Reg. No. M. 1550.

If not delivered please return to
"KODAGU" OFFICE, MERCARA.

ಕೊಡಗು.

ಪ್ರತಿ ವರ್ಷಕ್ಕೆ ಮುಂಗಡ ರೂ. ೩—೦—೦

ಸತ್ಯಾನ್ವೇಷಣಪರಮಸಾ ವಿದ್ಯಾ ನೀತಿರ್ಯಸ್ಸಾತಾಃ ‖ ಐಕ್ಯಮತ್ಯೇನ ದುಃರಾಸನಂ ಸುಸ್ಥಿರಾ ರಾಜ್ಯ ಸಂಪದಾ ‖

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೪] ಕೊಡಗು, ಸಂ ೧೯೨೫ನೇ ಇಸವಿ ಜನವರಿ ತಾರೀಕು ೨ನೆಯ ಶುಕ್ರವಾರ [ಸಂಚಿಕೆ ೨೮

ಆರೋಗ್ಯ ಚಂದ್ರಿಕೆ.

ಮದ್ರಾಸ.

ಸಂಪಾದಕರು: ಡಾಕ್ಟರ್ ಯು ರಾಮರಾವ್,
ಯಮ್. ಎಲ್ ಸಿ. ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಾಗೆಯೇ ಗಡೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯ ಗ್ರಂಥವಾಗುವುದು ಅಂಚೆಯ ವೆಚ್ಚ ಸೇರಿ ಈ ಚಂದಾ ಮೊಬಲಗು ವರ್ಷಕ್ಕೆ 1-8-0, ಬಿಡಿ ಪ್ರತಿ 0-2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ 'ಆರೋಗ್ಯ ಚಂದ್ರಿಕೆ' 323,
ತಂಬುಶೆಟ್ಟಿ ಬೀದಿ, ಮದ್ರಾಸ್

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2 ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ವಾರ್ತೆದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ 4. ಕಳುಹಿಸುವ ವಾರ್ತೆಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು 5. ಪ್ರಕಟಿಸಲಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಚಾರ್ಜು ತಂಗಡಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗೋಣ, ಶರೀರ ಸುಖವಾಗೋಣ ರೋಗ ಶಾಂತಿಯಾಗೋಣ, ಸಂಬಳ ಹೆಚ್ಚೋಣ, ವಿವಾಹವಾಗೋಣ ಸಂತತಿಯಾಗೋಣ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸಾಗೋಣ, ವ್ಯಾಪಾರದಲ್ಲಿ ಬಹಳ ಲಾಭ ಸಿಗೋಣ, ಸಾಲ ಮುಕ್ತ ಆಗೋಣ, ಭೂತ ಪಿಶಾಚ ಗ್ರಹಬಾಧೆ ಅಳಿಯೋಣ, ಪ್ರತಿಕೂಲ ಜನರು ಅನುಕೂಲವಾಗೋಣ ಇನ್ನೇ ಮತ್ತು ಬೇರೆ ಎಷ್ಟೋ ಮಾತುಗಳು ಇಚ್ಛೆಯಂತೆಯೇ ಆಗುವ ಅಪೇಕ್ಷೆ ಇದ್ದರೆ ಇಚ್ಛಿತಫಲ ಕೊಡುವ ಲೋಕಮಾನ್ಯ ಕಲ್ಪತರು ತಾಯಿತ ಯಾವಾಗಲೂ ಹತ್ತಿರ ಇಡಿರಿ. ಅಂದರೆ ಇಚ್ಛೆ ಪೂರ್ಣವಾಗುವದು. ಅನುಭವದ ಮೇಲಿಂದ ಖಾತ್ರಿ ಆಗಲಾರದು. ತಾ. ಪ ೧೫, ರೂ. ೧.೨ ಗ ಣ ತೀವ್ರವಾಗಿ, ತಾ ನ ೩ಕಿ. ರೂ. ೬ ಗುಣ ೧೫ ದಿವಸಗಳಲ್ಲಿ, ತಾ ನ ೩ಕಿ. ರೂ. ೩ ಗುಣ ೧ ತಿಂಗಳಲ್ಲಿ, ವ್ಹಿ. ಪಿ ಖರ್ಚು ಬೇರೆ. ಗುಣವಾಗದಿದ್ದಲ್ಲಿ ತಾಯಿತದು ಖರ್ಚು ವಜಾಹೋಗಿ ಬಾಕೀ ಸಿಗುವದು

ವಿಳಾಸ:—ಮ್ಯಾನೇಜರ್, ಕಲ್ಪತರು ತಾಯಿತ, ಕೆ. ಎನ್. [38-21] ಪೋ. ಸಂಕೇಶ್ವರ ಜಿ. ಬೆಳಗಾಂವ.

Health is Wealth.

WANTED all to improve health strength and vitality and thus save our nation from physical degeneracy. Send half anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City

THE SHOPPING CENTRE OF COORG,

Spencer & Co. Ltd.,

MERCARA & POLLIBETTA.

An Announcement.

Our prices of wines, spirits, stores etc are down.

Send for our Xmas list and be convinced

Trial order Solicited.

ಕೃಷಿಕೋ ನಾಸ್ತಿ ದುರ್ಭಿಕ್ಷಃ

NITRATE OF SODA (15—16 per cent) Nitrogen,

"The best and cheapest form of Nitrogen highly concentrated and immediately available Nothing like it to make plants grow."

ವನಸ್ಪತಿಗಳಲ್ಲಿ ಗೊಬ್ಬರವಿರುವುದರ ವೆಚ್ಚಿನ ಉದ್ದೇಶ ವೆಂದರೆ ಗಿಡಗಳಿಗೆ ಸಾರಜನಕ (Nitrogen) ಎಂದೆನಿಸಿಕೊಳ್ಳುವ ದಾಗಿರುತ್ತದೆ "ನೈಟ್ರೇಟ್ ಆಫ್ ಸೋಡಾ" ಎಂಬ ರಸಾಯನಿಕ ಗೊಬ್ಬರವು (15—16%) ಅಂದರೆ ಬೇರೆ ಗೊಬ್ಬರ ಗಳಲ್ಲಿರುವುದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಜಾಸ್ತಿ ಸಾರಜನಕ ಭರಿತವಾಗಿದ್ದು ಗಿಡಗಳಿಗೆ ಥಟ್ಟನೆ ದೊರೆಯುವಂತೆಯಿರುತ್ತದೆ. ಇದರ ಉಪಯೋಗದಿಂದ ಫಸಲು ಬಹಳ ಸಮೃದ್ಧಿಯಾಗುವದು. ಬಿತ್ತಿದಲ್ಲಿ ರಸಾಯನಿಕ ಗೊಬ್ಬರವು ಮೂಡಿ (ಕುಕ್ಕೆ) ತುಂಬ ಹತ್ತಿಗೆ ಬಹಳ ಉಪಯೋಗವಾಗಿರುತ್ತದೆ. ಈ ರಸಾಯನಿಕ ಗೊಬ್ಬರವು ಚೀಲಿ ದೇಶದ "ಚಿಲ್ಲಿ" ಎಂಬಲ್ಲಿ ತಯಾರಿಸಿ ಬಹಳ ದೂರದೇಶದಿಂದ ತರಬೇಕಾದರೂ ಸಹ ಇದು ಹಳ್ಳಿ ಮೊದಲಾದ ತೋಟಗಳಲ್ಲಿ ಪೈರಿಗೆ ಕೃಷಿಗಳಿಗೆ ಉಪಯೋಗಿಸಲು ಬಹಳ ಲಾಭವಾಗಿಯೂ ಹಟ್ಟಿ ಗೊಬ್ಬರಕ್ಕಿಂತಲೂ ಬಹಳ ಮಟ್ಟಿನ ಆದಾಯವನ್ನು ಕೊಡುವದಾಗಿಯೂ ಇರುತ್ತದೆ. ಒಂದು ಎಕರೆ ಭೂಮಿಗೆ 120—180 ರಾತಲು ಬೇಕಾಗುವದು. ಇದರ ವಿಶೇಷ ವೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ಧಾರಾಳವಾಗಿ ನಮ್ಮಿಂದ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್

24—15 ಕಮಿಟಿಯವರ ಕಡೆ

ಕೊಡಗಿನಲ್ಲಿ—
B. P Ayapa, Hon. Representative Pollibetta, Coorg.

The Chilean Nitrate Committee, 6 Mission Row, Post Box 469, CALCUTTA

ಮಲೆಯೂಳ ವೈದ್ಯಶಾಲಾ.

ಮಲಬಾರಿನ ಸಂಪೀಕರ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯ ಶಾಲೆಯ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತದೆ. ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು ಬಹಳ ಕಡಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣ ಸಂಪೀಕರ್,
ಆಯುರ್ವೇದ ವೈದ್ಯರು,
52—48 ವೀರರಾಜೇಂದ್ರಪೇಟೆ.

LOOK SHARP! PLEASE LOOK SHARP!

For Superior rugs, shawls, silk and cotton banians of different varieties, sarees, socks, silk coating and shirting, tweed etc., etc., place your orders with the undersigned Samples may be examined before placing orders at Messrs. H. C. Raja & Bros., Brahmin Valley, Mercara.

B. S. VENKAT RAO,
Silk Cloth Agent, for Coorg, South Canara Malabar Districts, Mercara.

ದಯವಿಟ್ಟು ಗಮನಕೊಡಿ! ಸುಲಭ ಕ್ರಯ!

ಉತ್ತಮ ತರದ ರಗ್ಗುಗಳು, ರೇಶ್ಮೆ ಮತ್ತು ನೂಲಿನ ಬನೀಯನ್ನುಗಳು, ರೇಶ್ಮೆ ಕೋಟಿನ ಮತ್ತು ಷರಟಿನ ಬಟ್ಟೆಗಳು, ತರತರಾದ ಸೀರೆಗಳು, ಸಾಕ್ಸ್ ಮತ್ತು ಟ್ವೀಡುಗಳು, ಶಾಲು ಚೀಲಗಳು ಮತ್ತು ಇತರ ಬಟ್ಟೆಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಾಗಿ ಕೊಡತಕ್ಕ ಹಣವನ್ನು ಉಳಿಸಿಕೊಳ್ಳಿ. ಬಟ್ಟೆಗಳ ಸ್ಯಾಂಪಲ್ಗಳನ್ನು ಮೆ. ಹೆಚ್. ಸಿ. ರಾಜ ಅಂಡ್ ಬ್ರದರ್ಸ್, ಬ್ರಾಹ್ಮಣರ ಬೀದಿ, ಮಡಿಕೇರಿ, ಇವರ ಅಂಗಡಿಯಲ್ಲಿ ನೋಡಬಹುದು.

ಬಿ. ಯಸ್. ವೆಂಕಟರಾವ್,
ರೇಶ್ಮೆ ಬಟ್ಟೆಗಳ ಏಜೆಂಟ್, ದ ಕನ್ನಡ ಮಲಬಾರ್,
4-2 ಕೊಡಗು, ಮಡಿಕೇರಿ.

MOTOR CYCLE FOR SALE.

A. J. S. Motor cycle 3-50 C.C. A high class English Machine imported direct from England. Very little used, and open for any trial or expert examination. Original cost about Rs. 1,600

Apply stating offers, to 'Motor cycle C/o The Editor 'Kodagu,'
4-3 Mercara.

"ಕೊಡಗು"

ಸನ್ ೧೯೨೫ನೇ ಇಸವಿ ಜನವರಿ ತಾ. ೨ನೇ ಶುಕ್ರವಾರ.

ಕಾಂಗ್ರೆಸಿನ ಅಧ್ಯಕ್ಷರ ಭಾಷಣ.

ಬೆಳಗಾವಿಯಲ್ಲಿ ಡಿಸೆಂಬರು ತಾ 26ರಲ್ಲು ಪ್ರಾರಂಭವಾದ 39ನೆಯ ಇಂಡಿಯನ್ ನೇಶನಲ್ ಕಾಂಗ್ರೆಸಿನ ಅಧ್ಯಕ್ಷರಾದ ಮಹಾತ್ಮ ಗಾಂಧಿಯವರು ವರ್ಷ ವರ್ಷ ವಾಡಿಕೆಯಾಗಿ ಅಧ್ಯಕ್ಷರು ದೀರ್ಘವಾದ ಭಾಷಣವನ್ನು ಓದುವಹಾಗೆ ಈ ವರ್ಷ ತಮ್ಮ ಚಿಕ್ಕದಾದ ಭಾಷಣವನ್ನು ಓದದೆ, ಅದನ್ನು ಅಚ್ಚುಹಾಕಿ ಪುಸ್ತಕರೂಪದಲ್ಲಿ ಪ್ರಾರಂಭದ ದಿನವೇ ಬೆಳಿಗ್ಗೆ ಎಲ್ಲರಿಗೂ ಹಂಚಿದ್ದರು. ಸಾರಾಂಶವನ್ನು ಅಧಿವೇಶನದ ಸಮಯದಲ್ಲು ಇಂಗ್ಲೀಷಿನಲ್ಲೂ ಹಿಂದೀಯಲ್ಲೂ ನೆರೆದಿದ್ದ ಮಹಾಸಭೆಗೆ ಹೇಳಿದರು. ಈ ವರ್ಷದ ಭಾಷಣವು ಮೊದಲಿನ ವರ್ಷದವುಗಳ ಸುಮಾರು 20ರಷ್ಟು ಒಂದುಭಾಗದಷ್ಟು ಮಾತ್ರವೇ ಇದೆ ಎಂದು ಹೇಳಬಹುದು. ಈವೊದಲೇ ಅವರು ತಮ್ಮ ಬರವಣಿಗೆಗಳಲ್ಲಿ ಸೂಚಿಸಿದ್ದ ಮೇರೆ ಈ ವರ್ಷದ ಕಾಂಗ್ರೆಸ್ ಸಭೆಯನ್ನು ಕಾರ್ಯದ ಮೀಟಿಂಗಿನಂತೆಯೇ ನಡಿಸಿದರು. ಭಾಷಣಗಳನ್ನು ಮಾಡುವದಕ್ಕೆ ಹೆಚ್ಚು ಕಾಲವನ್ನು ಕಳೆಯದೆ ಮಾಡಬೇಕಾದ ಕೆಲಸವನ್ನು ಬೇಗನೆ ಮಾಡಿದರು. ಸಭೆಯಲ್ಲಿ ಠರಾವುಗಳನ್ನು ಚರ್ಚಿಸುವದು ಸಹ ಒಂದೇ ದಿನದಲ್ಲಿ ತೀರಿಸಬೇಕೆಂದೇ ಅವರ ಅಪೇಕ್ಷೆಯಾಗಿತ್ತೆಂದು ತಿಳಿಯಬರುತ್ತದೆ. ಅಧ್ಯಕ್ಷರ ಭಾಷಣವಾಗುತ್ತಿದ್ದಹಾಗೆ ಈ ಲೇಖನವು ಬರೆಯಲ್ಪಟ್ಟದ್ದರಿಂದ ಮೀಟಿಂಗು ಎಷ್ಟು ದಿವಸಗಳವರೆಗೆ ನಡೆಯಿತೆಂದು ಹೇಳಲಾಗುವದಿಲ್ಲ.

ಅಸಹಕಾರವನ್ನು ಪ್ರಾರಂಭಿಸಲಿಕ್ಕೆ ತತ್ಕಾಲ ಕಾರಣಗಳನ್ನು ಸೂಚಿಸಿ ಈಗ ಅಸಹಕಾರವನ್ನು ನಿಲ್ಲಿಸಲು ಹಿಂಸೆಗೆ ಹಾಕಬೇಕಾದ ಬಹಿಷ್ಕಾರವನ್ನು ಸಾಧಿಸಲು ಆಗದೆ ಹೋದದ್ದೇ ಮುಖ್ಯ ಕಾರಣವೆಂತ ಹೇಳಿದರು. ಅಸಹಕಾರವನ್ನು ಕಾಂಗ್ರೆಸಿನ ಧ್ಯೇಯವಾಗಿ ಇಟ್ಟುಕೊಂಡಿದ್ದಾಗ ಕಾಂಗ್ರೆಸನ್ನು ಬಿಟ್ಟು ಹೋದ ಮೋಡರೇಟ್ ಮತ್ತು ಅನಿಬೆಸೆಂಟ್ ಪಕ್ಷಗಳವರನ್ನು ಈಗ ಅಸಹಕಾರವನ್ನು ಕಾಂಗ್ರೆಸು ತತ್ಕಾಲ ಬಾಕಿಮಾಡಿರುವದರಿಂದ ಕಾಂಗ್ರೆಸ್ಸಿಗೆ ಸೇರಬೇಕೆಂದು ಕೇಳಿಕೊಳ್ಳಬೇಕಾಗಿದೆ. ಎಲ್ಲ ಪಾರ್ಟಿಯವರೂ ಕಾಂಗ್ರೆಸಿನೊಳಗೆ ಅನ್ಯೋನ್ಯ ಜಗಳವಾಡದೆ ಕೆಲಸಮಾಡಬೇಕು.

ಬಹಿಷ್ಕಾರಗಳಲ್ಲಿಕೆ ಪರದೇಶಿ ಬಟ್ಟೆಗಳ ಮೇಲೆಹಾಕಿದ ಬಹಿಷ್ಕಾರವನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಬಹಿಷ್ಕಾರವೆಂಬ ಶಬ್ದದಲ್ಲಿ ದ್ವೇಷವಿದೆಯೆಂತ ಒಬ್ಬ ಯೂರೋಪಿಯನ್ ಸ್ನೇಹಿತರು ಹೇಳಿದ್ದರಿಂದ ಆ ಶಬ್ದವನ್ನು ಬಿಟ್ಟು ಪರದೇಶಿ ಬಟ್ಟೆಗಳನ್ನು ಉಪಯೋಗಿಸುವದಿಲ್ಲವೆಂಬ ನಿಶ್ಚಯ ಎಂತ ಹೇಳಿಕೊಳ್ಳಬಹುದು. ದ್ವೇಷವನ್ನು ಸೂಚಿಸಲಿಕ್ಕಾಗಿ ಈ ಕರ್ತವ್ಯವನ್ನು ಕೈಕೊಂಡದ್ದಲ್ಲ. ಈ ಬಹಿಷ್ಕಾರ ಹಾಕಬೇಕಾದದ್ದು ನಮ್ಮ ಹಕ್ಕುಮಾತ್ರವಲ್ಲ ಕರ್ತವ್ಯವೂ ಸಹ ಆಗಿದೆ. ಬ್ರಿಟಿಷ್ ಜನರಿಂದ ನಮ್ಮ ದೇಶದ ಆಡಳಿತವನ್ನು ಅಹಿಂಸಾ ರೀತಿಯಲ್ಲಿ ವಾಪಾಸು ಪಡೆಯಬೇಕಾದರೆ ಕೈನೂಲಿನಿಂದಮಾಡಿದ ಬಟ್ಟೆಯನ್ನು ಉಪಯೋಗಿಸುವದು ಒಂದೇ ದಾರಿ ಎಂದು ನನಗೆ ತೋರುತ್ತದೆ. ಲಂಕಾಷಯರಿನ ಬಟ್ಟೆಯು ಹಿಂದೂ ದೇಶದಲ್ಲಿ ಬಹಳ ಖರ್ಚಾಗುತ್ತಿದೆ. ಬಟ್ಟೆಯನ್ನು ಬೇರೆ ಯಾವ ಸಾಮಾನನ್ನೂ ಹಿಂದೂದೇಶದವರು ಬೇರೆ ದೇಶಗಳಿಂದ ತರಿಸುವದಿಲ್ಲ. ಹಿಂದುಸ್ಥಾನದ ರೈತರನ್ನು ಬಡತನಕ್ಕೆ ಇಳಿಸಿ ಅವರಿಗೆ ಇದ್ದ ಎರಡನೇ ಕಸಬನ್ನು ನಾಶಮಾಡಿದ್ದೇ ಪರದೇಶಿಬಟ್ಟೆ. ಅವರು ಬದುಕಬೇಕಾದರೆ ಪರದೇಶಿಬಟ್ಟೆಗೆ ಬಹಿಷ್ಕಾರ ಹಾಕಲೇಬೇಕು. ಪರದೇಶೀಬಟ್ಟೆಗೆ ಬಹಿಷ್ಕಾರ ಹಾಕಬೇಕೆಂತ ಗ್ರಾಮಾಂತರಗಳಲ್ಲಿ ಬೋಧಿಸಿ ಸ್ವಾವಲಂಬನ ಮತ್ತು ಸ್ವಶಕ್ತಿಯಲ್ಲಿ ನಂಬಿಗೆಯನ್ನು ಹುಟ್ಟಿಸಲು ಕೈನೂಲಿನ ಉಪಯೋಗವೇ ಅತ್ಯುತ್ತಮ ದಾರಿ. ಸಹಕಾರಿಸುತ್ತ ಇತರ ಗ್ರಾಮಾಭಿವೃದ್ಧಿಗಳ ದಾರಿಗಿಂತಲೂ ಇದೇ ಉತ್ತಮವಾದ ದಾರಿ ಎಂಬುದರಲ್ಲಿ ಸಂಶಯವಿಲ್ಲ. ಇದರಿಂದ ತುಂಬಾ ರಾಜಕೀಯ ಪ್ರಯೋಜನಗಳು ಉಂಟಾಗುವವು. ಬ್ರಿಟಿಷರು ಇಂಡಿಯಾವನ್ನು ತಮ್ಮ ಸ್ವಾಧೀನದಲ್ಲು ಇಟ್ಟುಕೊಳ್ಳಲು ಮುಖ್ಯ ಕಾರಣವಾದ ಈ ಅಧರ್ಮದ ವ್ಯಾಪಾರವನ್ನು ಕೊನೆಗಾಣಿಸಿದರೆ ಅವರು ನಮ್ಮ ದೇಶದ ಆಡಳಿತವನ್ನು ನಮಗೆ ಬಿಟ್ಟುಕೊಡಲು ಹೆಚ್ಚು ಅಡ್ಡಿ ಇರಲಿಕ್ಕಿಲ್ಲ. ಇದರಿಂದ ಹಿಂದೂಸ್ಥಾನಕಷ್ಟ, ಬ್ರಿಟನ್ನಿನವರಿಗೂ, ಅವರು ಭೂಲೋಕದಲ್ಲಿ ಮುಖ್ಯ ಜನಾಂಗವಾದುದರಿಂದ ಒಟ್ಟು ಮನುಷ್ಯವರ್ಗಕ್ಕೆ ಪ್ರಯೋಜನವಾಗುತ್ತದೆ. ಅವಶ್ಯವಿದ್ದಷ್ಟನ್ನು ಒದಗಿಸಿಕೊಳ್ಳುತ್ತಾರೆಂಬ ತತ್ವವನ್ನು ನಾನು ನಂಬುವದಿಲ್ಲ. ನೀತಿಯುಕ್ತರಲ್ಲದ ವ್ಯಾಪಾರಿಗಳು ಜನರಲ್ಲಿ ಅನಾವಶ್ಯಕವಾದ ವಸ್ತುಗಳಮೇಲೂ ಆಶೆ ಹುಟ್ಟಿಸುತ್ತಾರೆ. ಒಂದು ವಸ್ತುವನ್ನು ಒಬ್ಬನಿಗೆ ಒದಗಿಸಿಕೊಡಬೇಕಾದರೆ ಹಾಗೆ ಒದಗಿಸಿಕೊಡುವದರಲ್ಲಿ ಧರ್ಮವಿದೆಯೋ ಎಂದು ನೋಡಬೇಕಾದದ್ದು ಒದಗಿಸಿಕೊಡುವವನ ಕರ್ತವ್ಯವಾಗಿದೆ. ನಿಶಾ ಪದಾರ್ಥವನ್ನು ಕೊಡುವದರಲ್ಲಿ ಹ್ಯಾಗೆ ಅಧರ್ಮವಿದೆಯೋ ಹಾಗೆಯೇ ಪರದೇಶೀ ಬಟ್ಟೆಯನ್ನು ಒದಗಿಸಿಕೊಡುವುದರಲ್ಲಿ ಅಧರ್ಮವಿದೆ. ಅಮಲು ಪದಾರ್ಥವನ್ನು ಸೇವಿಸುವುದರಿಂದ ದೇಶದಲ್ಲಿ ಒಂದು ತರದ ಸೋಮಾರಿತನವು ಹುಟ್ಟುವಹಾಗೆ ಕೈಯಿಂದ ನೂಲನ್ನು ಮಾಡುವುದು ಬಿಟ್ಟದ್ದರಿಂದ ದೇಶದ ಜನರಲ್ಲಿ ಇದ್ದ ಚುರುಕುತನ ಸಂಪೂರ್ಣ ಕಡಿಮೆಯಾಗಿದೆ. ಸೋಮಾರಿತನದಿಂದ ಯಾ ಬಡತನದಿಂದ ಹುಟ್ಟುವ ಉತ್ಸಾಹ ಹೀನತೆಯು ಅಧರ್ಮವೇ ಸರಿ. ಕೈನೂಲಿನ ಕೈಗಾರಿಕೆಯಿಂದ ಅಧರ್ಮವು ದೂರವಾಗಿ ಧರ್ಮವು ಸ್ಥಾಪನೆಯಾಗುವದಲ್ಲದೆ ಹಿಂದೂಸ್ಥಾನದಲ್ಲಿ ಪ್ರತಿಯೊಬ್ಬನಿಗೂ ರಾಜಕೀಯ ವಿಷಯದಲ್ಲಿ ತನಗಿರುವ ಶಕ್ತಿಯು ತಿಳಿಯಬರುತ್ತದೆ. ಬರೇ ಇಂಗ್ಲೆಂಡಿನಿಂದ ಬರುವ ಬಟ್ಟೆಯನ್ನು ಬಿಟ್ಟರೆ ಸಾಲದು, ಗಿರಣಿಗಳಿಂದ ಮಾಡಿದ ಬಟ್ಟೆಯನ್ನೂ ಸಹ ಉಪಯೋಗಿಸಬಾರದು. ಇಂಗ್ಲಿಷರನ್ನು ಶಿಕ್ಷಿಸಬೇಕೆಂದು ಹೀಗೆ ಮಾಡುವದಲ್ಲ. ನಮ್ಮ ದೇಶದ ಇರುವಿಕೆಯನ್ನು ಉಳಿಸಿಕೊಳ್ಳಲಿಕ್ಕಾಗಿ ಮಾಡುವುದಾಗಿದೆ."

ಹೀಗೆಂತ ಕೈನೂಲಿನ ಬಟ್ಟೆಯ ಉಪಯೋಗದ ಅವಶ್ಯಕತೆಯನ್ನು ವಿವರಿಸಿ ಇದಕ್ಕಿರುವ ಆಕ್ಷೇಪಣೆಗಳಿಗೆ ಜವಾಬು ಕೊಟ್ಟಿದ್ದಾರೆ. ಜನರಲ್ಲಿ ರಾಜಕೀಯ ಚಳವಳದಲ್ಲಿ ಹುಟ್ಟಬೇಕಾದ ಉತ್ಸಾಹವು ಇದರಿಂದ ಹುಟ್ಟುವದಿಲ್ಲವೆಂಬ ಆಕ್ಷೇಪಕ್ಕೆ, ಉತ್ಸಾಹವು ಹುಟ್ಟುತ್ತದೋ ಇಲ್ಲವೋ ಎಂಬುದನ್ನು ಪರೀಕ್ಷಿಸಿನೋಡಲಿಲ್ಲವೆಂತಲೂ ಕೈನೂಲುಮಾಡುವುದು ಬರೇ ಹೆಂಗಸರ ಕೆಲಸವೆಂತ ಹೇಳುವ ಆಕ್ಷೇಪಕ್ಕೆ ನಾಶವಾದ ಈ ಕೈಗಾರಿಕೆಯನ್ನು ಪುನರುದ್ಧಾರ ಮಾಡಲಿಕ್ಕೆ ಗಂಡಸರೂ ಸಹ ತತ್ಕಾಲ ಕೈಕೊಳ್ಳಬೇಕಾಗಿದೆ ಎಂತಲೂ, ಎಲ್ಲಾ ತರದ ಯಂತ್ರಗಳಿಗೆ ತಾನು ವಿರೋಧಿ ಎಂತ ಹೇಳುವುದು ನಿಜವಲ್ಲ, ಚರ್ಕವೂ ಸಹ ಒಂದು ಯಂತ್ರವಾಗಿದೆ, ಸಾವಿರದ ಒಂಭೈನೂರು ಮೈಲಿ ಉದ್ದ, ಸಾವಿರದ ಐನೂರು ಮೈಲಿ ಅಗಲವಿರುವ ಹಿಂದೂಸ್ಥಾನದ ಪ್ರತಿಯೊಂದು ಮನೆಯಲ್ಲೂ ಈ ಕೈ ನೂಲಿನ ಯಂತ್ರ ಅವಶ್ಯಕತೆ ಇದೆ ಎಂತಲೂ ಬರೆದಿದ್ದಾರೆ.

ಕಾಂಗ್ರೆಸಿನ ಮೆಂಬರಾಗತಕ್ಕಂತವರು ಸಾಲಿಯಾನ ಎರಡುಸಾವಿರ ಗಜ ಕೈನೂಲು ಮಾಡುವುದೇ ಅವರ ಯೋಗ್ಯತೆಯಾಗಿರಬೇಕೆಂದು ತೀರ್ಮಾನಿಸಿಕೊಳ್ಳಿ ಎಂದು ಸೂಚಿಸಿರುವರು. ತನ್ನಲ್ಲಿ ಜನರಿಗೆ ಬೇರೆ ಯಾವ ಬೋಧನೆಯೂ ಇಲ್ಲ. ಸ್ವರಾಜ್ಯವನ್ನು ಪಡೆಯಲು ಇದೊಂದೇ ದಾರಿಯೆಂದು ನನಗೆ ದೃಢವಾಗಿದೆ.

ಅನಂತರ ಹಿಂದೂ ಮುಸಲ್ಮಾನ ಒಗ್ಗಟ್ಟು ಕೈನೂಲಿನಷ್ಟೇ ಅವಶ್ಯವಾದದ್ದೆಂತಲೂ ಅಸ್ಪೃಶ್ಯತೆಯನ್ನು ಹಿಂದೂಗಳು ಹೋಗಲಾಡಿಸಬೇಕಾದದ್ದು ಇನ್ನೊಂದು ಮುಖ್ಯ ಸಂಗತಿಯಾಗಿದೆಯೆಂತಲೂ ಹೇಳಿ ಸ್ವರಾಜ್ಯವೆಂಬುದು ಏನೆಂದು ತಾನು ವಿವರಿಸಲಿಲ್ಲವೆಂಬ ಆಕ್ಷೇಪಣೆಗೆ ಜವಾಬಾಗಿ, ಸ್ವರಾಜ್ಯವೆಂದರೆ ತನ್ನ ಅಭಿಪ್ರಾಯದಲ್ಲಿ ಏನೇನು ಇರಬೇಕೆಂಬುದನ್ನು ತಪಶೀಲಾಗಿ ಹೇಳಿದ್ದಾರೆ.

(1) ಸ್ವರಾಜ್ಯ ಸರ್ಕಾರದ ಸಭೆಗಳಿಗೆ ಓಟುಕೊಡುವ ಹಕ್ಕು ತಿಳುವಳಿಕೆಯಮೇಲಾಗಲೀ ಆಸ್ತಿಯಮೇಲಾಗಲೀ ಇರಬಾರದೆಂತಲೂ, ಯಾವದಾದರೂ ಒಂದು ತರದ ಕೈ ಕೆಲಸವನ್ನೇ ಅರ್ಹತೆಯ ಗುರುತಾಗಿ ಇಟ್ಟುಕೊಳ್ಳಬೇಕೆಂತಲೂ (2) ಜೀವ ಮತ್ತು ಸೊತ್ತು ಉಳಿಸಿಕೊಳ್ಳಬೇಕಾದಷ್ಟು ಮಿಲಿಟರಿಯನ್ನು ಇಟ್ಟುಕೊಂಡು ಬಾಕಿಯವನ್ನು ತೆಗೆದುಬಿಡಬೇಕೆಂತಲೂ (3) ನ್ಯಾಯ ತೈಸಲನ್ನು ಪಡೆಯುವದು ಸುಲಭಮಾಡಿ ಕೋರ್ಟು ಕಚೇರಿಗಳನ್ನೂ ಕಾನೂನುಗಳನ್ನೂ ಸಾಧ್ಯವಾದಷ್ಟು ಕಡಿಮೆಮಾಡಿ ಕಕ್ಷಿಗಾರರೇ ತಮ್ಮ ವಾಜ್ಯಗಳನ್ನು ವಾದಿಸಲು ಅನುಕೂಲಕೊಡುವಂತೆ ಮಾಡಬೇಕೆಂತಲೂ (4) ನಿಶಾ ಪದಾರ್ಥಗಳ ಉತ್ಪತ್ತಿಯನ್ನು ಸರಕಾರದವರು ಇಟ್ಟುಕೊಳ್ಳಲೇಬಾರದೆಂತಲೂ (5) ಉದ್ಯೋಗಸ್ಥರ ಸಂಬಳವು ದೇಶದ ಆರ್ಥಿಕಸ್ಥಿತಿಗೆ ಅನುಸರಿಸಿ ಇರಬೇಕೆಂತಲೂ (6) ದೇಶವನ್ನು ಭಾಷಾ ಭೇದದಮೇಲೆ ವಿಂಗಡಿಸಬೇಕೆಂತಲೂ (7) ಪರದೇಶೀಯರಿಗೆ ಯಾನ್ಯಾವ ಹಕ್ಕುಗಳು ಇವೆ ಎಂಬದನ್ನು ಕಂಡು ಹಿಡಿದು ಅವುಗಳ ಭದ್ರತೆಗಾಗಿ ಖಾತರಿ ಕೊಡಬೇಕೆಂತಲೂ (8) ದೇಶೀಯ ಸಂಸ್ಥಾನಗಳ ಹಕ್ಕುಗಳನ್ನು ಉಳಿಸಿಕೊಡಬೇಕೆಂತಲೂ (9) ಎಲ್ಲಾ ನಿರಂಕುಶ ಹಕ್ಕುಗಳನ್ನು ಹೋಗಲಾಡಿಸಬೇಕೆಂತಲೂ (10) ದೇಶದ ಅತ್ಯುನ್ನತ ಪದವಿಯು ಪ್ರತಿಯೊಬ್ಬ ದೇಶೀಯನಿಗೂ ಸಿಕ್ಕಬಹುದಾಗಿರಬೇಕೆಂತಲೂ (11) ಎಲ್ಲಾ ಮತಗಳ ಸ್ವಾತಂತ್ರ್ಯವನ್ನು ಉಳಿಸಿಕೊಡಬೇಕೆಂತಲೂ (12) ಪ್ರಾಂತೀಕ ಸರಕಾರಗಳ ಭಾಷೆಯು ಆಯಾಯ ಪ್ರಾಂತ್ಯದ ಭಾಷೆಯಾಗಿರಬೇಕೆಂತಲೂ ಮಧ್ಯವರ್ತಿ ಸರಕಾರ ಭಾಷೆಯು ಹಿಂದುಸ್ಥಾನಿಯಾಗಿರಬೇಕೆಂತಲೂ ಹೇಳಿದ್ದಾರೆ.

ರಾಷ್ಟ್ರೀಯ ಶಾಲೆಗಳು, ನಿಶಾ ಪದಾರ್ಥಗಳು, ಬಂಗಾಳದ ದಬ್ಬಾಳಿಕೆ ಮುಂತಾದ ವಿಷಯಗಳಮೇಲೆ ಸ್ವಲ್ಪಮಟ್ಟಿಗೆ ಬರೆದು ಭಾಷಣವನ್ನು ಅಂತ್ಯಗೊಳಿಸಿರುವರು. ಅವರ ಬೋಧನೆಯನ್ನು ಪ್ರತಿಮನೆಯಲ್ಲಿಯೂ ಆಚಾರಕ್ಕೆ ತಂದು ಈ ಮಹಾತ್ಮರು ರಾಷ್ಟ್ರೀಯಕಾರ್ಯದ ಸಾರಥಿತ್ವವನ್ನು ವಹಿಸಿಕೊಂಡದ್ದನ್ನು ಸಫಲಗೊಳಿಸಬೇಕಾಗಿ ಹಾರೈಸುತ್ತೇವೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಪ್ರೊಸೀಡಿಂಗ್ಸ್.

ಮೆ. ಪಿ. ಬಿ. ಮೇದಪ್ಪನವರು.

ಠರಾವು ವಿಸ್ತಾರ ವಿಶದವಾಗಿಲ್ಲದ್ದರಿಂದ ಅದರ ಮೇಲೆ ಯಾರಿಗೂ ಅಭಿಪ್ರಾಯ ಕೊಡಲು ಸಾಧ್ಯವಿಲ್ಲ. ಇದಕ್ಕಿಂತ ಬೇಕಾದ ಸಲಹೆಗಳನ್ನು ಹಾಕಿದ ಒಂದು ಬಿಲ್ಲನ್ನು ಈ ಸಭೆಯ ಮಂಜೂರಾತಿಗೆ ತಂದಿದ್ದರೆ ಉತ್ತಮವಾಗಿತ್ತು. ಆಗ ಸೆಕ್ಷನ್ ವಾರ್ ಚರ್ಚಿಸಬಹುದಿತ್ತು. ಈಗ ಎಲ್ಲಿದ್ದೇವೆಂಬದೇ ಗೊತ್ತಾಗುವದಿಲ್ಲ.

ಗ್ರಾಮ ಪಂಚಾಯತಿ ಪದ್ಧತಿಯು ಕೊಡಗಿನಲ್ಲಿ ಜಾರಿಯಲ್ಲಿತ್ತೆಂತ ಹೇಳುತ್ತಾರೆ. ಅದು ಸರಿಯೆಂತ ನಾನು ಒಪ್ಪುವದಿಲ್ಲ. ರಾಜಿ ತೀರ್ಮಾನ ಕೋರ್ಟುಗಳು ಇದ್ದವು. ಅವುಗಳ ಕುರುಹು ಪೇಟೆಗಳಲ್ಲಿ ಉಳಿದಿರುವುದು. ಆ ಪದ್ಧತಿಗಳನ್ನು ಜನರು ಒಪ್ಪಿಯಾರೆಂತ ತಿಳಿಯಲು ನಾನು ಕುತೂಹಲವುಳ್ಳವನಾಗಿದ್ದೇನೆ. ಅಂಥಾ ಸಂಸ್ಥೆಗಳ ಎಲ್ಲಾ ಕಡೆಯಲ್ಲೂ ಆಕ್ಷೇಪಣೆ ಬರುತ್ತಿದೆ. ಅದು ಅನಾಗರೀಕ ಸ್ಥಿತಿಯನ್ನು ಸೂಚಿಸುತ್ತದೆ. ಎಲ್ಲಾ ಗ್ರಾಮಗಳಲ್ಲೂ ತಕ್ಕಾಮೆ ಮೇಲೆ ಆಕ್ಷೇಪಣೆಯೇ ಇರುವಾಗ ಪೂರ್ವದಲ್ಲಿ ಗ್ರಾಮ ಪಂಚಾಯತಿ ಇತ್ತೆಂತ ಹ್ಯಾಗೆ ಹೇಳುವದು, ಅಂಥಾ ಪದ್ಧತಿಯನ್ನು ಪುನಃ ಸ್ಥಾಪಿಸಬೇಕೆಂತ ಹ್ಯಾಗ ಹೇಳುವದು ಎಂಬುದು ನನಗೆ ಗೊತ್ತಾಗುವದಿಲ್ಲ.

ಮದ್ರಾಸಿನಲ್ಲಿ ಪಂಚಾಯತಿಗಳು ಒಳ್ಳೇ ಕೆಲಸಮಾಡಿವೆ ಎಂತ ಹೇಳಿದರು. ನನ್ನ ತಿಳುವಳಿಕೆಯಲ್ಲಿ, ಮದ್ರಾಸಿನ ಲಾಯರುಗಳ ಮತ್ತು ಕಕ್ಷಿಗಾರರ ಸಂಪರ್ಕದಿಂದ ಆ ದೇಶದ ಪಂಚಾಯತಿಗಳಿಂದ ಜನರಿಗೆ ಏನೂ ತೃಪ್ತಿಯುಂಟಾಗಿರುವದಿಲ್ಲವೆಂತ ನನಗೆ ಗೊತ್ತಾಗಿದೆ. ಈ ಪಂಚಾಯತಿ ಕೋರ್ಟುಗಳಲ್ಲಿ ನ್ಯಾಯದಂತೆ ಫೈಸಲಾಗುವದಿಲ್ಲ. ಮಾತು ನಡಿಯುವವರ ಮಾತಿನ ಮೇಲೆ ಫೈಸಲಾಗುತ್ತೆ. ಗ್ರಾಮದಲ್ಲಿ ಬಲಾಢ್ಯನು ಯಾರೋ ಅವನ ಇರಾದೆಯಂತೆ ಫೈಸಲಾಗುವದು. ಇಂಥಾ ಬಲಾಢ್ಯರು ಸಾಧಾರಣವಾಗಿ ಭೂಮಿಯನ್ನು ಎಳಕೊಳ್ಳುವವರಾಗಿರುತ್ತಾರೆ, ಅಥವಾ ಹಣ ಸಾಲ ಕೊಡುವವರಾಗಿರುತ್ತಾರೆ, ಅಥವಾ ತೊಂದರೆ ಕೊಡುವ ಚಳವಳಗಾರರಾಗಿರುತ್ತಾರೆ. ಇಂಥವರಿಗೆ ಎದುರಾಗಿ ಬಡ ರೈತನು ನಿಲ್ಲುವದು ಸಾಧ್ಯವೇ ಇಲ್ಲ. ಅಪ್ಪೀಲು ಸಹ ಇಲ್ಲ.

ಸ್ಥಳೀಯ ಸ್ವರಾಜ್ಯದ ರೂಪದಲ್ಲಿ ತರಬೇಕು ಕೊಡುವದೊಂದು ಮಾತು. ಈಗಾಗಲೇ ಅನೇಕ ಸಹಕಾರಿ ಸಂಘಗಳು ಇವೆ. ಇವುಗಳ ಜೊತೆಗೆ ಪಂಚಾಯತಿಗಳನ್ನು ಸಹ ಸ್ಥಾಪಿಸಿದರೆ ಗಲಾಟೆಯಾಗುತ್ತೆ. ಸಂಶಯಾಸ್ಪದವಾದ ಹೊಸ ಹೊಸ ಸಂಸ್ಥೆಗಳನ್ನು ಏರ್ಪಡಿಸುವದರ ಬದಲು ಈಗ ಇರುವ ಸಂಸ್ಥೆಗಳನ್ನೇ ಚನ್ನಾಗಿ ಉಪಯೋಗಿಸಿಕೊಳ್ಳುವದು ಉತ್ತಮ.

ಗ್ರಾಮ ಪಂಚಾಯತಿಗಳು ಸ್ವತಂತ್ರದ ಮತ್ತು ಸ್ವಾವಲಂಬನದ ಬೆಳವಣಿಗೆಗೆ ವಿರೋಧ. ಕಳೆದು ಹೋದ ಕಾಲವು ಬಹಳ ಚೆನ್ನಾಗಿತ್ತು ಎಂತ ಯೋಚಿಸುವವರ ತಲೆಯಲ್ಲಿ ಈ ಗ್ರಾಮ ಪಂಚಾಯತಿಗಳು ಹುಟ್ಟಿದ್ದು, ಈಗ ನಡೆಯುತ್ತಿರುವ ಕೆಲಸಗಳೊಂದೂ ಸರಿಯಲ್ಲವೆಂತಲೂ ಇನ್ನೂ ಇನ್ನೂ ಕಾಲ ಕೆಡುತ್ತಲೇ ಇರುತ್ತೆಂತಲೂ ಯೋಚಿಸುವವರಿಂದ ಹೊರಡುವದಾಗಿದೆ. ನಾನಂತೂ ಆ ದಾರಿ ಹಿಡಿಯುವವನಲ್ಲ. ನಾವು ಅಭಿವೃದ್ಧಿ ಹೋಗುತ್ತಲೇ ಇದ್ದೇವೆ ಎಂತ ನಾನು ನಂಬುತ್ತೇನೆ. ಸ್ವತಂತ್ರಕ್ಕೆ ಸ್ವಾವಲಂಬನ ಮುಂತಾದ ಗುಣಗಳನ್ನು ಅಭಿವೃದ್ಧಿಗೊಳಿಸಬೇಕಾದರೆ ಗ್ರಾಮ ಪಂಚಾಯತಿ ಇರಬಾರದು. ಹೇಗೂ ಗ್ರಾಮ ಪಂಚಾಯತಿಗಳು ಬೇಕೆಂತಾದರೆ ಒಂದು ಮಸೂದೆ ಕಾನೂನನ್ನು ತಂದು ಚರ್ಚಿಸುವದು ಉತ್ತಮ.

ಮೆ. ಸಿ. ಯಸ್. ವೆಂಕಪ್ಪಯ್ಯನವರು.

ಮಸೂದೆ ಕಾನೂನನ್ನು ಈ ಸಭೆಯ ಮುಂದೆ ತರುವದು ಅನಂತರ ಕೆಲಸವಾಗಿದೆ. ಈಗ ಸಭೆಯ ಮುಂದೆ ಇರುವ ವಿಷಯ ಗ್ರಾಮ ಪಂಚಾಯತಿಗಳನ್ನು ಕೊಡಗಿನಲ್ಲಿ ಸ್ಥಾಪಿಸಬೇಕೋ ಎಂಬುದು ಮಾತ್ರ. ತಪಶೀಲ್ ಏರ್ಪಾಡುಗಳನ್ನು ಹಿಂದಿನಿಂದ ಚರ್ಚೆ ಮಾಡಬೇಕೆಂತ ಹೇಳಿದ್ದಕ್ಕೆ ನನ್ನ ಒಪ್ಪಿಗೆ ಇದೆ. ಸಮುದಾಯದ ಬೆಳವಣಿಗೆಗೆ ಗ್ರಾಮ ಪಂಚಾಯತಿಯೂ ಸಹಾಯ ಮಾಡುವದಿಲ್ಲವೆಂತ ಒಬ್ಬರಿಬ್ಬರು ಮೆಂಬರುಗಳು ಹೇಳಿದರು. ಹಾಗೆ ಸಂಶಯವಿರುವದರಿಂದ ಠರಾವನ್ನು ಚರ್ಚಿಸಿ ಪಾಸ್ ಮಾಡಿಕೊಳ್ಳುವದು ಅವಶ್ಯವೆಂತ ನನಗೆ ತೋರುತ್ತೆ. ಠರಾವಿನ ಅಭಿಪ್ರಾಯವನ್ನು ಕೊಡಗಿನಲ್ಲಿ ಜಾರಿಗೆ ತರಬೇಕೋ ಎಂತ ಈಗ ನೋಡಿದರೆ ಸಾಕಾಗಿದೆ. ಮಸೂದೆ ಕಾನೂನನ್ನು ಈ ಸಭೆಯ ಮುಂದೆ ಸರಕಾರದವರು ತರಬೇಕಾಗಿದೆ. ಸ್ಥಳೀಯ ಸರಕಾರದವರು ತರಬೇಕಾದ ಮಸೂದೆ ಕಾನೂನುಗಳ ಮಸೂದೆಯನ್ನು ಸಹ ಇಂಡಿಯಾ ಸರಕಾರದವರೇ ತಯಾರಿಸಬೇಕೆಂತ ಇಂಡಿಯಾ ಸರಕಾರದವರ ಅಭಿಪ್ರಾಯವಾಗಿದೆ. ಹಾಗಿರುವಾಗ ಸರಕಾರಿ ನೌಕರರಲ್ಲದ ಮೆಂಬರುಗಳು ಮಸೂದೆ ಕಾನೂನನ್ನು ತಯಾರಿಸಿ ಈ ಸಭೆಯ ಮುಂದೆ ತರುವ ಕಾಲ ಬಂದಿಲ್ಲವೆಂತ ನನಗೆ ತೋರುತ್ತೆ.

ಗ್ರಾಮ ಪಂಚಾಯತಿಗಳಿಂದ ಸಮುದಾಯಕ್ಕೆ ಪ್ರಯೋಜನವಾಗಲಾರದೆಂತ ಹೇಳುವವರು ಈ ಕಾಲದಲ್ಲಿ ಸಹ ಇರುವವನ್ನು ನೋಡಿ ನನಗೆ ಆಶ್ಚರ್ಯವಾಗಿದೆ. ಡಿಸೆಂಟ್ರಲೈಸೇಶನ್ ಕಮಿಟಿಯವರು ಈ ವಿಷಯವನ್ನು ಚನ್ನಾಗಿ ಆಲೋಚಿಸಿ ಗ್ರಾಮ ಪಂಚಾಯತಿಗಳನ್ನು ಹಿಂದುಸ್ಥಾನದಲ್ಲಿ ಸ್ಥಾಪಿಸಬೇಕೆಂತ ಅಭಿಪ್ರಾಯಪಟ್ಟಿದ್ದಾರೆ. ಪಾರ್ಲಿಮೆಂಟ್ ಮುಂದೆ ಇಟ್ಟ 1920ನೇ ಇಸವಿಯ ಹಿಂದುಸ್ಥಾನದ ಸ್ಥಿತಿಯ ರಿಪೋರ್ಟು ಇಲ್ಲಿ ಇದೆ. ಇದರಲ್ಲಿ ಅನೇಕ ಕಡೆಗಳಲ್ಲಿ

ಗ್ರಾಮ ಪಂಚಾಯತಿಗಳನ್ನು ಏರ್ಪಡಿಸಿ ಜನರಿಗೆ ಆಡಳಿತದಲ್ಲಿ ಅಭಿರುಚಿ ಬಂದಿದೆಯೆಂತ ಒರೆದಿದೆ. ಇಂಥಾ ಆಡಳಿತದಲ್ಲಿ ಅಭಿರುಚಿ ಹುಟ್ಟಿಸಲಿಕ್ಕಾಗಿಯೇ ಗ್ರಾಮ ಪಂಚಾಯತಿಗಳನ್ನು ಕೊಡಗಿನಲ್ಲಿ ಏರ್ಪಡಿಸಬೇಕೆಂತ ನಾನು ಹೇಳುವದಾಗಿದೆ. ಪಟ್ಟಣದಲ್ಲಿರುವ ಕೆಲವು ಜನರು ಮಾತ್ರ ಸರಕಾರಿ ಆಡಳಿತವನ್ನು ತಿಳಿದರೆ ಸಾಲದು. ಪಟ್ಟಣದವರ ಸಂಗಡಲೇ ಗ್ರಾಮದವರನ್ನೂ ತರಬೇತು ಮಾಡಬೇಕು. ಕೆಲವು ಹಕ್ಕುಗಳನ್ನು ಗ್ರಾಮದವರಿಗೆ ಬಿಟ್ಟುಕೊಟ್ಟ ವಿನಹ ಅವರಿಗೆ ರಾಜ್ಯದ ಆಡಳಿತದ ಅನುಭವ ಬರುವದಿಲ್ಲ. ಗ್ರಾಮವಾಸಿಗಳಿಗೆ ಬರೇ ಓಟ್ ಕೊಟ್ಟು ಮೆಂಬರುಗಳನ್ನು ಈ ಸಭೆಗೆ ಕಳುಹಿಸುವ ಹಕ್ಕು ಕೊಟ್ಟರೆ ಸಾಲದು. ಅವರ ಪ್ರತಿನಿಧಿಗಳು ಇಲ್ಲಿ ಏನು ಮಾಡುತ್ತೇವೆಂಬದನ್ನು ಚಿಕ್ಕದಾಗಿಯಾದರೂ ಅವರಿಗೆ ತಿಳಿಯಬೇಕಾದರೆ ಗ್ರಾಮದ ಆಡಳಿತವನ್ನು ಅವರಿಗೆ ಕೊಡಬೇಕು. ಗ್ರಾಮ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸಿಕೊಳ್ಳುವ ಹಕ್ಕು ಕೊಟ್ಟರೆ ಮಾತ್ರ ಈ ಕೌನ್ಸಿಲಿಗೆ ಓಟ್ ಕೊಡುವ ಹಕ್ಕನ್ನು ತಿಳುವಳಿಕೆಯಿಂದ ಉಪಯೋಗಿಸುತ್ತಾರೆ.

ಠರಾವಿನ ಮಾತು ಸ್ಪಷ್ಟವಾಗಿಲ್ಲವೆಂಬದನ್ನು ನಾನು ಒಪ್ಪುವದಿಲ್ಲ. 24ನೇ ಠರಾವಿನ ವ್ಯಾಪಕವು ಬಹಳ ಸಂಕುಚಿತವಾಗಿದ್ದದ್ದರಿಂದ ಅದು ನನಗೆ ತೃಪ್ತಿಕರವಾಗಿ ತೋರಲಿಲ್ಲ. ಮದ್ರಾಸಿನಲ್ಲಿ ಪಂಚಾಯತಿಗಳು ಜಯಪ್ರದವಾಗಲಿಲ್ಲವಾದರೆ ಬೇರೆ ಯಾವದಾದರೂ ಪ್ರಾಂತ್ಯದ ಮಾದರಿಯನ್ನು ಯಾಕೆ ಅನುಕರಿಸಬೇಕೆಂಬದು ನನಗೆ ಗೊತ್ತಾಗುವದಿಲ್ಲ. ಈ ದೇಶಕ್ಕೆ ಸರಿಯಾಗುವ ಪಂಚಾಯತಿಗಳು ನಮಗೆ ಬೇಕಾಗಿವೆ. ಈ ಸಭೆಯ ಮುಂದೆ ಚರ್ಚೆಗೆ ಬರುವ ಪಂಚಾಯತ್ ಆಕ್ಟಿನ ಮಸೂದೆಯು ಮದ್ರಾಸ್ ಆಕ್ಟನ್ನು ಅನುಕರಿಸಬೇಕಾಗಿಲ್ಲ.

ಈ ದೇಶಕ್ಕೆ ಬ್ರಿಟಿಷರ ಆಳ್ವಿಕೆ ಬರುವ ಮುಂಚೆ ಈ ದೇಶದಲ್ಲಿ ಇದ್ದ ಪಂಚಾಯತಿಗಳು ಬರೇ ರಾಜಿ ಫೈಸಲಿನ ಪಂಚಾಯತಿಗಳಾಗಿದ್ದವೆಂತ ಆಕ್ಷೇಪಣೆ ಬಂತು. ರಾಜಿ ಫೈಸಲಿನ ಕೋರ್ಟುಗಳು ಬೇರೆ ಎಲ್ಲಾ ವಿಧದ ಕೋರ್ಟುಗಳಿಗಿಂತಲೂ ಉತ್ತಮವೆಂತ ನನ್ನ ಮತ. ಇಂಥಾ ರಾಜಿ ಪಂಚಾಯತಿ ಕೋರ್ಟನ್ನು ಜನರೇ ಚುನಾಯಿಸಿಕೊಳ್ಳಬೇಕು. ಅಂಥಾ ಕೋರ್ಟಿನಿಂದ ಜನರಿಗೆ ಖಂಡಿತವಾಗಿಯೂ ತೃಪ್ತಿಯಾಗುತ್ತದೆ. ಈಗಲೂ ಕೋರ್ಟಿಗೆ ಬರುವ ಕೇಸ್‌ಗಳಲ್ಲಿ ಶೇಕಡ ವರಷ್ಟಾದರೂ ರಾಜಿಯಿಂದಲೇ ತೀರ್ಮಾನವಾಗುತ್ತವೆ. ಈ ರಾಜಿ ತೀರ್ಮಾನಗಳು ಪಂಚಾಯತರಿಂದ ಮಾಡಲ್ಪಡುತ್ತವೆ. ಆದರೆ ಈ ಪಂಚಾಯತರನ್ನು ಕಾನೂನು ಮೇರೆ ಚುನಾಯಿಸುವದಲ್ಲ. ಕಕ್ಷಿಗಾರರು ಒಪ್ಪಿ ಆರಿಸಿಕೊಳ್ಳುವದಾಗಿದೆ. ಆದ್ದರಿಂದ ಒರೇ ರಾಜಿ ತೀರ್ಮಾನದ ಕೋರ್ಟುಗಳೆಂಬದು ವಿರೋಧವಲ್ಲ. ಕರ್ನಲ್ ಫ್ರೇಸರ ಮುಕುಂನಾಮೆಯೊಂದನ್ನು ನೋಡಿದ್ದೇನೆ. ಅದರಲ್ಲಿ ಹೇಳುವ ಪಂಚಾಯತಿಗಳು ಬರೇ ರಾಜಿ ತೀರ್ಮಾನದ ಪಂಚಾಯತಿ ಕೋರ್ಟೆಂತ ಹೇಳಲಿಕ್ಕಾಗುವದಿಲ್ಲ. ಅವು ಪಾರುಪತ್ತೆಗಾರ ಮತ್ತು ಇತರ ಪೋಲಿಸ ಅಧಿಕಾರಿಗಳಿಗೆ ಸಹಾಯ ಕೊಡುವ ಬಾಡಿಯಾಗಿತ್ತೆಂತ ಹೇಳಬಹುದು. ನಮ್ಮ ಪಂಚಾಯತಿಗಳು ಒರೇ ಜಾಬಿಯಂತೆ ಆಫೀಸರುಗಳಿಗೆ ಅಭಿಪ್ರಾಯ ಕೊಡುವವು ಆಗಿರಬೇಕೋ ಅಥವಾ ಸ್ವತಂತ್ರ ಕೋರ್ಟುಗಳಾಗಿರಬೇಕೋ ಎಂಬದನ್ನು ಮಸೂದೆ ಕಾನೂನು ಚರ್ಚೆಗೆ ಬಂದಾಗ ತೀರ್ಮಾನಿಸ ಬಹುದು.

ಫೈನಾನ್ಸ್ ಮೆಂಬರು ಪಾರ್ಲಿಮೆಂಟುಗಳು ಇರುವಲ್ಲಿ ಗ್ರಾಮ ಸಭೆ ಇಲ್ಲವೆಂತ ಹೇಳಿದರು. ಅಂಥಾ ದೇಶಗಳ ಸ್ಥಿತಿ ನನಗೆ ಗೊತ್ತಿಲ್ಲ. ಆದರೆ ಇಂಗ್ಲೆಂಡಿನಲ್ಲೂ ಸಹ ಜೂರಿ ಪದ್ಧತಿ ಇದೆಯೆಂತ ನನಗೆ ಗೊತ್ತಿದೆ. ಅಲ್ಲಿ ಸಿವಿಲ ಕೇಸುಗಳಿಗೆ ಸಹ ಜೂರಿಯವರು ಇರಲೇ ಬೇಕು. ಆದ್ದರಿಂದ ಮುಂದುವರಿದ ದೇಶಗಳಲ್ಲೂ ಗ್ರಾಮವಾಸಿಗಳನ್ನು ಮರೆತಿಲ್ಲವೆಂಬದು ಸ್ಪಷ್ಟವಾಯಿತು.

ಈ ದೇಶಕ್ಕೆ ಅಂದರೆ ಹಿಂದುಸ್ಥಾನಕ್ಕೆ ಪಾರ್ಲಿಮೆಂಟ್ ಪದ್ಧತಿಯು ಒಪ್ಪುವದಿಲ್ಲವೆಂತ ಹೇಳುತ್ತಾರೆ. ಹೀಗೆಂತ ಗಾಂಧಿ ಮಾತ್ರ ಮತ್ತು ಹಿಂದೀ ಗ್ರಂಥಕರ್ತರು ಸಹ ಹೇಳುತ್ತಾರೆ. ಪಾಶ್ಚಿಮಾತ್ಯ ಪಾರ್ಲಿಮೆಂಟ್ ಮಾದರಿಗಳು ಇಲ್ಲಿ ಒಪ್ಪುವದಿಲ್ಲವೆಂತಲೂ, ನಿಜವಾದ ಸ್ವರಾಜ್ಯವು ಗ್ರಾಮದಲ್ಲೇ ಪ್ರಾರಂಭವಾಗಬೇಕೆಂತ ನಮ್ಮ ಹಿಂದುಸ್ಥಾನದ ಶಾಸ್ತ್ರಜ್ಞರು ಹೇಳುತ್ತಾರೆ. ಇಂಥಾ ಆಧಾರಗಳಿರುವಾಗ ಪಂಚಾಯತಿ ನಮಗೆ ಬೇಕೋ ಬೇಡವೋ ಎಂತ ಸಂಶಯಪಡಬೇಕಾದ ಆವಶ್ಯವೇ ಇಲ್ಲ.

ಮಿ. ಟಿ ಜೆ. ಟಾಸ್ಕರ್‌ರವರು.

ಈ ಠರಾವಿನಿಂದ ಒಳ್ಳೇ ಚರ್ಚೆ ನಡೆದು ವಿಧ ವಿಧದ ಅಭಿಪ್ರಾಯ ತಿಳಿಯಲಿಕ್ಕೆ ಅನುಕೂಲ ದೊರೆತದ್ದಕ್ಕೆ ಸಂತೋಷಪಡುತ್ತೇನೆ. ನಾವು ಏರ್ಪಡಿಸುವ ಪಂಚಾಯತಿಗಳು ಬೇರೆ ಯಾವ ದೇಶದ ಮಾದರಿಯಲ್ಲೂ ಇರಬೇಕೆಂತ ಇಲ್ಲವೆಂಬದಕ್ಕೆ ನಾನು ಒಪ್ಪುತ್ತೇನೆ. ಮದ್ರಾಸಿನ ಒಂದು ಆಕ್ಟಿನ ಮೇರೆ ಸ್ಥಾಪಿಸಲ್ಪಟ್ಟಿರುವ ಪಂಚಾಯತಿಗಳು ಕೊಡಗಿನಲ್ಲಿ ಪೂರ್ವದಲ್ಲಿ ಇದ್ದ ಪಂಚಾಯತಿಗಳನ್ನು ಹೋಲುತ್ತವೆ.

ನಾನು ಯಾವ ಪಕ್ಷವನ್ನೂ ವಹಿಸುವದಿಲ್ಲವೆಂತ ನಾನು ಮೊದಲೇ ಹೇಳಿದ್ದೇನೆ.

ಓಟಿಗೆ ಹಾಕಲಾಗಿ ಸರ್ವ ಸಮ್ಮತದಿಂದ ಮಂಜೂರಾಯಿತು.

26ನೇ ಠರಾವನ್ನು ಮಿ ಸಿ. ಕಾಳಪ್ಪನವರು ವಾಪಸು ತೆಗೆದುಕೊಂಡರು. ಇದು ಸಹ 25ನೇ ಠರಾವಿನ ವಿಷಯವೇ ಆಗಿತ್ತು.

27ನೇ ಠರಾವು.

"ರೆವಿನ್ಯು ಮ್ಯಾನ್ಯುವಲ್, ಫಾರೆಸ್ಟ್ ಮ್ಯಾನ್ಯುವಲ್, ಸ್ಥಳೀಯ ರೂಲು ಮತ್ತು ಕಾನೂನುಗಳು, ಕೊಡಗು ಡಿಸ್ಟ್ರಿಕ್ಟ್ ಗಜೇಟಿನ 1ನೇ ಭಾಗ ಈ ಕೌನ್ಸಿಲ್ ರೂಲ್ಸ್ ಸಹಿತ ಕನ್ನಡದಲ್ಲಿ ಪ್ರಕಟಿಸಲು ಏರ್ಪಾಡು ಮಾಡಬೇಕೆಂತ ಈ ಸಭೆಯು ಚೀಫ್ ಕಮೀಷನರಿಗೆ ಶಿಫಾರಸ್ಸು ಮಾಡುತ್ತದೆ."

ಮಿ. ಯನ್ ಆರ್. ಸುಬ್ಬಯ್ಯನವರು.

ದೇಶದ ಶೇಕಡ 99ರಷ್ಟು ಭಾಗದ ಜನರ ಪರವಾಗಿ ಈ ಠರಾವನ್ನು ಈ ಸಭೆಯ ಅಂಗೀಕಾರಕ್ಕೆ ತಂದಿದ್ದೇನೆ. ಪ್ರತಿಯೊಬ್ಬನೂ ದೇಶದ ಕಾನೂನು ತಿಳಿದಿದ್ದಾನೆಂತ ಕಾನೂನ್ ಇದೆ. ಕಾನೂನಿನ ಯಾವ ನಿಬಂಧನೆಗಾದರೂ ವಿರೋಧವಾಗಿ ನಡೆದರೆ ತನಗೆ ಕಾನೂನು ಗೊತ್ತಿಲ್ಲವೆಂತ ಹೇಳಿದರೆ ಪ್ರಯೋಜನವಾಗುವದಿಲ್ಲ. ಠರಾವಿನಲ್ಲಿ ಹೇಳುವವುಗಳನ್ನೆಲ್ಲಾ ಕನ್ನಡಕ್ಕೆ ಮಾಡಿದರೆ ತುಂಬಾ ಜನರಿಗೆ ಕಾನೂನನ್ನು ತಿಳಿದುಕೊಳ್ಳಲು ಅನುಕೂಲ ಕೊಟ್ಟಂತೆ ಆಗುತ್ತೆ. ಯಾವದಾದರೂ ಕಾನೂನನ್ನು ಹೊಸದಾಗಿ ಜಾರಿಗೆ ತಂದರೆ ದೇಶಭಾಷೆಯಾದ ಕನ್ನಡದಲ್ಲಿ ಪ್ರಕಟವಾಗಬೇಕೆಂತ ನಿಯಮ ಇದೆ. ಇದರಿಂದಲೇ ಸರಕಾರದವರು ಮಾಡುವ ಕಾನೂನು ಕಾಯಿದೆಗಳನ್ನು ಸರ್ವರಿಗೂ ತಿಳಿಕೊಡಬೇಕಾದದ್ದು ಸರಕಾರದ ಭಾರವೆಂಬದನ್ನು ಸರಕಾರದವರು ಒಪ್ಪಿಕೊಂಡದ್ದು ಸ್ಪಷ್ಟವಾಯಿತು. ಕಾನೂನು ಕಾಯಿದೆಗಳು ಪ್ರಜೆಗಳಿಗೆ ಆಫೀಸರುಗಳು ಶಿಕ್ಷಿಸಲಿಕ್ಕಾಗಿ ಮಾತ್ರ ಇರುವದಲ್ಲ, ಪ್ರಜೆಗಳು ತಮ್ಮ ಕರ್ತವ್ಯವನ್ನು ಹೇಗೆ ಮಾಡಬೇಕು, ಸರಕಾರದ ಸಂಗಡ ಹೇಗೆ ವರ್ತಿಸಬೇಕು ಎಂಬದನ್ನು ನಿರ್ಣಯಿಸುವಂಥಾದ್ದು ಕಾನೂನು. ಕಾನೂನಿಗೆ ವಿರೋಧ ನಡೆದ ಮೇಲಲ್ಲವೇ ಶಿಕ್ಷೆ. ಅಂಥಾ ರೂಲುಗಳನ್ನು ನಿಬಂಧನೆಗಳನ್ನು 1900ನೇ ಇಸವಿಗೆ ಮೊದಲು ಕನ್ನಡದಲ್ಲಿ ಪ್ರಕಟಿಸುತ್ತಿದ್ದರು. ಆಗ ಆಫೀಸರುಗಳಿಗೆ ಇಂಗ್ಲಿಷ್ ಗೊತ್ತಿಲ್ಲದೆ ಇತ್ತಾದ್ದರಿಂದ ಕನ್ನಡದ ಪ್ರತಿಗಳು ಬೇಕಾಗುತ್ತಿತ್ತೆಂತ ಹೇಳುತ್ತಾರೆ. ಮೇಲೆ ಹೇಳಿದಂತೆ ಆಫೀಸರುಗಳ ಉಪಯೋಗಕ್ಕಾಗಿ ಮಾತ್ರ ಕಾನೂನು ಇರುವದಲ್ಲವಲ್ಲ?

ಗಜೇಟಿನ 2ನೇ ಭಾಗವನ್ನು ಕನ್ನಡದಲ್ಲಿ ಪ್ರಕಟಿಸುತ್ತಾರೆ. ಇದರಲ್ಲಿ ನೇಮಕಾತಿ ವಿಷಯ ಮಾತ್ರ ಮುಖ್ಯವಾಗಿ ಇರುವದು. ಸರಕಾರಕ್ಕೆ ತನ್ನ ನಾಮಾನುಗಳಿಗೆ ಒಳ್ಳೇ ಕ್ರಯ ಬರಬೇಕಾದ ಮಾತ್ರ ಕನ್ನಡದಲ್ಲಿ ಪ್ರಕಟಿಸುತ್ತಾರೆಂಬದು ಇದರಿಂದ ತಿಳಿಯುತ್ತೆ. ಮೊದಲು ಒಂದಾವರ್ತಿ ಈ ಕೋರಿಕೆಯು ಸರಕಾರದ ಮುಂದೆ ಹೋದಾಗ ಕನ್ನಡ ಕಾನೂನು ಪುಸ್ತಕಗಳು ತುಂಬಾ ಖರ್ಚಾಗುವದಿಲ್ಲ, ಆದ್ದರಿಂದ ಬರೇ ನಷ್ಟವಲ್ಲವೆಂತ ಜವಾಬು ಬಂತು. ರೆವಿನ್ಯು ಮ್ಯಾನ್ಯುವಲನ್ನು ಕನ್ನಡದಲ್ಲಿ ಪ್ರಕಟಿಸದೆ ಇರುವ ಅರ್ಧ ಭಾಗವನ್ನು ಪ್ರತಿಗಳು ಕೊಡಬೇಕೆಂತ ಹೇಳಿದರು, ಇದು ಸರಕಾರದ ತತ್ವ ವಾಗಿರಬಾರದು. ಇಂಗ್ಲಿಷ್ ಕಾನೂನು ಪುಸ್ತಕಗಳನ್ನು ಪ್ರಿಂಟ್ ಮಾಡಿಸಿದ ಖರ್ಚು ಅವುಗಳ ಮಾರಾಟದಿಂದ ಹುಟ್ಟುವದಿಲ್ಲ ಎಂಬ ಸಂಶಯವು ನನಗೆ ಇದೆ.

ಜನರು ತಮ್ಮ ದೇಶದಲ್ಲೇ ಪರದೇಶೀಯರಾಗಿ ಹೋಗಿದ್ದಾರೆ. ತಮ್ಮ ದಿನನಿತ್ಯಕ್ಕೆ ಸಂಬಂಧಪಡುವ ಕಾನೂನು ಕಾಯಿದೆಗಳನ್ನು ತಿಳಿದುಕೊಳ್ಳಲು ರಾಯರುಗಳಿಗೆ ಫೀಸ್ ಕೊಡಬೇಕಾಗಿದೆ. ತಮ್ಮ ಹಕ್ಕಿನಲ್ಲಿ ಬೆಳೆಯುವ ಸಸ್ಯಾದಿಗಳಲ್ಲಿಯೂ, ಭೂಮಿಯವೊಳಗೆ ಇರುವ ವಸ್ತುಗಳಲ್ಲಿಯೂ ತಮಗೆ ಏನು ಹಕ್ಕಿದೆ ಎಂಬದನ್ನು ತಿಳಿದುಕೊಳ್ಳಲು ಸಹ ಪ್ರಜೆಗಳಿಗೆ ಅನುಕೂಲವಿಲ್ಲ. ಫಾರೆಸ್ಟುಗಳಲ್ಲಿ ಏನು ಮಾಡಬಹುದು ಏನು ಮಾಡಬಾರದೆಂಬದು ಸಹ ಅವರಿಗೆ ಗೊತ್ತಿಲ್ಲ. ಸ್ಟೇಷನಿಂದ ಸ್ಟೇಷನ್ನಿಕ್ಕೆ ಏನು ತೆಗೆದುಕೊಂಡು ಹೋಗಬಹುದು, ಏನು ತೆಗೆದುಕೊಂಡು ಹೋಗಬಾರದೆಂಬದನ್ನು ಅವರಿಗೆ ತಿಳಿದುಕೊಳ್ಳಲು ಅನುಕೂಲವಿಲ್ಲ. ಇಂಥಾ ತೊಂದರೆಗಳಿಂದಲೂ ಸರಕಾರವು ಪರಕೀಯ ಸರಕಾರವೆಂಬದು ಪ್ರಜೆಗಳಿಗೆ ಗೊತ್ತಾಗುವದು. ತಮ್ಮ ಹಕ್ಕುಗಳನ್ನು ತಿಳಿದುಕೊಳ್ಳಬೇಕಾದರೆ ಪರಭಾಷೆ ಬೇಕೆಂತ ಇರುವಾಗ ತಮ್ಮ ಸರಕಾರವು ತಮ್ಮದೆಂಬ ಭಾವವು ಹೇಗೆ ಹುಟ್ಟೀತು?

ಠರಾವಿನ ಒಪ್ಪಿಗೆಗೆ ಹೆಚ್ಚಿನ ಕಾರಣಗಳು ಬೇಕಾಗಿಲ್ಲವೆಂತ ನಾನು ನಂಬುತ್ತೇನೆ.

ಮಿ. ಟಿ ಜೆ. ಟಾಸ್ಕರವರು.

ನಾನೂ ನಾಲ್ ಮೆಂಬರಿಗೆ ಕನ್ನಡದಲ್ಲಿ ಕಾನೂನು ಓದಲಿಕ್ಕೆ ಇರುವ ಉತ್ಸಾಹಕ್ಕೆ ಅಡ್ಡಿ ಬರುವ ಅಪೇಕ್ಷೆ ಏನೂ ನನಗೆ ಇಲ್ಲ. ಆದರೆ ಶೇಕಡ 99ರಷ್ಟು ಜನರು ಕನ್ನಡದಲ್ಲಿ ಕಾನೂನು ಓದಲು ಆಶಿಸುತ್ತಾರೆಂಬ ಮಾತನ್ನು ನಾನು ಒಪ್ಪುವದಿಲ್ಲ. ಈ ಮೆಂಬರರಲ್ಲಿ ಕನ್ನಡ ಅಫೀಶಿಯಲ್ ಟ್ರಾನ್ಸ್ಲೇಟರ್ ಏನಿದೆ ಎಂತ ತಿಳಿಯಲು ಅಪೇಕ್ಷಿಸುತ್ತೇನೆ. ಸಾಧ್ಯವಾದರೆ ಜನರಿಗೆ ತಮ್ಮ ಭಾಷೆಯಲ್ಲಿ ಕಾನೂನುಗಳನ್ನು ತಿಳಿಸಿಕೊಡುವದು ಒಳ್ಳೆಯದೇ. ಆದರೆ ಈ ಠರಾವಿನಲ್ಲಿ ಒಂದು ಲೈಬ್ರರಿಯನ್ನೇ ಕನ್ನಡದಲ್ಲಿ ಪ್ರಕಟಿಸಬೇಕೆಂತ ಕೇಳುತ್ತಾರೆ. ಇದಕ್ಕೆಲ್ಲಾ ಹಣಬೇಕು ಮತ್ತು ತೆಗೆದುಕೊಳ್ಳುವ ಜನರಿದ್ದಾರೋ, ಎಂತ ಯೋಚಿಸಬೇಕು. ರೂಲ್ಸ್‌ಗಳನ್ನೆಲ್ಲಾ ಕನ್ನಡದಲ್ಲಿ ನೋಡಲು ಜನರಿಗೆ ಅಪೇಕ್ಷೆ ಇದೆಯೋ, ಕೆಲವು ರೂಲ್ಸ್‌ಗಳನ್ನು ಸರಕಾರಿ ಉದ್ಯೋಗಸ್ಥರೇ ನೋಡಬೇಕಾಗುವದು ಬಹಳ ಅಪರೂಪ. ಎಕ್ಸ್‌ಪ್ಲೋಸಿವ್ ರೂಲ್ಸ್‌ಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಬೇಕೋ, ರೂಲ್ಸ್‌ಗಳನ್ನು ಕನ್ನಡಕ್ಕೆ ಮಾಡಿದ ಮಾತ್ರದಿಂದ ಲಾಯರುಗಳು ಇಲ್ಲದೆ ತೀರುತ್ತೋ. ಬಹುಶಃ ಪಂಡಿತರುಗಳೂ ಸಹ ಬೇಕಾಗಬಹುದು. ಕನ್ನಡದ ರೂಲ್ಸ್‌ಗಳನ್ನು ಅರ್ಥ ಮಾಡುವದು ಬಹಳ ಕಷ್ಟವೆಂತ ಒಬ್ಬ ಕನ್ನಡದಲ್ಲಿ ಬಿ. ಎ. ಪಾಸಾದವರು ನನ್ನಲ್ಲಿ ಹೇಳಿದರು. ನನಗೆ ತೆಲುಗು ಪಾಠ ಹೇಳಿಕೊಡುತ್ತಿದ್ದ ತೆಲುಗು ಮುನ್ಶಿಯವರಿಗೆ ತೆಲುಗು ಪೆನಲ್‌ಕೋಡಿನ ಅರ್ಥವಾಗುವದಿಲ್ಲವೆಂತ ಹೇಳುತ್ತಿದ್ದರು. ಠರಾವು ತಂದವರು ಕನ್ನಡದಲ್ಲಿ ಪೆನಲ್‌ಕೋಡು ಓದುತ್ತಾರೋ ಎಂತ ತಿಳಿಯಲು ಅಪೇಕ್ಷಿಸುತ್ತೇನೆ. ಹಾಗೆ ಅವರು ಓದುತ್ತಾರಾದರೆ ವಿಶೇಷವೇ ಸರಿ.

ಈ ಮ್ಯಾನ್ಯುವಲ್‌ಗಳನ್ನು ಮಾತ್ರ 200 ಪ್ರತಿಗಳಾಗಿ ಪ್ರಿಂಟ್ ಮಾಡಬೇಕಾದರೆ ಕಡಿಮೆಪಕ್ಷ 5,000 ರುಪಾಯಿ ಬೇಕಾಗುತ್ತೆ. ಅವನ್ನು ಓದಲು ಅಪೇಕ್ಷಿಸುವವರಿದ್ದಾರೋ? ಗ್ರಾಮದವರು ಠರಾವು ತಂದವರು ಹೇಳುವಷ್ಟು ತಿಳುವಳಿಕೆ ಇಲ್ಲದವರಾಗಿಲ್ಲವೆಂತ ನಾನು ನಂಬುತ್ತೇನೆ. ತಿಳುಕೊಳ್ಳಬೇಕಾದರೆ ಯಾರಾದರೂ ಸ್ನೇಹಿತರಲ್ಲಿಗೆ ಹೋಗಿ ತಿಳಿದುಕೊಳ್ಳುತ್ತಾರೆ. ನಾವು ಅಭಿವೃದ್ಧಿ ಹೊಂದುತ್ತಾ ಇದ್ದೇವೆ. ಇಂಗ್ಲಿಷಿನಲ್ಲಿ ರೂಲ್ಸ್‌ಗಳು ಇರುವದರಿಂದಲೇ ಈ ದೇಶವು ಎಷ್ಟೋ ಮುಂದರಿಸಿ ಹೋಗಿದೆಯೆಂತ ನಮಗೆ ತೋರುತ್ತದೆ.

ಮಿ. ಸುಬ್ಬಯ್ಯನವರು.

5,000 ರುಪಾಯಿ ಮಾತ್ರ ಖರ್ಚಾಗುವದು ದೊಡ್ಡದಲ್ಲ. ಈ ಉದ್ದೇಶಕ್ಕಾಗಿ ಹೆಚ್ಚಾದರೂ ಖರ್ಚು ಮಾಡಲು ಸರಕಾರವು ತಯಾರಿರಬೇಕು. ಶೇಕಡ 99ರಷ್ಟು ಜನರು ಕನ್ನಡದಲ್ಲಿ ಕಾನೂನು ಓದಬೇಕೆಂತಿಲ್ಲ. ಕನ್ನಡದಲ್ಲಿ ಕಾನೂನು ಇದ್ದರೂ ಲಾಯರುಗಳು ಇರಬೇಕೆಂಬ ಕಾರಣದಿಂದ ಕನ್ನಡಕ್ಕೆ ಮಾಡಬಾರದೆನ್ನುವದು ನ್ಯಾಯವಲ್ಲ. ಕನ್ನಡ ಭಾಷೆಯನ್ನೇ ಇಲ್ಲದಂತೆ ಮಾಡಲು ಸಾಧ್ಯವಾಗುತ್ತದೋ? ಆಫೀಸರುಗಳೆಲ್ಲಾ ಕನ್ನಡದವರೇ ಆಗಿದ್ದಾಗ ಎಲ್ಲಾ ಕಾನೂನುಗಳು ಕನ್ನಡದಲ್ಲಿ ಇರುತ್ತಿತ್ತು.

ಮಿ. ಟಿ. ಜೆ. ಟಾಸ್ಕರ್‌ರವರು.

ಇಷ್ಟೆಲ್ಲಾ ಖರ್ಚುಮಾಡಿ ಪ್ರಿಂಟ್ ಮಾಡಿಸಿದರೂ ಸಹ ಒಂದು ಪ್ರತಿ ಮಾತ್ರ ಠರಾವು ತಂದವರ ಪುಸ್ತಕ ಭಂಡಾರಕ್ಕೆ ಸೇರಬಹುದು. ಇತರ ಎಲ್ಲಾ ಪ್ರತಿಗಳೂ ಕಮಿಷನರವರ ಆಫೀಸಿನ ಬೀರುಗಳಲ್ಲಿ ಧೂಳಿನ ಹಿಡಿದು ಬಿದ್ದಿರಬೇಕಾಗುತ್ತೆ. ಈ ಠರಾವಿನಲ್ಲಿ ಹಾಸ್ಯರಸ ಹೆಚ್ಚಾಗಿದೆ. ಸರಕಾರದವರು ಅಲ್ಲಲ್ಲಿ ಒಂದೊಂದು ರೂಲ್‌ಗಳನ್ನು ಹೆಕ್ಕಿ ಕನ್ನಡ ಮಾಡಿ ಇಡಲು ಸಾಧ್ಯವಿಲ್ಲ. ಇದಕ್ಕಿಂತ ಸ್ಥಳೀಯ ವರ್ತಮಾನ ಪತ್ರಿಕೆಯು ಆಗಿಂದಾಗ್ಗೆ ಆಡಳಿತದ ಮೇಲೆ ಲೇಖನಗಳನ್ನು ಬರೆಯುತ್ತಿದ್ದರೆ ಹೆಚ್ಚು ಪ್ರಯೋಜನವಾಗಬಹುದು. ಇವು ಜನರಿಗೆ ಹೆಚ್ಚು ಸುಲಭವಾಗಿ ತಲಪುತ್ತವೆ. ಕನ್ನಡವನ್ನು ಅಡಗಿಸಿ ಬಿಡಬೇಕೆಂಬ ಉದ್ದೇಶವಲ್ಲ. ಕಾರ್ಯತಃ ಅವಶ್ಯವಿದೆಯೋ ಎಂಬದೇ ಮುಖ್ಯ ವಿಷಯ.

ಠರಾವು ಓಟಿಗೆ ಹಾಕಲಾಗಿ ಮಂಜೂರಾಯಿತು.

28ನೇ ಠರಾವು

"ನಂಜರಾಜಪಟ್ಣ ತಾಲೋಕಿನಲ್ಲಿ ರಿಜರ್ವ್ ಫಾರೆಸ್ಟಿನಲ್ಲಿ ಆಟಂಕವಿಲ್ಲವೆ ಬೇಟೆಗೆ ಬಿಡುವಂತೆ ರೂಲನ್ನು ತಿದ್ದಿ ಕೊಡಬೇಕೆಂತ ಚೀಫ್ ಕಮೀಷನರಿಗೆ ಈ ಸಭೆಯು ಶಿಫಾರಸ್ಸು ಮಾಡುತ್ತದೆ."

ಮಿ. ಯನ್. ಆರ್. ಸುಬ್ಬಯ್ಯನವರು.

ಅಧ್ಯಕ್ಷ, ಈ ಠರಾವಿನಿಂದ ರೈತರು ತಮ್ಮ ಫಸಲನ್ನು ಕಾಪಾಡಿಕೊಳ್ಳಲು ಅನುಕೂಲ ಕೊಡಬೇಕೆಂತ ನಾನು ಕೇಳುವದಾಗಿದೆ. ರಿಜರ್ವ್ ಫಾರೆಸ್ಟು ಗದ್ದೆಗಳ ಸಮೀಪವಿರುವದರಿಂದ ರಾತ್ರಿಯೆಲ್ಲಾ ಗದ್ದೆಯಲ್ಲಿ ಕಾಯುತ್ತಿರಬೇಕಾಗಿದೆ. ಸ್ವಲ್ಪ ಎಚ್ಚರ ತಪ್ಪಿದರೆ ತಮ್ಮ ವರುಷದ ಕಷ್ಟದಿಂದ ಬಂದ ಫಲವೆಲ್ಲಾ ಆನೆ, ಹಂದಿ, ಕಪಿ, ಜಿಂಕೆ ಮತ್ತು ಇತರ ಮೃಗಗಳು ನಾಶಪಡಿಸಿಬಿಡುತ್ತವೆ. ಗ್ರಾಮಗಳಲ್ಲೇ ಕಾಡಾನೆಗಳು ಜನರನ್ನು ಹಗಲು ಹೊತ್ತಿನಲ್ಲಿ ಅಟ್ಟುತ್ತವೆ. ದನಗಳ ಜೊತೆಯಲ್ಲಿ ಕಾವಲುಗಾರರು ಹಾಜರಿದ್ದರೂ ಹುಲಿಗಳು ದನಗಳನ್ನು ಎತ್ತಿಕೊಂಡು ಹೋಗಿಬಿಡುತ್ತವೆ. ರಾತ್ರಿ ಹೊತ್ತಿನಲ್ಲಿ ಹುಲಿಯು, ದನ, ಆಡು, ಹಂದಿ ಅಥವ ಆಳನ್ನು ಹೊಕ್ಕಲಿಕ್ಕೆ ಗ್ರಾಮಕ್ಕೇ ನುಗ್ಗಿಬಿಡುತ್ತದೆ. ನೂಲಾಬಿಯು ಪೂರ್ವಕ್ಕೆ ಸುಮಾರು 20 ಗ್ರಾಮಗಳು ಕಾಡು ಮೃಗಗಳ ಕಾಟ ತಡೆಯಲಾರದೆ ಪಾಳುಬಿದ್ದು ಹೋದವು. ಫಾರೆಸ್ಟಿನಲ್ಲಿ ಬೇಟೆಯಾಡಿ ಕಾಡು ಮೃಗಗಳನ್ನು ಓಡಿಸಲು ಸ್ವತಂತ್ರ ಕೊಡದೆ ಹೋದರೆ ಮಾಲಂಬಿ ಪಶ್ಚಿಮ ದಿಕ್ಕಿನ ಮತ್ತು ತಾಲೋಕಿನ ಇತರ ಭಾಗದ ಗ್ರಾಮಗಳ ಪಾಡೂ ಹೀಗೆಯೇ ಆಗುತ್ತೆ.

ಮಿ. ಬಿ. ಶ್ರೀಪತಿರಾಯರು.

ರಿಜರ್ವ್ ಫಾರೆಸ್ಟ್‌ಗಳ ಸಮೀಪವಾಗಿ ವಾಸಮಾಡುವ ಮುಖ್ಯವಾಗಿ ಸೋಮವಾರಪೇಟೆ ಮತ್ತು ಅಕ್ಕಪಕ್ಕದ ಗ್ರಾಮಗಳ ರೈತರುಗಳ ಪ್ರತಿನಿಧಿಯಾಗಿ ಈ ಠರಾವಿಗೆ ನಾನು ಅನುಮೋದನೆ ಕೊಡುತ್ತೇನೆ. ಠರಾವು ನಂಜರಾಜಪಟ್ಣಕ್ಕೆ ಮಾತ್ರ ಲಗಾವಾಗುವದಾದರೂ ನನ್ನನ್ನು ಚುನಾಯಿಸಿದವರ ಹಕ್ಕುಗಳನ್ನೂ ನಾನು ಬೇಡಿಕೊಳ್ಳಬೇಕಾಗಿದೆ.

ಸಂಪಾಜೆ, ಕರಿಕೆ, ಚೆಂಬು ಗ್ರಾಮಗಳ ರೈತರು ಬಹಳ ಕಷ್ಟಕ್ಕೆ ಗುರಿಯಾಗಿರುವದು ನಿಜ. ಆ ಭಾಗವು ಪೂರ್ವದಲ್ಲಿ ತುಂಬಾ ಜನಭರಿತವಾಗಿತ್ತು, ಮತ್ತು ತುಂಬಾ ಸ್ಥಳಗಳು ವ್ಯವಸಾಯವಾಗುತ್ತಿದ್ದವು. ತಾವುನಾಡಿನ ಪಶ್ಚಿಮ ಭಾಗದ ಜನರಿಗೆ ತೆಂಗಿನ, ಅಡಿಕೆ ಮುಂತಾದ ಅವಶ್ಯಕತೆಗಳು ಸಂಪಾಜೆ ನಾಡಿನಿಂದಲೇ ಬರುತ್ತಿದ್ದವು. ಈಗ ಆ ಪ್ರಾಂತ್ಯವು ನಿರ್ಜನ ಪ್ರದೇಶವಾಗಿದೆಯೆಂತ ಹೇಳಲು ತುಂಬಾ ವ್ಯಸನಪಡಬೇಕಾಗಿದೆ. ಇದಕ್ಕೆ ಕಾರಣವು ಕಾಡು ಮೃಗಗಳ ಕಾಟವೇ. ಆನೆಗಳ ಹಾವಳಿಯು ದಿನಚರಿಯ ವಿಷಯವಾಗಿ ಹೋಗಿದೆ, ಹಗಲು ಹೊತ್ತಿನಲ್ಲೇ ಜಿಂಕೆಗಳು ಎಳೆ ತೆಂಗಿನ ಸಸಿಗಳನ್ನು ನಾಶಪಡಿಸುತ್ತವೆ. ಎಸರ್ವ್ ಫಾರೆಸ್ಟಿನ ಹದ್ದು ಗ್ರಾಮದ ಹತ್ತಿರ ಬಂದಿರುವದರಿಂದ ರೈತರಿಗೆ ಕೋವಿ ಹಿಡಿಯುವ ಸ್ವತಂತ್ರವಿಲ್ಲದ್ದರಿಂದಲೂ ರೈತರು ದಿಕ್ಕು ತೋರದವರಾಗಿದ್ದಾರೆ. ಸಂಜಬಾಜಪಟ್ಟ ತಾಲೋಕಿನಲ್ಲಿ ನಾನು ಫಾರೆಸ್ಟ್ ಕಮಿಟಿ ಮೆಂಬರಾಗಿ ತುಂಬಾ ತಿರುಗಿ ಇರುವದರಿಂದ ತಕರಾವು ತಂದವರ ಎಲ್ಲಾ ಮಾತುಗಳಿಗೆ ನಾನು ಒತ್ತಾಸೆ ಕೊಡಬಲ್ಲೆನು. ಕಾಗೋಡು ಮುಂತಾದ ಪಾಳು ಗ್ರಾಮಗಳನ್ನು ನಾನು ನೋಡಿದೆ. ಇವು ಪೂರ್ವದಲ್ಲಿ ಜನಭರಿತ ಗ್ರಾಮಗಳಾಗಿದ್ದವು ಈಗ ಬರೇ ಹಡ್ಲುಗಳು ತೋರಬರುತ್ತವೆ. ದನಗಳು ಮೇಯುವದು ಸಹ ಕಂಡುಬರುವದಿಲ್ಲ ಯಾಕೆಂದರೆ ಜನರೇ ಇಲ್ಲ. ಕಾಡು ಮೃಗಗಳ ಭೀತಿಯಿಂದಲೂ ರಾತ್ರೆಯೆಲ್ಲಾ ನಿದ್ದೆ ಕೆಡಬೇಕಾದ್ದರಿಂದಲೂ ಜನರಲ್ಲಿ ಶಕ್ತಿಯೇ ಇಲ್ಲ. ಆದ್ದರಿಂದ ಮಲೇರಿಯ ಮುಂತಾದ ಬಾಯಿಲೆಗಳು ಸ್ವಲ್ಪ ಪ್ರಬಲವಾದರೆ ತುಂಬಾ ಜನರು ಸತ್ತು ಹೋಗುತ್ತಾರೆ. ಜನರಿರುವ ಭಾಗದಿಂದ ಕಾಡು ಮೃಗಗಳನ್ನು ಓಡಿಸಲು ಸರಕಾರದವರು ಈಚೆಗೆ ಪ್ರಯತ್ನ ಮಾಡುತ್ತಿರುವದು ತೃಪ್ತಿಕರವೇ. ಕಾಡು ಮೃಗಗಳನ್ನು ಈ ರೀತಿ ಓಡಿಸುವದರಿಂದ ಪ್ರಯೋಜನವಾದೀತೋ ಎಂತ ನೋಡಬೇಕಷ್ಟೆ. ಬೊಂಬಾಯಿ ಸರಕಾರದವರು ನೇಮಿಸಿದ ಒಂದು ಕಮಿಟಿಯವರು ಈ ವಿಷಯವಾಗಿ ಬರೆದ ಒಂದು ರಿಪೋರ್ಟನ್ನು ನಾನು ಓದಿದ್ದೇನೆ. ಜನರ ಅಭಿವೃದ್ಧಿಗೆ ಕಾಡು ಮೃಗಗಳು ತುಂಬಾ ಅಡಚಣೆಯಾಗಿದ್ದಾವೆಂತಲೂ, ಇವುಗಳಿಂದ ಕೋಟ್ಯಾಂತರ ರುಪಾಯಿನ ಆರ್ಥಿಕ ನಷ್ಟವು ಇದೆಯೆಂತ ಬರೆದಿದ್ದಾರೆ. ನಮ್ಮ ದೇಶಕ್ಕೂ ಅವರ ಅಭಿಪ್ರಾಯಗಳು ಅನ್ವಯವಾಗುತ್ತವೆ. ನಮ್ಮ ದೇಶದಲ್ಲಿ ಧಾನ್ಯಗಳ ನಷ್ಟದಿಂದಲೂ, ದನಕರುಗಳ ನಷ್ಟದಿಂದಲೂ ಲಕ್ಷಗಟ್ಟಲೆ ನಷ್ಟವಿದೆಯೆಂತ ಹೇಳಬಹುದು.

ಠರಾವನ್ನು ತಂದವರು ಠರಾವನ್ನು ದೇಶಕ್ಕೆಲ್ಲಾ ವ್ಯಾಪಕವಾಗುವಂತೆ ಮಾಡಬೇಕೆಂತ ಅವರನ್ನು ಕೇಳಿಕೊಳ್ಳುತ್ತೇನೆ.

ವಿಷಯ ನಿಯಾಮಕ ಮಂಡಲಿಯಲ್ಲಿ ಮೊದಲನೇ ದಿವಸದ ಚರ್ಚೆ.

ಮೊದಲು ಮಹಾತ್ಮಾ ಗಾಂಧಿಯವರು ಉಪಸಭೆಯಲ್ಲಿ ಮಂಜೂರಾದ ಗೊತ್ತುವಳಿಗಳನ್ನು ಮಂಡಿಸಿದರು. ಅದಕ್ಕೆ ಕೆಲ ತಿದ್ದುಪಡಿಗಳನ್ನು ಹಲವು ಸದಸ್ಯರು ಸೂಚಿಸಿದರು. ಆದರೆ ಅವು ಅಂಗೀಕರಿಸಲಾಗದೇ ಹೋದವು. ಶ್ರೀ ವಿಠಲಭಾಯಿ ಪಟೇಲರೂ, ಲಾಲಾಜಿಯವರೂ, ಶ್ರೀ ಕೌಂಡಿನ್ಯ ಶ್ರೀನಿವಾಸರಾಯರೂ, ಸ್ವಾಮಿ ಗೋವಿಂದಾನಂದರೂ, ಕೈನೂಲಿನ ಚಂದಾಯದ ಸೂಚನೆಗೆ ವಿರೋಧಿಸಿದರು. ವಿರೋಧಕರಾದವರಲ್ಲಿ ಕೆಲವರು ಅಸ್ವರಾಜ್ಯ ಪಕ್ಷದವರಾಗಿದ್ದರು. ಅವರ ಅಂಬೋಣವೇನಂದರೆ, ಮಹಾತ್ಮಾ ಗಾಂಧಿಯವರಿಗೂ ದಾಸ, ನೇಹರೂ, ಇವರುಗಳಿಗೂ ಆದ ಒಪ್ಪಂದವು ಸ್ವರಾಜ್ಯಪಕ್ಷದ ಕಾರ್ಯಕಾರಿ ಮಂಡಲದಿಂದ ಸ್ವೀಕೃತವಾಗಿದ್ದರೂ, ರಾಜ್ಯ ಪಕ್ಷದ ಸಾಮಾನ್ಯ ಸಭೆಯಲ್ಲಿ ಇನ್ನೂ ಚರ್ಚಿಸಲ್ಪಟ್ಟಿಲ್ಲ, ಸ್ವರಾಜ್ಯ ಪಕ್ಷದಲ್ಲಿಯೇ ಅನೇಕ ಸದಸ್ಯರು ನೂಲಿನ ಚಂದಾಯಕ್ಕೆ ವಿರೋಧಿಸುವವರಿದ್ದಾರೆ; ಆದುದರಿಂದ, ಈ ವಿಷಯವು ವಿಷಯ ನಿಯಾಮಕ ಸಭೆಯಲ್ಲಿ ಚರ್ಚಿಸಲ್ಪಡುವ ಮುಂಚೆ ಸ್ವರಾಜ್ಯ ಪಕ್ಷದ ಸಾಮಾನ್ಯ ಸಭೆಯಲ್ಲಿ, ಚರ್ಚೆ ಮಾಡಲ್ಪಡಲಿ ಅಲ್ಲಿ ಒಪ್ಪಿಗೆಯಾದ ಮೇಲೆಯೇ ಆ ವಿಷಯವು ಇಲ್ಲಿ ಚರ್ಚಿಸಲ್ಪಡಬಹುದು. ಮಹಾತ್ಮರು ಈ ಗೊತ್ತುವಳಿಯನ್ನು ಮಂಡಿಸುವಾಗ್ಯೆ ಸ್ವರಾಜ್ಯವಾದಿಗಳಿಗೂ ವೀರ ಅಸಹಕಾರಿಗಳಿಗೂ ತಮ್ಮ ಅಭಿಪ್ರಾಯವನ್ನು ತಮ್ಮ ಸ್ವಂತ ಜವಾಬ್ದಾರಿಯ ಮೇಲಿಂದಲೇ ಕೊಡಬೇಕೆಂದು ಹೇಳಿ ಮಾತಾಡುವಾಗ, ವೀರ ಅಸಹಕಾರಿಗಳ ಸಮ್ಮೇಳನದಲ್ಲಿ ಕೈನೂಲಿನ ಚಂದಾಯದ ಬಗ್ಗೆ ತಮ್ಮ ಒಪ್ಪಿಗೆಯ ಮಾತನ್ನು ಕೊಟ್ಟಿದ್ದರೂ 'ಈಗ ತಮಗೆ ಸೂಕ್ತವೆಂದು ತೋರಿದರೆ, ಪುನಃ ಆಲೋಚಿಸಿ, ಅದಕ್ಕೆ ವಿರೋಧವಾಗಿ ಅಭಿಮತವನ್ನು ಕೊಡಬಹುದು; ವಚನ ಭಂಗದಿಂದಾಗುವ ದೋಷದಿಂದ ಅಂಥವರನ್ನು ಬಿಡುಗಡೆ ಮಾಡಿರುವನೆಂಬದಾಗಿ' ತಿಳಿಸಿದರು. ವೀರ ಅಸಹಕಾರಿಗಳಿಗೆ ಹೇಗೆಯೋ ಹಾಗೆಯೇ, ಸ್ವರಾಜ್ಯವಾದಿಗಳ ಮುಖಂಡರು, ತಮ್ಮ ಪಕ್ಷದವರನ್ನು, ತಮ್ಮ ಸಂಘದ ಕಟ್ಟಳೆಯಿಂದಲೂ, ಬಂಧನದಿಂದಲೂ ಬಿಡುಗಡೆ ಮಾಡಿ, ಅವರಿಗೂ ಸ್ವತಂತ್ರ ಅಭಿಪ್ರಾಯ ಕೊಡಲಿಕ್ಕೆ ಅಪ್ಪಣೆ ಕೊಡಬೇಕಾಗಿ ಮಹಾತ್ಮರು ದೇ. ದಾಸರಿಗೂ ನೇಹರು ಅವರಿಗೂ ಬಿನ್ನವಿಸಿದರು, ಆದರೆ ಪಂಡಿತ ನೇಹರು, ದಾಸ ಇವರುಗಳು ತಮ್ಮ ಮಾತಿನಲ್ಲಿ ವಿಶದೀಕರಿಸಿದ್ದೇನಂದರೆ, ಸ್ವರಾಜ್ಯ ಪಕ್ಷದ ಘಟನೆಯಲ್ಲಿ ಆ ಪಕ್ಷಕ್ಕೆ ಸೇರಿದ ಪ್ರತಿಯೊಬ್ಬ ಸದಸ್ಯನೂ, ಆದರಿಂದ ಕಾರ್ಯಕಾರಿ ಮಂಡಲದಿಂದ ನಿರ್ಣಯಿಸಲ್ಪಟ್ಟದಕ್ಕೆ ರೀತಿ ಹಾಗೂ ನಿಯಮಗಳನ್ನು ಸ್ವೀಕರಿಸದೆ ಗತ್ಯಂತರವಿಲ್ಲ. ಈಗ ಒಪ್ಪಂದವು ಕಾರ್ಯ ನಿಯಾಮಕ ಸಭೆಯಿಂದ ಸ್ವೀಕೃತವಾಗಿರುವದು, ಆದರಂತೆ ಪ್ರತಿಯೊಬ್ಬ ಸ್ವರಾಜ್ಯವಾದಿಯು ಕೈನೂಲಿನ ಚಂದಾಯಕ್ಕೆ ಒಪ್ಪಲೇ ಬೇಕು. ಯಾರಿಗಾದರೂ ಭಿನ್ನಾಭಿಪ್ರಾಯವನ್ನು ಸೂಚಿಸುವದಿದ್ದರೆ ನಾಳೆ ನಡೆಯತಕ್ಕ ಸಾಮಾನ್ಯ ಸಭೆಯಲ್ಲಿ ಸೂಚಿಸಬಹುದು. ಬಹುಮತವು ಯಾವ ರೀತಿಯಾಗಿ ನಿರ್ಧರಿಸುವದೋ, ಆ ಮೇರೆ ನಡೆಯಬೇಕು. ಯಾರಿಗೆ ಇಷ್ಟವಿಲ್ಲವೋ, ಅವರು ಸ್ವರಾಜ್ಯ ಪಕ್ಷದಿಂದ ಹೊರಗಾಗ ಬಹುದು. ಯಾರಾದರೂ ವಿರೋಧಿಸಿದರೆ, ಅವರು ತಮ್ಮ ವೈಯಕ್ತಿಕ ಹೊಣೆಯಿಂದಲೇ ವಿರೋಧಿಸುವರೇ ಹೊರತು ಸ್ವರಾಜ್ಯವಾದಿಗಳ ಸದಸ್ಯರೆಂದಲ್ಲ.

ಶ್ರೀ ವಿಠಲಭಾಯಿ ಪಟೇಲರವರು ತಮ್ಮ ಅಭಿಮತವನ್ನು ಸೂಚಿಸುವಾಗ ಹೇಳಿದ್ದೇನಂದರೆ ಈಗ ಮಹಾತ್ಮರಿಂದ ಸೂಚಿಸಲ್ಪಡುವ ಕೈನೂಲಿನ ಚಂದಾಯವು ಕಾಂಗ್ರೆಸಿನ ಸದಸ್ಯರ ಸಂಖ್ಯೆಯನ್ನು ಬಹಳವಾಗಿ ಕಡಮೆ ಮಾಡುವದಲ್ಲದೆ, ಮಡ್ರಳರು, ಜಸ್ಟೀಸ ಪಕ್ಷದವರು, ಬೇರೆಯವರು ಕಾಂಗ್ರೆಸಿಗೆ ಬಂದು ಸೇರಲು ಅಡಚಣೆಯುಂಟು ಮಾಡುವದು. ಈ ರೀತಿ ಮಾಡುವದು ಮುಂಬಯಿಯಲ್ಲಿ ಹಿಂದಿನ ತಿಂಗಳು ನೆರೆದ ಐಕ್ಯಕೂಟದ ಉದ್ದೇಶಕ್ಕೆ ವಿರೋಧವಾಗುವದು; ಮತ್ತು ಮಹಾತ್ಮರ ಉದ್ದೇಶವು ದೇಶದಲ್ಲೆಲ್ಲಾ ಖಾದಿಯ ಪ್ರಚಾರವಾಗಬೇಕೆಂಬುದು. ಇವೆಲ್ಲ ಪೂರ್ತಿಯಾಗಬೇಕಾದರೆ ಬಲಾತ್ಕಾರದಿಂದಲ್ಲ ಕಾಂಗ್ರೆಸಿನಲ್ಲಿ ಎಲ್ಲರೂ ಸೇರುವಂತೆ ಮಾಡಿ, ಯಾರಿಗೆ ಖಾದಿಯಲ್ಲಿ ನಂಬಿಗೆ ಇದೆಯೋ, ಅವರೆಲ್ಲರೂ ಖಾದಿಯನ್ನು ಬಳಸುತ್ತಿದ್ದರೆ, ಇತರರೂ ಸಹವಾಸ ಬಲದಿಂದ ಖಾದಿಯನ್ನೇ ಉಪಯೋಗಿಸುವರು. ಸ್ವರಾಜ್ಯವು ದೊರಕಬೇಕಾದರೆ, ಖಾದಿಯೊಂದರಿಂದಲೇ ಇಲ್ಲ. ಕಾನೂನು ಮಂಡಲಗಳಲ್ಲಿ ಕಾರ್ಯ ನಡಿಸುವದರಿಂದಲೂ ಅಲ್ಲ. ಹೀಗೆಯೇ ಇತರ ಯಾವದು ಒಂದೇ ಕಾರ್ಯಕ್ರಮದಿಂದಲೂ ಅಲ್ಲ. ಯಾರಿಗೆ ಯಾವುದರಲ್ಲಿ ವಿಶ್ವಾಸ ಇರುವುದೋ ಅವರು ಅದರಲ್ಲಿ ಮನಸಿಟ್ಟು ಕಾರ್ಯ ನಡಿಸಿದರೇನೇ ಸ್ವರಾಜ್ಯ ಪ್ರಾಪ್ತಿಯಾಗುವದೆಂದು ಹೇಳಿದರು. ಲಾಲಾಜಿಯವರು ಮಹಾತ್ಮರ ಗೊತ್ತುವಳಿಯನ್ನು ವಿರೋಧಿಸುವಾಗ್ಯೆ ಹೇಳಿದ್ದು, ಈ ಒಪ್ಪಂದವೆಂದರೆ, ಅಸಂಬದ್ಧ ತತ್ವಗಳ ಸಂತೆಯಾಗಿದೆ. ಖಾದಿಯ ಬಟ್ಟೆಯನ್ನು ಎಲ್ಲಾ ಸಮಯದಲ್ಲಿಯೂ ತೊಡಬೇಕು. ಕೇವಲ ಕಾಂಗ್ರೆಸಿನ ಸಭೆಗಳೂ ಕೂಟಗಳೂ ಜರಗುವ ಸಮಯದಲ್ಲಿ ಉಪಯೋಗಿಸಿದರೆ ಸಾಕು ಎಂಬುದಾಗಿ ಅಸ್ಪದ ಕೊಡುವದು ಒಂದು ಬಗೆಯಿಂದ ಜನಗಳಿಗೆ ಅಸಾಧುಭೂತಿತನವನ್ನು ಕಲಿಸಿಕೊಟ್ಟಾಂತಾಗುವದು. ಕೈನೂಲಿನ ಚಂದಾಯದ ವಿಷಯಕ್ಕೆ ಇಲ್ಲವೇ ಎಲ್ಲರೂ ತಾವೇ ಸ್ವಂತವಾಗಿ ನೂತು ನೂಲನ್ನು ಕೊಟ್ಟರೆ, ಸಾಕೆಂದು ಹೇಳಬೇಕು. ಇಲ್ಲದೆ, ಇತರರಿಂದ ನೂಲಿಸಿದ ನೂಲನ್ನು ಕೊಟ್ಟರೆ ಅದರಿಂದಾಗಬಹುದಾದ ಮೋಸವನ್ನು ತಪ್ಪಿಸುವದಕ್ಕಾಗುವದಿಲ್ಲ. ಮಹಾತ್ಮರು ಈಗ ಹೊಸದಾಗಿ ಸೂಚಿಸಿರುವ ಕೈನೂಲಿನ ಚಂದಾಯವು ಪ್ರಪಂಚದ ಚರಿತ್ರೆಯಲ್ಲಿಯೇ ವಿಚಿತ್ರವಾದುದು. ಇದೊಂದು ವಿಲಕ್ಷಣ ಪ್ರಯೋಗವೆಂದು ಹೇಳಬಹುದು.

ದೇಶಬಂಧು ದಾಸರು ಎಲ್ಲಾ ಆಕ್ಷೇಪಣೆಗಳಿಗೂ ಉತ್ತರ ಕೊಡುವಾಗ್ಯೆ ಹೇಳಿದ್ದೇನಂದರೆ, ಇಷ್ಟೆಲ್ಲಾ ಮಾತನಾಡಿದವರಲ್ಲಿ ಸ್ವರಾಜ್ಯವಾದಿಗಳು ಬಹಳ ಸ್ವಲ್ಪ. ಸ್ವರಾಜ್ಯವಾದಿಗಳು ಹೀಗೆ ಮಾಡಿದರು, ಹಾಗೆ ಮಾಡುವರೆಂದು ಹೇಳುವದಕ್ಕೆ ಇತರರಿಗೆ ಅಧಿಕಾರವಿಲ್ಲ. ನನಗೆ ಸ್ವತಃ ಕೈನೂಲಿನ ಚಂದಾಯದ ವಿಷಯದಲ್ಲಿ ನಂಬಿಗೆ ಇಲ್ಲದಿದ್ದರೂ, ಮಹಾತ್ಮರ ಅಗಾಧ ವಿಶ್ವಾಸವನ್ನು ತಿಳಿದು ಒಂದಿಲ್ಲೊಂದು ದಿನ ನನಗೂ ಮನಗಾಣಿಕೆಯಾಗುವದೆಂಬ ಭರವಸೆಯಿಂದ ನಾನೂ ನೂಲಲು ಮೊದಲುಮಾಡುತ್ತೇನೆ, ನನ್ನ ಅಲ್ಪ ತರ್ಕ ಬುದ್ಧಿಯು ಮಹಾತ್ಮರ ದೈವಿಕ ಭಾವನೆಯ ಮುಂದೆ ನಿಲ್ಲತಕ್ಕದ್ದಲ್ಲ. ಮಹಾತ್ಮರು ನಮ್ಮನ್ನು ವಿಜಯ ಭೂಮಿಗೆ ಒಯ್ಯತಕ್ಕವರಿರುವರು. ನಮ್ಮ ತತ್ವಗಳಿಗೂ, ಅವರ ತತ್ವಗಳಿಗೂ ವಿರೋಧ ಬಾರದಂತೆ ಅನ್ಯೋನ್ಯವಾಗಿ ಸಹಕರಿಸಿ ಕೆಲಸ ಮಾಡುವದೇ ಈಗ ಬೇಕಾದ್ದು. ಹುಚ್ಚು ವಾದದಿಂದೇನೂ ಆಗದು!

ಡಾ. ಮಹಮ್ಮದಲ್ಲಿಯವರು ಕೊನೆಗೆ ಭಾಷಣ ಮಾಡಿದರು. ಅವರು ಅಂದದ್ದು; ನಮಗೆ ಸ್ವರಾಜ್ಯ ತಕ್ಕಲಿಕ್ಕೆ ಎರಡೇ ಸಾಧನಗಳು, ಅವು ಯಾವುದೆಂದರೆ ರಾಟೆ, ಅಥವಾ ಶಸ್ತ್ರ; ಸದ್ಯಕ್ಕೆ ಶಸ್ತ್ರದಿಂದ ಸ್ವರಾಜ್ಯ ದೊರಕಿಸುವದು ದುಸ್ತರವಿದೆ, ಅಥವಾ ಒಂದು ಬಗೆಯಿಂದ ಶಸ್ತ್ರದಿಂದ ಸ್ವರಾಜ್ಯ ಪ್ರಾಪ್ತಿಯಾದರೂ ಅದು ಶಸ್ತ್ರಧಾರಿಗಳ ಸ್ವರಾಜ್ಯವಾಗುವದೇ ಹೊರತು ಸಾಮಾನ್ಯ ಪ್ರಜೆಗಳದಲ್ಲ. ಈಗ ಇಡೀ ಹಿಂದೂ ದೇಶದಲ್ಲಿ ಕೋಟ್ಯಾನುಕೋಟಿ ಜನಗಳು ಒಪ್ಪತ್ತು ಕೂಡ ಊಟಕ್ಕಿಲ್ಲದೆ, ಕಷ್ಟಪಡುತ್ತಿರುವರು, ಅಂಥವರೆಲ್ಲರಿಗೂ ಸ್ವರಾಜ್ಯವೆಂದರೆ ಹೊಟ್ಟೆ ತುಂಬಾ ಊಟ, ಮೈ ತುಂಬ ಬಟ್ಟೆ; ಇಂಥ ಸ್ವರಾಜ್ಯವು ಸಿಕ್ಕಬೇಕಾದರೆ, ರಾಟೆಯಿಂದಲೇ! ಕೆಲವು ಅಲ್ಪಸಂಖ್ಯಾಕ ಜನರು ಅಗಾಧವಾದ ಸ್ವಾರ್ಥತ್ಯಾಗವನ್ನು ಮಾಡುವದಕ್ಕಿಂತಲೂ ಬಹು ಸಂಖ್ಯಾಕರು ಸ್ವಲ್ಪ ಸ್ವಾರ್ಥತ್ಯಾಗ ಮಾಡಿ, ಸ್ವರಾಜ್ಯ ಸಂಪಾದಿಸುವದು ಮೇಲು. ಈ ರೀತಿಯಾದ ಮಾರ್ಗವು ರಾಟೆಯೇ ಹೊರತು ಬೇರೆ ಇಲ್ಲ. ಮಹಾತ್ಮರು ಪ್ರಪಂಚದ ಅರ್ಥಶಾಸ್ತ್ರಜ್ಞರಲ್ಲಿ ಬಹು ಮೇಲಾದವರು, ನಮ್ಮ ದೇಶದಲ್ಲಿಯೇ ಹುಟ್ಟಿದ ಮಹಾತ್ಮರಲ್ಲಿ ನಮ್ಮ ನಂಬಿಗೆಯಿಲ್ಲ. ಜರ್ಮನಿಯವನೊಬ್ಬನು, ಏನೋ ಹೇಳಿದನೆಂದರೆ ಅದು ನಮಗೆ ವೇದ ವಾಕ್ಯಕ್ಕೆ ಸಮಾನ, ನಮ್ಮ ದೇಶದವರು ಹೇಳಿದರೆ ನಮಗೆ ವಿಶ್ವಾಸವಿಲ್ಲವೆಂಬುದೇ, ನಮ್ಮ ದೌರ್ಭಾಗ್ಯದ ಪರಮಾವಧಿಯನ್ನು ವ್ಯಕ್ತಪಡಿಸುತ್ತದೆಂದು ಹೇಳಿ, ಈ ಸಂವತ್ಸರದಲ್ಲಿ ನಮ್ಮ ದೇಶದಲ್ಲಿರುವ ಪರದೇಶೀಯ ಬಟ್ಟೆಗಳಿಗೆಲ್ಲಾ ಬಹಿಷ್ಕಾರವಾಗಬೇಕಾದರೆ, ಕೈನೂಲಿನ ಚಂದಾಯದಿಂದಲೇ ಆಗಬೇಕೆಂಬ ಇಂಗಿತವನ್ನರಿತುಕೊಂಡೇ ತಾವು ವಾರ ಒಂದಕ್ಕೆ ೩½ ಗಂಟೆ ರಾಟೆಗೆ ವಿನಿಯೋಗಿಸುವೆನೆಂದು ಮಹಾತ್ಮರಿಗೆ ಮಾತುಕೊಟ್ಟೆನೆಂದು ಹೇಳಿ ಮುಗಿಸಿದರು.

ಇಷ್ಟಾದ ನಂತರ ಎಲ್ಲರ ಮತ ಗಣನೆ ಆಯಿತು; 116 ಜನರು ಕೈನೂಲಿನ ಚಂದಾಯ ನಿರ್ಣಯಕ್ಕೆ ಮತ ಕೊಟ್ಟರು. 19 ಜನರು ವಿರೋಧಿಸಿದರು. ಸುಮಾರು 25 ಜನರು ಮತ ಕೊಡಲಿಲ್ಲ. ಈ ರೀತಿಯಾಗಿ ಕೈನೂಲಿನ ಚಂದಾಯದ ಗೊತ್ತುವಳಿಯು ಸಮ್ಮತವಾದುದನ್ನು ಕಂಡು ಮಹಾತ್ಮರು ಹಿಂದೂ ದೇಶಕ್ಕೆ ಸ್ವರಾಜ್ಯವೂ ರಾಟೆಯೂ ಚಿರಾಯುವಾಗಲೆಂದು ಹೇಳಿ ಹೊರಟರು.

'ಕರ್ನಾಟಕ ವೃತ್ತದಿಂದ'

ಕೌನ್ಸಿಲ್ ಮೀಟಿಂಗು.

(ಪ್ರಶ್ನೋತ್ತರಗಳು ಮುಂದುವರಿದದ್ದು)

ಮಿ. ಎ. ಬಿ. ಜಂಗಪ್ಪನವರು.

150. ಪ್ರ (ಎ) ಫಾರೆಸ್ಟು ಡಿಪಾರ್ಟಮೆಂಟಿಗೂ ಪ್ಯಾರಿ ಕಂಪೆನಿಗೂ ಉಂಟಾಗುವ ಎಗ್ರಿಮೆಂಟಿನ ವಿಷಯ ವಿಚಾರಿಸಲು ಕಮಿಷನರು, ಚೀಫ್ ಫಾರೆಸ್ಟ್ ಆಫೀಸರು, ಮಿ. ಬಿ. ಶ್ರೀಪತಿರಾಯರು ಮತ್ತು ಸಿ ಯಸ್. ವೆಂಕಟ್ಯಯ್ಯನವರು, ಇಂತಿಷ್ಟು ಮೆಂಬರುಗಳುಳ್ಳ ಒಂದು ಕಮಿಟಿಯು ನೇಮಕವಾಗಿದೆಯೋ?

(ಬಿ) ಈ ಕಮಿಟಿಯ ಉದ್ಯೋಗಸ್ಥರಲ್ಲದ ಮೆಂಬರುಗಳನ್ನು ಕೌನ್ಸಿಲಿನ ಉದ್ಯೋಗಸ್ಥರಲ್ಲದ ಮೆಂಬರುಗಳು ಚುನಾಯಿಸಿದ್ದೋ?

(ಸಿ) ಸರಕಾರದವರು ಚುನಾಯಿಸಿದ್ದಾದರೆ ಈ ವಿಷಯದಲ್ಲಿ ಕೊಡವರ ಹಿತವನ್ನು ಕಾಯಲು ಕೊಡವರನ್ನು ಮೆಂಬರುಗಳಾಗಿ ನೇಮಿಸುವರೋ?

ಉ. (ಎ) ಮತ್ತು (ಬಿ) ಚೀಫ್ ಕಮಿಷನರವರು ಅಂಥಾ ಕಮಿಟಿಯನ್ನು ನೇಮಿಸಿದ್ದಾಗಿದೆ.

(ಸಿ) ಕಮಿಟಿ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸುವ ವಿಷಯ ಯೋಚನೆಯಲ್ಲಿದೆ.

151. ಪ್ರ. (1) ಹೆಚ್ಚಾಗಿ ಧೂಪ ಮತ್ತು ಮರ ಎಣ್ಣೆಯನ್ನು ತೆಗೆಯಲು ಫಾರೆಸ್ಟ್ ಇಲಾಖೆಯವರು ಪ್ರಯತ್ನಪಟ್ಟಿದ್ದಾರೋ?

(2) ಅಂಥಾ ಮರಗಳಿರುವದರಿಂದ ಈ ಕೆಲಸದಿಂದ ಫಾರೆಸ್ಟ್ ಇಲಾಖೆಗೆ ಉತ್ಪತ್ತಿ ಉಂಟಾಗಲಿಕ್ಕಿಲ್ಲವೋ?

ಉ. ಧೂಪ ಮತ್ತು ಮರಎಣ್ಣೆಯನ್ನು ತೆಗೆಯಲು 1913 ರಿಂದ ಪ್ರಯತ್ನಗಳು ನಡೆಯಲ್ಪಟ್ಟಿವೆ. ಮೊನ್ನೆ ನ ರದಿಂದ 'ಗಮ್ ಕೆನೋ' ಎಂಬ ಅಂಟೊಂದು ಮಾತ್ರ ಸಾಧ್ಯವಾಗಿದೆ. 1919ರಲ್ಲಿ ಈ ಪದಾರ್ಥಕ್ಕೆ ಒಂದು ಕಂಪೆನಿಯಿಂದ ಆರ್ಡರು ಬಂತು. ಆದರೆ ಅವರಿಗೆ ಸ್ವಲ್ಪ ಮಾತ್ರ ಬೇಕಾದುದರಿಂದಲೂ, ನ್ಯಾಯವಾದ ಕ್ರಯ ಕೊಡಲಾರದುದರಿಂದಲೂ ಆ ಕೆಲಸವು ನಿಲ್ಲಿಸಲ್ಪಟ್ಟಿತು.

(2) ಈ ಕೆಲಸದಿಂದ ಉಂಟಾಗಬಹುದಾದ ಉತ್ಪತ್ತಿಯ ವಿಷಯ ಜ್ಞಾಪಕದಲ್ಲಿಡಲಾಗುವುದು.

152. ಪ್ರ. ಭೂಮಿಯ ಮೇಲೆ ಹಾಸುವ ತೊಲೆಗಳಿಗೆ ನಿರ್ವರ್ಣ ತೈಲ ರಸವನ್ನು ಹಾಕುವದಕ್ಕೋಸ್ಕರ ಇರುವ ಕಟ್ಟಡ ಮತ್ತು ಸಾಮಾನುಗಳನ್ನು ಮಾವುಕೂಟದಲ್ಲಿ ಉಪಯೋಗಿಸಿದ್ದಾರೋ? ಇದರಿಂದ ಮರವನ್ನು ಕಾಪಾಡಲು ಪ್ರಯೋಜನಕರವಾಗಿದೆಯೋ?

ಉ. ಆ ಕಟ್ಟಡಗಳೂ, ಸಾಮಾನುಗಳೂ ಉಪಯೋಗಿಸಲ್ಪಟ್ಟಿವೆ. ಈ ತೈಲವನ್ನು ಹಚ್ಚದೇನೇ ತೊಲೆಗಳು ಸಾಧಾರಣವಾಗಿ ಎರಡು ವರುಷ ಬಾಳುತ್ತವೆ ತೈಲವನ್ನು ಹಚ್ಚುವುದರಿಂದ ಉಂಟಾಗುವ ಪ್ರಯೋಜನವನ್ನು ಇನ್ನೂ ಹೇಳಲಾಗುವುದಿಲ್ಲ.

153. ಪ್ರ. (1) ಕಂಟ್ರಾಕ್ಟರ್ ಮಿ. ಟ್ಯೂರವರು ಇಷ್ಟರವರೆಗೆ ಕತ್ತರಿಸಿರುವ ಮರಗಳೆಷ್ಟು, ತೆಗೆದುಕೊಂಡು ಹೋಗಿರುವವೆಷ್ಟು ಮತ್ತು ಹಣ ಕೊಟ್ಟವೆಷ್ಟು?

(2) ಈ ಕಂಟ್ರಾಕ್ಟಿನ ಸಮಯವೆಷ್ಟು?

(3) ಎಷ್ಟು ಘನ ಅಡಿ ಹಾಸು ತೊಲೆಗಳನ್ನು ಟ್ಯೂರವರು ತಯಾರಿಸಿರುವರು?

(4) ಯಾವ ಮರವನ್ನಾದರೂ ಫಾರೆಸ್ಟಿನಿಂದ ಕತ್ತರಿಸುವ ಶರತ್ತು ಟ್ಯೂರವರಿಗಿದೆಯೋ?

ಉ. (1) ಕತ್ತರಿಸಿದ ಮರಗಳ ಸಂಖ್ಯೆ ಗೊತ್ತಿಲ್ಲ, ಬೇಕಾದರೆ ತಿಳಿಯಬಹುದು. ಕ್ರಯಕೊಟ್ಟು ತೆಗೆದುಕೊಂಡು ಹೋಗಿರುವ ತೊಲೆಗಳು ಇಲ್ಲ.

(2) 1925ನೇ ಜೂನ್ 30.

(3) 6723 ಘನ ಅಡಿ ಹಾಸು ತೊಲೆಗಳು.

(4) ಕಲ್ಲಳ್ಳದ 250 ಎಕರೆಯ 1ನೇ ಕೂಪು ಅವರ ವಶಕ್ಕೆ ಬಿಟ್ಟಿದೆ. ಇವುಗಳನ್ನು 25 ಎಕರೆಗಳ ಸೀಳುಗಳಾಗಿ ವಿಂಗಡಿಸಲ್ಪಟ್ಟಿದೆ. ಒಂದು ಸೀಳಿನಿಂದ ಇನ್ನೊಂದು ಸೀಳಿಗೆ ಹೋಗುವ ಮೊದಲು ಅಲ್ಲಿರುವ ಎಲ್ಲಾ ಪ್ರಯೋಜನಕರವಾದ ಮರಗಳನ್ನು ಕತ್ತರಿಸುವದು ಟ್ಯೂರವರ ಕೆಲಸವಾಗಿದೆ. ಅವರು ಇನ್ನೂ 1ನೇ ಸೀಳಿನಲ್ಲೇ ಕೆಲಸ ಮಾಡುತ್ತಿರುವರು.

ನೋಟೀಸ್.

ಕೊಡಗು ವಿದ್ಯಾಭಿವೃದ್ಧಿ ಸಂಘದ ಜನರಲ್ ಮೀಟಿಂಗ ತಾರೀಕು 11—1—25ನೇ ಆದಿತ್ಯವಾರ ಸಾಯಂಕಾಲ 5 ಗಂಟೆಗೆ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲ್‌ನಲ್ಲು ನಡಿಯುವ್ವದರಿಂದ ಎಲ್ಲಾ ಚಂದಾದಾರರು ದಯವಿಟ್ಟು ಬರಬೇಕಾಗಿ ಕೇಳಿಕೊಳ್ಳೋಣಾಗಿದೆ.

M. BHIMAIYA, Hon. Secretary. (Sd). K. CHENGAPPA, President.

ವರ್ತಮಾನ ಸಂಗ್ರಹ.

ಒಳ ದೇಶ.

ವೈನಾಡಿನಿಂದ ವೀರರಾಜೇಂದ್ರಪೇಟೆಗೆ ರೈಲು ತರುವದಕ್ಕಾಗಿ ಸರ್ವೆಯಾಗಿತ್ತಷ್ಟೆ. ಆದರೆ ತಲಚೇರಿಯಿಂದ ವೈನಾಡಿಗೆ ರೈಲು ಬಾದರೆ ಅದರಿಂದ ಲಾಭವೈನು ಕೊಡಗಿಗೆ ಒರಬೇಕಿತ್ತು. ಮದ್ರಾಸು ಸರಕಾರದವರು ತಲಚೇರಿ ಮತ್ತು ವೈನಾಡು ಲೈನಿನ ಕರ್ಚಿನಮೇಲೆ ಆಗುವ ಬಡ್ಡಿ ಮೊಬಲಗನ್ನು ಗ್ಯಾರಂಟಿಮಾಡಲು ಒಪ್ಪದಕಾರಣ ಆ ಲೈನು ಮುಂಚೂರಾಗ ಲಿಲ್ಲವಾದ್ದರಿಂದ ಕೊಡಗಿಗೆ ರೈಲು ಬರುವ ಏರ್ಪಾಡು ಸಹ ನಿಂತುಹೋಯಿತು.

ಶನಿವಾರ ಸಂತೆಯಲ್ಲಿ ಪ್ಲೇಗ್ ರೋಗವು ತಲೆದೋರಿ 3 ತಿಂಗಳುಗಳ ವರೆಗೆ ಊರನ್ನು ಬಿಟ್ಟಿದ್ದ ಜನರು ಪುನಹ ಈಗ ಬಂದು ಸೇರುತ್ತಲಿರುವರು. ಇದುವರೆಗೆ ಜನರಿಗ ಯಾವ ಗಲಾಟೆಯೂ ಆಗಿರುವುದಿಲ್ಲವಾದ ಕಾರಣ ಪಂಸ್ಟೇಡರು ತಮ್ಮ ವ್ಯಾಪಾರ ವಸ್ತುಗಳಿಗೆ ಯಾವಅಭ್ಯಂತರವೂ ಇಲ್ಲದೆ ಪ್ರಯಾಣಮಾಡಬಹುದು.

ಶನಿವಾರಸಂತೆ ಹೋಬಳಿಗೆ ಸೇರಿದ ಕಿರಂಗಾಲದಲ್ಲಿ ಇದುವರೆಗೆ 7 ಜನರು ಪ್ಲೇಗ್‌ಮಾರಿಗೆ ತುತ್ತಾಗಿರುತ್ತಾರಲ್ಲದೆ, ಇಬ್ಬರು ಕಾಯಿಲೆಯಲ್ಲಿರುವರು.

ಶ್ರೀಕಾವೇರಿ ಬಸ್ ಸರ್ವೀಸಿನವರು ಇದೇ ತಾ 5 ರಿಂದ ಮಡಿಕೇರಿಯಿಂದ ವೀರಾಜಪೇಟೆಗೆ ಮೂರ್ನಾಡು ಮೈಸಿಗಾಗಿಯೂ ಸಹ ದಿನವೈ ನಪ್ರಿಂಪವರ ಸರ್ವಿಸನ್ನು ಆರಂಭಿಸುವರೆಂದು ವರ್ತಮಾನವಿದೆ.

ಭಾಗಮಂಡಲದ ದೇವಸ್ಥಾನದಲ್ಲು ಕಳೆದ ಮಳೆಗಾಲದ ಜೋರಾದ ಮಳೆಯು ಹಾವಳಿಯಿಂದ ಬಿದ್ದುಹೋದ ಸತ್ರಮದ ಮನೆಯನ್ನು ಪುನಹ ಕಳೆದ ತಿಂಗಳಲ್ಲಿ ಹೊಸದಾಗಿ ಕೆಲಸ ಮಾಡಿಸಿ ತಾ. 22ರಲ್ಲು ಹಂಚು ವಗೈರೆ ಹಾಕಿ ಪೂರೈಸಿದ್ದು ಮಾರಣೆದಿನ ಬೆಳಗ್ಗೆ ಈಗಿನ ಗಾಳಿಯ ವೇಗದಿಂದ ಜಾರಿ ಕಾಕೋಲು ಮತ್ತು ಅಂದಾಜು 2,500 ಹಂಚು ಸಹಾ ಚೂರುಚೂರಾಗಿ ನೆಲಸಮವಾಗಿ ಬಿದ್ದು ಸುಮಾರು 700 ರುಪಾಯಿ ವರೆಗೆ ನಷ್ಟವಾಗಿದೆಂತ ಒಂದು ಚಾತ್ಮಿ.

ಕಳೆದ ತಾರೀಕು 26 ಮತ್ತು 27ರಲ್ಲು ಬೆಳಗಾಮಿನಲ್ಲಿ ನಡೆದ ಇಂಡಿಯನ್‌ನೇಶನಲ್ ಕಾಂಗ್ರೆಸ್ಸಿಗೆ ಕೊಡಗಿನಿಂದ ಡೆಲಿಗೇಟರಾಗಿಯೂ, ಸ್ವಾಗತ ಕಮಿಟಿಮೆಂಬರುಗಳಾಗಿಯೂ ಮತ್ತು ಪ್ರೇಕ್ಷಕರರಾಗಿಯೂ ಸುಮಾರು 35 ಜನರು ಹೋಗಿದ್ದರು. ಆ ಪೈಕಿ 7 ಜನರು ಕೌನ್ಸಿಲ್ ಮೆಂಬರುಗಳಾಗಿದ್ದರು. ಅವರಲ್ಲಿ ಕೆಲವರು ಬೆಂಗಳೂರುದಾರಿಗಾಗಿಯೂ ಇನ್ನು ಕೆಲವರು ಮಂಗಳೂರಿಗಾಗಿಯೂ ತಾರೀಕು 1ರಲ್ಲು ಕೊಡಗಿಗೆ ವಾಪಾಸು ಒಂದಿರುವರು.

ದಾಕ್ತರು ಮಡಿಕೇರಿಯಿಂದ ಅಪ್ಪಯ್ಯನವರು ಮದ್ರಾಸ್ ಪಟ್ಟಣದಲ್ಲು ಕಳೆದ ತಿಂಗಳಲ್ಲು ನಡೆದ ಬಿ ಎ ಎಂಬ ಪರೀಕ್ಷೆಯಲ್ಲು ತೇರ್ಗಡೆಯಾದ ವರ್ತಮಾನ ಕೇಳಿ ಸಂತೋಷಪಡುತ್ತೇವೆ. ಇದಲ್ಲದೆ ಎಂ ಆರ್. ಸಿ. ಪಿ. ಎಂಬ ಪರೀಕ್ಷೆಗೆ ಬರುವ ಪೆಬ್ರವರಿ ತಿಂಗಳ ಆಖೈರಿನಲ್ಲು ಹೋಗುವವರಾಗಿದ್ದಾರೆ.

ಭಾಗಮಂಡಲ ನಾಡು ಕಚೇರಿ ಶ್ಯಾನುಭೋಗರಾಗಿದ್ದ ಮಿ. ಮುಕ್ಕಾಟಿರ ಮಾಚಯ್ಯನವರನ್ನು ವೀರಾಜಪೇಟೆ ನಾಡು ಕಚೇರಿಗೂ, ಅಲ್ಲಿದ್ದ ಮಿ. ಅಮ್ಮಣಿಚಂಡ ಚಿಣ್ಣಪ್ಪನವರನ್ನು ಭಾಗಮಂಡಲ ನಾಡು ಕಚೇರಿಗೂ ಇದೇ ತಾ 10ರಿಂದ ವರ್ಗಾಯಿಸಿರುತ್ತಾರೆ.

ನಮ್ಮ ಕಂಪನಿಯ ಚಂದಾದಾರರ ಪೈಕಿ ಅನೇಕರು ತಮ್ಮ ಚಂದಾ ಹಣವನ್ನೂ ಕೇರುದಾರರನ್ನೈಕಿ ಕೆಲವರು ತಮ್ಮ ಬಾಪ್ತು ಶೇರುಹಣವನ್ನೂ ಸಂದಾಯಮಾಡಬೇಕಾಗಿ ಅನೇಕಾವರ್ತಿ ಕೇಳಿಕೊಂಡಾಗ್ಯೂ ಕೂಡ ಈ ವರೆಗೆ ಬಾವತಿಮಾಡದ್ದರಿಂದ ಇನ್ನಾದರೂ ವಡನೆ ಪಾವತಿಯಿಂದ ಕಂಪನಿಯ ಕೆಲಸಕ್ಕೆ ಉತ್ತೇಜನಕೊಡುವರಾಗಿ ನಂಬುತ್ತೇವೆ.

ಕೊಡಗು ವಿದ್ಯಾಭಿವೃದ್ಧಿ ಸಂಘದ ಜನರಲ್ ಮೀಟಿಂಗ ಇದೇ ತಾ. 11ರಲ್ಲು ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲಿ ನಡಿಯಲಿಕ್ಕಿರುವುದು. ಇದರ ತಪಶೀಲ್ ನೋಟೀಸನ್ನು ಇನ್ನೊಂದು ಕಡೆ ಪ್ರಕಟಿಸಿರುವೆವು.

ಕಲವು ಕಡಗಳಲ್ಲಿ ಭತ್ತ ಕಟಾವು ಈಗ ಮಾರಲಿಕ್ಕೆ ಸುರುವಾಗಿರುವುದುರಿಂದ ಭತ್ತದ ಧಾರಣೆಯು ಕಮ್ಮಿಯಾಗಿ ಗಾಡಿ 1ಕ್ಕೆ 85 ರುಪಾಯಿ ಮಾತ್ರ ಇರುತ್ತೆ.

ಹಿಂಕೆರೆ ಫಾರೆಸ್ಟರ್ ಮಿ. ಪೊಂಗಂಡ ಪೊನ್ನಪ್ಪನವರು ಕಳೆದ ವಾರದಲ್ಲು ಒಂದೇ ದಿನ 2 ಹುಲಿಗಳನ್ನು ಗುಂಡು ಹೊಡೆದು ಕೊಂದು ಮುಳಮುಡುವೆ ಮಾಡಿರುತ್ತಾರೆ.

ಮಾವ್ರಕೊಲದಲ್ಲಿ ಪಾರೆಸ್ಟ ರೇಂಜರಾಗಿದ್ದ ಮಿ. ನೆರವಂಡ ಪೂಣಚ್ಚನವರನ್ನು ಸೋಮವಾರಪೇಟೆಗೆ ಎಕ್ಸ್ಟ್ರಾ ಸೆಕ್ಷನ್ ರೇಂಜ್ ಆಫೀಸರಾಗಿಯೂ, ಅಲ್ಲಿದ್ದ ಮಿ. ಚೌರೀರ ಗಣಪತಿಯವರನ್ನು ಶಿಕ್ಷತ್ರಿಗೆ ಸ್ಪೆಶಲ್ ಡ್ಯೂಟಿ ರೇಂಜ್ ಆಫೀಸರಾಗಿಯೂ ವರ್ಗಾಯಿಸಿರುತ್ತಾರೆ.

ಹಿಂದೂ ದೇಶ.

ಡಿಸೆಂಬರು ಎರಡನೆ ವಾರದಲ್ಲಿ ಕಲ್ಕತ್ತಾದಲ್ಲಿ ನಡೆದ ಯುರೋಪಿಯನ್ ಸಂಘದವರ ವಾರ್ಷಿಕಮೀಟಿಂಗಿನಲ್ಲು ಕೋಮುವಾರು ಪ್ರತಿನಿಧಿಗಳು ಕೌನ್ಸಿಲುಗಳಲ್ಲಿ ಇದ್ದೇ ಇರಬೇಕೆಂದು ತೀರ್ಮಾನಿಸಿದರು.

ಬನಾರಿಸ್ ಯೂನಿವರ್ಸಿಟಿಯ ಎಲ್. ಎಲ್. ಬಿ. ಪರೀಕ್ಷೆಯಲ್ಲಿ 3ನೇ ಕ್ಲಾಸಿನಲ್ಲಿ ಪಾಸಾಗಲು ಸಾಕಷ್ಟು ನಂಬರು ಹೊಂದಿದ್ದರೂ ಕೂಡ ತನ್ನ ಪಾಸುಮಾಡದ್ದಕ್ಕಾಗಿ ಆ ಯೂನಿವರ್ಸಿಟಿಯಮೇಲೆ ಮಿ ರಾಮ ಉಗ್ರಾಲಸಿಂಗ್ ವಿದ್ಯಾರ್ಥಿಯವರು ಮೊಕದ್ದಮ್ಮೆ ನಡಿಸಿದ್ದರು. ಅಲ್ಲಿ ಹೈಕೋರ್ಟು ಜಡ್ಜಿಯವರು ಕೇಸನ್ನು ಡಿಸ್‌ಮಿಸ್ ಮಾಡಿದರು.

ರಂಗೂನಿನಲ್ಲಿ ಅಮೇರಿಕ ಬ್ಯಾಪ್ಟಿಸ್ಟ ಮಿಶನಿನವರಿಂದ ನಡಿಸಲ್ಪಡುತ್ತಿರುವ ಕಸ್ಸಿಂಗ್ ಹೈಸ್ಕೂಲಿನಲ್ಲಿ ಬೈಬಲ್ ಕಲಿಸುತ್ತಾರೆಂಬ ಕಾರಣ ಕಲವು ಬೌದ್ಧ ವಿದ್ಯಾರ್ಥಿಗಳು ಶಾಲೆಗೆ ಹೋಗದೆ ಬಹಿಷ್ಕರಿಸಿದರು. ಈ ಮುಷ್ಕರವು ಪ್ರಬಲವಾಗುವದನ್ನು ನೋಡಿ ವಿದ್ಯಾಇಲಾಖೆಯ ಮಂತ್ರಿಯವರು ಶಾಲೆ ಅಧಿಕಾರಿಗಳ ಒಂದು ಕಾನ್‌ಫರೆನ್ಸ್ ನಡಿಸಿ ಮಿಶನ ಸ್ಕೂಲ್‌ಗಳಲ್ಲಿ ಬೈಬಲನ್ನು ತಂದೆತಾಯಿಗಳ ಇರಾದೆಗೆ ವಿರೋಧವಾಗಿ ಕಲಿಸಕೂಡದೆಂದು ತೀರ್ಮಾನವಾಯಿತು. ಇದಕ್ಕೆ ಮಿಶನ್ ಅಧಿಕಾರಿಗಳು ಒಪ್ಪಿಕೊಂಡರು.

ಕಲ್ಕತ್ತಾದಲ್ಲಿರುವ ಲಾ ಮಾರ್ಟಿನರ್ ಕಾಲೇಜಿನ ಹಳೇ ವಿದ್ಯಾರ್ಥಿಯಾದ ಸರ್ ಹಾರಿ ಜೇಬರ್ ರವರು ಒಂದು ಲಕ್ಷ ರುಪಾಯಿಯನ್ನು ಆ ಕಾಲೇಜಿಗೆ ಉಚಿತವಾಗಿ ಕೊಟ್ಟಿರುವದಲ್ಲದೆ ಆ ಕಾಲೇಜಿಗಾಗಿ ಎಂಡೋಮೆಂಟ್ ಮಾಡಿನಲ್ಲಿಡುವಂತೆ 5 ಲಕ್ಷ ರುಪಾಯಿಯನ್ನು ಲಾರ್ಡ ಲಿಟ್ಟನ್‌ರವರಿಗೆ ಕಳುಹಿಸಿರುವರು.

ಅಖಿಲ ಭಾರತ ಕ್ರಿಸ್ಟಿಯನ್ ಕಾನ್‌ಫರೆನ್ಸಿನ 11ನೇ ವಾರ್ಷಿಕ ಮಹಾ ಸಭೆಯು ಬೊಂಬಾಯಿಯಲ್ಲಿ ಡಿಸೆಂಬರ್ ತಾ 29, 30 ಮತ್ತು 31ರಲ್ಲಿ ನಡೆಯಿತು. ಲಕ್ನೋದ ಕ್ರಿಶ್ಚಿಯನ್ ಕಾಲೇಜಿನ ಪ್ರಿನ್ಸಿಪಾಲರಾದ ಡಾಕ್ಟರ್ ಜೆ. ಆರ್. ಚಿಟಾಂಬರ್‌ರವರು ಅಧ್ಯಕ್ಷರಾಗಿದ್ದರು.

ಕಲ್ಕತ್ತಾದಲ್ಲಿ ನಡೆದ ಸ್ವರಾಜ್ಯವಾದದ ಒಟ್ಟು ಉತ್ಪತ್ತಿಯು ರು. 2,25,093—7—11 ಆಯಿತೆ. ಇನ್ನೂ ಒಂದು ಲಕ್ಷ ರುಪಾಯಿ ಬೇಕಾಗಿದೆಯೆಂದೂ ಅದು ಒದಗಿದರೆ ಅಷ್ಟೆ ಬೇಗ ದೇಶಬಾಂಧವರ ಪ್ರಾಂತದಲ್ಲಿ ಗ್ರಾಮಜನರಿಗಳ ಕೆಲಸ ಪ್ರಾರಂಭಿಸಬಹುದೆಂದೂ, ಜನರು ತಮ್ಮ ಶಕ್ತ್ಯಾನುಸಾರ ಸಹಾಯಮಾಡಬಹುದು, ಅದರ ಅಧ್ಯಕ್ಷರಾದ ತಮ್ಮ ಉದಾರತ್ವವನ್ನೂ ದೇಶ ಭಕ್ತಿಯನ್ನೂ ತೋರಿಸಬೇಕೆಂದೂ ಮಿ. ಸಿ. ಆರ್. ದಾಸ್‌ರವರು ಅಪ್ಪೀಲ್ ಮಾಡಿರುವರು.

ಲಕ್ನೋ ಯೂನಿವರ್ಸಿಟಿಯ ಕಾನ್ವೊಕೇಶನು ಡಿಸೆಂಬರು ತಾ. 1ರಲ್ಲಿ ಗವರ್ನರವರ ಅಧ್ಯಕ್ಷತೆಯಲ್ಲಿ ನಡೆಯಿತು. ಪದವಿ ಪ್ರಾಪ್ತರ ಪೈಕಿ ಮೊದಲಾಗಿ ಈ ವರ್ಷ ಶ್ರೀಮತಿ ನೂರ್ ಜೆಹಾನ್ ಯೂಸಫ್ ಎಂಬವರು ಎಂ ಡಿಗ್ರಿ ಪಡೆದರು.

ಸೆಂಟ್ರಲ್ ಪ್ರೋವಿನ್ಸಿನ ರಿಟಾಯರಾಗುವ ಗವರ್ನರಾದ ಸರ್ ಫ್ರಾಂಕ್‌ಸ್ಲೈಯವರು ಅವರ ಸ್ಪೀಚಿನಲ್ಲಿ ನಡೆದ ಒಂದು ದರ್ಬಾರಿನಲ್ಲಿ ಬೀರಾರನ್ನು ಹೈದರಾಬಾದಿಗೆ ಸೇರಿಸುವ ವಿಷಯ ಏನೊಂದೂ ಏರ್ಪಾಡುಮಾಡಿರುವದಿಲ್ಲವೆಂದೂ ಹಾಗೆ ಮಾಡುವ ಮುಂಚೆ ಅಲ್ಲಿಯ ಜನರ ಅಭಿಪ್ರಾಯವನ್ನು ಕೇಳುವರೆಂದೂ ಭರವಸೆಯಿತ್ತರು.

ಸೆಂಟ್ರಲ್‌ಪ್ರೋವಿನ್ಸಿನ ಗವರ್ನರಾಗಿ ನೇಮಿಸಲ್ಪಟ್ಟಿರುವ ಸರ್ ಮಾಂಟಗ್ಯು ಬಟ್ಲರ್‌ರವರಿಗೆ ಚಕ್ರವರ್ತಿಯವರು "ಸ್ಟಾರ್ ಆಫ್ ಇಂಡಿಯಾ" ಎಂಬ ಬಿರುದನ್ನು ದಯಪಾಲಿಸಿರುವರು.

1925ನೇ ಜನವರಿಯಲ್ಲಿ ಅಲ್ಲಹಾಬಾದಿನಲ್ಲಿ ನಡೆಯುವ ಐ. ಸಿ. ಎಸ್. ಪರೀಕ್ಷೆಯ ಫಲಿತಾಂಶದಿಂದ ಐದು ಜನರನ್ನು ಇಂಡಿಯನ್ ಸಿವಿಲ್ ಸರ್ವೀಸ್ಸಿಗೆ ಆರಿಸುವರು. ಇನ್ನುಳಿದ ಖಾಲಿ ಸ್ಥಳಗಳಿಗೆ ಅವಶ್ಯವಿದ್ದರೆ ಸರಕಾರದವರು ಇಷ್ಟರನ್ನ ನೇಮಿಸುವರಂತೆ.

ಲೆಜಿಸ್ಲೇಟಿವ್ ಎಸೆಂಬ್ಲಿಯ ಬರುವ ಮೀಟಿಂಗಿನಲ್ಲಿ ಚರ್ಚಿಸಲಿಕ್ಕಾಗಿ ಬಂಗಾಳದಲ್ಲಿ ಜಾರಿಗೆ ತರಲ್ಪಟ್ಟಿರುವ ಆರ್ಡಿನೇನ್ಸನ್ನು ಮಂಜೂರುಮಾಡುವಂತೆ ಒಂದು ಠರಾವನ್ನು ಪಂಡಿತ ಮೋತಿಲಾಲ್ ನೆಹರುರವರು ಕಳುಹಿಸಿರುವರು. ಇದನ್ನು ಚರ್ಚಿಸಬಹುದಲ್ಲವೆಂತಲೂ ವರ್ತಮಾನ ಹುಟ್ಟಿದೆ.

ವೈಸರಾಯರ ಎಕ್ಸಿಕ್ಯೂಟಿವ್ ಕೌನ್ಸಿಲಿನಿಂದ ಸರ್ ಮಹಮ್ಮದ್ ಶಾಫಿಯವರು ನಿವೃತ್ತರಾಗುವಾಗ ಅವರಸ್ಥಾನಕ್ಕೆ ಇಲಾಹಿ ಬಾರ್‌ಜೂನ ಸರ್. ಬಿ ಎನ್. ಸರ್ಮಾರವರಿಗೆ ಕೊಡಲ್ಪಡುವದಲ್ಲದೆ ಅವರನ್ನು ಆ ಕೌನ್ಸಿಲಿನ ವೈಸ್‌ಪ್ರೆಸಿಡೆಂಟರಾಗಿಯೂ ಕೌನ್ಸಿಲ್‌ಆಫ್ ಸ್ಟೇಟಿನ ಲೀಡರಾಗಿಯೂ ನೇಮಿಸುವರು.

ವಿದೇಶ.

ಈ ಅರಸ ಪದವಿಯಿಂದ ಕೆಳಗಿಳಿಸಲ್ಪಟ್ಟಿರುವ ಹುಸೇನರವರು ಅವರೈಬ್ ನಿವಾಸಿಗಳ ಸಹಾಯವನ್ನು ಕೋರುತ್ತಾ ಟ್ರಾನ್ಸ್‌ಜೋರ್ಡನ್ನಿಂದ ಬಿಮಾನಗಳನ್ನೂ ಬೇರೆ ಯುದ್ಧದ ಸಾಮಾಗ್ರಿಗಳನ್ನೂ ತರಿಸಿರುವರು. ಅವರು ಮೆಕ್ಕಾವನ್ನು ಮರಳಿ ಕೈವಶ ಮಾಡಿಕೊಳ್ಳಲು ಪ್ರಯತ್ನಿಸುವರು.

ಸರ್ ಚಾರ್ಲ್ಸ್ ಬೆಯಿಲೆಯವರು ಲಂಡನ್ನಿನಲ್ಲಿರುವ ಇಂಡಿಯಾ ಕೌನ್ಸಿಲುಮೆಂಬರುಶನಕ್ಕೆ ರಾಜಿನಾಮೆ ಕೊಟ್ಟಿರುವರು.

ಜರ್ಮನಿಯ ರಿಪಬ್ಲಿಕ್ ಸರಕಾರದ ಅಧ್ಯಕ್ಷರಾದ ಹರ್ ಎಬರ್ಟ್‌ರವರು ಹರ್ ಸ್ಟ್ರೆಸ್‌ಮನ್‌ರವರನ್ನು ಮಂತ್ರಿ ಮಂಡಳಿಯನ್ನು ಏರ್ಪಡಿಸುವಂತೆ ಕೇಳಿರುವರು.

ಬ್ರಿಟನ್ನಿನ ಲೇಬರ್ ಸರಕಾರದ ಪ್ರಧಾನ ಮಂತ್ರಿಯಾಗಿದ್ದ ಮಿ. ರಾಮ್ಸೆ ಮೆಕ್ಡನಾಲ್ಡರವರು ತಮ್ಮ ಆರೋಗ್ಯ ವೃದ್ಧಿಗಾಗಿ ಈ ತಾ. 22ರಲ್ಲು ಪಶ್ಚಿಮ ಇಂಡೀಸ್ ದ್ವೀಪಗಳಿಗೆ ಹೋಗಿ ಪೆಬ್ರವರಿ 19ರಲ್ಲು ಇಂಗ್ಲೆಂಡಿಗೆ ವಾಪಾಸು ಹೋಗುವರು.

ಕಂಮ್ಯೂನಿಸ್ಟರನ್ನು ಮೆಂಬರುಗಳಾಗಿ ತೆಗೆದುಕೊಳ್ಳಕೂಡದೆಂಬ ಲೇಬರ್ ಕಾನ್‌ಫರೆನ್ಸಿನ ತೀರ್ಮಾನದ ದೆಸೆಯಿಂದ ಮಿ. ಸಕ್ಲಾತ್ವಾಲರವರನ್ನು ಲೇಬರ್‌ಪಾರ್ಟಿಗೆ ಮೆಂಬರಾಗಿ ತೆಗೆದುಕೊಳ್ಳಬಾಗುವದಿಲ್ಲವೆಂದು ತಿರಸ್ಕರಿಸಿರುವರು.

ಏಂಗ್ಲೊ ಐರಿಷ್ ಕೌಲನ್ನು ರಿಜಿಸ್ಟರ್‌ಮಾಡಕೂಡದೆಂದು ಇಂಗ್ಲೆಂಡ್ ಸರಕಾರವು ಲೀಗ್‌ಆಫ್ ನೇಶನ್ಸಿಗೆ ಬರೆದಿರುವ ವರ್ತಮಾನವು ಡಬ್ಲಿನಿಗೆ ತಿಳಿದು ಬಂದು ಅಲ್ಲಿಯವರಲ್ಲಿ ಸ್ವಲ್ಪ ಗಲಿಬಿಲಿಯುಂಟಾಗಿದೆ.

ಭೂಲೋಕದ ಸುತ್ತಲು ವಿಮಾನಗಳಲ್ಲಿ ಸಂಚರಿಸಲು ಕಳೆದ ಅಕ್ಟೋಬರು 15ರಲ್ಲು ಬೊಂಬಾಯಿಯಿಂದ ಹೊರಟ ಮೂವರು ಪಾರ್ಶಿ ಬೋಯಿಸ್ ಸ್ಕೌಟುಗಳು ಲಂಡನಿಗೆ ತಾ. 16ರಲ್ಲು ತಲುಪಿದರು. ಅವರು ಇಂಡಿಯಾ, ಪರ್ಶಿಯಾ, ಮೆಸಪೊಟೋಮಿಯ, ಪಾಲಸ್ಟೈನ್, ಗ್ರೀಸ್, ಇಟಲಿ, ಸ್ವಿಟ್ಜರ್‌ಲ್ಯಾಂಡ್ ಮತ್ತು ಫ್ರಾನ್ಸಿಗಾಗಿ ದಾಟಿರುವರು. ಇವರ 300 ಮೈಲಿ ದೂರದ ಒಂದು ಪ್ರಯಾಣದ ಮುಕ್ಕಾಲು ಭಾಗವನ್ನು ಸಿರ್ಯನ್ ಮರುಭೂಮಿಯಮೇಲೆ ದಾಟಬೇಕಾಯಿತು. ಇವರು ಅಮೇರಿಕ, ಜಪಾನ್, ಚೈನಾ ಮತ್ತು ಬರ್ಮಕ್ಕಾಗಿ 16 ತಿಂಗಳೊಳಗೆ ಇಂಡಿಯಾಕೆ ವಾಪಾಸು ಬರುವರಂತೆ.

ಅಮೇರಿಕ ಪ್ರಾಮುಖ್ಯ ಲೇಬರ್‌ಮುಂದಾಳಾದ ಸಾಮ್ಯುಲ್ ಗೋಂಪರ್ಸ್‌ರವರು ಮೃತರಾದರು.

ಡಿಸೆಂಬರು ಎರಡನೇ ವಾರದಲ್ಲಿ ಇಂಗ್ಲೆಂಡಿನಲ್ಲಿ ಮುಖ್ಯವಾಗಿ ಲಂಡನ್‌ಪಟ್ಟಣದಲ್ಲಿ ಮಂಜು ಕವಿದುಕೊಂಡು ಅನೇಕ ಕೆಲಸಗಳು ನಿಂತುಹೋದವು. ಮಧ್ಯಾಹ್ನದಲ್ಲಿ ಮಧ್ಯರಾತ್ರಿಯಷ್ಟೇ ಕತ್ತಲಾಗಿತ್ತಂತೆ. ಬೀದಿಯ ದೀಪಗಳನ್ನು ಹಚ್ಚಿಯೂ ಬೆಳಕು ಸಾಲದಾಗಿತ್ತಂತೆ

ಮೆಕ್ಕಾವನ್ನು ಮರಳಿ ಹಿಡಿಯಲು ನೋಡಿದ ಎಮಿರ್ ಅಲಿ ಅರಸರವರ ಪ್ರಯತ್ನವು ಅಪಜಯವಾಗಿದೆ.

ಜರ್ಮನಿಯಲ್ಲಿ ಹೊಸ ಮಂತ್ರಿ ಮಂಡಳಿಯನ್ನು ಏರ್ಪಡಿಸುವುದು ಸುಲಭಸಾಧ್ಯವಲ್ಲದ್ದರಿಂದ ಜನವರಿ 5ರಲ್ಲಿ ರೀಚ್‌ಸ್ಟ್ಯಾಗ್ ಮೀಟಿಂಗು ನಡಿಯುವ ವರೆಗೆ ಈಗಿನ ಮಂತ್ರಿಮಂಡಳಿಯೇ ಕೆಲಸ ನಡಿಸುವಂತೆ ತೀರ್ಮಾನವಾಗಿದೆ.

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಆಸ್ಪತ್ರೆಯ ಶೀಘ್ರದ ನಿರೀಕ್ಷಣೆ.

ಅಯ್ಯಾ,

ಈ ಶನಿವಾರಸಂತೆ ಪ್ರಾಂತ್ಯದಲ್ಲಿ ಜನರು ಜ್ವರ, ಹೊಟ್ಟೆನೋವು, ಪ್ಲೇಗ್ ಇವೇ ಮೊದಲಾದ ಕಾಯಿಲೆಗಳಿಂದ ನರಳುತ್ತಲಿರುವರು. ಇಲ್ಲಿ ನೇಟಿವ್ ವೈದ್ಯರಿಲ್ಲ ಆಸ್ಪತ್ರೆಯೋ ಎಲ್ಲಿಯೋ ದೂರದಲ್ಲಿದೆ. ಈ ಕಷ್ಟವನ್ನು ನೋಡಿ ಹುಜೂರ್ ಕಮೀಷನರವರು ಕಳೆದ ತಿಂಗಳಲ್ಲಿ ಜನರೊಂದಿಗೆ ಬಂದಾಗ್ಯೆ ಶನಿವಾರ ಸಂತೆಗೆ ಒಂದು ಆಸ್ಪತ್ರೆ ಶೀಘ್ರದಲ್ಲಿ ಕೊಡುವುದಾಗಿ ವಾಗ್ದಾನಮಾಡಿದರು. ಘನ ಸರಕಾರದವರು ಆದಷ್ಟು ಶೀಘ್ರದಲ್ಲಿ ಆಸ್ಪತ್ರೆಯನ್ನು ಕೊಟ್ಟರೆ ಅನೇಕ ಜನರನ್ನು ಕಾಪಾಡಿದಂತಾಗುತ್ತೆ.

ಉತ್ತರಕೊಡಗಿನ ಬೆಳೆ.

ಈ ವರ್ಷ ಉ ಕೊಡಗಿನಲ್ಲಿ ಬೆಳೆ ಚನ್ನಾಗಿದೆ ಎಂದು ಜನರು ಅಲ್ಲಿ ಇಲ್ಲಿ ಆಡುತ್ತಿದ್ದರು. ಅದು ಎಷ್ಟರ ನಿಜವೆಂದು ಸ್ವಲ್ಪ ಮುಂದುವರಿದು ನೋಡುವ. ಆದಿಯಲ್ಲಿ ಅತಿವೃಷ್ಟಿಯಿಂದ ಹಾಗೂ ಹಿರಿ ನೆರೆಯಿಂದ ನಾಟಿಗದ್ದೆಗಳೆಲ್ಲವೂ ಹಾಳಾದವು. ನಂತರ ಕುಯಿಲು ಸಮಯದಲ್ಲಿ ಮಳೆಹೆಚ್ಚಾಗಿ ಅರಿಯು ಹಾಳಾಯಿತು. ಕುಯ್ಯದೆ ಬಿಟ್ಟಿದ್ದವರಿಗೆ ಬೆಳೆಯು ಬಣಗಿ ಸುರಿದು ಹೋಗುತ್ತಲಿವೆ. ಇದರಿಂದ ಅಕ್ಕಿ ನುಚ್ಚಾಗುವದು ಇನ್ನೊಂದು ತರದನಷ್ಟ. ಈ ಎಲ್ಲಾ ಕಾರಣಗಳಿಂದ ನೋಡುವದಾದರೆ ಈ ವರ್ಷದಬೆಳೆಯು ಕಳೆದ ವರ್ಷಕ್ಕಿಂತಲೂ ಕಡಮೆಯೆಂದು ನಿರ್ಧರಿಸಬಹುದು. ಬಡಜನರಿಗೆ ಜೀವನಮಾಡುವದು ಈವರ್ಷ ಸ್ವಲ್ಪ ಕಷ್ಟವೆ. ಕಾರಣ, ಹೆಚ್ಚಾಗಿ ಬತ್ತಬೆಳೆಸುವ ದೊಡ್ಡ ರೈತರು ಧನ ಪಿಶಾಚ ಗ್ರಸ್ತರಾಗಿ ಪರದೇಶಕ್ಕೆ ಕಳುಹಿಸುವದನ್ನು ಬಿಟ್ಟು ತಮ್ಮ ಸ್ವದೇಶದವರಿಗೇನೇ ಒಂದುಕಾಸುಕಮ್ಮಿಯಾದರೂ ಚಿಂತೆ ಇಲ್ಲವೆಂದು ಭಾವಿಸಿ ಮಾರಿದರೆ ಒಂದು ರೀತಿಯಲ್ಲಿ ಉತ್ಕರ್ಷ ಸೇವೆಯುಂಟುರುವ ದೇಶಸೇವೆಮಾಡಿದಂತಾಗುತ್ತದೆ. ಇದಕ್ಕಿಂತಲೂ ಹೆಚ್ಚಿನದು ಯಾವುದು?,

ದೇಶಹಿತೈಷಿ.

ಸಾರಾಯಿ.

ಅಯ್ಯಾ,

ನಮ್ಮ ಈ ಚಿಕ್ಕದೇಶದಲ್ಲಿ ಸಾರಾಯಿಕ್ಕಾಗಿ ಬಡಜನರಿಂದ ಸರಕಾರಕ್ಕೆ ಹೆಚ್ಚು ಕಮ್ಮಿ ವರ್ಷ ಒಂದಕ್ಕೆ ಎರಡು ಲಕ್ಷ ರುಪಾಯಿ ಉತ್ಪತ್ತಿಯಾಗುತ್ತಿದೆಯೆಂದು ಹೇಳುವರು. ಜನಸಮುದಾಯಕ್ಕೆ ವರ್ಷ ವರ್ಷವೂ ಉಂಟಾಗುತ್ತಿರುವ ಈ ಭಾರೀ ನಷ್ಟವನ್ನು ನಿವಾರಿಸಬೇಕಾದರೆ ಸಾರಾಯಿದ ವ್ಯಾಪಾರವನ್ನೇ ನಿಲ್ಲಿಸಬೇಕಾಗುವದು. ಸಾರಾಯಿವನ್ನು ನಿಲ್ಲಿಸುವ ಯೋಚನೆಮಾಡುವ ಮೊದಲು ಅದರ ನಿಲ್ಲುವಿಕೆಯಿಂದ ಸರಕಾರಕ್ಕೆ ಉಂಟಾಗುವ ಕಮ್ಮಿ ಉತ್ಪತ್ತಿಯನ್ನು ಭರ್ತಿಮಾಡಲು ತಯಾರಿರಬೇಕು. ಇಲ್ಲವಾದರೆ ಭಾರಿ ಸಂಬಳದ ಮೇಲು ಅಧಿಕಾರಿಗಳನ್ನು ಇಟ್ಟುಕೊಂಡು ಸರಕಾರದ ಕಾರುಬಾರು ನಡಿಸುವದನ್ನು ನಿಲ್ಲಿಸಿದಂತಾಗುವದು. ಅದು ನಮ್ಮ ಈಗಿನ ಸ್ಥಿತಿಗೆ ಬರೀ ಸ್ವಪ್ನದಗಂಟು.

ಸರಕಾರಕ್ಕೆ ಈಗ ಆಗುತ್ತಿರುವ ಉತ್ಪತ್ತಿಯನ್ನು ಸ್ವಲ್ಪವೂ ಕಮ್ಮಿಮಾಡದೆ ಜನಸಮುದಾಯವು ಈಗ ಸಾರಾಯಿಕ್ಕಾಗಿ ಮಾಡುತ್ತಿರುವ ವೆಚ್ಚದ ರುಪಾಯಿಗೆ ರುಪಾಯಿ ಕಮ್ಮಿಮಾಡಬೇಕಾದರೆ ಸರಕಾರವು ತನ್ನ ದಿವ್ಯಚಿತ್ತಕ್ಕೆ ಈ ಕೆಳಗಿನ ಸಂಗತಿಗಳನ್ನು ತಂದು ನಡಿಸಿದರೆ ಪ್ರಜಾ ಸಮೂಹಕ್ಕೆ ಭಾರೀ ಉಪಕಾರಮಾಡಿದಂತಾಗುವದು.

ಸಾರಾಯಿ ಕಂಟ್ರಾಕ್ಟುದಾರರು ಗಡಂಗದಿಂದ 6 ಕುಪ್ಪಿಯ ಗ್ಯಾಲನ್ ಒಂದಕ್ಕೆ ರೂ. 5—9—0 ಕೊಟ್ಟು ತೆಗದುಕೊಂಡು ಅದನ್ನು ಅಂಗಡಿಯಲ್ಲಿ ಚಿಲ್ಲರೆಯಾಗಿ ಕುಪ್ಪಿ ಒಂದರ ರೂ. 1—8—0 ಯಂತೆ 9 ರುಪಾಯಿಗೆ ವಿಕ್ರಿಮಾಡುತ್ತಿರುವರು. ಹಾಗೆಯೇ ತುಂಬಿ ತುಂಬದೆ ನೊರೆ ಇಳಿಯುವದಕ್ಕೆ ಮೊದಲೇ ನಾವಿನಲ್ಲಿ ಅಳೆದು ಹುಯ್ಯುವದರಿಂದ ಎಷ್ಟು ಕಮ್ಮಿ ಎಂದರೂ ಗ್ಯಾಲನ್ ಒಂದಕ್ಕೆ ಒಂದು ರುಪಾಯಿ ಸಂಪಾದಿಸುವನೆಂದು ಕಂಟ್ರಾಕ್ಟುದಾರನಿಂದ ಅರ್ಧ ಪಾವು ಸಾರಾಯಿವನ್ನು ಕೊಂಡುಕೊಂಡವರು ಸಹ ಗೊಣಗುಟ್ಟುತ್ತಿರುವದು ತಿಳಿದ ಸಂಗತಿಯಾಗಿದೆ. ಹಾಗೆಯೇ ಕೆಲವು ಕಂಟ್ರಾಕ್ಟುದಾರರು ಸಾರಾಯಿಯ ಬಣ್ಣ ಮತ್ತು ರುಚಿ ಸಹ ಕೆಡಿಸಿ ಗ್ಯಾಲನ್ ಒಂದಕ್ಕೆ ಒಂದು ರುಪಾಯಿ ಸಂಪಾದಿಸುವನೆಂದು ಅನೇಕರು ಹೇಳುವದು ಹೊಸ ಸಂಗತಿಯಲ್ಲ. ಅಂತು ಹಾಗೂ ಹೀಗೂ ರೂ. 5—9—0 ಕ್ಕೆ ಪಡಕೊಂಡ ಒಂದು ಗ್ಯಾಲನ್ ಸಾರಾಯಿವನ್ನು 11 ರುಪಾಯಿಗೆ ಮಾರುತ್ತಿರುವರೆಂದಾಯಿತು. ಅಂದರೆ ಸಾರಾಯಿದಿಂದ ಸರಕಾರಕ್ಕೆ ಒಂದು ರುಪಾಯಿ ಉತ್ಪತ್ತಿಯಾದರೆ ಕಂಟ್ರಾಕ್ಟುದಾರರಿಗೆ ಒಂದು ರುಪಾಯಿ ಸೇರಿತೆಂದು ಖಂಡಿತವಾಗಿ ತಿಳಿಯಬೇಕಾಗಿದೆ.

ಇದಲ್ಲದೆ ಸಾರಾಯಿವನ್ನು ನೀರಿನಂತೆ ಕಂಟ್ರಾಕ್ಟುದಾರನು ದೊಡ್ಡ ದೊಡ್ಡ ಗುದಾಮ ಪೀಪಾಯಿಗಳಲ್ಲಿ ತುಂಬಿಕೊಂಡು ಮನಸ್ಸೋ ಇಚ್ಛೆ ಇಟ್ಟುಕೊಳ್ಳಬೇಕಾದ ಅನುಕೂಲಕೊಟ್ಟು ಅವರ ಹಿಂದೆ ಅಬ್ಕಾರಿ ಇಲಾಖೆಯವರು ಕಳ್ಳಿಗಳನ್ನು ಹಾಕುತ್ತಾ ಓಡಾಡುವದರ ಅರ್ಥವಾದರೂ ಏನು ?

ಇದರ ಬದಲಿಗೆ ಸಾರಾಯಿವನ್ನು ಈಗಿನಂತೆಯೇ ಪೀಪಾಯಿಗಳಲ್ಲಿ ಅಬ್ಕಾರಿ ಇಲಾಖೆಯ ಹೆಡ್ಡಾಫೀಸಿಗೆ ತರಿಸಿಕೊಂಡು ಅಲ್ಲಿ 4, 2, 1, ಅರ್ಧ ಮತ್ತು ಕಾಲು ಪಾವುಗಳನ್ನು ತಕ್ಕ ಕುಪ್ಪಿಗಳಿಗೆ ತುಂಬಿ ಸರಕಾರದ ಸೀಲು ಮುದ್ರೆಗಳನ್ನು ಹಾಕಿ ಮಾರುವವರಿಗೆ ಅನುಕೂಲವಾಗಿ ದೊರಕುವಂತೆ ಅಬ್ಕಾರಿ ಇಲಾಖೆಯ ಸ. ಇ. ರವರ ಆಫೀಸಿಗೆ ಕಳುಹಿಸಿ ರಸೀದಿಗೆ ಹರಾಜುಮೂಲಕ ಕೊಡುವದರ ಬದಲು ಸ್ಟಾಂಪುಗಳನ್ನು ಮಾರುವಂತೆ ಸರಕಾರದಲ್ಲಿ ತಕ್ಕಷ್ಟು ಜವಾನರನ್ನು ಡಿಪಾಜಿಟ್ಟಾಗಿ ಇರಿಸಿಕೊಂಡು ವೆಂಡರುಗಳ ಮೂಲಕ ವ್ಯಾಪಾರಮಾಡಿಸಿದರೆ ಹೆಚ್ಚು ಕಮ್ಮಿ ಜನಸಮುದಾಯಕ್ಕೆ ರುಪಾಯಿಗೆ ರುಪಾಯಿ ಉಳಿಕೆಯಾಗುವದಲ್ಲದೆ ನ್ಯಾಯವಾದ ಸಾರಾಯಿವೂ ಸಿಕ್ಕುತ್ತದೆ. ಇತ್ತಲಾಗಿ ಇಲಾಖೆದಾರರಿಗೆ ಕಂಟ್ರಾಕ್ಟುದಾರರ ಅಂಗಡಿಗಳನ್ನು ಅಜಮಾಯಿಸುವ ಗಲಾಟೆಯೂ ಕಂಟ್ರಾಕ್ಟುದಾರರು ಕಂತು ಹಣವನ್ನು ಪಾವತಿಮಾಡಲು ತಪ್ಪಿದರೆ ಅವರ ಮತ್ತು ಜಾಮೀನ್ದಾರರ ಸೆಳೆದಾಡುವ ತೊಂದ್ರೆಯೂ ಉಳಿಯುವದಲ್ಲದೆ ವೆಂಡರುಗಳಿಗೆ ಸಾರಾಯಿವನ್ನು ಹೆಚ್ಚಿನ ಸಿಬ್ಬಂದಿಯಿಲ್ಲದೆ ಕೊಡಲು ಸಮಯವೂ ದೊರೆಯುವದು.

ಕುಪ್ಪಿಗಳಲ್ಲಿ ತುಂಬುವದೆಂದರೆ ಸಾಮಾನ್ಯವಾಗಿ ಜನರು ಆಷ್ಟೊಂದು ಕುಪ್ಪಿಗಳನ್ನು ಒದಗಿಸುವ ಬಗೆ ಹೇಗೆ ಕುಪ್ಪಿಗೆ ಕ್ರಯ ಇಲ್ಲವೋ ಎಂದೆನ್ನುವವರಲ್ಲಿ ಸಂದೇಹವಿಲ್ಲ. ಮೂರು ಕಾಸಿನ ಸೋಡಕ್ಕೆ ಹಾಗೆಯೇ ನಾಲ್ಕಾರು ಆಣೆಯಕ್ರಯದ ಕಾಸ್ಟರಾಯಿಲ್ ಔಷಧ ಮೊದಲಾದ್ದಕ್ಕೆ ಬೇಕುಬೇಕಾದ ಹಾಗೆ ಕುಪ್ಪಿ ದೊರೆಯುವಾಗ ಸಾರಾಯಿಕ್ಕೆ ದೊರೆಯಲಾರದೆಂದು ನೆನಸಕೂಡದು. ಹಾಗೆಯೇ ಕಾಲಿ ಕುಪ್ಪಿಗಳನ್ನು ನಿರ್ಣಯಿಸಲ್ಪಟ್ಟ ಕ್ರಯದಲ್ಲಿ ಕೊಂಡುಕೊಳ್ಳುವ ಏರ್ಪಾಡುಮಾಡಿದರೆ ಕುಪ್ಪಿಯಿಂದ ಉಂಟಾಗುವ ತೊಂದರೆಯು ಕೆಲವು ದಿನಗಳಲ್ಲೇ ಮಾಯವಾಗಲಾರದೆ? ಇಷ್ಟೆಲ್ಲಾ ಆಗಿ ಕುಡುಕತನಕ್ಕೆ ಉತ್ತೇಜನ ಕೊಡಬೇಕೆಂಬದ್ದಲ್ಲ ನನ್ನ ಅಭಿಪ್ರಾಯ. ಕುಡುಕತನವನ್ನು ಕಮ್ಮಿ ಮಾಡಲು ಆಗದೆ ಹೋದರೂ ಅದಕ್ಕಾಗಿ ಖರ್ಚುಮಾಡುವ ಹಣದ ಕೆಲವು ಭಾಗವನ್ನಾದರೂ ಉಳಿಸಬೇಕೆಂಬದೇ ನನ್ನ ಉದ್ದೇಶವಾಗಿದೆ.

ಈ ಮೇಲಿನ ಅಭಿಪ್ರಾಯವು ಹಿತಕರವೆಂದು ತೋರುವದಾದರೆ ಈ ಬಿಲ್ಲು ಕೊಡುವ ಇಂಗ್ಲಿಷ ನಮ್ಮ ಪ್ರತಿನಿಧಿಗಳಾದ ಕೌನ್ಸಿಲುಮೆಂಬರುಗಳೂ ಜವಾಬ್ದಾರರ ಸಂಘವೂ ನಮ್ಮ ಕೊಡಗು ಪತ್ರಿಕೆಯೂ ಸರಕಾರಕ್ಕೆ ಸಲಹೆ ಕೊಟ್ಟು ಮುಂದೆ ಬರುವ ಸಾರಾಯಿ ಹರಾಜಿಗೆ ಮೊದಲೇ ನಮ್ಮ ಈ ಚಿಕ್ಕದೇಶದಲ್ಲಿ ಪರೀಕ್ಷಾರ್ಥವಾಗಿಯಾದರೂ ಮಾಡಬೇಕಾಗಿ ತಮಗಳೆಲ್ಲರನ್ನೂ ಅತಿವಿನಯದಿಂದಬೇಡುವ,

ಐ. ಪಿ. ಯಂ.

ಅಯ್ಯಾ,

ಡಿಸೆಂಬರ್ ತಾ. 12ರಲ್ಲು ರಾವುಸಾಹೇಬ್ ಪಟ್ಟಮಾಡ ದೇವಯ್ಯನವರಿಗೆ ಪೋಲೀಸ್ ಡಿಪ್ಟಿಸುಪರಿಂಟೆಂಡೆಂಟ್ ಕೆಲಸವನ್ನು ನಮ್ಮ ಘನ ಸರಕಾರದವರು ಖಾಯಂ ಮಾಡಿಕೊಟ್ಟದ್ದಕ್ಕಾಗಿ ಐವತೊಕ್ಲು ದವಸ ಭಂಡಾರದ ಮೆಂಬರುಗಳೆಲ್ಲರೂ ಕೂಡಿ ಒಂದು ಟೀ ಪಾರ್ಟಿಯನ್ನು ಕೊಟ್ಟರು. ಇದಕ್ಕೆ ಕೆಲವು ಮನೆಗಳ ಪಟ್ಟೆದಾರರನ್ನು ಬರಮಾಡಿಸಿಕೊಂಡಿದ್ದರಲ್ಲದೆ ಕೆಲವು ಇತರ ಉದ್ಯೋಗಸ್ಥರನ್ನೂ ಸಹ ಬರಮಾಡಿಸಿದ್ದರು.

ಟೀ ಪಾರ್ಟಿಯು ಬಹಳ ಆನಂದವಾಗಿತ್ತು. ನಿಷೇಧವನ್ನು ಪೂರಾ ಭಂಗಮಾಡಿದ್ದರು.

ರಾವು ಸಾಹೇಬ್ ದೇವಯ್ಯನವರು ಕಷ್ಟಪಟ್ಟು ಕೆಲಸ ಮಾಡಿದ್ದಕ್ಕೆ ಸರಕಾರದವರು ಇವರಿಗೆ ಯೋಗ್ಯವಾದ ಪದವಿಯನ್ನು ಕೊಟ್ಟರೆಂದೂ ಇನ್ನೂ ಅನೇಕ ತರದಲ್ಲು ಇವರನ್ನು ಕೊಂಡಾಡಿ ಇವರನ್ನು ಒಂದು ಉದಾಹರಣೆಯಾಗಿ ತೆಗೆದುಕೊಂಡು ಸ್ಥಿರ ಸತ್ಯದಿಂದಲೂ ಕಷ್ಟದಿಂದಲೂ ಕೆಲಸ ಮಾಡಿದರೆ ದೇವರು ಯಾರನ್ನೂ ಹಾಳುಮಾಡಲಿಕ್ಕಿಲ್ಲವಾಗಿ ಸಹ ಈ ಸಂಘದ ಮೂಲ ಪುರುಷರಾದ ಮಾ. ಶ್ರೀ. ಪಟ್ಟಮಾಡ ಮಂದಪ್ಪನವರು ಸೂಚಿಸಿದರು. ಅಲ್ಲದೆ ಈ ಸಂಘದ ಸ್ಥಾಪನೆ ಒಂದು ವಾಳ ವಗೈರೆಯ ವರದಿಯನ್ನು ಸಹ ಈ ಸಂಘದ ಒಬ್ಬ ಮೆಂಬರಾದ ರಾವು ಸಾಹೇಬ್ ದೇವಯ್ಯನವರಿಗೂ ಮತ್ತು ಅಲ್ಲಿ ನೆರೆದಿದ್ದ ಇತರ ಜನರಿಗೂ ತಿಳಿಯುವಂತೆ ವಿವರಿಸಿದರು. ರಾವುಸಾಹೇಬ್ ದೇವಯ್ಯನವರು ಸಂಘದ ಮೆಂಬರುಗಳನ್ನು ವಂದಿಸಿ ಕಷ್ಟಪಟ್ಟು ಕೆಲಸಮಾಡುವವರಿಗೆ ದಾರಿದ್ರ್ಯವು ಸಂಭವಿಸಲಾರದೆಂದೂ ಇನ್ನೂ ಅನೇಕತರದ ಬುದ್ಧಿವಾದವನ್ನೂ ಹೇಳಿದರಲ್ಲದೆ ಐವತೊಕ್ಲು ಶಾಲೆಯನ್ನು ಈ ಸಂಘದವರೇ ಕಟ್ಟಿಸಿ ಉದ್ಧಾರಮಾಡಿದಕ್ಕಾಗಿ ಮೆಂಬರುಗಳನ್ನು ವಂದಿಸಿ ಮಂಗಳ ಜಯಘೋಷದೊಡನೆ ಟೀ ಪಾರ್ಟಿಯನ್ನು ಮುಕ್ತಾಯ ಮಾಡಲಾಯಿತು

ಹಾಜರಿದ್ದವ.

ಮಡಿಕೇರಿ ನಾಡುಕೋಲು.

ತಾ. 11 ರಲ್ಲು ಗದ್ದಿಗೆ ಕೋಲಿನಲ್ಲು ಮಾ. ಶ್ರೀ. ಪಾಲೆಕಂಡ ಮುತ್ತಣ್ಣನವರು, ಬಿಟ್ಟಿಯಂಡ ಕುಟ್ಟಪ್ಪನವರು, ಕೋದಂಡ ಐಯ್ಯಣ್ಣನವರು, ಕೀತಿಯಂಡ ಕಾಳಪ್ಪನವರು ವಗೈರೆ ಉದ್ಯೋಗಸ್ಥರು ದಯಮಾಡಿಸಿ ಅಲ್ಲಿಯಣ ಕಿಂಚಿತ ಜನರು ಸೇರಿ ಕೋಲುಹೊಡಿಯಲು ಏನು ಕಾರಣವೆಂಬ ಸಂಗತಿ ವಿಚಾರಿಸಿದಲ್ಲು ಕೊಕ್ಕಲೆರ ಮನೆಯವರಿಗೂ ಪಾಂಡಿರ ಮನೆಯವರಿಗೂ ತಾನು ಮುಂದೆ ಕೋಲು ಹೊಡೆಯುವದೆಂಬ ಸಂಗತಿಯಲ್ಲಿ ಜಗಳವಾಗುವದರಿಂದ ಜನ ಸೇರುವುದು ಕಮ್ಮಿಯಾಗುತ್ತಿ ಎಂಬ ಸಂಗತಿ ತಿಳಿದು ಅಲ್ಲಿನವರನ್ನು ವಿಚಾರಿಸಿ ಮಾರನೇ ದಿನ ಕರವಲೆ ಮಂದಿನಲ್ಲಿ ಇತ್ಯರ್ಥಮಾಡುತ್ತೇವೆ ಎಲ್ಲರೂ ಸೇರಬೇಕಾಗಿ ಅಪೇಕ್ಷಿಸಿದಮೇರೆ ಕರವಲೆ ಮಂದಿನಲ್ಲಿ ಇವರುಗಳು ಮತ್ತು ಕೊಂಗೆಟ್ಟಿರ ಮಂದಣ್ಣ ಡಾಕ್ಟರ್ ಸಹ ಒಂದು ಸೇರಿ ನಾಡಿನ ಹಾಜರಿದ್ದ ಎಲ್ಲ ಮುಖ್ಯಸ್ಥರಮುಂದೆ ಉಭಯಸ್ಥರ ಪುಕಾರುಗಳನ್ನು ಕೇಳಿ ಈ ಮೇರೆ ಫೈಸಲ್ ಮಾಡಿದರು.

ಗದ್ದಿಗೆಕೋಲು ಅರಮನೆಕೋಲು ಅದಕಾರಣ ಗ್ರಾಮದ ಪಟೇಲರು ಅಲ್ಲಿ ಮುಂದೆ ಕೋಲು ಹೊಡಿಯಬೇಕಾಗಿಯೂ ಕರವಲೆನಾಡುಮಂದಿನಲ್ಲು 1ನೇ ದೇವತಕ್ಕ 2ನೇ ನಾಡುತಕ್ಕ 3ನೇ ಪಾಂಡಿರಮನೆಯವನೊಬ್ಬನು 4ನೇ ಕೊಕ್ಕಲೆರಮನೆಯವನೊಬ್ಬನು ಅನಂತರ ಇತರರು ಪ್ರಾಯದಮೇರೆ ಕೋಲು ಹೊಡೆಯಬೇಕಾಗಿಯೂ, ನಾಡುತಕ್ಕನು ಬೈಸ್ಕಾರದಲ್ಲು ಇದ್ದು ಸೇರದೆ ಅವರ ಎಲ್ಲ ಕೆಲಸಗಳನ್ನು ಆ ಅಂಗಾಯ್ಯನಿಂದ ಪಾಂಡಿರ ಮನೆಯವರೇ ನಡಸುತ್ತಾ ಬರುವದರಿಂದ ನಾಡಿನವರ ಅನುಮತಿಮೇರೆ ಸದ್ರಿ ನಾಡುತಕ್ಕನು ಪೊನ್ನಪ್ಪಂಡಮನೆಯವರು ಸೇರಿ ನಡಸುವ ಪರ್ಯಂತರ ಪಾಂಡಿರ ಮನೆಯವರಿಗೆ ಕೊಡಲ್ಪಟ್ಟು, ಹೂವು ಪ್ರಸಾದಗಳೊಡನೆ ಎಲ್ಲ ಜನರುಸೇರಿ ಕೋಲು ಹೊಡೆಯಲ್ಪಟ್ಟಿತು. ಮಾರಣೆ ದಿನ ದೇವಕೋಲು ಸಹ ಆದೇಮೇರೆ ನಡೆಯಲ್ಪಟ್ಟಿತು. ಆ ದಿನ ಹೆಂಗಸರು ಮಕ್ಕಳು ಸಮೇತ ಹೆಚ್ಚು ಜನ ನೆರೆದಿದ್ದರು. ಈ ಮಂದು ಮುನಿಸಿಪಾಲಿಟಿ ಸರಹದ್ದಿನಲ್ಲಿರತಕ್ಕ ಕರವಲೆ ಮಹಿಷಾಸುರ ಮರ್ದಿನಿ (ಭಗವತಿ) ಯ ದೇವಸ್ಥಾನದಮುಂದೆ ಇದ್ದು ಮಡಿಕೇರಿಯಲ್ಲಿರತಕ್ಕ ಅನೇಕ ಮಹನೀಯರು ಈ ಮಂದಿಗೆ ಸೇರಿ ವಿನೋದಪಡಲು ಬಹು ಅನುಕೂಲವಿರುವದಾಗಿದೆ. ಇಂಥಾ ದಿವ್ಯಸ್ಥಳದಲ್ಲಿ ಉಂಟಾಗಿದ್ದ ಕಕ್ಷಿಯನ್ನು ತೀರ್ಮಾನಿಸಿ ಮಾಮೂಲಾಮೇರೆ ಪುತ್ತರಿ ಕೋಲು ಹೊಡಿಸಲು ಪ್ರಯತ್ನಪಟ್ಟ ಮೇಲ್ಕಂಡಮಹನೀಯರಿಗೆ ಮಹಿಷಾಸುರ ಮರ್ದಿನಿದೇವಿಯು ದೀರ್ಘಾಯುಷ್ಯವನ್ನೂ, ಕೀರ್ತಿ ಸಂಪತ್ತನ್ನೂ ದಯಪಾಲಿಸಲೆಂದು ಹಾರೈಸುವ.

ಹಾಜರಿದ್ದವ.

ಬೇಂಗುನಾಡು ಕಾನ್ಫರೆನ್ಸು

ಅಯ್ಯಾ,

ತಾ. 7—12—24ರಲ್ಲು ಬೇಂಗುನಾಡಿನ ಸಹಕಾರ ಸಂಘಗಳ ಒಂದು ಕಾನ್ಫರೆನ್ಸು ರಾವುಸಾಹೇಬ್ ಮತ್ತು ಪೋಲೀಸ್ ಡಿಪ್ಟಿ ಸುಪರಿಂಟೆಂಡೆಂಟರಾದ ಪಟ್ಟಮಾಡ ದೇವಯ್ಯನವರ ಅಧ್ಯಕ್ಷತೆಯಲ್ಲು ಕೊಟ್ಟೂರುಸ್ಕೂಲಿನಲ್ಲು ನಡೆಯಿತು. ಸುಮಾರು 150 ಜನರ ವರೆಗೆ ಹಾಜರಿದ್ದರು.

ಸಹಕಾರಿ ಸಂಘಗಳ ಮೂಲತತ್ವದ ವಿಷಯವಾಗಿ ಮ. ಶ್ರೀ. ಪಟ್ಟಮಾಡ ಚಂಗಪ್ಪನವರು, ಕುಂಞಪ್ಪನವರು ಮತ್ತು ಪೊಡನೋಲಂಡ ದೇವಯ್ಯನವರು ಸಹ ಜನರಿಗೆ ಬೋಧಿಸಿದಲ್ಲದೆ ಮಾ. ಶ್ರೀ. ಪಟ್ಟಮಾಡ ಚಿಣ್ಣಪ್ಪನವರು ಸಹಕಾರ ಸಂಘಗಳ ಜೊತೆಯಲ್ಲು ಒಂದು ಸ್ಟೋರು (ಉಗ್ರಾಣ) ಸಹ ಇಟ್ಟುಕೊಂಡರೆ ಗರೀಬ ರೈತರಿಗೆ ಆಗುವ ಅನುಕೂಲತೆಯನ್ನು ಸಹ ವಿವರಿಸಿದರು.

ಪರಸ್ಪರ ಸಂಘಗಳ ರಿಜಿಸ್ಟ್ರಾರರಾದ ಮಾ. ಶ್ರೀ. ಕೆ. ಎನ್. ಸುಬ್ರಾಯರವರು ಪರಸ್ಪರ ಸಂಘಗಳ ಮೂಲತತ್ವವನ್ನೂ, ಅದರ ಉಪಯೋಗ, ಹ್ಯಾಗೆ ನಡಿಸಬೇಕೆಂಬ ನಿಧಾನವನ್ನೂ ಸಹ ಜನರಿಗೆ ಮನದಟ್ಟಾಗುವಂತೆ ವಿವರಿಸಿದರು.

ಆ ಮೇಲೆ ಅಧ್ಯಕ್ಷರು ಸಹಕಾರವೆಂದರೇನು ? ಒಗ್ಗಟ್ಟಿನ ಬಲ, ಮೂಲತತ್ವ ವಗೈರೆಯಾಗಿ ಅನೇಕ ವಿಧದ ಬೋಧನೆಯನ್ನು ವರ್ಣಿಸಿದರಲ್ಲದೆ ಲಂತಾನದ ಸಂತಾನವನ್ನು ನಿರ್ಮೂಲ ಮಾಡಿದರೆ ದನಕರಗಳನ್ನು ಸಾಕಿ ಗರೀಬ ರೈತರು ಮುಂದುವರಿಯುವ ವಿಧಾನವನ್ನೂ ಸ್ಟೋರು ಇಟ್ಟುಕೊಂಡರೆ ಅದರಿಂದುಂಟಾಗುವ ಪ್ರಯೋಜನವನ್ನೂ ಸಹ ಬಹಳಚನ್ನಾಗಿ ಬೋಧಿಸಿ ಮುಕ್ತಾಯಮಾಡಿದರು.

ಇದು ಮುಕ್ತಾಯವಾದ ವಡನೆ ರಾವುಸಾಹೇಬ್ ದೇವಯ್ಯನವರ ಅಧ್ಯಕ್ಷತೆಯಲ್ಲಿಯೇ ಬೇಂಗುನಾಡು ಯೂನಿಯನ್ನಿನ ಜನರಲ್ ಮೀಟಿಂಗು ಮಾಡಲಾಯಿತು.

ರಿಜಿಸ್ಟ್ರಾರರು ಯೂನಿಯನ್ನಿನ ಕರ್ತವ್ಯ, ಅದರ ಜವಾಬ್ದಾರಿಕೆ, ಉಪಯೋಗ, ವಗೈರೆ ಹಲವು ಸಂಗತಿಗಳನ್ನು ವಿವರಿಸಿದರು.

ಯೂನಿಯನ್ನಿಗೆ 7 ಜನ ಕಮಿಟಿ ಮೆಂಬರುಗಳನ್ನು ಚುನಾಯಿಸಿದರು. ಈ ಪೈಕಿ ಮೆ. ಪಟ್ಟಮಾಡ ಚಂಗಪ್ಪನವರನ್ನು ಪ್ರೆಸಿಡೆಂಟರಾಗಿ ಚುನಾಯಿಸಿ ಮ. ಶ್ರೀ. ಪೊಡನೋಲಂಡ್ರ ಭೀಮಯ್ಯನವರನ್ನು ಗೌರವ ಕಾರ್ಯದರ್ಶಿಯಾಗಿ ಸಹ ಚುನಾವಣೆಯಾಯ್ತು. ಕಮಿಟಿಮೆಂಬರುಗಳು ಯಾವ್ಯಾವ ಸಂಘವನ್ನು ನೋಡಬೇಕೆಂದು ಸಹ ತೀರ್ಮಾನವಾಯಿತು. ಕಡೆಗೆ ಅಧ್ಯಕ್ಷರಿಗೂ, ರಿಜಿಸ್ಟ್ರಾರರಿಗೂ ಸಹ ಮಂಗಳ ಜಯಘೋಷದಿಂದ ಮೀಟಿಂಗನ್ನು ಬರಕಾಸ್ತು ಮಾಡಲಾಯಿತು.

ಹಾಜರಿದ್ದವ.

ಅಳತೆಯ ಪರೆ ವಿಷಯ.

ಅಯ್ಯಾ,

"ಕೊಡಗು" ಪತ್ರಿಕೆಯ ಸಂಪಾದಕರೆ, ಮೇಲ್ಕಂಡ ವಿಷಯಕ್ಕೆ ತಮ್ಮ ಪತ್ರಿಕೆಯಲ್ಲಿ ಸ್ವಲ್ಪ ಸ್ಥಳಕೊಟ್ಟು ಪ್ರಿಂಟುಮಾಡಿಸಬೇಕಾಗಿ ಅಪೇಕ್ಷಿಸುತ್ತೇನೆ. ಅಳತೆಪರೆ, ಪರೆತಲೆತಟ್ಟುವ ಕೋಲು ಮತ್ತು ಅಳತೆ ಇವುಗಳ ವಿಷಯ ಅನೇಕ ಅಭಿಪ್ರಾಯಗಳು ತಮ್ಮ ಪತ್ರಿಕೆಯಲ್ಲಿ ಓದಿನೋಡಿರುತ್ತೇನೆ. ಈ ವಿಷಯದಲ್ಲಿ ನನ್ನ ಅಭಿಪ್ರಾಯ ತಿಳಿಸುತ್ತೇನೆ. ಭತ್ತ ವ್ಯವಸಾಯಗಾರ ರೈತರು ಅಳತೆಯ ಅನ್ಯಾಯದಿಂದ ಬಿಡುಗಡೆ ಹೊಂದಬೇಕಾದರೆ ತೂಕದ ಮೂಲಕ ಅಳತೆಮಾಡುವದೇ ಅತ್ಯಂತ ಉತ್ತಮವಾದ ದಾರಿಯಾಗಿದೆ ಅಲ್ಲದೆ ಸ್ಥಿರವಾಗಿ ನಿಲ್ಲುವಂಥಾದ್ದು ಆಗಿರುತ್ತದೆ ಇದನ್ನು ಬೇಗಮಾಡಿಸಿಕೊಡಬೇಕಾಗಿ ಸರಕಾರದವರನ್ನು ಕೇಳಿಕೊಳ್ಳಬೇಕು. ಇದು ತತ್ಕಾಲಕ್ಕೆ ಆಗತಕ್ಕದಲ್ಲದಿದ್ದರೆ ತುಂಬ ಅಳತೆಯಲ್ಲಿ ಹತ್ತುಸೇರು ಬತ್ತ ಆಗುವಂಥ ಪರೆಗಳನ್ನು ಸರಕಾರದವರೇ ತಯಾರುಮಾಡಿಸಿ ಕಟ್ಟು ವಗೈರೆ ಕಟ್ಟಿಸಿ ಸರಕಾರದ ಸೀಲು ಹಾಕಿಸಿ ಪ್ರತಿ ನಾಡು ಕಚೇರಿಗಳಲ್ಲು ಮತ್ತು ಪೋಲೀಸ್ ಸ್ಟೇಶನ್‌ಗಳಲ್ಲು ಮಾರಲಿಕ್ಕೆ ಇಡಬೇಕು. ಹೀಗೆಮಾಡಿದರೆ ಪರೆಗಳು ಬೇಗ ಸಿಕ್ಕುವದು, ಪರೆತುಂಬ ಅಳತೆಯಲ್ಲಿ ಪರೆ ತಯಾರುಮಾಡಿದಲ್ಲಿ ಬತ್ತ ಕೊಂಡುಕೊಳ್ಳುವವರಿಗೂ ಕೊಡುವವರಿಗೂ ನಷ್ಟ ಅನ್ಯಾಯಗಳೇ ಉಂಟಾಗುವದಿಲ್ಲ. ಉರುಟಾದ ಅಥವ ಚಪ್ಪಟೆಯಾದ ಪರೆಕೋಲು ಮಾಡಿಸಿ ಸೀಲು ಹಾಕಿಸುವ ತೊಂದ್ರೆತಪ್ಪುವದು. ಪರೆ ತಲೆತಟ್ಟುವದಕ್ಕೆ ಕೆಯಾರು ಆದವರನ್ನು ಕರೆಸಿ ಇಟ್ಟುಕೊಳ್ಳುವ ತೊಂದರೆ ವ್ಯಾಪಾರಿಗಳಿಗೆ ಇರುವದಿಲ್ಲವಲ್ಲದೆ ರೈತರಿಗೆ ಉಂಟಾಗುವ ಅನ್ಯಾಯವು ತಪ್ಪುವುದು. ಪರೆಕೋಲಿನ ಪುಕಾರು ಸರಕಾರಕ್ಕೆ ಗಡಿಗಡಿ ಹೋಗುವದು ನಿಲ್ಲುವದು, ಬತ್ತದ ಕಣದಲ್ಲಿ ಪರೆಕೋಲಿನ ವಿಷಯದಲ್ಲಿ ನ್ವುಂಟಾಗುವ ಹೊಡೆದಾಟ ಬಡಿದಾಟ ತಪ್ಪುವದು. ಇನ್ನು ಅನೇಕ ಚಿಲ್ರೆ ವಿಷಯಗಳುಇವೆ, ಮುಖ್ಯವಾಗಿ ನಮಗೆ (1) ತೂಕದಮೂಲಕ ಅಳತೆ ಅತ್ಯಂತಬೇಕಿದು. ಇದು ಸಧ್ಯಕ್ಕೆ ಆಗದೆ ಇದ್ದರೆ (2) ಪರೆ ತಲೆತಟ್ಟದೆ ತುಂಬ ಅಳತೆಯಿಂದ ಕೊಡುವದು ಕೊಂಡುಕೊಳ್ಳುವದು ಆಗಬೇಕು ಈಗ ಬತ್ತ ಮಾರಾಟದ ಕಾಲವಾದ್ದರಿಂದ ಪರೆ ವಡನೆ ತಯಾರುಮಾಡಿಸ ಬೇಕಾಗಿ ಸರಕಾರದವರು ಕೌನ್ಸಿಲಮೆಂಬರುಗಳು ನಿಗ ತೆಗದುಕೊಳಬೇಕಾಗಿ ಅಪೇಕ್ಷಿಸುತ್ತೇನೆ.

ಕುಲ್ಲಿಕಂಡ ತಿಮ್ಮಯ್ಯ, ಮುಗ್ಗುಟಗ್ರಾಮ.

ಮನೆಯ ಶಿಲ್ಪಿಗಾರ.

ವಾಚಕ ಪ್ರಿಯರೆ?

ನಮ್ಮ ಕೊಡಗು ದೇಶದಲ್ಲಿ ದಿನಗಳು ಕಳೆದ ಹಾಗೆಲ್ಲಾ ಮನೆ ಕಟ್ಟುವ ಕೈಗಾರಿಕೆಯೊಂದು ವಿರುತ್ತಾ ಬರುತ್ತಿದೆ. ಈ ಸಂಬಂಧ ಉಂಟಾಗತಕ್ಕ ಖರ್ಚೆಲ್ಲಾ ಪರದೇಶಸ್ಥರ ಜೇಬಿಗೆ ಜಮೆಯಾಗುತ್ತದೆ. ನ್ಯಾಯವಾಗಿ ಜಮೆಯಾಗುವದು ಮಾತ್ರವಲ್ಲ. ಅನ್ಯಾಯವಾಗಿ ಹಣ ಬಡಕೊಂಡು ಓಡಿ ಹೋಗುವದು ಮತ್ತು ಅವರ ಕೃತ್ಯಗಳ ಮೂಲಕ ಹೆಚ್ಚಿನ ನಷ್ಟಗಳಿಗೆ ಗುರಿಯಾಗುವದೂ ಸಹ ಕೊಡಗಿನವರಿಗೆ ಸೇರಿದೆ. ಕಾರಣ ವಿಚಾರಿಸಿದರೆ ಇದಕ್ಕೆ ಕೊಡಗಿನವರೇ ಕಾರಣರು. ಇಲ್ಲಿ ಅಂಥಾ ಕೈಗಾರಿಕೆಕಾರರು ಇಲ್ಲದ್ದರಿಂದಲೇ ಕೊಡಗು ಈ ಅವಸ್ಥೆಗೆ ಗುರಿಯಾಗಬೇಕಾಗಿ ಬಂತು. ಕೊಡಗಿನಲ್ಲಿ ಮುಖ್ಯ ಶಿಲ್ಪಿ ವಿಷಯದಲ್ಲಿ ಹೆಚ್ಚು ನಂಬಿಕೆ. ಈ ಶಿಲ್ಪ ಹೇಳುವವರು ಪೂರಾ ಪರವಾಸಿಯರೇ. ಇವರಾದರೋ ಈ ಶಿಲ್ಪ ತಿಳಿದೋ ತಿಳಿಯದೆಯೋ ಇರುವವರಾದರೂ ಕೊಡಗು ಹತ್ತುತ್ತಲೇ ದೊಡ್ಡ ವಿದ್ವಾಂಸರಾಗಿ ಬಿಟ್ಟರು. ಇಂಥಾವರು ಇಲ್ಲಿ ಹೇರಳ ದೊರೆಯುತ್ತಾರೆಂಬದರಲ್ಲಿ ಸಂಶಯವಿಲ್ಲ. ಇವರು ಸುಖವಿರುವ ಯಾ ಇರದಿರುವ, ಯಾವದಾದರೂ ಒಂದು ಸ್ಥಳವನ್ನು ಯಜಮಾನನ ಮೆಚ್ಚಿಗೆ ಪಡೆಯುವದಕ್ಕಾಗಿ ಆತನು ತೋರಿಸಿದ ಸ್ಥಳವನ್ನು ಒಂದೆರಡು ಶಾಸ್ತ್ರೋಕ್ತ ಶ್ಲೋಕಗಳ ಮೂಲಕ ಶಿಲ್ಪಿಗೆ ವಿರೋಧವಾಗಿ ಮನಸ್ಸೋ ಇಚ್ಛೆ ಪ್ರಕಾರ ಆರಿಸಿಕೊಟ್ಟು ಯಜಮಾನನಿಂದ ಒಂದಕ್ಕೆರಡು ತರವಾಗಿ ಬಹುಮಾನವೆಂದೂ, ಇನಾಮೆಂದೂ, ಮಾಯೂರ್ದೆಂದೂ ಮುಂತಾಗಿ ವಸೂಲು ಮಾಡಿಬಿಡುತ್ತಾರೆ.

ಹೇಗೂ ಪರದೇಶದಿಂದ ಒಂದವರು ನಿಪುಣರೇ ಸರಿ. ಯಾಕಂದರೆ ಯಾವಾಗಲೂ ದೇಶ ತಿರುಗಿದವನ ಅವಿದ್ವಾಂಸನಾದರೂ ಜನಗಳ ತೋರಿಕೆಯಲ್ಲಿ ವಿದ್ವಾಂಸನೆನ್ನಿಸಿಕೊಳ್ಳುತ್ತಾನೆ. ಹೀಗೆ ಈತನು ಆರಿಸಿಕೊಟ್ಟ ಸ್ಥಳದಲ್ಲಿ ಮನೆ ಮಾಡಿ ಎಷ್ಟೋ ಅನರ್ಥಗಳಿಗೆ ಹೆಚ್ಚು ಜನರು ಈಡಾಗಿದ್ದಾರೆ. ಹೀಗೆ ಮನೆ ಕಟ್ಟಿದ ಒಂದೆರಡು ವರುಷಗಳಲ್ಲೇ ಸುಖವಿಲ್ಲವೆಂದು ಎರಡನೆ ಕಟ್ಟಿದ್ದೂ ಉಂಟು. ಹೀಗಾಗಿ ಒಬ್ಬೊಬ್ಬನು ಎರಡಕ್ಕೆ ಕಮ್ಮಿಯಾದ ಮನೆ ಕಟ್ಟುವದು ಬಹು ಕಡಮೆ. ಅಷ್ಟು ಮಾತ್ರವಲ್ಲ. ಹೀಗೆ ಅಷ್ಟು ಖರ್ಚಿನಿಂದ ಹಾಕಿದ ಕುತ್ತಿಯನ್ನು ಇನ್ನೊಬ್ಬನಿಗೆ ತೋರಿಸುವಾಗ ಆತನು ಅದಕ್ಕೇನಾದರೂ ಒಂದು ದೋಷಗಳನ್ನು ಹೇಳಿ ಪುನಹ ತಾನೇ ಒಂದು ಸ್ಥಳಕ್ಕೆ ಕುತ್ತಿ ಹಾಕುತ್ತಾನೆ. ಹೀಗಾಗಿ ಮನೆ ಕಟ್ಟುವ ಮೊದಲೆ ಅನಾವಶ್ಯಕವಾದ ನಷ್ಟ ಕಷ್ಟಗಳು ಉಂಟಾಗುವದಲ್ಲದೆ ಎರಡು ನೂರು ಜಾಗಗಳು ಸಹ ಬದಲಾವಣೆಯಾಗುತ್ತವೆ. ಹಾಗೂ ಮನೆ ಕಟ್ಟಿದರೂ ಅಲ್ಲಿಯೂ ಸುಖ ಸಿಕ್ಕುವದು ದೇವರ ಕೈಯಲ್ಲಿದೆ. ಹಾಗೆ ಸುಖ ಸಿಕ್ಕದೆ ಏನಾದರೂ ಕಾಲ ಗ್ರಹಚಾರದ ನಷ್ಟಕ್ಕೆ ಯಜಮಾನನು ಗುರಿಯಾದರೆ ಜನರ ಹೇಳಿಕೆಯು ಮತ್ತೆ ಮನೆಗೆ ದೂರೇ. ಹೀಗಾದರೂ ಜಾಗೆ ಕುತ್ತಿ ಹಾಕಿದಾತನಾದರೂ ಇದ್ದಾನೆಯೇ—ಅದೂ ಇಲ್ಲ. ಇಂದು ಕಂಡವನು ನಾಳೆ ಪರಾರಿಯೇ, ಅದೂ ಸಹಜ, ಆತನಿಗೇನು, ಯಾರು ಹೇಗಾದರೂ ಆತನ ಕಾರ್ಯ ಪೂರೈಸಿದರೆ ಸೈ. ಇದಕ್ಕೆ ಪ್ರತಿ ಒಬ್ಬರೂ ಸಿಗಕೊಟ್ಟು ಈ ವಿಷಯದಲ್ಲಿ ಹೆಚ್ಚಿನ ಖರ್ಚಿಗೆ ಗುರಿಯಾಗದೆ ಹಾಗೆ ಮನೆ ಕಟ್ಟುವರೆ ಕುತ್ತಿ ಇತ್ಯಾದಿ ಪೂರ್ವ ಪದ್ಧತಿಯಂತೆ ಆಗಲೇಬೇಕಾದರೆ ಯಾರಾದರೂ ದೇಶೀಯರನ್ನೇ ಹಿಡಿದು ಅವರ ಮುಖಾಂತರ ಮಾಡುವದು ಎಷ್ಟೋ ಮೇಲು. ಹಿತ್ತಲು ಮದ್ದಿಗೆ ಬೇಲಿ ಕಡಮೆ ಕಟ್ಟಿದರ ಕ್ರಮೇಣ ತಮ್ಮ ಬೆಳೆಗೇನೇ ಕುಂದಕ ಬಾರದಿರಲಾರದು. ಯಾಕಂದರೆ ಇಲ್ಲಿನವರಿಗೆ ಹೆಚ್ಚು ಸುಳ್ಳು ಹೇಳುವರೆ ಅವಕಾಶ ಇರುವುದಿಲ್ಲ, ಇಂದು ಎಲ್ಲಿರುವರೋ ನಾಳೆಯೂ ಅವರಿಗೆ ಅಲ್ಲಿಯೇ ಇರಬೇಕಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ಈ ಮೊದಲು ಒಬ್ಬ ಮಾನ್ಯ ಗ್ರಹಸ್ಥನು ಕೆಲವು ಮಲೆಯಾಳಿ ಆಚಾರಿಗಳಿಂದ ಕುತ್ತಿ ಹಾಕಿಸುವದಕ್ಕೆ ಆರಂಭ ಮಾಡಿದಾಗ ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಹಾಕಿ ಸ್ವಲ್ಪ ಹಣವನ್ನು ಆತನಿಂದ ಕಳಚಿಬಿಟ್ಟರ. ಕಡೆಗೆ ಮೂರ್ನಾಡು ಒಳಿ ಮೊದ್ದೂರು ಗ್ರಾಮದ ಚಿಂದುಳಿರ ಪೂವೈಯ್ಯನೆಂಬ ಶಿಲ್ಪಿ ತಿಳಿದ ಕೊಡಗರೊಬ್ಬರು ಅವರ ಮನಸ್ಸಿಗೂ ಶಾಸ್ತ್ರಕ್ಕೂ ಸರಿಯಾದ ಸ್ಥಳದಲ್ಲಿ ಕುತ್ತಿ ಹಾಕಿದರು. ಇದನ್ನು ಹೆಚ್ಚು ತಿಳುವಳಿಕೆಯುಳ್ಳ ಒಂದೆರಡು ಶಿಲ್ಪಿಗಾರರಲ್ಲಿ ತೋರಿಸುವಾಗ ಅವರೆಲ್ಲರೂ ಆ ಸ್ಥಳಕ್ಕೆ ಸಮ್ಮತಿಸಿಟ್ಟರು. ಆದಕಾರಣ ಪರದೇಶೀಯರಿಗಿಂತ ಸ್ವದೇಶೀಯರಲ್ಲಿ ಹೆಚ್ಚಿನ ವಿಶ್ವಾಸವಿಡುವರೆ ಯಾವ ಅಭ್ಯಂತರವೂ ಇಲ್ಲ ಮತ್ತು ಅವರ ಹಾಗೆ ನಷ್ಟ ಕಷ್ಟಗಳೂ ಕಡಮೆ. ಈ ಲೇಖನವು ಇತರರ ದೃಷ್ಟಿಗೆ ಹೂಲನ್ಯಾಯವಾಗಿ ಅನೂಯೂಪರವೆಂದಾ ಕಂಡರೂ ನಮ್ಮ ಲೇಖನಿಯು ಯಾವದೊಂದು ಪಕ್ಷವೂ ಪಕ್ಷವಲಂಬಿಸದೆ ವಾಸ್ತವ್ಯದಲ್ಲಿಯೇ ಬರಳಿ ಇಂದು ವಿಶ್ರಾಂತಿಯನ್ನು ಪಡೆದಿರುತ್ತೆ.

ಸಿ. ಕೆ. ಕುಟ್ಟಪ್ಪ

ಸರಕಾರಕ್ಕೆ ಒಡ ಸೌಕರರ ಒಂದು ಅಪ್ಪೀಲು.

ಅಯ್ಯಾ,

(ಶ್ಲೋಕ) ಸತ್ಯಂ ಬ್ರೂಹಿ ವಿಪ್ರೋ ಧರ್ಮಂ ಚರ [illegible] ಜನಂ || ಎಂಬ ನೀತಿಗನುಸಾರವಾಗಿ ಈ ಲೋಕದಲ್ಲಿ ಜನರು ಮಾಡುವ ಕುತಂತ್ರವನ್ನು ಯಾವ ರೀತಿಯಿಂದಲೂ ತಿಳಿಯುವದು ಬಹಳ ಪ್ರಯಾಸವೇ ಸರಿ. ಓದುವದೂ, ಮಾತಾಡುವದೂ, ಸ್ಥಾಕಾ ವೇದಾಂತ ವಿಚಾರವು ಸ್ವಾರ್ಥನವೆಲ್ಲಾ ನೇದಾಂತ ವಿಚಾರವು ಯೋಚಿಸಿದರೆ ಭೂಮಂಡಲಿಯು ಪೂರ್ವದಲ್ಲಿ ದೇವೇಂದ್ರನ ಸಭೆಯಲ್ಲಿ ದುಷ್ಕರ್ಮದ ದೆಸೆಯಿಂದ ಭೂಭಾರ ಹೊರುವದು ಪೂರಾ ತಪ್ಪ ನನ್ನಿಂದ ಸಾಧ್ಯವಿಲ್ಲವೆಂಬದಾಗಿ ಹೊರೆ ಇದ್ದಾಗ್ಯ ಕಲಿ ಯುಗದಲ್ಲಿ ದುಷ್ಟರನ್ನು ನಾಶ ಮಾಡಿ ಭೂಭಾರ ಕಮ್ಮಿ ಮಾಡುತ್ತೇನೆಂದು ಅಭಯವಿತ್ತ ಸಮಯವು ಈಗ ಸಮೀಪಿಸಿದ್ದು ತಿಳಿದರೂ ಕೂಡ ಮಾನವರು ತಪ್ಪ ಅನ್ಯಾಯದ ದರ್ಪವನ್ನು ಬಿಡದೆ ಹಿಂಸಿಸುತ್ತಿರುವದು ನೋಡಿದರೆ, ಯಮ ಧರ್ಮರಾಜರ ವಾರಂಟಿಗೆ ತುತ್ತಾಗದೆ ಸೂರ್ಯಚಂದ್ರರಿರುವ ವರೇಗೆ ಅಜರಾಮರವಾಗಿ ತಮಗೆ ನಾಶವಿಲ್ಲವೆಂದು ತಿಳಿದು ತಮ್ಮ ಅಹಂಕಾರವೆಂಬ ಮರಕ್ಕೆ ಪಿತ್ಥಾಟವೆಂಬ ಗೊಬ್ಬರವನ್ನು ಹಾಕಿ ಬೆಳೆಸುತ್ತಿರುವರು.

ಮಾತು ಸೋಬಿದ ಸಹ್ನೆಗಿಂತಲೂ ಸವಿಯಾಗಿ ಕೇಳುವವರಿಗೆ ಭೂಮಂಡಲದ ಮೇಲೆ ಇಂತಹ ಸತ್ಯವಾದಿಯರೂ ಯಾರೂ ಇಲ್ಲವೆಂತಲೂ ಪೂರ್ವದ ಹರಿಶ್ಚಂದ್ರ ಮೊದಲಾದವರು ಇವರಂತಲೂ ತೋರ್ಪಡಿಸುವರು.

ಇರಲಿ.

[illegible] ಉಪಾಧ್ಯಾಯರ ಕೆಲಸವೆಂಬದಾಗಿ ಇದ್ದರೂ ಕೂಡ ಈ ನವನಾಗರೀಕತೆಯು 20ನೆ ಶತಮಾನದಲ್ಲಿ [illegible] ಇಡೀ ದೇಶದಲ್ಲಿ ಸರಕಾರ [illegible] ಹೆಚ್ಚು ಜನರ ಜೀವನ [illegible] ಈ ಪ್ರಕಿ ಗ್ರಾಮ ಶಾಲೆಗಳ [illegible] ಉಪಾಧ್ಯಾಯರಿಗೆ ಈ ರೋಗ [illegible] ಆ ರೋಗವು ಪೇರಿಂದು [illegible] ಮಾಡಿರುವುದು ನೋಡಿದರೆ, [illegible] ಎಂಬ ವೃಕ್ಷಗಳು ಬಂದರೂ ಪರ [illegible] ಬಹಳ ವ್ಯಸನಪಡಬೇಕಾಗಿದೆ.

[illegible] ತಕ್ಕ ಪಟ್ಟಿಗೆ ಅನು [illegible] ಸರಕಾರದವರು [illegible] ಇಟ್ಟಿರುತ್ತಾರೆ.

ಈ ಪ್ರಕಿ [illegible] ಅವರವರ ಮನೆಯಿಂದ ಶಾಲೆಗೆ ಹೋಗ [illegible] ಈಗಿನ ಕಾಲಾವಸ್ಥೆಗೆ ಸರಿಯಾಗಿ ಮನಿ [illegible] ಗ್ರಾಮ ಮುಟ್ಟಿಗೂ ತಮ್ಮ [illegible] ಈ ಮಾತ್ರಕ್ಕೆ ನಲ್ಲದ [illegible] ಅಸಿಸ್ಟಂಟರ ಸ್ಥಾನಕ್ಕೆ [illegible] ಸ್ವಂತ ಪಟ್ಟಿಗೆ ಅನುಕೂಲವಾಗಿದ್ದಲ್ಲಿ ನಾಲ್ಕೈದು [illegible] ಒಂದು ಅನ್ಯಾಯದ ಅರ್ಜಿ [illegible] ಸರ್ಕ್ಯುಲರ್ ಬಂದಾಗಾಗಲಿ [illegible] ಅಕಸ್ಮಾತ ಕಾರಣಾಗಾಗಲಿ ಸುಮ್ಮನೆ ಒಂದು [illegible] ಇಲ್ಲವೆ ಒಬ್ಬನ ಬಾಲವನ್ನು [illegible] ಹೋಗುವದು ಒಂದು ಪದ್ಧತಿ.

ಈ ಹವರಿಕಗೋಸ್ಕರ ನ್ಯಾಯವಾದ ಕಾರಣದಲ್ಲಿ ಬಡ ಉಪಾಧ್ಯಾಯನು ತನ್ನ ಅಲ್ಪಸ್ವಲ್ಪ ಲಾಭವನ್ನು ಕೂಡ ಬಿಡದೆ [illegible] ಹೋಯಿತಲ್ಲವೆಂದು ಭೂಮಿಗೆ ಸರಿಯಾಗಿ [illegible].

ಇಂಥಾ ಕಾರಣಗಳ ಸಮಾಚಾರವು ಹೆಡ್ ಆಫೀಸರ ಗಮನಕ್ಕೆ ಬರಲಿಲ್ಲವೋ? ಬಾಕೀ ಬಂತು.—[illegible] ಇದಕ್ಕೆ ಸಮ್ಮತಿ ಬರೆದರೂ ಕೂಡ ಇವರು ಮನೆ ಹತ್ತರವಿರುವದರಿಂದ ಎಲ್ಲಾ ವ್ಯವಹಾರಗಳಿಗೂ ಕೈಹಾಕುತ್ತಾನೆ. [illegible] ಬಹಳ ಭಾವಿಸಿಕೊಂಡು ಬರೆಯೋ ಅಂದರೆ ಎಂಟು ದಿವಸಗಳೊಳಗಾಗಿ ಟ್ರಾನ್ಸ್‌ಫರ್ ಅಂದರೆ ಒಡವನ ಸತ್ಯ ತ್ಯಾಗೆ ಒಂದುವೇಳೆ ವರ್ಗಮಾಡಿದರೆ ಅವನ ಅನುಕೂಲ ತ್ಯಾಗಿದೆ ಎಂಬದನ್ನು ಸಹ ಯೋಚಿಸದೆ ಇಂಥಾ ಕಠಿಣ ಶಿಕ್ಷೆಗೆ ಗುರಿಪಡಿಸುವದು ಬಹಳ ಶೋಚನೀಯ.

ಮಹಸೀಯರೇ ಸಂಸಾರವನ್ನು ಸಾಕಲಿಕ್ಕಿಲ್ಲದೆ, ಒಡವನ ಈ ಪ್ರಯತ್ನ ಅನುಕೂಲವಿದ್ದವನು ಇವರಲ್ಲಿ ಒದ್ದಾಡಲು ಬರುತ್ತಾನೆಯೋ ಈ ಲೋವರ್ ಗ್ರೇಡಿನ ಕನ್ನಡ ಪ್ರೈಮರಿಯನ್ನು ತೆಗೆದುಕೊಂಡು ಏನು ದೌಲತ್ತು ಯಾವ ದೇಶದಲ್ಲಿ ತಾನೇ ಮಾಡುತ್ತಾನೆ. ಗಟ್ಟಿನ ಮನೆಯಲ್ಲಿ ದೊಡ್ಡ ಆಸ್ತಿ ಅಂದರೆ 30 ಬಟ್ಟಿ ಯಾ 50 ಬಟ್ಟಿ ನೀರಪಟ್ಟಿಯಾಗಿಯೋ ಗುಣದಾಗಿಯೋ ಇರುವ ಭೂಮಿ. 100 ಬಟ್ಟಿ ಭೂಮಿ ಇರುವವನು ಶೇಕಡ 10 ಜನರು ಮಾತ್ರ ಇವರು ಉದ್ಯೋಗವೆಂಬ ಒಸಮಾನ ಕಡೆಯಲು ಬರುವದಿಲ್ಲವೆ [illegible] ದವನು. ಈ 30 ಯಾ 50 ಬಟ್ಟಿ ಭೂಮಿಯನ್ನು ಗೇಣಿವಾರಕ್ಕೆ ಕೊಟ್ಟು ಸಾಲ್ವೆನು ಸಂಸಾರ ಇರುವಂತ ಉಪಾಧ್ಯಾಯನ [illegible] ಹೋಗಿ [illegible] ಹೋಗಿ [illegible] ಬರ [illegible] ಮನೆ, ಆಳು, ಬಾವಲಿ, ನಷ್ಟ [illegible] ಕಳೆದು ಸಿಕ್ಕಿದರೆ 3 ಯಾ 5 ಬಟ್ಟಿ [illegible] ಪತ್ತುವಂತವ ಕಾಫಿ, ಬಾಳೆ [illegible] ಇದಕ್ಕಿಲ್ಲವೇ ಅವರ ಪ್ರಯತ್ನ.

[illegible] ಒಬ್ಬ ತಾಬೇದಾರನಿಗೆ ಶಿಕ್ಷೆ ಕೊಡಬೇಕಾದರೆ, ಪರೀಕ್ಷೆ ವಿಚಾರಿಸಿ ತಪ್ಪಿತಸ್ಥನಾಗಿ ಕಂಡಲ್ಲಿ [illegible].

ಹುವಾಗೆ ನಮ್ಮ [illegible] ದೇಶದವರಾಗಿದ್ದನು. ಅವನಿಗೆ ನನ್ನ ನಡೆನುಡಿ ಆಚಾರ ಸದ್ಭವಕ್ಕ ಭಾದ್ಯತೆ ಚೆನ್ನಾಗಿ ಗೊತ್ತಿಲ್ಲದ ಕಾರಣ ಒಬ್ಬರ ಮಾತೋ, ಅರ್ಜಿಯೋ, ಸಿಕ್ಕಿದರೆ ಇದೇ ನಿಜವೆಂದು ಭಾವಿಸಿ ಶಿಕ್ಷೆ ಮಾಡುತ್ತಿದ್ದಿರಬಹುದು.

ಈಗಲಾದರೋ ನಮ್ಮ ದೇಶದಲ್ಲಿ ನಮ್ಮ ಸೋದರರಾಗಿ ಉದ್ಯೋಗ ಸರಕ್ಕಾರದವರು ಕರುಣಿಸಿದ್ದು ನಮ್ಮ ಭಾಗ್ಯೋದಯವೇ ಸರಿ. ಇವರು ದೇಶದವರಾದ್ದರಿಂದ ಇಲ್ಲಿನ ಮತ್ತು ಶಾಲೆಗಳ ಎಲ್ಲಾ ಸಂಗತಿಗಳು ಚೆನ್ನಾಗಿ ಅನುಭವವಿರಬಹುದು.

ಆದ್ದರಿಂದ ಇಂಥಾ ಸಂಗತಿಗಳು ಮಹಾಶಯರ ಗೋಚರಕ್ಕೆ ಬಂದಲ್ಲಿ ತಾಬೆದಾರರನ್ನು ಪೂರ್ಣವಿಚಾರಮಾಡುವರಲ್ಲದೆ ಶಾಲಾ ವಿದ್ಯಾರ್ಥಿಗಳ ಮತ್ತು ಪಂಚಾಯತದಾರರನ್ನು ಸಹ ವಿಚಾರಿಸಿ ಪೂರ್ತಿ ತಪ್ಪಿತಸ್ಥನಾಗಿ ಕಂಡಲ್ಲಿ ಶಿಕ್ಷೆ ಕೊಟ್ಟಾರಾಗಿಯೂ, ಪರಚಾರಿ ಸಂಗ್ತಿ ಮನಸ್ಸಿಗೆ ತಕ್ಕೊಳ್ಳಲಿಕ್ಕಿಲ್ಲವಾಗಿ ದೃಢವಾಗಿ ನಂಬಿಕೆ ಇದೆ.

ದೇಶದ ಪ್ರಥಮ ಸೋಪಾನವಾದ ಈಪ್ರೈಮರಿ ವಿದ್ಯಾ ಇಲಾಖೆಯ ಇನಸ್ಪೆಕ್ಟಿಂಗು ಆಫೀಸರುಗಳಿಗೆ ಶ್ರೀಮೂಲಕಾವೇರ್‍ಯಮ್ಮನವರು ಚಿರಾಯುವನ್ನು ಕರುಣಿಸಿ ದೇಶವು ಅಭಿವೃದ್ಧಿಸ್ಥಿತಿಯಾಗಲೆಂದು ಅನುದಿನವೂ ಪ್ರಾರ್ಥಿಸುವೆ.

ಹಿತಚಿಂತಕ.

FOR SALE.

A Ford car. In good running order. English body. Tyres practically new.

Apply to—

JAMES HUME,
Sidapur, Coorg.

2—1

TONGA FOR SALE.

A light four seater cash Bazaar make Tonga with folding top frame for sale.

Rs. 135 or nearest offer will be accepted.

To be seen at "Anandavasa" Mercara.

Apply to— X

C/o. THE MANAGER,
"*Kodagu*" *Ltd., Mercara.*

ಪ್ರಕಟಣೆ.

ಮಡಿಕೇರಿ ಪೋಲೀಸ್ ಸಬ್ ಇನ್‌ಸ್ಪೆಕ್ಟರುಗಳ ಕ್ವಾರ್ಟರ್ಸ್ ಕೆಳಗೆ ಅಂದವಾಗಿಯೂ ಹೊಸಮರಗಳಿಂದ ಭದ್ರವಾಗಿಯೂ 3 ವರ್ಷಗಳ ಹಿಂದೆ ಕಟ್ಟಲ್ಪಟ್ಟ ಸಂಸಾರ ಸಮೇತ ವಾಸ ಇರಲಿಕ್ಕೆ ಯೋಗ್ಯವಾದ 9 ಕೊಠಡಿಗಳಿರುವ ಮನೆ 3 ಅಂಕಣಗಳ ಕೊಟ್ಟಿಗೆ ಯಾವಾಗಲೂ ನಿರ್ಮಲವಾದನೀರು ಇರುವ ಕಲ್ಲು ಕಟ್ಟಿದ ಭಾವಿ (ನೀರು ಗೋಚಿ ತೆಗಿಯುವಂಥಾದ್ದು) ಕಾಫಿ, ಬಾಳೆ, ಕಿತ್ತಳೆ, ನಿಂಬೆ ಮರಗಳೂ ಮತ್ತು ಹಲಸು ಮುಂತಾದ ವಿನ ಗಿಡಗಳೂ ಇರುವ ಹಿತ್ತಲೂಸಹ ಇರುವ ಆಸ್ತಿ ಒಂದು ಮಾರಾಟಕ್ಕೆ ಇದೆ. ಇದಕ್ಕೆ (11,000) ಹನ್ನೊಂದು ಸಾವಿರ ರುಪಾಯಿ ಹೆಚ್ಚು ಕಡಿಮೆ ಕರಾರಾಗಿದೆ. ಈ ಸ್ಥಳವು ಗೋಗ್ಯವಾಗಿಯೂ ಸಂಸಾರ ಸಮೇತ ವಾಸ ಇರುವದಕ್ಕೆ ಯೋಗ್ಯವಾಗಿಯೂ ಇದೆ. ವಾಸಕ್ಕೆ ಇಂಥಾ ಯೋಗ್ಯವಾದ ಸ್ಥಳ ಮಡಿಕೇರಿಯಲ್ಲಿ ಸಿಕ್ಕುವದು ದುರ್ಲಭ. ಕೊಂಡುಕೊಳ್ಳುವದಕ್ಕೆ ಖಾಯಿಷ್ ಇರುವವರು ಸೊತ್ತು ನೋಡಿ ಕ್ರಯ ನಿಶ್ಚೈಸ ಬಹುದು. ಹೆಚ್ಚಿನ ವಿವರ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬೇಕಾಗಿದೆ.

VENDER,
C/o EDITOR, "KODAGU."
Mercara.

45

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಕೋಟೆರ ಚಿಣ್ಣಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಭಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಮೆ. ಕೆ. ಚಿಣ್ಣಪ್ಪನವರ ಆಫೀಸಿನಲ್ಲಿ.
ಮೂರ್ನಾಡು—ಕಮರ್ಶಿಯಲ್ ಸ್ಟೋರಿನಲ್ಲಿ ಮೆ. ಮಡೆಯಂಡ ದೇವಯ್ಯನವರು.
ನಾಪೋಕ್ಲು—ಮೆ. ಪೊನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮೆ. ಮುಕ್ಕಾಟಿರಪೂಣಚ್ಚನವರು.
ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಜಿ. ಮೊದಮ್ಮನವರು.
ಅಮ್ಮತ್ತಿ ಸಿದ್ದಾಪುರ—ಮೆ. ಐನಂಡ ಮೊದಪ್ಪನವರು.
ಮೆ. ಚಂಗಂಡ ಕುಟ್ಟಪ್ಪನವರು.

ಕೋದಂಡ ಉತ್ತಯ್ಯ.
ಆರ್ಗನೈಜಿಂಗ್ ಡೈರೆಕ್ಟರು, "ಕೊಡಗು" ಲಿಮಿಟೆಡ್.

ಪ್ರಕಟಣೆ.

ಈ ಸಂದರ್ಭವನ್ನು ಕಳಕೊಳ್ಳಬೇಡಿರಿ.

ಮಡಿಕೇರಿ ದೇಚೂರು ಬ್ಲಾಕಿನಲ್ಲಿ ಹೈಸ್ಕೂಲ್‌ಬಳಿ ಒಂದು ಎಕರು ಕಾಪಿತೋಟದಿಂದ ಕೂಡಿದ ಒಂದು ಹಂಚುಹಾಕಿದ ಮನೆಮತ್ತು ಅಡಿಗೆಮನೆ, ಇನ್ನು ಮನೆ ಕಟ್ಟಲಿಕ್ಕೆ ಎತ್ತರ ಭಾಗದಲ್ಲಿರುವ ಮನೆದಳವು ಸಹ ಮಾರಲಿಕ್ಕೆ ಇಟ್ಟಿದೆ. ಖಾಯಿಷ್‌ದಾರರು ಶೀಘ್ರದಲ್ಲಿಯೇ ಈ ಕೆಳಗಿನವರಿಗೆ ದಯವಿಟ್ಟು ಬರಕೊಳ್ಳುವದು.

C. Co EDITOR.
"*Kodagu*" MERCARA.

12—5

ಗೃಹಕೃತ್ಯದ ನೋಟೀಸ್.

ಕೊಡಗು ಗೋಣಿಕೊಪ್ಪಲು ಷಾಪಿನ ಅಂಗಡಿ ಆರ್. ಸುಂದರ್‌ಸಿಂಗ್ ಈ ಮೂಲಕ ಪ್ರಕಟಪಡಿಸುವದೇನಂದರೆ:—

ನನ್ನ ಹೆಂಡತಿಯಾಗಿದ್ದ ಬಾಲಾಬಾಯಿ ಎಂಬಾಕೆಯು ಸಹಿಸಲಶಕ್ಯತರದ ಅವಿಧೇಯತ್ವ ವಗೈರೆಗಳಿಗೋಸ್ಕರ ಕಳದ 9 ತಿಂಗಳುಗಳಿಂದ ನನ್ನ ಆಶ್ರಮದಲ್ಲಿ, ಮನಸ್ಸಿನಲ್ಲಿ, ಮತ್ತು ಸಂಸಾರದಲ್ಲಿ ಸಹ ಸಮಭಾಗವಿಲ್ಲದೆ, ಈಕೆಯಿಂದ ನಿವೃತ್ತಿ ಹೊಂದಬೇಕೆಂಬ ಇರಾದೆಯಲ್ಲಿ ಇದ್ದ ಸಂದರ್ಭದಲ್ಲಿ ಈಕೆಯ ತಾಯಿ ಮತ್ತು ತಂಗಿ ಸಹ ಆಗಷ್ಟ ತಿಂಗಳು 10ನೇ ತಾರೀಕಿನಲ್ಲಿ ಇವಳನ್ನು ಕರದು ಕೊಂಡುಹೋದರು.

ಈಕೆಯು ತೊಲಗಿದೊಡನೆ ಇವಳ ಗಾಸಾಕವನ್ನು ಬೆಂಗಳೂರು ಕಂಟಾನು ಪಾಳ್ಯದಲ್ಲಿ ಇರುವ ತಾಲೋಕು ಪೋಲೀಸ್ ಕಾನ್ಸ್ಟೆಬಲ್ ನಂ. 332ರ ಬಾಲಾಜಿಸಿಂಗ್ ಎಂಬವನ ಮೂಲಕ ಇವಳನ್ನು ಪುನಹ ನನ್ನಲ್ಲಿಗೆ ಬರಬಾರದಾಗಿ 3 ಕಾಗದಗಳು ಬರದು ತಿಳುವಳಿಕೆ ಕೊಟ್ಟಾಗ್ಯೂ, ಈಕೆಯು ತನ್ನ ತಾಯಿಯೊಡನೆ ಗೋಣಿಕೊಪ್ಪಲು ನನ್ನ ಮನೆಗೆ ತಾ. 16.11.24ರಲ್ಲು ಅನುಮತಿ ಇಲ್ಲದೆ ಪ್ರವೇಶಿಸಿಕೊಂಡು ಮಠಳ ಜಿಚ್ಚಿನ ವ್ಯಾಕುಲಗಳಿಗೆ ಕಾರಣಳಾಗಿ ಇದ್ದದ್ದರ ಮೇಲೆ ತಾ. 23-11-24ರಲ್ಲು ಕೆಲವು ದೊಡ್ಡಮನುಷ್ಯರಮೂಲಕ ಪಂಚಾಯಿತಿಯಿಂದ ತೀರ್ಮಾನವಾದ ಇವಳು ಧರಿಸಿದ ಸುಮಾರು 300 ರುಪಾಯಿಗಳ ನಗಗಳು, ಉಡುಗುರೆಗಳು, ಮತ್ತು ನಗದು 125 ರುಪಾಯಿ ಈಕೆಗೆಕೊಟ್ಟು ಈಕೆಯ ಸಕಲ ಪಕ್ಷನ್ನು ತಪ್ಪಿಸಿ ನಿವರ್ತಿಸಿ (Divorce) ಮಾಡಿ ಈ ಸಂಗತಿ ತಾ. 24-11-24ರಲ್ಲು ಪೊನ್ನಂಪೇಟೆ ಪೋಲೀಸಿನ್ನು ತಿಳಿಸಿ ಜನರಲ್‌ಡೈರಿಯಲ್ಲು ನೋಟುಮಾಡಿಸಿರುತ್ತೆ.

ಅವತ್ತಿಂದ ನನ್ನ ವ ನನ್ನ ಚರಸ್ಥಿರ ಸೊತ್ತುಗಳ ಮೇಲೆ ಈಕೆಗೆಯೂ ಈಕೆಯ ಸಮ್ಮಂಧದವರಿಗಾಗಲಿ ಯಾವ ತರಹದ ಹಕ್ಕು ಬಾಧ್ಯತೆಯು ಮುಂದಕ್ಕೆ ಇರುವದಿಲ್ಲವಾಗಿ ಈ ಮೂಲಕ ಅರಿಕೆಮಾಡಿಕೊಂಡಿರುತ್ತೇನೆ.

ಗೋಣಿಕೊಪ್ಪಲು, ಆರ್. ಸುಂದರ್‌ಸಿಂಗ್.
ತಾ. 24-11-24. 4—2 ಜನರಲ್ ಮರ್ಚಂಟ್.

ಪ್ರಕಟಣೆ.

ಇಲ್ಲಿ ನೋಡಿರಿ! ಇದೀಗ ಸುಸಮಯ!!

ಒಳ್ಳೇ ಸೊತ್ತು ಮಾರಾಟಕ್ಕಿದೆ.

ಅರಪತ್ತೊಕ್ಕಲು ಗ್ರಾಮದಲ್ಲಿ ಅಂದರೆ ಬೆಟ್ಟಗೇರಿ ದೊಡ್ಡರಸ್ತೆಗೆ ಸಮೀಪ 200ಬಟ್ಟಿಭೂಮಿ. ಭೂಮಿಗೆ ಪತ್ತು 15 ಏಕರುಬಾಣೆ. ಈಬಾಣೆದಲ್ಲು ಸದ್ಯ ಭೂಮಿ ಮಾಡತಕ್ಕ 3 ಏಕರು ಪುಕ್ಕಿ ಇದೆ. ಮುಚ್ಚು ಹಾಕಿದ ಅಂದಾಜು ಸಾವಿರ ರುಪಾಯಿ ಬಾಳತಕ್ಕ ಮನೆ ಇದೆ. ಪಸಲಿಗೆ ಬರಲಿಕ್ಕಾದ ಕಿತ್ತಳೆಗಿಡ. ಮನೆಮುಂದೆ ತೆಂಗು ಅಡಿಕೆಸಹ ಇದೆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದಾಗಲೀ ಖುದ್ದಾಗಿ ನೋಡಿಯಾಗಲೀ ತಿಳಿಯಬಹುದು. ಅಂದಾಜು ಕ್ರಯ 3,000 ರುಪಾಯಿ ಇಲ್ಲವೆ ಅದರ ಸಮೀಪದ ಕ್ರಯ.

ನೆರವಂಡ ಅಪ್ಪಚ್ಚು,
4-4 ಬಟ್ಟೆವ್ಯಾಪಾರಿ, ಮಡಿಕೇರಿ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಸ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಜಮೂಒಂದ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ.
ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್
ತಾರೀಕು, 1—7—1924.

ಶ್ರೀ
ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.
ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ—

ಮೇನೇಜರ್, ಶ್ರೀ ಧನ್ವಂತರಿ, ಶೃಂಗೇರಿ, ಮೈಸೂರುಸ್ಟೇಟ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಂಟಾದ ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ
17.9.24. ಮೇನೇಜರ್.

ARMS & AMMUNITION MART.

Mahomedally-Noorbhoy.



337, Abdul Rehman, Street, near Crawford Market, BOMBAY.

Telegraphic Address:- "SHOOTER" Bombay.

[24 17] Please write for latest Catalogues.

ಸಂಪತ್ತಿಯ ಸಾಧನಗಳು.

ಅಯ್ಯಾ ಬಂಧುಗಳೇ ಸಂಪತ್ತಿಯು ಅಸ್ಥಿರ ಬಾಕಿಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು ಅದನ್ನು ಶೋಧಿಸಿ ತೆಗೆಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು.

ಲಕ್ಷಾವಧಿ ರೈತರು ಹೂಡಿ ಅನುಭವ ತೆಗೆದುಕೊಂಡಿರುವರು. ಭೂಮಿಯತಕ್ಕ ತರತರದ ನೇಗಿಲುಗಳೂ ಗಾಣಗಳೂ ದೊರೆಯುತ್ತವೆ. ಕಿಸಾನ ಗಾಣವು ಒಂದು ಗಂಟೆಗೆ ೪೦೦ ಪೌಂಡು ಕಬ್ಬನ್ನು ಹಿಂಡಿ ಚಲ್ಲುತ್ತದೆ.

"ಕೊ" ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,
16-11 **ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ.**

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಶೇರುಹಣ ಸಲ್ಲಿಸಮಾಡಲಿಕ್ಕಿರುವವರೂ ದಯವಿಟ್ಟು ವೀರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮೇನೇಜರ್,
15.9.24. 'ಕೊಡಗು' ಲಿಮಿಟೆಡ್.

ಹಳೆ ವಿದ್ಯಾರ್ಥಿಯರ ತ್ರೈಮಾಸಿಕ.

ಸಂಪುಟ 2] ವರ್ಷದಚಂದಾ ಬರೀ ರೂ. 1-4-0 [ಸಂಚಿಕೆ 1
ಸಂಪಾದಕ = ಮಿ. ಬಿ. ಮೇದಪ್ಪ, ಬಿ ಎ., ಬಿ. ಎಲ್. ಎಂ. ಎಲ್. ಸಿ

ಈ ಸಂಚಿಕೆಯಲ್ಲಿ ಮನೋಹರವಾದ ಕೊಡಗಿನ ಪವಿತ್ರ ಸ್ಥಳವಾದ ಶ್ರೀ ಮೂಲ ಕಾವೇರಿಯ ಚಿತ್ರಗಳಿವೆ.

1. ಶ್ರೀ ಕಾವೇರಿಯ ಜನ್ಮ, ಅವತಾರ.
2. ಸರಕಾರಕ್ಕೆ ಸಾಲವೆಂದರೇನು?
3. ಪೋಲಿಟಿಕ್ಸ್ ಅಂದರೇನು?
4 ವಿಜಿರಾಬಾಯಿ.

ಇವೇ ಮುಂತಾದ ಬಹು ಸ್ವಾರಸ್ಯದ ವಿಷಯಗಳಿವೆ.

ಮೆನೇಜರ್,
ಓ. ಎಸ್. ಎಸೋಸಿಯೇಷನ್,
ಮಡಿಕೇರಿ.

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.

If not delivered please return to "KODAGU" OFFICE, MERCARA.

ಕೊಡಗು.

ಸತ್ಯೇನ ಧೂಶಿವಯೋಃ ॥ ... ॥ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ॥

ಪ್ರತಿ ಶುಕ್ರವಾರದ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೪] ಕೊಡಗು, ಸನ್ ೧೯೨೯ನೇ ಇಸವಿ ಜನವರಿ ತಾರೀಖು ೧೧ನೆಯ ಶುಕ್ರವಾರ [ಸಂಚಿಕೆ ೩೦

ಆರೋಗ್ಯ ಚಂದ್ರಿಕೆ.

ಮದ್ರಾಸ್

ಸಂಪಾದಕರು ಡಾಕ್ಟರ್ ಯು ರಾಮರಾವ್, ಯಮ್ ಎಲ್ ಸಿ ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿನೆ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ... ಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವ ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಒಂದು ಗ್ರಂಥವಾಗುವದು ಅಂಚೆಯ ವೆಚ್ಚ ಸೇರಿ ಚಂದಾ ಮೊಬಲಗು ವರ್ಷಕ್ಕೆ 1-8-0 ಎಂದು 0-2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯು ... ಪತ್ರವ್ಯವಹಾರಕ್ಕೆ 'ಆರೋಗ್ಯ ಚಂದ್ರಿಕೆ' ತಂಬುಚೆಟ್ಟಿ ಬೀದಿ, ಮದ್ರಾಸ್

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮ್ಯಾನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು 2 ಲೇಖನಗಳ ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು 3 ಬಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ 4 ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯಲ್ಲಿ ಸ್ಪಷ್ಟವಾಗಿಯೂ ಹೆಸರು ವಿಳಾಸಗಳಿಂದ ಕೂಡಿಯೂ ಬರೆಯಲ್ಪಟ್ಟಿರಬೇಕು ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು 5 ಪ್ರಕಟಿಸದಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭದರದಲ್ಲಿ ಹಾಕಲ್ಪಡುತ್ತವೆ. ಹೆಚ್ಚು ತಿಂಗಳಿಗೆ ಮ್ಯಾನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ

TONGA FOR SALE.

A light four seater cash Bazaar made Tonga with folding top frame for sale

Rs. 135 or nearest offer will be accepted.

To be seen at "Anandavasa" Mercara.

X

C/o. THE MANAGER, 'Kodagu' Ltd., Mercara.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,

P O. BASAVANAGUDI
Bangalore City

THE SHOPPING CENTRE OF COORG,

Spencer & Co. Ltd.,

MERCARA & POLLIBETTA.

An Announcement.

Our prices of wines, spirits, to[bacco], etc, are down

... for our Xmas list and be on ... d

... order Solicited.

... ಸ್ಟ್ರ ದುಭಿಕ್ಷ :

NIT ... (...—16 per cent.) Nitrogen, ... and cheapest form of Nit... concentrated and im... ... Nothing like it to ...

... ಕಾಯ ... ರಪಡುವವರ ಹೆಚ್ಚಿನ ಉದ್ದೇಶವು ... ಸಾರಜನಕ (Nitrogen) ಒದಗಿಸಿಕೊಡುವದಾಗಿದೆ ... "ನೈಟ್ರೇಟ್ ಆಫ್ ಸೋಡಾ" ಎಂಬ ರಸಾಯನಿಕ ... (...16%) ಅಂದರೆ ಮಿಕ್ಕುಗೊಬ್ಬರದಲ್ಲಿರು ... ಗಿಂತಲೂ ಜಾಸ್ತಿ ಕ್ಷಾರಜನಕ ಭಾಗವಾಗಿದ್ದು ... ಗಿ ಫಸಲಿನ ವದಗ ... ರೀತಿಯಲ್ಲಿರುತ್ತದೆ ಇದರ ... ಗದಿಂದ ಫಸಲು ಬಹಳ ಸಮೃದ್ಧಿಯಾಗುವದು. ಹಿಡಿತ ... ರಾಸಾಯನಿಕ ಗೊಬ್ಬರವು ಮೊದಲು (ಶುಷ್ಕ) ತುಂಬ ಪಟ್ಟಿಗೊ... ರತ್ನ ಸನುವಾಗಿರುತ್ತದೆ. ಈ ರಸಾಯನಿಕ ಗೊಬ್ಬರವು ... ರಿಕ ದೇಶದ "ಚಿಲ್ಲಿ" ಎಂಬಲ್ಲಿ ತಯಾರಿಸಿ ಬ... ಹಳ ದೂರದೇಶದಿಂದ ಬರಬೇಕಾದರೂ ಸಹ ಇದು ಹಳ್ಳಿ ಮೊಳಗಿನ ತೋಟಗದ್ದೆ ವಗ್ಯೆರೆ ಕೃಷಿಗಳಿಗೆ ಉಪಯೋಗಿಸಲು ಬಹಳ ಸುಲಭವಾಗಿಯೂ ಪಟ್ಟಿ ಗೊಬ್ಬರಕ್ಕಿಂತಲೂ ಬಹಳ ಹೆಚ್ಚಿನ ಆದಾಯವನ್ನು ಕೊಡುವದಾಗಿಯೂ ಇರುತ್ತದೆ. ಒಂದು ಎಕ್ರೆ ಭೂಮಿಗೆ 120—180 ರಾತಲು ಬೇಕಾಗುವದು ಇದರ ವಿಷಯ ಹೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ಧರ್ಮಾರ್ಥವಾಗಿ ನಮ್ಮಿಂದ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್

24—1... ಕಮಿಟಿಯವರ ಕಡೆ

ಕೊಡಗಿನಲ್ಲು— B. P. Ayapa, Hon Representative Pollibetta, Coorg. | The Chilean Nitrate Committee, 6 Mission Row, Post Box 469, CALCUTTA

ಮಲೆಯೂಳ ವೈದ್ಯಶಾಲಾ.

ಮಲಬಾರಿನ ನಂಬೀಶನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯ ಶಾಲೆಯ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತದೆ. ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುತ್ತೆ ಔಷಧದ ಚಾರ್ಜು ಬಹಳ ಕಡಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು

ನಾರಾಯಣ ನಂಬೀಶ,
ಆಯುರ್ವೇದ ವೈದ್ಯರು,
ವೀರರಾಜೇಂದ್ರಪೇಟೆ.

52—49

LOOK SHARP! PLEASE LOOK SHARP!

For Superior rugs, shawls, silk and cotton banians of different varieties, sarees, socks, silk coating and shirting, tweed etc., etc., place your orders with the undersigned Samples may be examined before placing orders at Messrs. H. C. Raja & Bros., Brahmin Valley, Mercara

B. S. VENKAT RAO,
Silk Cloth Agent, for Coorg, South Canara Malabr Districts, Mercara.

ದಯವಿಟ್ಟು ಗಮನಿಸಿರಿ! ಸುಲಭ ಕ್ರಯ!

ಉತ್ತಮ ತರದ ರಗ್ಗುಗಳು, ರೇಶ್ಮೆ ಮತ್ತು ನೂಲಿನ ಬನಿಯನ್ನುಗಳು, ರೇಶ್ಮೆ ಕೋಟಿನ ಮತ್ತು ಷರಟಿನ ಬಟ್ಟೆಗಳು, ತರಹವಾರಿ ಸೀರೆಗಳು, ಪ್ಲಾನೆಲ್ ಮತ್ತು ಟ್ವೀಡುಗಳು, ಶಾಲು ಚೀಲಗಳು ಮತ್ತು ಇತರ ಬಟ್ಟೆಗಳಿಗೆ ಈ ಕೆಳಗಿನ ವಿಳಾಸಕ್ಕ ಬರೆದು ಜೋಕ್ಕಾಗಿ ಕೊಡತಕ್ಕ ಹಣವನ್ನು ಉಳಿಸಿಕೊಳ್ಳಿ. ಬಟ್ಟೆಗಳ ಸ್ಯಾಂಪಲುಗಳನ್ನು ಮೆ. ಹೆಚ್. ಸಿ. ರಾಜ ಅಂಡ್ ಬ್ರದರ್ಸ್, ಬ್ರಾಹ್ಮಣರ ಬೀದಿ, ಮಡಿಕೇರಿ, ಇವರ ಅಂಗಡಿಯಲ್ಲಿ ನೋಡಬಹುದು.

ಬಿ. ಯಸ್. ವೆಂಕಟರಾವ್,
ರೇಶ್ಮೆ ಬಟ್ಟೆಗಳ ಏಜೆಂಟ್, ದ ಕನ್ನಡ, ಮಲಬಾರ್,
4-4 ಕೊಡಗು, ಮಡಿಕೇರಿ.

MOTOR CYCLE FOR SALE.

A J. S Motor cycle 350 C.C. A high class English Machine imported direct from England. Very little used, and open for any trial or expert examination Original cost about Rs. 1,600

Apply stating offers, to 'Motor cycle'
C/o The Editor 'Kodagu,'
Mercara

4-4

"ಕೊಡಗು"

ಸನ್ ೧೯೨೬ನೇ ಇಸವಿ ಜನವರಿ ತಾ. ೧ನೇ ಶುಕ್ರವಾರ.

ಹಿಂದೂ ಮಹಾಸಭೆ.

ಬೆಳ್ಗಾಮಿನಲ್ಲಿ ಡಿಸೆಂಬರ್ 27, 28ನೇ ತಾರೀಕುಗಳಲ್ಲಿ ಈ ಮಹಾಸಭೆಯ ವಿಶೇಷ ಅಧಿವೇಶನವು ನಡೆಯಿತು. ಪಂಡಿತ ಮದನಮೋಹನ ಮಾಳವೀಯರವರು ಅಧ್ಯಕ್ಷರಾಗಿದ್ದರು. ಈ ಮಹಾಸಭೆಯು ಪ್ರಾರಂಭವಾಗಿ ಕೆಲವು ವರುಷಗಳು ಮಾತ್ರ ಆದವು. ಸಂಗಡವಾರು ಸಭೆ ಮಾಡುವದಕ್ಕೆ ಕೆಲವರ ಆಕ್ಷೇಪಣೆ ಇರುವದರಿಂದ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಸಭೆಯ ಅವಶ್ಯಕತೆಗೆ ಕಾರಣಗಳನ್ನು ಬಹಳ ವಿಶದವಾಗಿ ವರ್ಣಿಸಿದ್ದಾರೆ. ನ್ಯಾಷನಲ್ ಕಾಂಗ್ರೆಸಿನಲ್ಲಿ ದೇಶದ ಎಲ್ಲಾ ಜನಾಂಗದ ಪ್ರತಿನಿಧಿಗಳೂ ಸೇರಿ ಮುಖ್ಯವಾಗಿ ರಾಜಕೀಯ ವಿಷಯಗಳನ್ನು ವಿಚಾರಿಸುವಾಗ ಹಿಂದೂ ಧರ್ಮದ ವಿಷಯಗಳನ್ನು ವಿಚಾರಿಸಿ ಪ್ರಚಾರಗೊಳಿಸುವ ಕೆಲಸವನ್ನು ಈ ಸಂಸ್ಥೆಯು ಮಾಡಬೇಕಾಗಿದೆ. ಮುಸಲ್ಮಾನರು ತಮ್ಮ ಧರ್ಮದ ಪ್ರಚಾರಕ್ಕೂ ತಮ್ಮ ರಾಜಕೀಯ ಹಕ್ಕುಗಳನ್ನು ಕಾಪಾಡಿಕೊಳ್ಳಲು ಮುಸ್ಲಿಮ್ ಲೀಗ್ ಮತ್ತು ಖಿಲಾಫತ್ ಸಭೆಗಳನ್ನು ಏರ್ಪಡಿಸಿಕೊಂಡಿರುವಾಗ ಹಿಂದೂ ಧರ್ಮದ ಕ್ಷೇಮವನ್ನು ಕಾಪಾಡಲಿಕ್ಕಾಗಿ ಈ ಸಭೆಯನ್ನು ಏರ್ಪಡಿಸುವದು ನ್ಯಾಯವಾಗಿದೆಯೆಂತ ನಮಗೆ ತೋರುತ್ತದೆ. ರಾಜಕೀಯ ವಿಷಯಗಳು ತಾತ್ಕಾಲಿಕದವಾಗಿವೆ. "ಎಷ್ಟೋ ಸಾಮ್ರಾಜ್ಯಗಳು ಹುಟ್ಟಿ ಬೆಳೆದು ನಾಶವಾಗಿ ಹೋದದ್ದು ಚರಿತ್ರೆಗಳಲ್ಲಿ ಓದುತ್ತೇವೆ. ಮತ ಧರ್ಮಗಳು ಶಾಶ್ವತವಾಗಿಯೇ ನಡೆದು ಬಂದಿವೆ. ಇನ್ನು ಮುಂದೆ ನಡೆಯಲೂ ಬೇಕು. ಅದ್ದರಿಂದ ಹಿಂದೂ ಧರ್ಮದ ತಿಳುವಳಿಕೆಯು ಜನರಲ್ಲಿ ಕಡಿಮೆಯಾಗಿರುವ ಈ ಕಾಲದಲ್ಲಿ ಈ ಮಹಾಸಭೆಯು ಅತ್ಯವಶ್ಯವಾಗಿದೆ" ಎಂತ ಅಧ್ಯಕ್ಷರು ಹೇಳಿದ್ದಾರೆ. ಹಿಂದೂಗಳು ತಮ್ಮ ಧರ್ಮವನ್ನು ಹೆಚ್ಚಾಗಿ ಗೌರವಿಸಬೇಕಾದರೆ ಇಸ್ಲಾಮ್ ಮುಂತಾದ ಇತರ ಧರ್ಮಗಳ ಸಾರವನ್ನು ತಿಳಿದುಕೊಳ್ಳುವದು ಬಹಳ ಅವಶ್ಯವಿದೆ. ಇದರಿಂದ ಅನ್ಯ ಧರ್ಮ ಅನುಯಾಯಿಗಳ ಸಂಗಡ ಭ್ರಾತೃತ್ವಭಾವದಿಂದ ವರ್ತಿಸಲು ಸಹ ಸಹಾಯವಾಗುತ್ತದೆ.

ಹಿಂದೂ ಧರ್ಮದ ಸಂಸ್ಕೃತಿಯಿಂದಲೇ ಬೆಳೆದ ಬೌದ್ಧ ಮತ್ತು ಸಿಖ್ಖ ಧರ್ಮಗಳ ಹಿಂಬಾಲಕರೂ ಮತ್ತು ಹಿಂದುಗಳೂ ಸಹ ಸಮ್ಮತರಾಗಿ ಕಲೆತು ತಮ್ಮ ಸಮಾನ ಸಂಸ್ಕೃತಿಯ ವಿಷಯಗಳನ್ನು ಪರ್ಯಾಲೋಚಿಸಲು ಈ ಸಂಸ್ಥೆಯು ಅವಶ್ಯವಿದೆ. ಬುದ್ಧ ಗಯೆಯು ಈಗ ಹಿಂದುಗಳ ಸ್ವಾಧೀನವಾಗಿದೆ. ಇದನ್ನು ಬೌದ್ಧರು ತಮಗೆ ಬಿಟ್ಟುಕೊಡಬೇಕೆಂತ ಕೇಳುತ್ತಾರೆ. ಇಂಥಾ ವಿಷಯವನ್ನು ಹಿಂದು ಮಹಾಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಬೇಕೇ ಹೊರತು ಬೇರೆ ಸ್ಥಳವಿಲ್ಲ.

ಹಿಂದೂ ಮುಸಲ್ಮಾನರೊಳಗೆ ಅನೇಕ ಕಡೆಗಳಲ್ಲಿ ದೊಂಬಿಗಳು ನಡೆದಿವೆ. ಇಂಥಾ ದೊಂಬಿಗಳಲ್ಲಿ ಹೆಚ್ಚು ಕಷ್ಟಕ್ಕೆ ಗುರಿಯಾಗುವದು ಹಿಂದುಗಳು. ಈ ರೀತಿ ಸುಲಭದಲ್ಲಿ ಮುಸಲ್ಮಾನರ ಹಿಂಸೆಗೆ ಗುರಿಯಾಗಲು ಕಾರಣವೇನೆಂಬದನ್ನು ಯೋಚಿಸಲಿಕ್ಕೂ ಮತ್ತು ಇಂಥಾ ದಂಗೆಗಳು ಇನ್ನು ಮುಂದೆ ನಡೆಯದಂತೆ ನೋಡಿಕೊಳ್ಳಲಿಕ್ಕೂ ಇಂಥಾ ಮಹಾಸಭೆ ಬೇಕಾಗಿದೆ. ಉತ್ತರ ಹಿಂದುಸ್ಥಾನದಲ್ಲಿ ಹಿಂದೂ ಮುಸಲ್ಮಾನ್ ಜಗಳಗಳು ಮುಖ್ಯವಾಗಿ ತೋರಿಬಂದರೂ ಸಹ ದಕ್ಷಿಣ ಇಂಡಿಯಾದಲ್ಲಿ ಜಗಳಗಳು ಸಂಭವಿಸಲಾರವೆಂತ ಇಲ್ಲ. ಮೊಕೆ ಮಲಬಾರಿನಲ್ಲಿ ಆದ ಅನಾಹುತಗಳನ್ನು ಕೆಲವು ಮಟ್ಟಿಗಾದರೂ ಹಿಂದೂ ಮುಸಲ್ಮಾನ್ ಜಗಳವೇ ಅಗತ್ಯವಲ್ಲವೇ. ಮೊನ್ನೆ ತಾನೇ ಹೈದರಾಬಾದ್ ಕರ್ನಾಟಕದ ಗುಲ್ಬರ್ಗಾದಲ್ಲಿ ಆದ ದೊಂಬಿಯು ಹಿಂದೂ ಮುಸಲ್ಮಾನರೊಳಗಿನ ಜಗಳವೇ ಆಗಿತ್ತು. ಅದ್ದರಿಂದ ಹಿಂದುಗಳು ತಮ್ಮ ಬಲಹೀನ ಸ್ಥಿತಿಗೆ ಕಾರಣವನ್ನು ಯೋಚಿಸಲು ಈ ಸಂಸ್ಥೆಯು ಅವಶ್ಯವಿದೆ. ಪ್ರಪಂಚದ ಯಾವ ಭಾಗದಲ್ಲೇ ಇದ್ದರೂ ಮುಸಲ್ಮಾನ್ ಜನರ ಐಹಿಕ ಕಷ್ಟಗಳ ಸಹಾನುಭೂತಿಯನ್ನು ತೋರಿಸಲು, ಮುಸ್ಲಿಮ್ ಲೀಗ್ ಮತ್ತು ಖಿಲಾಫತ್ ಸಭೆ ಇರುವಾಗ ಅಖಿಲ ಹಿಂದುಸ್ಥಾನದ ಹಿಂದುಗಳ ಕಷ್ಟಸುಖಗಳಲ್ಲಿ ಹಿಂದುಸ್ಥಾನದ ಎಲ್ಲಾ ಭಾಗಗಳ ಹಿಂದುಗಳೂ ಸಹಾನುಭೂತಿ ತೋರಿಸಲು ಒಟ್ಟುಗೂಡಿಸುವ ಸಂಸ್ಥೆ ಇರಲೇ ಬೇಕು.

ಬ್ರಾಹ್ಮಣ ಬ್ರಾಹ್ಮಣೇತರ ತಕರಾರುಗಳನ್ನು ತೀರಿಸಲು ಸಹ ಒಂದು ಸಮಾನ ಸಂಸ್ಥೆ ಬೇಕು. ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಕೆಲಸವನ್ನು ಕಾಂಗ್ರೆಸಿನವರು ಕೈಕೊಂಡಿದ್ದರೂ ಸಹ ಈ ಕೆಲಸವು ಮುಖ್ಯವಾಗಿ ಹಿಂದುಗಳದ್ದೇ ಆಗಿದೆ. ಹಿಂದೂ ಧರ್ಮದ ಹಿಂಬಾಲಕರಾದ ಬ್ರಾಹ್ಮಣ ಬ್ರಾಹ್ಮಣೇತರ ಸ್ಪೃಶ್ಯ ಅಸ್ಪೃಶ್ಯರೊಳಗೆ ಒಗ್ಗಟ್ಟಾದಲ್ಲವೇ ಒಟ್ಟು ಜನಾಂಗದ ಒಗ್ಗಟ್ಟು ಸಾಧ್ಯ. ಹಿಂದು ಧರ್ಮದ ಸಾರವನ್ನು ಹಿಂದುಳಿದ ನಿಸಿಕೊಂಡ ಪ್ರತಿಯೊಬ್ಬನಿಗೂ ತಿಳಿಸಿಕೊಟ್ಟು ಭ್ರಾತೃಭಾವವನ್ನು ಬೆಳೆಸಬೇಕಾದದ್ದು ಹಿಂದೂ ಸಮಾಜಕ್ಕೆ ಕರ್ತವ್ಯ.

ಮುಸಲ್ಮಾನರು ಕ್ರಿಶ್ಚಿಯನರೂ ಸಹ ಬೇರೆ ಜಾತಿಯವರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳಲು ಪ್ರಯತ್ನಿಸುತ್ತಾ ಇದ್ದಾರೆ. ಹಿಂದೂಗಳಾದವರೋ ತಮ್ಮ ಮತದಿಂದಲೇ ತಪ್ಪಿ ಮತಾಂತರ ಹೋದವರನ್ನು ಸಹ ಹಿಂದಕ್ಕೆ ತೆಗೆದುಕೊಳ್ಳಲು ಒಪ್ಪುವದಿಲ್ಲ. ಹಿಂದೂ ಶಾಸ್ತ್ರದಲ್ಲಿ ತಮ್ಮ 'ಧರ್ಮವನ್ನು ಪ್ರಚಾರಗೊಳಿಸಬೇಕೆಂತ ಇದಿಯಾದ್ದರಿಂದ ತಮ್ಮ ಕರ್ತವ್ಯವನ್ನು ಮರೆತು ಕೂತಿದ್ದಾರೆಂತ ಪಂಡಿತ ಮಾಳವೀಯರು ಹೇಳಿದ್ದಾರೆ. ಈಚೆಗೆ ಆರ್ಯ ಸಮಾಜದವರು ಹಿಂದೂ ಮತದಿಂದ ಬೇರೆ ಜಾತಿಗೆ ಸೇರಿದವರು ... ಹಿಂದೂ ಮತಕ್ಕೆ ಸೇರಬೇಕೆನ್ನುವವರನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಇದಕ್ಕೆ ಮುಸಲ್ಮಾನರು ಆಕ್ಷೇಪಿಸಲು ಕಾರಣವಿಲ್ಲ. ಮಲಬಾರಿನಲ್ಲಿ ಬಲಾತ್ಕಾರದಿಂದ ಅನೇಕ ಹಿಂದುಗಳನ್ನು ಮುಸಲ್ಮಾನ್ ಜಾತಿಗೆ ಸೇರಿಸಿಕೊಂಡಿದ್ದರು. ಅಂಥವರು ಮನ ನೊಂದು ಪುನಃ ಹಿಂದುಗಳಾಗಬೇಕೆಂತ ಅಪೇಕ್ಷಿಸಿದರೆ ಸೇರಿಸಿಕೊಳ್ಳುವದರಲ್ಲಿ ಆಕ್ಷೇಪಣೆ ಇಲ್ಲ. ನಮ್ಮ ದೇಶದಲ್ಲೂ ಸಹ ಒಬ್ಬ ಕೊಡಗಿನ ಕ್ರಿಶ್ಚಿಯನ್ ಜಾತಿಗೆ ಸೇರಿದ್ದವರು ಪುನಃ ತನ್ನ ಜಾತಿಗೆ ಬರಬೇಕೆಂತ ಅಪೇಕ್ಷಿಸುತ್ತಿದ್ದರೂ ಸಹ ನೀತಿಯು ಅನುಕೂಲವಿಲ್ಲದೆ ಇದ್ದಾರೆ. ಹಿಂದೂ ಮಹಾಸಭೆಯು ಅನುಮತಿ ಕೊಟ್ಟರೆ ಹಿಂದೂ ಜಾತಿಗಾದರೂ ತೆಗೆದುಕೊಳ್ಳಬಹುದಲ್ಲವೇ? ಹಿಂದೂ ಶಾಸ್ತ್ರದ ಸಾರವನ್ನು ಹಿಂದೂ ಸಮಾಜಕ್ಕೆಲ್ಲಾ ಸರಿಯಾಗಿ ತಿಳಿಸಿಕೊಟ್ಟು ದೇಶಾಚಾರ ಇತ್ಯಾದಿಗಳನ್ನು ವ್ಯತ್ಯಾಸ ಮಾಡಿಕೊಡಲು ಹಿಂದೂ ಮಹಾಸಭೆಯು ಅವಶ್ಯವಿದೆ.

ಹಿಂದೂ ಮಹಾಸಭೆಯ ಉದ್ದೇಶಗಳು ಯಾವವೆಂದರೆ.

(1) ಒಟ್ಟು ಜನಾಂಗಕ್ಕೆ ಅವಶ್ಯವಾದ ಕಾರ್ಯಗಳಲ್ಲಿ ಇತರ ಜಾತಿಯವರೊಡನೆ ಸಹಕರಿಸಿ ಕೆಲಸಮಾಡುವದು.

(2) ಐಹಿಕ ಆಮುಷ್ಮಿಕ ವಿದ್ಯೆಯನ್ನು ಎಲ್ಲಾ ಹಿಂದೂ ಜನಾಂಗಕ್ಕೂ ಕೊಡುವದು. ಇಂಥಾ ವಿದ್ಯೆಯನ್ನು ಕೊಡುವಾಗ ಪ್ರಾಚೀನ ಕಾಲದಿಂದಲೂ ಗೌರವ ಪಡೆದ ಬ್ರಹ್ಮಚರ್ಯ ಮತ್ತು ದೇಹ ಶಕ್ತಿಗೂ ಸಹ ತಕ್ಕಷ್ಟು ಗಮನ ಕೊಡಬೇಕಾದದ್ದನ್ನು ಸಹ ನನಪಿನಲ್ಲಿಡುವಿಕೆ.

(3) ಹುಡುಗಿಯರಿಗೆ 12 ವರುಷಕ್ಕಿಂತ ಮತ್ತು ಹುಡುಗರಿಗೆ 18 ವರುಷಕ್ಕಿಂತ ಮೊದಲೇ ಮದುವೆ ಆಗದಂತೆ ನೋಡಿಕೊಳ್ಳುವದು. (ಹಿಂದೂ ಜನರು ದೇಹ ಶಕ್ತಿಯಲ್ಲಿ ಹಿಂದೆ ಬೀಳಲು ಕಾರಣಗಳಲ್ಲಿ ಚಿಕ್ಕ ಪ್ರಾಯದಲ್ಲೇ ಮದುವೆಯಾಗುವದೇ ಒಂದು ಕಾರಣವಾಗಿ ಎಣಿಸಲಾಗಿದೆ).

(4) ಸಮಾಜ ಸೇವೆಗಾಗಿ ಸೇವಾದಳಗಳನ್ನು ಏರ್ಪಡಿಸುವದು. ಬೇರೆ ಜಾತಿಯವರು ಇಂಥಾ ದಳಗಳನ್ನು ಏರ್ಪಡಿಸಿಕೊಂಡಿದ್ದರೆ ಅವರ ಸಂಗಡ ಕಲೆತು ಶಾಂತಿಯನ್ನು ಕಾಳಿಸಿಕೊಳ್ಳಲು ಪ್ರಯತ್ನಿಸಬೇಕು. ಇಂಥಾ ಸೇವಕರು ಜನರಿಗೆ ತಿಳುವಳಿಕೆಯನ್ನು ಕೊಡಲೂ, ಜಾತ್ರೆ ಮುಂತಾದ ಗುಂಪುಗಳಲ್ಲಿ ಗಲಾಟೆಯಾಗದಂತೆ ನೋಡಿಕೊಳ್ಳಲೂ ಅವಶ್ಯವಾಗಿದ್ದಾರೆ.

(5) ಹಿಂದೀ ಭಾಷೆಯನ್ನು ಎಲ್ಲರೂ ಕಲಿಯುವಂತೆ ಮಾಡುವದು. ಹಿಂದೂ ಶಾಸ್ತ್ರಗಳೆಲ್ಲಾ ಮುಖ್ಯವಾಗಿ ನಾಗರೀ ಅಕ್ಷರದಲ್ಲಿ ಇರುವದರಿಂದ ನಾಗರೀ ಅಕ್ಷರವನ್ನು ಕಲಿಯುವದು ಅವಶ್ಯವೇ.

(6) ಬಾಲರನ್ನು ಸೇರಿ ಎಲ್ಲರೂ ವರ್ತಿಸುವಂತೆ ಎಲ್ಲಾ ವಿಧದಿಂದಲೂ ಪ್ರಯತ್ನಿಸುವದು.

(7) ಸ್ವದೇಶೀ ಬಟ್ಟೆಯನ್ನು ಅದರಲ್ಲೂ ಕೈನೂಲಿನ ಬಟ್ಟೆಯನ್ನೇ ಎಲ್ಲರೂ ಧರಿಸಬೇಕೆಂತ ಬೋಧಿಸುವದು.

(8) ಮತ ಬೋಧನ ಮಾಡಲು ಗ್ರಾಮ ಗ್ರಾಮಗಳಲ್ಲಿ ಸಮಾಜಗಳನ್ನು ಏರ್ಪಡಿಸುವದು.

(9) ಹಿಂದುಳಿದ ಜನಾಂಗಗಳನ್ನು ಮೇಲಕ್ಕೆ ಎತ್ತಲು ವಿದ್ಯೆಯಿಂದಲೂ ಇತರ ವಿಧದಿಂದಲೂ ಸಹಾಯ ಮಾಡುವದು.

(ಎ) ಈ ಜಾತಿ ಅಸ್ಪೃಶ್ಯರ ಮಕ್ಕಳನ್ನು ಇತರ ಮತದವರು ನಡೆಸುವ ಶಾಲೆಗಳಿಗೆ ಸೇರಿಸಿಕೊಳ್ಳುವದು. ಅವಶ್ಯವಿದ್ದಲ್ಲಿ ಬೇರೆ ಶಾಲೆಗಳನ್ನು ಏರ್ಪಡಿಸುವದು.

(ಬಿ) ಸಮುದಾಯದ ಭಾವಿಗಳಿಂದ ಅಸ್ಪೃಶ್ಯರು ನೀರು ತೆಗೆಯಬಹುದು, ಅಥವಾ ಅವಶ್ಯವಿದ್ದಲ್ಲಿ ಅವರಿಗೆ ಬೇರೆ ಭಾವಿಗಳನ್ನು ಮಾಡಿಕೊಡುವದು.

(ಸಿ) ಅಸ್ಪೃಶ್ಯರು ದೇವ ದರ್ಶನಕ್ಕೆ ಅಪೇಕ್ಷಿಸುವಾಗ ಅವರಿಗೆ ದರ್ಶನಕ್ಕೆ ಅನುಕೂಲ ಕಾಣುವಂತೆ ಎಲ್ಲಾ ದೇವಸ್ಥಾನದ ಅಧಿಕಾರಿಗಳನ್ನು ಕೇಳಿಕೊಳ್ಳುವದು.

ಅಸ್ಪೃಶ್ಯರ ವಿಷಯದಲ್ಲಿ ಜನರ ಮನಸ್ಸು ನೋಯುವಂತೆ ಬಲಾತ್ಕರಿಸಬಾರದು. ಈ ಮಹಾಸಭೆಯು ಅಹಿಂಸೆಯನ್ನು ನಂಬಿರುವದರಿಂದ ಶಾಂತತಾ ರೀತಿಯಿಂದಲೇ ಈ ಸಭೆಯ ಉದ್ದೇಶಗಳನ್ನು ಸಾಧಿಸಿಕೊಳ್ಳಬೇಕೆಂತ ಈ ಸಭೆಯ ನಿಯಮವಿದೆ.

ಈ ಉದ್ದೇಶಗಳನ್ನು ನೋಡಿದರೆ ನಮ್ಮ ಈ ಕೊಡಗು ದೇಶದಲ್ಲೂ ಹಿಂದು ಮಹಾಸಭೆಯ ಶಾಖೆಗಳನ್ನು ಏರ್ಪಡಿಸಿಕೊಳ್ಳುವದು ಅವಶ್ಯವೆಂತ ನಮಗೆ ತೋರುತ್ತದೆ. ಹಿಂದುಗಳು ಎನಿಸಿಕೊಂಡವರಲ್ಲಿ ಹಿಂದೂ ಧರ್ಮವೇನೆಂಬದು ತಿಳಿಯದವರು ಅನೇಕರು ಇದ್ದಾರೆ. ಅದ್ದರಿಂದ ಬಹಳ ಸುಲಭದಲ್ಲಿ ಬೇರೆ ಬೋಧಕರ ಬಲೆಗೆ ಬೀಳುವದಾಗಿದೆ. ಬ್ರಾಹ್ಮಣರ ಮೇಲೆ ವಿಶೇಷವಾಗಿ ಬ್ರಾಹ್ಮಣೇತರರು ಆಕ್ಷೇಪಿಸಲು ಕಾರಣಗಳಲ್ಲಿ ಹಿಂದೂ ಧರ್ಮದ ಗೂಢ ವಿಷಯಗಳನ್ನೆಲ್ಲಾ ಬ್ರಾಹ್ಮಣರೇ ಸ್ವಂತ ಹಕ್ಕಾಗಿ ಮಾಡಿಕೊಂಡು ಬಿಟ್ಟಿದ್ದಾರೆಂಬ ಭಾವನೆಯು ಒಂದಾಗಿದೆ. ಹಿಂದೂ ಧರ್ಮದ ಸಾರವನ್ನು ಸರ್ವರಿಗೂ ತಿಳಿಸಿಕೊಟ್ಟರೆ ಜಾತಿಗಳೊಳಗಿರುವ ಮಾತ್ಸರ್ಯಗಳು ಬಹಳ ಮಟ್ಟಿಗೆ ಕಡಿಮೆಯಾದೀತು.

ಬೆಳ್ಗಾಮಿನ ಮಹಾಸಭೆಯ ಅಧಿವೇಶನದಲ್ಲಿ ಮಂಜೂರಾದ ಮುಖ್ಯ ಠರಾವುಗಳು ಯಾವವೆಂದರೆ—(1) ದೇಶದಲ್ಲೆಲ್ಲಾ ಹಿಂದು ಮಹಾಸಭೆಯ ಶಾಖೆಗಳನ್ನು ಸ್ಥಾಪಿಸಬೇಕು, (2) ಹಿಂದೂ ಮುಸಲ್ಮಾನರೊಳಗೆ ರಾಜಕೀಯ ವಿಷಯಗಳಲ್ಲಿ ಇರುವ ಮತಭೇದವನ್ನು ವಿಚಾರಿಸುವ ಒಗ್ಗು ಒಂದು ಕಮಿಟಿ ನೇಮಕವಾಯಿತು, (3) ಕೋಹಾಟಿನಲ್ಲಿ ಆದ ಅತ್ಯಾಚಾರಗಳ ವಿಷಯದಲ್ಲಿ ವಿಷಾದವನ್ನು ಸೂಚಿಸಿದ್ದು. ಈ ಠರಾವಿನ ಮೇಲೆ ಲಾಲಾ ಲಜಪತರಾಯರು ಮಾತನಾಡುವಾಗ ಅವರು ಹೇಳಿದ್ದೇನೆಂದರೆ—"ಮಹಾತ್ಮ ಗಾಂಧಿ ಮುಂತಾದವರು ಮುಸಲ್ಮಾನರಿಗೆ ತೋರಿಸುವ ರಿಯಾಯ್ತಿಗಳಿಗಾಗಿ ನಾನು ಬೇಸರ ಮಾಡುವದಿಲ್ಲ. ಆದರೆ ಹಿಂದೂ ಧರ್ಮವು ನಾಶವಾಗದಂತೆ ನೋಡಿಕೊಳ್ಳಿ ಎಂತಲೂ, ಹಿಂದೂ ಜನರ ಜೀವ ನಾಶವಾಗದಂತೆ ಸಹ ನೋಡಿಕೊಳ್ಳಿ ಎಂತ ಕೇಳಿಕೊಳ್ಳುತ್ತೇನೆ." ಲಾಲಾಜಿಯವರು ಹಿಂದೂ ಧರ್ಮದ ಮಹತ್ವವನ್ನು ಬಹಳವಾಗಿ ವರ್ಣಿಸಿದರು. ಯುದ್ಧದ ನೀತಿಗಳನ್ನು ನೋಡಿದರೆ ಹಿಂದೂ ಯುದ್ಧ ನೀತಿಯಷ್ಟು ಉಚ್ಚ ನೀತಿಯು ಪ್ರಪಂಚದ ಬೇರೆ ಯಾವ ಜನಾಂಗದಲ್ಲೂ ಇಲ್ಲವೆಂತ ಹೇಳಿದರು, (4) ವೈಕಮಿನಲ್ಲಿ ಅಸ್ಪೃಶ್ಯರು ಪಬ್ಲಿಕ್ ರಸ್ತೆಗಾಗಿ ಹೋಗಬಿಡಬೇಕೆಂತ ತಿರುವಾಂಕೂರು ರಾಣಿಯವರನ್ನು ಕೇಳಿಕೊಳ್ಳಲಾಗಿದೆ, (5) ಪ್ರಪಂಚದಲ್ಲೆಲ್ಲಾ ಸ್ವತಂತ್ರವಾಗಿರುವ ಒಂದೇ ಹಿಂದೂ ಸಂಸ್ಥಾನವಾದ ನೇಪಾಳದ ಸ್ವಾತಂತ್ರ್ಯವನ್ನು ಬ್ರಿಟಿಷರು ಒಪ್ಪಿಕೊಂಡದ್ದಕ್ಕೆ ಸಂತೋಷವನ್ನು ಸೂಚಿಸಲಾಯಿತು.

ಹಿಂದೂ ಮುಸಲ್ಮಾನರು ತಮ್ಮ ತಮ್ಮ ಧರ್ಮವನ್ನು ಕಾಪಾಡಿಕೊಂಡು ರಾಷ್ಟ್ರ ಸೇವಾನಿರತರಾಗಲಿ ಎಂತ ಪಂಡಿತ ಮದನ ಮೋಹನ ಮಾಳವೀಯವರು ದೇವರ ಪ್ರಾರ್ಥನೆ ಮಾಡಿ ಸಭೆಯನ್ನು ಬರ್ಖಾಸ್ತು ಮಾಡಿದರು.

೪೧ನೇ ರಾಷ್ಟ್ರೀಯ ಸಭೆಯು

ಸ್ವಾಗತ ಮಂಡಲದ ಅಧ್ಯಕ್ಷರಾದ

ಗಂಗಾಧರರಾವ ದೇಶಪಾಂಡೆ ಇವರ

ಭಾಷಣವು.

(ತಾ. 26 ಡಿಸೆಂಬರ 1925.)

ಪ್ರತಿನಿಧಿ ಬಂಧು ಭಗಿನೀಯರೆ,

ಈಗೀಗ ಜಾಗ್ರತವಾಗಿರುವ ನಮ್ಮೀ ಕರ್ನಾಟಕ ಪ್ರಾಂತದ ಪರವಾಗಿ ಕೃಷಿ ವ್ಯವಸಾಯದ ಬೆಳಗಾಂವಿ ಗ್ರಾಮಕ್ಕೆ ಬಂದಿರುವ ತಮ್ಮೆಲ್ಲರಿಗೆ ಅಂತಃಕರಣಪೂರ್ವಕವಾಗಿ ಸ್ವಾಗತವನ್ನೀಯುವ ಸುಯೋಗವು ನನಗೆ ಲಭಿಸಿದ ಸಂಗತಿಯು ನನ್ನ ಆಯುಷ್ಯದೊಳಗಿನ ಪರಮಭಾಗ್ಯದ ಪ್ರಸಂಗವೆಂದು ನಾನು ಎಣಿಸುತ್ತೇನೆ. ಆದರೂ ತಾವು ನಮ್ಮ ಆಮಂತ್ರಣವನ್ನು ಮನ್ನಿಸುವದರಲ್ಲಿ ತೋರಿಸಿದ ದಯಾರ್ದ್ರತೆ ಹಾಗೂ ಸೌಜನ್ಯಗಳಿಂದ ನಮ್ಮ ಮೇಲೆ ಬಿದ್ದ ಬಹು ದೊಡ್ಡ ಭಾರವನ್ನು ವಹಿಸಲು ಸಾಕಷ್ಟು ಸಾಮರ್ಥ್ಯವು ನಮ್ಮಲ್ಲಿರುವದಿಲ್ಲೆಂಬ ಅರಿವಿನಿಂದ ನನ್ನ ಅಂತಃಕರಣದಲ್ಲಿ ಉಕ್ಕಿ ಬರುವ ಮನೋಭಾವಗಳನ್ನು ನಾನು ಪೂರ್ಣರೀತಿಯಿಂದ ವ್ಯಕ್ತಗೊಳಿಸಲಾರೆನು. ನಮ್ಮ ಅನುಭವ, ಸಾಧನ-ಸಾಮಗ್ರಿಗಳ ನ್ಯೂನತೆ, ಮತ್ತು ದೊಡ್ಡ ಪಟ್ಟಣಗಳಲ್ಲಿ ದೊರೆಯಬಹುದಾದ ಅನುಕೂಲತೆಗಳ ಅಭಾವದಿಂದೊದಗಿದ ತೊಂದರೆಗಳು—ಇವೆಲ್ಲವುಗಳಿಂದ ತಮ್ಮ ಸ್ವಾಗತದ ಸಲುವಾಗಿ ನಾವು ಮಾಡಿರುವ ಸಿದ್ಧತೆಯು ಎಲ್ಲ ಬಗೆಯಿಂದಲೂ ಅಪೂರ್ಣವಾಗಿರುತ್ತದೆಂಬದನ್ನೂ ಮತ್ತು ಎರಡನೇ ಪಟ್ಟಣಗಳಲ್ಲಿ ತಮಗೆ ದೊರೆಯಬಹುದಾದ ಸೌಕರ್ಯಗಳನ್ನು ಒದಗಿಸಲು ನಮ್ಮಿಂದಾಗಿಲ್ಲವೆಂಬದನ್ನೂ ನಾನು ಅರಿತಿಲ್ಲವೆಂತಲ್ಲ. ರಾಷ್ಟ್ರೀಯ ಮಹಾಸಭೆಯ ವಿಷಯಕ್ಕೆ ನಮ್ಮಲ್ಲಿರುವ ಪ್ರೇಮ ಮತ್ತು ಉತ್ಸಾಹಗಳಿಂದಲೂ ನಮ್ಮ ಪ್ರಾಂತದ ಸ್ವತಂತ್ರವಾದ ಅಸ್ತಿತ್ವವನ್ನು ಅನುಭವಿಸುವ ಆಕಾಂಕ್ಷೆಯಿಂದಲೂ ಕೋಕನಾಡಿನಲ್ಲಿ ತಮಗೆ ಆಮಂತ್ರಣವನ್ನು ಕೊಡಲು ಧೈರ್ಯಮಾಡಿದೆವಲ್ಲದೆ ನಮ್ಮ ಯೋಗ್ಯತೆಯ ಅಥವ ಸಾಧನ ಸಾಮಗ್ರಿಗಳ ಬಲದಿಂದಲ್ಲೆಂಬುದನ್ನು ನಾನು ನಿರಾತಂಕವಾಗಿ ಹೇಳುವೆನು. ಅದ್ದರಿಂದ ನಮ್ಮಲ್ಲಿ ಕಂಡುಬರುವ ಅನೇಕ ತಪ್ಪು ತಡೆಗಳನ್ನು ತಾವು ದಯವಿಟ್ಟು ಹೊಟ್ಟೆಯಲ್ಲಿ ಹಾಕಿಕೊಳ್ಳಬೇಕೆಂದು ಅತ್ಯಂತ ವಿನೀತನಾಗಿ ಬೇಡಿಕೊಳ್ಳುತ್ತೇನೆ.

ಈ ಊರು ಸಣ್ಣದು; ಜನಸಂಖ್ಯೆಯು 36,000ಕ್ಕೆ ಮಿಕ್ಕಿಲ್ಲ; ಅದರಲ್ಲಿಯೂ ಬಡ ಒಕ್ಕಲಿಗರ ಪ್ರಮಾಣವೇ ಹೆಚ್ಚು; ಹೀಗಿದ್ದು ಇಂಥ ಚಿಕ್ಕ ಊರು ರಾಷ್ಟ್ರೀಯ ಮಹಾಸಭೆಯನ್ನು ನೆರೆಯಿಸಲು ಧೈರ್ಯಮಾಡಿದ ಉದಾಹರಣೆಯೆಂದರೆ ಇದೇ ಮೊದಲನೆಯದು. ದೇವರ ದಯದಿಂದ ಈ ಅಧಿವೇಶನವು ಕೆಲಮಟ್ಟಿಗಾದರೂ ಯಶಸ್ವಿಯಾಗಿ ನಡೆದರೆ ಇಂಥ ಬೇರೆ ಚಿಕ್ಕ ಪಟ್ಟಣಗಳು ಸಹ ಇನ್ನು ಮುಂದೆ ರಾಷ್ಟ್ರೀಯ ಮಹಾಸಭೆಗೆ ಆಮಂತ್ರಣ ಕೊಡುವ ಧೈರ್ಯಗೊಳ್ಳುವವೆಂದೂ ಮತ್ತು ಆಗಿಂದ ನಮ್ಮ ... ಕೇವಲ ಧಾರ್ಮಿಕ ಹಾಗೂ ವಿದ್ಯಾವಂತರ ಮುಖ್ಯ ... ದ್ಯೋತಕವಾಗದೆ ...

ದೀ ರಾಷ್ಟ್ರದ ಅಂತಃಕರಣದ ಮೂರ್ತಸ್ವರೂಪವಾದದ್ದೆಂಬದನ್ನು ಸಿದ್ಧಗೊಳಿಸಲನುವಾಗುವದೆಂದೂ ನನಗೆ ಪೂರ್ಣ ನಂಬಿಕೆಯುಂಟು.

ಕರ್ನಾಟಕವು ಒಂದು ಪ್ರಾಂತವಾಗಿ ಇಡೀ ಭರತಖಂಡದ ಮುಂದೆ ನಿಲ್ಲುವ ಮೊದಲನೆಯದಾದ ಈ ಪ್ರಸಂಗದಲ್ಲಿ ಅದರ ವೈಭವ ಪೂರ್ಣವಾದ ಪ್ರಾಚೀನ ಇತಿಹಾಸವನ್ನು ತಮ್ಮಲ್ಲರಿಗೆ ಅರುಹಬೇಕೆಂಬ ಇಚ್ಛೆಯು ನನ್ನಲ್ಲಿ ಎಷ್ಟೇ ಉತ್ಕಟವಾದ್ದರೂ ವೇಳೆಯ ಅಭಾವದ ಮೂಲಕ ಅದರ ಸಾಮಾನ್ಯ ಸ್ವರೂಪವನ್ನಷ್ಟು ಹೇಳಿ ಅಷ್ಟರಿಂದಲೇ ಸಮಾಧಾನ ಹೊಂದುವೆನು. ಸುಂದರವಾದ ನಮ್ಮ ಕರ್ನಾಟಕವು ಭಿನ್ನವಿಭಿನ್ನವಾಗಿರುವದರಿಂದ ನಾವು ಬಹುಕಾಲದಿಂದ ಬಗೆಬಗೆಯ ತೊಂದರೆಗಳನ್ನನುಭವಿಸಬೇಕಾಗಿದೆ. ಇತಿಹಾಸಕಾರರು ಈ ಭಿನ್ನವಿಭಿನ್ನತೆಯನ್ನು ಸಮರ್ಥಿಸಲು ಕಾರಣಗಳನ್ನು ಹುಡುಕಿ ಹೇಳಬಹುದಾದರೂ ಅದು ಜನರ ಒಪ್ಪಿಗೆಯದದ್ದಲ್ಲವೆಂಬದನ್ನೂ ಮತ್ತು ಅವರ ಹಿತಕ್ಕೆ ವಿರೋಧಕರವಾಗಿದೆಂಬದನ್ನೂ ಯಾರೂ ಅಲ್ಲಗಳೆಯಲಾರರು.

ಕನ್ನಡಿಗರು ಒಂದೇತರದ ಪರಂಪರೆಯಲ್ಲಿಯೂ ಸಂಸ್ಕೃತಿಯಲ್ಲಿಯೂ ಹುಟ್ಟಿಬೆಳೆದು ಒಂದೇ ಭಾಷೆಯನ್ನಾಡುವ ವಿಶಿಷ್ಟವಾದ ಜನಾಂಗದವರು. ಭರತ ವರ್ಷದ ಪ್ರಾಚೀನ ಸಮಾಜ ರಚನೆಯಲ್ಲಿ ಅವರು ಸ್ವತಂತ್ರವಾದ ವೈಯಕ್ತಿಕ ಅಸ್ತಿತ್ವವನ್ನು ಪಡೆದವರಾಗಿದ್ದರು. ಅರ್ವಾಚೀನ ಇತಿಹಾಸ ಕಾಲದಲ್ಲಿಯೂ ಕೂಡ ಬಲಾಢ್ಯ ಹಾಗೂ ವೈಭವಶಾಲಿಯಾದ ವಿಜಯನಗರದ ಸಾಮ್ರಾಜ್ಯದಲ್ಲಿ ಕರ್ನಾಟಕವು ವಿಚ್ಛಿನ್ನವಾಗದೆ ಅಖಂಡವಾಗಿದ್ದಾಗ ಅದು ತನ್ನ ಸಂಸ್ಕೃತಿಯ ಹಾಗೂ ಸಾಮರ್ಥ್ಯದ ಉಚ್ಛ್ರಾಯವನ್ನು ತೋರಿಸಿರುವದು. ಅದು ನಮ್ಮ ಏಳಿಗೆಯ ಪರಮಾವಧಿಯ ಕಾಲವು. ಕವಿಗಳೂ, ತತ್ವಜ್ಞಾನಿಗಳೂ, ರಾಜನೀತಿಜ್ಞರೂ, ಧರ್ಮಸಂಸ್ಥಾಪಕರೂ, ಶಿಲ್ಪಿಗಳೂ ಮತ್ತು ವಿಜ್ಞಾನ ಶಾಸ್ತ್ರಜ್ಞರೂ ಕರ್ನಾಟಕದ ಫಲವತ್ತತೆಯನ್ನು ಸಿದ್ಧಗೊಳಿಸಲು ಅಹಮಹಮಿಕೆಯಿಂದ ಮುಂದರಿಯುತ್ತಿದ್ದರು. ನಮ್ಮ ನಾಡಿನ ತತ್ವಜ್ಞಾನದ ವಿಚಾರಗಳು ಆಗಿನ ರಾಷ್ಟ್ರಭಾಷೆಯಾದ ಹಿಂದುಸ್ಥಾನದ ಮನೋಭೂಮಿಕೆಯ ಮೇಲೆ ಬಲವತ್ತರವಾದ ಪರಿಣಾಮವನ್ನುಂಟುಮಾಡಿದವು. ಈಗಲೂ ನಾವು ಹಾಗೆ ಮಾಡಲೆಣಿಸಿದರೆ ಹಿಂದೀ ಅಂದರೆ ಈಗಿನ ರಾಷ್ಟ್ರಭಾಷೆಯಾದ ಹಿಂದುಸ್ಥಾನಿಯ ಮುಖಾಂತರವಾಗಿಯೇ ಹಾಗೆ ಮಾಡಬಹುದೆಂಬದನ್ನು ಅರಿತಿದ್ದೇವೆಂಬದನ್ನು ಈ ಸಂದರ್ಭದಲ್ಲಿ ಹೇಳಿ ಮುಂದರಿಯುವೆನು.

ಹಿಂದುಸ್ಥಾನದ ಇತರ ಭಾಗಗಳೊಂದಿಗೆ ಕರ್ನಾಟಕವಾದರೂ ಅಲ್ಪಕಾಲಿಕವಾದಾಗ್ಯೂ ಅತ್ಯಂತಹಾನಿಕರವಾದ ಪ್ರಸಂಗದೊಳಗಿಂದ ಹಾಯಬೇಕಾಯಿತು. ಈ ಕಾಲದಲ್ಲಿ ರಾಷ್ಟ್ರದ ಜೀವಜ್ಯೋತಿಯು ಮಂದವಾಗ ಹತ್ತಿತ್ತು, ಜನತೆಯು ನಿಸ್ಕಲಿತವಾಗಿ ದುರ್ಬಲವಾಗುತ್ತ ನಡೆದಿತ್ತು, ಇದರಿಂದ ದೇಶದಲ್ಲೆಲ್ಲಾ ಅರಾಜಕತೆಯುಂಟಾಗಿ ಯುರೋಪದವರ ಸಾಹಸಕ್ಕೆ ಅನುವು ದೊರೆಯಿತು. ಇದಲ್ಲದೆ ಧರ್ಮ, ಕಲಾಕೌಶಲ್ಯ ಮತ್ತು ವಿಜ್ಞಾನ ತತ್ವಜ್ಞಾನಗಳನ್ನು ವೃದ್ಧಿಗೊಳಿಸಲು ಅವಶ್ಯವಾದ ಉತ್ಪಾದಕ ಶಕ್ತಿಯು ಕುಂದುತ್ತ ಹೋಗಿತ್ತು. ಮತ್ತು ನಮ್ಮ ಪ್ರಾಂತವು ಹರಿದು ಹಂಚಿ ಹೋಗಿದ್ದರಿಂದ ಈ ಆಪತ್ತಿಗಳ ತೀವ್ರತೆಯು ಹೆಚ್ಚಿತು. ಈ ಬಾಹ್ಯ ಭಿನ್ನ ವಿಭಿನ್ನತೆಯಿಂದಲೇ ನಮ್ಮ ದುಃಖವು ಮುಗಿಯಲಿಲ್ಲ. ಆದರೆ ನಮ್ಮ ಭಿನ್ನ ಭಿನ್ನ ಧರ್ಮಗಳೂ, ಜಾತಿಗಳೂ, ಸಂಪ್ರದಾಯಗಳೂ, ಮತಗಳೂ, ಪಂಗಡಗಳೂ ಮೊದಲಿನಂತೆ ನಮ್ಮ ದೃಷ್ಟಿಯನ್ನು ಏಕಾಗ್ರಗೊಳಿಸಿ ಸಂಸ್ಕೃತಿಯಲ್ಲಿ ಏಕತೆಯನ್ನು ಮಾಡಿ ಅದನ್ನು ಬಲಗೊಳಿಸದೆ ಪ್ರಾಂತದಲ್ಲಿ ಒಡಕುಗಳನ್ನು ಹುಟ್ಟಿಸಲು ಕಾರಣವಾದವು. ಸಹಜವಾದ ವಿಕಾಸಶಕ್ತಿಯು ನಮ್ಮಲ್ಲಿದ್ದಿತು, ಆದರೆ ಅದನ್ನು ವೃದ್ಧಿಗೊಳಿಸಲವಶ್ಯವಾದ ಸುವ್ಯವಸ್ಥಿತ ಘಟನೆಯ ಲಾಭವು ಮಾತ್ರ ನಮಗೆ ದೊರೆಯಲಿಲ್ಲ. ಮುಂದೆ ಕೆಲಕಾಲದನಂತರ ಇತರ ಪ್ರಾಂತಗಳಂತೆ ಪುನರುಜ್ಜೀವಿತವಾದ ನಮ್ಮ ಪ್ರಾಂತದಲ್ಲಾದರೂ ತಕ್ಕಮಟ್ಟಿಗೆ ಶಿಲ್ಪಜ್ಞರೂ, ಕಾಯಿದೆ ಪಂಡಿತರೂ, ರಾಜಕಾರಣಧುರೀಣರೂ ಜನಿಸಿರುವರೆಂಬದನ್ನು ಅಭಿಮಾನದಿಂದ ಹೇಳಬಹುದು. ಮತ್ತು ಸತತಶೀಲನಾದ ಒಕ್ಕಲಿಗನಾದರೂ ತನ್ನ ಉದ್ಯೋಗದಿಂದಲೂ ಸಂಸ್ಕೃತಿಯಿಂದಲೂ ಈಗಲೂ ನಮ್ಮ ಪ್ರಾಂತದ ಅಭಿಮಾನಕ್ಕೆ ಕಾರಣನಾಗಿರುವನೆಂಬದನ್ನು ಹೇಳದಿರಲಾರೆನು. ಉಚ್ಚತರವಾದ ಧ್ಯೇಯನಿಷ್ಠತೆಯಿಂದ ಕೂಡಿದ ವ್ಯವಸಾಯ ಕುಶಲತೆಯೂ ಮತ್ತು ಶಿಸ್ತಿನಿಂದ ಕೂಡಿ ಕೆಲಸಮಾಡುವ ಸದ್ಗುಣವೂ ಈಗಲೂ ನಮ್ಮ ಪ್ರಾಂತದ ವೈಶಿಷ್ಟ್ಯವಾಗಿರುವವು. ಮತ್ತು ದೇವರ ಕೃಪೆಯಿಂದ ರಾಷ್ಟ್ರೀಯ ಮಹಾಸಭೆಯು ನಮ್ಮ ಪ್ರಾಂತದ ಪುನರ್ಘಟನೆಯನ್ನು ಮಾಡಿಕೊಟ್ಟದ್ದರಿಂದ ನಿರಾಶೆಯ ಕಗ್ಗತ್ತಲೆಯಲ್ಲಿ ಆಶೆಯ ಪ್ರಕಾಶಕಿರಣವು ಮಿನುಗುತ್ತಿ, ಉಜ್ವಲವಾದ ಭವಿಷ್ಯವು ನಮಗೆ ನಿಜವಾಗಿ ಒದಗುವದೆಂದು ತೋರುತ್ತಿದೆ. ಮಹಾಸಭೆಯು ನಮ್ಮ ಪ್ರಾಂತವನ್ನು ವಾಸ್ತವಿಕ ದೃಷ್ಟಿಯಿಂದ ಒಂದು ಮಾಡಿರುವದಲ್ಲದೆ ಅದರಿಂದ ನಮ್ಮ ಹುಟ್ಟಿದ ಸ್ವರಾಜ್ಯಲಾಲಸೆಯೂ, ಅಹಿಂಸಾಪ್ರೇಮವೂ ಇಲ್ಲಿಯ ಭಿನ್ನ ಭಿನ್ನ ಮತಗಳಲ್ಲಿಯೂ ಪಂಗಡಗಳಲ್ಲಿಯೂ ಐಕಮತ್ಯವನ್ನೂ ಹುಟ್ಟಿಸತೊಡಗಿರುವವು. ಜೈನರು ಮತ್ತು ಲಿಂಗಾಯತರು, ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು, ಹಿಂದುಗಳು ಮತ್ತು ಮುಸಲ್ಮಾನರು ಪರಸ್ಪರರ ಮನೋಭಾವಗಳನ್ನು ಆದರಿಸಹತ್ತಿರುವರು. ಪರಸ್ಪರರಲ್ಲಿ ಬಂಧುಭಾವವು ಹುಟ್ಟಿ ನಾವೆಲ್ಲರೂ ನಮ್ಮ ನಮ್ಮ ಜವಾಬುದಾರಿಯನ್ನೂ ಕರ್ತವ್ಯವನ್ನೂ ಅರಿತವರಾಗಿ ಸ್ವರಾಜ್ಯಧ್ವಜದ ಕೆಳಗೆ ಒಟ್ಟುಗೂಡ ಹತ್ತಿದ್ದೇವೆ.

ಒಂದುಕಾಲದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ವೈಮನಸ್ಯವು ಅತ್ಯಂತ ವಿರೋಧಕ್ಕೆ ಹೋಗಿ ಅದರ ಬಗ್ಗೆ ಮಾತಾಡುವದು ಕೂಡ ತಪ್ಪು ತಿಳುವಳಿಕೆಗೆ ಕಾರಣವಾಗಬಹುದೆಂಬ ಅಂಜಿಕೆಯು ಹುಟ್ಟುತ್ತಿತ್ತು. ಆದರೆ ಪರಮೇಶ್ವರನ ಕೃಪೆಯಿಂದ ಮಹಾತ್ಮಗಾಂಧಿಯವರ ಅತರ್ಕ್ಯವಾದ ಪ್ರಭಾವದ ಮೂಲಕ ಈ ಕಾಲವು ಹಿಂದಾಗಿ ಒಬ್ಬರೊಬ್ಬರ ವಿಚಾರಸರಣಿಯನ್ನು ತಕ್ಕಮಟ್ಟಿಗೆ ತಿಳಿದುಕೊಳ್ಳಲಾರಂಭಿಸಿರುವೆವು. ಈ ಪ್ರಶ್ನೆಯನ್ನು ಬಿಡಿಸುವ ಕೆಲಸವು ಬಹ್ವಂಶದಿಂದ ಬ್ರಾಹ್ಮಣರ ಕೈಯಲ್ಲಿಯೇ ಇರುತ್ತದೆಂದು ನನ್ನ ಖಂಡಿತವಾದ ಅಭಿಪ್ರಾಯವಿದೆ. ಯಾಕಂದರೆ ಅತ್ಯಂತ ಸ್ವಾರ್ಥತ್ಯಾಗವೇ ಬ್ರಾಹ್ಮಣನ ಧ್ಯೇಯವಾಗಿರುವದು. ಪ್ರೇಮ ಮತ್ತು ಐಕ್ಯಗಳ ಸಲುವಾಗಿ ನಾವು ಎಷ್ಟರಮಟ್ಟಿಗೆ ಸ್ವಾರ್ಥ ತ್ಯಾಗವನ್ನು ಮಾಡಬೇಕೆಂಬದನ್ನೂ ತಲೆ ಬಗ್ಗಿಸಬೇಕೆಂಬದನ್ನೂ ಮಹಾತ್ಮ ಗಾಂಧಿಯವರು ತಮ್ಮ ಉದಾತ್ತವಾದ ಆಚರಣೆಯಿಂದ ತೋರಿಸಿರುವರು. ಈ ದುರ್ದೈವಿಯಾದ ರಾಷ್ಟ್ರವು ಸ್ವರಾಜ್ಯವಿಲ್ಲದೆ ನಿರಾತಂಕವಾಗಿ ಜೀವಿಸಲರಿಯದೆಂದು ತಿಳಿದಮೇಲೆ ಆ ಸ್ವರಾಜ್ಯಕ್ಕೆ ಅತ್ಯವಶ್ಯವಾದ ಐಕ್ಯದ ಸಲುವಾಗಿ ನಾವು ಮಾಡಬೇಕಾದ ಆತ್ಮಯಜ್ಞವು ಎಂಥದಾದರೂ ಅಲ್ಪವೇಸರಿ.

ಆಳರಸರೊಂದಿಗೆ ಕಾದಾಡುವ ನಮ್ಮ ಮಾರ್ಗಗಳು ಯಾವವೇ ಇದ್ದರೂ ನಮ್ಮ ರಾಷ್ಟ್ರದ ಸಾಮರ್ಥ್ಯವನ್ನೂ ಮತ್ತು ಐಕ್ಯವನ್ನೂ ಬೆಳೆಸುವ ಕಾರ್ಯಕ್ರಮವು ಎಲ್ಲರಿಗೂ ಸಮಾನ್ಯವಾದದ್ದಾಗಿರುವದು. ಮಹಾತ್ಮಾಜಿಯವರು ಕಲ್ಪಿಸಿದ ತ್ರಿವಿಧ ವಿಧಾಯಕ ಕಾರ್ಯಕ್ರಮವು ನಮ್ಮಲ್ಲಿಯ ಶ್ರೇಷ್ಠರಾದವರ ಉತ್ಸಾಹ ಶಕ್ತಿಗಳನ್ನು ಕೂಡ ಕೆಲಸದಲ್ಲಿ ತೊಡಗಿಸಲು ಸಾಕಷ್ಟು ವಿಸ್ತೃತವಾಗಿರುವದು. ನಮ್ಮ ಪ್ರಾಂತದಲ್ಲಿ ಒಂದೆರಡು ಪ್ರಸಂಗಗಳನ್ನು ಹೊರ್ತು ಪಡಿಸಿದರೆ ಹಿಂದು ಮುಸಲ್ಮಾನರ ನಡುವೆ ಯಾವ ತರದ ಗಲಭೆಯೂ ಉಂಟಾಗಿಲ್ಲ. ಈ ಎರಡೂ ಧರ್ಮೀಯರಲ್ಲಿ ಸಾಧಾರಣತಃ ಅತ್ಯಂತ ಪ್ರೇಮಮಯವಾದ ಸಂಬಂಧವಿರುವದು.

ಅಸ್ಪೃಶ್ಯತಾ ಭಾವನೆಯು ದುರ್ದೈವದಿಂದ ಈ ವರೆಗೂ ಇಲ್ಲಿ ಉಳಿದಿರುವದು. ಆದರೆ ಶುಭವಿಚಾರಗಳ ಪ್ರಾದುರ್ಭಾವದಿಂದ ಅದು ನಷ್ಟವಾಗುತ್ತ ನಡದಿದೆ. ನಮ್ಮ ಪ್ರಾಂತದಲ್ಲಿಯ ಅಸ್ಪೃಶ್ಯರೆಂದೆನಿಸುವ ಜನರು ಸಾರ್ವಜನಿಕ ಸಭೆಗಳಲ್ಲಿಯೂ, ಸಂಸ್ಥೆಗಳಲ್ಲಿಯೂ, ರಾಷ್ಟ್ರೀಯ ಶಾಲೆಗಳಲ್ಲಿಯೂ ಇತರ ಹಿಂದು ಜನರೊಡನೆ ಏನೂ ಅಭ್ಯಂತರವಿಲ್ಲದೆ ಕೂಡುತ್ತಿರುವರು. ಆದರೂ ಅವರ ಶಿಕ್ಷಣದ ವಿಷಯದಲ್ಲಿಯೂ, ಸಾಮಾಜಿಕ ಸ್ಥಿತಿಯ ವಿಷಯದಲ್ಲಿಯೂ ನಮ್ಮಿಂದಾಗಬೇಕಾದಷ್ಟು ಕಾರ್ಯವಾಗಿಲ್ಲೆಂಬದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ಧ್ಯೇಯಸಾಧನೆಯ ದೃಷ್ಟಿಯಿಂದ ವಿಚಾರಮಾಡಿದರೆ ಖಾದಿಯ ಹುಟ್ಟುವಳಿ ಮತ್ತು ಪ್ರಸಾರದ ಬಗ್ಗೆ ನಾವು ಮಾಡತಕ್ಕಷ್ಟು ಕೆಲಸವನ್ನು ಮಾಡಿರುವೆವೆಂದು ಹೇಳಲಾಗದಿದ್ದರೂ ಖಾದಿಯ ಹುಟ್ಟುವಳಿಯ ಬಗ್ಗೆ ಪ್ರಾಮುಖ್ಯವನ್ನು ಹೊಂದಿದ ಪ್ರಾಂತಗಳಲ್ಲಿ ಕರ್ನಾಟಕವೂ ಒಂದಾಗಿರುತ್ತೆಂಬದು ಅಭಿಮಾನದ ಸಂಗತಿಯು. ನಾವು ತಿಂಗಳೊಂದಕ್ಕೆ 44,000 ಪೌಂಡು ಖಾದಿಯನ್ನು ಹುಟ್ಟಿಸುವೆವೆಂದೂ, ಖಾದಿಯ ಚಳವಳಿಯನ್ನು ನಡೆಸುವದರ ಸಲುವಾಗಿ 22,400 ರಾಟಿಗಗಳು ನಿಯಮದಿಂದ ತಿರುಗುತ್ತಲಿರುವವೆಂದೂ ತಿಳಿದು ಬಂದಿದೆ.

ತಿಂಗಳೊಂದಕ್ಕೆ 2,000 ಗಜ ನೂಲಿನ ಸ್ವರಾಜ್ಯಕರವನ್ನು ಕೊಡಲು ಸುಮಾರು 600 ಜನರು ಮುಂದೆ ಬಂದಿರುವರು. ಅ. ಭಾ. ಮಹಾಸಭೆಯ ಅಧಿವೇಶನದ ಸಿದ್ಧತೆಯನ್ನು ಮಾಡುವ ಪ್ರಸಂಗವಿಲ್ಲದಿದ್ದರೆ ಈ ಸಂಖ್ಯೆಯು ಇನ್ನೂ ಹೆಚ್ಚುತ್ತಿತ್ತು. ಸ್ವಂತ ಕಷ್ಟದಿಂದುಪಜೀವಿಸುವ ಜನಸಮಾಜಕ್ಕೆ ಈ ಖಾದಿಯ ಚಳವಳಿಯು ಮಹೋಪಕಾರಿಯಾದ ಕಾಮಧೇನುವಾಗುತ್ತದೆಂಬದು ಬಹು ಜನರ ಮನವರಿಕೆಯಾಗಿರುವದು. ಈ ಮಾತಿನಿಂದಲೇ ನಮ್ಮ ಖಾದಿಯ ಚಳವಳಿಯು ಅಬಾಧಿತವಾಗಿಯೂ, ಅಪ್ರಾಯತವಾಗಿಯೂ ಸಾಗುವದೆಂಬದರಲ್ಲಿ ಏನೂ ಸಂದೇಹವಿಲ್ಲ. ಖಾದಿಯಕೆಲಸವು ಸುಶಿಕ್ಷಿತರ ಹಾಗೂ ಸಾಮಾನ್ಯ ಜನರ ನಡುವಿನ ಸಂಬಂಧವನ್ನು ದೃಢೀಕರಿಸುವ ಅತ್ಯುತ್ತಮವಾದ ಉಪಾಯವಾಗಿರುವದೆಂಬದನ್ನು ಅನೇಕ ಉತ್ಸಾಹಿಗಳಾದ ಕೆಲಸಗಾರರು ಕಂಡುಹಿಡಿದಿರುವರು. ಮತ್ತು ನಮ್ಮ ರಾಷ್ಟ್ರಧ್ವಜದ ಕೈನೂಲಿನ ಉರುಟಾದ ಅರಿವೆಯು, ಅದರ ಮೇಲಿನ ಬಣ್ಣಗಳಿಗಿಂತ ಹೆಚ್ಚು ಸ್ಪಷ್ಟವಾಗಿ ರಾಷ್ಟ್ರೀಯ ಐಕ್ಯವನ್ನು ವ್ಯಕ್ತಗೊಳಿಸುತ್ತದೆಂದು ನಾನು ನಿಃಸಂಶಯವಾಗಿ ಹೇಳಬಲ್ಲೆನು.

ರಾಷ್ಟ್ರೀಯ ಮಹಾ ಸಭೆಯಲ್ಲಾದ ಅನಿಷ್ಟಕರವಾದ ಒಡಕಿನಿಂದ ದೇಶದಲ್ಲೆಲ್ಲಾ ಒಂದು ಬಗೆಯ ವ್ಯಾಮೋಹವೂ ಗೊಂದಲವೂ ಉತ್ಪನ್ನವಾಗಿರುವವು. ಆದರೆ ಈ ಸ್ಥಿತಿಯು ಇನ್ನು ಮುಂದೆ ಹೀಗೆಯೇ ಉಳಿಯದು ಮತ್ತು ಉಳಿಯಲಿಕ್ಕಾಗದು. ನಮ್ಮ ಶಕ್ತಿಗಳೆಲ್ಲ ವಿಸ್ಖಲಿತವಾಗಿದ್ದು ಕೆಲಮಟ್ಟಿಗೆ ನಿಃಸತ್ವವಾಗಿರುವವೆಂಬದೇನೋ ನಿಜ! ಆದರೂ ಅವು ಅಳಿದುಹೋಗಿಲ್ಲೆಂಬದು ಸ್ಪಷ್ಟವಾದಮಾತು. ಕಳೆದ ಮೂರು ವರ್ಷಗಳಿಂದ ನಾವು ಮಾಡಿದ ಪ್ರಗತಿಯನ್ನು ಮುಷ್ಕರಂತೆ ಕ್ರಮದಿಂದ ನಾಶಗೊಳಿಸದಿದ್ದರೆ ನಮ್ಮ ಈ ವರೆಗಿನ ಸಂಘಟಿತ ಕಾರ್ಯವು ಎಂಥ ನಿರಾಶೆಯನ್ನೂ ಸಂಶಯವನ್ನೂ ಹುಟ್ಟಿಸುವ ಸ್ಥಿತಿಗಳೊದಗಿದರೂ ಅವುಗಳೊಳಗಿಂದ ಸುರಕ್ಷಿತವಾಗಿ ಪಾರಾಗಿ ಅಚ್ಚಳಿಯದೆ ಉಳಿಯುವದೆಂಬದಕ್ಕೆ ಸಂಶಯವು ಬೇಡ. ಹಿಂದುದೇಶವನ್ನೆಲ್ಲ ಒಂದುಮಾಡಲು ಕೇವಲ ಸಡಿಲಾದ ದಾರಗಳನ್ನು ನಾವು ಪುನಃ ಬಿಗಿಹಿಡಿದು ಕೂಡಿಸಿದರೆ ನಮ್ಮ ಕೆಲಸವಾದಂತಾಯಿತು. ನಮ್ಮ ತೊಂದರೆಗಳು ಹೊರಗಿನವಿರದೆ ಅಂತರಂಗಿಕವಾಗಿರುವವು. ಆದ್ದರಿಂದ ಸಂಧಾನ ಮೊದಲಾದ ಬಾಹ್ಯ ಉಪಾಯಗಳಿಂದಲ್ಲದೆ ಅಂತಃಶುದ್ಧಿಯಿಂದಲೇ ನಮ್ಮ ಕಾರ್ಯವಾಗುವದೆಂಬದು ಸ್ಪಷ್ಟವಿದೆ.

ಈ ಕಾರ್ಯವು ಸುಲಭವಾದದ್ದಲ್ಲವೆಂಬದನ್ನು ನಾನು ಒಪ್ಪುತ್ತೇನೆ. ಆದರೂ ಅದು ಅಸಾಧ್ಯವಾದದ್ದೂ ಅಲ್ಲ. ಏತರ ಸಲುವಾಗಿ ಮತ್ತು ಯಾತರಿಂದ ಹಿಂದುಸ್ಥಾನವು ಯಾವಾಗಲೂ ಅಚಲವಾಗಿ ನಿಂತಿರುವದೋ ಆ ದೃಢವಾದ ಕೌಟುಂಬಿಕ ಬಂಧನಗಳು ನಮ್ಮನ್ನು ಎಲ್ಲ ಪ್ರಸಂಗಗಳಲ್ಲಿ ಸುರಕ್ಷಿತವಾಗಿಡುವವಲ್ಲದೆ ನಮ್ಮಲ್ಲಿ ಬಂಧುಭಾವವು ಹೆಚ್ಚಿ ದ್ವೇಷಾಸೂಯೆಗಳನ್ನು ಹೊರದೂಡುವವೆಂದು ನಾವು ಆಶಿಸುವಾ. ರಾಜ್ಯಕರ್ತರಿಂದೊದಗುವ ಅನಿಯಂತ್ರಿತವಾದ ಪ್ರಜಾಛಲನೆಯೂ ನಮ್ಮಲ್ಲಿ ಐಕ್ಯವನ್ನು ಬೆಳಿಸಲು ಒಂದು ಮಹತ್ವದ ಸಾಧನವಾಗಿರುವದು. ಬಂಗಾಲ ಸರಕಾರವು ಮೊನ್ನೆ ಮೊನ್ನೆ ಹೊರಗೆಡವಿದ ಆಸುರೀ ನಿರ್ಬಂಧನೆಯಿಂದುಂಟಾದ ಪರಿಸ್ಥಿತಿಯ ಬಗ್ಗೆ ವಿಚಾರಮಾಡಿನೋಡಿದರೆ ನನಗಂತೂ ಅದು ಪ್ರಚ್ಛನ್ನವಾದ ಅನುಗ್ರಹವೆಂದೇ ತೋರುತ್ತದೆ. ಈ ಪ್ರಸಂಗದಲ್ಲಿ ಬಂಗಾಲವು ಕುಟಿಲರಾದ ಆಳರಸರ ದಬ್ಬಾಳಿಕೆಗೆ ಬೆಚ್ಚಿಬೀಳದೆ ಎದೆಗೊಟ್ಟು ನಿಂತದ್ದನ್ನು ಕಂಡು ಎಲ್ಲರೂ ಅವರ ಬಗ್ಗೆ ಆದರವುಳ್ಳವರಾಗಿರುವರು. ಮತ್ತು ಅವರು ಅನುಭವಿಸುತ್ತಿರುವ ಕಷ್ಟಗಳೂ ನಿಷ್ಫಲವಾಗಿರುವದಿಲ್ಲ. ಯಾಕಂದರೆ ಅದರಿಂದ ದೇಶದೊಳಗಿನ ಎಲ್ಲ ಭಾಗಗಳು ಸಹಾನುಭೂತಿಯಿಂದ ಪ್ರೇರಿತವಾಗಿ ಒಟ್ಟಾಗಲು ಅನುಕೂಲವಾಗಿರುವದು.

ಬಾಂಧವರೇ ನಮ್ಮ ದೇಶವು ಅತ್ಯಂತ ಬಿಕ್ಕಟ್ಟಿನಪರಿಸ್ಥಿತಿಯೊಳಗಿಂದಹಾಯುತ್ತಲಿದೆ. ಬಲಾಢ್ಯವಾದ ಹಿತಾಹಿತಶಕ್ತಿಗಳೆರಡೂ ನಮ್ಮೆದುರಿನಲ್ಲಿರುವವು. ಅನುಪಮವಾದ ಅನುಕೂಲ ಸಂಧಿಗಳೇನೋ ಇರುವದು ನಿಜ. ಆದರೆ ಬುದ್ಧಿಭ್ರಂಶಕರವಾದ ವಿಘ್ನಗಳೂ ವಿಪುಲವಾಗಿರುವವು. ಈ ಕಾಲವು ನಮಗೆ ಅತಿಶಯ ಅನುಕೂಲವಾಗಿಯೂ ಇರುವುದು; ಅನಿಷ್ಟಕರವಾಗಿಯೂ ಇರುವುದು; ಮತ್ತೆ ಇದು ಜಾಣತನದ ಕಾಲವೂ ಆಗಿರುವದು. ಮೂರ್ಖತನದ ಕಾಲವೂ ಆಗಿರುವದು! ಶ್ರದ್ಧೆಯ ಕಾಲವೂ ಇದೇ; ಅಶ್ರದ್ಧೆಯ ಕಾಲವೂ ಇದೆ.

ನಾವು ಎದುರಿಸಬೇಕಾದ ಸದ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ನನ್ನ ಅಭಿಪ್ರಾಯಗಳನ್ನು ನಾನು ವ್ಯಕ್ತಗೊಳಿಸಲುದ್ಯುಕ್ತನಾಗಲೊಲ್ಲೆನು. ಯಾವದೊಂದು ಕಾರ್ಯಕ್ರಮದ ಸಶಾಸ್ತ್ರವಾದ ನಿಯಮಬದ್ಧತೆಯು ಕಾರ್ಯಕರವಾಗಿರದೆ ಅದರ ಬುಡಕ್ಕಿರುವ ಇಚ್ಛಾಶಕ್ತಿಯೇ ಅದರ ಪರಿಪೂರ್ತಿಗೆ ಕಾರಣವಾಗಿರುತ್ತದೆಂದು ಬಹುಕಾಲದಿಂದ ನನ್ನ ನಂಬಿಗೆ. ಬಹುಜನ ಸಮಾಜಕ್ಕೆ ತನ್ನ ಅಂತಃಸಾಮರ್ಥ್ಯದ ಅರಿವು ಹುಟ್ಟಿ ಅವರಲ್ಲಿ ಸ್ವರಾಜ್ಯಲಾಲಸೆಯು ಹುಟ್ಟಬೇಕೆಂದು ನನ್ನ ಬಯಕೆಯಿದೆ. ಈ ಕಾರ್ಯವನ್ನು ನೆರವೇರಿಸುವ ಯಾವ ಕಾರ್ಯಕ್ರಮಕ್ಕಾದರೂ ನನ್ನ ಬೆಂಬಲವಿದೆ. ಇದೇ ಭಾವನೆಯಿಂದ ದಿವಂಗತರಾದ ಲೋಕಮಾನ್ಯರ ಧ್ವಜದ ಕೆಳಗೆ ನಾನು ಕೆಲಸಮಾಡಿರುವೆನು. ಮತ್ತು ಈಗಲಾದರೂ ಆ ಧ್ವಜವನ್ನು ಅಂದಿನಿಂದ ಎತ್ತಿ ಹಿಡಿದ ಮಹಾತ್ಮರ ನೇತೃತ್ವದಲ್ಲಾದರೂ ನನ್ನ ಕರ್ತವ್ಯವನ್ನು ಮಾಡಲೆತ್ನಿಸಿರುವೆನು. ನಮ್ಮಲ್ಲಿ ಐಕ್ಯವೂ, ಸುಶಿಕ್ಷಿತರ ಹಾಗೂ ಸಾಮಾನ್ಯ ಜನತೆಯ ಪ್ರೇಮವಿಶ್ವಾಸಗಳಿಗೆ ಪಾತ್ರನಾದ ನಾಯಕನೂ ಇಲ್ಲದಿದ್ದರೆ ನಮ್ಮ ಮುಂದಿನ ಪ್ರಗತಿಯಾಗುವದು ಅಶಕ್ಯವಾದದ್ದೆಂಬದಕ್ಕೇ ನನ್ನ ಹೇಳಿಕೆಯು. ಸುದೈವದಿಂದ ಈ ಬಗೆಯ ಐಕ್ಯ ಮತ್ತು ನೇತೃತ್ವದ ಮೂರ್ತ ಸ್ವರೂಪರಾದ ಮಹಾತ್ಮಾಜಿಯವರು ನಮಗೆ ಲಭಿಸಿರುವರು. ಮತ್ತು ಅವರ ನೇತೃತ್ವದ ಕೆಳಗೆ ನಾವು ಹಿಂದೆಗೆದ ಹೆಜ್ಜೆಯನ್ನು ಮುಂದಿಟ್ಟು ನಮ್ಮ ಇಷ್ಟವಾದ ಧ್ಯೇಯವಾದರೂ ಬೇಗನೆ ನಮ್ಮ ಕೈವಶದಲ್ಲಿ ಬರುವಂತೆ ಮಾಡಬಲ್ಲೆವು. ಅವರನ್ನು ಅಧ್ಯಕ್ಷರನ್ನಾಗಿ ಆರಿಸಿದ್ದರಲ್ಲಿ ಪ್ರಾಂತಿಕ ಸಮಿತಿಗಳೂ ಮತ್ತು ಸ್ವಾಗತಮಂಡಲವೂ ಕೇವಲ ಕಾಲೋಚಿತವಾದ ಕರ್ತವ್ಯವನ್ನೆ ಮಾಡಿರುವವೆಂಬದರಲ್ಲಿ ಸಂದೇಹವಿಲ್ಲ. ನನ್ನ ಅಂತಃಕರಣವು ಈಗ ತುಂಬಿ ಬರುತ್ತಿರುವದರಿಂದ ಶಬ್ದಗಳಿಂದ ನನ್ನ ಮನೋಭಾವಗಳನ್ನು ಪೂರ್ಣರೀತಿಯಿಂದ ವ್ಯಕ್ತಗೊಳಿಸಲಾರೆನು. ಆದ್ದರಿಂದ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಬೇಕೆಂದು ಮಹಾತ್ಮಾಜಿಯವರನ್ನು ಅತ್ಯಂತ ನಮ್ರನಾಗಿ ಬೇಡಿಕೊಳ್ಳುತ್ತೇನೆ.

ಕೂಡಿದ ರಾಷ್ಟ್ರೀಯ ಸಭಾಧ್ಯಕ್ಷ ಮಹಾತ್ಮಾ ಗಾಂಧಿಯವರ ಭಾಷಣವು.

ಈ ದಿವಸ ನನಗೆ ವಹಿಸಿದ ಬಹುಮಾನದ ಸ್ಥಾನವನ್ನು ನಾನು ಸ್ವೀಕರಿಸಬೇಕೋ ಇಲ್ಲವೋ ಎಂಬುದನ್ನು ಬಹಳ ಯೋಚಿಸಿ ಅನಂತರ ಸ್ವೀಕರಿಸಿದ್ದೇನೆ. ಏಕೆಂದರೆ ಈ ವರ್ಷದ ಬಹುಮಾನ ಸ್ಥಾನವು ಕೀನ್ಯಾ ಮತ್ತು ದಕ್ಷಿಣ ಆಫ್ರಿಕಗಳಲ್ಲಿ ಆಶ್ಚರ್ಯಕರವಾದ ಕೆಲಸಗಳನ್ನು ಮಾಡಿದ ಶ್ರೀಮತಿ ಸರೋಜಿನಿ ನಾಯುಡು ಇವರಿಗೆ ಸಲ್ಲತಕ್ಕದ್ದಾಗಿದ್ದಿತು. ಇವರ ದೈವಸಂಕಲ್ಪವು ಬೇರೆಯಾಗಿಯೇ ಇದೆ. ದೇಶದ ಆಂತರಿಕ ಮತ್ತು ಬಾಹ್ಯ ಸ್ಥಿತಿಗಳು ಈ ಭಾರವನ್ನು ವಹಿಸಲು ನನಗೆ ಅಗತ್ಯಪಡಿಸಿದವು. ತಾವು ನನಗೊಪ್ಪಿಸಿದ ಈ ಭಾರವನ್ನು ವಹಿಸಲು ನನಗೆ ಅಗತ್ಯಪಡಿಸಿದವು ತಾವು ನನಗೊಪ್ಪಿಸಿದ ಈ ಗೌರವದ ಸ್ಥಾನವನ್ನು ಸಾರ್ಥಕಗೊಳಿಸಲು ತಾವು ನನಗೆ ಸಹಾಯ ಮಾಡುವಿರೆಂದು ನಾನು ನಂಬಿದ್ದೇನೆ.

ಈ ವರುಷ ನಮ್ಮ ದೇಶದಲ್ಲಿ ಸಂಭವಿಸಿದ ಶ್ರೀ. ಬಿಯಮ್ಮಾ, ಸರ್ ಆಶುತೋಷ ಮುಕರ್ಜಿ, ಶ್ರೀ ಭೂಪೇಂದ್ರನಾಥ ಬಾಸ, ಡಾ ಸುಬ್ರಹ್ಮಣ್ಯಂ ಅಯ್ಯರ್, ದಿಲ ಬಾಹದ್ದೂರಗಿರಿ, ಇವರ ಮತ್ತು ದಕ್ಷಿಣ ಆಫ್ರಿಕೆಯಲ್ಲೊದಗಿದ ಶ್ರೀ ರುಸ್ತುಮಜಿ, ಶ್ರೀ ಪಿ ಕೆ. ನಾಯುಡು ಇವರ ಶೋಚನೀಯ ಮರಣವನ್ನು ಕುರಿತು ಆರಂಭದಲ್ಲಿ ನಾವು ನಮ್ಮ ವಿಷಾದವನ್ನು ವ್ಯಕ್ತಗೊಳಿಸೋಣ; ಈ ಎಲ್ಲಾ ಕುಟುಂಬದವರಿಗೂ ನಿಮ್ಮ ದುಃಖದಲ್ಲಿ ನಾವು ಭಾಗಿಗಳಾಗಿದ್ದೇವೆಂದು ನಿಮ್ಮ ಪರವಾಗಿ ಆದರಪೂರ್ವಕ ನಾನು ತಿಳಿಸುವೆನು

ಪೂರ್ವ ವೃತ್ತಾವಲೋಕನ.

ರಾಷ್ಟ್ರೀಯ ಸಭೆಗೆ ಈ ಪ್ರಚಲಿತ ರಾಜ್ಯಪದ್ಧತಿಯು ಹಿತಕರವಾದುದೆಂಬ ವಿಷಯದಲ್ಲಿದ್ದ ಮೊದಲಿನ ನಂಬಿಕೆಯು ಹೋಗಿ, ಅದು ದುಃಖ ನಿವಾರಣೆಯ ಸಲುವಾಗಿ ಎರಡು ವರ್ಗಗಳ ಮೂಲಕ ಸರಕಾರವನ್ನು ಬೇಡಿಕೊಳ್ಳುವ ಕೆಲಸವನ್ನು ಬಿಟ್ಟಿತು. ಕ್ರಿ. ಶ. ೧೯೨೦ನೆಯ ಇಸವಿ ಸಪ್ಟೆಂಬರ ತಿಂಗಳಿಂದ ಮುಖ್ಯವಾಗಿ ತನ್ನ ಅಂತಸ್ಥ ಶಕ್ತಿಯನ್ನೇ ವೃದ್ಧಿಗೊಳಿಸುವ ಸಂಸ್ಥೆಯಾಯಿತು. ಸರಕಾರವು ಹಿಂದುಸ್ಥಾನದ ಮುಸಲ್ಮಾನರ ಸಂಗಡ ವಿಶ್ವಾಸಘಾತದಿಂದ ವರ್ತಿಸಿದ ಕಾರಣ, ಅದರ ವಿಷಯದಲ್ಲಿದ್ದ ಜನರ ವಿಶ್ವಾಸಕ್ಕೆ ಮೊದಲು ಭಂಗವುಂಟಾಯಿತು. ರೌಲೇಟ ಶಾಸನದಿಂದಲೂ ಜಾಲಿಯನ್‌ವಾಲಾಬಾಗದ ಕೊಲೆಯಲ್ಲಿ ಕೊನೆಗೊಂಡ ಓಡ್ವಾಯರ್ ಶಾಹಿಯಿಂದಲೂ ಜನರ ಕಣ್ಣುಗಳು ತೆರೆದು ಅವರಿಗೆ ಈ ಪದ್ಧತಿಯ ನಿಜಸ್ವರೂಪವು ಚನ್ನಾಗಿ ವ್ಯಕ್ತವಾಯಿತು. ಮತ್ತು ಈ ರಾಜ್ಯಪದ್ಧತಿಯ ಅಸ್ತಿತ್ವವು, ಜನರು ತಿಳಿದೋ ಅಥವಾ ತಿಳಿಯದೆಯೋ, ಮನಃಪೂರ್ವಕವಾಗಿಯೋ ಇಲ್ಲವೆ ಒತ್ತಾಯದಿಂದಲೋ, ಸರಕಾರಕ್ಕೆ ಮಾಡುವ ಸಹಕಾರವನ್ನೇ ಅವಲಂಬಿಸಿದೆಯೆಂದು ಜನರಿಗೆ ಆ ಕಾಲದಲ್ಲಿಯೇ ಮನವರಿಕೆಯಾಯಿತು. ಆದಕಾರಣ ಈ ರಾಜ್ಯ ಪದ್ಧತಿಯನ್ನು ಸುಧಾರಿಸಬೇಕು; ಇಲ್ಲವೆ ನಾಶಮಾಡಬೇಕೆಂದು ಯೋಚಿಸಿ, ಸರಕಾರಕ್ಕೆ ಮನಃಪೂರ್ವಕವಾದ ಯಾವ ವಿಧದ ಸಹಕಾರವನ್ನೂ ಮಾಡಕೂಡದೆಂದು ಜನತೆಯು ನಿರ್ಧರಿಸಿ, ೧೯೨೦ನೆ ಇಸವಿಯ ಕಲ್ಕತ್ತಾ ಮಹಾಸಭೆಯ ವಿಶೇಷ ಅಧಿವೇಶನದಲ್ಲಿ ಸರಕಾರದ ಪದವಿಗಳನ್ನೂ ನ್ಯಾಯಸ್ಥಾನಗಳನ್ನೂ, ಕಾಯಿದೆ ಕೌನ್ಸಿಲುಗಳನ್ನೂ ಮತ್ತು ವಿದೇಶೀ ವಸ್ತ್ರಗಳನ್ನೂ ಬಹಿಷ್ಕರಿಸಬೇಕೆಂದು ನಿರ್ಣಯಿಸಿತು. ಈ ಎಲ್ಲಾ ಬಹಿಷ್ಕಾರಗಳೂ ಕೆಲವು ಮಟ್ಟಿಗೆ ಆಯಾ ಜನರಿಂದ ಸ್ವೀಕರಿಸಲ್ಪಟ್ಟವು. ಆದರೆ ಹಾಗೆ ಮಾಡಲು ಇಷ್ಟವಿಲ್ಲದವರು ಮತ್ತು ಸಾಮರ್ಥ್ಯವಿಲ್ಲದವರು ರಾಷ್ಟ್ರೀಯ ಸಭೆಯಿಂದ ಪ್ರತ್ಯೇಕವಾದರು. ಈ ಅಸಹಯೋಗ ಚಳವಳಿಯ ಉತ್ಕರ್ಷಾಪಕರ್ಷಗಳ ವಿವೇಚನೆಯನ್ನು ಮಾಡುವದು ನನ್ನ ಉದ್ದೇಶವಲ್ಲ. ಈ ಬಹಿಷ್ಕಾರಗಳಲ್ಲಿ ಒಂದಾದರೂ ಸಂಪೂರ್ಣ ಯಶಸ್ವಿಯಾಗದಿದ್ದರೂ, ಬಹಿಷ್ಕೃತವಾದ ಪ್ರತಿಯೊಂದು ಸಂಸ್ಥೆಯ ಪ್ರತಿಷ್ಠೆಗೂ ಕೊರತೆಯುಂಟಾಯಿತೆಂಬುದೇನೋ ನಿಸ್ಸಂದೇಹವಾದ ಮಾತಾಗಿದೆ.

ಈ ಬಹಿಷ್ಕಾರಗಳಲ್ಲಿ ಬಹು ಮಹತ್ವವಾದ ಬಹಿಷ್ಕಾರವೆಂದರೆ ಹಿಂಸೆಯ ಬಹಿಷ್ಕಾರವು. ಒಂದು ಸಮಯದಲ್ಲಿ ಅದು ಸಂಪೂರ್ಣ ಯಶಸ್ವಿಯಾದಂತೆ ತೋರಿತು. ಆದರೆ ಈ ಅಹಿಂಸೆಯು ಅಸಹಾಯ ಸ್ಥಿತಿಯ ಮೂಲಕ ತೋರಿಕೆಗಾಗಿ ಉಂಟಾದದ್ದಾಗಿತ್ತೇ ವಿನಾ ಸಾಮರ್ಥ್ಯದ್ಯೋತಕವಾದ ಉತ್ಕೃಷ್ಟತರಗತಿಯ ಅಹಿಂಸೆಯಾಗಿರಲಿಲ್ಲವೆಂಬುದು ಸ್ವಲ್ಪಾವಧಿಯಲ್ಲಿಯೇ ಗೊತ್ತಾಯಿತು. ಆದರಿಂದ ಅಸಹಯೋಗವನ್ನು ಅಂಗೀಕರಿಸಿದ್ದವರ ವಿಷಯದಲ್ಲಿ ಅಸಹಿಷ್ಣುತೆಯು ತಲೆದೋರಿತು. ಇದು ಸೂಕ್ಷ್ಮತರವಾದ ಹಿಂಸೆಯೇ ಸರಿ. ಇದೊಂದು ದೊಡ್ಡ ದೋಷವು. ಇವೆಲ್ಲವುದ್ದು ನಿಜವಾಗಿದ್ದರೂ ಈ ಅಹಿಂಸೆಯ ಚಳವಳಿಯಿಂದ ಪ್ರತ್ಯಕ್ಷವಾದ ಹಿಂಸಾಪ್ರವೃತ್ತಿಗೆ ತಡೆಯುಂಟಾಯಿತೆಂದು ನಾನು ಖಂಡಿತವಾಗಿಯೂ ಹೇಳುವೆನು. ಅಹಿಂಸಾತ್ಮಕ ಅಸಹಯೋಗವು ಅಸ್ತಿತ್ವದಲ್ಲಿ ಇರದೇ ಇದ್ದಿದ್ದರೆ, ಪ್ರತ್ಯಕ್ಷವಾದ ಹಿಂಸೆಯು ನಿಶ್ಚಯವಾಗಿಯೂ ಉಂಟಾಗುತ್ತಿದ್ದಿತು. ಈ ಅಹಿಂಸಾತ್ಮಕ ಅಸಹಯೋಗದಿಂದ ಜನರಲ್ಲಿ ತಮ್ಮ ಸಾಮರ್ಥ್ಯದ ಬಗ್ಗೆ ಅರಿವುಂಟಾಯಿತೆಂದು ನಾನು ದೃಢವಾಗಿ ನಂಬಿದ್ದೇನೆ. ಇದು ಕ್ಲೇಶಗಳನ್ನು ಸಹಿಸಿ ಅನ್ಯಾಯ ಪ್ರತೀಕಾರ ಮಾಡುವ ಜನರಲ್ಲಿಯ ಗೂಢಶಕ್ತಿಯನ್ನು ಜಾಗ್ರತಗೊಳಿಸಿತು. ಮತ್ತು ಯಾವ ಉಪಾಯಗಳಿಂದಲೂ ಉಂಟಾಗದಂತಹ ಜಾಗೃತಿಯನ್ನು ಇದು ಜನಾಂಗದಲ್ಲಿ ಹುಟ್ಟಿಸಿತು.

ಅಹಿಂಸಾತ್ಮಕ ಅಸಹಯೋಗದಿಂದ ನಮಗೆ ಸ್ವರಾಜ್ಯವು ದೊರೆಯಲಿಲ್ಲ. ಆದರಿಂದ ಕೆಲವು ಶೋಚನೀಯವಾದ ಸಂಗತಿಗಳು ಸಂಭವಿಸಿವೆ. ನಾವು ಬಹಿಷ್ಕರಿಸಬೇಕೆಂದಿರುವ ಸಂಸ್ಥೆಗಳೆಲ್ಲವೂ ಚನ್ನಾಗಿ ನಡೆದಿವೆ. ಹೀಗಿದ್ದರೂ ಸ್ವರಾಜ್ಯ ಸಂಪಾದನೆಗೆ ಅಹಿಂಸಾತ್ಮಕ ಅಸಹಯೋಗವು ಸಾಧನವಾಗಿದೆಯೆಂಬ ತಿಳುವಳಿಕೆಯು ಜನರ ಅಂತಃಕರಣದಲ್ಲಿ ದೃಢಮೂಲವಾಗಿದೆಯೆಂದೂ ಅದಕ್ಕೆ ದೊರೆತ ಅಲ್ಪಸ್ವಲ್ಪ ಯಶಸ್ಸಿನಿಂದ ಸ್ವರಾಜ್ಯವು ನಮಗೆ ಸಮೀಪವಾಗಿದೆಯೆಂದೂ ನನ್ನ ನಮ್ರವಾದ ಅಭಿಪ್ರಾಯ. ಒಂದು ಧ್ಯೇಯದ ಸಲುವಾಗಿ ಕ್ಲೇಶವನ್ನು ಅನುಭವಿಸುವ ಸಾಮರ್ಥ್ಯವು ಹೆಚ್ಚಾದಂತೆ ಆ ಧ್ಯೇಯದ ಸಿದ್ಧಿಯಾದರೂ ಸುಲಭವಾಗುತ್ತ ಹೋಗುತ್ತದೆ.

ತಡೆ.

ಆದರೆ ಈ ಒದಗಿದ ವಿಲಕ್ಷಣ ಪರಿಸ್ಥಿತಿಯ ಮೂಲಕ ನಾವು ಈ ಚಳವಳಿಯನ್ನು ತಡೆಯಬೇಕಾಗಿದೆ. ಕೆಲವರು ಅಸಹಯೋಗದಲ್ಲಿ ಸಂಪೂರ್ಣ ವಿಶ್ವಾಸವುಳ್ಳವರಾಗಿದ್ದರೂ ಈ ಚಳವಳಿಯಲ್ಲಿರುವ ಬಹುಜನರು ವಿದೇಶೀ ವಸ್ತ್ರಗಳ ಬಹಿಷ್ಕಾರದ ವಿನಾ ಇನ್ನುಳಿದ ಬಹಿಷ್ಕಾರಗಳಲ್ಲಿ ನಂಬಿಗೆಯುಳ್ಳವರಾಗಿಲ್ಲ. ಎಷ್ಟೋ ಜನ ವಕೀಲರು ಪುನಃ ವಕೀಲಿಯನ್ನು ಮಾಡಲು ಪ್ರಾರಂಭಿಸಿದ್ದಾರೆ. ವಕೀಲಿ ಮಾಡುವದನ್ನು ಬಿಟ್ಟದ್ದಕ್ಕಾಗಿ ಕೆಲವರಿಗಂತೂ ಪಶ್ಚಾತ್ತಾಪವಾಗುತ್ತಲಿದೆ. ಕೌನ್ಸಿಲುಗಳಿಗೆ ಬಹಿಷ್ಕಾರ ಹಾಕಿದ ಎಷ್ಟೋ ಜನರು ಪುನಃ ಕೌನ್ಸಿಲುಗಳಲ್ಲಿ ಸೇರಿರುವರು. ಕೌನ್ಸಿಲ ಪ್ರವೇಶವು ಅವಶ್ಯಕವೆಂದು ನಂಬುವವರ ಸಂಖ್ಯೆಯು ಹೆಚ್ಚುತ್ತಲಿದೆ. ಶಾಲೆ ಕಾಲೇಜುಗಳನ್ನು ಬಿಟ್ಟ ಸಾವಿರಾರು ವಿದ್ಯಾರ್ಥಿಗಳು ತಮ್ಮ ಕೃತಿಯ ಬಗ್ಗೆ ಪಶ್ಚಾತ್ತಾಪಗೊಂಡು ಪುನಃ ಅವುಗಳಲ್ಲಿ ಪ್ರವೇಶಿಸಲು ಪ್ರಯತ್ನಿಸಿದ್ದಾರೆ. ಸರಕಾರೀ ಶಾಲೆಗಳಿಗೂ ಕಾಲೇಜುಗಳಿಗೂ ಹೋಗಲಿಚ್ಛಿಸುವ ಎಲ್ಲ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯುವದು ಕಠಿಣವಾಗಿದೆ ಎಂದು ನನಗೆ ತಿಳಿದಿದೆ. ಈ ಚಳವಳಿಗೆ ಪ್ರತ್ಯಕ್ಷ ಸಂಬಂಧಿಸಿದ ಮೇಲಿನ ಎಲ್ಲಾ ತರದ ಜನರನ್ನು ರಾಷ್ಟ್ರೀಯ ಸಭೆಯು ಬಿಟ್ಟು ನಡೆಯಲು ಸಿದ್ಧವಾದ ವಿನಾ, ಈಗಿನ ಪರಿಸ್ಥಿತಿಯಲ್ಲಿ ಈ ಎಲ್ಲಾ ಬಹಿಷ್ಕಾರಗಳು ರಾಷ್ಟ್ರೀಯ ಕಾರ್ಯಗಳೆಂದು ಸಾಗಿಸಲ್ಪಡಲಾರವು. ಅಸಹಯೋಗಿಗಳನ್ನು ಹೊರಗಿಡುವದು ಎಷ್ಟು ಅವ್ಯವಹಾರ್ಯವಾಗಿದೆಯೋ, ಅಷ್ಟೇ ಈ ಮೇಲಿನ ಜನರನ್ನು ಹೊರಗಿಡುವದೂ ಅವ್ಯವಹಾರ್ಯವಾದುದಾಗಿದೆಯೆಂದು ನಾನು ತಿಳಿಯುತ್ತೇನೆ. ಆದಕಾರಣ ಒಬ್ಬರನ್ನೊಬ್ಬರು ದೂಷಿಸದೆ ಒಬ್ಬರ ಗೊಡವೆಗೆ ಮತ್ತೊಬ್ಬರು ಹೋಗದೆ ಉಭಯ ಪಕ್ಷದವರೂ ರಾಷ್ಟ್ರೀಯ ಸಭೆಯಲ್ಲಿ ಸೇರಿರುವದೇ ಅವಶ್ಯಕವಾದುದಾಗಿದೆ. ಹಿಂದು ಮುಸಲ್ಮಾನರಲ್ಲಿ ಐಕ್ಯವಾಗುವದು ಎಷ್ಟು ಅವಶ್ಯಕವೋ, ಅಷ್ಟೇ ರಾಜಕೀಯ ಬೇರೆ ಬೇರೆ ಪಕ್ಷಗಳಲ್ಲಿಯೂ ಅಗತ್ಯವಿದೆ. ನಾವು ಪರಸ್ಪರ ಬಗ್ಗೆ ಸಹಿಷ್ಣುತೆಯುಳ್ಳವರಾಗಿ ಅನ್ಯ ಪಕ್ಷದವರು ನಮ್ಮ ಪಕ್ಷಕ್ಕೆ ಬರುವ ವರೆಗೆ ನಾವು ಕಾಲವನ್ನು ನಿರೀಕ್ಷಿಸಬೇಕು. ಇಷ್ಟೇ ಅಲ್ಲ ರಾಷ್ಟ್ರೀಯ ಸಭೆಯಿಂದ ದೂರ ನಿಂತ ಲಿಬರಲ್ ಪಕ್ಷದವರನ್ನು ಮತ್ತು ಇತರ ಪಂಗಡದವರನ್ನು ರಾಷ್ಟ್ರೀಯ ಸಭೆಯಲ್ಲಿ ಪುನಃ ಬಂದು ಸೇರಲು ಪ್ರಾರ್ಥಿಸಿಕೊಳ್ಳಬೇಕು. ಅಸಹಯೋಗವನ್ನು ನಿಲ್ಲಿಸುವದರಿಂದ ರಾಷ್ಟ್ರೀಯ ಸಭೆಯ ಹೊರಗಿರಲು ಅವರಿಗೆ ಯಾವ ಕಾರಣವೂ ಇಲ್ಲದಂತಾಗಿದೆ. ಈ ಮಹಾಸಭೆಯ ಪಕ್ಷದವರಾದ ನಾವೇ ಅವರ ಸಂಗಡ ಮೊದಲು ಸಂಧಾನವನ್ನಾರಂಭಿಸಬೇಕು. ಮಹಾಸಭೆಯಲ್ಲಿ ಸೇರಲು ನಾವು ಅಂತಃಕರಣಪೂರ್ವಕವಾಗಿ ಅವರಲ್ಲಿ ಹೇಳಿಕೊಳ್ಳಬೇಕು. ಮತ್ತು ಒಳಗೆ ಬರಲು ಅವರಿಗೆ ಅನುಕೂಲಪಡಿಸಿ ಕೊಡಬೇಕು. ನಾನು ಸ್ವರಾಜ್ಯ ಪಕ್ಷದೊಡನೆ ಸಂಧಾನವನ್ನೇಕೆ ನಡೆಸಿದೆನೆಂಬುದು ತಮಗೀಗ ತಿಳಿಯಬಹುದು.

ವಿದೇಶೀ ವಸ್ತ್ರಗಳ ಬಹಿಷ್ಕಾರದ ಅವಶ್ಯಕತೆ.

ಒಂದೇ ಬಹಿಷ್ಕಾರವು ಉಳಿದಿದೆಯೆಂಬುದು ನಿಮಗೆ ತಿಳಿದೇ ಇದೆ. ಒಬ್ಬ ಇಂಗ್ಲೀಷ ಮಿತ್ರನ ಅಭಿಪ್ರಾಯವನ್ನು ಮನ್ನಿಸಿ 'ಬಹಿಷ್ಕಾರ' ಎಂಬ ಶಬ್ದವನ್ನು ತೆಗೆದುಹಾಕಿ ಅದಕ್ಕೆ ಪ್ರತಿಯಾಗಿ "ವಿದೇಶೀ ವಸ್ತ್ರಗಳನ್ನು ಧರಿಸಲು ಸಮ್ಮತಿಸಬಾರದು." ಎಂಬ ಶಬ್ದಗಳು ಒಪ್ಪಿಗೆಯ ಪತ್ರಿಕೆಯಲ್ಲಿ ಪ್ರಯೋಗಿಸಲ್ಪಟ್ಟವು. 'ಬಹಿಷ್ಕಾರ' ಎಂಬ ಶಬ್ದವು ಕೆಲವರಿಗೆ ಕಟುವಾಗಿದೆಯೆಂಬುದೇನೋ ನಿಜ. ಆದರಿಂದ ಅದರ ಉದ್ದೇಶವು ಸ್ಪಷ್ಟವಾಗುತ್ತದೆ. ನಾನು ಇಂಥ ಅರ್ಥದಲ್ಲೇನೂ ಈ ಶಬ್ದವನ್ನು ಪ್ರಯೋಗಿಸುವ ಉದ್ದೇಶವುಳ್ಳವನಾಗಿರಲಿಲ್ಲ. ಈ ಬಹಿಷ್ಕಾರವು ಬ್ರಿಟಿಷ್ ವಸ್ತುಗಳ ಬಹಿಷ್ಕಾರವಲ್ಲ. ಆದರೆ ಅದು ವಿದೇಶೀ ವಸ್ತ್ರಗಳ ಬಹಿಷ್ಕಾರವು. ಈ ಬಹಿಷ್ಕಾರವು ನ್ಯಾಯವಾದುದಾಗಿರುವದಲ್ಲದೆ ನಮ್ಮ ಕರ್ತವ್ಯದ್ದಾಗಿಯೂ ಇದೆ. ಹಿಂದುಸ್ಥಾನದ ನದಿಗಳ ನೀರಿಗೆ ಪ್ರತಿಯಾಗಿ ವಿದೇಶಗಳ ನೀರನ್ನು ತಂದುಕೊಟ್ಟರೆ, ಅದನ್ನು ಬಹಿಷ್ಕರಿಸುವದು ಹೇಗೆ ನಮ್ಮ ಕರ್ತವ್ಯವಾಗದೆಯೋ ಹಾಗೆಯೇ ವಿದೇಶೀ ವಸ್ತ್ರಗಳನ್ನು ಬಹಿಷ್ಕರಿಸುವದೂ ನಮ್ಮ ಕರ್ತವ್ಯವಾಗಿದೆ. ಇದೇನೋ ವಿಷಯಾಂತರವಾಯಿತು.

ನಾವು ಮಾಡಿಕೊಂಡ ಒಡಂಬಡಿಕೆಯಿಂದ ವಿದೇಶೀ ವಸ್ತ್ರಗಳ ಬಹಿಷ್ಕಾರವು ಉಳಿದಿರುವದಲ್ಲದೆ, ಅದಕ್ಕೆ ಹೆಚ್ಚು ಪ್ರೋತ್ಸಾಹವು ದೊರಕಿದೆಯೆಂದು ಹೇಳುವದೇ ನನ್ನ ಉದ್ದೇಶವು. ಹಿಂಸಾತ್ಮಕವಾದ ಎಲ್ಲ ಉಪಾಯಗಳಿಗೆ ಪ್ರತಿಯಾಗಿ ಇದು ಅತ್ಯಂತ ಸರಳವಾದ ಕಾರಿಯಾದ ಉಪಾಯವೆಂದು ನಾನು [illegible] ಮನಸ್ಸನ್ನು [illegible] ಕಾರಣವಾಗುವ ಅಪಶಬ್ದಗಳೂ, ಉದ್ವೇಗಕರವಾದ [illegible]ಗಳೂ, ಸುಳ್ಳೂ, ಇವುಗಳೆಲ್ಲಾ ಹಿಂಸೆಯ ಲಕ್ಷಣಗಳಾಗುವಂತೆಯೇ ವಿನಯ, ಸದಾಚಾರ ಸತ್ಯ, ಪ್ರೇಮ ಮೊದಲಾದವುಗಳು ಅಹಿಂಸೆಯ ಲಕ್ಷಣಗಳೆಂದೇ ನಾನು ತಿಳಿದಿದ್ದೇನೆ. ಪರರನ್ನು ಒತ್ತಾಯದಿಂದ [illegible] ಹಿಂಸಾತ್ಮಕವಾದ ಕೃತ್ಯದ ಉದ್ದೇಶವು. [illegible] ಹುಟ್ಟಿದ [illegible] ವಸ್ತ್ರವು [illegible] ಹಿಂಸಾತ್ಮಕ ಕೃತ್ಯಗಳಿಂದ ಅಹಿಂಸಾತ್ಮಕ ಕೃತ್ಯಗಳು ಹೆಚ್ಚು ಪರಿಣಾಮಕಾರಿಯಾದವುಗಳೆಂದು ನಾನು ನಂಬಿದ್ದೇನೆ. ಆದರೆ, ಅಹಿಂಸಾತ್ಮಕವಾದ [illegible] ಉಂಟಾಗುವದು. ವಿದೇಶೀ ವಸ್ತ್ರಗಳ ಬಹಿಷ್ಕಾರವಾದರೂ ಈ ಬಗೆಯ [illegible]. ನಮಗೆ ಬೇಕಾಗುವ ವಸ್ತ್ರಗಳ ಬಹುಭಾಗವು ಪರದೇಶದಿಂದ ಬರುತ್ತದೆ. ಪರದೇಶದಿಂದ ಬರುವ ಪದಾರ್ಥಗಳಲ್ಲಿ ವಸ್ತ್ರವೇ ಹೆಚ್ಚಿನದಾಗಿದೆ. ಇದರ ತರುವಾಯ ಹೆಚ್ಚಾಗಿ ಬರತಕ್ಕ ಪದಾರ್ಥವಾವುದೆಂದರೆ, ಸಕ್ಕರೆಯು. ಹಿಂದುಸ್ಥಾನವು ಲ್ಯಾಂಕಶಾಯರದ ಸಂಗಡ ನಡೆಸುವ ವ್ಯಾಪಾರದಲ್ಲಿ ಬ್ರಿಟಿಷರ ಹಿತ ಸಂಬಂಧವು ಅಡಕವಾಗಿದೆ. ಹಿಂದುಸ್ಥಾನದ ಬಡತನವನ್ನು ನಾಶಗೊಳಿಸಿ ಈ ದೇಶದಲ್ಲಿ ಬಂದೇ ಬಿಡಾಗಿದ್ದ ಉಪವೃತ್ತಿಯನ್ನು ನಷ್ಟಪಡಿಸಿ ಭಾರತೀಯರು ನಿರುದ್ಯೋಗಿಗಳಾಗಿ ಕಾಲಕಳೆಯುವಂತೆ ಮಾಡಲು ಎಲ್ಲಾ ಕಾರಣಗಳಿಗಿಂತಲೂ ಇದೇ ಪ್ರಬಲವಾದ ಕಾರಣವಾಗಿದೆ. ಆದಕಾರಣ ಹಿಂದುಸ್ಥಾನವು ಬದುಕಿ ಬಾಳಬೇಕಾದರೆ ವಿದೇಶೀ ವಸ್ತ್ರಗಳ ಬಹಿಷ್ಕಾರವು ಅತ್ಯವಶ್ಯಕವಾಗಿದೆ. ಈ ಬಹಿಷ್ಕಾರವು ಕೇವಲ ಅಗ್ಗವಾಗಿಯೂ ಅಂದವಾಗಿಯೂ ಮತ್ತು ನಯವಾಗಿಯೂ ಇರುವ ಬಟ್ಟೆಗಳನ್ನು ಬಳಸಿ ತೆಗೆದುಕೊಂಡಂತೆ ಅವನ ಮನಸ್ಸನ್ನು ತಿರುಗಿಸುವದಕ್ಕೋಸ್ಕರ ಪ್ರಾರಂಭಿಸಲ್ಪಟ್ಟಿಲ್ಲ. ಆದರೆ ಬಡತನವನ್ನು [illegible] ಕಾಲವಾಗ ಹತ್ತಿಯನ್ನು ಹಿಂಜುವ ಮತ್ತು ನೂಲುವ ಕೆಲಸಗಳನ್ನು ಮಾಡಿ ತಮ್ಮ ನೂಲನ್ನು ಹಳ್ಳಿಯ ನೇಕಾರರಿಂದ ನೇಯಿಸಿಕೊಂಡು, ಅಂಥ ಖಾದಿಯನ್ನೇ ಧರಿಸುತ್ತಾ ವಿದೇಶೀ ವಸ್ತ್ರಗಳನ್ನಾಗಲೀ ಅಥವ ಹಿಂದುಸ್ಥಾನದ ಗಿರಣಿಗಳಲ್ಲಾದ ಬಟ್ಟೆಗಳನ್ನಾಗಲೀ ಕೊಂಡುಕೊಳ್ಳದೆ ತಮ್ಮ ಹಣವನ್ನು ತಮ್ಮಲ್ಲಿಯೇ ಉಳಿಸಿಕೊಳ್ಳಬೇಕೆಂದೇ ಈ ಬಹಿಷ್ಕಾರವನ್ನು ಪ್ರಾರಂಭಿಸಿದ್ದಾಗಿದೆ. ಬಡತನವನ್ನು ಹೊಂದುವವರ ಹಣವು ಈ ಕೈನೂಲು ಮತ್ತು ಕೈ ಮಗ್ಗಗಳ ಸಹಾಯದಿಂದ ಉಳಿಯುವದಲ್ಲದೆ, ಕೆಲಸಗಾರರಿಗೆ ಶ್ರೇಷ್ಠತರವಾದ ಸಮಾಜ ಸೇವೆಯನ್ನು ಮಾಡಲು ಅವಕಾಶ ದೊರೆಯುವದು. ಇದರಿಂದ ಬಡತನದವರ ಸಂಗಡ ನಮಗೆ ಪ್ರತ್ಯಕ್ಷ ಸಂಬಂಧವುಂಟಾಗಿ ಅವರಿಗೆ ರಾಜಕೀಯ ಶಿಕ್ಷಣಕೊಡಲು ನಮಗೆ ಅನುಕೂಲವಾಗುವದಲ್ಲದೆ, ಅವರನ್ನು ಸ್ವಾವಲಂಬಿಗಳನ್ನಾಗಿಯೂ ಸಮರ್ಥರನ್ನಾಗಿಯೂ ಮಾಡಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ, ಖಾದಿಯ ಕೆಲಸವು ಸಹಕಾರಿ ಸಂಘ ಅಥವ ಬೇರೆಯಾವ ಗ್ರಾಮಸಂಸ್ಥೆಗಳಿಗಿಂತಲೂ ಎಷ್ಟೋ ಪಟ್ಟು ಹೆಚ್ಚು ಫಲಕಾರಿಯಾಗಿರುವದೆಂಬುದು ಗೊತ್ತಾಗುತ್ತದೆ. ಈ ಖಾದೀ ಕೆಲಸದಿಂದ ಶ್ರೇಷ್ಠತರದ ರಾಜಕೀಯ ಪರಿಣಾಮಗಳೂ ಉಂಟಾಗುವವು. ಏಕೆಂದರೆ, ಬ್ರಿಟನ್ನದ ಮಾರ್ಗದಲ್ಲಿಯ ಅತ್ಯಂತ ಅನೀತಿಕರವಾದ ಮೋಹವನ್ನು ಅದು ದೂರಮಾಡುತ್ತದೆ. ಲ್ಯಾಂಕಶಾಯರದ ವ್ಯಾಪಾರವು ಅನೀತಿಕರವಾದುದೆಂಬುದಕ್ಕೆ ಕಾರಣವೇನೆಂದರೆ, ಹಿಂದುಸ್ಥಾನದ ಅ[illegible] ಸರ್ವನಾಶದಿಂದಲೇ ಈ ವ್ಯಾಪಾರವು ಉದ್ಭವಿಸಿ, ಅದರಿಂದಲೇ ಬೆಳವಣಿಗೆಯನ್ನು ಹೊಂದಿದೆ. ಒಂದು ಅನೀತಿಯು ಮತ್ತೊಂದು ಅನೀತಿಯನ್ನು ಹುಟ್ಟಿಸುವದರಿಂದ, ಎಷ್ಟೋ ಪ್ರತ್ಯಕ್ಷವಾಗಿರುವ ಬ್ರಿಟಿಶರ ದುಷ್ಕೃತ್ಯಗಳು ಈ ಅನೀತಿಕರವಾದ ವ್ಯಾಪಾರದಿಂದಲೇ ಹುಟ್ಟಿರುವದನ್ನು ತೋರಿಸಬಹುದು. ಆದುದರಿಂದ ಹಿಂದುಸ್ಥಾನವು ಸ್ವಯಂ ಪ್ರೇರಣೆಯಾದ ಪ್ರಯತ್ನಗಳಿಂದ ಬ್ರಿಟನ್ನದ ಮಾರ್ಗದಲ್ಲಿರುವ ಈ ಮಹಾ ಮೋಹ ಬಂಧನ ತೆಗೆದು ಹಾಕಿದರೆ ಇದರಿಂದ ಹಿಂದುಸ್ಥಾನಕ್ಕೆ ಹಿತವಾಗುವದಲ್ಲದೆ, ಬ್ರಿಟನ್ನಕ್ಕೂ ಹಿತವಾಗುವದು. ಬ್ರಿಟಿಶ ರಾಷ್ಟ್ರವು ಜಗತ್ತಿನಲ್ಲಿ ಪ್ರಮುಖವಾದ ಸಾಮ್ರಾಜ್ಯವಾಗಿರುವದರಿಂದ, ಇದರ ಮೂಲಕ ಜಗತ್ತಿನ ಜಾತಿಗಾದರೂ ಕ್ಷೇಮವಾಗುವದು. "ಮೊದಲು ಅವೇ[illegible] ಸುಂದರ ಪ್ರಾರ್ಥನೆ" ಎಂಬ ತತ್ವವು ನನಗೆ ಒಪ್ಪಿಗೆಯಿಲ್ಲ. ನ್ಯಾಯವಾದವುಗಳನ್ನು ರಕ್ಷಿಸುವ [illegible] ಯಿಂದಲೂ ಜನರಲ್ಲಿ ಅಪೇಕ್ಷೆಗಳನ್ನುಂಟುಮಾಡು[illegible]. ವ್ಯಕ್ತಿಯಂತೆ ರಾಷ್ಟ್ರವಾದರೂ ನೀತಿ ಬಂಧನವನ್ನು ಪಾಲಿಸಬೇಕೆಂದಿದ್ದರೆ, ಯಾವ ಅಪೇಕ್ಷೆಗಳನ್ನು ಅದು ಪೂರ್ಣಗೊಳಿಸಬೇ

(ಇದರ ಶೇಷ 6ನೇ ಪುಟದಲ್ಲಿ ಮುದ್ರಿಸಿದೆ)

ಬರಹಗಾರರಿಗೆ ರೂ. ೫೦೦ ಬಹುಮಾನ

" ಹಾದಿಸೀಸ್ವರಾಜ್ಯದ ಪ್ರಾಪ್ತ್ಯಹಾದಿ ... ವಿಷಾ ರದಲ್ಲಿ ಸುಮಾರು ೪೫೦೦ ಶಬ್ದಗಳೊಳಗೆ ಬಿಳಿಗನ್ನಡ ಭಾಷೆ ಯಲ್ಲಿ ... ಹಳ್ಳಿಹಳ್ಳಿ ಜನರಿಗೂ ಓದು ವುದಕ್ಕೆ ಅನುಕೂಲವಾಗುವಂತ ಒಂದು ನಿಬಂಧವು ಬೇಕು ಇದು ಆರ್ಥಿಕ, ಆಧ್ಯಾತ್ಮಿಕ ಔದ್ಯೋಗಿಕ, ಸಾಮಾಜಿಕ ಮತ್ತು ರಾಜಕೀಯ ದೃಷ್ಟಿಗಳಿಂದ ಅರ್ಥಗರ್ಭಿತವಾಗಿಯೂ ಸರಸವೂ ಸರಳವೂ ಆವೇಶಯುಕ್ತವೂ ಆಗಿದ್ದು ... ಯೇ ಇದರಲ್ಲಿ ... ಸಿದ್ಧಾಂತಗಳೂ ... ಸ್ಪಷ್ಟವಾಗಿ ... ನಿಶ್ಚಿತವಾದ ... ಅಭಿಲಾಷೆಯುಳ್ಳ ಬರಹಗಾರರು ತಮ್ಮ ನಿಬಂ ಧಗಳನ್ನು ... [illegible] ... ಗೆ ಕಳುಹಿಸಬೇಕು ... ಬಂದ ನಿಬಂ ಧಗಳನ್ನು ... ಪರೀಕ್ಷಿಸಲ್ಪಟ್ಟು ... ಗ ಮೇಲ್ಕಂಡ ರೂ ೫೦೦ ಬಹುಮಾನ ಕೊಡಲ್ಪಡುವ ದು ... ಬರಹಗಾರರ ... [illegible]

[illegible] son of [illegible] Holder SULLIA ... S. KANARA

[illegible]

ವರ್ತಮಾನ ಸಂಗ್ರಹ.

ಒಳದೇಶ.

ಈ ತಾರೀಕು ೪ರಲ್ಲಿ ಮಡಿಕೇರಿಯಲ್ಲಿರುವ ಕೊಡವರು ಸೇರಿ ... ಒಂದು ... ಸಭೆ ನಡೆಯಿತು ... [illegible] ... ಮಡಿಕೇರಿಯಲ್ಲಿರುವ ಕೊಡವರೆಲ್ಲರೂ ... [illegible]

[illegible]

ಹಾಸ್ಯ ಆ ... ಹೋದ ಕೇ... [illegible] ... ಅವರಿಗೆ ಕೆಲಸಕೊಟ್ಟಿರುವರು

ಡಿಸ್ಟ್ರಿಕ್ಟು ಬೋರ್ಡ್ ಎಲೆಕ್ಷನ್ ಇದೇ ತಾರೀಕು ೭೩ರ ದಿನ ನಡೆಯಲಿಕ್ಕಿರುವದು

[illegible] ... ತಾರೀಕು ೨೦ರಿಂದ ... ಪ್ರಾರಂಭವಾ ಗತಕ್ಕದ್ದು ... [illegible]

... ನಮ್ಮ ... [illegible] ... ಪ್ರಕಟಿಸ ... [illegible]

ಒಳದೇಶ.

[illegible]

ಗಾಂಧಿಯವರು ಪ್ರಕಟಿಸುವರು

... ನಡೆದ ಮದ್ರಾಸು ಪ್ರಾಂತಿಕ ... ಸಭೆಯಲ್ಲಿ ಮೌಲಾನ ಶೌಕತ್ ಅಲಿಯವ ರು ಅಧ್ಯಕ್ಷರಾಗಿದ್ದರು

ಪ್ರಿನ್ಸ್ ಮತ್ತು ಪ್ರಿನ್ಸೆಸ್ ಆಫ್ ಕಾನಟ್ ರವರು ಕಳೆದ ತಾ 30ರಲ್ಲಿ ... ತಲಪಿದರು ... ಸ್ಟೇಶನಿನಲ್ಲಿ ... ಸೇರಿ ಅವರಿಗೆ ಸ್ವಾಗತವನ್ನೀ ... ವರು

... ಮುನ್ಸಿಪಾಲಿಟಿಯ ಅಧ್ಯಕ್ಷರಾಗಿ ಮಿ. ವಿ ಜೆ ಪಟೇಲರವರು ಪುನಃ ಚುನಾಯಿಸಲ್ಪಟ್ಟರು

... ಹಿಂದೂ ಯೂನಿವರ್ಸಿಟಿಯ ಪಾರ್ಲಿಮೆಂಟಿ ನಲ್ಲಿ ಕಾಂಗ್ರೆಸಿನವರು ... [illegible] ... ಮಿ. ಶ್ರೀ ಪ್ರಕಾಶ ... ಪ್ರೊಫೆಸರ್ ... ಬಹುಮತದಿಂದ ಪಾಸಾಯಿತು

ವಿದೇಶ.

ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್‌ಗಳಲ್ಲಿ ... ಪ್ರಾರಂಭವಾಗಿ ಅನೇಕ ಕಡೆಗಳಲ್ಲಿ ... ಗಣಿಗಳ ಕೆಲಸವು ... ಸುಮಾರು 15,000 ಜನರಿಗೆ ಕೆಲಸ ... [illegible]

... ಮಂತ್ರಿ ಮಂಡಲಿಯನ್ನು ... ಡಾಕ್ಟರ್ ಮಾರ್ಕ್ಸ್ ರವರು ಒಪ್ಪಿಕೊಂಡಿರುವದರಿಂದ ... ಸರಕಾರದ ... [illegible]

... ಇಟೆಲಿಯ ... ಮಂತ್ರಿಯೊಡನೆ ... ಪಾರ್ಲಿಮೆಂಟಿನಲ್ಲಿ ... ವಿರೋಧ ಪಕ್ಷದವರಿಗಿರು ವ ... ತೀರ್ಮಾನಿಸಲು ... [illegible]

ಈಜಿಪ್ಟಿನ ಅರಸನಾದ ಫಾವದ್‌ರವರಿಗೂ ವಾಫ್ಡ್ ಪಾರ್ಟಿ ... ವ್ಯತ್ಯಾಸಗಳ ಸಂಬಂಧ ... ರಾಜರಿಗೆ ದ್ರೋಹ ... ರಾಜ ... [illegible]

ಅಮೇರಿಕದ ನ್ಯೂಯಾರ್ಕ್ ಪಟ್ಟಣದಲ್ಲಿ ... 400 ... ನಿರ್ಮಿಸಲು 6 ಸಾವಿರ ಜನರನ್ನು ... ತಾರೀಕು 3ರ ವರ್ತಮಾನ

... 5 ರಿಂದ 10 ದಿನಗಳೊಳಗೆ ... ಪ್ರಾರಂಭವಾ ... [illegible]

ಈಜಿಪ್ಟಿನಲ್ಲಿ ... 500 ... [illegible] ... ವಿದ್ಯಾರ್ಥಿಗಳು ... [illegible]

... ಸುಲ್ತಾನರು ... ತನ್ನ 61ನೆಯ ವಯಸ್ಸಿನಲ್ಲಿ ... 15 ವರುಷ ಪ್ರಾಯ ... [illegible]

... ಡಿಸೆಂಬರ್ 31ರ ... ರಾಜಕೀಯ ಅಧಿಕಾರ ... [illegible]

... ಕಡೆಗಳಲ್ಲಿ ... ಕೆಲವು ಮಂತ್ರಿಗಳು ರಾಜೀನಾಮೆ ಕೊಟ್ಟಿರುವರು ಅವರ ... [illegible]

(4ನೇ ಪುಟ ... ಕೊಡಿವ

ಕಾಗುತ್ತದೆಯೋ, ಅವರ ... ದರ ಕರ್ತವ್ಯವಾಗಿದೆ. ಈ ...ಯ ಸಭಾಧ್ಯಕ್ಷ ...ಯನ್ನು ತೆಗೆದುಕೊಳ್ಳುವೆನು. ಕುಡಿಯುವಸ್ಪಿ...ದಕಾದ ಮಾದಕ ಪದಾರ್ಥಗಳನ್ನು ಒದಗಿಸಿಕೊಡುವದು ಹೇಗೆ ಅನೀತಿಕರವೋ, ಹಾಗೆಯೇ ಪರದೇಶದವರು ಆ ದೇಶಕ್ಕೆ ಧಾನ್ಯವಸ್ತುಗಳನ್ನು ಪೂರೈಸುವದಾದರೂ ಅನೀತಿಕರವಾದುದೇಸರಿ. ಮಾದಕ ದ್ರವ್ಯಗಳಿಂದ ಮನುಷ್ಯನ ದೇಹಕ್ಕೂ ಆತ್ಮಕ್ಕೂ ಅಪಾಯ ಸಂಭವಿಸುವಂತೆ ಇವುಗಳಿಂದಲಾದರೂ ಸಂಭವಿಸುವದು. ಮಂಡತೆ ಮತ್ತು ಮದ ಇವೆರಡೂ ಒಂದೇ ಸ್ಥಿತಿಯ ಭಿನ್ನ ಲಕ್ಷಣಗಳಾಗಿವೆ. ಆದಕಾರಣ ಇವೆರಡೂ ಅಷ್ಟೇ ಹಾನಿಕರವಾದವುಗಳಾಗಿವೆ. ಸೋಮಾರಿತನ ಮತ್ತು ಬಡತನಗಳಿಂದ ಸಂಭವಿಸುವ ಮಂದತನವು ಅನೀತಿಕರ ಮತ್ತು ಪಾಪಕರವಾದವುಗಳೆಂಬದನ್ನು ನಾವು ಈ ವರೆಗೂ ಅರಿತಿಲ್ಲವಾದುದರಿಂದ ಒಮ್ಮೊಮ್ಮೆ ಹೆಚ್ಚು ಅನರ್ಥವು ಕೂಡ ಸಂಭವಿಸುತ್ತದೆ.

ಪ್ರತಿಪರ ಕರ್ತವ್ಯ.

ಹಿಂದುಸ್ಥಾನವು ತನ್ನ ಹಿತಾಹಿತಗಳನ್ನು ಯೋಚಿಸಿಯೇ ಪರದೇಶದ ಪದಾರ್ಥಗಳನ್ನು ತರಿಸಿಕೊಳ್ಳುವದು ಹೇಗೆ ಅದರ ಕರ್ತವ್ಯವಾಗಿದೆಯೋ, ಹಾಗೆಯೇ ಈ ದೇಶಕ್ಕೆ ಪದಾರ್ಥಗಳನ್ನು ಕಳುಹಿಸುವಾಗ, ಹಿಂದುಸ್ಥಾನದಹಿತಾಹಿತಗಳನ್ನು ಯೋಚಿಸುವದೂ ಪ್ರತಿಪರ ಕರ್ತವ್ಯವಾಗಿದೆಯೆಂದು ನಾನು ಭಾವಿಸುತ್ತೇನೆ. ನೀತಿಯನ್ನನುಸರಿಸದ ಅರ್ಥಶಾಸ್ತ್ರವು ನಿಜವಾದ ಅರ್ಥಶಾಸ್ತ್ರವೇ ಅಲ್ಲ. ಅಹಿಂಸೆಯ ತತ್ವವನ್ನು ವ್ಯಾಪಕಗೊಳಿಸುವದೆಂದರೆ ರಾಷ್ಟ್ರಗಳ ಪರಸ್ಪರ ವ್ಯಾಪಾರ ವ್ಯವಹಾರಗಳಲ್ಲಿ ನೀತಿಗೆ ಪ್ರಾಮುಖ್ಯತೆ ಬರುವಂತೆ ಮಾಡುವದು. ಹಿಂದುಸ್ಥಾನದ ಪ್ರಯತ್ನಗಳಿಂದ ರಾಷ್ಟ್ರ ರಾಷ್ಟ್ರಗಳ ಪರಸ್ಪರ ಸಂಬಂಧವು ನೀತಿಮೂಲಕವಾದುದಾಗಿ ಪರಿಣಮಿಸಿದುದನ್ನು ನೋಡುವದೇ ನನ್ನ ಮಹತ್ವಾಕಾಂಕ್ಷೆಯಾಗಿದೆ ಎಂದು ಒಪ್ಪಿಕೊಳ್ಳುತ್ತೇನೆ. ನಿಯಮಿತ ಜನಸಮೂಹದಲ್ಲಿ ಅಹಿಂಸಾ ತತ್ವವನ್ನು ಪ್ರಸಾದಗೊಳಿಸುವ ವಿಷಯದಲ್ಲಿ ನಾನು ನಿರಾಶೆಗೊಳ್ಳುವದಿಲ್ಲ. ಮಾನವೀ ಸ್ವಭಾವವು ಯಾವಾಗಲೂ ಅಧಃಪ್ರವರ್ತಿಯಾಗಿರುವದೆಂಬ ಅಭಿಪ್ರಾಯವನ್ನು ನಾನು ಸರ್ವಥಾ ನಂಬಲಾರೆನು.

ಕೈನೂಲು ಬಾವಿಗಳಿಂದ ವಿದೇಶೀ ವಸ್ತ್ರಗಳ ಬಹಿಷ್ಕಾರವು ಯಶಸ್ವಿಯಾದರೆ, ಅದು ಅತಿಮಹತ್ವವಾದ ರಾಜಕೀಯ ಸೌಲಭ್ಯಗಳನ್ನುಂಟುಮಾಡಿಕೊಡುವದಲ್ಲದೆ ಈ ದೇಶದ ಬಡಜನವಲ್ಲಿ ಕೂಡ—ಅವರು ಸ್ತ್ರೀಯರೇ ಇರಲಿ ಅಥವ ಪುರುಷರೇ ಇರಲಿ—ಆತ್ಮಸಾಮರ್ಥ್ಯದ ಅರಿವನ್ನು ಹುಟ್ಟಿಸಿ, ಹಿಂದುಸ್ಥಾನದ ಸ್ವಾತಂತ್ರ್ಯ ಯುದ್ಧದಲ್ಲಿ ಅವರನ್ನೂ ಭಾಗಿಗಳನ್ನಾಗಿ ಮಾಡುವದು.

(ಮುಂದುವರಿಯುವುದು.)

ನೋಟೀಸ್.

ಕೊಡಗಿನಿಂದ ಮೈಸೂರಿಗೆ ಮಾರಾಟಕ್ಕೆ ಬರುವ ಕಿತ್ತಳೆ ಹಣ್ಣುಗಳನ್ನು ಚಡದರಕಾಸ್ತಿನಲ್ಲಿ ನ್ಯಾಯವಾದ ದಾರಣೆಗೆ ಮಾರಾಟಮಾಡಿಸುವ ಬಗ್ಗೆ ಒಂದು ಏಜನ್ಸಿಯನ್ನು ನಾನು ಮೈಸೂರಲ್ಲಿ ತೆರೆದಿರುತ್ತೇನೆ. ಕಮೀಷನಾವಿನತ ಬಾಕಿ ಯಾವ ಪಂಚನೆಯೂ ಇಲ್ಲದೆ ಪಬ್ಲೀಕ್ ಹರಾಜಿನಲ್ಲಿ ಹಣ್ಣುಗಳನ್ನು ಮಾರಿಸಿಕೊಡಲು ತಯಾರಿದ್ದೇನೆ. ಅಲ್ಲದೆ ಹಿಂದೂದೇಶದ ಎಲ್ಲಾ ಕಡೆಗಳಿಗೂ ಕಿತ್ತಳೆ ಹಣ್ಣುಗಳನ್ನು ಒದಗಿಸಿಕೊಡಲು ನಾನು ಒಂದು ದೊಡ್ಡ ಉಗ್ರಾಣವನ್ನು (ಗೋದಾನ್) ತೆರೆದಿರುತ್ತೇನೆ. ನಾನು ಒಬ್ಬ ಕೊಡಗು ದೇಶಸ್ಥನಾದುದರಿಂದ ಕೊಡಗಿನಲ್ಲಿರುವ ನನ್ನ ದೇಶ ಬಾಂಧವರೆಲ್ಲರೂ ಈ ಅನುಕೂಲವನ್ನು ಕಳಕೊಳ್ಳಲಿಕ್ಕಿಲ್ಲವಾಗಿ ಕೋರುತ್ತೇನೆ.

ಟೆಲಿಗ್ರಾಮ್ ವಿಳಾಸ:—
ಫ್ರೂಟ್ಸ್, ಮೈಸೂರು.

ಟಿ. ಎ. ಕುಪ್ಪಸಾಮಿ ಪಿಳ್ಳೆ,
ಫ್ರೂಟ್ಸ್ ಗೋದಾನ್,
ಮೈಸೂರು.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಪ್ರೊಸೀಡಿಂಗ್ಸ್.

(ಕಳೆದ ವಾರದಿಂದ ಮುಂದರಿಸಿದ್ದು.)

ಮಿ. ಎ. ಜಿ. ಹ್ಯಾರಿಂಗ್ಟನ್‌ರವರು.

ಫಾರೆಸ್ಟಿನಲ್ಲಿ ಬೇಟೆಯಾಡುವದನ್ನು ಬಾನಸಿನ ನಿರ್ಬಂಧಿಸಲಾಗಿದೆ. 'ಈಗಿನ ರೂಲ್ ಮೇರೆ ಇಲಾಖೆಯವರಿಗೆ ಒಪ್ಪಿಗೆಯಾಗುವ ಮನುಷ್ಯನಿಗೆ ನಿರ್ಣಯವಾಗಿರುವ ಫೀಸ್ ಕೊಟ್ಟರೆ ಬೇಟೆಯಾಡಲು ಲೈಸೆನ್ಸ್ ಕೊಡಲಾಗುತ್ತೆ.

ಕಾಡು ಮೃಗಗಳಿಂದ ಮುಖ್ಯವಾಗಿ ಹಂದಿ, ಜಿಂಕೆ, ಆನೆಗಳಿಂದ ಪೈರುಗಳಿಗೆ ನಷ್ಟವಿರುವದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಆನೆಗಳ ವಿಷಯ ಏನೂ ಹೇಳಬೇಕಾಗಿಲ್ಲ; ಯಾಕೆಂದರೆ ಈಚೆಗೆ ಆನೆಗಳನ್ನು ಗ್ರಾಮಗಳಿಂದ ಓಡಿಸುವ ವಿಚಾರ ಮಾಡಲಾಗಿದೆ. ಇದರ ಫಲಿತಾಂಶ ಇನ್ನೂ ಗೊ...ರದೇ ಇದ್ದಿದ್ದರೆ ... ಹಂದಿ ಮುಂತಾದ ಮೃಗಗಳನ್ನು ಹೊಡೆಯೂ ... ವಿಷಯದಲ್ಲಿ ಸರಕಾರದವರು ಒಪ್ಪುತ್ತಾರೆಂಬ... ನ್ನು ಈಗಲೇ ಹೇಳುತ್ತೇನೆ. ಕಾಡು ಮೃಗಗಳಿಂದ ಪೈರುಗಳಿಗೆ ನಷ್ಟವಾಗುವದರಿಂದ ಗುಂಡು ಹೊಡೆಯಲು ಬಿಡಬಹುದೆಂತ ಯೋಚಿಸಲಾಗಿದೆ. ಒಂದು ವಿಧವಾಗಿ ಮಾಫಿಯಾಗಿ ಬೇಟೆಯಾಡುವ ಹಕ್ಕು ಪರೀಕ್ಷಾರ್ಥವಾಗಿ ಕೊಡಬಹುದೆಂತ ಚೀಫ್ ಫಾರೆಸ್ಟ್ ಅಫೀಸರು ರಜದಲ್ಲಿ ಹೋಗುವ ಮುಂಚೆ ಉತ್ತರ ಕೊಡಗಿಗೆ ಹೋಗಿ ನೋಡಿ ಕಮೀಷನರವರ ಸಂಗಡ ಮಾತನಾಡಿ ನಿಶ್ಚೈಸಿದ್ದಾರೆ.

ಠರಾವು ಬರೆದಿರುವ ಮೇರೆ ನಾನು ಒಪ್ಪಲಾಗುವದಿಲ್ಲ. ಮಾಫಿಯಾಗಿ ನಿಬಂಧನೆಗಳಿಗೆ ಒಳಪಟ್ಟು ಬೇಟೆಯಾಡಲು ಬಿಡಬಹುದೆಂತ ಠರಾವನ್ನು ವ್ಯತ್ಯಾಸ ಮಾಡಿದರೆ ಒಪ್ಪಬಹುದು. ಯಾವನಾದರೂ ಫಾರೆಸ್ಟ್ ರೆಗ್ಯುಲೇಶನಿಗೆ ವಿರೋಧವಾಗಿ ನಡೆದದ್ದು ತಿಳಿದು ಬಂದರೆ ಲೈಸೆನ್ಸ್ ತೆಗೆದುಬಿಡುವ ಹಕ್ಕು ಇಲಾಖೆಗೆ ಇರಬೇಕು. ಕಷ್ಟವಿರುವ ರೈತರಿಗೆ ಮಾಫಿಯಾಗಿ ಲೈಸನ್ಸ್ ಕೊಟ್ಟು ಮೃಗಗಳನ್ನು ರಿಜರ್ವ್ ಫಾರೆಸ್ಟಿನಲ್ಲಿ ಗುಂಡು ಹೊಡೆಯಲು ಬಿಡುತ್ತೇವೆ. ಆಗ ರೈತರು ಮೃಗಗಳನ್ನು ಓಡಿಸಲೂ ಬಹುದು. ಆದರೆ ಫಾರೆಸ್ಟ್ ನಿಬಂಧನೆಗಳಿಗೆ ಒಳಪಟ್ಟಿರಬೇಕು. ಚಿಕ್ಕ ಚಿಕ್ಕ ನಿಬಂಧನೆಗೆ ವಿರೋಧವಾದ ತಪ್ಪುಗಳನ್ನು ಗಮನಕ್ಕೆ ತೆಗೆದುಕೊಳ್ಳುವದಿಲ್ಲ. ಈ ಪರೀಕ್ಷೆಯ ಫಲ ತಿಳಿಯುವ ವರೆಗೆ ಮಾಲಂಬಿ ನಂ 1, 2ನೇ ರಿಜರ್ವನಲ್ಲಿ ಮಾತ್ರ ಈ ರೀತಿ ಮಾಫಿಯಾಗಿ ಬಿಡಬೇಕೆಂತ ಯೋಚಿಸಲಾಗಿದೆ. ಈ ರಿಜರ್ವೆಂದರೆ ದೊಡ್ಡ ಫಾರೆಸ್ಟ್, ಕೆಲವು ಪೈರುಗಳ ಉದ್ದವಿದೆ. ಠರಾವು ತಂದವರು ಸಹ ಈ ಫಾರೆಸ್ಟನ್ನೇ ಯೋಚನೆಯಲ್ಲಿಟ್ಟರುವಂತೆ ತಿಳಿಯಬಂದಿದೆ. ಆದ್ದರಿಂದ ಸರಕಾರದವರು ಈ ಭಾಗದಲ್ಲಿ ತುಂಬಾ ಸಹಾಯ ಮಾಡಲು ತಯಾರಿದ್ದಾರೆ. ಆದರೆ ತತ್ಕಾಲ ಎಲ್ಲಿಯೂ ಬಿಡಲಾಗುವದಿಲ್ಲ.

ಮಿ. ಬಿ. ಶ್ರೀಪತಿರಾಯರು.

ನನಗೆ ಎರಡನೇ ಮಾತನಾಡಲು ಹಕ್ಕಿದೆಯೋ ಇಲ್ಲವೋ, ಹೇಗೂ ಸಂವಾಜಿನಾದನ್ನೂ ನೇರಿಸಿಕೊಳ್ಳಬೇಕೆಂತ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು,

ಠರಾವನ್ನು ವ್ಯತ್ಯಾಸಮಾಡಲು ತಡವಾಯಿತು. ಈ ವ್ಯತ್ಯಾಸ ಮಾಡಲಿಕ್ಕೆ ಒಪಲಾಗುವದಿಲ್ಲ.

ಮಿ. ಯನ್. ಆರ್. ಸುಬ್ಬಯ್ಯನವರು.

ಇಲಾಖ ಮೆಂಬರ ಮಾತಿನಿಂದ ನನಗೆ ತುಂಬಾ ಸಂತೋಷವಾಯಿತು, ಆದರೂ ಠರಾವನ್ನು ವಾಪಸು ತೆಗೆದುಕೊಳ್ಳಬೇಕಾದ ಅವಶ್ಯ ಕಾಣಿಸಿಲ್ಲ.

ಠರಾವು ಮಂಜೂರಾಯಿತು.

[ಕೌನ್ಸಿಲಿನ ಕಳೆದ ಮೀಟಿಂಗು ನಡೆದು ಬಹಳ ದಿವಸಗಳಾದರೂ ಅದರ ಪ್ರೊಸೀಡಿಂಗ್ಸನ್ನು ಸ್ಥಳ ಸಂಕೋಚದಿಂದ ಇನ್ನೂ ಪ್ರಕಟಿಸಿ ಪೂರೈಸಲಾಗಲಿಲ್ಲವಾದುದರಿಂದ, ವಾಚಕರಿಗೆ ಪವರಿ ಪ್ರೊಸೀಡಿಂಗ್ಸನ್ನು ಇನ್ನು ಓದಲು ರುಚಿಸಲಿಕ್ಕಿಲ್ಲವೆಂಬ ಊಹನೆಯಿಂದ ಇನ್ನು ಮುಂದೆ ಅದನ್ನು ಪ್ರಕಟಿಸುವದು ಬಾಕಿಮಾಡಲಾಗಿದೆ. ಸಂ.]

ಪತ್ರವ್ಯವಹಾರಗಳು.

ಬಾತ್ಮಿದಾರರು ನಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಆಂಧ್ರ ದೇವಾಂಗದವರ ಮಹಾಸಭೆ.

ಅಯ್ಯಾ,

ವೃತ್ತಪತ್ರಿಕೆಗಳಿಂದ ಈ ಸಭೆಯು ಇದೇ ತಿಂಗಳು 21, 22, 23ರಲ್ಲಿ ಗೋದಾವರಿ ಜಿಲ್ಲೆಯ ಪದ್ಮಪುರದಲ್ಲಿ ಜರುಗುವದೆಂದು ತಿಳಿದುಬಂತು. ಅಖಿಳ ದೇವಾಂಗ ಮಹಾಸಭೆಯು ಈ ತಿಂಗಳಲ್ಲಿ ನಡೆಯಲಿಕ್ಕಿರುತ್ತದೆಂದು ಬಹಳ ದಿನಕ್ಕೆ ಹಿಂದೆ ಪತ್ರಿಕೆಯಲ್ಲಿ ಪ್ರಕಟವಾಗಿದ್ದರೂ ಇದನ್ನು ಹಿಂದಕ್ಕೊತ್ತಿ ಕೇವಲ ಆಂಧ್ರರು ಮಾತ್ರ ಸಭೆ ಸೇರಿಸುವದನ್ನು ನೋಡಿದರೆ ನಮಗೆ ಕೊಂಚ ಅಸಮಾಧಾನ ತೋರುತ್ತದೆ. ಅಖಿಳ ದೇವಾಂಗ ಸಭೆಯು ಆಂಧ್ರ ಸಭೆಗಿಂತ ಮಹತ್ವವುಳ್ಳದ್ದು ಎಂಬುದನ್ನು ಒತ್ತಿ ಹೇಳಬೇಕಿಲ್ಲ. ಆಂಧ್ರರು ಪ್ರತ್ಯೇಕವಾಗಿಯೇ ಈ ಸಭೆಯನ್ನು ಕರೆದರೋ, ಇಲ್ಲವೆ ಅಖಿಳ ದೇವಾಂಗ ಸಭೆಯ ಒಂದು ಭಾಗವಾಗಿ ಕರೆದಿರುವರೋ ತಿಳಿಯದು. ಅಖಿಳ ದೇವಾಂಗ ಸಭೆಯು ಇಂದಿನವರೆಗೂ ಜರುಗದ ದೆಸೆಯಿಂದ ಆಂಧ್ರರು ಭಿನ್ನವಾಗಿಯೇ ಸಭೆ ಸೇರುವರೆಂದು ಊಹಿಸಬೇಕಾಗಿದೆ.

ದೇವಾಂಗ ಮಂಡಲಿಯಲ್ಲಿ ಹದಿಮೂರು ತರಹದ ಪಂಗಡಗಳಿವೆಯೆಂದು ತಿಳಿದುಬರುತ್ತದೆ. ದೇವಾಂಗದವರು ದ್ರಾವಿಡರಾಗಿದ್ದ ಪಕ್ಷದಲ್ಲಿ ಇವರನ್ನು ನಾವು ಮೂರೇ ಗುಂಪುಗಳಾಗಿ ವಿಭಾಗಿಸುತ್ತೇವೆ. ಅವು ಯಾವುವೆಂದರೆ:—ತಮಿಳರು, ತೆಲುಗರು, ಕರ್ನಾಟಕರು ಇವರೆಲ್ಲರೂ ಒಬ್ಬನೇ ಋಷಿ ಮೂಲಕ್ಕೆ ಸೇರಿದವರಾದ್ದರಿಂದ ಬಳ ಕಲಹಗಳಿಂದ ಹಾಳಾಗುತ್ತಿರದು, ಉದ್ಧಾರಕ್ಕೆ ಐಕ್ಯಮತ್ಯವೇ ಆಧಾರ. ಆದುದರಿಂದ ಮೂರು ಪಂಗಡದವರೂ ಐಕ್ಯದಲ್ಲಿ ನಡೆದುಕೊಂಡು ಹೋಗಬೇಕಾಗಿ ನಮ್ಮ ವಿನಯ ಪ್ರಾರ್ಥನೆ.

ವಿಜಯನಗರದ ಅರಸರ ಕಾಲದಲ್ಲಿ ಕರ್ನಾಟಕ ದೇವಾಂಗದವರು ಬಹು ಏಳಿಗೆಯಲ್ಲಿದ್ದರು. ಈ ಜನರ ಅಧೋಗತಿಗೆ ತಾಳಿ ಕೋಟೆ ಯುದ್ಧವೇ ಮೂಲಕಾರಣ. ತುರುಕರು ವಿಜಯನಗರ ಸಂಸ್ಥಾನವನ್ನು ಛಿನ್ನ ಭಿನ್ನವಾಗಿ ಮಾಡಿದ ನಂತರ ಪ್ರಾಣ ರಕ್ಷಣೆಗಾಗಿ ಈ ಜನರು ಅಲ್ಲಾಪಿಲ್ಲಿಯಾಗಿ ಹೊರಟು ಹೋದರು. ತೆಲುಗು ಪ್ರಾಂತ್ಯಕ್ಕೆ ಹೋದವರು ತೆಲುಗು ಭಾಷೆಯನ್ನಾಡುತ್ತಾ ಅಲ್ಲಿಯೇ ಬಹುಕಾಲ ನೆಲಸಿದರು. ತಮಿಳು ಪ್ರಾಂತ್ಯಕ್ಕೆ ಹೋದವರಿಗೂ ಈ ಪಾಡೇ ಪ್ರಾಪ್ತವಾಯಿತು. ಹೆಚ್ಚು ಕಾಲವಾದನಂತರ ಅಗಲಿ ಹೋದ ಈಗ ಭಿನ್ನವಾಗಿರುವ ಜನರೊಳಗೆ ಹೊಕ್ಕು ಬಳಕೆ ಕೊಳುಕೊಡುವದು ನಿಂತು ಹೋದುವು. ಮೇಲಿನ ವಿಷಯ ಪರಿಶೀಲನೆಯಿಂದ ದೇವಾಂಗದವರೆನ್ನಿಸಿಕೊಳ್ಳುವ ಜನರೆಲ್ಲರೂ ವಿಜಯನಗರದ ಕರ್ನಾಟಕಸ್ಥರೇ ಆಗಿರಬೇಕೆಂದು ನಮ್ಮ ಭಾವನೆ. ಎಲ್ಲ ದೇವಾಂಗದವರಿಗೂ ಪ್ರಶಸ್ತವಾದ ಗುರು ಪೀಠವಿರುವುದು ವಿಜಯನಗರದ ಮುಖ್ಯ ಪಟ್ಟಣವಾದ ಹಂಪಾಕ್ಷೇತ್ರದಲ್ಲಿ. ಈ ಹೊತ್ತಿಗೂ ದೇವಾಂಗ ಜನರು ಕುಲ ದೇವತೆಯಾದ ಬನ ಶಂಕರಿ ದೇವಸ್ಥಾನದ ಬಾದಾಮಿಯಲ್ಲಿದೆ. ಆದುದರಿಂದ ದೇವಾಂಗದವರು ಮೊಟ್ಟಮೊದಲು ಹಂಪಾಕ್ಷೇತ್ರದ ಸುತ್ತಮುತ್ತಲೂ ವಾಸವಾಗಿದ್ದರು ಎಂದು ನಂಬಬೇಕಾಗಿದೆ.

ವೈಷಮ್ಯದಿಂದ ಏಳಿಗೆ ಇರಲಾರದು. ಎಲ್ಲ ಪಂಗಡದ ದೇವಾಂಗದವರು ಐಕ್ಯಭಾವದಿಂದ ನಡೆದುಕೊಳ್ಳುವದು ಉತ್ತಮ. ಎಲ್ಲರೂ ಕುಲದ ಏಳಿಗೆಗಾಗಿ ಸೇವೆ ಮಾಡಬೇಕು. ಎಲ್ಲರೊಳಗೂ ಕೊಳುಕೊಡು ಇಲ್ಲದೆ ಇದ್ದರೂ ಹೊಕ್ಕುಬಳಕೆ ಇರಬೇಕು. ಜಾತಿ, ಕುಲ ಭೇದಗಳಿರುವುದರಿಂದ ಹಿಂದೂ ದೇಶವು ಕೆಟ್ಟಿತೆಂದು ಅನೇಕ ಚರಿತ್ರಕಾರರ ಅಭಿಪ್ರಾಯ. ಬಾಬು ಎಸ್. ಸಿ. ಮುಕರ್ಜಿಯವರು ಬ್ರಾಹ್ಮಣರಿಂದಲೇ ಈ ಹಿಂದೂ ದೇಶಕ್ಕೆ ಹೆಚ್ಚಿನ ಕೆಡಕು ತಟ್ಟಿರುವದೆಂದು ತಮ್ಮ ಪುಸ್ತಕದಲ್ಲಿ ಬರೆಯುತ್ತಾರೆ. ನಾವು ಹೀಗೆ ಅಭಿಪ್ರಾಯಪಡುವದಿಲ್ಲ. ಬ್ರಾಹ್ಮಣರಿಂದ ಎಷ್ಟು ಒಳ್ಳೆದಾಗಲಿ, ಕೆಡುಕಾಗಲಿ ಆಗಿದೆಯೋ ಅಷ್ಟೇ ಅಬ್ರಾಹ್ಮಣರಿಂದಲೂ ಆಗಿದೆ. ಬ್ರಾಹ್ಮಣರು, ಅಬ್ರಾಹ್ಮಣರು ಹಿಂದುಗಳೇ ಆಗಿದ್ದಾರೆ. ಹಿಂದೂ ದೇಶಕ್ಕೆ ಹೀನಸ್ಥಿತಿಯು ಪ್ರಾಪ್ತವಾಗಿರುವದೇ ಅವರ ಅದು ಹಿಂದುಗಳ ದೋಷದಿಂದ.

ಸೃಷ್ಟಿ ಅಂದರೆ ಜೆರಿಕೆಯ ತೋಟ, ಇದರಲ್ಲಿ ಏಕತ್ವವಿರುವುದು ಅಸಾಧ್ಯ. 'ನಾಲ್ಕು ವರ್ಣಗಳನ್ನು ನಾನು ಸೃಷ್ಟಿಸಿದ್ದೇನೆ' ಎಂದು ಶ್ರೀಕೃಷ್ಣ ಪರಮಾತ್ಮನು ಹೇಳಿರುವ ಮಾತಿನ ಅರ್ಥವಾದರೂ ಏನಿರಬಹುದು? ಆದರೆ ಹಿಂದಿನ ಕಾಲದಲ್ಲಿ ಜನರು ಅವರ ಗುಣ ಸ್ವಭಾವಗಳಿಗನುಸಾರವಾಗಿ ಬ್ರಹ್ಮ, ಕ್ಷತ್ರಿ, ವೈಶ್ಯ, ಶೂದ್ರರೆಂದು ವಿಭಾಗಿಸಲ್ಪಟ್ಟಿದ್ದರು. ಕ್ರಮೇಣ ಈ ಜಾತಿಯೆಲ್ಲ ಮುಂದು ಮುಂದಕ್ಕೆ ಹರಿದು ಹೋದಂತೆ ಅನೇಕಾನೇಕ ಸಣ್ಣ ಪುಟ್ಟ ಜಾತಿಗಳಾದುವು. ಈ ಜಾತಿಗಳಿಂದ ಹಿಂದೂ ದೇಶಕ್ಕೆ ಬಹಳ ಕೇಡೇನೋ ಆಗಿದೆ. ಆದರೆ ಒಮ್ಮೆಲೇ ಇವುಗಳನ್ನೆಲ್ಲಾ ಒಂದುಗೂಡಿಸಲಿಕ್ಕೆ ಸಾಧ್ಯವಿಲ್ಲ. ಎಂತೂ ಎಲ್ಲಾ ಜಾತಿಯವರೂ ಸಮತ್ವದಿಂದ ವರ್ತಿಸುವದು ಲೌಕಿಕ ಧರ್ಮ. ಸ್ವಾಮಿ ವಿವೇಕಾನಂದರು ಜಾತಿಯಿಂದ ಉಂಟಾಗಿರುವ ಅನಿಷ್ಟ ಆಚಾರಗಳನ್ನು ಘೋರವಾಗಿ ದೂಷಿಸಿರುವರು. ಅನೇಕತ್ವದಲ್ಲಿ ಏಕತ್ವವನ್ನು ಕಾಣುವದೇ ಇವರ ನಿಸ್ವಾರ್ಥಪರವಾದ ಅಭಿಪ್ರಾಯ. ಆಂಧ್ರರ ಸಭೆಯು ಈ ತಿಂಗಳಲ್ಲಿ ಜರಗುವದೇನೋ ಸರಿ. ಆ ಸಭೆಗೆ ಯಾವ ತರಹದ ಆತಂಕವೂ ಉಂಟಾಗದೆ ಕಾರ್ಯಕ್ರಮಗಳು ಸಾಂಗವಾಗಿ ನಡೆಯಲೆಂದು ನಾವು ದೇವರನ್ನು ಪ್ರಾರ್ಥಿಸುತ್ತೇವೆ. ಆಂಧ್ರರೂ, ತಮಿಳರೂ, ಕರ್ನಾಟಕರೂ ಒಂದುಗೂಡಿ ನಡೆಯಬೇಕೆಂಬುದೇ ನಮ್ಮ ಅಭಿಲಾಷೆ. ಹೀಗಿರುವುದರಿಂದ ನ್ಯಾಯ ವಿಧಾಯಕ ಸಭೆಗಳಲ್ಲಿ ಭೇದವಿಲ್ಲದೆ ಯಾವ ಕೋಮಿನವನಾದರೂ ಸ್ಥಳಸಿಕ್ಕರೆ ಎಲ್ಲಾ ದೇವಾಂಗದವರಿಗೂ ಸೇವೆ ಮಾಡಬಹುದಾಗಿದೆ. ಇಂಥಾ ಸಭೆಗಳಲ್ಲಿ ಕೋಮುವಾರಿನ ಮಾತ್ಸರ್ಯವನ್ನು ಬಿಟ್ಟು ಕೆಲಸ ಮಾಡಿದರೆ ಮಂದಿಗಳ ಪ್ರೇಮವು ಸುಲಭವಾಗಿ ದೊರಕುವದು. ಆಂಧ್ರರಲ್ಲಿ ಇರುವಷ್ಟು ವಿದ್ಯಾವಂತರು ಇತರ ಎರಡು ಪಂಗಡದವರಲ್ಲಿ ಇಲ್ಲ. ಆದುದರಿಂದ ಆಂಧ್ರರು ಜನರಿಗೆ ಎಲ್ಲಾ ತರದಲ್ಲಿಯೂ ಸಹಾಯ ಕೊಡಬೇಕು, ಮತ್ತು ಅವು ಉತ್ತರೋತ್ತರ ಏಳಿಗೆಗೆ ಬರಬೇಕೆಂಬುದೇ ನಮ್ಮ ಆಶಯ. ಆಂಧ್ರ ಸಭೆಗೆ ಎಲ್ಲಾ ಪಂಗಡದ ದೇವಾಂಗದವರು ತಮ್ಮ ಪ್ರತಿನಿಧಿಗಳನ್ನು ಕಳುಹಿಸದೆ ಇರಲಿಕ್ಕಿಲ್ಲವೆಂದು ನಂಬುತ್ತೇವೆ. ಸಭೆಗೆ ಹೋದವರು ದೇವಾಂಗದವರ ಐಕ್ಯತೆಯ ವಿಷಯನಲ್ಲಿ ಮಾತಾಡಲು ಮರೆಯಬಾರದು. ಎಲ್ಲಾ ದೇವಾಂಗದವರು ಒಂದೇ ಛತ್ರಿಯ ಕೆಳಗೆ ಆಶ್ರಯವನ್ನು ಹೊಂದಲಿ ಎಂದು ಹಾರೈಸುತ್ತೇವೆ.

ಮಡಿಕೇರಿ. ಸಿ. ಯಂ. ಯಸ್.

ಅಯ್ಯಾ ಎಡಿಟರವರೇ,

ಕೆಲವು ಗ್ರಾಮಗಳಲ್ಲಿ ಕೊಡಗು ಜನರ ಹುತ್ತರಿ ಹಬ್ಬದ ವಿಷಯ ಅನಾಚಾರ ನಡದು ಬಂದ ಸಂಗತಿಗಳನ್ನು ಈ ಕೆಳಗೆ ವಿವರಿಸಿಕೊಂಡಿದ್ದೇನೆ. ಇದನ್ನು ನನುಸ, ಜನರು ತಿಳಿ

ವಳಿಕೆ ಬಗ್ಗೆ, ಕೊಡಗು ಪತ್ರಿಕೆಯಲ್ಲು ಪ್ರಕಟಿಸಬೇಕಾಗಿ ಈ ಮೂಲಕ ವಂದನೆ ಮಾಡಿಕೊಳ್ಳುತ್ತೇನೆ.

(1) ಕೊಡಗು ಜನರು ಮುಂದಿಗೆ ಯಾವ ಡ್ರೆಸ್ಸಿನಲ್ಲು ಹೋಗಬೇಕು? ಮತ್ತು ಯಾವ ಡ್ರೆಸ್ಸಿನಿಂದೊಡಗೂಡಿ ಕೋಲು ಹೊಡಿಯಬೇಕು?

(2) ಪಾಡಿ ಸುಬ್ರಾಯದೇವರ ಕದಿರು ತೆಗಿಯುವದಕ್ಕೆ ಮೊದಲು ಬೇರೆಯವರು ಕದಿರು ತೆಗಿಯಬಹುದೊ? ಅಲ್ಲದೆ ದೇವರ ಕದಿರು ತೆಗಿಯುವುದು ಇಂಥಾ ದಿವಸ, ನಾಡು ಕದಿರು ತೆಗಿಯುವುದು ಇಂಥಾ ದಿವಸ ಎಂದು, ಪಾಡಿದೇವಸ್ಥಾನದ ಪ್ರತಿ ಒಂದು ನಾಡುಗಳಿಗೆ ಚಿಟ್ಟಿ ಬಂದಮೇಲೆ, ಒಬ್ಬೊಬ್ಬರ ಮನಸ್ಸೋ ಇಚ್ಛೆ ಪ್ರಕಾರ ಕದಿರು ತೆಗೆದವರಿಗೆ, ದೇಶದವರು ಏನಾದರೂ ಅಂಥಾವರ ವಿಷಯ ತಕ್ಕ ತಪ್ಪುಮಾಡಲು ಯಾವದಾದರೂ ಸುಬು ಇದೆಯೋ?

(3) ನಾನು ದಾರಿಯಲ್ಲಿ ಹೋಗುವಾಗ್ಯೆ ಒಂದಾನೊಂದು ಗ್ರಾಮಸ್ಥರು ಅಂದರೆ ಸಾಧಾರಣ ಐವತ್ತು ಜನರ ವರೆಗೆ ಹಬ್ಬ ಮೊದಲುಗೊಂಡು ಅವರ ಊರುಮಂದಿನಲ್ಲಿ ಕುತ್ತಪಂತೆ ಯಲ್ಲು, ಕೋಟುಸರಾಯಿನಲ್ಲು ಕೋಲು ಹೊಡಿಯುವದನ್ನು ಕುದ್ದು ಕಂಡದ್ದಾಯ್ತು. ಈ ಸ್ಥಿತಿ ಒಬ್ಬರನ್ನಾದರೂ ಕೊಡಗು ರಿವಾಜುಮೇರೆ ಕುಪ್ಪಸಪಟ್ಟಿ ವಗ್ಯೆರೆ ಹಾಕಿರುವದನ್ನು ಕಾಣಲಿಲ್ಲ. ಮತ್ತು ಮಂದಿನಲ್ಲು ಕೋಲು ಹೊಡಿಯುವವರೂ, ಓಲಗಮಾಡುವವರೂ, ಸಹ ಏಕರೀತಿಯಾಗಿ ಡ್ರೆಸ್ಸಾಗಿ ಇದ್ದರು. ಆದ್ದರಿಂದ ಕೊಡಗರು ಯಾರೆಂದು ಓಲಗಮಾಡುವವರು ಯಾರೆಂದೂ ದೂರದಿಂದ ನೋಡುವವರು, ಅವರ ಗುರುತನ್ನು ಕಂಡು ಹಿಡಿಯಲು ಅಸಾಧ್ಯವಾಗಿತ್ತು. ಇದನ್ನು ಕಂಡು ಅವರಲ್ಲು ಕೊಡಗು ಡ್ರೆಸ್ಸಿನ ವಿಷಯದಲ್ಲು, ಕೋಲು ಹೊಡಿಯುವ ವಿಷಯದಲ್ಲು ಮತ್ತು ಕದಿರುತೆಗಿಯುವ ವಿಷಯದಲ್ಲು ಸಹ, ಎರಡು ನ್ಯಾಯದಮಾತುಗಳನ್ನು ಆಡಿದಾಯ್ತು. ಅಷ್ಟರಲ್ಲಿ ಅವರ ಜವಾಬು ಏನಂದರೆ—ನಮ್ಮ ಮಂದಿನಲ್ಲು ...., ಕಾರಿಯಂಡಾಡಿಬೇಂಗಿಯೂ ಕೇಳಸವದಾರ್) ಎಂದು ಜವಾಬುಕೊಟ್ಟರು. ನ್ಯಾಯವಾದ ಕೊಡಗು ಆಚಾರಗಳನ್ನು ತಿಳಿದಂಥ ಕೊಡಗರಾಗಿದ್ದರೆ, ಈ ಜವಾಬನ್ನು ಹೇಳುತ್ತಿರಲಿಲ್ಲ. ಅದೂ ಅಲ್ಲದೆ ದೇವರ ಕದಿರು ತೆಗಿಯುವದಕ್ಕೆ ಮೊದಲಾಗಿ ಆದಮೆ ಬುಧವಾರ ದಿನ ತಾ. 10-12-24 ನೇ ಮಧ್ಯಾಹ್ನ 12 ಗಂಟೆಗೆ ಸದರಿ ಊರವರು ಕದಿರು ತೆಗಿದಿರುತ್ತಾರೆ.

(4) ನನ್ನ ಜೊತೆಯಲ್ಲು ಮೈಸೂರಿನಿಂದ ಬಂದ, ಒಬ್ಬ ಸಾಹುಕಾರ ಯೋಗ್ಯಮನುಷ್ಯರು ಇದ್ದರು. ಸದ್ರಿಯವರು ಕೋಲು ಹೊಡಿಯುವದನ್ನು ಕಂಡು ಇವರು ಯಾವ ಯಾವ ತರದ ಜಾತಿಯವರೆಂದು ನನ್ನ ಸಂಗಡ ಕೇಳಿದರು. ನಾನು ಅವರಿಗೆ ತಕ್ಕ ಜವಾಬು ಕೊಡಲು ನಾಚಿಕೆಗೇಡು ಆದ್ದರಿಂದ ನಾನು ಏನೂ ಜವಾಬುಕೊಡಲಿಲ್ಲ. ಪುನಹ ಅವರು ನಿಮ್ಮ ಕೊಡಗರಿಗೆಲ್ಲಾ ಇದೇ ಕಾಯಂ ಡ್ರೆಸ್ಸೋ ಎಂದು ಕೇಳಿದರು. ಆಗ ನಾನು ಈ ಡ್ರೆಸ್ಸು ಅಲ್ಲ, ಬೇರೆಡ್ರೆಸ್ಸು ಇದೆಯೆಂದು ಹೇಳಿದೆನು. ಅಷ್ಟರಲ್ಲಿ ಅವರು ಹೌದು ಪಲ್ಲಿ ಪಟ್ಟಣಕ್ಕೆ ಹೋಗುವಾಗ್ಯೆ ಕೊಡಗರು, ಕೊಡಗು ಡ್ರೆಸ್ಸನ್ನು ಹಾಕಿದನ್ನು ಕಂಡು, ನಾನುಸಹ ಅವರ ಡ್ರೆಸ್ಸಿಗೆ ಬಹಳ ಸಂತೋಷಪಟ್ಟೆನು. ಇಲ್ಲಿಗೆ ಬಂದು ಇವರ ಡ್ರೆಸ್ಸನ್ನು ನೋಡಿದ್ದಲ್ಲು ಇವರು ನ್ಯಾಯವಾದ ಕೊಡಗರಲ್ಲವೆಂದು ಭಾವಿಸಲು ಕಾರಣವಾಯಿತೆಂದು ಹೇಳಿದರು. ಅಲ್ಲದೆ ಹೀಗೆಯೇ ಜಾತಿಪದ್ಧತಿಮೇರೆ ಡ್ರೆಸ್ಸು ತಪ್ಪಿ ಕೋಲು ಹೊಡೆದರೆ ದೇಶದವರಿಗೆ ಈ ವರ್ತಮಾನ ಸಿಕ್ಕಿದ್ದಲ್ಲು ಅದಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡುತ್ತಾರೆಯೇ ಎಂದು ಕೇಳಿದ್ದಕ್ಕೆ ಬಹುಶ್ಯ ಹಾಗೆ ಪಂಚಾಯಿತಿಗೆ ಬಂದ ಪಕ್ಷದಲ್ಲು ಮಾಡಲೂ ಬಹುದೆಂದು ಹೇಳಿದೆನು.

(5) ಆದ್ದರಿಂದ ದೇಶತಕ್ಕರವರೂ, ನಾಡು [illegible] ಮತ್ತು ಪದ್ಧತಿ ತಿಳಿದಂಥ ಮುಖ್ಯಸ್ಥರುಗಳೂ [illegible] ಇಂಥಾ ಪದ್ಧತಿಗಳನ್ನು ಆಯಾಯ ನಾಡುಗಳಲ್ಲಿ [illegible] ಮಾಡದಿದ್ದರೆ ಕೆಲವು ಕಾಲದಲ್ಲಿ ಕೊಡಗರ ಜಾತಿ ಪದ್ಧತಿಯನ್ನು ಬಿಟ್ಟು ನಾವು ಕೊಡಗರಲ್ಲ ನಾವು ಒಂದು ಕಡೆ ದೇಶದವರೆಂದು ಹೊಸ ಹೆಸರನ್ನು ಹೊಂದಿಸಬಹುದಾಗಿ ನಂಬುತ್ತೇನೆ. ಮೇಲ್ಕಂಡ ರೀತಿ ಕುಣಗವನ್ನು ಮೈಸೂರು ದೇಶದವರು ನೋಡಿ ಕೊಡಗು ಜನರೆಲ್ಲರೂ ಹೀಗೆಯೇ ಇರಬಹುದೆಂದು ಭಾವಿಸಬಹುದು. ಆದ್ದರಿಂದ ಒಳ್ಳೆಯವರ ಮಾನ ಹಳ್ಳಿಯಲ್ಲಿ ಹೋಯಿತು [illegible] ಆದ್ದರಿಂದ ಇನ್ನುಮುಂದಕ್ಕಾದರೂ ಆಯಾಯ ನಾಡಿನ ತಕ್ಕ ಮುಖ್ಯಸ್ಥರು ಈ ವಿಷಯ ತೊಂದರೆ ತೆಗೆದುಕೊಳ್ಳುವರೆಂದು ನಂಬುತ್ತೇನೆ.

ಕುದ್ದು ನೋಡಿದವ,

ಯಂ. ಯುವಕರ ವಾರ್ಷಿಕೋತ್ಸವ.

ಇದೇ ಡಿಸೆಂಬರು ತಿಂಗಳು 13ನೇ ಶನಿವಾರ ದಿನ ಮಸಯಡಿ ಎಂಗಾಮೋಸ್ಸರವರ 6ನೇ ವಾರ್ಷಿಕೋತ್ಸವವು ಅವರ ಏಸ್ ಮನೆಯಬಳಿಯಲ್ಲಿರುವ ಮೈದಾನದಲ್ಲು ನಡೆಯಿತು. ಪಟ್ಟೆದಾರರಾದ ಮ. ದೇವಯ್ಯನವರು ಅಗ್ರಸ್ಥಾನವನ್ನು ವಹಿಸಿದ್ದರು. ಸುಮಾರು 3 ಗಂಟೆಯಾಗಾಯ್ತು 1 [illegible] ಸಣ್ಣ ಬಾಲಕ ಬಾಲೆಯರುಗಳಿಗೂ ಯುವಕರಿಗೂ ಪ್ರೌಢರಿಗೂ ಪುನಹ ಅನೇಕ ಆಟಗಳು (sports) ನಡೆದುವು. ವಿಜ್ಞಾಪನೆಯನ್ನು ತಿಳ್ಯಪಡಿಸಿದ ಅನೇಕ ಅತಿಥಿಗಳೂ, ಸ್ನೇಹಿತರೂ, ಅಂತು ಪುರುಷ ಸ್ತ್ರೀಯರಾಗಿ ಸುಮಾರು 300 ಜನರಿದ್ದರು. ಆಸು ಕೂಲವಿಲ್ಲದೆ ಬಾರದವರು ಅವರ ಬಹುಮಾನಕ್ಕಾಗಿ ಮಕ್ಕಳಿಗೆ ಇನಾಮುಗಳನ್ನು ಕಳುಹಿಸಿದ್ದರು. ಆಟಗಳು ಆದನಂತರ ಸಂಘದ ಸಕ್ರೆಟರಿಯಾದ ಮ. ಪೂವಯ್ಯನವರು ಅತಿಥಿಗಳಿಗೆ ಸಂಘದ ಪರವಾಗಿ ವಂದನೆಯನ್ನು ಮಾಡಿ, ಇನಾಮು ಪಡೆದ್ದವರಿಗೆ ಕಳುಹಿಸಿದ್ದವರಿಗೂ ಸಹ ತುಂಬಾ ಕೃತಜ್ಞತೆಯನ್ನು ತೋರಿಸಿ, ಬರುವ ವರ್ಷವೂ ತುಂಬಾ ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳಿ [illegible] ಉಪನ್ಯಾಸವನ್ನು ಮಾಡಿದರು. ಇದಾದನಂತರ [illegible] ತೀರ್ಥಗಳು ಹಂಚಲ್ಪಟ್ಟವು. ತದನಂತರ ಸಂಗೀತವು ಪ್ರಾರಂಭವಾಯಿತು. ಇದಾದಮೇಲೆ ವಾದ್ಯ ಸಮೇತ ಅವರ ಮನೆಗೆ ಅತಿಥಿಗಳುಸಮೇತ ಹೋದರು. ಅಂತು ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ಅತಿಥಿ [illegible] ಕಾರ್ಯವು ವಿಜೃಂಭಣೆಯಿಂದ ನಡೆಯಿತೆಂದೂ ಹಿರಿಯವರ ಅಭಿಪ್ರಾಯವಾಗಿದೆ. ಅಧ್ಯಕ್ಷರು ಬಾಲಕರಿಗೆ [illegible] ಇನ್ನೂ ಉತ್ತಮ ಸ್ಥಿತಿ [illegible] ಆಶೀರ್ವಾದವನ್ನು [illegible].

' ಹಾಜರಿದ್ದವ ".

[illegible] ಗಳ ತಿರೋಮಣಿ [illegible]

[illegible] ರೀ—ರಾಸುಗಳ ಪಬ್ಲಿಕ್ ನ್ಯೂಸೆ [illegible] ತಕ್ಕಿನ ಕಾಟವು ನಿಮ್ಮಲ್ಲೂ ಇದೆಯೋ? ಇದರಿಂದ ರೈತರಿಗೆ ಉಂಟಾಗುತ್ತಿರುವ ಅನಾಹುತವನ್ನು ಸ್ಥಳ ವಿಸ್ತಾರವಾಗುವ ಭಯದಿಂದ ಅಲ್ಲಿಲ್ಲ ಬಿಡಬೇಕಾಗಿದೆ. ರಸ್ತೆ ಆಜುಬಾಜಿನ ವಾಸವು ಈ ಆಕ್ಟು ಈ ಉಗ್ರಸ್ಥಾನದಲ್ಲಿರುವವರೇಗೂ ಬೇಡವೆನಿಸುತ್ತಿದೆ. ಯಾವ ಗಲಾಟೆಯೂ ಮಾಡದೆ ಸುಮ್ಮನಿದ್ದ ಈ ಆಕ್ಟು ಇಷ್ಟು ಹಾ ಹಾ ಕಾರವನ್ನು ಈಗ ಜನರಲ್ಲಿ ಉಂಟುಮಾಡಲು ಕಾರಣವಾದರೂ ಏನಿರಬಹುದೆಂದು ಅನೇಕರು ಪಸಗೊಳ್ಳಬಹುದು ಇದಕ್ಕೆ ಕಾರಣವು ಯಾವದೋ ಒಂದು ಮೋಟಾರುಕಾರಿನಿಂದ ಹೊರಟು ಒಂದೇ ಒಂದು "ಘರ್ಜನೆಯಾಗಿರಬೇಕು" ಮೋಟಾರಿನ ಜೀವವೂ ನಿದಲ್ಲಲ್ಲಾ ಎಷ್ಟೋ ಒಂದೆರಡು ಸಾರಿ ಮೋಟಾರಿನ ವಾಯುವೇಗವನ್ನು ರಾಸುಗಳು ಒಂದೆರಡು ಸಲಂಗಳ ಪರಿಯಂತರ ತಡೆದದ್ದೇ ಆಗಿರಬಹುದು ಬಹುಶಃ ಬಡರೈತರ ಕೂಗು ಅಧಿಕಾರಿಗಳ ಕಿವಿಪರಿಯಂತರ ಮುಟ್ಟಿರಲಾರದೆಂಬ ಭಾವನೆಯೂ ಕಾರಣವಾಗಿರಬಹುದು. ಆದರೆ ನಿಜವನ್ನು ನುಡಿಯುವದಾದರೆ ಈಗಿನ ಮೋಟಾರುಗಳೂ ಬಸ್ಸುಗಳೂ ಪಬ್ಲಿಕ್ಕ ನ್ಯೂಸೆನ್ಸು ಆಗಿದೆ. ಇವುಗಳಿಗೆ ಆ ಆಕ್ಟು ಅಗತ್ಯ ಆಗಬೇಕಾದ್ದು. ಸರಕಾರದಿಂದ ಬಡರೈತನಿಗೆ ದೊರೆಯುವ ಸೌಕರ್ಯಗಳಲ್ಲಿ ರಸ್ತೆಯಿಂದ ಹೊಂದುತ್ತಿರುವ ಕಾರ್ಯವೇ ಅತಿಮುಖ್ಯವಾದದ್ದು ಮತ್ತು ನಿರಾಯಾಸವಾಗಿ ದೊರೆಯುವಂಥಾದ್ದು. ಅಂಥಾ ಅನುಕೂಲವೂ ಬೇಡದಲ್ಲಿರುವ ಪತ್ತಿಪತ್ತು ಮೋಟಾರುಗಳಿಂದ ದೊರೆಯದೆ ಆಗಿದೆ. ಪಾಠಕ ಮಹಾಶಯರೇ 5, 6 ಮೈಲು ವಸ್ತು ನಡಿಯುವದರೊಳಗಾಗಿ ಹೆಚ್ಚು ಕಮ್ಮಿ 4, 5 ಮೋಟಾರುಗಳನ್ನೂ ಬಸ್ಸುಗಳನ್ನೂ ಎದುರುಗೊಳ್ಳಲು ತಯಾರಿರಬೇಕು. ವಾಯುವೇಗದಿಂದ ಹೋಗುತ್ತಿರುವ ಈ ಮೋಟಾರುಗಳು ರಸ್ತೆಯಲ್ಲಿರುವ ದೂಳನ್ನು ಎಬ್ಬಿಸಿ ದಾರಿ ನಡಿಯುವವರ ಕಣ್ಣು, ಕಿವಿ, ಮೂಗು, ಬಾಯಿಗಳನ್ನು ತುಂಬಿಸುವದಲ್ಲದೆ ಮೋಟಾರು ದಾಟಿದ ಒಂದೆರಡು ಮಿನಿಟುಗಳ ವರೆಗೆ [illegible] ಇದಲು ದೂಳಿನಿಂದ ಕಣ್ಣು ಕಾಣದೆ ನಿಲ್ಲಬೇ[illegible] ಕ್ರಿಮಿ ಕೀಟಾದಿಗಳನ್ನು ಎಬ್ಬಿ[illegible] ವ್ಯಾಧಿಗಳಿಗೆ ಹೊಗಿಸುವವು. ಮ[illegible] ಮೈಮೇಲೆ ಕೆಸರನ್ನು ಹಾರಿಸುವವು. [illegible] ಈ ರೀತಿಯಾದ ಅನೇಕ ಕಷ್ಟಗಳನ್ನು ಬಡ ರೈತರು [illegible] ಗಳಿಂದ ಹೊಂದುತ್ತಿದ್ದರೂ [illegible] ವಿಲ್ಲವೇ? ಯಾರಾದರೂ ಪಬ್ಲಿಕ [illegible] ಆಕ್ಷೇಪಣೆಯನ್ನು ಒಯಸಿದರೇ? ಕೋಡು, [illegible] ಮಾಡಿಂಬಿದ ಸರಕಾರ ಕನ್ನಡಕಗಳಿಂದ [illegible] ಅದರ ಎಲ್ಲವೂ ತಪ್ಪೇ. ದೇವರ ಆಕ್ಸಿಸ್ಸಾದ [illegible] ಅವರ ಸರಕಾರದ ಆ [illegible] ರೈಬರಳು ಎತ್ತಿ ತೋ[illegible] ಚಿತಳಿತ್ತಿದವರಿ[illegible] ಯಾರು! ದೇವರು ಕೊಟ್ಟ [illegible] ಕಾರಣ. ಹಾಗೆ ನೋಡಿದ್ದೇ [illegible] ಮಿಲಿತವಾಗಿಯೂ ಕಾಣಸಿ[illegible] ಆಕ್ಟು ಯಾವ ರೀತಿ [illegible] ನೋಡದೆ ಇರುವದೇ ಬಡ [illegible] ಈ ಕಷ್ಟವು [illegible] ಕಾರಣ.

[illegible] ಗಳನ್ನು ಸ್ವೇಚ್ಛೆಯಾಗಿ ರಸ್ತೆಯಲ್ಲು ತಿರು[illegible] ಬಿಡಬೇಕೆಂದಲ್ಲ. ನನ್ನ ಧ್ಯೇಯ ರಸ್ತೆಗೆ ತಪ್ಪಿ ತಪ್ಪಿ ಬಂದ ರಾಸುಗಳನ್ನು ದೊಡ್ಡಿಗ ಸೇರಿಸಿಯೇ ಸೇರಿಸಬೇಕೆಂದಿರಬಾರದು. ಹಾಗ ಸೇರಿಸಿದರೆ ಮಾಲೀಕ ಮಾಡಿ ಮಾಲಿಕನ ಮೇಲೆ ಪ್ರಾಸಿಕ್ಯೂಶನ್ ನಡೆಸಲೇ ಬೇಕೆಂತಿರಬಾರದು. [illegible] ವಿಧಿಯೇ ತೀರ[illegible] [illegible] ರಡು ಶಿಕ್ಷೆ ಕೊಡುವದು ಬಹ[illegible] ರಾಸನ್ನು ದೊಡ್ಡಿಗೆ ಸೇರಿಸಿ [illegible] ನದ ಮೇಲೆ ಪುನಹ ಅವನ ಮೇಲೆ ಪ್ರಾಸಿಕ್ಯೂಶನ್ ಮಾಡುವದು ಯಾಕೆ. ಪ್ರಾಸಿಕ್ಯೂಶನ್ ನಡೆಸಬೇಕಾದರೆ ಒಂದೇ ತರದ ತಪ್ಪನ್ನು ಒಬ್ಬನು ಅನೇಕಾವರ್ತಿ ಮಾಡಿ ಅವನಿಂದ ನಿವೃತ್ತಿ ಇಲ್ಲದೆ ಹೋದರಲ್ಲವೇ ಅವನ ಮೇಲೆ ಮುಂದಿನ ಕ್ರಮ ಜರುಗಿಸುವದು ನ್ಯಾಯ.

ಪ್ರಜಾಪ್ರೀತಿಗೆ ಪಾತ್ರರಾದ ನಮ್ಮ ಹಜರತ್ ಕಮಿಷನರ್ ಸಾಹೇಬರವರು ಈ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸಿ ಇದರಿಂದ ರೈತರಿಗೆ ಉಂಟಾಗುತ್ತಿರುವ ಕಷ್ಟನಷ್ಟಗಳನ್ನು ಮನನ ಮಾಡಿ ಈ ಆಕ್ಟಿನ ಬಾಧೆಯನ್ನು ಆಗುವಷ್ಟು ಕಮ್ಮಿ ಮಾಡಿ ಬಡ ರೈತರನ್ನು ಕಾಪಾಡಬೇಕಾಗಿ ಬೇಡಿಕೊಳ್ಳುವ.

ಐ. ಪಿ. ಮಾದಪ್ಪ.

ಕೌನ್ಸಿಲ್ ಮೆಂಬರುಗಳಲ್ಲಿ ನನ್ನ ಪ್ರಾರ್ಥನೆ.

ಅಯ್ಯಾ,

ಕೊಡಗು ದೇಶವು ಹೀನಸ್ಥಿತಿಗೆ ಬರಲು ಅನೇಕ ಕಾರಣಗಳಿದ್ದರೂ ಈ ದೇಶದ ಮುಖ್ಯ ಉತ್ಪತ್ತಿಯಾದ ಬತ್ತದ ಕೂಡಾಟದ ಆಳತೆಯ ಪರೆ ಒಂದು ಮುಖ್ಯ ಕಾರಣವೆಂದು ನಿರ್ಧರಿಸಲು ಯಾವ ಅಭ್ಯಂತರವೂ ಇಲ್ಲ. ಈ ವಿಷಯ ಎಲ್ಲರಿಗೂ ತಿಳಿದ ವಿಷಯವಾಗಿರುವಾಗ ಅಂಥಾದ್ದನ್ನು ಹೆಚ್ಚು ವಿಸ್ತರಿಸುವ ಆವಶ್ಯ ಕಂಡುಬರುವದಿಲ್ಲ. ಕಳೆದ ಕೌನ್ಸಿಲ್ ಮೀಟಿಂಗಿನಲ್ಲು ಮೆಂಬರುಗಳಿಂದ ಚರ್ಚಿಸಲ್ಪಟ್ಟ ಮೇಲ್ಕಂಡ ಸಂಗತಿಯನ್ನು ಕಮಿಷನರ್ ಸಾಹೇಬರು ಮೆಂಬರುಗಳ ಭಾಗಕ್ಕೆ ಬಿಟ್ಟು ಕೊಟ್ಟಿರುತ್ತಾರೆ. ಆ ಬಾಬಿನಲ್ಲು ನಿಸಂಟಾರ ಪರ ಮಾಡಿಸಿ ಅದಕ್ಕೆ ಸೀಲು ಹಾಕಲು ಮರದ ಪರೆಗೆ ಸೀಲು ಹಾಕುವದು ಸರಿಯಾದ ರೀತಿಯಲ್ಲವೆಂದು ಸಾಹೇಬರವರು ಈ ಪ್ರಗೆ ಕೊಡಿಸಿದ್ದು ನ್ಯಾಯವೇ. ಈ ಬಾಬಿನಲ್ಲು ಮೆಂಬರುಗಳು ಅನೇಕ ಸಲಹೆಗಳನ್ನು ಒಪ್ಪಿಸಿದರೂ ತೀರ್ಮಾನಕ್ಕೆ ಬರಲಿಲ್ಲ. ಸರಿಯಾದ ಪರೆಯನ್ನು ತಯಾರಿಸಿ ಸೀಲು ಹಾಕಿಸಿ ಚಾರಿಗೆ ತಂದರೂ ದೊಣ್ಣೆಯಿಂದ ತಲೆ ಬಡಿಯುವಂತೆ ಮಾಡಿದರೆ ವ್ಯಾಪಾರಸ್ಥರಿಗೆ ಚಮತ್ಕಾರ ನಡಿಸಲು ಮುಂದರಿಸಿ ಕೊಟ್ಟಂತಾಗುವದು ನಿಶ್ಚಯ. ಅದಕ್ಕಾಗಿ ನನ್ನ ಅಭಿಪ್ರಾಯವನ್ನು ತಮಗಳ ಮುಂದಿಡಲು ಕೇಳಿಕೊಳ್ಳುತ್ತೇನೆ, ಮೈಸೂರು ದೇಶದಲ್ಲು ಈಗ ಜಾರಿಯಲ್ಲಿರುವಂತೆ 10 ಸೇರಿಗೆ ಸರಿಯಾದ ಕಬ್ಬಿಣದ ತಗಡಿನಿಂದ ತಯಾರಿಸಿದ ದೊಣ್ಣೆಯಿಂದ ತಲೆ ಬಡಿಯದೆ ಸೇರಿನ ರೀತಿ ತುಂಬಾ ಅಳಿಯುವ ಪರೆಯನ್ನು ತಯಾರಿಸಿದ್ದರೆ ಬಹಳ ಚೆನ್ನಾಗಿತ್ತು. ಮೈಸೂರು ದೇಶದಲ್ಲು ಇದಕ್ಕೆ ಕೊಳಗವೆಂದು ಹೇಳುತ್ತಾರೆ. ಇದು ತಿಳಿಯದವರಲ್ಲ, ಮೊದಲಿಗೆ ಒಂದು ತರಿಸಿದರೂ ಚೆನ್ನಾಗಿತ್ತು. ಈ ರೀತಿ ಮಾಡಿದ ಪಕ್ಷ ವ್ಯಾಪಾರಸ್ಥರ ಯಾವ ಚಮತ್ಕಾರವೂ ನಡಿಯುವ ಹಾಗಿಲ್ಲ. ಇದೇ ವಿಷಯವಾಗಿ ತಾರೀಕು 12—12—24ರ ಪತ್ರಿಕೆಯ 2ನೆ ಪೇಜಿನಲ್ಲು ವಿವರಿಸಿರುತ್ತಾರೆ. ಇದೇ ವಿಷಯವನ್ನು ಹೆಚ್ಚು ವಿಸ್ತರಿಸಬಹುದು, ಎಲ್ಲರಿಗೂ ತಿಳಿಯದ ವಿಷಯವಲ್ಲ. ಆದ್ದರಿಂದ ಇಲ್ಲಿಗೆ ಸಮಾಪ್ತಿ ಮಾಡಿರುತ್ತೇನೆ. ಕೌನ್ಸಿಲ್ ಮೆಂಬರುಗಳು ತಮ್ಮ ಘನ ಚಿತ್ತಕ್ಕೆ ತಂದುಕೊಳ್ಳಬೇಕಾಗಿ ಪ್ರಾರ್ಥಿಸುತ್ತೇನೆ.

ಒಬ್ಬ ರೈತ.

ಪ್ರಕಟಣೆ.

ಮಡಿಕೇರಿ ಪೋಲೀಸ ಸಬ್ ಇನ್‌ಸ್ಪೆಕ್ಟರುಗಳ ಕ್ವಾರ್ಟರ್ಸ್ ಕೆಳಗೆ ಅಂದವಾಗಿಯೂ ಹೊಸದಾಗಿಯೂ ಭದ್ರವಾಗಿಯೂ 3 ವರ್ಷಗಳ ಹಿಂದೆ ಕಟ್ಟಲ್ಪಟ್ಟ ಸಂಸಾರ ಸಮೇತ ವಾಸ ಇರಲಿಕ್ಕೆ ಯೋಗ್ಯವಾದ 9 ಕೊಠಡಿಗಳಿರುವ ಮನೆ 3 ಅಂಕಣಗಳ ಕೊಟ್ಟಿಗೆ ಯಾವಾಗಲೂ ನಿರ್ಮಲವಾದನೀರು ಇರುವ ಕಲ್ಲು ಕಟ್ಟಿದ ಭಾವಿ (ನೀರು ಗೋಚಿ ತೆಗಿಯುವಂಥಾದ್ದು) ಕಾಫಿ, ಬಾಳೆ, ಕಿತ್ತಳೆ, ನಿಂಬೆ ಮರಗಳೂ ಮತ್ತು ಹಲಸು ಮತ್ತು ಮಾವಿನ ಗಿಡಗಳೂ ಇರುವ ಹಿತ್ತಲೂಸಹ ಇರುವ ಆಸ್ತಿ ಒಂದು ಮಾರಾಟಕ್ಕೆ ಇದೆ. ಇದಕ್ಕೆ (11,000) ಹನ್ನೊಂದು ಸಾವಿರ ರುಪಾಯಿ ಹೆಚ್ಚು ಕಡಿಮೆ ಖರ್ಚಾಗಿದೆ. ಈ ಸ್ಥಳವು ಗೋಪ್ಯವಾಗಿಯೂ ಸಂಸಾರ ಸಮೇತ ವಾಸ ಇರುವದಕ್ಕೆ ಯೋಗ್ಯವಾಗಿಯೂ ಇದೆ. ವಾಸಕ್ಕೆ ಇಂಥಾ ಯೋಗ್ಯವಾದ ಸ್ಥಳ ಮಡಿಕೇರಿಯಲ್ಲಿ ಸಿಕ್ಕುವದು ದುರ್ಲಭ. ಕೊಂಡುಕೊಳ್ಳುವದಕ್ಕೆ ಅಪೇಕ್ಷೆ ಇರುವವರು ಸ್ವತಃ ನೋಡಿ ಕ್ರಯ ನಿಶ್ಚಯಿಸಬಹುದು. ಹೆಚ್ಚಿನ ವಿವರ ಈ ಕೆಳಗಿನ ವಿಳಾಸಕ್ಕೆ ಬರದು ತಿಳಿದುಕೊಳ್ಳಬೇಕಾಗಿದೆ.

VENDER,
C/o EDITOR, "KODAGU."
Mercara.

8-4

Reg. No. M. 1550.

If not delivered please return to
"KODAGU" OFFICE, MERCARA.

ಕೊಡಗು.

ವಾರ್ಷಿಕ ಚಂದಾ ರೂ. ೪-೦-೦

ಸತ್ಯೇನ್ದ್ರಿಯಶರದಯಿಮಃ ವಿದ್ಯಾ ನೀತಿಸ್ಪ್ರಯುಕ್ತಶಾಃ || ಐಕ್ಯಮತ್ಯೇನ್ದ್ರದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೪] ಕೊಡಗು, ಸ ೧೯೨೫ನೇ ಇಸವಿ ಜನವರಿ ತಾರೀಕು ೧೬ನೆಯ ಶುಕ್ರವಾರ [ಸಂಚಿಕೆ ೩೦

ಆ ರೋ ೯ ಗ್ಯ ಚಂ ದ್ರಿ ಕೆ .

ಮದ್ರಾಸ್

ಸಂಪಾದಕರು: ಡಾಕ್ಟರ್ ಯು. ರಾಮರಾವ್,
ಯಮ್. ಎಲ್. ಸಿ. ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ಕೊಡುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0 ರೂ. ಪತ್ರಿಕೆಯೊಂದಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವುವು.

ಪತ್ರವ್ಯವಹಾರಕ. 'ಆರೋಗ್ಯ ಚಂದ್ರಿಕೆ' 325,
ತಂಬುಶೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಚಾರ, ಮತ್ತು ನೀತಿ ಮುಂತಾದ ವಿಷಯಗಳಿಂದೊಡ ಗೂಡಿದ ಕೊಡಗಿನ ವಾರ ಪತ್ರಿಕೆ

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2 ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3 ವಾರ್ತೆದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರ [illegible] ಕಳುಹಿಸುವ ವಾರ್ತೆಗಳು ಕಾಗದದ [illegible] ಬರೆಯಲ್ಪಟ್ಟು [illegible] ಹೆಸರು ವಿಳಾಸಗಳಿಂದ [illegible] ಸ್ಥಳವು ದೊರೆತಂತೆಲ್ಲಾ [illegible] ಪ್ರಕಟಿಸಲ್ಪಡುವುವು 5. ಪ್ರಕಟಿಸಲಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಚಾರ್ಜು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ನೋ ೯ ಟೀ ೯ ಸ್ .

ಕೊಡಗಿನಿಂದ ಮೈಸೂರಿಗೆ ಮಾರಾಟಕ್ಕೆ ಬರುವ ಕಿತ್ತಳೆ ಹಣ್ಣುಗಳನ್ನು ಚಿಪದರಕಾಸ್ತಿನಲ್ಲಿ ನ್ಯಾಯವಾದ ದಾರಣೆಗೆ ಮಾರಾಟಮಾಡಿಸುವ ಬಗ್ಗೆ ಒಂದು ಏಜನ್ಸಿಯನ್ನು ನಾನು ಮೈಸೂರಲ್ಲಿ ತೆರೆದಿರುತ್ತೇನೆ. ಕಮೀಷನಾಗಿಸದು ಬಾಕಿ ಯಾವ ವಂಚನೆಯೂ ಇಲ್ಲದೆ ಪಬ್ಲೀಕ್ ಹರಾಜಿನಲ್ಲಿ ಹಣ್ಣುಗಳನ್ನು ಮಾರಿಸಿಕೊಡಲು ತಯಾರಿದ್ದೇನೆ. ಅಲ್ಲದೆ ಹಿಂದೂದೇಶದ ಎಲ್ಲಾ ಕಡೆಗಳಿಗೂ ಕಿತ್ತಳೆ ಹಣ್ಣುಗಳನ್ನು ಒದಗಿಸಿಕೊಡಲು ನಾನು ಒಂದು ದೊಡ್ಡ ಉಗ್ರಾಣವನ್ನು (ಗೋದಾಮ್) ತೆರೆದಿರುತ್ತೇನೆ. ನಾನು ಒಬ್ಬ ಕೊಡಗು ದೇಶಸ್ಥನಾದುದರಿಂದ ಕೊಡಗಿನಲ್ಲಿರುವ ನನ್ನ ದೇಶ ಬಾಂಧವರೆಲ್ಲರೂ ಈ ಅನುಕೂಲವನ್ನು ಉಪಯೋಗಿಸಿಕೊಳ್ಳಬೇಕಾಗಿ ಕೋರುತ್ತೇನೆ.

ಟೆಲಿಗ್ರಾಮ್ ವಿಳಾಸ —
ಫ್ರೂಟ್ಸ್, ಮೈಸೂರು,

ಟಿ. ಎ. ಕುಪ್ಪಸಾಮಿ ಪಿಳ್ಳೆ,
ಫ್ರೂಟ್ಸ್ ಗೋಡಾನ್,
ಮೈಸೂರು,

4—2

Health is Wealth.

WANTED all to improve health strength and vital ty and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City

THE SHOPPING CENTRE OF COORG,

Spencer & Co. Ltd.,

MERCARA & POLLIBETTA.

An Announcement.

Our prices of wines, spirits, stores, etc., are down.

Send for our Xmas list and be convinced

Trial order Solicited

11

ಕೃ ಷಿ ತೋ ೯ ನಾ ಸ್ತಿ ದು ರ್ಭಿ ಕ್ಷಃ

NITRATE OF SODA (15—16 per cent.) Nitrogen,

"The best and cheapest form of Nitrogen highly concentrated and immediately available. Nothing like it to make plants grow"

ವ್ಯವಸಾಯದಲ್ಲಿ ಗೊಬ್ಬರವಿಡುವದರ ಹೆಚ್ಚಿನ ಉದ್ದೇಶವು ಪೈರುಗಳಿಗೆ ಸಾರಜನಕ (Nitrogen) ಒದಗಿಸಿಕೊಡುವದಾಗಿರುತ್ತದೆ "ನೈಟ್ರೇಟ್ ಆಫ್ ಸೋಡಾ" ಎಂಬ ರಸಾಯನಿಕ ಗೊಬ್ಬರವು (15—16%) ಆದರೆ ಮೀನುಗೊಬ್ಬರದಲ್ಲಿಯಕ್ಕಿಂತ ಮೂರುಪಾಲು ಜಾಸ್ತಿ ಕ್ಷಾರಜನಕ ಭರಿತವಾಗಿದ್ದು ಪೈರುಗಳಿಗೆ ಪಕ್ಕನೆ ಒದಗುವರೀತಿಯಲ್ಲಿರುತ್ತದೆ. ಇದರ ಉಪಯೋಗದಿಂದ ಫಸಲು ಬಹಳ ಸಮೃದ್ಧಿಯಾಗುವುದು. ಹಿಡಿತುಂಬ ರಸಾಯನಿಕ ಗೊಬ್ಬರವು ಮುಡಿ (ಕುಕ್ಕೆ) ತುಂಬ ಹಟ್ಟಿಗೊಬ್ಬರಕ್ಕೆ ಸಮವಾಗಿರುತ್ತದೆ. ಈ ರಸಾಯನಿಕ ಗೊಬ್ಬರವು ಅಮೇರಿಕ ದೇಶದ "ಚಿಲ್ಲಿ" ಎಂಬಲ್ಲಿ ತಯಾರಿಸಿ ಬಹಳ ದೂರದೇಶದಿಂದ ಬರಬೇಕಾದರೂ ಸಹ ಅದು ಹಳ್ಳಿ, ಮೂಲೆಗಳ ತೋಟಗದ್ದೆ ನಗ್ಯರೆ ಕೃಷಿಗಳಿಗೆ ಉಪಯೋಗಿಸಲು ಬಹಳ ಸುಲಭವಾಗಿಯೂ ಹಟ್ಟಿ ಗೊಬ್ಬರಕ್ಕಿಂತಲೂ ಬಹಳ ಹೆಚ್ಚಿನ ಆದಾಯವನ್ನು ಕೊಡುವದಾಗಿಯೂ ಇರುತ್ತದೆ. ಒಂದು ಎಕ್ರೆ ಭೂಮಿಗೆ 120—180 ರಾತಲು ಬೇಕಾಗುವದು. ಇದರ ವಿಷಯ ಹೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ಧರ್ಮಾರ್ಥವಾಗಿ ನಮ್ಮಿಂದ ಪಡೆಯಬಹುದು.

ದಿ. ಚಿಲಿಯನ್ನ್ ನೈಟ್ರೇಟ್

24—17 ಕಮಿಟಿಯವರ ಕಡೆ

ಕೊಡಗಿನಲ್ಲಿ— B. P. Ayapa, Hon Representative Pollibetta, Coorg.	The Chilean Nitrate Committee, 6 Mission Row, Post Box 469, CALCUTTA.

ಮಲೆಯೂಳ ವೈದ್ಯಶಾಲಾ.

ಮಲಬಾರಿನ ನಂಬೀಶನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯ ಶಾಲೆಯ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತದೆ. ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು ಬಹಳ ಕಡಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣ ನಂಬೀಶ್ವರ,
ಆಯುರ್ವೇದ ವೈದ್ಯರು,
ವೀರರಾಜೇಂದ್ರಪೇಟೆ.

52—50

ಪ್ರ ಕ ಟ ಣೆ .

ಮಡಿಕೇರಿ ಪೋಲೀಸ್ ಸಬ್ ಇನ್‌ಸ್ಪೆಕ್ಟರುಗಳ ಕ್ವಾರ್ಟರ್ಸ್ ಕೆಳಗೆ ಅಂದವಾಗಿಯೂ ಹೊಸಮರಗಳಿಂದ ಭದ್ರವಾಗಿಯೂ 3 ವರ್ಷಗಳ ಹಿಂದೆ ಕಟ್ಟಲ್ಪಟ್ಟ ಸಂಸಾರ ಸಮೇತ ವಾಸ ಇರಲಿಕ್ಕೆ ಯೋಗ್ಯವಾದ 9 ಕೊಠಡಿಗಳಿರುವ ಮನೆ 3 ಅಂಕಣಗಳ ಕೊಟ್ಟಿಗೆ ಯಾವಾಗಲೂ ನಿರ್ಮಲವಾದನೀರು ಇರುವ ಕಲ್ಲು ಕಟ್ಟಿದ ಭಾವಿ (ನೀರು ಗೋಚಿ ತೆಗಿಯುವಂಥಾದ್ದು) ಕಾಫಿ, ಬಾಳೆ, ಕಿತ್ತಳೆ, ನಿಂಬೆ ಮರಗಳೂ ಮತ್ತು ಹಲಸು ಮತ್ತು ಮಾವಿನ ಗಿಡಗಳೂ ಇರುವ ಹಿತ್ತಲೂಸಹ ಇರುವ ಆಸ್ತಿ ಒಂದು ಮಾರಾಟಕ್ಕೆ ಇದೆ. ಇದಕ್ಕೆ (11,000) ಹನ್ನೊಂದು ಸಾವಿರ ರೂಪಾಯಿ ಹೆಚ್ಚು ಕಡಿಮೆ ಖರ್ಚಾಗಿದೆ. ಈ ಸ್ಥಳವು ಗೋಪ್ಯವಾಗಿಯೂ ಸಂಸಾರ ಸಮೇತ ವಾಸ ಇರುವದಕ್ಕೆ ಯೋಗ್ಯವಾಗಿಯೂ ಇದೆ. ವಾಸಕ್ಕೆ ಇಂಥಾ ಯೋಗ್ಯವಾದ ಸ್ಥಳ ಮಡಿಕೇರಿಯಲ್ಲಿ ಸಿಕ್ಕುವದು ದುರ್ಲಭ. ಕೊಂಡುಕೊಳ್ಳುವದಕ್ಕೆ ಅಪೇಕ್ಷಾ ಇರುವವರು ಸೊತ್ತು ನೋಡಿ ಕ್ರಯ ನಿಶ್ಚಯಿಸ ಬಹುದು. ಹೆಚ್ಚಿನ ವಿವರ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬೇಕಾಗಿದೆ.

VENDER,
C/o EDITOR "KODAGU."
Mercara.

85

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮ. ಕೋಟೆರ ಚಿಣ್ಣಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಸಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರರಾಜಪೇಟೆ—ಮ. ಕೆ. ಚಿಣ್ಣಪ್ಪನವರ ಆಫೀಸಿನಲ್ಲಿ.
ಮೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ ಮ. ಮದೆಯಂಡ ದೇವಯ್ಯನವರು.
ನಾಪೋಕ್ಲು—ಮ. ಪೊನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮ. ಮುಕ್ಕಾಟಿರಪೂಣಚ್ಚನವರು.
ಪೊನ್ನಂಪೇಟೆ—ಮ. ಪುತ್ತಮನೆ ಮುದ್ದಮ್ಮಯ್ಯನವರು.
ಕುಡಿಕೇರಿ—ಮ. ಪಿ. ಪೂದಮ್ಮನವರು.
ಅಮ್ಮತ್ತಿ ಸಿದ್ದಾಪುರ—ಮ. ಐನಂಡ ಪೂದಪ್ಪನವರು. ಮ. ಚೇಗೂಡ ಕುಟ್ಟಪ್ಪನವರು.

ಕೋಡಂಡ ಉತ್ತಯ್ಯ.
ಆರ್ಗನೈಜಿಂಗ್ ಡೈರೆಕ್ಟರು, "ಕೊಡಗು" ಲಿಮಿಟೆಡ್,

"ಕೊಡಗು"

ಸನ್ ೧೯೨೫ನೇ ಇಸವಿ ಜನವರಿ ತಾ. ೧೬ನೇ ಶುಕ್ರವಾರ.

ಡಿಸ್ಟ್ರಿಕ್ಟ್ ಬೋರ್ಡು.

ಕೊಡಗಿಗೆ ಲೆಜಿಸ್ಲೇಟಿವ್ ಕೌನ್ಸಿಲು ಮಂಜೂರಾಗಿ ಅದರ ಕೆಲಸವು ಪ್ರಾರಂಭವಾದಂದಿನಿಂದ ಡಿಸ್ಟ್ರಿಕ್ಟ್ ಬೋರ್ಡು ಮೂಲೆಗೆ ಹಾಕಲ್ಪಟ್ಟಂತೆ ಕಂಡುಬರುತ್ತದೆ. ಬೋರ್ಡಿನ ಮೀಟಿಂಗು ನಡೆಯದೆ ಹಲವು ತಿಂಗಳುಗಳಾದವು. ವರುಷಂಪ್ರತಿ ಅಕ್ಟೋಬರ್ ಯಾ ನವಂಬರು ತಿಂಗಳಲ್ಲಿ ನಡಿಯುತ್ತಿದ್ದ ಬಜೆಟ್ ಮೀಟಿಂಗೂ ಕೂಡ ಈ ಸಾರಿ ಆ ತಿಂಗಳಲ್ಲು ನಡೆಯದೆ ಇದೇ ತಾರೀಕು 23ರಲ್ಲು ನಡೆಯುವದೆಂದು ತಿಳಿಯಬರುತ್ತದೆ. ಹೀಗೆ ದೀರ್ಘಕಾಲ ಬೋರ್ಡಿನ ಮೀಟಿಂಗು ನಡಿಸದೆ ಇರಲು ಕಾರಣವೇನಿರಬಹುದೋ ತಿಳಿಯದು. ಡಿಸ್ಟ್ರಿಕ್ಟ್ ಬೋರ್ಡಿನ ಮತ್ತು ಕೌನ್ಸಿಲಿನ ಕೆಲಸಗಳು ಬೇರೆ ಬೇರೆಯಾಗಿರುವಲ್ಲು ಕೌನ್ಸಿಲು ಸಿಕ್ಕಿದನಂತರ ಡಿ. ಬೋರ್ಡಿನ ಮೀಟಿಂಗುಗಳನ್ನು ಕಡಿಮೆ ಮಾಡಿ ಅದನ್ನು ಮೂಲೆಗೆ ಹಾಕಲು ಕಾರಣಗಳ್ಯಾವವೂ ಇಲ್ಲ. ಅದು ಹ್ಯಾಗೂ ಇರಲಿ. ಬೋರ್ಡಿನ ಬರುವ ಮೀಟಿಂಗಿನಲ್ಲಿ 1925—26ನೇ ವರುಷದ ಆದಾಯ ವೆಚ್ಚದ ಅಂದಾಜು ಪಟ್ಟಿಯನ್ನು ಚರ್ಚಿಸುವುದಲ್ಲದೆ ಇನ್ನು ಕೆಲವು ಮುಖ್ಯ ಸಂಗತಿಗಳನ್ನು ತೀರ್ಮಾನಿಸಲಿಕ್ಕಿದೆ.

ಸಾಧಾರಣವಾಗಿ ಗ್ರಾಮಗಳಲ್ಲಿ ಹರಡಿಕೊಂಡಿರುವ ಮಲೇರಿಯ ಜ್ವರ, ಭೇದಿ, ಅಮಶಂಕ, ಮಲಬದ್ಧತೆ, ಹೊಸಗಾಯಗಳು, ಕೆಮ್ಮು ಲು, ಕಣ್ಣಿ ಮೊದಲಾದ ಕಾಯಿಲೆಗಳಿಗೆ ತಯಾರುಮಾಡಿದ ಔಷಧಿಗಳನ್ನು ಗ್ರಾಮ ಸ್ಕೂಲುಗಳಲ್ಲಿಟ್ಟು ಅಲ್ಲಿಯ ಉಪಾಧ್ಯಾಯರ ಮೂಲಕ ಗ್ರಾಮಸ್ಥರಿಗೆ ಹಂಚುವ ಹಾಗೆ ಮಾಡಬೇಕೆಂಬ ಮುಖ್ಯ ವಿಷಯವು ಚರ್ಚೆಯ ಪಟ್ಟಿಯಲ್ಲಿ ಬಂದಾಗಿದೆ. ಹೀಗೆ ಔಷಧ ಕ್ರಮದಲ್ಲಿ ತರಬೇತಾಗದಿರುವ ಉಪಾಧ್ಯಾಯರುಗಳ ಮೂಲಕ ಔಷಧಿ ಹಂಚುವದು ರಿಜಿಸ್ಟರ್ ಆಗಿರುವ ಡಾಕ್ಟರುಗಳ ರೂಲ್ಸಿಗೆ ವಿರೋಧವೆಂದು ಸಿವಿಲ್ ಸರ್ಜನರು ಸೂಚಿಸಿರುವರಂತೆ. ಆದರೆ ಫಾರೆಸ್ಟ್ ಇಲಾಖೆಗಳಲ್ಲಿ ರೇಂಜರುಗಳು ಸಾಧಾರಣವಾಗಿ ವಾಡಿಕೆಯಾಗಿರುವ ಕಾಯಿಲೆಗಳಿಗೆ ಔಷಧಿ ಹಂಚುತ್ತಿರುವರೆಂದು ಫಾರೆಸ್ಟ್ ಚೀಫ್ ಆಫೀಸರು ಹೇಳಿರುವರು. ಮಾತ್ರವಲ್ಲ ಸಿದ್ದಾಪುರದ ಬಳಿ ಇರುವ ಕಾಫಿ ಎಕ್ಸ್‌ಪರಿಮೆಂಟಲ್ ಫಾರ್ಮ (ಕಾಫಿ ವ್ಯವಸಾಯ ಪರೀಕ್ಷೆ ಸ್ಥಳ) ನಲ್ಲಿಯೂ ಹೀಗೆ ತಯಾರುಮಾಡಿದ ಔಷಧಿಗಳನ್ನು ಔಷಧಾ ಕ್ರಮದಲ್ಲಿ ತರಬೇತು ಹೊಂದದವರು ಕೊಡುತ್ತಿರುವುದರಿಂದ ಏನೊಂದೂ ಅಪಾಯ ಉಂಟಾಗಿರುವದಿಲ್ಲ, ಬದಲು ಎಷ್ಟೋ ಪ್ರಯೋಜನ ಉಂಟಾಗಿದೆ. ಡಿ. ಪಿ ಡಬ್ಲ್ಯು ಇಲಾಖೆಯವರು ದೊಡ್ಡ ವಿಶೇಷ ಕೆಲಸಗಳೇನಾದರೂ ಆಸ್ಪತ್ರೆಗೆ ದೂರವಾದ ಸ್ಥಳದಲ್ಲಿ ನಡಿಸುವಾಗ ತಯಾರಾದ ಔಷಧಿಗಳನ್ನು ಆ ಇಲಾಖೆಯವರೇ ಕೂಲಿಯವರಿಗೆ ಅಲ್ಲಿ ಕೊಡುತ್ತಾರೆ. ಅಷ್ಟೇಕೆ? ಕಾಫಿ ಪ್ಲಾಂಟರುಗಳ ತೋಟಗಳಲ್ಲೂ ಈಗಲೂ ರೈಟರುಗಳು ಆಸ್ಪತ್ರೆಗಳಿಂದ ತಯಾರುಮಾಡಿ ಕಳುಹಿಸಿಕೊಡುವ ಔಷಧಿಗಳನ್ನು ಕೆಲಸಗಾರರಿಗೆ ಕೊಡುತ್ತಿರುವುದಿಲ್ಲವೇ? ಹೀಗಿರುವಲ್ಲಿ ಸ್ಕೂಲು ಫೈನಲ್ ವರೆಗೆ ಓದಿರುವ ಉಪಾಧ್ಯಾಯರು ತಯಾರುಮಾಡಿದ ಔಷಧಿಗಳನ್ನು ಹಂಚುವಷ್ಟು ಯೋಗ್ಯರಲ್ಲವೋ? ಅವರ ಸ್ವಾಧೀನಕ್ಕೆ ವಿಷಕರವಾದ ಮತ್ತು ಅಪಾಯಕರವಾದ ಔಷಧಿಗಳೇನೂ ಕೊಡುವದು ಬೇಡ. ಗ್ರಾಮ ಶಾಲೆಗಳ ಉಪಾಧ್ಯಾಯರುಗಳು ಔಷಧಿ ಕೊಡುವದಾದರೆ ಮಕ್ಕಳು ಯಾವಾಗಲೂ ಶಾಲೆಗೆ ಬರುವುದರಿಂದ ಮನೆಯಲ್ಲಿ ಕಾಯಿಲಸ್ಥರಿಗೆ ಔಷಧಿ ತೆಗೆದುಕೊಂಡು ಹೋಗಲು ಅನುಕೂಲವಾಗಿ ಗ್ರಾಮಸ್ಥರು ಈ ತರಹದ ಏರ್ಪಾಡಿನಿಂದ ಹೆಚ್ಚು ಪ್ರಯೋಜನ ಹೊಂದುವರು. ಅವರಿಗೆ ಆಸ್ಪತ್ರೆ ಔಷಧಿಗಳಲ್ಲಿ ವಿಶ್ವಾಸವು ಹೆಚ್ಚುವುದು.

ಇದರ ಬದಲು ಸಿವಿಲ್ ಸರ್ಜನರವರು ಇನ್ನೊಂದು ಏರ್ಪಾಡನ್ನು ಸೂಚಿಸಿರುವರು. ಈ ಏರ್ಪಾಡನ್ನು ಅವರು ನೀಲಗಿರಿ ಡಿಸ್ಟ್ರಿಕ್ಟಿನಲ್ಲಿ ಜಾರಿಗೆ ತಂದಿರುವರಂತೆ. ಈಗ ಇರುವ ಡಿ. ಬೋರ್ಡು ಆಸ್ಪತ್ರೆಗಳನ್ನು ವಾರದ ಕೆಲವು ದಿವಸಗಳು ಮುಚ್ಚಿ ಬಿಟ್ಟು ಅಲ್ಲಿಯ ಸಬ್ ಅಸಿಸ್ಟೆಂಟ್ ಸರ್ಜನರು ಆ ದಿವಸಗಳಲ್ಲಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಂಚರಿಸುವಂತೆಯೂ, ಗ್ರಾಮಗಳಲ್ಲಿರುವ ಸರಕಾರಿ ಕಟ್ಟಡಗಳಲ್ಲಿ ಔಷಧಿಗಳನ್ನಿಟ್ಟು ಅವುಗಳನ್ನು ಸಬ್ ಅಸಿಸ್ಟೆಂಟ್ ಸರ್ಜನರು ಅಲ್ಲಿಗೆ ಹೋದಾಗ ಕೊಡುವಂತೆಯೂ ಮಾಡುವುದು. ಈ ಏರ್ಪಾಡು ತುಂಬಾ ಮನೆಗಳ ಗುಂಪುಗಳಿರುವ ಗ್ರಾಮಗಳಿಂದೊಡಗೂಡಿದ ನೀಲಗಿರಿ ಡಿಸ್ಟ್ರಿಕ್ಟಿನಲ್ಲಿ ಸಾಧ್ಯವಾಗಿರಬಹುದು. ಆದರೆ ದೂರ ದೂರ ಮನೆಗಳಿರುವ ನಮ್ಮ ದೇಶದ ಗ್ರಾಮಗಳಲ್ಲಿ ಎಂದಿಗೂ ಪ್ರಯೋಜನಕರವಾಗಲಾರದು. ಡಿ. ಬೋರ್ಡು ಆಸ್ಪತ್ರೆಗಳಲ್ಲಿ ಸ. ಅ. ಸರ್ಜನರುಗಳು ಒಂದು ದಿವಸ ಹಾಜರಿಲ್ಲದೆ ಹೋದರೆ ತುರಿತ ಕೆಲಸಗಳಿಗೆ ಈಗ ಎಷ್ಟೋ ತೊಂದರೆಯಾಗಿ ಕಂಡುಬರುವಲ್ಲು ವಾರದ ಕೆಲವು ದಿವಸಗಳಲ್ಲಿ ಆಸ್ಪತ್ರೆಯನ್ನು ಮುಚ್ಚುವದು ಎಂದೂ ಉಚಿತವಲ್ಲ. ಹೀಗೆ ಮುಚ್ಚುವದರಿಂದ ಗ್ರಾಮಸ್ಥರಿಗೆ ಆಸ್ಪತ್ರೆಗಳಿಂದ ಈಗ ಸಿಕ್ಕುತ್ತಿರುವ ಪ್ರಯೋಜನವನ್ನು ಕಡಿಮೆಮಾಡಿದಂತಾಗಿ ಅವರ ಕಷ್ಟವನ್ನು ಹೆಚ್ಚಿಸಿದಂತಾಗುವದು.

ಗ್ರಾಮಗಳ ಅನಾರೋಗ್ಯಸ್ಥಿತಿಯನ್ನು ಈ ಮೊದಲು ಎಷ್ಟೋ ವರ್ಣಿಸಿದಾಗ್ಯೂ ಸರಕಾರದ ಮೇಲಧಿಕಾರಿಗಳು ಅದನ್ನು ಅರಿತುಕೊಂಡಂತೆ ಕಾಣುವುದಿಲ್ಲ. ಸಿವಿಲ್ ಸರ್ಜನರು ಕೊಡಗಿನ ಸೇನಿಟರಿ ಮೇಲಧಿಕಾರಿಯಂತೆ. ಆದರೆ ಅವರು ಎಷ್ಟು ಗ್ರಾಮಗಳ ಒಳಕ್ಕೆ ನುಗ್ಗಿ ಅವುಗಳ ಅನಾರೋಗ್ಯಸ್ಥಿತಿಯನ್ನು ಖುದ್ದಾಗಿ ನೋಡಿರುವರೊ ತಿಳಿಯದು. ಅವರು ಹಾಗೆ ನೋಡಿದ್ದ ಪಕ್ಷ ಅವುಗಳ ನಿವಾರಣೆ ಬಗ್ಗೆ ಯಾವ ಏರ್ಪಾಡುಗಳನ್ನೂ ಮಾಡುತ್ತಿರುವದು ಕಂಡು ಬರುವದಿಲ್ಲ. ಪ್ರತಿಯೊಂದು ಗ್ರಾಮದೊಳಗೂ ಮೋಟಾರ್ ಗಾಡಿಗಳು ಹೋಗುವ ಅನುಕೂಲಗಳು ಉಂಟಾಗುವ ವರೆಗೆ ಇಂಥಾ ದೊಡ್ಡ ಆಫೀಸರುಗಳಿಗೆ ಗ್ರಾಮಗಳ ನಿಜಸ್ಥಿತಿಯನ್ನು ಖುದ್ದಾಗಿ ನೋಡಿ ಅರಿತುಕೊಳ್ಳುವ ಸಂದರ್ಭವೂ ಸಾಧ್ಯವೂ ಇಲ್ಲದ್ದರಿಂದ ಈ ಕೆಲಸಕ್ಕೆ ಸಬ್ ಅಸಿಸ್ಟೆಂಟ್ ಸರ್ಜನರುಗಳನ್ನೇ ನೇಮಿಸಬೇಕಾಗಿದೆ. ಸದ್ಯಕ್ಕೆ ಉತ್ತರ ಕೊಡಗಿಗೂ, ದಕ್ಷಿಣ ಕೊಡಗಿಗೂ ಒಬ್ಬೊಬ್ಬ ತಿರುಗಾಡುವ ಸ. ಅ. ಸರ್ಜನರನ್ನು ನೇಮಿಸಿದರೆ ಸಾಕಾಗಿದೆ. ಅವರು ಗ್ರಾಮಗಳಲ್ಲೆಲ್ಲಾ ಸುತ್ತಿ ಜನರಿಗೆ ತಮ್ಮ ಮನೆ ಮಠಗಳನ್ನು ಶುಚಿಯಾಗಿ ಇಟ್ಟುಕೊಳ್ಳುವ ಕ್ರಮಗಳನ್ನೂ ರೋಗಗಳ ನಿವಾರಣೆ ಬಗ್ಗೆಯೂ ಗ್ರಾಮಸ್ಥರನ್ನು ಅಲ್ಲಲ್ಲಿ ಸೇರಿಸಿ ಬೋಧನೆ ಕೊಡತಕ್ಕದ್ದು. ಮೇಲೆ ಸೂಚಿಸಿದಂತೆ ತಯಾರಿಸಿಕೊಡುವ ಔಷಧಿಗಳನ್ನು ವಾಡಿಕೆಯಾಗಿರುವ ಕಾಯಿಲೆಗಳಿಗಾಗಿ ಜನರಿಗೆ ಹ್ಯಾಗೆ ಹಂಚಬೇಕೆಂಬುದನ್ನು ಗ್ರಾಮಶಾಲೆಯ ಉಪಾಧ್ಯಾಯರುಗಳಿಗೆ ಹೇಳಿಕೊಡುವದು, ಮತ್ತು ಅವರು (ಉಪಾಧ್ಯಾಯರು) ಅವರ ಸ್ವಾಧೀನಕ್ಕೆ ಕೊಟ್ಟಿರುವ ಔಷಧಿಗಳನ್ನು ನ್ಯಾಯವಾಗಿ ಹಂಚಿರುವರೋ ಎಂದು ಚೆಕ್ಕುಮಾಡುವದು. ಅಲ್ಲದೆ ಸ್ಕೂಲು ವಿದ್ಯಾರ್ಥಿಗಳ ಆರೋಗ್ಯ ಪರೀಕ್ಷೆಯನ್ನು ಮಾಡುವುದು. ಮೇಲಿನ ಮೂರು ಕೆಲಸಗಳನ್ನು ಮಾಡುತ್ತಾ ಈ ಸ. ಅ. ಸರ್ಜನರುಗಳು ತಮ್ಮ ಕೆಲಸದ ರಿಪೋರ್ಟುಗಳನ್ನು ತಿಂಗಳುವಾರು ಸಿವಿಲ್ ಸರ್ಜನರ ಮೂಲಕ ಡಿ. ಬೋರ್ಡಿಗೆ ಕಳುಹಿಸತಕ್ಕದ್ದು. ಈ ಏರ್ಪಾಡನ್ನು ಒಂದೆರಡು ವರ್ಷಗಳ ವರೆಗೆ ಜಾರಿಯಲ್ಲಿಟ್ಟರೆ ಉಪಾಧ್ಯಾಯರುಗಳಿಗೆ ಔಷಧಿ ಕೊಡುವದರಲ್ಲಿ ತಕ್ಕಮಟ್ಟಿಗೆ ಮಾಹಿತಿ ಉಂಟಾಗುವದಲ್ಲದೆ ಗ್ರಾಮಸ್ಥರಿಗೆ ಆರೋಗ್ಯವನ್ನು ಕಾಪಾಡಿಕೊಳ್ಳುವ ತಿಳುವಳಿಕೆಯೂ ಸಾಧಾರಣ ಮಟ್ಟಿಗೆ ಉಂಟಾಗುವದು. ಮಳೆಗಾಲದಲ್ಲು ಈ ಸ. ಅ. ಸರ್ಜನರಿಗೆ ತಿರುಗಾಡಲು ಕಷ್ಟವಾದರೆ ಆಸ್ಪತ್ರೆಯ ಅವಶ್ಯಕತೆಯು ಹೆಚ್ಚಾಗಿರುವ ಅಂದರೆ ಸದ್ಯಕ್ಕೆ ತನಿವಾಳನಂತೆ ಮತ್ತು ಸಂಪಾಜೆ ಇವೆರಡು ಸ್ಥಳಗಳಲ್ಲಿ ಮೂರು ನಾಲ್ಕು ತಿಂಗಳವರೆಗೆ ಇವರು ಇರಬಹುದು. ಈ ಏರ್ಪಾಡನ್ನು ಎರಡು ಮೂರು ವರ್ಷಗಳ ವರೆಗೆ ಪರೀಕ್ಷೆಮಾಡಿ ನೋಡದೆ ಹೋದರೆ ಆರೋಗ್ಯದ ವಿಷಯದಲ್ಲಿ ಗ್ರಾಮಗಳ ಹೀನಸ್ಥಿತಿಯು ಎಂದಿಗೂ ಅಭಿವೃದ್ಧಿಯಾಗಲಾರದು. ಗ್ರಾಮಾಭಿವೃದ್ಧಿಗೆ ಅನುಕೂಲ ಕಲ್ಪಿಸಿಕೊಡದ ರಾಜಕೀಯ ಸುಧಾರಣೆಯು ಎಷ್ಟು ದೊರೆತರೂ ಅದರಿಂದೇನು ಪ್ರಯೋಜನ?

ಈ ಏರ್ಪಾಡಿಗೆ ಹಣವು ಬೇಕಾಗಿದೆ. ಡಿ. ಬೋರ್ಡಿನ ಬರುವ ವರ್ಷದ ಅಂದಾಜು ಉತ್ಪತ್ತಿ ರೂ. 1,26,790 ಮಾತ್ರ. ಅದರಲ್ಲಿ ರೂ. 1,23,630 ಮಾಮೂಲು ಕರ್ಚಿಗೆ ಬೇಕೆಂದು ಅಂದಾಜುಮಾಡಲಾಗಿದೆ. ಅಲ್ಲದೆ ಕೆಲವು ಹೊಸ ಕೆಲಸಗಳ ವಿಷಯ ಚರ್ಚೆಗೆ ಇಡಲ್ಪಟ್ಟಿದೆ. ಗೋಣಿಕೊಪ್ಪಲು ಆಸ್ಪತ್ರೆಯ ಸಿಬ್ಬಂದಿಯನ್ನು ಹೆಚ್ಚಿಸುವದರ ಮತ್ತು ಫ್ರೇಜರ್‌ಪೇಟೆಯಲ್ಲಿ 'ಇನ್‌ಪೇಶಂಟ್ ವಾರ್ಡ' (ಕಾಯಿಲಸ್ಥರನ್ನು ಇಡಲಿಕ್ಕೆ ಬೇಕಾದ ಕೋಣೆಗಳು) ಕಟ್ಟುವದರ ಬದಲು ಒಂದು ಎಂಬ್ಯುಲೆನ್ಸ್ ಕಾರನ್ನು ಇಟ್ಟು ಅದರಲ್ಲಿ ಒಬ್ಬ ಸ. ಅ. ಸರ್ಜನನೂ, ಒಬ್ಬ ವಾರ್ಡ ಹುಡುಗನೂ ತಿರುಗಾಡುವಂತೆ ಮಾಡುವದು ಉತ್ತಮವೆಂದು ಸಿವಿಲ್ ಸರ್ಜನರು ಅಭಿಪ್ರಾಯಕೊಟ್ಟಿರುವರು. ಗ್ರಾಮಗಳಿಗೆಲ್ಲಾ ಮೋಟಾರು ಕಾರು ಹೋಗುವ ವರೆಗೆ ಈ ಎಂಬ್ಯುಲೆನ್ಸ್ ಕಾರಿನಿಂದ ಗ್ರಾಮಸ್ಥರಿಗೆ ಹೆಚ್ಚಿನ ಪ್ರಯೋಜನವೇನೂ ದೊರೆಯಲಿಕ್ಕಿಲ್ಲ. ಇದರ ಬದಲು ಮೇಲೆ ಸೂಚಿಸಿದಂತೆ ತಿರುಗಾಡುವ ಇಬ್ಬರು ಸ. ಅ. ಸರ್ಜನರನ್ನು ನೇಮಿಸುವುದೇ ಒಳ್ಳೇಯದು.

ಕೆಲವು ಡಿ. ಬೋರ್ಡು ಆಸ್ಪತ್ರೆಗಳಿಗೆ 'ಮೈಕ್ರೊಸ್ಕೋಪ್' (ಸೂಕ್ಷ್ಮದರ್ಶಕ ಯಂತ್ರ) ಮತ್ತು ಇನ್ನು ಕೆಲವು ಶಸ್ತ್ರಗಳನ್ನು ತರಿಸಬೇಕೆಂಬುದು ಹೊಸ ವಿಷಯಗಳಲ್ಲಿ ಒಂದಾಗಿದೆ. ಇದಕ್ಕೆ 5,000 ರುಪಾಯಿ ಬೇಕಾಗುವುದಂತೆ. ಈಗ ಮಡಿಕೇರಿ, ವೀರರಾಜಪೇಟೆ ಮತ್ತು ಸೋಮವಾರಪೇಟೆ ಆಸ್ಪತ್ರೆಗಳಲ್ಲಿ ಮೈಕ್ರೊಸ್ಕೋಪುಗಳು ಇರುವುವೆಂದು ತಿಳಿಯುತ್ತೇವೆ. ದೇಶದ ಹಲವು ಕಡೆಗಳಲ್ಲಿ ಈಗ ಬಸ್ಸು ಸರ್ವೀಸುಗಳು ಇರುವುದರಿಂದ ಬೇರೆ ಆಸ್ಪತ್ರೆಗಳಲ್ಲಿ ಕಾಯಿಲೆಯ ಕ್ರಿಮಿಗಳನ್ನು ಸೂಕ್ಷ್ಮದರ್ಶಕ ಯಂತ್ರಗಳ ಮೂಲಕ ನೋಡಬೇಕಾದ ತುರಿತ ಸಂದರ್ಭಗಳಿದ್ದರೂ ಸಹ ಅವುಗಳನ್ನು ಬಸ್ಸುಗಳ ಮೂಲಕ ಮೈಕ್ರೊಸ್ಕೋಪ್ ಇರುವ ಆಸ್ಪತ್ರೆಗಳಿಗೆ ಕಳುಹಿಸಿ ಪರೀಕ್ಷಿಸಿಕೊಳ್ಳಬಹುದು. ಬೋರ್ಡಿನಲ್ಲಿ ಹಣದ ಕ್ಷಾಮವಿರುವ ಈ ಸಮಯದಲ್ಲು ಮೈಕ್ರೊಸ್ಕೋಪುಗಳಿಗೆ ಹಣ ಖರ್ಚುಮಾಡಬೇಕಾದ ತುರಿತ ಕಾಣುವುದಿಲ್ಲ. ಬೋರ್ಡಿನಲ್ಲಿ ತಕ್ಕಷ್ಟು ಉಳುವರಿ ಇರುವಾಗ ಈ ವಿಷಯಕ್ಕೆ ಗಮನಕೊಡಬಹುದು.

ಪೊಳ್ಳಿಬೆಟ್ಟದಲ್ಲಿ ಒಂದು ಆಸ್ಪತ್ರೆಯನ್ನು ತೆರೆಯಬೇಕೆಂಬುದು ಚರ್ಚೆಯ ಇನ್ನೊಂದು ವಿಷಯವಾಗಿದೆ. ಪೊಳ್ಳಿಬೆಟ್ಟದ ಸುತ್ತಮುತ್ತಲಿರುವವರಲ್ಲಿ ಹೆಚ್ಚಿನವರು ಕಾಫಿ ಪ್ಲಾಂಟರುಗಳು. ಅವರಿಗೆ ಮೋಟಾರುಕಾರುಗಳ ಅನುಕೂಲವಿರುವದಲ್ಲದೆ ಪ್ರತಿಯೊಂದು ಕಾಫಿತೋಟದಲ್ಲು ಎತ್ತಿನಗಾಡಿಗಳಿರುತ್ತವೆ. ಅವುಗಳ ಮೂಲಕ ಆಳುಗಳನ್ನು ಸಹ ಐದಾರು ಮೈಲು ದೂರದಲ್ಲಿರುವ ಆಸ್ಪತ್ರೆಗಳಿಗೆ ಕಳುಹಿಸಬಹುದು. ಪೊಳ್ಳಿಬೆಟ್ಟದವರ ಪ್ರಯೋಜನಕ್ಕಾಗಿಯೇ ಪೊಳ್ಳಿಬೆಟ್ಟ ಸಿದ್ದಾಪುರ ರಸ್ತೆಗೆ ಬೋರ್ಡಿನವರು ಕೆಲವು ವರ್ಷಗಳ ಹಿಂದೆ ಬಹಳ ಹಣ ಕರ್ಚುಮಾಡಿರುವರು. ಪೊಳ್ಳಿಬೆಟ್ಟದ ಉತ್ತರ ಭಾಗದವರೆಲ್ಲರೂ 6 ಮೈಲು ದೂರದಲ್ಲಿರುವ ಸಿದ್ದಾಪುರ ಆಸ್ಪತ್ರೆಗೂ ದಕ್ಷಿಣದಲ್ಲಿರುವವರೆಲ್ಲರೂ ಅಷ್ಟೇದೂರವಿರುವ ಗೋಣಿಕೊಪ್ಪಲು ಆಸ್ಪತ್ರೆಗೂ ಹೋಗಬಹುದು. ಪೊಳ್ಳಿಬೆಟ್ಟಕ್ಕಿಂತ ಅನಾನುಕೂಲದ ಸ್ಥಿತಿಯಲ್ಲಿರುವ ಬೇರೆ ಸ್ಥಳಗಳು ಅಂದರೆ, ಶನಿವಾರ ಸಂತೆ, ಸಂಪಾಜೆ, ಕೊಡ್ಲಿಪೇಟೆ, ಮೂರ್ನಾಡು, ಭಾಗಮಂಡಲ ಮೊದಲಾದವುಗಳು ಇರುವಾಗ್ಯೂ ಪೊಳ್ಳಿಬೆಟ್ಟದಲ್ಲಿ ಈಗ ತತ್ಕಾಲ ಆಸ್ಪತ್ರೆ ತೆರೆಯುವುದು ಅವಶ್ಯವಾಗಿ ಕಾಣುವದಿಲ್ಲ.

ಡಿಸ್ಟ್ರಿಕ್ಟ್ ಬೋರ್ಡಿನವರು ಈ ವರೆಗೆ ಗ್ರಾಮಗಳ ಆರೋಗ್ಯಸ್ಥಿತಿಗೆ ಗಮನಕೊಡದೆ ಇರುವುದೇ ದೇಶದ ಅನಾರೋಗ್ಯಕ್ಕೆ ಕಾರಣ. ಇನ್ನಾದರೂ ಬೋರ್ಡಿನವರು ಈ ವಿಷಯದಲ್ಲಿ ತಮ್ಮ ಕರ್ತವ್ಯವನ್ನು ಮಾಡುವರಾಗಿ ನಂಬುತ್ತೇವೆ. ಕ್ಷಯನವೊದಲಾದ ಸಾಧಾರಣದ ಔಷಧಿಗಳನ್ನು ಗ್ರಾಮಸ್ಥರಿಗೆ ಸಾಕಷ್ಟು ದೊರಕಿಸುವದಕ್ಕೂ, ಆರೋಗ್ಯದ ನಿಯಮಗಳನ್ನು ಅವರಿಗೆ ಬೋಧಿಸುವದಕ್ಕೆ ಬೇಕಾಗುವ ತಿರುಗಾಡುವ ಸ. ಅ. ಸರ್ಜನರನ್ನು ನೇಮಿಸುವದಕ್ಕೂ ಬೋರ್ಡಿನವರು ಹಣದ ಕೊರತೆಯನ್ನು ಲಕ್ಷ್ಯಕ್ಕಿಲ್ಲವಾಗಿ ಆಶಿಸುತ್ತೇವೆ. ತತ್ಕಾಲ ಮೆಡಿಕಲ್ ಇಲಾಖೆಯ ಸಮ್ಮಂಧ ಬೇರೆ ವಿಷಯಗಳನ್ನು ಕೈಕೊಳ್ಳದಿದ್ದರೂ ಇದೊಂದನ್ನಾದರೂ ಜಾರಿಗೆ ತರುವದು ಅತಿ ಅಗತ್ಯವೆಂದು ಒತ್ತಿ ಹೇಳಬಲ್ಲೆವು.

ಮಹಾತ್ಮಾ ಗಾಂಧಿಯವರ ಭಾಷಣವು.

(ಕಳದ ವಾರದಿಂದ ಮುಂದರಿಸಿದ್ದು.)

ವಿದೇಶಿಯೋ ಬ್ರಿಟಿಶವೋ,

ಬ್ರಿಟಿಶ ವಸ್ತ್ರಗಳ ಅಥವಾ ಬಹುಜನ ದೇಶಭಕ್ತರು ಸೂಚಿಸುವಂತೆ ಬ್ರಿಟಿಶ ಪದಾರ್ಥಗಳ ಬಹಿಷ್ಕಾರವು ಹಿಂಸಾತ್ಮಕವಾದುದಾಗಿದೆ ಎಂಬ ಮಾತನ್ನು ಬಿಟ್ಟರೂ, ನಿರರ್ಥಕವಾದುದೆಂಬುದನ್ನು ತೋರಿಸಿಕೊಡುವ ಅವಶ್ಯಕತೆಯೇ ಇಲ್ಲ. ನಾನು ಕೇವಲ ಹಿಂದುಸ್ಥಾನದ ಹಿತದೃಷ್ಟಿಯಿಂದಲೇ ಈ ಬಹಿಷ್ಕಾರದ ವಿಷಯದಲ್ಲಿ ಆಲೋಚಿಸುತ್ತಿರುವೆನು. ಎಲ್ಲಾ ಬ್ರಿಟಿಷ ಪದಾರ್ಥಗಳೂ ನಮಗೆ ಹಾನಿಯನ್ನುಂಟುಮಾಡುವದಿಲ್ಲ. ಪುಸ್ತಕಗಳಂತಹ ಅನೇಕ ಪದಾರ್ಥಗಳು ನಮ್ಮ ಬೌದ್ಧಿಕ ಮತ್ತು ಆಧ್ಯಾತ್ಮಿಕ ಹಿತಕ್ಕೂ ಅವಶ್ಯವಾಗಿರುವವು. ಬ್ರಿಟಿಷ ವಸ್ತ್ರಗಳಷ್ಟೇ ಅಲ್ಲ, ಎಲ್ಲ ವಿದೇಶಿ ವಸ್ತ್ರಗಳೂ ಮತ್ತು ಅಲ್ಪ ಪ್ರಮಾಣದಲ್ಲಿ ಹಿಂದುಸ್ಥಾನದ ಗಿರಣಿಯ ಬಟ್ಟೆಗಳೂ ನಮಗೆ ಹಾನಿಯನ್ನುಂಟುಮಾಡುವವು. ಕೈನೂಲು ಖಾದಿಗಳಿಂದ ಪ್ರಾಪ್ತವಾಗುವ ವಿದೇಶಿ ವಸ್ತ್ರಗಳ ಬಹಿಷ್ಕಾರವು ಯಾವ ಪರಿಣಾಮವನ್ನುಂಟುಮಾಡುವದೋ, ಅಂಥ ಪರಿಣಾಮವನ್ನು ಬೇರೆ ಯಾವ ಉಪಾಯದ ಬಹಿಷ್ಕಾರವೂ ಉಂಟುಮಾಡಲಾರದು. ಇದರಿಂದ ಎಲ್ಲಾ ವಿದೇಶಿಗಳ ಬಟ್ಟೆಗೂ ಬಹಿಷ್ಕಾರವನ್ನು ಹಾಕುವದು ಅವಶ್ಯಕವೆಂದು ಕಂಡುಬರುತ್ತದೆ. ಈ ಬಹಿಷ್ಕಾರವು ಶಿಕ್ಷೆಗೋಸ್ಕರವಲ್ಲ; ಇದು ರಾಷ್ಟ್ರದ ಅಸ್ತಿತ್ವಕ್ಕೆ ಅವಶ್ಯಕವಾಗಿದೆ.

ಆಕ್ಷೇಪಗಳ ವಿವೇಚನೆ.

"ರಾಟೆಯು ಮನಸ್ಸನ್ನು ರಂಜಿಸುವದಿಲ್ಲ; ಅದರಿಂದ ಉತ್ಸಾಹವುಂಟಾಗುವದಿಲ್ಲ; ಅದು ಹೆಣ್ಣುಮಕ್ಕಳಿಗೆ ಮಾತ್ರ ಯೋಗ್ಯವಾದ ವ್ಯವಸಾಯವು; ಅದು ಪುನಃ ನಮ್ಮನ್ನು ಮಧ್ಯಯುಗದ ಅನಾಗರಿಕ ಸ್ಥಿತಿಗೆ ತೆಗೆದುಕೊಂಡು ಹೋಗುವದು; ಯಾವ ಶಾಸ್ತ್ರೀಯ ಜ್ಞಾನವನ್ನು ವೃದ್ಧಿಗೊಳಿಸುವದು ಯಂತ್ರದ ಧ್ಯೇಯವಾಗಿದೆಯೋ, ಆ ಶಾಸ್ತ್ರೀಯ ಜ್ಞಾನವೈಭವದ ಪ್ರಗತಿಯನ್ನು ಕುಂಠಿತಗೊಳಿಸುವ ನಿಷ್ಫಲವಾದ ಪ್ರಯತ್ನಕ್ಕೆ ಸಾಧನವಾಗಿರುವದು" ಎಂದು ಆಕ್ಷೇಪಕರು ಆಕ್ಷೇಪಿಸುತ್ತಿರುವರು. ಹಿಂದುಸ್ಥಾನಕ್ಕೆ ಈಗ ಫಲಕಾರಿಯಾದ ಕಾರ್ಯವು ಬೇಕಾಗಿದೆಯೋ ಹೊರತು ಒಣ ಮರುಳು ಬೇಕಾಗಿಲ್ಲವೆಂದು ನಾನು ಭಾವಿಸಿದ್ದೇನೆ. ಲಕ್ಷಾಂತರ ಜನರಿಗೆ ಫಲಕಾರಿಯಾದ ಕಾರ್ಯವು ಹುರುಪುಗೊಳಿಸುವದೂ, ಶಕ್ತಿವರ್ಧಕವೂ ಆಗಿರುತ್ತದೆ. ನಿಜವಾಗಿ ಹೇಳಬೇಕೆಂದರೆ, ರಾಟೆಗೆ ಬೇಕಾದಷ್ಟು ಅವಕಾಶವನ್ನು ನಾವು ಕೊಟ್ಟಿಲ್ಲ. ಬಹು ಜನರು ಇದರ ವಿಷಯದಲ್ಲಿ ಎಷ್ಟು ಅಂತಃಕರಣಪೂರ್ವಕ ಆಲೋಚಿಸಬೇಕಾಗಿದ್ದಿತೊ, ಅಷ್ಟು ಆಲೋಚಿಸುತ್ತಿಲ್ಲವೆಂದು ಹೇ

ಳಲು ನನಗೆ ವಿಷಾದವಾಗುತ್ತದೆ. ಮಹಾ ಸಭಾ ಸಮಿತಿಯ ಸಭಾಸದರು ಕಾಲಕಾಲಕ್ಕೆ ಮಾಡಿದ ನೂಲಿನ ಸಂಬಂಧವಾದ ನಿರ್ಣಯವನ್ನು ಅವರೇ ನಾಗಗೊಳಿಸಿರುವದಿಲ್ಲ. ನಮ್ಮಲ್ಲಿ ಬಹುಜನರಿಗೆ ಅದರ ವಿಷಯದಲ್ಲಿ ವಿಶ್ವಾಸವೇ ಇಲ್ಲ. ಆದ ಕಾರಣ ನೂಲುವ ಕಾರ್ಯವು ಹುರುಪುಗೊಳಿಸತಕ್ಕದಾಗು ದಿಲ್ಲದ್ದರಿಂದ ಅದು ಯಶಸ್ವಿಯಾಗಲಿಲ್ಲವೆಂದು ಹೇಳುವದು ಅನ್ಯಾಯವು. ಅದು ಹೆಣ್ಣುಮಕ್ಕಳಿಗೇನೇ ಯೋಗ್ಯವಾದ ಉದ್ಯೋಗವೆಂದು ಹೇಳುವದೆಂದರೆ ನಿಜಸ್ಥಿತಿಯನ್ನು ಅಲ್ಲಗಳೆಯುವಂತೆಯೇ ಸರಿ. ನೂಲುವ ಗಿರಣಿಯೆಂದರೆ ನೂಲುವ ರಾಟೆಯ ಸಮುದಾಯವು. ಅವುಗಳನ್ನು ನಡಿಸುವವರು ಪುರುಷರಷ್ಟೇ. ಕೆಲವು ಉದ್ಯೋಗಗಳು ಮನುಷ್ಯನ ಯೋಗ್ಯತೆಯನ್ನು ಕಡಿಮೆ ಮಾಡುವವೆಂಬ ಮೂಢಭಾವನೆಯನ್ನು ನಾವು ತೆಗೆದುಹಾಕುವ ಕಾಲವು ಬಂದಿದೆ. ರಾಟೆಯು ಸಾಮಾನ್ಯ ಪರಿಸ್ಥಿತಿಯಲ್ಲಿ ಸ್ತ್ರೀಯರ ಉದ್ಯೋಗವಾಗಿರಬೇಕೆಂಬುದೇನೋ ನಿಜ. ಆದರೆ ಮನೆ ಕಸಬಿನ ಈ ರಾ...ಲ್ಲಿ ಸಾಧ್ಯವಿದ್ದಷ್ಟು ಸುಧಾರಣೆಯಾಗುವದಕ್ಕೋಸ್ಕರ ಭಾವೀ ಸ್ವರಾಜ್ಯದಲ್ಲಿ ಕೆಲವು ಪುರುಷರನ್ನು ಈ ಉದ್ಯೋಗದಲ್ಲಿಡುವದು ಅವಶ್ಯಕವಾಗುವದು. ಪುರುಷರಾದ ನಾವು ನೂಲುವದನ್ನು ಕೈಕೊಳ್ಳದೆ ಇದ್ದಿದ್ದರೆ ಮತ್ತು ಅದರ ವಿಷಯದಲ್ಲಿ ಹಗಲಿರುಳು ವಿಚಾರಮಾಡದೆ ಇದ್ದಿದ್ದರೆ, ಈ ರಾಟೇ ಯಂತ್ರದಿಂದ ಇಷ್ಟು ಪ್ರಗತಿಯಾಗುವದು ಶಕ್ಯವಿರಲಿಲ್ಲ

ಯಂತ್ರ.

ಯಂತ್ರಗಳ ವಿಷಯದಲ್ಲಿಯ ನನ್ನ ವಿಚಾರಗಳ ಬಗ್ಗೆ ತಪ್ಪು ತಿಳುವಳಿಕೆಗಳುಂಟಾಗಿವೆ. ಅವುಗಳನ್ನು ನೀವು ತೆಗದು ಹಾಕಬೇಕೆಂದು ನಾನು ಅಪೇಕ್ಷಿಸುತ್ತೇನೆ. ಅಹಿಂಸೆಯ ವಿಷಯದಲ್ಲಿದ್ದ ನನ್ನ ಎಲ್ಲಾ ವಿಚಾರಗಳನ್ನೂ ರಾಷ್ಟ್ರವು ಸ್ವೀಕರಿಸಬೇಕೆಂದು ನಾನು ಹೇಗೆ ಪ್ರಯತ್ನಿಸುವದಿಲ್ಲವೋ, ಹಾಗೆಯೇ ಯಂತ್ರದ ವಿಷಯದಲ್ಲಿದ್ದ ನನ್ನ ಎಲ್ಲಾ ವಿಚಾರಗಳನ್ನು ರಾಷ್ಟ್ರವು ಅಂಗೀಕರಿಸಬೇಕೆಂದು ನಾನು ಯತ್ನಿಸುವದಿಲ್ಲ.

ರಾಟೆಯು ನಿಜವಾಗಿಯೂ ಒಂದು ಅತ್ಯಂತ ಸುಂದರವಾದ ಯಂತ್ರವಾಗಿದೆ. ಈ ಯಂತ್ರವನ್ನು ಕಂಡು ಹಿಡಿದ ಆ ಅಪರಿಚಿತ ಪ್ರಸಿದ್ಧ ಪುರುಷನಿಗೆ ನಾನು ಭಕ್ತಿಯಿಂದ ಪ್ರತಿನಿತ್ಯ ನಮಸ್ಕರಿಸುತ್ತೇನೆ. 1900 ಮೈಲು ಉದ್ದವಾಗಿಯೂ 1500 ಮೈಲು ಅಗಲವಾಗಿಯೂ ಇರುವ (ಹಿಂದುಸ್ಥಾನ) ದೇಶದಲ್ಲೆಲ್ಲಾ ಜೀವಿಸುವ ಅಸಂಖ್ಯ ಜನರಿಗೆ ಅನ್ನವನ್ನು ದೊರಕಿಸಿಕೊಡುವ ಒಂದೇ ಒಂದಾದ ಈ ಮನೆ ಕಸಬನ್ನು ದುರುಳತನದಿಂದ ನಾಶಮಾಡಿದುದಕ್ಕೋಸ್ಕರ ನನಗೆ ದ್ವೇಷ ಉಂಟಾಗುತ್ತದೆ.

ನೂಲಿನ ಕರವು.

ರಾಟೆಯ ವಿಷಯದಲ್ಲಿ ನನಗೆ ಇಷ್ಟು ಉತ್ಕಟಪ್ರೇಮವು ಏಕಿರುವದೆಂಬದೂ, ಮಹಾಸಭೆಯು ಕೈ ನೂಲನ್ನು ಕರರೂಪದಲ್ಲಿ ಸ್ವೀಕರಿಸಬೇಕೆಂದು ನಾನು ಏಕೆ ಹವಣಿಸುತ್ತಿರುವೆನೆಂಬುದೂ, ಸ್ವರಾಜ್ಯಪಕ್ಷದ ಪರವಾಗಿ ಪಂಡಿತ ಮೋತೀಲಾಲ ನೆಹರೂ ದೇಶಬಂಧು ದಾಸರವರೂ ಇದಕ್ಕೆ ಮನ್ನಣೆಯನ್ನೇಕೆ ಕೊಟ್ಟಿರುವರೆಂಬುದೂ ಸುಲಭವಾಗಿ ತಿಳಿಯತಕ್ಕ ಸಂಗತಿಗಳಾಗಿವೆ. ರಾಷ್ಟ್ರೀಯ ಸಭೆಯಲ್ಲಿ ನನ್ನ ಮಾತೇ ನಡಿಯುತ್ತಿದ್ದರೆ ನೂಲಲು ಒಪ್ಪದವರೂ, ಎಲ್ಲಾ ಪ್ರಸಂಗಗಳಲ್ಲಿಯೂ ಖಾದಿಯನ್ನು ಧರಿಸಲಿಚ್ಛಿಸದವರೂ, ರಾಷ್ಟ್ರೀಯ ಸಭೆಯ ಸಭಾಸದರಾಗಿರಲು ಅವಕಾಶವಿರುತ್ತಿರಲಿಲ್ಲ. ಸ್ವರಾಜ್ಯಪಕ್ಷದವರು ಎಷ್ಟು ಒಪ್ಪಿರುವರೋ ಅಷ್ಟಕ್ಕೋಸ್ಕರ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ನಮ್ಮಲ್ಲಿಯ ದೌರ್ಬಲ್ಯ ಮತ್ತು ಅವಿಶ್ವಾಸಗಳಿಂದ ನಾನು ಕೆಲವುಮಟ್ಟಿಗೆ ಹಿಂಜರಿಯಬೇಕಾಯಿತು. ರಾಟೆ ವಾದಿಗಳಲ್ಲಿ ಪೂರ್ಣ ವಿಶ್ವಾಸ ಉಳ್ಳವರಿಗೆ ಇದರಿಂದ ಹೆಚ್ಚು ಪ್ರಯತ್ನಮಾಡುವ ಪ್ರವೃತ್ತಿಯುಂಟಾಗಬೇಕಾದುದು ಅವಶ್ಯವು.

ಇನ್ನಾವ ಸಂದೇಶವೂ ಇಲ್ಲ.

ರಾಷ್ಟ್ರದ ಮುಂದಿಡಲು ಇದಕ್ಕಿಂತಲು ಒಳ್ಳೆಯದಾದ ಅಥವ ಬೇರ ಯಾವ ಸಂದೇಶವೂ ನನ್ನಲ್ಲಿಲ್ಲದಿರುವುದರಿಂದ ರಾಟೆಯ ವಿಷಯದಲ್ಲಿ ಇಷ್ಟು ವಿಸ್ತಾರವಾಗಿ ವಿವರಿಸಬೇಕಾಯಿತು. ಶಾಂತ ಮತ್ತು ನ್ಯಾಯರೀತಿಯಿಂದಲೇ ನಾವು ಸ್ವರಾಜ್ಯ ಸಂಪಾದಿಸುವವನಾಗಿದ್ದರೆ, ಇದಕ್ಕಿಂತ ಹೆಚ್ಚು ...ಮುಖ್ಯವಾದ ಬೇರೆ ಯಾವ ಉಪಾಯವೂ ನಾನರಿಯೆನು. ಹಿಂಸಾಮಾರ್ಗದ ಹೊರತು ಅಖಿಲ ರಾಷ್ಟ್ರವು ಅನುಸರಿಸಬಹುದಾದ ಉಪಾಯವು ಇದೊಂದೇ ಸರಿ. ಸವಿನಯ ಶಾಸನೋಲ್ಲಂಘನೆಯ ವಿಷಯದಲ್ಲಿ ನಾನು ಸಂಪೂರ್ಣ ನಿಷ್ಠೆಯುಳ್ಳವನಾಗಿದ್ದೇನೆ. ಆದರೆ ವಿದೇಶಿ ವಸ್ತ್ರಗಳನ್ನು ಸಂಪೂರ್ಣ ಬಹಿಷ್ಕರಿಸಲು ಅವಶ್ಯಕವಾದ ಸಾಮರ್ಥ್ಯವನ್ನು ದೊರಕಿಸುವ ವರೆಗೆ, ಸ್ವರಾಜ್ಯ ಪ್ರಾಪ್ತಿಗಾಗಿ ಸವಿನಯ ಶಾಸನೋಲ್ಲಂಘನೆಯನ್ನು ಪ್ರಾರಂಭಿಸುವದು ಅವಶ್ಯಕವೇ ಸರಿ. ರಾಟೆಯ ವಿಷಯದಲ್ಲಿರುವ ನನ್ನ ಅಭಿಪ್ರಾಯಗಳು ನಿಮಗೆ ಮಾನ್ಯವಿರದಿದ್ದರೆ ಮಹಾ ಸಭೆಗೆ ನನ್ನ ನೇತೃತ್ವವು ಏಕೆ ನಿರುಪಯೋಗವಾದುದೆಂಬದನ್ನು ನೀವ ಈಗ ಸಹಜವಾಗಿ ತಿಳಿದುಕೊಳ್ಳಬಹುದು. ರಾಟೆಯಲ್ಲಿ ಅಡಗವಾಗಿರುವ ತತ್ವಗಳ ಈ ನನ್ನ ವಿವೇಚನೆಯು ಸರಿಯಾದುದಲ್ಲವೆಂದು ನಿಮಗೆ ತೋರಿ, ಅಲ್ಲವು ಮಿತ್ರರು ತಿಳಿದಿರುವಂತೆ ರಾಷ್ಟ್ರೀಯ ಸ್ಥಿತಿಯ ಮಾರ್ಗದಲ್ಲಿ ನಾನೊಬ್ಬ ವಿಘ್ನಕಾರಿಯಾಗಿರುವೆನೆಂದು ನೀವು ಭಾವಿಸಿದರೆ ಅದು ತಪ್ಪಾಗಲಾರದು. ನಿಮ್ಮ ಬುದ್ಧಿಗೂ, ನಿಮ್ಮ ಅಂತಃಕರಣಕ್ಕೂ ನನ್ನ ತತ್ವ ವಿವೇಚನೆಯು ಸರಿಯಾದುದೆಂದು ತೋರದಿದ್ದರೆ, ನೀವು ನನ್ನ ಪ್ರಮುಖತ್ವವನ್ನು ನಿರಾಕರಿಸಬೇಕು. ಹಾಗೆಮಾಡದಿದ್ದ ಪಕ್ಷದಲ್ಲಿ, ನೀವು ನಿಮ್ಮ ಕರ್ತವ್ಯವನ್ನು ಮಾಡಿದಂತಾಗುವದಿಲ್ಲ. ಒಮ್ಮೆ ಲಾರ್ಡ ವಿಲ್ಲಿಂಗ್ಡನ್ನರು "ಇಲ್ಲ" ಎಂದು ಹೇಳಲು ನಮ್ಮಲ್ಲಿ ಬಲವೂ ಧೈರ್ಯವೂ ಇಲ್ಲವೆಂದು ಹೇಳಿದುದು ಯಥಾ ಯೋಗ್ಯವೇ ಸರಿ. ಆದರೆ ಪುನಃ ನಮ್ಮ ವಿಷಯದಲ್ಲಿ ಹೀಗೆ ಯಾರೂ ನುಡಿಯದಂತೆ ನಾವು ನಡಿಯಬೇಕು. ನನ್ನ ಸೂಚನೆಯು ನಿಮಗೆ ಮಾನ್ಯವಿರದಿದ್ದ ಪಕ್ಷದಲ್ಲಿ, ಅದನ್ನು ನಿರಾಕರಿಸಿದರೆ ಸ್ವರಾಜ್ಯದ ಮಾರ್ಗದಲ್ಲಿ ತಾವು ನಿಜವಾಗಿಯೂ ಒಂದಡಿ ಮುಂದಿಟ್ಟಂತಾಗುವದು.

ಹಿಂದು ಮುಸಲ್ಮಾನರ ಐಕ್ಯ.

...ದು ಮುಸಲ್ಮಾನರ ಐಕ್ಯವು ರಾಟೆಗಿಂತಲೂ ಕಡಿಮೆ ...ತ್ವದ್ದಾಗಿಲ್ಲ. ಇದು ನಮ್ಮ ಜೀವಿತದ ಉಸಿರಾಗಿದೆ. ಸ್ವರಾಜ್ಯಸಂಪಾದನೆಗೆ ಇದು ಅತ್ಯವಶ್ಯಕವೆಂದು ಪ್ರಾಯಶಃ ಎಲ್ಲರು ಒಪ್ಪುತ್ತಿರುವದರಿಂದ, ಈ ವಿಷಯದಲ್ಲಿ ನಾನು ಹೆಚ್ಚು ಕಾಲವನ್ನು ಕಳೆಯುವದಿಲ್ಲ. ನಾನು 'ಪ್ರಾಯಶಃ' ಎಂಬ ಶಬ್ದವನ್ನು ಉಪಯೋಗಿಸುವದು ಏತಕ್ಕೆಂದರೆ ಕೆಲವು ಹಿಂದು ಜನರು ... ...ವು ಕೇವಲ ಹಿಂದುಗಳದೇ ಆಗದಿದ್ದರೆ, ಮತ್ತು ಕೆಲವು ಮುಸಲ್ಮಾನರು, ಹಿಂದುಸ್ಥಾನವು ಕೇವಲ ಮುಸಲ್ಮಾನರದೇ ಆಗದಿದ್ದರೆ, ಈಗಿನಂತೆ ಇಂಗ್ಲೀಷರ ಅಧೀನರಾಗಿರಲು ಇಷ್ಟಪಡುವವರಾಗಿರುವರೆಂಬದನ್ನು ನಾನು ಬಲ್ಲೆನು. ಸುದೈವದಿಂದ ಇಂಥವರ ಸಂಖ್ಯೆಯು ಅಲ್ಪವಾಗಿದೆ.

ಈಗಿನ ವೈಮನಸ್ಸು ಅಲ್ಪಕಾಲದ ವಿಕಾರವೆಂದು ಆಶಾವಾದಿಗಳಾದ ಶೌಕತ ಆಲ್ಲಿಯವರು ಭಾವಿಸುವಂತೆ ನಾನೂ ಭಾವಿಸುತ್ತೇನೆ. ಹಿಂದುಜನರು ಮುಸಲ್ಮಾನ ಬಾಂಧವರೊಡನೆ ಕೂಡಿಕೊಂಡು ನಡಸಿದ 'ಖಿಲಾಫತ್' ಚಳವಳಿಯೂ ಅನಂತರ ಪ್ರಾರಂಭವಾದ ಅಸಹಯೋಗವೂ ಈ ವರೆಗೆ ನಿದ್ರಿಸುತ್ತಿದ್ದ ಜನತೆಯಲ್ಲಿ ಜಾಗೃತೆಯನ್ನುಂಟುಮಾಡಿದವು. ಸುಶಿಕ್ಷಿತರಲ್ಲಿಯೂ ಅಶಿಕ್ಷಿತರಲ್ಲಿಯೂ ಇವು ಒಂದು ಜಗೆಯ ಹೊಸ ತಿಳುವಳಿಕೆಯನ್ನೇ ಉಂಟುಮಾಡಿದವು. ಅಸಹಕಾರವು ಬಹು ಒರದಿಂದ ನಡೆದಾಗ ನಿರಾಶರಾದ ಕೆಲವು ಸ್ವಾರ್ಥಿಗಳು, ಅದರ ನಾವೀನ್ಯದ ಮೋಹಕತೆಯು ಈಗ ಇಲ್ಲದಂತಾಗಲು, ಅವರಿಗೆ ಅನುವು ದೊರೆತು, ಎರಡೂ ಜಾತಿಯವರ ದುರಭಿಮಾನ ಅಥವಾ ಸ್ವಾರ್ಥವನ್ನು, ತಮ್ಮ ಹಿತಸಾಧನೆಗೆ ಅನುಕೂಲ ಪಡಿಸಿಕೊಳ್ಳುತ್ತಿರುವರು. ಇದರ ಪರಿಣಾಮವು ಕಳೆದೆರಡು ವರ್ಷಗಳಲ್ಲಾದ ಕಲಹದ ಚರಿತ್ರೆಯಲ್ಲಿ ಬರೆಯಲ್ಪಟ್ಟಿದೆ. ಧರ್ಮದ ವಿಪರ್ಯಾಸ ಮಾಡಲ್ಪಟ್ಟಿದೆ. ಅಲ್ಪ ವಿಷಯಗಳಿಗೆ ಧರ್ಮೋಕ್ತಿಗಳ ಹೆಸರಿನಿಂದ ಮಹತ್ವವು ಕೊಡಲಾಗಿದೆ. ಅವುಗಳನ್ನು ಅವಶ್ಯವಾಗಿ ಆಚರಿಸಲೇ ಬೇಕೆಂದು ಪ್ರತಿಪಾದಿಸಲ್ಪಡುತ್ತಿದೆ. ಕಲಹಾಗ್ನಿಯನ್ನು ಹೆಚ್ಚಿಸಲು ರಾಜಕೀಯ ಮತ್ತು ಸಾಂಪತ್ತಿಕ ಕಾರಣಗಳು ಉಪಯೋಗ ಮಾಡಲ್ಪಡುತ್ತವೆ. ಕೋಹಟದಲ್ಲಿ ಅದರ ಪರಮಾವಧಿಯಾಯಿತು. ಸ್ಥಳೀಯ ಅಧಿಕಾರಿಗಳ ಬುದ್ಧಿಪೂರ್ವಕವಾದ ಅಲಕ್ಷ್ಯದಿಂದ ಅನಿಷ್ಟವು ಮತ್ತೂ ಹೆಚ್ಚಿತು. ಈ ಅನರ್ಥದ ಕಾರಣಗಳನ್ನು ಕಂಡುಹಿಡಿಯುವದಕ್ಕಾಗಲಿ ಅದರಲ್ಲಿ ಯಾವ ಯಾವ ಪಕ್ಷಗಳ ಸಂಬಂಧವು ಎಷ್ಟೆಷ್ಟಿತ್ತೆಂಬದನ್ನು ಹೇಳಲಿಕ್ಕಾಗಲಿ ನನಗೆ ಅವಕಾಶವಿಲ್ಲ. ಒಂದುವೇಳೆ ಹೇಳಬೇಕೆಂದಿದ್ದರೂ ನನ್ನಲ್ಲಿ ಸಾಧನಗಳಿಲ್ಲ. ತಮ್ಮ ಜೀವವನ್ನುಳಿಸಿಕೊಳ್ಳುವದರ ಸಲುವಾಗಿ ಹಿಂದು ಜನರು ಓಡಿಹೋದರೆಂದು ಹೇಳಿದರೆ ಸಾಕು. ಕೋಹಾಟದಲ್ಲಿ ಮುಸಲ್ಮಾನರ ಸಂಖ್ಯೆಯು ಬಹು ಹೆಚ್ಚಾಗಿದೆ. ಆದಕಾರಣ ಸರಕಾರದ ಪ್ರಭುತ್ವದಲ್ಲಿ ದೊರೆಯ ಬಹುದಾದಷ್ಟು ಪರಿಣಾಮಕಾರಿಯಾದ ಅಧಿಕಾರವು ಅವರಿಗೆ ದೊರೆತದೆ. ಕೋಹಟದಲ್ಲಿ ಜನರೆಲ್ಲರೂ ಹಿಂದುಗಳೇ ಆಗಿದ್ದರೆ, ಅವರು ಎಷ್ಟು ಸುರಕ್ಷಿತವಾಗಿರುತ್ತಿದ್ದರೋ, ಅಷ್ಟೇ ಸುರಕ್ಷಿತವಾಗಿ ಬಹು ಸಂಖ್ಯಾಕರಾದ ತಮ್ಮ ಮಧ್ಯದಲ್ಲಿ ಹಿಂದುಗಳಿರಲಿಕ್ಕೆ ಒಡುತ್ತದೆಂಬುದನ್ನು ತೋರಿಸುವ ಭಾರವು ಮುಸಲ್ಮಾನರ ಮೇಲಿದೆ. ಓಡಿಹೋದ ಪ್ರತಿಯೊಬ್ಬ ಮನುಷ್ಯನನ್ನು ತಮ್ಮಲ್ಲಿ ಬರಮಾಡಿಕೊಳ್ಳುವವರೆಗೆ ಮುಸಲ್ಮಾನರು ಸಮಾಧಾನಪಡಲಿಕ್ಕಿಲ್ಲ. ಸರಕಾರವು ಬೀಸಿದ ಬಲೆಯಲ್ಲಿ ಹಿಂ... ...ಬೀಳಲಿಕ್ಕಿಲ್ಲವೆಂದೂ ತಮ್ಮ ಧನ ಪ್ರಾಣಗಳ ಸಂರ... ...ವಿಷಯದಲ್ಲಿ ಕೋಹಟದ ಮುಸಲ್ಮಾನರಿಂದ ಸಂಪೂ... ...ಆಶ್ವಾಸನ ದೊರೆಯುವ ವರೆಗೆ ಅವರು ತಿರುಗಿ ಹೋಗ... ಸರ್ವಥಾ ಒಪ್ಪಲಾರರೆಂದೂ ನಾನು ನಂಬಿದ್ದೇನೆ. ಸರಕಾರವು ಕಳ್ಳರಿಂದಲೂ ಸುಲಿಗೆಗಾರರಿಂದಲೂ ಜನರನ್ನು ಸಂರಕ್ಷಿಸಬಹುದು. ಆದರೆ ಒಂದು ಸಮಾಜವು ಇನ್ನೊಂದು ಸಮಾಜದಿಂದ ಸಂಪೂರ್ಣವಾಗಿ ಬಹಿಷ್ಕೃತವಾದರೆ, ಆ ಬಹಿಷ್ಕೃತವಾದ ಸಮಾಜವನ್ನು ಸ್ವರಾಜ್ಯ ಸರಕಾರವೂ ಕೂಡಾ ಸಂರಕ್ಷಿಸಲಾರದು. ಸರಕಾರವು ವಿಶೇಷ ಪರಿಸ್ಥಿತಿಯನ್ನು ಮಾತ್ರ ಎದುರಿಸಬಹುದು. ಆದರ ಉಭಯ ಪಕ್ಷಗಳಲ್ಲಿ ಕಲಹವು ನಿತ್ಯಕ್ರಮವಾಗಿ ಪರಿಣಮಿಸಿದರೆ, ಆ ಆಂತರಿಕ ಕಲಹವನ್ನು ಉಭಯ ಪಕ್ಷಗಳೂ ತಮ್ಮ ತಮ್ಮಲ್ಲಿ ಹೊಡೆದಾಡಿ ತಾವೇ ನಿರ್ಣಯಿಸಿಕೊಳ್ಳಬೇಕಾಗುವದು. ಈಗಿನ ಸರಕಾರವು ಪರಕೀಯವಾಗಿಯೂ ವಸ್ತುತಃ ಲಷ್ಕರೀ ಆಡಳಿತೆಯುಳ್ಳದ್ದಾಗಿಯೂ ಇರುವದರಿಂದ ನಾವು ಎಂಥ ಸಂಘಶಕ್ತಿಯನ್ನುಂಟುಮಾಡಿದರೂ ತನ್ನನ್ನು ಸಂರಕ್ಷಿಸಿಕೊಳ್ಳಲು ಸರಕಾರಕ್ಕೆ ಬೇಕಾದಷ್ಟು ಸಾಧನಗಳಿವೆ. ಆದಕಾರಣ ಸರಕಾರವು ಇಚ್ಛಿಸಿದರೆ, ಸಮಾಜಕಲಹಗಳನ್ನು ನಿಲ್ಲಿಸಲು ಅದಕ್ಕೆ ಸಾಮರ್ಥ್ಯವಿದೆ ಎಂಬುದು ಸಹಜವಾದ ಮಾತಾಗಿದೆ. ಆದರೆ ಕೆಲವು ಮಟ್ಟಿಗಾದರು ಲೋಕಪ್ರಿಯವಾದದ್ದೆಂದೆನಿಸುವ ಯಾವದೇ ಸ್ವರಾಜ್ಯ ಸರಕಾರವೂ ಒತ್ತಾಯದ ತತ್ವದ ಮೇಲಿಂದ ನಡೆಯಲಾರದು. ಸ್ವರಾಜ್ಯವೆಂದರೆ ಹಿಂದು, ಮುಸಲ್ಮಾನ ಮತ್ತು ಬೇರೆ ಸಮಾಜಗಳು ಕೂಡಿ ಸ್ವಸಂತೋಷದಿಂದ ಸಮ್ಮತಿಸಿ ಸ್ಥಾಪಿಸಿದ ರಾಜ್ಯವು. ಹಿಂದುಮುಸಲ್ಮಾನರಿಗೆ ಸ್ವರಾಜ್ಯವು ಬೇಕಾಗಿದ್ದರೆ ಸ್ನೇಹಭಾವದಿಂದ ತಮ್ಮ ಕಲಹವನ್ನು ತಾವೇ ತೀರಿಸಿಕೊಂಡ ಹೊರತು ಬೇರೆ ಗತಿ ಇಲ್ಲ. ದಿಲ್ಲಿಯಲ್ಲಾದ ಐಕ್ಯ ಪರಿಷತ್ತಿನಿಂದ ಧಾರ್ಮಿಕ ವ್ಯಾಜ್ಯಗಳ ನಿರ್ಣಯಕ್ಕೆ ಮಾರ್ಗವು ದೊರೆತಿದೆ. ವಿವಿಧ ಪಕ್ಷಗಳ ಪರಿಷತ್ತು ನಿಯಮಿಸಿದ ಮಂಡಳಕ್ಕೆ ಬೇರೆ ಕಾರ್ಯಗಳೊಂದಿಗೆ, ಕೇವಲ ಹಿಂದುಮುಸಲ್ಮಾನರದಲ್ಲ; ಉಳಿದ ಎಲ್ಲಾ ಜಾತಿ, ಪಂಥ, ಸಂಪ್ರದಾಯಗಳೊಳಗಿನ ಕಲಹವನ್ನು ನಿವಾರಣೆಮಾಡುವದಕ್ಕೋಸ್ಕರ ವ್ಯವಹಾರ್ಯವಾದ ಮತ್ತು ನ್ಯಾಯವಾದ ಉಪಾಯಗಳನ್ನು ಶೋಧಿಸುವ ಕಾರ್ಯವನ್ನೂ ಮಾಡಬೇಕಾಗಿದೆ. ಪ್ರತ್ಯೇಕ ಪ್ರತಿನಿಧ್ಯವನ್ನು ಆದಷ್ಟು ಬೇಗ ತೆಗದು ಹಾಕುವದು ನಮ್ಮ ಧ್ಯೇಯವಾಗಿರಬೇಕು. ಸಾಮಾನ್ಯ ಮತದಾರ ಸಂಘವು ತನ್ನ ಪ್ರತಿನಿಧಿಗಳನ್ನು ಅವರ ಯೋಗ್ಯತೆಯನ್ನನುಲಕ್ಷಿಸಿಯೇ ನಿಷ್ಪಕ್ಷಪಾತದಿಂದ ಆರಿಸಬೇಕು. ನಮ್ಮ ಎಲ್ಲಾ ಅಧಿಕಾರ ಸ್ಥಾನಗಳಲ್ಲಿಯೂ ಯೋಗ್ಯತೆಯುಳ್ಳ ಸ್ತ್ರೀ ಪುರುಷರೇ ಇರಬೇಕು. ಅಂತಹ ಸಮಯವು ಬರುವ ವರೆಗೆ ಎಂದರೆ, ಜಾತಿ ಮಾತ್ಸರ್ಯವೂ ಪಕ್ಷಪಾತವೂ ಅಳಿಯುವ ವರೆಗೆ, ಬಹುಸಂಖ್ಯಾಕರ ಉದ್ದೇಶಗಳ ಬಗ್ಗೆ ಸಂಶಯವೃತ್ತಿಯನ್ನು ಹೊಂದಿದ ಅಲ್ಪ ಸಂಖ್ಯಾಕರ ಮಾತು ನಡೆಯಲಿಕ್ಕ ಬೇಕು. ಮತ್ತು ಬಹು ಸಂಖ್ಯಾಕರು ಸ್ವಾರ್ಥತ್ಯಾಗದ ಮೇಲ್ಪಂಕ್ತಿಯನ್ನು ಹಾಕಿಕೊಡಬೇಕು.

ಅಸ್ಪೃಶ್ಯತಾ.

ಅಸ್ಪೃಶ್ಯತೆಯು ಸ್ವರಾಜ್ಯಮಾರ್ಗದಲ್ಲಿಯ ಮತ್ತೊಂದು ವಿಘ್ನವಾಗಿದೆ. ಹಿಂದು ಮುಸಲ್ಮಾನರ ಐಕ್ಯವು ಸ್ವರಾಜ್ಯಕ್ಕೆ ಎಷ್ಟು ಅವಶ್ಯಕವಿದೆಯೋ, ಅಷ್ಟೇ ಅಸ್ಪೃಶ್ಯತಾ ನಿವಾರಣೆಯೂ ಆಗಿರುವದು. ಇದು ಕೇವಲ ಹಿಂದು ಜನರಿಗೆ ಸಂಬಂಧಿಸಿದ ಪ್ರಶ್ನೆಯಾಗಿದೆ. ತಳ್ಳಲ್ಪಟ್ಟ ಸಮಾಜದವರಿಗೆ ಅವರ ಸ್ವಾತಂತ್ರವನ್ನು ತಿರಿಗಿ ಕೊಟ್ಟ ಹೊರ್ತು, ಹಿಂದು ಜನರಿಗೆ ಸ್ವರಾಜ್ಯದ ಬಗ್ಯೆ ಅಧಿಕಾರ ಉಂಟಾಗದು. ಹಾಗೂ ಅದನ್ನು ಸಂಪಾದಿಸಲು ಸಾಮರ್ಥ್ಯವೂ ಬರದು. ಅತ್ಯಂತ ಜನರನ್ನು ಕೆಳಗೆ ತಳ್ಳಿ, ತಾವೂ ಪತಿತರಾಗಿರುವರು. ಇಂಗ್ಲಿಷ ದಾಳಿಗಾರರು ಈಗ ನಮ್ಮನ್ನು ಯಾವ ಬಗೆಯಾಗಿ ನಡಿಸಿಕೊಳ್ಳುವರೋ—ಅದಕ್ಕೂ ಕಟ್ಟರೀತಿಯಿಂದ ಆಗದಿದ್ದರೂ—ಅದೇ ಬಗೆಯಾಗಿ, ನಾಗಿ ಬಂದ ಆರ್ಯರು ಹಿಂದುಸ್ಥಾನದ ಮೂಲನಿವಾಸಿಗಳನ್ನು ನಡೆಯಿಸಿಕೊಂಡರೆಂದು ಇತಿಹಾಸಕಾರರು ಹೇಳುತ್ತಿರುವರು. ಇದು ಹೀಗಿದ್ದದ್ದಾದರೆ, ಅಸ್ಪೃಶ್ಯ ವರ್ಗವನ್ನು ನಿರ್ಮಿಸಿದುದಕ್ಕಾಗಿ ಈ ದಾಸ್ಯವು ಉಚಿತವಾದ ಶಿಕ್ಷೆಯಾಗಿರುವದು. ನಾವು ಈ ಕಲಂಕವನ್ನು ಬೇಗನೆ ದೂರಮಾಡಿದಷ್ಟು, ಹಿಂದುಗಳಾದ ನಮಗೆ ಹಿತಕರವು. ಆದರೆ ಧರ್ಮಾಧಿಕಾರಿಗಳು ಇದು ದೈವ ನಿಯುಕ್ತವೆಂದು ಪ್ರತಿಪಾದಿಸುತ್ತಾರೆ. ನಾನಾದರೂ ಸ್ವಲ್ಪಮಟ್ಟಿಗೆ ಹಿಂದೂ ಧರ್ಮವನ್ನು ಬಲ್ಲೆನು. ಧರ್ಮಾಧಿಕಾರಿಗಳ ಮಾತು ತಪ್ಪಾದದ್ದೆಂಬ ವಿಷಯದಲ್ಲಿ ನನಗೆ ಯಾವ ಸಂಶಯವೂ ಇಲ್ಲ. ದೇವರು ಮಾನವಜಾತಿಯ ಒಂದು ಭಾಗದವರನ್ನು ಅಸ್ಪೃಶ್ಯರನ್ನಾಗಿ ನಿರ್ಮಿಸಿರುವನೆಂದು ಹೇಳುವದು ನಾಸ್ತಿಕತೆಯ ದ್ಯೋತಕವಾಗಿರುವದು. ಆದಷ್ಟು ಅಲ್ಪಾವಧಿಯಲ್ಲಿ ಈ ದೋಷವನ್ನು ಹೊರದೂಡುವದು ಮಹಾ ಸಭೆಯ ಭಕ್ತರಾದ ಹಿಂದೂ ಜನರ ಕರ್ತವ್ಯವಾಗಿರುವುದು. ವೈಕೋಮದ ಸತ್ಯಾಗ್ರಹಿಗಳು ನಮಗೆ ಮಾರ್ಗದರ್ಶಕರಾಗಿರುವರು. ಅವರು ತಮ್ಮ ಸತ್ಯಾಗ್ರಹದ ಯುದ್ಧವನ್ನು ನಮ್ರತೆಯಿಂದಲೂ ದೃಢಮನಸ್ಸಿನಿಂದಲೂ ನಾಗಿಸುತ್ತಿರುವರು. ಅವರಲ್ಲಿ ತಾಳ್ಮೆಯೂ, ಧೈರ್ಯವೂ ಶ್ರದ್ಧೆಯೂ ವುಂಟು. ಯಾವದೇ ಚಳವಳಿಯಲ್ಲಾದರೂ ಈ ಗುಣಗಳಿದ್ದದ್ದಾದರೆ, ಅದನ್ನು ತಡೆಯಲಸಾಧ್ಯವಾಗುವದು. ರಾಜಕೀಯ ಹೇತುವನ್ನು ಸಾಧಿಸಿಕೊಳ್ಳುವದಕ್ಕಾಗಿ, ಈ ತಳ್ಳಲ್ಪಟ್ಟವರ್ಗದವರನ್ನು ಉಪಯೋಗಿಸಿಕೊಳ್ಳುವ ಪ್ರವೃತ್ತಿಯು ಇತ್ತಿತ್ತ ಕಂಡುಬರುತ್ತದೆ. ಅಂಥ ಪ್ರವೃತ್ತಿಗೀಡಾಗಬಾರದೆಂದು ನನ್ನ ಹಿಂದು ಬಾಂಧವರಿಗೆ ನಾನು ಎಚ್ಚರಿಕೆ ಕೊಡುತ್ತೇನೆ. ಅಸ್ಪೃಶ್ಯತಾ ನಿವಾರಣೆಯು ಹಿಂದು ಜನರು ಹಿಂದು ಧರ್ಮದ ದೇಶದಿಂದಲೂ ತಮ್ಮ ದೇಹಿಯಿಂದಲೂ ಆಚರಿಸಬಹುದಾದ ಪ್ರಾಯಶ್ಚಿತ್ತವಾಗಿದೆ - ಈಗ ಅವಶ್ಯವಾದ ಶುದ್ಧೀಕರಣವು ಅಸ್ಪೃಶ್ಯರನಾಗಿರದೆ ಉಚ್ಚವರ್ಣದವರೆಂದು ಕರೆಯಿಸಿಕೊಳ್ಳುವವರದಾಗಿರುತ್ತದೆ. 'ಅಸ್ಪೃಶ್ಯರದೆಂದೇ' ಎಂದು ಬೆರಳುಮಾಡಿ ತೋರಿಸುವ ವಿಶಿಷ್ಟದುರ್ಗುಣಗಳಾವವೂ ಇಲ್ಲ. ಮಲಿನತೆಯು ಅಸ್ವಚ್ಛತೆ ಇವು ಕೂಡ ಅವರ ವಿಶಿಷ್ಟವಾದ ದುರ್ಗುಣಗಳಲ್ಲ. ನಮ್ಮ ದೋಷಗಳು ನಮಗೆ ಕಾಣಸದಿರುವದಕ್ಕೂ ಮತ್ತು ಯಾರು ನಮ್ಮಿಂದ ತಳ್ಳಲ್ಪಟ್ಟರೋ ಮತ್ತು ಯಾರನ್ನು ನಾವು ದಬ್ಬಿಟ್ಟಿರುತ್ತೇವೆಯೋ ಅಂಥ ನಮ್ಮ ಕಾಲ್ಕೆಳಗೆ ತುಳಿಯಲ್ಪಟ್ಟ ಬಾಂಧವರ ದೋಷಗಳು ನಮಗೆ ದೊಡ್ಡವಾಗಿ ಕಾಣಿಸುವದಕ್ಕೂ 'ಉಚ್ಚ' ಹಿಂದುಗಳಾದ ನಮ್ಮ ಗರ್ವವೇ ಕಾರಣವು. ರಾಷ್ಟ್ರಗಳಂತೆ ಧರ್ಮಗಳು ಕೂಡ ತಕ್ಕಡಿಯಲ್ಲಿ ತೂಗಲ್ಪಡುತ್ತಿರುವವು. ದೇವರ ಕೃಪಾ ಪ್ರಸಾದವೂ ಸಾಕ್ಷಾತ್ಕಾರವೂ ಯಾವದೊಂದು ವಿಶಿಷ್ಟ

ಜಾತಿಗಾಗಲಿ ರಾಷ್ಟ್ರಕ್ಕಾಗಲಿ ದೊರೆಯತಕ್ಕದ್ದೆಂಬ ನಿಯಮವಿಲ್ಲ. ದೇವರನ್ನು ಭಜಿಸುವವರೆಲ್ಲರೂ ಅವಕ್ಕೆ ಸಮಾನಾಧಿಕಾರಿಗಳಾಗಿರುವರು. ಅನ್ಯಾಯ ಅಸತ್ಯ ಅಥವಾ ಹಿಂಸೆ ಇವುಗಳನ್ನು ನಂಬಿದ ಧರ್ಮವೂ ರಾಷ್ಟ್ರವೂ ಭೂತಲದಲ್ಲಿ ಹೇಳಲಿಕ್ಕೆ ಹೆಸರಿಲ್ಲದಂತಾಗುವವು. ದೇವರು ಜ್ಯೋತಿಯು; ಆದರೆ ತಮಸ್ಸಲ್ಲ. ದೇವರು ಪ್ರೇಮವು; ಆದರೆ ದ್ವೇಷವಲ್ಲ. ದೇವರು ಸತ್ಯವು; ಆದರೆ ಅಸತ್ಯವಲ್ಲ. ದೇವರೊಬ್ಬನೇ ದೊಡ್ಡವನು; ಅವನ ಪ್ರಜೆಗಳಾದ ನಾವು ಧೂಳಿಯಾಗಿರುವೆವು. ನಾವು ನಮ್ರವಾಗಿ ಅವನು ಹುಟ್ಟಿಸಿದ ಅತ್ಯಂತ ಕ್ಷುದ್ರಪ್ರಾಣಿಗಳಿಗೂ ಕೂಡ ನಮ್ಮ ಆದರವನ್ನು ತೋರಿಸುವಾ. ಭಗವಾನ್ ಶ್ರೀಕೃಷ್ಣನು ಚಿಂದೆಯನ್ನುಟ್ಟ ಸುದಾಮನ ವಿಷಯದಲ್ಲಿ ಎಷ್ಟು ಆದರವುಳ್ಳವನಾಗಿದ್ದನೋ, ಅಷ್ಟು ಮತ್ತಾರ ವಿಷಯದಲ್ಲೂ ಇದ್ದಿಲ್ಲ. ಪ್ರೇಮವು ಧರ್ಮದ ಹಾಗು ತ್ಯಾಗದ ಮೂಲವಾಗಿರುವದೆಂದೂ, ಈ ನಶ್ವರವಾದ ದೇಹವು ಸ್ವಾರ್ಥ ಮತ್ತು ಅಧರ್ಮಗಳ ಮೂಲವಾಗಿರುವದೆಂದೂ ತುಳಸೀದಾಸರು ಹೇಳುವರು. ಹಿಂದುಗಳಿಗೆ ಸ್ವರಾಜ್ಯ ದೊರೆಯಲಿ, ದೊರೆಯದೆ ಇರಲಿ, ಅವರು ತಮ್ಮ ವೈದಿಕ ತತ್ವಜ್ಞಾನವನ್ನು ಪುನರುಜ್ಜೀವಿಸಿ, ಅದನ್ನು ಜೀವದ್ವಸ್ತುವನ್ನಾಗಿ ಮಾಡಲು ಸಮರ್ಥರಾಗಬೇಕಾದರೆ ಆತ್ಮಶುದ್ಧಿಯನ್ನು ಮಾಡಿಕೊಳ್ಳುವ ಹೊರ್ತು ಗತ್ಯಂತರವಿಲ್ಲ.

ಸ್ವರಾಜ್ಯ ಯೋಜನೆಯು.

ಅದರ ಹಾಗೆಯೂ ಹಿಂದೂ ಮುಸಲ್ಮಾನರ ಐಕ್ಯವೂ ಅಸ್ಪೃಶ್ಯತಾ ನಿವಾರಣೆಯೂ ಸಾಧ್ಯದ ಸಾಧನೆಗಳು ಮಾತ್ರ ಆಗಿವೆ. ಸಾಧ್ಯವನ್ನು ನಾವು ಕಂಡಿಲ್ಲ. ಸಾಧನೆಗಳ ಅರಿಕೆಯಾದರೆ ನನಗಂತೂ ಸಾಕು. ಸಾಧ್ಯ ಸಾಧನಗಳು ನನ್ನ ಜೀವನ ತತ್ವಜ್ಞಾನದಲ್ಲಿ ಪರ್ಯಾಯಶಬ್ದಗಳಾಗಿರುವವು. ಆದರೆ ಜ್ಞಾನವು ಅಸ್ಪಷ್ಟವಾಗಿರದೆ, ಸ್ಪಷ್ಟವಾಗಿರಬೇಕೆಂಬ ಅಭಿಪ್ರಾಯವನ್ನು ಬಾಬೂ ಭಗವಾನದಾಸರವರು ಜನರಮುಂದೆ ಆಗ್ರಹಪೂರ್ವಕವಾಗಿ ಇಟ್ಟಿದ್ದಾರೆ. ನಾನಾದರೂ ಆ ಮತದವನಾಗಿರುವೆನೆಂದು ಈ ಮೊದಲೇ ಹೇಳಿರುವೆನು. ಜನರು ಸ್ವರಾಜ್ಯದ ಪೂರ್ಣ ವ್ಯಾಖ್ಯೆಯನ್ನು ಅಂದರೆ ಅಖಿಲ ಹಿಂದುಸ್ಥಾನಕ್ಕೆ ಯಾವುದು ಬೇಕಾಗಿರುವದೋ ಮತ್ತು ಅದು ಯಾತಕ್ಕೋಸ್ಕರ ಹೆಣಗಬೇಕೋ, ಆ ಸ್ವರಾಜ್ಯದ ಯೋಜನೆಯನ್ನು ಅರಿತಿರಲಿಕ್ಕೆ ಬೇಕು. ಸದ್ಯದಿಂದ ವಿವಿಧ ಪಕ್ಷಗಳ ಪರಿಷತ್ತಿನಿಂದ ನಿಯುಕ್ತವಾದ ಉಪಮಂಡಲಕ್ಕೆ ಈ ಕಾರ್ಯವು ಒಪ್ಪಿಸಲ್ಪಟ್ಟಿದೆ ಮತ್ತು ಎಲ್ಲ ಪಕ್ಷಗಳಿಗೆ ಸಮ್ಮತವಾದ ಯೋಜನೆಯನ್ನು ಮಂಡಲವು ಸಿದ್ಧಗೊಳಿಸುವದೆಂದು ನಾವು ಆಶಿಸುವಾ. ಆ ಮಂಡಲದ ವಿಚಾರಣೆಗಾಗಿ ನನ್ನ ಕೆಲವು ಸೂಚನೆಗಳನ್ನು ಮುಂದಿಟ್ಟಿದ್ದೇನೆ.

೧. ಮತಾಧಿಕಾರದ ಯೋಗ್ಯತೆಯು ಆಸ್ತಿಯನ್ನಾಗಲಿ ವ್ಯಕ್ತಿಯ ಸಾಮಾಜಿಕ ಸ್ಥಿತಿಯನ್ನಾಗಲಿ ಅವಲಂಬಿಸಿರಕೂಡದು. ಆದರೆ ಈಗ ಮಹಾಸಭೆಯ ಸಭಾಸದತ್ವದ ವಿಷಯದಲ್ಲಿ ಸೂಚಿಸಲ್ಪಟ್ಟಂತೆ ಕೆಲಸವನ್ನು ಅವಲಂಬಿಸಿರಬೇಕು. ಮತಾಧಿಕಾರದ ವಿಷಯದಲ್ಲಿ ಸಾಕ್ಷರತೆಯಿಂದಾಗಲಿ ಅಥವಾ ಆಸ್ತಿಯಿಂದಾಗಲಿ ಬರುವ ಯೋಗ್ಯತೆಗಳು ಭ್ರಮಕವಾದವುಗಳೆಂದು ಸಿದ್ಧವಾಗಿದೆ. ರಾಜ್ಯದ ಆಡಳಿತೆಯಲ್ಲಿಯೂ ಅದನ್ನು ಸುಸ್ಥಿತಿಯಲ್ಲಿಡುವದರಲ್ಲಿಯೂ ಸೇರಲಿಚ್ಛಿಸುವವರಿಗೆಲ್ಲ ಕೈಕೆಲಸದಿಂದ ಅವಕಾಶ ದೊರೆಯುವುದು.

೨. ಶಾಂತತೆಯ ಕಾಲದಲ್ಲಿ ಮಿತ್ರಜೀವಿತಗಳನ್ನು ಸಂರಕ್ಷಿಸಲು ಅವಶ್ಯವಿದ್ದಷ್ಟು ಬಿಟ್ಟು ಘಾತಕವಾದ ಹೆಚ್ಚಿನ ಲಷ್ಕರೀ ವೆಚ್ಚವನ್ನು ಕಡಿಮೆಮಾಡಲಿಕ್ಕೇಬೇಕು.

೩. ನ್ಯಾಯವು ಅಲ್ಪ ವೆಚ್ಚದಿಂದ ದೊರೆಯುವಂತಾಗಬೇಕು. ಈ ಉದ್ದೇಶದಿಂದಲೇ ವರಿಷ್ಠ ನ್ಯಾಯ ಸಭೆಯು ಲಂಡನದಲ್ಲಿರದೆ ದಿಲ್ಲಿಯಲ್ಲಿರಬೇಕು. ಬಹು ತರ ಎಲ್ಲ ದಿವಾಣೀ ಪ್ರಕರಣಗಳಲ್ಲಿ ಪಕ್ಷಕಾರರಿಗೆ ತಮ್ಮ ವ್ಯಾಜ್ಯಗಳನ್ನು ಪಂಚಾಯತರ ಮುಖಾಂತರದಿಂದ ತೀರಿಸಿಕೊಳ್ಳಲು ಅಗತ್ಯಪಡಿಸಬೇಕು. ಕಾಯಿದೆಯ ಪ್ರತ್ಯಕ್ಷ ದುರುಪಯೋಗ ಮತ್ತು ಲಂಚ ಮುಂತಾದ ಪ್ರಸಂಗಗಳನ್ನು ಹೊರ್ತುಪಡಿಸಿ, ಉಳಿದ ಎಲ್ಲ ಪ್ರಸಂಗಗಳಲ್ಲಿ ಪಂಚಾಯತರು ಮಾಡಿದ್ದೇ ಕೊನೆಯ ತೀರ್ಮಾನವು. ಮಧ್ಯಂತರದ ಅನೇಕ ನ್ಯಾಯಸಂಸ್ಥೆಗಳನ್ನು ತೆಗೆದುಹಾಕಬೇಕು. ನ್ಯಾಯಸ್ಥಾನಗಳಿಂದಾದ ತೀರ್ಮಾನುಗಳಿಗೆ ಕಾಯಿದೆ ಸ್ವರೂಪವು ಬರಕೂಡದು. ನ್ಯಾಯ ನಡೆಯಿಸುವ ಸಾಮಾನ್ಯ ಕ್ರಮವು ಹೆಚ್ಚು ಸುಲಭವಾಗಿ ಮಾಡಲ್ಪಡಬೇಕು. ಬಹು ತೊಡಕಿನ ಮತ್ತು ಕಗ್ಗಳಾದ ಇಂಗ್ಲಿಷ ಕ್ರಮವನ್ನು ನಾವು ಕಣ್ಣುಮುಚ್ಚಿಕೊಂಡು ಅನುಸರಿಸಿದೆವು, ಪಕ್ಷಕಾರರಿಗೆ ತಮ್ಮ ನ್ಯಾಯಗಳನ್ನು ತಾವೇ ನಡಿಸಲು ಹಗುರವಾಗುವಂತೆ ಕ್ರಮವನ್ನು ಸುಲಭ ಮಾಡಬೇಕೆಂಬುದರ ಕಡೆಗೆ ವಸಾಹತಿಗಳ ಪ್ರವೃತ್ತಿಯು ಇರುತ್ತದೆ.

(೪) ಮಾದಕ ದ್ರವ್ಯಗಳಿಂದ ಉತ್ಪನ್ನವನ್ನು ಮಾಡಿಕೊಳ್ಳಕೂಡದು.

(೫) ದೇಶದ ಸಾಮಾನ್ಯ ಸ್ಥಿತಿಗನುಗುಣವಾಗಿರುವಂತೆ ದಿವಾಣಿ ಮತ್ತು ಲಷ್ಕರಿ ಅಧಿಕಾರಿಗಳ ಸಂಬಳವನ್ನು ಇಳಿಸಬೇಕು.

(೬) ಭಾಷಾನುಗುಣವಾಗಿ ಪ್ರಾಂತಗಳ ಪುನರ್ವಿಭಾಗ ಆಗಬೇಕು. ಮತ್ತು ಪ್ರತಿಯೊಂದು ಪ್ರಾಂತಕ್ಕೆ ತನ್ನ ಒಳಗಣ ಆಡಳಿತೆಗಾಗಿಯೂ, ಬೆಳವಣಿಗೆಗಾಗಿಯೂ ಶಕ್ಯವಿದ್ದಮಟ್ಟಿಗೆ ಸ್ವಾಯತ್ತತೆಯು ಬೇಕು.

(೭) ಪರದೇಶಸ್ಥರಿಗೆ ಕೊಡಲ್ಪಡುವ ಸರ್ವಾಧಿಕಾರಗಳ ಪರೀಕ್ಷಣೆಗಾಗಿ ವಿಚಾರಮಂಡಲಗಳನ್ನೇರ್ಪಡಿಸಬೇಕು. ನ್ಯಾಯದಿಂದ ಸಂಪಾದಿಸಿದಂಥ ಬಹು ದಿನದಿಂದ ಸ್ಥಿರವಾಗಿ ನೆಲೆಗೊಂಡ ಹಕ್ಕುಗಳಿಗೆ ಬಾಧೆಯಾಗದಂತೆ, ವಿಚಾರಣಾಮಂಡಲಗಳ ನಿರ್ಣಯಕ್ಕನುಸರಿಸಿ ಆಶ್ವಾಸನೆಯನ್ನು ಕೊಡಬೇಕು.

(೮) ಮಧ್ಯವರ್ತಿ ಸರಕಾರದಿಂದ ಯಾವ ಬಗೆಯ ತೊಂದರೆಯಿಲ್ಲದೆ ಅವರವರ ಗೌರವವು ಉಳಿಯುವಂತೆ ಆಶ್ವಾಸನವು ಸಂಸ್ಥಾನಿಕರಿಗೆ ದೊರೆಯಬೇಕು. ಆದರೆ ಆಯಾ ಸಂಸ್ಥಾನದೊಳಗಿನ ಪ್ರಜೆಗಳು ಪೀನಲಕೋಡಿನ ವಿರುದ್ಧ ಅಪರಾಧಗಳನ್ನು ಮಾಡದೆ ಇದ್ದ ಪಕ್ಷದಲ್ಲಿ, ಸ್ವತಂತ್ರ ಹಿಂದುಸ್ಥಾನದಲ್ಲಿ ಆಶ್ರಯವನ್ನು ಹೊಂದಲು ಅವರಿಗೆ ಅಧಿಕಾರವಿರತಕ್ಕದ್ದು.

(೯) ಎಲ್ಲ ಅನಿಯಂತ್ರಿತವಾದ ಅಧಿಕಾರಗಳು ಇಲ್ಲದಾಗಬೇಕು.

(೧೦) ಅತ್ಯುಚ್ಚಪದವನ್ನು ಪಡೆಯಲು ಅವಶ್ಯವಾದ ಯೋಗ್ಯತೆಯುಳ್ಳ ಎಲ್ಲ ಜನರಿಗೂ ಅಧಿಕಾರವಿರತಕ್ಕದ್ದು. ದಿವಾಣಿ ಮತ್ತು ಲಷ್ಕರಿ ಅಧಿಕಾರಗಳ ಬಗ್ಗೆ ಪರೀಕ್ಷೆಗಳು ಹಿಂದುಸ್ಥಾನದಲ್ಲಿಯೇ ಆಗತಕ್ಕದ್ದು.

(೧೧) ಭಿನ್ನ ಭಿನ್ನ ಪಂಥದವರಿಗೆ ಪೂರ್ಣ ಧಾರ್ಮಿಕ ಸ್ವಾತಂತ್ರ್ಯವಿರತಕ್ಕದ್ದು. ಪರಸ್ಪರರ ಬಗ್ಗೆ ಸಹಿಷ್ಣುತೆ ಇರತಕ್ಕದ್ದು.

(೧೨) ಪ್ರಾಂತಿಕ ಸರಕಾರಗಳ, ಕಾಯಿದೆಮಂಡಲಗಳ ಮತ್ತು ಕೋರ್ಟುಗಳ ವ್ಯವಹಾರವು ಕೆಲವೊಂದು ನಿಯಮಿತ ಅವಧಿಯಲ್ಲಿ ಆಯಾಪ್ರಾಂತದ ಭಾಷೆಯಲ್ಲಿಯೇ ನಡೆಯುವಂತೆ ಏರ್ಪಾಡಾಗತಕ್ಕದ್ದು. ಪ್ರಿವ್ಹಿಕೌನ್ಸಿಲಿನ ಹಾಗೂ ವರಿಷ್ಠ ಕೋರ್ಟುಗಳ ಭಾಷೆಯು ಹಿಂದುಸ್ಥಾನಿಯಾಗಿರಬೇಕು. ಲಿಪಿಯು ದೇವನಾಗರಿಯಾಗಲಿ ಪಾರ್ಸಿಯಾಗಲಿ ಇರತಕ್ಕದ್ದು. ಮಧ್ಯವರ್ತಿ ಸರಕಾರದ ಮತ್ತು ಮಧ್ಯವರ್ತಿ ಕಾಯಿದೆ ಕೌನ್ಸಿಲಿನ ಭಾಷೆಯು ಹಿಂದುಸ್ಥಾನಿಯಾಗಬೇಕು. ಅಂತರರಾಷ್ಟ್ರೀಯ ರಾಜಕಾರಣದ ಭಾಷೆಯು ಇಂಗ್ಲೀಷ ಇರತಕ್ಕದ್ದು.

ನಾನು ಪಡೆಯಲಿಚ್ಛಿಸುವ ಸ್ವರಾಜ್ಯಕ್ಕೆ ಅವಶ್ಯಕವಾದ ಹಲವು ಸಂಗತಿಗಳ ಬಗ್ಗೆ ಮೇಲ್ಕಾಣಿಸಿದ ರೂಪರೇಷೆಯನ್ನು ನೋಡಿ, ಇದೊಂದು ಕಲ್ಪನಾರಾಜ್ಯದಲ್ಲಿಯ ನನ್ನ ಸ್ವೈರವಿಹಾರವೆಂದು ತಿಳಿದು ನೀವು ನಗಲಿಕ್ಕಿಲ್ಲವೆಂದು ನಾನು ನಂಬುತ್ತೇನೆ. ನಾನು ಉಲ್ಲೇಖಿಸಿದ ಸಂಗತಿಗಳನ್ನೆಲ್ಲ ಪಡೆಯಲು ಅಥವಾ ನೆರವೇರಿಸಲು ನಮ್ಮಲ್ಲಿ ಸಾಮರ್ಥ್ಯವಿರಲಿಕ್ಕಿಲ್ಲ. ನಮ್ಮಲ್ಲಿ ಸಂಕಲ್ಪವಿದೆಯೋ? ನಾವು ಇಚ್ಛೆಯನ್ನಾದರೂ ಬೆಳೆಯಿಸುವಾ. ವಿಚಾರತರಂಗಗಳಿಗೆ ಅವಕಾಶಕೊಡುವದರಿಂದ ಅತ್ಯಂತ ಚಿತ್ತಾಕರ್ಷಕವಾದ ಈ ವಿಷಯವನ್ನು ಮುಗಿಸುವ ಮೊದಲು, ಸ್ವರಾಜ್ಯ ಯೋಜನೆಯನ್ನು ತಯಾರಿಸಲು ಕುಳಿತ ಮಂಡಳದವರಿಗೆ ಯಾವನೊಬ್ಬ ವ್ಯಕ್ತಿಯ ಸೂಚನೆಗಳಿಗೆ ಕೊಡುವಷ್ಟು ಲಕ್ಷ್ಯಕ್ಕಿಂತ ಹೆಚ್ಚಿನ ಲಕ್ಷ್ಯವನ್ನು ನನ್ನ ಸೂಚನೆಗಳಿಗೆ ಕೊಡಬೇಕೆಂದು ನಾನು ಇಚ್ಛಿಸುವದಿಲ್ಲವೆಂದು ಖಂಡಿತವಾಗಿ ಹೇಳುತ್ತೇನೆ. ಎರಡನೆಯ ಯಾವ ಬಗೆಯಿಂದ ನನ್ನ ವಿಚಾರಗಳು ಎಷ್ಟು ಪ್ರಸಾರವಾಗುವವೋ ಅದಕ್ಕೂ ಹೆಚ್ಚು ಪ್ರಸಾರವಾಗಬೇಕೆಂಬ ಉದ್ದೇಶದಿಂದಲೇ ನನ್ನ ಈ ಭಾಷಣದಲ್ಲಿ ಅವುಗಳನ್ನು ಸೇರಿಸಿದ್ದೇನೆ.

ಸ್ವಾತಂತ್ರ್ಯ.

ಬ್ರಿಟಿಷರೊಡನೆ ಸಮಾನಸ್ಕಂಧತೆಯ ಹಾಗೂ ಗೌರವಪೂರ್ಣವಾದ ಸಂಬಂಧವು ನಮ್ಮದು ಉಳಿಯುವದೆಂದು ಗ್ರಹಿಸಿ ನಾನೀ ಮೇಲಿನ ರೂಪರೇಷೆಯನ್ನು ಮುಂದಿಟ್ಟಿರುವೆನು. ಆದರೆ ಮಹಾಸಭೆಯ ಭಕ್ತರಲ್ಲಿ, ಎಲ್ಲಾ ಪರಿಸ್ಥಿತಿಗಳಲ್ಲಿಯೂ ಬ್ರಿಟಿಷರ ಸಂಬಂಧವನ್ನು ಹರಿಬೊಗೆದು ಪೂರ್ಣ ಸ್ವಾತಂತ್ರ್ಯ ಬಯಸುವಂಥ ಕೆಲವು ಜನರಿರುವರೆಂಬುದನ್ನು ನಾನು ಬಲ್ಲೆನು. ಅವರಿಗೆ ಬ್ರಿಟಿಷರೊಡನೆ ಸಮಾನ ಸ್ಕಂಧತೆಯೂ ಕೂಡ ಬೇಡ. ಬ್ರಿಟಿಷರು ಈಗ ಹೇಳುತ್ತಿರುವಂತೆ ಅಂತಃಕರಣಪೂರ್ವಕವಾಗಿ ನಮಗೆ ಸಮಾನಸ್ಕಂಧರಾಗಲು ನೆರವಾದರೆ, ಬ್ರಿಟಿಷರ ಸಂಬಂಧವನ್ನು ಪೂರ್ಣವಾಗಿ ಹರಿದೊಗೆಯುದಕ್ಕಿಂತ ಇದು ಹೆಚ್ಚಿಗೆ ಶ್ರೇಯಸ್ಕರವೆಂದು ನಮಗೆ ತೋರುತ್ತದೆ. ಆದ್ದರಿಂದ ನಾನು ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ಸಲುವಾಗಿ ಪ್ರಯತ್ನಿಸುತ್ತೇನೆ. ಆದರೆ ಬ್ರಿಟಿಷರ ಸ್ವಂತ ತಪ್ಪಿನ ಮೂಲಕ ಅವರ ಸಂಬಂಧವನ್ನು ತೆಗೆದುಹಾಕುವದು ಅವಶ್ಯವೆಂದು ಕಂಡು ಬಂದರೆ, ಅವರ ಎಲ್ಲ ಸಂಬಂಧಗಳನ್ನು ಕಿತ್ತುಹಾಕಲು ನಾನು ಹಿಂದುಮುಂದೆ ನೋಡುವದಿಲ್ಲ. ಈ ಪ್ರಕಾರ ಅವರಿಂದ ನಾವು ಪ್ರತ್ಯೇಕವಾದರೆ, ಅದರ ಭಾರವನ್ನೆಲ್ಲ ಅವರ ತಲೆಯ ಮೇಲೆಯೇ ಇಡುವೆನು. ಪೂರ್ಣ ಸ್ವತಂತ್ರರಾಗಿದ್ದು ತಮ್ಮ ತಮ್ಮೊಳಗೆ ಜಗಳಾಡುವಂಥ ರಾಷ್ಟ್ರಗಳು ಬೇಕಿರದೆ, ಪರಸ್ಪರಾವಲಂಬಿಗಳಾಗಿ ಬಂಧುಭಾವದಿಂದಿರುವ ರಾಷ್ಟ್ರಗಳ ಸಂಘವು ಬೇಕಿರುವದೆಂದು ಜಗತ್ತಿನಲ್ಲಿಯ ವಿವೇಕಿಗಳಾದ ಜನರು ಇಚ್ಛಿಸುವರು. ಈ ಸ್ಥಿತಿಯು ಬರಬೇಕಾದರೆ, ಬಹುಕಾಲವು ಹೋಗಬಹುದು. ಆದರೆ ನನ್ನ ದೇಶದ ಸಲುವಾಗಿ ನಾನು ಏನೋ ಒಂದು ದೊಡ್ಡ ಹಕ್ಕನ್ನು ಬೇಡಲಿಚ್ಛಿಸುವುದಿಲ್ಲ. ಸಂಪೂರ್ಣ ಸ್ವಾತಂತ್ರ್ಯವನ್ನಪೇಕ್ಷಿಸದೆ, ಸಾರ್ವತ್ರಿಕ ಪರಸ್ಪರಾವಲಂಬನೆಯನ್ನಿಚ್ಛಿಸಿದರೆ, ಅದು ಏನೂ ಅಷ್ಟು ದೊಡ್ಡದಾದ ಅಥವಾ ಅಶಕ್ಯವಾದ ಮಾತಾಗುವದಿಲ್ಲ. ಹಿಂದುಸ್ಥಾನದೊಂದಿಗೆ ಗೌರವಪೂರ್ಣವಾದ ಸಂಬಂಧವನ್ನು ಇಟ್ಟುಕೊಳ್ಳುವದು ಅಥವಾ ಬಿಡುವದು ಬ್ರಿಟನ್ನದ ಮಾತಾಗಿದೆ. ನಾನು ಸ್ವಾತಂತ್ರ್ಯವನ್ನು ಸಾರಲಿಚ್ಛಿಸುವದಿಲ್ಲ; ಆದರೆ ಪೂರ್ಣ ಸ್ವತಂತ್ರರಾಗಿರುವ ಯೋಗ್ಯತೆಯನ್ನು ಮಾತ್ರ ಬಯಸುತ್ತೇನೆ. ಸಾಮ್ರಾಜ್ಯದೊಳಗೆ ಹಿಂದುಸ್ಥಾನವು ಸಮಾನಸ್ಕಂಧವಾಗುವಂತೆ ಮಾಡುವದು ನನ್ನ ಧ್ಯೇಯವಿರುವದೆಂದು ಬ್ರಿಟನ್ನವು ಹೇಳುತ್ತಿರುವ ವರೆಗೆ, ನಾನು ಯೋಜಿಸುವ ಯೋಜನೆಯಲ್ಲಿ ಬ್ರಿಟಿಷರೊಡನೆ ಸಂಬಂಧವನ್ನು ಪ್ರತಿಪಾದಿಸುವೆನಲ್ಲದೆ, ಸಂಬಂಧರಹಿತ ಸ್ವಾತಂತ್ರ್ಯವನ್ನು ಪ್ರತಿಪಾದಿಸಲಾರೆನು. ಪ್ರತಿಯೊಂದು ಸಂದರ್ಭದಲ್ಲಿ ಸ್ವಾತಂತ್ರ್ಯದ ಬಗ್ಗೆ, ರಾಷ್ಟ್ರಸಭೆಯ ಭಕ್ತನು ಹಟ ಹಿಡಿಯಬಾರದೆಂದು ನಾನು ಆಗ್ರಹಪೂರ್ವಕವಾಗಿ ಹೇಳಬಿಚ್ಛಿಸುತ್ತೇನೆ. ಸ್ವಾತಂತ್ರ್ಯವೇನೂ ಅಶಕ್ಯಕೋಟಿಯೊಳಗಿನದಲ್ಲ. ಆದರೆ ನಮ್ಮನ್ನು ಸಮಾನಸ್ಕಂಧರನ್ನಾಗಿ ಮಾಡುವದು ತನ್ನ ಉದ್ದೇಶವಿರುವದೆಂದು ಮೇಲೆ ಮೇಲೆ ಮಾತ್ರ ಹೇಳಿ, ನಿಜವಾಗಿ ನಮ್ಮನ್ನು ನಿರಂತರ ದಾಸ್ಯದಲ್ಲಿಡಲು ಬ್ರಿಟನ್ನವು ಬಯಸುತ್ತದೆಂಬುವದು ಸಂಪೂರ್ಣವಾಗಿ ಸ್ಪಷ್ಟವಾಗುವ ವರೆಗೆ, ಪೂರ್ಣ ಸ್ವಾತಂತ್ರ್ಯವು ಅನವಶ್ಯಕವಾದುದು.

ಸ್ವರಾಜ್ಯ ಪಕ್ಷವು.

ಇಲ್ಲಿಯ ವರೆಗೆ ಒಪ್ಪಿಗೆಯ ಪತ್ರದಲ್ಲಿ ಉಲ್ಲೇಖಿಸಿದ ವಿಷಯಗಳ ಬಗ್ಗೆ ಹಾಗೂ ಅದರಿಂದ ಹೊರಡುವ ಸಾಮಾನ್ಯ ವಿಷಯಗಳ ಬಗ್ಗೆ ವಿವೇಚಿಸಿದ್ದಾಯಿತು. ಸ್ವರಾಜ್ಯ ಪಕ್ಷಕ್ಕೆ ಸಮಾನತೆಯನ್ನು ಕೊಟ್ಟದ್ದರ ವಿಷಯದಲ್ಲಿ ಬಹಳ ಹೇಳುವದು ಅವಶ್ಯವಿಲ್ಲ. ಸ್ವರಾಜ್ಯ ಪಕ್ಷದ ಬಗ್ಗೆ ಮಾತನ್ನೆತ್ತುವದನ್ನು ಬಿಟ್ಟುಬಿಡಲು ಒದುವಂತಿದ್ದರೆ ಒಳಿತಾಗುತ್ತಿತ್ತು. ಏಕೆಂದರೆ ಆ ಪಕ್ಷವು ಯೋಗ್ಯತೆಯುಳ್ಳದ್ದಿರುವದಿಲ್ಲೆಂತಿಲ್ಲ; ಆದರೆ ಕೌನ್ಸಿಲ್ ಪ್ರವೇಶದ ಅದರ ವಿಚಾರಗಳು ನನಗೆ ಸರಿದೋರುವದಿಲ್ಲ. ಆದರೆ ನಾನು ಮಹಾಸಭೆಯಲ್ಲುಳಿದು ಅದರ ನೇತೃತ್ವವನ್ನು ವಹಿಸುವದಿದ್ದರೆ, ವಸ್ತುಸ್ಥಿತಿಯನ್ನು ಇದ್ದಕಿದ್ದಂತೆ ಕಂಡುಹಿಡಿಯುವದು ಒಳಿತು. ಮಹಾಸಭೆಯಿಂದ ಹೊರಬೀಳುವದಾಗಲಿ, ಅಧ್ಯಕ್ಷಸ್ಥಾನದ ಬಹುಮಾನವನ್ನು ಸ್ವೀಕರಿಸದಿರುವದಾಗಲಿ ನನಗೆ ಬಹಳ ಹಗುರಾದ ಮಾತಾಗಿತ್ತು. ಹಾಗೆ ಮಾಡುವುದು ದೇಶಹಿತದ ದೃಷ್ಟಿಯಿಂದ ಸರಿಯಲ್ಲವೆಂದು ನನಗೆ ತೋರಿತು; ಈಗಲಾದರೂ ತೋರುತ್ತದೆ. ಸ್ವರಾಜ್ಯ ಪಕ್ಷದವರು ಮಹಾಸಭೆಯಲ್ಲಿ ಬಹು ಸಂಖ್ಯಾಕರಾಗಿರದಿದ್ದರೂ, ಬಲವಾದ ಹಾಗೂ ಹೆಚ್ಚುತ್ತಿರುವ ಅಲ್ಪ ಸಂಖ್ಯಾಕರಾಗಿರುವರು. ಯೋಗ್ಯತೆಯ ವಿಷಯದ ಮೇಲೆ ನಾನು ಮಹಾಸಭೆಯಲ್ಲಿ ಭೇದವನ್ನು ಹುಟ್ಟಿಸಬಾರದಾದ ಪಕ್ಷದಲ್ಲಿ, ನನ್ನ ಸದಸದ್ವಿವೇಕ ಬುದ್ಧಿಗೆ ವಿರುದ್ಧವಿಲ್ಲದ ಕರಾರುಗಳನ್ನು ಸ್ವರಾಜ್ಯ ಪಕ್ಷದವರು ಹೇಳಿದರೆ, ಅವುಗಳಿಗೊಪ್ಪುವದು ನನ್ನ ಕರ್ತವ್ಯವಾಗುವದು. ಅವರು ಹಾದಿಯನ್ನು (ನ್ಯಾಯವನ್ನು) ಬಿಟ್ಟು ಮಾತಾಡುವವರಲ್ಲವೆಂದು ನನ್ನ ಅಭಿಪ್ರಾಯವು. ತಮ್ಮ ಧೋರಣದ ಸಲುವಾಗಿ ಮಹಾಸಭೆಯ ಹೆಸರನ್ನು ಉಪಯೋಗ ಮಾಡಿಕೊಳ್ಳಲು ಅವರು ಇಚ್ಛಿಸುವರು. ತಮ್ಮ ಧೋರಣವು ಅಸಹಕಾರಿಗಳಿಗೆ ಬಂಧನವಾಗದಂತೆ, ತಮಗೆ ಹಾಗೆ ಮಾಡಲನುಕೂಲವಾಗಲು, ಒಂದು ಮಾರ್ಗವನ್ನು ಅವರಿಗೆ ಹುಡುಕಿ ತೆಗೆಯ ಬೇಕಾಯಿತು. ತಮ್ಮ ಧೋರಣವನ್ನು ಯೋಜಿಸಿ, ಅದನ್ನು ಕೊನೆಗಾಣಿಸುವ ವಿಷಯದಲ್ಲಿ ಬೇಕಾಗುವ ದುಡ್ಡಿನ ಮತ್ತು ಕಾರ್ಯನಿರ್ವಾಹದ ಅಧಿಕಾರವನ್ನೂ, ಜವಾಬುದಾರಿಯನ್ನೂ, ಅವರಿಗೊಪ್ಪಿಸಿ ಬಿಡುವದು ಒಂದು ಮಾರ್ಗವಾಗಿದೆ. ಮಹಾಸಭೆಯು ಆ ಧೋರಣದ ನೇತೃತ್ವವನ್ನು ವಹಿಸಿದ್ದರೆ, ಅದರ ಬಗ್ಗೆ ಜವಾಬುದಾರಿಯನ್ನಾದರೂ ಹೊರಬೇಕಾಗುತ್ತಿತ್ತು. ಆ ಜವಾಬುದಾರಿಯನ್ನು ಹೊರುವದು ನನಗಿಷ್ಟವಿಲ್ಲದ್ದರಿಂದಲೂ, ಯಾವ ಅಸಹಯೋಗಿಗೂ ಇಷ್ಟವಿಲ್ಲೆಂದು ನನಗೆ ಅನಿಸುತ್ತಿದ್ದದರಿಂದಲೂ, ಆ ಧೋರಣವನ್ನು ಯೋಜಿಸುವ ಕಾರ್ಯದಲ್ಲಿ ಕೂಡಿಕೊಳ್ಳುವದು ನನಗೆ ಅಶಕ್ಯವಾಗಿದ್ದಿತು. ಹಾಗೂ ನನಗದರಲ್ಲಿ ಮನಸ್ಸಿಲ್ಲವಾದ್ದರಿಂದ, ಅದನ್ನು ಯೋಚಿಸಲು ನಾನು ಅಸಮರ್ಥನು. ವಿಶ್ವಾಸದಲ್ಲಿಯೇ ಮನಸ್ಸಿರುತ್ತದೆ. ಮಹಾಸಭೆಯ ಹೆಸರಿನ ಮೇರೆ ಕೌನ್ಸಿಲಿನ ಕಾರ್ಯಕ್ರಮವನ್ನು ನಡಿಗಿಸಲು ಸಂಪೂರ್ಣ ಅಧಿಕಾರವನ್ನು ಸ್ವರಾಜ್ಯ ಪಕ್ಷದವರಿಗೆ ಕೊಡುವದರಿಂದ, ಮಹಾಸಭೆಯನ್ನು ಸೇರಲಿಚ್ಛಿಸುವ ಎರಡನೆಯ ಪಕ್ಷದವರ ಸ್ಥಿತಿಯು ಕೆಲವುಮಟ್ಟಿಗೆ ವಿಲಕ್ಷಣವಾಗುವದು. ಆದರೆ ಹೀಗಾಗುವದು ನಿಜ. ಅದಕ್ಕೆ ಉಪಾಯವಿಲ್ಲ. ಸ್ವರಾಜ್ಯ ಪಕ್ಷವು ತನಗೆ ದೊರೆತ ಸೌಲಭ್ಯವನ್ನು ಬಿಟ್ಟುಕೊಡುವದೆಂದು ನಾವು ಆಶಿಸಬಾರದು. ದೇಶಹಿತದ ಸಲುವಾಗಿಯೇ ಈ ಸೌಲಭ್ಯಗಳು ಅದಕ್ಕೆ ಬೇಕಲ್ಲದೆ, ಸ್ವಾರ್ಥದ ದೃಷ್ಟಿಯಿಂದಲ್ಲ. ಎಲ್ಲ ಪಕ್ಷಗಳಿಗೂ ಈ ತರದ ಮಹತ್ವಾಕಾಂಕ್ಷೆ ಇರುವದು. ಇದ್ದರೂ ಅಭ್ಯಂತರವಿಲ್ಲ. ಆದ್ದರಿಂದ ಉಳಿದವರು ಮಹಾಸಭೆಯಲ್ಲಿ ಬಂದು, ಒಳಗಿನಿಂದ ಕೆಲಸ ಮಾಡುತ್ತ, ದೇಶದರಾಜಕರಣದ ಸ್ವರೂಪವನ್ನು ಬದಲುಮಾಡಬಹುದು. ಡಾ. ಬಿಸೆಂಟರವರು ಈ ದಿಶೆಯಲ್ಲಿ ಮಾರ್ಗವನ್ನು ತೋರಿಸಿರುವರು. ಎಷ್ಟೋ ಸಂಗತಿಗಳು ಬೇರೆ ರೀತಿಯಿಂದ ಬರಗುವದು ಅವರಿಗೆ ಬೇಕಿತ್ತೆಂಬುದನ್ನು ನಾನು ಬಲ್ಲೆನು. ಆದರೆ ಮಹಾಸಭೆಯಲ್ಲಿ ಸೇರಿ ಕೆಲಸಮಾಡಿ ಮತದಾರರನ್ನು ತನ್ನ ಮತಕ್ಕೆ ಒಲಿಸುವ ಇಚ್ಛೆಯಿಂದ ಅವರು ಒಳಗೆ

ಬರಲು ಸಂತುಷ್ಟರಿದ್ದಾರೆ. ಅಸಹಯೋಗಿಗಳು ತಮ್ಮ ಸದ ಸದ್ವಿವೇಕ ಬುದ್ಧಿಯ ವಿರುದ್ಧ ಹೋಗದೆ, ಒಡಂಬಡಿಕೆಗೆ ಸಮ್ಮತಿಯನ್ನು ಕೊಡಬಲ್ಲರೆಂದು ನನ್ನ ಅಭಿಪ್ರಾಯವು. ಎಲ್ಲ ಪಕ್ಷಗಳೂ ಕೂಡಿ ನೆರವೇರಿಸಬೇಕಾದ ಒಂದೇ ಒಂದಾದ ರಾಷ್ಟ್ರೀಯ ಕಾರ್ಯಕ್ರಮವೆಂದರೆ, ಖಾದಿ, ಹಿಂದೂ ಮುಸಲ್ಮಾನರ ಐಕ್ಯ, ಹಿಂದುಗಳಿಂದ ಅಸ್ಪೃಶ್ಯತಾ ನಿವಾರಣೆ —ಇದೇ ಆಗಿರುವದು. ಈ ಎಲ್ಲ ಪಕ್ಷಗಳಿಗೆ ಬೇಕಾದ ಮಾತು ಇದೇ ಅಲ್ಲವೋ ?

(ಮುಂದುವರಿಯುವದು.)

COFFEE ESTATE FOR SALE.

A portion of Merryland Estate, 3 miles from Sidapur. Coffee 70 acres, Paddy 17, Orange 5, Grazing land 36, Makki about 4. Well appointed Bungalow, 3 cooly lines, granary, cattle shed, all tiled. Motor road to bungalow. Inspection by appointment. Offers will not be considered after end of February. Prize Rs. 50,000 or near offer.

Apply to—

S. M. PINTO,

Virarajendrapett, Coorg.

ವರ್ತಮಾನ ಸಂಗ್ರಹ.

ಒಳದೇಶ.

ಹೊಸ ವರ್ಷದ ಬಿರುದಾವಳಿಯ ಪಟ್ಟಿಯಲ್ಲಿ ಈಗ ಕೋಕನಾಡದಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಿರುವ ಮ. ಕಡೇಮಾಡ ಬೆಳ್ಯಪ್ಪನವರಿಗೆ ರಾವ್ ಸಾಹೇಬ್ ಬಿರುದನ್ನು ಕೊಟ್ಟಿರುವರು.

ವರ್ಷಂಪ್ರತಿ ನಡಿಯುವ ಶಿಶು ಪ್ರದರ್ಶನವು ಮಡಿಕೇರಿ ಮಾರ್ಕೆಟ್ ಬಳಿ ಬರುವ ಫೆಬ್ರುವರಿ ತಿಂಗಳ 16ನೇ ಸೋಮವಾರ ದಿನ ನಡಿಸಲು ತೀರ್ಮಾನವಾಗಿರುತ್ತೆ. ತಪಸೀಲು ಮುಂದಕ್ಕೆ ಪ್ರಕಟಿಸಲ್ಪಡುತ್ತೆ.

ಈ ತಾ. 11ರಲ್ಲು ನಡೆಯಬೇಕಾಗಿದ್ದ ಕೊಡಗು ವಿದ್ಯಾಭಿವೃದ್ಧಿ ಸಂಘದ ಮೀಟಿಂಗು ನಿಯಮಿಸಿದ ಗಂಟೆಯಲ್ಲು ಕೋರಂ ಇಲ್ಲದ್ದರಿಂದ ಮೀಟಿಂಗು ನಡಿಸಲಾಗಲಿಲ್ಲ.

ಫಾರೆಸ್ಟಿನ ಎಕ್ಸ್‌ಟ್ರಾ ಎಸಿಸ್ಟೆಂಟ್ ಕನ್ಸರ್‌ವೇಟರಾದ ಮ. ಚೋನಿರ ಬೆಳ್ಯಪ್ಪನವರಿಗೆ ಈ ವಾರದಿಂದ ಎರಡು ತಿಂಗಳು ರಜೆಯು ಮಂಜೂರಾಗಿದೆ.

ಕೊಡಗಿನ ಹಂಗಾಮಿ ಸ್ಕೂಲ್ ಇನ್‌ಸ್ಪೆಕ್ಟರಾಗಿದ್ದ ಮ. ಎಂ. ಎಸ್. ಹೆಚ್. ತಾಮ್ಸನ್‌ರವರು ಕೊಡಗು ಕೌನ್ಸಿಲಿಗೆ ರಾಜಿನಾಮೆ ಕೊಟ್ಟಿರುವರು. ರಜೆಯಿಂದ ಇನ್ಸ್‌ಪೆಕ್ಟರ ಕೆಲಸಕ್ಕೆ ಬಂದಿರುವ ಮ. ಜೆ. ಪಿಟ್ಸ್‌ರವರನ್ನು ಕೌನ್ಸಿಲ್ ಮೆಂಬರಾಗಿ ಚಿ. ಕಮಿಷನರವರು ಪುನಹ ನೇಮಿಸಿರುವರು.

ಮಡಿಕೇರಿ ಹುಡುಗಿಯರ ಹೈಸ್ಕೂಲು ರಜೆ ಕಳೆದು ತಾ. 15ರಲ್ಲಿ ತೆರೆಯಲ್ಪಟ್ಟಿತು.

ಫೆಬ್ರುವರಿ 1ರಿಂದ ಮ. ಕರವಂಡ ಚಂಗಪ್ಪನವರನ್ನು ಪೊನ್ನಂಪೇಟೆಗೂ, ಮ. ಮಂಡೆಪಂಡ ಅಪ್ಪಚ್ಚನವರನ್ನು ಅಮ್ಮತ್ತಿಗೂ, ಮ. ನೆಲ್ಲಮಕ್ಕಡ ಸುಬ್ಬಯ್ಯನವರನ್ನು ನಾಪೋಕ್ಲಿಗೂ, ಮ. ಕೇತಿಯಂಡ ಬೆಳ್ಯಪ್ಪನವರನ್ನು ವೀರಾಜಪೇಟೆಗೂ ಪಾರುಪತ್ಯಗಾರರಾಗಿ ವರ್ಗಾಯಿಸಿರುವರು.

ಮುಜ್ರಾಯಿ ಇಲಾಖೆಯ ಟೆಂಪಲ್ ಕಮಿಟಿಗೆ ಎಡೆಕಿಗ್ಗಟ್ಟುನಾಡುಗಳ ಪರವಾಗಿ ತಾ. 7ರಲ್ಲು ವೀರಾಜಪೇಟೆಯಲ್ಲಿ ನಡೆದ ಚುನಾವಣೆಯಲ್ಲಿ ರಾ. ಸಾ. ಪಟ್ಟಮಾಡ ದೇವಯ್ಯನವರೂ, ನಾಡಿ ಮತ್ತು ಕೇರಿನಾಡುಗಳ ಪರವಾಗಿ ತಾ. 9ರಲ್ಲು ಮಡಿಕೇರಿಯಲ್ಲಿ ನಡೆದ ಚುನಾವಣೆಯಲ್ಲಿ ಮ. ಪಾಂಡಂಡ ಚಂಗಪ್ಪನವರೂ ಮೆಂಬರುಗಳಾಗಿ ಆರಿಸಲ್ಪಟ್ಟಿರುವರು.

ಅಮ್ಮತ್ತಿ ಸೆಕೆಂಡರಿ ಸ್ಕೂಲ್ ಫುಟ್‌ಬಾಲ್ ಟೋರ್ನಮೆಂಟು ಫೆಬ್ರುವರಿ ಒಂದನೇ ವಾರದಲ್ಲಿ ಪ್ರಾರಂಭವಾಗುವದರಿಂದ ಅದರಲ್ಲಿ ಆಡಲು ಇಚ್ಛೈಸುವ ಟೀಮುಗಳು 3 ರೂಪಾಯಿ ದಾಖಲಾತಿ ಫೀಜು, 5 ರೂಪಾಯಿ ಟೋರ್ನಮೆಂಟು ಫೀಜೂ ಈ ತಾ. 25ರೊಳಗೆ ಅದರ ಸೆಕ್ರೆಟರಿಗೆ ಕಳುಹಿಸಬೇಕೆಂದೂ, ಇದೇ ಮೊದಲಾಗಿ ಈ ಟೋರ್ನಮೆಂಟಿನಲ್ಲಿ ಆಡುವ ಟೀಮಿಗೆ ಮಾತ್ರ ದಾಖಲಾತಿ ಫೀಜು ಇದೆ ಎಂದೂ, ಅದರ ಸೆಕ್ರೆಟರಿಯವರು ತಿಳಿಸುತ್ತಾರೆ.

ಸ್ವಾಮಿ ವಿವೇಕಾನಂದರವರ 63ನೇ ಜನ್ಮದಿನ ಮಹೋತ್ಸವವನ್ನು ಮಡಿಕೇರಿ ವೇದಾಂತ ಸಂಘದವರು ಹೈಸ್ಕೂಲ್ ಹಾಲಿನಲ್ಲಿ ತಾ. 18ರ ಸಾಯಂಕಾಲ ನಡಿಸುವರು.

ಈ ತಾರೀಕು 23ರ ಸಾಯಂಕಾಲ 'ಕೊಡಗು' ಕಂಪೆನಿಯ ಶೇರ್‌ಹೋಲ್ಡರುಗಳ ಮೀಟಿಂಗೂ, ಜಮೀನ್ದಾರರ ಸಂಘದ ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗೂ 'ಕೊಡಗು' ಆಫೀಸಿನಲ್ಲಿ ನಡೆಯುವವು.

ಶನಿವಾರಸಂತೆಗೆ ಒಂದು ಮೈಲು ದೂರದಲ್ಲಿರುವ ಹಂಡ್ಲಿ ಮತ್ತು ಬಡಕನಳ್ಳಿ ಗ್ರಾಮಗಳಲ್ಲಿ ಪ್ಲೇಗ್‌ನಿಂದ ಇಲಿಗಳು ಸಾಯುತ್ತಾ ಇವೆ. ಗ್ರಾಮ ನಿವಾಸಿಗಳೆಲ್ಲ ಹೆಡ್ಡ್ ಕಟ್ಟಿಕೊಂಡು ವಾಸಮಾಡುತ್ತಾ ಇದ್ದಾರೆ. ಸರಕಾರದವರು ಎರಡು ಗ್ರಾಮದ ಜನರಿಗೂ ಇನಾಕ್ಯುಲೇಶನ್‌ಮಾಡಿ ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತಾ ಇದ್ದಾರೆ. ಈ ವರೆಗೆ ಜನರ ಏನೊಂದು ಮರಣ ಸೂಚನೆ ಇರುವುದಿಲ್ಲ.

ತಿತಿಮತಿ ರೇಂಜಿನಲ್ಲಿ 5ನೇ ಗ್ರೇಡ್ ಫಾರೆಸ್ಟರ್ ಆಗಿದ್ದ ಪಟ್ಟಚೆರವಂಡ ಬೆಳ್ಯಪ್ಪನವರನ್ನು ಸರಕಾರಿ ಸರ್ವಿಸಿನಿಂದ ಡಿಸ್‌ಮಿಸ್ ಮಾಡಿ, ಅವರನ್ನು ಪುನಹ ಸರಕಾರಿ ಉದ್ಯೋಗಕ್ಕೆ ತೆಗೆದುಕೊಳ್ಳಕೂಡದೆಂದು ಚೀಫ್ ಫಾರೆಸ್ಟ್ ಆಫೀಸರವರು ಹುಕುಂ ಮಾಡಿರುವರು.

ಕಮಿಷನರವರು ಬೆಂಗಳೂರಿನಿಂದ ಮಡಿಕೇರಿಗೆ ತಾರೀಕು 14ರಲ್ಲು ವಾಪಸು ಬಂದಿರುವರು.

ಈ ವಾರದಿಂದ ವೀರಾಜಪೇಟೆಯಿಂದ ತಲಚೇರಿಗೆ ಒಂದು ಬಸ್ಸ್ ಸರ್ವೀಸು ಇಡಲ್ಪಟ್ಟಿದೆಂದು ತಿಳಿಯುತ್ತೇವೆ.

ಕೊಡಗಿನಲ್ಲಿ ಕಾಂಗ್ರೆಸ್ ಕಮಿಟಿಯೊಂದನ್ನು ಸ್ಥಾಪಿಸಲು ಮಡಿಕೇರಿಯಲ್ಲಿ ತಾರೀಕು 24ರ ಸಾಯಂಕಾಲ ಒಂದು ಮೀಟಿಂಗು ನಡೆಯುತ್ತದೆ.

ಬಂಗಳೂರಿನ ಭಾರತಿ ಬುಕ್ ಡಿಪ್ಪೋದ "ಶಿಶು ವೈದ್ಯ ಸಂಜೀವಿನಿ ಎಂಬ ಅಮೋಘವಾದ ವೈದ್ಯ ಶಾಸ್ತ್ರವು" ಮತ್ತು "ಸಚಿತ್ರ ಮಹಾಜಾಲಾ ವಿದ್ಯಾ ಮತ್ತು ಯಕ್ಷಿಣೀ ವಿನೋದ" ವೆಂಬ ಪುಸ್ತಕಗಳ ನೋಟೀಸುಗಳನ್ನು ಈ ಸಂಚಿಕೆಯ ಸಪ್ಲಿಮೆಂಟಾಗಿ ನಮ್ಮ ವಾಚಕರೆಲ್ಲರಿಗೂ ಕಳುಹಿಸಿದ್ದೇವೆ.

ಹಿಂದೂದೇಶ.

ಅಖಿಲಭಾರತ ಕಾಂಗ್ರೆಸ್ ಕಮಿಟಿಯ ವರ್ಕಿಂಗ್ ಕಮಿಟಿಯ ಮೀಟಿಂಗು ತಾ. 25ರಲ್ಲಿ ಡೆಲ್ಲಿಯಲ್ಲಿ ನಡೆಯುವದು.

ಸೆಂಟ್ರಲ್ ಪ್ರಾಂತ್ಯದಲ್ಲಿ ಟ್ರಾನ್ಸ್‌ಫರ್ಡ್ ಇಲಾಖೆಗಳನ್ನು 1924 ನೇ ಮಾರ್ಚಿಯಿಂದ ಗವರ್ನರವರೇ ನಡಿಸುತ್ತಾ ಬರುತ್ತಿರುವದಾದರೂ, ಅಲ್ಲಿಯ ಕೌನ್ಸಿಲು ಮೆಂಬರುಗಳಿಗೆ ಕೌನ್ಸಿಲನ್ನು ಸರಿಯಾಗಿ ಉಪಯೋಗಿಸಲು ಇನ್ನೊಂದು ಸಂದರ್ಭ ಕೊಡಲಿಕ್ಕಾಗಿ ಬರುವ ಮಾರ್ಚಿಯಲ್ಲಿ ಕೌನ್ಸಿಲಿನ ಒಡ್ಜೆಟ್ ಮೀಟಿಂಗೊಂದು ಮಾಡಲಾಗುವದೆಂದು ಅಲ್ಲಿಯ ಗವರ್ನರಾದ ಸರ್‌ಫ್ರೆಂಕ್ ಸ್ಲೈಯವರು ತಾ. 10 ರಲ್ಲಿ ನಾಗಪುರದಲ್ಲಿ ನಡೆದ ಡಿವಿಜನಲ್ ದರ್ಬಾರ್ ಭಾಷಣದಲ್ಲಿ ಹೇಳಿರುವರು.

ಸಂಯುಕ್ತ ಪ್ರಾಂತ್ಯದಲ್ಲಿ ಅಬ್ಕಾರಿ ಇಲಾಖೆಯ ವಿಷಯ ಒಂದು ದರ್ಬಾರಿನಲ್ಲಿ ಅಲ್ಲಿಯ ಗವರ್ನರವರು ಹೀಗೆಂದು ಸೂಚಿಸಿರುವರು—"ಅಬ್ಕಾರಿ ಉತ್ಪತ್ತಿಯು ಕಡಿಮೆಯಾಗಲು ಸಾಮಾಜಿಕ ಸುಧಾರಣೆಯ ಕೆಲಸವು ಸ್ವಲ್ಪವೇನೂ ಅಲ್ಲ. ಸಮಾಜದಲ್ಲಿ ಮುಂದುವರಿಯಬೇಕೆಂಬ ಆಶೆಯಿಂದ ಕೆಳ ತರಗತಿಯವರು ಮದುವೆ ಮತ್ತು ಹಬ್ಬಗಳಲ್ಲಿ ನಿಶಾ ಸೇವನೆಮಾಡುವ ಹಳೇ ಪದ್ಧತಿಗಳನ್ನು ಬಿಡುತ್ತಿದ್ದಾರೆ. ಇದು ಸಮಾಜದ ಏಳಿಗೆಗೆ ಶುಭ ಸೂಚನೆಯೇ ಸರಿ. ಅಲ್ಲದೆ ಸರಕಾರವೂ ಕೂಡ ನಿಶಾ ನಿಷೇಧದ ಕೆಲಸಕ್ಕೆ ಬಹಳ ಸಹಾಯ ಮಾಡುತ್ತಿದೆ."

ಇಂಡಿಯನ್ ಸಯನ್ಸ್ ಕಾಂಗ್ರೆಸಿನ 12ನೇ ಪರಿಷತ್ತು ತಾ. 12ರಲ್ಲು ಕಾಶೀಪಟ್ಟಣದಲ್ಲಿ ಪ್ರಾರಂಭವಾಗಿದೆ. ಬೆಂಗಳೂರಿನಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಶನ್ ಆಫ್ ಸಯನ್ಸಿನ ಡೈರೆಕ್ಟರಾದ ಡಾ. ಎಂ. ಓ. ಫೋರ್ಸ್ಟರ್‌ರವರು ಅಧ್ಯಕ್ಷರಾಗಿರುವರು.

ಸೆಂಟ್ರಲ್ ಪ್ರಾಂತ್ಯದ ಸ್ವರಾಜ್ಯ ಪಂಗಡದ ಕೌನ್ಸಿಲ್ ಮೆಂಬರುಗಳು ಮಂತ್ರಿತನವನ್ನು ವಹಿಸಿಕೊಳ್ಳಬೇಕೋ, ಎಂಬದನ್ನು ಚರ್ಚಿಸಲು ತಾ. 11ರಲ್ಲು ನಾಗಪುರದಲ್ಲಿ ಅವರ ಮೀಟಿಂಗು ನಡೆಯಿತು. ಇದಲ್ಲದೆ ಸ್ವರಾಜ್ಯ ಪಾರ್ಟಿಯ ಎಗ್ಸಿಕ್ಯೂಟಿವ್ ಕಮಿಟಿಯ ಮೀಟಿಂಗೂ ಸಹ ಆ ದಿನ ಅಲ್ಲಿ ನಡೆಯಿತು. ಮ. ದಾಸರವರಿಗೆ ಬರಲು ಸಾಧ್ಯವಲ್ಲದ್ದರಿಂದ ಅವರ ಅಭಿಪ್ರಾಯವನ್ನು ಬರೆದು ಕಳುಹಿಸಿರುವರು. ಮೀಟಿಂಗುಗಳ ತೀರ್ಮಾನವು ತಿಳಿದು ಬಂದಿರುವದಿಲ್ಲ. ಆದರೂ ಸರಕಾರಿ ಉದ್ಯೋಗವನ್ನು ಒಪ್ಪಿಕೊಳ್ಳಬಾರದೆಂಬುದೇ ಹೆಚ್ಚಿನವರ ಅಭಿಪ್ರಾಯವಂತೆ.

ಬಂಗಾಳ ಆರ್ಡಿನೆನ್ಸ್ ಕಾನೂನಿಗೆ ಅಲ್ಲಿಯ ಕೌನ್ಸಿಲ ಮಂಜೂರಾತಿಗಾಗಿ ತಾ. 7ರಲ್ಲು ಅದು ಕೌನ್ಸಿಲಿನಲ್ಲಿ ಚರ್ಚಿಸಲ್ಪಟ್ಟಿತು. ಮ. ದಾಸರವರಿಗೆ ಕಾಯಿಲೆಯಾದರೂ ಅವರನ್ನು ಡೋಲಿಯಲ್ಲಿ ಕೌನ್ಸಿಲಿಗೆ ಹೊತ್ತುಕೊಂಡು ಹೋದರು. ಅವರು ಮಾತಾಡಲು ಅಶಕ್ತರಾಗಿದ್ದರು. ಪ್ರೇಕ್ಷಕರಿಗೆ ಪಾಸುಗಳು ಕೊಡಲ್ಪಟ್ಟಿದ್ದರೂ ಆ ದಿನ ಕೌನ್ಸಿಲಿನೊಳಗೆ ಮೆಂಬರುಗಳನ್ನಲ್ಲದೆ ಬೇರೆ ಯಾರನ್ನೂ ಬಿಡಲಿಲ್ಲ. ಗವರ್ನರಾದ ಲಾರ್ಡ್ ಲಿಟ್ಟನ್‌ರವರು ಆರ್ಡಿನೆನ್ಸಿಗೆ ಒಪ್ಪಿಗೆ ಕೊಡಬೇಕೆಂದು ಸುದೀರ್ಘ ಭಾಷಣವನ್ನು ಮಾಡಿದರು. ನೇಶನಲಿಸ್ಟರ ಪರವಾಗಿ ಸರ್ ಪಿ. ಸಿ. ಮಿತ್ತರ್‌ರವರು ಅದಕ್ಕೆ ವಿರೋಧಿಸಿ ಮಾತಾಡಿದರು. ಓಟಿಗೆ ಹಾಕಿದಲ್ಲು 57 ಜನ ಪರವಾಗಿಯೂ 66 ವಿರೋಧವಾಗಿಯೂ ಓಟು ಕೊಟ್ಟದ್ದರಿಂದ ನೇಶನಲಿಸ್ಟ್ ಪಂಗಡದವರು ಸರಕಾರವನ್ನು 9 ಓಟುಗಳಿಂದ ಸೋಲಿಸಿದರು. ಇದು ಬಂಗಾಳಕ್ಕೆ ದೊಡ್ಡ ಜಯವೇ ಸರಿ.

ಬೆಳಗಾಂ ಕಾಂಗ್ರೆಸಿನ ತೀರ್ಮಾನವನ್ನು ಅನುಸರಿಸಿ ಕತ್ತಿಯಾವಾಡದ ರಾಜಕೀಯ ಪರಿಷತ್ತು, 12 ವರುಷ ಪ್ರಾಯದ ಮೇಲೆ ತಿಂಗಳಿಗೆ 2000 ಗಜ ನೂಲು ಕೊಡುವ ಮತ್ತು ಖಾದಿ ಒಟ್ಟೆ ಧರಿಸುವವರು ಮಾತ್ರ ಆ ಕಾನ್‌ಫರನ್ಸಿ ಮೆಂಬರಾಗಬಹುದೆಂದು ಮಂಜೂರುಮಾಡಿರುವರು.

ಲೋಕಮಾನ್ಯ ತಿಲಕರಿಗೂ ತನಗೂ ತಮ್ಮ ಮನೋಗತ (ಐಡಿಯಲ್) ದಲ್ಲಿ ಸ್ವಲ್ಪ ಭೇದಗಳಿದ್ದರೂ ಹೊರತು ತಾವಿಬ್ಬರು ಎಂದೂ ವಿರೋಧಿಗಳಾಗಿರಲಿಲ್ಲವೆಂದೂ ತನಗೆ ತಿಲಕರ ಮೇಲೆ ದೊಡ್ಡ ಬಹುಮಾನವೂ, ಅವರಿಗೆ ತನ್ನ ಮೇಲೆ ಪ್ರೀತಿಯೂ ಇತ್ತೆಂದೂ, ಆದುದರಿಂದ ಮಹಾರಾಷ್ಟ್ರದವರು ಪಂಗಡಗಳಾಗಿರದೆ ಸ್ವರಾಜ್ಯದ ಹೋರಾಟದಲ್ಲಿ ತನಗೆ ಎಲ್ಲರೂ ಒಗ್ಗಟ್ಟಾಗಿ ಸಹಾಯ ಮಾಡಬೇಕೆಂದೂ ಮಹಾತ್ಮಗಾಂಧಿಯವರು ಮಹಾರಾಷ್ಟ್ರದವರಿಗೆ ಅಪ್ಪೀಲು ಮಾಡಿರುವರು.

ಅನಾರೋಗ್ಯದ ದೆಸೆಯಿಂದ ನಾಮಧಾರಿ ವಿ. ಶ್ರೀನಿವಾಸ ಶಾಸ್ತ್ರಿಯವರು ಕೌನ್ಸಿಲ್ ಆಫ್ ಸ್ಟೇಟಿನ ಮೆಂಬರತನಕ್ಕೆ ರಾಜಿನಾಮೆ ಕೊಟ್ಟಿರುವರು.

ತಾ. 7ರಲ್ಲಿ ಲಾಲಾ ಲಜಪತರಾಯರು ಮದ್ರಾಸಿನ ಇಂಪೀರಿಯಲ್ ಸಿನೆಮಾದ ಹಾಲಿನಲ್ಲಿ ಹಿಂದೂ ಮಹಾ ಸಭೆಯ ವಿಷಯ ಬಹಳ ಮನಸ್ಸಿಗೆ ನಾಟುವಂತೆ ಭಾಷಣ ಮಾಡಿದರು. ಮೀಟಿಂಗಿಗೆ ಟಿಕೇಟುಗಳ ಮೂಲಕ ಪ್ರವೇಶ. ಇದರಿಂದ ವಸೂಲಿಯಾದ 500 ರೂಪಾಯಿಯು ಕೋಹಟ್ ರಿಲೀಫ್ ಫಂಡಿಗೆ ಕೊಡಲಾದದ್ದಲ್ಲದೆ ಈ ಫಂಡಿಗೆ 7,000 ರೂಪಾಯಿ ವರೆಗೆ ಚಂದಾಕೊಡಲಾಗುವದೆಂದು ಅಲ್ಲಿ ನೆರೆದಿದ್ದವರು ಹೇಳಿದರು.

ವಿದೇಶ.

ಈಜಿಪ್ಟಿನಲ್ಲಿ ನಡೆದ ಸರ್ದಾರ್ ಸರ್ ಲೀ ಸ್ಟೇಕ್‌ರವರ ಕೊಲೆಯ ಸಂಬಂಧ ಸೆರೆ ಮಾಡಲ್ಪಟ್ಟಿದ್ದ ಅಬ್ದುಲ್ ರಹಮನ್ ಫೇಮಿಯವರನ್ನು ತಕ್ಕಷ್ಟು ರುಜುವಾತು ಇಲ್ಲದ್ದರಿಂದ ಬಿಡುಗಡೆ ಮಾಡಿರುವರು.

ಈಜಿಪ್ಟಿನ ಮತ್ತು ಸುಡಾನಿನ ಸ್ವತಂತ್ರವನ್ನು ಪಡೆಯುವದಕ್ಕಾಗಿ ರಾಜಶಾಸನಾನುಸಾರವಾಗಿ ಪ್ರಯತ್ನಿಸುವ ಉದ್ದೇಶದಿಂದ ಯೂನಿಯನ್ ಪಾರ್ಟಿ ಎಂಬ ಒಂದು ರಾಜಕೀಯ ಪಾರ್ಟಿಯು ಹೊರಟಿದೆ. ಇದಕ್ಕೆ ಜಾಗುಲಾಲ್ ಪಾರ್ಟಿಯಿಂದ ಕೆಲವರೂ ಸೇರಿರುವರು. ಬೇಗನೆ ನಡೆಯಲಿಕ್ಕಿರುವ ಅಲ್ಲಿಯ ಪಾರ್ಲಿಮೆಂಟಿನ ಚುನಾವಣೆಯಲ್ಲಿ ಬಹುಮತಕ್ಕೆ ಪ್ರಯತ್ನಿಸುತ್ತಿರುವರು.

ಜರ್ಮನಿಯವರು ಕೊಡುವ ಯುದ್ಧ ನಷ್ಟ ಪರಿಹಾರದ ದ್ರವ್ಯವನ್ನು ಪಾಲಾಗುವದರಲ್ಲಿ ಹಂಚಿಕೊಳ್ಳಬೇಕೆಂಬುದನ್ನು ನಿಶ್ಚೈಸಲು ಆರು ಜನಾಂಗದವರು ಸೇರಿದ ಮಿತ್ರ ಮಂಡಲಿಯವರ ಫಿನೇನ್ಸ್ ಮಂತ್ರಿಗಳ ಮೀಟಿಂಗು ಪ್ಯಾರಿಸ್ ಪಟ್ಟಣದಲ್ಲಿ ನಡೆದು ಒಂದು ತರಹದ ತೀರ್ಮಾನಕ್ಕೆ ಬಂದಿರುವರು. ತಪಸೀಲು ತಾರೀಕು 12ರಲ್ಲು ನಡೆಯುವ ಕೊನೆಯ ಮೀಟಿಂಗಿನಲ್ಲು ತೀರ್ಮಾನವಾಗಲಿಕ್ಕಿತ್ತು.

ಎಮೀರ್ ಅಲಿಯವರ ಸೈನ್ಯದಿಂದ ಮಹಾಜನರ ವಹಾಬಿಗಳು ಹಿಂದೆಟ್ಟಲ್ಪಟ್ಟಿರುವರೆಂದು ವರ್ತಮಾನ ಬರುತ್ತಿದೆ. ಆದರೆ ವಹಾಬಿಗಳ ಪ್ರಮುಖರಾದ ಇಬ್ನ್‌ಸಾವೂದರು ಎಲ್ಲಿರುವರೆಂದು ಗೊತ್ತಾಗಿರುವದಿಲ್ಲ.

ಕೆಲವು ವರುಷಗಳ ಹಿಂದೆ ಮದ್ರಾಸ್ ಪ್ರಾಂತ್ಯದ ಗವರ್ನರಾಗಿದ್ದ ಲಾರ್ಡ್ ಪೆಂಟ್‌ಲೇಂಡ್‌ರವರು ತಾರೀಕು 12ರಲ್ಲು ಲಂಡನಿನಲ್ಲಿ ಮೃತಪಟ್ಟರು.

ಚೈನಾದ ಷಂಗಹಾಯಿ ಪ್ರಾಂತ್ಯದ ಈಗಿನ ಗವರ್ನರವರಿಗೂ, ಕ್ಯಾಂಗ್ಸುವಿನ ಮೊದಲಿನ ಗವರ್ನರಿಗೂ ಷಂಗಾಯಿನಲ್ಲಿ ಯುದ್ಧವು ಪ್ರಾರಂಭವಾಗಿದೆ. ಗ್ರಾಮಾಂತರಗಳಿಂದ ಸಾವಿರಾರು ಜನರು ಷಂಗಹಾಯಿಪಟ್ಟಣಕ್ಕೆ ಬರುತ್ತಿರುವರು. ಅಲ್ಲಿ ಸುರಕ್ಷಿತೆಗಾಗಿ ಎಲ್ಲಾ ಏರ್ಪಾಡುಗಳು ನಡೆಯುತ್ತಿವೆ.

ನೋಟೀಸು.

ಕೊಡಗಿನಲ್ಲಿ ಒಂದು ಕಾಂಗ್ರೆಸ್ ಕಮಿಟಿಯನ್ನು ಏರ್ಪಡಿಸುವ ಬಗ್ಗೆ ತಾ. 24—1—1925ರಲ್ಲು ಸಾಯಂಕಾಲ 5 ಗಂಟೆಗೆ ಮಡಿಕೇರಿಯಲ್ಲಿ ಮ. ಸಿ. ಎನ್. ವೆಂಕಪ್ಪಯ್ಯನವರ ಆಫೀಸು ಬಳಿ ಒಂದು ಮೀಟಿಂಗು ನಡೆಯುವದು. ಕಮಿಟಿಗೆ ಸೇರಲು ಇಚ್ಛೈಸುವವರು ಮೀಟಿಂಗಿಗೆ ದಯಮಾಡಿ ಬರಬೇಕಾಗಿ ಕೋರಿಕೆ.

ಮಡಿಕೇರಿ,
15—1—1925.

ಸಿ. ಎನ್. ವೆಂಕಪ್ಪಯ್ಯ.
ಎ. ಎಂ. ಚಣ್ಣಪ್ಪ.

ಪ್ರಕಟಣೆ.

ನಮ್ಮ ಅಂಗಡಿಯಲ್ಲಿ ಹೊಸ ಅಕ್ಷರಗಳು ಬಂದು ತಲುಪಿರುವದರಿಂದ, 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್,' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ.

ಮೇನೇಜರ್,
'ಕೊಡಗು' ಲಿಮಿಟೆಡ್,

ಬೆಳಗಾಂ ಕಾಂಗ್ರೆಸ್.

ಈ ವರುಷ ಬೆಳಗಾಮಿನಲ್ಲಿ ನಡೆದ 39ನೇ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿಗೆ ಕೊಡಗಿನಿಂದ ಅಪರೂಪವಾಗಿ ಹೋದ ಸುಮಾರು 30 ಜನರ ಪೈಕಿ 7 ಜನರು ಕೌನ್ಸಿಲ್ ಮೆಂಬರುಗಳೂ, ಮೂವರು ಸ್ತ್ರೀಯರೂ ಆಗಿದ್ದರು. ಇಷ್ಟರವರೆಗೆ ಹಿಂದೂ ರಾಷ್ಟ್ರದ ಚಳವಳದಿಂದ ಪ್ರತ್ಯೇಕ ನಿಂತಿದ್ದ ನಮ್ಮ ದೇಶದಿಂದ ಇಷ್ಟು ಜನರು ಇಂಡಿಯಾದ ರಾಷ್ಟ್ರೀಯ ಸಭೆಗೆ ಹೋದದ್ದು ಕೊಡಗಿನ ಸೌಭಾಗ್ಯವೆಂದೇ ಹೇಳಬೇಕಾಗಿದೆ. ಅಲ್ಲಿಗೆ ಹೋದವರೇ ಆ ಮಹಾ ಸಭೆಯ ದರ್ಶನದ ನೆನಪನ್ನು ಇಟ್ಟುಕೊಳ್ಳದೆ ದೇಶದ ಬಾಕಿ ಜನರಿಗೂ ಅರುಹಿದರೆ ಪ್ರಯೋಜನಕರವಾಗುವವೆಂದು ಅನೇಕರು ಹೇಳುವದನ್ನು ಕೇಳಿದರಿಂದ ಅಲ್ಲಿಗೆ ಹೋದವರೊಬ್ಬರ ನೆನಪನ್ನು ವಾಚಕರ ತಿಳುವಳಿಕೆಗೋಸ್ಕರ ಇಲ್ಲಿ ಬರೆಯಲಾಗಿದೆ.

"ವಿಜಯನಗರ"—ಕಾಂಗ್ರೆಸ್ ನಡೆದ ಸ್ಥಳಕ್ಕೆ "ವಿಜಯನಗರ" ವೆಂದು ತಾತ್ಕಾಲಿಕ ಹೆಸರುಕೊಡಲ್ಪಟ್ಟಿತ್ತು. ಇದು ಬೆಳಗಾಂ ಪಟ್ಟಣದಿಂದ ಈಚೆಗೆ ಮೂರು ಮೈಲು ದೂರದಲ್ಲಿತ್ತು. ಬೆಂಗಳೂರಿನಿಂದ ಬೊಂಬಾಯಿಗೆ ಹೋಗುವ ರೈಲ್ವೆ ಲೈನಿನ ಬದಿಯಲ್ಲೇ ಇತ್ತು. ಈ ಸ್ಥಳಕ್ಕೆ ವಿಜಯನಗರವೆಂದು ಹೆಸರು ಕೊಡಲಿಕ್ಕೆ ಕಾರಣವೇನಂದರೆ—ಕರ್ನಾಟಕ ಸಾಮ್ರಾಜ್ಯದ ನಿರ್ಮಿಸಲ್ಪಟ್ಟವಾದ ಜಗತ್ಪ್ರಖ್ಯಾತಿಯಾಗಿ ಮೆರೆದ ವಿಜಯನಗರ ಪಟ್ಟಣದ ನೆನಪು ಅಲ್ಲಿ ನೆರೆದ ಪ್ರತಿಯೊಬ್ಬನಿಗೂ ಬರುವಂತೆ ಈ ಹೆಸರು ಕೊಟ್ಟದ್ದಾಗಿದೆ. ಬಳ್ಳಾರಿಯ ಹಂಪೆಯೇ ಪೂರ್ವದ ವಿಜಯನಗರ ಪಟ್ಟಣವಾಗಿತ್ತು. ಪಾಳುಬಿದ್ದ ಈ ಊರೇ ಪಾಶ್ಚಿಮಾತ್ಯರನ್ನ ವಿಸ್ಮಯಗೊಳಿಸಿದೆ. ಇಂಥಾ ಊರನ್ನು ಕನ್ನಡಿಗರು ಅಖಿಲಭಾರತೀಯರ ನೆನಪಿಗೆ ತರಬೇಕಾದದ್ದು ಅವರ ಕರ್ತವ್ಯವಾಗಿದೆ. ಕಾಂಗ್ರೆಸ್ ಡೇರೆಯ ಆವರಣದ ಮುಖ್ಯ ಹೆಬ್ಬಾಗಿಲಿನಲ್ಲಿ ದೊಡ್ಡದಾದ ಗೋಪುರವನ್ನು ಕಟ್ಟಿದ್ದರು. ಇದಕ್ಕೆ ಸುಮಾರು ಏಳುಸಾವಿರ ರೂಪಾಯಿ ಖರ್ಚುಮಾಡಿದರು. ಇದನ್ನು ಅನೇಕರು ಗಾರೆ ಇಟ್ಟಿಗೆಯಿಂದ ಕಟ್ಟಿದ ಪುರಾತನ ಕಾಲದ ಗೋಪುರವೆಂದೇ ನೆನೆದರು. ಆ ಗೋಪುರದ ಕೆಳಕ್ಕಾಗಿ ಗೇಟು ದಾಟುವಾಗ ಅದರೊಳಗಿನ ಬಿದಿರುಗಳ ಮತ್ತು ಖಾದಿ ಪರದೆಗಳ ಕೆಲಸವನ್ನು ನೋಡಿದಾಗ ಮಾತ್ರ ಅದು ಕೃತ್ರಿಮ ಗೋಪುರವೆಂದು ಗೋಚರವಾಯಿತು. ಈ ತರಹದ ಗೋಪುರವು ಹಂಪೆಯಲ್ಲಿ ವಿಜಯನಗರದ ಪ್ರಖ್ಯಾತಿಯನ್ನು ಈಗಲೂ ಪ್ರೇಕ್ಷಕರಿಗೆ ನೆನಪು ಕೊಡುತ್ತಿದೆಯಂತೆ.

ರೈಲ್ವೆಯ ತುಮುಕು.—ಬೆಂಗಳೂರಿನಿಂದ ತಾರೀಕು 23ರ ರಾತ್ರಿ ರೈಲ್ ಹತ್ತುವಾಗಲೇ ಪ್ರಯಾಣಿಕರ ತುಮುಕು ಬೆಳಗಾಮಿನಲ್ಲಿ ಕೂಡುವ ಜನಸಂದಣಿಯ ಸೂಚನೆಯನ್ನು ಕೊಡುತ್ತಿತ್ತು. ಈ ತರಹದ ತುಮುಕು ಎರಡು ದಿವಸಗಳ ಮೊದಲೇ ಪ್ರಾರಂಭವಾಗಿತ್ತಂತೆ. ಹೋಗುತ್ತಾ ಹೋಗುತ್ತಾ ಪ್ರತಿ ಸ್ಟೇಶನುಗಳಲ್ಲಿಯೂ ಜನರು ರೈಲಿಗೆ ನುಗ್ಗುತ್ತಾ ಒಂದು ಹುಬ್ಬಳ್ಳಿಯಿಂದ ಆಚೆ ಪ್ರಯಾಣಿಕರಿಗೆ ಗಾಡಿಯಲ್ಲಿ ಎಡೆ ಸಿಕ್ಕಲೇ ಇಲ್ಲ. ಅನೇಕ ಥರ್ಡ್ ಗಾಡಿಗಳಲ್ಲಿ ಜನರು ನಿಂತುಕೊಂಡೇ ಬಂದಿರುತ್ತಾರೆ. ಅನೇಕವೇಳೆ ಪ್ರಯಾಣಿಕರಿಗೆ ಉಂಟಾದ ತೊಂದರೆಯಿಂದ ರೈಲಿನ ಅಪಾಯ ಸೂಚಕವಾದ ಸರಪಣಿಯನ್ನು ಎಳೆದು ರೈಲನ್ನು ನಿಲ್ಲಿಸಿದ್ದೂ ಉಂಟು. ದಾರಿಯುದ್ದಕ್ಕೂ ಪ್ರತಿ ಸ್ಟೇಶನುಗಳಲ್ಲಿಯೂ "ಮಹಾತ್ಮಾ ಗಾಂಧಿಕಿ ಜೈ" ಎಂಬ ಜಯಘೋಷವು ಕೇಳುತ್ತಿತ್ತು. ಮೂರು ದಿನಗಳಿಂದ 24ನೇ ತಾರೀಕಿನ ವರೆಗೆ ಬೆಳಗಾಂ ಸ್ಟೇಶನಿನಲ್ಲಿ ಸುಮಾರು 20 ಸಾವಿರ ಟಿಕೇಟುಗಳು ಜಮಾಯಿಸಲ್ಪಟ್ಟಿದ್ದವಂತೆ. ನಂತರದ ಎರಡು ದಿನಗಳಲ್ಲಿ ಇಷ್ಟೇ ಆದರೂ ಆಗಿರಬೇಕು. 23ನೇ ತಾರೀಕಿನ ಒಂದು ದಿನದಲ್ಲೇ ಆ ಸ್ಟೇಶನಿನಲ್ಲಿ ಸುಮಾರು ಹತ್ತುಸಾವಿರ ರೂಪಾಯಿಯ ಟಿಕೇಟುಗಳು ಕಾಂಗ್ರೆಸಿನಿಂದ ವಾಪಸು ಹೊರಟ ಜನರಿಂದ ತೆಗೆಯಲ್ಪಟ್ಟಿತ್ತಂತೆ. ಅನೇಕ ಸ್ಪೆಶ್ಯಲ್ ಟ್ರೈನುಗಳು 28 ಮತ್ತು 29ರಲ್ಲಿ ಬೆಳಗಾಮಿನಿಂದ ಹೊರಟವು. ಕಾಂಗ್ರೆಸ್ ಸಭೆಯು 27ಕ್ಕೆ ತೀರಿದರೂ ತಾರೀಕು 29ರಲ್ಲು ಸಹ ಬೆಳಗಾಮಿಗೆ ಬರುವ ರೈಲುಗಳಲ್ಲಿ ಮಹಾತ್ಮರನ್ನೂ ಕಾಂಗ್ರೆಸ್ ನಡೆದ ಸ್ಥಳವನ್ನೂ ನೋಡಲಿಕ್ಕೆ ಅನೇಕ ಜನರು ಹೋಗುತ್ತಿದ್ದರು.

ಕಾಂಗ್ರೆಸ್ ಡೇರೆ.—ಕಾಂಗ್ರೆಸ್ ಸಭೆಗೆ ಸೇರಿದ ಡೇರೆಯಲ್ಲಿ ತುಂಬಾ ಸುಮಾರು ಹದಿನಾರು ಸಾವಿರ ಜನರು ನೆರೆದಿದ್ದರೆಂದು ಹೇಳಬಹುದು. ಈ ಡೇರೆಯನ್ನು ಕಳೆದ ವರುಷ ಕೋಕನಾಡ ಕಾಂಗ್ರೆಸ್ಸಿಗಾಗಿ ಕಲ್ಕತ್ತಾದ ಒಂದು ಕಂಪೆನಿಯವರು ಶುದ್ಧ ಖಾದಿ ಬಟ್ಟೆಯಿಂದಲೇ ಸುಮಾರು 37 ಸಾವಿರ ರೂಪಾಯಿ ಖರ್ಚುಮಾಡಿಸಿ ಮಾಡಿದ್ದಾಗಿದೆ. ಅದು ಈಗ ಅಖಿಲಭಾರತ ಕಾಂಗ್ರೆಸ್ ಕಮಿಟಿಯವರ ವಶದಲ್ಲಿದೆ. ಅವರಿಂದ ಕರ್ನಾಟಕ ಸ್ವಾಗತ ಕಮಿಟಿಯವರು ಸುಮಾರು 5 ಸಾವಿರ ರೂಪಾಯಿ ಬಾಡಿಗೆ ಕೊಟ್ಟು ಅನೇಕ ಸಾವಿರ ರೂಪಾಯಿ ಖರ್ಚುಮಾಡಿ ಡೇರೆ ಹಾಕಿಸಿದ್ದಾಗಿದೆ. ಈ ಡೇರೆಯಲ್ಲಿ ನೆಲದ ಮೇಲೆ ಜಮಖಾನೆಗಳು ಹಾಸಲ್ಪಟ್ಟವರ ಮೇಲೆ ಎಲ್ಲರೂ ಕೂಡಬೇಕಾಗಿತ್ತು. ಪ್ರೇಕ್ಷಕರಿಗೆ ಮಾತ್ರ ಡೇರೆಯ ಒಳಭಾಗದ ಕರೆಯಲ್ಲಿ ಸುತ್ತಲೂ ಗ್ಯಾಲರಿಗಳು ಹಾಕಿದ್ದವು. ಡೇರೆಯ ಒಂದು ಭಾಗದ ನೆಲವು ಸ್ವಲ್ಪ ಎತ್ತರವಾಗಿತ್ತು. ಅಲ್ಲಿ ಅಧ್ಯಕ್ಷರಿಗೂ ಇತರ ಮುಖಂಡರಿಗೂ ಕೂರಲಿಕ್ಕೆ ಸ್ಥಳ ನಿರ್ಮಿಸಿದ್ದರು. ಅಧ್ಯಕ್ಷರಿಗೆ ಒರಗಲಿಕ್ಕೆ ಮಾತ್ರ ಒಂದು ದಿಂಬವನ್ನೂ ಮುಂದುಗಡೆ ಒಂದು ಸಣ್ಣಮೇಜನ್ನೂ ಇಟ್ಟಿದ್ದರು. ಇದಕ್ಕೆ ಎದುರಾಗಿ ಡೇರೆಯ ಮಧ್ಯ ಭಾಗದಲ್ಲಿ ಸುತ್ತಲು ಕಟಕಟ್ಟೆ ಹಾಕಿದ್ದ ಎತ್ತರವಾದ ಪ್ರಸಂಗ ಪೀಠವಿತ್ತು. ಅದಕ್ಕೆ ಏಣಿಯಿಂದ ಹತ್ತುತ್ತಿದ್ದರು. ಭಾಷಣ ಮಾಡಿದವರೆಲ್ಲರೂ ಇಲ್ಲಿ ನಿಂತೇ ಮಾತಾಡಿದರು. ಹೆಚ್ಚಿನವರ ಭಾಷಣವು ಎಲ್ಲರಿಗೂ ಕೇಳಿಸಿರಬಹುದು. ಆದರೆ ಎಲ್ಲರಿಗೂ ಭಾಷಣ ಮಾಡಿದವರನ್ನು ಚನ್ನಾಗಿ ನೋಡಲು ಸಿಕ್ಕಿತು. ಪ್ರಸಂಗ ಪೀಠದ ಸುತ್ತಲು ಪತ್ರಿಕಾ ಪ್ರತಿನಿಧಿಗಳಿಗೆ ಸ್ಥಳ ಬಿಟ್ಟಿದ್ದರು. ಅವರಿಗೆ ಬರೆಯಲಿಕ್ಕೆ ಎತ್ತರ ಕಡಿಮೆಯಾದ ಒಂದು ತರಹದ ಬೆಂಚುಗಳನ್ನು ಇಟ್ಟಿದ್ದರು. ಸುಮಾರು 225 ಜನ ಪತ್ರಿಕಾ ಪ್ರತಿನಿಧಿಗಳಿದ್ದರು. ಇವರಿಗೆ ಎಲ್ಲರ ಭಾಷಣವೂ ಸ್ಪಷ್ಟವಾಗಿ ಕೇಳುತ್ತಿತ್ತು. ಇವರನಂತರ ಸುತ್ತಲೂ ದಾರಿಬಿಟ್ಟು ಪ್ರತಿನಿಧಿಗಳಿಗೂ (ಡೆಲಿಗೇಟ್ಸ್) ಸ್ವಾಗತ ಕಮಿಟಿಯ ಮೆಂಬರುಗಳಿಗೂ ಸ್ಥಳ ಏರ್ಪಡಿಸಿದ್ದರು. ಬೇರೆ ಬೇರೆ ಪ್ರಾಂತ್ಯಗಳ ಪ್ರತಿನಿಧಿಗಳಿಗೆ ಬೇರೆ ಬೇರೆ ಸ್ಥಳಗಳು ಗುರುತು ಮಾಡಲ್ಪಟ್ಟಿದ್ದವು. ಸ್ತ್ರೀಯರಿಗೆ ಪ್ರತ್ಯೇಕ ಸ್ಥಳ ಇಡಲ್ಪಟ್ಟಿತ್ತು. ಪ್ರೇಕ್ಷಕರಿಗೆ ಮಾತ್ರ ಗ್ಯಾಲರಿಗಳಿದ್ದವು. ಡೇರೆಯ ಒಳಗೆ ಹೋಗಲೂ ಸಹ ಬೇರೆ ಬೇರೆ ಬಾಗಿಲುಗಳಿದ್ದವು. ಡೇರೆಯ ಒಳಗೆ ಕಂಬಗಳಿಗೆ ಮುಖಂಡರ ನಕ್ಷೆಗಳು ತೂಗಹಾಕಲ್ಪಟ್ಟಿದ್ದವು. ಅವುಗಳಲ್ಲಿ ಮಹಾತ್ಮ ಗಾಂಧಿಯವರ ಮತ್ತು ಲೋಕಮಾನ್ಯ ತಿಲಕರ ನಕ್ಷೆಗಳು ಪ್ರಾಮುಖ್ಯವಾಗಿದ್ದವು. ಅಲ್ಲಲ್ಲಿ ನೀತಿವಾಕ್ಯಗಳನ್ನು ಖಾದಿ ಬಟ್ಟೆಯ ಮೇಲೆ ಬರೆದು ಹಚ್ಚಿದ್ದರು. ಚರ್ಕದ ನಕ್ಷೆ ಇರುವ ಖದ್ದರಿನ ಸ್ವರಾಜ್ಯ ಭಾವುಟಗಳ ಸಾಲುಗಳು ಎಲ್ಲೆಲ್ಲಿಯೂ ಕಾಣಬರುತ್ತಿದ್ದವು

(ಮುಂದುವರಿಯುವುದು.)

ವಿಮರ್ಶೆ.

"ಲೋಕ ರಹಸ್ಯ."

ಈ ಮಾಸಪತ್ರಿಕೆಗೆ ನಮ್ಮ ಸ್ವಾಗತವನ್ನು ಮನಃಪೂರ್ತಿಯಾಗಿ ಕೊಡುತ್ತೇವೆ. ಹಿಂದುಸ್ಥಾನದಲ್ಲಿ ಅದರಲ್ಲೂ ನಮ್ಮ ಕರ್ನಾಟಕ ಪ್ರಾಂತ್ಯದಲ್ಲಿ ವೃತ್ತಪತ್ರಿಕೆಗಳು ಬಹಳವಾಗಿ ಹಬ್ಬಿದ ವಿನಹ ಜನರು ಜಾಗೃತಿಗೊಳ್ಳುವದಿಲ್ಲ. ನಮ್ಮ ಕೊಡಗು ದೇಶದಲ್ಲಿ ಒಂದು ಮಾಸಿಕ ಪತ್ರವು ಹೊರಡುತ್ತಿದೆಯೆಂಬದರಿಂದ ನಮ್ಮ ದೇಶದ ಪ್ರತಿಯೊಬ್ಬನಿಗೂ ಗೌರವವನಿಸಬೇಕು. ಕರ್ನಾಟಕ ಪ್ರಾಂತ್ಯದಲ್ಲಿ ಅನೇಕ ಮಾಸಿಕ ಪತ್ರಗಳು ಪ್ರಾರಂಭವಾಗಿ ತಕ್ಕಷ್ಟು ವಾಚಕರ ಆಶ್ರಯ ದೊರೆಯದೆ ಸ್ವಲ್ಪ ಕಾಲದಲ್ಲೇ ನಿಂತುಹೋಗಿರುವುದು ವಿಷಾದಕರವಾಗಿದೆ. ನಮ್ಮ ದೇಶದಲ್ಲಿ ಹುಟ್ಟಿರುವ ಈ ಹೊಸ ಪತ್ರಿಕೆಗೆ ನಮ್ಮ ದೇಶದವರೂ ಕರ್ನಾಟಕದ ಎಲ್ಲಾ ಪ್ರಾಂತ್ಯದವರೂ ತುಂಬಾ ಉತ್ತೇಜನಕೊಟ್ಟು ಚಿರಕಾಲ ನಡೆಯುವಂತೆ ಸಹಾಯ ಮಾಡಿಯಾರೆಂತ ಹಾರೈಸುತ್ತೇವೆ.

"ಸ್ವವಿಷಯ" ದಲ್ಲಿ ಸಂಪಾದಕರು ತುಂಬಾ ದೊಡ್ಡ ಭಾರವನ್ನು ವಹಿಸಿಕೊಂಡಿದ್ದಾರೆ. ಸ್ವತಂತ್ರ ಜೀವನಕ್ಕೂ, ವಿದ್ಯಾರ್ಜನೆಗೂ, ಪರೋಪಕಾರಕ್ಕೂ, ಜೀವನ ರಹಸ್ಯಗಳನ್ನು ಕಂಡುಹಿಡಿಯಲಿಕ್ಕೂ ಸಹಾಯಕೊಡಲು ಮಾಡಿರುವ ಸಂಕಲ್ಪವು ಮಹತ್ವದ್ದಲ್ಲವೇ? ಈ ಮಹಾಕಾರ್ಯಕ್ಕೆ ದೇವರು ಸಹಾಯಮಾಡಲಿ.

ಸರಕಾರವನ್ನು ಸಕಾಲ, ಅಕಾಲದಲ್ಲಿ ಬೈಯ್ಯುತ್ತಿರುವದೇ ಪತ್ರಿಕೆಗಳ ಕರ್ತವ್ಯವೆಂತ ಈಗ ಅಭಿಪ್ರಾಯವಿದೆಯೆಂತ ಬರೆದಿದೆ. ಸರಕಾರವನ್ನು ಬೈಯ್ಯುವದೇ ಉದ್ದೇಶವಾಗಿಟ್ಟುಕೊಂಡಿರುವ ಪತ್ರಿಕೆಯೊಂದನ್ನಾದರೂ ನಾವು ನೋಡಿರುವದಿಲ್ಲ. ಈಗ ಜೀವನದ ಪ್ರತಿಯೊಂದು ಭಾಗಕ್ಕೂ ಸರಕಾರದ ಸಂಪರ್ಕವಿಲ್ಲದೆ ಸಾಧ್ಯವಿಲ್ಲ. ಆದ್ದರಿಂದ ಸರಕಾರದ ಕಾರ್ಯಗಳ ಮೇಲೆ ಟೀಕಿಸದೆ ಇರುವದು ಸಾಧ್ಯವಿಲ್ಲ. ಹಿಂದುಸ್ಥಾನವು ಪರದಾಸ್ಯದಲ್ಲಿ ಸಿಲುಕಿಕೊಂಡಿರುವಾಗ ಅದನ್ನು ತಪ್ಪಿಸಲು ಪ್ರಯತ್ನಿಸುವದೆಂದರೆ ರಾಜಕೀಯ ವಿಷಯವಾಯಿತ್ತು. ಇಂಥಾ ರಾಜಕೀಯ ವಿಷಯದ ಮೇಲೆ ಬರೆಯುವಾಗ ಸರಕಾರದ ಮೇಲೆ ಟೀಕಿಸದೆ ಇರಲು ಸಾಧ್ಯವಲ್ಲ? ಜನರಿಗೆ ಸ್ವತಂತ್ರ ಜೀವನವನ್ನು ಒದಗಿಸಿಕೊಡದೆ ಇರುವದು ಸರಕಾರದ ತಪ್ಪೆಂತ ಬರೆಯದೆ ಇರುವದು ಹೇಗೆ? ಈಗ ಸರಕಾರಿ ಶಾಲೆಗಳಲ್ಲಿ ಕೊಡುವ ವಿದ್ಯೆಯಿಂದ ಒಳ್ಳೇ ಗುಮಾಸ್ತರುಗಳಾಗಬಹುದೇ ಹೊರತು ಸ್ವತಂತ್ರ ಜೀವನಕ್ಕೆ ಸಹಾಯ ದೊರೆಯುವದಿಲ್ಲ. ಸ್ವಶಕ್ತಿಯಲ್ಲಿ, ಸ್ವದೇಶದಲ್ಲಿ, ಸ್ವಭಾಷೆಯಲ್ಲಿ ನಂಬಿಕೆ ಹುಟ್ಟುವಂಥ ವಿದ್ಯೆ ಕೊಡುವದಿಲ್ಲವೆಂತ ಬರೆಯದೆ ಇರಲು ಸಾಧ್ಯವಿಲ್ಲ. ನೂತನ ನಾಗರೀಕತೆಯಿಂದ ಆಗಿರುವ ಕೆಡಕುಗಳನ್ನು ಒಳ್ಳೇ ರೀತಿಯಿಂದ ನಮ್ಮ ಸಹೋದರ ಪತ್ರಿಕೆಯು ಬರೆದಿದೆ. ಈ ನವನಾಗರೀಕತೆಯ ಹಾವಳಿಯನ್ನು ತಪ್ಪಿಸಲು ತ. ನಮ್ಮ ಸರಕಾರವು ಸ್ವಲ್ಪವೂ ಪ್ರಯತ್ನಿಸಿರುವದಿಲ್ಲವಲ್ಲ! ಹೀಗಿರುವಾಗ ಸರಕಾರದ ಮೇಲೆ ಟೀಕಿಸದೆ ಇರಲು ಸಾಧ್ಯವಿದೆಯೆ? ಆದರೆ ಪ್ರಜೆಗಳ ಕರ್ತವ್ಯವನ್ನು ಮಾತ್ರ ಮರೆತುಬಿಡಬಾರದು. ಇದನ್ನು ಯಾವ ಪತ್ರಿಕೆಯೂ ಮರೆತಿರುವದಿಲ್ಲ.

ಕ್ರಿಮಿನಲ್ ಸಿವಿಲ್ ಲಾಗಳ ಮೇಲೆಯೂ ಲೇಖನಗಳಿವೆ. ಸಿವಿಲ್ ಲಾದ ಲೇಖನವು ನಮ್ಮ ದೇಶದಲ್ಲಿ ಜಾರಿ ಇರುವ ಕಾನೂನನ್ನು ತಿಳಿದು ಬರೆದರೆ ಉತ್ತಮವಿತ್ತು. ನಮ್ಮ ದಮ್ಮಪಟ್ ಲಾವು ಬೇರೆ ಹೈಕೋರ್ಟುಗಳ ತೀರ್ಪಿಗಿಂತ ಸ್ವಲ್ಪ ವ್ಯತ್ಯಾಸವಾಗಿದೆ. ಇದನ್ನು ತಿಳಿಸಿಕೊಟ್ಟರೆ ಇನ್ನೂ ಪ್ರಯೋಜನವಾದೀತು. ಕೃಷಿ, ಕೈಗಾರಿಕೆ, ಪಾಠ ಹೇಳುವ ಕ್ರಮ, ವೈದ್ಯ, ನೀತಿ, ಅಡಿಗೆ, ಜ್ಯೋತಿಷ್ಯ ಮುಂತಾದ ವಿಷಯಗಳ ಮೇಲೂ ಲೇಖನಗಳಿವೆ. ಅಲ್ಲಲ್ಲಿ ಹಾಸ್ಯ ಮತ್ತು ನೀತಿಯ ವಾಕ್ಯಗಳೂ ಇವೆ. ಪತ್ರಿಕೆಗೆ ಜಯವಾಗಲಿ. ಪತ್ರಿಕೆಗೆ ಚಂದಾ ಎಷ್ಟೆಂತ ಅದರಲ್ಲಿ ತಿಳಿಸಿರುವದಿಲ್ಲ.

ಪತ್ರವ್ಯವಹಾರಗಳು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಅಯ್ಯಾ,

"ವಿರಾಜಪೇಟೆ ಆಸ್ಪತ್ರೆಗೆ ಒಬ್ಬ ಮೆಡಿಕಲ್ ಗ್ರ್ಯಾಜ್ಯೇಟನ್ನು ಯಾಕೆ ನೇಮಿಸಬಾರದು?"

ಎಂಬ ಸನ್ನವೊಂದು ಬಾತ್ಮಿಯು ತಾ. 14—11—24ರ ಸಂಚಿಕೆಯಲ್ಲು ಪ್ರಕಟವಾಗಿತ್ತಷ್ಟೇ. ಅದರಲ್ಲು ವೀರಾಜಪೇಟೆ ಆಸ್ಪತ್ರೆಯ ವಿಷಯವೂ, ಮು. ಬಟ್ಟಿಯಂಡ ಸಂಜಪ್ಪನವರ ಕಾಯಿಲೆಯ ವಿಷಯವೂ, ಅಲ್ಲಿಯ ಮೆಡಿಕಲ್ ಆಫೀಸರ ವಿಷಯವೂ ಸರಿಯಲ್ಲದ ಕೆಲವು ಸಂಗತಿಗಳನ್ನು ಬರೆದಿರುವನೆಂದು ನನಗೆ ಇತ್ತಲಾಗಿ ತಿಳಿಯಬಂದಿರುವುದರಿಂದ ಅದಕ್ಕೆ ನಾನು ಬಹಳ ವ್ಯಸನಪಡುತ್ತೇನೆ. ಇದರಿಂದ ಯಾರಿಗಾದರೂ ನೋವು ಉಂಟಾಗಿದ್ದರೆ ನನ್ನ ವ್ಯಸನವು ಮತ್ತಷ್ಟು ಹೆಚ್ಚೆಂದು ನಾನು ಪುನಹ ಹೇಳಬೇಕಾಗಿಲ್ಲ.

'ತಿಳಿದವ.'

ಸ್ಕೂಲ್ ಕಂಪೌಂಡ್ ಒಡಾವಣೆ.

ಅಯ್ಯಾ ವಾಚಕ ಮಹಾಶಯರೇ,

ಶನಿವಾರಸಂತೆಯಲ್ಲಿರುವ ಮ್ಯುನಿಸಿಶಾಲೆಯು ಎಲ್ಲರಿಗೂ ತಿಳಿದ ವಿಷಯವಾಗಿದೆ. ಇದನ್ನು ಸರಕಾರದವರು ಊರಿನ ಮಧ್ಯದಲ್ಲಿ ಕಟ್ಟಿದ್ದಾರೆ. ಇದರ ಮುಂಭಾಗದಲ್ಲಿ ರಾಜಮಾರ್ಗ, ಹಿಂದುಗಡೆ ಮಾರ್ಕೆಟ್, ಒಂದು ಬದಿಯಲ್ಲಿ ಒಂದು ವ್ಯಾಪಾರಿಯ ಮನೆ, ಬಲದಲ್ಲಿ ಸಾರ್ವಜನಿಕ ಭಾವಿ, ಹೀಗಾಗಿ ಸ್ಕೂಲಿಗೆ ಕಂಪೌಂಡೇ ಇಲ್ಲವಾಗಿದೆ. ಇದರ ದೆಸೆಯಿಂದ ಸ್ಕೂಲಿಗೆ ಅನೇಕ ತರದ ಅಡಚಣೆಗಳಿವೆ. ಜನರು ಸುತ್ತಲೂ ಜಲ ಮಲಾದಿಗಳಿಂದ ಹೇಸಿಕೆ ಮಾಡುತ್ತಾರೆ ಮತ್ತು ಹಿಂದುಗಡೆ ಗಾಡಿ ಮೊಳವಿರುವದರಿಂದ ದನಗಳ ಸಗಣಿ, ಕಸ ಕಡ್ಡಿ ಅಲ್ಲೇ ಬಿದ್ದು ಅದರ ಮೇಲಿಂದ ಬರುವ ಗಾಳಿಯು ಸ್ಕೂಲು ಹವವನ್ನು ಬಹಳಮಟ್ಟಿಗೆ ಕೆಡಿಸುತ್ತದೆ. ಇದರಿಂದ ಹುಡುಗರು ಯಾವಾಗಲೂ ಜ್ವರ ತಲೆನೋವು ಮೊದಲಾದ ಕಾಯಿಲೆಗಳಿಂದ ನರಳುತಿದ್ದು ಅವರ ಸಂಖ್ಯೆಯು ದಿನೇ ದಿನೇ ಕಡಿಮೆಯಾಗುತ್ತಾ ಬರುತ್ತದೆ. ತೋಟಗಾರಿಕೆಗೆ ಸ್ಥಳವಿಲ್ಲದೆ ತೋಟ ಮಾಡಲು ಅನಾನುಕೂಲವಾಗಿದೆ. ಇದರ ದೆಸೆಯಿಂದ ಹುಡುಗರು ಅತ್ಯಾವಶ್ಯವಾಗಿ ಮಾಡಬೇಕಾದ ಒಂದು ಕೆಲಸವು ನಿತ್ತಂತಾಗುವುದು. ಮೇಲಾಗಿ ಹುಡುಗರಿಗೆ ಆಟವಾಡಲು ಆಟದ ಮೈದಾನವು ಇಲ್ಲದಾಗಿದೆ. ದೂರ ಹೋಗಲು ಹುಡುಗರು ಬಹಳ ಚಿಕ್ಕವರು. ಇದರ ದೆಸೆಯಿಂದ ಅವರ ತಂದೆತಾಯಿಗಳು ದೂರಕ್ಕೆ ಕಳುಹಿಸುವುದಿಲ್ಲ. ಹುಜೂರ್ ಕಮಿಷನರವರು ಸಹ ಸ್ಕೂಲಿಗೆ ಸೇರಿದ ಆಟದ ಮೈದಾನವಿಲ್ಲವೆಂದು ಬರೆದಿರುವರು. ಈ ಎಲ್ಲಾ ಕಾರಣಗಳ ಮೇಲಿಂದ ನೋಡುವದಾದರೆ ಮಾರ್ಕೆಟ್ಟನ್ನು ಇಲ್ಲಿಂದ ತೆಗೆದು ಗುಡುಗಳಲೆ ದಿಣ್ಣೆಗೆ ಹಾಕಿದರೆ, ಸ್ಕೂಲಿಗೆ ತೋಟಗಾರಿಕೆಗೆ ಹೆಚ್ಚು ಸ್ಥಳವು ಆಟದ ಮೈದಾನವೂ ಸಿಕ್ಕುವದಲ್ಲದೆ ಗ್ರಾಮಕ್ಕೂ ಸಹ ಅನುಕೂಲವಾಗುತ್ತದೆ. ಹುಜೂರ್ ಕಮಿಷನರ್ ಸಾಹೇಬರು ಹಾಗೂ ಸ್ಕೂಲು ಮೇಲಧಿಕಾರಿಗಳು ಈ ವಿಷಯ ಮನಸ್ಸಿಗೆ ತೆಗೆದುಕೊಂಡು, ಮುಂದಿನ ಪಟ್ಟಿಗಳಾಗುವ ಬಾಲಕರ ಆರೋಗ್ಯದ ಹಾಗೂ ಪ್ರಾರ್ಥನಾಕಡೆಗೆ ಮನಸ್ಸುಕೊಡಬೇಕಾಗಿ ನನ್ನ ಆಶೆ. ಇಂದಿನ ಮಕ್ಕಳು ನಾಳಿನ ಜನರೆಂದೂ ಅವರ ಆರೋಗ್ಯ ವಿದ್ಯೆ, ಬುದ್ಧಿ ಮೊದಲಾದವುಗಳಿಂದ ನಮ್ಮ ಜನಾಂಗ ಅಭಿವೃದ್ಧಿಯು ಅವರಲ್ಲಿ ಒಡೆದು ಮೂಡುತ್ತದೆಂದೂ, ತಿಳಿದಿರುವ, ಯಾವನೊಬ್ಬ ದೇಶಾಭಿಮಾನಿಯೂ ಉದ್ದೇಶಕ್ಕೇ ಅಡ್ಡ ಬರನೆಂದು ತಿಳಿದಿರುವ,

ದೇಶಾಭಿಮಾನಿ.

ಕಾಫಿಯ ಬೆಲೆ ಮತ್ತು ಎಚ್ಚರ.

ಮಹನೀಯರೇ,

ಕೊಡಗಿನಲ್ಲಿ ಕೆಲವು ತರಹದ ಬೆಳೆ ಫಸಲುಗಳ ಎಷ್ಟಾನೇ ಇವೆಯಾದರೂ, ಎಲ್ಲವುಗಳಿಗೂ ಮಿಗಿಲಾಗಿ ಉತ್ಪತ್ತಿ ಮತ್ತು ಕೀರ್ತಿಗಳನ್ನು ಗಳಿಸಿದ್ದು ಕಾಫಿಯ ವ್ಯವಸಾಯಗಾರರೇ ಎನ್ನುವದರಲ್ಲಿ ಯಾವ ಅಭ್ಯಂತರವೂ ಇಲ್ಲವಷ್ಟೆ! ಈ ಕಾಫಿಯ ವ್ಯವಸಾಯಗಾರರನೇಕರು ಒಮ್ಮೆ ಐಶ್ವರ್ಯ ಶಿಖರದಲ್ಲಿದ್ದು ಇನ್ನೊಮ್ಮೆ ಬೆಲೆ ಕಮ್ಮಿಯಾಗಿ ಅಲ್ಲಿಂದ ಉರುಳಿಬಿದ್ದು ಅನೇಕ ಸಂಕಟಕ್ಕೀಡಾಗಿ ಹಲಕೆಲವರು ಬೇಸರಿಸಿ ಮುಂದುವರ್ಷದಿಂದ ತಮ್ಮ ಕಾಫಿಯ ವ್ಯವಸಾಯವನ್ನು ಬಿಟ್ಟುಬಿಡದೆ ಅನೇಕ ವರುಷಗಳಿಂದಲೂ ಮೇಲಾಡುತ್ತಿದ್ದುದಕ್ಕೆ ದೀನ ದಯಾಳ್ವ

ವಾದ ಭಗವಂತನು ಕರುಣೆಯಿಂದ ಕಣ್ಣು ತೆರೆದಂತೆ ಈಗಲೂ ಮತ್ತೊಮ್ಮೆ ಈ ಕೊಡಗಿನಲ್ಲಿ ಎಂದೂ ಆಗದಿದ್ದ ಬೆಲೆಯು ಏರಿದ್ದು ಭಕ್ತರ ಇಚ್ಛಾಪೂರ್ತಿಸಲು ಭಗವಂತನೇ ಆಶೀರ್ವದಿಸಿದ್ದಲ್ಲದೆ ಮತ್ತಿನ್ನೇನು? ಆದರೂ ಈ ತರಹದ ಬೆಲೆ ಸಂತೆನ್ನು ವರ್ಷದಲ್ಲಿಯೇ ಪುನಃ ಮೈಮರೆತು ಇನ್ನೊಮ್ಮೆ ತಾವೂ ಆ ಐಶ್ವರ್ಯ ಶಿಖರವನ್ನೇರುವೆವೆಂದು, ನಂಬಿದ ಭೃತ್ಯರೂ ಹವಣಿಸುವರೋ ಏನೋ, ಬೆಲೆ ಏರಿತು, ದಳ್ಳಾಳಿಗಳ ಆನಂದದ ಓಡಾಟವು ಎಲ್ಲೆಡೆಯೂ ಇದೆ "ಶಿವ ಕೊಟ್ಟರೂ ಶಿಂಗ್ರಿಯಷ್ಟು ಬಿಡ" ಎನ್ನುವಂತೆ ರವಾನಿಸುವಲ್ಲಿಯೂ ಅದು ಕಳುಹುವ ಮಧ್ಯೆಯೂ ಎಷ್ಟು ಪಾಲುದಾರರು ಇರುವರೋ ಯಾರು ಬಲ್ಲ?

ಮಾಲಿಕರು ಕಳುಹಿಸುವ ಕಾಪಿಯು ಗಾಡಿಯಲ್ಲಿ ಗಾಡಿಯವರ ಸ್ವಾಧೀನಕ್ಕೆ ಬಿಡಲ್ಪಟ್ಟನಂತರ ಅವರು ಯಾವ ಪ್ರಕಾರ ಎಚ್ಚರಿಕೆಯಲ್ಲಿ ಸಾರಾಟ ಮಾಡುವ ಸ್ಥಳಕ್ಕೆ ತಲಪಿಸುವರೆಂಬದರ ಉಸ್ತುವಾರಿಯನ್ನು ಯಾರು ನೋಡುವರು? ಗಾಡಿ ಬಿಟ್ಟ ಸ್ಥಳದಲ್ಲಿ ಅವರು ಎಚ್ಚರಿಕೆಯಲ್ಲಿರದೆ ಕಳ್ಳರ ಪಾಲಾದರೆ ಮಾಲಿಕರಿಗೆ ಏನು ಸಿಕ್ಕಿದಂತಾಗುವದು? ದಾರಿಯಲ್ಲಿ ಗಾಡಿಯಿಂದ ಭರ್ತಿ ಮಾಡಲ್ಪಟ್ಟ ಮೂಲನ್ನು ಕನ್ನಹಾಕಿ ಮಾಡಕೊಂಡು ಹೋದರೆ ಮಾಡುವದೇನು? ಅಲ್ಲದೆ, ಇಷ್ಟು ಬೆಲೆ ಸಿಕ್ಕುವ ಕಾಲದಲ್ಲಿ ಹೊತ್ತುಕೊಂಡು ಹೋಗುವ ಗಾಡಿಯವರೇ ಕದ್ದರೂ ಕದಿಯಬಲ್ಲರು ಆದ್ದರಿಂದ ಮಾಲಿಕರು ಯಾವಾಗಲೂ ಎಚ್ಚರಿಕೆಯಲ್ಲಿರತಕ್ಕದ್ದಲ್ಲದೆ, ಸರಕಾರದವರು ನ್ಯಾಯವಾದ ಒಂದೋಬಸ್ತಿನ ಎಚ್ಚರಿಕೆಗೆ ಏರ್ಪಾಡು ಮಾಡದೆ ಇದ್ದರೆ ನಿವೃತ್ತಿಯೇ ಇರಲಾರದು

ಜೆ. ಎ ಯಂ.

ಕೊಡಗಿನ ಚರಿತ್ರೆ

ಅಯ್ಯಾ,

ನಮ್ಮ ದೇಶದ ಯಾವ ಚರಿತ್ರೆಯನ್ನು ನೋಡಿದರೂ ಅದರಲ್ಲಿ ನಮ್ಮ ದೇಶದ ಜ್ಞಾನಿಗಳ ಮತ್ತು ಕವಿಶ್ರೇಷ್ಠರ ವಿಷಯಗಳು ಯಾವದೂ ತೋರದೆ ಇರುವುದರಿಂದ ನಮ್ಮ ಚರಿತ್ರೆಯು ಸಂಪೂರ್ಣವಾದುದೆಂದು ಹೇಳಲು ಆಗುವದಿಲ್ಲ ಜ್ಞಾನಿಗಳೂ ಕವಿಗಳೂ ನಮ್ಮ ದೇಶದಲ್ಲಿ ಇತ್ತಿಲ್ಲವೆನ್ನುವದಾದರೆ ನಮ್ಮ ಭಾಷೆಯಲ್ಲಿ ಕವಿತೆಗಳನ್ನು 'ಪಳಂಜೊಲ್ಲು' ಗಳನ್ನೂ ರಚಿಸಿದವರ್ಯಾರು? ಅಲ್ಲಲ್ಲಿಯ ಬುದ್ಧಿವಂತರಿಂದ ಒಂದೊಂದು ಕವಿತ್ವವೂ ಪಳಂಜೊಲ್ಲು ರಚಿತವಾದವುಗಳೆಂದು ಎನ್ನುವವಾದರೆ ಅವುಗಳೆಲ್ಲವೂ ದೇಶದ ಎಲ್ಲಾ ಭಾಗಗಳಲ್ಲಿಯೂ ಒಂದೇ ತರನಾಗಿ ಈಗಲೂ ಅವುಗಳನ್ನು ಮಾತಾಡುವ ಸಂಭವವು ಹೇಗಾಯಿತು. ಮತ್ತು ನಮ್ಮಲ್ಲಿಯ ನಾವಿನಲ್ಲಿ 'ಪಟ್ಟಣತ್ ಬಡುವಂಡ ಕಳ್ಳ ಪಡೆ ಒಂಬಾನ ಎಂಗರಿಂಜಿ ಕೊಂಡ್‌ಲೆ" ಎಂಬದಾಗಿ ದುಃಖಕರವಾದ ಆ ಸಮಯದಲ್ಲೂ ಈಗಲೂ ಹಾಡಲ್ಪಡುವಾಗ ನಮಗೆ ಅಷ್ಟು ದೊಡ್ಡ ಉಪದ್ರವನ್ನು ಕೊಟ್ಟ ಪಡುವನು ಯಾರು, ಯಾವಾಗ ಮತ್ತು ಯಾವ ಪಟ್ಟಣದವನು, ಇವುಗಳು ಯಾವವೂ ನಮ್ಮ ಚರಿತ್ರೆಯಲ್ಲಿ ಕಾಣದಿರುವದರಿಂದಲೂ ನಮ್ಮ ಚರಿತ್ರೆಯು ಸಂಪೂರ್ಣವಾದುದೆಂದು ಹೇಳಲು ಆಗುವದಿಲ್ಲ. ನಮ್ಮ ರಾಜೇಂದ್ರನಾಮೆಯಲ್ಲಾಗಲೀ ಈಚೆಗೆ ಇತರರು ಬರೆದ ಚರಿತ್ರೆಯಲ್ಲಾಗಲೀ ನಮ್ಮ ಹಿರಿಯರು ಅನ್ಯದೇಶೀಯರಿಂದ ಪರಾಜಿತರಾದದ್ದು ಕಂಡು ಬಾರದೆ ಇರುವದರಿಂದ ಈಗ ಇರುವ ಚರಿತ್ರೆಯಲ್ಲಿ ಅನೇಕ ಭಾಗವು ಬಿಟ್ಟು ಹೋಗಿದೆಂಬದು ಸ್ಪಷ್ಟವಾಗುತ್ತದೆ ದೇಶದ ಚರಿತ್ರೆಯನ್ನು ಬರಿಯುವದಾದರೆ ಈಗಲೀಗಲಿನ ಚರಿತ್ರೆಯ ಆಧಾರದಿಂದ ಅಲ್ಲಲ್ಲಿ ಅದಲು ಬದಲು ಮಾಡಿಕೊಂಡು ಚರಿತ್ರೆಯನ್ನು ಬರೆದ ಹಾಗೆಯೇ ಪೂರೈಸಿದೆ ಎಂಬಷ್ಟಕ್ಕೆ ಮಾತ್ರ ಬರಿಯುವದರಿಂದ ಜನಾಂಗದ ಹಿಂದಿನ ಸ್ಥಿತಿಗತಿಗಳನ್ನು ಮುಂದಿನವರಿಗೆ ತಿಳಿಯಲು ತುಂಬಾ ಅಡಚಣೆಯನ್ನುಂಟುಮಾಡುತ್ತದೆ ಆದ್ದರಿಂದ ವಿದ್ಯಾಬುದ್ಧಿ ವಿಶಾರದರಾದ ಮಹನೀಯರು ಯಾರಾದರೂ ಈ ಮಹತ್ಕಾರ್ಯಗಳನ್ನು ಕೈಕೊಂಡು ಬಿಟ್ಟುಹೋದ ನಮ್ಮ ಚರಿತ್ರೆಗಳನ್ನೂ ಜ್ಞಾನಿಗಳೂ ಕವಿಗಳೂ ಇದ್ದ ಕಾಲವನ್ನೂ ಸಾಧ್ಯವಾದರೆ ಅವರ ಹೆಸರನ್ನೂ ಕಾಣಿಸಿದರೆ ಒಂದು ಜನಾಂಗದ ಹಿಂದಿನ ಸ್ಥಿತಿಗತಿಯನ್ನು ಊರ್ಜಿತ ಸ್ಥಿತಿಗೆ ತಂದ ಮಹಾಭಾಗ್ಯವು ಅವರಿಗೆ ಉಂಟಾಗುವದು.

ಏ ಪಿ ಯಾ

ಮಂಜತ್ರಾಬಾದು ಯಾಲಕ್ಕಿ

ದೇಶಬಾಂಧವರೆ,

ಹಾಲಿ ಮಂಜತ್ರಾಬಾದುಯಾಲಕ್ಕಿಗೆ ಮಣವೊಂದರ 100 ರುಪಾಯಿ ಕ್ರಯವಿರುವದು. ಎಲ್ಲವರ ಗೋಚರಕ್ಕೆ ಬಂದಿರಬಹುದು. ಕೊಡಗಿನಲ್ಲಿ ಕೆಲವರ ತಿಳುವಳಿಕೆಗೆ ಬರದ ಮಹನಿಯರು ಇನ್ನಾದರೂ ಕಣ್ಣು ಬಿಟ್ಟು ಅವರವರಿಗೆ ಇರತಕ್ಕ ಶೀತ ಜಾಗದಲ್ಲಿ ಯಾ ಗದ್ದೆ ಮಾಡಲಿಕ್ಕೆ ಲಾಯಕ್ಕಾದ ಮಕ್ಕಿ ಜಾಗದಲ್ಲು ಕೊಂಚ ಕೊಂಚವಾದರು ನೆಟ್ಟು ಅದರ ಪ್ರತಿಫಲ ಹೊಂದಲಿಕ್ಕೆ ಪ್ರಯತ್ನ ಪಟ್ಟರೆ ನಮ್ಮ ದರಿದ್ರವನ್ನು ಕೊಂಚವಾಗಲೂ ಹೋಗಲಾಡಿಸಬಹುದು. ಬೇಸಿಗೆಯಲ್ಲಿ ಗದ್ದೆಯಲ್ಲಿ ನಡತಕ್ಕ ಮೆಣಸಿನ ಗಿಡಕ್ಕಿಂತ ಕೊಂಚ ಹೆಚ್ಚು ಶ್ರಮ ತೆಗೆದುಕೊಂಡರೆ ಸಾಕಾಗಿದೆ. ಇದರ ಬೀಜವನ್ನು ಸೆಪ್ಟಂಬರು ಯಾ ಅಕ್ಟೋಬರ್ ತಿಂಗಳಲ್ಲು ಬಿತ್ತಲಿಕ್ಕೆ ಒಳ್ಳೆ ಕಾಲವಾಗಿದೆ ಜೂನ್ ತಿಂಗಳಲ್ಲು ನೆಡಲಿಕ್ಕೆ ಗಿಡವು ತಯಾರಾಗಿ ಸಿಕ್ಕುತ್ತೆ. ಗದ್ದೆ ವಗೈರೆ ಹೆಚ್ಚಿನ ತೊಂದರೆ ಇರುವವರು ಕೆಲಸವಿಲ್ಲದ ಸಮಯವಾದ ಮಾರ್ಚ ಏಪ್ರಿಲ್ ತಿಂಗಳಲ್ಲು ಕಾಡು ಕಡದು ಬೇಲಿ ವಗೈರೆ ಹಾಕಿ ಶೀತಜಾಗದಲ್ಲು ಗುಂಡಿಸಹ ತೆಗದಿಡಬಹುದು. ನೆಡಲಿಕ್ಕೆ ಹೆಚ್ಚು ಆಳು ಬೇಕಾಗಿರುವದಿಲ್ಲ ಇದನ್ನು ನೆಟ್ಟು ಒಂದೆರಡು ವರ್ಷ ಚನ್ನಾಗಿ ಸಾಕಿದರೆ ಮುಂದಕ್ಕೆ ಹೋಗುವ ದಾರಿಯನ್ನು ಅದೇ ತೋರಿಸುತ್ತೆ. ಇಲ್ಲಿ ಮಂಜತ್ರಾಬಾದಿನಲ್ಲಿ ಅನೇಕರು ಪೂರ್ವದಲ್ಲಿ ಬಾಜರುಬಿಟ್ಟ ಕಾಪಿತೋಟಕ್ಕೆ ಹೆಚ್ಚು ನೆಳಲಿಟ್ಟು ಯಾಲಕ್ಕಿ ವ್ಯವಸಾಯಮಾಡಿ ನೀರು ಗುಣಿಹೊಡಸಿ ಅದರ ಮಣ್ಣನ್ನು ಸುತ್ತ ಚಲ್ಲಿ ಇದರಲ್ಲಿ ಚನ್ನಾಗಿ ಫಲವತ್ತಾದನ್ನು ನಾನು ಕಣ್ಣಾರೆ ನೋಡಿರುತ್ತೇನೆ ಒಂದು ಎಕರೆಗೆ ಆಗತಕ್ಕ 1200 ಗಿಡದಲ್ಲಿ 10 ಯಾ 12 ಮಣ ಕುಯ್ಯುವುದರಲ್ಲಿ ಸಂದೇಹವಿಲ್ಲ ಇದರ ಹಣವಿಗೆ ಕನಿಷ್ಟ ತಿಂಗಳಾದ ಸಪ್ಟಂಬರ್ ಅಕ್ಟೋಬರ್ ತಿಂಗಳಲ್ಲಿ ಸಿಗುವದಲ್ಲದೆ ಇದರ ಕೆಲಸವನ್ನ ಮುಂದರಿಸಲಿಕ್ಕೆ ಆಳುಗಳು ದೊರಕಿಸಲಿಕ್ಕೂ ಅನುಕೂಲವಾಗುತ್ತೆ.

ಕಲ್ಲುಮಾಡನ ಯಂ. ಬೆಳ್ಯಪ್ಪ.

ಹಾಲಿ ಗ್ರಂಥ ಭಾಕ್ಸಿ

ಭಗವತಿ ಕ್ಲಬ್.

ಅಯ್ಯಾ,

ಈ ಕ್ಲಬ್ಬಿಗೆ ಸಣ್ಣಸಣ್ಣ ಪುಸ್ತಕಗಳು ಮೊದಲುಗೊಂಡು ರಾಮಾಯಣ, ಮಹಾಭಾರತ ಇತ್ಯಾದಿ ಒಂದುನೂರು ಪುಸ್ತಕಗಳನ್ನು ಮೆ. ಜೋಂಜೀರ ಬಿದ್ದಪ್ಪನವರು ಉಚಿತಾರ್ಥವಾಗಿ ಕೊಟ್ಟಿರುತ್ತಾರೆ ನೆರೆ ಊರವರಾದ ನಮ್ಮ ಮೇಲಿನ ಪ್ರೀತಿಗೂ ಮತ್ತು ಇವರ ಉದಾರ್ಯಕ್ಕೂ ಇವರನ್ನು ಸಂಘದವರು ವಂದಿಸುವದಲ್ಲದೆ, ಇವರ ಆಯುರಾರೋಗ್ಯವೂ ಸಂಪತ್ತೂ ಕೊಡುವಂತೆ ಭಗವಂತನ್ನ ಪ್ರಾರ್ಥಿಸುತ್ತೇವೆ.

ಊರವರು

ಮಧ್ಯಪಾನವನ್ನು ಆದಷ್ಟು ಕಮ್ಮಿಮಾಡಿ ಕೊಡಗಿನಲ್ಲಿ ಇದರ ವಾಸನೆಯೇ ಇಲ್ಲದಂತೆ ಮಾಡಬೇಕೆಂಬ ಸಜ್ಜನರ ಪ್ರಯತ್ನಕ್ಕೆ ಭಂಗಬಂದಿರುವದನ್ನು ನೋಡಿ ನಾನು ಅತ್ಯಂತ ವ್ಯಸನಪಡುತ್ತೇನೆ ಬಡವ ಕಗ್ಗತ್ತಲೆಯಲ್ಲಿ ಬೆಳಕು ಕಂಡಂತೆ ಅಲ್ಲಲ್ಲಿ ಶುಭ ಶಕುನಗಳು ತಲೆದೋರುತ್ತ ಈ ವರುಷ ಹುತ್ರಿ ಹಬ್ಬ ಕಳೆದು ಊರೊಕ್ಕೆಯ ದಿನ ಪಾಲುಗುಂದ ಗ್ರಾಮಸ್ಥರೆಲ್ಲ ಅವರ ಅಂಬಲದಲ್ಲಿ ಸೇರಿ ಮದ್ಯ, ಎಂದರೆ ಸೇಂದಿ, ಸಾರಾಯ ಇತ್ಯಾದಿ ಕೆಲವು ಸಮಯದಲ್ಲಿ ಸ್ವಲ್ಪ ಪ್ರಯೋಜನವುಳ್ಳದ್ದಾದರೂ ಮತ್ತು ಕೆಲವರಿಗೆ ಸ್ವಲ್ಪ ಆದಾಯಕರವಾದರೂ, ಒಟ್ಟಾರೆ ಕೆಟ್ಟದಾಗಿರುವುದರಿಂದಿದನ್ನು ಮುಟ್ಟಬಾರದೆಂದು ಅಭಿಪ್ರಾಯಪಟ್ಟು ತಮ್ಮ ಕ್ರಮದಲ್ಲಿ ಐವತ್ತು ವರುಷಕ್ಕೆ ಕಮ್ಮಿ ಪ್ರಾಯ ಇರುವ ಯುವಕರು ಸೇಂದಿ, ಸಾರಾಯಿ ವಗೈರೆ ವಿಷ ಪದಾರ್ಥಗಳನ್ನೇ ವಿಸರ್ಜಿಸಬೇಕೆಂದೂ ಜೊತೆಗೆ ಬೀಡಿ ಸಿಗರೇಟ್ ಇತ್ಯಾದಿ ಧೂಮ ಪದಾರ್ಥಗಳನ್ನೂ ಸಹ ಉಪಯೋಗಿಸಬಾರದೆಂದೂ ತೀರ್ಮಾನಿಸಿರುವ ಸಂಗತಿಯನ್ನು ಕೇಳಿ ಸಂತೋಷವಾಗುವದಿಲ್ಲ. ಆದರೆ ಒಂದು ಮಾತು, ಅನೇಕ ಗ್ರಾಮಗಳಲ್ಲಿ ಇಂಥವು ಇದಕ್ಕಿಂತ ಕಠಿಣ ಏರ್ಪಾಡುಗಳು ಎಷ್ಟೊತ್ತೋ ಆದವು ಅವೆಲ್ಲವೂ ನೀರಿನ ಮೇಲಿನ ಹೋಮದಂತಾದವು ಆದ್ದರಿಂದ ಇವರ ಪ್ರಯತ್ನವು ಆಗಲಿಕ್ಕಿಲ್ಲವೆಂತಲೂ ಇದಕ್ಕೆ ಭಗವಂತನ ಸಹಾಯವು ಅತ್ಯವಶ್ಯವೆಂದೂ ತೋರುತ್ತದೆ

ಹೇವಣಗೇರಿ ಪಾಲುಗುಂದವ್ವ

ಈ ವರುಷ ಡಿ ಬೋರ್ಡಿನಿಂದ ಹೆಗ್ಗಡೆ ಹಣ ಸಿಕ್ಕಿದರೂ ಗ್ರಾಮದ ರಸ್ತೆಗಳು ಚೆನ್ನಾಗಲ್ಲವೆಂಬ ಅತೀ ಆಯಿತು ಆದರೆ ಇತ್ತ ನೋಡಿ, ಚೆಂಬೆಬೆಳಿಯೂರು ಹೇವಣಗೇರಿ ರಸ್ತೆಗೆ 60 ರುಪಾಯಿ ಮಂಜೂರಾಯಿತು ಇದನ್ನು ಮೆ ಪೃಗ್ಗಿನ ಪೂಣಚ್ಚ ಮತ್ತು ಮೆ ಮುಕ್ಕಾಟಿರ ಅಯ್ಯಣ್ಣನವರು ವಹಿಸಿಕೊಂಡು ನಂಬಿದ ಲೆಕ್ಕಪತ್ರ ಇಟ್ಟುಕೊಂಡು 130 ರುಪಾಯಿಯ ಕೆಲಸವನ್ನು ಮಾಡಿದ್ದನ್ನು ತಿಳುವ ಪ್ರಯೋಜಕ ನೊಬ್ಬನೂ ಈ ಮಾತನ್ನು ನಿಮಗೆ ಹೇಳಲಿಲ್ಲ? ಆದರೆ ಇವರಿಗುಂಟಾಗಿರುವ ನಷ್ಟವನ್ನು ಇವರ ತಲೆ ಮೇಲೆ ಬಿಟ್ಟರೆ ಮುಂದಕ್ಕೆ ಯಾರ ಮಾಡುವವರ್ಯಾರು? ಆದರಿಂದ ಘನ ಸರಕಾರದವರೂ ಮತ್ತು ಗ್ರಾಮಸ್ಥರೂ ಇದರ ಭಾರವನ್ನು ಸ್ವಲ್ಪವಾದರೂ ತೆಗದುಕೊಳ್ಳಲಿಕ್ಕಿಲ್ಲವೇ?

ಇಲ್ಲಿಂದ ಮುಂದರಿದ ಪಾಲುಗುಂದ ಕೊಂಡಂಗೇರಿ ರಸ್ತೆಗೆ 130 ರುಪಾಯಿ ಮಂಜೂರಾಯಿತು. ಈ ಕೆಲಸವನ್ನು ಪಾಲುಗುಂದ ಗ್ರಾಮಸ್ಥರೇ ವಹಿಕೊಂಡರು. ಕೊಂಡಂಗೇರಿ ಗ್ರಾಮದವರನ್ನು ಕೇಳಿಕೊಂಡು ಅವರು ಇದಕ್ಕೆ ಸಹಾಯ ಮಾಡದ್ದನ್ನು ನೋಡಿದರೆ ಇದೆಯಂತ ಕೊಂಡಂಗೇರಿ ಜನರು ಇಲ್ಲವೆಂಬದಾಗಿ ಭಾವಿಸಬೇಕಾಗುತ್ತದೆ ವಹಿಸಿಕೊಂಡ ಕೆಲಸವನ್ನು ಪಾಲುಗುಂದ ಗ್ರಾಮದವರು ಮಾತ್ರ ಹಣದಂತೆ ಒಟ್ಟೆ ಪ್ರಕಾರ ವಿಭಾಗ 150ರೂ. ಕೊಟ್ಟದಕ್ಕೆ ಸುಮಾರು 300ರೂ ಕೆಲಸ ಮಾಡಿದ್ದನ್ನು ನೋಡಿ ಎಲ್ಲರು ಬಹಳ ಸಂತೋಷಪಡುತ್ತಾರೆ. ಕೆಲಸವನ್ನು ನೋಡಿದ ಪಾರುಪತ್ಯಗಾರರೂ ಮತ್ತು ಶ್ಯಾನುಭೋಗರು ಸಹ ಎಷ್ಟು ಸಂತೋಷಪಟ್ಟರೆಂದು ಅವರೇ ಹೇಳುವರು ಕೆಲಸದಲ್ಲಿ ಹೆಚ್ಚು ಮೋಹನತ್ತು ತೆಗೆದುಕೊಂಡ ಜನರ ಮೊಣ್ಣಯ್ಯನವರನ್ನು ವಂದಿಸಬೇಕಾದದ್ದು ಗ್ರಾಮಸ್ಥರ ಕರ್ತವ್ಯವಲ್ಲವೇ? ಆದರೆ ಇವರ ಕೆಲಸವು ಪೂರ್ತಿ ಆಯಿತೆಂದು ಹೇಳಲಿಕ್ಕಾಗುವದಿಲ್ಲ ಮಧ್ಯದಲ್ಲಿ ಒಂದು ಗದ್ದೆಯಲ್ಲಿ ಸುಮಾರು ಒಂದು ಫರ್ಲಾಂಗ್ ರಸ್ತೆಯನ್ನು ಬೆಳೆಯ ದೆಸೆಯಿಂದ ಈಗ ಮಾಡಿರುವದಿಲ್ಲ ಇದನ್ನು ಮಾಡಿದರೆ ವೀರರಾಜಪೇಟೆಯಿಂದ ಈ ರಸ್ತೆಗಾಗಿ ಕೊಂಡಂಗೇರಿ ಕಡುವಿನವರೆಗೆ ಏನೊಂದು ತೊಂದರೆ ಇಲ್ಲದೆ ಗಾಡಿಗಳು ಹೋಗಬಹುದು. ಈ ಕೆಲಸಕ್ಕಾಗಿ ಮತ್ತು ಗ್ರಾಮಸ್ಥರ ಒಗ್ಗಟ್ಟಿಗಾಗಿ ಮೆ ಬಲ್ಲಚಂಡ ಬೆಳ್ಯಪ್ಪ ಬಿ ಎ ಯವರು ಐವತ್ತು ರೂಗಳನ್ನು ಕೊಟ್ಟದ್ದಕ್ಕೆ ನಾವು ತುಂಬಾ ಸಂತೋಷಪಡುವದಲ್ಲದೆ ಅವರನು ಈ ಮೂಲಕ ವಂದಿಸುತ್ತೇವೆ

"ಗ್ರಾಮಸ್ಥ."

ಗೋಣಿಕೊಪ್ಪಲು ಸ್ಕೂಲು

ಅಯ್ಯಾ,

ಈ ಮಿಶನರಿ ಸ್ಕೂಲ್ ತೆರೆಯುವ ಕಾಲದಲ್ಲಿ ಮಿಶನರಿಯವರಿಗೆ ಕಟ್ಟಡ ಕಟ್ಟಲಿಕ್ಕೆ ಸ್ಥಳವೂ, ಹಣವೂ ಈ ಪಾರ್ಶ್ವದ ಜನರಿಂದ ಕೊಡಲ್ಪಟ್ಟದ್ದಲ್ಲದೆ ಸರಕಾರದವರಿಂದಲೂ, ಡಿಸ್ಟ್ರಿಕ್ಟ್ ಬೋರ್ಡಿನಿಂದಲೂ ತಿಂಗಳುವಾರು ರುಪಾಯಿ 80ರ ಮೇರೆ ಸಹಾಯವೂ ಸಿಕ್ಕುತ್ತಾ ಈಗ ಸ್ಕೂಲು ಇರುವ ಸ್ಥಿತಿಯಲ್ಲು ನಡೆಯುತ್ತಿದೆ ದಿನೇ ದಿನೇ ಈ ಸ್ಕೂಲಿನಲ್ಲು ವಿದ್ಯಾರ್ಥಿಯರ ಸಂಖ್ಯೆಯು ಹೆಚ್ಚುತ್ತಿದೆ ಆದರೆ ಉಪಾಧ್ಯಾಯರ ಸಂಖ್ಯೆಯು ಇದ್ದಷ್ಟೇ ಇದ್ದು ಫಸ್ಟ್ ಸ್ಟೇಂಡಾರ್ಡ್ ಒಂದು ತರಗತಿಯಲ್ಲಿ ಸುಮಾರು 60 ವಿದಾರ್ಥಿಗಳಿಗಿಂತ ಹೆಚ್ಚು ಸಂಖ್ಯೆ ಇದ್ದು ಒಬ್ಬ ಉಪಾಧ್ಯಾಯನಿಂದ ಬೋಧನೆಯು ಕೊಡುವದು ನೋಡಿದರೆ ಬಹು ವ್ಯಸನಕರವಾದ ಸಂಗತಿಯಾಗಿದೆ.

ಈ ವಿಷಯವಾಗಿ ಸ್ಕೂಲು ಸಬ್ ಅಸಿಸ್ಟಂಟ್ ಇನ್‌ಸ್ಪೆಕ್ಟರವರೂ, ಡಿ. ಬೋರ್ಡು ಮೆಂಬರ್ ಮೆ ಕೋಟೆರ ಚಿಣ್ಣಪ್ಪನವರು ಯಂ ಯಲ್. ಸಿ. ಯವರೂ ಸಂದರ್ಶಿಸಿದಾಗ ಮಾಡಿರುವ ರಿಮಾರ್ಕುಗಳಿಂದ ಸ್ಕೂಲಿನ ವ್ಯಸನಕರವಾದ ಸ್ಥಿತಿಯು ವಿಶದವಾಗುತ್ತದೆ

ಸರಕಾರದ ಶಾಲೆಯಲ್ಲು ಇಲ್ಲದೆ, ಸರಕಾರದಿಂದಲೂ, ರೈತರಿಂದಲೂ, ದ್ರವ್ಯ ಸಹಾಯ ಹೊಂದಿಕೊಂಡು, ವಿದ್ಯಾರ್ಥಿಯರ ವಿದ್ಯೆಕ್ಕೆ ಒಳ್ಳೆಯ ಗಮನ ಕೊಡದಿರುವದು ತುಂಬಾ ಶೋಚನೀಯವಾದ ಸಂಗತಿಯಾಗಿದೆ.

ಪ್ರತಿ ಮಾಹೆಯಾನ ರುಪಾಯಿ 80ರ ಮೇರೆ ಸರಕಾರದಿಂದಲೂ ಬಾಕಿ ಸ್ವಲ್ಪ ಹಣವು ಸ್ಕೂಲುಫೀಜಿನಿಂದಲೂ, ಅಂತು ಒಟ್ಟು ಅಷ್ಟೇ ಹಣದಿಂದ ಮಾತ್ರ ಸ್ಕೂಲಿನ ಕಾರುಬಾರವು ನಡೆಯುತ್ತಿರುವಾಗ್ಯೆ 100ರಲ್ಲು 95 ಪಾಲು ಖರ್ಚಿನ ಜವಾಬ್ದಾರಿಯು ಮಿಶನರಿಯವರದಲ್ಲವಾಗಿದ್ದು ಸ್ಕೂಲನ್ನು ಈ ತರಹದ ಸ್ಥಿತಿಯಲ್ಲಿಡುವದು ಎಂದಿಗೂ ನ್ಯಾಯವಲ್ಲ

ಮಿಶನರಿಯವರಿಗೆ ಸ್ಕೂಲು ನಡೆಯಿಸುವ ಭಾರವು ಕೆಟ್ಟಾದ ಪಕ್ಷದಲ್ಲಿ ಖಂಡಿತವಾಗಿಯೂ ಸ್ಥಳದ ಜನರ ಸ್ವಾಧೀನಕ್ಕೆ ಬಿಡುವದು ಒಳ್ಳೆಯದಾಗಿದೆ. ನಮ್ಮ ಹಣಕೊಟ್ಟು, ನಮ್ಮ ಸ್ಥಳಕೊಟ್ಟು, ಸರ್ಕಾರದಿಂದಲೂ ಸಹಾಯ ದೊರಕಿದರೂ ಮಕ್ಕಳಿಗೆ ಸ್ಥಳವಿಲ್ಲದೆಯೂ, ಉಪಾಧ್ಯಾಯರು ಸಾಲದೆಯೂ ವಿದ್ಯೆಕ್ಕೆ ಅಡಚಣೆ ಮಾಡುವದು ಸಹಿಸಲಾಗದ ಸಂಗತಿಯಾಗಿದೆ

ಈ ವಿಷಯವಾಗಿ ಸ್ಕೂಲಿನ ಸೂಪರಿಂಟೆಂಡೆಂಟರವರು ಒಡನೆ ಜವಾಬ್ದಾರಿಯನ್ನು ವಹಿಸಿಕೊಂಡು ವಿದ್ಯಾರ್ಥಿಯರನ್ನು ಸೇರಿಸಿಕೊಳ್ಳುವದಕ್ಕೂ ಮಾಸ್ತರುಗಳನ್ನು ಹೆಚ್ಚಿಸಲಿಕ್ಕೂ ತೊಂದರೆ ತೆಗೆಯಬೇಕಾಗಿದೆ. ಸದರಿ ವಿಷಯಕ್ಕೆ ಗಮನಕೊಡಲು ಆಗದಪಕ್ಷ ಖಂಡಿತವಾಗಿಯೂ ಸ್ಕೂಲನ್ನು ಜನರ ಸ್ವಾಧೀನಕ್ಕೆ ಬಿಡಬೇಕಾಗಿದೆ.

ಪ್ರೀಯ ಸ್ಕೂಲಿಗೆ ಸಂಬಂಧಪಟ್ಟ ಸುತ್ತಮುತ್ತಲಿನ ವಿದ್ಯಾರ್ಥಿಯರ ತಂದೆತಾಯಿಗಳು ದಯಮಾಡಿ ಸ್ಕೂಲಿಗೆ ಕಳುಹಿಸುವ ವಿದ್ಯಾರ್ಥಿಯರನ್ನು ಬಾಕಿಮಾಡಬಾರದು ನಮ್ಮ ಹಣ, ನಮ್ಮ ಸ್ಥಳ ಕೊಟ್ಟು ಮತ್ತೆ ಸ್ಕೂಲಿಗೆ ಹೆಚ್ಚಿಗೆ ನಮ್ಮ ಮಕ್ಕಳನ್ನು ಸೇರಿಸಿಕೊಳ್ಳುವದಿಲ್ಲವೆಂದು ಹೇಳಿದರೆ ನಮ್ಮ ದುರ್ಭಾಗ್ಯವೇ ಸರಿ ಆದ್ದರಿಂದ ನಾವೆಲ್ಲರೂ ಸೇರಿ "ಮಿಶನರಿಯವರು ನಮಗೇನೇ ಆ ಸ್ಕೂಲನ್ನು ವಹಿಸಿಕೊಡಲಿ' ಎಂದು ಬರೆಯುವ, ಅದನ್ನು ಡಿಸ್ಟ್ರಿಕ್ಟ್ ಬೋರ್ಡ್ ಶಾಲೆಯನ್ನಾಗಿ ಮಾಡಲು ಸಂಕಲ್ಪದವರನ್ನೂ ಸದ್ರಿ ಇಲಾಖೆಯವರನ್ನೂ ಕೇಳುವ ಈ ಪ್ರಸ್ತಾವದಲ್ಲು ಇಟ್ಟರೆ ನಮ್ಮ ಮಕ್ಕಳ ಮುಂದಳ ಸ್ಥಿತಿಯು ಕ್ಷೇಮಕರವಾಗಿ ಪರಿಣಮಿಸಬಹುದು.

ಡಿಸ್ಟ್ರಿಕ್ಟ್ ಬೋರ್ಡಿನಿಂದ ಗ್ರಾಂಟುಕೊಡಲು ಸಾಂಕ್ಷನ್ ಮಾಡುವಾಗ್ಯೆ ಸದರಿ ಸ್ಕೂಲಿನಲ್ಲು ವಿದ್ಯಾರ್ಥಿಯರಿಗೆ ಮಿಶನರಿಯವರ ಮತಬೋಧನೆಯನ್ನು ಕೊಡಬಾರದೆಂದು ಒಪ್ಪಿಗೆ ಪಡೆದು ಸಂಕ್ಷನ್ ಮಾಡಿದೆಂದು ತಿಳಿಯಬರುತ್ತದೆ ಆದರ ಸ್ಕೂಲಿನಲ್ಲು ಪ್ರತಿ ವಿದ್ಯಾರ್ಥಿಯನ್ನು ಕನ್ನದೇವರು ಯಾರೆಂದು ಕೇಳಿದಲ್ಲು ಯೇಸುವಂದೇ ಹೇಳುವಷ್ಟುಮಟ್ಟಿಗೆ ಮತಬೋಧನೆಯು ನಡೆದಿದೆ ಈ ವಿಷಯವನ್ನು ತಿಳಿದ ತಂದೆತಾಯಿಗಳು ಹೇಗೆ ತಾನೆ ಅಂಥಾ ಸ್ಕೂಲಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಷ್ಟಪಟ್ಟಾರು? ನಮ್ಮ ಹಣಕೊಟ್ಟು ನಮ್ಮ ಮತವನ್ನು ಪರಮತಕ್ಕೆ ಅಲೋಚನೆ ಕೊಡುವಂಥಾ ಸಂದರ್ಭವನ್ನು ಯಾರೂ ಇಷ್ಟಪಡಲಾರರು.

ಜಿ. ಪೂಣಚ್ಚ.

ವನ ಭೋಜನ.

ಮಹನೀಯರೆ,

ಮಡಿಕೇರಿ ಗಾಲ್ಫ್ ಗ್ರೌಂಡಿನ ಪಕ್ಕದಲ್ಲಿ ಇದೇ ತಿಂಗಳ ತಾ. ೪ರ ದಿನ ಹಗಲು 1 ಗಂಟೆಗೆ ಮಡಿಕೇರಿಯ ಉದ್ಯೋಗಸ್ಥರೂ, ರಿಟೈಯರ್ಡ್ ಆಫೀಸರುಗಳೂ ಮತ್ತು ನಿವಾಸಿಗಳೂ ಆದ ಕೊಡವರದೊಂದು ನವ "ಸೋಷಿಯಲ್ ಗ್ಯಾದರಿಂಗ್" ಯೂ, ವನಭೋಜನ, ಅಥವ, ಊರುಪರ್ವಯೊಂದು ವಿಜೃಂಭಣೆಯಿಂದ ಜರುಗಿತು. ಸಾಧಾರಣ 150 ಜನಗಿಂತಲೂ ಮಿಕ್ಕಿ ಇದ್ದರು. ಈ ಔತಣಕ್ಕೆ ಹೊರಗಿನ ಪ್ರಾಂತ್ಯದಲ್ಲಿರುವ ನಮ್ಮ ಕೆಲವು ಕೊಡವ ಮಹನೀಯರೂ ಹಾಜರಿದ್ದುದರಿಂದ ಚಿರಕಾಲ ಅಗಲಿದ್ದ ಆ ನಮ್ಮ ಭ್ರಾತೃಗಳ ಸಮಾವೇಶವು ಆ ಸ್ಥಳದಲ್ಲಿ ಚಿರಾನಂದವನ್ನುಂಟುಮಾಡುತ್ತಿದ್ದವು. ಊಟವು ಇಂಗ್ಲೀಷು ಮತ್ತು ನೇಟಿವ್ ಮಧುಪಾನಗಳಿಂದಲೂ, ಆ ಮೇಲೆ ಚುಟ್ಟಾ, ಸಿಗರೇಟು, ಬಾಳೆಹಣ್ಣು, ಕಿತ್ತಳೆ ಹಣ್ಣುಗಳೂ, ತಾಂಬೂಲದಿಂದಲೂ ಅತಿ ಆನಂದ ಮಗ್ನವಾಗಿದ್ದಿತು. ಇದಾದಮೇಲೆ ರಾ. ಬಾ. ಕೊ. ಕುಟ್ಟಯ್ಯನವರು ಈ ಅಪೂರ್ವವಾದ ವನಭೋಜನದ ಉದ್ದೇಶ್ಯವಾಗಿ ಸ್ವಾರಸ್ಯವಾದ ಭಾಷಣದಿಂದ ಇನ್ನುಮುಂದೆ ಪ್ರತಿವರ್ಷವೂ ಮಡಿಕೇರಿಯಲ್ಲಿರುವ ಕೊಡಗರೆಲ್ಲರೂ ಒಗ್ಗಟ್ಟಾಗಿ ಸೇರಿ ಹುತ್ತರಿ ಹಬ್ಬವನ್ನೂ, ಊರುಪರ್ವಯನ್ನೂ ನಡಸುವಂತೆ ಸಭೆಯನ್ನು ಕೇಳಿಕೊಂಡರು. ಹಾಗೆಯೇ ರಾ. ಬಾ. ಅಪ್ಪಾರಂಡ ಮುಂದಣ್ಣನವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ರಾ. ಬಾ. ಕೆ. ಚಂಗಪ್ಪನವರು ತಾನು ನಾಡಿನಲ್ಲಿ ಹೋಗುವಾಗ್ಯೆ ಈ ಊರುಪರ್ವಯನ್ನು ತಿಳಿದ ನಾಡಿನಲ್ಲಿರುವ ನಮ್ಮ ಕೆಲವು ಜ್ಞಾತೃವರ್ಗದವರು ಕೆಳಗಿನ ಸಂಗತಿಗಳನ್ನು ತಿಳಿಯಲು ಅಪೇಕ್ಷಿಸುತ್ತಾರೆ. ಮಡಿಕೇರಿ ಕೊಡವರು ಹೊಸತಾಗಿ ಊರುಪರ್ವ ಮಾಡುತ್ತಾರಂತೆ. ಅವರಿಗಲ್ಲಿ ಜನ್ಮಭೂಮಿ ಇದೆಯೋ? ಯಾರ ಗದ್ದೆಯಿಂದ ಕದಿರು ತೆಗೆಯುವದು? ಆರೂಢ ಮನೆ ಮಠಗಳಿವೆಯೇ? ಮಂದು ಮಾನಿಗಳಿವೆಯೇ? ಮನೆ ಮನೆ ಊರವಂಶದವರ ಗುರುಪೂಜ್ಯರನ್ನು ಹಾಡುವರೇ? ಎಂಬ ವಗೈರೆಯಾದ ಪ್ರಶ್ನೆ ಮಾಡುತ್ತಾರೆ. ಇಂಥಾ ಹುತ್ತರಿ ಹಬ್ಬವನ್ನು ಯಾವ ಉತ್ತರದಿಂದ ಮಡಿಕೇರಿಯಲ್ಲಿ ನಡೆಸುವದೆಂದು ಕೇಳಿದರು. ಅದಕ್ಕೆ ಶ್ರೀಯುತ ಕೋದಂಡ ತಿಮ್ಮಯ್ಯನವರ [illegible] ನಮ್ಮ ಮಡಿಕೇರಿಯ [illegible] ಕೇಳಲಿಕ್ಕಾಗುವದಿಲ್ಲ. ಇಲ್ಲಿಯ ಮುಂದಿನ ಭೂಮಿಯು ರಾಜರ ಕಾಲ [illegible] ನಮ್ಮ ವಶದಲ್ಲಿ ತಡದು ಕುಯ್ಯುತ್ತಿದ್ದುದ್ದಾಗಿದೆ. ಆ ಭೂಮಿಯು ಒಬ್ಬರ ಸ್ವಂತವಲ್ಲ. ಆರೂಢ ಮನೆಗಳಲ್ಲಿಯೂ ಸೇರಿ ಹುತ್ತರಿ ನಡಸಬೇಕಂತಾದರೆ, ಎಷ್ಟೋ ಮನೆತನದ ಅನೇಕರು ದೂರ ದೂರ ತಮ್ಮ ಸ್ವಂತಮನೆ, ಭೂಮಿ ವಗೈರೆ ಮಾಡಿಕೊಂಡು ತಮ್ಮ ಕುಟುಂಬದೊಂದಿಗೆ ಅಲ್ಲಿಯೇ ಹುತ್ತರಿ ವಗೈರೆ ಶುಭಾಶುಭಗಳನ್ನು ಮಾಡುವದಿಲ್ಲವೇ? ಆ ಊರವರೊಂದಿಗೆ ಅವರು ಅಲ್ಲಿ ಸೇರಿ ಮಂದು ಮಾನಿಗೆ ಸೇರುವದಿಲ್ಲವೋ? ಅವರೆಲ್ಲರು ಮನೆಮನೆಯ ಗುರುಪೂಜ್ಯರನ್ನು ಪದ ಹೇಳುವದು ಒಂದು ತರದ ಅತಿಥಿ ಸತ್ಕಾರ. ಮತ್ತೂ ಹಾಗೆ ಮಾಡಿ ಪ್ರತಿಯೊಂದು ಮನೆತನದಿಂದಲೂ ನಿರಕ್ಷಿನ ಮನೆತನ ವಯಾರಾತಿಯಿಂದ ಕೂಡಿದ ಹಣದಲ್ಲಿ ಊರುಪರ್ವ ಮಾಡುವದಾಗಿದೆ. ಹಾಗೆಯೇ ನಾವೂ ಮಾಡಬೇಕೆಂತ ಇದೆಯೇ? ಈಗ ನಾವೆಲ್ಲರೂ ಹಾಕಿದಂತೆ ಕೆಂಗೆ ಹಾಕಿ ಹುತ್ತರಿ ಊರುಪರ್ವ ಎಲ್ಲವೂ ಮಾಡಬಹುದು. ಆದರೆ ಇನ್ನು ಮುಂದೆ ಹುತ್ತರಿ ಹಬ್ಬವನ್ನು ಮಡಿಕೇರಿಯಲ್ಲಿ ಮಾಡಬೇಕೆಂಬೋ? ಬೇಡವೋ ಎಂಬುವನ್ನು ಚರ್ಚಿಸಬೇಕಾಗಿದೆ ಎಂದರು. ಶ್ರೀ ಪಟ್ಟಡ ಅಪ್ಪನವರು ತಕ್ಕ ಕಾರಣಗಳನ್ನು ತೋರಿಸಿ ಮಡಿಕೇರಿಯಲ್ಲಿ ಹುತ್ತರಿಹಬ್ಬ ಮಾಡುವದನ್ನು ವಿರೋಧಿಸಿದರು. ಓಟಿಗೆ ಹಾಕಲು ಬಹುಮತದಿಂದ ಹುತ್ತರಿ ಮಡಿಕೇರಿಯಲ್ಲಿ ಮಾಡಬೇಕೆಂದು ಹೆಚ್ಚಾಗಿ ಆ ಬಗ್ಗೆ ಕಮಿಟಿಯೊಂದನ್ನು ಮಾಡಿಸಲಾಯಿತು. ಅನಂತರ ಟೀ ಕುಡಿದು ಓಲಗವಾದ್ಯ ಕುಣಿತವನ್ನೆಲ್ಲಾ ಮುಗಿಸಿದನಂತರ ಶ್ರೀ ಬಿಟ್ಟಿಯಂಡ್ರ ಮುತ್ತಣ್ಣನವರು ಭಕ್ತಿಸ್ವರ್ಗದ ವಿಷಯ ಚಕ್ಕದೊಂದು ಸ್ವಾರಸ್ಯವಾದ ಹರಿಕಥೆಯನ್ನು ಸಭಿಕರ ಚಿತ್ತಾಕರ್ಷಣೆಯಂತೆ ಇಂಪಾಗಿ ಅಭಿನಯಿಸಿದರು. ಹಾಗೂ ಆ ಒಂದು ದಿನವನ್ನು ಅಲ್ಲಿ ನೆರೆದಿದ್ದವರೆಲ್ಲರೂ ಆನಂದದಿಂದ ಮುಕ್ತಾಯಗೊಳಿಸಿ ಅವರವರ ಬಿಡಾರವನ್ನು ಸೇರಿದರು. ಹೀಗೆಯೇ ಮುಂದುಮುಂದಕ್ಕೂ ಒಗ್ಗಟ್ಟಾಗಿ ನಡೆಯುವಂತೆ ಭಗವಂತನು ಸರ್ವರಿಗೂ ಆಶೀರ್ವದಿಸಲೆಂದು ಲೇಖಕನ ಪ್ರಾರ್ಥನೆ.

ದಾಬಿದ್ದನ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚರ್ಯಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕಿರುವವರೂ, ಮತ್ತು ಕೇರುಹಣ ಸಲ್ಲಿಸಬೇಕಿರುವವರೂ ದಯವಿಟ್ಟು ಮೀಡಿಕೇರಿಯಲ್ಲಿರುವ ನಮ್ಮ ಕಂಪೆನಿಯ ಹೆಡ್ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮ್ಯಾನೇಜರ್

15.9.24. 'ಕೊಡಗು' ಲಿಮಿಟೆಡ್.

ಪ್ರಕಟಣೆ.

☞ ಈ ಸಂದರ್ಭವನ್ನು ಕಳಕೊಳ್ಳಬೇಡಿರಿ.

ಮಡಿಕೇರಿ ದೇವೂರು ಬ್ಲಾಕಿನಲ್ಲಿ ಹೈಸ್ಕೂಲ್‌ಬಳಿ ಒಂದು ಎಕರು ಕಾಫಿತೋಟದಿಂದ ಕೂಡಿದ ಒಂದು ಹಂಚುಹಾಕಿದ ಮನೆಮತ್ತು ಅಡಿಗೆಮನೆ, ಇನ್ನು ಮನೆ ಕಟ್ಟಲಿಕ್ಕೆ ಎತ್ತರ ಜಾಗದಲ್ಲಿರುವ ಮನೆಯನ್ನು ಸಹ ಮಾರಲಿಕ್ಕೆ ಇಟ್ಟಿದೆ. ಬಾಯಿಷ್‌ದಾರರು ಶೀಘ್ರದಲ್ಲಿಯೇ ಈ ಕೆಳಗಿನವರಿಗೆ ದಯವಿಟ್ಟು ಬರಕೊಳ್ಳುವದು.

C. Co EDITOR,
"*Kodagu*" MERCARA.

12—7

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರುಮೊಬಲಗು	...	7,720
ಜಮೂಬಂದ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಖಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಸರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ತನಿಖೆ ಮಾಡುತ್ತಾರೆ.

ಪ್ರೆಸಿಡೆಂಟ್. ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ.
ಸಿ. ಮುತ್ತಣ್ಣಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು, 1—1—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್—ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡಭಾಷೆಯಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಇದರ 1 ನೇ. ಆರೋಗ್ಯವಂತನಾಗಿ ಬಹುಕಾಲ ಬದುಕಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುವು. ದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕ ಇರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ—

ಮೇನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಬಗ್ಗೆ ಕಂಟ್ರಾಕ್ಟು ಎಗ್ರಿಮೆಂಟು ಫಾರಮುಗಳೂ ಮತ್ತು ಫಿರ್ಯಾದು (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು ಆಫೀಸಿನಿಂದ ತಕೊಳ್ಳಬಹುದು.

ಮಡಿಕೇರಿ
17.9 [illegible] ಮೇನೇಜರ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.
Telegraphic Address:- "SHOOTER" Bombay.

[24 10] Please write for latest Catalogues.

ಗ್ರಹಕೃತ್ಯದ ನೋಟೀಸ್.

ಕೊಡಗು ಗೋಣಿಕೊಪ್ಪಲು ಸಾಪಿನ ಅಂಗಡಿ ಆರ್. ಸುಂದರ್‌ಸಿಂಗ್ ಈ ಮೂಲಕ ಪ್ರಕಟಪಡಿಸುವದೇನಂದರೆ:—

ನನ್ನ ಹೆಂಡತಿಯಾಗಿದ್ದ ಬಾಲಾಬಾಯಿ ಎಂಬಾಕೆಯು ನಹುಸುಲಶಕ್ಯತರದ ಅವಿಧೇಯತ್ವ ವಗೈರಗಳಿಗೋಸ್ಕರ ಕಳೆದ 9 ತಿಂಗಳುಗಳಿಂದ ನನ್ನ ಆಶ್ರಯದಲ್ಲಿ, ಮನಸ್ಸಿನಲ್ಲಿ, ಮತ್ತು ಸಂಸಾರದಲ್ಲಿ ಸಹ ಸಮಾಧಾನವಿಲ್ಲದೆ, ಈಕೆಯಿಂದ ನಿವೃತ್ತಿ ಹೊಂದಬೇಕೆಂಬ ಇರಾದೆಯಲ್ಲಿ ಇದ್ದ ಸಂದರ್ಭದಲ್ಲಿ ಈಕೆಯ ತಾಯಿ ಮತ್ತು ತಂಗಿ ಸಹ ಆಗಷ್ಟು ತಿಂಗಳು 10ನೇ ತಾರೀಕಿನಲ್ಲಿ ಇವಳನ್ನು ಕರದುಕೊಂಡುಹೋದರು.

ಈಕೆಯು ಹೊರಟುಹೋದ ಇವಳ ಕಾಸಾತಮ್ಮ ಬೆಂಗಳೂರು ಕಲಾಸು ಪಾಳ್ಯದಲ್ಲಿರುವ ರಾಷಯ ಕು ಪೋಲೀಸ್ ಕಾನ್‌ಸ್ಟೆಬಲ್ ನಂ 332ರ ಬಾಲಾಜಿಸಿಂಗ್ ಎಂಬುವನ ಮೂಲಕ ಇವಳನ್ನು ಪುನಹ ನನ್ನಲ್ಲಿಗೆ ಬಿಡುವದಾಗಿ 3 ಕಾಗದಗಳು ಬರದು ತಿಳುವಳಿಕೆ ಕೊಟ್ಟಾಗ್ಯೂ, ಈಕೆಯ [illegible] ನನ್ನ ಮನೆಗೆ ತಾ. 16-11-24ರಲ್ಲಿ ಅನುಮತಿ ಇಲ್ಲದೆ ಪ್ರವೇಶಿಸಿಕೊಂಡು, ಮರಳಿ ಹಿಂದಿನ ವ್ಯಾಕುಲಗಳಿಗೆ ಕಾರಣಳಾಗಿ ಇದ್ದದ್ದರ ಮೇಲೆ ತಾ 23-11-24ರಲ್ಲಿ ಕೆಲವು ದೊಡ್ಡಮನುಷ್ಯರಮೂಲಕ ಪಂಚಾಯಿತಿಯಿಂದ ತೀರ್ಮಾನವಾದ ಇವಳು ಧರಿಸಿದ ಸುಮಾರು 300 ರುಪಾಯಿಗಳ ನಗಗಳು, ಉಡುಗೊರೆಗಳು, ಮತ್ತು ನಗದು 125 ರುಪಾಯಿ ಈಕೆಗೆಕೊಟ್ಟು ಈಕೆಯ ಸಕಲ ಹಕ್ಕನ್ನು ತಪ್ಪಿಸಿ ನಿವರ್ತಿಸಿ (Divorce) ಮಾಡಿ ಈ ಸಂಗತಿ ತಾ. 24-11-24ರಲ್ಲಿ ಪೊನ್ನಂಪೇಟೆ ಪೋಲೀಸಿನಲ್ಲಿ ತಿಳಿಸಿ ಜನರಲ್‌ಡೈರಿಯಲ್ಲಿ ನಮೂದುಮಾಡಿಸಿರುತ್ತೆ.

ಆದ್ದರಿಂದ ನನ್ನ ವ ನನ್ನ ಬಂಧುರ ಸೊತ್ತುಗಳ ಮೇಲೆ ಈಕೆಗೆ ಯಾ ಈಕೆಯ ಸಂಬಂಧದವರಿಗಾಗಲಿ ಯಾವ ತರದ ಹಕ್ಕು ಬಾಧ್ಯತೆಯು ಮುಂದಕ್ಕೆ ಇರುವದಿಲ್ಲವಾಗಿ ಈ ಮೂಲಕ ಪ್ರಕಟಪಡಿಸಿಕೊಳ್ಳುತ್ತೇನೆ.

ಗೋಣಿಕೊಪ್ಪಲು, ಆರ್. ಸುಂದರ್‌ಸಿಂಗ್.
ತಾ. 24-11-24. 4—1 ಜನರಲ್ ಮರ್ಚೆಂಟ್.

ಹಳೆ ವಿದ್ಯಾರ್ಥಿಯರ ತ್ರೈಮಾಸಿಕ.

ಸಂಪುಟ 2] ವರ್ಷದಚಂದಾ ಬರೇ ರೂ. 1-4-0 [ಸಂಚಿಕೆ 1

ಸಂಪಾದಕ ಸಿ. ಬಿ. ಮೇದಪ್ಪ, ಬಿ.ಎ., ಬಿ.ಎಲ್. ಎಂ. ಎಲ್. ಸಿ.

ಈ ಸಂಚಿಕೆಯಲ್ಲಿ ಮನೋಹರವಾದ ಕೊಡಗಿನ ಪವಿತ್ರ ಸ್ಥಳವಾದ ಶ್ರೀ ಮೂಲ ಕಾವೇರಿಯ ಚಿತ್ರಗಳಿವೆ.

1. ಶ್ರೀ ಕಾವೇರಿಯ ಜನ್ಮ, ಅವತಾರ.
2. ಸರಕಾರಕ್ಕೆ ಸಾಲವೆಂದರೇನು?
3. ಪೋಲಿಟಿಕ್ಸ್ ಅಂದರೇನು?
4. ವಿನೋದಾವಳಿ.

ಇವೇ ಮುಂತಾದ ಬಹು ಸ್ವಾರಸ್ಯದ ವಿಷಯಗಳಿವೆ.

ಮೇನೇಜರ್,
ಓ. ಎಸ್. ಎಸೋಸಿಯೇಷನ್,
ಮಡಿಕೇರಿ.

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.
If not delivered please return to
"KODAGU" OFFICE, MERCARA.

ಕೊಡಗು.

ವಾರ್ಷಿಕ ಚಂದಾ ರೂ. ೪—೮—೦

ಐಕ್ಯೇನ ಭೋಕಡಯಯಃ ವಿದ್ಯಾಸ್ತೀತಿ ಪ್ರಯುಕ್ತತಾಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೪] ಕೊಡಗು, ಸನ್ ೧೯೨೫ನೇ ಇಸವಿ ಜನವರಿ ತಾರೀಕು ೨೩ನೆಯ ಶುಕ್ರವಾರ [ಸಂಚಿಕೆ ೩೨

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್,
ಯಮ್. ಎಲ್. ಸಿ. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮುಂಗಡ ವರ್ಷಕ್ಕೆ 1-8-0, ಬಿಡಿ ಪತ್ರಿಕೆ 1ಕ್ಕೆ 0-2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ' 323,
ತಂಬುಶೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ವಾರ್ತೆದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ವಾರ್ತೆಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಧರಗಳಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸ್.

ಕೊಡಗಿನಿಂದ ಮೈಸೂರಿಗೆ ಮಾರಾಟಕ್ಕೆ ಬರುವ ಕಿತ್ತಳೆ ಹಣ್ಣುಗಳನ್ನು ಚಿಲ್ಲರೆಕಾಸ್ತಿನಲ್ಲಿ ನ್ಯಾಯವಾದ ಬೆಲೆಗೆ ಮಾರಾಟಮಾಡಿಸುವ ಬಗ್ಗೆ ಒಂದು ಏಜನ್ಸಿಯನ್ನು ನಾನು ಮೈಸೂರಲ್ಲಿ ತೆರೆದಿರುತ್ತೇನೆ. ಕಮೀಷನ್‌ವಿನಹ ಬಾಕಿ ಹಣ ವಂಚನೆಯೂ ಇಲ್ಲದೆ ಪಬ್ಲೀಕ ಪರಾಜಿನಲ್ಲಿ ಹಣ್ಣುಗಳನ್ನು ಮಾರಿಸಿಕೊಡಲು ತಯಾರಿದ್ದೇನೆ. ಅಲ್ಲದೆ ಹಿಂದೂದೇಶದ ಎಲ್ಲಾ ಕಡೆಗಳಿಗೂ ಕಿತ್ತಳೆ ಹಣ್ಣುಗಳನ್ನು ಒದಗಿಸಿಕೊಡಲು ನಾನು ಒಂದು ದೊಡ್ಡ ಉಗ್ರಾಣವನ್ನು (ಗೋಡೌನ್) ತೆರೆದಿರುತ್ತೇನೆ. ನಾನು ಒಬ್ಬ ಕೊಡಗು ದೇಶಸ್ಥನಾದುದರಿಂದ ಕೊಡಗಿನಲ್ಲಿರುವ ನನ್ನ ದೇಶ ಬಾಂಧವರೆಲ್ಲರೂ ಈ ಅನುಕೂಲವನ್ನು ಕಳಕೊಳ್ಳಲಿಕ್ಕಿಲ್ಲವಾಗಿ ಕೋರುತ್ತೇನೆ.

ಟೆಲಿಗ್ರಾಮ್ ವಿಳಾಸ:—
ಫ್ರೂಟ್ಸ್, ಮೈಸೂರು.

ಟಿ. ಎ. ಕುಪ್ಪಸಾಮಿ ಪಿಳ್ಳೆ,
ಫ್ರೂಟ್ಸ್ ಗೋಡೌನ್,
ಮೈಸೂರು.

೧—೬

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City

THE SHOPPING CENTRE OF COORG,

Spencer & Co. Ltd.,

MERCARA & POLLIBETTA.

An Announcement.

Our prices of wines, spirits, stores, etc., are down.

Send for our Xmas list and be convinced.

Trial order Solicited.

12

ಕೃಷಿತೋ ನಾಸ್ತಿ ದುರ್ಭಿಕ್ಷಃ

NITRATE OF SODA (15—16 per cent.) Nitrogen,

"The best and cheapest form of Nitrogen highly concentrated and immediately available. Nothing like it to make plants grow."

ವ್ಯವಸಾಯದಲ್ಲಿ ಗೊಬ್ಬರವಿಡುವದರ ಹೆಚ್ಚಿನ ಉದ್ದೇಶವು ಬೆಳೆಗಳಿಗೆ ಸಾರಜನಕ (Nitrogen) ಒದಗಿಸಿಕೊಡುವದಾಗಿರುತ್ತದೆ "ನೈಟ್ರೇಟ್ ಆಫ್ ಸೋಡಾ" ಎಂಬ ರಸಾಯನಿಕ ಗೊಬ್ಬರವು (15—16%) ಆದರೆ ಮೀನುಗೊಬ್ಬರದಲ್ಲಿಯಕ್ಕಿಂತ ಮೂರುಪಾಲು ಜಾಸ್ತಿ ಕ್ಷಾರಜನಕ ಭರಿತವಾಗಿದ್ದು ಬೆಳೆಗಳಿಗೆ ಥಕ್ಷನೆ ಪಡಗುವರೀತಿಯಲ್ಲಿರುತ್ತದೆ. ಇದರ ಉಪಯೋಗದಿಂದ ಪಸಲು ಬಹಳ ಸಮೃದ್ಧಿಯಾಗುವುದು. ಹಿಡಿತುಂಬ ರಸಾಯನಿಕ ಗೊಬ್ಬರವು ಮುಡಿ (ಕುಕ್ಕೆ) ತುಂಬ ಹಟ್ಟಿಗೊಬ್ಬರಕ್ಕೆ ಸಮವಾಗಿರುತ್ತದೆ. ಈ ರಸಾಯನಿಕ ಗೊಬ್ಬರವು ಅಮೇರಿಕ ದೇಶದ "ಚಿಲ್ಲಿ" ಎಂಬಲ್ಲಿ ತಯಾರಿಸಿ ಬಹಳ ದೂರದೇಶದಿಂದ ಬರಬೇಕಾದರೂ ಸಹ ಅದು ಹಳ್ಳಿ ಮೂಲೆಗಳ ತೋಟಗದ್ದೆ ವಗೈರೆ ಕೃಷಿಗಳಿಗೆ ಉಪಯೋಗಿಸಲು ಬಹಳ ಸುಲಭವಾಗಿಯೂ ಹಟ್ಟಿ ಗೊಬ್ಬರಕ್ಕಿಂತಲೂ ಬಹಳ ಹೆಚ್ಚಿನ ಆದಾಯವನ್ನು ಕೊಡುವದಾಗಿಯೂ ಇರುತ್ತದೆ. ಒಂದು ಎಕ್ರೆ ಭೂಮಿಗೆ 120—180 ರಾತಲು ಬೇಕಾಗುವದು. ಇದರ ವಿಷಯ ಹೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ಧರ್ಮಾರ್ಥವಾಗಿ ನಮ್ಮಿಂದ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್

24—18 ಕಮಿಟಿಯವರ ಪರ

ಕೊಡಗಿನಲ್ಲು—
B. P. Ayapa, Hon Representative
Pollibetta, Coorg.

The Chilean Nitrate Committee, 6 Mission Row, Post Box 469,
CALCUTTA.

ಮಲೆಯಾಳ ವೈದ್ಯಶಾಲಾ.

ಮಲಬಾರಿನ ನಂಬೀಶನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯ ಶಾಲೆಯ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತದೆ. ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು ಬಹಳ ಕಡಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣ ನಂಬೀಶನ್,
ಆಯುರ್ವೇದ ವೈದ್ಯರು,
ವೀರರಾಜೇಂದ್ರಪೇಟೆ.

52—51

ಪ್ರಕಟಣೆ.

ಮಡಿಕೇರಿ ಪೊಲೀಸ್ ಸಬ್ ಇನ್‌ಸ್ಪೆಕ್ಟರುಗಳ ಕ್ವಾರ್ಟರ್ಸ್ ಕೆಳಗೆ ಅಂದವಾಗಿಯೂ ಹೊಸಮರಗಳಿಂದ ಭದ್ರವಾಗಿಯೂ 3 ವರ್ಷಗಳ ಹಿಂದೆ ಕಟ್ಟಲ್ಪಟ್ಟ ಸಂಸಾರ ಸಮೇತ ವಾಸ ಇರಲಿಕ್ಕೆ ಯೋಗ್ಯವಾದ 9 ಕೊಠಡಿಗಳಿರುವ ಮನೆ 3 ಅಂಕಣಗಳ ಕೊಟ್ಟಿಗೆ ಯಾವಾಗಲೂ ನಿರ್ಮಲವಾದನೀರು ಇರುವ ಕಲ್ಲು ಕಟ್ಟಿದ ಭಾವಿ (ನೀರು ಗೋಚ ತೆಗೆಯುವಂಥಾದ್ದು) ಕಾಫಿ, ಬಾಳೆ, ಕಿತ್ತಳೆ, ನಿಂಬೆ ಮರಗಳೂ ಮತ್ತು ಹಲಸು ಮತ್ತು ಮಾವಿನ ಗಿಡಗಳೂ ಇರುವ ಹಿತ್ತಲೂಸಹ ಇರುವ ಆಸ್ತಿ ಒಂದು ಮಾರಾಟಕ್ಕೆ ಇದೆ. ಈ ಸ್ಥಳವು ಗೌಪ್ಯವಾಗಿಯೂ ಸಂಸಾರ ಸಮೇತ ವಾಸ ಇರುವದಕ್ಕೆ ಯೋಗ್ಯವಾಗಿಯೂ ಇದೆ. ವಾಸಕ್ಕೆ ಇಂಥಾ ಯೋಗ್ಯವಾದ ಸ್ಥಳ ಮಡಿಕೇರಿಯಲ್ಲಿ ಸಿಕ್ಕುವದು ದುರ್ಲಭ. ಕೊಂಡುಕೊಳ್ಳುವದಕ್ಕೆ ಖಾಯಿಷಾ ಇರುವವರು ಸೊತ್ತು ನೋಡಿ ಕ್ರಯ ನಿಶ್ಚೈಸಬಹುದು. ಹೆಚ್ಚಿನ ವಿವರ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬೇಕಾಗಿದೆ.

VENDER,
C/o EDITOR, "KODAGU."
Mercara.

8.6

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮ. ಕೋಟೆರ ಚಿಣ್ಣಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲಿಸುವ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಮ. ಕೆ. ಚಿಣ್ಣಪ್ಪನವರ ಆಫೀಸಿನಲ್ಲಿ.
ಮೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ ಮ. ಪುಡಿಯಂಡ ದೇವಯ್ಯನವರು.
ನಾಪೋಕ್ಲು—ಮ. ಪೊನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮ. ಮುಕ್ಕಾಟಿರಪೂಣಚ್ಚನವರು.
ಪೊನ್ನಂಪೇಟೆ—ಮ. ಪುತ್ತಮನೆ ಮುದ್ದಮ್ಮೈಯ್ಯನವರು.
ಹುಗಿಕೇರಿ—ಮ. ಜಿ. ಮಾದಮ್ಮನವರು.
ಅಮ್ಮತ್ತಿ ಸಿದ್ಧಾಪುರ—ಮ. ಐನಂಡ ಪೂವಪ್ಪನವರು.
ಮ. ಚಂಗಂಡ ಕುಟ್ಟಪ್ಪನವರು.

ಕೋದಂಡ ಉತ್ತಯ್ಯ,
ಆರ್ಗನೈಜಿಂಗ್ ಡೈರೆಕ್ಟರು, "ಕೊಡಗು" ಲಿಮಿಟೆಡ್,

"ಕೊಡಗು"

ಸನ್ ೧೯೨೫ನೇ ಇಸವಿ ಜನವರಿ ತಾ. ೨೩ನೇ ಶುಕ್ರವಾರ.

ಶಿಶು ಪ್ರದರ್ಶನ.

ಬ್ರಿಟನ್ನಿನಲ್ಲಿ ಶಿಶುಗಳ ಮರಣ ಸಂಖ್ಯೆಯು ಬಹಳ ಹೆಚ್ಚುತ್ತಾ ಬರುತ್ತಿದ್ದುದರಿಂದ ಬ್ರಿಟಿಷ್ ಸಾಮ್ರಾಜ್ಯದ ಚಕ್ರವರ್ತಿನಿಯವರಿಗೆ ತಮ್ಮ ಪ್ರಜೆಗಳ ತಾಯಂದಿರ ಮತ್ತು ಮಕ್ಕಳ ಮೇಲಿರುವ ಸಹಾನುಭೂತಿಯನ್ನೂ, ಪ್ರೀತಿಯನ್ನೂ ತೋರಿಸಲಿಕ್ಕಾಗಿ ಶಿಶುಗಳ ಪ್ರದರ್ಶನದ ಚಳವಳಕ್ಕೆ ಪ್ರಾರಂಭ ಮಾಡಲು ಅವರು ಉತ್ತೇಜನ ಕೊಟ್ಟರು. ಅಂದಿನಿಂದ ಬ್ರಿಟನ್ನಿನಲ್ಲಿ ಈ ಚಳವಳವು ಪ್ರಬಲವಾಗಿ ಸಾವಿರಾರು ಕಡೆಗಳಲ್ಲಿ ಪ್ರದರ್ಶನಗಳು ನಡೆದು ಶಿಶುಗಳ ಮರಣ ಸಂಖ್ಯೆಯು ಎಷ್ಟೋ ಕಡಿಮೆಯಾಗುತ್ತಿದೆ.

ಈ ಕೆಲಸವು ಇಂಗ್ಲೆಂಡಿನಲ್ಲಿ ಮಾತ್ರ ನಿಲ್ಲದೆ ಬ್ರಿಟಿಷ್ ಸಾಮ್ರಾಜ್ಯದ ಬೇರೆ ಕಡೆಗಳಲ್ಲಿಯೂ ಹರಡಿತು. ಹಿಂದೂ ದೇಶದಲ್ಲಿಯೂ ಪ್ರಾರಂಭವಾಯಿತು. ಬ್ರಿಟನ್ನಿನ ಶಿಶು ಮರಣದ ಸಂಖ್ಯೆಗಿಂತ ಇಂಡಿಯಾದ ಸಂಖ್ಯೆಯು ಎಷ್ಟೋ ಹೆಚ್ಚಾಗಿರುವಲ್ಲಿ ಈ ಚಳವಳು ಹಿಂದೂ ದೇಶದಲ್ಲಿಯೂ ಹಬ್ಬುತ್ತಿರುವುದು ಆಶ್ಚರ್ಯವೇನೂ ಅಲ್ಲ. ಒಂದು ವೇಳೆ ಬ್ರಿಟನ್ನಿಗಿಂತ ಮುಂಚಿತವಾಗಿಯೂ ಇಲ್ಲವಾದರೆ ಅಲ್ಲಿಗಿಂತ ಪ್ರಬಲವಾಗಿಯೂ ಇಂಡಿಯಾದಲ್ಲಿ ಈ ಕೆಲಸವು ನಡೆಯದೆ ಇರುವುದು ವ್ಯಸನಭರಿತವಾದ ವಿಸ್ಮಯವನ್ನುಂಟು ಮಾಡಬೇಕಾಗಿದೆ. ಈ ವಿಷಯದಲ್ಲಿ ಸರಕಾರದವರು ಪ್ರಜೆಗಳೊಂದಿಗೆ ಸಹಕರಿಸುತ್ತಿರುವದು ಸಂತೋಷಕರ. ಈ ಬಗ್ಗೆ ಸರಕಾರದವರು ತಮ್ಮ ಕರ್ತವ್ಯವನ್ನು ಸ್ವಲ್ಪ ಮಟ್ಟಿಗಾದರೂ ಅರಿತವರಾಗಿರುವದರಿಂದ ಈ ಕೆಲಸವು ಇನ್ನು ಬೇಗನೆ ವೃದ್ಧಿ ಹೊಂದುವುದೆಂದು ಹೇಳಬಹುದು.

ಕಳೆದ ವಾರದಲ್ಲಿ ಮದ್ರಾಸು ಪ್ರಾಂತ್ಯದ ಕೆಲವು ಪಟ್ಟಣಗಳಲ್ಲಿ ("ಹೆಲ್ತ್ ವೀಕ್") ಆರೋಗ್ಯ ಅಭಿವೃದ್ಧಿಯ ವಾರಗಳನ್ನು ನಡಿಸಿದರು. ಮಧುರೆ ಜಿಲ್ಲೆ ಒಂದರಲ್ಲೇ ಮೂವತ್ತು ಸ್ಥಳಗಳಲ್ಲಿ ಪ್ರದರ್ಶನಗಳು ನಡೆದು 3000 ಶಿಶುಗಳಿಗಿಂತ ಹೆಚ್ಚು ಪ್ರದರ್ಶಿಸಲ್ಪಟ್ಟವಂತೆ. ಇದಕ್ಕಾಗಿ ಯೂನಿಯನ್‌ಗಳು ಏರ್ಪಾಡಾಗಿವೆ. ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರುಗಳೇ ಇದರ ಏಳಿಗೆಗೆ ಕಾರಣರು.

ಮದ್ರಾಸ್ ಪಟ್ಟಣದಲ್ಲಿ ಆ ಪ್ರಾಂತ್ಯದ ಗವರ್ನರಾದ ವೈಕೌಂಟ್ ಗಾಷೆನ್ನಾರವರು ತಾರೀಕು 14ರಲ್ಲಿ ಶಿಶು ಪ್ರದರ್ಶನವನ್ನು ತೆರದು ಆರೋಗ್ಯ ಮತ್ತು ಶಿಶು ವಾರವನ್ನು ಪ್ರಾರಂಭಿಸಿದರು. ಆ ವೇಳೆಯಲ್ಲಿ ಅವರು ಮಾಡಿದ ಭಾಷಣದಲ್ಲಿ ಇಂಥಾ ಪ್ರದರ್ಶನಗಳ ಆವಶ್ಯಕತೆಯನ್ನು ಸಂಕ್ಷೇಪವಾಗಿ ಹೇಳಿರುವರು. ಈ ಕೆಲಸಕ್ಕೆ ಆಕ್ಷೇಪಣೆಗಳು ಹುಟ್ಟಾಗಿರುವುದರಿಂದ ಇದನ್ನು ಜಯಪ್ರದವಾಗಿ ಮಾಡುವುದು ಕಷ್ಟವೆಂಬುದರಲ್ಲಿ ಸಂಶಯವಿಲ್ಲ. ಜನರನ್ನು ಅವರಿಗೆ ಕಾಣಿಸುವ ತಿಳಿಗೇಡಿತನವು ಇದರ ಎರಡನೆಯ ಶತ್ರುವೆಂದು ಹೇಳಬಹುದು. ಆರೋಗ್ಯಕರವಾದ ಮಕ್ಕಳನ್ನು ಪಡೆಯುವ ಮತ್ತು ಅವುಗಳನ್ನು ಪೋಷಿಸುವ ಕ್ರಮಗಳನ್ನು ಅರಿಯದ ತಂದೆ ತಾಯಿಗಳು ಹ್ಯಾಗೆ ತಾನೇ ಎಳೆ ಮಕ್ಕಳ ಮರಣವನ್ನು ತಡೆದಾರು? ಈ ಅಜ್ಞಾನವು ಎಲ್ಲಾ ತರಗತಿಯ ಜನರಲ್ಲಿ ಎಲ್ಲಾ ಕಡೆಗಳಲ್ಲಿಯೂ ಹರಡಿಕೊಂಡಿದೆ. ಇದನ್ನು ಹೋಗಲಾಡಿಸಲು ಶಿಶುಗಳ ಪೋಷಣೆಯ ವಿಷಯ ಅಲ್ಲಲ್ಲಿ ಭಾಷಣಗಳನ್ನು ಮಾಡಿಯೂ ಮಕ್ಕಳ ತಾಯಿಯರಲ್ಲಿ ಹೋಗಿ ಅವರಿಗೆ ಬೋಧಿಸಿಯೂ 'ಬೇಬಿ ವೆಲ್‌ಫೇರ್ ಸೆಂಟರ್' ಎಂಬ ಸ್ಥಳವನ್ನು ನಿರ್ಮಿಸಿ ಅಲ್ಲಿ ಮಕ್ಕಳನ್ನು ಪೋಷಿಸಿ ಪ್ರತ್ಯಕ್ಷ ತೋರಿಸಿಯೂ ಜನರಲ್ಲಿ ತಿಳುವಳಿಕೆಯನ್ನು ಉಂಟು ಮಾಡಬೇಕು. ಹೀಗೆ ತಿಳುವಳಿಕೆಯನ್ನುಂಟುಮಾಡಿದರೂ ಸಾಲದು. ಅಂಥಾ ಜ್ಞಾನವನ್ನು ಕಾರ್ಯತಃ ಆಚರಣೆಗೆ ತರುವಂತೆ ಅವರಲ್ಲಿ ಉತ್ತೇಜನ ಹುಟ್ಟಿಸತಕ್ಕದ್ದು. ಎಲ್ಲಿ ನೋಡಿದರೂ ಈ ದುಃಸ್ಥಿತಿಯು ಬಡವರಲ್ಲಿಯೇ ಹೆಚ್ಚು. ಅವರಿಗೆ ತಕ್ಕಷ್ಟು ಆಹಾರ ಇಲ್ಲದೆ ಇರುವದೇ ಇದಕ್ಕೆ ಮುಖ್ಯ ಕಾರಣವಾದರೂ ಪೋಷಣೆಯ ವಿಷಯ ಅವರಿಗೆ ಬೋಧನ ಕೊಟ್ಟರೂ ಅದರಂತೆ ನಡಿಸಲು ಅವರಲ್ಲಿರುವ ಉತ್ಸಾಹ ಹೀನತೆಯು ಇದಕ್ಕೆ ಇನ್ನೊಂದು ಕಾರಣವೆಂದು ಹೇಳಬಹುದು. ಪಟ್ಟಣದ ಜನರು ಬೇರೆ ಅನೇಕ ಸಂಗತಿಗಳಲ್ಲಿ ಮುಂದುವರಿಯುತ್ತಾ ಬಂದರೂ ಮಕ್ಕಳ ಉಪಚಾರದ ವಿಷಯದಲ್ಲಿ ಹೊಸ ದಾರಿಯನ್ನು ಅವಲಂಬಿಸಲಿಕ್ಕೆ ಹಿಂಜರಿಯುವರು. ಆದುದರಿಂದ ಈ ವಿಷಯದಲ್ಲಿ ತಂದೆ ತಾಯಿಗಳಿಗೆ ಮನವರಿಕೆ ಮಾಡಿಸುವದಕ್ಕಾಗಿ ಶಿಶುಗಳ ಪ್ರದರ್ಶನ, ಶಿಶು ಪೋಷಣೆಯ ಸಂಸ್ಥೆ (ಬೇಬಿ ವೆಲ್‌ಫೇರ್ ಸೆಂಟರ್) ಮುಂತಾದವುಗಳನ್ನು ಅಲ್ಲಲ್ಲಿ ಏರ್ಪಡಿಸಬೇಕಾದದ್ದು ಅವಶ್ಯ.

ಕಳೆದ ವರುಷ ಹಿಂದೂ ದೇಶದಲ್ಲೆಲ್ಲಾ ಒಂದೇ ವಾರ ಶಿಶುಗಳ ಸಂರಕ್ಷಣೆ ವಾರವಾಗಿ ನಡಿಸಲ್ಪಟ್ಟಿತು. ಮಡಿಕೇರಿಯಲ್ಲಿಯೂ ಕಡೆಗೆ ಒಂದು ದಿನವು ಆಚರಿಸಲ್ಪಟ್ಟಿತು. ಆ ದಿನ ಮಡಿಕೇರಿ ಆಸ್ಪತ್ರೆಯಲ್ಲಿ 'ಬೇಬಿ ವೆಲ್‌ಫೇರ್ ಸೆಂಟರ್' ಎಂಬ ಸಂಸ್ಥೆಯು ತೆರೆಯಲಾಯಿತು. ಆದರೆ ಈ ವರುಷ ಹಿಂದೂ ದೇಶದಲ್ಲಿ ಬೇರೆ ಬೇರೆ ಪ್ರಾಂತ್ಯಗಳು ಬೇರೆ ಬೇರೆ ಕಾಲಗಳಲ್ಲಿ ಈ ವಾರದ ಕೆಲಸವನ್ನು ನಡಿಸುತ್ತಿದ್ದಾರೆ. ಆದುದರಿಂದ ಬೇರೆ ಕಡೆಗಳ ಅನುಭವದಿಂದ ನಮ್ಮ ದೇಶದಲ್ಲಿಯೂ ನ್ಯಾಯವಾಗಿ ನಡಿಸಲು ಅನುಕೂಲವಾಗಿದೆ.

ಪ್ರದರ್ಶನವು ಬರುವ ತಿಂಗಳು 16ರಲ್ಲು ಮಡಿಕೇರಿಯಲ್ಲಿ ನಡಿಸಲ್ಪಡುವದೆಂದು ತಿಳಿಯುತ್ತೇವೆ. ಆದರೆ ಮಡಿಕೇರಿಯಲ್ಲಿ ಮಾತ್ರ ಮಾಡಿದರೆ ಸಾಲದು. ಇದರ ಮುಖ್ಯ ಉದ್ದೇಶ ಸ್ಥಾನದ ರೆಡ್ ಕ್ರಾಸ್ ಸಂಘದ ಸಕ್ರೆಟರಿಯವರು ಮಡಿಕೇರಿಗೆ ಬಂದಿದ್ದಾಗ ಹೇಳಿದಂತೆ ದೇಶದ ಬೇರೆ ಬೇರೆ ಭಾಗಗಳಲ್ಲಿ ಇಂಥಾ ಪ್ರದರ್ಶನಗಳನ್ನು ಮಾಡಬೇಕು. ಹಾಗೆ ಮಾಡಿದರೆ ಜನರಿಗೆ ಶಿಶು ಪೋಷಣೆಯಲ್ಲಿ ಉತ್ತೇಜನ ಹುಟ್ಟುವುದು. ಅನೇಕ ಬಡ ತಾಯಿಗಳು ಚನ್ನಾಗಿ ಬೆಳದು ಪುಷ್ಟಿಯಾಗಿಯೂ ಚಂದವಾಗಿಯೂ ಇರುವ ತಮ್ಮ ಶಿಶುಗಳನ್ನು ಪ್ರದರ್ಶನಕ್ಕೆ ತಂದರೆ ಜನರ ದೃಷ್ಟಿಯಾಗಿ ಅವುಗಳಿಗೆ ಕಾಯಿಲೆ ಬರುವದೆಂಬ ಹೆದರಿಕೆಯಿಂದ ಮಕ್ಕಳನ್ನು ತಾರದೆ ಇರುವರು. ಇದು ಪೂರಾ ತಪ್ಪು ಭಾವನೆಯಾಗಿದೆ. ಇನ್ನಾದರೂ ಹಳ್ಳಿಯವರು ಈ ತಪ್ಪು ಹೆದರಿಕೆಯನ್ನು ಬಿಟ್ಟು ಮುಂದಿನ ಜನಾಂಗದ ಅಭಿವೃದ್ಧಿಯ ಮೇಲೆ ನಿಗ ಇಟ್ಟು ದೇಶದ ಬೇರೆ ತಾಯಂದಿರಿಗೆ ಉದಾಹರಣ ತೋರಿಸಲಿಕ್ಕಾಗಿ ಉತ್ತಮ ಶಿಶುಗಳನ್ನು ಪ್ರದರ್ಶನಕ್ಕೆ ಖಂಡಿತವಾಗಿ ತರಬೇಕು. ಐಶ್ವರ್ಯವಂತರೂ ವಿದ್ಯಾವಂತರೂ ಕೂಡ ಬೇರೆಯವರಲ್ಲಿ ಉತ್ಸಾಹವನ್ನು ಹುಟ್ಟಿಸಲಿಕ್ಕಾಗಿ ಚನ್ನಾಗಿರುವ ತಮ್ಮ ಶಿಶುಗಳನ್ನು ಪ್ರದರ್ಶಿಸತಕ್ಕದ್ದು.

ವರುಷಕ್ಕೊಂದಾವರ್ತಿ ಮಾಡುವ ಈ ಪ್ರದರ್ಶನ ಒಂದೇ ಶಿಶುಗಳ ಪೋಷಣೆಗೆ ಉತ್ತೇಜನ ಕೊಡಲಾರದು. ಮೇಲೆ ಹೇಳಿದಂತೆ ಶಿಶು ಪೋಷಕ ಸಂಸ್ಥೆಗಳನ್ನು ಸ್ಥಾಪಿಸಬೇಕು. ಕೊಡಗಿನ ರೆಡ್ ಕ್ರಾಸ್ ಸಂಘದವರು ಈ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ಕೆಲಸ ಮಾಡಿರುವರು. ಮಡಿಕೇರಿ ಆಸ್ಪತ್ರೆಯಲ್ಲಿರುವ ಈ ಸಂಸ್ಥೆಯಲ್ಲಿ ಅಲ್ಪ ಬಡವರ ಶಿಶುಗಳನ್ನು ಪೋಷಣೆ ಮಾಡುತ್ತಿರುವರು. ಆದರೆ ಪೇಟೆಯ ಮಧ್ಯದಲ್ಲಿ ಒಂದು ಸೆಂಟರನ್ನು ತೆರೆಯಬೇಕೆಂಬ ಇವರ ಅಭಿಲಾಷೆಯು ಇನ್ನೂ ಫಲಿತಕ್ಕೆ ಬಂದಿರುವುದಿಲ್ಲ. ತಕ್ಕದಾದ ಕಟ್ಟಡವು ದೊರೆಯದ ಇರುವುದೇ ಇದಕ್ಕೆ ಅಡಚಣೆ ಎಂದು ವರ್ತಮಾನ. ಆದಷ್ಟು ಬೇಗನೆ ಈ ತೊಂದರೆಯನ್ನು ನಿವಾರಿಸಿಕೊಳ್ಳುವರೆಂದು ಅಪೇಕ್ಷಿಸುತ್ತೇವೆ. ಪೇಟೆಯ ಮಧ್ಯದಲ್ಲಿ 'ಸೆಂಟರ್' ಒಂದು ತೆರೆಯಲ್ಪಡದೆ ಹೋದರೆ ಪೇಟೆನ ನಿವಾಸಿಗಳಾದ ಪೇಟೆಯವರು ಶಿಶು ಪೋಷಣೆಯಲ್ಲಿ ಉತ್ಸಾಹಿಕರಾಗರು.

ಇದಕ್ಕೆಲ್ಲಾ ಹಣವು ಬೇಕಾಗಿದೆ. ಹಣವು ದೊರದವರಿಂದ ಚಂದಾ ಮೂಲಕ ಒದಗಾಗತಕ್ಕದ್ದಾಗಿದೆ. ಆದ್ದರಿಂದ ಈ ಸಂಘದವರು ಈ ವರೆಗೆ ಪಡೆದ ಮೊಬಲಗನ್ನು ಯಾವ ರೀತಿಯಲ್ಲಿ ವೆಚ್ಚ ಮಾಡಿರುವರೆಂದೂ, ಪ್ರಯೋಜನಕರವಾದ ಯಾವ ಕೆಲಸಗಳನ್ನು ಮಾಡಿರುವರೆಂದೂ ಆಗಾಗ್ಯೆ ದೇಶದ ಸ್ಥಳಿಕ ಪತ್ರಿಕೆಯ ಮೂಲಕವಾಗಲಿ ಬೇರೆ ಯಾವ ವಿಧದಲ್ಲಿಯಾಗಲಿ, ಪ್ರಕಟಿಸುವುದು ಉತ್ತಮವೆಂದು ತೋರುತ್ತದೆ.

ವೀರರಾಜೇಂದ್ರ ಪೇಟೆ ಹೈ ಸ್ಕೂಲು.

ಕಳದ ವರುಷ ಈ ಶಾಲೆಯು ಹೈ ಸ್ಕೂಲ್ ಪದ್ದಿಗೆ ಏರಿತು. ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಹೆಚ್ಚು ಮಕ್ಕಳು ತೇರ್ಗಡೆಯಾಗಲಿಲ್ಲ. ಆದರೆ ಈ ವಿಷಯದಲ್ಲಿ ಜನರಿಗೆ ಬೇಸರಿಕೆ ಇಲ್ಲ. ಪ್ರಥಮ ಪ್ರಯತ್ನದಲ್ಲಿ ಇಬ್ಬರಾದರೂ ತೇರ್ಗಡೆಯಾದರೆಂದು ಸಂತೋಷಿಸಬೇಕಾಗಿದೆ.

ಗಣಿತ ಶಾಸ್ತ್ರಾಭ್ಯಾಸಕ್ಕೆ ಇಲಾಖೆಯವರು ಆದಷ್ಟು ತ್ವರಿತದಿಂದ ಮಕ್ಕಳಿಗೆ ಅನುಕೂಲ ಮಾಡುವುದು ಒಳ್ಳೇದೆಂದು ತೋರುತ್ತದೆ. ಟ್ರಿಗ್ನಾಮಿಟ್ರಿಯನ್ನು ಸ್ವಲ್ಪ ಸಹಾಯದಿಂದಲೇ ಮಕ್ಕಳು ಕಲಿತುಕೊಳ್ಳುವರು. ಗಣಿತ ಶಾಸ್ತ್ರ ಓದುವವನು ವಿಜ್ಞಾನವನ್ನು ಜತೆಗೂಡಿಸಬೇಕು. ವಿಜ್ಞಾನ ಶಾಸ್ತ್ರವನ್ನು ಕಲಿಸಲಿಕ್ಕೆ ಬೆಲೆಯುಳ್ಳ ಗಾಜಿನ ಸಲಕರಣೆಗಳು ಹೆಚ್ಚು ಬೇಕು. ಕ್ರಮೇಣ ಇವುಗಳು ಸಹ ಶಾಲೆಗೆ ಉಪಲಬ್ಧವಾಗುವುವೆಂದು ಆಶಿಸುತ್ತೇವೆ.

ಚರಿತ್ರೆ ತೆಗೆದುಕೊಂಡ ಹುಡುಗನು ಕನ್ನಡವನ್ನು ಕೈ ಹಿಡಿಯುವುದು ಇಲಾಖೆಯ ನಿಯಮ. ಇದೇತರ ಯೋಚನೆಯು ಹೊಗಸಾದ್ದು. ಚರಿತ್ರೆ ಓದಿದವನು ವಕೀಲನಾಗುವ ಸಂಭವವೇ ಅಧಿಕ. ಉಪಾಧ್ಯಾಯನೂ ಆಗಬಹುದು. ವಕೀಲನಾಗಲಿ, ಉಪಾಧ್ಯಾಯನಾಗಲಿ, ತನ್ನ ಅಭ್ಯಯನ ಕಾಲದಲ್ಲಿ ಕನ್ನಡವನ್ನು ಪರಿಸಿದಾಗ್ಯೂ, ಸಾಂಸಾರಿಕನಾದ ಮೇಲೆ ಕನ್ನಡವನ್ನು ಪ್ರೀತಿಸುವುದಿಲ್ಲ. ಶಾಲೆಯಲ್ಲಿ ಕೆಲಸಕ್ಕೆ ಬಿದ್ದ ಕನ್ನಡ ವ್ಯವಹಾರಕ್ಕೆ ಬೇಕಾಗದೇ? ಇದು ಹೋಲ್ಯವೇ ಸರಿ! ಕನ್ನಡ ಪಾಠವು ಈಗಿನಂತೆ ನಡೆದಿದ್ದರೆ ಹೀಗಾಗುತ್ತಿರಲಿಲ್ಲ. ಕನ್ನಡ ಪಾಠವನ್ನು ಹೇಳುವ ಉಪಾಧ್ಯಾಯರಿಗೆ ಕನ್ನಡ ಸಾಹಿತ್ಯದ ಪರಿಜ್ಞಾನವಿರಬೇಕು. ದಿನಕ್ಕೆ ಎರಡು ಅಥವ ಮೂರು ಪದ್ಯಗಳನ್ನು (ನೆರಾಗವಾಗಿ) ಓದಿ ಅರ್ಥ ಹೇಳಿದರೆ ಸಾಲದು. ತಾಳೆ ಸೇರಿಸಲ್ಲದ ನಾಗರಿಂದೇನು ಫಲ?

ಹೀಗಿರುತ್ತಾ, ಈ ಶಾಲೆಗೆ ಒಳ್ಳೇ ಕನ್ನಡ ಪಂಡಿತರನ್ನು ನೇಮಿಸುವುದು ಆದ್ಯ ಕೆಲಸ. ಕೊಡಗಿನಲ್ಲಿ ಕನ್ನಡಕ್ಕೆ ಆದರಣೆ ದೊರೆಯಬೇಕಾದರೆ, ಕನ್ನಡ ಮತ್ತು ಸಂಸ್ಕೃತ ಇವೆರಡನ್ನು ಅಭ್ಯಾಸಿಸಿದ ಪಂಡಿತರೇ ಬೇಕು. ಇಂಥಾ ಪಂಡಿತರಿಗೆ ಇಂಗ್ಲಿಷ್ ತಿಳಿದಿದ್ದರೆ ಹಿತ, ಆದರೆ ಅವಶ್ಯವಿಲ್ಲ. ಹೈ ಸ್ಕೂಲಿನಲ್ಲಿ (6ನೇ ಫಾರಂನಲ್ಲಿ) ಕನ್ನಡ ಪಾಠ ಹೇಳುವವರು ಇಲ್ಲದ್ದಾರೆಂದು ಸಾರ್ವಜನಿಕರು ಹೇಳುತ್ತಾರೆ. ಪ್ರೋತ್ಸಾಹದಿಂದ ಪಂಡಿತ ಪದವಿಯನ್ನು ಪಡೆದಿರುವ ಒಬ್ಬರಾದ ಉಪಾಧ್ಯಾಯರು ಇರುವರು. ಸಂಸ್ಕೃತ ತಿಳಿದ ಪಂಡಿತರಿರುವದರಿಂದ ಮಕ್ಕಳಿಗೂ, ಇತರ ಜನರಿಗೂ, ಬಹಳ ಪ್ರಯೋಜನವು ಆಗಿದೆ. ಆದ ಪ್ರಯುಕ್ತ, ಹೆಚ್ಚು ಮೋಹದಿಂದ ಕೆಲಸ ನಡಿಸುತ್ತಿರುವ ಮತ್ತು ಜನರ ಪ್ರೀತಿಗೊಳಗಾಗಿರುವ ಶ್ರೀಯುತ ರಾಮರಾಯರು ಒಬ್ಬ ಪಂಡಿತವರ್ಯನನ್ನು ಶೀಘ್ರದಲ್ಲಿಯೇ ಹೊಂದ ಪ್ರಯತ್ನಿಸುವರೆಂದು ಹಾರೈಸಲಾಗಿದೆ.

ಮಹಾತ್ಮಾ ಗಾಂಧಿಯವರ ಭಾಷಣವು.

(ಮುಂದರಿಸಿದ್ದು)

ಕೇವಲ ಸಮಾಜ ಸುಧಾರಣೆಯೋ?

ಈ ಕಾರ್ಯಕ್ರಮವು ಮಹಾಸಭೆಯನ್ನು ಕೇವಲ ಸಮಾಜ ಸುಧಾರಣೆಯ ಸಂಸ್ಥೆಯನ್ನಾಗಿ ಮಾಡುವದೆಂದು ಕೆಲವರೆನ್ನುವರು, ಆದರೆ ನನ್ನ ಮತವು ಹೀಗಿಲ್ಲೆಂದು ನಾನು ನಮ್ರತನದಿಂದ ಹೇಳುತ್ತೇನೆ. ಸ್ವರಾಜ್ಯಕ್ಕೆ ಅತ್ಯವಶ್ಯವಾದ ಪ್ರತಿಯೊಂದು ಸಂಗತಿಯು ಕೇವಲ ಸಾಮಾಜಿಕ ಕಾರ್ಯವಲ್ಲ. ಆದರೆ ಅದಕ್ಕೂ ಹೆಚ್ಚಿನದು ಇರುತ್ತದೆ. ಆದ್ದರಿಂದ ಅದನ್ನು ಮಹಾಸಭೆಯು ಕೈಕೊಂಡೇ ತೀರಬೇಕು. ಮಹಾಸಭೆಯು ಈ ಕೆಲಸವನ್ನಷ್ಟೇ ನಿರಂತರ ಮಾಡಬೇಕೆಂದು ನಾನು ಸೂಚಿಸುವದಿಲ್ಲ. ಈ ಬರುವ ವರ್ಷದಲ್ಲೆಲ್ಲಾ ವಿಧಾಯಕ ಕಾರ್ಯಕ್ರಮಗಳನ್ನು—ಬೇರೆ ರೀತಿಯಿಂದ ಹೇಳುವದಾದರೆ, ಒಳಗಣ ಬೆಳವಣಿಗೆಯ ಕೆಲಸವನ್ನು ನೆರವೇರಿಸುವದಕ್ಕೆ—ಮಹಾಸಭೆಯು ತನ್ನ ಪೂರ್ತಿ ಶಕ್ತಿಗಳನ್ನು ಕೇಂದ್ರೀಕರಿಸಬೇಕೆಂದು ನನ್ನ ಅಭಿಪ್ರಾಯವಿದೆ.

ಮಹಾಸಭೆಯು ನೆರವೇರಿಸಬೇಕಾದ ವಿಧಾಯಕ ಕಾರ್ಯಗಳು ಒಡಂಬಡಿಕೆಯಲ್ಲಿ ಉಕ್ತವಾದ ಕಾರ್ಯಗಳಷ್ಟೇ ಅಲ್ಲ. ನಾನು ಇನ್ನು ಹೇಳಲಿರುವ ಕಾರ್ಯಗಳು ಅತ್ಯಂತ ಮಹತ್ವದಾಗಿರುವವು. ಆದರೆ ಅವು ವಾದಗ್ರಸ್ತವಲ್ಲದವುಗಳಾದ್ದರಿಂದಲೂ, ಮೇಲಿನ ಕಾರ್ಯಗಳಂತೆ ಸ್ವರಾಜ್ಯಕ್ಕೆ ಅತ್ಯಾವಶ್ಯಕವಾದವುಗಳಲ್ಲವಾದ್ದರಿಂದಲೂ ಒಡಂಬಡಿಕೆಯಲ್ಲಿ ಅವು ಉಲ್ಲೇಖಿಸಲ್ಪಟ್ಟಿಲ್ಲ.

ರಾಷ್ಟ್ರೀಯ ಶಾಲೆಗಳು.

ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳನ್ನು ನಡೆಯಿಸುವದು ಮೇಲಿನ ಕಾರ್ಯಗಳಲ್ಲಿ ಒಂದಾಗಿದೆ. ಖಾದಿಯ ತರುವಾಯದಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾದ ಕಾರ್ಯಕ್ರಮವೆಂದರೆ ರಾಷ್ಟ್ರೀಯ ಸಂಸ್ಥೆಯ ಕಾರ್ಯಕ್ರಮವೆಂಬುದನ್ನು ಬಹುಶಃ ಜನರು ಅರಿತಿರಲಿಕ್ಕಿಲ್ಲ. ಎಲ್ಲಿಯವರೆಗೆ ಸ್ವಲ್ಪಾದರೂ ವಿದ್ಯಾರ್ಥಿಗಳಿರುವರೋ, ಅಲ್ಲಿಯ ವರೆಗೆ ರಾಷ್ಟ್ರೀಯ ಸಂಸ್ಥೆಗಳನ್ನು ನಡಯಿಸುವ ಕಾರ್ಯವನ್ನು ಬಿಟ್ಟುಕೊಡಲಾಗದು. ತಮ್ಮ ತಮ್ಮಲ್ಲಿಯ ಶಾಲೆ ಕಾಲೇಜುಗಳನ್ನು ನಡೆಯಿಸುವದು ಆಯಾ ಪ್ರಾಂತ್ಯಗಳ ಧರ್ಮವಾಗಿದೆ. ಅಸಹಯೋಗವನ್ನು ನಿಲ್ಲಿಸುವದರಿಂದ, ಈ ಸಂಸ್ಥೆಗಳಿಗೆ ಯಾವ ತರದ ಬಾಧೆಯುಂಟಾಗಕೂಡದು. ಇಷ್ಟೇ ಅಲ್ಲ, ಅವುಗಳನ್ನು ನಡೆಯಿಸಿ, ಬೆಳೆಯಿಸಲಿಕ್ಕೆ, ಈ ವರೆಗೆ ಮಾಡಿದುದಕ್ಕಿಂತ ಹೆಚ್ಚಿಗೆ ಪ್ರಯತ್ನವನ್ನು ಮಾಡತಕ್ಕದ್ದು. ಎಷ್ಟೋ ಪ್ರಾಂತಗಳಲ್ಲಿ ಈ ವರೆಗೂ ಶಾಲೆ ಕಾಲೇಜುಗಳುಂಟು. ಗುಜರಾತ ಪ್ರಾಂತದಲ್ಲಿಯೇ ಒಂದು ರಾಷ್ಟ್ರೀಯ ವಿದ್ಯಾ ಪೀಠವಿದ್ದು, ಅದಕ್ಕೆ ಅಧೀನವಾಗಿ ಮೂರು ಕಾಲೇಜುಗಳೂ, 70 ಶಾಲೆಗಳೂ ನಡೆಯಿಸಲ್ಪಟ್ಟಿವೆ. ಅಲ್ಲಿ 9,000 ವಿದ್ಯಾರ್ಥಿಗಳು ಇರುವರು. ವಿದ್ಯಾ ಪೀಠದ ವಾರ್ಷಿಕ ವೆಚ್ಚವು 1,00,000 ರುಪಾಯಿ ಇರುತ್ತದೆ. ಅದಕ್ಕೆ ಅಹ್ಮದಾಬಾದಿನಲ್ಲಿ ಪ್ರತ್ಯೇಕವಾದ ಒಂದು ಸ್ಥಳವು ದೊರೆತಿರುವದಲ್ಲದೆ, ಕಟ್ಟಡಗಳಿಗಾಗಿ ಈಗಾಗಲೇ 2,05,323 ರುಪಾಯಿಗಳು ವೆಚ್ಚವಾಗಿರುವವು. ಅಸಹಯೋಗವನ್ನು ಕೈಕೊಂಡ ವಿದ್ಯಾರ್ಥಿಗಳಿಂದ ದೇಶದಲ್ಲೆಲ್ಲ ಅತ್ಯುತ್ತಮವಾದ ಕಾರ್ಯವು ಶಾಂತನೀತಿಯಿಂದ ಮಾಡಲ್ಪಟ್ಟಿದೆ. ಅವರ ಸ್ವಾರ್ಥತ್ಯಾಗವು ಘನವಾದುದೂ ಅತ್ಯುದಾರವಾದುದೂ ಇರುತ್ತದೆ. ವ್ಯಾವಹಾರಿಕ ದೃಷ್ಟಿಯಿಂದ ನೋಡಲು ಅವರು ಮುಂದಿನ ಉಜ್ವಲವಾದ ಜೀವನಕ್ರಮಕ್ಕೆ ಎರವಾಗಿರಬಹುದು. ಆದರೆ ರಾಷ್ಟ್ರೀಯ ದೃಷ್ಟಿಯಿಂದ ವಿಚಾರಿಸಲು, ಹಾನಿಗಿಂತಲೂ ಅವರಿಗೆ ಲಾಭವೇ ಹೆಚ್ಚಾಗಿದೆಯೆಂದು ನಾನು ಹೇಳುತ್ತೇನೆ. ಪಂಜಾಬದ ಶಾಲೆ ಕಾಲೇಜುಗಳ ತರುಣರಿಗಾದ ಮಾನಭಂಗ ಅವರ ಮರ್ಯಾದೆಗಳಿಂದ ಅಪಮಾನಿತ್ವದ ತರುಣವರ್ಗಕ್ಕೆ ಮಾನಭಂಗವೂ ಅವಮರ್ಯಾದೆಯೂ ಆಗಿ ತರುಣರು ಶಾಲೆಕಾಲೇಜುಗಳನ್ನು ಬಿಟ್ಟು ಹೊರಬಿದ್ದರು. ಸರಕಾರೀ ಶಿಕ್ಷಣಾಲಯಗಳಲ್ಲಿ ದಾಸ್ಯ ಶೃಂಖಲೆಯ ಮೊದಲನೆಯ ಕೊಂಡಿಯು ಮಾಡಲ್ಪಡುತ್ತದೆ. ಆದರೆ ರಾಷ್ಟ್ರೀಯ ಸಂಸ್ಥೆಗಳು—ಅವು ಎಷ್ಟೇ ಅವ್ಯವಸ್ಥಿತ ರೀತಿಯಿಂದ ನಡೆದಿತ

ಈ ಸ್ವಾತಂತ್ರ್ಯದ ಮೊದಲನೆಯ ಉಪಕರಣವನ್ನು ನಿರ್ಮಿಸುವ ಕಾರ್ಯಾಲಯಗಳಾಗಿವೆ. ಒಟ್ಟಿನಮೇಲೆ ರಾಷ್ಟ್ರದ ಸಿತನ್ಯತೆಯು ರಾಷ್ಟ್ರೀಯ ಸಂಸ್ಥೆಗಳಲ್ಲಿ ಓದುತ್ತಿರುವ ಹುಡುಗ ಹುಡಿಗಿಯರನ್ನೇ ಅವಲಂಭಿಸಿರುತ್ತದೆ. ಆದ್ದರಿಂದ ಎಲ್ಲ ಪ್ರಾಂತಗಳು ಮೊದಲು ಆ ಸಂಸ್ಥೆಗಳ ಸಲುವಾಗಿ ಹಣವನ್ನು ವಿನಿಯೋಗಿಸಿ, ಅವುಗಳನ್ನು ನಡೆಯಿಸಬೇಕು. ಹೀಗೆ ಮಾಡುವದು ಅವುಗಳ ಆದ್ಯಕರ್ತವ್ಯವೆಂದು ನಾನು ತಿಳಿಯುತ್ತೇನೆ. ಆದರೆ ಇವುಗಳು ನಿಜವಾಗಿ ರಾಷ್ಟ್ರೀಯ ಸಂಸ್ಥೆಗಳಾಗಬೇಕಾದರೆ, ಹಿಂದು ಮುಸಲ್ಮಾನರ ಐಕ್ಯವನ್ನು ಬೆಳೆಯಿಸುವ ಸಂಸ್ಥೆಗಳಾಗಬೇಕು. ಅಸ್ಪೃಶ್ಯತೆಯು ಹಿಂದು ಧರ್ಮಕ್ಕೊಂದು ಕಲಂಕವೆಂದೂ, ಮಾನವಜಾತಿಯ ವಿರುದ್ಧ ದ್ರೋಹವೆಂದೂ ಹುಡುಗಹುಡುಗಿಯರಿಗೆ ತಿಳಿಹೇಳಿ ಕಲಿಸುವ ಶಾಲೆಗಳಾಗಿರಬೇಕು. ಮತ್ತು ಅವು ನೂಲು ನೇಯುವ ಕಲೆಗಳಲ್ಲಿ ನಿಸ್ಣಾತರನ್ನು ತಯಾರಿಸುವ ವಿದ್ಯಾಲಯಗಳಾಗಿರಬೇಕು. ರಾಟಿ ಖಾದಿಗಳ ಸಾಮರ್ಥ್ಯದ ಬಗ್ಗೆ ಮಹಾಸಭೆಯ ವಿಶ್ವಾಸವು ಅಚ್ಚಳಿಯದೆ ಹಾಗೆಯೇ ಉಳಿದರೆ, ನೂಲುವ ಕಲೆಯ ಪೂರ್ಣ ಜ್ಞಾನವನ್ನು ಜನರು ಈ ಸಂಸ್ಥೆಗಳಲ್ಲಿ ಅಪೇಕ್ಷಿಸುವುದು ತಪ್ಪಾಗಲಾರದು. ಇವು ಖಾದಿಯನ್ನು ಹುಟ್ಟಿಸುವ ಕಾರ್ಯಾಲಯಗಳಾಗಬೇಕು. ಹುಡುಗ ಹುಡುಗಿಯರಿಗೆ ಬೌದ್ಧಿಕ ಶಿಕ್ಷಣವು ಕೊಡಲ್ಪಡಲಾಗದೆಂದು ಇದರ ಅರ್ಥವಲ್ಲ. ಬೌದ್ಧಿಕ ಶಿಕ್ಷಣದೊಂದಿಗೆ, ಅಂತಃಕರಣದ ವಿಕಾಸವೂ, ಕೈಕೆಲಸದ ಅಭ್ಯಾಸವೂ ನಡೆಯಬೇಕೆಂಬುದೇ ನನ್ನ ಅಭಿಪ್ರಾಯವು. ರಾಷ್ಟ್ರೀಯ ವಿದ್ಯಾಲಯ ಅಥವಾ ಮಹಾವಿದ್ಯಾಲಯದ ಯೋಗ್ಯತೆಯಾಗಲಿ ಉಪಯುಕ್ತತೆಯಾಗಲಿ ವಿದ್ಯಾಪೀಠದ ಬೌದ್ಧಿಕ ಉನ್ನತಿಯಿಂದ ನಿಶ್ಚಯಿಸಲ್ಪಡದೆ, ಅಲ್ಲಿಯ ತರುಣರ ಶೀಲದ ಬಲ್ಪಳದಿಂದಲೂ, ಹಿಂಜುವ ಬಿಲ್ಲು ರಾಟಿ ಮಗ್ಗ ಇವುಗಳನ್ನು ನಡೆಯಿಸುವ ಕುಶಲತನದಿಂದಲೂ ನಿಶ್ಚಯಿಸಲ್ಪಡಬೇಕು. ಯಾವ ರಾಷ್ಟ್ರೀಯ ಶಾಲೆಯೂ, ಕಾಲೇಜವೂ, ನಿಂತುಹೋಗಬಾರದೆಂದು ನಾನು ಇಚ್ಛಿಸುತ್ತೇನೆ. ನಿಜವಿದ್ದರೂ, ಹಿಂದುಗಳಲ್ಲದವರಿಗೆ ಪ್ರವೇಶಕೊಡದ ಅಸ್ಪೃಶ್ಯರನ್ನು ಬರಗೊಡದ, ಮತ್ತು ಶಿಕ್ಷಣಕ್ರಮದಲ್ಲಿ ಹಿಂಜುವ ಮತ್ತು ನೂಲುವ ಕಲಸಗಳನ್ನು ಆವಶ್ಯಕ ವಿಷಯಗಳೆಂದು ಎಣಿಸದ ಶಾಲೆಗಳನ್ನು ನಿಲ್ಲಿಸಲು ನಾನು ಸ್ವಲ್ಪಸಹ ಹಿಂದೆಮುಂದೆ ನೋಡುವದಿಲ್ಲ. ಶಾಲೆಯ ಮುಂದಿನ ಹಲಿಗೆಯಮೇಲಿನ 'ರಾಷ್ಟ್ರೀಯ' ಎಂಬ ಶಬ್ದದಿಂದ, ಅದಕ್ಕೆ ಸರಕಾರದ ಯಾವ ವಿದ್ಯಾಪೀಠದ ಸಂಬಂಧವಿಲ್ಲೆಂಬ ಮಾತಿನಿಂದ ಅಥವ ಸರಕಾರದ ಯಾವ ಬಗೆಯ ನಿಯಂತ್ರಣಕ್ಕೂ ಒಳಗಾಗಿಲ್ಲೆಂಬ ಮಾತಿನಿಂದ, ನಾವು ಸಂತುಷ್ಟರಾಗಿರುವ ಕಾಲವು ಹೋಗಿದೆ. ಅನೇಕ ರಾಷ್ಟ್ರೀಯ ಶಾಲೆಗಳಲ್ಲಿ ಮಾತೃಭಾಷೆಯನ್ನೂ ಹಿಂದೀ ಭಾಷೆಯನ್ನೂ ದುರ್ಲಕ್ಷಿಸುವ ಪ್ರವರ್ತಿಯು ಈಗಲೂ ಕಂಡುಬರುತ್ತದೆಂಬದನ್ನು ನಾನು ಹೇಳದಿರಲಾರೆನು. ಮಾತೃಭಾಷೆ ಮತ್ತು ಹಿಂದೀ ಭಾಷೆ ಇವುಗಳ ಮುಖಾಂತರವಾಗಿ ಶಿಕ್ಷಣಕೊಡುವ ಅವಶ್ಯಕತೆಯು ಮಹತ್ವವು ಅನೇಕ ಶಿಕ್ಷಕರಿಗೆ ಹೊಳೆದಿಲ್ಲ. ನಾನು ಸೂಚಿಸಿದ ಹಲವು ವಿಷಯಗಳ ಬಗ್ಗೆ ತಮ್ಮ ಅನುಭವವನ್ನು ಹೇಳುವದಕ್ಕೂ ಶಕ್ಯವಾದರೆ ಶಿಕ್ಷಣ ಮತ್ತು ಮುಂದಿನ ಕಾರ್ಯ ಇವುಗಳ ಬಗ್ಗೆ ಸಾಮಾನ್ಯಯೋಜನೆಯೊಂದನ್ನು ತಯಾರಿಸಲಿಕ್ಕೂ ರಾಷ್ಟ್ರೀಯ ಶಿಕ್ಷಕರ ಸಭೆಯೊಂದನ್ನು ಶ್ರೀ. ಗಂಗಾಧರರಾಯರು ಏರ್ಪಡಿಸಿರುವದರಿಂದ ನನಗೆ ...ದವಾಗಿದೆ.

ಕೆಲಸವಿಲ್ಲದೆ ವಳಿತ ಅಸಹಯೋಗಿಗಳು

ರಾಷ್ಟ್ರದ ಆಜ್ಞೆಯನ್ನು ಮನ್ನಿಸಿ ತಮ್ಮ ವಕೀಲಿಯನ್ನು ಬಿಟ್ಟುಕೊಟ್ಟ ವಕೀಲರ ವಿಷಯಕ್ಕೂ, ಸರಕಾರಿ ಶಾಲೆಗಳನ್ನು ಬಿಟ್ಟ ಶಿಕ್ಷಕರ ವಿಷಯಕ್ಕೂ, ಸರಕಾರಿ ನೌಕರಿಯನ್ನು ಬಿಟ್ಟ ನೌಕರದಾರರ ವಿಷಯಕ್ಕೂ ಇಲ್ಲಿ ಪ್ರಸ್ತಾಪವನ್ನೆತ್ತುವದು ಉಚಿತವಾಗಿದೆ. ಎಷ್ಟೋ ಜನರಿಗೆ ತಮ್ಮ ಜೀವಿತಾರ್ಥವನ್ನು ಸಾಗಿಸಲು ಕೂಡ ಪ್ರಯಾಸವಾಗುತ್ತಿದೆಂಬುದನ್ನು ನಾನು ಬಲ್ಲೆನು. ರಾಷ್ಟ್ರದಿಂದ ಸಹಾಯ ಹೊಂದಲು ಅವರು ಅರ್ಹರಾಗಿದ್ದಾರೆ. ಪ್ರಾಮಾಣಿಕರೂ, ಉದ್ಯೋಗಶೀಲರೂ ಆಗಿದ್ದು, ಅಲ್ಪವೇತನದಿಂದ ಸಂತುಷ್ಟರಾಗಿ, ದುಡಿದು ಸೇವೆಯನ್ನು ಮಾಡಲು ಸಿದ್ಧರಿದ್ದ ಅಸಂಖ್ಯ ಜನರನ್ನು ಖಾದೀ ಮಂಡಲದಲ್ಲಿಯೂ ಶಿಕ್ಷಣ ಸಂಸ್ಥೆಗಳಲ್ಲಿಯೂ ಉದ್ಯೋಗಕ್ಕೆ ಹಚ್ಚಲು ಆಸ್ಪದವಿದೆ. ರಾಷ್ಟ್ರಸೇವೆಯನ್ನು ಮಾಡಿ ಅದಕ್ಕೆ ಪ್ರತಿಯಾಗಿ ಏನೂ ವೇತನವನ್ನು ಸ್ವೀಕರಿಸಬಾರದೆಂಬ ಪ್ರವೃತ್ತಿಯು ಎಷ್ಟೋ ಜನರಲ್ಲಿ ಕಂಡುಬರುತ್ತದೆ. ವೇತನವಿಲ್ಲದ ಸೇವೆ ಮಾಡುವ ಇಚ್ಛೆ ಏನೋ ಸ್ತುತ್ಯವಿದೆ. ಎಲ್ಲರಿಗೂ ಈ ಇಚ್ಛೆಯಂತೆ ನಡೆಯುವುದು ಶಕ್ಯವಿಲ್ಲ. ಪ್ರತಿಯೊಬ್ಬ ಕೆಲಸಗಾರನು ತನ್ನ ವೇತನಕ್ಕೆ ಬಾಧ್ಯಸ್ಥನಾಗಿರುವನು. ವೇತನವಿಲ್ಲದೆ ಸರ್ವಕಾಲವನ್ನೂ ಸೇವೆಯಲ್ಲಿ ಕಳೆಯುವಂಥ ಸಾವಿರಗಟ್ಟಲೆ ಕೆಲಸಗಾರರನ್ನು ಯಾವ ದೇಶವೂ ಹುಟ್ಟಿಸಲಾರದು. ಆದ್ದರಿಂದ ದೇಶಭಕ್ತರು ದೇಶಸೇವೆಯನ್ನು ಮಾಡಿ, ಅದಕ್ಕೆ ಪ್ರತಿಯಾಗಿ ವೇತನವನ್ನು ಪಡೆಯುವದು ಗೌರವವೆಂದು ತಿಳಿಯಲು ಅನುಕೂಲವಾದ ವಾತಾವರಣವನ್ನು ನಾವು ಹುಟ್ಟಿಸಬೇಕು.

ಮಾದಕ ದ್ರವ್ಯಗಳು.

ಅಫೀಮು ಮದ್ಯದ ವ್ಯಾಪಾರ. ಇದು ರಾಷ್ಟ್ರದ ದೃಷ್ಟಿಯಿಂದ ಮಹತ್ವದ ಮತ್ತೊಂದು ವಿಷಯವು. 1921ನೇ ಇಸವಿಯಲ್ಲಿ ಮದ್ಯಪಾನವನ್ನು ನಿಲ್ಲಿಸುವದಕ್ಕಾಗಿ ದೇಶದೊಳಗೆ ಎಲ್ಲೆಲ್ಲಿಯೂ ಹಬ್ಬಿದ ಉತ್ಸಾಹವು ಅಹಿಂಸಾತ್ಮಕವಾಗಿ ಉಳಿದಿದ್ದರೆ, ಹೆಚ್ಚಿನ ಪ್ರಗತಿಯಾಗುತ್ತಿರುವುದು ನಮಗೆ ಕಂಡು ಬರುತ್ತಿದ್ದಿತು. ಆದರೆ ದುರ್ದೈವದಿಂದ ಪ್ರತಿಬಂಧನದ ನಮ್ಮ ಚಳವಳಿಯು ಕೆಡುತ್ತಹೋಗಿ ಹಿಂಸೆಯಲ್ಲಿ ಪರಿಣಮಿಸಿತು. ಒಮ್ಮೊಮ್ಮೆ ಹಿಂಸೆಯು ಪ್ರಕಟವಾಗಿಯೂ ಒಮ್ಮೊಮ್ಮೆ ಗುಪ್ತವಾಗಿಯೂ ಇರುತ್ತಿದ್ದಿತು. ಆದ್ದರಿಂದ ಪ್ರತಿಬಂಧದ ಚಳವಳಿಯನ್ನು ಬಿಟ್ಟುಕೊಡಬೇಕಾಯಿತು. ಮೊದಲಿನಂತೆ ಗಡಂಗಗಳೂ, ಅಫೀಮಿನ ಅಕ್ರಯಗಳೂ ಪುನಃ ಭರದಿಂದ ಸಾಗಹತ್ತಿದವು. ಆದರೆ ಪ್ರತಿಬಂಧದ ಕಾರ್ಯವು ಪೂರ್ಣ ನಿಂತುಹೋಗಿಲ್ಲೆಂಬುದನ್ನು ಕೇಳಿ ನಿಮಗೆ ಸಂತೋಷವಾಗಬಹುದು. ಎಷ್ಟೋ ಜನ ಕೆಲಸಗಾರರು ಪ್ರತಿ ಬಂಧದ ಕೆಲಸವನ್ನು ಶಾಂತರೀತಿಯಿಂದಲೂ ನಿಃಸ್ವಾರ್ಥಬುದ್ಧಿಯಿಂದಲೂ ಇಂದಿಗೂ ಸಾಗಿಸುತ್ತ ಬಂದಿರುವರು. ಸ್ವರಾಜ್ಯವು ನಮಗೆ ಪ್ರಾಪ್ತವಾಗುವವರೆಗೆ, ಈ ಅನಿಷ್ಟವನ್ನು ನಿರ್ಮೂಲಮಾಡುವದು ನಮಗೆ ಶಕ್ಯವಿಲ್ಲೆಂಬುದನ್ನು ನಾವು ಅರಿತಿರಬೇಕು. ಈ ಅನೀತಿಮಯವಾದ ಮಾದಕ ದ್ರವ್ಯಗಳ ಉತ್ಪನ್ನದಿಂದ ನಮ್ಮ ಮಕ್ಕಳ ಶಿಕ್ಷಣವು ಸಾಗುತ್ತಿರಬೇಕೆಂಬುದು ನಮಗೇನೂ ಅಭಿಮಾನದ ಮಾತಲ್ಲ. ಶಿಕ್ಷಣಕಾರ್ಯವು ನಿಲ್ಲುವ ಪ್ರಸಂಗ ಬಂದರೂ ಅದನ್ನು ಲಕ್ಷಿಸದೆ, ಈ ಕಂದಾಯವನ್ನು ಮಹಾ ಸಭೆಯ ಭಕ್ತರು ಧೈರ್ಯದಿಂದ ಕಿತ್ತು ಹಾಕವಂತಿದ್ದರೆ, ಅವರ ಕೌನ್ಸಿಲ ಪ್ರವೇಶವನ್ನು ನಾನು ಕ್ಷಮಿಸಿದರೂ ಕ್ಷಮಿಸಬಹುದು. ಅಷ್ಟೇ ಖಾತೆಯ ವೆಚ್ಚವನ್ನು ಆ ಪ್ರಮಾಣದಿಂದ ಕಡಿಮೆ ಮಾಡಲು ಅವರು ಆಗ್ರಹ ಕೊಟ್ಟರೆ ಅಂಥ ಯಾವ ಕಾರ್ಯವೂ ಆಗಲರಿಯದು.

ಬಂಗಾಲದಲ್ಲಿಯ ದಬ್ಬಾಳಿಕೆಯು.

ಇದು ವರೆಗೆ ಅಂತರಂಗಿಕ ಪರಿಸ್ಥಿತಿಯನ್ನು ಕುರಿತು ವಿವೇಚಿಸಿದೆನೆಂಬುದು ನಿಮಗೆ ಗೊತ್ತಾಗುವದು. ಒಳಗಿನ ಪರಿಸ್ಥಿತಿಗಳು ನಮ್ಮ ಭವಿತವ್ಯತೆಯ ಮೇಲೆ ಪರಿಣಾಮವನ್ನುಂಟುಮಾಡುವಂತೆ, ಹೊರಗಿನ ಪರಿಸ್ಥಿತಿಗಳೂ, ಅವುಗಳಲ್ಲಿ ಮುಖ್ಯತಃ ನಮ್ಮನ್ನಾಳುವವರ ಕೃತಿಗಳೂ (ಪ್ರತಿಕೂಲವಾಗಿ ಆದಾಗ್ಯೂ) ವಿಶೇಷವಾಗಿ ಅದರ ಮೇಲೆ ಪರಿಣಾಮವನ್ನುಂಟು ಮಾಡುತ್ತಿರುವವು. ಬೇಕಾದರೆ ಅವುಗಳಿಂದ ನಾವು ಪ್ರಯೋಜನವನ್ನು ಹೊಂದಬಹುದು, ಅಥವ ಅವುಗಳಿಗೆ ಅಧೀನರಾಗಿ ನಾವು ಹಾನಿಗಾದರೂ ಒಳಗಾಗಬಹುದು. ನಮ್ಮ ರಾಜ್ಯಕರ್ತರ ಮೊನ್ನೆಮೊನ್ನಿನ ಕೃತಿಯೆಂದರೆ ಬಂಗಾಲದಲ್ಲಿ ಪ್ರಾರಂಭಿಸಿದ ದಬ್ಬಾಳಿಕೆಯು. ವಿವಿಧಪಕ್ಷಗಳ ಪರಿಷತ್ತು ಅದನ್ನು ಸ್ಪಷ್ಟವಾಗಿ ನಿಷೇಧಿಸಿರುವದು. ಈ ಅಸ್ತ್ರವು ಬಂಗಾಲದ ಸ್ವರಾಜ್ಯಪಕ್ಷದ ಮೇಲೆಯೇ ಪ್ರಯೋಗಿಸಲ್ಪಟ್ಟಿದೆಯೆಂದು ಹೇಳಲು ಆ ಪರಿಷತ್ತಿಗೆ ಅನುಮಾನವಿದ್ದಿತು. ಆದರೆ ನನಗೆ ಆ ಅನುಮಾನವೇನೂ ಇಲ್ಲ. ನಾನು ಕಲಕತ್ತೆಗೆ ಹೋಗಿದ್ದೆನು. ಅಲ್ಲಿ ಭಿನ್ನ ಭಿನ್ನ ಮತದ ಜನರನ್ನು ಕಾಣುವ ಪ್ರಸಂಗವು ನನಗೆ ದೊರೆಯಿತು. ಈ ಅಸ್ತ್ರವು ಬಂಗಾಲದ ಸ್ವರಾಜ್ಯಪಕ್ಷದಮೇಲೆಯೇ ಪ್ರಯೋಗಿಸಲ್ಪಟ್ಟಿರುವದೆಂಬದನ್ನು ನಾನು ಕೊನೆಗೆ ಮನಗಂಡೆನು. ಅಂದಿನಿಂದ ಲಾರ್ಡ ಲಿಟ್ಟನ್, ಲೀಡಿಂಗರವರುಮಾಡಿದ ಭಾಷಣಗಳಿಂದ ನನ್ನ ಈ ಅಭಿಪ್ರಾಯವು ದೃಢವಾಯಿತು. ಅವರುಮಾಡಿದ ಸಮರ್ಥನವು ಮನಸ್ಸಿಗೆ ಸ್ವಲ್ಪವೂ ಒಪ್ಪಿಗೆಯಾಗುವಂತಹದಿರುವದಿಲ್ಲ. ಲೋಕಮತಕ್ಕೆ ಏನೂ ಬೆಲೆಯಿಲ್ಲದ ಹಿಂದುಸ್ಥಾನದಲ್ಲಿಯೇ ಇಂಥ ಸಮರ್ಥನವು ಶಕ್ಯವಿದೆ. ಲಾರ್ಡ ಲಿಟನರು ಹಾಕುವ ಬಂಧ ವಿಮೋಚನೆಯ ಕರಾರುಗಳು ನಮ್ಮ ಬುದ್ಧಿಗೆ ಅಪಮಾನಕರವಾದವುಗಳು. ಹೊಸ ನಿರ್ಬಂಧನೆಯು ಮತ್ತು 1818ನೇ ಇಸವಿಯ ರಗ್ಯುಲೇಶನದ ಪ್ರಕಾರ ಕೆಲಸ ನಡಯಿಸಲು ಅಂಥ ಪರಿಸ್ಥಿತಿಯೇ ಇದ್ದಿತೆಂದು ಲಾರ್ಡ ರೀಡಿಂಗ, ಲಿಟನ್ನರು ಹೇಳುವದು ಅವರ ಕಲ್ಪನೆಯ ಮಾತುಗಳಾಗಿವೆ. ರಾಷ್ಟ್ರದ ಆಲೋಚನವೇನಂದರೆ:—

(1) ಅವರು ಹೇಳುತ್ತಿರುವ ಪರಿಸ್ಥಿತಿಯು ಇರುವದೆಂದು ಸಿದ್ಧಮಾಡಲ್ಪಟ್ಟಿಲ್ಲ.

(2) ಒಂದುವೇಳೆ ಅಂಥ ಪರಿಸ್ಥಿತಿಯು ಇರುತ್ತದೆಂದು ಕಲ್ಪಿಸಿದರೂ, ರೋಗಕ್ಕಿಂತಲೂ ಪ್ರತೀಕಾರ (ಉಪಾಯ)ವೇ ಹೆಚ್ಚು ಅಹಿತಕರವಾದದ್ದಾಗಿದೆ.

(3) ಈ ಪರಿಸ್ಥಿತಿಯನ್ನು ನಿರಿಪಡಿಸಲು, ಸಾಮಾನ್ಯಶಾಸನವು ತಕ್ಕಷ್ಟು ಸಾಮರ್ಥ್ಯವುಳ್ಳದ್ದಾಗಿರುವದು. ಮತ್ತು ಕೊನೆಯ ಮಾತೆಂದರೆ,

(4) ವಿಶೇಷ ಅಧಿಕಾರವು ಅವಶ್ಯವಿದ್ದಪಕ್ಷದಲ್ಲಿ, ತಾವೇ ನಿರ್ಮಿಸಿದ ಕಾನೂನ ಸಭೆಗಳಿಂದ ಅದನ್ನು ಪಡೆಯಬಹುದಾಗಿತ್ತು.

ನಾಮದಾರರು ತಮ್ಮ ಭಾಷಣಗಳಲ್ಲಿ ಈ ವಿಷಯಗಳ ಬಗ್ಗೆ ಏನೂ ಹೇಳಿದುವದಿಲ್ಲ. ಸರಕಾರದ ನಿರಾಧಾರವಾದ ವಿಧಾನಗಳ ಅನುಭವವನ್ನು ಬಹಳಸಾರೆ ಕಂಡುಂಡಂಥ ಈ ರಾಷ್ಟ್ರವು ಅವುಗಳನ್ನು ವೇದವಾಕ್ಯವೆಂದು ನಂಬಲಾರದು. ಅವರ ವಿಧಾನಗಳನ್ನು ನಾವು ನಂಬಲಾರೆವು; ಮತ್ತು ನಂಬಲೊಪ್ಪುವದಿಲ್ಲೆಂಬ ಮಾತನ್ನು ಅವರು ಬಲ್ಲರು. ನಾವು ಅವುಗಳನ್ನು ನಂಬದಿರುವದಕ್ಕೆ ಕಾರಣವೇನೆಂದರೆ, ಅವುಗಳು ಬುದ್ಧಿಪೂರ್ವಕವಾಗಿ ಮಾಡಿದ ಸುಳ್ಳು ವಿಧಾನಗಳೆಂತಲ್ಲ. ಆದರೆ ಅವುಗಳ ಮೂಲವು ಸದೋಷವಾಗಿರುತ್ತದೆಂದು ಕಂಡುಬಂದ ಸಂಗತಿಯು, ಅಧಿಕಾರದ ಅವರ ಅಶ್ವಾಸನಗಳಿಂದರೆ ಜನತೆಯ ಉಪಹಾಸವೇ ಸರಿ. 'ನಿಮಗೇನಮಾಡಿರು ವದೋ ಅದನ್ನು ಮಾಡಿಕೊಳ್ಳಿರಿ' ಎಂಬುದೇ ಅವರ ಭಾಷಣದ ಆಶಯವಿದ್ದಂತೆ ತೋರುತ್ತದೆ. ಆದುದರಿಂದ ನಾವು ... ಗೊಂಡು ನಮ್ಮ ತಾಳ್ಮೆಯನ್ನು ಕಳಕೊಳ್ಳಕೂಡದು. ... ಳಿಕೆಯಿಂದ ನಾವು ಭಯಭೀತರಾಗಿ ನಮ್ಮ ಧ್ಯೇಯ... ಚುತರಾಗದಿದ್ದರೆ, ಸ್ವರಾಜ್ಯಪ್ರಾಪ್ತಿಯು ನಮಗೆ ಸುಗಮವಾಗುವದು. ಏಕೆಂದರೆ, ಆದರಿಂದ ನಮ್ಮ ಸಾಮರ್ಥ್ಯ... ಕ್ಕೆಯಾಗುತ್ತದೆ. ಮತ್ತು ಅದು ಸಂಕಟ ಸಮಯದಲ್ಲಿ ನಮ್ಮೊಳಗೆ ಸ್ವಾರ್ಥತ್ಯಾಗವನ್ನೂ, ಧೈರ್ಯವನ್ನೂ ಉಂಟು ಮಾಡುತ್ತದೆ. ಏಕೆಂದರೆ ಬೆಂಕಿಯು ಬಂಗಾರದ ಕಳೆಯನ್ನು ಹೆಚ್ಚಿಸುವಂತೆ, ದಬ್ಬಾಳಿಕೆಯು ಸತ್ವಶೀಲಮನುಷ್ಯನ ... ರಾಷ್ಟ್ರದ ತೇಜವನ್ನು ಹೆಚ್ಚಿಸುತ್ತದೆ. 1921ನೇ ಇಸವಿಯಲ್ಲಿಯ ದಬ್ಬಾಳಿಕೆಯನ್ನು ನಾವು ಸವಿನಯ ಶಾಸನೋಲ್ಲಂಘನೆಯಿಂದ ಎದುರಿಸಿ, ಸರಕಾರಕ್ಕೆ ತನ್ನ ಸ್ವೈರವೃತ್ತಿಯನ್ನು ಪ್ರಕಟಿಸಲು ಅವಕಾಶವನ್ನು ಕೊಟ್ಟೆವು. ಆದರೆ ಈಗ ನಮ್ಮಲ್ಲಿ ಪ್ರತೀಕಾರದ ಯಾವ ಸಾಮರ್ಥ್ಯವೂ ಇಲ್ಲದೆ, ಸಹನೆ ಕೂಡಬೇಕಾಗಿದೆ. ನಾವು ಸವಿನಯ ಶಾಸನೋಲ್ಲಂಘನವನ್ನು ಕೈಕೊಳ್ಳಲು ಸಿದ್ಧರಿರುವದಿಲ್ಲ. ಅದಕ್ಕಾಗಿ ನಾವು ... ದ್ಧತೆಯನ್ನು ಮಾತ್ರ ಮಾಡಬಹುದು. ನಿಯಮಬದ್ಧತೆ, ... ಸಂಯಮನ, ಅಹಿಂಸಾತ್ಮಕ ಪ್ರತೀಕಾರಪ್ರವೃತ್ತಿ, ಸಂಘ... ಮತ್ತು ಇವೆಲ್ಲದಕ್ಕಿಂತ ಹೆಚ್ಚಿನದಾದ ಪ್ರಚಲಿತ ದೈವೀ ... ಸನಗಳನ್ನೂ ಅವುಗಳಿಗೆ ಪೋಷಕವಾದ ಮನುಷ್ಯಕೃತ ಶಾಸನಗಳನ್ನೂ ನಿಷ್ಠೆಯಿಂದಲೂ ಅಂತಃಕರಣದಿಂದಲೂ ಪಾಲಿಸುವುದು. ಇವೆಲ್ಲವುಗಳು ಶಾಸನಭಂಗದ ಸಿದ್ಧತೆಗಳಾಗಿವೆ. ... ದೆ ದುರ್ದೈವದಿಂದ ನಮ್ಮಲ್ಲಿ ಸಾಕಷ್ಟು ನಿಯಮಬದ್ಧತೆಯೂ ಆತ್ಮಸಂಯಮನವೂ ಇಲ್ಲ. ನಾವು ಹಿಂಸಾ ಪ್ರವೃತ್ತಿಯುಳ್ಳವರಿರುವೆವು; ಇಲ್ಲವೆ ನಮ್ಮ ಅಹಿಂಸೆಯು ಪ್ರತೀಕಾರಶಕ್ತಿ ಇಲ್ಲದ್ದಾಗಿರುವದು. ನಮ್ಮಲ್ಲಿ ಸಾಕಷ್ಟು ಸಂಘಶಕ್ತಿಯಿಲ್ಲ. ದೇವರ ಇಲ್ಲವೆ ಮನುಷ್ಯಕೃತವಾದ ಶಾಸನಗಳನ್ನು ನಾವು ಗತ್ಯಂತರವಿಲ್ಲವೆಂದು ಪಾಲಿಸುತ್ತೇವೆ. ಹಿಂದು ಮುಸಲ್ಮಾನರು ತಮ್ಮ ಪರಸ್ಪರ ವ್ಯವಹಾರದಲ್ಲಿ ದೇವರ ಮತ್ತು ಮನುಷ್ಯಕೃತ ನಿಯಮಗಳನ್ನು ಸ್ವೈರವೃತ್ತಿಯಿಂದ ದಿನಾಲು ಉಲ್ಲಂಘಿಸುವದನ್ನು ನಾವು ನೋಡುತ್ತಿದ್ದೇವೆ. ಹೀಗಿರಲು ದುಃಖಿತ ಜನರು ತಮ್ಮ ಮೇಲಾಗುವ ಅನ್ಯಾಯದ ನಿವಾರಣೆಗಾಗಿ ಉಪಯೋಗಿಸಬಹುದಾದ ಒಂದೇ ಒಂದು ಅಸದೃಶ ಮತ್ತು ಅಮೋಘವಾದ ಶಸ್ತ್ರವಾಗಿರುವ ಶಾಸನಭಂಗಕ್ಕೆ ಅನುಕೂಲವಾಗಿರುವ ವಾತಾವರಣವು ಈಗಿಲ್ಲೆಂಬುದು ಸ್ಪಷ್ಟವಿದೆ. ಇಂಥ ಪರಿಸ್ಥಿತಿಯಲ್ಲಿ ಕೈಕೊಳ್ಳಬಹುದಾದ ಎರಡನೆಯ ಉಪಾಯವೆಂದರೆ, ನಿಃಸಂಶಯವಾಗಿ ಹಿಂಸಾಪ್ರವೃತ್ತಿಯೇ ಸರಿ. ಹಿಂಸಾಪ್ರವೃತ್ತಿಗೆ ಅನುಕೂಲವಾದ ವಾತಾವರಣವು ಸದ್ಯಕ್ಕಿದೆಂದು ನಮಗೆ ಭಾಸವಾಗುತ್ತದೆ. ನಮಗೆ ಅದಕ್ಕಾಗಿ ಶಿಕ್ಷಣವು ಹಿಂದುಮುಸಲ್ಮಾನರ ಕಲಹಗಳಿಂದ ದೊರೆಯುತ್ತದೆ. ಹಿಂದುಸ್ಥಾನದ ಬಂಧಮೋಚನವು ಹಿಂಸಾಪ್ರವೃತ್ತಿಯಿಂದಲೇ ಶಕ್ಯವಿದೆಂದು ನಂಬುವವರು, ನಮ್ಮೊಳಗೆ ನಿರಂತರವಾಗಿ ನಡೆದಿರುವ ಅಂತಃಕಲಹಗಳನ್ನು ನೋಡಿ ಬೇಕಾದಷ್ಟು ಆನಂದಪಡಬಹುದು. ಆದರೆ ಹಿಂಸಾ ತತ್ವದಲ್ಲಿ ವಿಶ್ವಾಸವುಳ್ಳವರಿಗೆ ನಾನು ಹೇಳುವದೇನಂದರೆ,—"ನೀವು ಹಿಂದುಸ್ಥಾನದ ಪ್ರಗತಿಗೆ ಅಪ್ಪ ಬಯಸುತ್ತಿರುವಿರಿ. ಅನ್ನವಿಲ್ಲದೆ ಬಳಲುತ್ತಿರುವ ಲಕ್ಷಾವಧಿ ಜನರ ಬಗ್ಗೆ ನಿಮ್ಮಲ್ಲೇನಾದರೂ ಕನಿಕರವೂ, ಪ್ರೇಮವೂ ಇದ್ದದ್ದಾದರೆ, ನಿಮ್ಮ ಹಿಂಸಾ ಪ್ರವೃತ್ತಿಯಿಂದ ಅವರಿಗೆ ಯಾವ ಹಿತವೂ ಆಗಲಾರದೆಂದು ತಿಳಿಯಿರಿ. ಯಾವ ಸರಕಾರವನ್ನು ನೀವು ಕಳಬೇಕೆನ್ನುವಿರೋ, ಅದರ ಬಳಿಯಲ್ಲಿ ನಿಮಗಿಂತಲೂ ಹೆಚ್ಚಿನ ಶಸ್ತ್ರಬಲವು ಇರುವದಲ್ಲದೆ, ಅದು ನಿಮಗಿಂತಲೂ ಎಷ್ಟೋಪಟ್ಟು ಹೆಚ್ಚು ಸುಸಂಗಟಿತವಾದುದಾಗಿದೆ. ನಿಮಗೆ ನಿಮ್ಮ ಜೀವದ ಪರವೆಯು ಇರಲಿಕ್ಕಿಲ್ಲ. ಆದರೆ ದೇಶದ ಸಲುವಾಗಿ ಆತ್ಮಯಜ್ಞವನ್ನು ಮಾಡಬಿಚ್ಚಿಸದ ನಿಮ್ಮ ದೇಶಬಾಂಧವರ ಜೀವಿತವನ್ನು ನೀವು ಉಪೇಕ್ಷಿಸಲಾರಿರಿ. 'ಜಾಲಿಯನ್‌ವಾಲಾ ಬಾಗದಲ್ಲಿ ಆದಂಥ ಕೊಲೆಗಳು ಆತ್ಮ ಸಂರಕ್ಷಣೆಗೆ ಯೋಗ್ಯ ಸಾಧನಗಳಾಗಿರುವವೆಂದು ಈ ಸರಕಾರವು ನಂಬುತ್ತದೆಂಬುದನ್ನು ನೀವು ಬಲ್ಲಿರಿ. ಎರಡನೆಯ ದೇಶಗಳಮಾತು ಹೇಗೆಯೇ ಇರಲಿ, ಈ ದೇಶದಲ್ಲಿ ಹಿಂಸಾ ಸಂಘವು ಬೆಳೆಯುವ ಸಂಭವವೇ ಇಲ್ಲ. ಹಿಂದುಸ್ಥಾನವು ಅಹಿಂಸಾತತ್ವದ ಹೊಗಸಾದ ನೆಲೆಯೂ, ಅಹಿಂಸೆಯ ಮರ್ಮವನ್ನು ಅತ್ಯುತ್ತಮವಾಗಿ ತಿಳಿಹೇಳುವ ನಾಡೂ ಆಗಿರುವದು. ಅಹಿಂಸೆಯ ಸಲುವಾಗಿ ನೀವು ಆತ್ಮಯಜ್ಞವನ್ನು ಮಾಡಿದರೆ, ನಿಮ್ಮ ಜೀವಿತವನ್ನು ನೀವು ಹೆಚ್ಚು ಒಳಿತಾಗಿ ಉಪಯೋಗಿಸಿದಂತಾಗುವದಿಲ್ಲವೇ?"

ಹಿಂಸಾತ್ಮಕ ಮತ್ತು ಅರಾಜಕವಾದ ಸರಕಾರಕ್ಕೆ ಇಂಥ ಯಾವದೊಂದು ಬಿನ್ನಹವನ್ನು ನಾನು ಮಾಡಿದರೆ, ಅದು ಹೇಗೆ ನಿಷ್ಫಲವಾಗುವ ಸಂಭವವಿದೆಯೋ, ಹಾಗೆಯೇ ಕ್ರಾಂತಿಕಾರಕರಿಗೆ ನಾನು ಮಾಡಿದ ಈ ಬಿನ್ನಹವಾದರೂ ನಿಷ್ಫಲವಾಗುವದೆಂಬುದು ನನಗೆ ಗೊತ್ತಿದೆ. ಆದ್ದರಿಂದ ನಾವು ಯೋಗ್ಯವಾದ ಉಪಾಯವನ್ನು ಹುಡುಕಿ ತೆಗೆದು, ಹಿಂಸಾತ್ಮಕ ಸರಕಾರಕ್ಕೂ ಹಿಂಸಾತ್ಮಕ ಕ್ರಾಂತಿಕಾರರಿಗೂ, ಅವರು ಯೋಜಿಸುವ ಹಿಂಸೆಗಿಂತ ಹೆಚ್ಚು ಪರಿಣಾಮಕರವಾದ ಶಕ್ತಿಯೊಂದಿರುವದೆಂಬುದನ್ನು ಅವರಿಗೆ ಪ್ರಯೋಗದಿಂದ ಸಿದ್ಧಮಾಡಿ ತೋರಿಸಬೇಕು.

ದಬ್ಬಾಳಿಕೆಯು ಒಂದು ಲಕ್ಷಣವು.

ದಬ್ಬಾಳಿಕೆಯು ಎಲ್ಲೆಲ್ಲಿಯೂ ಹರಡಿಕೊಂಡಿದ್ದ ಪಳ್ಳೆ

ಬೇನೆಯು ಒಂದು ಲಕ್ಷಣವಾಗಿದೆ. "ಯುರೋಪದ ಪ್ರಭುತ್ವ, ಮತ್ತು ಏಶಿಯದ ಅಧೀನತೆ" ಎಂಬುದು ಎಲ್ಲೆಲ್ಲಿಯೂ ಸೂತ್ರವಾಗಿದೆ. ಇದನ್ನೇ ಹೆಚ್ಚು ಸಂಕ್ಷಿಪ್ತವಾಗಿ ಹೇಳುವದಾದರೆ, ಇದಕ್ಕೆ "ಬಿಳಿ ಮತ್ತು ಕರಿಬಣ್ಣದವರ ಜಗಳ" ವೆಂದೆನ್ನಬಹುದು; 'ಬಿಳಿಬಣ್ಣದವರ ಮೇಲಿರುವ ಭಾರ' ವೆಂದು ಕಿಪ್ಲಿಂಗನು ತಪ್ಪು ಹೆಸರು ಕೊಟ್ಟಿರುವನು. ಮಲಾಯಾ ದ್ವೀಪಕಲ್ಪದಲ್ಲಿ ಅಲ್ಪಕಾಲಿಕವೆಂದೆನಿಸುತ್ತಿದ್ದ ವರ್ಣನಿರ್ಬಂಧವು ಬಹುತರವಾಗಿ ಶಾಶ್ವತವಾದಂತಾಗಿದೆ. ಮಾರಿಶಸದ ತೋಟಗಳಿಗೆ ಅಡ್ಡಿ ಅಥವ ಆಯಾಸವಿಲ್ಲದೆ ಹಿಂದುಸ್ಥಾನದ ಕೂಲಿಕಾರರು ದೊರೆಯಬೇಕು. ಕೀನಿಯದಲ್ಲಿ ತಲು, ತಮ್ಮ ಕಿಂತಲೂ ಹೆಚ್ಚಿಗೆ ಅಧಿಕಾರವಿರುವ ಹಿಂದೀ ಜನರ ಮೇಲೆ ಅಲ್ಲಿಯ ಯುರೋಪಿಯನರು ನಿರಾತಂಕವಾಗಿ ಪ್ರಭುತ್ವವನ್ನು ನಡಿಸುವರು. ದಕ್ಷಿಣ ಆಫ್ರಿಕೆಯ ಯೂನಿಯನ್ ಸರಕಾರವು ಹಿಂದೀ ಜನರ ಹಿಂದಿನ ಉಪಕಾರಗಳನ್ನು ಸ್ಮರಿಸದೆ ಅವರೆಲ್ಲರನ್ನೂ ತನಗೆ ಹಾನಿಯಾಗುವದಿಲ್ಲೆಂದು ತೋರಿದರೆ ಹೊರಗೆ ಹಾಕಲು ಇಚ್ಛಿಸುವರು. ಈ ಎಲ್ಲ ಸಂದರ್ಭಗಳಲ್ಲಿ ಹಿಂದುಸ್ಥಾನ ಸರಕಾರದವರಿಗಾಗಲಿ ಸಾಮ್ರಾಜ್ಯ ಸರಕಾರದವರಿಗಾಗಲಿ ಏನೂ ಮಾಡಲು ಬರುವದಿಲ್ಲೆಂತಿಲ್ಲ. ಅವರು ಹಿಂದೀ ವಸಾಹತುಗಾರರ ರಕ್ಷಣೆಯನ್ನು ಮಾಡಲು ಮನಸ್ಸಿಲ್ಲದವರಾಗಿರುವರು. ಇಲ್ಲವೆ ಅದಕ್ಕಾಗಿ ಮಾಡಬೇಕಾದಷ್ಟು ಆಗ್ರಹವನ್ನು ಹಿಡಿಯಲೊಲ್ಲರು. ಫಿಜಿ ನಡುಗಡ್ಡೆಯ ಬಗ್ಗೆ ತಾವೇ ನಿಯಮಿಸಿದ ವಿಚಾರಣಮಂಡಲವು ಸಾದರಪಡಿಸಿದ ವರದಿಯನ್ನು ಪ್ರಕಟಿಸುವಷ್ಟು ಸೌಜನ್ಯವನ್ನು ಸಹ ಹಿಂದುಸ್ಥಾನ ಸರಕಾರವು ತೋರಿಸಿಲ್ಲ. ಯೂತಕ್ಕಾ ಹಣಿಯದ ಅಕಾಲಿಗಳನ್ನು ಬಗ್ಗು ಬಡಿಯಲು ನಡೆದಿರುವ ಪ್ರಯತ್ನವಾದರೂ ಇದೇ ಬೇನೆಯ ಒಂದು ಬಹಿರ್ಲಕ್ಷಣವಾಗಿದೆ. ಅವರು ತಮಗೆ ಪ್ರಾಣದಷ್ಟೇ ಪ್ರಿಯವಾಗಿರುವ ತಮ್ಮ ಧರ್ಮದ ರಕ್ಷಣೆಗಾಗಿ ನೀರಿನಂತೆ ರಕ್ತವನ್ನು ಸುರಿಸುವರು. ಅವರದು ತಪ್ಪಾಗಿರಬಹುದು. ಹಾಗಿದ್ದರೆ ಅದಕ್ಕಾಗಿ ಹಾನಿಯನ್ನು ಹೊಂದಿದವರು ಅವರೇ ಆಗಿರುವರು. ಎರಡನೇ ಪಕ್ಷದ ಜನರಿಗಾದರೂ ಅವರಿಂದ ಹಾನಿಯಾಗಿಲ್ಲ. ನಾನಕಾನಾ ಸಾಹೇಬ, ಗುರುಕಾಬಾಗ ಮತ್ತು ಜೈತೊ ಈ ಸ್ಥಳಗಳಲ್ಲಿಯ ಸಂಗತಿಗಳು ಅವರ ಧೈರ್ಯ, ಸಹನಶೀಲತೆ ಮತ್ತು ಆತ್ಮಯಜ್ಞಗಳ ಸಾಕ್ಷಿಯಾಗಿವೆ. ಆದರೆ ಪಂಜಾಬದ ಗವರ್ನರ ಸಾಹೇಬರು ಅಕಾಲಿಗಳನ್ನು ಮುರಿದೊಗೆಯಲು ಸಂಕಲ್ಪವನ್ನು ಮಾಡಿರುವರೆಂಬ ವಾರ್ತೆ ಇದೆ.

ದಬ್ಬಾಳಿಕೆಯು ಬರ್ಮೀ ಜನರ ಸತ್ವವನ್ನು ನಷ್ಟಗೊಳಿಸುತ್ತಲಿದೆಂದು ನಾವೀಗ ಕೇಳುತ್ತೇವೆ.

ಇಜಿಪ್ತದ ಸ್ಥಿತಿಯಾದರೂ ಸಮಕಿಂತೇನೂ ಒಳಿತಾಗಿರುವದಿಲ್ಲ. ಒಬ್ಬ ತಲೆ ತಿರುಕನಾದ ಇಜಿಪ್ತಿಯನನು ಒಬ್ಬ ಯುರೋಪಿಯನ್ ಅಧಿಕಾರಿಯ ಕೊಲೆಮಾಡಿದನು. ಇದು ಅತಿ ನಿಂದ್ಯವಾದ ಕೃತ್ಯವೆಂಬುದೇನೋ ನಿಜ. ಆದರೆ ಶಿಕ್ಷೆಯೂ ಕೂಡ ಅತಿ ನಿಂದ್ಯವಾದ ಕೃತ್ಯವಾಗಿರುವದಲ್ಲದೆ, ಅದರಿಂದ ಮೂಸದ ಜಾತಿಯ ಮಾನಭಂಗವು ಮಾಡಲ್ಪಟ್ಟಿದೆ. ಇಜಿಪ್ತಕ್ಕೆ ತನಗೆ ದೊರೆತ ಒಂದು [illegible] ಎಲ್ಲ ಪಕ್ಷಗಳಿಗೆರವಾಗಬೇಕಾಗಿತು. ಒಬ್ಬ ಮನುಷ್ಯನ ತಪ್ಪಿಗಾಗಿ ಇಡೀ ರಾಷ್ಟ್ರವೇ ನಿರ್ದಯತನದಿಂದ ಶಿಕ್ಷಿಸಲ್ಪಟ್ಟಿದೆ. ಈ ಕೊಲೆಗೆ ಇಜಿಪ್ತಿಯನರ ಸಹಾನುಭೂತಿ ಇದ್ದರೂ ಇರಬಹುದು. ದಬ್ಬಾಳಿಕೆಯನ್ನು ಅವಲಂಬಿಸದೆ ತನ್ನ ಸಂರಕ್ಷಣೆಯನ್ನು ಮಾಡಿಕೊಳ್ಳಲು ಸಮರ್ಥವಾದ ಸರಕಾರವು ಪ್ರಜೆಗಳನ್ನು ಪೀಡೆಗೊಳಪಡಿಸಿ ಅವರನ್ನು ಭಯಗ್ರಸ್ತರನ್ನಾಗಿ ಮಾಡಲೆಸಗುವದು ನ್ಯಾಯವಾಗುವದೋ?

ಅದ್ದರಿಂದ ಬಂಗಾಲದಲ್ಲಿಯ ದಬ್ಬಾಳಿಕೆಯು ವಿಶೇಷವಾದ ಸಂಗತಿಯೇನಲ್ಲ. ನಮಗೆ ಸ್ವರಾಜ್ಯವು ದೊರೆಯುವವರೆಗೆ, ಭಿನ್ನ ಭಿನ್ನ ಪ್ರಾಂತಗಳಲ್ಲಿ ಭಿನ್ನ ಭಿನ್ನ ರೂಪದಿಂದ ಆಗಾಗ್ಗೆ ತಲೆ ಎತ್ತುವ ದಬ್ಬಾಳಿಕೆಯು ಮಾಡಿಳೆಯದೆಂದಾಗಿ ಎಣಿಸಲಿಕ್ಕೆ ಬೇಕು.

ಅಧಿಕಾರದ ಅವಶ್ಯಕತೆಯು.

ಮಹಾಸಭೆಯು ತನಗೆ ಒಪ್ಪಿಸಲ್ಪಟ್ಟ ಕಾರ್ಯಭಾಗದ ವಿಷಯದಲ್ಲಿ ತನ್ನ ಪಾತ್ರತೆಯನ್ನು ಸಿದ್ಧಗೊಳಿಸಬಲ್ಲರೆ, ತನ್ನ ಬೇಡಿಕೆಗಳಿಗೆ ಪುಷ್ಟಿಗೊಡಲು ಅಧಿಕಾರವನ್ನು ಪಡೆಯುವದಗತ್ಯವು. ಆ ಅಧಿಕಾರವು ಬರುವ ಮೊದಲು ಹಿಂದು, ಮುಸಲ್ಮಾನ, ಕ್ರೈಸ್ತ, ಶೀಖ, ಪಾರ್ಶಿ, ಮೊದಲಾದ ನಾವೆಲ್ಲರು ಒಂದಾಗಲಿಕ್ಕೆ ಬೇಕು. ಅದರಂತೆಯೇ ಸ್ವರಾಜ್ಯಪಕ್ಷದವರೂ, ಅಸಹಯೋಗಿಗಳೂ, ಲಿಬರಲರೂ, ಹೋಮರೂಲರರೂ, ಮುಸ್ಲೀಮ ಲೀಗದವರೂ ಒಂದಾಗಲಿಕ್ಕೆ ಬೇಕು. ನಮ್ಮಲ್ಲಿ ಒಕ್ಕಟ್ಟಾಗಿ ನಮಗೆ ಬೇಕಾದುದು ಏನೆಂಬುದನ್ನು ಸ್ಪಷ್ಟವಾಗಿ ನಾವು ಅರಿತುಕೊಂಡರೆ ಅದರಿಂದ ನಮಗೆ ಹಿತವಾಗುವದು. ನಮ್ಮ ದೇಶದೊಳಗೆ ವಿದೇಶೀ ವಸ್ತ್ರಗಳನ್ನು ಬಾರದಂತೆ ಮಾಡಲು ನಾವು ಶಕ್ತಿಯುಳ್ಳವರಾದರೆ ಹೆಚ್ಚಿಗೆ ಒಳಿತಾಗುವದು. ಇಷ್ಟಾದ ಬಳಿಕ ನಾವು ಅಧಿಕಾರಕ್ಕೆ ಪಾತ್ರರಾಗುವೆವು.

ನನ್ನ ಶ್ರದ್ಧೆ.

ನನ್ನ ಶ್ರದ್ಧೆಯನ್ನು ಕುರಿತು ಹೇಳುವಾ: ಮಹಾಸಭೆಯು ನನ್ನ ಅಭಿಮತವಾಗಿ 'ಇಷಲಿಬ್ಬಿಸುವ ಮಹಾ ಸಭಾಸದಸ್ಯನು' ನಾನಾಗಿರುವದರಿಂದ, ರಾಷ್ಟ್ರವು ಅಸಹಯೋಗಕ್ಕೆ ಸಿದ್ಧವಿಲ್ಲದ್ದರಿಂದ, ಅದನ್ನು (ಅಸಹಯೋಗವನ್ನು) ನಿಲ್ಲಿಸಬೇಕಾಗಿ ನಾನು ಹೇಳುವೆನು. ಆದರೆ ನನ್ನ ವ್ಯಕ್ತಿಯ ಮಟ್ಟಿಗೆ ಹೇಳುವದಾದರೆ ಸರಕಾರವು ಈಗಿದ್ದಂತೆ ಎಲ್ಲಿಯವರೆಗೆ ಉಳಿಯುವದೋ ಅಲ್ಲಿಯವರೆಗೆ ನಾನು ಅಸಹಯೋಗವನ್ನು ನಿಲ್ಲಿಸಲಾರೆನು; ಮತ್ತು ನಿಲ್ಲಿಸುವದಿಲ್ಲ. ನನ್ನ ವಿಷಯದಲ್ಲಿ ಅದು ದೋರಣವಾಗಿರದೆ ನನ್ನ ಶ್ರದ್ಧೆಯ ಒಂದು ಅಂಗವಾಗಿರುವದು. ಅಸಹಯೋಗವೂ ಸವಿನಯ ಶಾಸನೋಲ್ಲಂಘನವೂ ಸತ್ಯಾಗ್ರಹವೆಂಬ ವೃಕ್ಷದ ಭಿನ್ನ ಶಾಖೆಗಳಾಗಿವೆ. ಅದು ನನ್ನ ಕಲ್ಪದ್ರುಮ,-ನನ್ನ ಜಾಮ-ಇ-ಜಾಮ,-ನನ್ನ ಚಿಂತಾಮಣಿಯು ಆಗಿರುವದು. ಸತ್ಯಾಗ್ರಹವು ಸತ್ಯಾನ್ವೇಷಣೆಯು; ಮತ್ತು ದೇವರು ಸತ್ಯ. ಅಹಿಂಸೆಯು ಆ ಸತ್ಯವನ್ನು ನನಗೆ ದೃಗ್ಗೋಚರ ಮಾಡಿಸುವ ಪ್ರಕಾಶವು. ನನ್ನ ಮಟ್ಟಿಗೆ ಸ್ವರಾಜ್ಯವು ಆ ಸತ್ಯದ ಒಂದು ಭಾಗವಾಗಿದೆ. ದಕ್ಷಿಣ-ಆಫ್ರಿಕಾ, ಖೇಡಾ, ಚಂಪಾರಣ್ಯಗಳಲ್ಲಿಯೂ ಬೇರೆ ಅನೇಕ ಪ್ರಸಂಗಗಳಲ್ಲಿಯೂ ಈ ಸತ್ಯಾಗ್ರಹದಿಂದ ನನಗೆ ಯಶಸ್ಸು ದೊರೆಯದಿರಲಿಲ್ಲ. ಅದರಲ್ಲಿ ಹಿಂಸೆಗೂ ದ್ವೇಷಕ್ಕೂ ಆಸ್ಪದವಿಲ್ಲ. ಆದ್ದರಿಂದ ಇಂಗ್ಲೀಷರನ್ನು ನಾನು ದ್ವೇಷಿಸಲಾರೆನು. ಅಥವಾ ಅವರ ಅಧೀನನಾಗಿಯೂ ಇರಲಾರೆನು. ಬ್ರಿಟಿಷರು ಹಿಂದುಸ್ಥಾನದಲ್ಲಿ ತಮ್ಮ ಪದ್ಧತಿಗಳನ್ನೂ ತಮ್ಮ ಸಂಸ್ಥೆಗಳನ್ನೂ ಬಲಾತ್ಕಾರದಿಂದ ನೆಲೆಗೊಳಿಸಲು ಮಾಡುವ ಅಪವಿತ್ರ ಪ್ರಯತ್ನಗಳನ್ನೂ ಜೀವವಿರುವವರೆಗೆ ವಿರೋಧಿಸದಿರಲಾರೆನು. ಆದರೆ ಅಹಿಂಸಾವೃತ್ತಿಯನ್ನವಲಂಬಿಸಿಯೇ ನಾನು ಪ್ರಯತ್ನಗಳನ್ನು ವಿರೋಧಿಸುವೆನು. ಯುದ್ಧದಲ್ಲಿ ಇಂಗ್ಲಿಷ್ ರಾಜಕರ್ತರನ್ನು ಅಹಿಂಸಾ ಶಸ್ತ್ರದಿಂದ ಎದುರಿಸುವ ಸಾಮರ್ಥ್ಯವು ಹಿಂದುಸ್ಥಾನಕ್ಕೆ ಉಂಟೆಂದು ನಾನು ನಂಬುತ್ತೇನೆ. ಸತ್ಯಾಗ್ರಹದ ಪ್ರಯೋಗವು ಅಯಶಸ್ವಿಯಾಗಿಲ್ಲ. ಅದು ಕೆಲಮಟ್ಟಿಗೆ ಯಶಸ್ವಿಯಾಗಿದೆ, ಆದರೆ ನಾವು ಇಚ್ಛಿಸಿದ ಫಲವು ಮಾತ್ರ ಅದರಿಂದ ದೊರೆತಿಲ್ಲ. ನಾನು ನಿರಾಶೆ ಹೊಂದಿಲ್ಲ. ಇಷ್ಟೇ ಅಲ್ಲ, ಹಿಂದುಸ್ಥಾನಕ್ಕೆ ಅಲ್ಪಾವಕಾಶದಲ್ಲಿಯೇ ಇಚ್ಛಿತಫಲವು ಪ್ರಾಪ್ತವಾಗುವದೆಂದೂ ಮತ್ತು ಅದು ಕೂಡ ಸತ್ಯಾಗ್ರಹದಿಂದಲೇ ಎಂದೂ ನಾನು ನಂಬಿದ್ದೇನೆ. ನಾವು ಅಸಹಯೋಗವನ್ನು ನಿಲ್ಲಿಸುವದು ಈ ಪ್ರಯೋಗದ ಒಂದು ಭಾಗವಾಗಿದೆ. ನಾನು ಸೂಚಿಸಿರುವ ಕಾರ್ಯಕ್ರಮವು ಪೂರ್ತಿಗೊಂಡರೆ, ಅದನ್ನು ತಿರುಗಿ ಕೈಕೊಳ್ಳುವ ಪ್ರಸಂಗವು ಎಂದೂ ಬರಲಾರದು. ಈ ಕಾರ್ಯಕ್ರಮವು ನೆರವೇರದಿದ್ದರೆ ಅಹಿಂಸಾತ್ಮಕವಾದ ಅಸಹಯೋಗವನ್ನು ಮಹಾಸಭೆಯು ಒಳಗಾಗಲಿ ಅಥವ ಹೊರಗಾಗಲಿ ಒಂದಿಲ್ಲೊಂ[illegible] ಅಂಗೀಕರಿಸಬೇಕಾಗುವದು. ಸತ್ಯಾಗ್ರಹ ಎಂದಿಗೂ ನಿಷ್ಫಲವಾಗದೆಂದು, ಮತ್ತು ಒಬ್ಬ ಸಂಪೂರ್ಣ ಸತ್ಯಾಗ್ರಹಿಯೇ ಸತ್ಯದ ಮಹಿಮೆಯನ್ನು ತೋರಿಸಲು ಸಾಕೆಂದು [illegible] ಆಗಾಗ್ಗೆ ಹೇಳುತ್ತ ಬಂದಿರುತ್ತೇನೆ. ನಾವೆಲ್ಲರೂ ಪೂರ್ಣ ಸತ್ಯಾಗ್ರಹಿಗಳಾಗಲು ನಾವು [illegible] ಪಡುವಾ. ಈ ಸಾಹಸವನ್ನು ಅತಿ ಕ್ಷುದ್ರನು ಕೂಡ ಮಾಡಬಹುದು. ಏಕೆಂದರೆ ಅತನಿಗೆ ಎಟುಕದಂಥ ಯಾವ ಯೋಗ್ಯತೆಯೂ ಅದಕ್ಕೆ ಬೇಕಾಗುವದಿಲ್ಲ. ಸತ್ಯಾಗ್ರಹವು ಅಂತರಾತ್ಮನ ಧರ್ಮವಾಗಿದೆ. ಅದು ಪ್ರತಿಯೊಬ್ಬರಲ್ಲಿಯೂ ಗೂಢವಾಗಿರುತ್ತದೆ. ಸ್ವರಾಜ್ಯದಂತೆ ಇದಾದರೂ ನಮ್ಮ ಜನ್ಮಸಿದ್ಧ ಅಧಿಕಾರವಾಗಿದೆ. ನಾವದನ್ನು ತಿಳಿಯುವ

ಹಲ್ಲುಗಳ ರಚನೆ, ಪ್ರಯೋಜನ, ಕೆಲಸ ಮುಂತಾದುವು.

ನಾವು ಒಂದುರೊಟ್ಟಿಯ ತುಂಡನ್ನು ಬಾಯೊಳಗೆ ಹಾಕುತ್ತಲೇ, ಅದನ್ನು ಮೊದಲು ಬಾಯಮುಂದಿನ ಹಲ್ಲುಗಳಿಂದ ಸ್ವಲ್ಪಕಚ್ಚಿ ಅನಂತರ ಎರಡು ದವಡೆಗಳ ಹಿಂಭಾಗದ ಹಲ್ಲುಗಳಿಂದ ಅಗಿಯುತ್ತೇವೆ. ಪುಡಿಯಾಗದ ತುಂಡುಗಳನ್ನು ಚೆನ್ನಾಗಿ ಪುಡಿಮಾಡಲಿಕ್ಕೆ ನಾಲಗೆಯು ಆಗಾಗ ಬೇರೆ ಬೇರೆ ಹಲ್ಲುಗಳಿಗೆ ಒಡ್ಡಿಕೊಡುತ್ತದೆ. ಪ್ರಾಯಸ್ಥರ ಬಾಯೊಳಗೆ ಒಟ್ಟು 32 ಹಲ್ಲುಗಳು ಇರುವವು. ಇವುಗಳಲ್ಲಿ 16 ಹಲ್ಲುಗಳು ಮೇಲ್ದವಡೆಯಲ್ಲಿಯೂ, 16 ಕೆಳದವಡೆಯಲ್ಲಿಯೂ ತೋರುವವು. ಮೇಲ್ದವಡೆಯು ಅಲುಗಾಡದೆ ಸ್ಥಿರವಾಗಿರುವದು; ಆದರೆ ಕೆಳದವಡೆಯು ಎರಡು ಎಲುಬುಗಳಿಂದ ಮಾಡಲ್ಪಟ್ಟದ್ದಾಗಿ, ಕಿವಿಯ ಸುತ್ತಲಿರುವ ಎಲುಬಿಗೆ ಜೋಡಿಸಲ್ಪಟ್ಟಿರುವದರಿಂದ, ಅದನ್ನು ಮುಂದಕ್ಕೂ ಹಿಂದಕ್ಕೂ, ಬದಿಯಿಂದ ಬದಿಗೂ, ಆಡಿಸಲಿಕ್ಕೆ ಸಾಧ್ಯವಿದೆ. ಇದರಿಂದ ನಾವು ಬಾಯೊಳಗಿಟ್ಟ ಆಹಾರವು ಮೇಲ್ದವಡೆ ಕೆಳದವಡೆಗಳ ಮಧ್ಯದಲ್ಲಿ ಜಗಿಯಲ್ಪಟ್ಟು ಪುಡಿಯಾಗುತ್ತದೆ.

ಮಗು ಹುಟ್ಟುವಾಗ ಅದರ ಬಾಯಿಯೊಳಗೆ ಹಲ್ಲುಗಳಿರುವದಿಲ್ಲ. ಅದಕ್ಕೆ ಆರು ತಿಂಗಳು ಪ್ರಾಯವಾಗುತ್ತಲೇ ಅದರ ವಸಡಿನಲ್ಲಿ ಚಿಕ್ಕಚಿಕ್ಕ ಹಲ್ಲುಗಳು ಮೊಳೆಯುತ್ತವೆ. ಮಗುವಿಗೆ ಎರಡು ವರ್ಷ ವಯಸ್ಸಾದೊಡನೆಯೇ ಅದರ ಬಾಯಿಯೊಳಗೆ 20 ಹಾಲು ಹಲ್ಲುಗಳು ತೋರುವವು. ಇವುಗಳಲ್ಲಿ ಹತ್ತು ಮೇಲ್ದವಡೆಯಲ್ಲಿಯೂ, ಹತ್ತು ಕೆಳದವಡೆಯಲ್ಲಿಯೂ ಕಾಣುತ್ತವೆ. ಮಕ್ಕಳಿಗೆ ಆರು ವರ್ಷ ವಯಸ್ಸು ಆಗುವವರೆಗೆ ಮಾತ್ರ ಈ ಹಲ್ಲುಗಳು ಇರುವವು. ಏಳು ವಯಸ್ಸು ತುಂಬಿದಕೂಡಲೆ ಇವು ಒಂದೊಂದಾಗಿ ಬೀಳಲಿಕ್ಕೆ ತೊಡಗಿ ಇವುಗಳ ಸ್ಥಳಗಳಲ್ಲಿ ಸ್ಥಿರಹಲ್ಲುಗಳು ಮೂಡುತ್ತವೆ. ಹನ್ನೆರಡು ವರ್ಷಗಳೊಳಗೆ ಹಾಲು ಹಲ್ಲುಗಳೆಲ್ಲಾ ಬಿದ್ದುಹೋಗಿ ಸ್ಥಿರ ಹಲ್ಲುಗಳು ಕಾಣಿಸಿಕೊಳ್ಳುತ್ತಾ, ಸುಮಾರು ಹದಿಮೂರು ವರ್ಷಗಳಾಗುತ್ತಲೇ, ಅವರ ಬಾಯಿಯೊಳಗೆ ಎರಡು ದವಡೆಗಳಲ್ಲಿ ಒಟ್ಟು 28 ಹಲ್ಲುಗಳು ತೋರುವವು. ಅವರಿಗೆ 20, 25 ವರ್ಷವಾಗುವಾಗ ನಾಲ್ಕು ಹೊಸ ಹಲ್ಲುಗಳು ಅಂಕುರಿಸುತ್ತವೆ. 25 ವರ್ಷ ಪ್ರಾಯವಾಗುವಾಗ ಅವರು ಯುವಕರಾಗಿ ಅವರಿಗೆ ಜ್ಞಾನ ಬರುವದರಿಂದ, ಅವರ ಬಾಯೊಳಗೆ ಹೊಸತಾಗಿ ಮೂಡಿದ ಕೊನೆಯ ನಾಲ್ಕು ದವಡೆಯ ಹಲ್ಲುಗಳಿಗೆ "ಜ್ಞಾನದಂತ" ಗಳೆಂದು ಹೆಸರು. ಹೀಗೆ ಪ್ರಾಯಸ್ಥರ ಬಾಯೊಳಗೆ ಒಟ್ಟು 32 ಹಲ್ಲುಗಳು ಇರುವವು.

ನಮ್ಮ ಬಾಯೊಳಗಿರುವ ಹಲ್ಲುಗಳು ಒಂದು ಇನ್ನೊಂದರ ಹಾಗಿರುವದಿಲ್ಲ. ಅವುಗಳಿಗೆ ರೂಪದಲ್ಲಿ ವ್ಯತ್ಯಾಸವಿದೆ. ಅವುಗಳಿಂದ ಉಂಟಾಗುವ ಪ್ರಯೋಜನಗಳಿಗೆ ಅನುಸಾರವಾಗಿ ಶಾಸ್ತ್ರಜ್ಞರು ಅವುಗಳಿಗೆ ಬೇರೆ ಬೇರೆ ಹೆಸರುಗಳನ್ನು ಕೊಟ್ಟಿರುವರು. ಪ್ರತಿ ಒಂದು ದವಡೆಯ ಇದುರಿನಲ್ಲಿರುವ ನಾಲ್ಕು ಹಲ್ಲುಗಳು ಆಹಾರ ವಸ್ತುಗಳನ್ನು ಕಡಿದು ತುಂಡುಮಾಡಲಿಕ್ಕೆ ಅನುಕೂಲವಾಗಿರುವದರಿಂದ, ಇವುಗಳನ್ನು ಕಡಿಯುವ ಹಲ್ಲುಗಳೆಂದು ಹೇಳುವರು. ಇವುಗಳ ಎರಡೂ ಬದಿಗಳಲ್ಲಿ ಮೊನೆಯುಳ್ಳ ಒಂದೊಂದು ಹಲ್ಲು ಇರುವದು. ಚೂಪಾದ ಅಂಚುಗಳಿರುವ ಈ ಹಲ್ಲುಗಳಿಗೆ ಕೋರೆ ಹಲ್ಲುಗಳೆಂದು ಹೇಳುವರು. ಮಾಂಸಾಹಾರಿಗಳು ಮಾಂಸ ತುಂಡುಗಳನ್ನು ಸೀಳಲಿಕ್ಕೆ ಈ ಹಲ್ಲುಗಳನ್ನು ಉಪಯೋಗಿಸುವವು. ಮಾಂಸ ತಿನ್ನುವ ಮೃಗಪಕ್ಷಿಗಳ ಕೋರೆ ಹಲ್ಲುಗಳು ಉದ್ದವಾಗಿಯೂ ಹರಿತವಾಗಿಯೂ ಇರುವವು. ನಮಗೆ ಎರಡು ದವಡೆಗಳಲ್ಲಿ ಒಟ್ಟು ನಾಲ್ಕು ಕೋರೆ ಹಲ್ಲುಗಳಿವೆ. ಇವುಗಳಿಗೆ ಸೇರಿದಂತೆ ಒಂದೊಂದು ಬದಿಯಲ್ಲಿ ಎರಡೆರಡು ಉಬ್ಬುಗಳುಳ್ಳ ಜೋಡು ಹಲ್ಲುಗಳು, ಆಹಾರವನ್ನು ಪುಡಿಮಾಡಲಿಕ್ಕೆ ಸಹಾಯಮಾಡುವವು. ಇವುಗಳ ಬದಿಯಲ್ಲಿ ಎತ್ತರ ತಗ್ಗಾದ ತಲೆಗಳುಳ್ಳ ದೊಡ್ಡ ಹಲ್ಲುಗಳು ಆಹಾರವನ್ನು ಚೂರ್ಣಿಸುವದರಿಂದ, ಇವುಗಳನ್ನು ಆಹಾರವನ್ನು ಪುಡಿಮಾಡುವ ನಿಜವಾದ ಹಲ್ಲುಗಳೆಂದು ಹೇಳುವರು. ಹೀಗೆ ಹಲ್ಲುಗಳ ಒಟ್ಟುಸಂಖ್ಯೆ 32. ಕೆಲವರಿಗೆ ಬಾಯಿಕೂಡುವಾಗ ಎಂದರೆ, 32 ಹಲ್ಲುಗಳೂ ಹುಟ್ಟುವಾಗ, 30 ವರ್ಷಗಳಾಗಿ ಹೋಗುವವು. ಆದರೆ ಕೆಲವರಿಗೆ 25 ವಯಸ್ಸಿನಲ್ಲಿಯೇ 32 ಹಲ್ಲುಗಳೂ ಬರುವದೂ ಉಂಟು.

ಹಲ್ಲಿನಲ್ಲಿ ತಲೆ, ಕುತ್ತಿಗೆ, ಬೇರು ಎಂಬ ಮೂರು ಭಾಗಗಳು ಇವೆ. ಕೆಲವು ಹಲ್ಲುಗಳಿಗೆ ಒಂದಕ್ಕಿಂತ ಹೆಚ್ಚಿಗೆ ಬೇರು ಇಲ್ಲ. ಕೆಲವಕ್ಕೆ ಎರಡು ಅಥವ ನಾಲ್ಕು ಬೇರುಗಳೂ ಇರುತ್ತವೆ.

ಹಲ್ಲಿನ ಭಾಗಗಳನ್ನೂ, ಪ್ರಯೋಜನಗಳನ್ನೂ ತಿಳಿದನಂತರ, ಅದು ಯಾವ ಪದಾರ್ಥದಿಂದ ರಚಿಸಲ್ಪಟ್ಟಿದೆಯೆಂಬ ಸಂಗತಿಯನ್ನು ನಾವು ತಿಳಿದುಕೊಳ್ಳಬೇಕು. ಹಲ್ಲು ಕಲ್ಲಿನಂತೆ ಗಟ್ಟಿಯಾದ ಒಂದು ಪದಾರ್ಥದಿಂದ ನಿರ್ಮಿಸಲ್ಪಟ್ಟಿದೆ. ಈ ವಸ್ತುವಿಗೆ 'ದಂತಸಾಮಗ್ರಿ' ಎಂದು ಹೆಸರು. ಇದೂ ಅಸ್ಥಿನಿರ್ಮಾಣ ಸಾಮಗ್ರಿಯಂತೆ ಗಟ್ಟಿಯಾಗಿರುವುದು. ನಾವು ಅವುಗಳನ್ನು ಪುಡಿಮಾಡಲು ನಮ್ಮ ಹಲ್ಲುಗಳಿಗೆ ಸಾಕಾದಷ್ಟು ಕೆಲಸವನ್ನು ಕೊಡಬೇಕಾಗುತ್ತದೆ. ನಾವು ಮೆತ್ತಗಿರುವ ಆಹಾರವನ್ನೇ ಯಾವಾಗಲೂ ಉಪಯೋಗಿಸಿದರೆ, ಅವುಗಳಿಗೆ ಸಾಕಷ್ಟು ಕೆಲಸ ದೊರಕದೆ ಹೋಗುವುದು. ಶರೀರದ ವಿವಿಧಭಾಗಗಳಿಗೆ ವ್ಯಾಯಾಮವು ಅಗತ್ಯವಿರುವಂತೆ, ನಮ್ಮ ಹಲ್ಲುಗಳಿಗೆ ಕೂಡ, ನಾವು ಸಾಕಷ್ಟು ಕೆಲಸಕೊಡುವದು ಅತ್ಯವಶ್ಯಕವಾಗಿದೆ. ಅವರೆ ಈ ಹಲ್ಲುಗಳಲ್ಲಿರುವ ದಂತಸಾಮಗ್ರಿಯು ಹಾಳಾಗದಂತೆ ನಾವು ಅದನ್ನು ಜಾಗ್ರತೆಯಿಂದ ಕಾಪಾಡಿಕೊಳ್ಳುವದು ಅಗತ್ಯವಾಗುತ್ತದೆ. ಅದು ಒಂದು ಸಲ ಮುರಿದು ಹೋದರೆ, ಅಥವಾ ಬಿದ್ದುಹೋದರೆ, ಹಲ್ಲಿನ ಮೆತ್ತಗಿರುವ ಒಳಭಾಗಗಳು ಕೆಟ್ಟು ಹೋಗಿ, ನಮಗೆ ಹಲ್ಲುನೋವು ಉಂಟಾಗಿ, ನಾವು ಆರೋಗ್ಯವನ್ನು ನಷ್ಟಮಾಡಿಕೊಳ್ಳುವ ದುರ್ಗತಿಯು ಬರುವುದು.

ಕೆಲವರು ಹಲ್ಲುಗಳ ನಿಜವಾದ ಬೆಲೆಯನ್ನು ತಿಳಿದುಕೊಂಡಂತೆ ತೋರುವುದಿಲ್ಲ. ಅವರು ಊಟಮಾಡುವಾಗ ಹಲ್ಲುಗಳಿಗೆ ಸಾಕಷ್ಟು ಕೆಲಸವನ್ನು ಕೊಡದೆ, ಆಹಾರವನ್ನು 3, 4 ನಿಮಿಷಗಳೊಳಗೆ ಗಪಗಪನೆ ನುಂಗಿಬಿಡುವರು.

ನಾವು ಪ್ರತಿಯೊಂದು ತುತ್ತನ್ನೂ ಹಲ್ಲುಗಳಿಂದ ಚನ್ನಾಗಿ ಜಗಿದು ಪುಡಿಮಾಡಿ ನುಂಗಬೇಕೆಂಬ ಉದ್ದೇಶದಿಂದಲೇ ಸರ್ವಜ್ಞನಾದ ದೇವರು, ಹಲ್ಲುಗಳೆಂಬ ಅಮೂಲ್ಯ ರತ್ನಗಳನ್ನು ನಮ್ಮ ಬಾಯೊಳಗೆ ನಿರ್ಮಿಸಿರುವನು. ನಾವು ಆಹಾರಗಳನ್ನು ಹಲ್ಲುಗಳಿಂದ ಚನ್ನಾಗಿ ಜಗಿದು ಪುಡಿಮಾಡದೆ ಹೊಟ್ಟೆಯೊಳಗೆ ಬೇಗ ಬೇಗನೆ ತುರುಕಿಕೊಂಡರೆ, ನಮಗೆ ತಿನ್ನುವದರಲ್ಲಿರುವ ರುಚಿಯೂ ತಪ್ಪಿಹೋಗಿ ನಾವು ತಿಂದ ಆಹಾರವೂ ಸರಿಯಾಗಿ ಕರಗದೆ ನಮಗೆ ಆಗಾಗ ಅಜೀರ್ಣ, ಹೊಟ್ಟೆನೋವು, ಅಗ್ನಿಮಾಂದ್ಯ, ಅನ್ನದ್ವೇಷ, ಅತಿಸಾರ, ರಕ್ತಾತಿಸಾರ ಮತ್ತು ಮಲಬದ್ಧತೆ ಮೊದಲಾದ ರೋಗಗಳು ಉಂಟಾಗಿ ನಮ್ಮ ಪ್ರಾಣನಷ್ಟವಾಗುವದು. ದೀರ್ಘಕಾಲದ ಅಸ್ವಸ್ಥದಿಂದ ಗುಣಹೊಂದುತ್ತಾ ಬರುವ ರೋಗಿಗಳು, ಹಲ್ಲುಗಳಿಂದ ಆಹಾರವನ್ನು ಚನ್ನಾಗಿ ಜಗಿದು ಪುಡಿಮಾಡಿ ತಿಂದರೆ, ಆ ಆಹಾರವು ಸರಿಯಾಗಿ ಜೀರ್ಣವಾಗಿ, ಅವರು ಬಲಶಾಲಿಗಳಾಗಿ, ನಿರೋಗಿಗಳಾಗಿ ಜೀವಿಸಿದ ದೃಷ್ಟಾಂತಗಳು ಹಲವು ಇರುತ್ತವೆ. ಗ್ಲಾಡ್‌ಸ್ಟನ ಮೊದಲಾದವರು ಬಹಳ ಮುದುಕರಾಗಿದ್ದರೂ ಯಾವ ಅಸ್ವಸ್ಥವೂ ಇಲ್ಲದೆ ಆರೋಗ್ಯವಂತರಾಗಿಯೂ ದೃಢಾಂಗರಾಗಿಯೂ ಇರಲು ಏನು ಕಾರಣವೆಂದು ಒಮ್ಮೆ ಅವರನ್ನು ಒಬ್ಬರು ಕೇಳಲು 'ನಾನು ಊಟಮಾಡುವಾಗ ನನ್ನ

ಬಾಯೊಳಗೆ ಇಡುವ ಪ್ರತಿ ಒಂದು ತುತ್ತನ್ನೂ ನನ್ನ ಬಾಯಿಯೊಳಗೆ ಇರುವ ಹಲ್ಲುಗಳಿಂದ 32 ಸಲ ಜಗಿದು ಪುಡಿಪುಡಿ ಮಾಡಿ ಆಹಾರವನ್ನು ನುಂಗುತ್ತಿರುವದರಿಂದ, ನಾನು ಇಷ್ಟು ಹಣ್ಣು ಮುದುಕನಾಗಿದ್ದರೂ ಯಾವ ರೋಗದ ಬಾಧೆ ಇಲ್ಲದೆ, ಕಾಯಪುಷ್ಟನಾಗಿಯೂ, ಆರೋಗ್ಯವಂತನಾಗಿಯೂ, ಜೀವಿಸಿಕೊಂಡಿರುತ್ತೇನೆ' ಎಂದರು. ನಾವು ಚಿರಾಯುಗಳಾಗಿ ರೋಗರುಜೆಗಳಿಲ್ಲದೆ ಬದುಕಿರಬೇಕಾದರೆ ಹಲ್ಲುಗಳಿಗೆ ಹುಳು ಹಿಡಿಯದಂತೆಯೂ, ಹಲ್ಲುಗಳ ದಂತ ಸಾಮಗ್ರಿಯು ಕೆಡದಂತೆಯೂ ನಾವು ಹಲ್ಲುಗಳನ್ನು ಚನ್ನಾಗಿ ತಿಕ್ಕಿ ತೊಳೆಯುವುದು ಅಗತ್ಯ. ಊಟ ಅಥವಾ ಫಲಹಾರವಾದ ಮೇಲೆ ಬಾಯನ್ನು ಮುಕ್ಕಳಿಸಿ ತೊಳೆಯುವದಲ್ಲದೆ, ದಂತ ಸಾಮಗ್ರಿಯು ಹಾಳಾಗದಂತೆ ಗಟ್ಟಿ ಚಿಪ್ಪು ಇರುವ ಒಣ ಅಡಿಕೆ, ಬಾದಾಮಿಬೀಜ, ಇತ್ಯಾದಿಗಳನ್ನು ಹಲ್ಲುಗಳಿಂದ ಒಡೆಯಬಾರದು. ಶಾಲೆಯ ಕೆಲ ಹುಡುಗರು ಚೂರಿಗಳ ಅಲಗುಗಳನ್ನು ತಮ್ಮ ಹಲ್ಲುಗಳಿಂದ ಹೊರಕ್ಕೆ ಎಳೆಯಲು ಪ್ರಯತ್ನಿಸುವರು. ಇದರಿಂದ ಹಲ್ಲುಗಳ ದಂತ ಸಾಮಗ್ರಿಗಳು ಮುರಿದುಹೋಗಿ, ಹಲ್ಲುಗಳು ಹುಳುಹಿಡಿದು, ಹಲ್ಲು ತೂತುಹೋಗುವದರಿಂದ ಅವರು ಸಹಿಸಲಸಾಧ್ಯವಾದ ನೋವನ್ನು ಅನುಭವಿಸುವರು.

ದಂತಸಾಮಗ್ರಿಯ ಸುತ್ತಲೂ ಮುಚ್ಚಿಕೊಂಡಿರುವ ಕಠಿಣವಾದ ಬಿಳೀ ಪದಾರ್ಥಕ್ಕೆ ದಂತದ ಹೊದಿಕೆ ಎಂದು ಹೇಳುವರು. ನಾವು ಸೀ ಪದಾರ್ಥಗಳನ್ನು ಅಧಿಕವಾಗಿ ಉಪಯೋಗಿಸುತ್ತಾ ಬಂದರೆ, ದಂತಕವಚವು ಕೆಟ್ಟುಹೋಗಿ, ದಂತರೋಗಗಳು ಪ್ರಾಪ್ತವಾಗಿ, ಹಲ್ಲುಗಳು ಅಕಾಲದಲ್ಲಿ ಉದುರಿಹೋಗುವವು. ಈ ಹಲ್ಲು ಹೊದಿಕೆಯು ಒಂದುಸಲ ಒಡೆದು ಹೋದರೆ, ಅದು ತಿರುಗಿ ಬೆಳೆಯುವದಿಲ್ಲ. ಆದುದರಿಂದ ಹಲ್ಲುಗಳ ಹೊರಸ್ತರದಲ್ಲಿರುವ ಈ ಹೊದಿಕೆಯು ಕೆಡದಂತೆ ನಾವು ಜಾಗ್ರತೆ ತೆಗೆದುಕೊಳ್ಳಬೇಕು. ನಾವು ಹಲ್ಲುಗಳನ್ನು ಸಿಗಿದು ಪರೀಕ್ಷಿಸಿದರೆ, ಅವುಗಳ ಮಧ್ಯದಲ್ಲಿ ತಿರುಳಿನ ಹಾಗಿರುವ ಒಂದು ಬಗೆಯ ವಸ್ತುವು ನಮಗೆ ಕಾಣುವದು. ಇದೇ ದಂತಪಿಂಡ. ಇದರಲ್ಲಿ ರಕ್ತನಾಳಗಳೂ, ನರಗಳೂ ಕವಲು ಕವಲುಗಳಾಗಿ ವ್ಯಾಪಿಸಿಕೊಂಡಿರುತ್ತವೆ. ಹಲ್ಲುಗಳ ಬೇರುಗಳು ಒಂದು ಬಗೆಯ ಅಂಟು ಪದಾರ್ಥದಿಂದ ದವಡೆಯ ಅಸ್ಥಿಗಳಿಗೆ ಬಿಗಿಯಲ್ಪಟ್ಟಿವೆ. ಈ ವಸ್ತುವಿಗೆ 'ಹಲ್ಲಿನ ಅಂಟು' ಎಂದು ಹೇಳುವರು.

ಮೇಲೆ ಹೇಳಿದ ಎಲ್ಲಾ ಸಂಗತಿಗಳಿಂದ, ಹಲ್ಲುಗಳ ವಿಷಯದಲ್ಲಿ ಹೆಚ್ಚಿನ ಜಾಗ್ರತೆಯನ್ನು ತೆಗೆದುಕೊಳ್ಳಬೇಕೆಂದು ನೀವು ತಿಳಿದುಕೊಳ್ಳಬಹುದು. ಹಲ್ಲುಗಳು ನಮ್ಮ ದೇಹವನ್ನು ಅಲಂಕರಿಸುವ ಅಮೂಲ್ಯವಾದ ಆಭರಣಗಳೆಂದರೆ ಅತ್ಯುಕ್ತಿ ಆಗಲಾರದು. ನಮಗೆ ಹಲ್ಲು ನೋವು ಉಂಟಾದರೆ ಅಥವಾ ನಮ್ಮ ಹಲ್ಲು ಹುಳು ಹಿಡಿದು ಕೊಳೆತುಹೋದರೆ, ನಾವು ಕೂಡಲೇ ದಂತವೈದ್ಯನ ಬಳಿಗೆ ಹೋಗಿ ಅದನ್ನು ಬೇಗನೆ ಗುಣಮಾಡಿಸಿಕೊಳ್ಳುವದು ಅತ್ಯವಶ್ಯವು.

(ಆರೋಗ್ಯ ಚಂದ್ರಿಕೆಯಿಂದ).

FOR SALE.

OVRLAND 'MODEL 4' recently completely ever hauled and all necessary replacements effected and repainted. and not used since. New Battery (never used). Price Rs 2,000.

Apply to.—

4-1 The Hunsur Works, Hunsur

ವರ್ತಮಾನ ಸಂಗ್ರಹ.

ಒಳದೇಶ.

ಮೆ. ಪಂದಿಕುತ್ತಿರ ಚಂಗಪ್ಪನವರನ್ನು ದಕ್ಷಿಣ ಕೊಡಗಿನ ಕೋ ಆಪರೇಟಿವ್ ಇನ್‌ಸ್ಪೆಕ್ಟರಾಗಿ ವರ್ಗಾಯಿಸಿ ಮೆ. ಪಟ್ಟಮಾಡ ಪೊನ್ನಪ್ಪನವರನ್ನು ಉತ್ತರ ಕೊಡಗಿನ ಕೋ ಆಪರೇಟಿವ್ ಇನ್‌ಸ್ಪೆಕ್ಟರಾಗಿ ನೇಮಿಸಿರುವರು.

ತಾರೀಕು 18ರಲ್ಲು ಸಾಯಂಕಾಲ ಮಡಿಕೇರಿ ವೇದಾಂತ ಸಂಘದವರು ಸ್ವಾಮಿ ವಿವೇಕಾನಂದರವರ ಜನ್ಮದಿನದ 63ನೇ ವಾರ್ಷಿಕೋತ್ಸವವನ್ನು ಹೈಸ್ಕೂಲ್ ಹಾಲಿನಲ್ಲಿ ನಡೆಸಿದರು. ಮೆ. ಸಿ. ಯಮ್. ವೆಂಕಪ್ಪಯ್ಯನವರು ಅಧ್ಯಕ್ಷರಾಗಿದ್ದರು. ಮೆ. ಪಂದ್ಯಂಡ ಬೆಳ್ಯಪ್ಪನವರು ಸ್ವಾಮಿ ವಿವೇಕಾನಂದರವರ ಜೀವನ ಚರಿತ್ರೆ ಮತ್ತು ಬೋಧನೆಗಳ ವಿಷಯ ಉಪನ್ಯಾಸ ಮಾಡಿದರು. ನಂತರ ಆ ದಿನವೇ ಮೈಸೂರಿನಿಂದ ಬಂದ ಉತ್ತರ ಹಿಂದುಸ್ಥಾನದ ಸ್ವಾಮಿ ಶಂಕರಾನಂದರವರು ಹಿಂದೂ ಮತದ ವಿಷಯ ಸ್ವಾರಸ್ಯವಾದ ಭಾಷಣ ಮಾಡಿದರು.

ಇದೇ ತಾರೀಕು 15ರಲ್ಲು ಕೈಕೇರಿ ದೇವಸ್ಥಾನದಲ್ಲು ನಡೆದ ಪಬ್ಲಿಕ್ ಮೀಟಿಂಗಿನಲ್ಲು ಮೆ. ಪಾರುವಂಗಡ ಕುಶಾಲಪ್ಪನವರು ಬೆಳಗಾಂ ಕಾಂಗ್ರೆಸ್ಸಿನ ವಿಷಯ ಭಾಷಣ ಮಾಡಿದರು.

ತಾರೀಕು 22ರಿಂದ ಕಾವೇರಿ ಬಸ್ಸ್ ಸರ್ವೀಸಿನವರು ವೀರಾಜಪೇಟೆಯಿಂದ ಮೂರ್ನಾಡಿಗಾಗಿ ಮಡಿಕೇರಿಗೆ ಬಸ್ಸ್ ನಡಿಸಲು ಪ್ರಾರಂಭಿಸಿರುವರು.

ಎಡೆನಾಲ್ಕುನಾಡು ಮಳೆ ಮಹಾದೇವರ ಭಕ್ತಜನ ಸಂಘದ ಜನರಲ್ ಮೀಟಿಂಗು ಬರುವ ಫೆಬ್ರವರಿ ತಾರೀಕು 1ನೇ ಆದಿತ್ಯವಾರ ಸದರಿ ದೇವಸ್ಥಾನದಲ್ಲಿ ನಡೆಯುವುದು.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಫೈನೇನ್ಸ್ ಕಮಿಟಿಯವರು 1925—26ನೇ ವರುಷದ ಬಜೆಟನ್ನು ಚರ್ಚಿಸಲು ತಾರೀಕು 20ರಿಂದ 22ರ ವರೆಗೆ ಮೀಟಿಂಗು ನಡಿಸಿದರು.

ಸ್ವಾಮಿ ಶಂಕರಾನಂದರವರು ತಾರೀಕು 19ರ ಸಾಯಂಕಾಲ ಮಡಿಕೇರಿ ಹೈಸ್ಕೂಲ್ ಹಾಲಿನಲ್ಲಿ 'ಹಿಂದೂ ಮಹಾಸಭೆ'ದ ವಿಷಯ ಭಾಷಣ ಮಾಡಿದರು. ಡಾ. ಕೋದಂಡ ಅಪ್ಪಯ್ಯನವರು ಅಧ್ಯಕ್ಷರಾಗಿದ್ದರು. ಹಾಲ್ ತುಂಬಾ ಜನರು ಸೇರಿದ್ದರು.

ಅಮ್ಮತ್ತಿನಾಡು ಕಣ್ಣಾತುಮೊಟ್ಟು ಗ್ರಾಮದ ಕೊಲ್ಲಿರ ಕಾರ್ಯಪ್ಪನವರ ಕಣದಲ್ಲಿ ತಾ 15ರಲ್ಲು ರಾತ್ರಿ ಆಕಸ್ಮಿಕ ಬೆಂಕಿಬಿದ್ದು 8 ಭತ್ತದ ಮೆದೆಗಳ ಪೈಕಿ 3 ಬೆಂದುಹೋಗಿ ಸುಮಾರು 15 ಗಾಡಿ ಭತ್ತ ನಷ್ಟವಾಗಿದೆಯೆಂದೂ ಕಾರ್ಯಪ್ಪನವರು ಬೆಂಕಿಯನ್ನು ಫಕ್ಕನೆ ಕಂಡು ನೆರೆಯವರ ಸಹಾಯದಿಂದ ಬಾಕಿ ಮೆದೆಗಳು ಬಚಾವು ಮಾಡಲ್ಪಟ್ಟವೆಂದೂ ವರ್ತಮಾನ.

ಸಬ್ ಅಸಿಸ್ಟೆಂಟರಾದ ಮೆ. ಪಿ. ಯಸ್. ರಾಮಸ್ವಾಮಿ ಐಯ್ಯರ್‌ರವರು ಪೊನ್ನಂಪೇಟೆಯಲ್ಲಿ "ರಾಮ್‌ಸೆ" ಎಂಬ ನಾಮಧೇಯದಿಂದ ಒಂದು ಔಷಧಿ ಮತ್ತು ಚಿಕಿತ್ಸಾಲಯವನ್ನು ತೆರೆದಿರುವರು. ಇದರಿಂದ ಆ ಪ್ರಾಂತ್ಯದ ಜನರಿಗೆ ಬಹಳ ಅನುಕೂಲವನ್ನುಂಟು ಮಾಡಿರುವುದರಿಂದ ಇವರ ಪ್ರಯತ್ನವು ಜಯಪ್ರದವಾಗುವಂತೆ ಜನರು ಸಹಾಯ ಮಾಡುವರಾಗಿ ನಂಬಲಾಗಿದೆ.

ಹಿಂದೂ ದೇಶ.

ಅಮೃತಸರದಲ್ಲಿ ತಾರೀಕು 15ರಲ್ಲಿ ಒಂದು ಅಂಗಡಿಗೆ ಬೆಂಕಿ ಬಿದ್ದು ಒಂದು ದೊಡ್ಡ ಕಟ್ಟಡವು ಬೆಂದು ಹೋದದಲ್ಲದೆ ಸುಮಾರು 50 ಸಾವಿರ ರುಪಾಯಿ ಬೆಲೆಯ ಸಾಮಾನುಗಳು ಸುಟ್ಟು ಹೋದವು.

ಇಂಡಿಯನ್ ಪತ್ರಿಕಾಕರ್ತರ ಸಂಘದ ಜನರಲ್ ಮೀಟಿಂಗು ತಾರೀಕು 15ರಲ್ಲಿ ಬೊಂಬಾಯಿಯಲ್ಲಿ ನಡೆದು ಡಾ. ಅನಿಬೆಸೆಂಟರವರನ್ನು ಅಧ್ಯಕ್ಷರಾಗಿಯೂ, "ಬೊಂಬಾಯಿ ಕ್ರಾನಿಕಲ್" ಪತ್ರಿಕೆಯ ಸಂಪಾದಕರಾದ ಮೆ. ಎಸ್. ಎ. ಬ್ರೆಲ್ವಿಯವರನ್ನು ಸೆಕ್ರೆಟರಿಯಾಗಿಯೂ ಚುನಾಯಿಸಿದರು.

ಹಿಂದೂ ಯುವಕರು 16 ವಯಸ್ಸಿನೊಳಗೆ ಮದುವೆ ಆಗಕೂಡದೆಂದು ಒಂದು ಕಾನೂನು ಮಾಡುವ ವಿಷಯ ಲೆಜಿಸ್ಲೇಟಿವ್ ಎಸೆಂಬ್ಲಿಯ ಬರುವ ಮೀಟಿಂಗಿನಲ್ಲಿ ಚರ್ಚಿಸಲ್ಪಡುವದು.

ತಾರೀಕು 14ರಲ್ಲಿ ಲಕ್ನೋದಲ್ಲಿ ಮುಗಿದ ಅಖಿಲ ಭಾರತ ಸಂಗೀತ ಕಾನ್‌ಫರೆನ್ಸಿನಲ್ಲಿ ಸಂಯುಕ್ತ ಪ್ರಾಂತ್ಯದಲ್ಲಿ ಒಂದು ಸಂಗೀತ ಕಾಲೇಜನ್ನು ಸ್ಥಾಪಿಸಬೇಕೆಂದು ತೀರ್ಮಾನವಾಯಿತು. ಇದಕ್ಕೆ ಸುಮಾರು ಮೂರು ಲಕ್ಷ ರುಪಾಯಿ ಬೇಕಾಗುವುದರಲ್ಲಿ ಒಂದು ಲಕ್ಷದ ವರೆಗೆ ಅಲ್ಲಿ ನೆರೆದಿದ್ದ ಜನರೇ ಚಂದ ಕೊಡುವರೆಂದು ವಾಕುಕೊಟ್ಟರು.

ಪಂಡಿತ ಮೋತಿಲಾಲ್ ನೆಹರು ಮತ್ತು ಅಬ್ದುಲ್ ಕಲಂ ಆಜಾದ್‌ರವರು ನಾಗಪುರದ ಹಿಂದೂ ಮುಸಲ್ಮಾನರ ವಿವಾದವನ್ನು ಎರಡು ಕಡೆಗಳಿಗೂ ಒಪ್ಪುವಂತೆ ತೀರ್ಮಾನಿಸಿರುವರು.

ಬಂಗಾಳದ ಕೌನ್ಸಿಲಿನಲ್ಲಿ ನಾಪಾಸಾದ ಆರ್ಡಿನೇನ್ಸನ್ನು ಅಲ್ಲಿಯ ಗವರ್ನರವರು ಸರ್ಟಿಫೈ ಮಾಡಿ ಮಂಜೂರು ಮಾಡಿರುವರು. ವೈಸರಾಯರೂ ಮಂಜೂರಾತಿಗೆ ಒಪ್ಪಿಗೆ ಕೊಡುವರೆಂದು ವರ್ತಮಾನ.

ಪಂಜಾಬು ಲೆಜಿಸ್ಲೇಟಿವ್ ಕೌನ್ಸಿಲಿನ ಪ್ರಥಮ ಚುನಾವಣೆಯ ಅಧ್ಯಕ್ಷ ಪದವಿಗೆ ಒಬ್ಬ ಮಹಮ್ಮದೀಯರೂ ಒಬ್ಬ ಹಿಂದೂ ಉಮೇದ್ವಾರರಾಗಿ ನಿಂತಿದ್ದದರಲ್ಲಿ ಮಹಮ್ಮದೀಯ ಉಮೇದ್ವಾರರಾದ ಖಾನ್ ಬಹದ್ದೂರ್ ಶೇಕ್ ಅಬ್ದುಲ್ ಖಾದಿರವರು ಚುನಾಯಿಸಲ್ಪಟ್ಟಿರುವರು.

ಬೊಂಬಾಯಿಯ ಮುನಿಸಿಪಾಲಿಟಿಯ ಒಬ್ಬ ಮೆಂಬರಾದ ಮಿ. ಎ. ಕೆ. ಬವ್ಲ ಎಂಬವರು ಮಮ್ತಾಜ್ ಬೇಗಮ್ ಎಂಬ ಯುವತಿ ಮತ್ತು ಬವ್ಲರವರ ಸೆಕ್ರೆಟರಿ ಮಿ. ಕೆ. ಇ. ಮಾತ್ಯ್ಸರವರೊಡನೆ ಮೋಟಾರಿನಲ್ಲಿ ಬೊಂಬಾಯಿಯ ಮಲಬಾರ್ ಹಿಲ್ಸ್ ಬಳಿ ತಾರೀಕು 12ನೇ ಸಾಯಂಕಾಲ ಹೋಗುತ್ತಿರುವಾಗ ಬೇರೊಂದು ಮೋಟಾರಿನಲ್ಲಿ ಕೆಲವರು ಅವರನ್ನು ಹಿಂಬಾಲಿಸಿ ಅವರ ಮೋಟಾರನ್ನು ನಿಲ್ಲಿಸಿ ಅವರಿಗೆ ಗುಂಡು ಹೊಡೆದು ಗಾಯಮಾಡಲು ಕ್ಲಬ್ಬಿನಿಂದ ವಾಪಸು ಬರುತ್ತಿದ್ದ ಯೂರೋಪಿಯನ್ ಮಿಲಿಟರಿ ಆಫೀಸರು ಅವರನ್ನು ಕಾಪಾಡಿದರು. ಆದರೆ ಬವ್ಲರವರು ಗುಂಡಿನ ಪೆಟ್ಟಿನಿಂದ ಮರುದಿನ ಮೃತರಾದರು. ಸ್ತ್ರೀಯು ಮತ್ತು ಸೆಕ್ರೆಟರಿಯವರು ಮತ್ತು ಮಿಲಿಟರಿ ಆಫೀಸರು ಆಸ್ಪತ್ರೆಯಲ್ಲಿರುವರು. ಬವ್ಲರವರು ದೊಡ್ಡ ಶ್ರೀಮಂತರು. ಅವರ ಉತ್ಪತ್ತಿ ತಿಂಗಳಿಗೆ 30,000 ರುಪಾಯಿ. ಈ ಯುವತಿಯು ಮೊದಲು ಇಂದೋರ್ ರಾಜರ ಅರಮನೆಯಲ್ಲಿದ್ದವಳು. ಕೇಸಿನ ಸಂಬಂಧ ಕೆಲವರು ಸೆರೆ ಹಿಡಿಯಲ್ಪಟ್ಟಿರುವರು. ಈ ಯುವತಿಯನ್ನು ಒಯ್ಯಲಿಕ್ಕಾಗಿ ಈ ಕೇಸಿನ ಹಿಂದೆ ಯಾರೋ ಬೇರೆಯವರು ಇರಬಹುದೆಂದು ಜನರಲ್ಲಿ ಕುತೂಹಲ ಹುಟ್ಟಿದೆ.

ಭೂಪಾಲದ ಬೇಗಮ್ ರಾಣಿಯೂ ಮತ್ತು ಕಚ್ಛವಾಡದ ಮಂತ್ರಿಯಾದ ಸರ್ ಪ್ರಭಾಶಂಕರ್ ಪಟ್ಟಣಿಯವರೂ ಪ್ರತಿ ದಿನವೂ ಚರ್ಕಾದಲ್ಲಿ ನೂಲುಮಾಡಲು ಪ್ರಾರಂಭಿಸಿರುವರು. ಪಟ್ಟಣಿಯವರು ಮಹಾತ್ಮರಿಂದ ಮೂರು ದಿವಸದಲ್ಲಿ ನೂಲು ಮಾಡಲು ಕಲಿತುಕೊಂಡಿರುವರು. ಇಂಥಾ ಮಹನೀಯರೇ ನೂಲು ಮಾಡುವುದು ಪ್ರಾರಂಭಿಸಿರುವುದು ಬೇರೆಯವರಿಗೆ ಒಳ್ಳೆ ಉದಾಹರಣೆಯಾಗಿದೆ.

ವಿದೇಶ.

ಮಿತ್ರ ಮಂಡಲಿಯವರ ಫಿನೇನ್ಸ್ ಮಂತ್ರಿಗಳ ಪ್ಯಾರಿಸ್ ಮೀಟಿಂಗಿನ ತೀರ್ಮಾನವು ಎಲ್ಲರಿಗೂ ತೃಪ್ತಿಯನ್ನುಂಟುಮಾಡಿದೆ. ಜರ್ಮನಿಯು ಕೊಡುವ ಯುದ್ಧ ನಷ್ಟ ಪರಿಹಾರ ದ್ರವ್ಯದ ಒಂದನೇ ಕಂತಿನಲ್ಲಿ ಬ್ರಿಟನ್ನಿಗೆ 8 ಮಿಲಿಯ ಪೌನುಗಳು ಸಿಕ್ಕುವುದು.

1919ರಲ್ಲಿ ಈಜಿಪ್ಟಿನಲ್ಲಿ ಪ್ರಧಾನ ಮಂತ್ರಿಯಾಗಿಯೂ ಜಾಗ್‌ಲಾಲ್ ಪಾಶಾರವರ ಮಂತ್ರಿ ಮಂಡಲಿಯ ಒಬ್ಬ ಮಂತ್ರಿಯಾಗಿಯೂ ಇದ್ದ ಮಹಮದ್ ಸಯದ್ ಪಾಶಾರವರು ಈಗ ವಾಫ್ಡ್ ಪಾರ್ಟಿಯನ್ನು ಬಿಟ್ಟಿರುವದರಿಂದ ಅಲ್ಲಿಯ ಜನರಲ್ಲಿ ಆಶ್ಚರ್ಯ ಉಂಟಾಗಿದೆ.

ಇಂಗ್ಲೆಂಡಿನ ಯುದ್ಧದ ಹಡಗುಗಳನ್ನು ನಾಶಪಡಿಸಲು ಪ್ರಯತ್ನಿಸಿದ ಒಂದು ಒಳಸಂಚಿಗೆ ಸೇರಿದವರೆಂದು ಐರ್ಲೆಂಡಿನ ಐದು ಗಂಡಸರನ್ನು ಮತ್ತು ಒಬ್ಬ ಹೆಂಗಸನ್ನು ಇಂಗ್ಲೆಂಡಿನಲ್ಲಿ ಸೆರೆಹಿಡಿದಿರುವರು.

ಈಜಿಪ್ಟಿನ ಪಾರ್ಲಿಮೆಂಟಿನ ಚುನಾವಣೆಯನ್ನು ಫೆಬ್ರವರಿ 2ನೇ ತಾರೀಕಿಗೆ ಮುಂದರಿಸಿರುವರು.

ವಿನಂತಿ.

ಈ ಕೆಳಗಿನ ಚಹರೆಯ ನನ್ನ ಬಾಬ್ತು ಒಂದು ಹಸುವು ಕಳೆದ ಡಿಸಂಬರು ತಾರೀಕು 27ರಲ್ಲು ಬೆಂಬೆಳಿಯೂರು ಗ್ರಾಮದ ನನ್ನ ಮನೆಯಿಂದ ಪರಾರಿಯಾಗಿ ಹೋಗಿದೆ. ಈ ಹಸುವು ಯಾರಾದರೂ ಮಹಾನುಭಾವರುಗಳ ದನಗಳ ಜೊತೆಯಲ್ಲು ಬಂದು ಸೇರಿಕೊಂಡಿದ್ದರೆ ದಯವಿಟ್ಟು ನನಗೆ ತಿಳಿಸಬೇಕಾಗಿ ಕೋರುತ್ತೇನೆ. ಹಾಗೆ ಪತ್ತೆ ಮಾಡಿಕೊಟ್ಟವರಿಗೆ 3 ರುಪಾಯಿ ಇನಾಮು ಕೊಡುತ್ತೇನೆ. ಹಸುವಿನ ಚಹರೆ: ಕೆಂದ ವರ್ಣ, (ಕೆಂಪು) ಕೋಡು ಸುಮಾರು ಮುಕ್ಕಾಲು ಅಡಿ ಉದ್ದದ ಬಾಚಗೋಡು (ಹಿಂದಕ್ಕೆ ಬಾಗಿವೆ), ಹಣೆಯಲ್ಲು ಸುಮಾರು ಮೂರು ಅಂಗುಲ ಅಗಲದ ಬಿಳಿ ಬೊಟ್ಟು ಇದೆ.

ಮು. ಬಿ. ಮಾದಪ್ಪ,
ವೆಲ್ಡನ್ ಎಸ್ಟೇಟ್,
ಪೊಳ್ಳಿಬೆಟ್ಟ.

ಬೆಳಗಾಂ ಕಾಂಗ್ರೆಸ್.

(ಮುಂದರಿಸಿದ್ದು.)

ಬೇರೆ ಬೇರೆ ಮತಸ್ಥ ಗುಡಿಸಲುಗಳು—ಸಬ್ಜೆಕ್ಟ್ ಕಮಿಟಿ (ವಿಷಯ ನಿರ್ಧಾರಕ ಸಮಿತಿ) ಯ ಮೀಟಿಂಗ್ ನಡೆಯುವ ಕಾಂಗ್ರೆಸ್ ಡೇರೆಯ ಸಮೀಪವೇ ಬೇರೊಂದು ಡೇರೆಯು ಹಾಕಲ್ಪಟ್ಟಿತ್ತು. ಇದೂ ಚನ್ನಾಗಿ ಶೃಂಗರಿಸಲ್ಪಟ್ಟಿತ್ತು. ಇದರ ಸಮೀಪ ಮಹಾತ್ಮಾ ಗಾಂಧಿಯವರು ಇಳಕೊಳ್ಳಲು "ವಿದ್ಯಾರಣ್ಯಾಶ್ರಮ" ವು ನಿರ್ಮಾಣವಾಗಿತ್ತು. ತನಗೆ ಗುಡಿಸಲು ಬೇಕೆಂತ ಕೇಳಿದಕ್ಕೆ ಬಾದಿಂಪ ಅರಮನೆಯನ್ನೇ ಕೊಟ್ಟರು ಎಂತ ಮಹಾತ್ಮರು ಇದನ್ನು ವರ್ಣಿಸಿದ್ದಾರೆ. ಇವೆಲ್ಲವೂ ಖಾದಿ ಬಟ್ಟೆಯಿಂದ ಮಾಡಲ್ಪಟ್ಟದ್ದವು. ಇದಕ್ಕೆ ಸ್ವಲ್ಪ ದೂರದಲ್ಲಿ ಸಂಗೀತ ಮಂಡಲಿಯ ಚಪ್ಪರವು ಬಿದುರಿನ ತಟ್ಟಿಗಳಿಂದ ಹಾಕಲ್ಪಟ್ಟಿತ್ತು. ಇದರ ಎದುರಿನ ಮೈದಾನದಲ್ಲಿ ದೊಡ್ಡದಾದ ಸ್ವರಾಜ್ಯ ಬಾವುಟ ಒಂದು ಎತ್ತರವಾಗಿ ಹಾರಿಸಲ್ಪಟ್ಟಿತ್ತು. ದೊಡ್ಡ ಡೇರೆಯ ಉತ್ತರಕ್ಕೆ ಖಿಲಾಫತ್ ಕ್ಯಾಂಪು ಇತ್ತು. ಅಲ್ಲದೆ ಅಲ್ಲಿ ನೆರೆದ ಜನರ ವಾಸಕ್ಕಾಗಿ ಸುಮಾರು 85 ಗುಡಿಸಲುಗಳು ಬಿದುರಿನ ತಟ್ಟಿಯಿಂದ ಕಟ್ಟಲ್ಪಟ್ಟಿದ್ದವು. ಪ್ರತಿ ಗುಡಿಸಲು ಸುಮಾರು 100 ಅಡಿ ಉದ್ದವಾಗಿಯೂ 35 ಅಡಿ ಅಗಲವಾಗಿಯೂ, ಸಣ್ಣ ರದ ಕೋಣೆಗಳುಳ್ಳದಾಗಿಯೂ, ಪ್ರತಿಯೊಂದು ಕೋಣೆಯಲ್ಲಿ 6 ಜನರು ಉಳಕೊಳ್ಳಲಿಕ್ಕೆ ಬಿದಿರು ಮತ್ತು ಗೋಣಿ ಚಟ್ಟಿನಿಂದ ಮಾಡಿದ ಮಂಚಗಳುಳ್ಳದಾಗಿಯೂ ಇತ್ತು. ಗುಡಿಸಲಿನ ಬಾಗಿಲಿಗೂ ಗೋಣಿ

ತಟ್ಟಿನ ಪರದೆ ಇತ್ತು. ಈ ಗುಡಿಸಲಿಗೆ ಪ್ರತಿಯೊಬ್ಬನು 4 ರುಪಾಯಿ ಬಾಡಿಗೆ ಕೊಡಬೇಕಾಗಿತ್ತು. ಈ ಗುಡಿಸಲುಗಳು ಪ್ರಾಂತ್ಯವಾರ ವಿಂಗಡಿಸಿ ಗುರುತು ಮಾಡಲ್ಪಟ್ಟಿದ್ದವು. ಸ್ವಾಗತ ಕಮಿಟಿಗೆ ಸೇರಿದ ಕರ್ನಾಟಕ ಪ್ರಾಂತ್ಯದವರಿಗೆ ಮಾತ್ರ ಜಿಲ್ಲೆವಾರು ವಿಂಗಡಿಸಲ್ಪಟ್ಟಿತ್ತು. ಇದರಲ್ಲಿ ಕೊಡಗಿಗೂ ಒಂದು ಸಾಲು ಗುಡಿಸಲುಗಳು ಗುರುತು ಮಾಡಿ ಇಡಲ್ಪಟ್ಟಿದ್ದವು. ಕೊಠಡಿ ಒಂದಕ್ಕೆ ಎರಡು ರುಪಾಯಿ ಡಿಪಾಜಿಟ್ ಕೊಟ್ಟಲ್ಲಿ ಎಣ್ಣೆ ಸಹಿತ ಒಂದು ಲಾಂದ್ರವು ಕೊಡಲ್ಪಡುತಿತ್ತು. ಕೊಠಡಿ ಬಿಟ್ಟು ಹೋಗುವಾಗ್ಯೆ ದೀಪ ವಾಪಸು ಕೊಟ್ಟಲ್ಲಿ ಹಣ ವಾಪಸು ಸಿಕ್ಕುತ್ತಿತ್ತು. ಸಂಸಾರ ಸಮೇತ ಇರುವವರಿಗೆ ಪ್ರತ್ಯೇಕ ಗುಡಿಸಲುಗಳಿದ್ದವು. ಅವಕ್ಕೆ ಗುಡಿಸಲು ಒಂದರ 50 ರುಪಾಯಿ ಬಾಡಿಗೆ.

ಮಲ ಮೂತ್ರ ವಿಸರ್ಜನ ಏರ್ಪಾಡು.—ಮೂತ್ರ ವಿಸರ್ಜನಕ್ಕೆ ವಾಸದ ಗುಡಿಸಲುಗಳ ಹಿಂದುಗಡೆಯಲ್ಲೇ ಗುಂಡಿ ತೆಗೆದು ತಟ್ಟಿಗಳಿಂದ ಮರೆ ಮಾಡಿದ್ದರು. ಸ್ವಲ್ಪ ದೂರದಲ್ಲಿ ಮಲ ವಿಸರ್ಜನಕ್ಕೆ ತಕ್ಕದಾದ ಕಕ್ಕಸ್ ಏರ್ಪಾಡು ಸರಿಯಾಗಿ ಮಾಡಲ್ಪಟ್ಟಿತ್ತು. ಗದ್ದೆಗಳಲ್ಲಿ ಸಾಲು ಸಾಲಾಗಿ ಎರಡೂವರೆ ಅಡಿ ಆಳ ಬಿಲಂದಿಗಳನ್ನು ತೋಡಿ ಬದಿಗೆ ತಟ್ಟಿಗಳಿಂದ ಅವುಗಳನ್ನು ಸಣ್ಣ ಸಣ್ಣದಾಗಿ ಪ್ರತ್ಯೇಕಿಸಿ, ಪ್ರತಿಯೊಂದು ಕೊಠಡಿಯಲ್ಲಿಯೂ ಕಡಪ ಕಲ್ಲುಗಳನ್ನು ಹಾಸಿಯೂ ಬಾಗಿಲಿಗೆ ಗೋಣಿ ತಟ್ಟಿನ ಪರದೆ ಹಾಕಿಯೂ ಅನುಕೂಲಪಡಿಸಿದ್ದರು. ಸಮೀಪದಲ್ಲೆ ದೊಡ್ಡ ಪಾತ್ರೆಗಳಲ್ಲಿ ನೀರಿಟ್ಟು ಚಿಕ್ಕ ಟಿನ್ನಿನ ಪಾತ್ರೆಗಳನ್ನು ಸಾಕಷ್ಟು ಇಡಿಸಿದ್ದರು. ಹೆಂಗಸರಿಗೆ ಪ್ರತ್ಯೇಕ ಏರ್ಪಾಡಿತ್ತು.

ನೀರು ಸರಬರಾಯಿ.—ನೀರಿನ ಸರಬರಾಯಿಯ ಏರ್ಪಾಡು ಬಹಳ ಚನ್ನಾಗಿ ಮಾಡಲ್ಪಟ್ಟಿತ್ತು. ಈ ಬಗ್ಗೆ ಸುಮಾರು ಇಪ್ಪತ್ತು ಸಾವಿರ ರುಪಾಯಿ ಖರ್ಚು ಮುಟ್ಟಿತಂತೆ. ಆಳವಾದ ಭಾವಿಗಳನ್ನು ತೋಡಿ ಅವುಗಳಿಂದ ಇಂಜಿನ್‌ಗಳ ಮೂಲಕ ನೀರೆತ್ತಿ ಎತ್ತರವಾದ ಸ್ಥಳದಲ್ಲಿ ಏರ್ಪಡಿಸಿದ್ದ ಕಬ್ಬಿಣದ ಕೆರೆಗಳಲ್ಲಿ ತುಂಬಿಟ್ಟು, ಅಲ್ಲಿಂದ ನಲ್ಲಿಗಳ ಮೂಲಕ ಬೇಕಾದ ಸ್ಥಳಗಳಿಗೆ ಒದಗಿಸಿ ಕೊಟ್ಟಿದ್ದರು. ಅದಿಯಲ್ಲಿ ನೀರು ಹರಿಯಲು ಅನುಕೂಲಿಸುವಂತೆ ಸ್ವಲ್ಪ ಓರೆಯಾಗಿ ಕಡಪ ಕಲ್ಲುಗಳನ್ನು ಹಾಸಿ, ಸಾಲು ಸಾಲಾಗಿ ಒಂದೆ ಎತ್ತರದಲ್ಲಿ ಹಲವು ನಲ್ಲಿಗಳನ್ನು ಜೋಡಿಸಿ ಅವುಗಳಿಂದ ಅಲ್ಲಲ್ಲಿ ಟ್ಯಾಪುಗಳಿಟ್ಟು ನೂರಾರು ಜನರು ಏಕ ಕಾಲದಲ್ಲಿ ತಣ್ಣೀರು ಸ್ನಾನ ಮಾಡಲು ಏರ್ಪಾಡಿತ್ತು. ಸಮೀಪದಲ್ಲೇ ನೀರನ್ನು ಕಾಯಿಸುತ್ತಿದ್ದರು. ಇದರಿಂದ ಬಿಸಿ ನೀರು ಸ್ನಾನಕ್ಕೂ ಅನುಕೂಲವಿತ್ತು. ಈ ಸ್ಥಳದಲ್ಲೇ ಬಟ್ಟೆಯನ್ನು ಸಹ ಒಗೆದುಕೊಳ್ಳುತ್ತಿದ್ದರು. ಸ್ವಯಂ ಸೇವಕರು ಎಚ್ಚರದಲ್ಲಿದ್ದರೂ ಕೂಡ ಸ್ನಾನ ಮಾಡುವ ಸ್ಥಳದಲ್ಲಿ ಸ್ವಲ್ಪ ಹಣದ ಕಳ್ಳತನವು ನಡೆಯಿತೆಂದು ವರ್ತಮಾನವಾಯಿತು.

ಊಟದ ಸಂಸ್ಥೆ.—ಊಟಕ್ಕೆ ಹಲವಾರು ಛಪ್ಪರಗಳು ಹಾಕಲ್ಪಟ್ಟಿದ್ದವು. ತಮಿಳುನಾಡು, ಆಂಧ್ರ ಮತ್ತು ಬಂಗಾಳ ಮುಂತಾದ ಊಟದ ಭಾಗಗಳು ವಿಂಗಡಿಸಲ್ಪಟ್ಟಿದ್ದವು. ದಿನಸಕ್ಕೆ 1—8—0ರ ಚಾರ್ಜು ಕೊಟ್ಟು ಟಿಕೇಟು ತೆಗೆದುಕೊಂಡರೆ ಬೇಕಾದಷ್ಟು ಊಟವು ಸಿಕ್ಕುತ್ತಿತ್ತು. ಚಪಾತಿ ಸಕ್ಕರೆ, ತುಪ್ಪ, ಅನ್ನ ವಿವಿಧ ಮೇಲೋಗರ, ಚಟ್ನಿ, ಉಪ್ಪಿನಕಾಯಿ, ಹಾಲು ಮೊಸರುಗಳಿಂದ ಕೂಡಿದ ಅಲ್ಲಿಯ ಊಟಕ್ಕಿಂತ ಹೆಚ್ಚು ಯಾರೂ ಆಶಿಸುವಂತಿರಲಿಲ್ಲ. ಇದಲ್ಲದೆ ಊಟದ ಮತ್ತು ಫಲಾಹಾರದ ಹೋಟೇಲುಗಳು ಅನೇಕ ಇದ್ದವು. ಇವುಗಳಲ್ಲಿ ಮುಖ್ಯವಾಗಿ ಕಾಫಿ, ತಿಂಡಿ ಸಮಯಗಳಲ್ಲಿ ಜನರ ಮುನ್ನುಕಿನಿಂದ ತಿಂಡಿ ತೆಗೆದುಕೊಂಡವರೆಲ್ಲರೂ ಹಣ ಕೊಟ್ಟರೊ, ಹಣ ಕೊಟ್ಟವರೆಲ್ಲರಿಗೂ ತಿಂಡಿ ಸಿಕ್ಕಿತೊ, ಎಂಬ ಸಂಶಯವು ಬರುತ್ತಿತ್ತು. ಅಲ್ಲದೆ ಹೋಟೇಲು ಮಾಲೀಕರು ಯೋಚಿಸಿದಂತೆ ಪದಾರ್ಥಗಳ ಕ್ರಯವು ಏರುತ್ತಿತ್ತು.

ಪಟ್ಟಣದ ವಿವರ.—ಕಾಂಗ್ರೆಸ್ ಕ್ಯಾಂಪು ಒಂದು ಪಟ್ಟಣವೆ ಇತ್ತು. ಇದರ ರಸ್ತೆಗಳು ವಿಶಾಲವಾಗಿ ಇದ್ದವಲ್ಲದೆ ಪ್ರತಿಯೊಂದು ಬೀದಿಗೂ ಕರ್ನಾಟಕದ ಪ್ರಾಚೀನ ಮತ್ತು ಆಧುನಿಕ ಭರತಖಂಡ ಪ್ರಮುಖರ ಹೆಸರುಗಳಿಡಲ್ಪಟ್ಟಿದ್ದವು. ವಿದ್ಯಾರಣ್ಯ ವೀಧಿ, ಬಸವೇಶ್ವರ ಬೀದಿ, ಶಿವಾಜಿ ರಸ್ತೆ, ಗಾಂಧಿ ಬೀದಿ, ಬೌಕತಾಲಿ ರಸ್ತೆ ಮುಂತಾದವು. ಇವುಗಳಲ್ಲಿ ಕೆಲವು ದೇಶದ ದೊಡ್ಡ ಪಟ್ಟಣಗಳಲ್ಲಿ ಮಾಡುವಂತೆ ಪ್ರತಿ ನಿತ್ಯವೂ ರಸ್ತೆಗಳಿಗೆ ನೀರು ಹಾಕಿಸುತ್ತಿದ್ದರು. ಅವರೂ ಅಲ್ಲಿಯ ಕೆಂಪು ಧೂಳಿನ ಕಾಟವನ್ನು ತಡೆಯಲು ಕಷ್ಟವಾಗುತ್ತಿತ್ತು. ತೊಟ್ಟ ಉಡುಪುಗಳೆಲ್ಲಾ ಕೆಂಪು ರಾಗು ಹಚ್ಚಿದಂತೆ ಆಗುತ್ತಿದ್ದವಲ್ಲದೆ, ಊಟಕ್ಕೆ ಬಡಿಸಿದ ಅನ್ನವೂ ಧೂಳಿನಮಯವಾಗುತ್ತಿತ್ತು. ರಾತ್ರೆ ಮಲಗಿದಲ್ಲಿ ಮಧ್ಯ ರಾತ್ರೆಯವರೆಗೆ ಧೂಳಿನಿಂದ ಉಸಿರು ಕಟ್ಟಿದಂತಾಗುತ್ತಿತ್ತು. ರಾತ್ರಿಯ ಬೆಳಕಿನ ವಿಷಯವನ್ನು ವಿಜಯನಗರವು 'ವಿದ್ಯುಚ್ಛಕ್ತಿಯ ಅನುಕೂಲವಿರುವ ಪಟ್ಟಣಗಳಿಗಿಂತ ಹಿಂದೆ ಬಿದ್ದಿರಲಿಲ್ಲ. ಹೆಚ್ಚು ಬೆಳಕು ಕೊಡುವ ಗ್ಯಾಸ್ ದೀಪಗಳನ್ನು ಅಲ್ಲಲ್ಲಿ ನೆಟ್ಟಿದ್ದರು. ಮುಖ್ಯಾಗಳಿಗೆ ಗೋಪುರದಲ್ಲಿ ಅಲಂಕಾರಕ್ಕಾಗಿ ವಿದ್ಯುಚ್ಛಕ್ತಿಯ ಹಲವು ಬಣ್ಣದ ಸಾವಿರಾರು ದೀಪಗಳನ್ನು ಹಚ್ಚಿದ್ದರು. ರಾತ್ರಿ ವೇಳೆಯಲ್ಲಿ ಇಲ್ಲಿಂದ ಯಾವ ಕಡೆ ನೋಡಿದರೂ ಏನೊಂದೂ ಕಷ್ಟವಿಲ್ಲದೆ ನಗರದ ನೋಟವು ಚೆಲುವಾಗಿ ಬರುತ್ತಿದ್ದುದರಿಂದ ನಿಶೆ ನಾಚಿಸಿತೆಂದು ತಿಳಿಯುತ್ತದೆ.

(ಮುಂದುವರಿಯುವದು.)

ಪತ್ರವ್ಯವಹಾರಗಳು.

ಬಾತ್ಮಿದಾರರು ಬರೆವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ. ಸಂ.

ಬೇಂಗುನಾಡು ತಕ್ಕಾಮೆ.

ಅಯ್ಯಾ,

ಬೇಂಗುನಾಡು ಸಾವಿರ ಕುಳದ ನಾಡು, ಇದಕ್ಕೆ ಒಂದೇ ನಾಡು ತಕ್ಕರೆಂಬುವದಕ್ಕೆ ಸಂದೇಹವೇನಿದೆ. ಮೂಲಟ್ಟಿಯವರು ಪಾಳ್ಯದಾರರು, ಕರ್ಣಬಾಣ, ಚೆಟ್ಟಿಬಾಣ, ಮೂಲಟ್ಟೆ ಕೊಟ್ಟ ಅರಮೇರಿ ನಾಯಕ, ಅಚ್ಚು ನಾಯಕ, ಕೆಂಗಳ ನಾಯಕ ಮೊದಲಾದವರು ಕುಂಡ ಪಾಳ್ಯದಾರರು, ಆವರು ಪಾಳ್ಯದಾರರು ಮತ್ತು ತಕ್ಕರು ಎನ್ನಿಸಿಕೊಂಡು ಕೊಡಗು ದೇಶಕ್ಕೆ ವೀರರಾಜ ಮತ್ತು ಲಿಂಗರಾಜ ಒಡೆಯರವರ ಸಂತತಿಯವರು ರಾಜರಾಗುವದಕ್ಕೆ ಮೊದಲು ಕೊಡಗು ದೇಶವನ್ನು ಆಳುತ್ತಿದ್ದರು. ಆ ಪಾಳ್ಯದಾರರ ಮಣ್ಣಿಗೆ ಒಂದವರೆಲ್ಲರೂ ಕೊಡಗು ದೇಶದಲ್ಲಿ ತಕ್ಕರಾಗಿದ್ದಾರೆ. ಅಚ್ಚು ನಾಯಕನ ಮಣ್ಣಿನಲ್ಲಿ ಅಬ್ಬಿಕುಟ್ಟಿರ ಮನೆಯವರು ಇದ್ದಾರೆ. ಅವರು ತಕ್ಕರು, ಅರಮೇರಿ ನಾಯಕನ ಮಣ್ಣಿನಲ್ಲಿ ಪಾಲೇಕಂಡ ಮನೆಯವರು ಇದ್ದಾರೆ. ಅವರು ನಾಡು ತಕ್ಕರೆ, ಅದು ಅಲ್ಲದೆ ಮಾತಂಡ ಮನೆಯವರು, ಪರದಂಡ ಮನೆಯವರು, ಕಳ್ಳಿಚಂಡ, ಕುಡುವಂಡ, ಪಾಂಡಿ ಈ ಮನೆಯವರು ಇರುವದೆಲ್ಲಾ ಪಾಳ್ಯದಾರರ ಮಣ್ಣಿನಲ್ಲಿ. ಆದಕಾರಣ ಮೂಲಟ್ಟಿ ಕೊಟ್ಟನ ಮಣ್ಣಿಗೆ ಪಟ್ಟಮಾಡ ಮನೆಯವರು ಒಂದದ್ದರಿಂದ ಅವರು ತಕ್ಕರಾದರು.

ಕೊಡಗು ದೇಶದಲ್ಲಿ ವಾಡಿಕೆ ಏನೆಂದರೆ, ಸಾವಿರ ಕುಳ ಇರುವ ನಾಡಿಗೆ ಒಂದು ತಕ್ಕರು. ಕಡಿಯತ್ತುನಾಡು ಮೂರು ಸಾವಿರ ಕುಳ ಮೂರು ತಕ್ಕರು, ನಾಲ್ಕುನಾಡು ನಾಲ್ಕು ಸಾವಿರ ಕುಳ ನಾಲ್ಕು ತಕ್ಕರು. ಈ ರೀತಿ ಪದ್ಧತಿಯಾಗಿರುವಾಗ್ಯ ಬೇಂಗುನಾಡಿಗೆ ಒಂದು ತಕ್ಕರಲ್ಲದೆ ಹೆಚ್ಚಿಗೆ ತಕ್ಕರು ಹ್ಯಾಗೆ ಬರುವರು?

ಕ್ಷೇತ್ರಪಾಲ ದೇವರನ್ನು ಹಾಡುವಾಗ್ಯೆ ಕಲ್ಲುಮಾಡನ ಅಯ್ಯಣ್ಣನವರನ್ನು ಹಾಡುವದು ನಿಜ. ಏಕೆಂದರೆ ಕ್ಷೇತ್ರಪಾಲ ದೇವರನ್ನು ತರುವಾಗ್ಗೆ ಕಪ್ಪೋಳೆ ಕಡೆನಿಂದ ಕಲ್ಲುಮಾಡನ ಐಯ್ಯಣ್ಣನವರಿಗೆ ದೇವ್ವಾದನ ಒಂದದ್ದರಿಂದ ಅವರು ಮೊದಕೋರನೆಂದು ಕರೆಯಲ್ಪಟ್ಟು ಕ್ಷೇತ್ರಪಾಲ ದೇವರ 1ನೆ ಕಾವುಕಾರರಾಗಿ ನೇಮಿಸಲ್ಪಟ್ಟು ಈಗಲೂ ಕಲ್ಲುಮಾಡನ ಮನೆಯವರು 'ಮೊದಕೋರ' ನೆನ್ನಿಸಿಕೊಂಡು ಚಂಗುತಿರಿ ಆಯುಧವೆಂಬ ನಿಶ್ಶಿ ಕಣಕಲೆಯನ್ನು ಹಿಡಿಯುತ್ತಾರೆ. ಕಲ್ಲುಮಾಡನ ಮನೆಯವರು ತಕ್ಕರಾಗಲಿ ಚಂಗುತಿರಿ ಆಯುಧ ಕಲ್ಲುಮಾಡನ ಮನೆಯವರು ಯಾಕೆ ಹಿಡಿಯಬೇಕು. ಆದಕಾರಣ ಕಲ್ಲುಮಾಡನ ಮನೆಯವರು ಕ್ಷೇತ್ರಪಾಲ ದೇವರ 1ನೆ ಕಾವುಕಾರರ ಹೊರತು ನಾಡು ತಕ್ಕರಲ್ಲ.

ಪೂವ್ವಯ್ಯನವರೇ, ತಕ್ಕ ಎಂಬುವದರ ಅರ್ಥವೇನು, ಕಾವುಕಾರರು ಎಂಬುದರ ಅರ್ಥವೇನು, ಕಾಪಾರು ಎಂಬುದರ ಅರ್ಥವೇನು, ತಮಗೆ ಗೊ... ...ರೆ ವಿವರಿಸುತ್ತೇನೆ ಕೇಳಿರಿ. ತಕ್ಕರು ಅಂದರೆ ನಾಡು ... ...ರವರನ್ನು ತಪ್ಪು ಪುಣ್ಯ ಮೆಯಲ್ಲಿ ನಡುವ ... ... ಪಗ್ಗದೆಯಲ್ಲಿ ತಪ್ಪು ಬಾರದಂತೆ ಕೆಲಸ ಮಾಡಿಸುವವರು. ಕಾವುಕಾರರು ಅಂದರೆ ದೇವರ ಕೆಲಸ ಮಾಡಿಕೊಂಡು ದೇವರನ್ನು ಕಾಯುವವರು. ಕಾಪಾರು ಅಂದರೆ ಅರಮನೆ ಕೆಲಸ ಮಾಡಿಕೊಂಡು ಅರಮನೆಯನ್ನು ಕಾಯುವವರು. ಹೀಗಿರುವಾಗ್ಯೆ ಕಲ್ಲುಮಾಡನ ಮನೆಯವರು 1ನೆ ಕಾವುಕಾರರೆಂಬುದನ್ನು ಒಪ್ಪಿಕೊಳ್ಳುತ್ತೀರೋ ಇನ್ಕಾರ ಮಾಡುತ್ತೀರೋ? ಹಾಗಾದರೆ ತಕ್ಕಾಮೆಯೂ ಕಾವುಕಾರಿಕೆ ಕೆಲಸವೂ ಒಂದೇ ಕುಳಕ್ಕೆ ಇರುವದು ಕೊಡಗು ದೇಶದಲ್ಲಿ ಎಲ್ಲಿಯಾದರೂ ತೋರಿಸಿಕೊಡುವಿರಾ? ಆದಕಾರಣ ಕಲ್ಲುಮಾಡನ ಮನೆಯವರು ಖಂಡಿತವಾಗಿಯೂ ನಾಡು ತಕ್ಕರಲ್ಲ. ತಕ್ಕರಾದರೆ ತಕ್ಕರು ತಮ್ಮನ್ನು ತಾವೇ ಕಾವುಕಾರರಾಗಿ ಮಾಡಿಕೊಳ್ಳುತ್ತಾರೋ?

ಮೆ| ಪೂವ್ವಯ್ಯನವರು ನಮ್ಮ ಮೇಲೆ ಕೋರ್ಟಿಗೆ ಹೋಗುವದು ನಮಗೆ ಬಹಳ ಸಂತೋಷವಿದೆ. ಕೋರ್ಟಿಗೆ ಹೋದರೆ ಕಲ್ಲುಮಾಡನ ಮನೆಯವರು ತಕ್ಕರಲ್ಲ ಎಂಬುದು ರುಜುವಾತು ಮಾಡುವದಕ್ಕೆ ನಾವು ಸಿದ್ಧವಾಗಿದ್ದೇವೆ.

ಪಿ. ಕುಂಞಪ್ಪ.

ದ್ರಾವಿಡ ಬ್ರಾಹ್ಮಣರ 5ನೇ ಪರಿಷತ್ತು.

ಅಯ್ಯಾ,

ದಕ್ಷಿಣ ಕನ್ನಡ ಜಿಲ್ಲೆಯ ನಂದಾವರ ಶ್ರೀ ಶಂಕರ ನಾರಾಯಣ ದೇವಸ್ಥಾನದ ಸನ್ನಿಧಿಯಲ್ಲಿ ಡಿಸಂಬರ್ ತಾರೀಕು 27, 28ರಲ್ಲಿ ಒದಗಿದ ದ್ರಾವಿಡ ಬ್ರಾಹ್ಮಣರ 5ನೇ ಸಮಾಗಮದ ಅಧಿವೇಶನವು ಪ್ರೇಕ್ಷಕರಿಗೆ ಅತ್ಯಾನಂದವನ್ನುಂಟುಮಾಡುತ್ತಿತ್ತು. ಸಭಾಸದರನ್ನು ತಕ್ಕ ರೀತಿಯಲ್ಲಿ ಸತ್ಕರಿಸಲಿಕ್ಕೆ ನಾತಕನಷ್ಟು ಸ್ವಾಗತ ಮಂಡಲಿಯ ಅಧ್ಯಕ್ಷರೂ, ಧರ್ಮ ಕರ್ಮಗಳಲ್ಲಿಯೂ, ವೈಧಿಕ ಲೌಕಿಕ ಜ್ಞಾನಗಳಲ್ಲಿಯೂ, ಅಧಿಮಾನವುಳ್ಳ ವಿದ್ಯಾ ಸಂಪನ್ನರಾದ, ಶಾಂತ ಸ್ವಭಾವದ, ಸಭಾಧ್ಯಕ್ಷರು (ಕೊಡಗಿನ ಡಿ ಡೈರೆಕ್ಟರಾದ ಮ. ಕೆ. ಯಸ್. ಸುಬ್ಬರಾಯರು) ಯೋಗ್ಯರೇ ಲಭಿಸಿರುವರು. ತದೋಪಾದಿಯಲ್ಲಿಯೇ ಧರ್ಮಜ್ಞರೂ, ವಾಗ್ಮಿಗಳೂ, ಕವಿಗಳೂ, ವಿದ್ಯಾಸಂಪನ್ನರೂ, ದನವಂತರೂ, ಘನವಂತರೂ ಶ್ರೇಷ್ಠ ಪದವಿಯನ್ನು ಹೊಂದಿದ್ದ ಗರುಗಳೂ, ಸಂಸ್ಕೃತ, ಕನ್ನಡ, ಇಂಗ್ಲೀಷು ಶಾಲೆಗಳು, ನೆರೆದದ್ದು ತುಂಬಾ ಸಂತೋಷಕರವಿದೆ, ಇದ್ದ ಎರಡು ಶಾಲೆಯವರು 2 ದಿನಗಳಲ್ಲಿಯೂ ನಟಿಸಿದ ನಾಟಕ ಚಾತುರ್ಯವೂ, ಶಾಲೆಯ ವಿದ್ಯಾರ್ಥಿಗಳ ಸ್ವಯಂ ಸೇವಕತನದ ಕೆಲಸವೂ, ವಿದ್ಯಾರ್ಜನೆಯ ಫಲವೆನ್ನು, ಪರೋಪಕಾರ, ಕಾಯಕಷ್ಟ, ಇವುಗಳ ನಿದ್ದುದ್ಧಿಯೆನ್ನು ನಿದರ್ಶನವಾಗಿ ತೋರುತ್ತಿತ್ತು. ಸಭಾ ಕಾರ್ಯಕ್ರಮಗಳು ನಿಯಮಕ್ಕನುಸಾರವಾಗಿ ಸಾಂಗವಾಗಿ ನಡಿದುದಲ್ಲದೆ, ಸಮಾಜದ ಏಳಿಗೆಗೆ ಆವಶ್ಯ ಕೆಲಸವೂ, ಹೊಸ ನಿರ್ಣಯಗಳೂ ಮಂಜೂರಾದವು. ಮತ್ತು ಹಿಂದಿನ ನಿರ್ಣಯಗಳಲ್ಲಿ ಜಾರಿಗೆ ಬಾರದಿರುವುದನ್ನು ಆದಷ್ಟು ಬೇಗನೆ ಮುಂದರಿಸಬೇಕೆಂದು ಸ್ಥಳಿಯ ಮಂಡಲಿಗೆ ಒತ್ತಿ ಸೂಚಿಸಿತು. ಹೊಸ ನಿರ್ಣಯಗಳ ಪೈಕಿ ಶುಭ ಕಾರ್ಯಗಳಲ್ಲಿ ನಿಧಿಯನ್ನೇರ್ಪಡಿಸುವ ಮತ್ತು ಧರ್ಮಜ್ಞಾನದ ಪುಸ್ತಕಾಲಯವೇರ್ಪಡಿಸುವ 2 ಠರಾವುಗಳು ಮುಖ್ಯವಾಗಿತ್ತು. ಪುಸ್ತಕಾಲಯಕ್ಕೆ ಸಭೆಯಲ್ಲೇ ಕೆಲವು ಹಣವು ಸಂಗ್ರಹವಾಗಿ ಪುಸ್ತಕ ದಾನದ ವಾಗ್ದಾನವು ಮಾಡಲ್ಪಟ್ಟಿತು. ಹಳೆಯ ನಿರ್ಣಯಗಳ ಕ್ರಮದಂತೆ 'ಬಡ ವಿದ್ಯಾರ್ಥಿಗಳ ಫಂಡಿಗೆ' ಹಲವರಿಂದ ಹಣ ಸಂಗ್ರಹಿಸಲ್ಪಟ್ಟು ವಿದ್ಯಾಯಿನಿ ಶಾಲೆಯಲ್ಲಿ ತಯಾರಿಸಲ್ಪಟ್ಟ ಕೆಲವು ವಸ್ತ್ರ ಮುಂತಾದ ಪದಾರ್ಥಗಳ ವಿಲಾಯಿನಿಂದುಂಟಾದ ಲಾಭದ ನಿಧಿಯನ್ನು ಫಂಡಿಗೆ ಸೇರಿಸಲ್ಪಟ್ಟಿತು. ಕರ್ನಾಟಕ ಬ್ಯಾಂಕಿಗೆ ಹಲವು ಶೇರುಗಳು ಸೇರಿತು. ಸಮಸ್ತ ಪ್ರದರ್ಶನಗಳು ಸಮಾಜದವರಿಂದಲೇ ನಡಿಸಲ್ಪಟ್ಟು, ಸರ್ವರೂ ಸಮಾನವಾಗಿ ಭಾವಿಸುವಂತೆ ಭಾಗಿದ ಈ ಸಭೆಯವರ ಸ್ನಾನ, ಪಾನ, ಭೋಜನ, ಶಯನಾದಿಗಳ ಕ್ರಮವೂ, ಕ್ಷೇಮಕ್ಕೆ ತಕ್ಕಂತೆಯೇ ಯೋಗ್ಯ ರೀತಿಯಲ್ಲಿ ನಡಿಸಲ್ಪಟ್ಟಿತು. ಸಭಾ ಅಂತ್ಯದಲ್ಲಿ ನಾಟಕ ಮಂಡಲಿಗೂ, ಗಾಯಕರಿಗೂ, ಸ್ವಯಂ ಸೇವಕ ತರುಣರಿಗೂ, ಸಂಭಾಷಣೆಗಳು ಆಗಿ ಆಗತ ಸ್ವಾಗತ ಮಂಡಲಿಯ ವಂದನಾರ್ಪಣೆಗಳು ನಡೆದು ಮಂಗಳ ಹಾಡಿದೊಂದಿಗೆ ಸಮಾಗಮವು ಮುಗಿತಾಯವಾಯಿತು.

ಹಾ! ನಮ್ಮ ಪೂರ್ವ ಪುಣ್ಯವಲ್ಲವೆ! ಏನು! ಎರಡು ವರೆ ದಿವಸದ ಗಡಿಕೆಯ ಹಾದಿ ಮಾತ್ರ! ಬರುವ ವರುಷ ಅಂದರೆ 1925ನೇ ಡಿಸಂಬರ್ ತಿಂಗಳಿನ ಕ್ರಿಸ್‌ಮಸ್ ರಜಾ ದಿನಗಳಲ್ಲಿ ದಕ್ಷಿಣಕನ್ನಡ ಜಿಲ್ಲೆ, ಸುಬ್ರಮಣ್ಯ ಕ್ಷೇತ್ರದಲ್ಲಿ ದ್ರಾವಿಡ ಬ್ರಾಹ್ಮಣರ 6ನೇ ಪರಿಷತ್ತು ನಡೆಯುವದು. ಯಾವತ್ತೂ ಇಂಥಾ ಮಹಾಸಭೆಗಳನ್ನು ನೋಡಲು ಅವಕಾಶವಿಲ್ಲದೆ ಇರಲು, ಈಗ ತಾನೇ ಇಂಥಾದ್ದಕ್ಕೆ ಅವಕಾಶವಿದೆಯೆಂದರೆ ತುಂಬಾ ಅತ್ಯಾಶ್ಚರ್ಯವಾಗುವದು. ಆದಕಾರಣ, ಕೊಡಗಿನ ಬ್ರಾಹ್ಮಣರಿಗೆ ಯಾವ ವೆಚ್ಚವೂ ಇಲ್ಲದೆ ಸಾವಕಾಶವಾಗಿ ಕಾಲು ನಡಿಗೆಯಿಂದಲೇ ಹೋಗಬಹುದು. ಸುಬ್ರಮಣ್ಯ ದೇವಸ್ಥಾನದಲ್ಲಿ ಆಗಬಹುದಾದಕಾರಣ ಕ್ಷೇತ್ರಕ್ಕೆ ಯಾತ್ರೆ ಮಾಡಿದ ಹಾಗೂ, ಸ್ವಾಗತ ಮಂಡಲಿಯವರಿಗೆ ಉತ್ಸಾಹ ಮಾಡಿದ ಹಾಗೂ, ಬ್ರಾಹ್ಮಣರ ವೃದ್ಧಿಗೂ ಪ್ರೋತ್ಸಾಹಿಸಿದ ಹಾಗೆ ಸಂಶಯವಿಲ್ಲದೆ ಆಗುತ್ತದೆ. ಎಲ್ಲಿಯೋ ಸಂದಿಯೊಳಗಿರುವ ಮಗನನ್ನು ಮರಿಯದೆ, ಜ್ಞಾಪಕಕ್ಕೆ ತಂದುಕೊಂಡು ಹಾಗೆಯೇ ಕಾರ್ಯಗಳನ್ನು ಜರಗಿಸಿದನ್ನು ನೋಡಿದರೆ ತುಂಬಾ ಸಂತೋಷವಾಗುವುದು.

ಆದುದರಿಂದ ಪ್ರತಿ ಒಬ್ಬರೂ ಸಾಧ್ಯವಾದ ಮಟ್ಟಿಗೆ ಮುಂದಿನ ಪರಿಷತ್ತಿನಲ್ಲಿ ನೆರೆಯಬೇಕೆಂದೇ ನನ್ನ ಆಂಗಲಾಚಿ ಬೇಡುವಿಕೆ.

ಪಿ. ಯಸ್. ನಾರಾಯಣ.

ಅಭಿಮತ

ಅಯ್ಯಾ ದೇಶವಾತ್ಸಲ್ಯ ಶೀಲರೇ,

ಕೊಡಗು ರಾಜರು ತಮ್ಮ ದೇಶಕ್ಕೆ ಸರ್ವದಾ ಸೌಲಭ್ಯ ಉಂಟಾಗಲೆಂದು ಶಿವಾರ್ಪಿತಕ್ಕೋಸ್ಕರ ಮಹಾತ್ಮರಿಗೆ ಕೊಟ್ಟಂಥ ಜಹಗೀರು ಮಠಗಳ ಪೈಕಿ ಅಬ್ಬಿಮಠವು ಈಗತಾನೇ ಗತಿಹಿದ ಚಿಕ್ಕ ಮಲ್ಲಿಕಾರ್ಜುನ ಸ್ವಾಮಿಯವರು ತಮ್ಮ ಅವಸಾನ ಕಾಲದಲ್ಲಿ ನಾಗಭೂಷಣ ಸ್ವಾಮಿಯವರೆಂಬ ವ್ಯೆಸರವರಿಗೆ ವಿಲ್ ಬರೆದಿರುತ್ತಾರಾಗಿ ಕೇಳುತ್ತೇನೆ. ಈ ರೀತಿ ಏನೊಂದೂ ತಿಳಿಯದ ಬಾಲಕರಿಗೆ ವಿಲ್ ಬರೆದು ಪರಾಧೀನಪಡಿಸಿರುವದು ರಾಜರ ಮನೋಗತದಂತೆ ಶಿವಾರ್ಪಿತವಾಗೋ ಹ್ಯಾಗಾಗುತ್ತೆ. ಮಹಾತ್ಮರ ಗದ್ದಿಗೆ ಪೂಜೆ ಹ್ಯಾಗೆ ನಡೆಯುತ್ತೆ, ದೇಶಕ್ಕೆ ಸೌಲಭ್ಯವು ತಾನೇ ಹ್ಯಾಗೆ ಲಭಿಸುತ್ತೆ. ಸಂಧರ್ಭಾನುಸಾರ ವಿಲ್ ಮಾಡಬೇಕಾದರೂ ರಾಜ್ಯ ದೇಶದ ಶಿಷ್ಯ ಮಂಡಲಿಗಳನ್ನೆಲ್ಲಾ ಸೇರಿಸಿಕೊಂಡು ತಕ್ಕಂತವರಿಗೇನೇ ಅಕ್ರಮ ಕೊಟ್ಟು ವಿಲ್ ಬರೆದಿದ್ದರೆ ರಾಜರ ಮನೋಗತದಂತೆ ಶಿವಾರ್ಪಿತ ನಡೆಸಲು ಮತ್ತು ಆ ಸ್ಥಳದ ಸತ್ಕಾರ್ಯಗಳನ್ನೆಲ್ಲಾ ನಡೆಸಲು ಯಾವ ಅಭ್ಯಂತರವೂ ಇರುತ್ತಿರಲಿಲ್ಲ. ಉತ್ತರ ದೇಶದ ಜಂಗಮರು ಅಲ್ಲಿ ಸೇರಿಕೊಂಡು ಏನೊಂದೂ ವ್ಯವಹಾರಗಳನ್ನು ನಡೆಸಲಿಕ್ಕೂ ಅವಕಾಶವಾಗುತ್ತಿರಲಿಲ್ಲ. ಹಾಲಿ ಅಬ್ಬಿಮಠಕ್ಕೆ ಧಾಳಿಯನ್ನಿಟ್ಟಿರುವ ಚಿತ್ರದುರ್ಗದವರು ಕೊಡಗಿನಲ್ಲಿ

ಮೂಲೆಗೆ ಬಿದ್ದಿರುವ ಮುರುಘಾಶಾಖದ ಎಷ್ಟು ಮಠಗಳನ್ನು ಉನ್ನತಸ್ಥಿತಿಗೆ ತಂದಿರುತ್ತಾರೆ. ಹೀಗೆ ಮುರುಘಾಶಾಖದ ಮಠಗಳು ಇನ್ನೂ ಕೊಡಗಿನಲ್ಲಿ ಇಲ್ಲವೋ? ಅವುಗಳೆಲ್ಲಾ ಯಾವ ರೀತಿಯಲ್ಲಿ ಇವೆ? ಬಂದ ಮನೆಗೆ ಹಿರಿದದ್ದೇ ಲಾಭ ವೆಂಬ ಗಾದೆಗೆ ಅನುಸಾರವಾಗಿ ಉತ್ತರ ದೇಶದವರು ಉತ್ಪತ್ತಿ ಇರುವ ಮಠವು ಎಲ್ಲಿ ಅನಾನುಕೂಲಕ್ಕೆ ಬರುತ್ತಿವೆಯೋ ಅಲ್ಲಿಗೆ ತಮ್ಮ ಕಡೆಯ ಏಜಂಟರು, ಮೇನೇಜರು, ವಾರ್ತಾಪತ್ರಿಗಾರರುಗಳನ್ನೆಲ್ಲಾ ಸೇರಿಸಿ ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವ ಬಗ್ಗೆ ಬ್ಯಾರಿಷ್ಟರುಗಳನ್ನು ಇಟ್ಟು ಕೋರ್ಟಿನಲ್ಲಿ ವ್ಯವಹಾರ ನಡೆಸಿ ಇಲ್ಲಿಯವರನ್ನೆಲ್ಲಾ ದೂರ ಮಾಡುವದು ಒಂದು ತರಹದ ಸೌಲಭ್ಯವು ಈ ದೇಶಕ್ಕೆ ಲಭಿಸಿದಂತಲ್ಲವೇ? ಇದನ್ನೆಲ್ಲಾ ನಮ್ಮನ್ನಾಳುವ ಸರಕಾರದ ಪ್ರಭುಗಳು ನಮ್ಮ ಪೂರ್ವರಾಜರುಗಳ ಮನೋಗತವು ಸಾರ್ಥಕವಾಗುವಂತೆಯೂ ಹೆಚ್ಚು ಉತ್ಪತ್ತಿಯುಳ್ಳ ಮಠಗಳ ಆದಾಯವನ್ನು ಪರದೇಶದವರು ಹೊಂದದ ಹಾಗೂ ಇಂಥಾ ಮಠಗಳನ್ನು ಪರಾಧೀನ ಪಡಿಸದ ಹಾಗೂ ಹಕ್ಕು ಸ್ಥಾಪಿಸಿಕೊಡಬೇಕಾಗಿ ಬೇಡುವ.

ಮಠಗಳ ಹಿತಚಿಂತಕ.

ಕಾಂಗ್ರೆಸ್ ಮತ್ತು ಖಿಲಾಫತ್ ಸಭೆಗಳಿಗೆ ದಯ ಮಾಡಿಸಿದ್ದವರಲ್ಲಿ ವಿನಂತಿ.

ಮಹನೀಯರೇ,

ತಾವೆಲ್ಲರೂ 1924ನೇ ಇಸವಿ ಡಿಶಂಬರಿನಲ್ಲಿ ಆದ ಕಾಂಗ್ರೆಸ್ ಮತ್ತು ಖಿಲಾಫತ್ ಸಭೆಗಳಿಗೆ ದಯಮಾಡಿಸಿ ಅಲ್ಲಿ ನೆರೆದಂಥಾ ಮಹಾತ್ಮರನ್ನು ನೋಡಿ ಸಭೆಗಳಲ್ಲಿ ತೀರ್ಮಾನವಾದ ಎಲ್ಲಾ ವಿಷಯಗಳನ್ನು ತಾವೆಲ್ಲರೂ ಚೆನ್ನಾಗಿ ಮಂದಟ್ಟವಾಗಿ, ದೃಢವಾಗಿ, ಖಂಡನೆಯಾಗಿ ತಿಳಿದಿರುವಿರಷ್ಟೆ. ತಾವೆಲ್ಲರೂ ಸುಮಾರು ಹೋಗಬರುವ ಅಂದಾಜು ಖರ್ಚು ಮೂರು ನಾಲ್ಕು ಸಾವಿರ ರುಪಾಯಿಗಳನ್ನು ಖರ್ಚು ಮಾಡಿಕೊಂಡು ಅಲ್ಲಿಯ ಜನ ಸಮೂಹವನ್ನೂ, ಅಲ್ಲಿ ನೆರೆದಂಥ ಇಂಡಿಯಾ ದೇಶದ ಮಹಾತ್ಮರನ್ನೂ, ಅಲ್ಲಿ ಆದಂಥ ಭಾಷಣಗಳನ್ನೂ, ಅಲ್ಲಿಯ ತೀರ್ಮಾನಗಳನ್ನೂ, ಅಲ್ಲಿ ಮಾಡಿದಂಥ ಖಾದಿ ಪ್ರದರ್ಶನ, ಚಪ್ಪರ, ಗ್ಯಾಸ್‌ಲೈಟ್, ನೀರುನಲ್ಲಿ, ಊಟ ಉಪಚಾರ, ರೈಲ್ವೆ, ಪೋಸ್ಟಾಫೀಸ್, ವಾಸಸ್ಥಳ ಗಂಡಸು ವಾಲಂಟಿಯರ್ಸ್, ಹೆಂಗಸು ವಾಲಂಟಿಯರ್ಸ್ ಮತ್ತು ಬೇರೆ ಬೇರೆ ನಾನಾ ತರದ ಏರ್ಪಾಡುಗಳ ಮಹತ್ವವನ್ನೂ, ಗಾಂಧೀಯವರನ್ನೂ ಚಮತ್ಕಾರ ಚಳವಳಿಯನ್ನೂ, ಧೈರ್ಯವನ್ನೂ, ದೇಶ ಪ್ರೀತಿಯನ್ನೂ, ಜನ ಪ್ರೀತಿಯನ್ನೂ ಮತ್ತು ರೀತಿ ರೀತಿ ಆಶ್ಚರ್ಯಕರವಾದ ಮನೋಹರ ವಿಶೇಷ ಸಂಗತಿಗಳನ್ನೂ ತಮ್ಮ ದೇಶದವರಿಂದ ವಿವರಿಸಲಿಕ್ಕೆ ತಾವು ಸ್ವರ್ಗ ಸಮಾನವಾದ ಸಭೆಗಳಿಗೆ ದಯಮಾಡಿಸಿ ಬಂದಿದ್ದೀರಿ ಎಂದು ತಮ್ಮನ್ನು ತಾವೇ ಬಹು ಮೂಸಿಕೊಳ್ಳಲಿಕ್ಕೆ ತೆರಳಿ ತಮ್ಮ ಕೊಡಗು ದೇಶಕ್ಕೆ ದಯಮಾಡಿಸಿರುತ್ತೀರೋ ಹ್ಯಾಗೆ ಎಂಬದನ್ನು ತಿಳಿಯಲು ನಾನು ಮತ್ತು ತಮ್ಮ ದೇಶಸ್ಥರು ಬಹು ಆತುರದಲ್ಲಿಯೂ ಕುತೂಹಲದಲ್ಲಿಯೂ ಇದ್ದೇವೆ.

ತಾವು ಇಂಥಾ ಮಹಾಸಭೆಗಳಿಗೆ ದಯಮಾಡಿಸಿ ತಮ್ಮ ದೇಶಕ್ಕೆ ಬಂದು ತಾವು ಒಪ್ಪಿಕೊಂಡು ಬಂದಂಥ ಕಾರ್ಯಗಳಲ್ಲಿ ಏನೊಂದು ಮಾಡದೆ ಒಂದು ಚಾನ್ಸ್ ತಮಾಷೆಗೆ ಅಲ್ಲಿವರೇ ದೇಶ ಸಂಚಾರಕ್ಕೆ ಹೋಗಿದ್ದೆವೆ ಎಂಬದಾಗಿ ಭಾವಿಸಿಕೊಂಡು ಸುಮ್ಮನೆ ಕೂತುಕೊಳ್ಳುವದು ಮಹಾ ನಾಚಿಕೆ ಕಾರ್ಯವಾಗಿದೆ, ಮತ್ತು ಕೊಡಗು ಎಂಬ ಪುಣ್ಯ ದೇಶದ ತಾವು ಸತ್ಪುತ್ರರಾಗಿ ಅನ್ನಿಸಿಕೊಳ್ಳುವಂಥಾದ್ದು ತಮ್ಮ ದೇಶಕ್ಕೇ ಅವಮಾನ ಮಾಡಿದ ಹಾಗೆ ಆಗುತ್ತೆ. ಈ ಚಿಕ್ಕ ಕೊಡಗಿನಿಂದ 35 ಮಹಾ ಪುರುಷರು ದಯಮಾಡಿಸಿದ್ದರು ಎಂದು ತಿಳಿದು ನನಗೆ ತುಂಬಾ ಸಂತೋಷವಾಯಿತು. ನನ್ನಂಥ ಪಾಪಿಯು ಹೋರಗೆ ಇದ್ದದ್ದು ಭಾರಿ ವ್ಯಸನದ ಸಂಗತಿ, ಮಾಡತಕ್ಕದ್ದೇನು ದೇವರ ಚಿತ್ತ, ಆತನ ಆಜ್ಞೆ ಇರಲಿಲ್ಲ, ನಾನು ಹೋಗಲು ಅನುವಾಗಲಿಲ್ಲ. ಆದರೆ ನನ್ನ ದೇಶ ಪ್ರೀತಿಯು ನನ್ನ ಪ್ರತಿ ನರಂದ್ರಕ್ಕೂ ರಕ್ತದಲ್ಲಿಯೂ ತುಂಬಿರುವದರಿಂದ ನನ್ನ ಸಂತೋಷವು ಮಿತಿಮೀರಿದೆ. ಈ ಕಾಂಗ್ರೆಸಿಗೆ ದಯಮಾಡಿಸಿದ ನನ್ನ ಸಹೋದರರು ಏನು ಮಾಡುತ್ತಾರೆಂದು ತಿಳಿದು ಇವರನ್ನು ಹುರಿದುಂಬಿಸುವದು ನನ್ನ ಮತ್ತು ದೇಶಸ್ಥರ ಕರ್ತವ್ಯವಾಗಿದೆ. ಈವರ ಸನ್ನಿಧಾನದಲ್ಲಿ ನನ್ನ ಅಲ್ಪ ಸಲಹೆ ಏನೆಂದರೆ ಎಲ್ಲದಕ್ಕಿಂತ ಮೊದಲು ನೇಶನಲ್ ವಿದ್ಯೆ, ಅಂದರೆ ತಮ್ಮ ಮತವನ್ನು, ತಮ್ಮ ದೇಶವನ್ನು, ತಮ್ಮ ಜನರನ್ನು, ತಮ್ಮ ಭಾಷೆಯನ್ನು, ತಮ್ಮ ಉಡುಪು ತೊಡುಪು, ಊಟ ಉಪಚಾರ ಮತ್ತು ಭಯಭಕ್ತಿ ಮಾನ ಮರ್ಯಾದೆ ವಗೈರೆ ಪ್ರೀತಿಯಿಂದ ತುಂಬುವಂಥ ವಿದ್ಯೆ ಅತ್ಯಂತ ಅವಶ್ಯವಾಗಿದೆ. ಈಗ ಸಿಕ್ಕುವಂಥ ವಿದ್ಯೆಯ ಪ್ರತಿಫಲ ಗೊತ್ತೇ ಇದೆ. ವಿವರಿಸುವ ಅವಶ್ಯವೇನೂ ಇಲ್ಲ. ಇದರ ವಿವರಣೆ ಆಗಿಯೇ ಆಗಿದೆ, ಮತವೆಂಬದು ಬಿಟ್ಟೇ ಹೋಯಿತು, ಮಾನ ಮರ್ಯಾದೆ ಭಯಭಕ್ತಿ ಎಂಬದು ಇಲ್ಲವೇ ಇಲ್ಲ. ಈ ಲೋಕ ಪರಿಪಾಲನೆ ಮಾಡುವಂಥ ದೇವರು ಇದ್ದಾನೋ ಎಂಬದು ಸಂಶಯವಾಗಿ ಹೋಗಿದೆ, ಗುರುಹಿರಿಯರು ಯಾರೋ ತಿಳಿಯದು. ತಮ್ಮ ದೇಶ ತಮ್ಮ ಜನರು ಯಾವಾಗಲೂ ಹಾಸ್ಯವೇ, ತುಚ್ಛೀಕಾರವೇ, ತಮ್ಮ ಭಾಷೆ ಮಾತಾಡುವದೇ ಇಲ್ಲ, ಉಡುಪು ತೊಡುಪು, ಊಟ ಉಪಚಾರ, ಹ್ಯಾಟ್, ಬೂಟ್ಸ್, ಟೇಬಲ್, ವೈನ್, ವ್ಹಿಸ್ಕಿ, ಸಿಗರೇಟ್, ಕಾಲುಚು, ಅರ್ಧ ಮೀಸೆ ಬೋಳಿಸುವದು, ಬಿಳಿಯರಿಂದ ಸಲಾಂ ಮಾಡುವದು, ಈಗಿನ ಸಿವಿಲಿಜೇಶನ್ ಹೀಗಿರುವಾಗ್ಯೆ ದೇಶದ ಅಭಿವೃದ್ಧಿಗೆ ಇಂಥಾವಿದ್ಯೆ ಸಹಾಯವಾಗಬಹುದೋ? ಈಗಿನವಿದ್ಯೆಯಮುಖ್ಯ ಸಾರಾಂಶವೇನೆಂದರೆ, ಸರಕಾರಿ ನೌಕರಿ ಮಾಡುವದು, ಲೋಕದಎಲ್ಲಾ ತರದ ಸುಖಗಳನ್ನು ಅನುಭವಿಸುವದು, ಮತ್ತು ಜಂಟಲ್‌ಮ್ಯಾನ್ ಅನ್ನಿಸಿಕೊಳ್ಳುವದು ಇಷ್ಟೇ ವಿನಹ ಮತ್ತೇನಲ್ಲ. ಆದ್ದರಿಂದ ನಮ್ಮ ಹಿರಿಯರಂತೆ ದೇಶೀ ವಿದ್ಯೆ ನಮ್ಮ ಜನಾಂಗದವರಿಗೆ ಸಿಕ್ಕದಿದ್ದರೆ ದೇಶವು ಎಂದೂ ಅಭಿವೃದ್ಧಿಯಾಗುವದಿಲ್ಲ. ತಮ್ಮಂಥ ಕೆಲವು ಸತ್ಪುರುಷರು ದೇಶ ಕಾರ್ಯಕ್ಕೆ ಇಳಿದರೂ ಕೂಡ ಅದು ಅರ್ಧ ಮನಸ್ಸಿನಿಂದ ವಿನಹ ಪೂರ್ತಿ ಮನಸ್ಸಿನಿಂದ ಅಲ್ಲ. ಈ ವಿದ್ಯೆ ಗಂಟಿಗೆ ಒಂದೊಂದು ತರಹದ ಮನಸ್ಸು ಬದಲಾಯಿಸುತ್ತಾ ಇರುತ್ತೆ. ಒಂದು ವೇಳೆ ಸ್ವಲ್ಪ ಧೈರ್ಯದಿಂದ ಮಾಡಿದರೂ ಕೂಡ ಮುಂದಿನವರು ಇದನ್ನು ನಿಲ್ಲಿಸಿಬಿಡುವದು ಖಂಡಿತ. ಆದ್ದರಿಂದ ದೇಶೀ ವಿದ್ಯೆ ಮೂಲಕ ಇಂಥಾ ಜನರನ್ನು ತರಬೇತು ಮಾಡದ ವಿನಹ ದೇಶ ಚಳವಳಿ ಅಲ್ಲವೆ ದೇಶಾಭಿವೃದ್ಧಿ ಕಾರ್ಯವು ಸಾಧ್ಯವಾಗುವದಿಲ್ಲ, ಇದಕ್ಕೋಸ್ಕರ ಈಗಲಾದರೂ ಅಮ್ಮತ್ತಿಯಲ್ಲಿರುವ ಕೊಡಗು ನೇಶನಲ್ ಸ್ಕೂಲನ್ನು ಭದ್ರಪಡಿಸಿ ನ್ಯಾಯವಾದ ವಿದ್ಯೆ ಕೊಡುವಂಥ ಏರ್ಪಾಡು ಮಾಡಬೇಕಾದದ್ದು ಈಗ್ಗೆ ನೇಶನಲ್ ಕಾಂಗ್ರೆಸಿಗೆ ಹೋದಂಥ ಮಹಾಪುರುಷರ ಮೊದಲನೆ ಕರ್ತವ್ಯವಾಗಿದೆ. ಇದನ್ನು ಹಿಂದೆ ಹಾಕಿ ಬೇರೆ ಕಾರ್ಯ ಮಾಡಿದರೆ ಸಫಲವಾಗಲಿಕ್ಕಿಲ್ಲ. ಇದು ರೈಲ್ವೆ ಇಂಜಿನ್ ಆಗಿದೆ. ಖಾದಿ, ಚರಕ, ಸಿಪಾ ಪದಾರ್ಥಗಳು ವಾಗಿನ್ಸ್‌ಗಳಾಗಿವೆ. ಯೂನಿಟಿ ಯೂನಿ ಒಗ್ಗಟ್ಟು ರೈಲ್ವೆ ರಸ್ತೆಯಾಗಿದೆ. ಇಂಜಿನಿಗೆ ವಾಗಿನ್‌ಗಳು ಜೋತೆ ತಾಗಿಸಿ ರೈಲ್ವೆ ರಸ್ತೆಯ ಮೇಲೆ ಒಳ್ಳೇ ಡ್ರೈವರ್ಸ್ ನಡಿಸಿದ್ದಾದರೆ ಖಂಡಿತವಾಗಿ ತಮ್ಮ ಉದ್ದೇಶಕ್ಕೆ ತಲಪುವದು. ಇಲ್ಲವಾದರೆ ಇದೇ ಮೀಟಿಂಗ್ಸ್, ಇದೇ ಚರ್ಚೆ, ಇದೇ ಕಾಲಹರಣೆ ಎಂಬ ವಿಷಯವು ಖಂಡನೆ ಎಂಬದು ಕಾಂಗ್ರೆಸ್ ಮತ್ತು ಖಿಲಾಫತ್ ಸಭೆಗಳಿಗೆ ದಯಮಾಡಿಸಿದ ನನ್ನ ದೇಶೀಯ ಸಹೋದರರಲ್ಲಿ ಬಹು ವಿನಯದಿಂದ ಅರಿಕೆಮಾಡಿಕೊಳ್ಳುತ್ತೇನೆ. ದೇವರು ತಮಗೆ ನ್ಯಾಯವಾದ ಬುದ್ಧಿ ದಯಪಾಲಿಸಲಿ.

ಅಬ್ದುಲ್ ಗಫೂರ್‌ಖಾನ್.

ಮಹದೇವಪೇಟೆಯ ದುಃಸ್ಥಿತಿ

ಮಹನೀಯರೆ,

ಪೇಟೆಯು ಹಬ್ಬಿಯ ಅಳತೆಯಲ್ಲಿ ಸಣ್ಣದಾಗಿದ್ದರೂ ಯೋಗ್ಯತೆ ಮತ್ತು ಮರ್ಯಾದೆಗಳಲ್ಲಿ ಹಿಂದಕ್ಕೆ ದೊಡ್ಡದಾಗಿತ್ತು. ಈಗ ಎಲ್ಲಾ ರೀತಿಯಲ್ಲಿಯೂ ಸಂಕುಚಿತವಾಗಿದೆ. ಎಳು ಮತ್ತು ಬೀಳುಸೃಷ್ಟಿಯ ಅಧಿಕಾರಿಯಾದ ಮಾಯೆಯಸ್ವಭಾವ. ಇವಳ ವೃತ್ತಿಯಿಂದ ಹಿಂದೂದೇಶವೇ ಬದಲಾಗಿರುವಾಗ, ಎಲ್ಲಿಯೋ ಒಂದು ಕೊಂಪೆಯಲ್ಲಿರುವ ಈ ಬೀದಿಗೆ ಮಾಯೆಯ ಸೋಂಕು ತಗಲದೆ ಇದ್ದೀತೇ? ನಾವೆಲ್ಲರೂ ನಮ್ಮಸುತ್ತಿರುವ ಚರಾಚರ ವಸ್ತುಗಳೆಲ್ಲಾ ಶಾಶ್ವತವಾಗಿರುತ್ತವೆಂದು ನಂಬಿರುವಂತೆ ನಮ್ಮ ಪೂರ್ವಿಕರೂ ಸಹ ನಂಬಿದ್ದರು. ಆದರೆ ವಿಚಾರ ಶೀಲನಾದ ಜ್ಞಾನಿಗೆ ಪ್ರಪಂಚವೆಲ್ಲವೂ ಉಪಾಧಿಯಿಂದ ಕೂಡಿದೆ. ಈ ಜಗತ್ತು ಅಂತವಂತವಾದುದರಿಂದ ನಿಮಿಷ ನಿಮಿಷಕ್ಕೂ ವ್ಯತ್ಯಾಸವನ್ನು ಹೊಂದುತ್ತಲಿದೆಯೆಂದು ಆತನಿಗೆ ತಿಳಿದಿದೆ.

ಅಣುರೂಪವಾದ ನಮ್ಮ ಪೇಟೆಯ ಬದಲಾವಣೆಯನ್ನು ಮೇಲಿನ ಕಾರಣದಿಂದ ಹೊಂದಿದ್ದರಲ್ಲಿ ಆಶ್ಚರ್ಯವೇನಿದೆ? ಈ ಪೇಟೆಯು ಸುಮಾರು 50ವರುಷಗಳಿಗೆ ಹಿಂದಕ್ಕೆ ಅತಿ ವೃದ್ಧಿಸ್ಥಿತಿಯಲ್ಲಿತ್ತು ಆಗ್ಯೆ ಮಡಿಕೇರಿಯ ಸುತ್ತಮುತ್ತಲೂ ಕಾಫಿ ತೋಟಗಳುಇದ್ದುವು ಬುದವಾರದಿನಲ್ಲಿ ದೊಡ್ಡ ಸಂತೆನಡೆಯುತ್ತಿತ್ತು. ಮಡಿಕೇರಿಯ ಈಗಿನ ಸಂತೆಯು ಹಿಂದಿನ ಸಂತೆಯಷ್ಟು ದೊಡ್ಡದಲ್ಲ. ಈಗ ಇವೆರಡಕ್ಕೆ ಆನೆ ಇರುವೆಗಳ ಹೋಲಿಕೆಯಾಗಿ ಹೋಗಿದೆ. ಎಲೆ ಪೇಟೆಯಲ್ಲಿ ಸಂತೆದಿನಗಳಲ್ಲಿ ಬೀಳುತ್ತಿದ್ದ ಹುರುಳಿ, ರಾಗಿ ಇತ್ಯಾದಿ ಧಾನ್ಯಗಳ ರಾಶಿಗಳು ಮನುಷ್ಯನ ಎತ್ತರಕ್ಕೆ ಇರುತ್ತಿದ್ದವು. ಈಗ ಪೇಟೆಯು ರಿಕ್ತತೆಯ ಮುಸುಕಿನಿಂದ ಪರವೇಷ್ಟಿತವಾಗಿ, ಕಾಂತಿ ವಿಹೀನವಾಗಿ ಹೋಗಿದೆ. ಇದೆಲ್ಲಕ್ಕೂ ಮಾಯೆಯೆ ಕಾರಣವಲ್ಲವೇ? ಇವಳ ಶಕ್ತಿಯಿಂದ ಎಷ್ಟು ಮಂದಿ ವಿದ್ಯಾವಂತರೂ, ಅವಿದ್ಯಾವಂತರೂ, ಅಬಾಲವೃದ್ಧರೂ, ಧನಾಢ್ಯರೂ, ಧನ ವಿಹೀನರೂ, ಬಲಾಢ್ಯರೂ, ಬಲಹೀನರೂ, ಎಂತೆಂಥವರು ಇವಳ ವಶಗಿಗೆ ಬೀಳಲಿಲ್ಲ? ಹಾಗಾದರೆ ಶಾಶ್ವತತ್ವವು ದೃಶ್ಯವಸ್ತುಗಳಿಗೆಲ್ಲಿಂದ ಬಂದೀತು? ಲೋಕವು ಅಶಾಶ್ವತವು, ಶರೀರಗಳು ನಶಿಸಿ ಹೋಗುವದನ್ನು ನಾವು ನೋಡುತ್ತಿದ್ದರೂ, ಧರ್ಮರಾಯನು ಯಕ್ಷನಿಗೆ ಹೇಳಿದ ಉತ್ತರವು ನಮ್ಮ ಸ್ಮರಣೆಗೆ ಒದಗುವದಿಲ್ಲ. ಇರಲಿ.

ಪೇಟೆಯಲ್ಲಿ ಬಸವನಗುಡಿ, ಶಂಕರ ದೇವಾಲಯ ಮತ್ತು ಕನ್ನಿಕಾ ಪರಮೇಶ್ವರಿ ದೇವಸ್ಥಾನಗಳು ಇವೆ. ಹಿಂದಕ್ಕೆ ಈ ದೇವಾಲಯಗಳನ್ನಾಶ್ರಯಿಸಿದ ಜನಗಳಾದ ಲಿಂಗಾಯತರು, ದೇವಾಂಗದವರು ಮತ್ತು ವೈಶ್ಯರು ಅಭಿವೃದ್ಧಿ ಸ್ಥಿತಿಯಲ್ಲಿದ್ದರೆಂದು ಸುಲಭವಾಗಿ ಊಹಿಸಬಹುದು. ಈ ಜನಗಳಲ್ಲಿ ಅನೇಕರಿಗೆ ಕಾಫಿ ತೋಟಗಳಿದ್ದವು. ಸಾಮಾನ್ಯವಾಗಿ ಎಲ್ಲರೂ ವ್ಯಾಪಾರ ಮಾಡುತ್ತಿದ್ದರು. ಐಶ್ವರ್ಯವಂತರಾದುದರಿಂದ ದೇವ ಕಾರ್ಯಗಳನ್ನು ವಿಜೃಂಭಣೆಯಿಂದ ನಡೆಸುತ್ತಿದ್ದರು. ಲಿಂಗಾಯತರ 'ಸಂಕಿಕೋಳು,' ದೇವಾಂಗದವರ 'ಶಿವದರ್ಶನೆ' ಮತ್ತು ವೈಶ್ಯರ 'ಗಂಗಾಪೂಜೆ' ಈ ಉತ್ಸವಗಳಿಗಾಗಿ ಬಹು ದ್ರವ್ಯ ಖರ್ಚಾಗುತ್ತಿತ್ತು. ಈಗ ಅವುಗಳೆಲ್ಲ ಮಾಯವಾಗಿವೆ. ಇಪ್ಪತ್ತು ವರುಷಗಳಿಗೆ ಹಿಂದಿದ್ದ ಸ್ಥಿತಿಯು ಈಗ ಇಲ್ಲ. ಆಗಿನ ಆಮೋದಪ್ರಮೋದ ಈಗುಂಟೇ? ಈಗ ಹೊಟ್ಟೆ ಪೋಷಣೆಯ ಕೆಲಸವೇ ಹೆಚ್ಚಾಗಿದೆ. ಹಿಂದಕ್ಕೆ ಗೌರಿ ಮತ್ತು ಗಣೇಶನ ಹಬ್ಬವು ಅತಿ ವಿಜೃಂಭಣೆಯಿಂದ ನಡೆಯುತ್ತಿತ್ತು. ಈಗ ಗಣೇಶನಿಗೆ ನೈವೇದ್ಯಕ್ಕೆ ಮೋದಕದ ಖರ್ಚಿಗೆ ಕಷ್ಟಬಂದಿದೆ.

ಆಹಾ! ಮಾಯೆಯು ಎಂಥಾ ಪ್ರಬಲಳು, ಯಾರನ್ನೂ ಬಿಡಳು. ಇವಳು ಈಶ್ವರನನ್ನೇ ಗೆದ್ದಿರುವಳು. ಕಾಳಿಯ ಚಿತ್ರವನ್ನು ನೋಡಿದರೆ, ಈಶ್ವರನು ಇವಳ ಪಾದಾಕ್ರಾಂತನಾಗಿರುವದು ಭಯಂಕರವಾಗಿ ತೋರುವುದು. ಇದರ ಗೂಢಾರ್ಥ ಬೇರೆ, ಈಶ್ವರನನ್ನು ನೋಡದಂತೆ, ಜನರನ್ನು ಇವಳು ಮಂಕು ಮಾಡುವಳು ಎಂದರ್ಥ. ಇವಳನ್ನು ದೂರದಲ್ಲಿಡುವಂತೆ ದೇವರು ನಮಗೆ ಬುದ್ಧಿಯನ್ನು ಕೊಟ್ಟಿದ್ದಾನೆ. ಆದರೆ ನಮ್ಮ ಪೂರ್ವಜರು ತಮ್ಮ ಮಕ್ಕಳಿಗೆ ನ್ಯಾಯವಾದ ವಿದ್ಯೆಯನ್ನು ಕೊಟ್ಟು ಅವರನ್ನು ಬುದ್ಧಿವಂತರನ್ನಾಗಿ ಮಾಡಲಿಲ್ಲ. ಹಿರಿಯರ ಮರಣಾನಂತರ ಅವರ ಮಕ್ಕಳು ವ್ಯವಸಾಯ ಕ್ರಮವನ್ನರಿಯದೆ, ವ್ಯಾಪಾರದ ಗುಟ್ಟನ್ನು ತಿಳಿಯದೆ, ಆಸ್ತಿಯನ್ನೆಲ್ಲಾ ಕೆಲವರು ಸಾಲಕೊಟ್ಟು ಮತ್ತೆ ಕೆಲವರು ಕೂತು ಉಂಡುಟ್ಟು ಕಳಕೊಂಡರು. ಹಿಂದಕ್ಕೆ ಚಿಲಿಪಿಲಿ ಧ್ವನಿತವಾಗುತ್ತಿದ್ದ ಮನೆಯಲ್ಲಿ ಮಕ್ಕಳನ್ನು ಎಣಿಸೋಣವೆಂದರೆ ನಮಗೆ ಬೆರಳುಗಳೇ ಇಲ್ಲ! ಮನೆ ಮಠಗಳು ಜೀರ್ಣವಾಗಿ ಹೋದರೂ ಅವು ನಾದುರುಸ್ತಿನಲ್ಲೇ ಇವೆ. ಈ ಗರೀಬ ಜನಗಳಿಗೆ ಶುಕ್ರವಾರ ಮತ್ತು ಆದಿತ್ಯವಾರ ಸಂತೆಗಳೇ ಜೀವನೋಪಾಯಕ್ಕೆ ಆಧಾರ, ಹಂಗಾಮಿನಲ್ಲಿ ಕಾಫಿ ವ್ಯಾಪಾರ, ಬಾಕಿ ಕಾಲಗಳಲ್ಲಿ ಏನು ವೃತ್ತಿ? ಜೂಜು, ಇಲ್ಲವೆ ಹರಟೆಕೂಟದಲ್ಲಿ ಸೇರೋಣ, ಹೆಂಗಸರ ವೃತ್ತಿ ನಿರ್ವೃತ್ತಿ, ಹೀಗಿರುವಾಗ ಹೊಟ್ಟೆಗೂ ಬಟ್ಟೆಗೂ ನೇರವಾಗಿ ಬಾಳುವದೆಂತು? ಸ್ತ್ರೀ ಪುರುಷರಿಬ್ಬರಿಗೂ ಒಂದು ಉಪಾಯ ತೋರುತ್ತಿದೆ, ಮಹಾತ್ಮನ ಚರಕಕ್ಕೆ ಶರಣು ಹೋಗುವದು, ವಿರಾಮಕಾಲದಲ್ಲಿ ನೂತರೆ ದಿನಕ್ಕೆ ತಲೆಯೊಂದರ ಎರಡಾಣೆ ಸಂಪಾದನೆಯಾಗಬಹುದು, ವ್ಯಾಪಾರವೋ ಇತರ ಯಾವ ಕಾಯ ಕಷ್ಟವೋ ಮಾಡಿಕೊಂಡು, ಪರಮಪವಿತ್ರವಾದ, ಹಿಂದೆ ನಮ್ಮ ಪೂರ್ವಿಕರು ಕೈಕೊಂಡಿದ್ದ ಹಿಂದೂ ದೇಶದ ಯಶಸ್ಸಿಗೆ ಕಾರಣವಾದ ನೂಲುವ ಈ ಉಪವೃತ್ತಿಯನ್ನು ಅಂಗೀಕರಿಸಿದರೆ, ದೇವರು ಪೇಟೆಯವರನ್ನು ಹಿಂದಿನ ಉಚ್ಛ್ರಾಯ ಸ್ಥಿತಿಗೆ ತಂದು ಪೇಟೆಯು ಕಳಕೇರುವಂತೆ ಮಾಡದೆ ಇರಲಾರನು ಎಂದು ದೃಢವಾಗಿ ನಂಬುತ್ತೇನೆ.

ನಾನೊಬ್ಬ ಭಿಕ್ಷುಕ. ನಾನು ಬೇಡುವ ಭಿಕ್ಷವು "ನೂಲನ್ನು ನೂತು ನೀವು ಉದ್ಧಾರರಾಗಿರಿ, ಮತ್ತು ಭಾರತಮಾತೆಯನ್ನು ಉದ್ಧಾರಮಾಡಿರಿ" ಎಂಬುದಾಗಿದೆ. ಈತರದ ಭಿಕ್ಷೆಯನ್ನು ನೀಡುವಂಥ ಮಹಾನೀಯರು ಪೇಟೆಯಲ್ಲಿ ಅನೇಕರಿದ್ದೀರಿ. ತಕ್ಷಣವೇ ಹತ್ತಕ್ಕೊಬ್ಬನಾದರೂ ಈ ಭಿಕ್ಷವನ್ನು ನನಗೆ ನೀಡುತ್ತಾ ದಾನಶೀಲರಾದ ಕರ್ಣ, ಶಿಬಿ, ಸಿರಿಯಾಳ, ದಧೀಚಿ ಇತ್ಯಾದಿ ಮಹಾಪುರುಷರು ಸಂಪಾದಿಸಿದ ಪದವಿಯನ್ನು ಹೊಂದಬಹುದಲ್ಲವೇ? ನಿರರ್ಥಕವಾದ ಯೋಚನೆಯಿಂದೇನೂ ಫಲವಿಲ್ಲ! ತಾಮಸಿಕ ಗುಣವನ್ನು ಕಿತ್ತುಹಾಕಿ, ರಜೋಗುಣವನ್ನು ಕೈಹಿಡಿಯಿರಿ. ಧರ್ಮನಿಷ್ಠರಾದ ಕರ್ಮಿಗಳಾಗಿರಿ' ಎಂಬುದೇನನ್ನ ಪ್ರಾರ್ಥನೆ.

"ಬೇಡುವವ"

ಮೋಟಾರುಗಳಿಂದ ಕಷ್ಟ!

ಅಯ್ಯಾ,

ಕೊಡಗಿನಲ್ಲಿ ಮೋಟಾರುಗಳು ದಿನೇ ದಿನೇ ಹೆಚ್ಚುತ್ತಲಿವೆ. ಇದರಿಂದ ರೈತರ ದನಕರಗಳಿಗೆ ಉಂಟಾಗುತ್ತಿರುವ ಅನರ್ಥವು ದಿನೇ ದಿನೇ ಹೆಚ್ಚಾಗುತ್ತಲಿದೆ. ದೊಡ್ಡಿಗೆ ದನಗಳನ್ನು ಪೊಲೀಸಿನವರು ಸೇರಿಸಿ ಸೇರಿಸಿ ಸಾಕಾಯಿತು. ರೈತರು ದೊಡ್ಡಿ ಚಾರ್ಜು ತೆತ್ತು ಸಾಕಾಯಿತು. ಸರಕಾರಕ್ಕೆ ಇವರ ಕಷ್ಟವನ್ನು ಅರ್ಜಿ ಮೂಲಕ ಬರಕೊಂಡಾಗ್ಯೂ ಈ ವರೆಗೂ ಏನೊಂದೂ ಸುಖವಿಲ್ಲ. ಬಡ ರೈತರ ಕಷ್ಟಕ್ಕಿಂತಲೂ ಕೆಲವು ಮೋಟಾರು ಸವಾರರ ಅನುಕೂಲವೇ ಮೇಲೆಂದು ಭಾವಿಸಿದ್ದಾರೋ ತಿಳಿಯದು. ರೋಡು ಮಾರ್ಜಿನುಗಳು ರೈತರಿಂದ ಸರಕಾರಕ್ಕೆ ಬಿಟ್ಟುಕೊಟ್ಟ ಜಾಗ. ಈ ಜಾಗದಲ್ಲಿ ರೈತರ ದನಗಳು ನಿಲ್ಲಕೂಡದೆಂದರೆ ಏನು? ಪ್ರಿನ್ಸ್ ಆಫ್ ವೇಲ್ಸರ ಮೋಟಾರು ಕೂಡ ಮೈಸೂರು ಪಟ್ಟಣದ ಬೀದಿಯಲ್ಲಿ ಕಾಲು ಗಂಟೆ ಸಮಯ ಎಮ್ಮೆ ದನಗಳಿಂದ ತಡೆಯಲ್ಪಟ್ಟಿತ್ತಂತೆ! ನಮ್ಮ ಈದೇಶದ ಶ್ರೀಮಂತರನ್ನು ಮೋಟಾರುಕಾರುಗಳು ಕೊಂಚ ಸಮಾಧಾನದಲ್ಲಿ ಬಿಟ್ಟರೆ ಈ ಅನರ್ಥಗಳು ನಿಲ್ಲಲಿಕ್ಕಿಲ್ಲವೇ? ಕೊಡಗೇನು ರಣರಂಗವೇ (ವಾರಾ ಜೂನ್) ಪ್ರಾಣಭೀತಿ ಇಲ್ಲದ ಹಾಗೆ ಗಂಟೆಗೆ 20-25 ಮೈಲುಗಳ (ಸ್ಪೀಡ್) ವೇಗದಲ್ಲಿ ಮೋಟಾರುಗಳನ್ನು ಬಿಡಲಿಕ್ಕೆ! ಸರ್ಟಿಫಿಕೇಟು ಹೊಂದಿದ ಡ್ರೈವರುಗಳು ಹೇಳಿದ ಹಾಗೆ ಕೇಳುವ ಮೋಟಾರುಗಳನ್ನು ಅವಶ್ಯ ಬಿದ್ದ ಹಾಗೆ ನಿಲ್ಲಿಸಿ ನಿಧಾನದಲ್ಲಿ ಬಿಡಲು ಆಗದ ಪಕ್ಷ ತಿಳುವಳಿಕೆ ಕಮ್ಮಿಯಾದ ದನ ಕಾಯುವ ಹುಡುಗರು ಹೇಳಿದಂತೆ ಕೇಳದ ದನಗಳನ್ನು ಮೋಟಾರು ವೇಗಕ್ಕೆ ರಸ್ತೆಯಲ್ಲಿ ಹ್ಯಾಗೆತಾನೇ ನಡಿಸಿಯಾರು? ರಸ್ತೆಯ ಹಕ್ಕು ಧೂರ್ತ ಮೋಟಾರುಗಳಿಗೋ ಇಲ್ಲವೆ ಬಡ ರೈತರಿಗೆ ಇದೆಯೋ?

ಹಾಗಿದ್ದರೆ ಈ ಕಷ್ಟವನ್ನು ನಮ್ಮ ಸರಕಾರವು ನಿವಾರಣೆ ಮಾಡಲು ಸಾವಕಾಶವೇನು? ಡಿ. ಬೋರ್ಡು ಕಾನೂನನ್ನು ರದ್ದು ಪಡಿಸಲು ಕೌನ್ಸಿಲು ಮೆಂಬರುಗಳಿಂದಲೂ ಡಿ. ಬೋರ್ಡು ಮೆಂಬರುಗಳಿಂದಲೂ ಆಗುವದಿಲ್ಲವೇ? ಕಮಿಷನರ್ ಸಾಹೇಬರಿಂದ ಆಗುವದಿಲ್ಲವೆ? ಇದಿಷ್ಟು ಕಷ್ಟಗಳನ್ನು ನಿವಾರಿಸದಿದ್ದರೆ ಬಡ ರೈತರ ಪ್ರೀತಿಗೆ ಇವರು ಪಾತ್ರರಾಗುವರೆ? ಈ ವಿಷಯ ಈಗಿನ ಡಿ. ಬೋರ್ಡುಮೆಂಬರುಗಳೂ ಕೌನ್ಸಿಲು ಮೆಂಬರುಗಳೂ ತೊಂದರೆ ತೆಗೆದು ನಿವಾರಿಸದಿದ್ದರೆ ನಿಜವಾಗಿಯೂ ರೈತರ ಪ್ರತಿನಿಧಿಗಳಲ್ಲವೆಂಬದು ವ್ಯಕ್ತವಾಗುತ್ತೆ ಈ ಸಂಗತಿ ಎಚ್ಚರ ತೆಗೆದುಕೊಳ್ಳುವದಾಗಿ ಕೋರಿಕೆ. ಕಮಿಷನರವರ ದಯಾದ್ರ್ರ ಹೃದಯವನ್ನು ಬಡರೈತರ ಮತ್ತು ದನಕರುಗಳ ಮತ್ತು ಕಡೆಗೆ ಪೋಲೀಸಿನವರ ಕಷ್ಟದ ಕಡೆ ಕೊಂಚ ನೀಡಬೇಕೆಂದು ವಿನಯ ಪ್ರಾರ್ಥನೆ.

ಎ. ಕೆ. ಸಂಕಟಿ.

ಸಂಪತ್ತಿಯ ಸಾಧನಗಳು.

ಅಯ್ಯಾ ಬಂಧುಗಳೇ ಸಂಪತ್ತಿಯು ಅನ್ಯರ ಕೈಕೆಳಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು. ಅದನ್ನು ಶೋಧಿಸಿ ತೆಗೆಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು.

ಲಕ್ಷಾವಧಿ ರೈತರು ಹೂಡಿ ಅನುಭವ ತೆಗೆದುಕೊಂಡಿರುವರು. ಭೂಮಿಯ ತಕ್ಕ ತರತರದ ನೇಗಿಲುಗಳೂ ಗಾಣಗಳೂ ದೊರೆಯುತ್ತವೆ. ಕಿಸಾನಗಾಣವು ಒಂದು ಗಂಟೆಗೆ ೪೦೦ ಪೌಂಡು ಕಬ್ಬನ್ನು ಹಿಂಡಿ ಹಲ್ಲುತ್ತದೆ.

“ಕೊ” ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,
ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ.

COFFEE ESTATE FOR SALE.

A portion of Merryland Estate. 3 miles from Sidapur. Coffee 70 acres, Paddy 17, Orange 5, Grazing land 36, Makki about 4. Well appointed Bungalow, 3 cooly lines, granary, cattle shed, all tiled. Motor road to bungalow. Inspection by appointment. Offers will not be considered after end of February. Prize Rs. 30,000 or near offer.

Apply to—

S. M. PINTO,
Virarajendrapett, Coorg.

3—2

ಪ್ರಕಟಣೆ.

ನಮ್ಮ ಆಂದವಾದ ಹೊಸ ಅಕ್ಷರಗಳು ಬಂದು ತಲುಪಿರುವುದರಿಂದ, ‘ಲೆಟರ್ ಹೆಡ್ಸ್,’ ‘ವಿಸಿಟಿಂಗ್ ಕಾರ್ಡ್ಸ್’ ಆಮಂತ್ರಣಗಳು (ಇನ್ವಿಟೇಷನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ. ಮ್ಯಾನೇಜರ್,
‘ಕೊಡಗು’ ಲಿಮಿಟೆಡ್

ನೋಟೀಸ್.

“ಕೊಡಗು” ಪತ್ರಿಕೆಯ ವಿಳೆ ಚಂದಾಹಣ ಕೊಡತಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಕೆಲಸಗಳ ಸಲ್ಲಿಸಿಕೊಡಲಿಕ್ಕಿರುವವರೂ ದಯವಿಟ್ಟು ವೀರರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಸಾಕಷ್ಟು ಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮ್ಯಾನೇಜರ್,
15.9.24. ‘ಕೊಡಗು’ ಲಿಮಿಟೆಡ್.

ಪ್ರಕಟಣೆ.

ಈ ಸಂದರ್ಭವನ್ನು ತಿಳಕೊಳ್ಳಬೇಕಿದೆ.

ಮಡಿಕೇರಿ ದೇವೂರು ಬ್ಲಾಕಿನಲ್ಲಿ ಹೈಸ್ಕೂಲಿಗೆ ಬಳಿ ಒಂದು ಎಕರೆ ಕಾಪಿತೋಟದಿಂದ ಕೂಡಿದ ಒಂದು ಹಂಚುಹಾಕಿದ ಮನೆಯನ್ನು ಅಡಿಗೆಮನೆ ಇನ್ನು ಮನೆ ಕಟ್ಟಲಿಕ್ಕೆ ಎತ್ತರ ಜಾಗದಲ್ಲಿರುವ ಮನೆದವರು ಸಹ ಮಾರಲಿಕ್ಕೆ ಇಟ್ಟಿದೆ. ಖಾಯಿಸ್‌ದಾರರು ಶೀಘ್ರದಲ್ಲಿಯೇ ಈ ಕೆಳಗಿನವರಿಗೆ ದಯವಿಟ್ಟು ಬರೆಕೊಳ್ಳುವದು.

C. C/o EDITOR,
“*Kodagu*” MERCARA.

12—9

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಸು ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಜಮೂಬಂದ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6–4–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೇರ ತಮ್ಮಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ.
ಸಿ. ಯಂ. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಕು 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ:—

ಮ್ಯಾನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಟ್ರಿಕಾಪ್ಪ ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು ‘ಕೊಡಗು’ ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ
17.9.24. ಮ್ಯಾನೇಜರ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.
Telegraphic Address:-“SHOOTER” Bombay.

[24 20] Please write for latest Catalogues.

ಮಾರಾಟಕ್ಕೆ.

1. ಮಡಿಕೇರಿ ಅರೆ ಮುಲ್‌ಕಟ್ಟಪ್ಪನವರ ಮಡಿಕೇರಿ ನಾಡುಬಿಳಿಗೇರಿಗ್ರಾಮದಲ್ಲಿ ಮಡಿಕೇರಿ ಮೂರ್ನಾಡು ರಸ್ತೆ 5ನೇ ಮೈಲ್ ಬಳಿ ಇರುವ ಆಸ್ತಿ, ಅಂದರೆ— ಸಾಗಿನ ಉತ್ತಮವಾದ ಭೂಮಿ 31½ ಎಕರು, ಕಿತ್ತಳೆ 25 ಎಕರು, (ಈ ಪೈಕಿ 15 ಎಕರು ಪಸಲಿಗೆ ಬಂದದನ್ನು ಈ ವರ್ಷ 1,200 ರುಪಾಯಿಗಳಿಗೆಪಸಲು ಗುತ್ತಿಗೆ ಕೊಡಲಾಗಿದೆ) ಯಾಲಕ್ಕಿ 15 ಎಕರು, ಹೊಸದಾಗಿ ಹಾಕಿರುವ ಕಾಪಿ 15 ಎಕರು ಮತ್ತು 116 ಎಕರು ಬಾಣೆ, ಒಂದು ವಾಸದ ಮನೆ, ಆಳುಗಳ ಲೈನು ಮತ್ತು ದನಗಳ ಕೊಟ್ಟಿಗೆ ಸಹ—ಮಾರಾಟಕ್ಕೆ ಇದೆ. ಕ್ರಯ ರುಪಾಯಿ 25,000 ಅಥವಾ ಇದರ ಸಮೀಪದ ಬೆಲೆ.

2. ಅರೆ ಮುಲ್‌ಕಟ್ಟಪ್ಪನವರ ಮಡಿಕೇರಿ ಮಹದೇವಪೇಟೆ ಬಸವಣ್ಣನ ಗುಡಿ ಬಳಿ ಇರುವ ವಾಸದ ದೊಡ್ಡ ಮಹಡಿಮನೆ ಕ್ರಯ ರೂ. 5,000.

ಹೆಚ್ಚಿನ ವಿವರಕ್ಕೆ ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು.

ಬಿ. ಎಸ್. ಅಪ್ಪಣ್ಣ,
ಬೋಯಿಕೇರಿ ಎಸ್ಟೇಟ್,
12—1 ಸುಂಟಿಕೊಪ್ಪ.

WANTED.

Blacksmith and hammerman for Public Works Workshop, Mercara. Pay according to qualifications.

Aqply—

SUB-DIVISIONAL OFFICER,
MERCARA.

3—1

ಹಳೆ ವಿದ್ಯಾರ್ಥಿಯರ ತ್ರೈಮಾಸಿಕ.

ಸಂಪುಟ 2] ವರ್ಷದಚಂದಾ ಬರೇ ರೂ. 1-4-0 [ಸಂಚಿಕೆ 1
ಸಂಪಾದಕ —ಸಿ. ಬಿ. ಮೇದಪ್ಪ, ಬಿ. ಎ., ಬಿ. ಎಲ್. ಎಂ. ಎಲ್. ಸಿ.

ಈ ಸಂಚಿಕೆಯಲ್ಲಿ ಮನೋಹರವಾದ ಕೊಡಗಿನ ಪವಿತ್ರ ಸ್ಥಳವಾದ ಶ್ರೀ ಮೂಲ ಕಾವೇರಿಯ ಚಿತ್ರಗಳಿವೆ.

1. ಶ್ರೀ ಕಾವೇರಿಯ ಜನ್ಮ, ಅವತಾರ.
2. ಸರಕಾರಕ್ಕೆ ಸಾಲವೆಂದರೇನು?
3. ಪೋಲಿಟಿಕ್ಸ್ ಅಂದರೇನು?
4. ವಿನೋದಾವಳಿ.

ಇನ್ನೇ ಮುಂತಾದ ಬಹು ಸ್ವಾರಸ್ಯದ ವಿಷಯಗಳಿವೆ.

ಮ್ಯಾನೇಜರ್,
ಓ. ಎಸ್. ಎಸೋಸಿಯೇಷನ್,
ಮಡಿಕೇರಿ.

Printed & published by Kodanda Appayya, R.B., Chairman, Board of Directors, at “Kodagu” Press, Mercara for “Kodagu” Ltd.

Reg. No. M. 1550.
If not delivered please return to "KODAGU" OFFICE, MERCARA.

ಕೊಡಗು.

ವಾರ್ಷಿಕ ಚಂದಾ ರೂ. ೪—೦—೦

ಸತ್ಯೇನ ಧರ್ಮದಯಯಾ ವಿದ್ಯಾ [illegible] ಪ್ರಯತ್ನತಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು. ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೪] ಕೊಡಗು, ಸ೯ ೧೯೨೫ನೇ ಇಸವಿ ಜನವರಿ ತಾರೀಕು ೩೦ನೆಯ ಶುಕ್ರವಾರ [ಸಂಚಿಕೆ ೨೩

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು ರಾಮರಾವ್,
ಯಮ್. ಎಲ್. ಸಿ. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪ್ರತಿ 1ಕ್ಕೆ 0-2-0. ಹಿಂದಿನ ಸಂಚಿಕೆಗಳು [illegible]

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ' 323,
ತಂಬುಚೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ಬಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯಲ್ಲಿ ಸ್ಪಷ್ಟವಾಗಿಯೂ ಹೆಸರು ವಿಳಾಸಗಳಿಂದ ಕೂಡಿಯೂ [illegible] ದೊರೆತಂತಿಲ್ಲ. ಈ ಪತ್ರಗಳು ಪ್ರಕಟಿಸಲ್ಪಡುವದಿಲ್ಲ. 5. ಪ್ರಕಟಿಸಲಾಗದ ಬಾತ್ಮಿಗಳನ್ನು [illegible] ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಕ್ರಮವು ಸಂಗತಿಗಳು ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ

ನೋಟೀಸ್.

ಕೊಡಗಿನಿಂದ ಮೈಸೂರಿಗೆ ಮಾರಾಟಕ್ಕೆ ಬರುವ ಕಿತ್ತಳೆ ಹಣ್ಣುಗಳನ್ನು ಚಲಾವಣೆಯಲ್ಲಿರುವ ನ್ಯಾಯವಾದ ದಾರಣೆಗೆ ಮಾರಾಟಮಾಡಿಸುವ ಬಗ್ಗೆ ಒಂದು ಏಜನ್ಸಿಯನ್ನು ನಾನು ಮೈಸೂರಲ್ಲಿ ತೆರೆದಿರುತ್ತೇನೆ. ಕಮೀಷನ್ ಹೊರತು ಬೇರೆ ಯಾವ ವಂಚನೆಯೂ ಇಲ್ಲದೆ ಪಬ್ಲೀಕ್ ಹರಾಜಿನಲ್ಲಿ ಹಣ್ಣುಗಳನ್ನು ಮಾರಿಸಿಕೊಡಲು ತಯಾರಿದ್ದೇನೆ. ಅಲ್ಲದೆ ಹಿಂದೂಪೇಟೆಯ ಎಲ್ಲಾ ಕಡೆಗಳಿಗೂ ಕಿತ್ತಳೆ ಹಣ್ಣುಗಳನ್ನು ಒದಗಿಸಿಕೊಡಲು ನಾನು ಒಂದು ದೊಡ್ಡ ಉಗ್ರಾಣವನ್ನು (ಗೋಡೌನ್) ತೆರೆದಿರುತ್ತೇನೆ. ನಾನು ಒಬ್ಬ ಕೊಡಗು ದೇಶಸ್ಥನಾದುದರಿಂದ ಕೊಡಗಿನಲ್ಲಿರುವ ನನ್ನ ದೇಶ ಬಾಂಧವರೆಲ್ಲರೂ ಈ ಅನುಕೂಲವನ್ನು ಕಳಕೊಳ್ಳಲಿಕ್ಕಿಲ್ಲವಾಗಿ ಕೋರುತ್ತೇನೆ.

ಟೆಲಿಗ್ರಾಮ್ ವಿಳಾಸ:— } ಟಿ. ಎ. ಕುಪ್ಪಸಾಮಿ ಪಿಳ್ಳೆ,
ಫ್ರೂಟ್ಸ್, ಮೈಸೂರು. } ಫ್ರೂಟ್ಸ್ ಗೋಡೌನ್,
ಮೈಸೂರು.

1—1

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture.
P. O. BASAVANAGUDI
Bangalore City

THE SHOPPING CENTRE OF COORG

Spencer & Co. Ltd.,

MERCARA & POLLIBETTA.

An Announcement.

Our prices of wines, spirits, stores, etc., are down.

Send for our Xmas list and be convinced

Trial order Solicited

3

ಕೃತಿಮೋ [illegible]

NITRATE OF SODA [illegible] Nitrogen

The best and cheapest form of Nitrogen highly concentrated and immediately available. Nothing like it to make plants grow.

[illegible] ವರ್ಷಗಳಿಗೆ ನೈಟ್ರೋಜನ್ (Nitrogen) [illegible] ನೈಟ್ರೇಟ್ ಆಫ್ ಸೋಡಾ [illegible] (15—16%) [illegible]

[illegible] ಉಪಯೋಗಿಸುವ ಕ್ರಮ [illegible] 120—150 [illegible]

ದಿ ಚಿಲಿಯನ್ ನೈಟ್ರೇಟ್

21—19 ಕಮಿಟಿಯವರ ಕಡೆ

ಕೊಡಗಿನಲ್ಲಿ— B. P. Ayapa, Hon Representative Pollibetta, Coorg	The Chilean Nitrate Committee, 7 Hare Street, Post Box 461 CALCUTTA

ಮಲಿಯಾಳ ವೈದ್ಯಶಾಲಾ.

ಮಲಿಯಾಳದ ನಂಬೀಶನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯ ಶಾಲೆಯ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತದೆ. ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ನಾಡಿಯಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು ಬಹಳ ಕಡಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

52—52

ನಾರಾಯಣ ನಂಬೀಶನ್,
ಆಯುರ್ವೇದ ವೈದ್ಯರು,
ವೀರರಾಜೇಂದ್ರಪೇಟೆ.

ಪ್ರಕಟಣೆ.

ಮಡಿಕೇರಿ ಪೋಲೀಸ್ ಸಬ್ ಇನ್ಸ್‌ಪೆಕ್ಟರುಗಳ ಕ್ವಾರ್ಟರ್ಸ್ ಕೆಳಗೆ [illegible] 3 ವರ್ಷಗಳ ಹಿಂದೆ ಕಟ್ಟಲ್ಪಟ್ಟ [illegible] ವಾಸ ಇರಲಿಕ್ಕೆ ಯೋಗ್ಯವಾದ 9 ಕೊಠಡಿಗಳುಳ್ಳ ಮನೆ 3 ಅಂಕಣಗಳ ಕೊಟ್ಟಿಗೆ [illegible] ಗಳೂ [illegible] (ಸಿಮೆಂಟ್ ಗಾರೆ ಹಾಕಿದ್ದು) ಕಾಫಿ, ಬಾಳೆ, ಕಿತ್ತಳೆ, [illegible] ಮತ್ತು [illegible] ಮತ್ತು [illegible] ಇರುವ ಕಿತ್ತಳೆ [illegible] ಇರುವ [illegible] ಗೋಸ್ಕರವಾಗಿ [illegible] ವಾಸ ಇರುವದಕ್ಕೆ ಯೋಗ್ಯವಾದ [illegible] ಯೋಗ್ಯವಾದ [illegible] ಮಡಿಕೇರಿಯಲ್ಲಿ [illegible] ಇರುವವರು [illegible] ಹೆಚ್ಚಿನ ವಿವರ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬೇಕಾಗಿದೆ.

VENDER,
C/o EDITOR, "KODAGU."
Mercara.

6.

ನೋಟೀಸು.

ಈ ಕೆಳಗಿನ [illegible] "ಕೊಡಗು" ಪತ್ರಿಕೆಯ [illegible] [illegible] ಕೊಡಲಾಗಿದೆ. [illegible]

ಏಜಂಟರುಗಳು.

ವೀರಾಜಪೇಟೆ—ಮೆ. ಕೆ. [illegible] ಆಫೀಸಿನಲ್ಲಿ.
ಮೂರ್ನಾಡು—[illegible] ಮ
[illegible] ದೇವಯ್ಯನವರು.
ನಾಪೋಕ್ಲು—ಮೆ. [illegible] ಮುದ್ದಪ್ಪನವರು.
ಗೋಣಿಕೊಪ್ಪಲು—ಮೆ. [illegible] ನವರು.
ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಬಿ. [illegible] ನವರು.
ಅಮ್ಮತ್ತಿ ಸಿದ್ದಾಪುರ—ಮೆ. [illegible] ನವರು.
ಮೆ. [illegible] ನವರು.

ಕೊಡಂಡ [illegible]

[illegible]

"ಕೊಡಗು"

ಸ॥ ೧೯೨೫ನೇ ಇಸವಿ ಜನವರಿ ತಾ. ೩೦ನೇ ಶುಕ್ರವಾರ.

ದೇಶೀಯ ಮತ್ತು ರಾಷ್ಟ್ರ ಭಾಷೆ.

ಹಿಂದುಸ್ಥಾನದ ಜನರು ಸ್ವಾತಂತ್ರ್ಯವನ್ನು ಕಳಕೊಂಡು ಬಹುಕಾಲವಾಗಿ ಹೋದದ್ದರಿಂದ ತಾವು ಸ್ವಾತಂತ್ರ್ಯವನ್ನು ಕಳಕೊಂಡವರಾಗಿದ್ದೇವೆ ಎಂಬದೇ ಅನೇಕರಿಗೆ ಗೊತ್ತಿಲ್ಲದೆ ಹೋಗಿದೆ. ಅನೇಕರಿಗೆ ಈ ಅಧೀನ ಸ್ಥಿತಿಯೇ ಒಳ್ಳೇದು ಎಂತ ಸಹ ತೋರಿ ಹೋಗಿದೆ. ಆದರೆ ಮನುಷ್ಯನಿಗೆ ಸ್ವಾತಂತ್ರ್ಯವು ಜನ್ಮ ಸಿದ್ಧ ಹಕ್ಕಾಗಿದೆ ಎಂಬದು ಈಚೆಗೆ ಕೆಲವು ವರ್ಷಗಳಿಂದ ಚನ್ನಾಗಿ ಮನಸ್ಸಿಗೆ ನಾಟಿರುವದರಿಂದ ಹಿಂದುಸ್ಥಾನದಲ್ಲಿ ಸ್ವಾತಂತ್ರ್ಯದ ಹೋರಾಟವು ಹೆಚ್ಚಾಗಿದೆ. ಜನರಲ್ಲಿ ಸ್ವಾತಂತ್ರ್ಯದ ಪ್ರೀತಿಯನ್ನು ಬಹಳವಾಗಿ ಹೆಚ್ಚಿಸಿದರೆ ಒಟ್ಟು ಜನಾಂಗದ ಅಧೀನತೆಯು ಒಂದು ನಿಮಿಷವಾದರೂ ನಿಲ್ಲಲಾರದು. ಜನರಲ್ಲಿ ಸ್ವಾತಂತ್ರ್ಯಪ್ರೀತಿಯು ಹೆಚ್ಚಬೇಕಾದರೆ ಇಂಗ್ಲಿಷ್‌ಭಾಷೆಯಮೇಲೆ ಜನರಿಗೆ ಇರುವ ಮಮತೆಯನ್ನು ಹೋಗಲಾಡಿಸಬೇಕು. ಈ ಭಾಷೆಯಮೇಲಿನ ಪ್ರೀತಿಯಿಂದ ಜನರು ತಮ್ಮ ಇತಿಹಾಸಗಳನ್ನೂ, ಪೂರ್ವ ಸಂಸ್ಕೃತಿ (culture) ಯನ್ನೂ ಮರೆತು ಪಾಶ್ಚಿಮಾತ್ಯರನ್ನೇ ಜೀವನದ ಪ್ರತಿಯೊಂದು ಕೆಲಸಕ್ಕೂ ಮಾದರಿಯಾಗಿ ತೆಗೆದುಕೊಳ್ಳುವ ಪದ್ಧತಿಯಾಗಿದೆ. ಆದ್ದರಿಂದ ಜನರಲ್ಲಿ ಸ್ವಭಾಷೆ ಮತ್ತು ರಾಷ್ಟ್ರೀಯ ಭಾಷೆಯಲ್ಲಿ ಪ್ರೀತಿ ಹುಟ್ಟಿಸಿದ ಹೊರತು ರಾಷ್ಟ್ರೀಯ ಸಂಸ್ಕೃತಿಯು ಬೆಳವಣಿಗೆಯಾಗಲಾರದು.

ಐರ್ಲ್ಯಾಂಡಿನಲ್ಲಿ ಸ್ವಾತಂತ್ರ್ಯದ ಹೋರಾಟದಲ್ಲಿ ಸ್ವಭಾಷೆ ಪ್ರೇಮವನ್ನು ಬೆಳೆಸುವದೇ ಮೊದಲನೆ ಕಾರ್ಯವಾಗಿ ಮುಖಂಡರು ತೆಗೆದುಕೊಂಡರು. ದಕ್ಷಿಣ ಆಫ್ರಿಕಾದಲ್ಲಿ ಬೋಯರರನ್ನು ಇಂಗ್ಲಿಷರು ಸೋಲಿಸಿದಮೇಲೆ ಸಹ ಇಂಗ್ಲಿಷ್ ಭಾಷೆಯನ್ನು ಅವರು ತಿರಸ್ಕರಿಸಿ ತಮ್ಮ ಮಾತೃಭಾಷೆಗೇ ಪ್ರಾಮುಖ್ಯತೆಯನ್ನು ಕೊಟ್ಟು ಕಳಕೊಂಡ ಸ್ವಾತಂತ್ರ್ಯವನ್ನು ಪುನಃ ಪಡಕೊಂಡರು. ಇಂಗ್ಲಿಷ್ ಭಾಷೆಯನ್ನು ಕೆಲವರು ಕಲಿತುಕೊಳ್ಳಲಿಕ್ಕೆ ಆಕ್ಷೇಪಣೆ ಇಲ್ಲ. ಆದರೆ ವಿದ್ಯಾಭ್ಯಾಸವೆಂದರೆ ಇಂಗ್ಲಿಷ್‌ಭಾಷೆಯನ್ನು ಕಲಿಯುವದೇ ಎಂಬ ಜನರ ಅಭಿಪ್ರಾಯವು ಬೇರಟುಹೋಗಿ ಮಾತೃಭಾಷೆಯನ್ನೂ ಸ್ವರಾಷ್ಟ್ರಭಾಷೆಯನ್ನೂ ಮಾತ್ರ ಕಲಿತರೂ ಸಹ ವಿದ್ಯಾವಂತ, ನಾಗರೀಕ ಎಂತ ಎನಿಸಿಕೊಳ್ಳಬಹುದೆಂಬದು ಜನರಿಗೆ ನಿಶ್ಚಯವಾಗುವಂತೆ ಮಾತೃಭಾಷೆಗೂ, ರಾಷ್ಟ್ರಭಾಷೆಗೂ ಪ್ರಾಮುಖ್ಯತೆ ಕೊಡಬೇಕು. ಹಿಂದುಸ್ಥಾನದಲ್ಲಿ ಇಂಗ್ಲಿಷ್‌ಭಾಷೆಯಲ್ಲಿ ವಿದ್ಯಾಭ್ಯಾಸಕೊಡಲು ಪ್ರಾರಂಭಿಸಿ ಸುಮಾರು ಒಂದು ನೂರು ವರ್ಷಗಳಾಗಿ ಹೋದರೂ ಇಂಗ್ಲಿಷ್ ಭಾಷೆಯಲ್ಲಿ ಸರಿಯಾಗಿ ಬರವಣಿಗೆಮಾಡಿ ಸಂಭಾಷಣೆ ನಡಿಸಲು ಶಕ್ತಿ ಇರುವವರು ನೂರರಲ್ಲಿ ಒಂದು ಜನ ಇದ್ದಾರೋ ಇಲ್ಲವೋ ಎಂಬ ಸಂಶಯ ಬರುತ್ತದೆ. ಆದ್ದರಿಂದ ಮಾತೃಭಾಷೆ ಮತ್ತು ರಾಷ್ಟ್ರಭಾಷೆಗೆ ಗೌರವ ದೊರೆತ ಹೊರತು ಹೆಚ್ಚಿನ ಜನರು ವಿದ್ಯಾವಂತರಾಗುವದಿಲ್ಲ. ಇಂಗ್ಲಿಷ್‌ಭಾಷೆಕಲಿಯದೆ ಬರೇ ದೇಶೀಯಭಾಷೆ ಮಾತ್ರ ಕಲಿತವನಿಗೆ ಲೋವರ್ ಸೆಕಂಡರಿಗಿಂತ ಹೆಚ್ಚಿನವಿದ್ಯೆ ದೊರೆಯುವ ಸಂಭವವೇ ಇಲ್ಲ. ಸಂಸ್ಕೃತ ವಾಙ್ಮಯ (Literature) ವು ಅಪಾರವಾಗಿ ಇರುವದರಿಂದ ಅದರಲ್ಲಿ ವಿದ್ವಾಂಸನಾಗಬೇಕಾದರೆ ಸುಮಾರು ಹತ್ತು ವರ್ಷಗಳ ವರೆಗೆ ಅದನ್ನೇ ಅಭ್ಯಾಸಮಾಡಬೇಕು. ಅಷ್ಟು ಅಭ್ಯಾಸಮಾಡಿದರೂ ಅಂಥವನಿಗೆ 'ಪಂಡಿತ' ನೆಂಬ ಹೆಸರುಮಾತ್ರ ದೊರೆಯುತ್ತದೆ. ಅಂಥವನ ಸಂಪಾದನೆ ಶಕ್ತಿಯು ತಿಂಗಳಿಗೆ 50 ರೂಪಾಯಿ ಮೀರುವದಿಲ್ಲ. ಇದು ಯಾಕೆಂದರೆ ಪ್ರಪಂಚದ ವಿಜ್ಞಾನ (Science) ಕಾನೂನು ಮುಂತಾದ ಐಹಿಕ ಜ್ಞಾನಗಳನ್ನು ಸಂಸ್ಕೃತಭಾಷೆಯಮೂಲಕವಾಗಿ ಕೊಡದೆ ಇರುವದೇ ಇದಕ್ಕೆ ಕಾರಣ. ಇಂಗ್ಲಿಷ್‌ಭಾಷೆಯನ್ನು ಕಲಿತರೆ ಹೆಚ್ಚಿನ ಸಂಪಾದನೆಯಾಗುತ್ತದೆಂತ ಎಲ್ಲರಿಗೂ ತಿಳಿದುಬಂದಿದೆ. ಇಂಗ್ಲಿಷ್ ಭಾಷಾ ಜ್ಞಾನವಿದ್ದರೆ ಸರಕಾರಿ ನೌಕರಿಗಳು ಸಿಕ್ಕುತ್ತವೆ. ಕಾನೂನು, ವಿಜ್ಞಾನ, ಇತರ ಕಸಬು ವಿದ್ಯೆಗಳನ್ನು ಸಹ ಇಂಗ್ಲಿಷ್ ಭಾಷೆಯಮೂಲಕವೇ ಕೊಡುವದರಿಂದ ಆಯಾ ಇಲಾಖೆಗಳಲ್ಲಿ ಮಾಡುವ ಸಂಪಾದನೆ ಸಹ ಇಂಗ್ಲಿಷ್ ವಿದ್ಯೆಯಿಂದಲೇ ಆಗುವ ಸಂಪಾದನೆ ಎಂತ ಸಾಮಾನ್ಯ ಜನರು ತಿಳಿಯಲು ಕಾರಣವಾಗಿದೆ. ದೇಶೀಯ ಭಾಷೆಗಳಲ್ಲಿ ಕಸಬುದಾರಿ ವಿದ್ಯೆಗಳನ್ನು ಕೊಟ್ಟು, ಸರಕಾರಿ ವ್ಯವಹಾರ ಪತ್ರಗಳನ್ನೆಲ್ಲಾ ದೇಶಭಾಷೆಯಲ್ಲೇ ನಡಿಸಬೇಕೆಂತ ಮಾಡಿದರೆ ಇಂಗ್ಲಿಷ್ ಭಾಷೆ ತಿಳಿಯದೆ ಹೋದರೂ ತಿಂಗಳಿಗೆ ಸಾವಿರಾರು ರೂಪಾಯಿಗಳನ್ನು ಸಂಪಾದಿಸುವ ಶಕ್ತಿ ಬರುತ್ತದೆಯೆಂತ ಜನರಿಗೆ ತಿಳಿದು ಬಂದೀತು. ವಿದ್ಯೆಗೆ ಮಾರ್ಕೆಟ್‌ವೆಲ್ಯೂ ಅಂದರೆ ವಿದ್ಯಾವಂತನ ಸಂಪಾದನೆ ಶಕ್ತಿಯೇ ಮುಖ್ಯವಲ್ಲ ಆತನಿಗೆ ಬರುವ ಜ್ಞಾನವೇ ಮುಖ್ಯವೆಂತ ನಮಗೆ ಗೊತ್ತಿದೆ. ಆದರೂ ಈಗಿನ ಹೊಟ್ಟೆಪಾಡಿನ ಹೋರಾಟದಲ್ಲಿ ಬರೇ ಜ್ಞಾನ ಸಂಪಾದನೆಯು ಜನರ ಮನಸ್ಸಿಗೆ ಹೊಗುವದಿಲ್ಲ. ಆದರೆ ಸರಕಾರಿ ಇಲಾಖೆಗಳ ವ್ಯವಹಾರವು ಇಂಗ್ಲಿಷಿನಲ್ಲೇ ಆಗಬೇಕೆಂತ ಮಾಡುವದೂ, ಉಚ್ಚ ವಿದ್ಯೆಯನ್ನು ದೇಶಭಾಷೆಯಲ್ಲೇ ಕೊಡುವಂತೆ ಮಾಡುವದೂ ಕೂಡಲೇ ಸಾಧ್ಯವಿಲ್ಲ. ಇಂಗ್ಲಿಷ್ ಭಾಷೆಯಲ್ಲಿ ಉಚ್ಚ ವಿದ್ಯೆ ಕಲಿತ ದೇಶೀಯರಿಗೂ ಸಹ ಸರಕಾರಿ ವ್ಯವಹಾರಗಳು ದೇಶಭಾಷೆಯಲ್ಲಿ ಆಗುವದು ಸರಿಯಲ್ಲವೆಂತ ತೋರಿದೆ. ನಮ್ಮ ದೇಶದ ಕಳೆದ ಜಮಾಬನ್‌ದಾರರ ಸಂಘದ ಮೀಟಿಂಗಿನಲ್ಲಿ ನಮ್ಮ ದೇಶದ ಕೌನ್ಸಿಲ್ ಚರ್ಚೆಗಳು ದೇಶಭಾಷೆಯಲ್ಲಿ ಆಗಬೇಕೆಂಬ ಠರಾವು ಮಂಜೂರಾಗಲಿಲ್ಲವೆಂಬದರಿಂದ ಇಂಗ್ಲಿಷ್ ವಿದ್ಯಾವಂತರು ಮಾತ್ರವಲ್ಲ ದೇಶದ ಜನರೂ ಸಹ ಇಂಗ್ಲಿಷ್‌ನ ಮೇಲೆ ಎಷ್ಟರಮಟ್ಟಿಗೆ ಅಧೀನರಾಗಿದ್ದಾರೆಂಬ ಸಂಗತಿಯು ಗೊತ್ತಾಗುತ್ತದೆ. ನಮ್ಮ ಈ ಚಿಕ್ಕ ದೇಶದಲ್ಲಿ ಸರಕಾರದ ವ್ಯವಹಾರ ಪತ್ರಗಳು ಪೂರ್ತಿ ಕನ್ನಡ ಭಾಷೆಯಲ್ಲೇ ನಡಿಸುವಂತೆ ಮಾಡುವದು ಅಸಾಧ್ಯವಲ್ಲ. ಯಾಕೆಂದರೆ ಈ ಪ್ರಾಂತ್ಯದಲ್ಲಿ ಕನ್ನಡ ಭಾಷೆಯನ್ನು ತಿಳಿಯದೆ ಇರುವವರು ಕಡಿಮೆ. ದೊಡ್ಡ ಪ್ರಾಂತ್ಯಗಳಲ್ಲಾದರೆ ವಿಧವಿಧ ಭಾಷೆಗಳನ್ನಾಡುವ ಜನರ ಸಮುದಾಯಗಳಿವೆ. ಆದ್ದರಿಂದ ಸರಕಾರವು ಯಾವುದೇ ಒಂದು ಭಾಷೆಯಲ್ಲಿ ವ್ಯವಹಾರ ನಡಿಸುವದು ಸಾಧ್ಯವಿಲ್ಲವೆನ್ನಬಹುದು. ಈ ಕಾರಣದಿಂದಲೇ ಭಾಷಾವಾರು ಪ್ರಾಂತ್ಯಗಳನ್ನು ಮಾಡಿಕೊಡಬೇಕೆಂತ ನಡಿಯುತ್ತಿರುವ ಹೋರಾಟವು. ನಮ್ಮ ದೇಶದ ಸರಕಾರಿ ಕೆಲಸಗಳು ಪೂರ್ತಿ ದೇಶ ಭಾಷೆಯಲ್ಲಿ ನಡಿಯುವಂತೆ ಮಾಡಿಕೊಳ್ಳುವದು ದೇಶೀಯರ ಕೈಯಲ್ಲಿದೆ. ಆಗ ಸರಕಾರದ ಕೆಲಸ ನಡಿಸಲಿಕ್ಕೆ ಗುಮಾಸ್ತರುಗಳಿಗೆ ಕೊಡುವ ಸಂಬಳದ ದರವೆಲ್ಲಾ ಕಡಿಮೆಯಾದರೆ ಸಾಕಾದೀತು. ಸರಕಾರದ ಖರ್ಚು ಕಡಮೆಯಾದರೆ ಪ್ರಜೆಗಳ ಮೇಲೆ ಬೀಳುವ ತೆರಿಗೆಗಳ ಹೊರೆಯೂ ಕಡಿಮೆಯಾದೀತು.

ಹಿಂದುಸ್ಥಾನವು ದೊಡ್ಡದೊಂದು ಭೂಖಂಡವೇ ಆಗಿರುವಾಗ ಅಲ್ಲಿ ಅನೇಕ ಭಾಷೆಗಳು ಇರುವದರಲ್ಲಿ ಆಶ್ಚರ್ಯವಿಲ್ಲ. ಆದರೆ ಒಟ್ಟು ಹಿಂದುಸ್ಥಾನವೆಲ್ಲ ಒಗ್ಗಟ್ಟಾಗಿ ಕೆಲಸಮಾಡಿ ಸ್ವತಂತ್ರ್ಯಪಡೆದು ಒಗ್ಗಟ್ಟಾಗಿಯೇ ಅಭಿವೃದ್ಧಿ ಹೊಂದಬೇಕೆಂಬದರಲ್ಲೂ ಏನೂ ಸಂಶಯವಿಲ್ಲ. ಆದ್ದರಿಂದ ಒಟ್ಟು ಹಿಂದುಸ್ಥಾನಕ್ಕಾಗಿ ಕೆಲಸಮಾಡುವವರು ತಮ್ಮ ಅಭಿಪ್ರಾಯಗಳನ್ನು ದೇಶದ ಎಲ್ಲಾ ಭಾಗದ ಜನರಿಗೂ ತಿಳಿಸಿಕೊಡಲು ಒಂದು ಭಾಷೆ ಅವಶ್ಯವಿದೆ. ಈ ವರೆಗೂ ಇಂಥಾ ಭಾಷೆಯು ಇಂಗ್ಲಿಷ್ ಭಾಷೆಯಾಗಿತ್ತು. ಒಟ್ಟು ಹಿಂದುಸ್ಥಾನದವರು ಸೇರಿ ನಡಿಸುವ ಮಹಾಸಭೆಗಳ ಕಾರ್ಯಗಳು ಇಂಗ್ಲಿಷ್‌ನಲ್ಲೇ ಆಗುತ್ತಿತ್ತು. ಒಂದು ಪ್ರಾಂತದ ಮುಂದಾಳು ಇನ್ನೊಂದು ಪ್ರಾಂತ್ಯಕ್ಕೆ ಹೋಗಿ ಭಾಷಣ ಮಾಡಬೇಕಾದರೆ ಇಂಗ್ಲಿಷ್‌ಭಾಷೆಯಲ್ಲೇ ಮಾಡಬೇಕಾಗಿತ್ತು. ಈಗಲೂ ಸಹ ಅದೇ ಸ್ಥಿತಿಯಲ್ಲಿ ಇದೆ. ಮೊನ್ನೆ ತಾನೆ ಮಡಿಕೇರಿಗೆ ಬಂದು ಹೋದ ಶಂಕರಾನಂದ ಎಂಬ ಸನ್ಯಾಸಿ ಸಹ ಇಂಗ್ಲಿಷ್‌ನಲ್ಲೇ ಭಾಷಣಮಾಡಿದ್ದರಿಂದ ಅನೇಕರಿಗೆ ಅವರ ಅಭಿಪ್ರಾಯಗಳು ತಿಳಿಯಲು ಸಾಧ್ಯವಾಯಿತಷ್ಟೆ. ಆದರೆ ಇಂಗ್ಲಿಷ್ ಭಾಷೆಯನ್ನು ಕಲಿಯಲಿಕ್ಕೆ ಇರುವ ಕಷ್ಟ ಮತ್ತು ಅದರಿಂದ ಆಗುವ ನಷ್ಟಗಳನ್ನೂ ಗಣನೆಗೆ ತೆಗೆದುಕೊಂಡರೆ ದೇಶದ ಹೆಚ್ಚಿನ ಜನರು ಆ ಭಾಷೆಯನ್ನು ಕಲಿಯಲುಸಾಧ್ಯವೂ ಇಲ್ಲ, ಕಲಿಯಬಾರದೆಂತಲೂ ದೇಶ ಹಿತೈಷಿಗಳ ಮತವಾಗಿದೆ. ಹಾಗಾದರೆ ಒಟ್ಟು ಹಿಂದುಸ್ಥಾನಕ್ಕೆಲ್ಲಾ ಸುಲಭಸಾಧ್ಯವಾದ ದೇಶೀಯ ಭಾಷೆಯೊಂದನ್ನು ಆರಿಸಿಕೊಳ್ಳಬೇಕಾಗಿದೆ. ಇಂಥಾ ಭಾಷೆಯು ಹಿಂದೀ ಅಥವಾ ಹಿಂದುಸ್ಥಾನಿಯು ಆಗಬಹುದೆಂತ ಮಹಾತ್ಮ ಗಾಂಧಿಯವರೇ ಮುಂತಾದ ಮುಖಂಡರ ಮತವಾಗಿದೆ. ಮೊನ್ನೆ ಬೆಳ್ಗಾಮಿಯಲ್ಲಿ ಆದ ರಾಷ್ಟ್ರೀಯ ಸಭೆಯಲ್ಲು ಮತ್ತು ಗೋರಕ್ಷಣಸಭೆ, ಹಿಂದೂ ಮಹಾಸಭೆ ಮುಂತಾದಸಭೆಗಳಲ್ಲಿ ಹಿಂದೀ ಭಾಷೆಯು ಬಹುಮಟ್ಟಿಗೆ ಉಪಯೋಗಿಸಲ್ಪಟ್ಟಿತು. ಇಂಗ್ಲಿಷ್‌ಭಾಷೆಯು ತಿಳಿಯಬಹುದಾಗಿದ್ದಕ್ಕಿಂತ ಹೆಚ್ಚಿಗೆ ಜನರಿಗೆ ಹಿಂದೀ ಭಾಷೆಯು ತಿಳಿಯುತ್ತಿತ್ತು. ದಕ್ಷಿಣ ಹಿಂದುಸ್ಥಾನದ ದ್ರಾವಿಡ ಭಾಷೆಗಳಾದ ತಮಿಳು, ತೆಲಗು, ಮಲೆಯಾಳ ಮತ್ತು ನಮ್ಮ ಕನ್ನಡ ವಿನಹ ಇತರ ಉತ್ತರ ಹಿಂದುಸ್ಥಾನದ ಎಲ್ಲಾ ಭಾಷಾ ಪ್ರಾಂತ್ಯದವರಿಗೂ ಹಿಂದುಸ್ಥಾನಿಯು ಸುಲಭದಲ್ಲಿ ತಿಳಿಯುತ್ತೆ. ಅಥವಾ ಅಭ್ಯಾಸ ಮಾಡಿಕೊಳ್ಳಬಹುದು. ಅವರ ಅಕ್ಷರಗಳು ಹಿಂದುಸ್ಥಾನಿಯ ಅಕ್ಷರಗಳಿಗೂ ವಿಶೇಷ ವ್ಯತ್ಯಾಸವಿಲ್ಲ ಮತ್ತು ಭಾಷೆಯೂ ಸಹ ಸಂಸ್ಕೃತದಿಂದಲೇ ಹುಟ್ಟಿದ ಭಾಷೆಗಳಾಗಿವೆ. ಮತ್ತು ಹಿಂದುಸ್ಥಾನದ ಸುಮಾರು ಮುನ್ನೂರು ಮಿಲಿಯ ಜನರಲ್ಲಿ 22 ಮಿಲಿಯ ಜನರಿಗೆ ಹಿಂದುಸ್ಥಾನಿಯೇ ಮಾತೃಭಾಷೆಯಾಗಿದೆ. ಆದ್ದರಿಂದ ಇತರ ಭಾಗದ ಜನರು ಮುಖ್ಯವಾಗಿ ದಕ್ಷಿಣಹಿಂದುಸ್ಥಾನದವರು ಹಿಂದುಸ್ಥಾನಿಯನ್ನು ಹೆಚ್ಚಾಗಿ ಅಭ್ಯಾಸ ಮಾಡಿಕೊಳ್ಳುವದು ಅತಿ ಅವಶ್ಯವಾಗಿದೆ. ಮುಸಲ್ಮಾನರ ಬರಹ ಬೇರೆಯಾದರೂ ಹಿಂದುಸ್ಥಾನಿಯು ಅವರಿಗೆ ಸುಲಭವಾಗಿ ಅರ್ಥವಾಗುತ್ತದೆ. ಹಿಂದುಸ್ಥಾನಿಯೆಂತ ಪೇಟೆಗಳಲ್ಲಿ ಈಗ ರೂಢಿಯಲ್ಲಿರುವ ಭಾಷೆಯು ಮುಸಲ್ಮಾನರ ಗ್ರಂಥಗಳ ಭಾಷೆಯಲ್ಲ. ಮುಸಲ್ಮಾನರ ಗ್ರಂಥಗಳ ಭಾಷೆಯು ಉರ್ದುಭಾಷೆಯಾಗಿರುತ್ತದೆ. ಉರ್ದುಭಾಷೆಯೂ ಹಿಂದುಗಳ ಹಿಂದೀಭಾಷೆಯೂ ಮಿಶ್ರವಾಗಿ ಆಗಿರುವ ಭಾಷೆಯೇ ಹಿಂದುಸ್ಥಾನಿ ಭಾಷೆಯಾಗಿದೆ. ಹಿಂದೀ ಭಾಷೆಯನ್ನೇ ಮಹಾತ್ಮ ಗಾಂಧಿಯವರು ಹಿಂದುಸ್ಥಾನಿಯೆಂತ ಕರೆಯುತ್ತಾರೆ. ಹಿಂದುಗಳಿಗೆ ತಮ್ಮ ಮತ ಗ್ರಂಥಗಳು ಸಂಸ್ಕೃತವನ್ನು ಬಿಟ್ಟರೆ ಹಿಂದೀಯಲ್ಲೇ ಹೆಚ್ಚಾಗಿ ದೊರೆಯುವ್ವದಾಗಿದೆ, ವೇದಾಂತದಲ್ಲಿ ಅಭಿರುಚಿ ಇರುವವರು ಹಿಂದೀ ಭಾಷೆಯನ್ನು ಕಲಿತಿರುವವರು ಅನೇಕರು ಇದ್ದಾರೆ. ಹಿಂದೂ ಮತಕ್ಕೆ ಹಿಂದೀ ಭಾಷೆಯು ಬಹಳ ಅವಶ್ಯವಿದೆ ಎಂಬುದಕ್ಕೆ ಹಿಂದೂ ಮಹಾಸಭೆಯ ಉದ್ದೇಶಗಳಲ್ಲಿ ಹಿಂದೀ ಭಾಷೆಯನ್ನು ದೇಶದಲ್ಲೆಲ್ಲಾ ಪ್ರಚುರಗೊಳಿಸಬೇಕಾದದ್ದು ಒಂದಾಗಿ ಇಟ್ಟುಕೊಂಡಿರುವದೇ ಒಂದು ನಿದರ್ಶನವಾಗಿದೆ. ಆದ್ದರಿಂದ ರಾಜಕೀಯ ಕೆಲಸಕ್ಕೂ ಮತ ವಿಚಾರಕ್ಕೂ ಹಿಂದೀ ಭಾಷೆಯೇ ಅನುಕೂಲವಾದದ್ದಾಗಿರುತ್ತೆ. ಸ್ವರಾಜ್ಯ ಸ್ಥಾಪನೆಯಾದ ಮೇಲೆ ಸಹ ಹಿಂದುಸ್ಥಾನದಲ್ಲಿ ಭಾಷಾವಾರು ಪ್ರಾಂತ್ಯಗಳಾದರೂ ಪ್ರಾಂತ್ಯಗಳೊಳಗಿನ ವ್ಯವಹಾರಗಳೆಲ್ಲಾ ಹಿಂದೀ ಭಾಷೆಯಲ್ಲೇ ಆಗಬೇಕಾಗುತ್ತೆ. ಈ ಭಾಷೆಯು ದ್ರಾವಿಡ ದೇಶಗಳ ಪಟ್ಟಣಗಳಲ್ಲಿ ಈಗಲೂ ಅನೇಕರಿಗೆ ತಿಳಿಯುತ್ತೆ. ಹಿಂದೀ ಭಾಷೆಯಲ್ಲಿ ಸಂಸ್ಕೃತ ಶಬ್ದಗಳು ತುಂಬಾ ಇರುವದರಿಂದ ಹಿಂದೀಯನ್ನು ಸಮುದಾಯದ ಜನರು ಅಭ್ಯಾಸ ಮಾಡದೇನೇ ತಿಳಿದುಕೊಳ್ಳಬಹುದು. ಉಚ್ಚ ವಿದ್ಯೆಯನ್ನು ಕೊಡಲು ಪ್ರತಿಯೊಂದು ದೇಶೀಯ ಭಾಷೆಯನ್ನು ಉಪಯೋಗಿಸುವದರ ಬದಲು ಒಂದೇ ಭಾಷೆಯನ್ನು ಉಪಯೋಗಿಸಿದರೆ ವಿಜ್ಞಾನ ಶಾಸ್ತ್ರ ಮುಂತಾದ ಎಲ್ಲಾ ವಿಷಯಗಳನ್ನೂ ಪ್ರತಿಯೊಂದು ದೇಶೀಯ ಭಾಷೆಯಲ್ಲೂ ಬರೆಯಬೇಕಾದ ಅವಶ್ಯವಿರುವದಿಲ್ಲ. ಹಿಂದೀ ಭಾಷೆಯು ಈ ಉದ್ದೇಶಕ್ಕೂ ಉಪಯೋಗಿಸಲ್ಪಡಬಹುದು.

ದಕ್ಷಿಣ ಹಿಂದುಸ್ಥಾನದಲ್ಲಿ ಹಿಂದೀ ಪ್ರಸಾರಕ್ಕಾಗಿ ಶ್ರೀಯುತ ಪುರುಷೋತ್ತಮದಾಸ್ ಟಾಂಡನ್ ಎಂಬವರು ತಿರುಗುತ್ತಿದ್ದಾರೆ. ಮಹಾತ್ಮ ಗಾಂಧಿಯವರ ಮಕ್ಕಳಲ್ಲಿ ಒಬ್ಬರು ಇದೇ ಕೆಲಸದಲ್ಲಿ ಇದ್ದಾರೆ. ನಮ್ಮ ದೇಶದಲ್ಲೂ ಸಹ ಹಿಂದೀ ಭಾಷೆಗೆ ಜನರು ತಕ್ಕಷ್ಟು ಗಮನವನ್ನು ಕೂಡಲೇ ಕೊಡಬೇಕೆಂತ ನಮ್ಮ ಅಪೇಕ್ಷೆಯಾಗಿದೆ.

ಲೇಖನ ವೃತ್ತಿ.

(ಒರೆದು ಓದದ್ದು).

ಲೇಖನ ವೃತ್ತಿಯು ಹಲವು ವಿಧದ್ದಾಗಿದೆಂದು ಅನೇಕರಿಗೆ ತೋರಬಹುದಾದರೂ, ವೃತ್ತ ಪತ್ರಿಕೆಗಳ ಮತ್ತು ಗ್ರಂಥಗಳ ಕುರಿತ ಬರವಣಿಗೆಯೇ ನಮ್ಮ ಈಗಿನ ವಿಚಾರವಾಗಿದೆ. ಪತ್ರಿಕೆಗಳನ್ನು ನಡಿಸುವ ಪದ್ಧತಿಯು ಹಿಂದೂ ದೇಶಕ್ಕೆ ಹೊಸತು. ಈ [illegible] ಆಚರಣೆತಂದ ಯಶಸ್ಸು ಆಂಗ್ಲೇಯರಿಗೆ ಅಥವಾ ಪಾಶ್ಚಾತ್ಯರಿಗೆ ಸಲ್ಲುತ್ತದೆ. ಊರೂರ ವರದಿಯನ್ನು ತರಲಿಕ್ಕೆ ಹಿಂದೆ ನಮ್ಮ ರಾಜರುಗಳು ಸುದ್ದಿಗಾರರನ್ನು ನೇಮಿಸುತ್ತಿದ್ದರು. ಆಗಿನ ಗ್ರಂಥ[illegible] ಕಾಲಪತ್ರಗಳೇ. ಈಗ ಲೇಖನ ವೃತ್ತಿಯು ಹೆಚ್ಚಿನ ವೃದ್ಧಿಸ್ಥಿತಿಗೆ ಬರಲಿಕ್ಕೆ ಮುದ್ರಣ ಯಂತ್ರವೇ ಮೂಲಕಾರಣ. ಮುದ್ರಣ ಯಂತ್ರವು ಚೈನಾ ದೇಶದಲ್ಲಿ ಪ್ರಥಮತ ಕಂಡು ಹಿಡಿಯಲ್ಪಟ್ಟಿದ್ದರೂ, ಲೇಖನ ವೃತ್ತಿಯು ಆ ಊರಲ್ಲಿ ಬೆಳೆಯಲಿಲ್ಲ. ಚೈನಾದವರು ಭಾರತೀಯರಂತೆ ದೇವತಾ ಸ್ವಭಾವದವರಾದುದರಿಂದ, ಶೋಧಕರಿಗೆ ಉತ್ತೇಜನ ದೊರೆಯಲಿಲ್ಲ. ಮುದ್ರಣ ಕಾರ್ಯವನ್ನು ಹಬ್ಬಿಸುವ ವಿಚಾರವು ಜರ್ಮನರ ಮತ್ತು ಆಂಗ್ಲೇಯರ ಪಾಲಿಗೆ ಬೀಳಬೇಕಾಯ್ತು.

ಮುದ್ರಣಕಾರ್ಯವು ಏಳ್ಗೆಗೆ ಬಂದಂತೆ, ವಿದ್ಯೆಯು ಪ್ರಗತಿಯು ಹೆಚ್ಚಿತು. ಅನೇಕರು ಗ್ರಂಥಗಳನ್ನು ಬರೆದು ಹೆಚ್ಚು ಧನ ಸಂಪಾದಿಸಿದರು. ಮೊದಲು ಛಾಪಾದ ಗ್ರಂಥವು ಕ್ರೈಸ್ತರ ಬಾಯಿಬಲ್. ಮುದ್ರಣ ಯಂತ್ರವನ್ನು ರೂಪಿಸಿದ ಜೆ. ಗ್ರುಟನ್‌ಬರ್ಗ್ ಮತ್ತು ಡ. ಕಾಕ್ಸ್‌ಟನ್ ಇವರನ್ನು ನಾವು ಎಂದೂ ಮರೆಯಬಾರದು.

ಒಂದುವೇಳೆ ಮುದ್ರಣಕಾರ್ಯವು ಭರತಖಂಡದಲ್ಲಿ ಪ್ರಾಚೀನ ಕಾಲದಲ್ಲಿ ರೂಢಿಯಲ್ಲಿದ್ದರೆ ಭರತಖಂಡವು ಹೇಗಿರಬಹುದಿತ್ತು? ವೇದೋಪನಿಷತ್ತುಗಳೂ, ಪುರಾಣಗಳೂ, ಧರ್ಮಶಾಸ್ತ್ರಗಳೂ, ಅಂಥವಾದ ಗ್ರಂಥಗಳಾಗಿ ಛಾಪಿಸಲ್ಪಡುತ್ತಿದ್ದವಲ್ಲದೆ, ಅನೇಕ ರಸಿಕ, ಭಯಾನಕ ಹಾಗೂ ಕೌತುಕ ಕಾದಂಬರಿಗಳು ಹೊರಬಿದ್ದು, ಹೆಸರುಗೊಂಡ ಬ್ರಹ್ಮಚರ್ಯವು ಈಗ ಲುಪ್ತವಾಗಿರುವಂತೆ, ಆಗಲೇ ಆಗುತ್ತಿತ್ತು. ಹೆಂಗಸರು ವಿದ್ಯಾವಂತರಾಗಿ ತಮ್ಮ ಪಾತಿವ್ರತ್ಯವನ್ನು ಕಳೆದುಕೊಳ್ಳುತ್ತಿದ್ದರು. ಬ್ರಹ್ಮಚರ್ಯನಾಶವಾದಮೇಲೆ ವರ್ಣಾಶ್ರಮದ ಮಾತಿರುತ್ತಿರಲಿಲ್ಲ. ಈಗ ಪಾಶ್ಚಾತ್ಯರು ಕಾಮ, ಕ್ರೋಧ ಮತ್ತು ಲೋಭಗಳಿಗೆ ಗುಲಾಮರಾಗಿರುವಂತೆ ನಾವೂ ಆಗುತ್ತಿದ್ದೆವು.

ಹಿಂದೂ ದೇಶವು ದೇವರ ಕಡೆಯ ಸುಪಥವನ್ನು ತೋರುವ ಬದಲು, ಲೌಕಿಕರ ಕುಪಥವನ್ನು ತೋರಿಸುತ್ತಿತ್ತು. ಆದರೆ ಈಗ ಮುದ್ರಣಾಲಯಗಳು ಹಿಂದುದೇಶದಲ್ಲಿ ಹೆಚ್ಚಿಲ್ಲವೋ? ಇದರಿಂದ ಲಾಭವುಂಟಾಗಿರುವದಲ್ಲದೆ, ನಷ್ಟವೇನೆಂದು ಕೆಲವರು ಪ್ರಶ್ನಿಸಬಹುದು. ಇದಕ್ಕುತ್ತರವನ್ನು ಅವರವರ ಅಂತರಾತ್ಮನೇ ಕೊಡುವನು. ನವೀನ ನಾಗರೀಕತೆಯ ಕೇಡುಕನ್ನು ದೂರಮಾಡಲಿಕ್ಕಾಗಿಯಲ್ಲವೇ, ರಾಮಕೃಷ್ಣ ಪರಮಹಂಸರು, ವಿವೇಕಾನಂದರು, ದಯಾನಂದ ಸರಸ್ವತಿಯರು ಇತ್ಯಾದಿ ಜ್ಞಾನಿಗಳು ನಮ್ಮಲ್ಲಿ ಅವತರಿಸಿದ್ದು. ಮುದ್ರಣವೃತ್ತಿಯಿಂದ ಐಹಿಕ ವ್ಯಾಪಾರಕ್ಕೆ ಇರುವಷ್ಟು ಲಾಭವು ಆಮುಷ್ಮಿಕ ವ್ಯಾಪಾರಕ್ಕಿಲ್ಲ.

ಸುಧಾರಿಸಿದಮೂಲಕ ನಮಗೆ ಮುದ್ರಣವೃತ್ತಿಯೂ, ಇದನ್ನಾಶ್ರಯಿಸಿರುವ ಲೇಖನ ವೃತ್ತಿಯೂ ಬೇಕೇಬೇಕು. ಆದ

ರು ನೀತಿ ಧರ್ಮಭ್ರಷ್ಟರಾಗುವಂತೆ, ಈ ಕಾರ್ಯಗಳಲ್ಲಿ ಪ್ರವೇಶಿಸುವುದುತ್ತಮ. ಕನ್ನಡದ ವಿಚಾರವಾಗಿ ಮಾತಾಡುವುದಾದರೆ, ಇತ್ತೀಚೆಗಾಗಿ ಅನೇಕ ವಿಪ್ಲವಾತ್ಮಕ ಕಾದಂಬರಿಗಳು ಹೊರಟಿರುವುದು ತೋರುವುದು. ಇಂಥ ಕಾದಂಬರಿಗಳನ್ನು ಬರೆಯುವುದರ ಬದಲು ಕರ್ನಾಟಕದ ಚರಿತ್ರೆ, ಭೂಗೋಳ, ಶಿಲ್ಪವಿದ್ಯೆ ವಿಷಯ ಬರೆಯ ಬಹುದಿತ್ತು. ಮತ್ತು ಈಗಿನ ಮಕ್ಕಳು ಮುಂದಿನ ಪ್ರಜೆಗಳು ಎಂಬುದನ್ನರಿತು ಮಕ್ಕಳಿಗೆ ಯೋಗ್ಯವಾದ ಪುಸ್ತಕಗಳನ್ನು ಬರೆಯಬಹುದಿತ್ತು. ಇತ್ತೀಚೆಗೆ ಆಂಧ್ರರು ಒಳ್ಳೊಳ್ಳೇ ಗ್ರಂಥಗಳನ್ನು ಓದಿ ತಮ್ಮ ಮಕ್ಕಳನ್ನು ಯೋಗ್ಯಪ್ರಜೆಗಳನ್ನಾಗಿ ಮಾಡುತ್ತಿಲ್ಲವೇ? ನಮ್ಮ ಕರ್ನಾಟಕರು ಇನ್ನ್ಯಾವಾಗ ಜಾಗ್ರತೆಗೆ ಬರುವರೋ ನಮಗೆ ತೋಚದು. ಧಾರವಾಡದ ಕನ್ನಡ ಮೈಸೂರಿನವರಿಗೆ ಬೇಡ, ಕೊಡಗಿನವರಿಗೆ ಯಾವುದೂ ಬೇಡ. ತಂತಮ್ಮದೇ ಶ್ರೇಷ್ಠ ಎಂಬಿತ್ಯಾದಿ ಒಣ ಹಠಬೆಯ ಮಾತುಗಳೇ ಕರ್ನಾಟಕದ ವಾತಾವರಣದಲ್ಲಿ ತುಂಬಿಕೊಂಡಿವೆ. ಈಗೀಗ ಧಾರವಾಡದವರು ಉತ್ತಮಗ್ರಂಥಗಳನ್ನು ಮೈಸೂರಿನ ಹಳಬ್ರ ವಾಕ್ಯರಚನೆಗಳಿಂದ ಬರೆಯುತ್ತಿದ್ದಾರೆ. ಸಾಹಿತ್ಯ ಚಟುವಟಿಕೆಗಳು ಬಹಳವಾಗಿ ನಡೆದಿವೆ. ಕರ್ನಾಟಕವು ಛಿನ್ನ ವಿಚ್ಛಿನ್ನವಾಗಿರುವುದರಿಂದ ಈಗ ಕಲಹಗಳುಂಟು. ಇದಕ್ಕೆ ಏಕತ್ವ ಉಂಟಾದೊಡನೆ ಉತ್ತರೋತ್ತರ ಪ್ರವೃದ್ಧಿಯನ್ನು ಹೊಂದುವುದರಲ್ಲಿ ಸಂದೇಹವೇನಿದೆ? ಇಂಥಾ ಏಕತ್ವಕ್ಕೆ ಲೇಖನವೃತ್ತಿಯು ಬಹಳ ಸಹಾಯ ಮಾಡತಕ್ಕದ್ದಿರುತ್ತದೆ. ಎಲ್ಲ ಕರ್ನಾಟಕರು ಹೊಂದಿ ನಡೆಯುವುದು ಈಗ ಸಿಗ್ಗರವಿದೆ.

ಕರ್ನಾಟಕದ ಧಾರವಾಡದಲ್ಲಿ ಲೇಖನ ವೃತ್ತಿಯು ಮುಂದರಿದಿರುವಂತೆ, ಇನ್ನಾವ ಭಾಗದಲ್ಲಿಯೂ ಇಲ್ಲ. ದಿನ ದಿನಕ್ಕೊಂದು ಹೊಸ ಹೊಸ ಪತ್ರಿಕೆಯನ್ನು ಧಾರವಾಡ ಪ್ರಾಂತದವರು ಹೊರಡಿಸುತ್ತಿರುವರು. ಕೊಡಗಿನಲ್ಲಿ ಈಗೀಗ ಲೇಖನ ವೃತ್ತಿಯ ಜಾಗೃತಿ ಉಂಟಾಗಿದೆ. ಕೊಡಗು ಪತ್ರಿಕೆಯು ಕೊಡಗಿಗಾಗಿ ಮಾಡಿರುವ ಸೇವೆಯನ್ನು ಎಷ್ಟು ಹೊಗಳಿದರೂ ಸಾಲದು. ಈ ಪತ್ರಿಕೆಗೆ ನೇರ್ಪಿನ ಹಾದಿ ಇಲ್ಲವೆಂದು ಹೀಯಾಳಿಸುವರು. ನ್ಯೂನತೆಗಳು ಎಲ್ಲ ಪತ್ರಿಕೆಗಳಿಗೂ ಉಂಟು. ಆದರೆ ಈ ಪತ್ರಿಕೆಯು ಜಾತಿ ಮತ್ಸರವನ್ನು ತ್ಯಜಿಸಿ ದೇಶದ ಅಭ್ಯುದಯಕ್ಕೆ ಕೆಲಸ ಮಾಡುತ್ತಿದೆಂಬುದು ನಮಗೆಲ್ಲರಿಗೂ ತಿಳಿದಿದೆ. ಕೊಡಗಿಗೆ ಒಂದೇ ಪತ್ರಿಕೆ ಸಾಲದು. ಮೂರು ನಾಲ್ಕಾದರೂ ಅವಶ್ಯ. ... ವಿದ್ಯಾರ್ಥಿಯರ ತ್ರೈಮಾಸಿಕ ಪತ್ರಿಕೆಯೊಂದುಂಟು. ... ವಿಷಗಳು ಪ್ರಶಂಸನೀಯವಾದುವು. ಪತ್ರಿಕೆಯೂ ಅಚ್ಚುಕಟ್ಟಾಗಿದೆ. ಉತ್ತರ ಕೊಡಗಿನವರು ಸೋಮವಾರಪೇಟೆಯಿಂದ ಒಂದು ಪತ್ರಿಕೆಯನ್ನು ಹೊರಡಿಸುವುದು. ವೀರಾಜಪೇಟೆಯಿಂದ "ಲೋಕ ರಹಸ್ಯ" ವೆಂಬ ಮಾಸಿಕ ಪತ್ರಿಕೆಯು ಹೊರಟಿದೆ. ಸಂಪಾದಕರೂ ಚಾಲಕರೂ ಒಬ್ಬರೇ ಇದ್ದು ಮೆ. ನಾರಾಯಣರಾಯರನ್ನು ಅಭಿನಂದಿಸುತ್ತೇವೆ. ಈ ಪತ್ರಿಕೆಗೆ ಸಕಲ ಶ್ರೇಯಸ್ಸು ದೊರಕಲೆಂದು ನಮ್ಮ ಅಪೇಕ್ಷೆ. ಆದರೆ ಈ ಪತ್ರದ ವಿಚಾರ ಅಲ್ಪ ಸ್ವಲ್ಪ ಅನುಮಾನ ತೋರುತ್ತದೆ. ಪತ್ರದಲ್ಲಿ ಇತರರ ಲೇಖನಗಳು ಇಲ್ಲ. ಆದ್ದರಿಂದ ಎಲ್ಲ ಲೇಖನಗಳು ಕಾಯಲ್ಪಟ್ಟಿವೆ ತನ್ನ ಕಾಲಿನ ಮೇಲೆ ಬಹುಕಾಲ ಯಾವ ಪತ್ರವೂ ನಿಲ್ಲಲಾರದು. ಇದಕ್ಕೆ ಜನ ದಾದಾರರ ಸಹಾಯವೂ, ಬರಹಗಾರರ ಸಹಾಯವೂ ಬೇಕು. ಪತ್ರವು ವಿಶ್ವಕೋಶದಂತಿದೆ. ಇತರ ಪತ್ರಿಕೆಗಳ ಸಂಪಾದಕರು ಪತ್ರದ ಭಾರವನ್ನೆಲ್ಲಾ ತಾವೇ ಹೊತ್ತುಕೊಂಡಿಲ್ಲ. ಅವರು ಬೇರೆ ಲೇಖಕರ ಮೇಲೆ ಭಾರವನ್ನು ಸಮನಾಗಿಯೇ ಹಾಕಿರುತ್ತಾರೆ. 'ಲೋಕ ರಹಸ್ಯ' ವು ನವೀನವಾದದ್ದೇ ಸರಿ.

ಹಿಂದೂ ದೇಶದಲ್ಲಿ ಎಷ್ಟೋ ಪತ್ರಗಳು ಹುಟ್ಟಿದವು; ಆರು ತಿಂಗಳಾಗುವುದರ ನೊಳಗೇ ಮುಳುಗಿದುವು. ಹೀಗಾಗಲಿಕ್ಕೆ ಯಾರ ತಪ್ಪು? ಸಂಪಾದಕರ ಇಲ್ಲವೆ ಚಂದಾದಾರರ ತಪ್ಪೋ? ಅಥವ ಜನರ ಗರೀಬತನವೋ? ಪತ್ರಿಕೆಯ ಸ್ಥಿತಿಗತಿಯನ್ನು ನೋಡಿದರೆ, ಯಾವುದು ನಿಜವಾದ ಕಾರಣವೆಂದೆನ್ನಲಾಗುತ್ತೆ. ಮೊದಲು ಪತ್ರಿಕೆ ಮೊದಲಬಂದ್ದು ಬಂಗಾಳದಲ್ಲಿ. ಅಲ್ಲಿನ 'ಅಮೃತ ಬಜಾರ' ಪತ್ರಿಕೆ ಇಂದಿನವರೆವಿಗೂ ಇದೆ. ಅದಕ್ಕೆ ಲೇಖಕರನ್ನು ತಂದವರು ಬಾಬು ಶಿಶಿರಕುಮಾರ ಘೋಷರು ಮತ್ತು ಮೋತಿಲಾಲ ಘೋಷರು. ಇವರಿಗೆ ಸ್ವಂತ ಛಾಪಾಖಾನ ಇದ್ದದ್ದರಿಂದ ಇವರ ಪತ್ರವು ದೈನಿಕ ಪತ್ರವಾಯಿತು. ಛಾಪಾಖಾನ ಇದ್ದರೂ ಸಾಲದು, ಸಂಪಾದಕನಿಗೆ ಸ್ವಾರ್ಥಪರತ್ಯಾಗ, ಜೊತೆಗೆ ಹಣವೂ ಬೇಕು. ಲೇಖನ ವೃತ್ತಿಯು ಸುಲಭವಾದುದಲ್ಲ. ಓದುಗರೇ ಚಾಹೀರಾತುಗಳಿಂದ ಪತ್ರಿಕೆಯನ್ನು ನಡೆಸಲಾಗುತ್ತೆಂಬ ಮಾತು ಸುಳ್ಳು. ಹಿಂದೂ ದೇಶದಲ್ಲಿ ಕೈಗಾರಿಕೆಗಳು ಕಡಿಮೆ. ಈಗೀಗ ಅಲ್ಲೊಂದು, ಇಲ್ಲೊಂದು ಮೂಡುತ್ತಿವೆ. ಹೀಗಿರುವಲ್ಲಿ ಜಾಹಿರಾತುಗಳೆಲ್ಲಿಂದ? ಒಂದುವೇಳೆ ಔಷಧಿಯ ಚಾಹೀರಾತು ಸಿಕ್ಕಬಹುದು. ಅಮೇರಿಕಾ ದೇಶದ 'ಗ್ಲೋಬ್' ಪತ್ರದ ಸಂಪಾದಕರು, ಮೊದಲು ಗರೀಬರಿದ್ದರು. ಈ ಪತ್ರವನ್ನೇ ಮಾರ್ಗದಲ್ಲಿ ನಿಂತು ಮಾರುತ್ತಿದ್ದರು. ಅನಂತರ ಜಾತ್ರೀದಾರರಾಗಿ ನೇಮಿಸಲ್ಪಟ್ಟರು. ಇವರ ಕರ್ತೃತ್ವವನ್ನು ನೋಡಿ ಮೊದಲಿನ ಸಂಪಾದಕನು ತನ್ನ ಸಹಾಯಕನನ್ನಾಗಿ ಮಾಡಿಕೊಂಡನು. ಇವರು ಈಗ ದೊಡ್ಡ ಎಡಿಟರಾಗಿದ್ದಾರೆ. ವಾಚಕರೇ! ಸಂಪಾದಕತ್ವವು ಎಷ್ಟು ಕಷ್ಟತರದ ಕೆಲಸ! ಸಂಪಾದಕನು ನೇರ್ಪಾದಿಷ್ಠನಾಗಿಯೂ, ನಿರಭಿಮಾನ ಕಾರನಾಗಿಯೂ, ತಾಳ್ಮೆಯುಳ್ಳವನಾಗಿಯೂ ಇರಬೇಕು. ದೇಶದ ಸಮಸ್ತ ಚಳವಳಿಗಳನ್ನು ಪರವೆಯ ಹಿಂದಿನಿಂದ ನೋಡುವ ಯೋಗ್ಯತೆಯುಳ್ಳವನಾಗಿರಬೇಕು. ಇವನ ಪ್ರತಾಪವು ರಾಜನನ್ನು ನಡುಗಿಸುವಂತದ್ದು. ನಿಜವಾದ ಅರಸನೇ ಈತನು. ಅಂದಮೇಲೆ, ಲೇಖನ ವೃತ್ತಿಯು ಎಷ್ಟು ಬಹುಮಾನಕರವಾದದ್ದು ನೀವೇ ಊಹಿಸಿರಿ.

ಕೊಡಗಿನಲ್ಲಿ ಕನ್ನಡದಲ್ಲಿಯಾದರೂ ಲೇಖನ ವೃತ್ತಿಯು ಮುಂದರಿದಿರುವುದಿಲ್ಲ. ಇಂಥಾ ಸ್ಥಿತಿಗೆ ಈಗಿನ ವಿದ್ಯಾರೀತಿಯೇ ಕಾರಣವಾಗಿದೆ. ಜನರಿಗೆ ಇಂಗ್ಲಿಷಿನ ಮೇಲೆ ಇರುವಷ್ಟು ಪ್ರೇಮ ಕನ್ನಡದ ಮೇಲೆ ಇಲ್ಲ. ಇನ್ನಾದರೂ ಈ ಗಿನವರು ಲೇಖನ ವೃತ್ತಿಯನ್ನು ಅಭ್ಯಾಸಿಸುವುದು ಶ್ರೇಯಸ್ಕರ

"ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧತ"

'ಲೋಕಬಂಧು'

ಬೆಳಗಾಂ ಕಾಂಗ್ರೆಸ್.

(ಮುಂದುವರಿದ್ದು)

ಸ್ವಯಂ ಸೇವಕರು.—ರೈಲಿನಿಂದ ಇಳಿದಕೂಡಲೆ ಖಾಕಿ ಬಿಸ್ತರಿನ ಯೂನಿಫಾರಂ ಹಾಕಿದ ಕೆಲವರು ಬಂದು ಸಾಮಾನುಗಳನ್ನು ಸಾಗಿಸಲಿಕ್ಕೆ ಕೂಲಿಗಳನ್ನು ಕರೆತ್ತೇವೆ, ಇಲ್ಲಿ ಸ್ವಲ್ಪ ನಿಂತುಕೊಳ್ಳಿರಿ ಎಂದು ಹೇಳಿ ನಮ್ಮಲ್ಲಿ ಕೆಲವರನ್ನು ರೈಲ್ವೆ ಸ್ಟೇಶನಿನ ಸಮೀಪವಿದ್ದ ವಿಚಾರದ ಆಫೀಸಿಗೆ ಕರೆದುಕೊಂಡು ಹೋಗಿ ಅಲ್ಲಿಂದ ಕರ್ನಾಟಕದ ಉಳಕೊಳ್ಳುವ ಸ್ಥಳದ ವಿರ್ಮಾಣದ ಆಫೀಸಿಗೆ ತಲುಪಿಸಿ ಅಲ್ಲಿ ನಮ್ಮವರಿಗೆ ಬೇಕಾದ ಡೇರೆಗಳ ಟಿಕೇಟುಗಳನ್ನೂ ಲಾಂದ್ರಗಳನ್ನೂ ತೆಗೆದುಕೊಂಡನಂತರ ನಮ್ಮನ್ನು "ಕೊಡಗು" ಎಂದು ಗುರ್ತಿಸಿದ್ದ ಡೇರೆಗೆ ತಂದುಬಿಟ್ಟರು. ಇಷ್ಟರಲ್ಲಿ ಸ್ಟೇಶನಿನಲ್ಲಿದ್ದ ನಮ್ಮ ಸಾಮಾನುಗಳನ್ನೂ ಬಾಕಿ ಜನರನ್ನೂ ನಮ್ಮ ಡೇರೆಗೆ ಖಾಕಿ ಯೂನಿಫಾರಂನ ಇನ್ನು ಕೆಲವರು ತಂದುಬಿಟ್ಟಿದ್ದರು. ಇಂಥಾ ಯೂನಿಫಾರಂನವರೇ ದಾರಿಯುದ್ದಕ್ಕೂ ರಸ್ತೆಯಲ್ಲಿ ನಿಂತುಕೊಂಡು ಜನರನ್ನೂ ವಾಹನಗಳನ್ನೂ ಎಡಕ್ಕೆ ಹೋಗಿರೆಂದು ಸೂಚನೆ ಕೊಡುತ್ತಿದ್ದರು. ಇವರೇ ಸ್ವಯಂ ಸೇವಕ ದಳದ ಸೈನಿಕರೆಂದು ತಿಳಿಯಲಾಯಿತು. ಇವರ ಸೇನಾಧಿಪತಿಯು ಹುಬ್ಬಳ್ಳಿಯ ಡಾಕ್ಟರ್ ಹಾರ್ಡೀಕರರಾವರು. ಈ ಸೈನಿಕರ ಸಂಖ್ಯೆಯು ಸಾವಿರದ ಮೇಲಿತ್ತು. ಇವರಲ್ಲದೆ ಕಪ್ಪು ಬಣ್ಣದ ಮತ್ತು ಸ್ವರಾಜ್ಯ ಬಾವುಟದ ಬಣ್ಣದ ಅಂಚುಳ್ಳ ಸೀರೆಯ ಯೂನಿಫಾರಂ ಧರಿಸಿದ್ದ ಸ್ತ್ರೀಯರ ಸ್ವಯಂ ಸೇವಕರ ದಳ ಒಂದು ಬೇರೆ ಇತ್ತು. ಇವರು ಸುಮಾರು 15೦ರ ಮೇಲಿದ್ದರು. ಇವರು ಸ್ತ್ರೀ ಅತಿಥಿಗಳ ಏರ್ಪಾಟನ್ನು ತೆಗೆದುಕೊಳ್ಳುತ್ತಿದ್ದರು. ಸ್ವಯಂ ಸೇವಕರ ಉಳಕೊಳ್ಳುವ ಸ್ಥಳವು ಪಟ್ಟಣದೊಳಗೆ ಬೇರೆ ಇತ್ತು. ಅದಕ್ಕೆ ಸ್ವಯಂ ಸೇವಕರ ಶಿಬಿರವೆಂದರ "ಬ್ಯಾರಕ್ಸ್" ಎಂದು ಬೋರ್ಡ್ ಹಾಕಿದ್ದರು. ಬ್ಯಾರಕ್ಸಿನಲ್ಲಿ ಆಗುವಂತೆಯೇ ಬೆಳ್ಳು ದಳಕ್ಕೆ ಸೂಚನೆಗಳನ್ನು ಕೊಡುವ ತುತ್ತೂರಿ ಶಬ್ದಗಳು ಆಗುತ್ತಿದ್ದವು. ಬೆಳಗ್ಗಿನ ಜಾವದಲ್ಲಿ ನಾಲ್ಕು ಗಂಟೆ ಸಮಯಕ್ಕೆ ಈ ಶಬ್ದ ಆದಕೂಡಲೆ ಗಡಗಡ ನಡುಗುವ (ಮಡಿಕೇರಿ ಚಳಿಗಿಂತಲೂ ಹೆಚ್ಚಾದ) ಚಳಿಯಲ್ಲಿ ಅವರು ಕವಾತು ಮಾಡುವ ಮೈದಾನದಲ್ಲಿ ಸೇರುತ್ತಿದ್ದರು. ಅಲ್ಲಿ ಒಂದು ಎತ್ತರವಾದ ಧ್ವಜಸ್ತಂಭವಿತ್ತು. ಅವರು ಅಲ್ಲಿ ಸ್ವಲ್ಪ ಹೊತ್ತು ಕವಾತು ಮಾಡಿದನಂತರ ಒಂದು ದೊಡ್ಡ ಸ್ವರಾಜ್ಯದ ಬಾವುಟವನ್ನು ಸೇನಾಧಿಪತಿಯು ಸ್ತಂಭದ ಮೇಲಕ್ಕೆ ಏರಿಸುತ್ತಿದ್ದರು. ಹೀಗೆ ಏರಿಸುವ ಕೆಲಸವನ್ನು ಒಂದು ದಿನ ಮಹಾತ್ಮ ಗಾಂಧಿಯವರೇ ಮಾಡಿದರು. ಆಗ್ಯ ಸ್ವಯಂ ಸೇವಕರೂ, ಸೇವಕಿಯರೂ, ಆ ಸ್ತಂಭದ ಸುತ್ತಲೂ ಸಾಲಾಗಿ ನಿಂತು ಭಾರತ ಮಾತೆಯ ಹಾಡನ್ನು ಹಾಡುತ್ತಾ ನಮಸ್ಕರಿಸುತ್ತಾ ನಿಲ್ಲುತ್ತಿದ್ದರು. ಈ ನೋಟವನ್ನು ನೋಡಲಿಕ್ಕಾಗಿ ದಿನಂಪ್ರತಿ ಸಾವಿರಾರು ಜನರು ಚಳಿಗೆ ಹೆದರದೆ ಅಲ್ಲಿಗೆ ತುಮುಕುತ್ತಿದ್ದರು. ಇದಾದನಂತರ ಆ ಸೈನಿಕರು ತಮ್ಮ ತಮಗೆ ನಿರ್ಣಯಿಸಲ್ಪಟ್ಟ ಬೇರೆ ಬೇರೆ ಕೆಲಸಗಳಿಗೆ ಹೋಗುತ್ತಿದ್ದರು. ಸ್ವಯಂ ಸೇವಕ ಸೇವಕಿಯರು ನ್ಯಾಯಾಸನಕ್ಕೆ ಬರುವಾಗಲೂ, ಕವಾತು ಮಾಡುವಾಗಲೂ, ವಾಸಸ್ಥಾನಕ್ಕೆ ಹೋಗುವಾಗಲೂ, ಬ್ಯಾಂಡ್ ಬಾರಿಸುತ್ತಿದ್ದರು. ಈ ಶಬ್ದವೇ ಅನೇಕರನ್ನು ಅಲ್ಲಿಗೆ ಆಕರ್ಷಿಸುತ್ತಿತ್ತು. ಸ್ವರಾಜ್ಯ ಬಾವುಟವನ್ನು ಕೆಂಪು, ಹಚ್ಚೆ ಮತ್ತು ಬಿಳೀ ಬಣ್ಣಗಳ ಖದ್ದರ ಬಟ್ಟೆಯಿಂದ ಮಾಡಿದ್ದರು. ಅದರಲ್ಲಿ ಚರಕದ ಚಿತ್ರವಿತ್ತು. ಈ ಸೈನ್ಯದ ಕೆಲವು ಆಫೀಸರುಗಳು ಕುದುರೆಯ ಮೇಲೂ, ಇನ್ನು ಕೆಲವರು ಬೈಸಿಕಲ್ಲಿನ ಮೇಲೂ ಸವಾರಿ ಮಾಡುತ್ತಿದ್ದರು. ಎಲ್ಲಿ ನೋಡಿದರೂ ಸ್ವಯಂ ಸೇವಕರನ್ನು ಕಾಣುತ್ತಲೇ ಇತ್ತು. ಅವರ ದೃಷ್ಟಿಬೀಳದ ಸ್ಥಳವೇ ಇಲ್ಲ. ರಸ್ತೆಗಳಲ್ಲಿಯೂ, ಕಾನ್ಫರನ್ಸುಗಳಲ್ಲಿಯೂ, ವಾಸದ ಡೇರೆಗಳ ಮುಂದುಗಡೆಯಲ್ಲಿಯೂ, ಸ್ನಾನ ಮಾಡುವಲ್ಲಿಯೂ, ಊಟದ ಸ್ಥಳದಲ್ಲಿಯೂ, ಯಾಕೆ, ಕಕ್ಕಸಗಳ ಎದುರಿನಲ್ಲಿಯೂ ಸಹ ಅವರು ಎಲ್ಲವೂ ಸರಿಯಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದರು. ಅವರು ಹೇಳಿದಂತೆ ಕೇಳದವರಿಗೆ ಮುಖಂ ಮಾಡುವವರ ಹಾಗೆ ಬಹುಧೈರ್ಯದಿಂದ ಬೇಡಿಕೊಂಡು ತಮ್ಮ ಇರಾದೆಯನ್ನು ನಡಿಸಿಕೊಳ್ಳುತ್ತಿದ್ದರು. ವಾಸದ ಡೇರೆಗಳ ಮುಂದೆ ಇಡೀ ರಾತ್ರಿಯೆಲ್ಲಾ ಇವರು ಪಾರ ಇರುತ್ತಿದ್ದರು. ಇಂಥಾ ಪಾರದವರನ್ನು ಎರಡು ಗಂಟೆಗೊಂದುಸಾರಿ ಬದಲಿಸುತ್ತಿದ್ದರು. ಬಜಾರಗಳಿಗೆ ನ್ಯಾಯವಾದ ಬಾಗಿಲುಗಳು ಇರದಿದ್ದರೂ ಕೂಡ ಅವುಗಳಲ್ಲಿ ಸಾಮಾನುಗಳನ್ನು ಇಟ್ಟು ಜನರು ಹೊರಗೆ ಹೋಗಿರುವಾಗಲೂ ಯಾವದೊಂದೂ ಕಾಣೆಯಾಗುತ್ತಿರಲಿಲ್ಲ. ಪೋಲೀಸಿನವರು ಯಾರೂ ಕಾಂಗ್ರೆಸ್ಸ ಕ್ಯಾಂಪಿನಲ್ಲಿ ಇರಲೇ ಇಲ್ಲ. ಅಷ್ಟುದೊಡ್ಡ ಜನಸಂಖ್ಯೆ ಸೇರಿದ್ದ ಸ್ಥಳದಲ್ಲಿ ಯಾವದೊಂದೂ ತೊಂದರೆಗಳುಂಟಾಗದಂತೆ ಹಗಲಿರುಳು ಎಚ್ಚರ ತೆಗೆದುಕೊಂಡ ಸ್ವಯಂಸೇವಕ, ಸೇವಕಿಯರ ದಂಡದ ಕೆಲಸವು ಸ್ತೋತ್ರಾರ್ಹವಾದದ್ದೇ. ಇವರ ಉತ್ಸಾಹ ರಣೆಯನ್ನು ಹೇರಕಡೆಯವರೂ ಹಿಂಬಾಲಿಸತಕ್ಕದ್ದಾಗಿದೆ. ದೇಶಸೇವಕ ಇವರಂತೆ ಮನಸ್ಸನ್ನು ಅಧೀನದಲ್ಲಿಟ್ಟುಕೊಂಡವರು ಅನೇಕರು ಬೇಕಾಗಿದೆ. ಇಂಥವರಿಂದಲೇ ಸ್ವರಾಜ್ಯ ಪ್ರಾಪ್ತಿಯು ಸುಲಭವಾಗುವುದು.

ಭಜನೆಗಳು—ಆಯಾಯ ಪ್ರಾಂತ್ಯದ ಪ್ರತಿನಿಧಿಗಳು ಗುಂಪುಕೂಡಿಕೊಂಡು ಬೆಳಗ್ಗಿನ ಜಾವದಲ್ಲಿ ಅವರವರ ಭಾಷೆಯಲ್ಲಿ ರಾಷ್ಟ್ರಗೀತೆಗಳನ್ನು ಮನಸ್ಸು ಶೋಧಿಸುವಂತೆ ಹಾಡುತ್ತಾ ಕ್ಯಾಂಪಿನ ಬೀದಿಗಳಲ್ಲೆಲ್ಲಾ ಪ್ರದಕ್ಷಿಣೆಬಂದು ಸ್ವರಾಜ್ಯ ಬಾವುಟ ಇದ್ದೆಡೆಗೆ ಹೋಗಿ ನಮಸ್ಕರಿಸಿ ತಮ್ಮ ತಮ್ಮ ಬಿಡಾರಗಳಿಗೆ ಹೋಗುತ್ತಿದ್ದರು. ಈ ಭಜನೆ ಪಾರ್ಟಿಗಳಿಂದ ಜನರ ಉತ್ಸಾಹವು ಎಷ್ಟರಮಟ್ಟಿಗೆ ತುಂಬಿ ತುಳುಕುತ್ತಿತ್ತೆಂದು ಕಂಡುಬರುತ್ತಿತ್ತು.

ಆಫೀಸುಗಳು—ಮೇಲೆ ಸೂಚಿಸಿದ, ವಿಚಾರದ ಆಫೀಸು, ಉಳಕೊಳ್ಳುವ ಸ್ಥಳದ ನಿರ್ಮಾಣದ ಆಫೀಸುಗಳಲ್ಲದೆ ಕಾಂಗ್ರೆಸ್ಸಿನ ಸಬ್ಜೆಕ್ಟ್ ಕಮಿಟಿಯ ಜನರಲ ಸೆಕ್ರೆಟರಿ ಸೆಂಟ್ರಲ್ ಇನ್‌ಕ್ವಯರಿ ಆಫೀಸು, ಟಿಕೇಟುಕೊಡುವ ಆಫೀಸು, ಪೋಸ್ಟ್ ಮತ್ತು ಟೆಲಿಗ್ರಾಫ್ ಆಫೀಸುಗಳೂ ಅನುಕೂಲವಾಗಿ ಏರ್ಪಡಿಸಲ್ಪಟ್ಟಿದ್ದುವು. ವಿಜಯನಗರ ಸ್ಟೇಷನಿನಬಳಿ ರೈಲ್ವೆ ಟಿಕೇಟು ಆಫೀಸೂ ಇತ್ತು. ಸ್ವಾಗತ ಕಮಿಟಿಯವರು ಕಟ್ಟಿಸಿದ್ದ ತಟ್ಟಿಯ ಡೇರೆಗಳಲ್ಲಿ ಅನೇಕರು ಬಾಡಿಗೆ ಕೊಟ್ಟು ಅಂಗಡಿಗಳನ್ನೂ ಹೋಟೆಲುಗಳನ್ನೂ ಇಟ್ಟಿದ್ದರು.

ಚರ್ಖಾಲಯ—ಮಹಾತ್ಮರು ಉಳಕೊಂಡಿದ್ದ 'ವಿದ್ಯಾರಣ್ಯಾಶ್ರಮದ' ಸಮೀಪ ಒಂದು ದೊಡ್ಡ ಚಪ್ಪರವನ್ನು ಹಾಕಿ ಅದರೊಳಗೆ ಸುಮಾರು 150 ಚರಖಾಗಳನ್ನು ಇಟ್ಟಿದ್ದರು. ಅಲ್ಲಿ ಅನೇಕರು ಬಂದು ನೂಲುವಾಡುತ್ತಿದ್ದರು. ಅಲ್ಲಿಯೇ ನೂಲು ಎಳೆಯುವ ಮೇಲಾಟವು ನಡೆಯಿತು. ಅದರಲ್ಲಿ ಗೆದ್ದ ಇನಾಮುಗಳು ದೊರಕಿದವರ ಹೆಸರುಗಳನ್ನು ಮಹಾತ್ಮರು ಕಾಂಗ್ರೆಸ್ಸಿನಲ್ಲಿ ಓದಿ ಹೇಳಿದರು. ಇದಲ್ಲದೆ ಅದರ ಬಳಿ ರಾತ್ರಿಹೊತ್ತು ಖದ್ದರಿನ ಮಹತ್ವದ ವಿಷಯವಾಗಿಯೂ, ಸ್ವದೇಶೀಬಟ್ಟೆಯನ್ನು ಬಿಟ್ಟು ಪರದೇಶ ಬಟ್ಟೆಯ ಉಪಯೋಗದಿಂದುಂಟಾಗುವ ನಷ್ಟಗಳನ್ನು ಸೂಚಿಸಿಯೂ ಕಸ್ಸಿರತ್ತಾದೊಬ್ಬರು ಲ್ಯಾಂಟರ್ನ್ ಲೆಕ್ಚರುಗಳನ್ನು ಮಾಡುತ್ತಿದ್ದರು.

ಪ್ರದರ್ಶನ—ಒಂದುಕಡೆ ಸ್ವದೇಶಿ ಕೈಗಾರಿಕೆಯ ಸಾಮಾನುಗಳ ಪ್ರದರ್ಶನವೂ ಇತ್ತು. ನಾಲ್ಕಾಣೆ ಟಿಕೇಟು ತೆಗೆದುಕೊಂಡು ಅದರೊಳಗೆ ಹೋದಲ್ಲಿ ಅಲ್ಲಿ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಕೈನೂಲಿನಿಂದ ಮಾಡಿದ ಖದ್ದರಬಟ್ಟೆ ಕೈಗಾರಿಕೆಯ ಕುಶಲತೆಯೂ ಪ್ರಾಮುಖ್ಯವಾಗಿ ಕಾಣುತ್ತಿತ್ತು. ಕೆಲವು ಬಟ್ಟೆಗಳನ್ನು ನೋಡಿದರೆ ಕೈಯಿಂದ ಅಷ್ಟು ಹಸನಾದ ನೂಲುವಾಡಲು ಸಾಧ್ಯವೋ ಎಂಬ ಸಂಶಯವು ಅನೇಕರಿಗೆ ಹುಟ್ಟುತ್ತಿತ್ತು. ಹತ್ತಿಹಿಂಜುವುದು, ನೂಲುವಾಡುವ ಮತ್ತು ಬಟ್ಟೆ ನೇಯುವ ಕೆಲಸಗಳನ್ನೂ ಅಲ್ಲಿ ಮಾಡಿ ತೋರಿಸುತ್ತಿದ್ದರು. ಮಹಾತ್ಮ ಗಾಂಧಿಯವರ ಶಸ್ತ್ರ ಕ್ರಿಯೆಯನ್ನು (ಆಪರೇಷನ್) ಪ್ರತ್ಯಕ್ಷ ತೋರಿಸುವಂತೆ ಜೀವಗಾತ್ರದ ರೂಪದಲ್ಲಿ ಬೊಂಬೆಗಳನ್ನು ಮಾಡಿ, ಅದನ್ನು ವಿದ್ಯುಚ್ಛಕ್ತಿಯಿಂದ ಚಲಿಸುವಂತೆ ಏರ್ಪಡಿಸಿದ ಬೊಂಬಾಯಿ ಕರಾಚಿ ಕೆ ಶಿಲ್ಪರಾದ ಘಾಟ್ಕೆಯವರ ವಿದ್ಯೆ ಚಮತ್ಕಾರವನ್ನು ನೋಡಲು ನುಗ್ಗುತ್ತಿದ್ದ ಜನರ ತುಮುಲ ತಡೆಯಲಾರದಾಗುತ್ತಿತ್ತು. ಈ ಹಸ್ತ ನೈನೊಳಗೆ ಇಡಲ್ಪಟ್ಟಿದ್ದ ಬೇರೆ ಕೆಲವು ಬೊಂಬೆಗಳು ಬಹು ಚನ್ನಾಗಿ ಮಾಡಲ್ಪಟ್ಟಿದ್ದವು. ಪ್ರದರ್ಶನ ಕ್ಯಾಂಪಿನ ಹೊರಗಡೆಯಲ್ಲಿ ಬೆಸಂಟಿಯಾವರ ಡೇರೆ ಒಂದನ್ನು ಏರ್ಪಡಿಸಿದ್ದರು. ಇದರ ಪ್ರವೇಶಕ್ಕೆ ೦—2—೦ ಆಣೆ ಟಿಕೇಟು. ಇಲ್ಲಿಯೂ ಪ್ರದರ್ಶನದಲ್ಲಿ ಇಟ್ಟಿದ್ದ ರೀತಿಯಂತೆ ಬೊಂಬೆಗಳಂತವೇ ಹಿಂದೂ ಪುರಾಣದಲ್ಲಿ ಹೆಸರುವಾಸಿಗೊಂಡಿರುವ ಕೆಲವು ಪುರುಷ ಮತ್ತು ಸ್ತ್ರೀಯರ ರೂಪಗಳನ್ನು ಸ್ವಲ್ಪ ಚಿತ್ರಿತ ಆಹ್ಲಾದವನ್ನು ಕೊಡುವ ಹಾಗೆ ಇಟ್ಟಿದ್ದರು. ಒಬ್ಬ ಹೊರನಾಡಿಯವನು ನಾಲ್ಕು ಮೊಳ ಎತ್ತರದ ಕೂತಿದ್ದು ಮೇಲೆ ಚರ್ಮದಿಂದ ಮಾಡಿದ ಒಪ್ಪ ಕುಹುಕನು ಹರಕು ಬಟ್ಟೆಗಳನ್ನು ಧರಿಸಿಕೊಂಡು, ಬೇಡುವಲ್ಲಿ ಎಂದು ಕುಪ್ಪಿಯನ್ನು ಹಿಡಿದುಕೊಂಡು ಬಾಯಲ್ಲಿ ಹೊಗಳುತ್ತಾ ನಾಡಾಯಿ ಕೇಳುತ್ತಿರುವಾಗ ಅವನ ಎದುರಿನಲ್ಲಿ ಬಿಳೀ ಖದ್ದರ ಬಟ್ಟೆಯನ್ನು ಹಾಕಿಕೊಂಡು ಕುಡಿಯಬೇಡವೆಂದು ಕುಡುಕನಿಗೆ ನಮಸ್ಕರಿಸುತ್ತಾ ನಿಂತಿರುವ ಬೊಂಬೆಗಳ ನೋಟವು ಯಾರ ಮನಸ್ಸನ್ನಾದರೂ ಕರಗಿಸದೆ ಇರದು. ಪ್ರದರ್ಶನದಲ್ಲಿ, ಕೈನೂಲಿನ ಬಟ್ಟೆಯ ಮಾದರಿಗಳು ಮಾತ್ರವಲ್ಲ, ಕಬ್ಬಿಣ, ಕಂಚು, ಚರ್ಮ, ಕಲ್ಲು ಮೊದಲಾದ ಕೈಗಾರಿಕೆಗಳ ವಿಶೇಷ ಸಾಮಾನುಗಳು ಅಲ್ಲಿ ಇಡಲ್ಪಟ್ಟಿದ್ದವು. ಅನೇಕ ಸಾಮಾನುಗಳು ಮಾರಾಟಕ್ಕೂ ಇದ್ದವು. ಪ್ರದರ್ಶನದಲ್ಲಿರುವುದು ನಿಜವಾದ ಹಾರಿ ಎಂಬ ಧರವಸೆಯಿಂದ ಬಟ್ಟೆಯನ್ನು ನಾವಿದಾರು ಜನರು ಕೊಂಡುಕೊಳ್ಳುತ್ತಿದ್ದರು.

ಕಾನ್ಫರೆನ್ಸ್‌ಗಳು.—ಕಾಂಗ್ರೆಸ್ ವಾರದಲ್ಲಿ ಬೆಳಗಾವಿನಲ್ಲಿ ಅನೇಕ ಕಾನ್ಫರೆನ್ಸುಗಳು ನಡೆದವು. ತಾರೀಕು 24ರಿಂದಲೇ ಸಭೆಗಳು ಪ್ರಾರಂಭವಾದವು. ತಾರೀಕು 28ರ ವರೆಗೆ ದಿವಸದ ಪ್ರತಿಯೊಂದು ಗಂಟೆಯಲ್ಲಿ ಯಾವದಾದರೂ ಒಂದು ಮೀಟಿಂಗ್ ಇದ್ದೇ ಇತ್ತು. ಎಲ್ಲಾ ಸಭೆಗಳನ್ನು ಕ್ರಮವಾಗಿ ನೋಡಬೇಕೆಂಬವವನಿಗೆ ತನ್ನ ಆಹಾರವನ್ನು ತೆಗದುಕೊಳ್ಳಲೂ ಸಹ ಎಡೆ ಇರುತ್ತಿರಲಿಲ್ಲ. ವಿವಿಧ ಮೀಟಿಂಗುಗಳನ್ನು ಕೆಲವು ಸ್ಥಳಗಳಲ್ಲೇ ನಡಿಸಬೇಕಾಗಿದ್ದುದರಿಂದ ಮೀಟಿಂಗಿನ ಸಮಯವನ್ನು ಒಂದು ದಿನಕ್ಕೆ ಮುಂದಾಗಿ ನಿಶ್ಚೈಸಿ ಜನರಿಗೆ ಕಾಲದಲ್ಲಿ ತಿಳಿಸಲೂ ಸಹ ಆಗುತ್ತಿರಲಿಲ್ಲ. ನಡೆದ ಮುಖ್ಯ ಕಾನ್ಫರೆನ್ಸುಗಳು ಯಾವವೆಂದರೆ:—ಡಾಕ್ಟರ್ ಕಿಚ್ಲುರವರ ಅಧ್ಯಕ್ಷತೆಯಲ್ಲಿ ಖಿಲಾಫತ್ ಕಾನ್ಫರೆನ್ಸು, ಪಂಡಿತ ಮದನಮೋಹನ ಮಾಳವೀಯರ ಅಧ್ಯಕ್ಷತೆಯಲ್ಲಿ ಹಿಂದೂ ಮಹಾಸಭೆ, ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ಗೋರಕ್ಷಣ ಸಭೆ, ಸರ್ ಶಂಕರನಾಯರವರ ಅಧ್ಯಕ್ಷತೆಯಲ್ಲಿ ಪೋಲಿಟಿಕಲ್ ಕಾನ್ಫರೆನ್ಸು, ಮಿ. ಸಿ. ಆರ್. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿಗಳ ಕಾನ್ಫರೆನ್ಸು, ಸಿ. ಆರ್. ದಾಸ್‌ರವರ ಅಧ್ಯಕ್ಷತೆಯಲ್ಲಿ ಆಲ್ ಇಂಡಿಯಾ ಲೈಬ್ರರಿ ಕಾನ್ಫರೆನ್ಸು, ಶ್ರೀಮತಿ ಸರೋಜಿನಿ ನಾಯಡುರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸಂಗೀತ ಸಮ್ಮೇಳನ, ಮಿ. ಸಿ. ಆರ್. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಅಸ್ಪೃಶ್ಯತೆ ಕಾನ್ಫರೆನ್ಸು, ವಿ. ಜೆ. ಪಟೇಲರವರ ಅಧ್ಯಕ್ಷತೆಯಲ್ಲಿ ರೈಲ್ವೆ ಪ್ರಯಾಣಿಕರ ಸಭೆ, ಶ್ರೀಮತಿ ಸರೋಜಿನಿಯವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಮಹಿಳಾ ಸಭೆ, ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ನೇಶನಲ್ ಶಾಲಾ ಉಪಾಧ್ಯಾಯರುಗಳ ಸಭೆ, ಮಿ. ಎನ್. ಸಿ. ಕೆಲ್ಕಾರರವರ ಅಧ್ಯಕ್ಷತೆಯಲ್ಲಿ ಆಶ್ರಿತ ಸಂಸ್ಥಾನಗಳ ಪ್ರಜೆಗಳ ಸಭೆ, ಮಿ. ಕಂಬಳಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣದ ಸಭೆ, ಡಾಕ್ಟರ್ ಶ್ರೀನಿವಾಸಮೂರ್ತಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕದ ಆಯುರ್ವೇದ ಸಮ್ಮೇಳನ, ಸ್ಪಿರಿಚ್ಯುವಲಿಸ್ಟ್ ಸಭೆ, ಸ್ವಯಂ ಸೇವಕರ ಕಾನ್ಫರೆನ್ಸು, ಕರ್ನಾಟಕ ಮಹಿಳೆಯರ ಸಮ್ಮೇಳನ ಮೊದಲಾದ ಇನ್ನೂ ಕೆಲವು ಸಭೆಗಳು ನಡೆದವು. ಇದಲ್ಲದೆ ಆರ್ಯಸಮಾಜದ ಕಡೆಯವರು ಮೈದಾನದಲ್ಲಿ ಪ್ರತಿನಿತ್ಯವೂ ಆರ್ಯಸಮಾಜದ ಸಮ್ಮಂಧ ಭಾಷಣ ಮಾಡುತ್ತಿದ್ದರು. ಪ್ರತಿ ಬೆಳಗ್ಗೆ ಮತ್ತು ರಾತ್ರಿಯಲ್ಲಿಯೂ ಸಂಗೀತಸಮ್ಮೇಳನದ ಚಪ್ಪರದಲ್ಲಿ ಸಂಗೀತ ನಡೆಯುತ್ತಿತ್ತು. ಹಣಕೊಟ್ಟು ಟಿಕೇಟುಗಳ ಮೂಲಕ ಇದರ ಪ್ರವೇಶ. ವಿಜಯನಗರದ ನಿವೇಶನದಲ್ಲಿ ಅಲ್ಲದಿದ್ದರೂ ಬೆಳಗಾಂ ಪಟ್ಟಣದಲ್ಲಿ ಆಲ್ ಇಂಡಿಯಾ ಬ್ರಾಹ್ಮಣೇತರರ ಕಾಂಗ್ರೆಸು ರಾಮಸ್ವಾಮಿ ಮೊದ್ಲಿಯಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದಕ್ಕೆ ಮುಂಚಿತವಾಗಿ ವಿಜಯನಗರದಲ್ಲಿ ಈ ಕಾಂಗ್ರೆಸ್ಸಿಗೆ ವಿರೋಧಿಸಿ ನೇಶನಲ್ ಕಾಂಗ್ರೆಸ್ಸಿಗೆ ಸೇರಿದ ಬ್ರಾಹ್ಮಣೇತರರ ಸಭೆಯು ರಾಮಸ್ವಾಮಿ ನಾಯಕರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಾಂಗ್ರೆಸ್ಸಿನ ನಿಯಾಮಕ ಸಮಿತಿ.—ಈ ಸಮಿತಿಯು ಅದಕ್ಕಾಗಿ ಪ್ರತ್ಯೇಕ ಏರ್ಪಡಿಸಲ್ಪಟ್ಟಿದ್ದ ಸುಮಾರು ಐದಾರು ಸಾವಿರ ಜನರು ಹಿಡಿಯಬಹುದಾದ ಡೇರೆಯಲ್ಲಿ ತಾ 24ರಿಂದಲೇ ಮೀಟಿಂಗಿಗೆ ಪ್ರಾರಂಭಿಸಿದೆ. ಇದರಲ್ಲೂ ಮಹಾತ್ಮ ಗಾಂಧಿಯವರೇ ಅಧ್ಯಕ್ಷಸ್ಥಾನದಲ್ಲಿದ್ದರು. ಸಮಿತಿಗೆ ಪ್ರಾಂತ್ಯವಾರು ಚುನಾಯಿಸಿದ ಮೆಂಬರುಗಳಿಗೆ ಪ್ರತ್ಯೇಕ ಸ್ಥಳ ಏರ್ಪಾಡಾಗಿತ್ತು. ಬೇರೆ ಸ್ಥಳದಲ್ಲಿ ಫ್ರೀಯಾಗಿ ಟಿಕೇಟು ಪಡಕೊಂಡಿದ್ದ ಪ್ರೇಕ್ಷಕರಿಗೆ ಕೂರಲು ಎಡೆಬಿಟ್ಟಿದ್ದರು. ಇಲ್ಲಿ ಹೆಚ್ಚು ವಾದವಿವಾದಗಳು ನಡೆಯುತ್ತಿತ್ತು. ಅಲ್ಲಿ ನಡೆಯುತ್ತಿದ್ದ ಚರ್ಚೆಗಳನ್ನು ನೋಡಲು ಪ್ರೇಕ್ಷಕರು ಸಾವಿರಗಟ್ಲೆ ಬರುತ್ತಿದ್ದರು. ಇಲ್ಲಿಯಷ್ಟು ಕ್ರಮವಾದ ಚರ್ಚೆಯು ನಡಿಯಲಿಕ್ಕೆ ಕಾಂಗ್ರೆಸ್ ಸಭೆಯಲ್ಲಿ ಅನುಕೂಲವಿರಲಿಲ್ಲ. ಇಲ್ಲಿ ಚರ್ಚಿಸಿ ತೀರ್ಮಾನಿಸಿದ ಠರಾವುಗಳಮೇಲೆ ಕಾಂಗ್ರೆಸ್ಸಿನಲ್ಲಿ ಯಾರ್ಯಾರು ಮಾತಾಡಬೇಕೆಂಬದೂ ಸಹ ನಿಶ್ಚಯಿಸುತ್ತಿದ್ದರು. ಕಾಂಗ್ರೆಸ್ ಮೆಂಬರುತನಕ್ಕೆ ಕೈನೂಲಿನ ಫೀಸಿನ ವಿಷಯದಲ್ಲಿ ನಡೆದ ದೀರ್ಘವಾದ ಚರ್ಚೆಯಲ್ಲಿ ಅನೇಕ ಮುಂದಾಳುಗಳು ಭಾಗಗಳಾಗಿ ಬಹಳ ಚನ್ನಾಗಿ ಉಪನ್ಯಾಸ ಮಾಡಿದರು. ಈ ಮೀಟಿಂಗಿನಲ್ಲಿ ಮಹಾತ್ಮರು ಆಗಾಗ್ಗೆ ತಮಾಷೆಮಾತುಗಳನ್ನಾಡುತ್ತಲೂ, ನಗಾಡುತ್ತಲೂ ಹಸನ್ಮುಖಿ ವ್ಯಕ್ತರಾಗಿಯೇ ಇರುತ್ತಿದ್ದರು. ಈ ಸಮಿತಿಯ ಮೀಟಿಂಗು ತಾ. 27ರ ಬೆಳಗ್ಗಿನ ವರೆಗೂ ನಡೆಯಿತು.

ನೇಶನಲ್ ಕಾಂಗ್ರೆಸ್.—ಈ ಮಹಾ ಸಭೆಯು ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ತಾ. 26 ಮತ್ತು 27ರಲ್ಲಿ ನಡೆಯಿತು. ಮೊದಲನೇ ದಿವಸ ಮೂರು ಗಂಟೆಗೆ ಪ್ರಾರಂಭವಾಗಿ ಸ್ವಾಗತ ಕಮಿಟಿ ಅಧ್ಯಕ್ಷರಾದ ಶ್ರೀಯುತ ಗಂಗಾಧರರಾವ್ ದೇಶಪಾಂಡೆಯವರ ಭಾಷಣವು ಕನ್ನಡದಲ್ಲಿಯೂ, ಅಧ್ಯಕ್ಷರಾದ ಮಹಾತ್ಮ ಗಾಂಧಿಯವರ ಭಾಷಣವು ಇಂಗ್ಲೀಷಿನಲ್ಲಿಯೂ ಹಿಂದೀಯಲ್ಲಿಯೂ ನಡೆದವು. ಆದರೆ ಇವರು ಹೇಳತಕ್ಕಂಥಾದ್ದನ್ನು ಇಂಗ್ಲಿಷ್, ಮರಾಠಿ ಮತ್ತು ಕನ್ನಡ ಭಾಷೆಗಳಲ್ಲಿ ಅಚ್ಚುಹಾಕಿ ಮೊದಲೇ ಹಂಚಿದ್ದರು. ಇದಕ್ಕೆ ಹೇಳಬೇಕಾದ್ದನ್ನು ಸಂಕ್ಷೇಪವಾಗಿ ಅವರು ಸಭೆಯಲ್ಲಿ ಹೇಳಿದ್ದಾಗಿದೆ. ಅಧ್ಯಕ್ಷರನ್ನು ಚುನಾಯಿಸುವ ವಾಡಿಕೆಯ ಮರ್ಯಾದೆಯನ್ನೇನೂ ಅನುಸರಿಸಲಿಲ್ಲ. ಸ್ವಾಗತಕಮಿಟಿಯ ಅಧ್ಯಕ್ಷರೇ ಮಹಾತ್ಮ ಗಾಂಧಿಯವರು ಅಧ್ಯಕ್ಷರಾಗಬೇಕೆಂದ ಕೂಡಲೆ ಮಹಾತ್ಮರು ತಮ್ಮ ಭಾಷಣವನ್ನು ಮಾಡಿದರು. ಕೂಡಲೆ ಕಾಂಗ್ರೆಸ್ಸಿನ ಈ ಅಧಿವೇಶನದ ಮುಖ್ಯ ಠರಾವಾದ ಕಾಂಗ್ರೆಸು ಮೆಂಬರುತನದ ಅರ್ಹತೆಗೆ ತಿಂಗಳಿಗೆ 2000 ಗಜ ಕೈನೂಲನ್ನು ಕೊಡಬೇಕೆಂಬುದನ್ನು ದೇಶಬಂಧುದಾಸರವರು ತಮ್ಮ ಭಾಷಣದೊಡನೆ ಸಭೆಯ ಮುಂದಿಟ್ಟರು. ಕಾಂಗ್ರೆಸ್ಸಿನ ಎರಡು ಪಂಗಡಗಳು ಒಗ್ಗಟ್ಟಾದ ವಿಷಯದಲ್ಲಿ ಇವರು ಬಹಳ ಉತ್ಸಾಹದಿಂದ ಮಾತಾಡಿದರು. ಇವರ ಭಾಷಣವು ಡೇರೆಯೊಳಗಿದ್ದ ಹದಿನಾರುಸಾವಿರ ಜನರಿಗೂ ಕೇಳಿಸುತಿತ್ತು. ಮೌಲಾನಾಮಹಮ್ಮದಲ್ಲಿಯವರು ತಮ್ಮ ಗಂಭೀರವಾದ ಸುತ್ತು ದೀರ್ಘವಾದ ಭಾಷಣದಿಂದ ಈ ಠರಾವನ್ನು ಅನುಮೋದಿಸಿದರು. ನಂತರ ಮೌಲಾನಾ ಹಜರತ್ ಮೋಹಾನಿ, ಮೌ. ಹಜರತ್ ಸೋಬಾನಿ, ಮತ್ತು ಸ್ವಾಮಿ ಗೋವಿಂದಾನಂದ ಎಂಬವರು ಠರಾವನ್ನು ವಿರೋಧಿಸಿದರು. ಮಧ್ಯಪ್ರಾಂತ್ಯದ ಸ್ವರಾಜ್ಯಪಕ್ಷದ ಅಭ್ಯಂಕರ್‌ರವರು ಠರಾವಿನ ತತ್ವಕ್ಕೆ ತಾನು ವಿರೋಧವಿದ್ದರೂ ಒಗ್ಗಟ್ಟಿಗಾಗಿ ಅದಕ್ಕೆ ಒಪ್ಪುತ್ತೇನೆಂದು ಉದ್ದವಾದ ಭಾಷಣಮಾಡಿದರು. ಅನಂತರ ಸ್ವರಾಜ್ಯಪಕ್ಷದ ಎನ್. ಸಿ. ಕೇಳ್ಕರ್‌ರವರೂ, ಪಂಡಿತ ಮೋತಿಲಾಲ್ ನೆಹರುರವರೂ ಠರಾವಿಗೆ ಒತ್ತಾಸೆಯಾಗಿ ಮಾತಾಡಿದರು. ಅಸಹಕಾರವನ್ನು ಬಿಡಬೇಡವೆನ್ನುವ ಪಕ್ಷದ ಕೆಲವರು ಈ ವಿಷಯ ಮಾತಾಡಬೇಕೆಂದು ಕೇಳಿಕೊಂಡರೂ ಅಧ್ಯಕ್ಷರು ಅವರು ಮಾತಾಡುವದು ಅವಶ್ಯವಿಲ್ಲವೆಂತಲೂ, ಅವರು ಹೇಳಬೇಕಾದದ್ದನ್ನು ತಾನೇ ಹೇಳುತ್ತೇನೆಂದು ವಿವರಿಸಿ ಹೇಳಿ, ಠರಾವನ್ನು ಓಟಿಗೆ ಹಾಕಿದರು. ಠರಾವನ್ನು ಓಟಿಗೆ ಹಾಕಬೇಕಾದರೆ ತಾನು ಈ ಠರಾವಿಗೆ ಬಹಳ ಪ್ರಾಮುಖ್ಯತೆ ಕೊಡುತ್ತೇನೆಂಬ ಕಾರಣದಿಂದ ಯಾರೂ ಓಟು ಕೊಡಬಾರದಾಗಿಯೂ ಠರಾವಿನ ಕೆಲಸವನ್ನು ಮನಃಪೂರ್ತಿಯಾಗಿ ಮಾಡುತ್ತೇನೆಂದು ನಂಬಿಕೆ ಇದ್ದರೆ ಮಾತ್ರ ದೇವರನ್ನು ಸಾಕ್ಷಿಯಾಗಿಟ್ಟುಕೊಂಡು ಠರಾವಿಗೆ ಸಮ್ಮತಿಕೊಡಬೇಕೆಂದು ಜನರನ್ನು ಕೇಳಿಕೊಂಡರು. ಬಹಳ ಸ್ವಲ್ಪ ಜನರು ಮಾತ್ರ ಠರಾವಿಗೆ ವಿರೋಧವಾಗಿ ಓಟುಕೊಟ್ಟದ್ದರಿಂದ ಬಹುಮತದಿಂದ ಮಂಜೂರಾಯಿತು. ಮರುದಿನ ಚರ್ಚೆಯಾದ ಠರಾವುಗಳಮೇಲೆ ಶ್ರೀಯುತ ಲಾಲಾ ಲಜಪತರಾಯರು, ಶ್ರೀಮತಿ ಸರೋಜಿನಿದೇವಿಯವರು, ಮಿ. ಎಸ್. ಶ್ರೀನಿವಾಸ ಅಯ್ಯಂಗಾರ್‌ರವರು, ಮಿ. ಶ್ರೀನಿವಾಸರಾವ್ ಕೌಜಲಗಿ ಮತ್ತು ಮಿ. ಮುದವೇಡ್ಕರ್ ಕೃಷ್ಣರಾವ್‌ರವರು ಕನ್ನಡದಲ್ಲಿಯೂ, ಮಿ. ಷಣ್ಮುಗಂ ಚೆಟ್ಟಿಯಾರ್‌ರವರು ಮಿ. ಪ್ರಕಾಶಂರವರು, ಡಾಕ್ಟರ್ ಅನಿಬೆಸೆಂಟ್‌ರವರು ಇನ್ನೂ ಅನೇಕರು ಭಾಷಣಮಾಡಿದರು. ಕೋಹತ್ತಿನಲ್ಲಿ ಆದ ಹಿಂದೂ ಮುಸಲ್ಮಾನರ ಜಗಳದ ವಿಷಯದಲ್ಲಿ ಸರಕಾರದವರು ಬರೆದಿರುವ ರಿಪೋರ್ಟನ್ನು ಖಂಡಿಸಿ, ಸರಕಾರಿ ಉದ್ಯೋಗಸ್ಥರ ಉದಾಸೀನತೆಯೇ ಈ ಜಗಳಕ್ಕೆ ಕಾರಣವೆಂದೂ, ಲಾಲಾಲಜಪತರಾಯರು ಮನಸ್ಸು ಕರಗುವಂತೆ ಮಾತಾಡಿದರು. ಕಾಂಗ್ರೆಸ್ಸಿನಲ್ಲಿ ನಡೆದ ಭಾಷಣಗಳಲ್ಲಿ ಇವರದಷ್ಟು ವಿಶೇಷವಾದದ್ದು ಬೇರೆ ಯಾವದೂ ಇರಲಿಲ್ಲವೆಂತ ಅನೇಕರ ಅಭಿಪ್ರಾಯ. ವಸಾಹತುಗಳಲ್ಲಿರುವ ಹಿಂದೀಯರ ಹೀನಸ್ಥಿತಿಯ ವಿಷಯದಲ್ಲಿ ಶ್ರೀಮತಿ ಸರೋಜಿನಿಯವರು ಭಾಷಣಮಾಡಿದಾಗ ಅಲ್ಲಿಯ ಬಿಳೀಜನರ ಅಹಂಕಾರವನ್ನು ವರ್ಣಿಸಿ ಇದನ್ನು ಅಡಗಿಸಲಿಕ್ಕೆ ಹಿಂದೀಯರಿಗೆ ಸಹಾಯಮಾಡಬೇಕೆಂದು ಎಲ್ಲರ ಮನಸ್ಸಿಗನಾಟುವಂತೆ ತಮ್ಮ ಉಚ್ಚತರದ ಇಂಗ್ಲಿಷ್ ಭಾಷೆಯಲ್ಲಿ ಬಲವತ್ತಾಗಿ ಅಪ್ಪೀಲುಮಾಡಿದರು. ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕೆಂಬ ಠರಾವಿನಮೇಲೆ ಆಂಧ್ರದೇಶ ಗಣಪತಿ ಶಾಸ್ತ್ರಿಗಳೆಂಬವರೊಬ್ಬರು ಸಂಸ್ಕೃತದಲ್ಲಿ ಬಹಳ ಚನ್ನಾಗಿ ಭಾಷಣಮಾಡಿದರು. ಆದರೆ ಅಲ್ಲಿ ನೆರೆದಿದ್ದ ಕೆಲವರಿಗೆ ಮಾತ್ರ ಅರ್ಥವಾಯಿತಷ್ಟೆ. ಇದೇ ಠರಾವಿನಮೇಲೆ ಅಧ್ಯಕ್ಷರ ಕೋರಿಕೆಮೇರೆ ಒಬ್ಬ ಪಂಚಮನು ಭಾಷಣ ಪೀಠದಮೇಲೆ ಏರಿ ತೆಲಗು ಭಾಷೆಯಲ್ಲಿ ಮಾತಾಡಿದನು, ಅವನು ಮಾತಾಡಿದ್ದು ಸಮೀಪದವರಿಗೆ ಮಾತ್ರ ಕೇಳಿಸಿತು. ಎರಡನೇ ದಿವಸ ಸಭೆಯು ಬೆಳಗ್ಗೆ ಹನ್ನೊಂದು ಗಂಟೆಗೆ ಪ್ರಾರಂಭವಾಗಿ ಮಧ್ಯಾಹ್ನ ಊಟಕ್ಕೆ ಸಹ ಏಳದೆ ಸಾಯಂಕಾಲ 5½ ಗಂಟೆವರೆಗೆ ನಡೆಯಿತು. ಮೀಟಿಂಗಿನ ಮಧ್ಯದಲ್ಲಿ ಡಾಕ್ಟರ್ ಅನಿಬೆಸೆಂಟ್‌ರವರು ಬಂದರು. ಅವರು ಡೇರೆಯೊಳಗೆ ಪ್ರವೇಶ ಮಾಡಿದಾಗ ಅಧ್ಯಕ್ಷರೂ ಸಭೆಯವರೆಲ್ಲರೂ ಎದ್ದು ನಿಂತರು. ಅವರು ತಾನು ಚರ್ಕಾದಲ್ಲಿ ಯಾವಾಗಲೂ ನೂಲುತ್ತಿರುವವಳಾದರೂ, ಕೈನೂಲಿನ ಫೀಜು ಕಾಂಗ್ರೆಸ್ಸಿಗೆ ಎಲ್ಲಾ ಪಂಗಡದ ಜನರು ಸೇರಲು ಅಡ್ಡಿಯಾಗಿದೆ ಎಂದೂ, ಇನ್ನುಮುಂದಾದರೂ ಕಾಂಗ್ರೆಸ್ಸಿನ ಬಾಗಿಲನ್ನು ಅಗಲವಾಗಿ ತೆರೆದು ಎಲ್ಲರನ್ನೂ ಅದರೊಳಗೆ ಬಿಡಬೇಕೆಂದೂ ಭಾಷಣಮಾಡಿದರು. ಇವರ ಮಾತು ಎಲ್ಲರಿಗೂ ಕೇಳಿಸಿಕೊಳ್ಳಲಾಗುವದಿಲ್ಲ. ಅಷ್ಟರಿಗೆ ಉಪಚಾರದಮಾತುಗಳು ಬಹಳ ತಡವೆಯಾಗಿತ್ತು. ಕಡೇ ಠರಾವಿನಂತರ ಅಧ್ಯಕ್ಷರು ಮುಕ್ತಾಯದ ಭಾಷಣ ಹಿಂದೀಯಲ್ಲಿ ಸುಮಾರು ಅರ್ಧ ಗಂಟೆವರೆಗೆ ಮಾಡಿದರು. ಕೂಡಲೆ ಸಭೆ ಬರಖಾಸ್ತಾಯಿತೆಂತ ಅಧ್ಯಕ್ಷರೊಡನೆ ಎಲ್ಲರೂ ಎದ್ದರು. ಆದರೆ ಸ್ವಾಗತ ಸಮಿತಿಗೂ ವಾಲಂಟಿಯರುಗಳಿಗೂ ವಂದಿಸಬೇಕೆಂದು ಯಾರೋ ಸೂಚಿಸಿದನಂತರ ಅಧ್ಯಕ್ಷರು ಪುನಹ ಕೈಸೂಚನೆ ಕೊಟ್ಟ ಕೂಡಲೆ ಡೇರೆಯಲ್ಲಿದ್ದ ಜನರೆಲ್ಲರೂ ಥಕ್ಕನೆ ನಿಶ್ಶಬ್ದವಾಗಿ ಕೂತುಕೊಂಡರು. ಅಧ್ಯಕ್ಷರ ವಂದನೆಯ ಭಾಷಣವಾದನಂತರ ಪುನಹ ಜನರು ಹೊರಟುಬಿಟ್ಟರು. ಅಧ್ಯಕ್ಷರಿಗೆ ವಂದಿಸಲಿಕ್ಕಾಗಿ ಪಂಡಿತ ಮೋತಿಲಾಲ್ ನೆಹರುರವರು ಜನರನ್ನು ಕುಳಿತುಕೊಳ್ಳಲಿಕ್ಕೆ ಹೇಳಿದರೂ ಅವರು ಅದಕ್ಕೆ ಗಮನಕೊಡದೆ ಅನೇಕರು ಹೊರಗೆ ಹೋಗಿಬಿಟ್ಟರು. ನೆಹರುರವರ ಭಾಷಣದೊಡನೆ ಸಭೆಯು ಮುಕ್ತಾಯವಾಯ್ತು.

ಕಾಂಗ್ರೆಸ್ ಸಭೆಯಲ್ಲಿ ಪಾಸಾದ ಠರಾವುಗಳನ್ನು ಇನ್ನೊಂದುಸಾರಿ ಬರೆಯುತ್ತೇನೆ.

ವಾಲಂಟಿಯರ ರಿವ್ಯೂ.—ಕಾಂಗ್ರೆಸ್ ತೀರಿದ ಮರುದಿನ ಬೆಳಗ್ಗೆ ಧ್ವಜಸ್ತಂಭವಿದ್ದ ಮೈದಾನದಲ್ಲಿ ಸ್ವಯಂ ಸೇವಕದಳದ ಕವಾಯತು ನಡೆಯಿತು. ಮಹಾತ್ಮ ಗಾಂಧಿಯವರೇ [illegible] ಅನೇಕ ಮುಂದಾಳುಗಳು ಹಾಜರಿದ್ದರು. ಸ್ವಯಂ ಸೇವಕ ಮತ್ತು ಸೇವಿಕೆಯರು ಬಾಜಾ ಸಹಿತವಾಗಿ ಬ್ಯಾಂಡೊಡನೆ ಮೈದಾನಕ್ಕೆ ಬಂದು ಅಲ್ಲಿ ಅನೇಕ ವಿಧವಿಧದ ಕವಾಯತುಗಳನ್ನು ಮಾಡಿ ತೋರಿಸಿದರು. ಮಹಾತ್ಮರು ಎತ್ತರವಾದ ಮೇಜಿನ ಮೇಲೆ ಕೂತುಕೊಂಡು ಎಲ್ಲವನ್ನೂ ನೋಡಿದರು. ನಂತರ ಮಹಾತ್ಮರೊಂದಿಗೆ ಕೆಲವು ಮುಂದಾಳುಗಳ ಫೋಟೋ ತೆಗೆಯಲಾಯಿತು.

ಮಹಾತ್ಮ ಗಾಂಧಿಯವರು.—ಕೊಡಗಿನ ಕೆಲವರಿಗಾದರೂ ಮಹಾತ್ಮರ ಸಂದರ್ಶನವು ಈ ಸಾರ ದೊರೆತದ್ದು ಅವರ ಪುಣ್ಯ ಮಾತ್ರವಲ್ಲ, ದೇಶದ ಪುಣ್ಯವೆಂದೇ ನನ್ನ ಭಾವನೆ. ಅಮೇರಿಕದಿಂದ ಕಾಂಗ್ರೆಸ್ ನೋಡಲಿಕ್ಕಾಗಿಯೇ ಬಂದವರೊಬ್ಬರು ಮಹಾತ್ಮರ ದರ್ಶನದಿಂದ ಮನಸ್ಸಿಗೆ ಉತ್ಸಾಹವೂ, ಸಂತೋಷವೂ ಆಗುತ್ತೆಂತ ಬರೆದಿರುವಾಗ ಈ ವಿಷಯದಲ್ಲಿ ನಾನು ವರ್ಣಿಸಬೇಕಾದುದೇನಿದೆ. ಮಹಾತ್ಮರ ದರ್ಶನದ ಆಶೆಯಿಂದಲೇ ಹದಿನಾರು ಸಾವಿರ ಹಿಡಿಯುವ ಡೇರೆಯಲ್ಲಿಯೂ ತುಂಬು ಇದ್ದುದಲ್ಲದೆ ಡೇರೆಯ ಹೊರಗೂ ಸಹ ಬೆಳಗ್ಗಿನಿಂದ ಸಾಯಂಕಾಲದ ವರೆಗೆ ದೊಡ್ಡ ಜಾತ್ರೆಯಂತೆ ಜನರು ಗುಂಪು ಸೇರುತ್ತಿದ್ದರು. ತಲಕಾವೇರಿಯಲ್ಲಿ ತೀರ್ಥ ಬರುವಾಗ್ಗೆ ಜನರು ಹ್ಯಾಗೆ ಸ್ನಾನಮಾಡಲು ಆತುರದಿಂದ ಕಾಯುತ್ತಿರುವರೋ ಹಾಗೆಯೇ ಮಹಾತ್ಮರು ಡೇರೆಯಿಂದ ಹೊರಗೆ ಬರುವದನ್ನು ಸಾವಿರಗಟ್ಲೆ ಜನರು ಎದುರುನೋಡುತ್ತಾ ಬಿಸಿಲಿಗೂ ಧೂಳಿಗೂ ಲಕ್ಷ್ಯವಿಡದೆ ಕಾದು ನಿಲ್ಲುತ್ತಿದ್ದರು. ಇವರ ಸಂದರ್ಶನಕ್ಕಾಗಿಯೇ ಕಾಂಗ್ರೆಸ್ ಕ್ಯಾಂಪಿಗೆ ಒಟ್ಟು ಸುಮಾರು ಎಪ್ಪತ್ತುಸಾವಿರ ಜನರು ನೆರೆದಿದ್ದರೆಂದು ಕೆಲವರ ಅಂದಾಜು. ಜನರ ಇಷ್ಟು ದೊಡ್ಡ ಸೇರುವಿಕೆಯು ಈ ವರೆಗೆ ಯಾವ ಕಾಂಗ್ರೆಸಿನಲ್ಲಿಯೂ ಆಗಿರಲಿಲ್ಲವೆಂದು ತಿಳಿಯುತ್ತದೆ. ಅವರು ಹೋಗುವಲ್ಲೆಲ್ಲಾ "ಮಹಾತ್ಮ ಗಾಂಧಿಕೀ ಜೈ" ಎಂತ ಜಯಘೋಷ ಮಾಡುತ್ತಿದ್ದರು. ಜನಸಾಮಾನ್ಯಕ್ಕೆ ಮಾತ್ರವಲ್ಲ, ವಿದ್ಯಾವಂತರಿಗೂ ಕೂಡ ಇವರ ಮೇಲೆ ಅತಿಶಯ ಭಕ್ತಿ ಇದೆ ಎಂಬುದು ಇವರಿಗೆ ಕಾಂಗ್ರೆಸ್ ಸಭೆಯಲ್ಲಿ ತೋರಿಸುತ್ತಿದ್ದ ಮರ್ಯಾದೆಯೇ ನಿದರ್ಶನವಾಗಿದೆ. ಕಾಂಗ್ರೆಸ್ ಸಭೆಯಲ್ಲಿ ಮಹಾತ್ಮರನ್ನು ವಿರೋಧಿಸಿ ಮಾತಾಡಿದವರೂ ಕೂಡ ಅವರಿಗೆ ತುಂಬಾ ಗೌರವ ಕೊಟ್ಟೇ ಮಾತಾಡಿದರು. ಯಾವ ಕಾನ್ಫರೆನ್ಸುಗಳಲ್ಲೇ ಆಗಲಿ ಮುಂದಾಳುಗಳು ತಮ್ಮ ಭಾಷಣಗಳಲ್ಲಿ ಮಹಾತ್ಮರ ಹೆಸರನ್ನು ತರುತ್ತಿದ್ದರು. ಹಾಗೆ ತರದಿದ್ದರೆ ಅವರ ಉಪನ್ಯಾಸಕ್ಕೆ ಗಮನ ಸಿಕ್ಕುವದೇ ಕಷ್ಟವಾಗುತ್ತಿತ್ತು. ಪ್ರತಿಯೊಂದು ಕಾನ್ಫರೆನ್ಸಿಗೂ ಮಹಾತ್ಮರು ಸ್ವಲ್ಪ ಹೊತ್ತಾದರೂ ಸಭೆ ತೀರುವದರೊಳಗೆ ಬರುತ್ತಿದ್ದರು. ಅವರು ಬರುತ್ತಾರೆಂಬ ನಿರೀಕ್ಷಣೆಯಿಂದ ಜನರು ತಂಡ ತಂಡವಾಗಿ ಸಾವಿರಗಟ್ಲೆಯಲ್ಲಿ ಸೇರುತ್ತಿದ್ದರು. ಅಖಿಲ ಭಾರತ ವಿದ್ಯಾರ್ಥಿಗಳ ಸಭೆಯಲ್ಲಿ ಅಧ್ಯಕ್ಷರಾದ ಮಿ. ಸಿ. ಆರ್. ರೆಡ್ಡಿಯವರು ಭಾಷಣ ಮಾಡುತ್ತಿದ್ದಾಗ ಮಹಾತ್ಮರು ಥಕ್ಕನೆ ಡೇರೆಯೊಳಗೆ ಪ್ರವೇಶಿಸುವಷ್ಟರಲ್ಲಿ ಹೊರಗಿದ್ದ ಜನರು ತುಂಬಾ ಡೇರೆಯೊಳಕ್ಕೆ ನುಗ್ಗಿದ್ದಲ್ಲದೆ ಜಯಘೋಷವು ಡೇರೆಯೆಲ್ಲಾ ತುಂಬಿ ಅಧ್ಯಕ್ಷರು ಭಾಷಣವನ್ನು ನಿಲ್ಲಿಸಬೇಕಾಯಿತು. ಕೂಡಲೇ ಮಹಾತ್ಮರು ಮಾತಾಡುವವರಂತ ಹೇಳಲು ಎಲ್ಲವೂ ನಿಶ್ಶಬ್ದವಾಯಿತು.

ಇವರ ಆಶ್ರಮದಲ್ಲಿ ಪ್ರತಿದಿನವೂ ಬೆಳಗ್ಗೆ ನಾಲ್ಕು ಗಂಟೆಯಿಂದ ಆರು ಗಂಟೆ ವರೆಗೆ ಪ್ರಾರ್ಥನೆ ನಡಿಯುತ್ತಿತ್ತು. ಆಗ ಅಲ್ಲಿಗೆ ಯಾರು ಬೇಕಾದರೂ ಹೋಗಬಹುದಿತ್ತು. ಸ್ವಲ್ಪವೂ ವಿಶ್ರಾಂತಿ ಇಲ್ಲದೆ ರಾತ್ರಿ 11 ಗಂಟೆ ವರೆಗೆ ಒಂದಲ್ಲ ಒಂದು ಕೆಲಸವನ್ನಾದರೂ ಮಾಡುತ್ತಲೇ ಇದ್ದರು. ಚರ್ಕಾದಲ್ಲಿ ನೂಲು ಮಾಡುವುದೇ ಇವರಿಗೆ ವಿಶ್ರಾಂತಿ ಎಂದು ತೋರುತ್ತದೆ. ಇವರ ಒಟ್ಟು ದುಸ್ತುಲಲ್ಲಾ ಸೊಂಟದಿಂದ ಮೊಣಕಾಲು ವರೆಗೆ ಉಟ್ಟಿದ್ದ ಖದ್ದರಿನ ಪಂಚೆ ಒಂದು ಮಾತ್ರ ಆಗಿತ್ತು. ಒಂದೊಂದು ವೇಳೆ ಮೈಮೇಲೆ ಒಂದು ಖಾದಿಚಾಳಿವನ್ನು ಹಾಕಿಕೊಳ್ಳುತ್ತಿದ್ದರು. ಫ್ಲಾನಲ್, ಸರ್ಜ್, ಕಂಬಳಿಯ ಶರಟು, ಕೋಟು, ಶಾಲು ಹಾಕಿದ್ದರೂ ಶೀತ, ಚಳಿ, ನಿಮೋನಿಯ ವಗೈರೆ ಆಗುತ್ತದಂತ ಹೇಳುವವರು ಅತಿ ಕಠಿಣ ಚಳಿ ಇದ್ದ ಬೆಳಗಾವಿನಲ್ಲಿ ಇವರ ಉಡುಪನ್ನೂ, ಆರೋಗ್ಯವನ್ನೂ ನೋಡಬೇಕಿತ್ತು. ಅವರ ಆರೋಗ್ಯವು ಬಹಳ ಚನ್ನಾಗಿತ್ತು. ದೇಹವು ಪುಷ್ಟಿಯಾಗಿಯೇ ಇತ್ತು. ಇವರು ತೆಗದುಕೊಳ್ಳುವ ಅಲ್ಪ ಸ್ವಲ್ಪ ಆಹಾರದಿಂದ ದೇಹವು ಇಷ್ಟು ಪುಷ್ಟಿಯಾಗಿ ಹ್ಯಾಗಿದೆ ಎಂತ ನನಗೆ ಆಶ್ಚರ್ಯವಾಯಿತು. ಇವರು ಒಂದೂವರೆ ತಿಂಗಳ ಮೊದಲು 21 ದಿವಸ ಉಪವಾಸ ಇದ್ದರೆಂದು ಯಾರಿಗೂ ತೋರುತ್ತಿರಲಿಲ್ಲ. ಕಾಂಗ್ರೆಸಿನ ಅಧ್ಯಕ್ಷ ಪೀಠದಲ್ಲಿ ಕೂತಿದ್ದಾಗಲೇ ಒಬ್ಬೊಬ್ಬರು ಕೈನೂಲಿನ ಹಾರಗಳನ್ನು ಇವರ ಕುತ್ತಿಗೆಗೆ ಹಾಕಿ ನಮಸ್ಕರಿಸಿ ಹೋದರು. ಖದ್ದರಿನ ಕೆಲಸಕ್ಕಾಗಿ ಹತ್ತು ಲಕ್ಷ ರೂಪಾಯಿ ಕೊಟ್ಟ ಶಿವಪ್ರಸಾದ ಗುಪ್ತರೂ, ಒಂದು ಲಕ್ಷ ರೂಪಾಯಿ ಕೊಟ್ಟ

ಜಮ್ನಲಾಲ್ ಬಜಾಜ್‌ರವರೂ ಇವರ ಜೊತೆಯಲ್ಲೇ ಇರುತ್ತಿದ್ದರು. ಯಾವ ಸಭೆಯಲ್ಲಿ ಮಾತಾಡಿದರೂ ಇವರು ಕೈನೂಲು ಮತ್ತು ಖದ್ದರ್ ಬಟ್ಟೆಯನ್ನು ಪರಿಷ್ಕರಿಸಬೇಕೆಂಬುದನ್ನು ಹೇಳದೆ ಇರುತ್ತಿರಲಿಲ್ಲ. ನಮ್ಮ ದೇಶದಿಂದ ಹೋದವರಲ್ಲಿ ಒಬ್ಬಿಬ್ಬರು ಇವರಿಗೆ ಕಿತ್ತಳೆಹಣ್ಣನ್ನು ಕೊಡಲು ಹೋದಾಗಲೂ ಕಿತ್ತಳೆ ಹಣ್ಣಿನ ಬದಲು ಕೈನೂಲು ತಂದಿದ್ದರೆ ಬಹಳ ಸಂತೋಷವಾಗುತ್ತಿತ್ತೆಂತ ಹೇಳಿದರು. ಅವರೇ ಹೇಳಿಕೊಳ್ಳುವಂತೆ ಅವರಿಗೆ ಖದ್ದರಿನ ಹುಚ್ಚು ಹಿಡಿದಿದೆ ಎಂತ ಹೇಳುವುದರಲ್ಲಿ ಅತಿಶಯೋಕ್ತಿ ಇಲ್ಲ.

ಸ್ವಾಗತಸಮಿತಿ — ಸ್ವಾಗತ ಸಮಿತಿಯು ಕರ್ನಾಟಕದ ಎಲ್ಲಾ ಭಾಗಗಳಿಂದ ಬಂದ 4000 ಮೆಂಬರುಗಳುಳ್ಳದ್ದಾಗಿತ್ತು. ಶ್ರೀಯುತ ಗಂಗಾಧರರಾವ್ ದೇಶಪಾಂಡೆಯವರು ಇದರ ಅಧ್ಯಕ್ಷರಾಗಿದ್ದರು. ಸ್ವಾಗತದ ಏರ್ಪಾಡುಗಳೆಲ್ಲವೂ ಬಹು ಚೆನ್ನಾಗಿ ಮಾಡಲ್ಪಟ್ಟಿದ್ದವು. ಈ ಏರ್ಪಾಡುಗಳನ್ನೆಲ್ಲಾ ನ್ಯಾಯವಾಗಿ ನಡಿಸಲು ಫೈನಾನ್ಸ್ ಕಮಿಟಿ, ಚಪ್ಪರ ಮತ್ತು ಶೃಂಗಾರದ ಕಮಿಟಿ, ಉಳಕೊಳ್ಳುವ ಸ್ಥಳಗಳ ಕಮಿಟಿ, ನೀರು ಸರಬರಾಯಿಯ ಕಮಿಟಿ, ಊಟದ ಕಮಿಟಿ, ದೀಪಗಳ ಕಮಿಟಿ, ರಾಶಿ ಮತ್ತು ರವಾನೆ ಕಮಿಟಿ, ವಾಲಂಟಿಯರ್ಸ್ ಕಮಿಟಿ, ಕ್ಷೇಮ ಸರ್ಫಾ ಕಮಿಟಿ, ಮೆಡಿಕಲ್ ಕಮಿಟಿ, ಪ್ರದರ್ಶನ ಕಮಿಟಿ, [illegible] ಕಮಿಟಿ, ಸಂಗೀತ ಕಮಿಟಿ, [illegible] ಕಮಿಟಿ, [illegible] ಸಭಾ ಕಮಿಟಿ ಮತ್ತು ಕೆಲಸಗಳ ಕಮಿಟಿ ಎಂದು ಹಲವು ಕಮಿಟಿಗಳನ್ನು ನೇಮಿಸಿದ್ದರು. ಈ ಕಮಿಟಿಗಳೆಲ್ಲವೂ ತಮ್ಮ ತಮ್ಮ ಕೆಲಸಗಳನ್ನು ತೃಪ್ತಿಕರವಾಗಿ ಮಾಡಿದುವು. ಶ್ರೀಯುಕ್ತ [illegible]ರವರಾಗಿದ್ದ ಮೆಡಿಕಲ್ ಕಮಿಟಿಯವರ ಏರ್ಪಾಡಿನಿಂದ ಕಾಯಿಲೆ ಬಿದ್ದವರಿಗೆ ತಾಪತ್ರಯವಿಲ್ಲದೆ ಡಾಕ್ಟರುಗಳ ಪರೀಕ್ಷೆಯೂ, ಔಷಧಿಗಳೂ ದೊರಕಿದವು. [illegible] ಸಹಾಯಕರವಾಗಿತ್ತು [illegible] ಎಂದು ಹೇಳಲಿಕ್ಕಾಗುವದಿಲ್ಲ. ಈ ಸಮಿತಿಯ ಅಧ್ಯಕ್ಷರು ಹಳಬರಾದರೂ ಪ್ರತಿದಿನ ಬೆಳಿಗ್ಗೆ ಸಾಯಂಕಾಲ [illegible] ಕ್ಯಾಂಪಿನ ಎಲ್ಲಾ ಭಾಗಗಳನ್ನೂ ನೋಡುತ್ತಿದ್ದರು. ಊಟದ ವಿಷಯದಲ್ಲಿ [illegible] ವರ ಅಭಿಪ್ರಾಯ. ಹ್ಯಾಗೂ ಈ ಸಂದರ್ಭದಲ್ಲಿ ಕರ್ನಾಟಕವು ಹಿಂದೂ ದೇಶಕ್ಕೆ ಕೊಟ್ಟ ಸಂಪೂರ್ಣ ಸ್ವಾಗತವು ಪ್ರತಿಯೊಬ್ಬ ಕರ್ನಾಟಕಸ್ಥನೂ ಹಿಗ್ಗುವಂಥಾದ್ದಾಗಿದೆ.

ಸ್ವಾಗತ ಕಮಿಟಿಯ ಒಟ್ಟು ಉತ್ಪತ್ತಿ 1,97,000 ಖರ್ಚು 1,60,000. ಉತ್ಪತ್ತಿಯ ವಿವರ — ಸ್ವಾಗತ ಕಮಿಟಿ ಮೆಂಬರುಗಳ ಫೀಸಿನಿಂದ 11,000 (ಇದರಲ್ಲಿ 10 ಮಂದಿ ಕರ್ನಾಟಕಸ್ಥರು ಸೇರಿ 1,000 ರೂಪಾಯಿ ಕೊಟ್ಟಿರುತ್ತಾರೆ). ಪ್ರತಿನಿಧಿಗಳ ಫೀಸು ಬಾಬ್ತು ಸ್ವಾಗತಕಮಿಟಿಗೆ [illegible] 9,000, ಭೋಜನದ ಟಿಕೇಟುಗಳಿಂದ 6,000, ಪ್ರೇಕ್ಷಕರ ಫೀಸಿನಿಂದ 8,000, ಪದಾರ್ಥಗಳ ವಿಕ್ರಯದಿಂದ 20,000.

ಖರ್ಚಿನ ವಿವರ — ಕಾಂಗ್ರೆಸ್ ಸಭಾ [illegible] ರೂ. 13,000, ಬಿಡಾರಗಳಿಗೆ 40,000, ನೀರಿನ ಸಪ್ಲೈಗೆ 2,[illegible], ದೀಪಗಳಿಗೆ 11,000, ಶುಚೀಕರಣಕ್ಕೆ 6,000, ಊಟದ [illegible] ಮತ್ತು ಆಹಾರ ಸಾಮಗ್ರಿಗಳಿಗೆ 3,000, ಪ್ರದರ್ಶನಕ್ಕೆ 5,000, ಸ್ವಯಂ ಸೇವಕರ [illegible] ಮತ್ತು ಇತರ ಅಲಂಕಾರಗಳಿಗೂ 15,000, ಇತರ ಸಾಮಾನ್ಯ ವೆಚ್ಚಕ್ಕೆ 10,000.

ನೋಟೀಸು.

ಕೊಡಗು ಜಮಿನ್‌ದಾರರಸಂಘದ [illegible] ಮೀಟಿಂಗನ್ನು ಈ ವರ್ಷ ಮಡಿಕೇರಿ ತಾಲೋಕಿನವರು [illegible] ಬೇಕಾಗಿದೆ. ಯಾವಸ್ಥಳದಲ್ಲಿ ನಡಸಬೇಕೆಂಬುದನ್ನು ನಿರ್ಧರಿಸಿಕೊಂಡು ಬೇಕಾದ ಏರ್ಪಾಡುಗಳನ್ನು ಮಾಡಲು ಮಡಿಕೇರಿ ತಾಲೋಕಿನವರು ಸೇರಿ ಮೂರ್ನಾಡಿನಲ್ಲಿ ತಾ॥ 15—2—1925ರಲ್ಲಿ ಮಧ್ಯಾಹ್ನ 1 ಘಂಟೆಗೆ ಮೀಟಿಂಗು ನಡಿಸಲು ನಿಶ್ಚೈಸಲಾಗಿರುತ್ತೆ. ಸರ್ವರೂ ಹಾಜರಾಗಬೇಕಾಗಿ ಕೋರುತ್ತೇವೆ.

ಮಡಿಕೇರಿ,
ತಾ॥ 2[illegible]—1—1925

ಕೋದಂಡ ಅಪ್ಪಯ್ಯ.	ಮನಿಯಪಂಡ [illegible]
ಪಾಂಡಂಡ ಚಂಗಪ್ಪ	ಪಾಂಡಂಡ ಮುತ್ತಣ್ಣ
ಕೆಂಬಡತಂಡ ಮಂದಣ್ಣ.	ಗುಪ್ಪಿ ಬಸಪ್ಪ.
ಪಳಂಗಂಡ ಚಂಗಪ್ಪ.	ಮೂವೆರ ಅಣ್ಣಯ್ಯ
ಚೌರಿರ ಅಪ್ಪಯ್ಯ	ಎಂ ಎಂ ಸಿದ್ದೀಕ್
ಚೆಕ್ಕೆರ ಪೂವಯ್ಯ	ಸಿ ಯನ್. ವೆಂಕಪ್ಪಯ್ಯ

ವರ್ತಮಾನ ಸಂಗ್ರಹ.

ಒಳದೇಶ.

ವೀರಾಜಪೇಟೆ ಮುನಸೀಫರಾಗಿರುವ ಮಿ. ಸಿ ಎನ್ ಮುತ್ತಣ್ಣನವರಿಗೆ ಕಾಯಿಲೆಯ ದೆಸೆಯಿಂದ ಪುನಃ ಮೂರು ತಿಂಗಳು ರಜೆ ಮಂಜೂರಾಗಿದೆ.

ಕಳೆದವಾರದಲ್ಲು ಪೊನ್ನಂಪೇಟೆ ಮೇಕೂರುಹೊಸಕೇರಿ ಗ್ರಾಮದ ಕುಟ್ಟಂಡ ಬೋಪ್ಪಯ್ಯನವರ ಪತ್ನಿಯು ತಾನಾಗಿ ಅವರ ಕೆರೆಗೆ ಬಿದ್ದು ಮೃತಪಟ್ಟಿರುವುದೂ ಮೂರು ದಿವಸಗಳನಂತರ ಶವವು ಕಾಣಬಂತೆಂದೂ ತಿಳಿದು ಬರುತ್ತದೆ.

ಮಿ ಪಟ್ಟಮಾಡ ಪೊನ್ನಪ್ಪನವರ ಸ್ಥಳಕ್ಕೆ ಮಿ ಮೂಡೆರ ತಿಮ್ಮಯ್ಯನವರನ್ನು ಕೋಆಪರೇಟಿವ್ ಕ್ಲಾರ್ಕಾಗಿ ನೇಮಿಸಿರುವರು.

ತಾರೀಕು 7—1—25ರಲ್ಲು ಸಿದ್ದಾಪುರದ ಬಳಿ ನೆಲ್ಯಹುದಿಕೇರಿ ಗ್ರಾಮದಲ್ಲು [illegible] ಜನರು ರಾತ್ರಿ ಮೀನು ಹಿಡಿಯಲಿಕ್ಕೆ ಸಮೀಪದ ಕಾವೇರಿ ನದಿಗೆ ಹೋದಲ್ಲು ಆಳವಾದ ಗುಂಡಿಯಲ್ಲು ಒಬ್ಬರು ಮೃತಪಟ್ಟು ಹೋದದ್ದು ಕೆಲವು ದಿವಸಗಳ ವರೆಗ ಯಾರಿಗೂ ತಿಳಿಯಬರಲಿಲ್ಲ. ಕಡೆಗೆ ಪುಕಾರು ಉಂಟಾಗಿ ಪೊಲೀಸಿನವರು ವಿಚಾರಿಸಿ [illegible]ದಲ್ಲು ಈ ತಾರೀಕು 25ರಲ್ಲು ಹೊಳೆ ದಡದಲ್ಲಿ ಹೂತಿಟ್ಟ ಆ ಶವವು ಕಾಣಬಂತು. ಆವನು ಕಡಿಯತ್ಮನಾಡು ಕಿರುಂದಾಡು ಗ್ರಾಮದ ಚರುಮಂದಂಡ ಮಾಚಯ್ಯನೆಂದೂ ತಿಳಿಯಬಂದಿದೆ. ಈ ಎರಡು ಬಾಕಿ ಜನರು [illegible] ಅವರು ಕೋವಿಬಾಕಿ ಮೀನು ಹಿಡಿಯುವಾಗ್ಗೆ ಆಳವಾದ ಗುಂಡಿಯಲ್ಲಿ ಈಸು ತಗಿಯಲು ಮುಳುಗಿದ ಮಾಚಯ್ಯನು ಬಡಲಾರದೆ ಸತ್ತನೆಂತ ಹೇಳಿದರೆಂದು ವರ್ತಮಾನ. ವಿಚಾರವು ನಡಿಯುತ್ತಿದೆ.

ತಿರುಚಿನಾಪಳ್ಳಿ ಕಾಲೇಜಿನಲ್ಲಿ ಬಿ.ಎ ಕ್ಲಾಸಿನಲ್ಲಿ ಓದುತ್ತಿದ್ದ ಚೇಕರಂಡ ಕಾರ್ಯಪ್ಪನವರನ್ನು ಸರ್ವೆ ಆಫ್ ಇಂಡಿಯಾದ ಸಬ್ ಅಸಿಸ್ಟೆಂಟ್ ಸುಪರಿಂಟೆಂಡೆಂಟಾಗಿ ಡೇರಾಡೂನಿನಲ್ಲಿ ತರಪೇತು ಹೊಂದಲು ಕಳುಹಿಸಿರುವರು.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ [illegible] ಸಭಾ ಮೀಟಿಂಗು ಫೆಬ್ರವರಿ ತಾರೀಕು 7ರಲ್ಲು ಮಡಿಕೇರಿ ಮುನಿಸಿಪಲ್ ಹಾಲಿನಲ್ಲಿ ನಡೆಯುವದು.

ಶ್ರೀಮಂಗಲನಾಡು ಕುಟ್ಟಗ್ರಾಮದ ಅಜ್ಜಮಾಡ ಮಾದಪ್ಪನವರು ಮತ್ತು ಕೈಬಲಿರ ತಿಮ್ಮಯ್ಯನವರು ಕೆಲವು ದಿವಸಗಳ ಹಿಂದೆ ಕಾಡ ಹಂದಿ [illegible] ಗದ್ದೆಯಲ್ಲಿ [illegible] ತಿಮ್ಮಯ್ಯನವರು ಇರುವದನ್ನು ತಿಳಿಯದೆ ಹಂದಿಗಳೆಂದು ಮಾದಪ್ಪನವರ ಗುಂಡು ಹೊಡಿಯಬೇಕಾಗಿ ಆಕಸ್ಮಿತ ತಿಮ್ಮಯ್ಯನವರಿಗೆ ಗುಂಡು ತಗಲಿ ಒಂದು ಗಂಟೆಯನಂತರ ಅವರು ಮೃತಪಟ್ಟರಂತೆ.

ಫೆಬ್ರವರಿ ತಾ 1ರಲ್ಲು ಪೊನ್ನಂಪೇಟೆಯಲ್ಲಿ ಜಮೀನ್‌ದಾರರ ಸಂಘದ ಎಗ್ಸಿಕ್ಯೂಟಿವ್ ಕಮಿಟಿ ಮೀಟಿಂಗೂ, ಮಡಿಕೇರಿ ತಾಲೋಕಿನ ಸ್ವಾಗತಮಂಡಲಿಯ ಮೀಟಿಂಗೂ ಮತ್ತು ಕಾಂಗ್ರೆಸ್ ಕಮಿಟಿಯ ಮೀಟಿಂಗೂ ನಡೆಯಲಿಕ್ಕಿರುವವು.

ತಾ 26ರಲ್ಲು ಬಿಲ್ಲಚಂಡ ಎಸ್ ಚಂಗಪ್ಪನವರ ಪತ್ನಿಯು ತಮ್ಮ ಮಡಿಕೇರಿ ಮನೆಯಲ್ಲಿ ದೈವಾಧೀನರಾದರು.

ಕಂದಾಯ ಕೊಡುವ ಸಮಯವು ಸಮೀಪಿಸುತ್ತಾ ಬಂದರೂ ಕೂಡ ಶ್ರೀಮಂಗಲನಾಡಿನಲ್ಲಿ ಇನ್ನೂ ಜಮಾಬಂದಿ ಆಗದೆ ಇರುವುದರಿಂದ ಕಳೆದ ನೆರೆಯ ದೆಸೆಯಿಂದ ಅಲ್ಲಿಯ ಜನರಿಗೆ ಉಂಟಾದ ನಷ್ಟಕ್ಕಾಗಿ ಕಂದಾಯ ರಿಮಿಶನ್ ಅರ್ಜಿ ಒದಗಿ ಕಂದಾಯ ಮಾಫಿಮಾಡಿಕೊಳ್ಳಲು ತೊಂದರೆಯಾಗಿದೆ. ಬಂದೂ ಬೇಗನೆ ಅಲ್ಲಿಯ ಜಮಾಬಂದಿ ನಡಿಸಿದರೆ ಉಪಕಾರವಾಗುತ್ತಿತ್ತೆಂದು ಅಲ್ಲಿಯವರೊಬ್ಬರ ಬಾತ್ಮಿ.

ತಾ 23ರಲ್ಲು ಕೌನ್ಸಿಲು ಹಾಲಿನಲ್ಲು ಡಿಸ್ಟ್ರಿಕ್ಟ್ ಬೋರ್ಡಿನ ಬಜೆಟ ಮೀಟಿಂಗು ನಡೆಯಿತು.

ನಾಲ್ಕುನಾಡು ಯವಕಪಾಡಿ ಗ್ರಾಮದ [illegible] ತೋಟದ ಒಬ್ಬ ಯರವನು, ಒಬ್ಬ ಗೌಡುಗನು ಕಟ್ಟಿದ್ದ ಉರಿಯಲ್ಲು ರಾತ್ರಿ ಕೋವಿ ತಂದುಕೊಂಡು ಉಳಿ [illegible] ಉಳಿಕಟ್ಟಿದ ಗೌಡುಗನು ಅಲ್ಲಿಗೆ ಬರುವಾಗ್ಗೆ ಹಂದಿ ಎಂದು ತೋರಿ ಯರವನು ಗುಂಡು ಹೊಡೆದದ್ದು ಗೌಡುಗನಿಗೆ ತಗಲಿ ಆವನು ಮನೆಗೆ ಹೋಗಿ ಮೃತಪಟ್ಟನೆಂದು ಸುದ್ದಿ.

ಕಳೆದವಾರ ಕುಂಡಿಲಗೇರಿಗ್ರಾಮದ ಮುಕ್ಕಾಟಿರ [illegible]ಯ್ಯನವರ ಪತ್ನಿಯು ಬಾವಿಗೆ ಬಿದ್ದು ಸತ್ತಳೆಂದು ತಿಳಿಯುತ್ತೇವೆ.

ಬಿಟ್ಟನಾಡು ನಾಲ್ಕೇರಿ ಗ್ರಾಮದಲ್ಲಿ ಕರಕಾಂ ತೋಟದಲ್ಲಿ ಕೊಂಕಣಸ್ಥರ ತಿಮ್ಮಯ್ಯನೆಂಬುವನಿಗೆ ಗುಂಡು ಹೊಡೆದದ್ದಕ್ಕಾಗಿ ಮುಕ್ಕೇರ ಅಜ್ಜಯ್ಯನಿಗೆ ಸಬ್‌ಜಡ್ಜಿಯವರ ಕೋರ್ಟಿನಲ್ಲಿ ಮೂರು ತಿಂಗಳು ಸಾದಾ ಸಜೆ ವಿಧಿಸಲ್ಪಟ್ಟಿದೆ.

ತಾ [illegible]ರ ಸಾಯಂಕಾಲ ಮಡಿಕೇರಿ ಹೈಸ್ಕೂಲ್ ಹಾಲಿನಲ್ಲಿ [illegible] ರವರ ಅಧ್ಯಕ್ಷತೆಯಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡದು ಹಿಂದೂ ಮಹಾಸಭೆಯ ಶಾಖೆಯೊಂದನ್ನು ಇಲ್ಲಿ ಸ್ಥಾಪಿಸುವಂತೆ ತೀರ್ಮಾನಿಸಿ ಒಂದು ಆರ್ಗನೈಸಿಂಗ್ ಕಮಿಟಿಯನ್ನು ನಿರ್ಮಾಣಿಸಿದರು.

ಈ ತಾ 27ರಲ್ಲು ಕೊಡಗು ಆಫೀಸಿನಲ್ಲಿ ಕೊಡಗು ಕಂಪೆನಿಯ ಡೈರಕ್ಟರುಗಳ ಮೀಟಿಂಗೊಂದೂ ಜಮೀನುದಾರರ ಸಂಘದ ಎಕ್ಸಿಕ್ಯುಟಿವ್ ಕಮಿಟಿ ಮೀಟಿಂಗೊಂದೂ, ತಾ 24ರಲ್ಲು [illegible] ಬಳಿ ಕಾಂಗ್ರೆಸ್ ಕಮಿಟಿಯ ಮೀಟಿಂಗೊಂದು ನಡೆದವು. ಇವುಗಳ ವಿವರವು ಬರುವವಾರ ಪ್ರಕಟಿಸಲ್ಪಡುವುದು.

ಹಿಂದೂ ದೇಶ.

ಸೆಂಟ್ರಲ್ ಪ್ರಾವಿನ್ಸಿನ ಹೊಸ ಗವರ್ನರಾದ ಸರ್ ಮಾಂಟೆಗ್ಯೂ ಬಟ್ಲರವರು ನಾಗಪುರಕ್ಕೆ ತಾರೀಕು 25ರಲ್ಲಿ ತಲುಪಿದರು. ಮರು ದಿನ ಹಳೆ ಗವರ್ನರಾದ ಸರ್ ಫ್ರಾಂಕ್ ಸ್ಲೈಯವರು ಅಲ್ಲಿಂದ ಹೊರಟು ಹೋದರು.

ರಂಗೂನಿನಲ್ಲಿ ಒಂದು ಅಕ್ಕಿ ಗಿರಣಿಗೆ ಬೆಂಕಿ ಬಿದ್ದು ಸುಮಾರು ಒಂದು ಲಕ್ಷ ರೂಪಾಯಿಗಳ ಮೇಲೆ ನಷ್ಟ ಸಂಭವಿಸಿದೆ.

ತಾರೀಕು 29ರಲ್ಲು ಬನಾರಿಸ್ ಹಿಂದೂ ಯುನಿವರ್ಸಿಟಿಯ ಕಾನ್ವಕೇಶನ್ ಅಳ್ವಾರದ ಮಹಾರಾಜರವರ ಅಧ್ಯಕ್ಷತೆ ನಡೆಯಿತು.

ತಾರೀಕು 23, 24ರಲ್ಲಿ ಎಲ್ಲಾ ಪಾರ್ಟಿಗಳ ಕಾನ್ಫರೆನ್ಸಿನ ಕಮಿಟಿಯ ಮೀಟಿಂಗು ಡೆಲ್ಲಿಯಲ್ಲಿ ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಅನೇಕ ಮುಂದಾಳುಗಳು ಹಾಜರಿದ್ದರು. ದೀರ್ಘವಾದ ಚರ್ಚೆ ನಡೆದನಂತರ ಎಲ್ಲಾ ಪಂಗಡವನ್ನು ಕಾಂಗ್ರೆಸಿಗೆ ಸೇರುವಂತೆ ಮಾಡಲು ಬೇಕಾದ ಏರ್ಪಾಡುಗಳನ್ನೂ ಸೂಚಿಸಲಿಕ್ಕೂ, ಸ್ವರಾಜ್ಯ ದೊರೆತಾಗ ಎಲ್ಲಾ ಕಾನೂನು ಸಭೆಗಳಲ್ಲಿ ಪ್ರತಿ ಕೋಮಿನ [illegible] ಜನಗಳ ಪ್ರತಿನಿಧಿತ್ವವನ್ನು ನಿಶ್ಚಯಿಸಲಿಕ್ಕೂ, ದೇಶದ ಈಗಿನ ಸ್ಥಿತಿಗೊಪ್ಪುವಂತೆ ಸ್ವರಾಜ್ಯದ ರಚನೆಯನ್ನು ನಿರ್ಧರಿಸುವದಕ್ಕೂ ಎಲ್ಲಾ ಪಂಗಡಗಳ ಪ್ರತಿನಿಧಿಗಳಾದ 40 ಮೆಂಬರುಗಳುಳ್ಳ ಒಂದು ಸಬ್ ಕಮಿಟಿಯು ನಿರ್ಮಾಣವಾಯಿತು. ಈ ಕಮಿಟಿಯು ತನ್ನ ರಿಪೋರ್ಟನ್ನು ಫೆಬ್ರವರಿ 15ರೊಳಗೆ ತಯಾರಿಸತಕ್ಕದ್ದು. ಈ ರಿಪೋರ್ಟನ್ನು ಚರ್ಚಿಸಲು ಜನರಲ್ ಕಮಿಟಿಯ ಮೀಟಿಂಗು ಮಾರ್ಚ ಒಂದನೇ ವಾರದಲ್ಲಿ ನಡೆಯುವುದು.

ತಾರೀಕು 27ರ ರಾತ್ರಿ ಬೊಂಬಾಯಿಯಲ್ಲಿ ಎರಡು ಮಹಡಿಯ ಕಟ್ಟಡ ಒಂದಕ್ಕೆ ಬೆಂಕಿ ಬಿದ್ದು ಕಟ್ಟಡವು ಬಿದ್ದು ಹೋದದ್ದಲ್ಲದೆ ಅದರಲ್ಲಿದ್ದ ಅಂಗಡಿಯ ಬಟ್ಟೆಗಳೂ, ಆಟದ ಸಾಮಾನುಗಳೂ, ರೇಶ್ಮೆ ಬಟ್ಟೆಗಳೂ ಸುಮಾರು ಒಂದು ಲಕ್ಷ ರೂಪಾಯಿಯ ವರೆಗೆ ನಷ್ಟವಾಗಿವೆ.

ಬಂಗಾಳ ಆರ್ಡಿನೆನ್ಸಿನ ವಿಷಯ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಚರ್ಚಿಸಲು ತಾರೀಕು ೩೦ನೇ ದಿವಸನ್ನು ಪ್ರತ್ಯೇಕ ಇಟ್ಟಿದ್ದರು.

ಲೆಜಿಸ್ಲೇಟಿವ್ ಎಸೆಂಬ್ಲಿಯ ಅಭಿಪ್ರಾಯಕ್ಕೆ ಬೆಲೆ ಕೊಡುವ ಬ್ರಿಟಿಶ್ ಹಿಂದೂ ದೇಶದ ಆರ್ಥಿಕ ಸ್ಥಿತಿಯನ್ನು ವಿಚಾರಿಸಲು ಈಗಿನ ದೇಶದ ಪರಿಸ್ಥಿತಿಯು ಎಷ್ಟರ ಮಟ್ಟಿಗೆ ಸಹಾಯಕರವಾಗಿರುವದೆಂದೂ ಅದನ್ನು ಹ್ಯಾಗೆ ಉತ್ತಮಗೊಳಿಸಬಹುದೆಂದೂ ಕಂಡು ಹಿಡಿಯಲು ಸರ್ ಎಂ ವಿಶ್ವೇಶ್ವರಯ್ಯನವರು (ಅಧ್ಯಕ್ಷರು) ಡಾ [illegible] ಮತ್ತು [illegible] (ನೆಲ್ಲೂರ) ಇವರು ಮೂವರು ಇರುವ ಒಂದು ಕಮಿಟಿಯನ್ನು [illegible] ಸರಕಾರದವರು ನೇಮಿಸಿರುವರು.

ಮದ್ರಾಸಿನಲ್ಲಿ ನಡೆಯಲಿಕ್ಕಿರುವ ಆಂಧ್ರ ಆಯುರ್ವೇದಿಕ್ ಕಾನ್ಫರೆನ್ಸಿನ ಏಳನೇ ಮಹಾಸಭೆಯ ಸ್ವಾಗತ ಕಮಿಟಿಯ ಅಧ್ಯಕ್ಷರಾಗಲು ಸರ್ ಪಿ ತ್ಯಾಗರಾಜ ಚೆಟ್ಟಿಯವರು ಒಪ್ಪಿಕೊಂಡಿರುವರು.

ವಿದೇಶ.

ಈಜಿಪ್ಟಿನಲ್ಲಿ ನಡೆಯುತ್ತಿರುವ ಚುನಾವಣೆಯು [illegible] ಜಾಗ್ಲುಲ್ ಪಾಷಾರವರು [illegible] ಪ್ರಚಾರ ಮಾಡುತ್ತಿರುವರು. ಸರ್ಕಾರದವರು ಜಾಗ್ಲುಲ್ ಪಂಗಡದವರನ್ನು ನ್ಯಾಯವಾದ ಮೀಟಿಂಗುಗಳನ್ನು ಮಾಡಲು ಬಿಡದೆ ಪೊಲೀಸಿನವರೂ ಸಿಪಾಯಿಗಳೂ ಮುಂದಾಳುಗಳ ಮನೆಗೆ ನುಗ್ಗಿ ಹೊಡೆಯುತ್ತಿರುವುದರಿಂದ ಈಗಿನ ಚುನಾವಣೆಯು ದೇಶದ ನ್ಯಾಯವಾದ ಚುನಾವಣೆಯಲ್ಲವೆಂದು ಸೂಚಿಸಿರುವರು.

ಮಿ. ಆಸ್‌ಕ್ವಿತ್ತರವರಿಗೆ ಅರ್ಲ ಎಂಬ ಟೈಟಲನ್ನು ರಾಜರು ದಯಪಾಲಿಸಿರುವರು. ಅವರು ಅದನ್ನು ಸ್ವೀಕರಿಸಿರುವರು.

ಡೆಪ್ಯುಟಿ ಎಂಬ ಪಾರ್ಲಿಮೆಂಟಿನಲ್ಲಿ ಉಂಟಾದ ಒಂದು ಗೊಂದಲದ ಕಾರಣ ಪ್ರಸ್ತುತ ಮಂತ್ರಿ ಮಂಡಲಿಯು ರಾಜೀನಾಮೆ ಕೊಡಲು ನಿಶ್ಚೈಸಿದೆ.

ಸುಡಾನಿನಲ್ಲಿ ಡಿಫೆನ್ಸ್ ಫೋರ್ಸ್ ಎಂಬ ಸೈನ್ಯ ಒಂದನ್ನು ನೇಮಿಸುವದು ನ್ಯಾಯವಲ್ಲವೆಂತಲೂ ಸುಡಾನಿನ ವಿಷಯ ಈಜಿಪ್ಟ ಸರಕಾರಕ್ಕೂ ಇಂಗ್ಲೆಂಡಿನ ಸರಕಾರಕ್ಕೂ ನ್ಯಾಯವಾದ ಪತ್ರವ್ಯವಹಾರ ನಡೆದಲ್ಲದೆ ಯಾವುದನ್ನೂ ತೀರ್ಮಾನಿಸಕೂಡದೆಂತಲೂ, ಈಜಿಪ್ಟ ಮತ್ತು ಸುಡಾನಿನ ಏಕೀಕರಣವನ್ನು ಎಂದೂ ಬಿಡೆಯಕೂಡದೆಂದಲೂ ಈಜಿಪ್ಟಿನ ಪ್ರಧಾನಮಂತ್ರಿಯಾದ [illegible] ಪಾಷಾರವರು ಬ್ರಿಟನ್ನಿನ ಪ್ರತಿನಿಧಿಯಾದ ಲಾರ್ಡ ಎಲೆನ್‌ಬಿಯವರಿಗೆ ಬರೆದಿರುವರು.

« ಪರಕೆ ಎಂಬುದು ನಿಜವೇ? »

(ಬರೆದು ಬಂದದ್ದು.)

ಈ ವಿಷಯವಾಗಿ ಅನೇಕರು, ಅನೇಕ ವಿಧವಾದ ಅಭಿಪ್ರಾಯ ಪಟ್ಟಿರುತ್ತಾರೆ. ವಿಚಾರಿಸುತ್ತಾ ಹೋದರೆ ಕಾರ್ಯಕ್ರಮದಲ್ಲಿ ಅವರ ಅಭಿಪ್ರಾಯಗಳಾವವೂ ಸರಿ ಹೋಗುವಂತಿಲ್ಲ. 'ಪರಕೆ' ಎಂದರೆ ಅದು ಕೇವಲ ಸುಳ್ಳು, ಭ್ರಾಂತಿ ಎಂದು [illegible]ವಾಗಿ ದಯಾನಂದ ಸರಸ್ವತಿಯೇ ಮೊದಲಾದ ಮಹಾತ್ಮರು [illegible] ಪ್ರತಿಪಾದಿಸುತ್ತಾರೆ. ಪ್ರಕೃತ ನಡವಳಿಕೆಯ ಪ್ರತ್ಯಕ್ಷಾನುಭವದಲ್ಲಿ ವಿಮರ್ಶಿಸುವಾಗ ಈ ಮತಸ್ಥರುಗಳೆಲ್ಲರ ಅಭಿಪ್ರಾಯವೇ ಮಿಥ್ಯಾ ಕಲ್ಪನೆ ಎಂಬುದು ಸ್ವತಃ ಸ್ಪಷ್ಟವಾಗುತ್ತದೆ. ಹೀಗಿರುವಾಗ ಯಾವಗ [illegible]

ಯೊಳವದು ಮಿಥ್ಯವೆಂಬ ಮಾತಿನಿಂದ ಭ್ರಾಂತಿ ಕಲ್ಪನೆಯು ವಾಚಕರಿಗೆ ತಲೆದೋರದಿರದು. ಆ ವಿಚಾರವಾಗಿ ನಮ್ಮ ಲೇಖನಿಯು ಸ್ವಲ್ಪ ಮುಂದರಿಸಿದೊಡನೆಯೇ—ಆ ಮಹಾತ್ಮರುಗಳ ಮಾತು ಸರಿಯೇ? ಅದು ಸರಿ ಎಂದು ಹೇಳತಕ್ಕ ಈ ಮಹಾತ್ಮರಾರು? ಎಂಬ ತರ್ಕ ಪ್ರಶ್ನೆಯು ನಮ್ಮ ಲೇಖನಿಯ ಮೇಲೆ ಆಗ್ರಹಗೊಳ್ಳದಿರದು. ಇರಲಿ, ಮಹಾತ್ಮರ ಅಭಿಪ್ರಾಯ ಸ್ವಲ್ಪ ನಿಲ್ಲಲಿ, ಇದರ ಸತ್ಯ ವಿಚಾರ ಹೇಗೆಂದು ಪರಿಶೀಲಿಸೋಣ. ಸಾಮಾನ್ಯ ವಾಡಿಕೆಯಾಗಿ ಮನುಷ್ಯರು ಏನಾದರು ತಮಗೆ ಆಪತ್ತು ಬಂದೊದಗಿದರೆ ತತ್ಪರಿಹಾರ ನಿಮಿತ್ತವಾಗಿ ದೈವ ಸಂಬಂಧ ಕುರಿತು "ಸಂಹಾರ ಅಥವಾ ಹರಕೆ" ಗಳನ್ನು ಮಾಡುತ್ತಾರೆ. ಇವುಗಳು ಒಮ್ಮೊಮ್ಮೆ ಫಲಕಾರಿಯಾಗುವದೂ, ಆಗದಿರುವದೂ ಉಂಟು. ಆ ನಿಮಿತ್ತ ಹರಕೆ ಎಂಬುದು ಭ್ರಾಂತಿ ಎಂದೂ, ಹರಕೆ ಮಾಡಿದರು ಯೋಚನೆಮಾಡಿದ್ದು ಕೂಡಲೆ ದೊರೆಯಬೇಕೆಂದು ಮುಂತಾಗಿ ಬಲಾತ್ಕಾರ ಕಲ್ಪನೆಗಳನ್ನು ಕಲ್ಪಿಸಿಕೊಂಡು ಹರಕೆ ನಿಲ್ಲಿಸಬೇಕೆಂಬ ಕಾರಣಗಳನ್ನು ಕಲ್ಪಿಸುತ್ತಾರೆ. ಇನ್ನು ಕೆಲವರು ದೈವಗಳಿಗೆ ನಮ್ಮಂತೆ ಸಂಸಾರ ಸಾಗರಗಳಿವೆಯೇ? ಇಲ್ಲವೆ ಹಸಿವು ತೃಷೆಗಳಿವೆಯೋ? ಈ ಹರಕೆ ಕಾಣಿಕೆ ಮುಂತಾದವುಗಳಿಂದ ಅವಕ್ಕಾಗುವ ಪ್ರಯೋಜನವೇನು? ದೈವಗಳೇನು ಲಂಚ ತಿನ್ನಲಿಕ್ಕೆ ಆಶಿಸುತ್ತವೆಯೇ? ಎಂದು ಮುಂತಾಗಿ ಕಾರಣಗಳನ್ನು ಕಲ್ಪಿಸುತ್ತಾರೆ. ಉಳಿದ ಕೆಲವು ಮಹಾತ್ಮರು ಮನುಷ್ಯರ ಕಷ್ಟ ನಿಮಿತ್ತ್ಯೊದಗುವ ದೈವವು ಮನೆಯಲ್ಲಿ ಹೆಂಡತಿ ಮಕ್ಕಳಿಗೆ ಆಪತ್ತು ಅತ್ಯಧಿಕವಾಗಿರುವಾಗ್ಯೂ ಹರಕೆ ಮಾಡಿದರೆ ಬೇಗನೆ ಕಾಫಿ ರೊಟ್ಟಿ ಮಾಡಿ ಕೂಡಲಾರದೇ? ಕೂಲಿಯು ಸಿಕ್ಕದಿರುವ ಸಮಯ ಗದ್ದೆ ಹೂಡಿ ಕೃಷಿ ಮಾಡಲಾರದೆ? ಎಂದು ಮುಂತಾಗಿ ಪ್ರಶ್ನೆ ಮಾಡುತ್ತಾರೆ. ಮತ್ತು ವೇದಾಂತಿಗಳು ಜಗತ್ತು ಮಿಥ್ಯ ಬ್ರಹ್ಮ ಸತ್ಯವೆಂದೆಂದುಕೊಂಡು ಎಲ್ಲವೂ ಭ್ರಾಂತಿಮಯವೆಂದೂ, ದೈವವೆಂದರೇನು? ಪ್ರಾರಬ್ಧ ಕರ್ಮಗಳ ಮೀರತಕ್ಕವರಾರು? ಆಗುವಷ್ಟು ಆಗದಿರದು, ವಿಧಿಯನ್ನು ಮೀರತಕ್ಕವನಿಲ್ಲವೆಂದು ಹೇಳುತ್ತಾ ಕಾರಣ ಕಲ್ಪಿಸುತ್ತಾರೆ.

ಈ ಕಾರಣಗಳೆಲ್ಲವು ಅವರವರ ಪಟ್ಟಿಗೆ ಸಕಾರಣವೆಂದಾಗಿದ್ದರೂ ಸರ್ವಸಮ್ಮತಕ್ಕೆ ಕೇವಲ ಅಸಮಾಧಾನಕರವಾಗಿವೆ. ಯಾವವಾದದೊಂದನ್ನು ಹಿಡಿದು ಮಾಡುವಾಗ ನಾವು ಕೊಡತಕ್ಕ ಕಾರಣಗಳು ಸಮರ್ಪಕವಾಗಿದ್ದು ಸರ್ವಸಮ್ಮತವಿರಬೇಕು. ಅಲ್ಲವೆ ಅದನ್ನು ಯಾರೂ ಪ್ರತಿಘಟಿಸಕೂಡದು. ಈ ಪಕ್ಷದಿಂದ ಇವರು ಕೊಡತಕ್ಕ ಕಾರಣಗಳನ್ನು ಪರಿಶೀಲಿಸುತ್ತಾ ಹೋದರೆ ಅವರ ಕಾರಣಗಳೆಲ್ಲವು ಸುಲಭದಲ್ಲೇ ಖಂಡನೆಯಾಗುತ್ತೆ. ವೇದಾಂತಿಗಳು ಹೇಳತಕ್ಕ "ಜಗನ್ಮಿಥ್ಯಾ ಬ್ರಹ್ಮ ಸತ್ಯ" ವೆಂಬುದೇನೆಂದು ಯೋಚಿಸಿದರೂ, ಪ್ರಕೃತ ಮನುಷ್ಯವರ್ಗವು ಪ್ರತ್ಯಕ್ಷವನ್ನು ನಿರ್ಧರಿಸಿ ಪರೋಕ್ಷ ವಿಚಾರಕ್ಕೆ ಆ ಮೇಲೆ ಕಾಲಿಡಬೇಕಷ್ಟೆ. ನರುವವನ್ನು ಬಿಟ್ಟು ಯಾವಾಗಲೂ ಆಪ್ತರಿಗೆ ಒಂದೇ ಸಲ ಧುಮುಕಲು ಯಾರಿಗೂ ಶಕ್ಯವಿಲ್ಲ. ಹಾಗೂ ಪ್ರಪಂಚವು ನರಜೀವನಕಾಗಿಯೇ ನಿರ್ಮಿಸಲ್ಪಟ್ಟಿದೆಯೇ ಹೊರತು ಎರಡನೆಯವರ ಲೀಲೆಗಾಗಿ ನಿರ್ಮಿಸಲ್ಪಟ್ಟಿರುವದಿಲ್ಲ. ಅದಕಾರಣ ನರಜೀವಿಗಳಿಗೆ ಯಾವಾಗಲೂ ಪ್ರತ್ಯಕ್ಷ ಕಾಣತಕ್ಕ ಜಗತ್ತು ಸತ್ಯವಾಗಿಯೂ ಪರೋಕ್ಷದಲ್ಲಿರತಕ್ಕ ಬ್ರಹ್ಮವು ಮಿಥ್ಯವಾಗಿಯೂ ತೋರುತ್ತದೆ. ವಿದ್ಯಾರ್ಥಿಗಳು ಪಾಠ ಕಲಿಯುವಾಗ ಉಪಾಧ್ಯಾಯರೊಡನೆ ಯಾ ಮಠದಲ್ಲಿಯ, ಕೊಂಡು ವಿದ್ಯಾಭ್ಯಾಸವು ಪೂರ್ಣವಾದೊಡನೆ ಹೇಗೆ ಅಲ್ಲಿಂದ ಮುಕ್ತರಾಗುವರೋ, ಹಾಗೆಯೇ ಮನುಷ್ಯರು ಸಂಸಾರವೆಂಬ ಪ್ರಪಂಚದಲ್ಲಿದ್ದುಕೊಂಡು ತಮ್ಮ ಕರ್ತವ್ಯವು ಸಂಪೂರ್ಣ (ಬ್ರಹ್ಮಜ್ಞಾನವು) ದೊರಕೊಡನೆ ಈ ಪ್ರಪಂಚವನ್ನು ಬಿಟ್ಟುಬಿಡುತ್ತಾರೆ. ಆ ಮಾತ್ರಕ್ಕೆ ವಿದ್ಯಕ್ಕೆ ವಿದ್ಯಾರ್ಥಿಗಳ ಮಠವು ಮಿಥ್ಯವಾಗುತ್ತದೆಯೇ? ಯಾವಾತನು ಗ್ರಹಕೃತ್ಯದಲ್ಲಿದ್ದುಕೊಂಡು ಸಂಸಾರಪಾಶಕ್ಕೆ ಸಿಲುಕಿದವನಾಗುತ್ತಾನೋ, ಆತನಿಗೆ ಬ್ರಹ್ಮಜ್ಞಾನ ಉಂಟಾದರೆ ಕೂಡಲೆ ತಾನಿರುವ ಸ್ಥಳವನ್ನು ಬಿಟ್ಟು ಎರಡನೆಯದಾದ ನಿರ್ಜನ ಪ್ರದೇಶಕ್ಕೆ (ಕಾಡಿಗೆ ಅಂದರೆ ಗ್ರಹಸ್ಥತ್ವವನ್ನು ಇರತಕ್ಕ ಸಂಸಾರ ಭೂಮಿಯನ್ನು ಬಿಟ್ಟು) ಹೋಗಿ ಬಿಡುತ್ತಾನೆ. ಅಂಥಾವನು ಈ ಪ್ರಾಪಂಚಿಕ ವ್ಯವಹಾರದಲ್ಲಿರುವುದಿಲ್ಲವಷ್ಟೆ. ಆದಮೇಲೆ ಅಂಥಾವರ ಮಾತುಗಳು ನಮ್ಮ ಈ ಪ್ರಾಪಂಚಿಕ ವ್ಯವಹಾರಿಕರಿಗೆ ಹೇಗೆ ವ್ಯಾಪಿಸುತ್ತವೆ. ಹಾಗೆ ಒಂದುವೇಳೆ ವ್ಯಾಪಕತ್ವವನ್ನು ಕಲ್ಪಿಸಿಕೊಂಡರ ಕೇವಲ ನವಿಲು ವೇಷವನ್ನು ನಟಿಸಿಕೊಂಡ ಕಾಗೆಯ ಕ್ರಮವೇ, ಕಾರ್ಯಕ್ಕೆ ಪರಿಣಮಿಸದಿರಲಾರದು. ಜ್ಞಾನಿಗಳಿಗೆ ಯಾವದು ಅವಶ್ಯವಿಲ್ಲದಿದ್ದರೂ ಪ್ರಪಂಚಕ್ಕೆ ಸರ್ವವು ಬೇಕಷ್ಟೆ. ಪ್ರಪಂಚವು ಎಂದಿಗೂ ಜ್ಞಾನಿಗಳ ಮಯವಾಗಲಿಕ್ಕಿಲ್ಲ. ಹಾಗೆ ಆಗುವದಾಗಿದ್ದರೆ ಇಷ್ಟನ್ನೆಲ್ಲಾ (ಅಸತ್ಯವೆಂದೆನ್ನುವದನ್ನೆಲ್ಲಾ) ಸೃಷ್ಟಿಸುವ ಅಗತ್ಯವಿತ್ತಿಲ್ಲ. ಹಾಗೆ ಸೃಷ್ಟಿಸಿದ್ದರಿಂದ ಸರ್ವವು ಬೇಕೆಂಬುವದಕ್ಕೆ ಅದೇ ಒಂದನೆಯ ಸಾಕ್ಷಿ. ಇದರಲ್ಲಿ ಒಂದೊಂದು ವರ್ಗಕ್ಕೆ ಒಂದೊಂದು ಸತ್ಯವಾಗಿಯೂ, ಒಂದೊಂದು ಮಿಥ್ಯವಾಗಿಯೂ ಒಂದು ವೇಳೆ ಇರಬಹುದಾದರೂ, ಅದು ಆಯಾ ವರ್ಗದ ನಂಬಿಕೆಯನ್ನನುಸರಿಸಿ ಸತ್ಯ ಮಿಥ್ಯವೆನ್ನಿಸುವ ಭೇದವಾಗುತ್ತದೆಯೇ ಹೊರತು ಅದು ಇಡೀ ಪ್ರಪಂಚಕ್ಕೆ ವ್ಯಾಪಿಸುವದಿಲ್ಲ. ಮತ್ತು ವೇದಾಂತಿಗಳು (ಯೋಗಿಗಳು) ಸಂಸಾರಿಕನನ್ನು ಅನೇಕ ವಿಧದಲ್ಲಿ ಅಲ್ಲಗಳೆದು ಅದು ನೀಚಭಾವವೆಂದು ಕಲ್ಪಿಸುತ್ತಾ ಹೀನತರವನ್ನೆಣಿಸುತ್ತಾರೆ. ಇದು ಕೂಡಾ ಸರ್ವಸಮ್ಮತವಲ್ಲ. ಯೋಗಿಗಳು ಯೋಗಿಗಳಾಗುವ ಮುಂಚೆ ಯಾವ ತರಗತಿಯಲ್ಲಿದ್ದರೆಂಬುದನ್ನು ಯೋಚಿಸುವದಿಲ್ಲ.

ಹಾಗೂ ಯೋಗಿಗಳಾಗಬೇಕಾದರೆ ಯಾವ ಪದವಿಯಿಂದ ಎಲ್ಲಿಗೆ ಕಾಲಿಟ್ಟದೆಂಬುದನ್ನು ಮರೆತುಬಿಡುತ್ತಾರೆ. ಯೋಗಿಗಳಾದವರು ಯೋಗ ಮಾರ್ಗವೇ ಶ್ರೇಷ್ಠವೆಂದೂ, ಗೃಹಸ್ಥರು ಗೃಹಸ್ಥಾಶ್ರಮವೇ ಮೇಲೆಂದೂ ಹೇಳುತ್ತಾರೆ. ಎಷ್ಟೋ ಯೋಗಿಗಳಾದವರು ಗೃಹಸ್ಥಾಶ್ರಮಕ್ಕೂ ಗೃಹಸ್ಥಾಶ್ರಮ ಬಿಟ್ಟು ಎಷ್ಟೋ ಜನರು ಯೋಗ ಮಾರ್ಗಕ್ಕೂ ಕಾಲಿಟ್ಟಿದ್ದಾರೆ. ಕಾರಣ ವಿಚಾರಿಸಿದರೆ ಎರಡು ಮಾರ್ಗದಲ್ಲೂ ಸ್ವತಂತ್ರವಾಗಿ ಐಕ್ಯ ಹೊಂದತಕ್ಕ ಮಾರ್ಗವಿದೆ. ಯಾವ ಮಾರ್ಗ ಹಿಡಿದರೂ ಬಾಧಕವಿಲ್ಲ. ಮತ್ತು ಯಾವನು ಗೃಹಸ್ಥಾಶ್ರಮಿಯಾಗಿದ್ದು ತನ್ನ ಸದಾಚಾರದಿಂದ ಐಕ್ಯ ಹೊಂದುತ್ತಾನೋ ಆತನು ಯೋಗಿಗಿಂತಲೂ ಶ್ರೇಷ್ಠನೆಂದು ಭಗವಂತನ ವಚನವಿದೆ. ಅದಕಾರಣ ವೇದಾಂತಿಗಳ ತತ್ವವು ವೇದಾಂತಿಗಳಿಗೆ ವ್ಯಾಪಿಸುತ್ತದೆಯೇ ಹೊರತು ಇತರರು ಆ ತತ್ವವನ್ನು ಕಟ್ಟಿಕೊಂಡರೆ ಪ್ರಯೋಜನವಿಲ್ಲವು. ಇನ್ನು ವೇದಾಂತಿಗಳ ಮಾತು ಹಾಗಿರಲಿ. ದೈವವು ಲಂಚ ತಿನ್ನುವುದೇ? ಹರಕೆ ಎಂದರೆ ಲಂಚವೇನು? ಎಂದು ಮುಂತಾಗಿ ಪ್ರತಿಪಾದಿಸುತ್ತಾರೆ. ವಿಚಾರಿಸಿದರೆ ಹರಕೆ ಎಂಬುದು ಎಂದಿಗೂ ಲಂಚವಾಗುವದಿಲ್ಲ. ಮನುಷ್ಯರು ತಮ್ಮ ಅತ್ಯಂತ ಆಪತ್ಕಾಲದಲ್ಲಿ ಮನುಷ್ಯ ಮಾತ್ರದವರಿಂದ ತಮಗೆ ಸಹಾಯವಿಲ್ಲವೆಂಬುದು ನಿರ್ಧಾರವಾದ ಕೂಡಲೆ ಮನೋವಾಕ್ಕಾಯ ಮೂಲಕ ಶುದ್ಧ ಹೃದಯರಾಗಿ ಕಂಗೆಟ್ಟು ತಾವು ನಂಬತಕ್ಕ ದೇವತೆಯನ್ನು ಪ್ರಾರ್ಥಿಸಿಕೊಳ್ಳುವದೇ ಹರಕೆಯು. 'ಪ್ರಾರ್ಥನೆ' ಎಂಬುದರ ಕನ್ನಡವೇ 'ಹರಕೆ' ಎಂಬರ್ಥವಾಗಿರುತ್ತದೆ. ಇಂಥಾ ಹರಕೆಗಳು ಆ ಪ್ರಾರ್ಥಿಸಿಕೊಂಡವನ ಯೋಗ್ಯತೆಯನ್ನು ಮೀರಿ ಕೊಂಡು ಯಾವಾಗಲೂ ಇರುವದಿಲ್ಲ. ಹಾಗೆ ಆಪತ್ಕಾಲದಲ್ಲಿ ಮಾಡಲ್ಪಟ್ಟ ಯಾವ ಹರಕೆಯೂ ವಿಫಲವಾಗುವದೂ ಇಲ್ಲ. ಇದಕ್ಕೆ ಅನಾಥರಿಗೆ ನಾಥನಾಗಿರುತ್ತೇನೆಂಬ ಭಗವದ್ವಾಕ್ಯವೇ ನಿದರ್ಶನ. ಇದು ಎಂದಿಗೂ ಲಂಚವಾಗುವದಿಲ್ಲ. ಹಾಗೆ ಮನುಷ್ಯನು ವಿಪತ್ತಿನಿಂದ ಪಾರಾದ ನಡನೆ ಸಂತೋಷ ಸೂಚನಾರ್ಥವಾಗಿ ತನ್ನ ಶಕ್ತ್ಯನುಸಾರ ಧನಗಳನ್ನು ತಾನು ನಂಬಿದ ದೇವತೆಯ ಯೋಗ್ಯತಾನುಸಾರವಾಗಿ ಸಮರ್ಪಿಸುತ್ತಾನೆ. ನಮ್ಮನ್ನು ಯಾರಾದರೂ ಆಪತ್ಕಾಲದಿಂದ ಕಾಪಾಡಿದರೆ ಹೇಗೆ ವಿಪತ್ತಿನಿಂದ ಮುಕ್ತರಾದ ಮೇಲೆ ಧಾತನನ್ನು ಸಂಭಾವನೆಪೂರ್ವಕ [illegible] ಅದು ಮನುಷ್ಯನ ಕರ್ತವ್ಯವಾಗಿದೆ. ಅದೇ ಹರಕೆಯ ಸಮರ್ಪಣೆಯು. ಮನುಷ್ಯರು ಯಾವಾಗಲೂ ಹರಕೆ ಮಾಡುವದು ಕಷ್ಟಕ್ಕಾಗಿ ಅಲ್ಲದೆ ಸುಖಸಂತೋಷಕ್ಕಾಗಿ ಎಂದೂ ಮಾಡರು. ಹಾಗೆ ಮಾಡಲ್ಪಟ್ಟ ಹರಕೆಗಳೂ ಮೇಲೆ ಹೇಳಿದ ಸತ್ಕ್ರಿಯಾನುಸಾರವಾದವುಗಳೂ ಯಾವಾಗಲೂ ಸಿದ್ಧಿಸಲಾರವು. ಅಪ್ರಯೋಜಕರೇ ಸರಿ, ಮಾಡತಕ್ಕ ಕಾರ್ಯ ಕುರಿತು ಆರಂಭದಲ್ಲಿ ಸಂಕಲ್ಪಿಸಿಕೊಂಡೇ ಮಾಡಬೇಕೆಂಬ ನಿಬಂಧನೆಯು ಮನುಷ್ಯರಿಗೆ ಸಾಮಾನ್ಯ ಧರ್ಮವಾಗಿರುವದು. ಆ ನಿಬಂಧನೆಯು ಕೂಡ ಹರಕೆ ಎನ್ನಲ್ಪಡುತ್ತದೆ. ಇಂಥಾ ಸಂಕಲ್ಪಿಸಿದ ನಿಬಂಧನೆಗಳು ತಪ್ಪಲಾರವು. ಹೀಗೆ ಮಾನಸಿಕ ನಿಬಂಧನ (ಪ್ರಾರ್ಥನ) ಯಲ್ಲಿ ಒಂದು ತರದ ಶಕ್ತಿ ಇದೆ. ಇದು ಆಕರ್ಷಣೆ ಇರುವ ಆತ್ಮ ಶಕ್ತಿ ಅಥವಾ 'ಮೆಸ್ಮೆರಿಜಂ' ಎಂದು ಹೇಳುತ್ತಾರೆ. ಈ ಶಕ್ತಿಯ ಸಾಮರ್ಥ್ಯವನ್ನೂ ಇಷ್ಟಿಷ್ಟೆಂದು ಹೇಳಲಿಕ್ಕಾಗುವುದಿಲ್ಲ. ಇದು ಆಯಾ ಮನುಷ್ಯನ ನಂಬಿಕೆ (ಮನಸ್ಸಿನ ದೃಢತೆ) ಯನ್ನನುಸರಿಸಿರುತ್ತದೆ. "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ." ಎಂಬಂತೆ ಮನುಷ್ಯರ ಪ್ರತಿಬಂಧಕಕ್ಕೂ ಮನಸ್ಸೇ (ನಂಬಿಕೆಯೇ) ಕಾರಣವಾಗಿದೆ. ಈ ಸಂಪತ್ತು ಹೀನನಿಗೆ ಮಾತ್ರ ಎಲ್ಲವೂ ಸುಳ್ಳು. ಆದ ಪ್ರಯುಕ್ತ ಮನುಷ್ಯರಿಗೆ ಮನುಷ್ಯ ಮಾತ್ರದವರಿಂದ ಆಗಬಹುದಾದ ಕಾಫಿ ರೊಟ್ಟಿಗಳ ಕಾರಣವನ್ನೂ ಕೃಷಿ ಮಾಡಲಾರರೆಂಬ ಕಾರಣವನ್ನೂ ತೋರಿಸುವದು ಸಮಂಜಸವಲ್ಲ. ವ್ಯಸನ್ನ ಲಂಚವೂ ಬೇಡ. ಇನ್ನು ದೈವಗಳಿಗೆ ನಮ್ಮ ಸಂಸಾರಗಳಿವೆಯೇ? ಅವುಗಳಿಂದಾಗುವ ಪ್ರಯೋಜನವೇನು? ಅವಕ್ಕೆ ಹಸಿವು ತೃಷೆಗಳಿವೆಯೇ ಎಂಬ ಪ್ರಶ್ನೆಗಳು ಮಾತ್ರ ಉಳಿದಿವೆ. ಆ ವಿಚಾರದಲ್ಲಿ ದೈವಗಳಿಗೆ ಮನುಷ್ಯರಿಂದಾಗತಕ್ಕ ಪ್ರಯೋಜನವೇನೂ ಇಲ್ಲ." ಮನುಷ್ಯರಿಗಾಗಿಯೇ ನದಿಗಳು ಹರಿಯುತ್ತವೆ. ದನಗಳು ಹಾಲು ಕರೆಯುತ್ತವೆ. ವೃಕ್ಷಗಳು ಫಲಿಸುತ್ತವೆ. ಇಷ್ಟೇನು, ಈ ಪ್ರಪಂಚವು ಕೂಡ ಅದಕ್ಕಾಗಿಯೇ ಸೃಷ್ಟಿಸಲ್ಪಟ್ಟಿತು. ಹಾಗೂ ದೈವಗಳೂ ಕೂಡ ಮನುಷ್ಯವರ್ಗಕ್ಕಾಗಿಯೇ ಇರುವದಾಗಿದ್ದು, ಪೂಜೆಮಾಡು, ಬಲಿ ಕೊಡು, ಕಾಣಿಕೆ ಹಾಕು, ಹರಕೆಮಾಡು ಎಂದು ದೈವಗಳೇನೂ ಮನುಷ್ಯನನ್ನು ಯಾಚಿಸುವದಿಲ್ಲ. ಕಾಡುಗುಡ್ಡಗಳಲ್ಲಿರತಕ್ಕ ತರಕಾರಿ ವನಸ್ಪತಿ ಯಾ, ಪುಷ್ಪ, ಇಲ್ಲವೆ ಔಷಧಿ ಗಿಡ ಮರಗಳನ್ನು ನಾವುಗಳು ನೆಟ್ಟು ಸಾಕಿಕೊಂಡು ಅವುಗಳಿಗೆ ನಾವಾಗಿಯೇ ಅವುಗಳ ಪ್ರಯೋಜನವನ್ನು ಬಯಸಿ ಉಪಚಾರ ಮಾಡುತ್ತೇವೆಯೇ ಹೊರತು ಅವುಗಳು ನಮ್ಮನ್ನು ಯಾಚಿಸಿಕೊಂಡು ಬರುವದಿಲ್ಲ. ಅವು ನಾವು ಸಾಕದಿದ್ದರೂ ಜೀವಿಸಬಲ್ಲವು. ಹಾಗೆ ನಾವು ಸಾಕದಿದ್ದರೆ ನಮ್ಮ ಸಮಯಕ್ಕೆ ದೊರಕುವುದು ದುರ್ಲಭ. ಅಂತೆಯೇ ದೈವಗಳ ಪೂಜನೆಯು ಕೂಡಾ ಮನುಷ್ಯರಿಗೆ ಹೊರತು ದೈವಗಳಿಗಲ್ಲ. ಹರಕೆಯನ್ನು ಮಾಡತಕ್ಕ ದೈವದ ಬಲವು ಎಷ್ಟರಮಟ್ಟಿಗೆ ಒಲಿದಿದೆ ಎಂಬ ನಂಬಿಕೆ ಇರುತ್ತದೆಯೋ ಅಷ್ಟರ ಮಟ್ಟಿಗೆ ಕಾರ್ಯವು ನೆರವೇರುತ್ತದೆ. ಯಾವನು ಕಾರ್ಯಕ್ಕಾಗಿ ನನಗೆ ದೈವಗಳಲ್ಲಿ ನಂಬಿಕೆ ಇಲ್ಲವೆಂದು ನಟಿಸಿಕೊಂಡು ಹೃದಯ ಶುದ್ಧವಿಲ್ಲದಿರುವವನಾಗುವನೋ ಅಂಥಾವನು "ಗುರುವು ಮಧ್ಯ ಸೇವಿಸಿದನೆಂಬ ನೆವದಿಂದ ಶಿಷ್ಯರು ಮಧ್ಯ ಸೇವನೆ ಮಾಡಲು ಆರಂಭಿಸಲು ಗುರುವು ಕುದಿಯುವ ಕಂಚಿನ ನೀರನ್ನು ಕುಡಿದು ಶಿಷ್ಯರಿಗೆ ಪಾನ ಮಾಡಿರೆಂದು ಹೇಳುವಾಗ ನಿರಾಕರಿಸಿ ಅಧೋಗತಿ [illegible] ರಂತೆ" ಅಂತಹ ಪ್ರಾಯಶ್ಚಿತ್ತವನ್ನು ಹೊಂದ [illegible] ನಿಗೆ ಹಸಿವು ತೃಷೆಗಳಿಂದ [illegible] ದೇವರ ಜಾ [illegible] 'ಹರಕೆ' ಎಂಬುದು ನಿಜವೇ ಆಗಿರುತ್ತದೆ.

B R V

ನೋಟೀಸ್.

[illegible] ಗೆ ಹೋಗುವ ರಸ್ತೆಯ ಕೆಳಭಾಗದಲ್ಲಿರುವ [illegible] ಕೂಡು ಹಾಕಲ್ಪಟ್ಟಿರುವ ಬಿಡಾಡಿ ದನಗಳನ್ನು [illegible] ತಾ. 1ನೆ ಆದಿತ್ಯವಾರ ದಿನ ಬೆಳಿಗ್ಗೆ [illegible] ಸರಿಯಾಗಿ ಪಬ್ಲಿಕ್ ಹರಾಜು ಮಾಡಲ್ಪಡುತ್ತೆ. [illegible] ದಿನ ಹರಾಜು ಸ್ಥಳಕ್ಕೆ ಬಂದು [illegible] ಮೂಲಕ ಪಡೆಕೊಳ್ಳಬಹುದು. [illegible] ಮೇಲಿನ ಥಾರೆಸ್ಟ ರಿಂದಾಗಲೀ ಹೆಡ್ಡಾಫೀಸಿನಿಂದಾಗಲೀ ತಿಳಿದುಕೊಳ್ಳಬಹುದು.

ಸಿರಾಜುದಿನ್ ಬೇಗ್,
ಫಾರೆಸ್ಟರ್.

ಪತ್ರವ್ಯವಹಾರಗಳು.

ಬಾತ್ಮಿದಾರರ ಮತದ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಸಿವಿಲ್ ಸರ್ಜನರು.

ಅಯ್ಯಾ,

ಕೊಡಗಿನ [illegible] ಕರ್ನಲ್ ಫ್ರೀಜರವರು ಪ್ರಸಿದ್ಧ [illegible] ಕೊಡಗಿನಿಂದ ಹೋಗುವದೆಂದೂ ಮಡಿಕೇರಿ [illegible] ಬಂದು "ಸೆಂಟ್ ಅಥವಾ ಎಂಟರ್‌ಪ್ರೈಸ [illegible]" ಕೂಡು [illegible] ದಿತ್ತೆಂದೂ ವರ್ತಮಾನ [illegible] ಇದು ನಿಜವಾದರೆ ಸರ್ಕಾರದವರು ಇಂಥಾದ [illegible] ಕೊಟ್ಟಿರುವರೂ ಎಂದು ಎಲ್ಲರೂ ತಿಳಿಯಬೇಕಾದ ಸಂಗತಿಯಾಗಿದೆ. ಉದ್ಯೋಗಸ್ಥರು ರಿಟೈರ್ ಆಗುವ ಮೊದಲು ಪ್ರೈವೇಟಾಗಿಯಾಗಲೀ ಇಲಾಖೆಯವರಿಂದಾಗಲೀ 'ಎಂಟರ್‌ಟೈನ್‌ಮೆಂಟ್' ಗಳನ್ನು ಸ್ವೀಕರಿಸಕೂಡದೆಂಬ ರೂಲ್ ಇದೆ ಎಂದು ನಾನು ಕೇಳಿಬಲ್ಲೆನು. ಈ ರೂಲು ಇರುವದಾದರೆ ನ್ಯಾಯನೆ. ಇಲ್ಲವಾದರೆ ಉದ್ಯೋಗಸ್ಥರ ಅಧಿಕಾರಬಲಕ್ಕೆ ಹೆದರಿ ಪ್ರಜೆಗಳೂ ತಾವಾದರೂ ಸಾಲ ಮಾಡಿ ಹಣ ವೆಚ್ಚಮಾಡಿ ಎಂಟರ್‌ಟೈನ್‌ಮೆಂಟ್‌ಗಳನ್ನೂ ಬಹುಮಾನಗಳನ್ನೂ ಕೊಡುವದರಲ್ಲಿ ಸಂಶಯವಿಲ್ಲ. ಆದುದರಿಂದ ಸರಕಾರದವರ ರೂಲಿಗನುಸಾರವಾಗಿ ಬೇರೆ ಪ್ರಾಂತಗಳಲ್ಲಿ ಉದ್ಯೋಗಸ್ಥರಿಗೆ ಬಹುಮಾನ ಕೊಡುವದೇ ಇಲ್ಲ ಎಂದು.

ಆದರೆ ಕೊಡಗು ದೇಶವು ಎಲ್ಲಾ ವಿಷಯಗಳಲ್ಲಿಯೂ ವಿಶೇಷತರವಾದದ್ದಾಗಿ ಕಾಣುತ್ತದೆ. ಇಲ್ಲಿ ಉದ್ಯೋಗಸ್ಥರಿಗೆ ಪಬ್ಲಿಕಿನವರೂ ಇಲಾಖೆಯವರೂ ಟೀಪಾರ್ಟಿಗಳನ್ನೂ, ಔತಣಗಳನ್ನೂ, ಬಹುಮಾನಗಳನ್ನೂ ಕೊಡುವುದಕ್ಕೆ ಮಿತಿಯೇ ಇಲ್ಲ. ಇಲ್ಲಿ ಸರಕಾರದ ರೂಲ್ಸಿಗೆ ಬೆಲೆಕೊಡುವಂತೆ ಕಾಣುವುದೇ ಇಲ್ಲ.

ಮೊದಲಿನ ಸಿವಿಲ್ ಸರ್ಜನರಾಗಿದ್ದ ಕರ್ನಲ್ ಮಾನ್‌ಸೆಲ್‌ರವರು ಹೋಗುವಾಗ ಮೆಡಿಕಲ್ ಇಲಾಖೆಯವರು ಅವರಿಗೆ ಎಂಟರ್‌ಟೈನ್‌ಮೆಂಟಿಗಾಗಿಯೂ, ಕೀರ್ತಿ ಮೊದಲಾದ ಬಹುಮಾನಗಳಿಗಾಗಿಯೂ ನೂರಾರು ರೂಪಾಯಿಗಳನ್ನು ಖರ್ಚುಮಾಡಿ ಒಂದೆರಡು ತಿಂಗಳೊಳಗೆ ಮತ್ತೊಂದು ಎಂಟರ್‌ಟೈನ್‌ಮೆಂಟಿಗೆ ಚಂದಾ ಕೊಡುವದೆಂದರೆ ಆ ಇಲಾಖೆಯ ನೌಕರರಿಗೆ ಎಷ್ಟು ಕಷ್ಟವಾಗುವುದೆಂದು ವಾಚಕರು ಊಹಿಸಿಕೊಳ್ಳಬಹುದು. ಇಲಾಖೆದಾರರಿಗೆಲ್ಲರಿಗೂ ಇಂಥಾ ಎಂಟರ್‌ಟೈನ್ ಮೆಂಟುಗಳನ್ನು ಕೊಡಲು ಮನಸ್ಸು ಪೂರ್ತಿ ಇದೆಯೆಂದು ಹೇಳಬಾಗುವುದೇ? ಅವರಲ್ಲಿ ಕೆಲವರು ಇಂಥಾದ್ದನ್ನು ವಿರೋಧಿಸಲು ಪ್ರಾರಂಭಿಸಿದರೆ, ಮನಸ್ಸಿಲ್ಲದಿದ್ದರೆ ಅದಕ್ಕೆ ವಿರೋಧ ನಿಲ್ಲುವ ಧೈರ್ಯವು ಆ ಬಡ ನೌಕರರಿಗೆ ಎಲ್ಲಿಂದ ಬರುವುದು? ತಮ್ಮ ಉದ್ಯೋಗವೇ ಸರ್ವಸ್ವವೆಂದಿರುವ ಅವರು ಮೇಲಧಿಕಾರಿಗಳ ಮನಸ್ಸನ್ನು ನೋಯಿಸಬಾರದೆಂಬ ಭಾವನೆಯಿಂದ ಎಷ್ಟು ಕಷ್ಟವಾದರೂ ತಮ್ಮ ಪಾಲಿನ ಚಂದವನ್ನು ಕೊಟ್ಟೇ ಕೊಡುವರು. ಅವರಿಗೆ ಕೊಡದೆಯೂ ಕಳೆಯದು. ಕೊಡದೆ ಹೋದರೆ ದೃಷ್ಟಿಗೆ ಬೀಳುವರು.

ಅಲ್ಲದೆ, ಕೆಲವು ವಾರಗಳ ಹಿಂದೆ ವೀರರಾಜಪೇಟೆ ಆಸ್ಪತ್ರೆಯಲ್ಲಿ ಎಸ್. ಎ. ಸರ್ಜನರು ತನ್ನ ಡ್ಯೂಟಿಯ ಸಮಯದಲ್ಲಿ ಆಸ್ಪತ್ರೆಯಲ್ಲಿ ಇಲ್ಲದೆ (ಒಂದು ಖಾಸಗಿ ಕಾಯಿಲೆಯವರನ್ನು ನೋಡಲಿಕ್ಕೆ ಹೋಗಿದ್ದರು) ಹೋದದರಿಂದ ಅವರನ್ನು ಸಿವಿಲ್ ಸರ್ಜನರು ಕೆಲವು ದಿವಸ ಸಸ್ಪೆಂಡ್ ಮಾಡಿದರೆಂದು ತಿಳಿಯಬರುತ್ತದೆ. ಆದರೆ ಸಿವಿಲ್ ಸರ್ಜನರಿಗೆ ಎಂಟರ್‌ಟೈನ್‌ಮೆಂಟ್ ಮಾಡಿದರೆ ದಿನ ಪಟ್ಟಣ ಕಮ್ಮಿ ಮೆಡಿಕಲ್ ಆಫೀಸರುಗಳೆಲ್ಲಾ ಮಡಿಕೇರಿಗೆ ಬಂದು ಕೊಡಗಿನ ಆಸ್ಪತ್ರೆಗಳೆಲ್ಲಾ

ಬರಿದಾಗುವುದಿಲ್ಲವೇ? ಆಗ ತುರಿತ ಕಾಯಿಲಸ್ಥರ ಪಾಡೇನು? ಇವುಗಳಿಗೆಲ್ಲಾ ಸ್ಥಳೀಯ ಮೇಲಧಿಕಾರಿಗಳು ಗಮನ ಕೊಟ್ಟು ತಾಬೆದಾರಿಗಳಿಗೂ ಮತ್ತು ಪಬ್ಲಿಕ್‌ನವರಿಗೂ ತೊಂದರೆಗಳುಂಟಾಗದಂತೆ ನೋಡಿಕೊಳ್ಳುವರಾಗಿ ಆಶಿಸುತ್ತೇನೆ.

ಕರ್ನಲ್ ಫ್ರೇಜರ್‌ರವರು ಚಿಕಿತ್ಸಾ ಮತ್ತು ಶಸ್ತ್ರಕ್ರಿಯೆಗಳಲ್ಲಿ ದೇಶದ ಜನರಿಗೆ ಒಳ್ಳೇ ಕೆಲಸಗಳನ್ನು ಮಾಡಿರುವರು, ತಮ್ಮ ಕೆಲಸಗಳಲ್ಲಿ ಧೃಡತೆಯನ್ನು ತೋರಿಸಿರುವರು. ಅವರ ಜನೋಪಕಾರದ ಕೆಲಸಗಳಿಗೆ ಅವರು ಜನರ ವಂದನೆಗಳಿಂದ ತೃಪ್ತರಾಗಬೇಕಲ್ಲದೆ ಟೀ ಪಾರ್ಟಿ, ಬಹುಮಾನ ಮುಂತಾದವುಗಳಿಗೆ ಬೆಲೆ ಕೊಡಬಾರದು.

'ದೂರದೃಷ್ಟಿ.'

ಹಾರಂಗಿ ನಾಲೆ.

ಅಯ್ಯಾ, ವಾಚಕಮಹಾಶಯರೇ,

ಕೊಡಗಿನ ನಿವಾಸಿಗಳ ಸ್ಥಿತಿಯನ್ನು ಕುರಿತು ಕೆಲವು ಮಟ್ಟಿಗೆ ಪರ್ಯಾಲೋಚಿಸೋಣ. ಈ ಕೊಡಗಿನಲ್ಲು ಕೊಡಗರು, ಕೊಡಗೇತರರು ಎಂಬದಾಗಿ ಎರಡು ಪಂಗಡದ ಜನರು, ಅದರಂತೆ ಉತ್ತರಕೊಡಗು ದಕ್ಷಿಣಕೊಡಗೆಂದು ಎರಡು ತಾಲೋಕುಗಳು. ದಕ್ಷಿಣಕೊಡಗು ಪೂರ ಕೊಡಗರೇ. ಅವರ ಜೀವನವು ಬತ್ತದ ಬೆಳೆ, ಕಾಫಿ, ಇಲಾಚಿ, ಸರಕಾರಿ ನವ್ಕರಿಯಿಂದಾಗಿರುತ್ತೆ. ಉತ್ತರಕೊಡಗಿನ ಅರ್ಧ ಭಾಗದವರಿಗೆ ಮೇಲ್ಕಂಡಂತೆ ಆಗಿರುತ್ತೆ. ಆದರೆ ಪುರಾತನದ ಏಳುಸಾವಿರ ಸೀಮೆ ಎಂಬ ಈಗಿನ ಉತ್ತರಕೊಡಗಿನ ಪ್ರಾಂತದವರಿಗೆ ಬತ್ತದ ಬೆಳೆ ಸೇಕಡ 10ರಷ್ಟು ಇರಲಾರದು. ಇಲಾಚಿ ಮತ್ತು ಕಾಫಿ ಇಲ್ಲವೇ ಇಲ್ಲ. ಕುಕ್ಕಿಬೆಳೆ (ಹೊಲ) ಈ ಹೊಲಗಳಲ್ಲು ವರ್ಷದ 365 ದಿನಗಳೂ ಕೆಲ್ಸವೆ. ಈ ಹೊಲಗಳಲ್ಲಿ ಬೆಳೆಸುವ ಕಿರಾಣಿಗಳಿಗೆ ಕಾಲಕ್ಕೆ ಸರಿಯಾಗಿಯೂ ಹದ ತಪ್ಪದೆಯೂ ಮಳೆಬಂದರೆ ಪೈರು, ಹದತಪ್ಪಿದರಿಂದ ಪೈರು ಪಲಾಯನವಾಗಿ ರಾಗಿ ತಿಂದು ರೋಗಿಗಳಾಗಿ ಮೂಲೆಗೊತ್ತಿ ಒಡವರಾಗಿ ಗ್ರಾಮಗಳನ್ನೆ ಬಿಟ್ಟು ನೀರಾವರಿ ಕಾಮಗಾರಿಯಲ್ಲಿರುವ ನೆರೆದೇಶವಾದ ಮೈಸೂರು ಸೀಮೆಗೆ ಓಡಿಹೋದರು. ಬಾಕಿ ಇರುವ ಒಡವರು ಅನೇಕ ವರ್ಷಗಳಿಂದ ತಮಗಳಿಗೆ ಘನ ಸರಕಾರದವರು ಹಾರಂಗಿ ಹೊಳೆಗೆ ಕಟ್ಟೆಕಟ್ಟಿ ನಾಲೆಗಳ ಮೂಲಕ ನೀರು ಸರಬರಾಯಿ ಮಾಡಿಕೊಡಬೇಕಾಗಿ ಎಷ್ಟು ಮೊರೆ ಇಟ್ಟರೂ ಗಮನಕ್ಕೆ ತಾರದೆ ಹೋದದರ ದೆಪ್ಯುಟೇಶನ್ ಜಮೀನ್ದಾರ್ ಸಂಘದಮೂಲಕ ಸಹರಾವು ಕೊಂಡು ಹೋದರು. ಈಗಿನ ಹೊಸ ಕೌನ್ಸಿಲಿನಲ್ಲು [illegible] ತೀರ್ಮಾನವಾದರೂ ಕೂಡ ಏನೊಂದೂ ಉತ್ಸಾಹವನ್ನು ಕಂಡು ಬರುವದಿಲ್ಲ. ಮಾತುಮಾತಿಗೆ ಹಣಇಲ್ಲ. ಹಣಇಲ್ಲ ಎಂಬುದಾಗಿ ಹೇಳುವದರಲ್ಲಿಯೇ ಇದ್ದಾರೆ. ಈ ಹಣ ಜಮೆಯಾದ ಕಾಲಇಲ್ಲ. ಈ ನಾಲೆ ಬರುವಕಾಲ ಇಲ್ಲ. ಈ ಬಾಬಿನಲ್ಲು ನಮ್ಮ ಘನ ಸರಕಾರದವರ ಗಣನೆ ಬಗ್ಗೆ ನಮ್ಮ ನೆರೆದೇಶವಾದ ಮೈಸೂರು ದೇಶದ ಆಯವ್ಯಯಗಳ ಕುರಿತು ಸರ್ ಎಂ. ವಿಶ್ವೇಶರೈಯ್ಯನವರು 1922ನೇ ಇಸವಿ ಜುಲೈತಿಂಗಳಲ್ಲಿ ಮಾಡಿದ ಪ್ರಸಿದ್ಧ ಪತ್ರದಲ್ಲು, ಇವರ ದಿವಾನಗಿರಿಯಲ್ಲು (1) ಕೃಷ್ಣರಾಜಸಾಗರದ ಒರಿಜಿನಲ್ (ಮೊದಲನೆ) ಪ್ರಾಜೆಕ್ಟಿನಲ್ಲಿ ರಿಸರ್ವಾಯರ್ ಕಟ್ಟೆ, (2) ಕಾವೇರಿ ಪವರ್‌ಸ್ಕೀಮಿನ ಒಡಾವಣೆ, (3) ಕಾವೇರಿ ವೈಲಿನಲ್ಲಿ ತರೀ ಸಾಗುವಳಿಯ ಬಡಾವಣೆ ಈ ಮೂರು ವಿಷಯಗಳು ಗರ್ಭೀಕರಿಸಲ್ಪಟ್ಟಿದ್ದರೂ ಎರಡನೇ ಅಂಶಗಳಲ್ಲಿ ಪವರ್ ಸಪ್ಲೈ ಏರ್ಪಾಡಿನಿಂದಲೂ, ತರೀ ಸಾಗುವಳಿಯಿಂದಲೂ ನಿರೀಕ್ಷಿಸಲ್ಪಟ್ಟಿದ್ದ ಪ್ರತಿಫಲವು ಈಗಾಗಲೇ ಫಲೋನ್ಮುಖವಾಗಿರುವುದು. ಶಿವನ ಸಮುದ್ರದ ಪವರ್‌ಸ್ಕೀಮಿನಿಂದ ಈ ಕಟ್ಟೆಯು ಉಪಕ್ರಮವಾಗುವ ಮುಂಚೆ 10—38 ಲಕ್ಷ ರುಪಾಯಿಗಳು ಬರುತ್ತಿದ್ದವು. ಈಚಿನ ಲೆಕ್ಕಗಳಿಂದ ಪವರ್ ಉತ್ಪತ್ತಿಯಲ್ಲಿಯೂ ತರಿಸಾಗುವಳಿಯ ಉತ್ಪತ್ತಿಯೂ 30.29 ಲಕ್ಷ ರುಪಾಯಿಗಳಾಗುತ್ತವೆ. 19.91 ಲಕ್ಷ ರುಪಾಯಿಗಳು ಕೃಷ್ಣರಾಜಸಾಗರದಿಂದ ಉತ್ಪತ್ತಿಯಾಗುತ್ತದೆಂದು ಇದರಿಂದ ಸ್ಪಷ್ಟವಾಗುತ್ತದೆ. ಒಟ್ಟಾರೆ 3 ಕೋಟಿ 26 ಲಕ್ಷ ರುಪಾಯಿ ಖರ್ಚಾಗಿರುವದು. ಈಗಮಾಡಿರುವ ಖರ್ಚಿಗೆ ಶೇಕಡ 61ರಂತೆ ಬರುತ್ತಲಿರುವದು.

ಕೆಲಸವು ಉಪಕ್ರಮಿಸಲ್ಪಟ್ಟಾಗ ಇದಕ್ಕೆ ಪ್ರತಿಫಲವೇ ಬರುವದಿಲ್ಲವೆಂದು ಪೂರ್ವಾಪರ ಜ್ಞಾನವಿಲ್ಲದವರು ಗಲಾಟೆ ಮಾಡುತ್ತಿದ್ದರು. ದೊಡ್ಡ ಅಧಿಕಾರಿಗಳು ತಲೆಯನ್ನು [illegible]ಗಿದರು. ವರ್ತಮಾನ ಪತ್ರಿಕೆಗಳು ಈ ಪ್ರಯತ್ನದಿಂದ ಈ ದೇಶಕ್ಕೆ ಅಪಾಯ ಉಂಟಾಗುವದೆಂದು ಆಕ್ಷೇಪವನ್ನು ಮಾಡಿದವು. ಉತ್ತರಲಾಗಿ ಪ್ರತಿಫಲವು 10½ಲಕ್ಷ ರುಪಾಯಿಗಿಂತಲೂ ಹೆಚ್ಚು ಬಂತೆ ಆಗಿದೆ. ಹೀಗಿರುವಾಗ್ಯೆ ನಮ್ಮ ಸರಕಾರವೂ ಈಗಿನ ಕೌನ್ಸಿಲು ಮೆಂಬರುಗಳೂ ಸಹ ತಮ್ಮ ಬಜೆಟ್ಟಿನಲ್ಲು ಹಣ ಇಲ್ಲವೆಂಬ ನೆಪದಿಂದ ಈ ನಮ್ಮ ದೇಶಕ್ಕೆ ಚಿನ್ನದ ಗಣಿಯೋ [illegible]ದಿಯಲ್ಲು ಅಪಾಯ ತಪ್ಪಿಸಲಾಗಬಹುದಾದ ಹಾರಂಗಿ ನಾಲೆಯ ಕೆಲಸವನ್ನು ಕೈಕೊಳ್ಳಲು ಹೆದರಿ ಜಾಕಿಮಾಡುತ್ತಲಿದ್ದಾರೆ. ಎನ್ನಾದರೂ ನಮ್ಮ ಸರಕಾರವು ಈ ಕೆಲಸಕ್ಕೆ ಈಗಿನ ಬಜೆಟ್ಟಿನಲ್ಲು ಹಣ ಇಲ್ಲದಿದ್ದರೆ ಈ ಮೊದಲು ಹೊಂದಿದ ಆದಾಯದಿಂದಲಾಗಲೀ ಯಾ ಅದೂ ಇಲ್ಲದಿದ್ದರೆ ಸಾಲ ಮಾಡಿ ಆದರೂ ಎಡೆಬಿಡದೆ ಹಾರಂಗಿ ಹೊಳೆಗೆ ಕಟ್ಟೆಕಟ್ಟಿ ತರಿ ಜಮೀನಿಲ್ಲದ ಉತ್ತರ ಕೊಡಗಿನವರಿಗೂ ಭೂಮಿಗಿಂತ ಜನ ಹೆಚ್ಚಾಗಿರುವ ನಾಡಿನಾಲ್ಕುನಾಡಿನವರಿಗೂ ನವ ಉತ್ತೇಜನ ಕೊಟ್ಟು, ಹಾಳುಬಿದ್ದ ಗ್ರಾಮಗಳನ್ನು ಸಾಗುವಳಿಗೆ ತರುವಂತೆ ಮಾಡುವರಾಗಿ ಘನ ಸರಕಾರದವರಲ್ಲಿ ವಿನಂತಿ.

ಜಮೀನ್ದಾರಾ ಸಂಘದ ಆರ್ಗನೈಸರ್,
ಉತ್ತರಕೊಡಗು.

ನಿಮೋನಿಯ.

(ಕೊಡಗು ಭಾಷೆಯಲ್ಲಿ ಚಾಮಟು ಕೋವೆ.)

ಕೊಡಗು ದೇಶದಲ್ಲಿ ಮಲೇರಿಯ (ಕೊಡಗು ಭಾಷೆಯಲ್ಲಿ ಮೂರಪನಿ) ಕಳೆದ ಮೇಲೆ ಚಾಮಟು ಕೋವೆಯೇ ಮುಖ್ಯವಾದ ಕಾಯಿಲೆಎಂದು ಹೇಳಬಹುದು, ಇದು ಎದೆಯಲ್ಲಿರುವ ಎರಡು ಭಾಗದ ಶ್ವಾಸಕೋಶಗಳ ಕಾಯಿಲವಾಗಿದೆ.

ಇದರ ಮುಖ್ಯ ಚಿನ್ಹೆಗಳೇನಂದರೆ.—ಥಟ್ಟನೆ ಜೋರು ಜ್ವರ, ಚಳಿ, ಶ್ವಾಸ ಬಿಡುವದು ಎಳೆಯುವದು ಅತಿ ಶೀಘ್ರ, ಎದೆಯಲ್ಲಿ ನೋವು, ಕೆಮ್ಮಲು, ಕೆಮ್ಮುವಾಗ ಎದೆ ನೋವು, ಕಪ್ಪಿದ ಉಗುಳು ಮಂದ, ಆದರೆ ಉಗುಳುವಾಗ ಕಫವು ತುಂಡೇ ಆಗುವುದಿಲ್ಲ, ಬೆರಳಿನಲ್ಲಿ ಕತ್ತರಿಸ ಬೇಕಾಗುತ್ತೆ. ಉಗುಳಿರುವ ಪಾತ್ರವನ್ನು ಮಗುಚಿದರೂ ಕೆಮ್ಮಿದಉಗುಳು ಅದರಿಂದ ಹೊರಗೆ ಜಾರುವದಿಲ್ಲ. ಅಷ್ಟು ಮಂದತರದ ಉಗುಳಿಗೆ ಗಟ್ಟಿಯೆಂದೇ ಹೇಳಬೇಕು. ಮತ್ತು ಅದರಲ್ಲಿ ಸ್ವಲ್ಪ ರಕ್ತ ಸೇರಿರುವದರಿಂದ ಅದು ಕೆಂಪು ಮತ್ತು ಹಳದಿ ಬೆರಕೆಯ ಬಣ್ಣವಾಗಿರುತ್ತದೆ (viscid rusty sputum).

ಬಹಳ ಎಚ್ಚರಿಕೆಯಿಂದ ಹಾಲು, ಟೀ, ಕಾಫಿ, ನಿರ್ಮಲವಾದ ನೀರು ಆಗಾಗ್ಯೆ ಕೊಡುತ್ತಾ ಕಾಯಿಲಸ್ಥನನ್ನು ಹಾಸಿಗೆಯಲ್ಲೇ ಯಾವಾಗಲೂ ಮಲಗಿಸಿ ಉಪಚಾರ ಮಾಡಿದರೆ ಮುಕ್ಕಾಲು ಪಾಲು ಜನರು ಬದುಕಿಕೊಳ್ಳುತ್ತಾರೆ 'ಟೈಫಾಯಿಡ್' ನಂತೆ ಇದಕ್ಕೂ ಡಾಕ್ಟರುಗಳಿಂದೇನೂ ಚಿಕಿತ್ಸೆ ಆಗತಕ್ಕಂಥಾದ್ದಿಲ್ಲ. ಆದರೆ ತಿಳಿದ ಡಾಕ್ಟರುಗಳಿಂದ ಇಂಥದ್ದೇ ಮಾಡಬೇಕು ಇಂಥದ್ದೇ ಮಾಡಬಾರದೆಂಬ ಬುದ್ಧಿವಾದ ಕೇಳಿಕೊಳ್ಳಬಹುದು. ಕೆಲವು ನಿಮೋನಿಯ ಕಾಯಿಲೆಗಳನ್ನು ಮದ್ದುಕೊಟ್ಟು, ರಕ್ತ ತೆಗೆದು ಗುಣಮಾಡುವ ಸಂಗತಿ ಎಲ್ಲರೂ ಕೇಳಿರಬಹುದು. ಇದಕ್ಕೆ ಇಂಗ್ಲಿಷಿನಲ್ಲಿ ಒಂದು ಹೇಳಿಕ ಉಂಟು. ಏನಂದರೆ —(Nature cures the patient, Doctor takes the credit.)

ಬಹಳ ಸಾರಾಯ ಕುಡಿಯುವವರಿಗೆ, ಮುದುಕರಿಗೆ, ಸಣ್ಣ ಕೂಸುಗಳಿಗೆ ನಿಮೋನಿಯಾ ಬಂದರೆ ಅವರು ಬದುಕುವದು ಅಪರೂಪ. ಪಾಯಿಕಾನೆ ಮಾಡಲಿಕ್ಕೂ ಸಹ ನಿಮೋನಿಯಾ ಬಂದವರು ಮಲಗಿದ್ದಲ್ಲಿಂದ ಏಳಬಾರದು. ಮಲಗಿದ್ದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ತಿರುಗಿ ಮಲಗಬೇಕಾದರೆ ಇತರರ ಸಹಾಯ ಪಡೆದುಕೊಳ್ಳುವದು ಒಳ್ಳೇದು. ಅಷ್ಟು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಎಷ್ಟು ಬೇಗನೆ ಜ್ವರ ಮತ್ತು ಕೆಮ್ಮಲು ಇರುವ ಕಾಯಿಲದವರನ್ನು ಮಲಗಿಸಿ ಪೋಷಣೆ ಮಾಡುತ್ತೀರೋ ಅಷ್ಟೂ ಕಮ್ಮಿ ಮರಣ. ನಿಮೋನಿಯಾ ಕಾಯಿಲವು ಚನ್ನಾಗಿ ಗುಣವಾಗದೆ ಹೋದರೆ ಅಥವಾ ಗುಣವಾದರೂ ಕೂಡಲೆ ಕೆಲಸಕ್ಕೆ ಹೊರಗಿದು ಕ್ಷಯ ರೋಗವು ಪ್ರಾಪ್ತಿಯಾಗುತ್ತದೆ. ಈ ತರಹದ ಕ್ಷಯ ರೋಗಕ್ಕೆ ನಿಮೋನಿಯದ ಕ್ಷಯ (Pneumonic Phthisis) ಎಂದು ಹೆಸರು. ಆದುದರಿಂದ ಕಾಯಿಲದ ಚಿನ್ಹೆಗಳು ಕಡಿಮೆಯಾದರೂ ಬಹಳ ತಿಂಗಳು ಚನ್ನಾಗಿ ಪೋಷಣೆ ಮಾಡಿಕೊಳ್ಳಬೇಕು. ನನಗೆ ನಿಮೋನಿಯಾ ಪ್ರಾಪ್ತಿಯಾದದಿನಿಂದ ಆರು ತಿಂಗಳು ಪೋಷಣೆ ಕೊಟ್ಟದ್ದರಿಂದ ಈಗಲೂ ಬಲಾಢ್ಯನಾಗಿದ್ದೇನೆ.

'ಅನುಭವಶಾಲಿ.'

ತಕ್ಕಾಮೆ,

ಅಯ್ಯಾ,

23ನೇ ಜನವರಿ 1925ರ ಇದೇ ಪತ್ರಿಕೆಯಲ್ಲಿ "ಬೇಂಗು ನಾಡಿನ ತಕ್ಕಾಮೆ" ಎಂಬ ಅದೊಂದು ಶಿರೋಲೇಖನದ ಬಾತ್ಮಿದಾರರಾದ ಮೇ ಪಿ. ಕುಶಾಲಪ್ಪನವರಿಂದ ತಿಳಿಯಬೇಕಾದ ಕೆಲವಂಶವಿದೆಯಾದದ್ದರಿಂದ, ಶ್ರೀಯುತರು ದೇಶವಿನವೆ ಕೆಳಗಿನ ನನ್ನ ಅಭಿಪ್ರಾಯದ ಪ್ರಶ್ನೆಗಳಿಗೆ ಸಮುತ್ತರವೀಯಬೇಕಾಗಿ ಕೇಳಿಕೊಳ್ಳುತ್ತೇನೆ.

ಪಾಟ್ಯದಾರರು ಕುಲನಷ್ಟಬಂದಲ್ಲಿ ನಿಜವಾಗಿಯೂ ಸೀಮೆ ತಕ್ಕರೂ ಬಂದು ಒಕ್ಕಲಾದ ಕುಲಗಳೋ? ಹಾಗಾದರೆ ಊರು ತಕ್ಕರು ಹೇಗಾದರು? ತಕ್ಕಾಮೆಯು ಪಾಟ್ಯಗಾರರಿಗೂ ಮೊದಲೇ ಇದ್ದಿರಬಾರದೇಕೆ? ನ್ಯಾಯಶೀಲರಾದ ಮೂತಬ್ಬಾರಗಳನ್ನೇ ಆರಿಸಿ (ಈಗಿನ ಕೌನ್ಸಿಲುಪಕ್ಷೈಕೆ ಮೆಂಬರುಗಳಂತೆ ಚುನಾಯಿಸಿ) ಅವರಮೂಲಕ ರಾಜ್ಯಭಾರವನ್ನು ನಡೆಸುತ್ತಿದ್ದಿರಬಾರದೇಕೆ? ಆ ಮೂತಬ್ಬಾರಗಳಾದ ನ್ಯಾಯಮೂರ್ತಿಗಳನ್ನು ತಕ್ಕರೆಂದು ಕರೆಯುತ್ತಾ ಕ್ರಮೇಣ ಆವ್ಯಕ್ತಿಗಳ ಮನೆತನವನ್ನೇ (ಸಂಪ್ರದಾಯ ಪ್ರಕಾರ) ಉತ್ತರೋತ್ತರ ಹೆಸರಾಗಿ ತಕ್ಕರೆಂದು ಕರೆಯುತ್ತಾ ಬಂದಿರಬಾರದೇಕೆ? ಬುದುವಂಡ, ಪೋರೆರ ಮತ್ತು ಪರಮಡ ಎಂಬ ಸೀಮೆ ತಕ್ಕರು ಕುಲನಷ್ಟ ಬಂದಿರುವವರಷ್ಟೆ? ಆ ಮಹೇಮರ ಮಣ್ಣು ಯಾರ್ಯಾರಿಗೆ ಸ್ವಾಧೀನವಿದೆ ಎಂದು ಬಲ್ಲಿರೂ? ಸ್ವಾಧೀನ ಪಡಕೊಂಡಿರುವವರಿಗೆಲ್ಲಾ ಆ ಸೀಮೆತಕ್ಕಾಮೆಯು ಸಿಕ್ಕಿದೆಯೋ? ಅರಮೇರಿಯ ನಾಯಕನಿಗೂ ಪಾಲೆಕಂಡ ತಕ್ಕಾಮೆಗೂ ಸಮ್ಮಂಧವೇನು? ತಂಗಮಾಲೆಗಳಿಂಡನಾಡಲ್ಲಿ ಅರಮೇರಿನಾಯಕನು ಅರ್ಹ ಮೇರಿ ಗ್ರಾಮದಲ್ಲಿದ್ದುದಲ್ಲವೇ? ಕದನೂರು ಗ್ರಾಮದಲ್ಲಿರುವ ಪಾಲೆಕಂಡ ಮನೆತನಕ್ಕೆ ಅರಮೇರಿನಾಯಕನ ತಕ್ಕಾಮೆ ಇರುವುದಕ್ಕೆ ಆಧಾರವೇನು? ನಾಯಕಂಡ ಮನೆಯವರು ಈಗಲೂ ಅರಮೇರಿಯಲ್ಲಿ ಇರುವಾಗ್ಯೆ ಮೊದಲಿನ ಅರಮೇರಿ ನಾಯಕನು ಈ ಮನೆತನದವನೆಂದೇ ಯಾಕೆ ಹೇಳಬಾರದು? ಮಾಲಟ್ಟಿರ ಮಣ್ಣು ಪಟ್ಟಮಾಡ ಮನೆತನದವರಿಗೆ ಮಾತ್ರ ಸಿಕ್ಕಿದೆ ಎಂಬುದು ಯಾವ ಆಧಾರದಿಂದ? ಬೇರೆಯಾರಿಗಾದರೂ ಸಿಕ್ಕಿರಬಾರದೇ? ಇದು ಪೂರ್ವ ಪರಂಪರೆಯನ್ನು ತಿಳಿಯುವ ಜಡವಾಗಿರುವದಾದಕಾರಣ ದಯವಿಟ್ಟು ಸಮುತ್ತರವೀಯಬೇಕಾಗಿ ಅಪೇಕ್ಷಿಸುವ,

"ಅಪೇಕ್ಷಿ".

FOR SALE IN MERCARA.

European bunglow, outhouses and 50 cents of land close to club.

Apply:—

Peirce Leslie & Co., Ltd.
MANGALORE.

3-1

ಒಂದು ಸತ್ಕಾಲಕ್ಷೇಪವು.

ಅಯ್ಯಾ,

'ಇದೇ ಮಾಹೆ ತಾ. 18ನೇ ಭಾನುವಾರ ರಾತ್ರಿ 7 ಗಂಟೆಯಿಂದ 9 ಗಂಟೆ ವರೆಗೆ ಸಿದ್ದಾಪುರದಲ್ಲಿ ಅಲ್ಲಿಯ ಪುರ ಜನಗಳ ಕೋರಿಕೆಯಂತೆ ಮಡಿಕೇರಿ ಶ್ರೀಯುತ ಬಿಟ್ಟಿಯಂಡ ಮುತ್ತಣ್ಣನವರಿಂದ "ರುಕ್ಮಿಣಿ ಮತ್ತು ಬಲರಾಮರ ಗರ್ವಭಂಗ" ವೆಂಬ ಹರಿ ಕಥೆಯು ನಡೆಸಲ್ಪಟ್ಟಿತು. ಕಥೆಯು ಸಮಯೋಚಿತವಾಗಿಯೂ ಲಲಿತ ಭಾಷೆಯಿಂದ ಕೂಡಿದ್ದಾಗಿಯೂ ಭಕ್ತಮಂಡಲಿಯ ಭಕ್ತಿಯನ್ನ ವೃದ್ಧಿಪಡಿಸಲು ಸೋಪಾನವೋ ಎಂಬುವಂತೆಯೂ ಇದ್ದು ಸಭಿಕರಿಗೆ ತುಂಬ ಸಂತೋಷವನ್ನುಂಟುಮಾಡಿತು.

ಇದಕ್ಕಾಗಿ ಅಲ್ಲಿಯ ಮಹಾಜನಗಳು ಸಹಾಯಮಾಡಿದ ಪ್ರೈಸ್‌ನ್ನು "ಬಾಯ್ಸ್ ವೆಲ್ಫೇರ್ ಅಸೋಸಿಯೇಷನ್" ನಿಂದ ಹೊರಡುತ್ತಾ ಇರುವ ಪತ್ರಿಕೆಗೆ ಮೂಲಧನವಾಗಿಕೊಟ್ಟು ಅದನ್ನು ಅಭಿವೃದ್ಧಿಗೆ ತರಬೇಕೆಂಬ ಈ ಊರಿನ ಜನಗಳ ಸದುದ್ದೇಶವನ್ನು ನಿಷ್ಪಕ್ಷಪತೆಯಿಂದ ನಡೆಸಿಕೊಟ್ಟ ಶ್ರೀಯುತ ಬಿ. ಮುತ್ತಣ್ಣನವರ ಉದಾರ ಮತ್ತು ಪಾರಮಾರ್ಥಿಕ ಗುಣವು ವರ್ಣಿಸಬಹುದಲ್ಲವಾಗಿರುತ್ತೆ. ಈ ಸತ್ಕಾರ್ಯದಲ್ಲಿ ಮುಂದಾಳಾಗಿ ನಿಂತು ಕಾರ್ಯವು ಅವಿಘ್ನವಾಗಿ ನಡಿಯಲು ತಕ್ಕ ಏರ್ಪಾಡುಗಳನ್ನು ಮಾಡಿದ ಮ ರಾ. ಕೆ. ಎಂ. ಮುತ್ತಣ್ಣ ಬಿ.ಎ. ಯವರಿಗೂ, ಸದುದ್ದೇಶದ ಮೇಲ್ಪಂಕ್ತಿಯನ್ನು ಹಾಕಿದ ಈ ಊರಿನ ಮಹಾ ಜನಗಳಿಗೂ ಆ ಸದುದ್ದೇಶವನ್ನು ಸ್ವಾರ್ಥಪರತೆ ಇಲ್ಲದೆ ನೆರವೇರಿಸಿಕೊಟ್ಟ ಶ್ರೀಯುತ ಬಿಟ್ಟಿಯಂಡ ಮುತ್ತಣ್ಣನವರಿಗೂ ದೇವರು ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲೆಂದು ಕೋರುವ,

ಸಜ್ಜನ ವಿಧೇಯ,
ಪಿ. ಶ್ರೀನಿವಾಸಮೂರ್ತಿ.

ವೀರಶೈವರ ವಿದ್ಯಾನಿಧಿ ಸಂಘ.

ಅಯ್ಯಾ ಮತ ಬಾಂಧವರೇ,

ಈ ಹಿಂದೆ ಶನಿವಾರಸಂತೆಯಲ್ಲಿ ಏರ್ಪಡಿಸಿದ ವಿದ್ಯಾನಿಧಿ ಸಂಘವು ಈ ವರೆಗೆ ಮುಂದರಿದು ಬಾರದೆ ಮೂಲೆಯಲ್ಲಿರುವದನ್ನು ನೋಡಿದರೆ ಮತ ಬಾಂಧವರಿಗೆ ತುಂಬಾ ವ್ಯಸನವಲ್ಲವೆ? ಉತ್ತರಕೊಡಗಿನಲ್ಲಿ ಹುಟ್ಟಿ ದಕ್ಷಿಣಕೊಡಗಿನ ವರೆಗೂ ವರ್ತಮಾನವು ಹಬ್ಬಿ ಈಗ ಸಂಘವು ನಿಂತಲ್ಲಿಯೇ ನಿಂತುಕೊಂಡಿರುವದರಿಂದ ಮತ ಬಾಂಧವರಿಗೆ ತುಂಬಾ ವಿಷಾದವಾಗಿದೆ. ನಮ್ಮ ನೆರೆಹೊರೆ ದೇಶಗಳಲ್ಲಿ ವೀರಶೈವರು ದೊಡ್ಡ ದೊಡ್ಡ ಸಂಘಗಳನ್ನು ಏರ್ಪಡಿಸಿ ವಿದ್ಯಾವಂತರಾಗಿ ದೇಶದ ಸಹೋದರ ಜನಾಂಗದೊಳಗೆ ಸೇರಿ ಮುಂದುವರಿಯುವದು ನಿಮ್ಮ ನೇತ್ರಗಳಿಗೆ ಇನ್ನೂ ಗೋಚರವಾಗಲಿಲ್ಲವೇ? ಎಲ್ಲಾ ದೇಶಗಳಲ್ಲೂ ಅವರ ತನುಮನ ಧನಗಳನ್ನರ್ಪಿಸಿ ದೇಶಸೇವೆ, ಮತಸೇವೆ, ಮಾಡುತ್ತಾ ಇರುವಾಗ ಉತ್ತರಕೊಡಗಿನ ಮಹನೀಯರಿಗೆ ಇನ್ನೂ ಎಚ್ಚರಿಕೆಯು ಹುಟ್ಟಲಿಲ್ಲವೇ? ತಾವುಗಳು ಏರ್ಪಡಿಸಿದ ಮುಖಂಡರೂ, ಮುಂದಾಳುಗಳೂ, ಮುಂದೆ ಪರದೇಶದಲ್ಲಿ ನಡೆಯುವ ವೀರಶೈವರ ಕಾಂಗ್ರೆಸ್ ಕಮಿಟಿಗೆ ದಯಮಾಡಿಸಿ, ದೇಶಭಕ್ತರು ಮಾಡುವಂಥ ದೇಶಸೇವೆಯನ್ನು ಕಣ್ಣಾರೆ ನೋಡುವರನೆ? ಕೊಡಗು ವೀರಶೈವ ಸಮಾಜಸಂಘವೆಂದು ಏರ್ಪಡಿಸಿ ಕೈಬಿಟ್ಟರೆ ದೇಶಕ್ಕೆ ಒಂದು ಕೊರತೆಯಾಗುವದಿಲ್ಲವೇ? ಕೊಡಗು ದೇಶದಲ್ಲಿರುವ ವೀರಶೈವ ಮಹನೀಯರು ಈಗ ನಟ್ಟಿರುವ ವೀರಶೈವ ಸಂಘದ ಗಿಡಕ್ಕೆ ಉತ್ತೇಜನಮಾಡಿ, ಫಲ ಕಾಣಿಸಬೇಕೆಂದು ನನ್ನ ವಿನಂತಿ.

ಮತಭಕ್ತ.

ಭಂಗಾರದಂತಹ ಆಸ್ತಿ.
೧೦೦ ರುಪಾಯಿಗಳಿಗೆ ೫೬೦ ರುಪಾಯಿಗಳ ಪ್ರತಿಫಲ.

ಜೀವವಿಮೆಯನ್ನು ಮಾಡಿ ಮೃತಪಟ್ಟ ಒಬ್ಬ ಮನುಷ್ಯನು ಇದಕ್ಕಿಂತಲೂ (ನಂಬಿಕೆಯುಳ್ಳ) ಗಟ್ಟಿಯಾದ ಜೀವನಾಧಾರ (ಆಸ್ತಿ). ಅಥವಾ ಇದಕ್ಕಿಂತಲೂ ಹೆಚ್ಚು ಉತ್ಪತ್ತಿ (ಹುಟ್ಟುವಳಿ) ಯಾಗುವ ಬೇರೆ ಯಾವ ರೀತಿಯಲ್ಲಿ ಹಣವನ್ನು ವಿನಿಯೋಗಿಸಬಹುದಾಗಿತ್ತು ?

ಈ ಮನುಷ್ಯನು ಓರಿಯಂಟಲ್ ಗೌರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿಯಲ್ಲಿ 1921ನೇ ಇಸವಿ ನೆಪ್ಟಂಬರ್ ತಿಂಗಳಿನಲ್ಲಿ ತನ್ನ ಜೀವವಿಮೆ ಮಾಡಿ 3 ವರ್ಷಗಳ ನಂತರ ಮೃತಪಡಲಾಗಿ ಅದುವರೆವಿಗೆ ಆತನು ಕಂಪೆನಿಗೆ 274—8—0 ರುಪಾಯಿಗಳನ್ನು ಕಂತುಗಳಾಗಿ ಪಾವತಿ ಮಾಡಿದ್ದರೂ ಆತನು ಕುಟುಂಬದವರಿಗೆ 1,536 ರುಪಾಯಿಗಳನ್ನು ಕಂಪೆನಿಯವರು ಪಾವತಿ ಮಾಡಿರುತ್ತಾರೆ.

ಓರಿಯಂಟಲ್ ಕಂಪೆನಿಯ ಜೀವವಿಮೆಯ ಪತ್ರವು ಈತನ ಕುಟುಂಬದವರಿಗೆ ಎಷ್ಟು ಪ್ರಯೋಜನವನ್ನೂ ಅನುಕೂಲತೆಯನ್ನೂ ಉಂಟುಮಾಡಿತೆಂಬುವುದನ್ನು ಪರ್ಯಾಲೋಚಿಸಿ ನೋಡಿರಿ ! 4.1

ಸಂಪತ್ತಿಯ ಸಾಧನಗಳು.

ಅಯ್ಯಾ ಬಂಧುಗಳೇ ಸಂಪತ್ತಿಯು ಅನ್ಯರ ಪಾಕರಿಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು ಅದನ್ನು ಶೋಧಿಸಿ ತೆಗೆಯಲು, ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು.

ಲಕ್ಷಾವಧಿ ರೈತರು ಹೂಡಿ ಅನುಭವ ತೆಗೆದುಕೊಂಡಿರುವರು. ಭೂಮಿಯು ತಕ್ಕ ತರತರದ ನೇಗಿಲುಗಳೂ ಗಾಣಗಳೂ ದೊರೆಯುತ್ತವೆ. ಕಿಸಾನಗಾಣವು ಒಂದು ಗಂಟೆಗೆ ೪೦೦ ಪೌಂಡು ಕಬ್ಬನ್ನು ಹಿಂಡಿ ಚಲ್ಲುತ್ತದೆ.

“ಕೊ” ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್,
4-2 **ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ.**

COFFEE ESTATE FOR SALE.

A portion of Merryland Estate, 3 miles from Sidapur. Coffee 70 acres, Paddy 17, Orange 5, Grazing land 36, Makki about 4. Well appointed Bungalow, 3 cooly lines, granary, cattle shed, all tiled Motor road to bungalow Inspection by appointment Offers will not be considered after end of February. Prize Rs. 50,000 or near offer

Apply to—
S. M. PINTO,
3 3 *Virarajendrapett, Coorg.*

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲುಪಿರುವುದರಿಂದ, ‘ಲೆಟರ್ ಹೆಡ್ಸ್’ ‘ವಿಸಿಟಿಂಗ್ ಕಾರ್ಡ್ಸ್’ ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ. ಮ್ಯಾನೇಜರ್,
‘ಕೊಡಗು’ ಲಿಮಿಟೆಡ್

ನೋಟೀಸ್.

“ಕೊಡಗು” ಪತ್ರಿಕೆಯ ಹಳೆ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಶೇರುಹಣ ಸಲ್ಲಿಸಬೇಕಾದವರೂ ದಯವಿಟ್ಟು ವೀರರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮ್ಯಾನೇಜರ್,
1-3-34. ‘ಕೊಡಗು’ ಲಿಮಿಟೆಡ್.

FOR SALE.

OVRLAND ‘MODEL 4’ recently completely ever hauled and all necessary replacements effected and repainted. and not used since. New Battery (never used) Price Rs 2,000.

Apply to :—
4-2 The Hunsur Works, Hunsur

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಜಮಾಬಂದ ಡೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಡೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಡೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದೂರ್. ಬಿ.ಎ. ಬಿ.ಎಲ್.
ಸೆಕ್ರೆಟರಿ.
ಸಿ. ಯಮ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್
ತಾರೀಕು, 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ತಪ್ಪಿಯದರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ.—

ಮ್ಯಾನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಚಾರ್ಜು ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು ‘ಕೊಡಗು’ ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ
17-9-34. ಮ್ಯಾನೇಜರ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.
Telegraphic Address :- “SHOOTER” Bombay.

[24 21] Please write for latest Catalogues.

ಮಾರಾಟಕ್ಕೆ.

1. ಮಡಿಕೇರಿ ಆರೆ ಮುಳ್‌ಶೆಟ್ಟಪ್ಪನವರ ಮಡಿಕೇರಿ ನಾಡುಬಿಳಿಗೇರಿಗ್ರಾಮದಲ್ಲಿ ಮಡಿಕೇರಿ ಮೂರ್ನಾಡು ರಸ್ತೆ 3ನೇ ಮೈಲಾ ಬಳಿ ಇರುವ ಆಸ್ತಿ, ಅಂದರೆ— ಸಾಗಿನ ಉತ್ತಮವಾದ ಭೂಮಿ 31½ ಎಕರು, ಕಿತ್ತಳೆ 25 ಎಕರು, (ಈ ಪೈಕಿ 15 ಎಕರು ಫಸಲಿಗೆ ಬಂದದನ್ನು ಈ ವರ್ಷ 1,200 ರುಪಾಯಿಗಳಿಗೆ ಫಸಲು ಗುತ್ತಿಗೆ ಕೊಡಲಾಗಿದೆ) ಯಾಲಕ್ಕಿ 15 ಎಕರು, ಹೊಸದಾಗಿ ಹಾಕಿರುವ ಕಾಫಿ 15 ಎಕರು ಮತ್ತು 116 ಎಕರು ಬಾಣೆ, ಒಂದು ವಾಸದ ಮನೆ, ಆಳುಗಳ ಲೈನು ಮತ್ತು ದನಗಳ ಕೊಟ್ಟಿಗೆ ಸಹ—ಮಾರಾಟಕ್ಕೆ ಇದೆ ಕ್ರಯ ರುಪಾಯಿ 25,000 ಅಥವಾ ಇದರ ಸಮೀಪದ ಬೆಲೆ

2. ಆರೆ ಮುಳ್‌ಶೆಟ್ಟಪ್ಪನವರ ಮಡಿಕೇರಿ ಮಹದೇ[illegible] ಡ್ಡ ಮಹಡಿಮನೆ ಕ್ರಯ ರೂ. 5,000.

ಹೆಚ್ಚಿನ ವಿವರಕ್ಕೆ ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು.

ಎಂ. ಎನ್. ಅಪ್ಪಣ್ಣ,
ಬೋಯಿಕೇರಿ ಎಸ್ಟೇಟ್.
12—2 ಸುಂಟಿಕೊಪ್ಪ.

WANTED.

Blacksmith and hammerman for Public Works Workshop, Mercara. Pay according to qualifications

Aqply—
SUB-DIVISIONAL OFFICER,
3—2 MERCARA.

ಹಳೆ ವಿದ್ಯಾರ್ಥಿಯರ ತ್ರೈಮಾಸಿಕ.

ಸಂಪುಟ 2] ವರ್ಷದಚಂದಾ ಬರೇ ರೂ. 1-4-0 [ಸಂಚಿಕೆ 1
ಸಂಪಾದಕ :—ಸಿ. ಬಿ. ಮೇದಪ್ಪ, ಬಿ.ಎ., ಬಿ ಎಲ್. ಎಂ. ಎಲ್. ಸಿ

ಈ ಸಂಚಿಕೆಯಲ್ಲಿ ಮನೋಹರವಾದ ಕೊಡಗಿನ ಪವಿತ್ರ ಸ್ಥಳವಾದ ಶ್ರೀ ತಲಕಾವೇರಿಯ ಚಿತ್ರಗಳಿವೆ.

1. ಶ್ರೀ ಕಾವೇರಿಯ ಜನ್ಮ, ಅವತಾರ.
2. ಸರಕಾರಕ್ಕೆ ಸಾಲವೆಂದರೇನು ?
3. ಪೋಲಿಟಿಕ್ಸ್ ಅಂದರೇನು ?
4. ಮಿರಾಬಾಯಿ.

ಇವೇ ಮುಂತಾದ ಬಹು ಸ್ವಾರಸ್ಯದ ವಿಷಯಗಳಿವೆ.

ಮ್ಯಾನೇಜರ್,
ಓ. ಎಸ್. ಎಸೋಸಿಯೇಷನ್,
ಮಡಿಕೇರಿ

Printed & published by Kodanda Appayya, R.B., Chairman, Board of Directors, at “Kodagu” Press, Mercara for “Kodagu” Ltd.

O. M. 1550.

If ... please return to "KODAGU" OFFICE, MERCARA.

ಕೊಡಗು.

ಸತ್ಯೇನ ಭೂಷಿತರಯುತೋ ವಿದ್ಯಾ ನೀತಿ ಪ್ರಯತ್ನತಃ || ಐಕ್ಯಮತ್ಯೇನ ವೀರಾಣಾಂ ಸುಸ್ಥಿರಾ ರಾಜ್ಯ ಸಂಪದಾ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು. ಎಡಿಟರ್ ಪಂಚ್ಚೆಂಡ ಐ. ಬೆಳ್ಳಪ್ಪ.

ವಾರ್ಷಿಕ ... ರೂ. ೩—೮—೦

ಸಂಪುಟ ೪] ಕೊಡಗು, ಸನ್ ೧೯೩೫ನೇ ಇಸವಿ ಫೆಬ್ರವರಿ ತಾರೀಕು ೮ನೆಯ ಶುಕ್ರವಾರ [ಸಂಚಿಕೆ ೩೪

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು ರಾಮರಾವ್, ಯಮ್. ಎಲ್. ಸಿ. ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮುಂಬಲಗು ವರ್ಷಕ್ಕೆ ... ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಧಾರಾಳ ದೊರೆಯುವವು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ' 323, ... ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ಶಿಲ್ಪ, ವಿಜ್ಞಾನ, ಮತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು. 3. ಬಾತ್ಮಿದಾರರ ಅಭಿಪ್ರಾಯಕ್ಕೆ "ಕೊಡಗು" ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳಲಾರರು.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗಳನ್ನು ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ

ನೋಟೀಸ್.

ಕೊಡಗಿನಿಂದ ಮೈಸೂರಿಗೆ ಮಾರಾಟಕ್ಕೆ ಬರುವ ಕಿತ್ತಳೆ ಹಣ್ಣುಗಳನ್ನು ಚಡದರಕಾಸ್ತಿನಲ್ಲಿ ನ್ಯಾಯವಾದ ದಾರಣೆಗೆ ಮಾರಾಟಮಾಡಿಸುವ ಬಗ್ಗೆ ಒಂದು ಏಜನ್ಸಿಯನ್ನು ನಾನು ಮೈಸೂರಲ್ಲಿ ತೆರೆದಿರುತ್ತೇನೆ. ಕಮೀಷನ್‌ವಿನಃ ಬಾಕಿ ಮಾರಾಟದ ಹಣವನ್ನೂ ಇಲ್ಲವೆ ಪಬ್ಲೀಕ್ ಹರಾಜಿನಲ್ಲಿ ಹಣ್ಣುಗಳನ್ನು ಮಾರಿಸಿಕೊಡಲು ತಯಾರಿದ್ದೇನೆ. ಅಲ್ಲದೆ ಹಿಂದೂದೇಶದ ಎಲ್ಲಾ ಕಡೆಗಳಿಗೂ ಕಿತ್ತಳೆ ಹಣ್ಣುಗಳನ್ನು ಒದಗಿಸಿಕೊಡಲು ನಾನು ಒಂದು ದೊಡ್ಡ ಉಗ್ರಾಣವನ್ನು (ಗೋಡೌನ್) ತೆರೆದಿರುತ್ತೇನೆ. ನಾನು ಒಬ್ಬ ಕೊಡಗು ದೇಶಸ್ಥನಾದುದರಿಂದ ಕೊಡಗಿನಲ್ಲಿರುವ ನನ್ನ ದೇಶ ಬಾಂಧವರೆಲ್ಲರೂ ಈ ಅನುಕೂಲವನ್ನು ಕಳಕೊಳ್ಳಲಿಕ್ಕಿಲ್ಲವಾಗಿ ಕೋರುತ್ತೇನೆ.

ಟೆಲಿಗ್ರಾಮ್ ವಿಳಾಸ:— ಫ್ರೂಟ್ಸ್, ಮೈಸೂರು.

ಟಿ. ಎ. ಕುಪ್ಪಸಾಮಿ ಪಿಳ್ಳೆ, ಫ್ರೂಟ್ಸ್ ಗೋಡೌನ್, ಮೈಸೂರು.

1—4

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,

P. O. BASAVANAGUDI

Bangalore City

THE SHOPPING CENTRE OF COORG,

Spencer & Co. Ltd.,

MERCARA & POLLIBETTA.

An Announcement.

Our prices of wines, spirits, ...

... for our Xmas list and be convinced

Trial order Solicited.

14

ಕೃಷಿತೋ ನಾಸ್ತಿ ದುರ್ಭಿಕ್ಷಃ

NITRATE OF SODA (15—16 per cent.) Nitrogen,

"The best and cheapest form of Nitrogen highly concentrated and immediately available. Nothing like it to make plants grow."

ವ್ಯವಸಾಯದಲ್ಲಿ ಗೊಬ್ಬರವಿಡುವದರ ಹೆಚ್ಚಿನ ಉದ್ದೇಶವು ಬೆಳೆಗಳಿಗೆ ಸಾರಜನಕ (Nitrogen) ಒದಗಿಸಿಕೊಡುವದಾಗಿರುತ್ತದೆ. "ನೈಟ್ರೇಟ್ ಆಫ್ ಸೋಡಾ" ಎಂಬ ರಸಾಯನಿಕ ಗೊಬ್ಬರವು (15—16%) ಅಂದರೆ ಬೂಸುಗೊಬ್ಬರದಲ್ಲಿಯಕ್ಕಿಂತ ಮೂರರಷ್ಟು ಜಾಸ್ತಿ ಕ್ಷಾರಜನಕ ಭರಿತವಾಗಿದ್ದು ಬೆಳೆಗಳಿಗೆ ಥಕ್ಕನೆ ಪಡಗುವರೀತಿಯಲ್ಲಿರುತ್ತದೆ. ಇದರ ಉಪಯೋಗದಿಂದ ಫಸಲು ಬಹಳ ವೃದ್ಧಿಯಾಗುವದು. ಹಿಡಿತುಂಬ ರಸಾಯನಿಕ ಗೊಬ್ಬರವು ಮುಡಿ (ಕುಕ್ಕೆ) ತುಂಬ ಬೂಸುಗೊಬ್ಬರಕ್ಕೆ ಸಮವಾಗಿರುತ್ತದೆ. ಈ ರಸಾಯನಿಕ ಗೊಬ್ಬರವು ಅಮೇರಿಕ ದೇಶದ "ಚಿಲ್ಲಿ" ಎಂಬಲ್ಲಿ ತಯಾರಿಸಿ ಪರದೇಶದಿಂದ ಬರಬೇಕಾದರೂ ಸಹ ಅದು ಹಳ್ಳಿ ಮೊದಲಾದ ತೋಟಗಳಿಗೆ ವಗೈರೆ ಕೃಷಿಗಳಿಗೆ ಉಪಯೋಗಿಸಲು ಬಹು ಸುಲಭವಾಗಿಯೂ ಹಟ್ಟಿ ಗೊಬ್ಬರಕ್ಕಿಂತಲೂ ಬಹಳ ಹೆಚ್ಚಿನ ಆದಾಯವನ್ನು ಕೊಡುವದಾಗಿಯೂ ಇರುತ್ತದೆ. ಒಂದು ಎಕ್ರೆ ಭೂಮಿಗೆ 120—180 ರಾತಲು ಬೇಕಾಗುವದು. ಇದರ ವಿಷಯ ಹೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ಧರ್ಮಾರ್ಥವಾಗಿ ನಮ್ಮಿಂದ ಪಡೆಯಬಹುದು.

ದಿ. ಚಿಲಿಯನ್ನ ನೈಟ್ರೇಟ್

24—20 ಕಮಿಟಿಯವರ ಕಡೆ

ಕೊಡಗಿನಲ್ಲಿ—

B. P. Ayapa, Hon Representative Pollibetta, Coorg.

The Chilean Nitrate Committee, 7 Hare Street, Post Box 469 CALCUTTA.

ಪ್ರಕಟಣೆ.

ನಮ್ಮ ಅಂದವಾದಹೊಸ ಅಕ್ಷರಗಳು ಬಂದು ತಲಪಿರುವುದರಿಂದ, 'ಲೆಟರ್ ಹೆಡ್ಸ್', 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ.

ಮೇನೇಜರ್,

'ಕೊಡಗು' ಲಿಮಿಟೆಡ್

ಪ್ರಕಟಣೆ.

ಮಡಿಕೇರಿ ಪೋಲೀಸ್ ಇನ್‌ಸ್ಪೆಕ್ಟರುಗಳ ಕ್ವಾರ್ಟರ್ಸ್‌ಗೆ ಅಂದಾಜು ... ಹೊಸಮನೆಗಳಿಂದ ಭದ್ರವಾಗಿಯೂ 3 ವರ್ಷಗಳ ಹಿಂದೆ ಕಟ್ಟಲ್ಪಟ್ಟ ಸಂಸಾರ ಸಮೇತ ವಾಸ ಇರಲಿಕ್ಕೆ ಯೋಗ್ಯವಾದ 9 ಕೊಠಡಿಗಳಿರುವ ಮನೆ 3 ಅಂಕಣಗಳ ಕೊಟ್ಟಿಗೆ ಮುಂತಾದವುಗಳೂ ವಿಸ್ತಾರವಾದ ನೀರು ಇರುವ ಕಲ್ಲು ಕಟ್ಟಿದ ಭಾವಿ (ನೀರು ಗೋಚಿ ತೆಗಿಯುವಂತಾದ್ದು) ಕಾಫಿ, ಬಾಳೆ, ಕಿತ್ತಳೆ, ನಿಂಬೆ ಮರಗಳೂ ಮತ್ತು ಹೂವು ಮತ್ತು ಮಾವಿನ ಗಿಡಗಳೂ ಇರುವ ಹಿತ್ತಲೂ ಸಹ ಇರುವ ಆಸ್ತಿ ಒಂದು ಮಾರಾಟಕ್ಕೆ ಇದೆ. ಈ ಸ್ಥಳವು ಗೋಪ್ಯವಾಗಿಯೂ ಸಂಸಾರ ಸಮೇತ ವಾಸ ಇರುವದಕ್ಕೆ ಯೋಗ್ಯವಾಗಿಯೂ ಇದೆ. ವಾಸಕ್ಕೆ ಇಂತಾ ಯೋಗ್ಯವಾದ ಸ್ಥಳ ಮಡಿಕೇರಿಯಲ್ಲಿ ಸಿಕ್ಕುವದು ದುರ್ಲಭ. ಕೊಂಡುಕೊಳ್ಳುವದಕ್ಕೆ ಖಾಯಿಷ್ ಇರುವವರು ಸ್ವತಃ ನೋಡಿ ಕ್ರಯ ನಿಶ್ಚೈಸಬಹುದು. ಹೆಚ್ಚಿನ ವಿವರ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬೇಕಾಗಿದೆ.

VENDER,

C/o EDITOR, "KODAGU."

Mercara.

8-8

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಕೋಟೆರ ಚಿನ್ನಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು

ವೀರಾಜಪೇಟೆ— ಮೆ. ಕೆ. ಚಿನ್ನಪ್ಪನವರ ಆಫೀಸಿನಲ್ಲಿ.

ಮೂರ್ನಾಡು— ಕೃಷ್ಣಯ್ಯ ಸ್ಟೋರಿನಲ್ಲಿ ಮೆ. ಮಚಿಯಂಡ ದೇವಯ್ಯನವರು.

ನಾಪೋಕ್ಲು— ಮೆ. ಪೊನ್ನಚಂಡ ಮುದ್ದಪ್ಪನವರು.

ಗೋಣಿಕೊಪ್ಪಲು— ಮೆ. ಮುಕ್ಕಾಟಿರಪೂಣಚ್ಚನವರು.

ಪೊನ್ನಂಪೇಟೆ— ಮೆ. ಪುತ್ತಮನೆ ಮುದ್ದಯ್ಯನವರು.

ಮಡಿಕೇರಿ— ಮೆ. ಜಿ. ಪೂವಮ್ಮನವರು.

ಅಮ್ಮತ್ತಿ ಸಿದ್ದಾಪುರ— ಮೆ. ನರಿಂಡ ಮಾದಪ್ಪನವರು ಮೆ. ಜಂಗಾಂಡ ಕುಟ್ಟಪ್ಪನವರು.

ಕೋದಂಡ ಉತ್ತಯ್ಯ.

ಮೇನೇಜಿಂಗ್ ಡೈರೆಕ್ಟರು, "ಕೊಡಗು" ಲಿಮಿಟೆಡ್,

"ಕೊಡಗು"

೧೯೨೫ನೇ ಇಸವಿ ಫೆಬ್ರವರಿ ತಾ. ೬ನೇ ಶುಕ್ರವಾರ.

ಅಕಸ್ಮಿತ ಮರಣಗಳು.

ಈ ಹೊಸ ವರುಷವು ಕೊಡಗಿನಲ್ಲಿ ಶುಭಕರವಾಗಿ ಪ್ರಾರಂಭಿಸಿದ ಹಾಗೆ ಕಾಣುವುದಿಲ್ಲ. 1925ನೇ ವರುಷವು ಶುರುವಾಗಿ ಒಂದು ತಿಂಗಳಾಯಿತಷ್ಟೆ. ಅಷ್ಟರೊಳಗೆ ದೇಶದ ಬೇರೆ ಬೇರೆ ಸ್ಥಳಗಳಿಂದ ಅನೇಕ ಅಕಸ್ಮಿತ ಮರಣಗಳ ವಾರ್ತೆಯು ಕೇಳಿ ಬಂದಿವೆ. ಇನ್ನೂ ಕೇಳುತ್ತಲೇ ಇದ್ದೇವೆ. ಕಳೆದ ವಾರದ ಪತ್ರಿಕೆಯು ಒಳದೇಶದ ವರ್ತಮಾನಗಳನ್ನು ಓದಿದವರ ಮನಸ್ಸು ಒಗ್ಗನೆ ದುಃಖಕರವಾದ ಭೀತಿಗೊಳ್ಳದೆ ಇರದು. ಕೋವಿಯ ಗುಂಡಿನಿಂದ ಎಷ್ಟೆಲ್ಲಾ ಮರಣಗಳು! ಬಂದು ಕಡೆಗದ್ದೆಯಲ್ಲಿ ಊಟಮಾಡುತ್ತಿರುವ ಕಾಡುಹಂದಿಗೆಂದು ಗುಂಡು ಹೊಡೆಯುವಾಗ ಮನುಷ್ಯನಿಗೆ ತಗಲಿ ಅವನು ಸತ್ತನಂತೆ, ಇನ್ನೊಂದು ಕಡೆ ಒಬ್ಬನು ಕಟ್ಟಿದ ಉಳಿಯಲ್ಲಿ ಇನ್ನೊಬ್ಬನು ಕೂತು ಉಳಿ ಕಟ್ಟಿದವನು ಅಲ್ಲಿಗೆ ಬರುವಾಗ್ಯೂ ... ಅವನಿಗೆ ಗುಂಡಂತೆ. ಈ ವಾರದ ವರ್ತಮಾನ ... ಬಂದು ಗುಂಡು ಹಾ... 1925 ... ಬಂದ ... ಕಳೆದ ... ಜಾತಿ ಎಂದರೆ, ಕಠಿಕಾರರು ತೋಟದಲ್ಲಿ ಕಾಡು ಮೃಗವೆಂದೂ ಕೋವಿಯಿಂದ ಗುಂಡು ಹೊಡೆದಲ್ಲಿ ಎಂದು ಕಾಲಿನ ಜಾತಿಗಳಾದ ಮನುಷ್ಯರು ತುತ್ತಾದರು. ಈ ಸಂಗತಿಗಳೆಲ್ಲಾ ನಡೆದು ಹೋದವುಗಳಾಗಿವೆ. ಇವುಗಳನ್ನು ವಿಚಾರಿಸಿ ನ್ಯಾಯ ಕಂಡು ಸರಕಾರದವರು ಶಿಕ್ಷೆ ಕೊಡುತ್ತಲೂ ಇದ್ದಾರೆ. ಈ ವಿಷಯ ಬರೆಯುವುದು ನಮ್ಮ ಉದ್ದೇಶವಲ್ಲ.

ಆದರೆ ಇಂಥಾ ಅಕಸ್ಮಿತಗಳಿಗೆ ಕಾರಣವೇನು, ಅವುಗಳನ್ನು ನಿವಾರಿಸುವುದು ಹ್ಯಾಗೆ ... ಎಲ್ಲರೂ ಸ್ವಲ್ಪ ವಿಚಾರಿಸತಕ್ಕ ಸಂಗತಿಯಾಗಿದೆ. ಹಂದಿ ಎಂದೂ, ಕಾಡು ಹಂದಿ, ಕಾಡು ಜಾತಿಗೆಂದೂ ಗುಂಡು ಹೊಡೆಯಲು ಮನುಷ್ಯರಿಗೆ ತಗಲುವದು ಹ್ಯಾಗೆ? ಇದಕ್ಕೆ ಗುಂಡು ಹೊಡೆಯುವವರ ಆತುರವೇ ಮುಖ್ಯ ಕಾರಣವಾಗಿದೆ. ಹಗಲೇ ಆಗಲಿ ರಾತ್ರಿಯೇ ಆಗಲಿ ತಾನು ಗುಂಡು ಹೊಡೆಯುವ ಜಾತಿಯು ಎಂಥಾದ್ದು ಎಂಬದನ್ನು ಪರಿಶೀಲಿಸಿ ತಿಳಿದುಕೊಳ್ಳದೆ ಶಬ್ದ ಕೇಳಿದಾಗಲೇ, ಮರ ಗಿಡಗಳು ಅಲ್ಲಾಡಿದಾಗಲೇ ಗುಂಡು ಹೊಡೆಯುವುದರಿಂದಲೇ ಇಂಥಾ ಅನರ್ಥಗಳುಂಟಾಗುವವು. ಕಾಡು ಜಾತಿಯು ಹೋಗಿ ಬಿಡುವುದೆಂದು ಆತುರಪಡಬಾರದು. ಕಾಡು ಜಾತಿಯು ಕಾಡಿಗೆ ಹೋಗುವುದರಲ್ಲಿ ವ್ಯಸನವೇನು? ಅದಕ್ಕಾಗಿ ಅತಿ ಆಶೆಯಿಂದ ಜಾತಿ ಆಯಿತೆಂದು ಎಂದಿಗೂ ಗುಂಡು ಹೊಡೆಯಬಾರದು. ಮಾತ್ರವಲ್ಲ, ಹಗಲಿನ ಸಾಧು ಕೂಡುವ ಬೇಟೆಯಲ್ಲಾಗಲೀ, ರಾತ್ರಿಯ ಉಳಿ ಕೂಡುವವರಲ್ಲಾಗಲಿ, ಪ್ರತಿಯೊಬ್ಬನು ಅವನವನಿಗೆ ನಿಶ್ಚಯಿಸಿದ ಸ್ಥಳದಲ್ಲಿಯೇ ಇರಬೇಕಲ್ಲದೆ ಬೇರೆ ಕಡೆಗಳಿಗೆ ದಾರಿಗಳು ಬಂದವೆಂದು ಹೋಗಬಾರದು. ಬೇಟೆಗಳಲ್ಲಿ ನ್ಯಾಯವಾದ ಬಿಲ್ಲು ನಿಂತು ನಿಯಮ ಪ್ರಕಾರ ಬೇಟೆಯಾಡಿದರೆ ಅಕಸ್ಮಿತಗಳು ಉಂಟಾಗುವುದು ಬಹಳ ಅಪರೂಪ. ತಾನು ಮುಂದೆ ಜಾತಿಗೆ ಗುಂಡು ಹೊಡೆದುಬಿಡಬೇಕೆಂಬ ಅತಿ ಆಶೆಯಿಂದ ಕೆಲವರು ಕಾಡಿನ ಒಳಗೆ ಸುತ್ತಲೂ ನ್ಯಾಯವಾದ ಬಿಲ್ಲು ನಿಲ್ಲದೆ ಕಾಡಿನೊಳಗೆ ನುಗ್ಗಿ ಒಳ ಬಿಲ್ಲು ಅಥವ ಕಳ್ಳ ಬಿಲ್ಲು ನಿಲ್ಲುವದರಿಂದಲೂ, ಜಾತಿಯು ಶಬ್ದ ಕೇಳಿ ತಾವು ನಿಂತ ಸ್ಥಳ ಬಿಟ್ಟು ಬೇರೆ ಕಡೆಗೆ ಓಡುವದರಿಂದಲೂ, ನ್ಯಾಯವಾಗಿ ನಿಂತು ಬೇಟೆಯಾಡುವವರ ಗುಂಡಿನ ಪೆಟ್ಟಿಗೆ ಈಡಾಗುವರು. ರಾತ್ರಿಯ ಉಳಿಯಲ್ಲೂ ಜಾತಿಯು ಬಿಟ್ಟು ದಾರಿಯಲ್ಲಿ ಕೇಳ ... ಉಳಿ ಕೂತಿರುವ ಸ್ಥಳಕ್ಕಾಗಿ ಅದು ಬರುವುದಿಲ್ಲವೆಂದು ತಿಳಿದು ತಾವೇ ಕಳಕ್ಕೆ ಇಳಿದು ಜಾತಿಗೆ ಕಾದಿಸಿಕೊಳ್ಳಬಾರದೆಂದು ಬಗ್ಗಿಕೊಂಡು, ಅವಿತುಕೊಂಡು ಜಾತಿಯು ಬಳಿಗೆ ಹೋಗುವುದು ದೊಡ್ಡ ತಪ್ಪು. ಹೀಗೆ ಹೋಗುವುದರಿಂದ ಸರಿಯಾಗಿ ಉಳಿ ಕೂತವರ ಗುಂಡಿಗೆ ಸಿಕ್ಕಿ ಸಾಯುವರು. ಆದುದರಿಂದ ಗುಂಡು ಹೊಡೆಯುವವರ ಅವಸರ, ಆತುರತೆಯೂ, ಬೆಟ್ಟ ತಗಲುವವರ ತಪ್ಪು ಚಲನೆಗಳೂ ಇಂಥಾ ಮರಣಗಳಿಗೆ ಕಾರಣಗಳೆಂದು ಹೇಳಬಹುದು. ಇವುಗಳನ್ನು ನಿವಾರಿಸಲು ಪ್ರತಿಯೊಬ್ಬ ಬೇಟೆಗಾರನೂ ಹಿಗಿಬಿಡತಕ್ಕದ್ದು. ಯಾವ ಕೆಲಸವನ್ನೇ ಆಗಲಿ ಮನಸಾರೆ ತಿಳಿದು ನೋಡಬೇಕು. ಅದಕ್ಕೂ ಪ್ರಾಣವನ್ನೇ ತೆಗೆಯುವಂಥ ಅನರ್ಥವಾದ ತುಪಾಕಿಗಳನ್ನು ಉಪಯೋಗಿಸುವಲ್ಲಿ ಎಲ್ಲದಕ್ಕಿಂತಲೂ ಹೆಚ್ಚಾಗಿ ಪ್ರಾಪ್ತ ಕಾಲ ಜ್ಞಾನವುಳ್ಳವರಾಗಬೇಕು.

ನಮ್ಮ ಪೂರ್ವಜರು ಈಗಿನವರಿಗಿಂತ ಎಷ್ಟೋ ಹೆಚ್ಚಾಗಿ ಬೇಟೆಯಾಡುತ್ತಿದ್ದರೆಂಬುದರಲ್ಲಿ ಸಂಶಯವಿಲ್ಲ. ಆದರೆ ಅವರು ಬೇಟೆಯ ಕ್ರಮಗಳನ್ನನುಸರಿಸಿಯೇ ನಡೆಯುತ್ತಿದ್ದರು. ಬೇಟೆ ತಿಳಿದವರೊಬ್ಬರನಾತನನ್ನು ಉಳಿದವರೆಲ್ಲರೂ ಕೇಳುತ್ತಿದ್ದರು. ಅವರು ಮಾಂಸವನ್ನು ಪ್ರೀತಿಸಿ ಬೇಟೆಯಾಡುತ್ತಿದ್ದದ್ದು ಕಡಿಮೆ. ಗುರಿತಪ್ಪದೆ ಗುಂಡು ಹೊಡೆಯಬೇಕೆಂಬ ಕ್ಷತ್ರಿಯರ ಸ್ವಭಾವ ಗುಣಕ್ಕಾಗಿ ಅವರು ಹೆಚ್ಚಾಗಿ ಬೇಟೆಯಾಡುತ್ತಿದ್ದರು. ಆದುದರಿಂದ ಒಬ್ಬನಿಗಿಂತ ಮುಂಚೆ ಒಬ್ಬನು ಜಾತಿಗೆ ಗುಂಡು ಹೊಡಿಯಬೇಕೆಂಬ ಆತುರವು ಅವರಿಗೆ ಇರಲಿಲ್ಲ. ಹೊಡೆದ ಗುಂಡನ್ನು ತಪ್ಪಿಸಬಾರದೆಂಬುದೇ ಆಗಿನವರ ಆಶೆಯಾಗಿತ್ತು. ಈ ಕಾರಣದಿಂದಲೇ ಬೇಟೆಯಲ್ಲಿ ಗುಂಡು ಹೊಡೆದು ತಪ್ಪಿಸಿದವನಿಗೆ ಕಾಲುಗಳ ಮಧ್ಯೆ ಮುಳ್ಳು ಎಳೆಯುವ ಶಿಕ್ಷೆಯ ಪದ್ಧತಿಯನ್ನು ಏರ್ಪಡಿಸಿಕೊಂಡಿದ್ದರು. ಈ ಪದ್ಧತಿಯು ಈಗಲೂ ಕೆಲವು ಕಡೆಗಳಲ್ಲಿ ಜಾರಿಯಲ್ಲಿದೆ. ಆದರೆ ಜಾತಿ ಕಾಣದ್ದಕ್ಕೂ ಜಾತಿಗೆ ಮುಂದಾಗಿ ಗುಂಡು ಹೊಡೆಯದ್ದಕ್ಕೂ ಆಗಿನವರು ಶಿಕ್ಷಿಸುತ್ತಿರಲಿಲ್ಲ. ಆದುದರಿಂದ ಜಾತಿಗೆ ಕಾಣುವಲ್ಲಿಗೆ ಹೋಗಿ ಜಾತಿಗೆ ಮುಂದಾಗಿ ಗುಂಡು ಹೊಡೆದು ಮಾಂಸವನ್ನು ಸಂಪಾದಿಸಬೇಕೆಂಬುದು ಅವರ ಉದ್ದೇಶವಲ್ಲವಾಗಿ ಸ್ಪಷ್ಟವಾಗುತ್ತದೆ. ಆದ ಪ್ರಯುಕ್ತ ಪೂರ್ವದಲ್ಲಿ ಈಗಿರುವ ನವೀನತರದ ತೋಟದ ಕೋವಿಗಳೇ ಮೊದಲಾದವುಗಳು ಇಲ್ಲದಿದ್ದರೂ ಕೂಡ ಬಹಳ ಒಳ್ಳೇ ಗುರಿಕಾರರು ಇದ್ದರು. ಕೈಕಿರಿ ಕೋವಿ, ಕಲ್ಲುಕೋವಿ ಇವೇ ನೋಡಲಾದ ಭಾರವಾದ ಕೋವಿಗಳನ್ನು ಉಪಯೋಗಿಸುತ್ತಿದ್ದರೂ ಆಗಿನ ಕಾಲದಲ್ಲಿ ಹೊಡೆದ ಗುಂಡು ತಪ್ಪಿಸುವದೇ ಬಹಳ ಅಪರೂಪವಾಗಿತ್ತು. ಬೇಟೆಯಲ್ಲಿ ಒಬ್ಬ ಗುತ್ತುಗಾರನನ್ನು ನೇಮಿಸಿಕೊಂಡು ಅವನ ಆಜ್ಞೆಯಂತೆ ಎಲ್ಲರೂ ನಡೆಯುತ್ತಿದ್ದರು. ಮಿಲಿಟರಿಯಂತೆಯೇ ಬೇಟೆಯಲ್ಲಿಯೂ ಗುತ್ತುಗಾರನಿಗೆ ವಿಧೇಯರಾಗಿ ನಿಯಮಕ್ಕನುಸಾರವಾಗಿ ನಡೆಯುತ್ತಿದ್ದರು.

ಈಗಿನವರಾದರೋ ಬೇಟೆಯಲ್ಲಿ ಪ್ರತಿಯೊಬ್ಬನೂ ಗುತ್ತುಗಾರನೇ. ಒಬ್ಬನಮಾತು ಇನ್ನೊಬ್ಬನು ಕೇಳುವಂತಿಲ್ಲ. ... ಜಾತಿಗಳು ಪಾಡಿತವಾಗಿ ಬರುವ ಕಡವುಗಳಲ್ಲಿಯೇ ನಿಲ್ಲ ... ಪ್ರಯತ್ನಿಸುವರು. ಇಂಥಾ ಸ್ಥಳಗಳಲ್ಲಿ ನಿಲ್ಲಲು ತಾನು ಮುಂದೆ ತಾನು ಮುಂದೆ ಎಂದು ಕಲಹಗಳುಂಟಾಗುವುದೂ ಉಂಟು. ಜಾತಿಯು ತನ್ನ ಬಳಿಗಾಗಿ ಬಾರದಿದ್ದರೂ ದೂರ ಎಂದಲೇ ಗುಂಡು ಹಾರಿಸುವರು. ಗುಂಡು ಬೀಳುವುದಕ್ಕೂ ಲೆಕ್ಕವಿಲ್ಲ ಗುಂಡು ತಪ್ಪುವದಕ್ಕೂ ಲೆಕ್ಕವಿಲ್ಲ. ಇದನ್ನು ಕೇಳುವವರೇ ಇಲ್ಲ. ಜಾತಿಯು ಅನೇಕ ಗುಂಡುಗಳಾದನಂತರ ಸತ್ತುಬಿದ್ದರೆ ತನ್ನ ಗುಂಡು ಮೊದಲೆಂದು ವಾದಿಸುವರು ... ಮೂಲಿಸಿ ಮರ್ಯಾದೆ ಸಿಕ್ಕಬೇಕೆಂದು ವಾದಿಸುವರಲ್ಲದೆ ... ಒಟ್ಟಾರೆ ನೋಡಿದರೆ ಈಗಿನವರು ಬೇಟೆಯಾಡುವುದು ಒಳ್ಳೇ ಮಾಂಸದ ಆಶೆಯಿಂದಲೇ ಹೊರತು ಬೇಟೆಯ ಪ್ರೀತಿಗಲ್ಲವೆಂದು ಕಂಡುಬರುತ್ತದೆ. ಹೀಗಾದುದರಿಂದ ಈ ಕೋವಿಗಳಿಂದ ಅನಾಹುತಗಳು ದಿನೇ ದಿನೇ ಹೆಚ್ಚುತ್ತಿರುವುದೆಂಬುದಕ್ಕೆ ಸಂದೇಹವಿಲ್ಲ. ಇದನ್ನು ನಿವಾರಿಸಲು ನಮ್ಮ ಹಿರಿಯರಂತೆ ಬೇಟೆಕ್ರಮಗಳನ್ನನುಸರಿಸಿ ನಡೆಯುವುದೊಂದೇ ಸರಿಯಾದ ದಾರಿಯಾಗಿ ತೋರುತ್ತದೆ. ಬೇಟೆಗಾರರು ಸ್ವಾದರೂ ಬೇಕೆಂದು ಕಾಡುಜಾತಿಯ ಮಾಂಸಕ್ಕೆ ಅತಿ ಆಶಿಸುವುದು, ಕಾಡುಮೃಗಗಳ ಜೀವಕ್ಕಿಂತ ಮನುಷ್ಯ ಜನ್ಮ ಅಮೂಲ್ಯವಾದ ತನ್ನ ಯಾ ತನ್ನ ಸಹೋದರರ ಪ್ರಾಣಕ್ಕೆ ಹಾನಿಕರವಾದದ್ದಾಗಿ ಬರುತ್ತದೆ.

ಇನ್ನೊಂದು ತರದ ದುರ್ಮರಣವು ದೇಶದಲ್ಲಿ ವಾಡಿಕೆಯಾಗುವಂತೆ ಕಾಣುತ್ತದೆ. ಗಂಡಸರು ಕೋವಿಯಿಂದಾಯಿಗೆ ತುಕಡ್ಡಾಗುತ್ತಿರುವಹಾಗೆ ಹೆಂಗಸರು ಕರ್ಮ ಭಾವಿಗಳಿಗೆ ಬಿದ್ದು ಪ್ರಾಣಕಳಕೊಳ್ಳುತ್ತಿರುವುದು ಈಗಿನ ಒಂದು ತರದ ವ್ಯಾಧಿಯಂತೆ ವ್ಯಾಪಿಸುತ್ತಿದೆ. ಈ ತರದ ಪ್ರಾಣತ್ಯಾಗಕ್ಕೆ ಹಲವು ಕಾರಣಗಳಿರಬಹುದು. ಅವುಗಳನ್ನೆಲ್ಲಾ ಇಲ್ಲಿ ವಿವರಿಸುವ ಅವಶ್ಯವಿಲ್ಲ. ಆದರೂ ಒಂದರದನ್ನು ಹೇಳದೆ ಕಳೆಯದು. ಸಂಸಾರದಲ್ಲಿ ದಂಪತಿಗಳಿಗೆ ಇರಬೇಕಾದ ಅನ್ಯೋನ್ಯ ಪ್ರೀತಿ ಭಾವವು ಕಡಿಮೆಯಾಗಿ ಅದರ ಬದಲು ಕಲಹಗಳು ಹೆಚ್ಚುತ್ತಿರುವುದೇ ಇಂಥಾ ಮರಣಗಳ ಮುಖ್ಯಕಾರಣವೆಂದು ಹೇಳಬಹುದು. ಅಲ್ಲದೆ ಆತ್ಮಹತ್ಯಮಾಡಿಕೊಳ್ಳುವುದು ಬೇರೊಬ್ಬನ ಪ್ರಾಣ ತೆಗೆಯುವಷ್ಟೇ ಮಹಾ ಪಾಪವೆಂಬುದನ್ನು ಜನರು ಅರಿತುಕೊಳ್ಳದಿರುವುದು ಇನ್ನೊಂದು ಕಾರಣವಾಗಿದೆ. ಮನುಷ್ಯನ ಜನ್ಮದ ಉದ್ದೇಶವೇನೆಂಬುದನ್ನು ತಿಳಿಸಿಕೊಡುವ ಮತವನ್ನು ಜನರು ಮರೆಯುತ್ತಾ ಬರುತ್ತಿರುವದರಿಂದ ಈಗಿನ ಸ್ಥಿತಿಯು ಹೀಗೆ ವಿಪರೀತವಾಗುತ್ತಿರುವುದಾಗಿದೆ. ಪ್ರತಿಯೊಂದು ಮತವೂ ಆತ್ಮಹತ್ಯವನ್ನು ನಿಂದಿಸುತ್ತದೆ. ಯಾವನೇ ಆಗಲಿ ಅವನು ಹುಟ್ಟಿಬೆಳೆದ ಅಥವಾ ಅವನಿಗೆ ನಿಜವೆಂದು ಕಂಡು ಬರುವ ಮತದ ತತ್ವಗಳಿಗನುಗುಣವಾಗಿ ನಡೆಯುತ್ತಾ ಬಂದರೆ ಸಂಸಾರದಲ್ಲಿ ಪ್ರೀತಿಭಾವವು ಹುಟ್ಟಿ ಈಗ ಉಂಟಾಗುತ್ತಿರುವ ಅನರ್ಥಗಳು ಇಲ್ಲದಾಗುವವು.

ದೇಶದ ಈಗಿನ ಕ್ಷೀಣಗತಿಯು ಜನರಲ್ಲಿ ದೈವಭಕ್ತಿ, ಮತ್ತು ಮತಶಕ್ತಿಯು ಕಡಿಮೆಯಾಗಿರುವದರಿಂದಲೇ ಉಂಟಾಗಿದೆಯೆಂದು ದೃಢವಾಗಿ ಹೇಳುತ್ತೇವೆ. ಮನುಷ್ಯ ವರ್ಗವು ಯಾವ ವಿಚಾರದಲ್ಲಾದರೂ ಮುಂದರಿಯಬೇಕಾದರೆ ದೈವಭಕ್ತಿಯನ್ನು ಗಳಿಸದೆ ಹೋದರೆ ಸಾಧ್ಯವಿಲ್ಲವೆಂದು ಎಷ್ಟು ಹೇಳಿದರೂ ಸಾಲದು. ಇದನ್ನು ಚೆನ್ನಾಗಿ ಯೋಚನೆಯಲ್ಲಿಟ್ಟುಕೊಂಡು ಜನಸಮುದಾಯವು ಮತದ ಕಡೆಗೆ ತಿರುಗುವರಾಗಿ ನಂಬುತ್ತೇವೆ.

ಸ್ವಾಮಿ ಶಂಕರಾನಂದಜೀಯವರ ಭಾಷಣ.

(ಕಳೆದ ತಾರೀಖು 19ರಲ್ಲು ಮಡಿಕೇರಿ ಹೈಸ್ಕೂಲ್ ಹಾಲಿನಲ್ಲಿ ಕದ್ರೀಮಠದ ಸ್ವಾಮಿ ಶಂಕರಾನಂದರವರು "ಹಿಂದೂ ಮಹಾಸಭಾ" ದ ವಿಷಯ ಭಾಷಣ ಮಾಡಿದರು. ಈ ಭಾಷಣದ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.)

ಈ ನಮ್ಮ ಹಿಂದೂ ದೇಶದಲ್ಲಿ ಮತ ವಿಚಾರವು ಇಷ್ಟು ಹಿಂದೆ ಬೀಳಲು ಕಾರಣವೇನೆಂದು ವಿಚಾರಿಸಿದರೆ ಇದು ಹಿಂದೂ ಮಕ್ಕಳ ತಾಯಿ ತಂದೆಯರಿಂದಲೇ ಉದ್ಭವಿಸಿದ್ದಾಗಿದೆ ಎಂದು ಹೇಳಬಹುದು.

... ಅವರ ತಾಯಿ ... ಎಲ್ಲಾ ವಿದ್ಯೆಗಳನ್ನೂ ಕಲಿಯಬೇಕಾಗಿರುವುದು. ಆದರೆ, ಈಗಿನ ಹಿಂದೂ ತಾಯಿ ತಂದೆಗಳು ಪಾಶ್ಚಿಮಾತ್ಯ ಪದ್ಧತಿಗೆ ಒಳಪಟ್ಟಿರುವವರಾದುದರಿಂದ ತಮ್ಮ ಚಿಕ್ಕ ಮಕ್ಕಳಿಗೆ ಹಿಂದೂ ಧರ್ಮದಂತೆ ದೇವರ ಸ್ಮರಣೆ, ... ದೇವಭಕ್ತರ ಕಥೆ ಪುರಾಣಗಳನ್ನೂ ತಿಳಿಯುವಂತೆ ಹೇಳಿಕೊಡದೆ ಎಲ್ಲಾ ... ಶಾಲೆಯ ಉಪಾಧ್ಯಾಯರ ... ಕಲಿಸಿಕೊಡುವರು. (ಆದರೆ ಮಹಮ್ಮದೀಯರ ಮಕ್ಕಳನ್ನಾಗಲೀ ಕ್ರೈಸ್ತರ ಮಕ್ಕಳನ್ನಾಗಲೀ ಶಾಲೆಯ ವಿದ್ಯೆಕ್ಕೆ ಬಿಡುವ ಮೊದಲೇ, ಕೊರಾನನ್ನೂ ಬೈಬಲನ್ನೂ ಅವರವರ ಮತ ಸಂಬಂಧವಾದ ಪ್ರಾರ್ಥನೆಗಳನ್ನೂ ಬೆಳಿಗ್ಗೆ ಸಾಯಂಕಾಲವೂ ಕಲಿಸುತ್ತಲೇ ಇರುವರು. ನಮ್ಮ ಹಿಂದೂ ಮಕ್ಕಳಿಗೆ ಶಾಲೆಯ ಉಪಾಧ್ಯಾಯರಾದರೂ ಬೆಳಿಗ್ಗೆ ಸಾಯಂಕಾಲವೂ ಹಿಂದೂ ಧರ್ಮದಂತೆ ಸಂಧ್ಯಾವಂದನೆಗಳೇ ಮುಂತಾದ ಯಾವ ನಿತ್ಯ ಕರ್ಮಗಳನ್ನೂ ಕಲಿಸದೆ, ಅವರ ಕರಿಕಲಂ ಪ್ರಕಾರ ಪಾಠ ಹೇಳುವರು. ಅಂಥಾ ಪಾಠಗಳನ್ನು ಆ ಬಡ ಸಣ್ಣ ಮಕ್ಕಳು ಚೆನ್ನಾಗಿ ಕಲಿತುಕೊಂಡರೆ ಜಯಿತು, ಇಲ್ಲವಾದರೆ ಯಾಕೆ ಕಲಿಯಲಿಲ್ಲವೆಂಬ ಪ್ರಶ್ನೆಯೊಂದು ಕೂಡಲೇ ಹುಟ್ಟುತ್ತೆ. ಆಗ ಮಡುಗನು ತನ್ನ ಗಳಿಯರೊಂದಿಗೆ ಆಡುತ್ತಾ ಕಾಲ ಕಳೆದುದರಿಂದ ಪಾಠ ಕಲಿಯಲಿಲ್ಲವೆಂದು ದೀನ ಸ್ವರದಿಂದ ನಿಜವನ್ನು ಉಸುರಿದ ನಂತರ ಕೂಡಲೇ ಶಿಕ್ಷೆಯಾಗುತ್ತೆ. ಅಂಥಾ ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ... ಸುತ್ತಾ, ತನಗೆ ಮನೆಯಲ್ಲಿ ತಾಯಿ ತಂದೆಗಳು ಬೇರೆ ಕೆಲಸ ಮಾಡಲು ಹೇಳಿದ್ದರು, ಎಂತಾಗಲೀ, ಇಲ್ಲವೇ, ತಲೆ ನೋವು ಜ್ವರ ಮನ್ನಾ ... ಯಾಗಿ ತ್ತೆಂದಾಗಲೀ ಪೊಳ್ಳು ನೆಪವನ್ನು ಹೇಳಿದರೆ ಆ ದಿನ ಶಿಕ್ಷೆಯು ಬಾಕಿಯಾಗುವುದು. ಇದರಿಂದ ಹುಡುಗನು ಸುಳ್ಳು ಹೇಳಿದರೆ ಕ್ಷಮೆಯುಂಟೆಂದೂ, ನಿಜಕ್ಕೆ ಶಿಕ್ಷೆಯಾಗುವುದೆಂದೂ ತಿಳಿದು ಮುಂದಕ್ಕೆ ಸುಳ್ಳನ್ನು ಗುರು ಮಂತ್ರದಂತೆ ಅಭ್ಯಸಿಸತೊಡಗುವನು. ಇದರಿಂದ ತಂದೆ ತಾಯಿಯರಿಂದಿಯರು ಮಕ್ಕಳನ್ನು ಶಾಲೆಗೆ ಕಳುಹಿಸಿ ಉಪಾಧ್ಯಾಯರ ಮೂಲಕ ಪ್ರಾರಂಭದಲ್ಲೇ ಸುಳ್ಳಿನಿಂದ ಪಾರಂಗತರನ್ನಾಗಿ ಮಾಡಿಕೊಳ್ಳುವರು.

ಪೂರ್ವಕಾಲದ ವಿದ್ಯಾರ್ಥಿಗಳು ಗುರುಕುಲವಾಸದಲ್ಲಿ ಒಬ್ಬ ಗುರುವಿನ ಪತ್ರದಲ್ಲೇ ಇದ್ದು ಅಲ್ಲಿಯೂ ಶಿಷ್ಯವರ್ಗದವರೊಂದಿಗೆ ಭಕ್ತಿ ವಿಶ್ವಾಸಗಳಿಂದ ಕೂಡಿ ವಿದ್ಯೆಗಳೆಲ್ಲವನ್ನೂ ಕಲಿತುಕೊಳ್ಳುತ್ತಿದ್ದ ಕಾರಣ ಇಂಥಾ ಸುಳ್ಳು ಕಲಿಯಲು ಅವರಿಗೆ ಅವಕಾಶವಾಗುತ್ತಿರಲಿಲ್ಲ. ಮತ್ತು ಗುರುವಿನಾಶ್ರಮದಲ್ಲಿ ತನ್ನ ಮನೆಯಂತೆಯೇ ವಾಸಿಸುತ್ತಾ ವಿದ್ಯೆ ಕಲಿಯುತ್ತಿದ್ದುದರಿಂದ ಆಗಿನ ಶಿಷ್ಯವರ್ಗದವರಿಗೆ ಗುರುವಿನ ಮೇಲೆ ಪ್ರೇಮವೂ ಭಕ್ತಿ ವಿಶ್ವಾಸಗಳೂ ಆಗುತ್ತಿದ್ದವಲ್ಲದೆ, ಸಂಗಡಿಗರೊಂದಿಗೆ ಭ್ರಾತೃಭಾವವೂ ನೆಲೆಯಾಗಿ ನಿಲ್ಲುತಿತ್ತು. ಗುರುಕುಲವಾಸದಲ್ಲಿಯೇ ಅನೇಕವರ್ಷಗಳ ವರೆಗೂ ಇದ್ದು ಬ್ರಹ್ಮಚರ್ಯವನ್ನು ಕೈಕೊಂಡು, ಜ್ಞಾನಶಕ್ತಿಯುಳ್ಳವರಾಗಿಯೂ, ದೃಢಕಾಯರಾಗಿಯೂ ಇರುತ್ತಿದ್ದರು. ಮತ್ತು ಆಗಿನವರಿಗೆ ವರ್ಣಾಶ್ರಮ ಧರ್ಮದಲ್ಲಿ ಆಸಕ್ತಿ ಹೆಚ್ಚು. ಜಾತಿಭೇದವೇನೆಂಬುವನ್ನೇ ತಿಳಿದಿರಲಿಲ್ಲ. ವರ್ಣಾಶ್ರಮವೆಂದರೆ ನಾಲ್ಕು:—(1) ಬ್ರಹ್ಮಚರ್ಯ, (2) ಗೃಹಸ್ಥ, (3) ವಾನಪ್ರಸ್ಥ, (4) ಸನ್ಯಾಸ. ಇವುಗಳಲ್ಲಿ ಒಂದನೇ ಆಶ್ರಮದಲ್ಲಿ ಬಾಲಕನು ಗುರುಕುಲವಾಸಕ್ಕೆ ತೊಡಗಿ, 25 ವರ್ಷಗಳ ವರೆಗೂ ಬ್ರಹ್ಮಚರ್ಯವನ್ನು ಕೈಕೊಂಡನಂತರ ಇಷ್ಟವಾದರೆ ಗೃಹಸ್ಥಾಶ್ರಮಕ್ಕೆ ಪ್ರವೇಶಿಸಿ 50 ವಯಸ್ಸಿನವರೆಗೂ, ಇದ್ದು ಗೃಹಸ್ಥಧರ್ಮವನ್ನು ತನ್ನ ಮಗನಿಗೆ ವಹಿಸಿ ತನ್ನ ಪತ್ನಿಯೊಡನೆ ವಾನಪ್ರಸ್ಥಾಶ್ರಮಕ್ಕೆ (ಕಾಡಿಗೆ) ತೆರಳಿ, 75 ವಯಸ್ಸಿನವರೆಗೂ ದೇವರ ಸ್ಮರಣೆಯಲ್ಲಿ ಉಪಾಸನೆಯಲ್ಲಿಯೂ ಮತ್ತು ಯೋಗಾಭ್ಯಾಸದಲ್ಲಿಯೂ ಇದ್ದು ಆ ಮೇಲೆ ಸನ್ಯಾಸಾಶ್ರಮವನ್ನು ಸ್ವೀಕರಿಸುತ್ತಿದ್ದನು.

ಈಗಿನವರು ಶಾಲೆಯ ವಿದ್ಯಾರ್ಜನ ಮಾಡಿ, ಬ್ರಹ್ಮಚರ್ಯವೇನೆಂದೇ ತಿಳಿದುಕೊಳ್ಳದೆ, ಬಾಲ್ಯವಿವಾಹ, ಅಪೇಯಪಾನ, ಅಭಕ್ಷ್ಯಭೋಜ್ಯ ಮುಂತಾದ ದುರ್ಗುಣಗಳಿಂದ ಶಕ್ತಿಹೀನರಾಗಿ, ನಮ್ಮ ಪೂರ್ವಜರ ಧರ್ಮಗಳೆಲ್ಲವನ್ನೂ ತ್ಯಜಿಸಿ, ಅನ್ಯಧರ್ಮವನ್ನು ವಹಿಸಿ, ಎಷ್ಟೋ ವಯಸ್ಸಾದರೂ ಆಶಾಪಾಶಗಳಿಗೆ ಒಳಗಾಗಿ ಬದ್ಧಜೀವನರಾಗಿ ಮೃತರಾಗುವರು. ಹೀಗಿರುವುದರಿಂದ ತಮ್ಮ ಮಕ್ಕಳಿಗೆ ಸ್ವತಂತ್ರವಿಲ್ಲದೆ ಪ್ರತಿ ಕುಟುಂಬದಲ್ಲಿಯೂ ತಂದೆ ಮಕ್ಕಳಿಗೂ ಅತ್ತೆ ಸೊಸೆಯರಿಗೂ ಜಗಳಾಟವಾಗುತ್ತಿರುವದು ವಾಡಿಕೆಯಾಗಿ ಇದೆ. ಆದುದರಿಂದ ಪೂರ್ವಿಕರಂತೆ ವರ್ಣಾಶ್ರಮಧರ್ಮದಲ್ಲಿ ನಡೆದರೆ ಅವರವರ ಮುಂದಿನಜನ್ಮಕ್ಕೆ ಯೋಗ್ಯ ಕರ್ತವ್ಯ ಮಾಡಿದಂತೆಯೂ ಆಗುವುದಲ್ಲದೆ, ತಮ್ಮ ಮಕ್ಕಳಿಗೆ ಸ್ವಾತಂತ್ರ್ಯವೂ ಸಿಕ್ಕುವುದರಿಂದ ಈಗಿನಹಾಗೆ ತಂದೆತಾಯಿಗಳು ಅವರವರ ದಿನವನ್ನು ಬೇಗನೆ ಕಳೆದುಕೊಂಡು ಹೋಗಬೇಕೆಂದು ಯೋಚಿಸುತ್ತಿರುವುದೂ ನಡೆಯಲ್ಲವನು, ಬ್ರಹ್ಮಚರ್ಯವನ್ನವಲಂಬಿಸದಿರುವುದೆ

ರಿಂದಲೂ, ಬಾಲ್ಯವಿವಾಹದ ಪದ್ಧತಿಗಳಿಂದಲೂ ಈಗಿನ ಜನತೆಯು ಹೆಚ್ಚು ಬಲಹೀನರಾಗಿರುವರಲ್ಲವೆ, ಅಂಥವರಲ್ಲಿ ಹುಟ್ಟುವ ಮಕ್ಕಳು ಮತ್ತಷ್ಟು ಬಲಹೀನರಾಗಿಯೂ ಬುದ್ಧಿಶಕ್ತಿ ಕಡಿಮೆಯುಳ್ಳವರಾಗಿಯೂ ಆಗುವುದರಲ್ಲಿ ಆಶ್ಚರ್ಯವೇನಿರುವುದು ? ಆದುದರಿಂದ ಈಗಿನಕಾಲದಲ್ಲಿ ನಾನು ರಾಜನಾಗಿದ್ದರೆ, ಇಂಥಾ ಬಲಹೀನರಿಗೆ ಮದುವೆಮಾಡಿ ಪುನಃ ಮತ್ತಷ್ಟು ಬಲಹೀನರಾದ ಮಕ್ಕಳನ್ನು ಹುಟ್ಟಿಸದಂತೆ ಕಾನೂನುಗಳನ್ನೇ ಮಾಡುತ್ತಿದ್ದೆನು.

ನಮ್ಮ ಮಕ್ಕಳಿಗ ಶಾಲೆಗಳಲ್ಲಾಗಲೀ ಮನೆಗಳಲ್ಲಾಗಲೀ ವೇದಗಳನ್ನು ಕಲಿಸದಿದ್ದರೆ ಅವರು ತಮ್ಮ ಮತಸೂತ್ರಗಳನ್ನು ತಿಳಿದುಕೊಳ್ಳುವಬಗೆ ಹೇಗೆ? ರಾಮಾಯಣ ಮತ್ತು ಭಾರತಗಳನ್ನು ಓದಿಸುವುದಾಗಲೀ, ತಿಳಿಸುವುದಾಗಲೀ ಇಲ್ಲದಿದ್ದರೆ ಶ್ರೀರಾಮ ಮತ್ತು ಶ್ರೀಕೃಷ್ಣನಂಥ ಮಹಾ ಸತ್ಪುರುಷರೂ, ಸದ್ಗುಣಿಗಳೂ ಮತ್ತು ಮಹಾ ಪರಾಕ್ರಮಿಗಳೂ ಆದ ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿಯುವುದು ಹೇಗಾಗುವದಾಗಿ? ತಂದೆಯ ಅಪ್ಪಣೆಯನ್ನು ಶಿರಸಾವಹಿಸಿ 14 ವರ್ಷ ವನವಾಸಕ್ಕೆ ಹೊರಡುವಾಗ ಕಾಡುಗಳಲ್ಲಿಯೂ ಕಂದರಗಳಲ್ಲಿಯೂ ತಿರುಗಿಸಲು ಮನಸ್ಸಿಲ್ಲದ ಶ್ರೀರಾಮನು ಪ್ರಾಣಸತಿಯಾದ ಸೀತೆಯನ್ನು ಬರಬೇಡವೆಂದು ಎಷ್ಟು ತಡೆದರೂ, ಪತಿಯನ್ನು ಪ್ರಾಣೇಶನೂ, ಸರ್ವಸ್ವವೂ ಆದ ಶ್ರೀರಾಮನು 14 ವರ್ಷ ವನವಾಸದಲ್ಲಿ ಕಷ್ಟಪಡಲು ಹೊರಟಿರುವಾಗ ಪ್ರತಿಯೊಂದು ಕಷ್ಟದಲ್ಲಿ ತಾನೂ ಸಹ ಭಾಗಿಯಾಗುವುದೇ ಉಚಿತವೆಂದೆಣಿಸಿ ಪತಿಯನ್ನು ಹಿಂಬಾಲಿಸಿದ ಸೀತಾದೇವಿಯು ನಮ್ಮ ಹಿಂದೂ ಮಾತೆಯಲ್ಲವೇ ? ಅಂಥಾ ಸೀತೆಯರು ಈಗಿನ ನಮ್ಮ ಸ್ತ್ರೀಯರಲ್ಲಿ ಎಷ್ಟುಮಂದಿ ಇರುವರು? ಒಂದಾದರೂ ದುರ್ಲಭ. ಈಗಿನ ಸ್ತ್ರೀಯರು 14 ವರ್ಷ ಪರ್ಯಂತರ ಗಂಡನನ್ನು ಬಿಟ್ಟಿರಬಹುದು. ಇದಲ್ಲದೆ ಪಿತೃವಾಕ್ಯ ಪರಿಪಾಲನೆಗೋಸ್ಕರ ಶ್ರೀರಾಮನೊಡನೆ ರಾಜ್ಯಸುಖವನ್ನಾಗಲೀ, ಇಲ್ಲವೇ, ಆತನ ಸೌಖ್ಯವನ್ನೂ ಸಹ ನೋಡಬಾರದಂಥ ಮಂತ್ರದ ಮಹತ್ವ ಸಿದ್ಧರೋಕ್ತಿಗಳಿಂದ ಗಂಡನನ್ನು ಬಿಡದೆಂದು ಆ ಶ್ರೀರಾಮನ ಚರಿತ್ರೆಗೆ ಸಂಬಂಧಪಟ್ಟ ... ಇರಲಿ! ಆ ಶ್ರೀರಾಮನಿಗೆ ತಮ್ಮನಾದ ಲಕ್ಷ್ಮಣನು ... ಲ್ಲೆಯು ಉದರದಲ್ಲಿ ಜನಿಸಿದ್ದರೂ, ತಾನೂ ಸಹ ... ಷ್ಟಕ್ಕೆ ಸಹ ಭಾಗಿಯಾದನು. ಅಷ್ಟಲ್ಲದೇ ಭ್ರಾತೃವಾತ್ಸಲ್ಯ ... ರಾವಣನು ಸೀತೆಯನ್ನು ಕದ್ದು ... ತ್ತಿರಲು ದಾರಿಯಲ್ಲಿ ಸೀತೆಯು ತನ್ನ ಆಭರಣಗಳನ್ನು ಬಿಚ್ಚಿ ಒಂದು ಬಟ್ಟೆಯಲ್ಲಿ ಕಟ್ಟಿ ಬಿಸಾಡಿದ್ದಳು. ಅದು ಶ್ರೀರಾಮನಿಗೆ ಸಿಕ್ಕಿದರೂ ಸೀತೆಯ ಅಗಲಿಕೆಯಿಂದ ಶ್ರೀರಾಮನಿಗೆ ... ಷ್ಟ ಇತ್ತಿಲ್ಲವಾದ್ದರಿಂದ ಲಕ್ಷ್ಮಣನಿಗೆ ಗುರ್ತಿಸಲು ಕೊಡಲು ಲಕ್ಷ್ಮಣನು ಸೀತೆಯು ... ಮಂತ್ರವಾದ ಬೇರೆ ಆಭರಣಗಳಲ್ಲದ್ದು ... ಗುರ್ತಿಸಲಾರನೆಂದು ... ತೆಯದೆಂದೇ ಹೇಳಿದನು. ಅಷ್ಟಲ್ಲದೆ ಪರ್ಣಗಳು ಶ್ರೀರಾಮನು ಮತ್ತು ಸೀತೆಯು ... ದಪ್ರೂಜಗಾಗಿ ... ತ್ತೆ. ಆತನ ... ಲಕ್ಷ್ಮಣನಂಥ ... ಇರುವರು ... ಮೂಲ್ಯವಾದ ನಮ್ಮ ಪೂರ್ವಜರ ಸಚ್ಚರಿತ್ರೆಗಳನ್ನು ಈಗಿನ ಮಕ್ಕಳಿಗೆ ಕಲಿಸಿಕೊಡದಿದ್ದರೆ ಅವರು ತಮ್ಮ ನಡತೆಗಳನ್ನು ತಿದ್ದಿಕೊಳ್ಳುತ್ತಾ ಸತ್ಪುರುಷರಾಗುವ ಬಗೆ ಹೇಗೆ? ಆದುದರಿಂದ ರಾಮಾಯಣ ಮತ್ತು ಭಾರತದಂಥ ನಮ್ಮ ಪೂರ್ವಜರ ಸಚ್ಚರಿತ್ರೆಗಳನ್ನು ಕಥೆಗಳಾಗಿ ನಮ್ಮ ಮಕ್ಕಳಿಗೆಯಾದಾಗಲೂ ಸ್ವಲ್ಪ ಸ್ವಲ್ಪವಾಗಿ ಚಿಕ್ಕಂದಿನಿಂದಲೇ ಕಲಿಸುತ್ತಾ ಅವರನ್ನು ಸಚ್ಚರಿತ್ರರನ್ನಾಗಿ ತಿದ್ದುಕೊಳ್ಳುವದು ಒಳ್ಳೆಯದಾದಿ

ಈಗಿನ ನಾಗರೀಕರೆನ್ನಿಸಿಕೊಂಡವರು ಮಲಗಿದಲ್ಲಿಂದ ಏಳಲಿಕ್ಕೇ ಗಂಟೆ 8 ಆಗುವದು. ಅವರೆಲ್ಲ ಎದ್ದ ಕೂಡಲೇ ಕಾಫಿ, ಟೀ, ಬೀಡಿ ಸಿಗರೇಟುಗಳನ್ನು ಸೇವಿಸುತ್ತಾ, ಸಿಗರೇಟು ಗಳನ್ನೆಲ್ಲಾ ಮುಗಿಸುತ್ತಿ, ಬಟ್ಟೆ, ತಲೆ, ಕ್ರಾಪ್, ಸ್ನಾನ ಮುಂತಾದವುಗಳಲ್ಲಾ ಕಾಲರ್, ಟೈ, ಹ್ಯಾಟ್, ಬೂಟು, ವಾಕಿಂಗ್ ಸ್ಟಿಕ್, ಕ್ಲಬ್ ವಗ್ಯರೆಗಳಲ್ಲದರ ಆ ... ಮಗನ ... ಯುವ ವಿಷ್ಯಯವದು? ತಂದೆಯಂತೆ ಮಗನಲ್ಲವೇ? ಈ ಮೇಲಿನ ಅನಾವಶ್ಯವಾದ ಶೋಕಿಗಳನ್ನೆಲ್ಲಾ ಬಿಟ್ಟು ನಮ್ಮ ಹಿಂದೂ ಪದ್ಧತಿಯಂತೆ ಸೂರ್ಯೋದಯಕ್ಕೆ ಮೊದಲು ಎದ್ದು ಸ್ನಾನಮಾಡಿ ಪೂರ್ವಾಭಿಮುಖವಾಗಿ ಕೂತು ಏಕಮನಸ್ಸಿನಿಂದ ದೇವರನ್ನು ಧ್ಯಾನಿಸಬೇಕು. ಬೆಳಗಿನ ಸೂರ್ಯನ ಕಿರಣವು ಶರೀರಕ್ಕೆ ತಾಗಿದರೆ ಒಂದು ಬಗೆಯ ಉತ್ತಮ ತೇಜಸ್ಸು ಉಂಟಾಗುತ್ತೆ. ಹಾಗೆಯೇ ಸಾಯಂ ಸೂರ್ಯನ ಕಿರಣದಲ್ಲಿ ತೇಜಸ್ಸು ಇದೆ. ಸಾಯಂಕಾಲ ಪಶ್ಚಿಮಾಭಿಮುಖವಾಗಿ ಕೂತು ದೇವರನ್ನು ಧ್ಯಾನಿಸಬೇಕು. ಈಗಿನವರಂತೆ ಬಿಸಿನೀರು ಸ್ನಾನವೂ ಬೇಕುಬೇಕಾದಷ್ಟು ಪದಾರ್ಥಗಳೂ ನಮ್ಮ ಪೂರ್ವೀಕರು ಇಟ್ಟುಕೊಳ್ಳುತ್ತಿರಲಿಲ್ಲ. ಅವರು ಅವರ ಜೀವನವನ್ನು ಪರಾಶ್ರಯವಿಲ್ಲದೆ ಸುಲಭೋಪಾಯವಾಗಿ ನಡೆಸಿಕೊಳ್ಳುತ್ತಿದ್ದು ಮುಂದಾಲೋಚನೆಯಿಂದ ಪೆಟ್ಟಾದ ಕೆಲಸಗಳನ್ನು ಮಾಡುವವರಾಗಿದ್ದರು. ಈಗಿನವರಂತೆ ಸ್ವಲ್ಪ ಆಲೋಚನೆಯಿಂದ ಹೆಚ್ಚು ತೊಂದರೆಗಳಿಂದ ಬೇಯಿಸುತ್ತಿರಲಿಲ್ಲ.

ಹಿಂದುಗಳು ಮುಖ್ಯವಾಗಿ ಅನಾವರ ಅನುಕೂಲಗಳನ್ನು ನೋಡಿಕೊಳ್ಳುತ್ತಿರುವರಲ್ಲದೆ ಹಿಂದೆ ಬಿದ್ದಿರುವ ತಮ್ಮ ಸಹೋದರ ವರ್ಗದವರ ಅನುಕೂಲಾಭಿವೃದ್ಧಿಯನ್ನು ಎಂದೂ ಕೋರುವದಿಲ್ಲ. ಐಶ್ವರ್ಯವಂತರೆನ್ನುವವರು ನಾಟಕಗಳು, ಮೋಟಾರು ಮುಂತಾದವುಗಳನ್ನು ಕೊಂಡುಕೊಳ್ಳುವದರಲ್ಲಿಯೂ ತಮ್ಮ ಹೆಂಡರು ಮಕ್ಕಳಿಗೆ ಒಡವೆ ವಸ್ತ್ರ ಒದಗಿಸಿಕೊಳ್ಳುವದರಲ್ಲಿಯೂ ಮತ್ತು ನಾನಾ ನಮೂನೆಯ ಪೋಷಾಕಿನ ಉಡುಪುಗಳನ್ನೂ ತಯಾರಿಸಿ ಬಿಟ್ಟುಕೊಳ್ಳುವದರಲ್ಲಿಯೂ ತಮ್ಮ ಹಣ ವ್ಯಯಮಾಡುತ್ತಿರುವರಲ್ಲದೆ ದಿನಕ್ಕೊಂದು ಹೊತ್ತಿನ ಊಟವೂ ಸಹ ಇಲ್ಲದೆ ಗೋಳಿಟ್ಟು ಹೊರಳಾಡುತ್ತಿರುವ ಬಡ ಸಹೋದರ ವರ್ಗದವರಿಗೆ ತಂತಮ್ಮ ಕೈಲಾದಷ್ಟು ಸಹಾಯಮಾಡಿ ಅವರನ್ನು ಮುಂದಕ್ಕೆ ತರುವ ಯೋಚನೆಯಲ್ಲಿಯೂ ಇರುವದಿಲ್ಲ. ಅಂಥಾವರನ್ನು ಐಶ್ವರ್ಯವಂತರೆಂದು ಹೇಳಲಿಕ್ಕೆ ನನಗೆ ನಾಚಿಕೆಯಾಗುತ್ತದೆ. ಬಡ ಸಹೋದರರನ್ನು ಉದ್ಧಾರಮಾಡುವವರನ್ನು ಐಶ್ವರ್ಯವಂತರನ್ನ ಬೇಕೇ ... ಬಡವರನ್ನು ಹಿಂದಿ ತಮ್ಮ ಜೀವನವನ್ನು ಸಾಗಿಸುತ್ತಿರುವವರು ಎಂದಿಗೂ ಐಶ್ವರ್ಯವಂತರಲ್ಲ. ಹಾಗೆಯೇ ಪಶ್ಚಿಮ ಕಾಲದಲ್ಲಿ ಬಲಹೀನರಾದವರಿಗೆ ಸಹಾಯಮಾಡಿ ರಕ್ಷಿಸುವವರನ್ನು ಬಲವಂತರೆಂತಲೂ, ವಿದ್ಯಾಹೀನರನ್ನು ವಿದ್ಯಾದಾನದಿಂದ ಉತ್ತಮಸ್ಥಿತಿಗೇರಿಸಿದವರನ್ನು ವಿದ್ಯಾವಂತರೆಂತಲೂ ಕರೆಯುತ್ತಾರೆ. ಉತ್ತಮ ಸ್ಥಿತಿಯಲ್ಲಿರುವವರು ಕೆಳಗಿನ ತರಗತಿಯ ಜನರಿಗೆ ಸಹಾಯಮಾಡಿ ಅವರನ್ನೂ ಉತ್ತಮ ತರಗತಿಗೇರಿಸಿ ತಮ್ಮ ಸಮಾನರಾಗಿ ಕಾಣುತ್ತಿರಬೇಕೆಂಬುದನ್ನೇ ನಮ್ಮ ಹಿಂದೂ ಧರ್ಮವು ಸಾರಿ ಹೇಳುತ್ತಿರವುದಾಗಿದೆ. ಅಲ್ಲದೆ ನಾನೂ ಒಬ್ಬ ಮನುಷ್ಯನಾಗಿ ಹುಟ್ಟಿ ಬೇರೆ ಮನುಷ್ಯರಂತೆಯೇ ತನಗೂ ಸಹ ಸಕಲಾವಯವಗಳೂ ಇದ್ದು ಸರ್ವ ಕೆಲಸಗಳನ್ನೂ ಮಾಡುವ ಸಾಮರ್ಥ್ಯವೂ ಸ್ವತಂತ್ರವೂ ಇರುವುದರಿಂದ ನಾನೇಕ ಇನ್ನೊಬ್ಬನ ಅಧೀನನಾಗಿರಬೇಕು ? ಎಂಬುದನ್ನು ನಮ್ಮ ಹಿಂದೂ ಮತವು ಬತ್ತಿ ಹೇಳುತ್ತಿದೆ

ಹಿಂದೂ ದೇಶವು ನಾಗರೀಕತೆಯಲ್ಲಿ ಇಷ್ಟು ಹಿಂದೆ ಬೀಳಲು ಇಲ್ಲಿರುವ ಜಾತಿಭೇದಗಳೇ ಇನ್ನೊಂದು ಮುಖ್ಯ ಕಾರಣವಾಗಿದೆ. ಪೂರ್ವಕಾಲದಲ್ಲಿ ಜಾತಿಭೇದಗಳೇನೂ ಇಲ್ಲದೆ ಎಲ್ಲರೂ ಒಂದಾಗಿಯೇ ಮನೆತನ ತಿಳಿದುಕೊಂಡಿದ್ದರು. ಅವರು, ಈ ಹಿಂದೂಗಳಲ್ಲಿ ವೇದ ಶಾಸ್ತ್ರಗಳನ್ನು ಪಠನಮಾಡುತ್ತಾ ದೇವರ ಸ್ಮರಣೆಮಾಡುತಾ ದೇವರ ಭಕ್ತಿಯಲ್ಲಿಯೂ, ಸೇವೆಯಲ್ಲಿಯೂ ಕಾಲಕಳೆಯುತ್ತಿದ್ದವರು ಬ್ರಾಹ್ಮಣರೆಂತಲೂ, ಒಳ್ಳೆ ಶಕ್ತಿಯುಳ್ಳವರೂ, ದೃಢಕಾಯರೂ ಆಗಿ ... ರಣ ಪ್ರಯೋಗದಲ್ಲಿ ನಿಪುಣರಾದವರು ಕ್ಷತ್ರಿಯರೆಂತಲೂ, ವ್ಯಾಪಾರ, ವ್ಯವಸಾಯ ಮುಂತಾದವುಗಳಲ್ಲಿ ನಿಪುಣರಾದವರು ವೈಶ್ಯರೆಂತಲೂ, ಯಾವ ವಿದ್ಯೆಯೂ ಗೊತ್ತಿಲ್ಲದೆ ದಡ್ಡರಾದವರನ್ನು ಶೂದ್ರರೆಂತಲೂ ಹಿಂದೂಗಳಲ್ಲಿ ನಾಲ್ಕು ವರ್ಗಗಳನ್ನು ಮಾಡಿದ್ದರೇ ವಿನಹ ಬೇರೆ ಬೇರೆ ಜಾತಿ ಬಗೆಗಳಿಂದ ವಿ... ... ಶೂದ್ರನೆಂಬುವನು ... ಪ್ರಯತ್ನದಿಂದ ಬ್ರಾಹ್ಮಣನಾಗುತ್ತಿದ್ದನು. ಹಾಗೆಯೇ ಕ್ಷತ್ರಿಯ, ವೈಶ್ಯ ಮತ್ತು ಬ್ರಾಹ್ಮಣನಾಗುವುದು ... ಅವರವರ ... ಶೂದ್ರರಾಗುತ್ತಿದ್ದರು. ಶೂದ್ರ ... ಕಲಿಸುವುದಕ್ಕಾಗಿರುತ್ತಿದ್ದು ... ಈ ನಾಲ್ಕು ವರ್ಗದವರೂ ಪರಸ್ಪರ ಹೆಣ್ಣು ಕೊಡುವದು, ತರುವದೂ ಇತ್ತು. ಮತ್ತು ಎಲ್ಲರೂ ಸಹ ಪಂಕ್ತಿ ಭೋಜನಮಾಡುತ್ತಿದ್ದರು. ಈಚೀಚೆಗೆ ಅಂಥಾವುಗಳೆಲ್ಲಾ ದುರಾದೃಷ್ಟದಿಂದ ಮರೆಯುತ್ತಾ ಬಂದು ಬೇರೆಬೇರೆ ಜಾತಿಜನಗಳೆಂದು ಭಾವಿಸುತ್ತಾ ಈಗ ಇಡೀ ಹಿಂದುಸ್ಥಾನವೇ ಜಾತಿಭೇದಗಳಲ್ಲಿ ಮುಳುಗಿಹೋಗಿದೆ. ಹೀಗಾಗುತ್ತಾ ಬರಲು ಹಿಂದೂ ಮತವಿಚಾರಗಳಲ್ಲಿ ಹಿಂದೂಗಳು ಉದಾಸೀನರಾದುದೇ ಕಾರಣವಾಗಿದೆ. ಆದುದರಿಂದ ಇನ್ನಾದರೂ ಹಿಂದೂ ಸಹೋದರರಾದ ನೀವೆಲ್ಲರೂ ಎಚ್ಚತ್ತು ಮತೋದ್ಧಾರಕ್ಕೆ ಶ್ರಮಿಸಬೇಕೆಂಬುದೇ ನನ್ನ ಆಶೆಯಾಗಿದೆ.

ಕೊಡಗರು ರಾಜಪುತ್ರಾನದಿಂದ ಬಂದ ಕ್ಷತ್ರಿಯರೆಂಬುದನ್ನು ನಾನು ಚರಿತ್ರೆಯಿಂದ ತಿಳಿದಿರುತ್ತೇನೆ. ಸೂರ್ಯ ಮತ್ತು ಚಂದ್ರ ವಂಶಸ್ಥರಾದ ಕ್ಷತ್ರಿಯರು. ಈಗಲೂ ರಜಪೂತರ ನಡತೆಯಲ್ಲಿದ್ದಾರೆ. ಕೊಡಗರು ತಮ್ಮ ಕ್ಷತ್ರಿಯ ಧರ್ಮವನ್ನು ಮರೆತಿರುವರೆಂದು ಬರುವುದಕ್ಕೆ ನನಗೆ ವ್ಯಸನವಾಗುತ್ತಿದೆ. ಇನ್ನು ಮುಂದೆ ದೇವರು ಉಪನಯನ, ಸಂಧ್ಯಾವಂದನ, ಅಗ್ನಿಹೋತ್ರಾದಿ ನಿತ್ಯಕರ್ಮಗಳನ್ನು ಆಚರಿಸುತ್ತಾ ಬರುವರಲ್ಲದೆ, ಈಗಿರುವ ಜಾತಿಭೇದ ಮುಂತಾದವುಗಳನ್ನು ಹೋಗಲಾಡಿಸಲಿಕ್ಕೂ, ಹಿಂದೂ ಮತಬೋಧನೆಗೆ ಸಹಾಯಮಾಡಲಿಕ್ಕೂ ನೀವೆಲ್ಲರೂ ಮುಂದೆ ಕೈಕೊಂಡರೆ ತೀರಿಸಿಕೊಳ್ಳುವಿರೆಂದು ನಾನು ಆಶಿಸುತ್ತೇನೆ.

ಸಹೋದರರೇ, ಈಗ ಕಾಶಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಹಿಂದೂಮಹಾಸಭೆಯ ಶಾಖೆಯೊಂದನ್ನು ಈ ಕೊಡಗಿನಲ್ಲಿಯೂ ನೀವೆಲ್ಲರೂ ಸೇರಿ ಸ್ಥಾಪಿಸಬೇಕಾಗಿದೆ. ಮತ್ತು ಆ ಹಿಂದೂ ಮಹಾಸಭೆಗೆ ಹಿಂದೂಗಳಾದ ನೀವೆಲ್ಲರೂ ಸೇರಿ ಹಿಂದೂ ಮತವಿಚಾರವನ್ನು ಚರ್ಚಿಸಿ ಹಿಂದುಳಿದ ಸಹೋದರವರ್ಗದವರಿಗೆ ತಿಳಿಸಿಕೊಡುತ್ತಾ ಅವರನ್ನು ನಾಗರೀಕರನ್ನಾಗಿ ಮಾಡಬೇಕಾದ ಭಾರವು ನಿಮ್ಮಲ್ಲಿದೆ. ಹೀಗೆ ಸಹೋದರರೆಲ್ಲಾ ಸೇರುತ್ತಾ ಚರ್ಚಿಸುತ್ತಾ ಬರುವುದರಿಂದ ಒಂದು ಭಾಗದಲ್ಲಿ ಸೇರುವ ಹಿಂದೂಗಳಾದ ಸಹೋದರರಲ್ಲಿಯೂ ಐಕ್ಯ ಪ್ರೀತಿಯು ಹೆಚ್ಚುತ್ತಾ ಒಂದು ಕ್ರಮೇಣ ಜಾತಿಭೇದದ ಮಟ್ಟನಾಶವಾಗದಿರಲಾರದು, ಇಂಥಾ ಸಭೆಯು ಬಲವಾಗುತ್ತಾ ಹಿಂದು ಹಿಂದೂಗಳೆಲ್ಲಾ ಒಟ್ಟಾಗಿ ಸೇರುವುದರಿಂದ ಕ್ರಮೇಣ ಸಮಯಬಂದರೆ ಬೇರೆ ವರ್ಗದವರೊಂದಿಗೆ ಸಮಾನತೆ ಕೋರಲೂ ಸಹ ನಮಗೆ ತಾವೇ ಸಹಾಯವಾಗಬೇಕೆಂದಂತಾಗುವುದು. ಆದಕಾರಣ ನೀವೆಲ್ಲರೂ ನಾನಾಕಾರಣವೂ ಇದೆ ತುಂಬಾ ಮುತುವರ್ಜಿಯಿಂದ ಈ ಹಿಂದೂ ಮಹಾಸಭಾ ಸ್ಥಾಪಿತಕ್ಕೆ ಸಾಹಸಪಡಬೇಕೆಂಬದಾಗಿ ಈ ಸಭೆಯನ್ನು ನಾನು ಕೇಳಿಕೊಳ್ಳುತ್ತೇನೆ. ನಿಮ್ಮ ಸಹಾಯಕ್ಕೆ ದೇವರು ಸಹಾಯ ಮಾಡದೆ ಇರಲಾರನು.

ಬೆಳಗಾವಿಯಲ್ಲಿ ಡಿಸೆಂಬರ ತಾ. 26, 27ರಲ್ಲು ನಡೆದ
39ನೆಯ ಭಾರತ ರಾಷ್ಟ್ರೀಯ ಮಹಾ ಸಭೆಯಲ್ಲಿ
ಮಂಜೂರಾದ ನಿರ್ಣಯಗಳು.

1. ದುಃಖಪ್ರದರ್ಶನದ ನಿರ್ಣಯ.

ಈ ಮಹಾಸಭೆಯು ಬಿಯಿಸಮ್ಮಾ, ಸರ್ ಆಶುತೋಷ ಚೌಧುರಿ, ಅಶುತೋಷ ಮುಕರ್ಜೀ, ಶ್ರೀಭೂಪೇಂದ್ರನಾಥ ಬಾಸು, ಡಾ ಸುಬ್ರಮಣ್ಯ ಅಯ್ಯರ್, ಶ್ರೀ ರಾವ ಬಹದ್ದೂರಗಿರಿ, ಶ್ರೀ. ಗೋವಿಂದ ವೆಂಕಟೇಶಯಾಜಿ, ಶ್ರೀ. ವಾಮನರಾವ ಮೊಹರೀರ, ಶ್ರೀ. ಟಿ. ವಿ. ಗೋಪಾಲಸ್ವಾಮಿ ಮುದಲಿಯಾರ್, ಶ್ರೀ. ಸಿ. ವ್ಹಿ. ಪಿ ಶಿವ ಮತ್ತು ದಕ್ಷಿಣಆಫ್ರಿಕದ ಶ್ರೀ. ರುಸ್ತುಮಜಿ ಜೀವನಜಿ, ಶ್ರೀ. ಘೋರಪಡೆ, ಶ್ರೀ ಪಿ ಕೆ ನಾಯುಡು,—ಇವರ ಸ್ಮರಣಾರ್ಥವಾಗಿ ದುಃಖಪ್ರದರ್ಶನಮಾಡುತ್ತದೆ, ಮತ್ತು ದುಃಖಿತರಾದ ಅವರ ಕುಟುಂಬದವರಿಗೆ ತನ್ನ ಸಹಾನುಭೂತಿಯನ್ನು ಆದರಪೂರ್ವಕವಾಗಿ ವ್ಯಕ್ತಗೊಳಿಸುತ್ತದೆ.

2. ರಾಜಿಯ ವ್ಯವಸ್ಥೆಯೂ ನೂಲಿನಕರವೂ.

(ಅ) ಮಹಾತ್ಮ ಗಾಂಧಿಯವರು ಮತ್ತು ಸ್ವರಾಜ್ಯಪಕ್ಷದ ದೇಶಬಂಧು ಚಿತ್ತರಂಜನ ದಾಸ, ಪಂಡಿತಮೋತೀಲಾಲ, ನೆಹರುಗಳೊಳಗೆ ಆದ ಒಪ್ಪಂದವನ್ನು ಈ ಮಹಾಸಭೆಯು ಅನುಮೋದಿಸುತ್ತದೆ.

(ಬ) ಈ ಒಪ್ಪಂದದಿಂದ ಮಹಾಸಭೆಯಲ್ಲಿ ದ್ವಿಪಕ್ಷಗಳೊಳಗೆ ನಿಜವಾದ ಐಕ್ಯವು ಉಂಟಾಗುವದೆಂದೂ, ಮತ್ತು ಇತರ ರಾಜಕೀಯ ಪಕ್ಷಗಳ ಅನುಯಾಯಿಗಳು ಮಹಾಸಭೆಯಲ್ಲು ಸೇರಲು ಅನುಕೂಲವಾಗುವದೆಂದೂ ಈ ಮಹಾ ಸಭೆಯು ಕೋರುತ್ತದೆ. ಹೊಸ ಬರ್ಕೆನ್ಹೆಡನ ಅಥವಾ 1818 ನೆಯ 3ನೆ ರೆಗ್ಯುಲೇಶನ ಪ್ರಕಾರ ಬಂಧಿಸಲ್ಪಟ್ಟ ಸ್ವರಾಜ್ಯಪಕ್ಷದವರನ್ನೂ ಇತರರನ್ನೂ ಈ ಮಹಾಸಭೆಯು ಅಭಿನಂದಿಸುತ್ತದೆ. ಹಿಂದುಸ್ಥಾನದ ಜನರು ತಮ್ಮ ಗೌರವಸ್ವಾತಂತ್ರ್ಯಗಳನ್ನು ಸ್ಥಿರಪಡಿಸಿಕೊಳ್ಳಲು ಸಮರ್ಥರಾಗದಿರುವವರೆಗೆ ಇಂತಹ ಬಂಧನಗಳು ಅನಿವಾರ್ಯವೆಂದೂ, ಇದುವರೆಗೆ ಬಹುಕಾಲ ಮುಂದುವರಿಸಲ್ಪಟ್ಟ ವಿದೇಶಿವಸ್ತ್ರ ಬಹಿಷ್ಕಾರವನ್ನು ಸಾಧಿಸುವದರಿಂದ ದೇಶದ ಪ್ರಕೃತ ಸ್ಥಿತಿಯಲ್ಲಿ ಈ ಸಾಮರ್ಥ್ಯವು ವೃದ್ಧಿಗೊಳ್ಳುವದೆಂದೂ ಈ ಮಹಾ ಸಭೆಯ ಅಭಿಪ್ರಾಯವಾಗುತ್ತದೆ. ಆದುದರಿಂದ ಈ ಸಾರ್ವಜನಿಕ ಉದ್ದೇಶವನ್ನು ಸಾಧಿಸುವದರಲ್ಲಿ ದೇಶದ ಜನರಲ್ಲಿರುವ ಕೈಮಗ್ಗ ನೇಕಾರರ ಸೂಚನೆ ಎಂದು ಕೈನೂಲುವದರ ಪ್ರಚಾರವನ್ನು ಈ ಮಹಾಸಭೆಯ ಸದಸ್ಯತ್ವದ ಯೋಗ್ಯತಾಂಕವಾಗಬೇಕೆಂದು, ಅಂಗೀಕರಿಸಿ ಸ್ತ್ರೀ ಪುರುಷರಾದ ಪ್ರತಿಯೊಬ್ಬರೂ ಇದನ್ನು ಸಾಧಿಸಿ ಸಭೆಯನ್ನು ಸೇರಬೇಕೆಂದು ಈ ಮಹಾಸಭೆಯು ಕೇಳಿಕೊಳ್ಳುತ್ತದೆ

(ಸ) ಪೂರ್ವೋಕ್ತ ನಿರ್ಣಯದಂತರ ಮೇರೆಗೆ ಸ್ತ್ರೀ ಪುರುಷರಾದ ಪ್ರತಿಯೊಬ್ಬರೂ ವಿದೇಶಿ ಬಟ್ಟೆಗಳನ್ನೆಲ್ಲಾ ತ್ಯಜಿಸಿ ಕೈಮಗ್ಗದಲ್ಲಿ ನೈದ ಖಾದಿಯನ್ನೇ ಧರಿಸಬೇಕೆಂದು ಮಹಾ ಸಭೆಯು ಅಪೇಕ್ಷಿಸುತ್ತದೆ.

ಮೇಲಿನ ಉದ್ದೇಶವನ್ನು ಜಯಪ್ರದಗೊಳಿಸುವ ಕಾರ್ಯಕ್ಕಾಗಿ ಜನತೆಯು ಸಭೆಗಳನ್ನು ನಡೆಸಿ ಅವರ ಮನೋಭಿಪ್ರಾಯವನ್ನು ತಿಳಿಸುತ್ತಾ, ಮತ್ತು ಖಾದಿಯನ್ನು ನೇಯ್ದು ಅದನ್ನು ಮಾರುವ ಇವೇ ಮುಂತಾದ ಕೆಲಸಗಳ ಪ್ರಸಾರಕ್ಕೆ ನೆರವಾಗಬೇಕೆಂದು ಮಹಾಸಭೆಯು ಅಪೇಕ್ಷೆ ಇದೆ.

(ಡಿ) ಮಹಾಸಭೆಗೆ ಸಮ್ಬಂಧಿಸಿದ ಹಿಂದುಸ್ಥಾನದ ಸಂಸ್ಥಾನಿಕರು ಶ್ರೀಮಂತ ಜನರು ಮತ್ತು ರಾಜಕೀಯ ಹಾಗು ಇತರ ಸಂಸ್ಥೆಗಳ ಸದಸ್ಯರು, ಮ್ಯುನ್ಸಿಪಾಲಿಟಿಗಳು, ಲೋಕಲ್ ಬೋರ್ಡುಗಳು, ಪಂಚಾಯತಿಗಳು ಮತ್ತು ಇಂಥ ಬೇರೆ ಸಂಸ್ಥೆಗಳು ಖಾದಿಯನ್ನು ಸ್ವತಃ ಉಪಯೋಗಿಸಿ ಮತ್ತು ಬೇರೆ ವಿಧದಿಂದ ವಿಶೇಷತಃ ಇಂದಿನವರೆಗೆ ನಷ್ಟವಾಗದೆ ಉಳಿದಿದ್ದ ಹಾಗು ನಯವಾದ ಖಾದಿಯಲ್ಲಿ ಸುಂದರವಾದ ಆಕೃತಿಗಳನ್ನು ತೆಗೆಯಲು ಸಮರ್ಥರಿರುವ ಕಸಬುಗಾರರ ವರ್ಗಗಳಿಗೆ ಉದಾರಾಶ್ರಯವನ್ನು ಕೊಟ್ಟು ನೂಲುವ ಕಲಸದ ಪ್ರಸಾರಕ್ಕೆ ನೆರವಾಗಬೇಕೆಂದು ಅವರಿಗೆ ಮಹಾಸಭೆಯು ವಿನಂತಿ.

(ಇ) ವಿದೇಶಿ ಅರಿವೆ ಮತ್ತು ನೂಲುಗಳ ವ್ಯಾಪಾರದಲ್ಲಿ ತೊಡಗಿದಂಥ ವರ್ತಕರು ರಾಷ್ಟ್ರದ ಹಿತದ ಕಡೆಗೆ ಲಕ್ಷ್ಯ ಕೊಟ್ಟು, ಇನ್ನು ಮೇಲೆ ವಿದೇಶಿ ಅರಿವೆ ನೂಲುಗಳನ್ನು ತರದೆ, ಖಾದಿಯ ವ್ಯಾಪಾರವನ್ನು ಮಾಡುತ್ತಾ ರಾಷ್ಟ್ರೀಯ ಮನೆ ಕಸಬಿನ ಅಭಿವೃದ್ಧಿಗೆ ಸಹಾಯಮಾಡಬೇಕೆಂದು ಅವರಿಗೆ ಮಹಾಸಭೆಯು ಪ್ರಾರ್ಥಿಸುತ್ತದೆ

(ಎಫ್) ಗಿರಣಿಯ ನೂಲಿನಿಂದ ಗಿರಣಿಗಳಲ್ಲಿಯೂ ಮಗ್ಗಗಳಮೇಲೂ ತರತರದ ಅರಿವೆಯು ನೇಯಲ್ಪಟ್ಟು ಹಿಂದುಸ್ಥಾನದ ಪೇಟೆಯಲ್ಲಿ ಖಾದಿಯೆಂದು ಮಾರಲ್ಪಡುತ್ತದೆಂದು ಮಹಾಸಭೆಗೆ ತಿಳಿದು ಬಂದದ್ದರಿಂದ, ಹೀಗೆ ಮಾಡುತ್ತಿರುವ ಗಿರಣಿಯ ಮಾಲಕರೂ ನೇಕಾರರೂ ಈ ಅನಿಷ್ಟವಾದ ನಡತೆಯನ್ನು ಬಿಡಬೇಕೆಂದೂ ಮಹಾಸಭೆಯು ಪರ್ಣಸ್ತದ ಕೆಳಗೆ ಈ ವರೆಗೂ ಬಾರದಿದ್ದಂಥ ಸ್ಥಳಗಳಲ್ಲಿ ಎಷ್ಟೇ ತಮ್ಮ ಕೆಲಸವನ್ನು ಸಾಗಿಸಿ ಹಿಂದುಸ್ಥಾನದ ಮನೆ ಕಸಬಿಗೆ ಉತ್ತೇಜನವನ್ನು ಕೊಡಬೇಕೆಂದೂ, ಹಾಗು ಪರದೇಶದ ನೂಲನ್ನು ಇನ್ನು ಮುಂದೆ ತರಿಸಬಾರದೆಂದೂ ಅವರನ್ನು ಮಹಾಸಭೆಯು ಬೇಡಿಕೊಳ್ಳುತ್ತದೆ.

(ಜಿ) ಹಿಂದು, ಮುಸಲ್ಮಾನ ಅಥವಾ ಬೇರೆಯಾವದೇ ಧರ್ಮದ ಗುರುಗಳು ಹಾಗು ಪ್ರಮುಖರು ತಮ್ಮ ತಮ್ಮ ಧರ್ಮದವರಿಗೆ ಖಾದಿಯ ಸಂದೇಶವನ್ನು ಹೇಳಬೇಕೆಂದೂ ಪರದೇಶಿ ಅರಿವೆಗಳ ಉಪಯೋಗವನ್ನು ಬಿಡಲು ಉಪದೇಶಿಸಬೇಕೆಂದೂ ಅವರಿಗೆ ಮಹಾ ಸಭೆಯು ವಿಜ್ಞಾಪಿಸುತ್ತದೆ.

2. ಸಂಘಟನೆಯಲ್ಲಿಯ ಈಗಿನ 7ನೆಯ ನಿಯಮವನ್ನು ತೆಗೆದು ಅದರ ಸ್ಥಳದಲ್ಲಿ ಮುಂದಿನದನ್ನು ಸೇರಿಸಬೇಕು.

(ಎ) ನಾಲ್ಕನೆಯ ನಿಯಮದಿಂದ ಅಡ್ಡಿ ಬಾರದಿದ್ದರೆ ಪ್ರತಿಯೊಬ್ಬನಿಗೆ ಪ್ರಾಂತಿಕ ಸಮಿತಿಯ ನಿಯಂತ್ರದೊಳಗಿನ ಮಹಾಸಭೆಯ ಯಾವದೇ ಪ್ರಾಥಮಿಕ ಸಂಸ್ಥೆಯ ಸದಸ್ಯನಾಗಲು ಅಧಿಕಾರವಿರುವದು. ಆದರೆ ಯಾರು ರಾಜಕೀಯ ಮತ್ತು ಮಹಾ ಸಭೆಯ ಸಭೆಗಳಲ್ಲಿ ಅಥವಾ ಮಹಾ ಸಭೆಯ ಕೆಲಸದಲ್ಲಿ ತೊಡಗಿದಾಗ ಕೈಮಗ್ಗದ ಮೇಲಾದ ಕೈನೂಲಿನ ಬಟ್ಟೆಯನ್ನು ಧರಿಸುವದಿಲ್ಲವೋ ಮತ್ತು ಯಾರು ಪ್ರತಿವರ್ಷ ತಮ್ಮ ಕೈಯಿಂದ ನೂತ 24(0) ಗಜ ಒಳ್ಳೆ ನೂಲನ್ನು ಕಳುಹಿಸುವದಿಲ್ಲವೋ ಅಥವ ಬೇನೆ ಇಲ್ಲವೆ ಅನಿಷ್ಟ ಅಥವ ಇಂಥಾ ಬೇರೆ ಯಾವದೇ ಪ್ರಸಂಗದಲ್ಲಿ ಅಷ್ಟೇ ನೂಲನ್ನು ಎರಡನೇ ಜನರಿಂದ ನೂಲಿಸಿ ಕಳುಹಿಸುವದಿಲ್ಲವೋ ಅಂಥ ಯಾವ ಮನುಷ್ಯನೂ ಮಹಾ ಸಭೆಯ ಯಾವದೇ ಸಮಿತಿಯ ಅಥವ ಸಂಸ್ಥೆಯ ಸದಸ್ಯನಾಗಲಾರನು.

ಹಾಗು ಯಾವ ಮನುಷ್ಯನೂ ಒಂದೇ ಕಾಲಕ್ಕೆ ಮಹಾ ಸಭೆಯ ಎರಡು ಸಂಸ್ಥೆಗಳ ಸಭಾಸದನಾಗಲಾರನು.

(ಬಿ) ಜನವರಿಯ 1ನೇ ತಾರೀಕಿನಿಂದ ಡಿಸೆಂಬರ 31ನೆಯ ತಾರೀಕಿನ ವರೆಗೆ ಸದಸ್ಯತ್ವದ ವರ್ಷವು ಗಣಿಸಲ್ಪಡತಕ್ಕದ್ದು. ಮೇಲೆ ಉಲ್ಲೇಖಿಸಲ್ಪಟ್ಟ ವಂತವನ್ನು ಮುಂಗಡವಾಗಿಯೇ ಕೊಡಲ್ಪಡಬೇಕು. ಮತ್ತು ತಿಂಗಳೊಂದಕ್ಕೆ 2,000 ಗಜದಂತೆ ಮುಟ್ಟಿಸಬಹುದು. ನಡುವೆ ಸದಸ್ಯರಾಗುವ ಜನರು ಆ ವರ್ಷದ ಪ್ರಾರಂಭದಿಂದ ಕೊಡಬೇಕಾದ ಎಲ್ಲವನ್ನೂ ಸಲ್ಲಿಸಬೇಕು.

(ತಾತ್ಕಾಲಿಕ ಯೋಜನೆಯು)

1925ನೆಯ ಇಸವಿಯ ಮಟ್ಟಿಗೆ 24,000 ಗಜ ನೂಲನ್ನು ಮಾತ್ರ ಮಾರ್ಚ ತಿಂಗಳ ತಾ 1ಕ್ಕಾಗಲಿ ಅದರೊಳಗಾಗಲಿ ಕೊಡಬೇಕು, ಅಥವ ಮೇಲೆ ಹೇಳಿದಂತೆ ತಿಂಗಳಿಗಿಷ್ಟಿಷ್ಟರಂತೆ ಕೊಟ್ಟು ಮುಟ್ಟಿಸಬೇಕು.

(ಸಿ) ತಾನು ಕೊಡಬೇಕಾದ ನೂಲಿನ ವಂತವನ್ನು ಅಥವ ಕಂತುಗಳನ್ನು ಯಾವನು ಮುಟ್ಟಿಸುವದಿಲ್ಲವೋ, ಅಂಥ ಯಾವ ಮನುಷ್ಯನಿಗೂ ಭಿನ್ನ ಭಿನ್ನ ಸಮಿತಿಗಳ ಪ್ರತಿನಿಧಿಗಳನ್ನಾಗಲಿ ಮಹಾ ಸಭೆಯ ಪ್ರತಿನಿಧಿಗಳನ್ನಾಗಲಿ ಆರಿಸಲು, ಅಥವ ಪ್ರತಿನಿಧಿಯಾಗಿ ಆರಿಸಲ್ಪಡಲು, ಇಲ್ಲವೆ ಯಾವದೇ ಮಂಡಲ ಅಥವ ಉಪಮಂಡಲಗಳನ್ನು ನೇಮಿಸಲು ಅಥವ ಮಹಾಸಭೆಯ ಇಲ್ಲವೆ ಮಹಾಸಭೆಯ ಸಂಸ್ಥೆಗಳ ಅಥವ ಅದರ ಮಂಡಲ ಇಲ್ಲವೆ ಉಪಮಂಡಲಗಳ ಸಭೆಗಳಲ್ಲಿ ಭಾಗ ತೆಗೆದುಕೊಳ್ಳಲು ಅಧಿಕಾರವಿಲ್ಲ.

ನೂಲಿನ ಕರವನ್ನು ಕೊಡಲಿಕ್ಕೆ ತಪ್ಪಿದಂಥ ಯಾವ ಸದಸ್ಯನೂ ತಾನು ಸಲ್ಲಿಸತಕ್ಕ ಕರವನ್ನು ಸಲ್ಲಿಸಿದರೆ, ಮತ್ತು ನಡೆಯುವ ತಿಂಗಳ ವಂತವನ್ನು ಮುಟ್ಟಿಸಿದರೆ, ಅಧಿಕಾರವು ಅವನಿಗೆ ಪುನಃ ಪ್ರಾಪ್ತವಾಗುವದು.

(ಡಿ) ಪ್ರತಿಯೊಂದು ಪ್ರಾಂತಿಕ ಸಮಿತಿಯು ಮಹಾ ಸಮಿತಿಯ ಮಂತ್ರಿಗೆ ಸದಸ್ಯರ ಸಂಪೂರ್ಣ ಹೆಸರಿನ ಯಾದಿಯ ಮತ್ತು ಅವರು ಕಳುಹಿಸಿದ ನೂಲಿನ ಪರಿಮಾಣವನ್ನೂ ತಿಂಗಳು ತಿಂಗಳಿಗೆ ತಿಳಿಸುತ್ತಿರಬೇಕು. ಪ್ರಾಂತಿಕ ಸಮಿತಿಗಳು ತಮಗೆ ಕರ ರೂಪದಿಂದ ದೊರೆತ ನೂಲಿನ ನೂರರಲ್ಲಿ ಹತ್ತನೆಯ ಭಾಗವನ್ನು ಅಥವಾ ಅದರ ಬೆಲೆಯನ್ನು ಮಹಾಸಮಿತಿಗೆ ಒಪ್ಪಿಸಬೇಕು.

ಈಗಿನ ಆರನೆಯ ನಿಯಮದ 5ನೆಯ ಕಲಮನ್ನು ಮತ್ತು 9ನೆಯ ನಿಯಮದ 2ನೆಯ ಕಲಮನ್ನು ತೆಗೆಯಬೇಕು.

3. ಸೇವೆಯ ಬಗ್ಗೆ ಸಮಾಧಾನವು.

ಶ್ರೀಮತಿ ಸರೋಜಿನಿ ನಾಯುಡು ಇವರು ತಮ್ಮ ಉತ್ಸಾಹ ಮತ್ತು ಕರ್ತೃತ್ವಶಕ್ತಿಗಳಿಂದ ವಸಾಹತುಗಳಲ್ಲಿಯ ಹಿಂದೀ ಜನರಿಗೆ ಪ್ರಿಯರಾಗಿ, ಮತ್ತು ತಮ್ಮ ವಕ್ತೃತ್ವ ಬಲದಿಂದ ಅಲ್ಲಿಯ ಯುರೋಪಿಯನ ಜನರ ಸಹಾಯಭೂತಿಯನ್ನು ದೊರಕಿಸಿ, ಹಿಂದೀ ವಸಾಹತುಗಾರರ ಹಿತಕ್ಕಾಗಿ ಅವರು ಮಾಡಿರುವ ಮಹತ್ವದ ಕಾರ್ಯಗಳ ಬಗ್ಗೆ ಮಹಾ ಸಭೆಯು ಸಮಾಧಾನವನ್ನು ವ್ಯಕ್ತಗೊಳಿಸುತ್ತದೆ.

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಶ್ರೀ. ವಝೆಯವರು ಮತ್ತು ಪಂಡಿತ ಬನಾರಸಿದಾಸ ಚತುರ್ವೇದಿಯವರು ಕೇನಿಯದ ಹಿಂದೀ ವಸಾಹತುಗಾರರ ಹಿತಕ್ಕಾಗಿ ಮಾಡಿದ ಕೆಲಸಗಳ ಬಗ್ಗೆ ಮಹಾ ಸಭೆಯು ತನ್ನ ಕೃತಜ್ಞತೆಯನ್ನು ವ್ಯಕ್ತಗೊಳಿಸುತ್ತದೆ.

4. ಬರ್ಮದೇಶದ ಜನರಬಗ್ಗೆ ಸಹಾನುಭೂತಿಯು.

ಬರ್ಮದೇಶದ ಜನರು ಪಡುತ್ತಿರುವ ತೊಂದರೆಗಳ ಬಗ್ಗೆ ಮಹಾ ಸಭೆಯು ಅವರಿಗೆ ತನ್ನ ಸಹಾನುಭೂತಿಯನ್ನು ಆದರಪೂರ್ವಕವಾಗಿ ವ್ಯಕ್ತಗೊಳಿಸುತ್ತದೆ. ಮತ್ತು ಅವರಲ್ಲಿ ನಡೆದಿರುವ ದುಷ್ಕಾಳಿಕೆಯಿಂದ ಅವರು ಹೆದರಿ ತಮ್ಮ ಸತ್ವವನ್ನು ಕಳೆದುಕೊಳ್ಳಲಿಕ್ಕಿಲ್ಲವೆಂದು ಮಹಾಸಭೆಯು ನಂಬುತ್ತದೆ.

ಬರ್ಮದೇಶದಲ್ಲಿ ವಾಸವಾಗಿರುವ ಹಿಂದೀ ಜನರು ಪ್ರತ್ಯೇಕ ಪ್ರಾತಿನಿಧ್ಯದ ಅಧಿಕಾರವನ್ನು ಬೇಡುವ ಪ್ರವೃತ್ತಿಯನ್ನು ಕಂಡು ಮಹಾ ಸಭೆಗೆ ಖೇದವೆನಿಸುತ್ತದೆ. ಮತ್ತು ಇಂಥ ಹಿಡಿದು ನಿಲ್ಲುವ ಪ್ರವೃತ್ತಿಯು ತತ್ವತಃ ಅನುಚಿತವಾಗಿರುವದರಿಂದ ಅವರು ಇಂಥಾ ಅಧಿಕಾರವನ್ನು ಬೇಡಬಾರದೆಂದು ಮಹಾ ಸಭೆಯು ಅವರಿಗೆ ಅಗ್ರಹಪೂರ್ವಕವಾಗಿ ಹೇಳುತ್ತದೆ. ಹಾಗು ಯಾವ ಬರ್ಮೀ ಜನರ ದೇಶದಲ್ಲಿ ಐಹಿಕ ಸೌಲಭ್ಯಗಳಿಗಾಗಿ ಹಿಂದೀ ಜನರು ವಾಸವಾಗಿರುವರೋ ಅಂಥ ಆ ಜನರಿಗೆ ಪ್ರತಿಬಂಧ ನ್ಯಾಯಮಾರ್ಗದಿಂದ ನೆರವಾಗುವದು ತಮ್ಮ ಕರ್ತವ್ಯವಾಗಿ ಅವರು ತಿಳಿಯಬೇಕೆಂದು ಮಹಾಸಭೆಯು ಅವರಿಗೆ ಉಪದೇಶಿಸುತ್ತದೆ.

5. ಕೋಹಾತ್ ಮತ್ತು ಗುಲ್ಬರ್ಗ.

ಹಿಂದುಸ್ಥಾನದ ಹಲವೆಡೆಗಳಲ್ಲಿ ಹಿಂದು ಮುಸಲ್ಮಾನರೊಳಗಿನ ಪರಸ್ಪರ ವೈಮನಸ್ಸು ಮತ್ತು ಅಲ್ಲಲ್ಲಿ ನಡೆದ ದಾಂಧಲೆಗಳಿಗಾಗಿ ವಿಷಾದಿಸುವದರ ಹೊರತು ಇತ್ತೀಚೆಗೆ ಕೋಹಾತಿನಲ್ಲಿ ನಡೆದ ದಂಗೆಯ ಪರಿಣಾಮವಾಗಿ ಉಂಟಾದ ಪ್ರಾಣಹಾನಿ, ಸೊತ್ತು, ದೇವಾಲಯಗಳ ನಷ್ಟ ಇವುಗಳ ಬಗ್ಗೆ ಈ ಮಹಾಸಭೆಯು ವಿಷಾದಿಸುತ್ತದಲ್ಲದೆ ಅಲ್ಲಿಯ ಸ್ಥಳೀಯ ಅಧಿಕಾರಿ ವರ್ಗವು ತನ್ನ ಪ್ರಥಮ ಕರ್ತವ್ಯವಾದ ಪ್ರಾಣ ಮತ್ತು ಸೊತ್ತುಗಳ ರಕ್ಷಣೆಯನ್ನು ಮಾಡಲು ಈ ಭಾಗದಲ್ಲಿ ತಪ್ಪಿದೆ ಎಂದೂ ಅಭಿಪ್ರಾಯ ಪಡುತ್ತದೆ. ತಮ್ಮ ಜನ್ಮ ಸ್ಥಾನವಾದ ಕೋಹಾತನ್ನು ಬಿಟ್ಟು ಹೋಗುವ ಸ್ಥಿತಿಯು ಒಂದೊದಗಿದ ಹಿಂದಣಗಳಿಗಾಗಿ ವ್ಯಾಕುಲಪಡುವದಲ್ಲದೆ ತಮ್ಮ ಬಾಧುಗಳಾದ ಮತ್ತು ನೆರೆಯವರಾದ ಹಿಂದುಗಳ ಪ್ರಾಣಕ್ಕೂ ಸೊತ್ತಿಗೂ ಯಾವ ರೀತಿಯಲ್ಲಿಯೂ ಹಾನಿಯುಂಟಾಗದಂತೆ ಅಭಯವನ್ನಿತ್ತು ಅಲ್ಲಿಯ ಹಿಂದುಗಳನ್ನು ಹಿಂದಕ್ಕೆ ಕರೆಯಬೇಕಾಗಿ ಕೋಹಾತಿನ ಮುಸಲ್ಮಾನರಿಗೆ ಒತ್ತಿ ಹೇಳುತ್ತದೆ. ಹಿಂದು ಮುಸಲ್ಮಾನ ಮುಖಂಡರ ಅಭಿಪ್ರಾಯಗಳನ್ನು ತಗೆದುಕೊಳ್ಳದೆ ಆ ಕೋಹಾತಿನ ಮುಸಲ್ಮಾನರ ಮರ್ಯಾದೆ ಪೂರ್ಣವಾದ ಆಮಂತ್ರಣದ ಹೊರತಾಗಿ ಕೋಹಾತಿಗೆ ಪುನಃ ಹಿಂತಿರುಗಬಾರದಾಗಿಯೂ ಈ ಕೋಹಾತಿನ ಅನಾಹುತದ ವಿಷಯವಾಗಿ ಇಂಡಿಯಾ ಸರಕಾರದ ಅಥವ ಇತರರ ನಿರ್ಣಯವನ್ನು ಹಿಂದು-ಮುಸಲ್ಮಾನರು ಅಂಗೀಕರಿಸಬಾರದೆಂದೂ ಕಳೆದ ಐಕ್ಯತಾ ಪರಿಷತ್ತಿನವರು ಅಥವಾ ಇದಕ್ಕೆ ನಿಯಮಿತವಾದ ಬೇರೆ ಮಂಡಳಿಯವರು ನಿಯಮಿಸಿದ ಸಮಿತಿಯವರು ಎಲ್ಲಾ ಸ್ಥಿತಿಗತಿಗಳನ್ನು ವಿಚಾರಿಸಿ ತಮ್ಮ ಅಭಿಪ್ರಾಯವನ್ನು ಕೊಡುವ ತನಕ ಎಲ್ಲಾ ತೀರ್ಮಾನಗಳನ್ನು ಅಮಾನತ್ತಿನಲ್ಲಿಡಬೇಕಾಗಿ ಈ ಮಹಾಸಭೆಯು ಅಪೇಕ್ಷಿಸುತ್ತದೆ.

ಗುಲ್ಬರ್ಗದ ದಂಗೆಯ ಸಂಬಂಧ ಸಂಕಟಪಡುತ್ತಿರುವವರಿಗಾಗಿ ಈ ಮಹಾ ಸಭೆಯು ಪ್ರೀತಿಪೂರ್ವಕವಾದ ಸಹಾನುಭೂತಿಯನ್ನು ತೋರಿಸುವದಲ್ಲದೆ ಪೂಜಾಮಂದಿರಗಳನ್ನು ಅಪವಿತ್ರಗೊಳಿಸಿದುದು ಮಹಾಪಾತಕವೆಂದು ದೃಢವಾಗಿ ಹೇಳುತ್ತದೆ.

6. ಅಸ್ಪೃಶ್ಯತೆ.

ಅಸ್ಪೃಶ್ಯತಾ ನಿವಾರಣಾ ವಿಷಯದ ಬಗ್ಗೆ ಹಿಂದೂಜನರ ಅಭಿಪ್ರಾಯದಲ್ಲಿ ಆದ ಪ್ರಗತಿಯನ್ನು ಕಂಡು ಮಹಾಸಭೆಗೆ ಸಮಾಧಾನವಾಗುತ್ತದೆ. ಮತ್ತು ಆ ವಿಷಯದಲ್ಲಿ ಇನ್ನೂ ಬಹಳ ಮಾಡತಕ್ಕದ್ದಿರುವದೆಂದು ಈ ಮಹಾಸಭೆಯ ಅಭಿಪ್ರಾಯವಿದೆ. ಮಹಾಸಭೆಯ ಎಲ್ಲ ಸಂಸ್ಥೆಗಳ ಹಿಂದೂ ಸದಸ್ಯರು ಅದರ ಬಗ್ಗೆ ಹೆಚ್ಚಿಗೆ ಪ್ರಯತ್ನವನ್ನು ಮಾಡಬೇಕೆಂದು ಅವರಿಗೆ ಬಿನ್ನವಿಸುತ್ತದೆ. ಅಸ್ಪೃಶ್ಯ ವರ್ಗದವರಿಗೆ ಬಾವಿ, ಗುಡಿ ಮತ್ತು ಶಿಕ್ಷಣ ಇವುಗಳ ಸೌಲಭ್ಯಗಳನ್ನು ಒದಗಿಸಿ ಕೊಟ್ಟು ಅವರ ಸ್ಥಿತಿಯನ್ನು ಸುಧಾರಿಸುವದಕ್ಕೆ ಪ್ರಾಂತಿಕ ಸಮಿತಿಗಳ ಸದಸ್ಯರು ಹೆಚ್ಚು ಲಕ್ಷ್ಯವನ್ನು ಪೂರೈಸಬೇಕೆಂದು ಈ ಮಹಾಸಭೆಯು ಆಗ್ರಹದಿಂದ ಸೂಚಿಸುತ್ತದೆ. ವರ್ಣ-ಹಿಂದುಗಳು ಹಾದಾಡುವ ಬೀದಿಗಳಲ್ಲಿ ಹಾದಾಡಲು ಅಸ್ಪೃಶ್ಯ ವರ್ಗದವರಿಗೆ ಅಧಿಕಾರವಿರುತ್ತದೆಂಬುದನ್ನು ಸಿದ್ಧಪಡಿಸುವವರಲ್ಲಿ ತೊಡಗಿದಂಥ ವೈಕೋಮದ ಸತ್ಯಾಗ್ರಹಿಗಳನ್ನು ಅವರ ಅಹಿಂಸಾವೃತ್ತಿ, ತಾಳ್ಮೆ, ಧೈರ್ಯ ಮತ್ತು ಸಹನಶೀಲತೆಗಳ ಬಗ್ಗೆ ಮಹಾಸಭೆಯು ಅಭಿನಂದಿಸುತ್ತದೆ, ಮತ್ತು ಪ್ರಗತಿಪರರೆಂದು ತಿಳಿಯಲ್ಪಟ್ಟಿರುವ ತ್ರಾವಣಕೋರ ಸಂಸ್ಥಾನವು ಶೀಘ್ರದಲ್ಲಿಯೇ ಸತ್ಯಾಗ್ರಹಿಗಳ ಮಾತು ನ್ಯಾಯವಾಗಿರುವದೆಂದು ಒಪ್ಪಿ ಪರಿಸ್ಥಿತಿಯನ್ನು ಸರಿಪಡಿಸುವದೆಂದು ಮಹಾಸಭೆಯು ಆಶಿಸುತ್ತದೆ.

7. ವಸಾಹತುಗಳಲ್ಲಿನ ಹಿಂದೀ ಜನರು.

ವಸಾಹತುಗಳಲ್ಲಿನ ಹಿಂದೀ ವಸಾಹತುಗಾರರಿಗೆ ಆಗುವ ತೊಂದರೆಗಳ ಬಗ್ಗೆ ಮಹಾಸಭೆಗೆ ಅತ್ಯಂತ ವ್ಯಸನವಾಗುತ್ತದೆ. ಈ ವಸಾಹತುಗಾರರ ಹಿತ ಸಂಬಂಧಗಳನ್ನು ಸಂರಕ್ಷಿಸುವದು ತಮ್ಮ ಕರ್ತವ್ಯವೆಂದು ಹಿಂದೀ ಮತ್ತು ಸಾಮ್ರಾಜ್ಯ ಸರಕಾರದವರು ಬಾರಿಬಾರಿಗೆ ಹೇಳಿದ್ದರೂ ಕೂಡ ಆ ಕರ್ತವ್ಯವನ್ನು ಅವರು ನೆರವೇರಿಸಲಿಲ್ಲವೆಂದು ಮಹಾಸಭೆಯು ತನ್ನ ಅಭಿಪ್ರಾಯವನ್ನು ನಮೂದಿಸುತ್ತದೆ. ಈ ವಸಾಹತುಗಾರರಿಗೆ ಆಗುವ ತೊಂದರೆಗಳ ಬಗ್ಗೆ ಅವರ ವಿಷಯದಲ್ಲಿ ಮಹಾಸಭೆಯು ಸಹಾನುಭೂತಿಯುಳ್ಳದ್ದಾಗಿದ್ದರೂ ಸ್ವರಾಜ್ಯವು ದೊರೆಯುವ ವರೆಗೆ ಪರಿಣಾಮಕಾರಕವಾದ ಸಹಾಯವನ್ನು ಮಾಡಲು ತನ್ನ ಅಸಾಮರ್ಥ್ಯದ ಬಗ್ಗೆ ಅದಕ್ಕೆ ವಿಷಾದವಾಗುತ್ತದೆ.

ದಕ್ಷಿಣ ಆಫ್ರಿಕದಲ್ಲಿ ಮನೆ ಮಾಡಿಕೊಂಡಿದ್ದ ಹಿಂದೀ ವಸಾಹತುಗಾರರು ಈ ವರೆಗ ನಿರಾತಂಕವಾಗಿ ಉಪಭೋಗಿಸುತ್ತ ಬಂದ ಅವರ ಮುನಿಸಿಪಲ್ ಹಕ್ಕುಗಳನ್ನು ಸೆಳೆಯುವ ನೇಟಲ ಪ್ರಾವಿನ್ಸಿಯಲ್ ಆರ್ಡಿನನ್ಸಿಗೆ ಅಲ್ಲಿಯ ಯೂನಿಯನ ಸರಕಾರದ ಗವರ್ನರ ಜನರಲರವರು ಮಂಜೂರಿಯನ್ನು ಕೊಟ್ಟದ್ದಕ್ಕಾಗಿ ಮಹಾಸಭೆಗೆ ಅತ್ಯಂತ ಅಸಮಾಧಾನವಾಗುತ್ತದೆ.

ಹಕ್ಕನ್ನು ಸೆಳೆಯುವ ಈ ಕೃತ್ಯವು ಸ್ಪಷ್ಟವಾಗಿ ಅನ್ಯಾಯವಾಗಿರುವದಲ್ಲದೆ 1914ರಲ್ಲಿ ಯೂನಿಯನಿನ ಸರಕಾರ ಮತ್ತು ಹಿಂದೀ ಸಮಾಜಗಳ ನಡುವೆಯಾದ ಒಡಂಬಡಿಕೆಯ ಹಾಗು ನೇಟಲ ಸರಕಾರದ ಹಿಂದಿನ ವಚನಗಳ ಭಂಗವು ಇರುವದೆಂದು ಮಹಾಸಭೆಗೆ ಅನಿಸುತ್ತದೆ.

ಕೆನಿಯಾ ಪ್ರಶ್ನೆಯ ನಿರ್ಣಯವು ಅಲ್ಲಿಯ ಹಿಂದೀ ವಸಾಹತುಗಾರರ ನೈಸರ್ಗಿಕ ಮತ್ತು ನ್ಯಾಯವಾದ ಹಕ್ಕುಗಳ ಸೆಳೆಯುವಿಕೆಯೇ ಇರುವದೆಂದು ಮಹಾಸಭೆಯ ಅಭಿಪ್ರಾಯವದೆ.

(ಮುಂದುವರಿಯುವದು).

ಕಾಂಗ್ರೆಸ್ ಕಮಿಟಿ ಮೀಟಿಂಗು.

ತಾರೀಕು 24—1—25ರಲ್ಲು ಕಾಂಗ್ರೆಸ್ ಕಮಿಟಿ ಮೂಡುವ ಬಗ್ಗೆ ಮಡಿಕೇರಿಯಲ್ಲಿ ಒಂದು ಸಭೆ ಸೇರಿತ.

1. ಮಾ. ರಾ ಶ್ರಿ ಬಿಳಿಯಂಡ ಕುಶಾಲಪ್ಪನವರು ಅಧ್ಯಕ್ಷರಾಗಿ ಚುನಾಯಿತರಾದರು.

2. ಕಾಂಗ್ರೆಸ್ಸಿನ ಹೊಸ ವರ್ಗಣಿ (ಚಂದಾ) ಯನ್ನು ವಿವರಿಸಿ ಮೆಂಬರಾಗಲು ಇಚ್ಛೈಸುವವರು ಹೆಸರು ಕೊಡಬೇಕೆಂತ ಕೇಳಲಾಗಿ 15 ಜನರು ಹೆಸರು ಕೊಟ್ಟರು.

3. ಕೊಡಗು ಡಿಸ್ಟ್ರಿಕ್ಟ ಕಾಂಗ್ರೆಸ್ ಕಮಿಟಿಗೆ ಮೆ. ಪಿ. ಟಿ ಕುಶಾಲಪ್ಪನವರು ಅಧ್ಯಕ್ಷರಾಗಿಯೂ, ಮೆ. ಸಿ. ಬಿ. ವೆಂಕಪ್ಪಯ್ಯನವರು ಸಕ್ರೆಟರಿಯಾಗಿಯೂ ಮೆ. ಯಂ. ಯಂ ಸಿದ್ದೀಕ್‌ರವರು ಖಜಾಂಚಿಯಾಗಿಯೂ ಚುನಾಯಿಸಲ್ಪಟ್ಟರು.

4. ಈ ಮೊದಲು ತಿಲಕ ಸ್ವರಾಜ್ಯ ಫಂಡಿಗೆ ವಸೂಲಾಗಿ ಮೆ ಯಂ ಯಂ. ಸಿದ್ದೀಕರಲ್ಲಿ ಬಾಕಿ ಇರುವ ಹಣವನ್ನು ಕಾಂಗ್ರೆಸ್ ಕಮಿಟಿಗೆ ವರ್ಗಾಯಿಸಲ್ಪಡಬೇಕು.

5. ಸೆಕ್ರೆಟರಿಯವರು ಮೂರು ಚರ್ಕಗಳನ್ನು ಕಾಂಗ್ರೆಸ್ ಆಫೀಸಿನಲ್ಲಿ ಯಾವಾಗಲೂ ತಯಾರಿಸಿ ಇಡಬೇಕು. ಇದನ್ನು ಬೇಕಾದವರಿಗೆ ಅಸಲ್ ಕ್ರಯಕ್ಕೆ ಮಾರಬೇಕು.

6. ಅಲ್ಲದೆ ಒಂದು ಮಣ ಬೀಜಬಿಡಿಸಿದ ಹತ್ತಿಯನ್ನು ತರಿಸಿ ಇಡಬೇಕು. ಅದನ್ನು ಅಸಲ್ ಕ್ರಯಕ್ಕೆ ಮಾರಬೇಕು.

7. ಖಜಾಂಚಿಯವರಲ್ಲಿ ತತ್ಕಾಲ ಖಾದಿಯನ್ನು ರಖಂ ವಾರು ಇಡಬೇಕು. ಈ ಬಗ್ಗೆ ತಿಲಕ ಸ್ವರಾಜ್ಯ ಫಂಡಿನಿಂದ 100 ರುಪಾಯಿಗೆ ಮೀರದೆ ಉಪಯೋಗಿಸಬೇಕು ಎಂಬ ತೀರ್ಮಾನವಾಯಿತು.

ಪಿ. ಟಿ. ಕುಶಾಲಪ್ಪ,
(ಅಧ್ಯಕ್ಷರು).

ಜಮೀನ್ದಾರರ ಸಂಘದ ಕಮಿಟಿ ಮೀಟಿಂಗು.

ಮಡಿಕೇರಿ 'ಕೊಡಗು' ಆಫೀಸಿನಲ್ಲಿ ತಾ. 23—1—25 ರಲ್ಲು ನಡೆದ ಜಮೀನ್ದಾರರ ಸಂಘದ ಎಗ್ಸಿಕ್ಯೂಟಿವ್ ಕಮಿಟಿಯ ಮೀಟಿಂಗಿನ ವಿವರ—17 ಕಮಿಟಿ ಮೆಂಬರುಗಳು ಹಾಜರಿದ್ದರು. ರಾ. ಬಾ. ಕೆ. ಅಪ್ಪಯ್ಯನವರು ಅಧ್ಯಕ್ಷರಾಗಿದ್ದರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

2. ಅಮ್ಮತ್ತಿ ನೇಶನಲ್ ಸ್ಕೂಲ್ ಹೆಡ್ ಮಾಸ್ತರಾದ ಮೆ. ಬ್ಲಾಚಂಡ ಬೆಳ್ಯಪ್ಪನವರ ರಾಜಿನಾಮೆ ಕಾಗದವು ಓದಲಾಯಿತು.

ಈ ಸಂಘವು ನೇಶನಲ್ ಶಾಲೆಯ ಆಡಳಿತವನ್ನು (ಮೇನೇಜ್‌ಮೆಂಟ್) ತೆಗೆದುಕೊಳ್ಳದೆ ಇರುವುದರಿಂದ ಅವರ ರಾಜಿನಾಮೆಯನ್ನು ಒಪ್ಪಿಕೊಳ್ಳುವ ಅಧಿಕಾರ ಸಂಘಕ್ಕೆ ಇಲ್ಲವೆಂದು ಅವರಿಗೆ ಜವಾಬು ಕೊಡುವಂತೆ ತೀರ್ಮಾನವಾಯಿತು.

3. ಕಮಿಷನರವರ ತಾರೀಕು 19—12—24ರ ನಂ. 379 ಜಿ. ಪಿ. ರ ಬ್ರಿಚಾಫು ಕಂಟ್ರಾಕ್ಟು ಆಕ್ಟಿನ ವಿಷಯದ ಪತ್ರವು ಓದಲಾಯಿತು.

ಈ ಆಕ್ಟನ್ನು 1920ನೇ ಇಸವಿಯ ಜಮಾಬಂದಿಗೆ ಮುಂಚೆ ಇದ್ದಂತೆಯೇ ಇಟ್ಟುಕೊಳ್ಳಬೇಕೆಂಬ ಅಭಿಪ್ರಾಯವನ್ನು ಸಂಘದ ಕಮಿಟಿಯು ತಾರೀಕು 25—5—23ರಲ್ಲೇ ಕಮಿಷನರಿಗೆ ತಿಳಿಸಿದೆ ಎಂದೂ, ಈಗ ಈ ವಿಷಯ ಅಭಿಪ್ರಾಯ ಕೊಡಲು ಸಂಘದ ಜನರಲ್ ಮೀಟಿಂಗಿಗೆ ಇಟ್ಟಿದೆ ಎಂದೂ ಕಮಿಷನರಿಗೆ ಜವಾಬುಕೊಡುವಂತೆ ತೀರ್ಮಾನವಾಯಿತು.

4. ಬರುವ ಕಾನ್‌ಫರೆನ್ಸಿನ ಅಧ್ಯಕ್ಷರನ್ನು ಚುನಾಯಿಸುವದಕ್ಕಾಗಿ ಎಗ್ಸಿಕ್ಯೂಟಿವ್ ಕಮಿಟಿಯು ಮೀಟಿಂಗೊಂದು ತಾರೀಕು 15—2—25ರಲ್ಲು ಮೂರ್ನಾಡಿನಲ್ಲು ನಡಿಸುವಂತೆ ತೀರ್ಮಾನವಾಯಿತು.

ಕೆ. ಅಪ್ಪಯ್ಯ,
(ಅಧ್ಯಕ್ಷರು).

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿನಾಡು ಈರಳೆ ಗ್ರಾಮದಲ್ಲಿ ಸಿಡುಬು ಪ್ರಾರಂಭವಾಗಿದೆ.

ವೀರಾಜಪೇಟೆ ಮುನಸೀಫರಾದ ಮೆ. ಸಿ. ಎನ್ ಮುತ್ತಣ್ಣನವರು ಕಳೆದ ತಿಂಗಳು 23ರಿಂದ 3 ತಿಂಗಳು ರಜೆಯಲ್ಲಿ ಹುವುದರಿಂದ ಜುಡಿಶಿಯಲ್ ಶಿರಸ್ತೆದಾರರಾಗಿದ್ದ ಮೆ. ಯು. ಮಂಜುನಾಥಯ್ಯರವರನ್ನು ಅವರ ಬದಲಿಗೆ ಮುನಸೀಫರಾಗಿ ನೇಮಿಸಿರುವರು. ಅವರು ತಾರೀಕು 31—1—25ರಲ್ಲು ವೀರಾಜಪೇಟೆಗೆ ಹೋಗಿ ಚಾರ್ಜು ತೆಗೆದುಕೊಂಡರು.

ಪೋಲೀಸ್ ಇನ್‌ಸ್ಪೆಕ್ಟರಾದ ರಾ. ಸಾ ಕೋದಂಡ ಐಯ್ಯಣ್ಣನವರಿಗೆ ಪ್ರಸವ ಪಾಚೀ ಅಪ್ಪಯ್ಯನವರಿಗೆ ರಜೆ ಕೊಟ್ಟಿರುವರು. ಇವರಿಗೆ ರಜೆ ಮುಂದುವರಿಸುತ್ತಾ ಬರುವುದು ಇದು ನಾಲ್ಕನೇ ಸಾರಿಯಾಗಿದೆ.

ಕಳೆದವಾರ ಕುಂಜಿಲಗೇರಿ ಮಾನಾಡು ಹೇರೂರು ಗ್ರಾಮದಲ್ಲಿ ಮೆ. ಸಿ. ಟಿ. ಸುಬ್ಬಯ್ಯನವರ ಆಳೊಬ್ಬನು ಒಂದು ಕಿತ್ತಳೆ ಮರಕ್ಕೆ ಹತ್ತಿ ಕಿತ್ತಳೆಹಣ್ಣು ಕೊಯ್ಯುತ್ತಿರುವಾಗ ಹಗಲಾದರೂ ಸೊಪ್ಪು ತುಂಬಾ ಇದ್ದದ್ದರಿಂದ ಗೊತ್ತಾಗದೆ ಅದು ಕಪಿ ಎಂದು ಯೋಚಿಸಿ ಅವರು ಗುಂಡು ಹೊಡದರು. ಆತನಿಗೆ ಚಿಲ್ಲುಗಳು ತಗಲಿದರೂ ಅವು ಶರೀರದೊಳಗೆ ಹೊಕ್ಕ ಇಳಿಯದ್ದರಿಂದ ಜೀವಕ್ಕೆ ಅಪಾಯವೇನೂ ಉಂಟಾಗಲಿಲ್ಲವೆಂದೂ ಆತನು ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವನೆಂದೂ ತಿಳಿಯುತ್ತೇವೆ.

ಮ. ಯು. ಮಂಜುನಾಥಯ್ಯರವರು ವೀರಾಜಪೇಟೆಗೆ ಮುನಸೀಫರಾಗಿ ಹೋಗಿರುವುದರಿಂದ ಹಂಗಾಮಿ ಜುಡಿಶ್ಯಲ್ ಶಿರಸ್ತೆದಾರರಾಗಿ ಮೆ. ಕೋಳೆರ ಕುಟ್ಟಪ್ಪನವರನ್ನು ನೇಮಿಸಿರುವರು.

ಕಳೆದವಾರದ ಪತ್ರಿಕೆಯಲ್ಲಿ ಪ್ರಕಟವಾದಂತೆ ನಾಲ್ಕೇರಿ ಗ್ರಾಮದ ತರವಾಡಿ ಕೋಟಿಯಲ್ಲಿ ಮಾಡಿದ ಗುಂಡಿನ ಕೇಸಿನಲ್ಲಿ ಸಜಾಯಾದದ್ದು ಮೂಕರ ಅಪ್ಪಯ್ಯನಿಗೆ ಎಂದು. ಮೂಕರ 'ಸುಬ್ಬಯ್ಯನಿಗೆ' ಎಂದು ಆಗಬೇಕು. ಇದು ಸ್ವ ಪ್ರಮಾದ ಪ್ರಕಟವಾದದ್ದಾಗಿದೆ.

ಪಟ್ಟಿಬ್ಬಗೇರಿ ಗ್ರಾಮದಲ್ಲಿ ಒಬ್ಬನ ದನ ಮೇಯುವವನು ಕಳೆದ ತಾರೀಕು 24ರಲ್ಲಿ ನೀರು ಇಳಿಸುವದಕ್ಕಾಗಿ ಹೈನನು ರಕ್ಕೆ ಹತ್ತುವಾಗ್ಯೆ ಏಣಿಗ ಕಟ್ಟಿದ ಹಗ್ಗವು ತುಂಡಾಗಿ ಅವನು ಕಳಕ್ಕೆ ಬಿದ್ದು ಮೃತನಾದನು.

ಕೆಲವು ದಿವಸಗಳ ಹಿಂದೆ ಪಟ್ಟಚೆರವಂಡ ಪೊನ್ನಪ್ಪನವರ ಒಂದು ಎತ್ತನ್ನು ಕೊಳಕೇರಿ ಗ್ರಾಮದ ಮೊಪ್ಲೆ ಅಕ್ಕರೆ ಪೈದು ಎಂಬವನು ಕಳವುಮಾಡಿ, ಅದರ ಕಿವಿ ಕುಯಿದು ಪೇರಿಯವರಿಗೆ ಕ್ರಯಕ್ಕೆ ಮಾರಿದನೆಂಬ ಗುಮಾನಿ ಮೇಲೆ ಪೊಲೀಸಿನವರು ವಿಚಾರಿಸುತ್ತಿರುವರೆಂದು ವರ್ತಮಾನ. ಇದೇ ಪ್ರಕಾರ ಆಜುಬಾಜು ಗ್ರಾಮಗಳಲ್ಲಿ ಕಳೆದ ಮೂರು ತಿಂಗಳಿಂದ ಎಂಟು ದನಗಳು ಕಳವು ಆಗಿವೆಯಂತೆ.

ಜಮೀನ್ದಾರರ ಸಂಘದ ಉತ್ತರ ಹಿಂದೂಸ್ಥಾನ ಪ್ರಚಾರಕ ಕಾರ್ಯದರ್ಶಿ ಮಿ. ಸುದರ್ಶನ ಮಾತೃಯ್ಯನವರು ಈ ತಾರೀಕು 7ರಲ್ಲು ಪೊನ್ನಂಪೇಟೆ, 8ರಲ್ಲು ಶ್ರೀಮಂಗಲ, 9ರಲ್ಲು ಸೋಮವಾರಪೇಟೆ, 1 ರಲ್ಲು ಕುಶಾಲನಗರ, 11ರಲ್ಲು ಫ್ರೇಜರ್‌ಪೇಟೆ, 12ರಲ್ಲು ಸುಂಟಿಕೊಪ್ಪ, 13ರಲ್ಲು ಕುರುಳಿ ಅಂಜ್ಲ, 10ರಲ್ಲು ಮೂರ್ನಾಡು ಈ ಊರ ಸಂಘದ ಪ್ರಚಾರಕ ಮೀಟಿಂಗುಗಳನ್ನು ನಡಿಸುವರು.

"ಕೊಡಗು" ಪತ್ರಿಕೆ ಬೇಕೆಂದೂ, ಅದರ ಚಂದಾ ಮೊಬಲಗನ್ನು ಒಂದು ತಿಂಗಳೊಳಗೆ ಪಾವತಿ ಮಾಡುತ್ತೇವೆಂದೂ ಆರ್ಡರುಕೊಟ್ಟ ಚಂದಾದಾರರು ಕೆಲವರು ವಾಯಿದೆ ಮೀರಿದರೂ ಕೂಡ ಚಂದಾ ಕೂಡದೆ ಇರುವುದರಿಂದ ಇನ್ನಾದರೂ ಒಡನೆ ಕಳುಹಿಸುವರಾಗಿ ಕೋರಿಕೆ.

ಈ ಸಂಚಿಕೆಯ ಕಡೇ ಪುಟದಲ್ಲಿ ಪ್ರಕಟವಾಗಿರುವ ಮೆ. ಸ. ಸೋಮಯ್ಯನವರ ಕೋವಿ ಲಾಟರಿಯ ತಾರೀಕು ಅಚ್ಚು ಹೊಡೆಯುವಾಗ ಸ್ವಲ್ಪ ತೊಂದರೆಯಾಗಿ ಸರಿಯಾಗಿ ಪ್ರಿಂಟಾಗಲಿಲ್ಲ. ಲಾಟರಿಯು ಈ ತಾರೀಕು 15ರಲ್ಲು ವೀರಾಜಪೇಟೆಯಲ್ಲಿ ನಡೆಯುವುದು.

ಕೊಡಗಿನ ಸಿವಿಲ್ ಸರ್ಜನರಾದ ಮೇಜರ್ ಫ್ರೇಜರ್ ಐ. ಎಂ. ಎಸ್. ರವರು ರಜಾ ತೀರುವವರೆಗೆ ಗುತ್ತಿಯಲ್ಲಿಯೋಗುವುದರಿಂದ ಅವರೊಳಗೆ ಇಲ್ಲಿಗೆ ಸಿವಿಲ್ ಸರ್ಜನರಾಗಿ ಶಿವಮೊಗ್ಗದಿಂದ ಗುದ್ದ ಆಗರೊಳಗೆ ಇಲ್ಲಿಗೆ ಸಿವಿಲ್ ಸರ್ಜನರಾಗಿ ಶಿವಮೊಗ್ಗದಿಂದ ಗುದ್ದ ಮೇಜರ್ ಫೈಫಲ್ ಸೈನ್ಯದ ಕ್ಯಾಪ್ಟನ್ ಆರ್. ಎಫ್. ತಾಂಬರ್ನ್ ಐ. ಎಂ. ಎಸ್. ರವರು ಬರುವರೆಂದು ತಿಳಿಯುತ್ತೇವೆ.

ಸಿದ್ದಾಪುರದಿಂದ ಮೈಸೂರಿಗೆ ನಾಗರಾಜ್ ಬಸ್ಸ್ ಸರ್ವೀಸಿನವರು ಬಸ್ಸನ್ನು ನಡಿಸುತ್ತಿರುವರು. ಟಿಕೇಟು ಚಾರ್ಜು ಮೂರು ರುಪಾಯಿ ಮಾತ್ರವಂತೆ.

ಹಿಂದೂ ದೇಶ.

ಈ ವಾರದಲ್ಲಿ ಕಲ್ಕತ್ತಾ, ರಂಗೂನು, ಲಾಹೋರು, ಕಾಶಿ ಮೊದಲಾದ ಪಟ್ಟಣಗಳಲ್ಲಿ ದಂಗೆ ಜರುಗಿದ ಹಸ್ತ ಪತ್ರಿಕೆಗಳು ಸಾವಿರಗಟ್ಟಲೆ ಹಂಚಲ್ಪಟ್ಟಿವೆ.

ತಾರೀಕು 2ರಲ್ಲು ಕಲ್ಕತ್ತಾದಲ್ಲಿ ನಡೆದ ಯೂರೋಪಿಯನ್ ಸಂಘದ ವಾರ್ಷಿಕ ಮೀಟಿಂಗಿನಲ್ಲಿ ಅದರ ಅಧ್ಯಕ್ಷರಾದ ಮಿ. ಹಚ್. ಡಬ್ಲು. ಕಾರ್‌ರವರು ಹಿಂದೂ ದೇಶದಲ್ಲಿ ರಾಜಕೀಯ ಮಾರ್ಪಾಡುಗಳಲ್ಲಿ ಹೊಸ ಪರಿಶೋಧನೆಗಳನ್ನು ಯೂರೋಪಿಯನರೆಲ್ಲರೂ ವಿರೋಧಿಸಬೇಕೆಂದು ಭಾಷಣ ಮಾಡಿದರು.

ಕಲ್ಕತ್ತಾದಲ್ಲಿ ಒಬ್ಬ ಹಿಂದೂ ಹುಡುಗನನ್ನು ಬಲತ್ಕಾರದಿಂದ ಮಹಮ್ಮದೀಯ ಮತಕ್ಕೆ ಸೇರಿಸಿದಕ್ಕೆ ಮೂವರು ಮುಸಲ್ಮಾನರನ್ನು ಸೆರೆಹಿಡಿದಿರುವರು.

ಎಲ್ಲಾ ಪಾರ್ಟಿ ಕಾನ್‌ಫರೆನ್ಸಿನ ಸಬ್ ಕಮಿಟಿಯ ಮೀಟಿಂಗು ಪ್ರಸಕ್ತ ತಾರೀಕು 28ರಲ್ಲಿ ಪ್ರಾರಂಭವಾಗುವುದು.

ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನ ಅಧ್ಯಕ್ಷ ಪದವಿಗೆ ಮೊದಲಿನ ನೇಮಿತ ಅಧ್ಯಕ್ಷರಾಗಿದ್ದ ದಿವಾನ್ ಬಹದ್ದೂರ್ ಸ್ವಾಮಿಕನ್ನು ಚೆಟ್ಟಿಯವರನ್ನೇ ಚುನಾಯಿಸಿರುವರು.

ರಾಜಕೋಟೆಯಲ್ಲಿ ನ್ಯಾಶನಲ್ ಸ್ಕೂಲನ್ನು ತೆರೆಯಲು ಅಲ್ಲಿಗೆ ಮಹಾತ್ಮ ಗಾಂಧಿಯವರು ಹೋಗುವಾಗ್ಯೆ ಅವರಿಗೊಂದು ಅಭಿನಂದನೆಯ ಪತ್ರವನ್ನು ಒಪ್ಪಿಸುವುದಕ್ಕೆ ರಾಜಕೋಟೆಯ ಪ್ರತಿನಿಧಿ ಅಸೆಂಬ್ಲಿಯು ಒಮ್ಮತದಿಂದ ತೀರ್ಮಾನಿಸಿರುವರು.

ಹಿಂದೂ ಮತ ಮತ್ತು ಧರ್ಮಶ್ರಮಗಳ ಆಸ್ತಿಯ ಆಡಳಿತದ ವಿಷಯ ಡಾಕ್ಟರ್ ಗೌರ್‌ರವರು ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ತಂದ ಮಸೂದೆಯನ್ನು ಸರಕಾರದವರು ವಿರೋಧಿಸಿದರೂ ಕೂಡ ಒಂದು ಕಮಿಟಿಯ ವಿಚಾರಕ್ಕೆ ಬಿಡಲಾಗಿದೆ.

ಬರ್ಮಾದ ಕೌನ್ಸಿಲ್ ಬಹಿಷ್ಕಾರದ ಪಾರ್ಟಿಯಲ್ಲಿ ಕೌನ್ಸಿಲಿಗೆ ಹೋಗಬೇಕೋ, ಬೇಡವೋ, ಎಂಬದರ ವಿಷಯ ಎರಡು ಪಂಗಡಗಳುಂಟಾಗಿವೆ.

ತಾರೀಕು 1ರಿಂದ ಬೊಂಬಾಯಿಯಿಂದ ವಿದ್ಯುಚ್ಛಕ್ತಿಯಿಂದ ಓಡಿಸುವ ಟ್ರೈನುಗಳನ್ನು ನಡಿಸಲು ಪ್ರಾರಂಭಿಸಿರುವರು.

ಮಹಮ್ಮದೀಯರು, ಯೂರೋಪಿಯನ್ ಮೊದಲಾದ ಜನರ ಜಾತಿಯವರಿಗೆ ಬೇರೆ ಕ್ಷೇತ್ರದಲ್ಲಿ ರಾಮಗಳನ್ನು ಕೊಡಬಾರದೆಂದು ತಂದ ಮಿ. ನಿಯೋಗಿಯವರ ಮಸೂದೆಯು ಅಸೆಂಬ್ಲಿಯಲ್ಲಿ ನಾಶವಾಯಿತು. ಈ ಮಸೂದೆಯ ಪರವಾಗಿ ಬಂದ ಮತಗಳಲ್ಲಿ ಸ್ವರಾಜ್ ಪಾರ್ಟಿ ಎಂಬ ಅತ್ತ್ಯಧಿಕ ಡಾಕ್ಟರ್ ಗೌರ್ ರವರು ಸಂಗಡಿಗರು ಪಕ್ಷ ತಿರುಗಿದ ಅವರನ್ನು ಅಸೆಂಬ್ಲಿಯ ನ್ಯಾಶನಲ್ ಪಾರ್ಟಿಯ ಮುಖಂಡತನದಿಂದ ತಗಿದಿರುವರು.

ಮೈಸೂರು ಮಹಾರಾಜರವರು ನಿತ್ಯ ಪೂಜೆಗೆ ಮುಂಚೆ ಅರ್ಧ ಗಂಟೆ ಚರಕಾದಲ್ಲಿ ನೂಲು ಮಾಡುತ್ತಾರೆಂದು "ಸ್ವರಾಜ" ಪತ್ರಿಕೆಯಲ್ಲಿ ಪ್ರಕಟವಾದದ್ದು ನಿಜವೋ ಎಂದು ಗೊತ್ತಾಗಿರುವುದಿಲ್ಲ.

ಬಂಗಾಳ ಆರ್ಡಿನೆನ್ಸಿನ ವಿಷಯ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ತಾರೀಕು 28ರಲ್ಲಿ ಚರ್ಚೆ ನಡೆದು ಪ್ರೆಸಿಡೆಂಟ್‌ರಿಂದ ಇನ್ನೊಂದು ತಾರೀಕಿಗೆ ಮುಂದರಿಸುವರು.

ಕಲ್ಕತ್ತಾದ "ಸ್ಟೇಟ್ಸ್‌ಮನ್" ಪತ್ರಿಕೆಯು ಜೈಲಿನಲ್ಲಿರುವ ಮಿ. ಸುಭಾಸ್‌ಚಂದ್ರ ಬೋಸ್‌ರವರ ಮೇಲೆ ಇಲ್ಲದ ಅಪವಾದಗಳನ್ನು ಬರೆದರೆಂದು ಅವರು ಆ ಪತ್ರಿಕೆಯ ಮಾಲಕರು ಮತ್ತು ಸಂಪಾದಕರ ಮೇಲೆ ಒಂದು ಲಕ್ಷ ರುಪಾಯಿ ಮಾನ ನಷ್ಟಕ್ಕೆ ದಾವೆ ಹಾಕಿರುವರು.

ಬರುವ ಇಂಡಿಯನ್ ನೇಶನಲ್ ಕಾಂಗ್ರೆಸ್ ಮಹಾಸಭೆಯನ್ನು ಕಾನ್‌ಪುರದಲ್ಲಿ ನಡಿಸುವದರಿಂದ ಸ್ವಾಗತವನ್ನೀಡಬೇಕೆಂದೂ, ಆ ಸಮಯದಲ್ಲಿ ಆರೋಗ್ಯ ರಕ್ಷಣೆ ಮೊದಲಾದ ಕೆಲಸಗಳಿಗೆ ಮುನ್ಸಿಪಾಲಿಟಿಯಿಂದ ಕಾಂಗ್ರೆಸ್ಸಿನ ಸ್ವಾಗತ ಕಮಿಟಿಗೆ ಹತ್ತು ಸಾವಿರ ರುಪಾಯಿ ಕೊಡಬೇಕೆಂದೂ ಕಾನ್‌ಪುರದ ಮುನ್ಸಿಪಾಲಿಟಿಯ ಜನರಲ್ ಮೀಟಿಂಗಿನಲ್ಲಿ ಪಂಡಿತ ರಾಮಪ್ರಸಾದ ಮಿಶ್ರರವರು ಠರಾವು ತರಲಿಕ್ಕಿರುವರು.

ಮೆ. ಸಿ. ಆರ್. ದಾಸ್‌ರವರು ತನ್ನ ಆರೋಗ್ಯವನ್ನು ಪೂರ್ತಿಯಾಗಿ ಪಡೆಯಲು ಪಾಟ್ನಾದಲ್ಲಿ ಒಂದು ತಿಂಗಳು ಇರಲಿಕ್ಕಾಗಿ ಕಲ್ಕತ್ತಾದಿಂದ ಕಳೆದ ತಾ. 27ರಲ್ಲಿ ಹೊರಟುಹೋದರು. ಅನೇಕ ಮುಂದಾಳುಗಳು ಅವರನ್ನು ಸ್ಟೇಶನಿನಿಂದ ಕಳುಹಿಸಿಕೊಟ್ಟರು.

ಟ್ರಿಚನಾಪಲಿನ ಸ್ತ್ರೀಯರ ಸಂಘದ ಸೆಕ್ರೆಟರಿಯಾದ ಶ್ರೀಮತಿ ಟಿ. ಮಾಧವಿ ಅಮ್ಮರವರನ್ನು ಕೊಚ್ಚಿಯ ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರಾಗಿ ನೇಮಿಸಲು ಸಿಫಾರಸ್ಸು ಮಾಡಿರುವರು.

ಶ್ರೀಯುತ ಚಿತ್ತರಂಜನ ದಾಸ್‌ರವರು ಅನಾರೋಗ್ಯದ ದೆಸೆಯಿಂದ "ಫಾರ್‌ವರ್ಡ್" ಪತ್ರಿಕೆಯ ಸಂಪಾದಕ ಕೆಲಸವನ್ನು ಬಿಟ್ಟನಂತರದೂ, ಅವರ ಬದಲು ಈಗತಾನೇ ಜರ್ಮನಿಯಿಂದ ಹಿಂತಿರುಗಿ ಬಂದಿರುವ ಬನೋಯಿ ಕುಮಾರ ಸರ್ಕಾರ್‌ರವರು ಆ ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಳ್ಳುವರೆಂದು ವರ್ತಮಾನ.

ವಿದೇಶ.

ವಿಸ್ತಾರವಾಗಿ ಹರಡಿಕೊಂಡಿರುವ ಶಹರವು ಜನ, ಜಲ, ತರಗುಗಳಿಲ್ಲದ ಮರುಭೂಮಿಯಾಗಿದೆ. ಆದರೆ ಪಕ್ಕದ ಪ್ರದೇಶಗಳಲ್ಲಿ ಅಪೂರ್ವವಾಗಿ ನೀರು ಸಿಕ್ಕುತ್ತದೆ. ಈಗ ಕೆಲವು ಕಡೆ ಈಮರುಭೂಮಿಯಲ್ಲಿ ಮರಳನ್ನು ಆಳವಾಗಿ ತೋಡಿದರೆ ಅಲ್ಲಿ ನೀರು ತೋರಿಬರುವುದೆಂದೂ, ನಾಲದುದಕ್ಕೆ ಮೀನುಗಳು ಸಹ ಅಲ್ಲಿ ಸಿಕ್ಕುತ್ತವೆ ಎಂದೂ ಕಂಡುಬಂದಿದೆ. ಈ ಕಾರಣದಿಂದ ಶಾಸ್ತ್ರಜ್ಞರು ಈಗ ಮೀನುಗಳು ಅಲ್ಲಿಗೆ ಹೇಗೆ ಬಂದುವೆಂಬುದನ್ನು ಪರೀಕ್ಷಿಸ ತೊಡಗಿರುವರು. ಮರುಭೂಮಿಯಲ್ಲಿ ಮೀನು ಸಿಗುವುದೆಂದರೇನು?

ಸಸಿಲ್ ಹಿಜಿನ್ಸ್ ಎಂಬ 28 ವರುಷ ಪ್ರಾಯದ ಒಬ್ಬ ಆಂಗ್ಲೇಯನು ಕಾರಾಗೃಹದಲ್ಲಿ ಬಂಧಿಯಾಗಿದ್ದನು. ಆತನು ಆತ್ಮಹತ್ಯ ಮಾಡಿಕೊಳ್ಳುವುದಕ್ಕಾಗಿ 9 ಅಂಗುಲ ಉದ್ದದ ಎರಡು ಚಂಚಾಗಳನ್ನು ನುಂಗಿದನು. ಚಂಚಾಗಳನ್ನು ನುಂಗಿದರೂ ಕೂಡ ಆತನು ಸಾಯಲಿಲ್ಲ. ಅವು ಎದೆಯ ಮೂಳೆಗಳ ಮಧ್ಯೆ ಸಿಕ್ಕಿಕೊಂಡಿದ್ದುದರಿಂದ ಮಲಗುವ ವೇಳೆಯಲ್ಲಿ ಅವನಿಗೆ ಬಾಧೆಯಾಗುತ್ತಿತ್ತು. ಅನಂತರ ಲಿವರ್‌ಪೂಲಿನ ಆಸ್ಪತ್ರೆಯಲ್ಲಿ ಎಕ್ಸ್‌ರೇ ಮೂಲಕ ಪರೀಕ್ಷಿಸಿ ನೋಡಿದಲ್ಲು ಚಂಚಾಗಳು ಕಂಡುಬಂದು ಶಸ್ತ್ರ ಚಿಕಿತ್ಸೆಯಿಂದ ತೆಗೆಯಲ್ಪಟ್ಟವು. ಇಂಥಾ ಪದಾರ್ಥಗಳು ಹೊಟ್ಟೆಯೊಳಗೆ ಇಷ್ಟು ದೀರ್ಘಕಾಲ ವಿದ್ದುದನ್ನು ನೋಡಿದುದು ಇದೇ ಮೊದಲೆಂದು ಡಾಕ್ಟರನ ಅನುಭವ.

ಇಂಗ್ಲೆಂಡಿನಲ್ಲಿ ಡೇಲಿ ಎಂಬ ಗ್ರಾಮದಲ್ಲಿ ಒಬ್ಬ ಹುಡುಗಿಯು ಅಲ್ಲಿಯ ಒಂದು ಯಂತ್ರಾಲಯದಲ್ಲಿ ಕೆಲಸ ಮಾಡುತ್ತಿದ್ದಳು. ಆ ಹುಡುಗಿಯು ಯಂತ್ರದ ಒಳ ಹೊಗುತ್ತಲೇ ಆ ಯಂತ್ರದ ಚಲನೆಯು ವ್ಯತ್ಯಾಸವಾಗುತ್ತಿತ್ತು. ಕಡೆಗೆ ಒಬ್ಬ ಡಾಕ್ಟರನು ಆ ಹುಡುಗಿಯನ್ನು ಪರೀಕ್ಷಿಸಿ ನೋಡಿ, ಆಕೆಯ ಶರೀರದಲ್ಲಿ ವಿದ್ಯುಚ್ಛಕ್ತಿಯು ಉತ್ಪನ್ನವಾಗಿ ಸುತ್ತಿಗಲ್ಲಿನ ಪ್ರಾಣವನ್ನುಂಟು ಮಾಡುತ್ತದೆಂದೂ ಈ ಕಾರಣದಿಂದಲೇ ಯಂತ್ರದ ಚಲನೆಯು ವ್ಯತ್ಯಾಸವಾಗುತ್ತದೆಂದು ಹೇಳಿದನು.

ಇಂಡಿಯಾದಲ್ಲಿ ಬ್ರಿಟಿಷ್ ಸರಕಾರದವರು ಕೈಕೊಳ್ಳಬೇಕಾದ ತಕ್ಕದ ವಿಷಯ ಪ್ರಶ್ನಿಸ ಮೂರು ರಾಜಕೀಯ ಪಂಗಡದವರೂ ಒಂದೇ ತೀರ್ಮಾನಕ್ಕೆ ಬರುವುದು ಉತ್ತಮವೆಂದು ಸರ್ ವಲಿಯಮ್ ವಿನ್ಸೆಂಟರವರು ಒಂದು ಭಾಷಣ ಮಾಡಿದರು.

ಕಾನ್‌ಸ್ಟೇಂಟಿನೋಪಲಿನಲ್ಲಿದ್ದ ಗ್ರೀಕ್ ಪೆಟ್ರಿಯಾರ್ಕ್‌ರನ್ನು ತುರ್ಕಿ ಸರಕಾರದವರು ಅಲ್ಲಿಂದ ಹೊರಡಿಸಿಬಿಟ್ಟಿರುವರು. ಇದು ಗ್ರೀಕರಿಗೆ ಕೋಪೋದ್ರೇಕವನ್ನುಂಟುಮಾಡಿದೆ.

ಬ್ರಿಟಿಷರವರು ಸುಡಾನಿನಲ್ಲಿ ಕೈಕೊಂಡಿರುವ ಕ್ರಮವನ್ನು ಆಕ್ಷೇಪಿಸಿ ಅಲ್ಲಿಯ ರಾಷ್ಟ್ರೀಯ ಪಕ್ಷದವರು ವಾಶಿಂಗ್ಟನಿಗೆ ಟೆಲಿಗ್ರಾಂ ಕಳುಹಿಸಿರುವರು.

ಫ್ರಾನ್ಸಿನವರು ಫ್ರಾನ್ಸಿನ ಪ್ರಧಾನ ಮಂತ್ರಿಯಾಗಿ ಹೆರಿಯೋ ಚುನಾಯಿಸಲ್ಪಟ್ಟಿರುವರು.

ಬೆಳಗಾಂ ಕಾಂಗ್ರೆಸ್.

(ಇನ್ನೊಬ್ಬ ಪ್ರೇಕ್ಷಕರ ಅಭಿಪ್ರಾಯ).

ಯಾವ ಮಹಾತ್ಮನು ಇದೀ ಜಗತ್ತಿನಲ್ಲಿ ಯೇಸುಕ್ರಿಸ್ತನೆಂದೂ, ಬುದ್ಧನೆಂದೂ, ಮಹಮ್ಮದನೆಂದೂ, ಸಾಕ್ಷಾತ್ ಈಶ್ವರ ಸ್ವರೂಪನೆಂದೆನ್ನಿಸಿಕೊಂಡಿದ್ದಾನೋ, ಅಂಥಾ ಮಹಾತ್ಮ ಗಾಂಧಿಯವರು ಅಗ್ರಾಸನವನ್ನು ವಹಿಸಿದ್ದರಿಂದ, ಈ ಬೆಳಗಾಂ ಕಾಂಗ್ರೆಸ್ ಇದುವರೆಗೆ ಆದ ಮೂವತ್ತೆಂಟು ಕಾಂಗ್ರೆಸಿಗಿಂತಲೂ ಎಲ್ಲಾ ವಿಧದಲ್ಲಿಯೂ ಹೆಚ್ಚಿನ ಉತ್ಸಾಹದಿಂದಲೂ ಕುತೂಹಲದಿಂದಲೂ ನಡೆಯಿತೆಂದೇ ಹೆಚ್ಚಿನ ಜನರ ಅಭಿಪ್ರಾಯ.

ಹೊಸದಾಗಿ ನಿರ್ಮಿಸಿದ ವಿಜಯನಗರವೆಂಬ ಹೆಸರಿನ ಕಾಂಗ್ರೆಸ್ ಕೂಡಿದ ಜಾಗವು ಸಾಕ್ಷಾತ್ ದೇವೇಂದ್ರನ ಅಮರಾವತಿನಗರವೋ ಎಂಬಂತೆ ಶೋಭಿಸುತ್ತಿತ್ತು. ಅದರ ಹೊಸ ನಮೂನೆಯು ಈಗತಾನೇ ಬಹಳ ಅಷ್ಟ ಕಷ್ಟ ಮಾಡಿದ ಮೈಸೂರು ನಗರಕ್ಕೆ ಹೋಲುತ್ತಿತ್ತು. ರಸ್ತೆಗಳ ಸೊಗಸು, ಸಿಂಗಾರದ ಕೆಲಸಗಳ ಸೊಬಗು, ಕಾಂಗ್ರೆಸ್ ಹೊಟೇಲುಗಳು, ಡೇರಾ ಮೊದಲಾದ ಉಳಿಯುವ ಸ್ಥಳಗಳು ಅತ್ಯಂತ ಅನುಕೂಲವಾಗಿದ್ದವು. ವಾಲಂಟಿಯರುಗಳ ಕಾರ್ಯನಿರ್ವಾಹಕ ಶಕ್ತಿಯೂ, ಅವರ ಸ್ವಭಾವಗುಣವೂ, ವಿಧೇಯತ್ವವೂ, ಪ್ರತಿ ಒಬ್ಬ ಪ್ರೇಕ್ಷಕನನ್ನು ಅತ್ಯಂತ ವಿಸ್ಮಯಗೊಳಿಸುತ್ತಿತ್ತು. ಅಲ್ಲಿಯ ಜನರ ಮರ್ಯಾದೆಯೂ, ವಾಲಂಟಿಯರುಗಳ ಸೇವೆಯೂ, ಯಾವ ವಿಧವಾದ ಗಲಾಟೆ ಇಲ್ಲದಿರುವಿಕೆಯನ್ನು ನೋಡಿದರೆ ಪ್ರತ್ಯಕ್ಷ ಸ್ವರಾಜ್ಯದ ಸನ್ನಿಧಿಯೋ ಇದೆಂದು ತೋರುತ್ತಿತ್ತು. ಪ್ರದರ್ಶನದ ಸೊಬಗನ್ನು ವಿವರಿಸಲಿಕ್ಕೆ ಆ ಶ್ರೇಷ್ಠ ಕವಿಯಾದ ಕಾಳಿದಾಸನಾದರೂ, ಅಥವಾ ಇನ್ನಾವ ಕವಿಯಿದ್ದರೆ ಬೇಕಾಗುತ್ತಿತ್ತು! ತರತರದ ಖಾದಿ ಬಟ್ಟೆಯಿಂದಲೂ, ಇನ್ನು ಸ್ವದೇಶದಲ್ಲಿ ತಯಾರಾದಿದ ಇತರ ಸಾಮಾನುಗಳಿಂದಲೂ ನೋಡಲಿಕ್ಕೆ ಬಹು ಆನಂದವನ್ನುಂಟುಮಾಡುತ್ತಿತ್ತು. ಈ ಪ್ರದರ್ಶನವನ್ನು ನೋಡಲಿಕ್ಕೆ ಜನರು ಕಿಕ್ಕಿರಿದು ಹೋಗುತ್ತಿದ್ದರು. ನೋಟಕರ ದೃಷ್ಟಿಯನ್ನು ಆಕರ್ಷಿಸುವ ಜಗತ್ತಿನ ಸೃಷ್ಟಿಯಲ್ಲಿ ಅಪೂರ್ವವೆಂದು ತೋರುವ ಆ ಮಹಾತ್ಮ ಗಾಂಧಿ

ಯವರನ್ನು ಕಾಯಿಲೆಯಲ್ಲಿ ಆಪರೇಶನ್ ಮಾಡಿದ್ದನ್ನು ತೋರಿಸಿದ್ದು ಪ್ರತಿ ಒಬ್ಬನನ್ನು ವಿಸ್ಮಯಗೊಳಿಸುತ್ತಿತ್ತು. ಮಹಾತ್ಮರು ಆಪರೇಶನ್ ಮೇಜಿನಲ್ಲಿ ಸ್ಮೃತಿ ಇಲ್ಲದೆ ಮಲಗಿದ್ದರು. ಆಗ ತಾನೇ ಆಪರೇಶನ್ ಮಾಡಿದ್ದರಿಂದ ಹೊಟ್ಟೆಯಲ್ಲಿ ರಕ್ತದ ಚಿಹ್ನೆಯು ಕಾಣುತ್ತಿತ್ತು. ಆಪರೇಶನ್ ಮಾಡಿದ ಧೀರ ಕರ್ನಲ್ ಮೇಡಕ್‌ರವರು ಕೈ ತೊಳೆಯುತ್ತಿದ್ದರು. ನರ್ಸ್‌ಗಳಿಬ್ಬರು ಮಹಾತ್ಮರ ತಲೆ ಪಕ್ಕದಲ್ಲಿ ಕ್ಲೋರೋಫಾರಂ ಬಾಯಿಗೆ ಬಾರದಂತೆ ಬಾಯಿಗೆ ಕೈ ವಸ್ತ್ರ ಮುಚ್ಚಿಕೊಂಡು ನಿಂತಿದ್ದರು. ಇನ್ನೊಬ್ಬ ನರ್ಸ್ ಒಂದು ತಟ್ಟೆಯನ್ನೂ, ತೊಳೆಯುವ ಸಾಮಾನುಗಳನ್ನೂ ತೆಗೆದುಕೊಂಡು ಬರುತ್ತಿದ್ದಳು. ಈ ಚಿತ್ರವನ್ನು ನೋಡುವಾಗ ಆಗತಾನೆ ಆ ಕೃತ್ಯಗಳು ನಡೆದಂತೆಯೂ, ಎಲ್ಲರೂ ಜೀವದಲ್ಲಿರುವವರಲ್ಲದೆ, ಶಿಲ್ಪನಾ ಕಾರ್ಯವಲ್ಲವೆಂದು ತೋರುತ್ತಿತ್ತು. ಇನ್ನೊಂದು ಸ್ಥಳದಲ್ಲಿ ಮಹಾತ್ಮರು ಚರಕವನ್ನು ತಿರುಗಿಸುವುದೂ, ಲೋಕಮಾನ್ಯ ತಿಲಕರ ಭಾವಚಿತ್ರವೂ, ಪ್ರತ್ಯಕ್ಷ ಜೀವಿತ ಸ್ವರೂಪಗಳಂತೆ ನೋಟಕರಿಗೆ ಆತ್ಯಾನಂದವನ್ನುಂಟುಮಾಡುತ್ತಿತ್ತು. ಮತ್ತೊಂದು ಸ್ಥಳದಲ್ಲಿ ಶಾಕುಂತಲೆಯು ದುಷ್ಯಂತನಿಗೆ ಕಾಗದ ಬರೆಯುವುದೂ, ಇನ್ನೂ ಅನೇಕ ಶಿಲ್ಪನಾ ಕಲ್ಪನೆಗಳೂ ಇದ್ದವು. ಇವೆಲ್ಲಕ್ಕಿಂತಲೂ ವಿಶೇಷವಾಗಿ ಹೆಂಡ ಕುಡಿಯುವುದನ್ನು ನಿಲ್ಲಿಸಲು ಸ್ವಯಂ ಸೇವಕನೊಬ್ಬನು ಪಿಕೆಟಿಂಗ್ ಮಾಡುವುದನ್ನು ಪ್ರತಿಷ್ಠಿಸಿದ್ದರು. ಮಧ್ಯದಲ್ಲಿ ಸಾರಾಯಿಯನ್ನು ಅಂಗಡಿಯಾತನು ಕಂಬ್ರಾಶ್ಟದಾರನು ಕುಳಿತಿದ್ದನು. ಅವನ ಬಲ ಭಾಗದಲ್ಲಿ ಭಕ್ತಿಭಾವದಿಂದಲೂ, ವಂದನಾಪೂರ್ವಕದಿಂದಲೂ ಕೈ ಜೋಡಿಸಿಕೊಂಡು, ದಮ್ಮಯ್ಯ ಕುಡಿಯಬಾರದೆಂದು ಮರೆಹೊಕ್ಕಂತೆ ತರುಣರಾದ ಯುವಕನೊಬ್ಬನು ನಿಂತಿದ್ದನು. ಎಡಭಾಗದಲ್ಲಿ ಕುಡುಕನಾದವನೊಬ್ಬನು, ಎಡಕೈಯಲ್ಲೊಂದು ಕೋಲನ್ನೂ, ಬಲ ಜೇಬಿನಲ್ಲೊಂದು ಕುಪ್ಪಿಯನ್ನೂ ಹಾಕಿಕೊಂಡು ನಿಂತಿದ್ದನು. ಅವನ ಸ್ವಭಾವವು ಹೇಯವಾಗಿತ್ತು. ಬಾಯಿ ಹಲ್ಲುಗಳು ಬಹಳ ಹೇಸಿಕೆಯಾಗಿತ್ತು, ಒಂದು ಕಡೆ ಜೊಲ್ಲು ಸುರಿಯುತ್ತಿತ್ತು, ಮುಖದಲ್ಲಿ ಕಾಂತಿ ಇರಲಿಲ್ಲ, ತನ್ನ ಮಾನವನ್ನು ಸಹ ಸರಿಯಾಗಿ ಮುಚ್ಚಿರಲಿಲ್ಲ, ಇಂಥಾ ಹೇಸಿಕೆಯನ್ನು ನೋಡುವಾಗ, ನೋಟಕರಿಗೆ, ಈ ಪ್ರಪಂಚದಲ್ಲಿ ಇನ್ಯಾರೂ ಸಾರಾಯಿ ಹೆಂಡ ವಗೈರೆ ನಿಷಿದ್ಧ ಪದಾರ್ಥ ಸೇವನೆಯನ್ನು ಮಾಡಬಾರದೆಂಬುದು ಮನಸ್ಸಿಗೆ ಹೊಳೆಯುತ್ತಿತ್ತು. ಆ ಪ್ರದರ್ಶನದಲ್ಲಿದ್ದ ವಿಶೇಷಗಳನ್ನು ನೋಡಲಿಕ್ಕೆ ಆ ಭಗವಂತನು ಅನುಕೂಲಿಸಿದ್ದಕ್ಕೆ ನಾವು ಅವನನ್ನು ಎಷ್ಟು ವಂದಿಸಿದರೂ ಸಾಲದೆಂದೂ, ಮದ್ರಾಸ್, ಬೆಂಗಳೂರು ವಗೈರೆ ಕಡೆಗಳಲ್ಲಿರುವ ಯಾವ ಪ್ರದರ್ಶನವೂ, ಇದಕ್ಕೆ ಯಾವ ವಿಧದಲ್ಲಿಯೂ ಹೋಲುತ್ತಿರಲಿಲ್ಲವೆಂದೂ ನನ್ನ ಮನಸ್ಸಿಗೆ ತೋರಿತು.

ಕಾಂಗ್ರೆಸ್ ಪೆಂಡಾಲಿನ ಸೊಗಸನ್ನು ಹೇಳಬೇಕೇ? ಇಷ್ಟು ಕೈಯಿಂದ ಸೂತ್ರ ಜಗತ್ತನ್ನು ಹಿಡಿಸುವ ಈ ದೇಶದ ಬಟ್ಟೆ ಮಾರಿಯಿಂದಲೇ ಮಾಡಲ್ಪಟ್ಟಿತ್ತು. ಆ ಸಭೆಯಲ್ಲಿ ಕೋಟ್ಯಾಧಿಪತಿಗಳೂ, ಲಕ್ಷಾಧಿಪತಿಗಳೂ ಇದ್ದರೂ ಎಲ್ಲರೂ ನೆಲದ ಮೇಲೆ ಮಂಡಿಹಾಕಿ ಕುಳಿತರು. ಪ್ರತಿ ಒಬ್ಬನ ತಲೆಯಲ್ಲಿ ಗಾಂಧಿ ಟೋಪಿಯೂ ಮೈಯಲ್ಲಿ ಒಂದು ಬಟ್ಟೆ ಮತ್ತು ಪಂಚೆಯೂ ಇದ್ದುದರಿಂದ ಸಭೆಯಲ್ಲಿ ಐಶ್ವರ್ಯವಂತನ್ಯಾರು, ಗರೀಬನಾರು ಎಂಬುದು ತಿಳಿಯುತ್ತಿರಲಿಲ್ಲ. ಹಿಂದೂ ದೇಶದಲ್ಲೇ ಐಶ್ವರ್ಯವಂತರಲ್ಲಿ ಶ್ರೇಷ್ಠನಾದ ಪಂಡಿತ ಮೋತಿಲಾಲ್ ನೆಹರೂ ಮತ್ತು ಅವರ ಪುತ್ರರ ಡ್ರೆಸ್ಸನ್ನೂ ನೋಡುವಾಗಲೂ ಕಾಂಗ್ರೆಸಿನಲ್ಲಿ ಒಳಗೂ ಹೊರಗೂ ನೆರೆದಿದ್ದ ಜನರ ಸ್ವಭಾವವನ್ನೂ ಕೊಡಗು ದೇಶದಲ್ಲಿರುವ ಜನರ ಅಂದರೆ ಅದರಲ್ಲಿಯೂ ಕೊಡಗರ ಸ್ವಭಾವವನ್ನು ನೋಡುವಾಗ, ಕೊಡಗನಾದ ನನ್ನ ಮನಸ್ಸಿಗೆ ಒಂದು ತರತರದ ಮನೋ ವ್ಯಾಧಿಯೂ ತಡೆಯಲಾರದ ವ್ಯಸನವೂ ಉಂಟಾಗಿ, ಇನ್ನು ಮುಂದೆ ಯಾವ ಅಹಂಕಾರವನ್ನೂ ದೇವರು ನನಗೆ ಕೊಡಬಾರದೆಂದು ತೋರಿತು. ಭರತಖಂಡದಲ್ಲಿ ಐರ್ಲೋಕ್ಯದಂತೆ ಸಜನೆಯನ್ನು ಮಾಡಿ ಸಾತಂತ್ರ್ಯಕ್ಕೆ ಹಿತ ಉಡುಪಿಗೂ ಮರುಳಾದ ಜನರು ಯಾರಾದರೂ ಇದ್ದರೆ ಅವರು ಕೊಡಗರೇ ಎಂದು ತೋರಿತು.

ಅಲ್ಲಿಯ ಜನರು ಒಂದೇ ಒಂದು ... ವಲ್ಲಿ ತಿನ್ನುತ್ತಿರುವ ಒಪ್ಪತ್ತು ಕುಡಿಯುವ ಹಾಲು ಮೊಸರು ಇತರ ಆಹಾರಗಳೂ, ನಾಲ್ಕು ಜನ ಕೊಡಗರು ಊಟಮಾಡುವುದಕ್ಕಿಂತ ಹೆಚ್ಚಾಗುತ್ತಿತ್ತು. ಇದನ್ನೆಲ್ಲಾ ನೋಡಿ ನೋಡಿ, ಯಾವ ತರಹದ ಒಳ್ಳೆಯ ಊಟವನ್ನು ಮಾಡದೆಯೂ ಇರುವುದನ್ನೆಲ್ಲಾ ಸಂದೇಹೀಯರ ಉಡುಗೆ ಮತ್ತು ಹೆಂಗಸರಿಗೆ ಆಭರಣವನ್ನು ತೊಡಿಸಿ ಜನಾಂಗವನ್ನು ಕ್ಷೀಣಗತಿಗೆ ತರುವವರೇ ನನ್ನಂತ ಕೊಡಗರೆಂದು ಭಾವಿಸಿದೆನು. ಅಷ್ಟೆ ಅಲ್ಲ, ನಾನು ಕೊಡಗನು, ನನ್ನ ದೇಶವು ಎಂತಾದ್ದು, ಧೈರ್ಯಸ್ಥೈರ್ಯವುಳ್ಳಂತಾದ್ದು ಎಂಬದಾಗಿ ಹೇಳಿಕೊಂಡು ಬಾವಿಯಲ್ಲಿರುವ ಕಪ್ಪೆಗಳಂತೆ ಯಾವದನ್ನೂ ಕಾಣದೆ ತಾನೇ ದೊಡ್ಡವನೆಂದು ಕೊಚ್ಚಿಕೊಳ್ಳುವ ಪ್ರಾಣಿಯಾದರೂ ಈ ನನ್ನಂತ ಕೊಡಗನೇ ಎಂದು ತೋರಿತು. ಇಷ್ಟೇ ಅಲ್ಲ, ನಮ್ಮಲ್ಲಿರುವ ಮುಖ್ಯಪಟ್ಟ ... ಐಶ್ವರ್ಯವಂತರು, ಪದವೀಧಾರರೂ ಸಹ ದಯಮಾಡಿಸಿದ್ದಿದ್ದರೆ ಇಂಥಾದ್ದನ್ನು ಕಣ್ಣಾರೆ ಕಂಡು ತಮ್ಮ ಶ್ರೇಷ್ಠತೆಯನ್ನು ಹೋಲಿಸಿ ನೋಡುತ್ತಿದ್ದರು. ಶಿವಾ! ಶಿವಾ! ಕೊಡಗು ದೇಶದ ನಿವಾಸಿಗಳು ಇದರಲ್ಲಿಯೂ ಕೊಡಗರು ಖಾದಿ ಬಟ್ಟೆಯೊಂದನ್ನು ಮಾತ್ರ ಎಲ್ಲರೂ ಧರಿಸಿ, ಮನುಷ್ಯನಿಗೆ ಸೌಂದರ್ಯ, ಸೊಗಸು ಎಲ್ಲವೂ ತನ್ನ ಮನಸ್ಸಿನಲ್ಲಿಯೇ ಇದೆ ಎಂದು ಭಾವಿಸಿ ಜಲತಾರಿ, ರೇಶ್ಮೆ, ಕಲಾಪತ್ತುಗಳ ಧರಿಸುವುದನ್ನು ಖಂಡಿತವಾಗಿಯೂ ಎಲ್ಲರೂ ಬಿಟ್ಟು ಬಿಡದ ಹೊರತು ಜನಾಂಗವು ಖಂಡಿತವಾಗಿಯೂ ಮುಂದಕ್ಕೆ ಬಾರದೆಂಬದಾಗಿ ತೋರಿತು. ಇದಕ್ಕೆ ಸಾಕ್ಷಿಯಾಗಿ ಕೊನೆಗಿನಲ್ಲಿರುವಷ್ಟು ಬಟ್ಟೆಗಳಿಗಳ ಬಟ್ಟೆ ಅಂಗಡಿಗಳು ಲಕ್ಷಾಂತರ ಜನ ಸಂಖ್ಯೆಯಿಂದ ಕೂಡಿದ ಅನೇಕ ದೊಡ್ಡ ಪಟ್ಟಣಗಳಲ್ಲಿಯೂ ಸಹ ಇಲ್ಲವೆಂದು ಪ್ರತ್ಯಕ್ಷ ನೋಡಿ ಆಯಿತು.

ಕಾಂಗ್ರೆಸ್ ಮಂಟಪದಲ್ಲಿ ಆ ಮಹಾತ್ಮರು ಕಾಲಿಟ್ಟಾಕ್ಷಣವೇ ಮಹಾತ್ಮ 'ಗಾಂಧಿಕಿ ಜೈ' ಎಂಬ ಜಯಘೋಷವು ಆಕಾಶವನ್ನು ಮುಚ್ಚುತ್ತಿತ್ತು. ಯಾವ ಸಭೆಯಲ್ಲೇ ಆಗಲಿ ಅವರ ದರುಶನವನ್ನು ನೋಡಿದಾಕ್ಷಣವೇ ಜನರಿಗೆ ಒಂದು ತರವದ ಆನಂದವುಂಟಾಗಿ ಈ 'ಜೈ' ಎಂಬ ಜಯಘೋಷವು ತುಂಬುತ್ತಿತ್ತು. ಹೀಗೆಯೇ ಭರತಖಂಡದ ಪ್ರಜಾ ಮುಖಂಡರಾದ ದೇಶಬಂಧು ದಾಸ್, ಲಾಲಾಜಿ, ಮೋತಿಲಾಲ್ ನೆಹರು, ಮದನಮೋಹನ ಮಾಲವೀಯ, ಶ್ರೀಮತಿ ಸರೋಜಿನಿ ದೇವಿ ಡಾಕ್ಟರ್ ಬೆಸೆಂಟ್, ಮಹಮ್ಮದಾಲಿ, ಶೌಕತಾಲಿ ವಗೈರೆಯವರು ಭಾಷಣ ಮಾಡಲಿಕ್ಕೆ ಏಳುವಾಗಲೇ ಜನರು ಕರತಾಡನಗಳನ್ನು ಮಾಡುತ್ತಿದ್ದರು. ಹಿಂದೀ ಭಾಷೆಯನ್ನೇ ಆಡಬೇಕೆಂಬುದು ಬಹುಮತದ ಒತ್ತಾಯವಾಗಿತ್ತು. ಆದರೂ ಭಾಷೆಗಳು ಹಿಂದೀ, ಇಂಗ್ಲಿಷ್ ಮತ್ತು ಕನ್ನಡದಲ್ಲಿ ನಡೆಯುತ್ತಿತ್ತು. ದೊಡ್ಡ ಪೆಂಡಾಲಿನ ನಡು ಮಧ್ಯದಲ್ಲಿ ಅಧ್ಯಕ್ಷರು ಎತ್ತರವಾದ ಗೋಳಾಕಾರವಾದ ಮಂಟಪದಲ್ಲಿ ಕೂತಿದ್ದರು. ಭಾಷಣ ಮಾಡುವವರೂ ಸಹ ಈ ಮಧ್ಯದ ಮಂಟಪಕ್ಕೆ ಬಂದು ಮಾತಾಡುತ್ತಿದ್ದರು. ಭಾಷಣವು ಗಂಭೀರವಾಗಿಯೂ ಈ 20,000 ಜನರಿಗೆ ಕೇಳುವಹಾಗೆ ಮಾಡಲ್ಪಡುತ್ತಿತ್ತು. ಅವರ ಪೈಕಿ ದೇಶಬಂಧು ಮತ್ತು ಲಾಲಾಜೀಯವರ ಭಾಷಣವೂ ಭಾಷಿಸುವಾಗ ಅವರ ನಟನೆ ಮೊದಲಾದ ಸ್ವಭಾವಗಳೂ ಪಂಜರದಲ್ಲಿರುವ ಸಿಂಹವು ಪಂಜರದಲ್ಲಿ ಯಾವ ಸ್ಥಿತಿಯಲ್ಲಿ ಶಾಂತಿ ಇಲ್ಲದೆ ಅತ್ತಿತ್ತ ತಿರುಗಾಡುತ್ತದೋ ಆ ರೀತಿ ಅವರು ಸುತ್ತಲೂ ತಿರುಗಿ ಮಾತಾಡುವಾಗ ನೋಟಕರಿಗೆ ದಿವ್ಯಾನಂದವನ್ನುಂಟು ಮಾಡುತ್ತಿತ್ತು. ಶ್ರೀಮತಿ ಸರೋಜಿನೀ ದೇವಿಯವರ ವಾಕ್ಚಾತುರ್ಯವೂ, ಇಂಪೂ, ಗಂಭೀರತ್ವವೂ, ಅವಳ ಸ್ವರವೂ ಸಭಿಕರನ್ನು ಆತ್ಮಾನಂದಗೊಳಿಸುತ್ತಿದ್ದವು. ಡಾಕ್ಟರ್ ಬೆಸೆಂಟರನ್ನು ನೋಡುವಾಗ ಇದೀ ಸಭೆಯೇ ಮಹಾಲಕ್ಷ್ಮೀ ಆದಿಯಾಗಿ ಎದ್ದು ನಿಂತು ಅವರಿಗೆ ಸನ್ಮಾನಿಸಿದರು. ಆ ಎಪ್ಪತ್ತೈದು ವರುಷದ ಮುದುಕಿಯ ಭಾಷಣವು ಅತ್ಯಂತ ಸ್ವಾರಸ್ಯವಾಗಿತ್ತು. ಇದೆಲ್ಲಕ್ಕಿಂತಲೂ ಹಿಂದೂ ದೇಶದ ಒಗದ್ಗುರುತನಕ್ಕೆ ಲಾಯಕಾದ ಆ ಪಂಡಿತ ಮದನಮೋಹನ ಮಾಲವೀಯರು ಹಿಂದೂ ಸಭೆಯ ವಿಷಯದಲ್ಲಿ ಬಹಳ ಗಂಭೀರಸ್ವರದಿಂದ ಎರಡು ಗಂಟೆ ಹನ್ನೆರಡು ನಿಮಿಷ ಮಾತಾಡಿದ್ದು ಪ್ರತಿ ಒಬ್ಬನಿಗೂ ಅತ್ಯಾಶ್ಚರ್ಯವನ್ನುಂಟು ಮಾಡಿತು. ಹೀಗೆಯೇ ಮಹಮ್ಮದಾಲಿ, ಶೌಕತಾಲಿ, ರಾಮಲಿಂಗ ರೆಡ್ಡಿಯವರು ಮೊದಲಾದ ಪ್ರಮುಖರ ಮಾತು ಕೇಳಲಿಕ್ಕೆ ಅತಿ ಉತ್ಸಾಹವಾಗುತ್ತಿತ್ತು.

ಸ್ವಯಂ ಸೇವಕರ ವ್ಯವಸ್ಥೆಯನ್ನೂ ಅವರು ಶಾಂತತೆಯಿಂದ ಮಾಡುವ ಕೆಲಸವನ್ನೂ ನೋಡುವಾಗ ಡಾಕ್ಟರ್ ಹರ್ಡೀಕರರ ಪ್ರತಿಭಾ ಮತ್ತು ಮೇಧಾಶಕ್ತಿಯು ಇಂತಹ್ಯೇ ಇರಬಹುದೆಂದು ತಿಳಿಯುತ್ತಿತ್ತು. ಸುಮಾರು 200 ಜನ ಸ್ತ್ರೀ ಸ್ವಯಂ ಸೇವಕರೂ, 1000 ಜನ ಪುರುಷ ಸ್ವಯಂ ಸೇವಕರೂ ಮಾಡುತ್ತಿದ್ದ ಡ್ರಿಲ್ ವಗೈರೆ ಕವಾಯತುಗಳೂ, ರಸ್ತೆಯ ಸಂದಿನಲ್ಲಿ ಕುದುರೆಯ ಮೇಲೆ ಕುಳಿತು ನಡೆಸುತ್ತಿದ್ದ ಕುದುರೆ ಸವಾರ ಸ್ವಯಂ ಸೇವಕರ ನಡತೆಯು ಪ್ರತಿ ಒಬ್ಬರನ್ನೂ ತಲೆದೂಗುವಂತೆ ಮಾಡುತ್ತಿತ್ತು. ಮೂರು ನಾಲ್ಕು ಲಕ್ಷ ಜನರಿರುವ ಮಹಾಸಮ್ಮೇಳನದಲ್ಲಿ ಯಾವ ಗಲಾಟೆಯೂ ಆಗದೆ ಇದ್ದುದರಿಂದ ಪೊಲೀಸಿನವರಿಂದಲೇ ಹೆಚ್ಚಿನ ಗಲಾಟೆಯಾಗುವುದೋ ಎಂದು ಅನೇಕರು ಅಂದುಕೊಳ್ಳುತ್ತಿದ್ದರು. ಮಹಾತ್ಮ ಗಾಂಧಿಯವರು ಈ ವ್ಯವಸ್ಥೆಗಳನ್ನು ಇತರ ಮುಂದಾಳುಗಳೊಡನೆ ಪರೀಕ್ಷಿಸಿ ಬಹುಮಾನಗಳನ್ನು ಕೊಟ್ಟರು.

ಸ್ತ್ರೀ ವಾಲಂಟೆಯರುಗಳ ವಿಷಯ ಒಂದೆರಡು ಮಾತು ಬರಿಯಬೇಕಾಗಿದೆ. ಅವರಲ್ಲಿ 50, 60 ವರುಷದ ಮುದುಕಿಯರೂ ಸಹ ಇದ್ದರು. ದೇಶದ ಕೆಲಸವನ್ನು ಮಾಡಲು ಅನುಕೂಲ ದೊರೆತದ್ದಕ್ಕಾಗಿ ಅವರಿಗುಂಟಾದ ಆನಂದದ ಚಿಹ್ನೆಯು ಅವರಲ್ಲಿ ಕಂಡುಬರುತ್ತಿತ್ತು. ಸ್ತ್ರೀಯರ ಇಂಥಾ ಕೆಲಸಗಳನ್ನು ನೋಡಲಿಕ್ಕೆ ಕೊಡಗಿನಿಂದಲೂ ಸಹ ಸ್ತ್ರೀಯರನೇಕರು ಬಂದಿದ್ದರೆ ಬಹಳ ಚೆನ್ನಾಗಿತ್ತೆಂದು ಯೋಚಿಸಿದೆನು. ಅಷ್ಟೇ ಅಲ್ಲ, ನಮ್ಮ ಕೊಡಗು ದೇಶದ ಸ್ತ್ರೀಯರೂ ಸಹ ಇಂಥಾ ಮಹತ್ಕಾರ್ಯಗಳಲ್ಲಿ ಕೈಹಾಕಿ ತಮ್ಮ ತಮ್ಮ ಮನೆಗಳನ್ನು ಮೋಹಗೊಳಿಸಿ ಬರೀ ಖಾದಿ ಧರಿಸುವುದರಲ್ಲಿಯೂ ಆಭರಣಗಳ ಆಸೆಯನ್ನು ಕಡಿಮೆ ಮಾಡುವುದರಲ್ಲಿಯೂ ಉದ್ಯುಕ್ತರಾದ ಹೊರತು ನಮಗೆ ಮೋಕ್ಷವಿಲ್ಲವೆಂದು ನಂಬಿದೆನು.

ಅಂತೂ ಇಂತೂ ಕಾಂಗ್ರೆಸ್ ನಡೆಗಿದೇ ಮುಗಿಯಿತು. ಇನ್ನು ಉಳಿದಿರುವುದು ಪ್ರತಿ ಒಬ್ಬ ಪ್ರೇಕ್ಷಕನೂ ತಕ್ಕಮಟ್ಟಿಗೆ ಆ ಕಾಂಗ್ರೆಸಿನ ಠರಾವಿನಂತೆ ನಡೆಯುವುದೇ. ಪ್ರತಿ ಒಬ್ಬನೂ ಬಹಳ ಕೆಲಸವನ್ನು ತನ್ನ ದೇಶದಲ್ಲಿ ಮಾಡಬೇಕೆಂಬ ಕುತೂಹಲದಿಂದಲೇ ಹೊರಟೇ ಹೊರಟೆವು. ನಾನಂತೂ ಯಾವಾಗಲೂ ಕಾಂಗ್ರೆಸಿನ ಸ್ವಪ್ನದಲ್ಲಿಯೇ ಅಡ್ಡಾಡುತ್ತಿದ್ದೇನೆ. ರಜೆಸ್ಸಿನಲ್ಲಿಯೂ ಸಹ ಬೆಳಗಾಂ ಕಾಂಗ್ರೆಸಿಗೆ ಹೋಗಿ ಮಹಾತ್ಮರ ಮಹನೀಯರ ದರುಶನವನ್ನು ನೋಡಿದವರೇ ಧನ್ಯರು ಎಂದು ಯೋಚಿಸುತ್ತಾ ಇದ್ದೇನೆ. ಭಾರತಮಾತೆಗೆ ಜಯವಾಗಲಿ.

'ಪ್ರೇಕ್ಷಕ'

ಇಂಡಿಯಾ ಸಾಬೂನ್.

ಒಳ್ಳೆ ಆಗ್ಗ ! ! ಸರ್ವೋತ್ಕೃಷ್ಟ ! !

ನಮ್ಮ "ಇಂಡಿಯಾ ಸಾಬೂನ್" ಸರ್ವೋತ್ಕೃಷ್ಟವಾದುದೆಂದು ತಿಳಿದು ಎಲ್ಲಾ ಕಡೆಗಳಲ್ಲಿಯೂ, ಎಲ್ಲಾ ಊರುಗಳ ಅಂಗಡಿಗಳಲ್ಲಿಯೂ ಇದನ್ನೇ ಮಾರುತ್ತಿದ್ದಾರೆ. ಇದರಿಂದ ಒಗೆಯುವ ವಸ್ತ್ರಗಳು ಸ್ವಚ್ಛವಾಗುವದಲ್ಲದೆ, ಅವುಗಳ ನೂಲಿಗೆ ಇದರಿಂದ ಯಾವ ವಿಧವಾದ ಉಪದ್ರವವೂ ಉಂಟಾಗದೆ, ಹೆಚ್ಚಾದ ಬಾಳಿಕೆ ಬರುವವು. ಈ ವಿಷಯವನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಎಲ್ಲರಿಗೂ ಮುಂದಟ್ಟಾಗುವದು. ನಮ್ಮ ಗಿರಾಕಿಗಳಿಗೆ ಹೆಚ್ಚು ಲಾಭ ! ! ಧಾರಾಳವಾದ ಕಮಿಷನ್ ದೊರೆಯುವದು. ಆರ್ಡರುಗಳಿಗೆ ಮಾಲನ್ನು ಒಂದೋಬಸ್ತಾಗಿ ಪ್ಯಾಕ್‌ಮಾಡಿ ಅವರ ಅಡ್ರೆಸಿಗೆ, ಅಥವಾ ಅವರು ಅಪೇಕ್ಷಿಸುವ ಸಮೀಪದ ರೈಲ್ವೆ ಸ್ಟೇಷನಿಗೆ ರವಾನಿಸುತ್ತೇವೆ.

ಇಷ್ಟು ಮಾತ್ರವೇ ಅಲ್ಲ; ನಮ್ಮ ಗಿರಾಕಿಗಳಿಗೆ ಅವರವರ ಅದೃಷ್ಟ ಪರೀಕ್ಷಾರ್ಥವಾಗಿ ನಾವು ಕಳುಹಿಸುವ ಯಾವದೋ ಒಂದು ಸೋಪ್ ಪ್ಯಾಕಿನಲ್ಲಿ ೧೦ ರುಪಾಯಿನ ಅರ್ಧ ನೋಟನ್ನು ಇಟ್ಟಿರುತ್ತೇವೆ. ಅಂಥಾ ಅರ್ಧ ನೋಟಿನ ಪ್ಯಾಕನ್ನು ಹೊಂದಿದವರು ಆ ಅರ್ಧ ನೋಟಿನ ನಂಬರನ್ನು ತಿಳಿಸಿದಲ್ಲಿ ಬಾಕಿ ಅರ್ಧ ನೋಟನ್ನೂ ಅವರಿಗೆ ಬಹುಮಾನವಾಗಿ ತಕ್ಷಣವೇ ಕಳುಹಿಸಿಕೊಡುವೆವು. ಪ್ರಯತ್ನಿಸಿ ನೋಡಿ ! ವ್ಯಾಪಾರಕ್ಕೆ ವ್ಯಾಪಾರ ! ! ಅದೃಷ್ಟಕ್ಕೆ ಅದೃಷ್ಟ ! ! !

ಎನ್ ಕೃಷ್ಣಯ್ಯ ಶೆಟ್ಟಿ,

12—1 ನಗರ್ತಪೇಟೆ, ಬೆಂಗಳೂರು ಸಿಟಿ.

ಪತ್ರವ್ಯವಹಾರಗಳು.

ಬಾತ್ಮೀದಾರರ ಮತದ ಅಭಿಪ್ರಾಯಗಳಿಗೆ ಪತ್ರಿಕಾ ... ಉತ್ತರವಾದಿಗಳಲ್ಲ. ಸಂ.

ಪೊನ್ನಂಪೇಟೆ ಮತ್ತು ಮಡಿಕೇರಿ ಆಸ್ಪತ್ರೆ.

ಅಯ್ಯಾ ಪತ್ರಿಕಾಕರ್ತರೇ,

ಈಗ ದೇಶದಲ್ಲಿ ಹರಡಿಕೊಂಡಿರುವ ವಿಷಮ ಜ್ವರ, ಮಲೇರಿಯ ವಗೈರ ಕಾಯಿಲೆಗಳು ಪ್ರಬಲವಾಗುತಿರುವುದು ಸರಿಯಷ್ಟೆ. ಇಂಥಾ ಕಾಯಿಲೆಗಳ ಹಾವಳಿಯಿಂದ ದಕ್ಷಿಣ ಕೊಡಗು ತಾಲೋಕಿನಲ್ಲಿ ಮಾ|| ರಾ|| ಪಿ. ಯಸ್. ರಾಮಸ್ವಾಮಿ ಅಯ್ಯರ್ ಎಲ್. ಯಂ. ಪಿ. ಡಾಕ್ಟರವರು ತಾರೀಕು 10.1.25 ರಿಂದ ಪೊನ್ನಂಪೇಟೆಯಲ್ಲಿ ಸ್ವಂತವಾಗಿ ಆಸ್ಪತ್ರೆಯನ್ನು ತೆರೆದು ಅನೇಕ ಕಾಯಿಲಸ್ತರಿಗೆ ದಿನಂಪ್ರತಿ ಒಳ್ಳೆ ಔಷಧಿಗಳನ್ನು ಕೊಟ್ಟು ಕಾಯಿಲಸ್ತರಿಗೆ ಚಿಕಿತ್ಸೆ ಮಾಡುತ್ತಿರುವದು ಇಲ್ಲಿಯವರಿಗೆ ಬಹಳ ಅನುಕೂಲವಾಗಿದೆ. ತಾರೀಕು 26—1—25ರಲ್ಲಿ ಶ್ರೀಮಂಗಲನಾಡು ಹುದಿಕೇರಿಯಲ್ಲಿ ಒಂದು ಬ್ರಾಂಚ್ ಆಸ್ಪತ್ರೆ ತೆರೆದಿರುತ್ತಾರೆ. ಸದರಿ ಪೊನ್ನಂಪೇಟೆನಾಡಿನ ಕಡೆಗಡಿಯ ಗೋಣಿಕೊಪ್ಪಲಲ್ಲಿ ಶ್ರೀಮಂಗಲನಾಡಿನ ಕಡೆಗಡಿಯಾದ ಶ್ರೀಮಂಗಲದಲ್ಲಿ ಒಂದೊಂದು ಆಸ್ಪತ್ರೆ ಇರುವದರಿಂದ ಜನರಿಗೆ ಔಷಧಿಗೋಸ್ಕರ ದೂರ ನಡೆದು ಹೋಗುವದೇ ಪೂರಾ ಕಷ್ಟ. ಇಂಥಾದ್ದರಲ್ಲಿ ಪೊನ್ನಂಪೇಟೆಯಲ್ಲೂ, ಹುದಿಕೇರಿಯಲ್ಲೂ ಮೇಲ್ಕಂಡವರು ಆಸ್ಪತ್ರೆಗಳನ್ನು ಇಟ್ಟು ಕಾಯಿಲಸ್ತರಿಗೆ ಸಹಾಯ ಮಾಡುತ್ತಿರುವುದು ನಮ್ಮೆಲ್ಲರ ಅದೃಷ್ಟವಾಗಿದೆ. ಎರಡು ಜಾಗದಲ್ಲಿ ಸರಿಯಾಗಿ ಅನುಭವ ಹೊಂದಿರುವ ಕಂಪೌಂಡರುಗಳನ್ನು ಇಟ್ಟು ಕೆಲಸ ಮಾಡಿಸುತ್ತಾರೆ. ತಾನು ಹುದಿಕೇರಿಯಲ್ಲಿ ಒಂದು ವಾರಕ್ಕೆ ಮೂರು ದಿನ ಇದ್ದು ಕೆಲಸ ಮಾಡುವಂತೆಯೂ ನಾಲ್ಕು ದಿನ ಪೊನ್ನಂಪೇಟೆಯಲ್ಲಿ ಕೆಲಸ ಮಾಡುವ ಹಾಗಾಗಿ ಸಹ ಏರ್ಪಾಡು ಮಾಡಿರುವರು.

'ಪೊನ್ನಂಪೇಟೆಯವ'

ಶ್ರೀ ಕಾವೇರಿ ಬಸ್ ಸರ್ವೀಸು.

ಅಯ್ಯಾ ವಾಚಕ ಮಹಾಶಯರೇ,

ಶ್ರೀ ಕಾವೇರಿ ಬಸ್ ಸರ್ವೀಸ್ ಕಳೆದ ವಾರದಿಂದ ಮಡಿಕೇರಿಯಿಂದ ಮೂರ್ನಾಡಿಗಾಗಿ ವೀರರಾಜಪೇಟೆಗೆ ಪ್ರತಿ ದಿನವೂ ಒಂದಾವರ್ತಿ ಬೆಳಿಗ್ಗೆ 9 ಗಂಟೆಯಿಂದ ವೀರಾಜಪೇಟೆಯಿಂದ ಹೊರಟು ಮಧ್ಯಾಹ್ನ 11 ಗಂಟೆಗೆ ಮಡಿಕೇರಿಗೆ ತಲುಪಿ ಪುನಹ 4 ಗಂಟೆಗ ಮಡಿಕೇರಿಯಿಂದ ಹೊರಟು ಸಾಯಂಕಾಲ 6 ಗಂಟೆಗೆ ವೀರಾಜಪೇಟೆಯನ್ನು ಸೇರುತ್ತಿದೆ. ಆದರೆ ಸದರಿ ಬಸ್ಸಿನ ಡ್ರೈವರ್ಸ್‌ರು ಮಡಿಕೇರಿಯಿಂದ ವೀರಾಜಪೇಟೆಗೂ, ವೀರಾಜಪೇಟೆಯಿಂದ ಮಡಿಕೇರಿಗೂ ಸೀದಾ ಹೋಗುವವರಿಗೆ ಮಾತ್ರ 1—4—0 ಯಂತೆಯೂ, ಮಧ್ಯ ದಾರಿಯಲ್ಲಿ ಬಸ್ಸು ಹತ್ತುವವರಿಗೂ, ಇಳಿಯುವವರಿಗೂ ಮೈಲು 1ಕ್ಕೆ 0—1—3 ಯಂತೆಯೂ, ಚಾರ್ಜು ವಸೂಲ್ ಮಾಡುತ್ತಿರುವದನ್ನು ನೋಡಿ ತುಂಬಾ ವ್ಯಸನ ಪಟ್ಟುಕೊಂಡೆನು. ಸದರಿ

ಬಸ್ಸ್ ಸರ್ವಿಸಿನ ಡೈರೆಕ್ಟರುಗಳು ಕೊಡಗಿನ ಕೊಡವ ಮಹನೀಯರುಗಳಾಗಿದ್ದರೂ ಪರ ಸ್ಥಳದ ಮಹನೀಯರು ಈ ದೇಶದಲ್ಲಿ ಓಡಿಸುತ್ತಿರುವ ಬಸ್ಸುಗಳಿಗೆ ಹಾಕಿದ ದರಕ್ಕಿಂತಲೂ ಹೆಚ್ಚಾಗಿ ವಸೂಲುಮಾಡಿ ಧನ ಸಂಪಾದನೆಯನ್ನು ಮಾತ್ರ ಎಣಿಸುತ್ತಿರುವದು ಆಶ್ಚರ್ಯಕರವಾದ ವಿಷಾದವಲ್ಲವೇ? ಸದರಿ ಲೈಸೆನ್ಸಿನಲ್ಲಿ ತಿರುಗುತ್ತಿರುವವರಂದರೆ ಹೆಚ್ಚಾಗಿ ಬಡ ರೈತರೇ ಆಗಿದ್ದಾರೆ. ಬಡವರಂದರೂ, ಈಗಿನ ಕಾಲ ಮಹಿಮೆಯಿಂದಲೋ ಇನ್ನಾವ ಕಾರಣಗಳಿಂದಲೋ ಬಸ್ಸು ಓಡಾಡುತ್ತಿರುವದನ್ನು ತಿಳಿದ ಲಾಗಾಯಿತಿನಿಂದ ಎಲ್ಲೆಲ್ಲಿಯೂ ನಡೆಯಲು ಶಕ್ತಿ ಇದ್ದ ಒಬ್ಬೇ ಯಾರೊಬ್ಬನಿಗೂ ಒಂದು ತರದ ವಾಯುರೋಗ ಹಿಡಿದವನಾಗಿ ಕಾಣುತ್ತಿದೆ. ದೇಗೂ ಇರಲಿ, ದೇಶೀಯ ಮಹನೀಯರ ಈ ಬಗೆಯ ಉದಾರ ಗುಣಗಳಿಗೆ ಎಷ್ಟು ವಿಷಾದಪಟ್ಟರೂ ಸ್ವಲ್ಪವೇ. ಬಡ ರೈತರುಗಳು ತ್ವರಿತ ಕೆಲಸವಿದ್ದಾಗ ಬಸ್ಸಿನಲ್ಲಿ ಹೋಗದೆ ನಿವೃತ್ತಿಯೂ ಇಲ್ಲ. ಇಳಿದು ಜೇಬು ನೋಡಿದರೆ ಹೋಟೆಲಿಗೆ ಹೋಗಿ ಕಾಫಿ, ತಿಂಡಿ ವಗೈರೆಗಳಿಗೆ ಆಕಾಶ ನೋಡಬೇಕಾಗುವದು. ಅಂತೂ ಬಡವರು ಯಾವಾಗಲೂ ಬಡವರೇ. ಡೈರೆಕ್ಟರರು ಹಣದ ಯೋಚನೆಯಲ್ಲಿಯೇ ಇದ್ದಾರೆಯೋ ಏನೋ ತಮ್ಮ ಸಹೋದರ ಸಹೋದರಿಯರ ಬಡತನಕ್ಕೆ ಯಾವ ರಿಯಾಯಿತಿಯನ್ನೂ ತೋರಿಸುತ್ತಿರುವದನ್ನು ಯೋಚನೆ ಮಾಡಲಾರರು.

ಇದೇ ಲೈಸೆನ್ಸಿಗಾಗಿ ತಮ್ಮ ಚಾರ್ಜಿನಲ್ಲಿ ಬಸ್ಸು ಓಡಾಡಿಸಲು ಅಪ್ಪಣೆ ಕೊಡಿಸಿಕೊಡಬೇಕಾಗಿ ಮೂರು ನಾಲ್ಕು ಸರ್ವಿಸಿನವರು ಬೇಡಿಕೊಂಡರೂ ನಮ್ಮ ದೇಶದ ಡಿ. ಮ. ಸಾಹೇಬರವರು ಬೇರೆ ಯಾರಿಗೂ ಕೊಡದೆ ಶ್ರೀ ಕಾವೇರಿ ಬಸ್ಸು ಸರ್ವಿಸಿನವರಿಗೇನೇ ಲೈಸನ್ಸು ಕೊಟ್ಟಿರುವದಾಗಿ ತಿಳಿದೆನು. ಬೇರೆ ಸರ್ವಿಸಿನವರು ಮೈಲು ಒಂದಕ್ಕೆ 1 ಆಣೆಯ ದರದಲ್ಲಿ ಓಡಿಸುವುದಾಗಿ ಕೇಳಿದರೂ ಅವರಿಗೆ ಕೊಡದಿರುವುದು ಆಶ್ಚರ್ಯವಲ್ಲವೇ? ಒಬ್ಬರೇ ಎರಡು ಸರ್ವಿಸಿನವರಿಗೂ ಲೈಸನ್ಸು ಕೊಟ್ಟಿದ್ದಾದರೆ ರೋಡು ಹಾಳಾಗುವದೆಂಬ ಇರಾದೆಯಲ್ಲಿ ಒಬ್ಬರಿಗೇನೇ ಕೊಟ್ಟಿರುವುದಾದರೂ ಅದೇ ಒಂದು ಲೈಸನ್ಸನ್ನು ಕಮ್ಮಿ ದರದಲ್ಲಿ ಓಡಿಸುವವರಿಗೆ ಕೊಟ್ಟಿದ್ದರೆ ಸಾರ್ವಜನಿಕರಿಗೆ ಎಷ್ಟೋ ಉಪಕಾರ ಮಾಡಿದಂತಾಗುತ್ತಿರಲಿಲ್ಲವೇ? ಮಡಿಕೇರಿಯಿಂದ ಮೈಸೂರಿಗೆ ಈಗ ನಡೆಯುವ ೮—೧೨—೦ ರ ಚಾರ್ಜನ್ನು ಮೈಲಿಗೆ 1 ಆಣೆಯಂತೆ ವಸೂಲಿಸಿದರೆ ಪಕ್ಕ ಮೈಲುಗಳಿಗೆ [illegible] ದರದಿಂದ ೦—೭—೦ ಉಳಿತಾಯವಾಗುತ್ತಿರಲಿಲ್ಲವೇ? [illegible] ದಿಗಾದರೂ ಆಗುತ್ತಿರಲಿಲ್ಲವೇ? ಅದುದರಿಂದ ನಮ್ಮ ದಯಾಳುವಾದ ಡಿ. ಮ. ಸಾಹೇಬರವರು ದೇಶದ ಜನರ ಮೇಲಿನ ಕರುಣೆಯಿಂದ ನ್ಯಾಯವಾದ ರಿಯಾಯಿತಿಯನ್ನು ಇನ್ನಾದರೂ ತಡವಿಲ್ಲದೆ ಕೊಡಿಸುವರಾಗಿ ನಂಬಿಕೆಯುಳ್ಳವನು.

'ಮನನೊಂದವ.

ಕಾಂಗ್ರೆಸ್ ಕಮಿಟಿ

ಮ. ಗಜೆಟ್ ಎಡಿಟರ್ ಸಾಹೇಬರವರೇ!

ಹಾಲಿ ವರುಷದ ಕಾಂಗ್ರೆಸ್ ಸಭೆಗೆ ದಯಮಾಡಿದ್ದವರ ವಿಷಯವಾಗಿ ತಾವು ಕಳೆದ ವಾರ ಕೊಡಗು ಪತ್ರಿಕೆಯಲ್ಲಿ ಬರೆದ ಲೇಖನವನ್ನು ಓದಿ ನೋಡಿದೆನು. ನಿಮ್ಮ ಬರವಣಿಗೆಯಲ್ಲಿ ಜಾಣ್ಮೆ ಮರೆಯದು. ಹಾಗೆ ಬಂದವರು, ಕೈ ಕಟ್ಟಿ ಕೂರುತ್ತಾರೆಂದು ನಂಬದೆ, ಅದರ ಉತ್ಸಾಹದಿಂದ ಕೂಡಿದವರಾಗಿ, ಮಡಿಕೇರಿಯಲ್ಲಿ ಕಾಂಗ್ರೆಸ್ ಕಮಿಟಿಯನ್ನು ಸ್ಥಾಪಿಸಿದರು. ಈ ಕಮಿಟಿಯನ್ನು ಆರಂಭದಲ್ಲಿಯೇ ನಿರ್ಮೂಲ ಮಾಡಬೇಕೆಂದು ಕೆಲವರು ಯೋಚಿಸಬಹುದು. ಏಕೆಂದರೆ [illegible] ಸಂಘದಲ್ಲಿ ಇದರ ದೆಸೆಯಿಂದ ವೈಮನಸ್ಸು ಉಂಟಾದೀತೋ ಏನೋ! ಕಾಂಗ್ರೆಸ್ ಅಧಿವೇಶನದಲ್ಲಿ [illegible] ಯಾವ ತರದ ಭಯವೂ ತೋರದು. ಕಾಂಗ್ರೆಸ್ ಕಮಿಟಿ ಸ್ಥಾಪಿಸಲ್ಪಟ್ಟಿದ್ದರೂ ಕೊಡಗಿನಲ್ಲಿ ಹೊಸ್ತು ಕೆಲಸ ನಡೆಯುವಂತಾಗದ ಈ ದೇಶದ ಕಾಂಗ್ರೆಸ್ [illegible] ಸಂಸ್ಥಾಪನೆ ಅನುಕೂಲಗಳಿಲ್ಲ. [illegible] ಸಹಕಾರಿ [illegible] (Res-ponsive Co-operation) [illegible] ದರ್ಶದಲ್ಲಿ ವಿಸ್ತರಿಸಿ [illegible]. ಮಹಾತ್ಮ ಗಾಂಧಿಯವರು ಅಹಿಂಸಾ ಮಾರ್ಗವನ್ನು ಪ್ರತಿಪಾದಿಸಿದರು. ಅದುದರಿಂದಲೇ [illegible] ಇವರಿನ್ನು ಕೆಲಸ ಮಾಡುವರು. ಭಿನ್ನಾಭಿಪ್ರಾಯಗಳು ಇವರಲ್ಲಿ ತಲೆದೋರುತ್ತದೆ. ಇಂಥಾ [illegible] ಕಾಂಗ್ರೆಸ್ ಮಂಡಲಿಗಳು ಕೆಲಸ ಮಾಡಬೇಕಾಗುತ್ತದೆ.

ಉಡುಪಿನ ವಿಚಾರವಾಗಿ ಕೊಡಗಿನಲ್ಲಿ ಎಷ್ಟೋ ಬೋಧನೆ ಮಾಡಿದರೂ, ಹ್ಯಾಟು ಬೂಟನ್ನು ಹಾಕುವವರು ನಮಗೆ ಕಾಣಸಿಗುವರು. ಎರಡು ವರುಷಗಳ ಹಿಂದೆ ಕೊಡಗಿನಲ್ಲಿ ಆರಂಭಿಸಿದ ಸ್ವದೇಶಿ ಚಳವಳಿ ಬೇಗನೆ ನಿಂತು ಹೋಯಿತು. ಈ ವಿಚಾರವಾಗಿ ಚಳುವಳಿಗಳು ಮತ್ತೊಮ್ಮೆ ನಡೆದಷ್ಟು ಪ್ರಯೋಜನವಿದೆ. ಜನರ ಪ್ರೀತಿಯನ್ನು ಗಳಿಸಿ ಕೆಲಸ ನಡೆಯಬೇಕಿರುತ್ತೆ. ದೇಶದಲ್ಲಿ ರಾಷ್ಟ್ರೀಯ ಭಾವನೆಯುಂಟಾಗಲಿಕ್ಕೆ ಜನರು ಹಿಂದುಸ್ಥಾನಿಯನ್ನು ಅಭ್ಯಸಿಸಬೇಕು. ಪಂಚಮರ ಏಳಿಗೆಗಾಗಿ ಹೆಚ್ಚು ಮನಸ್ಸಿನಿಂದ ಕೆಲಸ ಮಾಡಲಿಕ್ಕೆ ಮೆಂಬರುಗಳಿಗೆ ಸಮಯವಿದೆ.

ಸಾಹೇಬರೇ! ಜನರಿಗೆ ಬುದ್ಧಿ ಬಂದಂತೆ ತೋರುತ್ತದೆ. ರಾಜಕೀಯ ವಿಚಾರದಲ್ಲಿ ನಮ್ಮ ದೇಶದ ಜನರು ಮಕ್ಕಳಾಗಿದ್ದರು; ಈಗ ಬಲಿಯುತ್ತಲಿದ್ದಾರೆ. ಕಾಂಗ್ರೆಸ್ ಬ್ರಾಂಚು ಸ್ಥಾಪಿಸಲ್ಪಟ್ಟ ವಿಚಾರವು ಎಲ್ಲರಿಗೂ ಸಂತೋಷವನ್ನುಂಟು ಮಾಡುತ್ತದೆ.

ಭಾರತ ಪುತ್ರ.

ರಾಮಕುಂಜ ಸಂಸ್ಕೃತ ಶಾಲೆ.

ಅಯ್ಯಾ,

ಶ್ರೀ ಹರಿಹರಪುರದ ಶ್ರೀರಾಮಾನಂದ ಸರಸ್ವತೀ ಶ್ರೀಪಾದಂಗಳವರು ಜನವರಿ ತಾರೀಖು 16ನೇ ಗುರುವಾರ ಅಪರಾಹ್ನ 2 ಗಂಟೆಗೆ ಇಲ್ಲಿನ ರಾಮಕುಂಜ [illegible] ಸಂಸ್ಕೃತ ಪಾಠಶಾಲೆಗೆ ಚಿತ್ತೈಸಿದ್ದರು. ಮರುದಿನ ತಾರೀಖು 17ನೇ ಶುಕ್ರವಾರ ಸದರಿಯವರಿಂದ ಪೂಜಿಸ [illegible] ಒಂದಿದ್ದ ಶಾರದಾ [illegible] ಸವರ ಸನ್ನಿಧಿಯಲ್ಲಿ ಈ ಶಾಲೆಗೆ ಸಂಬಂಧಪಟ್ಟ ಒಂದು ಪ್ರಸ್ತುತಿಯಾತ್ರೆ. [illegible] ಪ್ರವೇಶ ಮಹೋತ್ಸವವು ಅತಿ ವಿಜೃಂಭಣೆಯಿಂದ ಜರಗಿತು. ತುಂಬಾ ಸಂತೋಷಕರ. ಇನ್ನು ಮುಂದೆ ಸದ ಊರುಗಳಿಂದ ಬರತಕ್ಕ ಸಂಸ್ಕೃತ ವಿದ್ಯಾರ್ಥಿಗಳಿಗೆ ಭೋಜನಾದಿ ಸಕಲ ಕಾರ್ಯಗಳೂ ಬಹು ಸುಲಭ ಖರ್ಚಿನಿಂದಲೇ ನೆರವೇರುವದೆಂದೂ ಮತ್ತು ಧರ್ಮಶಾಸ್ತ್ರದಲ್ಲಿದ್ದ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉಪಕಾರ ಮತ್ತು ಪ್ರತಿ ದಿನವಾರಗಳಲ್ಲಿ ಒಳ್ಳೆ [illegible] ಸದರಿ ಶಾಲಾ ಸ್ಥಾಪಕ ಶ್ರೀಮತ್ರೀ [illegible] ದಾಕಲಿಸಿರುವನು. [illegible] ಬಡ [illegible] ಕೊಡುವದಾಗಿ [illegible] ಮಾಡಿದ ಸಂಗತಿ ಕೂಡಾ ತಿಳಿಸಲು ಅತ್ಯಾನಂದ ಪಡುತ್ತೇನೆ

ಮ. ಶ್ರೀನಿವಾಸ ಸ್ವಾಮಿ,
ಮಂಗಳೂರು.

ಕೊಡಗಿನ ಮಂಗಳ [illegible]
ನಾಲ್ಕು ಪ್ರಶ್ನೆಗಳು.

ಅಯ್ಯಾ ಸಂಪಾದಕರುಗಳೇ,

[illegible] ಕಳೆದ ಸೆಪ್ಟಂಬರ್ ತಿಂಗಳ 17ರ ಕೊಡಗು ಪತ್ರಿಕೆಯಲ್ಲಿ ಹಿಂದಣ 6 ಪ್ರಶ್ನೆಗಳಿಗೆ ಬರೆದ ಉತ್ತರವು ವಾಚಕ ಮಹಾಶಯರುಗಳಿಗೆ [illegible] ಅದರಂತೆ ಈಗಲೂ ಈ ಕೆಳಗಿನ 4 ಪ್ರಶ್ನೆಗಳಿಗೂ ಮುಂದಣ ಪತ್ರಿಕೆಯಲ್ಲಿಯೇ ಉತ್ತರವನ್ನು ಕೊಡುತ್ತಾರೆಂದಾಗಿ ನಂಬುತ್ತೇನೆ

1 ಈ ದೇಶದಲ್ಲಿ ಕೊಡಗು ರಾಜರು ಜಹಗೀರು [illegible] ಉಂಬಳಿ ಮಾನ್ಯ [illegible] ಸಾರ್ವಭೌಮ [illegible] ಇವುಗಳೆಲ್ಲಾ ಈಗ ಸುರಕ್ಷಿತವಾಗಿವೆಯೋ?

2. ಈ ಮಾನ್ಯಗಳನ್ನೆಲ್ಲಾ ಒಬ್ಬರೇ ರಾಜರು ಉಂಬಳಿ ಕೊಟ್ಟಿರುತ್ತಾರೋ? ಅಥವಾ ಬೇರೆ ರಾಜರು ಸಹ ಕೊಟ್ಟಿರುತ್ತಾರೋ? ಹಾಗಿದ್ದರೆ ಬೇರೆ ರಾಜರು ಸಹ ಕೊಟ್ಟಿದ್ದರೆ ಯಾವ ಯಾವ ಮಾನ್ಯಗಳನ್ನು ಯಾವ ಯಾವ ರಾಜರು ಕೊಟ್ಟಿರುತ್ತಾರೆ.

3 ತಮಗೆ ಸಾಧ್ಯವಾದಷ್ಟು ಮಾನ್ಯಗಳ ಸನ್ನದನ್ನು ಈ ಪತ್ರಿಕೆಯಲ್ಲಿ ಪ್ರಕಟ ಪಡಿಸುವಿರಾ.

4. ಹಿಕ್ಕಿಲದ ಚಿತ್ರದುರ್ಗದವರು ಕೊಡಗು ದೇಶದ ಮಾನ್ಯಗಳಿಗೆ ಹ್ಯಾಗೆ ಪ್ರವೇಶವಾಯಿತು, ಎಂಬೀ ನಾಲ್ಕು ಪ್ರಶ್ನೆಗಳಿಗೆ ಉತ್ತರವನ್ನು ನಿರೀಕ್ಷಿಸುತ್ತೇನೆ.

ಉತ್ತರ ಕೊಡಗು ನಿವಾಸಿ.

ಕೊಡಗು ವಿದ್ಯಾಭಿವೃದ್ಧಿ ಸಂಘ.

ಮಹಾಶಯರೆ,

ಈ ಸಂಘವು 1917ನೇ ಇಸವಿ ಮೊದಲು 1922ನೇ ಇಸವಿಯ ವರೆಗೆ ಬಹು ಚೆನ್ನಾಗಿ ನಡೆಯುತ್ತಾ ಬಂದು 1923ನೇ ಇಸವಿಯಿಂದ ಸ್ವಲ್ಪ ಶಿಥಿಲ ಬಂದಂತೆ ಕಂಡುಬರುತ್ತೆ. ಆ ಕಾಯಿಲೆಯ ಕಾರಣವನ್ನು ಕಂಡುಹಿಡಿಯಲು ಪ್ರಯತ್ನಿಸಿದ್ದಲ್ಲಿ ಕೊಡಗು ಕೊಡಗೇತರರೆಂಬ ಭೇದವಿಟ್ಟ ದ್ದು ತಪ್ಪು. ಏಕೆಂದರೆ ತಾನು ಹಾಗೆ, ತಾನು ಹೀಗೆ ಅನ್ನುವರು ಕೆಲವರು, ಈ ಹಣ ತಾನು ಕೊಡುವದಲ್ಲದೆ ಇದರಿಂದ ಯಾವ ಪ್ರಯೋಜನವೂ ಕಾಣುವದಿಲ್ಲವೆಂದನ್ನುವವರು ಕೆಲವರು, ಇನ್ನು ಕೆಲವರು ಗಳಿಕೆಯ ಮಕ್ಕಳು ಓದಿ ಬಂದು ತನ್ನನ್ನು ಹೊತ್ತಿರುವ ಭೂದೇವಿಯನ್ನೇ ಮರೆಯುತ್ತಾರೆಂದೂ, ಈ ಮೇರ ಪೂರ್ವಾಪರ ಜ್ಞಾನವಿಲ್ಲದೆ ಹೋರಾಡಿಕೊಂಡು ನಮ್ಮ ಮುಂದಕ್ಕೆ ಬರುವ ಯುವಕರನ್ನು ಹಿಂದಕ್ಕೆ ತಳ್ಳಿ ಮೂಲೆಗೊತ್ತಿದರೆ ಅದರ ಫಲವನ್ನು ನಾವೇ ಅನುಭವಿಸಬೇಕಾಗುತ್ತೆ. ಈ ಮೇಲ್ಕಂಡ 4 ಕಾರಣಗಳನ್ನು ಇಲ್ಲಿ ಸೂಕ್ಷ್ಮವಾಗಿ ಯೋಚಿಸುವ.

1. ಕೊಡಗರು, ಕೊಡಗೇತರರೆಂಬ ಭೇದ ಇಡದೆ ಒಂದಾಗಿ ಕೊಡಗಿಗೆ ಒಂದು ಸಂಘ ತೆರೆಯುತ್ತಿದ್ದರೆ, ಕಳೆದ ವಾರದಲ್ಲಿ ಪ್ರಕಟವಾಗಿದ್ದ ವೀರಶೈವ ವಿದ್ಯಾನಿಧಿ, ಗೌಡರುಗಳ ವಿದ್ಯಾಭಿವೃದ್ಧಿ ಸಂಘ, ಬ್ರಾಹ್ಮಣರ ವಿದ್ಯಾಭಿವೃದ್ಧಿ ಸಂಘ, ಅಂಜುಮನ್ ಸಂಘ, ಎಂಬ ಪಂಚ ಕಲ್ಯಾಣಿಯಾಗುತ್ತಿತ್ತೇನು? "ಪಂಚಮಂ ಕಾರ್ಯ ಸಿದ್ಧ್ಯಾಂಚ" ಈ ಐದು ಸಂಘಗಳು ಪ್ರತ್ಯೇಕ ಪ್ರತ್ಯೇಕ ಯಾರಿಗೋಸ್ಕರ ಕೆಲಸ ಮಾಡುತ್ತವೆ! ಒಬ್ಬೊಬ್ಬರ ಕ್ಷೇಮಕ್ಕಾಗಿ ಅಲ್ಲ ಈ ಕೊಡಗು ದೇಶದ ಕ್ಷೇಮಕ್ಕಾಗಿ ಅಂದರೆ ದೊಡ್ಡ ದೊಡ್ಡ ಪರೀಕ್ಷೆಯಲ್ಲಿ ತೇರ್ಗಡೆ ಆಗದಿದ್ದರೆ ಸರಕಾರದವರು ನಿಮ್ಮ ದೇಶದಲ್ಲಿ ನ್ಯಾಯವಾದ ವಿದ್ಯಾವಂತರಿಲ್ಲದ್ದರಿಂದ ನಾವು ಪರದೇಶೀಯರನ್ನು ಕರತರಬೇಕಾಯಿತೆಂದು ಅನ್ನುವಾಗ್ಗೆ ದೇಶೀಯರಿಗೆ ಕೊರತೆಯೋ, ಯೂ, ನಂಗಡಿಂದೆನ್ನುವವರಿಗೆ ಕೊರತೆಯೋ? ಅದುದರಿಂದ ನಂಗಡ ಭೇದವಿಲ್ಲ, ದೇಶದಲ್ಲಿ ವಿದ್ಯಾಭಿವೃದ್ಧಿ ಒಗ್ಗೆ ಎಲ್ಲರೂ ಹೋರಾಡಬೇಕು.

2. ಈ ಹಣ ಕೊಡುವದರಿಂದ ಯಾವ ಪ್ರಯೋಜನವೂ ಕಾಣುವದಿಲ್ಲ, ಅನ್ನುವದರಲ್ಲಿ ಕೆಲವು ಪಟ್ಟಿಗೆ ನ್ಯಾಯವಿದೆ. ಈ ಸಂಘದ ಆಡಳಿತ ಮಂಡಳಿಯವರು ಆಗಿಂದಾಗ್ಗೆ ಮೀಟಿಂಗ್ ಮಾಡಿ ಸದರಿ ಮೀಟಿಂಗಿನ ಫಲಿತಾಂಶ ಮತ್ತು ಜಮಾಖರ್ಚಿನ ಲೆಕ್ಕ ಪತ್ರದ ಪ್ರಕಟಿಸುತ್ತಿರುತ್ತಿದ್ದರೆ ಈ ಸವಾಲಿಗೆ ಕಾರಣ ಇರುತ್ತಿರಲಿಲ್ಲ, ಮತ್ತು ಕಳೆದ ಒಂದು ಪತ್ರಿಕೆಯಲ್ಲಿ ಜನರಲ್ ಮೀಟಿಂಗ್ ಮಾಡಲು ಕೋರಂ ಆಗಲಿಲ್ಲವೆಂದು ಪ್ರಕಟವಾದದ್ದು ನೋಡಿದೆನು. (ಪಣ ತಿಂಬಿಕ್ ಸೂರೆಯ್, ಅಡಿ ತಿಂಬಿಕ್ ಚಂಡೆ) ಮುಖ್ಯವಾದ ಸ್ಕಾಲರ್‌ಶಿಪ್ ಕೊಡಲು ಜನರಲ್ ಬಗ್ಗೆ ನಾಡು ಕಮಿಟಿಗಳು ಬೇಡ, ಮಡಿಕೇರಿ ನಿವಾಸಿಗಳೇ ಸಾಕು, ಈಗ ಚಂದಾ ವಸೂಲಾತಿಗೆ ನಾಡು ಕಮಿಟಿ ಮತ್ತು ದೇಶೀಯರೆಲ್ಲರೂ ಬೇಕು. ಇದೆಲ್ಲಿಯ ನ್ಯಾಯ? ಇದಕ್ಕೆ ಕಾರ್ಯನಿರ್ವಾಹಕ ಸಮಿತಿಯವರೇ ಜವಾಬು ಕೊಡಬೇಕಾಗಿದೆ

ಅವರ ದೇಶೀಯರ ಕೊಟ್ಟ ಚಂದ ಎಲ್ಲಿಯೂ ಹೋಗಿ [illegible] ಆಗಿದೆ ಅದರ ಫಲಿತಾಂಶವು ದೇಶದ [illegible] ಈಗ ಕಂಡ ಹಾಗೆಯೇ ಇದೆ, ಇನ್ನು ಕಾಣಲೂ ಬಹುದು. ಅಂದರೆ 1924ರ ವರೆಗೆ 22 ಯುವಕರಿಗೆ 8,655 ರು ಗಳು ಸ್ಕಾಲರ್‌ಶಿಪ್ ಎಂದೂ, 5 ಯುವಕರಿಗೆ 1,720 ರು ಸಾಲ [illegible] ಅಂತು ಜಮ್ಮಾ 30 ಯುವಕರಿಗೆ 10,375 ರೂಪಾಯಿಗಳು ಈ ಸಂಘದಿಂದ ವಿದ್ಯಾಭಿವೃದ್ಧಿಗಾಗಿ ಕೊಡಲ್ಪಟ್ಟಿದೆ. ಮೇಲ್ಕಂಡ ಸಾಲಿಗರಲ್ಲಿ 10 ಜನರು [illegible] ಉದ್ಯೋಗ ಹೊಂದಿ 857 ರೂಪಾಯಿ ಮರುಪಾವತಿ [illegible].

3. [illegible] ಕಲಿತು ಬಂದವರ ನಡತೆ ನ [illegible] ದೇಶೀಯರಲ್ಲಿ ನ್ಯಾಯವಿದೆ, ಡಿಗ್ರಿ ಪಡೆದವರಲ್ಲಿಯೂ ನ್ಯಾಯವಿದೆ. ಹ್ಯಾಗೆಂದರೆ ಕಂಡೆ ಕೊಡಿಚ್ [illegible] ದೇವನನ್ನೂ, ದೇಶೀಯರ ಸ್ಥಿತಿಗತಿಯನ್ನು ಪೂರ್ವಾಪರ ತಿಳಿದು ನಡೆಯುವದಿಲ್ಲವೆಂದು ಯುವಕರಿಗಿದೇ—ಡಿಗ್ರಿಗೂ, ಬುದ್ಧಿಗೂ ವ್ಯತ್ಯಾಸವಿಲ್ಲ. [illegible] ಮತ್ತೆ ಮನಸ್ಸಿನ ಕೈಬಿಟ್ಟರೆ ಏರುಗುತ್ತೋ, [illegible] ವಿದ್ಯೆ ಬೇಕಾದಷ್ಟು ಓದಿದರೂ ಅವರಿಗೆ ಡಿಗ್ರಿ ಕೊಡುವುದ್ದರ ಅವರೇನು ಮಾಡ್ಯಾರು? ಡಿಗ್ರಿ ಪಡೆದವನ [illegible] ಬಂದಂತೆ, ಅದರಿಂದ ಅವರನ್ನು ಯೋಚಿಸಿ [illegible] ಮುಂದಣ ಕಾರ್ಯವನ್ನು ಕೈ ಬಿಡದೆ ಪ್ರತಿ ಕೊಡಗನಾಗಿ ಹುಟ್ಟಿ ಪ್ರಾಯಕ್ಕೆ ಬಂದವರೆಲ್ಲಾ ಅವರ ಶಕ್ತ್ಯಾನುಸಾರ ಸಹಾಯ ಮಾಡಬೇಕಾದದ್ದು ಅವರ ಕರ್ತವ್ಯ. ಹಚ್ಚಿನ ಮೊಬಲಗು ಅಂದರೆ ವರುಷ ಒಂದರ ನೂರು ರೂಪಾಯಿಗಳ ಮೇಲೆ ಕೊಡುತ್ತಿದ್ದ ರಾಯ ಬಹದ್ದೂರ್ ಕೋದಂಡ ಮೊಣ್ಣಯ್ಯನವರು, ರಾಜಕಾರ್ಯ ಪ್ರಸಕ್ತ ಮನೆಯಪಂಡ ಮುತ್ತಣ್ಣನವರನ್ನೂ ಕಳಕೊಂಡದ್ದು ಈ ಜನರನ್ನು ಕಳಕೊಂಡಂತಾಯಿತು. (ಅವರ ಸ್ಕಾಲರ್‌ಶಿಪ್ 2).

4ನೇ ಅಂಶವನ್ನು ಯೋಚಿಸಬೇಕಾದದ್ದೇನಂದರೆ, ನಮ್ಮ ಕರ್ತವ್ಯವು ವಿದ್ಯಾಭಿವೃದ್ಧಿಗಾಗಿ ಆಗಿರುವಾಗ್ಯೆ ವಿದ್ಯಾ ಇಲ್ಲಾದವರೆಲ್ಲಾ ನಮ್ಮ ಈ ತೆರಂಡರೆಯನ್ನು ಕೆಲವು ಮಟ್ಟಿಗೆ ಸ್ವೀಕರಿಸಿದರೆ ನಮ್ಮ ಕೆಲಸವು ಕೇವಲ ಸುಲಭ. ನಮ್ಮ ಸಂಘದ ಮೆಂಬರುಗಳೇ ಹುಡುಗರ ತಂದೆಯರು. ಅವರಿಂದೆಲ್ಲಾ ಚಂದಾ ವಸೂಲ್ಮಾಡುವಂತೆ ಮಕ್ಕಳಿಗೆ ಹೇಳಿದರೆ ಒಂದು ಹೋಗುತ್ತೆ. ಅಲ್ಲದೆ ಬೆಪ್ಪುನಾಡು ಸಹಕಾರಿ ಸಂಘದ ಪ್ರೆಸಿಡೆಂಟರಾದ ಮೇ. ಅಪ್ಪಾರಂಡ ಪೂಣಚ್ಚ ಬಿ.ಎ. ಬಿ.ಎಲ್. ಯವರು 1923ನೇ ಇಸವಿಯಲ್ಲಿ 31-8-0, 1924ರಲ್ಲಿ 41-8-0 ಯನ್ನು ಅವರ ಸಂಘದ ಆದಾಯದಿಂದ ಈ ಸಂಘಕ್ಕೆ ಕಳುಹಿಸಿ ಕೊಟ್ಟಂತೆ ಬಾಕಿ ಎಲ್ಲಾ ಸಂಘದವರು ಅವರ "ಕಾಮನ್ ಗುಡ್ ಫಂಡ್" ಮತ್ತು ಲಾಭವನ್ನು ಸಹ ಈ ಸಂಘಕ್ಕೆ ಕಳುಹಿಸಿಕೊಡುವಂತೆಯೂ, ಫಾರೆಸ್ಟ್ ಮತ್ತು ಪೋಲೀಸ್ ಇಲಾಖೆಯವರು ಕಾಬೂಲಿಯಿಂದಲೂ, ಗಾರ್ಡುಗಳಿಂದಲೂ ವಸೂಲ್ಮಾಡಿಕೊಡುವಂತೆ ಟೆರಿಟೋರಿಯಲ್ ಫೋರ್ಸ್ ಸುಬೇದಾರರುಗಳು ತಲಾ ಒಂದು ರೂಪಾಯಿಯಂತೆ ವಸೂಲ್ಮಾಡಿಕೊಟ್ಟಲ್ಲಿ ಅವರ ಮಕ್ಕಳಿಗೇನೇ ಮುಂದಣ ಅಭಿವೃದ್ಧಿಗೆ ಈಗಲೇ ಹಣ ಸೇರಿಸಿ ಇಟ್ಟಂತಾಗುವದರಿಂದ ಪ್ರತಿ ಒಬ್ಬ ಕೊಡಗನು ಈ ಬಾಬನ್ನು ಯಾವ ಬಗೆಯಾದ ಭಿನ್ನಾಭಿಪ್ರಾಯಗಳಿಲ್ಲದೆ, ಅಭಿಪ್ರಾಯಗಳಿಲ್ಲದೆ, ಮಹತ್ತು ನಮ್ಮ ಆದಾಯದಲ್ಲಿ ರೂಪಾಯಿಗೆ ಒಂದಾಣೆಯಂತೆ ಈ (ವಿದ್ಯಾ ದಾನಂ ಮಹಾ ದಾನಂ) ಸಂಘಕ್ಕೆ ಕೊಡುತ್ತೆ ಬಂದಲ್ಲಿ ವಿದ್ಯಾ ದಾನದ ಫಲವನ್ನು ಪಡೆಯುವರಾಗಿ ವಿನಂತಿ,

ಕ್ಸ್, ಕ್ಸ್,

ಭಂಗಾರದಂತಹ ಆಸ್ತಿ. ೧೦೦ ರುಪಾಯಿಗಳಿಗೆ ೫೬೦ ರುಪಾಯಿಗಳ ಪ್ರತಿಫಲ.

ಜೀವವಿಮೆಯನ್ನು ಮಾಡಿ ಮೃತಪಟ್ಟ ಒಬ್ಬ ಮನುಷ್ಯನು ಇದಕ್ಕಿಂತಲೂ (ನಂಬಿಕೆಯುಳ್ಳ) ಗಟ್ಟಿಯಾದ ಜೀವನಾಧಾರ (ಆಸ್ತಿ), ಅಥವಾ ಇದಕ್ಕಿಂತಲೂ ಹೆಚ್ಚು ಉತ್ಪತ್ತಿ (ಹುಟ್ಟುವಳಿ) ಯಾಗುವ ಬೇರೆ ಯಾವ ರೀತಿಯಲ್ಲಿ ಹಣವನ್ನೂ ವಿನಿಯೋಗಿಸಬಹುದಾಗಿತ್ತು ?

ಈ ಮನುಷ್ಯನು ಓರಿಯಂಟಲ್ ಗೌರ್ನಮೆಂಟ್ ಸಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿಯಲ್ಲಿ 1921ನೇ ಇಸವಿ ಸೆಪ್ಟಂಬರ್ ತಿಂಗಳಿನಲ್ಲಿ ತನ್ನ ಜೀವವಿಮೆ ಮಾಡಿ 3 ವರ್ಷಗಳ ನಂತರ ಮೃತಪಡಲಾಗಿ ಅದುವರೆಗೆ ಆತನು ಕಂಪೆನಿಗೆ 274—8—0 ರುಪಾಯಿಗಳನ್ನು ಕಂತುಗಳಾಗಿ ಪಾವತಿ ಮಾಡಿದ್ದರೂ ಆತನ ಕುಟುಂಬದವರಿಗೆ 1,536 ರುಪಾಯಿಗಳನ್ನು ಕಂಪೆನಿಯವರು ಪಾವತಿ ಮಾಡಿರುತ್ತಾರೆ.

ಓರಿಯಂಟಲ್ ಕಂಪೆನಿಯ ಜೀವವಿಮೆಯ ಪತ್ರವು ಆತನ ಕುಟುಂಬದವರಿಗೆ ಎಷ್ಟು ಪ್ರಯೋಜನವನ್ನೂ ಅನುಕೂಲತೆಯನ್ನೂ ಉಂಟುಮಾಡಿಕೊಟ್ಟಿರುವುದನ್ನು ಪರ್ಯಾಲೋಚಿಸಿ ನೋಡಿರಿ ! 4.2

ಸಂಪತ್ತಿಯ ಸಾಧನಗಳು.

ಅಯ್ಯಾ ಬಂಧುಗಳೇ ಸಂಪತ್ತಿಯು ಅಸ್ಪಷ್ಟವಾಗಿ ಯಲ್ಲದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು ಅದನ್ನು ಶೋಧಿಸಿ ತೆಗೆಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು.

ಲಕ್ಷಾವಧಿ ರೈತರು ಮಾಡಿ ಅನುಭವ ತೆಗೆದುಕೊಂಡಿರುವರು. ಭೂಮಿಯತಕ್ಕ ತರತರದನೇಗಿಲುಗಳೂ ಗಾಣಗಳೂ ದೊರೆಯುತ್ತವೆ. ಕಿಸಾನಗಾಣವು ಒಂದು ಗಂಟೆಗೆ ೪೦೦ ಪೌಂಡು ಕಬ್ಬನ್ನು ಹಿಂಡಿ ಹಲ್ಲುತ್ತದೆ.

„ಕೊ" ಬುಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,
4.3 **ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ.**

FOR SALE IN MERCARA.

European bunglow, outhouses and 50 cents of land close to club.

Apply:—

Peirce Leslie & Co., Ltd.
3.2 **MANGALORE.**

ಪ್ರಕಟಣೆ.

ಮಡಿಕೇರಿಯಂಡ ಸೋಮಯ್ಯನವರ ಪ್ರಿಂಟಿಂಗ್ ಕೋವಿಯನ್ನು ಫೆಬ್ರವರಿ ತಾರೀಕು 15ಕ್ಕೆ ವೀರರಾಜಪೇಟೆ ಮು. ಟಿ. ರಾಮಸ್ವಾಮಿ ಪಿಳ್ಳೆಯವರ ಮನೆ ಎದುರಿಗೆ ಲಾಟರಿ ಹಾಕಲ್ಪಡುತ್ತೆ. ಚಂದಾ ಹಾಕಿದವರು ಬರಬಹುದು.

ನ. ಸೋಮಯ್ಯ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಜಾಹೀರುಹಣ ಸಲ್ಲಿಸಲಿಕ್ಕಿರುವವರೂ ದಯವಿಟ್ಟು ವೀರರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮ್ಯಾನೇಜರ್,
15.9.24. 'ಕೊಡಗು' ಲಿಮಿಟೆಡ್.

FOR SALE.

OVRLAND 'MODEL 4' recently completely ever-hauled and all necessary replacements effected and repainted. and not used since. New Battery (never used). Price Rs. 2,000.

Apply to:—

4.3 The Hunsur Works, Hunsur.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಜಮಾಬಂದ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ವರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೬ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಎಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ.
ಸಿ. ಯಮ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು, 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು ? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ:—

ಮೇನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಬ್ರಿಚಾಫ್ ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡೆಕೊಳ್ಳಬಹುದು.

ಮಡಿಕೇರಿ
17.9.24. ಮೇನೇಜರ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.
Telegraphic Address:-"SHOOTER" Bombay.

[24 22] Please write for latest Catalogues.

ಮಾರಾಟಕ್ಕೆ.

1. ಮಡಿಕೇರಿ ಅರೆ ಮಲ್ ಚಿಟ್ಟಪ್ಪನವರ ಮಡಿಕೇರಿ ನಾಡುಬಿಳಿಗೇರಿಗ್ರಾಮದಲ್ಲಿ ಮಡಿಕೇರಿ ಮೂರ್ನಾಡು ರಸ್ತೆ 5ನೇ ಮೈಲ್ ಬಳಿ ಇರುವ ಆಸ್ತಿ, ಅಂದರೆ— ಸಾಗಿನ ಉತ್ತಮವಾದ ಭೂಮಿ 31½ ಎಕರು, ಕಿತ್ತಳೆ 25 ಎಕರು, (ಈ ಪೈಕಿ 15 ಎಕರು ಫಸಲಿಗೆ ಬಂದದನ್ನು ಈ ವರ್ಷ 1,200 ರುಪಾಯಿಗಳಿಗೆ ಫಸಲು ಗುತ್ತಿಗೆ ಕೊಡಲಾಗಿದೆ) ಯಾಲಕ್ಕಿ 15 ಎಕರು, ಹೊಸದಾಗಿ ಹಾಕಿರುವ ಕಾಫಿ 15 ಎಕರು ಮತ್ತು 116 ಎಕರು ಬಾಣೆ, ಒಂದು ವಾಸದ ಮನೆ, ಆಳುಗಳ ಲೈನು ಮತ್ತು ದನಗಳ ಕೊಟ್ಟಿಗೆ ಸಹ—ಮಾರಾಟಕ್ಕೆ ಇದೆ. ಕ್ರಯ ರುಪಾಯಿ 25,000 ಅಥವಾ ಇದರ ಸಮೀಪದ ಬೆಲೆ.

2. ಅರೆ ಮಲ್ ಚಿಟ್ಟಪ್ಪನವರ ಮಡಿಕೇರಿ ಮಹದೇವಪೇಟೆ ಬಸವಣ್ಣನ ಗುಡಿ ಬಳಿ ಇರುವ ವಾಸದ ದೊಡ್ಡ ಮಹಡಿಮನೆ ಕ್ರಯ ರೂ. 5,000.

ಹೆಚ್ಚಿನ ವಿವರಕ್ಕೆ ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು.

ಎ. ಎನ್. ಅಪ್ಪಣ್ಣ,
ಜೋಯಿಕೇರಿ ಎಸ್ಟೇಟ್.
12—3 ಸುಂಟಿಕೊಪ್ಪ.

WANTED.

Blacksmith and hammerman for Public Works Workshop, Mercara. Pay according to qualifications.

Aqply—

SUB-DIVISIONAL OFFICER
3—3 MERCARA.

ಹಳೆ ವಿದ್ಯಾರ್ಥಿಯರ ತ್ರೈಮಾಸಿಕ.

ಸಂಪುಟ 2] ವರ್ಷದಚಂದಾ ಬರೇ ರೂ. 1-4-0 [ಸಂಚಿಕೆ 1
ಸಂಪಾದಕ —ಪಿ. ಬಿ. ಮೇದಪ್ಪ, ಬಿ.ಎ., ಬಿ ಎಲ್. ಎಂ. ಎಲ್. ಎ.

ಈ ಸಂಚಿಕೆಯಲ್ಲಿ ಮನೋಹರವಾದ ಕೊಡಗಿನ ಪವಿತ್ರ ಸ್ಥಳವಾದ ಶ್ರೀ ಮೂಲ ಕಾವೇರಿಯ ಚಿತ್ರಗಳಿವೆ.

1. ಶ್ರೀ ಕಾವೇರಿಯ ಜನ್ಮ, ಅವತಾರ.
2. ಸಹಕಾರಕ್ಕೆ ಸಾಲವೆಂದರೇನು ?
3. ಪೊಲಿಟಿಕ್ಸ್ ಅಂದರೇನು ?
4. ಮಿಠಾಬಾಯಿ.

ಇವೇ ಮುಂತಾದ ಬಹು ಸ್ವಾರಸ್ಯದ ವಿಷಯಗಳಿವೆ.

ಮೆನೇಜರ್,
ಓ. ಎಸ್. ಎಸೋಸಿಯೇಷನ್,
ಮಡಿಕೇರಿ.

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.
If not delivered please return to "KODAGU" OFFICE, MERCARA.

ಕೊಡಗು.

ಸ್ವಾತಂತ್ರ್ಯ ಭೂತದಯಸಾ ವಿದ್ಯಾ ನೀತಿ ಪ್ರಯತ್ನತಾಃ ॥ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಎಡಿಟರ್ ಪುದ್ಯಂಡ ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೪-೦-೦

ಸಂಪುಟ ೪] ಕೊಡಗು, ಸನ ೧೯೨೪ನೇ ಇಸವಿ ಫೆಬ್ರವರಿ ತಾರೀಕು ೨೨ನೆಯ ಶುಕ್ರವಾರ [ಸಂಚಿಕೆ ೬

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್,
ಯಮ್. ಎಲ್. ಸಿ. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ. 'ಆರೋಗ್ಯ ಚಂದ್ರಿಕೆ' 323,
ತಂಬುಶೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತು ನೀತಿ ಮುಂತಾದ ವಿಷಯಗಳಿಂದೊಡ ಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ಬಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಾಕ್ಷಣ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು **ಸಂಗತಿಗಳು ಮೇನೇಜರಿಗೆ** ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಶೇರುಹಣ ಸಲ್ಲಿಸಬೇಕಾಗಿರುವವರೂ ದಯವಿಟ್ಟು ವೀರರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮೇನೇಜರ್,
13-9-24. 'ಕೊಡಗು' ಲಿಮಿಟೆಡ್.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City

THE SHOPPING CENTRE OF COORG,
Spencer & Co. Ltd.,
MERCARA & POLLIBETTA.
An Announcement.

Our prices of wines, spirits, stores, etc., are down.

Send for our Xmas list and be convinced.

Trial order Solicited.

4-16

ಕೃಷಿತೋ ನಾಸ್ತಿ ದುರ್ಭಿಕ್ಷಃ

NITRATE OF SODA (15—16 per cent.) Nitrogen,

"The best and cheapest form of Nitrogen highly concentrated and immediately available. Nothing like it to make plants grow."

ವ್ಯವಸಾಯದಲ್ಲಿ ಗೊಬ್ಬರವಿಡುವದರ ಹೆಚ್ಚಿನ ಉದ್ದೇಶವು ಬೆಳೆಗಳಿಗೆ ನಾರಜನಕ (Nitrogen) ಒದಗಿಸಿಕೊಡುವದಾಗಿರುತ್ತದೆ. "ನೈಟ್ರೇಟ್ ಆಫ್ ಸೋಡಾ" ಎಂಬ ರಸಾಯನಿಕ ಗೊಬ್ಬರವು (15—16%) ಅಂದರೆ ಮೀನುಗೊಬ್ಬರದಲ್ಲಿಯಕ್ಕಿಂತ ಮೂರುಪಾಲು ಜಾಸ್ತಿ ಕ್ಷಾರಜನಕ ಭಾಗವಾಗಿದ್ದು ಬೆಳೆಗಳಿಗೆ ಫಕ್ಕನೆ ಪಡಗುವರೀತಿಯಲ್ಲಿರುತ್ತದೆ. ಇದರ ಉಪಯೋಗದಿಂದ ಫಸಲು ಒಮ್ಮೆ ಸಮೃದ್ಧಿಯಾಗುವುದು ಹಿಡಿತುಂಬ ರಸಾಯನಿಕ ಗೊಬ್ಬರವು ಮುಡಿ (ಕುಕ್ಕೆ) ತುಂಬ ಹಟ್ಟಿಗೊಬ್ಬರಕ್ಕೆ ಸಮವಾಗಿರುತ್ತದೆ. ಈ ರಸಾಯನಿಕ ಗೊಬ್ಬರವು ಅಮೇರಿಕ ದೇಶದ "ಚಿಲ್ಲಿ" ಎಂಬಲ್ಲಿ ತಯಾರಿಸಿ ಬಹಳ ದೂರದೇಶದಿಂದ ಬರಬೇಕಾದರೂ ಸಹ ಅದು ಭತ್ತ, ಮೆಣಸು, ಕಾಫಿ ತೋಟಗಳು ಮತ್ತು ಕಿತ್ತಳೆ ಮೊದಲಾದ ಮೂಲೆಗಳ ತೋಟಗದ್ದೆ ಪಗೈರೆ ಕೃಷಿಗಳಿಗೆ ಉಪಯೋಗಿಸಲು ಬಹಳ ಸುಲಭವಾಗಿಯೂ ಹಟ್ಟಿ ಗೊಬ್ಬರಕ್ಕಿಂತಲೂ ಬಹಳ ಹೆಚ್ಚಿನ ಬದಾಯವನ್ನು ಕೊಡತಕ್ಕದಾಗಿಯೂ ಇರುತ್ತದೆ. ಒಂದು ಎಕ್ರೆ ಭೂಮಿಗೆ 120—160 ರಾತಲು ಬೇಕಾಗುವದು. ಇದರ ವಿಷಯ ಹೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ಧರ್ಮಾರ್ಥವಾಗಿ ನಮ್ಮಿಂದ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್
24—22 ಕಮಿಟಿಯವರ ಕಡೆ

ಕೊಡಗಿನಲ್ಲಿ—
B. P. Ayapa, Hon Representative Pollibetta, Coorg.

The Chilean Nitrate Committee, 7 Hare Street, Post Box 469 CALCUTTA

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಒಂದು ತಲುಪಿರುವುದರಿಂದ, 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್,' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ.

ಮೇನೇಜರ್,
'ಕೊಡಗು' ಲಿಮಿಟೆಡ್

ಪ್ರಕಟಣೆ.

ಮಡಿಕೇರಿ ಪೋಲೀಸ್ ಸಬ್ ಇನ್ಸ್‌ಪೆಕ್ಟರುಗಳ ಕ್ವಾರ್ಟರ್ಸ್, ಕೆಳಗೆ ಅಂದವಾಗಿಯೂ ಹೊಸ ಮಾದರಿಯಿಂದ ಭದ್ರವಾಗಿಯೂ 3 ವರ್ಷಗಳ ಹಿಂದೆ ಕಟ್ಟಲ್ಪಟ್ಟ, ಸಂಸಾರ ಸಮೇತ ವಾಸ ಇರಲಿಕ್ಕೆ ಯೋಗ್ಯವಾದ 9 ಕೊಠಡಿಗಳಿರುವ ಮನೆ 3 ಅಂಕಣಗಳ ಕೊಟ್ಟಿಗೆ ಯಾವಾಗಲೂ ನಿರ್ಮಲವಾದ ನೀರು ಇರುವ ಕಲ್ಲು ಕಟ್ಟಿದ ಭಾವಿ (ನೀರು ಸೇದಿ ತೆಗೆಯುವಂಥಾದ್ದು) ಕಾಫಿ, ಬಾಳೆ, ಕಿತ್ತಳೆ, ನಿಂಬೆ ಮರಗಳೂ ಮತ್ತು ಹಲಸು ಮತ್ತು ಮಾವಿನ ಗಿಡಗಳೂ ಇರುವ ಹಿತ್ತಲು ಸಹ ಇರುವ ಆಸ್ತಿ ಒಂದು ಮಾರಾಟಕ್ಕೆ ಇದೆ. ಈ ಸ್ಥಳವು ಗೋಪ್ಯವಾಗಿಯೂ ಸಂಸಾರ ಸಮೇತ ವಾಸ ಇರುವದಕ್ಕೆ ಯೋಗ್ಯವಾಗಿಯೂ ಇದೆ. ವಾಸಕ್ಕೆ ಇಂಥಾ ಯೋಗ್ಯವಾದ ಸ್ಥಳ ಮಡಿಕೇರಿಯಲ್ಲಿ ಸಿಕ್ಕುವದು ದುರ್ಲಭ. ಕೊಂಡುಕೊಳ್ಳುವದಕ್ಕೆ ಅಪೇಕ್ಷೆ ಇರುವವರು ನೋಡಿ ಕ್ರಯ ನಿಶ್ಚೈಸಬಹುದು. ಹೆಚ್ಚಿನ ವಿವರ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬೇಕಾಗಿದೆ.

VENDER,
C/o EDITOR "KODAGU."
Mercara.

12-3-10

ನೋಟೀಸು.

ಈ ಕೆಳಗಿನ ಮನಸೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮ. ಕೋಟೆರ ಚಿಣ್ಣಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು

ವೀರರಾಜಪೇಟೆ—ಮ. ಕೆ. ಚಿಣ್ಣಪ್ಪನವರ ಆಫೀಸಿನಲ್ಲಿ.
ಮೂರ್ನಾಡು—ಕಮಿಟಿಯವರ ಸೊಸೈಟಿಯಲ್ಲಿ ಮ. ಮಣಿಯಂಡ ದೇವಯ್ಯನವರು.
ನಾಪೋಕ್ಲು—ಮ. ಪೊನ್ನವಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮ. ಮ. ಕಾಟಿಮಣಿಯಪ್ಪನವರು.
ಪೊನ್ನಂಪೇಟೆ—ಮ. ಅತ್ತಿಮನೆ ಮುದ್ದಪ್ಪನವರು.
ಮಡಿಕೇರಿ—ಮ. ಜಿ. ಬಿಳಿಯಪ್ಪನವರು.
ಅಮ್ಮತ್ತಿ ಸಿದ್ದಾಪುರ— ಮ. ಐನಂಡ ಮಾದಪ್ಪನವರು.
ಮ. ಬಂಗೆರಿರ ಕುಟ್ಟಪ್ಪನವರು.

ಕೋಟೆರ ಚಿಣ್ಣಪ್ಪಯ್ಯ.
ಜನರಲ್ ಏಜಂಟ್ ಸೈಕ್ರೆಟರಿ, "ಕೊಡಗು" ಲಿಮಿಟೆಡ್

"ಕೊಡಗು"

ಸನ್ ೧೯೨೫ನೇ ಇಸವಿ ಫೆಬ್ರವರಿ ತಾ. ೧೩ನೇ ಶುಕ್ರವಾರ.

ಅಸ್ಪೃಶ್ಯತಾ ನಿವಾರಣೆ.

ಹಿಂದೂಮತದ ಹಿಂಬಾಲಕರಲ್ಲಿ ಕೆಲವರನ್ನು ಅಸ್ಪೃಶ್ಯರಾಗಿ ಉಳಿದ ಪಂಗಡದವರು ಭಾವಿಸುವದು ಬಹಳ ದೊಡ್ಡದೊಂದು ಕೊರತೆಯೆಂಬದನ್ನು ದೇಶ ಹಿತೈಷಿಗಳು ಆಗಿಂದಾಗ್ಯೆ ಹೇಳುತ್ತಿದ್ದಾರೆ. ದೇವರ ಸೃಷ್ಟಿಯಲ್ಲಿ ಜನ್ಮವೆತ್ತಿದ ಯಾವ ಮನುಷ್ಯನಾದರೂ ಅವನ ಹುಟ್ಟಿನಕಾರಣದಿಂದಲೇ ಅಸ್ಪೃಶ್ಯನೆಂತ ಭಾವಿಸಲ್ಪಡುವದು ದೇವರ ಸೃಷ್ಟಿ ಕ್ರಮಕ್ಕೆ ವ್ಯತಿರಿಕ್ತವಾಗಿದೆ. ಹಿಂದುಸ್ಥಾನದ ಸ್ವರಾಜ್ಯಸ್ಥಾಪನೆಗೆ ಅಸ್ಪೃಶ್ಯತೆಯೇ ದೊಡ್ಡದೊಂದು ಆಟಂಕವಾಗಿದೆ. ಹಿಂದುಸ್ಥಾನದಿಂದ ಇಂಗ್ಲಿಷ್ ಅಧಿಕಾರಿಗಳು ಬಿಟ್ಟುಹೋದರೆ ಅಸ್ಪೃಶ್ಯರೆನಿಸಿಕೊಂಡವರ ಪಾಡೇನಾಗಬೇಕು ಎಂತ ಸ್ವರಾಜ್ಯಸ್ಥಾಪನೆಗೆ ವಿರೋಧಿಸುವವರು ಕೇಳುತ್ತಾರೆ. ಈ ಸವಾಲು ನ್ಯಾಯವಾದದ್ದೇ. ಅಸ್ಪೃಶ್ಯರಲ್ಲದವರಲ್ಲೂ ಸಹ ಕೆಲವು ಹಿಂದುಳಿದ ಪಂಗಡದವರು 'ಬ್ರಿಟಿಷ್ ಸರಕಾರವು ಈ ದೇಶದಲ್ಲಿ ಇದ್ದೇ ಇರಬೇಕು, ಇಲ್ಲವಾದರೆ ಬಲಾಢ್ಯ ಜನರ ಅಧಿಕಾರವಾಗುತ್ತೆ" ಎಂತ ಕೂಗಿಕೊಳ್ಳುತ್ತಿರುವದು ಆಗಿಂದಾಗ್ಯೆ ಕೇಳುತ್ತಿದೆಯಲ್ಲವೆ? ಅಸ್ಪೃಶ್ಯರು ಈ ರೀತಿ ಕೂಗದೆ ಇರುವವರಿಂದ ಅವರಿಗೆ ಈ ಭಯವಿಲ್ಲವೆಂತಲ್ಲ. ಅವರನ್ನು 'ಜಾತಿ' ಹಿಂದುಗಳು ಅಸ್ಪೃಶ್ಯರನ್ನಾಗಿಮಾಡಿ ವಿದ್ಯೆಯ ಸಂಪಾದನೆಗೆ ಅನುಕೂಲ ಕೊಡದೆ ತಮ್ಮ ಕ್ಷೇಮವನ್ನು ಸಹ ಯೋಚಿಸಲು ಶಕ್ತಿ ಇಲ್ಲದೆ ಹೋಗಿದೆ. ಆದ್ದರಿಂದಲೇ ಅಸ್ಪೃಶ್ಯರ ಕೂಗು ಕೇಳುವದಿಲ್ಲ. ಅವರ ಸ್ಥಿತಿಯನ್ನು ಮನಸ್ಸಿಗೆ ಹಚ್ಚಿಕೊಂಡು ಮಹಾತ್ಮ ಗಾಂಧಿಯವರು ಅವರಿಗಾಗಿ ಹೋರಾಡಲು ಹೊರಟಂದಿನಿಂದ ಜನರ ಮನಸ್ಸು ಅವರ ಸ್ಥಿತಿಯನ್ನು ಯೋಚಿಸ ತೊಡಗಿದೆ. ಸ್ವರಾಜ್ಯ ಸ್ಥಾಪನೆಗಾಗಿ ಮಾತ್ರವಲ್ಲ. ಹಿಂದುಮತಕ್ಕೆ ಇರುವ ಈ ಲೋಪವನ್ನು ಹೋಗಲಾಡಿಸಿ ಹಿಂದೂಮತದ ಈ ಕಳಂಕವನ್ನು ತೆಗೆದುಹಾಕುವದೇ ಹಿಂದುಮತದ ಹಿತೈಷಿಗಳ ಕರ್ತವ್ಯವಾಗಿರಬೇಕು. ಹಿಂದೂಮತವೆಂದರೆ ಬಹಳ ದೊಡ್ಡಮತ. ಎಲ್ಲಾ ಮತದ ಕಡೆಗೂ ತಾಳ್ಮೆಯುಳ್ಳಮತವಾಗಿದೆ. ವೇದಾಂತ ಶಾಸ್ತ್ರವನ್ನು ಬೋಧಿಸುವ ಮತವಾಗಿದೆ. ಅಂದರೆ ಪ್ರಪಂಚದಲ್ಲಿರುವ ಸರ್ವಪ್ರಾಣಿಗಳಲ್ಲೂ ಪರಮಾತ್ಮನ ಅಂಶವಿದೆಯೆಂತ ಬೋಧಿಸುವ ಮತವಾಗಿದೆ. ವಿಗ್ರಹಾರಾಧಕನಿಗೂ ನಿರ್ಗುಣ ಬ್ರಹ್ಮ ಅಂದರೆ ಆಕಾರವಿಲ್ಲದ, ಯೋಚಿಸಲಶಕ್ಯವಾದ ದೇವರ ಉಪಾಸಕನಿಗೂ ಎಡೆಕೊಡುವ ಮತವಾಗಿದೆ. ಇಂಥಾ ಮಹತ್ವವಾದ ತಾಳ್ಮೆ ಇರುವ ಮತದಲ್ಲಿ ಅಸ್ಪೃಶ್ಯತೆಯ ಭಾವನೆಯೇ ಇರಕೂಡದು. ಅದರೂ ಹಿಂದುಸ್ಥಾನದಲ್ಲಿ 'ಜಾತಿ' ಹಿಂದುಗಳು ಪೂಜಿಸುವ ಮೂರ್ತಿಗಳಿಗೇನೇ ನಮಸ್ಕರಿಸುವ, 'ಜಾತಿ' ಹಿಂದುಗಳು ಪಠಿಸುವ ದೇವರ ನಾಮಗಳನ್ನೇ ಪಠಿಸುವ ಕೋಟ್ಯಾಂತರ ಜನರನ್ನು ಅಸ್ಪೃಶ್ಯರೆಂದು ಭಾವಿಸುವ ಜನರು ಹಿಂದೂಮತವು ಮಹತ್ವದ್ದು ಎಂತಹೇಳಿಕೊಳ್ಳಲು ಹೇಗೆಸಾಧ್ಯವಿದೆ? ಮುಸಲ್ಮಾನರು ಕ್ರಿಶ್ಚಿಯನರು ಅಸ್ಪೃಶ್ಯರಾಗಿ ಎಣಿಸಲ್ಪಡುವದಿಲ್ಲ. ಇದಕ್ಕೆ ನಮಗೆ ಹಿಂದುಗಳ ಹೇಡಿತನವೇ ಕಾರಣವೆಂತ ತೋರುತ್ತದೆ. ಮುಸಲ್ಮಾನರನ್ನೂ ಕ್ರಿಶ್ಚಿಯನರನ್ನೂ ಅಸ್ಪೃಶ್ಯರೆಂದೇ ಹಿಂದುಗಳು ಭಾವಿಸುತ್ತಿದ್ದರು. ಆದರೆ ಮುಸಲ್ಮಾನ್ ಮತದವರು ಹಿಂದುಸ್ಥಾನವನ್ನು ಆಳಿದವರಾಗಿದ್ದಾರೆ. ಕ್ರಿಶ್ಚಿಯನ್ ಮತದ ಹಿಂಬಾಲಕರು ಈಗ ಹಿಂದುಸ್ಥಾನವನ್ನು ಆಳುವವರಾಗಿದ್ದಾರೆ. ಆದ್ದರಿಂದ ಈಎರಡು ಮತದ ಅನುಯಾಯಿಗಳನ್ನು ಅಸ್ಪೃಶ್ಯರಾಗಿ ಎಣಿಸಲು 'ಜಾತಿ' ಹಿಂದುಗಳಿಗೆ ಸಾಧ್ಯವಿಲ್ಲ. ಆದರೆ 'ಜಾತಿ' ಹಿಂದುಗಳು ತಮ್ಮ ಸ್ವಾರ್ಥತೆಗಾಗಿಯೋ ಅಜ್ಞಾನ ದೃಷ್ಟಿಯಿಂದಲೋ ಅಸ್ಪೃಶ್ಯರಾಗಿ ಇಟ್ಟುಕೊಂಡ ಜನರನ್ನು ತಿರಸ್ಕರಿಸಿದರೆ ಅದರಿಂದ ತಮಗೆ ಏನೂ ಕೆಡಕು ಬರುವದಿಲ್ಲವೆಂಬ ಧೈರ್ಯವಿರುವದರಿಂದ ಅವರನ್ನು ಅಸ್ಪೃಶ್ಯರನ್ನಾಗಿಯೇ ಇಟ್ಟುಕೊಂಡಿದ್ದಾರೆ. ಈಗ ಮಹಾ ತಪಸ್ವಿಯಾಗಿ ಪ್ರಪಂಚದ ಜನರೆಲ್ಲಾ ಅತಿ ಶ್ರೇಷ್ಠನೆನಿಸಿಕೊಂಡಿರುವ ಮಹಾತ್ಮ ಗಾಂಧಿಯವರ ಕೋರಿಕೆಯನ್ನಾದರೂ ಮನಸ್ಸಿಗೆ ತಂದುಕೊಂಡು ಹಿಂದೂಮತಕ್ಕೆ ಇರುವ ಕೊರತೆಯನ್ನು ಹೋಗಲಾಡಿಸುವ ಕಾಲವು ಬಂದೊದಗಿದೆ.

ಅಸ್ಪೃಶ್ಯತೆಯ ನಿವಾರಣೆಯು ರಾಜಕೀಯ ಚಳವಳಿಯ ಸಂಗಡ ಮಿಶ್ರಿತವಾದದ್ದು ಈಗ ನಾಲ್ಕು ವರುಷಗಳಿಂದ ಮಾತ್ರ. ಸಮಾಜ ಸುಧಾರಕರು ಈ ವಿಷಯವಾಗಿ ಮೂವತ್ತೈದು ವರುಷಗಳಿಂದಲೂ ಕೂಗಾಡುತ್ತಿದ್ದಾರೆ. ಆರ್ಯ ಸಮಾಜದವರು ಈ ಕೊರತೆಯನ್ನು ನಿರ್ಮೂಲಪಡಿಸಲಿಕ್ಕಾಗಿ ಬಹುಕಾಲದಿಂದ ಹೋರಾಡುತ್ತಿದ್ದಾರೆ. ರಾಮಕೃಷ್ಣ ಪರಮಹಂಸರ ಶಿಷ್ಯ ವರ್ಗದವರೂ ಈ ಕೆಲಸವನ್ನು ಕೈಕೊಂಡಿದ್ದಾರೆ. ಆದರೂ ಜನರ ಜೀವಿತಕ್ಕೆ ಆವಶ್ಯವಾದ ಸ್ವರಾಜ್ಯ ಸಂಪಾದನೆಗೇನೇ ಅಸ್ಪೃಶ್ಯತಾ ನಿವಾರಣೆಯು ಅವಶ್ಯವಿದೆ ಎಂತ ಮಹಾತ್ಮ ಗಾಂಧಿಯವರು ಬೋಧಿಸಲು ಪ್ರಾರಂಭಿಸುವ ವರೆಗೆ "ಅಸ್ಪೃಶ್ಯತಾ ನಿವಾರಣೆ"ಗೆ ಬೇಕಾದಷ್ಟು ಗಮನವು ಬಿದ್ದಿರಲಿಲ್ಲ. ಈ ಸುಸಂಧಿಯನ್ನು ಉಪಯೋಗಿಸಿಕೊಂಡು ಈ ದೋಷವನ್ನು ಹೋಗಲಾಡಿಸುವುದು ಆವಶ್ಯವಾಗಿದೆ. ಈ ದೋಷವು ಬ್ರಾಹ್ಮಣರಲ್ಲಿ ಮಾತ್ರ ಇದೆ ಎಂದು ಹೇಳಕೂಡದು. 'ಜಾತಿ' ಹಿಂದುಗಳೆನ್ನಿಸಿಕೊಳ್ಳುವವರಲ್ಲಿ ಎಲ್ಲರಲ್ಲೂ ಇದೆ. ನಮ್ಮ ಈ ಕೊಡಗು ದೇಶದಲ್ಲಿ ಅಸ್ಪೃಶ್ಯತಾ ದೋಷವು ಇಲ್ಲವೆಂತ ಹೇಳಕೂಡದು. ಈಗ ಮೂರು ವರುಷಗಳ ಕೆಳಗೆ ಮಡಿಕೇರಿಯಲ್ಲಿ ಪಂಚಮರ ಸಭೆ ಸೇರಿ ಅಲ್ಲಿ ಅಸ್ಪೃಶ್ಯರ ಸ್ಪರ್ಶನಮಾಡಿದ ಬ್ರಾಹ್ಮಣ ಮತ್ತು ಕೊಡಗರನ್ನು ಬಹಿಷ್ಕರಿಸಬೇಕೆಂತ ಮಾತುಗಳು ಅಲ್ಲಲ್ಲಿ ಕೇಳಬರುತ್ತಿತ್ತು. ಸ್ಕೂಲ್‌ಗಳಲ್ಲಿ ಅಸ್ಪೃಶ್ಯರು ಬರಕೂಡದೆಂತಲೂ ಬಂದರೂ ಪ್ರತ್ಯೇಕ ಕೂರಬೇಕೆಂತಲೂ ಈಗಲೂ ಹೆಚ್ಚಿನ ಜನರ ಅಭಿಪ್ರಾಯವಾಗಿದೆ. ಬ್ರಾಹ್ಮಣರು ಬ್ರಾಹ್ಮಣೇತರರನ್ನೂ, ಕೊಡಗರು ಕೊಡಗೇತರರನ್ನೂ ಹೀಗೆ ಭಾವಿಸಿದರೆ ಬ್ರಾಹ್ಮಣೇತರರಿಗೂ ಕೊಡಗೇತರರಿಗೂ ಮನಸ್ಸು ನೋಯುವಂತೆಯೇ 'ಜಾತಿ' ಹಿಂದುಗಳೆಲ್ಲರೂ ಪಂಚಮರನ್ನು ಅಸ್ಪೃಶ್ಯರೆಂಬ ತುಚ್ಛಭಾವನೆಯಿಂದ ದೂರೀಕರಿಸಿದರೆ ಪಂಚಮರಿಗೂ ತುಂಬಾ ನೋವಾದೀತು, ಎಂತ ತಿಳಿದುಕೊಂಡು ಅವರಿಗೂ ಸಮಾನ ಹಕ್ಕುಗಳನ್ನು ಕೊಡಬಾರದೇ—ಕಾವೇರಿ ನದಿಯು ದೈವೀಕವಾದದ್ದೆಂತ ಕಾವೇರಿ ಮೂಲಕ್ಕೆ ಪೂಜಿಸಲಿಕ್ಕಾಗಿ ಜಾತಿ ಹಿಂದೂಗಳು ಸಾವಿರಾರು ಹೋಗುವಾಗ ಪಂಚಮರು ನೂರಾರು ಜನರಾದರೂ ಹೋಗುತ್ತಾರೆ. ಅವರಲ್ಲಿ ದೈವಭಕ್ತಿ ಕಡಿಮೆ ಇದೆ ಎಂತ ಹೇಳಲು ಸಾಧ್ಯವಿಲ್ಲ. ಆದರೆ ಅಯ್ಯೋ ಪಾಪ, ಅವರಿಗೆ ಸಂಗಮದಲ್ಲಿ ಸ್ನಾನಕ್ಕೆ ಎಡೆ ಇಲ್ಲ, ಶ್ರೀಮೂಲ ಕಾವೇರಿಯ ಸಮೀಪ ದರ್ಶನ ಸಹ ಇಲ್ಲ. ಜಾತಿ ಹಿಂದುಗಳಿಗೆ ಶ್ರೀಮೂಲ ಕಾವೇರಿಯ ದರ್ಶನದ ಕುತೂಹಲವಿದ್ದಂತೆಯೇ ಅವರಿಗೂ ಇರುವಾಗ ಅವರಿಗೆ ಈ ಭಕ್ತಿ ಸೇವೆಯ ಅನುಕೂಲ ಕೊಡದಿರುವುದು ತಪ್ಪಲ್ಲವೇ? ಈ ವಿಷಯಗಳಲ್ಲಿ ಬದಲಾವಣೆ ಕೂಡಲೇ ಆಗಬೇಕೆಂತ ನಾವು ಒತ್ತಾಯಪಡಿಸುವುದಿಲ್ಲ. ಈಗ ತಾನೇ ಸ್ಥಾಪಿತವಾದ ಹಿಂದೂ ಮಹಾಸಭೆಯಲ್ಲಿ ಈ ವಿಷಯವನ್ನು ಚೆನ್ನಾಗಿ ಚರ್ಚಿಸಿ ನಾಯಿ ನರಿ ಕಾಗೆಗೆ ಇರುವಷ್ಟು ಸ್ವತಂತ್ರವನ್ನಾದರೂ ಪಂಚಮರಿಗೆ ಕೊಡಲು ಪ್ರಯತ್ನಿಸಬೇಕು.

ಮಹಾತ್ಮ ಗಾಂಧಿಯವರಿಗೆ ಈ ಅಸ್ಪೃಶ್ಯರ ಮೇಲೆ ಕನಿಕರವೆಷ್ಟಿದೆ ಎಂದರೆ, ಅನೇಕಾವರ್ತಿ ಅವರು "ತನಗೆ ಇನ್ನೊಂದು ಜನ್ಮದಲ್ಲಿ ಪಂಚಮನ ಜನ್ಮ ಬರಲಿ" ಎಂತ ಹೇಳಿಕೊಂಡಿದ್ದಾರೆ. ಒಬ್ಬಳು ಅಸ್ಪೃಶ್ಯ ಹುಡುಗಿಯನ್ನು ತಮ್ಮ ಆಶ್ರಮದಲ್ಲಿ ಸಾಕು ಮಗಳಾಗಿ ಇಟ್ಟುಕೊಂಡಿದ್ದಾರೆ. ಪಂಚಮರು ಮಾಡುವ ಪಾಯಿಖಾನೆ ಗೋಚುವ ಕೆಲಸವನ್ನು ತಾನೇ ಮಾಡುತ್ತಾರೆ. ಪಂಚಮನಾಗಿ ಹುಟ್ಟಿದರೆ ಅವರ ಮೇಲ್ಮೆಗೆ ಹೆಚ್ಚಿನ ಕೆಲಸ ಮಾಡಬಹುದೆಂತಲೂ ಪಂಚಮನಾಗಿ ಬೇಡಿದರೆ ಜಾತಿ ಹಿಂದುಗಳ ಮನಸ್ಸನ್ನು ಕರಗಿಸಬಹುದೆಂತಲೂ, ಹೇಳುತ್ತಾರೆ. 'ಮಹಾತ್ಮ ಗಾಂಧಿ' ಎಂದರೆ ನಮ್ಮ ಹಿಂದುಳಿದ ಈ ದೇಶದಲ್ಲೂ ಸಹ ಒಂದು ತರದ ಭಕ್ತಿ ಹುಟ್ಟುತ್ತದೆ. ಆದ್ದರಿಂದ ಅವರ ಬೋಧನೆಯು ನಿಷ್ಪ್ರಯೋಜನವಾಗಲಾರದೆಂತ ನಮಗೆ ತೋರುತ್ತದೆ.

ಅಸ್ಪೃಶ್ಯತೆಯನ್ನು ಹೋಗಲಾಡಿಸಲಿಕ್ಕೆ ಪಂಚಮರಿಗೆ ವಿದ್ಯೆಯನ್ನು ಕೊಡಬೇಕಾದದ್ದೇ ದೇಶ ಹಿತೈಷಿಗಳ ಕರ್ತವ್ಯವಾಗಿದೆ. ಅವರಿಗೆ ವಿದ್ಯೆ ದೊರಕಿತೆಂದರೆ ಅವರ ಅಸಹ್ಯ ಗುಣಗಳನ್ನು ಬಿಟ್ಟು ಸ್ವಚ್ಛವಾಗುವುದರಲ್ಲಿ ಸಂಶಯವಿಲ್ಲ. ಪಂಚಮರ ಮಕ್ಕಳೆಲ್ಲರೂ ಪ್ರೈಮರಿ ವಿದ್ಯಾಭ್ಯಾಸಕ್ಕೆ ಬರಲೇಬೇಕೆಂತ ಬಲಾಂತಪಡಿಸಿ, ಆ ಮಕ್ಕಳಿಗೆ ಸಕಲ ಅನುಕೂಲಗಳನ್ನು ಒದಗಿಸಿ ಕೊಡಬೇಕಾದದ್ದು ಜಾತಿ ಹಿಂದುಗಳ ಕರ್ತವ್ಯವಾಗಿದೆ. ಅವರಲ್ಲಿ ಬಹಳ ಅಸಹ್ಯಗುಣಗಳೇ ನಮಗೆ ತೋರಿ ಬಂದರೂ ಸಹ ಅವರು ಮನುಷ್ಯ ಜನ್ಮದಲ್ಲಿ ಇರುವವರಾದ್ದರಿಂದ ಅವರಿಗೆ ಮನುಷ್ಯತ್ವಕ್ಕೆ ಇರುವ ಹಕ್ಕನ್ನು ಕೊಡಬೇಕಾದದ್ದು ಜಾತಿ ಹಿಂದುಗಳ ಕರ್ತವ್ಯವಾಗಿದೆ. ಅವರಿಗೆ ವಿದ್ಯೆ ಪಡೆಯಲು ಅರ್ಹತೆಯೇ ಇಲ್ಲವೆಂತ ಹೇಳುವುದು, ಹಿಂದುಸ್ಥಾನವನ್ನಾಳುವ ಬ್ರಿಟಿಷರು ಹಿಂದೀಯರಿಗೆ ಸ್ವರಾಜ್ಯಕ್ಕೆ ಯೋಗ್ಯತೆ ಇಲ್ಲವೆಂತ ಹೇಳಿದಂತೆಯೇ ಆಗುತ್ತದೆ. ಅಧೀನದಲ್ಲಿ ಇಟ್ಟುಕೊಳ್ಳಲು ಅಪೇಕ್ಷೆ ಇರುವವರಿಗೆ ಅಧೀನದ ಜನರ ಅಯೋಗ್ಯತೆ, ಅಶಕ್ತಿ, ಅಸಹ್ಯಗುಣ ಇದೇ ಕಣ್ಣಿದುರಿಗೆ ಬೀಳುತ್ತೆ. ಆದ್ದರಿಂದ ಹಿಂದುಸ್ಥಾನವನ್ನು ಆಳುವವರ ಮೇಲೆ ಹಿಂದೀಯರು ಹೊರಿಸುವ ದೂರಿಗೆ ಜಾತಿ ಹಿಂದೂಗಳು ಗುರಿಯಾಗದೆ ಪಂಚಮರ ಸ್ವತಃ ಸಿದ್ಧ ಹಕ್ಕುಗಳನ್ನು ಅವರಿಗೆ ಬಿಟ್ಟುಕೊಡಲು ಜಾತಿ ಹಿಂದೂಗಳು ಕೂಡಲೇ ತಯಾರಾಗಬೇಕು.

ಅಸ್ಪೃಶ್ಯತೆಯನ್ನು ಹೋಗಲಾಡಿಸುವದೆಂದರೆ ಪಂಕ್ತಿ ಭೋಜನವಾಗಲೀ ಹೆಣ್ಣು ಕೊಟ್ಟು ತರುವದಾಗಲೀ ಆಗಬೇಕೆಂತ ಅಲ್ಲ. ಈ ವಿಷಯವನ್ನು ನೆನಪಿನಲ್ಲಿಟ್ಟುಕೊಂಡರೆ ಅಸ್ಪೃಶ್ಯತಾ ನಿವಾರಣೆಯು ಸುಲಭಸಾಧ್ಯವಾಗುತ್ತದೆ.

How to kill an Institution.

ಒಂದು ಸಂಸ್ಥೆಯನ್ನು ನಾಶಪಡಿಸುವ ಸುಲಭೋಪಾಯಗಳು.

[ನಮ್ಮ ದೇಶದಲ್ಲಿ ಸಂಸ್ಥೆಗಳು ಹುಟ್ಟುವುದಕ್ಕೆ ಲೆಕ್ಕವೇ ಇಲ್ಲ. ಇಲ್ಲಿಯವರು ಯಾವ ವಿಷಯದಲ್ಲಾದರೂ "ಆರಂಭಶೂರರೆ" ಂದೂ ನಂತರ ಅವರ ಉತ್ಸಾಹವೆಲ್ಲಾ ದೇಶದ ಹವಾಗುಣದಂತೆ ತಣ್ಣಗಾಗುವದೆಂದೂ ವಾಡಿಕೆ ಮಾತಾಗುತ್ತಿದೆ. ಹೀಗಾಗಲು ಅನೇಕ ಕಾರಣಗಳಿವೆ. ಇವುಗಳನ್ನು ಎಲ್ಲರ ಮನಸ್ಸಿಗೆ ನಾಟುವಂತೆ ಒಂದು ಇಂಗ್ಲಿಷ್ ಪತ್ರಿಕೆಯಲ್ಲಿ ಪ್ರಕಟಿಸಿದ್ದದರಲ್ಲಿ ಕೆಲವುಗಳನ್ನು "ಕನ್ನಡ ಸಹಕಾರಿ" ಪತ್ರಿಕೆಯಲ್ಲಿ ಕನ್ನಡಿಸಿ ಪ್ರಕಟಿಸಿರುವರು. ನಮ್ಮ ದೇಶೀಯರೆಲ್ಲರೂ ಈ ಕಾರಣಗಳನ್ನು ತಿಳಿಯಬೇಕಾದುದರಿಂದ ಅವುಗಳನ್ನು ಇಲ್ಲಿ ಪ್ರಕಟಿಸಿದ್ದೇವೆ. ಸಂ. ಕೊ.]

ಮೆಂಬರರನ್ನು ಒದಗಿಸುವ ರಗಳೆಯನ್ನು ನೀನು ಹಚ್ಚಿಕೊಳ್ಳಬೇಡ. ಅವನ್ನು ಬೇರೆಯವರಿಗೆ ಬಿಟ್ಟುಬಿಡು. ಆದರೆ ಮೆಂಬರರ ಸಂಖ್ಯೆ ಏರಬೇಕೆಂದಾದಾಗ ಗಲಾಟೆ ಎಬ್ಬಿಸುತ್ತಿರು.

ವಂತಿಗೆಯ ಹಣವನ್ನು ಕೊನೆಯ ಘಳಿಗೆಯವರೆಗೂ ಕೊಡಬೇಡ—ಅದನ್ನು ಕೊಡದೇ ಇದ್ದರೆ ಮತ್ತೂ ಉತ್ತಮ.

ಸಂಸ್ಥೆಯ ಶ್ರೇಯಸ್ಸಿಗಾಗಿ ನಿನ್ನ ಪ್ರಯತ್ನಗಳೇನೂ ಇಲ್ಲದಿರಲಿ. ಆದರೆ ಇತರರು ಸೊಂಟಕಟ್ಟಿ ಮನಃಪೂರ್ವಕವಾಗಿ ಸ್ವಾರ್ಥವನ್ನು ತೊರೆದು ಕೆಲಸವನ್ನು ಮಾಡುವಾಗ, ಸಂಸ್ಥೆಯ ಅಧಿಕಾರವೆಲ್ಲ ಬರೇ ಕೆಲವರ ಕೈಯ್ಯಲ್ಲೇ ಸಿಕ್ಕಿ ಹೋಗಿದೆ ಎಂದು ಗೊಣಗುಟ್ಟುತ್ತಿರು.

ಸಂಸ್ಥೆಯ ಸಭೆಗಳಿಗೆ ಹೋಗಬೇಡ—ಹೋಗುವುದಾದರೂ, ಹೊತ್ತುಮೀರಿ ಹೋಗಿ, ನೀನು ಬರುವದಕ್ಕೆ ಮೊದಲು ಏನೇನು ಕೆಲಸ ನಡೆಯಿತೆಂದು ನಡುನಡುವೆ ಕೇಳುತ್ತ, ಸಭೆಯ ಕೆಲಸವನ್ನು ತಡೆಯುತ್ತಿರು.

ಸಭೆಗೆ ಹೋದಲ್ಲಿ, ಆಡಳಿತೆಯವರ ಮತ್ತು ಇತರ ಮೆಂಬರರ ಕೆಲಸಗಳಲ್ಲಿ ಹುಳುಕುಗಳನ್ನು ತಪ್ಪದೆ ಹುಡುಕು ತೆಗೆ.

ಆಡಳಿತೆಯಲ್ಲಿ ಯಾವ ಸ್ಥಾನವನ್ನೂ ವಹಿಸಿಕೊಳ್ಳಬೇಡ. ಯಾಕೆಂದರೆ ತಾನು ಪರರಿಗೆ ಸಹಾಯವನ್ನಿತ್ತು ಕೆಲಸಮಾಡುವದಿಕ್ಕಿಂತಲೂ ಕೆಲಸಮಾಡುವವರಿಗೆ ಅಡ್ಡಬಂದು ಅವರ ಖಂಡನೆಮಾಡುವದು ಸುಲಭ.

ಆದರೂ ಯಾವದೊಂದು ಉಪಸಭೆಗೆ ನಿನ್ನನ್ನು ನೇಮಕ ಮಾಡದಿದ್ದರೆ ಮನನೊಂದು ನಿನ್ನ ಅಸಮಾಧಾನವನ್ನು ಕಾಣಿಸಬೇಕು. ಚುನಾವಣೆಯು ನಿನ್ನ ಮೆಚ್ಚಿಕೆಗೆ ಬರಲಿಲ್ಲವೆಂದು ತಿಳಿಯಪಡಿಸುವುದಕ್ಕೆ ಕೊಂಚವೂ ಸಂಕೋಚಪಡಬೇಡ.

ನಿನ್ನನ್ನು ನೇಮಕಮಾಡಿಯೇ ಬಿಟ್ಟರೆ, ಸರ್ವಥಾ ಸಭೆಗಳಿಗೆ ಹೋಗಬೇಡ. ಸಭೆಯ ನೋಟೀಸು ನಿನಗೆ ಜಾರಿಯಾಗಿಲ್ಲವೆಂದು ಹೇಳಿಬಿಡುವದು ತುಂಬಾ ಅನುಕೂಲ. ಇದರಿಂದ ಕಾರ್ಯದರ್ಶಿಯು ಮುಳ್ಳಿನ ಮಣೆಯ ಮೇಲೆ ಕೂತಂತೆ ಎಚ್ಚರನಾಗಿರಬೇಕಾಗುವುದು.

ಸಭೆಯಲ್ಲಿ ಯಾವುದಾದರೂ ಒಂದು ಮುಖ್ಯವಾದ ವಿಷಯದಲ್ಲಿ ನಿನ್ನ ಅಭಿಪ್ರಾಯ ಕೇಳಿದರೆ ಬಾಯಿತ್ತಬೇಡ; ಆದರೆ ಸಭೆ ಮುಗಿದಮೇಲೆ ಆ ವಿಷಯವು ಹ್ಯಾಗೆ ಇತ್ಯರ್ಥವಾಗಬೇಕಿತ್ತೆಂದು ಕೊಚ್ಚುತ್ತಿರು. ಇದು ಮುಖ್ಯಸಂಗತಿ— ಯಾಕೆಂದರೆ, ಉಪಸಭೆಯು ಮೆಂಬರರನ್ನು ಹೀನೈಸುವುದು ಈಗೀಗ ಕ್ರಮವೇ ಆಗಿಹೋಗಿದೆ. ಇದರಿಂದ ಪುನಃ ಚುನಾವಣೆಯಾಗುವಾಗ ನಿನ್ನನ್ನೇ ಮರಳಿ ಆರಿಸಲಿಕ್ಕೆ ತಪ್ಪಿಹೋಗದಂತಾಗಲಿಕ್ಕೆ ಸಾಕು.

ನಿನ್ನ ಮಾತು ಇತರರೆಲ್ಲರಿಗೆ ಕೇಳಿಸುವಂತೆ ಮಾಡಬೇಕೆಂಬುದನ್ನು ಮರೆಯಬೇಡ—ಹೀಗೆಮಾಡುವದಾದರೆ ನಿನಗೆ ಕೆಲಸಮಾಡುವುದಕ್ಕೆ ಅವಕಾಶವಿರದು, ಕೆಲಸಮಾಡುವವರಿಗೆ ಅದನ್ನು ಕುರಿತು ಆಡುವುದಕ್ಕೆ ಸಮಯವೇ ಸಿಗುವುದಿಲ್ಲ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ.

ಕ. ಪ್ರಾ. ಕಾ. ಕಮಿಟಿಯ ಮುಂದರಿಸಲ್ಪಟ್ಟ ಸಭೆಯು ತಾರೀಕು 1—2—25ನೆಯ ದಿನ ರಾತ್ರೆ ೮ ಗಂಟೆಗೆ ಮಂಗಳೂರು ಜಿಲ್ಲಾ ಕಮಿಟಿಯ ಕಚೇರಿಯಲ್ಲಿ ಸೇರಿ ಮುಂದಿನ ಠರಾವುಗಳನ್ನು ಪಾಸುಮಾಡಿತು.

ಅಧ್ಯಕ್ಷ ಶ್ರೀ ಕಾರ್ನಾಡ ಸದಾಶಿವರಾವ್.

1. ಹಿಂದಿನ ಕಾರ್ಯಕ್ರಮಗಳನ್ನು ಮುಂದರಿಸುವ ಕುರಿತು ಬಂದ ಶ್ರೀ ವಿನಾಯಕ ಬಾಬಾಜಿ ಜೋಶಿ, ಜಿ. ಜಿ. ಗುತ್ತಲ ಮುಂತಾದ ಮಹನೀಯರ ಪತ್ರಗಳನ್ನು ಓದಿ ಮುಂದಿನ ಠರಾವುಗಳನ್ನು ಮಾಡಲಾಯಿತು.

(ಅ) ಈಗಿನ ಕಾರ್ಯಕ್ರಮದ ೩ನೆಯ ವಿಷಯದೊಳಗಿನ ನೂಲಿನ ವರ್ಗಣಿ ವಿಚಾರವೊಂದರ ಹೊರತು ಉಳಿದವುಗಳನ್ನು ಮುಂದಿನ ಸಭೆಯ ವರೆಗೆ ಮುಂದರಿಸತಕ್ಕದ್ದೆಂದು ಈ ಸಭೆಯು ನಿರ್ಣಯಿಸುತ್ತದೆ.

(ಆ) ನೂಲಿನ ವರ್ಗಣೆ ವಿಚಾರವನ್ನು ನಾಳೆ ಕೂಡುವ ಕಾರ್ಯಕಾರಿ ಮಂಡಲವು ನಿರ್ಣಯಿಸಿ ಮುಂದೆ ಯೋಗ್ಯ ತೋರಿದಂತೆ ಆಚರಣೆಗೆ ತರುವ ಅಧಿಕಾರವನ್ನು ಕಾರ್ಯಕಾರಿ ಮಂಡಳಿಗೆ ಕೊಟ್ಟಿದೆ.

2. (ಅ) ಮುಂದಿನ ಅಧಿವೇಶನವನ್ನು ಹುಬ್ಬಳ್ಳಿಯಲ್ಲಿ, ಅಲ್ಲಿ ಅನುಕೂಲವಾಗದಿದ್ದರೆ ಗದಗಿನಲ್ಲಿ ನಡಿಸಬೇಕೆಂದು ಬಹುಮತದಿಂದ ನಿರ್ಣಯಿಸಲಾಯಿತು.

(ಆ) ಆ ಅಧಿವೇಶನವನ್ನು ಕರೆಯುವ ಸಮಯವನ್ನು ನಿರ್ಣಯಿಸುವ ಅಧಿಕಾರವು ಅಧ್ಯಕ್ಷರ ಕಡೆಗೆ ಇರುವದು.

ಕ. ಪ್ರಾ. ಕಾ. ಕಮಿಟಿ, ದ. ಕೃ ಭಾರದ್ವಾಜ,
ಮೊಕ್ಕಾಂ ಮಂಗಳೂರು, 4-2-25. ಜನರಲ್ ಸೆಕ್ರೆಟರಿ.

ಮುಂದರಿಸಿಟ್ಟ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯಕಾರೀ ಮಂಡಳದ ಸಭೆಯು ರಾ. ಕಾರ್ನಾಡು ಸದಾಶಿವರಾಯರ ಅಧ್ಯಕ್ಷತೆಯಲ್ಲಿ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಚೇರಿಯಲ್ಲಿ ತಾರೀಕು 2—2—25ಕ್ಕೆ ಸೇರಿ ಕೆಳಗಿನ ನಿರ್ಣಯಗಳು ಮಂಜೂರಾದವು :—

ನಿರ್ಣಯಗಳು

1. ಸನ್ 1925ನೇ ವರುಷದ ಮಟ್ಟಿಗೆ ಕಾಂಗ್ರೆಸ್ ಸದಸ್ಯತ್ವವು ಮಾರ್ಚ ತಿಂಗಳ 1ನೇ ತಾರೀಕಿನಿಂದ ಪ್ರಾರಂಭವಾಗತಕ್ಕದ್ದು.

2. ಸದಸ್ಯರಾಗತಕ್ಕವರೂ ಸದಸ್ಯರನ್ನು ಮಾಡತಕ್ಕವರೂ ಅ. ಭಾ ರಾಷ್ಟ್ರೀಯ ಮಹಾಸಭೆಯ ಬೆಳಗಾಂವಿಯಲ್ಲಿ ಹೊಸದಾಗಿ ಬದಲಿಸಿದ ಘಟನೆಯ 1, 4 ಮತ್ತು 7ನೆಯ ನಿಯಮಗಳನ್ನು ಲಕ್ಷ್ಯದಲ್ಲಿಡತಕ್ಕದ್ದು.

3. ನೂಲಿನ ಕರದ ನಿಯಮಗಳನ್ನು ಯಶಸ್ವಿಯಾಗಿ ನೆರವೇರಿಸುವ ಕುರಿತು ಈ ಕಾರ್ಯಕಾರೀ ಮಂಡಲವು ಮಾಡಿದ ಕೆಳಗಿನ ಸೂಚನೆಗಳನ್ನು ಎಲ್ಲ ಕಮಿಟಿಗಳೂ ಮತ್ತು ಕೆಲಸಗಾರರೂ ಅಮಲಿನಲ್ಲಿ ತರತಕ್ಕದ್ದು.

(ಕ) ಕರ್ನಾಟಕದ ಪ್ರತಿಯೊಂದು ಜಿಲ್ಲೆಯವರು 1925ನೆಯ ಜೂನ್ ತಿಂಗಳ ಅಂತ್ಯದೊಳಗಾಗಿ ಕಡಿಮೆ ಪಕ್ಷಕ್ಕೆ ಒಂದು ಸಾವಿರ ಸದಸ್ಯರನ್ನಾದರೂ ಸೇರಿಸಲಿಕ್ಕೆ ಪ್ರಯತ್ನಪಡತಕ್ಕದ್ದು.

(ಖ) ಪ್ರತಿಯೊಂದು [illegible] ಗಳನ್ನು ಪೂರೈಸುವ ಕುರಿತು [illegible] ತಿಂಗ[illegible] ಕೆಳಗಿನ ಯೋಗ್ಯತೆಯುಳ್ಳ ಪ್ರಚಾರಕರನ್ನು [illegible] ಕು.—

(ಅ) ಪ್ರಚಾರಕರು [illegible] ಲಿ ಅರಳೆ ([illegible]) [illegible] 12 [illegible] ನೂಲನ್ನಾದರೂ [illegible].

(ಬ) [illegible] ಹುವುದಕ್ಕಾಗಲು ಪಾರಿಕಿಗಳನ್ನು [illegible] ಷ್ಟು ಕನ್ನಡ ಓದು ಬರಹಕ್ಕೆ [illegible].

(ಗ) ಇಂಥ ಪ್ರಚಾರಕರಿಗೆ [illegible] ರುಪಾಯಿಗೆ [illegible] ಪ್ರತಿಯೊಂದು [illegible] ಪ್ರಾಂತಿಕ [illegible] ಪಟ್ಟಿಯು [illegible] ಯಿಂದ ಬರತಕ್ಕದ್ದು. [illegible] ಜೆಯೋ ಕೊಡಲ್ಪಡತಕ್ಕದ್ದು.

(ಘ) (ಅ) ಪ್ರತಿಯೊಂದು [illegible] ತನ್ನಲ್ಲಿ ಒಟ್ಟುಗೂಡುವ ಕರದ ನೂಲಿನಲ್ಲಿ ನೂರಕ್ಕೆ 30 ಭಾಗವನ್ನು ಪ್ರತಿ ತಿಂಗಳ 10ನೆ ತಾರೀಕಿನೊಳಗ ತಪ್ಪದೆ ಜಿಲ್ಲಾ ಕಮಿಟಿಗಳಿಗೆ ಕಳಿಸಿಕೊಡತಕ್ಕದ್ದು. ಪ್ರತಿಯೊಂದು ಜಿಲ್ಲಾ ಕಮಿಟಿಯು ಇದರಲ್ಲಿ 20 ಭಾಗವನ್ನು ಪ್ರಾಂತಿಕ ಕಮಿಟಿಗೆ 18ನೆಯ ತಾರೀಕಿಗೆ ಮುಟ್ಟುವಂತೆ ಕಳಿಸಬೇಕು

(ಬ) ಯಾವುದಾದರೊಂದು ಕಮಿಟಿಗೆ ತನ್ನಲ್ಲಿ ಉಳಿಯುವ ಕರದ ನೂಲನ್ನು ನೇಯಿಸಲು ಸಾಧ್ಯವಾಗದಿದ್ದಲ್ಲಿ ವರಿಷ್ಟ ಕಮಿಟಿಗಳು ಇಂಥ ವ್ಯವಸ್ಥೆಯನ್ನು ಮಾಡತಕ್ಕದ್ದು.

(ಙ) ಸ್ವತಃ ನೂಲಲಿಕ್ಕೆ ಒಪ್ಪದ ಅಥವಾ ಶಕ್ತರಲ್ಲದ ಜನರು ಸದಸ್ಯರಾಗಲಿಚ್ಛಿಸಿದರ ಅವರಿಗೆ ಕರದ ಸಲುವಾಗಿ ಬೇಕಾದ ನೂಲನ್ನು ಅಥವಾ ಹತ್ತಿಯನ್ನು ಒದಗಿಸಿಕೊಡುವ ತಕ್ಕ ವ್ಯವಸ್ಥೆಯನ್ನು ಪ್ರತಿ ಒಂದು ಕಮಿಟಿಯು ಇಡತಕ್ಕದು.

4. ಈ ವರುಷದ ಕಾಂಗ್ರೆಸ್ ಸದಸ್ಯತನವು ಇದೇ ಮಾರ್ಚ ತಿಂಗಳ 1ನೆಯ ತಾರೀಕಿನಿಂದ ಪ್ರಾರಂಭವಾಗ ಲಿದ್ದರಿಂದ ಈ ತಿಂಗಳ (ಫೆಬ್ರವರಿ) ಅಂತ್ಯದೊಳಗಾಗಿ ಎಲ್ಲ ಕಮಿಟಿಗಳು ಹೆಚ್ಚು ಜನ ಸದಸ್ಯರನ್ನು ಸೇರಿಸಲಿಕ್ಕೆ ಮನಮುಟ್ಟಿ ಪ್ರಯತ್ನ ಮಾಡಿ ತಮ್ಮ ತಮ್ಮ ಸಾಧಾರಣ ಸಭೆಗಳ ಅಸ್ತಿತ್ವವನ್ನು ಕಾಯ್ದುಕೊಳ್ಳಬೇಕೆಂದು ಈ ಮಂಡಲವು ಆಗ್ರಹಪೂರ್ವಕವಾಗಿ ಸೂಚಿಸುತ್ತದೆ.

5. ಈ ವರುಷದ ನೂಲಿನ ಕರದ ನಿರ್ಣಯವು ಅಮಲಿನಲ್ಲಿ ಬಂದು ನೂಲಿನ ಪ್ರಸಾರ ಹೆಚ್ಚಾಗುತ್ತ ಹೋದಂತೆ ಪ್ರಾಂತದಲ್ಲಿ ನೂಲಿನ ಸಂಚಯವು ಹೆಚ್ಚಾಗುವ ಸಂಭವವಿರುವುದರಿಂದಲೂ ಅದರಿಂದ ಖಾದಿಯನ್ನು ನೇಯಿಸಿ ಅದರ ಪ್ರಸಾರದ ಬಗ್ಗೆಯೂ ಮತ್ತು ಈಗ ಕಮಿಟಿಗಳಲ್ಲಿ ಶಿಲ್ಕು ಬಿದ್ದ ಖಾದಿಯ ಮಾರಾಟದ ಸಲುವಾಗಿ ಯೋಗ್ಯವಾದ ವ್ಯವಸ್ಥೆಯನ್ನು ಮಾಡಬೇಕಾಗಿರುವುದರಿಂದಲೂ ಮತ್ತು ಕಮಿಟಿಗಳಿಗೆ ಈ ಮುಂದೆ ಬೇಕಾಗಬಹುದಾದ ಅರಳೆಯನ್ನು ಒದಗಿಸುವದಕ್ಕಾಗಿ ಯಾವುದಾದರೊಂದು ವ್ಯವಸ್ಥೆಯನ್ನು ಮಾಡುವದು ಅತ್ಯಾವಶ್ಯಕವಾಗಿರುವುದರಿಂದಲೂ ಕರ್ನಾಟಕ ಪ್ರಾಂತಿಕ ಖಾದಿ ಬೋರ್ಡಿನವರು ಶೀಘ್ರದಲ್ಲಿಯೇ ಸೇರಿ ಈ ವಿಷಯಗಳನ್ನು ವಿಚಾರಿಸಿ ಕಾರ್ಯವನ್ನು ಕೈಕೊಳ್ಳಬೇಕೆಂದು ಈ ಮಂಡಲವು ಕ. ಪ್ರಾ. ಖಾದಿ ಬೋರ್ಡಿಗೆ ವಿನಂತಿ ಮಾಡಿಕೊಳ್ಳುತ್ತದೆ.

ಮಂಗಳೂರು, ಕಾರ್ನಾಡು ಸದಾಶಿವರಾವ್,
ತಾ. 2—2—1925, ಅಧ್ಯಕ್ಷ.

INDIAN RED CROSS SOCIETY, COORG LOCAL CENTRE, MERCARA.

ಅಖಿಲ ಭಾರತ ತರುಣಧ್ವಜ ಮಂಡಲಿ, ಕೊಡಗು ಶಾಖಾ, ಮಡಿಕೇರಿ.

ಪ್ರಸಿದ್ಧ ಪತ್ರಿಕೆ.

ಮೇಲ್ಕಂಡ ಸಂಘದ ವಾರ್ಷಿಕ ವರ್ಷಾವಧಿ ನಡಿಸಬೇಕಾದ ಶಿಶು ಪ್ರದರ್ಶನವನ್ನು ಇದೇ ಫೆಬ್ರವರಿ ತಿಂಗಳ 16ನೇ ತಾರೀಕಿನ ದಿನ ಮಡಿಕೇರಿ ಮಾರ್ಕೆಟಿನ ಬಳಿ ನಡಿಸುವದಾಗಿ ಈ ಮೊದಲೇ ಪ್ರಕಟಪಡಿಸಿದ್ದು ಸರಿಯಷ್ಟೆ. ಆದರೆ ಕೆಲವು ಅನಾನುಕೂಲತೆಗಳ ಸಲುವಾಗಿ ಸದರಿ ದಿನದ ಪ್ರದರ್ಶನವನ್ನು ಮುಂದಕ್ಕೆ ಒರಗಿಸಿ ಇದೇ ಫೆಬ್ರವರಿ ತಿಂಗಳ 20ನೇ ತಾರೀಕು ಶುಕ್ರವಾರದ ಆರಂಭಿಸಿ 24ನೇ ತಾರೀಕು ಮಂಗಳವಾರದ ವರೆಗೆ ನಡಿಸಬೇಕೆಂದು ಕಮಿಟಿಯವರಿಂದ ತೀರ್ಮಾನಿಸಲ್ಪಟ್ಟಿರುವುದರಿಂದ ಈ ಕೆಳಗೆ ಕಂಡ ಕಾರ್ಯಕಾರ್ಯದ ಪಟ್ಟಿಯ ಮೇರೆ ನಡಿಸಲಾಗುತ್ತೆ. ಎಲ್ಲಾ ಮಹನೀಯರು ಮತ್ತು ಮಹಿಳೆಯರು ದಯಮಾಡಿಸಿ ಸದರಿ ಪ್ರದರ್ಶನವನ್ನು ಆನಂದಗೊಳಿಸುವದಲ್ಲದೆ ಶಿಶುಗಳಿರುವವರು ತಮ್ಮ ತಮ್ಮ ಶಿಶುಗಳನ್ನು ಸ್ಪರ್ಧೆಗೆ ಬಿಡಬೇಕಾಗಿ ಕೇಳಿಕೊಳ್ಳಲಾಗಿದೆ.

ಕಾರ್ಯಕಾರ್ಯದ ಪಟ್ಟಿ

ತಾರೀಕು [illegible]—2 ಂದ 24 2—25ರ ವರೆಗೆ ಪ್ರತಿ [illegible] ಗಂಟೆಗೆ [illegible] ಸಾಯಂಕಾಲ ಸಮಯ [illegible] ಸೆಡಿಜೆನ್, [illegible], ಜಾಣಂತಿಯರ ಹಿ [illegible] ಗಳ [illegible] ವಸ್ತುಗಳ [illegible] ಉಪನ್ಯಾಸ [illegible].

[illegible] ಮಂಗಳವಾರ ದಿನ ಶಿಶು ಪ್ರದರ್ಶನವ [illegible] ಶಿಶುಗಳ ಪರೀಕ್ಷೆ, ಅರ್ಹರಾದ ಶಿಶುಗಳಿಗೆ [illegible] ಗಳನ್ನು ಕೊಡುವುದು. ಕಾಯಿಲಸ್ಥರ ಪ್ರಥಮ ಚಿಕಿತ್ಸೆ (First Aid) ಯಲ್ಲು ಈ ವರುಷ ತೇರ್ಗಡೆ ಹೊಂದಿದ ಬಾಲಕ ಬಾಲಕಿಯರಿಗೆ ಸರ್ಟಿಫಿಕೇಟುಗಳನ್ನು ಕೊಡುವುದು ಮತ್ತು ಉಪನ್ಯಾಸಗಳು ನಡೆ.

[illegible] ಕಾಯಿಲಸ್ಥರ ಪ್ರಥಮ ಚಿಕಿತ್ಸೆ (First Aid) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಈ ಕೆಳಗೆ ಕಂಡ ಬಾಲಕ ಬಾಲಕಿಯರಿಗೆ ಇದೇ ಫೆಬ್ರವರಿ ತಾರೀಕು 24ನೇ ದಿನ ನಡಿಯುವ ಶಿಶು ಪ್ರದರ್ಶನದಲ್ಲಿ ತೇರ್ಗಡೆ ಸರ್ಟಿಫಿಕೇಟುಗಳನ್ನು ಕೊಡತಕ್ಕವಾಗುವುದರಿಂದ ಸದರಿ ದಿನ ಈ ಕೆಳಗೆ ಬರೆದಿರುವ ಪಟ್ಟಿಯಲ್ಲಿ ಕಂಡ ಬಾಲಕ ಬಾಲಕಿಯರು ಹಾಜರಾಗಿ ದಯಮಾಡಿಸಿ ತಮ್ಮ ತಮ್ಮ ಸರ್ಟಿಫಿಕೇಟುಗಳನ್ನು ಪಡಕೊಳ್ಳಬೇಕಾಗಿ ತಿಳಿಯಪಡಿಸೋಣಾಗಿದೆ.

ಮಡಿಕೇರಿ ಸೆಂಟರ್.

1. ಸಿ ಯಸ್ ಫೀಪಯ್ಯ, 2 ಸಿ. ಯಸ್ ಕಾಳಪ್ಪಯ್ಯ, 3. ಯಮ್ ಯಸ್ ಗೋಪಾಲರಾವ್, 4. ಸಿ. ಪಿ ಬೋಡಪ್ಪ, 5. ಸಿ. ಯಸ್ ನಾರಾಯಣರಾವ್, 6. ಟಿ. ಯಮ್. ಸುಬ್ಬಯ್ಯ, 7. ಡಿ. ದಾಸಪ್ಪ, 8. ಕೆ. ಪಿ. ಚಿಣ್ಣಪ್ಪ.

ಸೋಮವಾರಪೇಟೆ ಸೆಂಟರ್.

9. ಸಿ ಜೆಚ್. ಪುಟ್ಟರಂಗಪ್ಪ, 10 ಕೆ. ಯಸ್. ನಾರಾಯಣರಾವ್, 11. ಎ. ಬಿ. ಒಸಪ್ಪ, 12. ಕೆ. ಎಲ್. ತಾಪ್ಪಯ್ಯ, 13 ಎ ಸಿ. ಬಸಪ್ಪರ.

ಮಡಿಕೇರಿ, ಎ. ಪಿ. ಕಾರ್ಯಪ್ಪ,
ತಾರೀಕು 9—2—25 ಗೌರವ ಕಾರ್ಯದರ್ಶಿ.

ಮೂರಕಪನಿ.

(ಒರೆದು ಬಂದದ್ದು.)

ನಾನು ಹುಟ್ಟಿ ಬೆಳೆದದ್ದು ಕೊಡಗಿನಲ್ಲಿ, ರಾಜರ ಕಾಲದಿಂದಲೇ ನಾನು ಪ್ರಬಲಕ್ಕೆ ಬಂದುದರಿಂದ ನನ್ನ ಮುಂದೆ ನಿಲ್ಲಲಿಕ್ಕೆ ಯೋಗ್ಯನಾದವನು ಯಾರೂ ಇಲ್ಲ, ಆದರೆ ನಾನು ರಾಜ ಮನೆಸ್ಥಾನದವ ಕೊಡಗು ಪತ್ರಿಕೆಯ ಸಂಪಾದಕರು ಅಲ್ಲವೆಂತ ಹೇಳಬಹುದು! ನಿಜವಾಗಿಯೂ ಅವರನ್ನು ಮಾನನಷ್ಟಕ್ಕೆ ಗುರಿಪಡಿಸುವೆನು! ನಾನು ಕಡಿಮೆ ಮನುಷ್ಯನಲ್ಲ ನನ್ನ ಚರಿತ್ರೆ ಕೇಳಿ. ನನ್ನ ತಾಯಿ ನೊಳ್ಳೆ, ಅಂದರೆ ನಾನು ನೊಳ್ಳೆಯ ಉದರದಲ್ಲಿ ಜನಿಸಿದವನು. ನಾನು ಹುಟ್ಟಿದಕೂಡಲೇ ನನ್ನ ಪಿತೃಗಳು, ಮಾತಾಪಿತ್ರೀಯವರು ಸ್ವರ್ಗ ಲೋಕವನ್ನೈದಿದರು. ಅದು ಹ್ಯಾಗಾಯಿತೆಂದರೆ.—ನನ್ನ ತಾಯಿಯು ಗರ್ಭಿಣಿ ನೊಳ್ಳೆಯಾದಬಳಿಂದ ಒಂದು ದಿವಸ ಸಾಯಂಕಾಲ 7 ಗಂಟೆಗೆ ಒಬ್ಬ ಕಪ್ಪು ಮನುಷ್ಯನನ್ನು ಮುಖದ ಮೇಲೆ ಕಚ್ಚಿ ರಕ್ತವನ್ನು ಹೀರಿ ಕುಡಿಯುತ್ತಿದ್ದಳು. ನಾನು ನೊಳ್ಳೆಯ ಬಾಯಿಯೊಳಗಿನ ಉಗುಳಿನಲ್ಲಿ ಹಸಿವಿನಿಂದ ಮನುಷ್ಯನಿಗೆ ಹುಟ್ಟಿದ ಗಾಯದ ಸ್ವಲ್ಪ ರಕ್ತವನ್ನು ಹೀರಿ ಕುಡಿಯುತ್ತಿದ್ದೆನು. ಕೂಡಲೆ ನನ್ನ ತಾಯಿಯನ್ನು ಆ ಮನುಷ್ಯನು ಕೈಯಿಂದ ಹೊಡೆದು ಕೊಂದುಬಿಟ್ಟನು. ನಾನು ಮನುಷ್ಯ ರಕ್ತದೊಂದಿಗೆ ಸೇರಿ ಅವಯವಗಳಲ್ಲೆಲ್ಲಾ ಹರಡಿಕೊಂಡು ಸಂಚರಿಸುತ್ತಾ ಪ್ರಬಲಕ್ಕೆ ಬಂದೆನು. ರಕ್ತದಲ್ಲಿ ಕ್ರಿಮಿಗಳೋಪಾದಿಯಲ್ಲಿ ಕೆಂಪು ರಂಗಿನ ಸಣ್ಣ ಕಾರ್ಪಸ್ಕಲ್ (red blood corpuscle) ಕೋಟ್ಯಾಂತರಗಳು ಇದ್ದವು ಅವುಗಳಲ್ಲಿ ಒಂದರೊಳಗೆ ನಾನು ಚಿಕ್ಕಂದಿನಿಂದಲೇ ಪ್ರವೇಶಿಸಿ ಪ್ರಬಲಕ್ಕೆ ಒಂದೊಡನೆಯೇ ನನ್ನಂತೆಯೇ ಒಂದು ಡಜನ್ ಪ್ರಬಲಕ್ಕೆ ಬಂದವರನ್ನು ನಾನು ನೋಡಿದೆನು. ಅವರೊಂದಿಗೆ ಇರುವದು ಬಹಳ ಕಷ್ಟಕರವಾದುದರಿಂದ ಇನ್ನೊಂದು ಕಾರ್ಪಸ್ಕಲನ್ನು ಸೇರಬೇಕೆಂದು ಆ ಮನೆಯ ಗೋಡೆಯನ್ನು ಕತ್ತರಿಸಿ ಹೊರಗೆ ಬಂದೆವು. ಅಷ್ಟರಲ್ಲಿ ಆ ಮನುಷ್ಯನು ಚಳಿ ಮತ್ತು ಜ್ವರ ಬಂತೆಂದು ಮಲಗಿ ಕಂಬಳಿಯೊಳಗೆ ಮುಲುಗಿಕೊಂಡನು. ನಮಗೂ ಬೆಚ್ಚಗಾಯಿತು, ಕೂಡಲೆ ಆತನು ಕ್ವಯಿನ ಎಂಬ ಒಂದು ಮದ್ದನ್ನು ನಿಂಬೆ ಹುಳಿಯ ರಸದಲ್ಲಿ ಸೇರಿಸಿ ಕುಡಿದನು. ಮಾರಣೆ ದಿವಸ ನನ್ನಂತೆ ಪ್ರಬಲಕ್ಕೆ ಬಂದ ಕ್ರಿಮಿಗಳೊಂದಿಗೆ ನನಗೂ ಮಂಕು ಹಿಡಿಯಿತು. ಇದು ಕ್ವಯಿನ ಎಂಬುದರಿಂದಲೇ ಎಂದು ತಿಳಿದುಕೊಂಡೆವು. ಬಡ ಪಾಪಿಗಳಾದ ನನ್ನ ಸಂಗಾತಿಗಳೆಲ್ಲರೂ ಸತ್ತು ಹೋದವು ಆದರೆ ನಾನು ಮಾತ್ರ ಚೇತರಿಸಿಕೊಂಡು ಮರಣವೆಂಬ ನದಿಯಲ್ಲಿ ಮುಳುಗುತ್ತಾ ತೇಲುತ್ತಾ ಚಿಕ್ಕಂದಿನಲ್ಲೇ ಈ ಜೀವದಲ್ಲಿ ಗಟ್ಟಿಗನಾದುದರಿಂದಲೂ ಎಲ್ಲರ ಪೈಕಿ ನಾನು ಒಬ್ಬ ಮಾತ್ರ ದಷ್ಟದವನಾದುದರಿಂದಲೂ ನದಿ ದಡ ಸೇರಿದೆನು.

Stout as Julius Cæsar
I swam across the river
To leave behind this Commentary.

ಮುಖದ ಕಳೆ ಮತ್ತು ದೇಹಕಾಂತಿ.

ಇದನ್ನು ಕಾಪಾಡಿಕೊಳ್ಳುವುದು ಹೇಗೆ?

ನಮ್ಮ ಮುಖದ ಕಳೆಯನ್ನು ಕಾಪಾಡಬೇಕಾದರೆ, ಮುಖದ ಪೌಡರ್, ಗ್ಲಿಸರೈನ್, ಸೋಪು ಮುಂತಾದ ಅಂಗರಾಗಗಳೂ, ಅನುಲೇಪನಗಳೂ [illegible] ಕೆಲಸಕ್ಕೆ ಬಾರವು. ನಮ್ಮ ದೇಹದ ಆರೋಗ್ಯವು ಕ[illegible] ಕಾಪಾಡಿಕೊಂಡರೆ, ಅದರಿಂದ ಮುಖ ಕಾಂತಿಗೆ ಕುಂದಕವಿಲ್ಲದಿರುವುದು. ನಮ್ಮ ದೇಹದ ಜೀರ್ಣಾಂಗಗಳಲ್ಲಿ ಒಂದಾದ ಕಾಳಿಜ ಅಥವಾ ಪ್ಲೀಹವೆಂಬುದು, ಸರಿಯಾಗಿ ಕೆಲಸಮಾಡದೆ ಮಂದವಾಗಿದ್ದರೆ ಮುಖವು ಸಪ್ಪೆ ಬೀಳುವುದು. ಆಗಾಗ ಅಜೀರ್ಣಕ್ಕೆ ಅವಕಾಶ ಕೊಟ್ಟರೆ, ಮುಖದಲ್ಲಿ, ಮುಖ್ಯವಾಗಿ ಮೂಗಿನಲ್ಲಿ, ಒಂದು ಬಗೆಯ ವಿಕಾರವಾದ ಕೆಂಪು ಬಣ್ಣವು ತೋರುವುದು. ಮುಖದಲ್ಲಿ ವಿಶೇಷವಾಗಿ ಮೊಡವೆಗಳೂ, ಬೊಕ್ಕೆಗಳೂ ಕಿಲುಬೂ, ತೋರುವುದಕ್ಕೆ ಸಹ ಈ ಅಜೀರ್ಣವೇ ಕಾರಣವು.

ವಿಶೇಷವಾಗಿ ಟೀ ಕುಡಿಯುವುದೂ, ಸೀ ಪದಾರ್ಥಗಳನ್ನು ಹೆಚ್ಚಾಗಿ ತಿನ್ನುವುದೂ ಅಜೀರ್ಣಕ್ಕೆ ಕಾರಣವು. ಮುಖ ಕಾಂತಿಯನ್ನೂ ದೇಹ ಲಾವಣ್ಯವನ್ನೂ ಸರಿಯಾಗಿ ಕಾಪಾಡಿಕೊಳ್ಳಬೇಕೆಂಬ ಇಷ್ಟವುಳ್ಳವರು, ಬೆಳಿಗ್ಗೆ ಟೀ, ಕಾಫಿ, ಮುಂತಾದ ಪಾನೀಯಗಳನ್ನು ಕುಡಿಯುವುದಕ್ಕಿಂತ, ಬಿಸಿನೀರಿಗೆ ಒಂದು ಕಲ್ಲು ಉಪ್ಪನ್ನು ಹಾಕಿ, ಆ ನೀರನ್ನು ಒಂದು ಬಟ್ಟಲಿನಷ್ಟು ಪ್ರತಿ ದಿನ ಬೆಳಿಗ್ಗೆ ಕುಡಿಯುತ್ತಾ ಬಂದರೆ ಎಷ್ಟೋ ಗುಣವುಂಟು.

ಶುದ್ಧವಾದ ಹಸುವಿನ ಹಾಲನ್ನು ಕುಡಿಯುತ್ತ ಬಂದರೂ ಮುಖ ಕಾಂತಿಯು ಹೆಚ್ಚುವುದು.

ರಕ್ತದಲ್ಲಿ ಅಥವಾ ರಕ್ತ ಸಂಚಾರದಲ್ಲಿ ಏನಾದರೂ ಅಲ್ಪ ಸ್ವಲ್ಪ ನ್ಯೂನತೆ ಇದ್ದರೂ ಕೂಡ ದೇಹದ ಚರ್ಮವು ಸಪ್ಪಗೆ ಕಾಣಿಸುತ್ತ, ಮೂಗು, ತುಟಿ ಇವೆರಡೂ ನೀಲದ ಬಣ್ಣಕ್ಕೆ ತಿರುಗುವುದು, ಇಂಥಾ ಸ್ಥಿತಿಯಲ್ಲಿ ರಕ್ತ ಶುದ್ಧೀಕರವಾದ ಮತ್ತು ಶಕ್ತಿವರ್ಧಕವಾದ ಟಾನಿಕ್ಕುಗಳನ್ನಾಗಲಿ, ಹೃದಯಕ್ಕೆ ಬಲಕೊಡುವ ಟಾನಿಕ್ಕುಗಳನ್ನಾಗಲಿ ಸೇವನೆ ಮಾಡಬೇಕು.

ಅಧಿಕ ಕೋಪ ಅಥವಾ ದುಃಖ ಇವು ಕೂಡ ಮುಖ ಕಾಂತಿಯನ್ನು ಕಡಿಸುವುದು. ಆದುದರಿಂದ ಮನುಷ್ಯನು ಚಿಂತೆ, ದುಃಖ, ಕೋಪ, ಮುಂತಾದವುಗಳಿಗೆ ಸುಲಭವಾಗಿ ಅವಕಾಶ ಕೊಡದಂತೆ, ಮನೋ ಬಲವನ್ನು ಕಾಪಾಡಿಕೊಳ್ಳುವ ಸಾಧನೆಯನ್ನು ಮಾಡಬೇಕು. ಮನಸ್ಸು ಕಲಗದ ಹಾಗೆ ಶಾಂತಚಿತ್ತನಾಗಿ ಧೈರ್ಯದಿಂದ ಇರತಕ್ಕವನಿಗೆ ಸಹಜವಾದ ಒಂದು ಅಪೂರ್ವ ಲಾವಣ್ಯವು ಮುಖದಲ್ಲಿ ಕಾಣುವುದು. ಜಿತೇಂದ್ರಿಯರಾದ ಮಹರ್ಷಿಗಳ ಮುಖದಲ್ಲಿ ಕವಿಗಳು ವರ್ಣಿಸತಕ್ಕ ಅದ್ಭುತ ತೇಜಸ್ಸೆಂಬುದು ಇದೇ ಹೊರತು ಬೇರೆ ಅಲ್ಲ. ಅವರು ಆಹಾರಾದಿಗಳನ್ನು ಬಿಟ್ಟು ದೇಹದಂಡನೆ ಮಾಡುವುದರಿಂದ ಕೃಶಾಂಗರಾಗಿದ್ದರೂ, ಕೋಪತಾಪಾದಿಗಳಿಲ್ಲದೆ ಶಾಂತಚಿತ್ತರಾಗಿರುವುದರಿಂದ ಅವರ ಮುಖದಲ್ಲಿ ಅಪೂರ್ವವಾದ ತೇಜಸ್ಸುಂಟಾಗುವುದು.

ನಿಧಾನ್ರಭಾವ, ಕುಟುಂಬ ಚಿಂತೆ, ಅತ್ಯಾಶೆ, ದೇವದಾರಿಲ್ಲ, ಇವೆಲ್ಲಾ ಚರ್ಮದ ಕಾಂತಿಯನ್ನು ಕೆಡಿಸಿ ಸಪ್ಪಗೆ ಮಾಡುವುದಲ್ಲದೆ ಕಣ್ಣಿನ ಕೆಳಗೆ ಸುತ್ತಲೂ ಕಪ್ಪುಕಟ್ಟುವದು.

ದಿನಕ್ಕೆ ಏಳು ಅಥವ ಎಂಟು ಗಂಟೆಗಳ ಕಾಲ ಸುಖನಿದ್ರೆಯು ಮನುಷ್ಯನಿಗೆ ಅವಶ್ಯವು. ಆದರೆ ಬಹಳ ಹೊತ್ತು ಮಲಗುವುದರಿಂದ ಮೈಬಣ್ಣವು ಕಂದಿ ಹೋಗುವುದು. ಆದುದರಿಂದ ವಿಶೇಷವಾಗಿ ನಿದ್ರೆ ಕೆಡಲೂ ಬಾರದು; ಹೆಚ್ಚಾಗಿ ನಿದ್ರೆ ಮಾಡಲೂ ಬಾರದು.

ಶುದ್ಧವಾದ ಗಾಳಿಗೆ ಅವಕಾಶವಿಲ್ಲದ ಕೋಣೆಗಳಲ್ಲಿ ಮಲಗುವುದರಿಂದಲೂ, ಮೈಮೇಲೆ ಬಹಳವಾಗಿ ಬಟ್ಟೆಯನ್ನು ಹೊದ್ದುಕೊಳ್ಳುವದರಿಂದಲೂ ಮುಖ ಕಾಂತಿಯು ಕೆಡುವುದು. ಹಾಸಿಗೆ ಹೊದ್ದಿಕೆಗಳು, ಅಥವ ಮೈಮೇಲೆ ಹಾಕಿಕೊಳ್ಳುವ ಉಡುಪು ಸಾಧಾರಣವಾಗಿ ಶರೀರದ ಉಷ್ಣವು ಕೆಡದಂತೆ ಕಾಪಾಡುವದಕ್ಕೆ ತಕ್ಕಷ್ಟು ಮಾತ್ರವಿರಬೇಕು. ಮಲಗುವ ಕೋಣೆಯ ಕಿಟಿಕಿಗಳನೆಲ್ಲಾ ಚಳಿ, ಗಾಳಿ, ಬೇಸಿಗೆಯ ಕಾಲವೆಂಬ ವ್ಯತ್ಯಾಸವನ್ನು ನೋಡದೆ ಯಾವಾಗಲೂ ತೆರೆದಿಟ್ಟೇ ಮಲಗಬೇಕು. ಆದರೆ ಹೊರಗಿನ ಶೀತದ ಗಾಳಿಯು ನೆಟ್ಟಗೆ ಮುಖದ ಮೇಲೆ ಅಥವಾ ನಡು ನೆತ್ತಿಯಮೇಲೆ ಬೀಸುವುದಕ್ಕೆ ಅವಕಾಶ ಕೊಡಬಾರದು. ತಲೆಯ ಮೇಲೆ ಶೀತದ ಗಾಳಿಯು ಬೀಸುವುದಕ್ಕೆ ಅವಕಾಶ ಕೊಡುವುದರಿಂದ ತಲೆಶೂಲೆ, ಹಲ್ಲುಬೇನೆ ಮುಂತಾದವುಗಳು ತಲೆದೋರುವವು.

ಅನೇಕ ಸಂದರ್ಭಗಳಲ್ಲಿ ಮದ್ಯ ಸೇವನೆಯಿಂದ ಮೈಬಣ್ಣವು ಬಹಳವಾಗಿ ಕಂದಿಹೋಗುವುದು. ಮದ್ಯ ಸೇವನೆಯಿಂದ ಮೂಗು, ಮುಖ, ಕೆನ್ನೆ ಇವು ಕೆಂಪು ಬಣ್ಣಕ್ಕೆ ತಿರುಗುವುದಲ್ಲದೆ, ಮೈ ಚರ್ಮವು ಹಳದಿಯಾಗುವುದು. ಅಫೀಮು, ಮಾರ್ಫಿಯಾ, ಗಾಂಜಾ, ಮುಂತಾದ ಮದ ದ್ರವ್ಯಗಳ ಸೇವನೆಯಿಂದಲೂ, ದೇಹದ ಚರ್ಮವು ಒಂದು ಬಗೆಯ ಹಳದಿ ಬಣ್ಣಕ್ಕೆ ತಿರುಗುವುದು.

ಮುಖ್ಯವಾಗಿ ದೇಹಕಾಂತಿಯನ್ನು ಕಾಪಾಡುವ ಉದ್ದೇಶವುಳ್ಳವರು ತಮ್ಮ ದೇಹಾರೋಗ್ಯವನ್ನು ಮೊದಲು ಸರಿಯಾಗಿ ನೋಡಿಕೊಂಡು ಅದರ ಮೇಲೆ ಆಗಾಗ ಎಂದಾವರೂ ಒಮ್ಮೆ ಬಾಹ್ಯ ಸಂಸ್ಕಾರಗಳನ್ನೂ ಮಾಡಿಕೊಳ್ಳಬಹುದು. ಎಷ್ಟೇ ಶುದ್ಧವೆನಿಸಿಕೊಂಡಿದ್ದರೂ, ಮುಖದ ಪೌಡರನ್ನು ಮಿತವಿಲ್ಲದೆ ಆಗಾಗ ವಿಶೇಷವಾಗಿ ಉಪಯೋಗಿಸುವುದರಿಂದ ಅವಗುಣವೇ ಹೊರತು ಗುಣಭಾಗವು ಕಡಿಮೆ. ಏಕೆಂದರೆ ಈ ಪೌಡರುಗಳನ್ನು ಮುಖಕ್ಕೆ ಮೆತ್ತುವುದರಿಂದ ರೋಮಕೂಪಗಳೆಲ್ಲಾ ಮುಚ್ಚಿ ಹೋಗಿ ಸ್ವಾಭಾವಿಕವಾಗಿ ಬೆವರು ತಾದ ಕಶ್ಮಲಗಳು ಹೊರಗೆ ಒರಲು ಅಡ್ಡಿಮಾಡಿದಂತಾವು. ಬಹಳ ಹೆಚ್ಚು ವಾಸನೆಯುಳ್ಳವಾಗಲಿ, ಬಣ್ಣವನ್ನು ಮಿಶ್ರ ಮಾಡಿದ ಪೌಡರುಗಳು ಚರ್ಮದ ಶಕ್ತಿಯನ್ನು ಕೆಡುವವು. ನಯವಾಗಿ ಪುಡಿ ಮಾಡಿದ ಮತ್ತು ಶುದ್ಧ ಕೆಲವು ಪೌಡರುಗಳನ್ನು ಮಾತ್ರ ಎಂದಾದರೂ ಒಮ್ಮೊಮ್ಮೆ ಉಪಯೋಗಿಸಬಹುದು. ಸ್ತ್ರೀಯರಿಗೆ ಕಪೋಲಕಾವ ಬುದು, ಅವರಿಗೆ ಸಹಜವಾದ ದೇಹಾರೋಗ್ಯದಿಂದ ಾಗತಕ್ಕದಾಗಿದೆ. ಮುಖದಲ್ಲಿ ಮತ್ತು ಮೈಯಲ್ಲಿ ವಿರಾಗಿ ಎಣ್ಣೆ ಕಾರುವ ಸ್ವಭಾವವುಳ್ಳ ಹೆಂಗಸರು, ಕೊಬ್ಬಿಗಿರುವ ಪದಾರ್ಥಗಳನ್ನು ಅಧಿಕವಾಗಿ ತೆಗೆದುಕೊಳ್ಳದೆ ಹೊತ್ತಿನಲ್ಲಿ ತಣ್ಣೀರನ್ನು ಹೆಚ್ಚಾಗಿ ಕುಡಿಯುವುದನ್ನು ಕೆಗೆ ತರಬೇಕು. ದಿನಕ್ಕೆರಡುಸಾರಿ ಸೋಪು ಹಾಕಿ ರಿನಿಂದ ಮುಖವನ್ನು ತೊಳೆಯುವುದಲ್ಲದೆ, ಇನ್ನೂ ಅವರ್ತಿ ಆಗಾಗ ತಣ್ಣೀರಿನಲ್ಲಿ ಮುಖವನ್ನು ತೊಳೆಯು ಬರಬೇಕು. ಮುಖವನ್ನೊರಸುವಾಗ ಮೃದುವಾದ ದಿಂದ ಮೆಲ್ಲಗೆ ಒತ್ತಬೇಕಲ್ಲದೆ ಒಲವಾಗಿ ಒತ್ತಿ ತಿಕ್ಕಮು. ಮುಖದಲ್ಲಿ ಜಿಡ್ಡು ಕಾರುವಾಗ ಎಂದಿಗೂ ಪೌಗಳನ್ನು ಹಾಕಬಾರದು. ಮೊಡವೆ, ಮಚ್ಚೆ, ಬೊಕ್ಕೆ, ಅದಿರು ಮುಂತಾದವುಗಳಿಗೆ ಪ್ರತ್ಯೇಕವಾದ ಚಿಕಿತ್ಸೆಗಳನ್ನು ಮಾಡಿಸಬೇಕು.

"ಆರೋಗ್ಯಚಂದ್ರಿಕೆ"

ಕೋರ್ಟಿನ ಕಚೇರಿ ವರ್ತಮಾನ.

ಸೋಮವಾರಪೇಟೆಯ ಸಮೀಪ ಇರುವ ಅಬ್ಬಿಮಠವೆಂಬ ಲಿಂಗಾಯತ ಮಠದಲ್ಲಿ ಮಠಾಧಿಪತಿಯಾಗಿದ್ದ ಚಿಕ್ಕ ಮಲ್ಲಿಕಾರ್ಜುನಸ್ವಾಮಿ ಎಂಬವರು, ಕಳೆದ ಏಪ್ರಿಲ್ ತಿಂಗಳಲ್ಲಿ ಮಡಿಕೇರಿಯಲ್ಲಿ ದೇವಾಧೀನರಾದರು. ಅವರು ಸಾಯುವ ಮುಂಚೆ ತನ್ನ ಪೂರ್ವಾಶ್ರಮದ ತಮ್ಮ ನಾಗಭೂಷಣ ಎಂಬ ಹುಡುಗನಿಗೆ ತನ್ನ ಮರಣಾನಂತರ ಮಠಾಧಿಕಾರ ಇರಬೇಕೆಂತ ನಿಯಮಿಸಿ ಮರಣಶಾಸನ ಬರೆದಿಟ್ಟಿರೆಂದೂ, ಅವರ ದೇಹವನ್ನು ಅಬ್ಬಿಮಠಕ್ಕೆ ಸಾಗಿಸಿ ಅಲ್ಲಿ ಸಮಾಧಿ ಮಾಡಲಿಕ್ಕೆ ಚಿತ್ರದುರ್ಗದ ಮಠದ ಶಿಷ್ಯರು ತಡಮಾಡಿ ಮಠದ ಸ್ವಾಧೀನವನ್ನು ಬಲಾತ್ಕಾರದಿಂದ ತೆಗೆದುಕೊಂಡರೆಂದೂ, ಆದ್ದರಿಂದ ಮಠದ ಸ್ವಾಧೀನವನ್ನು ಮರಣಶಾಸನದ ಮೇರೆ ಮಠಾಧಿಪತ್ಯಕ್ಕೆ ನೇಮಕನಾದ ನಾಗಭೂಷಣ ಸ್ವಾಮಿಗೆ ಕೊಡಿಸಬೇಕೆಂದು ಡಿಸ್ಟ್ರಿಕ್ಟ್ ಜಡ್ಜ್ ಕೋರ್ಟಿಗೆ ನಾಗಭೂಷಣ ಸ್ವಾಮಿಯ ಪರವಾಗಿ ಅವರ ಅಣ್ಣ ಮುದ್ದಪ್ಪನೆಂಬವರು ಅರ್ಜಿ ಮಾಡಿದರು. ಚಿತ್ರದುರ್ಗ ಮಠದವರು ವಿಲ್ ಮಾಡುವಾಗ ಚಿಕ್ಕ ಮಲ್ಲಿಕಾರ್ಜುನ ಸ್ವಾಮಿಯವರಿಗೆ ಜ್ಞಾನವಿದ್ದಿಲ್ಲವೆಂತಲೂ, ವಿಲ್ ಮಾಡಿದ್ದು ಹೌದಾದರೂ ವಿಲ್ ಮೂಲಕ ಮಠಾಧಿಕಾರಿಯನ್ನು ನೇಮಿಸಕೂಡದೆಂತಲೂ, ಕೊಡಗಿನ ಮುಂಗಾಣ ಸಮಯದ ಮಠಗಳಿಗೆಲ್ಲಾ ಮಠಾಧಿಕಾರಿಗಳನ್ನು ನೇಮಿಸುವ ಹಕ್ಕು ಚಿತ್ರದುರ್ಗ ಮಠದ ಜಗದ್ಗುರುಗಳಿಗೆ ಸೇರಿದೆಯೆಂತಲೂ ತಕರಾರು ಮಾಡಿದರು.

ಈ ಕೇಸಿನಲ್ಲಿ ಡಿಸ್ಟ್ರಿಕ್ಟ್ ಜಡ್ಜಿಯವರು ಮಾಡಿದ ತೀರ್ಮಾನದ ಸಾರವನ್ನು ಈ ಕೆಳಗೆ ಕೊಟ್ಟಿದೆ.

ಈ ಫೈಸಲನ್ನು ತಾನು ಸಮ್ಮರಿಯಾಗಿ ಫೈಸಲ್ ಮಾಡಿರುವದಾಗಿ ಹೇಳಿ ವಾದಾಸ್ಪದವಾದ ವಿಷಯಗಳನ್ನು ವಿವರಿಸಿ ಹೀಗೆಂತ ಬರೆದಿದ್ದಾರೆ—ಮಠವೆಂಬ ಖಾನೂನ್ ವ್ಯಕ್ತಿಯಲ್ಲಿ ಸೊತ್ತು ಇರುತ್ತದೆಯೇ ಹೊರತು ಮಠದ ಸೊತ್ತು ಮಠಾಧಿಕಾರಿಯಲ್ಲಿ ಟ್ರಸ್ಟ್ ಸೊತ್ತಾಗಿರುವದಿಲ್ಲವೆಂಬದು ಖಾನೂನ್ ಆಗಿರುತ್ತದೆ. ಮಠಕ್ಕೆ ಕೊಡಗು ರಾಜರು ಕೊಟ್ಟ ನಿರೂಪವು ಈ ಖಾನೂನಿಗೆ ಅನುಸರಿಸಿಯೇ ಇದೆ. ಆದ್ದರಿಂದ ಚಿಕ್ಕ ಮಲ್ಲಿಕಾರ್ಜುನ ಸ್ವಾಮಿಯವರು ಬರೆದ ವಿಲ್ ಎಂಬ ಲಿಖಾವಟ್ಟಿನಿಂದ ಸೊತ್ತು ಪರಭಾರೆ ಮಾಡಿದಂತಾಗುವುದಿಲ್ಲ. ತನ್ನ ಮರುದಿನಕ್ಕೆ ಮಠಾಧಿಕಾರಿ ಯಾರಿರಬೇಕೆಂಬದನ್ನು ನಿರ್ಣಯಿಸಿದ್ದು ಮಾತ್ರವಾಗಿದೆ. ಸೊತ್ತು ಮಠದ ಸೊತ್ತಾಗಿಯೇ ಉಳಿದಿರುತ್ತದೆ. ಕೊಡಗು ರಾಜರು ಕೊಟ್ಟ ನಿರೂಪವನ್ನು ನಾನು ಸಮ್ಮರಿಯಾಗಿ ಗಮನಕ್ಕೆ ತೆಗೆದುಕೊಳ್ಳುವಾಗ ಚಿತ್ರದುರ್ಗ ಮಠಕ್ಕೆ ಅಬ್ಬಿ ಮಠದ ಸೊತ್ತನ್ನು ಕೊಟ್ಟದ್ದಲ್ಲವೆಂತ ನನಗೆ ಖಂಡಿತವಾಗಿಯೂ ತೋರುತ್ತದೆ.

ಹಿಂದುಸ್ಥಾನದ ಎಲ್ಲಾ ಮಠಗಳಿಗೂ ಮಠಾಧಿಕಾರಿಗಳನ್ನು ನೇಮಿಸುವದು ಆಯಾ ಮಠಗಳ ಪದ್ಧತಿಯನ್ನು ಅನುಸರಿಸಿಯೇ ಆಗಬೇಕೆನ್ನುವದೇ ಖಾನೂನಾಗಿದೆ. ಈ ಖಾನೂನೇ ಚಿತ್ರದುರ್ಗ ಮಠದವರು ಹಿಂದುಸ್ಥಾನದ ಎಲ್ಲಾ ಲಿಂಗಾಯತ್ ವಿರಕ್ತ ಮಠಗಳಿಗೆ ಅಧಿಕಾರಿಗಳನ್ನು ನೇಮಿಸುವವರಾಗಿದ್ದಾರೆಂಬ ವಾದಕ್ಕೆ ವಿರೋಧವಾಗಿದೆ. ಈ ಮೊಕದ್ದಮೆಯಲ್ಲಿ ಚಿಕ್ಕ-ಮಲ್ಲಿಕಾರ್ಜುನ ಸ್ವಾಮಿಯವರು ಮಾಡಿದ ನೇಮಕಕ್ಕೆ ಚಿತ್ರದುರ್ಗದ ಮಠದ ಒಪ್ಪಿಗೆ ಇಲ್ಲದ್ದರಿಂದ ಮಂಜೂರಿಲ್ಲವೆಂತ ನಾನು ಫೈಸಲ್ ಮಾಡಲಾರೆ. ಮಠಗೆ ಛತ್ರವು ಕೊಡುವಾಗ ಚಿತ್ರದುರ್ಗದವರ ಮಂಜೂರಾತಿ ಪಡೆದ ಪುರಾವಾತು ಇದೆ. ಆದರೆ ಅಂಥಾ ಮಂಜೂರಾತಿಯು ಮಠಿಯ ಶಾಸ್ತ್ರೋಕ್ತ ಯೋಗ್ಯತೆ ಸಂಬಂಧವಾಗಿ ಮಾತ್ರ ಆಗಿರುತ್ತೆಂತ ತೋರಬರುತ್ತದೆ. ಕೊಡಗಿನ ಮಠಗಳಲ್ಲಿ ತನ್ನ ಅನಂತರದ ಅಧಿಕಾರಿಯನ್ನು ನೇಮಿಸುವ ಕೆಲಸವನ್ನು ಪ್ರಾರಂಭಿಸುವದಾದರೂ ಮಠಾಧಿಕಾರಿಯ ಕರ್ತವ್ಯವಾಗಿದೆಯೆಂತ ಕಂಡು ಬರುತ್ತದೆ.

ಸಾಧಾರಣವಾಗಿ ಸ್ವಾಮಿಯ ಜೀವಮಾನ ಕಾಲದಲ್ಲೇ ಮರಿ ಮಾಡಿ ಅವನಿಗೆ ವಿದ್ಯೆ ಕಲಿಸಿ ಆಶ್ರಮದಲ್ಲಿ ಆಶ್ರಮ ಕೊಡುವದು ಪದ್ಧತಿಯಾಗಿದೆ. ಈ ಕೇಸಿನಲ್ಲಿ ನೇಮಕಕ್ಕೆ ಆಗಬೇಕಾದ ಕಾರ್ಯಗಳೆಲ್ಲಾ ನಡೆದಿವೆ ಎಂಬದನ್ನು ಸೂಚಿಸುವದೇನೂ ಕಾಣುವದಿಲ್ಲ. ಅರ್ಜಿದಾರನಿಗೆ ಶಿವದೀಕ್ಷೆಯಾಗಿರಲಿಲ್ಲ. ಇನ್ನೂ ಕೆಲವು ಕಾಲದವರೆಗೆ ಆಶ್ರಮ ಕೊಡಲು ಆಗುವಂತೆ ಕಾಣುವದಿಲ್ಲ. ಅರ್ಜಿದಾರನು ಗತಿಸಿದ ಮಠಾಧಿಪತಿಯ ರಕ್ತ ಸಂಬಂಧಿಕನೆಂಬ ಆಕ್ಷೇಪಣೆಯೊಂದು ಬಂದಿದೆ. ಅಣ್ಣನ ಮಗನನ್ನು ನೇಮಿಸಿದ ಉದಾಹರಣೆ ಕೊಡಗಿನಲ್ಲಿ ಇದೆ. ಆದರೂ ರಕ್ತ ಸಂಬಂಧಿಕನನ್ನು ನೇಮಿಸುವದು ಆಕ್ಷೇಪಕರವೇ. ಮೈನರನ್ನು ನೇಮಿಸಿದ್ದಕ್ಕೂ ಉದಾಹರಣೆ ಉಂಟು. ಕ್ರಮ ದಾವಾದಲ್ಲಿ ಮೈನರಿನ ಹಕ್ಕು ಸ್ಥಾಪನೆಯಾಗಬಹುದೆಂತ ತೋರುತ್ತದೆ. ಮೈನರೇ ಮಠದ ಕಾರ್ಯ ನಡಿಸಲು ಸಾಧ್ಯವಿಲ್ಲ. ಮೈನರಾಗಿರುವಾಗ ಆಡಳಿತ ನಡೆಸಲು ಏರ್ಪಾಡನ್ನೇನೂ ಸೂಚಿಸಿರುವದಿಲ್ಲ. ಆದರೆ ಮೈನರನ್ನು ಆರಿಸುವದು ಒಳ್ಳೇದೋ ಎಂತ ಸಂಶಯವಿದೆ. ಮೈನಾರಿಟಿ ತೀರುವಾಗ ಯೋಗ್ಯನಾಗಿರುತ್ತಾನೋ ಎಂಬದನ್ನು ಹೇಳಲು ಸಾಧ್ಯವಿಲ್ಲ.

ವಿಲ್ ಪೌತನು ಮಾಡಿಸಿದ್ದೆಂಬದರಲ್ಲಿ ನನಗೆ ಸಂಶಯವಿಲ್ಲ. ಮರಣಕಾಲದ ಎಲ್ಲಾ ವಿಲ್ಲುಗಳಿಗೂ ಒರುವ ಆಕ್ಷೇಪಣೆಯಂತೆಯೇ ವಿಲ್ ಮಾಡಿಸಿದಾತನಿಗೆ ಸ್ವಬುದ್ಧಿ ಚನ್ನಾಗಿ ಇರಲಿಲ್ಲ ಎಂಬ ಆಕ್ಷೇಪವನ್ನು ಇದಕ್ಕೂ ಹೇಳಬಹುದು. ಪೌತನು ತುಂಬಾ ಬಲಹೀನರಾಗಿದ್ದರೆಂಬದರಲ್ಲಿ ಸಂಶಯವಿಲ್ಲ. ವಿಲ್ಲಿಗೆ ಸಮ್ಮಂಧಪಡುವ ವಿಷಯವನ್ನು ನಾನು ಫೈಸಲ್ ಮಾಡುವದಿಲ್ಲ. ಯಾಕೆಂದರೆ ಮೈನರ್ ತಮ್ಮನನ್ನು ಆಮೈರ್ ಕಾಲದಲ್ಲಿ ನೇಮಿಸಿದ್ದನ್ನು ಸಮ್ಮರಿ ತೀರ್ಮಾನದಲ್ಲಿ ಮಂಜೂರು ಮಾಡಬಹುದೆಂತ ನನಗೆ ತೋರುವದಿಲ್ಲ. ಅರ್ಜಿಯನ್ನು ತಳ್ಳಬೇಕಾಗಿದೆ. ಹೇಗೂ ಮಠದ ಸೊತ್ತುಗಳ ಪಟ್ಟಿಯನ್ನು ಸುಬೇದಾರರು ತಯಾರಿಸಿದ್ದಾರೆ.

ಮಠದ ತುಂಬಾ ಶಿಷ್ಯರು ಸೇರಿ ಅಬ್ಬಿಮಠದಿಂದ ನೇಮಕವಾದ ಗುರು ಬರುವವರೆಗೆ ಸೋಮವಾರಪೇಟೆ ಮಠದ ಸ್ವಾಮಿಯವರು ಆಡಳಿತ ನಡಿಸಬಹುದೆಂತ ಒಪ್ಪಿದ್ದಾರೆ. ಪದ್ಧತಿ ಮೇರೆ ಗುರುವಿನ ನೇಮಕವಾಗುವ ವರೆಗೆ ಅಥವ ಅರ್ಜಿದಾರನ ಹಕ್ಕು ಸ್ಥಾಪಿತವಾಗುವವರೆಗೆ ಈ ತಂಗಾಮಿ ಏರ್ಪಾಡಿಗೆ ಏನೂ ಆಕ್ಷೇಪಣೆ ಇಲ್ಲ. ಅರ್ಜಿಯನ್ನು ಸಮ್ಮರಿ ರೀತಿಯಲ್ಲಿ ತಿರಸ್ಕರಿಸಿದ್ದರಿಂದ ಎದುರಿನವರ ಹಕ್ಕನ್ನು ಒಪ್ಪಿದಂತೆ ಆಗಲಿಲ್ಲ. ಅವರವರ ಖರ್ಚು ಅವರವರೇ ಪಟ್ಟುಕೊಳ್ಳಬೇಕು.

ಓಂ

ಶ್ರೀ ಗುರು ಶಾಂತಮಲ್ಲಪ್ಪ ಸ್ವಾಮಿ ಪ್ರಸನ್ನಃ

ಶಿವದೀಕ್ಷಸಂಸ್ಕಾರ ಪಟ್ಟಸ್ಥಲಾಧಿಕಾರ ಪತ್ರಿಕಾ.

ಸರ್ವಲೋಕೋಪಕಾರಾಯ ಯೋದೇವಃ ಪರಮೇಶ್ವರಃ
ಚರತ್ಯತಿಥಿರೂಪೇಣ ನಮಸ್ತೇ ಜಂಗಮಾತ್ಮನೇ
ಕಾಮಕ್ರೋಧವಿನಿರ್ಮುಕ್ತೋ, ಶೋಭ ವೇಷ ವಿವರ್ಜಿತಃ
ಸರ್ವಸಂಗ ಪರಿತ್ಯಾಗಿ ಶ್ರೇಷ್ಠೋ ಶ್ರೀಲಿಂಗ ಜಂಗಮಃ

ಅಬ್ಬಿಮಠದಹೊಸಳ್ಳಿಗ್ರಾಮದ ಜಂಗಮಮುದ್ದಪ್ಪನು

ಮ. ರಾ. ಶ್ರೀ. .... ನವರಿಗೆ ಮಾಡುವ ....

ಅಬ್ಬಿ ಮಠದ ಮಾಜಿ ಗುರುಗಳಾದ ಕುಮಾರದ ಚರಮೂರ್ತಿಗಳು ಚಿಕ್ಕ ಮಲ್ಲಿಕಾರ್ಜುನ ಸ್ವಾಮಿಗಳು ಈ ಮೊದಲು ತಮ್ಮ ಬದಲಿಗೆ ನೇಮಿಸಿದ್ದ ನಾಗಭೂಷಣ ಮರಿದೇವರಿಗೆ ಶಾಲಿವಾಹನ ಶಕ 1846ನೇ ರಕ್ತಾಕ್ಷಿನಾಮ ಸಂವತ್ಸರದ ಫಾಲ್ಗುಣ ಶುದ್ಧ ನವಮಿ ಅಂದರೆ (ತಾ. 2—3—1926)ನೆ ಚಂದ್ರಮಾನ ಮಾಮೂಲು ಅನುಸರಿಸಿ ಶಿವದೀಕ್ಷಾ ಸಂಸ್ಕಾರವು ಇದೇ ನವಮಿ ಬುಧವಾರ ವೀರಕ್ತಾಶ್ರಮವನ್ನು ಕೊಡಿಸಿ ಗಣಾರಾಧನೆ ಉತ್ಸಾಹಾದಿಗಳನ್ನು ಉತ್ತರಕೊಡಗು ಫ್ರೇಜರ್‌ಪೇಟೆ ಹೋಬಳಿಗೆ ಸೇರಿದ ತೊರೆನೂರು ಮಠದ ಗುರುಗದ್ದಿಗೆ ಸಮೀಪ ಕಾವೇರಿ ಪುಣ್ಯನದಿ ತೀರದಲ್ಲು ಈ ಗುರುಕಾರ್ಯ ನೆರವೇರಿಸುವಂತೆ ಗುರುಹಿರಿಯರು ನಿಶ್ಚೈಸಿರುವದರಿಂದ ಈ ಕಾರ್ಯಕ್ಕೆ ತಾವುಗಳು ಸರ್ವರೂ ತಮ್ಮ ತಮ್ಮ ಸ್ಥಳ ಪರಸ್ಥಳದ ಭಕ್ತ ಮಹೇಶ್ವರರೇ ಮೊದಲಾದವರನ್ನೂ ದೀಕ್ಷೆ ಆಗತಕ್ಕಂತ ವಟುಗಳನ್ನೂ ಕರೆದುಕೊಂಡು ಒಂದು ದಿನ ಮುಂಚಿತವಾಗಿ ತೊರೆನೂರು ಮಠಕ್ಕೆ ದಯಮಾಡಿಸಿ ಈ ಗುರು ಕಾರ್ಯವನ್ನು ನೆರವೇರಿಸಿ ನಮ್ಮಗಳ ಮನಸ್ಸಂತೋಷಪಡಿಸಬೇಕೆಂಬದಾಗಿ ಪ್ರಾರ್ಥಿಸುವ,

ತಮ್ಮ ವಿಧೇಯ,

ತಾರೀಕು......... ...... ಅ. ಹೊ. ಜಂಗಮ ಮುದ್ದಪ್ಪ

ದಯಮಾಡಿ ಪರೀಕ್ಷಿಸಿ ನೋಡಿರಿ!

X. L. ALOIL.

ಹೊಸ ನಮೂನೆಯ ಮೀನಿನ ಎಣ್ಣೆ

ಆಜಾರಾದವರೂ, ಸಣ್ಣಮಕ್ಕಳೂ ಶಕ್ತಿ ಕುಂದಿದವರೂ ಮತ್ತು ಎದೆನೋವು ವಗೈರೆಗಳಿಂದ ಪೀಡಿತರಾದವರೂ ಸಹ ಸೇವಿಸುವದರಿಂದ ಒಡನೆ ತೃಪ್ತಿಯಾಗುವರು. "ಕಾಡ್ ಲಿವರ್ ಆಯಿಲ್ ಎಮಲ್‌ಷನ್" ಎಂಬದರ ಬದಲಿಗೆ ಇದು ಉತ್ತಮತರದ ಕ್ಷೀರ ರಸವಾಗಿದೆ. ವಾಸನೆ ಇಲ್ಲ. ಬೆಲೆ ಬಹಳ ಕಡಿಮೆ,

M. P. BALA & Co,
CHEMISTS.
12-2. *Tellicherry*
Or VIRAJPET WORKS,
Virajpet.

SITUATIONS VACANT.

There is a vacancy in the Forest Department for an intelligent man, to be employed as temporary forester on Rs. 35 per mensem. The undersigned will interview applicants on Monday, February **16th, at 11** a.m. in the Chief Forest Office.

V. G. DARRINGTON,
12—2—1925,
Ag. Chief Forest Office.

ಬೆಳಗಾಂ ಕಾಂಗ್ರೆಸ್ಸಿನಲ್ಲಿ ಮಂಜೂರಾದ ನಿರ್ಣಯಗಳು

(ಮುಂದರಿಸಿದ್ದು)

8. ಅಕಾಲಿಗಳು.

ಗುರುದ್ವಾರಾ ಸುಧಾರಣೆಗಾಗಿ ಅಕಾಲಿಯವರು ತೋರಿಸಿದ ಶಾಂತತೆಯನ್ನೂ ಸಹನಶಕ್ತಿಯನ್ನೂ ಈ ರಾಷ್ಟ್ರೀಯ ಮಹಾಸಭೆಯು ಅಭಿನಂದಿಸುವದಲ್ಲದೆ ಪಂಜಾಬು ಸರಕಾರದವರು ಅಕಾಲಿಯವರ ಶಕ್ತಿಯನ್ನು ಕುಂದಿಸುವರೆ ಕೈಕೊಳ್ಳುತ್ತಿರುವ ಎಲ್ಲ ಪ್ರಯತ್ನಗಳೂ ಅಕಾಲಿಯವರ ಧೈರ್ಯ ಸ್ಥೈರ್ಯಗಳ ಮುಂದೆ ನಿಷ್ಫಲವಾಗುವವೆಂದು ಅಭಿಪ್ರಾಯಪಡುತ್ತದೆ.

ನಾಭಾ ಕಾರಾಗ್ರಹದಲ್ಲಿ ಮೃತಪಟ್ಟ 10(ಮಂದಿ ಅಕಾಲಿ ಕೈದಿಗಳ ವೃತ್ತಾಂತವನ್ನು ಈ ಮಹಾಸಭೆಯು ವ್ಯಾಕುಲಚಿತ್ತದಿಂದ ಕೇಳುತ್ತದೆ ಮತ್ತು ನಾಭಾ ಸರಕಾರದವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ನೇಮಿಸಿದ ಅಕಾಲಿ ರಿಪ್ರೆಶನ್ ಎನ್‌ಕ್ವಾಯರಿ ಕಮಿಟಿಯವರಿಗೆ ಜೈಲನ್ನು ಸಂದರ್ಶಿಸುವರೆ ಪ್ರತಿಬಂಧಿಸಿದ್ದನ್ನು ಸಂಪೂರ್ಣ ವಿರೋಧಿಸುತ್ತದೆ.

ಅಕಾಲಿ ಕೈದಿಗಳ ಈ ಅಕಾಲಮರಣಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಅಮಾನುಷ ವರ್ತನವೇ ಕಾರಣವೆಂದು ಅಭಿಪ್ರಾಯಪಡುವದಲ್ಲದೆ ಮೃತಪಟ್ಟವರ ಬಂಧುಗಳಿಗಾಗಿ ತಮ್ಮ ತೃತ್ಪೂರ್ವಕವಾದ ವಿಷಾದವನ್ನು ಸೂಚಿಸುತ್ತದೆ.

9. ರಾಷ್ಟ್ರೀಯ ವಿದ್ಯಾ ಸಂಸ್ಥೆಗಳು.

ದೇಶದ ಮುಂದಣ ಅಭಿವೃದ್ಧಿಯು ತರುಣರಮೇಲೆ ಹೊಂದಿಕೊಂಡಿರುವದರಿಂದ ಪ್ರಾಂತೀಕ ಸಭೆಯವರು ಎಲ್ಲಾ ರಾಷ್ಟ್ರೀಯ ಶಿಕ್ಷಣಸಮಿತಿಗಳನ್ನು ಇನ್ನೂ ಜಾಗ್ರದಾವ

ಗೆ ಕರುಣರಿಂದು ಕಾಂಗ್ರೆಸು ದೃಢವಾಗಿ ನಂಬುತ್ತದೆ ಗೆ ಇತರ ರಾಷ್ಟ್ರೀಯ ಶಾಲೆಗಳನ್ನು ಅಭಿವೃದ್ಧಿಪಡಿಸಬೇಕು ಹಿಂದಿ ಅಕ್ಷರಗಳು ರಾಷ್ಟ್ರೀಯವೆಂದಾಗಬೇಕಾದರೆ ಯೂವದಾದರೊಂದು ಹಿಂದೀಯ ಭಾಷೆಯಲ್ಲಿ ಶಿಕ್ಷಣವನ್ನು ಕೊಡಬೇಕಲ್ಲದೆ ಹಿಂದೂ ಮುಸಲ್ಮಾನರ ಐಕ್ಯತೆಯನ್ನು ಅಭಿವೃದ್ಧಿಪಡಿಸಿ ಅಸ್ಪೃಶ್ಯರಿಗೂ ವಿದ್ಯೆಯನ್ನಿತ್ತು ಅಸ್ಪೃಶ್ಯತೆಯನ್ನು ಹೋಗಲಾಡಿಸತಕ್ಕದು ಮತ್ತು ಶರೀರ ವ್ಯಾಯಾಮ ಮೊದಲಾದವುಗಳನ್ನು ಅವಶ್ಯಕವನ್ನಾಗಿ ಮಾಡಿ 12 ವರುಷ ಪ್ರಾಯದ ಮೇಲಣ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಪ್ರತಿಯೊಂದು ಕೆಲಸದ ದಿನ ಅರ್ಧ ತಾಸು ನೂಲನ್ನು ತೆಗೆಯತಕ್ಕದು ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಯೂ, ಶಿಕ್ಷಕನೂ ಖದ್ದರನ್ನೇ ಧರಿಸುವ ಅಭ್ಯಾಸವನ್ನಾಗಿರತಕ್ಕದ್ದು

10 ರಾಷ್ಟ್ರಸೇವೆ

ಕೆಲಸಕ್ಕೆ ತಕ್ಕ ಪ್ರತಿಫಲವನ್ನು ಪಡೆಕೊಂಡು ರಾಷ್ಟ್ರಸೇವೆಯನ್ನು ಮಾಡಲು ಹುಡುಗರು ಸಿದ್ಧರಾಗುವದರಿಂದ ಯೋಗ್ಯವಾದ ಜನರ ಸಿಕ್ಕಬಹುದು ... ದಿಂದ ರಾಷ್ಟ್ರಸೇವೆ ಮಾಡಿದುದಕ್ಕಾಗಿ ಪ್ರತಿಫಲ ... ದುಕೊಳ್ಳುದರಿಂದ ಅಂತವರ ಗೌರವಕ್ಕೆ ... ಯೂ ಅಕೀರ್ತಿಯುಂಟಾಗದುದೂ ... ಯುಳ್ಳವರು ಅಥವಾ ಕೆಲಸವನ್ನು ... ದೃಷ್ಟಿಯನ್ನು ರಾಷ್ಟ್ರಸೇವಕರಿಗೆ ಪ್ರಥಮತಃ ಕೊಡುವರೆಂದೂ ಈ ಮಹಾಸಭೆಯು ನಂಬುತ್ತದೆ

11 ನಿಯಮಗಳಲ್ಲಿ ಬದಲಾವಣೆಗಳು

11ನೆಯ ನಿಯಮದಲ್ಲಿ 10 ರೂಪಾಯಿಗಳ ಬದಲಾಗಿ 1 ರುಪಾಯಿ ಎಂದೂ 23ನೇ ನಿಯಮದಲ್ಲಿ ಕಾಂಗ್ರೆಸ್ ಶಬ್ದದಿಂದ ಆರಂಭವಾಗುವ ವಾಕ್ಯದ ಕೊನೆಗೆ—ಮಹಾಸಭೆಯ ದ್ರವ್ಯ ಸಂಗ್ರಹವು ಕೇಂದ್ರಾಧ್ಯಕ್ಷರ ವಶದಲ್ಲಿರಬೇಕು ಮತ್ತು ಅವರು ಅದರ ಲೆಕ್ಕವನ್ನಿಡಬೇಕು ಎಂದು ಸೇರಿಸಬೇಕು ಮಹಾಸಮಿತಿಯ ಕೆಲಸವನ್ನು ಮಂತ್ರಿಗಳು ನೋಡತಕ್ಕದ್ದು ... ಮಹಾ ಸಭೆಯಿಂದ ಸಮಸ್ತ ಕಾರ್ಯಗಳ ವರದಿಯನ್ನು ... ಯುದಿಂದ ಮಹಾಸಮಿತಿಯು ... ತಿಂಗಳೊಳಗಾಗಿಯೇ ಪ್ರಕಟಿಸಿ ಮಾರಾಟಕ್ಕೆ ಇಡಬೇಕು 23ನೆಯ ನಿಯಮದ ಕೊನೆಗೆ ಮತ್ತು ಮಂದಿನ ಮಹಾಸಭೆಯು ವರದಿಯೊಡನೆ ಪ್ರಸಿದ್ಧಪಡಿಸಬೇಕು ಎಂದು ಸೇರಿಸತಕ್ಕದು.

ಮುಂದಿನ ಕಾಂಗ್ರೆಸಿನ ಕಾರ್ಯಾಧ್ಯಕ್ಷ ಪಂಡಿತ ... ನಾಯರ ಅಲ್ಲಿನವರು ... ರೆಡ್ಡಿ ... ಬಾಜಾ ಇವರುಗಳನ್ನು ಕಾರ್ಯದರ್ಶಿಗಳನ್ನಾಗಿ ... ಶ್ರೀ ಓಮುಸಾಬಾಜಾನ್ ಮತ್ತು ಶ್ರೀ ದೇವಾಂಕರ ... ಜೀವನ್ ಇವರುಗಳನ್ನು ಕೋಶಾಧ್ಯಕ್ಷರಾಗಿ ನೇಮಿಸಲಾಯಿತು ಮುಂದಿನ ಕಾಂಗ್ರೆಸಿನ ಸ್ಥಳವನ್ನು ನಿರ್ಣಯಿಸುವ ಹಕ್ಕು ಅಖಿಲ ಭಾರತ ಕಾಂಗ್ರೆಸ್ ಕಮಿಟಿಗೆ ಒಪ್ಪಿಸಲಾಯಿತು

COORG FOREST DEPARTMENT

TIMBER SALE NOTICE

Mercara the 11th February 1925

It is notified that about 30,000 c ft of teak 1200 c ft of Biti and 10,000 c ft of other species Honne Matti Mundi and Arasinatega lying at the Coorg Timber Depot at Hunsur will be sold by public auction in convenient lots (about 500 c ft) at Hunsur on Friday the *3rd April 1925 at 1 p m sharp*

All the timber is open to inspection

For further particulars apply to the Divisional Forest Officer South Coorg Mercara

ವರ್ತಮಾನ ಸಂಗ್ರಹ.

ಒಳದೇಶ.

ಈ ತಾ ... ಶಾಲೆಯವರ ... ಸರ್ವೀಸಿನ ಮೋಟಾರ್ ... ಯ ಲಾರಿಯನ್ನು ತುಂಬ ... ಮೈಸೂರಿಗೆ ಹೋಗುತ್ತಿದ್ದಾಗ ಮಡಿಕೇರಿಯಿಂದ 10 ಮೈಲು ದೂರ ಸಮತಟ್ಟಿನ ಸ್ಥಳವಾದರೂ ಮಗುಚಿ ಬಿದ್ದು ಅದರ ಒಬ್ಬ ಕ್ಲೀನರು ಅದರಡಿಯಲ್ಲಿ ಸಿಕ್ಕಿ ಮೃತಪಟ್ಟನು ಡ್ರೈವರಿಗೂ ಮತ್ತೊಬ್ಬನಿಗೂ ಘಾಯಗಳಾದವು ಸುಮಾರು ಆರೇಳುಸಾವಿರ ಕಿತ್ತಳೆ ಹಣ್ಣುಗಳು ಹಾಳಾದವು ಆದರ ಲಾರಿಯ ಇಂಜಿನಿಗೆ ಏನೊಂದೂ ದೋಷ ಉಂಟಾಗದ್ದರಿಂದ ಅದನ್ನು ಮೈಸೂರಿಗೆ ನಡಿಸಿಕೊಂಡು ಹೋದರು ಆ ಲಾರಿಗೆ ಇನ್ನು ಮುಂದೆ ಕೊಡಗಿನಲ್ಲಿ ಲೈಸೆನ್ಸ್ ರದ್ದುಮಾಡಿರುವದಾಗಿಯೂ ವರ್ತಮಾನ ಡ್ರೈವರ ಮೇಲೆ ಕೇಸು ನಡಿಯುತ್ತಿದೆಯೆಂದೂ ಸುದ್ದಿ ತಿರುವುಇಲ್ಲದ ಆ ಸಮತಟ್ಟು ಜಾಗದಲ್ಲಿ ಲಾರಿಯು ಮಗುಚಿದ್ದೇ ಆಶ್ಚರ್ಯ!

ತಾ 7 ಮತ್ತು 8ರಲ್ಲಿ ವೀರರಾಜಪೇಟೆ ಹೈಸ್ಕೂಲಿನ ವಾರ್ಷಿಕೋತ್ಸವವು ಬಹು ವಿಜೃಂಭಣೆಯಿಂದ ನಡೆಯಿತು ರಾ ಬಾ ಕೊಡಂದೇರ ಕುಟ್ಟಪ್ಪಯ್ಯನವರು ಅಧ್ಯಕ್ಷರಾಗಿದ್ದರು ವಿದ್ಯಾರ್ಥಿಗಳ ಮರ್ಚೆಂಟ್ ಆಫ್ ವೆನಿಸ್ ಎಂಬ ಇಂಗ್ಲಿಷ್ ನಾಟಕವನ್ನೂ 'ಪ್ರಹ್ಲಾದ' ಎಂಬ ಕನ್ನಡ ನಾಟಕವನ್ನೂ ಅಭಿನಯಿಸಿ ನೆರೆದಿದ್ದ ಮಹಜನರಿಗೆ ಮನಸಂತೋಷವನ್ನುಂಟುಮಾಡಿದರು.

ತಾ 7ರಲ್ಲಿ ನಡೆದ ಕೊ ಆಪರೇಟಿವ್ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗಿನಲ್ಲಿ ಈ ಕೆಳಗಿನ ಮೇರೆ ಸಹಕಾರಿ ಸಂಘಗಳಿಗೆ ಸಾಲವು ಮಂಜೂರಾಯಿತು ಟೀಚರ್ಸ್ ಕೋಆಪರೇಟಿವ್ ಸಂಘಕ್ಕೆ 1,500 ಚಾಜ್ಜಿಹೊಸೂರು ಸಂಘಕ್ಕೆ 2,000, ಸಾಲೂರು ಸಂಘಕ್ಕೆ 750 ಮಡಿಕೇರಿ ಟವುನ್ ಸೊಸೈಟಿಗೆ 2,000

ರವೀಂದ್ರನಾಥ್ ಠಾಗೂರರವರ ವಿಶ್ವವಿದ್ಯಾಲಯವಾದ ಶಾಂತಿನಿಕೇತನದಿಂದ ಬಂದ ಶಾಸ್ತ್ರಿಯವರ ಮಡಿಕೇರಿಗೆ ಬಂದು ತಾ 10ರಿಂದ 12ರ ವರೆಗೆ ಬ್ರಾಹ್ಮಣರಿಗೆ ಸಾಯಂಕಾಲವು ಉಪನಿಷದ್ ಮತ್ತು ಗಾಯತ್ರಿಮಂತ್ರದ ವಿಷಯ ಪ್ರಸಂಗಗಳನ್ನು ಬಹು ಉಲ್ಲಾಸವಾಗಿ ಮಾಡಿದರು ಅವರು ತಾ 12ರಲ್ಲಿ ವೀರರಾಜಪೇಟೆಗಾಗಿ ಕುಂಶೇರಿಗೆ ಸಂಸ್ಕೃತದ ಹೊಸ ಬರವಣಿಗೆಗಳನ್ನು ಸಂಗ್ರಹಿಸಲಿಕ್ಕಾಗಿ ಹೋದರು.

ತಾ 12ರಲ್ಲಿ ಮೈಸೂರಿನ ಶ್ರೀಕೃಷ್ಣ ಬಸ್ ಸರ್ವೀಸಿನ ಬಸ್ಸೊಂದು ಉಡುಪಿಗೆ ಬಂದು ಮದುವೆಗಾಗಿ ಜನರನ್ನು ಮಡಿಕೇರಿಗೆ ತೆಗೆದುಕೊಂಡು ಹೋಗುತ್ತಿರುವಾಗ್ಗೆ ಮಂಗಳೂರು ರಸ್ತೆಯಲ್ಲಿ ಮಡಿಕೇರಿಯಿಂದ ನಾಲ್ಕು ಮೈಲು ದೂರದ ವಾ ದನ್ನ ಒಸ್ಗೆ ಮಗುಚಿಬಿದ್ದು ಒಬ್ಬೊಬ್ಬರಿಗೆ ಸ್ವಲ್ಪ ಗಾಯವಾಯಿತಂತೆ ಬಸ್ಸಿಗೆ ಪೂರಾ ಲುಕ್ಸಾನು ಉಂಟಾಗಿದೆಯಂತೆ

ಫ್ರೇಸರ ಪೇಟೆ ಪುಸ್ತಕೆಲಯಂಜಿ ದ್ರಾಮವು ಮಡಿಕೇರಿಗೆ ಬಂದು ತಾ 13ರಿಂದ ಆಟವನ್ನು ಪ್ರಾರಂಭಿಸುವರು

ಈ ವಾರದ ಬಟ್ಟಿನ ದಿವಸವೆಲ್ಲಾ ಮಳೆಮೋಡ ಕವಿದು ... ತಾ 9ರಲ್ಲಿ ಜೋರದ ಅನೇಕ ಕಡೆಗಳಲ್ಲಿ ಸಾಧಾರಣವಾಗಿ ಮಳೆ ಬಿದ್ದಿದೆ ಈ ಮಳೆಯಿಂದ ಎಲ್ಲಾ ವಿಧದಲ್ಲೂ ನಷ್ಟವಲ್ಲದೆ ಲಾಭವಿಲ್ಲ

ಕೊಡಗಿನ ಸಿವಿಲ್ ಸರ್ಜನರಾಗಲಿಕ್ಕಿರುವ ... ಇನ್ನೂ ಬರಬೇಕಾದ ದರಿಂದ ... ಪೇಟೆ ... ಸರ್ಜನರಾಗಿರುವ ಮಿ ಡಿ ... ಪ್ರಾಯವರ ಮಡಿಕೇರಿ ಆಸ್ಪತ್ರೆಯ ಚಾರ್ಜಿನಲ್ಲಿರುವರು

ದವ್ ಕ್ರಾಸ್ ಸಂಘದವರು ವನಸ್ಪತಿ ನಡಿಸುವ ಶಿಶು ಪ್ರದರ್ಶನವು ಈ ವರ್ಷ ಫೆಬ್ರವರಿ ತಾರೀಕು 20ರಿಂದ 24ರ ವರೆಗೆ ಮಡಿಕೇರಿಯಲ್ಲಿ ನಡಿಯುವದು ಇದರ ತಪಸೀಲು ಇಂಗ್ಲಿಷಿನಲ್ಲಿ ಪ್ರಕಟವಾಗಿದೆ

ಮೈಸೂರು ಕಾಫಿ ಪ್ಲಾಂಟರುಗಳು ಬಂದು ಮೀಟಿಂಗು ... ತಾಲೂಕುಗಳಿಗೆ ಅಲ್ಲಿಯ ಸರಕಾರದವರು ... ಹಾಕಿದ ಬೆಂದಿ ಕೊಡಗಿನಲ್ಲಿಯೂ ಹೀಗೆ ... ಹಾಕುವ ... ಮೆಂಬರುಗಳನ್ನು ಕೇಳಿಕೊಳ್ಳಬೇಕೆಂದೂ ತೀರ್ಮಾನಿಸಿರುವರು

ಹಿಂದೂ ದೇಶ.

ತಾರೀಕು 7ರಲ್ಲಿ ಮಲಬಾರು ತೀರದ ಬಂದರಿನಿಂದ ... ಗೆ ಹೊರಟ ... ಎಂಬ ಹಡಗು ಅದೇ ದಿನ ರಾತ್ರಿ ಮುಳುಗಿ ... ಮಧ್ಯದಲ್ಲಿ ... ಆದರಲ್ಲಿದ್ದ 38 ಜನರ ಪೈಕಿ 16 ಜನರು ಮೃತಪಟ್ಟರು ಬಾಕಿಯವರನ್ನು ಮರುದಿನ ಬೆಳಿಗ್ಗೆ ... ಹಡಗೊಂದು ಬೊಂಬಾಯಿಗೆ ತೆಗೆದುಕೊಂಡು ಹೋಯಿತು

ಅಸೆಂಬ್ಲಿಯ ಸ್ವರಾಜ್ಯ ಪಾರ್ಟಿಯವರ ... ಪಂಡಿತ ಮೋತಿಲಾಲ್ ನೆಹರುರವರು ತಮ್ಮ ... ಮಿ ವಿ ಜೆ ಪಟೇಲರವರನ್ನು ಡೆಪ್ಯುಟಿ ... ನಾಯಿಸಿರುವರು

ಲೆಜಿಸ್ಲೇಟಿವ್ ಅಸೆಂಬ್ಲಿಯ ... ಪ್ರೆಸಿಡೆಂಟರಿಗೆ ... ರೂಪಾಯಿ ಸಂಬಳ ಕೊಡಬೇಕೆಂದು ಸ್ವರಾಜ್ಯ ಪಾರ್ಟಿಯವರ, 3,000 ರೂಪಾಯಿ ... ದಂದ ... ಪಾರ್ಟಿಯವರ ಅಭಿಪ್ರಾಯಗಳಾಗಿವೆ

ಅಸೆಂಬ್ಲಿಯ ಇಂಡಿಪೆಂಡೆಂಟ್ ಪಾರ್ಟಿಯ ಮೀಟಿಂಗು ನಡೆದು ಮಿ ಜಿನ್ನಾರವರನ್ನು ಅಧ್ಯಕ್ಷರನ್ನಾಗಿಯೂ ಮಿ ರಾಮಚಂದ್ರರಾವರನ್ನು ಉಪಾಧ್ಯಕ್ಷರಾಗಿಯೂ ... ನಾಯಿಸಿರುವರು

ಕಲ್ಕತ್ತಾ ಮುನಿಸಿಪಾಲಿಟಿಯು 1925—26ನೇ ವರುಷದ ಆದಾಯ ವೆಚ್ಚದ ಅಂದಾಜು ಪಟ್ಟಿಯಲ್ಲಿ 13,09,000 ರೂಪಾಯಿ ವೆಚ್ಚವು ಆದಾಯಕ್ಕಿಂತ ಹೆಚ್ಚಂತೆ ಇದನ್ನು ... ಲು ಬಂದು ವಿಶೇಷ ಕಮಿಟಿಯನ್ನು ಏರ್ಪಡಿಸಿರುವರು

ತಾ 6ರಲ್ಲಿ ಮಂಗಳೂರಿನ ಸೆಂಟ್ ಎಲೋಸಿಯಸ್ ಕಾಲೇಜಿನ ಕೆಲವು ಹುಡುಗರು ಸಮುದ್ರತೀರಕ್ಕೆ ಪಿಕ್‌ನಿಕ್ ಹೋಗಿ ಸಮುದ್ರಸ್ನಾನಮಾಡಿದಲ್ಲಿ ಮೂವರು ನೀರುಪಾಲಾದರೆಂಬ ವರ್ತಮಾನ

ತಿರುವಾಂಕೂರು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ವೈಕಮಿನ ರಸ್ತೆಗಳನ್ನು ಎಲ್ಲಾ ಜಾತಿಯವರ ಉಪಯೋಗಕ್ಕೆ ಬಿಡಬೇಕೆಂದು ತಂದ ಠರಾವು ಮೂರು ದಿವಸಗಳ ವರೆಗೆ ಚರ್ಚಿಸಲ್ಪಟ್ಟು ಓಟಿಗೆ ಹಾಕಿದಲ್ಲಿ ಬಹುಮತದಿಂದ ನಾಪಾಸಾಯಿತು

ನೇಪಾಳದ ಮಹಾರಾಜರು ಅವರ ದೇಶದಲ್ಲಿ ದಾಸತ್ವವನ್ನು ಹೋಗಲಾಡಿಸಬೇಕೆಂದು ವಿನಂತಿಮಾಡಿಕೊಂಡಿರುವರು. ಈ ವಿಷಯದಲ್ಲಿ ಇಂಗ್ಲಿಷ್ ಪತ್ರಿಕೆಗಳು ಮಹಾರಾಜರನ್ನು ಬಹಳವಾಗಿ ಹೊಗಳಿರುವವು

ಬಂಗಾಳ ಗವರ್ನರರ ಸೂಚನೆ ಮೇರೆ ಅಲ್ಲಿಯ ಕೌನ್ಸಿಲಿನ ಪಂಗಡಗಳ ಮುಂದಾಳುಗಳ ಮೀಟಿಂಗೊಂದು ತಾ 7ರಲ್ಲಿ ನಡೆಸಲ್ಪಟ್ಟು ಅಲ್ಲಿಯ ಸರಕಾರಕ್ಕೆ ಮಂತ್ರಿಗಳು ಬೇಕೋ, ಬೇಕಾದರೆ ಅವರ ಸಂಬಳವೆಷ್ಟು ಎಂಬ ವಿಷಯಗಳು ಚರ್ಚಿಸಲ್ಪಟ್ಟು ಆ ವಿಷಯ ಯಾವ ತೀರ್ಮಾನಕ್ಕೂ ಬಾರದೆ ಕೌನ್ಸಿಲಿನಲ್ಲಿಯೇ ಮಂತ್ರಿಗಳ ಸಂಬಳದ ವಿಷಯ ಬಂದು ಠರಾವನ್ನು ಮುಂದಿಡುವಂತೆ ತೀರ್ಮಾನವಾಯಿತು

ಬಂಗಾಳದ ಸ್ವರಾಜ್ಯಪಂಗಡದವರು ಸರಕಾರದ ಉದ್ಯೋಗವನ್ನು ಸ್ವೀಕರಿಸುವರೆಂದು ಹರಡಿದ ವರ್ತಮಾನವು ಸುಳ್ಳೆಂದೂ ಅವರು ಹೀಗೆಂದೂ ತೀರ್ಮಾನಮಾಡಿರುವುದಿಲ್ಲವೆಂದೂ ಆ ಪಾರ್ಟಿಯ ಸೆಕ್ರೆಟರಿಯರಾದ ಮಿ ಜೆ ಎಸ್ ಸೇನ್ ಗುಪ್ತರವರು ಪ್ರಕಟಿಸಿರುವರು.

ತಾ 5ರಲ್ಲಿ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಬಂಗಾಳ ಆರ್ಡಿನೆನ್ಸಿನ ವಿಷಯ ಚರ್ಚೆ ನಡೆಯಿತು ಪಂಡಿತ ಮೋತಿಲಾಲ್ ನೆಹರುರವರು ಆರ್ಡಿನೆನ್ಸನ್ನು ರದ್ದುಪಡಿಸಬೇಕೆಂದು, ಮಿ ದೊರೆಸ್ವಾಮಿ ಅಯ್ಯಂಗಾರ್‌ರವರು ತಂದ ಠರಾವಿಗೆ ಬೆಂಬಲವಾಗಿ ಸರಕಾರದವರ ನವ ಮಂತ್ರದ ಕಾರಣಗಳನ್ನು ಖಂಡಿಸಿ ಮಾತಾಡಿದರು ಓಟಿಗೆ ಹಾಕಿದಲ್ಲಿ ಆರ್ಡಿನೆನ್ಸನ್ನು ವಾಪಸುಪಡಬೇಕೆಂದು 13 ಜನರ ಬಹುಮತದಿಂದ ಪಾಸಾಯಿತು.

ಬುದ್ಧಗಯೆಯನ್ನು ಬೌದ್ಧರ ಅಧೀನಕ್ಕೆ ಬಿಟ್ಟುಕೊಡಬೇಕೆಂದು ಅಖಿಲ ಬರ್ಮಾ ಬೌದ್ಧ ಕೌನ್ಸಿಲಿನವರು ಇಂಡಿಯಾ ಸರಕಾರಕ್ಕೆ ಬರಕೊಂಡ ಅರ್ಜಿಗೆ ಆ ವಿಷಯವು ನಮ್ಮಂಥವಟ್ಟ ಮತದವರಿಂದ ತೀರ್ಮಾನಿಸಿಕೊಳ್ಳುವಂಥಾದ್ದೆಂದು ಜವಾಬು ಕೊಟ್ಟಿರುವರು

ಮಹಾತ್ಮ ಗಾಂಧಿಯವರು ಮೌಲಾನ ಶೌಕತಾಲಿಯವರೊಡನೆ ಕೋಹತ ವಿವಾದವನ್ನು ತೀರಿಸಲಿಕ್ಕಾಗಿ ರಾವಲ್‌ಪಿಂಡಿಗೆ ಹೋಗಿರುವರು ಕೋಹತ್ತಿನ ಮುಸಲ್ಮಾನ್ ಮುಂದಾಳುಗಳು ಮಹಾತ್ಮರೊಡನೆ ಮಾತಾಡಲು ರಾವಲ್‌ಪಿಂಡಿಗೆ ಬರಲು ಒಪ್ಪಿರುವರು

ವಿದೇಶ.

ಅಮೇರಿಕವನ್ನು ಹಿಂಬಾಲಿಸಿ ಚೈನಾ ದೇಶವೂ ಜಿನೀವ ಅಫೀಮು ಕಾನ್‌ಫರೆನ್ಸಿನಿಂದ ಹಿಂತೆಗೆದಿದೆ

ಜಿನ್ವಾ ಸರಕಾರದವರು ಇಂಡಿಯನ್ ಮುಸ್ಲಿಂ ಡಿಪ್ಯುಟೇಶನಿಗೆ ಮಕ್ಕಾಕ್ಕೆ ಹೋಗಲು ಅಪ್ಪಣೆ ಕೊಡದ್ದರಿಂದ ಅದು ಇಂಡಿಯಾಕ್ಕೆ ವಾಪಸು ಹೊರಟಿದೆ

ಅಜೆಪ್ಟಿನಲ್ಲಿ ವಿದ್ಯಾ ಇಲಾಖೆಯ ಮಂತ್ರಿಯವರ ಹುಕುಂ ಮೇರೆ ಕೈರೋದಲ್ಲಿ 600 ಮಂದಿ ವಿದ್ಯಾರ್ಥಿಗಳು ಶಾಲೆಯಿಂದ ಹೊರಗೆ ಹಾಕಲ್ಪಟ್ಟಿರುವರು.

ಫ್ರಾನ್ಸ್ ದೇಶದಲ್ಲಿ ಆಹಾರ ಧಾನ್ಯಗಳ ಕ್ರಯವು ಬಹಳವಾಗಿ ಏರುವ ಸಂಭವ ಇರುವದರಿಂದ ಸರಕಾರದವರೇ ಧಾನ್ಯಗಳನ್ನು ಕೊಂಡುಕೊಂಡು ಕೂಡಹಾಕಿ ನಂತರ ಜನರಿಗೆ ವಾಡಿಕೆ ಕ್ರಯದಲ್ಲಿ ಕೊಡುವ ಮಸೂದೆ ಒಂದನ್ನು ಅಲ್ಲಿಯ ಪಾರ್ಲಿಮೆಂಟಿನವರು ಮಂಜೂರು ಮಾಡಿರುವರು.

ಲಂಡನಿನಲ್ಲಿರುವ ಇಂಡಿಯನ್ ವಿದ್ಯಾರ್ಥಿಗಳು ಹಾಸ್ಟೆಲಿನ ... ವಾರ್ಷಿಕೋತ್ಸವದಲ್ಲಿ ಮಿ ... ಲಿನ್ ... ರವರು ಮಾಡಿದ ಭಾಷಣದಲ್ಲಿ ಪ್ರಜಾಪ್ರಭುತ್ವದ ಒಲವು ಜನರ ನೀತಿಯ ಮೇಲೆ ಇದೆ ಎಂತಲೂ ಮಹಾತ್ಮ ಗಾಂಧಿಯವರ ರಾಜಕೀಯ ತತ್ವಗಳಿಗೆ ತಾನು ಒಪ್ಪದಿದ್ದರೂ ಅವರು ನೀತಿಯ ವಿಷಯದಲ್ಲಿ ಈಗಿನ ಕಾಲದಲ್ಲಿ ಮಾಡಿರುವಷ್ಟು ಉತ್ತಮವಾದ ಕೆಲಸವನ್ನು ಬೇರೆ ಯಾರೂ ಮಾಡಿರುವದಿಲ್ಲವೆಂದೂ ಹೇಳಿದರು.

ಈಜಿಪ್ಟಿನಲ್ಲಿ ನಡೆದ ಚುನಾವಣೆಯಲ್ಲಿ ಮಾಜಿ ಮಂತ್ರಿಯಾದ ಜಾಗುಲಾಲ್ ಪಾಷಾರವರು ಸೋಲಿಸಲ್ಪಟ್ಟಿರುವರು. ಇದು ಬೇರೆ ಪಂಗಡಗಳ ತಂತ್ರಗಳಿಂದುಂಟಾದುದೆಂದು ಜಾಗುಲಾಲ್ ಪಾಷಾರವರು ಸೂಚಿಸಿರುವರು.

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆಯುತ್ತಿದ್ದಾಗ್ಗೆ ಗದ್ದಲ ಉಂಟಾಗಿ ಚರ್ಚೆಯ ವಿಷಯಕ್ಕೆ ಸಂಬಂಧ ಪಡದಂಥ ಭಾಷಣ ಮಾಡುತ್ತಿದ್ದ ಒಬ್ಬ ಮೆಂಬರನ್ನು ಅಧ್ಯಕ್ಷರ ಹುಕುಂ ಮೇರ ಕೂತುಕೊಳ್ಳಲಿಲ್ಲವೆಂದು ಬೇರೆ ಮೆಂಬರು ಅವನನ್ನು ದೂಡಿ ಕೆಳಗೆ ಬೀಳಿಸಿದಾಗ್ಗೆ ಅವನಿಗೆ ಸ್ಮೃತಿ ತಪ್ಪಿತ್ತಂತೆ.

ದೇವಾಂಗದವರೂ, ಆಂಧ್ರದೇಶದಲ್ಲಿ ನಡೆದ ಅವರ ಮಹಾಸಭೆಯೂ.

ನೇಯಿಗೆ ಕಸಬನ್ನು ಮುಖ್ಯವಾಗಿ ಅವಲಂಬಿಸಿಕೊಂಡು ಹಿಂದೂಸ್ಥಾನದಲ್ಲಿ ವಿಶೇಷವಾಗಿ ದೇವಾಂಗದವರಿದ್ದಾರೆ ಮೈಸೂರು ಕೊಡಗು ಪ್ರಾಂತ್ಯದಲ್ಲಿಯೇ ಅಲ್ಲದೆ ಮದ್ರಾಸು ಆಧಿಪತ್ಯದಲ್ಲಿ ಮಧುರೆ, ಅರ್ಕೋಡು, ಸೇಲಂ, ಮದ್ರಾಸ, ಪಟ್ಟಣ, ಕೃಷ್ಣ, ಗೋದಾವರಿ ಪ್ರದೇಶಗಳಲ್ಲಿಯೂ, ಒರಿಸ್ಸ, ಕಲ್ಕತ್ತ, ಬೊಂಬಾಯಿ ಆಧಿಪತ್ಯ ಈ ಕಡೆಗಳಲ್ಲಿಯೂ ಈ ಜನರು ಸುಮಾರು 10 ಲಕ್ಷದ ವರೆಗೂ ಇರುವುದಾಗಿ ತಿಳಿಯಬರುತ್ತದೆ. ಆದರೆ ವಿದ್ಯಾವಿಹೀನರಾದುದರಿಂದಲೂ ಬಡವರಾದುದರಿಂದಲೂ ಇವರ ಶಕ್ತಿ ಸಾಮರ್ಥ್ಯಗಳು ಸವನಾಗರಿಕ ಪ್ರಪಂಚದ ಗೋಚರಕ್ಕೆ ಬಾರದೆ ಇರುವುದು ವಿಷಾದಕರ. ಈ ಜನಾಂಗದವರ ಉತ್ಪತ್ತಿಯ ಮೂಲವನ್ನು ವಿಚಾರಮಾಡಿದುದೇ ಆದರೆ, ಇವರು ಸೂತ್ರ ವಸ್ತ್ರ ನಿರ್ಮಾಣಕ್ಕಾಗಿ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣಭೂತರಾದ ಬ್ರಹ್ಮ, ವಿಷ್ಣು, ಮಹೇಶ್ವರರು ಉದ್ಭವವಾದ ಕಾಲದಲ್ಲಿಯೇ ಬ್ರಹ್ಮಾದಿ ದೇವತೆಗಳ ಪ್ರಾರ್ಥನೆಯನ್ನನುಸರಿಸಿ ವಿರಾಟ್ ಸ್ವರೂಪನು ಒಂದಾನೊಂದು ತೇಜಸ್ಸನ್ನು ತನ್ನ ಅಂಗದಿಂದ ಉತ್ಪತ್ತಿ ಮಾಡಿದವನಾಗಿಯೂ, ಆ ತೇಜಸ್ಸಿಗೆ 'ದೇವಾಂಗ' ನೆಂಬ ಹೆಸರು ಬಂತೆಂದೂ, ಆ ದೇವಾಂಗನ ವಂಶ ಪರಂಪರೆಗೆ ಸೇರಿದವರೇ ಈ ದೇವಾಂಗದವರೆಂದು ಇವರ ಮೂಲ ವೃತ್ತಾಂತವಿದೆ. ತತ್ಕಾಲದಭ್ಯಾದಯೋ ಈ ಜನರು 'ವಿದ್ಯಾಹೀನಃ ಪಶುಃ' ಎಂಬ ವಾಕ್ಯಕ್ಕನುಸಾರವಾದ ಸ್ಥಿತಿಯಲ್ಲಿದ್ದಾರೆ. ಈ ದುಸ್ಥಿತಿಯನ್ನು ಹೋಗಲಾಡಿಸಿಕೊಳ್ಳುವದಕ್ಕಾಗಿ ಪ್ರಾಜ್ಞರಾಗಿ ವಿದ್ಯೆ, ಧನ, ಗೌರವಗಳನ್ನು ಸಂಪಾದಿಸಿಕೊಂಡಿರುವ ಹಲವು ದೇವಾಂಗದ ಮಹನೀಯರು ತಮ್ಮ ಕುಲಾಭಿವೃದ್ಧಿಗಾಗಿ ಈಗೀಗತಾನೆ ಉದ್ಯಮಶೀಲರಾಗಿರುವುದು ಈ ಜನಾಂಗದವರಿಗೇ ಅಲ್ಲದೆ ಭಾರತಭೂಮಿಯ ಶ್ರೇಯಸ್ಸನ್ನು ಬಯಸುವವರೆಲ್ಲರಿಗೂ ಸಂತೋಷವನ್ನುಂಟುಮಾಡತಕ್ಕ ವಿಷಯವಾಗಿದೆ. ಅವರಲ್ಲಿಯೂ ಸ್ವಯಂ ಅಗಿ ತಮ್ಮ ಗುಣದೋಷಗಳನ್ನು ತಾವೇ ವಿಮರ್ಶಿಸಿ ಅಭಿವೃದ್ಧಿಮಾರ್ಗಗಳನ್ನು ಹುಡುಕಿ ಅವಲಂಬಿಸತೊಡಗಿರುವದು ಕೇವಲ ಶುಭಸೂಚಕ.

ವಿದ್ಯಾರ್ಜನೆಯೇ ಸರ್ವ ಶ್ರೇಯಸ್ಸಿಗೂ ಮುಖ್ಯವಾದುದೆಂದರಿತು ವಿದ್ಯಾನಿಧಿಗಳನ್ನು ಕೂಡಿಸಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪನೆಮಾಡುವದರ ಮೂಲಕವಾಗಿಯೂ, ವಿದ್ಯಾರ್ಥಿ ವೇತನಗಳನ್ನು ಕೊಡುವುದರ ಮೂಲಕವಾಗಿಯೂ ದೇವಾಂಗ ಬಾಲಕರು ವಿದ್ಯಾವ್ಯಾಸಂಗಮಾಡಲು ಸೌಕರ್ಯಗಳನ್ನು ಒದಗಿಸುವ ಉದ್ದೇಶದಿಂದ ಅಲ್ಲಲ್ಲಿಯೇ ಸಂಘಗಳು ಸ್ಥಾಪನೆಯಾಗುತ್ತಿರುವವು. ಈಗ ಸೇಲಂ, ಕೊಯಮುತ್ತೂರು, ತಿರುಚಿನಾಪಳ್ಳಿ, ಮಡಿಕೆ, ಬೆಂಗಳೂರು, ಗದಗು, ಬೆಟ್ಟಗೇರಿ ಮುಂತಾದ ಸ್ಥಳಗಳಲ್ಲಿ ಆಯಾ ಕಡೆಯ ಮುಖಂಡರುಗಳು ಸಂಘಗಳನ್ನು ಏರ್ಪಾಡುಮಾಡಿರುವರು.

ಇಂತಹ ಉದ್ಯಮಗಳಲ್ಲಿ ದೇವಾಂಗ ಜನ ಸಮೂಹದವರಲ್ಲಿ ಆಸಕ್ತಿಯನ್ನು ಉಂಟುಮಾಡುವದಕ್ಕೂ, ಅವಶ್ಯಕವಾದ ಸಹಾನುಭೂತಿಗಳನ್ನು ಅವರಿಂದ ಪಡೆದು ಸಂಘ ಶಕ್ತಿ ಗೌರವಗಳನ್ನು ಬಲಪಡಿಸುವ ಕಾರಣದಿಂದಲೂ, ಬೇರೆ ಬೇರೆ ಭಾಗಗಳಲ್ಲಿರುವ ದೇವಾಂಗದವರಿಗೆ ಒಬ್ಬರಿಗೊಬ್ಬರ ಪರಿಚಯವನ್ನುಂಟುಮಾಡಿ ಪರಸ್ಪರ ವಿಶ್ವಾಸ ಬೆಳೆಯಿಸುವುದಕ್ಕೂ ಮಹಾಸಭೆಗಳು ನಡೆಯಬೇಕಾದದು ಆವಶ್ಯಕ. ಪ್ರಕೃತ ಶ್ರೀ ಬಾದಾಮಿ ಕ್ಷೇತ್ರದಲ್ಲಿ ಕಳೆದ ತಿಂಗಳಲ್ಲಿ ನಡೆದ ಶ್ರೀ ಬನಶಂಕರಿ ಜಾತ್ರೆಯಲ್ಲಿ ಬೊಂಬಾಯಿ ಆಧಿಪತ್ಯದ ದೇವಾಂಗ ಮಹಾಜನರು ಶ್ರೀಮಂತ ಸಕ್ಕರಿ ಶಂಕರಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನೂ, ಮದ್ರಾಸುಪಟ್ಟಣಕ್ಕೆ ಉತ್ತರದಲ್ಲಿರುವ ಆಂಧ್ರದೇಶವೆಂದು ಕರೆಯಲ್ಪಡುವ ಪ್ರಾಂತ್ಯ ಕೋಕಿನಾಡ ಸಮೀಪದಲ್ಲಿರುವ ಪದ್ದಾಪುರವೆಂಬ ಸ್ಥಳದಲ್ಲಿ ಬೆಂಗಳೂರು ದೇವಾಂಗ ಸಂಘದ ಪ್ರೆಸಿಡೆಂಟರಾದ ಶ್ರೀಯುತ ಎಂ. ಹಂಪೈಯ್ಯನವರ ಅಧ್ಯಕ್ಷತೆಯಲ್ಲಿ ಆ ದೇಶದ ದೇವಾಂಗಜನರ ಒಂದು ಸಭೆಯೂ ನಡೆದವು. ಬರುವ ಏಪ್ರಿಲ್ ತಿಂಗಳ ಮೊದಲನೆಯ ವಾರದಲ್ಲಿ ಎಲ್ಲಾ ಪ್ರಾಂತ್ಯದ ಕುಲ ಬಾಂಧವರು ಸೇರಿದ ಒಂದು ಅಖಿಲ ಭಾರತ ದೇವಾಂಗ ಮಹಾಸಭೆಯು ಮದ್ರಾಸಿನಲ್ಲಿ ನಡೆಯುವದಾಗಿ ಪ್ರಕಟವಾಗಿದೆ.

ಪೆದ್ದಾಪುರದಲ್ಲಿ ನಡೆದ ಮಹಾಸಭೆಯು ಅತ್ಯಂತ ರಮಣೀಯವಾಗಿಯೂ, ಸ್ತ್ರೀತ್ಸಾಹವಾದ ಶ್ರದ್ಧೆ ಭಕ್ತಿ ವಿಶ್ವಾಸದಿಂದಲೂ ನಡೆಯಿತೆಂದು ತಿಳಿದುಬಂದಿದೆ. ಬೆಂಗಳೂರಿಂದಲೂ ಮರಾ ಗಳಾದ ಡಿ. ಕೊಂಗಾಡಿಯಪ್ಪನವರೂ, ಪೊಸನ್ನ ಒಸಪ್ಪನವರೂ, ಮರಡಿ ಸುಬ್ಬಯ್ಯನವರೂ, ಕೆ. ಎಸ್. ವೀರಭದ್ರಯ್ಯ, ಬಿ. ಏ. ಯವರೂ ಚನ್ನಪಟ್ಟಣದ ಪಾಪಣ್ಣನವರೂ, ಸಿ. ಚಿಕ್ಕ ವೆಂಕಟಪ್ಪನವರೂ, ಡಿ. ಎ. ಆದಿನಾರಾಯಣರವರೂ, ಇನ್ನೂ ಕೆಲವರು ಆ ಮಹಾಸಭೆಗೆ ಆಹ್ವಾನಿತರಾಗಿ ದಯಮಾಡಿಸಿದ್ದರು. ಆ ಸಭೆಯು ಮೂರು ದಿವಸಗಳು ನಡೆದುದಾಗಿಯೂ ಪ್ರತಿ ದಿನವೂ ಸುಮಾರು 2,000 ಜನರಿಗೆ ಮೇಲ್ಪಟ್ಟು ಸಭಾಮಂಟಪವನ್ನಲಂಕರಿಸಿ, ಅಲ್ಲಿ ನಡೆಯುತ್ತಿದ್ದ ಸ್ವಾರಸ್ಯವೂ, ಹೃದಯಂಗಮವೂ ಆದ ಭಾಷಣಗಳನ್ನು ಕೇಳಿ ಸರ್ವರೂ ಆನಂದಭರಿತರಾಗುತ್ತಿದ್ದರೆಂಬುದಾಗಿಯೂ ತಿಳಿಸಲು ಸಂತೋಷಪಡಬೇಕಾಗಿದೆ.

ಸಭಾಧ್ಯಕ್ಷರ ಅಗ್ರಭಾಷಣ ಮತ್ತು ಅಲ್ಲಿ ನಡೆದ ಇತರ ಉಪನ್ಯಾಸಗಳಿಂದ ಬೋಧ್ಯವಾದ ಈ ಮುಂದೆ ಕಂಡ ಒಸ

ಅಂಶಗಳು ಎಲ್ಲಾ ದೇವಾಂಗ ಮಂಡಲಿಯವರಲ್ಲಿಯೂ ಪ್ರಚುರವಾಗಿ ಅವರೆಲ್ಲರಿಗೂ ಸದ್ಬೋಧೆಯನ್ನುಂಟುಮಾಡಲೆಂದು ನಾವು ಆಶಿಸುತ್ತೇವೆ. ಆ ಮಹಾಸಭೆಯಲ್ಲಿ ಉಕ್ತವಾದ ವಿಷಯಗಳು ಯಾವುವೆಂದರೆ:—(1) ದೇವಾಂಗ ಮತೀಯರಾದ ಪ್ರತಿ ಕುಟುಂಬದವರೂ ತಮ್ಮ ಬಾಲಕ ಬಾಲಕಿಯರನ್ನು 14, 12 ವಯಸ್ಸಿನ ವರೆಗಾದರೂ ಓದಿಸಬೇಕು, (2) ಮುಂದೆ ವಿದ್ಯಾವ್ಯಾಸಂಗ ಮಾಡಿಸಲು ಅನನುಕೂಲವಾದವರಿಗೆ ಸಂಘಗಳ ಮೂಲಕವಾಗಿ ಸಹಾಯಗಳನ್ನು ಒದಗಿಸಬೇಕು. ಇದಕ್ಕಾಗಿ ಧನಿಕರಾದವರು ತಮ್ಮ ಕುಟುಂಬ ಸಂರಕ್ಷಣೆಯೇ ತಮ್ಮ ಕಾರ್ಯವೆಂದು ತಿಳಿಯದೆ ತಮ್ಮ ಕುಲ ಸರ್ವರ ಹಿತಾರ್ಥವಾಗಿ ಸ್ವಾರ್ಥತ್ಯಾಗಮಾಡಬೇಕಾದದು ಅವರ ಧರ್ಮ. ವಿದ್ಯಾವಂತರೂ, ಕಾರ್ಯದಕ್ಷತೆಯುಳ್ಳವರೂ, ಆದ ಪಯೋವಂತರು ಕುಲಸೇವಾ ಬದ್ಧಕಂಕಣರಾಗಿ ಕೆಲವು ಕ್ರಿಶ್ಚಿಯನ್ ಮಿಶನರಿ ಸಂಘಕ್ಕೆ ಸೇರಿದವರು ಸ್ವಾರ್ಥತ್ಯಾಗಮಾಡಿ ದೇಶ, ವಿದೇಶ ತಿರುಗಿ ಕೆಲಸಮಾಡುವಂತೆ ದೇವಾಂಗದವರು ಇಂತಹ ಸೇವಾ ಮಾರ್ಗವನ್ನು ಹಿಡಿಯಬೇಕು. ಹೀಗೆ ಹಣವಂತರೂ, ವಿದ್ಯಾವಂತರೂ, ಉಭಯರೂ ಸೇರಿ ಕಾರ್ಯ ಕಲಾಪಗಳನ್ನು ಕೈಗೊಂಡಲ್ಲದೆ ನಮ್ಮ ಸಮಾಜವು ವೃದ್ಧಿಗೆ ಬರಲಾರದು. (3) ನೇಯಿಗೆ ಕಸಬಿನಿಂದ ಹೊಟ್ಟೆಗೂ, ಬಟ್ಟೆಗೂ ಮೀರಿ ಧನಾರ್ಜನೆಯಾಗಲು ಈ ಕಾಲದಲ್ಲಿ ಪ್ರಯಾಸವಾಗಿರುವದರಿಂದ ದೇವಾಂಗದವರು ತಮ್ಮ ಕಸಬಿಗೆ ಸಂಬಂಧಪಟ್ಟ ವ್ಯಾಪಾರಗಳನ್ನೂ ಇತರ ವ್ಯಾಪಾರಗಳನ್ನೂ ಕೈಗೊಂಡು ಆರ್ಥಿಕ ಸ್ಥಿತಿಯನ್ನು ವೃದ್ಧಿಪಡಿಸಿಕೊಳ್ಳಬೇಕು. (4) ಅಲ್ಲದೆ, ನಿತ್ಯ ಸ್ನಾನ ಸಂಧ್ಯಾರಾಧನಾದಿ ಕರ್ಮಗಳನ್ನು ಬಿಡದೆ ಅನುಷ್ಠಾನದಲ್ಲಿಟ್ಟುಕೊಂಡು ದುರಾಚಾರಗಳು ಯಾವುವಿದ್ದರೂ ಹಿಂದಿಸಿ ತ್ಯಜಿಸಬೇಕು. (5) ಹಾಗೆಯೇ ದೇವಾಂಗದವರಲ್ಲಿ ಕುಲಾಚಾರ ಸಂಬಂಧವಾದ ಕಲಹಗಳೂ, ತಾಂಬೂಲದ ಜಗಳಗಳೂ ಇನ್ನೂ ಇದರಂತೆ ಇತರ ಬಹು ಪಾದ ಬೇರೆಬೇರೆ ಐಕ್ಯಮತ್ಯ ಭೇದಕವಾದ ಕಾರಣಗಳನ್ನು ಸರಿಪಡಿಸಿಕೊಂಡು ಮುಂದೆ ಈ ರೀತಿಯಾದ ವಿವಾದಗಳು ಬಾರದಂತೆ ಮುಖಂಡರಾದವರು ಅವುಗಳಿಗೆ ಮನಸು ಕೊಡಬಾರದು. (6) ಸ್ವದೇಶ ವಿದೇಶಗಳಲ್ಲಿರುವ ದೇವಾಂಗದವರಲ್ಲಿ ಪರಸ್ಪರ ವಿಶ್ವಾಸವನ್ನುಂಟುಮಾಡತಕ್ಕ ಬಗ್ಗೆ ಹಾಗಿರುವ ಪದ್ಧತಿಯಂತೆ ಪರಸ್ಪರ ಬಾಂಧವ್ಯಗಳನ್ನು ನಡೆಸಿ ನಡೆ ಇರುವ ರೀತಿಯನ್ನು ಒದಗಿಸಿ ದೂರದೇಶ ಬಾಂಧವ್ಯಗಳು ನಡೆಯುತ್ತಿರಬೇಕೆಂಬುದೇ ಮೊದಲಾದ ವಿಷಯ— ಎಂಬಿವೇ ಮುಂತಾದ ಸದ್ವಿಚಾರಗಳು ಮತಬಾಂಧವರ ಕೃಪಾಮಯವಾದ ಗಮನಕ್ಕೆ ತರಲ್ಪಟ್ಟವು.

ಈ ಲೇಖನವನ್ನು ಓದುವ ದೇವಾಂಗ ಮಹಾಶಯರು ಇದರಲ್ಲಿ ಗರ್ಭೀಕೃತವಾದ ಕುಲಾಭಿವೃದ್ಧಿಗೆ ಸಾಧಕಗಳಾದ ಅಂಶಗಳನ್ನು ಗ್ರಹಿಸಿ ಕುಲ ಸೇವಾತತ್ಪರರಾಗಬೇಕೆಂದು ಹೇಳಬೇಕಾದ್ದೇನಿದೆ? ತಮ್ಮಾಲದಲ್ಲಿ ದೇವಾಂಗದವರನೇಕರು ಮೌಢ್ಯದಿಂದ ಆವೃತರಾಗಿದ್ದರೂ ಇವರು ಸೂಕ್ಷ್ಮ ಬುದ್ಧಿಯುಳ್ಳವರಾಗಿರುವರೆಂದೇ ಹೇಳಬಹುದು. ಪೂರ್ವದಲ್ಲಿ ಇಂಡಿಯಾದೇಶದ ಜನರ ಇರಸ್ಥಿತಿಯ ವಿಷಯವಾಗಿ ಬ್ಲೀಕನ್ ರವರು ಬರೆದಿರುವ ಪುಸ್ತಕದಲ್ಲಿ, "ಈ ದೇವಾಂಗದವರು ಬಹಳ ಬುದ್ಧಿಶಾಲಿಗಳಂದ, ಸ್ವಪ್ರೋತ್ಸಾಹದಿಂದ ಬಹಳ ಉತ್ಕೃಷ್ಟವಾದ, ಹಸನಾದ ಗಿರಾಕಿ ಇರುವ ಯಾವ ತರಹದ ಬಟ್ಟೆಗಳನ್ನಾದರೂ ತಯಾರುಮಾಡಲು ಸಾಮರ್ಥ್ಯವಿರುತ್ತದೆಂತಲೂ" ಬರೆದಿರುತ್ತಾರೆ. ಪ್ರತ್ಯಕ್ಷದಲ್ಲಿಯೂ ಗಮನಿಸಿ ನೋಡುವಲ್ಲಿ ತಮ್ಮ ಸ್ವಪ್ರಯತ್ನದಿಂದ ವಿದ್ಯಾ ಜ್ಞಾನವನ್ನೂ ಸಂಪಾದಿಸಿರುವ, ಇಲ್ಲವೆ ಕೃಷಿ, ವಾಣಿಜ್ಯದಲ್ಲಿ ಮೇಲ್ಮೆಯನ್ನು ಹೊಂದಿರುವ ಕೆಲವು ದೇವಾಂಗದವರು ಸುಪ್ರಸಿದ್ಧರಾಗಿ ಇವರ ಮುಂದಾಳುಗಳಾಗಿರುವ ಜನರ ಸರಿಸಮಾನರಾಗಿ ಬಾಳುತ್ತಿರುವುದೇ ಬೂದಿ ಮುಚ್ಚಿದಂತಿರುವ ದೇವಾಂಗದವರ ಮೇಧಾಶಕ್ತಿ ಸಾಮರ್ಥ್ಯಗಳಿಗೆ ಹೆಗ್ಗುರುತಾಗಿವೆ. ಹಿಂದುಳಿದಿರುವ ಸಮಸ್ತ ಪ್ರಜಾ ವರ್ಗದವರ ಮೇಲ್ಮೆಗೋಸ್ಕರ ಶ್ರಮಪಡುತ್ತ ಜಗದ್ವಿಖ್ಯಾತರಾಗಿರುವ ಮದರಾಸಿನ ಸರ್ ಪಿ. ತ್ಯಾಗರಾಯ ಶೆಟ್ಟರು ದೇವಾಂಗದವರೇ ಅಲ್ಲವೇ? ಇವರಲ್ಲದೆ ... ...

... ...

ಮುಂತಾದ ಮಹನೀಯರನ್ನೊಳಗೊಂಡಿರುವ ದೇವಾಂಗ ಮಂಡಲಿಯು ವಿದ್ಯೆ ಎಂಬ ಸಾಣೆ ಕಲ್ಲಿನಿಂದ ಉಜ್ಜಲ್ಪಟ್ಟದೇ ಆದರೆ ರತ್ನಪ್ರಾಯವಾಗಿ ಪ್ರಕಾಶಕ್ಕೆ ಬಾರದೆ ಇರುವುದೇ? ದೈವ ಯೋಗದಿಂದ ಈಗತಾನೇ ಉದ್ಭವವಾಗಿರುವ ಕುಲಸೇವಾ ಕಾರ್ಯಗಳಲ್ಲಿ ಸಮಸ್ತ ಮತ ಬಾಂಧವರೂ ಭಾಗಿಗಳಾಗಿ ತಮ್ಮಲ್ಲಿ ಸರ್ವ ವಿಧದಿಂದಲೂ ವಿದ್ಯೆಯನ್ನು ಅಭಿವೃದ್ಧಿಪಡಿಸುವುದು, ಕೈಗಾರಿಕೆಯ ಉದ್ಯಮಗಳನ್ನು ಪ್ರೋತ್ಸಾಹಿಸುವುದೂ, ಪೌರ ಕಾರ್ಯಗಳಿಗೆ ಗಮನ ಕೊಡುವ ಸದ್ಗುಣಗಳನ್ನು ಪರಿಪೋಷಿಸುವುದು, ಇವೇ ಮುಂತಾದ ಪ್ರಯತ್ನಗಳಲ್ಲಿ ನಿರತರಾಗುವುದರ ಮೂಲಕ ದೇವಾಂಗ ಮತಸ್ಥರು ಶ್ರೇಯೋವಂತರೂ, ಸತ್ಪ್ರಜೆಗಳೂ, ದೇಶ ಹಿತೈಷಿಗಳೂ ಎಂದು ಪ್ರಖ್ಯಾತಿಯನ್ನು ಪಡೆಯುವಂತೆ ಮಾಡುವುದರಲ್ಲಿ ಎಲ್ಲಾ ದೇವಾಂಗದವರೂ ಆಸಕ್ತಿಯನ್ನು ವಹಿಸಿಯಾರೆಂದು ನಿರೀಕ್ಷಿಸಿದೆ.

ಡಿ. ಎ. ಆದಿನಾರಾಯಣ,
ಸೆಕ್ರೆಟರಿ,
ದೇವಾಂಗ ಸಂಘ, ಬೆಂಗಳೂರು.

NOTICE.

In the court of D. M. of Puttur,
Original suit 889 of 1924.
Sheenappa Gowda—Plaintiff.
Subraya Kudrettaya & others—Defendant

Please take notice that a suit has been filed fu[illegible] and the same stands [illegible] 23rd February 1925

Da[illegible] 5 2—25. PUTTUR. } B. S. HOLLA, *Vakil for Plaintiff.*

ಪತ್ರವ್ಯವಹಾರಗಳು.

ಚಾತ್ತ್ರದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಡೇವಿ ಡಿಬೇಟಿಂಗ್ ಸೊಸೈಟಿ

ಮಹನೀಯರೆ,

ಪ್ರತಿ ವರುಷವೂ ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಈ ಸೊಸೈಟಿಯಲ್ಲಿ ಗದ್ದಲವು ಬಹಳ ಜೋರಾಗಿರುತ್ತಿತ್ತು. ಪ್ರತಿನಿತ್ಯವೂ ಬಾಲಕರನ್ನು ಶಾಲೆ ಬಿಟ್ಟ ಮೇಲೆ ನಾಟಕ ತರಬೇತು ಮಾಡುತ್ತಿದ್ದರು. ಆದರೆ ಈ ವರುಷ ಫೆಬ್ರವರಿ ಅರ್ಧ ಕಳೆದರೂ ಅದರ ಸುಳಿವೇ ಕಾಣುವುದಿಲ್ಲ. ಪಾಪ, ಚ ಹ ಡುಗರುತಾನೇ ಏನು ಮಾಡಬಲ್ಲರು! ಅವರಿಗೆ ದಾರಿ ತೋರಿಸಿ ಕೊಡಲಿಕ್ಕಾಗಿರುವ ಗುರುಗಳೇ ಅಂಥ ಕಾರ್ಯಗಳನ್ನು ಹೇಳಿಕೊಡದಿದ್ದರೆ ಸೆಕ್ರೆಟರಿಯು ಮತ್ತು ಮೆಂಬರುಗಳು ಏನುಮಾಡಬಲ್ಲರು?

ಪ್ರತಿ ವರುಷವೂ ಆ ಸೊಸೈಟಿ ರೂಮಿನ ಮೇಜಿಯ ಮೇಲೆ ಅನೇಕ ದಿನಪತ್ರಿಕೆಗಳೂ, ವಾರ ಪತ್ರಿಕೆಗಳೂ, ಇತರ ಪತ್ರಿಕೆಗಳೂ ಸದಾ ಇರುತ್ತಿದ್ದವು. ಆದರೆ ಈ ವರುಷ ಆ ಕೋಣೆಯ ಬಾಗಿಲನ್ನು ಯಾವ ನಕ್ಷತ್ರದಲ್ಲಿ ಮುಚ್ಚಿದರೋ ಗೊತ್ತಿಲ್ಲ, ಅದನ್ನು ತೆರೆಯಲು ಇನ್ನೂ ಸಮಯ ಬಂದಿರುವುದಿಲ್ಲ. ಸಂಘದ ಪ್ರೆಸಿಡೆಂಟರು ಪ್ರಾರಂಭದಲ್ಲಿ ಅನೇಕ ಪತ್ರಿಕೆಗಳನ್ನು ತರಿಸಲು ಹೆಡ್‌ಮಾಸ್ಟರ್ ಸಾಹೇಬರವರ ತಪ್ಪಿಗೆಯಿಂದ ತರಿಸಿಕೊಡುವುದಾಗಿ ಮಾತು ಕೊಟ್ಟಿದ್ದರು. ಆದರೆ ಅದಕ್ಕೆ ತಕ್ಕ ಸಮಯವು ಇನ್ನೂ ಬಂದಿರುವುದಿಲ್ಲವೆಂದು ಕಾಣುತ್ತದೆ.

'ಡೇಯಿಲಿ ಎಕ್ಸ್‌ಪ್ರೆಸ್' ಪತ್ರಿಕೆಯವರಿಂದ ಕೆಲವು ದಿವಸಗಳ ಹಿಂದೆ ಸಾಧಾರಣ ಸುಮಾರು ರೂಪಾಯಿಗಳು ಬಾಕಿ ಇರುವುದರಿಂದ ವಡನೆ ಕಳುಹಿಸಬೇಕೆಂದು ರಿಜಿಸ್ಟರ್ ನೋಟೀಸ್ ಕೊಡಲಾದೀತೆಂದು, ನೋಟೀಸ್ ಕೊಟ್ಟಿತ್ತು. ಅವರು ಪತ್ರಿಕೆಯನ್ನು ಡಿಸೆಂಬರ್ 31ರ ವರೆಗೆ ಕಳುಹಿಸಿರುವರಂತೆ. ಆದರೆ ಸಂಘಕ್ಕೆ ಮಾತ್ರ ಒಂದೂ ಸಿಕ್ಕಿರುವುದಿಲ್ಲ. ದುರ್ದೆಶೆಗೆ ಇಳಿದಿರುವ ಆ ಸಂಘವು ಇಷ್ಟು ದೊಡ್ಡ ಮೊತ್ತವನ್ನು ಇಳಿಸುವ ಬಗೆ ಎಂತೋ ನಾನರಿಯೆನು. ಇದರ ಮೇಲೆ ಅದರ ವಾರ್ಷಿಕೋತ್ಸವವನ್ನೂ (Eloqution competition) ವಾಕ್ಚಾತುರ್ಯ ಸ್ಪರ್ಧೆಯನ್ನೂ ಹೇಗೆ ನಡಿಸಬಲ್ಲರು? ಹ್ಯಾಗೂ ಮೆ. ಬಿ. ಕುಶಾಲಪ್ಪನವರ ಚಿತ್ರದ ಚೀಲವು ಈ ಸೊಸೈಟಿಯಲ್ಲಿ ಬೆಳೆಯದಿದ್ದರೂ ಬೇರೆ ಕಡೆಯಲ್ಲಿ ಮೊಳಕೆ ಹುಟ್ಟುತ್ತಿರುವದು ಬಹಳ ಸಂತೋಷಕರವಾದ ಸಂಗತಿಯಾಗಿದೆ.

ನಮ್ಮ ಸಹೋದರರಾದ ವೀರಾಜಪೇಟೆ ವಿದ್ಯಾರ್ಥಿಗಳು ಕಳೆದ ವರುಷ ಇನಾಮನ್ನು ಪಡೆದರು. ಆದರೆ ಅವರಾದರೂ ಈ ವರುಷ ಒಂದನ್ನು ಏರ್ಪಡಿಸಿದ್ದರೆ ಆಗುತ್ತಿರಲಿಲ್ಲವೇ, ಕಳೆದ ವರುಷ ಅವರನ್ನು ಕರೆಯಿಸಿದಕ್ಕಾಗಿ ಈ ವರುಷ ಅವರು ಈ ಮರ್ಯಾದೆಯನ್ನು ನೋಡಿ ಏರ್ಪಡಿಸಿದ್ದರೆ ಬಹಳ ಉತ್ತಮವಾಗುತ್ತಿತ್ತು. ಆದರೆ ಇಷ್ಟು ದಿವಸಗಳ ವರೆಗೆ ಅದರ ಸುಳಿವೇ ಕಾಣುವುದಿಲ್ಲವು. ವಿದ್ಯಾವಂತರು ತಮ್ಮ ದೇಶದ ಮುಂದಿನ ಜನಾಂಗದ ಅಭಿವೃದ್ಧಿಯನ್ನು ಬಯಸುವವರು ಇನ್ನಾದರೂ ಆ ಕಾರ್ಯವನ್ನು ಮಾಡಬಾರದೇ? ಸಮಯವು ಮಿತಿಮೀರಿರುವುದಿಲ್ಲ, ಮನಸೊಂದೇ ಬೇಕಾದದ್ದು. ಪುಣ್ಯಶಾಲಿಗಳು ಮುಂದೆ ಬಂದು ಮೂಲೆಗೊತ್ತುತ್ತಿರುವ ಸಂಘವನ್ನು ವೃದ್ಧಿಗೊಳಿಸುವರೆಂದು ಹಾರೈಸುತ್ತೇನೆ.

'ಅಭಿಲಾಷಿ'

ಮಡಿಕೇರಿ ಊರೊಕ್ಕೆ ಊಟ.

ಮಹನೀಯರೇ,

ಕಳೆದ ತಿಂಗಳು 4ರಲ್ಲು ಮಡಿಕೇರಿಯ ಕೊಡವರು ಸೇರಿ ಚಂದಾ ಹಾಕಿ ಒಂದು ಊರೊಕ್ಕೆಯನ್ನು ನಡಿಸಿದ ಸಂಗತಿ ಎಲ್ಲರಿಗೂ ತಿಳಿದದ್ದಾಗಿದೆ. ಸುಮಾರು 250 ರುಪಾಯಿ ವಸೂಲಾಯಿತೆಂದು ವರ್ತಮಾನ. ಆದರೆ ವಸೂಲಿಯು ಮತ್ತು ಖರ್ಚು ವೆಚ್ಚಗಳ ಲೆಕ್ಕವನ್ನು ಇಡಲಿಕ್ಕೂ ಊಟದ ಎಲ್ಲಾ ಏರ್ಪಾಡುಗಳನ್ನು ಮಾಡಲಿಕ್ಕೂ ಒಂದು ಕಮಿಟಿಯನ್ನು ನೇಮಿಸಲಾಯಿತಷ್ಟೆ. ಆದರೆ ಈ ಕಮಿಟಿಯವರು ಆದಾಯ ವೆಚ್ಚದ ವಿವರವನ್ನು ಚಂದಾದಾರರ ತಿಳುವಳಿಕೆಗೆ ಪ್ರಕಟಿಸದೆ ಇರುವುದು ಬಹು ವ್ಯಸನಕರ. ಹೀಗೆ ಈ ವಿಷಯ ಗುಟ್ಟಾಗಿಡಲು ಕಾರಣವೇನೆಂದು ತಿಳಿಯುವುದಿಲ್ಲ. ಊಟವಾದ ಸಂತರ ಇತ್ತಲಾಗಿ ಆ ಕಮಿಟಿಯವರೆಲ್ಲರೂ ಸೇರಿ ಮೀಟಿಂಗು ಮಾಡಿ ಲೆಕ್ಕಾಚಾರವನ್ನು ನೋಡಿದರೋ? ಆ ಮೀಟಿಂಗಿನಲ್ಲಿ ಎಷ್ಟು ಕಮಿಟಿ ಮೆಂಬರುಗಳು ಹಾಜರಿದ್ದರು? ಆ ಮೀಟಿಂಗಿನ

ಪ್ರೊಸೀಡಿಂಗ್ಸ್ ಏನು ಎಂಬ ಮುಂತಾದ ವಿಷಯಗಳನ್ನು ದಯವಿಟ್ಟು ಪ್ರಕಟಿಸುವರಾಗಿ ನಂಬುತ್ತೇನೆ. ಇಂಥಾ ಪಬ್ಲಿಕ್ [illegible] ಕೆಲಸಗಳ ಚಂದಾ ವಸೂ [illegible] ವಿವರವನು ಪ್ರಕಟಿಸುವು [illegible] ಕೊಟ್ಟ [illegible] ಉಪ [illegible] ಆದಲೇ [illegible] ಗ್ಯಾಡು [illegible] ನವರಿಗೆ [illegible] ನಾದ ಕೆಲ [illegible] ಟಿ ಮೊ [illegible] ಯೋಗಿಸಿ [illegible]

ಮದ್ರಾಸಿಗೆ ಸೇರಿಸಿದ ಪಕ್ಷದಲ್ಲಿ ನಮ್ಮ ದೇಶವು ಹೀಗಿರುವುದಕ್ಕಿಂತ ಹೆಚ್ಚಿನ ಅಭಿವೃದ್ಧಿಯಲ್ಲೂ ಸ್ವರಾಜ್ಯದ ಚಳವಳದಲ್ಲೂ ಇರುವುದಲ್ಲದೆ ಪರದೇಶದಿಂದ ಓದಿಬರುವ ನಮ್ಮ ಯುವಕರಿಗೂ ಸಹ ಅನೇಕ ವಿಧದಲ್ಲಿ ಈ ಕೌನ್ಸಿಲಿನಲ್ಲಿ ದೊರೆಯುವ [illegible] ಕ್ಕಿಂತಲೂ ಹೆಚ್ಚಿನ ಪ್ರಯೋಜನಗಳು ಉಂಟಾಗುವುದರ [illegible] ಯಾವ ಸಂದೇಹವೂ ಇಲ್ಲವೆಂದು ನಾನು ದೃಢವಾಗಿ ಹೇಳುತ್ತೇನೆ. ಈಗ ಸದ್ಯಕ್ಕೆ ಕಾನ್‌ವೆಂಟಿನ (ಮರ್ಕರ [illegible] ಯರ ಶಾಲೆ) ಲ್ಲಿ ಹುಡುಗಿಯರು ಬಹಳ [illegible] ದ 5ನೇ ಮತ್ತು 6ನೇ ಫಾರಂಗಳ [illegible] ಯಿ ಹೆಚ್ಚು ಕೊಡಲಿಕ್ಕಾಗಿ ಕೆಲವರ [illegible] ಗಳು ಬಹುಮ [illegible] ತ್ತನೆ.

ಈ ಇಲಾಖೆಗೆ ಮದ್ರಾಸು ಸರಕಾರದಂತೆ ಸ್ಯಾನಿಟರಿ ಇನ್‌ಸ್ಪೆಕ್ಟರ್ ಕೆಲಸದವಿ ತೋರ್ಗಿಸಿ [illegible] ನಿ [illegible]

Reg. No. M. 1550.
'KODAGU' M.

ಕೊಡಗು

ಸಂಪಾದಕರು—[illegible] [illegible] [ವಾರ್ಷಿಕ ಚಂದಾ ರೂ. 4-8-0]

ಸಂಪುಟ [illegible] | ತಾರೀಖು [illegible] ೧೯೪೫ನೇ ಫೆಬ್ರವರಿ | ಸಂಚಿಕೆ [illegible]

॥ ಪ್ರಚಲಿತ ವಿಚಾರಗಳು ॥

ಸ್ವತಂತ್ರ ಬರ್ಮಾ.

[illegible] ಬ್ರಿಟಿಷ ಸಮ್ರಾಜ್ಯದ [illegible] ಟದಿಂದ [illegible] ರಕ್ಷಿಸ್ಪ [illegible] ಬಿಟಿಷ [illegible] ಬರ್ಮಾವು [illegible] ಹಿಸಲು ಹಿಂದೂ ದೇಶದ [illegible] ಭಾರತ [illegible] ಬರ್ಮಾದ [illegible] ದು [illegible] [illegible] ಎಂದು [illegible]

[illegible] ಕಾರ್ಯವಿಲ್ಲದೆ [illegible] ಗಾಂಧೀಜಿ [illegible] ಯಿಂದ ಭಾರತದ [illegible] ಇದೇ [illegible]

ಕಾಂಗ್ರೆಸ ಕಾರ್ಯಕಾರಿ ಮಂಡಳ

[illegible] ಕಾಂಗ್ರೆಸ ವರ್ಕಿಂಗ್ ಕಮಿಟಿಗೆ ಈ ಸದಸ್ಯರನ್ನು ನೇಮಕ ಮಾಡಿದರೆ. ಶ್ರೀಗಳಾದ ರಾಜೇಂದ್ರಪ್ರಸಾದ (ಅಧ್ಯಕ್ಷ) ಪಂಡಿತ ಜವಾಹರ ಲಾಲ್‌ನಹರು, ಸರ್ದಾರ್ ವಲ್ಲಭಭಾಯಿ ಪಟೇಲ (ಖಜಾಂಚಿ) ಮೌಲನಾ ಅಬುಲ್‌ಕಲಂ ಆಝಾದ್, ಪಂಡಿತ ಗೋವಿಂದ ವಲ್ಲಭಪಂತ್, ಸರದಾರ್ ಪ್ರತಾಪಸಿಂಗ್, ಡಾ. ಪ್ರಫುಲ್ಲಚಂದ್ರಘೋಷ್, ಡಾ. ಪಟ್ಟಾಭಿ ಸೀತಾರಾಮಯ್ಯ, ರಫಿ ಅಹಮ್ಮದ್ ಕಿದ್ವಾಯಿ, ಎಸ್. ಕೆ. ಪಾಟಿಲ್, ಪ್ರೊ. ಎನ್. ಜಿ. ರಂಗಾ, ಬಲವಂತರಾಯ ಮೆಹತಾ, ಶ್ರೀಮತಿ ಸುಚೇತ ಕೃಪಲಾನಿ, ಆಚಾರ್ಯ ಜುಗಲ್‌ಕಿಶೋರ್ ಮತ್ತು ಆಚಾರ್ಯಶಂಕರರಾವ್‌ದೇವ್ (ಕಾರ್ಯದರ್ಶಿಗಳು) ಕಾರ್ಯಕಾರಿ ಮಂಡಳಿಯ ಮೀಟಿಂಗು ತಾ. [illegible] ರಲ್ಲಿ ಡೆಲ್ಲಿಯಲ್ಲಿ ನಡೆಯುವದು.

ಸ್ವಾತಂತ್ರ್ಯ ದಿನ.

ಪ್ರತಿ ವರ್ಷ ಜನವರಿ ೨೬ ರನ್ನು ಸ್ವಾತಂತ್ರ್ಯ ದಿನವೆಂದು ಇಡೀ ಹಿಂದೂ ದೇಶವು ಆಚರಿಸುತ್ತಾ ಬಂದಿದೆ. ಈ ವರ್ಷ ಆ ದಿನದ ಕಾರ್ಯಕ್ರಮದ ಬಗ್ಗೆ

ಭಯಂಕರ ಕೊಲೆ

[illegible] ಜಿನ [illegible] ದ [illegible] ಪಾಕಿಸ್ತಾನ [illegible] ಗಾಡಿಯ ಮೇಲೆ [illegible] ವಿರೋಧಿ [illegible] ಕೊಂದುಹಾಕಿರುವರು. ಪಾಕಿಸ್ತಾನದ [illegible] ಜನ ನಿರಾಶ್ರಿತರಲ್ಲಿ ಕೇವಲ ೨೦೦ ಜನರು ಮಾತ್ರ ಭಾರತದ [illegible] ವುಳಿದವರು ಕೊಲ್ಲಲ್ಪಟ್ಟಿರಬೇಕೆಂದು ಎಣಿಸಲಾಗಿದೆ. ಅನೇಕ ಮಹಿಳೆಯರನ್ನು ಅಪಹರಿಸಲಾಗಿದೆಯಂತೆ. ಈ ನಿರಾಶ್ರಿತ ಜನರ ಜೊತೆಯಲ್ಲಿದ್ದ [illegible] ಸೈನಿಕರಲ್ಲಿ ಕೇವಲ [illegible] ಜನರು ಉಳಿದಿರುವರಾಗಿ ಸುದ್ದಿ.

ರಾಜ್ಯಘಟನಾ ಸಭಾಧ್ಯಕ್ಷರಿಗೆ ವೇತನ.

ಹಿಂದೂದೇಶದ ಆಹಾರ ಸಚಿವರಾಗಿದ್ದು, ರಾಜ್ಯಘಟನಾ ಸಭೆಯ ಅಧ್ಯಕ್ಷರಾಗಿಯೂ ಇರುವ ಡಾ. ರಾಜೇಂದ್ರಪ್ರಸಾದರು ಅಖಿಲಭಾರತ ಕಾಂಗ್ರೆಸಿನ ಪ್ರೆಸಿಡೆಂಟ್‌ಪದವನ್ನು ವಹಿಸಿಕೊಳ್ಳಲು ಕೇಂದ್ರದ ತನ್ನ ಮಂತ್ರಿತನಕ್ಕೆ ರಾಜಿನಾಮೆ ಇತ್ತಿರುವರು (ಇವರ ಬದಲು ಆಹಾರ ಮಂತ್ರಿಗಳಾಗಿ ಶ್ರೀ ಜಯರಾಮ್‌ದಾಸ್ ದೌಲತ್‌ರಾಂರವರು ನೇಮಕವಾಗಿದ್ದಾರೆ) ಡಾ. ರಾಜೇಂದ್ರಪ್ರಸಾದರು ಈ ವರೆ [illegible] ಕೇಂದ್ರದಲ್ಲಿ ಮಂತ್ರಿಯಾಗಿದ್ದ ಕಾರಣ ರಾಜ್ಯಘಟನಾ ಸಭಾಧ್ಯಕ್ಷರಿಗೆ ವೇತನದ [illegible] ಆದರೆ ಈಗ ಕೇಂದ್ರದ ಮಂತ್ರಿಗಳ [illegible] ತಿಂಗಳಿಗೆ [illegible] ಸಂಬಳವೆಂದು ನಿಶ್ಚಯಿಸ [illegible]

ಕೆ. ಪಿ. ಸಿ. ಸಿ

ತಾರೀಖು [illegible] ರಲ್ಲಿ [illegible] ಕರ್ನಾಟಕ [illegible] ಕಾಂಗ್ರೆಸ್ ಸಮಿತಿಯ [illegible] [illegible] ಕೊಡಗಿನ [illegible]

ಕಾಶ್ಮೀರ

ಕಾಶ್ಮೀರದಲ್ಲಿ ಪಾಕಿಸ್ತಾನ [illegible] ಇಂಡಿಯಾ ಸರಕಾರ [illegible] ಯೋಗ [illegible] ಮಾಡಲು [illegible] ಪಾಕಿಸ್ತಾನ [illegible] ತಮ್ಮ [illegible] ಇವರನ್ನು ಹಿಂದೀ [illegible] ಇವರು ಹಿಮ್ಮೆಟ್ಟಿ ಪಾಕಿಸ್ತಾನ ಗಡಿಯಲ್ಲಿ ಸೇರುತ್ತಾರೆ. ಇಲ್ಲಿ ಇವರನ್ನು ಎದುರಿಸಿ [illegible] ಮೇಲಿನ ನಿಯಮಕ್ಕೆ ವಿರುದ್ಧವಾಗಿದೆ. ಆದ್ದರಿಂದ ಇಂಡಿಯಾ ಸರಕಾರವು ಈ ವಿಚಾರವನ್ನು ಸಂಯುಕ್ತ ರಾಷ್ಟ್ರ ಸಭೆಯ ಮುಂದಿಟ್ಟಿದೆ. ಈ ವಿಚಾರವನ್ನು ಅಲ್ಲಿ ವಾದಿಸಲು ಹಿಂದೂ ದೇಶದ ಪರ ಸರ ಗೋಪಾಲಸ್ವಾಮಿ ಅಯ್ಯಂಗಾರ್, ಕಾಶ್ಮೀರದ ಶೇಕ್ ಅಬ್ದುಲ್ಲಾ ಮೊದಲಾದವರಿಂದ ಕೂಡಿದ ಸಮಿತಿಯೊಂದು [illegible] ಪಾಕಿಸ್ತಾನದ ಪರ ಸರ್ [illegible] ಖಾನರ ಮುಂದಾಳ್ತನದಲ್ಲಿ ಒಂದು ಸಮಿತಿ ಹೋಗಿದೆ. ಅಲ್ಲಿ ಎರಡು ಪಕ್ಷಗಳೂ ತಮ್ಮ ವಿಚಾರಗಳನ್ನು ಮಂಡಿಸಿವೆ. ಸಂಯುಕ್ತ ರಾಷ್ಟ್ರ ಸಭೆಯು 'ಗುಡ್ ಆಫೀಸ್' ಸಮಿತಿಯೊಂದನ್ನು ನೇಮಿಸಿ ಕಾಶ್ಮೀರದ ವಿಚಾರ ವಿವೇಚಿಸಲು [illegible]

ಪಾಕಿಸ್ಥಾನಕ್ಕೆ ಸಾಲ.

ಹೈದರಾಬಾದ್ ಸರಕಾರವು ಪಾಕಿಸ್ಥಾನ ಸರಕಾರಕ್ಕೆ [illegible] ಕೋಟಿ ರೂಪಾಯಿಗಳ ಸಾಲ ಕೊಟ್ಟಿರುವದಾಗಿ ಅಧಿಕೃತವಾಗಿ ತಿಳಿದುಬಂದಿದೆ. ಈ ಸಾಲವನ್ನು ಕೊಟ್ಟು ಹೈದರಾಬಾದು, ಹಿಂದೀಸರಕಾರದೊಡನೆ ಕೆಲವು ದಿನಗಳ ಹಿಂದೆ ಡೆಲ್ಲಿಯಲ್ಲಿ ಮಾಡಿದ "ಸ್ಟ್ಯಾಂಡ್ ಸ್ಟಿಲ್" ಒಪ್ಪಂದವನ್ನು ಮುರಿದಿದೆ. [illegible] ಹೈದರಾಬಾದು [illegible] ಇಂಡಿಯಾ [illegible] ಪಾಕಿಸ್ತಾನ [illegible] ಈ ಬೀತಿ [illegible] ಕೇಂದ್ರದ [illegible]

ಹಿಂದೂ ದೇಶ ಮತ್ತು ಪಾಕಿಸ್ತಾನ [illegible] ಕೊಡಲು [illegible] ಪಾಕಿಸ್ತಾನ [illegible] ಪರಿಹಾರ [illegible] ಕೊಟ್ಟು [illegible] ಪಾಕಿಸ್ತಾನ [illegible] ಹಣವನ್ನು [illegible] ಉಪಯೋಗಿಸ [illegible] ಗಿದು [illegible] ಇಂಡಿಯಾ [illegible]

ಸ್ಟರ್ಲಿಂಗ್ ಬಾಕಿ

ಕಳೆದ ಯುದ್ಧದ ಸಮಯದಲ್ಲಿ ಭಾರತವು ಬ್ರಿಟಿಷ ಸರಕಾರಕ್ಕೆ ಕೊಟ್ಟ [illegible] 'ಸ್ಟರ್ಲಿಂಗ್' [illegible] ಎಂದು [illegible] ಈ ಬಗ್ಗೆ ಹಿಂದೀ ಸರಕಾರಕ್ಕೆ [illegible] ಪೌಂಡುಗಳು ಬರಬೇಕು. [illegible] ಒಂದೇ [illegible] ಬ್ರಿಟಿಷ್ ಸರಕಾರಕ್ಕೆ [illegible] ಈ ಬಗ್ಗೆ [illegible] ಬಿಡಬೇಕಾದ [illegible] ಮಾತುಕತೆ ಇಂಗ್ಲೆಂಡಿನಲ್ಲಿ ನಡೆದು ಕಳೆದ ಆಗಸ್ಟ [illegible] ರಲ್ಲಿ ಡಿಸಂಬರ್ ಅಂತ್ಯದವರೆಗೆ [illegible] ಮಿಲಿಯ ಪೌಂಡುಗಳನ್ನು ಯಾವದೇ [illegible] ಭಾರತಕ್ಕೆ ಕೊಡುವಂತೆ ಆಗಿದೆ. [illegible] ಮಿಲಿಯ ಪೌಂಡನ್ನು ಕೊಡುವ ತೀರ್ಮಾನವಾಯಿತು. ಈ ತೀರ್ಮಾನದ ಅವಧಿ ಮುಗಿದಿದೆ. ಮುಂದಿನ ಏರ್ಪಾಡುಗಳನ್ನು ಮಾಡಲು ಸ್ಟರ್ಲಿಂಗ್ ಮಾತುಕತೆಯು ಡೆಲ್ಲಿಯಲ್ಲಿ ಪ್ರಾರಂಭವಾಗಿದೆ. ಇಂಗ್ಲಂಡಿನಿಂದ ನಿಯೋಗ ಒಂದು ಸರ್ ಜೆರ್‌ಮಿ ರೈಸ್‌ಮನ ಮುಂದಾಳ್ತನದಲ್ಲಿ ಬಂದಿದೆ. ಈ ಮಾತುಕತೆಯಲ್ಲಿ ಪಾಕಿಸ್ತಾನ ಸರಕಾರವು ಭಾಗ ವಹಿಸುವದಿಲ್ಲವೆಂದು ಹಿಂದೆ ನಿರ್ಣಯಿಸಿದ್ದರು. ಆದರೆ ಇತ್ತಲಾಗಿ ಅದರಲ್ಲಿ ಭಾಗವಹಿಸುವ ನಿರ್ಧಾರವನ್ನು ಅವರು ಮಾಡಿದ್ದಾರೆ

ದೇವಾಂಗದವರೂ, ಆಂಧ್ರ ದೇಶದಲ್ಲಿ
ನಡೆದ ಅವರ ಸಭಾಕಾರ್ಯವೂ,

ಅಂಶಗಳು ಎಲ್ಲಾ ದೇವಾಂಗ ಮಂಡಲಿಯವರಲ್ಲಿಯೂ ಸ್ಪಷ್ಟ ರವಾಗಿ ಅವರೆಲ್ಲರಿಗೂ ಸದ್ಬೋಧೆಯನ್ನುಂಟುಮಾಡಲೆಂದು ನಾವು ಆಶಿಸುತ್ತೇವೆ ಆ ಮಹಾಸಭೆಯಲ್ಲಿ ಉಕ್ತವಾದ ವಿಷಯಗಳು ಯಾವುವೆಂದರೆ.—(1) ದೇವಾಂಗ ಮತೀಯರಾದ ಪ್ರತಿ ಕುಟುಂಬದವರೂ ತಮ್ಮ ಬಾಲಕ ಬಾಲಕಿಯರನ್ನ 14 12 ವಯಸ್ಸಿನ ವರೆಗಾದರೂ ಓದಿಸಬೇಕು, (2) ಮುಂ ...ವ್ಯಾಸಂಗ ಮಾಡಿಸಲು ಅನನುಕೂಲವಾದವರಿಗೆ ...ಕವಾಗಿ ಸಹಾಯಗಳನ್ನು ಒದಗಿಸಬೇಕು ...ಕು ತಮ್ಮ ಕುಟುಂಬ ಸಂರಕ್ಷಣೆ ಮೇ...

NOTICE.

In the court of D M of Puttur,

Sh...
Subiaya
Pleader
filed ...
posted ...
Date ...
Pr...

ತಾ. ೨೩-೧-೧೯೪೮

ಕೊಡಗು

ತಾ ೨೩-೧-೧೯೪೮ನೇ ಶುಕ್ರವಾರ

ಪ್ರಾರ್ಥನಾಸಭೆಯಲ್ಲಿ ಬಾಂಬು.

ಗಾಂಧೀಜಿಯವರು ತಮ್ಮ 'ಅನಿಶ್ಚಿತ ಅವಧಿಯ' ಉಪವಾಸವನ್ನು ಕೇಂದ್ರ ಸರಕಾರದ ಮತ್ತು ಡೆಲ್ಲಿಯ ರಾಜಕೀಯ ವಂದಾಳುಗಳ ಭರವಸೆಯ ಮೇರೆ ನಿಲ್ಲಿಸಿರುವರು ಉಪವಾಸದ ಭೀಕರ ಪ್ರತಿಚ್ಛಾಯೆಯಿಂದ ತಳಮಳಗೊಂಡಿದ್ದ ಭಾರತೀಯರ ಮನಸ್ಸಿನಲ್ಲಿ ನೆಮ್ಮದಿಯುಂಟಾಯಿತು. 'ಜಗತ್ತು ದಾರಿತಪ್ಪಿ ನಡೆಯುವ ಕಾಲಕ್ಕೆ ಅದನ್ನು ತಿದ್ದಲು ನಾನು ಆಗಾಗ್ಗೆ ಜನ್ಮವೆತ್ತಿ ಬರುವನೆಂಬ ಗೀತೆಯಲ್ಲಿಯ ಭಗವದ್ವಾಣಿಯಂತೆ ಭಾರತೀಯರು ಕೋಮುವಾರು ಭಾವನೆಯ ಪರಾಗಿ ದಿಕ್ಕುಕಾಣದೆ ಅತ್ಯಾಚಾರದ ನಿರೆಯಲ್ಲಿ ದಾರಿತಪ್ಪಿದಾಗ ಅವರನ್ನು ಸರಿದಾರಿಗೆ ತರುವ ಮಹಾಜ್ಯೋತಿಯಾಗಿ ಮಹಾತ್ಮರ ಉಪವಾಸ ಪರಿಣಮಿಸಿದೆ ಕಲ್ಕತ್ತಾದಲ್ಲಿ ನೋಡಿದರೆ ನೋದರರ ಕೊಲೆಯುದ್ದ ನಡೆಯುತ್ತಿದ್ದ ಕಾಲಕ್ಕೆ ಮಹಾತ್ಮರು ಉಪವಾಸಮಾಡಿ ಪರಿಸ್ಥಿತಿಯನ್ನು ಹಿಡಿತಕ್ಕೆ ತಂದರು ಈಗ ಡೆಲ್ಲಿಯಲ್ಲಿ ಪ್ರತಿ ಹೃದಯದಲ್ಲಿ ಗುಪ್ತವಾಗಿ ಅಡಗಿರಬಹುದಾದ ಕೋಮುವಾರು ಪ್ರತೀಕಾರ ಭಾವನೆಯನ್ನು ಕಿತ್ತೊಗೆಯಲು ಉಪವಾಸಮಾಡಿ ಕೃತಕೃತ್ಯರಾದರು ಹಿಂದೂ, ಮುಸ್ಲಿಮ, ಸಿಕ್ಖರ, ಅವರು ಇವರೆಂಬ ಜಾತೀಯ ಭಾವನೆಯ ಅಜ್ಞಾನ ತಿಮಿರದಲ್ಲಿ ಮಹಾತ್ಮರ ಉಪವಾಸಗಳು ದೀವಿಗೆಗಳಂತೆ ಮಹಾತ್ಮರು ಮನಸ್ಸೆಯಾಗಿ ತೆಗೆದುಕೊಂಡ ಉಪವಾಸದಿಂದ ಅವರ ಪ್ರಕೃತಿ ಇನ್ನೂ ಸರಿಹೋಗಿಲ್ಲ ಪ್ರಾರ್ಥನಾ ಸಭೆಗಳಿಗೆ ಅವರನ್ನು ಎತ್ತಿಕೊಂಡು ಬರಬೇಕು ಅವರ ಮಾತು ಪದಡಿಗಿಂಥಾ ದೂರಕ್ಕೆ ಕೇಳವದಿಲ್ಲ ಇಂಥಾ ನಿರ್ಬಲಸ್ಥಿತಿಯಲ್ಲಿ ಅವರಿದ್ದರೆ

ತಾರೀಕು ೨೦ರ ಸಾಯಂಕಾಲ ಬಿರ್ಲಾಭವನದ ಆವರಣದಲ್ಲಿ ಪ್ರಾರ್ಥನಾ ಸಭೆ ನಡೆಯುತ್ತಿದ್ದಾಗ ಯಾರೋ ಒಬ್ಬರು ಮಹಾತ್ಮರ ಮೇಲೆ ನಾಡಬಾಂಬು ಪ್ರಯೋಗಿಸಿದರಂತೆ ಅದು ಮಹಾತ್ಮರಿಂದ ಸುಮಾರು ೧೫ ಗಜ ದೂರದಲ್ಲಿ ಬಿದ್ದು ಸಿಡಿಯಿತೆಂದೂ ಯಾರಿಗೂ ಅಪಾಯವಾಗಲಿಲ್ಲವೆಂದೂ ತಿಳಿಯುತ್ತದೆ ಈ ಸ್ಫೋಟನದ ಗುಡುಗಿಗೆ ಜನರು ಚಂಚಲರಾಗಿದ್ದರೂ ಮಹಾತ್ಮರು ಸಮಾಧಾನಗೊಳಿಸಿದರಂತೆ ಹಿಂದೆ ಗಾಂಧೀಜಿಯವರ ಹರಿಜನ ಪತ್ರಿಕೆ ದ್ವಾರ ನೀತಿಯನ್ನು ವಿರೋಧಿಸಿ ಒಬ್ಬನು ಪೂನಾದಲ್ಲಿ ಗಾಂಧೀಜಿಯವರ ಮೇಲೆ ಬಾಂಬು ಪ್ರಯೋಗಿಸಿದ್ದನು ಆ ಸಂದರ್ಭದಲ್ಲಿ ಮಹಾತ್ಮರು 'ನನ್ನಿಂದ ಏನಾದರೂ ಉಪಯೋಗವಿದೆಯೆಂದು ದೇವರು ತಿಳಿಯುವದಾದರೆ ಇನ್ನೂ ಅನೇಕ ವರ್ಷಗಳನ್ನು ಕರುಣಿಸುವನು' ಎಂದು ಹೇಳಿದ್ದರು ತಾರೀಕು ೨೦ರ ಬಾಂಬು ಪ್ರಕರಣದಲ್ಲಿ ನಿರಾಶ್ರಿತ ಯುವಕನೊಬ್ಬನು ಗಾಂಧೀಜಿಯವರ 'ಮುಸ್ಲಿಂ ಪಕ್ಷಪಾತಿ' ನೀತಿಯನ್ನು ವಿರೋಧಿಸಿ ಹೀಗೆ ಮಾಡಿದನೆಂದು ಗೊತ್ತಾಗಿದೆ ಆತನ ದಸ್ತಗಿರಿಯಾಗಿ ವಿಚಾರವಾಗುತ್ತಿದೆ

ಮಹಾತ್ಮರಂಥಾ ಸ್ಥಿತಪ್ರಜ್ಞರಿಗೆ ಹುಟ್ಟು, ಸಾವು ಎಲ್ಲವೂ ಒಂದೆ ಆದ್ದರಿಂದಲೇ 'ಮರಣವು ನನ್ನ ಅಮೂಲ್ಯ ಸಂಗಾತಿ' ಯೆಂದು ಅವರು ಹೇಳುತ್ತಾರೆ ಆದ್ದರಿಂದ ಗಾಂಧೀಜಿಯವರು ಸಾವಿಗೆ ಹೆದರರು ಕೋಮುವಾರು ಐಕ್ಯತೆಗಾಗಿ ಪ್ರಾಣಾರ್ಪಣೆ ಮಾಡಲು ಸಿದ್ಧರಾಗಿರುವ ಈ ಮಹಾ ವಿಭೂತಿಗೆ ಮರಣ ಭಯವೆಲ್ಲಿಯದು? ಆದರೆ ಮಹಾತ್ಮರು ಹಿಂದೂ ದೇಶದ ಹಿತಕ್ಕಾಗಿ, ಜಗತ್ತಿನ ಕಲ್ಯಾಣಕ್ಕಾಗಿ ಇನ್ನೂ ಬದುಕ ಬೇಕಿದೆ ಕೋಮುವಾರು ಐಕ್ಯತೆಗಾಗಿ ಎಲ್ಲರೂ ಮುಕ್ತ ಹೃದಯದಿಂದ ಶ್ರಮಿಸುವದಾದರೆ ೧೨೫ ಅಲ್ಲ, ೧೩೩ ವರ್ಷಗಳ ವರೆಗೆ ಬದುಕಿ ಜನ ಸೇವೆ ಮಾಡುವ ಇಚ್ಛೆ ತನಗಿರುವದಾಗಿ ಅವರು ವ್ಯಕ್ತಮಾಡಿರುವರು ಈ ಅಮೂಲ್ಯ ಜೀವವು ಭಾರತೀಯರೆಲ್ಲರ ಭಾಗ್ಯನಿಧಿ ಅಂಥಾದ್ದರ ಮೇಲೆ ಕೈಮಾಡಲೆಳಸುವದು ಮಾನವ ಕುಲಕ್ಕೆ ಅಹಿತ ಬಗೆದಂತೆ ಮಹಾತ್ಮರು ತಮ್ಮ ಆಶಯದಂತೆ ೧೩೩ ವರ್ಷ ಬದುಕಲಿ

ವರ್ತಮಾನ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ವಾರ್ಷಿಕೋತ್ಸವವು ಶ್ರೀ ಐವರ್ ಬಲ್ಲರವರ ಅಧ್ಯಕ್ಷತೆಯಲ್ಲಿ ತಾ ೩೧-೧-೪೮ರಲ್ಲಿ ನಡೆಯುವದು

ನಿರಾಶ್ರಿತರ ಸಹಾಯಾರ್ಥವಾಗಿ ಮಡಿಕೇರಿಯ ನಟ್ಟಕಲಾ ಸಭೆಯವರು ಮತ್ತು ಸಹಕಾರ ತರಬೇತು ಶಾಲೆಯ ವಿದ್ಯಾರ್ಥಿಗಳು ತಾ ೧೮-೧-೪೮ರಲ್ಲಿ ನಾಟಕಗಳನ್ನು ಅಭಿನಯಿಸಿದರು ಸಹಕಾರ ತರಬೇತು ಶಾಲೆಯ ವಿದ್ಯಾರ್ಥಿಗಳು ಸಂಗ್ರಹಿಸಿದ ರೂ ೩೭೦ರಲ್ಲಿ ಖರ್ಚು ರೂ ೭೫ ಕಳೆದು ಉಳಿದ ರೂ ೨೯೫ನ್ನು ಕೊಡಗು ನಿರಾಶ್ರಿತ ಸಮಿತಿಯವರಿಗೆ ಪಾವತಿ ಮಾಡಿರುವರಾಗಿ ವಾರ್ತೆ

ಅಖಿಲ ಭಾರತ ರೆಡ್ ಕ್ರಾಸ್ ಸಂಘದ ಆಶ್ರಯದಲ್ಲಿ ನಿರಾಶ್ರಿತರಿಗೆ ಬೇಕಾದ ಸಹಾಯಗಳನ್ನು ಒದಗಿಸಲು ಒಂದು ಕೇಂದ್ರ ಸಮಿತಿಯನ್ನು ರಚಿಸಿ ಕಾರ್ಯ ಕೈಕೊಳ್ಳಲು ತಾ ೨೭-೧-೪೮ರಲ್ಲಿ ಬೆಳಗೆ ೧೧ ಗಂಟೆಗೆ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯೊಂದು ಕೌನ್ಸಿಲ್ ಹಾಲ್‌ನಲ್ಲಿ ನಡೆಯುವದು

ಸೋಮವಾರಪೇಟೆ ಹೈಸ್ಕೂಲಿನ ಸ್ಕೂಲ್ ಫೈನಲ್ ತರಗತಿಯಲ್ಲಿದ್ದ ಎಲ್ಲಾ (೩೦) ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕೂರಲು ಅರಿಸಿರುವರಾಗಿ ತಿಳಿಯ ಬರುತ್ತದೆ

ತಾರೀಕು ೨೨-೧-೪೮ರಲ್ಲಿ ಶನಿವಾರ ಸಂಜೆ ಪೋಟಬಳಿಯ ಹರಿಜನರ ಸಭೆಯೊಂದು ಶ್ರೀ ಸಿ ಐ ಚೆಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಕೊಡ್ಲಿಪೇಟೆ ಬಳಿಯ ಹರಿಜನ ಕೇರಿಯಲ್ಲಿ ನಡೆದು ಉತ್ತಮ ಜೀವನ ಸಂಘವೊಂದನ್ನು ಸ್ಥಾಪಿಸಲು ತೀರ್ಮಾನಿಸಿ ಇದಕ್ಕೆ ಬೇಕಾದ ಏರ್ಪಾಡು ಮಾಡಲು ಒಂದು ಸಮಿತಿಯನ್ನು ನೇಮಿಸಲಾಯಿತು ಹರಿಜನೋದ್ಧಾರದ ಕುರಿತು ಶ್ರೀ ಗಳಾದ ಅಬ್...

...ಲ್ ಅಲೆಕ್ಸಾಂಡರ್ ಕುಲ ಸಹಾಯಕರಾದ ತ್ರಿಣ್ಣ ಹೆಚ್ ವಾದಪ್ಪ ಅವರ ಧ ಲ್ಲಪ್ಪ ಮತ್ತು ಚೆನ್ನಯ್ಯನವರೂ ಆದ ಷಣ ಮಾಡಿದರು

ಕೊಡಗು ಚೀಫ್ ಕಮಿಷನರವರು ತಾ. ೧೯ರಲ್ಲಿ ಮದ್ರಾಸಿಗೆ ಹೋಗಿರುವರು ತಾ ೨೬ರಲ್ಲಿ ವಾಪಸು ಬರಲಿರುವರು

ತಾ ೨೩-೧-೪೮ರಲ್ಲಿ ಮಡಿಕೇರಿ ವಿದ್ಯಾರ್ಥಿ ಕಾಂಗ್ರೆಸ್ಸಿನ ಸದಸ್ಯರೆಲ್ಲರೂ ಸೇರಿ ನೇತಾಜಿ ಸುಭಾಷಚಂದ್ರಬೋಸರವರ ಜಯಂತಿಯನ್ನು ನಡೆಸಿದರು ಬೆಳಿಗ್ಗೆ ಮೆರವಣಿಗೆಯನ್ನು ಮುಗಿಸಿ ಶಾಲೆಯ ಮೈದಾನದಲ್ಲಿ ಹೈಸ್ಕೂಲ್, ಸೈಂಟ್ ಮೈಕೆಲ್ ಹೈಸ್ಕೂಲ್ ಮತ್ತು ಕಾನ್ವೆಂಟಿನ ವಿದ್ಯಾರ್ಥಿಗಳು ಸಭೆ ಸೇರಿದ್ದರು ಸಭೆಯಲ್ಲಿ ಶ್ರೀ ಗಳಾದ ಬಿ ಎಸ್ ಕಶಾಲಪ್ಪ ಮತ್ತು ಆತ್ಮರಾಮ ಶೆಟ್ಟಿ ಬಿ ಎಂ ಸುಬ್ಬಯ್ಯ ಮತ್ತು ಎಂ ಎಂ ಗಣಪತಿ ಇವರುಗಳು ಬೋಸರ ಜೀವನ ಚರಿತ್ರೆಯನ್ನು ಕುರಿತು ಬಹು ಸ್ವಾರಸ್ಯವಾದ ಭಾಷಣ ಮಾಡಿದರು.

ವಾಷಿಂಗ್ಟನ್ನಿನಲ್ಲಿ ಮಹಾತ್ಮಾ ಗಾಂಧಿಯವರ ಪ್ರತಿಮೆ?

ಅಮೇರಿಕಾದ ವಾಷಿಂಗ್ಟನ್ನಿನಲ್ಲಿ ಮಹಾತ್ಮಾಗಾಂಧಿಯವರ ಪ್ರತಿಮೆಯೊಂದನ್ನು ನಿರ್ಮಿಸುವ ಬಗ್ಗೆ ಸಂಯುಕ್ತ ಸಂಸ್ಥಾನಗಳ ಪ್ರಜಾಪ್ರತಿನಿಧಿ ಸಭೆಯಲ್ಲಿ ಇಮಾನುಯಲ್ ಸೆಲ್ಲರ್ ರವರು ಒಂದು ಸೂಚನೆಯನ್ನು ಮಂಡಿಸಿರುವರು

ಅಮೇರಿಕದಲ್ಲಿ ಇಂಡಿಯಾ ಲೀಗಿನ ಅಧ್ಯಕ್ಷರಾದ ಜೆ ಜೆ ಸಿಂಗರವರು ಅಗತ್ಯ ಬಿದ್ದಲ್ಲಿ ಒಂದು ನಿಧಿಯನ್ನೂ ಸಹ ಸಂಗ್ರಹಿಸುವದಾಗಿ ಸೆಲ್ಲರ್‌ರವರಿಗೆ ತಿಳಿಸಿ ತಮ್ಮ ಸಹಕಾರವನ್ನು ವ್ಯಕ್ತಪಡಿಸಿದ್ದಾರೆ

ಪರಮಾಣು ಬಾಂಬಿಗಿಂತ ಮಿಗಿಲು.

'ಮಹಾತ್ಮರ ಉಪವಾಸದಿಂದ ದೊರೆತ ಜಯವು, ಉಪವಾಸ ಶಸ್ತ್ರವು ಪರಮಾಣು ಬಾಂಬಿಗಿಂಥಾ ಮಿಗಿಲೆಂಬುದನ್ನು ತೋರಿಸುತ್ತದೆ' ಎಂದು ಲಂಡನಿನ 'ನ್ಯೂಸ್ ಕ್ರಾನಿಕಲ್' ಪತ್ರಿಕೆ ಬರೆದಿದೆ 'ಹಿಂದೂದೇಶ ಮತ್ತು ಪಾಕಿಸ್ತಾನದ ಸಂಬಂಧದಲ್ಲಿ ಬಿಸಿ ಏರುತ್ತಿದ್ದ ಸಮಯಕ್ಕೆ ಜನತೆಯನ್ನು ನಿಲ್ಲಿಸಿ ಶಾಂತ ಉಸಿರಾಡಿ ಆಲೋಚಿಸುವ ಅನುವನ್ನು ಈ ಉಪವಾಸ ಮಾಡಿತು ಪಂಡಿತ ಜವಾಹರರಂಥಾ ಒಗ್ಗಟ್ಟು ಪ್ರಸಿದ್ಧ ರಾಜನೀತಿಜ್ಞರಿಗಳು ಮಹಾತ್ಮರ ಶಕ್ತಿ ಜ್ಯೋತಿಯಿಂದ ತಮ್ಮ ಚೇತನವನ್ನು ಪಡೆಯುತ್ತಾರೆ' ಎಂದೂ ಆ ಪತ್ರಿಕೆ ಹೇಳಿದೆ

ಸುಭಾಷ್ ಚಂದ್ರಬೋಸರ ೫೧ನೇ ಜನ್ಮದಿನ.

ಇದೇ ಜನವರಿ ೨೩ಕ್ಕೆ ಸುಭಾಷ್ ಬೋಸರ ೫೧ನೇ ಜನ್ಮದಿನ ಅದರ ಗೌರವಾರ್ಥವಾಗಿ ಒಂದು ವಸ್ತು ಪ್ರದರ್ಶನದ ಏರ್ಪಾಟಾಗಿದೆ ಅದರಲ್ಲಿ ಬೋಸರು ಹು...

...ಡುಗರಾಗಿದ್ದಾಗ ತಮ್ಮ ತಾಯಿಗೆ ಬರೆದ ಪತ್ರಗಳು ರಚಿಸಿದ ಹಾಡುಗಳು, ೧೯೩೭ರಲ್ಲಿ ಅವರು ಬರೆಯಲಾರಂಭಿಸಿದ ಚಿತ್ತರಂಜನ ದಾಸರ ಜೀವನಚರಿತ್ರೆ, ಅವರಿಗೆ ಪರದೇಶದಿಂದ ಬಂದಿರುವ ಬಹುಮಾನಗಳು ಇವು ಪ್ರದರ್ಶಿಸಲ್ಪಡುವುವು

ಭಾಬಾರವರ ರಾಜಿನಾಮೆ?

ಭಾರತ ಮಂತ್ರಿ ಮಂಡಲದ ಸಚಿವರಾದ ಶ್ರೀ ಭಾಬಾರವರು ಜನವರಿ ೩೧ರಿಂದ ತನ್ನ ಕೆಲಸದಿಂದ ನಿವೃತ್ತರಾಗಬೇಕೆಂದು ಆಶಿಸಿದ್ದಾರೆಂದು ನಂಬಲರ್ಹವಾದ ಕಡೆಗಳಿಂದ ತಿಳಿದು ಬಂದಿದೆ ಶ್ರೀ ಭಾಬಾರವರು ಮಂತ್ರಿಮಂಡಳದಲ್ಲಿ ಅತ್ಯಂತ ಚಿಕ್ಕ ವಯಸ್ಸಿನವರು ಅವರ ಉತ್ಸಾಹ ಮತ್ತು ಸಂಘಟನಾ ಶಕ್ತಿಯ ಪರಿಚಯವು ಅವರು ಡೆಲ್ಲಿ ಎಮರ್ಜನ್ಸಿ ಸಮಿತಿಯ ಅಧ್ಯಕ್ಷರಾಗಿದ್ದಾಗ ಜನತೆಗೆ ಬಹು ಮಟ್ಟಿಗೆ ಆಯಿತು ಅವರ ರಾಜಿನಾಮೆಯನ್ನು ವಾಪಾಸು ತೆಗೆದುಕೊಳ್ಳುವಂತೆ ಸರ್ದಾರ್ ಪಟೇಲ್, ನೆಹರೂ ಮುಂತಾದವರು ಶ್ರೀ ಭಾಬಾರವರನ್ನು ಒತ್ತಾಯಪಡಿಸಬಹುದೆಂದು ಊಹಿಸಲಾಗಿದೆ

ಕರ್ನಾಟಕದ ಏಕೀಕರಣದ ಬಗ್ಗೆ ಗಾಂಧೀಜಿಯವರು.

ಕರ್ನಾಟಕದ ಏಕೀಕರಣದ ಬಗ್ಗೆ ಬೆಳಗಾವಿಯ ಪ್ರಸಿದ್ಧ ಕಾಂಗ್ರೆಸ್ ನಾಯಕರಾದ ಶ್ರೀ ಗಂಗಾಧರರಾವ್ ದೇಶಪಾಂಡೆಯವರು ಗಾಂಧೀಜಿಯವರಿಗೆ ಪತ್ರ ಬರೆದು ಇತ್ತೀಚೆಗೆ ಪಂಡಿತ ನೆಹರೂರವರು ಕರ್ನಾಟಕದ ಬಗ್ಗೆ ಕೊಟ್ಟ ಹೇಳಿಕೆಯನ್ನು ನಿಷೇಧ ವ್ಯಕ್ತಪಡಿಸಿದ್ದರು

ಕರ್ನಾಟಕಕ್ಕೆ ತನ್ನ ಒಪ್ಪಿಗೆ ಇದೆಯೆಂದೂ, ಆಯಾ ಪ್ರಾಂತ್ಯಗಳು ತಮ್ಮ ತಮ್ಮಲ್ಲಿಯೇ ಪರಿಹಾರಗಳನ್ನು ಒಪ್ಪಿಕೊಂಡು ಕೇಂದ್ರ ಸರಕಾರಕ್ಕೆ ತಿಳಿಸಿದರೆ ಆಗ ಮತ್ತೆ ಕಾದದೆ ಇರುವುದಿಲ್ಲವೆಂದೂ ಗಾಂಧೀಜಿ ಉತ್ತರ ಕೊಟ್ಟಿರುವರು

ಮೌಲನಾ ಅಬ್ದುಲ್ ಕಲಾಂ ಅಜಾದರು ಲಂಡನ್ನಿಗೆ.

ಭಾರತ ಸರ್ಕಾರದ ವಿದ್ಯಾ ಮಂತ್ರಿಗಳಾದ ಮೌಲಾನಾ ಅಬ್ದುಲ್‌ಕಲಾಂ ಆಜಾದರ ಮುಂದಿನ ತಿಂಗಳು ಲಂಡನ್ನಿಗೆ ಹೋಗುವರೆಂದು ತಿಳಿದು ಬಂದಿದೆ ಇಲ್ಲಿನ ಇಂಡಿಯಾ ಆಫೀಸಿನಲ್ಲಿರುವ ಬರಹ ಕಲಾ ಸಂಪತ್ತು ಮತ್ತು ದಾಖಲೆ ಮುಖ್ಯವಸ್ತುಗಳ ಮತ್ತು ಹಳೆಯ ಪತ್ರಗಳ ಪರಿಶೀಲನಾರ್ಥವಾಗಿ ಅಲ್ಲಿಗೆ ಹೋಗುವರೆಂದು ಗೊತ್ತಾಗಿದೆ

ಹಿಮಾಲಯ ಪ್ರಾಂತ್ಯರಚನೆ!

ಸಿಮ್ಲಾದ ಬಳಿ ಬರಾಗಾಂವ್ ಎಂಬಲ್ಲಿ ಸಭೆ ಸೇರಿದ ಹಿಮಾಲಯ ಪ್ರಾಂತ್ಯದ ಜನರು ಸರಮೂಲ ಎಂಬಲ್ಲಿಂದ ಟಿಬೆಟ್ ಗಡಿವರೆಗೆ ಹಿಮಾಲಯ ಪ್ರಾಂತವೊಂದು ಪ್ರತ್ಯೇಕ ಪ್ರಾಂತ್ಯವಾಗಬೇಕೆಂದೂ ಮೇಲಿನ ಪ್ರಾಂತ್ಯವು ಭೌಗೋಳಿಕ ಸಾಂಸ್ಕೃತಿಕ ಹಾಗೂ ಭಾಷೈಕ ದೃಷ್ಟಿಯಿಂದ ಅಖಂಡವಿರುವುದೆಂದೂ ಠರಾವು ನಿರ್ಣಯ ಮಾಡಿದರು.

[illegible] ಎಂಬ ಮುಂತಾದ ವಿಷಯಗಳನ್ನು ಡ[illegible]ಗಿ ಸಂಬುಕೀ[illegible] ಇಂಥಾ ಪತ್ರಿ[illegible] ಚಂದಾ ಪತ್ರ[illegible] ಪ್ರಕಟಿಸುವು[illegible] ಚಂದಾ ಕೊಟ್ಟ[illegible] ರೀತಿಯಲ್ಲಿ ಉಪ[illegible] ಯುವುದರಿಂದಲೇ [illegible] ವಶವಾಗ್ಯಾದು [illegible]ಯಾಗುವವರೆಗೆ [illegible]ಮವಾದ್ದ[illegible]

ಮದ್ರಾಸಿಗೆ ಸೇರಿಸಿದ ಪಕ್ಷದಲ್ಲಿ ನಮ್ಮ ದೇಶವು ಹೀಗಿ[illegible]ಕ್ಕಿಂತ ಹೆಚ್ಚಿನ ಅಭಿವೃದ್ಧಿಯಲ್ಲೂ ಸ್ವರಾಜ್ಯದ [illegible] ಇರುವುದಲ್ಲದೆ ಪರದೇಶದಿಂದ ಓದಿಬರುವ ನಮ್ಮ[illegible]ಗೂ ಸಹ ಅನೇಕ ವಿಧದಲ್ಲಿ ಈ ಕಾಲೇಜಿನಲ್ಲಿ [illegible]ಕ್ಕಿಂತಲೂ ಹೆಚ್ಚಿನ ಪ್ರಯೋಜನಗ[illegible] ಯಾವ ಸಂದೇಹವೂ ಇಲ್ಲವೆಂ[illegible] ತ್ತೇನೆ. [illegible]ಗ ಸದ್ದ[illegible] ಯರ ಕಾಲೇ[illegible] [illegible]

[illegible]

"ವಿರಸವೆ ಮ[illegible] ಸಮರಸವೆ ಜೀವನ."

ಲೇ:— ಬಿ. ಡಿ. ಗಣಪತಿ

ರಾಷ್ಟ್ರಗಳ ಇತಿಹಾಸದಲ್ಲಿ 'ರಾಜಕೀಯ'ವೆಂಬುದು ರಣಗರ್ಜನೆಯಂತೆ ಇದು ಜಗಳಕ್ಕೆ ನೆಪವಾಗಿದೆ. ಧರ್ಮ, ಜಾತಿ, ಮತ, ಮೊದಲಾದ ಹೆಸರಿನಿಂದ ರಕ್ತ ಸುರಿಸಿದ ಜಗಳಗಳಂತೆ ಮಾನವ ಪ್ರಾಣಿಯು ಬಡಿದಾಟಕ್ಕೆ ಹೊಸ ಕಾರಣ ಹುಡುಕಿ 'ರಾಜಕೀಯ' ಧ್ವಜವೆತ್ತಿರುವನು. ಜರ್ಮನಿಯ 'ಆರ್ಯಜನಾಂಗ' ವಿಚಾರವೂ, ಪಾಶ್ಚಿಮಾತ್ಯರ 'ಕಪ್ಪು ಬಿಳಿ' ನೀತಿಯೂ, ಭರತಖಂಡದ ಹಿಂದೂ ಮುಸ್ಲಿಮರ ಎಳೆದಾಟ ಜಗ್ಗಾಟವೂ, ಇತ್ತಲಾಗಿ ಪ್ರಾಂತಪ್ರಾಂತಗಳಲ್ಲಿ ಹಬ್ಬಿರುವ ಸಂಸ್ಕೃತಿ, ಭಾಷೆ, ಮೊದಲಾದ ಸೋಂಕುರೋಗವೂ ರಾಜಕೀಯದ ರಂಗಿನ [illegible] ಈ ಸೋಂಕುರೋಗಕ್ಕೆ [illegible]ಕ್ಕದೆ ಇಲ್ಲಿ [illegible] ಇದರಿಂದಾಗಿ ನೂರಾರು ವರ್ಷಗಳಿಂದ ಸಹವಾಸ ಸಂಪರ್ಕ, ಸೋಲು ಗೆಲವು, ದುಃಖ ಆನಂದಗಳಲ್ಲಿ ಏಕಾಭಿಪ್ರಾಯದಿಂದ ಹಿತವಾಗಿ ಬದುಕಿ ಬಾಳಿದ ಜನ ಜೀವನ ಪ್ರವಾಹಕ್ಕೆ ಅಡೆತಡೆಗಳು [illegible] ದವರ, ಇವರ [illegible] ಬ್ರಾಹ್ಮಣರು [illegible] ಏಕವಾಗಿದ್ದ [illegible] ಒಳಯ ಮನೋಹರವಾಗಿ ನೇಯಲ್ಪಟ್ಟ ಎಳೆಗಳನ್ನು ನೂರಾರಾಗಿ ಬೇರ್ಪಡಿಸಲಾಗುತ್ತಿದೆ. ಇದ್ದ ಒಕ್ಕಟ್ಟನ್ನು ಬಿಕ್ಕಟ್ಟಾಗಿ ಮಾಡಲು ಆಯಾಗೀಯವರೆಂಬ ಪೌರಾಣಿಕ ಕಂತೆ, ಕೆಲವು ನೆಟ್ಟಿನವರೆಂಬ ಚಾರಿತ್ರಿಕ ಬೊಂತೆಗಳನ್ನು ಬಿಚ್ಚಿ ತೊಡಗಿದ್ದಾರೆ. ನಿಜಗುಣಯೋಗಿಗಳು ತಮ್ಮ 'ವಿವೇಕ ಚಿಂತಾಮಣಿ'ಯಲ್ಲಿ 'ಕೆಲವರು ಸಿದ್ಧಪುರುಷರಂ, ಕೆಲವರು ಪತಿವ್ರತೆಯರಂ, ಕೆಲವರು ನಾಗರೀಕರಂ, ಕೆಲವರು ದಯಾಳುಗಳಂ, ಕೆಲವರು ಅರಣ್ಯಕರಂ' ಎಂದು ವರ್ಣಿಸಿರುವಂತೆ ರಾಜಕೀಯ ರಂಗದಲ್ಲಿಯ ವ್ಯಕ್ತಿಗಳ ಚಿತ್ರಗಳನ್ನು ಪರಸ್ಪರರು ಮಾಡುತ್ತಿದ್ದಾರೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಬಿನ್ನಮತದವರಾಗಿ, ಭಿನ್ನ ವರ್ಣದವರಾಗಿ, ಭಿನ್ನ ಭಿನ್ನ ಕುಲಜಾತಿಯವರಾಗಿ ಲೆಕ್ಕಿಸಲ್ಪಡುತ್ತಿದ್ದ ಭಾರತೀಯರು ಒಂದಾಗುವರೆಂದು ಭಾವಿಸಲಾಗಿತ್ತು. ಆದರೆ ಸ್ವಾತಂತ್ರ್ಯದ ಉದಯದೊಂದಿಗೆ ಜಾಗ್ರತವಾದ ಮಾನವನ ಸ್ವಾರ್ಥವು ರಾಜಕೀಯ ಮಂತ್ರತಂತ್ರಗಳ ಸಹಾಯದಿಂದ ಹೃದಯ ಹೃದಯಗಳನ್ನು ದೂರವಾಡುತ್ತಿದೆ. ಏಕ್ಯತೆ, ಭ್ರಾತೃಭಾವಗಳನ್ನು ಲೋಪವಾಡುತ್ತಿದೆ.

'ವಾರಾಂಗನೇವ ನೃಪನೀತಿರನೇಕರೂಪಾ' ಎಂಬ ಮಾತು ಅಕ್ಷರಶಃ ನಿಜ. ರಾಜಕೀಯವು ಒಬ್ಬ ವೇಶ್ಯೆಯಂತೆ, ವೇಶ್ಯೆಯ ತುಟಿಯ ತುದಿಗಿರುವ ಮಾತು, ಗಲ್ಲದ ಮೇಲಿರುವ ನಗೆ, ಕಣ್ಣ ಒಳಗಿರುವ ಪ್ರೀತಿ ಇವು ಅದಕ್ಕೂ ಒಳಗಿರುವವೆಂದು ತಿಳಿಯುವದು ಎಷ್ಟು ಮೂಢತನವೋ ಅದೇ ರೀತಿ ರಾಜಕೀಯ ವೇದಿಕೆಯಲ್ಲಿ ನಿಂತು ಬಡವರಿಗಾಗಿ ಕನಿಕರಪಡುವ, ಸೇವೆ ಮಾಡ ಬಯಸುವ, ದೈತನ ಜೀವನದಲ್ಲಿ ಬೆಳಕು ಚೆಲ್ಲುವೆವೆನ್ನುವ ಬಹುತೇಕ ರಾಜನೀತಿಜ್ಞರ ಮಾತುಗಳಿಗೆ ಬೆಲೆ ಕಟ್ಟುವದೂ ಮೂರ್ಖತೆ. ಇಂದಿನ ರಾಜಕೀಯದಲ್ಲಿ ಎಲ್ಲವೂ ಆಡಂಬರ [illegible] ಅರ್ಥವಾಗದ ಭಾಷಣ, ಭಂಗಿಗಳು, ದೇಶಸೇವಕನ ವೇಶಭೂಷಣದ ಸೋಗು ಸೊಗಸುಗಳು, ಎಲ್ಲರಿಗಿಂಥಾ ನಾನೇ ಹಿರಿಯ ರಾಜಕೀಯಪಟು, ನನ್ನಿಂದಲೇ ದೇಶದ ಉದ್ಧಾರವೆನ್ನುವ ಆತ್ಮಲಂಪಟತನ ಇಂಥಾ ಆರಾಧನೆಯಿಂದ ರಾಜಕೀಯ ವೇಶ್ಯೆಯು ಹದಗೆಟ್ಟು ಬೀದಿಯಲ್ಲಿ ನಗ್ನನೃತ್ಯ ಕೈಕೊಂಡಿದ್ದಾಳೆ. [illegible] ಜರ್ಮನಿ ಹಿಂದೆ ಪ್ರಪಂಚದ ರಂಗಭೂಮಿಯಲ್ಲಿ ರಾಜನೀತಿಯನ್ನು ತನ್ನ ಕೈಗೊಂಬೆಯಾಗಿ ಕುಣಿಸುತ್ತಿದ್ದನು. ಇಂದು ರಾಜನೀತಿಯು ಕೆಲವರ ಕೈಗೊಂಬೆಯಾಗಿದೆ [illegible] ಶರೀರ ಬಲವಿರುವವನು ಯಾವ ರೀತಿ ಶಾಶ್ವತವಾಗಿ ಬಲ್ಲವಿದ್ದರೂ ಕ್ಷಣಕಾಲ ಕಾಮಿನಿಯನ್ನು ತನ್ನ ಮಾತಿನಂತೆ ಕುಣಿಸಬಲ್ಲನೋ ಅದೇ ರೀತಿ ಮಾತು ತಿಳಿದವರು, ಬುದ್ಧಿನ ಬಲವಿದ್ದವರ, ಕೆಲಕಾಲ ರಾಜಕೀಯ ರಂಗದಲ್ಲೂ ಮೆರೆಯುವರು. ಆದರೆ ಆ ಕ್ಷಣಿಕಾಲವೂ [illegible] ಹಳ್ಳಿನ ಬೇಕಿಯಿಂದ ಯಾವ ರೀತಿಯಲ್ಲಿ ಆಡಿಗ ಆಸ [illegible] ಅದೇ ರೀತಿ ಈ ಆಡಂಬರದ ರಾಜಕಾರಣಿಗಳಿಂದ ಜನಸೇವೆಯಾಗದ ಬದಲು ರಾಜಕೀಯವು ಹದಗೆಟ್ಟು, ಸ್ವೈರ ಸಮಾಜೋದ್ಧಾರಕರು ಹೇಸಿ ಹೊರಗೆ ನಿಲ್ಲಬೇಕಾಗುತ್ತದೆ. ವೇಶ್ಯೆಯಾಗಿರುವ ರಾಜಕೀಯದ ಸಂಗ ಬೇಡವೆಂದು ರಾಜನೀತಿಯನ್ನು ರವೀಂದ್ರನಾಥರು ತ್ಯಜಿಸಿದರು. 'ಉದ್ಧರೇದಾತ್ಮನಾತ್ಮಾನಂ' ಎಂಬನ್ನುವ ಅರವಿಂದ ಮಹಾಯೋಗಿಗಳು [illegible] ಸ್ವೀಕರಿಸಿಯು. ಗರತಿಯಾಗಿ ಬರುವವರೆಗೆ ಅವಳ ಮುಖಾವಲೋಕನ ಮಾಡುವದಿಲ್ಲವೆಂದು ಪಾಂಡಿಚೆರಿಯಲ್ಲಿ ಆಶ್ರಮವಾಸಿಗಳಾದರು. ಪತಿತೋದ್ಧಾರ ಪ್ರಿಯರಾದ ಮಹಾತ್ಮಾಗಾಂಧೀಜಿಯವರು ರಾಜಕೀಯ ಹಾದರದ ಕಳಂಕವನ್ನು ತೊಳೆಯಬೇಕೆಂದು ಕಂಕಣಬದ್ಧರಾಗಿ ಪ್ರಯತ್ನಿಸುತ್ತಿರುವರು. ನೂರಾರು ಭಾಗಿಲುಗಳಿಂದ ಸ ವಿರಾಮ ಸಂಪ್ರಾಯಲ್ಲಿ ವಿರಪ್ಪರುಷರು ರಾಜಕೀಯ ವೃಶ್ಯೆಯ ಮನೆಗೆ ನುಗ್ಗುತ್ತಿರಲು, ಅವಳನ್ನು ಸ್ತುತಿಸಿ, ಆರಾಧಿಸುತ್ತಿರಲು ಮಹಾತ್ಮರೊಬ್ಬರೇ ಕೆಲವು ಜನರು ಯಾವ ಬಾಗಿಲನ್ನು ತಡೆಯುವರು? ರಾಜಕೀಯ ವೇಶ್ಯಾಗೃಹದಲ್ಲಿ ಎಷ್ಟು ರಂಗಿನ ಜನರು! ಅಧಿಕಾರದ ಆಶೆಯಿಂದ ಪ್ರೇತ ಘಕ್ರಿಯುಡಿ ಸೇರಲು ಬಂದವರು ಕೆಲರಾದರೆ, ದ್ವಾರಿರುವಾಲಿನ ಆಶೆಯಿಂದ ತಲೆಹಿಡಿದು ಕೊಡಲು ಬಂದವರು ಕೆಲವರು! ದುಡ್ಡುಳ್ಳವರಿಗೆ ದೊಡ್ಡಸ್ತನ ಸಿಗಬೇಕೆಂದು ಕಿವಿಮಾತಾಡುವವರು ಕೆಲವರಾದರೆ, ಸಾವಿರಮಂದಿ ಅಂದದ್ದೇ ಸತ್ಯವೆಂದು ಸಾಧಿಸುವವರು ಕೆಲವರು

ಮಂಡೆ ಬೋಳಿ ನರೆ ಒಬ್ಬನು ಧಾರ್ಮಿಕನಾಗನು. [illegible] ಬಟ್ಟೆಯನ್ನೂ ಬೂದಿಬಡಕ ಸ್ವಯನ್ನೂ ಕಂಡು ಕಾಮವಿಕಾರಗಳು ಹೇಗೆ ಓಡಿಹೋಗವೋ ಅದೇ ರೀತಿ ಖಾದಿ ಒಟ್ಟಿ ಧರಿಸಿದ ಮಾತ್ರಕ್ಕೆ ಸ್ವಾರ್ಥಕ ತೊಲಗದು. ಸಭೆಯಲ್ಲಿ ನಿಂತು ಭಾಷಣ ಮಾಡಿದಾಕ್ಷಣಕ್ಕೆ ದೇಶಸೇವಕನಾಗಲಾರನು. ಎಲ್ಲಿಯವರೆಗೆ ಜೀವ ಸ್ವಾರ್ಥತೆಯ, ಅಧಿಕಾರ ಲಾಲಸೆಯ ಪಂಜರದಲ್ಲಿ ಗಿಳಿಯಾಗಿರುವದೂ ಅಂದಿನ ವರೆಗೆ [illegible] ವೇಶವೆಂದು ದುರ್ಭಾಗ್ಯರ ಹೃದಯವು ಧನಪ್ರಿಯ ಮನೆಯಲ್ಲಿ ಜೀತದಾಳಾಗಿರುವಾಗ ತ್ಯಾಗ, ಜನಸೇವೆ, ದೇಶಸೇವೆಗಳೆಂಬ ಡೊಂಬರಾಟದ ಫಲವೇನು? ಬಡವರು ಊಟವಾಡಲೆಂದು ತಾನು ಉಪವಾಸಿಯಾಗಿರುವವನು ಪುಣ್ಯವನ್ನು ಗಳಿಸುವನೋ ನಿಜ, ಆದರೆ ಪಾರಣೆಯ ಕಾಲಕ್ಕೆ ಪಕ್ವಾನ್ನವನ್ನುಣಬೇಕೆಂದು ಧರಣೆ ಮಾಡುವ ಉಪವಾಸಿಯು ಯಾವ ಪುಣ್ಯ ಗಳಿಸುವನೋ ತಿಳಿಯದು. ಅದರಂತೆ ಅಧಿಕಾರದ ಕಡೆಗೆ, ಸ್ವಾರ್ಥತೆಯ ಕಡೆಗೆ [illegible] ಜನಸೇವಾನಿರತರ ಸ್ಥಿತಿ [illegible] ಇರುವುದು

'The true test of civilisation is the capacity to mingle with all people' ನಾಗರೀಕತೆಯ ನಿಜವಾದ ಪರೀಕ್ಷೆಯೇ ಎಲ್ಲಾ ಜನರೊಡನೆಯೂ ಸಮರಸಜೀವನವೆಂದು ಸರ ರಾಧಾಕೃಷ್ಣನ್‌ರವರು ಹೇಳಿದ್ದಾರೆ. ಒಳ್ಳೆಯ ಮನಸ್ಸಿನಿಂದ ಒಂದುಗೂಡಿರುವದೇ ದರ್ಮ. ಒಳ್ಳೆಯ ಮನಸ್ಸಿನಿಂದ ಹೊಂದಿಕೊಂಡಿರುವದೇ ಬಾಳುವವರ ಲಕ್ಷಣ. ಹೊಂದಿಕೊಂಡಿರುವ ಬುದ್ಧಿಯು ಕಡಿಮೆಯಾಗಿ ತಾ ಹಾಳಾಗುವ ಹಾದಿ ಸಮೀಪಿಸಿತೆಂದು ತಿಳಿಯಬೇಕು.

ಒಡಕ ಉಂಟಾದ ಮೇಲೆ ಒಡೆದು ಪುಡಿಯಾಗಲು ತಡವಾಗದು. ಎಂಥಾ ಬಿಗಿದ ಕಟ್ಟು, ಕಡಿದಾಟದಲ್ಲಿಯೂ, ಆದಲು ಒದಲಿನಲ್ಲಿಯೂ ತಾವು ಹೊಂದುಗೂಡಿ ಒಂದಾಗಿರಬೇಕೆಂಬ ಬುದ್ಧಿಯೊಂದು ನಮ್ಮಲ್ಲಿ ನೆಲೆಗೊಂಡಿದ್ದರೆ ನಾವು ಉಳಿಯುವೆವು. ನಮ್ಮ ದೇಶವೂ ಉಳಿಯುವದು. ಈ ಏಕತೆಯ ತತ್ವವನ್ನು ಅಂದು ಶ್ರೀರಾಮಕೃಷ್ಣರು, ಸಾರಿದರು. ಬಸವೇಶ್ವರ, ವಿದ್ಯಾರಣ್ಯರೂ ಈ ಸಂದೇಶವನ್ನೇ ಘೋಷಿಸಿದರು. ಇಂದು ಮಹಾತ್ಮಾಗಾಂಧೀಜಿಯವರು ಅದನ್ನೇ ಸಾರುತ್ತಿದ್ದಾರೆ. ಒಂದೇ ಬುದ್ಧಿಯಿದ್ದ ಪಾಂಡವರು ಐದೇ ಜನವಾದರೂ ಗೆಲ್ಲಲಿಲ್ಲವೇ? ತಲೆಗೊಂದು ಬುದ್ಧಿಯ ಕೌರವರು ನೂರಾರು ಮಂದಿ ಇದ್ದರೂ ಸಾಯಲಿಲ್ಲವೇ? ಆದ್ದರಿಂದ ಐಕ್ಯತೆಗಾಗಿ ಹೆಣಗುವವರೇ ದರ್ಮವಂತರು. ಐಕ್ಯತೆಯು ಮಾರ್ಗವೇ ಧರ್ಮದ ಹಾದಿ, ಬಲದ ಹಾದಿ, ಶುಭಮಂಗಳದ ಹಾದಿ, ಶಾಂತಿ ತುಷ್ಟಿ ಪುಷ್ಟಿಗಳ ಹಾದಿ.

ಐಕ್ಯತೆ 'ಇರಬೇಕು' ಎಂದಾಗ ಅಜ್ಞಾನ ದಾರ್ಬಲ್ಯಗಳ ಮೂಲಕ ಕುರಿಹಿಂಡಿನಂತೆ ಹೊಂದಿಕೊಂಡಿರುವದಲ್ಲ. ಇಲ್ಲವೇ ಬಲಿಷ್ಠರಾದ ಪರರ ಒತ್ತಾಯಕ್ಕೆ ಹೊಂದಿಕೊಂಡು ಒತ್ತಟ್ಟಿಗಿರುವದೂ ಅಥರ್ವ ಜೀವನ. ಧನಮದದಿಂದಾಗಲೀ, ಅಧಿಕಾರಮದದಿಂದಾಗಲೀ, ಸ್ವಾರ್ಥತೆಯಿಂದಾಗಲೀ ಇಲ್ಲವೇ ತಮ್ಮ ಪಕ್ಷ ರಾಜಕೀಯದ ಮಬ್ಬಿನಲ್ಲಾಗಲೀ ಮುಂದಾಳುಗಳು ತಮ್ಮ ಪೌರುಷದ ಜಂಭದಲ್ಲಿ, ಇಲ್ಲವೇ ಅಹಂಕಾರದ ದರ್ಪದಲ್ಲಿ ಜನರನ್ನು ಲೆಕ್ಕಿಸದೆ ತಮ್ಮೊಡನೇ ಹೊಂದಿಕೊಂಡಿರಬೇಕೆಂದು ಬಲಾತ್ಕಾರ ಮಾಡಿದರೆ ಸತ್ವಶೀಲರಾದವರು ತಮ್ಮ ಸತ್ವಬಲದಿಂದ ಅವರನ್ನು ಎದುರಿಸಬೇಕಾಗುತ್ತದೆ. ಈ ಎದುರಾಟ ವೈಮನಸ್ಸಿನಿಂದಲ್ಲ. ಬದಲು ತತ್ವದ ದೃಷ್ಟಿಯಿಂದ. ಇಂಥಾ ಸ್ವತಂತ್ರ ವಿಚಾರ ಮಾಡುವದು ಸುಲಭವಲ್ಲ. ನಮ್ಮ ಬುದ್ಧಿಯು ನಮ್ಮ ಹಿಡಿತದಲ್ಲಿದ್ದರೆ ಮಾತ್ರ ಇದು ಸಾಧ್ಯ. ಸೂತ್ರವು ತುಂಡಾಗಿ ಹತ್ತು ದಿಕ್ಕಿಗೆ ಚದುರಿಬಿದ್ದ ಮಣಿಗಣದಂತೆ ಇಹದೋ ಅಲ್ಲಿಯ ಎಂಬ ಶಂಕೆಯಲ್ಲಿ ಅನೇಕ ವಿಚಾರಗಳು ತಳೆದೋರಿದರೂ ಅವುಗಳನ್ನು ಪೋಣಿಸುವ ಎಳೆಯೇ ಒಡೆಯುವದು ಕಷ್ಟವಾಗುವುದು. ಅಂಥಾ ಸಮಯದಲ್ಲಿ ವಿಚಾರ ಸ್ವಾತಂತ್ರ್ಯವಿಲ್ಲದಿದ್ದರೆ ನಮ್ಮ ವ್ಯಕ್ತಿತ್ವ ನಾಶವಾಗುತ್ತದೆ. ಇತರರ ಹೇಳಿಕೆಗೆ, ಧನಕ್ಕೆ, ಆಶೆಗೆ ಮರುಳಾಗುತ್ತೇವೆ. ಹೀಗೆ ಮಾಡಿದರೆ ಸ್ವತಂತ್ರ ವಿಚಾರವೆಂಬ ರತ್ನನಿಧಿಯಾದ ರತ್ನಾಕರನನ್ನು ಚಿನಿವಾರರ ಜೊಕ್ಕಸದ ನಗವಾಗಿ ಮಾಡಿದಂತೆ!

ದೇಶಕ್ಕೆ ಸ್ವಾತಂತ್ರ್ಯ ಬಂದರೆ ಸಾಲದು, ನಮಗೆ ಬುದ್ಧಿಸ್ವಾತಂತ್ರ್ಯ ಬೇಕು. ಸ್ವತಂತ್ರದಲ್ಲಿದ್ದ ಬುದ್ಧಿಯೇ ಸ್ವತಂತ್ರಬುದ್ಧಿಯು. ಇದನ್ನುಳಿದು ಬೇರೆ ಸ್ವತಂತ್ರತೆ ಇಲ್ಲ. ಭವನವನ್ನೇ ತತ್ತರಿಸಿ ಬಿತ್ತರವಾಗಿ ಉಂಟು ಮುಕ್ತಮುಕ್ತಾಗಿ ಉಗುಳಿದ ವ್ಯಾಸವಾಲ್ಮೀಕಿಗಳು ಸ್ವತಂತ್ರಬುದ್ಧಿಯ ಅವತಾರಗಳು. ಹೋಮರ್, ಡಾಂಟೆ, ಶೇಕ್ಸ್‌ಪಿಯರ್ ಮೊದಲಾದ ಭುವನೋಪಜೀವಿಗಳೂ ಈ ಸ್ವತಂತ್ರ ಅಮೃತ ಕುಂಭವನ್ನು ಕುಡಿದವರು. ಆದ್ದರಿಂದ 'ಸತ್ಯವನ್ನರಿತವರು ಸತ್ಯದಂತೆ ಇರಬೇಕು.' ಅಂದರೆ ಸತ್ಯಜ್ಞಾನಿಯು ನಿರ್ವಿಕಾರನಾಗಿ, ನಿಷ್ಕಾಮನಾಗಿ, ನಿರ್ಭಯಿಯಾಗಿ ಇರಬೇಕು. ಪ್ರೀತಿ ಇಲ್ಲದಲ್ಲಿ ಭೀತಿ ಇರುತ್ತದೆ. ರಾಜಕೀಯವು ಪ್ರೀತಿಯನ್ನು ಬೆಳೆಸುವ ಹೊಲವಾಗಬೇಕು. ಬಿಡಿತನದ ಬಿಕ್ಕಟ್ಟಿನಲ್ಲಿ ಇಡಿತನದ ಒಕ್ಕಟ್ಟನ್ನು ಹುಟ್ಟಿಸುವದೇ ಶುದ್ಧ ರಾಜಕೀಯ. ಜನಹಿತವೇ ರಾಜಕೀಯ ಪಂಡಿತರ ಧ್ಯೇಯವಾದರೆ ಜನತೆಯನ್ನು ತನ್ನಂತೆಯೇ ಕಾಣುವ ಬುದ್ಧಿ ಅವರಲ್ಲಿರಬೇಡವೇ? ಇನ್ನೊಬ್ಬನೂ ನನ್ನಂತೆಯೇ ಎಂದು ತಿಳಿಯುವದಾದರೆ ಘರ್ಷಣೆಗೆ ಎಡೆ ಎಲ್ಲಿ? ಆದ್ದರಿಂದ ಭಿನ್ನತೆಯೇ ದೇಶದ ಅವನತಿಗೆ ಕಾರಣ ಐಕ್ಯತೆಯೇ ಉದ್ಧಾರ ಸಾಧನ. 'ವಿರಸವೇ ಮರಣ, ಸಮರಸವೇ ಜೀವನ' ಅಲ್ಲವೇ?

...ಅಂಶಗಳು ಎಲ್ಲಾ ದೇವಾಂಗ ಮಂಡಲಿಯವರಲ್ಲಿಯೂ ಪ್ರಚುರವಾಗಿ ಅವರೆಲ್ಲರಿಗೂ ಸದ್ಬೋಧೆಯನ್ನುಂಟುಮಾಡಲೆಂದು ನಾವು ಆಶಿಸುತ್ತೇವೆ. ಆ ಮಹಾಸಭೆಯಲ್ಲಿ ಉಕ್ತವಾದ ವಿಷಯಗಳು ಯಾವುವೆಂದರೆ —(1) ದೇವಾಂಗ ಮತೀಯರಾಗಲಿ ಕುಟುಂಬದವರೂ ತಮ್ಮ ಬಾಲಕ ಬಾಲಕಿಯರನ್ನು ...ನ ವರೆಗಾದರೂ ಓದಿಸಬೇಕು. (2) ಮುಂ...ಗ ಮಾಡಿಸಲು ಅನನುಕೂಲವಾದವರಿಗೆ ...ಸಹಾಯಗಳನ್ನು ಒದಗಿಸಬೇಕು

ತಾವು ಬ...ಟುಂಬ ಸಂತೃಪ್ತಿಗೆ ... ಜನರಿಗೆ ಓದಿ ತಿಳಿಸಲು ಸಹಾಯಿಸಿರುವರಲ್ಲಿಯೇ ಗಾಂಧೀಜಿಯವರ ಧ್ವನಿಗ್ರಾಹಕ ಭಾಷಣವನ್ನು ಮುಗಿಸಿಲ್ಲವೆಂದು ವ್ಯಾರೆಲಾಲರಿಗೆ ತಿಳಿಸಿ ತಮ್ಮ ಭಾಷಣವನ್ನು ಮುಂದುವರಿಸಿದರು

"ನನ್ನ ಷರತ್ತುಗಳ ಬಗ್ಗೆ ಭರವಸೆ ಕೊಟ್ಟಿರುವಿರಿ. ಅವರ ಅದನ್ನು ಈಡೇರಿಸಿಕೊಡದೆ ಹೋದ ಪಕ್ಷದಲ್ಲಿ ನಾನು ಇನ್ನೊಮ್ಮೆ ಉಪವಾಸಮಾಡಲು ಹಿಂಜರಿಯುವುದಿಲ್ಲ, ನನ್ನ ಷರತ್ತುಗಳನ್ನೆಲ್ಲಾ ನನಗೆ ಬಂದುಕೊಟ್ಟಿರುವ ಪ್ರಮಾಣಪತ್ರದ ಜವಾಬ್ದಾರಿಯನ್ನರಿತ ಆ ಜವಾಬ್ದಾರಿಯನ್ನೆಲ್ಲಾ ವಹಿಸಿಕೊಂಡ, ನಾನು ಡೆಲ್ಲಿ ಬಿಟ್ಟು ಹೋಗಲು ಅನುಕೂಲಮಾಡಿಕೊಡಿ ಪಾಕಿಸ್ಥಾನಕ್ಕೆ ಹೋಗಲು ಅವಕಾಶ ಕಲ್ಪಿಸಿಕೊಡಿ" ಎಂದು ಮಹಾತ್ಮರು ತಿಳಿಸಿದರು

ಗಾಂಧೀಜಿಯವರ ಉಪವಾಸ ಮುಗಿಯಿತು.

ಮಹಾತ್ಮರ ಷರತ್ತುಗಳು

ತಾರೀಕು ೧೨ರ ಬೆಳಗ್ಗೆ ೧೧ ಘಂಟೆಯಿಂದ ಹಿಂದೂ ಮುಸ್ಲಿಂ ಐಕ್ಯತೆಯ ಬಗ್ಗೆ ಮಹಾತ್ಮರು ಪ್ರಾರಂಭಿಸಿದ ಉಪವಾಸವನ್ನು ತಾರೀಕು ೧೮ರ ಬೆಳಗ್ಗೆ ೧೨-೪೫ ಗಂಟೆಗೆ ನಿಲ್ಲಿಸಿದರು. ಈ ಉಪವಾಸವನ್ನು ನಿಲ್ಲಿಸಲು ದೇಶದ ಸರ್ವ ಮಂಡಳಿಗಳೂ ಅತುಳ ಪ್ರಯತ್ನ ಮಾಡಿದರು. ಮೌಲಾನಾ ಅಬುಲ್ ಕಲಾಂ ಅಜಾದ್, ಡಾ. ರಾಜೇಂದ್ರ ಪ್ರಸಾದ್ ಮೊದಲಾದವರು ಅಧ್ಯಕ್ಷತೆ ವಹಿಸಿದರು. ಡೆಲ್ಲಿಯಲ್ಲಿಯ ಪ್ರತಿ ರಾಜಕೀಯ ಪಕ್ಷದವರು ಸಭೆ ಸೇರಿ ಹಿಂದೂ ಮುಸ್ಲಿಮ್ ಐಕ್ಯತೆಯ ಬಗ್ಗೆ ತಾವು ಶ್ರಮಿಸುವುದಾಗಿ ಆಶ್ವಾಸನ ಕೊಟ್ಟಿರುವರು. ಅವರ ಆ ಆಶ್ವಾಸನ ಪತ್ರದಲ್ಲಿ ಒಪ್ಪಿಕೊಂಡಿರುವ ಏಳು ಷರತ್ತುಗಳು ಹೀಗಿವೆ.

ಷರತ್ತುಗಳು

೧) ಡೆಲ್ಲಿಯ ಹತ್ತಿರ ಖ್ವಾಜಾಬಕ್ತಿಯಾರ ಸಮಾಧಿ ಸ್ಥಳದಲ್ಲಿ ಮುಸ್ಲಿಂ ವಾರ್ಷಿಕ ಜಾತ್ರೆ ಇಷ್ಟರಲ್ಲಿಯೇ ನಡೆಯಲಿದೆ ಇದರಲ್ಲಿ ಮುಸಲ್ಮಾನರು ನಿರ್ಭಯವಾಗಿ ಭಾಗವಹಿಸಲು ರಕ್ಷಣೆ ಕೊಡಬೇಕು.

೨) ಈಗ ಡೆಲ್ಲಿಯಲ್ಲಿರುವ ಮಸೀದಿಗಳು ದೇವಾಲಯಗಳಾಗಿ ಹಾಗು ವಸತಿಗಳಾಗಿ ರೂಪಾಂತರಿಸಲ್ಪಟ್ಟಿವೆ. ಅವೆಲ್ಲವನ್ನು ಪುನಃ ಮಸೀದಿಗಳನ್ನಾಗಿ ಮಾಡಲು ನಿರಿಷ್ಟ ಪ್ರದೇಶಗಳ ಮುಸಲ್ಮಾನರಿಗೆ ಒಪ್ಪಿಸಬೇಕು

೩) ಡೆಲ್ಲಿಯಲ್ಲಿ ಕರೋಲಬಾಗ, ಸಬ್ಜಿಮಂಡಿ ಮತ್ತು ಪಹಾಡಗಂಜ ಭಾಗಗಳಲ್ಲಿ ಮುಸಲ್ಮಾನರು ಯಾವ ಆತಂಕವಿಲ್ಲದೆ ಇರುವಂತಾಗಬೇಕು

೪) ಒತ್ತಾಯದಿಂದ ಪಾಕಿಸ್ಥಾನಕ್ಕೆ ಹೋದ ಮುಸಲ್ಮಾನರು ಹಿಂತಿರುಗಿ ಬಂದರೆ ಹಿಂದುಗಳ ಆಕ್ಷೇಪಣೆ ಬಾರದು

೫) ಬಂಡಿಗಳಲ್ಲಿ ಮುಸಲ್ಮಾನರು ಯಾವ ಹೆದರಿಕೆಯಿಲ್ಲದೆ ಪ್ರಯಾಣ ಮಾಡುವಂತಾಗಬೇಕು

೬) ಮುಸಲ್ಮಾನರಿಗೆ ಆರ್ಥಿಕ ಬಹಿಷ್ಕಾರವನ್ನು ಹಾಕಕೂಡದು.

೭) ತಮ್ಮ ಎಲ್ಲಾ ಹಳ್ಳಿಗಳಲ್ಲಿ ಇತರರಿಗೆ ನೆಲಸಲು ಒಪ್ಪಿಗೆ ಕೊಡುವುದು ಆ ಭಾಗ ಬಿಟ್ಟವರು ಮುಸಲ್ಮಾನರಿಗೆ ಬೇಡಿದ್ದು

ಗಾಂಧೀಜಿಯವರ ಭಾಷಣ

ತದನಂತರ ಮಹಾತ್ಮಾ ಗಾಂಧಿಯವರು ತಮ್ಮ ಉಪವಾಸ ನೆರೆದಿದ್ದ ಶಾಂತಿ ಸಮಿತಿಯವರನ್ನುದ್ದೇಶಿಸಿ ಒಂದೆರಡು ಮಿನಿಟು ಮಾತನಾಡಿದರು

'ಶಾಂತಿ ಸಮಿತಿಯವರು ಕೇವಲ ಡೆಲ್ಲಿಯಲ್ಲಿ ಶಾಂತಿ ನೆಲೆಸುವಂತೆ ನೋಡಿದರೆ ಸಾಲದು. ಅಖಿಲ ಭಾರತದಲ್ಲಿ ಆಗುತ್ತಿರುವ ಅನ್ಯಾಯದ ಕಡೆಗೂ ಗಮನಕೊಡಬೇಕು ಇಡೀ ದೇಶದ ಶಾಂತಿಯ ಕಡೆಗೆ ಗಮನಕೊಡಬೇಕು'

ಎಂದು ಮಹಾತ್ಮರು ತಮ್ಮ ಹಿತೋಕ್ತಿ ನುಡಿದರು. ಗಾಂಧೀಜಿಯವರ ಈ ಒಂದೆರಡು ಮಾತುಗಳು ಪಿಸುಮಾತಿನಂತಿದ್ದವು. ಅಷ್ಟು ಮಟ್ಟಿಗೆ ಗಾಂಧೀಜಿ ನಿಶ್ಶಕ್ತರಾಗಿದ್ದಾರೆ!

ಗಾಂಧೀಜಿ ಮಾತನಾಡಿದ ಕೆಲವು ನಿಮಿಷಗಳ ನಂತರ ಹಾಗೇ ನಿಶ್ಶಕ್ತಿಯ ಪರಿಣಾಮವಾಗಿ ಮಲಗಿ ದಿಂಬಿಗೊರಗಿ ಕಣ್ಣು ಮುಚ್ಚಿಕೊಂಡರು. ಭಾಷಣದ ನೋಟ್ ತೆಗೆದುಕೊಳ್ಳುತ್ತಿದ್ದ ಅವರ ಕಾರ್ಯದರ್ಶಿ ಪ್ಯಾರೇಲಾಲರವರು ಅವನ್ನು ಮುಂದೆ ಭಾಷಣ ಮುಗಿಯಿತೆಂದು ತಿಳಿದು...

ಕೋಮುವಾರು ರಾಜಕೀಯ

ಲೇಖಕಿ ಶ್ರೀಮತಿ ಕಾವೇರಿ, ಕೊಡಗು.

"Whoever is Communal minded is the greatest enemy of mankind" "ಕೋಮುವಾರು ಮನೋಭಾವದವರು ಇದ್ದಾರೋ ಅವರು ಮಾನವ ಜನಾಂಗದ ಮಹಾಶತ್ರುಗಳು" ಎಂದು ಪಂಡಿತ ನೆಹರೂರವರು ಅಜಮೀರದಲ್ಲಿ ಮಾಡಿದ ಒಂದು ಭಾಷಣದಲ್ಲಿ ಹೇಳಿದರು. ನಮ್ಮ ಮುಖ್ಯಮಂತ್ರಿಗಳ ಈ ಮಾತಿನ ಒರೆಗಲ್ಲಿಗೆ ಹಿಂದೂದೇಶದ, ನಮ್ಮ ಪುಟ್ಟ ಕೊಡಗಿನ ಮುಂದಾಳುಗಳನ್ನು ಹಚ್ಚಿದರೆ ಅನೇಕರ ಮನೋಭಾವ ... ಬೀಳುವುದು... ರಲ್ಲಿ ... ಯಲ್ಲ

... ಕಾಲದ ರಚನೆಯಾಗುತ್ತಿರುವ ಜನತಾ ... ಕೈಬಿಟ್ಟಿದೆ ... ಪ್ರಾಥಮಿಕ ... ರಚನೆಯಲ್ಲಿ ಜನತೆಯ ... ಹಕ್ಕುಗಳನ್ನು ಸೂಚಿಸುತ್ತಾ "whereinshall be guaranteed and secured to all the people of India justice, social, economic and political, equality of status, of opportunity, and before the law, freedom of thought, expression belief, faith, worship, vocation, association and action subject to law and public morality" ಎಂದ ಹೇಳಿರುವರು. ಇದರಂತೆ ಹಿಂದೂದೇಶದ ಎಲ್ಲಾ ಜನರಿಗೆ ನ್ಯಾಯ, ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ಸಮತೆ, ಆಲೋಚನೆ, ಮಾತಾಡುವ, ಒಡೆಯುವ ಸ್ವಾತಂತ್ರ್ಯ, ಪ್ರಾರ್ಥನೆ, ನಂಬಿಕೆ, ಸಂಘರಚನೆ, ಮತ್ತು ಕಾರ್ಯ ಕರ್ಮದ ಸ್ವಾತಂತ್ರ್ಯ ಕೊಡಲ್ಪಟ್ಟಿವೆ. ಈ ರಚನೆಯ ದೃಷ್ಟಿಯಲ್ಲಿ ಭಾರತೀಯರಲ್ಲಿ ಮೇಲು ಕೀಳೆಂಬ ಭಾವನೆಯಿಲ್ಲ. ಹರಿಜನ, ಬ್ರಾಹ್ಮಣರೆಂಬ ಭೇದವಿಲ್ಲ. ಪ್ರತಿಯೊಬ್ಬನೂ ಸ್ವತಂತ್ರನು. ಪ್ರತಿಯೊಬ್ಬನೂ ಭಾರತೀಯನು. ತಾನು ಸ್ವತಂತ್ರನೆಂದಾಗ ನ್ಯಾಯ ಮತ್ತು ಸಾರ್ವಜನಿಕ ಹಿತಕ್ಕೆ ವಿರುದ್ಧವಾಗಿ ಈ ಸ್ವಾತಂತ್ರ್ಯದ ಉಪಯೋಗವಲ್ಲ. ಹಾಗೆ ಮಾಡುವವರು ಶಿಕ್ಷೆಗೆ ಗುರಿಯಾಗಲೇ ಬೇಕು.

ಮೇಲಿನ ವಿಮಲ ವಾಣಿಯನ್ನೆತ್ತಿದ ಪಂಡಿತ ಜವಾಹರರು, ನಿರ್ಣಯವನ್ನು ಮಾಡಿದ ಘಟನಾ ಸಮಿತಿಯ ಸಭ್ಯರು ನಾವು ಈ ವಿಸ್ತೃತ ತತ್ವಗಳನ್ನು ಪ್ರತಿಪಾದಿಸುವವರೂ ನಾವು. ಆದರೆ ಪ್ರಕೃತ ರಾಜಕೀಯ ರಂಗದಲ್ಲಿ ಮಾತಿನ ವಲ್ಲತನ ಮರೆಯಾಗಿ ಕೃತಿಯ ದಾಸರಾಗಬೇಕಾದ ... ಏನು ಮಾಡಿದ್ದೇವೆ? ನಮ್ಮ ಮುಂದಾಳುಗಳು, ನಮ್ಮ ... ಆಡಳಿತ ... ಬೇಕಾದ ... ಲ್ಲಿ ... ತಿಂದ ... ಬೇನೆ ... ಜನರು ... ಲ್ಲಿ ... ಕೋ ... ಜನ ... ಆಗ ಪ್ರಜಾಸತ್ತಾತ್ಮಕ ... ಜನ ... ಕೀಯ ... ಗೆ ... ವಾರು ಕೇಸರಿನ ಅಳ ಹಿಟ್ಲರನ ಎಡದ್ಯರನ್ನು ವಿರೋಧಿಸಿದಂತೆ ಜಿನ್ನಾರು ಹಿಂದೂಗಳನ್ನು ವಿರೋಧಿಸುತ್ತಿರುವವರ ಆದ ರೀತಿ ಕೊಡಗಿನಲ್ಲಿ ಕೊಡವರು, ಕೊಡಗೇತರರ ಸ್ನೇಹ, ಕೊಡವರಲ್ಲದವರು ಕೊಡವರನ್ನು ವಿರೋಧಿಸುತ್ತಿರುವರು ಹಿಟ್ಲರನ ಕೋಮುವಾರು ನೀತಿಯು ಜಗತ್ತನ್ನೇ ಯುದ್ಧದ ಕಡೆ ಎಳೆದ ತಳ್ಳಿತು. ಜಿನ್ನಾರ ನೀತಿಯು ಭಾರತದ ಮಿಲಿಯಾಂತರ ಜನರ ನಾಶಕ್ಕೆ ಕಾರಣವಾಯಿತು. ಕೊಡಗು ರಾಜಕೀಯ ವಲ್ಲಿ ಹರಿಯಬಿಟ್ಟಿರುವ ಈ ಕೋಮುವಾರು ಪ್ರಚಾರವನ್ನು ತಡೆಗಟ್ಟದಿದ್ದರೆ ವಿಪರೀತ ಅನಾಹುತಗಳಾಗಬಹುದು.

ಮಹಾತ್ಮರು ಉಪವಾಸ ತೆಗೆದುಕೊಂಡುದು ಕೇವಲ ಹಿಂದೂ ಮುಸ್ಲಿಂ ಐಕ್ಯತೆಗಾಗಿ ಅಲ್ಲ, ಕೋಮುವಾರು ಪಿಶಾಚಿಯಿಂದ ನೃತ್ಯವನ್ನು ನಿಲ್ಲಿಸಲು ಅಂದ ಈ ಉಪವಾಸದಿಂದ ಕೊಡಗಿನವರೂ ಪಾಠ ಕಲಿಯಬೇಕು. ದೇಶದ ಭವಿಷ್ಯದ ತೀರ್ಮಾನ ಯಾವ ರೀತಿಯಲ್ಲೇ ಆಗಲಿ, ಯಾರೇ ಸರಕಾರದ ಕಡಿವಾಣ ಹಿಡಿಯಲಿ, ಹೇಗಾದರೂ ರೈತರಾದ ನಾವು ನಮ್ಮ ಗದ್ದೆ ಉಳಬೇಕು. ಎಂದಿನಂತೆ ಕೃಷಿ ಮಾಡಬೇಕು. ಬಿಸಿಲು ಮಳೆಗಳಲ್ಲಿ ಶ್ರಮಿಸಬೇಕು. ಯಾವ ಸರಕಾರ ಬಂದರೂ ರೈತರನ್ನು ಕೂರಿಸಿ ಊಟ ಬಡಿಸಲಾರದು. ನಾವು ಸ್ವಾವಲಂಬಿಗಳಾಗದಿದ್ದರೆ ಯಾರು ಆಡಳಿತ ನಡೆಸಿದರೂ ನಮ್ಮ ಜೀವನ ಸುಖಮಯವಾಗಲಾರದು. ಯಾವ ಸರಕಾರ ಬಂದರೂ ಯಾವ ಏಕೀಕರಣವಾದರೂ ನಾವು ನೆರೆಯವರಾಗಿ ಗ್ರಾಮದವರಾಗಿ ಜೀವಿಸಲೇಬೇಕು. ವಿಷಮ ರಾಜಕೀಯದ ವಿಷದಿಂದ ಒಮ್ಮೆ ಗ್ರಾಮೀಣ ಜನರಿಗೆ ನಮ್ಮ ಮನಸ್ಸಿನ ಮನೋಕಷಾಯದ, ಕೋಮುವಾರು ಭಾವನೆಯ ಒಡಕು ಬಂದರೆ ದೇಶದಲ್ಲಿ ರಾಮನ ಆಡಳಿತ ನಡೆಯುತ್ತಿದ್ದರೂ ಜೀವನವು ರಣರಾಜ್ಯವಾಗುವುದು. ಆದ್ದರಿಂದ ಗ್ರಾಮದ ಜನರಾದ ನಾವು ರಾಜಕೀಯದ ಗೊಂದಲದಲ್ಲಿ ಭ್ರಾತೃಭಗಿನಿಯರಾಗಿ, ಒಂದೇ ಕುಟುಂಬದವರಾಗಿರುವ ಐಕ್ಯ ಜೀವನಕ್ಕೆ ಭಂಗ ತಂದು ದೇಶದ ಅವನತಿಗೆ ಕಾರಣರಾಗಬಾರದು. ಮುಂದಾಳುಗಳೆನ್ನುವವರೂ ಕೋಮುವಾರು ಭಾವನೆಗೆ ಚಲನೆಕೊಟ್ಟು ದೇಶದ್ರೋಹ ಮಾಡಬಾರದು

NOTICE.

In the cour...

Subray...

Plea...

filed...

pr...

Date...

Pl...

ತಾ ೨೩-೧-೧೯೪೮.

ಪ್ರಕಟಣೆ.

1 ದಿನ ಸಾವಿರಾರು ಸವ್ವಲ್ಪ ವ್ಯಾಪಾರ ಮಾಡುತ್ತಿರುವ ವ್ಯಾಪಾರಸ್ಥರಿಗೆ ಈ ಮಧ್ಯೆ ಕಾಫಿ ಹುಡಿ ಸಿಕ್ಕದ ಬಹಳ ತೊಂದರೆ ಆಗಿದೆ. ಇದಕ್ಕಾಗಿ ನಾವು ನಿಮ್ಮ ಕ್ಷೇಮ ಕೋರಿಕೊಳ್ಳುತ್ತೇವೆ ಮತ್ತು ಪೂರೈಸಿಂದ ಕಾಫಿ ಬರದೆ ಇದ್ದದ್ದೇ ಇದಕ್ಕೆ ಕಾರಣವೆಂದು ತಿಳಿಸುತ್ತೇವೆ.

ಇನ್ನು ಮುಂದಕ್ಕೆ ಕಾಫಿ ಹುಡಿಬೇಕಾದವರು ದಯವಿಟ್ಟು ವಾಲಿ ಟಿನ್ನು ಮತ್ತು ರೂ. 1-7 0 ಪ್ರಕಾರ ಹಣ ಕಳುಹಿಸಿ ಕೊಟ್ಟಲ್ಲಿ ಅವರವರ ಸ್ಥಳಕ್ಕೆ ಬಸ್ಸಿನಲ್ಲಿ ಮುಫತ್ತಾಗಿ ಬಟವಾಡೆ ಮಾಡುತ್ತೇವೆ.

2 ಪೌಂಡ್ ಹುಡಿ ಬೇಕಾದವರು ರೂ 0-12 0 ಯಂತೆ ಕ್ರಾಫ್ಟ್ ಪೇಪರ್ ಪಾಕೆಟಿನಲ್ಲಿ ಡೆಲಿವರಿ ಕೊಡಲಾಗುತ್ತದೆ.

ತಿಂಗಳು ಒಮ್ಮೆ ಮತ್ತು ಸಾಗಿನ ಜಾಗಗಳಿಗೆ ಸ್ಟಾಂಪ್ ಜವಾಬ್ದಾರಿ ವಹಿಸಿ ಮಾರತಕ್ಕವರ ಜೊತೆ ಅವರವರಿಗೆ ಸಂಬಂಧಪಟ್ಟ ನಂಬರು ಕೊಡಲಾಗಿದೆ. ಎರಡು ಪಾರ್ಸಲು ತೆಗೆದ ಕೂಡಲೇ ಹೆಚ್ಚು ಬೇಕಾದಲ್ಲಿ ಹೀಗೆ ಕಾಯಿದೆ ಪ್ರಕಾರ ನಡೆದುಕೊಳ್ಳುವವರು ತಮ್ಮ ಹಳ್ಳಿಯಲ್ಲಿ ಸಂಬಂಧಿಸಿದ ಅಂಗಡಿಗೆ ಮಾಡಲು ಒಪ್ಪಿಸುವುದು ಹಾಗೂ ರಶೀದಿ ಪಡೆದುಕೊಂಡು ಮುನ್ಸಿಪಾಲಿಟಿಯ ಕಛೇರಿ ಹಣ ಕಟ್ಟುವುದು, ಕಾರಣಾಗತವಾದುದು.

ಮೇನೇಜಿಂಗ್ ಡೈರೆಕ್ಟರ್,
ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್
4-1 ಲಿಮಿಟೆಡ್, ಮಡಿಕೇರಿ.

ಪ್ರೊಸೀಡಿಂಗ್ಸ್ ಏನು ಎಂಬ ಮುಂತಾದ ವಿಷಯಗಳನ್ನು ದಯವಿಟ್ಟು ಪ್ರಕಟಿಸುವರಾಗಿ ನಂಬುತ್ತೇನೆ. ಇಂಥಾ ಪದ್ಧ[illegible] ಚಂದಾ ಮಾಡಿ[illegible]ನ್ನು ಪ್ರಕಟಿಸುವು[illegible] ಚಂದಾ ಕೊಟ್ಟ[illegible]ರೀತಿಯಲ್ಲಿ ಉಪ[illegible]ಯೋಗಿಸುವುದರಿಂದಲೇ [illegible] ವಸೂಲ್ಮಾಡು[illegible] ತಿಳಿಯಲಾಗುವವರೆಗೆ [illegible]ಮವಾದ ಕೆಲ[illegible] ಕವಿಟಿ ಮಂ[illegible] ಉಪಯೋಗ್ಗಿ!

ಮದ್ರಾಸಿಗೆ ಸೇರಿಸಿದ ಪಕ್ಷದಲ್ಲಿ ನಮ್ಮ ದೇಶವು ಹೀಗಿರುವುದಕ್ಕಿಂತ ಹೆಚ್ಚಿನ ಅಭಿವೃದ್ಧಿಯಲ್ಲೂ ಸ್ವರಾಜ್ಯದ ಚಳವಳದಲ್ಲೂ ಇರುವುದಲ್ಲದೆ ಪರದೇಶದಿಂದ ಓದಿಬರುವ ನಮ್ಮ ಯುವಕ[illegible]ಗೂ ಸಹ ಅನೇಕ ವಿಧದಲ್ಲಿ ಈ ಕಾನ್ಸಿಲಿನಲ್ಲಿ ದೊರೆ[illegible]ಕ್ಕಿಂತಲೂ ಹೆಚ್ಚಿನ ಪ್ರಯೋಜನಗಳು ಉಂಟಾಗುವ[illegible] ಯಾವ ಸಂದೇಹವೂ ಇಲ್ಲವೆಂದು ನಾನು ದೃಢವಾಗಿ[illegible] ತ್ತೇನೆ. ಈಗ ಸದ್ಯಕ್ಕೆ ಕಾಣುವಂತೆ [illegible] ಯರ ಶಾಲೆ) ಲ್ಲಿ ಹುಡುಗಿಯರು [illegible] ದ 5ನೇ ಮತ್ತು 6ನೇ ಫಾ[illegible] ಯು ಹೆಚ್ಚು [illegible] ಗಳು [illegible]

ಈ ಇಲಾಖೆಗೆ ಮದ್ರಾಸು ಸರಕಾ[illegible]

ತಾ ೨೩-೧-೧೯೪೮

೫

ನೇತಾಜಿ ಸುಭಾಸರು ಜೀವಂತವಿದ್ದಾರೆ?

ಸುಭಾಷರ ಹಿರಿಯಣ್ಣಂದಿರು ನೇಶನಲ್ ಪ್ರೆಸ್ ಪ್ರತಿನಿಧಿಗೆ ಕೊಟ್ಟೊಂದು ಹೇಳಿಕೆಯಲ್ಲಿ ಹೀಗೆ ತಿಳಿಸಿದ್ದಾರೆಂದು 'ಅಭ್ಯುದಯ' ವಾರಪತ್ರಿಕೆಯಲ್ಲಿ ಪ್ರಕಟವಾಗಿದೆ.

ನೇತಾಜಿಯವರು ಬದುಕಿ ಜೀವಂತರಿರುವರೆಂದು ನನ್ನ ದೃಢ ನಂಬಿಕೆ. ಸೋವಿಯಟ್ ರಾಜ್ಯದೊಳಗಿನ ಯಾವುದೋ ಒಂದು ಪ್ರಾಂತ್ಯದಲ್ಲಿ ಗುಪ್ತ ರೂಪದಿಂದಿರುವರು. ರಷ್ಯಾದಲ್ಲಿ ಭಾರತ ಸಂಬಂಧವಾದ ಕೆಲವು ಗುಪ್ತ ವಿಚಾರಗಳು ಪ್ರಕಟವಾಗುತ್ತವೆ. ಪ್ರತಿಭಾವಂತ ಮತ್ತು ಅನುಭವಸ್ಥ ರಾಜನೀತಿಜ್ಞರಿಗಲ್ಲದೆ ಬೇರೆ ಯಾರಿಗೂ ಈ ಸಂಗತಿಗಳು ತಿಳಿದಿರುವುದು ಅಶಕ್ಯ (ಸುಭಾಷರಿಗೆ ಸ್ಪಷ್ಟ ಕಚೇರಿ ಇದರಲ್ಲಿರಬೇಕೆಂದವರ ಸಂದೇಹ) ಇದಲ್ಲದೆ ನೇತಾಜಿಯವರ [illegible] ಸೂಚಿಸುವ ಕಾರ್ಯಕ್ರಮವನ್ನು ಬಂಗಾಲಿ ಭಾಷೆಯಲ್ಲಿ ಮಾಸ್ಕೋ ರೇಡಿಯೊವು ಪ್ರಾರಂಭಿಸಿದೆ. ಅವರ ಒಳಯಿದ್ದ ನಂಬಿಗಸ್ತ ಸೈನಿಕರೂ ಆಪ್ತ ಸ್ನೇಹಿತರೂ ಆದ ಕರ್ನಲ್ ಹಬಿಬರ್ ರಹಿಮಾನರು ತಮ್ಮ ನೇತಾಜಿಯ ವಿಷಯ ಅವಿಷ್ಟ ಹಿಂಸೆ ಕೊಟ್ಟರೂ ಒಂದು ಸಂಗತಿಯನ್ನಲ್ಲದ ಬೇರೆ ಯಾವುದನ್ನೂ ತಿಳಿಸದಂತೆ ಪ್ರತಿಜ್ಞಾಬದ್ಧರಾಗಿದ್ದಾರೆ (ಹಬಿಬರ್ ರಹಿಮಾನರು ಸಭೆ ಸರಿ ಸತ್ತಿದ್ದರೆಂದು ಹೇಳಿದರು. ಆದರೆ ಹೆಣ ಎಲ್ಲಿ ಎಂಬುದನ್ನು ತಿಳಿಸಿಲ್ಲ) ಭಾರತವು ಮತ್ತೆಗೆ ಸುಭಾಷರ ಮೇಲಿನ ಪ್ರತಿಬಂಧಕಾಜ್ಞೆಗಳು, ಆರೋಪಗಳು ರದ್ದಾಗಿದ್ದರೂ ಮಿತ್ರರಾಷ್ಟ್ರದವರು ಅವರ ಮೇಲೆ ಯುದ್ಧಾಪರಾಧ ಹೊರಿಸಲು ಪ್ರಯತ್ನಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಭಾರತ ಸರಕಾರಕ್ಕೂ ಅವರನ್ನು ರಕ್ಷಿಸುವುದು ಶಕ್ಯವಿಲ್ಲ. ಅವರನ್ನು ಹಿಡಿದ ಕೂಡಲೆ ಯುದ್ಧಾಪರಾಧ ಸಮಿತಿಯವರಿಗೆ ಕೊಡಲೇಬೇಕಾಗಿ ಬರುವ ಆತಂಕದಿಂದ ಅವರು ಗುಪ್ತವಾಗಿರುವರೆಂದು ಹೇಳಿದೆ.

ಹೈದರಾಬಾದ್ ಪೋಲೀಸರು

ಮದ್ರಾಸ್ ಪ್ರಾಂತದ [illegible] ಜಿಲ್ಲೆಯೊಳಗಿರುವ [illegible] ಲಪುರಂ ಹಳ್ಳಿಯಲ್ಲಿ ಬೆಳೆ ಕುಯ್ಯುವ ಈ ಸಮಯದಲ್ಲಿ ಹೈದರಾಬಾದ್ ನಿಜಾಮರ ಪೋಲೀಸರು ನುಗ್ಗಿ ಬಲಾತ್ಕಾರದಿಂದ ಧಾನ್ಯವನ್ನು ಕೊಯ್ಯಲು ಯತ್ನಿಸಿದರೆಂದೂ, ಆಗ ಮದ್ರಾಸ್ ಪೋಲೀಸ್ ಪಡೆಯು ಅವರನ್ನೆದುರಿಸಿ ಗುಂಡು ಹಾರಿಸಿತೆಂದೂ ಈ ವಿಷಯವನ್ನು ಮದ್ರಾಸು ಪ್ರಧಾನ ಮಂತ್ರಿಗಳು ಪಂಡಿತ ಜವಾಹರರಿಗೆ ತಿಳಿಸಿ ಈ ವಿಚಾರ ವಿಚಾರಣೆ ಮಾಡಬೇಕೆಂದು ಕೇಳಿಕೊಂಡಿದ್ದಾಗಿಯೂ ಅಲ್ಲದೆ ಬೀದಿ ಜಯಜ್ಯೋತಿ ಎಂಬ ಹಳ್ಳಿಗೆ ನೈಜಾಮರ ೨೦೦ ಪೋಲೀಸರು ನುಗ್ಗಿ ಹಾವಳಿಮಾಡಿರುವರಂತೆ. ಹಳ್ಳಿಯನ್ನು ಸುಟ್ಟು ಮಾನಿನಿಯರ ಮಾನಭಂಗ ಮಾಡಿದರಂತೆ.

ಬಟ್ಟೆ [illegible]

ಹೆಚ್ಚು ಬಟ್ಟೆಗಳ ಮೇಲೆ ಇರುವ ಹತೋಟಿಯನ್ನು ತಾ ೨೦ ರಿಂದ 'ಬಹು ಮಟ್ಟಿಗೆ ತಿದ್ದುವ ಗಜೇಟ್' ಎಂದು ಇಂಡಿಯಾ ಸರಕಾರ ನಿರ್ಧರಿಸಿದೆ.

ಹೆಚ್ಚು ಬಟ್ಟೆಯು ಪ್ರಾಂತದೊಳಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಲು ಯಾವ ರೀತಿಯ ಅಡ್ಡಿಯೂ ಇರುವುದಿಲ್ಲ.

ಆದರೆ ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತ್ಯಕ್ಕೆ ಬಟ್ಟೆ ಸಾಗಿಸಬೇಕಾದರೆ ಮಾತ್ರ ಟೆಕ್ಸ್‌ಟೈಲ್ ಕಮಿಷನರ ಸಲಹೆ ಪಡೆಯಬೇಕು.

ಬಾತ್ಮಿ.

ಸರಕಾರದ ಜವಾಬ್ದಾರಿಕೆ.

ನಮ್ಮ ನೂತನ ಸರಕಾರದವರು ಯುದ್ಧದ ಸಮಯದಲ್ಲಿ ಕೊಡಗಿನ ಜನರಿಗೆ ಬೇಕಾದ ಸಾಮಾನುಗಳು ತರಿಸಿ ಬಟವಾಡೆ ಮಾಡಲು ರಕ್ತ ಏಜಂಟರುಗಳನ್ನು ನೇಮಕ ಮಾಡಿರುತ್ತಾರೆ. ಅವರಲ್ಲಿ ಸಿಮೆಂಟು ಮತ್ತು ಇನ್ನಿತರ ಸಾಮಾನುಗಳಿಗಾಗಿ ಒಂದು ಕಂಪೆನಿಯನ್ನು ನೇಮಕ ಮಾಡಿರುತ್ತಾರೆ. ಈ "ಕೂರ್ಗ ಏಜನ್ಸಿ ಲಿಮಿಟೆಡ್" ಕಂಪೆನಿಯು ಇದಕ್ಕಾಗಿ ಕೊಡಗಿನಲ್ಲಿ ಜನ್ಮತಾಳಿ. ಯಾರಾಗಲಿ ಕಬ್ಬಿಣ ಮತ್ತು ಸಿಮೆಂಟಿಗೆ ಸರಕಾರದವರಿಗೆ ಅರ್ಜಿ ಹಾಕಿದರೆ ಸರಕಾರದವರು ಆ ಅರ್ಜಿಯನ್ನು ಸಾವು ನೇಮಕ ಮಾಡಿದ ಏಜಂಟರಿಗೆ ಅವರ ಶಿಫಾರಸ್ಸಿನ ಮೇಲೆ ಕಳುಹಿಸುತ್ತಾರೆ. ಇನ್ನು ಸರಕಾರದವರ ಕರ್ತವ್ಯ ತೀರಿತೆಂದು ಅರ್ಜಿದಾರರೆ ಈ ಏಜೆಂಟರು ಸಾಮಾನು ಕೊಳ್ಳುವವರಿಂದ ಸಾಮಾನುಗಳಿಗೆ ಬೇಕಾದ ಪೂರ್ತಿ ಹಣವನ್ನು ಮುಂಗಡ ಪಡೆದುಕೊಂಡು ಅದನ್ನು ತಿಂಗಳುಗಳು ಆದ ನಂತರ ಬರಿಸಿ ಅವರವರಿಗೆ ಬಟವಾಡೆ ಮಾಡುತ್ತಾರೆ. ಅಲ್ಲದೆ ಸರಕಾರದವರ ಮುಖಾಂತರ ಹೋದ ಅರ್ಜಿಗಳಿಗೆ ಡೆಪ್ಯುಟಿ ಕಮಿಷನರ ಹೇಳಿದವರಿಗೆ ಒಡನೆ ಸರಬರಾಯಿ ಕೊಡಬೇಕೆಂದು ಹುಕುಂ ಮಾಡಿದರೂ ಸಹ ಕೊಡದೆ 'ಸರಬರಾಯಿ ಮಾಡುವುದಿಲ್ಲ, ಪುನಃ ಪ್ರಕಾರು ಮಾಡಿ, ನಮಗೆ ತೊಂದರೆಯಿಲ್ಲ' ಎಂದು ಹೇಳುವರು. ಈ ತರಹದ ಸ್ಥಿತಿಯನ್ನು ಹೇಗೆ ಸುಧಾರಿಸಬೇಕು?

ಎಷ್ಟೋ ವರ್ಷಗಳಿಂದ ವ್ಯಾಪಾರ ಮಾಡಿದವರನ್ನು ಬಿಟ್ಟು ಇದಕ್ಕಾಗಿ ಒಂದು ಕಂಪೆನಿಗೆ ಜನ್ಮವಿತ್ತು ಅದನ್ನು ನೇಮಕ ಮಾಡಿದ್ದು ಸಾರ್ವಜನಿಕರಿಗೆ ಉಪಕಾರ ಮಾಡಲೋ, ಯಾ ಏಜೆಂಟರ ಪ್ರಯೋಜನಕ್ಕೊ? ಇನ್ನಾದರೂ ಸರಕಾರದವರು ಜನರ ಕಷ್ಟವನ್ನು ನೀಗಿಸುವರೇ?

'ನಂದನ'

ನೋಟೀಸು.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ–

ಸೋಮವಾರಪೇಟೆನಾಡು ಬೆಟ್ಟದಳ್ಳಿ ಗ್ರಾಮದ ಸಾಗಿನ ಸರ್ವೆ ನಂ 36/1, 62/9, 73/16, 97 5, 68/7, 55/3, 80/2 105/3, 81 7, 87/1 ಮತ್ತು ಬಾಣೆ ಸರ್ವೆ ನಂ 81 6 ರ 3 18 ಎಕ್ರೆ ದ ಭೂಮಿ ಮತ್ತು ಬಾಕಿ ಸ್ವತ್ತುಗಳು ಅಕ್ಕಸಾಲೆ ಪುಟ್ಟಾಚಾರಿ ಮಗಳು ಪಾರ್ವತಮ್ಮನ ಅನುಭವ ಸ್ವಾಧೀನದ್ದು. ಸದರಿ ಸ್ವತ್ತಿಗೆ ಹಕ್ಕುದಾರಳಾಗಿರುವ ಕಾರಣ ಈ ಸ್ವತ್ತುಗಳನ್ನು ಬೇರೆ [illegible] ನಾದ [illegible] ಜೋಗ್ಯ, ಕ್ರಯ, ವಗೈರೆ ಯಾವ ವಿಧವಾದ ಪರಾಧೀನ ಮಾಡಿಸಿಕೊಂಡಲ್ಲಿ ಮಾಡಿಸಿಕೊಂಡವರಿಗೆ ಸದರಿ ಸ್ವತ್ತುಗಳು ಹಕ್ಕಾಗ ವುದಿಲ್ಲವಾಗಿಯೂ ಸದರಿ ಸ್ವತ್ತುಗಳನ್ನು ಯಾರೂ ಕ್ರಯ ವಗೈರೆ ಪರಾಧೀನ ಮಾಡಿಸಿಕೊಳ್ಳಬಾರದಾಗಿಯೂ ಈ ನೋಟೀಸು ಮೂಲಕ ತಿಳಿಸಿರುತ್ತೇನೆ.

ಪ್ಯಾನರ್ ಪಾರ್ವತಿಯು
ಗಾರ್ಡಿಯನ್ ತಾಯಿ.

1 1 ಅಕ್ಕಸಾಲೆ ಗೌರಮ್ಮ
20 1-48

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R E P 201 1947
S C 208/1941

ಸ್ವೀನಟ್ಟ ನಾಯಕ—ಅರ್ಜಿದಾರ
ಇಬ್ರಾಹಿಂ ಸಾಹೇಬ್ ಕಾಡಿ—ಎದುರು

ಸದ್ರಿ 1ನೇ ಎದುರು–ಇಬ್ರಾಹಿಂ ಸಾಹೇಬ್, ಶೇಕ್ [illegible] ಸಾಹೇಬರವರ ಮಗ, ಕೊಡಗು ಜಿಲ್ಲಾ, ಮಡಿಕೇರಿ ಇವರಿಗೆ–

ಮೇಲ್ಕಂಡ ಡಿಕ್ರಿ [illegible] ಪತ್ತೆಯಾಗದ ಕಾರಣ [illegible] ಮಾಡಿದ್ದರಿಂದ ನಿಮ್ಮ [illegible] ಸ್ವತ್ತುಗಳನ್ನು ನೀಲಾಮು [illegible] ಮೇಲ್ಕಂಡ ಕೋರ್ಟಿನಲ್ಲಿ ತಾ 21-1-1948ಕ್ಕೆ ವಾಯಿದೆ [illegible] ದಿವಸ [illegible] 10-30ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉತ್ತರ [illegible] ಲೂ, ತಪ್ಪಿದರೆ ನಿಮ್ಮನ್ನು ಗೈರುಹಾಜರಿ ಮಾಡಿ ತೀರ್ಮಾನಿಸಲ್ಪಡುವುದೆಂತಲೂ ಕೋರ್ಟಿನ ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗಿದೆ.

ಪುತ್ತೂರು, N Y Kolathaya,
6-12-47 *Va'd for Pen*

Small-Savings Scheme of the Government of India.

ಇಂಡಿಯಾ ಸರಕಾರದ ಚಿಕ್ಕ ಉಳುವರಿ ಯೋಜನೆ.

ನೀವು ನೇಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಕೊಂಡುಕೊಂಡಿರುವಿರಾ?

ನಿಮ್ಮ ವ್ಯಾಪಾರ ಉದ್ಯಮಗಳು ಕಡಿಮೆಯಾದರೆ ರೋಗ ಬಂದರೆ ಅಥವಾ ನಿಮ್ಮ [illegible] ನಿಮ್ಮ ಮತ್ತು ನಿಮ್ಮ ಕುಟುಂಬದ ಭವಿಷ್ಯವನ್ನು ಹೇಗೆ ಭದ್ರಪಡಿಸುವಿರಿ?

ನೇಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು ನಿಮ್ಮ ಭವಿಷ್ಯವನ್ನು ಭದ್ರಪಡಿಸುವುವು

ನೀವು ಒಬ್ಬರಾಗಲಿ ನಿಮ್ಮ ಕುಟುಂಬದ ಪ್ರತಿಯೊಬ್ಬ ವಯಸ್ಕರ ಹೆಸರಿನಲ್ಲಿಯೂ ರೂಪಾಯಿ 5ರಿಂದ ರೂ 15,000 ವರೆಗಿನ ಸರ್ಟಿಫಿಕೇಟುಗಳನ್ನು ಪೋಸ್ಟಾಫೀಸಿನಿಂದಾಗಲಿ ಸರಕಾರದ ಏಜಂಟರ ಮುಖಾಂತರವಾಗಲಿ ಕೊಂಡುಕೊಳ್ಳಬಹುದು.

12 ತಿಂಗಳ ನಂತರ ಸರಕಾರದವರು ನಿಮ್ಮ ಹಣವನ್ನು ಬಡ್ಡಿ ಸಮೇತ ಯಾವಾಗ ಕೇಳಿದರೂ ಮರುಪಾವತಿ ಮಾಡುವರು. 12 ವರುಷಗಳ ವರೆಗೆ ತೆಗೆದುಕೊಳ್ಳದಿದ್ದರೆ ನಿಮ್ಮ ಹಣಕ್ಕೆ ವರುಷ 1ರ 100ಕ್ಕೆ 4½ ರೂ ಬಡ್ಡಿ ದೊರೆಯುತ್ತದೆ ಅಂದರೆ ಪ್ರತಿ 100 ರೂಪಾಯಿ 150 ಆಗುತ್ತದೆ. ಆದಾಯ ತೆರಿಗೆಯಿಲ್ಲ. ಚಿನ್ನಕ್ಕಿಂತಲು ಉತ್ತಮ. [illegible] ಸರ್ಟಿಫಿಕೇಟುಗಳು ಆಕಸ್ಮಾತ್ ನಾಶವಾಗಿ ಹೋದರೆ ಹೊಸ ಪ್ರತಿಯನ್ನು ಪಡೆಯಬಹುದು.

ನಮ್ಮ ಪ್ರಧಾನ ಮಂತ್ರಿ ಮಾನ್ಯ ಪಂಡಿತ ನೆಹರೂರವರು ಹೇಳುವುದೇನೆಂದರೆ –

ಈ ವರೆಗೆ ಸರಕಾರದವರು ಹೊರಡಿಸಿದ ಯಾವುದೇ ಯೋಜನೆಯಲ್ಲಿಯೂ ಸಾರ್ವಜನಿಕರಿಗೆ ಅವನಂಬಿಕೆಯಿತ್ತು. ಅದಕ್ಕೆ ಕಾರಣವೂ ಇತ್ತು. ಇನ್ನು ಮುಂದೆ ಅಂಥಾ ಅವನಂಬಿಕೆಗೆ ಎಡೆಯಿಲ್ಲ. ಪ್ರತಿಯೊಬ್ಬನೂ ತಕ್ಕ ಉಳಿತಾಯದ ಸಂಸ್ಥೆಗೆ ಸೇರಿ ಸಾಧ್ಯವಾದಷ್ಟು ಹಣ ಉಳಿಸಿರಿ. ಇದರಿಂದ ಉಳಿಸಿದವರ ಮತ್ತು ನಮ್ಮ ಜನಾಂಗದ ಅಭಿವೃದ್ಧಿಗೂ, ನಮ್ಮ ಮೋಕ್ಷಭೂಮಿಯ ಪುನರ್ರಚನೆಗೂ ಸಹಾಯವಾಗುವುದು.

ಇಂದಿನಿಂದಲೇ ಪ್ರಯತ್ನಿಸಿರಿ. ಉಳಿತಾಯದ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.

ಕೊಡಗು ಸರಕಾರದ ಪ್ರಕಟಣೆ

ಅಂತಗಳು ಎಲ್ಲಾ ದೇವಾಂಗ ಮಂಡಲಿಯವರಲ್ಲಿಯೂ ಪ್ರಚುರವಾಗಿ ಅವರೆಲ್ಲರಿಗೂ ಸದ್ಬೋಧೆಯನ್ನುಂಟುಮಾಡಲೆಂದು ನಾವು ಆಶಿಸುತ್ತೇವೆ. ಆ ಮಹಾಸಭೆಯಲ್ಲಿ ಉಕ್ತವಾದ ವಿಷಯಗಳು ಯಾವುವೆಂದರೆ:—(1) ದೇವಾಂಗ ಮತೀಯರಾರ ಕುಟುಂಬದವರೂ ತಮ್ಮ ಬಾಲಕ ಬಾಲಕಿಯರನ್ನು ...ವರೆಗಾದರೂ ಓದಿಸಬೇಕು. (2) ಮುಂ...ಓದಿಸಲು ಅನನುಕೂಲವಾದವರಿಗೆ ...ಳನ್ನು ಒದಗಿಸಬೇಕು.

ತಾ. ೩೧-೧-೧೯೪೭

ಓಲೆಗಳ ಓಡಾಟ.

ಪ್ರೀತಿಯ ಅಂಣ್ಣಾ,

ಮನುಷ್ಯನ ಇಲ್ಲವೆ ದೇಶದ ಜೀವನದಲ್ಲಿ ಸುಸಂದರ್ಭಗಳು ಎಂದೋ ಒಮ್ಮೆ ಬರುತ್ತವೆ. ಆ ಸಂದರ್ಭಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳದ ಮನುಷ್ಯನು ಇಲ್ಲವೇ ರಾಷ್ಟ್ರವು ಅಧೋಗತಿಗಿಳಿಯ ಬೇಕಾಗುತ್ತದೆ. ಕಪ್ಪು ಸಂತೆಯ ವಿಚಾರ ಯಾರು ಏನೇ ಟೀಕಿಸಲಿ, ಹಣಗಳಿಸಲು ದೊರೆತ ಈ ಸಂದರ್ಭವನ್ನು ಕಳೆಕೊಳ್ಳುವವನು ಮೂರ್ಖನು! ದುಡ್ಡಿದವರನ್ನೇ ಪೂಜೆ ಮಾಡುವ ಇಂದಿನ ಸಮಾಜದಲ್ಲಿ ಬದುಕಿ ಬಾಳಬೇಕಾದರೆ ಹಣಗಾರನಾಗಬೇಕು. ಹೇಗೆ ಹಣ ಮಾಡಿದನೆಂಬುದು ಇಂದಿನ ಪ್ರಶ್ನೆಯಲ್ಲ. ಹಣಗಾರನೆಂದರೆ ಸಮಾಜವು ಕರೆದು ಆಸನ ಕೊಡುತ್ತದೆ. ನಮ್ಮ ನೆರೆಮನೆಯ ದಾಮು ಸಾರಾಯಿ ಅಂಗಡಿ ಕಂಟ್ರಾಕ್ಟು ತೆಗೆದು ಹಣ ಮಾಡಲಿಲ್ಲವೇ? ಇಂದು ಅವನು ಕಂಟ್ರಾಕ್ಟು ಬಿಟ್ಟಿದ್ದಾನೆ. ಆತನು ಸಾರಾಯಿ ಕಂಟ್ರಾಕ್ಟರನಲ್ಲ; ಸಮಾಜದ ಸಭ್ಯ ಧನಿಕ ಗೃಹಸ್ಥ. ಅವನು ಹೋದಲ್ಲೆಲ್ಲಾ ಗೌರವವಿದೆ. ಜವಾನನಿಂದ ಹಿಡಿದು ದಿವಾನನ ವರೆಗೂ ಆತನ ಮಾತು ನಡೆಯುತ್ತಿದೆ. ಈ ಗೌರವ ಆತನ ಬುದ್ಧಿಬಲದಿಂದೆಂದು ತಿಳಿದಿರುವೆಯಾ? ಆತನ ದುಡ್ಡಿನ ಬಲದಿಂದ! ಕಪ್ಪು ಸಂತೆ ಎಂದೂ ಶಾಶ್ವತ ಇರಲಾರದು. ಇನ್ನು ಒಂದೆರಡು ವರ್ಷಗಳಲ್ಲಿ ಅದರ ಹೆಸರಿಲ್ಲದಾಗಬಹುದು. ಆ ವರೆ... ಸ್ವಾರ್ಥಕ್ಕೋಸ್ಕರ ಸಂಪಾದನೆ ಮಾಡುವಾ. ಆಗಾಗ್ಗೆ ನಿನ್ನ ಒಣ ವೇದಾಂತ ಹೇಳಿ ನನ್ನನ್ನು ಚಂಚಲಚಿತ್ತನಾಗಿ ಮಾಡದಿರು. ಈ ಗುಟ್ಟು ಇಂದು ಹಲವರಿಗೆ ತಿಳಿದಿದೆ. ತ್ಯಾಗಿಗಳೆಂದು ದೇಶ ಸೇವಕರೆಂದು ಹೊರಟ ಖಾದೀ ಧರಿಸಿದವರೇ ಇಂದು ಈ ಸಂದರ್ಭ ಕಳೆದುಕೊಳ್ಳಬಾರದೆಂದು ಕಪ್ಪು ಸಂತೆಗೆ ಇಳಿದಿದ್ದಾರೆ. ಇವರಲ್ಲಿ ಕೆಲವರು ಉಟ್ಟ ಬಟ್ಟೆ ಮಾತ್ರ ಬಿಳೀ ಖಾದಿ. ಉಳಿದ ಎಲ್ಲೆಡೆಯಲ್ಲೂ ಕಪ್ಪು, ಮಾತು ಕಪ್ಪು, ವ್ಯಾಪಾರ ಕಪ್ಪು, ನಡತೆ ಕಪ್ಪು, ಎಲ್ಲೆಲ್ಲೂ ಸಾರ್ವತ್ರಿಕ ಕಪ್ಪು! ದುಡ್ಡು ಮಾಡುವ ವೈಖರಿ ಸರಕಾರಿ ಅಧಿಕಾರಿಗಳಿಗೂ ಮುಟ್ಟಿದೆ. ಹಾಗಿರುವಾಗ ದುಡ್ಡಿದವನೇ ದೊಡ್ಡಪ್ಪನಲ್ಲವೇ? ಹಾಗಿರುವಾಗ ದುಡ್ಡೇ ಸರ್ವಸ್ವ. ಇಂದು ಜನರಿಗೆ ದೇವರು ಬೇಡ. ದುಡ್ಡಿನ ಆರಾಧನೆಯೇ ಪ್ರಧಾನ. ನಡೆಯಲ್ಲಿ, ನುಡಿಯಲ್ಲಿ, ಜಾಗೃತ ಸ್ವಪ್ನಾವಸ್ಥೆಗಳಲ್ಲೂ 'ದುಡ್ಡು ದುಡ್ಡು' ಜಪವಾಗಿದೆ. ಹಾಗಿರುವಾಗ ನೀನು ನನಗೆ ಆಗಾಗ ಉಪದೇಶ ಮಾಡುವೆ. ಸಮಾಜವನ್ನೊಮ್ಮೆ ನೀನು ಕಣ್ತೆರೆದು ನೋಡಬಾರದೆ?

ರಮೇಶ.

ಪ್ರೀತಿಯ ತಮ್ಮಾ,

ಸಮಾಜದ ಒರೆಗಲ್ಲಿಗೆ ನಿನ್ನ ಪತ್ರದಲ್ಲಿನ ವಿಚಾರಗಳನ್ನು ಹಚ್ಚಿ ನೋಡಿದರೆ ಅದರಲ್ಲಿ ಬಹುಭಾಗ ಸತ್ಯವೇ ತೋರುವದು. ನಿಜ, ಇಂದಿನ ನಾಗರೀಕ ಸಮಾಜವು ದುಡ್ಡಿನ ಪೂಜೆಗಿಳಿದಿದೆ. ಪವಿತ್ರ ಖಾದಿ ಹೊದ್ದವರೂ, ಪೇಟ ಟೋಪಿ ಹಾಕಿದವರೂ, ಅಂಗಡಿಯ ಶ್ರೀಮಂತರು ಕೂಲಿಗಾರರೂ ಎಲ್ಲರೂ ದುಡ್ಡಿನ ಬೆನ್ನು ಹಿಡಿದು ಧಾವಿಸುತ್ತಿದ್ದಾರೆ. ನೀನು ಹೇಳುವಂತೆ ಜೀವನದಲ್ಲಿ ಸುಸಂದರ್ಭಗಳು ಯಾವಾಗಲೂ ಬರುತ್ತಾ ಇರುವದಿಲ್ಲ. ನಿಜ, ಇಡೀ ಸಮಾಜವು ದುಡ್ಡಿನ ಪೂಜೆಯಲ್ಲಿ ಪರಸ್ಪರ ಪೈಪೋಟಿ ನಡೆಸುತ್ತಿದೆ. ಈ ಪೈಪೋಟಿಯಲ್ಲಿ ನೀನೂ ಭಾಗಿಯಾಗಿ ಹತ್ತರೊಳಗೆ ಹನ್ನೊಂದಾಗಿ ಬಿಡಬೇಕೆಂದೆನ್ನುವಿಯಾದರೆ ನಾನು ಬಲಾತ್ಕಾರ ಮಾಡಲಾರೆ. ಆದರೆ ನೀನು ಈ ಪ್ರವಾಹಕ್ಕೆ ಇಳಿಯುವ ಮೊದಲು ನನ್ನ ಈ ಮಾತುಗಳಿಗೆ ಸ್ವಲ್ಪ ಗಮನಕೊಡು.

ಹೊಸದಾಗಿ ಬಾವಿ ತೆಗೆಯುವ ದೃಶ್ಯವನ್ನು ನೀನು ನೋಡಿರುವಿಯಾ? ಬಾವಿಯು ಆಳವಾಗುತ್ತಾ ಹೋದ ಹಾಗೆ ತೆಗೆದು ರಾಶಿ ಹಾಕಿದ ಮಣ್ಣು ಎತ್ತರವಾಗುತ್ತಾ ಹೋಗುವದಲ್ಲವೇ? ಆದ್ದರಿಂದ ಒಂದೆಡೆ ಎತ್ತರವಾಗಬೇಕಾದರೆ ಮತ್ತೊಂದೆಡೆ ಹಳ್ಳವಾಗಲೇ ಬೇಕು. ಅದೇ ರೀತಿ ಒಬ್ಬನು ಧನವಂತನಾಗಬೇಕಾದರೆ ನೂರಾರು ಜನರು ಕಡುದರಿದ್ರರಾಗಬೇಕೆಂಬುದನ್ನು ನೀನು ಒಪ್ಪುವಿಯಲ್ಲವೇ? ಕಪ್ಪು ಸಂತೆಯಲ್ಲಿ ಹತ್ತಾರು ಬಡಪಾಯಿಗಳನ್ನು ಸುಲಿಗೆ ಮಾಡಿ ಅವರ ಕುಟುಂಬವನ್ನು ಮಣ್ಣುಪಾಲು ಮಾಡಿದಾಗ ನೀನು ಧನಿಕನ ದರ್ಜೆಗೇರುವೆ ಅಲ್ಲವೇ? ಹಾಗಾದರೆ ದುಡ್ಡಿನ ಮೋಹದ ಪೈಪೋಟಿಗಿಳಿದು ನಿನ್ನ ಸಾವಿರಾರು ಸಹೋದರರನ್ನು ಸುಲಿಗೆ ಮಾಡಿ ನಿರ್ನಾಮ ಮಾಡುವೆಯಾ? ಈ ಉದ್ಯಮದಿಂದ ನಿನ್ನ ಹೊಟ್ಟೆ ಬೆಳೆಯುವದೇನೋ ನಿಜ. ಆದರೆ ಸಾವಿರಾರು ಹೊಟ್ಟೆಗಳು ಒಣಗಿ ಬರಡಾಗುವದನ್ನು ನೀನು ಗಮನಿಸಿರುವೆಯಾ? ನೂರು ಜನರ ಹೊಟ್ಟೆಗೆ ಕಾಲುಕೊಟ್ಟು ನೀನು ದಿನಕ್ಕೊಂದರಂತೆ ಹೊಸಕಾರಿನಲ್ಲಿ ತಿರುಗಿದರೆ ದೇಶಕ್ಕೆ ಬಂದ ಭಾಗ್ಯವೇನು?

ನಿನಗೆ ಮದುವೆಯಾಗಿದೆ. ನಿನಗೆ ನಿನ್ನ ಹೆಂಡತಿಯಲ್ಲಿ ಅನುರಾಗವಿದೆ. ನಿನ್ನ ತಮ್ಮನನ್ನೂ ಪ್ರೀತಿಸುವೆ. ನಿನ್ನ ಪ್ರೇಮವು ಈ ಮೂರು ವ್ಯಕ್ತಿಗಳೊಳಗೆ ಮಾತ್ರ! ಈ ಸಂಕೀರ್ಣ ಪ್ರೇಮದಿಂದಲೇ ನಿನಗೆ ಅಮಿತ ಆನಂದ ದೊರೆಯುತ್ತಿದೆ; ಜೀವನವು ಸುಖಮಯವೆನ್ನಿಸುತ್ತಿರುವೆ. ಅದೇ ಪ್ರೇಮವನ್ನು ವಿಸ್ತರಿಸಿ ನಿನ್ನ ಕುಟುಂಬದವರನ್ನು, ನಿನ್ನ ಗ್ರಾಮದವರನ್ನು, ನಿನ್ನ ನಾಡಿನವರನ್ನು, ನಿನ್ನ ದೇಶದವರನ್ನು ಪ್ರೀತಿಸಲು ಕಲಿ. ಆಗ ಅದೆಷ್ಟು ಗಾಢವಾದ ಆನಂದವು ದೊರೆಯುವದು ನೋಡ. ಮಾನವ ಸಮಾಜವನ್ನು ನಿನ್ನ ಕುಟುಂಬವಾಗಿ ಮಾಡಿಕೋ. ಅದರಲ್ಲಿ ಯಾವ ಬ್ರಹ್ಮಾನಂದವಿದೆ ನೋಡು. ಈ ವಿಶಾಲ ದೃಷ್ಟಿಯನ್ನು ತಳೆದಾವರೆ ನಿನ್ನ ಕಪ್ಪುಸಂತೆಯ ಆಸ್ತಿ ಎಲ್ಲಿ? ಎಲ್ಲಿವರೆಗೂ ತಂದೆ ಮಗನನ್ನು ಸುಲಿಗೆ ಮಾಡುವನೇ? ಸಹೋದರನು ಸಹೋದರನಿಗೆ ಮೋಸಮಾಡಿ ಹಣಗಳಿಸುವನೇ?

ದುಡ್ಡಿಗ ಬೆಲೆ ಇದೆ ಎನ್ನುವ! ನಿಜ. ಇಂದಿನ ನಾಗರಿಕ ಸಮಾಜ ದುಡ್ಡಿಗೆ ಅಗ್ರಪೂಜೆ ಸಲ್ಲಿಸುತ್ತಿದೆ. ಚಿನ್ನಕ್ಕೂ ತಾಮ್ರಕ್ಕೂ ವ್ಯತ್ಯಾಸವೇನು ಬಲ್ಲೆಯಾ? ಕಬ್ಬಿಣಕ್ಕೂ ಕಲ್ಲಿಗೂ ವ್ಯತ್ಯಾಸವೇನು? ಚಿನಕ್ಕೆ ಬೆಲೆ ಕಟ್ಟಿ ಮೇಲೇರಿಸಿದವನೂ ಮನುಷ್ಯನೇ, ತಾಮ್ರದ ಬೆಲೆ ಇಳಿಸಿದವನೂ ಅವನೇ. ಕಬ್ಬಿಣಕ್ಕೆ ಬೆಲೆ ಕಟ್ಟಿ ಕಲ್ಲಿಗೆ ಬೆಲೆ ಇಲ್ಲವೆಂದವನೂ ಅವನೇ. ಈ ತೋರಿಕೆಯ ಬೆಲೆ ಕಟ್ಟಿ ಅದರ ಮೋಹದಲ್ಲಿ ಮನುಷ್ಯನು ಸಿಕ್ಕಿ ದಿಕ್ಕು ಕಾಣದೆ ಕೊಳಲುತ್ತಿದ್ದಾನೆ. ಇದಕ್ಕಾಗಿ ತನ್ನ ಸಹೋದರರನ್ನೂ ಕೊಲ್ಲಲು ಸಿದ್ಧನಾಗಿದ್ದಾನೆ. ಈ ದೃಷ್ಟಿಯಿಂದ ಮನುಷ್ಯನು ಪ್ರಾಣಿಗಳಿಗೂ ಹೀನನು. ಪ್ರಾಣಿಗಳಿಗೆ ಚಿನ್ನವೂ ಒಂದೆ. ಮಣ್ಣೂ ಒಂದೆ. ಸ್ಥಿತಪ್ರಜ್ಞ ಋಷಿಯ ದೃಷ್ಟಿ!

ಎಷ್ಟು ಮಂದಿ ಮಿಲಿಯಾಧಿಪತಿಗಳು ಸಂಪಾದಿಸಿದ ದುಡ್ಡನ್ನೆಲ್ಲಾ ಮಣ್ಣಿನಂತೆ ಬಿಟ್ಟು ಸಾಯಬೇಕಾಯಿತು. ಕಾಲಚಕ್ರದ ಉರುಳಾಟದಲ್ಲಿ ಅಂತಿಮವು ಬರುವಾಗ ಯಾವ ಧನವೂ ತಡೆಯಲಾರದು. ಕೋಟ್ಯಾಧೀಶರಾದ ನರಪತಿಗಳ ಹೆಸರು ಇಂದು ಯಾರ ಬಾಯಿಯಲ್ಲಿಯೂ ಇಲ್ಲ. ಆದರೆ ಬಿಡಿಕಾಸಿಗೂ ಗತಿಯಿಲ್ಲದ ಗಾಂಧೀಜಿಯ ಹೆಸರು ಮನೆಮಾತಾಗಿದೆ, ಏಕೆ? ಇಂದಿನ ಸಮಾಜ ಯಾವುದಕ್ಕೇ ಬೆಲೆ ಕಟ್ಟಿದರೂ ಭಗವಂತನ ಸತ್ಯ ದೃಷ್ಟಿಗೆ ಬೇಕಾದುದು ಬ್ಯಾಂಕಿನ ಲೆಕ್ಕವಲ್ಲ. ಹೃದಯದ ವೈಶಾಲ್ಯ! ಆದ್ದರಿಂದ ದುಡ್ಡಿನ ಮೋಹದಲ್ಲಿ ಹೃದಯದಲ್ಲಿ ಅರಣ್ಯ ಬೆಳೆಸಿ ಹಾಳಾಗದಿರು.

ಗಣೇಶ.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು
ಕೊಟ್ಟಿಕಾರ್ ಬ್ರದರ್ಸ್, ಲಿಮಿಟೆಡ್.
ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ
ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು
ದಿ ಬೊಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.
30 ಮೌಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2
ಬೊಂಬೆ ಲೈಫ್ ಬಿಲ್ಡಿಂಗ್, ಪೊ ಬಾ ನಂ 1, ಉಡುಪಿ.
(ಟೆಲಿಫೋನ್ ನ ...)
ಇತರ ಆಫೀಸುಗಳು:— ಬೆಂಗಳೂರು, ತಿರುವೆಂದರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿತವಾಗಿದೆ)
ವಸೂಲಾದ ಶೇರು ಮೊಬಲಗು ರೂ 1,33,740, ಜಮಾ ಒಂದ ರೀವ ಸಾರಿ 3,30,268 1 8, ವಸೂಲಾದ ಕ್ಷೇಮನಿಧಿ 2,36,454-0-3. ಸೇವಿಂಗ್ ಬ್ಯಾಂಕ್ ಡಿಪಾಜಿಟ್ಟು 3,03,222-13-2.
ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ, ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಕೋವಣಾತಿಯನ್ನು ತಾ. 1-1-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0-8-0 ದರದ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ಸರ್ಕಾರ್ವ್ವ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.
ಎಂ. ಎಸ್ ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ, ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾನ್ಚಿ.

ಎಂಪೈರ್ ಆಫ್ ಇಂಡಿಯಾ
ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ಮೀರಿದೆ
	ಚಾಲ್ತಿಯಿರುವ ವಿಮೆ	17,74,52,000	,,
	ಆಸ್ತಿ	6,67,60,000	,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು		3,33,62,000	,,

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.
ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.
ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬೇ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಪ್ರೊಸೀಡಿಂಗ್ಸ್ ಏನು ಎಂಬ ಮುಂತಾದ ವಿಷಯಗಳನ್ನು ದಯವಿಟ್ಟು ಪ್ರಕಟಿಸುವರಾಗಿ ನಂಬುತ್ತೇನೆ. ಇಂಥಾ ಪಬ್ಲಿಕ್ ಊಟಗಳ ಯಾ ಬೇರೆ ಪಬ್ಲಿಕ್ ಕೆಲಸಗಳ ಚಂದಾ ವಸೂಲಾತಿಯು ಮತ್ತು ಖರ್ಚು ವೆಚ್ಚದ ವಿವರವನ್ನು ಪ್ರಕಟಿಸುವುದು ನಮ್ಮ ಈ ದೇಶದಲ್ಲಿ ಕಡಿಮೆಯಾಗಿದೆ. ಚಂದಾ ಕೊಟ್ಟ ಮಹನೀಯರಿಗೆ ತಮ್ಮ ಹಣವನ್ನು ಯಾವ ರೀತಿಯಲ್ಲಿ ಉಪಯೋಗಿಸಿದರು ಎಂಬ ವಿಷಯವು ತಿಳಿಸದಿರುವುದರಿಂದಲೇ ಯಾವ ಪಬ್ಲಿಕ್ ಕೆಲಸಕ್ಕೇನೇ ಆಗಲಿ ಚಂದಾ ವಸೂಲ್ಮಾಡುವುದು ಕಷ್ಟವಾಗುತ್ತಿದೆ. ಚಂದಾ ವಸೂಲಿಮಾಡುವವರಿಗೆ ಆ ಹಣವನ್ನು ನ್ಯಾಯವಾದ ರೀತಿಯಲ್ಲಿ ಉತ್ತಮವಾದ ಕೆಲಸಕ್ಕೆ ಉಪಯೋಗಿಸುತ್ತೇವೆಂದು ಹೇಳುವಂತ ಕಮಿಟಿ ಮೆಂಬರುಗಳು ಆ ಹಣವನ್ನು ಯಾವ ರೀತಿಯಲ್ಲಿ ಉಪಯೋಗಿಸಿದರೆಂಬದನ್ನು ತಿಳಿಸಲು ಸಹ ಉದಾಸೀನರಾಗಿರುವುದು ಯಾ ಹಿಂಜರಿಯುವುದು ಶೋಚನೀಯ ಸಂಗತಿಯಾಗಿದೆ. ಅದರಿಂದಲೇ ಪಬ್ಲಿಕ್ ಕೆಲಸಗಳಿಗೆ ಚಂದಾ ಎತ್ತುವವರ ಪ್ರಯತ್ನಗಳು ನೆರವೇರುವದು ಕಷ್ಟವಾಗಿದೆ. ಇನ್ನಾದರೂ ಪಬ್ಲಿಕ್ ಕೆಲಸವನ್ನು ಕೈಗೊಳ್ಳುವ ಮಹನೀಯರು ತಮ್ಮ ಲೆಕ್ಕಪಕ್ಕಗಳನ್ನು ಪ್ರಕಟಿಸಿ ಚಂದಾದಾರರ ಮನಸ್ಸಿನಲ್ಲಿರುವ ಸಂಶಯವನ್ನು ಪರಿಹರಿಸುವರಾಗಿ ಕೋರುವ,

'ಚಂದದಾರ'

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲ್.

ಅಯ್ಯಾ,

ನಮ್ಮ ಕೊಡಗು ದೇಶಕ್ಕೆ ಇತರ ಪ್ರಾಂತ್ಯಗಳ ಹಾಗೆ ನ್ಯಾಯವಿಧಾಯಕ ಸಭೆ ಅಂದರೆ ಲೆಜಿಸ್ಲೇಟಿವ್ ಕೌನ್ಸಿಲ್ ಕೊಡಬೇಕೆಂತ ಹೋರಾಡಿದಕ್ಕೆ ನಮ್ಮ ಘನ ಹೊಂದಿದ ಸರಕಾರವು ಬಹಳ ದೀರ್ಘಾಲೋಚನೆಯಿಂದಲೂ ಮತ್ತು ಅತಿ ಉಲ್ಲಾಸದಿಂದಲೂ ಇತರ ಕೌನ್ಸಿಲಿಗಿಂತ ವಿಷ್ಯೊ ಸಿತ್ರಾಣವಾದ ಬೆನ್ನು ಮೂಳೆ ಇಲ್ಲದ ಒಂದು ಕೌನ್ಸಿಲನ್ನು ದಯಪಾಲಿಸಿದಕ್ಕೆ ನಾವೆಲ್ಲರೂ ಬಹಳ ಕೃತಜ್ಞತೆಯುಳ್ಳವರಾಗಿರುತ್ತೇವೆ. ಈ ಕೌನ್ಸಿಲ್ ಸಿಕ್ಕಿ ಸುಮಾರು ಒಂದು ವರುಷ ಆಯಿತು. ಇದರಿಂದ ಜನರಿಗೆ ಎಷ್ಟು ತೃಪ್ತಿ ಉಂಟಾಗಿದೆಯೋ ಅಷ್ಟೇ ಅತೃಪ್ತಿಯೂ ಉಂಟಾಗಿದೆ ಎಂದು ಹೇಳಬೇಕಾಗಿದೆ. ಈ ಕೌನ್ಸಿಲನ್ನು ಕೊಡುವುದಕ್ಕಿಂತ ಮುಂಚೆ ನಮ್ಮ ಚಿಕ್ಕ ದೇಶವಾದ ಕೊಡಗನ್ನು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಬೇಕೆಂತಲೂ ಬೇಡವೆಂತಲೂ ಜನರು ಭಿನ್ನಾಭಿಪ್ರಾಯದಲ್ಲಿದ್ದರು.

ಇದರ ಮಧ್ಯೆ ನಮ್ಮ ದೇಶಕ್ಕೆ ಪ್ರತ್ಯೇಕವಾಗಿ ಕೌನ್ಸಿಲನ್ನು ಕೊಟ್ಟ ಪಕ್ಷದಲ್ಲಿ ಮದ್ರಾಸಿಗೆ ಸೇರಿಸುವುದು ಪ್ರಯೋಜನವಿಲ್ಲವೆಂಬುದಾಗಿ ಕೇಳಿಕೊಂಡದಕ್ಕೆ ಘನ ಸರಕಾರವು ಅತಿ ಸಂತೋಷದಿಂದ ಈಗಿನ ಎಡ್ವೈಸರಿ ಬೋರ್ಡಿನಂತಿರುವ ಕೌನ್ಸಿಲನ್ನು ದಯಪಾಲಿಸಿದರು. ನಮಗೂ ಸಹ ಇತರ ಪ್ರಾಂತ್ಯಗಳ ಜನರಿಗೆ ಸಿಕ್ಕುವ ಹಕ್ಕುಬಾಧ್ಯತೆಗಳನ್ನು ಇದರಿಂದ ಹೊಂದಿಕೊಳ್ಳಬಹುದೆಂತಲೂ ಮತ್ತು ನಮ್ಮಿಂದ ಚುನಾಯಿಸಲ್ಪಟ್ಟ ಮೆಂಬರುಗಳು ಕೌನ್ಸಿಲಿನಲ್ಲಿ ಮುಂದಕ್ಕೆ ಇಡುವ ಠರಾವುಗಳನ್ನು ಘನ ಸರಕಾರದವರು ಗಮನಕ್ಕೆ ತೆಗೆದುಕೊಂಡು ಮಂಜೂರಾತಿ ಮಾಡುವರೆಂತಲೂ, ಹಾಗೆ ಮಾಡಿದಪಕ್ಷದಲ್ಲಿ ನಮ್ಮ ದೇಶದ ಬಡ ಜನರ ಕಷ್ಟವೆಲ್ಲವೂ ನಿವಾರಣೆ ಆಗುವದಲ್ಲದೆ ಮೆಂಬರುಗಳಿಗೆ ಓಟ್ಸ್ ಕೊಟ್ಟದರ ಪ್ರತಿಫಲವು ಸಹ ಅನುಭವಕ್ಕೆ ಬರಬಹುದೆಂಬ ಒಂದು ದೊಡ್ಡ ಕುತೂಹಲವು ದೇಶದ ಸಾಮಾನ್ಯ ಜನರ ಮನಸ್ಸಿನಲ್ಲೆಲ್ಲಾ ನೆಲೆಗೊಂಡಿತ್ತು. ಆದರೆ ಈಗ ಕೌನ್ಸಿಲಿನಲ್ಲಿ ಆಗುವ ಪ್ರೊಸೀಡಿಂಗ್ಸ್‌ಗಳನ್ನು ಪತ್ರಿಕೆಯಲ್ಲಿ ನೋಡುತ್ತಾ ಒಂದವ್ವೇ ಆದರೆ ಅವರು ಮೊದಲು ಪಟ್ಟ ಅಭಿಪ್ರಾಯಕ್ಕೂ ಆಶೆಗೂ ವಿರೋಧವಾಗಿಯೂ ನಿರಾಶೆಯಾಗಿಯೂ ಕಂಡು ಬರುವುದಲ್ಲದೆ ಈ ಕೌನ್ಸಿಲ್ ಮೆಂಬರುಗಳಿಗೆ ಟಿಎ, ರಿಪೋರ್ಟರ್, ಗುಮಾಸ್ತ ಇತ್ಯಾದಿ ವಗೈರೆ ಸಿಬ್ಬಂದಿಗಳ ಸಂಬಳ ಕರ್ಚಿಗಾಗಿ ಮಾತ್ರ ಇಟ್ಟ ಒಂದು ಸಭೆ ಮಾತ್ರವಲ್ಲದೆ ಇದರಿಂದ ಯಾವ ತರಹದ ಪ್ರಯೋಜನವೂ ಇಲ್ಲವೆಂದು ಚೆನ್ನಾಗಿ ತಿಳಿಯಬರುತ್ತದೆ. ಕೌನ್ಸಿಲ್ ಮುಂದೆ ದೇಶದ ಮತ್ತು ಜನರ ಪ್ರಯೋಜನಕ್ಕಾಗಿ ಇಟ್ಟ ಅನೇಕ ಠರಾವುಗಳನ್ನು ಸರಕಾರದವರು ತಿರಸ್ಕಾರ ಮಾಡಿರುವದನ್ನು ನೋಡಿ ಎಲ್ಲರಿಗೂ ಕೌನ್ಸಿಲಿನ ಮೇಲೆ ಭರವಸೆ ಇಲ್ಲದಾಗುತ್ತಿದೆ. ಇದೂ ಅಲ್ಲದೆ ಅನೇಕ ಸಂದರ್ಭಗಳಲ್ಲಿ ಠರಾವುಗಳ ವಿಷಯದಲ್ಲಿ ಆಯಾಯ ಇಲಾಖೆಯ ಅಧಿಕಾರಿಗಳ ಅಭಿಪ್ರಾಯದ ಮೇರೆ ಅವುಗಳನ್ನು ತಿರಸ್ಕಾರ ಮಾಡಿರುವರು. ಹೀಗೆ ತಿರಸ್ಕಾರ ಮಾಡುವ ಪಕ್ಷದಲ್ಲಿ ಮೆಂಬರುಗಳು ಯಾತಕ್ಕೋಸ್ಕರ ಅಷ್ಟು ಶ್ರದ್ಧೆ ತೆಗೆದುಕೊಂಡು ಠರಾವನ್ನು ಕೌನ್ಸಿಲಿನ ಮುಂದೆ ಇಟ್ಟು ಕೂಗಿಕೊಳ್ಳಬೇಕು? ಹಾಗೆ ಕೂಗಿಕೊಂಡಾಗ್ಯೂ ಕೂಡ ಸ್ವಲ್ಪವಾದರೂ ಪ್ರಯೋಜನಕ್ಕೆ ಬಾರದಿದ್ದರೆ ಮೆಂಬರುಗಳನ್ನು ಚುನಾಯಿಸಿದರ ಮತ್ತು ಕೌನ್ಸಿಲ್ ಕೊಟ್ಟದರ ಫಲವೇನು? ಜನರಿಗೆ ಮೆಂಬರುಗಳ ಮೇಲೆ ಇದ್ದ ನಂಬಿಕೆಯೂ, ವಿಶ್ವಾಸವೂ ಕೂಡ ಕೆಟ್ಟುಹೋದಹಾಗಿಗಲ್ಲಿಲ್ಲವೇ? ಕೌನ್ಸಿಲಿನಲ್ಲಿ ಈ ರೀತಿ ಆಗುತ್ತಾ ಬರುವುದಾದರೆ ಇನ್ನು ಮುಂದಕ್ಕೆ ಮೆಂಬರುತನಕ್ಕೆ ಯಾರು ಕಾನಡಿಡೇಟರಾಗಲಿಕ್ಕೆ ಇಷ್ಟಪಡುವರು? ಇಷ್ಟಪಡುವವರು ಇದ್ದರೂ ಕೂಡ ಗರೀಬ್ರೈತರು ಯಾರು ಕಾನಡಿಡೇಟಿಗೆ ಓಟ್ ಕೊಡಲಿಕ್ಕೆ ಇಷ್ಟಪಡುವರು? ಇದರ ಬದಲು ಈ ಕೌನ್ಸಿಲಿನ ಬದಲಿಗೆ ಕೊಡಗನ್ನು ಮದ್ರಾಸಿಗೆ ಅಮಲ್ಗಮೇಶನ್ ಮಾಡುವ ವಿಷಯದಲ್ಲಿ ಹೆಚ್ಚಿನ ಚಳವಳಿಯನ್ನು ನಡೆಸಬಹುದಾಗಿ ತೋರುತ್ತದೆ. ಹೀಗೆ ನಮ್ಮ ದೇಶವನ್ನು ಮದ್ರಾಸಿಗೆ ಸೇರಿಸಿದ ಪಕ್ಷದಲ್ಲಿ ನಮ್ಮ ದೇಶವು ಹೀಗಿರುವುದಕ್ಕಿಂತ ಹೆಚ್ಚಿನ ಅಭಿವೃದ್ಧಿಯಲ್ಲೂ ಸ್ವರಾಜ್ಯದ ಚಳವಳಿಯಲ್ಲೂ ಇರುವುದಲ್ಲದೆ ಪರದೇಶದಿಂದ ಓದಿಬರುವ ನಮ್ಮ ಯುವಕರಿಗೂ ಸಹ ಅನೇಕ ವಿಧದಲ್ಲಿ ಈ ಕೌನ್ಸಿಲಿನಲ್ಲಿ ದೊರೆಯುವುದಕ್ಕಿಂತಲೂ ಹೆಚ್ಚಿನ ಪ್ರಯೋಜನಗಳು ಉಂಟಾಗುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದು ನಾನು ದೃಢವಾಗಿ ಹೇಳುತ್ತೇನೆ. ಈಗ ಸದ್ಯಕ್ಕೆ ಕಾನ್ವೆಂಟಿನ (ಮಡಿಕೇರಿ ಹುಡುಗಿಯರ ಶಾಲೆ) ಲ್ಲಿ ಹುಡುಗಿಯರು ಬಹಳ ಕಡಿಮೆಯಾದುದರಿಂದ 5ನೇ ಮತ್ತು 6ನೇ ಫಾರಂಗಳನ್ನು ಇಡಲಿಕ್ಕೆ 3,500 ರುಪಾಯಿ ಹೆಚ್ಚು ಕೊಡಲಿಕ್ಕಾಗುವುದಿಲ್ಲವೆಂದು ಕೌನ್ಸಿಲ್ ಮೆಂಬರುಗಳು ಬಹುಮತದಿಂದ ವಿರೋಧಿಸಿದರು. ಆದರೂ ಕೂಡ ಅವರ ಇರಾದೆಯನ್ನು ತಿರಸ್ಕರಿಸಿ ಸ್ಕೂಲ್ ಇನ್ಸ್ಪೆಕ್ಟರು 6ನೇ ಫಾರಂ ವರೆಗೆ ಇಡುವುದು ಪ್ರಯೋಜನಕರವೆಂತಲೂ ಅದರಿಂದ ನಷ್ಟವಿಲ್ಲವೆಂತಲೂ ಹೇಳಿದ ಪ್ರಕಾರ ಮಂಜೂರಾತಿ ಆಯಿತು. "ಹೀಗೆ ಒಬ್ಬರ ಅಭಿಪ್ರಾಯದ ಮೇರೆ ಮಂಜೂರುಮಾಡಿ ಬಹುಮತದವರ ತೀರ್ಮಾನವನ್ನು ಉಲ್ಲಂಘಿಸಿದ್ದು ನ್ಯಾಯವೇ? ಜಾತಿ ಮೆಂಬರುಗಳನ್ನು ಗರೀಬ ರೈತರು ಚುನಾಯಿಸಿದ್ದು ನಿಷ್ಪ್ರಯೋಜನವಾಗಲಿಲ್ಲವೇ? ಒಂದೆರಡು ಹುಡುಗಿಯರಿರುವ ಕ್ಲಾಸಿಗೆ 80 ರುಪಾಯಿ ಸಂಬಳದ ಉಪಾಧ್ಯಾಯರು ಪಾಠ ಹೇಳಬೇಕಾದರೆ ನಮ್ಮ ದೇಶವೂ, ಸರಕಾರವೂ ಎಷ್ಟು ಐಶ್ವರ್ಯವುಳ್ಳದ್ದಾಗಿರಬೇಕು? ಈ ಕಾನ್ವೆಂಟಿನ ಸಂಗತಿಯಲ್ಲಿ ಎಲ್ಲರಿಗೂ ತಿಳಿದ ಮಟ್ಟಿಗೆ ಇದು ಬಹಳ ನಷ್ಟವೆಂದೂ ನಿಷ್ಪ್ರಯೋಜನವೆಂದೂ ತಿಳಿದು ಒಂದದಾಗಿದೆ. ಹಾಗೆ ಲೋವರ್ ಸೆಕಂಡರಿ ಪಾಸಾಗಿ ಹೆಚ್ಚು ಓದಿಸಲಿಕ್ಕೆ ಇಷ್ಟ ಪಡುವವರು ತಮ್ಮ ಬಾಲಕಿಯರನ್ನು ಸೆಂಟ್ರಲ್ ಹೈಸ್ಕೂಲಿನಲ್ಲಿ ಸುಲಭ ಕರ್ಚಿನಲ್ಲಿ ಯಾತಕ್ಕೋಸ್ಕರ ಓದಿಸಬಾರದು? ಈಗಲೂ ಸಹ ಎಷ್ಟೋ ಬಾಲಕಿಯರು ಅಲ್ಲಿ ಓದುತ್ತಿದ್ದಾರೆ. ಈ ವಿಷಯದಲ್ಲಿ ಎಲ್ಲಾ ಮಹನೀಯರು ಸ್ವಲ್ಪ ಗಮನಕೊಡಬೇಕಾಗಿದೆ. ಸೋಮವಾರಪೇಟೆಯಲ್ಲಿ ಒಂದು ಲೋವರ್ ಸೆಕಂಡರಿ ಶಾಲೆಯು ಬಹಳ ಅವಶ್ಯವಿದೆ ಎಂದು ಅಲ್ಲಿಂದ ಚುನಾಯಿಸಲ್ಪಟ್ಟ ಒಬ್ಬ ಮೆಂಬರು ಈ ಕೌನ್ಸಿಲಿನ ಮುಂದೆ ಅತಿ ಧೈರ್ಯದಿಂದ ಇಟ್ಟ ಠರಾವನ್ನು ಸಹ ಹಣವಿಲ್ಲವೆಂದು ಶಾಲೆಯ ಅಧಿಕಾರಿಯ ಅಭಿಪ್ರಾಯದಮೇರೆ ತಿರಸ್ಕರಿಸಲ್ಪಟ್ಟಿದೆ ಎಂದು ತಿಳಿಯಬಂತು. ಹಾಗೆ ಮಾಡಿದವರಿಗೆ ಕಾನ್ವೆಂಟಿನ ವಿಷಯದಲ್ಲಿ ಮಾತ್ರ ಹಣವಿದೆ ಎಂಬದಾಗಿ ಹೇಳಿದಕ್ಕೆ ನಾವೆಲ್ಲರೂ ಬಹಳ ವ್ಯಸನಪಡಬೇಕಾಗಿದೆ. ಹೀಗೆ ಪ್ರತಿಯೊಂದು ವಿಷಯದಲ್ಲೂ ಕೌನ್ಸಿಲಿನಲ್ಲಿರುವ ಆಯಾಯ ಇಲಾಖೆಯ ಅಧಿಕಾರಿಗಳ ಅಭಿಪ್ರಾಯದಮೇರೆ ಠರಾವುಗಳನ್ನು ಪಾಸುಮಾಡುತ್ತಾ ಬಂದರೆ ಗರೀಬ ರೈತರ ಜಡತನವೂ ಮೆಂಬರುಗಳ ಜವಾಬ್ದಾರಿಯೂ ಯಾವ ರೀತಿಯಲ್ಲಿ ಕೊನೆಗಾಣಬಹುದೆಂದು ಎಲ್ಲರೂ ಸ್ವಲ್ಪ ಗಮನಿಸತಕ್ಕ ವಿಷಯವಾಗಿದೆ. ಆದುದರಿಂದ ಘನ ಸರಕಾರವೂ ಮತ್ತು ಮೆಂಬರುಗಳೂ ಸಹ ಕಾನ್ವೆಂಟಿನ ವಿಷಯವನ್ನು ಪುನಃ ಕೌನ್ಸಿಲಿನಲ್ಲಿ ಚರ್ಚೆಗೆ ತಂದು ಮೆಂಬರುಗಳ ಅಭಿಪ್ರಾಯದಂತೆ ಲೋವರ್ ಸೆಕೆಂಡರಿಯವರೆಗೆ ಮಾತ್ರ ಮೊದಲಿನಂತೆ ಇಡಿಸಿ ಇದರ ಬದಲಿಗೆ ಪೊನ್ನಂಪೇಟೆ ಅಥವ ಮಡಿಕೇರಿಯ ಶಾಲೆಗಳಲ್ಲಿ ಲೋವರ್ ಸೆಕಂಡರಿಯವರೆಗೆ ಇದನ್ನು ಒಡನೆ ಮಡಗುವದಾಗಿ ಉತ್ತೇಜನವನ್ನು ಕೊಟ್ಟು ಜನರ ಪ್ರೀತಿಗೆ ಪಾತ್ರರಾಗಬೇಕಾಗಿಯೂ ಮತ್ತು ಮೆಂಬರುತನದ ಪ್ರಯೋಜನವನ್ನು ಸಹ ತೋರಿಸಿ ಗೌರವವನ್ನು ಉಳಿಸಿಕೊಳ್ಳಬೇಕಾಗಿಯೂ ಹಾರೈಸುತ್ತೇನೆ.

ಅಲ್ಲದೆ ಈ ಠರಾವನ್ನು ಸರಕಾರದವರು ಉಲ್ಲಂಘಿಸಿದ ಪಕ್ಷದಲ್ಲಿ ಮೆಂಬರುಗಳು ಅವರು ಕೌನ್ಸಿಲಿನಲ್ಲಿದ್ದುಕೊಂಡು ಕೂಗಿಕೊಳ್ಳುವುದು ನಿಷ್ಪ್ರಯೋಜನವೆಂದು ತಿಳಿದುಬಂದ ಪಕ್ಷದಲ್ಲಿ ಅಂಥವರು ಕೌನ್ಸಿಲನ್ನು ಕಾಲಿಮಾಡಿ ಅವರ ಗೌರವವನ್ನು ಮತ್ತು ಜನರ ಪ್ರೀತಿಯನ್ನು ಉಳಿಸುವ ರೀತಿಯಲ್ಲಿ ಅವರು ಕೌನ್ಸಿಲಿನಲ್ಲಿ ಇದ್ದುಕೊಂಡು ಕೆಲಸಮಾಡಿದರ ಎರಡರಷ್ಟು ಕೌನ್ಸಿಲಿನ ಹೊರಗೆ ಕೆಲಸಮಾಡಿದರೆ ಅದರ ಪ್ರತಿಫಲವು ನಿಶ್ಚಿ ಜನರಿಗೆ ಸಂತೋಷವನ್ನುಂಟುಮಾಡಿದ ಹಾಗೆ ಆಗುತ್ತದೆ. ಆದುದರಿಂದ ನಮ್ಮ ಕೌನ್ಸಿಲು ಮೆಂಬರುಗಳು ಎಂ. ಎಲ್. ಸಿ. ಟೈಟಲನ್ನು ಗಮನಕ್ಕೆ ತೆಗೆದುಕೊಳ್ಳದೆ ಅವರು ಹೇಳಿದ ಪ್ರಕಾರ ದೇಶಸೇವಕ, ಜನ ಸೇವಕ ಎಂಬುವುದನ್ನು ಚೆನ್ನಾಗಿ ಮನಸ್ಸಿನಲ್ಲಿಟ್ಟುಕೊಂಡು ಓಟ್ಸ್ ಕೊಟ್ಟು ಜನರ ಪ್ರೀತಿಗೆ ಪಾತ್ರರಾಗಬೇಕೆಂದು ನಾನು ಅವರನ್ನು ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ.

'ಕೆ. ಸಿ. ಜೆ.'

ವೇಕ್ಸಿನೇಟಿಂಗ್ ಇಲಾಖೆ.

ಅಯ್ಯಾ,

ಈ ಹೊಡಲಿನ ತಮ್ಮ ಪತ್ರಿಕೆಯಲ್ಲಿ ಕೆಲವು ಸಂಗತಿಗಳನ್ನು ವ್ಯಾಕ್ಸಿನೇಷನ್ ಇಲಾಖೆಯ ಸಮ್ಮಂಧ ಒಂದೆರಡು ಲೇಖನಗಳಲ್ಲಿ ಓದಿದೆನು. ಅದರಲ್ಲಿ ಕೆಲವು ಮಟ್ಟಿಗೆ ಕಾರಣಗಳು ನ್ಯಾಯವಾಗಿ ಕಂಡುಬಂದವು. ಮುಖ್ಯವಾಗಿ ಕೊಡಗು ಸರಕಾರದ ಎಲ್ಲಾ ಇಲಾಖೆಗಳು ಮದ್ರಾಸ್ ಸರಕಾರದ ಕ್ರಮಕ್ಕೆ ತರುತ್ತಾ ಬರುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಹೀಗಿರುವಾಗ ವೈದ್ಯ ಇಲಾಖೆಯ ಮುಖ್ಯ ಶಾಖೆಗಳ ಪೈಕಿ ಒಂದಾದ ವೇಕ್ಸಿನೇಷನ್ ಇಲಾಖೆಯು ಇನ್ನೂ ಶಿಶುವಾಗಿ ಇರುವದು ನೋಡಿದರೆ ಬಹಳ ಆಶ್ಚರ್ಯ.

ಈ ಇಲಾಖೆಗೆ ಮದ್ರಾಸು ಸರಕಾರದಂತೆ ಸ್ಯಾನಿಟರಿ ಇನ್ಸ್ಪೆಕ್ಟರ್ ಕೆಲಸದಲ್ಲಿ ತೇರ್ಗಡೆ ಹೊಂದಿದ ಒಬ್ಬರನ್ನು ನಮ್ಮ ಈ ದೇಶದ ವ್ಯಾಕ್ಸಿನೇಶನ್ ಇಲಾಖೆಯ ಇನ್ಸ್ಪೆಕ್ಟರರಾಗಿ ಮಾಡಬೇಕಾಗಿ ಸೂಚಿಸಿದ್ದು ನ್ಯಾಯವೆ. ಈ ವಿಷಯ ಮದ್ರಾಸು ಸರಕಾರಕ್ಕೂ ಸಹ ಬರೆದು ತಿಳಿದುಕೊಳ್ಳಬಹುದು.

ಹೀಗಿರುವಾಗ ಸ್ಯಾನಿಟರಿ ಇನ್ಸ್ಪೆಕ್ಟರನ್ನೇ ಈ ದೇಶಕ್ಕೂ ಒಬ್ಬರನ್ನು ನೇಮಿಸುವ ತರದೂದ್ ಈ ಸರಕಾರವು ಮಾಡುವದು ಉತ್ತಮ ಸಂಗತಿಯಾಗಿ ತೋರುವದು. ವ್ಯಾಕ್ಸಿನೇಷನ್ ಇಲಾಖೆಯ ಇನ್ಸ್ಪೆಕ್ಟರಿಗೆ ಕೆಲಸ ಕಮ್ಮಿ ಇರುವದು ಎಲ್ಲರಿಗೂ ತಿಳಿಯದ ಸಂಗತಿಯಲ್ಲ. ಒಬ್ಬ ಇಬ್ಬರನ್ನು ಸೇನಿಟರಿ ಇನ್ಸ್ಪೆಕ್ಟರ್ ತರಬೇತುಮಾಡಲಿಕ್ಕೆ ನಮ್ಮ ಕೊಡಗು ಸರಕಾರವು ಕಳುಹಿಸಿ ಅಂಥವರನ್ನು ವೈದ್ಯ ಇಲಾಖೆಯ ಶಾಖೆಯಾದ ವ್ಯಾಕ್ಸಿನೇಷನ್ ಇಲಾಖೆಗೆ ಇನ್ಸ್ಪೆಕ್ಟರಾಗಿ ನೇಮಿಸಿದಲ್ಲಿ ಅಂಥವರು ಪ್ರತಿಗ್ರಾಮಗಳಲ್ಲಿ ತಿರುಗಾಡಬೇಕಾಗಿರುವದರಿಂದ ಸ್ಯಾನಿಟೇಷನ್ ಸಂಗತಿಯಲ್ಲಿ ಕೆಲವು ಮಟ್ಟಿಗೆ ತೊಂದರೆ ತೆಗೆದುಕೊಂಡು ಬೋಧಿಸುತ್ತಾ ಬಂದಲ್ಲಿ ಅಂಟುರೋಗ ವಗೈರೆ ಎಲ್ಲಾ ಕಾಯಿಲೆಗಳು ಕಮ್ಮಿಯಾಗಿ ಗ್ರಾಮಾಂತರಗಳಲ್ಲಿನ ಸ್ಥಿತಿಯು ದಿನೆದಿನೆ ಚೆನ್ನಾಗಿ ಆಗಲು ಏನೂ ತೊಂದರೆಗಳು ಇರುವದಿಲ್ಲ. ಆದರೆ ಒಬ್ಬರನ್ನು ನೇಮಿಸಿದರೆ ಕೆಲವು ಮಟ್ಟಿಗೆ ಕೆಲಸವು ಹೆಚ್ಚಾಗಬಹುದು. ಗಡಿಗಡಿ ಗ್ರಾಮಾಂತರಗಳಲ್ಲಿ ವಾಕ್ಸಿನೇಷನ್ ಇನ್ಸ್ಪೆಕ್ಟರರ ದರ್ಶನವು ಕಮ್ಮಿಯಾಗಬಹುದು. ಆದ್ದರಿಂದ ಉತ್ತರಕೊಡಗಿಗೂ ಮತ್ತು ದಕ್ಷಿಣಕೊಡಗಿಗೂ ಪ್ರತ್ಯೇಕ ಪ್ರತ್ಯೇಕ ಒಬ್ಬೊಬ್ಬ ಸೇನಿಟರಿ ಇನ್ಸ್ಪೆಕ್ಟರನ್ನು ವ್ಯಾಕ್ಸಿನೇಷನ್ ಇನ್ಸ್ಪೆಕ್ಟರಾಗಿ ಮಾಡಿದಪಕ್ಷ ಯಾವ ವಿಧವಾದ ಅಭ್ಯಂತರವೂ ಇದರಾರದು. ಈ ಸಂಗತಿಗಳು ನಮ್ಮ ಸರಕಾರಕ್ಕೂ ಮತ್ತು ದೇಶದ ಎಲ್ಲಾ ಜನರಿಗೂ ತಿಳಿಯದ್ದಲ್ಲ. ಇಬ್ಬರು ಇನ್ಸ್ಪೆಕ್ಟರನ್ನು ನೇಮಕಮಾಡಿದಲ್ಲಿ ದೇಶದ ಜನರಿಗೆ ಹೆಚ್ಚಿನ ಗುಣ ದೊರೆಯುವದಲ್ಲದೆ ಅಂಥವರ ತಾಬೆಯಲ್ಲು ಕೆಲಸಮಾಡುವಾಗ ವ್ಯಾಕ್ಸಿನೇಟರುಗಳು ಸಹ ಕೆಲವು ಮಟ್ಟಿಗೆ ಸ್ಯಾನಿಟೇಶನ್ ವಿಷಯ ತಿಳಿದುಕೊಳ್ಳುವದರಿಂದ ಕಾಲಕ್ರಮೇಣ ಇವರುಗಳು ಸಹ ಗ್ರಾಮಾಂತರಗಳಲ್ಲಿ ಬೋಧಿಸಲು ಅನುಕೂಲವಾಗುವದು.

ಪಿ. ಡಿ. ಗಣಪತಿ.

ಮಡಿಕೇರಿ ರಾಮಕೃಷ್ಣ ಹಾಸ್ಟೆಲ್.

ಅಯ್ಯಾ,

ಈಗಿನಕಾಲದಲ್ಲಿ ದೇಶದ ಸರ್ವ ಭಾಗದಲ್ಲೂ ನವನಾಗರೀಕತೆಯು ಹೆಚ್ಚುತ್ತಾ ಬರುತ್ತಿರುವದನ್ನು ನಾವುಗಳೆಲ್ಲರು ಅನುದಿನವೂ ನೋಡುತ್ತಲೂ ಕಿವಿಯಿಂದ ಕೇಳುತ್ತಲೂ ಇದ್ದೇವೆ. ಇದರ ಸಂಗಡಲೇ ಮತಪ್ರಚಾರಕರಾದ ದೊಡ್ಡ ದೊಡ್ಡ ಮಹನೀಯರ ಉಪನ್ಯಾಸಗಳಿಂದ ಸಕಲ ಜನರ ಬುದ್ಧಿಶಕ್ತಿಯು ಹೆಚ್ಚಾಗಿ ವಿಕಸಿತ (ಪ್ರಕಾಶ) ವಾಗುತ್ತಿರುವದು, ಎಲ್ಲಿ ನೋಡಿದರೂ ದೊಡ್ಡ ದೊಡ್ಡ ಸಮಾಜಗಳು, ಕೂಟಗಳು, ಆಗುತ್ತಲೇ ಇರುವವು, ಪ್ರತಿ ಒಬ್ಬರೂ ಪರಸ್ಪರ ಭ್ರಾತೃ ಭಾವವನ್ನಿಟ್ಟುಕೊಂಡು ತಮಗಳ ಶಕ್ತ್ಯಾನುಸಾರ ಸಹಾಯವನ್ನು ಮತ್ತೊಬ್ಬರಿಗೆ ಮಾಡುತ್ತಾ ಒಗ್ಗಟ್ಟಿನಿಂದಿದ್ದು ಆತ್ಮವಸ್ತುವನ್ನು ಸಾರ್ಥಕಗೊಳಿಸಬೇಕೆಂಬುದೇ ಈ ತರದ ಸಮಾಜಗಳ ಮುಖ್ಯ ಉದ್ದೇಶ್ಯಗಳಾಗಿವೆ. ಹೀಗಿರುವಲ್ಲಿ ಮಡಿಕೇರಿಯಲ್ಲಿ ಈಗ ನಾಲ್ಕೈದು ವರ್ಷಗಳಿಂದ ಸ್ಥಾಪಿಸಲ್ಪಟ್ಟಿರುವ ರಾಮಕೃಷ್ಣ ಹಾಸ್ಟೆಲೆಂಬ ಬಡವಿದ್ಯಾರ್ಥಿಗಳ ಪ್ರಯೋಜನಾರ್ಥವಾಗಿ ಕಟ್ಟಿದ್ದ ಮನೆಯನ್ನು ಬಿಟ್ಟುಬಿಡಬೇಕೆಂದು ತಾ. 30—1—25ರಲ್ಲಿ ಸಿ. ಹೆಚ್. ಸ್ಕೂಲ್ ಹೆಡ್ಮಾಸ್ಟರವರು ಹುಕುಂಮಾಡಿದರೆಂಬ ವಿಷಯ ಕೇಳಲು ನಾವುಗಳು ತುಂಬಾ ವಿಷಾದಿಸುತ್ತೇನೆ. ಇದಕ್ಕೆ ಯಾವ ಕಾರಣವೆಂಬದ್ದು ಗೊತ್ತಾಗುವದಿಲ್ಲ. ಮಧುಮಾಂಸಹಾರಿಗಳಲ್ಲದ ವಿದ್ಯಾರ್ಥಿಗಳೇ ಆ ಹಾಸ್ಟೆಲ್‌ನಲ್ಲಿ ಹೆಚ್ಚಾಗಿರುವಲ್ಲಿ ಆ ಮಕ್ಕಳ ಕಷ್ಟಸುಖಗಳನ್ನು ಯಾರೂ ನೋಡುವವರು ಇಲ್ಲದಂತಾಯಿತೆ? ಅವರು ಇನ್ನು ಮುಂದೆ ದೇಶವನ್ನು ಉದ್ಧಾರಮಾಡಲಾರರೆಂದು ಹ್ಯಾಗೆತಾನೆ ಹೇಳಬಲ್ಲೆನು. ಸದರಿ ಹಾಸ್ಟೆಲಿನ ವಿದ್ಯಾರ್ಥಿಗಳಿಗೆ ಪರೀಕ್ಷೆ ಕಾಲವು ಕಳೆಯುವ ತನಕ ಬೇರೆ ಮನೆಹುಡುಕುವ ತಾಪತ್ರಯ ಇಲ್ಲದಂತಾಯಿತೆಂಬದು ಸ್ವಲ್ಪ ಮಟ್ಟಿಗೆ ಸಂತೋಷಕರವಾದ ಸಂಗತಿಯಾಗಿದೆ. ಇದನ್ನು ನೋಡಿದರೆ ಇನ್ನು ಮುಂದಕ್ಕೆ ಸದರಿ ಹಾಸ್ಟೆಲಿನ ವಿದ್ಯಾರ್ಥಿಗಳಿಗೆ ಯಾವ ತೊಂದರೆಯೂ ಇಲ್ಲದಂತೆ ದೊಡ್ಡ ದೊಡ್ಡ ಪುಣ್ಯಾತ್ಮರುಗಳು ಉದಾರಮನಸ್ಸಿನಿಂದ ಸಹಾಯಮಾಡಿ ಹಾಸ್ಟೆಲ್ ಈಗ ನಡಿಯುವಂತೆಯೇ ಮುಂದಕ್ಕೂ ನಡಿಸಿಕೊಳ್ಳುವಂತೆ ತಕ್ಕ ಸಹಾಯಮಾಡಬಹುದಾಗಿ ಅತಿ ವಿನಯದಿಂದ ಹಾರೈಸುತ್ತಾ ಇದ್ದೇನೆ.

ತಿಳಿದವ.

ಶ್ರೀ ರಾಮಕೃಷ್ಣ ಪರಮಹಂಸರ ಚರಿತ್ರೆ.

ಮಹನೀಯರೇ,

ಶ್ರೀ ರಾಮಕೃಷ್ಣ ಪರಮಹಂಸರ ಜೀವನಚರಿತ್ರೆಯೆಂಬ ಗ್ರಂಥವನ್ನು ಮಹಾತ್ಮಗಾಂಧಿಯವರು ಈ ಕೆಳಗೆ ಹೇಳುವ ಮೇರೆ ನಿಜವಾದ ಜೀವನಚರಿತ್ರೆಯು ಹೊರಬಿದ್ದಿರಲಿಲ್ಲ. ಈಗ ನೂತನವಾಗಿ ರಾಮಕೃಷ್ಣನಂಘದವರಿಂದ ಇಂಗ್ಲೀಷಿನಲ್ಲಿ ವಿಕ್ರಯಕ್ಕೆ ಸಿದ್ಧವಾಗಿದೆ. ಅದರ ಪುಟಸಂಖ್ಯೆಯು 765 ಬೆಲೆ 5ರುಪಾಯಿ). ಈ ಉತ್ತಮಗ್ರಂಥದಲ್ಲಿ ಮಹಾತ್ಮಗಾಂಧಿಯ

ವರ ಮುನ್ನುಡಿಯೊಂದಿದೆ ಅದನ್ನು ಕನ್ನಡಕ್ಕೆ ಪರಿವರ್ತಿಸಿ ಸಕಲರ ಅವಗಾಹನೆಗೂ ತರಲಾಗಿದೆ.

ಶ್ರೀ ರಾಮಕೃಷ್ಣ ಪರಮಹಂಸರ ಜೀವನದ ಕಥನವೆಂದರೆ ಧರ್ಮದ ಆಚರಣೆಯ ಕಥನವೇ ಆಗಿದೆ ಪರಮಾತ್ಮನನ್ನು ನಾವು ಪ್ರತ್ಯಕ್ಷವಾಗಿ ನೋಡುವದಕ್ಕೆ ಆತನ ಜೀವನ ಚರಿತ್ರೆಯು ಸಹಾಯವಾಗಿದೆ ಈ ಚರಿತ್ರೆಯನ್ನು ಓದಿದವರಿಗೆಲ್ಲಾ ದೇವರೆ ಸತ್ಯವು ಇನ್ನುಳಿದುದೆಲ್ಲಾ ಮಿಥ್ಯವು ಎಂಬ ಅಂಶದಲ್ಲಿ ಪೂರ್ಣನಂಬಿಕೆಯುಂಟಾಗದೆ ಇರದು. ದೇವತಾಭಾವವೇ ರಾಮಕೃಷ್ಣನಾಗಿ ಜನ್ಮವೆತ್ತಿರುವದಾಗಿದೆ. ಆತನ ಮಾತುಗಳು ಬರೀ ವಿದ್ವಾಂಸನ ಮಾತುಗಳಲ್ಲ. ಆದರೆ ಅವು ಜೀವನ ಗ್ರಂಥದ ಪುಟಗಳೇ ಆಗಿವೆ ಅವುಗಳು ಆತನ ಸ್ವಾನುಭವದ ಪ್ರಗಟೀಕರಣಗಳಾಗಿವೆ. ಅವು ವಾಚಕನ ಮನಸ್ಸಿನಲ್ಲಿ ನಿವಾರಿಸ ಶಕ್ಯವಾದಂತ ಸಂಸ್ಕಾರಗಳನ್ನುಂಟುಮಾಡುವವು. ಶ್ರದ್ಧಾರಹಿತವಾದ ಈ ಕಾಲದಲ್ಲಿ ರಾಮಕೃಷ್ಣನು ಪ್ರಕಾಶಮಾನವಾದ ಸಜೀವವಾದ ಭಕ್ತಿಯ ಮಾದರಿಯನ್ನು ದಯಪಾಲಿಸಿರುತ್ತಾನೆ. ಇದು ಸಾವಿರಾರುಮಂದಿ ಸ್ತ್ರೀ ಪುರುಷರಿಗೆ ಶಾಂತಿಯನ್ನುಂಟುಮಾಡುವದು ಹಾಗಿಲ್ಲದಿರುತ್ತಿದ್ದರೆ ಅವರೆಲ್ಲರೂ ಆತ್ಮರ ಪ್ರಕಾಶವೇನೆಂಬುದನ್ನರಿಯಲು ಬಹಿಷ್ಕೃತರಾಗಿರುತ್ತಿದ್ದರು. ರಾಮಕೃಷ್ಣನ ಜೀವನವು ಆಹಿಂಸೆಯಲ್ಲಿನ ಒಂದು ವಸ್ತು ಪಾಠವಾಗಿದೆ. ಆತನ ಪ್ರೇಮಕ್ಕೆ ಈ ದೇಶ ಆದೇಶವೆಂಬ ಪರಿಮಿತಿಯೇ ಇಲ್ಲವಾಗಿದೆ. ಈ ಗ್ರಂಥವನ್ನು ವಾಚಿಸುವರೆಲ್ಲರಿಗೂ ಆತನ ದೈವೀಕವಾದ ಪ್ರೇಮವು ಆವೇಶವನ್ನುಂಟುಮಾಡಲಿ.

ಅನ ಭವಿ

FOR SALE.

OVRLAND MODEL 4' recently completely ever-hauled and all necessary replacements effected and repainted: and not used since. New Battery (never used) Price Rs 2,000.

Apply to —

44 The Hunsur Works, Hunsur

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.
Telegraphic Address :- "SHOOTER" Bombay.

[2] Please write for latest Catalogues.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಸ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಜಮೆಯಿಂದ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು,	ಯಂ. ಭುಜಂಗರಾಯರು
ರಾಯ್ ಬಹದ್ದೂರ್.	ಬಿ.ಎ., ಬಿ.ಎಲ್.

ಸಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಕು, 1—7—1924.

ಮಾರಾಟಕ್ಕೆ.

1 ಮಡಿಕೇರಿ ಅರ ಮಲ್‌ಶಿಟ್ಟಪ್ಪನವರ ಮಡಿಕೇರಿ ನಾಡುಬಿಳಿಗೇರಿಗ್ರಾಮದಲ್ಲಿ ಮಡಿಕೇರಿ ಮೂರ್ನಾಡು ರಸ್ತೆ 5ನೇ ಮೈಲ್ ಬಳಿ ಇರುವ ಆಸ್ತಿ, ಅಂದರೆ— ಸಾಗಿನ ಉತ್ತಮವಾದ ಭೂಮಿ 31½ ಎಕರು, ಕಿತ್ತಳೆ 25 ಎಕರು, (ಈ ಪೈಕಿ 15 ಎಕರು ಫಸಲಿಗೆ ಒಂದದ್ದನ್ನು ಈ ವರ್ಷ 1,200 ರೂಪಾಯಿಗಳಿಗೆಸಲು ಗುತ್ತಿಗೆ ಕೊಡಲಾಗಿದೆ) ಯಾಲಕ್ಕಿ 15 ಎಕರು, ಹೊಸದಾಗಿ ಹಾಕಿರುವ ಕಾಫಿ 15 ಎಕರು ಮತ್ತು 116 ಎಕರು ಬಾಣೆ ಒಂದು ವಾಸದ ಮನೆ, ಆಳುಗಳ ಲೈನು ಮತ್ತು ದನಗಳ ಕೊಟ್ಟಿಗೆ ಸಹ—ಮಾರಾಟಕ್ಕೆ ಇದೆ ಕ್ರಯ ರೂಪಾಯಿ 25,000 ಅಥವಾ ಇದರ ಸಮೀಪದ ಬೆಲೆ

2. ಅರ ಮಲ್‌ಶೆಟ್ಟಪ್ಪನವರ ಮಡಿಕೇರಿ ಮಹದೇವಪೇಟೆ ಬಸುವಣ್ಣನ ಗುಡಿ ಬಳಿ ಇರುವ ವಾಸದ ದೊಡ್ಡ ಮಹಡಿಮನೆ ಕ್ರಯ ರೂ 5,000.

ಹೆಚ್ಚಿನ ವಿವರಕ್ಕೆ ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು.

ಎಂ ಎನ್ ಅಪ್ಪಣ್ಣ,
ಬೋಯಿಕೇರಿ ಎಸ್ಟೇಟ್.

12—5 ಸುಂಟಿಕೊಪ್ಪ.

FOR SAFETY AND GOOD SERVICE
IN
Life Assurance
GO TO THE
Oriental
IN AGE SIZE & STRENGTH
THE
GREATEST INDIAN
Life Assurance Company.

Apply for full particulars to
No. 3, South Parade,
Bangalore

P. V. SUBRAMANIER
Branch Secretary for Mysore State, Coorg, Bellary & Anantapur
1-4

ಸಂಪತ್ತಿಯ ಸಾಧನಗಳು.

ಅಯ್ಯಾ ಬಂಧುಗಳೇ ಸಂಪತ್ತಿಯು ಅನ್ಯರಬಾಳೆರಿಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು ಅದನ್ನು ಶೋಧಿಸಿ ತೆಗಿಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು.

ಲಕ್ಷಾವಧಿ ರೈತರು ಹೂಡಿ ಅನುಭವ ತೆಗೆದುಕೊಂಡಿರುವರು ಭೂಮಿಯತಕ್ಕ ತರತರದನೇಗಿಲುಗಳೂ ಗಾಣಗಳೂ ದೊರೆಯುತ್ತವೆ ಕಿನಾನಗಾಣವು ಒಂದು ಗಂಟೆಗ ೪೦೦ ಪೌಂಡು ಕಬ್ಬನ್ನು ಹಿಂಡಿ ಚೆಲ್ಲುತ್ತದೆ.

« ಕೊ » ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ,

ಕಿರ್ಲೋಸ್ಕರ ಬಂಧು ಲಿಮಿಟೆಡ್,
1-4 ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನ ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ.—

ಮೇನೇಜರ್, ಶ್ರೀ ಧನ್ವಂತರಿ, ಶೃಂಗೇರಿ, ಮೈಸೂರುಸ್ಟೇಟ್.

ಇಂಡಿಯಾ ಸಾಬೂನ್.

ಬೆಲೆ ಅಗ್ಗ!! ಸರ್ವೋತ್ತಮ!!

ನಮ್ಮ "ಇಂಡಿಯಾ ಸಾಬೂನ" ಸರ್ವೋತ್ತಮವಾದುದೆಂದು ತಿಳಿದು ಎಲ್ಲಾ ಕಡೆಗಳಲ್ಲಿಯೂ, ಎಲ್ಲಾ ಊರುಗಳ ಅಂಗಡಿಗಳಲ್ಲಿಯೂ ಇದನ್ನೇ ಮಾರುತ್ತಿದ್ದಾರೆ ಇದರಿಂದ ಒಗೆಯುವ ವಸ್ತ್ರಗಳು ಸ್ವಚ್ಛವಾಗುವವಲ್ಲದೆ, ಅವುಗಳ ನೂಲಿಗೆ ಇದರಿಂದ ಯಾವ ವಿಧವಾದ ಉಪಹತಿಯೂ ಉಂಟಾಗದೆ, ಸರಿಯಾದ ಬಾಳಿಕೆ ಬರುವವು ಈ ವಿಷಯವನ್ನು ಒಂದು ಸಲ ಅಜಮಾಯಿಷಿ ಮಾಡಿದರೆ ಎಲ್ಲರಿಗೂ ಮಂದಟ್ಟಾಗುವದು ನಮ್ಮ ಗಿರಾಕಿಗಳಿಗೆ ಹೆಚ್ಚು ಲಾಭ!! ಧಾರಾಳವಾದ ಕಮಿಷನ್ ದೊರೆಯುವದು. ಆರ್ಡರುಗಳಿಗೆ ಮಾಲನ್ನು ಬಂದೋಬಸ್ತಾಗಿ ಪ್ಯಾಕ್‌ಮಾಡಿ ಅವರ ಅಡ್ರೆಸಿಗೆ, ಅಥವಾ ಅವರು ಅಪೇಕ್ಷಿಸುವ ಸಮೀಪದ ರೈಲ್ವೆ ಸ್ಟೇಷನಿಗೆ ರವಾನಿಸುತ್ತೇವೆ.

ಇಷ್ಟು ಮಾತ್ರವೇ ಅಲ್ಲ, ನಮ್ಮ ಗಿರಾಕಿಗಳಿಗೆ ಅವರವರ ಅದೃಷ್ಟ ಪರೀಕ್ಷಾರ್ಥವಾಗಿ ನಾವು ಕಳುಹಿಸುವ ಯಾವದೋ ಒಂದು ಸೋಪಿನ ಪ್ಯಾಕಿನಲ್ಲಿ ೧೦ ರುಪಾಯಿನ ಅರ್ಧ ನೋಟನ್ನು ಇಟ್ಟಿರುತ್ತೇವೆ. ಅಂಥಾ ಅರ್ಧ ನೋಟಿನ ಪ್ಯಾಕನ್ನು ಹೊಂದಿದವರು ಆ ಅರ್ಧ ನೋಟಿನ ನಂಬರನ್ನು ತಿಳಿಸಿದಲ್ಲಿ ಬಾಕಿ ಅರ್ಧ ನೋಟನ್ನೂ ಅವರಿಗೆ ಬಹುಮಾನವಾಗಿ ತಕ್ಷಣವೇ ಕಳುಹಿಸಿಕೊಡುವೆವು. ಪ್ರಯತ್ನಪಡಿ! ವ್ಯಾಪಾರಕ್ಕೆ ವ್ಯಾಪಾರ!! ಅದೃಷ್ಟಕ್ಕೆ ಅದೃಷ್ಟ!!!

ಎನ್. ಕೃಷ್ಣಯ್ಯ ಶೆಟ್ಟಿ,
12—3 ನಗರ್ತಪೇಟೆ, ಬೆಂಗಳೂರು ಸಿಟಿ.

FOR SALE IN MERCARA.

European bunglow, outhouses and 50 cents of land close to club.

Apply :—

Peirce Leslie & Co., Ltd.
MANGALORE.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ವ್ಯವಹಾರ ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡೆಕೊಳ್ಳಬಹುದು.

ಮಡಿಕೇರಿ,
17.9.24 ಮೇನೇಜರ್.

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.

If not delivered please return to "KODAGU OFFICE, MERCARA."

ಕೊಡಗು.

ಪ್ರತಿ ಬುಧವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೪] ಕೊಡಗು, ಸ್ವ ೧೯೨೧ನೇ ಇಸವಿ ಫೆಬ್ರುವರಿ ತಾರೀಕು ೨೦ನೆಯ ಬುಧವಾರ [ಸಂಚಿಕೆ ೩೩.

ಆರೋಗ್ಯ ಚಂದ್ರಿಕೆ.

ಸಂಪಾದಕರು. ಡಾಕ್ಟರ್ ... ರಾವ್,

ಆರೋಗ್ಯ ... ವಿಷಯದಲ್ಲಿ ... ದಕ್ಕಾಗಿ ... ಮಾಸಪತ್ರಿಕೆಯು ... ಪತ್ರಿಕೆ ... ಯ ಕನ್ನಡ ಪ್ರತಿಮಾ ... ಯಲ್ಲಿ ಪ್ರಸಿದ್ಧರಾದ ಡಾಕ್ಟರ ... ಪಂಡಿತರ ಲೇಖನಗಳು ...

ಆರೋಗ್ಯ ಚಂದ್ರಿಕೆಯ ... ಗದೆ ಪುನಃ ... ಆರೋಗ್ಯ ಚಂದ್ರಿಕೆ ... ಕೊಂಡರೆ ... ಗ್ರಂಥವಾಗುವುದು. ... ಚಂದಾ ... 02-0 ಹಿಂದಿನ ...

ಪತ್ರವ್ಯವಹಾರ ... 323, ...

"ಕೊಡಗು"

ರಾಜಕೀಯ, ವಿದ್ಯಾ, ... ವಿಷಯಗಳಿಂದೊಡ ಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರತಿ ... 'ಕೊಡಗು' ಮಡಿಕೇರಿ, ... ಸಂಪಾದಕರು 'ಕೊಡಗು' ... ಹಿಸಬೇಕು. ... ಪತ್ರಿಕಾಕರ್ತರು ... ವ ವಾರ್ತೆಗಳು ... ಹೆಸರು ವಿಳಾಸಗಳಿಂದ ... ಸ್ಥಳವು ದೊರೆ... 5 ಪ್ರಕಟಿಸ... ವಾಡ್ಡಾರಿಕೆಯ...

...

ಅತ್ಯಂತ ಸುಲಭವಾ... ಕೆಂಗಡಿಗೆ ಮೇನೇಜರಿಗೆ ...

ಮೇನೇಜರ್,

"ಕೊಡಗು" ... ಮಡಿಕೇರಿ

ನೋಟೀಸ್.

"ಕೊಡಗು" ಪತ್ರಿಕೆಯ ... ಕೊಡಲಿ ಚ್ಛಿರುವವರೂ ... ಮತ್ತು ಕೇರುವಾ ... ವೀರಾಜಪೇಟೆಯಲ್ಲಿರುವ ... ಆಫೀಸಿನಲ್ಲಿ ಪಾವತಿ ...

ಮಡಿಕೇರಿ, ...

೬-9-೨೪. 'ಕೊಡಗು' ...

Health is Wealth.

WANTED all to improve health strength and vitality and thus save our nation from physical degeneracy. Send 1 anna stamp and get 25 specimen photographs with full particulars from

... Physical Culture,

... Bangalore City

... Spencer Co. Ltd., ...

Our prices of wines, spirits, ... etc., are down.

Send for our Xmas list and be convinced.

Trial order Solicited.

ಸೈತಿಲೋ ನಾಸ್ಸಿ ಮಭಿಕ್ಷ.

NITRATE OF SODA (15—16 per cent) Nitrogen.

"The best and cheapest form of Nitrogen highly concentrated and immediately available. Nothing like it to make plants grow."

ರಸಾಯನ... ನೈಟ್ರೋಜನ್, ... ಸೋಡಾ ... (15—16%) ... ಪರಿಶೀಲಿಸಿ ... ಕಾಫಿ ... ಚಿಲ್ಲಿ ... ಯಾರಿಸಿ ...

... ಬೇಕಾದರೆ ... ಮೊಳಗ, ಕಿತ್ತಳೆ ... ಕೃಷಿಗಳಿಗೆ ಉಪಯೋಗಿಸ... ಉತ್ಪನ್ನ... ಪಟ್ಟಿ ... ಒಂದು ಎಕ್ರೆ ಜಮೀನಿಗೆ 120—160 ರಾತಲು ಬೇಕಾಗುವದು ಇದರ ... ವರ್ತಮಾನವನ್ನು ಮತ್ತು ... ಹೆಚ್ಚು ... ನಿಂದ ಪಡೆಯಬಹುದು.

... ಸ್ಟ್ರೀಟ್

24—... ಕಮಿಟಿಯವರ ಕಡೆ

ಕೊಡಗು ... B. P. ...ppa, Hon. Re...ntive Pollibetta, Coorg.	The Chilean Nitrate Committee 7 Hare Street, Post Box 409 CALCUTTA

ಪ್ರಕಟಣೆ.

ನಮ್ಮ ಆಂದವಾದಹೊಸ ಅಕ್ಷರಗಳು ಬಂದು ತಲುಪಿದ ದ್ದರಿಂದ 'ಲೆಟರ್ ಹೆಡ್ಸ್' 'ವಿಸಿಟಿಂಗ್ ಕಾರ್ಡ್ಸ್' ಆ ಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆ ಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ... ನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾ ಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ.

ಮೇನೇಜರ್,

'ಕೊಡಗು' ಲಿಮಿಟೆಡ್

ಪ್ರಕಟಣೆ.

ಮಡಿಕೇರಿ ಪೋಲೀಸ್ ಸಬ್ ಇನಸ್ಪೆಕ್ಟರುಗಳ ಕ್ವಾರ್ಟರ್ಸ್ ಕೆಳಗೆ ಆಂದವಾಗಿಯೂ ಹೊಸಮರಗಳಿಂದ ... ಮೂ 3 ವರ್ಷಗಳ ಹಿಂದೆ ಕಟ್ಟಲ್ಪಟ್ಟ ಸಂ ಸಾರ ಸಮೇತ ವಾಸ ಇರುವುದಕ್ಕೆ ಯೋಗ್ಯವಾದ 9 ಕೊ ಠಡಿಗಳಿರುವ ಮನೆ 3 ಅಂಕಣಗಳ ಕೊಟ್ಟಿಗೆ ... ಗಲೂ ... ಇರುವ ಕಲ್ಲು ಕಟ್ಟಿದ ಭಾ ... ಕಾಫಿ, ಬಾ ... ಕಿತ್ತಳೆ ... ಮರಗಳೂ ಮತ್ತು ಹಲಸು ಮತ್ತು ... ಇರುವ ಹಿತ್ತಲೂ ಸಹ ಇರುವ ಆಸ್ತಿ ... ಇದೆ ಈ ಸ್ಥಳವು ... ಯೂ ಸಂಸಾರ ಸಮೇತ ವಾಸ ಇರುವುದಕ್ಕೆ ಯೋಗ್ಯ ವಾಗಿಯೂ ಇದೆ ... ಇಂಥಾ ಯೋಗ್ಯವಾದ ಸ್ಥಳ ಮಡಿಕೇರಿಯಲ್ಲಿ ಸಿಕ್ಕುವದು ದುರ್ಲಭ ... ಕೊಂ ಡುಕೊಳ್ಳುವದಕ್ಕೆ ... ಇರುವವರು ಸೊತ್ತು ನೋಡಿ ಕ್ರಯ ನಿಶ್ಚಯಿಸಬಹುದು. ಹೆಚ್ಚಿನ ವಿವರ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬೇಕಾಗಿದೆ.

VENDER,

C/o EDITOR, "KODAGU."

Mercara.

12 10

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂ ದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿ ಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮ ಕೋಟೆರ ಚಿಣ್ಣಪ್ಪನವರ ಒವಾಬುದಾರಿಕೆಯ ಮೇಲೆ ಕೊಡಲಾಗಿದೆ. ದ್ದರಿಂದ ... ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಾದ ಕಡೆಗಳಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು

ವೀರಾಜಪೇಟೆ—ಮ ಕೆ ಚಿಣ್ಣಪ್ಪನವರ ಆಫೀಸಿನಲ್ಲಿ.

ಮೂರ್ನಾಡು—ಕಮಲ್ ... ಸ್ಟೋರಿನಲ್ಲಿ ಮ ಮ ಡೆಯಂಡ ದೇವಯ್ಯನವರು.

ನಾಪೋಕ್ಲು—ಮ ಪೊನ್ನಚಂಡ ಮುದ್ದಪ್ಪನವರು.

ಗೋಣಿಕೊಪ್ಪಲು—ಮ. ಮುಕ್ಕಾಟಿರವುಣಚ್ಚನವರು.

ಪೊನ್ನಂಪೇಟೆ—ಮ ಪುತ್ತರ ... ಮುದ್ದಮ್ಮೆಯ್ಯನ ವರು.

ಕುಡಿಕೇರಿ—ಮ ಜೆ. ಪೂವಮ್ಮನವರು.

ಅಮ್ಮತ್ತಿ ಸಿದ್ದಾಪುರ—ಮ ... ಪೂವಪ್ಪನವರು.

ಮ. ಚಂಗಂಡ ಕುಟ್ಟಪ್ಪನವರು.

ಕೋದಂಡ ಅಚ್ಚಯ್ಯ.

ಮೆನೇಜಿಂಗ್ ಡೈರೆಕ್ಟರು, "ಕೊಡಗು" ಲಿಮಿಟೆಡ್.

"ಕೊಡಗು"

ಸನ್ ೧೯೩೮ನೇ ಇಸವಿ ಫೆಬ್ರವರಿ ತಾ.
೨೦ನೇ ಶುಕ್ರವಾರ.

ಗ್ರಾಮಗಳ ಆರೋಗ್ಯ ಸ್ಥಿತಿ.

ಕಳೆದ ತಿಂಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ವಿಷಯ ಒಳಿದಾಗ್ಯೆ ಕೊಡಗಿನ ಗ್ರಾಮಗಳ ಆರೋಗ್ಯದ ಹೀನಸ್ಥಿತಿಯನ್ನು ಹೋಗಲಾಡಿಸಲು ಡಿಸ್ಟ್ರಿಕ್ಟ್ ಬೋರ್ಡಿನವರು ಯಾವ ತರದಲ್ಲಿ ಕೆಲಸ ಮಾಡಬೇಕೆಂದು ಸೂಚಿಸಿದ್ದೆವು. ಆ ಸೂಚನೆಗಳಲ್ಲಿ ಕೆಲವನ್ನು ನಂತರ ನಡೆದ ಬೋರ್ಡ್ ಮೀಟಿಂಗಿನಲ್ಲಿ ಜಾರಿಗೆ ತರುವಂತೆ ಆಲೋಚಿಸಲ್ಪಟ್ಟಿರುವರಾಗಿ ತಿಳಿಯುತ್ತೇವೆ. ದೇಶದ ಗ್ರಾಮಗಳಲ್ಲೆಲ್ಲಾ ಸಂಚರಿಸಿ ಕಾಯಿಲಸ್ಥರಿಗೆ ಚಿಕಿತ್ಸೆ [illegible] ಆರೋಗ್ಯ ಸ್ಥಿತಿಯ ವಿಷಯ [illegible] ಬೋಧಿಸುವುದಕ್ಕೆ ತಕ್ಕಾಗಿ ಇಬ್ಬರು ಸಬ್ ಅಸಿಸ್ಟೆಂಟ್ ಸರ್ಜನರ [illegible] ನೇಮಿಸುವುದಕ್ಕಾಗಿ ಬೋರ್ಡಿನವರು [illegible] ರೂಪಾಯಿ ಮಂಜೂರು ಮಾಡಿರುವರಂತೆ. ಇದು ಪರಿಕ್ಷಾರ್ಥವಾಗಿ ಒಂದೆರಡು ವರ್ಷಗಳವರೆಗೆ ನಡಿಸುವ [illegible] ತತ್ಕಾಲಕ್ಕೆ ಇದಕ್ಕೆ ಹೊಸ ವಡಿಕೆ [illegible] ನೇಮಿಸದೆ ಮಡಿಕೇರಿ ಮತ್ತು ವಿರಾಜಪೇಟೆ ಆಸ್ಪತ್ರೆಗಳಿಂದ ಒಬ್ಬೊಬ್ಬ [illegible] ಈ ಕೆಲಸಕ್ಕೆ ಹಾಕಬಹುದೆಂದು ಅಭಿಪ್ರಾಯಪಟ್ಟರೆ ಮೇಲೆ ಅದಕ್ಕೆ [illegible] ರೂಪಾಯಿ ಮಾತ್ರ ಮಂಜೂರು ಮಾಡಿರುವರೆಂದೂ [illegible] ತಿಳಿಯುತ್ತದೆ. [illegible]

[illegible]

ಮಲೇರಿಯ ಜ್ವರಕ್ಕೆ ಕ್ವಯನೈನ್ನೂ ಕೆಮ್ಮು, ಕಡಿ [illegible] ಉಪಾಧ್ಯಾಯರುಗಳಿಂದ ಔಷಧಿಗಳನ್ನು [illegible] ಶಾಲೆಯ ಉಪಾಧ್ಯಾಯರುಗಳಿಗೆ ಔಷಧಿ ಕೊಡುವುದಕ್ಕೆ [illegible] ಉಪಾಧ್ಯಾಯರುಗಳಿಗೆ ನಂಬಿಗಸ್ಥರ [illegible] ಸಾಧಾರಣ ಕಾಯಿಲೆಗಳಿಗೆ ಉಪಯೋಗಿಸುವ ಔಷಧಿಗಳನ್ನು ಕೊಡುವ ವಿಧಾನವನ್ನು ಸುಲಭದಲ್ಲಿ ಹೇಳಿಕೊಡಬಹುದೆಂತಲೂ, ವಿದ್ಯಾರ್ಥಿಗಳು ಶಾಲೆ ಬಿಟ್ಟು ಮನೆಗೆ ಹೋಗುವ [illegible] ಔಷಧಿಗಳನ್ನು ಕೊಡುವುದು ಉಪಾಧ್ಯಾಯರುಗಳಿಗೆ [illegible] ಔಷಧಿಗಳನ್ನು ಅನುಕೂಲವಾಗಿ ಹಾಕಬಹುದೆಂದೂ [illegible]

[illegible] ನ್ಯಾಯವಲ್ಲವೆಂದು [illegible] ಈಗಳ ಕ್ವಯನೈನನ್ನು ಪೂರ್ತಿ ಸ್ವಚ್ಛತೆಯಿಕ್ಕೆ ಶಾಲೆಗಳಲ್ಲಿ ಇಟ್ಟು ಹಂಚುವ ಏರ್ಪಾಡು ಮಾಡಬಹುದೆಂದು ತೀರ್ಮಾನವಾಯಿತು. ಈ ತೀರ್ಮಾನವು ಬಹು ಸಮ್ಮತವಾಗಲಿಕ್ಕಿಲ್ಲ [illegible] ಅನೇಕ ಗ್ರಾಮಸ್ಥರಿಗೆ ಆಸ್ಪತ್ರೆ ಔಷಧಿಗಳ ಮೇಲೆ ನಂಬಿಕೆಯೇ ಇಲ್ಲ. ಅವರಿಗೆ ಆಸ್ಪತ್ರೆಯ ಔಷಧಿಗಳಲ್ಲಿ ಭಕ್ತಿ ಹುಟ್ಟುವಂತೆ ಮಾಡುವುದು [illegible] ಕರ್ತವ್ಯವಾಗಿದೆ. [illegible] ಔಷಧಿಗಳಲ್ಲಿ ವಿಶ್ವಾಸ ಹುಟ್ಟಿದ್ದೇ ಆದರೆ ಅವು ದೊರಕುವ [illegible] ದೂರದಲ್ಲಿದ್ದರೂ ಅವುಗಳನ್ನು ಪಡೆಯಲು [illegible] ಹೋಗಲು ಹಿಂದರೆ [illegible] ಆಸ್ಪತ್ರೆಗಳು [illegible] ಅವುಗಳಿಗೆ ಹೋಗಲಿಕ್ಕೆ ಅವರಿಗೆ [illegible] ಔಷಧಿಗಳಲ್ಲಿ ವಿಶ್ವಾಸ ಹುಟ್ಟಿಸುವುದಕ್ಕಾಗಿ ಪ್ರಾರಂಭದಲ್ಲಿ ಅವುಗಳನ್ನು [illegible] ಕೊಡಬೇಕು. [illegible]

[illegible]

ಸಂಚಾರಿ [illegible] ದಕ್ಷಿಣ [illegible] ಸಂತೋಷಪಡಬೇಕಾಗಿದೆ. ಆದರೆ ಕಾಯಿಲೆಯ ಸಮಯವಾದ ಏಪ್ರಿಲ್, ಮೇ ತಿಂಗಳುಗಳು [illegible] ಔಷಧಿಗಳಿಗೆ [illegible] ಸಮಯವೂ ಇದೇ ಆಗಿದೆ. [illegible] ಅಧಿಕಾರಿಗಳು [illegible] ಬೋರ್ಡಿನವರ ತೀರ್ಮಾನದ [illegible] ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಈ ಕೆಲಸಗಳೆಲ್ಲಾ ನಮ್ಮ ಹೊಸ ಸಿವಿಲ್ ಸರ್ಜನರ ಕೈಯಲ್ಲಿದೆ. ಅವರು ಮನಸ್ಸು ಮಾಡಿದರೆ ಇವುಗಳನ್ನೆಲ್ಲಾ ಬಹಳ ಬೇಗನೆ ಜಾರಿಗೆ ತರಬಹುದು. ಅವರ ಕಾರ್ಯದಕ್ಷತೆ ಎಲ್ಲರಿಗೂ ಗೊತ್ತಾಗಿಯೇ ಇದೆ. ಅವರು ಈ ಮುಖ್ಯವಾದ ಮತ್ತು ತುರಿತವಾದ ಸಂಗತಿಗಳಿಗೆ ಕೂಡಲೆ ಕೈಹಾಕಿ ದೇಶದವರ ಕೃತಜ್ಞತೆಗೆ ಪಾತ್ರರಾಗುವರಾಗಿ ನಂಬುತ್ತೇವೆ.

ಜಮೀನುದಾರರ 'ಸಂಘದ' ವಾರ್ಷಿಕ ಕಾನ್ಫರೆನ್ಸು.

ಈ ತಾರೀಕು 1[illegible]ರಲ್ಲಿ ಜಮೀನುದಾರರ ಸಂಘದ ಎಗ್ಸಿಕ್ಯೂಟಿವ್ ಮೀಟಿಂಗು ಮಡಿಕೇರಿಯಲ್ಲಿ ನಡೆದು ಈ ವರ್ಷದ ಮಹಾಸಭೆಯನ್ನು ಮಾರ್ಚಿ [illegible] ತಾರೀಕಿನವರ ಕೋರಿಕೆ ಮೇರೆ ಮುರ್ನಾಡಿನಲ್ಲಿ ನಡಿಸುವಂತೆ ತೀರ್ಮಾನವಾಯಿತು. [illegible] ಏಪ್ರಿಲ್ ತಾ 11ರಲ್ಲಿ [illegible] ಅಧ್ಯಕ್ಷರಾಗಿ [illegible] ಅಬ್ದುಲ್ [illegible] ಖಾನ್ [illegible] ಅನೇಕ ವರ್ಷಗಳಿಂದ ದೇಶಕ್ಕಾಗಿ ಸ್ವಾರ್ಥತ್ಯಾಗದಿಂದ, ಫಲಿತಾಂಶಗಳಿಗೆ [illegible] ಕೊಡಗಿನ [illegible]

[illegible]

[illegible] ಮುಂದುವರಿದ್ದರಿಂದ ದೇಶದ ಜನರಿಗೆ ಅವರ ಪರಿಚಯವು ಹೆಚ್ಚು ಇರಲಾರದು. ಅವರು ಹಸಿಬಾಗಿರುವದರಿಂದ ದೇಶಕ್ಕೆ ದೇಹ ಮತ್ತು ಬೋಧಶಕ್ತಿಯಿಂದ ಕೆಲಸಮಾಡಲು ಸಾಧ್ಯವಿಲ್ಲದಿದ್ದರೂ ದೇವರು ಅವರಿಗೆ ದಯಪಾಲಿಸಿರುವ ಐಶ್ವರ್ಯದಿಂದಾದರೂ ಸಹಾಯಮಾಡಿಯಾರಾಗಿ ಆಶಿಸುತ್ತೇವೆ. ಅವರು ಈಗ ಪ್ರಾರಂಭಿಸಿರುವ ಔದಾರ್ಯಗುಣವನ್ನು ತನ್ನ ಜೀವಿತ ಕಾಲವೆಲ್ಲಾ ನಡಿಸುವರಾಗಿ ನಂಬುತ್ತೇವೆ. [illegible] ದೊಡ್ಡ ಮನಸ್ಸುಳ್ಳಂಥ ಜಮೀನುದಾರರು ಹಲವರು ಇದ್ದಾರೆಂಬುದಕ್ಕೆ ಸಂಶಯವಿಲ್ಲ. ಆದರೆ ಅವರಲ್ಲಿ ದೇಶವಾತ್ಸಲ್ಯವು ಹುಟ್ಟುವಂತೆ ಸಂಘದ ಸದುದ್ದೇಶಗಳನ್ನು ತಿಳಿಸಿ ಅವರ ಮುಂದುಗೆ ನಾಯಕರಾಗೆ ವಿನಂತಿ ಮಾಡಿಕೊಳ್ಳುವದೇ ಬೇಕಾದದ್ದು. ಆದುದರಿಂದ ಸ್ವಾಗತ ಕಮಿಟಿಯ ಬಗ್ಗೆ ಹಂಚಾ ವಸೂಲಿಗೆ ಸ್ವಾರ್ಥತ್ಯಾಗಿಗಳಾದ ಕೆಲವು ಮಹನೀಯರು ಹೊರಟಿದ್ದೇ ಆದರೆ ಮಡಿಕೇರಿ ತಾಲೋಕು ಕೊಡಗಿನ ಬೇರೆ ಯಾವ ತಾಲೋಕಿಗೂ ದೇಶಾಭಿಮಾನದಲ್ಲಿ ಹಿಂದೆಬೀಳಲಿಕ್ಕಿಲ್ಲವಾಗಿ ತೋರುತ್ತದೆ.

ಅಸ್ಪೃಶ್ಯತಾ ಪಾಪ.

[ಬೆಳಗಾವಿಯಲ್ಲಿ ರಾಜಕೀಯ ಕಾನ್ಫರೆನ್ಸಿನಲ್ಲಿ ಅಸ್ಪೃಶ್ಯತಾ ನಿವಾರಣೆಯ ವಿಷಯ ಮಹಾತ್ಮ ಗಾಂಧಿಯವರು ಒಂದು ಭಾಷಣವನ್ನು ಮಾಡಿದರು. ಈ ಮಹತ್ವದ ಭಾಷಣದಲ್ಲಿರುವ ಅಭಿಪ್ರಾಯಗಳನ್ನು ಎಲ್ಲರೂ ತಿಳಿಯತಕ್ಕದಾದುದರಿಂದ ಅದರ ಸಾರಾಂಶವನ್ನು ಇಲ್ಲಿ ಕೊಟ್ಟಿದ್ದೇವೆ. ಈ ಪರಿಷತ್ತಿಗೆ ಮೊದಲು ಅಲ್ಲಿ ಕೆಲವರು ಮಹಾತ್ಮರ ಅಭಿಪ್ರಾಯಗಳಿಗೆ ವಿರುದ್ಧವಾಗಿ ಚಳವಳ ನಡೆಸಿದ್ದರು. ಸಂ.]

ಈ ಪರಿಷತ್ತಿನಲ್ಲಿ ಅಸ್ಪೃಶ್ಯರಿಗೋಸ್ಕರ ಪ್ರತ್ಯೇಕ ಸ್ಥಳವು ಇಡಲ್ಪಟ್ಟರೆ ನಾನೂ ಅದೇ ಸ್ಥಳದಲ್ಲಿ ಹೋಗಿ ಕುಳಿತುಕೊಳ್ಳುವೆನೆಂದು ನಾನು 'ನವಜೀವನ'ದಲ್ಲಿ ಬರೆದಂದಿನಿಂದ ಬೆಳಗಾವಿ ನಗರದಲ್ಲಿ ದೊಡ್ಡ ಚಳವಳವು ಆರಂಭವಾಗಿದೆ. ಕಾಠಿಯಾವಾಡದಲ್ಲಿ ಅಸ್ಪೃಶ್ಯತೆಯು ಎಷ್ಟರಮಟ್ಟಿಗಿದೆ ಎಂದು ನಾನು ಚೆನ್ನಾಗಿ ತಿಳಿದಿರುವೆನು. ನನ್ನ ಪೂಜನೀಯಳಾದ ಮಾತೆಯು ಅಂತ್ಯಜನನ್ನು ಮುಟ್ಟುವದು ಪಾಪವೆಂದು ತಿಳಿಯುತ್ತಿದ್ದಳು. ಈ ಕಾರಣದಿಂದ ಅವಳ ಮೇಲೆ ನನಗಿರುವ ಪೂಜ್ಯಭಾವವು ಕಡಿಮೆಯಾಗಲಾರದು. ಆದರೆ ನಾನು ಹರಿಯುತ್ತಿದ್ದ ಬಾವಿಯಲ್ಲಿ ಹೋಗಿ ಮುಳುಗಿ ಸಾಯಲಿಚ್ಛಿಸುವದಿಲ್ಲ. ನನ್ನ ತಾಯಿತಂದೆಗಳು ನನಗೆ ಬಾಲ್ಯದಿಂದಲೇ ಸ್ವಾತಂತ್ರ್ಯವನ್ನು ಕೊಟ್ಟಿರುವರು; ಮತ್ತು ಆ ದಿನ ನಾನು ಅವರಿಂದ ಭಿನ್ನವಾದ ವಿಚಾರವುಳ್ಳವನಾಗಿದ್ದರೂ ನನ್ನ ತಾಯಿಯ ಆಶೆಯು 'ಪುತ್ರನೇ, ನೀನು ಧನ್ಯನು' ಏಕೆಂದರೆ ನೀನು ನನ್ನೊಡನೆ ಯಾವ ತರದ ಪ್ರತಿಜ್ಞೆಗಳನ್ನು ಮಾಡಿದೆಯೋ ಅವುಗಳಲ್ಲಿ ಯಾರನ್ನಾದರೂ ಮುಟ್ಟುವದು ಪಾಪವೆಂಬ ಪ್ರತಿಜ್ಞೆ ಇರಲಿಲ್ಲ ಎಂದೇ ಹೇಳುತ್ತಿರುವದೆಂದು ನನ್ನ ವಿಶ್ವಾಸವಿದೆ. ನನ್ನನ್ನು ವಿಲಾಯಿತಿಗೆ ಕಳುಹಿಸುವಾಗ ನಾನು ಮೂರು ಪ್ರತಿಜ್ಞೆಗಳನ್ನು ಕೈಕೊಳ್ಳುವಂತೆ ಅವರು ಮಾಡಿದರು. ಆದರೆ ವಿಲಾಯತಿಯಲ್ಲಿ ಅಸ್ಪೃಶ್ಯತೆಯನ್ನು ಧರ್ಮವಾಗಿ ತಿಳಿಯಬೇಕೆಂಬ ಪ್ರತಿಜ್ಞೆಯು ಅದರಲ್ಲಿರಲಿಲ್ಲ.

ಬೆಳಗಾವಿನಗರದಲ್ಲಿ ಈಗ ಸ್ವಲ್ಪ (ಅಥವಾ ಹೆಚ್ಚು ಎಂದು ನನಗೆ ಗೊತ್ತಿಲ್ಲ) ಮಟ್ಟಿಗೆ ಚಳವಳವಾರಂಭವಾಗಿದೆಯೆಂದೂ ನಾಗರ ಮತ್ತು ವೈಶ್ಯ ಬಾಂಧವರು ಅದರ ನಾಯಕರೆಂದೂ ನನಗೆ ತಿಳಿದಿದೆ. ಅವರಲ್ಲಿ ಯಾರಾದರೂ ಇಲ್ಲಿದ್ದರೆ, ಅವರು ಗಾಂಧಿಯು ಭ್ರಷ್ಟನಾಗಿದ್ದಾನೆ—ಅವನು ಸನಾತನ ಧರ್ಮದ ಹೆಸರನ್ನೇ ಕೆಡಿಸುತ್ತಾನೆ ಎನ್ನುತ್ತಿರುವರೆಂದು ಗಂಭೀರವಾದ—ಅವರಿಗೆ ನಾನು ವಿವೇಕ ಮತ್ತು ದೃಢತಾಪೂರ್ವಕವಾಗಿ ಇಷ್ಟೇ ಹೇಳಬಿಚ್ಛಿಸುತ್ತೇನೆ—ಗಾಂಧಿಯು ಸನಾತನ ಧರ್ಮದ ಹೆಸರನ್ನು ಕೆಡಿಸುತ್ತಾನೆಂದು ಹೇಳಬಾರದು. ಅವನು ಏನೇ ಮಾತನ್ನು ಹೇಳುತ್ತಾನೋ ಅದರಲ್ಲಿ ಸನಾತನ ಧರ್ಮದ ಹೆಸರು ಶಾಶ್ವತವಾಗಿ ಉಳಿಯುವದು. ನಿಮ್ಮಲ್ಲಿ ದೊಡ್ಡ ದೊಡ್ಡ ಪಂಡಿತರಿರುವರು, ವೇದದ ಪ್ರತಿಯೊಂದು ಶಬ್ದವನ್ನು ಉಚ್ಚಾರಮಾಡಬಲ್ಲವರಿರುವರು—ಆದರೂ ನೀವು ತಪ್ಪನ್ನು ಮಾಡುತ್ತಿದ್ದೀರೆಂದು ನಾನು ಅವರಿಗೆ ಹೇಳುವೆನು. ಅಸ್ಪೃಶ್ಯತೆಯು ಹಿಂದೂ ಧರ್ಮದ ಮೂಲವೆಂದು ಯಾರು ತಿಳಿಯುವರೋ ಅವರು ಸನಾತನ ಧರ್ಮದ ಹೆಸರನ್ನು ಕೆಡಿಸುವವರಾಗಿರುವರು. ಉಪನಿಷತ್ತುಗಳಲ್ಲಿ ಮಹಾಭಾರತದಲ್ಲಿ, ಗೀತೆಯಲ್ಲಿ, ಎಲ್ಲಿಯೂ ಇದಕ್ಕೆ ಆಧಾರವಿಲ್ಲವೆಂದು ನಾನು ಎದೆ ತಟ್ಟಿ ಹೇಳುವೆನು. ನಾನೊಬ್ಬನೇ ಈ ಅಭಿಪ್ರಾಯದವನಾಗಿ ಉಳಿದರೂ ಅಸ್ಪೃಶ್ಯತೆಗೆ ನಾನು ಯಾವ ಆಧಾರವನ್ನೂ ಕಾಣುತ್ತಿದ್ದಿಲ್ಲವೋ ಅದಕ್ಕೆ ಹಿಂದೂಧರ್ಮದಲ್ಲಿ ಸ್ಥಾನವನ್ನು ಕೊಟ್ಟರೆ, ಹಿಂದೂ ಧರ್ಮಕ್ಕೆ ಕ್ಷಯರೋಗವು ತಗಲುವದೆಂದು ನಾನು ಕೊನೆಯವರೆಗೆ ಹೇಳುತ್ತಾ ಇರುವೆನು. ಮತ್ತು ಅದರ ನಾಶದಲ್ಲಿಯೇ ಅದು ಪರಿಣಾಮಗೊಳ್ಳುವದು. ಹಿಂದುಸ್ಥಾನದ ಉದ್ಧಾರವು ಮುಸಲ್ಮಾನರಮೇಲೂ ಕ್ರೈಸ್ತರಮೇಲೂ ಅವಲಂಬಿಸಿರುವದಕ್ಕಿಂತ ಹೆಚ್ಚು ಹಿಂದುಗಳು ತಮ್ಮ ಧರ್ಮದ ರಕ್ಷಣೆಯನ್ನು ಯಾವ ರೀತಿಯಲ್ಲಿ ಮಾಡುವರೆಂಬುದರ ಮೇಲೆ ಹೊಂದಿಕೊಂಡಿರುವದೆಂದು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೊಡನೆ ಹೇಳುವೆನು. ಏಕೆಂದರೆ ಮುಸಲ್ಮಾನರ ಕಾಲಿಕ ವಿಶ್ವಾಸವು ಇಲ್ಲವಿದೆ ಮಕ್ಕಾ ಕ್ಷೇತ್ರದಲ್ಲಿದೆ. ಕ್ರೈಸ್ತರ ಪುಣ್ಯಕ್ಷೇತ್ರವೂ ಜೆರೂಸಲೇಮಿನಲ್ಲಿದೆ. ನೀವು ಹಿಂದುಸ್ಥಾನದಲ್ಲೇ ನಿಂತು ಮೋಕ್ಷಪ್ರಾಪ್ತಿಯನ್ನು ಮಾಡಿಕೊಳ್ಳಬಹುದೆಂದು ನಂಬುವವರು. ಇದೇ ಮುಕ್ತಿಸ್ಥಳ ಮತ್ತು ಕಾಮಧೇನುವು, ಪುಣ್ಯಭೂಮಿಯಾಗಿದೆ. ಋಷಿ ಮುನಿಗಳು ಇದು ಕರ್ಮಭೂಮಿ—ಭೋಗಭೂಮಿಯಲ್ಲವೆಂದು ಹೇಳಿರುವರು. ಈ ಭೂಮಿಯ ನಿವಾಸಿಗಳ ಹತ್ತಿರ ನಾನು ಹೇಳುವದೇನೆಂದರೆ—ಈ ದಿನ ಹಿಂದೂ ಧರ್ಮವು ತಕ್ಕಡಿಯಲ್ಲಿರಿಸಲಾಗಿದೆ. ಲೋಕದ ಬೇರೆ ಎಲ್ಲ ಧರ್ಮಗಳೊಡನೆ ಅದರ ತುಲನೆಯಾಗುತ್ತಿದೆ. ಬುದ್ಧಿಗೆ ಮತ್ತು ದಯಾಧರ್ಮಕ್ಕೆ ವಿರೋಧವಾದ ಯಾವುದಾದರೂ ವಿಷಯದ ಸಮಾವೇಶವು ಹಿಂದೂ ಧರ್ಮದಲ್ಲಿ ಆದರೆ ಅದರ ನಾಶವು ನಿಶ್ಚಯವೆಂದು ತಿಳಿಯಬೇಕು. ಹಿಂದೂ ಧರ್ಮದ ಹೆಸರಿನಲ್ಲಿ ಈ ದಿನ ಎಷ್ಟು ಅನ್ಯಾಯವೂ ದುಷ್ಟತನವೂ ನಡೆಯುತ್ತಿದೆ ಎಂದು ತಿಳಿದು ಅಗತ್ಯವಿದ್ದರೆ ನಾನೊಬ್ಬನೇ ಈ ಅನ್ಯಾಯ ಮತ್ತು ದುಷ್ಟತನಕ್ಕೆ ವಿರುದ್ಧವಾಗಿ ಕಾದಾಡುವೆನು, ಒಬ್ಬನೇ ತಪಶ್ಚರ್ಯ ಮಾಡುವೆನು. ಅದರ ಹೆಸರನ್ನು ಜಪಿಸುತ್ತಾ ಸಾಯುವೆನು. ಒಂದುವೇಳೆ ನಾನು ಭ್ರಾಂತನಾಗಿ ಅಸ್ಪೃಶ್ಯತಾ ಸಮ್ಮಂಧವಾದ ವಿಚಾರಗಳಲ್ಲಿ ನಾನು ತಪ್ಪುಮಾಡಿದೆನು, ಅಸ್ಪೃಶ್ಯತೆಯು ಹಿಂದೂ ಧರ್ಮದ ಒಂದು ಅಂಗವಾಗಿದೆ, ನಾನು ಪಾಪವನ್ನು ಮಾಡಿದೆನು ಎಂದು ಹೇಳಿದರೆ, ತೆರೆದ ಮನಸ್ಸಿನಿಂದ ಆ ಮಾತುಗಳನ್ನು ಹೇಳುತ್ತಿದ್ದೇನೆಂದೂ, ಧೈರ್ಯನಾಲವೆ ನನ್ನ ವಿಚಾರಗಳನ್ನು ಬದಲಿಸುವೆನೆಂದೂ ನೀವು ತಿಳಿಯಬೇಕು. ಅಂತಹ ಮಾತುಗಳನ್ನು ನಾನು ಮೂರ್ಚಿತಾವಸ್ಥೆಯಲ್ಲಿ ಮಾತ್ರ ಉಚ್ಚರಿಸುತ್ತೇನೆಂದು ಭಾವಿಸಿರಿ.

ಈಗ ನಾನು ನಿಮ್ಮೊಡನೆ ಹೇಳುವ ಮಾತುಗಳಲ್ಲಿ ನನ್ನ ಸ್ವಾರ್ಥವಿಲ್ಲ. ಇದರಿಂದ ನಾನು ಯಾವ ಪದವಿಯನ್ನೂ ಪಡೆಯಲಿಚ್ಛಿಸುವದಿಲ್ಲ. 'ಭಂಗಿ' ಎಂಬ ಬಿರುದನ್ನು ಮಾತ್ರ ನಾನು ಪ್ರೀತಿಸುತ್ತೇನೆ. ಕೊಳೆಯನ್ನು ತೆಗೆದು ನಿರ್ಮಲಗೊಳಿಸುವದು ಎಂತಹ ಪುಣ್ಯಕಾರ್ಯವು? ಈ ಕೆಲಸವನ್ನು ಬ್ರಾಹ್ಮಣನು ಮಾಡಬಹುದು. ಭಂಗಿಯೂ ಮಾಡಬಹುದು. ಬ್ರಾಹ್ಮಣನು ಜ್ಞಾನಪೂರ್ವಕವಾಗಿ ಮಾಡುತ್ತಾನೆ. ಭಂಗಿಯು ಅಜ್ಞಾನಪೂರ್ವಕವಾಗಿ ಮಾಡುತ್ತಾನೆ. ನನಗೆ ಇಬ್ಬರೂ ಪೂಜ್ಯರೂ ಆದರಣೀಯರೂ ಆಗಿರುವರು. ಇಬ್ಬರ ಕಾರ್ಯದಲ್ಲಿ ಒಬ್ಬರ ಕಾರ್ಯವಾದರೂ ಲೋಪವಾದರೆ ಹಿಂದೂ ಧರ್ಮವೇ ಲೋಪವಾಗದೆ ಇರಲಿಕ್ಕಿಲ್ಲ.

ನನಗೆ ಸೇವಾಧರ್ಮವು ಪ್ರಿಯವಾಗಿದೆ. ಆದುದರಿಂದಲೇ ಭಂಗಿಯು ನನಗೆ ಪ್ರಿಯನಾಗಿರುವನು. ನಾನು ಅತ್ಯಂಜನೊಡನೆ ಕುಳಿತುಕೊಂಡು ಆಹಾರವನ್ನು ಸಹ ತೆಗೆದುಕೊಳ್ಳುತ್ತೇನೆ. ಆದರೆ ನೀವೂ ಹಾಗೆ ಮಾಡಿರಿ, ಅವರೊಡನೆ ಭೋಜನವನ್ನೂ, ವಿವಾಹ ಸಮ್ಮಂಧವನ್ನೂ ಮಾಡಿರೆಂದು ನಾನು ಹೇಳುವದಿಲ್ಲ. ಹಾಗೆ ಹೇಳುವ ಅಧಿಕಾರವಾದರೂ ನನಗೆಲ್ಲಿಂದ ಬರಬೇಕು? ಯಾರಾದರೂ ಅತ್ಯಂಜವರ್ಗದ ಹುಡುಗಿಯು ಅಥವಾ ಕುಷ್ಠರೋಗಿಯು ನನ್ನ ಸೇವೆಯನ್ನು ಬಯಸುವದಾದರೆ ಆ ಸೇವೆಯನ್ನು ಮಾಡಬಾರದೆಂದೂ, ತನ್ನ ಕೈಯಿಂದ ನನಗೆ ಆಹಾರವನ್ನು ಕೊಡಲಿಚ್ಛಿಸಿದರೆ ತಿನ್ನುವದಿಲ್ಲವೆಂದೂ ಹೇಳಲಾರೆ. ಈಶ್ವರನು ಇಚ್ಛಿಸಿದ್ದರೆ ನನ್ನನ್ನು ರಕ್ಷಿಸಲಿ ಅಥವ ಕೊಲ್ಲಲಿ, ನಾನು ಆ ಸೇವೆಯನ್ನು ಮಾಡದೆ ಇರಲಾರೆನು. ನಾನು ಭಂಗೀ ಮತ್ತು ಕುಷ್ಠರೋಗಿಯ ಸೇವೆಯನ್ನು ಮಾಡುವದು, ಅವರಿಗೆ ತಿನ್ನಿಸಿ ಆ ಮೇಲೆ ತಿನ್ನುವದು—ಇದೇ ನನ್ನ ಧರ್ಮವೆಂದು ತಿಳಿಯುತ್ತೇನೆ. ಆದರೆ ನಾನು ನಿಮ್ಮೊಡನೆ ವ್ಯವಹಾರ ಧರ್ಮದ ಮೇರೆಯನ್ನು ಮೀರಿ ನಡೆಯಿರೆಂದು ಹೇಳುವದಿಲ್ಲ. ನಿಮ್ಮೊಡನೆ ನಾನು ಕೇಳಿಕೊಳ್ಳುವದಿಷ್ಟು. ವರ್ಣಾಶ್ರಮವನ್ನು ಇಟ್ಟುಕೊಳ್ಳಬೇಕು. ಈಶ್ವರನು ೪ ವರ್ಣಗಳ ರಚನೆಯನ್ನು ಮಾಡಿರುವನು. ಇದರ ಅರ್ಥವನ್ನು ನಾನು ತಿಳಿಯಬಲ್ಲೆನು. ಆದರೆ ನೀವು ಐದನೇ ಅಸ್ಪೃಶ್ಯ ವರ್ಗವನ್ನು ರಚಿಸಬೇಡಿರಿ. 'ಅಸ್ಪೃಶ್ಯ' ಶಬ್ದವನ್ನು ಕೇಳುವಾಗ ನನಗೆ ವೇದನೆಯಾಗುತ್ತದೆ. ಯಾರು ನನ್ನನ್ನು ವಿರೋಧಿಸುತ್ತಿರುವರೋ ಅವರೊಡನೆ ನಾನು ಪ್ರಾರ್ಥಿಸುವದೇನೆಂದರೆ ನೀವು ವಿಚಾರ ಮಾಡಿರಿ! ನನ್ನ ಹತ್ತಿರ ಒಂದು ಚರ್ಚೆಮಾಡಿ ನಾನು ಹೇಳುವದೇನೆಂದು ತಿಳಿದುಕೊಳ್ಳಿರಿ! ನೀವು ವಿವೇಕ ಮತ್ತು ವಿಚಾರ ಇವೆರಡನ್ನು ಬಿಟ್ಟು ಮಾತನಾಡುತ್ತಿದ್ದೀರಿ. ಅದರಿಂದ ಫಲವಿಲ್ಲ. ಅದರಿಂದ ನನಗೆ ಇಷ್ಟು ಮಾತ್ರ ದುಃಖವಾಗುತ್ತದೆ. ಅವರ ಮೇಲೆ ದ್ವೇಷವು ನನಗಿಲ್ಲ. ಅವರು ನನಗೆ ಹೀಗೆ ಬರೆಯುತ್ತಾರೆ—ಹಿಂದೂ ಧರ್ಮದ ಆಧಾರದ ಮೇಲೆಯೂ ಪಂಡಿತರ ಸಹಾಯದಿಂದಲೂ ನಿಮ್ಮ ಮೇಲೆ ಯಾವ ಆಕ್ಷೇಪಗಳನ್ನೆತ್ತುತ್ತಿದ್ದರೂ ಅದಕ್ಕೆ ಸತ್ಯವಿಲ್ಲ. ನಾವು ನಿಮ್ಮ ಅಭಿಪ್ರಾಯವಿರುವ ನಮ್ಮ ಶ್ರೀಯವರು ಬಹಳ ಸಹಾಯವನ್ನು ಕೇಳುತ್ತೇವೆ. ಅದರಿಂದ ಅನೇಕ ಶಾಸ್ತ್ರಗಳು ನಿಮ್ಮನ್ನು ಸಮರ್ಥಿಸುವವೆಂದು ನಿಮಗೆ ತಿಳಿಯುವದು. ನೀವು ಅಸ್ಪೃಶ್ಯತಾ ನಿವಾರಣೆ ಬಗ್ಗೆ ಯಾವ ಪ್ರಬಲವಾದ ಚಳವಳಿಯನ್ನು ಮಾಡಿ ಕೆಲಸಮಾಡುತ್ತಿರುವಿರೋ ಅಷ್ಟು ಉತ್ಸಾಹದಿಂದ ಕೆಲಸ ಮಾಡಲು ನಮ್ಮಿಂದಾಗುವದಿಲ್ಲವೆಂಬುದು ನಿಜ. ನೀವು ನಿರ್ಭಯರಾಗಿದ್ದೀರಿ—ನಾವು ಬಹಳ ಹಿಂದೆಮುಂದೆ ಯೋಚಿಸಬೇಕಾಗುತ್ತದೆ. ದ್ರೋಣಾಚಾರ್ಯ ಮತ್ತು ಭೀಷ್ಮಾಚಾರ್ಯರ ಹತ್ತಿರ ಶ್ರೀ ಕೃಷ್ಣನು ಬಂದು ನೀವು ಪಾಂಡವರಿಗಾಗಿ ಯುದ್ಧ ಮಾಡುವಿರೋ ಎಂದು ಕೇಳುವಾಗ ಅವರೇನು ಉತ್ತರಕೊಟ್ಟರು? ನಮ್ಮ ಮುಂದೆ ಜೀವನೋಪಾಯದ ಪ್ರಶ್ನೆ ಇದೆ—ನಾವೇನು ಮಾಡಲಿ? ನಮ್ಮ ನಡುವೆ ಎಷ್ಟೋ ಮಂದಿ ದ್ರೋಣಾಚಾರ್ಯರೂ ಭೀಷ್ಮಾಚಾರ್ಯರೂ ಇರುವರು. ಅವರು ಯಾವ ಕಾರ್ಯವನ್ನೂ ಮಾಡಲೂ ಅಸಮರ್ಥರಾಗಿರುವರು. ಈ ವಿಷ್ಣುಚಕ್ರ ದೋಷವಲ್ಲ—ಸಮಯದೋಷ—ಪರಿಸ್ಥಿತಿಯ ದೋಷ. ಆದರೆ ಅವರು ಮನಸ್ಸಿನಲ್ಲಿ ತಾವು ಒಳ್ಳೇಕಾರ್ಯವನ್ನು ಮಾಡುತ್ತಿದ್ದೇವೆಂದು ತಿಳಿಯುತ್ತಾರೆ. ಅಂತ ಈ ಮನೋಧರ್ಮವು ನನಗೆ ತೃಪ್ತಿಯನ್ನು ಕೊಡುತ್ತಿದೆ.

ಇದನ್ನು ಹೇಳುವಾಗ ನಾನು ಇನ್ನೊಂದು ಮಾತನ್ನು ಹೇಳಬಿಚ್ಛಿಸುತ್ತೇನೆ. ಸತ್ಯಾಗ್ರಹಿಯು 'ಕೊಲ್ಲುವದಲ್ಲ—ಸಾಯುವದೇ' ನನ್ನ ಧರ್ಮವಾಗಿದೆ. ಆದುದರಿಂದ ನನ್ನ ಸ್ವಂತಜೀವಿತದಲ್ಲಿ ನಾನು ಕೆಲಸಮಾಡುವೆನು. ನಿಮ್ಮಲ್ಲಿ ನನ್ನದೊಂದು ಪ್ರಾರ್ಥನೆ ಇದೆ, ನೀವು ಅಸ್ಪೃಶ್ಯತೆಯು ಹಿಂದೂಧರ್ಮದ ಪಾಪವೆಂದು ಹೇಳುವ ಅಧಿಕಾರವನ್ನು ಕೊಡಿರಿ. ನಿಮ್ಮಿಂದ ಸಾಧ್ಯವಾದರೆ ಹಿಂದೂ ಸಂಸಾರದ ಹೃದಯವನ್ನು ಜಾಗ್ರತೆಗೊಳಿಸಿರಿ. ಆದರೆ ನನಗೂ ದಾಗಿಯಾತಲು ಅಧಿಕಾರವಿಲ್ಲ. ಸತ್ಯಾಗ್ರಹಿಯು ಏಕಮಾರ್ಗಿಯಾಗಿರುತ್ತಾನೆ. ಅವನು ಯಾರೊಡನೆಯೂ ಚರ್ಚೆಯನ್ನು ನಡೆಸುವದಿಲ್ಲ. ಯಾರೊಡನೆಯೂ ಬಿನ್ನವನ್ನು ಮಾಡಿಕೊಳ್ಳುವದಿಲ್ಲ. ಆದುದರಿಂದ ನಾನು ನಿಮ್ಮೊಡನೆ ಪ್ರೇಮಭಾವದಿಂದ ವರ್ತಿಸುವೆನೆಂದು ನಿಮಗೆ ವಚನ ಕೊಡುವೆನು. ನಾನೊಬ್ಬನೇ ಉಳಿದರೂ ಕೂಡ 'ರಕ್ಷಿಸಿರಿ ರಕ್ಷಿಸಿರಿ' ಎಂದೆಚ್ಚರಿಸುತ್ತಾ ಅದೇ ಮಾತನ್ನು ಹೇಳುವೆನು.

ಇನ್ನು ಯಾರು ಅಸ್ಪೃಶ್ಯತೆಯ ವಿಚಾರವಾಗಿ ನನ್ನನ್ನು ಸಮರ್ಥಿಸುತ್ತಿದ್ದಾರೆಯೋ ಅವರೊಡನೆಯೂ 'ಅಸ್ಪೃಶ್ಯ' ವರ್ಗದವರೊಡನೆಯೂ ನನ್ನ ವಿನಂತಿ ಇದೆ. ನಿಮ್ಮನ್ನು ಪರಿಹಾಸ್ಯ ಮಾಡುವವರ ಮತ್ತು ವಿರೋಧಿಸುವವರ ವಿಷಯವಾಗಿ ಸಹನ ಶೀಲತೆಯನ್ನು ತಾಳಿರಿ. ತುಲಸೀದಾಸರು 'ದಯೆಯೇ ಧರ್ಮದ ಮೂಲ'ವೆಂದು ಹೇಳಿರುವರು. ಪ್ರೇಮಭಾವವನ್ನು ಬಿಟ್ಟರೆಂದರೆ ನೀವು ಸೋತುಹೋಗುವಿರಿ. ಅಸ್ಪೃಶ್ಯತೆಯನ್ನು ನೀವು ಹೇಗೆ ಪಾಪವೆಂದು ತಿಳಿಯುತ್ತೀರೋ, ಹಾಗೆಯೇ ನಿಮ್ಮ ವಿರೋಧಿಗಳನ್ನು ತಿರಸ್ಕರಿಸಿದ ಪಾಪಕ್ಕೆ ನೀವು ಗುರಿಯಾಗಬೇಡಿರಿ. ಯಾರು ನಿಮ್ಮನ್ನು ಬೈದು ಮಾತನಾಡುವರೋ ಅವರೊಡನೆ ನಗುತ್ತ ಮಾತನಾಡಿರಿ. ಅವರಮೇಲೆ ಮನಃಪೂರ್ವಕವಾದ ಪ್ರೇಮವನ್ನಿಟ್ಟು ಶುದ್ಧ ಆಚಾರ ಮತ್ತು ವಿಚಾರವನ್ನು ಪಾಲಿಸಿರಿ. ಹೀಗೆ ನೀವು ಮಾಡುವದಾದರೆ ಅಸ್ಪೃಶ್ಯತಾರೂಪೀ ಪಾಪವು ನಾಶಹೊಂದುವದು.

ದೇಶದ ಒಂದೇ ರಾಜಕೀಯ ಸಂಸ್ಥೆಯಾದ ಜಮಿಾನು ದಾರರ ಸಂಘವು ಸ್ಥಾಪಿಸಲ್ಪಟ್ಟು ಹತ್ತು ಹದಿನೈದು ವರ್ಷಗಳಾದರೂ ಪಬ್ಲಿಕ್ ಮೀಟಿಂಗು ನಡಿಸಲು ಅನುಕೂಲವಾಗುವಂತ ಚಾವಡಿಯುಳ್ಳ ತನ್ನದೊಂದು ಕಟ್ಟಡವನ್ನು ಏರ್ಪಡಿಸಿಕೊಳ್ಳದೆ ಇರುವುದು ಆದರ ಹೆಸರಿಗೆ ಒಂದು ಕುಂದಕವಾಗಿಯೇ ತೋರುತ್ತದೆ. ಆದರ ಹೆಡ್ ಆಫೀಸಿನಲ್ಲಿ ಆಫೀಸ್ ಇಡಲು, ಮೀಟಿಂಗು ನಡಿಸಲು ಬೇರೆ ಕಟ್ಟಡಗಳನ್ನು ಬಾಡಿಗೆಗೆ ತೆಗೆದುಕೊಳ್ಳಬೇಕಾಗಿದೆ. ಇಂಥಾ ಕೆಲಸಕ್ಕೆ ನ್ಯಾಯವಾದ ಕಟ್ಟಡವು ಸಿಕ್ಕುವದೂ ದುರ್ಲಭ. ಈ ಮೇಲ್ಕಂಡ ಕಾರಣಗಳಿಂದಲೇ ಸಂಘದವರು ಕೆಲವು ವರ್ಷಗಳಿಂದ ತಮ್ಮ ಜನರಲ್ ಮೀಟಿಂಗಿನಲ್ಲಿ ಸಂಘದ ಒಂದು ಹಾಲನ್ನು ಕಟ್ಟಬೇಕೆಂದು ತೀರ್ಮಾನಿಸಿದ್ದಾಗಿದೆ. ಆದರೆ ಎಗ್ಸಿಕ್ಯುಟಿವ್ ಕಮಿಟಿಯವರು ಈ ವಿಷಯಕ್ಕೆ ಅಷ್ಟಷ್ಟು ಗಮನಕೊಡದ್ದರಿಂದ ಅದು ಮೂಲೆಗೆ ಒತ್ತಲ್ಪಟ್ಟಿತು.

ಕೆಲವು ದಿವಸಗಳ ಹಿಂದೆ ಸಂಘದ ಕಮಿಟಿಮೆಂಬರುಗಳಲ್ಲಿ ಕೆಲವರು ಹಾಲಿನ ಆವಶ್ಯಕತೆಯು ತುರ್ತಾದುದೆಂದು ಯೋಚಿಸಿ ಅದಕ್ಕೆ ಬೇಕಾಗುವ ಕೆಲವು ಸಾವಿರ ರುಪಾಯಿಗಳನ್ನು ದೇಶದ ಮಹನೀಯರಿಂದ ಬೇಡಿ ಚಂದಾವಸೂಲ್ಮಾಡಬಹುದೆಂಬ ಧೈರ್ಯವನ್ನು ತಾಳಿದರಾದಲ್ಲಿಂದು ಪ್ರಕಟವಾಗಿದ್ದ ಇಂಥಾ ಹಾಲಿಗೆ ಕಟ್ಟಲು ಅನುಕೂಲವಾದ ಮಡಿಕೇರಿ ಪೋಸ್ಟಾಫೀಸಿನ ಎದುರಿನ ಜಾಗೆ, ಮೂರ್ನಾಡಿನ ಬಂಗ್ಲೆಯನ್ನು ಸಂಘಕ್ಕೆ ಕೊಂಡುಕೊಳ್ಳಲು ಯತ್ನಿಸಿದರು. ಸಂಘದ ಅಧ್ಯಕ್ಷರಾದ ಜನರಲ್ ಸೆಕ್ರೆಟರಿಯವರೂ ಈ ವಿಚಾರದಲ್ಲಿ ಶ್ರಮವಹಿಸಿದರೆಂದು ಯೋಚಿಸಿ ಆ ಕಟ್ಟಡದ [illegible] ದ ಕ್ರಯವನ್ನೆಲ್ಲಾ ಕಂತುಮಾಡಿಕೊಂಡಿಗೆ [illegible] ಮುಂಗಡವಾಗಿ ಕೊಟ್ಟು [illegible] ಯನ್ನು ಕೇಳಿದರು. ಅದಕ್ಕೆ [illegible] ಈ ಕ್ರಯವು ಅವಶ್ಯಕತೆ ಹೆಚ್ಚು [illegible] ದುಂದು [illegible] ಗಾರರಾ ಅವನ್ನು ಬೇಡಿಕೊಳ್ಳ ಮಹನೀಯರು ಒಂದೆ

ತ್ತುವರೆ ಸಾವಿರ ರುಪಾಯಿಗೆ ಪಡಕೊಂಡರೆಂದು ತಿಳಿಯುತ್ತೇವೆ.

ತಾ. 15ರಲ್ಲು ಮೂರ್ನಾಡಿನಲ್ಲು ನಡೆದ ಸಂಘದ ಕಮಿಟಿ ಮೀಟಿಂಗಿನಲ್ಲು ಈ ವಿಷಯ ಚರ್ಚಿಸಲ್ಪಟ್ಟು ಯೋಗ್ಯವಾದ ಹಳೇ ಕಟ್ಟಡವು ದೊರೆಯುವುದಿಲ್ಲವಾದರೆ ಹೊಸಕಟ್ಟಡವನ್ನಾದರೂ ಕಟ್ಟಿಸಬೇಕೆಂದು ತೀರ್ಮಾನಿಸಿ ಅದಕ್ಕಾಗಿ ದೇಶದಲ್ಲೆಲ್ಲಾ ತಿರುಗಿ ಚಂದಾ ವಸೂಲ್ಮಾಡಲಿಕ್ಕೆ ಒಂದು ಕಮಿಟಿಯನ್ನು ನೇಮಿಸಿರುವರು. ಈ ಕಮಿಟಿಯವರು ತಮ್ಮ ಕೆಲಸವನ್ನು ಒಡನೆ ಕೈಕೊಂಡದ್ದಾದರೆ ಆವರ ಪ್ರಯತ್ನವು ಸಫಲವಾಗುವದರಲ್ಲಿ ಸಂದೇಹವಿಲ್ಲ. ಈ ವರ್ಷ ದೇಶದಲ್ಲಿ ಆದ ಹೆಚ್ಚಿನ ಕಾಫಿ ಬೆಳೆಯು ಅದಕ್ಕೆ ದೊರೆತಿರುವ ಅಸಾಧಾರಣವಾದ ಉತ್ತಮ ಕ್ರಯವೂ ಸಂಘದ ಇಂಥಾ ದೊಡ್ಡ ಕೆಲಸಕ್ಕೆ ಉತ್ತೇಜನಕರವಾಗಿರುವದು. ಈ ವರ್ಷ ದೇಶೋಪಕಾರಾರ್ಥವಾಗಿ ಧನ ಸಹಾಯವನ್ನೀಯದ ಪ್ಲಾಂಟರುಗಳು ಮತ್ತ್ಯಾವಾಗನೀಡುವರು? ರೈತರು ತಮ್ಮ ಶಕ್ತ್ಯಾನುಸಾರ ಸಹಾಯಮಾಡುವರೆಂದು ಹೇಳಲಾಸೆವು. ಹ್ಯಾಗೂ ಪ್ರತಿಯೊಬ್ಬ ಜಮಿಾನುದಾರನೂ ಈ ಕೆಲಸಕ್ಕೆ ಸಹಾಯದ ಕೈ ಕೊಡಬೇಕಾಗಿ ಆಶಿಸುತ್ತೇವೆ.

ಸಂಘದ ಅಭಿವೃದ್ಧಿಗಾಗಿ ಬಹು ಮುತುವರ್ಜಿಯಿಂದ ಕೆಲಸಮಾಡಿದ ರಾಜಕಾರ್ಯ ಪ್ರಸಕ್ತ ರಾಮಬಹದ್ದೂರ್ ಲೇಟ್ ಮನಿಯಪಂಡ ಮುತ್ತಣ್ಣನವರ ಪತ್ನಿಯವರು ತಮ್ಮ ಪತಿಯ ಜ್ಞಾಪಕಾರ್ಥವಾಗಿ ಸಂಘದ ಹಾಲ್ ಕಟ್ಟಲಿಕ್ಕೆ ಒಂದುಸಾವಿರ ರುಪಾಯಿಯನ್ನು ಕೊಡುವರೆಂದು ವಾಗ್ದಾನಮಾಡಿರುವದು ಸಂತೋಷಕರವಾದಸಂಗತಿಯಾಗಿದೆ. ಮುತ್ತಣ್ಣನವರು ಜೀವಿತರಾಗಿದ್ದರೆ ಈ ಕೆಲಸಕ್ಕೆ ಆವರ ಸಹಾಯವು ಬಹಳವಾಗಿದೊರೆಯುತ್ತಿತ್ತೆಂದುನಾವು ಈಗಹೇಳಬೇಕಾದದ್ದಿಲ್ಲ. ಅವರ ಪತ್ನಿಯವರ ಉದಾರ ಗುಣದ ಉದಾಹರಣೆಯನ್ನು ಇನ್ನೂ ಅನೇಕ ಪರೋಪಕಾರಿಗಳಾದ ಐಶ್ವರ್ಯವಂತರು ಹಿಂಬಾಲಿಸುವರೆಂದೇ ನಮ್ಮ ಭಾವನೆ. ಇಷ್ಟೇ ಅಲ್ಲ, ಈ ಹಾಲನ್ನು ಒಬ್ಬರಾಗಿಯೇ ಕಟ್ಟಿಸುವಷ್ಟು ಶ್ರೀಮಂತರು ನಮ್ಮ ದೇಶದಲ್ಲಿ ಹಲವರು ಇರುವರು. ಆದರೆ ಅಂಥವರು ತಮ್ಮ ಐಶ್ವರ್ಯದಷ್ಟೇ ತಮ್ಮ ಉದಾರತ್ವವನ್ನು ದೊಡ್ಡದು ಮಾಡಬೇಕಾಗಿದೆ. ಪರದೇಶಗಳಲ್ಲಿ ಇಂಥಾ ಕೆಲಸಗಳಿಗೆ ಅನುಕೂಲಸ್ಥರಾದ ಮಹನೀಯರು ಮಾಡುತ್ತಿರುವ ಲಕ್ಷಗಟ್ಲೆ ಧನ ಸಹಾಯವನ್ನು ನಮ್ಮ ದೇಶಸ್ಥರು ಕೇಳಿರಲಾರರೇ? ಅವರನ್ನು ಹಿಂಬಾಲಿಸುವವರು ಇಲ್ಲಿ ಅಲ್ಪ ಸ್ವಲ್ಪವಾದರೂ ಇಲ್ಲದಾಗಲಿಕ್ಕಿಲ್ಲವಾಗಿ ಅಪೇಕ್ಷಿಸುತ್ತೇವೆ. ತಮ್ಮ ಉದಾರಗುಣದ ಜ್ಞಾಪಕವನ್ನು ದೀರ್ಘಕಾಲ ದೇಶೀಯರ ಕಣ್ಣೆದುರಿಗೆ ಇಡಲು ಇದೊಂದು ಸುಸಂಧಿಯಾಗಿದೆ. ಇಂಥಾ ಸಂದರ್ಭಗಳು ದೊರೆಯುವದು ಅಪರೂಪ. ಆದುದರಿಂದ ದೇಶಾಭಿಮಾನಿಗಳು ಈ ಸಮಯವನ್ನು ಕಳಕೊಳ್ಳಲಿಕ್ಕಿಲ್ಲವಾಗಿ ನಂಬುತ್ತೇವೆ.

ಮೂರ್ನಾಡಿನ ಮೀಟಿಂಗ್‌ಗಳು.

ಜಮಿಾನ್ದಾರರ ಸಂಘದ ಕಮಿಟಿ ಮೀಟಿಂಗು.

ಫೆಬ್ರವರಿ ತಾರೀಕು 15ರಲ್ಲು ಜಮಿಾನ್ದಾರರ ಸಂಘದ ಎಗ್ಸಿಕ್ಯುಟಿವ್ ಕಮಿಟಿ ಮೀಟಿಂಗೊಂದು ಮೂರ್ನಾಡಿನ ಪಾಂಡಂಡಾಣೆಯಲ್ಲಿ ನಡೆಯಿತು. ಸಂಘದ ಅಧ್ಯಕ್ಷರಾದ ರಾ. ಬಾ. ಕೋದಂಡ ಅಪ್ಪಯ್ಯನವರು ಮೀಟಿಂಗಿನ ಚೇರ್ ಮೇನಾಗಿದ್ದರು. 17 ಮೆಂಬರುಗಳು ಹಾಜರಿದ್ದರು.

1. ಈ ವರುಷದ ಕಾನ್‌ಫರೆನ್ಸು ಮಡಿಕೇರಿ ತಾಲೋಕಿನವರ ಕೋರಿಕೆ ಮೇರೆ ಮೂರ್ನಾಡಿನಲ್ಲಿ ನಡಿಸುವಂತೆ ತೀರ್ಮಾನವಾಯಿತು.

2. ಈ ವಾರ್ಷಿಕ ಜನರಲ್ ಮೀಟಿಂಗಿನ ಅಧ್ಯಕ್ಷ ಪದವಿಗೆ ಮೆ. ಬಿಳುಗುಂದದ ಅಬ್ದುಲ್ ಗಫ್ಫಾರ್‌ಖಾನ್ ಬ್ಯಾರಿಯವರನ್ನು ಒಮ್ಮತದಿಂದ ಚುನಾಯಿಸಿದರು.

3. ಈ ಮಹಾಸಭೆಯು ಏಪ್ರಿಲ್ ತಾರೀಕು 11, 12, 13ರಲ್ಲು ನಡಿಸುವಂತೆ ತೀರ್ಮಾನವಾಯಿತು.

4. ಈ ಕಾನ್‌ಫರೆನ್ಸಿನ ಸಮಯದಲ್ಲು ನೆರೆ ಪ್ರಾಂತ್ಯದಿಂದ ಕೆಲವು ಮುಖಂಡರುಗಳಿಗೆ ಆಮಂತ್ರಣ ಕಳುಹಿಸಿ ಕರೆಯಿಸಿ ಉಪನ್ಯಾಸಗಳನ್ನು ಕೊಡಿಸುವಂತೆಯೂ, ಇದಕ್ಕೆ ಬೇಕಾಗುವ ಏರ್ಪಾಡನ್ನು ಮಾಡುವಂತೆ ಸ್ವಾಗತ ಕಮಿಟಿಯನ್ನು ಕೇಳಿಕೊಳ್ಳುವುದಾಗಿಯೂ ಠರಾವು ಮಂಜೂರಾಯಿತು.

5. ಸಂಘಕ್ಕೆ ಒಂದು ಹಾಲನ್ನು ಮಡಿಕೇರಿಯಲ್ಲಿ ಕಟ್ಟಿಸುವ ಉದ್ದೇಶ್ಯ, ಬೇಕಾಗುವ ಹಣ ವಸೂಲಿಗಾಗಿ ಒಂದು ಕಮಿಟಿಯನ್ನು ನೇಮಿಸಿದರು.

6. ಕಳೆದ ವರುಷದ ಕಾನ್‌ಫರೆನ್ಸಿನ ಅಧ್ಯಕ್ಷರ ಭಾಷಣವನ್ನು, ಪ್ರೊಸೀಡಿಂಗ್ಸನ್ನು ಪ್ರಿಂಟು ಮಾಡಲು ತಡವಾದ್ದರಿಂದ ಅದನ್ನು ಪ್ರಿಂಟು ಮಾಡುವ ವಿಷಯದಲ್ಲಿ ಆ ಅಧ್ಯಕ್ಷರ ಇರಾದೆಯಂತೆ ನಡೆಯಬೇಕೆಂದು ತೀರ್ಮಾನವಾಯಿತು.

ಸ್ವಾಗತ ಕಮಿಟಿ ಮೀಟಿಂಗು.

ಮಡಿಕೇರಿ ತಾಲೋಕಿನವರು ಈ ವರುಷದ ಮಹಾಸಭೆಯನ್ನು ಮೂರ್ನಾಡಿನಲ್ಲಿ ನಡಿಸುವದಕ್ಕಾಗಿ ಸ್ವಾಗತದ ಏರ್ಪಾಡು ಮಾಡಲಿಕ್ಕೋಸ್ಕರ ಒಂದು ಪಬ್ಲಿಕ್ ಮೀಟಿಂಗನ್ನು ಆ ಸ್ಥಳದಲ್ಲಿಯೇ ನಡಿಸಿದರು. ರಾ. ಬಾ. ಕೆ. ಅಪ್ಪಯ್ಯನವರು ಮೀಟಿಂಗಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

1. ಸ್ವಾಗತ ಸಮಿತಿಯ ಅಧ್ಯಕ್ಷರಾಗಿ [illegible] ಪಾಂಡಂಡ ಮುತ್ತಣ್ಣನವರನ್ನು, [illegible] ದೇವಯ್ಯನವರನ್ನು, 86 ಜನರನ್ನು [illegible] ಚುನಾಯಿಸಿದರು. ಕಮಿಟಿ ಮೆಂಬರುಗಳನ್ನು ಹೆಚ್ಚಿಸುವ ಹಕ್ಕು ಈ ಸಮಿತಿಗೆ [illegible]

2. ಸ್ವಾಗತ [illegible] ಮಾರ್ಚಿ ತಾರೀಕು 1ರಲ್ಲಿ [illegible] ವಾಯಿತು.

3. ಚಂದಾಪಟ್ಟಿಯು ಹೊರಡಿಸಲು [illegible] ಎ. ಚಂಗಪ್ಪನವರು [illegible] ದಾ, [illegible] ಕೋ [illegible] ನವರು [illegible] ಸಿದ್ದವರು [illegible] ಅಲ್ಲಿಗೆ ನೆರೆದಿದ್ದ [illegible] ಪಟ್ಟಿಗೆ [illegible]

ಈ ಮೀಟಿಂಗುಗಳ ಅನಂತರ [illegible] " ದ ಕಾರ್ಯ [illegible] ಮಂಡ [illegible] ಅದಕ್ಕೆ [illegible] ಸಭೆದ ಅಧ್ಯಕ್ಷರಾದ ರಾ. ಬಾ. ಕೆ. ಅಪ್ಪಯ್ಯನವರು [illegible] ಸಭೆದ ವಿಷಯ [illegible] ಅದಕ್ಕೆ [illegible] ಕೇಳಿಕೊಂಡರು. ಈ ಸಭೆದ ಠರಾವನ್ನು [illegible] ಮಡಿಕೇರಿಯವರು [illegible] ಕೊಳ್ಳ ಮಾಡ ಕರುಂಬಯ್ಯನವರು ಆಕ್ಷೇಪಿಸಲು, ಈ ಸಭೆದ ಪ್ರಚಾರಕರಾದ ಸ್ವಾಮಿ [illegible] ಮಡಿಕೇರಿಗೆ ಬಂದು ಭಾಷಣ ಮಾಡಿ [illegible] ಯನ್ನು ಮಡಿಕೇರಿಯಲ್ಲಾದರೂ [illegible] ಕೊಟ್ಟ ಮೇರೆ ಅದನ್ನು [illegible] ಬಂದು [illegible] ಕಾಂಗ್ರೆಸ್ [illegible] ಮಹಾಸಭೆಯ ವೇಳೆಯಲ್ಲಿ ದೇಶದವರೆಲ್ಲರ [illegible] ಈ ಸಭೆದ ಜನರಲ್ ಮೀಟಿಂಗನ್ನು [illegible] ನಡಿಸಲು ಬೇಕಾಗುವ ಉದ್ಯೋಗಗಳನ್ನು [illegible] ನಾಯಿಸಲಾಗುವದೆಂದೂ ರಾ. ಬಾ. [illegible] ಉತ್ತರ ಕೊಟ್ಟರು.

ಅಲ್ಲಿ ನೆರೆದಿದ್ದ ಜನರು [illegible] ಕೊಡಗಿನ ಕಾಂಗ್ರೆಸ್ ಕಮಿಟಿಯ [illegible] ಮಿ. ಸಿ. ಯಸ್. ವೆಂಕಟ್ಟೆಯ್ಯನವರು ಕಾಂಗ್ರೆಸ್ ಮೆಂಬರುತನಕ್ಕೆ ಬೇಕಾದ ಅರ್ಹತೆಯನ್ನು [illegible] ಪ್ರಯೋಜನವನ್ನು [illegible] ಉದ್ದೇಶ [illegible] ಪ್ಪಯ್ಯನವರು [illegible] ಉಂಟಾಗುವ [illegible] ಗಳ ಸ್ಥಾಪಿಸಿದರು. [illegible] ಕಾಂಗ್ರೆಸ್ ಕಮಿಟಿಗೆ ಮೆಂಬರುಗಳಾ [illegible]

ಟೆರಿಟೋರಿಯಲ್ ಪ[illegible]

1925ನೇ ಇಸವಿ 14 [illegible] ತರಪೇತಿಗೆ ಬರತಕ್ಕವರು [illegible]

ಈ ಕೆಳಗೆ ನಮೂದಿಸಿದ ಮೇರೆ 14 [illegible] (ಕೊಡಗು) ಮರಕಾರ [illegible] ಡೇರಿಯಲ್ಲಿ) ಕರಪೇತು ಪ್ರಾರಂಭವಾಗುವದು.

1. (ಎ) ಐ. ಡಿ. ಯಫ್. ಆಫೀ[illegible] | [illegible] ನೇ ಇಸವಿ [illegible] ಸರುಗಳ ಮತ್ತು ಪಹಾಲ್ದಾರುಗಳ [illegible] ಸ್ಪೆಶಲ್ ತರಪೇತಿ. | [illegible] 12ರಿಂದ [illegible] 10ರವರೆಗೆ.

(ಆಫೀಸರುಗಳು ಮತ್ತು ಪಹಾಲ್ದಾರುಗಳು ಮಾರ್ಚಿ ತಾರೀಕು 12ನೇ ದಿನ ಪ್ರಾತಃಕಾಲ [illegible] ಗಂಟೆಗೆ ಪೋಲೀಸ್ ಲೈನ್ ಬಳಿ ಹಾಜರಾಗತಕ್ಕದ್ದು.)

(ಬಿ) ರಿಕ್ರೂಟುಗಳ ಪ್ರಾರಂಭದ ತರಪೇತು. | 1925ನೇ ಇಸವಿ ಮಾರ್ಚ್ 12ರಿಂದ ಏಪ್ರಿಲ್ 10ರ ವರೆಗೆ.

(ತಾರೀಕು 12—3—1925ನೇ ಪ್ರಾತಃಕಾಲ 8 ಗಂಟೆಗೆ ಪೋಲೀಸ್ ಲೈನ್ ಬಳಿ ಹಾಜರಾಗತಕ್ಕದ್ದು.)

(೨) ಕಾಲಕಾಲಕ್ಕಾಗ ಬೇಕಾದ ತರಪೇತು (ಕಳೆದ ವರುಷ ತರಪೇತು ಹೊಂದಿದ ಎಲ್ಲಾ ದರ್ಜೆಯವರು). | 1925ನೇ ಇಸವಿ ಏಪ್ರಿಲ್ 11ರಿಂದ ಮೇ ತಾ. ೫ರ ವರೆಗೆ.

(ಎಲ್ಲಾ ದರ್ಜೆಯವರು ಏಪ್ರಿಲ್ ತಾರೀಕು 11ನೇ ಪ್ರಾತಃಕಾಲ 8 ಗಂಟೆಗೆ ಸೆಂಟ್ರಲ್ ಹೈ ಸ್ಕೂಲ್ ಬಳಿ ಹಾಜರಾಗತಕ್ಕದ್ದು.)

ಯಾರಾದರೂ ಹಾಜರಾಗಲು ತಪ್ಪಿದಲ್ಲಿ ಅಂಥವರನ್ನು ದಂಡಿನ ನ್ಯಾಯಸಭೆಯು ಅಥವಾ ಕ್ರಿಮಿನಲ್ ಕೋರ್ಟಿನ ವಿಚಾರಣೆಗೆ ಗುರಿ ಪಡಿಸಲ್ಪಡುವರು.

Sd. C. G. M. PLUMER,
MAJOR,
Adndarcom. 11/3rd M. Regiment

ಬಡ ನಾರಾಯಣರ ಉದ್ಧಾರ.

ಈಗಿನ ಕಾಲದಲ್ಲಿ ವಿದ್ಯಾವಂತರ ದೃಷ್ಟಿಯು ದೇಶದ ಕಡೆ ಹೋಗುವುದೇ ಕಡಿಮೆ. ಅನೇಕರು ನಮ್ಮ ದೇಶದ ಏಳಿಗೆಯು ಆಗುವ ಬಗೆ ಹೇಗೆಂದು ಯೋಚಿಸುತ್ತಾರೆ. ಇದು ಸಂತೋಷಕರವಾದ ಸಂಗತಿಯೇ ಸರಿ. ಪತಿತ ಜನರಿಗೆ ಚೈತನ್ಯ ಒಂದು, ಅವರು ಮೆಲ್ಲಮೆಲ್ಲನೆ ಕೋಲೂರಿ ಏಳಬೇಕೆನ್ನುವ ಸಮಯಕ್ಕೆ, ಈ ಆತ್ಮ ತೇಜಸ್ಸಿನ ಭೂಮಿಯು ಕರುಣಾದ್ರ್ರನಿಯು ಶಿಕ್ಷಿತ ಮತ್ತು ನಿಸ್ವಾರ್ಥ ಪುರುಷರ ಕರ್ಣಗಳಲ್ಲಿ ಬಿದ್ದು ಪತ್ತುತ್ತಿದೆ. ಅವರ ಹೃದಯವು ಅನುತಾಪದಿಂದ ಕಂಪಿಸುತ್ತದೆ; ಅವರ ಹಸಿವು ತೃಷೆಗಳು ಕ್ಷೀಣವಾಗುತ್ತವೆ, ಮತ್ತೇನು? ಅಯ್ಯೋ, ಅವರು ತಮ್ಮ ತನು ಮನ ಧನಗಳನ್ನು ದೇಶ ಮಾತೆಯ ಸೇವೆಯಲ್ಲಿ ಧಾರೆ ಎರೆಯುವರು. ನಮ್ಮ ದೇಶದಲ್ಲಿ ಇಂಥಾ ಮಹಾ ಪುರುಷರು ಹಿಂದಕ್ಕೆ ಜನ್ಮವೆತ್ತಿದ್ದರು. ಇವರ ತ್ಯಾಗ, ತಪಸ್ಸು ಮತ್ತು ಶುಭ ಚಿಂತನೆಯ ಫಲವೇನೆಂದರೆ, ಹಿಮಾಚಲದಿಂದ ಕನ್ಯಾಕುಮಾರಿವರೆಗೂ, ಸಿಂಧು ದೇಶದಿಂದ ಬರ್ಮಾ ದೇಶದ ಪರ್ಯಂತರ ಹರಡಿರುವ ಪ್ರದೇಶದಲ್ಲಿ ಬಡ ಪ್ರಾಣಿಗಳು ಅನ್ನವಿಲ್ಲದೆ ನರಳುತ್ತಿರುವುದೇ! ಈ ಪ್ರಾಣಿಗಳ ಭಾವರಾಶಿಯು ದೇಶದ ಶಿಕ್ಷಿತ ಜನರನ್ನು ಅವರ ಮೋಹ ನಿದ್ರೆಯಿಂದ ಎಚ್ಚರಿಸಿ ದೇಶಸೇವೆಗಾಗಿ ಯತ್ನ ಮಾಡುವಂತೆ ಮಾಡಿದೆ.

ಈ ಉದ್ದೇಶವು ನೆರವೇರಲಿಕ್ಕೆ ನಮ್ಮ ಮುಂದಿರುವ ಮುಖ್ಯ ಕಾರ್ಯವೇನೆಂಬುದೇ ವಿಚಾರಾಸ್ಪದ ಸಂಗತಿ. ಸರ್ವ ದೇಶಗಳಲ್ಲಿಯೂ ತಮ್ಮ ತಮ್ಮ ಭಾಗ್ಯವು ಉದ್ಯಮ ಮತ್ತು ಚರಿತ್ರೆಯ ಮೇಲೆ ಹೊಂದಿದೆಯೇ ಹೊರತು ಜನ ಸಂಖ್ಯೆಯ ಮೇಲಾಗಲೀ, ಕ್ಷೇತ್ರಫಲದ ಮೇಲಾಗಲೀ ಹೊಂದಿಲ್ಲವೆಂದು ತೋರುತ್ತದೆ. ಒಂದುವೇಳೆ ಹೀಗಿದ್ದರೆ, ಭಾರತ ವರ್ಷವಾಗಲೀ ಅಥವ ಚೀನಾ ದೇಶವಾಗಲೀ ಉತ್ತಮ ದೇಶಗಳೆನ್ನಿಸಿಕೊಳ್ಳುತ್ತಿದ್ದವು. ಆದರೆ ಪ್ರಕೃತಿಯ ನಿಯಮವು ಬೇರೆಯಾಗಿದೆ; ಯೋಗ್ಯ ಜನರು ಜೀವಿಸುವ ರೀತಿಯಲ್ಲಿ ಅವರ ಪ್ರದೇಶವಿದೆ. ಈ ಕಾರಣದಿಂದಲೇ ಇಂಗ್ಲೆಂಡ್, ಫ್ರಾನ್ಸ್, ಜಪಾನ್ ಮೊದಲಾದ ದೇಶಗಳು ಸಣ್ಣ ದೇಶಗಳಾಗಿದ್ದಾಗ್ಯೂ ಇತರ ಎಲ್ಲ ದೇಶಗಳಿಗಿಂತ ಹೆಚ್ಚು ಯಶಸ್ಸು ಪಡೆದಿವೆ. ಈ ರಾಜ್ಯಗಳು ಎಷ್ಟೆಷ್ಟೋ ದೊಡ್ಡ ದೇಶಗಳನ್ನು ತಮ್ಮ ಆಡಳಿತಕ್ಕೆ ವಶೀಕರಣ ಮಾಡಿಕೊಂಡಿವೆ. ಕೆಲವು ವರುಷಗಳ ಹಿಂದಕ್ಕೆ ಈ ರಾಜ್ಯಗಳ ಹೆಸರತ್ತಿ ಹಾರಾಡುತ್ತಿರಲಿಲ್ಲ, ಈಗ ಇವುಗಳ ಪ್ರತಾಪವು ಸರ್ವ ದಿಕ್ಕಿಗೂ ಹರಡಿದೆ. ಇದರ ಕಾರಣವೇನಿರಬಹುದು? ಅಲ್ಲಿ ಈ ದೇಶಗಳ ಜನರು ಜೀವನ ಸಂಗ್ರಾಮದಲ್ಲಿ ಬದುಕುವಷ್ಟು ಯೋಗ್ಯರಿರಲಿಲ್ಲ, ಈಗ ಶಿಕ್ಷಣ ಬಲದಿಂದ ಎಲ್ಲ ತರದ ಯೋಗ್ಯತೆಯನ್ನು ಪಡೆದರು. ಅಗ್ಯೆ ಅವರು ಪ್ರಾಯಶಃ ಅಶಿಕ್ಷಿತರಾಗಿಯೂ, ಅಸಹಾಯರಾಗಿಯೂ ಇದ್ದರು, ಇವತ್ತಿಗೆ ಅವರು ನೂರಕ್ಕೆ ತೊಂಬತ್ತೊಂಬತ್ತು ಮಂದಿ ಶಿಕ್ಷಿತರಾಗಿಯೂ, ಸ್ವಾವಲಂಬಿಗಳಾಗಿಯೂ ಇದ್ದಾರೆ. ಹೀಗಿರುವಾಗ ಅವರು ಸ್ವತಂತ್ರರಾಗರೇ?

ನಮ್ಮ ದೇಶವನ್ನು ಸೋಲಿಸಿದಂಥ ಸ್ವಾತಂತ್ರ್ಯ ರಾಜ್ಯಗಳಿಗೆ ಸೋಲಿಸಲು ಸಾಧ್ಯವೇ? ಭರತಖಂಡವು ದೊಡ್ಡ ದ್ವೀಪವಾಗಿದ್ದು, ಮೂವತ್ತೊಂದು ಕೋಟಿ ಜನ ಸಂಖ್ಯೆಯುಳ್ಳದ್ದಾಗಿದೆ. ಇವರಲ್ಲಿ ಶೇಕಡ ನಾಲ್ಕು ಅಥವ ಐದು ಜನ ಮಾತ್ರ ಅಕ್ಷರಸ್ಥರು; ಜೀವನೋಪಾಯಕ್ಕೆ ತಕ್ಕದಾದ ವಿದ್ಯೆಯು ದೊರಕದೆ ಇರುವ ಕಾರಣ, ಇವರು ಸಹ ಜೀವನ ಸಂಗ್ರಾಮಕ್ಕೆ ಯೋಗ್ಯರೆನಿಸಿಕೊಂಡಿಲ್ಲ. ನಮ್ಮ ದಾರಿದ್ರ್ಯಕ್ಕೆ ಇದೇ ಮುಖ್ಯ ಕಾರಣ. ಅಗ್ಯೆ ನೂರಾರು ವರುಷಗಳಿಗೆ ಹಿಂದೆ ದೇಶದ ಸ್ಥಿತಿಯು ಉತ್ತಮವಾಗಿತ್ತೋ? ಇವತ್ತಿಗಿಂತ ಹೆಚ್ಚು ಜನ ವಿದ್ಯಾವಂತರಿದ್ದರೋ? ಎಂಬ ಪ್ರಶ್ನೆಗಳು ಏಳಬಹುದು. ಇದಕ್ಕೆ ಇಷ್ಟೇ ಹೇಳಬಹುದು. ಹಿಂದೆ ಜೀವನಕ್ಕೆ ಈಗಿನಷ್ಟು ಕಷ್ಟವಿರಲಿಲ್ಲ. ಆಗ ತಿನ್ನಲಿಕ್ಕೆ ಯಥೇಚ್ಛ ಅನ್ನ ಆಹಾರವಿತ್ತು. ಈಗಲಾದರೋ ಆಹಾರದ ಅಭಾವವೇ ಅಲ್ಲ; ಪೈಪೋಟಿಯೂ, ಕಷ್ಟಯೋಜ ಮುಂತಾದ ಕಠಿಣ ತರದ ಕಾರ್ಯಗಳು ದೇಶದಲ್ಲೆಲ್ಲಾ ತುಂಬಿಕೊಂಡಿವೆ. ಕಳೆದ ಎರಡು ಶತಮಾನಗಳಿಗಾಗಿ ನಮ್ಮ ಸ್ಥಿತಿಯೇ ಬೇರಾಗಿದೆ. ವಿಜ್ಞಾನ (science) ದ ಪ್ರಗತಿಯೊಡನೆ, ಶಿಲ್ಪ, ವ್ಯಾಪಾರ ಮತ್ತು ರಾಜನೀತಿಯ ಕ್ಷೇತ್ರದಲ್ಲಿ ಅವನತಿಯು ತೋರುತ್ತಿದೆ. ಇದರ ಫಲ ಸ್ವರೂಪವಾಗಿ ಎಲ್ಲೆಲ್ಲಿಯೂ ಕದನವು ನಡೆಯುತ್ತಿದೆ. ಭಾರತ ಖಂಡವೂ ಈ ಕದನದಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಭಾರತೀಯರು ಅಥವಾ ನ್ಯೂನತೆ, ಕರ್ದದಷ್ಟು ಮಡೊ..ಕ್ಕ ನುಗ್ಗಿ ಮೋಗಲು ಯತ್ನಿಸುತ್ತಾರೆ ಎನಲು, ಅದರಿಂದ ಹೊರಕ್ಕೆ ಬರುವ ಶಕ್ತಿ ಅವರಿಗಿಲ್ಲ. ಇವರು ತಾವು ನಾಗರಿಕರಾದರು, ಹೊಸ ದೇಶಗಳ ವಿಚಾರಗಳೇ ಇವರಿಗೆ ತಿಳಿಯುತ್ತಿರಲಿಲ್ಲ. ಹೀಗಿರುವಾಗ ಇವರು ಮುಂದರಿಯುವುದು ಹಾನೇ ಹೇಗೆ? ಇದರ ಫಲವೇನಾಗಿದೆಂಬುದು ನಿಮಗೆಲ್ಲರಿಗೂ ಕಠಿಣವಾಗಿ ಕಂಡಂತೆ ತೋರುತ್ತಿದೆ. ಎರಡು ಶತಮಾನಗಳಿಗೆ ಹಿಂದೆ ಯಾವ ದೇಶದಲ್ಲಿ ಧನ ಧಾನ್ಯವಿತ್ತೋ, ಎಲ್ಲಿ ಆನಂದವೂ, ಶಾಂತಿಯೂ ಇದ್ದವೋ, ಅಂಥಾ "ಸುಜಲಾಂ, ಸುಫಲಾಂ ಸಸ್ಯ ಶ್ಯಾಮಲಾಂ" ಭಾರತ ಭೂಮಿಯಲ್ಲಿ ಅಗ್ಯೆ ಹಾ, ಹಾ, ಕಾರ ಕೇಳಿಸುತ್ತಿದೆ! ಲಕ್ಷಾಂತರ ಜನರು ಈ ದೇಶದಲ್ಲಿ ಹುಟ್ಟಿ, ನಾನಾ ರೋಗಪೀಡಿತರಾಗಿ ಸಾಯುತ್ತಾರೆ. ನಿಲ್ಲಲಿಕ್ಕೆ ಅಂಗುಲ ಜಾಗವಿಲ್ಲ; ಹೊಟ್ಟೆ ತುಂಬ ಉಣ್ಣಲಿಕ್ಕೆ ಅನ್ನವಿಲ್ಲ; ಹೊಲಸು ಬಟ್ಟೆಗಳನ್ನೇ ಹಾಕಿಕೊಂಡು ಆಯುಷ್ಯ ಕಳೆಯುತ್ತಾರೆ; ಒಂದು ದಿನ ಎಲ್ಲಿಯೋ ಬಿದ್ದು ಪ್ರಾಣತ್ಯಾಗ ಮಾಡುವರು. ಹೇ! ಭಗವಾನ್, ಭಾರತೀಯರಿಗೆ ಇಂಥಾ ಅವಸ್ಥೆಯೇ?

ನಮ್ಮ ಭರತಖಂಡದ ಸ್ಥಿತಿಯನ್ನು ನೋಡಿದರೆ ಯಾರಿಗೆ ಹೊಟ್ಟೆ ಉರಿಯಲಾರದು! ಈ ದುಸ್ಥಿತಿಗೆ ಕಾರಣರು ಯಾರು?

ದೇಶ ಕಾಲಾನುಗುಣಕ್ಕೆ ಸರಿಯಾಗಿ ವ್ಯತ್ಯಾಸಗಳಾಗುವದೇನೋ ನಿಜ. ಅಂದಮೇಲೆ ಜವಾಬ್ದಾರರು ಯಾರು? ಸಮಾಲೋಚಿಸಿ ನೋಡಿದರೆ, ನಮ್ಮ ಜಾತೀಯ ಅಜ್ಞಾನ ಮತ್ತು ಸಂಕುಚಿತತ್ವ, ಇವೇ ಮೂಲಕಾರಣಗಳಾಗಿ ತೋರುತ್ತವೆ. ಲಕ್ಷಾಂತರ ನಮ್ಮ ನರ ನಾರಿಯರನ್ನು ನೀಚರೆಂದೂ ಅಸ್ಪೃಶ್ಯರೆಂದೂ, ಧಿಕ್ಕರಿಸಿ ಅವರಿಗೆ ಸರಿಯಾದ ವಿದ್ಯೆಯನ್ನು ಕೊಡದೆ ಮನಸ್ಸೋಚಿತವಾದ ಸ್ಥಾನದಿಂದ ಅವರನ್ನು ದೂರ ತಳ್ಳಿರುತ್ತೇವೆ. ಹಿಂದುಗಳ ಮುಖ್ಯ ಗ್ರಂಥಗಳಾದ ವೇದಗಳನ್ನು ಅವರು ಓದಲಾಗದು. 'ನೀವು ಮನುಷ್ಯರಲ್ಲ; ನಿಮ್ಮಲ್ಲಿ ಯಾವ ತರದ ಶಕ್ತಿಯೂ ಇಲ್ಲ; ನೀವು ಹುಟ್ಟುವಾಗಲೇ ಗುಲಾಮರು" ಎಂಬುದೇ ನಾವು ಆ ಬಡ ಜನರಿಗೆ ಕೊಡತಕ್ಕ ಉಪದೇಶ. ಅವರ ದರ್ಶನವು ನಮಗೆ ಅಶುಭ; ಅವರ ಮುಟ್ಟು ನಮಗೆ ಮೈಲಿಗೆ. ಹೀಗೆ ನಾವು ಅವರನ್ನು ಶಾಶ್ವತವಾಗಿಯೂ ಗುಲಾಮರನ್ನಾಗಿ ಮಾಡಿದೆವು.

ಈ ಇಪ್ಪತ್ತನೇ ಶತಮಾನದಲ್ಲಿ ಸಾಮಾನ್ಯವಾಗಿ ಎಲ್ಲ ದೇಶಗಳಲ್ಲಿಯೂ, 'ಸಾಮ್ಯ (equality): ಸ್ವಾಧೀನತೆ (liberty) ಮೈತ್ರಿ (fraternity)' ಇವುಗಳ ಪಾಠವು ಆರಂಭವಾಗಿದೆ. ಆದರೆ ಲಕ್ಷಾಂತರ ಅಭಾಗ್ಯ ಭಾರತೀಯರ ಅವಸ್ಥೆಯು ಏನಾದರೂ ಸುಧಾರಿತವಾಗಿದೆಯೋ? ಏನೂ ಇಲ್ಲವೆಂದೇ ಹೇಳಬೇಕು. ಈ ಹಿಂದುಳಿದ ಜನರಿಗೆ ಯೋಗ್ಯ ಶಿಕ್ಷಣವನ್ನು ಕೊಡುವ ವಿಷಯ ಯಾವ ಪ್ರಯತ್ನವೂ ನಡೆಯುವದಿಲ್ಲ. ಇವರು ಯಾವ ಅಜ್ಞಾನ ತಿಮಿರದಲ್ಲಿ ಹುಟ್ಟಿದರೋ, ಅದೇ ತಿಮಿರದಲ್ಲಿ ಸಾಯುತ್ತಿರುವರು. ಹಿಂದೆ ಇವರನ್ನು ನೀಚರೆಂದೂ, ಅಸ್ಪೃಶ್ಯರೆಂದೂ, ಪಾಪಿಷ್ಠರೆಂತಲೂ ಈಗಲೂ ಯೋಚಿಸುತ್ತೇವೆ. ನಮ್ಮ ಸನಾತನ ಧರ್ಮವು "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ಮಹೋತ್ಕೃಷ್ಟ ತತ್ವದ ಮೇಲೆ ನಿಂತಿದೆ. ಈ ಧರ್ಮವು ನಮ್ಮ ಸಮಾನತ್ವದ ಶಿಕ್ಷಣವನ್ನೇ ಕೊಡುವಂತಹದು. ಹೀಗಿದ್ದೂ, ನಾವು ನಮ್ಮ ಜನರನ್ನೇ ಅಂತ್ಯಜರು, ನೀಚರು ಎಂದು ಹೇಳಿ ಅವರನ್ನು ಪಾದಾಕ್ರಾಂತರನ್ನಾಗಿ ಮಾಡಿಕೊಳ್ಳಬಹುದೇ?

ಎಷ್ಟರ ವರೆಗೆ ದೇಶಬಾಂಧವರು ಹಸಿವಿನಿಂದ ನಾವು ಅತ್ಯಾಚಾರವನ್ನು ನಡೆಸುತ್ತೇವೋ ಅಷ್ಟರವರೆಗೆ ನಮ್ಮ ದೇಶದ ಸ್ಥಿತಿಯು ಹೀನವಾಗುತ್ತಲೇ ಹೋಗುತ್ತದೆ. ನಮ್ಮ ದೇಶಕ್ಕೆ ಕಲ್ಯಾಣವಾಗಬೇಕಾದರೆ, ನಾವು ಇದುವರೆಗೂ ನೀಚರೆಂದು ಭಾವಿಸಿದ್ದ ಜನರನ್ನು ಉದ್ಧಾರ ಮಾಡಬೇಕು; ಅವರ ನಾನಾ ಕಾರಣದಿಂದ ಅವರಿಗೆ ಸಮಾನ ಸ್ಥಾನ ಕೊಡಬೇಕು. ಎಲ್ಲಿವರೆಗೆ ಈ ಜನರು—ಕೊನೆಯಲ್ಲಿ ಕೊಂಡತ್ತಿದರು. ಅಶಿಕ್ಷಿತರು—ಅನ್ನ ಹಾಹಾಕಾರ ಮಾಡುತ್ತ, ಅನ್ನ ವಸ್ತ್ರಗಳಿಲ್ಲದೆಯೂ ಇರುವರೋ, ಅದುವರೆಗೂ ನಮ್ಮ ದೇಶಕ್ಕೆ ಏಳಿಗೆಯೇ ಇಲ್ಲ. ನಾವು ಈ ಲಕ್ಷಾಂತರ ಸಹೋದರರನ್ನು—ತತ್ಕ್ಷಣ ಎತ್ತುವುದನ್ನು ಬಿಟ್ಟ ಕಡೆಯಲ್ಲಿ, ದೇಶವು ಉನ್ನತಿಯ ಶಿಖರವನ್ನು ಹಿಡಿಯುವುದು.

ನಮ್ಮ ಬಡ ನಾರಾಯಣರನ್ನು ಉದ್ಧರಿಸಬೇಕಾದದ್ದು ನಮ್ಮ ಈಗಿನ ಮುಖ್ಯ ಕಾರ್ಯ. ಜಮೀನುದಾರರುಗಳನ್ನು ಬಿಟ್ಟು ಈ ಬಡವರಿಗೆ ಅಸ್ಪೃಶ್ಯತೆಯನ್ನು ಪರಿಹರಿಸುವುದೇ ಪ್ರಥಮ ಕರ್ತವ್ಯ. ಅಲ್ಲದೆ ಇವರಿಗೆ ಅನುಕೂಲವಿದ್ದ ವೇದ ಪಾಠಶಾಲೆಗಳು ಶ್ರೇಷ್ಠ ತತ್ವಗಳನ್ನು ಇವರಿಗೆ ಬೋಧಿಸಬೇಕು. ಇವರಿಗೆ ಎಲ್ಲಾ ಧರ್ಮದಲ್ಲಿಯೂ ಸಮಾನ ಹಕ್ಕುಗಳಿವೆ. "ಮಕ್ಕಳೇ, ನೀವು ಸರ್ವಶಕ್ತಿಯ ಈಶ್ವರನ ಅಂಶ. ನಿಮ್ಮೆಲ್ಲರಲ್ಲಿ ಆತನಿದ್ದಾನೆ. ನೀವು ಹೀಗೆ ಬಿದ್ದಿರಬೇಡಿ. ಎದ್ದು ನಿಲ್ಲಿ. ಸಹಜವಾಗಿ ಸಾಹಸ ಮಾಡುತ್ತೀರಿ" ಮತ್ತು ಗಳ್ಳಿಯ ಗ್ರಾಮಗಳಲ್ಲಿ ಶಾಲೆಗಳನ್ನು ತೆರೆದು ಈ ಆತ್ಮಗಳಿಗೆ ವಿದ್ಯಾದಾನವನ್ನು ಕೊಟ್ಟು, ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಬೇಕು. ಹೀಗಲ್ಲದೆ ಈ ಅನ್ಯಾಯ ನಿವಾರಣೆಯನ್ನು ಮಾಡುವದಿಲ್ಲ ಮಾಡಬೇಕು.

ಈ ಬಡ ಜನರ ಉದ್ಧಾರವೇ ನಮ್ಮ ಈಗಿನ ಗುರು. ನಮ್ಮ ದೇಶದ ಮುಖ್ಯ ಕಸುಬು ವ್ಯವಸಾಯ. ವ್ಯವಸಾಯ ಕಾರ್ಯವೆಲ್ಲವೂ ಈ ಜನರಿಂದಲೇ ನಡೆಯುತ್ತದೆ. ಈ ಕೃಷಿ ಪದ್ಧತಿಯು ಈಗಿನ ಭೂಮಿಯಲ್ಲಿ ಬಿತ್ತಿ, ಬೆಳೆ ಬೆಳೆಯುವುದಿಲ್ಲ. ಹೊಸ ಹೊಸ ರೀತಿಯ ಕೃಷಿ ಶಿಕ್ಷಣ ಕೊಡಬೇಕು. ಶಿಕ್ಷಣ ಸಹಾಯದಿಂದ ಹೊಸ ಹೊಸ ರೀತಿಯನ್ನು ಇವರು ಕಲಿತು, ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವರು. ಭಾರತೀಯರೇ: ಅತ್ಯ ಜನರನ್ನು ತಿರಸ್ಕರಿಸಿ, ದೇಶವನ್ನು ನಾಶದ ಕಡೆಗೆ ಒಯ್ಯಬೇಡಿ. ಇವರನ್ನು ನಮ್ಮವರೆಂದು ಭಾವಿಸಿ, ಇವರಿಗೆ ಕೈ ಕೊಡಿ. ಒಬ್ಬೊಬ್ಬರು ಒಬ್ಬೊಬ್ಬ ನೀಚ ಜನರಿಗೆ ಶಿಕ್ಷಣ ಕೊಟ್ಟರೆ, ಅದರ ಫಲವೇ ಮುಕ್ತಿ ಎಂದು ತಿಳಿಯಿರಿ. ಅವರಿಗೆ ಅನ್ನದಾನ, ಬಟ್ಟೆದಾನ ಮಾಡುವುದಕ್ಕಿಂತಲೂ, ವಿದ್ಯಾದಾನ ಮಾಡುವುದು ಒಳ್ಳೇದು ಭಾವಿಸಿರಿ. ಕಡೇ ಮಾತು, ಅವರನ್ನು ಸಬಲರಾದ ಭಾರತೀಯರನ್ನಾಗಿ ಮಾಡಿ, ನರ ಮುಕ್ತರ ಸ್ವರ್ಗವನ್ನು ಸಂಪಾದಿಸಿರಿ.

ಕಣ್ಣುಗಳ ಸಂರಕ್ಷಣೆ.

ನೇತ್ರೇಂದ್ರಿಯಕ್ಕೆ ಅಪಾಯವಾಗದಂತೆ ಕಾಪಾಡಿಕೊಳ್ಳುವ ವಿಷಯದಲ್ಲಿ, ಈ ಕೆಳಗೆ ಕಂಡ ನಿಯಮಗಳು ಬಹಳ ಅಮೂಲ್ಯವಾದುದರಿಂದ, ಅನೇಕ ಹಿಮಾಚಲಪರ್ಯಂತವಾದ ಈ ನಮ್ಮ ಇಂಡಿಯಾದೇಶದಲ್ಲಿ ಪ್ರತಿಯೊಬ್ಬರೂ ಈ ಸೂತ್ರಗಳನ್ನು ಕ್ಷಣಮಾತ್ರವೂ ಮರೆಯದೆ ನೆನಪಿನಲ್ಲಿಟ್ಟಿರಬೇಕು.

ಎಲೈ ತಂದೆ ತಾಯಿಗಳಿರಾ! ಪೋಷಕರುಗಳಿರಾ! ಉಪಾಧ್ಯಾಯರುಗಳಿರಾ! ನಿಮ್ಮ ಪೋಷ್ಯವರ್ಗದಲ್ಲಿ, ಮತ್ತು ಶಿಷ್ಯವರ್ಗದಲ್ಲಿ ಈ ಸೂತ್ರಗಳು ಕಂಠಪಾಠವಾಗುವಂತೆ ಎಚ್ಚರಿಸುತ್ತಿರಿ!

ಕಣ್ಣೊಂದು ಜೀವಕ್ಕೆ ಕನ್ನಡಿಯೆನಿಸಿದೆ. ನಿಮ್ಮ ವಾರ್ಧಕದಲ್ಲಿ ನಿಮಗೆ ಅವಲಂಬನ ಭೂತರಾದ ಮಕ್ಕಳಿಗೆ ಇರುವದು ಎರಡೇ ಕಣ್ಣುಗಳು. ಅವರ ಜೀವಾವಧಿ ಆ ಎರಡು ಕಣ್ಣುಗಳೇ ಅವರಿಗೆ ಸರ್ವ ವಿಧ ಸಹಾಯಕಗಳಾಗಿ ಕೆಲಸಮಾಡಬೇಕಾಗಿದೆ. ಆದುದರಿಂದ ಆ ಮಕ್ಕಳ ದೃಷ್ಟಿಗಳನ್ನು ಕಾಪಾಡುವ ವಿಷಯದಲ್ಲಿ ಎಚ್ಚರಗೊಂಡಿರಿ!

ಸೂತ್ರಗಳು.

1. ಸಂಜೆಯ ಹೊತ್ತಿನಲ್ಲಿ ಮಸುಕು ಮಸುಕಾದ ಬೆಳಕಿನಲ್ಲಿಯಾಗಲಿ, ಬಹಳ ತೀವ್ರವಾದ ಬೆಳಕಿನಲ್ಲಿಯಾಗಲಿ, ಕಣ್ಣಿಗೆ ಕಷ್ಟಕೊಟ್ಟು ಓದಬಾರದು.

2. ಮೈಗೆ ಆಯಾಸವು ತೋರಿದಾಗ ಕೆಳಗೆ ಮಲಗಿಕೊಂಡು ಅಥವಾ ಒರಗಿಕೊಂಡು ಓದಬಾರದು.

3. ನಡೆಯುತ್ತಿರುವಾಗಲೂ, ಊಟಮಾಡಿದೊಡನೆಯೂ ಓದಬಾರದು.

4. ಬಹಳ ಸಣ್ಣ ಅಕ್ಷರದ ಪುಸ್ತಕಗಳನ್ನು ಹೆಚ್ಚಾಗಿ ಓದಬಾರದು.

5. ಸಿನೇಮಾಗಳನ್ನು ಆಗಾಗ ನೋಡಬಾರದು.

6. ರಾತ್ರಿಹೊತ್ತು ಆಗಾಗ ಬಹಳ ಹೊತ್ತು ನಿದ್ರೆಗೆಡಬಾರದು.

7. ಕೊಳೆ ಹತ್ತಿದ ಕೈಗಳಿಂದಾಗಲೀ, ಕೈವಸ್ತ್ರದಿಂದಾಗಲೀ ಕಣ್ಣನ್ನು ಒರೆಸಬಾರದು.

8. ಕಣ್ಣಿಗೆ ಬಹಳ ದೂರವಾಗಿಯಾಗಲಿ, ಬಹಳ ಸಮೀಪವಾಗಿಯಾಗಲಿ ಪುಸ್ತಕಗಳನ್ನು ಹಿಡಿದು ಓದಬಾರದು.

9. ಮೈ ತಿರುಚಿದಂತೆ ವಕ್ರವಾಗಿಯಾಗಲಿ, ಬಹಳವಾಗಿ ಮೈಯನ್ನು ಮುಂದೆ ಬಗ್ಗಿಸಿಯಾಗಲಿ ಕುಳಿತು ಬರೆಯಬಾರದು.

10. ಬಿಸಿಲಿನ ಝಳವನ್ನು ಬಹಳಹೊತ್ತು ನೋಡುತ್ತಿರಬಾರದು.

11. ಓದುವಾಗ ಅಕ್ಷರಗಳಮೇಲೆ ಬಿಸಿಲುಬೀಳುವಂತೆ ಪುಸ್ತಕವನ್ನು ಹಿಡಿಯಬಾರದು.

12. ಇತರ ವಸ್ತುಗಳು ಯಾವುವಾದರೂ ಕಣ್ಣೊಳಗೆ ಬಿದ್ದಾಗ, ಆ ಕಣ್ಣನ್ನು ಕೈಯಿಂದ ತಿಕ್ಕುತ್ತಿರಬಾರದು.

13. ಬಿಸಿಲು ಝಳವನ್ನು ನಿವಾರಿಸತಕ್ಕ ಕನ್ನಡಕಗಳನ್ನು ಉಪಯೋಗಿಸುವುದರಲ್ಲಿ ಸುತ್ತಲೂ ಮುಚ್ಚಿದವುಗಳಾದರೆ, ಕಲ್ಲು, ಮಣ್ಣು, ಹೊಗೆ, ಧೂಳು ಮುಂತಾದವುಗಳ ಅಪಾಯ ಕಣ್ಣಿಗೆ ಅಷ್ಟಾಗಿ ಅವಕಾಶವಿರುವುದಿಲ್ಲ. ಇದಕ್ಕೆ ಅಂಬರ್ ಬಣ್ಣದ ಕನ್ನಡಕಗಳು ಉತ್ತಮ. ಇದು ಬಿಸಿಲು ಝಳದಿಂದಲೂ ಮಂಜಿನಿಂದಲೂ ಕಣ್ಣಿಗೆ ಅಪಾಯವಿಲ್ಲದಂತೆ ಕಾಪಾಡುವದು. ಓದುವಾಗ ನಿಮ್ಮ ಎಡ ಭುಜದ ಮೇಲಿಂದ ಮತ್ತು ಹಿಂದಿನಿಂದ ಬೆಳಕುಬೀಳುವಂತಿರಬೇಕು.

ಎಂತಹ ಸ್ಥಿತಿಯಲ್ಲಿ ಕನ್ನಡಕಗಳನ್ನು ಉಪಯೋಗಿಸಬೇಕು?

1. ಮುಂದೆ ಬರುವವರ ಗುರುತನ್ನು ನೀವು ತಟ್ಟನೆ ಕಂಡು ಹಿಡಿಯಲಾರದಿದ್ದರೆ ಅಥವಾ ನೀವು ಬೀದಿಯಲ್ಲಿ ಹೋಗುತ್ತಿರುವಾಗ ಅಕ್ಕ ಪಕ್ಕಗಳಲ್ಲಿ ಅಂಟಿಸಿರುವ ಬೋರ್ಡುಗಳನ್ನು ನೋಡಲಾರದಿದ್ದರೆ;

2. ಒಂದೆರಡು ನಿಮಿಷಗಳ ವರೆಗೆ ಯಾವುದಾದರೂ ಚನ್ನಾಗಿ ಗಮನಿಸಿ ನೋಡುತ್ತಿರುವಾಗ ನಿಮ್ಮ ಕಣ್ಣಿಗೆ ಆಯಾಸ ತೋರಿದರೆ ಕಣ್ಣುಗಳಲ್ಲಿ ನೀರುಬಂದರೆ ಅಥವಾ ಕಣ್ಣು ಭಾರವಾದಂತೆ ಕಂಡುಬಂದರೆ;

3. ಕಣ್ಣುಗಳೊಳಗೆ ಅಥವಾ ಅದರ ಅಕ್ಕಪಕ್ಕದಲ್ಲಿ ನಿಮಗೇನಾದರೂ ಬೇನೆಯು ತೋರಿದರೆ, ತಲೆನೋವು ಇದ್ದರೆ, ಕಣ್ಣಿಗೆ ಕೆಲಸಕೊಟ್ಟಾಗ ಸ್ಪಷ್ಟವಾದ ಕಾರಣವೇನೂ ತಿಳಿಯದೆ ದೇಹಕ್ಕೆ ನಿಶ್ಶಕ್ತಿಯು ತೋರಿದರೆ;

4. ನೀವು ಓದುತ್ತಿರುವಾಗ ಅಥವ ಕಣ್ಣಿಗೆ ಕೆಲಸಕೊಡುವ ಬೇರೆ ಯಾವುದಾದರೂ ಕೆಲಸಮಾಡುತ್ತಿರುವಾಗ, ನಡುನಡುವೆ ಕಣ್ಣುಗಳನ್ನು ಮುಚ್ಚಬೇಕೆಂದು ತೋರಿದರೆ ಅಥವಾ ಕಣ್ಣಿಗೆ ವಿಶ್ರಾಂತಿಕೊಡಬೇಕೆಂದು ತೋರಿದರೆ;

5. ಪ್ರಕಾಶವುಳ್ಳ ಬೆಳಕಿನಲ್ಲಿ ಸರಿಯಾಗಿ ಕಣ್ಣು ತೆರೆಯುವುದಕ್ಕೆ ನಿಮಗೆ ಕಷ್ಟವಾಗಿ ಕೈಮರೆಮಾಡಿಕೊಳ್ಳಬೇಕೆಂದು ತೋರಿದರೆ,

6. ನಿಮ್ಮ ಸಹಪಾಠಿಗಳಾಗಲಿ, ಸ್ನೇಹಿತರಾಗಲಿ, ಪುಸ್ತಕಗಳನ್ನು ಹಿಡಿಯುವುದಕ್ಕಿಂತ, ನೀವು ಪುಸ್ತಕವನ್ನು ಕಣ್ಣಿಗೆ ಸಮೀಪವಾಗಿ ಹಿಡಿದು ಓದಬೇಕಾದ ಸ್ಥಿತಿಯು ಕಂಡುಬಂದರೆ;

7. ಅಚ್ಚಕ್ಷರಗಳು ನಿಮ್ಮ ಕಣ್ಣಿಗೆ ಗಜಬಿಜಿಯಾಗಿ ಒಂದಕ್ಕೊಂದು ಕಲೆತಂತೆ ಕಂಡುಬಂದರೆ, ಅಥವಾ ಪಂಕ್ತಿಗಳು ಒಂದಕ್ಕೊಂದು ಸೇರಿಕೊಂಡಂತೆ ಬಹಳ ಸಮೀಪವಾಗಿ ಕಂಡು ಬಂದರೆ;

8. ಇದಕ್ಕೆ ಮೊದಲು ನೀವು ಸಾಧಾರಣವಾಗಿ ಪುಸ್ತಕಗಳನ್ನು ಹಿಡಿದು ಓದುತ್ತಿದ್ದುದಕ್ಕಿಂತ ದೂರಕ್ಕೆ ಹಿಡಿದು ನೋಡಿದ ಹೊರತು ಸಣ್ಣ ಅಕ್ಷರಗಳು ನಿಮಗೆ ಚೆನ್ನಾಗಿ ಕಾಣಿಸದಿದ್ದರೆ;

9. ಪುಸ್ತಕವನ್ನೋದುವದಕ್ಕಾಗಲಿ, ಬಟ್ಟೆಯನ್ನು ಹೊಲಿಯುವದಕ್ಕಾಗಲಿ, ಮೊದಲಿಗಿಂತ ನಿಮಗೆ ಹೆಚ್ಚು ಬೆಳಕು ಬೇಕೆಂದು ತೋರಿದರೆ;

10. ಕಣ್ಣುಬೇನೆ, ಕಣ್ಣುರಿ, ಕಣ್ಣು ಚುಚ್ಚುವದು ಮುಂತಾದ ರೋಗಗಳಿದ್ದರೆ;

ಈ ಮೇಲ್ಕಂಡ ಸ್ಥಿತಿಗಳಲ್ಲಿ ಒಡನೆಯೇ ನೀವು ಡಾಕ್ಟರಿಗೆ ತೋರಿಸಿ ಸರಿಯಾದ ಕನ್ನಡಕಗಳನ್ನು ಉಪಯೋಗಿಸಲು ಆರಂಭಿಸಬೇಕು.

ಎಲ್ಲಕ್ಕಿಂತಲೂ ಮೊದಲು, ದೃಷ್ಟಿನಾಶವು ತಗ್ಗದಂತೆ ಕಾಪಾಡುವದಕ್ಕೆ ಶರೀರ ಪ್ರಕೃತಿಯನ್ನು ಸರಿಯಾಗಿ ಪೋಷಿಸಿಕೊಳ್ಳುವದು ಅವಶ್ಯವು. ನೇತ್ರಾರೋಗ್ಯವು ಪುಷ್ಟಿವರ್ಧಕವಾದ ಆಹಾರ ಸೇವನೆ, ಕ್ರಮವಾದ ಮಲಶುದ್ಧಿ, ನರಗಳಿಗೆ ಬಲಕೊಡತಕ್ಕ ಮಾರ್ಗಗಳು ಇವುಗಳನ್ನನುಸರಿಸಿದೆ. ಆದುದರಿಂದ ಮೊದಲು ದೇಹದೌರ್ಬಲ್ಯವನ್ನು ನಿವಾರಿಸುವದಕ್ಕೆ ತಕ್ಕ ಪ್ರಯತ್ನಗಳನ್ನು ನಡಸಬೇಕು. ನೇತ್ರೇಂದ್ರಿಯ ಮತ್ತು ಕರ್ಣೇಂದ್ರಿಯ ಇವುಗಳೆರಡೂ ಪಟುವಾಗಿರುವದಕ್ಕೆ ದೇಹಪೋಷಣೆಯೇ ಮೂಲಾಧಾರವು.

ಕಣ್ಣುಗಳಿಗೆ ಮಾಡಬಹುದಾದ ಜಲ ಚಿಕಿತ್ಸೆ
ಮತ್ತು ವ್ಯಾಯಾಮ ಕ್ರಮ.

ಕಣ್ಣುಗಳಿಗೆ ಮಾಡಬಹುದಾದ ಜಲಸ್ನಾನ ಚಿಕಿತ್ಸೆಗಳಲ್ಲಿ ಮುಖ್ಯವಾದುದೆಂದರೆ—ಒಂದು ತಟ್ಟೆಯಲ್ಲಿ ನಮ್ಮ ಕಣ್ಣುಗುಡ್ಡೆಗಳಿಗೆ ತಡೆಯಬಹುದಾದಷ್ಟು ಸಾಧಾರಣ ಉಷ್ಣಾಂಶವುಳ್ಳ ನೀರನ್ನು ತುಂಬಿ, ಅದರಲ್ಲಿ ಕಣ್ಣುಗಳೂ, ಹಣೆಯೂ ಚೆನ್ನಾಗಿ ಮುಳುಗುವ ಹಾಗಿಟ್ಟು, 12 ರಿಂದ 24 ಸಲದವರೆಗೆ ಪ್ರಯತ್ನಪೂರ್ವಕವಾಗಿ ಕಣ್ಣುಗಳನ್ನು ತೆರೆದು ತೆರೆದು ಮುಚ್ಚುತ್ತಿರಬೇಕು. ಈ ವಿಧವಾಗಿ ಅವಶ್ಯವಿದ್ದವರೆಗೆ ಪುನರಾವೃತ್ತಿ ಮಾಡಬೇಕು.

ನೇತ್ರವ್ಯಾಯಾಮ.

ಸೌಕರ್ಯವಿದ್ದಂತೆ ಕುಳಿತು, ಅಥವಾ ನಿಂತು, ತಲೆಯನ್ನು ನೆಟ್ಟಗೆ ಅಲ್ಲಾಡದಹಾಗೆ ಒಂದೇ ಸ್ಥಿತಿಯಲ್ಲಿಟ್ಟು, ಕಣ್ಣಾಲಿಗಳನ್ನು ಮಾತ್ರ ಮೇಲಕ್ಕೂ ಕೆಳಕ್ಕೂ ಕೆಲವುಸಾರಿ ಆಡಿಸಬೇಕು. ಅದರಂತೆಯೇ ಕಣ್ಣುಗುಡ್ಡೆಗಳು ಎಡದಿಂದ ಬಲಕ್ಕೂ ಬಲದಿಂದ ಎಡಕ್ಕೂ ಬರುವಹಾಗೆ ಆಡಿಸುವದು; ಗುಡ್ಡೆಗಳನ್ನು ಬಲಪಾರ್ಶ್ವದಲ್ಲಿ ಆದಷ್ಟು ಮೇಲಕ್ಕೇರಿಸಿ, ಅಲ್ಲಿಂದ ಎಡಭಾಗದಲ್ಲಿ ಆದಷ್ಟು ಕೆಳಕ್ಕೆ ಬರುವಂತೆ ಮಾಡುವದು; ಹಾಗೆಯೇ ಎಡಪಾರ್ಶ್ವದಲ್ಲಿ ಮೇಲುಭಾಗಕ್ಕೇರಿಸಿ, ಅಲ್ಲಿಂದ ಬಲಪಾರ್ಶ್ವದಲ್ಲಿ ಆದಷ್ಟು ಕೆಳಕ್ಕೆ ಬರುವಂತೆ ಆಡಿಸುವದು; ಕಣ್ಣುಗುಡ್ಡೆಗಳನ್ನು ಪ್ರದಕ್ಷಿಣವಾಗಿಯೂ, ಅಪ್ರದಕ್ಷಿಣವಾಗಿಯೂ ಸುತ್ತಿಸುವದು; ಹೀಗೆ ಕಣ್ಣುಗುಡ್ಡೆಗಳಿಗೆ ವಿಚಿತ್ರಗತಿಗಳಿಂದ ಒಂದೊಂದು ವಿಧವಾದ ಚಲನೆಗಳನ್ನು 12ರಿಂದ 24 ಸಲದವರೆಗೆ ಸಮಯೋಚಿತವಾಗಿ ನಡೆಸುತ್ತಬಂದರೆ ಉತ್ತಮವಾದ ವ್ಯಾಯಾಮವಾಗುವದು.

[illegible] ಬಾದಾಮಿ ಎಣ್ಣೆ, 'ಆಲಿವ್' ಎಣ್ಣೆ, ಇವುಗಳನ್ನು ಆಹಾರದಲ್ಲಿ ಹೆಚ್ಚಾಗಿ ಉಪಯೋಗಿಸುತ್ತ ಬರುವದರಿಂದ ಕಣ್ಣಿಗೆ ಗುಣವುಂಟು ಮತ್ತು ಬಾದಾಮಿ ಎಣ್ಣೆಯನ್ನಾಗಲಿ ಮೂಲಿಕಾಸಮ್ಮಂಧವಾದ ಬೇರೆ ಎಣ್ಣೆಯನ್ನಾಗಲಿ ತಲೆಗೂ ಕಣ್ಣಿನ ಸುತ್ತಲೂ ಹಾಕಿ ಉಜ್ಜುವದರಿಂದಲೂ ಗುಣವುಂಟು. ಮಿದುಳಿಗೂ ಕಣ್ಣಿಗೂ ಉಂಟಾಗತಕ್ಕ ಬಲಹೀನತೆಯು ಇದರಿಂದ ತಗ್ಗಿ, ಕಣ್ಣು ತಿಳಿವಾಗುವದು.

ದೀರ್ಘಕಾಲದಿಂದ ಅನುಸರಿಸಿ ಬಂದ ಅನೇಕ ನೇತ್ರರೋಗಗಳಿಗೆ ಹೊಟ್ಟೆಯಲ್ಲಿ ಮತ್ತು ಕರುಳಿನಲ್ಲಿ ನಿಂತ ಮಲಗಳೇ ಕಾರಣವು. ವಾರಕ್ಕೊಂದಾವರ್ತಿ ಅವುಗಳನ್ನು ಶುದ್ಧಮಾಡುತ್ತಿದ್ದರೆ ನೇತ್ರರೋಗಗಳಿಗೆ ಪರಿಹಾರವುಂಟು.

ಬಿಳೀ ಬಣ್ಣದ ಪ್ರಕಾಶಗಳು ಸಾಧಾರಣವಾಗಿ ಕಣ್ಣಿಗೆ ಅಪಾಯಕರಗಳು. ಕೆಂಪು ಮತ್ತು ಹಳದಿಬಣ್ಣದ ಪ್ರಕಾಶಗಳಿಂದ ಕಣ್ಣಿಗೆ ಅಪಾಯವೇನೂ ಇಲ್ಲ ಮತ್ತು ಅವು ಹಿತಕರವೆಂದೂ ಶಾಸ್ತ್ರಶೋಧನೆಯಿಂದ ತಿಳಿದು ಬಂದಿದೆ.

ಕಣ್ಣುರಿ ಇದ್ದಾಗ ಅಥವ ಕಣ್ಣು ಕೆರಳಿದ್ದಾಗ ಬೋರಾಸಿಕ್ ಆಸಿಡ್ಡನ್ನು ದಿನಕ್ಕೆ ಕೆಲವುಸಾರಿ ಕಣ್ಣಿಗೆ ತೊಟ್ಟಿಕ್ಕುತ್ತ ಬಂದರೆ ಗುಣವುಂಟು.

ಕಣ್ಣಿನ ಅಂಚುಗಳನ್ನು (ಕೆಂದಾರೆಗಳನ್ನು) ಆಗಾಗ ಬೆರಳುಗಳಿಂದ ಚೆನ್ನಾಗಿ ತಿಕ್ಕುವದರಲ್ಲಿ ಕಣ್ಣಿನ ನರಗಳಿಗೆಲ್ಲಾ ಒಂದು ವಿಧವಾದ ವ್ಯಾಯಾಮವನ್ನು ಕೊಟ್ಟಂತಾಗುವದು.

ಕಣ್ಣಿಗೆ ಆಯಾಸ ತೋರಿದರೆ, ಅಥವಾ ಕಣ್ಣು ಕೆಂಪೇರಿದ್ದರೆ ತಣ್ಣೀರಿನಲ್ಲಿ ತೊಳೆಯುವದರಿಂದ ಅದಕ್ಕೆ ಉಪಶಾಂತಿಯುಂಟು.

ಸಮೀಪದೃಷ್ಟಿಯುಳ್ಳವರು ತಾವು ಕೆಲಸಮಾಡುವಾಗಲೂ ಓದುವಾಗಲೂ ತಾವು ನೋಡಬೇಕಾದ ವಿಷಯಗಳನ್ನು ಅಥವ ಪುಸ್ತಕಗಳನ್ನು ಸ್ವಲ್ಪಸ್ವಲ್ಪವಾಗಿ ದೂರಕ್ಕೆ ಹಿಡಿದು ಅದೇ ಕ್ರಮದಿಂದ ವಾಡಿಕೆಗೆ ತರುತ್ತಿದ್ದರೆ ಕಾಲಕ್ರಮದಲ್ಲಿ ಅವರ ದೂರದೃಷ್ಟಿ ಶಕ್ತಿಯು ವರ್ಧಿಸಬಹುದು.

(ಕಸ, ಕಡ್ಡಿ, ಕಲ್ಲು, ಮಣ್ಣು ಮುಂತಾದ ಇತರ ವಸ್ತುವ್ಯಾವುದಾದರೂ ಕಣ್ಣೊಳಗೆ ಸೇರಿಕೊಂಡಾಗ ಮೇಲಿನ ರೆಪ್ಪೆಯನ್ನು ಮೇಲುಮುಖವಾಗಿ ಹಿಂದಕ್ಕೆ ಮಡಿಸಿ ಶುದ್ಧವಾದ ಬಟ್ಟೆಯ ಸೆರಗಿನಿಂದ ಅಥವ ತತ್ತ್ರಿಯಿಂದ ಆ ಒಳಗಿನ ಕಸ್ಮಲವನ್ನು ಒತ್ತಟ್ಟಿಗೆ ತಳ್ಳಿಕೊಂಡು ಸುಲಭವಾಗಿ ತೆಗೆದುಬಿಡಬಹುದು).

(ಆರೋಗ್ಯಚಂದ್ರಿಕೆಯಿಂದ).

ಮಲೇರಿಯ ಜ್ವರ.

(ಬರೆದು ಬಂದದ್ದು.)

ಮಲೇರಿಯ ಎಂಬ ಚಳಿಜ್ವರವು ನಮ್ಮ ಕೊಡಗು ದೇಶದಲ್ಲಿ ಬಹಳ ವಾಡಿಕೆಯಾದ ಕಾಯಿಲೆಯಾಗಿದೆ. ಈ ಕಾಯಿಲೆಯಿಂದ ಲಕ್ಷಗಟ್ಟಲೆ ಜನರು ವರುಷಂಪ್ರತಿ ಮರಣ ಹೊಂದುತ್ತಿದ್ದಾರೆ. ಈ ಅನಾಮತದ ಕಾಯಿಲೆಯು ಹೇಗೆ ಪ್ರಬಲವಾಗುತ್ತದೆ ಮತ್ತು ಇದನ್ನು ಹೇಗೆ ದೂರಪಡಿಸಿಕೊಳ್ಳಬಹುದು ಎಂಬುದನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸುತ್ತೇನೆ.

ಚಳಿಜ್ವರವು ಸೊಳ್ಳೆಗಳಿಂದ ಉಂಟಾಗುವ ಕಾಯಿಲೆಯಾಗಿದೆ. ಸೊಳ್ಳೆಯು ಕಡಿತಕ್ಕೆ ಸಿಕ್ಕದಂತೆ ತಪ್ಪಿಸಿಕೊಳ್ಳುವ ಮನುಷ್ಯನಿಗೆ ಮಲೇರಿಯ ಜ್ವರವು ಎಂದೂ ಬರುವುದಿಲ್ಲ. ಈ ರೋಗದಿಂದ ಪೀಡಿತನಾದ ಮನುಷ್ಯನನ್ನು ಸೊಳ್ಳೆಗಳು ಕಚ್ಚಿ ರಕ್ತವನ್ನು ಹೀರುತ್ತವೆ. ಹೀಗೆ ರಕ್ತ ಹೀರುವಾಗ್ಯೆ ಆ ರೋಗಿಯ ರಕ್ತದಲ್ಲಿರುವ ಮಲೇರಿಯಲ್ ಪೇರಸೈಟ್ಸ್ ಎಂಬ ಸೂಕ್ಷ್ಮ ಕ್ರಿಮಿಗಳು ಸೊಳ್ಳೆಯ ಮೈಯೊಳಗೆ ಸೇರುತ್ತವೆ. ಈ ಕ್ರಿಮಿಗಳು ಸೊಳ್ಳೆಯ ಮೈಯೊಳಗೆ ಹೆಚ್ಚಾಗಿ ವೃದ್ಧಿಗೊಂಡು ಅದರ ಶರೀರದ ಎಲ್ಲಾ ಕಡೆಯಲ್ಲಿ ಹರಡಿಕೊಂಡು ಅದು ರಕ್ತ ಹೀರುವ ಸಮಯದಲ್ಲಿ ಅದರ ಮೈ ತುಂಬಾ ಕ್ರಿಮಿಗಳೊಂದಿಗೆ ಒಂದು ತರದ ನೀರು ಸಹ ಇರುತ್ತದೆ. ಈ ಸೊಳ್ಳೆಯು ಇನ್ನೊಂದು ಮನುಷ್ಯನ ಮೈ ಮೇಲೆ ಕೂತು ರಕ್ತ ಹೀರಲಿಕ್ಕೆ ಅವನನ್ನು ಕಚ್ಚಿದಾಗ ಅದರ ಶರೀರದಿಂದ ಮೇಲೆ ಹೇಳಿದ ಒಂದು ತರದ ನೀರಿನೊಂದಿಗೆ ಮಲೇರಿಯ ಕ್ರಿಮಿಗಳು ಅವನ ರಕ್ತದೊಳಗೆ ಸೇರುತ್ತವೆ. ಮನುಷ್ಯನ ಶರೀರವು ಈ ಕ್ರಿಮಿಗಳ ಪ್ರಾಬಲ್ಯಕ್ಕೆ ಗೊಬ್ಬರ ಹಾಕಿದ ಭೂಮಿಯಂತಿರುವುದು. ಮನುಷ್ಯನ ರಕ್ತದಲ್ಲಿ ಕೆಂಪಾದ ಅಣುಗಾತ್ರದ ಪ್ರಾಣಿಗಳಿರುವವು. ಈ ಕ್ರಿಮಿಗಳು ಆರೋಗ್ಯದಲ್ಲಿದ್ದು ರಕ್ತದಲ್ಲಿ ಹೆಚ್ಚಾಗಿದ್ದರೆ ಅದೇ ಮನುಷ್ಯನ ಭಾಗ್ಯವು. ಯಾಕೆಂದರೆ ಈ ಅಣುಗಳೇ ಮನುಷ್ಯನ ಪ್ರಾಣವನ್ನು ಕಾಪಾಡುವ ಶಿಪಾಯಿಗಳು. ಬೇರೆ ಯಾವ ಸೂಕ್ಷ್ಮ ಕ್ರಿಮಿಗಳು ಮನುಷ್ಯನ ದೇಹದೊಳಗೆ ಹೊಕ್ಕಿದರೆ ಈ ಅಣುಮಾತ್ರ ಕ್ರಿಮಿಗಳು ಅವುಗಳೊಂದಿಗೆ ಕಾದಾಡಿ ಕೊಂದು ಮನುಷ್ಯನನ್ನು ಕಾಪಾಡುತ್ತವೆ. ಆದರೆ ಮಲೇರಿಯ ಪೇರಸೈಟ್ಸ್‌ಗಳು ಈ ಕ್ರಿಮಿಗಳ ದೇಹವನ್ನು ಹೊಕ್ಕು ಅವುಗಳ ಶಕ್ತಿ ಕುಂದಿಸಿ ಕೊನೆಗೆ ಅವುಗಳನ್ನು ಕೊಂದು ಹಾಕುತ್ತವೆ. ಆದುದರಿಂದ ಪೇರಸೈಟ್ಸ್ ಹೊಕ್ಕಿದ ಮನುಷ್ಯನಲ್ಲಿ ಅಣು ಕ್ರಿಮಿಗಳು ಕಡಿಮೆಯಾಗಿ ಅವನು ಹಳದಿ ಬಣ್ಣದ ಮುಖವುಳ್ಳವನಾಗುವನು, ಮಲೇರಿಯ ಪೇರಸೈಟ್ಸ್‌ಗಳು ಅವನಲ್ಲಿ ಲಕ್ಷಗಟ್ಲೆ ಹೆಚ್ಚುತ್ತವೆ. ಇವುಗಳಿಂದ ಕೊಲ್ಲಲ್ಪಟ್ಟ ಅಣು ಕ್ರಿಮಿಗಳಲ್ಲಿರುವ ಕೆಲವು ಪದಾರ್ಥಗಳು ಮನುಷ್ಯನ ಜ್ವರಗಡ್ಡೆಯಲ್ಲಿ ಹೋಗಿ ಸೇರುತ್ತವೆ. ಆ ಕಾರಣ ಅಂಥಾ ಮನುಷ್ಯನ ಜ್ವರಗಡ್ಡೆಯು ಹೆಚ್ಚು ದಪ್ಪವಾಗಿಯೂ ಅಗಲವಾಗಿಯೂ ಆಗುತ್ತದೆ. ಕೆಲವು ವೇಳೆಗಳಲ್ಲಿ ಅವನ ಮುಕ್ಕಲ್ಲು (ಕಲೇಜ) ಸಹ ವ್ಯಾಧಿಸ್ಥವಾಗುವದು. ಇಂಥವನೇ ಮಲೇರಿಯ ಜ್ವರದಿಂದ ಪೀಡಿತನಾದವನು. ಇಂಥವನಿಗೆ ಚಳಿಜ್ವರವು ಬರುತ್ತಲೇ ಇರುವುದು. ಇಂಥಾ ಕಾಯಿಲೆಯುಳ್ಳವನು ಸಂಸಾರದಲ್ಲಿದ್ದು ಅಲ್ಲಿ ತುಂಬಾ ಸೊಳ್ಳೆಗಳಿದ್ದರೆ ಅಲ್ಲಿಯವರೆಲ್ಲರಿಗೂ ಮಲೇರಿಯವು ಅಂಟದೆ ಇರದು.

ಮೇಲೆ ಹೇಳಿದ ಪ್ರಕಾರ ಸೊಳ್ಳೆಗಳು ಮಾತ್ರ ಇಲ್ಲದಿದ್ದರೆ ಈ ಕಾಯಿಲೆಯೇ ಇಲ್ಲ. ಬಾಕಿ ಎಲ್ಲಾ ಕ್ರಿಮಿಗಳ ಪ್ರಕೃತಿಯಂತೆ ಸೊಳ್ಳೆಗಳಲ್ಲಿ ಹೆಣ್ಣು ಗಂಡೆಂಬ ಎರಡು ಜಾತಿಗಳಿವೆ. ಗಂಡು ಸೊಳ್ಳೆಗಳು ಸಸ್ಯಾಹಾರಿಗಳಾಗಿರುತ್ತವೆ. ಹೆಣ್ಣು ಸೊಳ್ಳೆಗಳು ರಕ್ತ ಹೀರಿ ಜೀವಿಸುತ್ತವೆ. ಆದುದರಿಂದ ಗಂಡು ಸೊಳ್ಳೆಗಳು ಎಂದೂ ಹಾನಿಕರವಲ್ಲ. ಮಲೇರಿಯದ ಮೂಲವಾಗಿರುವ ಹೆಣ್ಣು ಸೊಳ್ಳೆಯನ್ನು ನಾಶಮಾಡುವದೇ ಅತ್ಯಗತ್ಯವಾದುದು. ಹೆಣ್ಣು ಸೊಳ್ಳೆಗಳು ಕೆರೆ ಕುಂಟೆಗಳೂ ಬಚ್ಚಲುಗಳೂ ಮೊದಲಾದ ನಿಂತ ನೀರಿನ ಜಾಗಗಳಲ್ಲಿ ತಮ್ಮ ತತ್ತಿಗಳನ್ನು ಇಡುತ್ತವೆ. ಈ ತತ್ತಿಗಳನ್ನು ಮೀನು ಕಪ್ಪೆ ಮೊದಲಾದವುಗಳು ತಿನ್ನುವುದುಂಟು. ಆದುದರಿಂದಲೇ ಕೆರೆ ಕುಂಟೆಗಳಲ್ಲೆಲ್ಲಾ ಹೆಚ್ಚಾಗಿ ಮೀನು ಕಪ್ಪೆಗಳನ್ನು ಸಾಕಿಕೊಳ್ಳಬೇಕಾಗಿದೆ. ಈ ಮೊಟ್ಟೆಗಳು ಒಡೆದು ಚಿಕ್ಕ ಹುಳಗಳು ಹೊರಬಂದು ನೀರಿನಲ್ಲಿ ಜೀವಿಸುತ್ತಿರುತ್ತವೆ. ಇವುಗಳು ಒಡೆದ ಪಾತ್ರದಲ್ಲಿ ನಿಂತ ನೀರಿನಲ್ಲಾಗಲೀ ಕಲ್ಲುಗಳ ಸಂದುಗಳಲ್ಲಿ ನಿಂತ ನೀರಿನಲ್ಲಾಗಲಿ ಕುಣಿದಾಡುತ್ತಿರುವುದನ್ನು ಅನೇಕ ಸಲ ನಾವು ನೋಡಿರಬಹುದು. ಈ ಹುಳಗಳು ಬೆಳೆದು ಕೆಲವು ದಿವಸಗಳಲ್ಲಿ ಸೊಳ್ಳೆಗಳಾಗಿ ಹಾರಿ ಹೋಗುವುವು. ಆದುದರಿಂದ ಮನೆಯ ಸುತ್ತಮುತ್ತಲೂ ನೀರು ನಿಲ್ಲದಂತೆ ಎಚ್ಚರಿಕೆ ತೆಗೆದುಕೊಳ್ಳಬೇಕು.

ಕೆರೆ ಕುಂಟೆಗಳ ಮತ್ತು ಹಳ್ಳಗಳ ಸಮೀಪ ಮನೆ ಕಟ್ಟಿಕೊಂಡು ವಾಸ ಮಾಡಬಾರದು. ಆದರೆ ನೀರಿಲ್ಲದ ಸ್ಥಳದಲ್ಲಿ ವಾಸ ಮಾಡುವುದು ಕಷ್ಟವಾದುದರಿಂದ ಸೊಳ್ಳೆಗಳ ಮೊಟ್ಟೆಗಳನ್ನು ನಾಶಪಡಿಸಲು ಎಲ್ಲರೂ ಪ್ರಯತ್ನಿಸತಕ್ಕದ್ದು. ಪಟ್ಟಣಿಗರ ಹಿತವನ್ನು ಕಾಯಬೇಕಾದ ನಮ್ಮ ಮುನಿಸಿಪಾಲಿಟಿಯವರು ಪಟ್ಟಣದ ಸುತ್ತಲಿರುವ ಹಳ್ಳಗಳನ್ನು ಹಾಗೆಯೇ ಇಟ್ಟುಕೊಂಡಿರುವುದೂ ಪಟ್ಟಣದೊಳಗಿರುವ ಚರಂಡಿಗಳಿಗೆ ತಕ್ಕಷ್ಟು ಗಮನ ಕೊಡದಿರುವುದೂ ವ್ಯಸನಕರವಾದ ಸಂಗತಿಯಾಗಿದೆ. ಈ ಚರಂಡಿಗಳಲ್ಲಿ ಸೊಳ್ಳೆಗಳಲ್ಲದೆ ನಾನಾ ತರದ ಇತರ ರೋಗಗಳ ಸೂಕ್ಷ್ಮ ಕ್ರಿಮಿಗಳೂ ಸಹ ಪ್ರಬಲಗೊಳ್ಳುತ್ತಿರುವುವು. ನೀರಿನಲ್ಲಿರುವ ಸೊಳ್ಳೆಗಳ ಮೊಟ್ಟೆಗಳನ್ನು ನಾಶಪಡಿಸಲಿಕ್ಕೆ ನಿಂತ ನೀರಿನ ಪಕ್ಕಗಳ ಮೇಲೆ ಸೀಮೆ ಎಣ್ಣೆಯನ್ನು ಹಾಕಬೇಕು.

ಸೊಳ್ಳೆಗಳು ರಾತ್ರಿಕಾಲದಲ್ಲಿ ಅಂದರೆ ಸೂರ್ಯಾಸ್ತಮಯವಾದನಂತರ ರಕ್ತವನ್ನು ಹೀರಲು ತೊಡಗುತ್ತವೆ. ಆದುದರಿಂದ ಸೂರ್ಯನು ಕಂತಿದೊಡನೆ ಮನೆಯ ಕಿಟಿಕಿಬಾಗಿಲುಗಳನ್ನೆಲ್ಲಾ ಮುಚ್ಚಿ ಗಂಧ, ಕರ್ಪೂರ, ಸಾಂಬ್ರಾಣಿ ಮೊದಲಾದ ಹೊಗೆಗಳನ್ನು ಹಾಕಬೇಕು. ಹಾಗೆ ಹೊಗೆ ಹಾಕಿದರೆ ನಂತರ ಕಿಟಿಕಿ ತೆರೆದರೂ ಸಹ ಹೊರಗಿನ ಸೊಳ್ಳೆಗಳು ಬರುವದಿಲ್ಲ. ಒಂದುವೇಳೆ ಬಂದರೂ ಸಹ ಗೋಡೆಯಮೂಲೆಗಳಲ್ಲಿ ಸೇರಿಕೊಳ್ಳುವುವು. ಅವುಗಳನ್ನೆಲ್ಲಾ ಒಂದು ಬಟ್ಟೆಯನ್ನು ತೆಗೆದುಕೊಂಡು ಕೊಂದುಹಾಕಬಹುದು. ಇನ್ನೂ ಹೆಚ್ಚಾಗಿ ಸೊಳ್ಳೆಗಳು ಬಂದು ಕೈ ಕಾಲುಗಳಿಗೆ ಕಷ್ಟ ಕೊಡಗದಿರೆ ಸ್ವಲ್ಪ ಸೀಮೆ ಎಣ್ಣೆಯನ್ನು ಇಲ್ಲವೆ ಕರ್ಪೂರ ತೈಲವನ್ನು ಸವರಿಕೊಂಡರೆ ಇವು ದೂರವಾಗುವವು. ಮಲಗುವಾಗ ಸೊಳ್ಳೆಯ ಪರದೆಯನ್ನು ಉಪಯೋಗಿಸಬೇಕು. ಈ ಪ್ರಕಾರವಾಗಿ ಜಾಗ್ರತೆಯಿಂದ ಇದ್ದರೆ ಚಳಿಜ್ವರವು ಬರುವದಿಲ್ಲ. ಅಲ್ಲದೆ ನಮ್ಮ ದೇಶದಲ್ಲಿ ಪ್ರತಿಯೊಬ್ಬನೂ ವಾರಕ್ಕೆ ಎರಡುಸಾರಿ ಹತ್ತು ಗ್ರೇಯಿನ್ ಕ್ವಿನಿನ್ ತಿನ್ನಬೇಕು. ಈ ಕ್ವಿನಿನ್ ಔಷಧಿಯು ಮಲೇರಿಯಲ್ ಪೇರಸೈಟ್ಸ್ ಎಂಬ ಸೂಕ್ಷ್ಮ ಕ್ರಿಮಿಯನ್ನು ಮಾತ್ರ ಕೊಂದು ಹಾಕುವದು. ನಮ್ಮ ರಕ್ತದಲ್ಲಿರುವ ಕೆಂಪು ಅಣುಗಳಿಗೆ ಕ್ವಿನಿನಿಂದ ಯಾವ ಹಾನಿಯೂ ಬರುವದಿಲ್ಲ. ಮಲೇರಿಯಲ್ ಪೇರಸೈಟ್ಸುಗಳು ಹತ್ತು ಹದಿನೈದು ದಿವಸ ರಕ್ತಚಲನೆಯಲ್ಲಿದ್ದುಕೊಂಡು ಬಾಕಿ ಸಮಯದಲ್ಲಿ ಜ್ವರಗಡ್ಡೆಯಲ್ಲಾಗಲಿ ಮೂಳೆಗಳೊಳಗಾಗಲಿ ಹೋಗಿ ಅಡಗಿಕೊಳ್ಳುವವು. ಅಂಥ ಸಮಯದಲ್ಲಿ ಮನುಷ್ಯನು ಮಳೆಯಲ್ಲಿ ಒದ್ದೆಯಾದರೆ ಅಥವ ಅವನ ಮೈಯಲ್ಲಿ ನೋವೇನಾದರೂ ಸಂಭವಿಸಿದರೆ ಕ್ರಿಮಿಗಳು ಚಳಿಜ್ವರವನ್ನು ಬರಮಾಡುತ್ತವೆ. ಆದುದರಿಂದಲೇ ಒಬ್ಬನು ಬಿಡದೆ ವಾರಕ್ಕೆ ಎರಡುಸಾರಿ ಕ್ವಿನಿನು ತಿನ್ನುತ್ತಾ ಇರಬೇಕಾಗುವದು. ನಾನು ನಮ್ಮ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ರೈಸ್ ಸಾಹೇಬರೆಂಬ ಒಬ್ಬರು ಉಪಾಧ್ಯಾಯರಿದ್ದರು. ಅವರು ನಮ್ಮ ಈ ಮಲೇರಿಯಾಪ್ರಾಂತ್ಯದಲ್ಲಿ 32 ವರ್ಷ ಇದ್ದರೂ ಸಹ ಒಂದು ದಿವಸವಾದರೂ ಜ್ವರ ಬರಲಿಲ್ಲವೆಂದು ಅವರು ಹೋಗುವಾಗ ಒಂದು ಭಾಷಣದಲ್ಲಿ ಹೇಳಿದರು. ಇದಕ್ಕೆ ಕಾರಣವೇನೆಂದು ಪ್ರಶ್ನೆಮಾಡಿದಲ್ಲಿ ಅವರು ವಾರಕ್ಕೆ ಎರಡಾವರ್ತಿ ಕ್ವಿನಿನ್ ತಿನ್ನುವದನ್ನು ತಪ್ಪಿಸಲೇ ಇಲ್ಲವೆಂದು ಅವರು ಉತ್ತರವನ್ನು ಕೊಟ್ಟರು.

ಚಿಕ್ಕ ಮಕ್ಕಳಾಗಿರುವಾಗ ಅವುಗಳಿಗೆ ಹೊದಿಕೆ ಇಡದೆ ಹಾಗೆಯೇ ತೊಟ್ಟಿಲಲ್ಲಿ ಇಟ್ಟುಬಿಡುವುದರಿಂದ ಸೊಳ್ಳೆಗಳು ಹೆಚ್ಚಾಗಿ ಕಚ್ಚಿ ಅವರಿಗೆ ಮಲೇರಿಯಾ ಜ್ವರವನ್ನು ತರುತ್ತವೆ. ಇಂಥಾ ಮಕ್ಕಳು ಬಹಳ ಬಲಹೀನರಾಗಿ ರೋಗಿಗಳಾಗುತ್ತಾರೆ. ಆದುದರಿಂದ ಮಕ್ಕಳು ತಮ್ಮ ಎಚ್ಚರಿಕೆಯನ್ನು ತೆಗೆದುಕೊಳ್ಳುವ ಪ್ರಾಯ ಬರುವವರೆಗೆ ಸೊಳ್ಳೆಗಳ ಕಾಟದಿಂದ ಅವರನ್ನು ಕಾಪಾಡಬೇಕು.

ಈ ಸಂಗತಿಯನ್ನು ಕೇಳಿ ಮಲೇರಿಯ ಜ್ವರವನ್ನು ನಿಲ್ಲಿಸುವದು ಅಸಾಧ್ಯವೆಂದು ತಿಳಿದುಕೊಳ್ಳಬಾರದು. ಯಾಕೆಂದರೆ ಪನಾಮಾ ಎಂಬ ಭೂಕಂಠವನ್ನು ಕತ್ತರಿಸಿ ತೆಗೆಯುವಂಥ ಕಾಲದಲ್ಲಿ ಲಕ್ಷಾಂತರ ಜನರು ಮಲೇರಿಯ ಜ್ವರಕ್ಕೆ ತುತ್ತಾದುದರಿಂದ ಆ ಕೆಲಸವನ್ನು ಪೂರೈಸಲಸಾಧ್ಯವೆಂದು ಕೆಲವು ಸಮಯದ ವರೆಗೆ ಯೋಚನೆಮಾಡುತ್ತಿದ್ದರು. ಆದರೆ ನಾವು ಮೇಲೆ ಹೇಳಿದ ಪ್ರಕಾರ ಅವರು ಎಚ್ಚರಿಕೆ ತೆಗೆದುಕೊಂಡುದರಿಂದ ಆ ಕೆಲಸವನ್ನು ಅವರು ಪೂರೈಸಿದರು. ಅಲ್ಲದೆ ಈಗ ಆ ಪ್ರಾಂತ್ಯದಲ್ಲಿ ಮಲೇರಿಯ ಜ್ವರವೇ ಇಲ್ಲ. ಹಾಗೆಯೆ ಇಂಗ್ಲೆಂಡು, ಇಟಲಿ ಮತ್ತು ಅಮೇರಿಕ ದೇಶಗಳಲ್ಲಿಯೂ ಈ ಮಲೇರಿಯ ಜ್ವರದ ಹಾವಳಿಯೇ ನಿಂತುಹೋಗಿದೆ. ಆದುದರಿಂದ ನಾವು ನಮ್ಮ ದೇಶದಲ್ಲಿ ಈ ಜ್ವರದ ಹಾವಳಿಯನ್ನು ನಿಲ್ಲಿಸುವ ಪ್ರಯತ್ನ ತೆಗೆದುಕೊಳ್ಳಬೇಕು. ನಮ್ಮ ಡಾಕ್ಟರವರು ಹೇಳುವದೇನೆಂದರೆ, ನಮ್ಮ ಕೊಡಗುದೇಶವು ದಕ್ಷಿಣ ಹಿಂದುಸ್ಥಾನದ ಸ್ವಿಜರ್ಲೆಂಡು. ಇದನ್ನು ಸ್ವಿಜರ್ಲೆಂಡಿನಂತೆ ಆರೋಗ್ಯಸ್ಥಳವಾಗಿ ಮಾಡಬೇಕಾದರೆ ಇಲ್ಲಿಯ ಜನರು ಪ್ರತಿನಿತ್ಯವೂ ತಮ್ಮ ಆಹಾರದೊಂದಿಗೆ ಕ್ವಿನಿನನ್ನು ತೆಗೆದುಕೊಳ್ಳಬೇಕು. ಹಾಗೆ ಮಾಡಿದ್ದೇ ಆದರೆ ಚಳಿಜ್ವರವು ಸದರಿ ದೇಶದಿಂದ ನಿರ್ಮೂಲವಾಗುವದು. ಆದುದರಿಂದ ಈ ಕೆಳಗೆ ಹೇಳಿದ ಪ್ರಕಾರ ಪ್ರತಿನಿತ್ಯವೂ ನಾವು ಎಚ್ಚರಿಕೆ ತೆಗೆದುಕೊಳ್ಳಬೇಕು.

(1) ವಾರಕ್ಕೆ ಎರಡಾವರ್ತಿ ಕ್ವಿನಿನು ತಿನ್ನುವದು.

(2) ಕೆರೆ ಕುಂಟೆಗಳ ಸಮೀಪವನ್ನು ತಪ್ಪಿಸಿ ವಾಸಮಾಡುವದು. ಅಥವ ಸಮೀಪದಲ್ಲಿದ್ದರೂ [illegible]

ಕೆರೆ ಕುಂಟೆಗಳಲ್ಲಿ ಸಾಕಬೇಕು. ಮನೆಯ ಸುತ್ತಲೂ ನೀರು ನಿಲ್ಲದಂತೆ ನೋಡಿಕೊಳ್ಳುವದು.

(3) ಸೊಳ್ಳೆಗಳ ಮೊಟ್ಟೆಗಳನ್ನು ನಾಶಮಾಡುವದು.

(4) ಸೊಳ್ಳೆಯ ಪರದೆಯನ್ನು ಹಾಕಿಕೊಂಡು ನಿದ್ರೆಮಾಡುವದು ಅಲ್ಲದೆ ಮೈಗೆ ಎಣ್ಣೆಯನ್ನು ಲೇಪಿಸಿಕೊಂಡು ಮಲಗುವದು.

(5) ನೀರನ್ನು ಕಾಯಿಸಿ ಕುಡಿಯುವುದು.

ಹೀಗೆ ಮಾಡಿದ್ದೇಯಾದರೆ ಮಲೇರಿಯ ಎಂಬ ಜ್ವರದಲ್ಲಿ ಸಾವಿರಗಟ್ಲೆ ಸಾಯುವ ಅಗತ್ಯವಿಲ್ಲ.

ಒಂದು ಪ್ರಭಲವಾದ ಪ್ರಶ್ನೆ.

ದೇಶಾಭಿಮಾನವೆಂದರೇನು ?

ಕೈರಾಟೆಯಿಂದ ನೂಲು ತಯಾರಿಸಿ ಮಾಡಿದಬಟ್ಟೆಯನ್ನು ಧರಿಸಿ ಆ ಮೂಲಕ ಲಕ್ಷೋಪಲಕ್ಷ ಗರೀಬ ಜನರಿಗೆ ಅನ್ನವನ್ನೊದಗಿಸುವದೇ ದೊಡ್ಡ ದೇಶಾಭಿಮಾನ.

ಇಂಥಾ 'ಖಾದಿ' ಬಟ್ಟೆಯನ್ನು ಎಲ್ಲಾ ಜನರಿಗೂ ಸುಲಭಕ್ರಯದಲ್ಲಿ ಒದಗಿಸಲಿಕ್ಕೆ ಈಗತಾನೇ ವೀರರಾಜಪೇಟೆಯಲ್ಲಿ ಒಂದು ಖಾದಿ ಭಂಡಾರವನ್ನು ತೆರೆದಿರುತ್ತೇವೆ. ಈಭಂಡಾರದಲ್ಲಿ ಎಲ್ಲಾತರದ ನಾಜೂಕಾದ ಮತ್ತು ಗಟ್ಟಿಯಾದ ಖಾದಿಬಟ್ಟೆಗಳೂ ವಸ್ತ್ರಗಳೂ ಶೀರೆಗಳೂ ಟವಲು ಶಾಲುಗಳೂ ಖಾದಿಶೇಕ್ಯೆಯಿಂದ ತಯಾರಾಗಿದ ಎಲ್ಲಾತರದಬಟ್ಟೆಗಳೂ ದೊರೆಯುತ್ತವೆ. ಬಟ್ಟೆಗಿರುವ ಎಲ್ಲಾ ಆರ್ಡರನ್ನು ತಕ್ಷಣವೇ ಒದಗಿಸಲಾಗುತ್ತ. ಊರೂರಿನಲ್ಲಿರುವ ಎಲ್ಲಾ ಜನರಿಗೆ ಬಟ್ಟೆಯನ್ನೊದಗಿಸಲುತಕ್ಕ ಏರ್ಪಾಡುಮಾಡಲ್ಪಟ್ಟಿದೆ. ದೇಶಾಭಿಮಾನಿಗಳ ಪ್ರೋತ್ಸಾಹವನ್ನು ನಿರೀಕ್ಷಿಸುತ್ತಲೇ ಇರುತ್ತೇವೆ. ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

'ಮೇನೇಜರ'

12—1 ಖಾದಿ ಭಂಡಾರ, ವೀರರಾಜಪೇಟೆ.

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗಿನ ರಿಡಕ್ಶನ್ ಸಂಘದ ಶಾಮೆಯವರು ಪ್ರದರ್ಶನ ಸಂಬಂಧ ಮಡಿಕೇರಿ ದಸರ ಹಟ್ಟಿನಲ್ಲಿ ಈ ತಾರೀಕು 20ರಿಂದ 23ರ ವರೆಗೆ ಕಾಯಿಲೆಗಳ ಸಂಬಂಧ ಉಪನ್ಯಾಸಗಳನ್ನು ಮಾಡಿಸಿ ತಾರೀಕು 21ರಲ್ಲು ಶಿಶು ಪ್ರದರ್ಶನವನ್ನು ನಡಿಸಿದರು ಉತ್ತಮವಾದ ಶಿಶುಗಳಿಗೆ ಇನಾಮನ್ನು ಹಂಚಿದರು. ಈ ನಾಲ್ಕೈದು ದಿವಸಗಳ ಸಾಯಂಕಾಲ ಅಲ್ಲಿಯೇ ಮಲೇರಿಯಾ ಮೊದಲಾದ ಕಾಯಿಲೆಗಳ ಸಂಬಂಧ ಭೂತ ಕನ್ನಡಿಯ ಮೂಲಕ (ಲೇಂಟರ್ನ್ ಶೋ) ಚಿತ್ರಗಳನ್ನು ತೋರಿಸಿದರು. ಇದರ ವಿವರವನ್ನು ಬರುವ ವಾರ ಪ್ರಕಟಿಸುವೆವು

ಉತ್ತರ ಕೊಡಗಿನ ಡಿ. ಪಿ. ಡಬ್ಲ್ಯು. ಸಬ್ ಡಿವಿಜನಲ್ ಆಫೀಸರಾಗಿದ್ದ ಮಿ. ಹೇಗ್‌ರವರು ತಾರೀಕು 24ರಲ್ಲು ಎಗ್ಜಿಕ್ಯೂಟಿವ್ ಇಂಜಿನಿಯರವರಿಗೆ ಚಾರ್ಜು ಕೊಟ್ಟು ರಜೆಯಲ್ಲಿ ಇಂಗ್ಲೆಂಡಿಗೆ ಹೊರಟು ಹೋದರು. ಇವರು ಹಿಂತಿರುಗಿ ಕೊಡಗಿಗೆ ಬರುವಂತಿಲ್ಲ.

ಕಳೆದ ಶಿವರಾತ್ರಿಯಲ್ಲು ಸಾಯಂಕಾಲ ಸುಮಾರು 8 ಗಂಟೆಗೆ ಕುಂಬಳದಾಳು ಗ್ರಾಮದ ಕೈಯ್ಯಂಡಿರ ಪೂವಯ್ಯನೆಂಬ ಹುಡುಗನು ಭಾಗಮಂಡಲ ದೇವಸ್ಥಾನದ ಬಳಿ ಕಲ್ಲಿನ ಮೇಲೆ ಬೀಳಲು ತನ್ನ ಜೇಬಿನಲ್ಲಿದ್ದ ಕುಪ್ಪಿಯು ಒಡೆದು ಅದರ ಚೂರು ಪಕ್ಕಕ್ಕೆ ತಗಲಿ ಪೂರಾ ಗಾಯವಾದುದರಿಂದ ಅವನನ್ನು ಮಡಿಕೇರಿ ಆಸ್ಪತ್ರೆಗೆ ಅದೇ ರಾತ್ರಿ ಮೋಟಾರ ಕಾರಿನಲ್ಲಿ ಕಳುಹಿಸಲಾಯಿತು. ಅವನು ಆಸ್ಪತ್ರೆಯಲ್ಲಿ ಗುಣರಾಗುತ್ತಿದ್ದಾನೆ.

ಶಿವರಾತ್ರಿಗೆ ಕ್ಷೇಮದಲ್ಲಿದ್ದು ಕಾವೇರಿಗೆ ಹೊರಟ ಮೂರ್ನಾಡು ಕೋಟೆರ ಹಂಗಸೊಬ್ಬಳು ದಾರಿಯಲ್ಲಿ ಭೇದಿ ಕಾಯಿಲೆಯಿಂದ ಪೀಡಿತಳಾಗಿ ಭಾಗಮಂಡಲದಲ್ಲಿ ಹಬ್ಬಾದುದರಿಂದ ಮೋಟಾರಿನಲ್ಲಿ ಮಡಿಕೇರಿ ಆಸ್ಪತ್ರೆಗೆ ಕಳುಹಿಸಲ್ಪಟ್ಟಳು. ಆದರೆ ಅವಳು ಮರುದಿನ ಆಸ್ಪತ್ರೆಯಲ್ಲಿ ಮೃತಪಟ್ಟಳು.

ಈ ತಾರೀಕು 6ರಲ್ಲು ತಾವಳಗೇರಿನಾಡಿನ ಬಾಡಗ ಗ್ರಾಮದ ಕಲ್ಲೇರ ಸೋಮಯ್ಯನೆಂಬವನು ಪಿಟಿಕಾಡು ತೋಟದ ಒಬ್ಬ ಮಾದಿಗನಿಗೆ ಒದೆಯಲು ಅವನ ಬ್ಯರಡಗೆಡ್ಡೆಯು ಒಡೆದು ಮರುದಿನ ಮೃತಪಟ್ಟ ವಿಷಯ ಪೋಲೀಸಿನವರು ತನಿಖೆ ಮಾಡಿ ಅವನ ಮೇಲೆ ಚಾರ್ಜು ಮಾಡಿರುವರು.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಬಜೆಟು ಮೀಟಿಂಗು ಮಾರ್ಚ ತಾರೀಕು 12ರಿಂದ 16ರ ವರೆಗೆ ನಡೆಯುವುದು.

ತಾರೀಕು 22ರಲ್ಲು ಬೆಂಗಳೂರಲ್ಲಿರುವ ಕೊಡಗರ ಹಾಕಿ ಟೀಮು ಅಲ್ಲಿಯ ಕಾಲೇಜುಗಳ ಸಂಯುಕ್ತ ಟೀಮಿನೊಂದಿಗೆ ಪಂಥದಾಟವಾಡಿ ಎರಡು ಗೋಲುಗಳಿಂದ ಸೋಲಿಸಿರುವರು.

ಮಡಿಕೇರಿ ತಾಲೋಕಿನವರ ಸ್ವಾಗತ ಕಮಿಟಿಯ ಮೀಟಿಂಗು ಮಾರ್ಚ 1ರಲ್ಲು ಮೂರ್ನಾಡಿನಲ್ಲಿ ನಡೆಯುವುದು.

ಒಲಮುರಿಯಲ್ಲಿ ಮಹಾದೇವರ ಹಬ್ಬವು ಮಾರ್ಚ ತಾರೀಕು 9ರಲ್ಲು ಆಗುವುದು

ಶ್ರೀಕೃಷ್ಣ ಬಾಲ ಸನ್ಮಾರ್ಗ ಸಮಾಜದವರು, ಸಮಾಜದ 6ನೇ ವಾರ್ಷಿಕೋತ್ಸವವನ್ನು ತಾ 21ರಲ್ಲು ಓಂಕಾರೇಶ್ವರ ದೇವಸ್ಥಾನದ ಒಳ ಇರುವ ಸಮಾಜದ ಹಾಲಿನಲ್ಲು ಮಿ ಪಿ ಐ. ಚೆಟ್ಟಿಪ್ಪ ಎಂ. ಎಲ್. ಸಿ ಯವರ ಅಧ್ಯಕ್ಷತೆಯಲ್ಲಿ ನಡಿಸಿದರು. ಸಿಕ್ರೆಟರಿಯವರು ಸಮಾಜದ ವರದಿಯನ್ನು ಓದಿದನಂತರ ಹೈಸ್ಕೂಲಿನ ಉಪಾಧ್ಯಾಯರುಗಳಾದ ಮಿ. ಶ್ರೀನಿವಾಸಮೂರ್ತಿಯವರು ಸಮಾಜದ ವಿಷಯವೂ, ಮಿ. ಶಂಕರನಾರಾಯಣರಾಯರು ವಿದ್ಯಾರ್ಥಿಗಳ ಕರ್ತವ್ಯದ ವಿಷಯವೂ ಭಾಷಣಮಾಡಿದರು. ಅಧ್ಯಕ್ಷರ ಭಾಷಣದನಂತರ ಭಜನೆ ನಡಿಸಿ ಪ್ರಸಾದದೊಂದಿಗೆ ಸಭೆಯು ಮುಕ್ತಾಯವಾಯಿತು.

ಹಿಂದೂ ದೇಶ.

ಚಿತಗಾಂಗದ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿರುವದೇನಂದರೆ —ಬಾಬು ಅಕ್ಷಯ ಚರಣಸೇನರ ಪತ್ನಿಯು ಪ್ರಸೂತಳಾಗಿ ಒಂದು ವಿಲಕ್ಷಣವಾದ ಹೆಣ್ಣು ಕೂಸು ಜನ್ಮಿಸಿದೆ. ಆ ಕೂಸಿಗೆ ಒಂದು ದೊಡ್ಡ ಕಣ್ಣೂ ಎರಡು ತಲೆಗಳೂ ಇದ್ದವು. ಈ ಕೂಸು ನಾಲ್ಕು ತಾಸು ಮಾತ್ರ ಜೀವಂತ ಇದ್ದು ಸತ್ತಿತು. ರಾವಣನಿಗೆ ದಶ ಮುಖಗಳು ಹೇಗಿದ್ದವೆಂದು ಶಂಕಿಸಿ ರಾಮಾಯಣವನ್ನು ತುಚ್ಛೀಕರಿಸುವ ಜನರು ಇತ್ತ ಲಕ್ಷ್ಯಕೊಡಲಿ ಲೋ. ಮ.

ಮಲಬಾರ ಜಿಲ್ಲಾ ತಿರಿಕ್ಕೋಟೆಯೂರ್ ಎಂಬಲ್ಲಿ ಒಂದು ಸರ್ಪವು ಒಬ್ಬ ಬಡನಾಯರ ಯುವತಿಯನ್ನು ಪ್ರೀತಿಸಿ ಆಕೆಯ ತಲೆಯ ಮೇಲೆಯೂ, ಮೈ ಮೇಲೆಯೂ ಕುಳಿತುಕೊಂಡು ಪದೇ ಪದೇ ಮುದ್ದಿಡುತ್ತಿರುವದಂತೆ! ಜನರು ಇದನ್ನು ನೋಡಿ ಆಶ್ಚರ್ಯ ಚಕಿತರಾಗಿರುವರು. ಮಾನೆಯವರು ಅಂಜಿ ಮಂತ್ರವಾದಿಗಳಿಂದ ಮಂತ್ರ ತಂತ್ರಗಳನ್ನು ಮಾಡಿಸಿದರೂ ಅದರಿಂದ ಏನೂ ಪ್ರಯೋಜನವಾಗಿರುವದಿಲ್ಲ ಸರ್ಪವು ಮಾತ್ರ ಆ ಯುವತಿಯನ್ನು ಬಿಟ್ಟಗಲುವುದಿಲ್ಲ. ಲೋ ಮ.

ಆ ಯುವತಿಯು ಯಾವುದೋ ವಶೀಕರಣದ ಮದ್ದು ತಯಾರಿಸಿಟ್ಟಿದ್ದು, ಅದನ್ನು ಈ ಸರ್ಪವು ಭಕ್ಷಿಸಿದ ಬಳಿಕ ಇದನ್ನು ಬಿಡಲೇ ಆಶಯನ್ನು ಬಿಟ್ಟಗಲದಿರುವುದಾಗಿರಬಹುದು

ಕ್ರಿಮಿನಲ್ ಲಾ ಎಮೆಂಡಮೆಂಟ್ ಆಕ್ಟಿನ ಎರಡನೇ ಭಾಗವನ್ನು ತಿದ್ದುಪಡಿ ಮಾಡಬೇಕೆಂದು ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಮಂಜೂರಾಗಿದ್ದ ಮಸೂದೆಯನ್ನು ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಚರ್ಚೆಗೆ ತರಲು ಬದು ಬಹುಮತದಿಂದ ಸೋಲಿಸಲ್ಪಟ್ಟಿತು.

ಮಾಯಲಿ ಅಕ್ಷದ ಮಿಂಚುಮರಿಯವರ ಸೆರೆಯನ್ನು ವಿಷಯ ಸುಪ್ತ ಒದಗಾದಗಳನ್ನೂ ಚಿಕಿತ್ಸಿಸುವ ಆಸ್ಪತ್ರೆ ಮತ್ತು ಪಬ್ಲಿಕ್ ಯುನಿಯನ್ ಸ್ಟೋರ್‌ಗಳ ಕಮಿಟಿಯ ವರದಿಯು ಪ್ರಕಟವಾಗಿದೆ.

ಗುಲ್ಬರ್ಗದ ದಂಗೆಯ ವಿಷಯ ವಿಚಾರಿಸಲು ಹೈದರಾಬಾದಿನ ನೈಜಾಮರು ನೇಮಿಸಿದ್ದ ಕಮಿಶನಿನ ಅಧ್ಯಕ್ಷರ ತೀರ್ಪಿಗೆ ಒಪ್ಪಿ ನೈಜಾಮರು ಆ ದಂಗೆ ಸಂಬಂಧ ಕೈದುಮಾಡಲ್ಪಟ್ಟವರನ್ನೆಲ್ಲಾ ಬಿಡುಗಡೆ ಮಾಡಿರುವರೆಂಬ ವರ್ತಮಾನವು "ಮುಸಲ್ಮಾನ" ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಬೊಂಬಾಯಿಯ ಎಕ್ಸೈಸ್ ಕಮಿಟಿಯವರ ವರದಿಯಂತೆ ಅಲ್ಲಿಯ ಸರಕಾರದವರು ತಾವಿರುವ ರಾಜ್ಯದಲ್ಲಿ ಪೂರ್ತಿ ನಿಷೇಧವು ಅವರ ಉದ್ದೇಶವೆಂಬುದೂ, ಆದರೆ ಅದನ್ನು ಒಮ್ಮೆ ಜಾರಿಗೆ ತರುವುದು ಕಷ್ಟವೆಂಬುದೂ ಸೂಚಿಸಿರುವರು.

ಬಂಗಾಳ ಲೆಜಿಸ್ಲೇಟಿವ್ ಕೌನ್ಸಿಲಿನ ಹಿಂದೂ ಮೆಂಬರುಗಳ ಮೀಟಿಂಗು ಕೂಡಿ ಮುಸಲ್ಮಾನ ಮೆಂಬರುಗಳ ಇರಾದೆಯಂತೆ ಇಬ್ಬರು ಹಿಂದೂ ಮಂತ್ರಿಗಳೂ, ಇಬ್ಬರು ಮುಸಲ್ಮಾನ ಮಂತ್ರಿಗಳೂ ಇರಬೇಕೆಂದು ಒಪ್ಪಿದರು.

ಎಲ್ಲಾ ಪಂಗಡಗಳ ಕಾನ್ಫರೆನ್ಸಿನವರು ನೇಮಿಸಿದ ಸ್ವರಾಜ್ಯ ಸಬ್‌ಕಮಿಟಿಯವರು ತಮ್ಮ ವರದಿಯನ್ನು ಪ್ರಕಟಿಸಿರುವರು. ಜವಾಬ್ದಾರಿಯ ಸ್ವರಾಜ್ಯವನ್ನು ಪಡೆಯಲು ನಮ್ಮ ಸಿದ್ಧತೆಯೇ ಕಾರಣವಾಗಬೇಕಲ್ಲದೆ ಬ್ರಿಟಿಷ್ ಪಾರ್ಲಿಮೆಂಟಿನವರು ನಾವು ಅರ್ಹರೆಂದು ತೀರ್ಮಾನಿಸುವವರೆಗೆ ಕಾಯಬೇಕಾಗಿಲ್ಲವೆಂಬುದೇ ಇದರ ಸಾರಾಂಶ

ಡಾಕ್ಟರ್ ರವೀಂದ್ರನಾಥ ಠಾಕೂರರವರು ಅಸ್ವಸ್ಥರಾಗಿರುವರು. ಆದರೆ ಅವರ ಕಾಯಿಲೆಯ ವಿಷಯದಲ್ಲಿ ಜನರು ಕಳವಳಪಡಬೇಕಾದ ಅವಶ್ಯವಿಲ್ಲವೆಂದು ಅವರ ಡಾಕ್ಟರರವರು ಹೇಳಿರುವರು.

ಮಹಾತ್ಮ ಗಾಂಧಿಯವರು ರಾಜಕೋಟೆ ಸಂಸ್ಥಾನಕ್ಕೆ ಹೋಗಿದ್ದಾಗ ಅಲ್ಲಿಯ ಠಾಕೂರ್ ಸಾಹೇಬರವರು ಅವರಿಗೆ ಸ್ವಾಗತ ಪತ್ರವನ್ನು ಅರ್ಪಿಸಿದರು.

ಶ್ರೀ ಕಮಿಶನಿನ ಶಿಫಾರಸ್ಸುಗಳನ್ನು ಜಾರಿಗೆ ತರಲು ಬೇಕಾಗುವ ಹಣವನ್ನು ಮಂಜೂರ್ಮಾಡುವುದಕ್ಕೆ ವಿರೋಧಿಸಬೇಕೆಂದು ಎಸೆಂಬ್ಲಿಯ ನೇಶನಲಿಸ್ಟ್ ಮೆಂಬರುಗಳು ಬಹುಮತದಿಂದ ತೀರ್ಮಾನಿಸಿಕೊಂಡಿರುವರು.

ಸ್ವಾಮಿ ದಯಾನಂದ ಸರಸ್ವತಿಯವರ ಶತಮಾನ ಉತ್ಸವವನ್ನು ನಡಿಸಲು ಮಥುರೆಯಲ್ಲಿ ಸೇರಿದ್ದ ಆರ್ಯ ಸಮಾಜದವರು ಮತ್ತು ಪೌರಾಣಿಕರಲ್ಲಿಯೂ ತಾರೀಕು 21ರಲ್ಲಿ ದಂಗೆ ನಡೆಯಿತು ಎಂದಂತೆ.

ಬೊಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲು ತನ್ನ ಪ್ರಥಮ ಚುನಾಯಿಸಿದ ಅಧ್ಯಕ್ಷರಾಗಿ ಸರ್ ಇಬ್ರಾಹಿಮ್ ರಹಿಮತುಲ್ಲಾರವರನ್ನು ಸರ್ವಸಮ್ಮತದಿಂದ ಆರಿಸಿದೆ.

ಹಿಂದೂ ದೇಶದಲ್ಲಿ ಒಂದು ಇಂಡಿಯನ್ ಮಿಲಿಟರಿ ಕಾಲೇಜನ್ನು ಸ್ಥಾಪಿಸಲು ಬೇಕಾಗುವ ಏರ್ಪಾಡುಗಳನ್ನು ಯೋಚಿಸಲು ಒಂದು ಕಮಿಟಿಯನ್ನು ಮಾಡಬೇಕೆಂಬ ಪಂಡಿತ ಮೋತಿಲಾಲ್ ನೆಹರೂರವರ ಠರಾವು ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಸರಕಾರದವರೂ ವಿರೋಧಿಸದರೂ ಕೂಡ ಬಹುಮತದಿಂದ ಪಾಸಾಯಿತು.

ಬಂಗಾಳ ಕೌನ್ಸಿಲಿನವರು ಅದರ ಚುನಾಯಿತ ಅಧ್ಯಕ್ಷರಿಗೆ ಮಾಸವೊಂದ 3,000 ರೂಪಾಯಿ ಸಂಬಳ ಕೊಡಬೇಕೆಂದು ತೀರ್ಮಾನಿಸಿರುವರು.

ಮೊದಲು ಬೊಂಬಾಯಿ ಪ್ರಾಂತ್ಯದ ಗವರ್ನರಾಗಿದ್ದ ಸರ್ ಜಾರ್ಜ್ ಲಾಯಿಡ್‌ರವರು ಹಿಂದುಸ್ಥಾನದ ವೈಸರಾಯರವರಿಗೆ ನೇಮಕವಾಗಲ್ಪಡುವರೆಂದು ಸುದ್ದಿ.

ಗ್ವಾಲಿಯರ್ ಸೀಮೆಯಲ್ಲಿರುವ ದೇವಾಸ್ ಸಂಸ್ಥಾನದಿಂದ ಉತ್ತರಕ್ಕೆ ಮೂವತ್ತು ಮೈಲಿದೂರದಲ್ಲಿ ಒಂದು ಭಯಂಕರವಾದ ಅನಾಹುತ ನಡೆದ ಸುದ್ದಿಯು ತಾ. 18ರಲ್ಲಿ ಇಂದೋರ್‌ನಗರಕ್ಕೆ ತಲುಪಿದೆ. ದೇವಾಸ್ ನಗರದಿಂದ ಸಾರಂಗಪುರಕ್ಕೆ ಹೋಗಿ ಬರುತ್ತಿದ್ದ ಒಂದು ಮೋಟಾರ್ ಲಾರಿ ಗಾಡಿಯಲ್ಲಿ ಒಂದು ಮದುವೆಮನೆಯ ಜನಗಳು ಮಿತಿಮೀರಿ ಕುಳಿತು ಪ್ರಯಾಣ ಮಾಡುತ್ತಿದ್ದರು. ಅದರಲ್ಲಿ ಸರಿಯಾದ ದೀಪಗಳೂ ಇರಲಿಲ್ಲ. ಬೆಳದಿಂಗಳ ಕೈಲಾಂದ್ರ ಒಂದುಮಾತ್ರವೇ ಇತ್ತು. ಹಗಲಿನ ಬೆಳಕಿರುವ ತನಕ ಗಾಡಿಗೆ ಯಾವದೊಂದು ಅಪಾಯವೂ ಸಂಭವಿಸಲಿಲ್ಲ ಕತ್ತಲಾದಮೇಲೆ ಆ ಗಾಡಿಯು ವೇಗವಾಗಿ ಹೋಗುತ್ತಿರುವಲ್ಲಿ ಒಂದುಕಡೆ ತಿರುವು ಬಂತು. ಗಾಡಿಯನ್ನು ಆ ತಿರುವಿನಲ್ಲಿ ಬೇಗನೆ ತಿರುಗಿಸಿದಾಗ ಅದು ಅನಾಮತ್ತಾಗಿ ತಲೆಕೆಳಗಾಗಿ ಮಗುಚಿಕೊಂಡಿತು. ಒಳಗೆ ಕುಳಿತಿದ್ದವರ ಪೈಕಿ ಇಪ್ಪತ್ತಾರು ಜನಗಳು ಅಲ್ಲೇ ಮೃತಹೊಂದಿದರು. ಇಪ್ಪತ್ತೈದು ಜನಗಳುಮಾತ್ರ ಪ್ರಾಣದೊಡನೆ ಉಳಿಕೊಂಡರು. ಆದರೂ ಇವರಿಗೆಲ್ಲಾ ತುಂಬಾ ಗಾಯಗಳಾಗಿರುತ್ತವೆ

ವಿದೇಶ.

ಈಜಿಪ್ಟಿನ ಸರಕಾರವು ಅಲ್ಲಿಯೇ ತಯಾರಿಸಲ್ಪಡುವ ಪತ್ರಿ ಸಾಮಾನುಗಳಮೇಲೆ ಎಕ್ಸೈಸ್ ಸುಂಕವನ್ನು ತೆಗೆದು ಹಾಕಿರುವರು.

ಹಮ್ಬರ್ಗಿಗೆ ಹೋಗಿದ್ದ ಇಂಡಿಯನ್ ಮಿಶಾಹರ್ ದಳವು ಜೇನಸು ಇಂಡಿಯಾಕೆ ವಾಪಸ್ಸು ಬಂದು ತಲುಪಿದೆ.

ಬ್ರಿಟಿಷ್ ಚಕ್ರವರ್ತಿಯವರಾದ ಐದನೇ ಜಾರ್ಜ್ ಪ್ರಭುಗಳಿಗೆ ಚಳಿ ಸಂಬಂಧವಾದ ಸ್ವಲ್ಪ ಅಸ್ವಸ್ಥವು ಉಂಟಾಗಿದೆ. ಆದರೆ ದಿನೇ ದಿನೇ ಗುಣರಾಗುತ್ತಿದ್ದಾರೆ. ಇದರಿಂದ ಪ್ರಿನ್ಸ್ ಆಫ್ ವೇಲ್ಸ್‌ರವರ ಮುಂದಿನ ದೇಶ ಸಂಚಾರವು ಬದಲಾವಣೆಯಾಗುವಂತಿಲ್ಲ.

ಎಲ್ಲರಿಗೂ ಓಟು ಕೊಡುವ ಹಕ್ಕು ದೊರೆಯುವಂತೆ ಅನುಕೂಲಿಸುವ ಒಂದು ಮಸೂದೆಯನ್ನು ಜಪಾನ್ ಸರಕಾರದವರು ಪ್ರಕಟಿಸಿರುವರು.

ಬೆಲ್ಜಿಯ ಮುತ್ತಿಗೆಯು ನಾವಕಾಶವಾಗಿ ನಡೆಯುತ್ತಿದೆ. ಗುಂಡು ಮದ್ದು ಕಡಿಮೆಯಾಗಿರುವುದೇ ಇದಕ್ಕೆ ಕಾರಣವೆಂದು ಹೇಳುತ್ತಾರೆ.

ಲೀಗ್ ಮುಂದಾಳಾದ ಎಡ್ವಿಲ್ ಕಲೀವ್ ಎಂಬವರನ್ನು ಶೇಖಶೇಟಾಗನಕ್ಕೆ ಒಬ್ಬ ಉಮೇದ್ವಾರರಾಗಿ ಈಜಿಪ್ಟಿನ ಮುಸಲ್ಮಾನರು ಸೂಚಿಸಿರುವರು.

ಜನಿವಿಸುಧಾರಕ ಸಂಘದ ರಾಮಸ್ವಾಮಿಶಾಸ್ತ್ರಿ
ಜೋಬಳ ಕಮಿಟಿ ಮೀಟಿಂಗಿನ ಸಾರಾಂಶ.

ತಾ. 10—2- 25ರಲ್ಲು ಮಿ. ಸಿದ್ದರ ಸುಬ್ಬಯ್ಯ ಎಂ. ಎಲ್. ಸಿ ಯವರನ್ನು ಪ್ರಚಾರಕ ಕಾರ್ಯದರ್ಶಿ ಮಿ. ಐ. ಬಿ ಪೊಂಡಮಾಚಯ್ಯನವರು ಕೇಳಿಕೊಂಡಮೇರೆ ಸಭೆಯು ಸೇರಿಯಲ್ಪಟ್ಟಿತು.

1. ಪ್ರಚಾರಕ ಕಾರ್ಯದರ್ಶಿಯವರ ಭಾಷಣವು ಆದನಂತರ ಅಧ್ಯಕ್ಷರು 1920ನೆ ಇಸ್ವಿ ಜನವರಿ ಮಾಹೆಯ ವ್ಯವಸಾಯ ವ್ಯವಸಾಯಕ ಮತ್ತು ಪರೀಕ್ಷಕ ಸಂಘದ 1ನೆ ಸಂಚಿಕೆಯು 34, 35ನೆ ಪುಟಗಳಲ್ಲು ಇಂಗ್ಲೆಂಡಿನ ಮುಖ್ಯಮಂತ್ರಿಯರಾದ ಲಾಯಿಡ್ ಜಾರ್ಜರವರು ವ್ಯವಸಾಯಗಾರರು ತಮ್ಮ ಹಿಡುವಳಿಯಲ್ಲಿ ವಾಸಿಸುವ ವಿಷಯದಲ್ಲಿ ಮಾಡಿದ ಭಾಷಣದ ತಾತ್ಪರ್ಯವನ್ನು ಓದಿದಾಗ ಅದರಂತೆ ಜಮೀನುದಾರರಾದ ನಾವು ನಡೆ ಮಾಡಬೇಕು, ಅಂದರೆ ನಮ್ಮ ಜನರು ಪರದೇಶಗಳಿಗೆ ಹೋಗಿ ನಿಲ್ಲಗೊಡದೆ ಅದರ ಅವರನ್ನು ನಮ್ಮಲ್ಲೇ ಇಟ್ಟುಕೊಂಡು, ಇತರರು ಪರದೇಶಗಳಿಂದ ಇಲ್ಲಿಗೆ ಬಂದು ತಂಗುವಂತೆ ಏರ್ಪಾಡುಗಳನ್ನು ಮಾಡಿದ್ದಾದರೆ ನಮ್ಮ

ದೇಶದ (ಶಾಲೆವೇಶಿನ) ಹೆಸರು ಪ್ರಖ್ಯಾತಿಗೆ ಬರುತ್ತಿ ಗ್ರಾಮಾಂತರಗಳಲ್ಲಿ ಜವಿಯನು ಹಿಡುವಳಿದಾರರಾದ ರೈತರು ತಮ್ಮ ಹಿಡುವಳಿಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ನೆಲಸುವಂತೆ ಜೆಚ್ಚಾಗಿ ಪ್ರೋತ್ಸಾಹಿಸಬೇಕು.

2. ಈ ಮೇಲೆ ಭಾಷಣವಾದಕೂಡ್ಲೆ ಈ ಜಮೀಬಿ ರೈತರ ಹಿಡುವಳಿ ಒಳ ಮನೆಕಟ್ಟಿಕೊಳ್ಳುವರೆ ಪಾಳು ಗ್ರಾಮಗಳ ಸುತ್ತು, ಪಾರಿಸ್ಟ್, ಕಾಡುಮೃಗ, ಕಾಪಾನೆ ಕಾಟ ಹೆಚ್ಚು ತಮಗೆ ಕೊಟ್ಟ ಕೋವಿ ಲೈಸೆನ್ಸ ಸಾಗಲಿಯು, ಇನ್ನೂ ದಾಗಿ ಒಚ್ಚು ಬಡೆಯಲಿಲ್ಲ. ಕೋವಿ ಕೊಂಡೊಳಗೆ ಸ್ಟೇಶನ್‌ಗಳಲ್ಲು ಇಟ್ಟಿದ್ದಾಯಿತು. ಖಾಯಂ ಲೈಸನ್ಸ ಬಗ್ಗೆ ಅರ್ಜಿ ಬರದರೆ ದೊರೆಯಲಿಲ್ಲ ಪಸ್ಯಕೆಯಾಗಿನಾಲ್ಕಾರು ಲೈಸನ್ಸುಗಳನ್ನು ಅಧ್ಯಕ್ಷರ ಮೇಜಿನಮೇಲೆ ಇಟ್ಟರು. ಅಧ್ಯಕ್ಷರು ಹೊಂದಿಕೊಂಡು ಈ ಬಾಬನ್ನು ಡಿ ಮ ಕಾಪರ್ಬಿದ ಸಂಗದ ಮೂತಾಮು ತ್ತೀಸೆಯಾಗಿ ಸಭೆಯವರನ್ನು ಸಮಾಧಾನ ಪಡಿಸಿದರು.

3. ಈ ಕೆಳಗೆ ಕಂಡವರೋಳೆ ರಾಮನಕಾವು ಆಸ್ತಿ ದರೋಳೆ ಕಮಿಟಿಯು ಏರ್ಪಾಡಾಯಿತು.

ಅಧ್ಯಕ್ಷರು—ಮ. ರಾ. ತೊರೆನೂರುಮಠದ ಚರಮೂರ್ತಿ ಗುರುಲಿಂಗಸ್ವಾಮಿಗಳು.

ವೈಸ್‌ಪ್ರೆಸಿಡೆಂಟರು—ಮ. ರಾ. ಅಂಗಡಿ ಹೊಸಪ್ಪನವರು, ಪುಟ್ಟಾಲಿ

ಕಾರ್ಯದರ್ಶಿ—ಕಡೀ ತಿಮ್ಮಣ್ಣನವರು, ಪುಟ್ಟಾಲಿ.

ಖಜಾನಚಿ—ಜ ತಿಮ್ಮ ಶೆಟ್ರು

ಕಮಿಟಿ—ಗುಡಿಪಟ್ಟಿ ಮರಿಯಪ್ಪನವರು ಕೂಡಿಗೆ

- „ ಪಟೇಲ್ ಗುರುವೆಗ ಡ್ರು
- „ ಚಿಕ್ಕಳ್ಳಿ ಮಲ್ಲೇಗೌಡ ಪುಟ್ಟಾಲಿ
- „ ಹೊಸಕೋಟೆ ಪಟೇಲ್ ಸಿದ್ದಲಿಂಗಪ್ಪನವರು
- „ ಪುಟ್ಟಾಲಿ ಚಿಕ್ಕಳ್ಳಿ ಪುಟ್ಟಪ್ಪನವರು.
- „ ಕಜೆವೆ ವ್ಯಕ್ಕರ ಪೂರಚಟ್ಟು,
- „ „ ಮೂಡಿಮನೆ ರಾಮದಾಸ್ ಸಟ್ಟು
- „ „ ವೈಕಾಲಿ ಸಟ್ರು
- „ ಕೊಡಗ್ಲು ಕರ್ಯಣ್ಣನವರು.

ಈ ಕಮಿಟಿಯವರು ಇನ್ನೂ ಹೆಚ್ಚಿಗೆ ಕಮಿಟಿಗಳ ಸೇರಿಸಿಕೊಳ್ಳಲು ಅಧಿಕಾರವಿದ್ದರಾಯಿತೆಂಬ ತೀರ್ಮಾನದಿಂದ ಅಧ್ಯಕ್ಷರು ರಾಜಕೀಯರಿಗೆ ವಂದನೆಕಾರ್ಯಮಾಡಿ ಕಾಮದೇವರಿಗೆ ಗೋವಿಂದಾ ಎಂದು ಸಭೆಯು ಮುಕ್ತಾಯವಾಯಿತು.

ತಾ 11—1—25ರಲ್ಲು ವೆಲ್ಲಂದಮೋರೆ ಮಾ. ರಾ. ಸುಬ್ಬಯ್ಯ ಎಂ. ಎಲ್ ಸಿ ಯವರ ಅಧ್ಯಕ್ಷತೆಯಲ್ಲು ಫ್ರೇಜರ್‌ಪೇಟೆನಾಡು ಕಮಿಟಿ ಒಂದು ಕರೆಯಲ್ಪಟ್ಟಿತು.

ಪ್ರೆಸಿಡೆಂಟರು—ಮ ರಾ ಬರಾಸ್ ನಂಜುಂಡಶೆಟ್ರು

ವೈಸ್ ಪ್ರೆಸಿಡೆಂಟರು—ಮ ರಾ ಮುಳ್ಳುಸೋಗೆ ಪಟೇಲ್ ಈರಪ್ಪನವರು

ಸೆಕ್ರೆಟರಿ—ಮ. ರಾ ಸಿ ಡಿ ಬಸ್ವರಪ್ಪನವರು

ಟ್ರೆಜರರ್—ಮ. ರಾ ಬಿ ವೆಂಕಟಾರಮಟ್ಟು.

ಕಮಿಟಿಗಳು—ಬೈಚನಳ್ಳಿ ಪಟೇಲ್ ಈರೇಗವ್ಡರು.

- „ ಮೊಳ್ಳೂರುಪಟೇಲ್ ಬಿ. ಸಾಂತಪ್ಪನವರು
- „ ಬೆಂಗೆ ನಂಜುಂಡ ಶೆಟ್ರು
- „ ವೈ. ಎಸ್. ಎಸ್. ರಾಮಸೆಟ್ರು.
- „ ಮ. ಅಕ್ಬರ್ ಸಾಹೇಬರು.
- „ ಎಸ್ ಕೆ ಸುಬ್ಬಪ್ಪ ಸೆಟ್ರು.
- „ ವೈ. ಡಿ ಗವ್ವಡೈಯ ಸೆಟ್ರು.
- „ ವೈ. ಸು. ವೆಂಗಟ್ರಮಣ ಸೆಟ್ರು.
- „ ವೈ. ಶ್ರೀನಿವಾಸ ಸೆಟ್ರು.
- „ ಮುಳ್ಳುಸೋಗೆ ಈರೇ ಗವ್ಡರು.
- „ ಕಾಡು ಸಿದ್ದ ಸೆಟ್ರು.
- „ ಸತಾರ್ ಸಾಹೇಬರು.

ಇವರುಗಳು ಹೆಚ್ಚಿಗೆ ಬೇಕಾದ ಕಮಿಟಿಗಳನ್ನು ನೇಮಿಸಿಕೊಳ್ಳಬಹುದಾಗಿ ತೀರ್ಮಾನವಾಯಿತು.

ಬಾಕಿ ಕೊಡ್ಲಿಪೇಟೆ, ಸೋಮವಾರ ಸಂತೆ ಸೋಮವಾರಪೇಟೆ ಸಂತೆಕಪ್ಪಲ್ಲು ಕುರುಳಿ ಅರ್ಜಿಗಳಲ್ಲು ಮೀಟಿಂಗಿಗೆ ನ್ಯಾಯವಾಗಿ ಬರಲೇ ಸೇರಬೇಕಾದ ಪೂರ್ವ ಈ ತಾ. 22ರಲ್ಲಿ ಕರುಳಿ ಅರ್ಜಿಲ್ಲು 27ರಲ್ಲು ಸೋಮವಾರಪೇಟೆ 1—3—25ರಲ್ಲು ಕೊಡ್ಲಿಪೇಟೆ, 2—3—25ರಲ್ಲು ಸನಿವಾರಸಂತೆ ಹೋಬಳಿಗಳಲ್ಲು ಮೀಟಿಂಗ್‌ಮಾಡುವಂತೆ ನೋಟೀಸ್‌ಗಳು ಕಳಿಸಲ್ಪಟ್ಟಿದೆ.

ಪ್ರಚಾರಕ ಕಾರ್ಯದರ್ಶಿ,
ಉತ್ತರ ಕೊಡಗು.

ಬೇಹಿಸ್ಸೆ ಕೋಆಪರೇಟಿವ್ ಸ್ಟೋರ್ಸ್.

ವಿರಾಜಪೇಟೆ ನೋರ್ಲ್ ಸ್ಕೂಲಿನಲ್ಲಿ 31—1—25ರಲ್ಲು ನಡೆಸಿಕೊಡುವ ಜನರಲ್ಯಾಂಡ್ ಸಭೆಗಳ ಸ್ಟೋರ್ಸ್‌ನ ಎಕ್ಸಿಕ್ಯೂಟಿವ್ ಕಮಿಟಿ ಎನ್ನುವ ಈ ಕೆಳಗಿನ ವಿವರವನ್ನು ಪ್ರಕಟಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು—ಮೆ ಪಿ. ಎಂ. ಚಂಗಪ್ಪನವರು,
ಕೋಆಪರೇಟಿವ್ ಸಂಘಗಳ ಇನ್ಸ್‌ಪೆಕ್ಟರು.

(1) ಹಿಂದಿನ ಮೀಟಿಂಗಿನ ವರದಿಯನ್ನು ಓದಿ ಬಹುಮತದಿಂದ ಪಾಸಾಯಿತು.

(2) ಶೇರುದಾರನನ್ನು ಪಾಸಾಸು ಕೊಡಬೇಕೆಂದು ಅರ್ಜಿ ಬರೆದಿರುವ ಮೆಂಬರುಗಳಿಗೆ ಅವರ ಶೇರು ಹಣವನ್ನು ಕೊಡಬಹುದೆಂದು ತೀರ್ಮಾನವಾಯಿತು.

(3) ಕಮಿಟಿ ಮೆಂಬರನನ್ನು ಹಜಾರ ಮಾಡಬೇಕೆಂದು ಬಿದಿದ ರಾ ಶ್ರೀ ಆರ್. ಜೆಚ್. ಕೆಸಾಯಿ ರವರ ಕಾಗದವನ್ನು ಓದಿ, ಅದನ್ನು ಸಭೆಯವರು ಅಂಗೀಕರಿಸಿದರು. ಅವರ ಬದಲಿಗೆ ಪಡಿಕೇರಿಯಲ್ಲಿರುವ ರಾ. ಶ್ರೀ ಎಂ ಡಿ ಸೋಮಪ್ಪನವರನ್ನು ಕಮಿಟಿ ಮೆಂಬರಾಗಿ ಬಹುಮತದಿಂದ ಚುನಾಯಿಸಿದರು.

(4) ಪುಸ್ತಕಗಳನ್ನು ಕೆಗೆದುಕೊಂಡಂಥ ಏಜಂಟರುಗಳು ಹಣವನ್ನು ಮತ್ತು ಬಾಕಿ ಉಳಿದ ಸಾಮಾನುಗಳ ಪಟ್ಟಿಯೊಂದನ್ನು ಮೂರು ತಿಂಗಳಿಗೊಂದಾವರ್ತಿ ಕಳುಹಿಸಬೇಕೆಂದೂ ಹೀಗೆ ಕಳುಹಿಸುವಾಗ ಮತ್ತು ಸಾಮಾನು ತೆಗೆದುಕೊಳ್ಳುವಾಗ ಆಗುವ ಖರ್ಚನ್ನು ಸಂಪಾದನೆಗೆ ವಹಿಸಿಕೊಳ್ಳಬೇಕೆಂದೂ ತೀರ್ಮಾನವಾಯಿತು. ಅಲ್ಲದೆ ದೂರದ ಮೆಂಬರುಗಳು ಆಯಾಯ ಏಜಂಟರುಗಳಿಂದ ಸಾಮಾನುಗಳನ್ನು ತೆಗೆದುಕೊಳ್ಳಬೇಕೆಂದೂ ಹೀಗೆ ತೆಗೆದುಕೊಳ್ಳುವ ಏಜಂಟರುಗಳಿಗೆ ಇಷ್ಟೇ ಪರ್ಸೆಂಟಿನ ಸಾಮಾನು ಕೊಡಬೇಕೆಂಬುದನ್ನು ನಿರ್ಣಯಿಸಲಿಕ್ಕಾಗುವದಿಲ್ಲವೆಂತಲೂ ಮತ್ತು ಹತ್ತರದ ಮೆಂಬರುಗಳು ಸ್ಟೋರಿನಿಂದಲೇ ಸೆಕ್ರೆಟರಿಯವರಿಂದ ಅವರು ಕೊಡುವಷ್ಟು ಪರ್ಸೆಂಟಿನ ಸಾಮಾನುಗಳನ್ನು ತೆಗೆದುಕೊಳ್ಳಬಹುದೆಂದು ತೀರ್ಮಾನವಾಯಿತು.

(5) ಮಡಿಕೇರಿಯಲ್ಲಿ ಒಂದು ಶಾಖೆಯನ್ನು ಸ್ಥಾಪಿಸಬೇಕಾದರೆ ಅದನ್ನು ಪ್ರೆಸಿಡೆಂಟರ ಪಾತರಿಮೇಲೆ ಸ್ಥಾಪಿಸಬಹುದೆಂದು ತೀರ್ಮಾನವಾಯಿತು

(6) ಬಾಕಿನಿಂತ ಪುಸ್ತಕಗಳ ಅಂದರೆ ಡೆಡ್‌ಸ್ಟಾಕ್ ವಿಷಯ ಇವುಗಳನ್ನು ಮಾರಾಟಮಾಡುವದಕ್ಕೆ ಸಬ್ ಅಸಿಸ್ಟಂಟ್ ಇನ್ಸ್‌ಪೆಕ್ಟರವರನ್ನೂ ಎರಡು ಪ್ರೈಮರ್ಯ ಸ್ಕೂಲಿನ ಹೆಡ್ಮಾಸ್ಟರುಗಳನ್ನೂ ಕೇಳಿ ಅವರಿಂದ ಸಹಾಯ ಸಿಕ್ಕಬಿದ್ದರೆ ಮುಂದೆ ಆಲೋಚನೆ ಮಾಡಬಹುದೆಂದು ಒಪ್ಪಿದರು.

(7) ಭಟ್ಟಾ ಅಂಡ್ ಕಂಪೆನಿ ಏಜಂಟರವರಿಗೆ ಕೊಟ್ಟು ಒಂದುನೂರು ರುಪಾಯಿಗಳ ವಿಷಯ ಸೆಕ್ರೆಟರಿಯವರು ಕಂಪನಿಯವರಿಗೂ ಮತ್ತು ಲಾಯರಿಗೂ ಕಾಗದ ಬರೆದು ಇದರ ವಿಷಯವನ್ನು ಇನ್ನೊಂದು ಮೀಟಿಂಗಿಗೆ ಇಟ್ಟುಕೊಳ್ಳಬೇಕೆಂದು ತೀರ್ಮಾನವಾಯಿತು

(8) ಮೆಂಬರುಗಳಲ್ಲಿ ಬಾಕಿನಿಂತ ಹಣವನ್ನು ಎರಡು ತಿಂಗಳಲ್ಲಿ ಎಲ್ಲಾ ಹಣವನ್ನೂ ಮತ್ತು ಬಾಕಿ ಪುಸ್ತಕದ ಪಟ್ಟಿಯನ್ನು ಕಳುಹಿಸತಕ್ಕದ್ದು. ತಪ್ಪಿದವರಿಂದ ಕೇಳಿದ ಹನ್ನೆರಡರ ಬಡ್ಡಿಯನ್ನು ವಸೂಲ್ಮಾಡುವದು. ಈ ವಿಷಯ ಸೆಕ್ರೆಟರಿಯವರು ಕೂಡ್ಲೆ ನೋಟೀಸುಕೊಡುವದು.

(9) ಹಂಚದಿಕ್ಕಿರುವ ಡಿವಿಡೆಂಡ್ 80 ರುಪಾಯಿಗಳನ್ನು ಪೂರ್ತಿ ಪಾವತಿಮಾಡಿದ ಶೇರುದಾರರಲ್ಲಿ ಹಂಚಿ ಅವರವರ ಶೇರು ಹಣಗಳಿಗೆ ಸೇರಿಸಬೇಕೆಂದು ತೀರ್ಮಾನಿಸಿದರು. ಅಲ್ಲದೆ ಎಸ್ಟಾಬ್ಲಿಶ್‌ಮೆಂಟ್ ಆಗಿ ತೆರಿಗೆ ಸಂಬಳ ಬ್ರಾಂಚಿನಲ್ಲಿದ್ದ ಏಜಂಟರಿಗೆ (ಮ. ಎ ಬೋಪೈಯ್ಯನವರಿಗೆ) ಸ್ವಲ್ಪಕ್ಕೆ ಕಮಿಷನ್ (ಪ್ರೆಸಿಡೆಂಟರು ಹೇಳುವಷ್ಟು) ಈ ವರ್ಷದಲ್ಲಿ ಕೊಡಬಹುದೆಂದು ತೀರ್ಮಾನವಾಯಿತು.

(10) ಪೈಲಾಡಲ್ಲಿ ಸ್ಟೋರಿನ ಹೆಡ್ ಅಫೀಸ್ ಮಡಿಕೇರಿ ಎಂಬುದನ್ನು ವೀರಾಜಪೇಟೆ ಎಂಬುದಾಗಿ ತಿದ್ದುವದಕ್ಕೆ ರಿಜಿಸ್ಟ್ರಾರರಿಗೆ ಬರೆದುಕೊಳ್ಳತಕ್ಕದ್ದು

(11) ಗುಮಾಸ್ತನಿಂದ ಹೆಚ್ಚಿನ ಸಂಬಳ ಕೊಡಬೇಕೆಂದು ಒತ್ತಿಕೊಂಡು ಬಂದ ಅವರ ಅರ್ಜಿಯನ್ನು ಓದಿ ಇವರು ಪೈಸೆಂಟರಿಗೆ ಬಂದ ನಕಲು ಬರುವ ಮರುಗ ಕಾರಣ ಸಂಬಳ ಹೆಚ್ಚಿಸುವ ವಿಷಯದಲ್ಲಿ ಏನನ್ನಾದರೂ ಸಭೆಯವರು ಸಮ್ಮತಿಸದ್ದಾರೆಂದು ತಿಳಿಸಿ, ಬರುವ ಕಮಿಟಿ ಮೀಟಿಂಗಿನಲ್ಲಿ ಇದನ್ನು ಇಂತತ್ತೇ ಎಂಬದಾಗಿ ತೀರ್ಮಾನವಾಗುವದು.

(12) ಈ ಪ್ರೋಸೀಡಿಂಗ್ಸನ್ನು ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಎಲ್ಲರೂ ಅಭಿಪ್ರಾಯಪಟ್ಟರು

ಪಿ. ಎಂ. ಚಂಗಪ್ಪ,
ಅಧ್ಯಕ್ಷರು.

ಪತ್ರವ್ಯವಹಾರಗಳು.

ಪ್ರಾಸ್ತಾವಾದರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ ಸ

ಭಾಗಮಂಡಲದ ಹಜಾಮರು.

ಅಯ್ಯಾ,

ಕಳೆದ ಶಿವರಾತ್ರಿಗೆ ನಾನು ಭಾಗಮಂಡಲಕ್ಕೆ ಹೋಗಿದ್ದೆನು. ಸನ್ನಿಧಿಯೇ ಅನೇಕ ಯಾತ್ರಿಕರು ನೆರೆದಿದ್ದರು. ಶಿವರಾತ್ರಿಯ ಮರುದಿನ ನೂರಾರು ಜನರು ಕೊಳೆ ತಣ್ಣಾಗದ ನೀರಿನಲ್ಲಿ ಮುಳುಗಿ ಒದ್ದೆ ಬಟ್ಟೆಯಲ್ಲೇ ಸಾಲಾಗಿ ಕುಳಿತಿದ್ದ ಕೆಲವು ಕ್ಷೌರಗಾರರ ಎದುರಿನಲ್ಲಿ ನಡುಗುತ್ತಾ, ನಿಂತಿದ್ದರು. ಕೊಡಬೇಕಾದವರಲ್ಲಿಯೂ ಕಾವೇರಿ ಬಾತ್ರಿಗೆ ಹೋದಲ್ಲು ಗಡ್ಡವಿನ್ನೆಯನ್ನು ತಲೆ ಕೂದಲನ್ನೂ ತೆಗೆಯುವದು ಪದ್ಧತಿಯೂ ಗಿದೆ. ಆವ ದರಿಂದ ನಾನು ಚಳಿಯಿಂದ ಬಟ್ಟೆ ಬಿಚ್ಚುವದು ಕಷ್ಟವಾದರೂ, ಧೈರ್ಯವನ್ನು ತಾಳಿ ಉಡುಪನ್ನು ತೆಗೆದು ಹೊಳೆಯ ನೀರಿನಲ್ಲಿ ಮುಳುಗಿದೆನು. ಕೂಡಲೆ ಕ್ಷೌರಕ್ಕೆಂದು ಹಜಾಮರಿದಲ್ಲಿಗೆ ಹೋದೆನು ಅಲ್ಲಿ ಗಡಗಡನೆ ನಡುಗುತ್ತಾ ನಿಂತಿದ್ದ ಜನರ ಗುಂಪು ಮುಂದೆ ಬಂದು ಮುಂದೆ ಎಂದು ಅಡ್ಡಿಮಾಡಿ ನಾನು ಮುಂದೆ ಬಂದಿದ್ದರು. ಇನ್ನು ಕೆಲವರು ಹಜಾಮರಿಗೆ ಹದಿನಾರನೇ ದುಡ್ಡಿಗಿಂತ ಹೆಚ್ಚು ಕೊಡುವರು. ಕ್ಷೌರ ಮಾಡಿದಕ್ಕೆ ಕೆಲ ಎರಡ್ಡು ನಾಲ್ಕಾಣೆ ಎಂದೂ ಹಜಾಮರು ತಮ್ಮ ಮನಸ್ಸು ಇಚ್ಛೆ ಚಾರ್ಜು ವಸೂಲಿ ಮಾಡುತ್ತಿದ್ದರು

ಚಳಿಯನ್ನು ತಡೆಯಲಾರದೆ ಎಷ್ಟು ಚಾರ್ಜಾದರೂ ಕೊಟ್ಟು ಕ್ಷೌರ ಮಾಡಿಸಿಕೊಳ್ಳಲು ಜನರು ಆತುರರಾಗಿದ್ದರು. ಬೆಳಗ್ಗಿನಿಂದ ಮಧ್ಯಾಹ್ನದವರೆಗೂ ನೀರಿನಲ್ಲಿ ಮುಳುಗಿ ಬಂದ ವರು ಕ್ಷೌರಕ್ಕಾಗಿ ಕಾದದ್ದು ಉಂಟು. ಹೀಗೆ ಕ್ಷೌರಕರ ಕ್ಷಾಮಕ್ಕೆ ಕಾರಣವೇನೆಂದು ವಿಚಾರಿಸಿದೆನು. ಶಿವರಾತ್ರಿ ಜಾತ್ರೆಗೆ ಆ ಊರಿನ ಹಜಾಮರನ್ನಲ್ಲದೆ ಬೇರೆ ಯಾರನ್ನೂ ಅಲ್ಲಿ ಕ್ಷೌರಮಾಡಲು ದೇವಸ್ಥಾನದ ಅಧಿಕಾರಿಗಳು ಬಿಡುವುದಿಲ್ಲವೆಂದೂ ಹೀಗೆ ಮಾಡುವುದು ಅಲ್ಲಿ ಖಾಯಂ ಇರುವ ಹಜಾಮರ ಹಿತಕ್ಕಾಗಿ ಎಂತಲೂ ತಿಳಿಯಲಾಯಿತು.

ಇದು ಯಾತ್ರಿಕರಿಗೆ ಎಷ್ಟು ಕಷ್ಟವೆಂಬುದನ್ನು ದೇವಸ್ಥಾನದ ಅಧಿಕಾರಿಗಳು ತಿಳಿದಂತೆ ಕಾಣುವದಿಲ್ಲ ಅನೇಕರು ತಮ್ಮ ಕರ್ಮಾಂತರಗಳನ್ನು ಮುಗಿಸಿಕೊಂಡು ದೂರ ಸ್ಥಾನಗಳಿಗೆ ಹಿಂತಿರುಗಬೇಕಾಗಿರುವಲ್ಲು ಕ್ಷೌರಕ್ಕಾಗಿ ಹೀಗೆ ಅನೇಕ ಗಂಟೆಗಳ ವರೆಗೆ ಅವರನ್ನು ತಡೆಯುವುದು ಯಾವ ನ್ಯಾಯ? ಈ ಕಷ್ಟವನ್ನು ಸಹಿಸಲಾರದೆ ಕೆಲವರು ತಮ್ಮೊಳಗೇನೇ ಅತ್ತಿತ್ತ ಕ್ಷೌರ ಮಾಡಿಕೊಂಡದ್ದು ಉಂಟು. ಈ ಗಲಾಟೆಯಲ್ಲಿ ಕ್ಷೌರಿಕರು ವಾಡಿಕೆಯಾಗಿರುವ ಚಾರ್ಜನ್ನು ಅಂದರೆ ದೀಕ್ಷೆ ಇರುವವರಿಗೆ 3 ಆಣೆ ಬಾಕಿಯವರಿಗೆ ಒಂದಾಣೆ, ವಿಶಿ ದ ಮನಸ್ಸೋ ಇಚ್ಛೆ ಚಾರ್ಜು ಮಾಡುವುದಲ್ಲದೆ ಅವಸರದಲ್ಲಿ ಕ್ಷೌರವನ್ನು ಚೆನ್ನಾಗಿ ಕೂದಲನ್ನೆಲ್ಲಾ ತೆಗೆಯದೆ ಬಾಕಿಯೂ ಡುವುದು ಗ್ರಾಮಗಳನ್ನೂ ನಡಮಾಡುವುದೂ ಇದೆ. ಇಂಥಾ ತೊಂದರೆಗಳಿಗೆಲ್ಲಾ ದೇವಸ್ಥಾನದ ಅಧಿಕಾರಿಗಳ ಮುಕುಮೇ ಕಾರಣವಾಗಿದೆ ಹಜಾಮರು ಯಾವ ಸ್ಥಳದವರೇ ಇರಲಿ ಅಲ್ಲಿ ಕ್ಷೌರ ಮಾಡಬಹುದೆಂದೂ ಅಂಥವರು ದೇವಸ್ಥಾನಕ್ಕೆ ನ್ಯಾಯವಾದ ತೆರಿಗೆಯನ್ನು ಕೊಡಬೇಕೆಂದೂ, ಕ್ಷೌರಕ್ಕೆ ವಾಡಿಕೆಯಲ್ಲಿರುವ ಚಾರ್ಜಿಗಿಂತ ಹೆಚ್ಚು ವಸೂಲಿ ಮಾಡಬಾರದೆಂದೂ ಟೆಂಪಲ್ ಅಧಿಕಾರಿಗಳು ನಿರ್ಣಯಿಸಿದರೆ ಇಂಥಾ ಅನರ್ಥಗಳಿಗೆ ಎಂದೂ ಎಡೆ ಇರಲಿಕ್ಕಿಲ್ಲ. ಅವರು ಯಾತ್ರಿಕರ ಹಿತವನ್ನು ಭಯಸಿ ಇನ್ನಾದರೂ ತಕ್ಕದಾದ ಏರ್ಪಾಡುಗಳನ್ನು ಮಾಡುವರಾಗಿ ನಂಬುವೆ.

"ಯಾತ್ರಿಕ"

ಸೋಮವಾರ, ಸೋಮವಾರಪೇಟೆ ಬಸ್ಸು ಸರ್ವೀಸು

ಕೊಡಗು ದೇಶದ ಇಂಪೀರಿಯಲ್ ರಸ್ತೆಗಳೇ ಬೇರೆ ಎಲ್ಲಾ ದೇಶದ ರಸ್ತೆಗಳಿಗಿಂತಲೂ ಬಹಳ ಒಳ್ಳೆ ಸ್ಥಿತಿಯಲ್ಲಿರುವ ದೆಂಬುದಾಗಿ ಈ ದೇಶದವರು ಮತ್ತು ಅನ್ಯ ದೇಶದವರು ಹೇಳಿಕೊಳ್ಳುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಆದರೆ ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿದ ರಸ್ತೆಗಳ ಸ್ಥಿತಿ ಕೆಲವು ಸ್ಥಳಗಳಲ್ಲಿ ಸ್ವಲ್ಪಮಟ್ಟಿಗೆ ಅಸಮರ್ಪಕವಾದುದು ನಮ್ಮಲಿಗೆ ಧ್ಯಾನಗೋಚರವಾಗುತ್ತಿದ್ದುದು, ದೇಶದ ಅನೇಕರು ಅಲ್ಲಲ್ಲಿ ಹೇಳಿಕೊಳ್ಳುತ್ತಿದ್ದರು. ಸಿದ್ದಾಪುರಗಳಿಗೆ ಬೇರೆ ದೇಶದಲ್ಲಿ ರಸ್ತೆಗಳು ಅಷ್ಟುಮಟ್ಟಿಗೆ ಸರಿಯಾಗಿಲ್ಲದಿದ್ದರೂ ಕೂಡ ಬಸ್ಸು ಸರ್ವೀಸುಗಳು ದಿನೇ ದಿನೇ ಹೆಚ್ಚುತ್ತಾ ಒಂದು ಸ್ಪರ್ಧೆಯುಂಟಾಗಿ ಟಿಕ್ಕಾಗಿರುವುದರಿಂದ ಬೇರೆ ದೇಶದಲ್ಲಿರುವ ಜನ ರೈತರಿಗೆ ಅಲ್ಲಲ್ಲಿ ಪ್ರಯಾಣಕ್ಕೆ ಕಮ್ಮಿ ಚಾರ್ಜಿನಲ್ಲು ಅನುಕೂಲವಾಗುತ್ತಾ ಬರುವುದು. ಆ ಬೇರೆ ದೇಶದ ಜನ ರೈತರ ಪುಣ್ಯವೇ ಸರಿ ನಮ್ಮ ಈ ಚಿಕ್ಕ ದೇಶದಲ್ಲಿಯೂ ಬಸ್ಸುಗಳು ಒದಗಿದವು. ಅಲ್ಲಲ್ಲಿ ಹೆಚ್ಚುತ್ತಾ ಬಂದು ದೇಶದ ಎಲ್ಲಾ ಭಾಗದ ಇಂಪೀರಿಯಲ್ ರಸ್ತೆಗಳಲ್ಲಿ ಬಸ್ಸುಗಳೂ, ಕಾರುಗಳೂ, ಓಡಾಡುವುದರಿಂದ ಈ ದೇಶದ ಜನ ರೈತರಿಗೂ ಒಂದು ತರದ ಅನುಕೂಲವೇ ಸರಿ. ಈ ಚಿಕ್ಕ ದೇಶದ ಇಂಪೀರಿಯಲ್ ರಸ್ತೆಗಳ ಸ್ಥಿತಿ ಸಾವಧಾನವನ್ನೆಯು ಆಗುವುದಲ್ಲಿ ಬಹಳ ಕಮ್ಮಿಯಾಗಿಯೂ ಬಸ್ಸು ಓಡಾಡಿಸಲಿಕ್ಕೆ ಸ್ವಲ್ಪಮಟ್ಟಿಗೆ ತೊಂದರೆ ಸ್ಥಳ ವುಳ್ಳದುವೆಂಬುದಾಗಿ ಎಲ್ಲರೂ ಅಲ್ಲಲ್ಲಿ ಹೇಳಿಕೊಳ್ಳುತ್ತಿರುತ್ತದು ಸರಿಯಷ್ಟೇ. ಆದರೂ ಕೂಡ ಅಂಥಾ ಸಂಕಷ್ಟದ ರಸ್ತೆಗಳಿಗೆ ಎರಡು ಕಂಪೆನಿಯ ಬಸ್ಸು ಸರ್ವೀಸಿನವರು ಸ್ಪರ್ಧೆಯಿಂದ ಬಸ್ಸುಗಳನ್ನು ಓಡಾಡಿಸುವ ಹಾಗೆ ಮಾಡಿದ್ದು ನಮ್ಮ ಧನ ಸರಕಾರದವರು ಜನ ರೈತರಿಗೆ ಒಂದು ತರದ ಉಪಕಾರ ಮಾಡಿದಂತಾಗಿದೆ. ಹೀಗಿರುವಾಗ ಮಡಿಕೇರಿಯಿಂದ ಪ್ರಧಾನಕರ್ತರಾಗಿ ಸೋಮವಾರಪೇಟೆಗೆ ಹೋಗುವ ರಸ್ತೆಗಾಗಿ ಬಸ್ಸು ಓಡಿಸುವದಕ್ಕೆ ಲೈಸೆನ್ಸಿಗಾಗಿ ಕೆಲವರು ಪ್ರಯತ್ನಪಡುತ್ತಿರುವದಾದರೂ ಕೂಡ ನಮ್ಮ ಧನ ಸರಕಾರದವರು ಲೈಸೆನ್ಸ ಕೊಡಲಿಕ್ಕೆ ಉದಾಸೀನರಾಗುವುದು ನೋಡಿದರೆ ಏಕ "ಮೊಕ್ಷ ವ್ಯವಸ್ಥೆ" ಕಾಣುವುದಾಗಿದೆ. ಮಡಿಕೇರಿಯಿಂದ ಸೋಮವಾರಪೇಟೆಗೆ 2—4—0 ರುಪಾಯಿಕೊಟ್ಟಲ್ಲಿಂದ ಕೆಲ

ಮಡಿಕೇರಿಯಿಂದ ಸೋಮವಾರಪೇಟೆಗೆ 2—2—0 ಚಾರ್ಜು ಮಾಡುತ್ತಿರುವ ಸಂಗತಿಯು ನಮ್ಮ [illegible] ಸರಕಾರದವರ ಗಮನಕ್ಕೆ ಇಷ್ಟರವರೆಗೆ ಬಂದಿರಬಹುದಾ [illegible] ಮಡಿಕೇರಿಯಿಂದ ಮೊದಾಪುರಕ್ಕಾಗಿ ಬಸ್ಸ್ [illegible] ಲೈಸನ್ಸ್ ಕೊಟ್ಟಲ್ಲಿ ಖಂಡಿತವಾಗಿಯೂ ಅಂಥಾ ಲೈಸನ್ಸ್‌ದಾರರು ಮಡಿಕೇರಿಯಿಂದ ಸೋಮವಾರಪೇಟೆಗೆ 1—10—0 ವರೆಗೆ ಚಾರ್ಜು ಮಾಡಬಹುದೆಂದು ನಾನು ನಂಬಿರುತ್ತೇನೆ. ಅಲ್ಲದೆ ಸಂಪಾಜೆ ರಸ್ತೆಗಿಂತ ಬಹಳ ಹುಟ್ಟಿಗೆ ಒಳ್ಳೇಸ್ಥಿತಿಯಲ್ಲಿ ಮಡಿಕೇರಿಯಿಂದ ಮೊದಾಪುರಕ್ಕಾಗಿ ಸೋಮವಾರಪೇಟೆಗೆ ಹೋಗುವ ರಸ್ತೆಯು ಇರುವುದು [illegible] ಸರಕಾರದವರು [illegible] ಲೈಸನ್ಸ್ ಕೊಟ್ಟು [illegible] ಡಿಯೂರೆಂದು [illegible] ಮೊದಾಪುರಕ್ಕಾಗಿ [illegible] ಹೋಗುವ ರಸ್ತೆಯು [illegible] ಹಾರಂಗಿ [illegible] ರು, ಕಪ್ಪಲಿಟ್ಟು, [illegible] ದೊಡ್ಡ ದೊಡ್ಡ ಕಾಫಿ ತೋಟಗಳು [illegible] ಯೂರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳಿಗೂ, ರೈತರುಗಳಿಗೂ, ವರ್ತಕರುಗಳಿಗೂ [illegible] ಅನುಕೂಲವಾಗುತ್ತೆ. ಅಲ್ಲದೆ ಮೊದಾಪುರ [illegible] ಸೋಮವಾರಪೇಟೆ ಜನರು ಮಡಿಕೇರಿಗೆ ಕೋರ್ಟು [illegible] ಮತ್ತು ಇತರ ಕೆಲಸಕ್ಕಾಗಿಯೂ [illegible] ಬರುವುದು [illegible] ಮತ್ತು ನಷ್ಟಕ್ಕೆ ಕಾರಣವಾಗುತ್ತದೆ. [illegible] ದಯಾಳುವಾದ ಡಿ. ಪಿ. ಸಾಹೇಬರು [illegible] ಮೊದಾಪುರಕ್ಕಾಗಿ ಸೋಮವಾರಪೇಟೆಗೆ ಹೋಗುವ ರಸ್ತೆಯಾಗಿ ಬಸ್ಸ್ ಓಡಿಸಲಿಕ್ಕೆ ಲೈಸನ್ಸ್ [illegible] ಲೈಸನ್ಸ್ ಕೊಟ್ಟು ಬಡ ರೈತರ ಕಷ್ಟ ಮತ್ತು [illegible] ತಮ್ಮ [illegible] ಮಾಡಿಯಾರೆಂದು ನಂಬಿದ್ದೇನೆ.

ನಷ್ಟಪಟ್ಟವ

[illegible]

ಅಯ್ಯಾ,

ನಮ್ಮ ಈ [illegible] ಕಾಫಿ ಪ್ರಾಂತ್ಯವಾದ ಮಲೆನಾಡು [illegible] ಹೀನರಾಗಿಯೂ, ಭೂಮಿ ಕಿಂಚಿತ್ತು [illegible] ಬಹುಜತವಾಗಿಯೂ ಇರುವ ಪಾಡಿನಾ [illegible] ಸ್ಥಿತಿಯು ದೇವಿಯರಿಗೂ ಘನ ಸರಕಾರಕ್ಕೂ [illegible] ಈ ತಾಲೋಕಿನವರಿಗೆ ಭೂಮಿ ಕಿಂಚಿತ್ತಾದರೆ [illegible] ಹೆಚ್ಚಾದರೂ ಪೂರ್ವದ ರಾಜರ ಕಾಲಕ್ಕೆ [illegible] ನಮ್ಮ ಭೂಮಿಗೆ ಪಟ್ಟಾ ಸೆಯಾಗಿ [illegible] ನಡಮಾಡಿಕೊಂಡದ್ದಾಗಿದೆ. ಸದರಿ [illegible] ಹೆಚ್ಚಿನ ಕಂದಾಯ ವಿಧಿಸಿ ಕಂದಾಯಕಟ್ಟಲಾರದೆ ಅನೇಕ [illegible] ಹರಾಜಾಗಿ ಸರಕಾರಿ [illegible] ಹೋಗುತ್ತಾ ಇವೆ. ತರಿಭೂಮಿ [illegible] ಬಾಣೆ (ಭೂಮಿಗೆ ಆಯಕಟ್ಟಾದ [illegible]) [illegible] ವಲೆಗಳಲ್ಲು ಸರಕಾರದವರು [illegible] ಹುಟ್ಟಿದ ಬಾಣ [illegible] ಅನಗಳಿಂದ [illegible] ಟ್ಟಿ, ಇನ್ನೊಂದು [illegible] ಬೆತ್ತ ಕಡಿಯಲು ಲೈಸನ್ಸ್ [illegible] ಬೆತ್ತಕದ್ದು ಸೋಂ [illegible] ಹೋಗಿವ [illegible] ಗಾರ್ಡುಗಳಾಗಿಯೂ [illegible] ತೋಟಗಳಲ್ಲು ರೈಟರುಗಳಾ [illegible] ಪ್ರದೇಶಗಳಲ್ಲು ಕೈಸಂಬಳ [illegible] ಅನೇಕ ಯುವಕರು ಜೀವನ [illegible] ಈ ಕಾಲದಲಿ ಈ ತಾಲೋಕಿನ [illegible] ಯೂವ ಸಂದೇಹವೂ ಇರುವದಿಲ್ಲ [illegible] ಕ್ಕಳನ್ನು ವಿದ್ಯೆ [illegible] ಸುದಾಗಿದೆ, [illegible] ಶಾಲೆಗಳಿಗಿಂತಲೂ [illegible] ಗಳು ಮತ್ತು [illegible] ಅಲ್ಲದೆ ವೀರ [illegible] ಹೆಚ್ಚಿನ ವಿದ್ಯಾರ್ಥಿಗಳು ಇರುವದಾಗಿದೆ. [illegible] ಸಂಗತಿ [illegible] ಇಲಾಖೆಯವರನ್ನು ಕೇಳಿದರೆ ತಿಳಿಯ [illegible] ಮೊನ್ನೆ [illegible] ಯಲ್ಲು ನಡೆಯುವ [illegible] ಪರೀಕ್ಷೆಗೆ ನಾಪ್ಲೋಕ್ನು ಸೆಂಟರಾದ [illegible] ನಾಲ್ಕುನೂರು ಮಂದಿ ಗಂಡುವರಿಂದಲೂ [illegible] ಉಪಾಧ್ಯಾಯರು ಕಮ್ಮಿಯೊದ್ದರಿಂದಲೂ ಈ ತಾಲೋಕಿನ ಇತರ ಪ್ರೈಮರಿ ಶಾಲೆಗಳಿಂದ [illegible] ಗುವದಿಲ್ಲವೆಂದು ಪ್ರತಿ [illegible] ಈ ಮೋಡಲ್ ಸ್ಕೂಲಿನ [illegible] ಟ್ಟಿರುವದಾಗಿ ತಿಳಿಯುತ್ತೆ. ಇದು [illegible] ಗ್ರಾಮದ ಕಚ್ಚೇರಿ [illegible] 10 25, ತಾ. 11—2—25ರ [illegible] ಹೀಗ ಹಾಗದ್ದೀಯಾದರೆ ನಮ್ಮ ತಾಲೋಕಿನವರ ಗತಿಯೇನಾಗಬೇಕು ? ನಮ್ಮ ತಾಲೋಕಿನವರೇ ಸಬ್ [illegible] ಡೆಪ್ಯೂಟಿ [illegible], ಡಿಪ್ಯೂಟಿ ತೈಸೀಲ್ದಾರ್, ತಾಲೋಕು ಸೂಪರ್‌ದಾರರು, ಪಬ್ಲಿಕ್ ವರ್ಕ್ಸ್ [illegible] ಇತ್ಯಾದಿ ವಗ್ಯೆರೆ ದೊಡ್ಡ ಕೆಲಸದವರು. ಇದೆಲ್ಲಾ ಏಕೆ ದ್ವೇಷೋ ಪ್ರಧಾನವೆಂದು ಅರಿತದರಿಂದಲ್ಲವೇ? ಈ ಮುಖಂಡರುಗಳು ಮತ್ತು ಕೊಡಗು ವಿದ್ಯಾಭಿವೃದ್ಧಿ ಸಂಘದವರು ಡಿ. ಬೋರ್ಡು ಮೆಂಬರುಗಳು, ಎಂ. ಎಲ್. ಸಿ. ಗಳು ಸಹ ಸೇರಿ ಮೇಲ್ಕಂಡ ಹುಕುಮನ್ನು ವಡನೆ ರದ್ದುಮಾಡಿಸಿ ಈ ತಾಲೋಕಿನ ಎಲ್ಲಾ ಪ್ರೈಮರಿ ಶಾಲೆಯ ಹುಡುಗರನ್ನು ನಾಪ್ಲೋಕ್ನು ಮೋಡಲ್ ಸ್ಕೂಲಿನಲ್ಲು ಪರೀಕ್ಷೆಗೆ ತೆಗೆದುಕೊಂಡು ಪಾಸಾದ ಯುವಕರನ್ನು ಸೇರಿಸಿಕೊಳ್ಳುವಂತೆ ತಕ್ಕ ಮೊಸ್ಟರುಗಳನ್ನೂ ಸ್ಥಳಸಂಕೋಚವಾಗಿದ್ದರೆ ಶಾಲೆ ಒಪಾಯಿ ಸುಮಾಕೆಯೂ ಮಾಡಿಕೊಟ್ಟು ಗರೀಬರೈತರನ್ನು ಘನ ಸರಕಾರದವರು ಕಾಪಾಡುವರೆಂದು ವಿನಂತಿ.

[illegible] ಬಾಬನ್ನು ಸರಕಾರದವರು, ಅಂದರೆ ವಿದ್ಯಾ ಇಲಾಖೆಯ [illegible] ರಾದ ಬಿವಾಬು ವಡನೆ ಕೊಡುವರೆಂದು ಬಿನ್ನೈಸುವನು.

ಮಕ್ಕಳರಂಡೆ.

ರಾಮಸ್ವಾಮಿ ಕಣಿವೆಯ ಆರೋಗ್ಯಸ್ಥಿತಿ.

ಅಯ್ಯಾ,

ನಮ್ಮ ಚಿಕ್ಕ ದೇಶವಾದ ಕೊಡಗಿನ ನಾಲ್ಕು ಮೂಲೆಗಳಲ್ಲಿಯೂ ನಾಗರೀಕತೆಯ ಚಿಹ್ನೆಯು ಕಂಡುಬರುವುದು, ಕೊಡಗು ಪುತ್ರರಾದ ನಮಗೆ ಅತ್ಯಾನಂದವೇ ಸರಿ. ಆದರೆ ನಮ್ಮ ಕೊಡಗು ಸಹೋದರರಾದ ರಾಮಸ್ವಾಮಿ ಕಣಿವೆಹೋಬಳಿಯ ಜನರು ತಮ್ಮ ಗ್ರಾಮಗಳ ಹೀನಸ್ಥಿತಿಯನ್ನು ಹೋಗಲಾಡಿಸುವುದರಲ್ಲಿ ಸ್ವಲ್ಪವೂ ಗಮನಕೊಡದೆ ಇರುವದರ ವಿಷಯ ಎಷ್ಟು ವಿಷಾಧಿಸಿದರೂ ಸ್ವಲ್ಪವೇ. ಗ್ರಾಮಗಳ ಈಗಿನ ಸ್ಥಿತಿಯು ಅಲ್ಲಿಯ ನಿವಾಸಿಗಳ ಆರೋಗ್ಯಕ್ಕೆ ಎಷ್ಟು ಕುಂದಕವನ್ನು ಉಂಟುಮಾಡುವದೆಂದು ಹೇಳಲಸಾಧ್ಯ.

ಜನರು ವಾಸಮಾಡುವ ಸ್ಥಳಗಳ ಬದಿಯಲ್ಲಿ ದನಕರುಗಳನ್ನು ಕಟ್ಟಿಕೊಂಡರೆ ಪಶುಶಾಲೆಯ ದುರ್ವಾಸನೆಯು ಆ ಜನರನ್ನು ಬಾಧಿಸುತ್ತಿರುವುದೆಂಬುದು ಎಲ್ಲರಿಗೂ ತಿಳಿದುದಾಗಿದೆ. ಹೀಗಿರುವಲ್ಲಿ ಇಲ್ಲಿಯ ಜನರು ತಾವು ವಾಸಮಾಡುವ ಮನೆಗಳ ಒಳಗೆ ಅರ್ಧ ಭಾಗವನ್ನು ದನಕರುಗಳನ್ನು ಕಟ್ಟುವಿಕ್ಕೆ ಉಪಯೋಗಿಸಿಕೊಂಡರೆ ಆ ಮನೆಯೊಳಗಿನ ಜನರ ಆರೋಗ್ಯಸ್ಥಿತಿಯು ಹ್ಯಾಗೆ ಇರಬಹುದೆಂಬುವುದನ್ನು ಸ್ವಲ್ಪವೂ ತೋರದರೆ ಇಲ್ಲದೆ ಊಹಿಸಿಕೊಳ್ಳಬಹುದಲ್ಲವೇ. ಇಂಥಾ ಮನೆಗಳನ್ನು ಒಂದೊಂದು ಗುಂಪಿನಲ್ಲಿ ಅಂದರೆ ಒಂದು ಮನೆಯ ಸೂರುಗಟ್ಟಿಯ ನೀರು ಇನ್ನೊಂದು ಮನೆಯ ಒಳಗೆ [illegible] ಬೀಳುವ ರೀತಿಯಲ್ಲಿ ಸೂರಾಗನ್ನು ಕಟ್ಟಿಕೊಂಡು, ಗುಂಪುಗುಂಪಾಗಿ ವಾಸಿಸುವರು. ಇಂಥಾ ಊರುಗುಪ್ಪೆಗಳ ಒಳಗೆ ಬೆಳಗಿನ ಜಾಮದಲ್ಲಿಯೂ, ಸಾಯಂಕಾಲದಲ್ಲಿಯೂ ಸಾವಿರಾರು ದನಕರಗಳು ತಿರುಗಿದರೆ ಅಲ್ಲಿಯ ಮನೆಗಳ ಹೊರಗಿನ ಸ್ಥಿತಿಯು ಹ್ಯಾಗಿರಬಹುದು. ಸಾಧಾರಣವಾಗಿ, ಒಂದೆರಡು ಮಳೆ ಬಿದ್ದರೆ ಇಲ್ಲಿಯ ಊರೊಳಗೆ ಹೆಜ್ಜೆಯಿಟ್ಟು ಹೋಗುವದೇ ಅತಿ ಕಷ್ಟ [illegible] ಹಿಕೆಂದರೆ, ಅಲ್ಲಿಯ ದನಕರಗಳು ತಿರುಗಾಟದಿಂದ ಉಂಟಾದ ಒಂದೆರಡು ಅಡಿಯಷ್ಟು ಆಳವಿರುವ ಗೊಸರಿನಲ್ಲಿ ಮನುಷ್ಯರಿಗೆ ತಿರುಗಾಡಲು ಅಸಾಧ್ಯ. ಈ ರೀತಿಯಾಗಿ ಅಕಶೀಸ್ಥಲ್ಪಟ್ಟ ಊರವರು ಹ್ಯಾಗೆತಾನೆ ಸುಖಿಗಳಾಗಿ ಜೀವಿಸಲು ಇಚ್ಛೈಸಬಹುದು. ಇಂಥಾ ಗ್ರಾಮಗಳಲ್ಲಿವೇ ಮಲೇರಿಯಾ ಜ್ವರಕ್ಕೆ ತವರುಮನೆ ಎಂದೆನ್ನಿಕೊಳ್ಳುವುದು.

ಇಂತಾದ ಸ್ಥಿತಿಯು ತಮ್ಮ ಬದಿಯಲ್ಲೇ ಇದ್ದರೂ ಹೊಡ್ಡ ದಿನಂಪ್ರತಿ ಸಾರಾರು ಬಡಜನರಿಗೆ ಜೀವನವಾಗುವ ಸೀಗೆ ಹೊಸೂರು ತೋಟವನ್ನು ಪೂರಿಸುವುದು ಯಾವ ಧರ್ಮ. ಇನ್ನು ಮುಂದಕ್ಕಾದರೂ ಸೀಗೆ ಹೊಸೂರನ್ನು ದೂರುವುದರ ಬದಲು ತಮ್ಮ ಮುಂದಿರುವ ನ್ಯೂನತೆಯನ್ನು ತಿದ್ದುಪಡಿ ಮಾಡುವುದರಲ್ಲಿ ಇಲ್ಲಿಯ ಮಹಾನುಭಾವರುಗಳು ನಿರತರಾಗುವರೆಂದು ನಾನು ದೃಢವಾಗಿ ನಂಬುತ್ತೇನೆ.

ಕೆ. ಸಿ. ಪಿ.

ಅಯ್ಯಾ,

"ವೇಕ್ಸಿನೇಟಿಂಗ್ ಇಲಾಖೆ" ಎಂಬ ಶಿರೋ ಲೇಖನದ ತಾರೀಖು 13ರ ಇದೇ ಪತ್ರಿಕೆಯಲ್ಲಿ ಮಿ. ಪಿ. ಡಿ. ಗಣಪತಿಯವರ ಬಾತ್ಮಿಯು ನ್ಯಾಯಸಮ್ಮತವಾಗಿದೆ. ವ್ಯಾಕ್ಸಿನೇಟರ್ ಇನ್ಸ್‌ಪೆಕ್ಟರಿಗೆ ಹೆಚ್ಚಿನ ಕೆಲಸವೇನೂ ಇಲ್ಲದಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಯೇ ಆಗಿದೆ. ಆದರೆ, ಈಗಲೇ ಹೆಚ್ಚು ಕೆಲಸವಿಲ್ಲದ ಒಬ್ಬ ಇನ್ಸ್‌ಪೆಕ್ಟರನಿರುವ ಸ್ಥಳದಲ್ಲಿ ಸ್ಯಾನಿಟರಿ ಕಲಿಸಿ ಇನ್ನೊಬ್ಬರು ಇನ್ಸ್‌ಪೆಕ್ಟರನ್ನು ನೇಮಿಸುವುದರಿಂದ ದೇಶಕ್ಕೆ ಹೆಚ್ಚಿನ ಕಲ್ಯಾಣವೇನೂ ಇಲ್ಲವೆಂದೇ ನಂಬಬಹುದು. ಆದುದರಿಂದ ಈಗಾಗಲೇ ದೇಶವೆಲ್ಲಾ ಕೂಗುತ್ತಿರುವಂತೆ ಇಪ್ಪರು ತಿರುಗುವ ಸ. ಅ. ಸರ್ಜನರನ್ನು ನೇಮಿಸುವುದು ಒಳ್ಳೆಯದೂ ದೇಶಕ್ಕೆ ಹೆಚ್ಚು ಪ್ರಯೋಜನವೂ ಇದೆ. ಈ ದೇಶದಲ್ಲಿ ವ್ಯಾಕ್ಸಿನೇಶನ್ ಕ್ರಮಪಡಿಸಲು ಸ. ಅ. ಸರ್ಜನರಿಂದಲೂ ಸಾಧ್ಯವಿದೆ. ಈಗಿನ ವ್ಯಾಕ್ಸಿನ್ ಇನ್ಸ್‌ಪೆಕ್ಟರಿಗೆ ವರುಷಕ್ಕೆ 720ರಿಂದ 960 ರುಪಾಯಿಗಳ ಸಂಬಳವೂ, 160 ರುಪಾಯಿಗಳ ಭತ್ಯವೂ ಮತ್ತು 168 ರುಪಾಯಿಗಳ ಹಜಾರ ಮತ್ತು 16 ರುಪಾಯಿಗಳ ಭತ್ಯವೂ ಇರುವ ಒಬ್ಬ ಜವಾನನೂ ಇರುತ್ತಾರೆ. ಸ್ವಲ್ಪ ಹೆಚ್ಚು ಕಡಿಮೆ ಯಾಗಿದ ಸದರಿ ಮೊಬಲಗಿನಿಂದಲೇ ತತ್ಕಾಲಕ್ಕೆ ಇಬ್ಬರು ಸ. ಅ. ಸರ್ಜನರನ್ನು ನೇಮಿಸಬಹುದು. ಇನ್ನೊಬ್ಬ ಸ. ಅ. ಸರ್ಜನರ ಸಂಬಳವನ್ನು ಸರಕಾರದವರು ಆಲೋಚಿಸಬೇಕಾಗಿದೆ. ಇದರಿಂದ ವೇಕ್ಸಿನೇಟರುಗಳ ಕೆಲಸದ ಎಚ್ಚರಿಕೆಯು ಇನ್ಸ್‌ಪೆಕ್ಟರಿಗಿಂತಲೂ ಹೆಚ್ಚು ಅನುಕೂಲದಲ್ಲಿ ತೆಗೆಯಲು ಸಾಧ್ಯವಿದೆ. ಮೊದಲೊಮ್ಮೆ ಇದೇ ಪತ್ರಿಕೆಯಲ್ಲಿ ಬರೆದಿದ್ದಂತೆ ವೇಕ್ಸಿನೇಟರುಗಳಿಗೆ ಕಂಪೌಂಡಿಂಗ್ ಕಲಿಸಿದರೆ ಸರ್ಜನರುಗಳು ಇರುವಲ್ಲೆಲ್ಲಾ ವೇಕ್ಸಿನೇಟರುಗಳೂ ಗ್ರಾಮಗಳಲ್ಲಿ ತಿಂಬಾಲಿಸಬೇಕಾದುದರಿಂದ ಕಂಪೌಂಡರುಗಳ ಆವಶ್ಯಕತೆಯು ಆವಾಗ ಬೇಡವಾಗುವುದು. ಇದರಿಂದ ಗ್ರಾಮವಾಸಿಗಳಿಗೆ ಸಿಕ್ಕುವ ಲಾಭವು ಇಲ್ಲಿ ಬರೆಯಲು ಸಾಧ್ಯವಿಲ್ಲ. ನಮ್ಮ ಘನವೃತ್ತ ಸರಕಾರವು ಈ ವಿಷಯ ಆಲೋಚಿಸಿ, ರೋಗದಲ್ಲಿ ನರಳುತ್ತಿರುವ ಕಾಡುಮೂಲೆಗಳಲ್ಲಿಯೂ ಸಹ ಇರುವ ಬಡ ರೈತರಿಗೆ ಪ್ರಯೋಜನವಿರುವ ಕೆಲಸಗಳನ್ನು ಕೂಡಲೇ ಕೈಕೊಳ್ಳಬೇಕಾಗಿದೆ.

ಒಡಕೈತರ ಗೆಳೆಯ.

ಸ್ವಾಮಿ ಶಂಕರಾನಂದಜೀಯವರ ಭಾಷಣ.

ಅಯ್ಯಾ ಪತ್ರಿಕಾ ಕರ್ತರೇ,

'ತಮ್ಮ ಫೆಬ್ರವರಿ ತಾರೀಕು 6ರ ಸಂಚಿಕೆಯಲ್ಲಿ ಸ್ವಾಮಿ ಶಂಕರಾನಂದಜೀಯವರ ಭಾಷಣವನ್ನು ಪ್ರಕಟಿಸಿದ್ದನ್ನು ಓದಿದೆನು. ಇದರಿಂದ ನಾನು ಭಾಷಣವನ್ನು ಕೇಳಿ ಕಡೆಗೆ ಬಿಟ್ಟು ಹೋಗಿದ್ದ ಅನೇಕ ಸಂಗತಿಗಳು ಪುನಃ ಯೋಚನೆಗೆ ಬಂದುವು. ಈ ವಿಷಯದಲ್ಲಿ ತಾವು ತೆಗೆದುಕೊಂಡ ಅಪರಿಮಿತವಾದ ಶ್ರಮಕ್ಕೆ ನಾನು ತುಂಬಾ ವಂದಿಸುವೆನು. ಆದರೆ ನಾನು ಕೇಳಿದ ಒಂದು ಸಂಗತಿಯು ತಮ್ಮ ಪತ್ರಿಕೆಯಲ್ಲಿ ಬಿಟ್ಟುಹೋಗಿರುವ ಕಾರಣ ಅದನ್ನು ದಯವಿಟ್ಟು ಜನರ ತಿಳುವಳಿಕೆ ಬಗ್ಗೆ ಇನ್ನೊಂದು ಸಂಚಿಕೆಯಲ್ಲಿಯಾದರೂ ಹೊರಡಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ಅದೇನೆಂದರೆ—

ಈಗಿನ ನವನಾಗರೀಕತೆಯನ್ನು ಹೊಂದಿದವರ ಮನೆಯನ್ನು ನೋಡಿದರೆ ಪ್ರತಿಯೊಂದು ಮನೆಯಲ್ಲಿಯೂ ಒಂದೊಂದು ಡೈನಿಂಗ್ ರೂಮ್, ಡ್ರಾಯಿಂಗ್ ರೂಮ್, ಡ್ರೆಸಿಂಗ್ ರೂಮ್, ಕ್ವೀನ್ ರೂಮ್, ವಿಸಿಟರ್ಸ್ ರೂಮ್, ಸರ್ವೆಂಟ್ಸ್ ರೂಮ್, ಸ್ಟಾಗ್ ರೂಮ್, ಬೂಟ್ಸ್ ರೂಮ್ ವಗ್ಯೆರೆಯಾಗಿ ಎಷ್ಟೋ ರೂಮುಗಳಿರುವವು. ಆದರೆ ಒಂದು ಮನೆಯಲ್ಲಾದರೂ ಪ್ರೇಯಿಂಗ್ ರೂಮ್ (praying room) (ದೇವರ ಕೋಣೆ) ಎಂದು ಒಂದು ಕೋಣೆ ಇರುವದಿಲ್ಲ. ಆದುದರಿಂದ ಈಗಿನವರು ದೇವರನ್ನು ಬಹಿಷ್ಕಾರ ಮಾಡಿದಂತೆ ಕಾಣುತ್ತೆ. ಇದು ನಾವು ಪಾಶ್ಚಿಮಾತ್ಯರ ನವನಾಗರೀಕತೆಯನ್ನು ಹಿಂಬಾಲಿಸುವುದರಿಂದ ಉಂಟಾಗಿರುವ ಕುಂದಕವು. ಆದುದರಿಂದ ನಾವು ನಮ್ಮ ಧರ್ಮದಲ್ಲಿಯೇ ನಿರತರಾಗಿರುವುದು ನಮ್ಮ ಮತ ಸಂಬಂಧವಾದ ಕರ್ತವ್ಯವಾಗಿದೆ.

ಸಿ. ಗಣಪತಿ

ಪೊನ್ನಂಪೇಟೆಯ ದನಗಳು ಸಂಘ.

ಅಯ್ಯಾ,

ಪೊನ್ನಂಪೇಟೆಯಲ್ಲಿ ಒಂದು ದನಗಳ ವಿಮೆ ಸಂಘವಿತ್ತು. ಈ ಸಂಘವನ್ನು ಈಚೆಗೆ ಒಡೆದು ಹಾಕುವದೆಂದು ರಿಜಿಸ್ಟ್ರಾರವರು ಡಾಂಬಾರಾಜು ಹೇಳಿ ಲೆಕ್ಕವನ್ನು ತರಿಸಿಕೊಂಡು ಅನೇಕ ತಿಂಗಳಾಯಿತು. ಅನೇಕ ಗರೀಬ ವಿಮೆದಾರರು ಹಾಕಿದ ಹಣವು ಏನೂ ಇದ್ದಿ ಇಲ್ಲದೆ ಹಾಗೆಯೇ ನಿಂತಿದೆ. ವಿಮೆದಾರರಿಗೆ ಸಲ್ಲತಕ್ಕ ಹಣವನ್ನು ವಡನೆ ಸಂದಾಯಿತ ಮಾಡಿದರೆ ಗರೀಬ ಜನರಿಗೆ ಬಹಳ ಉಪಕಾರವಾಗುತ್ತಿತ್ತು. ಈ ವಿಷಯ ಕೊಡಗು ಸಹಕಾರಿ ಸಂಘಗಳ ರಿಜಿಸ್ಟ್ರಾರವರಿಗೂ ಕೊಡಗು ಕಮೀಷನರ್ ಸಾಹೇಬರವರಿಗೂ ಅನೇಕ ಅರ್ಜಿ ಬರೆದು ಸಾಕಾಯಿತು. ಕೊಡಗು ದೇಶದ ಇತರ ದನ ವಿಮೆಗಳ ಸಂಘಗಳಿಗೆ ಲಿಕ್ವಿಡೇಟರ್ ಮಾಡಿದ್ದಾರೆಂದೂ ಸಂಘಗಳನ್ನು ಒಡೆದಿದ್ದಾರೆಂದೂ ಪತ್ರಿಕೆಯ ಮೂಲಕ ತಿಳಿದೆನು. ಆದರೆ ನಮ್ಮ ಪೊನ್ನಂಪೇಟೆಯವರು ಏನು ಮಾಡಿದ್ದು ? ಸಹಕಾರ ಸಂಘಗಳ ರಿಜಿಸ್ಟ್ರಾರವರು ಯಾತಕ್ಕಾಗಿ ಈ ವಿಷಯ ಸುಮ್ಮನಿದ್ದಾರೆಂದು ತಿಳಿಯುವುದಿಲ್ಲ. ಇನ್ನೂ ಈ ವಿಷಯ ಯಾರಿಗೆ ಬರೆಯಬೇಕೆಂದು ವಿಮೆ ಸಂಘದ ಮೆಂಬರುಗಳು ಆಲೋಚನೆ ಮಾಡುತ್ತಿದ್ದಾರೆ. ಈ ವಿಷಯಕ್ಕೆ ಇನ್ನಾದರೂ ಅಧಿಕಾರಿಗಳು ಗಮನಕೊಟ್ಟು ಮೆಂಬರುಗಳ ಹಣವನ್ನು ವಾಪಸು ಕೊಡಿಸುವರಾಗಿ ನಂಬುವ,

ಎಂ. ಸಿ. ವೆಂಕಯ್ಯ.

ಕುಚಿಕ್ಕದ ಪಾಡಾರವಿಂದಕ್ಕೆ.

ಹೊಸವ ಕುಟುಂಬದಲ್ಲಿ ಕುಚಿಕ್ಕವನ್ನು ತಿಳಿಯದವರಿಗೆ ಸರಕಾರವೂ ಕೂಡ ಆ ತತ್ವವನ್ನು ಬೋಧಿಸಿ ಪ್ರಜಾ ಕ್ಷೇಮವನ್ನು ಬೆಳೆಸುತ್ತಿರುವ ಸಂಗತಿಯು ಎಲ್ಲರಿಗೂ ತಿಳಿಯದ್ದಲ್ಲ. ಆದರೆ ನಮ್ಮ ಮುಖ್ಯ ಪಟ್ಟಣವಾದ ಮಡಿಕೇರಿ ಮುನಿಸಿಪಾಲಿಟಿಯ ವಿಷಯ ಸ್ವಲ್ಪ ತಿಳಿಸುತ್ತೇನೆ.

ರೇಸ್ ಕೋರ್ಸ್‌ಗೆ ಹೋಗುವ ರಸ್ತೆಯ ಎಡಭಾಗದಲ್ಲಿ ಅಂದರೆ ಭುಜಂಗರಾವ್ ರಾಯರವರ ಮನೆಯ ಹತ್ತರ ಒಂದು ಸ್ವೀಪರ್ಸ್ ಲೈನನ್ನು ಪಟ್ಟಣಗಳ ಟೌನ್ ಹಾಲ್ ಇರುವಂತೆ ಮಧ್ಯದಲ್ಲಿ ಇಟ್ಟಿರುತ್ತಾರೆ. ಇಲ್ಲಿಂದ ಹೊರಡುವ ದುರ್ವಾ

ನೆಸೆಯು ಮತ್ತು ಆ ಒಸದು ರಾತ್ರಿಯಲ್ಲಿ ನಡೆಸುವ ಗಲಾಟೆಯೋ ಮೊದಲಾದುವನ್ನು ನೋಡಿದರೆ ಇದನ್ನು ಯಾರುತಾನೆ ಮನ್ನಿಸಿಯಾರು ಎಂದು ಹೇಳುವರು. ಸಾಯುಂಕಾಲದಲ್ಲಿ ಈ ಪುರ ನಿವಾಸಿಯರು ಗಾಳಿಸವಾರಿ ಹೋಗಿ ಹಿಂತಿರುಗಿ ಆ ಕಡೆಗಾಗಿ ದಾಟುವ ಸಂಕಟವನ್ನೂ ಅದರ ಸುತ್ತುಮುತ್ತಲಿನ ಜನರಿಗೆ ನಿದ್ರೆಯಕಾಲದಲ್ಲಿ ಉಂಟಾಗುವ ತೊಂದರೆಯನ್ನು ವಿಚಾರಿಸಿ ನೋಡಿದರೆ, ಇದರ ಕಂದಾಯ ತೆಗೆಯುವುದು ಬಹಳ ಅನ್ಯಾಯವೆಂದು ತೋರುತ್ತೆ.

ಇದರ ವಿಷಯ ಒಂದೆರಡು ಬಾರಿ ಯು ಪ್ರಕಟವಾಗಿದೆ ಎಂದು ತೋರುತ್ತೆ. ಆದರೂ ಕೂಡ ಪ್ರೆಸಿಡೆಂಟರ ಮೊದ ಲಾದ ಅದರ ಅಧಿಕಾರಿಗಳು ಈ ವರೆಗೆ ಅದರ ವಿಷಯ ಗಣನೆಗೆ ತೆಗೆಯದೆ ಇರುವುದನ್ನು ನೋಡಿದರೆ ಕೇವಲ ವ್ಯಸನಕರವಾಗಲಾಗುತ್ತೆ.

ಮಹಸೀಯರೆ, ಇಂಥಾ ಕ್ಷುದ್ರ ಸಂಗತಿಯನ್ನು ಪ್ರಕಟಕ್ಕೆ ಕೊಟ್ಟು ಮೇಲಧಿಕಾರಿಗಳ ಗಮನಕ್ಕೆ ತರುವುದಕ್ಕೆ ಪ್ರಸನ್ನರಿದ್ದರೆ ಜನರ ಅನುಕೂಲತೆಗೋಸ್ಕರ ಮೊದಲೇ ದೇಶಾಗುತ್ತೆ. ನಮ್ಮ ಕಮೀಷನರ್ ಸಾಹೇಬರವರು ಇದಕ್ಕೆ ಕಣ್ಣು ಒದೋಲಿಸ್ಸು ಮಾಡಬೇಕಾಗಿ ಅತಿ ವಿನಯದಿಂದ ಕೋರುವ.

ಪುರನಿವಾಸಿ

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಂಟಾದ ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ

17-9-24 ಮೇನೇಜರ್

Old Students' Quarterly.

Editor, Mr P B Medappa, B A, B L, M L C

Vol II No 2 is now out

Subscription—Yearly Rs 2, post free

Most delightful! Scholarly articles! Read and enjoy!

CONTENTS.

1 National welfare—
(includes thoughts on Free and Compulsory education in Coorg
2 Swarajya—A Canarese Drama.
3 Are Coorgs Kannadigas?
4 Ancient Coorg
5 Peep into Heavens
6 Frivolity page,
etc etc

If you become a subscriber now you will get a very beautiful calendar for 1923 free—absolutely free!

Apply to—

Manager,
O S Association,
Mercara.

ದಯಮಾಡಿ ಪರೀಕ್ಷಿಸಿ ನೋಡಿರಿ!

X. L. ALOIL.

ಹೊಸ ಸಮಸೆಯ ಮಿಣಿನ ಎಣ್ಣೆ

ರಾಜಾದಾದವರೂ, ಸ್ವಲ್ಪಮಕ್ಕಳೂ ಕಣ್ಣು ಕುಂಬಿದವರೂ ಮತ್ತು ಚಿನೋವು ಮಗ್ಗೆಗಳಿಂದ ಪೀಡಿತರಾದವರೂ ಸಹ ಸೇವಿಸುವದರಿಂದ ಬಹಳ ತೃಪ್ತಿಯಾಗುವುವು. "ಕಾಡ್ ಲಿವರ್ ಆಯಿಲ್ ಎಮಲ್‌ಷನ್" ಎಂಬದರ ಬದಲಿಗೆ ಇದು ಉತ್ತಮವಾದ ಕ್ಷೀರ ರಸವಾಗಿದೆ. ವಾಸನೆ ಇಲ್ಲ. ಬೆಲೆ ಒಸ್ ಕಡಿಮೆ

M. P BALA & Co,
CHEMISTS.
12-4 Tellicherry
or VIRAJPET WORKS,
Virajpet

ಮಾರಾಟಕ್ಕೆ.

ಎಪ್ಪತ್ತು ಎಕರುಳ್ಳ ಮಲಂಬಿ ಮತ್ತು ಮದಗೋಡು ಎಂಬ ಎರಡು ಚಿಕ್ಕ ಕಾಫಿ ತೋಟಗಳು ಮಾರಾಟಕ್ಕೆ ಇವೆ.

ಮಲಂಬಿತೋಟ—39 ಎಕರು 13 ವರುಷದ್ದಾಯದ ಕಾಫಿ.
15 ಎಕರು 6 ವರುಷದ ಕಾಫಿ
6 ಎಕರು ಕಾಡು ಕಡಿದು ಕಾಫಿ ನೆಡಲು ತಯಾರಾದ ಜಾಗ

ಮದಗೋಡು —20 ಎಕರನ್ನಲ್ಲಿ
9 ಎಕರು 13 ವರುಷದ ಕಾಫಿ.
6 ಎಕರು 6 ವರುಷದ ಕಾಫಿ.

ಈ ತೋಟಗಳು ಎಪ್ರಿಲ್ ಒಂದನೇ ತಾರೀಖಿನವರೆಗೆ ಮಾತ್ರ ಮಾರಾಟಕ್ಕೆ ಇರುತ್ತವೆ. ನಂತರ ಮಾರಲಾಗುವುದಿಲ್ಲ.

ಹೆಚ್ಚಿನ ವಿವರಕ್ಕೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ. ಯು. ಅಯ್ಯರ್,
ಹಂಚ್ಚಿ ಎಸ್ಟೇಟ್,
ಸೋಮವಾರಪೇಟೆ,
4-2 ಕೊಡಗು

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	...	50,000
ವಸೂಲಾದ ಶೇರ್ ಮೊಬಲಗು	....	7,720
ಬಡ್ಡಿಯಿಂದ ಠೇವಣಾತಿ		61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ತಕರ್ಸ್ಸೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟು, ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಎಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ, ಬಿ.ಎಲ್.

ಸೆಕ್ರೆಟರಿ.
ಸಿ. ಎಮ್. ಮೇತಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಖು, 1—7—1924.

ಶ್ರೀ

ಶ್ರೀ ಧನ್ವಂತರಿ.

ಆಯುರ್ವೇದ ಮಾಸಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆಯು ರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಧಿಕಾರ್ತ್ರಿಯಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂತಹ! ಇದೇ. ಆರೋಗ್ಯವಂತನಾಗಿ ಬದುಕಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವುದಕ್ಕೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹೆಣ್ಣುಮಕ್ಕಳೂ ಈ ಪತ್ರಿಕೆಯನ್ನು ಓದಲೇಬೇಕು. ಏಕೆಂದರೆ? ಮನೆಯಲ್ಲಿ ಈ ಪತ್ರಿಕೆಯಿದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರೂಪಾಯಿ.

ವಿಳಾಸ —

ಮೇನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market BOMBAY.
Telegraphic Address:—"SHOOTER" Bombay.

[52 1] Please write for latest Catalogues.

ಮಾರಾಟಕ್ಕೆ.

1 ಮಡಿಕೇರಿ ಅರ ಮಲ್ಲೆಕ್ಕಪ್ಪನವರ ಮಡಿಕೇರಿ ನಾಡುಬಿಳಿಗೇರಿಗ್ರಾಮದಲ್ಲಿ ಮಡಿಕೇರಿ ಮೂರ್ನಾಡು ರಸ್ತೆ 5ನೇ ಮೈಲ್ ಬಳಿ ಇರುವ ಆಸ್ತಿ, ಅಂದರೆ—ಸಾಗಿನ ಉತ್ತಮವಾದ ಭೂಮಿ 31½ ಎಕರು, ಕಿಕ್ಕಲೆ 25 ಎಕರು, (ಈ ಪೈಕಿ 15 ಎಕರು ಸಾಗಿಗೆ ಬಂದದ್ದನ್ನು ಈ ವರ್ಷ 1,200 ರ ವಾಯಿಗಳಿಗೆಸಲು ಗುತ್ತಿಗೆ ಕೊಡಲಾಗಿದೆ) ಯೋಲ್ಕ 15 ಎಕರು, ಹೊಸದಾಗಿ ಹಾಕಿರುವ ಕಾಫಿ 15 ಎಕರು ಮತ್ತು 116 ಎಕರು ಬಾಣೆ, ಒಂದು ವಾಸದ ಮನೆ, ಆಳುಗಳ ಲೈನು ಮತ್ತು ದನಗಳ ಕೊಟ್ಟಿಗೆ ಸಹ—ಮಾರಾಟಕ್ಕೆ ಇದೆ ಕ್ರಯ ರುಪಾಯಿ 25,000 ಅಥವಾ ಇದರ ಸಮೀಪದ ಬೆಲೆ.

2 ಅರೆ ಮಲ್ಲೆಕ್ಕಪ್ಪನವರ ಮಡಿಕೇರಿ ಮಹದೇವಪೇಟೆ ಬಸವಣ್ಣನ ಗುಡಿ ಬಳಿ ಇರುವ ವಾಸದ ದೊಡ್ಡ ಮಹಡಿಮನೆ ಕ್ರಯ ರೂ 5,000

ಹೆಚ್ಚಿನ ವಿವರಕ್ಕೆ ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು.

ಎಂ ಎಸ್ ಅಪ್ಪಣ್ಣ,
ಬೋಯಿಕೇರಿ ಎಸ್ಟೇಟ್
12-6 ಸುಂಟಿಕೊಪ್ಪ

ಇಂಡಿಯಾ ಸಾಬೂನ್.

ಬೆಲೆ ಅಗ್ಗ!! ಸರ್ವೋತ್ತಮ!!

ನಮ್ಮ "ಇಂಡಿಯಾ ಸಾಬೂನ್" ಸರ್ವೋತ್ತಮವಾದುದೆಂದು ತಿಳಿದು ಎಲ್ಲಾ ಕಡೆಗಳಲ್ಲಿಯೂ, ಎಲ್ಲಾ ಊರುಗಳ ಅಂಗಡಿಗಳಲ್ಲಿಯೂ ಇದನ್ನೇ ಮಾರುತ್ತಿದ್ದಾರೆ. ಇದರಿಂದ ಒಗೆಯುವ ವಸ್ತ್ರಗಳು ಸ್ವಚ್ಛವಾಗುವವಲ್ಲದೆ, ಅವುಗಳ ನೂಲಿಗೆ ಇದರಿಂದ ಯಾವ ವಿಧವಾದ ಉಪದ್ರವೂ ಬಾರದಾಗಲಿ ಮೈಗೆ ದ ಜಾಳಿಕೆ ಬರುವವು. ಈ ವಿಷಯವನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಎಲ್ಲರಿಗೂ ಮನದಟ್ಟಾಗುವದು. ನಮ್ಮ ಗಿರಾಕಿಗಳಿಗೆ ಹೆಚ್ಚು ಲಾಭ!! ಧಾರಾಳವಾದ ಕಮಿಷನ್ ದೊರೆಯುವದು. ಆರ್ಡರುಗಳಿಗೆ ಮೊದಲು ಒಂದೋಬನ್ನಾಗಿ ಪ್ಯಾಕ್ ಮಾಡಿ ಅವರ ಅಪ್ಪಣೆಯ ಪ್ರಕಾರ ಅವರು ಅಪೇಕ್ಷಿಸುವ ಸಮೀಪದ ರೈಲ್ವೆ ಸ್ಟೇಷನಿಗೆ ರವಾನಿಸುತ್ತೇವೆ

ಇಷ್ಟು ಮಾತ್ರವೇ ಅಲ್ಲ, ನಮ್ಮ ಗಿರಾಕಿಗಳಿಗೆ ಅವರ ಅದೃಷ್ಟ ಪರೀಕ್ಷಾರ್ಥವಾಗಿ ನಾವು ಕಳುಹಿಸುವ ಪ್ರತಿಯೊಂದು ಸಾಬೂನ್ ಪ್ಯಾಕಿನಲ್ಲಿ ೧೦ ರುಪಾಯಿನ ಅರ್ಧ ನೋಟನ್ನು ಇಟ್ಟಿರುತ್ತೇವೆ. ಅಂಥಾ ಅರ್ಧ ನೋಟಿನ ನ್ಯಾಯವನ್ನು ಹೊಂದಿದವರು ಆ ಅರ್ಧ ನೋಟಿನ ನಂಬರನ್ನು ತಿಳಿಸಿದಲ್ಲಿ ಬಾಕಿ ಅರ್ಧ ನೋಟನ್ನು ಅವರಿಗೆ ಬಹುಮಾನವಾಗಿ ತಕ್ಷಣವೇ ಕಳುಹಿಸಿಕೊಡುವೆವು. ಪ್ರಯತ್ನಿಸಿ! ಪರೀಕ್ಷಾರ್ಥಕ್ಕೆ ವ್ಯಾಪಾರ!! ಅದೃಷ್ಟಕ್ಕೆ ಅವಕಾಶ!!!

ಎಸ್. ಕೃಷ್ಣಯ್ಯ ಶೆಟ್ಟಿ,
12-4 ನಗರ್ತಪೇಟೆ, ಬೆಂಗಳೂರು ಸಿಟಿ.

Printed & published by Kodandera Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.

If not delivered please return to "KODAGU" OFFICE, MERCARA.

[illegible] ರೂ. 4—0—0

ಕೊಡಗು.

ಐಕ್ಯೇನ ಫಲಕರಮಯಂ ವಿದ್ಯಾ ನೀತಿ ಪ್ರಯುಕ್ತಕಾಃ || ಐಕ್ಯಮುಕ್ತೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು. ಎಡಿಟರ್ ಪಂಧ್ಯಂಡ ಐ. ಬೆಳ್ಯಪ್ಪ.

ಸಂಪುಟ ೪] ಕೊಡಗು, ಸ ೧೯೨೫ನೇ ಇಸವಿ ಮಾರ್ಚ ತಾರೀಕು ೬ನೆಯ ಶುಕ್ರವಾರ [ಸಂಚಿಕೆ ೩೮

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್,
ಯಮ್. ಎಲ್. ಸಿ. ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು [illegible] ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು ಆರೋಗ್ಯ ಚಂದ್ರಿಕೆಯನ್ನು [illegible] ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗ [illegible] ಗ್ರಂಥವಾಗುವುದು [illegible] ಚಂದಾ ಮೊಬಲಗು ವರ್ಷಕ್ಕೆ 1 [illegible] 9.2.0 ಹಿಂದಿನ ಸಂಚಿಕೆಗಳು [illegible]

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ' 323,
ತಂಬುಚೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು. 3. ಬಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ 4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ, ಈ ಪತ್ರಗಳು ಪ್ರಕಟಿಸಲ್ಪಡುವವು 5. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗಳಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾ ಹಣ ಕೊಡಬೇಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಲೇಖನ ಸಹಾಯ ಮಾಡಲಿಕ್ಕಿರುವವರೂ ದಯವಿಟ್ಟು ವೀರರಾಜೇಂದ್ರಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ

ಮಡಿಕೇರಿ, ಮೇನೇಜರ್,
13.2.25. 'ಕೊಡಗು' ಲಿಮಿಟೆಡ್.

Health is Wealth.

WANTED all to improve health strength and vitality and thus save our nation from physical degeneracy. Send half anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City

THE [illegible] EMPORIUM OF COORG,
Spencer & Co. Ltd.,
MERCARA & POLLIBETTA.

Announcement.

Our prices of wines, spirits, stores, etc., are down.

Send for our Xmas list and be convinced

Trial order Solicited

18

ಕೃಷಿತೋ ನಾಸ್ತಿ ದುರ್ಭಿಕ್ಷಃ

NITRATE OF SODA (15—16 per cent.) Nitrogen,

"The best and cheapest form of Nitrogen highly concentrated and immediately available Nothing like it to make plants grow."

ವ್ಯವಸಾಯದಲ್ಲಿ ಗೊಬ್ಬರವಿಡುವದರ ಹೆಚ್ಚಿನ ಉದ್ದೇಶವು ಬೆಳೆಗಳಿಗೆ ಸಾರಜನಕ (Nitrogen) ಒದಗಿಸಿಕೊಡುವದಾಗಿರುತ್ತದೆ "ನೈಟ್ರೇಟ್ ಆಫ್ ಸೋಡಾ" ಎಂಬ ರಸಾಯನಿಕ ಗೊಬ್ಬರವು (15—16%) ಆದರೆ ದನದಗೊಬ್ಬರದಲ್ಲಿಯಕ್ಕಿಂತ ಮೂರುಪಾಲು ಜಾಸ್ತಿ ಕ್ಷಾರಜನಕ ಧರಿಸಿರುವದಾಗಿದ್ದು ಬೆಳೆಗಳಿಗೆ ಥಟ್ಟನೆ ಪಡಗುವರೀತಿಯಲ್ಲಿರುತ್ತದೆ ಇದರ ಉಪಯೋಗದಿಂದ ಫಸಲು ಬಹಳ ಸಮೃದ್ಧಿಯಾಗುವದು ಹಿಡಿತುಂಬ ರಸಾಯನಿಕ ಗೊಬ್ಬರವು ಮುಡಿ (ಕುಕ್ಕೆ) ತುಂಬ ಹಟ್ಟಿಗೊಬ್ಬರಕ್ಕೆ ಸಮವಾಗಿರುತ್ತದೆ. ಈ ರಸಾಯನಿಕ ಗೊಬ್ಬರವು ಅಮೇರಿಕ ದೇಶದ "ಚಿಲ್ಲಿ" ಎಂಬಲ್ಲಿ ತಯಾರಿಸಿ ಬಹಳ ದೂರದೇಶದಿಂದ ಬರವೇಕಾದರೂ ನಮ್ಮ ಬಹು ಹಳ್ಳಿಮೊಲೆಗಳ ತೋಟಗಳ್ಳೆ ವಸ್ಯೆತೆ ಕೃಷಿಗಳಿಗೆ ಉಪಯೋಗಿಸಲು ಬಹಳ ಸುಲಭವಾಗಿಯೂ ಹಟ್ಟಿ ಗೊಬ್ಬರಕ್ಕಿಂತಲೂ ಬಹಳ ಹೆಚ್ಚಿನ ಆದಾಯವನ್ನು ಕೊಡುವದಾಗಿಯೂ ಇರುತ್ತದೆ. ಒಂದು ಎಕ್ರೆ ಭೂಮಿಗೆ 120—180 ರಾತಲು ಬೇಕಾಗುವದು ಇದರ ವಿಷಯ ಹೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ಧರ್ಮಾರ್ಥವಾಗಿ ನಮ್ಮಿಂದ ಪಡೆಯಬಹುದು.

ದಿ ಚಿಲಿಯನ್ನ ನೈಟ್ರೇಟ್

24—24 ಕಮಿಟಿಯವರ ಕಡೆ

ಕೊಡಗಿನಲ್ಲಿ—
B. P Ayapa, Hon Representative Pollibetta, Coorg.

The Chilean Nitrate Committee, 7 Hare Street, Post Box 469
CALCUTTA

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲಪಿರುವುದರಿಂದ 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್,' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ ಮೇನೇಜರ್,
'ಕೊಡಗು' ಲಿಮಿಟೆಡ್

ಪ್ರಕಟಣೆ.

ಮಡಿಕೇರಿ ಪೋಲೀಸ್ ಸಬ್ ಇನ್ಸ್ಪೆಕ್ಟರುಗಳ ಕ್ವಾರ್ಟರ್ಸ್ ಗಳಿಗೆ ಅಂದವಾಗಿಯೂ ಹೊಸಮರಗಳಿಂದ ಭದ್ರವಾಗಿಯೂ 3 ವರ್ಷಗಳ ಹಿಂದೆ ಕಟ್ಟಲ್ಪಟ್ಟ ಸಂಸಾರ ಸಮೇತ ವಾಸ ಇರಲಿಕ್ಕೆ ಯೋಗ್ಯವಾದ 9 ಕೊಠಡಿಗಳಿರುವ ಮನೆ 3 ಅಂಕಣಗಳ ಕೊಟ್ಟಿಗೆ ಯಾವಾಗಲೂ ನಿರ್ಮಲವಾದನೀರು ಇರುವ ಕಲ್ಲು ಕಟ್ಟಿದ ಭಾವಿ (ನೀರು ಗೋಟಿ ತೆಗೆಯುವಂಥಾದ್ದು) ಕಾಫಿ, ಬಾಳೆ, ಕಿತ್ತಳೆ, ನಿಂಬೆ ಮರಗಳೂ ಮತ್ತು ಹಲಸು ಮತ್ತು ಹೂವಿನ ಗಿಡಗಳೂ ಇರುವ ಹಿತ್ತಲೂಸಹ ಇರುವ ಆಸ್ತಿ ಒಂದು ಮಾರಾಟಕ್ಕೆ ಇದೆ. ಈ ಸ್ಥಳವು ಗೋಪ್ಯವಾಗಿಯೂ ಸಂಸಾರ ಸಮೇತ ವಾಸ ಇರುವದಕ್ಕೆ ಯೋಗ್ಯವಾಗಿಯೂ ಇದೆ. ವಾಸಕ್ಕೆ ಇಂಥಾ ಯೋಗ್ಯವಾದ ಸ್ಥಳ ಮಡಿಕೇರಿಯಲ್ಲಿ ಸಿಕ್ಕುವದು ದುರ್ಲಭ ಕೊಂಡುಕೊಳ್ಳುವದಕ್ಕೆ ಖಾಯಿಷ್ ಇರುವವರು ನೋಡಿ ಕ್ರಯ ನಿಶ್ಚೈಸಬಹುದು. ಹೆಚ್ಚಿನ ವಿವರ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬೇಕಾಗಿದೆ.

ಈ ಪ್ರಕಟಣೆ ಈ ವಾರಕ್ಕೆ ತೀರಿದರೂ ಆಸ್ತಿಯು ಮುಂದಕ್ಕೂ ಮಾರಾಟಕ್ಕೆ ಇದೆ.

VENDER,
C/o EDITOR "KODAGU."
Mercara.

12 12

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮ. ಕೋಟೆರ ಚಿಣ್ಣಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಭಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು

ವೀರರಾಜಪೇಟೆ—ಮ. ಕೆ. ಚಿಣ್ಣಪ್ಪನವರ ಆಫೀಸಿನಲ್ಲಿ.
ಮೂರ್ನಾಡು—ಕಮರ್ಶಿಯಲ್ ಸ್ಟೋರಿನಲ್ಲಿ ಮ. ಮದೆಯಂಡ ದೇವಯ್ಯನವರು.
ನಾಪೋಕ್ಲು—ಮ. ಪೊನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮ. ಮುಕ್ಕಾಟಿರ ಪೂಣಚ್ಚನವರು.
ಪೊನ್ನಂಪೇಟೆ—ಮ. ಕುತ್ತಮುಂಡ ಮುದ್ದಮ್ಮಯ್ಯನವರು
ಮಡಿಕೇರಿ—ಮ. ಜಿ. ಪೊದಮ್ಮನವರು.
ಅಮ್ಮತ್ತಿ, ಸಿದ್ದಾಪುರ—ಮ. ಐನಂಡ ಪೂವಪ್ಪನವರು. ಮ. ಚಂಗುಂಡ ಕುಟ್ಟಪ್ಪನವರು.

ಕೋದಂಡ ಉತ್ತಯ್ಯ.
ಜನರಲ್ ಮೆನೇಜಿಂಗ್ ಡೈರೆಕ್ಟರು, "ಕೊಡಗು." ಲಿಮಿಟೆಡ್,

"ಕೊಡಗು"

ಸನ್ ೧೯೨೫ನೇ ಇಸವಿ ಮಾರ್ಚ ತಾ. ೬ನೇ ಶುಕ್ರವಾರ.

ಕಂದಾಯದ ಅಜಮಾಯಿಷಿಯ ಕಮಿಟಿ.

ಇಂಡಿಯಾ ಸರಕಾರದಿಂದ ನೇಮಕವಾದ ಈ ಕಮಿಟಿಯವರು ಜನರ ಅಭಿಪ್ರಾಯವನ್ನು ತೆಗೆದುಕೊಳ್ಳಲಿಕ್ಕಾಗಿ ತಯಾರಿಸಿದ ಸವಾಲ್‌ಗಳ ಪಟ್ಟಿಯನ್ನು ಜಮೀನ್ದಾರರ ಸಂಘಕ್ಕೂ ಕೌನ್ಸಿಲಿನ ಫೈನಾನ್ಸ್ ಕಮಿಟಿ ಮೆಂಬರುಗಳಿಗೂ ಕಮೀಷನರು ಕಳುಹಿಸಿಕೊಟ್ಟಿರುತ್ತಾರೆ. ಇವಕ್ಕೆ ಜವಾಬನ್ನು ನೀದಾ ಕಮಿಟಿಗಾಗಲೀ ಅಥವಾ ಕಮೀಷನರ ಮೂಲಕವಾಗಲೀ ಕಳುಹಿಸಬೇಕೆಂತ ಸೂಚನೆ ಇದೆ. ಜಮೀನ್ದಾರರ ಸಂಘದ ಕಮಿಟಿಯು ಮುಂದೆ ಈ ಸವಾಲ್ ಪಟ್ಟಿಯನ್ನು ಇರಿಸಿ ಚರ್ಚಿಸಿ ಜವಾಬು ಬರೆಯುತ್ತಾರೆಂತ ನಂಬುತ್ತೇವೆ.

ಈ ಕಮಿಟಿಯನ್ನು ನೇಮಿಸಬೇಕೆಂತ ಸರಕಾರದ ಪರವಾಗಿ ಠರಾವು ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಚರ್ಚೆಗೆ ಬಂದಾಗ ಪ್ರಜಾ ಪ್ರತಿನಿಧಿಗಳಲ್ಲಿ ಹೆಚ್ಚಿನ ಜನರು ವಿರೋಧಿಸಿ ಕಂದಾಯದ ವಿಷಯದ ತನಿಖೆಯಾಗುವ ಮುಂಚೆ ಪ್ರಜೆಗಳ ಸಾಂಪತ್ತಿಕ ಸ್ಥಿತಿ ಹೇಗಿದೆ ಎಂಬದನ್ನು ಮೊದಲು ತನಿಖೆ ಮಾಡಬೇಕೆಂತ ವಾದಿಸಿದರು. ಈ ವಾದಕ್ಕೆ ಸರಕಾರವು ಗಮನಕೊಡದೆ ತೆರಿಗೆಯ ವಿಷಯ ತನಿಖೆ ಮಾಡಿಸುತ್ತಿದ್ದಾರೆ. ಸವಾಲು ಪಟ್ಟಿಯ ಮೊದಲಿನ ಗುಂಪಿನಲ್ಲಿ ದೇಶದ ಸಾಂಪತ್ತಿಕ ಸ್ಥಿತಿಯನ್ನು ಕಂಡು ಹಿಡಿಯಲು ಸರಕಾರದವರು ಮಾಡುತ್ತಿರುವ ಲೆಕ್ಕವು ಸರಿಯೋ, ಸರಿಯಲ್ಲದಿದ್ದರೆ ಯಾವ ಹೊಸ ರೀತಿಯನ್ನು ಸೂಚಿಸುತ್ತೀರಿ ಎಂತ ಇದೆ. ಈ ಒಂದು ಸವಾಲಿನಿಂದ ದೇಶದ ಸಾಂಪತ್ತಿಕ ಸ್ಥಿತಿಯು ತಿಳಿಯುವದಿಲ್ಲ. ಕ್ರಮವಾದ ತನಿಖೆಯನ್ನೇ ಮಾಡಬೇಕಾದದ್ದು ಬಹಳ ಅವಶ್ಯವಿದೆ. ಕಂದಾಯದ ವಿಷಯವನ್ನು ತನಿಖೆ ಮಾಡುವದೆಂದರೆ ಹೊಸ ಕಂದಾಯಗಳನ್ನು ಹಾಕಲು ಉಪಾಯ ಕಂಡು ಹಿಡಿಯುವದೇ ಸರಕಾರದವರ ಉದ್ದೇಶವೆಂತ ಜನರಿಗೆ ಅಪನಂಬಿಕೆಗೆ ಕಾರಣವಿದೆ. ಸರಕಾರದವರು ಮಿಲಿಟರಿ ಇಲಾಖೆಗೆ ಅಪರಿಮಿತವಾಗಿ ಮಾಡುವ ಖರ್ಚನ್ನು ಕಡಿಮೆ ಮಾಡಿದರೆ ಕಂದಾಯದ ತನಿಖೆ ಎಲ್ಲವೂ ಸುಲಭವಾಗಿಯೇ ತೀರುತ್ತದೆ. ಸರಕಾರದ ಖರ್ಚು ಕಡಿಮೆಯಾದ ಬಳಿಕವೇ ಯಾವ ಯಾವ ಕಂದಾಯಗಳನ್ನು ವಜಾಮಾಡಿ ಪ್ರಜೆಗಳ ಹೊರೆ ಕಡಿಮೆ ಮಾಡಬಹುದು ಎಂಬದೊಂದೇ ಸವಾಲು ಉಳಿಯುತ್ತದೆ. ದೇಶದ ಬಡತನವು ಸರಕಾರದ ದೃಷ್ಟಿಗೆ ಗೋಚರವೇ ಆಗುವದಿಲ್ಲ! ಮಿಲಿಟರಿ ಖರ್ಚು ಮತ್ತು ವಿಲಾಯತಿ ಅಧಿಕಾರಿಗಳ ಸಂಬಳವು ಹೆಚ್ಚೆಚ್ಚಾಗಿಯೇ ನಡೆಯುತ್ತಿರಬೇಕು; ಪ್ರಜೆಗಳಿಗೆ ಪ್ರಯೋಜನವಾಗುವ ಇಲಾಖೆಗಳಿಗೆ ಹಣವಿಲ್ಲವೆಂತಾದರೆ ಹೊಸ ಹೊಸ ತೆರಿಗೆ ಹಾಕಿಕೊಳ್ಳಿ ಎಂತ ಹೇಳಲು ಅನುಕೂಲವಾಗುವಂತೆ ಯಾವ ಯಾವ ತೆರಿಗೆ ಹಾಕಬಹುದು, ಯಾವ ಯಾವ ತೆರಿಗೆಯ ದರವನ್ನು ಬದಲಾಯಿಸಬಹುದು, ಯಾವ ಯಾವ ತೆರಿಗೆಯನ್ನು ಹೆಚ್ಚಿಸಬಹುದು ಎಂಬದನ್ನು ನಿರ್ಧರಿಸಲಿಕ್ಕೇನೇ ಈ ಕಮಿಟಿಯು ಏರ್ಪಾಡಾಗಿರಬೇಕೆಂತ ನಮಗೂ ತೋರುತ್ತದೆ. ತೆರಿಗೆ ಹೆಚ್ಚಿಸಬೇಡವೆನ್ನಲಿಕ್ಕೆ ಹೊಸ ತನಿಖೆಯೇ ಬೇಕೆಂತಲೂ ತೋರುತ್ತದೆ. ಸವಾಲ್ ಪಟ್ಟಿಗೆ ಜೋಡಿಸಿದ ಪಟ್ಟಿಯೊಂದರಲ್ಲಿ ದೇಶದ ಜನರ ಸರಾಸರಿ ಉತ್ಪತ್ತಿಯನ್ನು ಕೊಟ್ಟಿದ್ದಾರೆ. ಸರಾಸರಿ ಒಬ್ಬ ಮನುಷ್ಯನಿಗೆ ವರುಷಕ್ಕೆ ರೂ. 16—8—0ಯಿಂದ 116 ವರೆಗೆ ಬೇರೆ ಬೇರೆ ಸಂಖ್ಯೆಗಳನ್ನು ಬೇರೆ ಬೇರೆ ಜನರು ಕೊಟ್ಟಿದ್ದಾರೆ. ವರುಷಕ್ಕೆ ಕೋಟಿಗಟ್ಟಲೆಯಲ್ಲೂ ಸಂಪಾದಿಸುವವರ ಉತ್ಪತ್ತಿಯನ್ನೂ ಗಣನೆಗೆ ತೆಗೆದುಕೊಂಡದ್ದರಿಂದ ಸರಾಸರಿ ಉತ್ಪತ್ತಿಯು ಹೆಚ್ಚಾಗುವದಾಗಿದೆ. ನಮ್ಮ ಅಭಿಪ್ರಾಯದಲ್ಲಿ ದಾದಾಭಾಯಿ ನವರೋಜಿಯವರು ಹೇಳುವ ಅಂದಾಜೇ ಸರಿತೋರುತ್ತದೆ. ವರುಷಕ್ಕೆ ಸರಾಸರಿ ಒಬ್ಬ ಮನುಷ್ಯನು 20 ರೂಪಾಯಿ ಮಾತ್ರ ಸಂಪಾದಿಸುವನೆಂತ ಇವರ ಅಂದಾಜು. ಈ ದರಕ್ಕಿಂತ ಹೆಚ್ಚಿಗೆ ಸಂಪಾದಿಸುವ ಜನರು ಶೇಕಡ 50ರಷ್ಟಾದರೂ ಇರಬಹುದು. ಹಾಗಿರುವಾಗ ವರುಷಕ್ಕೆ ತಲೆ ಒಂದರ 10 ರೂಪಾಯಿ ಸಹ ಸಂಪಾದನೆ ಇಲ್ಲದ ಜನರು ಶೇಕಡ 30ರಷ್ಟಾದರೂ ಇರಬಹುದೆಂತ ನಮಗೆ ತೋರುತ್ತದೆ. ಸಾಧಾರಣವಾಗಿ ಒಬ್ಬ ಮನುಷ್ಯನ ಜೀವನಕ್ಕೆ 12 ಬಟ್ಟಿ ಭತ್ತ, 12 ರೂಪಾಯಿಯಾದರೂ ಕೊಡಿಸುವ ಪದ್ಧತಿ ಇದೆ. ಅಂದರೆ ಒಬ್ಬ ಮನುಷ್ಯನು ಜೀವವನ್ನು ಉಳಿಸಿಕೊಳ್ಳಲಿಕ್ಕೆ 72 ರೂಪಾಯಿಯಾದರೂ ಬೇಕೆಂತ ಆಯಿತು. ಒಂದು ಬಟ್ಟಿ ಭತ್ತಕ್ಕೆ 5 ರೂಪಾಯಿ ಬೆಲೆ ಕಟ್ಟಿರುತ್ತೇವೆ. ಹೀಗಿರುವಾಗ 5 ಜನರಿರುವ ಒಂದು ಕುಟುಂಬದಲ್ಲಿ 50 ರೂಪಾಯಿ ಸಂಪಾದನೆಯಾಗುವದಕ್ಕೆಲ್ಲಿ 360 ರೂಪಾಯಿಯಾದರೂ ಖರ್ಚಿಗೆ ಬೇಕು. 5 ಜನರ ಕುಟುಂಬದಲ್ಲಿ ಒಂದೆರಡು ಚಿಕ್ಕ ವಯಸ್ಸಿನವರಿರಬಹುದು. ಅದ್ದರಿಂದ ಖರ್ಚು ಕಡಿಮೆ ಸಾಕೆಂತ ಹೇಳುವದಾದರೆ ಅವರ ಸಂಪಾದನೆಯೂ ಹಾಗೆಯೇ ಕಡಿಮೆ ಇರುತ್ತೆಂತ ನೆನಪಿಟ್ಟಿರಬೇಕು. ನಾವು ಉದಾಹರಣೆಗಾಗಿ ತೆಗೆದುಕೊಂಡ ಕುಟುಂಬದಲ್ಲಿ ಅವರ ಸಂಪಾದನೆಯು ಒಂದು ತಿಂಗಳು 20 ದಿವಸಕ್ಕೆ ಮಾತ್ರ ತಲಪಿತು. ಈ ಬಾಕಿ ವರುಷವೆಲ್ಲಾ ಇವರು ಉಪವಾಸವಿರಬೇಕು. ದೇಶದ ಜನರ ನಿಜವಾದ ಸ್ಥಿತಿಯನ್ನು ತಿಳಿದವರು ಸಾಂಪತ್ತಿಕ ಸ್ಥಿತಿಯು ಹೀಗಾಗಿದೆಯೆನ್ನುವ ಮಾತನ್ನು ನಂಬದೆ ಇರಲಾರರು. ದಾದಾಭಾಯಿ ನವರೋಜಿಯವರ ಲೆಕ್ಕವನ್ನು ಗಣನೆಗೆ ತೆಗೆದುಕೊಳ್ಳುವದೇ ಬೇಡ. ಭೂಮಿ ಇಲ್ಲದ ಜನರು ಕಡಿಮೆಯಾಗಿರುವ ನಮ್ಮ ಈ ಕೊಡಗು ದೇಶದಲ್ಲಿ 4, 5, 8, 10 ಜನರಿರುವ ಕೆಲವು ಕುಟುಂಬಗಳಿಗಾದರೂ 10 ಬಟ್ಟಿ ಭತ್ತಕ್ಕಿಂತ ಹೆಚ್ಚಿಗೆ ಉತ್ಪತ್ತಿ ಇಲ್ಲವೆಂಬದು ನಾಲ್ಕು ಗ್ರಾಮಗಳನ್ನು ವಿಚಾರಿಸಿದರೆ ತಿಳಿಯುತ್ತದೆ. ಈ ಭತ್ತದಿಂದಲೇ ಆ ಕುಟುಂಬದ ಕಂದಾಯ, ಬಟ್ಟೆಬರೆ, ಮೇಲಿನ ಖರ್ಚು ಎಲ್ಲವೂ ನಡಿಯಬೇಕು. ಅಂಥಾ ಕುಟುಂಬಕ್ಕೆ ವರುಷವೆಲ್ಲಾ ಹೊಟ್ಟೆ ತುಂಬ ಅನ್ನ ಹೇಗೆ ದೊರೆತೀತು. ಕೂಲಿ ಮಾಡುತ್ತಾರೆ, ಸಾಲ ತೆಗೆಯುತ್ತಾರೆ. ಅತಿಬಡವರ ಲೆಕ್ಕ ತೆಗೆದುಕೊಂಡೆವೆಂತ ಆಕ್ಷೇಪಿಸಬಹುದು, ಸ್ವಲ್ಪ ಹೆಚ್ಚು ಸಂಪಾದನೆ ಇರುವವರಿಗೆ ಖರ್ಚು ಸಹ ಹೆಚ್ಚಾಗಿಯೇ ಇರುತ್ತದಷ್ಟೆ. ಒಂದು ಗ್ರಾಮದ ನಿವಾಸಿಗಳಲ್ಲಿ ಶೇಕಡ 25ಕ್ಕಿಂತ ಹೆಚ್ಚಿಗೆ ಸಾಲವಿಲ್ಲದ ಜನರು ಇರಲಾರರು. ಕೆಲವರು ಮಾತ್ರ ಕುಡುಕತನ ಮುಂತಾದ ದುಶ್ಚಟಗಳಿಂದ ಸಾಲಗಾರರಾಗಿರಬಹುದು. ಹೆಚ್ಚಿನ ಜನರಿಗೆ ಜೀವ ಉಳಿಸಿಕೊಳ್ಳಲಿಕ್ಕೆ ಬೇಕಾದಷ್ಟು ಉತ್ಪತ್ತಿ ಇಲ್ಲದ್ದರಿಂದಲೇ ಸಾಲಗಾರರಾದದ್ದಾಗಿದೆ. ಈ ನಮ್ಮ ವಾದವೆಲ್ಲಾ ಸರಿಯಲ್ಲವೆಂತ ಸರಕಾರದವರು ಹೇಳುವದಾದರೆ, ಜನರ ಉತ್ಪತ್ತಿಯನ್ನು ಕಂಡು ಹಿಡಿಯಲು ಮೊದಲು ಕಮಿಟಿಯಾಗಬೇಕಾಗಿತ್ತಲ್ಲವೇ ?

ಅತಿ ಬಡವರು ಸಹ ಸರಕಾರದ ತೆರಿಗೆಯನ್ನು ಕೊಡುತ್ತಿದ್ದಾರೆ. ತಾವು ತಿನ್ನುವ ಉಪ್ಪಿಗೂ ಉರಿಸುವ ಎಣ್ಣೆಗೂ ತೆರಿಗೆ ಮೊದಲೇ ಹೊರಿಸಲಾಗಿದೆ. ಆ ತೆರಿಗೆಯನ್ನು ಸೇರಿಸಿಯೇ ಅಂಗಡಿಯವನು ಕ್ರಯದ ರೂಪದಲ್ಲಿ ತೆಗೆದುಕೊಳ್ಳುತ್ತಾನೆ. ಈ ಪರೋಕ್ಷ ತೆರಿಗೆಯನ್ನು ಹಾಕುವ ಬದಲು ತಲೆ ತೆರಿಗೆ ಹಾಕಿದರೆ ಆದೀತೋ ಎಂತ ಕೇಳುತ್ತಾರೆ. ಆಗಬಹುದೆಂತ ಕೆಲವರು ಅಭಿಪ್ರಾಯಕೊಟ್ಟರೆ ಪರೋಕ್ಷ ತೆರಿಗೆಯನ್ನು ತೆಗೆದು ಹಾಕದೇನೇ ಪ್ರತ್ಯಕ್ಷ ತಲೆ ತೆರಿಗೆಯೂ ಬೀಳುವ ಸಂಭವವಿದೆ. ಅದ್ದರಿಂದ ಬಡವರಿಗೆ ಸಹಾಯವಾಗುವಂತೆ ಉಪ್ಪಿನ ಸುಂಕ ಮುಂತಾದ ತೆರಿಗೆಗಳನ್ನು ತೆಗೆದು ಹಾಕಬೇಕಾಗಿದೆಯೇ ಹೊರತು ಹೊಸ ತೆರಿಗೆ ಹಾಕಕೂಡದು. ಸಮುದಾಯದ ಪ್ರತಿ ಒಬ್ಬನೂ ತೆರಿಗೆ ಕೊಡಬೇಡವೇ ಎಂತ ಒಂದು ಸವಾಲು ಇದೆ. ಪ್ರತಿ ಒಬ್ಬನೂ ತೆರಿಗೆ ಕೊಡಲೇಬೇಕೆಂತ ಇಲ್ಲ. ಅನುಕೂಲ ಇರುವವರು ಕೊಟ್ಟರೆ ಸಾಕಾಗಿದೆ. ನಾಲಾ ನೀರು ಸರಬರಾಯಿಯಾಗುವ ಕಡೆಗಳಲ್ಲಿ ಹಾಕಿರುವ ಕಂದಾಯ ಕಡಿಮೆಯಾಗಲಿಲ್ಲವೇ, ಮೊದಲನೇ ಸಾರಿ ನೀರು ಸರಬರಾಯಿ ಮಾಡುವಾಗ ಭೂಮಿಯ ಬೆಲೆ ಹೆಚ್ಚುತ್ತದೆ, ಆ ಹೆಚ್ಚು ಬೆಲೆಯ ಒಂದು ಭಾಗವು ನೀರನ್ನು ಒದಗಿಸಿಕೊಟ್ಟ ಸರಕಾರಕ್ಕೆ ಸಲ್ಲಬೇಡವೇ ಎಂತ ಸವಾಲುಗಳು ಇವೆ. ಈಗ ಜಾರಿಯಲ್ಲಿರುವ ದರಗಳೇ ಹೆಚ್ಚಾಗಿ ಇರಬಹುದೇ ಹೊರತು ಇನ್ನೂ ಹೆಚ್ಚಿಸುವದರಲ್ಲಿ ನ್ಯಾಯವಿಲ್ಲ. ಭೂಮಿ ಕ್ರಯ ಹೆಚ್ಚಾದದರಿಂದ ಜನರು ಮನಃಪೂರ್ವಕವಾಗಿ ಕೊಟ್ಟರೆ ಸರಕಾರದವರು ತೆಗೆದುಕೊಳ್ಳಬೇಕೇ ಹೊರತು ಹೆಚ್ಚಿನ ಮೇಲೆ ಹೆಚ್ಚಾದ ಕ್ರಯದ ಭಾಗ ಕೇಳಕೂಡದು. ರೈಲ್ವೇ ಟಿಕೇಟುಗಳ ಮೇಲೆ ತೆರಿಗೆ ಹಾಕಬಹುದೋ ಎಂತ ಕೇಳಿದ್ದಾರೆ. ಮೂರನೇ ಕ್ಲಾಸ್ ಪ್ರಯಾಣಿಕರಿಗೆ ಟಿಕೇಟಿನ ಈಗಿನ ಚಾರ್ಜೇ ಹೆಚ್ಚಾಯಿತೆಂತ ಕೂಗುತ್ತಿರುವಾಗ ಇನ್ನೂ ಅದರ ಮೇಲೆ ತೆರಿಗೆ ಹೊರಿಸುವದು ಖಂಡಿತವಾಗಿಯೂ ಆಗಬಾರದು. ನಾಟಕ, ಸಿನೆಮಾ ಇತ್ಯಾದಿ ವಿನೋದಗಳಿಗೆ ಹೋಗುವವರ ಮೇಲೆ ತೆರಿಗೆ ಹಾಕಬಹುದೋ ಎಂತ ಕೇಳುತ್ತಾರೆ. ಬಡವರಿಗೆ ಅಪರೂಪದಲ್ಲಿ ದೊರೆಯುವ ಈ ವಿನೋದಗಳನ್ನು ಸಹ ಹೆಚ್ಚಿನ ಖರ್ಚಿಗೆ ದಾರಿಮಾಡಬಾರದು.

ಇನ್‌ಕಂಟ್ಯಾಕ್ಸ್ ಎಂಬ ಉತ್ಪತ್ತಿ ತೆರಿಗೆಯ ಮೇಲೆ ಸವಾಲುಗಳು ಹೆಚ್ಚಿವೆ. ಕೃಷಿ ಉತ್ಪತ್ತಿಯ ಮೇಲೆ ಉತ್ಪತ್ತಿ ತೆರಿಗೆ ಹಾಕಿರುವದಿಲ್ಲ. ಹಾಕಬಹುದೋ ಎಂತ ಕೇಳುತ್ತಾರೆ. ವರುಷಕ್ಕೆ 10 ರೂಪಾಯಿಗಿಂತ ಹೆಚ್ಚಿಗೆ ಉತ್ಪತ್ತಿ ಇರುವ ಕೃಷಿಕರ ಉತ್ಪತ್ತಿಯ ಮೇಲೆ ತೆರಿಗೆ ಹಾಕುವ ಯೋಚನೆ ಮಾಡಬಹುದು. ಅದಕ್ಕಿಂತ ಕಡಿಮೆ ಇರುವ ಜನರ ಕೃಷಿ ಉತ್ಪತ್ತಿಯನ್ನು ಗಣನೆಗೆ ತೆಗೆದುಕೊಳ್ಳಬಾರದು. ಕೆಲವು ವರುಷಗಳ ಕೆಳಗೆ 1000 ರೂಪಾಯಿ ಉತ್ಪತ್ತಿಯೇ ಉತ್ಪತ್ತಿ ತೆರಿಗೆಯ ಪ್ರಥಮ ಮೆಟ್ಟಾಗಿತ್ತು. ಈಚೆಗೆ 2,000 ರೂಪಾಯಿಗಿಂತ ಕಡಿಮೆ ಉತ್ಪತ್ತಿ ಮೇಲೆ ಈ ತೆರಿಗೆ ಇಲ್ಲ. ಈ ದರವನ್ನು ಬದಲಾಯಿಸಬೇಕೋ ಎಂತ ಕೇಳುತ್ತಾರೆ. ಬಡವರ ಹೊರೆಯನ್ನು ಕಡಿಮೆ ಮಾಡುವದಾದರೆ 1,000 ರೂಪಾಯಿಯನ್ನೇ ತೆರಿಗೆಗೆ ಅರ್ಹವಾದ ಉತ್ಪತ್ತಿಯಾಗಿ ತೆಗೆದುಕೊಳ್ಳಬಹುದು.

ನಿಷಾ ಪದಾರ್ಥಗಳ ಸೇವನೆಯನ್ನೇ ನಿಲ್ಲಿಸಬೇಕೋ, ನಿಲ್ಲಿಸುವದಾದರೆ ಈ ಬಾಬಿನಿಂದ ಆಗುವ ಇಪ್ಪತ್ತು ಚಿಲ್ರೆ ಕೋಟಿ ರೂಪಾಯಿನ ಉತ್ಪತ್ತಿಯ ಬದಲಿಗೆ ಬೇರೆ ಯಾವ ತೆರಿಗೆ ಹಾಕಬಹುದು ಎಂಬದೊಂದು ಪ್ರಶ್ನೆ ಇದೆ. ಡಾಕ್ಟರ್ ಮಾಷ್ರೆ ಎಂಬವರು 50 ರೂಪಾಯಿಗಿಂತ ಹೆಚ್ಚಿಗೆ ಭೂಮಿ ಕಂದಾಯ ಕೊಡುವವರ ಕಂದಾಯವನ್ನು ಹೆಚ್ಚಿಸಬಹುದೆಂತ ಅಭಿಪ್ರಾಯ ಕೊಟ್ಟಿದ್ದಾರಂತೆ. ನಿಷಾಪದಾರ್ಥ ಪೂರ್ತಿ ನಿಲ್ಲಿಸಿ ಬಿಡುವದಾದರೆ ಅನುಕೂಲಸ್ಥರ ಭೂಮಿಕಂದಾಯ ಮತ್ತು ಉತ್ಪತ್ತಿ ಕಂದಾಯವನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸಿಕೊಳ್ಳಬಹುದು. ಸೇಂದಿಗೆ ತೆರಿಗೆ ಕಡಿಮೆಯಾಯಿತೋ ಎಂತ ಕೇಳುತ್ತಾರೆ, ಕಡಿಮೆಯಾಗಲಿಲ್ಲವೆಂತ ನಮ್ಮ ಅಭಿಪ್ರಾಯ. ನಿಷಾ ಪದಾರ್ಥಗಳ ಕ್ರಯ ಹೆಚ್ಚಿಸಿದರೆ ಕುಡುಕತನ ಕಡಿಮೆಯಾಗಬಹುದೋ ಎಂತ ಒಂದು ಸವಾಲು ಇದೆ. ಆಗಬಹುದೆಂತ ನಮಗೆ ತೋರುತ್ತದೆ. ದೇಶೀಯ ಸರಾಯಿಗೆ ಕ್ರಯ ಹೆಚ್ಚಿಸಿದಂತೆಯೇ ಪರದೇಶಿ ಶೀಸ ಸಾರಾಯಿಗಳಿಗೂ ಪ್ರಮಾಣಾನುಸಾರ ಏರಿಸಬೇಕು. ಇಲ್ಲವಾದರೆ ಜಿಲ್ಲದ ಸಾರಾಯಿಗೆ ಕ್ರಯ ಏರಿಸುತ್ತಾ ಹೋದರೆ ಪರದೇಶಿ ಬ್ರ್ಯಾಂಡಿ ಮುಂತಾದ್ದರ ಮೇಲೆ ಜನರು ಬಿದ್ದಾರು. ಕರಾರುಗಳ ಸ್ಟ್ಯಾಂಪು, ಕೋರ್ಟು ಫೀಸು ಹೆಚ್ಚಿಸಬಹುದೋ ಎಂತ ಸವಾಲುಗಳು ಇವೆ. ಉತ್ತರ ಇಂಡಿಯಾದಲ್ಲಿ ಕೆಲವರು ಕೋರ್ಟುಫೀಸನ್ನು ಹೆಚ್ಚಿಸಬಹುದೆಂತ ಅಭಿಪ್ರಾಯ ಕೊಟ್ಟಿದ್ದಾರೆ. 500 ರೂಪಾಯಿ ವರೆಗಿನ ಲೇವಾದೇವಿಗಳೂ, ಹಕ್ಕುದಾರಿಕೆಗಳೂ ಕೋರ್ಟು ಫೀಸಿಲ್ಲದೆ ಫೈಸಲ್ ಮಾಡುವದಾದರೆ ದರವನ್ನು ಹೆಚ್ಚಿಸಬಹುದು. ಇಲ್ಲವಾದರೆ ಈ ಹೊರೆಯೂ ಸಾಲಗಾರರಾದ ಗರೀಬರ ಮೇಲೆ ಬೀಳುತ್ತದೆ.

ಮುನಿಸಿಪಾಲಿಟಿಗಳು, ಡಿಸ್ಟ್ರಿಕ್ಟ್ ಬೋರ್ಡುಗಳು ಹಾಕುವ ತೆರಿಗೆಗಳ ವಿಷಯವೂ ಹೊಗೆಸೊಪ್ಪಿನ ಮೇಲಿನ ತೆರಿಗೆ ವಿಷಯವೂ ಸವಾಲುಗಳು ಇವೆ. ಹಕ್ಕುದಾರಿಕೆ ಮೇಲೆ ಸೊತ್ತು ಬರುವಾಗ ಅದರ ಮೇಲೆ ತೆರಿಗೆ ಹಾಕಬಹುದೋ ಎಂತ ಸವಾಲು ಇದೆ. ಸೊತ್ತು ಒಬ್ಬ ಸತ್ತು ಇನ್ನೊಬ್ಬನಿಗೆ ಬರುವಾಗ ಅಂಥಾ ಸೊತ್ತಿನ ಯಾವುದಾದರೂ ಒಂದು ದಾಮಾಶಾಯಿಯನ್ನು ಸರಕಾರಕ್ಕೆ ಕೊಡಬೇಕೆಂತ ಮಾಡಬಹುದೋ ಎಂತ ಕೇಳುತ್ತಾರೆ. ಇದು ಖಂಡಿತವಾಗಿಯೂ ಆಗಕೂಡದು.

ಯಾವ ಬಾಬಿನಲ್ಲೂ ಕಂದಾಯ ಹೆಚ್ಚಿಸುವ ಅಭಿಪ್ರಾಯವನ್ನು ನಾವು ಒಪ್ಪುವದಿಲ್ಲ. ಮೊದಲು ಹೇಳಿದಂತೆ ಸರಕಾರದ ಮಿಲಿಟರಿ ಖರ್ಚು, ಯುರೋಪಿಯನ್ ಆಫೀಸರ ಸಂಬಳದ ಖರ್ಚು ಕಡಿಮೆ ಮಾಡಿ ಈಗ ಇರುವ ಅನೇಕ ತೆರಿಗೆಗಳನ್ನು ಕಡಿಮೆ ಮಾಡಬೇಕಾದದ್ದೇ ಸರಕಾರದ ಕೆಲಸವಾಗಿದೆ.

ಶುದ್ಧವಾದ ಗಾಳಿ ಮತ್ತು ಅದರ ಉಪಯೋಗ.

ಶುದ್ಧವಾದ ಗಾಳಿಯನ್ನು ಶ್ವಾಸಿಸುವದರಿಂದ ಉಂಟಾಗುವ ಗುಣಗಳೇನೆಂಬುದು ಈಗೀಗ ಬಹು ಜನಗಳ ಗಮನಕ್ಕೆ ಬರುತ್ತಿರುವುದು. ಕಫವಾತಜ್ವರ, ಎದೆಯ ಚಳಿ ಮುಂತಾದ ವ್ಯಾಧಿಗಳಿಂದ ತೊಂದರೆ ಪಡುವವರಿಗೆ, ಗಾಳಿಯು ಸೋಕಬಾರದೆಂದು ಅನೇಕ ಜನರಿಗೆ ಭ್ರಮೆ! ಅಂತಹ ರೋಗಿಗಳನ್ನು ಗಾಳಿಯ ಸಂಚಾರವೇ ಇಲ್ಲದ ಕೋಣೆಗಳಲ್ಲಿ ಕೂಡಿಟ್ಟು ಚಿಕಿತ್ಸೆ ಮಾಡಿಸುತ್ತಿದ್ದರು. ಈಚೆಗೆ ಆ ರೋಗಗಳಿಗೂ ಕೂಡಾ ಶುದ್ಧವಾದ ಗಾಳಿಯೇ ಉತ್ತಮ ಚಿಕಿತ್ಸೆಯೆಂದೂ ಅನೇಕರಿಗೆ ತಿಳಿದಿರಬಹುದು. ಮೈಮೇಲೆ ಒಳ್ಳೇ ಗಾಳಿಯು ಬೀಸುವದರಿಂದ ನರಗಳಿಗೆ ಶಕ್ತಿಯುಂಟಾಗಿ, ಮೈಗೆ ಲವಲವಿಕೆಯು ಏರ್ಪಡುವುದಲ್ಲದೆ, ಶುದ್ಧವಾದ ಗಾಳಿಯೇ ಜೀವಕ್ಕೆ ಉತ್ತೇಜನಕೊಡುವ ಒಂದು ಉತ್ತಮ ಔಷಧವಾಗಿದೆ. ಇದರಿಂದಲೇ ವೈದ್ಯ ಶಾಸ್ತ್ರಜ್ಞರು ಮಕ್ಕಳನ್ನು ಹೆತ್ತ ತಾಯಂದಿರಿಗೆ ಎಳಗೂಸನ್ನು ಸಹ ಸಾಧ್ಯವಾದಷ್ಟು ಶುದ್ಧವಾದ ಗಾಳಿಯು ಬೀಸುವ ಕಡೆಯಲ್ಲಿ ಮಲಗಿಸಬೇಕೆಂದೂ ಅವಕಾಶವಿದ್ದಾಗಲೆಲ್ಲಾ ಗಾಳಿಯಲ್ಲಿ ತಿರುಗಾಡಿಸುತ್ತಾ ಇರಬೇಕೆಂದೂ, ಕೂಸಿನ ಅವಯವಗಳಿಗೆಲ್ಲಾ ಚನ್ನಾಗಿ ಗಾಳಿಯು ತಗಲುವಂತೆ, ಹಗುರವಾಗಿಯೂ, ಸಡಿಲವಾಗಿಯೂ, ಇರುವ ಉಡುಪುಗಳನ್ನೇ ಉಡಿಸಬೇಕೆಂದೂ ಎಚ್ಚರಿಸುತ್ತಿರುವರು. ಮಕ್ಕಳ ಪೋಷಣೆಗೆ ಮತ್ತು ಅವುಗಳ ದೇಹಪುಷ್ಟಿಗೆ ಆಹಾರ, ನಿದ್ರೆ ಇವುಗಳೆಲ್ಲಕ್ಕಿಂತಲೂ ಶುದ್ಧವಾಯುವು ಬಹಳ ಮುಖ್ಯವಾದುದು.

ಕಿಟಕಿಯ ಬಾಗಿಲುಗಳನ್ನೆಲ್ಲಾ ಮುಚ್ಚಿ, ಗಾಳಿಯಾಡುವುದಕ್ಕೆ ಸ್ವಲ್ಪವೂ ಅವಕಾಶವಿಲ್ಲದಂತೆ ಮಾಡಿದ ಕೋಣೆಗಳಲ್ಲಿ ಮಲಗುವುದರಿಂದ ಅಲ್ಲಿನ ವಾಯುಸ್ಥಿತಿಯು ಹೇಗಾಗುವುದೆಂಬುದನ್ನು ಇಲ್ಲಿ ಸೂಕ್ಷ್ಮ ದೃಷ್ಟಿಯಿಂದ ಗಮನಿಸಿ ನೋಡಿರಿ. ಆ ಕೋಣೆಗೆ ಹೊರಗಿನ ಗಾಳಿಯು ಬರುವುದಕ್ಕೆ ಅವಕಾಶವಿಲ್ಲದುದರಿಂದ ಒಳಗಿರತಕ್ಕ ಮನುಷ್ಯರ ಉಸಿರಾಟದಿಂದ ಬರುವ ಕೆಟ್ಟನೀರಿನ ಆವಿಯೂ, ಮನುಷ್ಯನ ದೇಹದ ಉಷ್ಣವೂ ಅದರಲ್ಲಿ ಕಲೆತಿರುವದು. ಉಸಿರಿನಿಂದ ಬರುವ ಆವಿಯ ನೀರಿನೊಡನೆ ಅವನ ಶ್ವಾಸಕೋಶದಲ್ಲಿರಬಹುದಾದ ಅಣುಜೀವಿಗಳೂ ಆ ಕೋಣೆಯಲ್ಲಿಯೇ ಹರಡಿಕೊಳ್ಳುವವು. ಈ ಕ್ರಿಮಿಗಳು ಹೊರಗಿನ ಮೈದಾನದ ಶುದ್ಧವಾದ ಗಾಳಿಯಲ್ಲಿಯಾದರೆ ಒಂದುಕಡೆ ನಿಲ್ಲುವುದಕ್ಕೆ ಅವಕಾಶವಿಲ್ಲದೆ ನಾನಾಕಡೆಗೆ ಚದರಿ ಹೋಗುವವು. ಕೋಣೆಯಲ್ಲಿ ತುಂಬಿರುವ ಶಾಖವಾದ ಗಾಳಿಯ ಉಷ್ಣವು ಅವುಗಳಿಗೆ ವೃದ್ಧಿಯನ್ನೂ ಆಯುಷ್ಯನ್ನೂ ಹೆಚ್ಚಿಸುವದು. ಆ ಕ್ರಿಮಿಗಳು ಕೋಣೆಯ ಗಾಳಿಯನ್ನು ಉಚ್ಛ್ವಾಸಿಸತಕ್ಕವರ ದೇಹದಲ್ಲಿ ಪ್ರವೇಶಿಸಿ, ಒಡನೆ ರೋಗವನ್ನೂ ಹುಟ್ಟಿಸುವವು. ಇದೂ ಅಲ್ಲದೆ ಹಿಂದೆ ಹೇಳಿದಂತೆ ಕೋಣೆಯಲ್ಲಿ ತುಂಬಿಕೊಂಡ ಶಾಖವು ಮನುಷ್ಯನ ಮೂಗಿನಲ್ಲಿರುವ ಶ್ವಾಸಾಂಗದ ರಕ್ತನಾಳಗಳನ್ನೂ ಅರಳಿಸುವುದರಿಂದ ಅಂತಹ ಕ್ರಿಮಿಗಳು ಹೆಚ್ಚಾಗಿ ಒಳಗೆ ಹೋಗುವುದಕ್ಕೆ ದಾರಿ ಕೊಡುವುದು. ನಮ್ಮ ದೇಶದಲ್ಲಿ ಅನೇಕ ಶಿಶುಗಳಿಗೆ ಬಹಳ ದಿನಗಳವರೆಗೆ ನೆಗಡಿಯಿಂದ ಮೂಗು ಸೋರುತ್ತಿರುವುದೂ ಇನ್ನೂ ಇತರ ವಿಧವಾದ ಶೀತರೋಗಗಳೂ ಕಾಣಿಸುವದಕ್ಕೆ

ಬಾಲ್ಯದಲ್ಲಿ ಶುದ್ಧವಾದ ಗಾಳಿಗೆ ಅವಕಾಶ ಕೊಡದಿರುವದೇ ಮುಖ್ಯವಾದ ಕಾರಣವು.

ಮಗುಬಾಣಂತಿಯರಿಗೆ ಶೀತವಾಗುವದರಿಂದ, ಅವರನ್ನು ಸ್ವಲ್ಪವೂ ಗಾಳಿಗೆ ಅವಕಾಶವಿಲ್ಲದ ಕತ್ತಲೆಕೋಣೆಯಲ್ಲಿ ಕೂಡಿಡುವುದರಿಂದ ಅದಕ್ಕೆ ವಿರುದ್ಧವಾದ ಫಲವೇ ಉಂಟಾಗುವದೆಂದು ಇದರಿಂದ ಚೆನ್ನಾಗಿ ತಿಳಿಯಬಹುದು.

ಆ. ಜ

ಮದ್ಯಪಾನದ ಭಯಂಕರ ಚಿತ್ರ.

(ಸಂಯುಕ್ತ ಅಮೇರಿಕದಲ್ಲಿ ಈಗ ನಿಷೇಧ ನಿಯಮಕ್ಕೆ ಮೊದಲಿದ್ದ ಸ್ಥಿತಿ)

ನಿಷೇಧ ನಿಯಮದ ಮೊದಲು ಸಂಯುಕ್ತ ಅಮೇರಿಕದಲ್ಲಿ 140,000 ಗುತ್ತೆ ಅಂಗಡಿಗಳಿದ್ದವು. ಒಂದು ಅಂಗಡಿ 20 ಅಡಿ ಜಾಗ ಅಗಲದಷ್ಟು ಆಳೆಯನ್ನು ಬಿಟ್ಟು ಅವುಗಳಿಂದಲೇ ಒಂದು ಬೀದಿಯನ್ನು ರಚಿಸುವದಾದರೆ ಆ ಬೀದಿಯ ಉದ್ದವು 260 ಮೈಲಾಗುವದು. ಇಂಥ ಒಂದು ಬೀದಿಯಲ್ಲಿ ಕುಡುಕರೆಲ್ಲರೂ ವರ್ಷಂಪ್ರತಿ ಹೋಗತಕ್ಕವರು ಈ ಒಂದೆಡೆಯಲ್ಲೇ ಸೇರುವುದಾದರೆ ಅದರ ಚಂದವನ್ನು ಗಣಿತಮಾಡಿ ನೋಡಿರಿ. ಕುಡುಕತನಕ್ಕಾಗಿ ಈ ಅಂಗಡಿಗಳನ್ನು ಸೇರುವ ಜನರನ್ನು ಐದೈದು ಮುಖಗಳು ಒಮ್ಮೆಗೇ ತೋರುವಂತೆ ನಿಲ್ಲಿಸಿದರೆ ಆತತು ದಳದ ಉದ್ದವು 570 ಮೈಲಿಯಾಗುವದು. ಅಂದರೆ ಇವರ ಸಂಖ್ಯೆಯು ದಿನ ನಿತ್ಯವೂ 5,000,000ಕ್ಕೆ ಏರುವದು. ಈ ದೂರವನ್ನು ಒಬ್ಬನು ಒಂದು ತುದಿಯನ್ನು ಇನ್ನೊಂದು ತುದಿಯವರೆಗೆ ಒಬ್ಬನೇ ದಾಟಿ ಹೋಗುವದಾದರೆ ದಿನ ಒಂದರ 20 ಮೈಲಿಯಂತೆ ನಡೆದರೆ 28 ದಿನಗಳು ಬೇಕಾಗುವುದು.

ಇನ್ನು ಈ ಜನರ ಹಿಂದೆ ಎದುರಿನಲ್ಲಿ ಐದೈದುಮಂದಿ ತೋರುವಂತೆಯೇ 60 ಮೈಲು ಉದ್ದದ ಇನ್ನೊಂದು ಜನರ ತಂಡವು ಬರುವುದು. ಇವರ ಸಂಖ್ಯೆಯು ಐನೂರ ಮೂವತ್ತು ಸಾವಿರಕ್ಕೆ ಮೀರಿ ನಿಷಾಮಹಿಮೆಯ ರಿಜಿಸ್ಟರ್ ಸದಸ್ಯರುವರು. ಇವರಿಗೆ ಕುಡುಕತನವಲ್ಲದೆ ಇನ್ನಾವ ರುಚಿಯೂ ಗೊತ್ತಿಲ್ಲ. ಇವರ ಹಿಂದೆ ಇಬ್ಬಿಬ್ಬರ 150 ಮೈಲು ಉದ್ದದ ಇನ್ನೊಂದು ಸಾಲು ಬರುವದು. ವೃದ್ಧರಿಂದಲೂ ಬಾಲಕರಿಂದಲೂ ತುಂಬಿದ ತಂಡವು ಅದು. ಅದರಲ್ಲೇ ಪುರುಷರಿಗಿಂತಲೂ ಹೆಚ್ಚಾಗಿ ಕುಡಿಯಲು ಅಭ್ಯಾಸಿಸಿರುವ ಸ್ತ್ರೀಯರು ಸೇರಿಕೊಂಡಿರುವರು. ಈ ದೂರವನ್ನು ದಾಟಲು 7 ದಿವಸಗಳು ತಾಗುವವು. ಇಷ್ಟಕ್ಕೆ ಅಂಜಬೇಡಿರಿ. ಇವರ ಹಿಂದೆ ಬರುವ 100,000 ಜನಸಂಖ್ಯೆಯ ಇನ್ನೊಂದು ತಂಡವನ್ನು ನೋಡಿರಿ. ಇವರೇ ಅತಿ ಭಯಂಕರ ತಪ್ಪುಗಳನ್ನು ಮಾಡಿದ ಕೇಡಿಗಳು. ಇವರ ಮುಂಭಾಗದಲ್ಲಿ ಕೊಳೆಯಿಂದ ಒದ್ದೆಯಾದ ಬಟ್ಟೆಯುಳ್ಳ ಪಾಪಿಗಳನ್ನೂ ನೋಡಬಹುದು. ಅವರಿಗೆ ಮರಣದಂಡನೆಯು ವಿಧಿಸಲ್ಪಟ್ಟಿರುವುದು. ಉಳಿದವರಿಗೆ ಕಾರಾಗೃಹವಾಸ. ಇದೋ ಇವರ ಹಿಂದೆ ಬಲವಾದ ಕಾವಲಿನಲ್ಲಿರಿಸಲ್ಪಟ್ಟು ಮಣಬಂಡಂತೆ ಜೊಲ್ಲೆ ಹೊಡಿಯುತ್ತ ಬರುತ್ತಿರುವ ಇನ್ನೊಂದು ತಂಡವನ್ನು ನೋಡಿರಿ. ಮದ್ಯಪಾನ ವಿಶೇಷದಿಂದ ಚಿತ್ತಸ್ವಾಸ್ಥ್ಯವನ್ನು ಸಂಪೂರ್ಣವಾಗಿ ಕಳೆದುಕೊಂಡ ಮತಿಭ್ರಾಂತರೇ ಇವರು. ಇಷ್ಟಕ್ಕೆ ಮುಗಿಯಲಿಲ್ಲ. ಕುಡಿಕತನದಿಂದಲೇ ಮೃತಿಯನ್ನು ಹೊಂದಿದ 100,000 ಮಂದಿಯ ಮೆರವಣಿಗೆಯು ಸ್ಮಶಾನದ ಕಡೆಗೆ ಸಾಗುತ್ತಿರುವುದು. ಇವರ ಮರಣಕ್ಕಾಗಿ ಅಳುವವರ ಸಂಖ್ಯೆ ಇಲ್ಲ. ಒಂದು ಫರ್ಲಾಂಗಾದೂರಕ್ಕೆ 4 ರಂತೆ ಒಂದೊಂದು ಶವವನ್ನಿರಿಸಿ ಮೆರವಣಿಗೆಯನ್ನು ನಡಸುವುದಾದರೆ ಇಂತಹ ಶವ ಪಂಕ್ತಿಯ ಉದ್ದವು 3,333 ಮೈಲಿಯಾಗುವುದು. ಶವ ಸಂಸ್ಕಾರಗಳು ನಿಧಾನವಾಗಿ ಸಾಗುವದರಿಂದ ಈ ದೂರವನ್ನು ಅವರು ಸಾಗಬೇಕಾದರೆ ಎಷ್ಟು ತಿಂಗಳುಗಳು ಹಿಡಿಯಬಹುದೊ! ಈ ಸತ್ತವರನ್ನು ತಮ್ಮವರೆಂದು ತಿಳಿಯುವವರು ಒಬ್ಬರೂ ಲೋಕದಲ್ಲಿ ಉಳಿಯಲಿಲ್ಲ. ಈ ಶವಗಳ ಮೋರೆಗಳನ್ನು ನೋಡಿರಿ. ಕೆಲವರು ಹುಚ್ಚು ಹಿಡಿದು ಸತ್ತರು. ಕೆಲವರು ರಸ್ತೆಯಲ್ಲಿ ಬಿದ್ದು ಸತ್ತರು. ಕೆಲವರು ನೀರಿನಲ್ಲಿ ಬಿದ್ದು ಪ್ರಾಣಬಿಟ್ಟರು. ಕೆಲವರು ದಾರಿತಪ್ಪಿ ಕಾಡಿನಲ್ಲಿಬಿದ್ದು ಕೊಳೆತರು. ಕೆಲವರು ಆತ್ಮಹತ್ಯವನ್ನು ಮಾಡಿಕೊಂಡರು. ಇನ್ನೂ ಕೆಲವರು ಜಗಳಾಡಿ ಸತ್ತರು. ಕೆಲವರು ಬಂಡೆಗಳ ಅಡಿಯಲ್ಲಿ ಬಿದ್ದು ಸತ್ತರು. ಆದರೆ ಎಲ್ಲರೂ 'ಕುಡುಕರಾಗಿ ಬಾಳಿ ಬದುಕಿ ಸತ್ತರು' ಎಂಬ ಒಂದೇಒಂದು ಸುದ್ದಿ ಕೇಳಿಸುತ್ತಿರುವುದು. ಇವರ ಹಿಂದೆ ಈ ನೀಚರ ಕ್ರೂರ ಕೃತ್ಯದ ಪರಿಣಾಮವಾಗಿ ಸತ್ತವರ ಸಾಲೊಂದಿರುವುದು. ಇವರ ಹಿಂದೆ ಎರಡು ಮಂದಿಯ 30 ಮೈಲು ಉದ್ದದ ಇನ್ನೊಂದು ದಳವು ಕಾಣಿಸುವುದು. ಇವರೇ ಮದ್ಯಪಾಯಿಗಳಾದ ಮಾತಾ ಪಿತೃಗಳ ಅವಸ್ಥೆ ನಿರ್ಗತಿಕ ಕುಟುಂಬ. ಅವರಲ್ಲಿ ಎಷ್ಟೋಮಂದಿ ಹಿರಿಯರಂತೆ ಕುಡುಕರು. ಕೆಲವರು ಬುದ್ಧಿ-ಹೀನರು. ಕೆಲವರು ರೋಗಿಗಳು.

ಒಂದೇ ಒಂದು ರಾಜ್ಯದಲ್ಲಿ ಸೆರಾಯಿಯ ಪರಿಣಾಮವು ಇಷ್ಟೊಂದು ಭಯಂಕರವಿದ್ದರೆ ಇಡೀ ಪ್ರಪಂಚದಲ್ಲಿ ಹೀಗೆ ಲೆಕ್ಕಿಸುತ್ತ ಕುಳಿತರೆ ಎಂತಹ ಚಿತ್ರವು ನಮಗೆ ನೋಡ ಸಿಗಬಹುದು? ಇದಕ್ಕೆ ಪ್ರೋತ್ಸಾಹವನ್ನೀವ ಸರಕಾರವು ಸರಕಾರವೇ?

ಉಪವಾಸದಿಂದ ಯೌವನವನ್ನು ಕಾಪಾಡುವದು!

ಮುದಿಪ್ರಾಯವನ್ನು ನಿವಾರಿಸಲು ಒಂದು ಔಷಧಿಯನ್ನು ಅಮೇರಿಕದ ಚಿಕಾಗೋ ವಿಶ್ವವಿದ್ಯಾಲಯದ ಪ್ರಾಣಿ ಗುಣ ಧರ್ಮ ಶಾಸ್ತ್ರದ (ಫಿಸ್ಯೋಲಜಿ) ಪ್ರೊಫೆಸರಾದ ಎ. ಜೆ. ಕಾರ್ಲ್‌ಸನ್‌ರವರು ಕಂಡುಹಿಡಿದಿರುವರೆಂದು ಒಂದು ಪತ್ರಿಕೆಯು ಹೇಳುತ್ತದೆ. ಮೂರು ವರ್ಷಗಳ ಪರಿಶೋಧನೆಯಿಂದ ಯೌವನವನ್ನು ಕಾಪಾಡಲು ಉಪವಾಸವೇ ದಾರಿಯೆಂಬ ಅಭಿಪ್ರಾಯಕ್ಕೆ ಬಂದಿರುವರು.

ಅವರ ಹೇಳಿಕೆಯಂತೆ 15 ದಿವಸಗಳ ಉಪವಾಸವೇ ಈ ಔಷಧಿಯು ಮಾತ್ರೆಯಾಗಿದೆ. ಅವರ ಪರಿಶೋಧನಾಲಯದಲ್ಲಿ ಮೂವರು ಮಧ್ಯ ಪ್ರಾಯದ ಮನುಷ್ಯರು ಇಷ್ಟುಕಾಲ ಉಪವಾಸವಿದ್ದನಂತರ ತಮ್ಮ ಶರೀರದ ಬದಲಣೆಗೆಯೂ ತೃಪ್ತಿ ಬಂದದ್ದು ಕಂಡು ಒಂತಿತೆ. ಅವರು ಆಹಾರವನ್ನು ಸೇವಿಸಲು ಪ್ರಾರಂಭಿಸಿದೊಡನೆ ಅವರ ದೇಹಕ್ಕೆ 15 ವಯಸ್ಸಿನವರಷ್ಟೇ ಆಹಾರವು ಬೇಕಾಯಿತು. ಅವರು ಬೆಳವಣಿಗೆಯಲ್ಲಿ 40 ವರ್ಷ ಪ್ರಾಯದವರಿಗಿಂತ 12 ವರ್ಷ ವಯಸ್ಸು ಪ್ರಾಯದವರನ್ನು ಹೋಲುತ್ತಿದ್ದರು.

ಈ ತರಹದ ಉಪವಾಸವನ್ನು ಮಾಡಿದ ಪ್ರೊಫೆಸರ್ ಕಾರ್ಲ್‌ಸನ್‌ರವರು ಹೇಳುವದೇನೆಂದರೆ—ತನ್ನ ಪರಿಶೋಧನೆಗಳಿಂದ ದೀರ್ಘಕಾಲ ಉಪವಾಸವಿದ್ದು, ನಂತರ ಆಹಾರವನ್ನು ತೆಗೆಯಲು ಉಪಕ್ರಮಿಸಿದಾಗ ದೇಹಕ್ಕೆ ಅನವಶ್ಯವಾದ ಹೊಟ್ಟೆಯಲ್ಲಿರುವ ಪಾಚಕ ರಸದ ವಿಸರ್ಜನೆಯು ಹೆಚ್ಚಾಗುವದು. ಮತ್ತು ಶರೀರಗಳು ತಮ್ಮ ದಾಹಕ ತೂಕಕ್ಕೆ ಬರುವವು. ಪಾಚಕರಸದ ವಿಸರ್ಜನೆಯಲ್ಲಿ ಬದಲಾವಣೆಗಳು ಹ್ಯಾಗೆ ಫಲಕಾಗುತ್ತವೆ ಎಂಬದನ್ನು ಈಗ ಹೇಳಲು ಸಾಧ್ಯವಿಲ್ಲದಿದ್ದರೂ ಉಪವಾಸವು ದೇಹದಹನೆಯನ್ನು ಹೆಚ್ಚು ಯೌವನ ಸ್ಥಿತಿಗೆ ತರುತ್ತದೆಂಬದನ್ನು ಸ್ಥಿರಪಡಿಸುತ್ತೇವೆ.

ದಿ. ಪ.

ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು.

ಜನವರಿ ತಾರೀಕು 25ರಲ್ಲು ಮಡಿಕೇರಿಯಲ್ಲು ನಡೆದ ಡಿಸ್ಟ್ರಿಕ್ಟುಬೋರ್ಡು ಮೀಟಿಂಗಿನ ವಿವರ—8 ಉದ್ಯೋಗಸ್ಥ ಮೆಂಬರುಗಳೂ 6 ಉದ್ಯೋಗಸ್ಥರಲ್ಲದ ಮೆಂಬರುಗಳೂ ಹಾಜರಿದ್ದರು.

ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಲಾಯಿತೆಂದು ಒಪ್ಪಲಾಯಿತು.

1. 1923—24ರಲ್ಲು ಲೋಕಲ್ ಫಂಡ್ ಆಸ್ಪತ್ರೆಗಳಿಗೆ ಒದಗಿಸಿಕೊಟ್ಟ ಔಷಧಿಯ ಕ್ರಯದಲ್ಲಿ 5,080—12—0 ವಿಾರಿದೆ ಎಂಬ ಸೆಂಟ್ರಲ್ ರೆವಿನ್ಯೂವಿನ ಎಕೌಂಟೆಂಟ್ ಜನರಲ್‌ರವರ ಪತ್ರವು ಓದಲಾಯಿತು. ಫಂಡಿನ ಸಿಲ್ಕು ಬಾಕಿಯಿಂದ ಈ ಮೊಬಲಗನ್ನು ಕೊಡುವಂತೆ ತೀರ್ಮಾನವಾಯಿತು.

2. ಮಡಿಕೇರಿಯ ಕಸಬಿಗೆ ಮಾಹೆಯನ 60ರಿಂದ 10 ರುಪಾಯಿ ವರೆಗೆ ಸಂಬಳವನ್ನೇರಿಸಬೇಕೆಂದು ಬರೆದ ಅಸಿಸ್ಟೆಂಟ್ ಕಮಿಾಷನರವರ ಪತ್ರ ಓದಲಾಯಿತು.

1925ನೆ ಏಪ್ರಿಲ್ 1ರಿಂದ ಪೆಚ್ಚಿನ ಸಂಬಳವು ಓದಲಾಯಿತು.

3 ಶ್ರೀಮಂಗಲದಲ್ಲಿ ಕಂಪೌಂಡರರಿಗೂ ವೇಕ್ಸಿನೇಟರಿಗೂ ಉಳಕೊಳ್ಳುವದಕ್ಕೆ ಕಟ್ಟಡಗಳನ್ನು ಕಟ್ಟಿಸುವ ವಿಷಯ ಬರೆದ ಸಿವಿಲ್ ಸರ್ಜನರ ಪತ್ರ ಓದಲಾಯಿತು.

ಉಳಕೊಳ್ಳುವ ಕಟ್ಟಡಕ್ಕೆ 2,100 ರುಪಾಯಿ ಮಂಜೂರು ಮಾಡುವಂತೆಯೂ ಆಸ್ಪತ್ರೆಯ ಕಟ್ಟಡದ ವಿಷಯ ಮುಂದಕ್ಕೆ ಇಡುವಂತೆಯೂ ತೀರ್ಮಾನವಾಯಿತು.

4. ಮಡಿಕೇರಿ ಮುನಿಸಿಪಲ್ ವೇಕ್ಸಿನೇಟರವರ ಅರ್ಧ ಸಂಬಳವನ್ನು ಬೋರ್ಡಿನಿಂದ ಕೊಡಲಿಕ್ಕಾಗಿ 18½ ರುಪಾಯಿಗಳನ್ನು ಮಂಜೂರುಮಾಡಬೇಕೆಂದು ಕಮಿಷನರವರಪತ್ರ ಓದಲಾಯಿತು.

1925ನೇ ಏಪ್ರಿಲ್ 1ರಿಂದ ಮಂಜೂರಾಯಿತು.

5 ಬ್ಯರ, ಶೇಖಿ ಮುಂತಾದ ಕಾಯಿಲೆಗಳಿಗೆ ಕೊಡುವ ಪಂಚಾಯಿತಿದಾರರ ಉಸ್ತುವಾರಿಯಲ್ಲಿ ಔಷಧಿ ಪೆಟ್ಟಿಗೆಗಳ ಮುಖಾಂತರ ಗ್ರಾಮಸ್ಥರಿಗೆ ಔಷಧಿಗಳನ್ನು ಹಂಚುವದು ಉತ್ತಮವೆಂದು ಸೂಚಿಸಿ ಬರೆದ ಮೆ. ಪಿ. ಟಿ. [illegible]ನವರ ಪತ್ರವು ಓದಲಾಯಿತು.

(ಎ) ಉತ್ತರ ಕೊಡಗಿನಲ್ಲಿ ಮತ್ತು [illegible] ಕೊಡಗಿನಲ್ಲಿ ಬಿಟ್ಟಿಬಿಟ್ಟ ಸಬ್ ಅಸಿಸ್ಟೆಂಟ್ ಸರ್ಜನರು [illegible] ಪೆಟ್ಟಿಗೆಗಳನ್ನು [illegible] ರ ವಿಷಯ ಬಂದು ವಿವರವನ್ನು [illegible] ಸರ್ಜನರನ್ನು ಕೇಳುವಂತೆಯೂ (ಬಿ) [illegible] ರುಪಾಯಿ ಇಡಲ್ಪಡಬೇಕೆಂದೂ (ಸಿ) [illegible] ನರುಗಳು [illegible] ಔಷಧಿಯನ್ನು [illegible] ಮೊದಲಾದವುಗಳಲ್ಲಿ [illegible] ಯಿತು.

6. ಬೋರ್ಡಿನ ಉಪಾಧ್ಯಕ್ಷರ [illegible] ಕಾಗದಗಳು ಓದಲಾದವು.

ಈ ವಿಷಯವು ಮುಂದಕ್ಕೆ ಇಡಬೇಕೆಂದು [illegible] ವಾಯಿತು.

7 1923—24ರ ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಕಿಐಸದ ವಾರ್ಷಿಕ ವರದಿಯು ಓದಲಾಗಿ ನಾಪಲು ಮಾಡಲಾಯಿತು.

8. ಶನಿವಾರಸಂತೆ ಹೋಬಳಿಯ ಹೆಬ್ಬುಲುಸೆನಲ್ಲಿ ಟೋಲ್‌ಗೇಟನ್ನು ತೆರೆಯುವದರ ವಿಷಯ ಉತ್ತರ ಕೊಡಗಿನ ಸುಬೇದಾರರು ಬರೆದ ರಿಪೋರ್ಟನ್ನು ಮುಂದರಿಸಿದ ಅಸಿಸ್ಟೆಂಟ್ ಕಮಿಷನರವರ ಪತ್ರವು ಓದಲಾಯಿತು.

ಈ ವಿಷಯವು ಮುಂದಕ್ಕಿಡಲಾಯಿತು.

9. ಖಾಲಿ ಗಾಡಿಯ ಮೇಲೆ ಟೋಲ್ ಫೀಸ್ 4 ಆಣೆ ಹಾಕಬೇಕೆಂಬ ಮೆ. ಕೆ. ಪಿ. ಚೆಣ್ಣಪ್ಪನವರ ಪತ್ರವು ಓದಲಾಯಿತು.

ಮೊದಲಿದ್ದ ತುಂಬಿದ ಗಾಡಿ ಎಂಬದಕ್ಕೆ ಸ್ವಲ್ಪ ತುಂಬಿದ ಗಾಡಿಯೂ ಸಹ ಎಂಬದನ್ನು ಸೇರಿಸಲಾಯಿತು.

"ಮರ, ಬಿದಿರು, ಮತ್ತು ಸೌದೆ ತುಂಬಿಕೊಂಡು ವೀರಾಜಪೇಟೆ ಟೋಲ್‌ಗೇಟಿಗಾಗಿ ವೀರಾಜಪೇಟೆ ಕಡೆ ಹೋಗುವ ಗಾಡಿಗಳಿಗೆ 2 ಆಣೆ ಗೇಟ್ ಫಿ" ಎಂಬ ಶಬ್ದಗಳನ್ನು ತೆಗೆದು ಹಾಕಿಬಿಡಬೇಕೆಂದು ತೀರ್ಮಾನವಾಯಿತು.

10. ವೀರಾಜಪೇಟೆ ಒಂಟಿ ಅಂಗಡಿ ರಸ್ತೆಯು ಕಾಲುವೈಲಿನ ಒಳಗೆ ಇರುವ ಸೇತುವೆಯನ್ನು ದುರಸ್ತು ಮಾಡಲಿಕ್ಕೆ 595 ರುಪಾಯಿ ಕೊಡಬೇಕೆಂದು ಬರೆದ ಎಗ್ಸಿಕ್ಯೂಟಿವ್ ಇಂಜಿನಿಯರವರ ಪತ್ರವು ಓದಲಾಯಿತು.

ಈ ಚಾರ್ಜು ಈಗ ಜಾರಿಯಲ್ಲಿರುವ ವರುಷದ ಬಡ್ಜೆಟ್ಟಿನಿಂದ ಕೊಡಬೇಕೆಂದು ಇಂಜಿನಿಯರವರು ಹೇಳಿದ್ದರಿಂದ ಈ ವಿಷಯವು ಚರ್ಚಿಸಲ್ಪಡಲಿಲ್ಲ.

11. 1925—26ನೇ ವರುಷದ ಡಿಸ್ಟ್ರಿಕ್ಟ್ ಫಂಡಿನ ಆದಾಯ ವೆಚ್ಚದ ಅಂದಾಜು ಪಟ್ಟಿಯು ಓದಲಾಯಿತು.

ಈ ಕೆಳಗಿನ ಬದಲಾವಣೆಗಳಿಂದ ಅದೂ ಮಂಜೂರಾಯಿತು. ಪೂರ್ತಿ ಚರ್ಚೆಯಾದನಂತರ ಹಿಂದಿನ ವರುಷಗಳ ಸಿಲ್ಕು ಬಾಕಿಯಿಂದ 15,000 ರುಪಾಯಿಗಳನ್ನು ವರುಷ ವರುಷ ಒದಗುವಂತೆ ಕೆಳಗಿನ ಪಟ್ಟಿಯಲ್ಲಿ ತೋರಿಸಿರುವ ಹೊಸ ಕೆಲಸಗಳಿಗೆ ಕೊಡುವಂತೆ ತೀರ್ಮಾನವಾಯಿತು.

ಬೋರ್ಡಿನ (729 ರೂ.) ಖರ್ಚಿನಿಂದ ಚೀಫ್ ಕಮಿಷನರವರ ಆಫೀಸಿನಲ್ಲಿ ಒಬ್ಬ ಕ್ಲಾರ್ಕನ್ನು ಇಟ್ಟುಕೊಂಡಿರುವದರ ವಿಷಯ ಚರ್ಚಿಸಿರಾಗ ಆ ಚಾರ್ಜು ಬೋರ್ಡು ಕೊಡದಂತೆ ಮಾಡಬೇಕಾಗಿ ಚೀಫ್ ಕಮಿಷನರವರಿಗೆ ಬರೆಯುವಂತೆ ತೀರ್ಮಾನವಾಯಿತು.

ಪಿ. ಡಬ್ಲ್ಯು ಡಿಯವರ ಕರಡು ಬಡ್ಜೆಟ್ಟಿನಲ್ಲಿ ಈ ಕೆಳಗಿನ ಬದಲಾವಣೆಗಳು ಮಾಡಲ್ಪಟ್ಟವು.

(ಎ) ಅಮ್ಮತ್ತಿಯಲ್ಲಿ ಹೊಸ ಬಾವಿಗೆ ಎಂದು ಇಟ್ಟಿದ್ದ 1,500 ರುಪಾಯಿ ತೆಗೆದು ಹಾಕಲ್ಪಟ್ಟಿತು.

(ಬಿ) ಪೆರಂಬಾಡಿ ಟೋಲ್‌ಗೇಟಿಗೆ ಇಟ್ಟಿದ್ದ 500 ರೂ. ತೆಗೆದು ಹಾಕಲ್ಪಟ್ಟು ಅದನ್ನು ವೀರಾಜಪೇಟೆ ಒಂಟಿ ಅಂಗಡಿ ರಸ್ತೆಗೆ ಹಾಕಲ್ಪಟ್ಟಿತು.

ಹಿಂದಿನ ವರುಷಗಳ ಸಿಲ್ಕು ಬಾಕಿಯಿಂದ [illegible] ರುಪಾಯಿಗಳಿಂದ ಈ ಕೆಳಗಿನ ಹೊಸ (ವರ್ಷ ವರ್ಷ ಬೇಕಾಗದ) ಕೆಲಸಗಳನ್ನು ಮಾಡುವಂತೆ ತೀರ್ಮಾನವಾಯಿತು.

(ಎ) [illegible]

[illegible] ರೂ. [illegible] ಕೊಡಬೇಕಾದ [illegible] 27ನೇ ವರುಷದಲ್ಲಿ ಕೊಡಬೇಕಾದ [illegible] —3000

2. ಉತ್ತರ ಕೊಡಗಿನಲ್ಲಿ [illegible] ರೂ. 2,000

[illegible] ಶ್ರೀಮಂಗಲದಲ್ಲಿ ವೇಕ್ಸಿ[illegible] ಉಳಕೊಳ್ಳುವ [illegible] 2,100

3 [illegible] —[illegible]

[illegible]

[illegible]

[illegible]

[illegible]

ಬಗ್ಗೆ ಬೋರ್ಡಿಗೆ ಪ್ರೈಮರಿ ಶಾಲೆಗಳಿಗಾಗಿ ವರುಷಕ್ಕೆ ಕೊಡುವ 12,540 ರುಪಾಯಿಗಳ ಗ್ರಾಂಟನ್ನು 15,000 ರುಪಾಯಿಗಳಿಗೆ ಏರಿಸುವ ಹಾಗೆ ಚೀಫ್ ಕಮಿಷನರವರನ್ನು ಕೇಳಿಕೊಳ್ಳಬೇಕೆಂದು ತೀರ್ಮಾನವಾಯಿತು.

12. ಕೊಡ್ಲಿಪೇಟೆಯಲ್ಲಿ ಒಂದು ಔಷಧಾಲಯವನ್ನು ತೆರೆಯಬೇಕೆಂದು ಕೊಡ್ಲಿಹೋಬಳಿ ರೈತರು ಬರಕೊಂಡ ಅರ್ಜಿಯನ್ನು ಓದಲಾಯಿತು.

ಔಷಧಾಲಯವನ್ನು ತೆರೆಯಬೇಕೆಂತಾದರೆ ಅದನ್ನು ಶನಿವಾರಸಂತೆಯಲ್ಲಿಯೇ ಇಡಬೇಕೆಂತಲೂ ತೀರ್ಮಾನವಾಯಿತು.

13. ಮಡಿಕೇರಿ ಫ್ರೇಜರ‌್‌ಪೇಟೆ ರಸ್ತೆಯ 11ನೇ ಮೈಲಿನ ಬಳಿ ಇನ್ನೊಂದು ರಸ್ತೆಯು ಒಡೆದು ಮಾ. ರಾ. ರಾ. ಗಳಾದ ಎ. ಮಂದಣ್ಣ ಮತ್ತು ಎಸ್. ಆರ್. ಟೀಯವರ ತೋಟಗಳ ಮಧ್ಯೆ ಹಾದು ಹೋಗುವದನ್ನು ಬೋರ್ಡಿನವರು ಗ್ರಾಮಾಂತರದ ರಸ್ತೆಯಾಗಿ ತೆಗೆದುಕೊಳ್ಳಬೇಕೆಂದು ಅಸಿಸ್ಟೆಂಟ್ ಕಮಿಷನರವರಿಂದ ಶಿಫಾರಸ್ ಮಾಡಲ್ಪಟ್ಟ ಪತ್ರವು ಓದಲಾಯಿತು.

ಬೋರ್ಡು ಈ ರಸ್ತೆಯನ್ನು ಗ್ರಾಮಾಂತರದ ರಸ್ತೆಗಳಲ್ಲಿ ಒಂದನ್ನಾಗಿ ತೆಗೆದುಕೊಳ್ಳುವ ಹಾಗೆ ತೀರ್ಮಾನಿಸಿತು.

14. ಹುನ್ಸೂರು ಪರ್ಕ್ಯೂಲಿನವರ ಮೋಟರ್ ಬಸ್ಸುಗಳು ಗದ್ದಿಗೆಗಾಗಿ ದಾಖಲುವಾಗ ಟೋಲ್ ಕೊಡವೇ ಹಾಗಬೇಕೆಂದು ಅವರ ಮೇನೇಜರವರಿಗೂ ಅಸಿಸ್ಟೆಂಟ್ ಕಮಿಷನರವರಿಗೂ ನಡಿಯುತ್ತಿದ್ದ ಪತ್ರ ವ್ಯವಹಾರವು ಓದಲಾಯಿತು.

ಈ ವಿಷಯ ಟೋಲ್ ತೆಗೆದುಕೊಳ್ಳುವದನ್ನು ಇದ್ದಹಾಗೆ ಮಾಡುವದಕ್ಕೆ ಬೋರ್ಡಿನವರು ಚೀಫ್ ಕಮಿಷನರವರನ್ನು ಕೇಳಿಕೊಳ್ಳುವ ಹಾಗೆ ತೀರ್ಮಾನವಾಯಿತು.

15. ಶನಿವಾರಸಂತೆ ಸಿರಂಗಾಲ ರಸ್ತೆಗೆ ಕಲ್ಲು ಹಾಸುವದಕ್ಕೆ 1,35,000 ರುಪಾಯಿ ಖರ್ಚು ತಗಲುವದೆಂದು ಎಗ್ಜಿಕ್ಯೂಟಿವ್ ಇಂಜಿನಿಯರವರ ಪತ್ರವು ಓದಲಾಯಿತು.

ಇದನ್ನು ಮುಂದಕ್ಕೆ ಹಾಕಲಾಯಿತು.

16. ಪೆರಿಯಂಬಾಡಿ ಟೋಲ್‌ಗೇಟ್ ಕಂಟ್ರಾಕ್ಟರು ವೀರಾಜಪೇಟೆ ತಲಚೇರಿ ರಸ್ತೆಯಲ್ಲಿ 1924ನೇ ಜುಲೈಯಿಂದ 4 ತಿಂಗಳ ವರೆಗೆ ಕಾರುಬಾರ್ ಸೇತುವೆಯು ಕಳೆದ ಮಳೆಯಲ್ಲಿ ಕೊಚ್ಚಿಕೊಂಡು ಹೋದ ಕಾರಣದಿಂದ ವ್ಯಾಪಾರವು ನಿಂತು ಹೋದುದರಿಂದ ತನಗೆ 650 ರುಪಾಯಿ ಮಾಫಿ ಕೊಡಬೇಕೆಂದು ಬರಕೊಂಡ ಅರ್ಜಿಯೂ ಅದರಲ್ಲಿ ದಕ್ಷಿಣ ಕೊಡಗಿನ ಸುಬೇದಾರರ ವರದಿಯೂ ಓದಲಾಯಿತು.

ಕಂಟ್ರಾಕ್ಟರ ಮೇಲೆ ಕರುಣೆಯನ್ನಿಟ್ಟು ಅವನಿಗೆ 650 ರುಪಾಯಿ ಮಾಫಿ ಕೊಡಬಹುದೆಂದು ತೀರ್ಮಾನವಾಯಿತು.

17. ಮಡಿಕೇರಿಯ ವ್ಯಾಪಾರಿಗಳು ಸಂತೆ ದಿವಸ ಹಳೆ ಕೊಪ್ಪಲಿನಲ್ಲಿ ಮಾರು ಕಟ್ಟಿದ 5 ಅಡಿ×1 ಅಡಿ ಮಳಿಗೆಯ ಮಾರ್ಕೆಟ್ ಸುಂಕವನ್ನು ಕಮ್ಮಿ ಮಾಡಬೇಕೆಂದು ಬರಕೊಂಡ ಅರ್ಜಿಯು ಓದಲಾಯಿತು.

ಅರ್ಜಿಯು ತಳ್ಳಲ್ಪಟ್ಟಿತು.

18. ದಕ್ಷಿಣ ಕೊಡಗಿನ ಔಷಧ ಫಂಡಿನ ಗೌರವ ಸೆಕ್ರಟರಿಯು ಪೊನ್ನಂಪೇಟೆಯಲ್ಲಿ ಒಂದು ಔಷಧಾಲಯವನ್ನು ತೆರಯಬೇಕೆಂದು ಬರಕೊಂಡ ಪತ್ರವು ಓದಲಾಯಿತು.

ಕೊಡ್ಲಿಪೇಟೆ, ಶನಿವಾರಸಂತೆ, ಸಂಪಾಜೆ, ಮೂರ್ನಾಡು, ಪೊನ್ನಂಪೇಟೆ ಮತ್ತು ಅರಮನೆ ಬಾಗೆ ಈ ಸ್ಥಳಗಳಿಂದ ಸಿಕ್ಕಿದ ಅರ್ಜಿಗಳ ಪ್ರತಿ ಸಂಪಾದಿಸಿ ಒಂದು ಅರ್ಜಿಗೆ ದಕ್ಷಿಣ ಕನ್ನಡದ ಡಿಸ್ಟ್ರಿಕ್ಟ್ ಬೋರ್ಡಿನ ಆಲೋಚನೆ ಕೇಳಿ ಮೊದಲು ಗಮನ ಕೊಡಲ್ಪಡುವುದೆಂದು ತೀರ್ಮಾನವಾಯಿತು.

ಟಿ. ಜಿ. ಟಾಸ್ಕರ್,
ಪ್ರೆ (ಪ್ರೆಸಿಡೆಂಟ್) ಕೊಡಗು
ಡಿಸ್ಟ್ರಿಕ್ಟ್ ಬೋರ್ಡು.

ಶಿಶು ಪ್ರದರ್ಶನ.

ಅಖಿಲ ಭಾರತ ರೆಡ್‌ಕ್ರಾಸ್ ಸಂಘದ ಸ್ಥಳೀಯ ಶಾಖೆಯವರು ಕಳೆದ ವಾರವನ್ನು ಮಡಿಕೇರಿಯಲ್ಲಿ ಆರೋಗ್ಯವಾರ ನಡಿಸಿದರು. ಶಿಶು ಪ್ರದರ್ಶನಕ್ಕೆ ಸಮ್ಮಂಧಪಟ್ಟ ಕಾರ್ಯಕ್ರಮಪಟ್ಟಿಯೊಡನೆ ಆಮಂತ್ರಣಗಳನ್ನು ಅನೇಕರಿಗೆ ಗೌ. ಸೆಕ್ರಟರಿಯವರು ಮುಂಚಿತವಾಗಿ ಕಳುಹಿಸಿದ್ದರು. ಕಾರ್ಯಕ್ರಮ ಪಟ್ಟಿಯಲ್ಲಿ ನಮೂದಿಸಿದ್ದಂತೆ ಕಾರ್ಯವನ್ನು ತಾ. 20ರಲ್ಲಿ ಪ್ರಾರಂಭಿಸಿದರು. ಆ ದಿನ ಬೆಳಿಗ್ಗೆ ಸ್ಕೂಲು ಮಕ್ಕಳ ಮೆರವಣಿಗೆಯೊಂದು ಪಟ್ಟಣದ ಬೀದಿಗಳಲ್ಲಿ ನಡೆಯಿತು. ಸಾಯಂಕಾಲ 4 ಗಂಟೆಗೆ ಮಾರ್ಕೆಟ್ಟಿನ ಬಳಿ ಮಡಿಕೇರಿ ಮುನ್ಸಿಪಾಲಿಟಿ ಅಧ್ಯಕ್ಷರಾದ ರಾ. ಬಾ. ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ರಿಟಯರ್ಡ್ ಸಬ್ ಅ. ಸರ್ಜನರಾದ ಮೆ. ಕೊಂಗೆಟ್ಟಿರ ಮುಂದಣ್ಣನವರು ಮಲೇರಿಯ ಜ್ವರದ ವಿಷಯ ಉಪನ್ಯಾಸ ಕೊಟ್ಟರು. ಈ ಉಪನ್ಯಾಸವು ಒಂದು ಸೂಚನೆ ಗ್ರಾಮಗಳಿಂದ ಬಂದ ಜನರ ಪ್ರಯೋಜನಕ್ಕಾಗಿ ನಿರ್ಧರಿಸಿದ್ದಾಗಿತ್ತು. ಸಾಯಂಕಾಲ 6 ಗಂಟೆಗೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ರಾ. ಬಾ. ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಸಬ್ ಅ. ಸರ್ಜನ್ ಮೆ. ಅಜ್ಜಮಾಡ ಕಾರ್ಯಪ್ಪನವರು ಪುನಃ ಮಲೇರಿಯ ಜ್ವರದ ವಿಷಯ ಭಾಷಣಮಾಡಿದರು. ನಂತರ ಬೆಂಗಳೂರು ಆರೋಗ್ಯ ಇಲಾಖೆಯ ಮೆಡಿಕಲ್ ಆಫೀಸರಾದ ಮೆ. ಎಂ. ಎ. ರಹಮಾನ್‌ರವರು ಮ್ಯಾಜಿಕ್ ದೀಪದ ಮೂಲಕ ಮಲೇರಿಯ ಕಾಯಿಲೆಕ್ಕೆ ಸಮ್ಮಂಧಪಟ್ಟ ಚಿತ್ರಗಳನ್ನು ತೋರಿಸಿ ಅವುಗಳನ್ನು ವಿವರಿಸಿ ಹೇಳಿದರು.

ತಾ. 21ರ ಬೆಳಿಗ್ಗೆ ಅಲಂಕರಿಸಲ್ಪಟ್ಟ ಮೋಟಾರ್ ಬಸ್ಸಿನ ಮೆರವಣಿಗೆಯಾಯಿತು. ಸಾಯಂಕಾಲ 6 ಗಂಟೆಗೆ ಪ್ರಿಜರ್ ಅಸಿಸ್ಟೆಂಟ್ ಕಮಿಷನರ್ ಮೆ. ಕೊಂಗಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಸ್ಕೂಲುಗಳ ಸಬ್ ಅ. ಇನ್ಸ್‌ಪೆಕ್ಟರ್ ಮೆ. ಸಿ. ಸಿ. ಉತ್ತಯ್ಯನವರು ಶಿಶುಗಳ ಸಂರಕ್ಷಣೆಯ ವಿಷಯ ಉಪನ್ಯಾಸ ಕೊಟ್ಟರು. ಅನಂತರ ಮ್ಯಾಜಿಕ್ ದೀಪದ ಮೂಲಕ ಚಿತ್ರಗಳನ್ನು ತೋರಿಸಿದರು.

ತಾ. 22ರಲ್ಲು ಬೆಳಿಗ್ಗೆ ಗಣಪತಿಬೀದಿಯಲ್ಲಿರುವ "ಬೇಬಿ ವೆಲ್‌ಫೇರ್ ಸೆಂಟರ್"ನಲ್ಲಿ ಶಿಶುಗಳಿಗೆ ಆಹಾರವನ್ನು ತಯಾರಿಸುವ ಕ್ರಮವು ತೋರಿಸಲಾಯಿತು. ಸಾಯಂಕಾಲ 6 ಗಂಟೆಗೆ ರಿಟಯರ್ಡ್ ಪೋಲೀಸ್ ಇನ್ಸ್‌ಪೆಕ್ಟರ್ ಮತ್ತು ಬೆಂಚ್ ಮೇಜಿಸ್ಟ್ರೇಟ್ ಮೆ. ಕೋದಂಡ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಸ. ಅ. ಸರ್ಜನ್ ಮೆ. ಕೋದಂಡ ಕಾರ್ಯಪ್ಪನವರು ಶಿಶು ಪೋಷಣೆಯ ವಿಷಯ ಉಪನ್ಯಾಸಮಾಡಿದರು. ನಂತರ ಎಂದಿನಂತೆ ಮ್ಯಾಜಿಕ್ ದೀಪದಲ್ಲಿ ಚಿತ್ರಗಳನ್ನು ತೋರಿಸಲಾಯಿತು.

ತಾ. 23ರಲ್ಲು ಬೆಳಿಗ್ಗೆ ಆನೆಯಿಂದ ಕೂಡಿದ ಮೆರವಣಿಗೆಯು ನಡೆಯಿತು. ಸಾಯಂಕಾಲ 6 ಗಂಟೆಗೆ ಮೆ. ಸಿ. ಎನ್. ವೆಂಕಟಯ್ಯ ಎಂ. ಎಲ್. ಸಿ. ಯವರು ಮೆ. ಪಿ. ಐ. ಚೆಟ್ಟಿಯಾರ್ ಎಂ. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಸ್ಯಾನಿಟೇಶನ್ (ಆರೋಗ್ಯದ) ವಿಷಯ ಭಾಷಣ ಮಾಡಿದರು. ಆದಿನವೂ ಮ್ಯಾಜಿಕ್ ದೀಪವನ್ನು ತೋರಿಸಲಾಯಿತು. ಇಂಥಾ ಉಪನ್ಯಾಸಗಳಿಗೆ ಮೊದಮೊದಲು ಜನರು ಬರುವದು ಬಹಳ ಕಡಮೆಯಾಗಿದ್ದರೂ ಕಡೇ ಕಡೇಗೆ ಅನೇಕರು ಸೇರುತ್ತಿದ್ದರು. ಮ್ಯಾಜಿಕ್‌ದೀಪದ ಚಿತ್ರಗಳು ಹಲವರನ್ನು ಅಲ್ಲಿಗೆ ಆಕರ್ಷಿಸುತ್ತಿತ್ತು. ಈ ಪದಾರ್ಥದಿಂದ ನಮ್ಮ ದೇಶದ ಹೆಚ್ಚಿನ ಜನಸಂಖ್ಯೆಯನ್ನು ಪೀಡಿಸುತ್ತಿರುವ ಮಲೇರಿಯ, ಕ್ಷಯ ಮೊದಲಾದ ಕಾಯಿಲೆಗಳ ಅನಾಹುತವು ಜನರ ಮನಸಿಗೆ ಮುಂಡಟ್ಟಾಗುವಂತೆ ಮಾಡಿದರು. ತಿಳುವಳಿಕೆ ಕಮ್ಮಿಯಾದವರಿಗೂ ಕೂಡ ಮ್ಯಾಜಿಕ್‌ದೀಪವು ಯಾವ ಸಂಗತಿಯನ್ನಾಗಲಿ ವಿವರವಾಗಿ ತಿಳಿಸಲು ಉತ್ತಮವಾದ ಉಪಾಯವಾಗಿದೆ.

ತಾ. 24ರ ಸಾಯಂಕಾಲ 3 ಗಂಟೆಗೆ ಕೊಡಗು ಕಮಿಷನರೂ ಮತ್ತು ಈ ಸಂಘದ ಅಧ್ಯಕ್ಷರೂ ಆದ ಮೆ. ಟಿ. ಜಿ. ಟಾಸ್ಕರ‌್‌ರವರು ಸಂಘದ ಉದ್ದೇಶ ಮತ್ತು ಕೆಲಸದ ವಿಷಯವಾಗಿ ಭಾಷಣಮಾಡಿದರು. ಮೂರುವರೆ ಗಂಟೆಗೆ ಮಿಸೆಸ್ ಟಾಸ್ಕರ‌್‌ರವರ ಶಿಶು ಪ್ರದರ್ಶನವನ್ನು ತೆರೆದರು. ನಾಲ್ಕುವರೆ ಗಂಟೆಗೆ ಮೊದಲೇ ನೇಮಿಸಲ್ಪಟ್ಟಿದ್ದ 8 ಸ್ತ್ರೀ ಜಡ್ಜರು ಉತ್ತಮವಾದ ಶಿಶುಗಳನ್ನು ವಿಮರ್ಶಿಸಿ ಕಂಡು ಹಿಡಿದರು. ಪ್ರೈಮರಿ ಹೆಡ್ಮಾಸ್ಟರಾದ ಮೆ. ಪಿ. ಮಂಗೇಶರಾಯರು ಕನ್ನಡದಲ್ಲಿಯೂ, ಮೆ. ಎಂ. ಎಂ. ಸಿದ್ದೀಕರು ಹಿಂದುಸ್ಥಾನಿಯಲ್ಲಿಯೂ ಮೆ. ಪಿ. ಬಿ. ಪೇಡಪ್ಪ, ಎಂ. ಎಲ್. ಸಿ. ಯವರು ಕೊಡವ ಭಾಷೆಯಲ್ಲಿಯೂ ಈ ಸಂಘದ ಉದ್ದೇಶದ ಮತ್ತು ಪ್ರಯೋಜನಗಳ ವಿಷಯ ಮಾತುಗಳನ್ನಾಡಿದರು. ಐದುವರೆ ಗಂಟೆಗೆ ಉತ್ತಮಶಿಶುಗಳಿಗೆ ಬಹುಮಾನಗಳೂ 'ಫಸ್ಟ್ ಏಯಿಡ್'ನಲ್ಲಿ ಪಾಸಾದವರಿಗೆ ಸರ್ಟಿಫಿಕೇಟುಗಳೂ 'ಮಿಸೆಸ್' ಕೆ. ಸಿ. ತಿಮ್ಮಯ್ಯನವರಿಂದ ಕೊಡಲಾದವು. ಆ ದಿನ ಅಲ್ಲಿ ಶಿಶು ಸಂರಕ್ಷಣೆ, ಬಾಣಂತಿಯರ ಪೋಷಣೆ, ಮಲೇರಿಯ, ಕ್ಷಯರೋಗ ಮತ್ತು ಕುಡುಕತನಗಳ ಹಾವಳಿ ವಾಸಿಸತಕ್ಕ ಮನೆ ಮೊದಲಾದವುಗಳ ವಿಷಯದಲ್ಲಿ ಬುದ್ಧಿವಾದಗಳನ್ನೊಳಕೊಂಡ ಚಿತ್ರಗಳನೇಕವು ಪ್ರದರ್ಶಿಸಲ್ಪಟ್ಟಿದ್ದವು. ಆದರೆ ಅವುಗಳಲ್ಲಿ ಹೆಚ್ಚಿನವೆಲ್ಲವೂ ಇಂಗ್ಲೀಷಿನಲ್ಲೇ ಬರೆಯಲ್ಪಟ್ಟದುದರಿಂದ ಅಲ್ಲಿ ನೆರೆದಿದ್ದ ಹೆಚ್ಚಿನ ಜನರಿಗೆ ಅವುಗಳನ್ನು ಓದಿ ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ. ಅಂಥಾವುಗಳೆಲ್ಲವೂ ಕನ್ನಡದಲ್ಲಿ ಮುದ್ರಿಸಲ್ಪಟ್ಟರೆ ಸಾಮಾನ್ಯ ಜನರಿಗೆ ಅವು ಪ್ರಯೋಜನಕರವಾಗುವದು. ಕಡೇ ದಿನ ಅಲ್ಲಿ ನೆರೆದಿದ್ದ ಜನರ ಸಮೂಹವನ್ನು ನೋಡುವಾಗ್ಯೆ ಇಂಥ ಪ್ರದರ್ಶನಗಳು ಒಡನೆ ಅಲ್ಲದಿದ್ದರೂ ಕ್ರಮೇಣ ಜನ ಪ್ರಿಯವಾಗುವದೆಂದು ತಿಳಿಯಬರುವದು. ಇದಲ್ಲದೆ ತಾ. 26ರಲ್ಲು ದೇವಸ್ಥಾನದ ಸಾರ್ಕವರ್ನ್ ಹಾಲಿನಲ್ಲು ಮಹಿಳೆಯರಿಗಾಗಿ ಮ್ಯಾಜಿಕ್ ದೀಪದ ಚಿತ್ರಗಳನ್ನು ತೋರಿಸಿದರು. ಹಾಗೆಯೇ ತಾ. 27ರ ಸಾಯಂಕಾಲ ಘೋಷಾ ಸ್ತ್ರೀಯರಿಗಾಗಿ ಹಿಂದುಸ್ಥಾನಿ ಶಾಲೆಯಲ್ಲಿ ಮ್ಯಾಜಿಕ್ ದೀಪದಲ್ಲಿ ಚಿತ್ರಗಳನ್ನು ತೋರಿಸಿದರು. ಅನೇಕಮಂದಿ ಘೋಷಾ ಸ್ತ್ರೀಯರು ಅಲ್ಲಿ ನೆರೆದದ್ದು ಸಂತೋಷಕರವಾದ ಸಂಗತಿಯಾಗಿದೆ.

ಈಸ್ಟ್ ಆಫ್ರಿಕದ ಮೂರು ವರುಷದ ಅಭಿಪ್ರಾಯ.

(ಕೊಡಗಿನ ಒಬ್ಬ ಮಹಿಳೆಯಿಂದ.)

ಕೊಡಗು ಶ್ರೀಕಾವೇರಿ ಸ್ತ್ರೀಸಮಾಜದ ನಾನು 1920ರಲ್ಲು ಜನಿಸಿದ್ದೆನು. ವೀರಾಜಪೇಟೆ ಗವರ್ನಮೆಂಟು ಗರ್ಲ್ಸ್ ಸ್ಕೂಲಿನಲ್ಲಿ ಎಲಿಮೆಂಟರಿ ವಿದ್ಯೆ ಪೂರೈಸಿದ ಕೂಡಲೆ ಕಾರಣಾಂತರದಿಂದ ಹೆಚ್ಚು ಓದಲಿಕ್ಕೆ ಅನುಕೂಲಿಸಲಿಲ್ಲ. ಇದಕ್ಕಾಗಿ ನಾನು ಈಗ ತುಂಬಾ ವ್ಯಸನಪಡುತ್ತೇನೆ. ಅಲ್ಲದೆ ನನ್ನ ಹಾಗೆ ನನ್ನ ಕೊಡಗು ಸಹೋದರಿಯರು ಮುಂದಕ್ಕೆ ಹೆಚ್ಚಾದ ವಿದ್ಯಾಭಿವೃದ್ಧಿ ಹೊಂದದೆ ಇರಬಾರದಾಗಿ ನಂಬುತ್ತೇನೆ. ದೈವನಿಯಮಾನುಸಾರವಾಗಿ 1921ನೇ ಡಿಸಂಬರು ತಿಂಗಳು 3ನೆ ತಾರೀಕಿನಲ್ಲಿ ನನ್ನ ಪ್ರಿಯ ತಂದೆ ತಾಯಿಗಳು ನನ್ನ ಮದುವೆ ಕಾರ್ಯವನ್ನು ನೆರವೇರಿಸಿಟ್ಟರು. ನನ್ನನ್ನು ಮದುವೆಯಾಗುವ ನನ್ನ ಪ್ರಿಯ ಪತಿಗಳಾದರೋ ಈಸ್ಟ್ ಆಫ್ರಿಕದ ಟಾಂಗನಿಕ ಎಂಬ ರಾಜ್ಯದ ಸಮುದ್ರ ಒಂದರ ಬಂದರು ಎಂಬ ಪಟ್ಟಣದಲ್ಲಿಯ ಬ್ರಿಟಿಷ್ ಅಡ್ಮಿನಿಸ್ಟ್ರೇಟಿವ್ ಇಲಾಖೆಯಲ್ಲಿ ಉದ್ಯೋಗ ಮಾಡುವವರಾಗಿದ್ದರು. ಮದುವೆ ಕಾರ್ಯ ತೀರಿದ ಮೂರು ವಾರದೊಳಗಾಗಿ ಅವರ ರಜೆ ತೀರಿದ ಕೂಡಲೆ ನನ್ನನ್ನು ನನ್ನ ಸಂಗಡಲೇ ಕರೆದುಕೊಂಡು ಹೋಗುವ ಹಾಗೆ ನಿಶ್ಚಯ ಮಾಡಿಕೊಂಡರು. ಯಾವ ವಿಧದಲ್ಲಾದರೂ ವಿಧಿಯನ್ನು ಮೀರಲಿಕ್ಕಾಗಲಿಕ್ಕಿಲ್ಲವೇನೋ ನಿಜವೆಂದು ನಾನು ಎಂದಿಗೂ ನನ್ನ ದೇಶವನ್ನು ಬಿಟ್ಟು ಹೊರಗೆ ಹೋಗದವಳು ಇದಕ್ಕಾಗಿ ನಾನು ಅಂತರಂಗ ನನ್ನ ಮನಸ್ಸಿನಲ್ಲಿ ಹೆಚ್ಚಾಗಿ ಕಳವಳ ಪಡಬೇಕಾದದ್ದೇನೋ ನಿಜವಾದರೂ ನನ್ನ ಪ್ರಿಯ ತಂದೆ ತಾಯಿಗಳ ಧೈರ್ಯವಾದ ಬುದ್ಧಿ ಮಾತುಗಳಿಂದ ನಾನು ನನ್ನ ಧೈರ್ಯ ತಾಳಿಕೊಂಡು ಆ ಸಮಯದ ಹುತ್ತಿ ಹಬ್ಬ ಕಳದ ಕೂಡಲೆ ನಮ್ಮ ಇಷ್ಟ ದೇವರಿಗೆ ಪೂಜೆ ಪುನಸ್ಕಾರವೂ ಮಾಡಿ ನಮ್ಮ ತಂದೆ ತಾಯಿಗಳ ಸಂಬಂಧಸ್ಥರುಗಳ ಆಶೀರ್ವಾದಗಳನ್ನು ಪಡೆದುಕೊಂಡು ಅದೇ ಡಿಸಂಬರು ತಿಂಗಳು 21ನೆ ತಾರೀಕಿನಲ್ಲು ನಮ್ಮ ಪ್ರಿಯರ ಮನೆಯನ್ನು ಬಿಟ್ಟು ಪಯಣ ಹೊರಟು ಮಧ್ಯೆ ಬೆಂಗಳೂರು, ಪೂನಾದಲ್ಲಿ ಒಂದೊಂದು ರಾತ್ರೆ ವಿಶ್ರಾಂತಿ ತೆಗೆದುಕೊಂಡು ತಾರೀಕು 27ರಲ್ಲು ಬೊಂಬಾಯಿ ಪಟ್ಟಣವನ್ನು ತಲುಪಿ ಒಂದೆರಡು ದಿವಸ ಅಲ್ಲಿಯಣ ನಮ್ಮ ಕೊಡಗು ಸಹೋದರರೊಡನೆ ಸಂತೋಷದಿಂದ ವಿಶ್ರಾಂತಿ ತೆಗೆದುಕೊಳ್ಳುವಷ್ಟರಲ್ಲಿ ಬೊಂಬಾಯಿಯಿಂದ ಈಸ್ಟ್ ಆಫ್ರಿಕದ ಬ್ರಿಟಿಷ್ ಆಡಳಿತೆಯ ರಾಜಧಾನಿ ಮತ್ತು ರೇವು ಪಟ್ಟಣವಾದ ದಾರಸ್ಸಲಾಂ ಎಂಬಲ್ಲಿಗೆ ಹೋಗಲಿಕ್ಕಿರುವ ಗೋಲಾ ಎಂಬ ಸ್ಟೀಮರು ತಯಾರಾಗಿತ್ತು. ಅದ್ದರಿಂದ ನಾವು ಸಹ ಅದೇ ಸ್ಟೀಮರಿನಲ್ಲು ಡಿಸಂಬರು ತಾರೀಕು 29ರಲ್ಲು ಬೊಂಬಾಯಿ ಪಟ್ಟಣವನ್ನು ಬಿಟ್ಟೆವು. ಅಲ್ಲಿಂದ ಹಲವು ದಿನಗಳ ವರೆಗೆ ನಮಗೆ ಯಾವ ಕಡೆ ನೋಡಿದರೂ ಹಗಲು ಹೊತ್ತಿನಲ್ಲು ಮೇಲಕ್ಕೆ ವಿಸ್ತಾರವಾದ ನೀಲವರ್ಣದ ಆಕಾಶವೂ ಸೂರ್ಯನ ಕಿರಣಗಳೂ ಸುತ್ತಲೂ ಮಗೆಯ ಹಾಗೆ ಕಾಣುವ ಸಮುದ್ರದ ನೀರಲ್ಲದೆ ಬೇರೆ ಯಾವದೂ ಕಾಣದೆ ಎಂದೂ ಸಮುದ್ರ ಪಯಣಮಾಡದ ನನ್ನಂತವಳ ಸ್ಥಿತಿಯು ಯಾವ ರೀತಿಯಲ್ಲಿ ಇದ್ದಿರಬಹುದೋ ವಾಚಕ ಮಹಿಳೆಯರು ಮತ್ತು ಮಹನೀಯರೇ ಊಹಿಸಿಕೊಳ್ಳಲಿ. ಸಮುದ್ರ ಪ್ರಯಾಣವು ಸುರುಮಾಡಿದ 12 ದಿವಸಗಳ ಮೇಲೆ ನನ್ನ ಮನಸ್ಸಿನ ಬೇಸರಿಕೆಯೂ ಸ್ವಲ್ಪಮಟ್ಟಿಗೆ ತಲೆ ತಿರುಗುವಿಕೆಯೂ ಮಿತ್ರ ವಾಂತಿಯಾಗುವಂತೆಯೂ ಆಗಿ ಶರೀರಕ್ಕೆ ಸ್ವಾಸ್ಥ್ಯವಿಲ್ಲದೆ ಬಹಳ ಬೇಸರಪಡಬೇಕಾಯಿತು. ಆದರೆ ನನ್ನ ಪ್ರೀಯರವರ ಉಪಚಾರದಿಂದಲೂ ಆಗಾಗ್ಯೆ ಧೈರ್ಯ ಕೊಡುವಂತ ಹೇಳುವ ನಯ ಮಾತುಗಳಿಂದಲೂ ನಾನು ನನ್ನ ಕೂಡಲೆ ಬೇಸರಿಕೆಯನ್ನು ಬಿಟ್ಟು ಧೈರ್ಯ ತಾಳಿಕೊಳ್ಳುತ್ತಿದ್ದೆನು. ಇದು ಸಾಧಾರಣವಾಗಿ ಎಂದೂ ಸಮುದ್ರ ಪಯಣದ ಅನುಭವ ಇಲ್ಲದ ಪ್ರಯಾಣಿಕರಿಗೆ ಹೇಳ್ಕಂಡಂತೆ (Sea sickness) ಎಂಬ ಶರೀರ ಅನಾರೋಗ್ಯ ಉಂಟಾಗುವುದು ವಾಡಿಕೆಯಾಗಿರುವುದು. ಇದಕ್ಕಾಗಿ ನಾವು ಹೆಚ್ಚಿನ ಭಯಪಡಲೂ ಕಾರಣವಿರಲಿಲ್ಲ. ಹೀಗಾಗಿ 7ನೆ ದಿನಸ ನಮ್ಮ ಸ್ಟೀಮರು "ಜಾನ್ಜಿಬಾರ್" ಎಂಬ ಒಂದು ಸಣ್ಣದಾದ ದ್ವೀಪವನ್ನು ಸಮೀಪಿಸಿದಾಗ್ಯೆ ನಮಗೆಲ್ಲಾ ಸ್ವಲ್ಪಮಟ್ಟಿಗೆ ಉಲ್ಲಾಸವುಂಟಾಯಿತು. ಅಲ್ಲಿಂದ ಸ್ವಲ್ಪ ಸಮಯದಲ್ಲೇ ಹೊರಟು ಅದೇ ದಿನ ಮೇಲೆ ಹೇಳಿದ ದಾರಸ್ಸಲಾಂ ಎಂಬ ಮುಖ್ಯ ಪಟ್ಟಣವನ್ನು ಸೇರಿದೆವು. ಅಲ್ಲಿ ನನ ಇಬ್ಬರು ಕೊಡಗು ಯುವಕ ಸಹೋದರರನ್ನು ಕಾಣಲಿಕ್ಕೆ ಸಿಕ್ಕಿ ನಮಗೆ ಮತ್ತಷ್ಟು ಸಂತೋಷವಾಯಿತು, ಅಲ್ಲದೆ ಅವರು ನನ ನಮಗೆ ತಕ್ಕ ಉಪಚಾರಗಳನ್ನು ಮಾಡಿ ಸಂತೋಷಪಡಿಸಿದರು. ಅಲ್ಲಿಯೇ ಎರಡು ದಿನ ವಿಶ್ರಾಂತಿ ತೆಗೆದುಕೊಂಡು ನಮ್ಮ ಪ್ರೀಯರವರು ಉದ್ಯೋಗ ಮಾಡುವ 'ಲಿಂಡಿ' ಎಂಬ ಪಟ್ಟಣಕ್ಕೆ ರೈಲುದಾರಿ ಇಲ್ಲದ ಕಾರಣ ಸಮುದ್ರದ ಮೇಲೆ ಸ್ಟೀಮರಿನಲ್ಲು ಹೊರಟು ಅಲ್ಲಿಗೆ ತಲುಪಬೇಕಾದರೆ ಮೂರು ದಿನ ಹಿಡಿಯಿತು. ಹೇಗಾದರೂ ಬೊಂಬಾಯಿಯಿಂದ ಹೊರಟು ಹದಿಮೂರನೆ ದಿನ ನಾವು ಹೋಗಬೇಕಾದ ಲಿಂಡೀ ಪಟ್ಟಣವನ್ನು ಕ್ಷೇಮವಾಗಿ ತಲುಪಿದೆವು. ಅಲ್ಲಿಗೆ ತಲುಪಿ ಸುಮಾರು ಆರು ತಿಂಗಳ ವರೆಗೆ ನನ್ನ ಪ್ರಿಯರ ಸಂಗಡ ನನ್ನ ಮಾತಾಡಿರಬಹುದಲ್ಲದೆ ಬೇರೆ ಯಾರಲ್ಲಿಯೂ ನಾನು ಬಾಯಿ ತೆರೆದಿರಲಿಕ್ಕಿಲ್ಲವೆಂದು ಉಚಿತ ಹೇಳುತ್ತೇನೆ. ಯಾವಾಗಲೂ ಎಷ್ಟೋ ಉದ್ಯೋಗ ಮಾಡುವವರು ಮತ್ತು ವ್ಯಾಪಾರ ಮೊದಲಾಗಿ ಮಾಡಿಕೊಂಡು ಜೀವನ ಮಾಡುವ ಐಶ್ವರ್ಯವಂತರು ಹಿಂದೂ ದೇಶದ ಹೆಂಗಸರು ನನ್ನಲ್ಲಿಗೆ ಬಂದು ಹೋಗುತ್ತಿದ್ದರೂ ನಾವು ಪರಸ್ಪರ ಮಾತಾಡಲು ಅವರಿಗೂ ನನಗೂ ಆಗುತ್ತಿರಲಿಲ್ಲ. ಕೆಲವು ವೇಳೆ ನಾವು ಬಾಯಿಬಾರದ ಮೂಕರ ಹಾಗೆ ಆಂಗಿಕ ಚೇಷ್ಟೆ, ನಗಾಡುವದು ಮುಂತಾದ್ದರಲ್ಲಿ ಕಾಲ ಕಳೆಯಬೇಕಾಗಿ ಅದೊಂದು

(ಮುಂದುವರಿಯುವುದು).

FOR SALE.

A beautiful folding Camera complete with stand And accessores costing about Rs, 125, is open for offers.

Apply to—

'Photo'
C/o 'KODAGU'
MERCARA.

2—1

ವರ್ತಮಾನ ಸಂಗ್ರಹ.

ಒಳದೇಶ.

ಮೃತಪಟ್ಟ ಮಿ. ಕೆದಂಬಾಡಿ ಸುಬ್ಬಯ್ಯನವರ ಬದಲಿಗೆ ಹೊಲೆಯರು, ಕುರುಬರು, ಮಾದಿಗರು ಮತ್ತು ಎರವರ ಪರವಾಗಿ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿಗೆ ಮೆಂಬರಾಗಿ ಮಿ. ಮಹಮ್ಮದ್ ಧನೂಲ್‌ಖಾನ್ ಸಾಹೇಬರನ್ನು ಚೀಫ್ ಕಮಿಷನರ್ ಸಾಹೇಬರವರು ನೇಮಿಸಿರುವರು.

ತಾರೀಕು 20ನೆ ಫೆಬ್ರವರಿಯಲ್ಲಿ ಮಡಿಕೇರಿಯಲ್ಲಿ ನಡೆದ ಬರುವ ವರುಷದ ಸಾರಾಯಿ ಕಂಟ್ರಾಕ್ಟ್ ಹರಾಜಿನಲ್ಲಿ ಗುತ್ತಿಗೆಗಳು 80,340 ರೂಪಾಯಿಗಳಿಗೆ ಹೋದವು. ಕಳೆದ ವರುಷ ಇದರಿಂದ 91,560 ರೂಪಾಯಿಗಳ ಉತ್ಪತ್ತಿಯಾಗಿತ್ತು. ಈ ವರುಷ 11,220 ರೂಪಾಯಿಗಳು ಕಡಿಮೆ. 1924—25ರ ಸೇಂದಿ ಗುತ್ತಿಗೆಯ ಉತ್ಪತ್ತಿ 61,575; 1925—26ರ ಉತ್ಪತ್ತಿ 58,575 ರೂಪಾಯಿಗಳು. ಈ ಸಾರಿ ಸೇಂದಿಯಲ್ಲಿಯೂ 3,000 ರೂಪಾಯಿ ಕಡಿಮೆ. ಒಟ್ಟಿನಲ್ಲಿ ಬರುವ ವರುಷದ ಬಜೆಟ್ಟಿಗೆ ಎಕ್ಸೈಸ್ ಉತ್ಪತ್ತಿಯು 14,220 ರೂಪಾಯಿಯು ಕಡಿಮೆಯಾಗಿರುವುದು.

ಈ ವರುಷ ಮಡಿಕೇರಿ ಹೈ ಸ್ಕೂಲಿನಿಂದ 53 ಹುಡುಗರ ಪೈಕಿ 41 ಹುಡುಗರು ಸ್ಕೂಲ್ ಫೈನಲ್ ಪರೀಕ್ಷೆಗೆ ಅರಿಸಲ್ಪಟ್ಟಿರುವರು.

ದೇಶದಲ್ಲಿ ದನಗಳ ಅಭಿವೃದ್ಧಿ ವಿಷಯ ವಿಚಾರಿಸಿ ತಕ್ಕ ಏರ್ಪಾಡು ಮಾಡಲು ಕೌನ್ಸಿಲಿನಲ್ಲಿ ಮಾಡಿದ ಕಮಿಟಿಗೆ ಮಾ. ರಾ. ಗಳಾದ ಸಿದ್ದಾಪುರದ ಸುಬ್ಬಯ್ಯನವರು, ಪಾಲೂರಂಗಡ ಕುಶಾಲಪ್ಪನವರು ಮತ್ತು ಅಪ್ಪಾರಂಡ ಬಂಗಪ್ಪನವರೂ ನೇಮಿಸಲ್ಪಟ್ಟಿರುವರಾಗಿ ತಿಳಿಯುತ್ತೇವೆ.

ಮದರಾಸಿನಲ್ಲಿ ಲಾಯರ್ ಕೆಲಸಮಾಡುತ್ತಿರುವ ಮಂಡೇಪಂಡ ಗಣಪತಿ, ಬಿ. ಎ., ಬಾರಿಸ್ಟರವರನ್ನು ಒಂದು ಸ್ಪೆಷಲ್ ಮೊಕದ್ದಮೆಯಲ್ಲಿ ಒಬ್ಬ ಮಹಮ್ಮದೀಯನನ್ನು ಬಚಾವುಮಾಡಲು ಅಲ್ಲಿಯ ದೇಶಕ್ಕೆ ಕರೆದಿದ್ದರಿಂದ, ಅವರು ಕಳೆದ ತಾರೀಕು 27ರಲ್ಲಿ ಮದರಾಸಿನಿಂದ ಹೊರಟವರು ಬೊಂಬಾಯಿ, ಎಡನಿಗಾಗಿ ಅಲ್ಲಿಯವರೆಗೆ ಹೋಗಿ ಒಂದು ತಿಂಗಳಲ್ಲಿ ವಾಪಾಸು ಬರ ಬಹುದೆಂದೂ ತಿಳಿಯುತ್ತೇವೆ.

ಮಡಿಕೇರಿಸಮೀಪದ ಗಾಳಿಬೀಡು ಗ್ರಾಮದಲ್ಲಿರುವ ಮಹಿಷಾಮರ್ಧಿನಿ ದೇವರ ಹಬ್ಬವು ತಾರೀಕು 13ರಲ್ಲಿ ಪ್ರಾರಂಭವಾಗಿ ತಾರೀಕು 15ರಲ್ಲಿ ದೊಡ್ಡ ಉತ್ಸವವು ನಡೆಯುವುದು.

ಡಿ. ಓ. ಪಬ್ಲಿಕ್ ಇನ್ಸ್ಟಿಟ್ಯೂಷನಿನಲ್ಲಿ ಸ್ಪೆಷಲ್ ಸೆಕ್ಷನ್ ಆಫೀಸರಾಗಿ ನೇಮಿಸಲ್ಪಟ್ಟಿದ್ದ ಮಿ. ಪಟ್ಟಮಾಡ ಬಂಗಪ್ಪ, ಬಿ. ಎ. ಯವರು ಇಲ್ಲಿ ತಮ್ಮ ಉದ್ಯೋಗಕ್ಕೆ ರಾಜಿನಾಮೆ ಕೊಟ್ಟು ನೀಲಗಿರಿಯಲ್ಲಿ ಉದ್ಯೋಗಕ್ಕೆ ಹೋಗಿರುವರು.

ಮಡಿಕೇರಿ ಹೈಸ್ಕೂಲಿನ ವಾರ್ಷಿಕೋತ್ಸವವನ್ನು ಇದೇ ತಾರೀಕು 20ರಲ್ಲು ನಡಿಸುವರೆಂದು ವರ್ತಮಾನ.

ರೆಡ್‌ಕ್ರಾಸ್ ಸಂಘದ ಶಾಖೆಯವರು ಮಹಿಳೆಯರಿಗೆ ತಾರೀಕು 26ರ ರಾತ್ರಿ ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲಿಯೂ, ಮರುದಿನ ರಾತ್ರಿ ಫೀಮೇಲ್ ಸ್ಕೂಲಿನಲ್ಲಿಯೂ ಸ್ತ್ರೀಯರಿಗೆ ಹಿಂದುಸ್ಥಾನಿ ಶಾಲೆಯಲ್ಲಿಯೂ ಶಿಶುಗಳ ಪೋಷಣೆ ಮತ್ತು ಬಾಣಂತಿಯರ ಉಪಚಾರದ ವಿಷಯ ಮ್ಯಾಜಿಕ್ ದೀಪದ ಮೂಲಕ ಚಿತ್ರಗಳನ್ನು ತೋರಿಸಿದರು.

ಮಾರ್ಚಿ ತಾರೀಕು 20ನೇ ಶುಕ್ರವಾರ ಮಡಿಕೇರಿ ಕಾರ್ಪೊರೇಶನ್ ಗಾರ್ಡನಿನಲ್ಲಿ ನಾಯಿ, ಕೋಳಿ, ಕಾಯಿಪಲ್ಯ, ಹೂವು ಮತ್ತು ಹಣ್ಣು ಹಂಪಲುಗಳ ಪ್ರದರ್ಶನವು ನಡಿಸಲ್ಪಡುತ್ತೆ. ಉತ್ತಮ ತರದ ವಸ್ತುಗಳಿಗೆ ಇನಾಮುಗಳು ಕೊಡಲ್ಪಡುವವು.

ಸುಬ್ರಮಣ್ಯದ ಸ್ವಾಮಿಯೊಬ್ಬರು ಕಾಶಿ, ರಾಮೇಶ್ವರ ಮೊದಲಾದ ತೀರ್ಥಯಾತ್ರೆ ಸಂಚಾರ ಹೊರಟವರು ಸುಮಾರು 15 ವರುಷ ಸಂಚಾರಮಾಡಿ ಸುಬ್ರಮಣ್ಯಕ್ಕೆ ವಾಪಸು ಹೋಗುವಾಗ ತಾರೀಕು 1ರಲ್ಲು ಮಡಿಕೇರಿಗೆ ಬಂದಿರುವರು. ಇವರು ಮಾಧ್ವರ ಗುರುಗಳು. ಇಲ್ಲಿ ಓಂಕಾರೇಶ್ವರ ದೇವಸ್ಥಾನದಲ್ಲಿ ಅವರು ಬಂದಂದಿನಿಂದ ವಿಶೇಷ ಪೂಜೆಗಳು ಪ್ರತಿದಿನವೂ ನಡೆಯುತ್ತಿವೆ. ಇವರು ತಾರೀಕು 9ರಲ್ಲಿ ಸುಬ್ರಮಣ್ಯಕ್ಕೆ ಹೊರಟು ಹೋಗುವರಂತೆ.

ತಾರೀಕು 1ರಲ್ಲಿ ವೀರರಾಜಪೇಟೆಯಲ್ಲಿ ಖಾದಿ ಭಂಡಾರದ ಅಂಗಡಿಯು ತಿಮ್ಮರಾಜಕಟ್ಟೆ ರಸ್ತೆ ಮೂಲಕ ಸಣ್ಣದಾಗಿ ಖಾದಿ ಬಟ್ಟೆಯು ಖರ್ಚಾಯಿತಂತೆ.

NOTICE.

The next entrance examination for the admission of candidates to the Royal Military College, Sandhurst will be held at Simla on the 25th May 1925, for the term commencing at Sandhurst in September 1925.

2. Candidates must be between the ages 18 and 20 on the 1st July 1925

3. Intending candidates are requested to appear before the Commissioner of Coorg at Mercara on the 19th March 1925, at 11 a m

4 Further particulars can be had in the Commissioner's office during office hours

ಹಿಂದೂ ದೇಶ.

ತಾರೀಕು 2ರಲ್ಲಿ ವೈಸರಾಯರಾದ ರೀಡಿಂಗ್ ಪ್ರಭುಗಳು ಡಲ್ಲಿ ಹಿಂದೂ ವಿದ್ಯಾಲಯದ ಕಾನ್ವೊಕೇಶನ್ ಭಾಷಣವನ್ನು ಮಾಡಿದರು.

ಎಲ್ಲಾ ಪಾರ್ಟಿಗಳ ಕಾನ್‌ಫರೆನ್ಸಿನ ಸಬ್ ಕಮಿಟಿಯ ಮೀಟಿಂಗಿಗೆ 53 ಮೆಂಬರುಗಳ ಪೈಕಿ 14 ಮೆಂಬರುಗಳು ಮಾತ್ರ ಹಾಜರಾದ್ದರಿಂದ ಆ ಕಮಿಟಿಯವರು ಹಿಂದೂ ಮುಸಲ್ಮಾನ್ ಐಕ್ಯತೆಯ ವಿಷಯ ಯಾವ ತೀರ್ಮಾನಕ್ಕೂ ಬರಲಿಕ್ಕಾಗಲಿಲ್ಲವೆಂದೂ, ಇದರಿಂದ ದೇಶದವರು ಧೈರ್ಯಗೆಡದೆ ಈ ವಿಷಯದಲ್ಲಿ ಎಡೆಬಿಡದೆ ಕೆಲಸ ಮಾಡುತ್ತಿರಬೇಕೆಂದೂ ಮಹಾತ್ಮ ಗಾಂಧಿಯವರೂ ಮತ್ತು ಪಂಡಿತ ಮೋತಿಲಾಲ್ ನೇಹರೂರವರೂ ಪ್ರಕಟಿಸಿರುವರು.

ಸಂಯುಕ್ತ ಪ್ರಾಂತ್ಯದ ಕೌನ್ಸಿಲಿನಲ್ಲಿ ಆಗುವ ಹಿಂದೀ ಮತ್ತು ಉರ್ದು ಭಾಷೆಗಳ ಭಾಷಣಗಳನ್ನು ಸರಕಾರದವರು ಬರಕೊಳ್ಳಬೇಕೆಂತಲೂ, ಕೌನ್ಸಿಲ್ ಪ್ರೊಸೀಡಿಂಗ್ಸನ್ನು ಸ್ವಭಾಷೆಯಲ್ಲಿಯೂ ಪ್ರಕಟಿಸಬೇಕೆಂದು ಠರಾವು ಮಂಜೂರುಮಾಡಿರುವುದು.

ಡೆಲ್ಲಿಯ ಆಯುರ್ವೇದಿಕ್ ಮತ್ತು ಯುನಾನಿ ಟಿಬ್ಬಿಯ ಕಾನ್ವೊಕೇಶನು ಮಾರ್ಚಿ ತಾರೀಕು 2ರಲ್ಲಿ ಪಂಡಿತ ಮೋತಿಲಾಲ್ ನೇಹರೂರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಶಾಖಾಹಾರದ ದನಗಳನ್ನು ಕಡಿದು ಮಾರಲಿಕ್ಕೆ ಬೊಂಬಾಯಿ ಮುನಿಸಿಪಾಲಿಟಿಯವರು ಬಿಡಲಿಲ್ಲವೆಂಬ ಕಾರಣದಿಂದ ಅಲ್ಲಿಯ ಸುಮಾರು 200 ಕಟುಗರು ಕೆಲಸಮಾಡದೆ ತಾರೀಕು 2ರಲ್ಲಿ ಮುಷ್ಕರ ಹಿಡಿದರಂತೆ. ಅದೇ ದಿನ ತರಕಾರಿ ವ್ಯಾಪಾರಿಗಳೂ ಅವರ ಅಂಗಡಿಗಳಿಗೆ ಮುನಿಸಿಪಾಲಿಟಿಯವರು ಹೆಚ್ಚು ಸುಂಕ ಹಾಕುವರೆಂಬ ನೆವದಿಂದ ಕಟುಗರಿಗೆ ಸಮಾನುಭೂತಿಯನ್ನು ತೋರಿಸಲಿಕ್ಕಾಗಿಯೂ ಆ ದಿನ ವ್ಯಾಪಾರವೂ ಮಾಡದೆ ಮುಷ್ಕರ ಹಿಡಿದರು. ಮಾರ್ಕೆಟ್ಟಿನಲ್ಲಿ ಮಾಂಸ ತರಕಾರಿ ಯಾವುದೂ ದೊರೆಯದೆ ಜನರು ಮತ್ತು ಕೋಳಿಗೆ ಬಹಳ ಕ್ಲೇಶವನ್ನು ಸೃಷ್ಟಿಸಿತಂತೆ.

ಬಂಗಾಳ ಕೌನ್ಸಿಲಿನ ಇಂಡಿಪೆಂಡೆಂಟ್ ಪಾರ್ಟಿಯವರು ಮಿ. ಬಿ. ಚಕ್ರವರ್ತಿಯವರನ್ನು ಅವರ ಅಧ್ಯಕ್ಷರಾಗಿ ಚುನಾಯಿಸಿರುವರು.

ಕೊಚ್ಚಿ ಮಹಾರಾಜರವರು ಶ್ರೀಮತಿ ಟಿ. ಮಾಧವಿ ಅಮ್ಮಾಳವರನ್ನು ಅಲ್ಲಿಯ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರಾಗಿ ನೇಮಿಸಿರುವರು. ಸ್ತ್ರೀಯರಲ್ಲಿ ಈಕೆಯೇ ಮೊದಲನೇ ಕೌನ್ಸಿಲ್ ಮೆಂಬರಾಗಿರುವುದು.

ಮಹಾತ್ಮ ಗಾಂಧಿಯವರು ಮದ್ರಾಸಿಗಾಗಿ ವಯಕಂಗೆ ಬರುವಂತೆ ತೀರ್ಮಾನಿಸಿರುವರು.

ಮದ್ರಾಸು ಪ್ರಾಂತ್ಯದ 1925—26ನೆ ಅಂದಾಜು ಬಜೆಟ್ಟಿನಲ್ಲಿ 88 ಲಕ್ಷದ ಮೇಲೆ ಉತ್ಪತ್ತಿಗಿಂತ ಖರ್ಚು ಹೆಚ್ಚು ಕಂಡು ಬಂದಿದೆ. ಈ ವರುಷದ ಬಜೆಟ್ಟಿನಲ್ಲಿ ಇಷ್ಟರವರೆಗೆ 32 ಲಕ್ಷದ ಮೇಲೆ ಉತ್ಪತ್ತಿಗಿಂತ ಖರ್ಚು ಹೆಚ್ಚಾಗಿದೆ.

ಬೊಂಬಾಯಿಯಲ್ಲಿ ನಡೆದ ಮಲಬಾರ್ ಹಿಲ್ ಕೇಸಿನಲ್ಲಿ ಅಪರಾಧಿಗಳು ಮಿ. ಸಿ. ಆರ್. ದಾಸ್‌ರವರಿಗೆ 30 ಲಕ್ಷ ರೂಪಾಯಿಗಳ ಫೀಜು ಕೊಟ್ಟು ಅವರ ಪರವಾಗಿ ವಾದಿಸಬೇಕೆಂದು ಕೇಳಿಕೊಂಡದ್ದಕ್ಕೆ ದಾಸ್‌ರವರು ಒಪ್ಪಿದ್ದಾರೆಂದು ಹೊರಡಿಸಿದ ವರ್ತಮಾನವು ಪೂರಾ ಸುಳ್ಳಾಗಿದೆ.

ಬಂಗಾಳ ಕೌನ್ಸಿಲಿನ ಸ್ವರಾಜ್ಯ ಪಾರ್ಟಿಯವರು ತಮ್ಮ ಧ್ಯೇಯವನ್ನು ಯಾವ ವಿಧದಲ್ಲಿಯೂ ಬದಲಾಯಿಸಿರುವದಿಲ್ಲವೆಂದೂ ಅವರು ಸರಕಾರಿ ಉದ್ಯೋಗವನ್ನು ಕೈಕೊಳ್ಳುವುದಿಲ್ಲವೆಂತಲೂ, ಮಂತ್ರಿಗಳನ್ನು ನೇಮಿಸುವುದಕ್ಕೆ ಪೂರ್ತಿ ಜವಾಬ್ದಾರಿಯ ಸರಕಾರವು ಸಿಕ್ಕುವ ವರೆಗೆ ಒಪ್ಪುವದಿಲ್ಲವೆಂತಲೂ ಮುಖಂತಾಗಿ ಆ ಪಾರ್ಟಿಯ ಮುಂದಾಳಾದ ಮಿ. ಸಿ. ಆರ್. ದಾಸ್‌ರವರು ಪ್ರಕಟಿಸಿರುವರು.

ಕಳೆದ ತಾರೀಕು 27ರಲ್ಲಿ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ರೈಲ್ವೆ ಬಜೆಟಿನ ವಿಷಯ ಬಹು ಬಲವಾದ ಚರ್ಚೆಯು ನಡೆಯಿತು. ಓಟಿಗೆ ಹಾಕುವಾಗ ಇಂಡಿಪೆಂಡೆಂಟ್ ಪಾರ್ಟಿಯವರು ಸರಕಾರದ ಕಡೆ ಓಟು ಮಾಡಿದ್ದರಿಂದ ಆ ಬಜೆಟು ಪಾಸಾಯಿತು. ರೈಲ್ವೆ ಸರ್ವಿಸಿನಲ್ಲಿ ಇಂಡಿಯನರ ಸಂಖ್ಯೆಯು ಹೆಚ್ಚು ಇರುವದು ಬಹಳ ನಿಧಾನವಾದುದರಿಂದ ಸರಕಾರದವರೇ ಲೆ ಅಸಮಂಜಸೆಯು ದರ್ಶಾವೊಂದು ಪಾಸಾಯಿತು.

ಮೈಸೂರು ಪ್ರಾಂತ್ಯದ ಕೋಲಾರ್ ಗಣಿಗಳ ಬಳಿ ರಾಮಸಮುದ್ರ ಎಂಬಲ್ಲಿ ಕಲ್ಲಿದ್ದಲಿನ ಗಣಿಯೊಂದು ಕಂಡು ಹಿಡಿಯಲ್ಪಟ್ಟಿದೆ.

COORC FOREST DEPARTMENT, SOUTH DIVISION

NOTICE

Mercara, dated 27th February 1925

Tenders are hereby invited for the supply of the following quantities of rations required for the use of Government Live Stock stationed in the Tithimatti and Nagarhole Ranges.

1 Gram 150 pallas.
2. Ragi 135 „
3 Cotton seed 1250 lbs.

For further particulars apply to the Divisional Forest Officer, South Coorg. Mercara

ವಿದೇಶ.

ನ್ಯೂಜರ್ಸಿ ಪ್ರಾಂತ್ಯದಿಂದ ಸಿಕ್ಕಿದ ಎರಡು ಏಡಿಗಳಲ್ಲಿ ಒಂದು ಏಡಿಯು ತೂಕವು ಒಂದು ಮಣ ತೂಕವೂ, ಇನ್ನೊಂದು ಏಡಿಯು 34 ರಾತಲು ಭಾರವೂ 100 ಅಡಿ ಉದ್ದವೂ ಇದೆ. ಇದರ ಪ್ರಾಯವು ಸಾಧಾರಣ 54 ವರುಷವಿರಬಹುದಾಗಿ ನಿಶ್ಚಯಿಸಿರುವರು. ಇವುಗಳಿಗೆ ಬೇಟೆಗಾರರು ಹೊಡೆದ ಪೆಟ್ಟಿನ ಗುರ್ತು ಅವುಗಳ ಬೆನ್ನಿನ ಮೇಲೆ ಕಾಣಿಸುತ್ತಿರುವುದಂತೆ. ಈ ಏಡಿಗಳೆರಡನ್ನೂ ನ್ಯೂಯಾರ್ಕ್ ಪಟ್ಟಣದಲ್ಲಿರುವ ಪ್ರಾಣಿಶಾಸ್ತ್ರದ ವಸ್ತು ಸಂಗ್ರಹಾಲಯದಲ್ಲಿಟ್ಟಿರುವರಂತೆ.

ಗ್ಯಾಸ್ ಸಾಗಿಸುವುದಕ್ಕಾಗಿ 16 ಅಂಗುಲ ದಪ್ಪವೂ 310 ಮೈಲಿಗಳ ಉದ್ದವೂ ಇದ್ದು ಒಂದು ನೆಂದಾದರೂ ಇಲ್ಲದ ಉಕ್ಕಿನ ನಳಿಗೆಯನ್ನು ನವೀನ ತರದಲ್ಲಿ ತಯಾರಿಸಿ ಅಮೇರಿಕದ ಸಂಯುಕ್ತ ಪ್ರಾಂತ್ಯದ ಟೆಕ್ಸಾಸ್ ಎಂಬಲ್ಲಿಂದ ಬ್ಯೂಮಾಂಟ್ ಎಂಬಲ್ಲಿಯ ವರೇಗೆ ಗ್ಯಾಸ್ ಸಾಗಿಸಲು ಹೈ ಹಾಕಿರುವರು.

ಮಾರ್ಚಿ 2ರಲ್ಲಿ ಕೆನಡಾ ದೇಶದಲ್ಲಿ 25 ಮಿನಿಟುಗಳ ಕಾಲ ಒಂದು ಭಯಂಕರ ಭೂಕಂಪವಾಯಿತು. ಒಟ್ಟಾವ ಮತ್ತು ಕ್ವಿಬೆಕ್ ಪಟ್ಟಣಗಳಲ್ಲಿ ಜನಗಳನೇಕರು ಭೀತಿಯಿಂದ ಮೂರ್ಛೆ ತಪ್ಪಿದರು, ಕೆಲವರು ಮೃತಪಟ್ಟರು, ಕೆಲವು ಮನೆ ಮಠಗಳು ನಷ್ಟವಾದವು. ಅಮೇರಿಕದ ಯುನೈಟೆಡ್ ಸ್ಟೇಟ್ಸಿನಲ್ಲಿಯೂ ಈ ಕಂಪನವನ್ನು ಜನರು ಸ್ವಲ್ಪಮಟ್ಟಿಗೆ ಅನುಭವಿಸಿರುವರು.

ಜರ್ಮನ್ ರಿಪಬ್ಲಿಕ್ ಸರಕಾರದ ಮೊದಲನೇ ಪ್ರೆಸಿಡೆಂಟರಾದ ಇಬರ್ಟರವರು ಫೆಬ್ರವರಿ ತಿಂಗಳ 28ರಲ್ಲಿ ಮೃತರಾದರು.

ಚಾರ್ಜ್ ಚಕ್ರವರ್ತಿಗಳವರು ಕಾಯಿಲೆಯಿಂದ ವಾಸಿಯಾಗುತ್ತಾ ಇದ್ದಾರೆ. ಡಾಕ್ಟರುಗಳ ಹೇಳಿಕೆ ಮೇರೆ ಚಕ್ರವರ್ತಿಗಳವರು ಮೆಡಿಟರೇನಿಯನ್ ಸಮುದ್ರದ ಪ್ರಯಾಣಕ್ಕೆ ಹೊರಡಲಿಕ್ಕಿರುವರು.

ಜೆರುಸಲೆಮ್ ಮತ್ತು ಪೇಲೆಸ್ಟೈನಿನ ಅರೇಬಿಯರ ಎಗ್ಸಿಕ್ಯೂಟಿವ್ ಕಮಿಟಿಯವರು ಲಾರ್ಡ್ ಬೇಲ್ಫರ‍ವರು ಅಲ್ಲಿಗೆ ಹೋಗುವ ಸಂದರ್ಭಕ್ಕೆ ಬಹಿಷ್ಕಾರ ಹಾಕುವಂತೆ ತೀರ್ಮಾನಿಸಿರುವರು.

ಫೆಬ್ರವರಿ ಆಖೈರ್ ವಾರದಲ್ಲಿ ಇಂಗ್ಲೆಂಡಿನ ಸುತ್ತಲೂ ಭಯಂಕರ ಬಿರುಗಾಳಿಯು ಪ್ರಾರಂಭವಾಗಿ ಹಡಗುಗಳಲ್ಲಿ ಸುಮಾರು 84 ಮರಣಗಳುಂಟಾಗಿವೆ. ನಾಟಿಂಗ್ಹೇಮಿನಲ್ಲಿ ಸ್ವಲ್ಪಮಟ್ಟಿಗೆ ಭೂಕಂಪವೂ ಉಂಟಾಯಿತು. ಆದರೆ ಹೆಚ್ಚಿನ ನಷ್ಟವೇನೂ ಇಲ್ಲ.

ಕರ್ಡಿಸ್ತಾನದವರು ತುರ್ಕಿಯ ಸರಕಾರದ ಮೇಲೆ ದಂಗೆ ಎದ್ದಿರುವರು. ಅವರು ಖಲೀಫನನ್ನು ಇಟ್ಟುಕೊಳ್ಳಬೇಕೆಂದು ಹೇಳುತ್ತಿರುವರು. ಇವರ ಮೇಲೆ ಯುದ್ಧ ನಡೆಸಲು ತುರ್ಕಿ ಸರಕಾರವು ತೀರ್ಮಾನಿಸಿ ಸೈನ್ಯವನ್ನು ಹೊರಡಿಸಿರುವರು. ಇಸ್ಮೆಟ್ ಪಾಷಾರವರು ಸೈನ್ಯವನ್ನು ನಡಿಸುವರೆಂದು ವರ್ತಮಾನ.

ದಕ್ಷಿಣ ಆಫ್ರಿಕದವರಿಗೆ ಓಟುಗಳನ್ನು ಕೊಡಬಾರದೆಂದು ಅರಸರನ್ನು ಬೇಡಿಕೊಳ್ಳುವಂತೆ ಅಲ್ಲಿಯ ಎಸೆಂಬ್ಲಿಯಲ್ಲಿ ಠರಾವು ಪಾಸುಮಾಡಿರುವರು.

ಸ್ವಾಗತ ಕಮಿಟಿ ಮೀಟಿಂಗು.

ಮಡಿಕೇರಿ ತಾಲೋಕಿನವರ ಸ್ವಾಗತ ಕಮಿಟಿ ಮೀಟಿಂಗು ತಾ. 1ರಲ್ಲಿ ರಾ. ಬ. ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಮುನಿಸಿಪಾಲಿನಲ್ಲಿ ನಡಿಯಿತು.

1. ಕೆಳಗೆ ನಮೂದಿಸಿದ ಸ್ಥಳಗಳಲ್ಲಿ ಸ್ಪೆಷಲ್ ಕಮಿಟಿಗಳನ್ನು ಚಂದಾ ವಸೂಲಾತಿ ಬಗ್ಗೆ ನೇಮಿಸುವಂತೆ ತೀರ್ಮಾನವಾಯಿತು. ಸದರಿ ಕಮಿಟಿಮೆಂಬರುಗಳನ್ನು ಹೆಚ್ಚಿಸುವ ಅಧಿಕಾರವು ಅವರಿಗೆ ಇದೆ.

ಮಡಿಕೇರಿ—1 ಮ| ರಾ| ರಾ| ಬಾ. ಕೆ. ಅಪ್ಪಯ್ಯ, 2. ಸಿ. ಎನ್. ವೆಂಕಪ್ಪಯ್ಯ, 3. ಎಸ್. ಒಸಪ್ಪ, 4. ಎಂ. ಎ. ಚಿಣ್ಣಪ್ಪ, 5. ಎಂ. ಎಂ. ಸಿದ್ದೀಕ್.

ಮಾದಾಪುರ—ಮ| ಕೋದಂಡ ಎ. ತಿಮ್ಮಯ್ಯ.

ಸುಂಟಿಕೊಪ್ಪ ಮ| ಪಾಂಡಂಡ ಎ. ಚಂಗಪ್ಪ.

ಮಕ್ಕಂದೂರು—ಮ| ರಾ| ರಾ| ಗಳಾದ ಕೊಕ್ಕಲೆರ ತಿಮ್ಮಯ್ಯ, ಕುಂಬಗೌಡನ ಅಪ್ಪಯ್ಯ.

ಚೇರಳ ಶ್ರೀಮಂಗಲ—ಮ| ರಾ| ರಾ| ಗಳಾದ ಮುಕ್ಕಂಡ ಬೋಯಪ್ಪ, ಕೊಂಗೆಟ್ಟಿರ ಚಂಗಪ್ಪ.

ಕಡಗದಾಳು—ಮ| ರಾ| ರಾ|ಗಳಾದ ಕೊರವಂಡ ಪೊನ್ನಪ್ಪ, ಮುಕ್ಕಾಟಿರ ಎಸ್. ಕಾರ್‍ಯಪ್ಪ.

ಕಗ್ಗೋಡು—ಮ| ಮಣವಟ್ಟಿರ ಅಯ್ಯಪ್ಪ.

ಹಾಕತ್ತೂರು—ಮ| ರಾ| ರಾ| ಗಳಾದ ಬಿದ್ದಂಡ ಎ. ನಾ. ಬಿಯ್ಯಪ್ಪ, ಅಮ್ಮಟಂಡ ದೇವಯ್ಯ.

ಸಂಪಾಜೆ—ಮ ರಾ ರಾ| ಗಳಾದ ಕಿರಾಕ್ ರಾಮಚಂದ್ರಯ್ಯ, ಪಟೇಲ್ ಸುಬ್ಬಯ್ಯ.

ಅರೆಕಾಡು—ಮ ರಾ ರಾ ಗಳಾದ ಕಾಡುಮಂಡ ಮುತ್ತಣ್ಣ, ಕುಕ್ಕೆರ ಉತ್ತಯ್ಯ.

ಕಟ್ಟೆಮಾಡು—ಮ, ರಾ ರಾ ಗಳಾದ ಕಟ್ಟೆಮನೆ ಕಾರ್‍ಯಪ್ಪ, ಉಳುವಾರ ಮಾದಪ್ಪ.

ಹೊಸಕೇರಿ—ಮ. ರಾ ರಾ ಗಳಾದ ಬಿಯುಮನೆ ಕುಶಾಲಪ್ಪ, ಬಲ್ಲಡಂಡ ಅಪ್ಪಚ್ಚ.

ಮರಗೋಡು—ಮ. ರಾ ರಾ ಗಳಾದ ಕಾಳತಂಡ ಸೋಮಣ್ಣ, ಪಚ್ಚೆರಂಡ ಮಂದಣ್ಣ (ಪಟೇಲ).

ಹೆಮ್ಮತ್ತಾಳು—ಮ ಕುಂಬಗೌಡನ ಉತ್ತಯ್ಯ.

ಮೂರ್ನಾಡು—

ಐಕೊಳ—ಮ. ಮಂಗಂಡ ಅಪ್ಪಣ್ಣ.

ಕಾಂತೂರು—ಮ. ರಾ ರಾ ಗಳಾದ ಬಿದ್ದಂಡ ಜಿ ಮುತ್ತಣ್ಣ, ಅಪರೆಮಾದಂಡ ಮುದ್ದಪ್ಪ, (ಪಟೇಲ), ಕರೆಮನೆ ವೆಂಕಟಪ್ಪ (ಜಹಗೀರುದಾರ).

ಬಾಳಗ—ಮ. ಮನೆಯಂಡ ದೇವಯ್ಯ.

ಕಿಗ್ಗಾಲು—ಮ. ಬಲ್ಲತಂಡ ಕಾರ್‍ಯಪ್ಪ.

ಮುತ್ತಾರ್ಮುಡಿ—ಮ. ಟಿ. ಎಸ್. ಪೂವಯ್ಯ.

ಕೋಡಂಬೂರು—ಮ ಪಾಂಡಂಡ ಪೊನ್ನಪ್ಪ.

2. ಮೇಲಿನ ಸ್ಪೆಶಿಯಲ್ ಕಮಿಟಿಗಳಿಗೆ ರಶೀದಿ ಪುಸ್ತಕಗಳನ್ನು ಒದಗಿಸಿಕೊಡುವಂತೆ ತೀರ್ಮಾನವಾಯಿತು.

3 ಮ ಬಿದ್ದಂಡ ಜಿ ಮುತ್ತಣ್ಣನವರನ್ನು ಸ್ವಯಂಸೇವಕರ ಕ್ಯಾಪ್ಟನಾಗಿಯೂ, ಮ| ರಾ| ರಾ| ಗಳಾದ ಪಾಂಡಂಡ ಮುತ್ತಣ್ಣ, ಕೋಟೇರ ಚಿಣ್ಣಪ್ಪ, ಇವರಿಬ್ಬರನ್ನು ಸಹಾಯಕ ಕ್ಯಾಪ್ಟನರುಗಳಾಗಿಯೂ ಚುನಾಯಿಸಿದರು.

4. ಸಂಘದ ಕಾನ್ಫರೆನ್ಸಿನ ಸಮಯದಲ್ಲಿ ದೇಶದ ಹೊರಗಿನಿಂದ ಮತ ಬೋಧಕರನ್ನು ಕರೆಯಿಸಿ ಉಪನ್ಯಾಸ ಕೊಡಿಸುವಂತೆ ತೀರ್ಮಾನವಾಯಿತು.

5. ಟೆಂಪರೆನ್ಸ್ ಕಾನ್ಫರೆನ್ಸಿನ ಅಧ್ಯಕ್ಷರಾಗಲು ಮ| ಕೋದಂಡ ತಿಮ್ಮಯ್ಯನವರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

ಎಂ. ಎಂ ಬೆಳ್ಯಪ್ಪ,
ಸೆಕ್ರೆಟರಿ.

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಇರುಪ್ಪು ಜಾತ್ರೆ.

ಮಹನೀಯರೆ,

ಕಳೆದ ತಾರೀಕು 21ರಲ್ಲು ಇರುಪ್ಪು ಜಾತ್ರೆಯು ಕಿಗ್ಗಟ್ಟುನಾಡಿನ ಕುರ್ಚಿ ಎಂಬ ಗ್ರಾಮದಲ್ಲಿ ಬಹಳ ಸಂಭ್ರಮದಿಂದ ನಡೆಯಿತು. ಈ ಜಾತ್ರೆಯ ಕಥೆ ಏನಂದರೆ—ಶ್ರೀರಾಮಚಂದ್ರನು ಸೀತಾ ಲಕ್ಷ್ಮಣನು ಸಮೇತನಾಗಿ ಲಂಕೆಯಿಂದ ಅಯೋಧ್ಯೆಗೆ ಹೋಗುತ್ತಿರುವಾಗ ಮಲೆಯಾಳದ ತಿರುನೆಲ್ಲಿಗಾಗಿ ಕೊಡಗಿನ ಕುರ್ಚಿ ಗ್ರಾಮಕ್ಕಾಗಿ ದಾಟಿದರೆಂದೂ, ಮಲೆಯಾಳವು ಅಜ್ಞಾನ ಭೂಮಿಯಾದ್ದರಿಂದ ಲಕ್ಷ್ಮಣನು ತನ್ನ ಅಣ್ಣನ ಸೇವೆಯು ಬಿಸಿಯ ತಿರುನೆಲ್ಲಿಯ ನವಿಲಿನ ಗೋಣಗುಟ್ಟಿದನೆಂದೂ, ಪ್ರವಹ ಕೊಡಗಿನ ಕುರ್ಚಿ ಗ್ರಾಮಕ್ಕೆ ಬಂದೊಡನೇ ತಾನು ಮಾಡಿದ ಕೃತ್ಯಕ್ಕೆ ಬಹಳ ಮರುಗಿ ತಾನು ಅಗ್ನಿಕುಂಡಕ್ಕೆ ಪ್ರವೇಶಮಾಡಲು ತೊಡಗಿದನೆಂದೂ ಆ ಅಗ್ನಿಯನ್ನು ಕಮಿಸಲು ಶ್ರೀರಾಮಚಂದ್ರನು ಬಾಣವನ್ನು ಆ ಬೆಟ್ಟದ ಹಿಂದಿಗಸೆದು, ನೀರನ್ನು ಉತ್ಪತ್ತಿಮಾಡಿ ಆ ಅಗ್ನಿಯನ್ನು ಕೆಡಿಸಿದನೆಂದೂ ಆ ನೀರು ಬೀಳುವ ಜಾಗದಲ್ಲೇ ಅಗ್ನಿಕುಂಡವಿದ್ದುದಾಗಿಯೂ ಪುರಾಣ ಕಥೆ ಇದೆ. ಎಂಬುದಾಗಿ ಜನರು ಹೇಳಿಕೊಳ್ಳುತ್ತಿದ್ದರು. ಶ್ರೀರಾಮಚಂದ್ರನು ಕುರ್ಚಿ ಗ್ರಾಮಕ್ಕೆ ತಲುಪಿದ ದಿನವೇ ಮಹಾ ಶಿವರಾತ್ರಿಯಾದ್ದರಿಂದಲೂ, ಈಶ್ವರ ಲಿಂಗಕ್ಕೆ ಪೂಜೆ ಮಾಡಬೇಕಾದ್ದರಿಂದಲೂ, ತನ್ನ ಬಂಟನಾದ ಹನುಮಂತನನ್ನು ಕಾಶೀ ಕ್ಷೇತ್ರಕ್ಕೆ ಕಳುಹಿಸಿದನೆಂದೂ, ಅವನು ಬರಲು ಕೊಂಚ ತಡವಾದ್ದರಿಂದ ಶ್ರೀರಾಮನೇ ಒಂದು ಲಿಂಗವನ್ನು ಮಾಡಿ ಆ ಇರುಪ್ಪು ಕ್ಷೇತ್ರದಲ್ಲಿಟ್ಟನೆಂತಲೂ, ಅಷ್ಟರೊಳಗೆ ಹನುಮಂತನು ಲಿಂಗವನ್ನು ತಂದದ್ದರಿಂದ, ಅವನ ಮನಸ್ಸು ನೋಯದ ಹಾಗೆ ಹೇರ್ಮಾಡು ಗ್ರಾಮದಲ್ಲಿ ಹನುಮಂತನೇ ಆದಿಯಾಗಿ ಈಶ್ವರ ಲಿಂಗವನ್ನು ಶ್ರೀರಾಮಚಂದ್ರನು ಪ್ರತಿಷ್ಠೆಮಾಡಿ ಹೇರ್ಮಾಡಿನಲ್ಲಿ ಶಿವರಾತ್ರಿ ದಿನ ಪೂಜೆ ಮಾಡಿ ಉಪವಾಸವಿದ್ದು ಶ್ರೀರಾಮ ಕ್ಷೇತ್ರಕ್ಕೆ ಬರಬೇಕೆಂದೂ ಶ್ರೀರಾಮಚಂದ್ರನು ಆಜ್ಞಾಪಿಸಿದನೆಂಬುವಾಗಿ ಕಥೆಯು ಹುಟ್ಟಿದೆ.

ಈ ದೇವಸ್ಥಾನವು ಈಗ ಮುಜರಾಯಿ ಇಲಾಖೆಯವರಿಂದ ನಡೆಸಲ್ಪಡುತ್ತೆ. ಇವರ ಯಾವ ಏರ್ಪಾಡೂ ಜನರ ತೃಪ್ತಿಗೆ ಸರಿಯಾಗಿ ಆಗುವುದಿಲ್ಲವೆಂದು ಅನೇಕರು ಗುಣುಗುಟ್ಟುತ್ತಿದ್ದರು. ಬ್ರಾಹ್ಮಣರು ಅವರಿಷ್ಟದಂತೆಯೂ ಇತರ ಕೆಲಸಗಾರರು ಅವರಿಷ್ಟದಂತೆಯೂ ವರ್ತಿಸುತ್ತಿದ್ದರು. ದೇವಸ್ಥಾನದ ಎದುರಿಗಿದ್ದ ಲಕ್ಷದೀಪವನ್ನು ಶುಚಿ ಮಾಡದೆಯೂ ಅದರಲ್ಲಿ ದೀಪವಿಡದೆಯೂ ಇದ್ದುದು ಜನರಿಗೆ ಬಹಳ ಬೇಸರವನ್ನುಂಟುಮಾಡುತ್ತಿತ್ತು. ಈ ಉದಾಸೀನವನ್ನು ನೋಡಿದಾಗ ಕಿಗ್ಗಟ್ಟು ನಾಡಿನ ಜನರ ಪ್ರತಿನಿಧಿಯಾಗಿ ಚುನಾವಣೆ ಮಾಡಿದ ದೇವಸ್ಥಾನದ ಕಮಿಟಿ ಮೆಂಬರು ಆ ಸ್ಥಳವನ್ನು ನೋಡಲೇ ಇಲ್ಲವೆಂದು ತೋರಿತು. ಅಷ್ಟೇ ಅಲ್ಲ, ಆ ಪ್ರದೇಶದ ಜನರು ತಿಳುವಳಿಕೆ ಇಲ್ಲದವರಾದ್ದರಿಂದ ಇಲಾಖಾದಾರರು ಏನು ಮಾಡಿದರೆ ಸಾಕೆಂಬ ಅಭಿಪ್ರಾಯವಿದ್ದ ಹಾಗೂ ತೋರಿತು.

ದೇವಸ್ಥಾನದಲ್ಲಿ ಶ್ರೀರಾಮ ದೇವರ ಸ್ಥಾನವೂ ಉತ್ತಮ ವಿಗ್ರಹವೂ, ಅಶೋಕ, ಮಂದಾರ ವೃಕ್ಷಗಳೂ ನೋಡಲಿಕ್ಕೆ ಆನಂದವನ್ನುಂಟುಮಾಡುತ್ತೆ. ಶಿವರಾತ್ರಿ ದಿನ ರಾತ್ರಿ ಅನೇಕ ಜನರು ದೇವಸ್ಥಾನದಲ್ಲಿ ಸೇರಿದು, ಹರಿ ಕಥೆಯಿಂದಲೂ, ಭಜನೆಯಿಂದಲೂ ಕಾಲವನ್ನು ಕಳೆಯುತ್ತಿದ್ದರು. ಇನ್ನು ಕೆಲವು ಜನರು ಚಿಕ್ಕ ಚಿಕ್ಕ ಸಂಗಡವನ್ನು ಮಾಡಿಕೊಂಡು ಸಾರಾಯಿ ಹೆಂಡದ ಪಾರ್ಟಿಯಿಂದ ಹೊಳೆ ಕರೆಯಲ್ಲಿಯೂ ಗದ್ದೆ ಬದಿಯಲ್ಲಿಯೂ ಕುಡುಕತನದಲ್ಲಿ ಮಗ್ನರಾಗಿದ್ದರು. ಇನ್ನು ಕೆಲವು ಸ್ತ್ರೀಯರು ವ್ಯಾಪಾರದಲ್ಲಿ ಉದ್ಯುಕ್ತರಾಗಿದ್ದರು. ದೇವಸ್ಥಾನಕ್ಕೆ ಬಂದ ಶೇಕಡ 75 ಜನರು ಕುಡುಕರಾಗಿದ್ದರು. ಅವರ ಬಾಯಿಂದ ಬರುವ ಈ ದುರ್ಗಂಧವು ಬಹಳ ಹೇಸಿಕೆಯನ್ನುಂಟುಮಾಡುತ್ತಿತ್ತು. ಈ ಜನರು ಆ ದೇವಸ್ಥಾನಕ್ಕೆ ಪುಣ್ಯ ಸಂಪಾದನ ಮಾಡುವುದಕ್ಕೆ ಬರುವುದರ ಬದಲಾಗಿ ಹೆಚ್ಚಿನ ಪಾಪ ಸಂಪಾದನೆಗೆ ಬಂದಂತೆ ಪ್ರತ್ಯಕ್ಷವಾಗುತ್ತಿತ್ತು. ಆ ಕಿಗ್ಗಟ್ಟುನಾಡಿನ ಅದರಲ್ಲಿಯೂ ಸುತ್ತು ಮುತ್ತಲಿನ ಜನರು ಹೆಚ್ಚಾಗಿ ಚಪ್ಪರ ಹಾಕಿಕೊಂಡು ಅಲ್ಲಿಯೇ ವಾಸಕ್ಕೆ ಅನುಕೂಲ ಮಾಡಿಕೊಂಡಿದ್ದರು. ಪೂಜೆ ಆರಾಧನೆಗಳಲ್ಲಿಯೂ, ಜನರನ್ನು ಸತ್ಕರಿಸುವದರಲ್ಲಿಯೂ ತಮ್ಮ ಕಾಲವನ್ನು ಕಳೆಯುವುದರ ಬದಲಾಗಿ ಆ ಕುರ್ಚಿ ಗ್ರಾಮದ ಜನರು ವ್ಯಾಪಾರದ ಕುಶಲತೆಯಿಂದ ಹಣ ಸಂಪಾದನೆಯಲ್ಲಿ ಮಗ್ನರಾಗಿದ್ದರು. ಆ ಪೈಕಿ, ಮ ಅಜ್ಜಮಾಡ ಪೋಕ್ಕಯ್ಯನವರು ಮಾತ್ರ, ಅನೇಕ ಜನರನ್ನು ಸತ್ಕರಿಸಲು ಮತ್ತು ತನ್ನ ಕೈಯಲ್ಲಿ ಆಗುವ ಸಹಾಯವನ್ನು ಮಾಡಲಿಕ್ಕೆ ಟೊಂಕ ಕಟ್ಟಿ ನಿಂತಿದ್ದರು. ಈ ಪೈಕಿ ಅವರೇ ಧನ್ಯರೆಂದು ತೋರಿತು.

ರಾತ್ರಿಯನ್ನು ಜಾಗರಣೆಯಿಂದ ಕಳೆದ ಕೂಡಲೇ ಸುಮಾರು ಎಲ್ಲರೂ ಬೆಟ್ಟದ ಮೇಗೆ ಹೋಗಿ ಸುಮಾರು 75 ಅಡಿ ಎತ್ತರದಿಂದ ಬೀಳುವ ನೀರಿಗೆ ಶರೀರವನ್ನು ಚಾಚಿ, ಸ್ನಾನ ತೀರಿಸಿ ಬರುತ್ತಿದ್ದರು. ಆ ನೀರು ಬೀಳುವಾಗ ಹಿಮವೇ ತಲೆಗೆ ಬಿದ್ದಂತೆ ಅತ್ಯಂತ ಚಳಿಯನ್ನುಂಟುಮಾಡುತ್ತಿತ್ತು. ತಲೆಯ ಬುರುಡೆಯು ಎದ್ದು ಹೋದಂತೆ ಆ ಎತ್ತರದಿಂದ ಬೀಳುವ ನೀರಿಗೆ ತಲೆ ಚಾಚಿದವರಿಗೆ ಆಗುತ್ತಿತ್ತು. ದೇವಸ್ಥಾನದಿಂದ ಸ್ನಾನಮಾಡುವ ಜಾಗಕ್ಕೆ ಸುಮಾರು ಮೂರು ಫರ್ಲಾಂಗ್ ದೂರ ಇದೆ. ಸ್ನಾನಮಾಡಿ ಬಂದೊಡನೇ ಅನೇಕ ಜನರು ಹಣ್ಣು ಕಾಯಿಗಳನ್ನು ತೀರಿಸಿ ಅವರವರ ಮನೆಗೆ ಹೊರಡುತ್ತಿದ್ದರು. ಹೆಂಗಸರು ಗುಂಪು ಗುಂಪಾಗಿ ವ್ಯಾಪಾರದಲ್ಲಿ ಮಗ್ನರಾಗಿದ್ದರು.

ಅಲ್ಲಿ ಸೇರಿದ ಜನರ ಮುಖದಲ್ಲಿ ಕಾಂತಿ ಎಂಬುದು ಇರಲೇ ಇಲ್ಲ. ಎಲ್ಲರೂ ನಿಸ್ತೇಜರಾಗಿ ಮುಖದಲ್ಲಿ ರಕ್ತವಿಲ್ಲದೆ ಇದ್ದರು. ಇವರೆಲ್ಲರೂ ಕುಡುಕರಾಗಿ ಕರೆಯಲಿಕ್ಕೆ ಹಸಿ ನಗ್ಗಿರೆ ಇಲ್ಲದೆ ಇದ್ದುದರಿಂದ ಈ ಸ್ಥಿತಿ ಉಂಟಾಯಿತೆಂದು ಅನೇಕರು ಹೇಳುತ್ತಿದ್ದರು. "ಹಿಂದುಸ್ಥಾನದ ಕಾಲ್ ಸ್ಥಿತಿ? ದು' ಎಂಬ ತತ್ವವನ್ನು ಕುರಿತು, ಮ. ಕೋಟೆರ ಚಿಣ್ಣಪ್ಪನವರು ಮತ್ತು ಜಮ್ಮಡ ಮಾದಪ್ಪನವರು ಶಿವರಾತ್ರಿ ದಿನ ರಾತ್ರಿ ಉಪನ್ಯಾಸ ಮಾಡಿದರು. ಈ ಉಪನ್ಯಾಸದಲ್ಲಿ ಎಲ್ಲರೂ ಖರ್ಚು ಕಡಿಮೆ ಮಾಡಬೇಕೆಂದೂ, ಪರದೇಶಿ ಬಟ್ಟೆ, ಬಲವಾದ ಕಲಾಭತ್ತು ಧರಿಸುವದು ಕಡಿಮೆ ಮಾಡಬೇಕೆಂದೂ, ಸಾರಾಯಿ ಬಿಟ್ಟು ಮಾಡಬೇಕಾದದ್ದೆಂದೂ, ತನ್ನ ವಿರಾಮ ಕಾಲಗಳಲ್ಲಿ ಎಲ್ಲಾ ಮನೆಗಳಲ್ಲಿಯೂ ಚರ್ಕವನ್ನಿಟ್ಟು ನೂಲು ಮಾಡಿ ತಮಗೆ ಬೇಕಾದ ಬಟ್ಟೆಗಳನ್ನು ಮಾಡಿಕೊಳ್ಳಬೇಕೆಂತಲೂ, ಎಲ್ಲರೂ ಖಾದಿ ಬಟ್ಟೆಯನ್ನೇ ಧರಿಸಬೇಕೆಂದೂ, ಕುಡುಕತನವನ್ನು ಕಡಿಮೆ ಮಾಡಬೇಕೆಂದೂ ಮಗ್ಗಿರೆಯಾಗಿ ಉಪನ್ಯಾಸ ಮಾಡಿದರು.

ಅಲ್ಲಿ ಅಂಗಡಿಗಳು ವಿಶೇಷವಾಗಿದ್ದುವು. ಅಲ್ಲಿ ಬರುವ ಜನರು ಬರೀ ವ್ಯಾಪಾರಕ್ಕಾಗಿಯೇ ಬರುತ್ತಾರೋ ಎಂಬುದು ನಹ ತೋರಿತು. ಜನರು ದೇವತಾರಾಧನೆಗಿಂತ ತಮ್ಮ ಹೆಂಗಸರೊಡನೆ ವ್ಯಾಪಾರದಲ್ಲಿ ಮಗ್ನರಾಗಿದ್ದರು. ನಿಜವಾದ ಭಕ್ತಿ ಎಂಬುದು ಹೆಚ್ಚಿನ ಜನರಿಗಿಲ್ಲವೆಂದೇ ತೋರಿತು. ಜನ ಮೂರ್ತಿ? ಶಾಸ್ತ್ರಿ ಮರುಳೋ ಎಂಬ ವಿಚಾರವು ಯೋಚನೆಗೆ ಬಂತು. ನಡತೆ ಹೀನರಾದ, ಕುಡುಕರಾದ ಧನ ಹಿಂಬಾಲದಿಂದ ಮತ ಗಾಢ ಜನರಿಗೂ ವ್ಯಾಪಾರಸ್ತರಿಗೆ ನಾಕ್ಷತ್ರ ಯಾತ್ರೆಯೂ ಸರಿ ಎಂದು ತೋರಿತು. ಇದನ್ನೆಲ್ಲಾ ಕೂಡಾ ಮಟ್ಟಿಗೆ ಸರಿಪಡಿಸಲು, ಮುಜರಾಯಿ ಇಲಾಖೆಯವರು ತಕ್ಕ ಏರ್ಪಾಡು ಮಾಡಿದ್ದರೆ ಜನರಿಗೆ ಒಂದು ತರದ ಭಯವೂ, ನಂಬಿಕೆಯೂ ಉಂಟಾಗುತ್ತಿತ್ತು. ಈ ನ್ಯೂನತೆಯನ್ನೆಲ್ಲಾ ಸರಿಪಡಿಸಲು, ಇಲಾಖೆಯವರು ಮತ್ತು ಸ್ಥಳೀಕ ಜನರು ಒಡನೆ ಪ್ರಯತ್ನ ಬರುವರೆಂದು ನಂಬಿ ನನಗೆ ಕಂಡ ಅಭಿಪ್ರಾಯಗಳನ್ನು ಪತ್ರಕ್ಕೆ ಬಾಕಿಮಾಡುತ್ತೇನೆ.

ಹಾಜರಿದ್ದವ

ಕೊಡಗು ಜಮೀನ್ದಾರರ ಸಂಘದ ಸ್ವಯಂ ಸೇವಕರು.

ಕೆಲವು ಮಾಸಗಳಿಂದ ನಮ್ಮ ಈ ಸಂಘದಲ್ಲಿ ಒಂದು ವಾಲಂಟಿಯರ್ ಕೋರು ಇದೆ. ಈ ರೀತಿ ಹೇಳುವಾಗ ಇದು ಒಂದು ಸ್ವಪ್ನವೆಂದು ಯಾರಾದರೂ ಅಭಿಪ್ರಾಯಪಟ್ಟುಕೊಳ್ಳಬಾರದು. ಇವರನ್ನು ಎರಡು ವರುಷಗಳ ಹಿಂದೆ ಚುನಾಯಿಸಿದ್ದೇ ಮೊದಲು ಎಂದು ತಿಳಿದುಕೊಂಡು ಆ ರೀತಿಯನ್ನೂ ಅದರಲ್ಲಿಯ ನೀತಿಯನ್ನೂ ವರ್ಣಿಸುತ್ತೇನೆ. ಹೊಸ ಏರ್ಪಾಡುಗಳನ್ನು ಏನಾದರೂ ಮಾಡಿದ್ದರೆ ಕ್ಷಮಿಸಿ. ಸಭೆಯು ನೆರೆಯುವ ಪ್ರಾತಃಕಾಲದಲ್ಲಿ ಆ ದಾರಿಗಾಗಿ ನನ್ನ ಕೆಲಸದ ಮೇಲೆ ಹೋಗುತ್ತಿದ್ದೆನು. ನನ್ನನ್ನು ಒಬ್ಬ ಮಿತ್ರರು ಕರೆದರು. ಅವರ ಎದೆಯ ಮೇಲೆ ಒಂದು ಕೆಂಪು ಬಟ್ಟೆಯ ಹೂವು ಇತ್ತು. ಅವರು ನನ್ನನ್ನು ವಾಲಂಟೀಯರ್ ಆಗಬೇಕೆಂದು ಕೇಳಿದರು. ಹಾಗೆ ಕೇಳುವುದು ನನ್ನನ್ನು ಪರಿಹಾಸ್ಯ ಮಾಡಿದಂತೆ ತೋರಿತು. ಸ್ವಲ್ಪ ಸಮಯದಲ್ಲಿ ಅವರ ದಳವಾಯಿಯು ಅಲ್ಲಿಗೆ ಬಂದು ಉತ್ಸಾಹದಿಂದ ಒಂದು ಹೂವನ್ನೂ ನೂಚಿಯನ್ನೂ ಕೊಟ್ಟರು. ನಾನು ನನ್ನ ಕೆಲಸವನ್ನು ನ್ಯಾಯವಾಗಿ ಮಾಡಿದೆನೋ ತಿಳಿಯದು. ಆದರೆ ನಾನು ಸ್ವಯಂಸೇವಕನಾಗಿರಲಿಲ್ಲ. ಆಗಲೇ ನಾನು ಈ ರೀತಿಯ ಚುನಾವಣೆಯನ್ನು ನಮ್ಮಲ್ಲಿಯೇ ಹೇಳಿಕೊಂಡು ನೆಗಾಡಿ ಎಲ್ಲರನ್ನೂ ನೆಗಾಡಿಸಿದೆನು. ಆದರೆ ಬೇರೆ ರೀತಿಯಿಂದ ಚುನಾಯಿಸಿ ಅವರಿಗೆ ಉಡುಪು ವಗೈರೆ ಕೊಟ್ಟರೆ ಖರ್ಚು ಹೆಚ್ಚಾಗುವುದೆಂದು ಅವರ ಮುಖ್ಯಸ್ಥರು ಅಭಿಪ್ರಾಯಪಟ್ಟರು. ಅದು ಸಹಜವೆಂದು ಎಲ್ಲರೂ ಒಪ್ಪಿದೆವು. ಮೀಟಿಂಗ್ ಆದಮೇಲೆ ಸ್ವಯಂ ಸೇವಕರಲ್ಲಿ ಕೊಂಚಮಟ್ಟಿಗೆ ಜಗಳವಾಗುತ್ತದೆಂಬ ವರ್ತಮಾನವು ಸುಳ್ಳಾಗಿರಬೇಕು. ಹಾಗಿದ್ದರೆ ಅವರಲ್ಲಿನ ಸರಿಸಮಾನತ್ವವೇ ಅದಕ್ಕೆ ಕಾರಣ.

ಆದರೆ ನಮ್ಮಲ್ಲಿನ ಕೆಲವು ಮಹನೀಯರು ಬೆಳಗಾಮಿಗೆ ಹೋಗಿ ಅಲ್ಲಿನ ನವೀನ ರೀತಿಗಳನ್ನು ನೋಡಿ ವರ್ಣಿಸಿದ್ದನ್ನು ಓದುವಾಗ ನನಗೆ ಒಂದು ಆಲೋಚನೆಯು ಹೊಳೆಯಿತು. ಇದು ಮಹತ್ತಾದ ಸಂಗತಿ ಏನೂ ಅಲ್ಲ. ಆದರೆ ಈ ಹನಿಯು ಮುತ್ತುಚಿಪ್ಪಿನೊಳಗೆ ಬಿದ್ದಿದ್ದರೆ ಮುತ್ತಾಗುತ್ತಿತ್ತು. ಆದರೂ ಇರಲಿ ನೋಡುವ.

ಕಾರ್ಯದರ್ಶಿಗಳು ಸ್ವಯಂಸೇವಕರ ಮುಖ್ಯಾಧಿಕಾರಿಯಾಗಲು ಕಾರ್ಯಭಾರದ ಕಾರಣ ಅಸಮರ್ಥರಾಗುವರಾದ್ದರಿಂದ ತಮಗೆ ತಿಳಿದಮಟ್ಟಿಗೆ ಯೋಗ್ಯರೊಬ್ಬರನ್ನು ಈ ಹುದ್ದೆಗೆ ನಿಯಮಿಸುವುದು ಉತ್ತಮ. ಈ ಮಹನೀಯರು ಸ್ವಯಂಸೇವಕರ ದಳವಾಯಿಯಾದರೂ ಸ್ವಯಂಸೇವಕನಾಗಬೇಕೆಂದು ಅವಶ್ಯಕತೆ ತೋರುವುದಿಲ್ಲ. ಇದಾದಮೇಲೆ ಸಂಘದವರ ಪೈಕಿ ನ್ಯಾಯಶೀಲರಾಗಿಯೂ ಕೆಲಸದಲ್ಲಿ ಸ್ವಾರ್ಥಪರರಲ್ಲದವರಾಗಿಯೂ ಮತ್ತು ಸ್ವಯಂಸೇವಕರಾಗಿಯೂ ಇರುವ ನಾಲ್ವರನ್ನು ಚುನಾಯಿಸಿಕೊಳ್ಳುವುದು. ಹೆಚ್ಚಿಗೆ ಬೇಕಾಗಬಹುದಾದ ಸೇವಕರನ್ನು ವಿದ್ಯಾರ್ಥಿಗಳಿಂದ ಚುನಾಯಿಸುವುದು. ಈ ದೇಶದಲ್ಲಿರುವ ಅಥವಾ ಹೊರಗೆ ಓದುತ್ತಿರುವ ವಿದ್ಯಾರ್ಥಿಗಳಿಗೆಲ್ಲಾ ಈ ಸಮಯದಲ್ಲಿ ರಜೆ ಇರುತ್ತೆ. ವಿದ್ಯಾರ್ಥಿಗಳಲ್ಲಿ ಮೂರು ದಿನದ ಮಟ್ಟಿಗೆ ಬೇಕು ಎಂದು ಪತ್ರಿಕೆಯಲ್ಲಿ ಪ್ರಕಟಿಸಿದರೆ ಖಂಡಿತವಾಗಿಯೂ ಹೆಚ್ಚು ಜನರು ಮುಂದೆ ಬರುವರು, ಇದೀಗ ಸ್ವಯಂಸೇವೆ. ಇವರು ಯುವಕರಾದ್ದರಿಂದ ವಯಸ್ಸಿನವರೂ ಅನುಭವಶಾಲಿಗಳೂ ಆದ ದಳವಾಯಿಗೆ ವಿಧೇಯರಾಗಿರುವರೆಂದು ನಾನು ನಂಬುತ್ತೇನೆ.

ಇದಲ್ಲದೇ ಸಂಘದ ಮೇಲೆ ವಿದ್ಯಾರ್ಥಿಗಳಿಗೆ ಅಭಿಮಾನ ಹೆಚ್ಚಲಿಕ್ಕೂ ಅವರ ಉದ್ಯೋಗದ ಯೋಗ್ಯತೆಯನ್ನು ತೋರಿಸಲಿಕ್ಕೂ ನ್ಯಾಯವಾದದ್ದೇ. ಈ ಕೆಲಸವನ್ನು ಮಾಡಿದರೆ ರಾಜ್ಯಕಾರ್ಯದಲ್ಲಿ ವಿದ್ಯಾರ್ಥಿಗಳು ಕೈಹಚ್ಚುವರೆಂದು ಸಂಶಯವು ತಲೆದೋರಿದರೆ ಅವರಿಗೆ ಹೇಳುವುದು ಇಷ್ಟೇ. ಬೆಳಗಾಮಿನಲ್ಲಿ ಜನರೆಲ್ಲಾ ತಂಡ ತಂಡವಾಗಿ ಸಮ್ಮೇಳನ ಸೇರಿಗೆ ಹೋಗುತ್ತಿದ್ದಾಗ, ಸಣ್ಣ ಸಣ್ಣ ವೀರ ಸ್ವಯಂಸೇವಕರು ಅಲ್ಲಲ್ಲಿ ಗೂಟಗಳಂತೆ ಮಿಟಮಿಟನೆ ನೋಡುತ್ತಾ ಅವರ ಕೆಲಸವನ್ನು ಮಾಡುತ್ತಿದ್ದರಂತೆ. ಅವರನ್ನು ಪರೀಕ್ಷಿಸುವುದಕ್ಕಾಗಿ ಯಾರೋ ಮಹನೀಯರು ಈ ರೀತಿ ಪ್ರಶ್ನಿಸಿದರಂತೆ. "ಎಲ್ಲರೂ ಹೋಗಿ ಮಹಾತ್ಮರವರ ದರ್ಶನ ತೆಗೆದುಕೊಂಡು ಅವರ ಅಮೃತಮಯವಾದ ನುಡಿಗಳನ್ನು ಕೇಳಿ ಧನ್ಯರಾಗುವಾಗ

ವು ಯಾಕೆ ಇಲ್ಲಿಯೇ ನಿಂತು ಈ ಸುಸಂದರ್ಭವನ್ನು ಕಳೆದುಕೊಳ್ಳುತ್ತೀರಿ" ಎಂದು ಕೇಳಿದ್ದಕ್ಕೆ "ನಾವು ನಮ್ಮ ಈ ಸೇವೆಯಿಂದ ಧನ್ಯರಾಗುತ್ತೇವೆ" ಎಂದು ಹತ್ತು ವರುಷ ಪ್ರಾಯದ ಒಬ್ಬ ಬಾಲಕನು ಉತ್ತರವನ್ನಿತ್ತನಂತೆ. ಈ ಎದು ಶಬ್ದಗಳು ಯಾವ ಮಹಾತ್ಮರ ಬಾಯಿಯನ್ನು ಶಾನೆ ಶೋಭಾಯಮಾನವಾಗಿ ಮಾಡದು. ಈ ರೀತಿ ರಾಜ್ಯಕಾರ್ಯಕ್ಕೆ ಕೈ ಹಚ್ಚದೆ ಅತಿಥಿಗಳ ಅನುಕೂಲತೆಗೆ ಗಮನಕೊಡುವಂತ ಬಾಲಕರು ನಮ್ಮಲ್ಲಿ ದೊರಕರೇ? ಈ ಸಂಶಯವು ತಲೆದೋರುವುದೇ? ಆ ಪಕ್ಷ ಒಮ್ಮೆ ಪ್ರಯತ್ನಿಸಿ. ನಾವು ಕೊಡಗರಾದ ಮಾತ್ರಕ್ಕೆ ಬಾಲಕರಲ್ಲವೇ?

ಉಡುಪಿನಲ್ಲಿ ಒಗ್ಗಟ್ಟು ಮಾಡುವ ಶಕ್ತಿ ಇದೆ, ಇದರ ವಿಶೇಷವನ್ನು ವರ್ಣಿಸಲು ಮೊದಲುಮಾಡಿದರೆ ಕೊನೆಯೇ ಇಲ್ಲ. ಗಾಂಧಿ ಟೋಪಿ ಮತ್ತು ಪೊಲೀಸಿನವರ ಕುಮಾಲು ನೋಡಿದರೆ ಸಾಕು. ಈ ಕಾರಣ ಸ್ವಯಂಸೇವಕರಿಗೆ ಕುಪ್ಪಸ ದಟ್ಟಿ, ಪಂಚೆ ಅಂಗಿ, ಅಥವಾ ಇಜಾರ ಅಂಗಿ ಮಾಡಿಸುವ ಎಂದರೆ "ಮಾತೇನೋ ಒಳ್ಳೆದು ಆದರೆ ಹಣಕ್ಕೆ ಅಡಚಣೆ ಅನ್ನುವರು" ಸಂಗತಿಯು ವಾಸ್ತವ್ಯವೆ. ಆದರೆ ಇಷ್ಟು ಮಾಡಬಹುದು, ಒಬ್ಬೊಬ್ಬರಿಗೆ ಒಂದು ಪಾದಿ ಎಲೆವಸ್ತ್ರವನ್ನು ತಲೆಗೆ ಕಟ್ಟಿಕೊಂಡರ ಅದೇ ಸ್ವಯಂಸೇವಕರ ಸಮವಸ್ತ್ರ ಉಡುಪು.

ಸೂಚನೆಗೆ ಕ್ಷಮಿಸಿ. ಇದು ಸ್ವಾತಿ ನಕ್ಷತ್ರದ ಮಳೆ ಹನೀ ಹೌದು, ಆದರೆ ಮುತ್ತಿನಚಿಪ್ಪು ಬಾಯಿಬಿಟ್ಟಿರುವುದೋ ನೋಡುವ, ಅದೃಷ್ಟವಶಾತ್ ಬಾಯಿ ತೆರೆದಿದ್ದರೆ ಸ್ವಯಂಸೇವಕರೆಂಬ ಒಂದು ಮುತ್ತಿನ ಹಾರವು ನಮ್ಮ ಈ ಸಭೆಯ ಅಮೂಲ್ಯವೂ ಶಾಶ್ವತವೂ ಆದ ಆಭರಣವಾಗುವುದು.

'ಸರಸ್ವತಿ'

ದೇವಿ ಡಿಬೇಟಿಂಗ್ ಸೊಸೈಟಿ.

'ಅಭಿಲಾಷಿ' ಯವರು ಫೆಬ್ರುವರಿ 13ನೆಯ ಸಂಚಿಕೆಯಲ್ಲಿ ದೇವಿಡಿಬೇಟಿಂಗ್ ಸೊಸೈಟಿಯ ವಿಷಯ ಬರೆದದ್ದನ್ನು ನೋಡಿದರೆ ಒಂದಾನೊಂದು ಕಾಲದಲ್ಲಿ ಇದರ ಮೆಂಬರುಗಳಾಗಿದ್ದವರ ಮನಸ್ಸಿನಲ್ಲಿ ಬಹಳ ವಿಧವಾಗಿ ಯೋಚನೆಯಾಗುವದು, ಮಾಡತಕ್ಕದ್ದೇನು?

ಕೆಲವು ವರ್ಷಗಳ ಹಿಂದೆ ಈ ಸಂಘವು ಬಹಳ ಉನ್ನತ ಸ್ಥಿತಿಯಲ್ಲಿತ್ತು. ಮೆಂಬರುಗಳು ಶ್ರದ್ಧೆಯಿಂದ ಕೆಲಸಮಾಡುತ್ತಿದ್ದರು. ವಾಡಿಕೆಯಾಗಿ ಹೈಸ್ಕೂಲ್ ಹೆ. ಮಾಸ್ತರೇ ಇದರ ಪ್ರೆಸಿಡೆಂಟರು. ಇವರೂಸಹ ಇದಕ್ಕೆ ಉತ್ತೇಜನವನ್ನು ಕೊಡುತ್ತಿದ್ದರು. ಮೆಂಬರುಗಳ ಸಾಹಕಾರ್ಯಕ್ಕಾಗಿ ನಾನಾ ವಿಧವಾಗಿ ಕೆಲಸಮಾಡುತ್ತಿದ್ದರು. ಸೊಸೈಟಿಯ ಹಣದಿಂದ ಪತ್ರಿಕೆಗಳನ್ನು ತರಿಸುವುದಲ್ಲದೆ ಅವರು ಸಹ ಕೆಲವು ಪತ್ರಿಕೆಗಳನ್ನು ಸೊಸೈಟಿಗೆ ಇನಾಮಾಗಿ ಕೊಡುತ್ತಿದ್ದರು. ಈ ಚೇಜಿಗೆ ಇದೆಲ್ಲವೂ ಕಮ್ಮಿಯಾಗುತ್ತಾ ಬಂತು. ನವೀನ ಕಾನೂನುಗಳು ತಲೆದೋರಿದವು. ಮೆಂಬರುಗಳ ಮನಸ್ಸು ನೊಂದಂತಾಯಿತು. ಇವರ ಪ್ರಯತ್ನವು ಬೆಂಕಿಗೆ ನೀರೆರೆದಂತಾಯಿತು. ಮೀಟಿಂಗುಗಳು ಕಡಮೆಯಾಗುತ್ತಾ ಬಂದವು. ಹೀಗಾದನಂತರ ಪತ್ರಿಕೆಯ ಸಂಪಾದಕರಿಂದ ನೋಟೀಸ್ ಬಂದರೆ 'ಅಭಿಲಾಷಿ' ಯವರಿಗೆ ವಿಚಿತ್ರವೇನು? ಆಶ್ಚರ್ಯವೇನು? ಸದಾ ಕಳುಹಿಸುತ್ತಿದ್ದ ಪತ್ರಿಕೆಯು ಸಂಘದ ನೌಕರನಿಗೆ ಸಿಕ್ಕಿರಬೇಕು. ಪ್ರೆಸಿಡೆಂಟರು, ವೈ. ಸೆಕ್ರೆಟರಿಗಳು ಇದರ ವಿಷಯ ತಿಳಿದಿರಬೇಕು.

ಇದರ ಪುಸ್ತಕ ಬಂಡಾರದ ವಿಷಯ ಮೆಂಬರುಗಳನ್ನು ಲೈಬ್ರೇರಿಯನಾಗಳನ್ನು ದೂರಬೇಕು. ಕೆಲವು ಮೆಂಬರುಗಳು ಪುಸ್ತಕ ತೆಗೆದುಕೊಂಡರೆ ಹಿಂತಿರುಗಿ ಕೊಡಲು ಮನಸ್ಸು ಕಮ್ಮಿ. ಪುಸ್ತಕಬಂಡಾರಿಗಳು ತಾವು ಶಾಲೆಬಿಟ್ಟು ಹೋಗುವ ಸಮಯದಲ್ಲಿ ತೆಗೆದುಕೊಂಡು ನಡೆಯುವರು. ಈ ದೂರಿಕೆಗೆ ನಾನು ಎಲ್ಲಾ ಮೆಂಬರುಗಳನ್ನೂ ಬಂಡಾರಿಗಳನ್ನೂ ಗುರಿಮಾಡುವದಿಲ್ಲ. ಬುಕ್ ಕೀಪಿಂಗಿನಲ್ಲಿ ಉನ್ನತ ತರಗತಿಯಲ್ಲಿ ಕೇರ್ಗಡೆ ಹೊಂದಿದವರನ್ನು ಮಾತ್ರ. ಅಧಿಕಾರಿಗಳು ಸ್ವಲ್ಪ ಎಚ್ಚರಿಕೆ ತೆಗೆದುಕೊಂಡಿದ್ದರೆ ಹೀಗಾಗುತ್ತಿರಲಿಲ್ಲವೆಂದು ತೋರುತ್ತೆ.

ಇದೆಲ್ಲವೂ ಹಾಗಿರಲಿ. ಆದದ್ದು ಏನೋ ಆಯಿತು. ಇನ್ನಾದರೂ ಮೆಂಬರುಗಳು ಈ ಸಂಘವನ್ನು ಉರ್ಜಿತಸ್ಥಿತಿಗೆ ತರಲು ಯಾಕ ತಕ್ಕ ಏರ್ಪಾಡುಗಳನ್ನು ಮಾಡಬಾರದು. ನೀವು ಒಳ್ಳೆಯಕೆಲಸಮಾಡಿದರೆ ನಿಮ್ಮ ಹೆಸರು ಚಿರಕಾಲ ಸಂಘದ ಸ್ಮರಣೆಯಲ್ಲಿರುವದು. ಈ ಸಂಘವನ್ನು ಅತಿ ಉನ್ನತ ಸ್ಥಿತಿಯಲ್ಲಿಟ್ಟಿದ್ದ ಮೆ. ಕೆ. ಎಂ. ಐಯ್ಯಣ್ಣನವರ ಹೆಸರು ಆ ಸಮಯದಲ್ಲಿ ಮೆಂಬರುಗಳಾಗಿದ್ದವರ ಸ್ಮರಣೆಯಲ್ಲಿ ಈಗಲೂ ಇರುವದು. ಬಾಲ್ಯದಲ್ಲಿ ಸಣ್ಣ ಸಂಘಗಳನ್ನು ನಡಿಸಲು ಶಕ್ತರಾದರೆ ಮುಂದಕ್ಕೆ ದೇಶದ ಕಾರ್ಯವನ್ನು ಸರಿಯಾಗಿ ನಡಿಸಲು ಶಕ್ತರಾಗುವರು. ಇವೆಲ್ಲವೂ ಮುಂದಕ್ಕಿರುವ ಪಾಠಗಳು.

ಈ ಸಂಘವು ಒಬ್ಬ ಕೊಡಗಿನ ಬಾಲಕನ ಹೆಸರಿನಲ್ಲಿ ಮಾಡಿದ್ದು. ಆದ್ದರಿಂದ ಪ್ರತಿಯೊಬ್ಬ ಕೊಡಗಿನ ವಿದ್ಯಾರ್ಥಿಯೂ ಹೆಚ್ಚು ಶ್ರದ್ಧೆಯಿಂದ ಕೆಲಸಮಾಡತಕ್ಕದ್ದು. ವಿದ್ಯಾರ್ಥಿಗಳೇ ಪ್ರಾರಂಭಮಾಡಿದ್ದು. ಆದ್ದರಿಂದ ವಿದ್ಯಾರ್ಥಿಗಳು ಇದರ ಏಳಿಗೆಯಲ್ಲಿ ಶ್ರದ್ಧೆವಹಿಸಬೇಕು.

'ಮನೋಹರ'

ಕೊಡಗು ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟ್.

ಅಯ್ಯ,

ನಮ್ಮ ದೇಶದಲ್ಲೆಲ್ಲಾ ಬಸ್ಸು ಮತ್ತು ಕಾರ್ ಸರ್ವಿಸುಗಳು ದಿನೇ ದಿನೇ ಹೆಚ್ಚುತ್ತಾ ಬಂದಂತೆ ರಸ್ತೆಗಳು ಹೀನಸ್ಥಿತಿಗೆ ಬರುವದು ಸಹಜವೆ. ಆದರೆ ಪಬ್ಲಿಕ್ಕಿನ ಕ್ಷೇಮಕ್ಕೆ ಭಂಗವಿಲ್ಲದರೀತಿ ರಿಪೇರಿ ಬಗ್ಗೆ ನಿಗ ಅವಶ್ಯವಿದೆ. ಕೆಲವು ರಸ್ತೆಗಳಲ್ಲಿ ಚದರಿ ಇರುವ ಮೆಟ್ಲಿಂಗ್ ಕಲ್ಲುಗಳನ್ನು ಹೆರಕಿಸುವದೇ ದುರ್ಲಭವೆಂದು ಕಾಣುತ್ತೆ. ಕಳೆದ ವರ್ಷ ಮಳೆಯ ಹೆಚ್ಚಿನ ಪ್ರಬಲತ್ವದಿಂದ ರಸ್ತೆಗಳಲ್ಲಿ ನೀರಿನ ಪ್ರವಾಹವೇ ಆಗಿತ್ತು. ಈಗ ದೂಳಿನ ಪ್ರವಾಹವೇ ಹೆಚ್ಚುತ್ತಾ ಅದರಲ್ಲು ಕೇಳಾಡುವ ಅಸಂಖ್ಯಾತವಾದ ಮೆಟ್ಲಿಂಗು ಕಲ್ಲುಗಳ ದೆಸೆಯಿಂದ ಸೈಕಲ್ ಮತ್ತು ಕಾರುಗಳನ್ನು ಜಿಂದಿಸೋಪಾದಿಯಲ್ಲಿ ಎತ್ತಿ ಬಿಸಾಡುತ್ತವೆ. ಕೂತುಕೊಂಡವರಿಗೂ ಭಯವನ್ನುಂಟುಮಾಡುವದಲ್ಲದೆ ಟೈರುಗಳಿಗೂ ಬಾಳಿಕೆ ಕಡಿಮೆಮಾಡುತ್ತವೆ. ಮಡಿಕೇರಿ ಮೂರ್ನಾಡು ರಸ್ತೆಯು 12½ ಮೈಲುಗಳ ವರೆಗೂ ಇದೇಪರಿ ಹೀನಸ್ಥಿತಿಯಲ್ಲು ಕಂಡುಬರುತ್ತೆ.

ಅಮ್ಮತ್ತಿ ಮೂರ್ನಾಡು ರಸ್ತೆಯಲ್ಲಿ ಇರುವ ಕುಮ್ಮೆ ಹೊಳೆಯ ಸೇತುವೆಯೂ ಬಹಳ ಬಲಹೀನವಾಗಿರುವದ್ದರಿಂದ ಬರ್ಗಾಡಿಗಳನ್ನು ಅದರಮೇಲೆ ಬಿಡುವದು ಸಹ ಅಪಾಯಕರವಾಗಿದೆ. ಆ ರಸ್ತೆಯಲ್ಲಿ ಅನೇಕ ಪಶ್ಚಿಮದ ಗಾಡಿಗಳು, ಕಿತ್ತಳೆ ಗಾಡಿಗಳು ರಸ್ತೆ ಆಗುವ ಕಾರಣ ಕೂಡಲೆ ದುರಸ್ತು ಮಾಡಿಸುವದು ಅವಶ್ಯವಿದೆ. ಈಗ ದ ರಸ್ತುವೂ ಇರುವ ಸ್ಥಿತಿಯು ತೃಪ್ತಿಕರವಾಗಿಲ್ಲ. ಗಾಡಿ ಚಕ್ರಗಳು ದೂಳಿನೊಳಗೆ ಹೂಣಿಕೊಂಡು ಬಡ ಎತ್ತುಗಳಿಗೆ ತುಂಬಾ ಹಿಂಸೆ ಕೊಡಬೇಕಾಗುತ್ತೆ.

ಮಡಿಕೇರಿ ಸಿದ್ದಾಪುರ ರಸ್ತೆಯು 5ನೆ ಮೈಲಿನಿಂದ 10ನೆ ಮೈಲಿನವರೆಗೂ ಅಮ್ಮತ್ತಿ ಪೊನ್ನಂಪೇಟೆ ರಸ್ತೆಯ 3ನೆ ಮೈಲಿನಿಂದ 3ನೆ ಮೈಲಿನ ವರೆಗೂ ಬಹು ಅಪಾಯಕರವಾದ ತಿರುವುಗಳಿವೆ. ಆದರೆ ಇಂಥಾ ತಿರುವುಗಳಲ್ಲೆಲ್ಲಾ ಹೆಚ್ಚಾಗಿ ಮೆಟ್ಲಿಂಗ್ ಕಲ್ಲುಗಳನ್ನು ರಸ್ತೆಬಾಜು ಒಟ್ಟುಮಾಡಿ ಇಟ್ಟಿದ್ದಾರೆ. ಮೋಟಾರ್‌ಕಾರುಗಳಿಗೆ ಗಾಡಿಗಳು ಎದುರಾಗಿ ಬಂದರೆ ಕೂಡ್ಲೆ ಬಾಜುಮಾಡುವದು ಅಪಾಯಕರವಾಗಿದೆ. ಆದಕಾರಣ ಮೇಲಿನ ಅಧಿಕಾರಿಗಳು ಈ ರಸ್ತೆಗಳ ಸ್ಥಿತಿಯನ್ನು ಅಜಮಾಯಿಸಿ ಪಡಸ ನಿಗಾ ತೆಗದುಕೊಳ್ಳುವರಾಗಿ ನಂಬುತ್ತೇನೆ.

ಒಬ್ಬ ಮೋಟಾರಿಸ್ಟ್.

ಮಂಗಳೂರಿನ ಕೊಡಗು ವಿದ್ಯಾರ್ಥಿಗಳ ಸಂಘ.

ಈ ಸಂಘದ ವಾರ್ಷಿಕ ಸಮ್ಮೇಳನವು ಕಳೆದ ತಿಂಗಳು 22ನೇ ಭಾನುವಾರ 1 ಗಂಟೆಗೆ ಮೆ. ಪಟ್ಟಮಾಡ ಐಯ್ಯಂಣನವರ ಭವನದಲ್ಲಿ ಸಂಭ್ರಮದಲ್ಲಿ ನಡೆಯಿತು. ಮೆ. ಬಿದ್ದಂಡ ಕಾರ್ಯಪ್ಪ E. A. C ಯವರೂ ಮತ್ತು ನಡಿಕೇರಿಯಂಡ ಐಯ್ಯಂಣನವರೂ ಅತಿಥಿಗಳಾಗಿದ್ದರು.

ಫಲಹಾರಾದಿಗಳು ಮುಗಿದನಂತರ ಒಂದು ವಿದ್ಯಾರ್ಥಿಭವನವನ್ನು ಏರ್ಪಾಡುಮಾಡುವ ವಿಷಯವು ಚರ್ಚೆಯಾಯಿತು. ಈ ವಿಷಯವು ಮೊದಲೇ ಅತ್ಯಾವಶ್ಯವೆಂದು ಕಂಡು ಬಂದು ಕೊಂಚ ಪ್ರಯತ್ನಪಟ್ಟು ಧನಲಕ್ಷ್ಮಿ ಒಲಿಯದಿದ್ದ ಕಾರಣ ಕಾರ್ಯವು ಸಫಲವಾಗದಿದ್ದಕ್ಕೆ ಸಭಿಕರು ವ್ಯಸನ ಸೂಚಿಸಿದರು. ಇಂತಾದರೂ ಈ ಕೂಸಿನಂತಿರುವ ಸಂಘವನ್ನು ಪಾಲಿಸಿದ್ದು ಮೆ. ಕೋಳೆರ ಪೊನ್ನಪ್ಪನವರ ಏಕೈ ಪ್ರಯತ್ನದಿಂದವೆಂದು ಖಂಡಿತವಾಗಿಯೂ ಹೇಳಬೇಕು. ಹೇಗೂ ಇಲ್ಲಿ ಒಂದು ವಿದ್ಯಾರ್ಥಿಭವನ ಅವಶ್ಯಕತೆಯು ವರ್ಷಂಪ್ರತಿ ಹೆಚ್ಚುತ್ತಿರುವದರಿಂದ ಯಾವ ರೀತಿಯಲ್ಲಿ ಈ ಕೆಲಸವನ್ನು ನೆರವೇರಿಸಬಹುದೆಂದು ಚರ್ಚೆಯಾಯಿತು.

ಕೊನೆಗೆ ಮೆ. ಕಾರ್ಯಪ್ಪನವರು ಶ್ರಮ ತೆಗೆದುಕೊಂಡು ವಿದ್ಯಾರ್ಥಿಗಳ ಹಿತಚಿಂತಕರಾದ ಕೊಡಗು ದೇಶಾಭಿಮಾನಿಗಳಿಂದ ದ್ರವ್ಯ ಸಹಾಯ ಪಡೆಯಬೇಕೆಂದು ಎಲ್ಲರೂ ಏಕ ಕಂಠದಿಂದ ಕೇಳಿಕೊಂಡರು. ಅದಕ್ಕೆ ಮೆ. ಕಾರ್ಯಪ್ಪನವರು ಖಂಡಿತವಾಗಿಯೂ ತನ್ನ ಕೈಯಲ್ಲಾದ ಮಟ್ಟಿಗೆ ಕೆಲಸಮಾಡುವೆನೆಂದು ವಾಗ್ದಾನವಿತ್ತರು.

ನಂತರ ಮೆ. ಪೊನ್ನಪ್ಪನವರು ತಲಚೇರಿಗೆ ವರ್ಗವಾಗಿ ಹೋಗುವ ಕಾರಣ ಮೆ. ನೋಮೆಯಂಡ ತಮ್ಮಯ್ಯನವರನ್ನು ಮುಂದಿನ ವರ್ಷಕ್ಕೆ ಅಧ್ಯಕ್ಷರನ್ನಾಗಿ ಚುನಾಯಿಸಿದರು. ಈ ನಡೆಯಲ್ಲಿ ಒಂದುಮಾತು. ಮೆ. ಪೊನ್ನಪ್ಪನವರು ಮಂಗಳೂರಿನಿಂದ ಹೋಗುವದು ಇಲ್ಲಿಯ ಕೊಡಗರಿಗೆಲ್ಲಾ ಬಹಳ ವ್ಯಸನಕರವಾದ ಸಂಗತಿಯಾಗಿದೆ. ಇವರಿಗೆ ಚಿರಾಯುಆರೋಗ್ಯ ಸಂಪತ್ತನ್ನು ದೇವರು ದಯಪಾಲಿಸಲೆಂದು ನಮ್ಮ ಪ್ರಾರ್ಥನೆ.

ತರುವಾಯ ಮೆ. ಬಿ. ಕಾರ್ಯಪ್ಪನವರನ್ನು ಗೌರವ ಆರ್ಗನೈಜಿಂಗ್ ಕಾರ್ಯದರ್ಶಿಯನ್ನಾಗಿ ಚುನಾಯಿಸಿದರು. ನಡಿಕೇರಿಯಂಡ ಪೊಣ್ಣಪ್ಪನವರನ್ನು ಸಂಘದ ಕಾರ್ಯದರ್ಶಿಯನ್ನಾಗಿ ಚುನಾಯಿಸಿದರು. ಮಂಡೇಪಂಡ ಕಾಳಪ್ಪನವರನ್ನು ಕೋಶಾಧ್ಯಕ್ಷರನ್ನಾಗಿ ಚುನಾಯಿಸಿದರು.

ಮುಂದಿನ ಮತ್ತು ಇಂದಿನ ಅಧ್ಯಕ್ಷರಿಗೂ ಅತಿಥಿಗಳಿಗೂ ವಂದನೆಯನ್ನರ್ಪಿಸಿ ಸಭೆಯು ಮುಕ್ತಾಯವಾಯಿತು.

ತಾ 21-2-1925, ನ. ಸ. ಪೊಣ್ಣಪ್ಪ,
ಮಂಗಳೂರು. ಗೌ. ಕಾರ್ಯದರ್ಶಿ.

ಗೌಡುಗಳಲ್ಲಿ ವಿನಂತಿ.

ಮಹಾಶಯರೆ,

ನಮ್ಮ ಜನಾಂಗದವರನೇಕರು ಅವಿದ್ಯಾವಂತರಾದ ದೆಸೆಯಿಂದ ನಮ್ಮವರ ನಾಗರೀಕತೆಯು ಕೇವಲ ಹಿಂದುಳಿದ ವಿಷಯವಾಗಿದೆ. ಈಗಿನ ಕಾಲದಲ್ಲಿ ವಿದ್ಯಾವಂತರ ದೃಷ್ಟಿಯು ಮಾತೃದೇಶದ ಮೇಲೆಯೂ ತನ್ನ ಮತದ ಮೇಲೆಯೂ ಬಹುಕಡಮೆ. ಅನೇಕ ಬುದ್ಧಿವಂತರು ಮತದೇಳಿಗೆಯಲ್ಲಿ ಸದಾ ಪ್ರಯತ್ನಪಡುತ್ತಾ ಆವ ದಿವಸ ಕೊನೆಗಾಣುವದೋ ಎಂದು ಯೋಚಿಸುತ್ತಾ ಕರಗುತ್ತಿರುವವರಿಗೆ ದ್ರವ್ಯ ಸಹಾಯ ಸಿಕ್ಕದ್ದೊಂದು ದೊಡ್ಡ ತೊಂದರೆ. ಹೀಗೆ ಕರಗುತ್ತಿರುವ ಮಹಾಪುರುಷರಿಗೆ ಧನ ಲಕ್ಷ್ಮಿಯು ವಶವಾಗಿದ್ದಿದ್ದರೆ ನಮ್ಮವರನ್ನು ನಾಗರೀಕತನಕ್ಕೆ ಬಹುಶಃ ಎಳೆಯುತ್ತಿದ್ದರು.

ಐಶ್ವರ್ಯವಂತರಾದವರು ನಿರಂತರ ಹ್ಯಾಟ್, ಬೂಟ್, ಕಾಲರ್, ಟೈ ಮುಂತಾದವುಗಳ ಮೇಲೆ ಮಗ್ನರಾಗಿರುವರೇ ಹೊರತು ತಮ್ಮ ಮತವನ್ನು ಉದ್ಧಾರಮಾಡೋಣವೆಂಬ ಜ್ಞಾನವು ಅವರಿಗಿರುವದಿಲ್ಲ. ಇದು ನ್ಯಾಯವೆ?

ಕುಲಬಾಂಧವರೆ, ನಾನುಹಿಂದೆಯೂ ನಮ್ಮವರ ಏಳಿಗೆಯ ವಿಚಾರವಲ್ಲಿ ಒಕ್ಕಲಿಗರ ಪತ್ರಿಕೆಯಲ್ಲಿಯೂ, ಮಾತೃದೇಶದ ಪತ್ರಿಕೆಯಲ್ಲಿಯೂ ಕೆಲವು ವಿಚಾರಗಳನ್ನು ಪ್ರಕಟಿಸುತ್ತಿರುವ ವಿಚಾರವು ಸಕಲರಿಗೂ ವೇದ್ಯವಿರಬಹುದಾಗಿ ನಂಬುತ್ತೇನೆ. ಮನುಷ್ಯನಾದವನು ಬುದ್ಧಿವಂತಿಕೆಯ ಮಾತುಗಳಿಗೆ ಕಿವಿಗೊಡಬೇಕಾಗಿರುವದು ಧರ್ಮ. ಅನೇಕರು ಹೀಗೆಮಾಡದೆ ದುಂದುಗಾರಿಕೆಯನ್ನೂ ತಬದ್ದಾಳಿಕೆಯನ್ನೂ ಮುಂದಕ್ಕೆ ತರುವುದೇ ಹೊರತು ದುರಾಚಾರಗಳನ್ನು ಎಂದಿಗೂ ಮಾರ್ಪಾಡಿಸಲಿಲ್ಲರು. ನಮ್ಮ ವರ್ಗಕ್ಕೆ ಸೇರಿದ ಮೈಸೂರು ಶೀಮೆಯ ಗೌಡುಗಳು, ದಕ್ಷಿಣಕನ್ನಡ ಜಿಲ್ಲೆಯ ಗೌಡುಗಳು ಮುಂದುವರಿಯುವುದಕ್ಕೆ ಮಾಡುತ್ತಿರುವ ಸಾಧನಗಳನ್ನು ನೋಡಿದರೆ ನನಗೆ ಬಹು ಸಂತೋಷವಾಗುತ್ತಿದೆ. ಆದರ ನಮ್ಮ ದೇಶದ ಸಹೋದರರ ಮೌಢ್ಯವನ್ನು ನೋಡಿದರೆ ವಿಷಾದ ಪಡಬೇಕಾಗುತ್ತೆ. ನಮ್ಮಲ್ಲಿನ ಮೌಢ್ಯವನ್ನು ಹೋಗಲಾಡಿಸಲೋಸುಗ ನಮ್ಮ ವಯೋವೃದ್ಧರು "ಗೌಡುಗಳ ವಿದ್ಯಾಭಿವೃದ್ಧಿ ಸಂಘ" ವೆಂಬುದನ್ನು ಸ್ಥಾಪಿಸಿದರು. ಅನೇಕ ಮಹನೀಯರು ನಮ್ಮ ಸಂಘ ನಮ್ಮ ಸಂಪದವೆಂದು ಹೆಚ್ಚಾಗಿ ದ್ರವ್ಯ ಸಹಾಯಮಾಡಿ ಉರ್ಜಿತಕ್ಕೆ ತಂದುದನ್ನು ಕೆಲವು ಮೂಢರು ಸಂಪದವೇಲೆ ಕೆಲವು ಆಕ್ಷೇಪಗಳನ್ನು ಉಂಟುಮಾಡಿದುದರಿಂದ ನಮ್ಮ ಸಂಘವು ಐದಾರುವರ್ಷಗಳಿಂದ ಹೀನಸ್ಥಿತಿಯಲ್ಲಿದೆ. ಆದರೆ ಪುನಃ ಈಗತಾನೆ ಚಿಗುರುವಂತೆ ಮಾಡಲ್ಪಟ್ಟ ಸಾಹಸವು ನೆರವೇರುವುದರಲ್ಲಿ ಯಾವ ಅಭ್ಯಂತರವೂ ಇರುವುದಿಲ್ಲ. ಸಂಘವು ಸ್ಥಾಪಿಸಲಾಗಾಯಿತು ನಮ್ಮ ದೇಶದ ಉದಾರ ಬುದ್ಧಿಯುಳ್ಳ ಗೌಡುಗಳು ತಮ್ಮ ಕೈಲಾದ ಮಟ್ಟಿನ ಸಹಾಯವನ್ನು ಈ ವರೆಗೂ ಮಾಡುತ್ತಾ ಬಂದುದಕ್ಕೆ ನಾನು ಅವರುಗಳ್ಲಾ ವಂದಿಸುತ್ತೇನೆ. ಹೀಗೆಯೇ ಪ್ರತಿವರ್ಷವೂ ಗೌಡ ಮಹನೀಯರೆಲ್ಲರು ತಮ್ಮ ತಮ್ಮ ಕೈಯಲಾಗುವ ಮಟ್ಟಿನ ಸಹಾಯವನ್ನು ಮಾಡಿ ಸಂಘವನ್ನು ಉದ್ಧಾರಮಾಡಬೇಕಾಗಿ ಪ್ರಾರ್ಥನೆ.

ಮಹನೀಯರೆ, ಮತ್ತು ಮಹಿಳೆಯರೆ, ನಮ್ಮ ಮಂಗಳದ ಒಸರಲ್ಲಿ ಓದು ಬರಹವನ್ನು ಕಲಿತವರ ಸಂಖ್ಯೆಯು ನೇಕಡ 15 ಇರಬಹುದೆಂದು ನಂಬುತ್ತೇನೆ. ಓದು ಬರಹ ಬರುವವರು ತಮ್ಮ ತಮ್ಮ ವಿದ್ಯಾ ಚಾತುರ್ಯವನ್ನು ಮುಂದುವರಿಸದೆ ನಿಂತನೀರಿನೋಪಾದಿಯಲ್ಲಿ ಸುಮ್ಮನಿರುವರು. ಕೈಕಸರಾದರೆ ಬಾಯಿ ಮೊಸರೆಂಬ ನಾಣ್ಣುಡಿಯನ್ನು ನಮ್ಮ ಸಹೋದರರು ತಿಳಿದು ಸುಮ್ಮನಿರುವ ಸಂಗತಿಗೆ ವಿಷಾದಪಡಬೇಕಾಗುತ್ತೆ. ಸಾಮಾನ್ಯವಾದ ವಿದ್ಯಾವಂತರು ವರ್ತಮಾನ ಪತ್ರಿಕೆಗಳನ್ನು ಓದುವದರಿಂದ ತಮ್ಮ ತಿಳುವಳಿಕೆಯನ್ನು ಕ್ರಮೇಣ ಉರ್ಜಿತಕ್ಕೆ ತರುತ್ತಾರೆಯಾದುದರಿಂದ ಓದು ಬರಹ ಬರುವ ಪ್ರತಿಯೊಬ್ಬ ಮನುಷ್ಯನು ನಮ್ಮ ಮಾತೃದೇಶದ 'ಕೊಡಗು' ಪತ್ರಿಕೆಯನ್ನು ತರಿಸಿಕೊಂಡು ಅದರಲ್ಲಿ ಬರೆಯಲ್ಪಡುವ ವಿಚಾರಗಳನ್ನು ಸಮಯ ಸಿಕ್ಕಿದಾಗಲೆಲ್ಲಾ ಓದುತ್ತಾ ಬಂದರೆ ನಿಮ್ಮ ವಿದ್ಯೆಯು ಮುಂದುವರಿಯಬಾರದೆ? ಪತ್ರಿಕೆಯ ಚಂದಾ ಮೊಬಲಗು ಬಹು ಸ್ವಲ್ಪ. ಇಷ್ಟು ಅಲ್ಪ ಹಣವನ್ನು ಪ್ರತಿವರ್ಷವೂ ಪತ್ರಿಕೆಗಳಿಗೆ ಕೊಡುತ್ತಾ ಬಂದರೆ ನಾಲ್ಕಾರು ವರ್ಷಗಳೊಳಗೆ ನಿಮ್ಮ ವಿದ್ಯೆಯಮಹಿಮೆಯು ಹೇಗಿರುತ್ತೆ ಎಂಬ ಸಂಗತಿಯನ್ನು ನೀವೇ ಯೋಚಿಸಿ ತಿಳಿದುಕೊಳ್ಳಬಹುದು. ನಿಮ್ಮ ನಿಮ್ಮ ಪಾಂಡಿತ್ಯವನ್ನು ವೃದ್ಧಿಪಡಿಸಲು ಈ ಮೇಲಿನ ವಿಷಯವು ಒಂದನೆಯದಾಗಿರುತ್ತೆಯಾದುದರಿಂದ ಇನ್ನು ಮುಂದಕ್ಕಾದರೂ ದೇಶದ ಮೇಲೂ ಮತದಮೇಲೂ ನಿಮ್ಮ ವಿದ್ಯೆಯಮೇಲೂ ವಾತ್ಸಲ್ಯವಿಟ್ಟು ಈ ಪತ್ರಿಕೆಗೆ ಚಂದಾದಾರರಾಗಬೇಕಾಗಿ ವಿನಂತಿ. ಮಹನೀಯರೆ, ಪತ್ರಿಕಾ ಆಫೀಸಿನಲ್ಲಿ ನಮ್ಮವರ ಚಂದಾದಾರರು ಎಷ್ಟಿದ್ದಾರೆಂದು ಓದುಸಲ ಬಂದುನೋಡಿ. ಈ ದೇಶದಲ್ಲಿ ನಮ್ಮವರ ಸಂಖ್ಯೆಯು ಸುಮಾರು 15 ಸಾವಿರಕ್ಕೆ ಮೀರಿದ್ದಾಗಿರುವಾಗ ನೂರು ಜನರಾದರೂ ಪತ್ರಿಕೆಗೆ ಚಂದಾದಾರರಾಗಬಾರದಿತ್ತೆ? ನಮ್ಮವರು ಯಾವ ಕಾಲಕ್ಕೆ ನಾಗರೀಕತನಕ್ಕೆ ಬರುವರೋ ಎಂಬುದು ತಿಳಿಯದ್ದರಿಂದ ನೀವೆಲ್ಲರು ಮತದ ಮೇಲೆ ಕಣ್ಣಿಟ್ಟು ನೋಡಬೇಕಾಗಿಯೂ ನನ್ನ ಮನೋ ವ್ಯಥೆಯನ್ನು ಶಾಂತಿಗೊಳ್ಳಿಸಬೇಕಾಗಿಯೂ ವಿನಂತಿ.

ಸಿ. ಡಿ. ಮುತ್ತಣ್ಣಗೌಡ,
ಜನರಲ್ ಸೆಕ್ರೆಟರಿ, ಗೌ. ವಿ. ಸಂಘ.

ಒಂದು ಪ್ರಭಲನಾದ ಪ್ರಶ್ನೆ.

ದೇಶಾಭಿಮಾನವೆಂದರೇನು?

ಕೈರಾಟೆಯಿಂದ ನೂಲುತಯಾರಿಸಿ ಮಾಡಿದಬಟ್ಟೆಯನ್ನು ಧರಿಸಿ ಆ ಮೂಲಕ ಲಕ್ಷೋಪಲಕ್ಷ ಗರೀಬ ಜನರಿಗೆ ಅನ್ನವನ್ನೊದಗಿಸುವದೇ ದೊಡ್ಡ ದೇಶಾಭಿಮಾನ.

ಇಂಥಾ 'ಖಾದಿ' ಬಟ್ಟೆಯನ್ನು ಎಲ್ಲಾ ಜನರಿಗೂ ಸುಲಭಕ್ರಯದಲ್ಲಿ ಒದಗಿಸಲಿಕ್ಕೆ ಈಗತಾನೇ ವೀರರಾಜಪೇಟೆಯಲ್ಲಿ ಒಂದು ಖಾದಿ ಭಂಡಾರವನ್ನು ತೆರೆದಿರುತ್ತೇವೆ. ಈ ಭಂಡಾರದಲ್ಲಿ ಎಲ್ಲಾತರದ ಸಾಮಾನಿಕಾದ ಮತ್ತು ಗಟ್ಟಿಯಾದ ಖಾದಿಬಟ್ಟೆಗಳೂ ವಸ್ತ್ರಗಳೂ ಸೀರೆಗಳೂ, ಟವಲು ಶಾಲುಗಳೂ, ಖಾದಿರೇಶ್ಮೆಯಿಂದ ತಯಾರಾಗಿದ ಎಲ್ಲಾತರದಬಟ್ಟೆಗಳೂ ದೊರೆಯುತ್ತವೆ. ಬಟ್ಟೆಗಿಂವ ಎಲ್ಲಾ ಆರ್ಡರನ್ನು ತಕ್ಷಣವೇ ಒದಗಿಸಲಾಗುತ್ತೆ. ಊರೂರಾಲ್ಲಿರುವ ಎಲ್ಲಾ ಜನರಿಗೆ ಬಟ್ಟೆಯನ್ನೊದಗಿಸಲುತಕ್ಕ ಏರ್ಪಾಡುಮಾಡಲ್ಪಟ್ಟಿದೆ. ದೇಶಾಭಿಮಾನಿಗಳ ಪ್ರೋತ್ಸಾಹವನ್ನು ನಿರೀಕ್ಷಿಸುತ್ತಲೇ ಇರುತ್ತೇವೆ. ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

'ಮೇನೇಜರ್'

12—2 ಖಾದಿ ಭಂಡಾರ, ವೀರರಾಜಪೇಟೆ.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರತಾಪ್ತ ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಕಂಪ್ಲೇಂಟ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ

17-9-24 ಮ್ಯಾನೇಜರ್.

Old Students' Quarterly.

Editor, Mr P. B. Medappa, B.A., B.L., M.L.C.

Vol. II. No. 2 is now out.

Subscription—Yearly Rs. 2, post free. Most delightful! Scholarly articles! Read and enjoy!

CONTENTS.

1. National welfare—(includes thoughts on Free and Compulsory education in Coorg.
2. Swarajya—A Canarese Drama.
3. Are Coorgs Kannadigas?
4. Ancient Coorg.
5. Peep into Heavens.
6. Frivolity page, etc. etc.

If you become a subscriber now you will get a very beautiful calendar for 1925 free—absolutely free!

Apply to—
Manager,
O. S. Association,
Mercara.

ದಯಮಾಡಿ ಪರೀಕ್ಷಿಸಿ ನೋಡಿರಿ!

X. L. ALOIL.

ಹೊಸ ನಮೂನೆಯ ಮೀನಿನ ಎಣ್ಣೆ.

ಬಾಲಕಾಬಾಲಕಿಯರಿಗೂ, ಸ್ನಾಯುಶಕ್ತಿ, ಕುಂದಿದವರಿಗೂ ಮತ್ತು ಎದೆರೋಗ ಸಂಬಂಧವಾದ ರೋಗಗಳಿಂದ ಪೀಡಿತರಾದವರೂ ಸಹ ಸೇವಿಸುವದರಿಂದ ಒಡನೆ ತೃಪ್ತಿಯಾಗುವದು. "ಕಾಡ್ ಲಿವರ್ ಆಯಿಲ್ ಎಮಲ್ಶನ್" ಎಂಬುದರ ಬದಲಿಗೆ ಇದು ಶಾಸ್ತ್ರಮತವಾದ ಕ್ರಮದ ಪದಾರ್ಥವಾಗಿದೆ. ವಾಸನೆ ಇಲ್ಲ. ರುಚಿ ಬಹಳ ಒಳ್ಳೇದು.

M. P. BALA & Co.,
CHEMISTS,
17-4 Tellicherry
Or VIRAJPET WORKS,
Virajpet

ಮಾರಾಟಕ್ಕೆ.

ಎಪ್ಪತ್ತು ಎಕರೆಯುಳ್ಳ ನೊಲಂದಿ ಮತ್ತು ಮದಗೋಡು ಎಂಬ ಎರಡು ಚಿಕ್ಕ ಕಾಫಿ ತೋಟಗಳು ಮಾರಾಟಕ್ಕೆ ಇವೆ.

ನೊಲಂದಿತೋಟ—39 ಎಕರು 13 ವರುಷಪ್ರಾಯದ ಕಾಫಿ.
15 ಎಕರು 6 ವರುಷದ ಕಾಫಿ.
6 ಎಕರು ಕಾಡು ಕಡಿದು ಕಾಫಿ ಸಸಿಲು ತಯಾರಾದ ಜಾಗೆ.

ಮದಗೋಡು —20 ಎಕರೆಯಲ್ಲಿ
9 ಎಕರು 13 ವರುಷದ ಕಾಫಿ.
6 ಎಕರು 6 ವರುಷದ ಕಾಫಿ.

ಈ ತೋಟಗಳು ಏಪ್ರಿಲ್ ಒಂದನೇ ತಾರೀಕಿನವರೆಗೆ ಮಾತ್ರ ಮಾರಾಟಕ್ಕೆ ಇರುವುವು. ನಂತರ ಮಾರಲಾಗುವುದಿಲ್ಲ. ಹೆಚ್ಚಿನ ವಿವರಕ್ಕೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ. ಯಸ್. ಆಯರ್ನ್,
ಹಂಪ್ಸ್ಎಸ್ಟೇಟ್,
ಸೋಮವಾರಪೇಟೆ,
4—3 ಕೊಡಗು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಜಮಾಖಾದ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ತಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್,
ಕೊಡಂದೇರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರಟರಿ,
ಸಿ ಯಂ. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಕೇಶವಶಾಸ್ತ್ರೀ ಅಯು ರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವುದಕ್ಕೆ ಅಯಾ ರೋಗಗಳ ಚಿಕಿತ್ಸೆಗಳು ಬರೆಯಲ್ಪಡುವುವು. ದರಿದ್ರ ಮುಖ್ಯವಾಗಿ ಸ್ತ್ರೀಯರೂ ಪಕ್ಕೆಯುವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರೂಪಾಯಿ.

ವಿಳಾಸ.—

ಮೇನೇಜರ್, ಶ್ರೀ ಧನ್ವಂತರಿ, ಶೃಂಗೇರಿ, ಮೈಸೂರುಸ್ಟೇಟ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.
Telegraphic Address:- "SHOOTER" Bombay.

[52 2] Please write for latest Catalogues.

ಮಾರಾಟಕ್ಕೆ.

1. ಮಡಿಕೇರಿ ಅರೆ ಮಲ್ಲಿಶೆಟ್ಟಪ್ಪನವರ ಮಡಿಕೇರಿ ನಾಡುಮಡಿಕೇರಿಗ್ರಾಮದಲ್ಲಿ ಮಡಿಕೇರಿ ಮೊಣ್ಣಂಗೇರಿ ರಸ್ತೆ 5ನೇ ಮೈಲ್ ಬಳಿ ಇರುವ ಆಸ್ತಿ, ಅಂದರೆ— ಸಾಗಿನ ಉತ್ತಮವಾದ ಭೂಮಿ 31½ ಎಕರು, ಕಿತ್ತಳೆ 25 ಎಕರು, (ಈ ಪೈಕಿ 15 ಎಕರು ಪಸಲಿಗೆ ಬಂದದ್ದನ್ನು ಈ ವರ್ಷ 1,200 ರುಪಾಯಿಗಳಿಗೆಪಸಲು ಗುತ್ತಿಗೆ ಕೊಡಲಾಗಿದೆ) ಯಾಲಕ್ಕಿ 15 ಎಕರು, ಹೊಸದಾಗಿ ಹಾಕಿರುವ ಕಾಫಿ 15 ಎಕರು ಮತ್ತು 116 ಎಕರು ಜಾಗೆ, ಒಂದು ವಾಸದ ಮನೆ, ಆಳುಗಳ ಲೈನು ಮತ್ತು ದನಗಳ ಕೊಟ್ಟಿಗೆ ಸಹ—ಮಾರಾಟಕ್ಕೆ ಇದೆ. ಕ್ರಯ ರುಪಾಯಿ 25,000 ಅಥವಾ ಇದರ ಸಮೀಪದ ಬೆಲೆ.

2. ಅರೆ ಮಲ್ಲಿಶೆಟ್ಟಪ್ಪನವರ ಮಡಿಕೇರಿ ಮಹದೇವಪೇಟೆ ಬಸವಣ್ಣನ ಗುಡಿ ಬಳಿ ಇರುವ ವಾಸದ ದೊಡ್ಡ ಮಹಡಿಮನೆ ಕ್ರಯ ರೂ. 5,000.

ಹೆಚ್ಚಿನ ವಿವರಕ್ಕೆ ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು.

ಎಂ. ಎನ್. ಅಪ್ಪಣ್ಣ,
ಬೋಯಿಕೇರಿ ಎಸ್ಟೇಟ್,
12—7 ಸುಂಟಿಕೊಪ್ಪ.

ಇಂಡಿಯಾ ಸಾಬೂನ್.

ಬೆಲೆ ಅಗ್ಗ!! ಸರ್ವೋತ್ತಮ!!

ನಮ್ಮ "ಇಂಡಿಯಾ ಸಾಬೂನ" ಸರ್ವೋತ್ತಮವಾದುದೆಂದು ತಿಳಿದು ಎಲ್ಲಾ ಕಡೆಗಳಲ್ಲಿಯೂ, ಎಲ್ಲಾ ಊರುಗಳ ಅಂಗಡಿಗಳಲ್ಲಿಯೂ ಇದನ್ನೇ ಮಾರುತ್ತಿದ್ದಾರೆ. ಇದರಿಂದ ಒಗೆಯುವ ವಸ್ತ್ರಗಳು ಸ್ವಚ್ಛವಾಗುವವಲ್ಲದೆ, ಅವುಗಳ ನೂಲಿಗೆ ಇದರಿಂದ ಯಾವ ವಿಧವಾದ ಉಪಹತಿಯೂ ಉಂಟಾಗದೆ, ಸರಿಯಾದ ಬಾಳಿಕೆ ಬರುವವು. ಈ ವಿಷಯವನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಎಲ್ಲರಿಗೂ ಮಂದಟ್ಟಾಗುವದು. ನಮ್ಮ ಗಿರಾಕಿಗಳಿಗೆ ಹೆಚ್ಚು ಲಾಭ!! ಭಾರಿ ಯಾದ ಕಮೀಷನ್ ದೊರೆಯುವದು. ಆರ್ಡರುಗಳಿಗೆ ಮಾಲನ್ನು ಜಾಗ್ರತೆಯಾಗಿ ಪ್ಯಾಕ್‌ಮಾಡಿ ಅವರ ಆಪ್ರೆಸಿಗೆ, ಅಥವಾ ಅವರು ಅಪೇಕ್ಷಿಸುವ ಸಮೀಪದ ರೈಲ್ವೆ ಸ್ಟೇಷನಿಗೆ ರವಾನಿಸುತ್ತೇವೆ.

ಇಷ್ಟು ಮಾತ್ರವೇ ಅಲ್ಲ; ನಮ್ಮ ಗಿರಾಕಿಗಳಿಗೆ ಅವರವರ ಅದೃಷ್ಟ ಪರೀಕ್ಷಾರ್ಥವಾಗಿ ನಾವು ಕಳುಹಿಸುವ ಯಾವುದೋ ಒಂದು ಸೋಪ್ ಪ್ಯಾಕ್‌ನಲ್ಲಿ ಗಿಂ ರುಪಾಯಿಯ ಅರ್ಧ ನೋಟನ್ನು ಇಟ್ಟಿರುತ್ತೇವೆ. ಅಂಥಾ ಅರ್ಧ ನೋಟಿನ ಪ್ಯಾಕನ್ನು ಹೊಂದಿದವರು ಆ ಅರ್ಧ ನೋಟಿನ ನಂಬರನ್ನು ತಿಳಿಸಿದ್ದಲ್ಲಿ ಬಾಕಿ ಅರ್ಧ ನೋಟನ್ನೂ ಅವರಿಗೆ ಐನುಮಾಸವಾಗಿ ತಕ್ಷಣವೇ ಕಳುಹಿಸಿಕೊಡುವೆವು. ಪ್ರಯತ್ನಪಡಿ! ವ್ಯಾಪಾರಕ್ಕೆ ವ್ಯಾಪಾರ!! ಅದೃಷ್ಟಕ್ಕೆ ಅದೃಷ್ಟ!!!

ಎನ್. ಕೃಷ್ಣಯ್ಯ ಶೆಟ್ಟಿ,
12—5 ನಗರ್ತಪೇಟೆ, ಬೆಂಗಳೂರು ಸಿಟಿ.

Printed & published by Kodanda Appayya, R.F., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.

If not delivered please return to "KODAGU" OFFICE, MERCARA.

ಕೊಡಗು.

ವಾರ್ಷಿಕ ಚಂದಾ ರೂ. ೪-೦-೦

ಸತ್ಯೇನ ಧೀರತಯಾ ವಿದ್ಯಾ ನೀತಿ ಪ್ರಯುಕ್ತಯಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದಾ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು. ಎಡಿಟರ್ ಪಂದ್ಯಂಡ್ರ ಐ. ಬೆಳ್ಯಪ್ಪ.

ಸಂಪುಟ ೪] ಕೊಡಗು, ಸ ೧೯೨೪ನೇ. ಇಸವಿ ಸಪ್ಟೆಂಬರ ತಾರೀಕು ೨೬ನೆಯ ಶುಕ್ರವಾರ [ಸಂಚಿಕೆ ೪೦

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಯಮ್. ಎಲ್. ಸಿ. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣೆ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅನುಕೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ: 'ಆರೋಗ್ಯ ಚಂದ್ರಿಕೆ' 323, ತಂಬುಚೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ವಾರ್ತಾದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ವಾರ್ತೆಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ತಾಳಲ್ಪಡುತ್ತವೆ. ದರವು ಸಂಗತಿಗನುಸಾರವಾಗಿ ಬರೆದು ತಿಳಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಕೀರುಹಣ ಸಲ್ಲಿಸತಕ್ಕವರೂ ದಯವಿಟ್ಟು ವೀರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿದೆ.

ಮಡಿಕೇರಿ, ಮೇನೇಜರ್,
[illegible] "ಕೊಡಗು" ಲಿಮಿಟೆಡ್.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City

WATCH THIS SPACE.
**Another stock of
Arms & Ammunition.
Expected shortly.
Guaranteed Quality.
Revised prices.**

Spencer & Co. Ltd.,
MERCARA & POLLIBETTA.

23

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಟಾಪು ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ
17.9.24 ಮೇನೇಜರ್.

Old Students' Quarterly.

Editor, Mr. P. B. Medappa, B.A., B.L., M.L.C.

Vol. II No. 2 is now out.

Subscription—Yearly Rs 2, post free. Most delightful! Scholarly articles! Read and enjoy!

CONTENTS.

1. National welfare—(includes thoughts on Free and Compulsury education in Coorg.
2. Swarajya—A Canarese Drama.
3. Are Coorgs Kannadigas?
4. Ancient Coorg.
5. Peep into Heavens.
6. Frivolity page, etc. etc.

If you become a subscriber now you will get a very beautiful calendar for 1925 free—absolutely free!

Apply to—
Manager,
O. S. Association,
Mercara.

ಪ್ರಕಟಣೆ.

ನಮ್ಮ ಅಂದವಾದಹೊಸ ಅಕ್ಷರಗಳು ಬಂದು ತಲಪಿರುವುದರಿಂದ, 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ.

ಮೇನೇಜರ್.
'ಕೊಡಗು' ಲಿಮಿಟೆಡ್

ಒಂದು ಪ್ರಭಲವಾದ ಪ್ರಶ್ನೆ.

ದೇಶಾಭಿಮಾನವೆಂದರೇನು?

ಕೈರಾಟೆಯಿಂದ ನೂಲುತೆಯಾರಿಸಿ ಮಾಡಿದಬಟ್ಟೆಯನ್ನು ಧರಿಸಿ ಆ ಮೂಲಕ ಲಕ್ಷೋಪಲಕ್ಷ ಗರೀಬ ಜನರಿಗೆ ಅನ್ನವನ್ನೊದಗಿಸುವದೇದೊಡ್ಡ ದೇಶಾಭಿಮಾನ.

ಇಂಥಾ 'ಖಾದಿ' ಬಟ್ಟೆಯನ್ನು ಎಲ್ಲಾ ಜನರಿಗೂ ಸುಲಭಕ್ರಯದಲ್ಲಿ ಒದಗಿಸಲಿಕ್ಕೆ ಈಗತಾನೇ ವೀರಾಜಪೇಟೆಯಲ್ಲಿ ಒಂದು ಖಾದಿ ಭಂಡಾರವನ್ನು ತೆರೆದಿರುತ್ತೇವೆ. ಈಭಂಡಾರದಲ್ಲಿ ಎಲ್ಲಾತರದ ನಾಜೂಕಾದ ಮತ್ತು ಗಟ್ಟಿಯಾದ ಖಾದಿಬಟ್ಟೆಗಳೂ ವಸ್ತ್ರಗಳೂ ಶೀರೆಗಳೂ, ಟವಲುಶಾಲುಗಳೂ, ಖಾದಿರೇಶ್ಮೆಯಿಂದ ತಯಾರಾದಿದ ಎಲ್ಲಾತರದಬಟ್ಟೆಗಳೂ ದೊರೆಯುತ್ತವೆ. ಬಟ್ಟೆಗಿರುವ ಎಲ್ಲಾ ಆರ್ಡರನ್ನು ತಕ್ಷಣವೇ ಒದಗಿಸಲಾಗುತ್ತೆ. ಊರೂರಿನಲ್ಲಿರುವ ಎಲ್ಲಾ ಜನರಿಗೆ ಬಟ್ಟೆಯನ್ನೊದಗಿಸಲುತಕ್ಕ ಏರ್ಪಾಡುಮಾಡಲ್ಪಟ್ಟಿದೆ. ದೇಶಾಭಿಮಾನಿಗಳ ಪ್ರೋತ್ಸಾಹವನ್ನು ನಿರೀಕ್ಷಿಸುತ್ತಲೇ ಇರುತ್ತೇವೆ. ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

'ಮೇನೇಜರ್'
12—4 ಖಾದಿ ಭಂಡಾರ, ವೀರಾಜಪೇಟೆ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಕೋಟಿರ ಚಿಣ್ಣಪ್ಪನವರ ಬವಾಬುದಾರಿಕೆಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಮೆ. ಕೆ. ಚಿಣ್ಣಪ್ಪನವರ ಆಫೀ
ಮೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ ಮೆ. ಮಡೆಯಂಡ ದೇವಯ್ಯನವರು.
ನಾಪೋಕ್ಲು—ಮೆ. ಪೊನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮೆ. ಮುಕ್ಕಾಟಿರಪೂಣಚ್ಚನವರು.
ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಮ್ಮಯ್ಯನವರು.
ಹುದಿಕೇರಿ—ಮೆ. ಚೆ. ಮೊಣ್ಣಪ್ಪನವರು.
ಅಮ್ಮತ್ತಿ, ಸಿದ್ದಾಪುರ—ಮೆ. ಪಸಾಂಗ ಪೊನ್ನಪ್ಪನವರು.
ಮೆ. ಚಂಗಂಡ ಕುಟ್ಟಪ್ಪನವರು.

ಕೋದಂಡ ಉತ್ತಯ್ಯ.

[illegible]

"ಕೊಡಗು"

೧೯೨೫ನೇ ಇಸವಿ ಮಾರ್ಚಿ ತಾ. ೨೦ನೇ ಶುಕ್ರವಾರ.

೧೯೨೫-೨೬ರ ಬಡ್ಜೆಟ್.

ಕಳೆದ ವಾರ ನಡೆದ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಬರುವ ವರುಷದ ಅಂದರೆ 1925—26ರ ಅಂದಾಜು ಆದಾಯ ವೆಚ್ಚದ ಪಟ್ಟಿಯು ಚರ್ಚಿಸಲಾಯಿತು. ಪ್ರಥಮ ದಿನ ಫೈನಾನ್ಸ್ ಮೆಂಬರು ತಮ್ಮ ಧೀರ್ಘವಾದ ಭಾಷಣದೊಂದಿಗೆ ಬಡ್ಜೆಟನ್ನು ಚರ್ಚೆಗೆ ಕೌನ್ಸಿಲಿನ ಮುಂದೆ ಇಟ್ಟನಂತರ ಕೆಲವು ಮೆಂಬರುಗಳು ಅದರ ಮೇಲೆ ತಮ್ಮ ಅಭಿಪ್ರಾಯಗಳನ್ನು ಸೂಚಿಸಿ ಭಾಷಣ ಮಾಡಿದರು. ಮರುದಿನ ಇಸುಂಬಾರು ಠರಾವುಗಳು ಚರ್ಚಿಸಲ್ಪಟ್ಟವು. ಕಾರ್ಯಕ್ರಮ ಪಟ್ಟಿಯಲ್ಲಿ ನಮೂದಿಸಲ್ಪಟ್ಟಿದ್ದ 28 ಠರಾವುಗಳಲ್ಲಿ ಚರ್ಚೆಯ ನಂತರ ನಾಲ್ಕು ಮಾತ್ರ ಬಹುಮತದಿಂದ ಪಾಸಾದವು. ಮೂರು ತಕ್ಕಷ್ಟು ಓಟು ಸಿಕ್ಕದೆ ನಾಪಾಸಾದವು. 21 ಠರಾವುಗಳು ವಾಪಾಸು ತೆಗೆದುಕೊಳ್ಳಲಾದುವು.

1925—26ನೇ ವರುಷದಲ್ಲಿ ಅಂದಾಜು ಉತ್ಪತ್ತಿ ರೂ. 15,59,000, ಖರ್ಚು ರೂ. 15,95,000. ಇದರಿಂದ ಉತ್ಪತ್ತಿಗಿಂತ ಖರ್ಚು 36,000 ಎಂದು ತೋರುವುದು. ಆದರೆ ಈ ವರುಷದ ಅಂದರೆ 1924—25ರ ಬಡ್ಜೆಟಿನಲ್ಲಿ 1,17,000 ರೂ. ಉಳಿವರಿ ಇರುವುದೆಂದು ಕಳೆದ ವರುಷ ಅಂದಾಜು ಮಾಡಲ್ಪಟ್ಟಿದ್ದರಲ್ಲಿ ಈಗ ನೋಡುವಾಗ್ಯೆ 1,05,000 ಮಾತ್ರ ಉಳಿವರಿಯಾಗುವುದೆಂದು ಕಂಡು ಬರುವುದು. ಈ ಉಳಿವರಿಯನ್ನು ಬರುವ ವರುಷದ ಆದಾಯಕ್ಕೆ ಸೇರಿಸಿಕೊಳ್ಳುವುದರಿಂದ ಒಟ್ಟು ಆದಾಯವು 16,64,000 ರೂ ಆಗುತ್ತದೆ. ಇದರಿಂದ ಖರ್ಚು ಕಳೆದರೆ 69,000 ರೂ ಉಳಿವರಿಯಾಗುವುದೆಂದು ಅಂದಾಜು ಬಡ್ಜೆಟಿನಲ್ಲಿ ಸೂಚಿಸಲಾಗಿದೆ. ಆದರೆ ಇತ್ತಲಾಗಿ ಹೊಸತ ಅಂದಾಜು ಮಾಡಿದಲ್ಲಿ 84,000 ರೂ. ಉಳಿವರಿಯಾಗುವುದೆಂದು ಫೈನಾನ್ಸ್ ಮೆಂಬರವರು ತಮ್ಮ ಭಾಷಣದಲ್ಲಿ ಸೂಚಿಸಿರುವರು. ಇದರಲ್ಲಿ ಠಾಲ್ಸಿನ ಮೇರೆ ನಿರಕು ರಿಸರ್ವ್ 50,000 ರೂ. ಇಡಬೇಕಾಗಿದೆ. ಬಾಕಿ 34,000 ರೂ ನ್ನು ರಿಸರ್ವಿಗೆ ಸೇರಿಸಿ ರಿಸರ್ವನ್ನು ಹೆಚ್ಚಿಸುತ್ತಾ ಬರಬೇಕೆಂದು ಸರಕಾರದವರು ತೀರ್ಮಾನಿಸಿರುವರು. ಹೀಗೆ ನಿರಕು ರಿಸರ್ವಿಗಿಂತ ಹೆಚ್ಚು ಹಣ ಉಳಿವರಿ ಮಾಡುತ್ತಾ ಬಂದಪಕ್ಷ ಇಂಡಿಯಾ ಸರಕಾರದವರು ನಮ್ಮ ಒಂಟಪಾಳದಿಂದ ಬೇರೆ ಪ್ರಾಂತ್ಯಗಳಂತೆ ಪ್ರಾಂತಿಕ ವಂತಿಕೆಯನ್ನು ಕೇಳಬಹುದೆಂದೂ, ಆದುದರಿಂದ ನಮ್ಮ ದೇಶದ ತುರಿತ ಕೆಲಸಗಳಿಗೆಲ್ಲಾ ಹಣ ಒದಗಿಸಿ ಕೊಡುವ ವರೆಗೆ ರಿಸರ್ವನ್ನು 50,000 ರೂ ಗಿಂತ ಹೆಚ್ಚಿಸುವದು ಯುಕ್ತವಲ್ಲವೆಂತಲೂ ಮೆಂಬರುಗಳು ಸೂಚಿಸಿದರು. ಇದಕ್ಕೆ ಸರಕಾರದವರು ಗಮನಕೊಟ್ಟಂತೆ ಕಾಣಲಿಲ್ಲ. ಈ ವಿಷಯ ಸ್ಥಳೀಯ ಸರಕಾರದವರು ಇನ್ನೂ ಯೋಚಿಸಬೇಕಾಗಿದೆ.

ಉತ್ಪತ್ತಿಯ ಮುಖ್ಯಮೂಲಗಳು ಯಾವವೆಂದರೆ.— ಫಾರೆಸ್ಟು ರೂ. 7,09,000, ಭೂಮಿ ಉತ್ಪತ್ತಿ 3,71,000, ಎಕ್ಸೈಸ್ 3,46,000, ಸ್ಟಾಂಪು 83 ಸಾವಿರ, ವಿದ್ಯಾ ಇಲಾಖೆ 15 ಸಾವಿರ, ಸಿವಿಲ್‌ವರ್ಕ್ಸ್ 12 ಸಾವಿರ, ವೈದ್ಯ ಇಲಾಖೆ 10 ಸಾವಿರ, ಮತ್ತು ಬೇರೆ ಸಣ್ಣ ಉತ್ಪತ್ತಿಗಳು. ಖರ್ಚಿನ ವಿವರ— ಫಾರೆಸ್ಟು 5,47,000, ಸಿವಿಲ್‌ವರ್ಕ್ಸ್ 2,74,000, ವಿದ್ಯಾ ಇಲಾಖೆ 1,53,000, ಜನರಲ್ ಆಡಳಿತ 1,40,000, ಪೊಲೀಸು 93 ಸಾವಿರ, ಲೇಂಡ್ ರೆವಿನ್ಯೂ 80 ಸಾವಿರ, ವೈದ್ಯ ಇಲಾಖೆ 78 ಸಾವಿರ, ಪೆನ್‌ಶನ್ ಕೊಡುವಾದವುಗಳು 49 ಸಾವಿರ, ನ್ಯಾಯತೀರ್ಪಿನ ಇಲಾಖೆ 48 ಸಾವಿರ. ವ್ಯವಸಾಯ ಇಲಾಖೆ 32 ಸಾವಿರ, ದೇವಸ್ಥಾನ ಮೊದಲಾದ ಬೇರೆ ಕೆಲವು ಧರ್ಮದ ವಂತಿಗೆಗಳಿಗೆ 21 ಸಾವಿರ, ಸ್ಟೇಶನರಿ ಪ್ರಿಂಟಿಂಗ್ ವಗೈರೆಗಳಿಗೆ 20 ಸಾವಿರ, ಕೃಷಿಗೆ 14 ಸಾವಿರ, ಸೇಂಟ ಕಾಮಗಾರಿಕೆ 13 ಸಾವಿರ, ಇಂಡಿಯಾ ಸರಕಾರಕ್ಕೆ ವಂತಿಗೆ 12 ಸಾವಿರ ಮತ್ತು ಬೇರೆ ಸಣ್ಣ ಸಣ್ಣ ಖರ್ಚುಗಳು,

ಮೇಲಿನ ಖರ್ಚುಗಳಲ್ಲಿ ವರ್ಷಂಪ್ರತಿ ನಡೆಯುವ ವಾಡಿಕೆಯ ಖರ್ಚುಗಳಲ್ಲದೆ ಹೊಸ ಕೆಲಸಗಳಿಗೆ ಇಡಲ್ಪಟ್ಟಿರುವ ಸುಮಾರು 38 ಸಾವಿರ ರೂಪಾಯಿಯೂ ಸೇರಿದೆ. ಹೊಸ ವಿಷಯಗಳಿಗೆ ಇಷ್ಟಾದರೂ ಹಣವಿಟ್ಟದ್ದು ಸಂತೋಷಕರವೇ ಸರಿ. ಇವುಗಳ ವಿವರ—ಅರಮನೆಯ ರಿಪೇರಿಗೆ (ಅರ್ಥಕಚರ್ಚು ಈ ವರ್ಷ) 12 ಸಾವಿರ, ವೀರಾಜಪೇಟೆ ವ್ಯವಸಾಯಕ ಫಾರ್ಮನ್ನು ಪ್ರಯುಕ್ತ ತೆಗಿಯಲಿಕ್ಕೆ 8 ಸಾವಿರ, ವೀರಾಜಪೇಟೆ ಕೈಗಾರಿಕೆ ಶಾಲೆಗೆ 4,800, ಮಡಿಕೇರಿಯಲ್ಲಿ ಹುಲೇರಿಯ ಜ್ವರ ನಿರ್ಮೂಲಿಸುವ ಏರ್ಪಾಡಿಗಾಗಿ ಮುನ್ಸಿಪಾಲಿಟಿಗೆ ಗ್ರ್ಯಾಂಟ್ 3,500, ಚಿಕ್ಕ ಹೊಳೆ ನಾಲೆ ರಿಪೇರಿಗೆ 3 ಸಾವಿರ, ಹಾರಂಗಿ ನಾಲೆಯ ಸರ್ವೆ ಮೊದಲಾದದ್ದಕ್ಕೆ 2 ಸಾವಿರ, ಉತ್ಸಾಹಕರಾದ ಗ್ರಾಮ ಕರಿಗ್ರಾಮಗಳಿಗೆ 2 ಸಾವಿರ, ನಾಪೋಕ್ಲು ಶಾಲೆ ಹಾಸ್ಟೆಲಿಗೆ 982, ಗವರ್ನ್‌ಮೆಂಟು ಶಾಲೆಗಳಿಗೆ ಇಬ್ಬರು ಉಪಾಧ್ಯಾಯರುಗಳಿಗಾಗಿ 366, ಪರೀಕ್ಷಾದಾದ ಅಳತೆಗಳನ್ನು ನಡಸುವುದಕ್ಕೆ 700, ಅಲ್ಲದೆ ವೀರಾಜಪೇಟೆ ಮತ್ತು ಮಡಿಕೇರಿಯಲ್ಲಿ ಅಬ್ಕಾರಿಗೆ ಅಶ್ರಯಕ್ಕೆ ಬೇಕಾದ ಕಟ್ಟಡಗಳು, ವೀರಾಜಪೇಟೆ ಆಸ್ಪತ್ರೆ ಕಟ್ಟಡ ಬದಲಾವಣೆ, ವೀರಾಜಪೇಟೆ ಸಬ್‌ಜೈಲ್ ಸರಿಪಡಿಸುವದು, ವೀರಾಜಪೇಟೆ, ಪೊನ್ನಂಪೇಟೆ ಮತ್ತು ನಾಪೋಕ್ಲು ಶಾಲೆಗಳ ಹಾಸ್ಟೆಲುಗಳ ಕಟ್ಟಡಗಳ ಬದಲಾವಣೆ, ಈ ಕೆಲಸಗಳನ್ನು ಸಾಧ್ಯವಾದರೆ ಡಿ. ಪಿ. ಡಬ್ಲ್ಯು ಇಲಾಖೆಯವರು ಮಾಡಿಸುವಂತೆಯೂ, ಸಾಧ್ಯವಾದರೆ ನಾಪೋಕ್ಲು ಶಾಲೆಯ ಸಿಬ್ಬಂದಿಯನ್ನು ಹೆಚ್ಚಿಸುವಂತೆಯೂ ಫೈನಾನ್ಸ್ ಕಮಿಟಿಯವರು ಸಿಫಾರಸ್ಸು ಮಾಡಿರುವರು. ಈ ಸಿಫಾರಸ್ಸುಗಳನ್ನು ಸರಕಾರದವರು ಒಪ್ಪಿ ಅವುಗಳಂತೆ ನಡಿಸಲು ಪ್ರಯತ್ನಿಸುವರಾಗಿ ಆಶಿಸುತ್ತೇವೆ. ದೇಶದಲ್ಲಿ ತುರಿತ ಕೆಲಸಗಳನೇಕ ಇರುವುದರಿಂದ ಹೊಸ ವಿಷಯಗಳಿಗೆ 38 ಸಾವಿರ ರೂ. ಕೊಟ್ಟದ್ದು ಸಾಲದೆಂದೇ ನಮ್ಮ ಅಭಿಪ್ರಾಯ.

ಲಂತಾನವನ್ನು ನಾಶಪಡಿಸಲು ಈ ವರ್ಷ ಕೊಟ್ಟಿದ್ದ ಒಂದು ಸಾವಿರ ರುಪಾಯಿಯ ಬದಲು ಬರುವ ವರ್ಷಕ್ಕೆ ಐದುಸಾವಿರ ರೂ. ಇಡಲಾಗಿದೆ. ದನಗಳ ಮೇವಿಗಾಗಿ ಹುಲ್ಲುಗಾವಲುಗಳನ್ನು ಹೆಚ್ಚಿಸುವ ಸಮ್ಮಂಧ ಲಂತಾನತೆಗಿಯುವುದಕ್ಕಾಗಿಯೇ ಈ ಹೆಚ್ಚಿನ ಹಣವು ಇಟ್ಟದ್ದಾಗಿದೆ. ಈ ಹಣವನ್ನು ಸರಕಾರದವರು ಸಹಕಾರಿ ಸಂಘಗಳ ಮೂಲಕ ಲಂತಾನ ನಾಶಪಡಿಸಲು ಉಪಯೋಗಿಸುವರೆಂದು ತೋರುತ್ತದೆ. ಕೆಲವು ಗ್ರಾಮಗಳಲ್ಲಿ ಜನರು ತಾವಾಗಿಯೇ ಈ ಕೆಲಸವನ್ನು ಕೈಕೊಂಡಿರುವರು. ಇಂಥವರಿಗೆ ಸರಕಾರದಿಂದ ದ್ರವ್ಯ ಸಹಾಯಕೊಟ್ಟು ಹೆಚ್ಚಿನ ಗ್ರಾಮಗಳು ಇವುಗಳ ಉದಾಹರಣೆಯನ್ನು ಹಿಂಬಾಲಿಸಲು ಉತ್ತೇಜನ ಕೊಡುವರಾಗಿ ನಂಬುತ್ತೇವೆ.

ಮಡಿಕೇರಿ ಮತ್ತು ಸೋಮವಾರಪೇಟೆಯಲ್ಲಿ ಈಗಿರುವ ತಂಗಾಮಿ ರಿಜಿಸ್ಟ್ರೇಷನ್ ಕ್ಲಾರ್ಕುಗಳನ್ನು ಬರುವವರುಷವೂ ಇಟ್ಟುಕೊಳ್ಳಲಾಗುವುದು. ಕಮಿಷನರವರಿಗೆ ಯುಕ್ತ ತೋರಿದಂತೆ ಕೊಡಲು ಇರುವ 'ಡಿಸ್‌ಕ್ರೆಶನರಿ ಗ್ರ್ಯಾಂಟ' ನ್ನು 3 ಸಾವಿರದಿಂದ 5 ಸಾವಿರಕ್ಕೆ ಏರಿಸಲಾಗಿದೆ. ಪೋಲೀಸು ಇಲಾಖೆಯಲ್ಲಿ 8 ಸಾವಿರ ರುಪಾಯಿ ಖರ್ಚು ಕಡಿಮೆಮಾಡಬೇಕೆಂದು ಯೋಚಿಸಲಾಗಿದೆ.

ಬಡ್ಜೆಟ್ಟಿನ 2ನೇ ದಿನದ ಚರ್ಚೆಯಲ್ಲಿ ಇಸುಂಬಾರು ತರಲ್ಪಟ್ಟ 28 ಠರಾವುಗಳ ಪೈಕಿ ನಾಲ್ಕುಮಾತ್ರ ಮಂಜೂರಾಯಿತೆಂದು ಮೇಲೆಹೇಳಿದಾಯಿತು. ಇವುಗಳಲ್ಲಿ ಮುಖ್ಯವಾದದ್ದು ಮೂವ್ಕರೂಟ ಟ್ರಾಮ್ವೆಯ ವಿಷಯವಾಗಿದೆ. ಇದಕ್ಕೆ ಬಡ್ಜೆಟ್ಟಿನಲ್ಲಿ 1 ಲಕ್ಷ ಏಳುಸಾವಿರ ರೂ. ಇಡಲ್ಪಟ್ಟಿತ್ತು. ಈ ಕೆಲಸವನ್ನು ತತ್ಕಾಲ ನಿಲ್ಲಿಸಲು ಸರಕಾರದವರು ತೀರ್ಮಾನಿಸಿರುವರೆಂದೂ ಅಲ್ಲಿಯ ಸಿಬ್ಬಂದಿಯನ್ನು ಪೂರ್ವದಲ್ಲಿರುವ ಫಾರೆಸ್ಟಿನಲ್ಲಿ ಈಗ ಮೂವ್ಕರೂಟದಲ್ಲಿರುವ ಯಂತ್ರಗಳನ್ನು ಉಪಯೋಗಿಸಬಹುದೊ ಎಂಬದನ್ನೂ ಹೆಚ್ಚಿನ ಉತ್ಪತ್ತಿಯನ್ನು ಹೇಗೆ ಪಡೆಯಬಹುದೆಂಬುದನ್ನೂ ಆಲೋಚಿಸಲಿಕ್ಕಾಗಿ ಅಲ್ಲಿಗೆ ವರ್ಗಾಯಿಸುವರಾಗಿಯೂ, ಮೂವ್ಕರೂಟದಲ್ಲಿ ಯಂತ್ರಗಳನ್ನು ಸಾಧ್ಯವಾದರೆ ಮಾರಲಿಕ್ಕೆ, ಇಲ್ಲವಾದರೆ ಅವುಗಳನ್ನು ಹಾಳಾಗದಂತೆ ನೋಡಿಕೊಳ್ಳಲಿಕ್ಕೆ ಏಳುಸಾವಿರ ರುಪಾಯಿ ಬೇಕಾಗುವದರಿಂದ 1 ಲಕ್ಷ ರುಪಾಯಿಯನ್ನು ಮಾತ್ರ ಕಡಿಮೆ ಮಾಡುವದೆಂದೂ ಸರಕಾರಿ ಮೆಂಬರು ಹೇಳಿದರು. ಮೂವ್ಕರೂಟದಲ್ಲೂ ಪೂರ್ವ ಫಾರೆಸ್ಟಿನಲ್ಲಿರುವ ಸಿಬ್ಬಂದಿಯವರೇ ಅಲ್ಲಿಯ ಯಂತ್ರಗಳ ಎಚ್ಚರಿಕೆ ತೆಗೆದುಕೊಳ್ಳಬಹುದಾದುದರಿಂದ 1.07 ಲಕ್ಷ ರುಪಾಯಿಯನ್ನು ತೆಗೆದು ಬಿಡಬೇಕೆಂದೂ ಟ್ರಾಮ್ವೆ ಸಿಬ್ಬಂದಿಯನ್ನು ಪೂರ್ವ ಫಾರೆಸ್ಟಿಗೆ ಕಳುಹಿಸುವುದರಿಂದ ಏನೊಂದೂ ಪ್ರಯೋಜನವಿಲ್ಲವೆಂತಲೂ ಚುನಾಯಿತ ಮೆಂಬರುಗಳು ವಾದಿಸಿದನಂತರ ಟ್ರಾಮ್ವೆಗೆ ಇಟ್ಟಿದ್ದ 1.07 ಲಕ್ಷ ರುಪಾಯಿಯೂ ತೆಗೆದುಹಾಕಲ್ಪಡಬೇಕೆಂಬ ಠರಾವು ಬಹುಮತದಿಂದ ಮಂಜೂರಾಯಿತು. ಚುನಾಯಿತ ಇಂಡಿಯನ್ ಮೆಂಬರುಗಳೆಲ್ಲರೂ ಇದಕ್ಕೆ ಪರವಾಗಿ ಓಟು ಮಾಡಿದ್ದು ದೇಶದವರ ಇರಾದೆಯನ್ನು ಚನ್ನಾಗಿ ಸೂಚಿಸಿತು. ಕೆಲವು ವರುಷಗಳ ಮೊದಲೇ ನಿಲ್ಲಿಸಲ್ಪಡಬೇಕಾಗಿದ್ದ ಈ ಕೆಲಸವು ಈಗಲಾದರೂ ನಿಲ್ಲಿಸಲ್ಪಟ್ಟದ್ದು ತೃಪ್ತಿಕರವೆ. ಇನ್ನು ಮುಂದಾದರೂ ದೇಶದ ಗಂಧದ ಉತ್ಪತ್ತಿಯು ಉರುಟಿ ಮತ್ತು ಆರ್ಸೂಳಿಗಳ ಸೇರಿನಲ್ಲಿ ಹೋಮ ಹಾಕಲ್ಪಡಲಿಕ್ಕಿಲ್ಲವೆಂಬುದು ಸಂತೋಷಕರವಾದ ಸಂಗತಿಯಾಗಿದೆ. ಈ ಠರಾವಿನಿಂದ ಬಾಕಿಯಾದ ಹಣವು ಗಂಧದ ಮಾರಾಟವನ್ನು ಕಡಿಮೆ ಮಾಡಲಿಕ್ಕೆ ಹೋಗಬೇಕೆಂದು ಸರಕಾರದವರ ಅಭಿಪ್ರಾಯ. -ಅಂದರೆ ವರುಷಂಪ್ರತಿ ಮಾರುತ್ತಿದ್ದ ಗಂಧದಲ್ಲಿ ಒರುವ ವರುಷ ಒಂದು ಲಕ್ಷ ರುಪಾಯಿ ಬೆಲೆ ಬಾಳುವಷ್ಟು ಗಂಧವನ್ನು ಮಾರದೆ ಬಾಕಿ ಮಾಡತಕ್ಕದ್ದು. ಈ ಅಭಿಪ್ರಾಯವು ನ್ಯಾಯವಾದದ್ದೆಂದು ತೋರುತ್ತದೆ. ಇದಕ್ಕೆ ಕೌನ್ಸಿಲಿನವರು ವಿರೋಧಿಸಿರುವುದಿಲ್ಲ.

ಸೋಮವಾರಪೇಟೆ ಮತ್ತು ಪೊನ್ನಂಪೇಟೆಗಳಲ್ಲಿ ಇಬ್ಬರು ಸ್ಪೇಶಲ್ ಮೇಜಿಸ್ಟ್ರೇಟರನ್ನು ನೇಮಿಸಲಿಕ್ಕೆ 3,600 ರುಪಾಯಿ ಇಡಬೇಕೆಂಬ ಠರಾವು ಪಾಸಾಯಿತು. ಇದು ಅಗತ್ಯವೆಂಬದಕ್ಕೆ ಕಾರಣಗಳನ್ನು ಇಲ್ಲಿ ಸೂಚಿಸಬೇಕಾಗಿಲ್ಲ. ಇದರ ಆವಶ್ಯಕತೆಯನ್ನು ದೇಶದವರೆಲ್ಲರೂ ಚನ್ನಾಗಿ ತಿಳಿದಿರುವರು. ಸರಕಾರದವರೂ ಹಣದ ಕೊರತೆಗಾಗಿಯೇ ಇಷ್ಟರವರೆಗೆ ಸುಮ್ಮನಿದ್ದರೆಂದು ತೋರುತ್ತದೆ. ಇನ್ನಾದರೂ ಇದನ್ನು ಬಹಳ ಬೇಗನೆ ಜಾರಿಗೆ ತರುವರಾಗಿ ಅಪೇಕ್ಷಿಸುತ್ತೇವೆ. ಇ ಲೋಕಕಲಾ ಕೌಶಲ್ಯ ಮತ್ತು ಆಯುರ್ವೇದ ಯಾ ಯುನಾನಿ ಔಷಧಿ ಕ್ರಮಗಳನ್ನು ಕಲಿಯಲಿಕ್ಕೆ ವೇತನಗಳನ್ನು (ಸ್ಕಾಲರ್‌ಶಿಪ್) ಕೊಡುವುದಕ್ಕಾಗಿ 1,200 ಇಡಬೇಕೆಂಬದೂ ಮತ್ತು ದೇವಸ್ಥಾನಗಳ ರಿಪೇರಿಗಾಗಿ ಅವುಗಳ ಕಮಿಟಿಗೆ 10 ಸಾವಿರ ರುಪಾಯಿ ಕೊಡಬೇಕೆಂಬದೂ ಪಾಸಾದ ಇನ್ನೆರಡು ಠರಾವುಗಳು. ಇವೂ ಬೇಗನೆ ಮಂಜೂರಾಗಬೇಕಾದ ವಿಷಯಗಳೇ.

ಚರ್ಚಿಸಲ್ಪಟ್ಟ 28 ಠರಾವುಗಳಲ್ಲಿ ನಾಲ್ಕು ಮಾತ್ರ ಪಾಸಾಗಿರುವದರಿಂದ ಇವುಗಳನ್ನೆಲ್ಲಾ ಚೀಫ್ ಕಮಿಷನರವರು ಒಪ್ಪಿಕೊಳ್ಳುವರಾಗಿ ನಂಬುತ್ತೇವೆ. ಕಳೆದವರ್ಷದ ಬಡ್ಜೆಟ್‌ಮೀಟಿಂಗಿನಲ್ಲಿ ಪಾಸಾದ 4 ಠರಾವುಗಳಲ್ಲಿ ಅರ್ಧವನ್ನು ಮಾತ್ರ ಅಂಗೀಕರಿಸಿದ್ದು ಯಾರಿಗೂ ತೃಪ್ತಿಯನ್ನುಂಟುಮಾಡಲಿಲ್ಲ. ಚೀಫ್‌ಕಮಿಷನರವರು ಈ ವರ್ಷವೂ ಹಾಗೆಯೇ ಮಾಡದೆ ಪಾಸಾದ ನಾಲ್ಕು ವಿಷಯಗಳನ್ನೂ ಜಾರಿಗೆ ತರುವಂತೆಮಾಡಿ ದೇಶದ ಜನರಿಗೆ ಕೌನ್ಸಿಲಿನ ಮೇಲಿರುವ ಸ್ವಲ್ಪ ವಿಶ್ವಾಸವನ್ನೂ ಮೆಂಬರುಗಳಿಗೆ ಕೌನ್ಸಿಲಿನಲ್ಲಿ ಕೆಲಸಮಾಡಲು ಇರುವ ಕುತೂಹಲವನ್ನೂ ಕೆಡಿಸದೆ ಅವುಗಳನ್ನು ಬಲಪಡಿಸುವರಾಗಿ ಕೋರುತ್ತೇವೆ.

ಹಲ್ಲುಗಳ ಸಂರಕ್ಷಣೆ.

ಬಾಯಿ ಎಂಬದು ಶರೀರಕ್ಕೆ ಮುಖ್ಯವಾದ ಬಾಗಿಲು. ಆ ಬಾಯಿಯನ್ನು ಶುದ್ಧವಾಗಿರಿಸಬೇಕಾದುದು ಆವಶ್ಯವು ಅದರಲ್ಲಿಯೂ ಮುಖ್ಯವಾಗಿ, ಹಲ್ಲುಗಳು ಮನುಷ್ಯನ ಅಂದಕ್ಕೂ, ಚಂದಕ್ಕೂ, ಆಯುಸ್ಸಿಗೂ, ಆರೋಗ್ಯಕ್ಕೂ ಸೌಭಾಗ್ಯಕ್ಕೂ ಕಾರಣವೆಂದರೆ ಅತಿಶಯೋಕ್ತಿಯಲ್ಲ. ಪ್ರಾಣಿಗಳಿಗೆ ಆಹಾರದಲ್ಲಿ ರುಚಿಯನ್ನು ಹೆಚ್ಚಿಸಿಕೊಡುವದಕ್ಕೂ, ಜೀರ್ಣಶಕ್ತಿಯನ್ನು ಸರಿಯಾಗಿ ಕಾಪಾಡಿಕೊಳ್ಳುವದಕ್ಕೂ, ಹಲ್ಲುಗಳೇ ಮುಖ್ಯಾಧಾರಗಳು. ಬಾಯನ್ನು ಶುದ್ಧವಾಗಿಡದಿದ್ದರೆ ರೋಗಕಾರಣಗಳಾದ ಅನೇಕ ವಿಷ ಕ್ರಿಮಿಗಳಿಗೂ, ಕಶ್ಮಲಗಳಿಗೂ ವಾಸಕ್ಕೆ ಅನುಕೂಲಮಾಡಿ ಕೊಟ್ಟಂತಾಗುವದು. ಹಲ್ಲುಗಳ ನಡು ನಡುವೆ, ಮತ್ತು ಅದರ ಸುತ್ತಮುತ್ತಲೂ ಎಷ್ಟೋ ಪಕ್ಕಗಳೂ ಪೊಳ್ಳುಗಳೂ ಇರುವವು. ನಾವು ತೆಗೆದುಕೊಂಡ ಆಹಾರದಲ್ಲಿ ಕೆಲವು ಆ ಹಲ್ಲುಗಳ ಸಂದಿನಲ್ಲಿಯೇ ನಿಂತು ಕಾಲಕ್ರಮದಿಂದ ಅನ್ನ ಹುಳಿತು, ಕೊಳೆತು, ನಾರಿ ಕ್ರಿಮಿಗಳಾಗಿ, ವಿಷದ್ರವವಾಗಿ ಪರಿಣಮಿಸುವವು. ಬಾಯಲ್ಲಿ ಕೆಟ್ಟುಹೋದ ಹಲ್ಲಿನ ಶಕಲಗಳು, ಹುಣ್ಣುಗಳ ಕೀವು, ನಿರ್ಜೀವವಾದ ವಸತು, ಇವುಗಳ ಕಣಗಳೆಲ್ಲಾ ಅಲ್ಲಲ್ಲಿಯೇ ತಂಗಿ ರೋಗಕಾರಣಗಳಾಗಿ ಪರಿಣಮಿಸುವವು. ಹೀಗೆ ಬಾಯಲ್ಲಿ ಮತ್ತು ಹಲ್ಲುಸಂದುಗಳಲ್ಲಿ ಅಂಟಿದ ಕಲ್ಮಷಗಳೆಲ್ಲಾ ಆಗಾಗ ನಾವು ತಿನ್ನುವ ಆಹಾರದೊಡನೆ ಸೇರಿ, ಅಜೀರ್ಣ, ಅರೋಚಕ, ಬಾಯಿಯಲ್ಲಿ ದುರ್ಗಂಧ, ವಾತರೋಗ, ಗಂಟಲುನೋವು, ಕೀಲುವಾಯು, ಹೃದಯರೋಗ, ನೇತ್ರರೋಗ, ಕರ್ಣರೋಗ ಮುಂತಾದ ಅನೇಕ ರೋಗಗಳಿಗೆಲ್ಲಾ ಕಾರಣವಾಗುವುದು.

ಹಲ್ಲುಗಳನ್ನು ಕಾಪಾಡಿಕೊಳ್ಳುವ ಮಾರ್ಗಗಳು.

1. ಪ್ರತಿದಿನ ಬೆಳಗ್ಗೆ ಹಾಸಿಗೆಯಿಂದೆದ್ದ ಕೂಡಲೆ ಮತ್ತು, ರಾತ್ರಿ ಮಲಗಲಿಕ್ಕೆ ಹೋಗುವ ಮೊದಲು ತಪ್ಪದೆ ಹಲ್ಲುಗಳನ್ನು ಒಳಗೂ ಹೊರಗೂ ತೊಳೆದು ಶುದ್ಧಮಾಡಬೇಕು.

2. ಹಲ್ಲುಜ್ಜುವ ಬ್ರಷ್ಶುಗಳನ್ನು ಸಿಕ್ಕಿದಹಾಗೆ ಕೊಂಡುಕೊಂಡು ಅದರಿಂದ ಹಲ್ಲುಗಳನ್ನು ಉಜ್ಜಬಾರದು. ಅವುಗಳಲ್ಲಿ ಹಲ್ಲುಗಳಿಗೆ ಅಪಾಯವಿಲ್ಲವೆಂದು ಹೆಸರುಗೊಂಡವುಗಳನ್ನೇ ಉಪಯೋಗಿಸಬೇಕು. ಹಲ್ಲುಜ್ಜುವ ಪುಡಿಗಳೂ ಕೂಡ ವಿಷಹಾರಕವೂ ಸುಗಂಧವೂ ಆಗಿರಬೇಕು. ಚಾಕಿನ ಪುಡಿ, ಸೋಪು, ಇವುಗಳ ಸಮ್ಮಂಧವುಳ್ಳ ಹಲ್ಲುಪುಡಿ ಒಳ್ಳೆಯದು. ಹಸಿಯಾದ ಮತ್ತು ಮೃದುವಾದ ಬೇವಿನಕಡ್ಡಿ, ಆಲದ ಬಿಳಲು, ಇವುಗಳನ್ನೂ ಹಲ್ಲುಜ್ಜುವದಕ್ಕೆ ಉಪಯೋಗಿಸಬಹುದು.

3. ಹಲ್ಲುಜ್ಜುವ ಬ್ರಷ್ಶನ್ನು ನೀವು ಉಪಯೋಗಿಸಿದ ಕೂಡಲೆ ಚನ್ನಾಗಿ ಶುದ್ಧಮಾಡಬೇಕು. ವಾರಕ್ಕೊಂದು ಸಾರಿ ತಪ್ಪದೆ ಅದನ್ನು ಬಿಸಿನೀರಿನಲ್ಲಿ ಹಾಕಿ ಕುದಿಸಬೇಕು. ಅಥವಾ ಹೈಡ್ರೊಜನ್ ಪೆರಾಕ್ಸೈಡ್ ಎಂಬುದರಲ್ಲಿ ಇಟ್ಟಿರಬೇಕು.

4. ಮತ್ತೊಬ್ಬರು ಉಪಯೋಗಿಸಿದ ಬ್ರಷ್ಶನ್ನು ಉಪಯೋಗಿಸಬಾರದು.

5. ಹಲ್ಲುಗಳಿಗೆ ತಕ್ಕಷ್ಟು ಕೆಲಸಕೊಡುವುದಕ್ಕಾಗಿ ಅಗಿಯುವುದಕ್ಕೆ ತಕ್ಕಂತೆ ಒಣಗಿದ ಮತ್ತು, ಕಠಿಣವಾದ ಆಹಾರಗಳನ್ನೇ ಉಪಯೋಗಿಸಬೇಕು. ಆಹಾರವನ್ನು ಬಹಳ ಹೊತ್ತು ಚನ್ನಾಗಿ ಅಗಿಯಬೇಕು. ಹಸುರು ಪದಾರ್ಥಗಳನ್ನೂ ಮತ್ತು ಸುಣ್ಣವು ಹೆಚ್ಚಾಗಿ ಸೇರಿರುವ ಪದಾರ್ಥಗಳನ್ನೂ ಹೆಚ್ಚಾಗಿ ಆಹಾರದಲ್ಲಿ ತೆಗೆದುಕೊಳ್ಳಬೇಕು.

6. ಹಲ್ಲುಗಳ ನಡುವೆ ಇರುವ ಹಳ್ಳಗಳನ್ನೂ ಸಂದುಗಳನ್ನೂ ಶುದ್ಧವಾದ ರೇಷ್ಮೆಯ ದಾರದಿಂದ ಅಥವಾ ಇದಕ್ಕಾಗಿ ತಯಾರಿಸಿರುವ ಗರಗಳಿಂದ ಶುದ್ಧಮಾಡಬೇಕು.

7. ಆಗಾಗ ಶುದ್ಧವಾದ ನೀರಿನಿಂದಾಗಲೀ, ಪಿಂಗಾರದ ಮಿಶ್ರದಿಂದಾಗಲಿ ಉಪ್ಪುನೀರಿನಿಂದಾಗಲಿ ಬಾಯನ್ನು ಮುಕ್ಕಳಿಸುತ್ತಿರಬೇಕು,

8. ಮಲ ಶುದ್ಧಿಯಾಗುವಂತೆ ಪ್ರತಿದಿನವೂ ಗೋಧಿವೆ ತೌಡು ಚೇದಿಕರವಾದ ಆಹಾರ ಸಸ್ಯ ಸಂಬಂಧವಾದ ಎಣ್ಣೆ ಇವುಗಳನ್ನು ಆಹಾರದಲ್ಲಿ ಹೆಚ್ಚಾಗಿ ತೆಗೆದುಕೊಳ್ಳಬೇಕು.

9. ಹಲ್ಲು ಹುಳು ಬಿದ್ದಿದ್ದರೆ ರೋಗದಿಂದ ಯಾವದಾದರು ಹಲ್ಲು ದುರ್ಬಲವಾಗಿ ಆಡುತ್ತಿದ್ದರೆ ಒಡನೆಯೇ ದಂತ ವೈದ್ಯರಿಗೆ ತೋರಿಸಬೇಕು.

10. ಗೆಡ್ಡೆ ಗೆಣಸುಗಳು, ಧಾನ್ಯಗಳು, ಇವುಗಳಲ್ಲಿರುವ ಹಿಟ್ಟಿನ ಪದಾರ್ಥವು ಹಲ್ಲುಗಳನ್ನು ಕೆಡಿಸಿ ಹುಳಿತುಹೋಗುವಂತೆ ಮಾಡುವದು. ಸಮುದ್ರದ ನೀರಿನಲ್ಲಿ ಫ್ಲೋರಿನ್ ಎಂಬ ದಂತನಾಶಕ ವಸ್ತುವುಂಟು. ಆದರೆ ಆಹಾರದಲ್ಲಿ ಸಮುದ್ರದ ಉಪ್ಪನ್ನು ಸೇರಿಸುವದರಿಂದ ಹಲ್ಲಿಗೆ ಒಳ್ಳೆಯದೇ ಹೊರತು ಆ ಪಾಯವಿಲ್ಲ ಕಾಲ್‌ಸಿಯಂ ಫ್ಲೋರೈಡ್ ಎಂಬುದನ್ನು ಕೆಲವು ತಿಂಗಳು ತೆಗೆದುಕೊಳ್ಳುವದರಿಂದ ಹಲ್ಲುಗಳಲ್ಲಿ ಹುಳುಬೀಳುವದನ್ನು ನಿವಾರಿಸುತ್ತದೆ.

ಕೆಲವು ನಿಷೇಧ ನಿಯಮಗಳು.

1. ಹಲ್ಲುಗಳ ಸಂದಿನಲ್ಲಿ ಆಹಾರದ ಶಕಲಗಳು ತಂಗಿ ನಿಲ್ಲುವದಕ್ಕೆ ಅವಕಾಶ ಕೊಡಬೇಡಿರಿ!

2. ಟೀ, ಕಾಫಿ ಮುಂತಾದ ಪಾನೀಯಗಳನ್ನು ಬಹಳ ಬಿಸಿಯಾಗಿರುವಾಗ ಕುಡಿಯಬೇಡಿರಿ.

3 ಬಹಳ ಶೀತಳವಾದ ಎಂದರೆ ಮಂಜುಗಡ್ಡೆ (ice) ಕರಗಿದ ತಣ್ಣೀರು, ಸೋಡ ಮುಂತಾದುವನ್ನು ಕುಡಿಯಬೇಡಿರಿ.

4. ಅತಿ ಪಕ್ವವಾಗಿ, ಬಹಳ ಮೃದುವಾದ ಆಹಾರಗಳನ್ನೇ ಹೆಚ್ಚಾಗಿ ತಿನ್ನುತ್ತಾ ನಿಮ್ಮ ಹಲ್ಲುಗಳು ಮಾಡಬೇಕಾದ ಕೆಲಸಗಳನ್ನು ತಗ್ಗಿಸಬೇಡಿರಿ.

5. ಬಹಳ ಹುಳಿ, ಅಥವ ಬಹಳ ಸಿಹಿಯಾದ ಪದಾರ್ಥಗಳನ್ನು ತಿನ್ನಬೇಡಿರಿ.

6. ವೀಳ್ಯದೆಲೆ, ಹೊಗೆಸೊಪ್ಪು, ಅಡಿಕೆ ಸುಣ್ಣ, ಇವುಗಳನ್ನು ಯಾವಾಗಲೂ ಬಾಯಲ್ಲಿ ಹಾಕಿಕೊಂಡು ಅಗಿಯುತ್ತಿರಬೇಡಿರಿ ಮತ್ತು ಅಡಿಕೆ ಮುಂತಾದ ಕಠಿಣ ಪದಾರ್ಥಗಳನ್ನು ಹಲ್ಲಿನಿಂದ ಒಡೆಯುವದಕ್ಕೆ ಯತ್ನಿಸಬೇಡಿರಿ.

7. ಚನ್ನಾಗಿ ಅಗಿದು ನುಂಗಬೇಕಾದ ಆಹಾರಗಳನ್ನು ಅಗಿಯದೆ ನುಂಗುವದರಿಂದ ಅವುಗಳನ್ನು ಜೀರ್ಣಮಾಡುವ ವಿಷಯದಲ್ಲಿ ಹಲ್ಲುಗಳಿಂದಾಗಬೇಕಾದ ಸಹಾಯವನ್ನು ತಪ್ಪಿಸಿ ಕರಳುಗಳಿಗೆ ಅನಾವಶ್ಯವಾದ ಕೆಲಸಗಳನ್ನು ಹೆಚ್ಚಿಸಬೇಡಿರಿ.

8. ಹಲ್ಲು ಸಂದುಗಳಲ್ಲಿ ಸೇರಿರುವ ಇತರ ವಸ್ತುಗಳನ್ನು ನೀಗಿಸುವದಕ್ಕಾಗಿ, ಕತ್ತಿ, ಕತ್ತರಿ, ಸೂಜಿ, ನಿಬ್ಬು, ಪೆನ್ಸಿಲ್ ಮುಂತಾದ ಕಠಿಣ ವಸ್ತುಗಳಿಂದ ಹಲ್ಲನ್ನು ಚುಚ್ಚಬೇಡಿರಿ.

9. ಹಲ್ಲುಗಳನ್ನು ಬೆಳ್ಳಗೆ ಮಾಡುವದಕ್ಕಾಗಿ ದ್ರಾವಕಗಳನ್ನಾಗಲಿ ಇತರ ಕ್ಷಾರಗಳನ್ನಾಗಲಿ ಉಪಯೋಗಿಸಬೇಡಿರಿ.

10 ವಕ್ರವಾದ ಮತ್ತು ಸ್ಥಳ ಬದಲಾಯಿಸಿದ ಹಲ್ಲುಗಳು ಹುಟ್ಟುವದಕ್ಕೆ ಅವಕಾಶ ಕೊಡಬೇಡಿರಿ (ಇಂತಹ ಹಲ್ಲುಗಳನ್ನು ಒಡನೆಯೇ ಕಿತ್ತು ಹಾಕಿಸಬೇಕು. ಹಾಗಿಲ್ಲದಿದ್ದರೆ ಬೇರೆ ಹಲ್ಲುಗಳ ಬಿಗಿಯು ಇದರಿಂದ ತಪ್ಪಿಹೋಗುವದು.)

ಸೂಚನೆ.—ಕಟ್ಟಿಸಿಕೊಂಡ ಕೃತ್ರಿಮವಾದ ಹಲ್ಲುಗಳ ವಿಷಯದಲ್ಲಿಯೂ, ಮೇಲೆ ಹೇಳಿದ ಹತ್ತು ನಿಯಮಗಳನ್ನೂ ಅನುಸರಿಸುತ್ತ, ಅವುಗಳನ್ನು ಶುದ್ಧವಾಗಿ ಇಟ್ಟಿರಬೇಕು.

ಆರೋಗ್ಯಚಂದ್ರಿಕೆ.

ನವೀನ ಜೀವಿಗಳು.

ಚೀನಾ ದೇಶದ ದಕ್ಷಿಣ ಭಾಗದಲ್ಲಿ ವಿಶೇಷತರದ ಪ್ರಾಣಿಗಳಿರುವುವೆಂದು ಇತ್ತೀಚೆಗೆ ತಿಳಿದು ಬಂದಿರುತ್ತದೆ.

ಅವುಗಳಲ್ಲಿ 'ನಾಯಿಯಮೋರೆಯ ಮನುಷ್ಯರೆಂಬವರು ಅತಿ ಹೆಚ್ಚಿನ ಆಶ್ಚರ್ಯವನ್ನುಂಟುಮಾಡುವರು. ಅವರ ನಿವಾಸವು ತೀರಾ ಒಳಭಾಗದಲ್ಲಿದ್ದು ಅವರ ವೈಖರ್ಯಲ್ಲಿ ತುಂಬಾ ಕೂದಲು, ಅವರ ವಾಸ ಮರದ ಮೇಲೆ, ಸ್ವಭಾವವು ಪೂರಾ ಅನಾಗರೀಕವಾಗಿರುತ್ತದೆ.

ಅದೇ ಪ್ರಾಂತ್ಯದಲ್ಲಿ ಒಂದು ನೀಲಿಬಣ್ಣದ ಹುಲಿ ಇರುವದೆಂದೂ ತಿಳಿದುಬರುತ್ತದೆ. ಇದು ಪ್ರಾಣಿ ಶಾಸ್ತ್ರಕ್ಕೇ ವಿಶೇಷವಾದುದು. ಈ ಪ್ರಾಣಿಯು ಮೈಮೇಲೆ ನೀಲಿ ಬಣ್ಣದ ಬರೆಗಳಿರುವುವೆಂದಲ್ಲ. ಆದರೆ ಅದರ ಮೈ ಉಣ್ಣೆಯೇ ನೀಲಿಬಣ್ಣದ್ದು. ಒಂದು ತಿಂಗಳಲ್ಲಿ ಈ ಪ್ರಾಣಿಯು 60 ನರ ಭಕ್ಷಣೆಯನ್ನು ಮಾಡಿತೆಂದು ತಿಳಿದು ಬರುವದು. ಇಲ್ಲೇ ಒಂದು ಕರಡಿಯ ಪ್ರಮಾಣದ 'ಬೇಜರ್' ಮತ್ತು 'ಆನಿಗೂ ಬೆಂಕೆಗೂ' ಮಧ್ಯಜಾತಿಯ ಒಂದು ಮೃಗವಿದೆಯೆಂದು ಡಾ|| ಕಾಲ್ಡ್‌ವೆಲ್ ಇವರು ತಿಳಿಸುವರು.

ದಕ್ಷಿಣ ಚೀನಾದಲ್ಲಿ ಅತಿ ಪ್ರಾಚೀನಕಾಲದಲ್ಲಿದ್ದಂತೆ ಇರುವ ಅನೇಕ ಬಗೆಯ ಪ್ರಾಣಿ ಮತ್ತು ಮನುಷ್ಯರಿರುವರೆಂಬ ಶಾಸ್ತ್ರಜ್ಞರ ಊಹೆಯು ಇದರಿಂದ ನಿಜವೆಂದು ತೋರುವದು. ಈ ಪ್ರಾಂತ್ಯದಲ್ಲಿನ ಸಕಲವೂ ಪೂರ್ವದ ಕಾಲದಲ್ಲಿದ್ದಂತೆಯೇ ಇರಬಹುದೆಂದು ಊಹಿಸುವರು.

ಚೀನಾ ಜನರು ತಮ್ಮ ದೇಶದಲ್ಲಿ ಹಾರಾಡುವ ಹಾವುಗಳು 'ಡ್ರೈಗನ್' ಮೊದಲಾದ ಪ್ರಾಣಿಗಳಿದ್ದುವೆನ್ನುವರು. ಈ ಮಾತನ್ನು ಇತರರು ಇಷ್ಟರವರೆಗೆ ಪರಿಹಾಸ್ಯಮಾಡಿದರೂ ಇನ್ನು ಅವರನ್ನು ನಂಬಬೇಕಾಗಿ ತೋರುತ್ತದೆ.

ಶ.

ಜಮೀನುದಾರರ ಸಂಘದ

ವಾರ್ಷಿಕಾ ಜನರಲ್ ಮೀಟಿಂಗು ಈ ವರುಷ ಮೂರ್ನಾಡಿನಲ್ಲಿ ನಡೆಯುವುದು.

ಅಧ್ಯಕ್ಷರು:—ಮಾ. ರಾ. ರಾ. ಅಬ್ದುಲ್ ಗಫೂರ್‌ಖಾನ್ ಶೈತ್ಗಿಯವರು.

ಸಭೆಯು ಏಪ್ರಿಲ್ ತಾರೀಕು 11ರಲ್ಲಿ ಮಧ್ಯಾಹ್ನ 1 ಗಂಟೆಗೆ ಪ್ರಾರಂಭವಾಗುವುದು ಅವಶ್ಯವಿದ್ದರೆ ತಾರೀಕು 13ರ ವರೆಗೆ ನಡೆಯುವುದು.

ಈ ಸಮ್ಮೇಳನವು ಬಹು ಮುಖ್ಯವಾದದ್ದು ಬ್ರಿಟಾಫ್ ಕಂಟ್ರಾಕ್ಟ್ ಆಕ್ಟು, ಅಖಿಲಭಾರತ ಕಂದಾಯದ ಆಜಮಾಯಿಸಿಕೆಯ ಕಮಿಟಿಯ ಪ್ರಶ್ನೆಗಳು ಮೊದಲಾದ ಮುಖ್ಯ ಸಂಗತಿಗಳು ಚರ್ಚಿಸಲ್ಪಡುವವು. ಆದುದರಿಂದ ಪ್ರತಿಯೊಬ್ಬ ಜಮೀನ್ದಾರನೂ ಈ ಮೀಟಿಂಗಿಗೆ ಹಾಜರಾಗಬೇಕಾದದ್ದು ಅವನ ಕರ್ತವ್ಯವಾಗಿದೆ.

ಸ್ವಯಂ ಸೇವಕರು ಬೇಕಾಗಿವೆ.

ಈ ವರುಷದ 11—4—33ರಲ್ಲಿ ಮೂರ್ನಾಡಿನಲ್ಲಿ ನಡೆಯುವ ಜಮೀನ್‌ದಾರರ ಸಂಘದ ವಾರ್ಷಿಕ ಸಮ್ಮೇಳನದಲ್ಲಿ ಸಂಘದ ಅಭಿವೃದ್ಧಿ ಬಂದು. ಒಂದು ಸ್ವಯಂ ಸೇವಕರ ಬೆಟಾಲಿಯನ್ ಏರ್ಪಡಿಸಲಾಗುವುದು. ಇದರ ಉದ್ದೇಶವು ಸಮ್ಮೇಳನದಲ್ಲಿ ಚರ್ಚಿಸಲ್ಪಡುವುದು. ಬಹುಮತದಿಂದ ಮೇಲಧಿಕಾರಿಗಳನ್ನು ಆರಿಸಲ್ಪಡುವುದು. ಇದಕ್ಕೆ ಸೇರಲು ಅಪೇಕ್ಷಿಸುವರು ಕೆಳಗಿನ ವಿಳಾಸಕ್ಕೆ ಬರೆಯುವದಲ್ಲದೆ ಈ ವರುಷದ ವಾರ್ಷಿಕ ಸಮ್ಮೇಳನದ ಜಯಕ್ಕಾಗಿ ಸೇವಕರಾಗಿ ಆಗಬೇಕಾಗಿ ಕೋರಿಕೆ.

ವೀರಶೈವರಲ್ಲಿ ವಿನಂತಿ.

ಇದೇ ತಾರೀಕು 11—4—33ರಲ್ಲಿ ಮೂರ್ನಾಡಿನಲ್ಲಿ ನಡೆಯತಕ್ಕ ಕೊಡಗು ಜಮೀನ್‌ದಾರರ ಸಂಘದ ವಾರ್ಷಿಕ ಸಮ್ಮೇಳನಕ್ಕೆ ಹೋಗತಕ್ಕಂಥಾ ಶಿವಾಚಾರದವರು ದಯಮಾಡಿ ಅವರ ಸಂಖ್ಯೆ ಮತ್ತು ಹೆಸರುಗಳನ್ನು, ಅವರ ಊಟ ಉಪಚಾರಗಳನ್ನು ಏರ್ಪಡಿಸತಕ್ಕ ಬಗ್ಗೆ ಮುಂದಾಗಿಯೇ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಬೇಕಾಗಿ ಕೋರಿಕೆ

ಸೆಕ್ರಟರಿ,
ಜಮೀನ್‌ದಾರರ ಸಂಘದ
ಸ್ವಾಗತ ಕಮಿಟಿ,
ಮೂರ್ನಾಡು.

ಜಾತಿಯ ತಪ್ಪು ಉಪಯೋಗ.

(ಮ ಟಿ ವಿ ಶೇಷಗಿರಿ ಅಯ್ಯಂಗರ ಲೇಖನದಿಂದ)

ಜಾತಿ ನೀತಿಯ ಸೆಟ್ಟಿಗಾಗುವಿಕೆಗೆ ಮುಖ್ಯವಾಗಿ ಎರಡು ಅಡಚಣೆಗಳಿವೆ. ಒಂದನೇದು ಜಾತಿಯ ನಿರ್ಲಕ್ಷ್ಯ, ಜಾತಿಯ ಅಧಿಕ ಉಪಯೋಗ ಎರಡನೇದು ಈ ಎರಡರಲ್ಲಿ ನಾವು ಭಾರತೀಯರು ಎರಡನೇಯದರಲ್ಲಿ ತೇಲಾಡುತ್ತಿದ್ದೇವೆ. ಶಾಸ್ತ್ರಿ ಮಾತ್ಯಕಾರರೋ ಮೊದಲನೇಯದನ್ನು ಕಣ್ಣು ಮುಚ್ಚಿಕೊಂಡು ಅವಲಂಬಿಸುತ್ತಿರುವರು

ಈ ಬ್ರಹ್ಮಾಂಡದಲ್ಲಿರುವ ಪ್ರತಿಯೊಬ್ಬ ಮನುಷ್ಯನಲ್ಲಿಯೂ ಅತ್ಯುನ್ನತ ದೃಷ್ಟಿಯಿಂದಲ್ಲದೆ ಹೋದರೂ ಮಸುಕು ದೃಷ್ಟಿಯಿಂದಲಾದರೂ ಆತ್ಮವಿದೆಯೆಂದು ನಾವು ಒಪ್ಪುತ್ತೇವೆ. ಆದರೆ ಕೆಲವು ಪಂಗಡದ ಜನರನ್ನು ಸಮುದಾಯದಿಂದ ಓಡಿಸುವೆವು ಶಾಲೆಯಿಂದ ಹೊರಕ್ಕೆ ಕಳುಹಿಸುವೆವು, ದೇವಾಲಯದಿಂದ ಅಟ್ಟುವೆವು ಇದನ್ನೇ ನಾವು ಜಾತಿ ಜಾತಿ ಎಂದು ಒದರುವುದು. ವಿವೇಕಾನಂದರ ವಚನಾನುಸಾರ ಎಲ್ಲಿ ಹೋದರೂ 'ಅಸ್ಪೃಶ್ಯತೆ' ಯೇ ಜಾತಿ ನಮಗೆ

ಬೇರೆ ದೇಶದ ಜನರು ಅನುಭವಿಸುವ ಇಹಲೋಕ ಸುಖಗಳಿಗೆ ಬಾಹಿರರನ್ನಾಗಿ ಮಾಡಿ, ನಮ್ಮ ಜನರನ್ನು ಮನೆಯಲ್ಲಿ ಬಚ್ಚಿಡುವೆವು ಏನಾದರೂ ಸುದ್ದಿ ಎತ್ತಿದರೆ 'ಜಾತಿ, ಜಾತಿ' ಎಂದು ಕೂಗಿಡುವೆವು

ಯಾರಾದರೂ ಹಿಬ್ಬನು ಬಂದು ಹೊಸ ಕೆಲಸವನ್ನಾಗಲೀ, ಹೊಸ ವಿಷಯದ ಮಾತನ್ನಾಗಲೀ ಎತ್ತಿದರೆ ಊರೆಲ್ಲಾ 'ಜಾತಿ ಕೆಟ್ಟಿತೆಂಬ' ಗೋಳಾಟ

ಗೀತೆಯಲ್ಲಿ 'ಯಾರು ಬ್ರಹ್ಮ ಸೃಷ್ಟಿಯಲ್ಲಿರುವ ಜೀವರಾಶಿಗಳನ್ನೆಲ್ಲಾ ಸಮದೃಷ್ಟಿಯಿಂದ ನೋಡುವನೋ ಅವನೇ ಯೋಗಿಯು, ಅವನೇ ಬ್ರಾಹ್ಮಣನು' ಎಂದು ಹೇಳಿದೆ ಎಲ್ಲರೂ ಗಿಳಿ ಪಾಠ ಮಾಡುವುದು ಗೀತೆಯನ್ನು, ಮನೋ ವಾಕ್ಕಾಯಗಳಲ್ಲಿ ಮಾತ್ರ ಬೇರೆ. ಆ ಮೇಲೆ ಏನಾದರೂ ಪ್ರಶ್ನೆ ಮಾತ್ರ ಬಂದರೆ, ಗೀತೆಯು ಹೀಗೆ ಹೇಳುತ್ತದೆ, ಅದರಲ್ಲಿ ಹಾಗೆ ಹೇಳಿದೆ, ಇದರಲ್ಲಿ ಹೀಗೆ ಹೇಳಿದೆ, ಎಂದು ಪುರಾಣಗಳನ್ನು ಎಡುಹಿಡುವುದು. ಇದು ಯಾರಿಗೆ ಬೇಕು? ಮತ್ತು ಯಾವ ನ್ಯಾಯ?

ಈ ನಮ್ಮ ಕುತರ್ಕಗಳೇ, ಭಾರತೀಯರ ಹೀನಸ್ಥಿತಿಗೆ ಮೂಲ ಹೊರತು, ಮತ್ತೆ ಬೇರೆಯಲ್ಲ. ಯಾವ ಕಾಲಕ್ಕೆ ಭಾರತೀಯರು ಅಸ್ಪೃಶ್ಯತಾ ವೇಷದಿಂದ ಬಿಡಲ್ಪಡುವರೋ, ಯಾವ ಕಾಲಕ್ಕೆ ಜೀವರಾಶಿಗಳನ್ನೆಲ್ಲಾ ಸಮದೃಷ್ಟಿಯಿಂದ ನೋಡಿ ಸ್ವಾಭಿಮಾನವನ್ನು ತಾಳುವರೋ, ಅಂದು ಭಾರತೀಯರ ಸ್ವರಾಜ್ಯ ಪತಾಕೆಯು ಹಾರ್‍ಯಾಡುವುದರಲ್ಲಿ ಆಶ್ಚರ್ಯವೇನು? ಅಲ್ಲದೆ ನೋಯಿಸಿದರೆ ಅವರು ಮುಂದೆಯೋ ನಾವು ಹಿಂದೆಯೋ ಎಲ್ಲಕ್ಕೂ ಜಾತಿಯ ತಪ್ಪು ಉಪಯೋಗ ಅಥವಾ ನಮ್ಮ ಅಧಿಕ ಉಪಯೋಗವೇ ಕಾರಣ

ನಮ್ಮ ದಾರರ ಸ್ವಹಸ್ತ.

ಪದ । ಧಾಟಿ ॥ ಜಾವ್ಪೂ ಶಾಳೇಲಾ ಜಾಳಾ
ಜಾವ್ಪೂ ಶಾಳೇಲಾ, ಎಂಬಂತೆ

ದಾರವೇ ಆಧಾರಾ ನಮಗೀಧಾರವೇ ಆಧಾರ ಸುತ್ತಲಿ
ದು ನಂ ಸಾರ ಚಕ್ರವಾರಿತುಗಿಸುತ್ತಿರುವರಿಗೀನ ಮಗೆ॥ ಪಲ್ಲ॥

ಹುಟ್ಟಿದಕೂಸಿನ ಹುರಿಯ ಕೊಯ್ದರೆ । ಕಟ್ಟುವದಾ
ದಾದಾರ । ನಮಗೆ ದಾರವೆ ॥೧॥

ಹುಡುಗರ ನಡುವಿಗೆ ಬಡವೆ ಬಂದಿಸುವ ದೃಢತರ
ದುಡುದಾರಾ ನಮಗೆ ॥೨

ಸಾಧವ ಜೈನಾದಿಗರ ಶರೀರದಿ ತೋರುವ
ಜನಿವಾರಾ' ನಮಗೆ ೩

ವೀರಶೈವಮತ ಸಾರುವ ಲಿಂಗವ
ಕೀಲಿದ ಶಿವದಾರಾ ನಮಗೆ ೪।

ಮೊಳೆಯುರ್ಜದಿ । ಬೋಳುವ ಮಕನಾ
ಮೋಳಾಲಿಯ ದಾರಾ ನಮಗೆ ೫॥

ಉತ್ತಿ ಮಲಗ್ನದಿ ನಿತ್ಯವು ಸುರಗಿಯ
ಸುತ್ತುವದಾದಾರಾ ನಮಗೆ ॥೬॥

ಧಾತ್ರಿಯೊಳಬಲೆಯ । ಗಾತ್ರದಿ ಮಂಗಳ ।
ಸೂತ್ರವದಾದಾರಾ ನಮಗೆ ॥೭

ಅಂಗನೆಯಂಗವ । ಸಿಂಗರಿಸಿರುವಾ ।
ಜಂಗನೂಲುದಾರಾ ನಮಗೆ ॥೮।

ವಳಿದು ವಹಿಲದಿಂ ಹಲವು ಹೊತ್ತಿಗೆಯ ।
ಹೊಲಿಯುವದಾದಾರಾ ನಮಗೆ ।೯॥

ಸಿಜ್ಜಜನತೆಯೂ । ಹೆಚ್ಚಿನ ಮಾನವ ।
ಮುಚ್ಚುವದಾದಾರಾ । ನಮಗೆ ॥೧೦॥

ಆತ್ಮವಿಧಿಗೆ ಸಹ ಶಾಂತ ಮನದಿ ತಾ ।
ನಿಂತಿಹುದಾದಾರಾ ನಮಗೆ ॥೧೧॥

ಈಶಗಣರು ಯಮ ಕ್ರೀಶರು ಪಿಡಿದಾ ।
ಪಾಶವದಾದಾರಾ ನಮಗೆ ॥೧೨॥

ನಿರ್ಮಲಮನದಿಂ ದಮ್ಮನು ನೂಲುವ ।
ನಮ್ಮ ರಾಟಿ ದಾರಾ ನಮಗೆ ॥೧೩॥

ಪ್ರಾಜ್ಞಗುರುವು ನರಸಿಂಹ ಮಹಾತ್ಮನ ।
ಆಜ್ಞೆಯ ಆಧಾರಾ ನಮಗೆ ॥೧೪॥

"ಸ್ವಧರ್ಮ"

ಕೊಡಗು ಜಮ್ಖಾನ ರೇಸ್‌ಗಳು.

ಏಪ್ರಿಲ್ ೧೪, ೧೭, ೨೦.

ಪ್ರತಿದಿನವೂ ಸಾಯಂಕಾಲ ಮೂರು ಗಂಟೆಗೆ ಪ್ರಾರಂಭ.
ಟೋಟಲೈಜೇಟರ್ ಮತ್ತು ಬುಕ್ ಮೇಕರಿಗೆ ಎರಡು ರುಪಾಯಿ

ಪ್ರವೇಶಕ್ಕೆ ಒಂದು ರುಪಾಯಿ.

ಫಲಾಹಾರದ ಅಂಗಡಿಯೂ ಸಹ ಇದೆ

ಕೌನ್ಸಿಲ್ ಮೀಟಿಂಗು.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲ್ ಮೀಟಿಂಗು ಮಾರ್ಚಿ ತಾರೀಕು 12ರಲ್ಲು ಬೆಳಿಗ್ಗೆ 11 ಗಂಟೆಗೆ ಕೌನ್ಸಿಲ್ ಹಾಲಿನಲ್ಲಿ ಪ್ರಾರಂಭವಾಯಿತು. ಚೀಫ್ ಕಮಿಷನರಾದ ಮಿ. ಡಬ್ಲ್ಯು. ಪಿ. ಬಾರ್ಟನ್‌ರವರು ಅಧ್ಯಕ್ಷರಾಗಿದ್ದರು. ಕೌನ್ಸಿಲಿನ 20 ಮೆಂಬರುಗಳೂ ಹಾಜರಿದ್ದರು. ಹಾಲಿನ ಎದುರಿನಲ್ಲಿ ಸ್ವಲ್ಪ ದೂರದಲ್ಲಿರುವ ಪ್ರೇಕ್ಷಕರ ಗ್ಯಾಲರಿಯಲ್ಲು ಕೆಲವು ಪ್ರೇಕ್ಷಕರೂ, ಹಿಂದಿನ ಪಕ್ಕದ ಗ್ಯಾಲರಿಯಲ್ಲಿ ಕೆಲವು ಗಜೆಟೆಡ್ ಉದ್ಯೋಗಸ್ಥರೂ, ಯೂರೋಪಿಯನರೂ ಹಾಜರಿದ್ದರು. ಸ್ಕೂಲ್ ಇನ್‌ಸ್ಪೆಕ್ಟರಾದ ಮಿ. ಜೆ. ಎ. ಏಟ್ಕಿನ್, ಯಂ. ಎ. ಯವರೂ, ಹಿಂದುಳಿದ ಪಂಗಡದವರಿಗಾಗಿ ನೇಮಿಸಲ್ಪಟ್ಟ ಮಿ. ಮಹಮ್ಮದ್ ರಸೂಲ್‌ಖಾನ್ ಸಾಹೇಬರವರೂ ಸಿಂಹಾಸನಕ್ಕೆ ಭಕ್ತಿ ಪ್ರಮಾಣಮಾಡಿ ಕೊಡುಕೊಂಡರು.

ನಂಬರ್ 168ರಿಂದ 192ರ ವರೆಗಿನ ಪ್ರಶ್ನೆಗಳು ಉತ್ತರಗಳ ಸಮೇತ ಟೈಪ್ ಮಾಡಿದ್ದು ಮೆಂಬರುಗಳಿಗೆಲ್ಲಾ ಮೇಜಿನ ಮೇಲೆ ಇಡಲ್ಪಟ್ಟಿತ್ತು. ಸೆಕ್ರೆಟರಿಯವರು ಪ್ರತಿ ಪ್ರಶ್ನೆಯ ನಂಬರನ್ನೂ ಅದನ್ನು ಕೇಳಿದ ಮೆಂಬರ ಹೆಸರನ್ನೂ ಓದಿದ ಕೂಡಲೆ ಆ ಪ್ರಶ್ನೆಯ ವಿಷಯ ಏನಾದರೂ ಕೇಳಬೇಕಾದ ಮೆಂಬರುಗಳು ಆಗ ಕೇಳಿದರು. ಹೀಗೆ ಪ್ರಶ್ನೋತ್ತರಗಳಾದನಂತರ ಕಳೆದ ಮಾರ್ಚಿ ಮತ್ತು ಸಪ್ಟಂಬರು ತಿಂಗಳುಗಳ ಕೌನ್ಸಿಲ್ ಮೀಟಿಂಗುಗಳಲ್ಲಿ ಪಾಸಾದ ಠರಾವುಗಳ ಮೇಲೆ ಚೀಫ್ ಕಮಿಷನರವರು ಮಾಡಿದ ತೀರ್ಮಾನಗಳನ್ನು ಸೆಕ್ರೆಟರಿಯವರು ಮೇಜಿನಮೇಲಿಟ್ಟರು (ಇದು ಮುಂದಿನ ಪಾಠದಲ್ಲಿ ಪ್ರಕಟಿಸಲಾಗುವುದು.)

ಇಂಡಿಯಾ ಸ್ಟೇಟ್ ಸೆಕ್ರೆಟರಿಯಾಗಿದ್ದು ಹಿಂದೂದೇಶಕ್ಕೆ ಈಗಿನ ರಾಜಕೀಯ ಸುಧಾರಣೆಗಳನ್ನು ಕೊಡಲು ಮೂಲ ಕಾರಣರಾದ ಮಿ. ಇ. ಮಾಂಟೆಗ್ಯೂರವರು ಕೆಲವು ತಿಂಗಳ ಹಿಂದೆ ಮೃತಪಟ್ಟದ್ದಕ್ಕಾಗಿ ಪರಿತಾಪವನ್ನು ಸೂಚಿಸುವ ಒಂದು ಠರಾವನ್ನು ಮಿ|| ಬಿ. ಶ್ರೀಪತಿರಾಯರು ಕೌನ್ಸಿಲಿನ ಮುಂದಿಟ್ಟರು. ಮಿ. ಪಿ. ಟಿ. ಕುಶಾಲಪ್ಪನವರು ಅನುಮೋದಿಸಿದರು. ಸರ್ವ ಸಮ್ಮತದಿಂದ ಪಾಸಾಯಿತು.

ಈ ಕೌನ್ಸಿಲಿನಲ್ಲಿ ಹಿಂದುಳಿದ ಪಂಗಡದವರ ಪರವಾಗಿ ಮೆಂಬರಾಗಿದ್ದ ಮಿ. ಕರಂಬಾಡಿ ಸುಬ್ರಾಯರ ಅಕಾಲ ಮರಣಕ್ಕೆ ವ್ಯಸನವನ್ನು ಸೂಚಿಸಿ ಫೈನಾನ್ಸ್ ಮೆಂಬರವರು ಒಂದು ಠರಾವನ್ನು ತಂದರು. ಮಿ|| ಬಿ. ಶ್ರೀಪತಿರಾಯರು ಅನುಮೋದಿಸಲು ಅದು ಸರ್ವ ಸಮ್ಮತದಿಂದ ಪಾಸಾಯಿತು.

ಫೈನಾನ್ಸ್ ಮೆಂಬರಾದ ಕಮಿಷನರವರು 1925-26ನೇ ವರ್ಷದ ಬಜೆಟ್ಟನ್ನು ವಿವರಿಸಲು ದೀರ್ಘವಾದ ಭಾಷಣವನ್ನು ಓದಿ (ಮೊದಲಿನಂತೆ ಹೆಚ್ಚು ಸಮಯ ಬೇಕಾಗಿರುವ ಕಾರಣ ಮಾಡಾದದೆ) ಬಜೆಟ್ಟನ್ನು ಕೌನ್ಸಿಲಿನ ಮುಂದೆ ಚರ್ಚೆಗೆ ಇಟ್ಟರು.

ಕೂಡಲೆ ಮ. ರಾ ರಾ. ಗಳಾದ ಕೋಟೆರ ಚಿಣ್ಣಪ್ಪನವರು, ಮನೆಯಪಂಡ ಚಿಣ್ಣಪ್ಪನವರು, ಚಪ್ಪುಡಿರ ಚಂಗಪ್ಪನವರು, ಬಿ. ಶ್ರೀಪತಿರಾಯರು, ಪಂದ್ಯಂಡ ಬೆಳ್ಯಪ್ಪನವರು, ಸಿ. ಎನ್. ವೆಂಕಪ್ಪಯ್ಯನವರು, ಕಂಬೆಯಂಡ ಮಂದಣ್ಣನವರು ಮತ್ತು ನಿಸ್ತ್ರದ ಸುಬ್ಬಣ್ಣಯ್ಯನವರು ಬಜೆಟಿನ ಮೇಲೆ ತಮ್ಮ ತಮ್ಮ ಜನರಲ್ ಅಭಿಪ್ರಾಯಗಳನ್ನು ಸೂಚಿಸಿ ಭಾಷಣ ಕೊಟ್ಟರು. ಇವರೆಲ್ಲರೂ ಭಾಷಣ ಓದುವದರಲ್ಲಿ ಫೈನಾನ್ಸ್ ಮೆಂಬರನ್ನು ಹಿಂಬಾಲಿಸಿದರು.

ಫಾರೆಸ್ಟ್ ಮೆಂಬರಾದ ಮಿ. ಡೇರಿಂಗ್ಟನ್‌ರವರೂ, ಫೈನಾನ್ಸ್ ಮೆಂಬರವರೂ ಸಂಕ್ಷೇಪವಾಗಿ ಜವಾಬು ಕೊಟ್ಟನಂತರ ಸುಮಾರು ಮಧ್ಯಾಹ್ನ 2 ಗಂಟೆಗೆ ಆ ದಿನಕ್ಕೆ ಮೀಟಿಂಗು ಬರಖಾಸ್ತು ಆಯಿತು.

ಎರಡನೇ ದಿನ.

ತಾರೀಕು 13ರಲ್ಲು ಕೌನ್ಸಿಲ್ ಚೇಂಬರಿನಲ್ಲು ಬೆಳಿಗ್ಗೆ 11 ಗಂಟೆಗೆ ಪುನಹ ಮೀಟಿಂಗು ತೊಡಗಿತು. ಮೊದಲಿನ ದಿನದಂತೆಯೇ ಎಲ್ಲರೂ ಹಾಜರಿದ್ದರು. 193ರಿಂದ 217ರ ವರೆಗಿನ ಪ್ರಶ್ನೆಗಳಿಗೆ ಉತ್ತರ ದೊರಕನಂತರ ಈ ಕೆಳಗಿನ ಬಜೆಟಿನ ವಿಷಯ ಇರುವಾರು ಠರಾವುಗಳು ಚರ್ಚಿಸಲ್ಪಟ್ಟವು.

1. 6-ಎ ಎಕ್ಸೈಸಿನ 3,45,400 ಉತ್ಪತ್ತಿಯಲ್ಲಿ 100 ರೂಪಾಯಿ ಕಡಿಮೆ ಮಾಡಬೇಕೆಂಬು ಈ ಕೌನ್ಸಿಲ್ ಚೀಫ್ ಕಮಿಷನರವರಿಗೆ ಶಿಫಾರಸ್ಸು ಮಾಡುತ್ತದೆ."

ಇದನ್ನು ಮಿ. ಬಿ. ಶ್ರೀಪತಿರಾಯರು ಸೂಚಿಸಿ ಲೈಸನ್ಸು ಪದ್ಧತಿಯಿಂದ ಬೆಲ್ಲ ಮಾಡುವದರಿಂದುಂಟಾಗುವ ಪ್ರಯೋಜನದ ವಿಷಯ ಮಾತಾಡಿದರು,

ಈ ವಿಷಯದಲ್ಲಿ ಸರ್ಕಾರದವರು ಸಹಾನುಭೂತಿಯುಳ್ಳವರಾಗಿರುವರೆಂದೂ, ಪ್ರಯತ್ನಿಸುವವರಿಗೆ ಲೈಸನ್ಸು ಕೊಡಲು ತಯಾರಾಗಿರುವರೆಂದೂ ಫೈನಾನ್ಸ್ ಮೆಂಬರು ಹೇಳಿದ್ದರಿಂದ ಸೂಚಕರು ಠರಾವನ್ನು ವಾಪಸು ತೆಗೆದುಕೊಂಡರು.

2. 8-ಎ ಫಾರೆಸ್ಟಿನ ಮರ ವಗೈರೆ ಸಾಗಿಸುವ 1,73,800 ರೂ. ಖರ್ಚಿನಲ್ಲಿ 23,800 ಕಡಿಮೆ ಮಾಡಬೇಕೆಂದು ಈ ಕೌನ್ಸಿಲು ಚೀಫ್ ಕಮಿಷನರವರಿಗೆ ಶಿಫಾರಸ್ಸು ಮಾಡುತ್ತದೆ"

ಮಿ|| ಬಿ. ಶ್ರೀಪತಿರಾಯರು ಸೂಚಿಸಿದರು

ಫಾರೆಸ್ಟ್ ಮೆಂಬರು ಜವಾಬು ಕೊಟ್ಟನಂತರ ಠರಾವು ವಾಪಸು ತೆಗೆದುಕೊಳ್ಳಲಾಯಿತು.

3. 8-ಎ ಫಾರೆಸ್ಟಿನ ಖರ್ಚಿನಲ್ಲಿ 50,000 ಕಡಿಮೆಮಾಡಬೇಕೆಂಬ ಠರಾವನ್ನು ಮಿ|| ಸಿ. ಎನ್. ವೆಂಕಪ್ಪಯ್ಯನವರು ವಾಪಸು ತೆಗೆದುಕೊಂಡರು.

4. 8 ಎ ಫಾರೆಸ್ಟಿನಲ್ಲಿ 1,73,800 ಖರ್ಚಿನಲ್ಲಿ 1,07,000 ಕಡಿಮೆ ಮಾಡಬೇಕೆಂದು ಈ ಕೌನ್ಸಿಲು ಚೀಫ್‌ಕಮಿಷನರವರಿಗೆ ಶಿಫಾರಸ್ಸು ಮಾಡುತ್ತದೆ."

ಮಿ|| ಕೆ. ಪಿ. ಚಿಣ್ಣಪ್ಪನವರು ಸೂಚಿಸಿದರು.

ಸರ್ಕಾರದವರು ತತ್ಕಾಲ ಮಾಕೂಟ ಟ್ರಾಮ್ವೆಯನ್ನು ನಿಲ್ಲಿಸಲು ತೀರ್ಮಾನಿಸಿರುವುದರಿಂದ ಒಂದುಲಕ್ಷ ರೂಪಾಯಿ ಕಡಿಮೆಮಾಡಬಹುದೆಂತಲೂ, ಬಾಕಿ 7ಸಾವಿರ ರೂಪಾಯಿ ಮಾಕೂಟದ ಟ್ರಾಮ್ವೆಯ ಯಂತ್ರಗಳ ಎಚ್ಚರ ತೆಗೆದುಕೊಳ್ಳಲು ಬೇಕಾಗುವುದೆಂದೂ ಫಾರೆಸ್ಟು ಮೆಂಬರು ಜವಾಬು ಕೊಟ್ಟರು.

ಓಟಿಗೆ ಹಾಕಿದಾಗ ಉದ್ಯೋಗಸ್ಥರಲ್ಲದ ಇಂಡಿಯನ್ ಮೆಂಬರುಗಳೆಲ್ಲರೂ ಇದಕ್ಕೆ ಪರವಾಗಿ ಓಟುಕೊಟ್ಟದ್ದರಿಂದ ಬಹು ಮತದಿಂದ (ಅಂದರೆ 14 ಪರವಾಗಿ 6 ವಿರೋಧವಾಗಿ) ಈ ಠರಾವು ಪಾಸಾಯಿತು.

5. 8-ಎ ಫಾರೆಸ್ಟಿನ ಖರ್ಚಿನಲ್ಲಿ 5000 ರೂ. ಕಡಿಮೆ ಮಾಡಬೇಕೆಂಬ ಠರಾವನ್ನು ಮಿ|| ಸಿ. ಕಾಳಪ್ಪನವರು ವಾಪಸು ತೆಗೆದುಕೊಂಡರು.

6. 8-ಎ ಫಾರೆಸ್ಟಿನ ಕನ್‌ಸರ್ವನ್ಸಿ ಮತ್ತು ವರ್ಕ್ಸಿನ 35,000 ಖರ್ಚಿನಲ್ಲಿ 10 000 ಕಡಿಮೆ ಮಾಡಿ ಆ ಹಣವನ್ನು ವೀರಾಜಪೇಟೆ ಹೈಸ್ಕೂಲಿಗೆ ಒಂದು ಬೋರ್ಡಿಂಗಿಗಾಗಿಯೂ ಮತ್ತು ಲೈಬ್ರರಿಗಾಗಿಯೂ ಉಪಯೋಗಿಸಬೇಕೆಂಬ ಠರಾವನ್ನು ಮಿ. ಕೆ ಪಿ ಚಿಣ್ಣಪ್ಪನವರು ಚರ್ಚೆಯಾದನಂತರ ವಾಪಾಸು ತೆಗೆದುಕೊಂಡರು.

7. 8-ಬಿ ಫಾರೆಸ್ಟಿನಲ್ಲಿ ಇಬ್ಬರು ಎಕ್ಸ್‌ಟ್ರಾ ಅಸಿಸ್ಟೆಂಟ್ ಕನ್‌ಸರ್ವೇಟರುಗಳ ಸಂಬಳಕ್ಕೆ ಇಟ್ಟಿರುವ 11,410 ರೂಪಾಯಿ ತೆಗೆದುಬಿಟ್ಟು ಅವರಿಬ್ಬರು ಮದ್ರಾಸಿಗೆ ಹಿಂತಿರುಗಬೇಕೆಂಬ ಠರಾವನ್ನು ಮಿ· ಕೆ ಪಿ. ಚಿಣ್ಣಪ್ಪನವರು ಸೂಚಿಸಿದರು. ಚರ್ಚೆಯಾದನಂತರ ಇದಕ್ಕೆ ಪರವಾಗಿ ಮ. ರಾ. ರಾ. ಗಳಾದ ಚೌಡ್ಲು ಕಾಳಪ್ಪ, ಕೆ. ಪಿ. ಚಿಣ್ಣಪ್ಪ, ಪಿ. ಗಣಪಯ್ಯಯ್ಯ, ಪಿ. ಟಿ. ಕುಶಾಲಪ್ಪ, ಯಂ. ಯಂ. ಚಿಣ್ಣಪ್ಪ, ಎನ್. ಆರ್ ಸುಬ್ಬಣ್ಣಯ್ಯ, ಸಿ. ಎನ್. ವೆಂಕಪ್ಪಯ್ಯ ಮತ್ತು ಪಿ. ಐ. ಬೆಳ್ಯಪ್ಪ ಇವರು 8 ಜನರೂ, ವಿರೋಧವಾಗಿ ಮ. ರಾ. ರಾ ಗಳಾದ ಟಿ ಜಿ. ಟಾಸ್ಕರ್, ಕೆ. ಚಂಗಪ್ಪ, ಜೆ. ಎ. ಏಟ್ಕಿನ್, ಎ ಜಿ. ಡೇರಿಂಗ್ಟನ್, ಪಿ. ಜಿ ಟೆಪ್ಪಿಂಗ್, ಎ. ಇ. ಜೆ. ನಿಕಲ್ಸ್, ಪಿ. ಬಿ. ಮೇದಪ್ಪ, ಎ. ಬಿ. ಚಂಗಪ್ಪ, ಎಸ್. ಯಂ. ಪಿಂಟೊ ಮತ್ತು ಕೆ. ಮಂದಣ್ಣ ಇವರು 11 ಜನರೂ ಓಟು ಕೊಟ್ಟದ್ದರಿಂದ ಠರಾವು ಪಾಸಾಗಲಿಲ್ಲ.

8. 8-ಬಿ. ಫಾರೆಸ್ಟಿನಲ್ಲಿ ಪ್ರಯಾಣ ಖರ್ಚಿಗಾಗಿ ಇಟ್ಟಿರುವ 16,800 ರುಪಾಯಿಗಳಿಂದ 6,000 ಕಡಿಮೆ ಮಾಡಿ, ಈ ಹಣವನ್ನು ನಾಪೋಕ್ಲು ಹೈಯರ್ ಎಲಿಮೆಂಟರಿ ಶಾಲೆಯನ್ನು ಬದಲಾಯಿಸುವುದಕ್ಕೂ, ಅಲ್ಲಿ ಒಂದು ಬೋರ್ಡಿಂಗಿಗೂ ಉಪಯೋಗಿಸಬೇಕೆಂಬ ಠರಾವನ್ನು ಮಿ. ಕೆ. ಪಿ ಚಿಣ್ಣಪ್ಪನವರು ಸೂಚಿಸಿದರು. ಚರ್ಚೆಯನಂತರ ಓಟಿಗೆ ಹಾಕಲಾಗಿ ಮ. ರಾ ರಾ. ಗಳಾದ ಕೆ. ಪಿ. ಚಿಣ್ಣಪ್ಪ, ಎನ್. ಸುಬ್ಬಣ್ಣಯ್ಯ, ಸಿ. ಎನ್. ವೆಂಕಪ್ಪಯ್ಯ ಮತ್ತು ಪಿ. ಐ. ಬೆಳ್ಯಪ್ಪ, ಇವರು ನಾಲ್ವರು ಇದಕ್ಕೆ ಪರವಾಗಿಯೂ, ಮ. ರಾ. ರಾ. ಗಳಾದ ಪಿ. ಟಿ. ಕುಶಾಲಪ್ಪ, ಪಿ. ಗಣಪಯ್ಯಯ್ಯ ಮತ್ತು ಯಂ. ಯಂ. ಚಿಣ್ಣಪ್ಪ, ಇವರು ಮೂವರು ಯಾವ ಕಡೆಗೂ ಓಟುಮಾಡದೆ, ಬಾಕಿ 13 ಜನರು ವಿರೋಧವಾಗಿ ಓಟುಮಾಡಿದ್ದರಿಂದ ಠರಾವು ಪಾಸಾಗಲಿಲ್ಲ.

9. 8-ಎ. ಫಾರೆಸ್ಟಿನಿಂದ ಕಡಿಮೆ ಮಾಡಿದ ಹಣದಿಂದ 3,600ನ್ನು ಪೊನ್ನಂಪೇಟೆ ಮತ್ತು ಸೋಮವಾರಪೇಟೆಗಳಲ್ಲಿ ಸ್ಟೇಶನರಿ ಮ್ಯಾಜಿಸ್ಟ್ರೇಟರನ್ನು ನೇಮಿಸುವುದಕ್ಕಾಗಿ ಇಡಬೇಕೆಂಬ ಠರಾವನ್ನು ಮಿ. ಸಿ ಎನ್. ವೆಂಕಪ್ಪಯ್ಯನವರು ಸೂಚಿಸಿದರು. ಮಿ. ಪಿ. ಬಿ. ಮೇದಪ್ಪನವರು ಅನುಮೋದಿಸಿದರು, ಸರಕಾರದ ಪರವಾಗಿ ಫೈನಾನ್ಸ್ ಮೆಂಬರು ವಿರೋಧಿಸಿದರು. ಓಟಿಗೆ ಹಾಕಲಾಗಿ 13 ಚುನಾಯಿತ ಇಂಡಿಯನ್ ಮೆಂಬರುಗಳು ಪರವಾಗಿ ಓಟು ಕೊಟ್ಟದ್ದರಿಂದ ಠರಾವು ಪಾಸಾಯಿತು.

10. (ಎ) ಮಡಿಕೇರಿ ಮತ್ತು ವೀರಾಜಪೇಟೆ ಹೈಸ್ಕೂಲುಗಳಲ್ಲಿ ಇಬ್ಬರು ಸಂಸ್ಕೃತ ಉಪಾಧ್ಯಾಯರುಗಳನ್ನು ನೇಮಿಸಲಿಕ್ಕಾಗಿ ಫಾರೆಸ್ಟಿನಿಂದ ತೆಗೆದ ಹಣದಿಂದ 1,000 ರೂಪಾಯಿ ಇಡಬೇಕೆಂದೂ, (ಬಿ) ಮದ್ರಾಸು ಗವರ್ನಮೆಂಟ್ ಆಯುರ್ವೇದಿಕ್ ಕಾಲೇಜಿನಲ್ಲಿ ಆಯುರ್ವೇದ ಯೂ, ಯೂನಾನಿ ಔಷಧಿ ಕ್ರಮಗಳನ್ನು ಕಲಿಯುವ ವಿದ್ಯಾರ್ಥಿಗಳಿಗೆ ವೇತನ ಕೊಡಲಿಕ್ಕಾಗಿ ಫಾರೆಸ್ಟಿನಿಂದ ತೆಗೆದ ಹಣದಿಂದ 1,000 ರುಪಾಯಿ ಇಡಬೇಕೆಂದೂ ಠರಾವುಗಳನ್ನು ಮಿ· ಬಿ. ಶ್ರೀಪತಿರಾಯರು ಮುಂದಿಟ್ಟರು. ಇವುಗಳನ್ನು ಥಕ್ಕನೆ ಮಾಡಲಾಗುವುದಿಲ್ಲ, ಶೋಧನೆ ಮಾಡುತ್ತೇನೆಂದು ಸರಕಾರಿ ಮೆಂಬರು ಹೇಳಿದ್ದರಿಂದ ಠರಾವನ್ನು ವಾಪಾಸು ತೆಗೆದುಕೊಂಡರು.

. ನಾಪೋಕ್ಲು, ಪೊನ್ನಂಪೇಟೆ ಮತ್ತು ಸೋಮವಾರಪೇಟೆ ಸ್ಕೂಲುಗಳನ್ನು ಲೋವರ್ ಸೆಕಂಡರಿ ಗ್ರೇಡಿಗೆ ತರಲು 3,000 ರು. ಕೊಡಬೇಕೆಂಬ ಠರಾವನ್ನು ಮಿ. ಸಿ. ಎನ್ ವೆಂಕಪ್ಪಯ್ಯನವರು ಸೂಚಿಸಿದರು. ಲೋವರ್ ಸೆಕೆಂಡರಿಗೆ ಹೆಚ್ಚು ಹಣ ಬೇಕಾಗಿರುವುದಲ್ಲದೆ ಅದು ಹೈಯರ್ ಎಲಿಮೆಂಟರಿಗಿಂತ ಹೆಚ್ಚು ಪ್ರಯೋಜನಕರವಲ್ಲವಾದದರಿಂದ, ಅಲ್ಲಿ ಹೈಯರ್ ಎಲಿಮೆಂಟರಿ ಶಾಲೆಗಳನ್ನು ಸ್ಥಾಪಿಸಲು ಪ್ರಯತ್ನ ನಡೆಯುತ್ತಿದೆಂದು ವಿದ್ಯಾ ಇಲಾಖೆಯ ಮೆಂಬರು ಹೇಳಿದ್ದರಿಂದ ಠರಾವು ವಾಪಾಸು ತೆಗೆದುಕೊಳ್ಳಲಾಯಿತು.

12. 31 ವಿದ್ಯಾ ಇಲಾಖೆಯಲ್ಲಿ ಕಾನ್ವೆಂಟ್ ಹೈ ಸ್ಕೂಲಿಗೆ ಕೊಡುವ 7,370 ರುಪಾಯಿ ಗ್ರಾಂಟಿನಿಂದ 4,000 ರುಪಾಯಿ ಕಡಿಮೆ ಮಾಡಬೇಕೆಂಬ ಠರಾವನ್ನು ಮಿ· ಪಿ. ಐ. ಬೆಳ್ಯಪ್ಪನವರು ಮುಂದಿಟ್ಟರು, ವಿದ್ಯಾ ಇಲಾಖೆ ಮೆಂಬರೂ, ಕೆಲವು ಚುನಾಯಿತ ಇಂಡಿಯನ್ ಮೆಂಬರುಗಳೂ ವಿರೋಧಿಸಿದರು. ಚರ್ಚೆಯು ಚನ್ನಾಗಿ ನಡೆಯಿತು. ಓಟಿಗೆ ಹಾಕಿದಲ್ಲಿ ಮ. ರಾ. ರಾ. ಗಳಾದ ಸಿ. ಕಾಳಪ್ಪ, ಕೆ. ಪಿ. ಚಿಣ್ಣಪ್ಪ, ಪಿ. ಗಣಪಯ್ಯಯ್ಯ, ಯಂ. ಯಂ. ಚಿಣ್ಣಪ್ಪ, ಸಿ. ಎನ್. ವೆಂಕಪ್ಪಯ್ಯ, ಎನ್. ಆರ್. ಸುಬ್ಬಣ್ಣಯ್ಯ, ಪಿ. ಐ. ಬೆಳ್ಯಪ್ಪ ಮತ್ತು ಪಿ. ಟಿ. ಕುಶಾಲಪ್ಪ, ಇವರು 8 ಜನರು ಪರವಾಗಿಯೂ, ಬಾಕಿ 12 ಜನರು ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಪಾಸಾಗಲಿಲ್ಲ.

13. ಎಲಿಮೆಂಟರಿ ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ ಡಿಸ್ಟ್ರಿಕ್ಟ್ ಬೋರ್ಡಿಗೆ 5,000 ರುಪಾಯಿ ಗ್ರಾಂಟ್ ಕೊಡಬೇಕೆಂಬ ಠರಾವನ್ನು ಮಿ. ಯಂ. ಯಂ. ಚಿಣ್ಣಪ್ಪನವರು ಸೂಚಿಸಿದರು. ಡಿ. ಬೋರ್ಡಿನವರು ಈ ವಿಷಯ ಸರಕಾರಕ್ಕೆ ಬರೆದಿರುವರೆಂದು ಮುಂತಾಗಿ ಸರಕಾರಿ ಮೆಂಬರು ಜವಾಬು ಕೊಟ್ಟನಂತರ ಠರಾವನ್ನು ವಾಪಾಸು ತೆಗೆದುಕೊಂಡರು.

14. ಚಲೋಕಲಾ ಕೌಶಲ್ಯ (ಫೈನ್ ಆರ್ಟ್ಸ್ ಒಂದು) ಮತ್ತು ಆಯುರ್ವೇದ ಔಷಧಿ ಕ್ರಮ (ಎರಡು) ಕಲಿಯುವ ವಿದ್ಯಾರ್ಥಿಗಳಿಗೆ ಮೂರು ವೇತನಗಳನ್ನು ಕೊಡಲಿಕ್ಕಾಗಿ 1,200 ರುಪಾಯಿ ಇಡಬೇಕೆಂಬ ಠರಾವನ್ನು ಮಿ ಪಿ. ಐ. ಬೆಳ್ಯಪ್ಪನವರು ಸೂಚಿಸಿದರು, ಚರ್ಚೆಯಾದನಂತರ ಓಟಿಗೆ ಹಾಕಿದಾಗ ಮ. ರಾ ರಾ. ಗಳಾದ ಸಿ. ಎನ್. ವೆಂಕಪ್ಪಯ್ಯ, ಎನ್. ಆರ್. ಸುಬ್ಬಣ್ಣಯ್ಯ, ಯಂ. ಯಂ. ಚಿಣ್ಣಪ್ಪ, ಪಿ. ಟಿ. ಕುಶಾಲಪ್ಪ, ಪಿ ಗಣಪಯ್ಯಯ್ಯ, ಕೆ. ಪಿ. ಚಿಣ್ಣಪ್ಪ, ಸಿ. ಕಾಳಪ್ಪ, ಬಿ. ಶ್ರೀಪತಿರಾಯರು ಮತ್ತು ಪಿ. ಐ. ಬೆಳ್ಯಪ್ಪ, ಇವರು ಒಂಬತ್ತು ಜನರು ಪರವಾಗಿಯೂ, ಮ. ರಾ. ರಾ. ಗಳಾದ ಪಿ. ಬಿ ಮೇದಪ್ಪ, ಎಸ್. ಯಂ. ಪಿಂಟೊ, ಕೆ. ಯಂ. ಮಂದಣ್ಣ ಮತ್ತು ಎ. ಬಿ. ಚಂಗಪ್ಪ ಇವರು 4 ಜನರು ಯಾವ ಕಡೆಗೆ ಸೇರದೆಯೂ, ಬಾಕಿ 7 ಜನರು ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಪಾಸಾಯಿತು.

15. 8-ಎ. ಫಾರೆಸ್ಟಿನಿಂದ ತೆಗೆದ 10,000 ನ್ನು 32 ವೈದ್ಯ ಇಲಾಖೆಗೆ ಕೊಡಬೇಕೆಂಬ ಠರಾವನ್ನು ಮಿ ಪಿ. ಬಿ. ಮೇದಪ್ಪನವರು ಚರ್ಚಿಸಿ ವಾಪಸು ತೆಗೆದುಕೊಂಡರು.

16. ಒಬ್ಬ ಲೇಡಿ ಡಾಕ್ಟರನ್ನು ನೇಮಿಸಲಿಕ್ಕೆ 3,000 ರುಪಾಯಿ ಇಡಬೇಕೆಂಬ ಠರಾವನ್ನು ಮಿ. ಸಿ. ಎನ್. ವೆಂಕಪ್ಪಯ್ಯನವರು ಚರ್ಚೆಯಾದನಂತರ ವಾಪಸು ತೆಗೆದುಕೊಂಡರು.

17. 8-ಎ. ಫಾರೆಸ್ಟಿನಿಂದ ತೆಗೆದ ಹಣದಿಂದ 1,000 ನ್ನು ದೇಶದಲ್ಲಿ [illegible]ವನ್ನು ಉಚಿತವಾಗಿ ಒದಗಿಸಿಕೊಡಲು ಡಿಸ್ಟ್ರಿಕ್ಟ್ ಬೋರ್ಡಿಗೆ ಗ್ರ್ಯಾಂಟ್ ಕೊಡಬೇಕೆಂಬ ಠರಾವನ್ನು ಮಿ. ಪಿ. ಐ ಬೆಳ್ಯಪ್ಪನವರು ಮುಂದಿಟ್ಟರು· ಚರ್ಚೆಯನಂತರ ಮ. ರಾ ರಾ ಗಳಾದ ಸಿ ಕಾಳಪ್ಪ, ಕೆ. ಪಿ. ಚಿಣ್ಣಪ್ಪ, ಪಿ. ಗಣಪಯ್ಯಯ್ಯ, ಪಿ. ಟಿ. ಕುಶಾಲಪ್ಪ, ಯಂ. ಯಂ ಚಿಣ್ಣಪ್ಪ, ಎನ್. ಆರ್. ಸುಬ್ಬಣ್ಣಯ್ಯ, ಸಿ. ಎನ್. ವೆಂಕಪ್ಪಯ್ಯ ಮತ್ತು ಪಿ. ಐ. ಬೆಳ್ಯಪ್ಪ, ಇವರು 8 ಜನರು ಪರವಾಗಿಯೂ, ಮಿ. ಕೆ. ಯಂ. ಮಂದಣ್ಣನವರು ಯಾವ ಕಡೆ ಸೇರದೆಯೂ, ಬಾಕಿ 11 ಜನರು ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಪಾಸಾಗಲಿಲ್ಲ.

18. 8-ಎ. ಫಾರೆಸ್ಟಿನಿಂದ ಉಳಿಕೆಯಾದ ಹಣದಿಂದ 720 ನ್ನು ನಾಲ್ಕು ಸೂಲಗಿತ್ತಿಯರನ್ನು ತರಬೇತು ಮಾಡಲು ವೇತನಕ್ಕಾಗಿ ಇಡಬೇಕೆಂಬ ಠರಾವು ಮಿ. ಪಿ. ಐ, ಬೆಳ್ಯಪ್ಪನವರಿಂದ ಸೂಚಿಸಲಾಯಿತು. ಚರ್ಚಿಸಲ್ಪಟ್ಟನಂತರ ಫೈನಾನ್ಸ್ ಮೆಂಬರು ಇದಕ್ಕೆ ಮೆಡಿಕಲ್ ಇಲಾಖೆಯಿಂದಲೇ ಹಣ ಕೊಡಲ್ಪಡಬಹುದೆಂದು ಹೇಳಿದ್ದರಿಂದ ಠರಾವನ್ನು ವಾಪಸು ತೆಗೆದುಕೊಳ್ಳಲಾಯಿತು.

19. 34 ವ್ಯವಸಾಯ ಇಲಾಖೆಯ ಖರ್ಚಿನಿಂದ 100 ರು. ಕಡಿಮೆಮಾಡಬೇಕೆಂಬ ಠರಾವನ್ನು ಮಿ· ಪಿ. ಬಿ. ಮೇದಪ್ಪನವರು ಮುಂದಿಟ್ಟು ಆ ಇಲಾಖೆಯ ಅಂದರೆ, ವ್ಯವಸಾಯ, ಪಶುವೈದ್ಯ ಮತ್ತು ಸಹಕಾರಿ, ಇವುಗಳ ಆಡಳಿತ ವಿಷಯ ಬಂದಿಸಿ ಮಾತಾಡಿದರು. ಅದಕ್ಕೆ ಕೆಲವು ಚುನಾಯಿತ ಮೆಂಬರುಗಳೂ ಫೈನಾನ್ಸ್ ಮೆಂಬರೂ ಜವಾಬು ಕೊಟ್ಟರು, ನಂತರ ಠರಾವು ವಾಪಸು ತೆಗೆಯಲಾಯಿತು.

20. 8-ಎ. ಫಾರೆಸ್ಟಿನಿಂದ ಉಳಿಕೆಯಾದ ಹಣದಿಂದ 1,000 ರು.ನ್ನು ನಾಪೋಕ್ಲು ಮತ್ತು ಪೊನ್ನಂಪೇಟೆಗಳಲ್ಲಿ ಗೂಳಿಗಳನ್ನು ಇಡಲು ಕೊಡಬೇಕೆಂಬ ಠರಾವು ಮಿ. ಸಿ. ಎನ್. ವೆಂಕಪ್ಪಯ್ಯನವರಿಂದ ಸೂಚಿಸಲ್ಪಟ್ಟಿತು. ಈ ವಿಷಯವನ್ನು ನೇಮಕವಾಗಿರುವ ದನಗಳ ವಿಚಾರ ಕಮಿಟಿಗೆ ಬಿಡುವದುತ್ತಮವೆಂದು ಸರಕಾರಿ ಮೆಂಬರು ಹೇಳಿದ್ದರಿಂದ ಠರಾವನ್ನು ವಾಪಸು ತೆಗೆದುಕೊಂಡರು.

21. ವೀರಾಜಪೇಟೆ ವ್ಯವಸಾಯದ ಫಾರ್ಮನ್ನು ಕೊಂಡುಕೊಳ್ಳಲು ಇಟ್ಟಿರುವ 8,000 ದಿಂದ 1,000 ಕಡಿಮೆಮಾಡಿ ಆ ಹಣದಿಂದ ಅಲ್ಲಿಗೆ ದನಗಳನ್ನು ಕೊಂಡುಕೊಳ್ಳಲು ಉಪಯೋಗಿಸಬೇಕೆಂಬ ಠರಾವನ್ನು ಮಿ. ಕೆ. ಯಂ. ಮಂದಣ್ಣನವರು ಸೂಚಿಸದೆ ವಾಪಸು ತೆಗೆದುಕೊಂಡರು.

22. ಫಾರೆಸ್ಟಿನಿಂದ ತೆಗೆದ ಹಣದಿಂದ 150ನ್ನು ಫ್ರೇಜರ್‌ಪೇಟೆ ದನಗಳ ಪ್ರದರ್ಶನದಲ್ಲಿ ಇನಾಮು ಕೊಡಲು ಕೊಡಬೇಕೆಂಬ ಠರಾವನ್ನು ಮೆ. ಎನ್. ಆರ್. ಸುಬ್ಬಯ್ಯನವರು ಮುಂದಿಟ್ಟರು. ಈ ಹಣವನ್ನು ವ್ಯವಸಾಯ ಇಲಾಖೆಯಿಂದ ಕೊಡಬಹುದೆಂದು ಫೈನೇನ್ಸ್ ಮೆಂಬರು ಹೇಳಿದ್ದರಿಂದ ಠರಾವನ್ನು ವಾಪಸು ತೆಗೆದುಕೊಂಡರು.

23. 8-ಎ. ಫಾರೆಸ್ಟಿನಿಂದ ಉಳಿಕೆಯಾದ ಹಣದಿಂದ 21,800ನ್ನು ಮಡಿಕೇರಿ, ಭಾಗಮಂಡಲ ಮತ್ತು ಬೆಟ್ಟಕೇರಿ ಕಕ್ಕಬೆ ರಸ್ತೆಗಳಲ್ಲಿರುವ ಸೇತುವೆಗಳನ್ನು ರಿಪೇರಿ ಮಾಡಿಸಲು ಉಪಯೋಗಿಸಬೇಕೆಂಬ ಠರಾವು ಮೆ. ಬಿ. ಶ್ರೀಪತಿರಾಯರಿಂದ ಸೂಚಿಸಲ್ಪಟ್ಟಿತು. ಚರ್ಚೆಯಾದನಂತರ ಠರಾವನ್ನು ವಾಪಸು ತೆಗೆದುಕೊಂಡರು.

24. 8-ಎ. ಫಾರೆಸ್ಟಿನ ಜೀರ್ಣೋದ್ಧಾರಗಳ ಖರ್ಚಿಗೆ ಇಟ್ಟಿರುವ 34,000 ಯಿಂದ 2,000 ತೆಗೆದು, ಅದನ್ನು ಮಡಿಕೇರಿ, ವೀರಾಜಪೇಟೆ ರಸ್ತೆಯ ಕೆಲವು ಭಾಗಗಳಿಗೆ ಕಲ್ಲುಹಾಕಲಿಕ್ಕೂ, ಸೇತುವೆ ರಿಪೇರಿಗೂ ಉಪಯೋಗಿಸಬೇಕೆಂಬ ಠರಾವನ್ನು ಮೆ. ಕೆ. ಯಂ. ಮಂದಣ್ಣನವರು ವಾಪಸು ತೆಗೆದುಕೊಂಡರು.

25. 41-ಬಿ, ಸಿವಿಲ್ ವರ್ಕ್ಸಿನ 67,500 ಖರ್ಚಿನಲ್ಲಿ 100 ಕಡಿಮೆ ಮಾಡಬೇಕೆಂಬ ಠರಾವನ್ನು ಮೆ. ಬಿ. ಶ್ರೀಪತಿರಾಯರು ಸೂಚಿಸಿ, ಡಿ. ಪಿ. ಡಬ್ಲ್ಯು. ಇಲಾಖೆಯವರ ಅಜಾಗರೂಕತೆ ಕೆಲಸವನ್ನು ಖಂಡಿಸಿ ಮಾತಾಡಿದನಂತರ ಠರಾವನ್ನು ವಾಪಸು ತೆಗೆದುಕೊಂಡರು.

26. ಡಿ. ಪಿ. ಡಬ್ಲ್ಯು. ಇಲಾಖೆಯವರ ಪ್ರಯಾಣ ಭತ್ಯಕ್ಕೆ ಇಟ್ಟಿರುವ 9,740 ಯಿಂದ 1,740ನ್ನು ಕಡಿಮೆ ಮಾಡಬೇಕೆಂಬ ಠರಾವನ್ನು ಮೆ. ಕೆ. ಪಿ. ಚಿಣ್ಣಪ್ಪನವರು ಚರ್ಚೆಗೆ ಇಡದೇನೇ ವಾಪಸು ತೆಗೆದುಕೊಂಡರು.

27. 8-ಎ. ಫಾರೆಸ್ಟಿನಿಂದ ಉಳಿಕೆಯಾದ ಹಣದಲ್ಲಿ 10,000ನ್ನು ದೇವಸ್ಥಾನದ ಕಮಿಟಿಗೆ ಕೊಡಬೇಕೆಂಬ ಠರಾವು ಮೆ. ಸಿ. ಎಸ್. ವೆಂಕಪ್ಪಯ್ಯನವರಿಂದ ಮುಂದಿಡಲ್ಪಟ್ಟಿತು. ಸರಕಾರಿ ಮೆಂಬರು ವಿರೋಧಿಸಿದರು. ಚರ್ಚೆಯನಂತರ ಓಟಿಗೆ ಬಂದಲ್ಲಿ ಮ. ರಾ. ರಾ. ಗಳಾದ ಸಿ ಕಾಳಪ್ಪ, ಕೆ. ಪಿ. ಚಿಣ್ಣಪ್ಪ, ಪಿ. ಗಣಪಯ್ಯ, ಪಿ. ಟಿ. ಕುಶಾಲಪ್ಪ, ಯಂ. ಯಂ. ಚಿಣ್ಣಪ್ಪ, ಎಸ್. ಆರ್. ಸುಬ್ಬಯ್ಯ, ಸಿ. ಎಸ್. ವೆಂಕಪ್ಪಯ್ಯ, ಪಿ. ಎ. ಬೆಳ್ಯಪ್ಪ, ಪಿ. ಬಿ. ಮೇದಪ್ಪ, ಬಿ. ಶ್ರೀಪತಿರಾವು ಮತ್ತು ಕೆ. ಯಂ. ಮಂದಣ್ಣ, ಇವರು 11 ಜನರು ಪರವಾಗಿ ಓಟು ಕೊಟ್ಟದ್ದರಿಂದ ಠರಾವು ಪಾಸಾಯಿತು.

28. 8-ಎ. ಫಾರೆಸ್ಟಿನ ಹಣದಿಂದ ದೇವಸ್ಥಾನಗಳಿಗೆ ವರುಷಂಪ್ರತಿ 5,000 ಕೊಡಬೇಕೆಂಬ ಠರಾವನ್ನು ಮೆ. ಪಿ ಬಿ ಮೇದಪ್ಪನವರು ಸೂಚಿಸಿದರು. ಚರ್ಚೆಯಾದನಂತರ ಠರಾವು ವಾಪಸು ತೆಗೆದುಕೊಳ್ಳಲಾಯಿತು.

ಸಾಯಂಕಾಲ 5½ ಗಂಟೆಯಾದುದರಿಂದಲೂ ಬಜೆಟಿನ ಠರಾವುಗಳೆಲ್ಲಾ ಮುಗಿದದ್ದರಿಂದಲೂ ಮೀಟಿಂಗನ್ನು ತಾರೀಕು 16ಕ್ಕೆ ಮುಂದರಿಸಿದರು.

ನೋಟೀಸು.

ಸಂಘದ ವಾರ್ಷಿಕ ಜನರಲ್ ಮೀಟಿಂಗ್ ಮೂರ್ನಾಡಿನಲ್ಲಿ ಮ|| ರಾ|| ರಾ|| ಅಬ್ದುಲ್ ಗಫೂರ್ ಖಾನ್ ಕೈತ್ತಿಯವರ ಅಧ್ಯಕ್ಷತೆಯಲ್ಲಿ 1925 ನೇ ಇಸವಿ ಏಪ್ರಿಲ್ ತಾರೀಕು 11,12 ಮತ್ತು 13 ರಲ್ಲು ಮಧ್ಯಾಹ್ನ 1ಗಂಟೆಗೆ ನಡೆಯುತ್ತೆ. ಊಟೋಪಚಾರಕ್ಕೆ ಮುಡಿಕೇರಿ ತಾಲೋಕಿನವರು ಏರ್ಪಾಡುಮಾಡುತ್ತಾರೆ. ಚರ್ಚಿಸತಕ್ಕ ವಿಷಯಗಳನ್ನು ತಾರೀಕು 31—3—1925 ರ ಒಳಗೆ ಜನರಲ್ ಸಕ್ರೆಟರಿ ಮ|| ಸಿ. ಯನ್. ವೆಂಕಪ್ಪಯ್ಯನವರಿಗೆ ತಲಪುವಂತೆ ಕಳುಹಿಸಬೇಕೆಂತಲೂ, ಮೀಟಿಂಗಿಗೆ ಎಲ್ಲಾ ಮೆಂಬರುಗಳು ಹಾಜರಾಗಬೇಕೆಂತಲೂ ಕೋರುತ್ತೇನೆ.

ಚಂದಾ ಮೊಬಲಗನ್ನು ಬರಡು ವರ್ಷಗಳಿಂದ ಪಾವತಿ ಮಾಡದೆ ಇರುವವರು ಸಂಘದ ಕಾರ್ಯಗಳಲ್ಲಿ ಭಾಗಿಗಳಾಗಕೂಡದು. ಎಲ್ಲಾ ಮೆಂಬರುಗಳು ತಮ್ಮ ಬಾಕಿ ಚಂದಾ ಮೊಬಲಗನ್ನು ಕೂಡಲೇ ಪಾವತಿ ಮಾಡಬೇಕಾಗಿ ಕೋರುತ್ತೇನೆ.

ಕೊಡಗು ಜಮೀನ್ದಾರರ ಸಂಘ,

ಸಿ. ಎನ್. ವೆಂಕಪ್ಪಯ್ಯ,

ಮಡಿಕೇರಿ, ತಾರೀಕು 5—3—25. ಜನರಲ್ ಸೆಕ್ರೆಟರಿ.

ವರ್ತಮಾನ ಸಂಗ್ರಹ.

ಒಳದೇಶ.

ತಾ. 12 ಮತ್ತು 13ರಲ್ಲು ನಡೆದ ಲೆಜಿಸ್ಲೇಟಿವ್ ಕೌನ್ಸಿಲ್ ಮೀಟಿಂಗಿನಲ್ಲಿ 1925-26ರ ಬಜೆಟ್ ಚರ್ಚಿಸಲಾಗಿ ತಾ. 15ರ ಮೀಟಿಂಗಿನಲ್ಲಿ ಜನರಲ್ ವಿಷಯಗಳ ಸಮ್ಮಂಧ ಸುಮಾರು 19 ಠರಾವುಗಳು ಚರ್ಚಿಸಲ್ಪಟ್ಟವು.

ಜೇಕ್ಸನ್ ಸಾಹೇಬರವರು ತಾ 17ರಲ್ಲಿ ಬೆಂಗಳೂರಿಗೆ ಹೋಗಿ 18ರಲ್ಲಿ ಮಡಿಕೇರಿಗೆ ವಾಪಾಸು ಬಂದರು. ಇವರು ತಾ 30ರಲ್ಲಿ ಬೆಂಗಳೂರಿಗೆ ವಾಪಸು ಹೋಗುವರೆಂದು ವರ್ತಮಾನ.

ಕಳೆದ ಶುಕ್ರವಾರದಿಂದ ರಜೆಗೆ ದೇಶದ ಅನೇಕ ಕಡೆಗಳಲ್ಲಿ ಮಳೆ ಬಿದ್ದಿದೆ. ಕೆಲವು ಕಡೆಗಳಲ್ಲಿ ಜಡಿದು ಮಳೆಯಾಗಿದೆ. ಕೆಲವು ಸ್ಥಳಗಳಲ್ಲಿ ಬಹಳ ಜೋರಾಗಿ ಮಳೆ ಬಿದ್ದಿದೆ.

ಮೆ. ಪಿ. ಜಿ ಟಿಸ್ಸಿಂಗ್‌ರವರು ಇಂಗ್ಲೆಂಡಿಗೆ ಹೋಗುವ ಕಾರಣ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರುತನಕ್ಕೆ ರಾಜಿನಾಮೆ ಕಳುಹಿಸಿರುವರು.

ಈ ತಾ. 10ರಲ್ಲಿ ಪಾಡಿ ಸುಬ್ರಮಣ್ಯ (ಇಗ್ಗು ತಪ್ಪು) ದೇವರ ಕುಂಬ ಮಾಸದ ಕಲಾಡಿಚೆ ಹಬ್ಬವು ವಿಜ್ರಂಭಣೆಯಿಂದ ನಡೆಯಿತು. ದೇವರ ಭಂಡಾರಕ್ಕೆ 351—1—3 ನಗದು ರೂಪಾಯಿಗಳೂ ಹಲವು ಚಿನ್ನದ ಮತ್ತು ಬೆಳ್ಳಿಯ ಸಾಮಾನುಗಳೂ ಕಾಣಿಕೆಯಾಗಿ ಬಿದ್ದವೆಂದು ತಿಳಿಯಬರುತ್ತೆ.

ತಾ. 20ರಲ್ಲು ಮಡಿಕೇರಿ ಕಾರ್ಪೊರೇಶನ್ ಗಾರ್ಡನ್ನಿನಲ್ಲಿ ಹೂವು, ಕಾಯಿಪಲ್ಯ, ಕೋಳಿ, ನಾಯಿ ಮೊದಲಾದವುಗಳ ಪ್ರದರ್ಶನ ನಡೆಯಿತು.

ರೆವ್‌ಕ್ರಾಸ್ ಸಂಘದ ಗೌರವ ಕಾರ್ಯದರ್ಶಿಯವರು ತಾ. 9.10ರಲ್ಲು ಸೋಮವಾರಪೇಟೆಯಲ್ಲಿ ಶಿಶುಪೋಷಣೆ, ಭಾರಂತಿಯರ ಎಚ್ಚರಿಕೆ ಮೊದಲಾದವುಗಳ ವಿಷಯ ಮ್ಯಾಜಿಕ್ ಲ್ಯಾಂಟರ್ನ್ ಚಿತ್ರಗಳನ್ನು ತೋರಿಸಿದರು.

ತಾ. 23ರಲ್ಲಿ ಕೌನ್ಸಿಲ್ ಚೇಂಬರಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗು ನಡೆಯಲಿಕ್ಕಿದೆ.

ದಕ್ಷಿಣ ಕೊಡಗಿನಲ್ಲಿ ಭತ್ತದ ಧಾರಣೆಯು ಹೆಚ್ಚುತ್ತಾ ಇದೆಯೆಂದೂ, ವೀರಾಜಪೇಟೆಯಲ್ಲಿ ಗಾಡಿಗೆ 85 ರೂ. ಕ್ರಯವಿದೆಯೆಂದೂ ವರ್ತಮಾನ

ಆಳುಗಳಿಗೆ ವಾರಂಪ್ರತಿ ಸಂಬಳ ಕೊಡಬೇಕೆಂಬ ಮತ್ತು ಕಾರಖಾನೆಗಳಲ್ಲಿ ಕೆಲಸ ಮಾಡುವ ಹೆಂಗಸರಿಗೆ ಬಂಗಿಯಾಗಿದ್ದಲ್ಲಿ ಕೆಲಸ ಮಾಡಿಸದೆ ಜೀವನಾಂಶಕೊಡಬೇಕೆಂಬ ಎರಡು ಮಸೂದೆಗಳು ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಚರ್ಚೆಗೆ ಬಂದಿರುವದರಿಂದ ಅವುಗಳಮೇಲೆ ಜಮೀನ್ದಾರಸಂಘವು ಅಭಿಪ್ರಾಯ ಕೊಡಲು ಅವುಗಳನ್ನು ಸರಕಾರದವರು ಸಂಘಕ್ಕೆ ಕಳುಹಿಸಿರುವರೆಂದು ತಿಳಿಯುತ್ತೇವೆ.

ಹಿಂದೂ ದೇಶ.

ಸೆಂಟ್ರಲ್ ಪ್ರಾವಿನ್ಸಿನ ಲೆಜಿಸ್ಲೇಟಿವ್ ಕೌನ್ಸಿಲಿನ ಬಜೆಟ್ ಮೀಟಿಂಗಿನಲ್ಲಿ ಸ್ವರಾಜ್ಯ ಪಂಗಡದ ಮೆಂಬರುಗಳು ಮಂತ್ರಿಗಳ ಸಂಬಳಕ್ಕಾಗಿ ವರ್ಷಕ್ಕೆ ಎರಡು ರೂಪಾಯಿ ಮಾತ್ರ ಬಹುಮತದಿಂದ ಮಂಜೂರುಮಾಡಿರುವರು. ಗವರ್ನರು ಆ ಕೌನ್ಸಿಲನ್ನು ರದ್ದುಮಾಡುವರೆಂದು ವರ್ತಮಾನ.

ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಫೈನೇನ್ಸ್ ಬಿಲ್ಲನ್ನು ತಿರಸ್ಕರಿಸಬೇಕೆಂದು ಸ್ವರಾಜ್ಯಪಾರ್ಟಿಯ ಮು. ಪಟೇಲರವರು ತಂದ ಠರಾವಿಗೆ ಇಂಡಿಪೆಂಡಂಟ್ ಪಂಗಡದವರು ಸರಕಾರದವರೊಂದಿಗೆ ಸೇರಿ ವಿರೋಧ ಓಟುಮಾಡಿದ್ದರಿಂದ ಅದು ಪಾಸಾಗಲಿಲ್ಲ.

ಡೆಲ್ಲಿಯ "ದಿ ಹಿಂದೂಸ್ಥಾನ ಟೈಮ್ಸ್" ಎಂಬ ಪತ್ರಿಕೆಯನ್ನು ಪಂಡಿತಮದನ ಮೋಹನಮಾಲವೀಯರವರು ವಹಿಸಿಕೊಳ್ಳುವರೆಂದು ವರ್ತಮಾನ.

ರಾಜಪಿಪ್ಲದ ಮಹಾರಾಜರವರು ಅವರ ರಾಜ್ಯದಲ್ಲಿ ಇನ್ನುಮುಂದೆ ಪ್ರೈಮರಿ ವಿದ್ಯಾಭ್ಯಾಸವು ಉಚಿತವಾಗಿ ಕೊಡಲ್ಪಡುವದೆಂದೂ, ಕೈಗಾರಿಕ ವಿದ್ಯಾಭ್ಯಾಸಕ್ಕಾಗಿ 7500 ರೂ. ಮಂಜೂರುಮಾಡಿರುವರೆಂದು ಹೇಳಿರುವರು.

ಮೈಸೂರು ಯುವರಾಜರು ಅವರ ಪ್ರೈವೇಟ್ ಸಕ್ರೆಟರಿ ಮೆ. ಮುಕ್ರಿ ಮತ್ತು ಮೆಡಿಕಲ್ ಆಫೀಸರ್ ಡಾಕ್ಟರ್ ಸುಬ್ಬರಾವ್ ರೊಂದಿಗೆ ಯೂರೋಪಿನ ದೀರ್ಘ ಪ್ರಯಾಣಕ್ಕೆ ಹೊರಟುಹೋದರು.

ಶ್ರೀ ಶಂಕರಾಚಾರ್ಯರವರ ಅಪ್ಪಣೆ ಮೇರೆ ನಾಸಿಕದಲ್ಲಿ ಕ್ರಿಸ್ತಮತಾವಲಂಬಿಗಳಾದ ಕೆಲವು ಬ್ರಾಹ್ಮಣರನ್ನು ಶುದ್ಧೀಕರಿಸಿ ಹಿಂದೂಮತಕ್ಕೆ ತಿರುಗಿ ಸೇರಿಸಿಕೊಂಡಿರುವರು. ಸಂಪ್ರದಾಯವಲಂಬಿಗಳಾದ ನಮ್ಮ ಕೊಡವ ಬಂಧುಗಳು ಏನೇ ಹೇಳುವರೋ

ಈಗಿನ ಸರಕಾರದ ತತ್ವಕ್ಕೆ ಒಪ್ಪುವದಿಲ್ಲವೆಂಬುದನ್ನು ಸೂಚಿಸಲಿಕ್ಕಾಗಿ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಜನರ ಪ್ರತಿನಿಧಿಗಳು ವೈಸರಾಯರ ಎಗ್ಸಿಕ್ಯುಟಿವ್ ಕೌನ್ಸಿಲಿನ ಖರ್ಚಿಗೆ ಇಟ್ಟ ಹಣವನ್ನು ಪಾಸುಮಾಡಿರುವದಿಲ್ಲ

ದಕ್ಷಿಣ ಆಫ್ರಿಕೆಯ ಸಮಿತಿಯ ವಿಷಯ ಮೇಲೆ ಅಸಮ್ಮತಿಯನ್ನು ತೋರಿಸಲಿಕ್ಕೆ ತಾ 14ರಲ್ಲು ಸೆಂಟ್ರಲ್ ಪ್ರಾವಿನ್ಸಿನ ಲೆಜಿಸ್ಲೇಟಿವ್ ಕೌನ್ಸಿಲಿನವರು ಆ ದಿನದ ಮೀಟಿಂಗನ್ನು ಮುಂದರಿಸಿದರು,

ಮಹಾತ್ಮ ಗಾಂಧಿಯವರು ತಿರುವಾಂಕೂರಿನ ಪ್ರಯಾಣವನ್ನು ತೀರಿಸಿಕೊಂಡು ಮಧುರೆಗೆ ತಾ. 15ರಲ್ಲಿ ಬಂದಿರುವರು.

ರಿಫಾರ್ಮ್ಸ್ ಕಮಿಟಿಯವರ ವಿಷಯ ಈಗ ಲೆಜಿಸ್ಲೇಟಿವ್ ಎಸೆಂಬ್ಲಿಯ ಈಗಿನ ಸೆಶ್ಶನಿನಲ್ಲಿ ಚರ್ಚಿಸಲಿಕ್ಕಾಗುವದಿಲ್ಲವೆಂದು ಸರಕಾರಿ ಮೆಂಬರು ಹೇಳಿರುವರು

ಕಲ್ಕತ್ತಾ ಕಾರ್ಪೊರೇಶನಿನವರು ಮು ಸುಭಾಸ್‌ಚಂದ್ರ ಬೋಸ್ರವರಿಗೆ ಸಬ್ಸಿಸ್ಟೆನ್ಸ್ ಅಲೋಯನ್ಸ್ ಕೊಡಲು ನಿಶ್ಚಯಿಸಿರುವರು,

ಮದರಾಸು ಕಮಿಟಿಯು ವೈಕಾಮ್ ಸತ್ಯಾಗ್ರಹದ ವಿಷಯದಲ್ಲಿ ರೌಂಡ್ ಟೇಬಲ್ ಕಾನ್ಫರೆನ್ಸ್ ಆಗಬೇಕೆಂದು ಸೂಚಿಸಿದ್ದಕ್ಕೆ ಸ್ವರಾಜ್ಯ ಪಂಗಡದವರು ಅದನ್ನು ಖಂಡಿಸಿರುವರು.

ತಿರುವಾಂಕೂರು ಎಸೆಂಬ್ಲಿಯಲ್ಲಿ ತಾ. 10ರಲ್ಲು ಮೆಂಬರುಗಳ ಪ್ರಯಾಣದ ಭತ್ಯವನ್ನು ಕಡಿಮೆ ಮಾಡಿದರ ವಿಷಯ ದಿವಾನರನ್ನು ಕೇಳಿದ ಕಾರಣಗಳಿಗೆ ಮಡನೆ ಜವಾಬು ಸಿಕ್ಕದ್ದರಿಂದ 100ರಲ್ಲು 13 ಮೆಂಬರುಗಳಲ್ಲದೆ ಬಾಕಿಯವರೆಲ್ಲರೂ ಮೀಟಿಂಗನ್ನು ಬಿಟ್ಟುಹೊರಟುಹೋಗಿಬಿಟ್ಟರು. ಅವರು ಮಹಾರಾಣಿಯವರಿಗೆ ಡಿಪ್ಯುಟೇಶನ್ ಕಳುಹಿಸಿರುವರು. ತಾ. 13ರಲ್ಲಿ ದಿವಾನರು ಥಕ್ಕನೆ ಎಸೆಂಬ್ಲಿ ಮೀಟಿಂಗನ್ನು ಬರಕಾಸ್ತು ಮಾಡಿದರು.

ವಿದೇಶ.

ತುರ್ಕಿಸ್ಥಾನದಲ್ಲಿ ವರ್ತಮಾನ ಪತ್ರಿಕೆಗಳು ಅಲ್ಲಿಯ ಸರಕಾರದ ಕೆಲಸಗಳನ್ನು ಖಂಡಿಸಿ ಬರೆಯುತ್ತಿದ್ದುದರಿಂದ ಅಂಗೋರ ಎಸೆಂಬ್ಲಿಯವರು ಒಂದು ಹೊಸ ಕಾನೂನು ಮಾಡಿ ಕೆಲವು ಪತ್ರಿಕೆಗಳನ್ನು ನಿಲ್ಲಿಸಿರುವರು.

ಆರು ಮದುವೆಗಳಾಗಿ, 3 ಪತ್ನಿಯರು ಮೃತಪಟ್ಟು, 150 ವರ್ಷ ಪ್ರಾಯವಾಗಿರುವ ತುರ್ಕಿಸ್ಥಾನದ ಓರ್ವ ಮನುಷ್ಯನು ಇನ್ನೂ ಯೌವನಸ್ಥನ ಹಾಗೇ ಇದ್ದು, ತನ್ನ ನಾಲ್ಕನೇ ಪತ್ನಿಯು ಮುದುಕಿಯಾದುದರಿಂದ ಪುನಃ ಮದುವೆಯಾಗಬೇಕೆಂದಿರುವನಂತೆ ಈ ಆಯುಷ್ಯಕ್ಕೇನನ್ನುವಿರಿ!

ಅಮೇರಿಕದ ಡಾ ಪಿಕಿನ್ ಥಾಮಸ್ ಎಂಬವರು "ಆಟ್ಲಾಂಟಿಕ್ ಮಾಯ ರೇಡಿಯೋಫೋನ್" ಎಂಬ ಹೊಸ ದೊಂದು ಯಂತ್ರದ ಮೂಲಕ ಮನುಷ್ಯನ ಹೃದಯದ ಬಡಿತವನ್ನು ಎಷ್ಟೋ ದೂರದವರಿಗೆ ಕೇಳಬರುವಂತೆ ತಯಾರಿಸಿರುವರು. ಈ ಯಂತ್ರವನ್ನು 'ಹೆಲ್ಪಿಂಗ್ ಹಾರ್ಟ್ ಸ್ಪೀಕರ್' ಎಂಬಲ್ಲಿ ಉಪಯೋಗಿಸಿ ಸ್ಟೇಷನ್ನಿನ ನಾಡಿಗಳ ಬಡಿತ ಉತ್ತರ ಅಮೇರಿಕದಲ್ಲೆಲ್ಲಾ ಕೇಳುವದಂತೆ ಅಲ್ಲದೆ ಆ ಬಡಿತ ಮಹಾಸಾಗರ ದಾಟಿ ಇಂಗ್ಲೆಂಡಿನಲ್ಲೂ ಕೇಳುವುದಿದೆಯಂತೆ ಇದಲ್ಲವೇ ಪರಮಾಶ್ಚರ್ಯ!

ಆಸ್ಟ್ರಿಯಾದ ವಿಯೆನ್ನಾ ಎಂಬಲ್ಲಿ ಕೆಲವು ಡಾಕ್ಟರರು ಗುರಾರ್ಜಗಳ ಮೂಲಕ ಮನುಷ್ಯನನ್ನು ಬದುಕಿಸುತ್ತಿರುವರಂತೆ ಮನುಷ್ಯನಿಗೆ ಗುರ್ಜಾರಗಳಿಂದ ರಕ್ತವು ತಗಲಿದರೆ ಮನುಷ್ಯ ಪ್ರಾಣ ಉಳಿಯುತ್ತದೆ ಆ ರೋಗದ ಪ್ರತಿಬಂಧಕ ಚಿಕಿತ್ಸೆ ಗುಣವಾಗುವುದಂತೆ. ಈ ಚಿಕಿತ್ಸೆಯನ್ನು ಈಗ ಇಂಗ್ಲೆಂಡಿನಲ್ಲಿಯೂ ಪ್ರಾರಂಭಿಸಿರುವರಂತೆ. ನಮ್ಮ ದೇಶದ ಡಾಕ್ಟರರೂ ಪ್ರಯತ್ನಿಸಬಾರದೇ?

ಸಿಲೋನಿನಲ್ಲಿ 1575ರ ಸುಮಾರು ಈಗ ಸ್ಥಾಪಿತ ಸಮುದ್ರದಿಂದ ಮುತ್ತು ತೆಗೆಯಲಾರಂಭಿಸಿರುವರು.

ಇಂಗ್ಲೆಂಡಿನ ಆಪರೇಶನ್ ಕೀಳು [illegible] ಮುಖ್ಯ ತಿರುವ ರಿಪೇರಿ [illegible] ಪಾಶ್ಚಾತ್ಯ ಅರಸರ ದಯೆಯನ್ನು ಹಿಂದೆ ಅರಸನೇ ದೇವರೆಂದು ತಿಳಿಯುವ [illegible] ಅರಸರು ತಲೆಯನ್ನು ತೆಗೆದುಕೊಂಡದ್ದು ಕಾಣಲಿಲ್ಲ. ಇನ್ನುಮುಂದೆ ಈ ವರೆಗೆ ಅರಸರು ಸೇರುವ ಸಂಘದ ಕಲ್ಪನೆಯು ಇದಲ್ಲ, ಪಾಶ್ಚಾತ್ಯ ಜನರ ಶಾಸ್ತ್ರವು ದೇವರಿಗೂ ರಾಜನ ನೀಡುಗಳು ಹುದು.

ಈಸ್ಟ್ ಆಫ್ರಿಕದ ಮೂರು ವರುಷದ ಅಭಿಪ್ರಾಯ.

(ತಾಳಿಕೆಯ ಬರುವ ಪತ್ರದಿಂದ)

ದೊಡ್ಡ ವಿವಾಹ [illegible] ಆದರೆ ಸಾಮ್ರಾಜ್ಯದಲ್ಲದೆ ಸಮಗ್ರ ಹೊರಡುವಾಗ ಹೋಗಿ ಆಫ್ರಿಕದ ಹವಾ ಮೇಲೆ ಹೇಳಿದ ಗುಣದಂತೆ ಮನುಷ್ಯರು ಗೋವಾದ ಸಮುದಾಯದ ನಮ್ಮ ಜನ ದೇಶದ ಮನೆ ನಡೆ ನಡೆಯುತ್ತಿರುವ ಆ ನಂತರ ಮತ್ತು ಭೂಮಿಯ ನಿತ್ಯ ಜಾಡವನ್ನು ಆದರಿಕ್ಕೆ [illegible] ಸಂಗತಿ ಸ್ವಲ್ಪ ಸ್ವ ಮನೆತನದ ಮುಖ್ಯವಾಗಿ ನಮ್ಮ ಪ್ರಿಯರವರು ನ ಸ್ನೇಹಿತರು ತಯಾರು ಮಾಡುವ ಮೂಲಕ ಪತ್ರ [illegible] ವಹಿಸಲ್ಪಡುವದರಿಂದ ಆರು ತಿಂಗಳ [illegible] ಸಮಯದ ಹೊಲದ [illegible] ಸಂಗತಿ ನಮ್ಮವರ ಭಾಷೆಯನ್ನು ಸರಾಗವಾಗಿ ಮಾತಾಡುವುದಕ್ಕೆ ಕಲಿತುಕೊಂಡದರ ಮೇಲೆ [illegible] ನಮ್ಮ ಬಗ್ಗೆ [illegible] ನಾವು ಇರುವಲ್ಲಿ [illegible] ಮನುಷ್ಯರ ಕಡೆಗೆ ಹೋಗಿ ಅನೇಕ ವಿಧವಾದ ವಸ್ತುಗಳ [illegible] ಪರಿಮಳಗಳನ್ನು [illegible] ಮನುಷ್ಯ [illegible] ಮಗಳೂ ಮಾವಿನಲ್ಲಿಯೂ ಸಹ [illegible] ಅತ್ಯಂತ ಬಹಳವಾಗಿ ಪ್ರೀತಿಸುತ್ತಿದ್ದದ್ದಲ್ಲದೆ ಅನೇಕ ವಿಧವಾದ [illegible] ಸಾಧನಗಳನ್ನು ತಗಾದೆ ನನಗೆ ಹೇಳಿಕೊಡುತ್ತಿದ್ದರು, ಎಲ್ಲಾದರೂ ಸ್ವಲ್ಪಮಟ್ಟಿಗೆ [illegible] ಕಷ್ಟ

ಅನೇಕ ಹೆಂಗಸರು ನನಗೆ ಧೈರ್ಯ ಉಪಚಾರ ಸಂದರ್ಭ ಸಹ ಹೇಳುತ್ತಿದ್ದರು. ಇದಕ್ಕೆಲ್ಲಾ ನಾನು ಅವರಿಗೆಲ್ಲಾ ಎಷ್ಟು ವಂದಿಸಿದರೂ ಸಾಲದು. ಅಂಥಾ ಐಶ್ವರ್ಯವತಿಯರಾಗಿರುವ ಯೋಗ್ಯತೆ ಗುಣ ನಡತೆ ಮುಂತಾದ್ದರಿಂದ ಕೂಡಿ ಇರುವ ನಮ್ಮ ಹಿಂದೂ ಮಹಾ ಮಹಿಳೆಯರಿಂದ ನಾವು ಅಲ್ಪವಾದ ಕೊಡಗು ದೇಶದಲ್ಲಿಯ ಮಹಿಳೆಯರು ಎಷ್ಟೋ ಕಲಿಯಲಿಕ್ಕೆ ಇದೆ ಎಂದು ನನ್ನ ಭಾವನೆಯಾಗಿದೆ. ಅವರು ಎಷ್ಟೋ ಐಶ್ವರ್ಯವಂತನ ಪತ್ನಿಯಾದರೂ ಚಿನ್ನದ ತಗಡುಗಳಿಂದಲೇ ಸೀರೆ ಉಡುಪುಗಳನ್ನು ಮಾಡಿ ನಿತ್ಯವೂ ಉಟ್ಟುಕೊಳ್ಳುವ ಯೋಗ್ಯತೆ ಉಳ್ಳವಳಾದರೂ ಕೂಡ ಎಂಥಾ ಗರೀಬಳಾದ ಖಾದಿ ಬಟ್ಟೆಯನ್ನು ಉಡಲಿಕ್ಕೂ ಸಹ ಗತಿ ಇಲ್ಲದ ನಮ್ಮ ಹಿಂದು ಮಹಿಳೆಯರನ್ನು ಕಂಡರೆ ಬಹಳವಾಗಿ ಮನನೊಂದುಕೊಂಡು ಒಳ್ಳೇದಾದ ಮಾತು ಕಥೆಗಳಿಂದಲೂ ಅನೇಕ ವಿಧವಾದ ಬುದ್ಧಿವಾದದಿಂದಲೂ ಮನ ನೋಯಿಸದಂತೆ ಉಪಚರಿಸುವದು ನನ್ನ ಕಣ್ಣಾರೆ ನೋಡಿದೆನು. ಕರುಣ ದಯ ದಾಕ್ಷಿಣ್ಯ ಅವರ ಹೃದಯದಲ್ಲು ಹೆಚ್ಚಾದವರಲ್ಲಿ ತುಂಬಿತುಳುಕುತ್ತಿದೆ. ಇಂಥಾದ್ದೆಲ್ಲಾ ನಮ್ಮ ಈ ಕೊಡಗು ಶ್ರೀಕಾವೇರಿ ಸ್ಥಳದ ಮಹಾ ಮಹಿಳೆಯರಲ್ಲಿ ಮುಂದೆ ಯಾವ ಕಾಲದಲ್ಲಿ ಉಂಟಾಗುವದೋ ನನಗೆ ತೋರುವದಿಲ್ಲ. ಅಲ್ಲಿಯ ಈ ಹಿಂದು ಮಹಾ ಮಹಿಳೆಯರ ಮತ್ತು ಮಹನೀಯರುಗಳ ಗುಣಾತಿಶಯಗಳನ್ನು ಪೂರ್ಣವಾಗಿ ಇಲ್ಲಿ ನನ್ನ ಅಲ್ಪವಾದ ಜ್ಞಾನದಿಂದ ಬರೆಯಲು ನನಗೆ ಸಾಧ್ಯವಿಲ್ಲ. ಇವೆಲ್ಲಾ ಕಣ್ಣಾರೆ ನಿತ್ಯವೂ ನೋಡಿಯೂ ಮತ್ತು ಅವರ ಸಹವಾಸದಿಂದ ನನ್ನ ಅನುಭವಕ್ಕೆ ಒಂದದ್ದನ್ನು ಸ್ವಲ್ಪಮಟ್ಟಿಗೆ ಮಾತ್ರ ಬರೆದಿರುತ್ತೇನೆ. ಇನ್ನೂ ಹೆಚ್ಚಾದ ವಿವರ ಬರೆಯಬೇಕಾದರೆ ನಾನು ಈ ಬರೆದಿರುವದಕ್ಕಿಂತ ಎರಡರಷ್ಟು ಸ್ಥಳಬೇಕಾಗುವದು ಇದರಿಂದ ಸಂಪಾದಕರಿಗೂ ಬೇಸರವಾಗಬಹುದು.

ನಾವು ಮೇಲೆ ಹೇಳಿದ ರೀತಿ ಅಲ್ಲಿ 1922ನೇ ಇಸವಿ ತಿಂಗಳ ಆಗಾಯಿತು. 1924ನೇ ಮಾರ್ಚ ತಿಂಗಳ ವರೆಗೆ ಇದ್ದೆವು ....

....
ನಾನು ಮತ್ತು ನನ್ನ ಪ್ರಿಯಪತಿ ಸಹ ನಾವು ಮದುವೆಯಾಗಿ ಕೊಡಗಿನಿಂದ ಹೊರಟು ಹೋದ ಬಳಿಕ ನಮ್ಮ ತಂದೆ ತಾಯಿ ಅಣ್ಣ ತಮ್ಮಂದಿಯರು ಅಕ್ಕ ತಂಗಿಯರು ಮೊದಲಾದ ನಮ್ಮ ಕೇವಲ ಬಂಧು ವರ್ಗದವರನ್ನು ಸ್ನೇಹಿತ ಸೋದರ ಸೋದರಿಯರನ್ನು ಸಹ ಮೂರು ವರುಷದ ವರೆಗೆ ಕಾಣದೆ ಹೋದದಕ್ಕಾಗಿ ನಾವು ವ್ಯಸನಪಡುತ್ತಿದ್ದೆವು. ಅದ್ದರಿಂದ ಕಳೆದ ಡಿಶಂಬರು ತಿಂಗಳು ಮೊದಲೇ ಮುತ್ತಿಗೆ ಮುಂಚೆ ನಾವು ಒಂದು ಸೇರುವಂತೆ ರಜೆ ಪಡೆದದ್ದು ತತ್ಕಾಲದ ಸ್ನೇಹಮಯ. ದೊರೆಯದೆ ಡಿಶಂಬರು 13ನೇ ತಾರೀಕಿನಲ್ಲು ನಾವು ಮತ್ತು ಮಗು ಸಮೇತ ಸುರಕ್ಷಿತವಾಗಿ ಬೊಂಬಾಯಿಗೆ ತಲುಪಿ 14ರಲ್ಲು ಅಲ್ಲಿಯೂ ನಮ್ಮ ಪ್ರಿಯ ಕೊಡಗು ಸಹೋದರ ಮಹನೀಯರು ಅವರು ಆ ದಿನ ಸಗಣಿದ ಪುತ್ರಿ ಪಟ್ಟದ ಠಿಕಣಕ್ಕಾ ನಮ್ಮನ್ನು ಸಹ ಕರಸಿಕೊಂಡು ಬಹು ಪ್ರೀತಿಯಿಂದ ಉಪಚಾರ ಮಾಡಿದ್ದು ಎಂದಿಗೂ ಮರೆಯುತಕ್ಕದ್ದಲ್ಲ ಮತ್ತು ಅವರೆಲ್ಲರಿಗೂ ಎಷ್ಟು ವಂದಿಸಿದರೂ ಸಾಲದು. ಒಂದೆರಡು ದಿನ ಬೊಂಬಾಯಿಯಲ್ಲೇ ಇದ್ದು ಸಾಧ್ಯವಾದ ಮುಖ್ಯ ಸ್ಥಳಗಳನ್ನೆಲ್ಲಾ ನೋಡಿಕೊಂಡು ಅದೇ ತಿಂಗಳು 20ನೇ ತಾರೀಕಿನಲ್ಲಿ ನಮ್ಮ ಮನೆಯನ್ನು ಕ್ಷೇಮವಾಗಿ ತಲುಪಿದ ಮೇಲೆ ಈ ವರೇಗೂ ನಮ್ಮ ಬಂಧು ಜನರನ್ನು ಸಾಧ್ಯವಾದ ಮಟ್ಟಿಗೆ ಹೋಗಿ ನೋಡಿಕೊಂಡು ಸಂತೋಷಪಟ್ಟೆವು.

ಪತ್ರವ್ಯವಹಾರಗಳು.

ಪತ್ರಿ ದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಸರಕಾರಿ ಚಾಕರಿ,

ಅಯ್ಯಾ,

ನಮ್ಮ ಈ ಕೊಡಗು ದೇಶದಲ್ಲಿ ಒಬ್ಬ ಯುವಕನಿಗೆ ಮದುವೆಯಾಗಬೇಕಾದರೆ, ಹೆಣ್ಣು ಕೊಡುವವರು ಮೊದಲು ಅವನಿಗೆ ಸರಕಾರಿ ನೌಕರಿ ಇದೆಯೋ ಎಂದು ಕೇಳುತ್ತಾರೆ. ಆದರೆ, ನಾವು ಒರವ ಗೊತ್ತಿರುವವರಿಗೆಲ್ಲಾ ಚಾಕರಿ ಕೊಡಬೇಕೆಂದರೆ ಚಾಕರಿ ಎಲ್ಲಿರಬೇಕೆಂದು ಅನರು ಯೋಚಿಸುವದಿಲ್ಲ. ನಮ್ಮಲ್ಲಿ ಒಬ್ಬ ಯುವಕನು ಸರಕಾರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮನೆಯಲ್ಲಿ ನಿಂತರೆ ಅವನ ಬಂಧು ಬಳಗದವರು ಇವನು ಕನ್ನ ಜೀವನಕ್ಕೆ ಎಲ್ಲಿಯಾದರೂ ಹುಡುಕದೆ ಮನೆಗೆ ಬಂದು ಸೋಮಾರಿಯಾಗಿ ಕೂತಿದ್ದಾನೆ. ಇವನು ಇಲ್ಲಿ ಒಂದು ವಿನುಮಾಡುವನು? ಇದು ಕೆ ಒಂದು ಪಕ್ಷ ಊರನ್ನು ಬಿಡೆದು ಕೆಲಸಗಳನ್ನು ಕಂಡು ಹಾಳುಮಾಡುವ ಎಂದು ಮೊದಲಾಗಿ ಹೀಯಾಳಿಸುವರು. ನಾವು ಆ ಬಡಪ್ರಾಣಿಯು ಏನು ಮಾಡುವನು? ಏನಾದರೂ ಸರಿಯೇ, ಒಂದು 15 ರೂಪಾಯಿಯ ಜವಾನ ಚಾಕರಿಯಲ್ಲಿ ಇರುತ್ತೇನೆಂದೋ ಹೋಗಿ, ನಾನು ಮನೆಯಲ್ಲಿ ಇರುವದಿಲ್ಲ ಎಂದು ಮನೆಯನ್ನು ಬಿಡುತ್ತಾನೆ. ಹಾಗೆಯೇ ಇವನು ಒಂದು ಎಲ್ಲಿಯಾದರೂ ಹದಿನೈದೋ ಇಪ್ಪತ್ತೋ ರೂ. ಸಂಬಳ ಇರುವ ಒಂದು ಜವಾನ ಚಾಕರಿಗೆ ಉಮೇದ್ವಾರನಾಗಿ ನಿಂತರೆ ಅದಕ್ಕೆ ಎಷ್ಟೊಂದು ಜನರ ಅರ್ಜಿಗಳಿರುತ್ತವೆಂದು ತಿಳಿದಿರಿ, ಅದೂ ಕೆಲವು ಕಷ್ಟ. ಸಿಕ್ಕಿತೆಂದರೂ ಅವನು ಅದರಲ್ಲಿಯೇ ಕೂಪದಲ್ಲಿನ ಕಪ್ಪೆಯಾಗಿ ತನ್ನ ಜೀವನವನ್ನೆಲ್ಲಾ ಕಳೆಯಲೂ ಬೇಕಾಗಿರುವುದು. ಏನು ಹೇಳುವ! ಇಂತಹ ಮನುಷ್ಯರಿಂದ ನಮ್ಮ ಸಮಾಜದ ಸುಧಾರಣೆಯೊದೀತೋ?

ಅದ್ದರಿಂದ ಎಲೈ ಮೂಸರಕಾರಿ ತಂದೆತಾಯಿಗಳಿರಾ, ನಿಮ್ಮ ಮಗಂದಿರು ಶಿ. ಗೆ ಎಂದು ಓದಲು ಕಲಿತರೆ ಸರಕಾರಿ ಚಾಕರಿ ಎಂದು ಅಲ್ಪಬೇಡಿ! ಹಾಗೆ ಮಾಡುವುದಾದರೂ ಅವರು ಕೊಡಗು ಕಮೀಷನರರಿಗೆ ಬರೆಯಲಿ. ಇಲ್ಲದಿದ್ದರೆ ಆ ಗೋಜಿಯೇ ಬೇಡ. ಅವರು ಹಿಂದೆ ಬಿದ್ದಿರುವ ತಮ್ಮ ಸಮಾಜದ ಸೋದರರನ್ನ ಮೇಲಕ್ಕೆತ್ತಲು ಸೊಂಟಕಟ್ಟಲಿ, ಒಕ್ಕಲಿಯ ವ್ಯವಸಾಯಗಾರರಾಗಲಿ ಅದಕ್ಕೆ ನೀವು ಆಸ್ಪದಕೊಡಿ. ಅಂತಹ ವಿದ್ಯೆ ಕಲಿತವರು ನಿಮ್ಮ ಮಧ್ಯ ಇದ್ದರೆ ಅದರಿಂದ ನಿಮಗೆ ಅತ್ಯಂತ ಪ್ರಯೋಜನಗಳಿವೆ, ಅದೇನೆಂದರೆ ಪಸಿಪಸಿಯೇ ಕೂಡಿ ಹಳ್ಳವಾಗುವುದಾದರೂ ಆ ಹನಿಗಳನ್ನೆಂಬುದನ್ನು ಯಾರಿಂದಲಾದರೂ ಕಂಡು ಹಿಡಿಯಲಾವುದೇನು?

ನಿಮ್ಮ ಮಗನು ವಿದ್ಯೆ ಕಲಿಯುವುದು ಸರಕಾರಿ ಚಾಕರಿಗೆಂದು ಯೋಚಿಸಬೇಡಿ. ಆ ತಪ್ಪನ್ನು ನೀವು ಖಂಡಿತ ತಿದ್ದುಪಡಿಸುವುದು ಒಳ್ಳೇದು. ನಿಮ್ಮ ಈ ಅಂಧತೆಯನ್ನು ಮುಂದಿನ ಜನಾಂಗದವರು ನೋಡಿದರ ಫಕ್ಕನೆ ನಕ್ಕಾರು. ವಿದ್ಯೆಯಿಂದ ಇನ್ನೇನು ಪ್ರಯೋಜನವಿಲ್ಲವೆಂದು ತಿಳಿಯುತ್ತೀರೇನು? ವಿದ್ಯೆಯನ್ನು ವಿವರಿಸುವದು ಕಷ್ಟವಾದರೂ 'ಜ್ಞಾನಸಂಪಾದನೆ' ಎಂದು ತಿಳಿದುಕೊಂಡರೆ ಜ್ಞಾನಸಂಪಾದನೆ ಯಾವದಕ್ಕೆ? ಗವರ್ನಮೆಂಟು ಚಾಕರಿಗೆ ಇದೆಂತಹ ಹುಚ್ಚು ತನ ಪುನಃ. ಎಲ್ಲೈ ಮಾತೃಪಿತೃಗಳಿರಾ ಅದೊಬ್ಬ ಆಂಗ್ಲಕವಿಯು 'ಮಗುವು ತಂದೆಯತಂದೆ' ಎಂದು ಹೇಳಿರುವಂತೆ, ವಿದ್ಯಾವಂತರಾಗಿರುವ ನಿಮ್ಮ ಮಕ್ಕಳಿಂದ ನೀವು ಕಲಿಯತಕ್ಕದ್ದು ಅದೆಷ್ಟೋ ಇದೆ. ಅದ್ದರಿಂದ ಅವರ ಸಹಾಯದಿಂದ ನೀವು ಜಾಗ್ರತರಾಗಿ ನೀವು (ನಾವು) ಮನುಷ್ಯರು ಎಂದು ಅನ್ನಿಸಿ.

ಸರಕಾರಿ ಚಾಕರಿಗೆ ಹೋದ ನಿಮ್ಮ ಮಗನು, ಅವನೊಬ್ಬನನ್ನೆ ಕಳೆದುಕೊಂಡ ಹಾಗೆ. ಅದ್ದರಿಂದ ಮೊದಲೇ ಬಲವಾಗಿರುವ ಆ ಅಯ್ಯಾಕೋಶಸಿಯದಳಕ್ಕೆ ಇನ್ನೂ ಇನ್ನೂ ಗಟ್ಟಿ ಮಟ್ಟಾಗಿರುವ ಭಂಟರನ್ನು ಕಳುಹಿಸಿಕೊಡದಿರಿ. ಭರತಮಾತೆಗೆ ಜೈ! ಎಂಬ ನಿಮ್ಮ ಒಬ್ಬನೇ ಪುತ್ರನು ಅದೆಂದು ಘೋಷಿಸುವುದೋ ಎಂದು ಪಡದೆಯೊಳಗಿನ ಇವನು ನೋಡುತ್ತಿರುವನು.

ಪರಿಪ್ರಸಾದ

ಅಯ್ಯಾ,

ಇಂಡಿಯಾ ಸರಕಾರದವರಿಂದ ನೇಮಕವಾಗಿ ಕಂದಾಯದ ಅಬಮಾಯಿಸಿಕೆಯ ಕಮಿಟಿಯವರು ಜನರ ಅಭಿಪ್ರಾಯವನ್ನು ತಿಳಿದುಕೊಳ್ಳಲಿಕ್ಕಾಗಿ ತಯಾರಿಸಿದ ಸವಾಲ ಪಟ್ಟಿಯನ್ನು ಕೊಡಗು ಜಮೀನುದಾರರ ಸಂಘಕ್ಕೂ ಕೊಡಗು ಕೌನ್ಸಿಲಿಗ ಸಹ ಕೊಡಗು ಕಮೀಷನರವರು ಕಳುಹಿಸಿದಕ್ಕಾಗಿ ಎಷ್ಟು ವಿನಾದಿಸಿದರೂ ಸಾಲದು. ಯಾಕೆಂದರೆ ನಾವಾಗಿ ನಮ್ಮ ರಾಜ್ಯವನ್ನು ಕಂಪನಿ ಸರಕಾರಕ್ಕೆ ಬಿಟ್ಟುಕೊಟ್ಟ ಸನ್ 1834ರಲ್ಲು ನಮ್ಮ ದೇಶದ ಮೂಲ ನಿವಾಸಿಗಳ ಕುಟುಂಬದ ಸಮುದಾಯ ಸೊತ್ತಾದ ಜಮ್ಮ ಭೂಮಿ ಅಂದರೆ ಸನ್ 1814ರಲ್ಲು ಆಳಿಕೆಯಿಂದ ಖಾಯಂ ಕಂದಾಯಕ್ಕೆ ಶಿಸ್ತಾಗಿ ಆ ಯಾಯ ಕುಟುಂಬದ ಮುಖಸನ ಹೆಸರಿಗೆ ನಿಫಂಟಿನಲ್ಲಿ ಬರೆದ ಒಮ್ಮ ಹಕ್ಕಿನ ನಿಮ್ಮ ಭೂಮಿ ಮೇಲೆ ಎಂದೆಂದಿಗೂ ಕಂದಾಯ ಹೆಚ್ಚು ಕಡಿಮೆ ಮಾಡುವ ಹಕ್ಕಿಲ್ಲವೆಂದು ನಾವು ಸನ್ 1809ರಲ್ಲಿ ಪಟ್ಟಕ್ಕೆ ಬಂದ ಕೊಡಗಿನ 11ನೇ ಅರಸ ಲಿಂಗರಾಜರಿಂದ ಸದದಂತೆ 4910ನೇ ಈಶ್ವರ ಸಂವತ್ಸರದ ಜೈತ್ರ ತಾರೀಕು 3ರ ನಂಬರ್ ಒಂದರ ಸನ್ನದ್ ನಿರೂಪಕ್ಕೆ ಒಪ್ಪಿಗೆ ಸೈನ್ ಮಾಡಿಕೊಟ್ಟದ್ದನ್ನೂ ಅದನ್ನನುಸರಿಸಿ ಘನ ಸರಕಾರದವರು ಸನ್ 1870ನೇ ಸಪ್ಟಂಬರ್ ತಾರೀಕು 30ರಲ್ಲು ಕೊಟ್ಟ ನಂಬರ್ 172ರ ರಿಜಿಸ್ಟರ್ ಸನ್ನದ್ ನಿರೂಪವನ್ನು ಸಹ ಖಾಯಂ ಕಂದಾಯ ಪರ್ಮನೆಂಟ ಸೆಟ್ಲ್‌ಮೆಂಟು ಜಾಬು ಗಮನಕ್ಕೆ ತಾರದೆ ಹೋದ ಕಾರಣವೇನೋ ಗೊತ್ತಾಗುವುದಿಲ್ಲ. ಅದ್ದರಿಂದ ಆಳಿಕೆ ಮಾಡಿಕೊಳ್ಳುವುದೇನೆಂದರೆ, ಕಂದಾಯ ಹೆಚ್ಚು ಕಡಿಮೆ ಮಾಡುವ ಸ್ವತಂತ್ರ ಭರತಖಂಡದ ಯಾವ ಭಾಗಕ್ಕಿದೆಯೋ ಆ ಪ್ರಾಂತ್ಯದ ಪ್ರಜೆಗಳಿಗೆ ಸವಾಲ್ ಪಟ್ಟಿ ಕಳುಹಿಸಬೇಕೇ ಹೊರತು ನಮ್ಮ ದೇಶಕ್ಕೆ ಅಗಾವಾಗತಕ್ಕದ್ದಲ್ಲ. ಈ ಕಾರಣದಿಂದಲೇ ಕೊಡಗನ್ನು ಮದ್ರಾಸಿಗೆ ಸೇರಿಸಕೂಡದೆಂದು ಪ್ರಜೆಗಳು ವಾದಮಾಡಿ ಕೊಡಗನ್ನು ಪ್ರತ್ಯೇಕವಾಗಿ ಮಾಡಿ ಕೌನ್ಸಿಲ್ ಪಡೆದದ್ದಾಗಿದೆ. ಅದ್ದರಿಂದ ಸನ ಸರಕಾರದವರು ಮೇಲ್ಕಂಡ ನಂಬರ್ 1 ಮತ್ತು 172ರ ಎರಡು ಸನ್ನದುಗಳನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿಸಿ ವಿಚಾರ್ಮಾಲೋಡಿದನೆ ಮಾಡಿ ನೋಡಿದರೆ ನಮ್ಮ ದೇಶದಲ್ಲು ಶಿಸ್ತಾದ ಮನೆತನದ ಹೆಸರಿಗೆ ನಿಫಂಟಿನಲ್ಲು ಬರೆದ ಭೂಮಿ ಮೇಲೆ ಕಂದಾಯ ಹೆಚ್ಚು ಕಡಿಮೆ ಮಾಡುವ ಹಕ್ಕಿಲ್ಲವೆಂಬದು ಪೂರಾ ದೃಷ್ಟಾಂತರವಾಗುತ್ತೆ. ಅದ್ದರಿಂದ ಜಮೀನುದಾರರ ಸಂಘದವರು ಪ್ರತಿ ಒಬ್ಬ ಕುಟುಂಬಸ್ಥನ ಶಿಸ್ತಾದ ಭೂಮಿ ಸನ್ನದ್ ಸಮೇತ ಸಭೆಗೆ ಬಂದು ತಮ್ಮ ತಮ್ಮ ಹಕ್ಕನ್ನು ಸ್ಥಿರಪಡಿಸಿ ಮುಂದಕ್ಕೆ ಈ ತೈ ಮಾಡಬೇಕಾಗಿ ಪ್ರಾರ್ಥನೆ.

ಸ್ವದೇಶಾಭಿಮಾನಿ.

ಹಿಂದುಳಿದ ಸಂಗಡದ ಕೌನ್ಸಿಲ್ ಮೆಂಬರರು

ಅಯ್ಯಾ,

ಸ್ವರಾಜ್ಯದ ಮೆಟ್ಟಲು ಹತ್ತಲು ಇಂಡಿಯಾದ ಬೇರೆ ಪ್ರಾಂತ್ಯಗಳಿಗಿಂತ ಕೊಡಗು 10 ವರುಷಕ್ಕೆ ಹಿಂದೆ ಬಿದ್ದಿದೆ. ವಿದ್ಯೆಯಲ್ಲಾಗಲಿ, ನಾಗರಿಕತೆಯಲ್ಲಾಗಲಿ, ರಾಜಭಕ್ತಿಯಲ್ಲಾಗಲಿ ಈ ದೇಶವು ಬೇರೆ ದೇಶಗಳಿಗಿಂತ 20 ವರುಷಕ್ಕೆ ಮುಂದೆ ಇದೆ. ಇದೇ ಕಾರಣದಿಂದ ನಮಗೆ ಹೆಚ್ಚಿನ ಅಧಿಕಾರದ ಕೌನ್ಸಿಲ್ ಕೊಡಲಿಲ್ಲವೋ ಏನೆಂಬದು ಗೊತ್ತಾಗುವದಿಲ್ಲ. ಇದೇ ನಮ್ಮ ರಾಜಭಕ್ತಿಯ ಪ್ರತಿಫಲವೇ? ಇದಿರಲಿ. ಸಿಕ್ಕಿದ ಕೌನ್ಸಿಲಿನಿಂದ ದಿಕ್ಕಿಲ್ಲದ ಒಡ ಮೂಢ ಪ್ರಾಣಿಗಳಂತಿರುವ ಪಂಚಮರು ಮತ್ತು ಹಿಂದುಳಿದ ಸಂಗಡದವರಿಗೆ ಏನು ಉಪಕಾರವಾಯಿತು. ಅವರ ಪಕ್ಷಯಾಗಿ ನಿಯಮಿತ ಮೆಂಬರು ಅವರಿಗಾಗಿ ಯಾವ ಕಾರ್ಯವನ್ನು ಕೈಕೊಂಡರು. ನೂರಾರು ವರುಷಗಳಿಂದ ಗುಲಾಮರಂತೆ ಇರುವ ಇವರಿಗೆ ತಮ್ಮಿಂದ ಇಂದುಕೂಲು ಕ ನೂರಾರು ಹಿತ್ತಲುಗಳನ್ನು ಕೊಡಲು ಸಿಕ್ಕಿರುವ ಪ್ರದೇಶವಾದ ಈ ಕೊಡಗಿನಲ್ಲಿ ಸ್ಥಳವಿಲ್ಲವೇ? ಅವರ ಆರೋಗ್ಯವನ್ನು ಕಾಪಾಡುವ ಒಳ್ಳ ಶುಕ್ತ ಔಷಧೋಪಚಾರವನ್ನು ಮಾಡುವ ವಿದ್ಯೆಗಳನ್ನು ಪ್ರತಿ ಗ್ರಾಮದಲ್ಲಿ ಇಡುವದು ದೊಡ್ಡ ಅಗಾಧವಾದ ಕೆಲಸವೇ? ಇವರಿಗಾಗಿ ಒಬ್ಬ ನೇಟಿವ ಇನ್‌ಸ್ಪೆಕ್ಟರನ್ನು ಇಟ್ಟು ಅವರ ಆರೋಗ್ಯ ಸ್ಥಿತಿ ಕಾಪಾಡಲಿಕ್ಕಾಗಲಿಲ್ಲವೇ? ಅವರಿಗೆ ಪ್ರೈಮರಿ ವಿದ್ಯಾಭ್ಯಾಸಕ್ಕೆ ಯಾವ ಉತ್ತೇಜನವನ್ನು ಸರಕಾರದಿಂದ ಕೊಡಿಸಿದರು? ಮುಂದುವರಿದ ಸಂಗಡದವರ ಈಗಿನ ಸ್ಥಿತಿಗೆ ಸರಿಯಾಗಿ ನಾಗರೀಕತೆಯನ್ನು ಹೊಂದಲು ಅವರಿಗೆ ಇನ್ನೆಷ್ಟು ಶತಮಾನಗಳು ಬೇಕೆಂದು ನಿರ್ಧರಿಸುವಿರಿ? ಅವರಲ್ಲಿ ಪ್ರೈಮರಿ ವಿದ್ಯಾಭ್ಯಾಸವನ್ನಾದರೂ ಹರಡುವಂತೆ ಮಾಡಲು ಎಷ್ಟು ಶಾಲೆಗಳಿವೆ? ಎಷ್ಟು ಮಕ್ಕಳಿಗೆ ಸ್ಕಾಲರಶಿಪ ದೊರಕುವಂತೆ ವಿಚಾರು ನಡೆಸಿದೆ? ಅವರು ಈಗ ಮಾಡುತ್ತಿರುವ ಗುಲಾಮಗಿರಿಯಲ್ಲದೆ ಬೇರೆ ಯಾವ ಮರ್ಯಾದೆಯ ಕಸುಬನ್ನು ಕಲಿಸಲಿಕ್ಕೆ ಈ ಕೌನ್ಸಿಲಿಗೂ ಸರಕಾರಕ್ಕೂ ಮನಸ್ಸು ಬರುವದಿಲ್ಲವೇ? ಮೃಗಗಳಂತೆ ಸದಾ ಜೀತ ಮಾಡಿಕೊಂಡಿರಲಿಕ್ಕಾಗಿ ಭಗವಂತನು ಅವರನ್ನು ನಿರ್ಮಾಣ ಮಾಡಿದ್ದನೆಂದು ಈ ಸರಕಾರವು ಎಣಿಸಿದೆಯೇ?

ಹಿಂದುಳಿದ ಸಂಗಡದವರಿಗೆ ೧ ಕೌನ್ಸಿಲಿನಲ್ಲಿ ಒಬ್ಬ ಮೆಂಬರನ್ನು ಕೊಟ್ಟಿದ್ದೇವೆಂಬ ಹೆಸರು ಮಾತ್ರಕ್ಕೆ ಒಬ್ಬ ಮೆಂಬರನ್ನು ನೇಮಿಸಿದ್ದಲ್ಲದೆ ಅವರ ಸ್ಥಿತಿಯು ಯಾವ ವಿಧದಲ್ಲಿಯೂ ಬದಲಾಗಿಲ್ಲ. ಅಂಥಾ ಮೆಂಬರು ಇದ್ದಾರೆಂಬ ವರ್ತಮಾನವು ಸಹ ಹಿಂದುಳಿದ ಸಂಗಡದವರಿಗೆ ಗೊತ್ತಿಲ್ಲ. ಅಯ್ಯಾ, ಆ ಮೆಂಬರೇ—ದಯವಿಟ್ಟು ಮೈಸೂರು ಸೀಮೆಯಲ್ಲಿಯೂ ಮದ್ರಾಸಿನಲ್ಲಿಯೂ ಪಂಚಮರ ಏಳಿಗೆಗೆ ಕಲ್ಪಿಸಿದ ಅನುಕೂಲತೆಗಳನ್ನು ಕೊಂಚ ವಿಚಾರಿಸಿ. ತಮ್ಮ ಸ್ಥಾನಬಿಟ್ಟು ಕೊಂಚ ಗ್ರಾಮಾಂತರಗಳಲ್ಲಿಯೂ ತೋಟಗಳಲ್ಲಿಯೂ ಇರುವ ಪಂಚಮರು ಇತರ ಜನರ ಪಾಡನ್ನು ನೋಡಿಕೊಂಡು ಬರಲು ವರುಷಕೊಂದು ಸವಾರಿಯನ್ನಾದರೂ ಮಾಡಿ ನೋಡಿ. ಇದು ಆಗದಿದ್ದರೆ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟು ಪುಣ್ಯಗಳಿಸಿ.

- ಬಸಪ್ಪ.

ಭೂಮಿ ಏರ ಪದ್ಧತಿ.

ಅಯ್ಯಾ,

ಕೊಡಗು ಜನ ಸಂಖ್ಯೆಯಲ್ಲಿ ದಿನೇ ದಿನೇ ಹಿಂದೆ ಬೀಳುತ್ತಾ ಬರುತ್ತಿರುವದು ಸರ್ವರಿಗೂ ತಿಳಿದ ಸಂಗತಿ. ಇದರಿಂದ ಬಡ ಜನರ ಕಷ್ಟವು ಹೆಚ್ಚಾಗುತ್ತಾ ಬರುತ್ತಿದೆ. ಭೂಮಾಲಿಕನ ಸ್ಥಿತಿಯು ಇನ್ನಷ್ಟು ವ್ಯಸನಕ್ಕೆ ಕಾರಣವಾಗಿದೆ. ಈ ದೇಶದ ಜನ ಸಂಖ್ಯೆಯು ಹೆಚ್ಚಾದ ವಿನಹ ದೇಶದ ಸಂಪತ್ತಿಗೆ ಆಶಿಪಡುವದು ವ್ಯರ್ಥ. ಈ ದೇಶಕ್ಕೆ ಬೇರೆ ದೇಶದ ಜನರು ಬಂದು ನೆಲೆಗೊಳ್ಳದಂತೆ ಮಾಡಲು 2 ತರದ ಆಡಚಣೆಗಳು, 1ನೇದು ಜ್ವರ, ಇದಕ್ಕೆ ದೇವರಿಂದಲೂ ಸರಕಾರದಿಂದಲೂ ತಕ್ಕ ನಿವಾರಣೆಯಾಗಬೇಕು. ಸರಕಾರವು ಈ ವಿಷಯದಲ್ಲಿ ತನ್ನ ಕೆಲಸವನ್ನು ಸರಿಯಾಗಿ ಮಾಡುವದಿಲ್ಲವೆಂದು ತಿಳಿದಿರುವೆನು. 2ನೇದು ಬೇರೆ ದೇಶದ ರೈತರು ಇಲ್ಲಿಯ ದೊಡ್ಡ ಹಿಡುವಳಿದಾರ ಭೂಮಾಲಿಕರ ಭೂಮಿಯನ್ನು ಗೇಣಿಗೆ ಹಿಡಿದು ಅದಕ್ಕೆ ತಕ್ಕ ಪ್ರತಿಫಲ ಹೊಂದಲು ಅವಕಾಶ ಇಲ್ಲದೆ ಇರುವಿಕೆ. ಹೀಗೆ ಅವಕಾಶವನ್ನು ಕಲ್ಪಿಸಲಿಕ್ಕೆ ಸರಕಾರದವರೂ ಕೈ ಕಡಿಯ ಬಂದಾಗಿ ಇದಕ್ಕೆ ತಕ್ಕ ಕಾನೂನು ಮಾಡದೆ ಹೋದಲ್ಲಿ, ಹೆಚ್ಚು ಭೂಮಿ ಆಸ್ತಿಗಾರರೆಲ್ಲರೂ ಆಸ್ತಿಯ ಗುಲಾಮರಾಗಿಯೂ ಗರೀಬರೆಲ್ಲರೂ ಗುಲಾಮರ ದಾಸರಾಗಿ ಎಂದೆಂದಿಗೂ ಇರಲೇ ಬೇಕು. ಇತರ ದೇಶಗಳಲ್ಲಿ ಆಸ್ತಿವಂತನು ತನ್ನ ಆಸ್ತಿಗಳನ್ನು 2 ವರುಷಕೊಮ್ಮೆ ಸಹ ನೋಡದೆ ಇದ್ದರೂ ಅದರ ಉತ್ಪತ್ತಿಯೂ ಪ್ರತಿ ವರುಷವೂ ಅವನ ಮನೆಬಾಗಿಲಿಗೆ ಬಂದು ಬೀಳುತ್ತಾ ಇರುತ್ತಿದೆ. ಆಸ್ತಿಯು ಹೆಚ್ಚಾದ ಹಾಗೆಲ್ಲಾ ಅವನ ಸುಖವು ಹೆಚ್ಚುತ್ತಾ ಬರುತ್ತಿದೆ. ಇಲ್ಲಿಯ ಸ್ಥಿತಿಯು ಹಾಗಿಲ್ಲ. ಆಸ್ತಿಯು ಹೆಚ್ಚುತ್ತಿದ್ದ ಹಾಗೆಲ್ಲಾ ಕಷ್ಟವು ಹೆಚ್ಚುತ್ತಾ ಬರುತ್ತಿದೆ. ಜಮೀನುದಾರ ಗ್ರಾಮದಲ್ಲಿ 100 ಬಟ್ಟಿ ಭೂಮಿಯನ್ನು ಬಾಡಿಗೆಗೆ ಹಿಡಿದ ವಾರಗಾರನಿಗೆ 1 ಬಟ್ಟಿ ಭತ್ತ ಸಹ ಸಿಕ್ಕುವದು ದುರ್ಲಭವಾಗಿದೆ. ಬಡ ಜನರು ಯಾಗಿರುವ ಗ್ರಾಮಗಳಲ್ಲಿ ಭೂಮಿಯನ್ನು ನಡಿಸುವರೇ ?

ವಾರಗಾರರು ಸೇರುವದು ಕೂಡ ಕಷ್ಟ. ಯಜಮಾನಿಗೆ 100ಕ್ಕೆ 10 ಬಟ್ಟಿ ಭತ್ತ ಸಿಕ್ಕುವದು ಸಹ ದುರ್ಲಭ. ಇಂಥಾ ಭೂಮಿಯನ್ನು ಕಷ್ಟಾಳಿಯಿಂದ ಒಬ್ಬ ಗೇಣಿದಾರನು ಗುತ್ತಿಗೆ ಹಿಡಿದು ಭೂಮಿಯನ್ನು ರೂಪಿತಪಡಿಸಿ ಕೆಲವು ಬಟ್ಟಿ ಒಳ್ಳೆ ಬೆಳೆ ತೆಗೆಯುವಂತೆ ಮಾಡಿದನೋ ಇಲ್ಲವೋ ಭೂಮಿ ಯಜಮಾನರ ಕಣ್ಣು ಕೆಂಪೇರುತ್ತೆ. 10 ಬಟ್ಟಿ ಗುತ್ತಿಗೆವಾರಕ್ಕೆ ಕೊಟ್ಟ ಭೂಮಿಯನ್ನು 20 ಬಟ್ಟಿಗೆ ಏರಿಸುತ್ತಾನೆ. ವಾರಗಾರನ ಮನಸ್ಸು ಮುರಿಯಿತು. ಬಿಡುವದಿಲ್ಲವೆಂದು ಗೇಣಿದಾರನು ಹೇಳಿದರೆ ಭೂಮಿ ಜಮ್ಮ, ಪಿತ್ರಾರ್ಜಿತ. ಜಮ್ಮ ಭೂಮಿ ವಾರಕ್ಕೆ ಕೊಡಲು ಮಂಜೂರಾತಿ ಇಲ್ಲ. ಪಿತ್ರಾರ್ಜಿತ ಭೂಮಿ ಕೊಡಲಿಕ್ಕೂ ಅಲ್ಲಿ ಬಿಡಲಿಕ್ಕೂ ಅಲ್ಲ, ರೂಪಿತ ಪಡಿಸುವ ವಾರಗಾರನಿಗೆ ಪ್ರೋತ್ಸಾಹವೆಲ್ಲಿ? ಬೇರೆ ದೇಶದ ಬಡ ರೈತರು ಯಾವ ನಂಬಿಕೆಯಿಂದ ಇಲ್ಲಿಯ ಭೂಮಿಗೆ ಬಂದು ಸ್ವತಂತ್ರನಾಗಿ ತನ್ನ ಹೆಂಗಸು ಮಕ್ಕಳನ್ನು ಸಾಗಿಸಿಕೊಂಡು ಬಂದಾನು. ಬಂದರೂ ಯಾವ ನೂತನ ಪದಾರ್ಥಗಳನ್ನು ನಮ್ಮ ಭೂಮಿಯ ಬಾಗದಲ್ಲಿ ಬೆಳೆಯಿಸಿದರೆ ಅವನದಾಗುತ್ತೆ. ಇವನು ರೂಪಿತಪಡಿಸಿದ ಭೂಮಿಯಿಂದಲೂ ಬಾಣೆಯಿಂದಲೂ ಅವನಿಗೆ ಯಾವ ಫಲಿತಾಂಶವನ್ನು ನಿರೀಕ್ಷಿಸಬಹುದು. ಮಣ್ಣು ಕೆಂಪಗೆ ಆಗುವಾಗ್ಯೆ ಭೂಮಾಲಿಕನ ಕಣ್ಣು ಕೆಂಪಗೆ ಆಗುತ್ತೆ. ವಾರಗಾರನು ಸೂಕ್ಷ್ಮಿದನು, ಅವನನ್ನು ಓಡಿಸಬೇಕು ಎಂಬ ಆಶೆಯು ಹುಟ್ಟಿದ ಕೂಡಲೆ ಆ ಬಡ ವಾರಗಾರನು ತಾನು ಪಟ್ಟ ಶ್ರಮವನ್ನೆಲ್ಲಾ ನೀರಿಗೆ ಹಾಕಿ ಬಿಡಬೇಕಾಗುತ್ತೆ. ಈಗಳಾಗಿ ಬಡ ವಾರಗಾರರು ವರುಷಕ್ಕೆ ಒಬ್ಬ ಯಜಮಾನನ ಹತ್ತಿರ ವಾರಕ್ಕೆಂದು ನಿಲ್ಲುತ್ತಾನೆ. ಬೆಳೆದ ಭತ್ತವೆಲ್ಲಾ ಬೇಸಿಗೆಯಲ್ಲಿ ಯಜಮಾನನಿಗೆ ಕೊಟ್ಟು ಮಾರಣೆ ವರುಷ ಇನ್ನೊಬ್ಬ ಯಜಮಾನನನ್ನು ಹುಡುಕುತ್ತಾನೆ. ಹೀಗೆ 10 ವರುಷ 10 ಯಜಮಾನರು, ಇದರಿಂದ ಆ ವಾರಗಾರನಿಗೆ ಸುಖವು ಇದೆ. ಯಾಕೆಂದರೆ ಹೊಸ ಆಳನ್ನು ಯಜಮಾನರು ಒಂದು ವರುಷ ಮಟ್ಟಿಗಾದರೂ ಚನ್ನಾಗಿ ಪೋಷಣೆ ಮಾಡುತ್ತಿರುವದು ವಾಡಿಕೆ. ಈ ವಾಡಿಕೆಯನ್ನು ಬಲವಾಗಿ ಹಿಡಿದು ನಮ್ಮ ವಾರಗಾರರು ದೇಶ ಸಂಚಾರ ಮಾಡುತ್ತಿದ್ದಾರೆ. ಇಂಥಾ ವುಗಳ ನಿವಾರಣೆಯನ್ನು ನಮ್ಮ ಸರಕಾರದವರು ಕಂಡುಹಿಡಿದು ಒಂದು ಹೊಸ ಕಾನೂನನ್ನು ಜಾರಿಗೆ ತಂದು ಜಮ್ಮ ಸಾಗು ಭೂಮಿಯನ್ನು 15 ಇಲ್ಲವೆ 20 ವರುಷಗಳ ಮಟ್ಟಿಗೆ ಜ... ಹಿಡಿದುಕೊಳ್ಳದ ಶರತ್ತಿನ ಮೇರೆ ಗೇಣಿಗೆ ಕೊಡುವಂ... ಗೇಣಿದಾರನು ಆ ಬಾಗದಲ್ಲಿ ಬೆಳೆಸಿದ ಕಾಫಿ, ಕಿತ್ತಳೆ, ... ಹಲಸು, ತೆಂಗು, ಅಡಿಕೆ ಮೊದಲಾದ ಪೈರುಗಳಿಗೂ ಹೊಸ ಸಾಗುವಳಿಗೂ ಇಂತಿಷ್ಟು ಕಿಮ್ಮತ್ತನ್ನು ಭೂಮಿ ಮಾಲೀಕನು ವಾರಗಾರನಿಗೆ ಕಾಲಾವಧಿಯೊಳಗೆ ಭೂಮಿಯನ್ನು ಬಿಡಿಸುವಪಕ್ಷ ಕೊಡಬೇಕೆಂತಲೂ ನಿರ್ಣಯಿಸಿದಲ್ಲಿ ಈ ದೇಶದ ಭೂಮಿಯ ಬೆಳೆಯು ಹೆಚ್ಚಾಗುವದಲ್ಲದೆ ಪರದೇಶದ ರೈತರು ಇಲ್ಲಿ ಒಂದು ವಸತಿಯನ್ನು ಮಾಡಲಿಕ್ಕೆ ಅನುಕೂಲವಾಗಿ ಭೂಮಾಲೀಕನ ಕಷ್ಟವೂ ವಾರಗಾರರ ಕಷ್ಟವೂ ನಿವಾರಣೆಯಾಗುವುದರಲ್ಲಿ ಸಂದೇಹವಿಲ್ಲ. ಈ ರೀತಿ ಮಾಡದೆ ಹೋದಲ್ಲಿ ವಾರಗಾರನಿಗೆ ವರುಷಕ್ಕೊಂದು ಯಜಮಾನನೂ ಭೂಮಾಲೀಕನು ಈಗ ಪಡುತ್ತಿರುವ ವಾರಕ್ಕೆ 8 ದಿನಗಳ ಚಾಕರಿಯೂ ತಪ್ಪಿ ಅವರೂ ಅವರ ಮಕ್ಕಳಿಗೂ ಕೊಂಚ ವಿರಾಮದ ವೃತ್ತಿಯನ್ನು ಅವಲಂಬಿಸಲು ಅನುಕೂಲವಾಗಬಹುದು. ಹೀಗೆ ಮಾಡಿದರೆ ಜಮ್ಮಕ್ಕೆ ಭಂಗ ಬಂದೀತು, ನಾಗು ಪರಾದೀನವಾದೀತು; ವಾರಗಾರನ ಆಳು ಯಜಮಾನನಾಗುವನು, ಮೊದಲಾದ ಗೊಡ್ಡು ಅಭಿಪ್ರಾಯಗಳು ಕೆಲವರಲ್ಲಿ ಹುಟ್ಟಬಹುದು. ಅವನ್ನು ನಿವಾರಣೆಮಾಡತಕ್ಕ ಕಾನೂನುಗಳನ್ನು ಮಾಡುವದು ಸರಕಾರದ ಕೈಯಲ್ಲಿ ಇದೆ. ಈ ರೀತಿ ನಿವಾರಣೆಯನ್ನು ಕೈಕೊಳ್ಳದೆ, ಇಂಥಾ ಅಭಾವದ ಭಯಗಳನ್ನು ತೆಗೆದುಕೊಂಡು ತಕ್ಕ ಪ್ರತಿಕೂಲವನ್ನು ಒದಗಿಸಿಕೊಳ್ಳದಿದ್ದರೆ ನಿರಂತರವೂ ಆ ನ್ನಿವಂತರ ಜಮ್ಮಗಾರರ ಮಕ್ಕಳೂ ಬೇರೆ ವೃತ್ತಿಯನ್ನು ಅವಲಂಬಿಸಲು ಆಗುವದಿಲ್ಲ. ಆಸ್ತಿಗಳ ಬೆಲೆಯೂ, ಜನ ಸಂಖ್ಯೆಯೂ ಹೆಚ್ಚುವ ಸಂಭವವಿಲ್ಲ. ಬಾಣೆ ಬಾಗಗಳೂ ವೃದ್ಧಿಯಾಗಲು ಅವಕಾಶವು ದೊರೆಯದು, ಈ ಸುಧಾರಣೆಯನ್ನು ಸರಕಾರದವರು ಪರ್ಯಾಲೋಚಿಸುವರಾಗಿ ಪ್ರಾರ್ಥನೆ.

'ವಸಂತ್ರು'

ಸ್ತ್ರೀಯರ ವಿದ್ಯಾಭಿವೃದ್ಧಿ.

ಮಹನೀಯರೇ,

ನಾನು ಪ್ರೈಮರಿಸ್ಕೂಲಿನಲ್ಲಿ ಓದುತ್ತಿದ್ದಾಗ ನನ್ನ ಜೊತೆಯಲ್ಲಿ ಹುಡುಗಿಯರುಕೂಡ ಇದ್ದರು. ಒಬ್ಬ ಹುಡುಗಿಯಾದರೂ ನನಗಿಂತ ಮೊದಲೇ ಸೇರಿದ್ದರಿಂದ ಅವಳು ಕ್ಲಾಸಿನಲ್ಲಿ 1ನೇಯವಳಾಗಿದ್ದಳು. ಚಿಕ್ಕಚಿಕ್ಕ ಹುಡುಗರಿಗೆ ಅವಳೇ ಪಾಠಹೇಳುತ್ತಿದ್ದಳು. ಪಂಡಿತರಾದರೋ ಪ್ರಶ್ನೆಯನ್ನು ಕೇಳಿ ತಪ್ಪಿದ ಹುಡುಗರಿಗೆ ಕ್ಲಾಸಿನಲ್ಲಿ ಒಂದನೆಯವಳಾದವಳಿಂದ ಹೊಡೆಸುತ್ತಿದ್ದರು. ಇವಳನ್ನು ಹ್ಯಾಗಾದರೂ ಹಿಂದಕ್ಕೆ ಮಾಡಬೇಕೆಂದು ಪ್ರಯತ್ನ ಪಟ್ಟರೂ ಯಾವ ವಿಧದಲ್ಲಿಯೂ ಆಗಲಿಲ್ಲ. ಒಂದುದಿನ ಶಾಲೆಗೆ ಹೋಗುವಾಗ ಅವಳಿಗೆ ಮೊದಲೇ ಹೊರಟು ಹಿಂತಿರುಗಿ ಬಂದು ಈ ಹೊತ್ತು ರಾಜಹುಟ್ಟಿದದಕ್ಕಾಗಿ ರಜವಿದೆ ಶಾಲೆಗೆ ಬರಬೇಡವೆಂದು ಉಪಾಧ್ಯಾಯರು ಹೇಳಿರುತ್ತಾರೆಂದು ಸುಳ್ಳು ನೆವವನ್ನು ಹೇಳಿ ಅವಳನ್ನು ಹಿಂದಕ್ಕೆ ಕಳುಹಿಸಿ ನಾನು ದಾರಿಯಲ್ಲಿ ಸುಮ್ಮನೆ ಕೂತು ಅವಳು ಹಿಂದಕ್ಕೆ ಹೋದಮೇಲೆ ಶಾಲೆಗೆ ಹೋದೆನು. ಆ ದಿವಸ ಅವಳು ಬಾರದ್ದರಿಂದ ಆ ತಿಂಗಳಲ್ಲಿ ನಾನೇ ಮೊದಲನೆಯವನಾದೆ. ಆಗಲಾದರೋ ಗಂಡು ಹೆಣ್ಣು ಎಂಬ ಭೇದವಿಲ್ಲದೆ ಮಾಸ್ಟರ ಹೆದರಿಕೆಗಾಗಿ ಪ್ರತಿಯೊಬ್ಬರು ತನ್ನ ತನ್ನ ಪಾಠಗಳನ್ನು ಸರಿಯಾಗಿ ಕಲಿಯುತ್ತಿದ್ದರು. ಈಚೆಗೆ ಹುಡುಗಿಯರಿಗೆ ಬೇರೆ ಸ್ಕೂಲ್‌ಮಾಡಿದರು. ಅಂದಿನಿಂದಲೇ ನಮ್ಮ ಬಾಲಕಿಯರ ಅಭಿವೃದ್ಧಿಯು ಕಟ್ಟಿದೆ. ಈ ಶಾಲೆಗಳಲ್ಲಿ ಪ್ರೈಮರಿ ಓದಿದ ಯುವತಿಯರನ್ನು ಹೆಡ್‌ಮಿಸ್ಟ್ರೆಸ್ ಮಾಡಿರುತ್ತಾರೆ. ಬಾಕಿಯವರು ಅವರಿಗಿಂತ ಕೆಳಗಿನವರು ಇವರು ಹ್ಯಾಗೆ ಪಾಠ ಹೇಳ್ಯಾರು? ಬಾಲಕರಿಗೆ ಮಾತ್ರ ಸ್ಕೂಲ್‌ಫೈನಲ್, ಎಸ್. ಎ. ಇಂಥಾವರನ್ನು ಪ್ರೈಮರಿ ಸ್ಕೂಲ್‌ಗಳಲ್ಲಿ ಮಾಸ್ಟರಗಳಾಗಿ ಮಾಡಿ ಇವರ ಸ್ಥಿತಿಯನ್ನು ಈ ರೀತಿಯಲ್ಲಿಡುವದು ನ್ಯಾಯವೇ? ಬಾಲಕರ ಪಾಠಶಾಲೆಗಳಲ್ಲಿ ಓದಿದ ಒಬ್ಬ ಹುಡುಗಿಯನ್ನು ಬಾಲಕಿಯರ ಪಾಠಶಾಲೆಗಳಲ್ಲಿ ಓದಿದ ಒಬ್ಬ ಹುಡುಗಿಯನ್ನು ಪರೀಕ್ಷೆಮಾಡಿದಲ್ಲಿ ಆನೆಗೂ ಆಡಿಗೂ ಇರುವ ವ್ಯತ್ಯಾಸವು ಕಂಡುಬರುವದು. ನಾಲ್ಕನೆ ಕ್ಲಾಸಿನಲ್ಲಿ ಓದಿದ ಹುಡುಗಿಗೆ ಸಂತೆಪಟ್ಟಿಯನ್ನು ಸಹ ಸರಿಯಾಗಿ ಬರೆಯಲು ಆಗುವದಿಲ್ಲ. ಆದ್ದರಿಂದ ಅನೇಕ ತಾಯಿತಂದೆಗಳು ಹುಡುಗಿಯರನ್ನು ಶಾಲೆಗೆ ಕಳುಹಿಸುವದಿಲ್ಲ. ಆದ್ದರಿಂದ ನಮ್ಮ ಬಾಲಕಿಯರನ್ನು ಅಭಿವೃದ್ಧಿಗೊಳಿಸಲಿಕ್ಕಾಗಿ ಪ್ರತಿ ಗರ್ಲ್ಸ್ ಸ್ಕೂಲುಗಳಲ್ಲಿಯೂ 5 ಉಪಾಧ್ಯಾಯಿನಿಯರು ಇದ್ದಪಕ್ಷ ಮೂವರಾದರೂ ಸಧ್ಯ ಲೋವರ್ ಸೆಕಂಡರಿ ಓದಿದವರನ್ನು ಮಿಸ್ಟ್ರೆಸ್‌ಗಳಾಗಿ ಮಾಡಿದಲ್ಲಿ ನಮ್ಮ ಬಾಲಕಿಯರ ವಿದ್ಯೆಯು ಅಭಿವೃದ್ಧಿಗೊಳ್ಳುವದರಲ್ಲಿ ಯಾವ ಸಂಶಯವಿಲ್ಲ. ಈ ಮೇಲಿನ ರೀತಿ ಮಾಡದಿದ್ದ ಪಕ್ಷದಲ್ಲಿ ನಮ್ಮ ಹಿರಿಯರನ್ನು ಹಿಂಬಾಲಿಸಿ ನಾವೆಲ್ಲರೂ ಕೂಡಿ ಹತ್ತಿರದ ಬಾಲಕ ಪಾಠಶಾಲೆಗಳಿಗೆ ನಮ್ಮ ಬಾಲಕಿಯರನ್ನು ಕಳುಹಿಸುವದು ಲೇಸು.

ಬಾಲಕಿಯರ ಪೋಷಕ,

ದಿವಂಗತ ಮಿ. ಬಿದ್ದಂಡ ಗಣಪತಿಯವರ ಜ್ಞಾಪಕಾರ್ಥ.

ಮಹನೀಯರೆ,

ಮಿ. ಬಿದ್ದಂಡ ಗಣಪತಿಯವರು 1920ರಲ್ಲಿ ಗತಿಸಿದಕೂಡಲೇ, ದೇಶದ ಅನೇಕ ಕಡೆಗಳಲ್ಲಿಯೂ, ಕೊಡಗು ಜಮೀನುದಾರರ ಸಂಘದಲ್ಲಿಯೂ ವ್ಯಸನಸೂಚಕ ಮೀಟಿಂಗ್ ಮಾಡಿ ದೇಶದ ಜನರಿಗೆ ದಿವಂಗತರ ಮೇಲಿದ್ದ ಅಭಿಮಾನವನ್ನು ಸೂಚಿಸಿದರು. ಮಾರಣೇ ವರುಷದ ಕೊಡಗು ಜಮೀನುದಾರರ ಸಂಘದ ಜನರಲ್ ಮೀಟಿಂಗಿನಲ್ಲಿ ಮಿ. ಗಣಪತಿಯವರ ಹೆಸರನ್ನು ಸ್ಥಿರಪಡಿಸಲು ಅವರ ಹೆಸರಿನಲ್ಲಿ ಯಾವದಾದರೊಂದು ಒಳ್ಳೆ ಕಾರ್ಯ ಮಾಡಬೇಕೆಂದು ಜನರಲ್ ಮೀಟಿಂಗಿನಲ್ಲಿ ಮಂಜೂರಾಗ್ಯಾದಿ ಅನೇಕ ಮಹನೀಯರು ಮೀಟಿಂಗಿನಲ್ಲೇ ತಮ್ಮ ಅಭಿಮಾನವನ್ನು ಚಂದಾಪಟ್ಟಿಯಲ್ಲಿ ಹಣಹಾಕುವುದರಲ್ಲಿ ತೋರಿಸಿದರು. ಸದರಿ ಪಟ್ಟಿಯು ಹಾಗೆಯೇ ಜಮೀನುದಾರರ ಸಂಘದ ಆಫೀಸಿನಲ್ಲಿ ಬಿದ್ದಿರಬಹುದಾಗಿ ನಂಬುತ್ತೇನೆ.

ಅಲ್ಲಿಂದೀಚೆಗೆ ಯಾವ ಕಾರಣದಿಂದ ಇಂಥಾ ಕೆಲಸಕ್ಕೆ ಜಮೀನುದಾರ ಸಂಘದವರು ಮುಂದರಿಸಲಿಲ್ಲವೆಂದು ತಿಳಿಯುವುದಿಲ್ಲ. ಕೊಡಗಿನಲ್ಲಿ ದೇಶಕ್ಕಾಗಿ ಕೆಲಸ ಮಾಡಿದವರು ಇದ್ದುದು ಬಹಳ ಕಡಿಮೆ. ಮಿ. ಗಣಪತಿಯವರು ಜಮೀನುದಾರ ಸಂಘವನ್ನು ಸ್ಥಾಪಿಸಲಿಕ್ಕೆ ಮೂಲಪುರುಷರೆಂದೇ ತಿಳಿಯಬೇಕು. ಯಾಕೆಂದರೆ ಮಿ. ಕೋದಂಡ ಪೂವಯ್ಯನವರು ಈ ಸಂಘದ ಬೀಜವನ್ನು ಬಿತ್ತಿದರೂ, ಈ ಬೀಜಕ್ಕೆ ನೀರೆರೆದು ಸಾಕಿ ಸಲಹಿ ವೃಕ್ಷದೋಪಾದಿಗೆ ಸಂಘದ ಜನರಲ್ ಸೆಕ್ರೆಟರಿಯವರಾಗಿ ಆದಿಯಿಂದ ಅಂತ್ಯದವರೆಗೂ, ಮಿ. ಗಣಪತಿಯವರೇ ಕೆಲಸಮಾಡಿದ್ದು. ಯಾರು ದೇಶದ ಕೆಲಸ ಮಾಡಲಿಕ್ಕಿಲ್ಲದ, ದೇಶ ಸೇವೆಎಂಬುದೇನೆಂದು ಅರಿಯದ ಈ ಕೊಡಗು ದೇಶದಲ್ಲಿ ದೇಶ ಸೇವೆ ಎಂಬುದೇನು, ಹೇಗ ಕೆಲಸಮಾಡಬೇಕು, ದೇಶದ ಜನರ ಜವಾಬ್ದಾರಿಯೇನು, ಸರಕಾರದ ಕರ್ತವ್ಯವೇನು ಎಂಬುದನ್ನು ತಕ್ಕಮಟ್ಟಿಗೆ ಕೊಡಗು ದೇಶಕ್ಕೆ ತಿಳಿಸಿದ್ದು ಈ ಪುಣ್ಯಪುರುಷರೇ. ಇವರು ತನ್ನ ಆಯುಷ್ಯವನ್ನೆಲ್ಲಾ ತನ್ನ ದೇಶಕ್ಕಾಗಿ ಧಾರೆ ಎರೆದರೆಂಬುದಕ್ಕೆ ಸಂದೇಹವಿಲ್ಲ. ಇತರ ಶಾಯಿದಂಗಳಂತೆ, ಯಾ, ಉದ್ಯೋಗಸ್ಥರಂತೆ, ತನ್ನ ಕಾಲೇಜು ವಿದ್ಯಾಭ್ಯಾಸಂಗವು ಮುಗಿದೊಡನೇ ಈ ಮಹನೀಯರಿಗೂ, ತನ್ನ ಸ್ವಂತ ಸಂಪಾದನೆಗೆ ಇಳಿಯಬಹುದಾಗಿತ್ತು. ಆದರೆ ಇವರು ಮೂರು ವರುಷದ ಪರಿಯಂತರ ಎಟರ್ನಿ ಕೆಲಸಕ್ಕ ಮದ್ರಾಸಿನಲ್ಲಿ ಓದಿ ದೇಶ ಸೇವೆಯನ್ನು ಮಾಡುವ ಉದ್ದೇಶದಿಂದ ಯಾವ ವೃತ್ತಿಯನ್ನು ಕೈಕೊಳ್ಳದೆ ತನ್ನ ದೇಶ ಮಾತೆಯ ಕೆಲಸಕ್ಕೆ ಪ್ರಾರಂಭ ಮಾಡಿದರು. ಇವರು ರೈತರ ಕಷ್ಟಗಳನ್ನು ಸರಕಾರಕ್ಕೆ ನಿರ್ಭಯವಾಗಿ ಸೂಚಿಸುತ್ತಿದ್ದರು. ಸರಕಾರದ ಕಾರ್ಯತಂತ್ರಕ್ಕೆ ಹೆದರದೆಯೂ, ಮೆಚ್ಚಿಕೆಗೆ ಹಿಗ್ಗದೆಯೂ, ನ್ಯಾಯವನ್ನೇ ಧೈರ್ಯದಿಂದ ನುಡಿಯುತ್ತಿದ್ದರು. ರೈತರ ಪರ ಬಹಳವಾಗಿ ವಾದಿಸುತ್ತಿದ್ದುದರಿಂದ, ಇವರು ಸರಕಾರದವರ ಪ್ರೀತಿಗೆ ಪಾತ್ರರಾಗಿದ್ದಿಲ್ಲ. ಇವರು ಸರಕಾರ ಜನರಿಗ ಸೇರಿದ್ದರೆ ಬಹಳ ದೊಡ್ಡ ಪದವಿಯನ್ನು ಪಡೆದು, ರಾಯ ಬಹದ್ದೂರ್ ಮತ್ತು ದಿವಾನ್ ಬಹದ್ದೂರ್ ಎಂಬ ಪದವನ್ನು ಪಡೆಯುತ್ತಿದ್ದರು. ಆದರೆ ದೇಶದವರಿಗೆ ಇವರಿಂದೇನು ಪ್ರಯೋಜನವೆಂಬುದನ್ನು ಕೊಂಚಮಟ್ಟಿಗೆ ವಿಚಾರಿಸುವ. ಅವರ ಮರಣಾನಂತರ ಅವರ ಪರಿಸರ ಎಷ್ಟುಮಂದಿಗಾಯಿತು ... ದೇಹದಲ್ಲಿರುಬಾಗ ಸರಕಾರಕ್ಕೆ ಹೋರಾಡಿ ಅವರಿಗೆ ಸರಕಾರದ ಆಕ್ಷೇಪಣೆಗಳು ಸಿಕ್ಕುತ್ತಿದ್ದಾಗ ಕೆಲವು ಜನರು ಪರದೆಯಲ್ಲಿ ಹೀಯಾಳಿಸುತ್ತಿದ್ದರು. ರೈತರಿಗಾದರೋ ಅವರು ಮಾಡುತ್ತಿದ್ದ ಕೆಲಸವನ್ನು ಕೊಂಡಾಡಲು ತಿಳುವಳಿಕೆ ಇಲ್ಲ. ಆಸಮಯದಲ್ಲಿ 1 ಪತ್ರಿಕೆಯಾದರೂ ಇದ್ದಿದ್ದರೆ ಅವರ ವಿಷಯ ಎಲ್ಲರಿಗೂ ತಿಳಿಯುತ್ತಿತ್ತು. ಈ ಮಹನೀಯರು ಆರುವರ್ಷಗಳ ವರೆಗೆ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳಾಗಿಯೂ ಹದಿನಾಲ್ಕು ವರ್ಷಗಳ ವರೆಗೆ ಮರ್ಕಾರಾ ಸಹಕಾರ ಸಂಘದ ಪ್ರೆಸಿಡೆಂಟರಾಗಿಯೂ, ಮೂರು ವರ್ಷ ಬಲಮುರಿ ದವಸ ಬಂಡಾರದ ಪ್ರೆಸಿಡೆಂಟರಾಗಿಯೂ ಬಹಳ ಮುತುವರ್ಜಿಯಿಂದ ಕೆಲಸಮಾಡಿದರು. ಸರಕಾರಕ್ಕೆ ಒಳ್ಳೇದು ಮಾಡಿದವರಿಗೆ ಸರಕಾರದವರು ಬಹುಮಾನ ಕೊಡುವದು ವಾಡಿಕೆ. ಅಂಥಾದ್ದರಲ್ಲಿ ತನ್ನ ಜನರಿಗೆ ಒಳ್ಳೇದುಮಾಡಲಿಕ್ಕಾಗಿ, ತನ್ನ ತನು, ಮನ, ಧನವನ್ನು ಅರ್ಪಿಸಿ, ಪ್ರಾಣವನ್ನೂ ಕಳಕೊಂಡ ಮಿ. ಗಣಪತಿಯವರ ಜ್ಞಾಪಕಾರ್ಥವಾಗಿ ಜನರು ಏನೂ ಮಾಡದಿರುವದು ಎಷ್ಟುದೊಡ್ಡ ದ್ರೋಹವೆಂದು ಎಷ್ಟು ಹೇಳಿದರೂ ತೀರದು. ಈ ವಿಷಯ ಅನೇಕ ಜನರು ಚರ್ಚಿಸಿ ವೀರರಾಜಪೇಟೆಯಲ್ಲಿ ಅವರ ಹೆಸರಿನಲ್ಲಿ ಒಂದು ಪುಸ್ತಕ ಭಂಡಾರವನ್ನು, ಮತ್ತು ವಾಚನಾಲಯವನ್ನೂ ತೆರೆಯಬೇಕೆಂದು ನಿರ್ಧರಿಸಿರುತ್ತಾರೆ. ಈ ವಿಷಯವನ್ನು ಬರುವ ಏಪ್ರಿಲ್ 11ರಲ್ಲಿ ಜರಗುವ ಜನರಲ್ ಮೀಟಿಂಗಿನಲ್ಲಿ ಚರ್ಚಿಸಿ ಕೊಡಗು ಜಮೀನುದಾರ ಸಂಘದ ಪೂರ್ಣ ಸಹಾನುಭೂತಿಯನ್ನೂ, ಸಹಾನುಭೂತಿಯನ್ನೂ ಪಡೆಯಲು ಕುತೂಹಲವುಳ್ಳವರಾಗಿದ್ದೇವೆ. ಮಿ. ಗಣಪತಿಯವರು ಮರ್ಕಾರದಿನಲ್ಲಿಯೇ ಹುಟ್ಟಿ ಬೆಳೆದವರಾದ್ದರಿಂದಲೂ, ಸ್ವಾಗತ ಕಮಿಟಿಯವರು ಮತ್ತು ಅವರು ಕೆಲಸಮಾಡಿದ ಇತರ ಸಂಘಗಳ ಪ್ರತಿನಿಧಿಗಳೂ ತಕ್ಕ ದ್ರವ್ಯ ಸಹಾಯವನ್ನು ಮಾಡ್ಯಾರೆಂದು ನಂಬುತ್ತೇವೆ. ಅಲ್ಲದೆ ಮೀಟಿಂಗಿಗೆ ದಯಮಾಡಿಸುವ ಪ್ರತಿಯೊಬ್ಬ ಮಹನೀಯರೂ ತನ್ನ ಕೈಲಾದ ಮಟ್ಟಿಗೆ ಈ ಪುಣ್ಯ ಕಾರ್ಯಕ್ಕೆ ದ್ರವ್ಯ ಸಹಾಯಮಾಡಬೇಕೆಂದು ನಾನು ಈ ಲೇಖನವನ್ನು ಮುಗಿಸುತ್ತೇನೆ.

ವೀರರಾಜಪೇಟೆ, ಕೆ. ಎ. ಚಿಣ್ಣಪ್ಪ.

ಕೊಡಗರ ಮದುವೆ ಪದ್ಧತಿ.

ಕೊಡಗರ ಮದುವೆಯು ಬೇರೆ ಹಿಂದುಗಳ ಮದುವೆಗಿಂತಲೂ ವ್ಯತ್ಯಾಸ ರೀತಿಯಲ್ಲಿಯೂ, ಕೊಡಗು 'ಲಾ' ವು ಹಿಂದೂ 'ಲಾ' ಕ್ಕೆ ಅನೇಕ ಬಾಬತ್ತಿನಲ್ಲಿ ವ್ಯತ್ಯಾಸವಾಗಿಯೂ ಇರುವುದು ಸರಿಯಷ್ಟೆ. ಕೊಡಗನೊಬ್ಬನು ತನ್ನ ಮಗಳನ್ನಾಗಲೀ, ಯಾ, ತಂಗಿಯನ್ನಾಗಲೀ, ಅಲ್ಲವೆ ತನ್ನ ಅಣ್ಣ ತಮ್ಮಂದಿಯರ ಮಗಳನ್ನಾಗಲೀ ಇನ್ನೊಬ್ಬ ಕೊಡಗನಿಗೆ ಮದುವೆ ಮಾಡಿಕೊಟ್ಟಲ್ಲಿ ಆಕೆಯು ಒಂದು ಮಗುವನ್ನು ಪ್ರಸವಿಸಿ ಹಾಗಾಗುವಳು. ಆ ಮಗುವೂ ಕೆಲವು ದಿನಗಳಲ್ಲೇ ಮರಣಿಸ ಬಹುದು. ಹಾಗಾದರೆ ಆ ಪೌತಿಳು ತನ್ನ ತಂದೆಯ ಮನೆಯಿಂದ ಬಾಳಿಕೆ ಬರುವಾಗ್ಯೆ ತಂದ ಪಡಪೆ ವಸ್ತುಗಳೂ ಹಣಕಾಸುಗಳೂ ಆಕೆಯನ್ನು ಮದುವೆ ಮಾಡಿ ಕೊಟ್ಟ ತಂದೆ, ಯಾ, ವಾರಿಸ್‌ದಾರರುಗಳಲ್ಲದೆ ಜೀವದಲ್ಲಿರುವ ಗಂಡನಿಗ ಪಕ್ಕಾಗಬೇಕಾಗುವುದೋ ಹೇಗೆ? ಒಬ್ಬ ಕೊಡಗನು ಲಗ್ನವಾಗಿ ಕೆಲವು ವರುಷಗಳಲ್ಲಿ ಒಂದು ಹೆಣ್ಣು ಮಗಳನ್ನು ಪಡೆದು ಕೆಲವು ಕಾಲದಲ್ಲಿ ಪತ್ನೀ ಸಮೇತ ಆತನು ಮೃತನಾಗುವನು. ಮತ್ತು ತನ್ನ ಮರಣ ಕಾಲದಲ್ಲಿ ಜೀವವಿಮೆ ಕಂಪನಿಯೋ, ಸೇವಿಂಗ್ಸ್ ಬ್ಯಾಂಕಿನಿಂದಲೋ, ಇನ್ಯಾವ ಬಾಬಿನಿಂದಲಾದರೂ ಕೆಲವು ರೂಪಾಯಿಗಳು ಸಿಕ್ಕಬೇಕಾಗುವುದು, ನಗದು ಹಣವು ಪೌತನ ಹೆಣ್ಣು ಮಗಳಿಗೆ ಸಿಕ್ಕುವುದೋ ಅಥವಾ ಪೌತನ ಅಣ್ಣ ತಮ್ಮಂದಿಯರಿಗೆ ಸಿಕ್ಕಬೇಕಾಗುವುದೋ? ಪೌತನ ಮರಣ ಕಾಲದಲ್ಲಿ ಅವಿವಾಹಿತೆಯಾಗಿದ್ದು ಕೆಲವು ಕಾಲದನಂತರ ಲಗ್ನವಾಗಿ ತಂದೆಯ ಹಣವನ್ನು ಆಕೆಯು ಹೊಂದಿಕೊಂಡಿದ್ದರೆ, ಆಕೆಯೂ ಒಂದು ಮಗುವಿನ ತಾಯಿಯಾಗಿ, ತಾಯಿಯೂ ಮಗುವೂ ಪೌತಾದರೆ, ಆಕೆಯ (ಪೌತಳ) ತಂದೆಯ ಹೆಸರಿನಿಂದ ಸಿಕ್ಕಿದ ವಿಮೆ ಕಂಪನಿ, ಯಾ, ಇತರ ಬಾಬಿನ ಹಣವೂ ತೌರುಮನೆಯಿಂದ ಸಿಕ್ಕಿದ ಪಡಪೆ ವಸ್ತುಗಳೂ ಗಜೀವದಲ್ಲಿರುವ ಗಂಡನಿಗೋ, ಅಲ್ಲವೇ ಆ ಪೌತಳ ತಂದೆಯ ಅಣ್ಣ ತಮ್ಮಂದಿರೇ ಮುಂತಾದ ವಾರಿಸ್‌ದಾರರಿಗೆ ಆಗಬೇಕೋ?

ಹಿಂದೂ 'ಲಾ' ಪ್ರಕಾರ ಈ ದೇಶದಲ್ಲಿರುವ ಹಿಂದೂಗಳು ತಮ್ಮ ಹೆಣ್ಣು ಮಕ್ಕಳನ್ನು ಪರರೊಬ್ಬನಿಗೆ ಮದುವೆ ಮಾಡಿಕೊಡುವಾದರೆ ಆ ಹುಡುಗಿಯನ್ನು ಲಗ್ನವಾಗುವ ವರನೇ ವಧುವಿಗಿರುವ ಎಲ್ಲಾ ಪಡಪೆ ವಸ್ತುಗಳನ್ನು ತನ್ನ ಸ್ವಂತ ಆರ್ಜನೆಯಿಂದಲೇ ಮಾಡಬೇಕಾಗುವುದು, ಆದರೆ, ನಮ್ಮ ಕೊಡಗರ ಪದ್ಧತಿ ಮೇರೆ ವರನಿಂದ ಒಂದು ಕಾಸೂ ಹೊಂದಿಕೊಳ್ಳದೆ, ಹುಡುಗಿಯ ತಂದೆಯೇ ಮುಂತಾದ ವಾರಿಸ್‌ದಾರರೇ ತಮ್ಮ ಸ್ವಂತ ಆರ್ಜನೆಯಿಂದ ಹುಡುಗಿಗೆ ಬೇಕಾದ ಎಲ್ಲಾ ಪಡಪೆ ವಸ್ತುಗಳನ್ನು ಸಹಿತ ಮದುವೆ ಮಾಡಿಕೊಡಬೇಕಾಗಿದೆ. ಆದ್ದರಿಂದ ಅಂಥಾ ಹುಡುಗಿಯು ಪೌತಾಗುವಲ್ಲಿ ಮಕ್ಕಳಿದ್ದರೆ ಆ ಮಕ್ಕಳಿಗೆ ತಾಯಿಯ ಪಡಪೆ ವಸ್ತುಗಳು ಸಿಕ್ಕಬೇಕಾಗುವುದಂತಲೂ, ಆಕೆಯೂ ಪೌತಾಗಿ ಮಕ್ಕಳಿದ್ದು, ತದನಂತರ ಅವೂ ಪೌತಾದರೆ ಪೌತಳು ತಂದೆಯ ಮನೆಯಿಂದ ತಂದ ಸರ್ವ ಆಸ್ತಿಪಾಸ್ತಿ ಹಣಕಾಸುಗಳೆಲ್ಲವೂ ಪೌತಳ ತಂದೆಗಾಗಲೀ ಇಲ್ಲವೇ ತಂದೆಯ ಅಣ್ಣ ತಮ್ಮಂದಿರೇ ಮುಂತಾದ ವಾರಿಸ್‌ದಾರರಿಗೆ ಸಲ್ಲಬೇಕಾಗುವುದಲ್ಲದೆ, ಗಂಡನು ಸಜೀವಿ

ಯಾಗ್ಗಿದ್ದರೂ ಆತನಿಗೇನೂ ತಕ್ಕಿಲ್ಲವೆಂಬುದಾಗಿ ನನ್ನ ನಂಬಿಕೆ, ಆ ದುಃಖದಿಂದ ಈ ವಿಷಯ ಕೊಡಗು ಪದ್ಧತಿಯನ್ನು ಬಲ್ಲವರು ಬ ಹಳ ಬಲ್ಲಿದರೆನ್ನದೆ ತಿಳಿಸಬೇಕಾಗಿ ಕೋರುವ,

"ಸಂಕಟದ ಕೊಡವ"

ಸಹೋದರರೇ,

ವೀರಾಜಪೇಟೆ ಸ್ಕೂಲಿನಲ್ಲಿರುವ ಪ್ರೋಗ್ರೆಸ್ ಡಿಬೇಟಿಂಗ್ ಸೊಸೈಟಿಯ ವಾರ್ಷಿಕೋತ್ಸವವು ಕಳೆದ ತಿಂಗಳ 8ನೇ ತಾರೀಕಿನಲ್ಲಿ ರಾವು ಬಹದ್ದೂರ್ ಕೊಡಂದೇರ ಕುಟ್ಟಯ್ಯನವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತೆಂದು ಕೆಲವು ವಾರಗಳ ಹಿಂದೆ ತಿಳಿಸಿರುತ್ತೇವೆ. ಈ ಸೊಸೈಟಿಯು ಜನನವಾಗಿ ಹತ್ತು ಹದಿನೈದು ವರುಷಗಳಾದರೂ ಇದರ ಸ್ಥಿತಿಯು ಬಹಳ ಹೀನ ಸ್ಥಿತಿಯಲ್ಲಿರುವುದನ್ನು ನೋಡಿದರೆ ಬಹಳ ಶೋಚನೀಯವಾದ ಸಂಗತಿಯಾಗಿದೆ. ಈ ಸೊಸೈಟಿಯಲ್ಲಿ ಓದಲಿಕ್ಕೆ ಬೇಕಾದ ಪುಸ್ತಕ ಭಂಡಾರವಾಗಲಿ ಅಥವಾ ಅದನ್ನು ತರಿಸಿ ಇಟ್ಟುಕೊಳ್ಳುವಷ್ಟು ದ್ರವ್ಯವು ಸಹ ಇಲ್ಲದೆ ಇರುವುದರಿಂದ ಈ ಸೊಸೈಟಿಯು ಇನ್ನು ಮುಂದಕ್ಕೆ ಒಳ್ಳೆ ಸ್ಥಿತಿಗೆ ತರಲಿಕ್ಕೆ ಮಾರ್ಗವೆಂದೂ ಸಹ ಕಾಣುವುದಿಲ್ಲ. ಆದರೆ ಕಳೆದ ವರುಷ ಪಿಸ್ ಕಾಮುರಾಯರೆಂಬೊಬ್ಬ ಮಹನೀಯರು ನಮ್ಮ ಸೊಸೈಟಿಗೆ ಕೆಲವು ಪುಸ್ತಕಗಳನ್ನು ಕೊಟ್ಟು ನಮ್ಮನ್ನು ಪ್ರೋತ್ಸಾಹಿಸಿದುದಕ್ಕಾಗಿ ನಾವು ಅವರನ್ನು ಎಷ್ಟು ವಿಧವಾಗಿ ವಂದಿಸಿದರೂ ಸಾಲದು. ಇದೇ ಮೇರೆ ಈ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಕಲಿತ ಕೆಲವು ಮಹನೀಯರು ನಮ್ಮ ಸೊಸೈಟಿಯ ಅಭಿವೃದ್ಧಿಗೋಸ್ಕರ ಈ ವರುಷ ದ್ರವ್ಯ ಸಹಾಯ ಮಾಡಿದ್ದನ್ನು ನೋಡಲು ಬಹಳ ಸಂತೋಷಕರವೇ ಸರಿ. ಹೀಗೆ ಎಲ್ಲರೂ ತಮ್ಮ ಕೈಲಾದ ಮಟ್ಟಿಗೆ ಬಾಯಿಂದಾಗಲಿ, ಕೈಯಿಂದಾಗಲಿ ಕ್ರಮ ಕೆಗೆದುಕೊಂಡ ಪಕ್ಷದಲ್ಲಿ ಇನ್ನು ಮುಂದಕ್ಕೆ ಜನಾಂಗವಾಗಬೇಕಾದಂತ ನಾವು ಉನ್ನತ ಸ್ಥಿತಿಯನ್ನು ಪಡೆಯುವುದರಲ್ಲಿ ಏನ ಸಂಶಯವೂ ಇಲ್ಲ.

ಸೆಕ್ರೆಟರಿ.

ನೋಟೀಸ್.

ದಕ್ಷಿಣ ಕೊಡಗಿನ ಜಮೀನುದಾರರ ಸಂಘದ ಆರ್ಗನೈಜರ್ ಪದ್ದಂಡ ಕಾರ್ಯಪ್ಪನವರು ತನ್ನ ಕೆಲಸಕ್ಕೆ ರಾಜೀನಾಮೆ ಮಾಡಿರುವುದರಿಂದ, ದಯವಿಟ್ಟು ಜಮೀನುದಾರರ ಸಂಘದ ಎಲ್ಲಾ ಮೆಂಬರುಗಳು ಆಯಾಯ ನಾಡು ಕಮಿಟಿಯವರಿಗಾಗಲೀ, ಅಥವ ನಮ್ಮ ಏಜಂಟರಾಗಿರುವ ಕೋಟೆರ ಚಿಣ್ಣಪ್ಪನವರ ವೀರಾಜಪೇಟೆಯ ಆಫೀಸಿನಲ್ಲಾಗಲೀ, ಮೆ ಚಂಗಂಡ ಕುಟ್ಟಪ್ಪನವರು, ಬಸಂಡ ಮಾದಪ್ಪನವರು, ಜಮ್ಮಡ ಮಾದಪ್ಪನವರಿಗಾಗಲೀ ತಮ್ಮ ವಾರ್ಷಿಕ ಚಂದಾ ಹಣವನ್ನು ವಾಪತಿ ಮಾಡಿ ರಶೀತಿ ಪಡೆಯಬೇಕಾಗಿ ಈ ಮೂಲಕ ಕೇಳಿಕೊಂಡಿದ್ದೇವೆ.

ಜನರಲ್ ಸೆಕ್ರೆಟರಿ

ಮಹನೀಯರೇ,

1923ನೇ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ರೋಗಿಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿದೆ.

ಕೃಷ್ಣ ಸಂಪೀಪನ್ ಮತ್ತು ನಾರಾಯಣ ನಂಬೀಶ ರ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನ ಪಂಡಿತ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ತೈಕಾಟ್ಟ್ ಮೂಸ್ಸನ್ನು ಪಡೆದವರಾಗಿಯೂ ಇರುವ ಇ. ಟಿ. ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆ ಮಾಗಿದೆ.

ಪಂಡಿತರ ಮತ್ತು ಕಂಪೆನಿ,
ಆಯುರ್ವೇದಿಕ್ ಡಿಸ್ಪೆನ್ಸರಿ.
ಕಲ್ಲೂರು, ವೀರಾಜಪೇಟೆ ಮತ್ತು
ಗೋಣಿಕೊಪ್ಪಲು.

ದಯಮಾಡಿ ಪರೀಕ್ಷಿಸಿ ನೋಡಿರಿ!

X. L. ALOIL.

ಹೊಸ ನಮೂನೆಯ ಮೀನಿನ ಎಣ್ಣೆ

ಅಜೀರ್ಣರಾದವರೂ, ಸಣ್ಣಮಕ್ಕಳೂ ಶಕ್ತಿ ಕುಂದಿದವರೂ ಮತ್ತು ಎದೆನೋವು ಪಕ್ಕೆರೋಗಗಳಿಂದ ಪೀಡಿತರಾದವರೂ ಸಹ ಸೇವಿಸುವದರಿಂದ ಒಡನೆ ತೃಪ್ತಿಯಾಗುವರು. "ಕಾಡ್ ಲಿವರ್ ಆಯಿಲ್ ಎಮಲ್‌ಷನ್" ಎಂಬದರ ಬದಲಿಗೆ ಇದು ಉತ್ತಮತರದ ಕ್ಷೀರ ರಸವಾಗಿದೆ. ವಾಸನೆ ಇಲ್ಲ. ಬೆಲೆ ಬಹಳ ಕಡಿಮೆ.

M. P BALA & Co,
CHEMISTS.
12 6 *Tellicherry*
Or VIRAJPET WORKS,
Virajpet

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	..	50,000
ವಸೂಲಾದ ಶೇರ್ ಮೊಬಲಗು	..	7,720
ಜಮೆಯಾದ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಯಂ. ಭುಜಂಗರಾಯರು.
ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ.
ಸಿ. ಟಿ. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಕು 1—7—1924.

ಶ್ರೀ
ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.
ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಧಿಕಾರ್‍ಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಅಜಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ—
ಮೇನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್.

ARMS & AMMUNITION MART.
Mahomedally-Noorbhoy.

337, AbdullRehman, Street, near Crawford Market, BOMBAY.
Telegraphic Address :- "SHOOTER" Bombay.
[52 4] Please write for latest Catalogues.

ಮಾರಾಟಕ್ಕೆ.

1 ಮಡಿಕೇರಿ ಅರೆ ಮಲ್‌ಶೆಟ್ಟಪ್ಪನವರ ಮಡಿಕೇರಿ ನಾಡುಬೆಳಗೇರಿಗ್ರಾಮದಲ್ಲಿ ಮಡಿಕೇರಿ ಮೂರ್ನಾಡು ರಸ್ತೆ 5ನೇ ಮೈಲ್ ಬಳಿ ಇರುವ ಆಸ್ತಿ, ಅಂದರೆ—ಸಾಗಿನ ಉತ್ತಮವಾದ ಭೂಮಿ 31½ ಎಕರು, ಕಿತ್ತಳೆ 25 ಎಕರು, (ಈ ಪೈಕಿ 15 ಎಕರು ಪಸಲಿಗೆ ಬಂದದ್ದನ್ನು ಈ ವರ್ಷ 1,200 ರುಪಾಯಿಗಳಿಗೆಪಸಲು ಗುತ್ತಿಗೆ ಕೊಡಲಾಗಿದೆ) ಯಾಲಕ್ಕಿ 15 ಎಕರು, ಹೊಸದಾಗಿ ಹಾಕಿರುವ ಕಾಫಿ 15 ಎಕರು ಮತ್ತು 116 ಎಕರು ಬಾಣೆ, ಒಂದು ವಾಸದ ಮನೆ, ಆಳುಗಳ ಲೈನು ಮತ್ತು ದನಗಳ ಕೊಟ್ಟಿಗೆ ಸಹ—ಮಾರಾಟಕ್ಕೆ ಇದೆ. ಕ್ರಯ ರುಪಾಯಿ 25,000 ಅಥವಾ ಇದರ ಸಮೀಪದ ಬೆಲೆ.

2. ಅರೆ ಮಲ್‌ಶೆಟ್ಟಪ್ಪನವರ ಮಡಿಕೇರಿ ಮಹದೇವಪೇಟೆ ಬಸುವಣ್ಣನ ಗುಡಿ ಬಳಿ ಇರುವ ವಾಸದ ದೊಡ್ಡ ಮಹಡಿಮನೆ ಕ್ರಯ ರೂ. 5,000.

ಹೆಚ್ಚಿನ ವಿವರಕ್ಕೆ ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು.

ಎ. ಎನ್. ಅಪ್ಪಣ್ಣ,
ಬೋಯಿಕೇರಿ ಎಸ್ಟೇಟ್
12—9 ಸುಂಟಿಕೊಪ್ಪ

ಇಂಡಿಯಾ ಸಾಬೂನ್.

ಬೆಲೆ ಅಗ್ಗ!! ಸರ್ವೋತ್ತಮ!!

ನಮ್ಮ "ಇಂಡಿಯಾ ಸಾಬೂನ್" ಸರ್ವೋತ್ತಮವಾದುದೆಂದು ತಿಳಿದು ಎಲ್ಲಾ ಕಡೆಗಳಲ್ಲಿಯೂ, ಎಲ್ಲಾ ಊರುಗಳ ಅಂಗಡಿಗಳಲ್ಲಿಯೂ ಇದನ್ನೇ ಮಾರುತ್ತಿದ್ದಾರೆ. ಇದರಿಂದ ಒಗೆಯುವ ವಸ್ತ್ರಗಳು ಸ್ವಚ್ಛವಾಗುವವಲ್ಲದೆ, ಅವುಗಳ ನೂಲಿಗೆ ಇದರಿಂದ ಯಾವ ವಿಧವಾದ ಉಪಹತಿಯೂ ಉಂಟಾಗದೆ, ಸರಿಯಾದ ಬಾಳಿಕೆ ಬರುವವು. ಈ ವಿಷಯವನ್ನು ಒಂದು ಸಲ ಅಜಮಾಯಿಷಿ ಮಾಡಿದರೆ ಎಲ್ಲರಿಗೂ ಮನದಟ್ಟಾಗುವದು. ನಮ್ಮ ಗಿರಾಕಿಗಳಿಗೆ ಹೆಚ್ಚು ಲಾಭ!! ಧಾರಾಳವಾದ ಕಮಿಷನ್ ದೊರೆಯುವದು. ಅರ್ಹರುಗಳಿಗೆ ಮಾಲನ್ನು ಬಂದೋಬಸ್ತಾಗಿ ಪ್ಯಾಕ್‌ಮಾಡಿ ಅವರ ಅಡ್ರೆಸಿಗೆ, ಅಥವಾ ಅವರು ಅಪೇಕ್ಷಿಸುವ ಸಮೀಪದ ರೈಲ್ವೆ ಸ್ಟೇಷನಿಗೆ ರವಾನಿಸುತ್ತೇವೆ.

ಇಷ್ಟು ಮಾತ್ರವೇ ಅಲ್ಲ; ನಮ್ಮ ಗಿರಾಕಿಗಳಿಗೆ ಅವರವರ ಅದೃಷ್ಟ ಪರೀಕ್ಷಾರ್ಥವಾಗಿ ನಾವು ಕಳುಹಿಸುವ ಯಾವದೋ ಒಂದು ಸೋಪ್ ಪ್ಯಾಕ್‌ನಲ್ಲಿ ೧೦ ರುಪಾಯಿನ ಅರ್ಧ ನೋಟನ್ನು ಇಟ್ಟಿರುತ್ತೇವೆ. ಅಂಥಾ ಅರ್ಧ ನೋಟಿನ ಪ್ಯಾಕನ್ನು ಹೊಂದಿದವರು ಆ ಅರ್ಧ ನೋಟಿನ ನಂಬರನ್ನು ತಿಳಿಸಿದಲ್ಲಿ ಬಾಕಿ ಅರ್ಧ ನೋಟನ್ನು ಅವರಿಗೆ ಬಹುಮಾನವಾಗಿ ತಕ್ಷಣವೇ ಕಳುಹಿಸಿಕೊಡುವೆವು. ಪ್ರಯತ್ನಿಸಿ! ವ್ಯಾಪಾರಕ್ಕೆ ವ್ಯಾಪಾರ!! ಅದೃಷ್ಟಕ್ಕೆ ಅದೃಷ್ಟ!!!

ಎಸ್. ಕೃಷ್ಣಯ್ಯ ಶೆಟ್ಟಿ,
12—7 ನಗರ್‌ಪೇಟೆ, ಬೆಂಗಳೂರು ಸಿಟಿ.

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.

If not delivered please return to "KODAGU" OFFICE, MERCARA.

ಕೊಡಗು.

ಎಡಿಟರ್ ಪಂಡ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೪] ಕೊಡಗು, [illegible] ಶುಕ್ರವಾರ [ಸಂಚಿಕೆ [illegible]

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು. ಡಾಕ್ಟರ್ ಯು ರಾಮರಾವ್,

ಯಮ್ ಎಲ್ ಸಿ ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವವು

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು ಆರೋಗ್ಯ ಚಂದ್ರಿಕೆಯನ್ನು ತನಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವದು [illegible] ಈ ಪತ್ರಿಕೆಯ ಚಂದಾ ಮುಂಬಲಗು ವರ್ಷಕ್ಕೆ 1-8-0 ಬಿಡಿ ಪತ್ರಿಕೆ 1ಕ್ಕೆ [illegible] ದಿನ ಸರಿಚೀಟಿ [illegible] ದೊರೆಯುವದು.

ಪತ್ರವ್ಯವಹಾರಕ. 'ಆರೋಗ್ಯ ಚಂದ್ರಿಕೆ' 323, ತಂಬುಚೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡ ಗೂಡಿದ ಕೊಡಗಿನ ವಾರ ಪತ್ರಿಕೆ.

1 ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು 2 ಲೇಖನಗಳನ್ನು ಸಂಪಾದಕರು 'ಕೊಡಗು' ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3 ವಾರ್ತಾದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ 4. ನಮ್ಮಲ್ಲಿಗೆ ಕಳುಹಿಸುವ ವಾರ್ತೆಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು ಪ್ರಕಟಿಸಲಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಈಗ ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾ ಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಶೇರು ಹಣ ಸಲ್ಲಿಸಬೇಕಾಗಿರುವವರೂ ದಯವಿಟ್ಟು ವೀರರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಲಾಗಿದೆ.

ಮಡಿಕೇರಿ, ಮೇನೇಜರ್,

13-3-24. 'ಕೊಡಗು' ಲಿಮಿಟೆಡ್.

Health is Wealth.

WANTED—all to improve health strength and vitality and thus save our nation from physical degeneracy. Send half anna stamp and get 23 specimen photographs with full particulars from

Director, Physical Culture,

P O. BASAVANAGUDI

Bangalore City

WATCH THIS SPACE.

Another stock of

Arms & Ammunition.

Expected shortly.

Guaranteed Quality.

Revised prices.

Spencer & Co. Ltd.,

MERCARA & POLLIBETTA.

10—[illegible]

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಕೂಲಿಗಳ ದ್ವಿಭಾಷಾ ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು

ಮಡಿಕೇರಿ

17-9-24 ಮೇನೇಜರ್

Old Students' Quarterly.

Editor, Mr P B Medappa, B A, B L, M L C

Vol II No 2 is now out

Subscription—Yearly Rs 2, post free

Most delightful! Scholarly articles! Read and enjoy!

CONTENTS

1 National welfare—
(includes thoughts on Free and Compulsory education in Coorg
2 Swarajya—A Canarese Drama.
3 Are Coorgs Kannadigas?
4 Ancient Coorg
5 Peep into Heavens
6 Frivolity page,
etc etc

If you become a subscriber now you will get a very beautiful calendar for 1925 free—absolutely free!

Apply to—

Manager

O S Association,

Mercara.

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲಪಿರುವುದರಿಂದ, 'ಲೆಟರ್ ಹೆಡ್ಸ್' 'ವಿಸಿಟಿಂಗ್ ಕಾರ್ಡ್ಸ್', ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ

ಮಡಿಕೇರಿ. ಮೇನೇಜರ್,

'ಕೊಡಗು' ಲಿಮಿಟೆಡ್

ಒಂದು ಪ್ರಬಲವಾದ ಪ್ರಶ್ನೆ.

ದೇಶಾಭಿಮಾನವೆಂದರೇನು?

ಕೈರಾಟೆಯಿಂದ ನೂಲುತಯಾರಿಸಿ ಮಾಡಿದಬಟ್ಟೆಯನ್ನು ಧರಿಸಿ ಆ ಮೂಲಕ ಲಕ್ಷೋಪಲಕ್ಷ ಗರೀಬ ಜನರಿಗೆ ಅನ್ನವನ್ನೊದಗಿಸುವದೇ ದೊಡ್ಡ ದೇಶಾಭಿಮಾನ

ಇಂಥಾ 'ಖಾದಿ' ಬಟ್ಟೆಯನ್ನು ಎಲ್ಲಾ ಜನರಿಗೂ ಸುಲಭಕ್ರಯದಲ್ಲಿ ಒದಗಿಸಲಿಕ್ಕೆ ಈಗತಾನೇ ವೀರರಾಜಪೇಟೆಯಲ್ಲಿ ಒಂದು ಖಾದಿ ಭಂಡಾರವನ್ನು ತೆರೆದಿರುತ್ತೇವೆ ಈ ಭಂಡಾರದಲ್ಲಿ ಎಲ್ಲಾ ತರದ ನಾಜೂಕಾದ ಮತ್ತು ಗಟ್ಟಿಯಾದ ಖಾದಿಬಟ್ಟೆಗಳೂ ವಸ್ತ್ರಗಳೂ ಶೀರೆಗಳೂ, ಟವಲು ಶಾಲುಗಳೂ, ಖಾದಿರೇಶ್ಮೆಯಿಂದ ತಯಾರಾದ ಎಲ್ಲಾ ತರದ ಬಟ್ಟೆಗಳೂ ದೊರೆಯುತ್ತವೆ ಬಟ್ಟೆಗಿರುವ ಎಲ್ಲಾ ಆರ್ಡರನ್ನು ತಕ್ಷಣವೇ ಜರಗಿಸಲಾಗುತ್ತೆ ಊರೂರಿನಲ್ಲಿರುವ ಎಲ್ಲಾ ಜನರಿಗೆ ಬಟ್ಟೆಯನ್ನೊದಗಿಸಲು ತಕ್ಕ ಏರ್ಪಾಡು ಮಾಡಲ್ಪಟ್ಟಿದೆ. ದೇಶಾಭಿಮಾನಿಗಳ ಪ್ರೋತ್ಸಾಹವನ್ನು ನಿರೀಕ್ಷಿಸುತ್ತಲೇ ಇರುತ್ತೇವೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ಮೇನೇಜರ್

12—3— ಖಾದಿ ಭಂಡಾರ ವೀರರಾಜಪೇಟೆ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ ಕೋಲೆರ ಚಿಣ್ಣಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಾದ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಲಾಗಿದೆ.

ಏಜಂಟರುಗಳು

ವೀರರಾಜಪೇಟೆ—ಮೆ ಕೆ ಚಿಣ್ಣಪ್ಪನವರ ಆಫೀಸಿನಲ್ಲಿ.

ಮೂರ್ನಾಡು—ಕಮರ್ಶಿಯಲ್ ಸ್ಟೋರಿನಲ್ಲಿ ಮೆ. ಮುದಿಯಂಡ ದೇವಯ್ಯನವರು.

ನಾಪೋಕ್ಲು—ಮೆ ಪೊನ್ನಚಂಡ ಮುದ್ದಪ್ಪನವರು.

ಗೋಣಿಕೊಪ್ಪಲು—ಮೆ ಮುಕ್ಕಾಟೀರ [illegible]ನವರು.

ಪೊನ್ನಂಪೇಟೆ—ಮೆ. [illegible] ಮುದ್ದಯ್ಯನವರು.

ಕುಡಿಕೇರಿ—ಮೆ ಕೆ. ಮಾದಮ್ಮನವರು.

ಅಮ್ಮತ್ತಿ, ಸಿದ್ದಾಪುರ—ಮೆ. [illegible]ನವರು ಮೆ. ಚಂಗಂಡ ಕುಟ್ಟಪ್ಪನವರು.

ಕೋಡಂಡ ಉತ್ತಯ್ಯ.

ಆರ್ಗನೈಸಿಂಗ್ ಸೆಕ್ರೆಟರಿ, "ಕೊಡಗು." ಲಿ., [illegible]

"ಕೊಡಗು"

ಸಂ ೧೯೨೫ನೇ ಇಸವಿ ಮಾರ್ಚಿ ತಾ. ೧೩ನೇ ಶುಕ್ರವಾರ.

೧೯೨೩–೨೪ರ ಆಡಳಿತದ ವರದಿ.

ಎಂದಿನಂತೆ ಗತ ವರುಷದ ಅಂದರೆ 1923—24ನೇ ಸಂವತ್ಸರದ ಕೊಡಗು ದೇಶದ ಆಡಳಿತ ವರದಿಯು ಈಗ ತಾನೇ ನಮ್ಮ ಕೈ ಸೇರಿದೆ ಈ ವರುಷದ ಪ್ರಾಮುಖ್ಯತೆಯ ವಿಷಯವಾದ ಕೌನ್ಸಿಲ್ ಸಂಸ್ಥಾಪನದ ವ್ರಾರಂಭವನ್ನು ಕುರಿತು ಹೀಗೆಂದು ಹೇಳಲ್ಪಟ್ಟಿದೆ ' 1924ನೇ ಜನವರಿ 15ರಲ್ಲು ರಿಜಿಸ್ಟರ್ ಮಾಡಿದ ಓಟಿನ ಗಣ ಹೆಚ್ಚಿನ ಸಂಖ್ಯೆಯವರು ಓಟು ಕೊಟ್ಟ ಜನವರಿ 28ರಲ್ಲು ಕೌನ್ಸಿಲ್ ಕರೆಯಲ್ಪಟ್ಟದ್ದೇ ವರುಷದ ವಿಶೇಷವಾದ ಸಂಗತಿಯಾಗಿದೆ ಫಬ್ರವರಿ 2ನೇ ವಾರದಲ್ಲಿ ಸ್ಟೆನೇನ್ ಕಮಿಟಿಯ ಮೀಟಿಂಗು ನಡೆಸಲು ಅನುಕೂಲವಾಯಿತು. ಮುಖ್ಯ ಉಮೇದ್ವಾರರ ಜಯವು ಗೌಡುಗಳ ಮತ್ತು ಮಹಮ್ಮದಿಯರ ಉಮೇದ್ವಾರರುಗಳಲ್ಲಿನ ಸೋಲುವಿಕೆಯು ಚುನಾವಣೆಯ ಮುಖ್ಯ ಅಂಶಗಳಾಗಿವೆ ' ಈ ವಿಷಯುಗಳನ್ನು ಯಾರೂ ಅಲ್ಲಗಳೆಯಲಾರರು ಓಟುಗಳ ಶೇಕಡ 70ರ ಮೇಲಿನ ಸಂಖ್ಯೆಯು ತಮ್ಮ ಓಟು ಕೊಡುವ ಹಕ್ಕನ್ನು ಉಪಯೋಗಿಸಿದ್ದನ್ನು ಸರಕಾರದವರು ಗಣನೆಗೆ ತೆಗೆದುಕೊಂಡದ್ದು ಸಂತೋಷಕರವಾದ ಸಂಗತಿಯಾಗಿದೆ, ಹೀಗೆ ಜನರ ಮುಂದುವರಿಕೆಯನ್ನು ಸರಕಾರಿ ವರದಿಗಳಲ್ಲಿಯೂ ಬೇರೆ ಕಾಗದಗಳ ಮೇಲೂ ಮಾತ್ರ ಬರೆಯುವುದರಿಂದ ಹೆಚ್ಚಿನ ಪ್ರತಿಫಲವೇನೂ ಜನರಿಗೆ ದೊರೆತಂತಾಗುವುದಿಲ್ಲ. ಒದಲು ಬೇರೆ ಅನೇಕ ದೇಶಗಳ ಜನರಿಗಿಂತ ಇಲ್ಲಿಯವರು ತಮ್ಮ ದೇಶದ ಸರಕಾರದಲ್ಲಿ ಭಾಗಿಗಳಾಗುವ ಜವಾಬ್ದಾರಿಯನ್ನು ಚೆನ್ನಾಗಿ ತಿಳಿದುಕೊಂಡಿರುವುದರಿಂದ ಅವರನ್ನು ಎಚ್ಚರಪಡಿಸಲು ಸರಕಾರದವರು ಆದಷ್ಟು ಬೇಗನೆ ಅವರಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕಾದುದೇ ನ್ಯಾಯವೆಂದು ಯಾರು ತಾನೇ ಹೇಳಲಿಕ್ಕಿಲ್ಲ ಚುನಾವಣೆಯಲ್ಲಿ ಗೌಡುಗಳ ಮತ್ತು ಮಹಮ್ಮದಿ ಜಾತಿಗಳ ಉಮೇದ್ವಾರರು ಅಪಜಯ ಹೊಂದಿದ್ದು ಸಹಜ ಕರವೇ ಸರಿ. ಆದರೆ ಅವರಲ್ಲಿ ಅತೃಪ್ತಿಯುಂಟಾಗಬಾರದೆಂಬ ಕಾರಣದಿಂದಲೋ ಯಾವ ವ್ಯತ್ಯಾಸ ಕಾರಣಗಳಿಂದಲೋ ಮೊದಲು ಗೌಡುಗಳಲ್ಲಿ ಒಬ್ಬರನ್ನು ಕೌನ್ಸಿಲಿಗೆ ಹಿಂದುಳಿದ ಪಂಗಡದ ಪರವಾಗಿ ಸರಕಾರದವರು ನೇಮಿಸಿದರು. ಆ ಮೇಲೆ ಗತಿಸಿದ ನಂತರ ಈಗ ಒಬ್ಬ ಮಹಮ್ಮದಿಯನನ್ನು ಅವರ ಬದಲು ಕೌನ್ಸಿಲ್ ಮೆಂಬರಾಗಿ ಈಗ ತಾನೇ ನೇಮಿಸಿರುವರು ಆದುದರಿಂದ ಈ ಎರಡು ಪಂಗಡದವರಿಗೂ ಕೌನ್ಸಿಲಿನಲ್ಲಿ ತಮ್ಮ ಅಭಿಪ್ರಾಯಗಳನ್ನು ಸೂಚಿಸಲು ಅವಕಾಶ ಕೊಟ್ಟಂತಾಯಿತು. ಆದರೆ ಅವರು ಯಾರ ಪರವಾಗಿ ನೇಮಿಸಲ್ಪಟ್ಟರೋ ಆ ಹಿಂದುಳಿದ ಪಂಗಡದ ಅಂದರೆ ಹೊಲೆಯರ, ಕುರುಬರ, ಮಾದಿಗರ ಮತ್ತು ಯರವರ ಹಿತಕ್ಕಾಗಿ ಎಷ್ಟರ ಮಟ್ಟಿಗೆ ಕೌನ್ಸಿಲಿನಲ್ಲಿ ಕೆಲಸ ಮಾಡುವರೆಂಬುದನ್ನು ಸಮಯವೇ ಹೇಳಬೇಕಾಗಿದೆ, ಇದರ ವಿಷಯ ಈಗಲೇ ಅಭಿಪ್ರಾಯ ಕೊಡುವುದು ಅಕಾಲವಾಗಿದೆ.

1923ನೇ ಡಿಸೆಂಬರಿನಲ್ಲಿ ವ್ಯವಸಾಯದ ಬೆಂಗಳೂರಿನಲ್ಲಿ ಕೊಡಗು ಜಮೀನುದಾರರ ಸಂಘದ ಡೆಪ್ಯುಟೇಶನಿಗೆ ಭೇಟಿಕೊಟ್ಟು ಅನೇಕ ರಾಜಕೀಯ ವಿಷಯಗಳಿಗೆ ಜವಾಬು ಕೊಟ್ಟರೆಂದು ಸೂಚಿಸಲಾಗಿದೆ.

ಅನೇಕ ರಾಜಕೀಯ ಪ್ರಶ್ನೆಗಳಿಗೆ ಜವಾಬು ಕೊಟ್ಟದ್ದೇನೋ ನಿಜ, ಆದರೆ ಎಲ್ಲವುಗಳಿಗೂ ತೃಪ್ತಿಕರವಾದ ಉತ್ತರ ಕೊಟ್ಟರೆಂದು ಹೇಳಲಾಗುವುದಿಲ್ಲ, ಜಮ್ಮ ಹಿಡುವಳಿದಾರರಿಗೆ ಬ್ರಿಟಿಷ್ ಸರಕಾರದವರ ನ್ಯಾಯಶೀಲತೆಯಲ್ಲಿರುವ ವಿಶ್ವಾಸವನ್ನು ಕಡಿಮೆ ಮಾಡುತ್ತಿರುವ ಜಮ್ಮ ಹಿಡುವಳಿಯ ನಿರಕು ಕಂದಾಯ ಹೆಚ್ಚಿಸಿದ್ದನ್ನು ರದ್ದು ಮಾಡುವ ಪತ್ರಮುಖ್ಯ ಸಂಗತಿಗೆ ವ್ಯವಸಾಯದ ನ್ಯಾಯವಾದ ಜವಾಬು ಕೊಡದೆ ಹೋದದ್ದು ಡೆಪ್ಯುಟೇಶನ್ನಿನ ಪ್ರಯೋಜನವನ್ನು ಬಹಳ ಮಟ್ಟಿಗೆ ಕಡಿಮೆ ಮಾಡಿದೆ.

ವರದಿಯ ವರುಷದಲ್ಲಿ ಮುಂಗಾರು ವಿಪರೀತವಾಗಿತ್ತು ಆದರೆ 1924—25ರ ಮಳೆಗಾಲವು ಅದನ್ನು ಮೀರಿದ್ದರಿಂದ ಅದರ ಪ್ರಾಮುಖ್ಯತೆಯನ್ನು ಕಡಿಮೆ ಮಾಡಿತೆಂದೂ ಆಹಾರ ಸಾಮಗ್ರಿಗಳ ಧಾರಣೆಯು ಚೆನ್ನಾಗಿದ್ದರೂ ಹಿಂಗಾರು ಮಳೆಯು ತಪ್ಪಿಹೋದುದರಿಂದ ಬೆಳೆ ಫಸಲು ಎಂದಿನಷ್ಟು ಇರಲಿಲ್ಲವಾದುದು ಮಾತ್ರವಲ್ಲದೆ ಮಲೇರಿಯಾ ಜ್ವರವು ಹೆಚ್ಚಾಗಿ ಪ್ರಬಲಿಸಿತ್ತೆಂದೂ ಇದರಿಂದಲೇ 1924ರ ಮರಣ ಸಂಖ್ಯೆ ಹೆಚ್ಚಾಯಿತೆಂತಲೂ ಮುಂತಾಗಿ ಬರೆದಿರುವರು ಇವೆಲ್ಲಾ ಸಹಜ ಸಂಗತಿಗಳೇ ಆಗಿವೆ. ಆದರೆ ಅವುಗಳಿಗೆ ತಕ್ಕಷ್ಟು ಪರಿಹಾರವನ್ನು ಸರಕಾರದವರು ಕೊಟ್ಟಂತೆ ಕಾಣುವುದಿಲ್ಲ ಮಳೆಯ ಹಾವಳಿಯಿಂದುಂಟಾದ ನಷ್ಟಗಳ ಬಗ್ಗೆ ಸರಕಾರದವರು ಮಾಡಿದ ಸಹಾಯವನ್ನು ಕುರಿತು ಇಲ್ಲಿ ಹೆಚ್ಚು ಬರೆಯುವುದಿಲ್ಲ ದೇಶದ ಘೋರ ಶತ್ರುವಾದ ಮಲೇರಿಯಾ ಜ್ವರವು ಅದರ ಅತಿಉಗ್ರ ರೂಪದಲ್ಲಿ ಈ ಮಲೆನಾಡು ದೇಶದಲ್ಲಿ ಪಸರಿಸಿಕೊಂಡಿರುವುದನ್ನು ಸರಕಾರದವರು ಒಪ್ಪಿಕೊಂಡರೂ ಅವರ ನಿವಾರಣೆ ಬಗ್ಗೆ ಸಾಕಷ್ಟು ಗಮನ ಕೊಡಲಿಲ್ಲವೆಂದೇ ಹೇಳಬೇಕಾಗಿದೆ ಇಂಥಾ ದೇಶದಲ್ಲಿ ಮಲೇರಿಯ ನಾಶಕವಾದ ಕೊಯಿನವನ್ನು ಕ್ರಯವಿಲ್ಲದೆ ಜನರಿಗೆ ಹಂಚಬೇಕಾದಲ್ಲು, ಅದರ ಕ್ರಯವು ಪೊಟ್ಲಕ್ಕೆ ಮೂರು ಕಾಸಿನಿಂದ ಒಂಬತ್ತು ಕಾಸಿನವರೆಗೆ ಏರುತ್ತಾ ಬಂದಿದೆ. ಕೊಯಿನವನ್ನು ಉಚಿತವಾಗಿ ಪ್ರತಿಯೊಬ್ಬ ಗ್ರಾಮವಾಸಿಯ ಮನೆ ಬಾಗಿಲುಗಳಲ್ಲಿ ಅವರಿಗೆ ದೊರಕುವಂತೆ ಮಾಡದ ವಿನಹ ನಮ್ಮ ಆರೋಗ್ಯವು ಎಂದಿಗೂ ಅಭಿವೃದ್ಧಿ ಹೊಂದಲಿಕ್ಕಿಲ್ಲವಾಗಿ ಎಷ್ಟು ಹೇಳಿದರೂ ಸ್ವಲ್ಪವೇ ನಂಜನಗೋಡು ತಲಚೇರಿ ರೈಲ್ವೆಯು ಕೊಡಗಿನ ಹಾದು ಹೋಗುವುದೆಂಬುದೂ ನಂತರ ವೀರಾಜಪೇಟೆ ಮೈಸೂರು-ತಲಚೇರಿ ರೈಲ್ವೆಯೂ ಜನರಲ್ಲಿ ಸ್ವಲ್ಪ ಮಟ್ಟಿಗೆ ಉತ್ಸಾಹವನ್ನು ಹುಟ್ಟಿಸಿತ್ತು. ಆದರೆ ಒಂದನೇದಕ್ಕೆ ಮೈಸೂರು ಸರಕಾರದವರೂ ಎರಡನೇದಕ್ಕೆ ಮದ್ರಾಸ್ ಸರಕಾರದವರೂ ಹೆಚ್ಚು ನಿಗ ಇಡದ್ದರಿಂದ ಇವೆರಡೂ ಪ್ರಾಣ ಇಲ್ಲದ ಕೂಸುಗಳಂತಾಗುವುವು ಎಂಬುದರ ವಿಷಯ ಹೆಚ್ಚು ಬರೆದು ಪ್ರಯೋಜನವಿಲ್ಲ

ಮ. ಲೀಂಬೆರ್ಟರವರ ಸರಕಾರಿ ಆಫೀಸುಗಳ ಸಿಬ್ಬಂದಿ ಖೋತೆಯ ಏರ್ಪಾಡುಗಳು ಪೂರ್ತಿಯಾಗಿ ಜಾರಿಗೆ ತರಲ್ಪಟ್ಟದ್ದೂ ಕೌನ್ಸಿಲ್ ದೊರೆತು ದೇಶದ ಖಜಾನೆಯು ಇಂಡಿಯಾ ಸರಕಾರದಿಂದ ಪ್ರತ್ಯೇಕಿಸಲ್ಪಟ್ಟದ್ದೂ ಏಕ ಕಾಲದಲ್ಲಿ ಆದ್ದರಿಂದ ಸಿಬ್ಬಂದಿ ಖೋತೆಗೆ ಹೆಚ್ಚು ಬೆಲೆ ದೊರೆತಂತಾಯಿತೆಂದು ಹೇಳಿರುವರು ಚಿಕ್ಕ ಚಿಕ್ಕ ಬಡ ಉದ್ಯೋಗಸ್ಥರ ಸಿಬ್ಬಂದಿ ಖೋತೆ ಮಾಡಿ ಸಾವಿರಗಟ್ಟಲೆ ಸಂಬಳ ಹೊಂದುವ ದೊಡ್ಡ ದೊಡ್ಡ ಹುದ್ದೇದಾರರಿಗೆ ಸಂಬಳ ಬಡ್ತಿ ಮಾಡುವದೇ ಸರಕಾರದವರ ಉದ್ದೇಶವಾಗಿ ಪರಿಣಮಿಸುತ್ತದೆ. ಲೀ ಕಮಿಷನ್ನಿನ ಸಿಫಾರಸ್ಸು ಮೇರೆ ಇಂಡಿಯನ್ ಸಿವಿಲ್ ಸರ್ವೀಸು ಮತ್ತು ಇಂಪೀರಿಯಲ್ ಆಫೀಸರುಗಳ ಸಂಬಳ ಹೆಚ್ಚಿಸಲಿಕ್ಕೆ ಬರುವ ವರುಷದ ಒಡ್ಜೆಟ್ಟಿನಲ್ಲಿ ಸುಮಾರು 14,000 ರುಪಾಯಿ ಇಡಲ್ಪಟ್ಟಿದೆ ಇದಕ್ಕಾಗಿಯೇ ಜವಾನ ಮೊದಲುಗೊಂಡು ನೂರಾರು ಬಡ ನೌಕರರನ್ನು ಮನೆಗೆ ಕಳುಹಿಸಿ ಅವರ ಜೀವನದ ದಾರಿಗೆ ಮಣ್ಣು ಹಾಕಿದ್ದು ? ಇದಲ್ಲವೇ ಬ್ರಿಟಿಷ್ ಸರಕಾರದವರ ನ್ಯಾಯಶೀಲತೆ. ದೇಶದ ಕೊನೆಯ ಮೂಲೆಗಳಲ್ಲೂ ಕೂಡ ಚಳವಳವನ್ನೆಬ್ಬಿಸಿದ ನಮ್ಮ ಕೌನ್ಸಿಲಿಗಾದರೂ ಈ ವಿಷಯ ಒಂದು ಶಬ್ದವನ್ನೂ ಕೂಡ ಹೇಳಲು ಅಧಿಕಾರವಿಲ್ಲ ಒಂದು ವೇಳೆ ಅದರಲ್ಲಿ ಕೆಲವರು ತಿಳಿದೋ ತಿಳಿಯದೆಯೋ ಮಾತಾಡಿದರೆ ಅದು ಅರಣ್ಯ ರೋಧನವಾಗುವುದು.

ಪೋಲೀಸು ಇಲಾಖೆಯಲ್ಲಿ ರಿಟ್ರೆಂಚ್‌ಮೆಂಟ್ ಪ್ರಸತ ಮುಂದರಿಸಲ್ಪಟ್ಟದ್ದರೂ ಕೂಡ ಜಯಪ್ರದವಾದ ಮೊಕದ್ದಮೆಗಳ ಸಂಖ್ಯೆಯು ಹಿಂದಿನ ವರುಷದವುಗಳಿಗಿಂತ ಕಡಿಮೆಯಾಗಿರುವುದಿಲ್ಲವಂತೆ. ಇದು ಪೋಲೀಸು ಇಲಾಖೆಯ ಸಾಧಕತ್ವವನ್ನು ತೋರಿಸುತ್ತದೆ ಸಿವಿಲ್ ಕೋರ್ಟುಗಳನ್ನು ಕಡಿಮೆ ಮಾಡಿದ್ದರಿಂದ ಸಿವಿಲ್ ಕೇಸುಗಳು ಸಂಖ್ಯೆಯಲ್ಲಿ ಮೌಲ್ಯದಲ್ಲಿಯೂ ಕಡಿಮೆಯಾದುದು ಶುಭ ಸೂಚನೆಯೆಂದೇ ಹೇಳಬೇಕು ಅನಾವಶ್ಯಕ ಕೋರ್ಟು ವ್ಯಾಜ್ಯಗಳಲ್ಲಿ ಯಥೇಷ್ಟವಾಗಿ ಹಣ ವ್ಯಯ ಮಾಡುತ್ತಿರುವುದು ನಮ್ಮ ದೇಶದ ಬಡತನಕ್ಕೆ ಮುಖ್ಯವಾದ ಕಾರಣಗಳಲ್ಲಿ ಒಂದೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿರುವುದು. ಆದುದರಿಂದ ಕೋರ್ಟು ವ್ಯಾಜ್ಯಗಳು ಕಡಿಮೆಯಾಗುತ್ತಿರುವುದು ದೇಶದ ಸಾಂಪತ್ತಿಕ ಸ್ಥಿತಿಯ ಏಳಿಗೆಯನ್ನು ಸೂಚಿಸುತ್ತದೆ. ಮೂರು ಸಾವಿರಕ್ಕಿಂತ ಹೆಚ್ಚಾಗಿ ಬ್ರೀಚ್ ಆಫ್ ಕಂಟ್ರಾಕ್ಟಿನ ಕೇಸುಗಳು ಕೋರ್ಟಿಗೆ ತರಲ್ಪಟ್ಟವಂತೆ ಈ ಆಕ್ಟನ್ನು 1926ನೇ ಏಪ್ರಿಲ್‌ನಲ್ಲಿ ಬದಲಾಯಿಸಲಿಕ್ಕಿರುವುದರಿಂದ ದೇಶದವರು ಈ ವಿಷಯ ಚೆನ್ನಾಗಿ ಆಲೋಚಿಸಿ ತಮ್ಮ ಅಭಿಪ್ರಾಯವನ್ನು ಕೊಡಬೇಕಾಗಿದೆ.

ಸ್ಥಳೀಯ ಸ್ವರಾಜ್ಯದ ವಿಷಯದಲ್ಲಿ ದೇಶವು ತಕ್ಕಷ್ಟು ಮುಂದರಿಸಿರುವಂತೆ ಕಾಣುವುದಿಲ್ಲ. ಯಾಕೆಂದರೆ ರಿಪೋರ್ಟಿನಲ್ಲಿ ತೋರಿಸಿರುವಂತೆ 1923ನೇ ಸೆಪ್ಟಂಬರ್‌ನಲ್ಲಿ ಡಿಸ್ಟ್ರಿಕ್ಟ್ ಬೋರ್ಡಿಗೆ ಒಬ್ಬ ಉದ್ಯೋಗಸ್ಥನಲ್ಲದ ಉಪಾಧ್ಯಕ್ಷನು ಚುನಾಯಿಸಲ್ಪಟ್ಟದ್ದಲ್ಲದೆ 24ನೇ ಮಾರ್ಚ್ ಕೌನ್ಸಿಲ್ ಮೀಟಿಂಗಿನಲ್ಲಿ ಬೋರ್ಡಿಗೆ ಜವಾಬ್ದಾರಿಯುತವಾದ ಅಧಿಕಾರಗಳನ್ನು ಕೊಡಬೇಕೆಂದು ಒಂದು ಠರಾವು ಮಾತ್ರ ಪಾಸಾಯಿತು. ಠರಾವು ಪಾಸಾದುದೇನೋ ಹೌದು. ಆದರೆ ಅದು ಯಾವಾಗ ಜಾರಿಗೆ ಬರಲು, ಎಷ್ಟು ವರುಷಗಳಾಗುವುವೋ ತಿಳಿಯದು

ವರುಷದ ಆಖೈರಿನಲ್ಲಿ ಮರದ ಕ್ರಯವು ಸ್ವಲ್ಪ ಮಟ್ಟಿಗೆ ಏರುತ್ತಾ ಬಂತು. ಮತ್ತು ಪೂರ್ವ ಫಾರೆಸ್ಟುಗಳಲ್ಲಿ ಹಾಸು ಕೊರೆಗಳನ್ನು ತಯಾರಿಸಲು ಪರೀಕ್ಷಾರ್ಥವಾಗಿ ಒಂದು ಕಂಟ್ರಾಕ್ಟು ಮಾಡಲ್ಪಟ್ಟಿತೆಂದು ಹೇಳಲಾಗಿದೆ. ಈ ಕಂಟ್ರಾಕ್ಟಿನ ವಿಷಯ ಕೌನ್ಸಿಲ್ ಮೀಟಿಂಗುಗಳಲ್ಲಿ ಹಲವು ಪ್ರಶ್ನೋತ್ತರಗಳು ನಡೆದವು. ಆದರಿಂದ ಈ ಕಂಟ್ರಾಕ್ಟು ಎಷ್ಟು ಲಾಭಕರವಾದುದೆಂದು ಜನರಿಗೆ ತಿಳಿದಿರ ಬಹುದು ಈ ಕಂಟ್ರಾಕ್ಟಿನ ಈಗಿನ ಸ್ಥಿತಿಯು ಅಯೋಮಯ ಕಷ್ಟತರದ್ದಾಗಿದೆ ಮಾವುಕೂಟ ಟ್ರಾಮ್ವೆಗೆ ನೆರೆ ಹಾವಳಿಯಿಂದ ನಷ್ಟ ವೇನೋ ವಿಪರೀತ ಉಂಟಾಗಿದೆ ಇದರ ರಿಪೋರ್ಟಿನ ವಿಷಯ ನಮ್ಮ ಅಭಿಪ್ರಾಯವನ್ನು ಅನೇಕಸಾರಿ ಸೂಚಿಸಿದ್ದೇವೆ. ಅದರ ಆಖೇರ ತೀರ್ಮಾನಕ್ಕೆ ಈಗ ನಡೆಯುವ ಕೌನ್ಸಿಲ್ ಮೀಟಿಂಗಿನ ಚರ್ಚೆಗೆ ಬಿಟ್ಟಿವೆ. ಕೌನ್ಸಿಲರು ಈ ವಿಷಯದಲ್ಲಿ ದೇಶದ ಜನರ ಅಭಿಲಾಷೆಯನ್ನು ನೆರವೇರಿಸುವರೆಂದು ನಂಬುತ್ತೇವೆ,

ಮಹಾತ್ಮಗಾಂಧಿಯವರಿಗೆ ಮದ್ರಾಸಿನ ಸ್ವಾಗತ.

ತಾ|| 7 4 1925ರಲ್ಲಿ ಮದ್ರಾಸ್‌ಪಟ್ಟಣಕ್ಕೆ ಮಹಾತ್ಮ ಗಾಂಧಿಯವರು ಬಂದಾಗ ಮದ್ರಾಸ್ ಪಟ್ಟಣದ ಮುನ್ಸಿಪಲ್ ಕಾರ್ಪೊರೇಶನ್ನಿನವರು ಕೊಟ್ಟ ಬಹುಮಾನಪತ್ರ ಮತ್ತು ಅದಕ್ಕೆ ಮಹಾತ್ಮಾಜೀಯವರು ಕೊಟ್ಟ ಜವಾಬು.

ಬಹುಮಾನ ಪತ್ರ

ಮದ್ರಾಸು ಪಟ್ಟಣದ ನಿವಾಸಿಗಳ ಪರವಾಗಿ ಮದ್ರಾಸ್ ಮುನಸಿಪಾಲಿಟಿಯ ಕೌನ್ಸಿಲರುಗಳು ಮತ್ತು ಅಧ್ಯಕ್ಷರು ನಿಮ್ಮ ಸೆರೆ ವಾಸದ ನಂತರ ನಮ್ಮ ಪಟ್ಟಣಕ್ಕೆ ಮೊದಲನೇ ಸಾರಿ ಬಂದ ಈ ಸಂದರ್ಭದಲ್ಲಿ ನಿಮಗೆ ಮನಃಪೂರ್ತಿ ಸ್ವಾಗತ ಕೊಡುತ್ತೇವೆ ನಿಮ್ಮ ಜೀವನ ಸ್ವಾರ್ಥರಹಿತಯಿಲ್ಲದ ತ್ಯಾಗ ಮತ್ತು ಎಡೆಬಿಡದೆ ಮಾಡುವ ಸೇವೆಯೇ ಆಗಿದೆ. ನಿಮ್ಮ ದೇಶದವರಿಂದ ನಿಮ್ಮ ಜೀವನವು ಅಮೂಲ್ಯವಸ್ತುವಾಗಿ ಎಣಿಸಲ್ಪಟ್ಟಿದೆ, ನಿಮ್ಮ ದೇಶದ ನಿಜವಾದ ರಾಷ್ಟ್ರೀಯದ ಮತ್ತು ಜನಾಂಗಗಳ ಅನ್ಯೋನ್ಯತೆಗೆ ಅವಶ್ಯವಿರುವ ಧರ್ಮಗಳನ್ನು ಬೋಧಿಸಿ ನಿಮ್ಮ ದೇಶದ ಜನರ ಕೃತಜ್ಞತೆಯನ್ನು ಬಿಟ್ಟು ಪ್ರಪಂಚದ ಗೌರವವನ್ನೂ ಪಡೆದಿದ್ದೀರಿ ನಮ್ಮ ದೇಶದ ಹಿಂದುಳಿದ ಪಂಗಡದವರ ಏಳಿಗೆಗಾಗಿ ನೀವು ಮಾಡುವ ಕೆಲಸಗಳೂ, ವಿಧ ವಿಧ ಜಾತಿಗಳೊಳಗೆ ಅನ್ಯೋನ್ಯತೆಗಾಗಿ ನಿಮ್ಮ ಪ್ರಯತ್ನಗಳೂ, ನಿಮ್ಮ ಬೋಧನೆಯ ಸಾರವೂ ದೇವರ ದಯದಿಂದ ಫಲಿತಾಂಶಕ್ಕೆ ಬರಬಹುದೆಂತ ನಂಬುತ್ತೇವೆ. ಸಮಾಜದ ನಿರಂಕುಶ ಪ್ರವರ್ತನಿಗೆ ಸತ್ಯ ಮತ್ತು ಧೈರ್ಯವನ್ನೇ ಆಯುಧಗಳಾಗಿ ಮಾಡಿಕೊಂಡು ಎದುರಾಗಿರಿ. ಈ ದಬ್ಬಾಳಿಕೆ ನಾಶವಾಗದೆ ಇದ್ದರೂ ನೀತಿಯಲ್ಲಿ ನಿಮಗೆ ಜಯವಾಗಿದೆ ಜಾತಿಗಳೊಳಗೆ ಇರುವ ಜಗಳಗಳಿಗಾಗಿ ತುಂಬಾ ಮನಸ್ಸಿನ ನೋವಿನಿಂದಲೂ ನಮ್ರತೆಯಿಂದಲೂ ನೀವು ಕೈಕೊಂಡ ಉಪವಾಸವನ್ನು ಯಾರಿಂದ ಮರೆಯಲು ಸಾಧ್ಯವಿದೆ? ನಮ್ಮ ದೇಶದ ಪರಂಪರಾಗತ ಸಂಸ್ಕೃತಿಯಲ್ಲಿ ಇರುವ ಉತ್ಕೃಷ್ಟವಾದ ಸ್ವರೂಪವೇ ನೀವಾಗಿದ್ದೀರಿ ಸಮಾಜ ಸುಧಾರಣೆಯ ಕೆಲಸದಲ್ಲಿ ನಿಮಗೆ ಜಯವಾಗಲು ಎಂತ ಹಾರೈಸುತ್ತೇವೆ, ಸರ್ವಶಕ್ತ ಪರಮಾತ್ಮನು ನಿಮಗೆ ದೀರ್ಘಾಯುಸ್ಸನ್ನು ಕೊಟ್ಟು ಪ್ರಪಂಚದಲ್ಲೆಲ್ಲಾ ನಮ್ಮ ದೇಶವು ಗೌರವಿಸಲ್ಪಡುವಂತೆ ನಮ್ಮನ್ನೆಲ್ಲಾ ತಯಾರಿಸಲು ನಿಮಗೆ ಶಕ್ತಿಯನ್ನು ಕೊಡಲಿ ಎಂತ ಹಾರೈಸುತ್ತೇವೆ

ಮಹಾತ್ಮಗಾಂಧಿಯವರ ಉತ್ತರ

ಅಧ್ಯಕ್ಷರೇ, ಕಾರ್ಪೊರೇಶನ್ ಮೆಂಬರುಗಳೇ ಮತ್ತು ಸ್ನೇಹಿತರೇ, ನಿಂತು ಮಾತಾಡಲು ಶಕ್ತಿ ಇಲ್ಲದಕ್ಕೆ ನನ್ನನ್ನು ಎಂದಿನಂತೆಯೇ ಮನ್ನಿಸಬೇಕಾಗಿ ಬೇಡಿಕೊಳ್ಳುವೆನು. ನಿಮ್ಮ ಸೊಗಸಾದ ಬಹುಮಾನ ಪತ್ರಕ್ಕೆ ನಿಮಗೆ ವಂದಿಸುತ್ತೇನೆ. ಬಹುಮಾನಪತ್ರಗಳು ನನಗೆ ಅಡಚಣೆಗಳಾಗುತ್ತವೆ ಅನೇಕಾವರ್ತಿ ನನ್ನನ್ನು ತೋಟಿ ಎಂತ ಕರೆದುಕೊಂಡಿದ್ದೇನೆ ತೋಟಿಯಾಗಿಯೇ ಸತ್ಕರಿ ನನಗೆ ತೃಪ್ತಿಯಾಗುತ್ತದೆ ಮುನಿಸಿಪಲ್ ಕೆಲಸವನ್ನು ನಾನು ಪ್ರೀತಿಸುತ್ತೇನೆ ಒಂದಾನೊಂದು ಕಾಲದಲ್ಲಿ ಮುನಿಸಿಪಲ್ ಕೆಲಸವನ್ನು ಕೈಕೊಳ್ಳಲು ಯೋಚನೆಮಾಡಿದ್ದೆ. ಇದರಲ್ಲಿ ತುಂಬಾ ಕಷ್ಟಕೆಲಸವಿದೆ ನನ್ನನ್ನು ತೋಟಿ ಎಂತ ಒಂದಕ್ಕಿಂತ ಹೆಚ್ಚು ಅರ್ಥದಲ್ಲಿ ಹೇಳಿಕೊಳ್ಳುವದಾಗಿದೆ ಬಹಿರ್ಶುಚಿ ಮಾಡುವದೇ ಅಲ್ಲದೆ ಅಂತರ್ಶುಚಿ ಮಾಡುವ ಕೆಲಸವೂ ಇದೆ

ನಾನು ಮದ್ರಾಸಿಗೆ ಹೊಸಬನಲ್ಲ. ಮದ್ರಾಸಿನಲ್ಲಿ ಆಗಿಂದಾಗ್ಯೆ ಕೆಲವುಸಾರಿ ವಾಸವಿದ್ದೆನು ಆಗ ನಿಮ್ಮ ಪಟ್ಟಣದ ಆರೋಗ್ಯ ಸ್ಥಿತಿಯನ್ನು ತಕ್ಕಮಟ್ಟಿಗೆ ತಿಳಿದುಕೊಂಡಿದ್ದೇನೆ. ಬೆಳಗ್ಗಿನ ಹೊತ್ತಿನಲ್ಲಿ ನಿಮ್ಮ ಬೀದಿಗಳಲ್ಲಿ ತಿರುಗಾಡಿದ್ದೇನೆ. ಆಗ ರಸ್ತೆಗಳ ಬದಿಯಲ್ಲೆಲ್ಲಾ ಅಸಹ್ಯವಾಗಿದ್ದದನ್ನು ನೋಡಿದ್ದೇನೆ. ಮದ್ರಾಸಿನ ಬೀದಿಗಳು ಹಿಂದುಸ್ಥಾನದ ಬೇರೆ ಬೀದಿಗಳಿಗಿಂತ ಅಸಹ್ಯವಾಗಿರುತ್ತದೆಂತ ಹೇಳುವದಿಲ್ಲ ಆದರೆ ನಾನು ನೋಡಿದಾಗ ನಿಮ್ಮ ಬೀದಿಗಳನ್ನು ಪ್ರಾಯಬಂದ ಜನರು ಸಹ ಅಸಹ್ಯಮಾಡುತ್ತಿದ್ದರು. ಇದು ನನಗೆ ಹೊಸ ಅನುಭವವಾಗಿತ್ತು ನಾನು ಹಿಡುಗಲು ತೆಗೆದುಕೊಂಡು ಶುಚಿಮಾಡಬೇಕೆಂತ ತೋರುತ್ತಿತ್ತು, ಶುಚಿಮಾಡುವ ಕೆಲಸ ದೊರೆತರೆ ನನಗೆ ಸಂತೋಷ. ಮುನಿಸಿಪಲ್ ಬಹುಮಾನ ಪತ್ರವನ್ನು ನನಗೆ ಒಪ್ಪಿಸಿದಂಗಳೆಲ್ಲಾ ಈ ವಿಷಯವನ್ನು ಚೆನ್ನಾಗಿ ಬೋಧಿಸಬೇಕೆಂತ ನನ್ನ ಆಸೆ. ಬಹಿಶ್ಶುಚಿ (ಅಂದರೆ ಹೊರಗಿನ ಶುಚಿ) ಯ ವಿಷಯದಲ್ಲಿ ಪಾಶ್ಚಿಮಾತ್ಯರಿಂತ ನಾವು ತುಂಬ ಕಲಿಯಬೇಕಾಗಿದೆ ಪಾಶ್ಚಿಮಾತ್ಯರ ನಾಗರೀಕತೆ ಮತ್ತು ಅವರ ರೀತಿಗಳಿಗೆ ವಿರೋಧಿಸಿ ಮಾತಾಡುವ ಅವಶ್ಯವಿದ್ದರೆ ಅದರಿಂದ ಪಾಶ್ಚಿಮಾತ್ಯರಿಂದ ನ್ಯಾಯವಾಗಿಯೂ ಉಪಯೋಗವಾಗುವಂತೆಯೂ ಕಲಿತುಕೊಳ್ಳಬೇಕಾದ ವಿಷಯಗಳನ್ನೂ ಹೇಳಲು ಅನುಕೂಲ ಸಿಕ್ಕಿದಾಗ ಹೇಳದೆ ಬಿಡುವದಿಲ್ಲ. ದೊಡ್ಡ ಪಟ್ಟಣಗಳ ಆರೋಗ್ಯಸ್ಥಿತಿಯನ್ನು ಕಾಪಾಡಲು ಪಾಶ್ಚಿಮಾತ್ಯರನ್ನು ಹಿಂಬಾಲಿಸಬೇಕಾಗಿದೆ. ಕೋಟ ಕೆಲಸದಿಂದ ಮೇಲೆ ಕೆಲಸಗಳನ್ನು ಪ್ರಖ್ಯಾತಿ ಪಡೆದ ಇದ್ದರೂ ಗೌರವವಾದ ಕೆಲಸಗಳನ್ನು ಎಷ್ಟು ಬಿತ್ತಿ ಹೇಳಿದರೂ ಸಾಲದು. ಬೇರೆ ವಿಧದ ಸಾರ್ವಜನಿಕ ಕೆಲಸಗಳು ಮುಖ್ಯವಲ್ಲವೆಂತ ಅಲ್ಲ ಮುನಿಸಿಪಾಲಿಟಿಗಳ ಆರೋಗ್ಯಸಾಧನೆಯ ಕೆಲಸವು ಬಹಳ ಮುಖ್ಯವಾದ ಕೆಲಸವಾಗಿದೆ ಎಂಬುದನ್ನು ತಿಳಿಸಲು ಅಪೇಕ್ಷಿಸುತ್ತೇನೆ.

ಮನುಷ್ಯಜಾತಿಯ ಸೇವಕನಾಗಿ ನಾನು ಮಾಡಿದ ಅಲ್ಪ ಸ್ವಲ್ಪ ಕೆಲಸಗಳನ್ನು ಹೊಗಳಿದ್ದೀರಿ. ಅದರ-ಬಹುಮಾನವು

ವಾಗಿ ಬರುವ ಮಾನ ಪತ್ರದಲ್ಲಿ ಏನೂ ಬರೆದಿರುವದಿಲ್ಲ. ಮನುಷ್ಯಜಾತಿಯ ಸೇವೆಯಲ್ಲಿ ಖದ್ದರಿಗಾಗಿ ವಹಿಸಿದ ಕೆಲಸವು ಬಹಳ ಮುಖ್ಯವಾದದ್ದೆಂತ ನಾನು ನಂಬಿದ್ದೇನೆ. ಹಿಂದುಸ್ಥಾನದ ಬೇರೆಬೇರೆ ಜನಾಂಗಗಳೊಳಗೂ 'ಜಾತಿಗಳೊಳಗೂ ಒಗ್ಗಟ್ಟು ಬಹಳ ಅವಶ್ಯ. ಅಸ್ಪೃಶ್ಯತೆಯು ಕ್ಷಯರೋಗದಷ್ಟು ಹಾನಿಕರವಾದದ್ದು. ಅದನ್ನು ಆದಷ್ಟುಬೇಗನೇ ಹೋಗಲಾಡಿಸಬೇಕು." ಅದು ಹಿಂದು ಮತದ ಜೀವವನ್ನೇ ತಿಂದು ಬಿಡುತ್ತಾ ಇದೆ. ಆದರೆ ಹಿಂದುಸ್ಥಾನದ ತುಚ್ಛ ಬಡತನವನ್ನು ಹೋಗಲಾಡಿಸಬೇಕಾದರೆ ಖದ್ದರಿನ ಅವಶ್ಯವಿದೆ. ಆದ್ದರಿಂದ ನನ್ನನ್ನು ನೋಡಲಿಕ್ಕೆ ಬರುವ ಹಿಂದೀಯನಿಗೂ, ಇಂಗ್ಲಿಷ್ ಮನುಷ್ಯನಿಗೂ ಪರದೇಶೀಯನಿಗೂ ಖದರ್ ಕೆಲಸವನ್ನೇ ಮಾಡಿ ಎಂತ ನಾನು ಹೇಳುವದಾಗಿದೆ. ಹಿಂದುಸ್ಥಾನದ ಆರ್ಥಿಕ ಸ್ಥಿತಿಯನ್ನು ನೋಡಿ ಅದನ್ನು ಅಭಿವೃದ್ಧಿಗೊಳಿಸಲಿಕ್ಕೆ ನೂಲುವ ರಾಟೆಗಿಂತ ಬೇರೆ ಸಾಧನವಿಲ್ಲವೆಂತ ನನಗೆ ನಂಬಿಕೆಯೂ ಇದೆ. ಆದರೆ ಈ ಎಲ್ಲಾ ಕೆಲಸಗಳನ್ನು ಒಂದರಿಂದ ಒಂದನ್ನು ವಿಂಗಡಿಸುವದು ಸಾಧ್ಯವಿಲ್ಲ. ಜಾತಕವನ್ನು ರಾಜಕೀಯ ಕೆಲಸದಿಂದ ವಿಂಗಡಿಸಲು ನನಗೆ ಅಪೇಕ್ಷೆ ಇದೆಯಾದರೂ ಅದು ಸಾಧ್ಯವಿಲ್ಲ. ಆದರೂ ಬಡತನವನ್ನು ಹೋಗಲಾಡಿಸುವ ಉದ್ದೇಶದಿಂದಲೇ ಆದರೂ ಅದಕ್ಕೆ ಉತ್ತೇಜನಕೊಡಿ ಎಂತ ಕಾಂಗ್ರೆಸಿಗರನ್ನು ಕೇಳಿಕೊಳ್ಳುತ್ತೇವೆ. ಆದ್ದರಿಂದ ನಿಮ್ಮ ಸ್ಕೂಲ್‌ಗಳಲ್ಲಿ ನೂಲುವ ರಾಟೆಯನ್ನು ಇಡಿರಿ ಎಂತ ಕೇಳಿಕೊಳ್ಳುತ್ತೇನೆ. ಹಿಂದುವಾಗಲಿ ಮುಸಲ್ಮಾನನಾಗಲಿ ದೇಶೀಯನಾಗಲಿ ಇಂಗ್ಲಿಷ್ ಮನುಷ್ಯನಾಗಲಿ ರಾಜಕೀಯ ಚಳವಳಿಯಲ್ಲಿ ಯಾವ ಮತದವನೇ ಆಗಲಿ ಮನೆಯಲ್ಲಿ ಚರ್ಕವನ್ನು ಇಡಿರಿ ಎಂತ ಕೇಳಿಕೊಳ್ಳುತ್ತೇನೆ. ಚರ್ಕ ಮತ್ತು ಖದ್ದರಿನ ವಿಷಯದಲ್ಲಿ ನನ್ನ ಸ್ವಂತ ಅನುಭವದಿಂದ ಹೇಳಿದ ಈ ಮಾತೆಲ್ಲಾ ಸತ್ಯವಾಗಿದೆ. ಬಹುಮಾನಪತ್ರ ಕೊಟ್ಟದ್ದಕ್ಕೆ ಪುನಃ ವಂದಿಸುತ್ತೇನೆ.

ನಿಂಬೇ ಹಣ್ಣಿನ ರಸ.

ಇದು ಆರೋಗ್ಯಕ್ಕೆ ಅತ್ಯಂತ ಸಾಧಕವಾದದ್ದು. ಇದನ್ನು ಉಪಯೋಗಿಸತಕ್ಕ ವಿಷಯದಲ್ಲಿ ಅನುಭವಶಾಲಿಗಳಾದ ವೈದ್ಯರು ಬರೆದಿರುವದೇನಂದರೆ:—10 ವರ್ಷದವನಿಗೂ ಒಂದು ನಿಂಬೆಹಣ್ಣನ್ನೂ 20 ವರುಷದವನು 2 ನಿಂಬೇ ಹಣ್ಣನ್ನೂ 30 ವರುಷದವರು 3 ನಿಂಬೆಹಣ್ಣನ್ನೂ ಉಪಯೋಗಿಸಬೇಕು. ಬೆಳಗಿನ ಹೊತ್ತು ಆಹಾರವನ್ನು ತೆಗೆದುಕೊಳ್ಳುವದಕ್ಕೆ ಮುಂಚೆ ನಿಂಬೆರಸವನ್ನು ನೀರಿಗೆ ಹಿಂಡಿ ಅದನ್ನು ಸೇವಿಸಬೇಕು. ನಾವು ಊಟಮಾಡತಕ್ಕ ಪದಾರ್ಥಗಳಲ್ಲಿ ಅನೇಕ ವಿಷಗಳು ಹುಟ್ಟುತ್ತವೆ. ಈ ನಿಂಬೆರಸವು ಅಂಥಾ ವಿಷಗಳಿಂದ ಉಂಟಾಗತಕ್ಕ ರೋಗಗಳನ್ನು ಪರಿಹರಿಸುತ್ತದೆ. ಅನೇಕ ವಿಧವಾದ ಕ್ರಿಮಿಗಳು ನಮ್ಮ ಉದರದಲ್ಲಿ ಹುಟ್ಟುತ್ತವೆ. ಅವುಗಳನ್ನು ನಿಗ್ರಹಿಸುವ ಶಕ್ತಿಯು ಈ ನಿಂಬೆರಸಕ್ಕೆ ಇರುವದು. ಉನ್ಮತ್ತರಾದವರಿಗೂ ಕೂಡ, ತಲೆಗೆ ನಿಂಬೆರಸವನ್ನು ಹಾಕಿ ಉಜ್ಜಿ ನೀರನ್ನು ಹಾಕುವದರಿಂದ ಉನ್ಮತೆಯು ಪರಿಹಾರವಾಗುವದು. ನಿಂಬೇರಸವನ್ನು ಸೇರಿಸಿ ದಿನಕ್ಕೆ 3 ಅಥವಾ 4 ಗಾಜಿನ ಬಟ್ಟಲು ನೀರನ್ನು ಸೇರಿಸಿ ಸೇವಿಸಬಹುದು. ಭೋಜನಕ್ಕೆ ಮುಂಚೆ ತೆಗೆದುಕೊಳ್ಳತಕ್ಕ ನಿಂಬೇರಸದಿಂದ ತುಂಬಾ ಪ್ರಯೋಜನವಾಗುವದು. ಕೆಲವು ರೋಗಗಳಿಗೆ 12 ದಿವಸಗಳ ವರೆಗೂ, ಮೊದಲನೆ ದಿನ, ಎರಡನೆ ದಿನ, ಮತ್ತೊಂದು ಈ ರೀತಿಯಲ್ಲಿ ಹೆಚ್ಚಿಸುತ್ತ 12ನೇದಿನ 12 ಹಣ್ಣಿನ ರಸವನ್ನು ತೆಗೆದುಕೊಂಡು 13ನೆ ದಿನದಿಂದ 24ನೇ ದಿನದ ವರೆಗೂ ಒಂದೊಂದನ್ನು ಕಡಿಮೆಮಾಡುತ್ತಾ ಬರುವರು. ಅನೇಕವ್ಯಾಧಿಗಳು ಇದರಿಂದ ಪರಿಹಾರವಾಗುವವು. ಈ ರೀತಿಯಲ್ಲಿ ನಿಂಬೆಹಣ್ಣಿನ ರಸದ ಮಹಿಮೆಯು ತಿಳಿಸಲ್ಪಟ್ಟಿರುವದು. ಇದನ್ನು ಜಾರಿಗೆ ತರುವದಕ್ಕೆ ಮುಂಚೆ ಜಾರಿಗೆ ತರತಕ್ಕವರು ಕೊಂಚ ಕೊಂಚವಾಗಿ ಪರೀಕ್ಷಿಸಿ ಜಾರಿಗೆ ತರುವದುತ್ತಮ. ಬೆಳಗಿನ ಹೊತ್ತು ಆಹಾರವನ್ನು ತೆಗೆದುಕೊಳ್ಳುವದಕ್ಕೆ ಮುಂಚೆ ಒಂದು ಹಣ್ಣನ್ನೂ ಭೋಜನವಾದನಂತರ 3 ಗಂಟೆಗಳಾದಮೇಲೆ ಒಂದು ಹಣ್ಣನ್ನೂ ಉಪಯೋಗಿಸುವುದರಿಂದ ತುಂಬಾ ಪ್ರಯೋಜನವಾಗುವದೆಂದು ಹೇಳಲ್ಪಟ್ಟಿದೆ. ನಿಂಬೇಹಣ್ಣಿನ ರಸವು ಅಮೃತಕ್ಕೆ ಸಮಾನವಾದದ್ದು. ಆದರೆ ಅಮೃತವೂ ಕೂಡ ಹೆಚ್ಚಾಗಿ ತೆಗೆದುಕೊಳ್ಳಲ್ಪಟ್ಟರೆ ವಿಷವಾಗಿ ಸಂಭವಿಸಬಹುದು. ಇವುಗಳನ್ನು ತೆಗೆದುಕೊಳ್ಳುವದರಲ್ಲಿ ಕಾಲ, ದೇಶ, ತೆಗೆದುಕೊಳ್ಳತಕ್ಕವರ ದೇಹಸ್ಥಿತಿ ಇವುಗಳನ್ನು ಪರ್ಯಾಲೋಚಿಸಿ ತೆಗೆದುಕೊಳ್ಳಬೇಕು. ವೈದ್ಯರ ಸಲಹೆಯು ಅನೇಕ ಸಂದರ್ಭಗಳಲ್ಲಿ ಪ್ರಯೋಜನಕಾರಿಯಾದಾಗ್ಯೂ ಪ್ರತಿಯೊಬ್ಬರೂ ಸದರಿ ವೈದ್ಯರ ಸಲಹೆಯಂತೆ ನಡಿಯುವದರಿಂದ ತಮಗೆ ಪ್ರಯೋಜನವಾಗುವದೇ ಇಲ್ಲವೆಂಬುದನ್ನು ಪರಿಶೀಲಿಸಿ ಅವಶ್ಯಕವಾದ ಬದಲಾವಣೆಗಳನ್ನು ಮಾಡಿಕೊಳ್ಳಬೇಕು. ಹೀಗೆ ಮಾಡಿಕೊಳ್ಳುವದು ಅವಶ್ಯಕವೆಂದು ಡಾಕ್ಟರುಗಳೇ ಹೇಳುವರು. ಆದುದರಿಂದ ಈ ವಿಷಯಕ್ಕೆ ಗಮನವು ಕೊಡಲ್ಪಡಬೇಕು.

ಸಾಧ್ವಿ.

ಖಾದಿ ಭಂಡಾರ ಪ್ರಾರಂಭೋತ್ಸವ.

(ಒಬ್ಬ ವಾತ್ಮಿದಾರನಿಂದ).

ಕಳೆದ ತಾ. 4ನೇ ಬುಧವಾರ ವೀರರಾಜಪೇಟೆಯಲ್ಲಿ ಹೊಸದಾಗಿ ಒಂದು ಖಾದಿ ಭಂಡಾರವು ಬಹಳ ವಿಜೃಂಭಣೆಯಿಂದ ಮೆ. ಬಿದ್ದಂಡ ಬೋಪಯ್ಯನವರಿಂದ ತೆರೆಯಲ್ಪಟ್ಟಿತು. ಒಂಡಾರವನ್ನು ತೆರೆಯುವ ಸಂಭ್ರಮಕ್ಕಾಗಿ ಅಂಗಡಿಯ ಮುಂದೆ ಅನೇಕ ಜನರು ತಂಡ ತಂಡವಾಗಿ ಬೆಳಿಗ್ಗೆ 11 ಗಂಟೆಯಿಂದ ತೆರೆಯುವ ಸಮಯ 2 ಗಂಟೆಯ ವರೆಗೂ ಕುತೂಹಲದಿಂದ ನೋಡುತ್ತಿದ್ದರು. ನೋಡಿದ ಕೂಡ್ಲೆ ಎಲ್ಲರ ಮನಸ್ಸಿಗೂ ಖಾದಿ ಬಟ್ಟೆಯು ಬಹಳ ಚನ್ನಾಗಿ ಒರಟಾಗಿದೆ ಎಂದೂ ಜನರು ಆಡಿಕೊಳ್ಳುವಷ್ಟು ಕನಿಷ್ಟತರದ್ದಲ್ಲವೆಂದೂ, ಆದುದರಿಂದ ಎಲ್ಲರೂ ಇದನ್ನೇ ಧರಿಸಬೇಕೆಂದೂ ಆಡಿಕೊಳ್ಳುತ್ತಿದ್ದರು. ಒಂಡಾರವು 2 ಗಂಟೆಗೆ ಸರಿಯಾಗಿ ತೆರೆಯಲ್ಪಟ್ಟಿತು. ನೂರಾರು ಮುನ್ನೂರಕ್ಕಿಂತ ಹೆಚ್ಚಾಗಿ ಜನರು ರಸ್ತೆಯಲ್ಲಿಯೂ ನೆರೆಯ ದ ಅಂಗಡಿಗಳಲ್ಲಿಯೂ ನಿಂತುಕೊಂಡು ನೋಡುತ್ತಿದ್ದರು. ಅಧ್ಯಕ್ಷರಾದ ಮೆ ಬೋಪಯ್ಯನವರು ಎದುರಿಗಿರುವ ಮೇಜಿಯ ಮೇಲೆ ಇರುವ ಗೌನದ ಸುತ್ತಲೂ ಮಹಾತ್ಮ ಗಾಂಧಿಯವರ ಹೆಸರಿತ್ತು. ಅಂಗಡಿಯೊಳಗೆ ಪರದೆಯು ಹಾಕಲ್ಪಟ್ಟಿತು. ಮೆ. ಕೋಟೆರ ಚೆಣ್ಣಪ್ಪನವರು ಈ ದಿನದ ಉದ್ದೇಶವನ್ನು ಕುರಿತುಮಾತಾಡಿ ಎಲ್ಲರಿಗೂ ಅಭಿವಂದನೆಯಿಂದ ಖಾದಿಯನ್ನ ಏತಕ್ಕಾಗಿ ಧರಿಸಬೇಕೆಂಬುದನ್ನೂ ಕುರಿತು ಮಾತಾಡಿದರು. ಮೆ ಕೋದಂಡ ಉತ್ತಯ್ಯನವರು ಸಹ ಸ್ವದೇಶಿಯ ಮಹತ್ವವನ್ನು ಕುರಿತುಮಾತಾಡಿದರು. ಅಧ್ಯಕ್ಷರಾದ ಮು. ಬೋಪಯ್ಯನವರು ಹೇಳಿದ್ದೇನಂದರೆ ನಮ್ಮ ಯುವಕರು ಕೆಲವು ಜನರುಕೂಡಿ ಇಂಥಾ ಶ್ಲಾಘನೀಯವಾದ ಕೆಲಸವನ್ನು ಏರ್ಪಾಡುಮಾಡಿದ್ದಕ್ಕೆ ನಾವು ಅವರಿಗೆ ಎಷ್ಟು ವಂದಿಸಿದರೂ ಸಾಲದು. ಅವರಲ್ಲಿ ನಾವು ತಪ್ಪು ಕಂಡುಹಿಡಿಯುವ ಬದಲಾಗಿ ಅವರ ಕೆಲಸವನ್ನು ಶ್ಲಾಘಿಸಿ ಎಲ್ಲರೂ ಆದಷ್ಟು ಉತ್ತೇಜನ ಕೊಡುವುದು ನಮಗಳ ಕರ್ತವ್ಯ. ಖಾದಿಯನ್ನು ಧರಿಸಿದರೆ ಸರಕಾರದ ಕೋಪಕ್ಕೆ ಇದಿರಾದೇವೋ ಎಂಬ ಸಂಶಯವು ಅನೇಕರಿಗುಂಟು. ಇದು ಶುದ್ಧ ತಿಳಿಗೇಡಿತನ. ಖಾದಿಯನ್ನು ಧರಿಸುವುದು ಲಕ್ಷೋಪಲಕ್ಷ ಅನ್ನವಿಲ್ಲದೆ ನರಳುತ್ತಿರುವ ಜನರಿಗೆ ಅನ್ನವನ್ನು ಕಲ್ಪಿಸಲಿಕ್ಕೇನೇ ಆಗಿದೆ. ಅದರಿಂದ ಕೆಲಸವಿಲ್ಲದ ಜನರಿಗೆ ಕೆಲಸವನ್ನು ಕಲ್ಪಿಸಿದರೆ ಆ ಮೂಲಕ ದೇಶದ ಸಂಪತ್ತು ಹೆಚ್ಚುತ್ತದೆ. ಸರಕಾರದ ನೀತಿ ಏನು? ಜನರನ್ನು ಗುಣ, ನಡತೆ, ನೀತಿ, ಅನುಕೂಲ, ಸಂಪತ್ತು ಮೊದಲಾದವುಗಳಲ್ಲಿ ಒಳ್ಳೆ ಸ್ಥಿತಿಗೆ ತರುವದೇ ಆಗಿದೆ. ಯಾವ ಸರಕಾರಕ್ಕೇ ಆಗಲಿ, ಪ್ರಜೆಗಳನ್ನು ಸುಖಸಂಪತ್ತಿಗೆ ತರುವುದರಷ್ಟು ಶ್ರೇಷ್ಠ ಕೆಲಸವು ಯಾವದೂ ಇಲ್ಲ. ಆದ್ದರಿಂದ ಜಾತಕವನ್ನಿಟ್ಟು ನೂಲುನೂತು ಒಟ್ಟಮಾಡಿಕೊಂಡರೆ, ಸರಕಾರದ ಕೆಲಸವನ್ನು ನಾವು ಮಾಡಿದಂತಾಗುವದು, ಈ ಕಾರಣದಿಂದ ಯಾರೇ ಆಗಲಿ ಖಾದಿ ಧರಿಸುವದು ತಪ್ಪೆಂದು ಭಾವಿಸಬಾರದು.

ಖಾದಿಯ ಮಹತ್ವವನ್ನು ಕೊಂಡಾಡಿದವರು ಆ ಮಹಾತ್ಮ ಗಾಂಧಿಯವರು ಎಲ್ಲರೂ ಅವರವರ ಮನಸ್ಸಿನಲ್ಲಿ ಮೊದಲು ಖಾದಿಯನ್ನು ಧರಿಸಬೇಕೆಂದು ದೃಢಪಡಿಸಬೇಕಾಗಿದೆ. ಮೊದಲು ಪ್ರತಿಯೊಬ್ಬನ ಚಿತ್ತದಲ್ಲಿ ಯಾವಾಗ ಖಾದಿಯು ಸೊಗಸು ತಿಳಿಯುತ್ತದೋ ಆಗ ಇತರ ಪರದೇಶಿ ಬಟ್ಟೆಯು ಅಂದವಾಗಿ ಕಾಣದು. ಆದ್ದರಿಂದ ಭೂಲೋಕದಲ್ಲಿ ಮಾನವನಿಗಿರುವ ಎಲ್ಲಾ ಸೌಂದರ್ಯವೂ, ಸೊಬಗು ಅವರವರ ಮನಸ್ಸಿನಲ್ಲಿಯೇ ಇರುತ್ತದೆಂದು ತಿಳಿಯತಕ್ಕದ್ದು ಎಂಬುದಾಗಿ ಹೇಳಿ ದೇವರ ಪ್ರಾರ್ಥನೆಯಿಂದ ಭಂಡಾರವನ್ನು ತೆರೆದರು. ನಂತರ, ಹಣ್ಣು ಹಂಪಲುಗಳು ಹಂಚಲ್ಪಟ್ಟದಲ್ಲದೆ ಖಾದಿಬಟ್ಟೆಯನ್ನೆ ಏತಕ್ಕಾಗಿ ಧರಿಸಬೇಕೆಂಬುವ ಕಾಗದವು ಹಂಚಲ್ಪಟ್ಟಿತು.

ಕೂಡಲೇ ಜನರು ಪುರುಷಸ್ತ್ರೀಯರೆ ಅಂಗಡಿಯೊಳಗೆ ಕುತೂಹಲದಿಂದ ನುಗ್ಗಲಿಕ್ಕೆ ಸುರುಮಾಡಿದರು. ಈ ಅವಸರವು ಸಾಯಂಕಾಲ 7 ಗಂಟೆಯವರೆಗೂ ಇತ್ತು. ಅನೇಕ ಜನರು ಅಂಗಡಿಯೊಳಗೆ ಗಲಾಟೆಯಿಂದ ನುಗ್ಗಲಿಕ್ಕಾಗದೆ ಹೊರಟುಬಿಟ್ಟರು. ಕೆಲವು ಜನರು ಬಟ್ಟೆಯನ್ನೇ ಕ್ರಯಕ್ಕೆ ತೆಗೆಯಬೇಕೆಂಬ ಮನಸ್ಸಿನಿಂದ ಹಟತಾಗಿ ನೂರಾರು ಮುನ್ನೂರು ರುಪಾಯಿಯ ವ್ಯಾಪಾರವನ್ನು ಮಾಡಿದರು. ಮಾರಣೆ ದಿನವೂ ಸಹ ವ್ಯಾಪಾರವು ಬಹಳ ಜೋರಾಗಿತ್ತು. ಇದನ್ನು ನೋಡುವಾಗ ಜನರಿಗೆ ನಿಜವಾಗಿಯೂ ಖಾದಿಯಮೇಲೆ ಪ್ರೀತಿ ಇದೆ ಎಂಬುದಾಗಿ ತೋರಿತು. ಹಾಗೇ ಎಂಗೂಸಾದ ಈ ಖಾದಿ ಒಂಡಾರಕ್ಕೆ ಎಲ್ಲರೂ ಸಹಾಯಮನಸ್ಸನ್ನೇಯಲೆಂದೂ ಭಗವಂತನು ದೀರ್ಘಾಯುಸ್ಸನ್ನೀಯಲೆಂದೂ, ಪ್ರಾರ್ಥಿಸುವ.

ಕೊಡಗು ಜಮ್ಖಾನ ರೇಸ್‌ಗಳು.

ಏಪ್ರಿಲ್ ೧೪, ೧೭, ೨೦.

ಪ್ರತಿದಿನವೂ ಸಾಯಂಕಾಲ ಮೂರು ಗಂಟೆಗೆ ಪ್ರಾರಂಭ. ಟೋಟಲೈಜೇಟರ್ ಮತ್ತು ಬುಕ್ ಮೇಕರಿಗೆ ಎರಡು ರೂಪಾಯಿ.

ಪ್ರವೇಶಕ್ಕೆ ಒಂದು ರುಪಾಯಿ.

ಫಲಾಹಾರದ ಅಂಗಡಿಯೂ ಇರುತ್ತದೆ.

ವಿಜ್ಞಾಪನೆ.

ನಮ್ಮ ಪ್ರಿಂಟಿಂಗ್ ಕಾಗದ ತರುವ ಗಾಡಿಯು ಮೈಸೂರಿಂದ ಮಡಿಕೇರಿಗೆ ದಾರಿಯಲ್ಲಿ ಆಕಸ್ಮಿಕ ತಡವಾಗಿ ಸಾಕಷ್ಟು ಕಾಗದವು ಕಾಲಕ್ಕೆ ಸರಿಯಾಗಿ ನಮಗೆ ತಲಪದ್ದರಿಂದ ಈ ವಾರ ಆರು ಪುಟಗಳನ್ನು ಮಾತ್ರ, ಅದೂ ಸ್ವಲ್ಪ ತಡವಾಗಿ ಪ್ರಿಂಟು ಮಾಡಲು ಸಾಧ್ಯವಾಯಿತು. ಇದಕ್ಕಾಗಿ ವಾಚಕ ಮಹಾಶಯರು ಕ್ಷಮಿಸುವರಾಗಿ ಕೋರಿಕೆ.

ಮೇನೇಜರ್.

ವರ್ತಮಾನ ಸಂಗ್ರಹ.

ಒಳದೇಶ.

ದಕ್ಷಿಣ ಕೊಡಗಿನ [illegible]

[illegible] ತಾ. 1[illegible] [illegible]

ತಾ 1[illegible] [illegible] ಗಂಟೆಗೆ ನಡೆಯಲಿಕ್ಕಿದೆ.

[illegible]

[illegible] 12[illegible] ತಾ 11[illegible]

[illegible] ತಾ 12[illegible] ಮಡಿಕೇರಿ [illegible]

[illegible] 30 [illegible]

ಸರಕಾರ ಸೆಂಟ್ರಲ್ [illegible] ತಾ 14[illegible] ಮಡಿಕೇರಿ [illegible]

[illegible]

[illegible]

1935[illegible]

[illegible]

[illegible] 17 [illegible]

ಟಉಪಚಾರಕ್ಕೆ ಮಡಿಕೇರಿತಾಲೋಕಿನವರು ಏರ್ಪಾಡುಮಾಡುತ್ತಾರೆ. ಚರ್ಚಿಸತಕ್ಕ ವಿಷಯಗಳನ್ನು ತಾರೀಕು 31—3—1925 ರ ವಳಗೆ ಜನರಲ್ ಸೆಕ್ರಟರಿ ಮೆ|| ಸಿ. ಯನ್. ವೆಂಕಪ್ಪಯ್ಯನವರಿಗೆ ತಲಪುವಂತೆ ಕಳುಹಿಸಬೇಕೆಂತಲೂ, ಮೀಟಿಂಗಿಗೆ ಎಲ್ಲಾ ಮೆಂಬರುಗಳು ಹಾಜರಾಗಬೇಕೆಂತಲೂ ಕೋರುತ್ತೇನೆ.

ಚಂದಾ ಬಾಬಲಗನ್ನು ಎರಡು ವರ್ಷಗಳಿಂದ ಪಾವತಿ ಮಾಡದೆ ಇರುವವರು ಸಂಘದ ಕಾರ್ಯಗಳಲ್ಲಿ ಭಾಗಿಗಳಾಗಕೂಡದು. ಎಲ್ಲಾ ಮೆಂಬರುಗಳು ತಮ್ಮ ಬಾಕ್ಯ ಚಂದಾ ಬಾಬಲಗನ್ನು ಕೂಡಲೇ ಪಾವತಿ ಮಾಡಬೇಕಾಗಿ ಕೋರುತ್ತೇನೆ.

ಕೊಡಗು ಜಮೀನ್ದಾರರ ಸಂಘ,

ಸಿ. ಎನ್. ವೆಂಕಪ್ಪಯ್ಯ,

ಮಡಿಕೇರಿ, ತಾರೀಕು 5—3—25. ಜನರಲ್ ಸೆಕ್ರಟರಿ.

ಹಿಂದೂ ದೇಶ.

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಇರಾದೆ ಮೇರೆ ಹಿಂದೂ ದೇಶದ ರಾಜಕೀಯ ವಿಷಯ ಅವರ ಸಂಗಡ ಮಾತಾಡಲು ವೈಸರಾಯರಾದ ಲಾರ್ಡ್ ರೀಡಿಂಗ್‌ರವರು ನಾಲ್ಕು ತಿಂಗಳ ರಜೆಯಲ್ಲಿ ಇಂಗ್ಲೆಂಡಿಗೆ ಹೋಗುವರು. ಇವರ ಬದಲಿಗೆ ಬಂಗಾಳಪ್ರಾಂತ್ಯದ ಗವರ್ನರಾದ ಲಾರ್ಡ್ ಲಿಟ್ಟನ್‌ರವರು ತಂಗಾಮಿ ವೈಸರಾಯರಾಗಿ ನೇಮಿಸಲ್ಪಟ್ಟಿರುವರು. ಬಂಗಾಳದ ಎಗ್ಜಿಕ್ಯೂಟಿವ್ ಕೌನ್ಸಿಲಿನ ಸೀನಿಯರ್ ಮೆಂಬರಾದ ಸರ್ ಅಬ್ದುರ್ ರಹೀಂರವರನ್ನು ಬಂಗಾಳ ಗವರ್ನರಾಗಿ ನೇಮಿಸುವರೆಂದು ವದಂತಿ ಹುಟ್ಟಿತ್ತು. ಬಂಗಾಳದ ಮುಸಲ್ಮಾನರು ಇವರನ್ನು ಆ ಪದವಿಗೆ ನೇಮಿಸದೆ ಹೋದರೆ ಅಸಹಕಾರವನ್ನು ಕೈಕೊಳ್ಳುವರೆಂದು ಸೂಚಿಸಿದ್ದರು. ಸರ್ ಸುರೇಂದ್ರನಾಥ್ ಬನರ್ಜಿ ಮೊದಲಾದ ಲಿಬರಲ್ ಪಕ್ಷದವರು ನ್ಯಾಯವಾಗಿ ಇವರನ್ನೇ ನೇಮಿಸಬೇಕೆಂದು ಹೇಳಿದ್ದರು. ಆದರೆ ಸರಕಾರದವರು ಅಸ್ಸಾಮಿನ ಗವರ್ನರಾದ ಸರ್ ಜಾನ್‌ಕರ್‌ರವರನ್ನು ಬಂಗಾಳದ ತಂಗಾಮಿ ಗವರ್ನರಾಗಿಯೂ, ಸರ್ ವಿಲಿಯಂ ರೀಡ್‌ರವರನ್ನು ಅಸ್ಸಾಮಿನ ತಂಗಾಮಿ ಗವರ್ನರರಾಗಿಯೂ ನೇಮಿಸಿರುವರು. ಇದು ಬಂಗಾಳದಲ್ಲಿ ಆಶ್ಚರ್ಯವನ್ನುಂಟುಮಾಡಿದೆ.

ಹಿಂದೂ ದೇಶದಲ್ಲಿ ಈಗ ಜಾರಿಯಲ್ಲಿರುವ ಮಾರ್ಪಾಡುಗಳನ್ನು ಸರಿಯಾಗಿ ನಡಿಸಲು ಅಡಚಣೆಗಳಿವೆಯೋ ಮತ್ತು ಹೆಚ್ಚಿನ ಮಾರ್ಪಾಡುಗಳನ್ನು ಕೊಡಬಹುದೋ ಎಂಬ ವಿಷಯಗಳನ್ನು ವಿಚಾರಿಸಲು ಏರ್ಪಡಿಸಿದ ಕಮಿಟಿಯ ರಿಪೋರ್ಟು ಹೊರಪಟ್ಟಿದೆ. ಇದರ ಪಠಿಯು ಎಂದಿನಂತೆ ಏನೊಂದೂ ಸಾರವಿಲ್ಲದ್ದಾಗಿದೆ. ರಿಪೋರ್ಟಿನಲ್ಲಿ ಎರಡು ಭಾಗಗಳಿವೆ, ಐದು ಜನರ ಬಹುಮತ ರಿಪೋರ್ಟು ಒಂದು. ನಾಲ್ಕು ಜನ ಹಿಂದೀಯರ ಮೈನಾರ್ಟಿ ರಿಪೋರ್ಟಿನಲ್ಲಿ ಮಾತ್ರ ಮಾರ್ಪಾಡಿನ ವಿಷಯ ಸ್ವಲ್ಪ ಅತೃಪ್ತಿಯು ತೋರಿಸಲ್ಪಟ್ಟು ಅದನ್ನು ಬದಲಾಯಿಸಲು ಕೇಳಲ್ಪಟ್ಟಿದೆ. ಒಟ್ಟಾರೆ ಫಾರೆಸ್ಟ್ ಇಲಾಖೆ ಮಾತ್ರ ಎಲ್ಲಾ ಪ್ರಾಂತ್ಯಗಳಲ್ಲಿಯೂ ಮಂತ್ರಿಗಳ ಅಧೀನಕ್ಕೆ ಬಿಡಬಹುದಂತೆ. ಈ ರಿಪೋರ್ಟು ಶೇಖಡವರಿಗೆ ಎಂದೂ ತೃಪ್ತಿಕರವಲ್ಲವೆಂದು ಅಭಿಪ್ರಾಯಗಳು ಸೂಚಿಸಲ್ಪಟ್ಟಿವೆ.

ಮಹಾತ್ಮ ಗಾಂಧಿಯವರು ತಾರೀಕು 7ರಲ್ಲು ಮದ್ರಾಸಿಗೆ ತಲಪಿದಾಗ ಅಲ್ಲಿಯ ಜನರು ಸಾವಿರಗಟ್ಟಲೆಯಲ್ಲಿ ನೆರೆದು ಅವರಿಗೆ ಸ್ವಾಗತವನ್ನೀಡಿದರು. ಮುನಿಸಿಪಾಲಿಟಿಯವರು ಒಂದು ಬಹುಮಾನ ಪತ್ರವನ್ನು ಅರ್ಪಿಸಿದರು. ಇದನ್ನು ಇವರ್‍ಕೆ ಮಹಾತ್ಮರ ಜವಾಬನ್ನೂ ಇನ್ನೊಂದು ಕಡೆ ಪ್ರಕಟಿಸಿದ್ದೇವೆ. ಅದೇ ದಿನ ಸಾಯಂಕಾಲ ಒಂದು ದೊಡ್ಡ ಪಬ್ಲಿಕ್ ಮೀಟಿಂಗ್ ನಡೆದು ಗಾಂಧಿಯವರಿಗೆ 12 ಬಹುಮಾನ ಪತ್ರಿಕೆಗಳು ಅರ್ಪಿಸಲ್ಪಟ್ಟವು. ಅವರಿಗೆ ಪಯಣದ ವರೆಗೆ ದಾರಿ ಉದ್ದ ಸ್ಟೇಶನುಗಳಲ್ಲಿ ಜನರು ಅತಿ ಉತ್ಸಾಹದಿಂದ ಸ್ವಾಗತವನ್ನೀಡಿದರು.

ಬೊಂಬಾಯಿ ಸರಕಾರದವರು ಪರದೇಶದಿಂದ ತರಿಸುವ ಸಿಹಿ ಪದಾರ್ಥಗಳ ಲೈಸೆನ್ಸ್‌ಗಳಿಗೆ ಮೊದಲಿನ ಎರಡರಷ್ಟು ಫೀಸು ಕೊಡಬೇಕೆಂದು ತೀರ್ಮಾನಿಸಿರುವರು. ಇದು ಏಪ್ರಿಲ್ 1ರಿಂದ ಜಾರಿಗೆ ಬರುವುದು.

ಲಾಲಾ ಲಜಪತರಾಯರವರು "ದಿ ಪೀಪಲ್" ಎಂಬ ಒಂದು ಹೊಸ ಇಂಗ್ಲಿಷ್ ವಾರ ಪತ್ರಿಕೆಯನ್ನು ಹೊರಪಡಿಸಲಿಕ್ಕಿರುವರು. ಇದು ಎಪ್ರಿಲ್ 1ರಿಂದ ಹೊರಪಡುವುದು.

ಕೌನ್ಸಿಲಿನಲ್ಲಿ ಮಂತ್ರಿ ಪದವಿಯನ್ನು ಕೈಕೊಳ್ಳಬೇಕೋ ಎಂಬ ವಿಷಯವು ಸೆಂಟ್ರಲ್ ಪ್ರಾವಿನ್ಸಿನ ಸ್ವರಾಜ್ಯ ಪಂಗಡದ ಕೌನ್ಸಿಲ್ ಮೆಂಬರುಗಳಲ್ಲಿ ಚರ್ಚೆಯು ನಡೆಯುತ್ತಿದೆ. ಬೇರಾರಿನ ಮೆಂಬರುಗಳು ಮಂತ್ರಿ ಸರಕಾರವು ಇದ್ದೇ ತೀರಬೇಕೆಂದು ಸೂಚಿಸಿರುವರು.

ಸೆಂಟ್ರಲ್ ಪ್ರಾವಿನ್ಸಿನ ಮಂತ್ರಿಗಳಿಗೆ ಹೊಸೆಯಾದ ಎರಡು ಲಕ್ಷ ರೂಪಾಯಿ ಸಂಬಳ ಕೊಡುವ ಸೂಚನೆಯ ಠರಾವನ್ನು ಸ್ವರಾಜ್ಯ ಪಾರ್ಟಿಯ ಮೆಂಬರುಗಳು ಬಡ್ಜೆಟ್ ಮೀಟಿಂಗಿಗೆ ಕಳುಹಿಸಿರುವರು.

ಪತ್ರವ್ಯವಹಾರಗಳು.

ಜಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಪ್ರೈಮರಿ ಪರೀಕ್ಷೆಯನ್ನು ಕುರಿತು.

ಅಯ್ಯಾ,

ತಮ್ಮ ಫೆಬ್ರುವರಿ ತಾರೀಕು 27ರ ಪತ್ರಿಕೆಯಲ್ಲು ಮಕ್ಕಳ ತಂದೆಯಂಬೊಬ್ಬರ ಜಾತ್ಮಿಯನ್ನು ನೋಡಿ ಬಹಳ ಆಶ್ಚರ್ಯವುಂಟಾಯಿತು. ಇಡೀ ಹಿಂದುಸ್ಥಾನದಲ್ಲು ಯಾಕ ಪ್ರಪಂಚದಲ್ಲೆಲ್ಲಾ ವಿದ್ಯೆಯೇ ಪ್ರಧಾನವೆಂದು ತಿಳಿದುಕೊಂಡು ವಿದ್ಯೆ ಕಲಿಸಲು ಮಕ್ಕಳನ್ನು ಶಾಲೆಗೆ ಕಳುಹಿಸದಿದ್ದರೆ ತಂದೆಗಳಿಗೆ ಶಿಕ್ಷಿಸುವಂತಾದ ಖಾನೂನು ಸಹ ಕೆಲವು ಕಡೆಗಳಲ್ಲಿ ಮಾಡಿದ್ದಾರಾಗಿ ತಿಳಿಯುತ್ತೇನೆ.

ಹೀಗಿರುತ್ತಾ ನಾಪೋಕ್ಲು ಮೋಡಲ್ ಸ್ಕೂಲ್ ಸೆಂಟರಿಗೆ ಸೇರಿದ ಭಾಗಮಂಡಲ, ಪದಕಲ್, ಕೊಟ್ಟೂರು, ಚೇಂಗೂರು, ಚೆಟ್ಟಿಕೇರಿ, ಪಾಲೂರು, ಹೊದ್ದೂರು, ಪುಲಿಕೋಟು, ನೆಲಜಿ, ಕಕ್ಕಬೆ, ಚ್ಯೆಯಂಡಾಣೆ, ಕರಡ, ಬಾವಲಿ ಮತ್ತು ಪಾರಾಣೆ ಪ್ರೈಮರಿ ಶಾಲೆಗಳಿಂದ ಈ ಸಂವತ್ಸರದ ಪ್ರೈಮರಿ ಪರೀಕ್ಷೆಗೆ ಹುಡುಗರನ್ನು ಸೇರಿಸಿಕೊಳ್ಳಬೇಡವಾಗಿ ವಿದ್ಯಾ ಇಲಾಖೆ ಇನ್ಸ್‌ಪೆಕ್ಟರವರಿಂದ ಹುಕುಂ ಬಂದ ಸಂಗತಿ ಕುರಿತು ಕೊಟ್ಟಿರುವ ನಂಬ್ರು 10/25 ತಾರೀಕು 11—2—25ರ ಹುಕುಂ ನಿಜವಾಗಿದ್ದರೆ ಮೇಲ್ಕಂಡ ಸಂಚಿಕೆಯ ವರ್ತಮಾನ ಸಂಗ್ರಹದಲ್ಲು ಪ್ರಕಟವಾದಂತೆ ಈ ತಾರೀಕು 12ರಿಂದ 16ರ ವರೇಗೆ ನಡೆಯುವ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಬಡ್ಜೆಟ್ ಮೀಟಿಂಗಿನಲ್ಲು ಈ ಸಂಗತಿ ಚರ್ಚೆಯಿಂದ ಮೇಲ್ಕಂಡ ಹುಕುಂ ಮತ್ತು ಈ ಮೇರೆ ಬೇರೆ ಸ್ಕೂಲುಗಳಿಗೆ ಸಹ ಕೊಟ್ಟಿರಬಹುದಾದ ಹುಕುಂಗಳನ್ನು ರದ್ದು ಮಾಡಿ ಈ ಕೊಡಗಿನ ಎಲ್ಲಾ ಪ್ರೈಮರಿ ಶಾಲೆಗಳಿಂದ ಆಯಾ ಸೆಂಟರ್ ಮೋಡಲ್ ಸ್ಕೂಲುಗಳಲ್ಲು ಪರೀಕ್ಷೆಗೆ ತೆಗೆದುಕೊಳ್ಳುವಂತೆಯೂ, ಸ್ಥಳ ಸಂಕೋಚವಾಗಿರುವ ಮೋಡಲ್ ಸ್ಕೂಲುಗಳನ್ನು ಬದಲಾಯಿಸಿ ತಕ್ಕ ಮಾಸ್ತರುಗಳನ್ನು ಏರ್ಪಡಿಸುವಂತೆ ಮುಂದಾಗಿ ಬಡ್ಜೆಟ್ ತೀರ್ಮಾನದಿಂದ ಬಾಕಿ ಸಂಗತಿಗಳಿಗೆ ಕಮ್ಮಿ ಮಾಡಿ ವಿದ್ಯೆಯನ್ನು ಪ್ರಚಾರಕ್ಕೆ ತಂದು ದೇಶವನ್ನು ಉದ್ಧಾರ ಮಾಡುವರಾಗಿ ನಾನು ಸಹ ಮಕ್ಕಳ ತಂದೆಗೆ ವತ್ತಾಸೆಯಾಗಿ ಬೇಡುವೆನು.

ಉ. ವಾಚ್ಚಯ್ಯ.

ಮಡಿಕೇರಿ ಹುಡುಗಿಯರ ಹೈಸ್ಕೂಲು.

ಅಯ್ಯಾ,

'ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು' ಎಂಬದು ಪೂರ್ವಿಕರ ಗಾದೆ. ವರ್ತಮಾನ ಪತ್ರಗಳಲ್ಲಿ ಪೂರ್ವಾಪರ ಗ್ರಹಿಸದೆ, ಮನಸ್ಸಿಗೆ ಇಚ್ಛೆ ತನ್ನ ಊಹನೆಯೇ ಪ್ರಾಮಾಣಿಕವೆಂದು ಯುಕ್ತಾಯುಕ್ತ ವಿವೇಚನೆ ಇಲ್ಲದೆ ಎದ್ವಾತದ್ವ ಬರೆದು ಬಹಿರಂಗಪಡಿಸಿದ ಮಾತ್ರದಿಂದ ದೇಶ ಸೇವೆ ಮಾಡಿದ ಹಾಗೆ ಆಗಲಿಲ್ಲ. ಅದಕ್ಕೆ ಬದಲು ತಮ್ಮ ಅಂಥಾ ಬರವಣಿಗೆಯಿಂದ ಬಹಿರಂಗ ಪಡಿಸುವ ತಪ್ಪು ಅಭಿಪ್ರಾಯಗಳು ದೇಶದ ವೃದ್ಧಿಗೆ ದ್ರೋಹ ಮಾಡುವದೇ ಹೊರತು ಬೇರೆ ಪ್ರಯೋಜನವನ್ನು ಉಂಟುಮಾಡಲಾರವು.

ಈ ಫೆಬ್ರುವರಿ 13ನೆ ತಾರೀಕಿನ ನಿಮ್ಮ ಕೊಡಗು ವರ್ತಮಾನ ಪತ್ರದಲ್ಲಿ ಬೇರೆ ಸಂಗತಿಗಳ ಜೊತೆಗೆ ಮಡಿಕೇರಿ ಕಾನ್ವೆಂಟು ಬಾಲಿಕಾ ಶಾಲೆಯ ಕುರಿತು ಕೆ. ಪಿ. ಜಿ ಯವರು ಸೂಚಿಸಿರುವ ಕೆಲವು ಆಕ್ಷೇಪಣೆಯನ್ನು ನಾನು ಓದಲು ನನ್ನ ಮನಸ್ಸಿನಲ್ಲಿ ಒಂದು ವಿಚಿತ್ರ ವಿನೋದವು ಹೊಳೆಯಿತು.

ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ, ಕಾಡು ಜನಾಂಗದವರು ಹೊರ್ತು ಸವನಾಗರೀಕತೆಯನ್ನು ಹೊಂದಿರುವ ಸರ್ವಜನಾಂಗದವರೂ ಮತ್ತು ತಮ್ಮ ತಮ್ಮ ರಾಜ್ಯಭಾರ ಮಾಡುವ ಪ್ರಭುಗಳು ಸಹ ಖರ್ಚು ವೆಚ್ಚದ ಬಾಬಿನಲ್ಲಿ ಗಣನೆ ಇಡದೆ ತಮ್ಮ ತಮ್ಮ ದೇಶಗಳಲ್ಲಿನ ಸ್ತ್ರೀ ಪುರುಷರ ಮೌಢ್ಯತನವನ್ನು ಹೋಗಲಾಡಿಸಿ ತಮ್ಮ ಜನಾಂಗದವರನ್ನು ವಿದ್ಯಾವಂತರನ್ನಾಗಿ ಮಾಡಿ ತಮ್ಮ ತಮ್ಮ ದೇಶಗಳ ಸಂಪದಭ್ಯುದಯವನ್ನು ವೃದ್ಧಿ ಪಡಿಸುವ ಕಾರ್ಯದಲ್ಲಿ ನಾಮು ಮುಂದು ತಾಮು ಮುಂದು. ಸ್ಪರ್ಧೆಯಿಂದ ತಮ್ಮಿಂದ ಸಾಧ್ಯವಾದ ಮಟ್ಟಿಗೆ ದ್ರವ್ಯಾನುಕೂಲ ಕೊಟ್ಟು ತಮ್ಮ ತಮ್ಮ ದೇಶದ ಯುವಕ ಯುವತಿಯರಿಗೆ ಪ್ರೋತ್ಸಾಹ ಕೊಡುತ್ತಿರುವಲ್ಲಿ ನಮ್ಮ ಕೊಡಗು ದೇಶದ ಸಂಪನ್ನರು ಸ್ತ್ರೀ ವಿದ್ಯಾ ವಿಷಯದಲ್ಲಿ ಈ ರೀತಿ ವಿಮುಖರಾಗಲು ಕಾರಣವೇನೆಂಬದು ತಿಳಿಯುವದಿಲ್ಲ. ಈ ಕೊಡಗು ದೇಶದ ನಿವಾಸಿಗಳು ಎಲ್ಲಾ ಬಾಬನ್ನಲ್ಲಿಯೂ ಹಿಂದೆ ಬಿದ್ದಿರುವದನ್ನು ತಿಳಿದು ಸಾಧ್ಯವಾದ ಮಟ್ಟಿಗೆ ವಿದ್ಯಾಭಿವೃದ್ಧಿಯಲ್ಲಿಯೂ ಬೇರೆ ಬಾಬುಗಳಲ್ಲಿಯೂ ಮುಂದಕ್ಕೆ ತಂದು ಅವರಲ್ಲಿನ ಮೃಗಭಾವವನ್ನು ಹೋಗಲಾಡಿಸಲು ಸರಕಾರದವರು ಪ್ರಯತ್ನ ಮಾಡುತ್ತಿರುವಾಗ ನಿಮ್ಮ ಕೆ. ಪಿ. ಜಿ. ಯವರು ಸರಕಾರದವರಲ್ಲಿ ದುರ್ಭಾವವನ್ನಾರೋಪಿಸಿ ದುಂದುಗಾರಿಕೆಯನ್ನು ಕಲ್ಪಿಸಿ ಅವರು ಯಾವುದೋ ಒಂದು ಉದ್ದಿಷ್ಟದಿಂದ ನಮ್ಮ ಶಾಲಾ ಇನ್ಸ್‌ಪೆಕ್ಟರವರ ಮಾತಿಗೆ ಹೂಕ ಕೊಟ್ಟು ಕೌನ್ಸಿಲ್ ಮೆಂಬರುಗಳ ಮತವನ್ನು ಧಿಕ್ಕರಿಸಿ, ಕಾನ್ವೆಂಟ್ ಶಾಲೆಗೆ 3,500 ರುಪಾಯಿಗಳನ್ನು ಅಪಾತ್ರಯ ಮಾಡುತ್ತಾರೆಂಬ ಅಪವಾದವನ್ನು ಕಲ್ಪನೆ ಮಾಡಿ ಕಾಗದದಲ್ಲಿ ಬರೆದಿರುತ್ತಾರೆ. ಇವರ ಗೋಣ ಸಾರವು "ಪದ್ಮ ಹಾಸಿದವನ ಬೆಟ್ಟು ಕಾಲ್ಪದ" ಎಂಬ ಗಾದೆಗೆ ಸರಿಯಾಯಿತು. ನಮ್ಮ ನೆರೆ ಹೀರೆಯುಪನಾದ ಮೈಸೂರು ಸರಕಾರದವರು ಬರೆ ವಿದ್ಯಾಭಿವೃದ್ಧಿಗಾಗಿ ಎಷ್ಟರ ಮಟ್ಟಿಗೆ ದ್ರವ್ಯ ವೆಚ್ಚ ಮಾಡುತ್ತಾರೆಂದು ಯೋಚಿಸಿ ಅವರ ಮೇಲ್ಪಂಕ್ತಿಯನ್ನು ಅನುಸರಿಸಿದರೆ ಈ ಕೊಡಗು ದೇಶದ ಮೂಢತ್ವವು ತೊಲಗುವರೆ ಅನ್ನಿ ಇಲ್ಲ.

ಸರಕಾರದವರು ನಡಿಸುವ ಕೆಲಸಗಳಲ್ಲಿ ಇದು ಜನರಿಗೆ ಹಿತ, ಇದು ಅಹಿತ ಎಂಬ ಯುಕ್ತಾ ಯುಕ್ತ ವಿವೇಚನೆ ಮಾಡದೆ, ಒಳ್ಳೆ ಕೆಲಸವೇ ಆಗಲಿ ಕೆಟ್ಟದ್ದೇ ಆಗಲಿ ವಿಮರ್ಶೆ ಮಾಡಿಕೊಳ್ಳದೆ ಸರಕಾರದವರನ್ನು ಎಲ್ಲಾ ಸಂಗತಿಗಳಲ್ಲಿಯೂ ದೋಷಾರೋಪಣೆ ಮಾಡಿ ದೂರುವದು ಬಹು ವಿಷಾದಕರವಾದ ಸಂಗತಿಯೇ ಸರಿ. ಕೆಲವರು ಸ್ವಕಾರ್ಯ ದುರಂಧರತ್ವದಿಂದ ಸರಕಾರವನ್ನು ಪ್ರತಿ ಸಂಗತಿಯಲ್ಲಿಯೂ ಉದ್ಘಾಟಿಸುತ್ತಾ ಬಂದರೆ ತಮಗೆ ಏನಾದರೂ ಒಂದು ಬಿರುದು ಯಾ ತನ್ನ ಬಂಧುಗಳು ಯಾ ಸಮ್ಮಂಧಿಕರಿಗೆ ಒಂದು ವೇಳೆ ತನಗೆ ಸಹ ದೊಡ್ಡ ಸರಕಾರ ಉದ್ಯೋಗ ದೊರೆಯಬಹುದು. ಈ ಮೂಲಕ ಸರಕಾರದವರು ತನ್ನ ಬಾಯಿ ಕಟ್ಟುವುದಕ್ಕೆ ಈ ರೀತಿಯಿಂದ ಯತ್ನಿಸ್ಯಾರು. ಇದರಿಂದ ತನ್ನ ಸ್ವಾರ್ಥತೆ ಸಾರ್ಥಕವಾದೀತೆಂದು ತಪ್ಪು ಗ್ರಹಿಸುತ್ತಾರೆ. ಆದರೆ ಸರಕಾರದವರಲ್ಲಿ ಈ ದುರ್ಭಾವವನ್ನು ಆರೋಪಿಸುವದು ಶುದ್ಧ ಅವಿವೇಕ ಮತ್ತು ಕೆ. ಪಿ. ಜಿ. ಯವರಿಗೆ ಈ ಅಶ್ವಾಸೆ ಇರಲಾರದು.

ಈಗ ಕೆ. ಪಿ. ಜಿ ಯವರು ಸೂಚಿಸಿರುವ ಒಂದೊಂದು ಅಂಶವನ್ನೇ ಆಲೋಚಿಸುವ. ಸರಕಾರದವರು ಕೌನ್ಸಿಲ್ ಮೆಂಬರುಗಳ ಅಭಿಪ್ರಾಯಗಳಿಗೆ ವಿರೋಧವಾಗಿ ಶಾಲಾ ಇನ್ಸ್‌ಪೆಕ್ಟರವರ ಒಬ್ಬರ ಅಭಿಪ್ರಾಯವನ್ನು ಅನುಮೋದಿಸಿ ಕಾನ್ವೆಂಟು ಶಾಲೆಯಲ್ಲಿ 5, 6ನೇ ಫಾರಂ ಇಡುವದಕ್ಕೆ 3,500 ರುಪಾಯಿ ಗ್ರಾಂಟು ಕೊಟ್ಟಿದ್ದು ತಪ್ಪು ಎಂದು ಕೆ. ಪಿ. ಜಿ. ಯವರು ಆಕ್ಷೇಪಿಸುವುದು. ಇವರ ಅಭಿಪ್ರಾಯವು ಉಭಯಾರ್ಥವುಳ್ಳದ್ದಾಗಿದೆ. ಕೌನ್ಸಿಲ್ ಮೆಂಬರುಗಳ ಸಮ್ಮತಿ ಇಲ್ಲದೆ ಇನ್ಸ್‌ಪೆಕ್ಟರ ಮಾತಿನಂತೆ 3,500 ರುಪಾಯಿ ಮಂಜೂರು ಮಾಡಿದ್ದು ತಪ್ಪೆಂತಲೋ (2) ಅಥವಾ ಅಷ್ಟು ಹಣವನ್ನು ಮಂಜೂರು ಮಾಡಿದ್ದೇ ತಪ್ಪೆಂತಲೋ. ಈ ಎರಡು ಅಭಿಪ್ರಾಯಗಳನ್ನು ಬೇರೆ ಬೇರೆ ವಿಮರ್ಷೆ ಮಾಡುವ ಆದಿಯಲ್ಲಿ ಯಾವ ಮಹತ್ಕಾರ್ಯಗಳನ್ನೂ ಸೂಕ್ಷ್ಮರೂಪದಲ್ಲಿಯೇ ಪ್ರಾರಂಭಿಸುವದು. ಅತ್ತಿ ಮರ ಬಹು ಸೂಕ್ಷ್ಮವಾಗಿರುವ ಅತ್ತಿ ಬೀಜದಿಂದ ಹುಟ್ಟಿ ಕ್ರಮೇಣ ಬಹು ದೊಡ್ಡ ಮರವಾಗುವುದು. ನಮ್ಮ ಮಡಿಕೇರಿ ಹುಡುಗರ ಹೈ ಸ್ಕೂಲು ಸಹ ಆದಿಯಲ್ಲಿ ಬಹು ಸೂಕ್ಷ್ಮರೂಪದಿಂದಲೇ ಪ್ರಾರಂಭಿಸಿ ಬಹು ವರುಷ ಒಂದೇ ಸ್ಥಿತಿಯಲ್ಲಿ ಅಲೆಯುತ್ತಿದ್ದು ಬರುತ್ತಾ ಬರುತ್ತಾ ವೃದ್ಧಿಗೆ ಬಂದಿರುವುದೇ ಹೊರ್ತು ಎತ್ತಿಕೊಳ್ಳುತ್ತಲೇ ಅದು ಈಗಿನ ಸ್ಥಿತಿಗೆ ಬಂದದ್ದಲ್ಲ. ಸಾಧಾರಣ ಈಗ್ಯೆಗೆ ನಲುವತ್ತು ವರುಷಗಳ ಹಿಂದೆ ಮಡಿಕೇರಿಯಲ್ಲಿ ಮೆಟ್ರಿಕ್ಯುಲೇಶನ್ ಕ್ಲಾಸು ಇಟ್ಟ ವರುಷ ಎರಡು ವಿದ್ಯಾರ್ಥಿಗಳು ಮಾತ್ರ ಪಾಸಾದರು. ಅದರನಂತರ ಕ್ರಮಶಃ ಕೆಲವು ವರುಷಗಳ ವರೇಗೆ ಪಾಸಾದವರ ಸಂಖ್ಯೆ ಬಹು ಕಮ್ಮಿ. ಹೀಗಿದ್ದರೂ ಸರಕಾರದವರು ಆ ಶಾಲೆಯ ಖರ್ಚು ವೆಚ್ಚ ಪೋಷಣ ಮಾಡುವುದಕ್ಕೆ ಬದಲಾಗಿ ಹೆಚ್ಚಿಸುತ್ತಾ ಬಂದಿರುವರೇ ಹೊರ್ತು ಬೇರೆ ಅಲ್ಲ. ಒಂದುವೇಳೆ ಆ ಕಾಲದಲ್ಲಿ ಕೊಡಗು ದೇಶಕ್ಕೆ ಕೌನ್ಸಿಲ್ ಕೊಟ್ಟಿದ್ದು, ಮೆಂಬರುಗಳು ಶಾಲೆ ಖರ್ಚನ್ನು ಪೋಷಣ ಮಾಡಿ ಆ ಶಾಲೆಯ ಏಳಿಗೆಯನ್ನೂ ನಿರ್ಮೂಲ ಮಾಡಿದ್ದರೆ ಈಗ ಬಳವಳಿ ಮಾಡುವ ಯುವಕರು ಎಷ್ಟರ ಮಟ್ಟಿಗೆ ವಿದ್ಯಾ ವಿಹೀನರಾಗಿರುತ್ತಿದ್ದರೆಂಬದನ್ನು ಚೆನ್ನಾಗಿ ಗ್ರಹಿಸಬೇಕಾಗಿದೆ. ತದ್ವತ್ ಕಾನ್ವೆಂಟ್ ಶಾಲೆಯು ಸಹ ಪ್ರಕೃತದಲ್ಲಿ ಸೂಕ್ಷ್ಮಸ್ಥಿತಿಯಲ್ಲಿದ್ದರೂ ತಕ್ಕ ಉತ್ತೇಜನ ಕೊಡುತ್ತಾ ಬಂದಲ್ಲಿ ಕ್ರಮೇಣ ವೃದ್ಧಿಗೆ ಬರುವಲ್ಲಿ ಸಂಶಯವಿಲ್ಲ. ಕೊಡಗು ಸರಕಾರದವರು ದಯವಿಟ್ಟು ಜನರ ಹಿತಕ್ಕಾಗಿ ಕೊಟ್ಟಿರುವ ಕಾನ್ವೆಂಟ್ ಹೈ ಸ್ಕೂಲನ್ನು ಉತ್ತೇಜನಕೊಟ್ಟು ಅದನ್ನು ಉಚ್ಚ್ರಾಯ ಸ್ಥಿತಿಗೆ ತರುವುದಕ್ಕೆ ಬದಲು ಅದರ ಬೇರನ್ನೇ ಕಡಿದು ಹಾಕಬೇಕೆಂದು ಉದ್ಯುಕ್ತ ಪಟ್ಟಿರುವುದು ಮರ ಹತ್ತಿ ಬುಡ ಕಡಿದ ಬುದ್ಧಿವಂತಿಕೆಯೇ ಸರಿ.

ಸರಕಾರದವರು ಕೌನ್ಸಿಲ್ ಮೆಂಬರುಗಳ ಅಭಿಪ್ರಾಯವನ್ನುಲ್ಲಂಘಿಸಿ, ಇನ್ಸ್‌ಪೆಕ್ಟರ್ ಸಾಹೇಬರ ಸಲಹೆಯನ್ನು ಅನುಮೋದಿಸಿ ಕಾನ್ವೆಂಟ್ ಶಾಲೆಗೆ 3,500 ರುಪಾಯಿ ಕೊಟ್ಟದ್ದು ತಪ್ಪೆಂಬದು ಕೆ. ಪಿ. ಜಿ. ಯವರ ಆಕ್ಷೇಪಣೆ. ಇನ್ಸ್‌ಪೆಕ್ಟರ್ ಸಾಹೇಬರು ವಿದ್ಯಾ ಇಲಾಖೆಯಲ್ಲಿ ಬಹು ವರುಷದ ಅನುಭವಶಾಲಿ. ಶಾಲೆಗಳ ವಿಷಯದಲ್ಲಿ ಅವರಿಗಿರುವಷ್ಟು ಪರಿಶ್ರಮ ಬೇರೆಯವರು ಬೇರೆ ಸಂಗತಿಗಳಲ್ಲಿ ಬುದ್ಧಿವಂತರಾಗಿದ್ದ ಬಹುದಾದರೂ ಅವರುಗಳಿಗೆ ಇರುವುದು ಅಸಂಭವ. ವೈದ್ಯ ಇಲಾಖೆಗೆ ಡಾಕ್ಟರು, ಡಿ. ಪಿ. ಡಬ್ಲ್ಯುಗೆ ಇಂಜಿನೀಯರು, ವಿದ್ಯಾ ಇಲಾಖೆಗೆ ಇನ್ಸ್‌ಪೆಕ್ಟರು ಸಾಹೇಬರು. ಇವರುಗಳಿಗೆ ಆಯಾಯ ಡಿಪಾರ್ಟ್‌ಮೆಂಟಿನ ಅನುಭವ ಇರುವಷ್ಟು ಅನುಭವ, ಆಲೋಚನೆ ಮತ್ತು ಗ್ರಹಣ ಶಕ್ತಿ ಇತರರಿಗೆ ಅವರು ಎಷ್ಟು ಬುದ್ಧಿವಂತರಾದಾಗ್ಯೂ, ಇದೆ ಎಂದು ಹೇಳಿಕೊಳ್ಳುವುದು ಬರೀ ಅಹಂಭಾವ. ಕೌನ್ಸಿಲ್ ಮೆಂಬರುಗಳ ಅನುಭವ ಬಹು ಸ್ವಲ್ಪ ಕಾಲದ್ದು. ಇನ್ಸ್‌ಪೆಕ್ಟರ್ ಸಾಹೇಬರದು ಬಹು ಕಾಲದ್ದು. ಅಷ್ಟಲ್ಲದೆ ಇನ್ಸ್‌ಪೆಕ್ಟರ್ ಸಾಹೇಬರು ಕಾನ್ವೆಂಟ್ ಶಾಲೆಗೆ ಗ್ರಾಂಟ್ ಕೊಡಿಸಿದ್ದು ಅವರ ಮಕ್ಕಳ ವಿದ್ಯಾಭಿವೃದ್ಧಿಗಲ್ಲ. ದೇಶದ ಕ್ಷೇಮಕ್ಕೆ. ಈ ದೇಶದ ವಿದ್ಯಾಭಿವೃದ್ಧಿಯ ಸದುದ್ದೇಶವನ್ನೇ ಪ್ರಾಮುಖ್ಯವಾಗಿಟ್ಟುಕೊಂಡು, ನಮ್ಮ ಇನ್ಸ್‌ಪೆಕ್ಟರ್ ಸಾಹೇಬರು ಸರಕಾರಕ್ಕೆ ವಾಗಿ ಕೊಟ್ಟ ಸಲಹೆಗಳನ್ನು ಘನವಾದ ಚೀಫ್ ಕಮಿಷನರ್ ಸಾಹೇಬರು, ತನಗೆ ತೃಪ್ತಿಕರವಾಗಿ ತೋರಿದ್ದರಿಂದ ಮಂಜೂ

ರು ಮಾಡಿದ್ದು ಕೊಡಗಿನ ನಮ್ಮ ಭಗಿನಿಯರ ವಿದ್ಯಾಭಿವೃದ್ಧಿಯ ಕ್ಷೇಮಚಿಂತಕರು ಯಾರೂ ಆಕ್ಷೇಪಿಸುವಂತಿಲ್ಲ. ಅದರ ಬದಲು ಸಾಹೇಬರ ಮಂಜೂರಾತಿಯನ್ನು ವಂದನಾಪೂರ್ವಕ ಪರಿಗ್ರಹಿಸುವುದೇ ನಿಷ್ಪಕ್ಷಪಾತಿಗಳ ಕರ್ತವ್ಯ. ಆದಕಾರಣ ಕೊಡಗು ದೇಶದ ಜನರೇ ತಮಗೆ ಬಾಲಿಕಾ ಹೈ ಸ್ಕೂಲು ಕೊಡಬೇಕೆಂದು ಸರಕಾರದವರನ್ನು ಒತ್ತಾಯಪಡಿಸಬೇಕಿತ್ತು. ಅದರ ಬದಲು ಸರಕಾರದವರೇ ಅಂಥಾ ಹೈ ಸ್ಕೂಲು ಕೊಟ್ಟದ್ದು ಅದನ್ನು ವಂದನಾಪೂರ್ವಕವಾಗಿ ಪರಿಗ್ರಹಿಸುವುದು ನ್ಯಾಯವಾಗಿದೆ.

ಕೆ. ಪಿ. ಜಿ. ಯವರ ಇನ್ನೊಂದು ಸಲಹೆ ಏನೆಂದರೆ 5 ಮತ್ತು 6ನೇ ಫಾರಂನಲ್ಲಿರುವ ಅಲ್ಪ ಸಂಖ್ಯೆ ವಿದ್ಯಾರ್ಥಿನಿಯರಿಗೆ ಅಷ್ಟೊಂದು ಹೆಚ್ಚಿನ ಗ್ರಾಂಟು ಕೊಡುವದು ತಪ್ಪು, ಮತ್ತು ಅಂಥಾ 5 ಮತ್ತು 6ನೇ ಫಾರಂನ ವಿದ್ಯಾರ್ಥಿಗಳು ಮಡಿಕೇರಿ ಬಾಲಕರ ಸೆಂಟ್ರಲ್ ಹೈ ಸ್ಕೂಲಿನಲ್ಲಿ ವ್ಯಾಸಂಗ ಮಾಡಲಿ ಎಂಬದು. ವಿದ್ಯಾ ವಿಶಾರದರಾದ ಮತ್ತು ನವನಾಗರೀಕತೆಯಲ್ಲಿ ನಮಗಿಂತ ಎಷ್ಟೋ ಮುಂದುವರಿದಿರುವ ಪಾಶ್ಚಾತ್ಯರು ಸಹ ಬಾಲಕ ಬಾಲಿಕೆಯರನ್ನು ಮಿಶ್ರ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡಿಸಲು ಬಹು ಮಂದಿ ವಿಮುಖರಾಗಿದ್ದಾರೆ. ನಮ್ಮ ಭಾರತ ಮಹಿಳೆಯರಂತು ಇದಕ್ಕೆ ಎಂದೂ ಸಮ್ಮತಿಸರು. ಕೆ. ಪಿ. ಜಿ. ಯವರ ಈ ಅಭಿಪ್ರಾಯ 3ನೇ ಸ್ಟೇಂಡಾರ್ಡ್ ವರೇಗೆ ಸಲ್ಲಬಹುದು. ಅದಕ್ಕೆ ಮೇಲ್ಪಟ್ಟ ತರಗತಿಗಳಲ್ಲಿ ಬಾಲಕ ಬಾಲಿಕೆಯರನ್ನು ಪ್ರತ್ಯೇಕಿಸಿ ವ್ಯಾಸಂಗ ಮಾಡಿಸುವುದು ಅವಶ್ಯ. ಮೇಲಿನ ತರಗತಿಗಳಲ್ಲಿ ಮಿಶ್ರ ವಿದ್ಯಾಭ್ಯಾಸ ಮಾಡುತ್ತಿದ್ದ ಕೆಲವು ಶಾಲೆಗಳಲ್ಲಿ ನಡೆದಿರುವ ಕೆಲವು ಅವಿವೇಕಗಳೂ ಅಭಾಸಗಳೂ ನಮ್ಮ ಕೆ. ಪಿ. ಜಿ. ಯವರ ತಿಳುವಳಿಕೆಯಲ್ಲಿ ಇರಬಹುದು. ಇಂಥಾ ಅಸಂಬದ್ಧದ ನಡತೆಗೆ ಬಾಲಿಕೆಯರನ್ನು ಬಲಿ ಕೊಡುವುದಕ್ಕೆ ಆಸ್ಪದ ಕೊಡುವುದು ಎಷ್ಟು ಮಾತ್ರಕ್ಕೂ ಸಮ್ಮತವಲ್ಲ. ನಮ್ಮ ಭಾರತ ಗರತಿಯರು ತಮ್ಮ ಹೆಣ್ಣು ಮಕ್ಕಳಿಗೆ ವಿದ್ಯೆ ಇಲ್ಲದಿದ್ದರೂ ಚಿಂತೆ ಇಲ್ಲ. ಅವರ ಮಾನಕ್ಕೆ ಕುಂದಕ ಬರಬಹುದಾದ ಸ್ಥಳಕ್ಕೆ ಅವರನ್ನು ಕಳುಹಿಸಿಕೊಡುವುದಕ್ಕೆ ಒಪ್ಪುವುದಿಲ್ಲ. ಇಷ್ಟಲ್ಲದೆ ಹತ್ತು ವರುಷ ಮೀರಿದ ಬಾಲಿಕೆಯರಿಗೆ ಸ್ತ್ರೀಯರಿಂದ ವಿದ್ಯಾಭ್ಯಾಸ ಯುಕ್ತವೇ ಹೊರ್ತು ಗಂಡಸರೇ ಪ್ರಧಾನರಾಗಿ ಗಂಡು ಶಾಲೆಯ ರೀತಿಯಾದ ವಿದ್ಯಾಭ್ಯಾಸವು ಹೆಣ್ಣು ಹುಡುಗಿಯರಿಗೆ ಯೋಗ್ಯವಲ್ಲ. ವಿದ್ಯಾರ್ಥಿಗಳಿಗೆ ಉಪಾಧ್ಯಾಯರೇ ಉದಾಹರಣೆ. ಉಪಾಧ್ಯಾಯರುಗಳಿಂದ ಶಿಕ್ಷಣ ಹೊಂದುವ ಬಾಲಿಕೆಯರು ಗಂಡು ಬೀರಿಗಳಾಗಿ ಪುರುಷರ ಸ್ವಭಾವ ಗುಣಗಳನ್ನು ಅವಲಂಬಿಸುತ್ತಾರೆಯೇ ಹೊರ್ತು ಸ್ತ್ರೀಯರಿಗೆ ಇರಬೇಕಾದ ಲಜ್ಜೆ, ಸ್ತ್ರೀ ಧರ್ಮ, ನಯವಿನಯ, ತಾಳ್ಮೆ, ಇನ್ನೂ ಅನೇಕ ಇವೆ. ಇವುಗಳಿಗೆಲ್ಲಾ ಬಹಿಷ್ಕಾರ ಹಾಕುತ್ತಾರೆ. ಮತ್ತು ಹುಡುಗರ ಶಾಲೆಯಲ್ಲಿ ಓದುವ ಬಾಲಿಕೆಯರಿಗೆ ಇನ್ನೊಂದು ಹೆಚ್ಚಿನ ತೊಂದರೆ ಯಾವುದೆಂದರೆ, ಪಾಠದಲ್ಲಿ ತಮಗೇನಾದರೂ ತಿಳಿಯದ ಅಂಶ ಬಂದರೆ, ಆ ಅನುಮಾನವನ್ನು ಮಾಸ್ಟರ ಹತ್ತಿರ ಚರ್ಚೆ ಮಾಡಿ ತಿಳಿದುಕೊಳ್ಳುವುದಕ್ಕೆ ಅವರು ಧೈರ್ಯಪಡುವುದಿಲ್ಲ. ಅವರ ಅನುಮಾನವು ಅನುಮಾನದಂತೇ ಬಾಕಿ ನಿಲ್ಲುತ್ತದೆ. ಅದು ಹೊರ್ತು ತುಂಬಾ ಹುಡುಗರಿರುವ ಸ್ಥಳದಲ್ಲಿ ಹುಡುಗಿಯರು ಕೆಲವರು ಮಾತ್ರ ಇರುವುದರಿಂದ ಹುಡುಗರ ಮಧ್ಯದಲ್ಲಿ ಇವರಿಗೆ ಬಂಧನದಲ್ಲಿಟ್ಟಂತಾಗುವುದು. ಈ ಕಾರಣಗಳಿಂದ ಪ್ರಾಯ ಪ್ರಬುದ್ಧರಾಗಿ ಬರುತ್ತಿರುವ ವಿದ್ಯಾರ್ಥಿನಿಯರನ್ನು ಹುಡುಗರ ಒಂದೇ ತರುಣರ ತರಗತಿಯಲ್ಲಿ ಸೇರಿಸಿಕೊಂಡು ವಿದ್ಯಾಭ್ಯಾಸ ಮಾಡಿಸುವುದು ಪೂರ್ಣ ತಿರಸ್ಕಾರವೇ ಸರಿ. ಯಾವ ಕಾರಣದಿಂದಲಾದರೂ ಸ್ತ್ರೀಯರ ಮಾನ ಪರೀಕ್ಷೆಯಾದ ಪಕ್ಷದಲ್ಲಿ ಅವರ ಜೀವನವೇ ಹಾಳಾದಂತಾಗುವದು. ನಮ್ಮ ಬಾಲಿಕೆಯರನ್ನು ಸಾವಿತ್ರಿ, ದ್ರೌಪದಿ, ಸೀತಾ, ಚಂದ್ರಮತಿ, ಅಹಲ್ಯಾಬಾಯಿ, ಪದ್ಮಿನಿ ಇಂಥವರ ಮೇಲ್ಪಂಕ್ತಿಯನ್ನು ಅನುಸರಿಸಿ ನಡೆಸತಕ್ಕ ವಿದ್ಯಾವತಿಯರನ್ನಾಗಿ ಮಾಡಬೇಕಲ್ಲದೆ, ಬರೀ ಬೂಟಾಟಿಕೆ ವಿದ್ಯೆಯು ಸಾರ್ಥಕವಲ್ಲ. ಈ ಕಾರಣಗಳಿಂದ ಹೆಣ್ಣು ಮಕ್ಕಳು ಹೆತ್ತ ತಂದೆ ತಾಯಿಗಳು ತಮ್ಮ ಬಾಲಿಕೆಯರ ಉತ್ತರೋತ್ತರದ ಯಶಸ್ಸಿನಲ್ಲಿ ದೃಷ್ಟಿ ಇಟ್ಟು ತಮ್ಮ ಬಾಲಿಕೆಯರನ್ನು ಬಾಲಿಕಾ ಶಾಲೆಗೇನೇ ಸೇರಿಸಿ ವಿದ್ಯಾಭ್ಯಾಸ ಮಾಡಿಸುವರೆಂದು ಕೋರಬೇಕಾಗಿದೆ. ಸರಕಾರದವರು ಸಹ ಬಾಲಿಕಾ ಪಾಠಶಾಲೆ ಇರುವ ಸ್ಥಳದಲ್ಲಿ 3ನೇ ಸ್ಟೇಂಡಾರ್ಡ್ ಮೇಲ್ಪಟ್ಟ ಬಾಲಕ ಶಾಲೆಗೆ ಬಾಲಿಕೆಯರನ್ನು ಸೇರಿಸಕೂಡದೆಂದು ರೂಲ್ಸು ಮಾಡುವದು ಯುಕ್ತ. ಇನ್ನೊಂದು ವಿಷಯ ಈ ಸಮ್ಬಂಧದಲ್ಲಿ ಆಲೋಚಿಸಬೇಕಾಗಿದೆ. ವಿದ್ಯಾರ್ಥಿನಿಯರನ್ನು ಹುಡುಗರ ಹೈ ಸ್ಕೂಲು ತರಗತಿಗಳಿಗೆ ಸೇರಿಸಿದರೆ, ಸ್ಥಳ ಸಂಕೋಚದಿಂದ ಅಷ್ಟೇ ಹುಡುಗರನ್ನು ಅವರು ಸೇರುವುದಕ್ಕೆ ಯೋಗ್ಯರಾಗಿದ್ದರು. ಸೇರಿಸಿಕೊಳ್ಳುವುದಕ್ಕೆ ಅನುಕೂಲವಿಲ್ಲದಂತಾಗಿ ಅವರ ವಿದ್ಯಾ ವ್ಯಾಸಂಗಕ್ಕೆ ಮಣ್ಣು ಹಾಕಿದಂತಾಗುವುದು.

ಈ ಎಲ್ಲಾ ಕಾರಣಗಳಿಗೂ ಕೊಡಗು ದೇಶದ ಮಹನೀಯರುಗಳೂ ಮತ್ತು ಸರಕಾರದವರು ಸಹ ಹೆಚ್ಚು ಗಮನಕೊಟ್ಟು ಅಲ್ಲಲ್ಲಿ ಮುಖ್ಯವಾದ ಸ್ಥಳಗಳಲ್ಲಿ (ಇವುಗಳ ಪೈಕಿ ವೀರಾಜಪೇಟೆ ಒಂದು ಪ್ರಾಮುಖ್ಯವಾದ ಸ್ಥಳ) ಹೆಚ್ಚು ಬಾಲಿಕಾ ಶಾಲೆಗಳನ್ನು ಸ್ಥಾಪಿಸಿ, ಮಡಿಕೇರಿ ಕಾನ್ವೆಂಟ್ ಶಾಲೆಯನ್ನು ಇನ್ನೂ ವೃದ್ಧಿಗೆ ತಂದು ಬಾಲಿಕಾ ವಿದ್ಯಾಭ್ಯಾಸವನ್ನು ವೃದ್ಧಿಗೊಳಿಸಬೇಕೆಂದು ಪ್ರಾರ್ಥನೆ. ತತ್ಕಾಲ ವೀರಾಜಪೇಟೆ ಬಾಲಿಕಾ ಶಾಲೆಯನ್ನು ಹೈ ಸ್ಕೂಲು ದರ್ಜೆಗೆ ತರುವುದು ಆವಶ್ಯವಾದ ಸಂಗತಿಯಾಗಿದೆ. ಈ ಕಡೇ ಅಂಶದಲ್ಲಿ, ಕೊಡಗು ಸರಕಾರವು ಕೌನ್ಸಿಲ್ ಮೆಂಬರುಗಳೂ ಸಹ ಒಮ್ಮನಸ್ಸಿನಿಂದ ವೀರಾಜಪೇಟೆ ಬಾಲಿಕಾ ಶಾಲೆಯನ್ನು ವರುಷ ಒಂದಕ್ಕೆ ಒಂದೊಂದು ದರ್ಜೆಯಂತೆ ಏರಿಸುತ್ತಾ, ಇನ್ನು ಆರು ವರುಷದಲ್ಲಿ ಕಂಪ್ಲೀಟ್ ಹೈ ಸ್ಕೂಲು ದರ್ಜೆಗೆ ತಂದು ದಕ್ಷಿಣ ಕೊಡಗಿನ ವಿದ್ಯಾರ್ಥಿನಿಯರ ವಂದನಾಪೂರ್ವಕವಾದ ಕೃತಜ್ಞತೆಗೆ ಪಾತ್ರರಾಗಬೇಕೆಂಬ ನನ್ನ ವಿನಯಪೂರ್ವಕವಾದ ಅರಿಕೆ.

ಇನ್ನೊಂದು ಸ್ವಲ್ಪ ವಿಷಯದಲ್ಲಿ ನಮ್ಮ ಕೆ ಪಿ ಜಿ ಯವರು ಮಾಡಿರುವ ತಪ್ಪು ಅಭಿಪ್ರಾಯಗಳನ್ನು ಹೋಗಲಾಡಿಸಿ ನನ್ನ ಈ ಬರವಣಿಗೆಯನ್ನು ಪರಿಸಮಾಪ್ತಿ ಮಾಡುತ್ತೇನೆ. ಎರಡು ಹುಡುಗಿಯರಿಗೆ ಪಾಠ ಹೇಳುವುದಕ್ಕಾಗಿ ಮಾಹೆಯಾನ 80 ರೂಪಾಯಿ ಸಂಬಳದ ಉಪಾಧ್ಯಾಯರನ್ನು ನೇಮಿಸಿರುತ್ತಾರೆಂಬುದು ನಮ್ಮ ಕೆ ಪಿ ಜಿ ಯವರ ಇನ್ನೊಂದು ಆಕ್ಷೇಪಣೆ. ಈ ಅವರ ಗ್ರಹಿಕೆಯು ಶುದ್ಧ ತಪ್ಪು. ಕಾನ್ವೆಂಟಿನಲ್ಲಿ 80 ರೂಪಾಯಿ ಸಂಬಳದ ಉಪಾಧ್ಯಾಯರು ಬಿ. ಎ. ಪರೀಕ್ಷೆಯಲ್ಲಿ ಗಣಿತದಲ್ಲಿ ಉತ್ತೀರ್ಣರಾದವರು. ತರ್ಡ್ ಫಾರಂನಿಂದ ಮೊದಲು ಮೇಲಿನ ಫಾರಂಗಳಿಗೆ ಗಣಿತದಲ್ಲಿ ಈಗಿನ ರೀತಿಯಲ್ಲಿ ಪಾಠ ಬೋಧಿಸಬೇಕಾದರೆ ಗಣಿತದಲ್ಲಿ ಬಿ. ಎ. ಪರೀಕ್ಷೆಯಾದವರಿಗಿಂತ ಕಮ್ಮಿ ದರ್ಜೆಯವರಿಗೆ ಸಾಧ್ಯವಿಲ್ಲ. ಈ ಗಣಿತಜ್ಞರಾದ ಉಪಾಧ್ಯಾಯರು 6ನೇ ಫಾರಂನ ವಿದ್ಯಾರ್ಥಿನಿಯವರಿಗೆ ಮಾತ್ರವಲ್ಲ. ಎರಡನೇ ಫಾರಂನಿಂದ ಮೊದಲುಗೊಂಡು 6ನೇ ಫಾರಂನ ವರೇಗೂ ಪಾಠ ಹೇಳುತ್ತಾರೆ. ಇವರು ವಾರ ಒಂದಕ್ಕೆ 27-28 ಪೀರಿಯಡ್ ಪಾಠ ಹೇಳುತ್ತಾರೆ. ಈ ಉಪಾಧ್ಯಾಯರು ಬೇರೆ ಶಾಲೆಯಲ್ಲಿದ್ದಿದ್ದರೆ ಇವರಿಗೆ ಮಾಹೆಯಾನ 150 ರೂಪಾಯಿ ಸಿಕ್ಕುತ್ತಿತ್ತು. ಕಾನ್ವೆಂಟ್ ಶಾಲೆಯಲ್ಲಿ ಉಪಾಧ್ಯಾಯರಾಗಿ ಇವರು ಸಿಕ್ಕಿದ್ದು ಅಲ್ಲಿಯ ವಿದ್ಯಾರ್ಥಿನಿಯವರ ಪುಣ್ಯವೇ ಸರಿ. ಕೆಳಗಿನ ತರಗತಿಗಳಿಂದಲೇ ಗಣಿತದಲ್ಲಿ ಅಸ್ತಿವಾರ ಕಟ್ಟುವುದಕ್ಕೆ ಇವರಲ್ಲದೆ ಇನ್ನೊಬ್ಬ ಗಣಿತಜ್ಞರನ್ನು ಸಹ ನೇಮಕ ಮಾಡುವುದು ಶಾಲೆಯ ಅಭಿವೃದ್ಧಿಗೆ ಅವಶ್ಯವೆಂದರಿಯಬೇಕು. ಪ್ರಕೃತದಲ್ಲಿ ಈ ನನ್ನ ಲೇಖನವನ್ನು ಇಲ್ಲಿ ಸಮಾಪ್ತಿ ಮಾಡುವೆನು.

ಯು. ಎಸ್ ಆರ್

ಬೇಂಗುನಾಡು ತಕ್ಕಾಮೆ.

ಮಹನೀಯರೆ,

ಪಟ್ಟಮಾಡ ಕುಶಾಲಪ್ಪನವರ ಕಳೆದ ಸೆಪ್ಟಂಬರು ತಾರೀಕು 19ರ ಪತ್ರಿಕೆಯಲ್ಲಿ "ಮಾಲಟ್ಟಿ ಕೊಟ್ಟಂಡ ತಕ್ಕಾಮೆ ಗೊಂಡ್ ಬೇಂಗ್‌ನಾಡ್ ಪುಲಿಮಾಡಿ ಪೋಚಂದಾ" ಪಟ್ಟೋಲೆ ಪಳಮೆಯಲ್ಲು ಓದಿದೆ. ಆ ಮಣ್ಣು ತನ್ನ ಮನೆ ಹತ್ತಿರಾಗಿ ಇರುವದರಿಂದ ಬೇಂಗುನಾಡಿಗೆ ತನ್ನ ಮನೆಯವರು ಒಬ್ಬರೆ ತಕ್ಕರು, ಇನ್ನಾರು ತಕ್ಕರಲ್ಲವೆಂಬದಾಗಿ ಡಂಬ ಹೇಳಿಕೊಂಡದ್ದಕ್ಕೆ ಮಾಲಟ್ಟಿ ಕೊಟ್ಟನ ಚರಿತ್ರೆಯನ್ನು ಮತ್ತು ತಕ್ಕಾಮೆ ಸಂಗತಿಯನ್ನು ಸಹ ಸಂಕ್ಷೇಪವಾಗಿ ಕಳೆದ ಅಕ್ಟೋಬರು ತಾರೀಕು 10ರ ಪತ್ರಿಕೆಯಲ್ಲಿ ನಾನು ಪ್ರಚಾರಪಡಿಸಿರುತ್ತೇನೆ. ಅದಕ್ಕೆ ನಿಗ ಇಡದೆ ಪುನಹ ಕುಶಾಲಪ್ಪನವರು ಕಳೆದ ಜನವರಿ ತಾರೀಕು 23ರ ಪತ್ರಿಕೆಯಲ್ಲಿ ಪಾಳ್ಯಗಾರರು 8ರ ಪೈಕಿ ಮಾಲಟ್ಟಿ ಕೊಟ್ಟನು ಸಹ ಪಾಳ್ಯಗಾರನಾಗಿಯೂ ನಾಡು ತಕ್ಕರಾಗಿದ್ದನೆಂಬ ವಿಸ್ತಾರವಾಗಿ ಉಪನ್ಯಾಸಪಡಿಸಿದ್ದು ನೋಡಲಾಯಿತು. ಒಬ್ಬ ಬಾಯಿ ಹಿಡುವಳಿದಾರನಲ್ಲದೆಯೂ ಕೊಡವನಲ್ಲದೆಯೂ ಸಹ ಇದ್ದ ಮಾಲಟ್ಟಿ ಕೊಟ್ಟನೆಂಬ ಪುಂಡು ಕಾಕನು ನಾಡು ತಕ್ಕನಾಗಿದ್ದನೆಂತ ಹೇಳುವವನು ಹೆಡ್ಡನಾದರೂ ಕೇಳುವವರು ಕಿವುಡರಲ್ಲ. ಕೊಡವ ತಕ್ಕಾಮೆಯು ಜನ್ಮ ಹಿಡುವಳಿದಾರನಾಗಿಯೂ ಕೊಡವನಾಗಿಯೂ ಇರುವವರಿಗೆ ಹೊರ್ತು ಇತರ ಕುಲಸ್ಥರಿಗೆ ಇರುವದಿಲ್ಲ. ಈ ಸಂಗತಿಯನ್ನು ನಾನು ಮೊದಲೇ ವಿವರಿಸಿರುತ್ತೇನೆ. ಇಂಥಾ ಪುಂಡು ಕಾಕರು ಕಳ್ಳ ಪಾಳೆಗಾರರು ಸಹ ಒಂದೊಂದು ಸ್ಥಳಗಳಲ್ಲಿ ಸ್ವಲ್ಪ ಕಾಲ ಇದ್ದ ಮಾತ್ರಕ್ಕೆ ಪಾಲೆಕಾಡ ಮನೆಯವರು ಮಾತಂಡ ಮನೆಯವರು ಪಟ್ಟಂ ಕುಟುಂಬಸ್ಥರು ತಕ್ಕರೆನಿಸಿಕೊಂಡದ್ದಿಲ್ಲ. ಈಗಲವರು ಅನುಭವಿಸಿಕೊಂಡು ಬರುವ ಹಿಡುವಳಿಯು ತಕ್ಕಾಮೆ ಮಣ್ಣು ಆದ್ದರಿಂದ ಅಂಥವರೆಲ್ಲ ತಕ್ಕರೆನಿಸಿಕೊಂಡವರಾಗಿದೆ. ಪೂರ್ವದಲ್ಲಿ ನಮ್ಮ ನಾಡಿನಲ್ಲಿ ಪಟ್ಟಮಾಡ ಮನೆತನದವರು ಇರಲಿಲ್ಲ. ಈಚೆಗೆ ಶ್ರೀಮಂಗಲ ಪಟ್ಟಮಾಡ ಮನೆಯವರು ಈ ನಾಡಿಗೆ ಬಂದು ಈಗ ಅವರು ಅನುಭವಿಸಿಕೊಂಡು ಬರುವ ವರ್ಗಗಳು ಜಮಾದಾರ, ಸ್ಥಾನಿಕ ಮುಕ್ಕಾಟಿ ಮತ್ತು ಮಂಗೇರಿರ ಭೂಮಿ ಹಿಡುವಳಿಯಾಗಿದೆ. ಈ ಮಣ್ಣು ಯಾವಾಗ್ಲೂ ತಕ್ಕಾಮೆ ಮಣ್ಣು ಅಲ್ಲ. ಆದ್ದರಿಂದ ಬೇರೆ ನಾಡು ತಕ್ಕರಂತೆ ಇವರನು ಎಣಿಸಬೇಕಾಗುವದಿಲ್ಲ. ಈ ದೇಶದ ಕೊಡವ ಮನೆತನಗಳಿಗೆ ಯಾವಾಗ ಪ್ರತ್ಯೇಕ ಪ್ರತ್ಯೇಕ ಹೆಸರು ಬಂತೋ ಆ ಕಾಲದಲ್ಲಿಯೇ ತಕ್ಕಾಮೆ ಸಹ ಸ್ಥಾಪಿಸಿದ್ದಾಗಿದೆ. ಆ ಲಾಗಾಯಿತಿನಿಂದ ಎಲ್ಲಾ ನಾಡು ತಕ್ಕರಂತೆ ಈ ನಾಡಿಗೆ ನಾವು ಮತ್ತು ತೇಲಪಂಡ ಮನೆಯವರು ಸಹ ತಕ್ಕರಾಗಿ ತಕ್ಕಾಮೆ ನಡವಳಿಕೆಗಳೆಲ್ಲಾ ಬಾಬಿಯಿಂದ ನಡೆದು ಬರುತ್ತವೆ.

ಮತ್ತು ನಮ್ಮಂಥವರಾಗಿ ನಡೆಯುವ ಮೂರು ಊರುಗಳಲ್ಲಿ ನಾಯಕರ ಮನೆಗೆ ಊರವರು ಬಂದು ಊಟ ವಗೈರೆ ತೀರಿಸಿಕೊಂಡು ಪದ್ಧತಿ ಮೇರೆ ನಾವೆಲ್ಲರೂ ಸೇರಿ ಅಲ್ಲಿಯಣ ಕೆಲಸಗಳ ತೀರಿಸಿ ಪುನಹ ಮನೆಗೆ ಬರುವದು ರೂಢಿಯಲ್ಲಿದೆ. ನಾಡು ಕೋಲು ದಿನ ನಾಡು ಮಂದಿನಲ್ಲಿ ತಕ್ಕರಾದ ನಮಗೆ ಕೊಡುವ ಮಂಬು ಮತ್ತು ತಕ್ಕರು ನಾಡವರಿಗೆ ತಕ್ಕಾಮೆ ಮರ್ಯಾದೆ ಹಣ ಕೊಡುವದು ಸಹ ನಮ್ಮ ಎರಡು ತಕ್ಕರಲ್ಲಿಯೂ ಜಾರಿಯಲ್ಲು ಇದೆ. ತಪ್ಪೊಡಕ ಕಟ್ಟುವಾಗ ನಾವು ಎರಡು ತಕ್ಕರ, ದೇವ ತಕ್ಕರ, ಎಳಕುಕಾರರ ಮತ್ತು ಕಾವುಕಾರರು ವಗೈರೆ ಕುಳಗಳ ಹೆಸರುಗಳನ್ನು ಪ್ರತ್ಯೇಕ ಪ್ರತ್ಯೇಕ ಎತ್ತಿ ಕರೆಯುವದು ಜಾರಿಯಲ್ಲಿದೆ. 1910ನೆ ಇಸವಿಯಲ್ಲು ಇದ್ದ ಮೆಲರಾ ಕಮಿಶನರ್ ಸಾಹೇಬರವರು ಈ ದೇಶದಲ್ಲಿ ಯಾರ್‍ಯಾರು ತಕ್ಕರಿದ್ದಾರೆಂಬ ಸಂಗತಿ ಇಶಾಮುದಾರರ ಮರಿಪತ್ತು ತರಿಸಿನೋಡಿ ಈ ರುಜುವಾತುಗಳನ್ನೆಲ್ಲಾ ದೃಢಪಡಿಸಿಕೊಂಡು ಬೇಂಗುನಾಡಿನ ತೇಲಪಂಡ ಮತ್ತು ಕಲ್ಲುಮಾಡನ ಎರಡು ತಕ್ಕರನ್ನು ಸೇರಿಸಿ ಪಾಡಿನಾಲ್ಕುನಾಡು ತಾಲೋಕಿನಲ್ಲಿ 14 ತಕ್ಕರೆಂದೂ ಇಸ್ತಿಹಾರು ಮೂಲಕ ಪ್ರಕಟಿಸಿರುತ್ತಾರೆ. ರಾಜರ ಸಿಂಹಾಸನವನ್ನು ಪ್ರಜೆಗಳಿಗೆ ಮುಟ್ಟುವ ಸ್ವತಂತ್ರವು ಹ್ಯಾಗೆ ಇರುವದಿಲ್ಲವೋ ಹಾಗೆಯೇ ಕ್ಷೇತ್ರಪಾಲ ದೇವರ ಪಂಗು ತಿರುವಾಯಿದ ಅಷ್ಟಭಂಡ ಹಾಕಿ ಪ್ರತ್ಯಕ್ಷ ದೇವರೆನಿಸಿಕೊಂಡ ಕಡತಲೆಯನ್ನು ತಿರುವಳಕಾರನಿಗೆ ತಿರುವಳ ಬಂದ ಕಾಲದಲ್ಲಿ ಕೊಡುವ ಅಧಿಕಾರ ಕಲ್ಲುಮಾಡಂಡ ತಕ್ಕನಿಗ ಹೊರ್ತು ಇನ್ನಾರಿಗೂ ಇರುವದಿಲ್ಲ. ಈ ಪ್ರಕಾರ ನೀಲಕೋಡಿ ಐಯ್ಯಣ್ಣನೆಂಬ ಮಹಾ ಪುರುಷನ ಕಾಲದಲ್ಲಿಯೇ ಕಾವುಕಾರರು ಎಳಕುಕಾರರು ಎಂಬ ವಗೈರೆ ಕುಳಗಳನ್ನು ದೇವತಾ ಕೆಲಸ ನಡಿಸಲಿಕ್ಕೆ ನಿರ್ಣಯಿಸಿದ ರೀತಿ ಈಗಲೂ ಜಾರಿಯಲ್ಲಿದೆ. ಈ ಪ್ರಕಾರ ಕಲ್ಲುಮಾಡನ ಮನೆಯವರು ನಾಡು ತಕ್ಕರೂ ಹೌದು ಮತ್ತು ಕ್ಷೇತ್ರಪಾಲ ದೇವರ ಮುಖ್ಯಾಧಿಕಾರಿಯೂ ಸಹ ಹೌದು. ಇಂಥಾ ಪ್ರಮಾಣ ಸಂಗತಿಗಳು ಕಿವಿಯಲ್ಲಿ ಕೇಳಿ ಕಣ್ಣಿನಿಂದ ನೋಡುವದು ಪ್ರತ್ಯಕ್ಷ ಸರ್ವರೂ ಕಂಡು ತಿಳಿದರಾಗ್ಯೂ ಈ ಕುಶಾಲಪ್ಪನವರು ಮತ್ತು ಇವರ ಸ್ನೇಹಿತರೂ ಸಹ ತೇಲಪಂಡ ಮನೆಯವರೂ ಕಲ್ಲುಮಾಡಂಡ ಮನೆಯವರೂ ತಕ್ಕರಲ್ಲವೆಂದು ಪತ್ರಿಕೆಯಲ್ಲಿ ಪ್ರಚಾರಪಡಿಸಿದ್ದು ನೋಡುವಾಗ್ಯೆ ನಮ್ಮನ್ನಾಳುವ ಬ್ರಿಟಿಷ್ ಸರಕಾರದವರ ಅಧಿಕಾರ ಇವರ ಕೈಯಲ್ಲಿದೆ ಎಂಬದು ಅವರ ಬಾತ್ಮಿಯಿಂದ ಪರಿಷ್ಕಾರವಾಗುತ್ತದೆ. ಇನಾಮತಿ ವಗೈರೆ ಬಿರುದಾವಳಿಗಳನ್ನು ನಮ್ಮ ಸರಕಾರದವರಿಗೆ ದಂಡವಾಗಿ ಜಪ್ತಿಮಾಡಿಕೊಳ್ಳುವ ಅಧಿಕಾರ ಇರುವದೇ ಹೊರ್ತು ಈ ಕುಶಾಲಪ್ಪನವರಿಗಾಗಲೀ ಇವರ ಸ್ನೇಹಿತರಿಗಾಗಲೀ ಇಲ್ಲವೆಂಬ ಸಂಗತಿ ಒತ್ತಿ ಹೇಳುತ್ತೇನೆ.

ಒಟ್ಟು ನೋಡಿದರೆ "ಪಳಿ ಕೊಟ್ಟನವಂಗ್ ಪಳ್ಳಿಲ್ಲ ತಾಚ ಒಂದ ಬಾಲಿಯಂಗ್ ಅಚ್ಚು ಕಳ್ಳಿ" ಎಂಬ ಗಾದೆಯಂತೆ ಆಯಿತು. ಕೌರವರು ಪಾಂಡವರಿಗೆ ಯಾವತ್ತನ್ನು ಕೊಡದೆ ಏಕ ಚಕ್ರವರ್ತಿ ಪದವಿ ಪಡೆಯಬೇಕೆಂಬ ಇರಾದೆಯಿಂದ ಯುದ್ಧ ಮಾಡಿದ ರೀತಿ ಈ ಬಾತ್ಮಿದಾರರು ನಾವು ಎರಡು ತಕ್ಕರನ್ನು ಪಜಮಾಡಿ ಬೇಂಗುನಾಡನ್ನು ತನ್ನ ಮನೆಯವರೇ ಆಳಬೇಕೆಂಬ ದುರಾಲೋಚನೆಯು ನಡಿಯತಕ್ಕದ್ದಲ್ಲ. ಆದ್ದರಿಂದ ಇವರು ಡಂಬದ ನಡತೆಯನ್ನು ಬಿಟ್ಟು ಈ ಮೊದಲು ಬರೆದ ಬಾತ್ಮಿಗಳನ್ನು ಅವರು ವಾಪಸು ತೆಗೆದುಕೊಂಡು ಒಗ್ಗಟ್ಟಿಗೆ ವಿರೋಧಪಡಿಸ ಬಾರದೆಂಬದಾಗಿ ನನ್ನ ಕೋರಿಕೆ. ನಮ್ಮ ಗ್ರಾಮದಲ್ಲಿ ಸುಮಾರು ನಲುವತ್ತು ವರುಷಗಳಿಂದ ವಾಸ ಇರುವ ಇಲ್ಲದ ಜನ್ಮ ಹ್ಯಾಗೋ ಹಾಗೆಯೇ ಸ್ವಲ್ಪ ಕಾಲ ವಾಸ ಇದ್ದ ಮಾಲಟ್ಟಿ ಕೊಟ್ಟನು ತಕ್ಕನೆಂದು ಹೊಗಳಿಕೊಳ್ಳುವ ಬಾತ್ಮಿದಾರರು ನನಗೆ ಅರ್ಥ ವಿವರಿಸುವಷ್ಟು ಯೋಗ್ಯರಲ್ಲವೆಂಬದು ಈ ಬಾತ್ಮಿಯಿಂದ ಪರಿಷ್ಕಾರವಾಗುತ್ತದೆ.

ಕೆ ಪೂವಯ್ಯ.

[ಈ ವಿಷಯ ವಿವಾದ ನಡಿಸುತ್ತಿರುವ ಮೂರು ಮನೆತನದವರಿಗೂ ಅವರವರ ಅಭಿಪ್ರಾಯಗಳನ್ನು ಪ್ರಕಟಿಸಲು ಪತ್ರಿಕೆಯಲ್ಲಿ ಬೇಕಾದಷ್ಟು ಎಡೆ ಕೊಡಲಾಗಿದೆ. ಇನ್ನು ಈ ವಿವಾದವನ್ನು ಆ ಎಲ್ಲರು ಸೇರಿ ತೀರ್ಮಾನಿಸಿಕೊಂಡು ಒಗ್ಗಟ್ಟಿನಿಂದ ವರ್ತಿಸುವುದು ಉತ್ತಮವಲ್ಲದೆ ಪತ್ರಿಕೆಯಲ್ಲಿ ಬಾತ್ಮಿಗಳನ್ನು ಪ್ರಕಟಿಸುವುದರಿಂದ ಪ್ರಯೋಜನವಿಲ್ಲದ ಕಾರಣ ಈ ವಿಷಯ ಸತ್ಯ ವ್ಯವಹಾರಗಳ ಪ್ರಕಟಣೆಯು ಇಲ್ಲಿಗೆ ನಿಲ್ಲಿಸಲ್ಪಟ್ಟಿದೆ. ಸಂ.]

ಕೊಡವರ ಮದುವೆಯಲ್ಲಿ ಮಾಂಸ.

ಮಹನೀಯರೆ,

ಕೊಡವರ ಮದುವೆ ಪದ್ಧತಿ ವಿಷಯ ಬರೆದ 'ಕಮಲ' ಎಂಬವರ ಲೇಖನವು ಬಹಳ ಚಮತ್ಕಾರದಿಂದಲೂ ಬುದ್ಧಿವಂತಿಕೆಯಿಂದಲೂ ತುಂಬುತ್ತಿದೆಯೆಂದು ಎಲ್ಲರೂ ಒಪ್ಪಿಕೊಳ್ಳಬೇಕಾದ ಸಂಗತಿಯೋ ಹೀಗೆಯೇ ನಮ್ಮ ದೇಶದ ಮಹನೀಯರು ನಮ್ಮ ನಡವಳಿಗಳಲ್ಲಿರುವ ಗುಣ ಅವಗುಣಗಳನ್ನು ಆಗಾಗ್ಯೆ ಬರೆದು ಬಹಿರಂಗಪಡಿಸಿದರೆ ಈಗ ಮೂಢತನದಿಂದ ವಾಡಿಕೆ ಪ್ರಕಾರ ನಡೆಯುತ್ತಿರುವ ಪ್ರಯೋಜನಕರವಲ್ಲದ ಪದ್ಧತಿಗಳು ಕೆಲವು ವರುಷಗಳಲ್ಲಿಯೇ ನಿಂತು ಹೋಗುವದು. ಹೀಗೆಯೇ ತಿಳುವಳಿಕೆಯಿಂದ ಬರೆದ ಲೇಖನಗಳು ಆಗಾಗ್ಯೆ ಕೊಡಗು ಪತ್ರಿಕೆಯಲ್ಲಿ ಹೊರಪಡಿಸುವರೆಂದು ಎಲ್ಲರೂ ಆಶಿಸಬೇಕಾದದ್ದೇ.

...ನಿಷ ಪದಾರ್ಥ ಸೇವಿಸುವದನ್ನು ನಿಲ್ಲಿಸುವದು, ಮದುವೆ ...ರ್ಚು ಕಡಿಮೆ ಮಾಡುತ್ತದಾದ ಹೊಸ ಸುಧಾರಣೆಗಳೂ ...ತಳ ಹೊಗಳಬೇಕಾದ ಸಂಗತಿಯೇ ಹೌದು. ಆದರೆ ನಾ... ಹಿಂದುಗಳಾದರೂ ನಮ್ಮಲ್ಲಿ ಬೇರೆ ಹಿಂದುಗಳಲ್ಲಿಲ್ಲದ ಅನೇ... ಒಳ್ಳೇ ಅಭ್ಯಾಸಗಳಿವೆ. ದೃಷ್ಟಾಂತಕ್ಕೆ ವಿಧವೆಯರನ್ನು ...ದುವೆ ಮಾಡುವದು ಹುಡುಗಿಯರನ್ನು ದೊಡ್ಡವರಾದ ...ಲೆ ಮದುವೆ ಮಾಡುವದು ಇವೆಲ್ಲ ಇತರ ಹಿಂದುಗಳ ಅ...ಭ್ಯಾಸವಲ್ಲದೆ ಹೋದರೂ ಕೂಡ ನಮ್ಮ ಕೊಡಗರಲ್ಲಿ ವಾಡಿಕೆ...ಯಾಗಿರುವದು ಬಹಳ ವಿಶೇಷ.

ಹಾಗೆಯೇ ಮಾಂಸವನ್ನು ತಿನ್ನುವದು ಒಳ್ಳೆ ಅಭ್ಯಾಸ ...ಂದು ತೋರಿಸಲಿಕ್ಕೆ ನನಗೆ ತಿಳಿದ ಕೆಲವು ಸಂಗತಿಯನ್ನು ಬ...ರೆಯುವೆನು. ಕೊಡಗರು ಇತರ ಹಿಂದೂ ಜನರಿಗಿಂತ ಬಲಿ...ಷ್ಠರೂ, ಪರಾಕ್ರಮಶಾಲಿಗಳೂ ಆಗಿರುವದಕ್ಕೆ ಮಾಂಸ ತಿನ್ನುವ...ದ ಒಂದೇ ಕಾರಣ ಎಂದೆನ್ನಬೇಕು. ಯಾಕಂದರೆ ಹಿಂದೂಸ್ಥಾ...ನದ ಜನರಲ್ಲಿ ಮುಕ್ಕಾಲುಪಾಲು ಜನರು ಬಡತನದಿಂದ ಜೀವಿಸು...ವವರು. ಎಲ್ಲರಿಗೂ ವಿಶೇಷವಾಗಿ ಹಾಲು, ಬೆಣ್ಣೆ ಒಳ್ಳೇ ತ...ರಕಾರಿ ಮೊದಲಾದವುಗಳಿಂದ ಊಟ ಉಪಚಾರ ಮಾಡಲಿಕ್ಕೆ ...ಕ್ತಿ ಇಲ್ಲ. ಮಾಂಸವು ಕಾಡಿನ ಜಾತಿಗಳಿಂದಲೂ ಸಾಕುವ ...ಕೋಳಿ ಕುರಿಗಳಿಂದಲೂ ಸುಲಭವಾಗಿ ಸಿಕ್ಕುವದರಿಂದ ಜನ...ರ ಪ್ರಾಣ ರಕ್ಷಣೆಗೆ ಒಳ್ಳೇ ಆಹಾರವಾಗಿರುತ್ತೆ. ಅದು ಹ್ಯಾ...ಗಂದರೆ

ಪ್ರತಿಯೊಬ್ಬ ಮನುಷ್ಯನಿಗೂ ದೇಹ ಆರೋಗ್ಯ ಕಾಪಾ...ಡಿಕೊಳ್ಳಲಿಕ್ಕೆ 2000 'ಕೇಲರಿ' ಉಷ್ಣದ ಆಹಾರವು ಬೇಕು ...ದಕ್ಕಿಂತ ಕಡಿಮೆ ಆಹಾರದಲ್ಲಿ ಜೀವಿಸಿದರೆ ಗಾಳಿಯಲ್ಲಿ ...ಲುತ್ತಿರುವ ನಾನಾ ಕಾಯಿಲೆಗಳಿಗೆ ತುತ್ತಾಗುತ್ತಾರೆ. ಇ...ದನ್ನು ಮಾಂಸ ತಿನ್ನುವದರಿಂದ ಸುಲಭದಲ್ಲಿ ಒದಗಿಸಿಕೊಳ್ಳಬ...ಹುದು. ಮಾಂಸವನ್ನು ಬಿಟ್ಟು ಹಾಲು, ತರಕಾರಿ ಸಕ್ಕರೆ ಮೊ...ದಲಾದವುಗಳಿಂದ 2000 ಕೇಲರಿ ಬಿಸಿಯನ್ನು ಒದಗಿಸಿಕೊಳ್ಳ...ಬೇಕಾದರೆ 100 ಕೇಲರಿ ದೊರಕುವ ತರಕಾರಿ ಆಹಾರವನ್ನು ...ಬಹಳ ತಿನ್ನಬೇಕಾಗುತ್ತದೆ. ಕೊಡಗರೆಲ್ಲ ರಸವನ್ನು ತೆಗೆದು ...ಬಿಟ್ಟು ಆರಿಸಿದ ಕಸದಂತಿರುವ ಅಕ್ಕಿಯನ್ನು ಬೇಯಿಸಿ ತಿನ್ನುವ...ರಾದ್ದರಿಂದ ಮಾಂಸವನ್ನು ಶುಭ, ಅಶುಭಕಾಲಗಳಲ್ಲಿಯೂ, ...ವಿದುಪ್ಪಿವಸಗಳಲ್ಲಿಯೂ, ಆಗುವಷ್ಟು ತಿಂದರೆ ಮೃತ್ಯುವಿನ ಪಾ...ಲಾಗದೆ ದೇಹವನ್ನೂ ಆತ್ಮವನ್ನೂ ಒಟ್ಟಿಗೆ ಇಟ್ಟುಕೊಂಡು ...ಕಾಪಾಡಿಕೊಳ್ಳಬಹುದು. ತರಕಾರಿಯಿಂದ ದೊರಕುವ ಕೊ...ಬ್ಬು ಬಹಳ ಕಡಿಮೆ. ಮಾಂಸದಿಂದ ದೊರಕುವ ಸಣವನ್ನು ಮಾಂಸವಲ್ಲದ ಪದಾರ್ಥಗಳಿಂದ ದೂರಕಿಸಿಕೊಳ್ಳಬೇಕಾದರೆ ಈ...ಗ ತಿನ್ನುವ ಪ್ರಕಾರ ರೊಟ್ಟಿಗೆ ಬೆಣ್ಣೆಹಾಕುವದರ ಬದಲು ತು...ಪ್ಪದ ಬಟ್ಟಲಿಗೆ ರೊಟ್ಟಿಯನ್ನು ಅದ್ದಿ ತಿನ್ನಬೇಕಾಗಿ ಬರುತ್ತೆ. ಆ...ದುದರಿಂದ ಬಡರೈತರು ಆಗುವಷ್ಟು ಮಾಂಸವನ್ನು ತಿನ್ನುವದು ...ಉತ್ತಮವೆಂದು ನನ್ನ ಅಭಿಪ್ರಾಯ. ಮೃಗಗಳನ್ನು ಕೊಲ್ಲು...ವುದು ಧರ್ಮವಿಚಾರದ ಪ್ರಕಾರ ಪಾಪವಾಗಿರಬಹುದು. ಆ...ದರೆ ಮಾಂಸತಿನ್ನುವುದು ಶರೀರದ ವಿಚಾರದಲ್ಲಿ ಬಹಳ ಒಳ್ಳೇ...ದು. ಶರೀರಕ್ಕೆ ಒಳ್ಳೇದಾದದ್ದು ಆತ್ಮಕ್ಕೂ ಒಳ್ಳೇದಾಗಿ...ರಬೇಕು.

"ಕುಸುಮ ಕುಸುಮೋತ್ಕರ."

FOR SALE.

A beautiful folding Camera complete with stand And accessories costing about Rs. 125, is open for offers.

Apply to—

'Photo'

C/o 'KODAGU'

2—3 **MERCARA.**

ದಯಮಾಡಿ ಪರೀಕ್ಷಿಸಿ ನೋಡಿರಿ!

X. L. ALOIL.

ಹೊಸ ನಮೂನೆಯ ಮೀನಿನ ಎಣ್ಣೆ

ಆಶಕ್ತರಾದವರೂ, ಸಣ್ಣಮಕ್ಕಳೂ ಶಕ್ತಿ ಕುಂದಿದವರೂ ಮತ್ತು ಎದೆನೋವು ವಗೈರೆಗಳಿಂದ ಪೀಡಿತರಾದವರೂ ಇದು ಸೇವಿಸುವದರಿಂದ ಬಹಳ ಪುಷ್ಟಿಯಾಗುವರು. "ಕಾಡ್ ಲಿವರ್ ಆಯಿಲ್ ಎಮಲ್ಷನ್" ಎಂಬದರ ಬದಲಿಗೆ ಇದು ಉತ್ತಮವಾದ ಕ್ಷೀರ ರಸವಾಗಿದೆ. ವಾಸನೆ ಇಲ್ಲ. ಬೆಲೆ ಬಹಳ ಕಡಿಮೆ.

M. P. BALA & Co,

CHEMISTS,

12—6 Tellicherry

Or VIRAJPET WORKS,

Virajpet.

ಮಾರಾಟಕ್ಕೆ.

ಎಪ್ಪತ್ತು ಎಕರೆಯುಳ್ಳ ಮಾಲಂಬಿ ಮತ್ತು ಮದಗೋಡು ಎಂಬ ಎರಡು ಚಿಕ್ಕ ಕಾಫಿ ತೋಟಗಳು ಮಾರಾಟಕ್ಕೆ ಇವೆ.

ಮಾಲಂಬಿತೋಟ—39 ಎಕರು 13 ವರುಷಪ್ರಾಯದ ಕಾಫಿ.
15 ಎಕರು 6 ವರುಷದ ಕಾಫಿ.
6 ಎಕರು ಕಾಡು ಕಡಿದು ಕಾಫಿ ನೆಡಲು ತಯಾರಾದ ಜಾಗ.

ಮದಗೋಡು —20 ಎಕರೆಯಲ್ಲಿ
9 ಎಕರು 13 ವರುಷದ ಕಾಫಿ.
6 ಎಕರು 6 ವರುಷದ ಕಾಫಿ.

ಈ ತೋಟಗಳು ಏಪ್ರಿಲ್-ಒಂದನೇ ವಾರದವರೆಗೆ ಮಾತ್ರ ಮಾರಾಟಕ್ಕೆ ಇರುವುವು. ನಂತರ ಮಾರಲಾಗುವುದಿಲ್ಲ.

ಹೆಚ್ಚಿನ ವಿವರಕ್ಕೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ. ಯಸ್. ಅಯನ್ಗಾರ್,
ಹುಂಡಿ ಎಸ್ಟೇಟ್,
ಸೋಮವಾರಪೇಟೆ,
ಕೊಡಗು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಜಮೆಯಾದ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ - ಶೇಕಡ ಸಾಲಿಯಾನ ರೂ.- 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. - ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ತಣಿಖೆ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ.
ಸಿ. ಯಮ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಕೇಶವಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಪ್ರಾಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಬಹು ಸುಖವೂ ಸೌಖ್ಯವೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರೂಪಾಯಿ.

ವಿಳಾಸ—

ಮ್ಯಾನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.
Telegraphic Address :- "SHOOTER" Bombay.

[52 3] Please write for latest Catalogues.

ಮಾರಾಟಕ್ಕೆ.

1. ಮಡಿಕೇರಿ ಆರೆ ಮಲ್ಲಶೆಟ್ಟಪ್ಪನವರ ಮಡಿಕೇರಿ ನಾಡುಬಿಳಿಗೇರಿಗ್ರಾಮದಲ್ಲಿ ಮಡಿಕೇರಿ ಮೂರ್ನಾಡು ರಸ್ತೆ 5ನೇ ಮೈಲ್ ಬಳಿ ಇರುವ ಆಸ್ತಿ, ಅಂದರೆ— ಸಾಗಿನ ಉತ್ತಮವಾದ ಭೂಮಿ 31½ ಎಕರು, ಕಿತ್ತಳೆ 25 ಎಕರು, (ಈ ಪೈಕಿ 15 ಎಕರು ಫಸಲಿಗೆ ಬಂದದ್ದನ್ನು ಈ ವರ್ಷ 1,200 ರುಪಾಯಿಗಳಿಗೆಸಲು ಗುತ್ತಿಗೆ ಕೊಡಲಾಗಿದೆ) ಯಾಲಕ್ಕಿ 15 ಎಕರು, ಹೊಸದಾಗಿ ಹಾಕಿರುವ ಕಾಫಿ 15 ಎಕರು ಮತ್ತು 116 ಎಕರೆ ಬಾಣೆ, ಒಂದು ವಾಸದ ಮನೆ, ಆಳುಗಳ ಲೈನು ಮತ್ತು ದನಗಳ ಕೊಟ್ಟಿಗೆ ಸಹ—ಮಾರಾಟಕ್ಕೆ ಇದೆ. ಕ್ರಯ ರುಪಾಯಿ 25,000 ಅಥವಾ ಇದರ ಸಮೀಪದ ಬೆಲೆ.

2. ಆರೆ ಮಲ್ಲಶೆಟ್ಟಪ್ಪನವರ ಮಡಿಕೇರಿ ಮಹದೇವಪೇಟೆ ... ಇರುವ ... ದ ಮಹಡಿಮನೆ ಕ್ರಯ ರೂ. 5,000.

ಹೆಚ್ಚಿನ ವಿವರಕ್ಕೆ ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು.

ಎಂ. ಎನ್. ಅಪ್ಪಣ್ಣ,
ಬೋಯಿಕೇರಿ ಎಸ್ಟೇಟ್.
12—8 ಸುಂಟಿಕೊಪ್ಪ

ಇಂಡಿಯಾ ಸಾಬೂನ್.

ಬೆಲೆ ಅಗ್ಗ!! ಸರ್ವೋತ್ಕೃಷ್ಟ!!

ನಮ್ಮ "ಇಂಡಿಯಾ ಸಾಬೂನ್" ಸರ್ವೋತ್ತಮವಾದುದೆಂದು ತಿಳಿದು ಎಲ್ಲಾ ಕಡೆಗಳಲ್ಲಿಯೂ, ಎಲ್ಲಾ ಊರುಗಳ ಅಂಗಡಿಗಳಲ್ಲಿಯೂ ಇದನ್ನೇ ಮಾರುತ್ತಿದ್ದಾರೆ. ಇದರಿಂದ ಒಗೆಯುವ ವಸ್ತ್ರಗಳು ಸ್ವಚ್ಛವಾಗುವವಲ್ಲದೆ, ಅವುಗಳ ನೂಲಿಗೆ ಇದರಿಂದ ಯಾವ ವಿಧವಾದ ಉಪದ್ರವೂ ಉಂಟಾಗದೆ, ಸರಿಯಾದ ಬಾಳಿಕೆ ಬರುವವು. ಈ ವಿಷಯವನ್ನು ಒಂದು ಸಲ ಅಜಮಾಯಿಷಿ ಮಾಡಿದರೆ ಎಲ್ಲರಿಗೂ ಮಂದಟ್ಟಾಗುವದು. ನಮ್ಮ ಗಿರಾಕಿಗಳಿಗೆ ಹೆಚ್ಚು ಲಾಭ!! ಧಾರಾಳವಾದ ಕಮಿಷನ್ ದೊರೆಯುವದು. ಆರ್ಡರುಗಳಿಗೆ ಮಾಲನ್ನು ಒಂದೇಬಗ್ಗಾಗಿ ಪ್ಯಾಕ್ ಮಾಡಿ ಅವರ ಆಫೀಸಿಗೆ ಅಥವಾ ಅವರು ಅಪೇಕ್ಷಿಸುವ ಸಮೀಪದ ರೈಲ್ವೆ ಸ್ಟೇಷನಿಗೆ ರವಾನಿಸುತ್ತೇವೆ.

ಇಷ್ಟು ಮಾತ್ರವೇ ಅಲ್ಲ, ನಮ್ಮ ಗಿರಾಕಿಗಳಿಗೆ ಅವರವರ ಅದೃಷ್ಟ ಪರೀಕ್ಷಾರ್ಥವಾಗಿ ನಾವು ಕಳುಹಿಸುವ ಯಾವದೋ ಒಂದು ಸೋಪ್ ಪ್ಯಾಕ್‌ನಲ್ಲಿ ೧೦ ರುಪಾಯಿನ ಅರ್ಧ ನೋಟನ್ನು ಇಟ್ಟಿರುತ್ತೇವೆ. ಅಂಥಾ ಅರ್ಧ ನೋಟಿನ ಪ್ಯಾಕನ್ನು ಹೊಂದಿದವರು ಆ ಅರ್ಧ ನೋಟಿನ ನಂಬರನ್ನು ತಿಳಿಸಿದಲ್ಲಿ ಬಾಕಿ ಅರ್ಧ ನೋಟನ್ನೂ ಅವರಿಗೆ ಬಹುಮಾನವಾಗಿ ತಕ್ಷಣವೇ ಕಳುಹಿಸಿಕೊಡುವೆವು. ಪ್ರಯತ್ನಿಸಿರಿ! ವ್ಯಾಪಾರಕ್ಕೆ ವ್ಯಾಪಾರ!! ಅದೃಷ್ಟಕ್ಕೆ ಅದೃಷ್ಟ!!!

ಎಸ್. ಕೃಷ್ಣಯ್ಯ ಶೆಟ್ಟಿ,
12—8 ನಗರ್ತಪೇಟೆ, ಬೆಂಗಳೂರು ಸಿಟಿ.

Printed & published by Kodanda Appayya, R.B. Chairman, Board of Directors, at "Kodagu" Press, Mercara for "Kodagu" I'd

ಕೊಡಗು.

ಸತ್ಯೇನ ಧಾರ್ಯತೇ ಪೃಥ್ವೀ ವಿದ್ಯಾ ನೀತಿ ಪ್ರಯತ್ನತಾ || ವಿಶ್ವಮತ್ಯೇನ ದೇಶಾನಾಂ ರಾಜ್ಯಸಂಪದಾ ||

ಎಡಿಟರ್ ಪಂದ್ಯಂಡ. ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸುವದು.

ಕೊಡಗು, ಸ೯ ೧೯೨೪ನೇ ಇಸವಿ ಸೆಪ್ಟೆಂಬರ್ ತಾರೀಕಿನ ಯ ಶುಕ್ರವಾರ [ಸಂಚಿಕೆ ೪೯-೬೦

...ೋಗ್ಯ ಚಂದ್ರಿಕೆ.

ಮದ್ರಾಸ್.

...ು: ಡಾಕ್ಟರ್ ಯು. ರಾಮರಾವ್,
...ಎಮ್. ಎಲ್. ಸಿ. ಯವರು.

...ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ...ಸ್ಥ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ...ಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ... ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆ ...ಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ...ಕ್ಟರುಗಳ ಮತ್ತು ಆಯುರ್ವೇದ ಪಂಡಿತರ ...ರಾಗ್ಯ ಪ್ರಕಟವಾಗುವುದು.

...ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾ... ಓದಲು ಅರ್ಹವಾದವುಗಳಾಗಿರುವುವು. ...ಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟು... ಉಪಯುಕ್ತವಾಗುವ ಅಮೂಲ್ಯವಾದ ... ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ... ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ ...ಸಂಚಿಕೆಗಳು ಕೂಡಾ ದೊರೆಯುವವು.

...ಾರಕ: 'ಆರೋಗ್ಯ ಚಂದ್ರಿಕೆ' 323,
...ತಂಬುಚೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ...ಮುಂತಾದ ವಿಷಯಗಳಿಂದೊಡ... ಕೊಡಗಿನ ವಾರ ಪತ್ರಿಕೆ.

...ಕನ್ನು ಮೇನೇಜರ್ "ಕೊಡಗು" ಮಡಿ... ಕಳುಹಿಸಬೇಕು 2. ಲೇಖನಗಳನ್ನು ...ಡಗು' ಮಡಿಕೇರಿ, ಈ ವಿಳಾಸಕ್ಕೆ ಕಳು... ...ಪತ್ರಿಕಾದಾರರ ಅಭಿಪ್ರಾಯಕ್ಕೆ ಕೊಡಗು ...ಬಾಧ್ಯರಲ್ಲ. 4. ನಮ್ಮಲ್ಲಿಗೆ ಕಳುಹಿಸು... ...ದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ...ದ ಕೂಡಿಯೂ, ಬರೆಯಲ್ಪಟ್ಟಿರಬೇಕು. ...ಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು. ... ಪತ್ರಿಕೆಗಳನ್ನು ಮರಳಿ ಕಳುಹಿಸುವ ಜ... ...ಸಂಪಾದಕರು ವಹಿಸಿಕೊಳ್ಳುವದಿಲ್ಲ.

...ಪ್ರಕಟಣೆಗಳು.

...ಥವಾಗಿ ಪಾಕಲ್ಪಡುತ್ತವೆ. ಹೆಚ್ಚು ...ರಿಗೆ ಬರೆದು ತಿಳಿದುಕೊಳ್ಳಬಹುದು

ಮೇನೇಜರ್,
...ಡಗು' ಲಿಮಿಟೆಡ್, ಮಡಿಕೇರಿ.

...ನೋಟೀಸ್.

...ಪತ್ರಿಕೆಯ ಹಳೆ ಚಂದಾಹಣ ಕೊಡಲಿ... ...ಚಂದಾದಾರರಾಗ ಬೇಕೆಂದಿರುವವರೂ, ...ಪತ್ರಿಕೆ ಕೊಡಲಿಕ್ಕಿರುವವರೂ ದಯವಿಟ್ಟು ...ವರ ನಮ್ಮ ಕಂಪೆನಿಯ ಏಜಂಟರವರ... ...ಕೊಡಬೇಕಾಗಿ ಕೋರಿಕೆ.

ಮೇನೇಜರ್,
ಕೊಡಗು' ಲಿಮಿಟೆಡ್.

Health is Wealt...

WANTED all to improve th... strength and vitality and thus s...r nation from physical degeneracy. ...d half-anna stamp and get 23 sp...n photographs with full particulars f...

Director, Physical Culture,...
P. O. BASAVANAGU...
bangalore ...

WATCH THIS SPACE.

Another stock of
Arms & Ammunition.
Expected shortly.
Guaranteed Quality.
Revised prices.

Spencer & Co. Ltd.

MERCARA & POLLIBETTA.

24

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳ ಬ್ರಿಹಾಷ್ಠ ಕಂಟ್ರಾಕ್ಟ್ ಎಗ್ರಿಮೆಂಟ್ ಫಾರಮುಗಳೂ ಸ್ಟ್ರ... ಅಪ್ಲಿಕೇಶನ್ (complaint) ಫಾರಂಗಳೂ ಸಹ ಸ್ಟಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನ ದ ಪಡೆಕೊಳ್ಳಬಹುದು

ಮಡಿಕೇರಿ

17-9-24 ಮೇನೇಜರ್

Old Students' Quarterly.

Editor, Mr P. B. Medappa, B.A., L., M.L.C.

Vol. II. No. 2 is now out.

Subscription—Yearly Rs. 2, post fre... Most delightful! Scholarly articles! Read and enjoy!

CONTENTS

1. National welfare—
   (includes thoughts on Free and Compulsory education in Coorg.
2. Swarajya—A Canarese Drama.
3. Are Coorgs Kannadigas?
4. Ancient Coorg.
5. Peep into Heavens.
6. Frivolity page,
   etc. etc.

If you become a subscriber now you will get a very beautiful calendar for 1925 free—absolutely free!

Apply to—

Manager.
O. S. Association,
Mercara.

ಪ್ರಕಟಣೆ.

ನಮ್ಮ ಅಂದಾದ ಹೊಸ ಅಕ್ಷರಗಳು ಬಂದು ತಲಪಿರುವುದರಿಂದ, 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ. ಮೇನೇಜರ್,
'ಕೊಡಗು' ಲಿಮಿಟೆಡ್

ಒಂದು ಪ್ರಬಲವಾದ ಪ್ರಶ್ನೆ.

ದೇಶಾಭಿಮಾನವೆಂದರೇನು?

ಕೈರಾಟೆಯದ ನೂಲಿಂದ ತಯಾರಿಸಿ ಮಾಡಿದ ಬಟ್ಟೆಯನ್ನು ಧರಿಸುವ ಮೂಲಕ ಲಕ್ಷೋಪಲಕ್ಷ ಗರೀಬ ಜನರಿಗೆ ಅನ್ನವಸ್ತ್ರ ದಗಿಸುವದೇ ದೊಡ್ಡ ದೇಶಾಭಿಮಾನ.

ಇಂಥಾ 'ಖಾದಿ' ಬಟ್ಟೆಯನ್ನು ಎಲ್ಲಾ ಜನರಿಗೂ ಸುಲಭಪ್ರಯದಲ್ಲಿ ಒದಗಿಸಲಿಕ್ಕೆ ಈಗತಾನೇ ವೀರರಾಜಪೇಟೆಯಲ್ಲಿ ಒಂದು ಖಾದಿ ಭಂಡಾರವನ್ನು ತೆರೆದಿರುತ್ತೇವೆ. ಈ ಭಂಡಾರದಲ್ಲಿ ಎಲ್ಲಾ ತರದ ನಾಜೂಕಾದ ಮತ್ತು ಗಟ್ಟಿಯಾದ ಖಾದಿ ಬಟ್ಟೆಗಳೂ ವಸ್ತ್ರಗಳೂ ಸೀರೆಗಳೂ, ಟವಲುಗಳೂ, ಖಾದಿರೇಶ್ಮೆಯಿಂದ ತಯಾರಾದ ಕ್ಲಾತರಟ್ಟೆಗಳೂ ದೊರೆಯುತ್ತವೆ. ಬಟ್ಟೆಗಿರುವ ಎಲ್ಲಾ ಆರ್ಡರನ್ನು ತಕ್ಷಣವೇ ಜರಗಿಸಲಾಗುತ್ತೆ. ಊರೂರಿನಲ್ಲಿರುವ ಎಲ್ಲಾ ಜನರಿಗೆ ಬಟ್ಟೆಯನ್ನು ಒದಗಿಸತಕ್ಕ ಏರ್ಪಾಡುಮಾಡಲ್ಪಟ್ಟಿದೆ. ದೇಶಾಭಿಮಾನಿಗಳ ಪ್ರೋತ್ಸಾಹವನ್ನು ನಿರೀಕ್ಷಿಸುತ್ತಲೇ ಇರುತ್ತೇವೆ. ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

'ಮೇನೇಜರ್'

12-3-6 ಖಾದಿ ಭಂಡಾರ, ವೀರರಾಜಪೇಟೆ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲಿಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನೂ ನಮ್ಮ ಏಜಂಟರು ಮಿ. ಕೋಟೆರ ಚಣ್ಣಪ್ಪನವರ ಜವಾಬ್ದಾರಿಕೆಯ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಸಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರರಾಜಪೇಟೆ—ಕೆ. ಚಣ್ಣಪ್ಪನವರ ಆಫೀಸಿನಲ್ಲಿ.
ಮೂರ್ನಾಡು—ಇಂಪೀರಿಯಲ್ ಸ್ಟೋರಿನಲ್ಲಿ ಮಿ. ಮುಕುಂಡ ದೇವಯ್ಯನವರು.
ನಾಪೋಕ್ಲು—ಮಿ. ಪೊನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮಿ. ಮುಕ್ಕಾಟಿರ ಪೂಣಚ್ಚನವರು.
ಪೊನ್ನಂಪೇಟೆ—ಮಿ. ಪುತ್ತಮನೆ ಮುದ್ದಮ್ಮಯ್ಯನವರು.
ಕುದಿಕೇರಿ—ಮಿ. ಮೊದಮ್ಮನವರು.
ಅಮ್ಮತ್ತಿ, ಸಿದ್ದಾಪುರ—ಮಿ. ಐನಂಡ ಮೊದಪ್ಪನವರು.
ಮಿ. ಚಂಗಂಡ ಕುಟ್ಟಪ್ಪನವರು.

ಕೋರುವ ಉತ್ತಯ್ಯ.
ಅರ್ಗನೈಜಿಂಗ್ ಡೈರೆಕ್ಟರ್, "ಕೊಡಗು" ಲಿಮಿಟೆಡ್

"ಕೊಡಗು"

ಸ೯ ೧೯೩೫ನೇ ಇಸವಿ ಮಾರ್ಚಿ ತಾ. ೨೨ನೇ ಶುಕ್ರವಾರ.

ನೋಡಿದ್ಯಣ್ಣೋ ಮಹರಾಯ.

ಆರು ತಿಂಗಳು ನಿದ್ರೆ ಹೋಗಿದ್ದ ಡಿಸ್ಟ್ರಿಕ್ಟ್ ಬೋರ್ಡು ಈಗ ಎರಡು ತಿಂಗಳಿಂದ ಎಚ್ಚತ್ತು ಪಡನೆ ಪಡನೆ ತಿಂಗಳುವಾರು ಮೀಟಿಂಗು ಮಾಡಲು ಹತ್ತಿದೆ. ಕೌನ್ಸಿಲಿನ ಶಕೆಯಿಂದ ಇದರ ಚಳಿಯು ಬಿಡುಗಡೆಯಾಯಿತೋ ಏನೋ ತಿಳಿಯದು. ಅಲ್ಲ, ಇದು ಇನ್ನು ಯಾವಾಗ ಪುನಃ ದೀರ್ಘ ನಿದ್ರೆ ಹೋಗುವುದೋ ಗೊತ್ತಾಗುವುದಿಲ್ಲ. ಕಳೆದ ಫೆಬ್ರವರಿ ತಿಂಗಳಲ್ಲಿ ನಡದ ಮೀಟಿಂಗಿನಲ್ಲಿ ನೋಟಿಸಿನ ಬಾಕಿ ಇದ್ದ ಅನೇಕ ವಿಷಯಗಳನ್ನು ಚರ್ಚಿಸಿ ಪೂರೈಸಿದ್ದರಿಂದ ಈ ತಿಂಗಳ 2ನೇ ತಾರೀಕಿನಲ್ಲಿ ಒಂದು ಮೀಟಿಂಗು ಮಾಡಲಾಯಿತು. ಈ ಮೀಟಿಂಗಿನಲ್ಲಿ ಬಾಳೆಲೆ, ತಿತಿಮತಿ ಮತ್ತು ಕುಟ್ಟಂದಿ ಶಾಲೆಗಳನ್ನು ಮಾಫ ಮಾಡಿ, ಡಿ. ಪಿ. ಡಬ್ಲ್ಯು ಇಲಾಖೆಯವರ ಚಾರ್ಜಿನಲ್ಲಿರುವ ಬೋರ್ಡು ರಸ್ತೆಗಳ ರಿಪೇರಿಯ ವಿಷಯ ಮೊದಲಾದ ಸಾಧಾರಣ ಸಂಗತಿಗಳು ತೀರ್ಮಾನಿಸಲ್ಪಟ್ಟದ್ದಲ್ಲದೆ ರಸ್ತೆಗಳಲ್ಲಿ ತಿರುಗಾಡುವ ಪಬ್ಲಿಕ್ ಜನರ ಸುರಕ್ಷಿತೆಗೆ ಸಂಬಂಧಪಟ್ಟ ಒಂದು ಮುಖ್ಯ ವಿಷಯವು ಚರ್ಚಿಸಲ್ಪಟ್ಟಿತು.

ಈ ಸಂಗತಿಯು ಮುಖ್ಯವಾದದ್ದೆಂದು ಹೇಳಲು ಬೇರೆ ಕಾರಣಗಳನ್ನು ಇಲ್ಲಿ ಸೂಚಿಸಬೇಕಾದ ಅವಶ್ಯವಿಲ್ಲ. ಈಗ ಕೆಲವು ತಿಂಗಳುಗಳಿಂದ ರಸ್ತೆಬಾಜುಗಳಲ್ಲಿರುವ ರೈತರ ದನಕರುಗಳು ರಸ್ತೆಗಳಲ್ಲಿ ತಿರುಗಾಡುತ್ತಿರುವಾಗ ಅವುಗಳನ್ನು ದೊಡ್ಡಿಗೆ ಕೂಡಿಸುತ್ತಿರುವುದು ಮಾತ್ರವಲ್ಲದೆ ಮಾಲೀಕರನ್ನು ಅನೇಕ ಸಂದರ್ಭಗಳಲ್ಲಿ ಪ್ರಾಸಿಕ್ಯೂಶನಿಗೆ ಗುರಿಮಾಡುತ್ತಿರುವುದರಿಂದ ಜನರಿಗೆ ಉಂಟಾಗುವ ತೊಂದರೆಗಳ ವಿಷಯ ಈ ಪತ್ರಿಕೆಯಲ್ಲಿ ಪ್ರಕಟವಾದ ಅನೇಕ ಬಾತ್ಮಿಗಳೇ ಇದರ ಪ್ರಾಮುಖ್ಯತೆಗೆ ಕಾರಣವೆನ್ನಬಹುದು. ದನಕರುಗಳನ್ನು ಸಾಕುವವರಿಗೆ ಈ ದ್ವಿಕ್ಕಯಿಂದ ಎಷ್ಟರಮಟ್ಟಿಗೆ ಕಷ್ಟವೂ ಅತ್ಯಸ್ತ್ರೆಯೂ ಉಂಟಾಗಿದೆ ಎಂಬುದು ಅವರಲ್ಲಿ ಮಿಳಿತವಾಗುವವರಿಗೇ ಗೊತ್ತಿರುವುದಲ್ಲದೆ ಅವರಿಂದ ದೂರವಾಗಿರುವ ಅಧಿಕಾರಿಗಳಿಗೆ ತಿಳಿದು ಬರಲಿಕ್ಕಿಲ್ಲ. ಈ ಕಾನೂನು ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟದ್ದರಿಂದ ಈ ವಿಷಯವು ಕಳೆದ ಬೋರ್ಡು ಮೀಟಿಂಗಿನಲ್ಲಿ ಉದ್ಯೋಗಸ್ಥರಲ್ಲದ ಮೆಂಬರರಿಂದ ಚರ್ಚೆಗೆ ತರಲ್ಪಟ್ಟದ್ದು ನ್ಯಾಯವಾದದ್ದಾಗಿದೆ. ಪಬ್ಲಿಕ್ ರಸ್ತೆಗಳಲ್ಲಿ ಅಲೆದಾಡುವ ದನಕರುಗಳನ್ನು ದೊಡ್ಡಿಗೆ ಸೇರಿಸುವುದೇ ಮಾಲೀಕರಿಗೆ ಸಾಕಷ್ಟು ಶಿಕ್ಷೆಯಾಗಿರುವುದರಿಂದ ಅವರನ್ನು ಪ್ರಾಸಿಕ್ಯೂಶನಿಗೆ ಗುರಿಮಾಡುವುದು ನಿಲ್ಲಿಸಬೇಕೆಂಬುದೇ ಚರ್ಚೆಯ ತಿರುಳು. ಸರಕಾರಿ ಉದ್ಯೋಗಸ್ಥರಾದರೂ ದೇಶದ ಬಡ ಜನರ ಕಷ್ಟವನ್ನು ಚೆನ್ನಾಗಿ ಅರಿತುಕೊಂಡು ಈ ವಿಷಯದಲ್ಲಿ ಅವರಿಗೆ ಸಹಾನುಭೂತಿಯನ್ನು ತೋರಿಸಿ ಅವರ ಕಷ್ಟ ಪರಿಹಾರಕ್ಕೆ ಸಹಾಯಕರಾಗುವರೆಂದು ನಂಬಲಾಗಿದ್ದ ಕೆಲವು ಮೆಂಬರರು ಪ್ರಾಸಿಕ್ಯೂಶನ್ ಮಾಡದೆ ಹೋದರೆ ಜನರು ಎಚ್ಚರಗೊಳ್ಳುವುದಿಲ್ಲವೆಂತಲೂ, ಈ ವರೆಗೆ ಎಷ್ಟೋ ಸಂದರ್ಭಗಳಲ್ಲಿ ಮಾಲೀಕರು ಪ್ರಾಸಿಕ್ಯೂಶನಿಗೆ ಗುರಿ ಮಾಡಲ್ಪಟ್ಟಿದ್ದರೂ ಅವರು ತಮ್ಮ ದನಗಳನ್ನು ಕಾಯುವುದಕ್ಕೆ ತಕ್ಕಷ್ಟು ನಿಗ ಕೊಟ್ಟಿರುವುದಿಲ್ಲವೆಂತಲೂ, ಈ ಕಾರಣ ಪ್ರಾಸಿಕ್ಯೂಶನ್ ಮಾಡುವುದನ್ನು ನಿಲ್ಲಿಸುವುದರಿಂದ ಪಬ್ಲಿಕ್‌ನವರ ಸುರಕ್ಷಿತೆಗೆ ಭಂಗ ಉಂಟಾಗುವುದೆಂದೂ ವಾದಿಸಿದರು. ಉದ್ಯೋಗಸ್ಥರಲ್ಲದ ಇಂಡಿಯನ್ ಮೆಂಬರುಗಳು ಬೋರ್ಡಿಗೆ ತೆರಿಗೆ ಕೊಡುವವರ ಪರವಾಗಿ ವಾದಿಸಿ ಠರಾವಿಗೆ ಒತ್ತಾಸೆ ಕೊಟ್ಟರು. ಇದು ಎಷ್ಟೇ ಕೂಗಿಕೊಂಡರೂ ಪ್ರಯೋಜನವೇನು? ಬಹುಮತದಲ್ಲಿರುವ ಸರಕಾರಿ ಮೆಂಬರುಗಳೊಂದಿಗೆ ಉದ್ಯೋಗಸ್ಥರಲ್ಲದ ಯೂರೋಪಿಯನ್ ಮೆಂಬರುಗಳು ಸೇರಿದ ಮೇಲೆ ಮೈನಾರಿಟಿಯಲ್ಲಿರುವ ಉದ್ಯೋಗಸ್ಥರಲ್ಲದ ಇಂಡಿಯನ್ ಮೆಂಬರುಗಳು ಏನು ತಾನೆ ಮಾಡಲಾಪರು? 5 ಜನರು ಪರವಾಗಿಯೂ 9 ಜನರು ವಿರೋಧವಾಗಿಯೂ ಓಟು ಮಾಡಿದ್ದರ ಸಲುವಾಗಿ ಠರಾವು ಪಾಸಾಗಲಿಲ್ಲ.

ಪಬ್ಲಿಕ್ ರಸ್ತೆಯ ಸುರಕ್ಷಿತೆಗೋಸ್ಕರ ದನಕರುಗಳು ಅಲೆದಾಡುತ್ತಿರುವುದು ಸರಿಯಲ್ಲವೆಂಬುದು ಕೆಲವು ಮಟ್ಟಿಗೆ ನ್ಯಾಯವಾಗಿರಬಹುದು. ದೊಡ್ಡ ಪಟ್ಟಣಗಳ ಬೀದಿಗಳಲ್ಲಿ ದನ ಬಿಡುಕೊಂಡು ಹೋಗುವುದು ಮತ್ತು ಅಲ್ಲಿ ಬಸವನ ಕಟ್ಟಿಕೊಳ್ಳುವುದು ಸಹ ಆಕ್ಷೇಪಕರವಾಗಿದೆ. ಹಾಗೇ ಮೋಟಾರು ಕಾರುಗಳು, ಬಂಡಿ, ಬಸ್ಸುಗಳು ವೇಗವಾಗಿ ಹೋಗಕೂಡದು ಎಂಬ ಕಾನೂನುಗಳಿವೆ. ಆದರೆ ನಮ್ಮ ದೇಶದಲ್ಲಿ ವ್ಯವಸ್ಥೆಯು ಅಷ್ಟು ವಿಪರೀತಕ್ಕೆ ಒದಗಿರುವುದಿಲ್ಲ. ಈಗ ಕೆಲವು ಕಾಲದಿಂದ ಮೋಟಾರುಗಳ ಹಾವಳಿ ಹೆಚ್ಚಾದ ಮೇಲೆ ಈ ಜಾನುವಾರುಗಳು ಹೈರೋಡುಗಳಲ್ಲಿ ಅಲೆದಾಡದಂತೆ ನಿರ್ಬಂಧಪಡಿಸಲ್ಪಟ್ಟಿದೆ. ಅದರಂತೆಯೇ ಮೋಟಾರುಗಳು ವೇಗವಾಗಿ ಹೋಗಕೂಡದೆಂಬ ಕಾನೂನು ಮಾಡುವ ಅವಶ್ಯವಿತ್ತು. ಆದರೆ ನಿಷ್ಪಕ್ಷಪಾತದ ಅನುಕೂಲವನ್ನೇ ಹೆಚ್ಚಾಗಿ ಕಲ್ಪಿಸುತ್ತಿದೆ. ಜಾನುವಾರುಗಳ ಮಾಲೀಕರು ಅವರವರ ಭೂಮಿಯ ಮತ್ತು ಇತರ ಸಂಪಾದನೆಯ ಮೇಲೆ ಸ್ವತಕ್ಕ ತೆರಿಗೆಯನ್ನು ತೆರುತ್ತಿದ್ದರೂ ಡಜ್ಜ ಆಳುಗಳನ್ನಾದರೂ ಇಟ್ಟು ಅವನ್ನು ರಸ್ತೆಗಳಿಗೆ ಬಿಡದೆ ನೋಡಿಕೊಳ್ಳಬೇಕೆಂದು ಹೇಳುತ್ತಾರೆ. ಹೀಗೆಯೇ ಚಿಕ್ಕ ಸಂಪಾದನೆಯವರಿಗೆ ಈಗ ಹೆಚ್ಚಿನದರ ದೊಡ್ಡ ಆಸ್ತಿವಂತರ ಸಂಪಾದನೆಗೆ ಹೆಚ್ಚು ಹೋಗಬಾರದೆಂತಲೂ ಅನುಕೂಲವಾದ ಸಮಯವು ಉಳಿದು ಸಿಕ್ಕಬೇಕೆಂತಲೂ, ಮೇಲಿಂದ ಮೇಲೆ ದ್ರವ್ಯಾರ್ಜನೆಗೆ ಅನುಕೂಲ ಒದಗಬೇಕೆಂತಲೂ ಅಭಿಪ್ರಾಯವಾಗುತ್ತದೆ. ಆದರೆ ಅವರು ಕೊಡುವ ತೆರಿಗೆಯು ಅವರ ಸಂಪಾದನೆಯ ಅಳತೆಮೀರಿ ಇರುವುದಿಲ್ಲ. ಮೇಲ್ಕಂಡ ಕಾನೂನಿನಿಂದ ಅವರಿಗೆ ಕಲ್ಪಿಸಿಕೊಟ್ಟಿರುವ ಅನುಕೂಲವು ಅವರ ತೆರಿಗೆಯ ಅಳತೆ ಮೀರಿದೆ. ಮೋಟಾರುಗಳಿರುವವರು ಅತಿ ವೇಗವಾಗಿ ಸಂಚರಿಸುವ ಅವಶ್ಯಕತೆಯನ್ನು ಬಿಟ್ಟು ಗಂಟೆಗೆ ಹತ್ತು ಮೈಲಿನಂತೆ ಪ್ರಯಾಣ ಮಾಡಿದರೆ ಅಪಾಯಾಸ್ಪದವು ಬಹಳ ಕಡಿಮೆಯಾಗುವುದು. ದನಕರುಗಳಿಂದ ಈಗ ಹೇಳುವಷ್ಟು ತೊಂದರೆಯು ಖಂಡಿತ ಬರಲಿಕ್ಕಿಲ್ಲ. ಮತ್ತು ಜಾನುವಾರುಗಳ ಮಾಲೀಕರನ್ನು ಪ್ರಾಸಿಕ್ಯೂಟ್ ಮಾಡುವ ಸಂಧರ್ಭವು ಇರುವುದಿಲ್ಲ. ಹೀಗೆ ಪ್ರಾಸಿಕ್ಯೂಶನ್ ಮನ್ನಮಾಡಿದರೆ ಜನರು ಜಾನುವಾರುಗಳ ವಿಷಯ ಎಚ್ಚರಿಕೆ ತೆಗೆದುಕೊಳ್ಳುವುದಿಲ್ಲವೆಂಬ ಆಕ್ಷೇಪಣೆ ಹೇಳುತ್ತಿರುವರು. ಆದರೆ ದೊಡ್ಡಿಗೆ ಅವುಗಳನ್ನು ಹಾಕುವುದರಿಂದ ಮಾಲೀಕರಿಗೆ ದಂಡ ಬೀಳುವುದೆಂಬುದು ಎಲ್ಲರಿಗೂ ಗೊತ್ತೇ ಇದೆ. ಹೀಗೆ ಯಾರೂ ದಂಡ ಕೊಡುವುದಕ್ಕೆ ಇಷ್ಟ ಪಡುವುದಿಲ್ಲ. ಅವರು ಒಂದೆರಡು ಸಲ ದಂಡ ತೆತ್ತರೂ ಖಂಡಿತವಾಗಿಯೂ ಎಚ್ಚತ್ತು ತಮ್ಮ ತಮ್ಮ ಜಾನುವಾರುಗಳನ್ನು ಚೆನ್ನಾಗಿ ನೋಡಿಕೊಳ್ಳುವರೆಂಬುದರಲ್ಲಿ ಸಂದೇಹವಿಲ್ಲ. ಅಲ್ಲಲ್ಲಿ ಅಕ್ರಮ ಕಂಡುಬರಬಹುದು. ಅದನ್ನು ಯಾವ ದೇಶದಲ್ಲೂ ಯಾವ ಸರಕಾರದಿಂದಲೂ ಪೂರ್ತಿಯಾಗಿ ಅಳಿಸುವುದಕ್ಕೆ ಸಾಧ್ಯವಾಗಿರುವುದಿಲ್ಲ. ಮೋಟಾರು ಕಾರಿನಲ್ಲಿ ಹೋಗುವವರು ತಾನೇ ಎಷ್ಟು ವಿವೇಕಿಗಳು ಅಕ್ರಮಗಳನ್ನು ಮಾಡಿರುವರು. ಅದರಂತೆಯೇ ಜಾನುವಾರುಗಳ ಮಾಲೀಕರು ಸಹ ಸ್ವಲ್ಪ ತಪ್ಪಿ ಅಕ್ರಮಕ್ಕೆ ಗುರಿಯಾಗುವರೆಂದು ಎಲ್ಲರೂ ತಿಳಿಯಬೇಡವೆ. ಆ ಮಾತ್ರಕ್ಕೆ ಪ್ರಾಸಿಕ್ಯೂಶನ್ ಮಾಡಬೇಕೆಂದೂ ದೊಡ್ಡಿ ದಂಡವು ಅವರನ್ನು ಎಚ್ಚರಿಸುವುದಕ್ಕೆ ಸಾಲದೆಂದೂ ಹೇಳುವುದು ನ್ಯಾಯವಲ್ಲ. ಅಲ್ಲದೆ ಇಂಥಾ ಸಾಧಾರಣ ಅಕ್ರಮದ ಮೇಲೆ ಪ್ರಾಸಿಕ್ಯೂಶನ್ ಮಾಡುವುದರಿಂದ ತಪ್ಪಿತಸ್ಥನು ಕ್ರಿಮಿನಲ್ ತಪ್ಪಿತಕ್ಕೆ ಒಳಪಟ್ಟಂತಾಗುವುದಿಲ್ಲವೇ?

ಮೇಲ್ಕಂಡ ಡಿಸ್ಟ್ರಿಕ್ಟ್ ಬೋರ್ಡು ಕಾನೂನು ಕೆಲವು ವರುಷಗಳಿಂದ ಜಾರಿಯಲ್ಲಿದ್ದರೂ ಈಗ ಒಂದು ವರುಷದಿಂದ ಮಾತ್ರ ಜನರಿಗೆ ಸಂಕಟಕರವಾಗಿರುವುದಕ್ಕೆ ಕಾರಣವೇನು? ಹಿಂದೆ ಜನರು ಜಾನುವಾರುಗಳನ್ನು ರಸ್ತೆಗೆ ಬಿಡುತ್ತಿರಲಿಲ್ಲವೆಂದೋ ಅಥವಾ ಈಗ ಮಾತ್ರ ಪೋಲೀಸಿನವರು ಮತ್ತು ಮೋಟಾರಿನವರು ಈ ಕಾನೂನನ್ನು ತಿಳಿದದ್ದೋ ಗೊತ್ತಾಗುವುದಿಲ್ಲ. ಮುನಿಸಿಪಲ್ ವಿಭಾಗದಲ್ಲಿ ಅಲೆದಾಡುವಷ್ಟು ದನಗಳು ಬೇರೆ ರಸ್ತೆಗಳಲ್ಲಿ ಕಾಣುವುದಿಲ್ಲ. ಆದರೂ ಪ್ರಾಸಿಕ್ಯೂಶನ್ ಕೇಸುಗಳು ಮಡಿಕೇರಿ ಮುನಿಸಿಪಾಲಿಟಿಯಿಂದ ದೂರವಾಗಿರುವ ಸ್ಥಳಗಳಲ್ಲಿಯೇ ಹೆಚ್ಚಾಗಿ ನಡೆಯುತ್ತಿರುವುದು ಆಶ್ಚರ್ಯವಲ್ಲವೇ? ಪಟ್ಟಣದ ಹೊರಗಿರುವ ಪೋಲೀಸಿನವರಿಗೆ ತಕ್ಕಷ್ಟು ಕೆಲಸ ಇಲ್ಲದೆ ಇರುವುದರಿಂದಲೋ ಅಥವಾ ಮೇಲಧಿಕಾರಿಗಳಿಗೆ ಸಾಕಷ್ಟು ಕೆಲಸ ಮಾಡಿದೆವೆಂದು ತೋರಿಸಲಿಕ್ಕಾಗಿಯೋ ಹೀಗೆ ಜನರನ್ನು ಪ್ರಾಸಿಕ್ಯೂಶನಿಗೆ ಗುರಿಮಾಡುತ್ತಿರುವರೆಂಬುದು ಗೊತ್ತಾಗುವುದಿಲ್ಲ. ಆದರೆ ಪೋಲೀಸಿನವರಿಗೆ ಅಕ್ರಮ ನಡಿಸುವುದಕ್ಕೆ ಈ ಕಾನೂನು ಎಡೆಕೊಡುವುದೆಂದು ಖಂಡಿತ ಹೇಳಬಹುದು. ಮೋಟಾರಿನಲ್ಲಿ ಹೋಗುವವರು ಹತ್ತಿಪ್ಪತ್ತು ಮೈಲು ಪ್ರಯಾಣದಲ್ಲಿ ಒಂದೆರಡು ಸ್ಥಳದಲ್ಲಿ ಜಾನುವಾರುಗಳನ್ನು ಕಂಡಮಾತ್ರಕ್ಕೆ ದಾರಿಯಲ್ಲಿ ಸಿಕ್ಕುವ ಸ್ಟೇಶನಿಗೆ ಹೋಗಿ ತಮ್ಮ ಕೋಪವನ್ನು ತೋರಿಸುವುದೂ ಆ ಮಾತ್ರಕ್ಕೆ ಸಮ್ಮತಿಪಟ್ಟು ಇಲಾಖೆಯವರು ಕಾದಿದ್ದು ಎಚ್ಚರಿಸಬೇಕಾಗಿರುವುದೂ, ಇದೆಲ್ಲಾ ಕ್ರಮಕ್ಕೆ ಪ್ರತಿಫಲವಾಗಿ ಅಲ್ಲಲ್ಲಿ ಪ್ರಾಸಿಕ್ಯೂಶನ್ ಕೇಸುಗಳನ್ನು ತರುವುದೂ, ಜನರಿಗೂ ಪೋಲೀಸಿಗೂ ವಿಪರೀತದ ಸಂಕಟವೆಂದೇ ಹೇಳಬೇಕು. ಹೀಗಾಗಿ ತಪ್ಪಿತಕ್ಕೆ ಹೇಳುವ ಬಡ ಜನರು ಅಲ್ಪ ಸ್ವಲ್ಪ ಬಿಲ್ಲು ಮೋಸವಾದರೂ ತೆತ್ತು ಶ್ರಮವನ್ನು ತಪ್ಪಿಸಿಕೊಳ್ಳಬೇಕಾಗಿದೆಯೇ ಹೊರತು ಮೇಲಧಿಕಾರಿಗಳವರೆಗೆ ವಾದಿಸಿ ತಾನು ತಪ್ಪಿತಸ್ಥನಲ್ಲವೆಂಬುದನ್ನು ರುಜುವಾತುಪಡಿಸಿಕೊಳ್ಳುವಷ್ಟು ಶಕ್ತರಾಗಿರುವುದಿಲ್ಲ.

ಮೋಟಾರುಕಾರುಗಳು ಮತ್ತು ಬಸ್ಸುಗಳು ಜೀವ ಜಂತುಗಳಿಗೆ ಕಂಟಕವಾಗಿದೆಯೇ ಹೊರತು ಬೇರಿಲ್ಲ. ಜಾನುವಾರುಗಳು ದಾರಿಯಲ್ಲಿ ಅಡಚಣೆಯಾಗಿವೆ ಎಂದು ಪ್ರಾಸಿಕ್ಯೂಶನ್ ನಡೆಸುತ್ತಿರುವಂತೆ ಅಡಚಣೆಯಾಗುತ್ತಿರುವ ಮನುಷ್ಯರನ್ನೂ ಜಾನುವಾರುಗಳಂತೆ ನಡಿಸಬೇಕಾಗುವ ಸಮಯವು ಬರಬಹುದು. ಈಗಿನ ಸ್ಥಿತಿಯಲ್ಲಿ ಮೋಟಾರು ಕಾರುಗಳಿಂದ ಉಂಟಾಗುತ್ತಿರುವ ತೊಂದರೆಯನ್ನು ವಿಚಾರಿಸಬೇಕಾಗಿದೆ. ಜಾನುವಾರುಗಳಿಗೂ ಅಲೆದಾಡುವ ಮನುಷ್ಯರಿಗೂ ಯಾವಾಗಲೂ ಪ್ರಾಣಭಯ ಇದ್ದೇ ಇರಬೇಕಾಗಿದೆ. ಇಂಥಾ ಅಪಾಯವು ಆಗುತ್ತಿದ್ದರೂ ಮೋಟಾರುಗಳ ಮೇಲೆ ಒಂದು ಕಂದಾಯವಾಗಲೀ ವೇಗವನ್ನು ನಿಯತ ಮಾಡುವ ಅಭಿಪ್ರಾಯವಾಗಲೀ ಹುಟ್ಟಿರುವಂತೆ ಕಾಣುವುದಿಲ್ಲ. ಬಯಲು ಸೀಮೆಯಂತೆಯೇ ಈ ದೇಶದಲ್ಲಿ ವೇಗವಾದ ಸಂಚಾರಕ್ಕೆ ಕೊಂಚವೂ ಆಸ್ಪದ ಕೊಡಕೂಡದು. ಮಡಿಕೇರಿಯಿಂದ ನಾಲ್ಕು ಕಡೆ ಹೋಗುತ್ತಿರುವ ರಸ್ತೆಗಳ ವಿಷಯ ಇಲ್ಲಿ ವಿವರಿಸಿ ಬರೆಯಬೇಕಾಗಿಲ್ಲ. ಎರಡು ಗಾಡಿಗಳು ಬಾಜು ಮಾಡಿಕೊಂಡು ದಾಟಿ ಹೋಗುವದು ಕಷ್ಟವಾಗಿದೆ. ಅಂಥಾದರಲ್ಲಿ ಮೋಟಾರಿನವರು ಗಾಡಿಗಳನ್ನೂ ಕುದುರೆಗಳನ್ನೂ ಸೈಕಲುಗಳನ್ನೂ ಜನರನ್ನೂ ಎದುರುಗೊಂಡರೆ ಬಾಜು ಬಿಟ್ಟುಕೊಂಡು ಎಡಕ್ಕಾಗಿ ದಾಟಿ ಹೋಗುವುದು ಅಪರೂಪ. ಎದುರು ಬರುವ ಇವರೇ ಬಾಜು ಬಿಡಬೇಕಲ್ಲದೆ ಮೋಟಾರಿನವರೂ ಬಾಜು ಬಿಡಬೇಕೆಂಬುದನ್ನು ಅವರು ಜ್ಞಾಪಕದಲ್ಲಿ ಇಟ್ಟುಕೊಂಡಿರುವಂತೆ ಕಾಣುವುದಿಲ್ಲ. ಅಪಾಯ ಒದಗುವದೆಂಬಷ್ಟು ಹತ್ತರ ಸೇರಿದಾಗಲೇ ಅವರು ನಿಧಾನಿಸುವದಕ್ಕಾಗಲೀ, ಬಾಜು ಮಾಡುವುದಕ್ಕಾಗಲೀ, ನಿಲ್ಲಿಸುವುದಕ್ಕಾಗಲೀ ಪ್ರಯತ್ನಿಸುವರು. ಆದರೆ ಬಂಡಿಯವನಿಗೂ ಕುದುರೆ ಸವಾರನಿಗೂ ಬೆಚ್ಚುವುದು, ಬೆದರಿಸುವುದು ವಾಡಿಕೆಯಾಗಿದೆ. ಬಾಜು ಮಾಡುವುದಕ್ಕೆ ಹಣಗಾಡುವ ಗಾಡಿಗಳ ಬದಿಯಿಂದ ಒತ್ತಿ ಹೋದರೆ ಮೋಟಾರಿನವರು ನಗುನಗುತ್ತಾ ಹಾರಿಸಿ ಹೋಗುವರಲ್ಲದೆ ಸಹಾಯಕ್ಕೆ ಬರುವವರು ಬಹು ಕಡಿಮೆ. ಕುದುರೆಯಲ್ಲಿ ಬರುವವರು ಅಪಾಯ ತಪ್ಪಿಸಿಕೊಳ್ಳಬೇಕಾದರೆ ಕುದುರೆಯಿಂದ ತಟ್ಟನೆ ಇಳಿದು ಅದನ್ನು ಹಿಡಿದು ಬೆರಂಜಿಗೆ ಸೇರಿಸಿಕೊಳ್ಳಬೇಕಾಗಿದೆ. ಇದೆಲ್ಲಾ ಆಗಾಗ್ಯೆ ಕಣ್ಣಾರೆ ಕಾಣುವ ಸಂಗತಿಗಳಾಗಿವೆ. ಸೈಕಲಿನಲ್ಲಿ ಪ್ರಯಾಣ ಮಾಡುವವರಂತೂ ಅಂಕು ಡೊಂಕಾಗಿರುವ ನಮ್ಮ ಇಲ್ಲಿಯ ರಸ್ತೆಗಳಲ್ಲಿ ಮೋಟಾರುಗಳ ಶಬ್ದವನ್ನು ಕೇಳುವುದಕ್ಕಾಗಿ ಹಿಂದಕ್ಕೂ ಮುಂದಕ್ಕೂ ಕಿವಿಕೊಟ್ಟುಕೊಂಡೇ ಇರಬೇಕಾಗಿದೆ. ಅವರಿಗಂತೂ ಮೋಟಾರಿನವರು ಒಂದಿಂಚಾದರೂ ಬಾಜು ಮಾಡದೆ ಓಡಿಸುತ್ತಿರುವರು. ಇಷ್ಟೇ ಅಲ್ಲ. ರಸ್ತೆಗಳಲ್ಲಿ ಆಗಾಗ್ಯೆ ಮೋಟಾರಿನವರು ಶಬ್ದ ಮಾಡಿಕೊಂಡು ಹೋಗಬೇಕೆಂಬುದನ್ನೂ ಸಹ ಮರೆತಿರುವುದೂ ಉಂಟು. ಡಿಸ್ಟ್ರಿಕ್ಟ್ ಆಫೀಸರುಗಳಲ್ಲದೆ ಇತರ ಕಾರು ಮಾಲೀಕರು ಈ ತರಹದ ಅಕ್ರಮಗಳನ್ನು ಮಾಡುವುದು ವಾಡಿಕೆಯಾಗಿದೆ. ಮೋಟಾರುಗಳ ಗದ್ದಲದಿಂದ ಏಳುವ ಧೂಳಿನಿಂದಲೂ, ಕಸರಿನಿಂದಲೂ ಪಕ್ಕಗಳಲ್ಲಿ ದಾಟುವ ಪ್ರಯಾಣಿಕರಿಗೆ ಉಂಟಾಗುವ ಸಂಕಟವನ್ನು ಅಪಾಯವನ್ನೂ ಗಣನೆಗೆ ತೆಗೆದುಕೊಳ್ಳುವವರು ಯಾರೂ ಇಲ್ಲ. ಹೀಗಿರುವಲ್ಲಿ ಮೋಟಾರುಕಾರುಗಳಿಗೆ ಜಾನುವಾರು ವಗೈರೆಯಿಂದ ಎಷ್ಟು ಅಡಚಣೆ ಬಂದು ಒದಗುತ್ತದೋ ಅದಕ್ಕಿಂತಲೂ ಹೆಚ್ಚು ಸಂಕಟವೂ ನಷ್ಟವೂ ಇತರರಿಗೆ ಮೋಟಾರುಕಾರುಗಳಿಂದ ಉಂಟಾಗುತ್ತಿವೆ ಎಂಬ ಸಂಗತಿಯು ಗಣನೆಗೆ ತೆಗೆದುಕೊಳ್ಳತಕ್ಕದ್ದಾಗಿದೆ. ಮೇಲೆ ಹೇಳಿದ ಅಕ್ರಮಗಳೆಲ್ಲಾ ಯಾವಾಗ, ಯಾರಿಂದ, ಎಲ್ಲಿ, ಹ್ಯಾಗೆ ಆಯಿತೆಂಬ ವಿಚಾರವನ್ನು ಮಾಡುವುದಕ್ಕೆ ಅತಿ ವೇಗವಾಗಿ ಓಡುವ ಮೋಟಾರುಗಳನ್ನು ನಿಲ್ಲಿಸಲು ಬಡ ಜನರಿಗೆ ಸಾಧ್ಯವಿಲ್ಲದೆ? ಇಂಥಾ ?ಟಾರಿಗೆ ಅನುಕೂಲವಿಲ್ಲದೆ ಇರುವಲ್ಲಿ ಅಧಿಕಾರಿಗಳಿಗೆ ಫಿರ್ಯಾದು ಕೊಟ್ಟು ಪರಿಹಾರ ಹೊಂದಿಕೊಳ್ಳಲಿಕ್ಕೆ ತಾನೇ ದಾರಿ ಎಲ್ಲಿದೆ! ಅಥವಾ ಇವರು ದಾರಿಯಲ್ಲಿ ಸಿಕ್ಕುವ ಸ್ಟೇಶನುಗಳಲ್ಲಿ ಇವರ ಸಂಕಟವನ್ನು ಹೇಳಿಕೊಂಡರೆ ರುಜುವಾತು ಇಲ್ಲದೆ ತಿರಸ್ಕಾರ ಯಾರೂ ಈಗ ಹಾಕಿಕೊಳ್ಳುವುದಿಲ್ಲ. ಹ್ಯಾಗೂ ರಸ್ತೆಯ ಮಗ್ಗುಲಲ್ಲಿರುವ ಜನರು ಜಾನುವಾರುಗಳನ್ನು ಬಿಟ್ಟುಕೊಂಡು ಅಲೆದಾಡುವುದಕ್ಕೆ ಬಿಡುವುದು ಬಹಳ ಅಪರೂಪ. ಆದರೆ ಹತ್ತಿಪ್ಪತ್ತು ದನಗಳಿರುವ ಹಿಂಡಿನಲ್ಲಿ ಮುಂದಾಗಿ ಹೋಗುವವು ಅಲೆದಾಡುತ್ತಿರುವಂತೆಯೇ ಕಾಣಿಸುತ್ತವೆ. ಹಿಂದಿರುವ ದನಗಳನ್ನು ಹೊಡಕೊಂಡು ಬರುವವನಿಗೆ ಇದನ್ನು ನಿವಾರಿಸಲು ಸಾಧ್ಯವಿಲ್ಲ. ಆದರೆ ಮೇಲ್ಕಂಡ ಕಾನೂನಿನ ಪ್ರಕಾರ ಮುಂದೆ ಅಲೆದಾಡುತ್ತಿರುವ ದನಗಳು ಆಳಿನ ಸ್ವಾಧೀನ ಇಲ್ಲವೆಂದೇ ಹೇಳಬಹುದು. ಹೀಗೆ ಕಾನೂನೂ ಜಾರಿಯಾಗುತ್ತಿದೆ. ಅಪರೂಪವಾಗಿ ಶಿಕ್ಷಿಸಲ್ಪಡುವ ನಿಜವಾದ ತಪ್ಪಿತಸ್ಥನೊಬ್ಬನಿಗೆ ತಪ್ಪಿತಸ್ಥರಲ್ಲದವರು ಎಷ್ಟು ಮಂದಿ ಶಿಕ್ಷಿಸಲ್ಪಡುತ್ತಿರುವರೆಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

'ತನ್ನನ್ನು ಚಿಗುಟಿ ಇತರರನ್ನು ಚಿಗುಟಬೇಕೆಂಬ ಪೂರ್ವದ ನಾಣ್ಣುಡಿ ಇದೆ. ಮೋಟಾರಿನವರು ತಮ್ಮ ಸಂಕಟಕ್ಕೆ ಮೇಲ್ಕಂಡ ಕಾನೂನು ಇಟ್ಟುಕೊಳ್ಳಬೇಕೆಂದರೆ ದೇಶದ ಕ್ಷೇಮಕ್ಕೆಂದು ಅರ್ಥವಾಗುವುದಿಲ್ಲ. ದೇಶದ ಹಳ್ಳಿಯ ಜನರಿಗೆ, ಅಂದರೆ ಶೇಕಡ 90ರಷ್ಟು ಜನರಿಗೆ ಈ ಕಾನೂನಿನಿಂದ ತುಂಬಾ ಕಷ್ಟನಷ್ಟಗಳಿವೆ. ಈ ಕಾನೂನನ್ನು ಮಾಡಿದ ಡಿಸ್ಟ್ರಿಕ್ಟ್ ಆಫೀಸರುಗಳು ಮತ್ತು ಡಿಸ್ಟ್ರಿಕ್ಟ್ ಬೋರ್ಡಿನವರು ಇಷ್ಟು ಸಂಕಟಕ್ಕೆ ಹೊಣೆಯಾಗಿದ್ದಾರೆ. ಆ ಡಿ. ಬೋರ್ಡಿನಲ್ಲಿ ದೇಶದ ಕಷ್ಟ ನಿವಾರಣೆಗೆ ಸಾಕಷ್ಟು ಪ್ರತಿನಿಧಿಗಳಿರುವುದಿಲ್ಲ. ಅನೇಕ ವರುಷಗಳಿಂದ ಡಿ. ಬೋರ್ಡು ಇರುವದಾದರೂ ನಿನ್ನೆ ತಾನೇ ಬಂದ ಕೌನ್ಸಿಲಿನಷ್ಟು ಸಹ ಬಹುಮತವು ದೇಶೀಯ ಪ್ರತಿನಿಧಿಗಳಿಗೆ ಇರುವುದಿಲ್ಲ. ಈ ಕೊರತೆಗೆ ದೇಶೀಯರೇ ಕಾರಣರೆಂದು ಹೇಳಬೇಕಾಗಿದೆ. ವರುಷಕ್ಕೊಂದು ಮೀಟಿಂಗಿನಲ್ಲಿ ಠರಾವು ಮಾಡುವುದಲ್ಲದೆ ಬೋರ್ಡಿನಲ್ಲಿ ಬಹುಮತವನ್ನು ಪಡೆಯುವುದಕ್ಕೆ ದೇಶೀಯರು ದೃಢ ಪ್ರಯತ್ನವಾಗಲಿ ಚಳವಳವನ್ನಾಗಲಿ ಸಾಕಷ್ಟು ಮಾಡುತ್ತಿರುವುದಿಲ್ಲ. ಇಂಥಾ ಉದಾಸೀನದಿಂದ ಉಂಟಾಗಿರುವ ಸಂಕಟಕ್ಕೆ ದೇಶೀಯರೇ ಮೂಲಕಾರಣರು. ಹಾಗಿಲ್ಲದಿದ್ದರೆ ಇದೇ ಡಿ. ಬೋರ್ಡು ಮೊದಲೇ ಈ ಕಾನೂನನ್ನು ರದ್ದುಪಡಿಸಬಹುದಾಗಿತ್ತು. ಹ್ಯಾಗೂ ಸದ್ಯದ ಸ್ಥಿತಿಯಲ್ಲಿ ದೇಶೀಯರ ಉದಾಸೀನದ ಫಲಿತಾಂಶವಾದ ಈ ಸಂಕಟಕ್ಕೆ 'ನೋಡಿದ್ಯಣ್ಣೋ ಮಹರಾಯ' ನೆಂದರೆ ಸರಿ ಹೋಗಬಹುದೆ!

ವರ್ತಮಾನ ಸಂಗ್ರಹ.

ಒಳದೇಶ.

ಚೀಫ್ ಕಮೀಷನರಾದ ಮಿ. ಡಬ್ಲ್ಯು ಪಿ. ಬಾರ್ಟನ್‌ರವರು ತಾ. 26ರಲ್ಲು ಮಡಿಕೇರಿಯಿಂದ ಬೆಂಗಳೂರಿಗೆ ಹೊರಟು ಹೋದರು

ಮಿಸೆಸ್ ಟಾಸ್ಕರ್ ಮತ್ತು ಮಿಸೆಸ್ ಕೆ ಸಿ ತಿಮ್ಮಯ್ಯನವರಿಂದ ಏರ್ಪಡಿಸಲ್ಪಟ್ಟು ಪ್ರತಿ ಮಂಗಳವಾರ ಸಾಯಂಕಾಲ 3 ಗಂಟೆಯಿಂದ 5 ಗಂಟೆವರೆಗೆ ಮಿಸೆಸ್ ಟಾಸ್ಕರ್‌ರವರ ಬಂಗ್ಲೆಯಲ್ಲಿ ನೇಯಿಗೆ, ಹೊಲಿಗೆ ವಗ್ಯೆರೆ ಕಲಿಸ ಮಾಡುತ್ತಿದ್ದ ಪಾರ್ಟಿಯವರಿಂದ ತಯಾರಿಸಲ್ಪಟ್ಟ ಸಾಮಾನುಗಳನ್ನು ಮಾರಿ ಬಂದ ಹುಟ್ಟುವಳಿ 250 ರೂ ನ್ನು ರೆಡ್ ಕ್ರಾಸ್ ಸಂಘಕ್ಕೆ ಕಳುಹಿಸಿದರು

ತಾ 21ರಲ್ಲು ಮಡಿಕೇರಿ ಹೈಸ್ಕೂಲಿನ ವರ್ಷೋತ್ಸವವನ್ನು ನಡಿಸಿದರು. ಆ ದಿನ ವಿದ್ಯಾರ್ಥಿಗಳಿಗೆ ಸ್ಪೋರ್ಟ್ಸ್ ನಡಿಸಲಾಗಿ ಮುಂದು ಬಂದವರಿಗೆ ಇನಾಮುಗಳು ಕೊಡಲಾದುವು. ಸಾಯಂಕಾಲ ಹಳೇವಿದ್ಯಾರ್ಥಿಗಳ ಸಂಘದ ಪ್ರೆಸಿಡೆಂಟರಾದ ರಾ ಬಾ ಕೆ ಚಂಗಪ್ಪನವರು ಮತ್ತು ಹೆಡ್‌ಮಾಸ್ಟರ್ ಮಿ ಸಿ ಮಂಗೇಶರಾಯರು, ಚೀಫ್‌ಕಮೀಷನರು ಮತ್ತು ಬೇರೆ ಕೆಲವು ಮಹನೀಯರಿಗೆ "ಎಟ್‌ಹೋಮ್" ಕೊಟ್ಟರು. ನಂತರ ನಡೆದ ಸಭೆಗೆ ಚೀಫ್‌ಕಮೀಷನರು ಅಧ್ಯಕ್ಷರಾಗಿದ್ದರು. ಮಿ ಎ ಪಿ ಕಾರ್ಯಪ್ಪನವರು ಚೀಫ್‌ಕಮೀಷನರ ಟ್ರೋಫಿಯನ್ನು ಸೂಚಿಸಿ ವಿದ್ಯಾರ್ಥಿಗಳಿಗೆ ಬುದ್ಧಿವಾದದ ಭಾಷಣವನ್ನು ಮಾಡಿದರು. ಅಧ್ಯಕ್ಷರ ಭಾಷಣವಾದ ನಂತರ ಒಂದು ಚಿಕ್ಕ ನಾಟಕವು ಅಭಿನಯಿಸಲಾಯಿತು

ತಾ. 24ರಲ್ಲು ವೀರಾಜಪೇಟೆನಾಡು ಬಾಡಗ ಗ್ರಾಮದ ಮುಕ್ಕಂಡ ಚಿಣ್ಣಪ್ಪನವರು ಬೆಳಿಗ್ಗೆ ಬೇಟೆಯಲಿಕ್ಕೆ ಹೋದವರು ಮನೆಗೆ ವಾಪಸು ಬಾರದು ಏನೋ ಕಾಯಿಲೆ ಇಲ್ಲದೆ ಹುಲ್ಯಾತ್ತ ಮೃತಪಟ್ಟರೆಂದು ವರ್ತಮಾನ. ಇವರು ಒಮೊನ್ನಾದರಸಂಘದ ಎಕ್ಸಿಕ್ಯೂಟಿವ್‌ಕಮಿಟಿ ಮೆಂಬರಾಗಿ ಸಂಘದ ಪರವಾಗಿ ಮುಂದುವರ್ಷದಿಂದ ಕೆಲಸಮಾಡಿ ಸಂಘಕ್ಕೆ ಉತ್ತೇಜನ ಕೊಡುತ್ತಿದ್ದರು. ಇವರ ಮರಣವು ಸಂಘಕ್ಕೆ ನಷ್ಟವೆಂದು ಹೇಳಬೇಕಾಗಿಲ್ಲ.

ತಾ. 20ರಲ್ಲು ಡಿಸ್ಟ್ರಿಕ್ಟ್‌ಬೋರ್ಡ್ ಮೀಟಿಂಗು ಒಂದು ಕೌನ್ಸಿಲ್ ಹಾಲಿನಲ್ಲಿ ನಡೆಯಿತು.

ಚೀಫ್‌ಕಮೀಷನರವರು ಮಾರ್ಚಿ ತಾರೀಕು 23ರ ಸಾಯಂಕಾಲ ಕೌನ್ಸಿಲ್ ಮೆಂಬರುಗಳಿಗೂ, ಗೆಜೆಟೆಡ್ ಉದ್ಯೋಗಸ್ಥರಿಗೂ ಟ್ರೈಟರ್‌ದಾರರಿಗೂ ಇನ್ನು ಕೆಲವು ಮಹನೀಯರಿಗೂ 'ಬೋಯರ್' ಬಂಗ್ಲೆಯಲ್ಲಿ ಒಂದು ಟೀಪಾರ್ಟಿಯನ್ನು ಕೊಟ್ಟರು. ಟೆನ್ನಿಸ್ ಆಟವೂ ಇತ್ತು

ಏಪ್ರಿಲ್ ತಾರೀಕು 10ರಲ್ಲು ಒಲ ... ವಿಸಹಕಾರಿಸಂಘದ ವಾರ್ಷಿಕೋತ್ಸವವು ಮಿ ಕೇಳಪಂಡ ಅಚ್ಚಯ್ಯನವರ ಅಧ್ಯಕ್ಷತೆಯಲ್ಲಿ ನಡಯುವುದು. ನಂತರ ಅಲ್ಲಿಯ ರೀಡಿಂಗ್‌ರೂಮಿನಲ್ಲಿ ದಿವಂಗತ ಮಿ ಬಿದ್ದಂಡ ಗಣಪತಿಯವರ ಮತ್ತು ದಿವಂಗತ ಮಿ ಕೋಟೆರ ಉತ್ತಯ್ಯನವರ ಛಾಯಾಚಿತ್ರಗಳು ತೆರೆಯಲ್ಪಡುವವು

ಕೊಡಗಿನ ವಿರಜ್ಪೇಟ್ ಸ್ಟೇಟ್ ಶ್ರೀ ಸುಭಾಷ್ ಸ್ವಾಮಿ ... ಟಿಕೇಟುಗಳ ಸಪ್ಲಿಮೆಂಟನ್ನು ಈ ವಾರದ ಸಂಚಿಕೆಯೊಂದಿಗೆ ನಮ್ಮ ಚಂದಾದಾರರಿಗೆ ಕಳುಹಿಸುವೆವು.

ನಮ್ಮ ಪ್ರೆಸ್ಸಿನಲ್ಲಿ ಕಂಪೋಜಿಟರಾಗಿದ್ದ ಮಿ. ಚಿಟ್ಟಿಮಾಡ ಮುತ್ತಣ್ಣನವರು ತಾ. ೨೩ರಲ್ಲು ಪರಲೋಕವನ್ನೈದಿದರು. ಇವರು ನಮ್ಮ ಪತ್ರಿಕೆಗಾಗಿ ಬಹಳ ಶ್ರದ್ಧೆಯಿಂದ ಕೆಲಸಮಾಡಿದ್ದರು. ಇವರ ಅಕಾಲ ಮರಣಕ್ಕೆ ವಿಶಾದಿಸುತ್ತೇವೆ. ಇವರ ಗೈರ್‌ಹಾಜರ್ ದೆಸೆಯಿಂದ ಈ ವಾರ ೬ ಪುಟಗಳು ಮಾತ್ರ ಪ್ರಕಟಿಸುತ್ತೇವೆ.

ಹಿಂದೂ ದೇಶ.

ನಾಗಪುರ ಯುನಿವರ್ಸಿಟಿಯ ಇಂಟರ್‌ಮೀಡಿಯೇಟ್ ಕ್ಲಾಸಿನಲ್ಲಿ ಓದುತಿದ್ದ ಮಿ ಪಿ ಬಿ ಮಹಜನ್ ಎಂಬ ವಿದ್ಯಾರ್ಥಿಯ ಮರಣಕಾಲದಲ್ಲಿ ಯುನಿವರ್ಸಿಟಿ ಕಟ್ಟಡಕ್ಕೆ 5000ರೂ ಉಚಿತವಾಗಿ ಕೊಡುವಂತೆ ಮರಣಶಾಸನ ಬರೆದಿರುವನಂತೆ.

ತಾ 22ರಲ್ಲಿ ಮದ್ರಾಸಿನ "ಹಿಂದೂ" ಆಫೀಸಿನಲ್ಲಿ ಮಿ ವಿ ಎಸ್ ಶ್ರೀನಿವಾಸಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಮಹಾತ್ಮ ಗಾಂಧಿಯವರು ದಿವಂಗತ ಕಸ್ತೂರಿರಂಗ ಅಯ್ಯಂಗಾರ್‌ರವರ ಛಾಯಾಚಿತ್ರವನ್ನು ತೆರೆದರು

ಬಂಗಾಳ ಕೌನ್ಸಿಲಿನಲ್ಲಿ ಮಂತ್ರಿಗಳ ಸಂಬಳವನ್ನು ಮಂಜೂರು ಮಾಡದೆ ಮಂತ್ರಿಗಳನ್ನು ತೆಗೆದುಹಾಕುವಂತೆ ಮಿ ಸಿ ಆರ್ ದಾಸ್‌ರವರು ಅಲ್ಲಿಯ ಮೆಂಬರುಗಳಿಗೆಲ್ಲಾ ಅಪ್ಪೀಲು ಮಾಡಿರುವರು.

ಮದ್ರಾಸು ಎಗ್ಸಿಕ್ಯೂಟಿವ್ ಕೌನ್ಸಿಲಿಗೆ ಮೆಂಬರಾಗಿ ಆನರ್ ಬಲ್ ಡ್ಯೂಕ್ ಮತ್ತು ದಿ ಉಸ್ಮಾನ್ ರವರನ್ನೂ ಮಿ. ... ಮಾರ್ಗೇರಿ ಬೆಂಕ್ಸ್‌ರನ್ನೂ ನೇಮಿಸಿರುವರು

ಬಂಗಾಳದ ಕ್ರಿಮಿನಲ್ ಎಮೆಂಡ್‌ಮೆಂಟ್ ಆಕ್ಟಿಗೆ ಸಪ್ಲಿಮೆಂಟರಿ ಮಸೂದೆಯನ್ನು ಎಸಂಬ್ಲಿಯಲ್ಲಿ ಪಾಸುಮಾಡುವ ಜವಾಬ್ದಾರಿಯನ್ನು ಸ್ವರಾಜ್ ಮತ್ತು ಇಂಡಿಪೆಂಡೆಂಟ್ ಪಾರ್ಟಿಯವರು ತೆಗದುಕೊಳ್ಳದೆ ಸರಕಾರಿ ಮೆಂಬರುಗಳಿಗೆ ಬಿಡುವಂತೆ ತೀರ್ಮಾನಿಸಿರುವರು

ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಕಳೆದ ವರುಷ 1–0–0 ಇಳಿಸಿದ್ದ ಉಪ್ಪಿನ ಸುಂಕವನ್ನು ಈ ವರ್ಷ 1–4–0ಗೆ ಏರಿಸಿರುವರು.

ಮದುವೆಯಾಗದ ಹುಡುಗಿಯರಿಗೆ ಒಪ್ಪಿಗೆಯ ವಯಸ್ಸನ್ನು 16ಕ್ಕೂ ಮದುವೆಯಾದವರಿಗೆ 14ಕ್ಕೂ ಏರಿಸಲಿಯವರು ಶಿಫಾರಸು ಮಾಡಿರುವರು.

ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಆಕ್ಟಿನ ಸಪ್ಲಿಮೆಂಟರಿ ಬಿಲ್ಲಿನ 4, 5 ಮತ್ತು 6ನೇ ಕ್ಲಾಸ್‌ಗಳು ಎಸೆಂಬ್ಲಿಯಲ್ಲಿ ಪಾಸಾಗಬಿದ್ದರೂ ಮಸೂದೆಯನ್ನು ಮುಂದಿದ್ದಂತೆ ಪಾಸು ಮಾಡಲು ವೈಸರಾಯರು ಶಿಫಾರಸ್ಸು ಮಾಡಿರುವರು.

ಬಂಗಾಳ ಕೌನ್ಸಿಲಿನವರು ಮಂತ್ರಿಗಳ ಸಂಬಳವನ್ನು ಮಂಜೂರು ಮಾಡಿರುವುದಿಲ್ಲ. 69ಜನರು ಪರವಾಗಿಯೂ 63ಜನರು ವಿರೋಧವಾಗಿಯೂ ಓಟಮಾಡಿದರು,

ಇಂಡಿಯಾದಲ್ಲಿ ಪ್ರಾವಿನ್ಶಿಯಲ್ ಅಟಾನಮಿ ಕೊಡಬೇಕೆಂಬ ಸಹಾನುಭೂತಿಯನ್ನು ಇಂಗ್ಲೆಂಡಿನ ವಾರ್ತಾಪತ್ರಿಕೆಗಳು ತೋರಿಸುತ್ತಿವೆ. ಲಾರ್ಡ್ ವೆಲ್ಲಿಂಗ್ಟನ್‌ರವರ ಅಭಿಪ್ರಾಯದಂತೆ ಮುಂದುವರಿದು ಅರ್ಹತೆಯುಳ್ಳ ಪ್ರಾಂತ್ಯಗಳಿಗೆ ಮೊದಲು ಈ ಮಾರ್ಪಾಡನ್ನು ಕೊಡಬಹುದೆಂದು ಲಾರ್ಡ್ ಒಲಿವಿಯರವರು ಸೂಚಿಸಿರುವರು

ಜಿನೀವದಲ್ಲಿ ನಡೆಯಲಿಕ್ಕಿರುವ 7ನೇ ಇಂಟರ್‌ನೇಶನಲ್ ಲೇಬರ್ ಕಾನ್‌ಫರೆನ್ಸಿಗೆ ಇಂಡಿಯಾದ ಪ್ರತಿನಿಧಿಗಳಾಗಿ ಸರ್ ಎ ಸಿ ಚಟರ್ಜಿ, ಸರ್ ವಿಲ್ ಜ ಕರ್, ಸರ್ ಥಾಮಸ್ ಸ್ಮಿತ್, ಮಿ. ಎನ್ ಎಂ ಜೋಶಿಯವರು ಕಳುಹಿಸಲ್ಪಡುವರು

ವಿದೇಶ.

ಉತ್ತರ ಅಮೇರಿಕದ ವಿಶಂಗ ಎಂಬಲ್ಲಿ ಅತಿ ಸಿಹಿಯಾದ ಒಂದು ಜಾತಿ ಮರದೆಲೆಯನ್ನು ಕಂಡುಹಿಡಿದಿರುವರು. ಈ ಎಲೆಯು ಸಕ್ಕರೆಗಿಂತ 200ಪಾಲು ಹೆಚ್ಚು ಸಿಹಿ ಇರುವುದು. ಈ ಎಲೆಯನ್ನು ನೀರಿನಲ್ಲಿ ನೆನಹಾಕಿದರೆ ಸಕ್ಕರೆಗಿಂತಲೂ ಸವಿಯಾದ ನೀರಾಗುವುದು. ಎಲೆಯನ್ನು ಒಣಗಿಸಿ ಪುಡಿಮಾಡಿ ಪದಾರ್ಥಗಳನ್ನು ಮಾಡಿದರೆ ಅನೇಕ ದಿವಸಗಳವರೆಗೂ ಕೆಟ್ಟು ಹುಳಿಯಾಗದೆ ಮೂತ್ರವ್ಯಾಧಿಯವರಿಗೂ ಉಪಯೋಗಿಸಲು ತೊಂದರೆ ಇಲ್ಲದ್ದಾಗಿದೆ. ಈ ಮರವನ್ನು ನಮ್ಮ ಹಿಂದೂದೇಶದಲ್ಲಿಯೂ ಬೆಳೆಸಿದರೆ ಸಕ್ಕರೆತಿನ್ನದ ಮೂತ್ರರೋಗಿಗಳಿಗೆ ಮಹದುಪಕಾರವಿತ್ತಲ್ಲವೇ ?

ಜಪಾನಿನ ರಾಜಧಾನಿಯಾದ ಟೋಕಿಯೋ ಎಂಬಲ್ಲಿ 300 ಕ್ಕೂ ಹೆಚ್ಚು ಹಾವುಗಳನ್ನು ಪಂಜರಕ್ಕೆ ಅಂಗಡಿಗಳಿವೆಯಂತೆ. ಜಪಾನಿಗಳು ಕೇರೆಹಾವುಗಳನ್ನು ತರಕಾರಿಯಂತೆ ಬೇಯಿಸಿ ತಿನ್ನುವರಂತೆ. ಅವುಗಳ ರಕ್ತವನ್ನು ಪಾನಮಾಡುವರು. ರೋಗಿಗಳಂತೂ ವಿಶೇಷವಾಗಿ ಉಪಯೋಗಿಸುವರು. ಹಾವುಗಳನ್ನು ಸುಟ್ಟು ಭಸ್ಮಮಾಡಿ ಸಾರಾಯದಲ್ಲಿ ಮಿಶ್ರಮಾಡಿಯೂ ಕುಡಿಯುವರಂತೆ. ಹಾವುಗಳನ್ನು ತಿನ್ನುವುದರಿಂದ ದೇಹಪುಷ್ಟಿಯಾಗುವುದೆಂಬ ಭಾವನೆಯು ಆ ಜನರಲ್ಲಿದೆಯಂತೆ. ಜಪಾನಿಯರು ತೀವ್ರತೆಯಲ್ಲಿ ಮುಂದುವರಿದ ಜನಾಂಗವಲ್ಲವೇ ?

ಈಗ ಇಂಡಿಯಾದ ಸ್ಟೇಟ್ ಸೆಕ್ರೆಟರಿಯಾಗಿರುವ ಅರ್ಲ್ ಆಫ್ ಬ್ರಿಕನ್‌ಹೆಡ್ ಲಾರ್ಡ್ ರೀಡಿಂಗ್‌ನಂತರ ಇಂಡಿಯಾದ ವೈಸರಾಯರಾಗಿ ಬರುವರೆಂತಲೂ, ಸರ್ ರಾಬರ್ಟ್ ಹಾರ್ನ್‌ರವರು ಸ್ಟೇಟ್ ಸೆಕ್ರೆಟರಿಯಾಗುವರೆಂತಲೂ 'ಮ್ಯಾಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯು ಸೂಚಿಸುತ್ತದೆ

ಒಮ್ಮೆ ಇಂಡಿಯಾದ ವೈಸರಾಯರಾಗಿ ಹೆಸರುಗೊಂಡು ಇಂಗ್ಲೆಂಡಿನಲ್ಲಿ ರಾಜಕೀಯದಲ್ಲಿ ಪ್ರವೀಣರಾಗಿದ್ದ ಲಾರ್ಡ್ ಕರ್ಜನ್‌ರವರು ಪರಲೋಕವನ್ನೈದಿದರು. ಇವರ ಮರಣದ ವಿಷಯ ಅನೇಕ ಬ್ರಿಟಿಷ್ ಪತ್ರಿಕೆಗಳು ಸಂತಾಪವನ್ನು ಸೂಚಿಸಿ ಬರೆದಿರುವವು

ಜಾಗ್ಲುಲ್ ಪಾಷಾರವರನ್ನು ಈಜಿಪ್ಟ್ ಪಾರ್ಲಿಮೆಂಟಿನ ಅಧ್ಯಕ್ಷರಾಗಿ 90 ಹೆಚ್ಚಿನ ಓಟುಗಳಿಂದ ಆರಿಸಿರುವರು. ಅಲ್ಲಿಯ ಒಡನೆ ಮಂತ್ರಿ ಮಂಡಲಿಯು ರಾಜೀನಾಮೆಯನ್ನು ಒಪ್ಪಿಕೊಳ್ಳದ್ದರಿಂದ ಈಗಿನ ಪ್ರಧಾನ ಮಂತ್ರಿಯಾದ ಜಿವಾರ್ ಪಾಷಾರವರು ಪಾರ್ಲಿಮೆಂಟನ್ನು ಒಡೆದುಹಾಕಿರುವರು. ಹೊಸ ಪಾರ್ಲಿಮೆಂಟು ಜೂನ್ 1ರಲ್ಲಿ ಪ್ರಾರಂಭವಾಗುವುದು.

ಇಟಲಿಯ ಪ್ರಧಾನ ಮಂತ್ರಿಯಾದ ಮುಸೊಲೋನಿಯವರು ಫ್ರಿಟನ್ನಿನೊಂದಿಗೆ ಫ್ರಾನ್ಸನ್ನು ಬಿಟ್ಟು ಒಂದು ಪ್ರತ್ಯೇಕ ಕೌಲನ್ನು ಮಾಡಲು ಕೇಳಿಕೊಂಡಿರುವರು. ಈ ವಿಷಯ ಬ್ರಿಟನ್ನಿನವರು ಫ್ರಾನ್ಸಿನವರ ಅಭಿಪ್ರಾಯ ಕೇಳಿರುವರು

ಲಾರ್ಡ್ ರಾಲಿನ್‌ಸನ್‌ರ ನಂತರ ಇಂಡಿಯಾದ ಕಮಾಂಡರ್ ಇನ್ ಚೀಫ್‌ರಾಗಿ ಸರ್ ಡಬ್ಲ್ಯು. ಬರ್ಡ್‌ವುಡ್‌ರವರನ್ನು ನೇಮಿಸಿರುವರು.

ಪತ್ರವ್ಯವಹಾರಗಳು.

ಪಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ ಸಂ

ಕೊಡಗರು ಕನ್ನಡಿಗರು.

ಕನ್ನಡ ಬಾಂಧವರೇ

ಕೊಡಗು ... ಪ್ರಕಾಶಿತ ಪತ್ರಿಕೆಯ ... ನೇ ಸಂಚಿಕೆಯಲ್ಲಿ ... ಕೊಡಗರು ಕನ್ನಡಿಗರೋ ಎಂಬ ವಿಷಯವನ್ನು ಓದಿನೋಡಿ ಒಹು ಆಶ್ಚರ್ಯವೂ ದುಃಖವೂ ಒಮ್ಮೆಲೇ ಉದ್ಭವಿಸಿದ್ದು ... ನೃಪತುಂಗರು ತಮ್ಮ ದೂರಿಂದ ಕಾವ್ಯದಲ್ಲಿ ಹೀಗೆ ವರ್ಣಿಸಿರುವರು "ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್" ಭಾವಿಸಿದ ... ವಿಷಯ ವಿಶೇಷಾ ... ಪೂರ್ವದಲ್ಲಿ ಮಹಾರಾಷ್ಟ್ರ ... ಈಗಿನ ಮುಂತಾದ ಭಾಗಗಳೆಲ್ಲಾ ಕರ್ನಾಟಕಕ್ಕೆ ಸೇರಿದ್ದವು ... ವಿಂಧ್ಯಪರ್ವತದ ದಕ್ಷಿಣಕ್ಕಿರುವ ಎಲ್ಲಾ ಕನ್ನಡ ಪ್ರದೇಶವಾಯ್ತು. ಇದು (... ಶತಮಾನದಿಂದೀಚೆಗೆ) ೯ನೆ ಶತಮಾನದಲ್ಲಿ ಆಳಿದ ನೃಪತುಂಗನು ... ರಚಿಸಿದ್ದ ಕವಿರಾಜಮಾರ್ಗದಲ್ಲಿಂತಲೂ ಕೊಡಗು ಕರ್ನಾಟಕಕ್ಕೆ ಸೇರಿದ್ದೆಂದು ಅನೇಕ ಬಲವಾದ ಪ್ರಮಾಣಗಳಿವೆ ... ಶತಮಾನದಲ್ಲಿ ಜಗಿಹೋದ ... ತನ್ನ ... ದರಾದ ಸೋದರ ರಾಮನಾಥ ... ಗ್ರಂಥದ ... ದಿಯಲ್ಲಿ (ಕಾವೇರಿಯಿಂದ ಗೋದಾವರಿದಾವರೆಗಿರ್ದಾವ ... ಭಾವಿಸ ಕರ್ನಾಟಕ ... ಗೋದಾವರಿಕಡೆಯಿಂದು ಹೇಳಿದ ... ನಮ್ಮ ... ಕರ್ನಾಟಕದ ಎಲ್ಲೆಯನ್ನು ... ದ ... ಕಾವೇರಿಯಿಂದ ದಕ್ಷಿಣಕ್ಕೆ ... (...) ... ಗಂಗಾವಿದ್ಯ ... ರಚಿಸಿದ ... ಚರಿತ್ರೆಯಲ್ಲಿ ... ಉಲ್ಲೇಖವಿದೆ ... ನಾಯಕಮಾಲಿಕಾ ... ಗ್ರಂಥದಲ್ಲಿ ತಮಿಳು ... ವರ್ಣಿಸುವುದರಿಂದ ... ಉಪರಿಗಿತ್ತೆಂದು ನಿಶ್ಚಿತವಾಗಿ ... ಕೃತಯುಗದಲ್ಲಿ (ಕ್ರಿಸ್ತಪೂರ್ವ) ಕರ್ನಾಟಕವು ಇತ್ತೆಂತಲೂ ಕರ್ನಾಟಕದಲ್ಲಿ ಬೇರೆ ಬೇರೆ ... ಇದ್ದವೆಂದು ... ತ್ತದೆ. ಅದು ಹೇಗೆಂದರೆ ... ದ್ರಾವಿಡ ... ಹಿಮವಂತ ... ಸೌಂದರ್ಯ ... ಕೌಶಲ್ಯದಲ್ಲಿ ... ಕರ್ನಾಟಕ ... ಚಕ್ರವರ್ತಿ ... ಚಕ್ರವರ್ತಿ ... ಆಧಿಪತಿಯಾಗಿದ್ದರೂ ... ದಿನ ... ಕರ್ನಾಟಕದವರು ಕೊಡಗಿನವರು ಮುಂತಾದ ... ದೇಶದ ಅರಸುಗಳು ಬಂದು ಕಪ್ಪಕಾಣಿಕೆಗಳನ್ನು ಒಪ್ಪಿಸಿದರೆಂದು ಉಲ್ಲೇಖವಿದೆ. ತುಳುನಾಡು ಅಂದರೆ ದಕ್ಷಿಣಕನ್ನಡ ಜಿಲ್ಲೆ ಎಂದು. ಯಾರಿಗೆ ತಾನೆ ಗೊತ್ತಿರಲಿಕ್ಕಿಲ್ಲ ... ದೇಶ ಕರ್ನಾಟಕದ ಒಂದು ಭಾಗ, ಕರ್ನಾಟಕವೆಂದರ ಧಾರವಾಡ ವಿಜಯನಗರ (ಹಂಪೆ) ಇತ್ಯಾದಿ ಕರ್ನಾಟಕಕ್ಕೆ ಕನ್ನಡ ಜಿಲ್ಲೆಯು ಸೇರಿಲ್ಲವೇ? ... ಕನ್ನಡ ಜಿಲ್ಲೆಯನ್ನು ಕರ್ನಾಟಕಕ್ಕೆ ಸೇರಿಸದೆ ... ಕನ್ನಡ ಜಿಲ್ಲೆ ... ತಮಿಳು ... ವೇ? ... ಮಲಯಾಳ ಮಲಯ ಇತ್ಯಾದಿ ದೇಶಗಳಾಗಿ ... ಹಾಗಾದರೆ ... ಮರಾಠೀ ... ಒಂದು ಹೇಳಲು ... ಯೂ ಇಲ್ಲ. ಕರ್ನಾಟಕದ ಇತರ ಭಾಗದಲ್ಲಿ ಒಂದೊಂದು ಅರಸು ಮನೆತನದವರು ಆಳುತ್ತಿದ್ದರು. ... ಭಾಗಕ್ಕೆ ಅವರ ಮನೆತನದ ಹೆಸರು ... ದೇಶಗಳೆಂದು ... ಕರ್ನಾಟಕಕ್ಕೆ ಸೇರಿದ್ದೆಂದು ಈ ಮೇಲಿನ ಉದಾಹರಣೆಗಳಿಂದ ಸಿದ್ಧವಾಯಿತು. ಮಹಾರಾಷ್ಟ್ರದಲ್ಲಿ ಇರುವ ಅನೇಕ ದೇವಾಲಯಗಳನ್ನು ಕರ್ನಾಟಕದ ಶಿಲ್ಪಿಗರು ಕಟ್ಟಿರುತ್ತಾರೆ. ಮಹಾರಾಷ್ಟ್ರರು ಕನ್ನಡಿಗರನ್ನು ಕರೆಸಿದ್ದರು. ಕರ್ನಾಟಕದವರು ಕೇರಳ ತಮಿಳು ಇತ್ಯಾದಿ ದೇಶಗಳಿಂದ ಕೆಲಸಗಾರರನ್ನು ಕರೆಸಿ ಕಟ್ಟಿಸಿದರೂ ... ಕರ್ನಾಟಕದವರನ್ನು ತಮಿಳು ... ಕೆಲಸ ಮಾಡಿಸಿದ ... ಕರ್ನಾಟಕವು ... ವಾಗಿ ಇದೊಂದು ಉದಾಹರಣೆಯಾಗಿರುವದಿಲ್ಲ. ಕರ್ನಾಟಕದ ದೇವಾಲಯಗಳಲ್ಲಿದ್ದ ಒಂದು ನಮೂನೆಯ ಕೆಲಸವು ಮಹಾರಾಷ್ಟ್ರದಲ್ಲಿಯೂ ಇದೆ. ಮಹಾರಾಷ್ಟ್ರ ಲಿಪಿಯ ಶಿಲಾಶಾಸನವು ಇಲ್ಲಿ ಒಂದು ದೊರೆತರೆ ಇದು ಮಹಾರಾಷ್ಟ್ರನೇ ಆ

ಜಮೀನುದಾರರ ಸಂಘದ

ವಾರ್ಷಿಕಾ ಜನರಲ್ ಮೀಟಿಂಗು ಈ ವರುಷ ಮೂರ್ನಾಡಿನಲ್ಲಿ ನಡೆಯುವುದು.

ಅಧ್ಯಕ್ಷರು:—ಮ. ರಾ. ರಾ. ಅಬ್ದುಲ್ ಗಫೂರ ಖಾನ್ ಕೈಶ್ಗಿಯವರು.

ಸಭೆಯು ಏಪ್ರಿಲ್ ತಾರೀಕು 11ರಲ್ಲಿ ಮಧ್ಯಾಹ್ನ 1 ಗಂಟೆಗೆ ಪ್ರಾರಂಭವಾಗುವುದು. ಅವಶ್ಯವಿದ್ದರೆ ತಾರೀಕು 13ರ ವರೆಗೆ ನಡೆಯುವುದು.

ಈ ಸಮ್ಮೇಳನವು ಬಹಳ ಮುಖ್ಯವಾದದ್ದು. ಪ್ರಿಚಾರ್ಡ್ ಕಂಟ್ರಾಕ್ಟು ಆಕ್ಟು, ಅಖಿಲಭಾರತ ಕಂದಾಯದ ಜಮೀನು ವಿಚಾರಣಾ ಕಮಿಟಿಯ ಪ್ರಶ್ನೆಗಳು; ಆಳುಗಳಿಗೆ ಪಾರಂಪರಿಕ ಸಂಬಳ ಕೊಡಬೇಕೋ, ಕಾರಖಾನೆಗಳಲ್ಲಿ ಕೆಲಸಮಾಡುವ ಹೆಂಗಸರಿಗೆ ಹೆರಿಗೆ ಕಾಲದಲ್ಲಿ ಕೆಲಸ ಮಾಡಿಸದೆ ಜೀವನಾಂಶ ಕೊಡಬೇಕೋ, ಎಂಬ ಮೊದಲಾದ ಮುಖ್ಯ ಸಂಗತಿಗಳು ಚರ್ಚಿಸಲ್ಪಡುವವು. ಆದಕಾರಣ ಪ್ರತಿಯೊಬ್ಬ ಜಮೀನ್ದಾರನೂ ಈ ಮೀಟಿಂಗಿಗೆ ಹಾಜರಾಗಬೇಕಾದದ್ದು ಅವನ ಕರ್ತವ್ಯವಾಗಿದೆ.

ಸ್ವಯಂ ಸೇವಕರು ಬೇಕಾಗಿವೆ.

ಈ ವರುಷದ 11—4—25ರಲ್ಲು ಮೂರ್ನಾಡಿನಲ್ಲು ನಡೆಯುವ ಜಮೀನ್ದಾರರ ಸಂಘದ ವಾರ್ಷಿಕ ಸಮ್ಮೇಳನದಲ್ಲು ಸಂಘದ ಉದ್ದೇಶ್ಯ ಒಂದು ಸ್ವಾಯಂ ಸ್ವಯಂ ಸೇವಕರ ಬೆಟಾಲಿಯನ್ ಏರ್ಪಡಿಸಲಾಗುವುದು. ಇದರ ಉದ್ದೇಶವು ಸಮ್ಮೇಳನದಲ್ಲಿ ಚರ್ಚಿಸಲ್ಪಡುವುದು. ಬಹುಮತದಿಂದ ಮೇಲಧಿಕಾರಿಗಳನ್ನು ಆರಿಸಲ್ಪಡುವುದು. ಇದಕ್ಕೆ ಸೇರಲು ಅಪೇಕ್ಷಿಸುವರು ಕೆಳಗಿನ ವಿಳಾಸಕ್ಕೆ ಬರೆಯುವದಲ್ಲದೆ ಈ ವರುಷದ ವಾರ್ಷಿಕ ಸಮ್ಮೇಳನದ ಜಯಕ್ಕೂ ಸಹಕಾರಿಗಳಾಗಬೇಕಾಗಿ ಕೋರಿಕೆ.

ವೀರಶೈವರಲ್ಲಿ ವಿನಂತಿ.

ಇದೇ ತಾರೀಕು 11—4—25ರಲ್ಲು ಮೂರ್ನಾಡಿನಲ್ಲು ನಡೆಯತಕ್ಕ ಕೊಡಗು ಜಮೀನ್ದಾರರ ಸಂಘದ ವಾರ್ಷಿಕ ಸಮ್ಮೇಳನಕ್ಕೆ ಹೋಗತಕ್ಕಂಥಾ ಶಿವಾಚಾರದವರು ದಯಮಾಡಿ ಅವರ ಸಂಖ್ಯೆ ಮತ್ತು ಹೆಸರುಗಳನ್ನು, ಅವರ ಊಟ ಉಪಚಾರಗಳನ್ನು ಏರ್ಪಡಿಸತಕ್ಕ ಬಗ್ಗೆ ಮುಂದಾಗಿಯೇ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಬೇಕಾಗಿ ಕೋರಿಕೆ.

ಸಕ್ರೆಟರಿ,
ಜಮೀನ್ದಾರರ ಸಂಘದ
ಸ್ವಾಗತ ಕಮಿಟಿ,
ಮೂರ್ನಾಡು.

ಪೈತ್ಯ.

ಪೈತ್ಯವೆಂದರೇನು?

ಪಿತ್ತ ಪ್ರಕೃತಿ ಎಂದರೆ ದೇಹದಲ್ಲಿ ಅತಿಯಾಗಿ ಪಿತ್ತವು ಉತ್ಪತ್ತಿಯಾಗುವುದಕ್ಕೆ ಬದಲಾಗಿ ಅತಿ ಸ್ವಲ್ಪವಾಗಿ ಉತ್ಪತ್ತಿಯಾಗುವುದು. ರಕ್ತದಲ್ಲಿರುವ ಕಲ್ಮಷವು ಯಕೃತ್ತಿನಿಂದ ಪಿತ್ತವಾಗಿ ಬಾರದೆ ದೈಹಿಕ ರಚನೆಯಲ್ಲಿಯೇ (tissues of the body) ಕೂಡಿ ಹಾಕಿಕೊಳ್ಳುತ್ತದೆ. ಹೀಗಾಗುವುದರಿಂದ ಲೇ ಕಣ್ಣಿನ ಬಿಳುಪು ಮಾಸಿದಂತಾಗುವುದು, ಚರ್ಮವು ಕಪ್ಪಾಗುವುದು, ಬಾಯಿಗೆ ತಾಮ್ರದಂಥಾ ರುಚಿಯು ಕೊಡುವುದು, ತಲೆ ತಿರುಗಿದಂತಾಗುವುದು, ಕಣ್ಣಿನ ಮುಂದೆ ಕರೇ ಚುಕ್ಕೆಗಳು ಕಾಣಿಸಿಕೊಂಡಂತಾಗಿ ಕತ್ತಲುಗುಡಿಸುವುದು, ಕಸಾಲಿಕೆ, ಆಯಾಸ, ಅಸಮಾಧಾನ ಮುಂತಾದ ಶಾರೀರಿಕ, ಮಾನಸಿಕ ಸ್ಥಿತಿಗತಿಗಳು ಪೈತ್ಯ ಪ್ರಕೃತಿಯಿಂದಲೇ ತೋರುವವು. ಪೈತ್ಯವುಳ್ಳವರಿಗೆ ಚರ್ಮವು ಮಸಕಾದಂತಾಗುವುದು ದೇಹದಲ್ಲಿರುವ ಕಲ್ಮಷವು ಕೂಡಿ ಹಾಕಿಕೊಳ್ಳುವುದರಿಂದ ಚರ್ಮದ ಮೇಲ್ಭಾಗದಲ್ಲಿ ಒಂದುವೇಳೆ ಕೊಳಕಾಗಿಲ್ಲದಾಗ್ಯೂ ಅದಿದ್ದರೂ ಅಂತರಂಗದಲ್ಲಿ ಪೂರ್ಣವಾಗಿ ಅಶುದ್ಧವಾಗಿರುತ್ತೆ. ಕಲ್ಮಷವು ಕೇವಲ ಚರ್ಮದಲ್ಲೊಂದೇ ತುಂಬಿಕೊಂಡಿರುವುದಿಲ್ಲ; ದೇಹದಲ್ಲಿನ ಮಾಂಸಖಂಡಗಳೂ, ಜ್ಞಾನೇಂದ್ರಿಯವೂ, ಇತರ ಅಂಗಾಂಗಗಳೆಲ್ಲವೂ ಕಲ್ಮಷಯುಕ್ತವಾದ ವಸ್ತುವಿನಿಂದ ಅಸ್ವಸ್ಥವಾಗಿರುತ್ತೆ. ಯಕೃತ್ತಿನ ಅಥವಾ ಪಿತ್ತಕೋಶದ ಅಶೈತಸ್ಯ ಸ್ವಭಾವದಿಂದ ಈ ವಿಷಕರವಾದ ವಸ್ತುಗಳು ಈಚೆಗೆ ಹೊರಡಿಸಲ್ಪಡದೆ ಕೇಂದ್ರೀಕರಿಸಲ್ಪಟ್ಟಿದೆ.

ಪೈತ್ಯವುಂಟಾಗುವುದಕ್ಕೆ ಕಾರಣ.

ಪಿತ್ತವಾಗುವುದಕ್ಕೆ ಅನೇಕ ಕಾರಣಗಳುಂಟು. ಅವುಗಳಲ್ಲಿ ಸಾಧಾರಣವಾಗಿರತಕ್ಕದ್ದು ಅಮಿತ ಭೋಜನವು. ಕೈಬೆರಳುಗಳನ್ನು ಬಲಭಾಗದ ಪಕ್ಕೆಲುಬುಗಳ ಹತ್ತಿರ ಒತ್ತಿದ್ದರೆ ಕೊನೆಯ ಪಕ್ಕೆಲುಬಿನ ಒಂದು ಅಂಗುಲಕ್ಕೆ ಮೇಲ್ಭಾಗದಲ್ಲಿ ಯಕೃತ್ತಿನ ಕೆಳಭಾಗವು ಸಿಗುವುದು. ಮನಃಪೂರ್ವಕವಾಗಿ ಊಟಮಾಡಿದಾಗ ಪುನಃ ಯಕೃತ್ತನ್ನು ಹಿಡಿಯಲು ಹೋದರೆ ಅದು ಅರ್ಧ ಅಂಗುಲ ಕೆಳಕ್ಕೆ ಇಳಿದಂತೆ ತೋರುತ್ತೆ. ಇದಕ್ಕೆ ಕಾರಣವೇನಂದರೆ, ಯಕೃತ್ತವು ಜೀರ್ಣವಾಗದ ಕೆಲವು ಭಾಗದ ಆಹಾರಾಂಶವನ್ನು ಹೀರಿಕೊಂಡು ದೊಡ್ಡದಾಗುತ್ತೆ. ಎಂದಾದರೊಂದು ದಿನ ಹಬ್ಬ ಹುಣ್ಣಿಮೆ ಮುಂತಾದ ದಿವಸಗಳಲ್ಲಿ ದಿನಕ್ಕಿಂತ ಎರಡರಷ್ಟು ಭೋಜನ ಮಾಡಿದ ಮನುಷ್ಯನಿಗೆ ಪಕ್ಕೆಲುಬುಗಳಿಗೆ ಕೈ ಹಾಕಿದ್ದೇ ಆದರೆ ಯಕೃತ್ತನ್ನು ಅ.....ಉಬ್ಬಿರ ಪಸುಕನ್ನೂ ಒಂದಿರುವುದು ವ್ಯಕ್ತವಾಗುವುದಲ್ಲದೇ ಅದರ ಪರಿಮಾಣವು ಅತಿಯಾಗಿ ಹೆಚ್ಚಿಸಿದೆ ಎಂಬುದು ಗೋಚರವಾಗುವುದು. ಮೊನ್ನೆ ದಿವಸ ಶ್ರಾದ್ಧ, ನಿನ್ನೆ ದಿವಸ ಹಬ್ಬ, ಇವತ್ತು ಒಬ್ಬ ದಿವಸ, ನಾಳೆ ಸಂಕ್ರಮಣ ಎಂಬುದಾಗಿ ದಿನಗಟ್ಲೆ ಅಥವಾ ವಾರಗಟ್ಲೆ ಹಬ್ಬಗಳ ನೆಪದಿಂದ ಹೆಚ್ಚಾಗಿ ತಿನ್ನುತ್ತಾ ಬಂದಲ್ಲಿ ಯಕೃತ್ತಿನಲ್ಲಿರುವ ಮಾಂಸಖಂಡಗಳು ಹಿಗ್ಗಲ್ಪಟ್ಟು ಅತಿಯಾಗಿ ದೊಡ್ಡದಾಗುವುದು. ಯಕೃತ್ತುವು ಈ ಸ್ಥಿತಿ ತರಲ್ಪಟ್ಟದ್ದೇ ಆದರೆ ಪಿತ್ತವನ್ನು ಶೇಖರಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುವುದಲ್ಲದೆ ದೇಹದಲ್ಲಿನ ಕಲ್ಮಷವು ಅಲ್ಲಲ್ಲೇ ಉಳಿಯಲ್ಪಟ್ಟು ಮೇಲೆ ಹೇಳಿದಂತೆ ಪೈತ್ಯ ಪ್ರಕೃತಿಯು ಕಾಣಿಸಿಕೊಳ್ಳುತ್ತದೆ.

ಕೆಲವು ಸಂದರ್ಭದಲ್ಲಿ ಮೇಧಸ್ಸು ಹೆಚ್ಚಾಗಿರತಕ್ಕ ವಸ್ತುಗಳನ್ನು ಉಪಯೋಗಿಸುವುದರಿಂದಲೂ ಪೈತ್ಯವು ಉಂಟಾಗುವುದು. ಪ್ರಾಣಿ ಸಂಬಂಧವಾದ ಮೇಧಸ್ಸು ಜೀರ್ಣವಾಗುವುದು ಬಹು ಕಠಿಣ. ಬೆಣ್ಣೆ, ಹಂದಿ ಕೊಬ್ಬು, ಚರಬಿ ತುಪ್ಪ, ಕಜ್ಜದಂಥಾ ಪ್ರಾಣಿಗಳ ಮಾಂಸ ಮುಂತಾದವುಗಳಲ್ಲಿ ಹೆಚ್ಚಾಗಿ ಮೇಧಸ್ಸಿರುವುದರಿಂದ ಅವುಗಳ ಸೇವನೆಯಿಂದ ಪೈತ್ಯವುಂಟಾಗುತ್ತದೆ.

ಕೆಲವು ವರುಷಗಳ ಕೆಳಗೆ ಫ್ರಾನ್ಸ್ ದೇಶದ ಶರೀರ ಶಾಸ್ತ್ರಜ್ಞನು ಅನೇಕ ಪ್ರಾಣಿಗಳಿಗೆ ಕೊಬ್ಬು ಹೆಚ್ಚಾಗಿರುವ ಆಹಾರವನ್ನೇ ಹಾಕುತ್ತಾ ಬಂದು ಅವುಗಳಿಗೆ ಪಿತ್ತರಸವು ಎಷ್ಟು ಉತ್ಪತ್ತಿಯಾಗುವುದೆಂದು ಪರೀಕ್ಷಿಸಿದನು. ಎಷ್ಟೆಷ್ಟು ಕೊಬ್ಬಿನ ಆಹಾರವನ್ನು ಹಾಕುತ್ತಿದ್ದನೋ ಅಷ್ಟಷ್ಟು ಪಿತ್ತರಸವು ಕಡಿಮೆಯಾಗುತ್ತಿತ್ತು. ಇದನ್ನು ಹೇಗೆ ಕಂಡು ಹಿಡಿದನೆಂದರೆ ಆತನು ಕೆಲವು ಪ್ರಾಣಿಗಳಿಗೆ ಅತಿಯಾಗಿ ಕೊಬ್ಬುಳ್ಳ ಆಹಾರವನ್ನು ಹಾಕಿ, ಅವುಗಳನ್ನು ಕೊಂದು, ಅವುಗಳ ಯಕೃತ್ತನ್ನು ಸೂಕ್ಷ್ಮದರ್ಶಕ ಯಂತ್ರದಿಂದ (Microscope) ಪರೀಕ್ಷಿಸಿದನು. ಈ ಶೋಧನೆಯಿಂದ ಆತನಿಗೆ ತಿಳಿದುಬಂದದ್ದೇನೆಂದರೆ, ಯಕೃತ್ತನ್ನು ರಚನೆಮಾಡಿದ ಮತ್ತು ಪಿತ್ತವನ್ನು ಹಡಿಸತಕ್ಕ ಸಣ್ಣ ಸಣ್ಣ ಕಣಗಳೆಲ್ಲವೂ ಕೊಬ್ಬಿನಿಂದ ಮುಚ್ಚಿಬಿಟ್ಟು ಅವುಗಳ ಕಾರ್ಯಕ್ಕೆ ಅಡ್ಡಿಯಾಗಿದ್ದಲ್ಲದೇ ಹೆಚ್ಚು ಕಷ್ಟದಿಂದ ಸ್ವಲ್ಪವಾದ ಪಿತ್ತರಸವನ್ನು ಉತ್ಪತ್ತಿ ಮಾಡುತ್ತಿದ್ದವು.

ಹೆಚ್ಚಾಗಿ ಮಾಂಸಾಹಾರವನ್ನು ಉಪಯೋಗಿಸುವವರ ಯಕೃತ್ತು ಅಚೇತನವಾಗಿ ಬಹು ತಾಮಸದಿಂದ ಕೆಲಸಮಾಡಿ ಪೈತ್ಯವನ್ನುಂಟುಮಾಡುತ್ತದೆ. ಮಾಂಸಾಹಾರದಲ್ಲಿ ಹೆಚ್ಚಾಗಿ 'ಆಲ್ಬ್ಯುಮನ್' ಎಂಬ ವಸ್ತುವು ಇರುವುದರಿಂದ ಅದನ್ನು ಮಿತವಾಗಿ ಉಪಯೋಗಿಸಬೇಕು. ಇಪ್ಪತ್ತನಾಲ್ಕು ಗಂಟೆಯಲ್ಲಿ ಸಾಧಾರಣವಾಗಿ ಮೂರು 'ಔನ್ಸು' ಗಳಷ್ಟು ಈ ತರ ಆಹಾರವನ್ನು ತೆಗೆದುಕೊಳ್ಳಬಹುದು, ಹೆಚ್ಚಾಗಿಯೂ ಅರುಚಿಯಾಗಿಯೂ ಇರತಕ್ಕ ಮಾಂಸಾಹಾರವನ್ನಿಟ್ಟುಕೊಂಡಿರತಕ್ಕವರಿಗೆ ಬಹು ಕಲ್ಮಷವು ತುಂಬಿಕೊಳ್ಳುವುದು. ಈ ಕಲ್ಮಷವು ಮೂತ್ರದ್ವಾರದಿಂದ ಸಾಗಬೇಕಾಗಿರುವುದರಿಂದ ಮೂತ್ರ ಪಿಂಡಗಳಿಗೂ ಯಕೃತ್ತಿಗೂ ಹೆಚ್ಚು ಶ್ರಮೆಯಾಗುವುದು. ಯಕೃತ್ತಿನ ಕಾರ್ಯವು ಸರಿಯಾಗಿ ನಡೆಯದೇ ಪದ್ದಲ್ಲಿ ಕಲ್ಮಷದ ಶೇಷವು ಉಳಿದು ಪೈತ್ಯ, ವಾತ, ಕೈ ಕಾಲುಗಳಲ್ಲಿ ನೋವು, ಶಿರೋವೇದನೆ ಮುಂತಾದುವುಗಳೆಲ್ಲವೂ ಕಾಣಿಸಿಕೊಳ್ಳುವುವು. ಈ ಕಾರಣಗಳಿಂದ ನರಳುತ್ತಿರುವವರ ಮೂತ್ರವನ್ನು ಪರೀಕ್ಷಿಸಿದ್ದೇ ಆದರೆ ದೋಷವು ಕಂಡು ಬರುವುದು.

ಪೈತ್ಯಕ್ಕೆ ಪರಿಹಾರ.

ಇದಕ್ಕೆ ಪರಿಹಾರವು ಸ್ಪಷ್ಟವಾಗಿದೆ. ಯಕೃತ್ತನ್ನು ದುರುಪಯೋಗಪಡಿಸುವುದನ್ನು ನಿಲ್ಲಿಸಬೇಕು. ಅಂದರೆ ಯಕೃತ್ತಿಗೆ ಹೆಚ್ಚು ಕೆಲಸ ಕೊಡತಕ್ಕ ಆಹಾರವನ್ನು ತಿನ್ನಕೂಡದು. ಕೆಲವು ವಾರಗಳವರೆಗೆ ಸಾದಾ ಆಹಾರದಲ್ಲಿದ್ದು ಯಕೃತ್ತಿಗೆ ವಿಶ್ರಾಂತಿ ಕೊಟ್ಟರೆ ಅದ್ಭುತವಾದ ಬದಲಾವಣೆಯುಂಟಾಗುವುದು. ನಂತರ ಯಕೃತ್ತಿನ ಕಾರ್ಯವು ಸಾಂಗವಾಗಿ ನಡೆಯುವುದು.

ಪೈತ್ಯದಿಂದ ನರಳುವವರು ಮಾಂಸಾಹಾರವನ್ನೂ, ಸಕ್ಕರೆಯನ್ನೂ ಬಿಡಬೇಕು. ಸಕ್ಕರೆಯನ್ನು ಹೆಚ್ಚಾಗಿ ತಿನ್ನುವವರಿಗೆ ಪೈತ್ಯವುಂಟಾಗುವುದು. ಕಾರಣವೇನೆಂದರೆ ಯಕೃತ್ತು, ಆಹಾರದಲ್ಲಿರುವ ಸಕ್ಕರೆಯನ್ನೆಲ್ಲಾ ಹೀರಿಕೊಳ್ಳುತ್ತದೆ. ಪಿಷ್ಟ ಪದಾರ್ಥವೂ ಕೂಡ ಸಕ್ಕರೆಯಾಗಿ ಪರಿಣಮಿಸಿ ಅಪರಿಮಿತವಾಗಿ ಭಾಗವು ಯಕೃತ್ತಿನಲ್ಲಿ 'ಗ್ಲೈಕೋಜನ್' ಎಂಬ ರೂಪದಲ್ಲಿ ದುಂಬಿಕೊಳ್ಳುವುದು. ಈ ಕಾರಣದಿಂದಲೇ ಊಟವಾದ ಮೇಲೆ ಯಕೃತ್ತು ದೊಡ್ಡದಾಗುವುದು. ಒಂದು ಊಟದಿಂದ ಇನ್ನೊಂದು ಊಟದ ಮಧ್ಯೆ ಈ 'ಗ್ಲೈಕೋಜನ್' ಎಂಬ ವಸ್ತುವು ಪುನಹ ಸಕ್ಕರೆಯಾಗಿ ದೇಹದೊಳಕ್ಕೆ ಸೇರುತ್ತದೆ. ಒಬ್ಬ ಮನುಷ್ಯನು ಅತಿಯಾಗಿ ಸಕ್ಕರೆ ತಿಂದರೆ ಯಕೃತ್ತಿಗೆ ಪಿಷ್ಟ ತಯಾರಿಸುವ ಕೆಲಸವು ಅಧಿಕವಾಗಿ ಪಿತ್ತವನ್ನು ಉತ್ಪತ್ತಿ ಮಾಡುವ ಕಾರ್ಯವು ಕಡಿಮೆಯಾಗುತ್ತದೆ. ಆದ್ದರಿಂದ ಬೆಣ್ಣೆ, ಸಕ್ಕರೆ, ಮಿಠಾಯಿ ತಿನ್ನುವವರಿಗೆ ಪಿತ್ತ ಉಂಟಾಗುವುದು.

ನಾವು ಹೇಳುವಂತೆ ಚಿಕಿತ್ಸಾಕ್ರಮವನ್ನನುಸರಿಸಿ ಪ್ರಾಣಿ ಸಂಬಂಧವಾದ ಕೊಬ್ಬು, ಮಾಂಸ; ಸಕ್ಕರೆ, ಸಿಹಿ ಪದಾರ್ಥ, ಹೋಳಿಗೆ, ಮಿಠಾಯಿ ಮುಂತಾದವು ಅಲ್ಲದೆ ಮಸಾಲೆಪುಡಿ ಸಾಮಾನುಗಳನ್ನು ಉಪಯೋಗಿಸುವ ಪದಾರ್ಥಗಳನ್ನು ತಿನ್ನಕೂಡದು. ಹೆಚ್ಚಾಗಿ ಭೋಜನ ಮಾಡದಂತೆ ಎಚ್ಚರಿಕೆಯಾಗಿರಬೇಕು. ಊಟಕ್ಕೆ ಯಥೇಚ್ಛವಾಗಿ ಕಾಯಿಪಲ್ಯ, ತೊವ್ವೆ, ಪಚ್ಚಡಿ, ಹಣ್ಣು, ಹಾಲು ಮುಂತಾದುವನ್ನು ಉಪಯೋಗಿಸಿ ಊಟಮಾಡುವುದಕ್ಕೆ ಅರ್ಧ ಗಂಟೆ ಮುಂಚೆ ಒಂದು ಅಥವಾ ಎರಡು ಕಿತ್ತಳೆ ಹಣ್ಣುಗಳನ್ನು ತಿಂದರೆ ಒಳ್ಳೆಯದು. ಊಟಕ್ಕೆ ಒಂದು ಗಂಟೆ ಮುಂಚೆ ಹಿತವಾಗಿರುವಂತೆ ಎರಡು ಲೋಟದಷ್ಟು ಬಿಸಿ ನೀರು ಕುಡಿಯಬೇಕು. ಮಲಗುವದಕ್ಕೆ ಅರ್ಧ ಗಂಟೆ ಮುಂಚೆಯೂ ಇದೇ ಪ್ರಕಾರ ಬಿಸಿನೀರು ಕುಡಿದರೆ ಬಹಳ ಉಪಯೋಗ.

ಮಲಗಿದ ಮೇಲೆ, ತಣ್ಣೀರಿನಲ್ಲಿ ಬಟ್ಟೆಯನ್ನು ಅದ್ದಿ ಚನ್ನಾಗಿ ಹಿಂಡಿ ಯಕೃತ್ತು ಇರುವ ಭಾಗದ ಸುತ್ತಲೂ ಕಟ್ಟಿ ಎರಡು ಮೂರು ಪದರಿರುವ ಉಣ್ಣೆಯ ಬಟ್ಟೆಯನ್ನು ಹೊದೆದುಕೊಳ್ಳಬೇಕು. ಪ್ರಾತಃಕಾಲ ಎದ್ದ ಮೇಲೆ ಬಟ್ಟೆಯ ಕಟ್ಟನ್ನು ತೆಗೆದುಹಾಕಿ ಎದೆಯನ್ನೂ ಜಠರವನ್ನೂ ಉಜ್ಜಿಕೊಳ್ಳಬೇಕು. ನಂತರ ಸುಖೋಷ್ಣದ ನೀರಿನ ಸ್ನಾನಮಾಡುವುದು.

ಪ್ರತಿ ನಿತ್ಯವೂ ಸ್ವಚ್ಛವಾದ ಹವೆಯಲ್ಲಿ ಐದು ಮೈಲು ಸಂಚಾರ ಮಾಡಬೇಕು. ಸಂಚಾರ ಮಾಡುವಾಗ ಭುಜಗಳನ್ನು ಹಿಂದಕ್ಕೆ ಹಾಕಿಕೊಂಡು ತಲೆಯನ್ನೆತ್ತಿಕೊಂಡು ಬಲವಾದ ಹೆಜ್ಜೆಗಳನ್ನಿಡಬೇಕು. ದಿನವೂ ಎರಡು ಊಟದ ಮೇಲಿದ್ದು ಬೇರೆ ಆಹಾರವನ್ನು ತೆಗೆದುಕೊಳ್ಳದೆ ಇದ್ದರೆ ಯಕೃತ್ತಿಗೆ ಬೇಕಾದಷ್ಟು ವಿಶ್ರಾಂತಿಯು ದೊರೆಯುವುದಲ್ಲದೆ ಆಹಾರವು ಸುಲಭವಾಗಿ ಜೀರ್ಣವಾಗಿ ರಕ್ತದಲ್ಲಿರುವ ಕಲ್ಮಷವೆಲ್ಲವೂ ಆಚೆಗೆ ಸಾಗಲ್ಪಟ್ಟು ಪೈತ್ಯವು ನಿವಾರಣೆಯಾಗುವುದು.

ಶರೀರ ವ್ಯಾಯಾಮ.

ಕೊಡಗು ಜಮ್ಖಾನ ರೇಸ್‌ಗಳು.

ಏಪ್ರಿಲ್ ೧೪, ೧೭, ೨೦.

ಪ್ರತಿದಿನವೂ ಸಾಯಂಕಾಲ ಮೂರು ಗಂಟೆಗೆ ಪ್ರಾರಂಭ. ಟೋಟಲೈಜೇಟರ್ ಮತ್ತು ಬುಕ್ ಮೇಕರಿಗೆ ಎರಡು ರುಪಾಯಿ.

ಪ್ರವೇಶಕ್ಕೆ ಒಂದು ರುಪಾಯಿ.

ಫಲಾಹಾರದ ಅಂಗಡಿಯೂ ಸಹ ಇದೆ.

ನೋಟೀಸು.

ಸಂಘದ ವಾರ್ಷಿಕ ಜನರಲ್ ಮೀಟಿಂಗ್ ಮೂರ್ನಾಡಿನಲ್ಲಿ ಮ॥ ರಾ॥ ರಾ॥ ಅಬ್ದುಲ್ ಗಫೂರಖಾನ್ ಕೈಶ್ಗಿಯವರ ಅಧ್ಯಕ್ಷತೆಯಲ್ಲಿ 1925 ನೇ ಇಸವಿ ಏಪ್ರಿಲ್ ತಾರೀಕು 11,12 ಮತ್ತು 13 ರಲ್ಲು ಮಧ್ಯಾಹ್ನ 1ಘಂಟೆಗೆ ನಡೆಯುತ್ತೆ. ಊಟೋಪಚಾರಕ್ಕೆ ಮಡಿಕೇರಿತಾಲೋಕಿನವರು ಏರ್ಪಡಿಸುವರು. ಚರ್ಚಿಸತಕ್ಕ ವಿಷಯಗಳನ್ನು ತಾರೀಕು 31—3—1925 ರ ವಳಗೆ ಜನರಲ್ ಸೆಕ್ರೆಟರಿ ಮ॥ ಸಿ. ಯನ್. ವೆಂಕಪ್ಪಯ್ಯನವರಿಗೆ ತಲಪುವಂತೆ ಕಳುಹಿಸಬೇಕೆಂತಲೂ, ಮೀಟಿಂಗಿಗೆ ಎಲ್ಲಾ ಮೆಂಬರುಗಳು ಹಾಜರಾಗಬೇಕೆಂತಲೂ ಕೋರುತ್ತೇನೆ.

ಚಂದಾ ಮೊಬಲಗನ್ನು ಎರಡು ವರ್ಷಗಳಿಂದ ಪಾವತಿ ಮಾಡದೆ ಇರುವವರು ಸಂಘದ ಕಾರ್ಯಗಳಲ್ಲಿ ಭಾಗಿಗಳಾಗಕೂಡದು. ಎಲ್ಲಾ ಮೆಂಬರುಗಳು ತಮ್ಮ ಬಾಕಿ ಚಂದಾ ಮೊಬಲಗನ್ನು ಕೂಡಲೇ ಪಾವತಿ ಮಾಡಬೇಕಾಗಿ ಕೋರುತ್ತೇನೆ.

ಕೊಡಗು ಜಮೀನ್ದಾರರ ಸಂಘ,

ಸಿ. ಎನ್. ವೆಂಕಪ್ಪಯ್ಯ.
ಮಡಿಕೇರಿ, ತಾರೀಕು 5—3—25. ಜನರಲ್ ಸೆಕ್ರೆಟರಿ.

ಯಾತೋ? ಕರ್ನಾಟಕದಲ್ಲಿ ಕೆಲವರು ಶುಭ ಶೋಭನಗಳಲ್ಲಿ ತಮಿಳು ತೆಲಗು ಅರವು ಇತ್ಯಾದಿ ಭಾಷೆಗಳನ್ನಾಡಿದರೆ ಅವರು ಕರ್ನಾಟಕವನ್ನು ತಮಿಳು ತೆಲಗು ಪ್ರಾಂತ್ಯಕ್ಕೆ ಸೇರಿದ್ದೆಂದು ಹೇಳಿದರೆ ಯಾರಾದರೂ ಒಪ್ಪಬಹುದೇ? ಭಾಷೆ ಯಾವದಾದರೇನು ಮುಖ್ಯತಃ ಲಿಪಿಯ ಶೋಧನೆಯನ್ನು ನಮ್ಮ ನಿಷ್ಪಕ್ಷಪಾತಿಗಳು ಗಮನಕ್ಕೆ ತಂದಿದ್ದರೆ ಮೇಲಾಗಿತ್ತು. ಹಾಗೆ ಮಾಡದೆ ಮೇಲಾದ ಸಟಸೆಗಳು ಯಾವ ಸ್ಥಿರತೆಯನ್ನೂ ದೃಢಪಡಿಸಲು ಕಾರಣಗಳಿರುವದಿಲ್ಲ.

ಕೊಡಗು ಕನ್ನಡ ಬಂಧುಗಳೇ,

ಪತಂಗವು ಉರಿಯುವ ಬೆಂಕಿಯನ್ನು ಕಂಡು ಹಣ್ಣೆಂದು ಭ್ರಮಿಸಿ ಬಿದ್ದು ನಾಶವಾಗುವಂತೆ ನಮ್ಮ ವಾಚಕ ಮಹಾಶಯರು ಇಂಥಾ ವಾತ್ತೆಯನ್ನು ನೋಡಿ ಮನಸ್ಸನ್ನು ಕೆಡಿಸಿಕೊಳ್ಳಬಾರದೆಂದು ಕರಗೂಡಿ ಪ್ರಾರ್ಥಿಸಿಕೊಳ್ಳುತ್ತೇನೆ.

'ಮನನೊಂದವ'

ಡಿ. ಬೋರ್ಡಿನವರ ಕುರಿತು.

ಅಯ್ಯಾ,

ಮಳೆಗಾಲವು ಸಮೀಪಿಸಿತು. ಈಗಾಗಲೆ 8 ದಿನಗಳಿಂದ ಎಡೆಬಿಡದೆ ಮಳೆಯು ಹೊಡಿಯುತ್ತಾ ಇದೆ. ನಮ್ಮ ಈ ಪಾಡಿನಾಲ್ಕುನಾಡು ಬೆಟ್ಟ ಪ್ರದೇಶವಾದುದರಿಂದ ಒಂದು ಮಳೆ ಬಂದರೆ ಹೊಳೆ ದಾಟಲಾಗುವದಿಲ್ಲ. ನಾವು ಕಳೆದ ಜಮಾಬಂದಿಯಲ್ಲಿ ನಾಲಡಿ, ಕುಂಜಿಲ, ಪರೇಂಗೇರಿ, ಯವ್ವಕಪಾಡಿ, ಕೊಳಕೇರಿ ಗ್ರಾಮಸ್ಥರು ತಿರುಗಾಡುವ ಕಾಂಡಂಡ ವಾಡೆಗಾಗಿ ಹೋಗುವ ರಸ್ತೆಗೆ ಅಡ್ಡವಾಗಿ ದೊರೆಯುವ ಅದೆ ಹೊಳೆ ಮತ್ತು ಕೊಟ್ಟೇರಿ ಹೊಳೆ, ಇವುಗಳಿಗೆ ಪಾಲ ಹಾಕಿಸಿ ಕೊಡುವಂತೆಯೂ ಸದರಿ ರಸ್ತೆಯನ್ನು ರಿಪೇರಿ ಮಾಡಿಸಿ ಕೊಡಬೇಕಾಗಿಯೂ ಅರ್ಜಿ ಕೊಟ್ಟದ್ದಕ್ಕೆ ಮುಂದಕ್ಕೆ ಮಾಡಿಸಲಾಗುತ್ತೆಯಾಗಿ ಅಪ್ಪಣೆ ಆದದ್ದೇ ಶಿವಾಯಿ ಇನ್ನೂ ಪಾಲಹಾಕಿ ಕಂಡು ಬರುವದಿಲ್ಲ. ಮಳೆ ಒಂತು ಇನ್ನಾದರೂ ಪಡನೆ ಹೊಳೆಗಳಿಗೆ ಪಾಲ ಹಾಕುವ ಹಾಗೆ ಮಾಡಬೇಕಾಗಿ ವಿನಂತಿ. ಇದೇ ಮೇರ ಹೊರಮಲೆನಾಡು, ನೂರ್ಲಬಿನಾಡು, ಯಡಪನಾಡು, ಮರನಾಡುಗಳು ಸಹ ಇರುತ್ತೆ. ಪಾಲದ ಕೆಲಸ ಈಗ ನಡೆಯದಿದ್ದರ ಮಳೆಗಾಲದಲ್ಲು ತೃಪ್ತಿಕರವಾಗಿ ನಡಿಯುವದಿಲ್ಲ.

ದೇಶದ ಬಳ್ಳಿ ಮನ ಹೊಡಿಸುವದು, ದೇವರ ಹಬ್ಬಗಳ ನಡಿಸುವದು, ಕಾಡ ಕಡಿಯುವದು ಗದ್ದೆ ಕರಕಾಡು ಕಡಿಯುವದು ಜೋರಾಗಿದೆ. ಮೀನ ಮಾಸ ಶೂನ್ಯವಾದದ್ದರಿಂದ ಮದುವೆಗೆ ಸುರು ಆಗಲಿಲ್ಲ.

ಪ್ರಜಾರಾಥಕ.

ಅಯ್ಯಾ,

ಈ ದ ಎರಡು ತಿಂಗಳ ಓ. ಯನ್ ಮೊಗಟಿನಿನ ಸಂಪಾದಕೀಯ ಟಿಪ್ಪಣಿಗಳಲ್ಲೊಂದು, ಮೊನ್ನೆ ಮೊನ್ನೆ ಬೆಳಗಾವಿನಲ್ಲಿ ಆದ ಕಾಂಗ್ರೆಸ್ ಸಭೆಗೆ ಹೋಗಿ ಬಂದ ಮಹನೀಯರ ವರ್ತನದ ಸತ್ಯತೆಯನ್ನು ಅಭಿಯೋಗ ಮಾಡಿ ಹೇಳಿದುದಾಗಿತ್ತು. ಅವರು ಬೋಧಿಸುವ ಮನೋಗತಗಳು ಖಾದಿ ಪ್ರಚಾರ, ಅಸ್ಪೃಶ್ಯತಾ ನಿವಾರಣ, ಹಿಂದೂ ಮಹಮ್ಮದೀಯ ಒಗ್ಗಟ್ಟು, ಇವುಗಳ ಶ್ರೇಷ್ಠತೆಯನ್ನು ಅಲ್ಲಗಳೆದುದಾಗಿತ್ತು. ಅವರು ಹೇಳುವುದೆಲ್ಲವೂ ಇನ್ನೊಬ್ಬರಿಂದ ಹೊಂದಿಕೊಂಡುದೆಂದೂ ಆಯಿತು. ಮಹಾತ್ಮ ಗಾಂಧಿಯವರೇನೋ ಚನ್ನಾಗಿದ್ದರೂ ಅವರು ಮಾಡಿದ ಕಾರ್ಯವು ಚನ್ನಾಗಿಲ್ಲವಾದೂ ಆದರು. ಈ ಕೊಡಗಿನಲ್ಲಿ ಮಹಾತ್ಮರೇಕೆ? ಬುದ್ಧಿವಂತರೇ ವಿರಳವಾಗಿರುವಲ್ಲಿ, ಮೇಲೆ ಕಾಣಿಸಿರುವ ಹುಳುಕುಗಳೊಂದೂ ಇಲ್ಲದ ದೇಶಕ್ಕೆ ಹಿತಕರವಾದ ಸಾಧನಗಳನ್ನು ಹರಡುತ್ತಾ ಸತ್ಯತೆಯಿಂದ ದೇಶ ಸೇವೆಯೇ ಈಶ ಸೇವೆ ಎಂದು ತಮ್ಮ ಧ್ಯೇಯವಾಗಿ ಇಟ್ಟುಕೊಂಡಿರುವ ಮಹನೀಯರು ಇರುವರೋ? ಅಲ್ಲದಿದ್ದರೆ, ಕಾಂಗ್ರೆಸ್ ಮತದಲ್ಲಿ ಅದೇನು ಹುಳುಕು ಇರುವುದು, ನಮ್ಮ ದೇಶಕ್ಕೆ ಅದು ಹೇಗೆ ಪ್ರಭವಾಗಬೇಕು, ಅಂಥಾವರು ಈ ಕೊಡಗಿನಲ್ಲಿ ಒಬ್ಬಿಬ್ಬರಾದರೂ ಇರುವರೋ, ಮುಂತಾದ ಸಂಗತಿಗಳನ್ನು ಇನ್ನು ಮುಂದಿನ ತ್ರೈಮಾಸಿಕದ ಪುಟಗಳಲ್ಲಿ ನೋಡುವವೋ? ನಡೆಯುವದು ಎಡವದಿರಲಿಕ್ಕಿಲ್ಲ, ಮಾತಾಡುವವರ ಬಾಯಿ ತಪ್ಪದಿರಲಿಕ್ಕಿಲ್ಲ ಎಂದಿರುವಲ್ಲಿ, ಮೊದಲೇ ಚಳಿಯಿಂದ ಕೊರಗುತ್ತಿರುವ ಈ ಹಸು ಕೂಸಿಗೆ ಮಂಜುಗಡ್ಡೆಯನ್ನು ಔಷಧಿಯೆಂದು ಕೊಡಲೇಕೆ?

ಮತ್ತು ಈ ಕೊಡಗಿನಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ಬಿಡಿಸಲಿಕ್ಕಾಗದ ಬಿಕ್ಕಟ್ಟಿನ ಪ್ರಶ್ನೆ ಅದೇನಿರುವದು? ಪಕ್ಷ ಕೊಡಗು ಕೊಡಗೇತರರ ಬಿಡಿಸಲಿಕ್ಕಾಗದ ಪ್ರಶ್ನೆ ಏನು?

ಹರಿಪ್ರಸಾದ.

ಕಾಫಿ ತೋಟ.

ಯಾರ ತಪ್ಪು? ಅಸ್ತಿ ಮಾರುವವರದೋ? ಅಥವ ವ್ಯವಸಾಯಕ್ಕೆ ಜನ ಸೇರಿಸುವವರದೋ? ಅಥವ ಸರಕಾರದೋ? ಹಿತ ಪದಾರ್ಥವು ಅನುಕೂಲವಾಗಿ ದೊರೆಯುವಾಗ ಬಾಯಾರಿಕೆ ಇಲ್ಲದವನಿಗೂ ಬಾಯಾರಿಕೆ ಉಂಟಾಗುತ್ತೆ. ಸಿಕ್ಕದ ಹಾಗೆ ಮಾಡಿದರೆ ಬಾಯಾರಿಕೆ ಉಂಟಾಗುವದೇ ಕಮ್ಮಿ. ಹಾಗೆನೆ ಬ್ರಿ. ಆ. ಕಂಟ್ರಾಕ್ಟು ಟಿಕೆಟ್ಟು ಇರುವವರೆಗೆ ಆಳುಗಳಿಗೆ ಹಣ ಕೊಡದೆ ಇರಲಿಕ್ಕಾಗುವದಿಲ್ಲ. ಕೊಟ್ಟರೂ ಕಷ್ಟ, ಕೊಡದಿದ್ದರೂ ಕಷ್ಟ ಎಂಬುದು ಯಾರೂ ಚನ್ನಾಗಿ ಗೊತ್ತಿದ್ದವನೂ ನಿರ್ಧರಿಸಿಕಾರನನ್ನು ಹೊಂದ ಆಕ್ಟು, ಹಣ ಕೊಡು, ಕೊಡದಿದ್ದರೆ ಕಟ್ಟಿ ಎಂತ ಜಮುನಸ್ಸಿನೊಳಗೆ ಹೊಕ್ಕಿ ಪೀಡಿಸಿ ಕೊಡಿಸುತ್ತದೆ. ಹೀಗೆ ಹಣ ಕಟ್ಟಿ ಕೆಲಸಕ್ಕೆ ಬಾರದೆ ಮೋಸಪಡಿಸಿದವರಿಗೆ ವಾರಾಂಟು ಬರೆಯುವುದು ಮೇಜಿಸ್ಟ್ರೇಟರು ಹುಕುಂ ಮಾಡುತ್ತಾ ಬಡಬಾಯಿ ವಾರಾಂಟಿಗೆ ಸ್ಟಾಂಪು ಖರ್ಚು ಮಾಡಿದ್ದಲ್ಲದೇ ಹೋಗುವ ಬರುವ ಖರ್ಚು ಬೇರೆ, ಒಂದೇ ಸರ್ತಿಗೆ ವಾರಾಂಟು ಹೋಗುವದೂ ಇಲ್ಲ. ಮಾಸ್ತರು ಕೊಟ್ಟರೆ ಬಡಬಾಯಿ ಒದುಕಿದ ಇಲ್ಲವಾದ ಸಾಲ್ಕಾರು ನಾರಿ ನಡಿಯಬೇಕು. ಟ್ರೆಜರಿ ಅಸಿಸ್ಟಂಟ್ ಆಫಿಸರು ವಾರಾಂಟುಗಳನ್ನು ದಾಗಣೆ ಕೊಡಬೇಕೆಂದು ಗುಮಾಸ್ತರಿಗ ಹುಕುಂ ಮಾಡಿ ಬಿಡುತ್ತಾರೆ. ಗುಮಾಸ್ತರು ಮೆಜಿಸ್ಟ್ರೇಟರ ಎದುರಿನಿಂದ ಬರಬೇಕಾದರೆ ಗಂಟೆ 4 ಅದನ್ಂ ಮೂರೆ ಒಂದು. ಹೇಪರುಗಳನ್ನು ಕ್ಷಿಪ್ರ ಇತ್ತ ಇಡುವವರು ಸಾಯಂಕಾಲವಾಯಿತು. ಗುಮಾಸ್ತರ ಕೇಳಿದರೆ ನಾಳೆ ಬಾರದು, ಒಂದು ಗಳಿಗೆ ಪುರುಸತ್ತು ಸಿಕ್ಕುವದಿಲ್ಲವೆಂದೇ ಹೇಳಿಕ್ಕಾಯಿತು, ಸೋಡಿದವರಿಗೂ ಹಾಗೆನೇ ಕಾಣಿಸುತ್ತ. ಆದರೆ ಬಡಬಾಯಿಗಳ ಕಷ್ಟ ಹ್ಯಾಗೆ ನಿವಾರಣೆ? ಕೆಲಸಪಿಡಸ್ಟ ಕೂಡಿ ಮೇಣಕಷ್ಟ ಪುಡಿ ಎಂಬ ಹಾಗೆ ಆಯಿತು. ಈ ವಿಷಯ ನಮ್ಮ ಕಮಿಷನರ್ ಸಾಹೇಬರವರೂ ಮತ್ತು ಟ್ರೆ. ಅಸಿಸ್ಟಂಟ್ ಕಮಿಷನರವರೂ ಚನ್ನಾಗಿ ಆಲೋಚಿಸಿ ಬೇಗನೆ ವಾರಾಂಟು ಸಿಕ್ಕುವ ಹಾಗೆ ತಕ್ಕ ಏರ್ಪಾಡು ಮಾಡಬೇಕಾಗಿ ಕೋರುವ.

ಅನುಭವಸ್ಥ.

ಮಡಿಕೇರಿ ಮಿಶನಿನ ಶಾಲೆ.

ಕೊಡಗಿನ ವಿದ್ಯಾಭ್ಯಾಸಕ್ಕೆ ಬಾಸಲ್ ಮಿಶನಿನ ಜರ್ಮನ್ ಪಾದ್ರಿಗಳು ಕಾರಣಭೂತರು. ಈಗ ಉಚ್ಚ ವಿದ್ಯೆಯನ್ನು ಕೊಡುತ್ತಿರುವ ಶಾಲೆಯ ಚರಿತ್ರೆಯನ್ನು ತಿಳಿದುಕೊಂಡರೆ ಸಂಗತಿ ವಿಶದವಾಗುವದು. ಇವರು ಕೊಡಗಿನ ಬೇರೆ ಬೇರೆ ಕಡೆಗಳಲ್ಲಿ ಶಾಲೆಗಳನ್ನು ಸ್ಥಾಪಿಸಿ, ಕ್ರೈಸ್ತ, ಹಿಂದು ಭೇದಾ ಭೇದಗಳನ್ನು ನೋಡದೆ ಎಲ್ಲರೂ ವಿದ್ಯಾವಂತರಾಗುವಂತೆ ಸಾಹಸಪಡುತ್ತಿದ್ದರು. ಅವುಗಳ ಪೈಕಿ ಇಲ್ಲಿ ಇರುವ ಶಾಲೆಯು ನೂರು ನಲುವತ್ತು ವರುಷಗಳ ಹಿಂದೆ ಸ್ಥಾಪಿಸಲ್ಪಟ್ಟಿರುತ್ತದೆ. ಇದರಲ್ಲಿ ಎಷ್ಟೋ ವಿದ್ಯಾರ್ಥಿಗಳು ವ್ಯಾಸಂಗ ಮಾಡಿರುತ್ತಾರೆ. ಈ ಶಾಲೆ ಉಪಾಧ್ಯಾಯ ವೃತ್ತಿಯು ಇಂದಿನ ವರೆಗೂ ಕನ್ನಡ ಜಾತಿಯ ಕ್ರೈಸ್ತ ಉಪಾಧ್ಯಾಯರಿಂದಲೇ ನಡೆಯುತ್ತದೆ. ಇದನ್ನು ದೊರಕಿಸಿಕೊಳ್ಳಲಿಕ್ಕೆ ಆಗಿನ ಮಿಶನರಿಗಳು ಪಡುತ್ತಿದ್ದ ಕ್ರಮವನ್ನು ವರ್ಣಿಸಲಾರೆ. ಈಗಿನ ಶಾಲಾಭಿವೃದ್ಧಿಯು ನಾನೇನೂ ಹೊಗಳುವದಿಲ್ಲ. ಇಲ್ಲಿಂದ ಹೈ ಸ್ಕೂಲಿಗೆ ಸೇರಿ ಮುಂದಿನ ವ್ಯಾಸಂಗದ ಉತ್ತೀರ್ಣ ವಿದ್ಯಾರ್ಥಿಗಳೇ ಇದಕ್ಕೆ ಸಾಕ್ಷಿ. ಮೊದಲನೆ ದಿನದಿಂದ ಸರಕಾರಿ ಧನ ಸಹಾಯವಿಲ್ಲದಿದ್ದರೂ ಇಲ್ಲಿದ್ದ ಶಾಲೆಯಲ್ಲೂ ಶಾಲಾ ಕಲಸವು ಯಾವುದರಿಂದಲೂ ಕೊರತೆಯಿಲ್ಲದೆ ನಡೆಯುವಂತೆ ಜಾಗ್ರತೆ ವಹಿಸುತ್ತಿದ್ದರು. ಈ ಶಾಲೆಯಲ್ಲಿ ಇದ್ದರು ತರಬೇತಾದ ಮತ್ತು ಬಹು ಅನುಭೋಗಿಯಾದ ಉಪಾಧ್ಯಾಯರು ಗಳು ಕೆಲಸಮಾಡುತ್ತಿದ್ದರು. ಯುದ್ಧದ ಪರಿಣಾಮವಾಗಿ ಘನ ಸರಕಾರವು ಈ ಮಿಶನರಿಗಳ ಹಣವನ್ನು ವಿರಸ್ಕಾರವಾಗಿ ಉಳಿಸುವರೆ ಮಾಡಿದ ಯತ್ನವು ಗೌರವವಾದದ್ದು. ಈಗ ನಾಲ್ಕೈದು ವರುಷಗಳಿಂದ ಸ್ವಿಟ್ಜರ್ ಲ್ಯಾಂಡ್ ದೇಶದ ಮಿಶನರಿಗಳ ಆಡಳಿತಕ್ಕೆ ಈ ಜಿಲ್ಲೆಯ ಮಿಶನ್ ಕೆಲಸವನ್ನು ಘನ ಸರಕಾರವು ಒಪ್ಪಿಸಿದ ಕಾರಣ ಈ ಹೊಸ ಸಂಘದವರು ಹಿಂದಿನವರು ನಿರ್ಮಿಸಿದ್ದ ಹಲವು ಶಾಲೆಗಳನ್ನು ಮುಚ್ಚಿದರು. ಬಾಲಕರ ವಿದ್ಯೆಗೆ ಅಟಂಕಿಸಿದರು ಎಂದರೆ ತಪ್ಪಾಗದು. ಇದು ಘನ ಸರಕಾರದ ಯತ್ನಕ್ಕೆ ಭಂಗವಲ್ಲವೇ? ಅದಂತಿರಲಿ, ಉಳಿದಿರುವ ಎರಡು ಶಾಲೆಗಳಿಗೆ ಎಷ್ಟೋ ಅಪಾರ ಧನ ಸಹಾಯವು (ರೂಪಾಯಿ 15—80) ಮಿಶನರಿಯವರ ಸಂಪಡವರಿಗೆ ಈಗ ದೊರೆಯುತ್ತಾ ಇದ್ದರೂ ಶಾಲಾ ಮಾಸ್ತರುಗಳ ಬತ್ತಿಗೆ ಸೊಪ್ಪೆ ಸುತ್ತಿರುತ್ತಾರೆ. ಘನ ಸರಕಾರವು ತಮ್ಮ ಮಾಸ್ತರರುಗಳ ಕಡೆ ನಿಗಾ ಇಟ್ಟುಕೊಳ್ಳುವ ವೇತನವನ್ನೇರಿಸುತ್ತದೆ. ಹೀಗಿದ್ದಾಗ್ಯೂ ಶಾಲಾ ಕೆಲಸವು ತೃಪ್ತಿಕರ. ಒಬ್ಬ ನಿಶ್ಚಿಷ್ಟ ದಿನ ಉಳಿಸುವದಕ್ಕಾಗಿಯೂ ದೊರೆಯುವ ಸಂಬಳದ ಅರಿವಾಗದಿದ್ದರೂ ಈ ವರ್ಷದ ಮಿಶನರಿ ಶಾಲೆಯಲ್ಲಿ ಉಪಾಧ್ಯಾಯ ವೃತ್ತಿ ನಡೆಸಿದವರೆಲ್ಲರಿಗೆ ಇಲ್ಲಿ ದೊರಕಬೇಕಾದ ಜನರಿಂದ ಕೆಲಸವನ್ನು ನಿರಾಕರಿಸಿದರು. ಇವರನ್ನು ಗೋಣಿಕೊಪ್ಪಲಿನವರೊಬ್ಬರು ಪ್ರಚಾರಿಸಿದರೆಂಬ ವದಂತಿ. ಇದು ದಿಟವಾದರೆ ಮಿಶನರಿಗೆ ಅವರು ಇಲ್ಲಿ ಬರೇ ಇಪ್ಪತ್ತೊಂದ ಮೂರು ತಿಂಗಳು ಕೆಲಸ ಮಾಡಿ ಅದರಲ್ಲಿ 21 ವರುಷ ಸರ್ವೀಸುದಾರರೂ, ಅನುಭವಸ್ಥರೂ ಆಗಿರುವವರಿಗೆ ತಮ್ಮ ಮಿಶನರಿಯಾದ ಮಿಶನರಿಗೆ ವಿರೋಧಿಸಿದ್ದಾನೆಂಬ ಕಾರಣ ಮಾರ್ಚಿ ತಿಂಗಳಿನಿಂದ ಮನೇದಾರಿ ತೋರಿಸಿದರು. ಸರಕಾರಿ ವರುಷವು ಮುಗಿಯುತ್ತಾ ಮಕ್ಕಳು ವಿದ್ಯಾಭ್ಯಾಸಂಗದವಧಿಯಲ್ಲಿ ಇರುವುದನ್ನರಿಯದ ಮಿಶನರಿ ಇರುತ್ತಾರಲ್ಲಾ ಎಂಬುದನ್ನು ತಿಳಿಯಲು ಕ್ಲೇಶಪಡುತ್ತೇನೆ. ಈಗ 60-70 ಮಕ್ಕಳನ್ನು ಒಬ್ಬರು ನೋಡಿಕೊಂಡಿರುತ್ತಾರೆ. ಮಿಶನರಿಗಳ ಈ ಎಲ್ಲಾ ಮಾರ್ಪಾಟುಗಳು ಘನ ಸರಕಾರಕ್ಕೆ ಶಾಲಾಧಿಕಾರಿಗಳ ತಿಳುವಳಿಗೆ ಬಂದಿವೆಯೋ?

ಮಕ್ಕಳ ಮತ್ತು ಮಾಸ್ತರರುಗಳ ಮುಂದಿನ ಅಭಿವೃದ್ಧಿಗೆ ಅಡ್ಡಿಯನ್ನೊಡ್ಡಿದ ಇವರಿಗೆ ಸರಕಾರಿ ದ್ರವ್ಯ ಸಹಾಯದಲ್ಲಿ ಏಕೆ ಕಮ್ಮಿ ಮಾಡಬಾರದು? ಮೇಲ್ಕಂಡ ಸರ್ವ ಸಂಗತಿ ಇನ್ನು ಘನ ಸರಕಾರವೂ ಇಲಾಖಾಧಿಕಾರಿಗಳೂ ತಮ್ಮ ಚಿತ್ತಕ್ಕೆ ತರಬೇಕಾಗಿ ಪ್ರಾರ್ಥನೆ.

ಸದರಿ ಶಾಲಾ ಬಳಿ ಇದ್ದ ಹಳೇ ಕೂಲಿ ಜೋಪಡಿಯನ್ನು ಇಂಗ್ಲಿಷ್ ದೇವಾಲಯದ ಪರಿಚಾರಕ ಸರಕಾರಿ ಸಂಬಳವನ್ನು ಪಡೆಯುತ್ತಿರುವವರೊಬ್ಬರು ನೆಲಸಮ ಮಾಡುವರೆ ಗುತ್ತಿಗೆ ವಹಿಸಿಕೊಂಡು ಕೆಲಸ ಪೂರೈಸುತ್ತಾರೆ. ಅದೇ ಸ್ಥಳದಲ್ಲಿ ತಿರುಗೊಂದು ಕಟ್ಟುತ್ತಾರೆಂಬ ವದಂತಿ. ಇಲ್ಲಿ ವಾಸವಿರತಕ್ಕವರಿಂದ ಎಳೇ ಮಕ್ಕಳ ಆರೋಗ್ಯಕ್ಕೆ ಕೆಡುಕಾಗುವದರಿಂದ ಮುಂಚಿಗಿಂತ ಪಕ್ಕ ಆದಿ ದೂರಕ್ಕೇನೇ ಕಟ್ಟುವ ಏರ್ಪಾಡಾದರೊಳ್ಳೇದು. ಇದನ್ನು ಪುರಾಭಿವೃದ್ಧಿ ಸಂಘದವರ ಚಿತ್ತಕ್ಕೆ ವೇದ್ಯಪಡಿಸುತ್ತೇನೆ. ತಕ್ಕ ನಿಗಾ ತೆಕ್ಕೊಳ್ಳುವರೆಂದು ಎಂದು ನಿರೀಕ್ಷಿಸುವ,

ಮಕ್ಕಳ ತಂದೆ.

ಬಾಡಗ ಸಮ್ಮಿಶ್ರಿತ ವಿವಾಹ.

ಅಯ್ಯಾ,

ಕಳೆದ ತಾರೀಖು 14ರಲ್ಲು ನಮ್ಮ ಗ್ರಾಮದಲ್ಲು ಕೃಪಟ್ಟಿರ ಹಾಗಪ್ಪನವರಿಗೆ ಬಾಡಗಗ್ರಾಮದಲ್ಲಿದ್ದ ಒಬ್ಬ ಬ್ರಾಹ್ಮಣತಿ ವಿಧವೆಯನ್ನು ಕೊಡಗರ ಪದ್ಧತಿ ಮೇರೆ ಮದುವೆಮಾಡಲಾಯಿತು. ಊರವರೆಲ್ಲರೂ ಮನಸ್ಸುವರೂ ಸೇರಿದ್ದರು, ನಲ್ಲಕ್ಕಿ ಸಭಾಡೆಯಲ್ಲಿ ಹಿರಿದು ಬಂದು ಮದು ಮಗನನ್ನು ಮದುಮಗಳನ್ನು ನಿಲ್ಲಿಸಿ ಶಾಸ್ತ್ರಪ್ರಕಾರ ಹುಡಿಗಿಗೂ ಹುಡಿಗನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೂ ಪ್ರಾಪಕನ್ನು ಕೂಡುವಂತೆ ಸಂಭಂದ ವಗ್ಗೈದ ಕೆಲಸ ಊರು ಅವರೆಲ್ಲರೂ ತೀರ್ಮಾನಿಸಿದರು.

ಪೂರ್ವದಲ್ಲಿ ಅನೇಕ ದೊಡ್ಡ ಕುಟುಂಬ. ಈ ವಿವಾಹ ಕೆಲವರಿಗೆ ಮಂಗಳಕರವಾಗಿದೆ. ಅವರ ಮಕ್ಕಳಿಗೆ ಪೂರ್ತಿ ಹಕ್ಕನ್ನು ಕೊಟ್ಟಿರುವರು. ಇದರಿಂದ ಇನ್ನು ಮುಂದಕ್ಕಾದರೂ ಕೊಡಗರು ನಮ್ಮ ಕೊಡಗರು ಮತ್ತು ಇತರ ಜಾತಿಯವರು ಈ ತರದ ಸಮ್ಮಿಶ್ರಿತ ವಿವಾಹದಿಂದ ಕೊಡಗರಾದವರು ಒಪ್ಪಿಗೆ ಕೊಡುವರಲ್ಲ, ಸಂದೇಹವಿಲ್ಲ.

ಮಾ. ಸಿ. ದೇವಯ್ಯ.

ಕೊಡಗರ ಮದುವೆ ಪದ್ಧತಿ.

ಮಹನೀಯರೇ—

ಮಾರ್ಚಿ ತಾರೀಖು 13—3—25 ರಲ್ಲಿ ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಿರುವ ಕ. ಸ. ಮ. ಇವರ ಲೇಖನ ಓದಿದೆ. ಕೊಡಗರ ಮದುವೆ ಪದ್ಧತಿ ವಿಷಯ ಬರೆದ ಬರವಣಿಗೆಯನ್ನು ಓದಿದ್ದೇನೆ. ಈ ಮಹಾನುಭಾವರು ನನ್ನ ಬರವಣಿಗೆಯಲ್ಲಿರುವ ಒಂದೆರಡು ಅಂಶವನ್ನು ತೆಗೆದುಕೊಂಡು ಇದು ತಪ್ಪು ಇದು ಸರಿಯೆಂದು ಒಳೆದು ತಮ್ಮ ಅಭಿಪ್ರಾಯವನ್ನು ಬರೆದಿದ್ದರೆ ನನಗೆ ಇನ್ನೂ ಸಂತೋಷವಾಗುತ್ತಿತ್ತು.

ನನ್ನ ಬರವಣಿಗೆಯಲ್ಲಿ ವಿಧವೆಯರ ಪುನರ್ವಿವಾಹದ ವಿಷಯವಾಗಲೀ ಕನ್ಯೆಯನ್ನು ಬಲಾತ್ಕಾರದ ಮೇಲೆ ವಿವಾಹ ಮಾಡುವ ವಿಷಯವಾಗಲೀ ನನ್ನ ಏನೊಂದೂ ಅಭಿಪ್ರಾಯವನ್ನು ಬರೆದಿರುವದಿಲ್ಲ. ಈ ಎರಡಕ್ಕೂ ನಾನು ಪೂರಾ ವಿರೋಧಿಯಾಗಿದ್ದೇನೆ. ಆದರೆ ಇವುಗಳ ವಿಷಯ ಇಲ್ಲಿ ನಾನು ಬರೆಯುವುದು ಆವಶ್ಯವಿಲ್ಲ.

ಮಾಂಸ ಭಕ್ಷಿಸುವುದು ಬಹಳ ಆವಶ್ಯವೆಂದೂ ಶರೀರಕ್ಕೆ ಬೇಕಾದ 200 ಕ್ಯಾಲರಿ ಉಷ್ಣವನ್ನು ಮಾಂಸವೇ ಒದಗಿಸುವುದೆಂದೂ ಮೇಲ್ಕಂಡ ಮಾತ್ಯ್ದಾರರು ಬರೆದಿರುತ್ತಾರೆ. ಅದು ಕೆಲವು ಮಟ್ಟಿಗೆ ನಿಜವಾಗಿರಬಹುದು. ನನ್ನ ಬರವಣಿಗೆಯಲ್ಲಿ ಮಾಂಸ ಭಕ್ಷಣೆಯನ್ನು ಪೂರಾ ನಿಲ್ಲಿಸಬೇಕೆಂದು ಬರೆದಿಲ್ಲ. ಇತರ ಹಿಂದೂಗಳ ಹಾಗೆ ಹಿಂದೂಗಳಾದ ಕೊಡಗರೂ ಶುಭ ಶುಭ ಕಾರ್ಯಗಳಿಗೆ ಮಾತ್ರ ಅದನ್ನು ಸೇರಿಸುವುದನ್ನು ನಿಲ್ಲಿಸಿದರೆ ಒಳ್ಳೇದೆಂದು ಬರೆದದ್ದು. ಈ ಮಹಾನುಭಾವರು ಹೇಳುವ ಹಾಗೆ ಮಾಂಸ ಭಕ್ಷಣೆಯು ಅತ್ಯಾವಶ್ಯವೆಂಬುದೂ ಆ ಮಾಂಸ ಭಕ್ಷಣೆಯಿಂದಲೇ ಕೊಡಗರು ಇತರ ಹಿಂದೂಜನರಿಗಿಂತ ಬಲಿಷ್ಠರೂ ಪರಾಕ್ರಮಶಾಲಿಗಳೂ ಆಗಿರುವರು ಎಂಬುದೂ ನಿಜವೆಂದೇ ಭಾವಿಸಿಕೊಂಡು ಈ ವಿಷಯ ಸ್ವಲ್ಪ ಯೋಚಿಸಿ ನೋಡೋಣ. ಕೊಡಗರ ಒಟ್ಟು ಜನಸಂಖ್ಯೆಯನ್ನೂ ಅವರೆಲ್ಲರೂ ಸೇರಿ ಒಂದು ವರ್ಷಕ್ಕೆ ಭಕ್ಷಿಸುವ ಮಾಂಸದ ತೂಕವನ್ನೂ ಕಂಡುಹಿಡಿದು ಲೆಕ್ಕನೋಡಿದರೆ ಒಬ್ಬೊಬ್ಬನು ಒಂದು ತಿಂಗಳಿಗೆ ಸರಾಸರಿ 1ರಾತಲು ಮಾಂಸ ಭಕ್ಷಿಸುವುದೂ ನನ್ನ ಮನಸ್ಸಿಗೆ ಸಂದೇಹವಾಗಿದೆ. ಹೀಗೆ 1 ತಿಂಗಳಿಗೆ ತಿನ್ನುವ 1 ರಾತಲು ಮಾಂಸವು ಒಬ್ಬನನ್ನು ಬಲಿಷ್ಠನಾಗಿಯೂ ಪರಾಕ್ರಮಶಾಲಿಯಾಗಿಯೂ ಮಾಡುವುದೆಂಬುದು ಪೂರಾ ತಪ್ಪು ಅಭಿಪ್ರಾಯ. ದೇಶದ ಸ್ಥಿತಿಯೂ ಹವಾಗುಣವೂ ಅಲ್ಲಿಯ ಜನರ ಕಸುಬೂ ಅವರ ಬಲಕ್ಕೂ ಪರಾಕ್ರಮಕ್ಕೂ ಕಾರಣ.

ಕನ್ನಡ.

ಕೌನ್ಸಿಲು.

'ಫೀ' ಆ ಮಾತು ಹೋಗಲಿ, ಕೌನ್ಸಿಲು ಏನು ಮಾ
ೀತು? ನಮಗೆ ಅದರಿಂದ ಶುಭವಾಗುತ್ತದೇನು?' ಎಂದು
ನ್ನನ್ನು ಎಷ್ಟೊಂದು ಜನ ನಾಡವರು ಕೇಳಲಿಲ್ಲ? ಇದಕ್ಕೆ
ನೆಂದು ಉತ್ತರ? ಪಾಪ, ಅವರಿಗೇನು ಬೇಕು? ಕೊಡಗು
ಾಜಲಿದ್ದರೇನು? ಬ್ರಿಟಿಷ್ ರಾಜವಿದ್ದರೇನು? ಇಲ್ಲವೇ ಜ
ರ್ಮನಿಯ ಕೈಸರವಿದ್ದರೇನು? ಉಪ್ಪು ಮೆಣಸಿನ ಕ್ರಯ ಕ
್ಮಿಯಾಗಬೇಕು, ಕಿರಿಗ ತೀರ್ವೆಯ ಇಳಿಯಬೇಕು! ಅಲ್ಲವೇ
? ಇರಲಿ, ಆ ಪ್ರಶ್ನೆಗೆ ಕೌನ್ಸಿಲು ಮೆಂಬರುಗಳೇ ಜವಾ
ು ಕೊಡಬೇಕೋ? ಆದರೆ, ಕೌನ್ಸಿಲಿನಿಂದ ದೇಶಕ್ಕೆ ಪ್ರ
ಯೋಜನವಾಗಲಿ, ಆಗದಿರಲಿ, ಕೌನ್ಸಿಲ್ ಮೆಂಬರುಗಳು ಸ
್ಮ ತೊಂದರೆಗಳನ್ನೆಲ್ಲಾ ಸರಕಾರದ ಕಿವಿಗೆ ಸರಿಯಾಗಿ ಅರು
ಲಿ, ಅರುಹದಿರಲಿ, ಜವಾಬ್ದಾರರಾರು? ಅವರೇ ಏನು?
ೌನ್ಸಿಲ್ ಮೆಂಬರುಗಳು ನಮ್ಮ ತೊಂದರೆಗಳನ್ನು, ನಮ್ಮ ಕ
ನಷ್ಟಗಳನ್ನು ಸರಕಾರದ ಕಿವಿಗೆ ಚನ್ನಾಗಿ ಅರುಹೀ ಅರುಹೀ ಅವು
ಗಳನ್ನು ತೋರಗೊಳಿಸದಿದ್ದರೆ ಪರಕೀಯ ಸರಕಾರದ ನಿಜ
ದ ಸ್ವಭಾವವನ್ನು ಬಯಲಿಗೆ ತಂದಂತಾಯಿತು. ಕೌನ್ಸಿ
ಅದನ್ನು (ಆ ಜವಾಬ್ದಾರಿಕೆಯನ್ನು) ಖಂಡಿತವಾಗಿಯೂ
್ಮ ಗಮನಕ್ಕೆ ತರಬಹುದು. ಇಲ್ಲದಿದ್ದರೆ, ಅವರು ನಮ್ಮ
ೊಂದರೆಗಳನ್ನು ಸರಿಯಾಗಿ ಸರಕಾರದ ಮುಂದೆ ಇಡಲಿಲ್ಲ
ದರೆ, ನಾವು ನಮ್ಮೊಳಗಿನ ಅತ್ಯಂತ ಬುದ್ಧಿವಂತರನ್ನು ಅ
ಗೆ ಕಳುಹಿಸಿರುವಲ್ಲಿ, ಅವರೆಲ್ಲರೂ ಗ್ರೀಸಿನ ಸೋಕ್ರೆಟಿಸನಂಥ
ರುವರೆಂದು ತಿಳಿದೇವೇನು? ಹೀಗಿರುವಲ್ಲಿ ದೇಶದಲ್ಲಿನ ಪ್ರ
ಯೊಬ್ಬ ಬುದ್ಧಿವಂತನೂ ತಮ್ಮ ತಮ್ಮ ಮನೋಗತಗಳ
, ದೇಶದ ಕುಂದು ಕೊರತೆಗಳನ್ನೂ, ನೀವು ತಮ್ಮ ತ
್ಕ ಪ್ರಶ್ನೆಗಳನ್ನು ತಮ್ಮ ಪರ ಎತ್ತಿ ಹಿಡಿಯಲ್ಲಿರುವ ವಾದ
ಗ್ರಾದ ಸಹಿತ ಮೆಂಬರುಗಳಿಗೆ ಮನನ ಮಾಡಿ ಆ ಮೇ
ಇನ್ನೊಂದು ಚುನಾವಣೆಯಲ್ಲಿ ನೋಡುವ? ಏನೇನು
?

ಹರಿಪ್ರಸಾದ

ನೋಟೀಸ್.

ದಕ್ಷಿಣಕೊಡಗಿನ ಜಮೀನುದಾರರ ಸಂಘದ ಆರ್ಗನೈಜರ
ವ್ವಂಡ ಕಾರ್ಯಪ್ಪನವರು ತನ್ನ ಕಲಸಕ್ಕ ರಾಜೀನಾಮೆ ಮಾಡಿ
ದವರಿಂದ, ದಯವಿಟ್ಟು ಜಮೀನುದಾರರ ಸಂಘದ ಎಲ್ಲಾ
ೆಂಬರುಗಳು ಅವರವರ ನಾಡು ಕಮಿಟಿಯವರಿಗಾಗಲೀ, ಅ
ದ ನಮ್ಮ ಏಜೆಂಟರಾಗಿರುವ ಕೋಟೆರ ಚಿಣ್ಣಪ್ಪನವರ ವೀ
ರಾಜಪೇಟೆಯ ಆಫೀಸಿನಲ್ಲಾಗಲೀ, ಮ. ಚಂಗಂಡ ಕುಟ್ಟಪ್ಪ
ನವರು, ಐನಂಡ ಮಾದಪ್ಪನವರು, ಜಮ್ಮಡ ಮಾದಪ್ಪನವರಿಗಾ
ಲೀ ತಮ್ಮ ವಾರ್ಷಿಕ ಚಂದಾ ಹಣವನ್ನು ಪಾವತಿ ಮಾಡಿ ರ
ಶಿ ಪಡೆಯಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ.

ಜನರಲ್ ಸೆಕ್ರೆಟರಿ.

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದು ಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರು ವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿದೆ.

ಕೃಷ್ಣ ನಂಬೀಶರ್ ಮತ್ತು ನಾರಾಯಣ ನಂಬೀಶರ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಇಬ್ಬರಲ್ಲಿ ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ. ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹತ್ತು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ.

ನಂಬೀಶರ್ ಮತ್ತು ಕಂಪೆನಿ,

ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.

ಕಣ್ಣೂರು, ವೀರಾಜಪೇಟೆ ಮತ್ತು ಗೋಣಿಕೊಪ್ಪಲು.

ದಯಮಾಡಿ ಪರೀಕ್ಷಿಸಿ ನೋಡಿರಿ!

X. L. ALOL.

ಹೊಸ ನಮೂನೆಯ ಔಷಧಿ.

ಬಾಣಂತಿಯರೂ, ಸಣ್ಣಮಕ್ಕಳೂ, ಕುಂದಿದವರೂ ಮತ್ತು ಎದೆನೋವು ವಗೈರೆಗಳಿಂದ ಪೀಡಿತರಾದವರೂ ಸಹ ಸೇವಿಸುವುದರಿಂದ ಬಹಳ ಪುಷ್ಟಿಯಾಗುವುದು. "ಕಾಡ್ ಲಿವರ್ ಆಯಿಲ್ ಎಮಲ್ಷನ್" ಎಂಬುದರಲಿಗೆ ಇದು ಉತ್ತಮತರದ ಕ್ಷೀರ ರಸವಾಗಿದೆ. ವಾಸನೆಯಿಲ್ಲ. ಬೆಲೆ ಬಹಳ ಕಡಿಮೆ,

M. P. BALA Co,
CHEMIS

12—4—8 Tellicherry

Or VIRAJPET VRKS,
virajpet.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿ.

		ರೂ.
ಶೇರ್ ಬಂಡವಾಳ	....	),000
ವಸೂಲಾದ ಶೇರ್ ಮೊಬಲಗು	....	7,720
ಜಮೆಯಿಂದ ಠೇವಣಾತಿ	....	1,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚು ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ). 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು,	ಮೈನೇಜರ್.
ಕೊಡಂದೇರ ಕುಟ್ಟಯ್ಯನವರು,	ಯಂ. ಭುಜಂಗರಾಯರು
ರಾಯ್ ಬಹದ್ದೂರ್.	ಬಿ. ಬಿ.ಎಲ್.

ಸೆಕ್ರೆಟರಿ.

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ.ಬಿ.ಎಲ್

ತಾರೀಕು 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರಿ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೆಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ಕಣ್ಣು ತೆರೆದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ, ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ—

ಮೇನೇಜರ್, ಶ್ರೀ ಧನ್ವಂತರಿ,

ಶೃಂಗೇರಿ, ಮೈಸೂರುಸ್ಟೇಟ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.

Telegraphic Address:- "SHOOTER" Bombay.

[52 •] Please write for latest Catalogues.

ಮಾರಾಟಕ್ಕೆ.

1 ಮಡಿಕೇರಿ ಅರೆ ಮಲ್ ಶೆಟ್ಟಪ್ಪನವರ ಮಡಿಕೇರಿ ನಾಡುಬಿಳಿಗೇರಿಗ್ರಾಮದಲ್ಲಿ ಮಡಿಕೇರಿ ಮೂನಾಡು ರಸ್ತೆ 5ನೇ ಮೈಲ್ ಬಳಿ ಇರುವ ಆಸ್ತಿ, ಅಂದರೆ— ಸಾಗಿನ ಉತ್ತಮವಾದ ಭೂಮಿ 31½ ಎಕರು, ಕಿತ್ತಳೆ 25 ಎಕರು, (ಈ ಪೈಕಿ 15 ಎಕರು ಪಸಲಿಗೆ ಒಂದನ್ನು ಈ ವರ್ಷ 1,200 ರುಪಾಯಿಗಳಿಗೆ ಪಸಲು ಗುತ್ತಿಗೆ ಕೊಡಲಾಗಿದೆ) ಯಾಲಕ್ಕಿ 15 ಎಕರು, ಹೊಸದಾಗಿ ಹಾಕಿರುವ ಕಾಪಿ 15 ಎಕರು ಮತ್ತು 116 ಎಕರ ಬಾಣೆ, ಒಂದು ವಾಸದ ಮನೆ, ಆಳುಗಳ ಲೈನು ಮತ್ತು ದನಗಳ ಕೊಟ್ಟಿಗೆ ಸಹ ಮಾರಾಟಕ್ಕೆ ಇದೆ ಕ್ರಯ ರುಪಾಯಿ 25,000 ಅಥವಾ ಇದರ ಸಮೀಪದ ಬೆಲೆ

2. ಅರೆ ಮಲ್ ಶೆಟ್ಟಪ್ಪನವರ ಮಡಿಕೇರಿ ಮಹದೇವಪೇಟೆ ಬಸವಣ್ಣನ ಗುಡಿ ಬಳಿ ಇರುವ ವಾಸದ ದೊಡ್ಡ ಮಹಡಿಮನೆ ಕ್ರಯ ರೂ 5,000.

ಹೆಚ್ಚಿನ ವಿವರಕ್ಕೆ ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು.

ಎಂ. ಎನ್. ಅಪ್ಪಣ್ಣ,
ಬೋಯಿಕೇರಿ ಎಸ್ಟೇಟ್.

12—10 11 ಸುಂಟಿಕೊಪ್ಪ

ಇಂಡಿಯಾ ಸಾಬೂನ್.

ಬೆಲೆ ಅಗ್ಗ!! ಸರ್ವೋತ್ತಮ!!

ನಮ್ಮ "ಇಂಡಿಯಾ ಸಾಬೂನ್" ಸರ್ವೋತ್ತಮವಾದುದೆಂದು ತಿಳಿದು ಎಲ್ಲಾ ಕಡೆಗಳಲ್ಲಿಯೂ, ಎಲ್ಲಾ ಊರುಗಳ ಅಂಗಡಿಗಳಲ್ಲಿಯೂ ಇದನ್ನೇ ಮಾರುತ್ತಿದ್ದಾರೆ. ಇದರಿಂದ ಒಗೆಯುವ ವಸ್ತ್ರಗಳು ಸ್ವಚ್ಛವಾಗುವವಲ್ಲದೆ, ಅವುಗಳ ನಸಲಿಗೆ ಇದರಿಂದ ಯಾವ ವಿಧವಾದ ಉಪಹತಿಯೂ ಉಂಟಾಗದೆ, ಸರಿಯಾದ ಬಾಳಿಕೆ ಬರುವವು ಈ ವಿಷಯವನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಎಲ್ಲರಿಗೂ ಮನದಟ್ಟಾಗುವದು. ನಮ್ಮ ಗಿರಾಕಿಗಳಿಗೆ ಹೆಚ್ಚು ಲಾಭ!! ಧಾರಾಳವಾದ ಕಮಿಷನ್ ದೊರೆಯುವದು. ಆರ್ಡರುಗಳಿಗೆ ಮಾಲನ್ನು ಒಂದೋಬಸ್ತಾಗಿ ಪ್ಯಾಕ್ ಮಾಡಿ ಅವರ ಅಡ್ರೆಸಿಗೆ, ಅಥವಾ ಅವರು ಅಪೇಕ್ಷಿಸುವ ಸಮೀಪದ ರೈಲ್ವೆ ಸ್ಟೇಷನಿಗೆ ರವಾನಿಸುತ್ತೇವೆ.

ಇಷ್ಟು ಮಾತ್ರವೇ ಅಲ್ಲ, ನಮ್ಮ ಗಿರಾಕಿಗಳಿಗೆ ಅವರವರ ಅದೃಷ್ಟ ಪರೀಕ್ಷಾರ್ಥವಾಗಿ ನಾವು ಕಳುಹಿಸುವ ಯಾವದೋ ಒಂದು ಸೋಪ್ ಪ್ಯಾಕಿನಲ್ಲಿ ೧೦ ರುಪಾಯಿನ ಅರ್ಧ ನೋಟನ್ನು ಇಟ್ಟಿರುತ್ತೇವೆ. ಅಂಥಾ ಅರ್ಧ ನೋಟಿನ ಪ್ಯಾಕನ್ನು ಹೊಂದಿದವರು ಆ ಅರ್ಧ ನೋಟಿನ ನಂಬರನ್ನು ತಿಳಿಸಿದಲ್ಲಿ ಬಾಕಿ ಅರ್ಧ ನೋಟನ್ನೂ ಅವರಿಗೆ ಬಹುಮಾನವಾಗಿ ತಕ್ಷಣವೇ ಕಳುಹಿಸಿಕೊಡುವೆವು. ಪ್ರಯತ್ನ ಪಡಿ! ವ್ಯಾಪಾರಕ್ಕೆ ವ್ಯಾಪಾರ!! ಅದೃಷ್ಟಕ್ಕೆ ಅದೃಷ್ಟ!!!

ಎನ್. ಕೃಷ್ಣಯ್ಯ ಶೆಟ್ಟಿ,

12—8 9 ನಗರ್ತಪೇಟೆ, ಬೆಂಗಳೂರು ಸಿಟಿ.

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.

If not delivered please return to "KODAGU" OFFICE, MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩—೦—೦

ಸತ್ಯೇನ ಧಾರ್ಯತೇ ಪೃಥ್ವೀ ಸತ್ಯೇನ ತಪತೇ ರವಿಃ ‖ ಸತ್ಯೇನ ವಾತಿ ವಾಯುಶ್ಚ ಸರ್ವಂ ಸತ್ಯೇ ಪ್ರತಿಷ್ಠಿತಂ ‖

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೪] ಕೊಡಗು, ೧೯೨೫ನೇ ಇಸವಿ ಏಪ್ರಿಲ್ ತಾರೀಖು ೩ನೆಯ ಶುಕ್ರವಾರ [ಸಂಚಿಕೆ ೪೩

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಯಮ್. ಎಲ್. ಸಿ. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ರೂಪಾಯಿಗಳು ವರ್ಷಕ್ಕೆ 1-8-0. ಬಿಡಿ ಪ್ರತಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ' 323, ತಂಬುಶೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟನೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ಬಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟನೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ತಿಳಿಯಬೇಕಾದವರು ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಜಾಹಿರಾತು ಹಾಕಿಸಲಿಕ್ಕಿರುವವರೂ ದಯವಿಟ್ಟು ವೀರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮೇನೇಜರ್,
[illegible] 'ಕೊಡಗು' ಲಿಮಿಟೆಡ್.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City

WATCH THIS SPACE.
Another stock of
Arms & Ammunition.
Expected shortly.
Guaranteed Quality.
Revised prices.

Spencer & Co. Ltd.,

MERCARA & POLLIBETTA.

—೨೫

ಪ್ರಕಟನೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಬ್ರಿಟಿಷ್ ಕಂಟ್ರಾಕ್ಟ್ ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ

17-9-24. ಮೇನೇಜರ್.

Old Students' Quarterly.

Editor, Mr. P. B. Medappa, B.A., B.L., M.L.C.

Vol. II. No. 2 is now out.

Subscription—Yearly Rs. 2, post free. Most delightful Scholarly articles! Read and enjoy!

CONTENTS.

1. National welfare—(includes thoughts on Free and Compulsory education in Coorg.
2. Swarajya—A Canarese Drama.
3. Are Coorgs Kannadigas?
4. Ancient Coorg.
5. Peep into Heavens.
6. Frivolity page, etc. etc.

If you become a subscriber now you will get a very beautiful calendar for 1925 free—absolutely free!

Apply to—
Manager.
O. S. Association,
Mercara.

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲಪಿರುವುದರಿಂದ, 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ. ಮೇನೇಜರ್,
'ಕೊಡಗು' ಲಿಮಿಟೆಡ್

ಒಂದು ಪ್ರಬಲವಾದ ಪ್ರಶ್ನೆ.

ದೇಶಾಭಿಮಾನವೆಂದರೇನು?

ಕೈರಾಟೆಯಿಂದ ನೂಲು ತಯಾರಿಸಿ ಮಾಡಿದ ಬಟ್ಟೆಯನ್ನು ಧರಿಸಿ ಆ ಮೂಲಕ ಲಕ್ಷೋಪಲಕ್ಷ ಗರೀಬ ಜನರಿಗೆ ಅನ್ನವನ್ನೊದಗಿಸುವದೇ ದೊಡ್ಡ ದೇಶಾಭಿಮಾನ.

ಇಂಥಾ 'ಖಾದಿ' ಬಟ್ಟೆಯನ್ನು ಎಲ್ಲಾ ಜನರಿಗೂ ಸುಲಭಕ್ರಯದಲ್ಲಿ ಒದಗಿಸಲಿಕ್ಕೆ ಈಗತಾನೇ ವೀರಾಜಪೇಟೆಯಲ್ಲಿ ಒಂದು ಖಾದಿ ಭಂಡಾರವನ್ನು ತೆರೆದಿರುತ್ತೇವೆ. ಈ ಭಂಡಾರದಲ್ಲಿ ಎಲ್ಲಾ ತರದ ನಾಜೂಕಾದ ಮತ್ತು ಗಟ್ಟಿಯಾದ ಖಾದಿಬಟ್ಟೆಗಳೂ ವಸ್ತ್ರಗಳೂ ಸೀರೆಗಳೂ, ಟವಲು ಶಾಲುಗಳೂ, ಖಾದಿರೇಶ್ಮೆಯಿಂದ ತಯಾರಾದ ಎಲ್ಲಾ ತರದ ಬಟ್ಟೆಗಳೂ ದೊರೆಯುತ್ತವೆ. ಬಟ್ಟೆಗಿರುವ ಎಲ್ಲಾ ಆರ್ಡರನ್ನು ತಕ್ಷಣವೇ ಜರಗಿಸಲಾಗುತ್ತೆ. ಊರೂರಿನಲ್ಲಿರುವ ಎಲ್ಲಾ ಜನರಿಗೆ ಬಟ್ಟೆಯನ್ನೊದಗಿಸಲು ತಕ್ಕ ಏರ್ಪಾಡು ಮಾಡಲ್ಪಟ್ಟಿದೆ. ದೇಶಾಭಿಮಾನಿಗಳ ಪ್ರೋತ್ಸಾಹವನ್ನು ನಿರೀಕ್ಷಿಸುತ್ತಲೇ ಇರುತ್ತೇವೆ. ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

'ಮೇನೇಜರ್'

12—೨೬ 7 ಖಾದಿ ಭಂಡಾರ, ವೀರಾಜಪೇಟೆ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಕೋಟೆರ ಚಿಣ್ಣಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಮೆ. ಕೆ. ಚಿಣ್ಣಪ್ಪನವರ ಆಫೀಸಿನಲ್ಲಿ.
ಮೂರ್ನಾಡು—ಕಮರ್ಶಿಯಲ್ ಸ್ಟೋರಿನಲ್ಲಿ ಮೆ. ಮಡೆಯಂಡ ದೇವಯ್ಯನವರು.
ನಾಪೋಕ್ಲು—ಮೆ. ಪೊನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮೆ. ಮುಳ್ಳಾಟಿರ ಪೂಣಚ್ಚನವರು.
ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಮ್ಮಯ್ಯನವರು.
ಮಡಿಕೇರಿ—ಮೆ. ಜಿ. ಮೊದಮ್ಮನವರು.
ಅಮ್ಮತ್ತಿ, ಸಿದ್ಧಾಪುರ—ಮೆ. ಏಸಂಡ ಮಾದಪ್ಪನವರು.
ಮೆ. ಚಂಗಂಡ ಕುಟ್ಟಪ್ಪನವರು.

ಕೋದಂಡ ಉತ್ತಯ್ಯ,
ಆರ್ಗನೈಜಿಂಗ್ ಸೆಕ್ರೆಟರಿ, "ಕೊಡಗು" ಲಿಮಿಟೆಡ್.

"ಕೊಡಗು"

ಸನ್ ೧೯೨೬ನೇ ಇಸವಿ ಏಪ್ರಿಲ್ ತಾ. ೯ನೇ ಶುಕ್ರವಾರ.

ಕೊಡಗು ಕೌನ್ಸಿಲು.

ಕಳೆದ ತಿಂಗಳಲ್ಲಿ ನಡೆದ ಲೆಜಿಸ್ಲೇಟಿವ್ ಕೌನ್ಸಿಲು ಮೀಟಿಂಗಿನಲ್ಲಿ ಮೊದಲಿನ ಎರಡು ದಿವಸಗಳು ಬಜೆಟ್ ಚರ್ಚೆಯಲ್ಲೇ ಕಳೆಯಲ್ಪಟ್ಟರೂ ಮೂರನೆಯ ದಿವಸದಲ್ಲಿ ಜನರಲ್ ಸಂಗತಿಗಳಿಗೆ ಸಮ್ಮಂಧಪಟ್ಟ ಠರಾವುಗಳು ಚರ್ಚಿಸಲ್ಪಟ್ಟವೆಂದು ಮೊದಲೇ ಹೇಳಿದ್ದಾಯಿತು. ಆದಿನದ ಪ್ರೊಸೀಡಿಂಗ್ಸು ಸಂಕ್ಷೇಪವಾಗಿ ಇನ್ನೊಂದು ಕಡೆ ಪ್ರಕಟಿಸಲಾಗಿದೆ. ಇವುಗಳಲ್ಲಿ ಮುಖ್ಯವಾದವುಗಳ ಮೇಲೆ ಒಂದೆರಡು ಮಾತುಗಳನ್ನು ಹೇಳಲು ಇಚ್ಛಿಸುತ್ತೇವೆ.

ಬ್ರಿಚಾಪು ಕಂಟ್ರಾಕ್ಟು ಆಕ್ಟಿನ ವಿಷಯದ ಠರಾವಿಗೆ ಅಧ್ಯಕ್ಷರು ಪ್ರಾಮುಖ್ಯತೆ ಕೊಟ್ಟು ಅದನ್ನು ಬೇರೆಯವುಗಳಿಗಿಂತ ಮುಂಚೆ ಚರ್ಚಿಸಲು ಎಡೆಕೊಟ್ಟರು. ದೇಶದ ಸ್ಥಿತಿಗನುಗುಣವಾದ ಬದಲಾವಣೆಗಳಿಂದ 1859ನೇ ಇಸವಿಯ ಹಳೇ ಆಕ್ಟನ್ನೇ ಇಲ್ಲಿ ಜಾರಿಗೆ ತರಬೇಕೆಂದು ಆ ಠರಾವಿನ ಮುಖ್ಯಾಂಶ. ಈ ದೇಶದಲ್ಲಿ ಮುಖ್ಯವಾಗಿ ಮೂರು ವಿಧ ಜನರು ಭೂಮಿ ಹಿಡುವಳಿದಾರರು, ಕಾಫಿತೋಟ ಮಾಲೀಕರೂ ಆಗಿ, ಹೆಚ್ಚಿನ ಕೂಲಿ ಆಳುಗಳು ಪರಪ್ರಾಂತ್ಯದಿಂದ ಇಲ್ಲಿ ಕೆಲಸಕ್ಕೆ ಬರುವ ಕಾರಣ, ಬ್ರಿಚಾಪು ಕಂಟ್ರಾಕ್ಟು ಆಕ್ಟನ್ನು ಇಟ್ಟುಕೊಳ್ಳಬೇಕೆಂದೇ ದೇಶದ ಹೆಚ್ಚಿನ ಜನರ ಅಭಿಪ್ರಾಯವಾಗಿದೆ. ಈ ಮೊದಲು ಜಮೀನುದಾರರ ಸಂಘವು ಈ ವಿಷಯ ತನ್ನ ಅಭಿಪ್ರಾಯವನ್ನು ಸೂಚಿಸಿತು. ಆದರೆ ಬಡವರಾದ ಹಿಂದುಳಿದಿರುವ ಕೂಲಿಆಳುಗಳ ಹಿತವನ್ನು ಬಯಸುವವರು ಈ ಆಕ್ಟಿಗೆ ವಿರೋಧಿಸುವದರಲ್ಲಿ ನ್ಯಾಯವಿದೆ. ಕೌನ್ಸಿಲಿನಲ್ಲಿ ಹಿಂದುಳಿದ ಪಂಗಡದವರ ಪರವಾಗಿ ನೇಮಿಸಲ್ಪಟ್ಟಿರುವ ಮೆಂಬರರೂ ಕೂಡ ಇದಕ್ಕೆ ಪರವಾಗಿ ಓಟುಕೊಟ್ಟರೂ, ಚುನಾಯಿತ ಮೆಂಬರರಿಬ್ಬರು ಇದಕ್ಕೆ ವಿರೋಧಮಾಡಿದ್ದು ಕೂಲಿಆಳುಗಳ ಹಿತವನ್ನು ಎಲ್ಲರೂ ಬಿಟ್ಟುಕೊಟ್ಟಿಲ್ಲವೆಂದು ಸ್ಪಷ್ಟವಾಯಿತು. ಆಳುಗಳ ಕಷ್ಟಸುಖಗಳನ್ನು ಕೆಲಸಮಾಡಿಸುವ ಯಜಮಾನರು ಚೆನ್ನಾಗಿ ಅರಿತು ಇಂಥಾ ಆಕ್ಟನ್ನು ರದ್ದು ಪಡಿಸಬೇಕೆಂಬ ಅಭಿಪ್ರಾಯವು ದೇಶದವರಲ್ಲಿ ಹುಟ್ಟುವಂತೆ ಮಾಡಬೇಕಾದದ್ದೇ ಬಡವರ ಹಿತೈಷಿಗಳ ಕರ್ತವ್ಯವಾಗಿದೆ. ಈ ವಿಷಯವು ಬರುವ ವಾರದಲ್ಲಿ ಮಡಿಕೇರಿಯಲ್ಲಿ ನಡೆಯುವ ಜಮೀನ್ದಾರರ ಸಂಘದ ಕಾನ್‌ಫರೆನ್ಸಿನಲ್ಲಿ ಪುನಹ ಚರ್ಚಿಸಲ್ಪಡಬಹುದಾದುದರಿಂದ ಭೂಮಾಲೀಕರಿಗೆ ಈ ಆಕ್ಟಿಗೆ ವಿರೋಧಿಸುವವರ ಅಭಿಪ್ರಾಯವನ್ನು ವಿವರಿಸಿ ಹೇಳಲು ಅನುಕೂಲವು ದೊರೆಯುವುದು. ನಂತರ ಅಲ್ಲಿಯ ತೀರ್ಮಾನದಂತೆ ಅವರ ಪ್ರತಿನಿಧಿಗಳಿಗೆ ವರ್ತಿಸಲು ಸುಲಭವಾಗುವುದು.

ಕಳೆದ ಸೆಟ್ಲ್‌ಮೆಂಟಿನಲ್ಲಿ ಬಿಮ್ಮೆ ಭೂಮಿಯ ಕಂದಾಯ ಏರಿಸಿದ್ದನ್ನು ರದ್ದು ಮಾಡಬೇಕೆಂಬುದೂ, ಜಮ್ಮ ಹಿಡುವಳಿದಾರರಿಂದ ಸರ್ಕಾರದವರು ಬಲತ್ಕಾರದಿಂದ ಮಾಡಿಸುವ (ಹಿಟ್ಟಿಬಿಟ್ಟಿ) ಕೆಲಸವನ್ನು ಮನ್ನಮಾಡಬೇಕೆಂಬುದೂ ಕೌನ್ಸಿಲಿನ ಉದ್ಯೋಗಸ್ಥರಲ್ಲದ ಇಂಡಿಯನ್ ಮೆಂಬರುಗಳೆಲ್ಲರ ಒತ್ತಾಸೆಯಿಂದ ಪಾಸಾದುದು ಆಶ್ಚರ್ಯವೇನೂ ಅಲ್ಲ. ಇವುಗಳ ವಿಷಯವಾಗಿ ದೇಶದ ಜನರು ಎಷ್ಟೋ ವರ್ಷಗಳಿಂದ ಸರ್ಕಾರದವರಲ್ಲಿ ಅರಿಕೆಮಾಡಿಕೊಳ್ಳುತ್ತಿದ್ದರೂ ಈ ವರೆಗೆ ಯಾವದೊಂದು ನ್ಯಾಯವಾದ ತೀರ್ಮಾನವನ್ನು ಸರ್ಕಾರದವರು ಮಾಡಿಲ್ಲ. ದೇಶದ ಪ್ರತಿನಿಧಿಗಳೆಲ್ಲರೂ ಒಗ್ಗಟ್ಟಾಗಿ ಪುನಹ ಇವುಗಳ ವಿಷಯ ಒತ್ತಿ ಹೇಳಿರುವುದರಿಂದ ಇನ್ನಾದರೂ ಸರ್ಕಾರದವರು ದೇಶೀಯರ ಹಿತಕ್ಕಾಗಿ ದೇಶದವರ ಅಭಿಪ್ರಾಯದ ಮೇರೆ ದೇಶವನ್ನು ಆಳುತ್ತಿದ್ದೇವೆಂದು ಹೇಳುವ ತಮ್ಮ ಹೇಳಿಕೆಯನ್ನು ಸಿದ್ಧಾಂತಪಡಿಸುವರೋ ಎಂದು ಎದುರು ನೋಡುತ್ತಿರುವ.

ಹೆಚ್ಚಿನ ಪೂರ್ವಾರು ಅಂದರೆ ದೊಡ್ಡ ಪ್ರಾಂತ್ಯಗಳಿಗೆ ಕೊಟ್ಟಿರುವಂಥ ಕೌನ್ಸಿಲನ್ನು ನಮ್ಮ ಪ್ರಾಂತ್ಯಕ್ಕೂ ಕೊಡಬೇಕೆಂಬ ಠರಾವು ಪಾಸಾಗಬೇಕಾದದ್ದು ವಾಸ್ತವವೆ. ಆದರೆ ಬೇರೆ ಪ್ರಾಂತ್ಯಗಳಲ್ಲಿರುವವರು ಅಲ್ಲಿ ಈಗಿರುವ ದ್ವಿಮುಖ ಸರ್ಕಾರವನ್ನು ಮುರಿಯಬೇಕೆಂದು ಸಾಧಿಸುತ್ತಿರುವಲ್ಲಿ ಅಂಥಾ ಸರ್ಕಾರವನ್ನು ಪಡೆಯಲು ನಾವು ಪ್ರಯತ್ನಿಸುವುದು ಸರಿಯಲ್ಲವೆಂದು ತೋರಬಹುದು. ದೊಡ್ಡ ಪ್ರಾಂತ್ಯಗಳಿಗೆ ಪ್ರಾಂತೀಕ ಸ್ವಾತಂತ್ರ (ಪ್ರಾವಿನ್ಷಿಯಲ್ ಅಟಾನಮಿ) ಕೊಡಬೇಕೆಂಬ ಅಭಿಪ್ರಾಯವು ಇಂಗ್ಲೆಂಡಿನಲ್ಲಿ ಪ್ರಬಲವಾಗುತ್ತಿರುವುದರಿಂದ ಅಂಥಾ ಪೂರ್ವಾರು ಬೇರೆ ಪ್ರಾಂತ್ಯಗಳಿಗೆ ಬೇಗನೆ ದೊರೆಯುವದೆಂದಿರುವಾಗ ನಮ್ಮ ದೇಶಕ್ಕೂ ಕೊಡಬೇಕೆಂದು ಕೇಳಿದರೆ ನಮಗೆ ದ್ವಿಮುಖ ಸರ್ಕಾರದಲ್ಲಿ ತಪ್ಪೇನು ಇರುವದಿಲ್ಲವೆಂಬ ಅಡಚಣೆ ಇರಬಾರದು. ಹಿಂದೂದೇಶಕ್ಕೆ ಮಾಂಟ್‌ಫರ್ಡ್ ರಿಫಾರ್ಮ್ಸ್ ದೊರೆತಾಗ ನಮ್ಮ ಪ್ರಾಂತ್ಯಕ್ಕೂ ಅದು ಅನ್ವಯಿಸುವಂತೆ ಮಾಡಬೇಕೆಂದು ಕೇಳಿದಾಗ ನಮಗೆ ಮಾರ್ಲಿಮಿಂಟೋ ರಿಫಾರ್ಮಿನ ಅನುಭವ ಇಲ್ಲವೆಂದು ಆಕ್ಷೇಪವನ್ನು ಸರ್ಕಾರದವರು ಹೂಡಲಿಲ್ಲವೇ? ಈಗ ನಮಗೆ ಕೌನ್ಸಿಲು ಸರ್ಕಾರದಲ್ಲಿ ತಕ್ಕಷ್ಟು ತರಬೇತು ಆಗಿರುವುದರಿಂದ ಮಾಂಟ್‌ಫರ್ಡ್ ಪೂರ್ವಾರಿನ ಕೌನ್ಸಿಲು ಕೊಡಬೇಕೆಂದು ಕೇಳುವುದು ನ್ಯಾಯವಾಗಿದೆ. ದೊಡ್ಡ ಪ್ರಾಂತ್ಯಗಳ ಕೌನ್ಸಿಲಿಗೂ ನಮ್ಮ ಕೌನ್ಸಿಲಿಗೂ ಹೆಚ್ಚಿನ ಭೇದಗಳೇನೂ ಇರುವುದಿಲ್ಲವೆಂದು ಕೆಲವರ ಅಭಿಪ್ರಾಯ. ಆದರೆ ಈ ಅಭಿಪ್ರಾಯವು ಸರಿಯಲ್ಲವೆಂದು ಯಾರಿಗೆ ತಾನೇ ತೋರದು. ಮಾಂಟ್‌ಫರ್ಡ್ ರಿಫಾರ್ಮಿನ ಕೌನ್ಸಿಲಿಗೆ ಬಜೆಟಿನ ಮೇಲೆ ಓಟು ಕೊಡುವ ಅಧಿಕಾರವಿದೆ. ಅದರಲ್ಲಿ ಕೆಲವು ಇಲಾಖೆಗಳು ಜನರ ಪ್ರತಿನಿಧಿಗಳಿಗೆ ಜವಾಬ್ದಾರರಾದ ಮಂತ್ರಿಗಳ ಆಡಳಿತೆಯಲ್ಲಿವೆ. ನಮ್ಮ ಕೌನ್ಸಿಲಿಗೆ ಸಿಫಾರಸ್ಸಿನ ಠರಾವುಗಳನ್ನು ಚರ್ಚಿಸುವ ಅಧಿಕಾರ ಮಾತ್ರವಿದೆಯಲ್ಲದೆ ಮತ್ತೇನೂ ಇಲ್ಲ. ರಾಜಕೀಯ ಅಭಿವೃದ್ಧಿಯಲ್ಲಿ ನಾವು ನಮ್ಮ ನೆರೆಪ್ರಾಂತ್ಯದವರಿಗೆ ಹಿಂದುಳಿಯಬಾರದ ಕಾರಣ ಅವರಿಗೆ ದೊರೆತಿರುವ ಹೆಚ್ಚು ಅಧಿಕಾರದ ಕೌನ್ಸಿಲನ್ನು ಪಡೆಯಲು ಪ್ರಯತ್ನಿಸಬೇಕಾದದು ಪ್ರತಿಯೊಬ್ಬ ದೇಶೀಯನ ಕರ್ತವ್ಯವಾಗಿದೆ. ಈ ವಿಷಯ ಕೌನ್ಸಿಲಿನಲ್ಲಿ ಪಾಸಾದರೂ ಜನರ ಪ್ರತಿನಿಧಿ ಮೆಂಬರುಗಳೆಲ್ಲರೂ ಒಗ್ಗಟ್ಟಾಗಿ ಓಟುಮಾಡದೆಹೋದದು ವ್ಯಸನಕರವೆಂದೇ ತೋರುತ್ತದೆ.

ಪಾಸಾದ ಮತ್ತೊಂದು ಠರಾವು ಮುಖ್ಯವಾದದ್ದು. ಕೌನ್ಸಿಲಿನಲ್ಲಿ ಪ್ರಶ್ನೆಯನ್ನು ಯಾರೇ ಹಾಕಲಿ ಅದರ ಉತ್ತರದ ಮೇಲೆ ಪುನಹ ಪ್ರಶ್ನೆ ಕೇಳುವ ಹಕ್ಕು ಎಲ್ಲಾ ಮೆಂಬರುಗಳಿಗೂ ಇರಬೇಕೆಂಬುದೇ ಈ ಠರಾವು. ಇಂಥಾ ಅನುಕೂಲವು ಗವರ್ನರ್ಸ್ ಕೌನ್ಸಿಲುಗಳಲ್ಲಿವೆ. ನಮ್ಮ ಕೌನ್ಸಿಲಿನಲ್ಲಿ ಏನಾದರೂ ಪ್ರಯೋಜನವು ದೊರೆಯುತ್ತಿದ್ದರೆ, ಅದು ಪ್ರಶ್ನೆಗಳಿಗೆ ಸಿಕ್ಕುವ ಉತ್ತರಗಳಿಂದಾಗಿದೆ. ಹೀಗಿರುವಾಗ್ಯೆ ಸರ್ಕಾರದಿಂದ ಆಗುವಷ್ಟು ತಿಳುವಳಿಕೆಯನ್ನು ಪಡೆಯಬೇಕಾದರೆ ಸ್ಪ್ಲಿಮೆಂಟ್ ಪ್ರಶ್ನೆ ಕೇಳುವ ಹಕ್ಕು ಮೊದಲಿನ ಪ್ರಶ್ನೆ ಕೇಳಿದ ಮೆಂಬರಿಗೆ ಮಾತ್ರವಲ್ಲದೆ ಎಲ್ಲಾ ಮೆಂಬರುಗಳಿಗೂ ಇರಬೇಕಾದ್ದು ಅವಶ್ಯವಾಗಿದೆ.

ವಾಪಸು ತೆಗೆದುಕೊಂಡ ಠರಾವುಗಳಲ್ಲಿಯೂ ಕೆಲವು ಗಮನಕ್ಕೆ ತೆಗೆದುಕೊಳ್ಳತಕ್ಕವುಗಳಿವೆ. ದೇಶದಲ್ಲಿ ಪ್ರೈಮರಿ ವಿದ್ಯೆಯನ್ನು ಉಚಿತವಾಗಿಯೂ ಖಡ್ಡಾಯವಾಗಿಯೂ ಎಲ್ಲರಿಗೂ ಕೊಡಬೇಕೆಂಬುದಕ್ಕೆ ಆಲೋಚನಾಪರರಾದವರ್‍ಯಾರೂ ವಿರೋಧಿಸಲಿಕ್ಕಿಲ್ಲ. ಇಂಥಾ ಕ್ರಮವು ದೇಶದ ಅಭಿವೃದ್ಧಿಗೆ ಅತ್ಯಗತ್ಯವೆಂಬುದು ಎಲ್ಲರೂ ಒಪ್ಪುವ ಸಂಗತಿಯಾಗಿದೆ. ಆದರೆ ಈ ವಿದ್ಯಾಕ್ರಮವನ್ನು ಜಾರಿಗೆ ತರಬೇಕಾದರೆ ಹೆಚ್ಚಿನ ದ್ರವ್ಯವು ಬೇಕಾಗಿರುವುದಲ್ಲದೆ ಬೇರೆ ಅನೇಕ ತೊಂದರೆಗಳಿರುವವು. ವಿದ್ಯಾಭ್ಯಾಸವನ್ನು ಉಚಿತವಾಗಿ ಕೊಡುವದಾದರೆ ಅದಕ್ಕೆ ಬೇಕಾಗುವ ಹೆಚ್ಚಿನ ಖರ್ಚಿಗೆ ಬೇರೆ ಕಡೆಗಳಲ್ಲಿ ಜಾರಿಯಲ್ಲಿರುವಂತೆ ವಿದ್ಯಾ ಸೆಸ್ ಹಾಕಬೇಕಾಗಿ ಬರಬಹುದು. ವಿದ್ಯಾಭ್ಯಾಸವನ್ನು ಬಲತ್ಕಾರದಿಂದ ಕೊಡಬೇಕಾದರೆ, ಮಕ್ಕಳನ್ನು ಶಾಲೆಗೆ ಕಳುಹಿಸದ ತಂದೆತಾಯಿಗಳಿಗೆ ಜುಲುಮಾನೆಯ ಶಿಕ್ಷೆ ವಿಧಿಸಬೇಕಾಗಬಹುದು. ಇವೇ ಮೊದಲಾದ ವಿಷಯಗಳನ್ನು ದೇಶದವರಿಗೆ ವಿವರವಾಗಿ ತಿಳಿಸಿದನಂತರ ಅವರ ಅಭಿಪ್ರಾಯದಂತೆ ನಡಿಸುವುದು ಉತ್ತಮವಾಗಿದೆ. ಆದುದರಿಂದ ಇದನ್ನು ಥಕ್ಕನೆ ಜಾರಿಗೆತಾರದೆ ಸ್ವಲ್ಪ ಸಮಯ ತಡುಕೊಂಡು ದೇಶೀಯರಿಗೆ ತಮ್ಮ ಅಭಿಪ್ರಾಯವನ್ನು ಸೂಚಿಸಲು ಅನುಕೂಲಕೊಡುವುದು ಸರಿಯೆಂದೇ ಹೇಳಬೇಕು. ವಿದ್ಯಾ ಇಲಾಖೆಯ ಮೆಂಬರು ಈ ವಿಷಯ ಸಹಾನುಭೂತಿಯಿಂದ ವಿಚಾರಿಸುತ್ತೇನೆಂದು ಹೇಳಿದ್ದರಿಂದ ಠರಾವು ವಾಪಸು ತೆಗೆದುಕೊಳ್ಳಲಾದದ್ದು ತಪ್ಪಲ್ಲವೆಂದು ಕಾಣುತ್ತದೆ. ಆ ಮೆಂಬರು ತಮ್ಮ ಮಾತಿನಂತೆ ಕೆಲವು ಕಡೆಗಳಲ್ಲಿ ಈ ವಿಷಯ ಜನರನ್ನು ವಿಚಾರಿಸುವರೆಂದು ಕೇಳಲು ಸಂತೋಷಪಡುತ್ತೇವೆ.

ಈ ದೇಶವನ್ನು ಶೆಡ್ಯೂಲ್ ಡಿಸ್ಟ್ರಿಕ್ಟುಗಳ ಪಟ್ಟಿಯಿಂದ ತೆಗೆದುಬಿಡಬೇಕೆಂಬ ಒಂದು ಠರಾವು ಇತ್ತು. ಈ ಪಟ್ಟಿಯಲ್ಲಿ ದೇಶವು ಇದ್ದರೆ ಚೀಫ್‌ಕಮಿಷನರ್ ಸಾಹೇಬರು ಮನಸ್ಸು ಬಂದಾಗ ದೇಶದಲ್ಲಿ ಇರುವ ಯಾವ ಖಾನೂನನ್ನಾದರೂ ರದ್ದುಪಡಿಸಬಹುದು, ಅಥವಾ ದೇಶದಹೊರಗೆ ಇರುವ ಯಾವ ಖಾನೂನನ್ನಾದರೂ ಜಾರಿಗೆ ತರಬಹುದು. ಖಾನೂನುಮಾಡುವ ಕೌನ್ಸಿಲ್ ಈಗ ಸಿಕ್ಕಿರುವಾಗ ಕೌನ್ಸಿಲಿನ ಅನುಮತಿ ವಿನಹ ಖಾನೂನುಗಳನ್ನು ಜಾರಿಗೆ ತರುವ ಅಥವ ರದ್ದು ಪಡಿಸುವ ಅಧಿಕಾರ ಒಬ್ಬ ಆಫೀಸರಲ್ಲಿ ಇರುವದು ನ್ಯಾಯವಲ್ಲವೆಂಬುದೇ ಈ ಠರಾವಿಗೆ ಕಾರಣವಾಗಿದೆ. ಅಸ್ಸಾಮ್ ಪ್ರಾಂತ್ಯಕ್ಕೆ ಗವರ್ನರ ಕೌನ್ಸಿಲ್ ಸಿಕ್ಕಿದ್ದರು ಈಗಲೂ ಆ ದೇಶವು ಶೆಡ್ಯೂಲ್ ಡಿಸ್ಟ್ರಿಕ್ಟ್ ಆಗಿಯೇ ಇದೆಯೆಂತಲೂ ಕೌನ್ಸಿಲ್ ಮೂಲಕ ಖಾನೂನು ಮಾಡುವದು ತಡವಾಗುತ್ತೆ, ತುರ್ತದಲ್ಲಿ ಖಾನೂನನ್ನು ಜಾರಿಗೆ ತರುವ ಹಕ್ಕು ಇರುವದು ಒಳ್ಳೇದು, ಶೆಡ್ಯೂಲ್ ಡಿಸ್ಟ್ರಿಕ್ಟ್ ಪಟ್ಟಿಯಿಂದ ತೆಗೆದರೆ ಈಗ ಜಾರಿಯಲ್ಲಿರುವ ಎಲ್ಲಾ ಖಾನೂನುಗಳು ಪುನಃ ಕೌನ್ಸಿಲಿನಿಂದಲೂ ಮಂಜೂರಾಗಬೇಕಾಗುತ್ತೆ ಎಂತಮುಂತಾಗಿ ಕಮಿಷನರು ಹೇಳಿದರು. ಈ ವಿಷಯವನ್ನು ಇನ್ನೂ ಅಭ್ಯಾಸಮಾಡಿಸಿದನಂತರ ಚರ್ಚೆಗೆ ತರಬಹುದೆಂಬ ಕಾರಣದಿಂದ ಠರಾವನ್ನು ತಂದವರು ವಾಪಸು ತೆಗೆದುಕೊಂಡರು. ಅಸ್ಸಾಮನ್ನು ಶೆಡ್ಯೂಲ್ ಡಿಸ್ಟ್ರಿಕ್ಟ್ ಆಗಿ ಇಟ್ಟಿರಲಿ, ಇಡದಿರಲಿ, ಹಾಗೆ ಇಡಲು ಕಾರಣವಿರಲಿ, ಇಡದಿರಲಿ, ಒಬ್ಬ ಆಫೀಸರು ಖಾನೂನುಮಾಡುವ ಪದ್ಧತಿ ತೆಗೆದುಹಾಕಬೇಕೆಂದು ಅವಶ್ಯವಿತ್ತು. ಠರಾವನ್ನು ವಾಪಸು ತೆಗೆದುಕೊಳ್ಳಬಾರದಿತ್ತು.

ಮಿ. ಕ್ಯಾಂಬೆಲ್ ಸಾಹೇಬರು ರಿಟೈರಾಗುವದನ್ನು ಪುನಃ ವಿಮರ್ಶಿಸಲು ಒಂದು ಕಮಿಟಿಯನ್ನು ನೇಮಿಸಬೇಕೆಂಬದೊಂದು ಠರಾವು ಚರ್ಚೆಯಾಗಿ ನಾಪಾಸಾಯಿತು. ಠರಾವನ್ನು ಸರಕಾರದವರು ವಿರೋಧಿಸಿದರು. ಠರಾವು ಮಂಜೂರಾಗಿ ಚೀಫ್‌ಕಮಿಷನರು ಒಪ್ಪಿಕೊಂಡಿದ್ದರೂ ಕಮಿಟಿಯನ್ನು ನೇಮಿಸುವ ಅಧಿಕಾರವು ಚೀಫ್‌ಕಮಿಷನರಲ್ಲಿ ಇರುವದರಿಂದ ಅಂಥಾ ಕಮಿಟಿಯಿಂದ ದೇಶಕ್ಕೆ ವಿಶೇಷ ಪ್ರಯೋಜನವಿರಲಿಲ್ಲ. ಚೀಫ್‌ಕಮಿಷನರ ಇರಾದೆಯನ್ನು ನಡಿಸುವ ಕಮಿಟಿಯನ್ನೇ ನೇಮಿಸುತ್ತಿದ್ದರು. ಮಿ. ಕ್ಯಾಂಬೆಲರ ಕೆಲಸವನ್ನೆಲ್ಲಾ ವಿಮರ್ಶಿಸಬೇಕೆಂಬದರ ಬದಲು ಯಾವ ಯಾವ ಭಾಗದಲ್ಲಿ ಉದ್ಯೋಗಸ್ಥರಿಗೂ ದೇಶಕ್ಕೂ ತೊಂದರೆಯಾಗಿದೆಯೋ ಅಂಥಾದನ್ನು ಮಾತ್ರ ಚರ್ಚಿಸಿ ಸರಿಪಡಿಸಿಕೊಳ್ಳಬೇಕಾದದ್ದು ಯುಕ್ತ, ಮತ್ತು ಸಾಧ್ಯ. ಪಾರುಪತ್ಯಗಾರರುಗಳು ಮೆಜಿಸ್ಟ್ರೇಟ್‌ಗಳಾಗಿಯೂ, ಸಬ್‌ರಜಿಸ್ಟ್ರಾರಾಗಿಯೂ, ಟ್ರೆಜರಿ ಆಫೀಸರಾಗಿಯೂ ಇರುವದರಿಂದ ಪ್ರಜೆಗಳಿಗೆ ತೊಂದರೆಯಿದೆಯೆಂಬುದು ಒಪ್ಪಬೇಕಾದ ವಿಷಯವಾದ್ದರಿಂದ ಕೌನ್ಸಿಲಿನ ದೇಶೀಯ ಮೆಂಬರುಗಳೆಲ್ಲರೂ ಪ್ರತ್ಯೇಕ ಮೆಜಿಸ್ಟ್ರೇಟರನ್ನು ನೇಮಿಸಬೇಕೆಂಬ ಠರಾವಿಗೆ ಒಪ್ಪಲಿಲ್ಲವೇ? ಹಾಗೆಯೇ ಕ್ಯಾಂಬೆಲರ ಏರ್ಪಾಡಿನ ಯಾವ ಭಾಗದಿಂದ ತೊಂದರೆಯೆಂಬದನ್ನು ತಿಳಿದುಕೊಂಡು ಅಂಥಾದನ್ನು ಸರಿಪಡಿಸಲು ಠರಾವು ತಂದರೆ ಒಮ್ಮತದಿಂದ ಪಾಸಾಗಿ ಪ್ರಯೋಜನವಾದೀತೆಂತ ನಾವು ನಂಬುತ್ತೇವೆ.

ಬಾಣೆ ಜಾಗದಲ್ಲಿ ಬೆಳೆಯುವ ಮರಗಳ ಮೇಲೆ ಸರಕಾರಕ್ಕೆ ಶೇಕಡ 25ರಷ್ಟು ಬಿಟ್ಟುಕೊಟ್ಟು 35ವರ್ಷಗಳಿಂದ ಅನುಭವಿಸಿಬಂದ ಬಾಣೆ ಮಾಲೀಕರಿಗೆ ಮರವನ್ನು ಮಾರುವ ಹಕ್ಕು ಇರಬೇಕೆಂತ ಇದ್ದ ಠರಾವು ಸಹ ನಾಪಾಸಾಯಿತು. ಭೂಮಾಲೀಕರು ಬಾಣೆಯಲ್ಲಿ ಇರುವ ಮರಗಳನ್ನು ತಾವು ಸ್ವತಂತ್ರರಾಗಿ ಸರಕಾರಕ್ಕೆ ಯಾವ ಹದಲಿಕೆಯು ಕೊಡದೆ ಮಾರಿಕೊಳ್ಳುವ ಹಕ್ಕು ಇರಬೇಕೆಂತ ಜಮೀನ್‌ದಾರರ ಸಂಘದಲ್ಲಿ ಅನೇಕವೇಳೆ ಪಾಸಾಗಿರುವಾಗ ಸರಕಾರಕ್ಕೆ ಶೇಕಡ 25ರಷ್ಟು ಬೆಲೆ ಕೊಡಬೇಕೆಂತ ಇದ್ದದ್ದರಿಂದಲೇ ಠರಾವು ನಾಪಾಸಾದದ್ದೆಂತ ನಾವು ನಂಬುತ್ತೇವೆ.

ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ಕೌನ್ಸಿಲು ಮಾಡಿದ ಕೆಲಸದ ಮೇಲೆ ತಮ್ಮ ಮೆಚ್ಚಿಕೆಯನ್ನೇನೋ ಸೂಚಿಸಿದರು. ಆದರೆ ಅವರು ತಮ್ಮ ಮೆಚ್ಚಿಕೆಯ ಮಾತಿಗೆಸಯೇ ಕೌನ್ಸಿಲಿನಲ್ಲಿ ಪಾಸಾದ ಠರಾವುಗಳನ್ನು ಮಂಜೂರು ಮಾಡಿ ಜಾರಿಗೆ ತರುವರೋ ಎಂಬದನ್ನು ದೇಶದವರು ಬಹು ಕುತೂಹಲದಿಂದ ಎದುರು ನೋಡುತ್ತಿರುವರು.

ಕೌನ್ಸಿಲು ಮೀಟಿಂಗು.

ಮೂರನೆ ದಿನ

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲು ಮೀಟಿಂಗು ತಾ 14 ಮತ್ತು 15ರಲ್ಲಿ ನಡೆಯದೆ, ತಾ. 16ರಲ್ಲು ಬೆಳಿಗ್ಗೆ 11ಗಂಟೆಗೆ ಪುನಹ ಪ್ರಾರಂಭವಾಯಿತು. ಮೊದಲಿನ ಎರಡು ದಿವಸಗಳಂತೆ ಅಧ್ಯಕ್ಷರು ಮತ್ತು ಎಲ್ಲಾ ಮೆಂಬರುಗಳು ಹಾಜರಿದ್ದರು. ಪ್ರಶ್ನೆಗಳಿಗೆ 218ರಿಂದ 242ರವರೆಗೆ ಉತ್ತರ ಕೊಡಲ್ಪಟ್ಟಿತು. ನಂತರ ಜನರಲ್ ಸಂಗತಿಗಳಿಗೆ ಸಮ್ಮಂಧವಾದ ಠರಾವುಗಳು ಚರ್ಚಿಸಲ್ಪಟ್ಟವು. ಕಾರ್ಯಕ್ರಮ ಪಟ್ಟಿಯಲ್ಲಿ ಸಮೂದಿಸಿದ್ದ 20ಠರಾವುಗಳಲ್ಲಿ ಒಂದು ಮುಂದುವರಿಸಲ್ಪಟ್ಟಿತು. ಐದು ಸೂಚಿಸಲ್ಪಡಲಿಲ್ಲ. ಚರ್ಚಿಸಲ್ಪಟ್ಟ ಬಾಕಿ 14ರಲ್ಲಿ 7ವಾಪಸು ತೆಗೆದುಕೊಳ್ಳಲಾದುವು. ಓಟಿಗೆ ಹಾಕಿದ್ದಲ್ಲಿ 2ಸೋಲಿಸಲ್ಪಟ್ಟು, 5ಮಾತ್ರ ಪಾಸಾದವು.

85. "1859ನೇ ಇಸವಿಯ 13ನೇ ಆಕ್ಟನ್ನು (ಬ್ರಿಚಾಪು ಕಂಟ್ರಾಕ್ಟು ಆಕ್ಟನ್ನು) ಸ್ಥಳಕ್ಕೆ ಸರಿಹೊಂದುವಂತೆ ಒಂದು ಲೇಬರ್ ಮಸೂದೆ (ಬಿಲ್) ಯ ಮೂಲಕ 1926ನೇ ಏಪ್ರಿಲ್ 1ಕ್ಕೆ ಮೊದಲು ಬದಲಾಯಿಸುವಂತೆ ಈ ಕೌನ್ಸಿಲು ಚೀಫ್ ಕಮಿಷನರವರಿಗೆ ಸಿಫಾರಸ್ಸು ಮಾಡುತ್ತದೆ."

(ಈ ಠರಾವು ಅಧ್ಯಕ್ಷರ ಅಪ್ಪಣೆ ಮೇರೆ ಬೇರೆಯವುಗಳಿಗಿಂತ ಮೊದಲು ಚರ್ಚಿಸಲಾಯಿತು).

ಮಿ ಪಿ ಜಿ. ಟಿಪ್ಪಂಗ್‌ರವರು ಸೂಚಿಸಿದರು. ಮಿ. ಎನ್. ಆರ್. ಸುಬ್ರಹ್ಮಣ್ಯಯ್ಯನವರು ಅನುಮೋದಿಸಿದರು. ಮಿ. ಪಿ. ಬಿ. ಮೇದಪ್ಪನವರು ವಿರೋಧಿಸಿದರು. ಓಟಿಗೆ ಹಾಕಲಾಗಿ 15ಜನರು ಪರವಾಗಿಯೂ ಒಬ್ಬರು (ಮಿ. ಪಿ. ಬಿ. ಮೇದಪ್ಪನವರು) ವಿರೋಧವಾಗಿಯೂ ಓಟುಕೊಟ್ಟದ್ದರಿಂದ ಬಹುಮತದಿಂದ ಪಾಸಾಯಿತು. ಸರ್ಕಾರಿ ಮೆಂಬರುಗಳು ನಾಲ್ವರು ಯಾವ ಕಡೆಗೂ ಓಟು ಕೊಡಲಿಲ್ಲ.

70. (ಎ) ಪ್ರೈಮರಿ ವಿದ್ಯಾಭ್ಯಾಸದ ಮುಂದಿನ ಅಭಿವೃದ್ಧಿಯ ಖರ್ಚನ್ನು ಪ್ರಾಂತೀಯ ಉತ್ಪತ್ತಿಯು ಒಪ್ಪಿಕೊಳ್ಳುವುದು; (ಬಿ) ಕೊಡಗಿನಲ್ಲಿ ಪ್ರೈಮರಿ ವಿದ್ಯೆಯನ್ನು ಹುಡುಗರಿಗೂ ಹುಡುಗಿಯರಿಗೆ ಸಾರ್ವಜನಿಕ, ಖಡ್ಡಾಯ (ಬಲತ್ಕಾರವಾಗಿ ಕೊಡುವುದು) ಮತ್ತು ಉಚಿತವಾಗಿ ಮಾಡುವಂತೆ ಒಂದು ರಚನೆಯನ್ನು ಮಾಡಬೇಕು, ಎಂಬ ಠರಾವನ್ನು ಮಿ. ಯಂ. ಯಂ. ತಿಮ್ಮಪ್ಪನವರು ಸೂಚಿಸಿದರು. ಮಿ. ಎನ್. ಆರ್. ಸುಬ್ರಹ್ಮಣ್ಯಯ್ಯನವರು ಅನುಮೋದಿಸಿದರು ಮತ್ತು ಮಿ. ಸಿ. ಕಾಳಪ್ಪನವರು ಒತ್ತಾಸೆ ಕೊಟ್ಟರು.

ವಿದ್ಯಾ ಇಲಾಖೆಯ ಮೆಂಬರು ಹೀಗೆ ಮಾಡಲಿಕ್ಕಿರುವ ಕಷ್ಟಗಳನ್ನು ಸೂಚಿಸಿ ಈ ವಿಷಯ ವಿಚಾರ ಮಾಡಲಾಗುವುದೆಂ

ದು ಜವಾಬು ಕೊಟ್ಟನಂತರ ಸೂಚಕರು ಠರಾವನ್ನು ವಾಪಸು ತೆಗೆದುಕೊಂಡರು.

71. ನಂಜರಾಜಪಟ್ಣ ತಾಲೂಕಿನಲ್ಲಿ ಉಚಿತ ಮತ್ತು ಬಡ್ಡಾಯ ವಿದ್ಯೆಯನ್ನು ಆದಷ್ಟು ಬೇಗನೆ ಜಾರಿಗೆ ತರಬೇಕೆಂಬ ಠರಾವನ್ನು ಮೆ| ಎನ್. ಆರ್. ಸುಬ್ಬಯ್ಯನವರು ಸೂಚಿಸುವ ಮೊದಲೇ ವಾಪಸು ತೆಗೆದುಕೊಂಡರು.

72. ನಂಜರಾಜಪಟ್ಣ ತಾಲೋಕಿನಲ್ಲಿ ಹುಡುಗರಿಗೆ 15 ವರ್ಷ ಪ್ರಾಯದ ವರೆಗೂ, ಹುಡುಗಿಯರಿಗೆ 12 ವರ್ಷ ಪ್ರಾಯದ ವರೆಗೂ ಉಚಿತವಾಗಿಯೂ ಮತ್ತು ಬಡ್ಡಾಯವಾಗಿಯೂ ವಿದ್ಯಾಭ್ಯಾಸ ಮಾಡಿಸಬೇಕೆಂಬ ಠರಾವನ್ನು ಮೆ. ಸಿ. ಕಾಳಪ್ಪನವರು ಸೂಚಿಸಲೇ ಇಲ್ಲ.

39. ಜಮ್ಮ ಹಿಡಿವಳಿದಾರರಿಂದ ಬಲಾತ್ಕಾರವಾಗಿ ಕೆಲಸ ಮಾಡಿಸುವುದನ್ನು (ಹಿಟ್ಟಿಬಿಟ್ಟಿಯನ್ನು) ನಿಲ್ಲಿಸಬೇಕೆಂಬ ಠರಾವನ್ನು ಮೆ. ಪಿ. ಐ. ಬೆಳ್ಯಪ್ಪನವರು ಮುಂದಿಟ್ಟರು. ಮೆ. ಸಿ. ಎನ್. ವೆಂಕಪ್ಪಯ್ಯನವರು ಅನುಮೋದಿಸಿದರು. ಮೆ. ಎ. ಬಿ. ಜಂಗಪ್ಪನವರು ಒತ್ತಾಸೆಕೊಟ್ಟರು, ಫೈನಾನ್ಸ್ ಮೆಂಬರು ಜವಾಬು ಕೊಟ್ಟನಂತರ ಸ್ವಲ್ಪ ಚರ್ಚೆನಡೆಯಿತು. ಓಟಿಗೆ ಹಾಕಲಾಗಿ 13ಮೆಂಬರು ಪರವಾಗಿ ಓಟುಮಾಡಿದ್ದರಿಂದ ಠರಾವು ಪಾಸಾಯಿತು. ಚುನಾಯಿತ ಇಂಡಿಯನ್ ಮೆಂಬರುಗಳೆಲ್ಲರೂ ಇದಕ್ಕೆ ಪರವಾಗಿ ಓಟುಕೊಟ್ಟರು.

40. "ಕಳೆದ ಸೆಟ್ಲ್‌ಮೆಂಟಿನಲ್ಲಿ ಜಮ್ಮ ಹಿಡಿವಳಿಯ ಕಂದಾಯ ಬದಲಾವಣೆ ಮಾಡಿದನ್ನು ರದ್ದುಮಾಡಬೇಕೆಂದು ಈ ಕೌನ್ಸಿಲು ಚೀಫ್‌ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ."

ಈ ಠರಾವನ್ನು ಮೆ. ಪಿ. ಐ. ಬೆಳ್ಯಪ್ಪನವರು ಸೂಚಿಸಿದರು. ಮೆ. ಯಂ. ಯಂ. ಚಿಣ್ಣಪ್ಪನವರು ಅನುಮೋದಿಸಿದರು. ಸರ್ಕಾರಿ ಮೆಂಬರರು ಜವಾಬು ಕೊಟ್ಟನಂತರ ಮೆ. ಪಿ. ಬಿ. ಮೇದಪ್ಪನವರು ಠರಾವಿಗೆ ಒತ್ತಾಸೆಕೊಟ್ಟರು. ಮೆ. ಪಿ. ಟಿ. ಟಿಪ್ಪಂಗಾರವರು ವಿರೋಧಿಸಿದರು. ಮೆ. ಸಿ. ಎನ್. ವೆಂಕಪ್ಪಯ್ಯನವರು ಠರಾವಿಗೆ ಒತ್ತಾಸೆಯಾಗಿ ಮಾತಾಡಿದರು. ಉದ್ಯೋಗಸ್ಥರಲ್ಲದ 14 ಇಂಡಿಯನ್ ಮೆಂಬರುಗಳು ಪರವಾಗಿ ಓಟುಮಾಡಿದ್ದರಿಂದ ಠರಾವು ಪಾಸಾಯಿತು.

74. ನಂಜರಾಜಪಟ್ಣ ತಾಲೋಕಿನಲ್ಲಿ 'ನೋಟಿಫೈಡ್ ಏರ್ಯದ' ಹೊರಗೆ ಸೇಂದಿಅಂಗಡಿಗಳನ್ನು ಇಡಕೂಡದು ಎಂಬ ಠರಾವನ್ನು ಮೆ. ಸಿ. ಕಾಳಪ್ಪನವರು ವಾಪಸು ತೆಗೆದುಕೊಂಡರು.

58. ಬಾಣೆ ಜಾಗಗಳಲ್ಲಿ ಮರಬೆಳೆಸುವದಕ್ಕೆ ಸರ್ಕಾರದವರು ಉತ್ತೇಜನ ಕೊಡಬೇಕು ಮತ್ತು ಕಮ್ಮಿಪಕ್ಷ 35ವರ್ಷಗಳವರೆಗೆ ರೈತರ ಅಥವಾ ಅವರ ವಾರೀಸುದಾರರ ಸ್ವಾಧೀನದಲ್ಲಿರುವ ಬಾಣೆಗಳಲ್ಲಿಯ ಮರಗಳ ಬೆಲೆಯ ಶೇಕಡ 25ರಷ್ಟು ಸರ್ಕಾರಕ್ಕೆ ಕೊಟ್ಟರೆ ಆ ಮರಗಳನ್ನು ಮಾರುವ ಹಕ್ಕು ಅವರಿಗೆ ಕೊಡಬೇಕು ಎಂಬ ಠರಾವನ್ನು ಮೆ. ಎ. ಬಿ. ಜಂಗಪ್ಪನವರು ಮುಂದಿಟ್ಟರು. ಮೆ. ಎಸ್. ಯಂ. ಪಿಂಟೋರವರು ಅನುಮೋದಿಸಿದರು.

ಓಟಿಗೆ ಹಾಕಿದಲ್ಲು ಮ. ರಾ. ರಾ. ಗಳಾದ ಪಿ. ಬಿ. ಮೇದಪ್ಪ, ಎ. ಬಿ. ಜಂಗಪ್ಪ, ಬಿ. ಶ್ರೀಪತಿರಾವ್, ಎಸ್. ಯಂ. ಪಿಂಟೊ ಮತ್ತು ಕೆ. ಯಂ. ಮಂದಣ್ಣ ಇವರು ಐವರು ಪರವಾಗಿಯೂ, ಮ. ರಾ. ರಾ. ಗಳಾದ ಸಿ. ಕಾಳಪ್ಪ, ಕೆ. ಪಿ. ಚಿಣ್ಣಪ್ಪ ಪಿ. ಗಣಪಮ್ಮ, ಪಿ. ಟಿ. ಕುಶಾಲಪ್ಪ, ಯಂ. ಯಂ. ಚಿಣ್ಣಪ್ಪ, ಎನ್. ಆರ್. ಸುಬ್ಬಯ್ಯ, ಸಿ. ಎನ್. ವೆಂಕಪ್ಪಯ್ಯ ಮತ್ತು ಪಿ. ಐ. ಬೆಳ್ಯಪ್ಪ, ಇವರು ಎಂಟು ಜನರು ವಿರೋಧವಾಗಿಯೂ ಓಟುಮಾಡಿದ್ದರಿಂದ ಠರಾವು ಪಾಸಾಗಲಿಲ್ಲ.

77. ಬಾಳಾಜಿ ನಾಲೆಯನ್ನು ಎರಡು ಅಡಿ ಅಗಲಿಸಿ ಒಂದುಅಡಿ ಎತ್ತರಿಸಬೇಕೆಂಬ ಠರಾವನ್ನು ಮೆ. ಪಿ. ಗಣಪಮ್ಮನವರು ಸೂಚಿಸಿ ವಿಚಾರಿಸಲಾಗುವದೆಂದು ಸರ್ಕಾರಿ ಮೆಂಬರರ ಜವಾಬುಸಿಕ್ಕಿದೊಡನೆ ಠರಾವನ್ನು ವಾಪಸು ತೆಗೆದುಕೊಂಡರು.

62. ಇಂಡಿಯಾ ಗವರ್ನ್‌ಮೆಂಟ್ ಆಕ್ಟಿನ 52 ಎ. (1) ಸೆಕ್ಷನ್ ಮೇರೆ ನಮ್ಮ ಈಗಿನ ಕೌನ್ಸಿಲನ್ನು ದೊಡ್ಡ ಪ್ರಾಂತ್ಯಗಳ ಕೌನ್ಸಿಲುಗಳ ತರಗತಿಗೆ ಏರಿಸಬೇಕೆಂದು ಇಂಡಿಯಾ ಸರ್ಕಾರದವರನ್ನು ಚೀಫ್‌ಕಮಿಷನರು ಕೇಳಬೇಕೆಂಬ ಠರಾವನ್ನು ಮೆ. ಕೆ. ಪಿ. ಚಿಣ್ಣಪ್ಪನವರು ಸೂಚಿಸಿದರು. ಮೆ. ಗಣಪಮ್ಮನವರು ಅನುಮೋದಿಸಿದರು. ಎಷ್ಟರಮಟ್ಟಿಗೆ ಕೂರ್ಗಿಗೆ ಹೆಚ್ಚಿನ ಮಾರ್ಪಾಡನ್ನು ಕೊಡಬಹುದೆಂಬುದನ್ನು ವಿಚಾರಿಸಲು ಒಂದು ಕಮಿಟಿಯನ್ನು ಏರ್ಪಡಿಸಬೇಕೆಂಬ ಎಮೆಂಡ್‌ಮೆಂಟನ್ನು (ತಿದ್ದುಪಾಟನ್ನು) ಮೆ. ಎಸ್. ಯಂ. ಪಿಂಟೊರವರು ತರಲು, ಇದಕ್ಕೆ ರೂಲ್ಸಿನ ಮೇರೆ ಮೊದಲೇ ಸೂಚನೆ ಕೊಡದ್ದರಿಂದ ಇದನ್ನು ಚರ್ಚೆಗೆ ಬಿಡಲಾಗುವುದಿಲ್ಲವೆಂದು ಅಧ್ಯಕ್ಷರು ಹುಕುಂ ಮಾಡಿದಕಾರಣ ಪಿಂಟೊರವರು ಠರಾವಿಗೆ ಒತ್ತಾಸೆಕೊಟ್ಟರು. ಸರ್ಕಾರಿ ಮೆಂಬರರ ಜವಾಬಿನ ನಂತರ ಮೆ. ಬಿ. ಶ್ರೀಪತಿರಾಯರು ಮತ್ತು ಪಿ. ಬಿ. ಮೇದಪ್ಪನವರು ಎಮೆಂಡ್‌ಮೆಂಟಿನ ಪರವಾಗಿಯೂ, ಮೆ. ಪಿ. ಟಿ. ಕುಶಾಲಪ್ಪನವರು ಠರಾವಿನ ಪರವಾಗಿಯೂ ಮಾತಾಡಿದರು. ಚರ್ಚೆಯು ಮುಗಿದನಂತರ ಮ. ರಾ. ರಾ. ಗಳಾದ ಸಿ. ಕಾಳಪ್ಪ, ಕೆ. ಪಿ. ಚಿಣ್ಣಪ್ಪ, ಪಿ. ಗಣಪಮ್ಮ, ಪಿ. ಟಿ. ಕುಶಾಲಪ್ಪ, ಯಂ. ಯಂ. ಚಿಣ್ಣಪ್ಪ, ಎನ್. ಆರ್. ಸುಬ್ಬಯ್ಯ, ಸಿ. ಎನ್. ವೆಂಕಪ್ಪಯ್ಯ, ಪಿ. ಐ. ಬೆಳ್ಯಪ್ಪ ಮತ್ತು ಎಸ್. ಯಂ. ಪಿಂಟೊ ಇವರು ಒಂಭತ್ತು ಜನರು ಪರವಾಗಿ ಓಟುಮಾಡಿ ಬಾಕಿ ಜನರ ಯಾವರೂ ಓಟು ಮಾಡದ್ದರಿಂದ ಠರಾವು ಪಾಸಾಯಿತು.

ಜಮ್ಮಾಸುದಾರರ ಸಂಘದ

ವಾರ್ಷಿಕಾ ಜನರಲ್ ಮೀಟಿಂಗು ಈ ವರುಷ ಮೂರ್ನಾಡಿನಲ್ಲಿ ನಡೆಯುವುದು.

ಅಧ್ಯಕ್ಷರು ಸೂ. ರಾ. ರಾ. ಅಬ್ದುಲ್ ಗಫೂರ್ ಖಾನ್ ಕೈಶ್ಗಿಯವರು.

ಸಭೆಯು ಏಪ್ರಿಲ್ ತಾರೀಕು 11ರಲ್ಲಿ ಮಧ್ಯಾಹ್ನ 1 ಗಂಟೆಗೆ ಪ್ರಾರಂಭವಾಗುವುದು. ಆವಶ್ಯವಿದ್ದರೆ ತಾರೀಕು 13ರ ವರೆಗೆ ನಡೆಯುವುದು.

ಕಾನ್‌ಫರೆನ್ಸಿನ ಸಮಯದಲ್ಲಿ ಖಾದಿಬಟ್ಟೆಯ ಮತ್ತು ಚರಕಾಗಳ ಪ್ರದರ್ಶನವು ನಡೆಯುವುದು. ನಿಷಾನಿಷೇಧ ಕಾನ್‌ಪರೆನ್ಸು ನಡೆಯಲಿಕ್ಕಿದೆ. ಹಿಂದೂ ಮಹಾಸಭೆಯ ಮೀಟಿಂಗನ್ನು ನಡಿಸುವ ಏರ್ಪಾಡಾಗುತ್ತಿದೆ. ದೇಶೀಯರೆಲ್ಲರೂ ತಮ್ಮ ಕಷ್ಟಗಳನ್ನೂ, ಅಭಿಪ್ರಾಯಗಳನ್ನೂ ತಿಳಿಸಲು ಅಲ್ಲಿಗೆ ಸೇರುವುದು ಆವಶ್ಯವಾಗಿದೆ.

78. ಶೆಡ್ಯೂಲ್ ಡಿಸ್ಟ್ರಿಕ್ಟ್‌ಗಳ ಕ್ರಮದಿಂದ ನಮ್ಮ ಪ್ರಾಂತ್ಯವನ್ನು ತೆಗೆದುಬಿಡುತ್ತೆ ಇಂಡಿಯಾ ಸರ್ಕಾರವನ್ನು ಕೇಳಿಕೊಳ್ಳಬೇಕೆಂಬ ಠರಾವು ಸಿ. ಎನ್. ವೆಂಕಪ್ಪಯ್ಯನವರಿಂದ ಸೂಚಿಸಲ್ಪಟ್ಟಿತು. ಸರ್ಕಾರಿ ಮೆಂಬರ ಜವಾಬಿನ ನಂತರ ಠರಾವು ವಾಪಸು ತೆಗೆದುಕೊಳ್ಳಲಾಯಿತು.

64. ಹುದಿಕೇರಿಯಲ್ಲಿಂದು ಸರ್ಕಾರಿ ಲೋವರ್ ಸೆಕೆಂಡರಿ ಶಾಲೆಯನ್ನು ತೆರೆಯಬೇಕೆಂಬ ಠರಾವನ್ನು ಮೆ. ಸಿ. ಎನ್. ವೆಂಕಪ್ಪಯ್ಯನವರು ಸೂಚಿಸುವ ಮುಂಚೆಯೇ ವಾಪಸು ತೆಗೆದುಕೊಂಡರು.

66. ಮೆ. ಎ. ವೈ. ಜ್ಯಾಂಬಿ ಐ. ಸಿ. ಎಸ್. ರವರು ಸಿಬ್ಬಂದಿ ಜೋಡಿಯ ಬಗ್ಗೆ ಮಾಡಿದ ಶಿಫಾರಸ್ಸುಗಳ ವರದಿಯಿಂದ ಪ್ರಾಂತ್ಯದಲ್ಲಿ ಉಂಟಾಗಿರುವ ಅತೃಪ್ತಿಯನ್ನು ಹೋಗಲಾಡಿಸುವ ಉದ್ದೇಶದ ಈ ವರದಿಯ ಜಾರಿಯನ್ನು ವಿಚಾರಿಸಲು ಈ ಕೌನ್ಸಿಲಿನ ಉದ್ಯೋಗಸ್ಥರು ಮತ್ತು ಉದ್ಯೋಗಸ್ಥರಲ್ಲದ ಮೆಂಬರುಗಳು ಮತ್ತು ಇತರ ಮೆಂಬರುಗಳುಳ್ಳ ಒಂದು ಕಮಿಟಿಯನ್ನು ನೇಮಿಸಬೇಕೆಂಬ ಠರಾವನ್ನು ಮೆ. ಪಿ. ಬಿ. ಮೇದಪ್ಪನವರು ಮುಂದಿಟ್ಟರು. ಮೆ. ಬಿ. ಶ್ರೀಪತಿರಾಯರು ಅನುಮೋದಿಸಿದರು. ಮ. ರಾ. ರಾ. ಗಳಾದ ಪಿ. ಬಿ. ಮೇದಪ್ಪ, ಎ. ಬಿ. ಜಂಗಪ್ಪ, ಬಿ. ಶ್ರೀಪತಿರಾವ್ ಮತ್ತು ಕೆ. ಯಂ. ಮಂದಣ್ಣ ಇವರು ನಾಲ್ವರು ಪರವಾಗಿಯೂ, ಮ. ರಾ. ರಾ. ಗಳಾದ ಎ. ಜೆ. ನಿಕಲ್ಸ್, ಅಬ್ದುಲ್ ಖಾನ್ ಸಾಹೇಬ್, ಎಸ್. ಯಂ. ಪಿಂಟೊ ಮತ್ತು ಎನ್. ಆರ್. ಸುಬ್ಬಯ್ಯ ಇವರು ನಾಲ್ವರು ತಟಸ್ಥರಾಗಿಯೂ ಬಾಕಿ 12ಜನರು ವಿರೋಧವಾಗಿಯೂ ಓಟುಕೊಟ್ಟದ್ದರಿಂದ ಠರಾವು ಪಾಸಾಗಲಿಲ್ಲ.

79. ಚುನಾವಣೆಯ ಮತ್ತು ಕೌನ್ಸಿಲು ಕಾರ್ಯಕ್ರಮದ ರೂಲ್ಸುಗಳನ್ನು ತಿದ್ದುಪಡಿ ಮಾಡಲು ಒಂದು ಕಮಿಟಿಯನ್ನು ಏರ್ಪಡಿಸಬೇಕೆಂಬ ಠರಾವು ಸೂಚಕರಾದ ಮೆ. ಪಿ. ಬಿ. ಮೇದಪ್ಪನವರ ಕೋರಿಕೆ ಮೇರೆ ಮುಂದಕ್ಕೆ ಇಡಲಾಯಿತು.

80. ಪ್ರಶ್ನೆಯು ಉತ್ತರಿಸಲ್ಪಟ್ಟನಂತರ ಆ ಜವಾಬಿನ ಮೇಲೆ ಸಪ್ಲಿಮೆಂಟರಿ ಪ್ರಶ್ನೆಗಳನ್ನು ಕೇಳುವ ಅನುಕೂಲವು ಕೌನ್ಸಿಲಿನ ಎಲ್ಲಾ ಮೆಂಬರುಗಳಿಗೆ ಕೊಡಬೇಕೆಂಬ ಠರಾವನ್ನು ಮೆ. ಪಿ. ಬಿ. ಮೇದಪ್ಪನವರು ಸೂಚಿಸಿದರು. ಮೆ. ಕೆ. ಪಿ. ಚಿಣ್ಣಪ್ಪನವರಿಂದ ಅನುಮೋದಿಸಲಾಯಿತು. ಓಟಿಗೆ ಹಾಕಿದಲ್ಲು ಉದ್ಯೋಗಸ್ಥರಲ್ಲದ 14 ಇಂಡಿಯನ್ ಮೆಂಬರುಗಳು ಪರವಾಗಿ ಓಟುಕೊಟ್ಟದ್ದರಿಂದ ಠರಾವು ಪಾಸಾಯಿತು.

67. ಸಹಕಾರಿ ಸಂಘಗಳಿಗೆ ಜಮ್ಮ ಹಿಡುವಳಿಯನ್ನು ಗಿರವಿಕೊಡುವ ಈಗಿನ ಏರ್ಪಾಡನ್ನು ಕೂಡನೆ ನಿಲ್ಲಿಸಬೇಕೆಂಬ ಠರಾವು ಮೆ. ಕೆ. ಯಂ. ಮಂದಣ್ಣನವರಿಂದ ಮುಂದಿಡಲಾಗಿ ಮೆ. ಪಿ. ಬಿ. ಮೇದಪ್ಪನವರಿಂದ ಅನುಮೋದಿಸಲಾಯಿತು. ಮೆ. ಎ. ಬಿ. ಜಂಗಪ್ಪನವರು ಮತ್ತು ಮೆ. ಕೆ. ಪಿ. ಚಿಣ್ಣಪ್ಪನವರು ವಿರೋಧಿಸಿದರು. ಸರ್ಕಾರಿ ಮೆಂಬರ ಜವಾಬಿನಂತರ ಠರಾವು ವಾಪಸು ತೆಗೆದುಕೊಳ್ಳಲಾಯಿತು.

81. ಜಮ್ಮ ಹಿಡುವಳಿದಾರರಿಗೆ ತಮ್ಮ ಜಾಗದಲ್ಲಿ ಗಾಂಜ ಮತ್ತು ಗಂಧಬೆಳೆಸಲು, ಕಲ್ಲು ತೆಗೆಯಲು ಮತ್ತು ಮರ ಉಪಯೋಗಿಸಲು ಇರುವ ಅಡಚಣೆಗಳನ್ನು ತೆಗೆದುಹಾಕಬೇಕೆಂಬ ಠರಾವನ್ನು ಮೆ. ಕೆ. ಯಂ. ಮಂದಣ್ಣನವರು ಸೂಚಿಸದೇನೇ ವಾಪಸು ತೆಗೆದುಕೊಂಡರು.

82. ಪೊನ್ನಂಪೇಟೆಯಲ್ಲಿ ಒಂದು ವೆಟರಿನರಿ ಆಸ್ಪತ್ರೆಯನ್ನು ಇಡಬೇಕೆಂಬ ಠರಾವನ್ನು ಮೆ. ಪಿ. ಗಣಪಮ್ಮನವರು ಮುಂದಿಟ್ಟರು. ಈ ವಿಷಯವು ದನಗಳ ವಿಚಾರಣೆಯ ಕಮಿಟಿಗೆ ಬಿಡಲಾಗುವುದೆಂದು ಸರ್ಕಾರಿ ಮೆಂಬರು ಜವಾಬುಕೊಟ್ಟದ್ದರಿಂದ ಠರಾವು ವಾಪಸು ತೆಗೆದುಕೊಳ್ಳಲಾಯಿತು.

83. ಹುದಿಕೇರಿ ಮತ್ತು ಪೊನ್ನಂಪೇಟೆಗಳಲ್ಲಿ ಲೋವರ್ ಸೆಕೆಂಡರಿ ಶಾಲೆಗಳನ್ನು ಇಡಬೇಕೆಂಬ ಠರಾವನ್ನು ಮೆ. ಪಿ. ಗಣಪಮ್ಮನವರು ವಾಪಸು ತೆಗೆದುಕೊಂಡರು.

84. ಕೊಡಗಿನಲ್ಲಿ ಬಾಣೆ, ಉಂಬಳಿ ಮತ್ತು ಜೋಡಿ ಭೂಮಿಗಳಿರುವ ದೇವಸ್ಥಾನ ಮತ್ತು ಮಠಗಳ ಮೇಲು ಉಸ್ತುವಾರಿಗೆ ಕಮಿಟಿಗಳನ್ನು ಏರ್ಪಡಿಸಬೇಕೆಂಬ ಠರಾವನ್ನು ಗಣಪಮ್ಮನವರು ವಾಪಸು ತೆಗೆದುಕೊಂಡರು.

ಅಧ್ಯಕ್ಷರಾದ ಮೆ. ಡಬ್ಲ್ಯು. ಪಿ. ಬಾರ್ಟನ್‌ರವರುಮೂರು ತಿಂಗಳಲ್ಲಿ ವರ್ಗವಾಗಿ ಹೈದರಾಬಾದಿಗೆ ಹೋಗುವಕಾರಣ ಕೌನ್ಸಿಲಿನ ಕೆಲಸದಸಿಬ್ಬಂದಿಯು ತಮ್ಮ ಒಳ್ಳೇ ಅಭಿಪ್ರಾಯವನ್ನು ಸೂಚಿಸಿ ತಮ್ಮ ಅಪ್ಪಣೆ ಭಾಷಣವನ್ನು ಮಾಡಿದನಂತರ ಮೀಟಿಂಗು ಮುಕ್ತಾಯವಾಯಿತು.

ಒಬ್ಬ ಭಗಿನಿಯ ಭಾವನೆ.

'ನವಜೀವನ'ದಲ್ಲಿ ಜೊಂಬಾಯಿ ಬಾದಿಭಂಡಾರದ ಶ್ರೀ| ಜೇರಾಜಾನಿಯವರು ಮಹಾತ್ಮಾಜೀಯವರಿಗೆ ಬರೆದ ಒಂದು ಪತ್ರವೂ ಆ ಕುರಿತು ಮಹಾತ್ಮಾಜೀಯವರ ಅಭಿಪ್ರಾಯವೂ ಪ್ರಕಟವಾಗಿದೆ—

'ಒಬ್ಬ ಮಹಾರಾಷ್ಟ್ರ ಮಹಿಳೆಯು ತಾನೇ ತಯಾರಿಸಿದ ನೂಲಿನಿಂದ ನೇಯ್ದ ಎರಡು ಸೀರೆಗಳನ್ನು ತಂದು ಬಿಡ್ಡಾರ [illegible] ಇಟ್ಟಳು. ನಮ್ಮ ಎದುರು ಭಂಡಾರದಲ್ಲಿ ಕೊಟ್ಟು ಹೋದಳು. ಅವುಗಳನ್ನು ಒಳ್ಳೇ ಬೆಲೆಗೆ ಮಾರಬೇಕೆಂದು ಪುನಃ ಪುನಃ ಹೇಳಿ ಹೋಗಿದ್ದಳು. ಸೀರೆಗಳಿಗೆ ಒಳ್ಳೆ ಬೆಲೆ ಸಿಗದೆ ಅವುಗಳು ಎಲ್ಲಿಯೋ ಕಳೆದು ಹೋದುವು. [illegible] ತಿಂಗಳ ತರುವಾಯ ಆ ಮಹಿಳೆಯು ಬಂದು ತನ್ನ ಸೀರೆಗಳನ್ನು ಕೇಳಿದಳು. ನಾವು ನಂಗತಿಯನ್ನು ಹೇಳಿ ಅವಳಿಗೆ ಅತ್ಯಂತ ದುಃಖವಾಯಿತು. ಅವುಗಳ ಬದಲಿಗೆ ಅತ್ಯುತ್ತಮವಾದ ಖಾದಿಯ ಸೀರೆಗಳನ್ನು ಕೊಡಬಹುದೆಂದು ನಾವು ಹೇಳಿದೆವು. ಅದಕ್ಕವಳು 'ಹತ್ತು ತಿಂಗಳು ಕಷ್ಟಪಟ್ಟು ನಾನು ನೂಲು ತಯಾರಿಸಿದ್ದೆನು. ಅವರ ಸಂಖ್ಯೆ ಎಷ್ಟೇ ಇರಲಿ ಅವುಗಳ ಬದಲಿಗೆ ಕೊಡುವ ಸೀರೆಗಳನ್ನು ತೆಗೆದುಕೊಂಡರೆ ನನಗೆ ಹೇಗೆತಾನೇ ತೃಪ್ತಿಯಾದೀತು?' ಎಂದು ಉತ್ತರಕೊಟ್ಟಳು. ಇಷ್ಟು ಹೇಳುವಾಗ ಅವಳ ಕಣ್ಣುಗಳಿಂದ ನೀರು ಸುರಿಯಲಾರಂಭವಾಯಿತು. ಕೊನೆಗೆ ಅವಳು ತನ್ನ ಎರಡು ಸೀರೆಗಳ ಬದಲಿಗೆ ಒಂದು ಬೇರೆ ಸೀರೆಯನ್ನು ಕೊಂಡುಹೋದಳು. ಹೋಗುವಾಗ ಅದನ್ನು ತಾನು ಧರಿಸದೆ ಒಂದು ತಿಂಗಳ ವರೆಗೆ ಇಟ್ಟುಕೊಳ್ಳುವೆನೆಂದೂ, ತಾನು ಕೊಟ್ಟ ಸೀರೆಗಳು ಅಷ್ಟರೊಳಗೆ ಸಿಕ್ಕಿದರೆ ಅಗತ್ಯವಾಗಿ ತನಗೆ ಕಳುಹಿಸಬೇಕೆಂದೂ ಹೇಳಿದಳು. ಅವಳು ಹೋದ ಸ್ವಲ್ಪ ಹೊತ್ತಿನಲ್ಲಿ ನಮ್ಮಿಂದ ಖಾದಿಯನ್ನು ಕೊಂಡುಹೋಗಿದ್ದ ಇನ್ನೊಬ್ಬ ಮಹಾರಾಷ್ಟ್ರ ಸ್ತ್ರೀಯು ಒಂದು ತನ್ನ ವಸ್ತ್ರದ ಕಟ್ಟಿನಲ್ಲಿ ತಪ್ಪಿಬಿದ್ದ ಆ ಸೀರೆಗಳನ್ನು ಹಿಂದೆ ತಂದು ಕೊಟ್ಟಳು. ನಮ್ಮ ಸಂತೋಷಕ್ಕೆ ಮಿತಿಯೇ ಇಲ್ಲವಾಯಿತು. ಕೂಡಲೇ ಅವುಗಳನ್ನು ಆ ಭಗಿನಿಯ ಮನೆಗೆ ಕಳುಹಿಸಿ ಕೊಟ್ಟೆವು. ಅವಳು ದುಃಖದಿಂದ ಆ ಖಾದಿಯನ್ನು ಸಹ ಸೇವಿಸಿರಲಿಲ್ಲವೆಂದು ತಿಳಿದು ಬಂತು. ತನ್ನ ಸೀರೆಗಳು ಸಿಕ್ಕಿದುದರಿಂದ ಆನಂದವಾಗಿ ಆ ಮೇಲೆ ಆಹಾರವನ್ನು ತೆಗೆದುಕೊಂಡಳು.'

ಈ ರಸವು ಅನುಭವದಿಂದಲೇ ಬರತಕ್ಕದ್ದಾಗಿರುತ್ತದೆ. ಯಾರು ತಾನೇ ಕೈಯಿಂದ ತೆಗೆದ ನೂಲಿನ ಬಟ್ಟೆಯನ್ನು ನೇಯಿಸಿ ಧರಿಸುವರೋ ಅವರೇ ಆ ಭಗಿನಿಯ ಕಣ್ಣೀರಿನ ಬಿಂದುಗಳ ಬೆಲೆಯನ್ನು ತಿಳಿಯಬಲ್ಲರು. ಸ್ವಂತ ನೂಲಿನ ಸಣ್ಣದೊಂದು ಕರವಸ್ತ್ರವನ್ನು ಕಳಕೊಂಡ ಒಬ್ಬ ಮಿತ್ರನು ಇದೆ. ಸ್ವಾನುಭವ ಸಿಕ್ಕುವ ವರೆಗೆ ಅನುಭವಿಸಿದ ದುಃಖವನ್ನು ನಾವು ನೋಡಿರುವೆವು. ಒಂದು ಬೆಂಕಿಪೆಟ್ಟಿಗೆ ಅಥವಾ ಸೂಜಿ ಇವುಗಳ ಬೆಲೆಯನ್ನು ನಾವು ತಿಳಿಯುವುದಿಲ್ಲ. ಆದರೆ ಆ ವಸ್ತುಗಳನ್ನು ನಾವೇ ತಯಾರಿಸಿದ್ದರೆ ಸ್ವಂತ ತಯಾರಿಸಿದ ತಿಂಡಿ ನಮಗೆ ಸಿಹಿಯಾಗಿರುತ್ತದೋ ಹಾಗೆಯೇ ಸ್ವತಃ ನೂತ ನೂಲಿನ ಖಾದಿಯು ಪ್ರಿಯವಾಗಿರುತ್ತದೆ.

ಕೊಡಗು ಜಮ್ಖಾನ ರೇಸ್‌ಗಳು.

ಏಪ್ರಿಲ್ ೧೧, ೧೨, ೧೩.

ಪ್ರತಿದಿವಸ [illegible]

[illegible]

[illegible]

ಪ್ರವೇಶಕ್ಕೆ ಒಂದು ರುಪಾಯಿ.

[illegible]

ವರ್ತಮಾನ ಸಂಗ್ರಹ.

ಒಳದೇಶ.

ಮೆ· ಮಳವಂಡ ಚಿಣ್ಣಪ್ಪನವರು ಮೃತಪಟ್ಟರೆಂದು ಕಳೆದವಾರ ಪ್ರಕಟಿಸಿದ ವರ್ತಮಾನ ಸುಳ್ಳೆಂದು ಈಗ ತಿಳಿಯುತ್ತೇವೆ· ನಿಜವಲ್ಲದ ಸಂಗತಿ ಪ್ರಕಟಿಸಿದಕ್ಕೆ ವ್ಯಸನಪಟ್ಟರೂ ಇದು ಸುಳ್ಳು ವರ್ತಮಾನವೆಂದು ತಿಳಿಯಲು ಸಂತೋಷಪಡುತ್ತೇವೆ.

ಮೆ. ನಡಿಕೇರಿಯಂಡ ಕಾಳಪ್ಪನವರನ್ನು ಪೋಲೀಸು ಸುಪರಿಂಟೆಂಡೆಂಟ್ ಉದ್ಯೋಗದ ತರಬೇತಿಗೂ, ಮೆ. ಪಾಲೇಕಂಡ ಜಂಗಪ್ಪನವರನ್ನು ದಕ್ಷಿಣಕೊಡಗು ತಾಲೋಕಿನ ಸುಬೇದಾರರಾಗಿಯೂ, ಮೆ. ಮಂಡೇಪಂಡ ಮಂದಣ್ಣನವರನ್ನು ಉತ್ತರಕೊಡಗಿನ ಸುಬೇದಾರರಾಗಿಯೂ, ಮೆ. ಕೋದಂಡ ಐಯ್ಯಣ್ಣ ಆರ್. ಎಸ್ ರವರನ್ನು ದಕ್ಷಿಣಕೊಡಗಿನ ಮತ್ತು ಮೆ. ನಡಿಕೇರಿಯಂಡ ಚಿಣ್ಣಪ್ಪನವರನ್ನು ಉತ್ತರಕೊಡಗಿನ ಪೋಲೀಸು ಇನಸ್ಪೆಕ್ಟರುಗಳಾಗಿಯೂ ಏಪ್ರಿಲ್ 1ರಿಂದ ನೇಮಿಸಲಾಗಿವೆ.

ಕಳೆದವಾರ ಕಡನೂರ್ ತೋಟದಲ್ಲಿ ಒಂದು ಕರಿನಾಗರ ಹಾವು ರಬ್ಬರ್ ಹಾಲು ತೆಗೆಯುತ್ತಿದ್ದ ಒಬ್ಬ ಆಳನ್ನು ಸ್ವಲ್ಪದೂರ ಬೆನ್ನಟ್ಟಿಕೊಂಡು ಒರಲು ಆಳು ಮರ ಹತ್ತಲಾಗಿ ಅದನ್ನು ಅಲ್ಲಿಯ ಶಿಕಾರಿಯೊಬ್ಬನು ಗುಂಡುಹೊಡೆದು ಕೊಂದನಂತೆ. ಆ ಹಾವು 15 ಅಡಿ ಉದ್ದವಿತ್ತಂತೆ.

ಮಡಿಕೇರಿಯ ಬ್ರಾಹ್ಮಣರ ಬೀದಿಯಲ್ಲಿ ಸಿಡುಬು ಕಾಣಿದೋರಿದೆ· ಈಗಾಗಲೆ ಇಬ್ಬರಿಗೆ ಅಂಟಿದೆ.

ಟೆರಿಟೋರಿಯಲ್ ಪಟಾಲಾಂ ತರಬೇತಿಗಾಗಿ ಸೋಮವಾರಪೇಟೆ ಮತ್ತು ಸಾಪೋಕ್ಲ ಪಾರುಪತ್ಯಗಾರರು ಮಡಿಕೇರಿಗೆ ಬರುವದರಿಂದ ಈ ತಾ. 10ರಿಂದ ಒಂದು ತಿಂಗಳವರೆಗೆ ಮೆ. ಪಾಲೇಕಂಡ ಪೊಣ್ಣಪ್ಪನವರನ್ನು ಶಿಸ್ತೇದಾರರಾಗಿಯೂ ಸೋಮವಾರಪೇಟೆಗೂ, ಮೆ. ಬಲ್ಲಚ್ಚಿರಾಂಡ ಜಂಗಪ್ಪನವರನ್ನು ನಾಪೋಕ್ಲಿಗೂ ಪಾರುಪತ್ಯಗಾರರಾಗಿ ವರ್ಗಾಯಿಸಿರುವರು.

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ತಾ. 1ರಲ್ಲು ಮೂನಾಡಿನಲ್ಲಿ ನಡೆಯುವುದು.

ತಾ 5ರಲ್ಲು ಮೂರ್ನಾಡಿನಲ್ಲು ಬಿಳಿಗಿರಿ ದಾರರಸಂಘದ ವ್ಯಾಗತ ಕಮಿಟಿಯ ಮೀಟಿಂಗು ನಡೆಯುವುದು.

ಮಡಿಕೇರಿ ಯೂನೈಟೆಡ್ ಕ್ಲಬ್ಬಿನ ವಾರ್ಷಿಕೋತ್ಸವವನ್ನು ಈ ತಾ 5ರಲ್ಲಿ ನಡಿಸುವರೆಂದು ತಿಳಿಯುತ್ತೇವೆ

ಸೆಂಟ್ರಲ್‌ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ 7ರಲ್ಲು ಮಡಿಕೇರಿ ಮುನಸಿಪಲ್ ಆಫೀಸಿನಲ್ಲಿ ನಡೆಯಲಿಕ್ಕಿರುವದು.

ಉಪಾಧ್ಯಾಯರುಗಳು ಇಲ್ಲದೆ ಇದ್ದ ಮಡಿಕೇರಿ ಮಿಶನ್‌ಶಾಲೆಗೆ ಇಬ್ಬರು ತರಬೇತಾದ ಉಪಾಧ್ಯಾಯರುಗಳು ಮಂಗಳೂರಿಂದ ಬಂದಿರುವರು.

ವೀರಾಜಪೇಟೆ ಪೊನ್ನಂಪೇಟೆಗಳಲ್ಲಿ ಭತ್ತದಧಾರಣೆಯು ಗಾಡಿಗೆ 85ರಿಂದ 90 ರೂ. ವರೆಗೆ ಇದೆಯೆಂದು ವರ್ತಮಾನ.

ಮಡಿಕೇರಿ ಮತ್ತು ವೀರಾಜಪೇಟೆ ಸ್ಕೂಲುಗಳಲ್ಲಿ ಪರೀಕ್ಷೆಯು ತೀರಿ ಬರುವವಾರದಿಂದ ಬೇಸಿಗೆರಜವು ಪ್ರಾರಂಭವಾಗುವುದು.

ರಜೆಯಲ್ಲಿರುವ ಮೆ. ಕೊರವಂಡ ಮುತ್ತಣ್ಣನವರು ಬೇಗನೆ ವೀರಾಜಪೇಟೆ ಮುನಸೀಫರ ಉದ್ಯೋಗಕ್ಕೆ ಸೇರುವರೆಂದು ವರ್ತಮಾನ

ಮಡಿಕೇರಿ ಗಣಪತಿ ಬೀದಿಯ ಶಿಶ್ರೂಶಾಲೆಯಲ್ಲಿ 8 ಶಿಶುಗಳು ಉಪಚಾರಗಳನ್ನು ಹೊಂದುತ್ತಿದ್ದಾರೆ ಮಿಸೆಸ್ ಟಾಸ್ಕರವರು ಮತ್ತು ಮಿಸೆಸ್ ಕೆ. ಸಿ. ತಿಂಮೈಯ್ಯನವರು ತಂಬಾ ಮುತುವರ್ಜಿಯಿಂದ ಪ್ರತಿದಿನ ಬೆಳಿಗ್ಗೆ 9 ಗಂಟೆಗೆ ಶಿಶ್ರೂಶಾಲೆಯಕ್ಕೆ ಹೋಗಿ ಶಿಶುಗಳ ಪೋಷಣೆಯನ್ನು ನೋಡುತ್ತಿದ್ದಾರೆ.

ಹಿಂದೂ ದೇಶ.

ಮೆಟ್ರಿಕ್ಯುಲೇಶನ್‌ವರೆಗೆ ದೇಶಭಾಷೆಯಾದ ಉರ್ದು ಇಲ್ಲವೇ ಹಿಂದೀ ಭಾಷೆಯಿಂದಲೇ ಶಿಕ್ಷಣಕೊಡಬೇಕೆಂದು ಸಂಯುಕ್ತಪ್ರಾಂತ್ಯದ ಕೌನ್ಸಿಲಿನಲ್ಲಿ ಠರಾವು ಪಾಸಾಗಿದೆ.

ಮೈಸೂರು ಸಂಸ್ಥಾನದ ಎಲ್ಲಾ ಇಲಾಖೆಗಳ ವರದಿಯನ್ನು ಪ್ರಜಾಪ್ರತಿನಿಧಿಗಳಿಗೆ ಉಚಿತವಾಗಿ ಕೊಡಬೇಕೆಂದೂ, ಇಂಗ್ಲಿಷ್ ಗೊತ್ತಿಲ್ಲದವರಿಗೆ ಆ ವರದಿಯನ್ನು ಕನ್ನಡಕ್ಕೆ ಭಾಷಾಂತರಿಸಿ ಕೊಡಬೇಕೆಂದೂ ಅಲ್ಲಿಯ ಸರಕಾರವು ಹುಕುಂ ಮಾಡಿರುವುದು ನ್ಯಾಯವಾದದ್ದೇ. ಕೊಡಗಿನಲ್ಲಿಯೂ ಇದನ್ನು ಹಿಂಬಾಲಿಸಿದ್ದರೆ ಉತ್ತಮವಲ್ಲವೇ?

ಬರೋಡಾ ಸಂಸ್ಥಾನದಲ್ಲಿ ಸ್ತ್ರೀಕೈದಿಗಳಿಗಾಗಿ 80 ಸಾವಿರ ರೂಪಾಯಿ ಖರ್ಚಿನಿಂದ ಜೈಲಾಯಿ ಸರಕಾರವು ಬೇರೊಂದು ಕಾರಾಗೃಹವನ್ನು ಕಟ್ಟಿಸುವರು.

ಈಗಿನ ವೈಸರಾಯರಾದ ಲಾರ್ಡ್‌ರೀಡಿಂಗ್ ಪ್ರಭುಗಳು ಏಪ್ರೀಲ್ 10ಕ್ಕೆ ರಜೆಯಲ್ಲಿ ಇಂಗ್ಲಾಂಡಿಗೆ ಪ್ರಯಾಣಮಾಡುವರು· ಆಗೋಸ್ತಿನಲ್ಲಿ ವಾಪಸು ಬರಲಿಕ್ಕಿರುವರು.

ಡಕ್ಕಾಪಟ್ಟಣದ ಶ್ರೀಮತಿ ಸುನೀತಿ ಬಾಲಾಚಂದ್ರ ಎಂಬ ಸ್ತ್ರೀಯು ಸಂಸಾರಿಯಾಗಿ ಗೃಹಕೃತ್ಯದಲ್ಲಿದ್ದು ವಿದ್ಯಾಭ್ಯಾಸ ಮಾಡಿ ಯಂ. ಎ. ಪರೀಕ್ಷೆಯಲ್ಲಿ ಉತ್ತಮ ಶರಗತಿಯಲ್ಲಿ ಉತ್ತೀರ್ಣಳಾಗಿರುವಳು·

ಪಂಡಿತ ಕಪಿಲದೇವ ಮಾಳವೀಯರವರು ಅಲ್ಲಾಹಬಾದ್ ಮುನ್ಸಿಪಾಲಿಟಿಯ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು.

ಲಂಕೆಯಿಂದ ಬೊಂಬಾಯಿಗೆ ಮೆ. ಪಾರ್ಸನ್ ಎಂಬವರು ಆನೆಯ ಎರಡು ಅದ್ಭುತವಾದ ದಂತಗಳನ್ನು ತಂದಿರುವರು· ಒಂದೊಂದು ದಂತವೂ 7ಅಡಿ 3ಇಂಚು ಉದ್ದವೂ, 18ಇಂಚುಗಳ ಸುತ್ತಳತೆಯೂ ಇರುತ್ತ.

ಹಿಂದೂ ದೇಶದಲ್ಲಿ ಹಬ್ಬಗಳನ್ನು ಆಚರಿಸುವ ಕಾಲವು ಕಳೆದುಹೋಯಿತೆಂತಲೂ, ಗ್ರಹಣ ಮತ್ತು ಜಲಿಯನವಾಲಾಬಾಗ್ ದಿನಗಳಲ್ಲಿ ಜನರು ಉಪವಾಸ ಮತ್ತು ಪ್ರಾರ್ಥನೆಗಳನ್ನು ಮಾಡುವುದು ಉತ್ತಮವೆಂದೂ ಮಹಾತ್ಮಗಾಂಧಿಯವರು ಸೂಚಿಸಿರುವರು.

ಹಿಂದೂ ದೇಶದ ಸೈನ್ಯದ ಮುಖ್ಯ ಸೇನಾಧಿಪತಿಯಾದ ಲಾರ್ಡ್‌ರಾಲಿನ್‌ಸನ್‌ರು ಕ ತಾ. 28ರಲ್ಲು ಮೃತರಾದರು· ಇವರ ಗುಣಗಳನ್ನೂ ಕೆಲಸಗಳನ್ನೂ ಹೊಗಳಿ ಅನೇಕ ಪತ್ರಿಕೆಗಳು ಇವರ ಮರಣಪರಿತಾಪವನ್ನು ಸೂಚಿಸುತ್ತಿವೆ

ಬೊಂಬಾಯಿಯಲ್ಲಿ ಹೆಂಗಸರಿಗೆ ಒಂದು ಮೆಟರ್ನಿಟಿ ಆಸ್ಪತ್ರೆಯನ್ನು ತೆರೆಯಲಿಕ್ಕಾಗಿ ಒಬ್ಬ ಗಿರಣಿಮಾಲೀಕರಾದ ಮೆ ವಾಡ್ಯ, ಸಿ. ಐ. ಇ ಯವರು 16ಲಕ್ಷ ರೂಪಾಯಿ ಉಚಿತವಾಗಿ ಕೊಡಲು ಮಾತು ಕೊಟ್ಟಿರುವರಂತೆ.

ಬಂಗಾಳ ಸರ್ಕಾರದ ಮಂತ್ರಿಗಳು ರಾಜಿನಾಮೆಯನ್ನು ಕೊಟ್ಟಿರುವರು. ಟ್ರಾನ್ಸ್‌ಫರ್ ಇಲಾಖೆಗಳನ್ನೆಲ್ಲಾ ಗವರ್ನರವರು ತಮ್ಮ ಆಡಳಿತಕ್ಕೆ ತೆಗೆದುಕೊಂಡಿರುವರು.

ದೇಶ.

ಕಠಿಣ ಬಿರುಗಾಳಿಯಿಂದ ಚಿಕಾಗೊಪಟ್ಟಣದಲ್ಲಿ ಸಾವಿರಾರು ಜನರ ಪ್ರಾಣ ತೆಯೂ ನೂರಾರು ಮನೆಮಠಗಳೂ ನಾಶವಾಗಿರುವುದಲ್ಲದೆ ಅನೇಕ ಊರುಗಳೇ ನಾಶವಾದುವು.

ಹಾಪ್ಸ್ ಎಂಬ ಇಂಪ್ ಮನುಷ್ಯನು ಕಾಶ್ಮೀರಿ ದೇಶದ ಮಹಾರಾಜರನ್ನು ಪತ್ರಿಸ್ತುಪಡಿಸಿದನೆಂದು ಕೋರ್ಟಿನಲ್ಲಿ ವಿಚಾರಕ್ಕೆ ಗುರಿಪಡಿಸುವಾಗ ಹದರಿಸಿ 3 ಲಕ್ಷ ಪೌನುಗಳ ಎರಡು ಚೆಕ್ಕುಗಳನ್ನು ಮೋಸದಿಂದ ಬರಿಸಿದಕ್ಕಾಗಿ ಅವನಿಗೆ ಎರಡು ವರ್ಷಗಳ ಕಠಿಣ ಕಾರಾಗೃಹವಿಧಿಸಲಾಗಿದೆ

ಜರ್ಮನಿದೇಶದಲ್ಲಿ ಗೂರಾ ಮನುಷ್ಯರಾಗಿಯೇ ಒಂದು ಜಾತಿಯನ್ನು ಏರ್ಪಡಿಸಿರುವರು. ಅಲ್ಲಿರುವ ವ್ಯಕ್ತಿಕೋಡೇ ಶರ ಒಬ್ಬ ಹೆಂಗಸಿನ ಎತ್ತರವು6ಇಂಚು ಇದ್ದು ಅಕಯೋ ಆ ಬೀದಿಯ ಗುಜ್ಜಾರಿ ಜನಗಳ ಎತ್ತರವಾದ ಸ್ತ್ರೀಯಂತೆ! ಇದಲ್ಲವೆ ಕಲಿಯುಗದ ಮಹಾ!

ಜರ್ಮನಿಯಲ್ಲಿ ಪ್ರೆಸಿಡೆಂಟರ ಸ್ಥಾನಕ್ಕೆ ಅನೇಕ ಉಮೇದುವಾರರಲ್ಲಿ 'ಕ್ಸ್ಲಾರಾಜಾಕಿನ್' ಎಂಬ ನಾರೀಮಣಿಯೂ ನಿಂತಿರುವಳು, ಫಲಿತಾಂಶ ನೀಡಬೇಕಾಗಿದೆ·

ಪೋರ ಬಂದರದಲ್ಲಿ ಇತ್ತೀಗೆ ತಲೆಯಮೇಲೆ ಎರಡು ಕೋಡುಗಳುಳ್ಳ ಒಂದು ಹೆಣ್ಣುಶಿಶುವು ಜನಿಸಿದೆ ಎಂದು ಆ ಶೀಕವೃತ್ತಪತ್ರಗಳು ಹೇಳುತ್ತವೆ. ಹೀಗೆಯೇ ಅನೇಕಾನೇಕ ಆಶ್ಚರ್ಯಕರಸಂಗತಿಗಳು ಈಗಿನ ಸಿದರ್ಶನಕ್ಕೆ ಬರುತ್ತಿವೆ ವಿಚಾರಮಾಡಿದರೆ ಸಂತತೀಕಸ್ತವನ್ನು ವಿವರಿಸಿದೆ. ದರಿ ವು ಬವೆಂದು ಗೊತ್ತಾಗುತ್ತವೆ.

ಪ್ರಿನ್ಸ್‌ಆಫ್‌ವೇಲ್ಸ್‌ರವರು ತಮ್ಮ ದಕ್ಷಿಣಆಫ್ರಿಕದ ಆರು ತಿಂಗಳ ಪ್ರಯಾಣಕ್ಕೆ ಮಾರ್ಚ ತಾ. 25ರಲ್ಲು ಇಂಗ್ಲಂಡಿನಿಂದ ಹೊರಟರು,

ಪ್ಯಾರಿಸ್ಸ್‌ಪಟ್ಟಣದ ಯುನಿವರ್ಸಿಟಿಯಲ್ಲಿ ಸೋಶ್ಯಲಿಸ್ಟ್ ಪಂಗಡದವರೊಬ್ಬರನ್ನು ಪ್ರೊಫೆಸರಾಗಿ ನೇಮಿಸಿದ್ದು ಅಲ್ಲಿಯ ಹೆಚ್ಚಿನ ವಿದ್ಯಾರ್ಥಿಗಳಿಗೆ ತೃಪ್ತಿಯಾಗಿ ಆಪ್ರೊಫೆಸರನ್ನು ವಿ ಭಾಷಣ ಮಾಡಲುಬಿಡದೆ ವಿದ್ಯಾರ್ಥಿಗಳಲ್ಲಿಯೇ ಜಗಳವುಂಟಾಗಿ ಪೊಲೀಸಿನವರು ಬರಲು ಹೊಡೆದಾಟವಾಗಿ ಅನೇಕರಿಗೆ ಗಾಯಗಳುಂಟಾಗಿವೆಯಂತೆ.

ಆಸ್ಟ್ರಿಯದ ಹೊಸ ಪಾರ್ಲಿಮೆಂಟಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವ ಮೆ, ಬಾಗುಲಾಲ್‌ಪಾಷಾರವರು ಮಂತ್ರಿತ್ವವನ್ನು ವಹಿಸಿಕೊಳ್ಳುವದಿಲ್ಲವೆಂತಲೂ ಈಗಿನ ಪಾರ್ಲಿಮೆಂಟನ್ನು ಮುರಿದು ಹಾಕದು ಟಾನೂಸಿಗೆ ವಿರೋಧವೆಂತಲೂ ಸೂಚಿಸಿರುವರು.

PUBLIC NOTICE.

The public and all cancerned are hereby informed that in vertue of a Partition Cancellation Deed of 7-1-1918 registered in the sub-registrars office of Virarajandiapet, Mr. Chendandra Karumbayya Subbayya of Ammathi, Sidapura nad, Guhya Village, is not entitled without my consent to sell, mortgage or otherwise alienate of our landed properties situated in Chembebeloor, Kannagala and Sidapur and whosoever purchases or lends money on immovable properties to the aforesaid Mr Subbayya, does so on his or her own risk.

23. 3. '25.

C. K. Chengappa.
Riverside, Sidapur.

ನೋಟೀಸು.

ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—

ವೀರಾಜಪೇಟೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರಾದ ತಾ. 7—1—1918ರ ಪಾರಿಖತ್ತು ಖರಾರು ಮೇರೆ ಗುಹ್ಯ ಗ್ರಾಮದ ಚೇಂದಂಡ ಕರುಂಬಯ್ಯನವರ ಮಗ ಸುಬ್ಬಯ್ಯನವರಿಗೆ ನನ್ನ ಅನುಮತಿ ವಿನಹ ಚೆಂಬೆಬೇಳೂರು, ಕಣ್ಣಂಗಾಲ, ಗುಹ್ಯ, ಮತ್ತು ಸಿದ್ದಾಪುರ ಗ್ರಾಮಗಳಲ್ಲಿ ಇರುವ ನಮ್ಮ ಜಾಮ್ಯ ಸ್ಥಿರಸೊತ್ತುಗಳನ್ನು ಗಿರ್ವಿ, ಭೋಗ್ಯ ಯ ಮುಂತಾದ ಯಾವ ವಿಧದ ಪರಾಧೀನ ಪಡಿಸುವ ಹಕ್ಕು ಇರುವದಿಲ್ಲ· ಯಾರಾದರೂ ಹಾಗೆ ಅವರಿಂದ ಕ್ರಯ, ಗಿರ್ವಿ, ಭೋಗ್ಯ ಮುಂತಾದ ಯಾವ ವಿಧದಿಂದಲಾದರೂ ಸದರಿ ಸೊತ್ತುಗಳ ಹಕ್ಕನ್ನು ಪಡೆದರೆ ಹಾಗೆ ತೆಗೆದುಕೊಂಡವರೇ ದರ ನಷ್ಟಕಷ್ಟಗಳಿಗೆಲ್ಲಾ ಗುರಿಯಾಗುತ್ತಾರೆ·

23—3—25.

ಸಿ. ಕೆ. ಚಂಗಪ್ಪ,
ರಿವರ್‌ಸೈಡ್, ಸಿದ್ದಾಪುರ.

4-2

ನೋಟೀಸು.

ಸಂಘದ ವಾರ್ಷಿಕ ಜನರಲ್ ಮೀಟಿಂಗ್ ಮೂರ್ನಾಡಿನಲ್ಲಿ ಮ|| ರಾ|| ರಾ|| ಅಬ್ದುಲ್ ಗಫೂರ್‌ಖಾನ್ ಕೈಶ್ಗಿಯವ ಅಧ್ಯಕ್ಷತೆಯಲ್ಲಿ 1925 ನೇ ಇಸವಿ ಏಪ್ರಿಲ್ ತಾರೀಕು 11,12 ಮತ್ತು 13 ರಲ್ಲು ಮಧ್ಯಾಹ್ನ 1ಘಂಟೆಗೆ ನಡೆಯುತ್ತೆ. ಉಪಚಾರಕ್ಕೆ ಮಡಿಕೇರಿತಾಲೋಕಿನವರು ಏರ್ಪಾಡುಮಾಡುತ್ತಾರೆ. ಚರ್ಚಿಸತಕ್ಕ ವಿಷಯಗಳನ್ನು ತಾರೀಕು 31—3—1925 ರ ಒಳಗೆ ಜನರಲ್ ಸೆಕ್ರೆಟರಿ ಮ|| ಸಿ. ಯನ್. ವೆಂಕಪ್ಪಯ್ಯನವರಿಗೆ ತಲಪುವಂತೆ, ಕಳುಹಿಸಬೇಕೆಂತಲೂ, ಮೀಟಿಂಗಿಗೆ ಎಲ್ಲಾ ಮೆಂಬರುಗಳು ಹಾಜರಾಗಬೇಕೆಂತಲೂ ಕೋರುತ್ತೇನೆ.

ಚಂದಾ ಮೊಬಲಗನ್ನು ಎರಡು ವರ್ಷಗಳಿಂದ ಪಾವತಿ ಮಾಡದೆ ಇರುವವರು ಸಂಘದ ಕಾರ್ಯಗಳಲ್ಲಿ ಭಾಗಿಗಳಾಗಕೂಡದು. ಎಲ್ಲಾ ಮೆಂಬರುಗಳು ತಮ್ಮ ಬಾಕ್ತು ಚಂದಾ ಮೊಬಲಗನ್ನು ಕೂಡಲೇ ಪಾವತಿ ಮಾಡಬೇಕಾಗಿ ಕೋರುತ್ತೇನೆ

ಕೊಡಗು ಜಮೀನ್ದಾರರ ಸಂಘ,

ಸಿ. ಎನ್. ವೆಂಕಪ್ಪಯ್ಯ,
ಮಡಿಕೇರಿ, ತಾರೀಕು 5—3—25 ಜನರಲ್ ಸೆಕ್ರೆಟರಿ

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ ಸಂ.

ಕೊಡವರ ಮದುವೆ ಪದ್ಧತಿ.

ಭಗಿನಿ ಕಮಲೆ!

ತಾರೀಕು 22—2—25ರ ಪತ್ರಿಕೆಯಲ್ಲಿ ಕೊಡವರ ಮದುವೆಯ ಕುರಿತು ಬರೆದ ನಿಮ್ಮ ಅಭಿಪ್ರಾಯವು ಸ್ತುತ್ಯಾರ್ಹವಾದುದು. ಮಧು, ಮಾಂಸವು ಮದುವೆಗಳಲ್ಲಿ ಸೇರಿಸುವುದನ್ನು ಕುರಿತ ಆಕ್ಷೇಪಣೆಗೆ ಹೆಚ್ಚು ಚರ್ಚಿಸಲಾರೆನು. ಮೊದಲನೆಯ (ಮಧು) ಆಕ್ಷೇಪಣೆಯು ಕಾಲೋಚಿತವಾದುದೇ. ಈ ವಿಷಯದಲ್ಲಿ ಹಲವು ಸುಶಿಕ್ಷಿತ ಮುಂದಾಳುಗಳು ಆ ಮೊದಲೇ ನಿಷಾ ನಿಷೇಧಕ್ಕೆಂದು ಟೊಂಕ ಕಟ್ಟಿ ಹೋರಾಡುತ್ತಿದ್ದಾರೆ. ಆದರೂ ಆ ಪ್ರಯತ್ನವು ಇನ್ನೂ ಪೂರ್ಣ ಜಯ ಹೊಂದಿರುವುದಿಲ್ಲವು. ಇದೊಂದು ಪಿಶಾಚವು ದೇಶೀಯರನ್ನು ಕೇವಲ ಬಡತ್ತಿಗಿಳಿಸುವುದೇ ಸರಿ.—ಮಾಂಸ ಭಕ್ಷಣದ ವಿಷಯ ಈ ಮೊದಲು ನಮ್ಮೊಬ್ಬ ಗೆಳತಿಯು ಪ್ರಸ್ತಾಪಿಸಿತ್ರಿರುವಳು. ನಾನದಕ್ಕೆ ಯಾವ ಒಪ್ಪಿಗೆಯನ್ನೂ ಕೊಡಲಾರೆನು. ಆದುದರಿಂದ ಪದ್ಧತಿಯನ್ನು ವಿಚಾರಮಾಡ ತೊಡಗುವೆನು.

ನಿಮ್ಮ ಸಂಚಾರದಲ್ಲಿ ತಮಿಳರ ಮದುವೆಯನ್ನು ಕೊಡವರ ಮದುವೆಯನ್ನೂ ತುಲನೆಮಾಡ ತೊಡಗಿರುವಿರಿ. ಕಂಕಣ ಕಟ್ಟುವ ತಮಿಳರ ಪದ್ಧತಿಯು ಸರಿಯೆಂದೂ, ಕಂಕಣ ಕಟ್ಟದ ಕೊಡವರ ಪದ್ಧತಿ ಸರಿಯಿಲ್ಲವೆಂದೂ ಊಹಿಸುವುದು ಕೇವಲ ಭ್ರಾಮಕ ಕಲ್ಪನೆಯಾಗಿದೆ. ಎಲೆಂಟು ವರುಷ ಪ್ರಾಯದ ಎಳೆಗೂಸುಗಳನ್ನು ಧಾರಾಚಲಪೂರ್ವಕ ಅಗ್ನಿ ದಿಕ್ಪಾಲಕರ ಮೊದಲ್ಗೊಂಡು ದೇವರ ಕಾಣಲು ಮತ್ತು ಆಶೀರ್ವಾದದಲ್ಲಿ ಲಗ್ನ ಮಾಡುವುದು ಅವರ ಸಂಪ್ರದಾಯವು ಅವರಿಗೆ ನಿಜವಾಗಿಯೂ ಉಚಿತವಾಗಿದೆ. ಆದರೆ ಆ ಎಳೆಗೂಸುಗಳನ್ನು ವರನಿಗೆ ಒಪ್ಪಿಸುವಾಗ್ಯೆ ತಂದೆಗೆ ಯಾವ ಹಕ್ಕು ಉಳಿಸಿಕೊಳ್ಳದೆ ಕೊಟ್ಟುಬಿಡುವದು ಕೇವಲ ನಿಷ್ಕರುಣೆಯೊಂದಲ್ಲದೆ ಮತ್ತೆ ಮೂರಾಬಿಟ್ಟಿತೆಯೇ ಆಗುತ್ತೆ. ವರನಿಂದ ಯಾವುದಾದರೂ ಒಂದು ನಿಮಿತ್ತ ವಧುವಿಗೆ ಅತ್ಯಂತಾಪತ್ಕಾಲ ಬಂದಲ್ಲಿ ಆ ವಧುವು ಅನಾಥೆಯೇ ಆಗಬೇಕಲ್ಲದೆ ಮತ್ತೇನು? ತನ್ನ ಸ್ವಂತ ಆತ್ಮಜೆಯನ್ನು ಮಾನವ ವರ್ಗದಲ್ಲಿ ಹುಟ್ಟಿ ಅಪ್ಪು ಕಠೋರ ಶರತ್ತಿನಲ್ಲಿ ಬಿಟ್ಟು ಬಿಟ್ಟರೆ ಆ ಬಾಲೆಯ ಗತಿ ಏನು? ದಿಕ್ಕಾರು? ಇದು ತಂದೆಯಾದವನಿಗೆ ಧರ್ಮವೇ? ಇದು ಬರೀ ಒಂದು ಉಪಾಯಾಂತರದಿಂದ ಬಂದ ಸಂಪ್ರದಾಯವೆಂದು ಹೆ ನನೆಣಿಸಿದೆ.—ಪೂರ್ವಕಾಲದಲ್ಲಿ ರಾಜ್ಯ ಸಂಪಾದನೆಗಾಗಿ ಬರುತ್ತಿದ್ದ ಪರದೇಶೀ ವಿಷ್ವರುಣಗಳು ಆ ಕಾಲದಲ್ಲಿ ಸ್ತ್ರೀ

ಯರಾಗಿದ್ದ ಹೆಣ್ಮಕ್ಕಳನ್ನು ಕೆಡಿಸುತ್ತಿದ್ದ ಕಾರಣ, ಬಾಲ್ಯ ವಿವಾಹಕ್ಕೆ ಪ್ರೋತ್ಸಾಹಕೊಟ್ಟರು. ಹಾಗೂ ಬಾಲ್ಯ ವಿವಾಹವಾದರೂ ನಿಷೇಕ ಪ್ರಸ್ತವೇ ಮೊದಲಾದ ಹಲವು ಕಟ್ಟಳೆಗಳಲ್ಲಿ ಸ್ತ್ರೀಯು ತನ್ನ ಪುರುಷನಲ್ಲಿ ಸೇರದಿರುವಾಗಲೇ ಆಕೆಯನ್ನು ಕೆಡಿಸಿಬಿಟ್ಟಲ್ಲಿ, ಅಂಥಾ ಸ್ತ್ರೀಯನ್ನು ಲಗ್ನವಾದ ವರನು ತ್ಯಜಿಸಿದರೆ, ತಂದೆ ತಾಯಿಗಳಿಗೆ ಅಪಕ್ಕಾಲವಾಗುತ್ತೆ. ಆ ನಿಮಿತ್ತ, ಆ ತಂದೆಯು ಇಂಥಾ ನಿಷ್ಠೂರವಾದ ಶರತ್ತಿನಲ್ಲಿ ವಧನಿಗೊಪ್ಪಿಸುವುದಾಗಿದೆ.

ಕೊಡವರಾದರೋ, ಆ ಕಾಲದಲ್ಲಿಯೇ ಮಹಾ ಧೈರ್ಯ, ಸ್ಥೈರ್ಯ, ಸಾಹಸಿಗಳಾಗಿ ಎದೆಗುಂದದೆ, ದುಷ್ಟರಾಗಿ ಬಂದ ಪರದೇಶೀಯರನ್ನು ಹಿಮ್ಮೆಟ್ಟಿ ಪ್ರೌಢ ವಿವಾಹವನ್ನೇ ಸಂಪ್ರದಾಯದಲ್ಲಿಟ್ಟುಕೊಂಡರು. ಅದೇ ಇಂದಿಗೂ ವಾಡಿಕೆಯಾಯಿತು.

ಭಗಿನೀ, ವಧೂವರರಿಬ್ಬರನ್ನೂ ಜೊತೆಯಲ್ಲಿ ಕುಳ್ಳಿರಿಸಿ ಮಾಡುವುದೇ ನಿಜವಾದ ಲಗ್ನವು. ಹಾಗೆಯೇ ಕೊಡವರೂ ಲಗ್ನ ಬೆಳೆಸುವುದಾಗಿದೆ. ಆದರೆ ಪ್ರಾಪ್ತ ವಯಸ್ಕರಾದ ವಧೂವರರಿಗೆ ಅವರವರ ಮನೆಯಲ್ಲಿ ಒಂದು ದಿನಕ್ಕೆ ಮೊದಲೇ ತಮ್ಮ ತಮ್ಮ ಇಷ್ಟ ಮಿತ್ರರನ್ನೆಲ್ಲಾ ಕೂಡಿಸಿ ಮಾಡುವ ಮುಹೂರ್ತವು ಪಾಣಿಗ್ರಹಣವಲ್ಲ. ಅದು ಕೇವಲ ಶೃಂಗಾರ ಮುಹೂರ್ತವಾಗಿದೆ. ದಂಪತಿಗಳಾಗುವ ಪಾಣಿ ಗ್ರಹಣವು ಯಾವಾಗಲೂ ಹೆಣ್ಣಿನ ಮನೆಯಲ್ಲೇ ನಡೆಯುವುದಾಗಿದೆ. ಕಮಲ, ವರನು ವಧುವನ್ನು ಕೈ ಹಿಡಿದ ದಿನವೇ ವರನ ಮನೆಯಲ್ಲಿ ಕೋಣೆಗೆ ಸೇರಿಸುವುದೂ, ಆ ದಿನ ವಧುವಿಗೆ ಮುಟ್ಟಾಗಿದ್ದರೆ ಕೆಟ್ಟದ್ದೆಂದು ಬರೆದಿರುವಿರಿ. ಆ ನವ ದಂಪತಿಗಳಿಗೆ ಪರಸ್ಪರ ಪರಿಚಯವಿರಲಿಕ್ಕಿಲ್ಲವೆಂಬುದಕ್ಕಾಗಿಯೇ ವರನು ತನ್ನ ಅಪ್ತೇಷ್ಟರೊಡಗೂಡಿ ಒಂದು ದಿನಕ್ಕೆ ಮುಂದಾಗಿಯೇ ವಧುವಿನ ಮನೆಗೆ ಬಂದು ಎಲ್ಲರಿಗೂ ಪರಿಚಯಸ್ಥನಾಗಿ ನಿಶ್ಚಿತ ಮುಹೂರ್ತದಲ್ಲಿ ವಧುವನ್ನು ಅಗ್ನಿ ಸಾಕ್ಷಿಯಾಗಿ ಪಾಣಿ ಗ್ರಹಣ ಮಾಡಿ, ವಧುವಿಗೆ ವರನ ಮನೆಯ ಸರ್ವ ಸ್ವತಂತ್ರವನ್ನೂ ಪ್ರಮಾಣಪೂರ್ವಕ ಕೊಟ್ಟು, ಆ ಮೇಲೆ ಹೆಣ್ಣಿನ ಮನೆಯವರ ವಾಡಿಯ ಬಾಳೆ ಬಿರುದಿನ ಹತ್ತಿರ ದಂಪತಿಗಳೂ ನೆಂಟರಿಷ್ಟರೂ ಕೆಲವು ಸಮಯವಿದ್ದು, ಅಲ್ಲಿಂದ ಗಂಡಿನ ಮನೆಗೆ ಹೋಗಿ ಭಾವಿ, ಗದ್ದೆ, ಬಾಣೆ ವಗೈರೆ ಸರ್ವ ಆಸ್ತಿಯನ್ನೂ ಹೆಣ್ಣಿಗೆ ಒಪ್ಪಿಸಿ ಪರಿಚಯಸ್ಥಳಾದನಂತರ ಕೋಣೆಗೆ ಕೂಡಿಸುವುದಲ್ಲದೆ, ಹೆಣ್ಣಿನ ಮನೆಯಲ್ಲಿ ಲಗ್ನವಾಗುತ್ತಲೇ ಹಿಡಿತಂದು ಗಂಡಿನ ಮನೆಯಲ್ಲಿ ಬಲಾತ್ಕಾರದಿಂದ ಸೇರಿಸುವುದಲ್ಲ. ಸೂತಕವೋ ಮುಟ್ಟೋ ಆಗಬಹುದೆಂಬ ಇನ್ನೊಂದು ಆಕ್ಷೇಪಣೆಯನ್ನು ಹೊರಡದಿರಲಿಕ್ಕಾಗಿಯೇ ಆ ವಧುವಿನ ಮನೆಯಲ್ಲಿಯೇ ಆ ಲಗ್ನ ನಿಶ್ಚಯ ಮಾಡುವುದಾಗಿದೆ. ಹಾಗೂ ಆ ವಧುವಿನ ತಾಯಿಯೇ ಮೊದಲಾದ ಹತ್ತಿರದ ಸಮ್ಮಂಧಿಕರು ಅಂಥಾ ಅವಸ್ಥೆಯನ್ನು ತಪ್ಪಿಸಿಯೇ ಲಗ್ನ ನಿಶ್ಚಯಕ್ಕೆ ಒಪ್ಪುವರು.

ಮತ್ತೊಂದು. ತಾಯಿಲೆಯ ಕಾರಣವು—ಲಗ್ನ ನಿಶ್ಚಯವಾದ ಮೇಲೆ ಲಗ್ನ ದಿನದವರೆಗೂ ಪಾಲಿಸಬೇಕಾದ ಅನೇಕ ನಿಯಮಗಳು ಕೊಡವರ ಪದ್ಧತಿಯಲ್ಲಿವೆ. ಹಾಗೆ, ಇದ್ದೂ ತಾಯಿಲೆ ಕಸಾರಿಕೆಗಳು ದೈವೇಚ್ಛೆಯಿಂದ ಬಂದೊದಗಿದರೆ ಲಗ್ನವನ್ನು ಮುಂದುವರಿಸಿಡುವ ಪದ್ಧತಿಯೂ ವಾಡಿಕೆಯಲ್ಲಿದೆ. ಇನ್ನು, ರಾಜ ಕಾರ್ಯವೋ, ದೇಶ ಕಾರ್ಯವೋ ಏನಾದರೊಂದು ದುಸ್ತರವಾದ ವಿಪತ್ತಿನಿಂದ ವರನು ವಧುವನ್ನು ಪಾಣಿಗ್ರಹಣ ಮಾಡ ಹೋಗಲಿಕ್ಕೇನೇ ಸಮಯವಿಲ್ಲದಿದ್ದಲ್ಲಿ ಆ ವರನು ಹಿಡಿಯುವ ಆಯುಧಕ್ಕೆ ಪಾಣಿಗ್ರಹಣಮಾಡಿ ಹೆಣ್ಣು ಕರಕೊಂಡು ಒರಲೂಬಹುದು.

ಕೊಡವರ ಮದುವೆಯು ವಾಗ್ನಿಶ್ಚಯ ಪದ್ಧತಿಯಾಗಿದೆ. ಧಾರಾಜಲಪೂರ್ವಕ ಕನ್ಯಾದಾನವು ಬ್ರಾಹ್ಮಣರಿಗೆ ಮಾತ್ರ ಅವಶ್ಯಕವು. ಈ ವಿಷಯದಲ್ಲಿ ಮನುಸ್ಮೃತಿ 3ನೇ ಅಧ್ಯಾಯದ 35ನೆಯ ಶ್ಲೋಕವು:—

ಅದ್ಭಿರೇವದ್ವಿಜಾತೀನಾಂ ಕನ್ಯಾದಾನಂ ಪ್ರಶಸ್ಯತೆ।
ಇತರೇಷಾಂತು ವರ್ಣಾನಾಂ ಮಿತರೇತರ ಕಾಮ್ಯಯಾ॥

ವ್ಯಾಖ್ಯಾನ॥ಉದಕದಾನ ಪೂರ್ವಕಮೇವ ಬ್ರಾಹ್ಮಣಾನಾಂ ಕನ್ಯಾದಾನಂ ಪ್ರಶಸ್ತಂ, ಕ್ಷತ್ರಿಯಾದೀನಾಂ ವಿನಾಪ್ಯುದಕಂ ಪರಸ್ಪರೇಚ್ಛಯಾ ವಾಚ್ಯಾಪ್ರೀಣಾಪಿ ಕನ್ಯಾದಾನಂ ಭವತಿ, ಉದಕ ಪೂರ್ವಕ ಮಿತ್ಯ ನಿಯಮಃ।—ಎಂಬುದಾಗಿ ಹೇಳಿದೆ.

ಪರಸ್ಪರೇಚ್ಛೆಯಿಂದ ವಾಗ್ನಿಶ್ಚಯ ಪಾಣಿ ಗ್ರಹಣವು ಕ್ಷಾತ್ರ ವಿವಾಹಕ್ಕೆ ನ್ಯೂನತೆಯಲ್ಲ. ಅದರಂತೆಯೇ ಕೊಡವರ ವಿವಾಹವು ಪದ್ಧತಿಯೂ ಆಗಿದೆ.

ಭಗಿನೀ ಕಮಲ! ಕೊಡವರಲ್ಲಿಯ ಮದುವೆಯ ಶರತ್ತಿನಂತೆ ಗಂಡ ಹೆಂಡಿರು ಯಾವಾಗಬೇಕಾದರೂ ಬಿಟ್ಟುಹೋಗಬಹುದೆಂದು ಬರೆದಿರುವಿರಲ್ಲವೇ? ಅದ್ಯಾವ ಶರತ್ತಿನ ಮೇರೆ ಎಂಬುದನ್ನು ದಯಮಾಡಿ ತಿಳಿಸುವಿರಾ? ತಮತಮಗೆ ಇಷ್ಟವಿಲ್ಲದಾಗ ಬಿಟ್ಟು ಹೋಗಬಹುದೆಂಬ ಶರತ್ತು ಮತ್ತು ಪದ್ಧತಿಯು ಕೊಡವ ಮದುವೆಯಲ್ಲು ಇಲ್ಲವಲ್ಲಾ! ನಿಮ್ಮ ಬರಹವು ನಿಜವಾದರೆ, ಅದು ನಿಜವಾಗಿಯೂ ಮದುವೆಯಲ್ಲ. ಅದೊಂದು ಗುತ್ತಿಗೆಯ ಮಗುವೆ ಇಲ್ಲವೆ, ಕಾಂಟ್ರಾಕ್ಟು ಎನ್ನಬಹುದು. ಮತ್ತು, ಒಂದುವೇಳೆ ದಂಪತಿಗಳಲ್ಲಿ ವ್ಯಭಿಚಾರವೇ ಮುಂತಾದ ಸಹಿಸಲಶಕ್ಯವಾದ ದುಶ್ಚಾರಿ ಇದ್ದು ದಾಂಪತ್ಯಧರ್ಮಕ್ಕೆ ಗ್ಲಾನಿಬರುವಂತಿದ್ದರೆ, ಆ ದಂಪತಿಗಳು ಪ್ರತ್ಯೇಕ ವಿಭಾಗಿಗಳಾಗಿರುವುದರಲ್ಲಿ ದೋಷವೇನು? ದಾಂಪತ್ಯ ಧರ್ಮಭ್ರಷ್ಟವಾದದ್ದೇ ಆ ಸಂಸಾರವು ಸರಿಯಾಗಿ ಸಾಗಬಲ್ಲುದೇ?

25—3—25 "ಕಾವೇರಿ"

ಕೊಡಗಿನ ಸ್ಥಿತದ ವರದಿ.

ಮಹನೀಯರೆ,

1923-24ರ ಕೊಡಗಿನ ಸ್ಥಿತದ ವರದಿಯಲ್ಲಿ ಗೌಡುಗಳ ವಿಷಯವಾಗಿ ಕೊಡಗು ಸರಕಾರದವರು ಕೊಟ್ಟ ಅಭಿಪ್ರಾಯವನ್ನು ಮತ್ತು ಅದಕ್ಕೆಯಾಗಿ "ಕೊಡಗು ಎಡಿಟರವರು ಸೂಚಿಸಿದ ತೃಪ್ತಿ" ಗೌಡ ಜನಾಂಗದವರು ನೋಡಿ ಆಶ್ಚರ್ಯಪಡದೆ ಇರರು.

ಕೊಡಗು ಆಡಳಿತದ ವರದಿಯಲ್ಲಿ "ಯುವಕ ಉಮೇದ್ವಾರರ ಜಯವು, ಗೌಡುಗಳು ಮತ್ತು ಮಹಮ್ಮದೀಯ ಉಮೇದ್ವಾರರ ಸೋಲುವಿಕೆ ಮುಖ್ಯಾಂಶಗಳಾಗಿವೆ" ಯೆಂದು ಬರೆದಿರುವುದಂತೆ. ಆಳಿತದ ಮೂಲಪತ್ರವು ನಮಗೆ ದೊರಕದ್ದರಿಂದ. ಎಡಿಟರು ಹೇಳಿದ ವಾಕ್ಯದ ಮೇಲೂ ಮತ್ತು ಅದರ ಮೇಲೆ ಅವರು ಕೊಟ್ಟ ಅಭಿಪ್ರಾಯದ ಮೇಲೂ ಎರಡು ಮಾತುಗಳ ಹೇಳಬೇಕಾಗುವುದು.

ಗೌಡುಗಳು ಚುನಾವಣೆಯಲ್ಲಿ ಹಿಂದುಳಿಯಲಿಕ್ಕೆ ಗೌಡುಗಳ ಹಿಂದುಳಿದಿರುವೂ, ಅವರ ವಿದ್ಯಾಹೀನತೆಯೂ ಮತ್ತು ಹಿಂದಿನ ದೇಶಾಧಿಕಾರಿಗಳ ಕಡೆಗಳಲ್ಲಿರುವಂತೆ ಕೊಡಗಿನಲ್ಲಿ ಸಹ ನೆರೆಗೊಂಡಿರುವ ಜಾತಿಪಿತ್ಥಾಸಗಳೂ ಕಾರಣಗಳಲ್ಲದೆ ಬೇರೆಯಲ್ಲ. ಈ ವಿಷಯವನ್ನು ಗೌಡುಗಳು ಸರಕಾರಕ್ಕೆ ಎಷ್ಟು ಸಲ ಅರಿಕೆಮಾಡಿದಾಗ್ಯೂ ಸಹ ಸರಕಾರದವರು ಮೇಲೆ ತೋರಿಸಿದ ಕುಂದು ಕಾರಣವನ್ನು ತೋರಿಸಿದ್ದು ವಿಷಾದಕರ. ಇದರಿಂದ ಸರಕಾರದವರಿಗೆ ಗೌಡುಗಳ ನಿಜಸ್ಥಿತಿಯನ್ನು ತಿಳಿದುಕೊಳ್ಳಲು ಮನಸ್ಸಿಲ್ಲವೆಂದು ತಿಳಿದು ಬರುತ್ತದೆ.

ಯುವಕ ಉಮೇದ್ವಾರರ ಜಯವು ಗೌಡುಗಳಿಗೆ ಏನೂ ಕೆಡುಕನ್ನೂ ಮಾಡಿಲ್ಲ. ಒಂದು ವೇಳೆ ವೃದ್ಧ ಉಮೇದ್ವಾರರು ಜಯಪ್ರದ ಹೊಂದಿದ್ದರೂ ಸಹ ಗೌಡುಗಳ ಸ್ಥಿತಿಯು ಬದಲಾಗುತ್ತಿದ್ದಿಲ್ಲ. ಈಗ ಸದ್ಯಕ್ಕೆ ಗೌಡುಗಳು ಕೌನ್ಸಿಲಿಗೆ ಸೇರಬೇಕೆಂದಿದ್ದರೆ ಅವರಿಗೆ ಕೋಮುವಾರು ಚುನಾವಣೆ (Communal representation) ಕೊಡಬೇಕಲ್ಲದೆ ಬೇರೆ ಯಾವ ವಿಧದಲ್ಲಿಯೂ ಅವರಿಗೆ ಕೌನ್ಸಿಲು ಸೇರಲು ಸಾಧ್ಯವಿಲ್ಲ. ಮುಂದುವರಿದ ಪಂಗಡಗಳಾದ ಕೊಡವರೂ ಬ್ರಾಹ್ಮಣರೂ ಸರಕಾರಿ ಉದ್ಯೋಗದಿಂದಲೂ ತಮ್ಮ ವಿದ್ಯೆಯಬಲದಿಂದಲೂ ಹೆಚ್ಚಿನ ಸಾಮರ್ಥ್ಯವನ್ನು ಹೊಂದಿರುವುದರಿಂದ ಹಿಂದುಳಿದ ಪಂಗಡಗಳಾದ ಗೌಡುಗಳು, ಮಹಮ್ಮದೀಯರು ಮೊದಲಾದವರಿಗೆ ಕೋಮುವಾರು ಚುನಾವಣೆಯಿಂದಲ್ಲದೆ ಬೇರೆ ವಿಧದಿಂದ ಚುನಾವಣೆಯಲ್ಲಿ ಜಯಹೊಂದಲು ಸಾಧ್ಯವಿಲ್ಲ. ಆದುದರಿಂದ ಸರಕಾರದವರು ನಿಜವಾದ ಕಾರಣಗಳನ್ನು ತಿಳಿದುಕೊಳ್ಳದೆ ಅಲ್ಲಸಲ್ಲದ ನೆವದಿಂದ ಗೌಡುಗಳನ್ನು ಮೂಲೆಗೊತ್ತುವುದು. ತುಂಬಾ ವಿಷಾದಕರ.

ಯುವಕ ಉಮೇದ್ವಾರರ ಜಯಕ್ಕೂ ಗೌಡುಗಳ ಸೋಲುವಿಕೆಗೂ ಏನು ತಾನೇ ಸಂಬಂಧ? ಇದು "ಕತ್ತೆ ಕೂಗಿದ್ದರಿಂದ ಬೆಳಗಾಯಿತು" ಎಂದು ಹೇಳುವ ಅಸಂಗತ್ಯಾಲಂಕಾರಕ್ಕೆ ಸಮನಾಯಿತು. ಕತ್ತೆ ಕೂಗುವಿಕೆಗೂ, ಬೆಳಗಾಗುವಿಕೆಗೂ ಎಷ್ಟು ಸಂಬಂಧವಿಲ್ಲವೋ ಗೌಡುಗಳ ಸೋಲುವಿಕೆಗೂ "ಯುವಕರ" ಜಯಕ್ಕೂ ಅಷ್ಟೇ ಸಂಬಂಧವಿಲ್ಲ. ಗೌಡುಗಳ ಈಗಿನ ಸ್ಥಿತಿಯಲ್ಲಿ ಅವರ ಪ್ರತ್ಯೇಕ ಚುನಾವಣೆ ಕೊಡದವಿನಹ, ಕೊಡಗಿನಲ್ಲಿ ಯುವಕ ಉಮೇದ್ವಾರರೇ ಜಯಹೊಂದಲಿ ಅಥವಾ ವೃದ್ಧ ಉಮೇದ್ವಾರರೇ ಜಯಹೊಂದಲಿ ಗೌಡುಗಳಿಗೆ ಅದರಿಂದ ಪ್ರಯೋಜನವಾಗಲಾರದು. ಇದಿಷ್ಟು ಸರಕಾರದವರಲ್ಲಿ ವಿನಂತಿ.

ಮೇಲೆ ಹೇಳಿದ ಸರಕಾರದವರ ವರದಿಯಮೇಲೆ ಕೊಡಗು ಎಡಿಟರವರು ಅವರ ಯುಕ್ತಾನುಸಾರವಾಗಿ ಅಭಿಪ್ರಾಯ ಕೊಟ್ಟಿರುವರು. ಇವರ ಅಭಿಪ್ರಾಯವು ಹೊಳೆಯಲ್ಲಿ ಕೇಲಾಡುತ್ತಿದ್ದ ಗೌಡುಗಳ ತಲೆಯಮೇಲೆ ಭಾರವನ್ನಿಟ್ಟು ಮುಳುಗಿಸಿದಂತಾಗುತ್ತದೆ. ಅವರು "......" ಗೌಡುಗಳಲ್ಲಿ ಒಬ್ಬರನ್ನು ಕೌನ್ಸಿಲಿಗೆ ಹಿಂದುಳಿದ ಪಂಗಡದ ಪರವಾಗಿ ಸರಕಾರದವರು ನೇಮಿಸಿದರು. ಆ ಮೆಂಬರು ಗತಿಸಿದ ನಂತರ ಈಗ ಒಬ್ಬ ಮಹಮ್ಮದೀಯರನ್ನು ಆ ಸ್ಥಾನಕ್ಕೆ ಇದುಲು ಕೌನ್ಸಿಲು ಮೆಂಬರಾಗಿ ಈಗ ತಾನೇ ನೇಮಿಸಿರುವರು. ಆದುದರಿಂದ ಈ ಎರಡು ಪಂಗಡದವರಿಗೂ ಕೌನ್ಸಿಲಿನಲ್ಲಿ ತಮ್ಮ ಅಭಿಪ್ರಾಯಗಳನ್ನು ಸೂಚಿಸಲು ಅವಕಾಶ ಕಲ್ಪಿತಂತಾಯಿತು." ಎಂದು ಬರೆದಿರುತ್ತಾರೆ. ಎಡಿಟರು ಹೇಳುವ ಮಾತು ನಿಜ. ಇದರಿಂದ ಗೌಡುಗಳು ತೃಪ್ತಿಪಟ್ಟಿರುವರೆಂಬುದರಲ್ಲಿ ಸಂದೇಹವಿಲ್ಲ. ಒಬ್ಬ ಗೌಡನನ್ನು ಇಡೀ ಒಂದು ವರುಷ ಕೌನ್ಸಿಲಿನಲ್ಲಿ ಇದ್ದದ್ದು ಬಳಿಕ ಗೌಡುಗಳಿಗೆ ಇನ್ನೇನು ತಾನೇ ಬೇಕಾದೀತು! ಈ ವಿಷಯ ಎಡಿಟರವರೇ, ನೀವು ಗೌಡುಗಳ ದುರ್ದೆಶೆಯನ್ನು ಇಷ್ಟು ಕೊಂಡಾಡಬೇಕಾಗಿಲ್ಲ. ಗೌಡುಗಳಿಗೆ ನಿಜವಾಗಿಯೂ ಪಕ್ಷಪಾತಕ್ಕೆ ಕೋಮುವಾರು ಚುನಾವಣೆಯನ್ನು ತಪ್ಪಿಸಿ ಭೂಲೋಕದಲ್ಲಿ ಎಲ್ಲಿಯೂ ಇಲ್ಲದ ಕ್ರಮದ ಚುನಾವಣೆಯಿಂದ ಬದವಾಮಿಯಾದ ಗೌಡುಗಳನ್ನು ಮೂಲೆಗೊತ್ತಿದ್ದಕ್ಕೆ ಸರಕಾರದವರಿಗೂ ನಿಮಗೂ ನಮಸ್ಕಾರ. ಇನ್ನು ಸಹ ನಮ್ಮ ತೃಪ್ತಿಯನ್ನು ನೀವು ಕೊಂಡಾಡದೇ ಇರಿ. ಗೌಡುಗಳಿಗೆ ತಮ್ಮ ಹೃತಳಲ್ಲಿಯೇ ತಮಗೆ ನೆಲೆಯಿಲ್ಲದಂತಾಗಿರುವುದು. ಅದರಲ್ಲಿಯೂ ನೀವು ಗೌಡುಗಳು ಸಂತುಷ್ಟರಾದರು ಎನ್ನುತ್ತೀರಿ. ಹಾಗಾದರೆ ಮೂರುವರ್ಷ ಕೌನ್ಸಿಲು ದೊರೆತದ್ದರಿಂದ ಕೊಡಗು ದೇಶಕ್ಕೆ ಕೌನ್ಸಿಲು ಸಾಕಾಯಿತೆನ್ನಬಹುದಲ್ಲವೇ?

ಅದೂ ಅಲ್ಲದೆ .... ಪಂಗಡದವರು ಕೌನ್ಸಿಲಿನಲ್ಲಿ ಏಳೆಂಟು ಜನರಿರುವರು. ಅದರೂ ಸಹ ಯಾವದೋ ಒಂದು ಕಮಿಟಿಗೆ ಇಬ್ಬರು ಬ್ರಾಹ್ಮಣರನ್ನು ಮಾತ್ರ ಚುನಾಯಿಸಿದ್ದಕ್ಕೆ ಕೊಡವರೊಬ್ಬರು ತಟ್ಟನೆ ನಿಂತು, ಈ ಕಮಿಟಿಯಲ್ಲಿ ಕೊಡವರ ಹಕ್ಕನ್ನು ಕಾಪಾಡಲು ಯಾರೂ ಇಲ್ಲನೆಂದು ಗರ್ಜಿಸಿದರು. ಹಾಗಿರುವಲ್ಲಿ ಗೌಡುಗಳ ಗತಿಯೇನು? ಅವರಿಗೂ ಸಹ ಇತರರಂತೆಯೇ ಹಕ್ಕು ಬಾಧ್ಯತೆಗಳಿಲ್ಲವೇ? ಅದರೂ ಒಬ್ಬ ಗೌಡನನ್ನು ಒಂದು ವರ್ಷ ಕೌನ್ಸಿಲಿನಲ್ಲಿ ಇರಗೊಳಿಸಿದ್ದಕ್ಕೆ ಗೌಡುಗಳನ್ನು ತೃಪ್ತಿ ಪಡಿಸಿದಂತಾಯಿತೆಂದು ಹೇಳುತ್ತೀರಲ್ಲವೇ? ಸಕಲ ಸಮಾನರಾದ ಗೌಡುಗಳನ್ನು ಕೆಣಕಲು ಯಾರಿಗೆ ತಾನೇ ಧೈರ್ಯ ಸಾಲದು?

ಎನ್. ಮುದ್ದಪ್ಪ.

["ಯುವಕ ಉಮೇದುವಾರರ ಜಯವು, ಗೌಡುಗಳ ಮತ್ತು ಮಹಮ್ಮದೀಯ ಉಮೇದ್ವಾರರುಗಳ್ಳರ ಸೋಲುವಿಕೆಯು ಚುನಾವಣೆಯ ಮುಖ್ಯ ಅಂಶಗಳಾಗಿವೆ" ಎಂದು ಬರೆದುದರಲ್ಲಿ ಯುವಕರ ಜಯಕ್ಕೂ ಗೌಡುಗಳ ಸೋಲುವಿಕೆಗೂ ಏನೊಂದೂ ಸಮ್ಮಂಧವಿಲ್ಲ. ಹಾಗೆ ಸಮ್ಮಂಧವಿದೆಯೆಂದು ಪತ್ರಿಕಾದಾರರು ಭಾವಿಸಿಕೊಂಡದ್ದು ತಪ್ಪು. ಗೌಡುಗಳನ್ನು ಮೂಲೆಗೊತ್ತಲು ನಾವು ಎಂದೂ ಪ್ರಯತ್ನಿಸಿರುವುದಿಲ್ಲ. ಕೋಮುವಾರು ಪ್ರತಿನಿಧಿತ್ವವು ದೇಶದ ಹಿತಕ್ಕೆ ಅಡ್ಡಿ ಬರುವುದಾದುದರಿಂದ ಅದಕ್ಕೆ ನಾವು ಆಕ್ಷೇಪಿಸುವದಾಗಿದೆ. ಸಂ.]

ಜನ್ಮ ಭೂಮಿ ಕಳಕೊಳ್ಳಲಿಕ್ಕೆ.

ಮಿತ್ರರೆ,

ನಮ್ಮೆಲ್ಲರ ಕಣ್ಣಿಗೆ ಗೋಚರವಾದದ್ದಲ್ಲದೆ ಎಲ್ಲರ ಮನಸ್ಸಿಗೆ ವೇದ್ಯವಿರುವಂತೆಯೂ ನಮ್ಮ ದೇಶದ ಒಂದು ತರದ ಉನ್ನತಸ್ಥಿತಿಯನ್ನು ಈಗ ಅದಕ್ಕೆ ಉಂಟಾಗುತ್ತಲಿರುವ ಕುಂದುಕೊರತೆಗಳನ್ನು ಬೇಸರದಿಂದ ಪ್ರಜೆ ರನತಿಸಿದಕ್ಕೆ ಅಧಿಕಾರಸ್ಥರ ಧಾರಾಳ ಮನಸ್ಸಿನಿಂದ ಬಡ ರೈತರನ್ನು ಕಷ್ಟಕ್ಕೆ ಈಡು ಮಾಡಲಿಕ್ಕಿಲ್ಲವಾಗಿ ನಂಬಿಕೆ. ಕಲವು ವರುಷಕ್ಕೆ ಮೊದಲು ನಮ್ಮ ದೇಶದಲ್ಲು ಅನ್ಯದೇಶದವರೆಂದರೆ ಮಾಪಿಳ್ಳೆಯವರೇ ಮುಖ್ಯ ಲೇವಾದೇವಿ ನಡಿಸುತ್ತಿದ್ದರಲ್ಲದೆ ವರತಕ್ಕೆ ಮೂರು ಒಟ್ಟಿ ಭತ್ತದಂತೆ ಸಹ ಸಾಲಕೊಟ್ಟು ಗಾಡಿ 1ರ ಚೆಂಂದ 60 ರುಪಾಯಿ ಕ್ರಯ ಬಾಳುತಿದ್ದ ಭತ್ತವನ್ನು ಬರೀ 20 ರುಪಾಯಿನಲ್ಲೇ ತೃಪ್ತಿಪಡಿಸುತ್ತಿದ್ದದ್ದು ವಾಚಕ ಮಹಶಯರಿಗೆಲ್ಲಾ ಗೊತ್ತಿರುವ ಸಂಗತಿಯಾಗಿರಬಹುದಾಗಿದೆ. ಹೆಚ್ಚಿಗೆ ವಿವರಿಸಬೇಕಾದ ಅವಶ್ಯವಿರುವದಿಲ್ಲ. ಇಂಥಾ ಕಷ್ಟ ಬಡ್ಡಿಯ ಸಾಲ ಕೆರುವದ್ದರಿಂದಲೂ ಸುಲಭ ಬಡ್ಡಿಗೆ ಹಣ ದೊರೆಯದ್ದರಿಂದಲೂ ಜೆರಾಯಿತಿ ಕಸಬಿನವರಾದ ನಾವು ಅನೇಕ ಕಷ್ಟನಷ್ಟಗಳಿಗೆ ಗುರಿಯಾಗಿದ್ದೆವು. ಇಂಥಾ ಕಷ್ಟಗಳನ್ನು ಕಂಡು ಕರುಣದಿಂದ ಕೆಲವು ವರುಷಕ್ಕೆ ಮೊದಲು ಪೆನ್ಶನ್ ಪಡೆದು ತಮ್ಮ ದೇಶಕ್ಕೆ ಸುಂಕಿತವಾಗಿ ತೆರಳಿದ ಮಿ. ಗುಸ್ತಾವ್ ಹಾಲರ್ ಸಾಹೇಬರವರು ಸಹಕಾರ ಸಂಘವನ್ನು ಸ್ಥಾಪನೆ ಮಾಡಿದ್ದರಿಂದ ಕೆಲವು ಮಟ್ಟಿಗೆ ಕಷ್ಟ ಬಡ್ಡಿ ಕೆರುತಿದ್ದ ನಮ್ಮನ್ನು ಆ ಒಲೆಯಿಂದ ಬಿಡಿಸಿದಂತಾಯಿತು. ಇತ್ತೀಚೆಗೆ ಹೆಚ್ಚಿನ ಬಡ್ಡಿಯ ಕಷ್ಟವು ಕಮ್ಮಿಯಾಗುತ್ತಲು ಸಹಕಾರ ಸಂಘ ಜೆಜ್ಜುತ್ಕಲೂ ಬಂದದ್ದಾಗಿದೆ. ಅದರಿಂದ ಸಹಕಾರ ಸಂಘಕ್ಕೆ ಮೂಲಕಾರಣರಾದ ಮಿ. ಹಾಲರ್ ಸಾಹೇಬರವರಿಗೆ ನಾವು ಎಷ್ಟು ವಂದಿಸಿದರೂ ಸ್ವಲ್ಪವೇ. ಹಾಲರ್ ಸಾಹೇಬರವರ ರಕಾಲದಲ್ಲಿ ಮೂವತ್ತಕ್ಕೆ ಹತ್ತಿರ ಸಂಘವನ್ನು ಹೆಚ್ಚಿಸಮಾಡುವರ್ಜಿಯಿಂದಲೂ ಸ್ವದೇಶಾಭಿಮಾನದಿಂದಲೂ ದ್ರವ್ಯದ ಭಂಡಾರವಾಗಿಯೂದವಾದ ಭಂಡಾರವಾಗಿಯೂ 150ಕ್ಕೆ ಮೇಲೇರಿಸಿಯೂ ಇನ್ನೂ ಹೆಚ್ಚಿಸುತ್ತಲೂ ಇರುವ ಕೊಡಗು ರಿಜಿಸ್ಟ್ರಾರಾಗಿರುವ ಮಿ. ಕೆ. ಎನ್. ಸುಬ್ಬಯ್ಯರವರಿಗೆ ನಮಗಳ ಅನೇಕ ನಮಸ್ಕಾರಗಳನ್ನು ಸಮರ್ಪಿಸಬೇಕಾಗಿದೆ. ಗ್ರಾಮುಕ್ಕೊಂದು ಸಹಕಾರಿ ಸಂಘವು ಮಧ್ಯ ಮಧ್ಯ ದವಸದ ಭಂಡಾರವು ಇರುವದರಿಂದ ಪರದೇಶದವರು ಸುಲಿಗೆಮಾಡಿಕೊಂಡು ಹೋಗುತ್ತಿದ್ದ ಹೆಚ್ಚಿನ ಸಾಲ ಬಡ್ಡಿಯು ಕೊಂಚಮಟ್ಟಿಗೆ ನಮ್ಮ ದೇಶದೊಳಗೆ ಅಡಗಲಿಕ್ಕೆ ಮೊದಲುಮಾಡಿದೆ. ಅಲ್ಲದೆ ಸಂಘದ ನಿಮಿತ್ತ ಗಡಿಗಡಿ ಮೀಟಿಂಗಿಗೆ ಸೇರುವುದರಿಂದ ಕೆಲವುಮಟ್ಟಿಗೆ ಕಳಸಿಹೋಗಿದ್ದ ನಮ್ಮ ಆಚಾರ ಪದ್ಧತಿಗಳನ್ನು ತಿದ್ದಿಕೊಳ್ಳಲು ಸಹ ಅನುಕೂಲ ಸಿಕ್ಕಿದಂತಾಯಿತು. ಅಲ್ಲದೆ ದುಷ್ಟನ ಕೊಂದರೆಯೇ ನಮ್ಮ ಬಡತನಕ್ಕೆ ಮೂಲಕಾರಣವಾದದ್ದರಿಂದ ದ್ರವ್ಯದ ಭಂಡಾರವೇ ಗ್ರಾಮಕ್ಕೆ ಬಂದದ್ದು ಧರ್ಮಕ್ಕೆ ಕರೆತೋರಿದಂತಾಗಿದೆ. ಇದಕ್ಕೆ ಎಲ್ಲಿಂದಲೋ ಒಂದು ಮೊಸಳೆ ನೀರಿನಂತೆ ಪ್ರಕಾಶವಾದಿದೆ. ಇಂಥಾ ನಿರ್ಮಲವಾದ ಜಲಮೂಲಗೆ ದುರಾತ್ಮನಾದ ಮೊಸಳೆಯು ಸೇರಲು ಎಂದೂ ಎಡೆಕೊಡಲಿಕ್ಕಿಲ್ಲವಾಗಿ ನಂಬಬೇಕಾಗಿದೆ. ನವಕಾರ ಸಂಘದ ಬೈಲಾ ಜಾನಿನೂ ಪ್ರಕಾರ ಒಬ್ಬ ಮೆಂಬರನಿಗೆ ಸಾಲಕೊಟ್ಟವನಿ ಯಿದೆಮೇರೆ ಬಾಕಿ ಮಾಡುವದು ಪಕ್ಷ ವಸೂಲಾಗುವ ಅನೇಕ ಸಂದರ್ಭಗಳು ಇರುವದಾಗಿವೆ. ಯಾವ ರೀತಿಯಿಂದಲೂ ಕಸೂಲಾಗದಿದ್ದರೆ ಮೆಂಬರಿನ ಭೂಮಿಯನ್ನು ಕಳಕೊಳ್ಳುವ

ನು ಕೆಲವು ಸಂಘಗಳಲ್ಲಿ ಕಮಿಟಿಯವರ ಅಜಾಗ್ರತೆಯಿಂದ ಮೆಂಬರುಗಳ ಭೂಮಿ ಕಳಕೊಳ್ಳುವ ಸಂದರ್ಭ ಉಂಟು. ಹೀಗಿರುವಾಗ್ಯೆ ಅನೇಕ ಸಂಘಗಳಿಂದ ಭೂಮಿಯನ್ನೇ ಹರಾಜು ಮಾಡುವಂತೆ ವೀರಾಜಪೇಟೆ ಮುನ್ಸೀಫ್ ಕೋರ್ಟಿನಲ್ಲು ಮೊಖದ್ದಮೆ ನಡಿಯುವುದಾಗಿ ತಿಳಿಯಲಾಗುತ್ತೆ. ಈ ವರ್ತಮಾನವು ನಿಜವಾದ ಪಕ್ಷ ರೈತರ ಪಾಲಿಗೆ ಇದೊಂದು ದೊಡ್ಡ ಕಷ್ಟವೆಂದೇ ಹೇಳಬೇಕಾಗಿದೆ. ಹೀಗಾಗುವದಕ್ಕೆ ಕೆಲವು ಕಾರಣ ಕುರಿತು ಸಂಶಯಪಡಬೇಕಾಗಿದೆ. ಸ್ವಲ್ಪ ಮೊದಲು ಹೆಚ್ಚಿನ ಸಿಬ್ಬಂದಿ ಇಲ್ಲದಿರುವಾಗ ಇಂಥಾ ತೊಂದರೆಯೂ ಕಾಣುತ್ತಿರಲಿಲ್ಲ. ಈಗಲಾದರೋ ಇನ್‌ಸ್ಪೆಕ್ಟರ್, ಆರ್ಗನೈಜರ್, ಸುಪರ್‌ವೈಜರ್ ಇಂತಿಂಥಾ ಮೇಲಧಿಕಾರಿಗಳು ಇರುವದರಿಂದ ಸಂಘದ ಏಳಿಗೆಗೆ ಮತ್ತಷ್ಟು ಅನುಕೂಲವಾಗುತ್ತೆ ಎಂದು ಜನರ ಮನಸಿನಲ್ಲು ಅಂಕುರಿಸಿದ ಆಶೆಯೂ ಈಗ ನಿರಾಶೆಯಾಗುವಂತೆ ಕಾಣುತ್ತೆ. ಇದು ಆಯಾಯ ಸಂಘದ ಕಮಿಟಿಯವರ ಅಜಾಗ್ರತೆಯೋ ಗಿರ್ವಿ ಕೊಟ್ಟ ಮೆಂಬರನ ತಪ್ಪೋ ಇಲ್ಲವೇ ಈಗಿನ ಮೇಲಧಿಕಾರಿಗಳ ನ್ಯಾಯವೋ ಅಲ್ಲವೆ ಈಗ ಹೊಸ ಕಾನೂನು ಏನಾದರೂ ಇದೆಯೋ ಎಂದು ಸಂಶಯ ಪಡಬೇಕಾಗಿದೆ. ಇನ್ನೂ ಸಂಘದ ಕೆಲಸವೂ ಪಲು ನ್ಯಾಯವಾದ ತರಬೇತು ಹೊಂದದ್ದರಿಂದ ಕಮಿಟಿಯವರದೇ ಹೆಚ್ಚಿನ ತಪ್ಪಿರಬೇಕೆಂದು ಯೋಚಿಸಬೇಕಾಗಿದೆ. ಆದ್ದರಿಂದ ರಿಜಿಸ್ಟ್ರಾರವರು ಅಂಥಾ ಸಂಘವನ್ನು ಪರಿಶೀಲಿಸಿ, ಅಂತಂಥಾ ಸಂಘದ ನ್ಯೂನತೆಗಳನ್ನು ಹೋಗಲಾಡಿಸಿ ಸಂಘದ ಮುಂದಿನ ಅಭಿವೃದ್ಧಿಗೆ ಉತ್ತೇಜನ ಕೊಡದೆ ಇರಲಿಕ್ಕಿಲ್ಲವಾಗಿಯೂ ಅದಕ್ಕೆ ನಮ್ಮ ಉದಾರಗುಣಶೀಲರಾದ ರಿಜಿಸ್ಟ್ರಾರವರು ಇಂಥಾ ಕಠಿಣ ಕಾನೂನಿಗೆ ಎಡೆಕೊಟ್ಟದ್ದೇ ಆದರೆ ತನ್ನ ಇಲ್ಲಿವರೆಗಿನ ಪ್ರಯತ್ನವು ನಿಷ್ಫಲವಾಗುವುದಲ್ಲದೆ ಬಡ ರೈತರು ಅನೇಕ ಕಷ್ಟನಷ್ಟಗಳಿಗೆ ಈಡಾಗುವದರಿಂದ ರಿಜಿಸ್ಟ್ರಾರವರು ಖಂಡಿತವಾಗಿಯೂ ಭೂಮಿ ಕಳಕೊಳ್ಳಲಿಕ್ಕೆ ಎಡೆಕೊಡಲಿಕ್ಕಿಲ್ಲವಾಗಿ ನಂಬಿಕ ಇಡಬೇಕಾಗಿದೆ.

ಗು. ಭೀಮಯ್ಯ.

ನೋ ೕ ಟೀ ೕ ಸ್.

ದಕ್ಷಿಣಕೊಡಗಿನ ಜಮೀನುದಾರರ ಸಂಘದ ಆರ್ಗನೈಜರ ಪಿದ್ದಂಡ ಕಾರ್‍ಯಪ್ಪನವರು ತನ್ನ ಕೆಲಸಕ್ಕೆ ರಾಜಿನಾಮೆ ಮಾಡಿರುವದರಿಂದ, ದಯವಿಟ್ಟು ಜಮೀನುದಾರರ ಸಂಘದ ಎಲ್ಲಾ ಮೆಂಬರುಗಳು ಆಯಾಯ ನಾಡು ಕಮಿಟಿಯವರಿಗಾಗಲೀ, ಅಥವ ನಮ್ಮ ಏಜಂಟರಾಗಿರುವ ಕೋಟೆರ ಚಿಣ್ಣಪ್ಪನವರ ವೀರಾಜಪೇಟೆಯ ಆಫೀಸಿನಲ್ಲಾಗಲೀ, ಮ. ಚಂಗಂಡ ಕುಟ್ಟಪ್ಪನವರು, ಐನಂಡ ಮಾದಪ್ಪನವರು, ಬಿದ್ದಂಡ ಮಾದಪ್ಪನವರಿಗಾಗಲೀ ತಮ್ಮ ವಾರ್ಷಿಕ ಚಂದಾ ಹಣವನ್ನು ಪಾವತಿಮಾಡಿ ರಸೀತಿ ಪಡೆಯಬೇಕಾಗಿ ಈ ಮೂಲಕ ಕೇಳಿಕೊಂಡಿದ್ದೇವೆ.

ಒನರರಿ ಸೆಕ್ರೆಟರಿ.

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿದೆ

ಕೃಷ್ಣ ಸೋಮೇಶ್ವರ ಮತ್ತು ನಾರಾಯಣ ಸೋಮೇಶ್ವರ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ. ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ.

ಸಂಟೀಶರ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲಿಕೋಟೆ, ವೀರಾಜಪೇಟೆ ಮತ್ತು
52-೩-೬ ಗೋಣಿಕೊಪ್ಪಲು.

ದಯಮಾಡಿ ಪ್ರಶ್ನಿಸಿ ನೋಡಿರಿ!

X. L. LOIL.

ಹೊಸ ನಮೂನಿಯ ಮೀನಿನ ಎಣ್ಣೆ

ಆಹಾರಾದವರೂ, ಮಕ್ಕಳೂ ಶಕ್ತಿ ಕುಂದಿದವರೂ ಮತ್ತು ಎದೆನೋವು ರೋಗಗಳಿಂದ ಪೀಡಿತರಾದವರೂ ಸೇವಿಸುವದರಿಂದ ಬಲಿಷ್ಠರಾಗುವರು. "ಕಾಡ್ ಲಿವರ್ ಆಯಿಲ್ ಎಮಲ್ಷನ್" ಎಂಬದರ ಬದಲಿಗೆ ಇದು ಉತ್ತಮತರದ ಕ್ಷೀರ ರಸಾಯನ. ವಾಸನೆ ಇಲ್ಲ ಬೆಲೆ ಬಹಳ ಕಡಿಮೆ

M. BALA & Co,
CHEMISTS.
12—೮—೯ *Tellicherry*
Or 'AJPET WORKS,
Virajpet

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್‌ನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಬಲಗು	....	7,720
ಜಮೂಬಂದ ಶೇವಗ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಇಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ತನಿಖೆಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು	ಯಂ. ಭುಜಂಗರಾಯರು
ರಾಯ್ ಬಹದ್ದೂರ್.	ಬಿ.ಎ., ಬಿ.ಎಲ್.

ಸೆಕ್ರೆಟರಿ.
ಸಿ. ಯಂ. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಖು 1—7—1924.

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.
ಎಡಿಟರ್.—ವಿದ್ವಾನ್ ಕೇಶವಶಾಸ್ತ್ರೀ ಆಯುರ್ವೇದರತ್ನ, ಇಲ್ಲಾಡಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಗಳ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ಹೇಳುವದೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುತಾದ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ:—

ಮೇನೇಜರ್ ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.
Telegraphic Address:—"SHOOTER" Bombay.

[52-೬] Please write for latest Catalogues.

ಮಾರಾಟಕ್ಕೆ.

1 ಮಡಿಕೇರಿ ಅರೆ ಮಲ್‌ಕಟ್ಟಪ್ಪನವರ ಮಡಿಕೇರಿ ನಾಡುಬಿಳಿಗೇರಿಗ್ರಾಮದಲ್ಲಿ ಮಡಿಕೇರಿ ಮೂರ್ನಾಡು ರಸ್ತೆ 5ನೇ ಮೈಲ್ ಬಳಿ ಇರುವ ಆಸ್ತಿ, ಅಂದರೆ— ಸಾಗಿನ ಉತ್ತಮವಾದ ಭೂಮಿ 31½ ಎಕರು, ತೋಟ 25 ಎಕರು, (ಈ ಪೈಕಿ 15 ಎಕರು ಫಸಲಿಗೆ ಬಂದದ್ದನ್ನು ಈ ವರ್ಷ 1,200 ರುಪಾಯಿಗಳಿಗೆಫಸಲು ಗುತ್ತಿಗೆ ಕೊಡಲಾಗಿದೆ) ಯಾಲಕ್ಕಿ 15 ಎಕರು, ಹೊಸದಾಗಿ ಹಾಕಿರುವ ಕಾಪಿ 15 ಎಕರು ಮತ್ತು 116 ಎಕರು ಬಾಣೆ, ಒಂದು ವಾಸದ ಮನೆ, ಆಳುಗಳ ಲೈನು ಮತ್ತು ದನಗಳ ಕೊಟ್ಟಿಗೆ ಸಹ—ಮಾರಾಟಕ್ಕೆ ಇದೆ ಕ್ರಯ ರುಪಾಯಿ 25,000 ಅಥವಾ ಇದರ ಸಮೀಪದ ಬೆಲೆ.

2. ಅರೆ ಮಲ್‌ಕಟ್ಟಪ್ಪನವರ ಮಡಿಕೇರಿ ಮಹದೇವಪೇಟೆ ಬಸವಣ್ಣನ ಗುಡಿ ಬಳಿ ಇರುವ ವಾಸದ ದೊಡ್ಡ ಮಹಡಿಮನೆ ಕ್ರಯ ರೂ. 5,000.

ಹೆಚ್ಚಿನ ವಿವರಕ್ಕೆ ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು.

ಎಂ. ಎನ್ ಅಪ್ಪಣ್ಣ,
ಬೋಯಿಕೇರಿ ಎಸ್ಟೇಟ್.
12—೪೪ 12 ಸುಂಟಿಕೊಪ್ಪ.

ಇಂಡಿಯಾ ಸಾಬೂನ್.

ಬೆಲೆ ಅಗ್ಗ!! ಸರ್ವೋತ್ತಮ!!

ನಮ್ಮ "ಇಂಡಿಯಾ ಸಾಬೂನ್" ಸರ್ವೋತ್ತಮವಾದುದೆಂದು ತಿಳಿದು ಎಲ್ಲಾ ಕಡೆಗಳಲ್ಲಿಯೂ, ಎಲ್ಲಾ ಊರುಗಳ ಅಂಗಡಿಗಳಲ್ಲಿಯೂ ಇದನ್ನೇ ಮಾರುತ್ತಿದ್ದಾರೆ. ಇದರಿಂದ ಒಗೆಯುವ ವಸ್ತ್ರಗಳು ಸ್ವಚ್ಛವಾಗುವವಲ್ಲದೆ, ಅವುಗಳ ನೂಲಿಗೆ ಇದರಿಂದ ಯಾವ ವಿಧವಾದ ಉಪಹತಿಯೂ ಉಂಟಾಗದೆ, ಹೆಚ್ಚು ಬಾಳಿಕೆ ಬರುವವು. ಈ ವಿಷಯವನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಎಲ್ಲರಿಗೂ ಮನದಟ್ಟಾಗುವದು. ನಮ್ಮ ಗಿರಾಕಿಗಳಿಗೆ ಹೆಚ್ಚು ಲಾಭ!! ಧಾರಾಳವಾದ ಕಮಿಷನ್ ದೊರೆಯುವದು. ಆರ್ಡರುಗಳಿಗೆ ಮಾಲನ್ನು ಬಂದೋಬಸ್ತಾಗಿ ಪ್ಯಾಕ್‌ಮಾಡಿ ಅವರ ಆಪ್ರೆಸಿಗೆ ಅಥವಾ ಅವರು ಅಪೇಕ್ಷಿಸುವ ಸಮೀಪದ ರೈಲ್ವೆ ಸ್ಟೇಷನಿಗೆ ರವಾನಿಸುತ್ತೇವೆ.

ಇಷ್ಟು ಮಾತ್ರವೇ ಅಲ್ಲ; ನಮ್ಮ ಗಿರಾಕಿಗಳಿಗೆ ಅವರ ಅದೃಷ್ಟ ಪರೀಕ್ಷಾರ್ಥವಾಗಿ ನಾವು ಕಳುಹಿಸುವ ಯಾವದೋ ಒಂದು ಸೋಪ್ ಪ್ಯಾಕ್‌ನಲ್ಲಿ ೧೦ ರುಪಾಯಿನ ಅರ್ಧ ನೋಟನ್ನು ಇಟ್ಟಿರುತ್ತೇವೆ. ಅಂಥಾ ಅರ್ಧ ನೋಟಿನ ಪ್ಯಾಕನ್ನು ಹೊಂದಿದವರು ಆ ಅರ್ಧ ನೋಟಿನ ನಂಬರನ್ನು ತಿಳಿಸಿದಲ್ಲಿ, ಬಾಕಿ ಅರ್ಧ ನೋಟನ್ನೂ ಅವರಿಗೆ ಬಹುಮಾನವಾಗಿ ತಕ್ಷಣದೇ ಕಳುಹಿಸಿಕೊಡುವೆವು. ಪ್ರಯತ್ನಪಡಿ! ವ್ಯಾಪಾರಕ್ಕೆ ವ್ಯಾಪಾರ!! ಅದೃಷ್ಟಕ್ಕೆ ಅದೃಷ್ಟ!!!

ಎಸ್. ಕೃಷ್ಣಯ್ಯ ಶೆಟ್ಟಿ,
12—೩—10 ಸಾಬೂನ್ ಫ್ಯಾಕ್ಟರಿ, ಬೆಂಗಳೂರು ಸಿಟಿ.

Printed & published by Kodanda Appayya, R.B., Chairman, Board of Directors, at "Kodagu" Press. Mercara for "Kodagu" Ltd.

R. M. 1550. If not delivered please return to KODAGU OFFICE, MERCARA.

ಕೊಡಗು.

೧೦—೪—೨೫ ಪುಸ್ತಕ 13

ಶಕ್ತ್ಯೇನ ಭೂತದಯಯಾ ವಿದ್ಯಾನೀತಿ ಪ್ರಯುಕ್ತತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದಾ ||

ಎಡಿಟರ್ ಪಂದ್ಯಂಡ್ರ. ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೪] ಕೊಡಗು, ಸ್ ೧೯೨೫ನೇ ಇಸವಿ ಎಪ್ರಿಲ್ ತಾರೀಕು ೧೦ನೆಯ ಶುಕ್ರವಾರ [ಸಂಚಿಕೆ ೪೨

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್,

ಯಮ್. ಎಲ್. ಸಿ. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ: 'ಆರೋಗ್ಯ ಚಂದ್ರಿಕೆ' 323,

ತಂಬುಶೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ಬಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗಳಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಶೇರುಹಣ ಸಲ್ಲಿಸಮಾಡಲಿಕ್ಕಿರುವವರೂ ದಯವಿಟ್ಟು ವೀರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜೆಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮೇನೇಜರ್,

13-3-25. 'ಕೊಡಗು' ಲಿಮಿಟೆಡ್.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,

P. O. BASAVANAGUDI
Bangalore City

WATCH THIS SPACE.

Another stock of
Arms & Ammunition.
Expected shortly.
Guaranteed Quality.
Revised prices.

Spencer & Co. Ltd.,

MERCARA & POLLIBETTA.

25

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಚಾಪ್ತು ಕಂಟ್ರ್ಯಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ

17-9-24. ಮೇನೇಜರ್.

Old Students' Quarterly.

Editor, Mr. P. B. Medappa, B.A., B.L., M.L.C.

Vol. II. No. 2 is now out.

Subscription—Yearly Rs. 2, post free. Most delightful! Scholarly articles! Read and enjoy!

CONTENTS.

1. National welfare—(includes thoughts on Free and Compulsory education in Coorg.
2. Swarajya—A Canarese Drama.
3. Are Coorgs Kannadigas?
4. Ancient Coorg.
5. Peep into Heavens.
6. Frivolity page, etc. etc.

If you become a subscriber now you will get a very beautiful calendar for 1925 free—absolutely free!

Apply to—

Manager,
O. S. Association,
Mercara.

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲುಪಿರುವುದರಿಂದ, 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ. ಮೇನೇಜರ್,
'ಕೊಡಗು' ಲಿಮಿಟೆಡ್

ಒಂದು ಪ್ರಬಲವಾದ ಪ್ರಶ್ನೆ.

ದೇಶಾಭಿಮಾನವೆಂದರೇನು?

ಕೈರಾಟೆಯಿಂದ ನೂಲುತೆಗೆದು ಮಾಡಿದಬಟ್ಟೆಯನ್ನು ಧರಿಸಿ ಆ ಮೂಲಕ ಲಕ್ಷೋಪಲಕ್ಷ ಗರೀಬ ಜನರಿಗೆ ಅನ್ನವನ್ನೊದಗಿಸುವದೇ ದೊಡ್ಡ ದೇಶಾಭಿಮಾನ.

ಇಂಥಾ 'ಖಾದಿ' ಬಟ್ಟೆಯನ್ನು ಎಲ್ಲಾ ಜನರಿಗೂ ಸುಲಭಕ್ರಯದಲ್ಲಿ ಒದಗಿಸಲಿಕ್ಕೆ ಈಗತಾನೇ ವೀರಾಜಪೇಟೆಯಲ್ಲಿ ಒಂದು ಖಾದಿ ಭಂಡಾರವನ್ನು ತೆರೆದಿರುತ್ತೇವೆ. ಈ ಭಂಡಾರದಲ್ಲಿ ಎಲ್ಲಾ ತರದ ನಾಜೂಕಾದ ಮತ್ತು ಗಟ್ಟಿಯಾದ ಪಾಟಬಟ್ಟೆಗಳೂ ವಸ್ತ್ರಗಳೂ ಸೀರೆಗಳೂ, ಟವಲುಶಾಲುಗಳೂ, ಖಾದಿರೇಶ್ಮೆಯಿಂದ ತಯಾರ್ಮಾಡಿದ ಎಲ್ಲಾ ತರದಬಟ್ಟೆಗಳೂ ದೊರೆಯುತ್ತವೆ. ಬಟ್ಟೆಗಿರುವ ಎಲ್ಲಾ ಆರ್ಡರನ್ನು ತಕ್ಷಣವೇ ಜರಗಿಸಲಾಗುತ್ತೆ. ಊರೂರಿನಲ್ಲಿರುವ ಎಲ್ಲಾ ಜನರಿಗೆ ಬಟ್ಟೆಯನ್ನೊದಗಿಸಲುತಕ್ಕ ಏರ್ಪಾಡುಮಾಡಲ್ಪಟ್ಟಿದೆ. ದೇಶಾಭಿಮಾನಿಗಳ ಪ್ರೋತ್ಸಾಹವನ್ನು ನಿರೀಕ್ಷಿಸುತ್ತಲೇ ಇರುತ್ತೇವೆ. ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

'ಮೇನೇಜರ್'

12—7 ಖಾದಿ ಭಂಡಾರ, ವೀರಾಜಪೇಟೆ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಕೋಟೆರ ಚಿನ್ನಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಮೆ. ಕೆ. ಚಿನ್ನಪ್ಪನವರ ಆಫೀಸಿನಲ್ಲಿ.
ಮೂರ್ನಾಡು—ಕಮರ್ಶಿಯಲ್ ಸ್ಟೋರಿನಲ್ಲಿ ಮೆ. ಮುಕ್ಕಾಟಿರ ಚೆಯಂಡ ದೇವಯ್ಯನವರು.
ನಾಪೋಕ್ಲು—ಮೆ. ಪೊನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮೆ. ಮುಕ್ಕಾಟಿರಪೂಣಚ್ಚನವರು.
ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಮ್ಮಯ್ಯನವರು.
ಮಡಿಕೇರಿ—ಮೆ. ಪಿ. ಮಾದಮ್ಮನವರು.
ಅಮ್ಮತ್ತಿ ಸಿದ್ದಾಪುರ—ಮೆ. ಐನಂತ ಮಾದಪ್ಪನವರು.
ಮೆ. ಚಂಗಂಡ ಕುಟ್ಟಪ್ಪನವರು.

ಕೋದಂಡ ಉತ್ತಯ್ಯ.
ಆರ್ಗನೈಜಿಂಗ್ ಡೈರೆಕ್ಟರು, "ಕೊಡಗು." ಲಿಮಿಟೆಡ್.

"ಕೊಡಗು"

ಸ೯ ೧೯೨೫ನೇ ಇಸವಿ ಏಪ್ರಿಲ್ ತಾ.
೧೦ನೇ ಶುಕ್ರವಾರ.

ಮುಡ್ಡಿಮೂನ್ ಕಮಿಟಿ.

ಇಂಡಿಯಾ ದೇಶಕ್ಕೆ ರಾಜಕೀಯ ಸುಧಾರಣೆಗಳನ್ನು ಕೊಟ್ಟ ಪಾರ್ಲಿಮೆಂಟಿನ ಆಕ್ಟನ್ನೂ, ಅವುಗಳ ಮೇಲೆ ಮಾಡಿದ ರೂಲ್ಸುಗಳನ್ನೂ ಪರಿಶೋಧಿಸಿ ಅವುಗಳಲ್ಲಿ ದೋಷಗಳನ್ನು ಹೇಗೆ ಹೋಗಲಾಡಿಸಬಹುದೆಂಬುದನ್ನು ರಿಪೋರ್ಟು ಮಾಡಲಿಕ್ಕೆ ಇಂಡಿಯಾ ಸರಕಾರದಿಂದ ನೇಮಿಸಲ್ಪಟ್ಟ ಕಮಿಟಿಗೆ ಮಿ. ಮುಡ್ಡಿಮೂನ್ ಎಂಬವರು ಅಧ್ಯಕ್ಷರಾಗಿದ್ದರು. ಆದ್ದರಿಂದ ಆ ಕಮಿಟಿಗೆ ಮುಡ್ಡಿಮೂನ್ ಕಮಿಟಿ ಎಂತ ಹೆಸರಾಗಿದೆ. ಈ ಕಮಿಟಿಯ ರಿಪೋರ್ಟು ಕಳೆದ ಮಾರ್ಚಿ ತಿಂಗಳ 10ರಲ್ಲಿ ಪ್ರಕಟವಾಯಿತು. ಈ ಕಮಿಟಿಯವರು ಆರು ತಿಂಗಳು ಕೆಲಸ ಮಾಡಿದರು. ಅರ್ಧ ಲಕ್ಷ ರೂಪಾಯಿ ಖರ್ಚಾಯಿತು, ಫಲ ಕಾಣಿಸುವ ಹಾಗೆ ಇಲ್ಲ.

ಈ ಕಮಿಟಿಯನ್ನು ನೇಮಿಸುವಾಗಲೇ ದೇಶವೆಲ್ಲಾ ವಿರೋಧಿಸಿತು. ಸ್ವರಾಜ್ಯ ಪಂಗಡದವರಂತೂ ಇದರೊಂದಿಗೆ ಸಹಕರಿಸುವದೇ ಇಲ್ಲವೆಂತ ತೀರ್ಮಾನಿಸಿದರು. ಪಂಡಿತ ಮೋತಿಲಾಲ್ ನೆಹರೂರವರು ಈ ಕಮಿಟಿಯಲ್ಲಿ ಕೆಲಸಮಾಡಲಿಕ್ಕೇನೇ ವಿರೋಧಿಸಿದರು. ದೇಶಕ್ಕೆ ಯಾವತರದ ಸ್ವರಾಜ್ಯ ಕೊಡಬೇಕೆಂಬುದನ್ನು ತೀರ್ಮಾನಿಸಲಿಕ್ಕೆ ದೇಶೀಯರು ಚುನಾಯಿಸುವ ಪ್ರಜಾಪ್ರತಿನಿಧಿಗಳ ಮತ್ತು ಸರಕಾರದ ಮೆಂಬರುಗಳ ಒಂದು ಕಾನ್ಫರೆನ್ಸು ಆಗಬೇಕೆಂತ ಸ್ವರಾಜ್ಯ ಪಕ್ಷದವರ ಹೋರಾಟ ನಡೆದಿತ್ತು. ಇಂಥಾ ಕಾನ್ಫರೆನ್ಸ್ ಒಂದು ಆಗಬೇಕೆಂತ 1921ನೇ ಇಸವಿಯಲ್ಲೇ ಎಸೆಂಬ್ಲಿಯಲ್ಲಿ ಒಂದು ಠರಾವು ಪಾಸಾಗಿತ್ತು. ದೇಶಿಯರೆಲ್ಲರಿಗೂ ತೃಪ್ತಿಯನ್ನುಂಟುಮಾಡುತಿದ್ದ ಕಮಿಟಿಯನ್ನು ನೇಮಿಸುವ ಬದಲು ದ್ವಿಮುಖ ಸರಕಾರವನ್ನು ನಡಿಸುವದರಲ್ಲಿ ಸರಕಾರದವರಿಗೆ ಬಂದ ಅಡಚಣೆಗಳನ್ನು ಹೇಗೆ ತಪ್ಪಿಸಿಕೊಳ್ಳಬಹುದೆಂಬ ಉದ್ದೇಶದಿಂದ ಈ ಕಮಿಟಿಯನ್ನು ನೇಮಿಸಿದರು. ನಮ್ಮ ಕೊಡಗು ದೇಶದಲ್ಲಿ ದ್ವಿಮುಖ ಸರಕಾರವಿಲ್ಲ. ಆದ್ದರಿಂದ ಈ ಕಮಿಟಿಯ ವಿಚಾರವು ನಮ್ಮ ಸರಕಾರಕ್ಕೆ ವ್ಯಾಪಿಸಲಿಲ್ಲ. ನಮ್ಮ ಸರಕಾರದ ಅಭಿಪ್ರಾಯವನ್ನೂ ಸಹ ಕೇಳಿದಹಾಗೆ ಕಾಣುವುದಿಲ್ಲ. ಆದರೂ ಇಂಡಿಯಾ ಸರಕಾರವು ಖರ್ಚುಮಾಡಿದ 50,000 ರುಪಾಯಿಯಲ್ಲಿ ನಮ್ಮ ಪಾಲಿಕೆಯೂ ಇರುವುದರಿಂದ ಈ ಕಮಿಟಿಯ ಕೆಲಸಗಳನ್ನು ವಿಮರ್ಶಿಸಲು ನಮ್ಮ ದೇಶದವರಿಗೂ ಹಕ್ಕಿದೆ.

ಈ ಕಮಿಟಿಯು ಮುಂದೆ ಅಭಿಪ್ರಾಯಕೊಟ್ಟ ಮಂತ್ರಿಗಳೂ ಮತ್ತು ಇತರ ಪ್ರಮುಖರ ಅಭಿಪ್ರಾಯವೆಲ್ಲಾ ದ್ವಿಮುಖ ಸರಕಾರವು ನಿಷ್ಪ್ರಯೋಜನವಾದದ್ದು. ಪ್ರಾಂತೀಕ ಸರಕಾರಗಳಿಗೆ ಪೂರ್ತಿ ಸ್ವತಂತ್ರ ಕೊಟ್ಟು ಎಲ್ಲಾ ಆಡಳಿತಗಳೂ ಕೌನ್ಸಿಲಿನ ಅಧೀನವಿರತಕ್ಕದ್ದು ಯುಕ್ತವಾಗಿದೆಯೆಂತ ಅಭಿಪ್ರಾಯ ಕೊಟ್ಟರು. ಈಗ ಕೌನ್ಸಿಲಿಗೆ ಚುನಾವಣೆಯಾದ ಪರವೃತಿ ಇಬ್ಬರು ಅಥವ ಮೂವರನ್ನು ಮಂತ್ರಿಗಳಾಗಿ ಗವರ್ನರು ಚುನಾಯಿಸಿ ಅವರ ತಾಬೆಗೆ ಕೆಲವು ಇಲಾಖೆಗಳನ್ನು ಕೊಡುತ್ತಾರೆ. ವಿದ್ಯಾ, ಕೃಷಿ, ಸಹಕಾರಿ, ಆರೋಗ್ಯ ಇವೇ ಮಂತ್ರಿಗಳ ಸ್ವಾಧೀನಕ್ಕೆ ಕೊಟ್ಟ ಮುಖ್ಯ ಇಲಾಖೆಗಳಾಗಿವೆ. ಈ ಇಲಾಖೆಗಳ ಖರ್ಚಿಗೆ ಬೇಕಾದಷ್ಟು ಹಣವೇ ದೊರಕುವದಿಲ್ಲ. ಕಾದಿಟ್ಟುಕೊಂಡ ಅಂದರೆ ಮಂತ್ರಿಗಳ ಆಡಳಿತಕ್ಕೆ ಬಿಟ್ಟುಕೊಡದ ಇಲಾಖೆಗಳಿಗೆ ಬೇಕಾದ ಖರ್ಚಿನ ಮೊಬಲಗನ್ನು ತೆಗೆದು ಇಟ್ಟನಂತರ ಉಳಿದ ಮೊಬಲಗನ್ನು ಮಂತ್ರಿಗಳ ಇಲಾಖೆಗಳಿಗೆಕೊಡುವದು. ಖರ್ಚಿಗೆ ಸಾಲದಿದ್ದರೆ ಹೊಸ ಕಂದಾಯವನ್ನು ಪ್ರಜೆಗಳ ಮೇಲೆ ಹೊರಿಸಲು ಮಂತ್ರಿಗಳು ಶಿಪಾರಸ್ಸು ಮಾಡಬಹುದು. ಪ್ರಜೆಗಳ ಪ್ರಯೋಜನದ ಇಲಾಖೆಗಳಿಗೆ ಈ ರೀತಿ ಅತ್ಯಲ್ಪಕರವಾದ ಮರ್ಯಾದೆ. ಮಂತ್ರಿಗಳೇ ಈ ಕಮಿಟಿಯ ಮುಂದೆ ಕೊಟ್ಟ ಅಭಿಪ್ರಾಯದಿಂದ ಮಂತ್ರಿಗಳು ಗವರ್ನರ ಅಧೀನರಾಗಬೇಕಾಗುತ್ತದೆ ಎಂತ ತಿಳಿದು ಬಂದಿದೆ. ಸುಧಾರಣೆಯನ್ನು ಕೊಟ್ಟ ಶಾಸನವು ಮತ್ತು ರೂಲುಗಳ ಮೇರೆ ಮಂತ್ರಿಗಳೂ, ಇತರ ಎಗ್ಸಿಕ್ಯೂಟಿವ್ ಮೆಂಬರುಗಳೂ ಒಂದಾಗಿ ಸೇರಿ ಆಡಳಿತದ ಎಲ್ಲಾ ಭಾಗಗಳಲ್ಲೂ ತೀರ್ಮಾನಕ್ಕೆ ಬರಬೇಕೆಂತ ಇದೆ. ಆದರೆ ಜಾರಿಯಲ್ಲಿ ಇಂಥಾ ಒಗ್ಗಟ್ಟಿನ ಚರ್ಚೆ ಬಹಳ ಅಪರೂಪವಾಗಿರುತ್ತಂತೆ.

ಈ ರೀತಿ ದ್ವಿಮುಖ ಸರಕಾರದಲ್ಲಿ ಅತೃಪ್ತಿ ಇತ್ತೆಂತ ಬಹಳ ಅಭಿಪ್ರಾಯಪಟ್ಟ ಮಾತ್ರಕ್ಕೆ ದ್ವಿಮುಖ ಸರಕಾರಕ್ಕಿಂತ ನಮ್ಮ ದೇಶದ ಕೌನ್ಸಿಲ್ ಸರಕಾರವೇ ವಾಸಿಯೆಂತ ಅರ್ಥವಲ್ಲ. ದ್ವಿಮುಖ ಸರಕಾರವು ಕೃಷಿಯಲ್ಲ ಎಂತ ಹೇಳುವವರು ಪ್ರಾಂತ್ಯಗಳಿಗೆ ಪೂರ್ತಿ ಸ್ವತಂತ್ರ ಕೊಟ್ಟು ಎಲ್ಲಾ ಇಲಾಖೆಗಳು ಮಂತ್ರಿಗಳ ಅಧೀನಕ್ಕೆ ಕೊಡಬೇಕೆಂತ ಕೂಗುತ್ತಿರುವರಲ್ಲವೇ? ಆದರೆ ಸರಕಾರದ ಪಕ್ಷದವರು ಪ್ರಜಾಪ್ರತಿನಿಧಿಗಳು ಸರಕಾರದೊಂದಿಗೆ ಸಹಕರಿಸಿದರೆ ದ್ವಿಮುಖ ಸರಕಾರವನ್ನು ಸರಿಯಾಗಿ ನಡಿಸಬಹುದೆಂತಲೂ ದ್ವಿಮುಖ ಸರಕಾರದ ಮೂಲಕ ಪ್ರಜೆಗಳ ಜವಾಬ್ದಾರಿ ಸರಕಾರ ಪದ್ಧತಿಯನ್ನು ಸ್ವಲ್ಪ ಮಟ್ಟಿಗಾದರೂ ಜಾರಿಗೆ ತರಬಹುದೆಂತ ಹೇಳುತ್ತಾರೆ. ನಮ್ಮ ದೇಶದಲ್ಲಿ ಪ್ರಜೆಗಳಿಗೆ ಜವಾಬ್ದಾರಿಯಾಗಿರುವ ಆಡಳಿತದ ಗೋಜೇ ಇಲ್ಲವಲ್ಲ! ದೇಶದವರ ಅಭಿಪ್ರಾಯವನ್ನು ಸೂಚಿಸುವವರು ಕೌನ್ಸಿಲ್ ಮೆಂಬರುಗಳು. ಅಂಥಾ ಕೌನ್ಸಿಲ್ ಮೆಂಬರುಗಳಲ್ಲಿ ಹೆಚ್ಚಿನ ಸಂಖ್ಯೆಯವರ ಸಂಬಳಿಗೆ ಮಂತ್ರಿಯು ಪಾತ್ರನಾಗಿಲ್ಲದಿದ್ದರೆ ತನ್ನ ಕೆಲಸವನ್ನು ಬಿಡಬೇಕು, ಆದ್ದರಿಂದ ಮಂತ್ರಿಯು ತನ್ನ ಆಡಳಿತವನ್ನು ದೇಶದ ಹೆಚ್ಚಿನ ಜನರಿಗೆ ತೃಪ್ತಿಯಾಗುವಂತೆ ನಡಿಸಬೇಕೆಂತ ಆಯಿತು. ಈ ಕ್ರಮವು ನಮ್ಮ ಕೌನ್ಸಿಲಿನಲ್ಲಿಯಂತೂ ಇಲ್ಲವಲ್ಲ. ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನಲ್ಲೇ ಇಲ್ಲ! ಹೀಗಿರುವಾಗ ನಮ್ಮ ದೇಶಕ್ಕೆ ಹೆಚ್ಚಿನ ಸುಧಾರಣೆ ಬೇಕೆಂತ ತಂದ ಠರಾವಿನಿಂದ ಕೆಲವು ಪ್ರಜಾಪ್ರತಿನಿಧಿಗಳಿಗೆ ಗಾಬರಿಯಾಗಿತ್ತು. ದೇಶಕ್ಕೆ ಹೆಚ್ಚಿನ ಸುಧಾರಣೆ,—ದೊಡ್ಡ ಪ್ರಾಂತ್ಯಗಳಿಗೆ ಕೊಟ್ಟ ಸುಧಾರಣೆ ಎಂತಲೇ ಆಗಲಿ— ಬೇಕೆಂತ ಕೇಳಿದರೆ ಹಿಂದೂಸ್ಥಾನದ ಇತರ ಭಾಗಗಳೊಂದಿಗೇ ನಮ್ಮ ದೇಶವೂ ಹೆಜ್ಜೆ ಇಡಬೇಕೆಂತಾಯಿತು. ದ್ವಿಮುಖ ಸರಕಾರದಿಂದ ಪ್ರಯೋಜನವಾಗಿದೆಯೆಂದೇ ನಮ್ಮ ಅಭಿಪ್ರಾಯ. ಬಂಗಾಳ ಮತ್ತು ಮಧ್ಯಪ್ರಾಂತ್ಯದಲ್ಲಿ ಮಂತ್ರಿಗಳ ಸಂಬಳವನ್ನು ಮಂಜೂರು ಮಾಡದೆ ದ್ವಿಮುಖ ಸರಕಾರವು ನಡಿಯಲು ಸಾಧ್ಯವಿಲ್ಲದಂತೆ ಮಾಡಿ ಈಗಿನ ಸರಕಾರದಲ್ಲಿ ಸ್ವಲ್ಪವೂ ತೃಪ್ತಿಯಿಲ್ಲವೆಂತ ತೋರಿಸಲು ಸಾಧ್ಯವಾಯಿತಲ್ಲವೇ? ನಮ್ಮ ಕೌನ್ಸಿಲಿನಲ್ಲಿ ಈತರದಲ್ಲಿ ದೇಶದ ಅಭಿಪ್ರಾಯವನ್ನು ಸೂಚಿಸಲು ಅನುಕೂಲವೇ ಇಲ್ಲ. ಬಂಗಾಳದಲ್ಲಿ ಸರಕಾರಕ್ಕೆ ಈ ತರದ ಅಡಚಣೆಯನ್ನು ತಂದಿಟ್ಟ ದೇಶಬಂಧು ಚಿತ್ತರಂಜನದಾಸರಿಗೂ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೂ ರಾಜಸಂಧಾನದ ಮಾತುಗಳು ನಡಿಯುತ್ತಿರುವಂತೆ ಕಾಣುತ್ತದೆ. ಆದ್ದರಿಂದ ದ್ವಿಮುಖ ಸರಕಾರದಿಂದ ಈ ತರದ ಪ್ರಯೋಜನವಾಗಲಿಲ್ಲವೇ? ದ್ವಿಮುಖಸರಕಾರದಿಂದ ಪ್ರಜೆಗಳಿಗೆ ತತ್ಕಾಲ ಪ್ರಯೋಜನವಾಗದೆ ಇದ್ದರೂ ಸ್ವರಾಜ್ಯಸಾಧನೆಗೆ ಅನುಕೂಲ ದೊರಕುತ್ತದೆ. ಈ ಸಂಗತಿ ನಮ್ಮ ಅಗ್ರಲೇಖನದ ವಿಷಯಕ್ಕೆ ಸಂಬಂಧವಿಲ್ಲದಿದ್ದರೂ ಇಷ್ಟು ಮಾತು ಬರೆಯದೆ ಇರಲು ಸಾಧ್ಯವಾಗಲಿಲ್ಲ.

ಮುಡ್ಡಿಮೂನ್ ಕಮಿಟಿಯಲ್ಲಿ ಸರಕಾರಿಪಕ್ಷದ ಬಹುಮತದ ರಿಪೋರ್ಟು ಒಂದು ಕೆಲವುಮಟ್ಟಿಗಾದರೂ ಪ್ರಜಾಪಕ್ಷವಾಗಿರುವ ಕಡಿಮೆ ಸಂಖ್ಯೆಮೆಂಬರುಗಳ ಮೈನಾರಿಟಿ ರಿಪೋರ್ಟು ಒಂದು ಅಂತೂ ಎರಡು ರಿಪೋರ್ಟುಗಳಾಗಿವೆ. ಮೆಜಾರಿಟಿ ರಿಪೋರ್ಟಿನಲ್ಲಿ ಮಂತ್ರಿಗಳೂ, ಎಗ್ಸಿಕ್ಯೂಟಿವ್ ಕೌನ್ಸಿಲರುಗಳು ಎಲ್ಲಾ ಸಂಗತಿಗಳಲ್ಲೂ ಒಟ್ಟಿಗೇ ಚರ್ಚಿಸಬೇಕೆಂತ ರೂಲೇ ಇರಬೇಕೆಂತಲೂ, ಎಲ್ಲಾ ಪ್ರಾಂತ್ಯಗಳಲ್ಲೂ ಫಾರೆಸ್ಟ್ ಇಲಾಖೆಯು ಮಂತ್ರಿಗಳ ಅಧೀನಕ್ಕೆ ಕೊಡಬೇಕೆಂತಲೂ, ಹೆಂಗಸರು ಕೌನ್ಸಿಲಿಗೆ ಮೆಂಬರಾಗಲು ಅನುಕೂಲ ಕೊಡಬೇಕೆಂತಲೂ ಹಿಂದುಳಿದ ಪಂಗಡಗಳಿಗೆ ಚುನಾಯಿತ ಪ್ರತಿನಿಧಿತ್ವ ಹೆಚ್ಚಾಗಿ ಕೊಡಬೇಕೆಂತಲೂ ಮುಂತಾಗಿ ಕೆಲವು ಶಿಫಾರಸ್ಸು ಮಾಡಿರುತ್ತಾರೆ. ಇವೆಲ್ಲಾ ತಕ್ಕ ಮಟ್ಟಿಗೆ ಪ್ರಯೋಜನಕಾರಿಯಾದವೇ. ಆದರೆ ಮೈನಾರಿಟಿಯವರು ಹೇಳಿರುವಂತೆ ಸ್ವರಾಜ್ಯಸಾಧನೆಗೆ ತತ್ಕಾಲದಸಾರಗಳಿಲ್ಲ. ಪ್ರಾಂತ್ಯಗಳಲ್ಲಿ ಪ್ರಜಾಸತ್ತಾತ್ಮಕ ಅಂದರೆ ಪ್ರಜೆಗಳಿಗೆ ಅಧೀನವಾಗಿರುವ ಸರಕಾರವನ್ನು ಕೂಡಲೇ ಕೊಡಬೇಕು. ಈ ಬಗ್ಗೆ ಚಕ್ರವರ್ತಿಯವರಿಂದಲೇ ನೇಮಕವಾಗುವ ಕಮಿಟಿಯೊಂದು ಆಗಬೇಕು ಎಂತ ಮೈನಾರಿಟಿಯವರು ಶಿಫಾರಸ್ಸುಮಾಡಿರುತ್ತಾರೆ. ಈ ತರದ ಶಿಫಾರಸ್ಸುಮಾಡಲು ಈ ಕಮಿಟಿಗೆ ಹಕ್ಕಿಲ್ಲವೆಂತ ಮೆಜಾರಿಟಿಯವರು ಒದರಿದ್ದಾರೆ. ಕಮಿಟಿಗೆ ಹಕ್ಕಿರಲಿ, ಇಲ್ಲದಿರಲಿ, ದೇಶದ ಅಭಿಪ್ರಾಯವನ್ನು ಮೈನಾರಿಟಿಯವರು ಸರಕಾರಕ್ಕೆ ಕೆಲವು ಮಟ್ಟಿಗಾದರೂ ತಿಳಿಸಿಕೊಟ್ಟದ್ದಕ್ಕೆ ದೇಶದ ಅಭಿವಂದನೆಯು ಮೈನಾರಿಟಿಯವರಿಗೆ ದೊರಕಿದೆ.

ಮೆಜಾರಿಟಿ ರಿಪೋರ್ಟಿನ ಮೇಲೆ ಎಲ್ಲಾ ಪ್ರಾಂತ್ಯಗಳ ಕೌನ್ಸಿಲುಗಳು ಟೀಕಮಾಡಿ ಖಂಡಿಸಿವೆ. ದೇಶದ ಅತೃಪ್ತಿಯನ್ನೂ ಸೂಚಿಸಿಯವೆ. ಎಲ್ಲಾ ಪ್ರಮುಖರೂ ಮೆಜಾರ್ಟಿ ರಿಪೋರ್ಟಿಗೆ ವಿರೋಧ ಅಭಿಪ್ರಾಯವನ್ನು ಕೊಟ್ಟಿದ್ದಾರಲ್ಲ, ಇಲ್ಲ, ಮರೆತೆವು. ನಮ್ಮ ಕೌನ್ಸಿಲ್ ಈ ಮಾತನ್ನು ಎತ್ತಲಿಲ್ಲ. ಹೆಚ್ಚಿನ ಸುಧಾರಣೆ ಬೇಕು ಎಂತ ಕೇಳಿದ ಠರಾವಿಗೆ ಅನೇಕ ಚುನಾಯಿತ ಮೆಂಬರು ಓಟುಕೊಡುವಾಗ ಮೌನತಾಳಿದರು. ಹಿಂದುಸ್ಥಾನದ ಇತರ ಭಾಗಗಳೊಡನೆ ಮುಡ್ಡಿಮೂನ್ ರಿಪೋರ್ಟು ತೃಪ್ತಿಯಾಗಿಲ್ಲವೆಂತ ನಮ್ಮ ಕೌನ್ಸಿಲು ಹೇಳಬಹುದಿತ್ತು. ಅಥವಾ ದೇಶಕ್ಕೆ ಹೆಚ್ಚಿಗೆ ಸುಧಾರಣೆ ಬೇಕೆಂತಲಾದರೂ ಒಗ್ಗಟ್ಟಾಗಿ ಪಾಸ್‌ಮಾಡ ಬಹುದಿತ್ತು. ಹೇಗೂ ಪಾಸಾದ ಠರಾವಿಗೆ ದೇಶದ ಬೆಂಬಲವಿದೆಯೆಂತ ತೋರಿಸುವದು ದೇಶದವರ ಕೈಯಲ್ಲಿ ಇದೆ.

ಕತ್ತಲೆಯಲ್ಲಿ ಬೆಳಕು.

ಲಂಡನ್ ಪಟ್ಟಣದ "ಚ್ಯಾಲೆಂಜ್" ಎಂಬ ಪತ್ರಿಕೆ ಬರದದ್ದನ್ನು "ಹಿಂದು" ಪತ್ರಿಕೆಯಲ್ಲಿ ಪ್ರಕಟಿಸಿದ್ದರಿಂದ ಉತ್ತರಿಸಿದ್ದು—

ಪ್ರಪಂಚದ ಬೇರೆಭಾಗಗಳಲ್ಲಿ ಇರುವ ಕತ್ತಲೆಯಂತಲ್ಲ. ಇಂಡಿಯಾದೇಶದ ಕತ್ತಲೆಯಲ್ಲಿ ಒಬ್ಬ ಕಾಲಜ್ಞಾನಿಯ ಬೆಳಕು ಇದೆ. ಮಹಾತ್ಮನು ಸಾಧ್ಯವಾಗದ್ದನ್ನು ಬೋಧಿಸುವ ಅಸಾಧ್ಯ ಮನುಷ್ಯನೆಂತ ಹೇಳುವ ಕೆಲವರನ್ನೂ, ಬಹಳ ಅಪಾಯದ ಮನುಷ್ಯನೆಂತಲೂ ತಲತಳಕು ಮಾಡುವವನೆಂತಲೂ ಹೇಳುವ ಕೆಲವರನ್ನೂ, ಹುಚ್ಚು ಹಿಡಿದವನೆಂದು ಹೇಳುವ ಕೆಲವರನ್ನೂ ನೋಡಿದ್ದೇವೆ. ಆದರೂ ಈವರೆಗೂ ಅವನ ಉದ್ದೇಶದ ನಿರ್ಮಲತ್ವವನ್ನಾಗಲೀ, ಅವನ ನಡತೆಯ ಗಾಂಭೀರ್ಯವನ್ನಾಗಲೀ ಸಂಶಯಪಟ್ಟವರು ಯಾರೂ ಇಲ್ಲ. ಈ ಕೃಶದೇಹವುಳ್ಳ ಒಬ್ಬಂಟಿಗನಾದ, ಬರಿಗಾಲಿನಲ್ಲಿ ಪ್ರಯಾಣಮಾಡುವ ಸ್ವಲ್ಪ ಡಾಂಭಿಕನಾದರೂ ತೋರಿಸದ ಟೈ ಹಾಕಿ ಜೀವನವನ್ನು ಕಳೆಯುವ, ಕಷ್ಟಗಳನ್ನು ಅನುಭವಿಸಿ ಸ್ವಂತಪ್ರಯೋಜನವೇನೂ ಇಲ್ಲದ, ವಿನೋದಯುಕ್ತವಿಲ್ಲದ ಈ ಮನುಷ್ಯನು ಚರಿತ್ರೆಯಲ್ಲಿ ಎಲ್ಲಿಯೂ ಕಂಡುಬರದಷ್ಟು ಶಕ್ತಿಯನ್ನು ತನ್ನ ಒಳಗಡೆ ಉಳ್ಳವನಾಗಿದ್ದಾನೆ. ಅವನು ಪ್ರಯಾಣಮಾಡುವಾಗ ಪ್ರತಿ ಸ್ಟೇಶನಿನಲ್ಲಿಯೂ ಸಮೀಪ ಊರುಗಳಿನ ಸಾವಿರಗಟ್ಟಲೆ ಜನರು ಅವನು ದಾಟುವದನ್ನು ನೋಡಲಿಕ್ಕೆಂದು ಬರುತ್ತಾರೆ. ಒಂದು ಸಭೆಯಲ್ಲಿ ಉಪನ್ಯಾಸ ಮಾಡುವನೆಂದಾದರೆ ಅಂಥಾ ಸ್ಥಳದಲ್ಲಿ ಎಷ್ಟೋ ಘಂಟೆಗಳಮೊದಲೇ ಜನರ ಕಮಿಟಿ ಕೂಡುತ್ತದೆ. ಒಂದು ಆಸನದಲ್ಲಿ ಇಳಕೊಂಡು ಕೂತುಕೊಂಡರೆ ಅವನನ್ನು ನೋಡಲಿಕ್ಕೆಂತಲೂ, ಅವನ ಬಟ್ಟೆಯನ್ನು ಮುಟ್ಟಲಿಕ್ಕೆಂತಲೂ, ಮಕ್ಕಳ ತಲೆಯಮೇಲೆ ಅವನ ಕೈ ಇರಿಸಿ ಆಶೀರ್ವಾದ ಪಡೆಯಲಿಕ್ಕೆಂತಲೂ ಜನರು ಮುತ್ತುತ್ತಾರೆ. ಆದರೂ ಇಂಥಾ ದೇವತಾ ಮರ್ಯಾದೆ ಸಿಕ್ಕಿದರೂ ಸಮಾಧಾನದಿಂದಲೂ ನಮ್ರತೆಯಿಂದಲೂ ಇರುತ್ತಾನೆ. ಯಾವಾಗಲೂ ಆತ್ಮನಲ್ಲಿ ಬೆರೆತ ಒಂದು ಆನಂದ ಸುಖದಲ್ಲಿರುವದರಿಂದ ಸಹಿಸಲಶಕ್ಯವಾದ ಕಷ್ಟಗಳನ್ನು ಸಹಿಸುತ್ತಾ ಸಿಟ್ಟಾಗಲೀ ಬೇಸರವಾಗಲೀ ಬರುವದೇ ಇಲ್ಲ. ತಪ್ಪುಗಳನ್ನು ಕಾಣಿಸಿಕೊಡುವ ಅದ್ಭುತ ಶಕ್ತಿಯಿಂದಲೂ ಮನುಷ್ಯರಲ್ಲಿ ಯಾರನ್ನೂ ದೂಷಿಸದೆಯೂ ಮಾತಾಡುವದರಿಂದ ಅವನ ವಾಕ್ಯಗಳು ವೇದವಾಕ್ಯಕ್ಕೆ ಸಮವಾಗುತ್ತವೆ. ಇಂಡಿಯಾ ದೇಶದ ಪ್ರಯೊಬ್ಬನಿಗೂ ಸಮ್ಮತಿಯಾಗುವ ಮಾತೇ ಹೊರತು ಹೊಸ ವಿಷಯವೇನೂ ತಾನು ಹೇಳುವದಿಲ್ಲವೆನ್ನುತ್ತಾನೆ. ಅವನ ಧೈರ್ಯವೂ ಸತ್ಯತೆಯೂ ಇದರಿಂದ ಕಂಡುಬರುತ್ತದೆ—ಏನೆಂದರೆ ತನ್ನ ದೇಶದ ಮೇಲೆ ಪಶ್ಚಿಮ ದೇಶದಿಂದುಂಟಾದ ಎಲ್ಲಾ ಅಡಸುಗಳನ್ನೂ ಸ್ವಲ್ಪವೂ ದಾಕ್ಷಿಣ್ಯವಿಲ್ಲದೆ ಹೇಗೆ ದೂಷಿಸುತ್ತಾನೋ ಹಾಗೆಯೇ ತನ್ನ ದೇಶದ ಕೊರತೆಗಳನ್ನೂ ದೂಷಿಸುತ್ತಾನೆ. ತನ್ನ ದೇಶದ ಯುವಕರಿಗೆ ಹೇಳುವದೇನಂದರೆ—"ನೀವು ಬ್ರಹ್ಮಚರ್ಯದಲ್ಲಿರಬೇಕು. ಗುಲಾಮಗಿರಿಯೇ ದೊರಕುವ ಮಕ್ಕಳನ್ನು ಪಡೆಯಬಾರದು. ಮತ್ತು ನೀವು ಒಳ್ಳೆ ನಡತೆಯಲ್ಲಿ ಇರಬೇಕು. ನಮ್ಮ ಇಷ್ಟಾರ್ಥಿಯಾಗುವವರಿಗೆ ಪ್ರತಿಯೊಬ್ಬ ಹೆಂಗಸೂ ನಮ್ಮ ಅಕ್ಕ ತಂಗಿಯೇ ಆಗಿರಬೇಕು." "ಅಸ್ಪೃಶ್ಯ ವರ್ಗದವರನ್ನು ಮೇಲಕ್ಕೆತ್ತುವದಕ್ಕಾಗಿ ನನ್ನ ಇನ್ನೊಂದು ಜನ್ಮದಲ್ಲಿ ಅಸ್ಪೃಶ್ಯನಾಗಿ ಹುಟ್ಟಬೇಕೆಂತ ದೇವರನ್ನು ಬೇಡುತ್ತೇನೆ" ಹೀಗೆ ಮಾತಾಡುವ ಮನುಷ್ಯನು ಜನರ ಪ್ರೀತಿಗಾಗಿಯೇ ಮಾತಾಡುವವನಲ್ಲ.

ಇಂಥಾ ಬೋಧನೆಯಿಂದ ಸ್ವರಾಜ್ಯ ಸಿಕ್ಕಿದರೆ ಸಾಕೆಂತ ಇವನ ಬೋಧನೆಯಲ್ಲ, ಅದಕ್ಕಿಂತಲೂ ಹೆಚ್ಚಿನ ಉದ್ದೇಶ ಇದೆ. ರಾಜ್ಯ ಕಾರ್ಯದಲ್ಲಿ ಸ್ವರಾಜ್ಯ ಬೇಕು, ಯಾತಕ್ಕೆಂದರೆ—ತನಗೆ ಬೇಕಾದಂತೆ ಜೀವನ ನಡಿಸಿ ತನ್ನ ಪರತತ್ವ ವಿಚಾರಕ್ಕೆ ಬೇಕಾದ ದಾರಿ ಮಾಡಿಕೊಳ್ಳಲಿಕ್ಕಾಗಿ. ಕಾರ್ಖಾನೆಗಳಿಂದ ಕೂಡಿದ ನಾಗರೀಕತೆಯನ್ನೂ ಪಾಶ್ಚಾತ್ಯರ ರೀತಿಗಳನ್ನೂ ನೋಡಿದ್ದಾನೆ. ಅವುಗಳ ಬೇರನ್ನು ಸಹಿತ ತುಚ್ಛೀಕರಿಸುತ್ತಾನೆ. ಅವನ ಚಳವಳದ ಅರ್ಥವೇನಂದರೆ—ಇಂಡಿಯಾ ದೇಶದ ಆಳುವ ಜನಾಂಗದ ಮನೋಗತ ಮತ್ತು ರೀತಿಯಿಂದಲೂ, ಭಾಷಣ ಮತ್ತು ಯೋಚನೆಯಿಂದಲೂ, ಮನಾಭಿಲಾಷೆಯಿಂದಲೂ ಇಂಡಿಯಾ ದೇಶವನ್ನು ಬಿಡುಗಡೆ ಮಾಡಬೇಕೆನ್ನುವದೇ—ಅದರಿಂದ ಅವನ ಚಳವಳದ ಮೊದಲಿನ ಭಾಗದಲ್ಲೇ ವಿದ್ಯಾರ್ಥಿಗಳು ತಮ್ಮ ಮುಂದಿನ ಪ್ರಯೋಜನಗಳನ್ನೇನೂ ಲಕ್ಷಿಸದೆ, ಎಷ್ಟು ಕಷ್ಟ ಬಂದರೂ ತಮ್ಮ ಸ್ಕೂಲುಗಳನ್ನೂ ಕಾಲೇಜುಗಳನ್ನೂ ಬಿಟ್ಟು ಹೊರಡಬೇಕೆಂತ ಅವನು ಹೇಳಿದ್ದು. ಆದರಿಂದಲೇ ನೂಲುವ ಯಂತ್ರವನ್ನೂ ಕೈಮಗ್ಗವನ್ನೂ ಪ್ರಚಾರಗೊಳಿಸಿ ತನ್ನ ಹಿಂಬಾಲಕರಿಗೆ ಕೈಯಿಂದ ಮಾಡಿದ ಬಟ್ಟೆಯನ್ನೇ ಹಾಕುವಂತೆ ಹೇಳುತ್ತಾನೆ. ಇಂಡಿಯಾಕ್ಕೆ ಸ್ವತಂತ್ರ ಬಂದಾಗ ಪಾರ್ಲಿಮೆಂಟಿನಂತ ಸಭೆಗಳನ್ನು ಮಾಡಿಕೊಂಡು, ಕಾರ್ಖಾನೆಗಳನ್ನೂ ಅವುಗಳ ಪ್ರಯೋಜನವನ್ನೂ ಸಹಿಸಿಕೊಂಡು ಇದ್ದರೆ ಇಂಡಿಯಾಕ್ಕೆ ಸ್ವತಂತ್ರ ಬಂತೆಂದು ಅವನು ಒಪ್ಪಲಿಕ್ಕಿಲ್ಲ. ಸರಪಣಿಯು ಕಟ್ಟದಲ್ಲೇ ಇದೆ ಎಂತ ಅವನು ಎಣಿಸ್ಯಾನು. ಪ್ರಪಂಚಕ್ಕೆ ಅಂತ್ಯದಲ್ಲಿ ಇಂಡಿಯಾ ದೇಶದಿಂದ ಪ್ರಯೋಜನವಾಗಬೇಕಾದರೆ ಮೊದಲು ತನ್ನ ಜೀವನ ಕ್ರಮವನ್ನು ಬೆಳೆಯಿಸಿ ತನ್ನ ಸಭೆಗಳನ್ನೇರ್ಪಡಿಸಿ ತನ್ನ ಯೋಚನೆಗಳನ್ನು ಬದಲಾಯಿಸಿಕೊಂಡು ತನ್ನ ಧರ್ಮವನ್ನು ಮೊದಲಿನ ಸ್ಥಿತಿಗೆ ತಂದುಕೊಂಡರೆ ಸಾಧ್ಯವಷ್ಟೆ. ಠಾಗೋರರು ಪ್ರಪಂಚದ ಜನರೆಲ್ಲಾ ಒಂದೇ ಎಂತಲೂ ಪ್ರಪಂಚದ ಉತ್ತಮ ಕಲಾಕೌಶಲ್ಯಗಳೂ ವಿಜ್ಞಾನ ಶಾಸ್ತ್ರಗಳೂ, ನಾಗರೀಕತೆಯೂ, ಮತದ ಸಾರವೂ ಸಹ ತನ್ನ ಮಾತೃಭೂಮಿಯ ಪ್ರಯೋಜನಕ್ಕೆ ಅನುಕೂಲವಾಗಬೇಕು ಎಂದೆನ್ನುತ್ತಾರೆ. ಅವನು ಇದಕ್ಕೂ ಒಪ್ಪುವದಿಲ್ಲ. ಕವಿಯು ತನ್ನ ಮಾತೃಭೂಮಿಯ ಸ್ವತಂತ್ರವನ್ನು ಪ್ರೀತಿಸುವವನಾದರೂ ಪ್ರಪಂಚದ ಮನುಷ್ಯ ಜಾತಿಯವರ ಸಂಗಡ ಸ್ವತಂತ್ರದಲ್ಲಿ ಬಾಳಬೇಕೆನ್ನುತ್ತಾನೆ. ಕಾಲಜ್ಞಾನಿಯ ಮತದಲ್ಲಿ ಪ್ರಪಂಚದ ಸಂಗಡ

ಇಂಡಿಯಾ ದೇಶವು ಬೆಳೆಯಬೇಕೆಂದಿಲ್ಲ. ಆದರೆ ಅಲ್ಲಿಯ ಜನರು ಕಷ್ಟಪಟ್ಟು ಮನುಷ್ಯ ಜಾತಿಗೆ ಒಂದು ಹೊಸದಾರಿಯನ್ನು ಇಂಡಿಯಾ ದೇಶದ ಜನರು ತೋರಿಸಕೊಡಬೇಕು. "ನೀವು ಹೊರಗೆ ಬಂದು ಪ್ರತ್ಯೇಕವಾಗಿರಿ' ಎನ್ನುತ್ತಾನೆ. ಇಂಡಿಯಾ ದೇಶವು ಪ್ರತ್ಯೇಕವಾಗಿಯೇ ಇದ್ದುಕೊಂಡು ಆತ್ಮವಿಚಾರದಲ್ಲೇ ನಿರತವಾಗಿ ಬೇರೆ ಜನಾಂಗಗಳಿಗೆ ಎಚ್ಚರ ಕೊಡುತ್ತಾ ಮಾದರಿಯಾಗಿರಬೇಕು.

ಸ್ವತಂತ್ರತೆಯಲ್ಲಿ ಅನ್ಯೋನ್ಯವಾಗಿರಬೇಕೆಂದು ಹೇಳುವ, ಪ್ರತ್ಯೇಕವಾಗಿದ್ದು ಪ್ರಪಂಚವನ್ನು ಗೆಲ್ಲಬಹುದೆಂಬ ಅಭಿಪ್ರಾಯವನ್ನು ತಿರಸ್ಕರಿಸುವ, ನಮ್ಮ ಮತಕ್ಕೆ ಒಪ್ಪದವರೂ ಸಹ ದೇವರ ಕೃಪೆಯಿಂದ ವಿನಾಯಿಸಲ್ಪಡಬಾರದೆಂತ ಅಭಿಪ್ರಾಯವಿರುವ ನಮ್ಮ ನಾಗರೀಕತೆಯಲ್ಲಿ ಕೊರತೆಗಳಿವೆ. ಅವನ್ನು ತಿದ್ದಿಕೊಳ್ಳಬೇಕನ್ನುವ ನಾವು ಪಾಶ್ಚಾತ್ಯರಲ್ಲಿ ಏನೂ ಒಳ್ಳೇದಿಲ್ಲವೆಂತ ಒಪ್ಪುವದಿಲ್ಲ. ಆದ್ದರಿಂದ ಅವನ ಅಭಿಪ್ರಾಯಗಳಿಗೆ ನಾವು ಒಪ್ಪುವದಿಲ್ಲ. ಆದರೆ ಕ್ರೈಸ್ತರಾಗಿ ಅವನ ಕೆಲಸವನ್ನು ಬಹಳ ಕುತೂಹಲದಿಂದ ನೋಡಬೇಕಾಗಿದೆ ಅಲ್ಲದೆ ಅವನ ದಾರಿಯೇ ಒಳ್ಳೇದಲ್ಲವೋ ಎಂತ ತೋರುತ್ತಿದೆ.

ದೇವೀ ಜಾತ್ರೆ.

(ಸಾತ್ವಿಕ ದೇವೀ ಪೂಜಾ ಪದ್ಧತಿ)

||ದಯೆಯೇ ಧರ್ಮದ ಮೂಲ||

ಅನೇಕ ಸ್ಥಳಗಳಲ್ಲಿ ಗ್ರಾಮ ದೇವತೆಗಳ ಹಬ್ಬವು ಪ್ರಾರಂಭವಾಗಿ ಆ ಹಬ್ಬಗಳ ನೆವದಿಂದ ಸಹಸ್ರಾರು ಪ್ರಾಣಿಗಳು ಇಹಲೋಕದ ಯಾತ್ರೆಯನ್ನೇ ಮುಗಿಸಿ ಬಿಡುವ ವಿಷಯವು ಸರ್ವರಿಗೂ ತಿಳಿದದ್ದೇ ಆಗಿದೆ. ಈ ಅಧರ್ಮ ಕೃತ್ಯವನ್ನು ನಿಲ್ಲಿಸಲು ದಾವಣಗೆರೆ ತಾಲೂಕು ಮಳಲ್ಕೆರೆ ಗ್ರಾಮದವರು ಅನುಸರಿಸಿರುವ ವಿಧಾನವನ್ನು ನೋಡಿ ಇತರ ಗ್ರಾಮಸ್ಥರಾದರೂ ಹಿಂಸಾಯುಕ್ತ ದೇವೀಜಾತ್ರೆಯಿಂದಾಗುವ ಪಾಪಕೃತ್ಯವನ್ನು ನಿಲ್ಲಿಸಿ ಆ ಮೂಲಕ ಪುಣ್ಯ ಭಾಗಿಗಳಾಗಬೇಕೆಂಬ ಉದ್ದೇಶದಿಂದ ಈ ವಿಷಯವನ್ನು ಪ್ರಕಟಿಸಲಾಗಿದೆ. ಆದುದರಿಂದ ಇದುವರೆಗೂ ಹಿಂಸಾಯುಕ್ತವಾದ ದೇವೀಜಾತ್ರೆಯನ್ನು ಮಾಡುತ್ತಿದ್ದ ಮಹಾಶಯರೇ, ಈಗಲಾದರೂ ಚನ್ನಾಗಿ ಆಲೋಚಿಸಿ ಹಿಂಸಾಯುಕ್ತವಾದ ದೇವೀಜಾತ್ರೆಯನ್ನು ಮಳಲ್ಕೆರೆ ಗ್ರಾಮದವರಂತೆ ತಾವಾದರೂ ನಿಲ್ಲಿಸವೇ ಇರಲಾರಿರೆಂದು ನಂಬಿದೆ. ಮಳಲ್ಕೆರೆ ಗ್ರಾಮದಲ್ಲಿ ಪ್ರತಿಸಾಲೆಯೂ ದೇವೀಜಾತ್ರೆಯಾಗುತಲಿದ್ದು ಅದರಲ್ಲಿ ನಿರಪರಾಧಿಗಳಾದ ಅನೇಕ ಮೂಕ ಪ್ರಾಣಿಗಳನ್ನು ಕೊಲ್ಲುತ್ತಿದ್ದರು ಹಾಯ್! ಹಾಯ್! ಇದೆಂತಹ ದುಷ್ಟಪದ್ಧತಿಯು. ತಮ್ಮ ಕಷ್ಟಗಳನ್ನು ಲಕ್ಷಿಸದೇ ಹಗಲಿರುಳೂ ಮಳೆ, ಬಿಸಲು, ಗಾಳಿಯನ್ನದೆ ನಮ್ಮ ಸುಖಕ್ಕಾಗಿ ದುಡಿದು ಪ್ರಾಣಿಗಳಿಗೆ ಈಗತಿಯೇ? ಪ್ರತಿಪ್ರಾಣಿಯು ಸಹ ಉಪಕಾರ ಮಾಡಿದವರಿಗೆ ಪ್ರತ್ಯುಪಕಾರ ಮಾಡುವುವು. ಆದರೆ ಶ್ರೇಷ್ಠವಾದ ಮನುಷ್ಯಜನ್ಮದಲ್ಲಿದ್ದು ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡುವದು ಕರ್ತವ್ಯವಾಗಿದ್ದರೂ ಅಪಕಾರವನ್ನಾದರೂ ಮಾಡದಿರಬಾರದೆ! ಈ ವಿಷಯವನ್ನೆಲ್ಲಾ ಯೋಚಿಸಿ ಮ|| ರಾ|| ದಾವಣಗೆರೆ ಮಳಲ್ಕೆರೆ ಸತ್ಯಪ್ಪನವರು ಮತ್ತು ನಮ್ಮ ಸಂಘದ ಮ|| ರಾ|| ಸಿದ್ಧಲಿಂಗಪ್ಪ ಬೆಲ್ಲದ ಇವರು ಮಳಲ್ಕೆರೆ ಗ್ರಾಮದವರಿಗೆ ಚನ್ನಾಗಿ ಬೋಧಿಸಲು ಆ ಗ್ರಾಮದ ಸರ್ವರೂ ಹಿಂಸಾಮಾಡತಕ್ಕದ್ದು ರಾಕ್ಷಸಕೃತ್ಯವೇ ಹೊರತು ಮಾನುಷಕೃತ್ಯವಲ್ಲವೆಂದು ತಿಳಿದು ಇನ್ನು ಮುಂದೆ ತಮ್ಮ ಗ್ರಾಮದಲ್ಲಿ ಯಾರೂ ಯಾವಕಾಲದಲ್ಲಿಯೂ ಹಿಂಸೆಯನ್ನು ಮಾಡುವುದಿಲ್ಲವೆಂದೂ ಮತ್ತು ಮಾಂಸವನ್ನು ಸಹ ತಿನ್ನುವುದಿಲ್ಲವೆಂದೂ ಪ್ರತಿಜ್ಞೆಮಾಡಿದರು. ಅದಲ್ಲದೆ ತಮ್ಮ ಗ್ರಾಮದಲ್ಲಿ ನಡೆದ ಈ ಸಾಲಿಯ ದೇವೀಜಾತ್ರೆಯಲ್ಲಿ ಸಣ್ಣ ಡಕೋಣವನ್ನು ಸಹ ಕಡಿಯದೆ ಪಂಚಾಮೃತದಿಂದ ಜಳಕವನ್ನು ಮಾಡಿ ಬಿಟ್ಟಿದ್ದಲ್ಲದೆ ಆದಿವಸ ದೇವರ ಭಜನೆ ಮುಂತಾದ ಸತ್ಕಾಲಕ್ಷೇಪದಿಂದ ಕಾಲವನ್ನು ಕಳೆದರು. ದೇವಿಗೆ ಹರಿಕೆಯನ್ನು ಕಟ್ಟಿಕೊಂಡಿದ್ದವರೆಲ್ಲರೂ ಹಣ್ಣುಕಾಯಿ ಕರ್ಪೂರ ಮುಂತಾದವುಗಳಿಂದ ದೇವಿಯನ್ನು ಪೂಜಿಸಿ ದೇವಿಯ ಭಂಡಾರಕ್ಕೆ ಹಣವನ್ನು ಹಾಕಿದರು ಮಳಲ್ಕೆರೆಯ ಜನಗಳು ಈ ರೀತಿಯಾಗಿ ಇತರ ಗ್ರಾಮಸ್ಥರಿಗೆಲ್ಲಾ ಮೇಲ್ಪಂಕ್ತಿಯಾದುದು ಸಂತೋಷದ ಸಂಗತಿಯೇ. ಈ ಗ್ರಾಮದವರಂತೆ ದಾವಣಗೆರೆ ತಾಲೂಕ್ ಆಶಗಟ್ಟ ಗ್ರಾಮದವರು ಸಹಾ ಹಿಂಸಾಯುಕ್ತ ದೇವೀಜಾತ್ರೆಯನ್ನು ನಿಲ್ಲಿಸಿ ಕೇವಲ ಸಾತ್ವಿಕ ರೀತಿಯಿಂದಲೇ ಮಾಡಿದರು. ಇದನ್ನು ನೋಡಿಯಾದರೂ ಇತರ ಗ್ರಾಮದವರು ತಮ್ಮ ಗ್ರಾಮದಲ್ಲಿಯೂ ಹಿಂಸಾಯುಕ್ತ ಜಾತ್ರೆಯು ನಡೆಯುತ್ತಿದ್ದರೆ ಮಳಲ್ಕೆರೆ ಗ್ರಾಮದವರಂತೆ ತಾವಾದರೂ ನಿಲ್ಲಿಸಲು ಪ್ರಯತ್ನಿಸಬೇಕಾಗಿ ಕೋರುವ

ತವನಪ್ಪನವರ ದೇವೇದ್ರಪ್ಪನವರು.
(ಅಧ್ಯಕ್ಷರು)
ಪ್ರಾಣಿದಯಾ ಜ್ಞಾನಪ್ರಸಾರಕ ಸಂಘ ದಾವಣಗೆರೆ.

ಜಮಾನುದಾರರ ಸಂಘದ ಕಮಿಟಿ

ತಾರೀಕು 29—3—25ರಲ್ಲು ವೀರರಾಜಪೇಟೆಯಲ್ಲಿ ನಡೆದ ಜಮ್ಮಾನುದಾರರ ಎಕ್ಸಿಕ್ಯೂಟೀವ್ ಕಮಿಟಿ ಮೀಟಿಂಗಿನ ವಿವರ.

ರಾ. ಬಾ. ಕೆ. ಅಪ್ಪಯ್ಯನವರು ಅಧ್ಯಕ್ಷರಾಗಿದ್ದರು [illegible] ಕಮಿಟಿ ಮೆಂಬರುಗಳು ಹಾಜರಾಗಿದ್ದರು.

1. ಕೂಲಿ ಆಳುಗಳಿಗೆ ವಾರಾಪ್ರತಿ ಸಂಬಳ ಕೊಡಬೇಕೆಂಬ ಮಸೂದೆಯನ್ನೊಳಕೊಂಡ ಕಮೀಷನರವರ ಪತ್ರವು ಓದಲಾಯಿತು.

ಸಂಘವು ಈ ಮಸೂದೆಗೆ ವಿರೋಧಿಸುತ್ತದೆಂದು ಕಮೀಷನರವರಿಗೆ ತಿಳಿಸಬೇಕೆಂದು ತೀರ್ಮಾನವಾಯಿತು.

2. ಗಿರಣಿಗಳ ಮತ್ತು 50 ಆಳುಗಳಿಗಿಂತ ಹೆಚ್ಚಿರುವ ತೋಟಗಳ ಹೊಗಸು ಆಳುಗಳಿಗೆ ಹೆರಿಗೆಯ ಸಮಯದಲ್ಲಿ ಕೆಲಸವಿಲ್ಲದೆ ಜೀವನಕ್ಕೆ ಕೊಡುವಂತೆ ಒಂದು ಫಂಡನ್ನು ಕಾಯಬೇಕೆಂಬ ಮಸೂದೆಯನ್ನೊಳಕೊಂಡ ಕಮೀಷನರವರ ಪತ್ರವು ಓದಲಾಯಿತು. ಈ ಮಸೂದೆಗೂ ಸಂಘವು ಒಪ್ಪುವುದಿಲ್ಲವೆಂದು ಕಮೀಷನರವರಿಗೆ ತಿಳಿಸುವಂತೆ ಠರಾಯಿತು.

3 ಬ್ರಿಟಾಪು ಕಂಟ್ರಾಕ್ಟು ಆಕ್ಟಿನ ಬದಲಾದ [illegible] ಮಸೂದೆಯನ್ನು ತಯಾರಿಸಲು ಒಂದು ಕಮಿಟಿಯ [illegible] ವಿಷಯ ಕೊಡಗಿನ ಪ್ಲಾಂಟರ್ಸ್ ಸಂಘದ ಸೆಕ್ರೆಟರಿಯವರು ಬರೆದ ಕಾಗದವು ಓದಲಾಯಿತು.

ಈ ಕಾಗದವು ಸಂಘದ ಜನರಲ್ ಮೀಟಿಂಗಿನ [illegible] ಇಡಲಾಗುವುದೆಂದು ಪ್ಲಾಂಟರ್ಸ್ ಸಂಘಕ್ಕೆ ತಿಳಿಸುವಂತೆ ತೀರ್ಮಾನವಾಯಿತು.

4 [illegible] ಯರ್ದಂಡ [illegible] ದೇಶದ ಮತ್ತು ಜನರಲ್ [illegible] ಲಿಗಾಗಿ ಬೇರೆ ಕೆಲವರನ್ನು [illegible] ಸಲಾಯಿತು.

ಈ ವಿಷಯ [illegible]

[illegible] ಡುಕಕ್ಕಾಗಿ [illegible] ಮೀಟಿಂಗಿನಲ್ಲಿ [illegible] ರ್ಮಾನವಾಯಿತು.

ಶ್ರೀ ರಾಮಕೃಷ್ಣ ಪರಮಹಂಸರ [illegible]

[illegible]

[illegible] ಸಂಕಲ್ಪ [illegible] ಇವುಗಳಿಂದ [illegible] ರದಲ್ಲಿ ಮುಳುಗಿ ಸಂಸಾರವನ್ನು [illegible] ಕೊಂಡಂತೆಲ್ಲ ಸಂಸಾರದಲ್ಲಿ ಆಸಕ್ತಿಯು [illegible]

ಹಲಸಿನ ಹಣ್ಣನ್ನು ಬಿಡಿಸತಕ್ಕವ [illegible] ನಿನ್ನ ಕೈಗೆ ಎಣ್ಣೆ [illegible] ಬಡಿಯುವದು. ವಿವೇಕವೆಂಬ [illegible] ಕೈಗೆ ಹಚ್ಚಿಕೊಂಡು ಸಂಸಾರದ ಕೆಲಸದ [illegible] ಕ್ರಿಯ ಸಾಧನಗೆ ವಿಶಾಂತಿಯಾಗಿವು [illegible]

ನೀನು ಏಕಾಂತಸ್ಥಾನದಲ್ಲಿ [illegible] ರವೇಶ್ವರನಲ್ಲಿಟ್ಟರೆ ನೀನಿದ್ದಲ್ಲಿ ಭಕ್ತಿ ಮತ್ತು [illegible] ರು ಸುರಿಯುವದು. ಅದೇ ನೀನು ನಿನ್ನ ಮನಸ್ಸನ್ನು [illegible] ರದಲ್ಲಿಟ್ಟರೆ ಮನಸ್ಸು ದುಷ್ಟವಾಗುವದು. [illegible] ಬ್ಬವು ಕನಕ ಮತ್ತು ಕಾಂತೆ, ಇವುಗಳ [illegible]

ಸಂಸಾರವನ್ನು ನೀರಿಗೆ ಮನಸ್ಸ [illegible] ಲಿಸಬಹುದು. ಉತ್ತಮ ಹಾಲು [illegible] ವಾಯಿತೆಂದರೆ ಅದನ್ನು ಪುನಃ [illegible] ಡುವದಕ್ಕೆ ಬರಲಾರದು ಆದರೆ [illegible] ಡಿದರೆ ನೀರಲ್ಲಿ ಮಿಶ್ರ [illegible] ವನ್ನು ನಿರಂತರವಾಗಿ ಕಾಣಬಹುದು [illegible] ನಿಂದ ಬೆಣ್ಣೆ ತಯಾರಿ, ಅದ [illegible] ನೀರಿನಲ್ಲಿಟ್ಟರೂ ನೀರಿನಲ್ಲಿ [illegible] ರಗೆ ಏಕಾಂತ ಸಾಧನದಿಂದ ನೀನು ಮನಸ್ಸಿನ [illegible] ಕ್ತಿಯೆಂಬ ಬೆಣ್ಣೆಯಲ್ಲಿ ರೂಪಾಂತರ [illegible] ದಿದರೆ ಬೆಣ್ಣೆಯು ನೀರಿನಲ್ಲಿ [illegible] ತುಮಂತೆ ನಿನ್ನ ಮನಸ್ಸು ಸಂಸಾರದಲ್ಲಿದ್ದರೂ [illegible] ಯೊಡನೆ ಸೇರಿಕೊಳ್ಳಲಾರದು ಜ್ಞಾನದ ಇಲ್ಲವೆ ಭಕ್ತಿಯ [illegible] ವತ್ತಿತೆಂದರೆ ಮನಸ್ಸು ಸಂಸಾರದ [illegible] ಸಿದ್ಧವಾಗದು. ಸಂಸಾರದಿಂದ ಪ್ರತ್ಯೇಕ [illegible] ದೂ ಆಸಕ್ತವಾಗಿರಲಾರದು. ಇದರಿಂದ [illegible] ಸಾಧನವನ್ನು ಮಾಡು. ಕನಕ ಮತ್ತು ಕಾಂತೆ [illegible] ಅಸ್ಥಿರವಾದುವುಗಳು ಅಥವಾ [illegible] ಶ್ವರನೊಬ್ಬನೇ ಸತ್ಯವಸ್ತು [illegible] ನು? ದುಡ್ಡಿನ ಸಹಾಯದಿಂದ ಅನ್ನವಸ್ತ್ರ [illegible] ದೊರೆಯುವವು. ದುಡ್ಡಿನ ಸಹಾಯದಿಂದ ಇಷ್ಟೇ [illegible] ಮುಂದೇನೂ ಇಲ್ಲ ದುಡ್ಡಿನ ಬಲದಿಂದ ನಿನಗೆ [illegible] ರನು ಸಿಕ್ಕಲಾರನೆಂಬುದು ನಿಶ್ಚಯ. ದುಡ್ಡು [illegible] ಧ್ಯೇಕವೂ ಅಲ್ಲ ಇದು ವಿವೇಕದ ವಿಷಯ.

ದುಡ್ಡಿನಲ್ಲಿ ಇಲ್ಲವೆ ಸ್ತ್ರೀಯ ತಾಪನ್ನು [illegible] ಸಿದೆ? ನೀನು ನಿನ್ನ ವಿವೇಕಶಕ್ತಿಯನ್ನುಪಯೋಗಿಸಿದರೆ [illegible] ತ ಸಂಪತ್ತಿನ ಸ್ತ್ರೀಯ [illegible]

ಮಾಂಸ, ರಕ್ತ, ಚರ್ಮ, ಎಲುಬು, ಮಲಮೂತ್ರ ಇತ್ಯಾದಿಗಳಿಂದ ರಚಿತವಾದದ್ದಿರುವದೆಂದು ನಿನಗೆ ತಿಳಿದು ಬಂದೀತು. ಹೀಗಿದ್ದರೂ ಮನುಷ್ಯನು ಪರಮೇಶ್ವರನನ್ನು ಮರೆತು, ತನ್ನ ಮನಸ್ಸನ್ನು ಇಂತಹ ವಸ್ತುಗಳ ಕಡೆಗೆ ಹರಿಸುತ್ತಿರುವದು ಆಶ್ಚರ್ಯವಲ್ಲವೇ?

ಅಖಿಲ ಭಾರತ ಕೆಥಾರಿಣ ಧ್ವಜಮಂಡಲಿ,

ಕೊಡಗು ಶಾಖಾ, ಮಡಿಕೇರಿ

ಇದೇ ತಾ. 3ರಲ್ಲು ಮೇಲ್ಕಂಡ ಸಂಘದ ಕಮಿಟಿ ಮೀಟಿಂಗು ನಡೆಯಿತು. ಶಿಶುಪ್ರದರ್ಶನ ಸಮ್ಮಂಧ ಉಂಟಾದ ಆದಾಯ ವೆಚ್ಚದ ಪಟ್ಟಿಯನ್ನು ಮ ರಾ. ರಾ. ಶಾಮಣ್ಣನವರು ಆಡಿಟುಮಾಡಿ ಬರೆದ ಶರಗಳನ್ನು ಓದಲಾಯಿತು. ಜಮ್ಮಾ 299—3—0 ಜಮವು 346—14—4ಕ್ಕೆ ಖರ್ಚು ಸಹ ಆಗಿರುತ್ತೆ. ಜಮ ಮತ್ತು ಖರ್ಚಿನ ತಪಶೀಲು ಈ ಕೆಳಗೆ ಕೊಟ್ಟಿರುತ್ತೆ. ಹೆಚ್ಚಿಗೆ ಖರ್ಚಾದ ಮೊಬಲಗನ್ನು ರೆಡ್ ಕ್ರಾಸ್ ಸಂಘದ ಫಂಡಿನಿಂದ ವರ್ಗಾಯಿಸಿಕೊಳ್ಳಲು ತೀರುಮಾನವಾಯಿತು. ಮೇಜರ್ ಫ್ರೇಜರ್ ಸಾಹೇಬರವರ ಬದಲಿಗೆ ಕ್ಯಾಪ್ಟನ್ ಥಿಯೋಬಾಲ್ಡ್ ಸಾಹೇಬರನ್ನು ಚುನಾಯಿಸಿದರು. ರೆಡ್ ಕ್ರಾಸ್ ಸಂಘದ ವಾರ್ಷಿಕ ಜನರಲ್ ಮೀಟಿಂಗನ್ನು ಇದೇ [illegible] ಲಿಗೆ 24ನೇ ತಾರೀಕಿನ ದಿನ ಬೆಳಿಗ್ಗೆ 10 ಗಂಟೆಗೆ ಡಿ. ಹಗ. ಸಬ್ ಡಿವಿಜನಲ್ ಕಚೇರಿಯ ಹಾಲಿನಲ್ಲು ನಡಿಸುವಂತೆ ತೀರ್ಮಾನವಾಯಿತು.

ಜಮ ಖರ್ಚಿನ ತಪಶೀಲು.

ಜಮ.

	ರು.ಆ.ಪೈ.
[illegible] ಡಿಸ್ಪೆನ್ಸರಿ ಕಮಿಟಿಯಿಂದ ಜಮ	25—0—0
[illegible] ತಿಮ್ಮಯ್ಯನವರಿಂದ	10—0—0
ರೆಡ್ ಕ್ರಾಸ್ ಸಂಘದಿಂದ	24—0—0
[illegible] ಯರಾಯರು ದಾವಣಗೆರೆಯವರಿಂದ ...	0—4—0
[illegible] ಸತ್ಯಪ್ಪನವರು ಬುಕ್ಕು ಕೊಂಡು [illegible]	0—7—0
[illegible] ನವರಿಂದ .	5—0—0
[illegible] ರಾಯರಿಂದ ...	1—0—0
[illegible] ಅಪ್ಪಯ್ಯನವರಿಂದ ...	10—0—0
[illegible] ರಪ್ಪನವರಿಂದ	15—0—0
[illegible] ಯವರಿಂದ	5—0—0
[illegible] ಸ್ವಾಮಿಯವರಿಂದ ...	5—0—0
[illegible] ಸ್ವಾಮಿಯವರು ಟಿ ತಿಂಡಿವಸ್ತುಗಳ ಕೊಟ್ಟು [illegible] ಬ್ಬಸಿ	61—6—0
[illegible] ಕಿಂಡಲುಯವರಿಂದ ...	5—0—0
[illegible] ತಿಮ್ಮಯ್ಯನವರು ಜಾವಲಿ [illegible]	93—3—0
[illegible] ದಿಂದ ಬಂದ	4—11—0
[illegible] ಅಪ್ಪಯ್ಯನವರಿಗೆ ವರ್ಕ್ಷಾಪಾರ್ಟಿ [illegible] ಬಂದ	12—8—0
[illegible] ನಾವು ಪಾಲೇಕಂಡ ಮುಂದಣ್ಣ [illegible] ಬಂದ	[illegible]—1—0
ಹಬ್ಬ ಊಳಿದ ಚಾಪೆಗಳನ್ನು ಮಾರಿ	5—0—0
[illegible] ವೆಂಕಪ್ಪಯ್ಯನವರು ಕೊಂಡು [illegible] ಬುಕ್ಕು [illegible]	0—1—0
[illegible] ಶಾಸ್ತ್ರಿಯವರು ಬುಕ್ಕುಗಳನ್ನು [illegible] ಕೊಂಡದರಿಂದ	0—4—0
[illegible] ಗುಂಡುಕುಟ್ಟಿ ಮಾದಯ್ಯನವರಿಂದ ...	5—0—0
ಜಮ್ಮ....	299—3—0

ಖರ್ಚು

	ರು.ಆ.ಪೈ
[illegible] ಚಾರ್ಜು	7—1—0
[illegible] ಜೆಸ್ ಮೋಟ	4—2—0
ಇನಾಮುಗಳಿಗೆ	46—0—0
[illegible] ನಡಿಸಿದವರಿಗೆ	2—0—0
[illegible] ಸಾಮಾನುಗಳನ್ನು ಕೊಂಡು ಕೊಂಡ [illegible]	17—9—4
[illegible] ಕೊಂಡದಕ್ಕೆ ...	8—0—0
[illegible] ಜೋಡಿಸಿದಕ್ಕೆ	4—0—0
[illegible]	15—0—0
[illegible] ಮತ್ತು ಇತರ ಖರ್ಚುಗಳು....	34—14—6
[illegible] ನಡಿಸಿದಕ್ಕೆ ...	4—2—0
[illegible] ರಿಪೇರಿ	14—0—0
[illegible] ಸಂಗ್ರಹಗಳಿಂದ	12—1—0
[illegible] ರವರ ಬಿಲ್ ಮೊತ್ತ	162—3—0
[illegible] ಖರ್ಚು .	10—0—0
[illegible] ಬಂದವರಿಗೆ ಇನಾಮು ...	5—0—0
[illegible] ಸ್ಟಾಂಪುಗಳಿಂದ ..	10—0—6
[illegible] ವಕ್ಕೆ	13—13—0
ಪ್ರಿಂಟಿಗ್ ಚಾರ್ಜುಗಳು ..	36—3—0
ಒಟ್ಟು ಖರ್ಚು	346—3—4

ಎ. ಪಿ ಕಾರ್‍ಯಪ್ಪ,
ಹಾನರರಿ ಸೆಕ್ರೆಟರಿ.

ಮನುಷ್ಯರೂ ಕ್ರಿಮಿಕೀಟಗಳೂ.

(ಮದ್ರಾಸ್ ಪ್ರಕಟನ ಸಂಘದಿಂದ)

"ಅಬ್ಸರ್ವರ್" ಎಂಬ ವರ್ತಮಾನ ಪತ್ರಿಕೆಯಲ್ಲಿ ವೈದ್ಯಶಾಸ್ತ್ರಸಂಬಂಧವಾದ ಲೇಖನಗಳನ್ನು ಬರೆಯುವ ಜಾತಮಾದಾರನೊಬ್ಬನು ಬರೆದಿರುವದೇನೆಂದರೆ.—

(ಇಂಗ್ಲೆಂಡಿಗೆ) ಸಮೀಪವಾಗಿರುವ ಪೂರ್ವದೇಶಗಳ (ತುರ್ಕಿಸ್ಥಾನ್ ಮುಂತಾದ ಪ್ರಾಂತ್ಯಗಳ) ವಿಚಾರವಾಗಿ, ನಾವು ಬಹಳ ತೀವ್ರವಾಗಿ ಗಮನಿಸಬೇಕಾದ ಅಂಶಗಳಲ್ಲಿ, ಎಲ್ಲಕ್ಕಿಂತಲೂ ಬಹಳ ಪ್ರಧಾನವಾದುದು ಉಷ್ಣದೇಶಗಳಲ್ಲಿ ತಲೆದೋರತಕ್ಕ ರೋಗಗಳಿಗೆ ನಿವಾರಣೋಪಾಯವೇನೆಂಬುದೇ! ಇಂತಹ ವಿಚಾರಗಳನ್ನು ಪರಿಶೀಲನೆಮಾಡುವುದರಲ್ಲಿ ಯಾವಾಗಲೂ ಇಂಗ್ಲಿಷರೇ ಮುಂದಾಳುಗಳೆಂದು ಧಾರಾಳವಾಗಿ ಹೇಳಬಹುದು.

ಇದೇ ವಿಚಾರದಲ್ಲಿ ಆ ದೇಶೀಯರಾದ ಮೇನ್ಸನ್, ರಾಸ್, ಬ್ರೂಸ್ ಈ ಮೂವರೂ ಕ್ರಮಪಟ್ಟು ಪಡೆದಷ್ಟು ಚಿರಸ್ಥಾಯಿಯಾದ ಪ್ರಖ್ಯಾತಿಯು ಬೇರೊಬ್ಬರಿಗ ಸಲ್ಲದು. ಅಂತವರು ಮುಂದೆ ಹುಟ್ಟಲಾರರೆಂದೂ ಹೇಳಬಹುದು. ಬ್ರಿಟಿಷ್ ಜನಾಂಗದವರು ಇಷ್ಟು ಮಟ್ಟಿಗೆ ಪ್ರಯತ್ನಮಾಡಬೇಕಾದುದು ಸಹಜವೇ? ಏಕೆಂದರೆ, ಪ್ರಪಂಚದಲ್ಲಿ ಬೇರೆ ಯಾವ ಜನಾಂಗಕ್ಕೂ ಮೇಲ್ಕಂಡ ವಿಚಾರವಾಗಿ ಇಷ್ಟೊಂದು ವಿಮರ್ಶಮಾಡಿ ಜ್ಞಾನಾಭಿವೃದ್ಧಿಯನ್ನು ಪಡೆಯಬೇಕಾದ ಅವಶ್ಯಕತೆಯಿರಲಿಲ್ಲ. ಬೇರೆಬೇರೆ ಮೂಲೆಮೂಲೆಗಳಲ್ಲಿ ತಮಗೆ ಸೇರಿದ ಸ್ವಾಸ್ಥ್ಯಗಳನ್ನೂ, ಅಲ್ಲಿನ ತಮ್ಮ ಪ್ರಜೆಗಳನ್ನು ಸರಿಯಾದ ಸ್ಥಿತಿಯಲ್ಲಿ ಕ್ಷೇಮವಿರಿಸಿ, ಆಯಾ ಪ್ರಾಂತ್ಯಗಳ ಸ್ಥಿತಿಗತಿಗಳನ್ನು ವಿಮರ್ಶಿಸತಕ್ಕ ಬೇಕಾದ ಜವಾಬ್ದಾರಿಯು ಬ್ರಿಟಿಷ್ ಜನಾಂಗದ ಮೇಲೆ ಬಿದ್ದಿರುವಷ್ಟು ಬೇರೆ ಜನಾಂಗಕ್ಕಿಲ್ಲ.

ಹಿಂದೆ ನಡೆದ ಯೂರೋಪಿನ ಮಹಾ ಯುದ್ಧದಿಂದುಂಟಾದ ಅಲ್ಪಸ್ವಲ್ಪ ಲಾಭಗಳಲ್ಲಿ, ಉಷ್ಣವಲಯಕ್ಕೂ ಅಲ್ಲಿನ ಸೈನಿಕರಿಗೂ ಸಂಬಂಧಪಟ್ಟ ಆರೋಗ್ಯವಿಚಾರವನ್ನು ಕುರಿತು ಹೆಚ್ಚು ಗಮನಕೊಡಬೇಕಾದ ಅವಶ್ಯಕತೆಯುಂಟಾದುದು ಒಂದು ಪ್ರಧಾನಾಂಶವಾಗಿದೆ. ವೈದ್ಯಶಾಸ್ತ್ರ ಶೋಧಕರು, ಈ ಅವಕಾಶವನ್ನು ನಿರರ್ಥಕವಾಗಿ ಬಿಡದೆ, ಬಹಳ ಪ್ರಯೋಜನಕರಗಳಾದ ಕೆಲಸಗಳನ್ನು ನಡೆಸಿರುವರು. ಹಿಗ್ಗಿ ಕೆಲವು ವರ್ಷಗಳ ಕೆಳಗೆ, ಗಲಿಪೊಲಿಯೆಂಬ ಸ್ಥಳದಲ್ಲಿ, ಸೈನ್ಯಗಳಿಗೆ ಬಹಳ ಹಾನಿಕರಗಳಾಗಿ ಪ್ರಬಲಿಸಿದ್ದ ಸನ್ನಿಪಾತಜ್ವರ, ಅದಕ್ಕೆ ಸಮಾನವಾದ ಇತರ ವ್ಯಾಧಿಗಳು, ಬೇರೆಬೇರೆ ತರದ ಸನ್ನಿಗಳು, ಕ್ರಿಮಿಸಂಬಂಧದಿಂದುಂಟಾಗತಕ್ಕ ಶೀತಭೇದಿ ಮುಂತಾದ ಅಂಟುವ್ಯಾಧಿಗಳೆಲ್ಲಾ, ಇನ್ನು ಮೇಲೆ ಅಷ್ಟು ಪ್ರಬಲವಾಗದಂತೆ ಅಡಗಿಸುವುದಕ್ಕೆ ಸಿದ್ಧವಾಗುವ ಮಾರ್ಗವನ್ನು ಕಂಡುಹಿಡಿದರು. ಇದರಿಂದ ಆ ಯುದ್ಧಕಾಲದಲ್ಲಿ, ಸೈನ್ಯದಲ್ಲಿ ನೂರಾರು ಸಾವಿರ ಜೀವಗಳನ್ನು ಬದುಕಿಸಿದಂತಾಯಿತು. ಶತ್ರುಗಳನ್ನು ನಿಗ್ರಹಿಸುವ ಪ್ರಯತ್ನಕ್ಕಿಂತಲೂ, ಆ ಅಂಟು ರೋಗಗಳನ್ನು ಹರಡುವ ಕ್ರಿಮಿಗಳೊಡನೆ ಹೋರಾಡಿ ಅವುಗಳನ್ನಡಗಿಸುವುದಕ್ಕೆ ಹೆಚ್ಚು ಸಾಹಸವನ್ನು ಮಾಡಬೇಕಾಯಿತು. ವೈದ್ಯಶಾಸ್ತ್ರ ನಿಪುಣರಾಗಿ, ಇನ್ನೂ ಅದರ ಶೋಧನೆಯ ಕಾರ್ಯದಲ್ಲಿಯೇ ಇದ್ದ ಮಿ. ಆರ್ಥರ್ ಬೇಕಟ್ ಎಂಬವರು "ಟೈಫಸ್" ಎಂಬ ಒಂದು ಬಗೆಯ ವಿಷಮಜ್ವರದ ಮೂಲವನ್ನು ಕಂಡುಹಿಡಿಯುವ ಪ್ರಯತ್ನದಲ್ಲಿಯೇ ತಮ್ಮ ಪ್ರಾಣವನ್ನೂ ಒಪ್ಪಿಸಿಬಿಟ್ಟರು. ಇಂತಹ ಭಯಂಕರವಾದ ವ್ಯಾಧಿಯಿಂದ ಜನರನ್ನು ರಕ್ಷಿಸುವುದಕ್ಕಾಗಿ, ಆ ಕ್ರಿಮಿಗಳನ್ನು ನಾಶಮಾಡುವ ವಿಷಯದಲ್ಲಿ ಈಗ ನಡೆಯುತ್ತಿರುವ ಪ್ರಯತ್ನಗಳು ಬಹಳ ಫಲಕಾರಿಗಳಾಗಿವೆಯೆಂದು ನಾವು ದೃಢವಾಗಿ ನಂಬಬಹುದು.

ರೋಗಕ್ರಿಮಿಗಳನ್ನಡಗಿಸುವುದಕ್ಕಾಗಿ, ಮನುಷ್ಯನು ಈಗ ನಡೆಸುತ್ತಿರುವ ಮತ್ತು ಮುಂದೆ ನಡಿಸಬಹುದಾದ ಪ್ರಯತ್ನಗಳೇನೆಂಬುದಕ್ಕೆ ನವೀನಪ್ರಪಂಚವೆನಿಸಿಕೊಂಡ ಅಮೇರಿಕದಿಂದಲೂ ಒಳ್ಳೇ ನಿದರ್ಶನಗಳನ್ನು ಪಡೆಯಬಹುದು. ಕೆಲಕೆಲವು ಸಣ್ಣ ಪ್ರದೇಶಗಳಲ್ಲಿ ಹೊರತು ದಕ್ಷಿಣ ಅಮೇರಿಕದಲ್ಲಿ ಇನ್ನೂ ಈ ಪ್ರಯತ್ನವು ಚೆನ್ನಾಗಿ ಹರಡಿದ್ದರೂ, ಆ ಖಂಡದ ಇತರ ಭಾಗಗಳಲ್ಲಿ ಒಳ್ಳೇ ನಿದರ್ಶನಗಳು ದೊರೆಯುವುವು. ಈಚೆಗೆ ಸ್ವಲ್ಪಕಾಲದ ಹಿಂದೆ ಆ ಖಂಡಕ್ಕೆ ಹೋಗಿ ಬಂದ ಸರ್ ಜಾರ್ನ್ ಬ್ಲಾಂಟ್‌ಸ್ಟನ್ ಎಂಬವರು, ಮೇಲ್ಕಂಡ ಪ್ರಯತ್ನಕ್ಕೆ ಅದು ಬಹಳ ಉತ್ತಮವಾದ ಸ್ಥಳವೆಂದೂ, ಅಲ್ಲಿ ಅಪರಿಮಿತವಾದ ಅನುಕೂಲ್ಯಗಳಿರುವುವೆಂದೂ, ಹೇಳಿರುವರು. ಅಲ್ಲಿ ಕ್ರಿಮಿಶಾಸ್ತ್ರ ಮತ್ತು ಸಸ್ಯಶಾಸ್ತ್ರ ಸಂಬಂಧವಾದ ಶೋಧನೆಗಳನ್ನು ಕೈಕೊಂಡು ನಡೆಸಿದರೆ, ಅತ್ಯಂತ ಅನಾಯಾಸವಾದ ಭೋಗಭಾಗ್ಯವನ್ನೂ ಆನಂದಕರವಾದ ವಿಹಾರೋದ್ಯಾನದಂತೆ ಪರಿವರ್ತಿಸಬಹುದು. ಈ ಪ್ರಯತ್ನಕ್ಕಾಗಿ ದಕ್ಷಿಣಅಮೇರಿಕದಲ್ಲಿ ಬಂಡವಾಳವಿಟ್ಟು ಕೆಲಸಮಾಡತಕ್ಕವರಿಗೆ ಅಪರಿಮಿತವಾದ ಪ್ರತಿಫಲವು ದ್ರವ್ಯರೂಪವಾಗಿ ಲಭಿಸುವುದೆಂದು ಎಲ್ಲರಿಗೂ ಆಶೋತ್ತರವು ಹುಟ್ಟಬಹುದು. ವಾಸ್ತವದಲ್ಲಿ ನೋಡಿದರೆ, ಮಿ ರಾಸ್ ಎಂಬವರು ಇಸ್ಮಾಲಿಯಾ ಎಂಬಲ್ಲಿ ಮಲೇರಿಯಾ ಜ್ವರಕ್ಕೆ ಕಾರಣಗಳಾದ ಸೊಳ್ಳೆಗಳಿಗೂ, ಗಾರ್ಗಾಸ್ ಎಂಬವರು ಪನಾಮಾ ಪ್ರಾಂತ್ಯದಲ್ಲಿ ಹಳದೀಜ್ವರಕ್ಕೆ (ಯೆಲ್ಲೋ ಫೀವರ್) ಕಾರಣಗಳಾದ ಸೊಳ್ಳೆಗಳಿಗೂ ನಿವಾರಣೋಪಾಯವನ್ನು ಕಂಡುಹಿಡಿದಂತೆ, ಇಲ್ಲಿಯೂ ಮನುಷ್ಯರಿಗೆ ಹಾನಿಕರಗಳಾದ ಕ್ರಿಮಿಗಳನ್ನು ನಿರ್ಮೂಲವಮಾಡುವ ವಿಷಯದಲ್ಲಿ ಯಾರೂ ಪ್ರವರ್ತಿಸಿ ಜಯಹೊಂದುವರೋ ಅಂತವರಿಗೆ ದಕ್ಷಿಣ ಅಮೇರಿಕದ ಅಪರಿಮಿತವಾದ ಸಹಜ ಸೌಭಾಗ್ಯಗಳೆಲ್ಲಾ ಮೊತ್ತಕ್ಕೆ ಕೈವಶವಾಗುವುದೆಂದೇ ಹೇಳಬಹುದು. ಈ ಅದೃಷ್ಟ ಲಾಭವು ಅನ್ಯದೇಶದ ಜನಾಂಗದವರಿಗೇ ಹೊರತು, ಅಲ್ಲಿ ಈಗಿನ ಸ್ಥಳೀಕರೇ ಅದಕ್ಕೆ ಭಾಗಿಗಳಾಗುವ ಸಂಭವವು ಕಡಿಮೆ.

ಈ ಮೇಲ್ಕಂಡ ವಿಚಾರವಾಗಿಯೇ ಅಮೇರಿಕದ "ನಾಷನಲ್ ಜಿಯೊಗ್ರಫಿಕಲ್ ಸೊಸೈಟಿ" ಯ ಮೂಲಕ ಪ್ರಕಟವಾಗುವ ಅಮೂಲ್ಯವಾದ ಒಂದು ಸಂಚಿಕೆಯಲ್ಲಿ "ಮೊಸ್ ಫೈಟಿಂಗ್ ಮೆಡಿಸಿನ್" ಎಂಬ ಹೆಸರಿನಿಂದ ಒಂದಾನೊಂದು ಲೇಖನವು ಪ್ರಕಟವಾಗಿದೆ. ಅನೇಕ ವಾಚಕರು ಈ ಪತ್ರಿಕೆಯನ್ನು ಓದುತ್ತಿರುವರು. ಇದರಲ್ಲಿ ಭೂಗೋಳವಿಷಯವಾಗಿ, ಕಣ್ಣಿಗೂ, ಮನಸ್ಸಿಗೂ ಆನಂದಕರಗಳಾದ ಎಷ್ಟೋ ನಕ್ಷೆಗಳೂ, ಲೇಖನಗಳೂ ಪ್ರಕಟವಾಗುತ್ತಿರುವುವು. ಈ ಪತ್ರಿಕೆಯಲ್ಲಿರುವ ಮೇಲ್ಕಂಡ ಲೇಖನವು ಬಹಳ ಅಮೂಲ್ಯವಾಗಿದೆ. ಏಕೆಂದರೆ, ಇದರಲ್ಲಿ ಅತಿ ಭಯಂಕರಗಳಾದ ಮೂರು ಬಗೆಯ ಅಂಟು ವ್ಯಾಧಿಗಳು ಈಗೀಗ ಆ ಪ್ರಾಂತ್ಯದಲ್ಲಿ ಬ್ಯಾಗ ಅಡಗುತ್ತ ಬಂದಿವೆ ಎಂಬುದನ್ನು ವಿವರವಾಗಿ ಬರೆದಿದೆ. ಈಗ ನಡೆದಿರುವ ಪ್ರಯತ್ನದಲ್ಲಿ ಎಲ್ಲೋಫೀವರ್ (ಅಥವಾ ಹಳದೀ ಜ್ವರ) ವೆಂಬ ವ್ಯಾಧಿಯು, ಇನ್ನು ಸ್ವಲ್ಪ ಕಾಲದಲ್ಲಿಯೇ ಪ್ರಪಂಚದಲ್ಲಿ ಎಲ್ಲಿಯೂ ತಲೆದೋರದಂತೆ ಸಂಪೂರ್ಣವಾಗಿ ಅಡಗಿ ಹೋಗುವುದರಲ್ಲಿ ಸಂದೇಹವಿಲ್ಲ. ಕೊಕ್ಕೆ ಹುಳದ ರೋಗ ಮತ್ತು ಮಲೇರಿಯಾ ಜ್ವರ, ಇವೂ ಕೂಡ ಕಾಲಕ್ರಮದಿಂದ ನಿಂತುಹೋಗುವ ಸಂಭವ ಉಂಟು. ಎಂದರೆ ಜನಗಳು ಯಾವಾಗ ತಮ್ಮ ಕ್ಷೇಮಚಿಂತೆಯಲ್ಲಿ ಗಮನಪಟ್ಟು, ಆ ರೋಗಗಳ ನಿವಾರಣೋಪಾಯಗಳನ್ನು ತಿಳಿದುಕೊಂಡು ಅದರಂತೆ ಎಚ್ಚರದಿಂದ ನಡಕೊಳ್ಳುವರೋ, ಅಷ್ಟು ಶೀಘ್ರದಲ್ಲಿ ಆದರ ಫಲವನ್ನು ಪಡೆಯಬಹುದು.

ಈ ವಿಚಾರದಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿಯೂ, ಫಿಲಿಪೈನ್ ದ್ವೀಪಗಳಲ್ಲಿಯೂ ನಡೆಯುವ ಕಾರ್ಯಗಳಿಗಿಂತ ಈ ನಮ್ಮ ಇಂಡಿಯಾ ದೇಶದಲ್ಲಿ ನಾವು ಹೆಚ್ಚು ಪ್ರಯತ್ನವನ್ನು ನಡೆಸಬೇಕಾದ ಕಾಲವು ಸಮೀಪಿಸಿದೆ."

ಮದ್ರಾಸ್ ಪಬ್ಲಿಕ್ ಹೆಲ್ತ್ ಡೈರೆಕ್ಟರಾದ ಮೇಜರ್ ರಸ್ಸೆಲ್ ಟಿ ಎಂ. ಎಸ್. ರವರು ಬರೆಯುವುದೇನೆಂದರೆ.

"ಮೇಲ್ಕಂಡ ಲೇಖನದಲ್ಲಿರುವ ಕೊನೆಯ ವಾಕ್ಯವು, ಈ ದೇಶದಲ್ಲಿ ನಿಜವಾದ ಅಭಿಮಾನವುಳ್ಳವರಾರೊಬ್ಬರಿಗೂ, ಎಂದರೆ, ಅವರು ಐರೋಪ್ಯರಾಗಿರಲಿ, ಭಾರತೀಯರಾಗಿರಲಿ, ಎಲ್ಲರಿಗೂ ಮನಸ್ಸಿಗೆ ಹತ್ತದಿರಲಾರದು. ಮನುಷ್ಯ ಜಾತಿಗೂ ರೋಗ ಕ್ರಿಮಿಗಳಿಗೂ ಇರುವ ಹೋರಾಟವು, ಪ್ರಪಂಚದ ನಾನಾ ಭಾಗಗಳಲ್ಲಿ ಹರಡಿದ್ದರೂ, ಇಂಡಿಯಾ ದೇಶದಲ್ಲಿ ಅದು ಪ್ರಬಲವಾಗಿರುವಷ್ಟು ಬೇರೆಲ್ಲಿಯೂ ಇಲ್ಲ. ಮಲೇರಿಯಾ, ಫೈಲೇರಿಯಾಸಿಸ್, ಡಂಗೀ ಜ್ವರ, ಪ್ಲೇಗು, ಮರುಕಳಿಸುವ ಜ್ವರ, ಕಾಲಾ ಅಜಾರ್, ಮುಂತಾಗಿ ಇನ್ನೂ ಅನೇಕ ವ್ಯಾಧಿಗಳು, ಮನೆಗಳಲ್ಲಿರುವ ಸೊಳ್ಳೆ, ನೊಣ ಮುಂತಾದವುಗಳ ಮೂಲಕವಾಗಿ ಒಬ್ಬರಿಂದೊಬ್ಬರಿಗ ಅಂಟಿಬಂದು ನಾನಾ ಕಡೆಗ ಹರಡುವುವು. ಈ ಅಂಟು ವ್ಯಾಧಿಗಳಲ್ಲಿ ಒಂದಲ್ಲದಿದ್ದರೆ ಮತ್ತೊಂದು, ನಮ್ಮ ದೇಶದ ಯಾವುದಾದರೂ ಪ್ರಾಂತ್ಯದಲ್ಲಿ ತಲೆದೋರುತ್ತಲೇ ಇರುವುದು. ಇದರಿಂದ ಎಷ್ಟೋ ಜನರು ಮರಣಕ್ಕೆ ಗುರಿಯಾಗುತ್ತಿರುವರು. ಈ ರೋಗಗಳನ್ನು ನಿಗ್ರಹಿಸುವುದಕ್ಕಾಗಿ ನಮ್ಮ ಹಿಂದಿನ ವೈದ್ಯವಿದ್ಯಾ ನಿಪುಣರು ಅನೇಕ ದೃಢಪ್ರಯತ್ನಗಳನ್ನು ನಡೆಸಿದ್ದರೂ, ಈಗ ನಾವು ಸುಮ್ಮನೆ ಅಲಕ್ಷ್ಯವಾಗಿ ನಿಲ್ಲುವ ಹಾಗಿಲ್ಲ. ಈಗ ನಾವು ನಡಸಬೇಕಾದ ಪ್ರಯತ್ನಗಳು ಬಹಳ ಮುಖ್ಯವಾಗಿವೆ. ಈ ವಿಚಾರದಲ್ಲಿ ನಾವೂ ಕೂಡ ಅನೇಕ ಹೊಸ ಸಂಗತಿಗಳನ್ನು ಶೋಧನೆಮಾಡಬೇಕಾಗಿದೆ. ಇದಕ್ಕಾಗಿ ಈಗ ನಮ್ಮ ದೇಶದಲ್ಲಿ ಶಾಸ್ತ್ರೀಯವಾಗಿ ಕೆಲಸಮಾಡತಕ್ಕ ವಿದ್ಯಾವಂತರ ಸಹಾಯವು ಅತ್ಯವಶ್ಯವಾಗಿದೆ. ಕೇವಲ ದ್ರವ್ಯಬಲದಿಂದಲೇ ಈ ಕೆಲಸವನ್ನು ನಡೆಸುವುದಾದರೆ, 350 ಪ್ರಾಣಗಳನ್ನು ಬದುಕಿಸುವುದಕ್ಕೆ 2 ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದೆ ವೆಚ್ಚವಾಗುವುದಾಗಿ ಲೆಕ್ಕಕ್ಕೆ ಬಂದಿದೆ. ಶಾಸ್ತ್ರ ಮರ್ಯಾದೆಯಿಂದ ನಿಜಸ್ಥಿತಿಯನ್ನು ಶೋಧನೆ ಮಾಡಿ ತಿಳಿದುಬಲ್ಲ ಸ್ವಲ್ಪ ಮಂದಿ ವಿದ್ಯಾವಂತರಾದರೂ ಉತ್ಸಾಹದಿಂದ ಈ ಕೆಲಸಕ್ಕೆ ಪ್ರವರ್ತಿಸಿದ ಪಕ್ಷದಲ್ಲಿ, ಎಷ್ಟುಬಾರಿ ಅಂತಹ 350 ಜೀವಗಳನ್ನು ಬದುಕಿಸಬಹುದೆಂಬುದನ್ನು ನಮ್ಮವರು ಯೋಚಿಸಬೇಕು."

'ಆರೋಗ್ಯಚಂದ್ರಿಕೆ'

ನೋಟೀಸ್.

ಕೊಡಗು ಅಮೃತಮಯ ಸಂಘ.

ಈ ಸಂಘದ ವಾರ್ಷಿಕ ಜನರಲ್ ಮೀಟಿಂಗು ಈ ತಾ. 12ನೇ ಆದಿತ್ಯವಾರ ಬೆಳಿಗ್ಗೆ 9 ಗಂಟೆಗೆ ಮೂರ್ನಾಡಿನಲ್ಲಿ ಮ. ಕೋದಂಡ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಮಹನೀಯರೆಲ್ಲರೂ ದಯಮಾಡಿ ಬರಬೇಕಾಗಿ ಕೋರಿಕೆ.

ಸೆಕ್ರೆಟರಿ,
1—4—'25. ಅಮೃತಮಯ ಸಂಘ.

SEE! HOW DECORATIVE!



Our "TIC-TAK" (Registered.) wall clock has earned a name, that cannot be beaten. The best and reliable time-keeper. Universally approved. Insist always on

'Tic-Tak'

(Registered.)

WALL CLOCKS

Price rupees Three only.

GERMAN ALARAM TIMEPIECE.

Offered at a greatly reduced price.



A cheap and very useful Alaram Timepiece. Mechanism four inches dial in nickel case 30 hours keyless. It will go in any position. This timepiece can be easily taken in travelling cases. It is very useful for students and every one who has got to do anything in time. It is equally useful for night duty man. Whenever it is desired that the alaram should ring the little hand on the dial should be set from the back of the alaram. At the time punctually, at that very moment the alaram will ring. Guaranteed for 3 years.

Price Rupees 5 only.

22-Ct. ROLLED GOLD WRIST WATCHES.



This is a very new style watch fitted with high grades Swiss mechanism. Glass crystal lined, figures Arabic or Roman. Its design and finish will satisfy the most critical test. And an appearance equal to sovereign gold. Very charming to look at and perfect timekeeper. Guaranteed for 5 years, Rs. 12-8.

18-Carat Rolled gold wrist watch Rs. 7.

American 'Big Ben' Clock with repeater and alaram Rs. 10-8-0.

Baby timepiece with hour and half hour strike Rs 7.

Baby Timepiece with hour and half hour strike and alaram Rs. 8.

Guaranteed for 3 years.

German alaram Timepiece. Rs. 5.

German Negro Alaram Timepiece Rs 5.

German Double Bell Alaram Timepiece Rs. 6

World-famed 'B' Timepiece Rs. 2-8.

'Emden' Fountain Pen. 14-Carat Rolled Gold Nib. Rs. 2-8.

COORG SANDALWOOD.

Tenders are invited for the purchase of about 20 tons of Milwa chilts, and about 5 tons of Basola bukni. Delivery will be made at the Fraserpet Koti, in June 1925.

Tenders should reach the undersigned on or before April 30th 1925, and will be opened at noon on May 1st in the Chief Forest Office.

For further particulars, apply to V. C. Darrington, Chief Forest Officer, Coorg, Mercara.

ವರ್ತಮಾನ ಸಂಗ್ರಹ.

ಒಳ ದೇಶ.

ಶ್ರೀಮತಿ ಕೊಡಂದೇರ ಸೀತಮ್ಮನವರು ಜಮೀನುದಾರರ ಸಂಘದ ಮೂರ್ನಾಡು ಕಾನ್‌ಫರೆನ್ಸಿನ ಸ್ವಾಗತ ಖರ್ಚಿಗೆ 50 ರೂಪಾಯಿಗಳನ್ನು ಕೊಟ್ಟಿರುವರು. ಎಂದಿನಂತೆಯೇ ಇವರು ತಮ್ಮ ಉದಾರತ್ವವನ್ನು ಈ ವೇಳೆಯೂ ತೋರಿಸಿರುವರು. ನಮ್ಮ ದೇಶದ ಮಹಿಳೆಯರು ಧನ ಸಹಾಯ ಮಾಡಿದಂತೆಯೇ ಕಾನ್‌ಫರೆನ್ಸಿನಲ್ಲಿ ಹಾಜರಿದ್ದು ಸಂಘದ ಕೆಲಸಕ್ಕೆ ಉತ್ತೇಜನ ಕೊಡುವರಾಗಿ ನಂಬಲಾಗಿದೆ.

ಕೆಲವು ತಿಂಗಳುಗಳ ಹಿಂದೆ ಸೋಮವಾರಪೇಟೆ ನಾಡು ಕಚೇರಿಯಿಂದ ಸುಮಾರು ಒಂದು ಸಾವಿರ ರೂಪಾಯಿಗಳನ್ನು ಕಾಣದೆ ಮಾಡಿದ ಕಾರಣ ಅಲ್ಲಿ ನಾಡುಕಲ್ಲರ್ಕಾಗಿದ್ದ ಹರಗದ ಮುತ್ತಣ್ಣನವರಿಗೆ ಒಂಭತ್ತು ತಿಂಗಳು ಕಠಿಣ ಸಜೆಯು ಸಬ್‌ಜಡ್ಜಿ ಕೋರ್ಟಿನಲ್ಲಿ ವಿಧಿಸಲಾಯಿತು.

ರಜೆಯಲ್ಲಿದ್ದ ಮೆ. ಕೊರವಂಡ ಮುತ್ತಣ್ಣ ಬ್ಯಾರಿಸ್ಟರರವರು ವೀರರಾಜಪೇಟೆ ಮುನಸೀಫ್ ಉದ್ಯೋಗದ ಚಾರ್ಜನ್ನು ತಾ. 6 ರಲ್ಲಿ ವಹಿಸಿಕೊಂಡರು. ಮೆ|| ಯು ಕ. ಮಂಜುನಾಥಯ್ಯ ಬಿ. ಎ. ಯವರು ಮಡಿಕೇರಿಗೆ ತಮ್ಮ ಹಿಂದಿನ ಕೆಲಸಕ್ಕೆ ಹಿಂತಿರುಗಿ ಬಂದಿರುವರು.

ಕಳೆದ ವರ್ಷ ಫಾರೆಸ್ಟ್ ಆಫೀಸಿನಿಂದ ಗಫಲತ್ತಾದ ಸುಮಾರು ಒಂದು ಸಾವಿರ ರೂಪಾಯಿಯ ಸಮ್ಮಂಧ ಅಲ್ಲಿ ಆಗ ಮೇನೇಜರಾಗಿದ್ದು ರಜೆಯಲ್ಲಿದ್ದ ಅಬ್ದುಲ್‌ರಹಿಮಾನ್ ರವರನ್ನು ದಸ್ತಗಿರಿಮಾಡಿ ಜಾಮೀನು ಮೇಲೆ ಬಿಟ್ಟಿರುವರು.

ಮಡಿಕೇರಿ ತಾಲ್ಲೋಕು ಕಚೇರಿಯಲ್ಲಿ ಶಿರಸ್ತೇದಾರರಾಗಿದ್ದ ಮೆ|| ಕರ್ತಮಾಡಮೇದಯ್ಯನವರನ್ನು ಒಂದು ತಿಂಗಳ ವರೆಗೆ ಶನಿವಾರಸಂತೆಗೆ ಪಾರುತ್ತೇಗಾರರಾಗಿ ವರ್ಗಾಯಿಸಿರುತ್ತೆ.

ಮೈಸೂರಿನ ಪಾಪಣ್ಣ ಬಸ್ಸ್‌ಸರ್ವಿಸ್ಸಿಗೆ ಮಡಿಕೇರಿಯಿಂದ ಫ್ರೇಜರ್‌ಪೇಟೆಗಾಗಿ ಮೈಸೂರಿಗೆ ಬಸ್ಸು ನಡಿಸಲು ಲೈಸನ್ಸ್ ಕೊಡಲಾಗಿದೆಯೆಂದೂ ಈ ತಾ. 15 ರಿಂದ ಸರ್ವಿಸ್ ಪ್ರಾರಂಭವಾಗುವದೆಂದು ವರ್ತಮಾನ.

ಮಡಿಕೇರಿಯ ಮುನಸೀಫ್ ಕೋರ್ಟು 1924ನೇ ಅಕ್ಟೋಬರು 24ರಿಂದ ರದ್ದು ಮಾಡಲಾಗಿದೆಯೆಂದು ಗಜೆಟಿನಲ್ಲಿ ಪ್ರಕಟವಾಗಿದೆ.

ರಾ॥ ಸಾ|| ಹೆಚ್. ಯಂ. ಕಾಮತ್ ರವರ ಅರ್ಧ ಸಂಬಳದ ರಜೆಯು ಮಾರ್ಚಿ 1 ರಿಂದ ಒಂದು ತಿಂಗಳು ಮುಂದರಿಸಲ್ಪಟ್ಟಿದೆ.

ಚಕ್ರವರ್ತಿಯವರ ಜನ್ಮದಿನದ ವಾರ್ಷಿಕೋತ್ಸವಕ್ಕಾಗಿ ಜೂನ್ 3 ರಲ್ಲಿ ಕೋರ್ಟು ಕಚ್ಚೇರಿಗಳಿಗೆಲ್ಲಾ ರಜ ಕೊಡಲಾಗುವುದು.

ಕೊಡಗಿನ ಸಿವಿಲ್ ಕೋರ್ಟುಗಳು ರೀಸೆಸ್ಸ್‌ಗಾಗಿ ಏಪ್ರಿಲ್ 20 ರಿಂದ ಮೇ 31ರ ವರೆಗೆ [ಎರಡು ದಿವಸಗಳೂ ಸೇರಿ] ಮುಚ್ಚಲ್ಪಡುವವು. ಜುಡಿಶ್ಯಲ್ ಕಮೀಷನರವರ ಕೋರ್ಟು ಏಪ್ರಿಲ್ 15 ರಿಂದ ಮೇ 25ರ ವರೆಗೆ [ಎರಡು ದಿವಸಗಳು ಸೇರಿ] ಮುಚ್ಚಲ್ಪಡುವುದು. ಆದರೆ ತುರ್ತಿನ ವಿಶೇಷ ಕೆಲಸಗಳಿಗೂ, ರಿಕಾರ್ಡ್ ನಕಲು ದರಕಾಸ್ತುಗಳಿಗೂ, ಪ್ರೋಸೆಸ್ ಜಾರಿಗೂ ತಕ್ಕ ಏರ್ಪಾಡು ಮಾಡಲಾಗುವುದು.

ಜಮೀನುದಾರರ ಸಂಘದ ಕಾನ್‌ಫರೆನ್ಸಿನ ಸಮಯದಲ್ಲಿ ಸಂಘದ ಸಕ್ರೆಟರಿಯವರ ಕೋರಿಕಮೇರೆ ಶ್ರೀ ಕಾವೇರಿ ಬಸ್ಸು ಸರ್ವೀಸಿನವರು ಮಡಿಕೇರಿಯಿಂದ ಮೂರ್ನಾಡಿಗೆ ಸ್ಪೆಶ್ಯಲ್ ಬಸ್ ಸರ್ವೀಸ್ ಇಡುವ ಏರ್ಪಾಡು ಮಾಡಿರುವರು.

ಮೂರ್ನಾಡು ಕಾನ್‌ಫರೆನ್ಸಿನ ಸಮಯದಲ್ಲಿ ಸಹಕಾರಿ ಸಂಘಗಳ ವಿಷಯ ರಿಜಿಸ್ಟ್ರಾರವರೂ, ಆರೋಗ್ಯದ ವಿಷಯ ಒಬ್ಬ ಸಬ್‌ಅಸಿಸ್ಟೆಂಟ್ ಸರ್ಜನರೂ ಉಪನ್ಯಾಸ ಕೊಡುವಂತೆ ಏರ್ಪಾಡು ಮಾಡಲಾಗಿದೆ. ಅಲ್ಲದೆ ದೇಶದ ಸಾಂಪತ್ತಿಕಸ್ಥಿತಿ ಮತ್ತು ಖದ್ದರಿನ ವಿಷಯಭಾಷಣ ಮಾಡಲು ಮೂರ್ನಾಡಿಗೆ ಬರಲು ಒಪ್ಪಿದ್ದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾದ ಮೆ|| ಡಿ. ಕೆ. ಭಾರದ್ವಾಜರನ್ನು ಇಲ್ಲಿ ಮಾತನಾಡಲು ಅಧಿಕಾರಿಗಳು ಬಿಡುವದಿಲ್ಲವಾಗಿ ತಿಳಿದು ಬಂದದ್ದರಿಂದ ಅವರನ್ನು ಕರೆಯಿಸುವುದು ಬಾಕಿ ಮಾಡಲಾಯಿತೆಂದು ತಿಳಿಯುತ್ತೇವೆ.

ಉತ್ತರಕೊಡಗಿನ ಅಬ್ಕಾರಿ ಸಬ್ ಇನ್ಸ್‌ಪೆಕ್ಟರಾದ ಮೆ. ಬಿ. ಸುಬ್ಬಣ್ಣನವರು ಈ ತಾ. 10ರಿಂದ ಎರಡು ತಿಂಗಳು ರಜೆಯಲ್ಲಿರುವದರಿಂದ ಮೆ. ಪಟ್ಟಮಾಡ ಮಂದಪ್ಪನವರನ್ನು ಅವರ ಬದಲಿಗೆ ನೇಮಿಸಿರುವರು.

ಭಾಗಮಂಡ್ಲ ಮತ್ತು ಸಂಪಾಜೆಗಳಲ್ಲಿ ಏಪ್ರಿಲ್ 1ರಿಂದ ಮೇ ಆಕ್ಟೆರು ವರೆಗೆ ತಾತ್ಕಾಲಿಕ ಆಸ್ಪತ್ರೆಗಳನ್ನು ತೆರೆದಿರುವರು. ನಾಪೋಕ್ಲು ಸಬ್ ಅಸಿಸ್ಟೆಂಟ್ ಸರ್ಜನರಾದ ಮೆ|| ಪಟ್ಟಡ ಕಾರ್ಯಪ್ಪನವರು ಪ್ರತಿ ಬುಧವಾರ ಮತ್ತು ಗುರುವಾರ ಭಾಗಮಂಡ್ಲದಲ್ಲಿಯೂ, ಮಡಿಕೇರಿಯ ಸ. ಅ. ಸರ್ಜನರಾದ ಮೆ|| ಅಜ್ಜಮಾಡ ಕಾರ್ಯಪ್ಪನವರು ಪ್ರತಿ ಸೋಮವಾರ ಮತ್ತು ಮಂಗಳವಾರ (ತಿಳ್ಳು ಕಾಯಿಲೆಯಿದ್ದರೆ ಬುಧವಾರವೂ) ಸಂಪಾಜೆಯಲ್ಲಿಯೂ ಇರುವರು.

ಹಿಂದೂ ದೇಶ.

ಇಂಡಿಯಾ ಸ್ಟೇಟ್ ಸೆಕ್ರೆಟರಿಯಾದ ಲಾರ್ಡ್ ಬರ್ಕನ್‌ಹೆಡ್‌ರವರು ಮೆ|| ಸಿ. ಆರ್. ದಾಸರವರ ಪ್ರಕಟಣೆಯ ಸಮ್ಮಂಧವಾಗಿ ಇಂಡಿಯನರನ್ನು ಸಂಶಯರೂಪದಲ್ಲಿ ಕಾಣುವುದಿಲ್ಲವೆಂತಲೂ, ಮೆ|| ದಾಸ್‌ರವರು ದ್ವೇಷಿಸುವ ದಂಗೆಯನ್ನು ಅಡಗಿಸಲಿಕ್ಕೆ ದಾಸ್‌ರವರು ಸರ್ಕಾರದೊಂದಿಗೆ ಸಹಕರಿಸಬೇಕೆಂತಲೂ ಪಾರ್ಲಿಮೆಂಟಿನಲ್ಲಿ ಹೇಳಿರುವರು. ಇದಕ್ಕೆ ಉತ್ತರವಾಗಿ ದಾಸ್‌ರವರು ಇಂಗ್ಲೀಷರ ಸಂಶಯವನ್ನು ಒತ್ತಟ್ಟಿಗಿಡುವದು ತೃಪ್ತಿಕರವೆಂತಲೂ, ದಂಗೆಯು ಎಂದಿಗೂ ಸ್ವಾತಂತ್ರ್ಯ ಪಡೆಯಲು ಸಹಾಯಮಾಡುವುದಿಲ್ಲವಾದುದರಿಂದ ಅದನ್ನು ನಿಲ್ಲಿಸಲು ಎಲ್ಲರೂ ಪ್ರಯತ್ನಪಡಬೇಕೆಂತಲೂ, ಹೀಗೆ ಸರ್ಕಾರದೊಂದಿಗೆ ಸಹಕರಿಸಲು ಅದಕ್ಕೆ ಸರಿಯಾದ ಸ್ಥಿತಿಯನ್ನು ಉಂಟುಮಾಡುವುದು ಸರ್ಕಾರದ ಕೆಲಸವೆಂತಲೂ, ದಂಗೆಯನ್ನು ನಿರ್ಮೂಲಮಾಡುವುದಕ್ಕೆ ಅದರ ಕಾರಣಗಳನ್ನು ತೆಗೆಯುವುದೇ ಉತ್ತಮದಾರಿಯೆಂತಲೂ ಹೇಳಿರುವರು.

ಮುಡ್ಡಿಮಾನ್ ರಿಪೋರ್ಟನ್ನು ಬಿಂಡಿಸಿಮಾತಾಡಿ ಸಂಯುಕ್ತಪ್ರಾಂತ್ಯದ ಕೌನ್ಸಿಲು ಈಗಿನ ಮೀಟಿಂಗನ್ನು ತೀರಿಸಿ ಮುಂದುವರಿಸಲ್ಪಟ್ಟಿದೆ.

ಮೆ|| ವಿ. ಜೆ. ಪಟೇಲರವರು ಮತ್ತು ಮೆ ಜಮ್ನದಾಸ್ ಮೆಹ್ತರವರು "ಎಸಂಬ್ಲಿಯಲ್ಲಿನ ಕೆಲಸ" ಎಂಬದರ ವಿಷಯ ಮಾಡಿದ ಎರಡನೇ ಭಾಷಣದಲ್ಲಿ ಸ್ವಾತಂತ್ರ್ಯ ಪಾರ್ಟಿಯವರನ್ನು ಖಂಡಿಸಿರುವರು.

ಮೆ. ಎ ಆರ್ ಬೆನಾರ್ಜಿಯವರು ತಾರೀಕು 14ರಲ್ಲು ಪುನಹ ಮೈಸೂರಿನ ದಿವಾನರ ಪದವಿಯನ್ನು ವಹಿಸಿಕೊಂಡಿರುವರು.

ಸರ್ ಬಿ. ಎನ್ ಸರ್ಮನವರು ವೈಸರಾಯರ ಎಗ್ಜಿಕ್ಯೂಟಿವ್ ಕೌನ್ಸಿಲ್ ಮೆಂಬರತನದ ಅವಧಿ ತೀರಿದರೂ ಬರುವ ಅಕ್ಟೋಬರುವರೆಗೆ ಮುಂದರಿಸಿರುವರು.

ಕೊಚ್ಚಿ ಸಂಸ್ಥಾನದ ಹೊಸ ಲೆಜಿಸ್ಲೇಟಿವ್ ಕೌನ್ಸಿಲನ್ನು ತಾರೀಕು 3ರಲ್ಲಿ ಅಲ್ಲಿಯ ಮಹರಾಜರು ತೆರೆದರು. ಅದರ 15 ಮೆಂಬರುಗಳಲ್ಲಿ ಚುನಾಯಿತ ಮೆಂಬರುಗಳೇ ಹೆಚ್ಚು. ಸ್ತ್ರೀಯರಿಗೂ ಪುರುಷರಂತೆ ಓಟುಕೊಡುವ ಹಕ್ಕು ಇಟ್ಟಿರುವದಲ್ಲದೆ ಒಬ್ಬ ಮಹಿಳೆಯನ್ನು ಕೌನ್ಸಿಲಿನ ಮೆಂಬರಾಗಿ ನೇಮಿಸಿರುವರು.

ಮೆ. ಜೋಸೆಫ್ ಬೇಪ್ಟಿಸ್ಟರವರನ್ನು ಬೊಂಬಾಯಿಯ ಕಾರ್ಪೊರೇಶನಿನ ಅಧ್ಯಕ್ಷರಾಗಿ ಚುನಾಯಿಸಿರುವರು.

ತಾರಕೇಶ್ವರದಲ್ಲಿ ಪುನಹ ಕಾಂಗ್ರೆಸ್ಸಿನವರಿಗೂ ಮಹಾಂತರ ಕಡೆಯವರಿಗೂ ಕಲಹವು ಪ್ರಾರಂಭವಾಗುವಂತಿದೆ.

ಮೆ. ಸಿ. ಆರ್ ದಾಸ್‌ರವರ ನ್ಯಾಯವಾದ ಸೂಚನೆಗಳನ್ನು ಲಾರ್ಡ್ ಬರ್ಕನ್‌ಹೆಡರವರು ಆಲೋಚಿಸಲು ತಯಾರಾಗಿರುವರೆಂದು ಅಂಡರ್ ಸಕ್ರೆಟರಿಯಾದ ಲಾರ್ಡ್ ವಿಂಟರ್‌ಟನ್‌ರವರು ಪಾರ್ಲಿಮೆಂಟಿನಲ್ಲಿ ಉತ್ತರಕೊಟ್ಟಿರುವರು.

ಇನ್ನುಮುಂದೆ ಒಟ್ಟು ಸುಮಾರು ಒಂದು ಸಾವಿರ ಮಾತ್ರ ಕಾಂಗ್ರೆಸ್ಸು ಮೆಂಬರುಗಳಿರುವುದರಿಂದ ಕಾಂಗ್ರೆಸಿಗೆ ನೂಲಿನ ಫೀಜು ನ್ಯಾಯವಾದದ್ದೆಂದು ತೋರುವದಿಲ್ಲವೆಂದು ಮೆ. ಜಮ್ನದಾಸ್ ಮೆಹ್ತಾರವರು ಸೂಚಿಸಿರುವರು.

ತಿರುವಾಂಕೂರು ಸಂಸ್ಥಾನದ ದಿವಾನ್‌ಗಿರಿಗೆ ಮೆ. ರಾಘವಯ್ಯರವರು ರಾಜಿನಾಮೆ ಕೊಡುತ್ತಾರೆಂದೂ, ಆ ಪದವಿಗೆ ಈಗ ಇಂಗ್ಲಂಡಿನಿಂದ ಬರುತ್ತಾ ಇರುವ ಮೆ. ಮಾರಿಸ್ ವಾಟ್ಸನರವರನ್ನು ಮಹರಾಣಿ ರೀಜಂಟರವರು ನೇಮಿಸಿರುವರೆಂದೂ ವರ್ತಮಾನ. ಇದನ್ನು ಕೇಳಿ ಅಲ್ಲಿಯ ಪ್ರಜೆಗಳು ಒಂದು ಮಹಾಸಭೆಯನ್ನು ಮಾಡಿ ತಿರುವಾಂಕೂರು ಹಿಂದೂ ಸಂಸ್ಥಾನವಾದುದರಿಂದ ಒಬ್ಬ ಹಿಂದೂ ದಿವಾನರನ್ನೇ ನೇಮಿಸಬೇಕೆಂದು ಮಹರಾಣಿಯವರು ಕೇಳಿಕೊಂಡಿರುವರು.

ಕೊಯಮುತ್ತೂರು ಜಿಲ್ಲೆಯ ಪೋಲಾಚಿಯಲ್ಲಿರುವ ಮೆ. ಶಂಕರ ಅಯ್ಯರೆಂಬವರನ್ನು ಮೇಜಿಸ್ಟ್ರೇಟರಾದ ಮೆ. ಸಾಳ್ವಾನರವರು ಅನ್ಯಾಯವಾಗಿ ಒಂದು ದಿವಸ ದಸ್ತಗಿರಿ ಮಾಡಿಸಿ ಇಟ್ಟದ್ದರಿಂದ, ಅಯ್ಯರವರು ಮೇಜಿಸ್ಟ್ರೇಟರ ಮೇಲೆ ಐದು ಸಾವಿರ ರೂಪಾಯಿಗಳಿಗೆ ಮಾನಹಾನಿಯ ದಾವಾ ಹಾಕಿದ್ದರಮೇಲೆ ಹಾಗೆಯೇ ಡಿಕ್ರಿಯಾಗಿದೆಯಂತೆ.

ಬೊಂಬಾಯಿಯ ಬಾಪ್ಟಿಸ್ಟ ಮೊಬದನ್ಯೆಯ... ಕೈ. ಚಾರವಾಗಿ ಅಪರಾಧಿಗಳ ಮೇಲೆ ಚಾರ್ಜುಮಾಡಿ ಸೆಶನ್ಸ್ ಕೋರ್ಟಿಗೆ ಗುರಿಮಾಡಿರುವರು.

ವಿದೇಶ.

ಜರ್ಮನಿಯಲ್ಲಿ ರಿಪಬ್ಲಿಕ್ ಸರಕಾರದ ಅಧ್ಯಕ್ಷರ ಚುನಾವಣೆಯು ನಡೆಯುತ್ತದೆ. ಒಂದು ಸಲ ನಡೆದ ಚುನಾವಣೆಯಲ್ಲಿ ಪ್ರಜಾಸತ್ತಾತ್ಮಕ ಪಕ್ಷದ ಉಮೇದುವಾರರಾದ ಜಾರ್ಜರವರಿಗೆ ಹತ್ತು ಲಕ್ಷ ಓಟುಗಳ ಪೈಕಿ 4ಲಕ್ಷ ಓಟುಗಳು ಮಾತ್ರ ದೊರೆತದ್ದು ಸಾಲದ್ದರಿಂದ ಪುನಹ ಚುನಾವಣೆಯಾಗುವದು. ದೇಶಾಂತರವಾಸಿಯಾಗಿರುವ ಕೈಜರರವರಿಗೆ ಒಂದು ಗ್ರಾಮದವರು ನಾಲ್ಕು ಓಟುಗಳನ್ನು ಮಾತ್ರ ಕೊಟ್ಟರಂತೆ!

ಲಾರ್ಡ್‌ಗಳ ಪಾರ್ಲಿಮೆಂಟಿನಲ್ಲಿ ಸುಪೀರಿಯರ್ ಆಫೀಸರುಗಳ ಸಂಗಡವೇ ಪ್ರೊವಿನ್ಶ್ಯಲ್ ಆಫೀಸರುಗಳ ಸಂಬಳವನ್ನು ಏರಿಸಬೇಕೆಂದು ಸೂಚಿಸಿರುವರು.

ಲೀಡ್ಸಿನಲ್ಲಿ ಡಾ|| ಸುಬೇಸ್ವರ್ ಸರ್ಕಾರ್‌ದವರು ತಮ್ಮ ದಾದಿಮುದುಗಿಗೆ ಏನೋ ತಪ್ಪುಮಾಡಿದರೆಂದು ಐದು ವರ್ಷ ಸಜೆ ವಿಧಿಸಲಾಗಿದೆ.

ಫ್ರಾನ್ಸಿನ ಫೈನೇನ್ಸ್ ಗಲಾಟೆಗಾಗಿ ಅದರ ಮಂತ್ರಿಯಾದ ಮೆ|| ಕ್ಲೆಮಿಂಟಲ್‌ರವರು ರಾಜಿನಾಮೆ ಕೊಟ್ಟಿರುವರು. ಮೆ|| ಡಿಮೊಸ್ಜಿಯವರು ನೇಮಿಸಲ್ಪಟ್ಟಿರುವರು.

ಪರ್ಷಿಯಾದ ಈಗಿನ ಅರಸರಾದ ಷಾರವರ ತಂದೆಯವರು (ಮಾಜಿ ಷಾರವರು) ಮೃತಪಟ್ಟರು.

ಚಿಕಾಗೋ ಪಟ್ಟಣದಲ್ಲಿ 21 ವರುಷ ವಯಸ್ಸಿನ ವಿಲ್ಯಂ ಮ್ಯಾಕ್ಲಿಂಟಾಕ್ ಎಂಬ ಕೋಟ್ಯಾಧೀಶ್ವರನನ್ನು ಅವನ ಆಸ್ತಿಯನ್ನು ಅಪಹರಿಸಬೇಕೆಂದು ಷೆಫರ್ಡ್ ಎಂಬವನು ವಾಯಿದೆ ಜ್ವರವನ್ನು ಹುಟ್ಟಿಸುವಂಥ ಕ್ರಿಮಿಗಳನ್ನು ಒಬ್ಬ ವೈದ್ಯನಿಂದ ತಂದು ಆ ಕೋಟ್ಯಾಧೀಶ್ವರನಿಗೆ ದೇಹಕ್ಕೆ ಸೇರುವಂತೆ ಮಾಡಿ ಆದರಲ್ಲೇ ಅವನು ಮೃತಪಟ್ಟನು. ಇದು ವಿಚಾರಣೆಗೆ ಬಂದಾಗ ಆ ವೈದ್ಯನು ಆ ಕ್ರಿಮಿಗಳನ್ನು ತಾನೇ ಅವನಿಗೆ ಕೊಟ್ಟೆನೆಂದೂ ತನಗೆ ಅವನು ಒಂದು ಲಕ್ಷ ದ್ರವ್ಯವನ್ನು ಕೊಡುವುದಾಗಿ ವಾಗ್ದಾನಮಾಡಿದನೆಂದೂ ಮ್ಯಾಜಿಸ್ಟ್ರೇಟರಿಗೆ ಹೇಳಿ ಒಪ್ಪಿಕೊಂಡನು. ಮೊಕದ್ದಮೆ ನಡೆಯುತ್ತಾ ಇದೆ.

ಲಂಡನ್ ಪಟ್ಟಣದಲ್ಲಿ ಮ್ಯಾಡಂ ಟುಸ್ಸಾಡ್ ಎಂಬಾಕೆಯು ಒಂದು ದಿವ್ಯವಾದ ಭಾರೀ ಕಟ್ಟಡದೊಳಗ ಜೀನುಮೇಣದಲ್ಲಿ ಅನೇಕ ಚಿತ್ರವಿಚಿತ್ರವಾದ ವಸ್ತುಗಳನ್ನೂ ಅಪರೂಪದ ಜನರನ್ನೂ ದೊಡ್ಡವರನ್ನೂ ಮಾಡಿಟ್ಟು ಪ್ರದರ್ಶನ ಮಾಡಿದ್ದಳು. ಅನೇಕ ಚರಿತ್ರಾರ್ಹರಾದ ಪುರುಷರೂ ವಿಷಯಗಳೂ ಅವುಗಳಲ್ಲಿದ್ದವು. ಈ ಪ್ರದರ್ಶನ ಶಾಲೆಯನ್ನು ಲಂಡನ್ ಪಟ್ಟಣಕ್ಕೆ ಹೋದವರೆಲ್ಲಾ ನೋಡದೆ ಬರುತ್ತಿರಲಿಲ್ಲ. ಇಂಥಾ ಅಪರೂಪವಾದ ಪ್ರದರ್ಶನಾಲಯಕ್ಕೆ ಕಳೆದ ತಿಂಗಳು ಬೆಂಕಿ ಬಿದ್ದು ಉರಿದುಹೋಯಿತು. ಇದರಲ್ಲಿ 37,50,000 ರೂಪಾಯಿ ಆಗ ನಷ್ಟವಾಯಿತೆಂದು ತಿಳಿದುಬರುತ್ತದೆ.

ಚೀನಾ ರಾಜ್ಯದ ಪ್ರೆಸಿಡೆಂಟಾಗಿದ್ದ ಡಾಕ್ಟರ್ ಸನ್‌ಯಾಟ್‌ಸೆನ್ ಎಂಬ ಪುರುಷನ ಶವವನ್ನು ಬಹಳ ವೈಭವದಿಂದಲೂ ಗಾಂಭೀರ್ಯಯುಕ್ತವಾಗಿಯೂ ಪೀಕಿಂಗ್ ನಗರದಲ್ಲಿ ಮೆರವಣಿಗೆಮಾಡಿ ಆತನು ಬದುಕಿದ್ದಾಗ ಹೇಳಿದ್ದಂತೆ ಸಂಟ್ರಲ್ ಪಾರ್ಕಿನಲ್ಲಿ ಸಮಾಧಿಮಾಡಿದರು. ಸಮಾಧಿಕ್ರಿಯೆಗಳನ್ನು ಕ್ರೈಸ್ತಧರ್ಮ ಪ್ರಕಾರ ಆಚರಿಸಿದರು. ಮೆರವಣಿಗೆಯಲ್ಲಿ ವಿಮಾನಯಂತ್ರಗಳೂ ರಷ್ಯಾ ಬೋಲ್ಶವಿಕ್ಕರೂ ಸಾವಿರಾರು ಪ್ರಜೆಗಳೂ ಸರ್ಕಾರದ ನೂರಾರು ಮಂದಿ ಅಧಿಕಾರಿಗೂ ಸ್ವದೇಶದ ಹುದ್ದೇದಾರರುಗಳೂ ಹಾಜರಾಗಿದ್ದು ತಮ್ಮ ಸಂತಾಪವನ್ನೂ ಪ್ರಕಾಶಪಡಿಸಿದರು.

ಮುಂಬಯಿ ಮಾಧವಬಾಗದ ಹತ್ತಿರ ತೆಂಗಿನ ಎಣ್ಣೆಯ ಕಾರಖಾನೆಗೂ ಹಿತ್ತಾಳೆಯ ಕಾರಖಾನೆಗೂ ಕಳೆದ ಗುರುವಾರ ಬೆಂಕಿ ಹತ್ತಿ 60000 ರೂಪಾಯಿಗಳ ಹಾನಿಯಾಯಿತು.

ಕಾಕಿನಾಡಿನಲ್ಲಿ ಒಬ್ಬ ವರನಿಗೆ 40 ಸಾವಿರ ರೂಪಾಯಿ ವರದಕ್ಷಿಣೆ ಕೊಡಬೇಕೆಂದು ವರನ ಬೇಡಿಕೆ.

ಟೌನ್ ಹಾಲ್.

[ಬರದು ಬಂದದ್ದು]

"ಕೊಡಗು" ಪತ್ರಿಕೆಯ 27—2—25ರ ಅಗಲೇಖನವನ್ನು ಓದಿ ನನ್ನ ಮನಸ್ಸಿನಲ್ಲಿ ಅವರ ಅಭಿಪ್ರಾಯವು ನಿಜವೆಂದು ತೋರಿ ದೇಶದ ಈ ನ್ಯೂನತೆಯನ್ನು ಹೋಗಲಾಡಿಸಲು ದಾರಿಯಾವದೆಂದು ಮನಸ್ಸಿನಲ್ಲಿ ಯಾವಾಗಲೂ ಕೊರಗುತ್ತಿದ್ದೆನು.

ಒಂದು ದಿನ ನಮ್ಮ ಮನೆಗೆ ಒಂದು ಸೇರು ಸಕ್ಕರೆ ತಂದ ಕಾಗದವನ್ನು ಕೈಯಲ್ಲಿ ಹಿಡಿದುಕೊಂಡು ಸುಮ್ಮನೆ ಕೂತಿರುವಾಗ (Town Hall) ಎಂಬ ಎರಡು ದೊಡ್ಡ ಶಬ್ದಗಳು ಕಣ್ಣಿನ ಮುಂದೆ ಹೊಳದವು. ಆಲಸ್ಯದಲ್ಲಿದ್ದ ನಾನು ಕೂಂಚ ಎಚ್ಚರವಾದಂತವನಾಗಿ ಆ ಚಾತ್ಯಯನ್ನು ಓದಲು ಮೊದಲು ಮಾಡಿದೆನು. ಅದು ಬಹಳ ಪ್ರಯೋಜನಕಾರಿಯೆಂದು ನಾನು ತಿಳಿದೆನು. ಈ ಕಾರಣ ಅದರ ನಿಜತರ್ಜುಮೆಯನ್ನು ನಮ್ಮ ಈ ಅಮೂಲ್ಯ ಪತ್ರಿಕೆಯಲ್ಲಿ ಹಾಕಿ ವರ್ಜೀನ್ಯದಲ್ಲಿ ವಾಶಿಂಗ್ಟನ್ನರವರು ತೆಗೆದುಕೊಂಡ ಶ್ರಮೆಯನ್ನು ನಮ್ಮ ಸಂಪಾದಕರು ಅಥವಾ ಇನ್ನುಯಾರಾದರೂ ಉಪಕಾರಿಗಳು ಅನುಸರಿಸಲೆಂದು ನಾನು ದೇವರನ್ನು ಕರಗೂಡ್ಡಿ ಬೇಡಿಕೊಳ್ಳುವೆನು.

ತರ್ಜುಮೆ:— ವರ್ಜೀನಿಯದ ಬಿಸ್ಟಗಿ ಪಟ್ಟಣವು ನೀಗ್ರೋ ಜಾತಿಯವರಿಗೆ ಸ್ವತಂತ್ರ್ಯವು ಸಿಕ್ಕಿದಂದಿನಿಂದ ಬಹಳ ಉತ್ತಮ ಸ್ಥಿತಿಗೆ ಬಂದಿತು. ಆ ಸ್ಥಿತಿಗೆ ಮೂಲಾಧಾರರು ಭೂಕರ್ ಟಿ. ವಾಶಿಂಗ್‌ಟನ್ನರು. ಅವರು ಅಲ್ಲಿಯವರಿಗೆ ವಿದ್ಯೆ ಮತ್ತು ಕೈಗಾರಿಕೆಗಳನ್ನು ಚನ್ನಾಗಿ ಕಲಿಯಲು ಬಹಳ ಸಲಕರಣೆಗಳನ್ನು ಮಾಡಿಕೊಟ್ಟು ಕೆಲವು ದಿವಸಗಳನಂತರ ಆ ಪಟ್ಟಣಕ್ಕೆ ಒಂದು ಟೌನ್ ಹಾಲ್ ಅವಶ್ಯವಿರುವುದೆಂದು ಕಂಡು

ಬಂದು ಅಲ್ಲಿಯ ಕೆಲವು ಮಹನೀಯರು ಒಂದಾಗಿ ಸಭೆಯನ್ನು ಸೇರಿಸಿ ಅಲ್ಲಿ ಬಂದು ಮಾತಾಡುವಂತೆ ವಾಶಿಂಗ್‌ಟನ್ನರನ್ನು ಪ್ರಾರ್ಥಿಸಿಕೊಂಡರು. ಅವರು ಮಾಡಿದ ಭಾಷಣ:—

ಕೆಲವು ವರ್ಷಗಳಿಗೆ ಹಿಂದೆ ನಮಗೂ ಕಾಲ್ನಡೆಗಳಿಗೂ ಮಾತಾಡುವ ಒಂದು ವ್ಯತ್ಯಾಸವಲ್ಲದೆ ಬೇರೆ ಯಾವುದೂ ಇಲ್ಲವೆಂದು ಬಿಳಿಯಜನರು ಅಭಿಪ್ರಾಯಪಟ್ಟು ನಮ್ಮನ್ನು ತಂಡತಂಡವಾಗಿ ನಮ್ಮ ಜನ್ಮಭೂಮಿಯಾದ ಆಫ್ರಿಕದಿಂದ ಅಮೇರಿಕೆಗೆ ತಂದರು. ಆದರೆ ದೈವಯೋಗದಿಂದಲೂ ಲಿಂಕನ್ ಅಬ್ರಹಾಂ ಮೊದಲಾದವರ ದಯೆಯಿಂದಲೂ ಅವರ ಜಾತಿಯವರ ರಕ್ತವನ್ನು ಚೆಲ್ಲಿ ನಮ್ಮವರನ್ನು ಉದ್ಧಾರಮಾಡಿದರು. ಈಗ ನಾವು ಮನುಷ್ಯರೆಂದು ಅವರಿಂದಲೇ ಪ್ರಯತ್ನಪಟ್ಟರೆ ಕೆಲಸವು ಸಫಲವಾಗುವದೆಂದು ಕೆಲವು ವರ್ಷಗಳಲ್ಲಿಯೇ ಕೊಂಚ ಸೂಚನೆಯನ್ನು ಕೊಟ್ಟಿರುವವು. ಈಗ ನಮಗೆ ನಾಗರಿಕ ಗೃಹ ಒಂದರ ಅಗತ್ಯತೆಯು ತೋರಬಂದಿರುವುದು. ಈ ಅಭಿಪ್ರಾಯವು ಯಾರ ಮನಸ್ಸಿನಲ್ಲಿ ಅಂಕುರಿಸಿತೋ ಅವನೇ ಧನ್ಯನು. ಈ ಕೆಲಸವು ವ್ಯಾಪಿಸಿದಂದರೆ ಆ ಕೆಲಸದ ಪುಣ್ಯದ ಅರ್ಧಭಾಗವು ಪರಲೋಕದಲ್ಲಿ ನಮ್ಮ ದೇವರಾದ ಕ್ರೈಸ್ತರು ಅವನಿಗೆ ಕೊಡುವರು. 'ಸೈ ಕೊಡುವರೆ' ಎಂಬ ಶಬ್ದವು ನನ್ನ ಬಾಯಿಯಿಂದ ಬಂದದಕ್ಕೆ ನನ್ನನ್ನು ನನ್ನ ಸಂಗಾತಿಗಳು ಪರಿಹಾಸ್ಯಮಾಡಿಯಾರು. ಯಾಕೆಂದರೆ ನೆಪೋಲಿಯನನವರು ಹೇಳಿದಂತೆ 'ಅಸಾಧ್ಯವೆಂಬ ಶಬ್ದವು ಮೂರ್ಖರ ಶಬ್ದಕೋಶದಲ್ಲಿ ಬರೆಯಲ್ಪಟ್ಟಿದೆ,' ಎಂದು ನಾನು ನಂಬುವವನು. ನಮ್ಮ ತನು, ಮನ, ಧನಗಳನ್ನು ಧಾರೆಯೆರೆದು ಇಂದಿನವರೆಗೆ ಅನೇಕ ಕಾರ್ಯಗಳನ್ನು ಸಂಪೂರ್ಣಗೊಳಿಸಿ ಈ ವೇದವಾಕ್ಯದಂತೆ ಮಾತಿನ ಸತ್ಯತೆಯನ್ನು ತೋರಿಸಿರುವೆವು. ಒಳ್ಳೇ 100 ವರ್ಷಗಳು ಒಂದು ಕಳೆಯಲಿಲ್ಲವೇ ಐದು ವರ್ಷಗಳಲ್ಲಿ 5000 ವಿದ್ಯಾರ್ಥಿಗಳಿಗೆ ಯೋಗ್ಯವಾದ ಶಿಕ್ಷಣ, ಉದ್ಯೋಗ ನೀಡುವ ಮತ್ತು ಎಲ್ಲಾ ಸೌಕರ್ಯಗಳು ಮಾಡಿದ್ದು. ಬೇರೆ ಗಾಯಕರಿಲ್ಲದ್ದ ನಮ್ಮ ಕೈಯಲ್ಲಿ ಕರೆಗಳಿತ್ತೇ? ಯಾವತನಯಿಂದಲ್ಲವೇ ಈ ಕೆಲಸವು ಕೈಗೂಡಿದ್ದು. ಆ ರೀತಿಯೇ ಈ ಕೆಲಸವು ಖಂಡಿತವಾಗಿಯೂ ಕೈಗೂಡುವುದು. ಈ ಸಮಯದಲ್ಲಿ ನನ್ನ ಒಂದು ನೂತನವಾದ ಅಭಿಪ್ರಾಯವಿದೆ. ಸಭೆಯವರು ಸಂತೋಷದಿಂದ ಅನುಸರಿಸಬಹುದು. ಇಲ್ಲವಾದರೆ ಬಿಡಬಹುದು.

ಇ ಲ್ಲಿ ಶಾಂ ತ ವ ರ್ಣ ನೆ ಯ ನ್ನು ಕೊ ಟ್ಟ ರು

. ...

ನನ್ನ ಅಭಿಪ್ರಾಯದಲ್ಲಿ ಆಗತಾನೆ ಮಿ॥ ಕಾರ್ನೆಗಿಯವರು ದಯಪಾಲಿಸಿದಂತೆ ಪುಸ್ತಕ ಭಂಡಾರದ ಕಟ್ಟಡಗಳನ್ನು ಹಾಳಾಗಿ ಇಟ್ಟಿದ್ದಿಯ ಮಹಡಿಯ ಮೇಲೆ ಇಡುವುದು ಅಲ್ಲದ ಗೋಡೆಗೆ ದೂರವಾದ ಭಾಗದಲ್ಲಿ ಒಂದು ಸಾಲು ಕುರ್ಚಿಗಳನ್ನಿಟ್ಟು ಭಾಷಣ ಕೇಳುವುದಕ್ಕೆ ಅನುಕೂಲಿಸುವುದು. ಹಾಲಿನ ಕೆಳಭಾಗದಲ್ಲಿ ಕೊಂಚ ಕುರ್ಚಿಗಳನ್ನಿಡುವುದು. ಈ ಕುರ್ಚಿಗಳನ್ನಿಡುವ ಖರ್ಚು ಮತ್ತು ಅವುಗಳ ಎಚ್ಚರಿಕೆಯು ಪುಸ್ತಕ ಭಂಡಾರದವರಿಗೆ ಸೇರಿದ್ದು. ಅವರು ಬೇರೆಯಾವ ಬಾಡಿಗೆಯು ಕೊಡಬೇಕಾದ ಅವಶ್ಯಕತೆಯಿಲ್ಲ. ಭಾಷಣ ಸಮಯದಲ್ಲಿ ಮಾಡಬೇಕಾದ ಏರ್ಪಾಡುಗಳಿಗೆ ಇವರು ಸಹಾಯ ಕೊಡತಕ್ಕದ್ದು. ನಾಟಕ, ಸಿನೀಮ ಮೊದಲಾದವುಗಳನ್ನು ಅಭಿನಯಿಸುವುದಕ್ಕೆ ಈ ಹಾಲನ್ನು ಕೊಡಬಹುದು. ಅದರಲ್ಲಿ ಸಿಕ್ಕಿದ ಹಣವನ್ನು ಪುಸ್ತಕ ಭಂಡಾರದವರು ತೆಗೆದುಕೊಂಡು ಕಟ್ಟೋಣದ ಎಲ್ಲ ದುರಸ್ತಿಗಳನ್ನು ಮಾಡಿಕೊಳ್ಳಬೇಕು. ಕೋಣೆಯಲ್ಲಿ ಒಂದನ್ನು ನಾಟಕದವರಿಗೆ 'Green room' ದೇಶ ಧಾರಣೆಗೆ ಆಗಿಯೂ ಮತ್ತೊಂದು ಭಾಷಣಕರ್ತರಿಗೆ ಕುಳಿತುಕೊಳ್ಳಲಿಕ್ಕೆ 'retiring room' ಆಗಿಯೂ ಇಡಬಹುದು.

ಸುತ್ತಲಿನ ನಾಲ್ಕು ಜಗಲಿಗಳನ್ನು ಬಿಟ್ಟರೆ ಹನ್ನೆರಡು ಕೋಣೆಗಳನ್ನು ಒಂದೊಂದು ಸಂಘದವರಿಗೆ ಕೊಡಬಹುದು. ಇವರು ಕಟ್ಟೋಣದ ಕಮಿಟಿಯವರು ನಿಶ್ಚೈಸಿದನ್ನು ಮಾಸಿಕ ಕೊಡತಕ್ಕದ್ದು. ಆ ಸಂಘಗಳು ಯಾವುವೆಂದರೆ— ನಮ್ಮವರ ಮತ್ತು ರೆಡ್ ಇಂಡಿಯನ್ನರ ವಿದ್ಯಾಭಿವೃದ್ಧಿಸಂಘ, ಬಿಳಿಜನರು ಸ್ಥಾಪಿಸಿದವರಿಗೊಂದು, ನಮ್ಮ ಆದಿಪತ್ಯದ ಕಾಂಗ್ರೆಸ್ ಕಮಿಟಿಗೆ ಒಂದು, ಡೆಮೊಕ್ರೆಟ್ ಸೋಸೈಟಿಗೊಂದು, ಅಧಿಪತ್ಯದ ಸ್ಕೌಟ್ ಒಪ್ಪಿಗೊಂದು, ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿಗೊಂದು. ಇನ್ನುಳಿದವನ್ನು ಬೇರೆ ಸ್ವಂತ ಕಟ್ಟೋಣಗಳಿಲ್ಲದ ಅನೇಕ ಸಂಘಗಳಿಗೆ ಕೊಡಬಹುದು. ಎರಡು ಕೋಣೆಗಳನ್ನು ಅಲ್ಲಿಯ ಲೋಕಲ್ ಪ್ರೆಸ್ಸಿಗೆ ಕೊಡಬಹುದು.

ಆದರೆ ಈ ಸಂಘಗಳಿಂದ ಸೂತ್ರ ಕಟ್ಟೋಣಕ್ಕೆ ವಿರುಪಷ್ಟು ದ್ರವ್ಯಸಿಕ್ಕುವುದು. ದುರ್ಲಭ. ಯಾಕೆಂದರೆ ಇವುಗಳಿಗೆಲ್ಲ ಮೂಲಧನ ವಿಲ್ಲ. ಆದುದರಿಂದ ಉಪಕಾರಿಗಳಾದ ಉಪವಾಸ್ತರಿಗೆ ಈ ವಿಷಯವನ್ನು ಮನವಿಟ್ಟು ಹೇಳಿದರೆ ಅವರವರ ಶಕ್ತ್ಯಾನುಸಾರ ಕೊಡುವರು. ಇದು ದೇಶೀಯ ಗೃಹವಾದುದರಿಂದ ಈ ಗೃಹಕ್ಕೆ ಧನಸಹಾಯ ಮಾಡಿದವರ ಹೆಸರನ್ನು ಕೆತ್ತಿ ಇಡಬೇಕು. ಅದರಲ್ಲಿಯೂ ನಾನು ಒಂದು ತರದ ಏರ್ಪಾಡು ಬೇಕು. ಅದು ಹೀಗೆಯೇ ಇರಬೇಕೆಂದು ಹೇಳುವುದಿಲ್ಲ ಆದರೆ ನ್ಯೂಯಾರ್ಕಿನಲ್ಲಿ ಮಾಡಿದರೀತಿ ನಿಮ್ಮ ಮುಂದೆ ಇಡುತ್ತೇನೆ. 10000 ಮತ್ತು ಹೆಚ್ಚು ಪೌನ್ ಕೊಟ್ಟವರ ಹೆಸರು ಕಲ್ಲಿನಲ್ಲಿ ಕೆತ್ತಿ ಭಾಷಣಕರ್ತರು ನಿಲ್ಲುವ ಸ್ಥಳದಲ್ಲಿ ಹಿಂದೆ ಗೋಡೆಯಲ್ಲಿ ಎತ್ತರದಲ್ಲಿ ನೆಟ್ಟಿರುವರು. ರಾತ್ರಿವೇಳೆ ಅವರ ಮೇಲೆ ಬೆಳಕು ಬೀಳುವಂತೆ ದೀಪವನ್ನಿಟ್ಟಿರುವರು.

. 1000 ಮತ್ತು ಹೆಚ್ಚು ಪೌನ್ ಕೊಟ್ಟವರ ಹೆಸರು ಹೊಸ್ತಿಲಿನ ಮೇಲುಭಾಗದಲ್ಲಿ ಒಂದು ಚಿನ್ನದ ಗಿಲೀಟು ಕೊಟ್ಟಿರುವರು. 100 ಮತ್ತು ಹೆಚ್ಚು ಪೌನ್ ಕೊಟ್ಟವರದು ಕಿಟಕಿಗಳಲ್ಲಿ ಕೆತ್ತಿ ಬೆಳ್ಳಿಯ ಗಿಲೀಟು ಕೊಟ್ಟಿರುವರು. ಅದಕ್ಕೂ ಕಮ್ಮಿ ಕೊಟ್ಟವರದು ಹಾಲಿಗೆ ಹಾಸಿದ ಒಂದೊಂದು ಕಲ್ಲಿನ ಮೇಲೆ ಕೆತ್ತಿರುವರು. ಈ ರೀತಿ ಮಾಡಿದರೆ ಮಾತ್ರ ಇದಕ್ಕೆ ಧನಸಹಾಯ ಮಾಡಿದವರ ಹೆಸರು ಸ್ಥಾಯಿಯಾಗಿರುವುದಲ್ಲದೆ ಪ್ರತಿವ್ಯಕ್ತಿಗೂ ಅದು 'ನಮ್ಮ' ಗೃಹವೆಂಬ ಅಭಿಮಾನವು ಉಂಟಾಗುವುದು.

ಈ ರೀತಿಯಲ್ಲಿಯೇ ಮಾಡಬೇಕೆಂಬುದನ್ನು ಕಡ್ಡಾಯವಾಗಿ ಹೇಳುವುದಿಲ್ಲ ಆದರೆ ನನ್ನನ್ನು ಭಾಷಣ ಮಾಡುವುದಕ್ಕೆ ಕೇಳಿದ್ದರಿಂದ ನನ್ನ ಒಳಟು ಅಭಿಪ್ರಾಯವನ್ನು ಮತ್ತು ಅನುಭವವನ್ನು ಮುಂದಿಟ್ಟಿರುವೆನು. ಅತಿಯಾದ ಜಯಘೋಷದಿಂದ ಈ ಭಾಷಣವು ಮುಕ್ತಾಯವಾಯಿತು. ಒಡನೆಯೆ ಕಟ್ಟೋಣದ ತೊಂದರೆ ತೆಗೆದುಕೊಳ್ಳುವುದಕ್ಕೆ ಒಂದು ಕಮಿಟಿಯಾಯಿತು. ಅಲ್ಲಿ ಇದ್ದವರ ಶಕ್ತ್ಯಾನುಸಾರ ದ್ರವ್ಯಕೊಡುವುದಕ್ಕೆ ವಾಗ್ದಾನವನ್ನು ಬರೆದುಕೊಳ್ಳುವುದಕ್ಕೆ ಅಧ್ಯಕ್ಷರೆ ಮೊದಲು 1000 ಪೌನಾಹಾಕಿ ಒಂದು ಪತ್ರವನ್ನು ಎಲ್ಲರಿಗೂ ಕೂತಲ್ಲಿಗೆ ಕಳುಹಿಸಿದರು.

ಅಧ್ಯಕ್ಷರ ಅಭಿಪ್ರಾಯವನ್ನೇ ಎಲ್ಲಾ ರೀತಿಯಲ್ಲಿಯೂ ನಡೆಸಬೇಕೆಂದು ಕಮಿಟಿಯವರು ಏಕಮನಸ್ಸಿನಿಂದ ಒಪ್ಪಿದರು. ಸಭೆಯು ಮುಕ್ತಾಯವಾಗುವುದರೊಳಗೆ ಪೌ. 23456—7—6 ಕೊಡಲಾಗುವುದೆಂದು ಸೈನ್ ಹಾಕಿದರು. ಇದಲ್ಲದೆ ಕೆಲವು ಮಹನೀಯರು ದೊಡ್ಡ ದೀಪಗಳನ್ನು ಇನ್ನು ಕೆಲವು ಆವಶ್ಯಕವೂ ಕಾಲಕಳವು ಆದ ವಸ್ತುಗಳನ್ನು ದಾನಮಾಡಿ "ನಮ್ಮ ಗೃಹ"ದಲ್ಲಿ ನಮ್ಮವರ ಸ್ತುತಿಸ್ತ್ರೀರನ್ನು ಇಡಲು ಕಮಿಟಿಯ ಅಪ್ಪಣೆಪಡೆದರು.

ಈ ಲೇಖನವನ್ನು ನಾನು ಓದಿ ಬಹಳ ಸಂತೋಷವಾಗಿ ನಮ್ಮ ಈ ದೇಶಕ್ಕೆ ಆ ಮಹನೀಯರಂತೆ ದಾನತೋರಿಸುವರಿಗೆ ದೇವರು ದೀರ್ಘಾಯುಸ್ಸು ಕೊಡಲೆಂದು ನನ್ನ ಮನಸ್ಸಿನಲ್ಲಿ ಆಶೀರ್ವಾದಿಸಿದೆನು. ಆದರೆ ಸ್ವಲ್ಪ ಹೊತ್ತಿನಲ್ಲಿಯೇ ದೇಶದ ಸ್ಥಿತಿಯು ಮನಸ್ಸಿಗೆಬಂದು ಯಾವ ಮಹನೀಯರಮೇಲೆ ಈ ಆಶೀರ್ವಾದವು ತೋರುವುದೋ ಎಂದು ಆಲೋಚಿಸಿದೆನು.

ಆ ಅಧ್ಯಕ್ಷರು ಹೇಳಿದಂತೆ ನಮ್ಮ ದೇಶದವರು ಮಾಡಬೇಕೆಂದು ನಾನು 'ಕಡ್ಡಾಯವಾಗಿ' ಹೇಳುವುದಿಲ್ಲ. ಆದರೆ ಈ ಕಟ್ಟೋಣದ ನಕ್ಷೆಯು, ಹಣ ದೊರಕಿಸಿಕೊಳ್ಳುವ ರೀತಿಯು, ಅವರ ಹೆಸರು ತಲೆತಲಾಂತರದ ವರೆಗೆ ಸ್ಥಾಯಿಯಾಗಿರುವ ನೀತಿಯನ್ನು ಭೋದಿಸುವ ಹಾದಿಯು ನವೀನವಲ್ಲವೇ? ನಮಗೆ ಅಮೇರಿಕೆಯದಲ್ಲಿರುವವರಿಗಿಂತ ಕೆಲವು ಅನುಕೂಲತೆಗಳಿವೆ. ಅವು ಯಾವುವೆಂದರೆ, ನಮ್ಮ ಬಯೋಸುದಾರರ ಸಂಘವು 8000 ರೂಪಾಯಿಗಳ ಒಂದು ಮನೆಯನ್ನು ತೆಗೆದುಕೊಳ್ಳಲು ಸಿದ್ಧವಾಗಿದೆ. ಈ ಸಂಘವು ದೇಶವಿಖ್ಯಾತವಾದದರಿಂದ ಮತ್ತು ಇವರು ಮಡಿಕೇರಿಯಲ್ಲಿಯೇ ಮನೆಕಟ್ಟಲು ನಿಶ್ಚೈಸಿರುವುದರಿಂದ ಈ ಅಭಿಪ್ರಾಯವನ್ನೂ ಆದನ್ನೂ ಒಂದು ಮಾಡಿದರೆ "ಜಾಳಿಲೆ ಚತ್ತೆಕ್ ಪೋಸನ್ನಕೆ ಆಚಿ. . ."ಎಂಬಂತೆ ಎರಡು ಕಾರ್ಯಗಳು ಕೈಗೂಡುವವು. ಅಲ್ಲದೆ ದಿವಂಗತರಾದ ರಾಜಕಾರ್ಯ ಪ್ರಸಕ್ತ ಮನೆಯಪಂಡ ಮುತ್ತಣ್ಣನವರ ಹೆಸರಿನಲ್ಲಿ ಅವರ ಪ್ರಿಯಪತ್ನಿಯವರು 1000 ರೂಪಾಯಿ ಕೊಡುವರೆಂದು ಹೇಳಿದ ವಾಕ್ಯವು ಯಾರನ್ನು ಪುಳಕಿತರನ್ನಾಗಿ ಮಾಡದು. ಈ ರೀತಿಯಲ್ಲಿ ತಂದೆತಾಯಿಯರ, ಗಂಡ ಹೆಂಡತಿಯರ ಹೆಸರನ್ನು ಸ್ಥಾಯಿಯಾಗಿ ಮಾಡಲು ಅಪೇಕ್ಷಿಸುವ ಮಹನೀ ಮಹಿಳೆಯರಿಲ್ಲಲ್ಲ. ಈ ಗೃಹ ಅನುಕೂಲವಾದರೆ ಬಾಡಿಗೆ ಮನೆ ಮಾಡಿಕೊಂಡು ಈಗ ಇರುವ 'ಕೊಡಗು' ಆಫೀಸನ್ನು ಇಲ್ಲಿಟ್ಟರೆ ತಪ್ಪೇನು? ಇದು ದೇಶದನ ಏದಲ್ಲವೇ?

ಸಂಸ್ಕೃತಿ.

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಶ್ರೀ ಬಸವೇಶ್ವರ ಕೃಪಾಪೋಷಿತ ಕರ್ನಾಟಕ ಮಂಡಳಿ. ಕೊಡ್ಲಿಪೇಟೆ

ಮಹನೀಯರೇ,

ಈ ನಾಟಕ ಮಂಡಲಿಯವರು ತಮ್ಮ ನಾಟಕಗಳನ್ನು ಸೋಮವಾರ ಪೇಟೆಯಲ್ಲಿ ಪ್ರದರ್ಶಿಸಿ, ಮಡಿಕೇರಿಗೆ ದಯಮಾಡಿಸಿ ಈಗಾಗಲೆ ಎರಡು ನಾಟಕಗಳನ್ನು ಆಡಿದರು. ಮೊದಲನೆಯ ದಿನಸ ಆಡಿದ ನಾಟಕದಲ್ಲಿ ಕೇವಲ ಚಿಕ್ಕ ಬಾಲಕರೇ 'ಕಾಳಿದಾಸ" ಎಂಬ ನಾಟಕವನ್ನು ಅಭಿನಯಿಸಿ ತೋರಿಸಿದರು. ಬಾಲಕರೇನೋ ತಮ್ಮ ಶಕ್ತ್ಯಾನುಸಾರ ಅಭಿನೈಸಿದರು; ಆದರೆ ನಾಟಕವನ್ನು ನೋಡಿ ಸಂತೋಷ ಪಡುವದರ ಬದಲು ಮನಸ್ಸಿಗೆ ಬಹಳ ವ್ಯಸನವಾಯಿತು. ಯಾಕೆಂದರೆ, ಈ ನಾಟಕದಲ್ಲಿರುವ ಬಾಲಕರೆಲ್ಲರೂ ಕೊಡ್ಲಿಪೇಟೆ ಸ್ಕೂಲಿನ ವಿದ್ಯಾರ್ಥಿಗಳಾಗಿದ್ದುಕೊಂಡು, ವಿದ್ಯಾರ್ಜನೆಯ ಬದಲು ನಾಟಕದ ಹವ್ಯಾಸಕ್ಕೋಸ್ಕರ ತಮ್ಮ ಮುಂದಿನ ಅಭಿವೃದ್ಧಿಗೆ ಕುಂದಕ ತಂದುಕೊಂಡದ್ದನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. **ಈ ತಪ್ಪು ಬಾಲಕರ ಮೇಲೆ ಹೊರಿಸ ಬಹುದೋ! ಅಥವಾ ಅವರ ಪೋಷಕರ ಮೇಲೆ ಹೊರಿಸ ಬಹುದೋ! ಯಾ ನಾಟಕ ಮಂಡಲಿಯ ಮಾಲೀಕರ ಮೇಲೆ ಹೊರಿಸಬಹುದೋ!** ಹೇಗೆ ಎಂಬದನ್ನು ಈ ವೀರಶೈವಬಾಂಧವರೇ ಆಲೋಚಿಸಿ ನಿಶ್ಚೈಸಬೇಕಾಗಿದೆ.

ಕೊಡಗಿನ ವೀರಶೈವರ, ಪಶ್ಚಾತ್ತಾಪ ಹಾದಿ ಹಿಡಿದು ಹೋಗುತ್ತಿರುವುದು, ಈ ನಾಟಕಮಂಡಲಿಯ ಪಾಲಿಕರೂ, ಕೊಡ್ಲಿಪೇಟೆಯಲ್ಲಿ ಮುಖ್ಯಸ್ಥರು ಮತ್ತು ಭಾಗ್ಯಶಾಲಿಗಳು ಆದ ಈ ಪ್ರೊಪ್ರೈಟರುಗಳ, ಮನಸ್ಸಿಗೆ ಚನ್ನಾಗಿ ತಿಳಿದೂ ಕೂಡ, ತಮ್ಮ ಕಷ್ಟಾರ್ಜಿತವಾದ ನಾಲ್ಕು ಸಾವಿರ ರೂಪಾಯಿಗಳನ್ನು ಈ ನಾಟಕ ತಯಾರು ಮಾಡಲು ವಿನಿಯೋಗಿಸಿರುವದನ್ನು ಕೇಳಿ ಸ್ವಲ್ಪವಾದರೂ ವ್ಯಸನವಾಗುತ್ತದೆ. ಇದೇ ಹಣದನ್ನು ಈ ಚಿಕ್ಕ ಬಾಲಕರ ವಿದ್ಯಾಭಿವೃದ್ಧಿಗೆ ಉಪಯೋಗಿಸಿದ್ದರೆ ನಾಟಕದ ಬಾಲಕರಿಗೆ ಎಂಥಹ ಸಹಾಯವಾಗುತ್ತಿತ್ತೆಂಬದನ್ನು ನಾನು ವಿವರಿಸಿ ಬರೆಯಬೇಕೆ. ತಾರೀಕು 30-1-'25ನೇ ಸಂಚಿಕೆಯಲ್ಲಿ ವೀರಶೈವ ಮತ ಬಾಂಧವರಲ್ಲಿ ಅರಿಕೆ ಮಾಡಿದ್ದ, ಮತಹಿತೈಷಿಯ ಕೋರಿಕೆಯಂತೆ ಈ ನಾಟಕ್ಕಾಗಿ ಉಪಯೋಗಿಸಿದ ನಾಲ್ಕು ಸಾವಿರ ರೂಪಾಯಿಗಳನ್ನು ವೀರಶೈವರ ವಿದ್ಯಾನಿಧಿಸಂಘಕ್ಕೆ ಉಪಯೋಗಿಸಿ, ಈ ನಾಟಕಕ್ಕೆ ತೆಗೆದುಕೊಳ್ಳುವ ತೊಂದರೆಯ ಕಾಲುಪಾಲು ತೊಂದರೆ ತೆಗೆದು ಕೊಂಡು, ಇತರ ವೀರಶೈವರಲ್ಲಿ ಹೋಗಿ ಅವರಿಗೆ ನಮ್ಮ ವಿದ್ಯೆಹೀನತೆಯ ವಿಷಯ ಅವರ ಮನಸ್ಸಿಗೆತಾಗುವ ರೀತಿಯಲ್ಲಿ ಬೋಧಿಸಿ ಅವರಿಂದಲೂ ದ್ರವ್ಯಸಹಾಯ ಪಡೆದು ಈ ಲಿಂಗಾಯಿತ ಯಾ ಈ ವೀರಶೈವ ಚಿಕ್ಕ ಬಾಲಕರ ವಿದ್ಯಾಭಿವೃದ್ಧಿಗೆ ಸಹಾಯ ಮಾಡಿದ್ದರೆ ಎಂತಹ ಸಮಾಜಸೇವೆ ಮಾಡಿದಂತೆ ಆಗುತ್ತಿತ್ತು. ಅಲ್ಲದೆ, ದರಿದ್ರನಿಗೆ ಕನ್ನಡಿಯಲ್ಲಿ ತೋರಿಸಿದ ಗಂಟಿನೋಪಾದಿಯಲ್ಲಿ, ಈ ಹಿಂದೆ ಶನಿವಾರ ಸಂತೆಯಲ್ಲಿ ಸ್ಥಾಪಿಸಿದ "ವಿದ್ಯಾನಿಧಿ ಸಂಘ"ವು ಎಷ್ಟರಮಟ್ಟಿಗೆ ಊರ್ಜಿತವಾಗುತ್ತಿತ್ತು. ಇನ್ನಾದರೂ, ಈ ಮಹನೀಯರುಗಳಾದ ವೀರಶೈವಬಾಂಧವರು ಚನ್ನಾಗಿ ಕಣ್ಣು ತೆರೆದು ತಮ್ಮ ಸುತ್ತಲೂ ಇರುವ ಇತರ ಸಮಾಜದವರನ್ನು ನೋಡಿಯಾದರೂ ಎಚ್ಚರಹೊಂದಿ, ಮನುಷ್ಯ ಸ್ವಾತಂತ್ರ್ಯಕ್ಕೆ ಅಗತ್ಯಬೇಕಾಗಿರುವ ವಿದ್ಯಾಭಿವೃದ್ಧಿಗೆ ಅತ್ಯವಶ್ಯಕವಾದ ವಿದ್ಯಾನಿಧಿ ಸಂಘವನ್ನು ಪುನರುಜ್ಜೀವನ ಮಾಡುವರಾಗಿ ನಂಬಿರುತ್ತೇನೆ. ಪರಮಾತ್ಮನು ಇವರಿಗೆ ಈ ಅಮೋಘವಾದ ಬುದ್ಧಿಯನ್ನು ಕೊಡಬೇಕಾಗಿ ದೈನ್ಯದಿಂದ ಪ್ರಾರ್ಥಿಸುತ್ತೇನೆ.

ಓರ್ವ ಹತಭಾಗ್ಯ

ತಾ 8. 4. '25. ವೀರಶೈವ.

ಕ್ರೈಸ್ತರಿಗೆ ಇದು ಲಗ್ನಕ್ಕೆ ಸಮಯವೇ?

ಅಯ್ಯಾ,

ಭೂಮಂಡಲದಲ್ಲಿರುವ ಕ್ರೈಸ್ತರಾದವರಿಗೆ ಈ ವರುಷದಲ್ಲಿ ಫೆಬ್ರುವರಿ ತಾರೀಕು 25ರಿಂದ ಏಪ್ರಿಲ್ ತಾರೀಕು 11ರ ವರೆಗೆ ದುಃಖದ ದಿವಸಗಳು. ಈ ದಿವಸಗಳಲ್ಲಿ ಮದುವೆ ಕಾರ್ಯವನ್ನು ನಡಿಸುವುದು ಕ್ರೈಸ್ತ ಪದ್ಧತಿ ಇರುವುದಿಲ್ಲ. ಆದರೆ ಕೊಡಗಿನಲ್ಲಿರುವ ಹಾಲಿ ವೆಸ್ಲಿಯನ್ ಸಂಘದವರು ಈ ಪದ್ಧತಿಯನ್ನು ಒತ್ತಟ್ಟಿಗಿಟ್ಟು ಮತಭಕ್ತಿ ವಿರುದ್ಧವಾಗಿ ಕಳೆದ 18ನೇ ತಾರೀಕಿನಲ್ಲಿ ಒಂದು ಮದುವೆ ಮಾಡಿಕೊಟ್ಟರು. ವೆಸ್ಲಿಯನರ ಮತಭಕ್ತಿ ಹೀಗಿದ್ದವರಾದಲ್ಲವೇ, ಕೊಡಗಿನಲ್ಲಿರುವ ಲೇಟ್ ಬಾಸೆಲ್ ಮಿಶನ್ನಿನ ಕ್ರೈಸ್ತರಲ್ಲಿ ಶೇಕಡ 90 ಮಂದಿ ಇಂಥಾ ಅಕ್ರಮಗಳನ್ನು ಕಂಡು ವೆಸ್ಲಿಯನರು ಬೇಡವೆಂಬದಾಗಿ ನಿರಾಕರಿಸಿ ತಮ್ಮ ಪದ್ಧತಿಗಳನ್ನು ಚಿರಸ್ಥಾಯಿಯಾಗಿರಿಸುವಂತೆ ಪ್ರತ್ಯೇಕ ದೇವಾರಾಧನೆ ನಡಿಸುತ್ತಿರುವುದು?

ಲೇಟ್ ಬಾಸೆಲ್ ಮಿಶನಿನ ಕ್ರೈಸ್ತರಲ್ಲೊಬ್ಬ.

ತಿದ್ದುಪಡಿ

ಅಯ್ಯಾ ಸಂಪಾದಕರೇ,

ನಾನು ಕಳೆದ ವಾರದ ಪತ್ರಿಕೆಯಲ್ಲಿ ಬರೆದ ಬಾತ್ಮಿಯಲ್ಲಿ ಕೊಡಗಿನ ಆಡಳಿತದ ವರದಿಯ ವಿಷಯ ತಪ್ಪು ಅಭಿಪ್ರಾಯಪಟ್ಟು ಸರಕಾರದವರನ್ನು ದೂರಿಬರೆದದ್ದಕ್ಕೆ ವಿಷಾದಪಡುತ್ತೇನೆ. ನನಗೆ ಸಿಕ್ಕಿದ ಪತ್ರಿಕೆಯಲ್ಲಿ ನಾನು ಎತ್ತಿ ಹೇಳಿದ ವಾಕ್ಯದ ಒಂದು ಅಕ್ಷರವು ಸ್ಪಷ್ಟವಾಗಿಲ್ಲದೆ ಇದ್ದದ್ದರಿಂದ ಹಾಗೆ ತಪ್ಪು ಅಭಿಪ್ರಾಯಗೊಳ್ಳಲು ಕಾರಣವಾಯಿತು. "ಯುವತ ಉಮೇದ್ವಾರರ ಜಯವೂ ಗೌಡುಗಳ ಮತ್ತು ಮಹಮ್ಮದೀಯ ಉಮೇದ್ವಾರರುಗಳಿಗಿರ ಸೋಲುವಿಕೆಯ ಮುಖ್ಯಾಂಶಗಳಾಗಿವೆ" ಎಂಬ ಅರ್ಥವನ್ನು ತಿಳಿದುಕೊಂಡದ್ದರಿಂದ ತಪ್ಪಭಿಪ್ರಾಯಕೊಟ್ಟುದ್ದಾಯಿತು. ನನಗೆ ಸಿಕ್ಕಿದ ಪತ್ರಿಕೆಯಲ್ಲಿ 'ಯು' ಎಂಬ ಅಕ್ಷರವು ಸರಿಯಾಗಿ ಕಾಣದೆಯಿದ್ದದ್ದರಿಂದ 'ಯು' ಎಂಬ ಅರ್ಥದಿಂದ ಬರೆದದ್ದಾಗಿದೆ. ಆದ್ದರಿಂದ ಈ ಅರ್ಥಭೇದದಿಂದ ಬರೆದ ಬಾತ್ಮಿಯು ತಪ್ಪೆಂದು ನಾನು ಒಪ್ಪಿಕೊಳ್ಳುತ್ತೇನೆ. ಇದರ ಮೇಲೆ ವಾಚಕರೂ ಸರಕಾರದವರೂ ಬಿನ್ನಅಭಿಪ್ರಾಯ ಪಡಬೇಕಾಗಿಲ್ಲ.

ಎನ್. ಮುತ್ತಪ್ಪ.

ಉತ್ತರ ಕೊಡಗಿನನಾಲೆ

ಹನೀಯರೆ,

ನಮ್ಮ ಉತ್ತರಕೊಡಗಿನ ಮುಕ್ಕಾಲುಪಾಲು ಭೂಮಿ ...ತ್ತಾ ನಾಲೆನೀರಿನ ಆಶ್ರಯದಿಂದಲೇ ವ್ಯವಸಾಯವಾಗ ...ಕೆಂಬ ಸಂಗತಿಯನ್ನು ನಾನು ಪ್ರತ್ಯೇಕ ವಿವರಿಸಬೇಕಾಗಿಲ್ಲ ...ಲೆನೀರು ಸರಬರಾಯಿ ಆಗುವ ಭೂಮಿಗಳಿಗೆಲ್ಲ ಇಮ್ಮಡಿ ...ದಾಯ ವಿಧಿಸಿರುವುದು ಸಕಲರು ತಿಳಿದಸಂಗತಿಯಾಗಿದೆ. ...ಮ್ಮಡಿ ಕಂದಾಯತೆತ್ತರೂ ಸಹ ವರ್ಷಂಪ್ರತಿ ಗ್ರಾಮ ...ರೇ ನಾಲೆ ರಿಪೇರಿ ಮಾಡಿಕೊಳ್ಳಬೇಕಾಗಿರುತ್ತೆ. ಯಾರಾ ...ರು ರಿಪೇರಿಮಾಡಲು ತಪ್ಪಿದರೆ ನದರಿಯವನ ಪಾಲಿಗೆ ಬೀಳು ... ನಾಲೆಯನ್ನು ಸರಕಾರದವರೇಮಾಡಿಸಿ ಮನಸೋಇಚ್ಛೆ ...ರ್ಚನ್ನು ಕಂದಾಯ ವಸೂಲ್ಮಾಡುವ ರೀತಿಯಲ್ಲಿ ವಸೂ ...ಮಾಡುವರು ಇಲ್ಲವೇ ಜುಲ್ಮಾನ ವಿಧಿಸುವರು ಇವೆಲ್ಲ ...ದರೂ ನೀರು ಸರಬರಾಯಿ ಆಗುವುದೇಕಷ್ಟ. ನೀರಿಲ್ಲದೆ ...ರು ಉರಿದುಹೋಗುವದೇಜಾಸ್ತಿ ಯೆಂದರೆ ತಪ್ಪಾಗುವಂ...ಲ್ಲ. ನಾಲೆನೀರು ಸರಬರಾಯಿ ಆಗುವ ಭೂಮಿಗಳಿಗೆ ಬಡ ...ತರು ಹೆಚ್ಚು ಕಂದಾಯ ತೆರುತ್ತಿರುವುದರಿಂದ ರೈತರಿಗೆ ತೊಂ... ಕೊಡದೆ ವರ್ಷಂಪ್ರತಿ ಸರಕಾರದವರೇ ನ್ಯಾಯವಾಗಿ ...ರು ಸರಬರಾಯಿ ಆಗುವಂತೆ ರಿಪೇರಿಮಾಡಿ ಕೊಡುವಂತೆ ...ಮ್ಮ ಕೌನ್ಸಿಲ್‌ಮೆಂಬರುಗಳು ಮಾಡಿಸಿ ಕೊಟ್ಟಾರೆಂದು ...ದರು ನೋಡುತ್ತಿರುವುದಾಗಿದೆ ಮತ್ತು ನಮ್ಮ ದಯಾಳುವಾದ ...ಮಿಷನ್‌ರವರು ಈ ವಿಷಯಕ್ಕೆ ತುಂಬಾಗಮನ ಕೊಡುವ ...ಗಿ ನಂಬಿರುವದಾಗಿದೆ. ಇದಲ್ಲದೆ, ಸುಮಾರು 3000 ...ಟ್ಟಿ ಭೂಮಿಗೆ ನೀರು ಒದಗಿಸಿಕೊಡುತ್ತಿದ್ದ ನೇಗಳಿ ಕರ್ಕಳಿ ...ಗ್ರಾಮದ ನಾಲೆಯು ಕಳೆದ ಮಳೆಗಾಲದಲ್ಲಿ ನಾಟಿಕಲ್ಲ ...ರದನಂತರ ಒಡೆದುಹೋದ್ದರಿಂದ ಭೂಮಿಗಳಿಗೆ ಬಂದು ...ಕೊಟ್ಟು ನೀರಾದರು ಬಾರದ್ದರಿಂದ ಪೈರೆಲ್ಲ ಉರಿದುಹೋದ್ದ ...ರಿಂದ ಜನರ ಕಷ್ಟವನ್ನು ವಿವರಿಸಲಾಗುವುದಿಲ್ಲ. ಹೆಚ್ಚೇನು ...ಈಗಾಗಲೇ ಅನೇಕರಿಗೆ ಊಟಕ್ಕಿಲ್ಲವೆಂದರ ಯಾರಿಗೆತಾನೇ ವ್ಯಸನವಾಗದಿರುವುದು. ಕೂಡ್ಲೆ ನಾಲೆ ರಿಪೇರಿಮಾಡಿಸಿ ಕೊಡಬೇಕೆಂದು ಅಧಿಕಾರಿಗಳಿಗೆ ಅನೇಕಜನ ಬರೆಕೊಂಡದ್ದ. ...ಲ್ಲದೆ ನಮ್ಮ ಕೌನ್ಸಿಲ್‌ಮೆಂಬರಲ್ಲಿಯೂ ಪುಕಾರು ಇತ್ತು. ಇದುವರೆಗೆ ಯಾವಪ್ರಯೋಜನವೂ ದೊರೆಯಲಿಲ್ಲ. ಹೆಸರಿ... ಗೇನೋ ½-¼ ಕಂದಾಯ ರಿಮಿಶನ್‌ಕೊಟ್ಟು ಬಾಕಿ ಕಂದಾ ಯವನ್ನು ಸರಾಗವಾಗಿ ವಸೂಲ್ಮಾಡಿಯೇಬಿಟ್ಟರು. ತಾಲೂಕು ಸುಬೇದಾರರವರು ಬಂದಿರುವಾಗ್ಯೆ ಗರೀಬರಿಗೆ ಊಟಕ್ಕೆ ಮು ಫತ್ತಾಗಿ ಹಣಕೊಡಿಸುವದಾಗಿ ವಾಗ್ದಾನಮಾಡಿ ಹೋದ ರೀತಿ ಇದುವರೆಗೂ ಯಾವಸುದ್ದಿಯೂ ಇಲ್ಲ. ಈ ವರ್ಷ ವಾದರೂ ನಾಲೆ ರಿಪೇರಿಮಾಡಿಸಿ ಕೊಟ್ಟಾರೆಂದು ನಂಬಿದ್ದ ರೀತಿ ಇದುವರೆಗೂ ಕೆಲಸಕ್ಕೆ ಸುರುಮಾಡಿದಂತೆ ಕಾಣುವು ದಿಲ್ಲ. ಬೀಜಬಿತ್ತುವಕಾಲ ಸಮೀಪಿಸಿದರಿಂದ ಮೇ 15 ನೇ ತಾರೀಕಿನ ಒಳಗಾದರೂ ರಿಪೇರಿಮಾಡಿ ಪೂರೈಸದಿದ್ದರೆ ಈ ವರ್ಷವು ಮೇಲ್ಕಂಡಭೂಮಿ ಶೀರಾಪಾಳುಬೀಳುವುದರಿಂದ ಬರುವ ವರ್ಷಕ್ಕೆ ಗ್ರಾಮಸ್ಥರಿಗೆಲ್ಲ ಭಿಕ್ಷಾಟನೆಯೆ ಗತಿಯೆಂ ದು ಕಾಣುತ್ತೆ. ನಮ್ಮ ದಯಾಳುವಾದ ಕಮಿಷನರವರು ಈ ವಿಷಯ ತುಂಬಗಮನಕ್ಕೆ ತೆಗೆದುಕೊಂಡು ಕೂಡ್ಲೆ ಕೆಲ ಸಕ್ಕೆ ಸುರುಮಾಡುವಂತೆ ಏರ್ಪಾಡುಮಾಡಿ ಮೇ 15 ನೇ ತಾರೀಕಿನ ಒಳಗಾದರೂ ನಾಲೆಯನ್ನು ರಿಪೇರಿ ಮಾಡಿಸಿಕೊ ಟ್ಟು ಗರೀಬರೈತರ ಕಷ್ಟವನ್ನು ಪರಿಹರಿಸಿ ಕೊಡಬೇಕಾಗಿ ಪ್ರಾರ್ಥನೆ.

ಬಡರೈತ.

ಮಡಿಕೇರಿ-ಸೋಮವಾರಪೇಟೆ ಬಸ್ ಸರ್ವಿಸ್.

ಅಯ್ಯಾ,

ಕಳೆದ ಜನವರಿ ತಿಂಗಳಲ್ಲು ನನ್ನ ಸಹೋದರನು ಸೋಮ ವಾರಪೇಟೆಯಿಂದ ಮಡಿಕೇರಿಗೆ ಹೋಗಬೇಕಾಯಿತು. ಮ ಧ್ಯ ಸ್ಥಳವಾದ ಕುಶಾಲ್‌ನಗರದಲ್ಲು ಬಸ್ಸು ನಿಂತಲ್ಲಿ ಕಂಡಕ್ಟ ರನ್ನು ವಿಚಾರಿಸುವಾಗ್ಯೆ ಅಲ್ಲಿ 15 ಮಿನಿಟು ನಿಲ್ಲುತ್ತೆಯೆಂಗಿ ಹೇಳಿದ ಮೇರೆ ನನ್ನ ಸಹೋದರನು ತನ್ನ ಒಬ್ಬ ಸ್ನೇಹಿತನನ್ನು ಕಂಡು ಬರುತ್ತೇನೆಂದು ಕಂಡಕ್ಟರಿಗೆ ಹೇಳಿಹೋಗಿ 10 ಮಿನಿ ಟು ಒಳಗೆ ವಾಪಾಸು ಬರುವಷ್ಟರಲ್ಲಿ ಬಸ್ಸನ್ನು ನಡಿಸಿಬಿಟ್ಟಿದ್ದ ನಂತೆ. ಈತನು ತನ್ನ ಬೈಸಿಕಲನ್ನು ಸಹ ಬಸ್ಸಿನಲ್ಲಿ ಚಾರ್ಜು ಕೊಟ್ಟು ಹಾಕಿದ್ದನು. ಈತನಿಗೆ ಮಾರನೇ ದಿನವೇ ಕೊಡ ಗುಬಿಟ್ಟು ಹೋಗಬೇಕಾಗಿದ್ದದರಿಂದ ತನ್ನ ಸ್ನೇಹಿತನ ಬೈಸಿಕ ಲನ್ನು ಕೇಳಿಕೊಂಡು ಮಡಿಕೇರಿಗೆ ಹೊರಡಬೇಕಾಯಿತು. ಅರ್ಧ ದಾರಿಯಲ್ಲು ಬಸ್ಸು ಸಿಕ್ಕಲಾಗಿ ತನ್ನ ಸ್ನೇಹಿತನ ಬೈಸಿಕ ಲನ್ನು ಒಂದು ಆಳಿನ ಕೈಯ ಅಲಾಯಿದ ಸಂಬಳ ಕೊಟ್ಟು ವಾಪಾಸು ಕಳುಹಿಸಿ ಬಸ್ಸಿನಲ್ಲು ವಾಪಾಸು ಹೋಗಬೇಕಾಯಿ ತು.

ಎರಡನೆ ದಫ ಜನವರಿ ತಾರೀಕು 27ರಲ್ಲು ಪುನಹ ನನ್ನ ಸಹೋದರನು ಸೋಮವಾರಪೇಟೆಯಿಂದ ಮಡಿಕೇರಿಗೆ ಹೋ ಗಲು ಬಸ್ ಆಫೀಸಿಗೆ ಹೋಗಿ ಏಜಂಟರಿಗೆ ಚಾರ್ಜುಕೊಟ್ಟು ಬಳುಗೋಡಿನಲ್ಲು ಟಿಕೇಟ್ ಕೊಟ್ಟು ತನ್ನನ್ನು ಕೂರಿಸಿಕೊಂಡು ಹೋಗುವದಾಗಿ ಏರ್ಪಾಡು ಮಾಡಿದ್ದಕ್ಕೆ ಏಜಂಟರು ಒಪ್ಪಿ ದಮೇರೆ ಈತನು ಬಸ್ಸು ಬರುವ ಸಮಯವನ್ನು ಕಾಯುತ್ತಾ ಇದ್ದನು. ಕಂಡಕ್ಟರಾಗಲೀ ಡ್ರೈವರಾಗಲೀ ಬಳುಗೋಡಿನ ಲ್ಲಿ ಬಸ್ಸನ್ನು ನಿಲ್ಲಿಸದೆ, ಬಸ್ಸನ್ನು ನಿಲ್ಲಿಸುವ ಹಾಗೆ ಕೂಗುತ್ತಾ ಇದ್ದ ಹೋದಹಾಗೆಯೇ ಬಸ್ಸು ನಿಲ್ಲಿಸದೆ ನಡಿಸಿಬಿಟ್ಟನು. ಈ ತನಿಗೆ ಆ ದಿನವೇ ಮಡಿಕೇರಿಗೆ ತಲಪಬೇಕಾದ್ದರಿಂದ ನನ್ನ ಬೈ ಸಿಕಲನ್ನು ತೆಗೆದುಕೊಂಡು ಮಡಿಕೇರಿಗೆ ಸಾಯಂಕಾಲಕ್ಕೆ ತ ಲಪುವಂತೆ ಹೊರಡಬೇಕಾಯಿತು.

ಇದೂ ಅಲ್ಲದೆ ಕಳೆದ ಜನವರಿ ತಿಂಗಳಲ್ಲು ನಾನು ಮಡಿ ಕೇರಿಯಿಂದ ಬರುವಾಗ್ಯೆ ನನ್ನ ಜೊತೆಯಲ್ಲು ಕೆಲವು ಸಾಮಾ ನುಗಳನ್ನು ತಂದೆನು, ಇಳಿಯುವಾಗ ಸಾಮಾನು ತೆಗೆದುಕೊ ಳ್ಳಲು ಮರೆತುಬಿಟ್ಟೆನು. ಮಾರಣೆ ದಿನ ಹೋಗಿ ಕೇಳುವಾ ಗ್ಯೆ ಬಸ್ಸು ವಾಪಾಸು ಹೋಗುವಾಗ್ಯೆ ತೆಗೆದುಕೊಂಡು ಹೋ ಗಿಬಿಟ್ಟಿದೆಯೆಂಗಿ ತಿಳಿಯಬಂತು, 3, 4 ದಿವಸಗಳ ವರೆಗೂ ನನಗೆ ದೊರಕದ್ದರಿಂದ ಪೋಲೀಸಿಗೆ ಕಾಗದ ಬರೆಯಬೇಕಾಯಿ ತು. ಆ ಮೇಲೆ ನನ್ನ ಸಾಮಾನುಗಳು ದೊರಕಿತು. ಬಸ್ಸಿ ನಲ್ಲು ಮರೆತು ಸಾಮಾನುಗಳನ್ನು ಪೋಲೀಸ್ ಸ್ಟೇಶನಿಗೆ ಹಾ ಜರ್‌ಪಡಿಸದೆ ಮಡಿಕೇರಿಗೆ ವಾಪಾಸು ತೆಗೆದುಕೊಂಡು ಹೋ ಗಿ 3, 4 ದಿವಸಗಳ ವರೆಗೂ ತರದೆ ಇದ್ದದರ ಅರ್ಥವೇನಿರಬ ಹುದು?

ಇಂಥಾ ಪುಕಾರುಗಳು ನನ್ನ ಗೋಚರಕ್ಕೆ ಅನೇಕ ಬಂ ದಿವೆ. ಈ ಲೈನಿನಲ್ಲು ಒಬ್ಬನೇ ಬಸ್ಸು ನಡಿಸಿಕೊಂಡು ಇರು ವದೇ ಇಂಥಾ ಪುಕಾರುಗಳಿಗೆ ಕಾರಣ, ಎರಡು ಬಸ್ಸುಗಳು ಇದ್ದಿದ್ದರೆ ಹೀಗಾಗುತ್ತಿರಲಿಲ್ಲ. ಗರೀಬ ರೈತರಿಗೆ ಇಂಥಾ ಸಂದರ್ಭಗಳು ಒದಗಿದ್ದರೆ ಎಷ್ಟು ಕಷ್ಟಪಡಬೇಕಾಗಿತ್ತೆಂಬದ ನ್ನು ವಾಚಕರೇ ಊಹಿಸಿರಿ ಆದಕಾರಣ ಇದೇ ಲೈನಿಗೆ ಬೇರೆ ದರಕಾಸ್ತುದಾರರಿಗೂ ಸಹ ಲೈಸೆನ್ಸು ಕೊಟ್ಟು ಗರೀಬ ಪ್ರಯಾಣಕರಿಗೆ ಇಂಥಾ ಕಷ್ಟಬಾರದ ರೀತಿ ನೋಡಬೇಕಾಗಿ ಸರಕಾರದವರನ್ನು ನಾನು ಕೇಳಿಕೊಳ್ಳುತ್ತೇನೆ

ಮನ ನೊಂದವ.

ಇರ್ಪು ಜಾತ್ರೆ.

ಮಾರ್ಚಿ ತಾ 6ರಲ್ಲು ಕೊಡಗು ಪತ್ರಿಕೆಯ 6ನೇ ಪುಟ ದಲ್ಲು ಇರ್ಪು ಜಾತ್ರೆಯ ವಿಷಯ ಬರೆದ ಬಾತ್ಮಿದಾರರೇ,

ಮುಜರಾಯಿ ಇಲಾಖೆಯವರ ಏರ್ಪಾಡಿಗೂ ಇರ್ಪು ದೇವಸ್ಥಾನದ ಮೆಂಬರರ ಉದಾಸೀನಕ್ಕೂ ನಾನು ಸಹ ವಿಷಾದಿಸಬೇಕಾಗಿದೆ

ಇರ್ಪು ಜಾತ್ರೆಯಲ್ಲಿ ಬೀದಿಗಾಗಿ ನೂರಾರು ಜನರು ಅಂದರೆ ಸ್ತ್ರೀಪುರುಷರು ತಮ್ಮ ಬಂಧುಮಿತ್ರರೊಡನೆ ಬರುತ್ತಾ ಹೋಗುತ್ತಾ ಇದ್ದದ್ದನ್ನು ಬಾತ್ಮಿದಾರರು ನೋಡಿರಬಹುದು. ಅವರಲ್ಲಿ ಕೆಲವರು ಪೂಜೆಪುನಸ್ಕಾರಕ್ಕಾಗಿ ವ್ಯಾಪಾರ ಮಾಡು ತ್ತಿದ್ದರು. ಇನ್ನು ಕೆಲವರು ಹೋಗುವಾಗ್ಯೆ, ಮಕ್ಕಳ ಆಟದ ವಿನೋದ ಸಾಮಾನು ವಗೈರೆಯನ್ನು ತಮ್ಮ ನಮ್ಮಂ ಥವರಿಂದ ತೆಗೆಯಿಸಿಕೊಳ್ಳುತ್ತಿದ್ದರು. ಹೀಗೆಯೇ ನಮ್ಮ ದೇಶದ ಇತರ ಜಾತ್ರೆಗಳಲ್ಲಿ ಸಹ ತಮ ನಮ್ಮಂಥವರಿಂದ ವ್ಯಾಪಾರ ತೆಗೆಯಿಸಿಕೊಳ್ಳುವರು. ಇದೊಂದು ವಿಶೇಷವಲ್ಲ.

ಜಾತ್ರೆಗೆ ಬಂದ ಶೇಕಡ 75ರಷ್ಟು ಜನರು ಕುಡುಕ ರಾಗಿದ್ದರು ಎಂಬದಾಗಿ ಬರೆದಿರುವಿರಿ. ಜಾತ್ರೆಗೆ ನನ್ನ ಅಂದಾಜು 3 ಯಾ 4 ಸಾವಿರ ಜನರಷ್ಟು ಬಂದಿರಬಹುದು. ಇವರಲ್ಲು ಶೇಕಡ 75ರಷ್ಟು ಕುಡುಕರಾಗಿದ್ದರೆ ಶೇಕಡ 25ರಷ್ಟು ಜನರು ನೋಡಿರಬಹುದಲ್ಲವೇ? ಈ ಬಾತ್ಮಿದಾರ ರಾಗೆ 25% ಜನರು ನೋಡಿರುವುದಿಲ್ಲವಾಗಿ ತಿಳಿಯಬರುತ್ತ ದೆ.

ಕುರ್ಚಿಗ್ರಾಮದ ಜನರು ಒಂದಂಥಾ ಯಾತ್ರಿಕರನ್ನು ಸತ್ಕರಿಸುವದನ್ನು ಬಿಟ್ಟು ವ್ಯಾಪಾರದಲ್ಲಿ ಮಗ್ನರಾಗಿದ್ದರು ಎಂಬ ವಗೈರೆಯಾಗಿ ಬರೆದಿರುವಿರಿ ನಮ್ಮ ಗ್ರಾಮದವರ ಬೊಬ್ಬರಾದರೂ ನಿಮ್ಮನ್ನು ಸತ್ಕಾರಮಾಡಿದ್ದರೆ ನಿಮ್ಮಂತೆ ಇನ್ನೂ ಅನೇಕ ಹಾಜರಿದ್ದ ಯಾತ್ರಿಕರನ್ನು ಗ್ರಾಮಸ್ಥರು ಸತ್ಕರಿಸಿರುವದು ಹಾಜರಿದ್ದ ಯಾತ್ರಿಕರಿಗೆ ಗೊತ್ತಿರುವುದು. ನಮ್ಮ ಗ್ರಾಮಸ್ಥರು ಹೇಗೆ ಸತ್ಕಾರಮಾಡಬೇಕೆಂಬದನ್ನು ನೀವು ಖಂಡಿತವಾಗಿಯೂ ಬರೆಯುತಕ್ಕ ಆವಶ್ಯ ಇಲ್ಲ ಓ ಮರೆತೆನು, ಈ ಬಾತ್ಮಿದಾರರನ್ನು ಕುರ್ಚಿಗ್ರಾಮಸ್ಥರೆಲ್ಲರು ಸೇರಿಕೊಂಡು ಸತ್ಕರಿಸಲಿಲ್ಲವೆಂಬದಕ್ಕೆ ಇವರಿಗೆ ಮನಕ್ಲೇಶ ಎದುಹುದು ಇದಕ್ಕಾಗಿ ಕ್ಲೇಶವನ್ನಿಟ್ಟುಕೊಳ್ಳಬೇಡಿ

ಶಿವರಾತ್ರಿಯಲ್ಲಿ ಜನರ ಮುಖದಲ್ಲಿ ಕಾಂತಿ ಇರಲಿಲ್ಲ ವೆಂಬದಾಗಿ ಬರೆದಿರುವಿರಿ. ಜಾಗ್ರಣೆ, ಉಪವಾಸ, ವಿಷ ಲಿಪ್ತ ಜಳದಿಂದ ಮುಖಕಾಂತಿ ಇರಲಿಲ್ಲವಲ್ಲದೆ ನೀವು ಬರೆ ದಂತೆ ಖಂಡಿತವಾಗಿ ಕುಡುಕತನದಿಂದಲ್ಲವೆಂಬದು ಯಾತ್ರಿ ಕರೆಲ್ಲರಿಗೂ ಗೊತ್ತಿರಬಹುದಾಗಿ ನಾವು ಅಂರೋಕ್ತವಾಗಿ ಹೇಳುತ್ತೇನೆ.

ಕುರ್ಚಿ ಗ್ರಾಮದ ಜನರು ವ್ಯಾಪಾರದ ಕುತೂಹಲ ದಿಂದ ಹಣಸಂಪಾದನೆಯಲ್ಲಿ ಮಗ್ನರಾಗಿದ್ದರು ವಗೈರೆಯಾ ಗಿ ಬರೆದಿರುವಿರಿ. ನಮ್ಮ ಈ ದೇಶದಿಂದ ಅನ್ಯದೇಶಸ್ಥರು ಕೊಂಡೊಯ್ಯು ಲಾಭವನ್ನು ನೋಡಿ ಅನೇಕ ಮಹಾನುಭಾವರು ಯಾವ ತರದಲ್ಲು ನಮ್ಮ ದೇಶಸ್ಥರನ್ನು ವ್ಯಾಪಾರದಲ್ಲಿ ಮುಂದಕ್ಕೆ ತರುವದೆಂಬ ಇರಾದೆ ಇರುವವರು ಅನೇಕರಿರು ವಾಗ್ಯೆ ನಿಮ್ಮ ಬರವಣಿಗೆಯನ್ನು ಅವರೆಲ್ಲರೂ ನೋಡಿದ್ದರೆ ಅವರು ಹೀಗಾಡದಿರುವರೇ? ಮತ್ತು ಪ್ರತಿಯೊಬ್ಬರು ಅವರ ಶಕ್ತ್ಯನುಸಾರ ಎಷ್ಟು ಕೆಲಸಗಳನ್ನಾದರೂ ಜರಗಿಸ ಬಹು ದಲ್ಲವೇ?

ಜಾತ್ರೆಗೆ ಯಾತ್ರಿಕರಾಗಿ ಬಂದಿದ್ದ ಸಾವಿರಗಟ್ಲೆ ಜನರು ಕುಡುಕರಾಗಿ ಅವಿವೇಕಿಗಳಾಗಿದ್ದರೆಂದು ಲೇಪಿಸು ವದು ಪೂರಾ ಸುಳ್ಳೆಂಬು ನಾನು ಹೇಳಬಲ್ಲೆನು.

ಸೀತತ್ಕಾರಕರ್ದ್ಯಂ ಮಹಾನೀಯಂಬೇಕಾ ಪಟಾಪಟಾಯತೆ ದಿವ್ಯಂ ಚೂತರಸಂ ಸೀತತ್ವಾಗರ್ವಂ ನಾಯಾತಿ ಕೋಕಿಲ ಎಂಬಂತೆ ಕಪ್ಪೆಯು ಬರೀನೀರನ್ನು ಕುಡಿದುಕೊಂಡು ಪಟ ಪಟಯೆಂದು ಕೂಗಿಕೊಳ್ಳುತ್ತದೆ ಕೋಗಿಲೆಯು ಸೀ ಮಾ ವಿನ ಹಣ್ಣಿನ ರಸವನ್ನು ಕುಡಿದರೂ ಗರ್ವ ಹೊಂದುವದಿಲ್ಲ ಅದರಂತೆಯೇ ವಿದ್ವಾಂಸರು ಎಷ್ಟು ಐಶ್ವರ್ಯವಂತರೂ ವಿದ್ಯಾ ವಂತರೂ ಆದಾಗ್ಯೂ ಅಹಂಕಾರ ಹೊಂದುವದಿಲ್ಲ.

ಕುರ್ಚಿ ಗ್ರಾಮಸ್ಥ.

ಸಾಲ.

ಅಯ್ಯಾ,

ನನ್ನ ಪಿತೃವಿನ ಮೇಲ್ವಿಚಾರಣೆ ತಪ್ಪಿ ಮೂರು ವರ್ಷ ವಾಯಿತು ಅವರು ಗತಿಸುವಾಗ ನನಗೆ 100 ರೂ. ಸಾಲ ವನ್ನು ಬಿಟ್ಟು ಹೋದರು. ಅದು ಅವರು ಇರುವಾಗ ಅಷ್ಟೊಂದು ಕೆಡುಕಿನಲಿಲ್ಲ. ಏಕೆಂದರೆ ನನ್ನ ಜೊತೆಗೆ ದುಡಿ ಯಲಿಕ್ಕ ಒಬ್ಬ ಹೆಣ್ಣನ್ನು ಮದುವೆ ಮಾಡಿದ್ದರು. ತಂದೆಯ ವರ ತಿಥಿಖರ್ಚು ತಗಲಿದುದರಿಂದ, ನಾನು ಆ ಸಾಲವನ್ನು ಒಡನೆ ತೀರಿಸಬಾರದೆ ಹೋದೆನಾದುದರಿಂದ, ಸಾಲಕೊಟ್ಟ ವರ ತಗಾದೆ ಹೆಚ್ಚಿದುದರಿಂದ, ಬೇರೊಬ್ಬರಿಂದ ಸಾಲ ತೆಗೆ ಯಲೇ ಬೇಕಾಯಿತು ಈ ಸಮಯಕ್ಕೆ ನನ್ನ ಅರ್ಧಾಂ ಗಿಯ ಒಂದು ಚಿಂತೆ, ಏನೆಂದು? ನೆರೆಮನೆಯ ವ್ಯಯ್ಯಾರ ಮ್ಮನಿಗೆ ಮೈತುಂಬಾ ಚಿನ್ನದೊಡವೆಗಳಿದ್ದರೂ ತನಗೆ ಒಂದೂ ಇಲ್ಲವೆಂದು; ಸಾಲದಕ್ಕೆ ಇನ್ನೊಬ್ಬಳು ಹಣಕಿಸಿದಳು. ಮಗ ದೊಬ್ಬಳು ಹೀಯಾಳಿಸಿದಳು. ಪಾಪ! ಅವಳ ಚಿಂತೆಯನ್ನು ನೀಗಿಸುವುದು ನನ್ನ ಕರ್ತವ್ಯವಲ್ಲವೇ? ನಾನು ಅಂತೂ ನಿರಾ ಕರಿಸಿಯೇ ಬಿಡುತ್ತಿದ್ದೆ. ಆದರೆ, ಹಾಗೆಂದು ಹೊಗಳಿಸಿ ಕೊಳ್ಳುವ ಬುದ್ಧಿವಂತರು "ನನ್ನ ಹೇಳಿಕೆಯಂತೆ ನಡೆ; ನಡ ಯಂತೆ ಬೇಡ," ಎಂದು ಹೇಳುವವರಲ್ಲದೆ, "ನುಡಿಯಂತೆ ನಡೆಯುವವರು" ನನ್ನ ದೃಷ್ಟಿಪಥಕ್ಕೆ ಬೀಳಲೇ ಇಲ್ಲ. ನನ್ನ ಅಭಿಪ್ರಾಯದಂತೆ ನಡೆಯಲು ಹುಟ್ಟುಮೂಢನಾದ ನನಗೆ ಅಷ್ಟೊಂದು ಮನೋನಿಶ್ಚಯವಿಲ್ಲ, ಏನು ಮಾಡಲಿ? ಚಿನಿ ವಾರನಿಂದ ಒಂದು ಆಭರಣ ಮಾಡಿಸಿ ನನ್ನ ಮಿತ್ರಿಗೆ ಕೊಡಿ ಸಿಯೂ ಆಯಿತು. ಅಯ್ಯರಿಗೆ ಆಭರಣದ ಕಾಲಾಂಶಕ್ಕೆ ಅ ದನ್ನು ಈಡು ಇಟ್ಟೂಹೋಯಿತು. ಅದಿರಲಿ ನಾನು ನನ್ನ ಜಂಪತಿಗೆ ಒಂದೇ ಒಂದು ಆಭರಣ ಮಾಡಿಸಿದುದು, ಅದೂತ ಪ್ಪೇ? ಹೀಗೆ ಎಷ್ಟೊಂದು ಜನ ಮಾಡಿರುವುದಿಲ್ಲ

ಅದೃಷ್ಟವಶಾತ್ ನಾನು ಕಾಯಿಲೆಯಲ್ಲಿ ಬಿದ್ದೆ. ಬೆಳೆ ಕೆಟ್ಟು ಹೋಯಿತು. ಒಕ್ಕಲು ಕೆಲಸ ಬರುತ್ತಿಗೆ ಮೂರು ಗಾಡಿ ಭತ್ತ ಕೊಡೆಂದು ಚೀಲಗಳ ತೆಗೆದುಕೊಂಡು ಪುರದ ಲಿಂಗಪ್ಪ ಶೆಟ್ರು ಒಂದೇ ಬಂದರು. ನಾನು ಮೇಲೆ ವಿವರಿ ಸಿದ ನಿಮಿತ್ತಗಳಿಗಾಗಿ 3 ತಿಂಗಳ ಮೊದಲು 150 ರೂ ಸಾಲ ಅವರಿಂದ ತಕೊಂಡಿದ್ದೆ. ಒಂದು ವರ್ಷದ ಖರ್ಚಿಗೆ ಸಹ ಮಡಗಿಕೊಳ್ಳದೆ ಹೇಗೂ ಒಂದೂವರೆ ಗಾಡಿ ಭತ್ತ ಪಕ್ಕೆ ಮಾಡಿದೆ ಬಾಕಿದ್ದಕ್ಕೆ ಗಾಡಿ ಭತ್ತಕ್ಕೆ 80 ರೂ. ಪ್ರಕಾರ ಕೊಡಬೇಕು ಇಲ್ಲದಿದ್ದರೆ ಈ ಹಣಕ್ಕೆ ಮಾರನೆ ವರ್ಷಕ್ಕೆ 12 ಭಟ್ಟಿ ಭತ್ತ ಬಡ್ಡಿ ಕೊಟ್ಟದಾಯಿತು. ಎಷ್ಟೆಂದರೂ ನಾನು ಕಾಸಿಗೆ ಕಾಸೇ ಬಡ್ಡಿ ನಿಮ್ಮಿಂದ ತಕ್ಕೊಂಡೇನು; ಹೆಚ್ಚಿಲ್ಲ ಅಂದರು. ನಾನು ಹಣವೇ ಕೊಟ್ಟುಬಿಡುತ್ತೇ ನೆಂದು ನಮ್ಮ ಊರಿನ ಪರಸ್ಪರಲೇವಾದೇವಿ ಸಂಘದಿಂದ 150 ರೂ. ಸಾಲತೆಗೆದುಕೊಂಡೆನು. ಮಾರನೇ ವರ್ಷ ಕಂತು ಹಣ ಪಕ್ಕೆಮಾಡಲಾಗದಿರಲು, ಕೆಲವು ಮೆಂಬರುಗಳು ಈ ವರ್ತನವು ನ್ಯಾಯವಾದ ಮಾರ್ಗದಲ್ಲಿಲ್ಲವೆಂದರೂ ಪ್ರಸಿ ಡೆಂಟರು ದಯವಿಟ್ಟು ಬೇರೊಂದು ಕರಾರು ಬರೆಸಿಕೊಂಡರು. ಆ ನಡತೆ ತಪ್ಪಾದರೂ ನನ್ನದವರಿಗೆ ಅನೇಕಾನೇಕ ಧನ್ಯವಾದ ಗಳು.

ಹೀಗೆ ಅಲ್ಲಿಂದಲ್ಲಿಗೆ ಇಲ್ಲಿಂದಲ್ಲಿಗೆ ಸಾಲವನ್ನು ಬದಲಾ ಯಿಸಿ, ಹೇಗೂ ಈ ವರ್ಷ 300 ರೂ. ಸಾಲಗಾರನಾಗಿದ್ದೇನೆ. ನನ್ನ ಚರ ಆಸ್ತಿಗಳೆಲ್ಲವೂ ಪರರ ಪಾಲಾದವು; ಜೊತೆಗ ಆ ಚಿನ್ನದಾಭರಣ ಸಹ. ಊಟಕ್ಕೆ ತಿಗಟೆ ಇಲ್ಲ. ಉಡಲಿಕ್ಕೆ ಚಿಂದಿ ಇಲ್ಲ. ಧನವಂತರ ಕಾಲಿಗೆ ಬಿದ್ದು ದಮ್ಮಯ್ಯ ಅಂದುಕೊಂಡೆ. ಏನು, ಆ ಮಾತು? ಆ ಊರಿಗೆ ಹೋಗಲೂ ಬೇಡ, ಆ ಮಾತು ಕೇಳಲೂ ಬೇಡ, ನನ್ನಿಂದ ಒಂದು ಕುರು ಡುಕಾಸು ಸಿಕ್ಕದು" ಅಂದೇ ಅಂದರು. "ಹಾಗಲ್ಲ, ಸ್ವಾಮಿ, ಮಹರಾಜು ಬೇಂಕಿನಲ್ಲಿರುವ 1 ಲಕ್ಷ ರೂಪಾಯಿಗಳ 5—ಗೆ ಸಾವಿರವನ್ನಾದರೂ ನಮ್ಮ ಸೊಸೈಟಿಯಲ್ಲಿ ಹಾಕಿ ನಿಮ್ಮ 6% ಬದಲು 9% ಬಡ್ಡಿಯೂ ಸಿಕ್ಕಿತು; ನಮ್ಮಂತಹ ಬಡ ಪಾಪಿಗಳ ರಕ್ಷಿಸಿದ ಹಾಗೂ ಆಯಿತು," ಎಂದು ಉಸಿರು ಹಿಡಿದು ಅಂದು ಬಿಟ್ಟೆ. ಅಹಂ! ನಿನಗೇಕೆ ಆ ವಿಚಾರ? ನನ್ನ ತೋಟದಲ್ಲಿ ಗೇಯಿ," ಎಂದರು, ಇದಕ್ಕೇನೆನ್ನಲಿ?

ಈಗ ಭಿಕ್ಷಾಂದೇಹಿ ಎಂದು ಹೋಗಲೇ? ಪಾಪರ್ ಸರ್ಟಿಫಿಕೇಟು ತೆಗೆಯಲೇ? ಇಲ್ಲವೇ ಈ ಲೋಕವೇ ಬೇಡ ಎಂದು ತ್ಯಜಿಸಲೇ? ನನ್ನಂಥ ಪಾಪಿಯನ್ನು ಕಡೆ ಹಾಯಿಸುವ ಪಥ ಆದೇನಾದರೂ ಇದೇ ಏನು?

ಅದಿರಲಿ, ಈ ಇಪ್ಪತ್ತನೇ ಶತಮಾನದಲ್ಲಿ ಅವರಲ್ಲು ಈ ಚಿಕ್ಕ ಕೊಡಗಿನಲ್ಲಿ ಶೈಲಾಕರು ಇರುವರೆಂದರೆ ನನಗಾಟ ವಿರೇ? ಆಶ್ಚರ್ಯವೆರೆಯುವರೇ?

ಚಂದ್ರಪ್ರಸಾದ.

ನೋಟೀಸು.

ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ.—

ವೀರರಾಜಪೇಟೆ ಸಬ್ ರಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಷ್ಟರಾದ ತಾ. 7—1—1918ರ ಪಾರ್ಟಿಷನ್ ಖಿರಾಜು ಮೇರೆ ಗುಹ್ಯ ಗ್ರಾಮದ ಚೇಂದಂಡ ಕರುಂಬಯ್ಯನವರ ಮಗ ಸುಬ್ಬಯ್ಯನವರಿಗೆ ನನ್ನ ಅನುಮತಿ ವಿನಹ ಚೆಂಬೆಬೆಳೂರು, ಕಣ್ಣಂಗಾಲ, ಗುಹ್ಯ ಮತ್ತು ಸಿದ್ದಾಪುರ ಗ್ರಾಮಗಳಲ್ಲಿ ಇರುವ ನಮ್ಮ ಬಾಬ್ತು ಸ್ಥಿರಸೊತ್ತುಗಳನ್ನು ಗಿರ್ವಿ, ಭೋಗ್ಯ, ಕ್ರಯ ಮುಂತಾದ ಯಾವ ವಿಧದ ಪರಾಧೀನ ಪಡಿಸುವ ಹಕ್ಕು ಇರುವದಿಲ್ಲ. ಯಾರಾದರೂ ಹಾಗೆ ಅವರಿಂದ ಕ್ರಯ, ಗಿರ್ವಿ, ಭೋಗ್ಯ ಮುಂತಾದ ಯಾವ ವಿಧದಿಂದಲಾದರೂ ಸದರಿ ಸೊತ್ತುಗಳ ಹಕ್ಕನ್ನು ಪಡೆದರೆ ಹಾಗೆ ತೆಗೆದುಕೊಂಡವರೇ ಅದರ ನಷ್ಟಕಷ್ಟಗಳಿಗೆಲ್ಲಾ ಗುರಿಯಾಗುತ್ತಾರೆ

23—3—25. ಸಿ. ಕೆ. ಚಂಗಪ್ಪ,

1.2 ರಿವರ್‌ಸೈಡ್, ಸಿದ್ದಾಪುರ.

PUBLIC NOTICE.

The public and all canceined are hereby informed that in vertue of a Partition Cancellation Deed of 7—1—1918 registered in the sub-registrars office of Virarajandrapet, Mr Chendandra Karumbayya Subbayya of Ammathi, Sidapura nad, Guhya Village, is not entitled without my consent to sell, mortgage or otherwise alienate of our landed properties situated in Chembebeloor, Kannagala and Sidapur and whosoever purchases or lends money on immovable properties to the aforesaid Mr. Subbayya, does so on his or her own risk,

23 3. '25. *C K Chengappa.*

I. 2. *Riverside, Sidapur.*

ಕೊಡಗು ಜಮ್ಖಾನ ರೇಸ್‌ಗಳು.

ಏಪ್ರಿಲ್ ೧೪, ೧೭, ೨೦.

ಪ್ರತಿದಿನವೂ ಸಾಯಂಕಾಲ ಮೂರು ಗಂಟೆಗೆ ಪ್ರಾರಂಭ. ಟೋಟಲೈಜೇಟರ್ ಮತ್ತು ಬುಕ್ ಮೇಕರಿಗೆ ಎರಡು ರುಪಾಯಿ

ಪ್ರವೇಶಕ್ಕೆ ಒಂದು ರುಪಾಯಿ.

ಫಲಾಹಾರದ ಅಂಗಡಿಯೂ ಸಹ ಇದೆ.

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿದೆ.

ಕೃಷ್ಣ ನಂಬೀಷನ್ ಮತ್ತು ನಾರಾಯಣ ನಂಬೀಷನ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯಶಾಸ್ತ್ರದಲ್ಲಿ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಪಿ. ಟಿ. ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹಲವು ವರ್ಷಗಳಿದ್ದು ಪಾಂಡಿತ್ಯವನ್ನೂ ಅನುಭವವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಿಕ್ಕ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ.

ಮಂಜೇರಿ ಮತ್ತು ಕಂಪೆನಿ,

ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.

ಕಲ್ಲೂರು, ವೀರರಾಜಪೇಟೆ ಮತ್ತು

52-4 ಗೋಣಿಕೊಪ್ಪಲು.

ದಯಮಾಡಿ ಪರೀಕ್ಷಿಸಿ ನೋಡಿರಿ!

X. L. ALOIL.

ಹೊಸ ನಮೂನೆಯ ಮೀನಿನ ಎಣ್ಣೆ

ಬಾಲಕಾರಾದವರೂ, ಸಣ್ಣಮಕ್ಕಳೂ ಶಕ್ತಿ ಕುಂದಿದವರೂ ಮತ್ತು ಎದೆನೋವು ವಗೈರೆಗಳಿಂದ ಪೀಡಿತರಾದವರೂ ಸಹ ಸೇವಿಸುವದರಿಂದ ಒಡನೆ ಪುಷ್ಟಿಯಾಗುವರು. "ಕಾಡ್ ಲಿವರ್ ಆಯಿಲ್ ಎಮಲ್ಷನ್" ಎಂಬುದರ ಬದಲಿಗೆ, ಇದು ಉತ್ತಮತರದ ಕ್ಷೀರ ರಸವಾಗಿದೆ. ವಾಸನೆ ಇಲ್ಲ. ಬೆಲೆ ಬಹಳ ಕಡಿಮೆ.

M. P. BALA & Co.,

CHEMISTS.

12—9 *Tellicherry*

Or VIRAJPET WORKS,

Virajpet

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಜಮೆಯಾದ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.

ಕೊಡಂದೇರ ಕುಟ್ಟಯ್ಯನವರು, ಎಂ. ಭುಜಂಗರಾಯರು

ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ.

ಸಿ. ಯೆಂ. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಕು 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು ? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ:—

ಮೇನೇಜರ್, ಶ್ರೀ ಧನ್ವಂತರಿ, ಶೃಂಗೇರಿ, ಮೈಸೂರುಸ್ಟೇಟ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.

Telegraphic Address:-"SHOOTER" Bombay.

[52 7] Please write for latest Catalogues.

ಮಾರಾಟಕ್ಕೆ.

1. ಮಡಿಕೇರಿ ಅರೆ ಮಲೆ ಶೆಟ್ಟಪ್ಪನವರ ಮಡಿಕೇರಿ ನಾಡು ಬಿಳಿಗೇರಿಗ್ರಾಮದಲ್ಲಿ ಮಡಿಕೇರಿ ಮೂರ್ನಾಡು ರಸ್ತೆ 5ನೇ ಮೈಲ್ ಬಳಿ ಇರುವ ಆಸ್ತಿ, ಅಂದರೆ— ಸಾಗಿನ ಉತ್ತಮವಾದ ಭೂಮಿ 31½ ಎಕರು, ಕಿತ್ತಳೆ 25 ಎಕರು, (ಈ ಪೈಕಿ 15 ಎಕರು ಫಸಲಿಗೆ ಬಂದದ್ದನ್ನು ಈ ವರ್ಷ 1,200 ರುಪಾಯಿಗಳಿಗೆ ಫಸಲು ಗುತ್ತಿಗೆ ಕೊಡಲಾಗಿದೆ) ಏಲಕ್ಕಿ 15 ಎಕರು, ಹೊಸದಾಗಿ ಹಾಕಿರುವ ಕಾಫಿ 15 ಎಕರು ಮತ್ತು 116 ಎಕರು ಬಾಣೆ, ಒಂದು ವಾಸದ ಮನೆ, ಆಳುಗಳ ಲೈನು ಮತ್ತು ದನಗಳ ಕೊಟ್ಟಿಗೆ ಸಹ—ಮಾರಾಟಕ್ಕೆ ಇದೆ. ಕ್ರಯ ರುಪಾಯಿ 25,000 ಅಥವಾ ಇದರ ಸಮೀಪದ ಬೆಲೆ

2. ಅರೆ ಮಲೆ ಶೆಟ್ಟಪ್ಪನವರ ಮಡಿಕೇರಿ ಮಹದೇವಪೇಟೆ ಬಸವಣ್ಣನ ಗುಡಿ ಬಳಿ ಇರುವ ವಾಸದ ದೊಡ್ಡ ಮಹಡಿಮನೆ ಕ್ರಯ ರೂ. 5,000.

ಹೆಚ್ಚಿನ ವಿವರಕ್ಕೆ ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು.

ಎಂ. ಎಸ್. ಅಪ್ಪಣ್ಣ,

ಬೋಯಿಕೇರಿ ಎಸ್ಟೇಟ್.

12—12 ಸುಂಟಿಕೊಪ್ಪ.

ಇಂಡಿಯಾ ಸಾಬೂನ್.

ಬೆಲೆ ಅಗ್ಗ!! ಸರ್ವೋತ್ತಮ!!

ನಮ್ಮ "ಇಂಡಿಯಾ ಸಾಬೂನ್" ಸರ್ವೋತ್ತಮವಾದುದೆಂದು ತಿಳಿದು ಎಲ್ಲಾ ಕಡೆಗಳಲ್ಲಿಯೂ, ಎಲ್ಲಾ ಊರುಗಳ ಅಂಗಡಿಗಳಲ್ಲಿಯೂ ಇದನ್ನೇ ಮಾರುತ್ತಿದ್ದಾರೆ. ಇದರಿಂದ ಒಗೆಯುವ ವಸ್ತ್ರಗಳು ಸ್ವಚ್ಛವಾಗುವವಲ್ಲದೆ, ಅವುಗಳ ನೂಲಿಗೆ ಇದರಿಂದ ಯಾವ ವಿಧವಾದ ಉಪಹತಿಯೂ ಉಂಟಾಗದೆ, ಸರಿಯಾದ ಬಾಳಿಕೆ ಬರುವವು. ಈ ವಿಷಯವನ್ನು ಒಂದು ಸಲ ಆಜಮಾಯಿಷಿ ಮಾಡಿದರೆ ಎಲ್ಲರಿಗೂ ಮನದಟ್ಟಾಗುವದು. ನಮ್ಮ ಗಿರಾಕಿಗಳಿಗೆ ಹೆಚ್ಚು ಲಾಭ!! ಧಾರಾಳವಾದ ಕಮಿಷನ್ ದೊರೆಯುವದು. ಆರ್ಡರುಗಳಿಗೆ ಮಾಲನ್ನು ಬಂದೋಬಸ್ತಾಗಿ ಪ್ಯಾಕ್‌ಮಾಡಿ ಅವರ ಅಡ್ರೆಸಿಗೆ, ಅಥವಾ ಅವರು ಅಪೇಕ್ಷಿಸುವ ಸಮೀಪದ ರೈಲ್ವೆ ಸ್ಟೇಷನಿಗೆ ರವಾನಿಸುತ್ತೇವೆ.

ಇಷ್ಟು ಮಾತ್ರವೇ ಅಲ್ಲ; ನಮ್ಮ ಗಿರಾಕಿಗಳಿಗೆ ಅವರವರ ಅದೃಷ್ಟ ಪರೀಕ್ಷಾರ್ಥವಾಗಿ ನಾವು ಕಳುಹಿಸುವ ಯಾವದೋ ಒಂದು ಸೋಪ್ ಪ್ಯಾಕ್‌ನಲ್ಲಿ ೧೦ ರುಪಾಯಿನ ಅರ್ಧ ನೋಟನ್ನು ಇಟ್ಟಿರುತ್ತೇವೆ. ಅಂಥಾ ಅರ್ಧ ನೋಟಿನ ಪ್ಯಾಕನ್ನು ಹೊಂದಿದವರು ಆ ಅರ್ಧ ನೋಟಿನ ನಂಬರನ್ನು ತಿಳಿಸಿದಲ್ಲಿ ಬಾಕಿ ಅರ್ಧ ನೋಟನ್ನೂ ಅವರಿಗೆ ಬಹುಮಾನವಾಗಿ ತಕ್ಷಣವೇ ಕಳುಹಿಸಿಕೊಡುವೆವು. ಪ್ರಯತ್ನಪಡಿ! ವ್ಯಾಪಾರಕ್ಕೆ ವ್ಯಾಪಾರ!! ಅದೃಷ್ಟಕ್ಕೆ ಅದೃಷ್ಟ!!!

ಎಸ್. ಕೃಷ್ಣಯ್ಯ ಶೆಟ್ಟಿ,

12—10 ನಗರ್ತಪೇಟೆ, ಬೆಂಗಳೂರು ಸಿಟಿ.

Printed & published by Kodanda Appayya, K.B., Chairman, Board of Directors, at "Kodagu" Press, Mercara for "Kodagu" Ltd.

R. No. M. 1550.
If not delivered please return to "KODAGU" OFFICE, MERCARA.

ಕೊಡಗು.

[illegible]

ಸ್ವತಂತ್ರ ... ವಿದ್ಯಾ ... ಶಕ್ತಿಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೪] ಕೊಡಗು, ಸ್ರ ೧೯೨೫ನೇ ಇಸವಿ ಎಪ್ರಿಲ್ ತಾರೀಖು ೧೭ನೆಯ ಶುಕ್ರವಾರ [ಸಂಚಿಕೆ ೪೬

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು ರಾಮರಾವ್, ಯಮ್. ಎಲ್. ಸಿ. ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0 ಬಿಡಿಸು ಪತ್ರಿಕೆ 1ಕ್ಕೆ 0-2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ: 'ಆರೋಗ್ಯ ಚಂದ್ರಿಕೆ' 323, ತಂಬುಶೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮುಂತಾದ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ವಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ 4. ನಮ್ಮಲ್ಲಿಗೆ ಕಳುಹಿಸುವ ವಾತ್ಮೆಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು 5. ಪ್ರಕಟಿಸಲಾಗದ ವಾತ್ಮೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ದರವು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸ್.

"ಕೊಡಗು" ಪತ್ರಿಕೆಯ ಬಳಿ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಸೀರುಹಣ ಸಲ್ಲಿಸಮಾಡಲಿಕ್ಕಿರುವವರೂ ದಯವಿಟ್ಟು ವೀರಾಜಪೇಟೆಯಲ್ಲಿರುವ ನಮ್ಮ ಕಂಪನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮೇನೇಜರ್,
15-9-24. 'ಕೊಡಗು' ಲಿಮಿಟೆಡ್.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City

WATCH THIS SPACE.
Another stock of
Arms & Ammunition.
Expected shortly.
Guaranteed Quality.
Revised prices.

Spencer & Co. Ltd.,
MERCARA & POLLIBETTA.

26

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಬ್ರಿಚಾಫ್ ಕಂಟ್ರಾಕ್ಟ್ ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ

17-9-24. ಮೇನೇಜರ್.

Old Students' Quarterly.

Editor, Mr. P. B Medappa, B.A., B.L., M.L.C.

Vol II No 2 is now out

Subscription—Yearly Rs 2, post free. Most delightful! Scholarly articles! Read and enjoy!

CONTENTS.

1. National welfare—
(includes thoughts on Free and Compulsory education in Coorg)
2. Swarajya—A Canarese Drama.
3. Are Coorgs Kannadigas?
4. Ancient Coorg.
5. Peep into Heavens.
6. Frivolity page,
etc etc

If you become a subscriber now you will get a very beautiful calendar for 1925 free—absolutely free!

Apply to—
Manager,
O. S. Association,
Mercara.

ಪ್ರಕಟಣೆ.

ನಮ್ಮ ಆಫೀಸಿನಲ್ಲಿ ಹೊಸ ಅಕ್ಷರಗಳು ಒಂದು ತರಿಸಿರುವುದರಿಂದ, 'ಲೆಟರ್ ಹೆಡ್ಸ್' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ ಮೇನೇಜರ್,
'ಕೊಡಗು' ಲಿಮಿಟೆಡ್

ಒಂದು ಪ್ರಬಲವಾದ ಪ್ರಶ್ನೆ.

ದೇಶಾಭಿಮಾನವೆಂದರೇನು?

ಕೈರಾಟೆಯಿಂದ ನೂಲು ತಯಾರಿಸಿ ಮಾಡಿದ ಬಟ್ಟೆಯನ್ನು ಧರಿಸಿ ಆ ಮೂಲಕ ಲಕ್ಷೋಪಲಕ್ಷ ಗರೀಬ ಜನರಿಗೆ ಅನ್ನವನ್ನೊದಗಿಸುವುದೇ ದೊಡ್ಡ ದೇಶಾಭಿಮಾನ

ಇಂಥಾ 'ಖಾದಿ' ಬಟ್ಟೆಯನ್ನು ಎಲ್ಲಾ ಜನರಿಗೂ ಸುಲಭಕ್ರಯದಲ್ಲಿ ಒದಗಿಸಲಿಕ್ಕೆ ಈಗತಾನೇ ವೀರಾಜಪೇಟೆಯಲ್ಲಿ ಒಂದು ಖಾದಿ ಭಂಡಾರವನ್ನು ತೆರೆದಿರುತ್ತೇವೆ. ಈ ಭಂಡಾರದಲ್ಲಿ ಎಲ್ಲಾ ತರದ ನಾಜೂಕಾದ ಮತ್ತು ಗಟ್ಟಿಯಾದ ಖಾದಿಬಟ್ಟೆಗಳೂ ವಸ್ತ್ರಗಳೂ ಸೀರೆಗಳೂ, ಟವಲು ಶಾಲುಗಳೂ, ಖಾದಿರೇಶ್ಮೆಯಿಂದ ತಯಾರಾದ ಎಲ್ಲಾ ತರದ ಬಟ್ಟೆಗಳೂ ದೊರೆಯುತ್ತವೆ. ಬಟ್ಟೆಗಿರುವ ಎಲ್ಲಾ ಆರ್ಡರನ್ನು ತಕ್ಷಣವೇ ಒದಗಿಸಲಾಗುತ್ತೆ. ಊರೂರಿನಲ್ಲಿರುವ ಎಲ್ಲಾ ಜನರಿಗೆ ಬಟ್ಟೆಯನ್ನೊದಗಿಸಲು ತಕ್ಕ ಏರ್ಪಾಡು ಮಾಡಲ್ಪಟ್ಟಿದೆ. ದೇಶಾಭಿಮಾನಿಗಳ ಪ್ರೋತ್ಸಾಹವನ್ನು ನಿರೀಕ್ಷಿಸುತ್ತಲೇ ಇರುತ್ತೇವೆ. ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ಮೇನೇಜರ್,
12—8 ಖಾದಿ ಭಂಡಾರ, ವೀರಾಜಪೇಟೆ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಕೋಟೆರ ಚಿಣ್ಣಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಾದ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಮೆ. ಕ ಚಿಣ್ಣಪ್ಪನವರ ಆಫೀಸಿನಲ್ಲಿ.
ಮಾಲ್ದಾರು—ಕೋ-ಆಪರೇಟಿವ್ ಸ್ಟೋರಿನಲ್ಲಿ ಮೆ. ಮಚಮಂಡ ದೇವಯ್ಯನವರು.
ನಾಪೋಕ್ಲು—ಮೆ ಪೊನ್ನಚಾತ ಮುದ್ದಪ್ಪನವರು.
ಗೋಣಿಕೊಪ್ಪಲು—ಮೆ. ಮುಕ್ಕಾಟಿರ ಪೂಣಚ್ಚನವರು.
ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಮ್ಮಯ್ಯನವರು.
ಮಡಿಕೇರಿ—ಮೆ. ಜಿ ಮಂದಣ್ಣನವರು.
ಅಮ್ಮತ್ತಿ, ಸಿದ್ದಾಪುರ—ಮೆ. ಐನಂಡ ಮಾದಪ್ಪನವರು.
ಮೆ. ಚಂಗಂಡ ಕುಟ್ಟಪ್ಪನವರು.

ಕೋದಂಡ ಉತ್ತಯ್ಯ.
ಆರ್ಗನೈಜಿಂಗ್ ಡೈರೆಕ್ಟರು, "ಕೊಡಗು" ಲಿಮಿಟೆಡ್.

"ಕೊಡಗು"

ಸೆ ೧೯೩೩ನೇ ಇಸವಿ ಏಪ್ರಿಲ್ ತಾ. ೧೬ನೇ ಸುಕ್ರವಾರ.

ಜಮ್ಮಾನುದಾರರ ಸಂಘದ ಸ್ವಾಗತ.

ಜಮ್ಮಾನುದಾರರ ಸಂಘದ ವಾರ್ಷಿಕ ಜನರಲ್ ಮೀಟಿಂಗು ಈ ತಾರೀಕು 11 12 ಮತ್ತು 13ರಲ್ಲಿ ಮಡಿಕೇರಿ ತಾಲೂಕಿನವರ ಆತಿಥ್ಯದಲ್ಲಿ ಮುನಿಸಾಮಿಗಲ್ಲಿ ನಡೆಯಿತು. ಮು ಅಬ್ದುಲ್ ಗಫೂರ್‌ಖಾನ್ ಕೈಸ್ತಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಮ ಪಾಂಡಂಡ ಮುತ್ತಣ್ಣನವರು ಸ್ವಾಗತ ಮಂಡಳಿಯ ಚೇರ್‌ಮ್ಯಾನ್‌ರಾಗಿದ್ದರು. ಈ ವರುಷದ ಮೀಟಿಂಗಿನ ಏರ್ಪಾಡುಗಳಲ್ಲವೂ ಸ್ವಲ್ಪ ಬದಲಾವಣೆಯನ್ನು ಹೊಂದಿದ್ದವು. ಸಭಾಮಂಟಪವು ವಿಶಾಲವಾಗಿಯೂ ಅಲಂಕಾರವಾಗಿಯೂ ಕಟ್ಟಲ್ಪಟ್ಟಿತ್ತು. ಎಂದಿನಂತೆ ಕುರ್ಚಿ ಬೆಂಚು ಮೇಜುಗಳನ್ನು ಇಡುವದರ ಬದಲು ಬಿದಿರಿನ ತಟ್ಟೆಗಳನ್ನು ಹಾಸಿ ನೆಲದ ಮೇಲೆ ಕುಳಿತುಕೊಳ್ಳಲು ಅನುಕೂಲಪಡಿಸಿದ್ದರು. ಸಂಘದ ಮೆಂಬರುಗಳಲ್ಲದ ಬಂದ ಅತಿಥಿಗಳಿಗೆ ಮಾತ್ರ ಕೆಲವು ಕುರ್ಚಿಗಳು ಇಡಲ್ಪಟ್ಟಿದ್ದವು. ನಮ್ಮಲ್ಲಿಗೂ ನೆಲದ ಮೇಲೆ ಬಹಳ ಸಮಯ ಕೂತುಕೊಳ್ಳುವ ಅಭ್ಯಾಸವಾಗದ್ದರಿಂದ ಮೇಲಿನ ಏರ್ಪಾಡು ಮಾಡಲಾಗಿತ್ತೆಂದು ತಿಳಿಯಬಂತು. ಅಧ್ಯಕ್ಷರು, ಸಕ್ರೆಟರಿ ಮೊದಲಾದವರಿಗೂ ಸಹ ನೆಲದ ಮೇಲೆ ಕೂರುವ ಏರ್ಪಾಡು ಮಾಡಿದ್ದರು. ನೆಲದ ಮೇಲೆ ಕೂರಿಸ್ಕೂ ಮಾಡುವದು ಹಿಂದೂ ದೇಶದವರಿಗೆ ಸರಿಯಾದದ್ದಾಗಿಯೂ, ಸುಲಭವಾಗಿಯೂ ಇರುವುದರಿಂದ ಈ ಪದ್ಧತಿಯನ್ನೇ ಪೂರ್ಣ ಬಾರಿಗೆ ತರಲು ಪ್ರಯತ್ನಿಸುವುದು ಉತ್ತಮವೆಂದು ತೋರುತ್ತದೆ. ಸಭೆಯು ಒನಬೆಗ್ಗಲಾಗಲೂ ಭಾಷಣಕರ್ತರ ಮಾತುಗಳು ಕೇಳುವಂತೆ ಮೂಸಲಿಕ್‌ಸ್ಪೀಕರ ಮಂದಿರದ ಮಧ್ಯದಲ್ಲಿ ಎತ್ತರವಾದ ಭಾಷಣ ಪೀಠವನ್ನು ಏರ್ಪಡಿಸಿದ್ದರು. ಮಂಟಪವು ಉದ್ದವಾಗಿದ್ದುದರಿಂದ ಒಂದು ತಲೆಯಲ್ಲಿ ನಿಂತು ಮಾತಾಡಿದ್ದರೆ ಮತ್ತೊಂದು ಕೊನೆಯಲ್ಲಿ ಕೇಳುವದು ಕಷ್ಟವಾಗುತ್ತಿತ್ತು. ಮಧ್ಯದಲ್ಲಿ ನಿಂತುಕೊಂಡು ಮಾತಾಡಲು ಏರ್ಪಡಿಸಿದ್ದು ಬಹಳ ಅನುಕೂಲವಾಯಿತು. ಸಭಾಮಂದಿರದ ಸಮೀಪ ರಾಷ್ಟ್ರೀಯ ಬಾವುಟವನ್ನು ಎತ್ತರವಾಗಿ ಹಾರಿಸಿದ್ದರು. ಹಸರು, ಕೆಂಪು ಮತ್ತು ಬಿಳುಪು ಬಣ್ಣಗಳಿಂದ ಕೂಡಿದ್ದ ರಾಷ್ಟ್ರೀಯ ಬಾವುಟ ಇನ್ನೊಂದು ಕಡೆ ಸ್ವಯಂಸೇವಕರ ರಾಣ್ಯದ ಬಳಿ ಅವರ ಧ್ವಜವು ಕಂಬದ ಮೇಲೆ ಏರಿಸಲ್ಪಟ್ಟಿತ್ತು. ರಾಷ್ಟ್ರೀಯ ಬಾವುಟದ ಮೇಲೆ ಚರಕದ ಗುರ್ತೂ ಇದ್ದಿದ್ದರೆ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನಲ್ಲಿ ಉಪಯೋಗಿಸಿದ್ದ ಧ್ವಜದಂತೆ ಆಗುತ್ತಿತ್ತು. ಸ್ವಾಗತ ಕಮಿಟಿಯ ಆಫೀಸು, ಪಿದ್ದರ್ ಅಂಗಡಿ, ತಿಂಡಿ ಮತ್ತು ಸೋಡದ ಷಾಪುಗಳು, ಡಿಕರ್ ಪ್ರದರ್ಶನ ಮಳಿಗೆ ಮತ್ತು ಸಂಘದ ಆಫೀಸುಗಳು ಬಾಡು ಸಾಲಿನಲ್ಲಿದ್ದವು. ಇದೆಲ್ಲವೂ ಬೆಳಗಾಂ ಕಾಂಗ್ರೆಸ್ಸಿನ ಏರ್ಪಾಡನ್ನು ಸ್ವಲ್ಪಮಟ್ಟಿಗೆ ಹಿಂಬಾಲಿಸಿದ್ದಾಗಿದೆ. ಕಳೆದ ಸಾರಿ ಕೊಡಗಿನಿಂದ ಬೆಳಗಾಂ ಕಾಂಗ್ರೆಸ್ಸಿಗೆ ಕೆಲವರು ಹೋದದ್ದರ ಪ್ರಯೋಜನಗಳಲ್ಲಿ ಇದೊಂದು ಎಂದು ದೇಶದವರೆಲ್ಲಾ ತೋರಬಹುದು.

ಸಭೆಯು ನಿಯಮಿತ ಕಾಲಕ್ಕೆ ಸರಿಯಾಗಿ ಪ್ರಾರ್ಥನೆಯಿಂದ ಪ್ರಾರಂಭವಾಯಿತು. ಕೂಡಲೆ ಬಾಡಿದ ಸ್ವಾಗತ ಗೀತೆಯನ್ನು ಇನ್ನೊಂದು ಕಡೆ ಪ್ರಕಟಿಸಿರುವೆವು. ಸ್ವಾಗತ ಕಮಿಟಿಯ ಅಧ್ಯಕ್ಷರು ಭಾಷಣ ಮಾಡುವುದಕ್ಕೆ ಮುಂಚಿತವಾಗಿ ಪ್ರಿಂಟಾಗಿದ್ದ ಅದರ ಪ್ರತಿಗಳನ್ನು ಸ್ವಾಗತ ಗೀತೆಯಂತೆ ಸಭೆಯವರಲ್ಲಿ ಹಂಚಲಾಯಿತು. ಈ ಪದ್ಧತಿ ಬೇರೆ ದೊಡ್ಡ ಸಭೆಗಳಲ್ಲಿ ನಡಸುವುದನ್ನು ಅನುಸರಿಸಿದಂತಾಯಿತು. ಈ ಭಾಷಣವು ಬೇರೆ ಕಡೆ ಪ್ರಕಟವಾಗಿದೆ. ಇದು ಎಲ್ಲರಂತೆ ಉಪಚಾರದ ಮಾತುಗಳು ಮಾತ್ರ ಸ್ವಕೀಯ ಅಂದರೆ ಈ ತಾಲೂಕಿನ ವಿಷಯಗಳನ್ನು ಮಾತ್ರ ಒಳಕೊಂಡದ್ದಾಗಿರದೆ ದೇಶಕ್ಕೆ ಅನ್ವಯಿಸುವಂತ ರಾಜಕೀಯ ಸಮ್ಮಂಧ ಬುದ್ಧಿವಾದಗಳುಳ್ಳದ್ದಾಗಿದೆ. (ಪಾಲಿಟಿಕ್ಸ್) ರಾಜಕೀಯ ಕೆಲಸ ಮಾಡುವವನಂತೆ ಪ್ರಕಟವಾದ ಕೂಡಲೆ ಅಂಥವನನ್ನು ಆ ಮನ ಹಿಂಬಾಲಕರನ್ನು ಸರಕಾರದವರು ದುಃಖಿಸುವುದು. ಈ ದೇಶದಲ್ಲಿ ಹಾಡಿಕೆಯಾಗಿರುವುದರಿಂದ ದೇಶದ ಸಮುದಾಯದ ಕೆಲಸವು ಹಿಂದ ಬಿದ್ದಿದೆ ಎಂತ ಹೇಳಿರುವದು ಸರಿಯಾಗಿದೆ. ದೇಶದ ವಿದ್ಯಾವಂತರಾದವರು ಉಡುವು ನಡತೆಗಳಲ್ಲಿ ಯೂರೋಪಿಯನರನ್ನು ಅನುಸರಿಸುವ ಸ್ವಭಾವ ಹೆಚ್ಚಾಗಿರುವುದರಿಂದ ರಾಜಕೀಯ ಮತ್ತು ಸ್ವದೇಶೋನ್ನತಿ ಕಾರ್ಯಗಳಲ್ಲಿ ಕೈಹಾಕುವ ಜನರು ಬಹಳ ಅಪರೂಪವಾಗಿರುತ್ತಾರೆ ಎಂತ ಹೇಳಬಹುದಿತ್ತು. ಶ್ರೀಯುತ ಆರಿಂದ ಘೋಷರವರ ಬರವಣಿಗೆಯ ಆಧಾರದಿಂದ ರಾಷ್ಟ್ರೀಯತ್ವವೆಂದರೆ ಬರೀ ರಾಜಕೀಯ ಕಾರ್ಯವಲ್ಲ, ಅದು ದೇವರು ವಿಧಿಸಿದ ಧರ್ಮವೆಂತಲೂ, ಆದ ದರಿಂದ ಅದರಲ್ಲಿ ನಮ್ಮ ವಿದ್ಯಾವಂತರಾದರೂ ಮುಂದಾಳಾಗಿ ನಿಂತು ನಮ್ಮ ಮೇಲೆ ಅಭಿಮಾನವುಳ್ಳ ನವಯುಗಾಗಿ ಮಹಾತ್ಮರುಗಳ ಕೆಲಸ ಮಾಡುವವರನ್ನು ಹಿಂಬಾಲಿಸುವದು, ಪ್ರತಿಯೊಬ್ಬ ದೇಶೀಯನ ಕೆಲಸವೆಂದು ಹೇಳಿರುತ್ತಾರೆ. ಈ ವಿಷಯಕ್ಕೆ ತಕ್ಕಷ್ಟು ಗಮನಕೊಡದೆ ಇರುವುದರಿಂದಲೇ ನಮ್ಮ ದೇಶವು ಹಿಂದೆ ಬಿದ್ದಿರುವುದೆಂದು ನಾವು ಹೇಳಬೇಕಾಗಿಲ್ಲ.

ಮುಂದಾಳು ಹೇಗಿರಬೇಕೆಂಬದನ್ನು ವಿವರಿಸುತ್ತಾರೆ. ಧರ್ಮಕ್ಕಾಗಿ ಧರ್ಮದಿಂದ ವರ್ತಿಸುವುದೇ ಮುಂದಾಳು ಧರ್ಮವೆಂಬುದೇ ಅವರ ವಿವರಣೆಯ ಸಾರಾಂಶ. ದೇವರಲ್ಲಿಯೂ ಸತ್ಯದಲ್ಲಿಯೂ ನಂಬಿಕೆ ಹುಟ್ಟಿದರೇನೇ ಈ ಗುಣವು ಬರುವುದಾಗಿದೆ. ಆದುದರಿಂದ ಪ್ರತಿಯೊಬ್ಬನು ಅವನವನ ಮತಾನುಸಾರವಾಗಿ ನಡೆಯುವುದೇ ಮುಂದಾಳುತನಕ್ಕೆ ಅವಶ್ಯವಾದ ಗುಣವಾಗಿದೆ ಎಂದು ಮ ಮುತ್ತಣ್ಣನವರ ಅಭಿಪ್ರಾಯವಾಗಿದೆ. ಮುಂದಾಳಿಗೆ ಈ ಗುಣವು ಅವಶ್ಯವ ಪ್ರಸಂಗದಲ್ಲಿ ರಾಜಕೀಯ ಆಡಳಿತವು ಯಾವ ಯಾವ ದೇಶದಲ್ಲಿ ಹ್ಯಾಗೆ ಹ್ಯಾಗೆ ನಡೆಯುತ್ತದೆಂದು ತಿಳಿದುಕೊಂಡು ತನ್ನ ದೇಶದಲ್ಲಿ ನಡೆಯುವ ಆಡಳಿತದಿಂದ ಪ್ರಜೆಗಳಿಗೆ ಇರುವ ಸಾಧಕಬಾಧಕಗಳನ್ನು ಅರಿತುಕೊಂಡು ಅದನ್ನು ಸರಿಪಡಿಸಲಿಕ್ಕೆ ಸ್ವಾರ್ಥತೆಯನ್ನು ಬಿಟ್ಟು ಅಹೋರಾತ್ರಿ ಕೆಲಸ ಮಾಡುತ್ತಾ ಜನರಿಗೆ ತಿಳುವಳಿಕೆ ಕೊಡುತ್ತಾ ತನ್ನ ಮನಸ್ಸಾಕ್ಷಿಗೆ ಸರಿಯಾಗಿ ನಡೆಯುವುದರಿಂದ ತನಗೆ ಬರುವ ಆಪತ್ತುಗಳಿಗೆ ಹೆದರದೆ ಸರಕಾರದೊಂದಿಗೆ ಹೋರಾಡುವ ಗುಣಗಳುಳ್ಳವನು ಮುಂದಾಳಾಗುವುದರಲ್ಲಿ ಸಂಶಯವಿಲ್ಲ.

ಮತದ ವಿಷಯದಲ್ಲಿ ಹೇಳುವಾಗ ಅರ್ಜುನನವಾದವನ್ನು ಎತ್ತಿ ಹೇಳಿರುವರು. ರಾಜಕೀಯ ಕಾರ್ಯದ ಸಭೆಯಲ್ಲಿ ಒಂದು ಮತಕ್ಕೇ ಪ್ರಾಮುಖ್ಯತೆ ಕೊಟ್ಟದ್ದು ಯುಕ್ತವಾಗಲಿಲ್ಲ. ಪ್ರತಿಯೊಬ್ಬನು ಅವನವನ ಮತಕ್ಕನುಸಾರವಾಗಿ ನಡೆದುಕೊಂಡರೆ ಸಮುದಾಯದ ಕಾರ್ಯವು ಸರಿಯಾಗಿ ನಡೆಯುವುದು. ಮತ ಸಮ್ಮಂಧ ಸಭೆಗಳಲ್ಲಿ ಬೇರೆ ಬೇರೆ ಮತಗಳ ಹಿಂಬಾಲಕರು ಅವರವರ ಮತಗಳನ್ನು ಎತ್ತಿ ಹೇಳಬಹುದು.

ಖಾದಿ ಬಟ್ಟೆಯ ಉಪಯೋಗದ ವಿಷಯ ಒಳ್ಳೇ ಬೋಧನ ಕೊಟ್ಟಿರುವರು. ಮಹಾತ್ಮ ಗಾಂಧಿಯವರ ಎಲ್ಲಾ ತತ್ವಗಳನ್ನು ಒಪ್ಪದ ರವೀಂದ್ರನಾಥ್ ಟಾಗೋರರವರ ಬರವಣಿಗೆಯ ಆಧಾರವನ್ನೇ ಇದಕ್ಕೆ ಕೊಟ್ಟಿರುವರು.

ದೇಶದಲ್ಲಿ ಬಿಗ್ಗಟ್ಟು ಅವಶ್ಯವೆಂದು ಹೇಳಿ ನಮ್ಮ ದೇಶದಲ್ಲಿ ಬಿಗ್ಗಟ್ಟಿನವಂತ ಆರ್ಯಜನವವರು ಇಲ್ಲವೇ ಎಂತ ಸಿಂಹಾವಲೋಕನ ಸಂಗತಿಯನ್ನು ಸೂಚಿಸಿ ... ಹಿಂದುಗಳೇ ಸಬಿಕರಾಗಿರುವ ಜಮ್ಮಾನುದಾರರ ಸಂಘದ ವಾರ್ಷಿಕ ಸಭೆಗೆ ಮಹಮ್ಮದೀಯ ಮಹಾಶಯರೊಬ್ಬರು ಅಧ್ಯಕ್ಷರಾಗಿ ಆರಿಸಲ್ಪಟ್ಟದರಿಂದ ನಾಡಿನ ಬಿಗ್ಗಟ್ಟು ಸಿದ್ಧವಾಗುವದೆಂತ ಹೇಳಿ ತಮ್ಮ ಭಾಷಣವನ್ನು ಸ್ವಾರಸ್ಯವಾಗಿ ಮುಗಿಸಿದರು.

ಕೊಡಗು ಜಮ್ಮಾನ್ದಾರರ ಸಂಘದ ೧೯೩೩ನೇ ವಾರ್ಷಿಕ ಸಮ್ಮೇಳನದ ಸ್ವಾಗತ ಕಮಿಟಿಯ ಚೇರ್‌ಮೇನ್ ಮಿ॥ ಪಾಂಡಂಡ ಮುತ್ತಣ್ಣನವರ ಭಾಷಣ.

ಸಭಾಮಹಾಶಯರೇ,

ಇಲ್ಲಿ ಈ ದಿವಸ ನಾನು ಮಡಿಕೇರಿ ತಾಲೋಕು ಜಮ್ಮಾನ್ದಾರರ ಪರವಾಗಿ ಈ ಮಹಾಸಭೆಗೆ ಬಂದಿರುವ ಪ್ರಿಯ ಮಹಾನುಭಾವರಿಗೆ ಸ್ವಾಗತವನ್ನೀಯುವ ಸ್ವತಂತ್ರವನ್ನು ಸ್ವೀಕರಿಸಿದವನಾಗಿರುತ್ತೇನೆ. ಈ ಜಮ್ಮಾನ್ದಾರರ ಸಂಘದ ಮಹಾನುಭಾವರಿಗೆ ಇಲ್ಲಿ ಸಭೆ ಸೇರಲು ಆಮಂತ್ರಣವನ್ನು ಅಂಗೀಕರಿಸಿ ಇಲ್ಲಿ ಸಭೆ ಸೇರಲು ದಯಮಾಡಿಸಿದ್ದಕ್ಕೆ ವಂದಿಸುವವನಾಗುತ್ತೇನಲ್ಲದೆ ಗೌರವಿಸಿದಂಥಾ ಈ ಸಭಾಮಹಾನುಭಾವರುಗಳನ್ನು ನಮ್ಮ ಸ್ವಾಗತದಿಂದ ಯಾವ ರೀತಿಯಲ್ಲಿ ಮನಸಂತೋಷಪಡಿಸಲೆಂಬ ಭಾವನೆಯು ತೋರದ್ದಾಗಿರುತ್ತದೆ. ನಾವು ನಮ್ಮ ಸಹೋದರರಿಗೂ, ಸ್ನೇಹಿತರಿಗೂ, ಆಪ್ತರಿಗೂ ಇರುವ ಅನುಕೂಲತೆಗಳನ್ನು ಕೊಡಲು ಇತರ ನಾಡು ಮತ್ತು ತಾಲೋಕುಗಳ ಅನುಭವವೂ, ಅನುಕೂಲತೆಗಳೂ ಕಮ್ಮಿಯಾದರೂ, ಬರೀ ಒಂದು ಜಮ್ಮಾನ್ದಾರರ ಸಂಘವೆಂಬ ಮನಃತೃಪ್ತಿಯಿಂದಲೂ, ನಮ್ಮ ಹಿಂದುಳಿದ ಈ ನಾಡು ಈಗಿನ ಎಲ್ಲಾ ಚಳವಳಿದಲ್ಲಿ ಮುಂದಿರುವ ನಾಡು ಮತ್ತು ತಾಲೋಕುಗಳ ಅನುಭವವನ್ನು ಸ್ವಲ್ಪ ಮಟ್ಟಿಗೆ ಸ್ವೀಕರಿಸುವ ಆಶೆಯಲ್ಲಿ ಈ ಭಾರದ ಕೆಲಸವನ್ನು ನಾವು ವಹಿಸಿಕೊಂಡದ್ದಾಗಿರುತ್ತೆ. ಅದರ ಈಗ ತಮ್ಮ ಸೇವೆಯಲ್ಲಿ ಸ್ವಲ್ಪ ಅನುಭವ ಕಮ್ಮಿಯ ಸ್ವಾಗತದಿಂದ ಉಂಟಾಗತಕ್ಕ ಅನೇಕ ಕುಂದು ಕೊರತೆಗಳಿಗೆ ಕ್ಷಮಾಪಣೆ ಬೇಡುತ್ತೇನೆ.

ಈ ಜಮ್ಮಾನ್ದಾರರ ಸಂಘವು ಮೊಳಕೆ ಹೊಂದಿದಂದಿನಿಂದ ಈ ನಮ್ಮ ಒಟ್ಟೇ 3616 ಎಕರೆ ನಾಗುವಳಿಯ ಜಮ್ಮಾನ್ ಭೂಮಿ ಮತ್ತು 503½ ಜನ ಸಂಖ್ಯೆಯ (ಅಂದರೆ ಪ್ರತಿ ಗಂಡು ತಲೆಗೂ ಒಟ್ಟೇ 40 ಭಟ್ಟೆ ಭೂಮಿಯಂತೆ ಹಂಚಿರುವ) ಗರೀಬ ರೈತರಿಂದ ಕೂಡಿದ ಈ ಮೊಣ್ಣಾಡು ಇಂಥಾ ದೊಡ್ಡ ಮಹತ್ಕಾರ್ಯಕ್ಕೆ ಸ್ವಾಮಿ ಕೈ ಹಾಕಿದ್ದು ಇದೇ ಮೊದಲೆಂದು ಹೇಳಿದರೆ ಅತಿಶಯವಾಗಲಾರದು. ಈ ನಮ್ಮ ಪ್ರಯತ್ನವು ಕೈಗೂಡಿದ್ದೇ ಆದರೆ ಇನ್ನು ಮುಂದೆ ಇತರ ಊರುಕೇರಿಗಳಲ್ಲಿ ಸಹ ಈ ಸ್ವಾಗತೀಯ ಚಳವಳಿಯ ನಡೆಸಲು ಯಾವ ಅಭ್ಯಂತರವೂ ಇರಲಾರದು.

ದೇಶಾಭಿಮಾನ

ಈಗ ನಮ್ಮ ಇಡೀ ಭರತಖಂಡದಲ್ಲು ಎಲ್ಲಾ ವಿಷಯದಲ್ಲಿ ಸ್ವಾತಂತ್ರ್ಯದ ಚಳವಳಿವು ಸಮುದ್ರತೆರೆಯೋಪಾದಿಯಲ್ಲು ಉಕ್ಕಿ ಬರುತ್ತಿರುವಾಗ ಈ ಕೊಡಗು ದೇಶದಲ್ಲು ಗರೀಬ ರೈತರಿಂದ ಕೂಡಿ ಬರೇ ಇರುವ ಜಮ್ಮಾನ್ದಾರರ ಸಂಘವು ಇನ್ನೂ ಅದರ ಬಾಲ್ಯಾವಸ್ಥೆಯಲ್ಲಿರುವುದು ಅತಿ ಶೋಚನೀಯವು. ಚೆನ್ನಾಗಿ ಯೋಚಿಸಿದರೆ ಅದರ ಮುಖ್ಯ ತತ್ವವು ... ಸಾಗಿ ... ಬಾರದ ರಿಂದಲೇ ಎಂಬದಾಗಿ ಯೋಚಿಸಬೇಕಾಗುತ್ತದೆ. ಇಂಥಾ ಚಳವಳಿವು ಪ್ರಬಲಿಸಲು ಎಲ್ಲರೂ ತಮ್ಮ ತನು ಮನ ಧನವನ್ನರ್ಪಿಸಿ ಪ್ರಯತ್ನಿಸುವುದರ ಅನುಭವವು ಕಮ್ಮಿಯಾಗಿರುತ್ತೆ. ಅಲ್ಲದೆ ಯಾರಾದರೂ ಈ ಜನೋಪಕಾರಾರ್ಥಕ್ಕೆ ಕೈಹಾಕಬೇಕೆಂದರೆ ಬರೇ ಗೌರವಕ್ಕಾಗಿ ಕೃತಾರ್ಥತೆ ... ಕೆಲಸವು ಸಫಲಿಸದು. ಪೂರ್ತಿ ಮತ ... ಮಾಡಬೇಕಾಗಿರುತ್ತೆ. ನಮ್ಮ ... ರಾಜಕೀಯ ಶಬ್ದವನ್ನೆತ್ತಿ ... ಸರಕಾರಕ್ಕೆ ಮತ್ತು ಸರಕಾರದ ಹಿಂದೆ ಗಾಳಿಯ ... ಯಾವ ಆಲೋಚನೆಯು ಇಲ್ಲದೆ ... ಹಿಂಬಾಲಿಸುವವರಿಗೂ ಗೋಚರವಾಗುವದಲ್ಲದ ರಾಜಕೀಯವೆಂಬ ಶಬ್ದವು (Politics) ... ಕಂಡುಬರುವುದು ವಾಡಿಕೆಯಾಗಿರುತ್ತೆ. ಇದನ್ನು ಚನ್ನಾಗಿ ಪರಿಶೀಲಿಸಿ ನೋಡಿದರೆ ಅಂತಹ ರಾಜಕೀಯ ಕೆಲಸವು ದೇವರು ವಿಧಿಸಿದ ಕೆಲಸವಾಗಿರುತ್ತೆ. ಸರಕಾರದವರು ವಿಧಿಸಿದ ಕೆಲಸಗಳನ್ನು ಪ್ರಜೆಗಳು ಮಾಡದೆ ತಪ್ಪಿದಲ್ಲು ಸರಕಾರದವರ ಶಿಕ್ಷೆಯು ಪ್ರಜೆಗಳಿಗಿರುವುದು ಖಂಡಿತವೇ. ಹಾಗಾದರೆ ಅದೇ ಸರಕಾರದವರನ್ನೂ ಅವರ ಪ್ರಜೆಗಳನ್ನೂ ನಿರ್ಮಾಣಿಸಿದಂಥಾ ದೇವರು ವಿಧಿಸಿದ ಕೆಲಸಕ್ಕೆ ನಾವು ಗಮನ ಕೊಡದೆ ಹೋದಲ್ಲು ನಮಗೆ ನಿಮ್ಮ ನಿರ್ಮಾಣಕನ ಶಿಕ್ಷೆಯು ಇರುವುದಿಲ್ಲವೇ? ಖಂಡಿತವಾಗಿಯೂ ಇರುತ್ತೆ. ಈ ವಿಷಯವಾಗಿ ಸುಮಾರು 300 ವರ್ಷಗಳ ಹಿಂದೆ ಮಹಾತ್ಮ ರಾಮದಾಸರು ನಮಗೆ ಬೋಧಿಸಿ ಹೋಗಿದ್ದೇನಂದು —

(ಇಂಗ್ಲೀಷಿನ ತರ್ಜುಮೆ—ದೇವರಲ್ಲಿ ಪ್ರೀತಿ ಮತ್ತು ಜಗತ್ತಿನ ಮನುಷ್ಯರಿಗೆ ಹಂಚಿರುವ ಸುಖ ದುಃಖಗಳಲ್ಲಿ ವಿಶ್ವಾಸ, ನಮ್ಮ ಭೂಮಿಯಲ್ಲಿ ಪ್ರೀತಿ ಮತ್ತು ಅದರ ಕೀರ್ತಿಯಲ್ಲಿ ನಂಬಿಕೆ, ನಮ್ಮ ಸಹೋದರರ ಮೇಲೆ ಮಮತೆ ಮತ್ತು ಅವರಲ್ಲಿ ವಿಶ್ವಾಸ, ತನ್ನ ಮೇಲೆ ಪ್ರೀತಿ ಮತ್ತು ತನ್ನಲ್ಲಿ ವಿಶ್ವಾಸ.) ಈ ತತ್ವವನ್ನು ಯಾರು ಉಲ್ಲಂಘಿಸಿ ನಡೆಯುತ್ತಾರೋ ಅವರು ಮನುಷ್ಯ ಜಾತಿಯಲ್ಲು ಪಶುಸಮಾನರು. ಆದುದರಿಂದ ರಾಜಕೀಯ (Politics) ಈಗಿನ ಶಬ್ದವಲ್ಲ. ಈ ತತ್ವಕ್ಕೆ ತಪ್ಪಿ ಬರೀ ದೇಹೇಂದ್ರಿಯಗಳ ಸುಖಕ್ಕೆ ಸಾಧನ ಮಾಡಿದಲ್ಲಿ ನಮ್ಮ ನಿರ್ಮಾಣಕನೂ ಹೃಕೋರ್ಟಿನ ... ಸಕ್ಷನ್ ಅಂತವರಿಗೆ ಲಗಾವು ಆಗುವುದು ಖಂಡಿತವೇ ಸರಿ. ಆದರೆ ಈಗಿನ ಚಳವಳಿಯಲ್ಲಿ ಅನೇಕರು ಯಾವದಾದರೊಂದು ಉದ್ದೇಶದಿಂದ ಜನರ ಪ್ರೀತಿಯನ್ನಾಕರ್ಷಿಸಲು ತಾನೊಬ್ಬ ದೇಶಾಭಿಮಾನಿ (Patriot) ಎಂಬ ರಕ್ಷ್ಯ ನಡತೆಯಿಂದಲೂ ಪ್ರಯತ್ನಿಸುವದು ಸಾಧಾರಣ ವಾಡಿಕೆಯಲ್ಲಿರುತ್ತೆ. ಅಂತಹ ದೇಶಾಭಿಮಾನ ಎಂಬ ಬಿರುದಿನಿಂದ ಸಾಧು ಜನರನ್ನು ವಂಚಿಸುವುದು ಬಹು ಪಾಪಕೃತ್ಯವಾಗಿರುತ್ತೆ. ಅದು ಖಂಡಿತವಾಗಿಯೂ ಧರ್ಮವಲ್ಲವು. ಈ ವಿಷಯದಲ್ಲಿ ಕವಿವರ್ಯರಾದಂತ ಆರ್ಯಬಿಂಧೋಘೋಷ ಮಹಾ ಋಷಿಗಳು ಹೇಳುವದೇನಂದರೆ —

(ಇಂಗ್ಲೀಷಿನ ತರ್ಜುಮೆ— "ನೇಶನಲಿಸ್ಮ್" ರಾಷ್ಟ್ರತ್ವವು ಬರೀ ರಾಜಕೀಯ ಕಾರ್ಯಕ್ರಮವಲ್ಲ. ಅದು ದೇವರಿಂದ ಬಂದಂತ ಮತವಾಗಿದೆ. ಅದು ನೀನು ಜೀವಿಸಬೇಕಾದ ಮತವಾಗಿದೆ. ತನ್ನ ಸ್ವೋಪಜ್ಞನ ಶಕ್ತಿಯ ಗರ್ವದಿಂದ ತಾನು ಹೆಚ್ಚು ದೇಶಾಭಿಮಾನಿಯೆಂತಲೂ ದೇಶಾಭಿಮಾನಿಗಳೆಂದು ಹೇಳಿಕೊಳ್ಳದೆ ಇತರರಿಗಿಂತ ಮೇಲಿನವನೆಂತಲೂ ಹೇಳಿಕೊಳ್ಳುವವರನ್ನು ನೇಶನಲಿಸ್ಟ್ ಎಂದೂ ಯಾರೂ ಕರೆಯದಿರಲಿ. ನೀನು ನೇಶನಲಿಸ್ಟಾಗಿ ನೇಶನಲಿಸ್ಮ ಮತವನ್ನು ಒಪ್ಪುವನಾದರೆ ರಾಷ್ಟ್ರೀಯ ಭಾವನೆಯಿಂದ ಹಾಗೆ ಮಾಡಬೇಕು ... ನೀನು ದೇವರ ಸಾಧನವೆಂಬದನ್ನು ನೆನಪಿನಲ್ಲಿಡಬೇಕು.)

ಆದುದರಿಂದ ಈ ದೇಹೇಂದ್ರಿಯ ಸುಖಕ್ಕಾಗಿ ಜೀವರನ್ನು ವಂಚಿಸಲು ಪ್ರಯತ್ನಿಸಬಾರದು. ಯಾವನಾದರೊಬ್ಬರು ನಮ್ಮ ... ನಮ್ಮ ಮೇಲೆ ಅಭಿಮಾನವನ್ನಿಟ್ಟು ನಮ್ಮ (ಮೂಢಾತ್ಮರ) ಕೆಲಸಗಳನ್ನು ಮಹಾತ್ಮರಾಗಿ ಮಾಡುವಾಗ ನಾವು ಅವರ ಮತವನ್ನು ಪ್ರೋತ್ಸಾಹಿಸಿ ಅವರನ್ನು ಹಿಂಬಾಲಿಸಬೇಕಾದದ್ದು ನಮ್ಮ ಕರ್ತವ್ಯವೆ ಸರಿ. ಆದರೆ ನಮ್ಮ ಮುಂದಾಳುಗಳು (Leaders) ಯಾರು? ಅವರ ಲಕ್ಷಣಗಳ್ಯಾವುವು? ಎಂಬದನ್ನು ಸ್ವಲ್ಪ ಆಲೋಚಿಸಿ ನೋಡುವ.

ಮುಂದಾಳು ಯಾ ದೇಶಸೇವಕ.

ನಾವು ಯಾವ ಕೆಲಸಕ್ಕಾಗಲಿ ನಮ್ಮ ಹಿರಿಯರನ್ನು ಗೌರವಿಸಿ ಅವರ ಆಜ್ಞೆಯಂತೆ (ಸಮ್ಮತದಿಂದ) ನಡೆಯತಕ್ಕದ್ದು ನಮ್ಮ ಕರ್ತವ್ಯವೇ ಸರಿ. ಆದರೆ ಈಗಿನ ಪಾಶ್ಚಿಮಾತ್ಯ ವಿದ್ಯೆಯ ಗರ್ವದಿಂದ ಅನುಭವಶಾಲಿಗಳಾದ ಅನೇಕಾನೇಕ ಹಿರಿಯರನ್ನು ಉಲ್ಲಂಘನೆ ಮಾಡುವುದೊಂದು ನಮ್ಮ ವಿದ್ಯೆಯ ಗೌರವವಾಗಿರುತ್ತೆ. ಬರೀ ಇಂಗ್ಲಿಷ್ ಮಾತಾಡಲಿಕ್ಕೆ ಬರುವ

ಲಿಕಲ್ಕು ಬಂದರೆ ಅದು ವಿದ್ಯೆಯೆಂತಲೂ ನಮ್ಮ ದೇಶೀ ಸಂಸ್ಕೃತ ಕನ್ನಡ ಇತ್ಯಾದಿ ವಿದ್ಯೆಗಳು ಕಮ್ಮಿ ತರಗತಿಯವೆಂತಲೂ ಯೋಚಿಸಲಾಗದು. ಕಾಯಿಲೆಗೆ ಸರಿಯಾದ ಚಿಕಿತ್ಸೆ ಮಾಡಲರಿಯದ ನಾಮಧಾರೀ ಡಾಕ್ಟರ್ ಸ್ವಾಕಿನಲ್ಲಿ ಔಷಧಗಳಿಟ್ಟಿದ್ದರೆ ಪ್ರಯೋಜನವೇನು? ಆದ್ದರಿಂದ ಮುಂದಾಳಲ್ಲಿ ಜ್ಞಾನ ಸತ್ಯವಿರಬೇಕು. ಆ ಜ್ಞಾನವನ್ನು ಹ್ಯಾಗೆ ತಾನೆ ತಿಳಿಯತಕ್ಕದ್ದು? ಇದಕ್ಕೆ ಸತ್ಯವೇ ಮುಖ್ಯದಾರಿ ಅಂದರೆ ದೇವರ ನಂಬಿಕೆಯೇ ಶೀಘ್ರದಾರಿ. ಸತ್ಯವೇ ದೇವರು. ದೇವರೇ ಸತ್ಯವು. ಯಾರು ತನ್ನ ತನು, ಮನ, ಧನವನ್ನು ಈ ಪ್ರಪಂಚಕ್ಕೆಂದು ಸಮರ್ಪಿಸಿ ಶತ್ರುಗಳಿಂದಾಗತಕ್ಕ ಯಾವ ಕಿರುಕುಳಕ್ಕೂ ಅಂಜದೆ ಸ್ವಾರ್ಥತ್ಯಾಗ, ಸ್ವಾವಲಂಬನ, ಪರೋಪಕಾರ ಇವುಗಳನ್ನು ನಿರಂತರವಾಗಿ ಎಸಗುತ್ತಿರುವನೋ ಅಂತವನನ್ನು ನಾವು ಮುಂದಾಳಾಗಿ ಗೌರವಿಸತಕ್ಕದ್ದು. ಈ ತತ್ವವನ್ನು ಕೈಕೊಳ್ಳದೆ ತಾನೊಬ್ಬ ದೇಶಾಭಿಮಾನಿಯೆಂದರೆ ಸಾಲದು. ಆತನ ಕರ್ಮದಿಂದ ಮೋಹಿಸಲ್ಪಡತಕ್ಕದ್ದು. ಇದಕ್ಕೆ ಮಹಾತ್ಮ ಗಾಂಧಿ, ದೇಶಬಂಧು ದಾಸ್, ಲಾಲಜಿ ಮೊದಲಾದವರೇ ಆಧಾರವು. ತತ್ವವೆಂಬ ತತ್ವದಲ್ಲು ನಾವುಗಳು ಹಿಂದುಳಿದುದರಿಂದ ಕೆಲವುಮಟ್ಟಿಗೆ ಮತ ವಿಚಾರಿಸುವ ಮೊದಲು ದೇಶಾಭಿಮಾನಿ ದೇಶಸೇವಕ ಎಂಬ ನಾಮಧಾರಿಗಳನ್ನು ಮೂಲೆಗೊತ್ತುವುದು ಮುಂದಾಳಾಗಲಿಚ್ಛೈಸುವವರ ಕರ್ತವ್ಯವಾಗಿರುತ್ತದೆ. ಒಂದು ಹೊಳೆ ದಾಟಲು ದೋಣಿಯವನು ಬಿಸ್ಸನೋ ಯಾ ಆಚೆ ಈಚೆಯ ದಡ ಹತ್ತಿಸಲು ಕಾಯುತ್ತಿರುವವನೋ ಎಂಬುದನ್ನು ನಾವು ಮೊದಲು ತಿಳಿಯುವ ರೀತಿ ನಮ್ಮ ಮುಂದಾಳುಗಳ ಪಯಣವು ಯಾವ ಕಡೆಗೆ ಎಂಬದನ್ನು ನಾವು ಸ್ವಲ್ಪ ತಿಳಿಯತಕ್ಕದ್ದಾಗಿರುತ್ತೆ. ಆದ್ದರಿಂದ ಧರ್ಮವೆಂಬ ತತ್ವಗುಣವಿಲ್ಲದವನು ಮುಂದಾಳಾಗಲಾರನು. ಧರ್ಮಕ್ಕಾಗಿ ಧರ್ಮವನ್ನವಲಂಬಿಸಿ ವ್ಯವಹಾರ ಮಾಡುವದೇ ಮುಂದಾಳ ಧರ್ಮವು.

ಮತ.

ಜನತಾ ರೂಪೀ ಪರಮಾತ್ಮನ ಸೇವೆಯನ್ನು ನಿಷ್ಕಾಮ ರೀತಿಯಿಂದ ಮಾಡಿ ಅಂತಃಶುಚಿಯನ್ನು ಮಾಡಿಕೊಂಡು ಆತ್ಮಜ್ಞಾನವನ್ನು ಪಡೆಕೊಳ್ಳುವುದೇ ಒಬ್ಬ ಕೃಷಿಕಾರನ ಉದ್ದೇಶವು. ಈ ಭೂಲೋಕದಲ್ಲಿ ನಾವು ಜನಿಸಿದ್ದು ಯಾಕೆ? ಯಾರು ನಮ್ಮನ್ನು ನಿರ್ಮಾಣಿಸಿದ್ದು? ನಾವು ನೆಟ್ಟ ಒಂದು ಮಾವಿನ ಗಿಡದಿಂದ ಫಲವನ್ನು ನಿರೀಕ್ಷಿಸುವ ರೀತಿ ನಮ್ಮ ನಿರ್ಮಾಣಕನು ನಮ್ಮಿಂದೇನಾದರೂ ನಿರೀಕ್ಷಿಸುತ್ತಾನೋ? ನಾವು ಮಾತ್ರ ಈ ಲೋಕದಲ್ಲಿ ಜನಿಸಿದ್ದೋ? ಅಲ್ಲ ನಮಗಿಂತ ಮೊದಲು ಅನೇಕ ಮಹಾ ವೀರರೂ, ಸತ್ಪುರುಷರೂ ಜನಿಸಿ ಮಡಿದರೋ? ಅವರು ಹಿಂತಿರುಗಿ ತೆರಳುವಾಗ ಅವರವರ ಕರ್ಮಫಲ ಮಾತ್ರ ಉಳಿದಿರುವುದೇ ಹೊರತು ಅನ್ಯತಃ ಬೇರೆ ಏನಾದರೂ ಉಳಿದಿರುತ್ತದೋ? ನಮ್ಮ ದೇಹೇಂದ್ರಿಯಗಳನ್ನು ಅನೇಕರೀತಿಯಿಂದ ಪೋಷಿಸಿದಲ್ಲಿ ನಾವು ಸ್ಥಿರ ಜೀವಿಗಳಾಗುವೆವೋ ಎಂಬುದನ್ನು ನಾವು ಸ್ವಲ್ಪ ತಿಳಿಯಬೇಕಾಗಿರುತ್ತೆ. ಯಾವಾತನು ತನ್ನ ಭೌತಿಕ ಶರೀರವನ್ನು ಆತ್ಮವೆಂದು ಭಾವಿಸುತ್ತಾನೋ, ಯಾವಾತನು ತನ್ನ ಹೆಂಡತಿ ಮಕ್ಕಳನ್ನು ಯಾವಾಗಲೂ ತನ್ನ ಹತ್ತಿರವೇ ಇರುವರೆಂದು ಗ್ರಹಿಸುತ್ತಾನೋ ಮತ್ತು ಯಾವಾತನು ಮಣ್ಣು ಮುಂತಾದವುಗಳಿಂದ ಮಾಡಲ್ಪಟ್ಟ ಮೂರ್ತಿಗಳ ಪೂಜೆಯನ್ನು ಮನ್ನಿಸುತ್ತಾನೋ ಅಂಥವನು ಶಿಕ್ಷಿತ ಸಮುದಾಯದಲ್ಲಿ ಪಶು ಸಮಾನನು, ಎಂಬದಾಗಿ ದಯಾನಂದ ಸರಸ್ವತಿ ಸ್ವಾಮಿಯವರು ಹೇಳುತ್ತಾರೆ. ನಮಗೆ (ಹಿಂದುಗಳಿಗೆ) ಗುರುಗಳೆನಿಸುವಂಥಾ ಬ್ರಾಹ್ಮಣರೇ ಕುಲಬ್ರಾಹ್ಮಣರೋ ಕರ್ಮ ಬ್ರಾಹ್ಮಣರೋ ಎಂಬ ಸಂಶಯವು ಕವರೊಳಗೆ ತೋರಿ ಕೃಷಿ, ವ್ಯಾಪಾರ ಇತ್ಯಾದಿಗಳ ವ್ಯವಹಾರವು ನೆಲೆಗೊಂಡಿರುವಾಗ ಜಾತಿ ಮತವನ್ನೇ ಮರೆತ ಬೇರೆ ಕ್ಷತ್ರಿ, ವೈಶ್ಯ, ಶೂದ್ರರು ಏನು ತಾನೇ ಮಾಡ್ಯಾರು? (ಕೋಕನಾಡ ಸೋಶ್ಯಲ್ ಕಾನ್‌ಫರೆನ್ಸ್ ಅಧ್ಯಕ್ಷರ ಭಾಷಣ ನೋಡಿ) ಆದ ಭೌತಿಕತ್ವ, ಆಡಂಬರದ ಜೀವನ, ದ್ರವ್ಯಾಶೆ, ಪಟ್ಟಣವಾಸ, ಸಾವುಕಾರಿಕೆ ಮುಂತಾದ ವಿಚಾರಗಳು ನಮ್ಮ ಸಮಾಜದಲ್ಲಿ ಒಳನುಗ್ಗಿ ಹಾವಳಿಯನ್ನು ಮಾಡುತ್ತಲಿವೆ. ಅವುಗಳನ್ನು ಹೊಡೆದೋಡಿಸಿ ಆಧ್ಯಾತ್ಮಿಕತ್ವ, ಸುಲಭ ಜೀವನ, ಉಚ್ಚವಿಚಾರ, ಸ್ವರಾಜ್ಯ ದುಡಿತ ಮುಂತಾದ ಸದ್ಗುಣಗಳ ಬೀಜವನ್ನು ಹಾಕುವುದೇ ಮುಖ್ಯ ಕೃಷಿಕಾರನ ಉದ್ದೇಶವಿರಬೇಕು. ಇಡೀ ಜಗತ್ತಿನ ಎಲ್ಲಾ ಮೊದಲಿನ ಕಾಲುದಾರಿ ಬಿಟ್ಟು ಗಾಡಿದಾರಿಯಾಗಿ ಕುದುರೆ ಗಾಡಿ, ಮೋಟಾರು, ಏರೋಪ್ಲೇನ್ ಇತ್ಯಾದಿಗಳು ಹತ್ತು ತಾಸಿನ ದಾರಿಯನ್ನು ಒಂದೇ ತಾಸಿನಲ್ಲಿ ಪೂರೈಸುತ್ತಿರುವಾಗ ನಾವು ಮಾತ್ರ ಕಾಲುದಾರಿಯಲ್ಲೇ ನಡೆಯಬೇಕೆಂದರೆ ಅಸಾಧ್ಯವು. ನಾವು ಸಹ ಶೀಘ್ರ ದಾರಿಯನ್ನೇ ಹುಡುಕಬೇಕಾಗಿರುತ್ತೆ. ಆದುದರಿಂದ ನಮ್ಮ ಹಿಂದುಳಿದ (ಹಿಂದು) ಜನಾಂಗದ ಏಳ್ಗೆಗೆ ಮತವಿಚಾರದಲ್ಲಿ ನಾವು 'ಆರ್ಯ ಸಮಾಜ'ವನ್ನು ಸ್ಥಾಪಿಸುವುದು ನಮ್ಮ ಹಿಂದುಳಿದ ಹಿಂದುಗಳ ಮುಖ್ಯ ಧರ್ಮವಾಗಿರುತ್ತದಾಗಿ ನಂಬುತ್ತೇನೆ.

ಖಾದಿ ಬಟ್ಟೆ.

ಈಗಿನ ಚಳವಳದಲ್ಲಿ ಸೂಕ್ಷ್ಮ ಜೀವನ (Economy)ದ ವಿಧಾನವನ್ನು ಕಂಡುಹಿಡಿಯುವ ಪ್ರಯತ್ನವು ನಮ್ಮ ಇಡೀ ಭರತಖಂಡದಲ್ಲೆಲ್ಲಾ ವ್ಯಾಪಿಸಿರುವುದು ಸಹಜವಷ್ಟೆ. ಪ್ರತಿಯೊಬ್ಬನಿಗೂ ಹೊಟ್ಟೆತುಂಬ ಅನ್ನ, ಶರೀರ ಮುಚ್ಚುವಷ್ಟು ಬಟ್ಟೆ, ಕಣ್ಣು ತುಂಬ ನಿದ್ರೆ ದೊರಕಿಸುವುದು ಯಾವ ರೀತಿ ಎಂಬ ಆಲೋಚನೆಯು ಎಲ್ಲಾ ಲೋಕಮಾನ್ಯದಲ್ಲು ನೆಲೆಗೊಂಡಿರುವುದು ಸರಿಯಷ್ಟೇ. ಇದಕ್ಕೆ 'ಮಹಾತ್ಮ ಗಾಂಧಿ'ಯವರ ತತ್ವವನ್ನು ಇಡೀ ಭರತಖಂಡವೇ ಏಕೀಭವಿಸಿ ಪ್ರಯತ್ನಿಸುವುದು ಎಲ್ಲರ ಮನದಲ್ಲಿರಬಹುದು. ಖಾದಿ ಬಟ್ಟೆಯನ್ನು ಧರಿಸುವುದರಿಂದ ನಮ್ಮ ಸೂಕ್ಷ್ಮ ಜೀವನದ ದಾರಿಯಾಗಿ ಚೆನ್ನಾಗಿ ಉಂಡು ತಿಂದು ಉಲ್ಲಾಸದಲ್ಲಿರುವುದಲ್ಲದೆ ನಮ್ಮೊಳಗಿನ ಸಂಪಾದನೆಗಳನ್ನು ನಮ್ಮೊಳಗೆ ಹಂಚಿಕೊಂಡು ಪರವಿಶ್ವಾಸವನ್ನು ಬಿಟ್ಟು ಸ್ವಪ್ರೀತಿಯನ್ನು ಉದ್ಧರಿಸುತ್ತಾ ಮನುಷ್ಯ ಜಾತಿ ಪ್ರೀತಿಯಲ್ಲಿ ಮಗ್ನರಾಗಬಹುದು. ನಾವು ಬೆಳೆಸಿದ ಭತ್ತವನ್ನು ಮೈಸೂರು ಸೀಮೆಗೆ ರಫ್ತು ಮಾಡಿ ಅಲ್ಲಿಯ ಯಂತ್ರದಲ್ಲಿ ಅಕ್ಕಿ ತಯಾರಿಸಿ ವಾಪಾಸು ತರಿಸಿ ಅನ್ನ ಊಟಮಾಡುವ ನವ ನಾಗರೀಕತೆಯೆಂಬ ಸಾಧನವನ್ನು ಬಿಟ್ಟು ನಮ್ಮಲ್ಲಿರುವ ಕೈ ಒನಕೆ ಕಾಲುರಾಟೆಗಳಿಂದ ಅವಶ್ಯಕತೆಗೆ ಸರಿಯಾಗಿ ಅಕ್ಕಿ ತಯಾರಿಸಿ ಅವರವರ ರುಚಿಗೆ ಸರಿಯಾಗಿ ಗಂಜಿ, ಅನ್ನ, ಚಿತ್ರಾನ್ನ ಇತ್ಯಾದಿ ಪಾಕದಿಂದ ಯಾವ ರೀತಿ ಆನಂದಪಡುತ್ತೇವೋ ಅದೇರೀತಿಯಲ್ಲಿ ಮಹಾತ್ಮರ ತತ್ವವನ್ನನುಸರಿಸಿ ಅವರವರ ಇಷ್ಟಾನುಸಾರ ನಮೂನೆ ಕೋಲಿಗಗಳಿಂದ ನಮ್ಮ ಚರಕದಿಂದ ತಯಾರು ಆಗತಕ್ಕ ಖಾದಿ ಬಟ್ಟೆಗಳನ್ನು ನಾವು ಮೋಹಿಸಿದ್ದೇ ಆದರೆ ನಮ್ಮ ಹೊಟ್ಟೆಗೂ, ಮೈಗೂ, ನಿದ್ರೆಗೂ ಯಾವ ಅಭ್ಯಂತರವೂ ಇರಲಾರದು. ಆದರೆ ಈಗಿನ ಚಳವಳದಲ್ಲಿ ಖಾದಿ ಧರಿಸಿದ್ದೇ ಆದರೆ 'ನಾನ್ ಕೋಆಪರೇಟರ್' ಎಂಬ ಘೋರ ನಾಮಧೇಯವನ್ನು ಅನೇಕ ಆಫೀಸರರೂ, ತನ್ನನ್ನು ತಾನೇ ತಿಳಿಯದ ಅವರ ಹಿಂದಿನ ನಾನ್ ಆಫೀಸರರೂ ಸಹ ಉಚ್ಚರಿಸುವುದು ಸಾಧಾರಣ ಇಲ್ಲಿಯ ವಾಡಿಕೆಯು. ತಂದೆಯು ತನ್ನ ಮಕ್ಕಳನ್ನು ಪೋಷಿಸುವನು. ಸರಕಾರವು ಎಂದಿಗೂ ಪ್ರಜೆಗಳನ್ನು ನಿಂದಿಸದು. ಆದರ ತತ್ವಗುಣವಿಲ್ಲದೆ ಸ್ಥಾನವನ್ನೇರಿದವರು ಮಾತ್ರ ತಮ್ಮ ಉಗ್ರವನ್ನು ಘೋಷಿಸುವರು. ಈ ವಿಷಯದಲ್ಲಿ ನಿತ್ಯವೂ ಪ್ರೊಫೆಸರ್ ರೈಯವರು ಸಾರಿ ಸಾರಿ ಬೋಧಿಸುತ್ತಿರುತ್ತಾರೆ ಮತ್ತು ಕವಿ ಶ್ರೇಷ್ಠರಾದ ರಾಬೀಂದ್ರನಾಥ ಟ್ಯಾಗೋರರು ಹೇಳುವದೇನೆಂದರೆ:—

ಪಾಶ್ಚಿಮಾತ್ಯ ನವಿಲು ಗರಿಯ ಉಡುಪಿನ ವಿಸ್ಮಯವನ್ನೆತ್ತಿಕೊಂಡು ಅಲ್ಲಲ್ಲಿಯ ಪಾರ್ಕುಗಳಲ್ಲಿ ಗುಂಪು ಗುಂಪುಗಳಾಗಿ ಅಲೆದಾಡುತ್ತಾ ಕಾಲವನ್ನು ಕಳೆಯುತ್ತಿರುವ ಗಂಡು ಹೆಣ್ಣು ಮಕ್ಕಳು ಬಡವನು ಬಲ್ಲಿದನು ಎನ್ನುವ ಭಾರತೀಕರಗಳ ನಮೂನೆವು ಸ್ವರಾಜ್ಯದಾಡಳಿತೆಯಲ್ಲಿ ಒಂದು ಕಟ್ಟ ಸ್ವಪ್ನದೋಪಾದಿಯಲ್ಲಿ ಅದೃಶ್ಯವಾಗುವುದು. ಮತ್ತು ತಮ್ಮನ್ನು ಎಂಗಲು ಬಾಗಿಲಲ್ಲಿ ಕಾತಿರುವ ಕೋಳವನ್ನು ದೂರಪಡಿಸಲು ತಮ್ಮ ತಮ್ಮ ಅಜ್ಜಿ, ತಾಯಿ, ಸಹೋದರಿಯೂ ಹೆಂಡತಿ ಮತ್ತು ನಂಟರುಂಗಳು ನೂತು ತಯಾರಾದ ಖಾದಿ ಬಟ್ಟೆಯನ್ನು ಒಂದಿರುವೇಳೆಯೊಂದು ತೊಟ್ಟುಕೊಂಡು ಖಾದಿ ಗುಣವೇ ವೀರ ಸ್ವರ್ಗವೆಂಬ ತತ್ವವು ಅಭಿರುಚಿಯುಳ್ಳದ್ದೆಂದು ತಿಳಿಯುತ್ತಾರೆ.

ಒಗ್ಗಟ್ಟು.

ಹೀಗಿರುವುದರಿಂದ ಪ್ರತಿಯೊಂದು ಪ್ರವೃತ್ತಿಯಲ್ಲು ಅಭಿಮಾನಪಡೇಕಾದರ ನಮ್ಮ ಒಗ್ಗಟ್ಟೇ ಮುಖ್ಯ ಧರ್ಮ ಇಡೀ ಹಿಂದೂದೇಶದಲ್ಲೆಲ್ಲಾ ಬ್ರಾಹ್ಮಣರು, ಬ್ರಾಹ್ಮಣೇತರರು, ಹಿಂದೂಮುಸಲ್ಮಾನರು ವಾಗ್ವಾದವು ನಡೆಯುತ್ತಿರುವಾಗ ಈ ಹೆಸರುಗಳಿಂದ ಕೊಡಗಿನಲ್ಲಿ ನಮ್ಮ ಮತವೇ ತಿಳಿಯದ ನಾವು ಒಳಗಿಂದೊಳಗೆ ಬ್ರಾಹ್ಮಣರು, ಕೊಡಗರು, ಗೌಡರುಗಳೆಂಬ ವಿವಾದದಿಂದ ಅಲ್ಲಲ್ಲಿ ಚರ್ಚಿಸುವುದು ಒಂದು ಅತಿಶಯವಲ್ಲ. ಮತ್ತು ಇದು ಕೆಲವು ಜನರಿಂದ ಮಾತ್ರ ಕೂಡಿದ್ದಲ್ಲದ ಒಮ್ಮತದಿಂದ ಚರ್ಚಿಸುವುದಿಲ್ಲವು. ಇದು ಒಮ್ಮತವನ್ನು ಸಾಧಿಸುವ ಮೊದಲೇ ನಮ್ಮ ಒಗ್ಗಟ್ಟನ್ನು ಮತ್ತಷ್ಟು ಬಲಪಡಿಸುವ ಈ ಸಮಯದಲ್ಲು ನಮ್ಮ ಮುಸಲ್ಮಾನ್ ಅಣ್ಣ ಬಂಧುಗಳಾದಂಥಾ ಶ್ರೀ ಅಬ್ದುಲ್ ಗಫೂರ್ ಪಠಾನ್ ಪೃಷ್ನಯವರು ನಮ್ಮ ಮಧ್ಯೆ ದೊರಕಿದ್ದು ನಮ್ಮ ಅದೃಷ್ಟವೇ ಸರಿ. ಈ ನಮ್ಮ ಅಣ್ಣಬಂಧುಗಳು ಈಗಿನ ಅಬ್ಬರದ ರಾಜಕೀಯ ಚಳವಳವು ಈ ಪುಂಕ ಕೊಡಗು ಭೂಮಿಯನ್ನಾಕರ್ಷಿಸುವ ಮೊದಲೇ ನಮ್ಮ ಹಿಂದುಗಳಾದ ಜನಾಂಗದ ಏಳ್ಗೆಗೆ ವಿದ್ಯೆಯೇ ಮುಖ್ಯ ಕಾರಣವೆಂಬ ತತ್ವವನ್ನು ಪರಿಶೀಲಿಸಿ ತನ್ನ ಪಿತ್ರದ ಮಹತ್ವವನ್ನು ಕೈಬಿಟ್ಟು ಅನ್ಯತ್ರ ನೇಷನಲ್ ಶಾಲೆಗೆ ತನ್ನ ತನು, ಮನ, ಧನವನ್ನರ್ಪಿಸಿ, ಶಾಲೆ ಸ್ಥಾಪನ ಮಾಡಿ ಇದರ ಏಳ್ಗೆಗೆ ಅನೇಕಾನೇಕ ಅಪಜಯಗಳೂ, ಕುಂದು ಕೊರತೆಗಳೂ, ಒಂದರ ಮೇಲೊಂದು ಬಂದಿದ್ದರೂ ಸ್ವಲ್ಪವೂ ಎದೆಗುಂದದೆ ತಾನು ಹಿಡಿದಂತಾ ಮಾತ್ರೆಯು ಹುಳಿಯಾದರೂ ಕಾಯಿಲೆಗೆ ಸರಿಯಾದದ್ದೆಂದು ತಿಳಿದು ಚಿಕಿತ್ಸೆ ಮಾಡುತ್ತಿರುವ ಈ ಮುಸಲ್ಮಾನ್ ಪ್ರಿಯ ಬಂಧುಗಳು ಈ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಅಗ್ರಗಣ್ಯರಾಗಿರುವುದರಿಂದ ಸದರಿ ಸ್ಥಾನವನ್ನು ಶೀಘ್ರದಲ್ಲೇ ವಹಿಸಬೇಕಾಗಿ ನಮ್ಮ ಸ್ವಾಗತ ಮಂಡಲಿ ಪರವಾಗಿ ಕೇಳುವವನಾಗುತ್ತೇನೆ.

“ಕೊಡಗರು ಕನ್ನಡಿಗರೆ?”

(ಬರೆದು ಬಂದದ್ದು.)

“ನಿಷ್ಪಕ್ಷಪಾತಿ ಎಂಬವರು ಈ ಹೆಸರಿನ ಲೇಖನವನ್ನು ಹೈಸ್ಕೂಲ್ ಪತ್ರಿಕೆಯಲ್ಲಿ ಬರೆದದ್ದನ್ನು ಅನೇಕರು ಓದಿರಬಹುದು. ಲೇಖನದಿಂದಲೇ ಕೊಡಗು ದೇಶವು ಕನ್ನಡನಾಡಿಗೆ ಸೇರಿರುವದೆಂಬುದುಗೊತ್ತಾಗುತ್ತದೆ. (1) 'ಕೊಡಗಿನ ಒಂದೊಂದು ಭಾಗವನ್ನು ಒಂದೊಂದು ಕನ್ನಡ ರಾಜ ಮನೆತನದವರು ಆಳುತ್ತಿದ್ದರು' (2) ಕೊಡಗಿನ ಕೋರ್ಟುಕಚೇರಿ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸುವರು. (3) ಕೊಡಗಿನಲ್ಲಿ ಹಚ್ಚಿನ ಶಾಸನಗಳು ಕನ್ನಡ ಭಾಷೆಯಲ್ಲಿವೆ. (4) ಕರ್ನಾಟಕದ ಎಲ್ಲೆಯನ್ನು ಗುರ್ತಿಸುವಾಗ "ಕಾವೇರಿಯಿಂದ ಗೋದಾವರಿ" ತನಕ ಎಂಬುದರಿಂದ ಕೊಡಗು ಕನ್ನಡನಾಡಿನಲ್ಲಿ ಸೇರಿತು. (5) ಕೊಡಗರಿಗೆಲ್ಲಾ ಕನ್ನಡ ಗೊತ್ತಿದೆ." ಎಂಬ ಮುಂತಾದ ಕಾರಣಗಳಿಂದ ಕೆಲವು ವಿದ್ವಾಂಸರು ಕೊಡಗು ಕನ್ನಡ ಎಂತ ಸಾಧಿಸುತ್ತಾರಂತೆ. ಆದರ ಈ ಕಾರಣಗಳೆಲ್ಲವೂ ಕೊಡಗಿನ ಸ್ಥಿತಿಯನ್ನು ತಿಳಿಯದವರಿಂದ ಕೊಡಲ್ಪಟ್ಟವಾಗಿಯಂತೆ! 1ನೇ ಕಾರಣವು ಇನ್ನು ಬಲವಾಗಿಯೇ ಹೇಳಲ್ಪಡಬೇಕಿತ್ತು. ಕೊಡಗು ದೇಶವು ಕ್ರಿಸ್ತಶಕದ ಆರಂಭದಿಂದಲೇ ಕನ್ನಡ ರಾಜ್ಯಕ್ಕೆ ಸೇರಿತ್ತು. ತಲಕಾಡಿನ ಗಂಗರಸ ವಂಶಕ್ಕೆ ಸೇರಿದ ಅವನೀತ ಎಂಬ ಅರಸನು ಸುಮಾರು ಕ್ರಿಸ್ತಶಕ 5ನೇ ಶತಮಾನದಲ್ಲಿ ಆಳಿದವನು. ಇವನ ಶಾಸನವೊಂದು ಕೊಡಗಿನ ಖಜಾನೆಯಲ್ಲಿ ದೊರಕಿತಂತೆ. ಕೊಡಗು ಈ ಅರಸನ ಆಳಿಕೆಗೆ ಸೇರಿ ಇದ್ದದ್ದರಿಂದಲೇ ಈ ಶಾಸನವು ಕೊಡಗಿನಲ್ಲಿ ಇರಲು ಕಾರಣವೆಂತ ನನಗೆ ತೋರುತ್ತದೆ. ಕಿಗ್ಗಟ್ಟುನಾಡಿನ ಬಿಳೂರಲ್ಲಿ ಸಿಕ್ಕಿದ ಕ್ರಿ. ಶ. 888ರ ಶಿಲಾಶಾಸನವು, ಕೋತೂರು ಗ್ರಾಮದಲ್ಲಿ ಸಿಕ್ಕಿದ ಕ್ರಿ. ಶ. 891ರ ಶಿಲಾಶಾಸನವು ಇದೇ ಪ್ರಾಂತ್ಯದಲ್ಲಿ ಸಿಕ್ಕಿದ ಕ್ರಿ. ಶ. 978ರ ಶಿಲಾಶಾಸನವು, ಮಡಕೇರಿ ಹೈಸ್ಕೂಲಿನಲ್ಲಿ ಇರುವ ಕ್ರಿ. ಶ. 1000ದ ಶಿಲಾಶಾಸನವೂ, ಸಹ ಗಂಗರಸರ ಆಳಿಕೆಯಲ್ಲಿ ಬರೆದಂಥಾವು ಎಂತ ಮೈಸೂರು ಮತ್ತು ಕೊಡಗಿನ ಶಾಸನಗಳನ್ನು ಪರಿಶೋಧಿಸಿದ ರೈಸ್ ಎಂಬವರು ಬರೆದಿರುತ್ತಾರೆ. ಈ ಶಾಸನಗಳೆಲ್ಲಾ ಕನ್ನಡದಲ್ಲೇ ಇವೆ.

ಗಂಗರಸರ ಮುಖ್ಯಪಟ್ಟವು ಕೋಲಾರವೂ ಅನಂತರ ತಲಕಾಡೂ ಆಗಿದ್ದವು. ಇವೆರಡು ಪಟ್ಟಣಗಳೂ ಕನ್ನಡದೇಶದೊಳಗೇ ಇವೆ.

ಸುಮಾರು 10ನೇ ಶತಮಾನದಲ್ಲಿ ಗಂಗರನ್ನು ಸೋಲಿಸಿದ ಚೋಳರು ಒಂದು ಶತಮಾನಮಾತ್ರ ಕೊಡಗನ್ನು ತಮ್ಮ ರಾಜ್ಯದೊಳಗೆ ಸೇರಿಸಿಕೊಂಡಿದ್ದರು. ಅನಂತರ ಕನ್ನಡರಾಜ್ಯದ ಕೆಲವು ಭಾಗಗಳನ್ನಾಳುತ್ತಿದ್ದ ಚಂಗಾಳ್ವರೂ, ಹೊಯ್ಸಳರೂ ಕೊಡಗನ್ನು ಅಧೀನಪಡಿಸಿಕೊಂಡಿದ್ದರು. ಅನಂತರ ಬಂದ ಹಾಲೇರಿ ಅರಸರಂತ ಕನ್ನಡಿಗರೇ ಆಗಿದ್ದರೆಂಬುದು ಎಲ್ಲರಿಗೂ ತಿಳಿದಸಂಗತಿಯಾಗಿದೆ. ಚೋಳರ ಒಂದು ಶತಮಾನವನು ಉಳಿದ ಕ್ರಿಸ್ತಶಕದ 18 ಶತಮಾನಗಳೂ ಕೊಡಗು ಕನ್ನಡರಾಜರ ಅಧೀನವೇ ಇತ್ತೆಂತಾಯಿತು.

2ನೇ ಕಾರಣ ಕೊಡಗಿನ ಕೋರ್ಟು ಕಚೇರಿ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸುವರು. ಕೋರ್ಟು ಕಚೇರಿಗಳಲ್ಲಿ ಕನ್ನಡ ಕಲಿಸುವದಲ್ಲ ಉಪಯೋಗಿಸುತ್ತಾರೆ. ಶಾಲೆಗಳಲ್ಲಿ ಕನ್ನಡ ಕಲಿಸುವದೇನೋ ನಿಜ. ಆದರೆ ಕಡ್ಡಾಯವೇನೂ ಇಲ್ಲ. ಈ ನಿಜವಾದ ಸಂಗತಿಯನ್ನು ಅಲ್ಲವೆನ್ನುವವರಿಗೆ ದೇಶದ ಸ್ಥಿತಿಯು ತಿಳಿಯಲಿಲ್ಲವೆಂತ ನನಗೆ ತೋರುತ್ತದೆ.

3ನೇ ಕೊಡಗಿನ ಶಾಸನಗಳಲ್ಲಿ ಭಾಗಮಂಡಲ ಮತ್ತು ಪಾಲೂರು ಶಾಸನಗಳುಮಾತ್ರ ತಮಿಳುಭಾಷೆಯಲ್ಲಿ ಇರುವದಾಗಿದೆ. 'ನಿಷ್ಪಕ್ಷಪಾತಿ' ಹೇಳುವಾಗ ಕೊಡಗುಭಾಷೆಯಲ್ಲಿಲ್ಲ ಕನ್ನಡದಲ್ಲಿ ಶಾಸನ ಬರೆಯಲೂ ಸಿಕ್ಕದೆ ತಮಿಳಿನಲ್ಲಿ ಬರೆದಿರಬೇಕೇ ಹೊರತು ದೇಶವು ತಮಿಳು ದೇಶಕ್ಕೆ ಸೇರಿದ್ದರಿಂದ ಅಲ್ಲವೆಂತ ನಿಶ್ಚಿತವಾಗಿಯೂ ಹೇಳಬಹುದು. ಕೊಡಗಿನಲ್ಲಿ ದೊರಕಿ ಪ್ರಕಟವಾಗಿರುವ 75 ಶಾಸನಗಳಲ್ಲಿ ಎರಡು ಮಾತ್ರ ತಮಿಳಿನಲ್ಲಿರುವಾಗ "ಹೆಚ್ಚಿನ ಶಾಸನಗಳು ಕನ್ನಡದಲ್ಲಿವೆ" ಎಂಬುದು ತಪ್ಪೋ?

ಉಳಿದ ಎರಡು ಕಾರಣಗಳೂ ನಿಜವಾಗಿಯೇ ಇವೆ. ಇದುದರಿಂದ ಕೊಡಗು ದೇಶವು ಕನ್ನಡನಾಡಿಗೆ ಸೇರಿದ್ದೆಂಬುದರಲ್ಲಿ ಸಂಶಯವಿಲ್ಲ.

ಕರ್ನಾಟಕರಾಜ್ಯದೊಳಗೆ ಸೇರಿದ ಒಂದು ಊರಿನ ಹೆಸರನ್ನು ತಮಿಳುರಾಜ್ಯದ ಎಲ್ಲೆಯಾಗಿ ಹೇಳಿದೆಯೆಂದ್ದರಿಂದ ಕೊಡಗು ಕನ್ನಡನಾಡಿನ ಜೊತೆಗೆ ಇತ್ತೆಂತ ವಾದಿಸುತ್ತಾರೆ. ಈ ಕಾರಣದಿಂದ ಮಾತ್ರ ಕನ್ನಡನಾಡಿನೊಳಗೆ ಸೇರಿದ್ದಲ್ಲವೆಂತ ಅರ್ಥವಾಗುವದಿಲ್ಲ. ರಾಜೇಂದ್ರ ಚೋಳನು ಜಯಿಸಿದ ರಾಜ್ಯಗಳಲ್ಲಿ "ಕರ್ನಾಟಕದಲ್ಲಿದ್ದ ರಾಜ್ಯಗಳು ಮಾತ್ರವಲ್ಲ, ಕೊಡಗನ್ನು ಪ್ರತ್ಯೇಕವಾಗಿ ಹೇಳಿದ್ದಾನಂತೆ' ಲೇಖನದಲ್ಲಿ ಇದೆ. ಕರ್ನಾಟಕದಲ್ಲಿ ಇದ್ದ ರಾಜ್ಯಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿವರಿಸಿದ್ದಾನಂತಲೇ ಆಯಿತು. ಹಾಗಿರುವಾಗ ಕೊಡಗನ್ನು ಪ್ರತ್ಯೇಕ ಹೇಳಿದ್ದರಿಂದ ಕೊಡಗು ಕರ್ನಾಟಕದ ಜೊತೆಗಾಯಿತ್ತೆಂಬ ಅರ್ಥವಾಗುವದಿಲ್ಲ.

“ಬಹುಕಾಲ ಕೊಡಗರು ತಮಿಳರ ಆಶ್ರಯದಲ್ಲಾಗಲಿ ಅಥವ ಸ್ವತಂತ್ರವಾಗಿಯಾಗಲಿ ಕರ್ನಾಟಕಕ್ಕೆ ಸಂಬಂಧವಿಲ್ಲದೆ ತಮ್ಮ ವ್ಯಕ್ತಿತ್ವವನ್ನು ಕಳಕೊಳ್ಳದೆ ಬಂದರು.” ಎಂತ ಹೇಳ್ಳು

ತ್ತಾರೆ. ಇದಕ್ಕೆ ಐತಿಹಾಸಿಕ ಆಧಾರವನ್ನು ಕೊಟ್ಟಿರುವದಿಲ್ಲ. ನಾನು ಮೇಲೆ ಕೊಟ್ಟ ಆಧಾರದಿಂದ ಕೊಡಗು ಕನ್ನಡ ರಾಜರ ಅಧೀನವಾಗಿಯೇ ಇತ್ತೆಂತ ತೋರ ಬರುತ್ತದೆ. ಕೊಡಗು ಮತ್ತು ಮೈಸೂರುದೇಶದ ಕೆಲವು ಭಾಗಗಳು ಸಹ ಸೇರಿದ ಭಾಗವನ್ನು ಚಂಗಾಳರು ಪ್ರತ್ಯೇಕವಾಗಿ ಆಳುತ್ತಿದ್ದರೂ ಸಹ ಅವರು ಇತರ ಕರ್ನಾಟಕ ರಾಜರುಗಳಿಗೆ ಅಧೀನರಾಗಿದ್ದರು. ಚಂಗಾಳ್ವಪೆಮ್ಮ ದೇವಪ್ಪನು ಕೊಡಗರ ಸಹಾಯವನ್ನು ತೆಗೆದುಕೊಂಡಂತೆ ಶಾಸನದಲ್ಲಿ ಇದೆಯೆಂಬ ಕಾರಣದಿಂದಲೂ ಕೊಡಗರು ಕನ್ನಡಿಗರಲ್ಲವೆಂತ ಲೇಖನದಲ್ಲಿ ಇದೆ. ಕನ್ನಡ ಅರಸರ ಪ್ರಜೆಗಳಾಗಿದ್ದ ಕೊಡಗರ ಸಹಾಯವನ್ನು ತೆಗೆದುಕೊಂಡು ಚಂಗಾಳ್ವರಸನು ಪಾಲ್ಪರಗೆ ದಂಡೆತ್ತಿ ಹೋಗಿದ್ದಾಗಿರಬೇಕು.

ಕೊಡಗಿನ ಶಾಸನಗಳಲ್ಲಿ ಕೊಡಗರ ಹೆಸರಿಲ್ಲವೆಂಬದನ್ನು ನೋಡಿದರೆ ಕೊಡಗರ ವ್ಯಕ್ತಿತ್ವವು ಏನೂ ಬೇರೆಯಾಗಿರಲಿಲ್ಲವೆಂಬ ಅರ್ಥವಾಗುತ್ತದೆಯೇ ಹೊರತು ಕೊಡಗರು ಕನ್ನಡಿಗರಲ್ಲವೆಂತ ಅರ್ಥವಾಗುವದಿಲ್ಲ.

ಕೊಡಗಿನ ದೇವಸ್ಥಾನಗಳು ಅನೇಕ ಮಲೆಯಾಳದ ದೇವಸ್ಥಾನಗಳ ಆಕಾರವನ್ನು ಹೋಲುತ್ತಿವೆಯೆಂಬ ಕಾರಣದಿಂದ ಕೊಡಗಿನ ಮತಬೋಧಕರು ಮಲೆಯಾಳದಿಂದ ಬಂದವರಾಗಿರಬೇಕೆಂತ ತೋರುತ್ತದೆ. ಇದಕ್ಕೆ ಕೊಡಗರ ಕೆಲವು ದೇವತೆಗಳ ಹೆಸರುಗಳೇ ಇನ್ನೂ ನಿದರ್ಶನವಾಗಿ ಇದೆ. ಮುತ್ತಪ್ಪ, ಬಿಸುತೋರು ಕಾರ್ಯೂರ್ ಮುಂತಾದ ದೇವತೆಗಳು ಆದರೆ ಸಂಜರಾಜಪಟ್ಣ ತಾಲೋಕಿನ ದೇವಸ್ಥಾನಗಳು ಕನ್ನಡ ದೇಶದ ದೇವಸ್ಥಾನಗಳನ್ನು ಹೋಲುತ್ತಿವೆ. ಮತ್ತು ಈ ಪ್ರಾಂತ್ಯದಲ್ಲಿ ಕನ್ನಡಿಗರಾದ ಜೈನರ ಬಸ್ತಿಗಳು ಅನೇಕ ಇವೆ.

ಕೊಡಗಿನ ನಿವಾಸಿಗಳ ಪೈಕಿ 70000 ಜನರು ಕನ್ನಡ ಭಾಷೆಯೊಡುವವರಾಗಿದ್ದಾರೆ. ಸಂಜರಾಜಪಟ್ಣ ತಾಲೋಕು ಪೂರ್ತಿ ಕನ್ನಡಭಾಷೆಯ ಜನರೇ ಉಳ್ಳದ್ದಾಗಿದೆ. ಕೊಡಗರು ಕನ್ನಡಿಗರಲ್ಲದಿದ್ದರೂ ಕೊಡಗಿನಲ್ಲಿ ಹೆಚ್ಚಿನ ಜನರು ಕನ್ನಡಿಗರಾದ್ದರಿಂದ ಕೊಡಗರೂ ಸಹ ಕನ್ನಡ ಭಾಷೆಯನ್ನೇ ಬರವಣಿಗೆಗೆ ಉಪಯೋಗಿಸುತ್ತಿದ್ದಾರೆ. ಕ್ರಿಸ್ತಶಕದ ಆರಂಭದಿಂದಲೇ ಶಾಸನಗಳನ್ನು ಕನ್ನಡದಲ್ಲಿ ಕಿಗ್ಗಟ್ಟುನಾಡಿನಲ್ಲಿ ಸಹ ಬರೆದಿರುವಾಗ್ಯೆ ದೇಶದ ಜನರು ಆಗ ಸಹ ಕನ್ನಡದುಳ್ಳವರಾಗಿದ್ದಾರೆಯೆಂತ ಲೇ ಖಂಡಿತವಾಗಿಯೂ ನಂಬಬಹುದಲ್ಲವೇ. ?

ಕೊಡಗರು ವತಾಡುವ ಭಾಷೆಯಲ್ಲಿ ಮಲೆಯಾಳವೂ, ತಮಿಳೂ ಸಹ ಇದ್ದರೂ ಕನ್ನಡ ಮಾತುಗಳೂ ಸಹ ತುಂಬಾ ಇವೆ. ಆದರೆ ಬಹುಶತಮಾನಗಳ ಹಿಂದಿನಿಂದಲೇ ಕನ್ನಡ ಭಾಷೆಯನ್ನೇ ತಮ್ಮ ಬರವಣಿಗೆ ಭಾಷೆಯನ್ನಾಗಿ ಆರಿಸಿಕೊಂಡಿದ್ದಾರೆ. ಕನ್ನಡರಾಜರ ಅಧೀನದಲ್ಲಿ ಇದ್ದದ್ದೂ ಸಹ ಒಂದು ಕಾರಣವಾಗಿರಬಹುದು. ಆದರೆ 1900ವರ್ಷಗಳಿಂದಲಿದ್ದರೂ ಕನ್ನಡವನ್ನೇ ಬರವಣಿಗೆ ಭಾಷೆಯಾಗಿ ಇಟ್ಟುಕೊಂಡಿರುವಾಗ ಈಗ ಆ ಭಾಷೆಯನ್ನು ಬದಲಾಯಿಸಿ ತಮಿಳನ್ನಾಗಲೀ ಆರಿಸಿಕೊಳ್ಳುವದು ಸಾಧ್ಯವಿದೆಯೋ ? ತಮಿಳನ್ನಾಗಲೀ ಮಲೆಯಾಳವನ್ನಾಗಲೀ ಆರಿಸಿಕೊಂಡರೂ ಆ ಭಾಷೆಯೂ ಪರಕೀಯ ಭಾಷೆಯಾಗಲಿಲ್ಲವೇ. ಯಾವದಾದರೂ ಪರಕೀಯ ಭಾಷೆಯನ್ನು ಆರಿಸಬೇಕಾಗಿರುವಾಗ ಪುರಾತನ ಕಾಲದಿಂದಲೂ ಉಪಯೋಗದಲ್ಲಿ ಇಟ್ಟುಕೊಂಡಿರುವ ಕನ್ನಡವನ್ನೇ ವ್ಯವಹಾರ ಭಾಷೆಯಾಗಿ ಇಟ್ಟುಕೊಳ್ಳುವದರಲ್ಲಿ ನಾಚಿಕೆಯೇನಿದೆ. ಕೊಡಗರು ಕನ್ನಡಿಗರು ಎಂತ ಹೇಳುವದರಲ್ಲಿ ಅವಮಾನ್ಯವೇನು ಕಾಣದೆ ಇರುವಾಗ ಐತಿಹಾಸಿಕ ಸತ್ಯವನ್ನು ಯಾಕೆ ಒಪ್ಪಬಾರದು.

ಕೊಡಗು ಜಮೀನ್ದಾರರ ಸಂಘದ ೧೯೨೪-೨೫ನೇ ವರ್ಷದ ವರದಿ.

ಉದ್ಯೋಗಸ್ಥರು:—

ಮೆ. ರಾವ್‌ಬಹದ್ದೂರ್ ಕೋದಂಡ ಅಪ್ಪಯ್ಯನವರೇ ವರ್ಷಪೂರ್ತಾ ಸಂಘದ ಅಧ್ಯಕ್ಷರಾಗಿದ್ದರು. ಸಂಘದ ವಿಷಯಗಳಲ್ಲಿ ತುಂಬಾ ಮುತವರ್ಜಿ ತೆಗೆದುಕೊಂಡು ಕೆಲಸಮಾಡಿದರು. ಸಂಘವು ಇವರ ಕೆಲಸಕ್ಕೆ ಎಷ್ಟು ವಂದಿಸಿದರೂ ಸಾಲದು. ಕಮಿಟಿ ಮೆಂಬರುಗಳ ಪೈಕಿ ಮೆ. ಚೆಪ್ಪುಡಿರ ಪೂವಣ್ಣನವರು ಮತ್ತು ಕೆದಂಬಾಡಿ ಸುಬ್ರಾಯರು ಸಹ ನಿರಾಧೀನರಾದರು. ಇವರಿಬ್ಬರೂ ಸಂಘದ ಹಿತಕ್ಕಾಗಿ ತುಂಬಾ ಕೆಲಸಮಾಡುತ್ತಿದ್ದರು, ಇವರ ಕುಟುಂಬದವರಿಗೆ ಕಮಿಟಿಯ ಸಮಾನುಭೂತಿಯನ್ನು ಸೂಚಿಸುವ ಠರಾವುಗಳನ್ನು ಕಳುಹಿಸಲಾಗಿದೆ. ಮೆ. ಪೂವಣ್ಣನವರ ಬದಲಿಗೆ ಬಾಳ್ಗಡ್ ಪಾರ್ಕ್ ಪ್ಲಾಂಟರವರನ್ನು ಮೆಂಬರಾಗಿ ಚುನಾಯಿಸಿ ಕೊಳ್ಳಲಾಗಿದೆ, ಮೆ. ಸುಬ್ರಾಯರವರ ಬದಲಿಗೆ ಯಾರನ್ನೂ ಇನ್ನೂ ಚುನಾಯಿಸಿರುವದಿಲ್ಲ. ಮೆ. ಕೇಚಟ್ಟಿರ ಪೊಣ್ಣಪ್ಪನವರು ದೇಹದಲ್ಲಿ ಅನಾರೋಗ್ಯದ ಕಾರಣದಿಂದ ತನ್ನ ಕಮಿಟಿ ಮೆಂಬರತನಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆ. ಇವರ ಬದಲಿಗೆ ಯಾರನ್ನೂ ಆರಿಸಿಕೊಂಡಿರುವದಿಲ್ಲ. ಈ ಮಹಾಸಭೆಯಲ್ಲಿ ಇನ್ನು ಮುಂದಿನ ಎರಡು ವರ್ಷಗಳಲ್ಲಿ ಕೆಲಸಮಾಡತಕ್ಕ ಕಮಿಟಿಯನ್ನು ಆರಿಸಬೇಕಾಗಿದೆ

ಸಂಘದ ಮೆಂಬರುಗಳ ಸಂಖ್ಯೆ—

ಕಳೆದ ವರ್ಷದ ವರದಿಯಲ್ಲಿ ಮೆಂಬರುಗಳ ಸಂಖ್ಯೆ 2998 ಇದೆಯೆಂತ ತಿಳಿಸಿದ್ದೆ— ಈಗ 3748 ಇದೆ. ಈ ವರ್ಷದಲ್ಲಿ ಆರ್ಗನೈಜರುಗಳಾಗಿ ದಕ್ಷಿಣ ಕೊಡಗಿಗೆ ಮೆ. ಬಿದ್ದಂಡ ಕಾರ್ಯಪ್ಪನವರು ಉತ್ತರ ಕೊಡಗಿಗೆ ಮೆ. ಉದಿಯಂಡ ಮೊಣ್ಣಯ್ಯನವರು ತಾ. 23-9-24 ರಲ್ಲಿ ನೇಮಿಸಲ್ಪಟ್ಟರು. ಮೆ. ಕಾರ್ಯಪ್ಪನವರು ಏನೂ ಕೆಲಸಮಾಡದೆ 14-3-25 ರಲ್ಲಿ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ದೇಹದ ಅನಾರೋಗ್ಯವೇ ರಾಜೀನಾಮೆಗೆ ಕಾರಣವೆಂತ ಬರೆದಿದೆ. ಕೆಲವು ಸಾರಿ ಕೆಲಸ ನಡಿಯುತ್ತಿದೆಯೋ ಎಂತ ನಾನು ಕೇಳಿದಾಗ ಏರ್ಪಾಡು ಮಾಡುತ್ತೇನೆಂತ ಹೇಳುತ್ತಿದ್ದರು. ಜನರಲ್ ಮೀಟಿಂಗಿನ ಮುಂದೆ ಹೆಚ್ಚು ಸಮಯವಿಲ್ಲದೆ ಇರುವಾಗ ರಾಜೀನಾಮೆ ಬಂದದ್ದರಿಂದ ಹೊಸ ಆಫೀಸರನ್ನು ನೇಮಿಸಲು ಸಮಯ ಸಾಲಲಿಲ್ಲ. ಆದರೂ ಪ್ರೆಸಿಡೆಂಟರು ಮತ್ತು ಸೆಕ್ರೆಟರಿ ಸಹ ಸೇರಿ ಮೆ. ಚಂಗಂಡ ಕುಟ್ಟಪ್ಪನವರನ್ನು ಕೋಟೆರ ಚಿಣ್ಣಪ್ಪನವರನ್ನು ಬಿಸಂಡ ಮಾದಪ್ಪನವರನ್ನು ಜಮ್ಮಡ ಮಾದಪ್ಪನವರನ್ನೂ ಸಹ ಚಂದಾ ವಸೂಲ್ ಮಾಡಬೇಕಂತ ಕೇಳಿಕೊಂಡಿದ್ದಾರೆ ಇವರು ವಸೂಲ್‌ಮಾಡುವ ಮೊಬಲಗು ಬರುವ ವರ್ಷದ ಆದಾಯ ಪಟ್ಟಕ್ಕೆ ಸೇರುತ್ತದೆ.

ಮೆ. ಉದಿಯಾಂಡ ಮೊಣ್ಣಯ್ಯನವರು ಉತ್ತರ ಕೊಡಗಿನಲ್ಲಿ ಅಲ್ಲಲ್ಲಿ ಕೆಲವು ಮೀಟಿಂಗ್‌ಗಳನ್ನು ನಡಿಸಿದರೆಂತ ತಿಳಿಯುತ್ತೇವೆ. ಇವರ ಮೂಲಕ ಎಷ್ಟು ಹಣ ವಸೂಲಾಯಿತೆಂತ ಇನ್ನೂ ಹೇಳಲಿಕ್ಕಾಗಲಿಲ್ಲ. ಈ ರೀತಿ ಒಟ್ಟಿನಮೇಲೆ ಸಂಘದ ಪ್ರಚಾರಕ ಕೆಲಸವು ತಟಸ್ಥಸ್ಥಿತಿಯಲ್ಲೇ ಇತ್ತೆಂತ ತಿಳಿಸಲು ವ್ಯಸನಪಡುತ್ತೇನೆ.

ಕೊಡಗು ಜಮೀನ್ದಾರರ ಸಂಘದ 1924—1925ನೇ ಸಂವತ್ಸರದ (1—4—1924ರಿಂದ 31—3—1925ರ ವರೆಗಿನ) ಜಮಾ ಮತ್ತು ಖರ್ಚುಗಳ ತಪಶೀಲ್ ಪಟ್ಟಿ.

ಜಮಾ.

	ರೂ. ಆ. ಪೈ.
1924ನೇ ಇಸವಿ ಏಪ್ರಿಲ್ ತಾರೀಖು 1ರ ಲ್ಲಿ ಇದ್ದ ಶಿಲ್ಕು ಬಾಕಿ	852— 3— 2
1—4—1924ರಿಂದ 31—3—1925ರ ವರಗೆ ವಸೂಲಿಯಾದದ್ದು (ಈ ಪೈಕಿ 113—14—0 ಆಫೀಸು ಮುಖಾಂತ್ರವೂ 1144—10—0 ಆರ್ಗನೈಜರ್ ಬಿದ್ದಂಡ ಕಾರ್ಯಪ್ಪನವರ ಮೂಲಕವೂ ವಸೂಲಿ) ಜುಮ್ಲ ಕಾರ್ಯಪ್ಪನವರಿಂದ 1—1—'24ರಿಂದ ವಸೂಲಾದದ್ದು ರೂ. 1505—7—0	1258— 8— 0
ಪೋಸ್ಟಾಫೀಸಿನ ಸೇವಿಂಗ್ಸ್ ಬ್ಯಾಂಕು ಬಡ್ಡಿ	27— 6— 7
ಜುಮಲ	2138— 1— 9

ಖರ್ಚು.

ಆಫೀಸಿನವರ ಸಂಬಳ	264— 0— 0
ಮನೆ ಬಾಡಿಗೆ	80— 0— 0
ಪೋಸ್ಟೇಜು ಸ್ಟಾಂಪು ವಗೈರೆ....	44— 0— 0
ಸ್ಟೇಶನರಿ (ಪೇಪರ್, ಬುಕ್ಕು ಕಾಗದ ವಗೈರೆಗೆ)	20— 7—11
1923—1924 ಮತ್ತು 1924—1925 ಈ ಎರಡು ವರ್ಷಗಳಲ್ಲಿ ಸಂಘದ ವಿಷಯ ಕೊಡಗು ಪೇಪರಿನಲ್ಲಿ ಪ್ರಿಂಟು ಮಾಡಿಸಿದಕ್ಕಾಗಿ ಕೊಟ್ಟ ಪ್ರಕಟಣೆ ಚಾರ್ಜು (ವರ್ಷ 1ರ 100ರೂ. ಮೇರೆ)	200— 0— 0
ಕೋಟೆರ ಉತ್ತಯ್ಯನವರು ಇನಾಮಾಗಿ ಸಂಘಕ್ಕೆ ಕೊಟ್ಟ ಅಲ್ಮೈರವನ್ನು ವೀರಾಜಪೇಟೆಯಿಂದ ಮಡಿಕೇರಿಗೆ ಸಾಗಿಸಲು ಗಾಡಿ ಬಾಡಿಗೆ ಕೊಟ್ಟ ಖರ್ಚು	8— 0— 0
ಸಾದಿಲ್‌ವಾರ್	40— 0— 0
ಕಾರ್ಬನ್ ಪೇಪರ್, ರಿಬ್ಬನ್, ಪೆನ್ಸಿಲ್, ಪೇಪರ್ ಇಂಕು ವಗೈರೆಗಳನ್ನು ತರಿಸಲು ವಿ. ಪಿ. ಚಾರ್ಜು ಕೊಟ್ಟದ್ದು	30— 4— 0
ಟೈಪ್‌ರೈಟಿಂಗ್ ಮಿಶನ್ ಹಾಳಾದ್ದರಿಂದ ಅದನ್ನು ರಿಪೇರಿ ಮಾಡಿಸಿದ್ದಕ್ಕೆ ಕೊಟ್ಟದ್ದು	9— 7— 0
ಕೊಡಗು ಕಂಪೆನಿಗೆ ಡಬ್ಬಲ್ ಕ್ರೌನ್ ವಾರ್ಫಡೇಲ್ ಮಿಶನ್ ಗಿರ್ವಿ ಮೇಲೆ ಸಂಘದಿಂದ ಸಾಲಕೊಟ್ಟ ಮೊಬಲಗು	1000— 0— 0
ಜನರಲ್ ಮೀಟಿಂಗಿಗೆ ನೋಟೀಸು ಕೊಡಲು ಕಾರ್ಡು ಮತ್ತು ಅಗ್ರಿಮೆಂಟುಗಳ ನೋಟೀಸನ್ನು ಪ್ರಿಂಟು ಮಾಡಿಸಿದ್ದು	104—11— 0
ಬಿದ್ದಂಡ ಕಾರ್ಯಪ್ಪನವರು ವಸೂಲ್ಮಾಡಿದ ರೂ. 1505—7—0ಕ್ಕೆ ಕೊಡಬೇಕಾದ ಕಮಿಶನ್‌ಗಳ ಪೈಕಿ 250 ರೂ. ಅವರು ಮೊದಲೇ ಅಡ್ವಾನ್ಸು ಆಗಿ ತೊಂಡಿಕೊಂಡದ್ದರಿಂದ ಬಾಕಾ ಬಾಕಿ ಕಮಿಶನ್ ರೂ. 106—11—9 ಕೊಟ್ಟ ಖರ್ಚು	106—11— 9
ಜುಮ್ಲ ಖರ್ಚು	1928—11— 8
ತಾರೀಖು 1—4—1925ಕ್ಕೆ ಶಿಲ್ಕು ಬಾಕಿ.	209— 6— 1

ವಿಶೇಷ ವಿಷಯಗಳು.

ಈ ವರ್ಷದಲ್ಲಿ ಸಂಘದಿಂದ "ಕೊಡಗು" ಕಂಪೆನಿಗೆ 1000ರೂ ಶೇ. ಶಾ. 6ರೂ. ದರದಲ್ಲಿ ಬಡ್ಡಿ ಕೊಡಿಸಿಕೊಳ್ಳುವ ಕರಾರಿನಿಂದ ಕೊಟ್ಟಿರುವದು ವಿಶೇಷ ವಿಷಯವಾಗಿದೆ. ಪೋಸ್ಟಾಫೀಸಿನಲ್ಲಿ 3ರೂ. ಬಡ್ಡಿ ಮೇರೆ ಡಿಪಾಜಿಟ್ ಇರುವದರಿಂದ ಈ ಸಂಘಕ್ಕೆ ಹೆಚ್ಚಿನ ಬಡ್ಡಿ ಬರುವದಕ್ಕಾಗಿಯೂ ದೇಶದ ಕೆಲಸಮಾಡುತ್ತಿರುವ ಪತ್ರಿಕೆಗೆ ಸಹಾಯಮಾಡಲಿಕ್ಕಾಗಿಯೂ ಈ ಸಾಲವನ್ನು ಕೊಟ್ಟಿರುವದಾಗಿದೆ. ಈ ಮೊಬಲಗನ್ನು ಕಂಪೆನಿಯು ಸಂಘಕ್ಕೆ ತಾ. 31—3—26ರೊಳಗೆ 500ರೂ. ಮತ್ತು ಪೂರ್ತಿ ಹಣವಿನ ಬಡ್ಡಿ ಮತ್ತು 31—3—27 ರೊಳಗೆ ಉಳಿದ 500ರೂ. ಮತ್ತು ಇದರ ಬಡ್ಡಿ ಸಹ ಮರುಪಾವತಿ ಮಾಡಬೇಕಾಗಿದೆ. ಹೊಸತಿನಲ್ಲಿ 7500ರೂ. ಕ್ರಯವಿರುವ ಪ್ರಿಂಟಿಂಗ್ ಪ್ರೆಸ್ಸನ್ನು ಈ ಹಣಕ್ಕೆ ಅಡುಕೊಟ್ಟಿದ್ದಾರೆ.

ಮೆ ಕೋಟೆರ ಐಯ್ಯಪ್ಪನವರು ತನ್ನ ತಮ್ಮ ಕೋಟೆರ ಉತ್ತಯ್ಯನವರ ಜ್ಞಾಪಕಾರ್ಥಕ್ಕಾಗಿ ಸುಮಾರು 25ರೂ. ಕ್ರಯವಿರುವ ಅಲ್ಮೈರವನ್ನು ಸಂಘಕ್ಕೆ ಉಚಿತವಾಗಿ ಕೊಟ್ಟಿರುತ್ತಾರೆ. ಇವರ ಉದಾರ ಸಹಾಯಕ್ಕೆ ಸಂಘದ ಪರವಾಗಿ ನಾನು ಮೆ. ಐಯ್ಯಪ್ಪನವರಿಗೂ ಮತ್ತು ಉತ್ತಯ್ಯನವರ ಪತ್ನಿಯವರಿಗೂ ವಂದಿಸುತ್ತೇನೆ.

ಕಳೆದ ವರ್ಷದ ಜನರಲ್ ಮೀಟಿಂಗಿನಲ್ಲಿ ಸಂಘಕ್ಕೆ ಒಂದು ಪುಸ್ತಕ ಭಂಡಾರವನ್ನು ತೆರೆಯಲಿಕ್ಕಾಗಿ 200ರೂ ಮಂಜೂರ್‌ಮಾಡಲಾಗಿತ್ತು. ಇಟ್ಟುಕೊಳ್ಳಲು ಸ್ಥಳವಿಲ್ಲದ್ದರಿಂದ ಪುಸ್ತಕಭಂಡಾರದ ಏರ್ಪಾಡು ಇನ್ನೂ ಆಗಲಿಲ್ಲ. ಮೆ. ಮಾಚಿಮಂಡ ನಂಜಪ್ಪನವರು 56ಪುಸ್ತಕಗಳನ್ನು ಈ ಪುಸ್ತಕ ಭಂಡಾರಕ್ಕೆ ಕೊಟ್ಟಿರುತ್ತಾರೆ. ಇವರಿಗೂ ನಾನು ವಂದಿಸುತ್ತೇನೆ. ಇವರ ಮೇಲ್ಪಂಕ್ತಿಯನ್ನು ಇತರರು ಹಿಂಬಾಲಿಸಿದರೆ ಸಂಘಕ್ಕೆ ದೊಡ್ಡ ಪುಸ್ತಕ ಭಂಡಾರವು ಸುಲಭದಲ್ಲಿ ಆಗುತ್ತದೆ.

ಮಡಿಕೇರಿ ಪೋಸ್ಟಾಫೀಸ್ ಬಳಿ ಇರುವ ಮೆ. ಮಾರ್ಗನ್‌ರ ಮನೆಯು ಮಾರಾಟಕ್ಕೆ ಇದೆಯೆಂಬ ಸಂಗತಿಯನ್ನು ನೋಡಿ ಕೆಲವು ಕಮಿಟಿಮೆಂಬರುಗಳು ಆ ಕಟ್ಟಡವನ್ನು ಸಂಘಕ್ಕೆ ಕೊಂಡುಕೊಂಡು ದೇಶದ ಉಪಯೋಗಕ್ಕಾಗಿ ಒಂದು ಹಾಲಾಗಿ ಮಾಡಿಕೊಳ್ಳಬೇಕೆಂತ ಯೋಚಿಸಿ ಸಂಘದ ಪ್ರೆಸಿಡೆಂಟ್ ರಾಯ್‌ಬಹದೂರ್ ಮೆ. ಕೋದಂಡ ಅಪ್ಪಯ್ಯನವರೂ, ಜನರಲ್ ಸೆಕ್ರೆಟರಿಯವರೂ ಈ ಮನೆಯ ಮಾಲೀಕರಾದ ಪಿಯರ್ಸ್ ಲೆಸ್ಲಿ ಕಂಪೆನಿಯವರಲ್ಲಿ ಕ್ರಯ ಖಂಡನೆ ಮಾಡಲಿಕ್ಕೆ ಹೋದರು, ದೇಶದವರ ಸಹಾಯದೊರೆತೀತೆಂಬ ಭರವಸೆಯಿಂದ 8000ರೂ. ವರಗೆ ಕೇಳಿದರು. ಕಂಪೆನಿಯವರು ಕೊಡಲಿಲ್ಲ. ಮನೆಯನ್ನು ಈಚೆಗೆ 9500ರೂ. ಗೆ ಬೇರೆಯೊಬ್ಬರು ಕೊಂಡುಕೊಂಡುಬಿಟ್ಟರು.

ಈ ದೇಶೋಪಕಾರದ ಕೆಲಸಕ್ಕೆ ದೇಶದ ಪ್ರೀತಿಗೆ ಪಾತ್ರರಾಗಿದ್ದ ಗತಿಸಿದ ಮೆ. ಮನೆಯಪಂಡ ಮುತ್ತಣ್ಣನವರ ಜ್ಞಾಪಕಾರ್ಥಕ್ಕಾಗಿ ಅವರ ಪತ್ನಿಯವರು 1000ರೂ. ಕೊಡುವುದಾಗಿ ಮಾತುಕೊಟ್ಟರು. ಆದರೆ ನಾವು ಯೋಚಿಸಿದ ಮನೆಯೂ ಸಿಕ್ಕದ್ದರಿಂದ ಈ ಹಣಗಳನ್ನು ಉಪಯೋಗಿಸಲಿಕ್ಕೆ ಇನ್ನೂ ಅವಕಾಶವಾಗಿರುವದಿಲ್ಲ. ಆದರೆ ಅನಂತರ ನಡೆದ ಒಂದು ಕಮಿಟಿ ಮೀಟಿಂಗ್‌ನಲ್ಲಿ ಬೇರೆ ಸ್ಥಳವನ್ನಾದರೂ ತೆಗೆದುಕೊಂಡು ಒಂದು ಹಾಲನ್ನು ಕಟ್ಟಿಸಬೇಕೆಂತ ತೀರ್ಮಾನವಾಗಿದೆ, ತಕ್ಕದಾದ ಸ್ಥಳಕೊಡಬೇಕೆಂತ ಕಮಿಶನರಿಗೆ ಬರಕೊಂಡಿದ್ದೇವೆ ಇನ್ನೂ ಜವಾಬು ದೊರೆತಿಲ್ಲ. ನಮ್ಮ ದೇಶದಲ್ಲಿ ಸಾರ್ವಜನಿಕ ಕಟ್ಟಡವೊಂದು ಇಲ್ಲವೆಂಬ ಕೊರತೆಯನ್ನು ನಮ್ಮ ಸಂಘವು ಹೋಗಲಾಡಿಸಬೇಕು. ಯಾವುದಾದರೂ ಸಂಖ್ಯೆಗಿಂತ ಹೆಚ್ಚಿಗೆ ರೂಪಾಯಿ ಕೊಡುವವರ ಹೆಸರನ್ನು ಕಟ್ಟಡದ ಗೋಡೆಯಲ್ಲಿ ಕೆತ್ತಿ ಇಡುವಂತೆ ತೀರ್ಮಾನಿಸಿಕೊಂಡು ಕೆಲಸಮಾಡಿದರೆ ಧನಸಹಾಯವು ಸಾಲದೆ ಹೋಗಲಾರದೆಂತ ನಂಬುತ್ತೇನೆ. ಈ ವಿಷಯವನ್ನು ಮಹಾಸಭೆಯು ಯೋಚಿಸಿ ತೀರ್ಮಾನಿಸಬೇಕಾಗಿದೆ.

ಕಳೆದ ಜನರಲ್ ಮೀಟಿಂಗ್ ನಡೆದನಂತರ ಅದವೊದಲನೆ ಕಮಿಟಿ ಮೀಟಿಂಗಿನಲ್ಲಿ ಕಳೆದ ವರ್ಷದ ಮೀಟಿಂಗಿನ ವರದಿಯನ್ನು ಪ್ರಿಂಟ್‌ಮಾಡಿಸಿ ಹಾಕಬೇಕೆಂದು ತೀರ್ಮಾನವಾಯಿತು. ಆದರೆ ಇದರ ಖರ್ಚಿಗಾಗಿ ಕಿಗ್ಗಟ್ಟುನಾಡು ತಾಲೋಕು ಸ್ವಾಗತಮಂಡಲಿಯವರು 50ರೂ. ಕೊಡಬೇಕೆಂತ ತೀರ್ಮಾನವಾಯಿತು. ಕಳೆದವರ್ಷದ ಅಧ್ಯಕ್ಷರಾಗಿದ್ದ ಮೆ. ಉತ್ತಯ್ಯನವರು ಇದರ ಖರ್ಚಿಗಾಗಿ 25ರೂ. ಕೊಡುವದಾಗಿಯೂ ಹೇಳಿದರು. ಕಿಗ್ಗಟ್ಟುನಾಡು ಸ್ವಾಗತಮಂಡಲಿಯವರು ಸೆಪ್ಟೆಂಬರ್ ತಿಂಗಳಲ್ಲಿ ಪ್ರಿಂಟಾದ ಒಟ್ಟು ಪುಸ್ತಕಗಳ ಪೈಕಿ ಅರ್ಧ ಸಂಖ್ಯೆಯನ್ನು ತಮಗೆ ಕೊಟ್ಟರೆ ತಾವು ರುಪಾಯಿಯಲ್ಲು 5 ಆಣೆ ಕೊಡಬಹುದಾಗಿ ಬರೆದರು. ಅನಂತರ ನಡೆದ ಕಮಿಟಿ ಮೀಟಿಂಗಿನಲ್ಲಿ ಮೊದಲಿನ ಕಮಿಟಿಯ ಠರಾವನ್ನು ನೋಡಿಕೊಳ್ಳದೆ ಕಮಿಟಿಯವರು ಕಿಗ್ಗಟ್ಟುನಾಡು ಸ್ವಾಗತಮಂಡಲಿಗೆ ಅಧಿಕಾರದಿನೆಯನ್ನು ಕೊಟ್ಟರು. "ಕೊಡಗು" ಛಾಪಖಾನೆಯಲ್ಲಿಯೇ ಪ್ರಿಂಟುಮಾಡಿಸುವದು ಯುಕ್ತವೆಂತ ನಿರೀಕ್ಷಿಸುತ್ತಾ ಇದ್ದದ್ದಾಯಿತು. ಆ ಛಾಪಖಾನೆಯಲ್ಲಿ ಆ ಪ್ರಿಂಟುಮಾಡಿಸಲು ಅನುಕೂಲವಾಗಲೇ ಇಲ್ಲ. ಫೆಬ್ರವರಿ ತಿಂಗಳಲ್ಲಿ ನಡೆದ ಮೀಟಿಂಗಿನಲ್ಲಿ ಪುನಃ ಈ ವಿಷಯವು ಯೋಚಿಸಲಾಗಿ ಕಿಗ್ಗಟ್ಟುನಾಡುಸ್ವಾಗತಮಂಡಲದ ಕಾಗದದ ವಿಷಯ ಅವರಿಗೆ ತಿಳಿಸಿ ಪ್ರಿಂಟ್‌ಮಾಡಬೇಕೋ ಎಂತ ಮೆ. ಉತ್ತಯ್ಯನವರನ್ನೇ ಕೇಳಬೇಕೆಂತ ತೀರ್ಮಾನವಾಯಿತು. ಅವರಿಂದ ಜವಾಬು ಬರಲಿಲ್ಲ.

ಮೊನ್ನಾರ್ಡಿನಲ್ಲು ತಾರೀಖು 15—2—25ರಲ್ಲಿ ನಡೆದ ಕಮಿಟಿ ಮೀಟಿಂಗಿನಲ್ಲಿ ಹೊರಗಿನಿಂದ ಗಾಜಕೀಯ ವಿಷಯ ಉಪನ್ಯಾಸ ಮಾಡುವವರನ್ನು ತರಬೇಕೆಂತ ತೀರ್ಮಾನವಾಯಿತು. ಅದೇನೋರೆ ೩ ಜನರಿಗೆ ಕಾಗದ ಬರೆಯಲಾಯಿತು.

ಕರ್ನಾಟಕಪ್ರಾಂತ್ಯದ ಕಾಂಗ್ರೆಸ್ ಕಮಿಟಿ ಸೆಕ್ರೆಟರಿಯವರಾದ ಶ್ರೀಯುತ ಡಿ. ಕೆ. ಭಾರದ್ವಾಜರು ಬರುವರಾಗಿ ಬರೆದರು. ಈ ವರ್ತಮಾನ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರವರಿಗೆ ತಿಳಿಸಿ, ಶ್ರೀಯುತ ಭಾರದ್ವಾಜರು ಬಂದರೆ ಅವರ ಬಾಯಿ ಮುಚ್ಚಬೇಕಾಗುತ್ತೆಂತ ತಿಳಿಸಿದರು. ಅದರ ಮೇರೆ ಬರಬೇಡವೆಂತ ಶ್ರೀಯುತ ಭಾರದ್ವಾಜರಿಗೆ ಬರೆಯಲಾಯಿತು. ನಿಮ್ಮ ದೇಶಕ್ಕೆ ನಾಚಿಕೆ ಕೇಡಾಯಿತೇ ಹೊರತು ನನಗೇನೂ ಇಲ್ಲ. ಇನ್ನು ಮುಂದೆ ಹೀಗೆ ನಡೆಯದಂತೆ ನೋಡಿಕೊಳ್ಳುವುದೇ ದೇಶದ ಕೆಲಸವಾಗಿದೆ ಎಂತ ಅವರು ಜವಾಬು ಬರೆದಿರುತ್ತಾರೆ.

ಮೀಟಿಂಗ್‍ಗಳು.

ವರುಷದಲ್ಲಿ ಏಳು ಕಮಿಟಿ ಮೀಟಿಂಗ್‍ಗಳು ನಡೆದವು, ಮೂರು ಮಡಿಕೇರಿಯಲ್ಲೂ ಮೂರು ವೀರಾಜಪೇಟೆಯಲ್ಲೂ ಒಂದು ಮೂರ್ನಾಡಿನಲ್ಲೂ ನಡೆದವು. ಸರಾಸರಿ 17 ಜನರು ಹಾಜರಿದ್ದಂತಾಗಿದೆ. ಹಾಜರಾತಿಯು ಮೊದಲಿನ ವರುಷಗಳಿಗಿಂತ ಹೆಚ್ಚು ಚನ್ನಾಗಿದ್ದರೂ ಇನ್ನೂ ತುಂಬಾ ಅತೃಪ್ತಿಕರವಾಗಿದೆ. ಒಂದು ಮೀಟಿಂಗಿಗೆ ಸಹ ಬರದ ಮೆಂಬರುಗಳು ಅನೇಕರಿದ್ದಾರೆ. ಹೊಸ ಚುನಾವಣೆಯಲ್ಲಿ ಮೀಟಿಂಗ್‍ಗಳಿಗೆ ಹಾಜರಾಗುವ ಮೆಂಬರುಗಳನ್ನೇ ಚುನಾಯಿಸಿದರೆ ಸಂಘದ ಕೆಲಸವು ಹೆಚ್ಚು ಉತ್ಸಾಹದಿಂದ ನಡೆದೀತು.

ಕಳೆದ ವರ್ಷದ ರರಾವುಗಳಲ್ಲಿ ಕೆಲಸಕ್ಕೆ ಕಮಿಟಿಯಿಂದ

ಬಂದ ಜವಾಬು.

ರರಾವುಗಳು.

2 (c) ಹಿಂದುಳಿದ ಪಂಗಡಗಳ ಕ್ಷೇಮಕ್ಕಾಗಿ ನಿಯಮಿತವಾಗುವ ಮೆಂಬರು ಹಿಂದುಳಿದ ಪಂಗಡಕ್ಕೆ ಸೇರಿದವನಾಗಿರ ಬೇಕು.

(d) ಕೌನ್ಸಿಲಿಗೆ ಓಟುಕೊಡುವ ಹಕ್ಕು 1ರೂ. ಜಮ್ಮ ಕಂದಾಯದವನಿಗೂ, 2ರೂ. ಸಾಗುಕಂದಾಯ ಕೊಡುವವನಿಗೂ ಮತ್ತು ಕಂದಾಯವಿಲ್ಲದಿದ್ದರೆ 2ರೂ. ಸಾಗುಕಂದಾಯ ಕೊಡಬಹುದಾದ ಜಮಾನ್ ಇರುವವನಿಗೂ ಇರಬೇಕು.

(e) ಅವಿಭಕ್ತಕುಟುಂಬದಲ್ಲಿ ವಿಭಾಗವಾಗಿದಿದ್ದರೆ ಎಷ್ಟು ಜನರಿಗೆ ಓಟುಕೊಡುವ ಹಕ್ಕಿರುತ್ತಿತ್ತೋ ಅಷ್ಟು ಜನರಿಗೆ ಓಟು ಇರಬೇಕು.

ಜವಾಬು.

ಸೂಚನೆಗಳನ್ನು ಗುರ್ತಿಸಿ ಇಡಲಾಗಿದೆ.

(ಮುಂದುವರಿಯುವದು.)

ನೋಟೀಸು.

ಜಮಾನುದಾರರ ಸಂಘದ ಆರ್ಗನೈಜರಾಗಿ ದಕ್ಷಿಣ ಕೊಡಗಿಗೆ ಮೆ|| ಚಂಗಂಡ ಕುಟ್ಟಪ್ಪನವರನ್ನೂ, ಉತ್ತರ ಕೊಡಗಿಗೆ ಮೆ|| ಉದಯಂಡ ಮೊಣ್ಣಯ್ಯನವರನ್ನೂ ನೇಮಿಸಲಾಗಿದೆ. ಪ್ರಚಾರ ಕೆಲಸಕ್ಕೆ ಗ್ರಾಮಕಮಿಟಿಗಳು ಇವರಿಗೆ ಸಹಾಯ ಕೊಡಬೇಕಾಗಿಯೂ, ಮೆಂಬರುಗಳು ಇವರಿಗೆ ಚಂದಾ ಪಾವತಿಮಾಡಬೇಕಾಗಿಯೂ, ಚಂದಾ ವಸೂಲ್ ಮಾಡಿರುವವರು ಆ ಮೊಬಲಗನ್ನು ಇವರಿಗೆ ಕೊಡಬೇಕಾಗಿಯೂ ಕೋರುತ್ತೇನೆ.

ಮಡಿಕೇರಿ. ಸಿ ಯಸ್. ನೆಂಕಪ್ಪಯ್ಯ,
17—4—'25. ಜನರಲ್ ಸೆಕ್ರೆಟರಿ.

ವರ್ತಮಾನ ಸಂಗ್ರಹ.

ಒಳದೇಶ.

ತಾರೀಖು 11, 12 ಮತ್ತು 13ರಲ್ಲು ಜಮಾನುದಾರರ ಸಂಘದ ವಾರ್ಷಿಕ ಮಹಾಸಭೆಯು ಮೆ|| ಅಬ್ದುಲ್ ಗಫೂರ್ ಖಾನ್ ಕೈತ್ತಿಗ್ಗಿಯವರ ಅಧ್ಯಕ್ಷತೆಯಲ್ಲಿ ಮೂರ್ನಾಡಿನಲ್ಲಿ ನಡೆಯಿತು. ಸುಮಾರು 1000 ಜನರು ಸೇರಿದ್ದರು.

ತಾ. 14ರಲ್ಲು ಕೊಡಗು ಜಮ್ಮಾ ಕುದುರೆ ಜೂಜುಗಳು ಮಡಿಕೇರಿಯಲ್ಲಿ ಪ್ರಾರಂಭವಾದವು. ಪ್ರಾರಂಭದಲ್ಲೇ ಮೆ|| ಸ್ಪ್ರಾಟ್ಸ್‌ರವರು ಅವರ ಕುದುರೆ ಸಮೇತ ಬಿದ್ದು ಅವರಿಗೂ ಕುದುರೆಗೂ ಸ್ವಲ್ಪ ಜಖಂ ಆಯಿತು. 2ನೇ ಜೂಜಿನಲ್ಲಿ ಮೆ|| ಡೇವಿಸ್‌ರವರ ಕುದುರೆಯ ಕಾಲು ಓಡುವಾಗ್ಗೆ ಮುರಿದು ಹೋದುದರಿಂದ ಅದನ್ನು ಕೂಡಲೆ ಗುಂಡು ಹೊಡೆದು ಕೊಂದು ಬಿಟ್ಟರು.

ಕಲ್ಲಿಕೋಟೆಯಿಂದ ಬಂದು ಮೂರ್ನಾಡು ಕಾನ್‌ಫರೆನ್ಸಿನಲ್ಲಿ ಉಪನ್ಯಾಸಗಳನ್ನು ಮಾಡಿದ ಮೆ|| ಇ. ನೂಲಪಾಣಿಯವರು ಆರ್ಯಸಮಾಜದ ವಿಷಯ ತಾ. 14ರಲ್ಲು ಮಡಿಕೇರಿಯಲ್ಲಿ ಒಂದು ಭಾಷಣ ಮಾಡಿದರು.

ಅಮೃತಮಯ ಸಂಘದ ವಾರ್ಷಿಕ ಜನರಲ್ ಮೀಟಿಂಗ್ ತಾ. 12ರಲ್ಲು ಮೂರ್ನಾಡಿನಲ್ಲಿ ಮೆ|| ಕೋಡಂಡ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಳೆದವಾರ ಆಕಾಶವೆಲ್ಲಾ ಮೋಡ ಕವಿದುಕೊಂಡು ದೇಶದ ಅಲ್ಲಲ್ಲಿ ಮಳೆಯು ಬಿದ್ದಿದೆ.

ಜಮಾನುದಾರರ ಸಂಘದ ಕಾನ್‌ಫರೆನ್ಸಿನಲ್ಲಿ ರಿಜಿಸ್ಟ್ರಾರಾದ ಮೆ|| ಕೆ. ಎಸ್. ಸುಬ್ಬರಾಯರು ಸಹಕಾರ ಚಳವಳದ ವಿಷಯವೂ, ವೆಟರಿನರಿ ಅಸಿಸ್ಟೆಂಟರಾದ ಮೆ|| ಕೋದಂಡ ಸೋಮಣ್ಣನವರು ದನಗಳ ಪೋಷಣೆಯ ವಿಷಯವು ಮತ್ತು ಸಬ್ ಅಸಿಸ್ಟೆಂಟ್ ಸರ್ಜನರಾದ ಮೆ|| ಪಂದಿಕುತ್ತಿರ ಗಣಪತಿಯವರು ಮಲೇರಿಯ ಜ್ವರದ ವಿಷಯವೂ ಉಪನ್ಯಾಸ ಕೊಟ್ಟರು. ಕಲ್ಲಿಕೋಟೆಯ ಮೆ|| ಇ. ನೂಲಪಾಣಿಯವರು ಆರ್ಯಸಮಾಜದ ವಿಷಯ ಮಲೆಯಾಳ ಭಾಷೆಯಲ್ಲಿ ಎರಡು ಭಾಷಣಗಳನ್ನು ಮಾಡಿದರು.

ಬಲಮುರಿಸಹಕಾರ ಸಂಘಗಳ ವಾರ್ಷಿಕೋತ್ಸವವು ತಾ. 10ರಲ್ಲಿ ಮೆ|| ಕೇಳಪಂಡ ಅಚ್ಚಯ್ಯನವರ ಅಧ್ಯಕ್ಷತೆಯಲ್ಲಿ ಬಲಮುರಿ ಯೂನಿಯನ್ನಿನ ಬಳಿ ನಡೆಯಿತು. ಆ ಊರವರಲ್ಲದೆ ಹೊರಗಿನ ಅನೇಕ ಮಹನೀಯರು ಹಾಜರಿದ್ದರು. ಮಹಿಳೆಯರೂ ತುಂಬಾ ಸೇರಿದ್ದರು. ಸೇರಿದ್ದವರಿಗೆಲ್ಲಾ ಊಟವನ್ನು ಏರ್ಪಡಿಸಿದ್ದರು. ಅಲ್ಲದೆ ಮೀಟಿಂಗಿಗೆ ಚಪ್ಪರ ವಗೈರೆ ಏರ್ಪಾಡು ಚೆನ್ನಾಗಿ ಮಾಡಲ್ಪಟ್ಟಿತು. ಈ ಮೀಟಿಂಗಾದನಂತರ ಯೂನಿಯನ್ ಕಟ್ಟಡದಲ್ಲಿ ಮೆ. ಬಿದ್ದಂಡ ಗಣಪತಿಯವರ ಭಾವಚಿತ್ರವು ಮೆ. ಪಾಡಂಡ ಚಂಗಪ್ಪನವರಿಂದಲೂ, ಮೆ. ಕೋಟೆರ ಉತ್ತಯ್ಯನವರ ಭಾವಚಿತ್ರವು ಮೆ. ಪಾರ್ವಂಗಡ ಕುಶಾಲಪ್ಪನವರಿಂದಲೂ ತೆರೆಯಲ್ಪಟ್ಟವು. ಕೂಡಲೆ ಸ್ತ್ರೀಯರಿಗೆ ಬಾಣಂತಿಯರ ಮತ್ತು ಶಿಶುಗಳ ಪೋಷಣೆಯ ವಿಷಯದ ಚಿತ್ರಪಟಗಳು ಮ್ಯಾಜಿಕಾಲೆಂಟರ್ನ್ ಮೂಲಕ ತೋರಿಸಲಾದವು. ರಾತ್ರಿ ಹರಿಕತೆಯೂ ನಡೆಯಿತು.

ಮಿಸೆಸ್ ಟಾಸ್ಕರ್‌ರವರ ಕೋರಿಕೆ ಮೇರೆ ಪ್ರೊಫೆಸರ್ ದೇವಲ್ ಸರ್ಕಸಿನವರು ರೆಡ್‌ಕ್ರಾಸ್ ಸಂಘಕ್ಕಾಗಿ ತಾ. 15ರಲ್ಲು ಒಂದು ಆಟವನ್ನು ತೋರಿಸಿದರು. ಅನೇಕ ಮಹನೀಯರು ನೆರೆದದ್ದರಿಂದ 744 ರೂ. ವಸೂಲಾಯಿತು. ಇದರ ಅರ್ಧ ಭಾಗವು ರೆಡ್ ಕ್ರಾಸ್ ಸಂಘಕ್ಕೆ ಕೊಡಲಾಯಿತು. ಇದು ಈ ಸರ್ಕಸಿನವರ ಉದಾರತ್ವವನ್ನು ಸೂಚಿಸುತ್ತದೆ. ಇವರು ಒಂದು ವಾರ ಮಡಿಕೇರಿಯಲ್ಲಿ ಆಟಗಳನ್ನು ತೋರಿಸಿದರು. ಆಟವು ಪ್ರವೀಣತೆಯಿಂದ ಕೂಡಿದ್ದಲ್ಲದೆ ನೇತ್ರಾನಂದಕರವಾಗಿತ್ತು.

ಸುಂಟಿಕೊಪ್ಪದಲ್ಲು ದರ್ಜಿಯಾಗಿದ್ದ ಅಪ್ಪಚೆಟ್ಟೋಳಂಡ ಐಯ್ಯಣ್ಣನವರು ಕಾಯಿಲಸ್ಥರಾಗಿದ್ದು ಈ ವಾರ ಕುತ್ತಿಗೆ ಕುಯಿದುಕೊಂಡು ಮೃತಪಟ್ಟರೆಂದು ವರ್ತಮಾನ. ಕಾರಣವು ಇನ್ನು ತಿಳಿಯ ಬಂದಿರುವುದಿಲ್ಲ.

ಜಮಾನುದಾರರ ಸಂಘದ ಆರ್ಗನೈಜರಾದ ಮೆ|| ಚಂಗಂಡ ಕುಟ್ಟಪ್ಪನವರು ಸಂಘದ ಚಂದಾವಸೂಲಿಗಾಗಿಯೂ, "ಕೊಡಗು" ಪತ್ರಿಕೆಯ ಚಂದಾ ವಸೂಲಿಗಾಗಿಯೂ ಬುಧವಾರ ವೀರಾಜಪೇಟೆಯಲ್ಲಿಯೂ, ಆದಿತ್ಯವಾರ ಗೋಣಿಕೊಪ್ಪಲಲ್ಲಿಯೂ, ಸೋಮವಾರ ಮಡಿಕೇರಿಯಲ್ಲಿಯೂ ಇರುವರು. ಮೇಲಿನ ಚಂದಾ ಕೊಡಲಿಕ್ಕಿರುವವರು ಇವರಿಗೆ ಪಾವತಿಮಾಡಿ ರಶೀದಿ ಪಡಕೊಳ್ಳುವುದು.

ತಾ. 12ರಲ್ಲಿ ಮೂರ್ನಾಡಿನಲ್ಲಿ "ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ನಡೆಯಿತು. ವಿವರವು ಬರುವ ವಾರಪ್ರಕಟಿಸಲ್ಪಡುವುದು.

ಕ್ರಿಕೆಟ್ ಟೂರ್ನಮೆಂಟು ಕಳೆದವಾರ ಪ್ರಾರಂಭವಾಗಿ ಕೊಡಗು ಜಮ್ಮಾನದವರು ಮಡಿಕೇರಿ ಹೈಸ್ಕೂಲಿನವರನ್ನೂ, ಕಾಸ್ಮೋಪಾಲಿಟನಾಕ್ಲಬ್ಬಿನವರು ದಕ್ಷಿಣ ಕೊಡಗು ಟೀಮಿನವರನ್ನೂ ಸೋಲಿಸಿರುವರು.

ತಾ. 17ರಲ್ಲಿಯೂ ಕುದುರೆಜೂಜುಗಳು ನಡೆದವು. ಸರ್ಕಾರಿ ಉದ್ಯೋಗಸ್ಥರ ಜೂಜಿನಲ್ಲಿ ಮೆ. ಕೊಡಂದೇರ ಸುಬ್ಬಯ್ಯನವರು 1ನೇ, ಮೆ. ಕುಪ್ಪಂಡ ಕಾಳಪ್ಪನವರು 2ನೇ, ಮೆ. ಚೆಂಬಾಂಡ ಕಾರ್ಯಪ್ಪನವರು 3ನೇಯೂಗಿ ಬಂದರು. ಮೆ. ರಸೂಲ್ ಖಾನ್‌ರವರ ಕುದುರೆಯು ಕೆಲವು ಜೂಜುಗಳಲ್ಲಿ ಒಂದನೇಯದಾಗಿಬಂತು.

ಹಿಂದೂ ದೇಶ.

ಜಾವಳ್ಳಾ ಮೊಬದ್ದಮ್ಮೆಯನ್ನು ಬೊಂಬಾಯಿ ಯಿಂದ ಬೇರೆ ಕಡೆಗೆ ವರ್ಗಾಯಿಸಬೇಕೆಂದು ಅಪರಾಧಿಗಳೂ ವೈಸರಾಯರಿಗೆ ಅರ್ಜಿಬರೆದಿರುವರು. ಮುಮ್ತಾಜ್ ಬೇಗಮ್ ಮತ್ತು ಬೊಂಬಾಯಿ ಸರಕಾರವು ವರ್ಗಮಾಡಕೂಡದೆಂದು ವೈಸರಾಯರಿಗೆ ಅರ್ಜಿ ಬರೆದಿರುವರು.

ನೇಶನಲ್ ಕನ್ವೆನ್ಸನ ಅಧ್ಯಕ್ಷರಾಗಿ ಸರ್ ತೇಜ್ ಬಹದ್ದೂರ್ ಸಾಪ್ರು, ಉಪಾಧ್ಯಕ್ಷರಾಗಿ ನಾಮಧಾರಿ ವಿ. ಎಸ್. ಶ್ರೀನಿವಾಸಶಾಸ್ತ್ರಿ, ಜನರಲ್ ಸೆಕ್ರೆಟರಿಯಾಗಿ ಡಾಕ್ಟರ್ ಅನಿಬೆಸೆಂಟ್, ಖಜಾನ್ಜಿಯಾಗಿ ಮೆ|| ರಂಗನಾಥಮೊದಲಿಯಾರ್, ಇವರು ಚುನಾಯಿಸಲ್ಪಟ್ಟಿರುವರು.

ಕೊಚ್ಚಿಯ ಚೀಫ್‌ಜಡ್ಜರಾಗಿದ್ದ ರಾ|| ಬಾ|| ಟಿ. ಎಸ್. ನಾರಾಯಣ ಅಯ್ಯರವರನ್ನು ಅಲ್ಲಿಯ ದಿವಾನರಾಗಿ ನೇಮಿಸಿರುವರು.

ಕಲ್ಕತ್ತಾ ಪೋಲೀಸಿನ ಸಾರ್ಜೆಂಟ್ ಡೇವಿಸ್‌ರವರು "ಫಾರ್‌ವರ್ಡ್" ಮತ್ತು "ಬಾಸುಮತಿ" ಪತ್ರಿಕೆಗಳ ಮೇಲೆ ಹಾಕಿದ್ದ ಮೊಕದ್ದಮೆಯು ಡಿಸ್‌ಮಿಸ್ ಮಾಡಲಾಯಿತು.

ಮಹಾತ್ಮ ಗಾಂಧಿಯವರು ಮೇ ತಿಂಗಳ ಪ್ರಾರಂಭದಲ್ಲಿ ಬಂಗಾಳದಲ್ಲಿ ಪ್ರಯಾಣ ಮಾಡಲಿಕ್ಕಿರುವರು. ಇದಕ್ಕೆ ಡಾಕ್ಟರ್ ಪಿ. ಸಿ. ರೋಯಿಯವರು ತಕ್ಕದಾದ ಏರ್ಪಾಡುಗಳನ್ನು ಮಾಡುತ್ತಿರುವರು. ಖದ್ದರ್ ಪ್ರಚಾರವೇ ಅವರ ಮುಖ್ಯ ಉದ್ದೇಶವಾಗಿದೆ.

ಇಂದೂರಿನ ಮಹಾರಾಜರವರು ಐದು ವರುಷ ಇರಲು ಇಂಗ್ಲೆಂಡಿಗೆ ಹೋಗುವರೆಂಬ ವರ್ತಮಾನವು ಸುಳ್ಳೆಂದು ಪ್ರಕಟವಾಗಿದೆ.

1818ರ 3ನೇ ರೆಗ್ಯುಲೇಷನ್ನಿನ ಮೇರೆ ಸೆರೆಹಿಡಿಯಲ್ಪಟ್ಟ ಇಬ್ಬರು ಬಂಗಾಳ ಕೌನ್ಸಿಲರುಗಳ ಸ್ಥಳವು ಖಾಲಿಯಾಗಿರುವುದರಿಂದ ಅವರ ಸ್ಥಳಕ್ಕೆ ಇಬ್ಬರನ್ನು ಚುನಾಯಿಸುವಂತೆ ಹುಕುಂ ಆಗಿದೆ.

ಈಗ ಲಂಡನ್ನಿನಲ್ಲಿ ಲಾಯರಾಗಿರುವ ಮೆ|| ಯಂ. ಇ. ವಾಟ್ಸ್‌ರವರು ತಿರುವಾಂಕೂರಿನ ದಿವಾನರಾಗಿ ನೇಮಿಸಲ್ಪಟ್ಟಿರುವರು. ಅವರು ಜೂಲೈ 25ರಲ್ಲಿ ಉದ್ಯೋಗಕ್ಕೆ ಸೇರುವರೆಂದು ವರ್ತಮಾನ.

ಮದರಾಸು ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರಾಗಿದ್ದ ಮಂಗಳೂರಿನ ಮೆ|| ಮಹಾಬಲ ಹೆಗ್ಗಡೆಯವರು ಸರ್ಕಾರಿ ಲಾಯರಾಗಿ ನೇಮಿಸಲ್ಪಟ್ಟಕಾರಣ ಅವರ ಸ್ಥಳಕ್ಕೆ ಕೌನ್ಸಿಲಿಗೆ ಇನ್ನೊಂದು ಚುನಾವಣೆಯಾಗುವುದು. ಈ ಸ್ಥಳಕ್ಕೆ ಮೆ|| ಎ. ಬಿ. ಶೆಟ್ಟಿಯವರನ್ನು ಚುನಾಯಿಸಬೇಕೆಂದು ಮದ್ರಾಸಿನ ಎಸ್. ಶ್ರೀನಿವಾಸಅಯ್ಯಂಗಾರ್‌ರವರೂ, ಮಂಗಳೂರಿನ ಸದಾಶಿವರಾವ್‌ರವರೂ ಓಟರುಗಳನ್ನು ಕೇಳಿಕೊಂಡಿರುವರು.

ಹಂಗಾಮಿ ವೈಸರಾಯರಾಗಿ ನೇಮಿಸಲ್ಪಟ್ಟಿರುವ ಲಾರ್ಡ್ ಲಿಟ್ಟನ್‌ರವರು ಜಾಗನೆ ಊಟಕಮಂಡಿಗೆ ಬರಲಿಕ್ಕಿರುವರು.

ರಾಷ್ಟ್ರೀಯ ವಾರವು ತಾರೀಖು 7ರಿಂದ 14ರ ವರೆಗೆ ಹಿಂದೂ ದೇಶದ ಅನೇಕ ಕಡೆಗಳಲ್ಲಿ ಆಚರಿಸಲ್ಪಟ್ಟಿತು. ಕಡೇ ದಿನವಾದ 14ರಲ್ಲು ಜಲಿಯನ್‌ವಾಲಾ ದಿನದ ಜ್ಞಾಪಕಾರ್ಥವಾಗಿ ಬೊಂಬಾಯಿಯಲ್ಲಿ ನಡೆದ ದೊಡ್ಡ ಪಬ್ಲಿಕ್ ಮೀಟಿಂಗಿನಲ್ಲಿ ವಿ ಜೆ. ಪಟೇಲ್, ಮೌಲಾನ ಮಹಮ್ಮದಾಲಿ, ಮೊದಲಾದವರು ಭಾಷಣಮಾಡಿದರು. ಮಹಾತ್ಮ ಗಾಂಧಿಯವರು ಖದ್ದರ್ ಬಟ್ಟೆಯನ್ನೇ ಉಪಯೋಗಿಸುವಂತೆ ಜನರಿಗೆ ಅಪೀಲು ಮಾಡಿದರು.

ಹಿಂದೂ ಮಹಾಸಭೆಯು ಐದು ಲಕ್ಷ ರೂಪಾಯಿಯನ್ನು ಸಂಗ್ರಹಿಸಿ, ಒಂದು ಲಕ್ಷವನ್ನು ಸಂಗಾತನ್ ಚಳವಳಕ್ಕೂ ಬಾಕಿ ನಾಲ್ಕು ಲಕ್ಷವನ್ನು ಅಸ್ಪೃಶ್ಯರ ಉನ್ನತಿಗೂ, ಕೋಹಟಿನ ಕಷ್ಟ ಪರಿಹಾರಕ್ಕೂ ಉಪಯೋಗಿಸುವಂತೆ ತೀರ್ಮಾನಿಸಿದೆ.

ಹಕೀಮ್ ಅಜ್ಮಲ್‌ಖಾನ್‌ರವರು ಆರೋಗ್ಯದ ದೆಸೆಯಿಂದ ಯೂರೋಪಿಗೆ ಹೊರಟು ಹೋದರು.

ಬೊಂಬಾಯಿ ಮುನಿಸಿಪಾಲಿಟಿಯ ಪ್ರೆಸಿಡೆಂಟ್ ಪದವಿಯಿಂದ ರಿಟಯರಾದ ಮೆ. ವಿ. ಜೆ. ಪಟೇಲರವರ ಕೆಲಸವನ್ನು ಅಲ್ಲಿಯ ಮುಂದಾಳುಗಳು ಬಹಳವಾಗಿ ಶ್ಲಾಘಿಸಿದರು.

ಡಾಕ್ಟರ್ ಬಿ ಎನ್. ಸೀಲ್‌ರವರು ಮೈಸೂರು ಎಗ್ಸಿಕ್ಯೂಟಿವ್ ಕೌನ್ಸಿಲಿನ ಹೆಚ್ಚಿನ ಮೆಂಬರಾಗಿ ನೇಮಿಸಲ್ಪಟ್ಟಿರುವರು.

ವಿದೇಶ.

ಪರ್ಶಿಯಾದ ಮೇರೆಯ ಕಡೆಗೆ ಪಲಾಯನ ಮಾಡುತ್ತಿದ್ದ ಕುರ್ಡಿಷ್ ದಾಂಗೆಕೋರರನ್ನು ಮುತ್ತಿಗೆ ಹಾಕುವದರಲ್ಲಿ ತುರ್ಕಿಸೈನ್ಯಾಧಿಪತಿಗಳು ಸೋತುಹೋದದ್ದು ಕಮಾಲ್ ಪಾಷಾರವರಿಗೂ, ತುರ್ಕಿ ಸರ್ಕಾರಕ್ಕೂ ನಿರಾಶೆಯನ್ನುಂಟು ಮಾಡಿದೆ.

ಫ್ರಾನ್ಸಿನಲ್ಲಿ ಮುಖ್ಯ ಮಂತ್ರಿತ್ವದಲ್ಲಿ ತೊಂದರೆಯುಂಟಾಗಿ ಜೆ ಮೆ|| ಬ್ರಿಯಾಂಡರವರು ತನ್ನಿಂದ ಮಂತ್ರಿಮಂಡಳಿಯನ್ನು ಏರ್ಪಡಿಸಲಾಗುವುದಿಲ್ಲವೆಂದು ಹೇಳಿರುವರು. ಈ ಮೆ|| ಯಂ ಪೈನ್‌ಲೀವರನ್ನು ಕೇಳಿರುವರು.

ಕೆನಿಯಾದ ಗವರ್ನರ್ ಪದವಿಯು ಸರ್ ಜಾರ್ಜ್ ಲಾಯಿಡ್‌ರವರಿಗೆ ಕೊಡಲಾಗುವುದೆಂದು ವರ್ತಮಾನ.

ವೈಸರಾಯರು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರೊಂದಿಗೆ ಇಂಡಿಯಾದ ಆಡಳಿತದ ವಿಷಯ ಚರ್ಚಿಸುವಾಗ ಅಲ್ಲಿಗೆ ಇಂಡಿಯಾದ ಮುಂದಾಳುಗಳಾದ ಗಾಂಧಿ, ದಾಸ್, ಶಾಸ್ತ್ರಿ, ಲಜಪತರಾಯಿ ಬೆಸೆಂಟ್ ಮೊದಲಾದವರನ್ನು ಕರೆಯಕಳುಹಿಸುವರೋ ಎಂದು ಬ್ರಿಟನ್ನಿನ ಪಾರ್ಲಿಮೆಂಟಲ್ಲಿ ಮೆ|| ಲೀನ್ಸ್ ಬರಿಯವರು ಕೇಳಿದಕ್ಕೆ ಅಂಥಾ ಆಮಂತ್ರಣವೇನೂ ಕಳುಹಿಸಲ್ಪಡುವುದಿಲ್ಲ. ಆದರೆ ಅಂಥಾ ರಾಜಕೀಯ ಪಂಗಡದವರು ತಮ್ಮ ಅಭಿಪ್ರಾಯಗಳನ್ನು ಸರ್ಕಾರದ ಅನುಮತಿಯೊಡನೆ ಕಳುಹಿಸಿದರೆ ಅದಕ್ಕೆ ಗಮನಕೊಡಲಾಗುವುದೆಂದು ಅರ್ಲ್ ವಿಂಟರ್ಟನ್‌ರವರು ಉತ್ತರಕೊಟ್ಟರು.

ಪ್ರಕಟಣೆ.

ಭಾರತಮಾತೆಯ ಕಷ್ಟವನ್ನು ತಪ್ಪಿಸಬೇಕೆಂದು ಹೋರಾಡುತ್ತಿರುವ ಶ್ರೀಮಾನ್ ಲಾಲಾ ಲಜಪತ್‌ರಾಯ್, ಪಂಡಿತ ಮೋತೀಲಾಲ್ ನೇಹರು ಮೊದಲಾದ ಡೈರೆಕ್ಟರುಗಳಾದ ಭಾರತ ಪುತ್ರರಿಂದ ಸ್ಥಾಪಿತವಾಗಿರುವ

ದಿ ಲಕ್ಷ್ಮೀ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು ಲಾಹೋರು, ಮ್ಯಾನೇಜಿಂಗ್ ಡೈರೆಕ್ಟರು, ಪಂಡಿತ ಕೆ. ಸಂತಾನಂ.

ಮೂಲಧನ ೧೦,೦೦,೦೦೦.
ಷೇರು ವಸೂಲಾಸ್ತಿ ೧೦,೦೦,೦೦೦.

ಇಂಡಿಯಾ ಸರಕಾರದ ಲೈಫ್ ಇನಾಷ್ಯೂರೆನ್ಸ್ ಆಕ್ಟು ಅನುಸರಿಸಿ ನಿಜಸ್ಥವಾಗಿ ಇಂಡಿಯಾ ಸರಕಾರದಲ್ಲಿ ರೂಲ್ಸು ಪ್ರಕಾರ ಮೊಬಲಗು ಸೆಕ್ಯೂರಿಟಿ ಡಿಪಾಜಿಟ್ ಇಡಲ್ಪಟ್ಟಿರುತ್ತೆ.

ಎಲ್ಲಾ ತಾಲೋಕು ಮತ್ತು ಡಿಸ್ಟ್ರಿಕ್ಟುಗಳಲ್ಲಿಯೂ ಏಜಂಟರುಗಳು ಧಾರಾಳವಾದ ಕಮಿಷನ್‌ನಿಂದ ಕೆಲಸ ಮಾಡತಕ್ಕವರು ಬೇಕಾಗಿರುತ್ತೆ. ರೂಲ್ಸುಗಳು ತೊಂದರೆಯಾದವುಗಳಲ್ಲ. ವಿವರ್ಗಳಿಗೆ, ಫಾರಂ ಇತ್ಯಾದಿಗಳಿಗೆ ಬರೆಯಿರಿ.

ಚೀಫ್ ಏಜಂಟರ ಆಫೀಸು,
ದಿ ಲಕ್ಷ್ಮೀ ಇನಾಷ್ಯೂರೆನ್ಸು ಕಂಪೆನಿ, ಲಿಮಿಟೆಡ್,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು,
4—1

ಒಂದೇ ಮಾತರಂ.

ಜಮೀನುದಾರ ಸಂಘದ ಮೂರನೆಯ ಕಾನ್‌ಫರೆನ್ಸಿನ ಪ್ರಾರಂಭದಲ್ಲಿ ಹಾಡಿದ ಸ್ವಾಗತ ಗೀತೆ.

[ರಾಗ—ಝಂಪೆತಾಳ].

ಸ್ವಾಗತವು ಸುಸ್ವಾಗತವು ಸಕಲ ಜನ ಸಂಕುಲಕೆ
ಸ್ವಾಗತವ ಗೈವ ಬರಬಾಗುವವು ಸಹೃದಯಗಣಕೆ ||ಪಲ್ಲ||

ನಲಿದು ಬಂ ಸುಸ್ವಾಗ ಗೀತವನೆ ಪೇಳೆಂದು,
ಒಲಿದು ತಿಳುಹಲು ಬಂದ ಕಲೆಯುಳ್ಳ ಪರಿಯಂತೆ||
ಜಲನ ಬುದ್ಧಿಯ ಬಿಟ್ಟು ನಲೆಗೊಳಿಪ ಸ್ಥಿರತೆಯನು,
ತಿಳುಹಿಸಲು ಇಳೆಗಲ್ಲ ಕಲೆತು ಬಂದಿಹ ತಮಗೆ ಸ್ವಾಗತವು
ಸುಸ್ವಾಗತವು || ||೧||

ಕನ್ನಡದ ರಾಷ್ಟ್ರದಲಿ ಮೆರೆಯುತಿಹ ಸಾಮ್ರಾಜ್ಯ,
ಉನ್ನತದ ಕೊಡಗಿನ ಜನ್ಮವಿಹ ಕಾವೇರಿಯ ||
ಮನ್ನಣೆಯ ಪುತ್ರರ ಸನ್ನುತದ ಐಕ್ಯತೆಯ ||
ಇನ್ನು ಗೂಡಲು ಬಂದ| ಮುನ್ನಿಧಿಗಳೆ ನಿಮಗೆ ಸ್ವಾಗತವು
ಸುಸ್ವಾಗತವು || ||೨||

ಪಾರತಂತ್ರ್ಯದಿ ಮರುಗಿ ಕೊರಗುತ್ತಲಿರುತಿಹ|
ಭಾರತೀಯರ ಭಯವ| ಸಾರಿಸೀಗುವೆವೆನುತ ||
ತೋರಿ ಸತ್ಯಾರ್ಥದಾ| ಸರಳಸಿಂ ಘಟಘರನೆ! |
ವೀರ ಸಾಹಸ ಹರಿವ| ಧೀರ ನರ ನೀರರಿಗೆ ಸ್ವಾಗತವು
ಸುಸ್ವಾಗತವು || ||೩||

ಸತ್ಯವ್ರತವನು ತಳೆದು| ಮಿಥ್ಯವೆಲ್ಲವ ಕಳೆದು|
ಕತ್ತರಿಸಿ ಪುಸ್ಪೋಲೆಯ| ಮತ್ತೆ ಮನ್ನಣೆದೋರಿ ||
ಚಿತ್ತಶುದ್ಧಿಯ ಕಳೆದು ಇತ್ತ ಭೋಗವ ಕಳೆದು|
ತತ್ವಯೋಗದಿ ಮೆರೆವ| ಸತ್ಯ ಮೂರುತಿಗಳಿಗೆ ಸ್ವಾಗತವು
ಸುಸ್ವಾಗತವು || ||೪||

ವೈರವಿನಾಶವೆನಿಸಿ| ಹಿರಿದು ಸುಖ ಸಂಪದವ|
ಸಿರಿಯ ಸಾಮ್ರಾಜ್ಯದಿಂ| ಮೆರೆದ ಕೊಡಗಿನ ದೇಶ ||
ತೋರದ ಸಿರಿಯನು ಮರಳಿ| ಬರಸಲ್ಕೆ ಬಂದಿಹ|
ಮೂರುನಾಡಿನೊಳು ನೆರೆದು| ನೇರಿಹ ಬಲವಂತರಿಗೆ ಸ್ವಾಗತವು
ಸುಸ್ವಾಗತವು || ||೫||

ಕಿರಿದು ಕಾಲವು ಕಳೆದು| ಕರವು ಪ್ರೇಮದಲಿಂದು|
ಹರುಷ ತುಷ್ಟಿಯ ಪಡೆದ| ಸಿರಿವರನ ಕರುಣೆಯಿಂ ||
ತೋರಿದ ಬಳ್ಕಿಯೊಳಿರುವ| ವರ ಜನರಾತಿಥ್ಯವನು |
ಶರಧಿಯಿಂದದಿ ಕಂಡು| ಧರಿಸುವುದು ತಮವನ್ನು ಸ್ವಾಗತವು
ಸುಸ್ವಾಗತವು || ||೬||

ಬಿ. ರಾಮಯ್ಯ.

ರೈತರ ಕರ್ತವ್ಯಗಳು.

("ಕರ್ಮವೀರ" ದ ಲೇಖನದಿಂದ ನಮ್ಮ ದೇಶಕ್ಕೆ ಯೋಗ್ಯವಾದ ಸೂಚನೆಗಳನ್ನು ಮಾತ್ರ ತೆಗೆದದ್ದು.)

ರೈತರು ತಮಗಿರುವ ಜಮೀನಿನಿಂದ ಅತ್ಯಧಿಕ ಫಲವನ್ನು ಹೊಂದಬೇಕಾದರೆ ಕೆಲವು ಹೊಸನಿಯಮಗಳನ್ನು ಆಚರಣೆಗೆ ತಂದುಕೊಳ್ಳಬೇಕು. ಇವುಗಳಲ್ಲಿ ಮುಖ್ಯವಾದ ಹೊಸ ತರಹ ಗೊಬ್ಬರಗಳನ್ನು ಉಪಯೋಗಿಸುವುದರ ಅವಶ್ಯಕತೆ. ಎರಡನೆಯದು ಯಾವಾಗಲೂ ಜಮೀನಿನ ಫಲವತ್ತು ಏಕರೀತಿಯಾಗಿರುವಂತೆ ನೋಡಿಕೊಳ್ಳುವುದು. ಜಮೀನು ನಮಗೆ ಧಾನ್ಯವನ್ನು ಕೊಡುತ್ತದೆ. ಧಾನ್ಯದಲ್ಲಿರಬಹುದಾದ ಕೆಲವು ವಸ್ತುಗಳನ್ನು ಪುನಃ ಜಮೀನಿಗೆ ಒದಗಿಸದೇ ಹೋದರೆ ಕ್ರಮೇಣ ಜಮೀನಿನ ಫಲವತ್ತು ಕಡಿಮೆಯಾಗುವುದೆಂಬುದು ಸರ್ವಸಾಧಾರಣವಾದ ವಿಷಯ. ಹೊಸದಾಗಿ ವ್ಯವಸಾಯಕ್ಕೆ ತಂದ ಜಮೀನು ಮೊದಲು ವಿಶೇಷವಾದ ಫಲವನ್ನು ಕೊಟ್ಟು, ಅದಕ್ಕೆ ಯಥಾವಿಧವಾದ ಪೋಷಣೆಯನ್ನು ಮಾಡದಿದ್ದರೆ, ಕ್ರಮೇಣ ಕನಿಷ್ಠ ಬೆಳೆ ದೊರೆಯಲು ಪ್ರಾರಂಭವಾಗುತ್ತದೆ. ಅನೇಕ ವೇಳೆ ಈ ಕನಿಷ್ಠ ಬೆಳೆಯು ಅದನ್ನು ತೆಗೆಯುವದಕ್ಕೆ ಪಟ್ಟ ಶ್ರಮಕ್ಕಿಂತ ಕೀಳಾಗಿರುವುದು. ಪೋಷಣೆಯು ಸಾಲದೆ ಅನೇಕ ಜಮೀನುಗಳು ಈ ಸ್ಥಿತಿಗೆ ಬಂದಿವೆ. ಇದರಿಂದ ರೈತನಿಗೆ ಸುತರಾಂ ಪ್ರಯೋಜನವಿಲ್ಲ. ಆದಕಾರಣ ರೈತನು ತಕ್ಕ ರೀತಿಯಲ್ಲಿ ತನ್ನ ಜಮೀನನ್ನು ಆಬಾದುಪಡಿಸಬೇಕು. ಇದಕ್ಕಾಗಿ ಉತ್ತಮ ರೀತಿಯಲ್ಲಿ ಸಾಕಾದಷ್ಟು ಗೊಬ್ಬರವನ್ನು ಒದಗಿಸಿಕೊಂಡು, ಉಪಯೋಗಿಸುವ ವಿಧಾನವನ್ನು ತಿಳಿದುಕೊಳ್ಳಬೇಕು.

ಕಾಲ್ನಡೆಗಳ ಗೊಬ್ಬರವು ವ್ಯವಸಾಯವು ಪ್ರಾರಂಭವಾದಂದಿನಿಂದಲೂ ಉಪಯೋಗದಲ್ಲಿದೆ. ಆದರೆ ಅದನ್ನು ಉಪಯೋಗಿಸುವ ರೀತಿಯು ಮಾತ್ರ ಇನ್ನೂ ನಮ್ಮ ರೈತರಿಗೆ ಚೆನ್ನಾಗಿ ತಿಳಿಯದು. ಇದಕ್ಕೆ ತಕ್ಕಷ್ಟು ಶಾಸ್ತ್ರೀಯ ತಿಳುವಳಿಕೆ (Scientific knowledge) ಯು ಅವಶ್ಯಕ. ಇದರಿಂದ ನಮ್ಮ ಕಾಲ್ನಡೆಗಳ ಗೊಬ್ಬರವು ಸಾಲದು. ಅದರ ಮೇಲೆ ಗೊಬ್ಬರವನ್ನು ಸರಿಯಾಗಿ ಕೂಡಿಟ್ಟುಕೊಂಡು ತಕ್ಕ ರೀತಿಯಲ್ಲಿ ಉಪಯೋಗಿಸುತ್ತಲಿಲ್ಲ. ಈ ಗೊಬ್ಬರವನ್ನು ತಕ್ಕ ರೀತಿಯಲ್ಲಿ ಕೂಡಿಡದಿದ್ದರೆ ಅದು ಉಪಯೋಗಕ್ಕೆ ಬರುವುದರೊಳಗಾಗಿ ತನ್ನ ಸಾರವನ್ನೆಲ್ಲಾ ಕಳೆದುಕೊಂಡಿರುವುದು. ಒಣಗೊಬ್ಬರವನ್ನು ಉಪಯೋಗಿಸುವುದರಿಂದ ಅನೇಕವೇಳೆ ಪ್ರಯೋಜನವಾಗುವುದಕ್ಕೆ ಬದಲಾಗಿ ಕೇಡುಂಟಾಗುತ್ತದೆ. ಇದರಿಂದ ಗೆದ್ದಲು ತಗಲಿ ಫಸಲು ಕೆಡುವ ಸಂಭವವಿದೆ. ರೈತರು ತಮ್ಮ ಜಮೀನಿಗೆ ಅನುಗುಣವಾಗಿ ಕಾಲ್ನಡೆಗಳನ್ನು ಸಾಕಿರುವುದೂ, ಸಗಣಿಗೆ ಬೇರೆ ಉಪಯೋಗಗಳನ್ನಿಟ್ಟಿರುವುದೂ ಮುಂತಾದ ಕಾರಣಗಳಿಂದ ಗೊಬ್ಬರದ ಅಭಾವವು ಹೆಚ್ಚುವುದು.

ಕಾಲ್ನಡೆಗಳ ಗೊಬ್ಬರ ಮಾತ್ರವಲ್ಲದೆ ಮತ್ತೆರಡು ತರಹ ಗೊಬ್ಬರವು ಉಪಯೋಗಿಸಲರ್ಹವಾಗಿವೆ. ಇವುಗಳಲ್ಲಿ ಮೊದಲನೆಯದು:— ಹಸರು ಗೊಬ್ಬರ, ಇದನ್ನು ಉಪಯೋಗಿಸುವ ಪದ್ಧತಿಯು ಕೆಲವು ವರ್ಷಗಳಿಂದೀಚೆಗೆ ಹೆಚ್ಚಾಗುತ್ತಾ ಇದೆ. ಆದರೂ ಹಸರು ಗೊಬ್ಬರವನ್ನು ಒದಗಿಸುವ ಗಿಡಮರ ಎಲೆಗಳನ್ನು ವಿಶೇಷವಾಗಿ ಬೆಳಸಲು ತರಪೂರು ಮಾಡದಿರುವುದು ವ್ಯಸನಕರವಾಗಿದೆ. ಹೊಂಗೆ, ಬೇವು ಮುಂತಾದ ಮರಗಳನ್ನು ಬೆಳಸಿದರೆ ಗೊಬ್ಬರ ಮಾತ್ರವಲ್ಲದೆ ಇನ್ನೂ ಅನೇಕ ಮುಖ್ಯವಾಗಿ ಪ್ರಯೋಜನ ವಾಗುವುದು. ಕೃತಕ ಗೊಬ್ಬರ (Artificial Manure) ವೆಂಬುದು ಮತ್ತೊಂದು ತರದ ಗೊಬ್ಬರ. ಇದನ್ನು ಶಾಸ್ತ್ರೀಯ ಗೊಬ್ಬರ (Chemical Manure) ವೆಂದೂ, ಉಪ್ಪು ಗೊಬ್ಬರವೆಂದೂ ಕರೆಯುವುದುಂಟು. ಇದು ನಮ್ಮ ರೈತರಿಗೆ ಹೊಸದು. ಹಿಂದೂದೇಶದ ಕೆಲವು ಕಡೆಗಳಲ್ಲಿ ವ್ಯವಸಾಯದ ಇಲಾಖೆಯವರು ಸಲ್ಫೇಟ್ ಆಫ್ ಅಮೋನಿಯ (Sulphate of Ammonia) ಮೇ ಮೊದಲಾದ ಕೆಲವು ಬಗೆಯ ಕೃತಕ ಗೊಬ್ಬರಗಳನ್ನು ರೈತರಿಗೆ ಒದಗಿಸಿ ಅದರ ಪ್ರಯೋಗದ ಪ್ರಯೋಜನವನ್ನು ಮನಗಾಣಿಸಿರುವರು. ವರ್ಷವರ್ಷಕ್ಕೂ ಹೆಚ್ಚು ಹೆಚ್ಚಾಗಿ ಈ ತರದ ಉಪ್ಪುಗೊಬ್ಬರವು ಉಪಯೋಗಿಸಲ್ಪಡುತ್ತಿರುವುದೆಂದು ತಿಳಿದುಬರುತ್ತದೆ. ಇದರಿಂದ ಇನ್ನು ಮುಂದೆ ರೈತರು ತಮ್ಮ ಜಮೀನುಗಳ ಅಭಿವೃದ್ಧಿಗೆ ತಕ್ಕಷ್ಟು ಕೃತಕ ಗೊಬ್ಬರ (Artificial Manure) ವನ್ನು ಉಪಯೋಗಿಸುತ್ತಾರೆಂಬ ಶುಭ ಸೂಚನೆಯು ಕಂಡು ಬರುವುದು. ಸದ್ಯದಲ್ಲೇನೋ ಈ ಉಪ್ಪುಗೊಬ್ಬರಗಳನ್ನು ತಯಾರುಮಾಡುವುದು ನಮ್ಮ ದೇಶದಲ್ಲಿ ಒಂದು ಕಸಬಾಗಿ ಏರ್ಪಟ್ಟಿಲ್ಲ. ರೈತರು ಇದನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸುತ್ತಾ ಬಂದಹಾಗೆಲ್ಲಾ ಇದರ ತಯಾರಿ ಕಾರ್ಯವು ಕೈಗೊಳ್ಳಲ್ಪಡಬಹುದೆಂದು ಭರವಸೆಯಿದೆ. ಹಾಗೆ ಮಾಡಿದರೆ, ರೈತರಿಗೆ ಮಾತ್ರವೇ ಅಲ್ಲ, ತಯಾರಿಸುವ ಕಂಪನಿಗಳಿಗೂ ವ್ಯಾಪಾರಸ್ಥರಿಗೂ ಪ್ರಯೋಜನವಾಗಿ ದೇಶದ ಸಾಂಪತ್ತಿಕ ಸ್ಥಿತಿಯು ಉತ್ತಮಪಡುವುದು.

ಭೂವ್ಯವಸಾಯಕ್ಕೆ ದನಕರುಗಳ ಪೋಷಣೆಯೂ ಮುಖ್ಯವಾದುದಾಗಿದೆ. ನಮ್ಮ ರೈತರಿಗೆ ದನಗಳೇ ಉಳುವ 'ಮಿಷೀನು' ಗಳಾಗಿವೆ. ದನಗಳ ಸಹಾಯವಿಲ್ಲದಿದ್ದರೆ ಹೊಲಗದ್ದೆಗಳಿಗೆ ಗೊಬ್ಬರ ಗಾಡಿಗಳು ಸಾಗವು. ಹೊಲಗದ್ದೆಗಳ ಕಾಳುಕಡ್ಡಿಗಳು ಮನೆಗೆ ಬರಬೇಕಾದರೂ ಅವುಗಳು ಬೇಕೇಬೇಕು. ಇದರ ಮೇಲೆ ಕಾಲ್ನಡೆಗಳ ಗೊಬ್ಬರವೇ ಮುಖ್ಯ. ಈ ಕಾರಣಗಳಿಂದ ವ್ಯವಸಾಯಕ್ಕೆ ದನಕರುಗಳ ಪ್ರಯೋಜನವು ಅಷ್ಟಿಷ್ಟೆಂದು ಹೇಳಲಾಗುವುದಿಲ್ಲ. ಆದರೂ ಇವುಗಳ ಅಭಿವೃದ್ಧಿಯ ವಿಷಯದಲ್ಲಿ ರೈತರು ಸಾಕಾದಷ್ಟು ಗಮನಕೊಡುತ್ತಿರಲಿಲ್ಲ. ಉತ್ತಮವಾದ ಬೀಜದ ಹೋರಿಗಳನ್ನು ಸಾಕುವುದೂ; ದನಗಳ ಹುಲ್ಲು ನೀರುಗಳ ವಿಷಯದಲ್ಲಿ ಹೆಚ್ಚು ನಿಗ ಕೊಡುವುದೂ, ಅವುಗಳು ವಾಸಿಸುವ ಕೊಟ್ಟಿಗೆಗಳನ್ನು ಚೊಕ್ಕಟವಾಗಿಡುವುದೂ, ಅವುಗಳ ಖಾಯಿಲೆಗಳ ವಿಷಯದಲ್ಲಿ ಜಾಗರೂಕರಾಗಿರುವುದೂ ಇವೇ ಮುಂತಾದ ಕೆಲವು ನಿಯಮಗಳ ವಿಷಯದಲ್ಲಿ ರೈತರು ಹೆಚ್ಚು ಮುತವರ್ಜಿ ವಹಿಸಬೇಕಾಗಿದೆ.

ಎಲ್ಲಾ ಅನುಕೂಲ್ಯಗಳು ದೊರೆತು ಭೂವ್ಯವಸಾಯವು ಕೂಲಂಕಷವಾಗಿ ವೃದ್ಧಿಹೊಂದಬೇಕಾದರೆ, ಮುಖ್ಯವಾಗಿ ನಮ್ಮ ರೈತರ ಅಜ್ಞಾನವು ನಾಶವಾಗಬೇಕೆಂಬ ಅಂಶವನ್ನು ಹಿಂದೆಯೇ ಸೂಚಿಸಿದೆ. ಆಧುನಿಕ ಪರಿಸ್ಥಿತಿಗೆ ಹಳೆಯರೀತಿಯು ಫಲಿಸದೆಂಬುದೂ, ಶಾಸ್ತ್ರೀಯ ರೀತಿಯೇ ಶ್ರೇಷ್ಠವೆಂಬದೂ ವ್ಯವಸಾಯ ಕಲಾಕುಶಲರ ಮತವಾಗಿದೆ. ಆದುದರಿಂದ ವ್ಯವಸಾಯಗಾರರ ವಿದ್ಯಾಭ್ಯಾಸವನ್ನು ತ್ವರಿತಗೊಳಿಸುವುದು ಅತ್ಯಂತ ಆಗತ್ಯವಾದ ಕೆಲಸ. ಶಾಸ್ತ್ರೀಯ ರೀತಿಯಲ್ಲಿ ಜಮೀನನ್ನು ವೃದ್ಧಿಪಡಿಸಿಕೊಳ್ಳಬಹುದಾದ ವಿಧಾನವನ್ನು ಬೋಧಿಸುವ ನಿಪುಣರನ್ನು ಅದಕ್ಕಿಂತಲೂ ಅತ್ಯಂತ ಜಾಗ್ರತೆಯಾಗಿ ತರಬೇತು ಮಾಡಬೇಕಾಗಿರುವುದು. ವ್ಯವಸಾಯ ಕ್ಷೇತ್ರಗಳಲ್ಲಿ ವ್ಯವಸಾಯಗಾರರ ಮಕ್ಕಳನ್ನೇ ಹೆಚ್ಚಾಗಿ ತರಬೇತು ಮಾಡಬೇಕಾದುದು ನ್ಯಾಯವಾಗಿದೆ. ಏತಕ್ಕೆಂದರೆ, ಇವರು ಮುಂದೆ ತಮ್ಮ ಜಮೀನುಗಳಲ್ಲಿ ಮಾಡುವ ವ್ಯವಸಾಯವು ನೆರೆಹೊರೆಯವರಿಗೆ ಆದರ್ಶಪ್ರಾಯವಾಗುವುದು. ವ್ಯವಸಾಯಗಾರರ ಮಕ್ಕಳನ್ನು ತರಬೇತು ಮಾಡುವಂತೆ ವ್ಯವಸಾಯ ಬೋಧಕರನ್ನೂ ತರಬೇತು ಮಾಡಬೇಕಾದುದು ಆಗತ್ಯ. ಇವರು ರೈತರು ಅಧಿಕವಾಗಿ ಸೇರುವ ಜಾತ್ರೆ, ಸಭೆ ಮುಂತಾದ ಸ್ಥಳಗಳಲ್ಲಿ ಶಾಸ್ತ್ರೀಯ ರೀತಿಯಲ್ಲಿ ಬೆಳೆಮಾಡುವ ವಿಧಾನವನ್ನು ಬೋಧಿಸಿದರೆ ಹೆಚ್ಚು ಪ್ರಯೋಜನವಾಗುವುದು. ಮತ್ತು ಇವರು ಗ್ರಾಮಾಂತರಗಳಲ್ಲಿ ಸಂಚರಿಸಿ, ರೈತರ ಬೆಳೆ ಬಿತ್ತಾಟಗಳನ್ನು ಪರೀಕ್ಷಿಸಿ, ಅವುಗಳಲ್ಲಿರಬಹುದಾದ ಗುಣದೋಷಗಳನ್ನು ತೋರಿಸಿಕೊಡಬಹುದಲ್ಲದೆ ಇನ್ನೂ ಅನೇಕ ಸಲಹೆಗಳನ್ನು ಕೊಡಬಹುದು. ಹೆಚ್ಚು ಅನುಭವಶಾಲಿಗಳೂ ವ್ಯವಸಾಯ ವಿದ್ಯಾ ಪಾರಂಗತರೂ, ವ್ಯವಸಾಯಾಭಿವೃದ್ಧಿ ಕಾಂಕ್ಷಿತರೂ ಗ್ರಾಮಾಂತರಗಳಲ್ಲಿ ಸಂಚಾರಮಾಡಿ ರೈತರ ಮೌಢ್ಯವನ್ನೂ ಅಜ್ಞಾನವನ್ನೂ ಹೋಗಲಾಡಿಸಲು ಹೆಚ್ಚು ಶ್ರಮಪಡಬೇಕಾಗಿರುವುದು.

೧೧ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನ ಬೆಳಗಾವಿ.

ಪ್ರಕಟನೆ ೧.

ಬರುವ ಮೇ ತಿಂಗಳಿನ ತಾ. ೯, ೧೦, ೧೧ ಈ ದಿವಸಗಳಲ್ಲಿ ಈ ಸಮ್ಮೇಲನವನ್ನು ಬೆಳಗಾವಿಯಲ್ಲಿ ಜರಗಿಸುವದು ಗೊತ್ತಾಗಿದೆ. ಈ ಸಮ್ಮೇಲನಕ್ಕಾಗಿ, ಸ್ವಾಗತ ಸಂಘದ ಸಭಾಸದರ ಚಂದಾ ರೂ. ೫ ಮತ್ತು ಪ್ರತಿನಿಧಿಗಳ ಚಂದಾ ೨ ರೂ. ಪ್ರೇಕ್ಷಕರ ಚಂದಾ ರೂ. ೧ ಇರಬೇಕೆಂದು ಗೊತ್ತಾಗಿದೆ: ಬೆಳಗಾವಿ ಜಿಲ್ಲೆಯ ನಿವಾಸಿಗಳೂ, ಅದಕ್ಕೆ ಹೊಂದಿರುವ ದೇಶೀಯ ಸಂಸ್ಥಾನಗಳವರೂ ಅವಶ್ಯವಾಗಿ ಸ್ವಾಗತ ಸಂಘದ ಸಭಾಸದರಾಗಬೇಕು. ಬೇರೆ ಕಡೆಯ ಕನ್ನಡಿಗರಾದರೂ ಸಭಾಸದರಾಗಬಹುದು. ಕರ್ನಾಟಕ ಸಭೆ, ಸಂಘ, ವಾಚನಾಲಯ, ಮತ್ತು ಸಮಿತಿಗಳು ಸಮ್ಮೇಲನಕ್ಕೆ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಬಹುದು. ಯಾವ ಊರುಗಳಲ್ಲಿ ಈ ಬಗೆಯ ಸಂಸ್ಥೆಗಳಾವೂ ಇರುವದಿಲ್ಲವೋ ಅಲ್ಲಿಯವರು ತಾವು ಸಭೆ ಸೇರಿ ಪ್ರತಿನಿಧಿಗಳನ್ನು ಆರಿಸಬಹುದು. ಪ್ರತಿನಿಧಿಗಳು ತಾವು ಬೆಳಗಾವಿಗೆ ಯಾವ ದಿವಸ ಯಾವ ಬಂಡಿಯಿಂದ ಬರಬಹುದೆಂಬುದನ್ನು ಕಾರ್ಯದರ್ಶಿಗಳಿಗೆ ಇದೇ ತಿಂಗಳಿನ ಕೊನೆಯ ದಿವಸಗಳೊಳಗಾಗಿ ತಿಳಿಸಬೇಕು. ಜೈನ, ಲಿಂಗಾಯತ, ಮುಸಲ್ಮಾನ ಮತ್ತು ಬ್ರಾಹ್ಮಣ ಜಾತಿಗಳ ಪ್ರತಿನಿಧಿಗಳಿಗೆ ಇರುವ ಮತ್ತು ಊಟದ ವ್ಯವಸ್ಥೆಯು ಮೇ ತಿಂಗಳ ಆರಂಭ ೧೨ ತಾ ನವರೆಗೆ ದಿನವೊಂದಕ್ಕೆ ೧ ರೂ. ತೆಗೆದುಕೊಂಡು ಮಾಡಲಾಗುವುದು.

ಸಮ್ಮೇಲನದಲ್ಲಿ ನಿಬಂಧನಗಳನ್ನು ಓದಬೇಕೆಂದು ಬಯಸುವವರು ಕರ್ನಾಟಕದ ಇತಿಹಾಸ, ಸಾಹಿತ್ಯ, ಸಂಗೀತ, ಶಿಲ್ಪ, ಚಿತ್ರಕಲೆ, ಹಳ್ಳಿಯ ಹಾಡುಗಳು, ಲಾವಣಿಗಳು ಮುಂತಾದ ವಿಷಯಗಳ ಮೇಲೆ ನಿಬಂಧನಗಳನ್ನು ಬರೆದು ಇದೇ ತಿಂಗಳ ಕೊನೆಯ ದಿವಸದೊಳಗಾಗಿ ಕಾರ್ಯದರ್ಶಿಗಳ ಕಡೆಗೆ ಕಳುಹಿಸಬೇಕು. ಯಾವ ನಿಬಂಧವಾದರೂ ಓದುವದಕ್ಕೆ ಅರ್ಧ ಗಂಟೆಗೆ ಮೀರುವಂತಿರಬಾರದು.

ಸಮ್ಮೇಲನದಲ್ಲಿ ಕೈಬರಹದ ಹಳೆ ಗ್ರಂಥಗಳು, ತಾಮ್ರಪಟಗಳು, ನಾಣ್ಯಗಳು ಮತ್ತು ಪ್ರಚಲಿತ ವಾರ ಪತ್ರಿಕೆ, ತ್ರೈಮಾಸಿಕ ಪತ್ರಿಕೆಗಳು ಹಾಗು ಹೊಸದಾಗಿ ಪ್ರಸಿದ್ಧವಾದ ಗ್ರಂಥಗಳು ಮುಂತಾದ ವಸ್ತುಗಳ ಒಂದು ಪ್ರದರ್ಶನದ ಏರ್ಪಾಟು ಮಾಡುವದು ನಿಶ್ಚಿತವಾಗಿದೆ. ಈ ಪ್ರದರ್ಶನದಲ್ಲಿ ಇರಿಸಬೇಕಾದ ವಸ್ತುಗಳನ್ನು ಈ ತಿಂಗಳ ಕೊನೆಯ ದಿವಸಗಳೊಳಗೆ ಕಾರ್ಯದರ್ಶಿಗಳ ಕಡೆಗೆ ಕಳುಹಿಸಬೇಕು.

ಕನ್ನಡ ನುಡಿಯ ಅಭಿಮಾನವು ಬೆಳಗಾವಿ ಜಿಲ್ಲೆಯಲ್ಲಿಯೂ ಮತ್ತು ಅದಕ್ಕೆ ತಗುಲಿರುವ ಸಂಸ್ಥಾನಗಳಲ್ಲಿಯೂ, ಕುಂದುತ್ತಿರುವದೆಂಬುದನ್ನು ಹೊಸದಾಗಿ ಹೇಳಬೇಕಾಗಿಲ್ಲ. ತಾಯ್ನುಡಿಯ ಮೆಚ್ಚುಗೆಯನ್ನು ಹೆಚ್ಚಿಸಬೇಕೆಂತಲೇ ಈ ಸಮ್ಮೇಲನವನ್ನು ಬೆಳಗಾವಿಯಲ್ಲಿ ನೆರವೇರಿಸಬೇಕೆಂದು ನಮ್ಮ ಅವಲವಿಕೆ. ಕನ್ನಡ ನುಡಿಯನ್ನಾಡುವವರೆಲ್ಲರೂ ಜಾತಿ, ಮತ, ಭೇದಗಳನ್ನು ಬದಿಗಿಟ್ಟು ಸಮ್ಮೇಲನವು ಯಶಸ್ವಿಯಾಗುವಂತೆಯೂ, ಕನ್ನಡ ನಾಡಿನ ಹಿರಿಯರಸಾದ ಕೃಷ್ಣರಾಜ ಒಡೆಯ

ರವರು ಕನ್ನಡ ನುಡಿಯ ಏಳಿಗೆಗಾಗಿ ಏರ್ಪಡಿಸಿದ ಕರ್ನಾಟಕ-ಸಾಹಿತ್ಯ-ಪರಿಷತ್ತಿನ ಉದ್ದೇಶಗಳು ಕೊನೆಗಾಣುವಂತೆಯೂ ತಮ್ಮ ಕೈಲಾದಮಟ್ಟಿಗೆ ನೆರವಾಗಬೇಕೆಂದು ಬೇಡಿಕೊಳ್ಳುತ್ತೇನೆ

೧೧ನೆಯ ಸಾಹಿತ್ಯ ಸಮ್ಮೇಲನ ಕಚೇರಿ, ೧೪೩೩ ಬಸವನ ಓಣಿ, ಬೆಳಗಾವಿ ತಾ ೫ ೪ ೧೯೨೫.	ಕೃ. ಗೋ. ಗೆಜ್ಜಿ ಪಿ. ಆರ್. ಚಿಕ್ಕೋಡಿ. ಸನ್ಮಾನಿತ ಕಾರ್ಯದರ್ಶಿಗಳು.

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ ಸಂ

ಉದ್ಯೋಗಸ್ಥರ ಸ್ಥಿತಿ

ಅಯ್ಯಾ,

ಕಳೆದ ನವಂಬರ್ ತಾರೀಕು 28ರ ಕೊಡಗು ಪತ್ರಿಕೆಯಲ್ಲಿ ಉದ್ಯೋಗಸ್ಥರ ಸ್ಥಿತಿಯನ್ನು ಹಿತಚಿಂತಕರು ಬರೆದುದನ್ನು ನೋಡಲಾಯಿತು.

ಇದಕ್ಕೆ ಮೊದಲು ನಾನೂ ನನ್ನ ಎಷ್ಟೋ ಜನ ಉದ್ಯೋಗಸ್ಥರು ಬಸ್ಸಿನಲ್ಲಿಯೂ ಬೈಸಿಕಲ್ಲಿನಲ್ಲಿಯೂ ಹೋಗುವುದನ್ನು ಕಂಡು ಅವರ ಜೀವನವು ಬಹು ಸುಲಭವೆಂದು ತಿಳಿದಿದ್ದೆನು. ಆದರೆ ಈಗ ಅವರ ನಿಜವಾದ ಸ್ಥಿತಿಯನ್ನು ಹಿತಚಿಂತಕರಿಂದ ತಿಳಿದು ಬಹುವ್ಯಸನಪಟ್ಟೆನು ಇದಕ್ಕೆ ಎಲ್ಲರ ದೃಷ್ಟಿಗೂ ಪತ್ತು ಅನುಭವಕ್ಕೂ ತಂದುದಕ್ಕೆ ನಾನು ನನ್ನ ಮಿತ್ರರೂ ಸಹ ಅವರಿಗೆ ತುಂಬಾ ಕೃತಜ್ಞರಾಗಿರುತ್ತೇವೆ ಅಲ್ಲದೆ ನಾನು ಅವರು ಪಟ್ಟ ಅಭಿಪ್ರಾಯಕ್ಕೆ ಪೂರ್ತಿ ಅನುಮೋದಿಸುತ್ತೇನೆ ಅವರು ಹೇಳಿದಂತೆ 30 ರೂಪಾಯಿ ಸಂಬಳದ ಉದ್ಯೋಗಸ್ಥನಿಗೆ ಮನೆಬಾಡಿಗೆ ನೌಕರಿ ವಗೈರೆಗಳಿಗೆ 20 ರೂಪಾಯಿಗಳು ಖರ್ಚಾಗಿ ಹೋದರೆ ಉಳಿದ ಹತ್ತು ರೂಪಾಯಿಯಲ್ಲಿ ಆತನು ತನ್ನ ಹೆಂಡತಿ ಮತ್ತು ಅಡಿಗೆಯವನಿಗಿರುವ ಅಕ್ಕಿ, ಉಪ್ಪು ಮೆಣಸು ವಗೈರೆ ಸಾಮಾನುಗಳನ್ನು ಅವರಿಗೆ ಅವಶ್ಯವಾಗಿರುವ ಮೈ ಬಟ್ಟೆಗಳನ್ನು ಒದಗಿಸಿಕೊಳ್ಳುವ ರೀತಿಯು ಬಹು ಕಷ್ಟವಾಗಿರುವುದು. ಮೂರುಜನರಿಗೆ ತಿಂಗಳಿಗೆ ಎಷ್ಟು ಕಮ್ಮಿಯಾದರೂ 60 ಸೇರು ಅಕ್ಕಿ ಇಲ್ಲದೆ ಆಗುವುದಿಲ್ಲ ಈಗಿನ ದರದಲ್ಲಿ ಅಂದರೆ ರೂಪಾಯಿಗೆ ೫ ಸೇರಿನ ಪ್ರಕಾರ 60 ಸೇರಿಗೆ 12 ರೂಪಾಯಿ ಖಂಡಿತ ಬೇಕಾಗಿರುವುದು ಅಕ್ಕಿಯ ಕ್ರಯವು ಇದಕ್ಕಿಂತ ಹೆಚ್ಚಾದರೆ ಮತ್ತು ಹೆಚ್ಚು ಹಣ ಬೇಕಾಗುವುದು.

ಇದರ ಜೊತೆಗೆ ಉದ್ಯೋಗಸ್ಥರ ಹೆಂಡತಿಯರ ಹೆರಿಗೆ ಖರ್ಚಿಗೂ ಅಕಸ್ಮಿತ ಕಾಯಿಲೆ ಬಂದರೆ ಡಾಕ್ಟರಿಗೂ ಮತ್ತು ಔಷಧಿಗೂ ಮತ್ತು ಅದಕ್ಕೆ ಸರಿಯಾಗಿ ಉಪಚಾರವಹಿಸಲಿಕ್ಕೆ ಅವರಿಗೆ ಏನುಗತಿ? ಆದುದರಿಂದ ಅವರಿಗೆ ಕಮ್ಮಿಪಕ್ಷಕ್ಕೆ ತಿಂಗಳಿಗೆ 50 ರೂಪಾಯಿಯಾದರೂ ಬೇಕಾಗುವುದು ಈ ಕಾರಣ ಅವರ ನೂತನ ಸಂಬಳವನ್ನು 30ರಿಂದ 50ಕ್ಕೆ ಏರಿಸಿದರೆ ತಕ್ಕಮಟ್ಟಿಗೆ ಸಾಕಾಗುವುದೆಂದು ನನ್ನ ಅಭಿಪ್ರಾಯವಾಗಿದೆ ಈ ವಿಷಯವು ಚೆನ್ನಾಗಿ ತೀರ್ಮಾನವಾಗುವವರೆಗೆ ಹಿತಚಿಂತಕರು ಹೇಳಿದರೀತಿ ಸಿಟಿ ಎಲೋವೆನ್ಸ್ ಆಗಲೀ ಅಥವಾ ನಾಡು ಕಚ್ಚೇರಿಯವರಿಗೆ ಕೊಡುವರೀತಿ ಮನೆ ಬಾಡಿಗೆ ಆಗಲೀ ಅಥವಾ ಘೋರಯುದ್ಧದ ಸಮಯದಲ್ಲಿ ಕೊಡುತ್ತಿದ್ದಂತೆ ಗ್ರೈನ್‌ಕಾಂಪನ್ಸೇಷನ್ ಎಲೋವೆನ್ಸ್ ಆಗಲೀ ಕೊಟ್ಟು ಶೀಘ್ರದಲ್ಲಿಯೇ ಅವರ ಕಷ್ಟವನ್ನು ಪರಿಹಾರ ಮಾಡಬೇಕೆಂದು ನಾನು ನನ್ನ ಸಮ್ಮಂಧಪಟ್ಟ ಅಧಿಕಾರಿಗಳನ್ನು ಈ ಮೂಲಕ ಅತಿ ದೈನ್ಯದಿಂದ ಕೇಳಿಕೊಳ್ಳುತ್ತೇನೆ

ಮನನೊಂದವ

ಗೌಡುಗಳ ಕುಲಪದ್ಧತಿ.

ಅಯ್ಯಾ,

ಕೊಡಗಿನ ಒಮ್ಮದ ಗೌಡುಗಳಲ್ಲಿ ನಾಗಿನ ಗೌಡುಗಳಲ್ಲಿ ನನ್ನದೊಂದು ವಿನಂತಿ. ಇವರು ಮತಪೀಠಾರದಲ್ಲಿ ಶುಕ್ಲಪಕ್ಷದ ಪೂರ್ಣ ಚಂದ್ರನು ಕೃಷ್ಣಪಕ್ಷದಲ್ಲಿ ಕ್ಷಯವನ್ನು ಹೊಂದಿರುವಂತೆ ಅವರ ಸುಸ್ಥಿತಿಯು ನಾಸಿಗಳಿಂದ ಊ ಕೊಡಗಿನ ಪೂರ್ವ ನಿವಾಸಿಗಳಿಂದಲೂ ಕ್ಷಯಿಸಿ, ಕ್ರಿಶ್ಚಿಯನ್ ಮತಕ್ಕೆ ಸೇರಿರುವ ಹಿಂದುಗಳು ಕ್ರಿಶ್ಚಿಯನ್ ಮತದಲ್ಲಿ ಹ್ಯಾಗೆ ಹಿಂದುಳಿದಿರುವರೋ ತದ್ರೀತಿಯಲ್ಲಿ ಹಿಂದುಗಳಲ್ಲಿ ಗೌಡುಗಳು ದವರ ಪಂಗಡದವರು ಹಿಂದುಳಿದಿರುವರು. ಏತಂತುಗಳನ್ನು ಪುನರ್ವಿವಾಹ ಮಾಡಿಕೊಳ್ಳುವ ಪದ್ಧತಿಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ವಾಡಿಕೆಯಲ್ಲಿದ್ದದನ್ನು ಗೌಡ ಮಹಾಜನಾಂಗದ ಕೆಲವರೂ ಸಹ ಅನುಸರಿಸಿದ್ದು ತಪ್ಪು ಮತ್ತು ಇತರ ಮತದವರು ಉಡಿಗೆ ಕೊಡಗೆಗಳು ಮಾತ್ರ ಹಿಂಬಾಲಿಸಿ ಅವರ ಮತಾಚಾರವನ್ನು ಹಿಂಬಾಲಿಸದಿರುವುದರಿಂದ ಇವರು ಹಿಂದುಳಿದವರೆಂದು ಹೇಳಬಹುದು. ಇವರು ಒಂದೇ ಮತದವರಾಗಿದ್ದಲ್ಲಿ ಗೌಡುಗಳ ಕುಲಧರ್ಮಕ್ಕೆ ಸರಿಯಾಗುತ್ತಿದ್ದರು. ಇವರ ಮಾತ್ಸರ್ಯವಿಲ್ಲದ ಹೃದಯರು ಗೌಡುಗಳ ಕುಲಧರ್ಮ ಹ್ಯಾಗಿರುತ್ತೆ ಎಂಬುದನ್ನು ಗ್ರಹಿಸದಿರುವುದರಿಂದ ಇವರು ಎಲ್ಲರ ಆಕ್ಷೇಪಣೆಗೆ ಗುರಿಯಾಗುತ್ತಾರೆ.

ಪಿ ಬಿ ಮುತ್ತಪ್ಪ ಗೌಡ

ಹಿಂದೂ ಮಹಾಸಭೆ

ಮಹನೀಯರೇ,

ಕೆಲವು ತಿಂಗಳುಗಳ ಹಿಂದೆ ಸ್ವಾಮಿ ಶಂಕರಾನಂದರವರು ಮಡಿಕೇರಿಗೆ ಬಂದು ಹಿಂದೂ ಮಹಾ ಸಭೆಯ ಉದ್ದೇಶಗಳನ್ನು ಕುರಿತು ಭಾಷಣ ಮಾಡಿ ಹೋದನಂತರ ಮಡಿಕೇರಿಯ ಪುರನಿವಾಸಿಗಳು ಸಭೆಸೇರಿ ಈ ಸಭೆಯು ನಮ್ಮ ದೇಶಕ್ಕೂ ಅವಶ್ಯಕವಾದದ್ದೋ ಎಂಬ ವಿಷಯ ಚರ್ಚಿಸಿ, ಅವಶ್ಯಕವೆಂದು ಕಂಡುಬಂದ ಕಾರಣ ಈ ಸಭೆಯ ಶಾಖೆಯೊಂದನ್ನು ಕೊಡಗಿನಲ್ಲಿಯೂ ಸ್ಥಾಪಿಸಲಿಕ್ಕಾಗಿ ತಕ್ಕ ಏರ್ಪಾಡು ಮಾಡುವಂತೆ ಒಂದು ಕಮಿಟಿಯನ್ನು ನೇಮಿಸಿದರೆಂಬ ಸಂಗತಿಯನ್ನು ಈ ಪತ್ರಿಕೆಯಲ್ಲಿ ಓದಿದ ನೆನಪು ನನಗಿದೆ ಈ ಕಮಿಟಿಯು ನೇಮಕವಾಗಿ ತಿಂಗಳುಗಳು ಕಳೆದು ಹೋದರೂ ಕೂಡ ಇದರ ಕೆಲಸವು ಎಷ್ಟರ ಮಟ್ಟಿಗೆ ಮುಂದುವರಿದಿದೆ ಎಂಬ ಸಂಗತಿ ಯಾರಿಗೂ ತಿಳಿಯ ಬಂದಿರುವುದಿಲ್ಲ ಈ ಸಭೆಯು ನಮ್ಮ ದೇಶಕ್ಕೆ ಅತ್ಯಗತ್ಯವೆಂದು ನಂಬಿರುವ ನನಗೆ ಈ ಕಮಿಟಿಗೂ ದೇಶದ ವಾಡಿಕೆಯಾದ ಜಳಿಯು ಹಿಡಿಯಿತೋ ಎಂಬ ಭಯವು ತೋರುತ್ತಿದೆ

ಮೂರ್ನಾಡಿನಲ್ಲಿ ಜಮೀನುದಾರರ ಸಂಘದ ಸಮಯದಲ್ಲಿ ಹಿಂದೂ ಮಹಾಸಭದ ಶಾಖೆಯ ಮೀಟಿಂಗೊಂದು ನಡಿಸಲಿಕ್ಕೆ ಏರ್ಪಾಡು ಮಾಡಲಾಗುತ್ತಿದೆ ಎಂದು ಒಂದೆರಡು ವಾರಗಳ ಹಿಂದೆ ಪತ್ರಿಕೆಯಲ್ಲಿ ಓದಿದ ಜ್ಞಾಪಕವಿದೆ ಆದರೆ ಮೂರ್ನಾಡಿನಲ್ಲಿ ಇದರ ಸಮ್ಮಂಧ ಮೀಟಿಂಗು ಯಾವುದೂ ನಡಿಸದೆ ಇದ್ದದ್ದು ವ್ಯಸನಕರವೇ ಸರಿ ಈ ಕಮಿಟಿಯ ಮೆಂಬರುಗಳ ನಿದ್ರೆಯಿಂದ ಎಚ್ಚರಿಸಬೇಕೋ ಏನು, ಅವರಾಗಿಯೇ ಬಿಡದೆ ತಮ್ಮ ಉದಾಸೀನತೆಯನ್ನು ಬಿಟ್ಟು ಕೆಲಸವನ್ನು ಪ್ರಾರಂಭಿಸುವರೋ ಎಲ್ಲಾ ವಿಷಯಗಳಿಗೆ ಅವರ ಜವಾಬನ್ನು ಕಾಯುತ್ತಿರುವ

ಹಿಂದು

ಸಹಕಾರ ಭಾಷಣ

ಮಹನೀಯರೇ,

ಕಳೆದ ಜಮೀನ್ದಾರರ ಕಾನ್‌ಫರನ್ಸಿನಲ್ಲಿ ಕೆಲವು ಸರ್ಕಾರಿ ಉದ್ಯೋಗಸ್ಥರನ್ನು ಸಹಕಾರ ಜೀವನ, ಪಶುವೈದ್ಯ ಮತ್ತು ಬೇರೆ ಮೊದಲಾದ ಕಾಯಿಲೆಗಳ ವಿಷಯವಾಗಿ ಭಾಷಣ ಕೊಡುವಂತೆ ಏರ್ಪಾಡು ಮಾಡಲಾಗಿದ್ದದ್ದು ಸರಿಯಷ್ಟೆ ಸ್ವಾಗತಕಮಿಟಿಯವರ ಆಶಾ ಮಂತ್ರಿ ಕಾನ್‌ಫರನ್ಸಿನ ಪ್ರಥಮ ದಿನ ಅಧ್ಯಕ್ಷರ ಭಾಷಣವಾದೊಡನೆ ರಿಜಿಸ್ಟ್ರಾರರವರಿಗೆ ಸಹಕಾರ ಜೀವನದ ವಿಷಯ ಭಾಷಣ ಕೊಡಲು ಅಪೇಕ್ಷೆಪಡಲಾಯಿತು. ಭಾಷಣವು ಪ್ರಾರಂಭವಾಗುವ ಮೊದಲೇ ಸಮೀಪದಲ್ಲಿ ಬಿಟ್ಟಿದ್ದು ಮತ್ತು ಎಷ್ಟು ಮಾತ್ರ ಅಡಚಣೆ ಬರಬಹುದೆಂದು ಹೇಳಿದ್ದೇನೋ ಸರಿ ಆದರೆ ಭಾಷಣಕ್ಕೆ ಸಾಕಷ್ಟು ಸಮಯವನ್ನು ಕೊಡಲಾಗುವುದೆಂದು ಸ್ವಾಗತ ಕಮಿಟಿಯವರೂ, ಅಧ್ಯಕ್ಷರೂ ಒಪ್ಪಿದ್ದನ್ನು ಅವರು ಹಿಂತೆಗೆಯಲಿಲ್ಲ ಹಾಗೆಯೇ ಉಪನ್ಯಾಸವು ಪ್ರಾರಂಭವಾಯಿತು ಪ್ರಾರಂಭವಾಗಿ ಸ್ವಲ್ಪ ಸಮಯದಲ್ಲೇ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು, ಪೊಲೀಸು ಡಿಪ್ಯುಟಿ ಸುಪರಿಂಟೆಂಡೆಂಟರು ಮೊದಲಾದ ಕೆಲವು ಸರ್ಕಾರಿ ಉದ್ಯೋಗಸ್ಥರು ಸಭೆಯಿಂದ ಎದ್ದು ಹೊರಟುಹೋದರು. ಅವರ ಸುತ್ತಮುತ್ತಲು ಕೂತಿದ್ದ ಕೆಲವು ಸರ್ಕಾರಿ ಉದ್ಯೋಗಸ್ಥರಲ್ಲದ ಮಹನೀಯರು ಅವರನ್ನು ಹಿಂಬಾಲಿಸಿದರು. ಇದು ಸಭೆಯಲ್ಲಿ ನೆರೆದಿದ್ದವರಲ್ಲಿ ಉದಾಸೀನತೆಗೆ ಎಡೆಕೊಟ್ಟಿತು ಮೆಂಬರುಗಳು ಅಲ್ಲಲ್ಲಿಂದ ಎದ್ದು ಹೊರಗೆ ಹೋಗಲು ಪ್ರಾರಂಭಿಸಿದರು ಸ್ವಯಂಸೇವಕರ ಮತ್ತು ಸ್ವಾಗತಕಮಿಟಿಯ ಕೆಲವರ ಕೋರಿಕೆ ಮೇರೆ ಅವರ ಹೊರಗೆ ಹೋಗುವುದು ನಿಂತಿತು.

ಕೂಡಲೆ ಜಮೀನುದಾರರ ಸಂಘದ ಹಿತಚಿಂತಕರೆಂದು ನಟಿಸುತ್ತಿದ್ದವರು ಕೆಲವರು ಸರ್ಕಾರಿ ಉದ್ಯೋಗಸ್ಥರನ್ನು ಗುರಿಮಾಡಿಕೊಂಡು ಅವರಿಗೆ ಆಕ್ಷೇಪಣೆ ಮಾಡಿದರಂತೆ. ಮಾತಾಡ ತೊಡಗಿದರು ಇದು ಪೂರಾ ತಪ್ಪು ಊಹನೆ ಆಗಿದೆ ಈಗಿನ ಕಾಲದಲ್ಲಿ ಎಲ್ಲರ ಮನಸ್ಸನ್ನು ಸೆಳೆಯುವ ಗೂಢವಾಗಿರುವ ರಾಜಕೀಯ ವಿಷಯದ ಮಧ್ಯೆ ಸಾಧುವಾದ ಸಹಕಾರ ಜೀವನದ ಸಮ್ಮಂಧ ಭಾಷಣವು ಜನರಲ್ಲಿ ಉತ್ಸಾಹ ಹುಟ್ಟಿಸುವುದು ಒಳ್ಳೆ ಸ್ವಲ್ಪ ಕಡಿಮೆಯಾಗಿದ್ದರೂ, ರಿಜಿಸ್ಟ್ರಾರರವರ ಮೇಲೆ ಜನರಿಗೆ ಇರುವ ಮರ್ಯಾದೆಯು ಸ್ವಲ್ಪವೂ ಕಡಿಮೆ ಆಗಿರುವುದಿಲ್ಲವೆಂದು ನಾನು ಧೃಢವಾಗಿ ಹೇಳಬಲ್ಲೆನು. ನೆರೆದಿದ್ದ ಜಮೀನ್ದಾರರು ಎಂದಿಗೂ ಸರ್ಕಾರಿ ಉದ್ಯೋಗಸ್ಥರಿಗೆ ಅದರಲ್ಲೂ ರಿಜಿಸ್ಟ್ರಾರರವರಿಗೆ ಅವಮಾನ ದೌರ್ಜನ್ಯ ಮಾಡಿದರೆಂದು ಯಾರಾದರೂ ಹೇಳಲಿಕ್ಕಿಲ್ಲವೆಂದು ನಂಬಿದ್ದೇನೆ ಪೂರ್ತಿ ಸುಳ್ಳಾಗಿದೆ. ದೇಶದ ರೈತರ ಉನ್ನತಿಗೆ ಮುಖ್ಯ ಸಾಧನಗಳಲ್ಲಿ ಒಂದಾಗಿರುವ ಸಹಕಾರಿ ಸಂಘಗಳ ಬೆಳವಣಿಗೆಗೆ ಅತಿ ಶ್ರದ್ಧೆಯಿಂದ ಕೆಲಸ ಮಾಡುತ್ತಿರುವ ರಿಜಿಸ್ಟ್ರಾರರವರಿಗೆ ಅವರ ಪ್ರಯತ್ನವನ್ನು ಚೆನ್ನಾಗಿ ಅರಿತಿರುವ ಜಮೀನುದಾರರು ಎಂದಿಗಾದರೂ ಆಕ್ಷೇಪಣೆ ಮಾಡುವರೆಂದು ನಂಬಲಾಗುವುದೇ? ಅವರ ಮೇಲೆ ಜನರಿಗಿರುವ ಪ್ರೀತಿಗೆ ಈ ಸಂಬಂಧ ಉದಾಹರಣೆ ಈ ಸಹಕಾರ ಸಂಘಗಳ ಕಾರ್ಯ ಸ್ಥಾಪನೆಯನ್ನು ಜಮೀನ್ದಾರರ ಸಂಘ ಸ್ಥಾಪಿಸಿದುದನ್ನು ಎಲ್ಲಾರು ತಿಳಿಯಬೇಕಾದ ಸಂಗತಿಯಾಗಿದೆ

ಒಂದುವೇಳೆ ಅವರ ಭಾಷಣಕ್ಕೆ ತಕ್ಕಷ್ಟು ಗಮನಕೊಡಲಾಗಲಿಲ್ಲವೆಂದು ಹೇಳಿದರೂ, ಹಾಗೆ ಗಮನಕೊಡದಂತೆ ಮೊದಲು ಪಾ ರಂಭಿಸಿದವರ್ಯಾರು? ಅವರು ಭಾಷಣ ಮಾಡುತ್ತಿರುವಾಗ್ಯೆ ಸಭೆಯಿಂದ ಮೊದಲು ಹೊರಟುಹೋದ ಸರ್ಕಾರಿ ಉದ್ಯೋಗಸ್ಥರಲ್ಲವೇ? ಮತ್ಯೇಕೆ ಜಮೀನುದಾರರನ್ನು ದೂರುವುದು? ಆದುದರಿಂದ ಸರ್ಕಾರಿ ಉದ್ಯೋಗಸ್ಥರಾಗಲೀ, ದೇಶದ ಜನರಾಗಲೀ, ಇಂಥಾ ಕಲ್ಪನೆಯ, ನಿಜವಲ್ಲದ ವರ್ತಮಾನಗಳಿಗೆ ಸ್ವಲ್ಪವೂ ಬೆಲೆ ಕೊಡಬಾರದಲ್ಲದೆ ಅವುಗಳನ್ನು ಪ್ರತಿಭಟಿಸಬೇಕಾಗಿ ಕೋರುವ,

ಸ್ವಾಗತಕಮಿಟಿ ಮೆಂಬರು,

ಸ್ವಯಂ ಸೇವಕರ ದಳ

ದೇಶಾಭಿಮಾನಿಗಳೇ,

ಮೂರ್ನಾಡಿನಲ್ಲಿ ನಡೆದ ಜಮೀನುದಾರರ ಸಂಘದ ಕಾನ್‌ಫರೆನ್ಸಿನಲ್ಲಿ ಪಾಸಾದ ಠರಾವುಗಳಲ್ಲಿ ಒಂದರ ವಿಷಯ ಕೆಲವು ಮಾತುಗಳನ್ನು ಬರೆಯಲಿಚ್ಛೈಸುತ್ತೇನೆ ನಮ್ಮ ದೇಶಕ್ಕೆ ಸ್ವಯಂಸೇವಕರ ದಳ ಒಂದು ಇಡಬೇಕಾದದ್ದು ಆವಶ್ಯಕವಾದಕ್ಕೆ ಕಾರಣಗಳನ್ನು ಇಲ್ಲಿ ಬರಯಬೇಕಾಗಿರುವುದಿಲ್ಲ ಈ ವಿಷಯವು ಒಮ್ಮತದಿಂದ ಪಾಸಾದದ್ದು ಶುಭಸೂಚನೆಯೆಂದೇ ನನ್ನ ಭಾವನೆ ದಳವು ಬೇಕೆಂದು ಎಲ್ಲರೂ ಒಪ್ಪಿದರೂ ಅದನ್ನು ಏರ್ಪಡಿಸಲಿಕ್ಕೆ ಬೇಕಾಗುವ ಕಮಿಟಿಯ ವಿಷಯ ಚರ್ಚೆಯು ಬಹಳ ಎಳೆದಾಟವಾಯಿತು ಕಮಿಟಿ ಮೆಂಬರುಗಳ ಸಂಖ್ಯೆಯನ್ನು ನಿರ್ಣಯಿಸಲಿಕ್ಕೇನೇ ಬಹಳ ಮಾತುಗಳು ನಡೆದವು ಅವಲ್ಲಾ ನಮ್ಮ ದೇಶದಲ್ಲಿ ಸ್ವಯಂಸೇವಕರ ತರಬೇತಿನಲ್ಲಿ ಅನುಭವ ಇರುವವರು ಇಲ್ಲದಿರುವುದರಿಂದಲೇ ಆಗಿದೆ ಈ ವಿಷಯ ಅನುಭವ ಇಲ್ಲದಿದ್ದರೂ ಏರ್ಪಾಡು ಮಾಡುವುದು ಕಷ್ಟವಾಗಿ ಕಾಣುವುದಿಲ್ಲ ಹಿಂದೂ ದೇಶದವರು ನಮಗೆ ಉದಾಹರಣೆಯನ್ನು ಹಾಕಿ ಕೊಟ್ಟಿರುತ್ತಾರೆ ಡಾಕ್ಟರ್ ಹರ್ಡೀಕರ್‌ರವರು ಸ್ವಯಂಸೇವಕರ ವಿಷಯ ದೇಶದವರೆಲ್ಲರೂ ಉತ್ಸಾಹಿಗಳಾಗ ಬೇಕೆಂಬ ಉದ್ದೇಶದಿಂದ "ದಿ ವಾಲಂಟಿಯರ್" ಎಂಬ ಮಾಸಪತ್ರಿಕೆ ಯೊಂದನ್ನು ಹೊರಡಿಸಿರುವರು. ಇದು ಪ್ರಾರಂಭವಾಗಿ ನಾಲ್ಕು ತಿಂಗಳುಗಳಾದವು. ಏಪ್ರಿಲ್ ತಿಂಗಳ ಸಂಚಿಕೆಯಲ್ಲಿ ಹಿಂದೂಸ್ಥಾನಿ ಸೇವಾದಳದ ರೂಲ್ಸು ರೆಗ್ಯುಲೇಷನುಗಳೂ, ಅದರ ಕವಾಯತು ಕ್ರಮವೂ, ಡಿಸ್ಟ್ರಿಕ್ಟ್ ಹಿಂದೂಸ್ಥಾನಿ ಸೇವಾದಳದ ಬೋರ್ಡುಗಳ ರೂಲ್ಸುಗಳೂ ಕರ್ನಾಟಕ ದಳದ ಡ್ರಿಲ್ ಆರ್ಡರುಗಳೂ (ಇಂಗ್ಲೀಷಿನಲ್ಲಿ ಪ್ರಕಟವಾಗಿವೆ ಹಿಂದೂಸ್ಥಾನಿ ಡ್ರಿಲ್ ಆರ್ಡರ್‌ಗಳು ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗುವವಂತೆ) ಆದುದರಿಂದ ನಮ್ಮ ದೇಶದಲ್ಲಿ ಒಂದು ದಳವನ್ನು ಏರ್ಪಡಿಸಲು ಹೆಚ್ಚು ಕಷ್ಟವೇನು ಇಲ್ಲ ಇದಕ್ಕೆ ಏರ್ಪಡಿಸಾಗಿರುವ ಕಮಿಟಿಯವರು ಈ ಮಾಸಪತ್ರಿಕೆಯನ್ನು ತರಿಸಿಕೊಂಡರೆ ಕೆಲಸವು ಸುಲಭವಾಗುವುದು. ಅಲ್ಲದೆ ಈ ದಳಕ್ಕೆ ಸಮ್ಮಂಧಪಟ್ಟ ಎಲ್ಲಾ ವಿಷಯಗಳನ್ನೂ ಒಳಗೊಂಡಿರುವ "ದಿ ಆರ್ಗನೈಜೇಷನ್" ಎಂಬ ಪುಸ್ತಕವು 4 ಆಣೆಗೆ ದೊರೆಯುವುದು. ಈ ಮಾಸಪತ್ರಿಕೆಯು ಮತ್ತು ಈ ಪುಸ್ತಕವೂ ಜನರಲ್ ಸಕ್ರೆಟರಿ, ಹಿಂದೂಸ್ಥಾನಿ ಸೇವಾದಳ, ಹುಬ್ಬಳ್ಳಿ, (ಕರ್ನಾಟಕ) ಇವರಿಂದ ದೊರೆಯುವುದು

ಮಾಸಪತ್ರಿಕೆಯ ವಾರ್ಷಿಕ ಚಂದ, 3 ರೂ.

"ಜಮೀನುದಾರ"

PUBLIC NOTICE

The public and all concerned are hereby informed that in vertue of a Partition Cancellation Deed of 7—1—1918 registered in the sub-registrars office of Virarajendrapet, Mr Chendandira Karumbayya Subbayya of Ammathi Siddapuranad, Gahya Village, is not entitled without my consent to sell, mortgage or otherwise alienate of our landed properties situated in Chembebeloor, Kannagala and Sidpura nad who soever purchases or lends money on immovable properties to the aforeseid Mr Subbayya, does so on his or her own risk.

23. 3 '25 *C K Chengappa*

4. 3. *Riverside, Siddapur*

ನೋಟೀಸು.

ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—

ವೀರರಾಜಪೇಟೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರಾದ ತಾ 7—1—1918ರ ಪಾಲುಪಟ್ಟಿ ರದ್ದಿನ ಪ್ರಕಾರ ಅಮ್ಮತಿ ಸಿದ್ದಾಪುರ ನಾಡು ಗುಹ್ಯ ಗ್ರಾಮದ ಚೇಂದಂಡ ಕರುಂಬಯ್ಯನವರ ಮಗ ಸುಬ್ಬಯ್ಯನವರಿಗೆ ನನ್ನ ಅನುಮತಿ ವಿನಹ ಚೆಂಬೆಬೆಳ್ಳೂರು, ಕಣ್ಣಂಗಾಲ, ಗುಹ್ಯ ಮತ್ತು ಸಿದ್ದಾಪುರ ಗ್ರಾಮಗಳಲ್ಲಿ ಇರುವ ನಮ್ಮ ಜಾಯಿದಾದು ಸ್ಥಿರಸೊತ್ತುಗಳನ್ನು ಗಿರವಿ, ಭೋಗ್ಯ, ಕ್ರಯ ಮುಂತಾದ ಯಾವ ವಿಧದ ಪರಾಧೀನ ಪಡಿಸುವ ಹಕ್ಕು ಇರುವದಿಲ್ಲ ಹಾಗೆ ಮಾಡಿದವರು ಹಾಗು ಅವರಿಂದ ಕ್ರಯ, ಗಿರವಿ, ಭೋಗ್ಯ ಮುಂತಾದ ಯಾವ ವಿಧದಿಂದಲಾದರೂ ಸದರಿ ಸೊತ್ತುಗಳ ಹಕ್ಕನ್ನು ಪಡೆದವರು ಹಾಗೆ ತೆಗೆದುಕೊಂಡವರು, ಅದರ ನಷ್ಟಕಷ್ಟಗಳಿಗೆಲ್ಲಾ ಗುರಿಯಾಗುತ್ತಾರೆ

23—3—25. ಸಿ ಕೆ ಚಂಗಪ್ಪ,

4 3 ರಿವರ್‌ಸೈಡ್, ಸಿದ್ದಾಪುರ

ಪ್ರಕಟಣೆ.

ಭಾರತಮಾತೆಯ ವಸ್ತ್ರವನ್ನು ತಪ್ಪಿಸಿದ ಒಂದು ಹೋರಾ ಡುತ್ತಿರುವ ಶ್ರೀಮಾನ್ ಲಾಲಾ ಲಜಪತರಾಯ್ ಪಂಡಿತ ಮೋತಿಲಾಲ್ ನೇಹರು ಮೊದಲಾದ ಡೈರೆಕ್ಟರುಗಳಾದ ಭಾರತ ಪುತ್ರರಿಂದ ಸ್ಥಾಪಿತವಾಗಿರುವ

ದಿ ಲಕ್ಷ್ಮೀ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು ಲಾಹೋರು, ಮ್ಯಾನೇಜಿಂಗ ಡೈರೆಕ್ಟರು, ಪಂಡಿತ ಕೆ ಸಂತಾನಂ

ಮೂಲಧನ ೧೦ ೦೦ ೦೦೦
ಷೇರು ಪರಿಮಾಸ್ತು ೧೦,೦೦,೦೦೦

ಇಂಡಿಯಾ ಸರಕಾರದ ಲೈಫ ಇನ್ಶೂರೆನ್ಸ್ ಆಕ್ಟು ಅನುಸರಿಸಿ ರಿಜಿಸ್ಟರಾಗಿ ಇಂಡಿಯಾ ಸರಕಾರದಲ್ಲಿ ರೂಲ್ಸು ಪ್ರಕಾರ ಸೆಕ್ಯುರಿಟಿ ಡಿಪಾಜಿಟ್ ಇಡಲ್ಪಟ್ಟಿರುತ್ತೆ

ಎಲ್ಲಾ ತಾಲೂಕು ಮತ್ತು ಡಿಸ್ಟ್ರಿಕ್ಟುಗಳಲ್ಲಿಯೂ ಏಜಂಟರುಗಳು ದಾಖಲಾದ ಕಮಿಷನ್‌ನಿಂದ ಕೆಲಸ ಮಾಡತಕ್ಕವರು ಬೇಕಾಗಿರುತ್ತಾರೆ ... ಕೊಂಡರಿಯಾದವುಗಳ ... ಫಾರಂ ಇತ್ಯಾದಿಗಳಿಗೆ ಬರೆಯಿರಿ.

ಏಜೆಂಟರ ಆಫೀಸು,
ದಿ ಲಕ್ಷ್ಮೀ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್
... ಬಿಲ್ಡಿಂಗ್ಸ್ ಮೈಸೂರು

4—1

ಒಂದೇ ನೂತರಂ.

... ಸ್ವಾಗತವು ...

ಕೃಷಿಕರ ಕರ್ತವ್ಯಗಳು

(ಕರ್ನಾಟಕ ದ ... ದೇಶಕ್ಕೆ ಯೋಗ್ಯವಾದ ಸೂಚನೆಗಳು)

ಕೃಷಿಕರು ತಮಗೆ ... ಫಲವನ್ನು ... ಕೊಡಬೇಕು. ಇವುಗಳಲ್ಲಿ ...

ನೆಯದು ... ಗಿರುವಂತೆ ... ಕಾಲ್ನಡೆ ... ವಿಜ್ಞಾನ (Science) ... ಕೃತ್ರಿಮ (Artificial Manure) ... ಕೃತ್ರಿಮ (Artificial) ...

Reg. No. M 1580.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ ಬಿ ಚಿಕ್ಕಪ್ಪನವರು] [ವಾರ್ಷಿಕ ಚಂದಾ ರೂ 5-0-0

ಸಂಪುಟ ೨೮ | ತಾರೀಖು ೨ ೧೨-೧೯೪೯ನೇ ಶುಕ್ರವಾರ | ಸಂಚಿಕೆ ೨೮

"ಏನೂ ಸುಖವಿಲ್ಲ!"

ಲೇ ಶ್ರೀ ಬಿ ಡಿ ಗಣಪತಿ

ಶಿಕ್ಷಣಕೇತ್ರದಲ್ಲಿ ಕೆಟ್ಟ ಮಾತನ್ನು ... ನಾವು ಕೇಳು ... ಏನೂ ಸುಖವಿಲ್ಲ ...

ಯದಲ್ಲಿ ಜಾಗರೂಕರಾಗಿವುದೂ ಇವೇ ಮುಂತಾದ ಕೆಲವು ...

... ಅರ್ಥಿಗ್ಗಿಲ್ಲಾ ಬೇಕಿ ಹಬ್ಬಲು ಕಡಿದ ...

ಹಿಂದೂ ಮಹಾಸಭೆ

... ಹಿಂದೂ ಮಹಾ ಸಭೆಯ ...

ಸಭೆ ರ ಭಾಷಣ

...

ತ್ರಿರುವಾಗ್ಯೆ ಸಭೆಯಿಂದ ಮೊದಲು ಹೊರಟುಹೋದ ಸರ್ಕಾರಿ ಉದ್ಯೋಗಸ್ಥರಲ್ಲವೇ? ಮತ್ತೇಕೆ ಒಮ್ಮತದಾರರನ್ನು ದೂರವುದು? ಆದುದರಿಂದ ಸರ್ಕಾರಿ ಉದ್ಯೋಗಸ್ಥರಾಗಲೀ ದೇಶದ ಜನರಾಗಲೀ ಇಂಥಾ ಕಲ್ಪನೆಯ ನಿಜವಲ್ಲದ ವರ್ತಮಾನಗಳಿಗೆ ಸ್ವಲ್ಪವೂ ಬೆಲೆ ಕೊಡಬಾರದಲ್ಲದೆ ಅವುಗಳನ್ನು ಪ್ರತಿಭಟಿಸಬೇಕಾಗಿ ಕೋರುವ

ಸ್ವಾಗತಕಮಿಟಿ ಮೆಂಬರು

ಸ್ವಯಂ ಸೇವಕರ ದಳ

ದೇಶಾಭಿಮಾನಿಗಳೇ

ಮಂಗಳೂರಿನಲ್ಲಿ ನಡೆದ ಒಮ್ಮತದಾರರ ಸಂಪದ ಕಾರ್ಯವನ್ನು ... ಪಾಸಾದ ಠರಾವುಗಳಲ್ಲಿ ಒಂದರ ವಿಷಯ ಕೆಲವು ಮಾತುಗಳನ್ನು ಬರೆಯಲಿಚ್ಛೈಸುತ್ತೇನೆ ನಮ್ಮ ದೇಶಕ್ಕೆ ಸ್ವಯಂಸೇವಕರ ದಳ ಒಂದು ಇರಬೇಕಾದದ್ದು ಅವಶ್ಯಕವೂ ... ಕಾರಣಗಳನ್ನು ಇಲ್ಲಿ ಬರೆಯಬೇಕಾಗಿರುವುದಿಲ್ಲ ... ದೇಶದ ... ಕಮಿಟಿ ಮೆಂಬರುಗಳ ... ನಮ್ಮ ದೇಶದಲ್ಲಿ ಸ್ವಯಂಸೇವಕರ ತರಬೇತಿ ... ಸ್ವಯಂಸೇವಕರ ... ದೇಶದ ... ಪ್ರಾರಂಭವಾಗಿ ... ತಿಂಗಳುಗಳಾದವು ...

ಮಾಸಪತ್ರಿಕೆಯ ವಾರ್ಷಿಕ ಚಂದ 3 ರೂ

...

PUBLIC NOTICE

The public and all concerned are hereby informed that in virtue of a Partition Cancellation Deed of ,—1—19 registered in the sub registrars office of Virarajendrapet Mr Chendina Karumbayya Subbayya of Ammathi Siddapur and ... Village is not entitled without my consent to sell, mortgage or otherwise alienate of our landed properties situated in Chembebeloor Kannagala and Sidpur and who soever purchases or lends money on immovable properties to the aforesaid Mr Subbayya, does so on his or her own risk.

23 3 25 — *C K Chengappa*
4 3 — *Riverside, Sidapur*

ನೋಟೀಸು.

ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ—

ವೀರರಾಜಪೇಟೆ ಸಬ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರಿಂದ ತಾ /— 1—191 ರ ... ಕರುಂಬಯ್ಯನವರ ಮಗ ಸುಬ್ಬಯ್ಯನವರಿಗೆ ... ಗುಡ್ಡ ... ಇರು ...

... ಚೆಂಗಪ್ಪ

ಪಿ ಬಿ ಸುಬ್ಬಯ್ಯ ಗೌಡ

ಪ್ರಕಟಣೆ.

ಭಾರತಮಾತೆಯ ಕಷ್ಟವನ್ನು ತಪ್ಪಿಸಬೇಕೆಂದು ಹೋರಾಡುತ್ತಿರುವ ಶ್ರೀಮಾನ್ ಲಾಲಾ ಲಜಪತ್‌ರಾಯ್, ಪಂಡಿತ [illegible]

ನೆಯದು ಯಾವಾಗಲೂ ಒಣಿಸಿನ ಫಲವತ್ತು ಏಕರೀತಿಯಾಗಿರುವಂತೆ ನೋಡಿಕೊಳ್ಳುವುದು. ಒಣಿಸು ನಮಗೆ ಧಾನ್ಯವನ್ನು ಕೊಡುತ್ತದೆ. ಧಾನ್ಯದಲ್ಲಿರಬಹುದಾದ ಕೆಲವು ವಸ್ತು [illegible]

ಯದಲ್ಲಿ ಜಾಗರೂಕರಾಗಿವುದೂ ಇವೇ ಮುಂತಾದ ಕೆಲವು ನಿಯಮಗಳ ವಿಷಯದಲ್ಲಿ ರೈತರು ಹೆಚ್ಚು ಮುತವರ್ಜಿ ವಹಿಸಬೇಕಾಗಿದೆ.

ಈ ವಾರದ ಕಥೆ.

ತ್ಯಾಗವೇ-ಭೋಗ ಪಥ.

ಲೇ:— "ಶ್ರೇಮಯೋಗಿ" ಮಡಿಕೇರಿ.

ಪ್ರಥ [illegible] ನ ಉದಯವಾಗುತ್ತ [illegible] ಕಿರಿಯ ತಾವರೆಯ [illegible] ಇನ್ನೂ ಬಿಚ್ಚಿರಲಿಲ್ಲ ನಿನ್ನೆ [illegible] ಮಧ್ಯಾಹ್ನ [illegible] ವಿಚಿತ್ರ ಗಡಿಯಾಗಿ ಬಾಧಿಯಾದ [illegible] ಆಶೆಯಿಂದ [illegible] ರಲಿಲ್ಲ [illegible] ಗೀತ [illegible] ಸ್ವೀಕರಿಸುತ್ತಿತ್ತು.

[illegible] ವೃದ್ಧ ಚಿದಾನಂದರು ತನ್ನ [illegible] ಲೀಲಾವತಿ ಮತ್ತು ಶಿಷ್ಯ ಗಜಾನನನಿಗೆ [illegible] ಹೇಳುತ್ತಿದ್ದರು. ಗಜಾನನನ ದೃಷ್ಟಿ [illegible] ವರೆಯ [illegible] ತ್ತಿರುವ [illegible] ಚಿದಾನಂದರು [illegible] ಳುತ್ತಿರುವ [illegible] ವೇಳಿರಲಿಲ್ಲ.

ಚಿದಾನಂದರ ಜೀವನವು ಆದರ್ಶ ಜೀವನ [illegible] ತಂಡ ಸಾವಿರಾರ ವರೆಗೆ [illegible] ಆಗ ಅವು ಹಿಂದೂ [illegible] ದಂಗೆಯು [illegible] ಗಿತ್ತು. [illegible] ನೂರಾರು ಜನ [illegible] ದಂಗೆಯಲ್ಲಿ [illegible] ಜೀವ ಉಳಿಸಿಕೊಳ್ಳ [illegible] ಶಿಷ್ಯರಲ್ಲಿ ಗಜಾನನು [illegible] ಒಬ್ಬನಾಗಿದ್ದನು.

ಚಿದಾನಂದರು [illegible] ನಕ್ಷತ್ರ [illegible] ಹೇಳಬಲ್ಲರು [illegible] ಜಗತ್ತಿನ [illegible] ಹೇಳಬಲ್ಲರು. ಈ ಸರ್ವ ವಿದ್ಯಾ [illegible] ತನಗೆ ಗಜಾನನನ ಮೇಲೆ ತುಂಬಾ ಪ್ರೀತಿ ಎಲ್ಲಾ ಶಿಷ್ಯರ [illegible] ಪ್ರಾಣದ ಆಶೆಯಿಂದ ವಿದ್ಯಾದೇವಿಯನ್ನು ತೊರೆದು ಓಡಿಹೋಗಿದ್ದರೂ ಗಜಾನನು ಹಾಗೆ ಮಾಡದೆ ವಿದ್ಯೆಯ [illegible] ಪ್ರಾಣವನ್ನೇ ಪಣವಿಟ್ಟ [illegible] ಆನಂದವನ್ನುಂಟು ಮಾಡುತ್ತಿತ್ತು. ಆದರೆ ಎಷ್ಟೇ ತಂದೆ [illegible] ಗಜಾನನನ ಇರುವಿಕೆಯು [illegible] ಅವರಿಗೆ ಹಳಿಯುತ್ತಿರಲಿಲ್ಲ. ಗಜಾನನ [illegible] ಬಾಧಿಯಾಗಿ [illegible] ವಿದ್ಯಾರ್ಜನೆಯು [illegible] ಇರುವಿಕೆಗೆ ಕಾರಣ ಲೀಲಾವತಿ!

* * *

[illegible] ಒಂದೂ ಧಾರ್ಮಿಕ [illegible] ದೃಷ್ಟಿಯು [illegible] ಹಿಂದೂ, ಮುಸ್ಲಿಂ, ಕ್ರಿಶ್ಚಿ [illegible] ಯನರೆಂಬ ಭೇದವಿಲ್ಲ. ಎಲ್ಲಾಗಲೂ ಅವ [illegible] ಗ್ರಾಮದ ಎಲ್ಲಾ [illegible] ಅವರನ್ನು ಗೌರವಿಸು [illegible] ಗ್ರಾಮ [illegible] ವನ್ನು ಹಚ್ಚಿ [illegible] ಕಲಹವಾದಾಗ [illegible] ನೀತಿಯು [illegible] ಎಲ್ಲಿ? ದೃಷ್ಟಿ [illegible] ತನ್ನ [illegible]

ಚಿಕ್ಕ ದೃಷ್ಟಿಯಿಂದ ನೋಡುತ್ತಾನೆ. ಆ ಮರೆಗೆ ತಂದೆಯಂತೆ ಗೌರವಿಸುತ್ತಿದ್ದ ಚಿದಾನಂದರ ಮೇಲೂ ಕೈಮಾಡಲು [illegible] ಭ್ರಾಂತ ಮಹಮದೀಯರು ಹಿಂಜರಿಯಲಿಲ್ಲ.

ಚಿದಾನಂದರು ಮಧ್ಯಾಹ್ನ ಮಲಗಿದ್ದರು. [illegible] ಅವರ ಶರೀರ ಪ್ರಕೃತಿ ಚೆನ್ನಾಗಿರಲಿಲ್ಲ. ಆದರೂ [illegible] ಅನುಸಂಧಾನ ಮಾಡಿದ [illegible] ಶಕ್ತಿಯೊಂದು ಅವರ [illegible] ದಲ್ಲಿ [illegible] ಲೀಲಾವತಿ ಪಕ್ಕದ [illegible] ವೇದ ಗ್ರಂಥ ಒಂದನ್ನು ಓದುತ್ತಿದ್ದಳು. ಗಜಾನನು ಯಾವುದೋ [illegible] ಗುಡಿಸಲಿನ ಹತ್ತಿರ [illegible] ನೆರಳಿನಲ್ಲಿ ಕುಳಿತಿದ್ದನು.

"ಕಾಫಿರ್ ಕೋ ಮಾರೋ, ಮುಸ್ಲಿಂ ಲೀಗ್ [illegible]" ಎಂಬ ಕೂಗು ಹಠಾತ್ತಾಗಿ ಕೇಳಿತು. ಗಜಾನನು ಭಾವ ಸಮಾಧಿಯಿಂದ ಎಚ್ಚರಗೊಂಡನು. ದೂರದಲ್ಲಿ ನೂರಾರು ಜನ [illegible] ತನ್ನ ಗುರು [illegible] ಬರುತ್ತಿದ್ದಾರೆ [illegible] ಜನರನ್ನು [illegible] ಒಬ್ಬನು ಪ್ರಶ್ನಿಸಿದನು "[illegible]?"

"ಹೌದು" ಗಜಾನನನೆಂದ.

"[illegible] ಹಿಡಿದು ತರಬೇಕೆಂದು [illegible] ಅಪ್ಪಣೆಯಾಗಿದೆ [illegible] ಅವರ [illegible] ಆದರೆ ಇವರು [illegible] ಅವರಿಗೆ [illegible] ಬೇಗ ಸಿದ್ಧಗೊಂಡು ಬ ಹೇಳು."

"ಅಯ್ಯೋ ಎಷ್ಟೋ [illegible] ನೀವು ಅಷ್ಟು ಬೇಗ ಬಂದಿರಿ. ಸ್ವಲ್ಪ ನಿಧಾನಿಸಿ, ನಾನು ಹೋಗಿ ಹೇಳುತ್ತೇನೆ. ಹತ್ತು ನಿಮಿಷದಲ್ಲಿ ಬರುತ್ತಾರೆ" ಗಜಾನನು ಹೇಳಿ ಕುಟೀರದೊಳಗೆ ಹೋದನು.

ಆ ಕೋಲಾಹಲವು ಚಿದಾನಂದರನ್ನು [illegible] ಬಾಗಿಲಿಗೆ [illegible] ಲೀಲಾವತಿಯು [illegible] ಗಜಾನನನು ಬಂದು ಪರಿಸ್ಥಿತಿಯನ್ನು ವಿವರಿಸಿದನು. ತನ್ನ ಗುರುವಿನ ಪ್ರಾಣ [illegible] ಮಾಡುವುದು ತನ್ನ ಕರ್ತವ್ಯವೆಂದು ನಿರ್ಧರಿಸಿದ ಗಜಾನನು ತನ್ನ ಗುರುವಿನಂತೆ [illegible] ಉಡುಗೆಗಳನ್ನು ಧರಿಸಿ ಗುರುವಿನ ವಸ್ತ್ರಗಳನ್ನುಟ್ಟು [illegible] ಹೊರಗೆ ಬಂದನು! ಮುಸ್ಲಿಂ ದಂಗೆಖೋರರು ಆತನನ್ನು [illegible] ಕೊಂಡು ಕಣ್ಮರೆಯಾದರು!

ತನ್ನ ತಂದೆಯ ಜೀವ ರಕ್ಷಣೆಗಾಗಿ ತನ್ನ ಪ್ರಾಣವನ್ನು ಕೊಡಲು ತಯಾರಾದ ಗಜಾನನ ತ್ಯಾಗವನ್ನು ನೆನೆದು ಲೀಲಾವತಿಯು ಕಣ್ಣುಗಳಿಂದ ಅಶ್ರುಧಾರೆ ಹರಿಯಿತು. ಒಂದೆಡೆ ತಂದೆಯ ಮೋಹವು [illegible] ಒಂದೆಡೆ ಗೆಳೆಯನ ಪ್ರೀತಿ ಇವೆರಡೂ ಆಕೆಯ ಹೃದಯವನ್ನು [illegible] ಸೆಳೆಯುತ್ತಿದ್ದವು. ಆಕೆ ನಿಜವಾಗಿಯೂ ಗಜಾನನನ್ನು ಹಿಡಿಯುವವಳು. ಆದರೆ ಆ ನಿರ್ಧಾರಕ್ಕೆ ಬರುವಷ್ಟರಲ್ಲಿ ಗಜಾನನು ಹೊರಟುಹೋಗಿದ್ದನು. ಗಜಾನನು [illegible] ದೂರ ಹೋದರೂ ಆಕೆಯ ಹೃದಯ ಮಂದಿರದಲ್ಲಿ ಸ್ಥಾನ ಪಡೆದನು. ಆಕೆ ಅನನ್ಯ ಪ್ರೀತಿಯಿಂದ ಆತನನ್ನು ಅನುದಿನ ನೆನೆಯುತ್ತಿದ್ದಳು.

* * *

ಒಳ್ಳೇ ಕೆಲಸವನ್ನು ಮಾಡುವವನಲ್ಲಿ ಒಂದು ಆತ್ಮಸ್ಥೈರ್ಯವಿರುತ್ತದೆ. ಗಜಾನನನಲ್ಲಿ ಯಾವ ಹೆದರಿಕೆಯು ಚಿಹ್ನೆಯೂ ಇರಲಿಲ್ಲ. [illegible] ಗಜಾನನನ್ನು ಸ್ವಾಗತಿಸಿ ಕೇಳಿದನು "ನಿಮಗೆ ಜ್ಯೋತಿಷ್ಯ ಬರುವುದಲ್ಲವೇ?"

"ಹೌದು" ಗಜಾನನೆಂದ.

"ಹಾಗಾದರೆ ಈಗ ದೇಶದಲ್ಲಿ ಹಬ್ಬಿರುವ ಹಿಂದೂ ಮುಸ್ಲಿಂ ಕೋಲಾಹಲದಲ್ಲಿ ಯಾರಿಗೆ ಜಯವಾಗುವದು?"

ಗಜಾನನು ಸ್ವಲ್ಪ ಯೋಚಿಸಿ "ಇದರಿಂದ ಯಾರಿಗೂ ಜಯವಾಗದು"!

ಸಿಟ್ಟಿಗೆದ್ದ ಮುಸ್ಲಿಂ [illegible] "ಅದರರ್ಥವೇನು?"

ಗಜಾನನ— ಜಯಾಪಜಯ [illegible] ಯವ [illegible] ಕೊನೆಗೂ [illegible]!

ಕ್ರೋಧಿತ ಮುಸ್ಲಿಂ [illegible] "ಆತನನ್ನು ಬಂದೀಖಾನೆಯಲ್ಲಿಡಿ. ಈತನ ಮಾತಿನ ಸತ್ಯತೆ [illegible] ವರೆಗೆ ಆತನು ಅಲ್ಲೇ ಇರಲಿ"

* * *

ಲೀಲಾವತಿಯ ಗ್ರಾಮದಲ್ಲಿ ಕೆಲವೇ ಹಿಂದುಗಳು ಉಳಿದರು. ಆ ಗ್ರಾಮ [illegible] ಆತನು ಚಿಕ್ಕಂದಿನಿಂದಲೇ ಲೀಲಾವತಿಯ ಮೇಲೆ ತನ್ನ ಆಸಕ್ತಿಯನ್ನು [illegible] ಆತನ [illegible] ಲೀಲಾವತಿಯ [illegible] ಹಿಂದೂ [illegible] ದಂಗೆ ಕೋರರ ಲೂಟಿಗೆ [illegible] ಉಳಿದಿದ್ದವು. ಹವಿ [illegible] ಹಿಂದೂ ಬಂಧು [illegible] ಚಿದಾನಂದರಲ್ಲಿಗೆ ಬರುತ್ತಿದ್ದನು. ಗಜಾನನು ಅಲ್ಲಿ ಇರುತ್ತಿದ್ದುದರಿಂದ ತನ್ನ ಪ್ರೇಮ ಪ್ರಯತ್ನಗಳಲ್ಲಿ ಆತನಿಗೆ ಆತಂಕವಾಗುತ್ತಿತ್ತು. ಈಗ ಗಜಾನನಿಲ್ಲ. ಹ [illegible] ಲೀಲಾವತಿಯ ಬಗ್ಗೆ ತನ್ನ [illegible] ಪ್ರೇಮಗಳನ್ನು ವ್ಯಕ್ತಪಡಿಸುತ್ತಿದ್ದನು. ಆದರೆ ಲೀಲಾವತಿಯ ಹೃದಯ [illegible] ಅನುಸಿತ್ತು. ಆದರ [illegible] ಪ್ರಾಂತ್ಯ [illegible] ಹೇಗೆ ಕೊಟ್ಟೀತು? ಹ [illegible] ಶ್ರೀಮಂತನೂ, ವಿದ್ಯಾವಂತನೂ, ಸಜ್ಜನನೂ ಹೌದು. ಚಿದಾನಂದರೂ ಆತನನ್ನು ಮೆಚ್ಚಿದ್ದರು. ಮುಸ್ಲಿಮರಲ್ಲಿ "ಆದರ್ಶ ಹಿಂದು" ಎನ್ನುತ್ತಿದ್ದರು. ಆದರೆ ಗಜಾನನನ ತ್ಯಾಗ, ಆತನ [illegible] ಯು ಲೀಲಾವತಿಯ ಹೃದಯವನ್ನು ಪೂರ್ಣ ಆವರಿಸಿತ್ತು. ಚಿದಾನಂದರೂ ತಮ್ಮ ಆದರ್ಶ ಶಿಷ್ಯನಿಗಾಗಿ ಆಗಾಗ ಕಂಬನಿ ಮಿಡಿಯುತ್ತಿದ್ದರು.

* * *

ದೇಶದಲ್ಲೆಲ್ಲಾ ಗಾಬರಿ, ಕೋಲಾಹಲ ಪ್ರಾರಂಭವಾಗಿದೆ. ಹಿಂದೂ ಮುಸ್ಲಿಂ ಜಗಳವನ್ನು ನಿಲ್ಲಿಸಲು ಮಹಾತ್ಮಾಗಾಂಧೀಜಿಯವರು ಆಮರಣ ಉಪವಾಸ ತೊಡಗಿದ್ದಾರೆ. ಎಲ್ಲೆಲ್ಲೂ ಸಭೆಗಳು, ಪ್ರಾರ್ಥನೆ ನಡೆಯುತ್ತಿವೆ. ಹಿಂದೂ ಮುಸ್ಲಿಮ ಸಹೋದರರರು ಒಂದಾಗಿ ಮಹಾತ್ಮರಲ್ಲಿಗೆ ಹೋಗಿ ತಮ್ಮ ಈ ಮಹಾ [illegible] ರದ ಕರದನ್ನು ಇನ್ನು ಅನುಸರಿಸೆವೆಂದು ಪ್ರಮಾಣ ಮಾಡುತ್ತಿದ್ದಾರೆ. "ಬ್ರಹ್ಮ ಬಲಂ ಮಹಾಬಲ" ಎಂಬ [illegible] ಮಹಾತ್ಮರ ಆತ್ಮ ಬಲದ ತಪಸ್ಸಿನಿಂದ ಹಿಂದೂ ಮುಸ್ಲಿಂ ದಂಗೆ ನಿಂತಿತು. ಎಲ್ಲರ ಬಿಡುಗಡೆಯಾಯಿತು. [illegible] ಹಿಡಿಸಿಕೊಂಡಿದ್ದ ಹಿಂದುಗಳನ್ನು ಮುಸ್ಲಿಮರೂ, ಮುಸ್ಲಿಮರನ್ನು ಹಿಂದುಗಳೂ ವಾಪಾಸು ಬಿಟ್ಟರು. ಗಜಾನನನ ಬಿಡುಗಡೆಯೂ ಆಯಿತು.

* * *

ಲೀಲಾವತಿ [illegible] ಹೊರಗಿನ ಮರದ ನೆರಳಿನಲ್ಲಿ ಕುಳಿತಿದ್ದಾಳೆ. ತಂದೆ ಚಿದಾನಂದರ ಆರೋಗ್ಯ ಚೆನ್ನಾಗಿಲ್ಲ. ಆಕೆಗೆ ಗಜಾನನನ ನೆನಪು ಕ್ಷಣ ಕ್ಷಣಕ್ಕೆ ಆಗುತ್ತಿತ್ತು. ದೂರದಲ್ಲಿ ವೃದ್ಧನೊಬ್ಬನು ಆತ್ರಮದ [illegible] ಬರುತ್ತಿರುವುದು ಆಕೆಗೆ ಗೋಚರಿಸಿತು. "ಅಯ್ಯೋ, ತಂದೆ ಚಿದಾನಂದರೇ? ಅದೇ ಉಡುಪು, ಅದೇ ನಡೆ! ಮನೆಯೊಳಗಿದ್ದವರು ಅಷ್ಟು ದೂರ ಏಕೆ ಹೋದರು!" ಹೀಗೆ ಯೋಚಿಸಿದ ಲೀಲಾವತಿ ಆ ಕಡೆ ಧಾವಿಸಿದಳು. [illegible] ಬಿಡುಗಡೆ ಹೊಂದಿ ಬರುತ್ತಿದ್ದ ಗಜಾನನಗೆ ಲೀಲಾವತಿಯು ಆತುರವನ್ನು ಕಂಡು ಹೃದಯ ಉಕ್ಕಿತು. ಆಕೆಯನ್ನು ಹಿಡಿದಪ್ಪಿ ಮುದ್ದಿಸಿದನು. ತನ್ನ ಕೃತ್ರಿಮ ಗಡ್ಡವನ್ನು ತೆಗೆದು ಹಾಕಿದನು. ಲೀಲಾವತಿಗೆ [illegible] ಆದರೂ ಹೃದಯದಲ್ಲಿ ತೃಪ್ತಿಯೂ ಅಪೂರ್ವ ಆನಂದವೂ ಇತ್ತು. ಇಬ್ಬರೂ [illegible] ಒಳಗೆ ಹೋಗಿ ಮಲಗಿದ್ದ ಚಿದಾನಂದರ ಪಕ್ಕದಲ್ಲಿ ಕುಳಿತರು. ಚಿದಾನಂದರಿಗಾದ ಆನಂದವು [illegible] ಅವರ ಕಣ್ಣುಗಳ ಮೂಲಕ ಹೊರಸೂಸುತ್ತಿತ್ತು. ಅವರು ಹೇಳಿದರು "ನಿಸ್ಸಹಾಯಕನಾದ ಮುದುಕನೊಬ್ಬನ ರಕ್ಷಣೆಗಾಗಿ ಇಷ್ಟೊಂದು ಕಷ್ಟ ಸಹಿಸಿದ ನಿನಗೆ ನನ್ನ ಧನ್ಯವಾದಗಳನ್ನು ಹೇಗೆ ಅರ್ಪಿಸಲಿ! ಏನನ್ನೂ ಕೊಡ ತಂದೆಗಾಗಿ ಇಷ್ಟು ಮಾಡಲಾರೆನು. ನಿನಗೆ ಕೊಡಲು ನನ್ನ ಹತ್ತಿರ ಕೇವಲ ನನ್ನ ವೇದ ಗ್ರಂಥಗಳು [illegible] ನೀನು ಅವುಗಳನ್ನು ಸ್ವೀಕರಿಸು. ನನಗೆ ಗೊತ್ತು! ನಿನಗೆ ಪೂರ್ಣ ಸಂತೋಷವಾಗಿಲ್ಲವೆಂದು! ಗಜಾನನಾ, ಲೀಲಾವತಿ ಹತ್ತಿರ ಬನ್ನಿರಿ."

ಚಿದಾನಂದರು ಲೀಲಾವತಿಯ ಹಸ್ತವನ್ನು ಗಜಾನನನಿಗೆ ಕೊಟ್ಟು ಹೇಳಿದರು. "ನನ್ನ ಸರ್ವಸ್ವವನ್ನೂ ನಿಮಗೆ ಕೊಟ್ಟಿರುವೆ. ನೀವು ಜ್ಞಾನದ ಶೋಧನೆಯಲ್ಲಿ ಸಫಲರಾಗಿರಿ. ನಿಮ್ಮ ಜೀವನವು ಸುಖಮಯವಾಗಲಿ"

ಲೀಲಾವತಿ–ಗಜಾನನರ ಕಣ್ಣುಗಳಲ್ಲಿ ಆನಂದದ [illegible] ತುಂಬಿದ್ದರೆ ಮಾತು ಮೌನವಾಗಿತ್ತು! ಇಬ್ಬರೂ ಏನೂ ಹೇಳಲಿಲ್ಲ!

ಭಾರತದ ನವರಾಜ್ಯ ಶಾಸನ.

ಹಿಂದೂದೇಶಕ್ಕೆ ಒಂದು ರಾಜ್ಯಘಟನೆಯನ್ನು ಸಿದ್ಧಪಡಿಸಲಿಕ್ಕಾಗಿ ೧೯೪೬ರಲ್ಲಿ ಸುಮಾರು ೩೦೦ ಸದಸ್ಯರಿಂದ ಕೂಡಿದ ರಾಜ್ಯಘಟನಾ ಸಭೆಯು ಏರ್ಪಾಡಾಯಿತು. ಈ ಸಭೆಯು ವಿಚಾರವಿನಿಮಯ ಮಾಡಿ ಭರತಖಂಡಕ್ಕಿರುವ ಹೊಸ ರಾಜ್ಯಪದ್ಧತಿಯ ಶಾಸನವನ್ನು ತಯಾರಿಸಿದ್ದು ಅದರ ಮೂರನೆ ವಾಚನವು ಕಳೆದ ತಾ. ೧೪ರಿಂದ ಪ್ರಾರಂಭವಾಯಿತು. ಭಾರತ ಸರಕಾರದ ನ್ಯಾಯ ಮಂತ್ರಿಗಳೂ, ಘಟನಾ ಕರಡು ತಯಾರಿಯ ಸಮಿತಿಯ ಅಧ್ಯಕ್ಷರೂ ಆದ ಡಾ. ಅಂಬೇಡ್ಕರವರು 'ಈ ಸಭೆಯಿಂದ ನಿಶ್ಚಯಿಸಲ್ಪಟ್ಟಿರುವ ರಾಜ್ಯಘಟನೆಯು ಮಂಜೂರಾಗಬೇಕು.' ಎಂಬ ಠರಾವನ್ನು ತಂದಾಗ ರಾಜ್ಯಘಟನೆಯ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿ ಸುಮಾರು ೮೦ ಸದಸ್ಯರು ಭಾಷಣ ಮಾಡಿದರು. ಅವರಲ್ಲಿ ಕೆಲವರ ಭಾಷಣದ ಸಾರಾಂಶವನ್ನು ಇದರಡಿ ಕೊಡಲಾಗಿದೆ. ಈ ರಾಜ್ಯ ಶಾಸನವು ನವಂಬರ್ ತಾ. ೨೬ರಲ್ಲಿ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿದೆ. ಮುಂದೆ ಬರುವ ಜನವರಿ ೨೪ರಲ್ಲಿ ಪುನಹ ರಾಜ್ಯಘಟನಾ ಸಭೆ ಸೇರಿ ಮುಂದಿನ ರಿಪಬ್ಲಿಕ್ ಭಾರತದ ಪ್ರಥಮ ಪ್ರೆಸಿಡೆಂಟರನ್ನು ಆರಿಸುವದು. ನಂತರ ರಾಜ್ಯಘಟನಾ ಸಭೆಯು ವಿಸರ್ಜನೆಯಾಗುವದು. ಜನವರಿ ತಾ. ೨೬ರಲ್ಲಿ ರಿಪಬ್ಲಿಕ್ ಭಾರತದ ಘೋಷಣೆಯಾಗಿ ಈ ರಾಜ್ಯ ಪದ್ಧತಿಯು ಜಾರಿಗೆ ಬರುವದು. ಅಂದಿನಿಂದ ಭಾರತ ಚರಿತ್ರೆಯ ಹೊಸ ಅಧ್ಯಾಯ ಪ್ರಾರಂಭವಾಗುವದು.

ಭಾರತದ ಹೊಸ [illegible] ಈ ಶಾಸನದ ಮೇಲೆ ಸದಸ್ಯರು ವ್ಯಕ್ತಮಾಡಿದ ಅಭಿಪ್ರಾಯಗಳಿಂದ ಇದರ ಗುಣದೋಷಗಳನ್ನು ಸಾಧಾರಣ ತಿಳಿಯಬಹುದಾಗಿದೆ.

ಮುನಿಸ್ವಾಮಿಪಿಳ್ಳೆ (ಹರಿಜನ ಮುಂದಾಳು)

ಹರಿಜನರಲ್ಲಿ ಪ್ರತಿಯೊಬ್ಬನೂ ಘಟನೆಯನ್ನು ಸ್ವಾಗತಿಸುತ್ತಾನೆ. ಸಭಾಕಾರ್ಯದ ಅಧ್ಯಕ್ಷತೆ ವಹಿಸಿ ಕಷ್ಟ ಸಮಸ್ಯೆಗಳನ್ನು ಬಗೆಹರಿಸಿದ ಡಾ. ರಾಜೇಂದ್ರರು ಪ್ರಸಂಶೆಗೆ ಅರ್ಹರು. ಓರ್ವ ನಂದನರನ್ನೂ, ಮತ್ತೋರ್ವ ತಿರುವಲ್ಲುವಾರನನ್ನೂ ಹಡೆದ ಹರಿಜನ ಸಮಾಜವು ಡಾ. ಅಂಬೇಡ್ಕರ್‌ರನ್ನೂ ಹೆತ್ತಿದೆ. ಇದಕ್ಕಾಗಿ ನಾವು ಹೆಮ್ಮೆಪಡುತ್ತೇವೆ.

ಸೇಠ್ ಗೋವಿಂದದಾಸ್ (ಮಧ್ಯಪ್ರಾಂತ)

ಈ ಘಟನೆ [illegible] ತಯಾರಿಯಲ್ಲಿ [illegible] ಖಂಡಿತ [illegible] ನಲ್ಲಭಾಷೆಯ [illegible] ಅಭಿವಂದನಾರ್ಹರು. ಇದು ಹಿಂದುಸ್ತಾನಿಯಲ್ಲಿ [illegible] ಇಂಗ್ಲೀಷಿನಲ್ಲಿ [illegible] ಇಂಗ್ಲೀಷಿನ ಬಿಕ್ಕೆ [illegible] ಭಾರತದ ಭಾವೀ ಚರಿತ್ರೆಯಲ್ಲಿ [illegible] ಶಾಶ್ವತವಾಗಿ ಚಿಹ್ನೆಯಾಗಿ ಉಳಿದುಕೊಳ್ಳುವದು ವಿಷಾದಕರ.

ಲಕ್ಷ್ಮೀನಾರಾಯಣ ಸಾಹು (ಒರಿಸಾ)

ಈ ಘಟನೆ ತಯಾರಾದ ವಿಧಾನವು ನಿರಾಶಾಜನಕವಾಗಿದೆ. ಇದು ಅಯೋಗ್ಯ ಘಟನೆ. ಈ ಘಟನೆಯಲ್ಲಿ ಪ್ರಾಂತಗಳು ಮುನಿಸಿಪಾಲಿಟಿಗಳ ಸ್ಥಾನಕ್ಕಿಳಿದಿವೆ. ಕಾಮನ್‌ವೆಲ್ತಿನಲ್ಲಿ ಭಾರತವು ಉಳಿಯುವದು ಆಕ್ಷೇಪಣೀಯ. ರಾಷ್ಟ್ರಧ್ವಜದಲ್ಲಿ ಚರಖಾದ ಬದಲು ಚಕ್ರವು ಇದ್ದು ನನಗೆ ತೃಪ್ತಿ ಇಲ್ಲ. ಈ ಘಟನೆಯು ಭವಿಷ್ಯದಲ್ಲಿ ಕಾರ್ಯಕಾರಿಯಾದೀತೆ ಎಂಬ ಸಂಶಯ ನನಗಿದೆ.

ಶ್ರೀ ಹನುಮಂತಯ್ಯ (ಮೈಸೂರು)

ಕರಡು ತಯಾರಿಯ ಸಮಿತಿಯ ಸದಸ್ಯರು ಸ್ವಾತಂತ್ರ್ಯ ಚಳವಳದಲ್ಲಿ ಇದ್ದ ಜನರಲ್ಲ. ಆದ್ದರಿಂದಲೇ ವೀಣೆ ಸಿತಾರಗಳ ನಾದದ ಬದಲು ಈ ಘಟನೆಯಲ್ಲಿ ಇಂಗ್ಲಿಷ್ ಸಂಗೀತವನ್ನೇ ಅವರು ಹಾಡಿದ್ದಾರೆ. ಮಹಾತ್ಮಜಿಯವರು ಅನುಮೋದಿಸಿದ್ದ ವಿಕೇಂದ್ರೀಕರಣ ರಾಜ್ಯಪದ್ಧತಿ ಕಡೆಗಣಿಸಲ್ಪಟ್ಟಿದೆ. ಪ್ರಾಂತಗಳನ್ನೂ, ಸಂಸ್ಥಾನಗಳನ್ನೂ ಸಂದೇಹ ದೃಷ್ಟಿಯಿಂದ ಕಾಣಲಾಗಿದ್ದು ಅಧಿಕಾರವು ದಿಲ್ಲಿಯಲ್ಲಿ ಕೇಂದ್ರೀಕೃತವಾಗಿದೆ.

ಬಾಬು ರಾಮ ನಾರಾಯಣ ಸಿಂಗ್ (ಬಿಹಾರ)

ದಾಸ್ಯದಲ್ಲಿದ್ದ ಭಾರತವು ಸ್ವತಂತ್ರವಾಗಿ ತನಗೊಂದು ರಾಜ್ಯಶಾಸನವನ್ನು ತಯಾರಿಸಿಕೊಂಡುದು ಸಂತೋಷವೆನಿಸಿದರೂ ಅದರಲ್ಲಿ ಭಾರತೀಯ [illegible] ಲಕ್ಷಣವಿಲ್ಲದಿರುವದು ವಿಷಾದಕರ. ಈ ಘಟನೆಯು ದಿಲ್ಲಿಯಲ್ಲಿ ತಯಾರಾಯಿತೋ ಯಾ ಲಂಡನಿನಲ್ಲಿಯೋ ಎಂದು ಕೇಳಬೇಕಾಗಿದೆ. ಸದಸ್ಯರ ಮನಸ್ಸಿನಲ್ಲಿ ಇನ್ನೂ ಬ್ರಿಟಿಷ್ ಮನೋವೃತ್ತಿಯೇ ತುಂಬಿದೆ. ಇದೊಂದು ವಿಲಕ್ಷಣ ಕಲಸು ಮೇಲೋಗರ ಘಟನೆಯಾಗಿದ್ದು [illegible] ಕೆಲಸ ಮಾಡುವವರಿಗೆ ಜನಸೇವೆ ಕಷ್ಟವಾಗಿದೆ. ಸರಕಾರಿ ನೌಕರರಿಗೆ ರೂ ೫೦೦೦ದ ವರೆಗೆ ವೇತನ ನಿಶ್ಚಯಿಸಿದ್ದು ಆಕ್ಷೇಪಣೀಯ. ಕರಾಚಿ ಕಾಂಗ್ರೆಸಿನಲ್ಲಿ ಯಾವ ಅಧಿಕಾರಿಯೂ ರೂ. ೫೦೦ಕ್ಕಿಂತ ಹೆಚ್ಚು ಪಡೆಯಕೂಡದೆಂದು ನಿರ್ಣಯಿಸಿದ್ದರೂ ಅದಿಲ್ಲಿ [illegible]. ಜನತಾ ಸೇವಕರು ಜನತೆಯ ಯಜಮಾನರಾಗುತ್ತಿದ್ದಾರೆ. ಇದು ಕಮ್ಯೂನಿಸ್ಟರಿಗೆ ಆಹ್ವಾನ.

ಕುಲಧರ ಚಾಲಿಹಾ (ಅಸ್ಸಾಂ)

ತಯಾರಿಸಲ್ಪಟ್ಟ ದೇಶದ ಉತ್ಕೃಷ್ಟ [illegible] ರವಿದೆ. ಸದ್ಯಸ್ಥಿತಿಯಲ್ಲಿ ಇದಕ್ಕಿಂತ ಉತ್ತಮವಾಗಿ ಬೇರೊಂದನ್ನು ತಯಾರಿಸುವದು ಅಸಾಧ್ಯ. ಅಸ್ಸಾಮಿನ ಕೆಲವು ವಿಲಕ್ಷಣ ಅವಶ್ಯಕತೆಗಳಿಗನುಗುಣವಾಗಿ [illegible] ಕೆಲವು ವಿಭಾಗಗಳನ್ನು ಸ್ಪಷ್ಟೀಕರಿಸುವದು ಅವಶ್ಯ.

ಮಿಸ್ ಅಮ್ಮು ಸ್ವಾಮಿನಾಥನ್

ಅತ್ಯಂತ ಸುಂದರ ಘಟನೆ. ಅದರ [illegible] ತತ್ವಗಳು ಆದರ್ಶಪ್ರಾಯವಾಗಿ [illegible] ತಯಾರಿಸಲು [illegible] ತೆಗೆದುಕೊಂಡಿತು [illegible] ಕೆಲವು ಭಾಗಗಳು ಹೆಚ್ಚು [illegible] ಸಮಯ ತೆಗೆದುಕೊಂಡಿದ್ದರೂ ಭಾರತವು [illegible] ವರ್ಷಗಳಲ್ಲಿ ಇದನ್ನು ಸೃಷ್ಟಿಕರವಾಗಿ ಸಾಧಿಸಿದೆ ಎಂಬ ಸಮಾಧಾನ ಎಲ್ಲರಿಗಿರಲಿ.

ಗೋಕುಲಭಾಯಿಭಟ್ (ರಾಜಸ್ಥಾನ)

ಘಟನೆಯನ್ನು ಹೊಗಳುವ ಯಾ ತೆಗಳುವ ಕಾಲವಿದಲ್ಲ. ಅದರಂತೆ ಆಗುವ ಕೆಲಸದ ಮೇಲೆ ಅದರ ಯೋಗ್ಯತೆ ನಿಂತಿದೆ. ಮಹಾತ್ಮಾಗಾಂಧಿ ಮೊದಲಾದ ಹುತಾತ್ಮರ ಹೆಸರುಗಳು ಈ ಘಟನೆಯಲ್ಲಿ ಪಡಿಮೂಡಬೇಕಿತ್ತು. ಏಕೆಂದರೆ ಭಾರತಕ್ಕೆ ಹೊಸ ಶಾಸನ ರಚಿಸಿಕೊಳ್ಳುವ ಅನುವು ಇವರ ತ್ಯಾಗಗಳಿಂದಲೇ ದೊರಕಿತು.

ಎನ್. ವಿ. ಗಾಡ್ಗೀಳ್ (ಮುಂಬಯಿ ಪ್ರಾಂತ)

11. ಠ—ರೆವಿನ್ಯೂ ರೆಗ್ಯುಲೇಶನ್ 205ನೇ ರೂಲ್ಸ್ ಮೇರೆ ಕಂದಾಯ ಮಾಫಿ ಕೊಡುವಾಗ ಐಶ್ವರ್ಯವಂತ ಬಡವ ಎಂಬ ಭೇದವಿರಬಾರದು.

ಜ.—ಠರಾವು ತಿಳಿಯಲಿಲ್ಲ.

12. ಠ—ಗೆರಿಕಾಡು ಸೈಸಾರಿಯಾದರೂ ಕಡಿಯಲಿಕ್ಕೆ ಬಿಡಬೇಕು.

ಜ.—ಅವಶ್ಯ ವಿರುವವರು ಬರಕೊಂಡರೆ ಯೋಚಿಸಲಾಗುವದು.

14. ಠ.—ಬಿಟ್ಟಂಗಾಲ, ಮರೆನಾಡು, ಕುದಿಕೇರಿ ರಸ್ತೆ ಮಾಡಿಕೊಡಬೇಕು.

ಜ.—ಅಜಮಾಯಿಸಲಾಗುತ್ತೆ.

ಠರಾವುಗಳು.

15. ಸ್ಪೇಶಲ್ ಮೆಜಿಸ್ಟ್ರೇಟರುಗಳನ್ನು ನೇಮಿಸಬೇಕು.

20. ಇಬ್ಬರು ಪ್ರಯಾಣಮಾಡುವ ಸಬ್ ಅ. ಸರ್ಜನರನ್ನು ನೇಮಿಸಬೇಕು.

ಹಾರಂಗಿ ನಾಲೆ ಮಾಡಿಕೊಡಬೇಕು.

ಜವಾಬು.

ಈ ವಿಷಯಗಳು ಪರಿಶೀಲನೆಯಲ್ಲಿವೆ.

16. ಠ.—ಕುದಿಕೇರಿ, ಪೊನ್ನಂಪೇಟೆ, ನಾಪೋಕ್ಲು, ಸೋಮವಾರಪೇಟೆ ಈ ಸ್ಥಳಗಳಲ್ಲಿ ಲೋವರ್ ಸೆಕೆಂಡರಿ ಸ್ಕೂಲ್ ಮಾಡಿಕೊಡಬೇಕು.

ಜ.—ಇದಕ್ಕೆ ಹೆಚ್ಚಿಗೆ ಖರ್ಚು ಬೇಕಾದ್ದರಿಂದ ಸಾಧ್ಯವಿಲ್ಲ. ಹೈಯರ್ ಎಲಿಮೆಂಟರಿ ಶಾಲೆಗಳನ್ನೇ ಮಾಡಿಕೊಟ್ಟು ಹೆಚ್ಚಿಗೆ ಮಾಸ್ತರುಗಳನ್ನು ನೇಮಿಸುವದೇ ಸರಕಾರದ ಇರಾದೆಯಾಗಿದೆ

24. ಠ—ಸ್ವಂತ ಉಪಯೋಗಕ್ಕೆ ಗ್ರಾಮದಿಂದ ಗ್ರಾಮಕ್ಕೆ ಮರ ತೆಗೆದುಕೊಂಡು ಹೋಗಲು ಮಾಫಿ ರಹದಾರಿ ಇರಬೇಕು.

ಜ.—ಗಾಡಿ ಒಂದಕ್ಕೆ ಒಂದು ಆಣೆ ಮಾತ್ರ ವಸೂಲ್ ಮಾಡಲಾಗುತ್ತೆ.

29. ಠ—ಕಣಿವೆ ಹೋಬಳಿಯಲ್ಲಿ ಅನಾರೋಗ್ಯವನ್ನು ಹೋಗಲಾಡಿಸಲಿಕ್ಕೆ ಕುಡಿಯುವ ನೀರು ಭಾವಿಗಳನ್ನು ತೋಡಿಸಿ ಕೊಡಬೇಕು.

ಜ.—ಡಿಸ್ಟ್ರಿಕ್ಟ್ ಬೋರ್ಡಿನವರು ಉತ್ತರ ಕೊಡಗಿನಲ್ಲಿ ಭಾವಿ ತೋಡಿಸುವ ಯೋಚನೆಯಲ್ಲಿದ್ದಾರೆ.

32. ಠ.—30 ಮುಸಲ್ಮಾನ್ ವಿದ್ಯಾರ್ಥಿಗಳು ದೊರೆಯಬಹುದಾದಲ್ಲಿ ಹಿಂದುಸ್ಥಾನಿ ಸ್ಕೂಲ್‌ಗಳನ್ನು ಇಟ್ಟು ಮಾಫಿಯಾಗಿ ವಿದ್ಯೆ ಕೊಡಬೇಕು.

ಜ.—ಗುರ್ತಿಸಿಡಲಾಗಿದೆ.

33. ಠ.—ಬಾಳೆಲೆ ಮತ್ತು ವಿರಾಜಪೇಟೆಯಲ್ಲಿ ಪೋಸ್ಟಾಫೀಸ್ ಇಡಬೇಕು. ಮತ್ತು ಎಲ್ಲಾ ಪೋಸ್ಟಾಫೀಸ್‌ಗಳಿಗೂ ಹೆಚ್ಚಾಗಿ ಪೋಸ್ಟ್‌ಬೋರ್ಡ್‌ಗಳನ್ನು ಇಡಬೇಕು.

ಜ—ಆಲೋಚನೆಯ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಗೆ ಕಳುಹಿಸಲಾಗಿದೆ.

34. ಠ.—ಶಾಂತಳ್ಳಿ ಪರಂಬು ಮತ್ತು ಹುದಿಕೇರಿ ಸ್ಕೂಲ್‌ಗಳಿಗೆ ಸಬ್ ಅಸಿಸ್ಟೆಂಟು ಸರ್ಜನರು ಬರುತ್ತಿರುವಂತೆ ಮಾಡಬೇಕು.

ಜ.—ಎಲ್ಲಾ ಶಾಲೆಗಳನ್ನೂ ಡಾಕ್ಟರುಗಳು ನೋಡುತ್ತಿರಬೇಕೆಂಬ ವಿಷಯವು ಆಲೋಚನೆಯಲ್ಲಿದೆ.

37. ಠ—ಸೇಂದಿ ಸಾರಾಯಿ ಅಂಗಡಿಗಳನ್ನು ಹಬ್ಬ, ಸಂತೆ, ದಿನಗಳಲ್ಲಿ ಮುಚ್ಚಬೇಕು.

ಜ.—ಗುರ್ತಿಸಿ ಇಡಲಾಗಿದೆ.

38. ಠ.—1884 ರಿಂದ ಈಚೆಗೆ ಮಂಜೂರಾದ ಭೂಮಿಗೂ ಸಹ 10 ಎಕರೆ ಹಿತ್ಲು ಕೊಡಬೇಕು.

ಜ.—ಹಿತ್ಲುಭಾಗವನ್ನು ಮನೆ ಮತ್ತು ಕಣಕ್ಕಾಗಿ ಕೊಡುವದಾಗಿದೆ. ಈಗ ಕೊಡುತ್ತಿರುವ ಒಂದು ಎಕರೆ ಸಾಕಾಗಿದೆ.

39. ಠ.—ಸಿವಿಲ್ ಕೋರ್ಟಿನಲ್ಲಿ ಜಪ್ತಿಯಾಗುವ ಕ್ಷೇತ್ರದಿಂದ ಸಾಲಗಾರನ ಜೀವನಕ್ಕೆ ಬಿಡುವಂತೆ ರೂಲ್ ಮಾಡಿಕೊಡಬೇಕು.

ಜ.—1911ನೇ ಇಸ್ವಿಯಲ್ಲಿ ಯೋಚಿಸಿ ಸಾಧ್ಯವಿಲ್ಲವೆಂತ ಬಿಟ್ಟುಬಿಡಲಾಯಿತು.

40. ಠ.—ಅಮ್ಮತ್ತಿ ಮತ್ತು ವಿರಾಜಪೇಟೆ ವೆಟರ್ನರಿ ಅಸಿಸ್ಟೆಂಟರುಗಳು ಸಿದ್ದಾಪುರ ಮತ್ತು ಗೋಣಿಕೊಪ್ಪಲು ಸಂತೆಗಳಿಗೆ ಮಾರಾಟಕ್ಕೆ ಬರುವ ದನಗಳನ್ನು ಪರೀಕ್ಷಿಸಲಿಕ್ಕೆ ಹೋಗುತ್ತಿರಬೇಕು.

ಜ.—ಹೆಚ್ಚಿನ ಕುರಿತದ ಕೆಲಸಕ್ಕೆ ಅಟಂಕವಿಲ್ಲದಂತೆ ಅದಾವನ್ನು ಜಾರಿಗೆ ತರಲಾಗುತ್ತೆ.

44. ಠರಾವುಗಳು.—ಬಾಣೆಯಲ್ಲಿ ಕಾಫಿ ವ್ಯವಸಾಯ ಮಾಡಿದಾಗ ಫಲ ಬರುವವರೆಗೂ ಕಂದಾಯ ಹಾಕಬಾರದು.

45. ಬಾಣೆಯಲ್ಲಿ ಯಾವ ವ್ಯವಸಾಯ ಮಾಡಿದಾಗಲೂ ಕಂದಾಯ ಹಾಕಬಾರದು.

ಜ.—ಬಾಣೆಯನ್ನು ವರ್ಗದ ಸಹಾಯಕ್ಕೆ ಕೊಟ್ಟದ್ದಾಗಿದೆ. ಕೊಟ್ಟ ಕರಾರುಗಳಿಗೆ ಒಳಪಟ್ಟು ವ್ಯವಸಾಯ ಮಾಡಿದರೆ ತುಂಬಾ ರಿಯಾಯಿತಿಗಳನ್ನು ಕೊಡಲಾಗಿದೆ.

ಠರಾವುಗಳು.

47. ಸಂಪಾಜೆ, ಶನಿವಾರಸಂತೆಗಳಲ್ಲಿ ಆಸ್ಪತ್ರೆ ಇಡಬೇಕು. ನಾಪೋಕ್ಲು ಶ್ರೀಮಂಗಲ ಆಸ್ಪತ್ರೆಗಳಲ್ಲಿ ಪೇಷಂಟರುಗಳು ಇಳಕೊಳ್ಳಲಿಕ್ಕೆ ಸ್ಥಳ ಮಾಡಬೇಕು. ಎಲ್ಲಾ ಆಸ್ಪತ್ರೆಗಳಲ್ಲೂ ಸೂಲಗಿತ್ತಿಯರನ್ನು ಇಡಬೇಕು.

70. ಇರುಪು ರಸ್ತೆಯನ್ನು ಡಿ. ಬೋರ್ಡಿನವರು ತೆಗೆದುಕೊಳ್ಳಬೇಕು.

71. ಶೆಟ್ಟಿಗೇರಿಗೂ ಕುರ್ಚಿಗೂ ಮಧ್ಯೆ ಒಂದು ರಸ್ತೆ ಮಾಡಬೇಕು.

ಜವಾಬು.—ಈ ಮೂರು ವಿಷಯಗಳನ್ನು ಡಿ. ಬೋ. ಆಲೋಚಿಸುತ್ತಿದೆ.

49. ಠ.—ಸಂಪಾಜೆ ನಾಡಿನಲ್ಲಿ ಅಡಿಕೆ ತೋಟಗಳಿಗೆ ಬಾಣೆ ಕೊಡಬೇಕು.

ಜ.—ರೂಲ್ಸ್‌ನಲ್ಲಿ ಕಾಫೀ ವ್ಯವಸಾಯಕ್ಕೆ ಮಾತ್ರ ಬಾಣೆ ಕೊಡಬಹುದೆಂತ ಇದೆ.

50. ಠ.—ದೇವನೂರು, ಬಾಳಾಜಿ, ನಂಜರಾಜಪಟ್ಣ ಚಿಕ್ಕ ಶಾಲೆಗಳನ್ನು ಒಳ್ಳೇ ದುರಸ್ತಿನಲ್ಲಿ ಇಡಬೇಕು.

ಜ.—ಇದಕ್ಕೆ ಗಮನ ಕೊಡಲಾಗಿದೆ.

51. ಠ.—ರಾಮತೀರ್ಥ ನಾಲೆ ಮಾಡಿಕೊಡಬೇಕು.

ಜ.—ಇದರ ಸರ್ವೆಯನ್ನು ಕಾಯುತ್ತಿದ್ದೇವೆ.

53. ಕೋಟೂರು ಬೆಕ್ಕೆಸೊಡ್ಲೂರು ಗ್ರಾಮ ಬೌಂಡ್ರಿಯ ಲಕ್ಷ್ಮಣ ತೀರ್ಥಕ್ಕೆ ಸೇತುವೆ ಮಾಡಿ ಕೊಡಬೇಕು.

ಜ.—ಇತರ ಅನೇಕ ಸೇತುವೆಗಳು ಸರಕಾರದ ಮುಂದೆ ಇವೆ. ಇದನ್ನು ಈಗ ಯೋಚಿಸಲಾಗುವದಿಲ್ಲ.

54. ಠ.—ನಾಪೋಕ್ಲು ಮತ್ತು ಪೊನ್ನಂಪೇಟೆ ಎಗ್ರಿಕಲ್ಚರಲ್ ಫಾರಮ್‌ಗಳನ್ನು ಎಗ್ರಿಕಲ್ಚರಲ್ ಅಸಿಸ್ಟೆಂಟ್ ನೋಡುತ್ತಿರಬೇಕು.

ಜ.—ಇವು ಅಷ್ಟು ದೊಡ್ಡ ಫಾರಮ್‌ಗಳಲ್ಲ.

55. ಠ—ಪೊನ್ನಂಪೇಟೆ ಬೋರ್ಡಿಂಗ್ ಮನೆಯನ್ನು ಬಡಾಯಿಸಬೇಕು.

ಜ.—ಯೋಚನೆಯಲ್ಲಿದೆ.

56. ಠ.—ಮಡಿಕೇರಿ ಬೀದಿನಲ್ಲಿರುವ ಕೆರೆಯನ್ನು ದುರಸ್ತು ಮಾಡಬೇಕು.

ಜ.—ಮಾಡಿಯಾಯಿತು.

ಠರಾವುಗಳು.

58. ಹಾತೂರು ಕುಂದ ರಸ್ತೆಯನ್ನು ದುರಸ್ತಿನಲ್ಲಿಡಬೇಕು.

60. ಹುದಿಕೇರಿ ಮತ್ತು ಕರಡ ಶಾಲೆಗಳಲ್ಲಿ ಚಿತ್ರದ ಕೆಲಸ ಕಲಿಸಬೇಕು.

61. ಹಾಕತ್ತೂರಿನಿಂದ ಸಿದ್ದಾಪುರಕ್ಕೆ ಒಂದು ರಸ್ತೆ ಮಾಡಬೇಕು.

62. ಮಾರ್ಕೆಟ್ ಫೀಸಿನ ದರದ ಪಟ್ಟಿಯನ್ನು ಮಾರ್ಕೆಟ್ಟಿನಲ್ಲಿ ತಿಳಿವಳಿಕೆ ಬಗ್ಗೆ ಇಡಬೇಕು.

29. ಬಿಟ್ಟಂಗಾಲ ಬಾಡಗ, ಶೆಟ್ಟಿಗೇರಿ ರಸ್ತೆಯನ್ನು ಸರಿಯಾಗಿ ಇಡಬೇಕು.

ಜವಾಬು.—ಈ ಎಲ್ಲಾ ವಿಷಯಗಳಿಗೆ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಗಮನ ಕೊಡಲಾಗುತ್ತೆ.

63. ಠ.—ಕೊಡಗಿನ ಮುಖ್ಯ ಮನೆತನದವರೆಂಬವರ ಹೆಸರು ಬರೆದಿರುವ ಪುಸ್ತಕವನ್ನು ನಾಶಪಡಿಸಬೇಕು.

ಜ.—ಇದರ ವಿಷಯದಲ್ಲಿ ತಪ್ಪುತಿಳುವಳಿಕೆ ಇರುವಂತೆ ಕಾಣುತ್ತದೆ. ಕುಟುಂಬಗಳ ಘನತೆಯ ದರ್ಜೆಯನ್ನು ಈ ಪುಸ್ತಕವು ತೋರಿಸುವದಿಲ್ಲ.

64. ಠ.—ಸಂಘದಿಂದ ನೇಮಿಸಲ್ಪಡುವ ಕಮಿಟಿಗಳು ವೀರಾಜಪೇಟೆ ಮಡಿಕೇರಿ ಬೋರ್ಡಿಂಗ್ ಮನೆಗಳನ್ನು ನೋಡಿಕೊಳ್ಳುವಂತೆ ಹುಕುಂ ಮಾಡಬೇಕು.

ಜ. ಪಂಚಾಯ್ತುರನ್ನೂ ಸರಕಾರದವರು ಈ ಮೊದಲೇ ನೇಮಿಸಿದ್ದಾರೆ.

65. ಠ.—ಕೊಡಗು ಮತ್ತು ಅಮ್ಮ ಕೊಡಗು ಜನರ ಭೂಮಿ ಜಮಾಬಂದಿಯನ್ನು ಪರಭಾರೆ ಮಾಡದವರ ಹೊರತು ಹಂಗಿಸರ ಹೆಸರಿಗೆ ವರ್ಗಾಯಿಸಬಾರದು.

ಜ.—ಇದು ಹಿಂದು ಲಾಕ್ಕೂ ಕೊಡಗು ಪದ್ಧತಿಗೂ ವಿರೋಧವಾಗಿ ಕಾಣುತ್ತದೆ.

66. ಠ—ಜೋಡಿ ಭೂಮಿಗಳ ಹಕ್ಕನ್ನು ಆಲೋಚಿಸಲಿಕ್ಕೆ ಒಂದು ಕಮಿಟಿ ಮಾಡಬೇಕು.

ಜ.—ಗೊತ್ತಾಗಲಿಲ್ಲ. ಜೋಡಿ ಭೂಮಿಯು ಅರ್ಧ ಕಂದಾಯವು ದೇವರಿಗೆ ಸಲ್ಲಬೇಕು. ಇದು ಗೊತ್ತಿರುವಾಗ ಕಮಿಟಿ ಪ್ರಯೋಜನವೇನು?

67. ಠ.—ಮುಂಡ ಜಹಗೀರುಗಳ ಮೇಲೆ ಮರಾಧಿಕಾರಿಗಳಿಗೆ ಎಷ್ಟು ಹಕ್ಕಿದೆ ಯೆಂಬುದನ್ನು ಆಲೋಚಿಸಲು ಕಮಿಟಿಯಾಗಬೇಕು.

ಜ.—ಕೌನ್ಸಿಲ್‌ನಲ್ಲಿ ಈ ಚರ್ಚೆ ಬರುತ್ತದೆ.

72. ಠ.—ಸಿಟಡ್ಲುರು ಬಳಿ ಇರುವ ಕಾರ್‌ಮಾಡ್ ಕುಮ್ಮಿ ಎಂಬ ಟೀಕ್ ತೋಟವನ್ನು ತೆಗೆದುಬಿಡಬೇಕು.

ಜ.—ಈಗ ಇರುವ ತೋಟಕ್ಕಿಂತ ಹೆಚ್ಚಾಗಿ ಮಾಡುವದಿಲ್ಲವೆಂತ ಇಲಾಖೆಯವರು ಒಪ್ಪುತ್ತಾರೆ.

73. ಠ—ಜಮ್ಮ ಬಾಣೆಯಲ್ಲಿ ಭೂಮಿ ಮಾಡಿದಾಗ ಜಮ್ಮದ ಕಂದಾಯವೇ ಹಾಕಬೇಕು.

ಜ.—ಮೊದಲೇ ನಿರ್ಧರಿಸಲಾಗಿದೆ. ಪುನಃ ಯೋಚಿಸಲು ಕಾರಣವಿಲ್ಲ.

74. ಠ—ಫಾರೆಸ್ಟ್ ಇಲಾಖೆಯಿಂದ ಬಿಡುಗಡೆಯಾಗುವ ವೆಟರ್ನರಿ ಅಸಿಸ್ಟೆಂಟನ್ನು ಪೊನ್ನಂಪೇಟೆಯಲ್ಲಿ ಇಡಬೇಕು.

75. ನಾಪೋಕ್ಲಿನಲ್ಲಿ ವೆಟರ್ನರಿ ಅಸಿಸ್ಟೆಂಟನ್ನು ಇಡಬೇಕು.

ಜ—ಸಮಯ ಬಂದಾಗ ಯೋಚಿಸಲಾಗುತ್ತೆ.

77. ಠ.—ವಿರಾಜಪೇಟೆಯಲ್ಲಿ ಕೃಗಾರಿಕೆ ಸ್ಕೂಲ್ ಇಡಬೇಕು.

ಜ.—ವಿಸರ್ಜಿಸಲಾಗಿದೆ.

78. ಠ.—ಅಪಾಯದ ಮರಣವಾದಾಗ ಪೊಲೀಸ್ ಸ. ಇ. ರವರು ಮತ್ತು ಸಬ್ ಅಸಿಸ್ಟೆಂಟ್ ಸರ್ಜನರು ಕೂಡಲೆ ವರ್ತಮಾನಸಿಕ್ಕಿದ ಸ್ಥಳಕ್ಕೆ ಹೋಗಬೇಕು.

ಜ.—ಕ್ರಿಮಿನಲ್ ಪ್ರೊಸೀಜರ್ ಕೋಡಿನ 174ನೆ ಸಕ್ಷನ್ ಈ ಬಗ್ಗೆ ಸಾಕಾಗಿದೆ.

ತಿಳಿಯಲಿಲ್ಲವೆಂಬ ಠರಾವುಗಳನ್ನು ವಿವರಿಸಿ ಬರೆದಿದ್ದೇನೆ ಕಳುಹಿಸಿದೆಯೆಂತ ಕಾಣಬಂದಿದೆ.

ಈ ಕೆಳಗಿನ ಠರಾವುಗಳಿಗೆ ಜವಾಬು ಬರಲಿಲ್ಲ.

2. (ಎ.) ಈಗ ಕೊಟ್ಟಿರುವ ಕೌನ್ಸಿಲಿನಿಂದ ತೃಪ್ತಿಯಿಲ್ಲ. ದೊಡ್ಡ ಪ್ರಾಂತ್ಯಗಳ ಹಕ್ಕುಗಳನ್ನೇ ನಮಗೆ ಕೊಡಬೇಕು.

(ಬಿ.) ಹೆಂಗಸರಿಗೆ ಕೌನ್ಸಿಲಿಗೆ ಓಟ್ ಕೊಡುವ ಹಕ್ಕು ಕೊಡಬೇಕು.

(ಸಿ.) ನಾಡು ಖಜೇರಿ ರಿಕಾರ್ಡುಗಳೆಲ್ಲಾ, ಕ್ರಿಮಿನಲ್ ಕೇಸಿನ ಸಾಕ್ಷಿ ಕೈಫೀತು ಸಹ ಕನ್ನಡದಲ್ಲಿಡಬೇಕು. ಮತ್ತ ಲಿಖಾವಟ್ಟುಗಳನ್ನು ರಿಜಿಸ್ಟರ್ ಮಾಡುವಾಗ ಬರೆಯುವ ಇಂಡಾರ್ಸ್‌ಮೆಂಟುಗಳು ಕನ್ನಡದಲ್ಲಿ ಇರಬೇಕು.

12. ಡಿ. ಬೋರ್ಡು ಹಾಕಿದ ಲೋಕಲ್ ಫಂಡ್ ಸೆಸ್ ಒಂದಾಣೆಯನ್ನು ರದ್ದುಪಡಿಸಬೇಕು.

19. ನಿಷಾ ಪದಾರ್ಥಗಳ ಮಾರಾಟದ ಸ್ಥಳವನ್ನು ಆಯಾ ಊರಿನ ಜನರ ಅಭಿಪ್ರಾಯದ ಮೇರೆ ನಿರ್ಣಯಿಸಬೇಕು.

23. ಸೇಂದಿ, ಸಾರಾಯಿ ಕಂಟ್ರಾಕ್ಟುಗಳಿಗೂ, ಇಲಾಖೆ ಕಂದಾಯಕ್ಕೂ, ದೋಣಿ ಕಾಂಟ್ರಾಕ್ಟಿಗೂ ಭೂಮಿ ಗಿರವಿ ತೆಗೆದುಕೊಳ್ಳಬಾರದು, ತೆಗೆದುಕೊಂಡದ್ದಕ್ಕೂ ಹರಾಜು ಮಾಡಬಾರದು.

25. ದಕ್ಷಿಣ ಕೊಡಗಿನ ಪಟೇಲರುಗಳಿಗೂ ಕುಳುವಾಡಿಗಳನ್ನು ಕೊಡಬೇಕು.

26. ಕುಳುವಾಡಿಗಳು ರಿಕಾರ್ಡು, ಇಸ್ತಾರು ತೆಗೆದುಕೊಂಡು ಹೋದದ್ದಕ್ಕೆ ಭತ್ಯ ಕೊಡಬೇಕು.

27. ಗೋಣಿಕೊಪ್ಪಲು, ಬಾಳಲೆ ರಸ್ತೆ ಮಾಡಿಕೊಡಬೇಕು.

35. ಕಿಗ್ಗಟ್ಟುನಾಡು ತಾಲೋಕಿನವರಿಗೆ ಮಳೆ ನಷ್ಟಕ್ಕೆ ತಕಾವಿ ಸಾಲವನ್ನು ಧಾರಾಳವಾಗಿ ಕೊಡಬೇಕು.

57. ಕುಂದ ಹುಡುಗ ಹುಡುಗಿಯರ ಶಾಲೆಗಳನ್ನು ರಿಪೇರಿಮಾಡಿ, ಭಾವಿಯನ್ನು ತೋಡಿಸಿಕೊಡಬೇಕು.

69. ಬೆಳ್ಳುಮಾಡು, ನಾಪೋಕ್ಲು, ಭಾಗಮಂಡಲ ರಸ್ತೆ ಮಾಡಿಕೊಡಬೇಕು.

ಮೂರ್ನಾಡು, 11—4—1925.

ಸಿ. ಎಸ್. ವೆಂಕಪ್ಪಯ್ಯ, ಜನರಲ್ ಸೆಕ್ರೆಟರಿ.

ಹಿಂದುಸ್ಥಾನಕ್ಕೆ ಎಷ್ಟು ರಾಟಿಗಳು ಬೇಕು?

ಖಾದೀ ಭಕ್ತನೊಬ್ಬನು ಮಹಾತ್ಮ ಗಾಂಧಿಯವರಿಗೆ ಹಿಂದುಸ್ಥಾನಕ್ಕೆ ಎಷ್ಟು ರಾಟಿಗಳು ಬೇಕಾಗುವವೆಂಬುದರ ಲೆಕ್ಕವನ್ನು ಕಳಿಸಿರುವನು. ಇದರ ಸಾರಾಂಶವೇನಂದರೆ—

ಈ ದೇಶದ ಜನಸಂಖ್ಯೆ ೩೧ಕೋಟಿ ೬೦ಲಕ್ಷ. ಒಬ್ಬನಿಗೆ ಸರಾಸರಿ ೧೦ ವಾರ ಬಟ್ಟೆಯು ಬೇಕು. ಅಂದರೆ ಒಟ್ಟು ನಮಗೆ ೬೩೪ ಕೋಟಿ ೪೦ ಲಕ್ಷ ವಾರು ಬಟ್ಟೆಬೇಕು. ದಿನಕ್ಕೆ ನಾಲ್ಕು ಗಂಟೆ ರಾಟಿತಿರುಗಿದರೆ ವರ್ಷಕ್ಕೆ ೪೦ ಪೌಂಡು ನೂಲು ಹೊರಡುತ್ತದೆ. ಅದರಿಂದ ೧೬೦ ವಾರು ಬಟ್ಟೆಯು ಹುಟ್ಟುತ್ತದೆ. ಈ ಲೆಕ್ಕದಿಂದ ನೋಡಲು ನಾಲ್ಕು ಕೋಟಿ ರಾಟಿಗಳು ಅಂದರೆ ಪ್ರತಿ ಎಂಟು ಜನರಿಗೊಂದರಂತೆ ರಾಟಿಯು ಬೇಕು; ಪ್ರತಿ ದಿವಸ ಇದಕ್ಕೂ ಹೆಚ್ಚಾಗಿ ಕೆಲಸ ಮಾಡಿದರೆ ೩ ಕೋಟಿ ರಾಟಿಗಳು ಸಾಕಾಗುವವು. ಅಂದರೆ ೧೦ ಜನರಿಗೊಂದರಂತೆ ರಾಟಿಯು ಬೇಕು.

ಸರಾಸರಿ ಒಂದು ಮಗ್ಗದಿಂದ ೫ ವಾರು ಅರಿವೆಯು ಹೊರಡುತ್ತದೆಂದು ಹಿಡಿದರೆ (ವರ್ಷದಲ್ಲಿ ಕೆಲಸದ ದಿವಸಗಳು ಸರಾಸರಿ ೨೫೦) ರಾಟಿಗಳಿಂದ ಹೊರಟ ನೂಲನ್ನೆಲ್ಲ ನೇಯುವದಕ್ಕೆ ೫೧ ಲಕ್ಷ ಮಗ್ಗಗಳು ಬೇಕಾಗುವವು. ವರ್ಷದಲ್ಲಿ ೩೦೦ ದಿವಸ ಕೆಲಸಮಾಡಿದರೆ ೪೫ ಲಕ್ಷ ಮಗ್ಗಗಳು ಸಾಕಾಗುವವು. ೧೯೦೧ನೆಯ ಇಸ್ವಿಯ ಜನಗಣತಿಯ ಪ್ರಕಾರ, ಹಿಂದುಸ್ಥಾನದಲ್ಲಿ ೨೫ ಲಕ್ಷ ನೇಕಾರರಿದ್ದರು. ಅಂದರೆ ಸರಾಸರಿ ೮—೧೦ ಲಕ್ಷ ಮಗ್ಗಗಳು ಆಗ ಕೆಲಸ ಮಾಡುತ್ತಿದ್ದವು. ಆದರೆ ಈಗ ಅಷ್ಟು ಇದ್ದಂತೆ ತೋರಲಿಲ್ಲ.

೧೯೨೨ನೆಯ ಇಸ್ವಿಯಲ್ಲಿ ೧೫ಕೋಟಿ ೭೭ಲಕ್ಷ ವಾರು ಅರಿವೆಯು ಪರದೇಶದಿಂದ ಇಲ್ಲಿಗೆ ಬಂದಿತು. ಆ ವರ್ಷದಲ್ಲಿ ೫ಕೋಟಿ ೮ಲಕ್ಷ ಪೌಂಡು ನೂಲು ಬಂದಿತು. ಅದೂ ನೂಲ್ಪಟ್ಟ ಅರಿವೆಯಾಯಿತೆಂದು ತಿಳಿದರೆ ಒಟ್ಟು ಸುಮಾರು ೨೦೦ ಕೋಟಿ ವಾರು ಅರಿವೆಯು ಪರದೇಶದಿಂದ ಇಲ್ಲಿಗೆ ಬಂದಂತಾಯಿತು. ಇಷ್ಟು ಅರಿವೆಯು ತಯಾರಾಗಬೇಕಾದರೆ ಒಂದು ಕೋಟಿ ರಾಟಿಗಳು ಮೇಲೆ ಹೇಳಿದಂತೆ ಕೆಲಸ ಮಾಡಬೇಕು. ಅಂದರೆ ೩೦ ಜನರಿಗೊಂದರಂತೆ ರಾಟಿಯು ಆದರೆ ಪರದೇಶದಿಂದ ಬರುವ ಅರಿವೆಯು ಕಟ್ಟಾಗುವದು. ಇದಕ್ಕೆ ಸುಮಾರು ೧೨—೧೫ಲಕ್ಷ ಮಗ್ಗಗಳು ಬೇಕು.

ಮೇಲ್ಕಾಣಿಸಿದ ಲೆಕ್ಕದಿಂದ ಖಾದೀಭಕ್ತರ ಶ್ರದ್ಧೆಯು ಸಹಜವಾಗಿ ಮತ್ತಿಷ್ಟು ದೃಢವಾಗುವದು. ಆದೇ ಮೇರೆಗೆ ಕಲವರಿಗೆ ಅದರಲ್ಲಿಯ ಅವಿಶ್ವಾಸವೂ ಇದರಿಂದ ಹೆಚ್ಚಬಹುದು. ಇಲ್ಲಿಯ ಗಿರಣಿಗಳಲ್ಲಿ ಹೊರಡುವ ಅಂಕಿಗಳನ್ನು ಕೊಟ್ಟು ಆ ಖಾದೀಭಕ್ತನು ಹೇಳುವದೇನಂದರೆ "ಇಲ್ಲಿಯ ಗಿರಣಿಗಳು ಬೆಳೆದು ಆ ಉಪಾಯದಿಂದ ಪರದೇಶದಿಂದ ಬರುವ ಅರಿವೆಯು ನಿಲ್ಲಬೇಕಾದರೆ ಗಿರಣಿಗಳು ಒಳ್ಳೇ ಭರಭರಾಟೆಯಿಂದ ಸಾಗುವವೆಂದು ತಿಳಿದರೂ ಕೂಡ ಈ ಲೆಕ್ಕದಿಂದ ಕನಿಷ್ಟ ೩೦—೪೦ ವರ್ಷಗಳು ಬೇಕು. ಮಹಾಯುದ್ಧದಲ್ಲಿ ಇಲ್ಲಿಯ ಗಿರಣಿಗಳಿಗೆ ತೇಜದ ಕಾಲವಿತ್ತು. ಆ ಕಾಲವು ಇನ್ನು ಪುನ ಬರಲಾರದು. ಆದಕಾರಣ, ಇಲ್ಲಿಯ ಗಿರಣಿಗಳ ಮೂಲಕವಾಗಿ ಪರದೇಶದ ನೂಲು ಬರುವದು ಕಟ್ಟಾಗಬೇಕಾದರೆ ಕನಿಷ್ಟ

೭೦—೮೦ ಅಥವಾ ನೂರು ವರ್ಷಗಳು ಹಿಡಿಯುವ'ವೆಂದು ಈತನ ಅಂಬೋಣವು ಅಹುದು, ಆದರೆ ಕೈರಾಟಿಗಳು ಅಷ್ಟರ ವರೆಗೆ ಬೆಳಯಲಿಕ್ಕೆ ಎಷ್ಟು ವರ್ಷಗಳು ಹಿಡಿಯುವವು ಎಂಬದನ್ನು ಯಾರು ವಿಚಾರಮಾಡಬೇಕು? ಸಾರಾಂಶ ಇದು ಕೇವಲ ಲೆಕ್ಕದ ಪ್ರಶ್ನೆಯಲ್ಲ. ಯಾವದಾದರೊಬ್ಬ ಪುಣ್ಯಾತ್ಮರು ತಮ್ಮ ತಪೋಬಲದಿಂದ ರಾಟಿಗಳ ಸಂಖ್ಯೆಯನ್ನು ಒಂದೇ ವರ್ಷದಲ್ಲಿ ಅಲ್ಲಿಯವರಿಗೆ ಬೆಳಸಬಹುದು, ಅಥವಾ ನೂರು ಯಾಕೆ, ಸಾವಿರ ವರ್ಷಗಳಾದರೂ ಸಂಖ್ಯೆಯು ಬೆಳೆಯಲಿಕ್ಕಿಲ್ಲ. ಆದಕಾರಣ ಮಿತಿಮೀರಿ ಪ್ರಯತ್ನಿಸುವದೊಂದೇ ಖಾದೀಭಕ್ತರ ಕರ್ತವ್ಯ. ಇದರ ಮೇಲೆ ದೇವರ ಇಚ್ಛೆಯಿದ್ದಂತೆ ಆಗಲಿ.

ಜ ಕ

ನಮ್ಮ ದೇಶದಲ್ಲಿ ಕಾಫಿಯು ಎಲ್ಲೆಲ್ಲಿ ಹುಟ್ಟುತ್ತದೆ?

ಉತ್ತರ ಹಿಂದುಸ್ಥಾನದಲ್ಲಿ ಬಹಳ ಕಾಫಿ ತೋಟಗಳು ಇಲ್ಲವಂದರೂ ಸಲ್ಲುವದು. ಅವು ವಿಶೇಷವಾಗಿ ದಕ್ಷಿಣ ಹಿಂದುಸ್ಥಾನದಲ್ಲಿಯೇ ಇರುತ್ತವೆ. ಇವುಗಳಲ್ಲಿ ನೂರಕ್ಕೆ ೬೪ ತೋಟಗಳು ಮೈಸೂರಿನಲ್ಲಿ ಇವೆ. ಕೊಡಗಿನಲ್ಲಿ ೨೪, ಮದ್ರಾಸಿನಲ್ಲಿ ೨೦, ಕೊಚ್ಚೀನ ಮತ್ತು ತ್ರಾವಣಕೋರದಲ್ಲಿ ೨, ಹೀಗೆ ಇರುತ್ತವೆ. ೧೯೨೨ರಲ್ಲಿ ಒಟ್ಟು ೧೬೪೯೩೯ ಎಕರ ಭೂಮಿಯಲ್ಲಿ ೨೨೭೧೦೪೦೦ ಪೌಂಡು ಕಾಫಿ ಬೆಳಯಿತು. ಈ ತೋಟಗಳಲ್ಲಿ ಪ್ರತಿ ದಿವಸ ೭೪೩೩೨ ಜನರು ಕೆಲಸ ಮಾಡುತ್ತಿದ್ದರು.

ಕ ಇ

PUBLIC NOTICE

The public and all concerned are hereby informed that in vertue of a Partition Cancellation Deed of 7—1—1918 registered in the sub registrars office of Virarajendra pet, Mr Chendandra Karumbayya Subbayya of Ammathi Siddapuranad, Guhya Village, is not entitled without my consent to sell, mortgage or otherwise alienate of our landed properties situated in Chembebeloor, Kannagala and Sidpuranad who soever purchases or lends money on immovable properties to the aforeseid Mr Subbayya, does so on his or her own risk

23 3 '25 *C K Chengappa*
4, 4 *Riverside, Sidapur*

ನೋಟೀಸು.

ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—

ವೀರಾಜಪೇಟೆ ಸಬ್ ರಜಿಸ್ಟ್ರಾರ್ ಆಫೀಸಿನಲ್ಲಿ ರಜಿಸ್ಟರಾದ ತಾ 7—1—1918ರ ಪಾರಿಖತ್ತು ಬರಾಖು ಮೇರೆ ಗುಹ್ಯ ಗ್ರಾಮದ ಚೇಂದಂಡ ಕರುಂಬಯ್ಯನವರ ಮಗ ಸುಬ್ಬಯ್ಯನವರಿಗೆ ನನ್ನ ಅನುಮತಿ ವಿನಹ ಚೆಂಬೆಬೆಳೂರು, ಕಣ್ಣಂಗಾಲ, ಗುಹ್ಯ, ಮತ್ತು ಸಿದ್ದಾಪುರ ಗ್ರಾಮುಗಳಲ್ಲಿ ಇರುವ ನಮ್ಮ ಬಾಬ್ತು ಸ್ಥಿರಸೊತ್ತುಗಳನ್ನು ಗಿರ್ವಿ, ಭೋಗ್ಯ, ಕ್ರಯ ಮುಂತಾದ ಯಾವ ವಿಧದ ಪರಾಧೀನ ಪಡಿಸುವ ಹಕ್ಕು ಇರುವದಿಲ್ಲ. ಯಾರಾದರೂ ಹಾಗೆ ಅವರಿಂದ ಕ್ರಯ, ಗಿರ್ವಿ, ಭೋಗ್ಯ ಮುಂತಾದ ಯಾವ ವಿಧದಿಂದಲಾದರೂ ಸದರಿ ಸೊತ್ತುಗಳ ಹಕ್ಕನ್ನು ಪಡೆದರೆ ಹಾಗೆ ತೆಗೆದುಕೊಂಡವರೇ ಅದರ ನಷ್ಟಕಷ್ಟಗಳಿಗೆಲ್ಲಾ ಗುರಿಯಾಗುತ್ತಾರೆ.

ಸಿ ಕೆ ಚಂಗಪ್ಪ,
ರಿವರ್ಸೈಡ್, ಸಿದ್ದಾಪುರ.

23—3—25

ಜಮೀನ್ದಾರರ ಸಂಘದ ವಾರ್ಷಿಕ ಸಭೆ.

ಸನ್ 1925ನೇ ಎಪ್ರಿಲ್ ತಾರೀಕು 11, 12 ಮತ್ತು 13 ರಲ್ಲು ಮೂರ್ನಾಡಿನಲ್ಲಿ ನಡೆದ ಜಮೀನ್ದಾರರ ಸಂಘದ ವಾರ್ಷಿಕ ಮೀಟಿಂಗಿನ ವಿವರ—

ಮಡಿಕೇರಿ ತಾಲೋಕಿನ ಸ್ವಾಗತ ಮಂಡಳಿಯವರು ಸ್ವಾಗತ ಏರ್ಪಾಡುಗಳನ್ನು ಚೆನ್ನಾಗಿ ಮಾಡಿದ್ದರು. ಸಭೆಯ ಮಂದಿರವು ವಿಶಾಲವಾಗಿ ಸುಮಾರು 1000 ಜನರು ಕೂರುವಷ್ಟು ಅನುಕೂಲವಾಗಿತ್ತು. ಮಂದಿರ, ಆಫೀಸು, ಠಾವು, ಬಾವಟೆ ವಗೈರೆಗಳ ಏರ್ಪಾಡು ಬೆಳಗಾಂ ಕಾಂಗ್ರೆಸ್ಸಿನ ಮಾದರಿಯಲ್ಲಿದ್ದವು. ಅಲಂಕಾರಕ್ಕೇನೂ ಕಡಿಮೆ ಇರಲಿಲ್ಲ. ಮಂದಿರವು ಹುಲ್ಲಿನ ಮಾಡಿನದ್ದಾಗಿದ್ದದರಿಂದ ಮಳೆಯು ಹನಿಕಿದರೂ ಏನೊಂದೂ ತೊಂದರೆಯಾಗಲಿಲ್ಲ. ಊಟಕ್ಕೆ ಸಪ್ಪಿನಲ್ಲಿ ಸರಿಪಡಿಸಿದ್ದರು. ಊಟ ಉಪಚಾರವೆಲ್ಲವೂ ತೃಪ್ತಿಕರವಾಗಿಯೇ ನಡೆಯಿತು. ಆದರೆ ಕಳೆದ ವರುಷದ ಕಿಗ್ಗಟ್ಟುನಾಡಿನವರ ಶಾಖಾಹಾರದ ಉದಾಹರಣೆಯನ್ನು ಹಿಂಬಾಲಿಸದೆ ಮಾಂಸವನ್ನು ಸೇರಿಸಿದ್ದರು. ಸ್ವಾಗತದ ಏರ್ಪಾಡನ್ನು ತಕ್ಕ ರೀತಿಯಲ್ಲಿ ಮಾಡಿದ ಸ್ವಾಗತ ಕಮಿಟಿಯು ಮತ್ತು ಅದರ ಅಧ್ಯಕ್ಷರ ಮುತುವರ್ಜಿಯ ಕೆಲಸಕ್ಕೆ ದೇಶದವರ ವಂದನೆಯು ಸಲ್ಲತಕ್ಕದ್ದಾಗಿದೆ.

ತಾರೀಕು 11ರಲ್ಲು ಬೆಳಿಗ್ಯೆ 11 ಗಂಟೆಗೆ ಸಭೆಯ ಮಂದಿರದ ಸಮೀಪ ಪೂರ್ವಬಾಗದಲ್ಲಿ ಹಾಯಿಸಲ್ಪಟ್ಟಿದ್ದ ವಾಲಂಟಿಯರ್ ಧ್ವಜದ ಕೆಳಗೆ ಸ್ವಯಂ ಸೇವಕರ ದಳದ ಪೆರೇಡ್ ನಡೆಯಿತು. ಈ ದಳದ ಪ್ರಾರಂಭದ ಮೀಟಿಂಗಿನಲ್ಲು ಮೆ ಬಿದ್ದಂಡ ಐಯ್ಯಪ್ಪನವರು ಅಧ್ಯಕ್ಷರಾಗಿದ್ದರು. ರೂಲ್ಸಿಗನುಸಾರವಾಗಿ ನಡೆಯುವುದೂ, ಅಹಿಂಸಾತತ್ವವನ್ನು ಆಚರಿಸುವುದೂ ಸ್ವಯಂ ಸೇವಕರ ಮುಖ್ಯ ಕರ್ತವ್ಯವೆಂದು ಅಧ್ಯಕ್ಷರು ಒತ್ತಿ ಹೇಳಿದರು. ಈ ದಳದ ಸಂಖ್ಯೆಯು 15ರೇ ಆದರೂ ಅವರಲ್ಲಿ ಕೆಲವರು ಒಳ್ಳೇ ಕೆಲಸವನ್ನು ಮಾಡಿದರು.

ಮಧ್ಯಾಹ್ನ 1 ಗಂಟೆಗೆ ಸರಿಯಾಗಿ ಚುನಾಯಿತ ಅಧ್ಯಕ್ಷರಾದ ಮೆ ಅಬ್ದುಲಾ ಗಫೂರ್‌ಖಾನ್ ಶ್ರೈಸ್ತಿಯವರನ್ನು ಪೇಟೆಯಲ್ಲಿ ಅವರು ಉಳುಕೊಂಡಿದ್ದ ಸ್ಥಳದಿಂದ ವಾದ್ಯದೊಡನೆ ಕರೆತಂದು, ಸಭೆಯು ಮಂದಿರದಲ್ಲಿ ಪ್ರಾರಂಭವಾಯಿತು. ಮಂದಿರ ತುಂಬಾ ಜನರು ನರೆದಿದ್ದರು. ಕೆಲವು ಉದ್ಯೋಗಸ್ಥರೂ, ಸಂಘದ ಮೆಂಬರುಗಳಲ್ಲದ ಕೆಲವು ಉದ್ಯೋಗಸ್ಥರಲ್ಲದ ಮಹನೀಯರೂ ಹಾಜರಿದ್ದರು. ಕೆಲವು ಮಹಿಳೆಯರೂ ನರೆದಿದ್ದರು. ಇವರಲ್ಲಿ ಶ್ರೀಮತಿ ಕೊಡಂದೇರ ಸೀತವ್ವನವರು ಒಬ್ಬರಾಗಿದ್ದರು. ದೇವರ ಪ್ರಾರ್ಥನೆಯದೊಡನೆ ಮೆ ಬಿ ರಾಮಯ್ಯನವರಿಂದ ರಚಿತವಾದ ಸ್ವಾಗತ ಗೀತೆಯು ಹಾಡಲಾಯಿತು. ನಂತರ ಸ್ವಾಗತ ಕಮಿಟಿಯ ಅಧ್ಯಕ್ಷರಾದ ಮೆ ಪಾಂಡಂಡ ಮುತ್ತಣ್ಣನವರು ತನ್ನ ಭಾಷಣವನ್ನು ಮಾಡಿದರು. ಇದರ ಪ್ರಿಂಟಾದ ಪ್ರತಿಗಳು ಸಭೆಯಲ್ಲಿ ಹಂಚಲ್ಪಟ್ಟದ್ದರಿಂದ ಎಲ್ಲರಿಗೂ ಇದನ್ನು ಹಿಂಬಾಲಿಸಲು ಅನುಕೂಲವಾಯಿತು.

(ಮುಂದುವರಿಯುವುದು.)

ಕ್ರ ಯ ವಿ ಲ್ಲ !

ಶ್ರೀ ಕೃಷ್ಣನ ಪ್ರತಿಮೆಯ ನೀಲವರ್ಣದ ಚಿತ್ರವಿರುವ ಹಿಂದೂ ಇಂಗ್ಲೀಷ್ ಕ್ರಮಗಳನ್ನೊಳಕೊಂಡ ಕ್ರೋಧನ ಸಂವತ್ಸರದ ಕ್ಯಾಲೆಂಡರನ್ನು "ಕೊಡಗು" ಪತ್ರಿಕೆಯ ಹೆಸರನ್ನು ತಿಳಿಸಿ ಏಪ್ರಿಲ್ ತಿಂಗಳಂತ್ಯದೊಳಗೆ ಉಡುಪಿಯ ಸತ್ಯಾಗ್ರಹಿ ಪತ್ರಿಕೆಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆಂದು ಆ ಪತ್ರಿಕಾಕರ್ತರು ನಮಗೆ ತಿಳಿಸುತ್ತಾರೆ. ನಮ್ಮ ವಾಚಕ ಮಹಾಶಯರು ಈ ಸುಸಮಯವನ್ನು ಕಳಕೊಳ್ಳಲಿಕ್ಕಿಲ್ಲವಾಗಿ ನಂಬುತ್ತೇವೆ.

ಸಂ

ವರ್ತಮಾನ ಸಂಗ್ರಹ.

ಒ ಳ ದೇ ಶ.

ಮೆ|| ಕೋದಂಡ ಸೋಮಯ್ಯನವರು ತನ್ನ 73ನೇ ವಯಸ್ಸಿನಲ್ಲಿ ಕೊಟ್ರೋಳಿ ಗ್ರಾಮದಲ್ಲಿರುವ ತನ್ನ ಸ್ವಂತ ಭವನದಲ್ಲು ತಾ. 19 ರಲ್ಲು ಶಿವಾಧೀನರಾದರು. ಇವರು ತನ್ನ ಮರಣಕಾಲದಲ್ಲಿ ದೇಶದ ಏಳಿಗೆಗಾಗಿ ಕೆಲಸಮಾಡುತ್ತಿರುವ ಜಮೀನುದಾರರ ಸಂಘವನ್ನು ಮರೆಯದೆ ಈ ಸಂಘದವರು ಕಟ್ಟಿಸಲು ಏರ್ಪಾಡು ಮಾಡುತ್ತಿರುವ ಟೌನ್ ಹಾಲಿಗೆ ಇನ್ನೂರು ರೂಪಾಯಿಯನ್ನು ಕೊಡುವಂತೆ ತನ್ನ ಮರಣಶಾಸನದಲ್ಲಿ ಬರೆದಿರುವರೆಂದೂ ಈ ಶಾಸನವನ್ನು ಆರು ತಿಂಗಳ ನಂತರ ಮಾತ್ರ ಪೆಟ್ಟಿಗೆಯಿಂದ ಹೊರಗೆ ತೆಗೆದು ನೋಡಬೇಕಂದೂ ಹೇಳಿರುವರೆಂದು ವರ್ತಮಾನ. ಈ ವರ್ತಮಾನವು ನಿಜವಾಗಲೆಂದು ಹಾರೈಸುತ್ತೇವೆ.

ತಾ. 14 ರಲ್ಲು ವೀರಾಜಪೇಟೆ ಗಡಿಯಾರ ಕಂಬದಬಳಿ ಅರ್ಧ ಪೌನಿನ ಚಿನ್ನದ ಪಿನ್ನು ಮಡಗಿರುವ ಬ್ರೋಚ್ ಒಂದು ಮೆ|| ನೆಲ್ಲಾಮಕ್ಕಳ ಮಾಚಯ್ಯನವರಿಗ ಸಿಕ್ಕಿದ್ದನ್ನು ಅಲ್ಲಿಯ ಪೋಲೀಸು ಸ್ಟೇಷನಿಗೆ ಕೊಟ್ಟಿರುವರೆಂದೂ, ಅದರ ಮಾಲೀಕರು ನ್ಯಾಯವಾದ ರುಜುವಾತಿನಿಂದ ಅಲ್ಲಿಂದ ಹೊಂದಿಕೊಳ್ಳಬಹುದೆಂದೂ ಪ್ರಕಟಿಸಲು ನಮಗೆ ತಿಳಿಸಿರುವರು.

ತಾ 20 ರಲ್ಲು ಅಮ್ಮತಿಯಲ್ಲಿ ಕುದುರೆ ಜೂಜುಗಳು ನಡೆದವು. ಮೆ|| ಕಸೆಲ್‌ಖಾನ್ ಸಹೇಬರ ಎರಡು ಕುದುರೆಗಳ ಸಂಗಡ ಬೇರೆ ಕುದುರೆಗಳಿಗೆ ಓಡಲು ಸಾಧ್ಯವಿಲ್ಲವೆಂದು ಅವುಗಳನ್ನು ಜೂಜಿಗೆ ಬಿಡದೇನೇ ಇನಾಮುಗಳು ಕೊಡಲ್ಪಟ್ಟವಂತೆ. ಬಾಕಿ ಕುದುರೆಗಳಿಗೆ ಜೂಜುಬಿಟ್ಟು ಬೇರೆ ಇನಾಮುಗಳು ಕೊಡಲ್ಪಟ್ಟವು. ಸರ್ಕಾರಿ ಉದ್ಯೋಗಸ್ಥರ ಕುದುರೆಗಳ ಓಟಿನಲ್ಲಿ ಮೆ|| ಚೆಂಬಾಂಡ ಕಾರ್ಯಪ್ಪನವರ ಕುದುರೆ 1ನೇದು, ಮೆ|| ನಡಿಕೇರಿಯಂಡ ಚಿಣ್ಣಪ್ಪನವರದು 2ನೇದು ಮೆ ಚೇಂದ್ರಿಮಾಡ ಮುತ್ತಣ್ಣನವರದು 3ನೇದಾಗಿಯೂ ಬಂದವು. ಮಳೆಯಿಂದ ಜೂಜಿಗೆ ಸ್ವಲ್ಪ ತೊಂದರೆಯಾಯಿತು.

ಜಮೀನುದಾರರ ಸಂಘದ ಎಗ್ಸಿಕ್ಯೂಟಿವ್ ಕಮಿಟಿ ಮೀಟಿಂಗೂ, "ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗೂ ತಾ. 28ರಲ್ಲು ಮಧ್ಯಾಹ್ನ ವೀರಾಜಪೇಟೆಯಲ್ಲಿ ನಡೆಯುವುದು.

ಕ್ರಿಕೆಟ್ ಟೂರ್ನಮೆಂಟಿನಲ್ಲಿ ತಾ 18ಮತ್ತು19ರಲ್ಲಿ ಆದಿ ಮಡಿಕೇರಿ ಯುನೈಟೆಡ್ ಕ್ಲಬ್‌ನವರ. ಯೂನಿಯನ್ ಎಬ್ರಾಡಿನವರನ್ನು ಸೋಲಿಸಿದರು. ತಾ. 21ಮತ್ತು22ರಲ್ಲು ಕಾಸ್ಮೊಪಾಲಿಟನ್‌ಕ್ಲಬ್ಬಿನವರು ಕೊಡಗು ಜಮ್ಖಾನದವರನ್ನು (ಯಸೂರೋಪಿನವರ.) ಸೋಲಿಸಿದರು. ಅಖೈರು ಪಂಥದಾಟವು ತಾ 24ಮತ್ತು25ರಲ್ಲು ಕಾಸ್ಮೊಪಾಲಿಟನ್ ಕ್ಲಬ್ಬಿನವರಿಗೂ ಯುನೈಟೆಡ್ ಕ್ಲಬ್ಬಿನವರಿಗೂ ನಡೆಯುವುದು.

ಪ್ರೊಫೆಸರ್ ದೇವಾಲರವರ ಸರ್ಕಸ್ಸು ವೀರಾಜಪೇಟೆಗೆ ಹೋಯಿತು. ಆದರೆ ಕೊಲ್ಲಿಪೇಟೆ ಬಸ್ವೇಶರ ನಾಟಕಮಂಡಲಿ ಇನ್ನೂ ಮಡಿಕೇರಿಯಲ್ಲಿಯೇ ಆಟಗಳನ್ನು ಅಭಿನಯಿಸುತ್ತಿದೆ.

ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರತನಕ್ಕೆ ಮೆ|| ಪಿ. ಜಿ. ಟಿಪ್ಪಿಂಗ್ ರವರು ರಾಜೀನಾಮೆ ಕೊಟ್ಟಿರುವದರಿಂದ ಅವರ ಬದಲಿಗ ಇನ್ನೊಬ್ಬರನ್ನು ಕೌನ್ಸಿಲ್ ಮೆಂಬರಾಗಿ ಜೂನ್ 1 ರೊಳಗೆ ಚುನಾಯಿಸ ಬೇಕೆಂದು ಚೀಫ್ ಕಮೀಷನರವರು ಯುರೋಪಿಯನ್ ಪ್ಲಾಂಟರಿಗ ನೋಟೀಸು ಕೊಟ್ಟಿರುವರು. ಈ ಚುನಾವಣೆ ಬಗ್ಗೆ, 30—4—25 ರಲ್ಲಿ ಉಮೇದವಾರರು ಅಪ್ಲಿಕೇಶನ್ ಕೊಡತಕ್ಕದ್ದು. 4—5—'25 ರಲ್ಲಿ ಸದರಿ ಅಪ್ಲಿಕೇಶನ್‌ಗಳ ಪರಿಶೋಧನೆ 6—5—'25 ರಲ್ಲಿ ಆಖೈರು ಉಮೇದುವಾರರುಗಳ ಹೆಸರು ಪ್ರಕಟಿಸುವುದು. 25—5—'25ರಲ್ಲಿ ಓಟು ತೆಗೆಯುವುದು. ಈ ಚುನಾವಣೆಗೆ ಕೊಡಗು ಪ್ಲಾಂಟರುಗಳ ಸಂಘದ ಸೆಕ್ರೆಟರಿಯನ್ನು ರಿಟರ್ನಿಂಗ್ ಆಫೀಸರಾಗಿ ನೇಮಿಸಿರುವರು.

ಕೊಡಗು ಕೋ ಆಪರೇಟೀವ್ ಸೆಂಟ್ರಲ್ ಬ್ಯಾಂಕಿನ ಡೈರಕ್ಟರುಗಳ ಮೀಟಿಂಗು ತಾ ೨೮ರಲ್ಲು ಮಡಿಕೇರಿಯಲ್ಲಿ ನಡೆಯುವುದು.

ತಾ 21ರಲ್ಲಿ ಬೆಳಿಗ್ಯೆ ಮ್ಯಾನ್ಸ್ ಮೈದಾನದಲ್ಲಿ ಎತ್ಲೆಟಿಕ್ ಎಸೋಶಿಯೇಶನಿನ ಜರೂರ್ ಮೀಟಿಂಗೊಂದು ನಡೆಯಿತು. ಈ ಸಂಘಕ್ಕೆ ಸೇರಿದ 15 ಕ್ಲಬ್ಬುಗಳ ಪೈಕಿ 13 ಕ್ಲಬ್ಬುಗಳ ಪ್ರತಿನಿಧಿಗಳು ಹಾಜರಿದ್ದರು. ಈ ಕಮಿಟಿಯು ಫೆಬ್ರವರಿಯಲ್ಲಿ ಮಾಡಿದ ರೂಲ್ಸುಗಳ ಕೆಲವು ಬದಲಾವಣೆಗಳನ್ನು ಚರ್ಚಿಸುವುದೇ ಮೀಟಿಂಗಿನ ಉದ್ದೇಶವಾಗಿತ್ತು. ಈ ಬದಲಾವಣೆಗಳಿಗೆ ಮಡಿಕೇರಿ ಯುನೈಟೆಡ್ ಕ್ಲಬ್ಬಿನವರು ಆಕ್ಷೇಪಿಸಿದ್ದರು. ಈ ವಿಷಯ ಚರ್ಚೆಯ ಮಧ್ಯದಲ್ಲು ಅಧ್ಯಕ್ಷರಾದ ಮೆ|| ಪಿ. ಮಂಗೇಶರಾಯರು ಮೀಟಿಂಗನ್ನು ಬರಕಾಸ್ತು ಮಾಡುತ್ತೇನೆಂದು ಹೇಳಿ ಅಧ್ಯಕ್ಷರ ಪದವಿಗೆ ರಾಜಿನಾಮೆ ಕೊಟ್ಟರು. ಅಷ್ಟರಲ್ಲಿ ಹಾಜರಿದ್ದ 13 ಕ್ಲಬ್ಬುಗಳ ಪೈಕಿ ನಾಲ್ಕು ಕ್ಲಬ್ಬುಗಳ ಪ್ರತಿನಿಧಿಗಳು ಮೀಟಿಂಗಿನಿಂದ ಹೊರಟು ಹೋದರು. ಬಾಕಿ 9 ಕ್ಲಬ್ಬುಗಳ ಪ್ರತಿನಿಧಿಗಳು ಅಧ್ಯಕ್ಷರಿಂದ ಪ್ರೊಸೀಡಿಂಗ್ಸನ್ನು ಬುಕ್ಕಿಗ ದಾಖ್ಲ ಮಾಡಿಸಿ ರುಜು ಹಾಕಿಸಿದ ನಂತರ ಕಾಯಂ ಅಧ್ಯಕ್ಷರು ಹೊರಟು ಹೋದರೂ, ಚರ್ಚೆಯ ವಿಷಯವು ಬಯ ತುರಿತವಾದುದರಿಂದ ಮೆ|| ಒಡ್ಡಂಡ ಕರುಂಬೈಯ್ಯನವರನ್ನು ಚೇರ್ ಮ್ಯಾನರಾಗಿ ಆರಿಸಿಕೊಂಡು ಮೀಟಿಂಗನ್ನು ಮುಂದರಿಸಿ, ಫೆಬ್ರವರಿಯಲ್ಲು ಬದಲಾಯಿಸಿದ ರೂಲುಗಳನ್ನು ತತ್ಕಾಲ ಜಾರಿಗೆ ತರದೆ ಬರುವ ಇಡಬೇಕಂದೂ ಟೂರ್ನಮೆಂಟನ್ನು ಫೆಬ್ರವರಿಗೆ ಮುಂಚೆ ಇದ್ದ ರೂಲ್ಸ್‌ಗಳ ಮೇರೆ ಆಡಬೇಕಂದೂ ಠರಾವುಗಳನ್ನು ಪಾಸು ಮಾಡಿದರು.

ಮಲಬಾರು ಟೆರಿಟೋರಿಯಲ್ ಪಟಾಲಿಮಿನ ಮೆ|| ಮುಂಡೇಟಿರ ಸುಬ್ಬಯ್ಯನವರನ್ನು ಲೆಫ್ಟಿನೆಂಟ್ ಪದವಿಗೆ ಏರಿಸಿರುವರು.

ಹಿಂದೂ ದೇಶ.

ಕುಷ್ಠರೋಗ ನಿವಾರಣೆಯ ಇಂಡಿಯನ್ ಕೌನ್ಸಿಲಿಗೆ ಗ್ವಾಲಿಯರಿನ ಮಹಾರಾಜರವರು 60,000 ರೂಪಾಯಿಗಳನ್ನು ಕುಷ್ಠರೋಗಿಗಳ ಕಷ್ಟಪರಿಹಾರ ಬಗ್ಯೆ ಉಚಿತವಾಗಿ ಕೊಟ್ಟಿರುವರು. ಇವರು ಈ ಸಂಘದ ಉಪಾಧ್ಯಕ್ಷರಾಗಿರುವರು.

ನಾರ್ತವೆಸ್ಟರ್ನ್ ರೈಲ್ವೆಯಲ್ಲಿ ಸುಮಾರು ಎರಡು ಸಾವಿರ ಜನರು ಕೆಲಸ ಮಾಡದೆ ಮುಷ್ಕರ ಹಿಡಿದಿರುವರು. ತಾ 20 ರೊಳಗೆ ಕೆಲಸಕ್ಕೆ ಹೋಗದವರನ್ನು ಡಿಸ್‌ಮಿಸ್ ಮಾಡಲಾಗುವುದೆಂದು ಅಧಿಕಾರಿಗಳ ನೋಟೀಸ್ ಆದರೂ ತಾ. 18 ರ ವರೆಗೆ ಮುಷ್ಕರದಲ್ಲಿ ಏನೊಂದೂ ಬದಲಾವಣೆಯಿಲ್ಲ.

ಬೊಂಬಾಯಿಯ ಒಂದು ಕಂಪೆನಿಯು ಒಬ್ಬ ಗುಮಾಸ್ತನು ಬೇಕೆಂದು ವರ್ತಮಾನ ಪತ್ರಿಕೆಯಲ್ಲಿ ಪ್ರಕಟಿಸಿತು. ಆ ಸ್ಥಳಕ್ಕೆ 527 ಅರ್ಜಿಗಳು ಬಂದವಂತೆ. ಅನೇಕರು ಮೆಟ್ರಿಕ್ಯುಲೇಶನ್ ಪಾಸಾದವರಂತೆ! ಇದೀಗ ಈಗಿನ ವಿದ್ಯಾಭ್ಯಾಸದ ಫಲಿತಾಂಶ!!

ಕಲ್ಕತ್ತಾ ಮುನಿಸಿಪಾಲಿಟಿಯವರು ಅಲ್ಲಿಗೆ ಹೋದ ಪಂಡಿತ ಮದನಮೋಹನ ಮಾಳವೀಯರಿಗೂ ಲಾಲಾ ಲಜಪತರಾಯರಿಗೆ ಸ್ವಾಗತ ಪತ್ರಿಕೆಗಳನ್ನು ಒಪ್ಪಿಸಿದರು. ಅದಕ್ಕೆ ಸಮಯೋಚಿತ ಜವಾಬನ್ನು ಅವರಿಬ್ಬರೂ ಕೊಟ್ಟರು.

ತಾರೀಕು 17ರಲ್ಲಿ ಅಮೃತಸರದಿಂದ ಎರಡು ಕಾಹಿಂದಿ ಒಟ್ಟಿಗಳು ಜೈಟೋಕ್ಕೆ ಹೊರಟವು.

ಬೊಂಬಾಯಿ ಮುನಿಸಿಪಾಲಿಟಿಯು ನೇಶನಲಿಸ್ಟ್ ಪಾರ್ಟಿಯವರು ಮೆ. ವಿ. ಜೆ ಪಟೇಲರವರನ್ನು ತಮ್ಮ ಮುಂದಾಳಾಗಿ ಚುನಾಯಿಸಿಕೊಂಡಿರುವರು.

ಬರ್ಮಾದ ಪಗೋಲಿಪೆಸನ್ ಪ್ರಾಂತ್ಯದ ಮೇಲೆ ತಾರೀಕು 13ರಲ್ಲಿ ಬಿರುಗಾಳಿಯು ಬೀಸಿ 40 ಮನೆಗಳು ನಾಶ ಮಾಡಲ್ಪಟ್ಟು ಸುಮಾರು ಹತ್ತುಸಾವಿರ ರುಪಾಯಿ ನಷ್ಟವುಂಟಾಗಿರುವುದಂತೆ.

ಬೊಂಬಾಯಿಯ ಬಾಪ್ಟಾ ಕೊಲೆ ಮೊಕದ್ದಮ್ಮೆಯನ್ನು ಮದ್ರಾಸ್ ಹೈ ಕೋರ್ಟಿಗೆ ವರ್ಗಾಯಿಸುವರೆಂದು ವರ್ತಮಾನ.

ವೈಸರಾಯರಾದ ಲಾರ್ಡ್ ಲಿಟ್ಟನ್‌ರವರು ಈಗ ಊಟಕ ಮಂಡಿನಲ್ಲಿರುವರು.

ಇಂಪೀರಿಯಲ್ ಬ್ಯಾಂಕಿನ ಲಕ್ನೌ ಶಾಖೆಯಲ್ಲಿ ರಾಯ ಸಾಹೇಬ್ ವಿಶ್ವಂಬರನಾಥಟಂಡನ ಮೊದಲಾದ ಜನರು ಒಂದು ಗುಪ್ತ ಕೂಟವನ್ನು ರಚಿಸಿಕೊಂಡು ಬ್ಯಾಂಕಿನಿಂದ ಹತ್ತು ಲಕ್ಷ ರುಪಾಯಿಗಳನ್ನು ಅಪಹರಿಸಿದರು. ಈ ವಿಷಯವು ಅಲಹಾಬಾದಿನಲ್ಲಿ ವಿಚಾರಿಸಲ್ಪಟ್ಟು ಅವರಿಗೆ ಏಳು ವರುಷ ಕಠಿಣ ಸಜೆಯೂ ಐದು ಲಕ್ಷ ರುಪಾಯಿ ಜುಲ್ಮಾನೆಯೂ ವಿಧಿಸಲಾಗಿದೆ.

ಪೂನಾದ ಸೆಂಟ್ರಲ್ ಪೋಸ್ಟಾಫೀಸಿನಲ್ಲಿ ಮೂರುಸಾವಿರ ರುಪಾಯಿಯ ಬೆಲೆಯ ಸ್ಟಾಂಪುಗಳು ಮಾಯವಾಗಿವೆಯಂತೆ.

ತಾ॥ 14 ರಲ್ಲು ಮಹಾತ್ಮಾ ಗಾಂಧಿಯವರಿಗೆ ಸ್ವಲ್ಪ ಜ್ವರ ಬಂದಿತ್ತಂತೆ ಆದುದರಿಂದ ಅವರ ಕಾರ್ಯಕ್ರಮದಲ್ಲಿ ಸ್ವಲ್ಪ ಬದಲಾವಣೆಯಾಗಿದೆ, ನಂತರ ವರ್ತಮಾನವೇನೂ ಇಲ್ಲ.

ಈ ವರ್ಷ ಇಂಡಿಯನ್ ಟೆರಿಟೋರಿಯಲ್ ಪಟಾಲಾಮಿನ ಆಫೀಸರುಗಳಿಗೆ ಎರಡು ತಿಂಗಳು ಹೆಚ್ಚಿನ ತರಬೇತು ಕೊಡಲಿಕ್ಕಾಗಿ ಖರ್ಚಿನ ಬಗ್ಗೆ 1,12,140 ರೂ. ಮಂಜೂರಾಗಿದೆ. ಸದರಿ ಪಟಾಲಾಮಿನ ಹವಾಲ್ದಾರರಿಗೆ ಎರಡು ತಿಂಗಳು ಹೆಚ್ಚಿನ ತರಬೇತಿಗೆ 46,130 ರೂ. ಮಂಜೂರಾಗಿದೆ.

1922ನೇ ಇಸವಿ ಅಂತ್ಯವಾಗುವ 5 ವರುಷಗಳಲ್ಲಿ ಒಂದು ಕೋಟಿ 11 ಲಕ್ಷ, 5 ಕೋಟಿ, 54 ಲಕ್ಷ, 49 ಲಕ್ಷ, 47 ಲಕ್ಷ ಹೀಗೆ ಜನರು ಜ್ವರದಿಂದ ಹಿಂದೂಸ್ಥಾನದಲ್ಲಿ ಮಡಿದರೆಂದು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಮದ್ರಾಸು ಮುನಿಸಿಪಾಲಿಟಿಗೆ ಶ್ರೀಯುತ ಸನಿಕಾಚಲಂ ಚೆಟ್ಟಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಗುಜರಾತಿನಲ್ಲಿ ಒಬ್ಬ ಹೆಂಗಸು ಎಷ್ಟೆಷ್ಟು ಬೇಡವೆಂದು ಕೇಳದ ತನ್ನ ಗಂಡನು ತನ್ನ ಮಗಳನ್ನು ತುಂಬಾ ಹಣಕೊಟ್ಟ ಮುದುಕನಿಗೆ ಮದುವೆ ಮಾಡಿಕೊಟ್ಟದ್ದರಿಂದ ಮೈ ಮೇಲೆ ಸೀಮೆ ಎಣ್ಣೆ ಹಾಕಿಕೊಂಡು ಬೆಂಕಿ ಹಚ್ಚಿ ಮೃತಪಟ್ಟಳು. ಕನ್ಯಾ ಶುಲ್ಕದ ಅನರ್ಥವೇ !

ಗುಂಟೂರು ಮುನ್ಸಿಪಾಲಿಟಿಯ ಶಾಲಾ ಉಪಾಧ್ಯಾಯರುಗಳೆಲ್ಲರೂ ಕಾಂಗ್ರೆಸ್ ಮೆಂಬರುಗಳು ಅವರೂ ಅವರ ಶಾಲೆಯ ವಿಧ್ಯಾರ್ಥಿಗಳೂ ನೂಲು ನೂತು ತಿಂಗಳುವಾರು ಕಾಂಗ್ರೆಸ್ಸಿಗೆ ಕಳುಹಿಸುತ್ತಿರುವರು. ಹೀಗೆ 31 ಶಾಲೆಗಳಲ್ಲಿ 1500 ವಿದ್ಯಾರ್ಥಿಗಳೂ 75 ಉಪಾಧ್ಯಾಯರುಗಳೂ ಸೇರಿ ಕಳೆದ ಎರಡು ತಿಂಗಳಲ್ಲಿ 160000 ಗಜ ನೂಲನ್ನು ಕಾಂಗ್ರೆಸ್ ಸಭೆಗೆ ಕಳುಹಿಸಿರುವರಂತೆ.

ತಿಳುವಳಿಕೆ.

ಬೆಂಗಳೂರಿನಲ್ಲಿರುವ "ಸಿಟಿಯುಕ್ ಡಿಪೋವಿನ ಪ್ರೊಪ್ರೈಟರವರು ಈ ಮೂಲಕ ತಿಳಿಯಪಡಿಸುವುದೇನೆಂದರೆ ಮ. ಕೆ. ಭೀಮರಾವ್ ಎಂಬುವರಿಗೆ ನಮ್ಮಲ್ಲಿ ತಯಾರಾಗುವ ರಬರ್ ಸ್ಟಾಂಪುಗಳಿಗೆ ಮಾತ್ರ ಆರ್ಡರುಗಳನ್ನು ಪಡೆಯುವ ಏಜೆನ್ಸಿ ಕೊಟ್ಟಿತು. ಆದರೆ ಸದರಿಯವರು ಇನ್ನು ಕೆಲವು ಬೇರೆ ಪದಾರ್ಥಗಳಿಗೆ ಆರ್ಡರು ತೆಗೆದುಕೊಂಡಂತೆ ತಿಳಿದುಬಂದಿರುವುದರಿಂದ ಅಂಥ ಆರ್ಡರುಗಳನ್ನು ನಮ್ಮ ಹೆಸರಿನ ಮೇಲೆ ಕೊಟ್ಟದ್ದಲ್ಲಿ ಅಂಥವುಗಳಿಗೆ ನಮ್ಮ ಜವಾಬುದಾರಿ ಇಲ್ಲ. ಇಷ್ಟವುಳ್ಳವರು ಸೀದಾ ನಮಗೆ ಬರೆದುಕೊಂಡಲ್ಲಿ ನಾವೇ ಕಳುಹಿಸಿಕೊಡುತ್ತೇವೆ.

ವಿದೇಶ.

ಪೋರ್ಟುಗಲ್ಲಿನ ದಂಗೆ ಕೋರರ ಮುಂದಾಳು ವಾದ ಸುನ್ ಫಲೀಲ್ ಎಂಬವರು ಸೆರೆ ಹಿಡಿಯಲ್ಪಟ್ಟಿರುವರು. ದಂಗೆ ಕೋರರ ಸೈನ್ಯವೆಲ್ಲವೂ ಸರ್ಕಾರಕ್ಕೆ ಶರಣಾಗತರಾಗಿರುವರೆಂದು ವರ್ತಮಾನ.

ಇಂಗ್ಲೆಂಡಿನಲ್ಲಿ ಲಂಕಾಶಯರಿನವರು ಜಪಾನದ ಬಟ್ಟೆಯೊಂದಿಗೆ ಸ್ಪರ್ಧಿಸಲು ಬಹು ಅಗ್ಗದ ಬಟ್ಟೆಯನ್ನು ತಯಾರಿಸಲು ಪ್ರಯತ್ನಿಸಿರುವರಂತೆ.

ಲಂಡನ್ನಿನ "ದಿ ಟಯಮ್ಸ್" ಪತ್ರಿಕೆಯು ಇಂಡಿಯನ್ ಸಿವಿಲ್ ಸರ್ವಿಸಿಗೆ ಇಂಗ್ಲೆಂಡಿನ ಯುವಕರು ಹೆಚ್ಚಾಗಿ ಸೇರಬೇಕೆಂದು ವಿನಂತಿ ಮಾಡಿದೆ.

ಮೋಸಲ್ ಪ್ರಾಂತ್ಯದ ತಕರಾರನ್ನು ಲೀಗ್ ಆಫ್ ನೇಶನ್ಸ್ ಕಮಿಶನಿನವರು ತುರ್ಕಿಗೆ ಪರವಾಗಿ ತೀರ್ಮಾನಿಸಿರುವರೆಂದು ವರ್ತಮಾನ.

ತಾ. 17ರಲ್ಲು ಸೋಫಿಯ ಪಟ್ಟದ ಸೀಟಿನ ಡೇಲಿಯ ಕೆಥ್ರಲಿನಲ್ಲಿ ಬಾಂಬು ಒಡೆದುದರ ಫಲಿತಾಂಶವಾಗಿ 200 ಜನರು ಮೃತರಾದರು. 2000 ಜನರಿಗೆ ಘಾಯ ಉಂಟಾಗಿದೆ. ಅನೇಕ ದೊಡ್ಡ ಉದ್ಯೋಗಸ್ಥರೂ ಹೆಂಗಸರೂ ಮಕ್ಕಳೂ ಈ ನಾಶಕ್ಕೆ ಗುರಿಯಾಗಿರುವರು. ಇದು ಕಮ್ಯೂನಿಸ್ಟ ಮತ್ತು ಎನಾರ್ಕಿಸ್ಟ ಪಾರ್ಟಿಯವರ ಪಿತೂರಿಯಾಗಿದೆ. ನೂರಾರು ಜನರು ಸೆರೆಹಿಡಿಯಲ್ಪಟ್ಟಿರುವರು. ಸೆಂಟ್ರಲ್ ಕಮ್ಯೂನಿಸ್ಟ ಪಾರ್ಟಿಯ ಅಧ್ಯಕ್ಷರೂ, ಉಪ ಅಧ್ಯಕ್ಷರೂ ದಸ್ತಗಿರಿ ಮಾಡಲ್ಪಟ್ಟಿರುವರು. ರಷ್ಯದಲ್ಲಿ ಮಾರ್ಶಲ್ ಲಾ ಅಂದರೆ ಸೈನ್ಯಾಡಳಿತವು ಜಾರಿಗೆ ಬಂದಿರುವದು.

ಜರ್ಮನಿಯ ಪದಚ್ಯುತ ಯುವರಾಜನು ಯಾರು ಮೊದಲು ಮಹಾ ಯುದ್ಧವನ್ನು ಪ್ರಾರಂಭ ಮಾಡಿದರೆಂಬದೊಂದು ಪುಸ್ತಕವನ್ನು ಬರಯುತ್ತಿದ್ದಾನೆ.

ತುರ್ಕಿಸ್ತಾನದ ಗಡಿಯಲ್ಲಿ ದಂಗೆ ಎದ್ದ ಕುರ್ದ ದಂಗೆ ಕೋರರ ಮುಂದಾಳಾದ ಶೇಕ್‌ಸಯದ್ ರವರು ಸೆರೆಹಿಡಿಯಲ್ಪಟ್ಟು ತೂಗಹಾಕಲಿಕ್ಕೆ ಹುಕುಂ ಮಾಡಿರುವರು. ಅವರನ್ನು ಅಂಗೋರದಲ್ಲಿ ಗಲ್ಲಕ್ಕೆ ಹಾಕುವರು.

ಸ್ವಾಮಿ ವಿವೇಕಾನಂದರವರ ಸಹೋದರರಾದ ಮತ್ತು ಹದಿನಾರು ವರುಷಗಳಿಂದಲೂ ದೇಶಭ್ರಷ್ಟರಾಗಿದ್ದ, ಈಗ ಬರ್ಲಿನ್ ಪಟ್ಟಣದಲ್ಲಿ ವಾಸಮಾಡುತ್ತಿರುವ ಡಾ. ಭೂಪೇಂದ್ರನಾಥ ದತ್ತರವರು ಹಿಂದೂದೇಶಕ್ಕೆ ಬರಲು ಸರಕಾರದವರು ಅಪ್ಪಣೆಯನ್ನು ಕೊಟ್ಟಿರುವರು. ಇವರು 1909ರಲ್ಲು ಇಂಡಿಯಾ ದೇಶವನ್ನು ಬಿಟ್ಟರು. ಅದಕ್ಕೆ ಮೊದಲು "ಯುಗಾಂತರ" ಎಂಬ ಪತ್ರಿಕೆಯ ಸಂಪಾದಕರಾಗಿ ಒಂದು ವರುಷ ಜೈಲಿನಲ್ಲಿ ಇದ್ದರು.

ಪಶುಪಾಲನೆ.

ಸನ್ 1925ನೇ ಇಸ್ವಿಯ ಏಪ್ರಿಲ್ ತಾರೀಕು 12ರಲ್ಲು ಮಡಿಕೇರಿಯಲ್ಲಿ ನಡೆದ ಕೊಡಗು ಜಮೀನ್ದಾರರ ಸಂಘದ ಮೀಟಿಂಗಿನಲ್ಲಿ ಮಾಡಿದ ವೆಟರಿನರಿ ಭಾಷಣ.—

ಸಭಾಧ್ಯಕ್ಷರೇ, ಮಹಾಶಯರೇ, ನಾನು ಈ ದಿನ ತಮಗಳ ಕೋರಿಕೆಗನುಗುಣವಾಗಿ, ಡೆಪ್ಯೂಟಿ ಡೈರೆಕ್ಟರ್ ಸಾಹೇಬರವರ ಅನುಮತಿಯಿಂದ ಈ ಸಭೆಗೆ ಬಂದಿರುವದಾಗಿದೆ. ತಾವು ಪಶುವೈದ್ಯಶಾಸ್ತ್ರ ಸಂಬಂಧವಾಗಿ ಕೆಲವು ಮುಖ್ಯ ಸಂಗತಿಗಳನ್ನು ನಾನು ಮಾತಾಡಬೇಕೆಂದು ಕೇಳಿಕೊಂಡದ್ದಕ್ಕೆ ನಾನು ತಮಗಳನ್ನು ಎಷ್ಟು ವಂದಿಸಿದರೂ ಸ್ವಲ್ಪವಾಗಿದೆ. ಯಾತಕಂದರೆ ಈ ದೇಶದ ವ್ಯವಸಾಯಗಾರರ ಪೈಕಿ ತುಂಬಾ ನಾಗರೀಕತೆಯನ್ನೂ ಅನುಭವವನ್ನೂ ಪಡೆದವರೇ ಮುಖ್ಯವಾಗಿ ಇಲ್ಲಿ ನೆರೆದಿದ್ದೀರಿ. ವ್ಯವಸಾಯಕ್ಕೂ ಪಶುವೈದ್ಯಕ್ಕೂ ಇರುವ ಒಕ್ಕಸಂಬಂಧದಂಥಾ ನೆಂಟಸ್ತಿಕೆಯನ್ನು ಕುರಿತು ಇಲ್ಲಿ ಭಾಷಿಸಿದರೆ, ಅಂಥಾ ಮನೋಭಾವಗಳನ್ನು ತಾವುಗಳು ಹಿಂತಿರುಗಿ ತಮ್ಮ ತಮ್ಮ ಗ್ರಾಮಾಂತರಗಳನ್ನು ಸೇರಿದೊಡನೆ ಅಲ್ಲಿನ ರೈತರಿಗೆ ತಪಸೀಲಾಗಿ ವಿವರಿಸಿ, ಸಾಧ್ಯವಾದ ಸಂಗತಿಗಳನ್ನೆಲ್ಲಾ ಆ ಕೂಡಲೇ ಜಾರಿಗೆ ತರುವ ಪ್ರಯತ್ನಗಳನ್ನು ತಾವುಗಳು ಕೈಕೊಳ್ಳದೆ ಬಿಡಲಿಕ್ಕಿಲ್ಲವೆಂದು ನನಗೆ ಧೃಢವಾಗಿದೆ

ಪಶುವೈದ್ಯ ಶಾಸ್ತ್ರವು ಈ ದೇಶದಲ್ಲಿ ಹೊಸದಾದ ವರ್ತಮಾನವೇನೂ ಅಲ್ಲವೆಂಬದು ತಮಗಲ್ಲರಿಗೂ ಗೊತ್ತಿದೆಯಷ್ಟೆ. ಆದರೆ ಅದು ಇನ್ನೂ ಒಂದು ಎಳೇ ಕೂಸಾಗಿದೆ. ಈ ಕೂಸನ್ನು ಚೆನ್ನಾಗಿ ಸಾಕಿ ಅಭಿವೃದ್ಧಿಗೆ ತಂದು ಅದರಿಂದ ಪ್ರಯೋಜನವನ್ನು ಹೊಂದುವ ಜವಾಬ್ದಾರಿಕೆಯೂ ನಮ್ಮೆಲ್ಲರದಾಗಿದೆ. ವೆಟರಿನರಿ ಅಸಿಸ್ಟೆಂಟ್ ಸರ್ಜನರುಗಳು ಗ್ರಾಮಗಳ ಮೇಲೆ ಹೋದಾಗ ಸಣ್ಣ ಸಣ್ಣ ಗುಂಪುಗಳಿಂದ ಕೂಡಿದ ರೈತರ ಸಭೆಗಳಲ್ಲಿ ನಾನಾವಿಧವಾದ ಬೋಧನೆಗಳನ್ನು ಕೊಡುತ್ತಲೇ ಇದ್ದಾರೆ. ಪಶುವೈದ್ಯಶಾಸ್ತ್ರವನ್ನೆಲ್ಲಾ ಚರ್ಚಿಸುವೆನೆಂದರೆ ಈ ದಿವಸ ತಮಗಳ ಕೆಲಸದ ಮಧ್ಯ ನಮಗೆ ತಕ್ಕಷ್ಟು ಸಮಯವು ದೊರಕಲಾರದಾಗಿ ಭಾವಿಸುತ್ತೇನೆ. ಅಂಥಾ ತಪಸೀಲ್ ಉಪನ್ಯಾಸಗಳನ್ನು ಎಲ್ಲೆಲ್ಲಿ ಅನುಕೂಲವಾಗುವದೋ ಅಲ್ಲಲ್ಲಿ ವಿವರಿಸುವೆನು. ಈಗ ಸದ್ಯಕ್ಕೆ ನಮ್ಮ ದೇಶದಲ್ಲಿ ಮುಖ್ಯವಾಗಿ ಅವಶ್ಯವಿರುವ ಕೆಲವು ಸಂಗತಿಗಳನ್ನು ಮಾತ್ರ ಮೂರು ಭಾಗಗಳಾಗಿ ವಿಂಗಡಿಸಿ ಪ್ರತಿವಂದು ಅಂಶವನ್ನು ಬೇರೆ ಬೇರೆಯಾಗಿ ತಕ್ಕಮಟ್ಟಿಗೆ ಸಂಕ್ಷೇಪವಾಗಿ ವಿವರಿಸುತ್ತೇನೆ—

I. ಈ ದೇಶದಲ್ಲಿ ದನಗಳನ್ನು ಬೆಳಸುವದು ಅಂದರೆ ತಳಿಯೆಬ್ಬಿಸುವದು ಮತ್ತು ಅವುಗಳ ಮೇವು.

II. ಅಂಟುರೋಗಗಳೂ ಅವುಗಳ ನಿವಾರಣೆಗಳೂ.

III. ಜಾನುವಾರುಗಳ ಪಾಲನೆಗಳಿಗೂ ಜನರ ಆರೋಗ್ಯಕ್ಕೂ ಇರುವ ಸಂಬಂಧಗಳೂ

ಒಂದನೇ—ಮುಖ್ಯವಾಗಿ ವ್ಯವಸಾಯದಿಂದ ಕೂಡಿದ ಈ ನಮ್ಮ ದೇಶದ ಮೂಲಧನವು ಆವತ ದನಗಳೇ ಎನ್ನುವದರಲ್ಲಿ ಅಡ್ಡಿ ಏನೂ ಕಾಣುವದಿಲ್ಲ. ಆದರೂ ಕೂಡ ಕ್ರಮವಾಗಿ ದನಗಳನ್ನು ಬೆಳಸುವ ಅಂದರೆ ತಳಿ ಇಳಿಸುವ ಉತ್ತಮ ಕ್ರಮವಾದ ಏರ್ಪಾಡು ಎಲ್ಲಿಯೂ ಕಾಣುವದಿಲ್ಲ. ಒಂದು ಕಣಿವೆ ಹೋಬಳಿಯಲ್ಲಿ ಮಾತ್ರ ತಕ್ಕಮಟ್ಟಿಗೆ ಅಲ್ಲಿನ ಉಪಯೋಗಕ್ಕೆ ಅವಶ್ಯವಿರುವಷ್ಟು ದನಗಳನ್ನು ತಳಿಯೆಬ್ಬಿಸುತ್ತಾರೆಂದು ಹೇಳಬಹುದು. ಅಲ್ಲದೆ ಘನಸರಕಾರವು ಸಹ ಪರೀಕ್ಷಾರ್ಥವಾಗಿ ಅಗಿಂದಾಗ್ಯೆ ಕೆಲವು ಗೂಳಿಗಳನ್ನು ಇಟ್ಟಿರುತ್ತಾರೆ. ಇತ್ತೀಚೆಗೆ ನನಗೆ ತಿಳಿದ ಹಾಗೆ ಮೈಸೂರು ದೇಶದ ಪ್ರಖ್ಯಾತಗೊಂಡ ಅಮೃತಮಹಾಲ್ ಮಂದೆಯಿಂದ ಹದಿನಾಲ್ಕು ಗೂಳಿಗಳನ್ನು ತರಿಸಿ ಇಲ್ಲಿನ ಕೆಲವು ಅನುಭವಸ್ಥರ ಸ್ವಾಧೀನಕ್ಕೆ ಕೊಟ್ಟರು. ಈ ಗೂಳಿಗಳು ಸರಿಹೊಂದಿಯ ಹಸುಗಳಲ್ಲಿ ತಳಿಯೆಬ್ಬಿಸುವದೇ ಉದ್ದಿಶ್ಯವಾಗಿತ್ತು. ಆದರೆ ಆ ಏರ್ಪಾಡು ಕೆಲವು ಕಾರಣಗಳಿಂದ ಕೊನೆಗಾಣಿಸಲಿಲ್ಲ. ಆದ ನಂತರ ಅದೇ ದೇಶದ "ಹಳ್ಳೀಕಾರ" ಗೂಳಿಗಳನ್ನು ತರಿಸಿ ಅಮ್ಮತ್ತಿಯಲ್ಲಿ ವೆಟರಿನರಿ ಅಸಿಸ್ಟೆಂಟ್ ಸರ್ಜನರವರ ತಾಬೆಯಲ್ಲಿಟ್ಟು ಒಳ್ಳೇ ಪ್ರಯೋಜನವನ್ನು ಪಡೆದಿರುತ್ತೇವೆ. ಆದರೆ ಸುತ್ತುಮುತ್ತಲಿನ ರೈತರ ತಕ್ಕಷ್ಟು ಕುತೂಹಲ ತೆಗೆದುಕೊಂಡಂತೆ ಕಾಣುವದಿಲ್ಲ. ಜಾನುವಾರುಗಳನ್ನು ಅಂದರೆ ಇಲ್ಲಿ ದನಗಳನ್ನು ತಳಿಯೆಬ್ಬಿಸುವಾಗ ಒಂದು ಮುಖ್ಯವಾದ ಸಂಗತಿಯನ್ನು ಎಲ್ಲರೂ ಮನಸ್ಸಿನಲ್ಲಿಡಬೇಕಾಗಿದೆ. ಅದೇನಂದರೆ ನಮ್ಮ ದನಗಳು ಗದ್ದೆ ವ್ಯವಸಾಯಕ್ಕೂ, ಮನೆ ಉಪಯೋಗಕ್ಕಿರುವ ಹಾಲು ಮೊಸರು ವಗೈರೆ ಕೊಡಲಿಕ್ಕೂ ಸಹ ಪ್ರಯೋಜನಕರವಾಗುವ ರೀತಿ ಒಂದೇ ಜಾತಿಗಳಿಂದ ತಳಿಯೆಳಿಸಬೇಕಾಗಿದೆ. ಯಾತಕಂದರೆ, ಗದ್ದೆ ಹೂಡಲಿಕ್ಕೆ ಒಂದು ಜಾತಿಯ ದನ, ಮನೆ ಉಪಯೋಗದ ಹಾಲು ಮೊಸರು ವಗೈರೆಗೆ ಇನ್ನೊಂದು ಜಾತಿಯ ದನ ಎಂದು ಎರಡು ಬೇರೆ ಬೇರೆ ಜಾತಿಯ ದನಗಳನ್ನು ಈ ದೇಶದ ಹೆಚ್ಚಿನ ರೈತರಿಂದ ಸಾಕಲು ಸಾಧ್ಯವು ಅನುಕೂಲವೂ ಇಲ್ಲವೇ ಇಲ್ಲ. ಇಂಥಾ ಸಂಗತಿಯನ್ನು, ಅಲ್ಲದೆ ಅನ್ಯದೇಶದ ದೊಡ್ಡ ದನ, ಜಾತೀ ದನ, ಮಧ್ಯ ಜಾತೀ ದನ, ಡೇಯರಿ ಫಾರ್ಮ ಇವೇ ಮೊದಲಾದ ಸಂಗತಿಗಳನ್ನು ಅನುಕೂಲವೂ ಸಮಯವೂ ಇರುವ ಪುಣ್ಯಾತ್ಮರಿಗೆ ಬಿಟ್ಟು, ತತ್ಕಾಲಕ್ಕೆ ನಮ್ಮ ಉಪಯೋಗಕ್ಕೆ ಅನುಕೂಲಿಸುವ ಮತ್ತು ಕೂಡಲೇ ಸಾಧ್ಯವಾಗುವ ದಾರಿಯನ್ನು ಹಿಡಿಯುವ ನನ್ನ ಅನುಭವದಲ್ಲಿ ಮಧ್ಯತರದ ಹಳ್ಳೀಕಾರ ಗೂಳಿಗಳನ್ನು, ಈ ದೇಶದಲ್ಲಿಯೇ ಅನೇಕ ವರುಷಗಳಿಂದ ಪ್ರಾಬಲ್ಯಹೊಂದಿದ ದನಗಳ ಅಂದರೆ ದೇಶೀಯ ದನಗಳ ಗೂಳಿಗಳನ್ನು ಆರಿಸಿತೆಗೆಯಬೇಕು. ಆ ಮೇಲೆ ಉತ್ತಮ ತರವಾದ ದೇಶೀಯ ದನಗಳನ್ನು ಆರಿಸಿತೆಗೆಯಬೇಕು. ಇವುಗಳಿಂದ ತಳಿಯೆಳಿಸಿದ ದನಗಳು ಈ ದೇಶದ ಕೆಲಸಕ್ಕೂ ಹವಕ್ಕೂ ಅನುಕೂಲಿಸುತ್ತವೆ. ಈ ದೇಶದ ದನಗಳ ಪೈಕಿ ನನಗೆ ಕಂಡುಬರುವ ಉತ್ತಮ ದನಗಳು ಮರೆನಾಡು ಕಡಿಯತ್ತುನಾಡು ಮತ್ತು ನಾಲ್ಕುನಾಡಿನ ಕೆಲವು ಗ್ರಾಮಗಳು, ಸೂರ್ಲಬಿ ಹಮ್ಮಿಯಾಲ ವಗೈರೆ ಹುಲ್ಲುಗಾವಲುಗಳಲ್ಲಿ ಅಂದರೆ ಬಾಣೆಗಳಲ್ಲಿ ಈಗಲೂ ಕೆಲವು ರಾಸುಗಳು ಅಲೆದಾಡುತ್ತಲಿವೆ. ಒಳ್ಳೇದು, ಈಗ ಇವುಗಳನ್ನು ಜೊತೇ ಸೇರಿಸಿ ತಳಿಯೆಳಿಸುವದು ಮತ್ತು ಊರೂರಿಗೆ ಉಪಯೋಗವಾಗುವಂತೆ ಮಾಡುವ ರೀತಿ ಯಾವದು ಎಂಬದನ್ನು ಚರ್ಚಿಸುವ-ಮೊದಲು ಇದೆ ಜನವಿದೆ. ಬೇಕಾದದ್ದು ಒಂದು ಸೆಂಟ್ರಲ್ ಬುಲ್ ಬ್ರೀಡಿಂಗ್ ಫಾರ್ಮ ಮಾತ್ರ, ಅಂದರೆ ಈ ದೇಶದ ಉಪಯೋಗಕ್ಕಿರುವ ಗೂಳಿಗಳನ್ನೆಲ್ಲಾ ಕ್ರಮಕ್ರಮೇಣ ಒಂದೇಸ್ಥಳದಲ್ಲಿ ತಳಿಯೆಳಿಸಬೇಕು. ಇಂಥಾ ಒಂದು ಸಣ್ಣ ಫಾರ್ಮ ಯಾ ಡಿಪೋ ಇಟ್ಟು ಅಲ್ಲಿ ಪಶುವೈದ್ಯ ಶಾಸ್ತ್ರಜ್ಞನಗುಣವಾಗಿ ತಳಿಯೆಳಿಸಿದ ಗೂಳಿಗಳನ್ನು ಗ್ರಾಮಾಂತರಗಳಲ್ಲಿ ದನಗಳ ತಳಿಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಕೊಡಬೇಕು. ಇಂಥಾ ದನಗಳು ಎರಡು ಮೂರು ಸೇರು ಹಾಲುಕೊಡುವದರಲ್ಲೂ, ಗದ್ದೆ ವ್ಯವಸಾಯಕ್ಕೆ ನ್ಯಾಯವಾದ ಉಪಯೋಗವಾಗುವದರಲ್ಲೂ ನನಗೆ ಯಾವದೊಂದು ಸಂದೇಹವಿಲ್ಲ. ಆದರೆ ಗ್ರಾಮಗಳಲ್ಲಿ ಇಂಥಾ ಗೂಳಿಗಳನ್ನು ಇಟ್ಟು ಸಾಕುವದು ಯಾರು ? ನನ್ನ ಸ್ವಂತ ಅಭಿಪ್ರಾಯವನ್ನು ಸೂಚಿಸುವ ವಿಷಯ ಅಡ್ಡಿ ಇಲ್ಲವಾದರೆ, ಈಗ ನಮ್ಮ ದೇಶದಲ್ಲಿ ಅನೇಕ ಪರಸ್ಪರಸಹಾಯದ ಸಂಘಗಳಿವೆ ಇಂಥಾ ರೈತರ ಕ್ಷೇಮಾರ್ಥವಾದ ಕೆಲಸವನ್ನು ಅಂಥಾ ಸಂಘಗಳೇ ವಹಿಸಿಕೊಂಡರೆ ಕ್ರಮವಾಗಿ ನಡೆಯುವದರಲ್ಲಿ ಅಡ್ಡಂತರ ಇಲ್ಲವೆಂದೂ, ಆ ಕಾರ್ಯವು ನೆರವೇರುವದೆಂದೂ ಸಹ ನಾನು ನಂಬುತ್ತೇನೆ. ಕೆಲವು ಅನುಕೂಲಸ್ಥರು ಅವರವರ ಮಂದೆಗೆ ಒಂದೊಂದು ಅಂಥಾಗೂಳಿಗಳನ್ನು ಇಟ್ಟುಕೊಂಡರೆ ಉತ್ತಮವೇ. ನಾನು ಗೂಳಿಗಳ ವಿಷಯ ಮಾತಾಡುವಾಗ ಬರೇ "ದನ"ಗಳ ಸಂಗತಿ ಕುರಿತು ಮಾತ್ರ ಹೇಳುವದಿಲ್ಲ. ನಮ್ಮ ದೇಶದಲ್ಲಿ "ಎಮ್ಮೆ" ದನಗಳು ಸಹ ಚೆನ್ನಾಗಿ ಅಭಿವೃದ್ಧಿಯಾಗುತ್ತವೆ. ಅಲ್ಲದೆ ಅನೇಕ ಕೊಳಚೆ ಭೂಮಿಗಳು ಇರುವದರಿಂದ ಅವುಗಳನ್ನು ಸಾಗುವಳಿ ಮಾಡಲಿಕ್ಕೂ ಮನೆ ಉಪಯೋಗದ ಹಾಲು ಬೆಣ್ಣೆ ವಗೈರೆಗೂ ಸಹ ಎಮ್ಮೆಗಳನ್ನು ಬಿಟ್ಟುಬಿಡಲಿಕ್ಕೆ ಆಗುವದಿಲ್ಲ. ಈ ದೇಶದಲ್ಲಿ ಎಷ್ಟು ಚಿಕ್ಕೋದಾದ ಅಂದರೆ ಘಟ್ಟದಾಸಾಗಿದ್ದೂ, ಹಾಲುಕರ ಉತ್ತಮವಾಗಿಯೂ ಇರುವ ಎಮ್ಮೆ ದನಗಳು ಇನ್ನೂ ಉಳಿದಿವೆ ಎಂಬ ಸಂಗತಿ ಇಲ್ಲಿ ಸೇರಿರುವ ಕೆಲವು ಮಹಾಶಯರಿಗೇನೇ ತಿಳಿದಿದೆ. ಯಾವಾಗ ಒಂದು ಗೂಳಿಯನ್ನು ಗ್ರಾಮಗಳ ಒಂದು ಅಂಶಕ್ಕೆ ಜೊತೆಮಾಡಿದಿರೋ ಅಂದರೆ ಒದಗಿಸಿದಿರೋ ಆಕೂಡಲೇ ಅಲ್ಲಿನ ಎಲ್ಲಾ ಪ್ರಯೋಜನಕ್ಕೆ ಬಾರದ ಅಯುಕ್ತವಾದ ಹೋರಿಗಳನ್ನೆಲ್ಲಾ ಬೀಜ ತೆಗೆಸ ಬೇಕು. ಈ ವಿಷಯದಲ್ಲಿಯೂ ಸಹ ವೆಟರಿನರಿ ಡಿಪಾರ್ಟ್‌ಮೆಂಟಿನವರು ಬೇಕಾದ ಸಹಾಯ ಕೊಡಲು ಸಿದ್ಧರಿದ್ದೇವೆ. ಇಂಥಾ ಒಂದು ಏರ್ಪಾಡೇನಾದರೂ ಕೂಡಲೆ ಕೈಕೊಂಡ ವಿನಹ ಈ ದೇಶದ ದನಗಳು ಇನ್ನಷ್ಟು ಹೀನಸ್ಥಿತಿಹೊಂದಿ ದೇಶದ ದಾರಿದ್ರ್ಯವು ಹೆಚ್ಚುವದರಲ್ಲಿ ಸಂದೇಹವೇನೂ ಇಲ್ಲ.

ದನಗಳನ್ನು ಬೆಳಸುವದಕ್ಕೂ ಇವುಗಳ ಮೇವು ಒದಗಿಸಿಕೊಳ್ಳುವದಕ್ಕೂ ಇರುವ ಸಂಬಂಧವು ನಾನು ಮೊದಲು ಹೇಳಿದ ಮೇರೆ ರಕ್ತಸಂಬಂಧವೇ ಎನ್ನಬಹುದು. ಒಳ್ಳೇದು, ಹಾಗಾದರೆ ನಮ್ಮ ದೇಶದ ಸ್ಥಿತಿ ಹ್ಯಾಗೆ ಎಂಬ ಸಂಗತಿಯನ್ನು ಕುರಿತು ಸ್ವಲ್ಪ ಚರ್ಚಿಸುವ. ಈ ವಿಷಯದಲ್ಲಿ ನಾನು ಪೂರಾ ಮನಸ್ಸು ತೆರೆದು ಮಾತಾಡಿದರೆ ನನ್ನನ್ನು ನಾನೇ ತುಚ್ಛೀಕರಿಸಿದಂತಾಗುವದು. ಹ್ಯಾಗೂ ಇಲ್ಲಿನ ರೈತರು ದನಗಳಿಗೆ ಕೊಡುವ ಬಾಧೆಯು ಅವರು ಶಿಕ್ಷೆಗೆ ಗುರಿಯಾಗುವದಕ್ಕೆ ಆಸ್ಪದವಾಗುವಲ್ಲಿ ಅಡ್ಡಿ ಕಾಣುವದಿಲ್ಲ. ಜಾನುವಾರುಗಳ ಹಿಂಸೆಯ ನಿವಾರಣೆ ಸೊಸೈಟಿ ಒಂದು ಈ ದೇಶದಲ್ಲಿ ಇರುತ್ತಿದ್ದರೆ ಸಾಧಾರಣವಾಗಿ ಶೇಕಡ ತೊಂಬತ್ತೊಂಬತ್ತು ಜನರು ದಿನವಿಷ್ಟು ಶಿಕ್ಷೆ

ಹೊಂದುತ್ತಿದ್ದರು. ಹಗಲೆಲ್ಲಾ ಕೆಲವುಸಾರಿ ರಾತ್ರಿಯೂ ಸಹ ಕೆಲಸಮಾಡಿ, ಮೇವಿಲ್ಲದ ಬಾಣೆಗಳಲ್ಲಿ ತಿರುಗಿ ತಿರುಗಿ ದಣಿದು ಹಿಂತಿರುಗಿ ಕೊಟ್ಟಿಗೆಗೆ ಹುಲ್ಲಿನ ನಿರೀಕ್ಷಣೆಯಲ್ಲಿ ಬಂದ ದನಗಳಿಗೆ ಉಪಕಾರವು ಪಟ್ಟಣ ಹಬ್ಬವೇನು. ಅಲ್ಲದೆ ಮಲಗಿಯಾದರೂ ವಿಶ್ರಾಂತಿಸುವದೆಂದರೆ ಮೊಣಕಾಲೆತ್ತ ಹೂಣುವಷ್ಟು ಕೊಳೆಯುತ್ತಿರುವ ಗೊಬ್ಬರವೇ ಹಾಸಿಗೆ ಇದು ಯಾವ ಧರ್ಮ? ಇಲ್ಲಿ ತಾವೆಲ್ಲರೂ "ಒಬ್ಬನ ಆಹಾರವು ಇನ್ನೊಬ್ಬನಿಗೆ ವಿಷ' ಎಂಬ ಗಾದೆಯನ್ನು ನೆನಪಿಗೆ ತರಬೇಕಾಗಿದೆ. ರೈತನ ಗೊಬ್ಬರವು ದನಗಳಿಗೆ ವಿಷವಾಗುತ್ತದೆ. ಅದು ಹ್ಯಾಗೆಂದರೆ ಅನೇಕ ದಿವಸಗಳ ವರೇಗೆ ಕೊಟ್ಟಿಗೆಯಲ್ಲಿಯೇ ಬಿಟ್ಟ ಗೊಬ್ಬರದಿಂದ ಕೆಲವು ವಿಧದ ಹುಳುಯೂ, ವಿಷಘಾಳಿಯೂ ಉತ್ಪನ್ನವಾಗಿ ದನಗಳ ಶ್ವಾಸಕೋಶಗಳಿಗೆ ಸೇರಿ ಅನೇಕ ವಿಧವಾದ ಖಾಯಿಲೆಗಳನ್ನುಂಟುಮಾಡುತ್ತವೆ. ಇದನ್ನು ತಪ್ಪಿಸುವದು ಅತ್ಯವಶ್ಯವಾಗಿದೆ. ಜಾನುವಾರಗಳ ಅಭಿವೃದ್ಧಿಗೆ ಶುಚಿಯಾದ ಘಾಳಿ, ನಿರ್ಮಲವಾದ ನೀರು ಮತ್ತು ಶುಭ್ರವಾದ ಮೇವು ಸಹ ಮನುಷ್ಯಸಂತತಿಯೇ ಅವಶ್ಯವಾದವುಗಳೆಂಬದು ತಮಗೆಲ್ಲರಿಗೂ ತಿಳಿಯದ ಸಂಗತಿಯಲ್ಲ. ಆದರೆ ಈ ದೇಶದ ಹುಲ್ಲುಗಾವಲುಗಳನ್ನು ಕೆರೆಗಳನ್ನು ಆಲೋಚಿಸಿದರೆ ಕಣ್ಣಿನಲ್ಲಿ ನೀರುಬರುತ್ತದೆ. ಎಲ್ಲಿ ನೋಡಿದರೂ ಲಂಟಾನ, ಕಾಡು ಕೋಳಿ, ಮುಟ್ಟಿದರೆ ಮುನಿ— ಎಲ್ಲಿನೋಡಿದರೂ ಕೊಳಕು ಹುಲ್ಲು ಕಸಗಳು ತುಂಬಿದಕೆರೆಗಳು. ಹಾಗಾದರೆ ಜಾನುವಾರುಗಳು ಮೇಯುವದೆಲ್ಲಿ? ಶುಚಿಯಾದ ನೀರು ಕುಡಿಯುವದೆಲ್ಲಿ? ಈ ಅಡಚಣೆಗಳನ್ನು ನಿವಾರಿಸದಿದ್ದರೆ ದನಗಳನ್ನು ಸಾಕುವದು ತಾನೆ ಹ್ಯಾಗೆ? ಇವುಗಳನ್ನೆಲ್ಲಾ ಉಪಯೋಗಕ್ಕೆ ಅನುಕೂಲವಾಗಿ ಇಡಬೇಕಾದರೆ ಗ್ರಾಮಸ್ಥರ ಪರಸ್ಪರ ಸಹಾಯದಿಂದಲೇ ಆಗಬೇಕಾಗಿ ನನಗೆ ತೋರುತ್ತದೆ. ಇನ್ನೂ ಜಂಜಡದಲ್ಲಿ ಹಾಲು ಕುಡಿಸಿಕೊಳ್ಳುವದು ನ್ಯಾಯವಾಗಿ ಕಾಣುವದಿಲ್ಲ. ಲಂಟಾನವು ಬಾಣೆಗಳನ್ನೆಲ್ಲಾ ಆವರಿಸಿಕೊಂಡು ಕಾಡುಮೃಗಗಳ ಅವಾಂತರವು ಹೆಚ್ಚಾಗುತ್ತಾ ಬರುತ್ತದೆ. ದನಗಳಿಗೆ ಸದ್ಯ ಕೆಲಸದ ಸಮಯದಲ್ಲು, ಹಾಲುಕರೆಯುವ ಸಮಯದಲ್ಲು ಸ್ವಲ್ಪ ತಿಂಡಿ ಕೊಡಲೇ ಬೇಕು. ಇದಕ್ಕೆ ಅರ್ಹವಾದ ಹುಲ್ಲು, ಹಿಂಡಿ, ಹತ್ತೀಬೀಜ, ಹುರುಳಿ, ತವಡು ಉಪ್ಪು ವಗೈರೆ ಸಾಮಗ್ರಿಗಳನ್ನು ಸಮಯೋಚಿತವಾಗಿಯೂ, ಅನುಕೂಲವಿದ್ದ ಮಟ್ಟಿಗೆಯೂ, ಕೊಡಲೇಬೇಕು. ಬಿಸಿಲುಕಾಲದ ಉಪಯೋಗಕ್ಕೆ ಗಿನಿಗ್ರಾಸ್ ಎಂಬಹುಲ್ಲನ್ನು ಬೆಳಸಿ ತಕ್ಕ ಕಾಲದಲ್ಲಿ ಕುಯ್ದು ತಯಾರಿಸಿದ ಗುಣಿಗಳಲ್ಲಿ ತುಂಬಿಸಿ ಇಟ್ಟುಕೊಳ್ಳಬಹುದು. ಅಲ್ಲದೆ ದನಗಳ ವಾಸದ ಕೊಟ್ಟಿಗೆಗಳನ್ನು ಮಳೆ ಘಾಳಿಯಬಾಧೆ ಇಲ್ಲದ ಹಾಗೂ, ಶುಚಿಯಾದ ಘಾಳಿ ಆಡುವಹಾಗೂ ಮಲಕೊಳಿಸಲ್ಲದ ರೀತಿಯಾಗಿ ಸಹ ಕಟ್ಟಬೇಕು. ಈ ವಿಷಯ ಆಯಾಯ ಸ್ಥಳಕ್ಕೂ, ಅವರವರ ಅನುಕೂಲಕ್ಕೂ ತಕ್ಕಂತೆ ನಡಿಸುವಬಗ್ಗೆ ಬೋಧನೆಕೊಡಲು ವೆಟರಿನರಿ ಅಸಿಸ್ಟೆಂಟ್ ಸರ್ಜನರುಗಳು ತಯಾರಾಗಿರುತ್ತಾರೆ.

ಕುಶಾಲನಗರದಲ್ಲಿಯೂ, ರಾಮಪುರದಲ್ಲಿಯೂ ವರ್ಷಂಪ್ರತಿ ನಡೆಯುವ ಜಾನುವಾರಗಳ ಜಾತ್ರೆ ಮತ್ತು ಪ್ರದರ್ಶನಗಳಿಗೆ ಎಲ್ಲಾ ರೈತರು ಹೋಗಿ ಅಲ್ಲಿನ ದನಗಳರೀತಿ ನೋಡಿ ತುಂಬಾ ತಿಳಿದುಕೊಳ್ಳಬಹುದು. ಅಲ್ಲಿಯೂ ಕಲಿತುಕೊಳ್ಳುವ ಕುತೂಹಲವಿದ್ದವರಿಗೆ ಕಲಿಯತಕ್ಕ ಸಂಗತಿಗಳು ಅನೇಕವಾಗಿವೆ.

ಎರಡನೇ:— ಈಗ ನಾನು ಅಂಟುರೋಗಗಳೂ ಅವುಗಳ ನಿವಾರಣೆಗಳೂ ಎಂಬ ವಿಷಯ ಹೇಳುತ್ತೇನೆ. ಈ ದೇಶದಲ್ಲಿ ಅತೀ ಅನಾಹುತಕರವಾದಅಂಟುರೋಗವು "ದೊಡ್ಡರೋಗ" ವೆಂಬದೇ. ಈ ರೋಗವು ಮೆಲುಕುಹಾಕುವ ಮೃಗಗಳಿಗೇನೇ ತಗಲುವದು. ಕೆಲವು ಕಡೆಗಳಲ್ಲಿ ಹಂದಿಗಳಿಗೂ ತಗಲಿದೆ. ಈ ರೋಗದ ನಂಜುಗಾಳಿಯಲ್ಲಿ ಸ್ವಲ್ಪದೂರದವರೆಗೆ ಚಲಿಸುತ್ತದೆ. ಆದುದರಿಂದಲೇ ಹೆಚ್ಚು ದನಗಳಿಗೆ ಥಟ್ಟನೆ ಅಂಟಿಕೊಳ್ಳುವದು. ಈ ನಂಜು ಸಾಧಾರಣವಾಗಿ ಮೂರು ತಿಂಗಳವರೆಗೆ ಗೊಬ್ಬರ ವಗೈರೆ ಕೆಲವು ಅನುಕೂಲವಾದ ವಸ್ತುಗಳಲ್ಲಿ ನಿಂತಿರುತ್ತದೆ. ರಾಸುಗಳ ರಕ್ತಕ್ಕೆ ಈ ನಂಜು ಸೇರಿ ಏಳುದಿವಸಗಳೊಳಗೆ ಮೊದಲನೇ ಕುರುಹುಗಳು ಕಾಣಿಸಿಕೊಳ್ಳುತ್ತವೆ.

(1) ಹೆಚ್ಚಾದ ಅಂದರೆ 106 ಡಿಗ್ರಿಜ್ವರ
(2) ಮೇವು ಬಿಡುವದು.
(3) ಸಗಣಿ ಘಟ್ಟಿಯಾಗುವದು.
(4) ಕಣ್ಣು ಮೂಗುಗಳಲ್ಲಿ ನೀರು ಸುರಿಯುವದು.
(5) ಬಾಯಿಯೊಳಗೆ ಹುಣ್ಣುಗಳು
(6) ಬಹುದುರ್ವಾಸನೆಯುಳ್ಳ ಭೇದಿಯಾಗುವದು
(7) ಕೀವು ಮತ್ತು ರಕ್ತ ಮಿಶ್ರವಾದ ಬೇಧಿ

ಈ ರೋಗದ ನಿವಾರಣೆ.— ರೋಗದ ನಂಜು ರಕ್ತಕ್ಕೆ ಸೇರುವ ಮೊದಲೇ ದನಗಳಿಗೆಲ್ಲಾ ವಾಕು ಹಾಕಿಸಬೇಕು. ವಾಕು ಹಾಕಿಸಿದ ನಂತರ ನದಿರಾಸುಗಳನ್ನು ಅಂಟು ಇರುವ ಜಾನುವಾರಗಳ ಮಧ್ಯೆ ಬಿಟ್ಟರೆ ಒಳ್ಳೇದು. ರೋಗತಗಲಿದ ರಾಸುಗಳನ್ನು ಕಟ್ಟಿ ಹಾಕಿ ಅಕ್ಕಿ ಅಥವಾ ರಾಗಿಗಂಜಿ ಮಾಡಿ ದಿವಸಕ್ಕೆ ಮೂರು ಹೊತ್ತು ಸ್ವಲ್ಪ ಬಿಸಿಯಾಗಿ ಕೊಡಬೇಕು. ಈ ಗಂಜಿಯಲ್ಲಿ ಹತ್ತರಿಂದ ಇಪ್ಪತ್ತು ತೊಟ್ಟುಗಳು ಕಾರ್ಬಾಲಿಕ್ ಯಾಸಿಡ್ ಹಾಕಿದರೆ ಒಳ್ಳೇದು. ಮೊದಲಿನ ಚಿನ್ಹೆಗಳನ್ನು ಕಂಡ ಕೂಡಲೇ ಜುಲಾಪಿಂಗೆ ಕೊಯಿನ ಶಹ ಕೊಟ್ಟರೆ ರೋಗವು ಹೆಚ್ಚು ಬಲಕಾಯಿಸುವದಿಲ್ಲ. ಸಗಣಿ, ಗಂಜಳ ವಗೈರೆ ಮಲವನ್ನು ಆಗಾಗ್ಗೆ ತೆಗೆದು ಸುಡಬೇಕು. ಕೊಟ್ಟಿಗೆಗೆ ಫೀನಯಿಲ್ ಲೋಷನ್ ಮಾಡಿ ಚೆಲ್ಲಬೇಕು.

ಎರಡನೇ— "ಗಂಟ್ಲುಕಟ್ಟು" ರೋಗದಿಂದಲೂ ಅನೇಕ ರಾಸುಗಳು ಮೃತಪಟ್ಟು ದೊಡ್ಡನಷ್ಟವಾಗುತ್ತದೆ. ಇದರ ನಂಜು ಗಾಳಿಯಲ್ಲಿ ಚಲಿಸುವದಿಲ್ಲ. ಆದರೆ ಕೊಳಚೆ ನೆಲ ವಗೈರೆ ಅನುಕೂಲವಾದ ಸ್ಥಳಗಳಲ್ಲಿ ಬಹಳ ವರ್ಷಗಳ ವರೇಗೂ ಇದ್ದುಕೊಂಡು ಕೊನೆಗೆ ತನಗೆ ಹಿತವಾದ ಹವ ಸಿಕ್ಕಿದಾಗ ಕೂಡಲೇ ಮಿಲ್ಯಗಟ್ಟಲೆಯಾಗಿ ಬೆಳೆದು ಹುಲ್ಲುಗಾವಲುಗಳಲ್ಲಿ ದನಗಳ ರಕ್ತವನ್ನು ಸೇರಿ ಶೀಘ್ರವಾಗಿಯೇ ಮೃತಪಡಿಸುತ್ತದೆ. ಈ ನಂಜು ಮೆದಳನ್ನೂ, ಗಂಟಲನ್ನೂ, ಕರುಳನ್ನೂ ಸೇರಿಕೊಂಡು ಆಯಾಯ ಸ್ಥಳಗಳಲ್ಲಿ ಬೇರೆಬೇರೆ ಕುರುಹುಗಳನ್ನು ತೋರ್ಪಡಿಸುತ್ತದೆ.

(1) ಹೆಚ್ಚಾದ ಅಂದರೆ 107 ಡಿಗ್ರಿ ಜ್ವರ.
(2) ಮೂಗು ಬಾಯಿಗಳಿಂದ ರಕ್ತ ಸುರಿಯುವದು.
(3) ಮೂಗಿನಿಂದ ಮಂದವಾದ ಅರಿಸಿನ ಬಣ್ಣದ ಸಿಂಬಳ ಬರುವದು.
(4) ಗಂಟ್ಲು ಊದುವದು.
(5) ಹೊಟ್ಟೆ ಉಬ್ಬರಿಸುವದು.
(6) ಕೆಲವು ಸಾರಿ ರಕ್ತವೇ ಬೇಧಿಯಾಗುವದು.

ಇದಕ್ಕೆ ನಿವಾರಣೆ-ವಾಕು ಹಾಕಿಸುವದು. ಈ ರೋಗವೆಂದುತಿಳಿದ ಮೇಲೆ ಜನರು ಅಂಥಾ ರಾಸುಗಳನ್ನು ಮುಟ್ಟುವರ ಕೈಯಲ್ಲಿ ಘಾಯಗಳಿರಬಾರದು. ಯಾಕಂದರೆ ಇದು ಥಟ್ಟನೆ ಮನುಷ್ಯರಿಗೂ ಹಾಯುತ್ತದೆ.

ಮೂರನೇ:—ಕಾಲುಬ್ಬರ ಬಾಯಿಬ್ಬರ ಇದೂ ಸಹ ಮೆಲುಕುಹಾಕುವ ಜಾತಿಗಳಿಗೆ ಅಂದರೆ ಆಡು, ಕುರಿ, ದನವಗೈರೆಗಳಿಗೇನೆ ಸಾಧಾರಣವಾಗಿ ಅಂಟುವದು. ಇದರ ನಂಜು ಸಹ ಗಾಳಿಯಲ್ಲಿ ಚಲಿಸುವ ಕಾರಣದಿಂದಲೇ ಥಟ್ಟನೆ ಗ್ರಾಮದ ಮಂದೆಗಳಲ್ಲೆಲ್ಲ ಹಬ್ಬಿ ಕೊಳ್ಳುವದು. ಈ ರೋಗದಿಂದ ಹೆಚ್ಚು ರಾಸುಗಳು ಸಾಯುವುದಿಲ್ಲ. ಚಿಕಿತ್ಸೆ ಕ್ರಮವಾಗಿ ನಡಿಸಿದರೆ ಸಾಯುವುದು ಕಡಿಮೆ. ಆದರೆ ಎಳೇ ಕರುಗಳು ಸಾಧಾರಣವಾಗಿ ಜ್ವರದ ತಾಪದಿಂದಲೇ ಸತ್ತು ಹೋಗುತ್ತವೆ. ಇದರ ಕುರುಹುಗಳು.

1. ಹೆಚ್ಚಾದ ಅಂದರೆ 106 ಡಿಗ್ರಿ ಜ್ವರ.
2. ಬಾಯಿ ಮತ್ತು ಗೊರಸುಗಳ ಮಧ್ಯೆ ಹುಣ್ಣು ಬೀಳುವದು.
3. ಮೇವುಬಿಡುವದು.
4. ಬಾಯಲ್ಲಿ ಜೊಲ್ಲು ಸೋರುವದು.

ಸ್ಪಟೀಕಾರದ ನೀರಿನಲ್ಲಿ ದಿವಸಕ್ಕೆ ಮೂರುಸಾರಿ ಬಾಯಿಯನ್ನು ತಕ್ಕಳಿಸುವುದು. ಕಾಲಿನ ಹುಣ್ಣಿಗೆ ಬೇವಿನ ಸೊಪ್ಪು ಅರೆದು ಹಚ್ಚುವದು. ನವಿಲುತುತ್ತ, ಟಾರೆಂಟೈನ್, ಫೀನಯಿಲ್ ವಗೈರೆಗಳು ಸಹ ಉಪಯೋಗಕರವಾದವು. ಮುಖ್ಯವಾಗಿ ಗೊರಸಿನಲ್ಲಿಯೂ, ಬಾಯಿಯಲ್ಲಿಯೂ ಹುಳಗಳು ಬೀಳದಂತೆ ಶುಚಿಯಾಗಿ ನೋಡಿಕೊಂಡರೆ ಹದಿನೈದು ದಿವಸಗಳಲ್ಲಿ ರಾಸುಗಳು ಗುಣವಾಗುತ್ತವೆ.

ಮೂರನೇ.—ಅಂಟುರೋಗ ನಿವಾರಣೆ-ರೋಗ ಬಂದ ನಂತರ ವಾಸಿಮಾಡಿ ಕೊಳ್ಳುವದಕ್ಕಿಂತಲೂ ರೋಗವು ಬಾರದಂತೇನೇ ಮಾಡಿಕೊಳ್ಳುವುದು ಉತ್ತಮವೆಂದು ಗಾದೆಯಿರುವದು ಎಲ್ಲರಿಗೂ ತಿಳಿದೇ ಇದೆ. ಅಂಟುರೋಗವು ತಗಲದಂತೆ ಮಾಡಬೇಕಾದರೆ ಈ ಕೆಳಗೆ ಕಾಣಿಸಿರುವ ಕ್ರಮಗಳನ್ನು ಅನುಸರಿಸಿದರೆ ತುಂಬಾ ಪ್ರಯೋಜನಕರವಾಗುವದು.

1. ದನಗಳನ್ನು ಆಳು ಇಟ್ಟು ಎಚ್ಚರದಲ್ಲಿ ಕಾಯಿಸಿ ಇತರ ದನಗಳ ಮಂದೆಗೆ ಹೋಗದಂತೆ ನೋಡಬೇಕು.
2. ಅಂಟುರೋಗ ಇರುವಕಡೆ ದನಗಳನ್ನು ಬಿಡಬಾರದು.
3. ವಾಕುಹಾಕಿಸಬೇಕು.
4. ಹೊಸದಾಗಿ ಕೊಂಡುಕೊಂಡ ಯಾವದೇ ರಾಸನ್ನಾಗಲೀ ಹತ್ತು ದಿವಸಗಳ ವರೆಗೆ ಬೇರೆ ಇಡಬೇಕು.
5. ಒಬ್ಬ ರೈತನಿಗೆ ಎರಡು ಕೊಟ್ಟಿಗೆಗಳಿರಬೇಕು. ಇದರಿಂದ ಸಂಶಯಕರವಾದ ರಾಸುಗಳನ್ನು, ರೋಗ ತಗಲಿದವುಗಳನ್ನು ಬೇರೆ ಇಟ್ಟು ಚಿಕಿತ್ಸೆ ನಡಿಸಲಿಕ್ಕೆ ಅನುಕೂಲವಾಗುತ್ತದೆ.
6. ಅಂಟುರೋಗದ ಪ್ರಥಮ ಚಿನ್ಹೆಗಳು ಕಾಣಿಸಿಕೊಂಡಕೂಡಲೆ ವೆಟರಿನರಿ ಡಿಪಾರ್ಟ್‌ಮೆಂಟಿನವರಿಗೆ ಜಲ್ದಾಗಿ ತಿಳಿಸಬೇಕು. ಮರು ದಿವಸದ ವರೆಗೆ ನಿಂತರೆ ರೋಗವು ಬಲಕಾಯಿಸಿ ಬಿಡುತ್ತದೆ.
7. ನೆರೆಹೊರೆ ಗ್ರಾಮಸ್ಥರಿಗೆ ಈ ವರ್ತಮಾನವನ್ನು ತಕ್ಷಣವೇ ತಿಳಿಸಬೇಕು.
8. ಅಂಟು ರೋಗದಿಂದ ಸತ್ತ ರಾಸುಗಳ ಚರ್ಮ ಸುಲಿಸಬಾರದು. ಅಂಥಾ ರಾಸುಗಳನ್ನು ಬಾಯಿ ಮೂಗು ಆಸನವನ್ನು ಸಹ ಚೆನ್ನಾಗಿ ಮುಚ್ಚಿ, ಆರಡಿ ಗುಂಡಿಯಲ್ಲಿ ಹಾಕಿ, ಆದರ ಚರ್ಮವನ್ನು ಪೂರಾ ಕತ್ತಿಯಿಂದ ಗೀರಿ ಘಾಯಮಾಡಿ ಮಣ್ಣುಹಾಕಲಿಕ್ಕೆ ಆಯುಕ್ತವಾಗಿ ಮಾಡಬೇಕು. ಆ ಮೇಲೆ ಒಂದು ಕುಕ್ಕೆ ಸುಣ್ಣ ಹಾಕಿ ಮುಚ್ಚಬೇಕು.
9. ಪ್ರತಿ ದಿವಸವೂ ಬೆಳಿಗ್ಗೆ ಗೊಬ್ಬರವನ್ನು ತೆಗೆದು, ಕೊಟ್ಟಿಗೆಯೊಳಗೆ ಗಾಳಿ ಆಡುವ ಹಾಗೆ ಅನುಕೂಲಮಾಡಿ, ಸಾಧ್ಯ ಕಾಲ ಮಲಗಲಿಕ್ಕೂ ತಿನ್ನಲಿಕ್ಕೂ ಹುಲ್ಲು ಹಾಕಬೇಕು. ಗೊಬ್ಬರವನ್ನು ಸ್ವಲ್ಪ ದೂರದಲ್ಲಿ ಗುಂಡಿಯಲ್ಲಿ ಹಾಕಬೇಕು.
10. ಕೊಟ್ಟಿಗೆಯ ನೆಲವನ್ನು ತೆರೆದು ಬಿಸಿಲಾಡುವಂತೆ ಮಾಡಬೇಕು. ಅವಶ್ಯವಿದ್ದರೆ ನೆಲವನ್ನು ಒಂದೆರಡು ಅಡಿ ಆಳಕ್ಕೆ ಅಗೆದು ಆ ಮೇಲೆ ಥರ್ಮಾಸ್ ಮಾಡಬೇಕು. ಫಿನಯಿಲ್ ಲೋಷನ್ ಮಾಡಿ ಕೊಟ್ಟಿಗೆಗೆಲ್ಲ ಚಿಮುಕಿಸಬೇಕು.
11. ಈ ದೇಶದಲ್ಲಿ ರೈತರು ರೋಗತಗಲಿದ ರಾಸುಗಳನ್ನು ಕಟ್ಟಿಹಾಕಿ ಕೊಂಡು ಚಿಕಿತ್ಸೆ ಮಾಡುವ ಬದಲು ಕಾಡು ಬಾಣೆಗಳಲ್ಲಿ ಸಹ ತಿರುಗಾಡಲಿಕ್ಕೆ ಬಿಟ್ಟುಬಿಡುವುದು ಸಾಧಾರಣವಾಗಿದೆ. ಇಂಥಾ ಅಕ್ರಮದಿಂದಲೇ ಹೆಚ್ಚಾದ ಅವಾಂತರವು ನಷ್ಟವೂ ಸಂಭವಿಸುವದು. ಇದನ್ನು ಖಂಡಿತ್ ನಿಲ್ಲಿಸಬೇಕು. ಇಲ್ಲದಿದ್ದರೆ ತಾನು ಕೆಟ್ಟಿದ್ದು ಸಾಲದೆ ತನ್ನ ನೆರೆಯವರನ್ನೂ ಕೆಡಿಸುತ್ತಾನೆ.
12. ರೋಗದಿಂದ ಸತ್ತ ರಾಸುಗಳನ್ನು ಹೂಣಲಿಕ್ಕೆ ಗುಂಡಿಯನ್ನು ತೋಡು, ಕೆರೆ, ಭಾವಿ ವಗೈರೆ ನೀರಿನ ಸ್ಥಳವನ್ನು ತಪ್ಪಿಸಿಯೂ ದನಗಳು ಚರಾವು ಮಾಡುವ ಬಾಣೆ ವಗೈರೆ ಸ್ಥಳಗಳನ್ನು ತಪ್ಪಿಸಿಯೂ ತೆಗೆಯಬೇಕು. ಇವೆಲ್ಲ ಸಾಧಾರಣವಾಗಿ ಎಲ್ಲರಿಗೂ ತಿಳಿದ ಸಂಗತಿಗಳೇ, ಆದರೂ ಕೂಡ ಹೆಚ್ಚು ಜನರು ಮನಸ್ಸಿಗೆ ತೆಗೆದುಕೊಳ್ಳುವದಿಲ್ಲ.

ಮೂರನೇ.—ಜಾನುವಾರುಗಳ ಖಾಯಿಲೆಗಳಿಗೂ ಜನರ ದೇಹಾರೋಗ್ಯಕ್ಕೂ ಇರುವ ಕೆಲವು ಸಂಬಂಧಗಳು ಈ ವಿಷಯದಲ್ಲಿ ಜನರು ಏನು ತೊಂದರೆ ತೆಗೆದುಕೊಂಡಂತೆ ಕಾಣುವದಿಲ್ಲ. ವೆಟರಿನರಿ ಅಸಿಸ್ಟೆಂಟ್ ಸರ್ಜನರುಗಳು ಕೆಲಸದ ಮೇಲೆ ಹೋದಾಗ ಸಣಸಣ ಉಪನ್ಯಾಸ ಮಾಡುತ್ತಲೇ ಇದ್ದರೂ ಕೂಡಾ, ಈ ದಿನ ನಾನು ಇವುಗಳನ್ನು ಮೂರು ಭಾಗಗಳಾಗಿ ವಿಂಗಡಿಸಿ ಹೇಳುತ್ತೇನೆ.

1. ಮಾಂಸ ಮತ್ತು ಹಾಲು, ಈ ಎರಡು ವಸ್ತುಗಳಿಂದ ಹೊಟ್ಟೆಗೆ ಸೇರಿ ರೋಗ ತಗಲುವದು. ಮಾಂಸವನ್ನಾಗಲೀ, ಹಾಲನ್ನಾಗಲೀ ತಕ್ಕಷ್ಟು ಬೇಯಿಸಿ ಯೂ, ಕುದಿಸಿಯೇ ಉಪಯೋಗಿಸಬೇಕು. ಇಲ್ಲದಿದ್ದರೆ ಕೆಲವು ಹುಳಗಳ ಮೊಟ್ಟೆಗಳು ಶರೀರಕ್ಕೆ ಸೇರಿ ಅಲ್ಲಿ ಹುಳ ಬೆಳೆಯುತ್ತದೆ. (ಎ) ಇದಕ್ಕೆ ಸಾಮ್ಯವಾಗಿ ಹಂದಿ ಮಾಂಸದಲ್ಲಿನ 'ಅಕ್ಕಿ' ಎಂಬದು ಒಂದು ತರದ ಹುಳದ ಗೂಡು. ಇದು ಹೊಟ್ಟೆಗೆ ಸೇರಿದರೆ ಅಲ್ಲಿ ಬೆಳೆದು ಮಾಂಸದಲ್ಲೆಲ್ಲಾ ಪ್ರಬಲವಾಗುತ್ತದೆ. ಈ ರೋಗಕ್ಕೆ 'ಟ್ರೈಕಿನೋಸಿಸ್' ಎನ್ನುತ್ತಾರೆ.

(ಬಿ) ಹಾಲಿನಿಂದ ಅಂದರೆ ರೋಗ ತಗಲಿದ ರಾಸುಗಳ ಮೂಲಕ ಮಕ್ಕಳಿಗೆ 'ಡಿಫ್‌ತೀರಿಯಾ' ಮತ್ತು ಬಾಯಿ ಹುಣ್ಣು ವಗೈರೆ ಖಾಯಿಲೆಗಳು ಬರುತ್ತವೆ.

(ಸಿ) 'ಕ್ಷಯ' ವೆಂಬ ಭಯಂಕರವಾದ ರೋಗದ ನಂಜು ಮನುಷ್ಯನ ಶರೀರದಲ್ಲಿಯೂ ಒಂದೇ ಜಾತಿಗೆ ಸೇರಿದವುಗಳೆಂದು ಕೆಲವು ಪರಿಶೋಧಕರು ಕಂಡು ಹಿಡಿದಿರುತ್ತಾರೆ. ಈ ವಿಷಯ ಬಹಳ ಎಚ್ಚರ ತೆಗೆದುಕೊಳ್ಳಬೇಕು. ಮುಖ್ಯವಾಗಿ ಸದ್ಯಕ್ಕೆ ಬಹಳ ಲಾಭಕಾರಿಯಾಗಿ ಕೆಮ್ಮುಳ್ಳ ಇರುವ ಹಸುಗಳ ಹಾಲು ಉಪಯೋಗಿಸಬಾರದು. ಕೆಚ್ಚಲಿನೊಳಗೆ ಗಂಟು ಗಂಟುಗಳಾಗಿದ್ದರೆ ಅಂಥಾ ಹಾಲನ್ನು ಉಪಯೋಗಿಸಬಾರದು.

(ಡಿ) 'ಟೇಪ್‌ವರ್ಮ್' ಎಂಬ ಅಪಾಯಕರವಾದ ಏಕಹುಳವು ನಾಯಿ ಮರಿಗಳಿಂದ ಮಕ್ಕಳ ಕೈಗೆ ಸಿಕ್ಕಿ ಅಲ್ಲಿಂದ ಹೊಟ್ಟೆಗೆ ಹೋಗಿ 'ಹೈಡಟಿಡ್' ಎಂಬ ಹೊಟ್ಟೆನೋವನ್ನುಂಟುಮಾಡುತ್ತದೆ.

2. ಒಂದಕ್ಕೊಂದು ತಗಲಿ ಅಂಟುವ ಖಾಯಿಲೆಗಳ ಪೈಕಿ (ಎ) ನಾಯಿಯ ಪರಂಗಿ ಯಾ ಕಜ್ಜಿ, ಕುದುರೆಯ ಕಜ್ಜಿ, ಹುಳುಕಡ್ಡಿ, ಇನ್ನು ಕೆಲವು ಚರ್ಮದ ಖಾಯಿಲೆಗಳು, ಅಂದರೆ ಹುಣ್ಣು ವಗೈರೆಗಳು ನಾಯಿಯಿಂದಲೂ ಕುದುರೆಯಿಂದಲೂ ಹಾಯುತ್ತವೆ.

3. ಈ ಗುಂಪಿನಲ್ಲಿ ಹೆಚ್ಚು ಅಪಾಯಕರವಾದದ್ದು ಗಂಟ್ಲುಕಟ್ಟು ರೋಗ ಮತ್ತು 'ರೇಬೀಸ್' ಯಾ 'ನಾಯಿಯ ಹುಚ್ಚು' ಎಂಬದು. ಗಂಟ್ಲುಕಟ್ಟು ರೋಗವು ಹೆಚ್ಚಾಗಿ ಘಾಯಗಳ ಮೂಲಕ ಮನುಷ್ಯನ ರಕ್ತಕ್ಕೆ ಸೇರುತ್ತದೆ. ರೋಗ ಅಂಟಿದ ರಾಸುಗಳ ಸಂಗಡ ಎಚ್ಚರವಿಲ್ಲದೆ ಆಡುವದು ಮತ್ತು ಕಡಿಮೆ ಕ್ರಯದ ಕ್ಷೌರದ ಮಾಡಲಿಕ್ಕೆ ಉಪಯೋಗಿಸುವ 'ಬ್ರಷ್' ಗಳಿಂದಲೂ ಸಹ ಈ ರೋಗವು ತಗಲುತ್ತದೆ. ನಾಯಿಯ ಹುಚ್ಚು ಸಾಧಾರಣವಾಗಿ ಅಂಥಾ ನಾಯಿಯು ಕಚ್ಚಿಯೇ ತಗಲುವದು ಎಂಬದು ತಮಗೆಲ್ಲರಿಗೂ ತಿಳಿದೇ ಇದೆ.

ಇನ್ನು 'ವೇರಿಯೋಲ' ಯಾ ದನಗಳ ಸಿಡುಬು ವಗೈರೆ ಅನೇಕ ಖಾಯಿಲೆಗಳನ್ನು ಕುರಿತು ಇಲ್ಲಿ ಹೇಳುವದೆಂದರೆ ನನ್ನ ಸಮಯ ಕಡಿಮೆಯಾಗಿದೆ. ನನ್ನ ಮುಖ್ಯ ಉದ್ದಿಶ್ಯ ಏನೆಂದರೆ—ಈಗ ನಾನು ಸೂಕ್ಷ್ಮವಾಗಿ ವಿವರಿಸಿದ ಸಂಗತಿಗಳನ್ನೆಲ್ಲಾ ತಾವುಗಳು ಚಿಕಿತ್ಸೆಗೆ ತೆಗೆದುಕೊಂಡು ಇಲ್ಲಿ ನನ್ನ ಮೀಟಿಂಗ್ ಮಾಡಿ ವೆಟರನರಿ ಅಸಿಸ್ಟೆಂಟ್ ಸರ್ಜನರುಗಳನ್ನು ಸೇರಿಸಿಕೊಂಡು ತಕ್ಕ ಏರ್ಪಾಡು ಗ್ರಾಮಾಂತರಗಳಲ್ಲಿ ಮಾಡಬೇಕೆಂಬುದೇ. ಮುಖ್ಯವಾಗಿ ದನಗಳನ್ನು ಬೇಗ ಅಭಿವೃದ್ಧಿಗೆ ತರಬೇಕಾದರೆ 'ಗೋರಕ್ಷಣೆ ಸಂಘಗಳು' ಇದ್ದೇ ಇರಬೇಕು. ನಾನು ಈಗ ಸದ್ಯಕ್ಕೆ ತಮಗಳ ಮನಸ್ಸಿನಲ್ಲಿ ಜವಾಬ್ದಾರಿಕೆಯನ್ನೂ ಹೊರಗೆಡಹಿದ್ದೇನೆಂದು ನಂಬಿ ತಾವುಗಳು ಇಷ್ಟು ಹೊತ್ತು ಕೇಳಿಸಿದ್ದಕ್ಕೆ ತುಂಬಾ ವಂದನೆ ಮಾಡುತ್ತೇನೆ.

ಸಿ. ಬಿ. ಸೋಮಯ್ಯ:
ವೆಟರನರಿ ಅಸಿಸ್ಟೆಂಟ್ ಸರ್ಜನ್.

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ ಸಂ.

ಕೊಡಗಿನ ಜನರ ದೌರ್ಭಾಗ್ಯ.

ಮಹಾಶಯರೇ,

ಜಮ್ಮಾದಾರರ ಸಂಘದ ಮೀಟಿಂಗಿನಲ್ಲಿ ಸೆಕ್ರೆಟರಿಯವರು ಓದಿದ ರಿಪೋರ್ಟಿನಲ್ಲಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿ ಡಿ. ಕೆ. ಭಾರದ್ವಾಜರು ಮೂರ್ನಾಡಿಗೆ ಬಂದು ಖಾದಿಪ್ರಚಾರದ ವಿಷಯ ಮಾತಾಡಲು ತಯಾರಿದ್ದರೆಂದೂ ಬದರೆ ಅವರ ಬಾಯಿಮುಚ್ಚಬೇಕಾಗುತ್ತದೆ ಎಂತ ಡಿಸ್ಟ್ರಿಕ್ಟ ಮೇಜಿಸ್ಟ್ರೇಟರು ಹುಕ್ಕುಂ ಮಾಡಿದರೆಂದೂ ತಿಳಿಸಿದರು. ಸಂಘವು ಡಿಸ್ಟ್ರಿಕ್ಟ ಮೇಜಿಸ್ಟ್ರೇಟರ ಹುಕುಮಿಗೆ ವ್ಯಸನ ಪಡುತ್ತದೆ ಎಂತ ಮಹಾಸಭೆಯಲ್ಲಿ ಠರಾವು ಪಾಸಾಯಿತು. ಅಷ್ಟರಲ್ಲೇ ಕೊಡಗಿನ ಜನರು ತೃಪ್ತರಾಗಬಹುದೇ? ಈ ವಿಷಯವಾಗಿ ಸೆಕ್ರೆಟರಿಯವರಲ್ಲಿ ಅನಂತರ ಮಾತನಾಡಿದ್ದಲ್ಲಿ ಡಿಸ್ಟ್ರಿಕ್ಟ ಮೇಜಿಸ್ಟ್ರೇಟರ ಹುಕುಮನ್ನೇ ಕಮಿಶನರು ಸಹ ಅನುಮೋದಿಸಿದರೆಂತ ತಿಳಿಯುತ್ತೇನೆ. ಇದು ಬಹಳ ವ್ಯಸನಕರವೇ. ಕೊಡಗಿನ ಹೊರಗಿನಿಂದ ಬಂದ ರಾಷ್ಟ್ರಸೇವಕರ ಬಾಯಿಮುಚ್ಚಿದ್ದು ಹೊಸ ವಿಷಯವಲ್ಲ. ಆದರೆ ಕಾಂಗ್ರೆಸ್ಸಿನ ಸ್ವಾಗತಸಮಿತಿಯ ಪರವಾಗಿ ಬಂದಿದ್ದ ಮುದುವೇಡ್‌ಕರ್ ಕೃಷ್ಣರಾಯರವರನ್ನು ಉಪನ್ಯಾಸ ಮಾಡಲು ಬಿಟ್ಟಾಗ ಜನರಿಗೆ ತುಂಬಾ ಸಂತೋಷವಾಯಿತು. ಹೊಸ ಕಮಿಶನರು ಬಂದನಂತರ ಸರಕಾರದ ರೀತಿಯು ವ್ಯತ್ಯಾಸವಾಗಿದೆಯೆಂತ ಜನರು ನಂಬಿದ್ದರು. ಆದರೆ ಈಗ ಭಾರದ್ವಾಜರ ಬರುವಿಕೆಗೆ ಆಕ್ಷೇಪಿಸಿದ ಡಿಸ್ಟ್ರಿಕ್ಟ ಮೇಜಿಸ್ಟ್ರೇಟರ ಹುಕುಮಿಗೆ ಕಮಿಶನರ ಪಕ್ಷಪಾತವಿದೆಯೆಂತ ಜನರಿಗೆ ತಿಳಿದ ಕೂಡಲೇ ಯಾವ ಕಮಿಶನರಾದರೂ ಪ್ರಜಾಸ್ವಾತಂತ್ರ್ಯದ ವಿಷಯದಲ್ಲಿ ಸರಕಾರದ ತತ್ವವೊಂದೇಯೆಂತ ಭಾವಿಸದೆ ಇರರು. ಇಂಥಾ ದುಸ್ಥಿತಿಗೆ ಪರಿಣಾಮವೇನು? ಜನರು ಎಚ್ಚತ್ತು ಸ್ವಾತಂತ್ರ್ಯವನ್ನು ಪಡೆಯುವದು ಒಂದೇ ದಾರಿ. ಭಾರದ್ವಾಜರಿಗೆ ರಾಜದ್ರೋಹಕ್ಕೆ ಶಿಕ್ಷೆಯಾಗಿದೆ ಎಂಬದೇ ಈಗಿನ ಹುಕುಮಿಗೆ ಕಾರಣವಂತೆ! ಹಾಗಾದರೆ ಮುದುವೇಡ್‌ಕರ್ ಕೃಷ್ಣರಾಯರಿಗೆ ಅದೇ ತಕ್ಕೇರಿಗೆ ಶಿಕ್ಷೆಯಾಗಿದ್ದದ್ದು ಕಮಿಶನರಿಗೆ ತಿಳಿದಿರಲಿಲ್ಲವೆಂತ ನಂಬ ಬಹುದೇ? ಅದು ಸಾಧ್ಯವಿಲ್ಲ. ಸಮಸ್ತ ರಾಜಕೀಯ ಕೆಲಸಗಾರರ ಜಾತಕವೆಲ್ಲಾ ಸರಕಾರಿ ರಿಕಾರ್ಡುಗಳಲ್ಲಿ ಇದೆಯೆಂತ ತಿಳಿಯುತ್ತೇವೆ. ಮುದುವೇಡ್ ಕೃಷ್ಣರಾಯರು ಒಂದಾಗ ಡಿಸ್ಟ್ರಿಕ್ಟ ಮೇಜಿಸ್ಟ್ರೇಟರು ಮಡಿಕೇರಿಯಲ್ಲಿ ಇಗದಿಲ್ಲವಂತ ತೋರುತ್ತದೆ. ಮುದುವೇಡ್‌ಕರ್ ಕೃಷ್ಣರಾಯರು ರಾಜದ್ರೋಹಿಯಾದರೂ ಮಡಿಕೇರಿಯಲ್ಲೂ ವಿರಾಜಪೇಟೆಯಲ್ಲೂ ರಾಜದ್ರೋಹ ಮಾತಾಡಲಿಲ್ಲವೆಂತ ನಂಬುತ್ತೇನೆ. ಅಥವಾ ರಾಜದ್ರೋಹ ಬೋಧಿಸಿದ್ದರೂ ಜನರು ದಂಗೆಯೇಳಲಿಲ್ಲವೆಂಬದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಸೆಕ್ರೆಟರಿಯವರು ಡಿಸ್ಟ್ರಿಕ್ಟ ಮೇಜಿಸ್ಟ್ರೇಟರಿಗೆ ಭಾರದ್ವಾಜರು ರಾಜಕೀಯ ವಿಷಯ ಪ್ರಸ್ತಾಪ ಮಾಡುವದಿಲ್ಲ, ಬರೇ ಆರ್ಥಿಕ ವಿಷಯ ಮಾತಾಡುತ್ತಾರೆಂತ ಮಾತುಕೊಟ್ಟರೂ ಸಹ ಭಾರದ್ವಾಜರ ಬರುವಿಕೆಗೇನೇ ಆಕ್ಷೇಪಿಸಿದ್ದನ್ನು ನೋಡಿದರೆ ಡಿಸ್ಟ್ರಿಕ್ಟ ಮೇಜಿಸ್ಟ್ರೇಟರು ದೇಶದ ಜನರ ಮನಸ್ಸನ್ನು ಇನ್ನೂ ತಿಳಿದು ಕೊಂಡಂತೆ ಕಾಣುವದಿಲ್ಲ. ದೇಶದ ಜನರು ಆರ್ಥಿಕ ಸ್ಥಿತಿಯನ್ನು ಸ್ವಲ್ಪಮಟ್ಟಿಗಾದರೂ ಉನ್ನತಸ್ಥಿತಿಗೆ ತರಲು ಪ್ರಯೋಜನವಾಗುತ್ತಿದ್ದ ಶ್ರೀಯುತ ಭಾರದ್ವಾಜರ ಬರುವಿಕೆಗೆ ಅಡ್ಡಿಯಾದ್ದರಿಂದ ದೇಶಕ್ಕ ಕೆಡಕಲ್ಲವೇ? ಕೊಡಗಿನ ಜನರಿಗೆ ಕಿವಿಯಿಂದ ಕೇಳುವ ಸ್ವತಂತ್ರ ಎಂದು ಬಂದೀತು!

"ಸಂಘದ ಮೆಂಬರು".

ಪೊನಪ ಗೋಣಿಕೊಪ್ಪಲು ಸ್ಕೂಲು.

ಅಯ್ಯಾ,

ಈ ಸ್ಕೂಲಿನ ವಿಷಯವಾಗಿ ಒಂದೆರಡಾವರ್ತಿ ನಾನು ಪತ್ರಿಕೆಗೆ ಬರೆದೆನು. ಆದರೆ ಇದರ ವಿಷಯವಾಗಿ ಸರಕಾರದವರಾಗಲಿ, ಡಿಸ್ಟ್ರಿಕ್ಟ ಬೋರ್ಡು ಮೆಂಬರುಗಳಾಗಲಿ ಯಾ ಕೌನ್ಸಿಲ್ ಮೆಂಬರುಗಳಾಗಲಿ ನಿಗಕೊಡದೆ ಇರುವದು ನೋಡಿ ಸಹಿಸಲಾರದೆ ಪುನಹ ಇದೊಂದು ಬಾತ್ಮಿಯನ್ನು ಕಳುಹಿಸುತ್ತೇನೆ; ದಯವಿಟ್ಟು ಪ್ರಕಟಿಸಬೇಕೆಂದು ಬೇಡುತ್ತೇನೆ.

ನಾನು ಮೊದಲೇ ಬರೆದ ಮೇರೆ ಮಿಶನ್ ಅಧಿಕಾರಿಗಳು ಈಗಿನ ವಿದ್ಯಾರ್ಥಿಗಳ ಸಂಖ್ಯೆಗಿಂತ ಅಂದರೆ ನೂರೈವತ್ತರ ಮೇಲೆ ಹೆಚ್ಚಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಕೂಡದೆಂಬ ಆರ್ಡರ್ ಆದಂತೆಯೇ ಈಗ ಇಪ್ಪತ್ತನಾಲ್ಕು ಮಕ್ಕಳನ್ನು ಸೇರಿಸಿಕೊಳ್ಳದೆ ಬಹು ಅಡಚಣೆಮಾಡುವದು ವಿದ್ಯೆ ಕಲಿಸಬೇಕೆಂದಿರುವ ತಂದೆ ತಾಯಿಗಳಿಗೂ ವಿದ್ಯೆ ಕಲಿಯಬೇಕೆಂದಿರುವ ಮಕ್ಕಳಿಗೂ ಬಹು ಕಷ್ಟಕರವಾಗಿ ಕಂಡುಬರುತ್ತೆ. ಅವರು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳದಿದ್ದರೂ ತಂದೆ ತಾಯಿಗಳು ಜುಲುಮಿನಿಂದ ಸ್ಕೂಲಿಗೆ ಕಳುಹಿಸುತ್ತಿರುತ್ತಾರೆ. ಈ ಪ್ರಕಾರವಾಗಿ ಒಂದೇ ಕ್ಲಾಸಿನಲ್ಲಿ ಎಪ್ಪತ್ತು ಎಂಬತ್ತು ಮಕ್ಕಳವರೆಗೆ ತುಂಬಿ ಕುರಿಗಳ ಮನೆಯೋ ಯಾ, ಕರಗಳ ದೊಡ್ಡಿಯೋ ಎಂಬಂತೆ ಕಾಣುತ್ತಿರುತ್ತದೆ. ಇಂಥಾ ಒಂದು ತರಗತಿಗೆ ಒಬ್ಬ ಮಾಸ್ತರು! ಹಾಗಾದರೆ ಆ ತರಗತಿಯ ಸ್ಥಿತಿಯು ಹ್ಯಾಗಿರಬಹುದು?

ಸ್ಕೂಲು ಇನ್‌ಸ್ಪೆಕ್ಟರವರು ಸಂದರ್ಶಿಸಲಾಗುವರೇ? ಅದು ಮೊದಲೇ ಆಗಲಾರದು. ಬಡ ರೈತರು ಎಷ್ಟು ಕೇಳಿಕೊಂಡರೂ ಕಣ್ಣು ತೆರೆದು ನೋಡುವ ಅಧಿಕಾರಿಗಳು ಯಾರಾದರೂ ಇದ್ದಾರೆಯೇ? ಈ ಕಾಲದಲ್ಲೇ ಸ್ಥಿತಿಯು ಈ ತರದಲ್ಲಿದೆ, ಮುಂದಕ್ಕೆ ಏನಾಗಬಹುದು? ಡಿಸ್ಟ್ರಿಕ್ಟ ಬೋರ್ಡು ಅಧಿಕಾರಿಗಳು ಇದರ ಮೇಲ್ವಿಚಾರಣೆಗೆ ಏನಾದರೂ ತೊಂದರೆ ತೆಗೆದುಕೊಳ್ಳುತ್ತಿರುತ್ತಾರೆಯೇ? ಅದು ಅವರ ಗಣನೆಗೆ ಬಂದಿರುವದಿಲ್ಲವಾಗಿ ಕಾಣುತ್ತೆ. ರೈತರ ಹಣದಿಂದ ಮಾತ್ರ ತಿಂಗಳಿಗೊಂದಾವರ್ತಿ ಮಿಶನರಿಯವರ ಮಾಸ್ತರುಗಳ ಸಂಬಳ ಬಡಾವಣೆಗೆ ಕಳುಹಿಸುವದೊಂದೇ ಕೆಲಸವಾಗಿ ಕಾಣುತ್ತೆ. ಆ ಹಣವನ್ನು ಹ್ಯಾಗೆ ಉಪಯೋಗಿಸುತ್ತಾರೆ, ಯಾತಕ್ಕಾಗಿ ಕೊಡಬೇಕು, ಕೊಟ್ಟದ್ದಕ್ಕೆ ಸರಿಯಾಗಿ ಪ್ರತಿಫಲ ದೊರೆಯುತ್ತೋ ಎಂಬುದನ್ನು ಕೇಳುವಷ್ಟು ಜವಾಬ್ದಾರಿ ಮೆಂಬರುಗಳಾಗಲಿ, ಸರಕಾರದವರಾಗಲಿ ಹೊತ್ತುಕೊಳ್ಳದ ಮೇಲೆ ರೈತರ ಹಣವನ್ನು ಈ ತರದ ದುಂದುಗಾರಿಕೆಗೂ, ನಿಷ್ಪ್ರಯೋಜನ ಕಾರ್ಯಕ್ಕೂ ಖರ್ಚುಮಾಡುವದು ಬಹು ಅನ್ಯಾಯವಾಗಿದೆ.

ಇದರ ವಿಷಯವಾಗಿ ಒಂದು ಠರಾವನ್ನು ಕಳೆದ ಜಮ್ಮಾದಾರರ ಸಂಘದ ಜನರಲ್ ಮೀಟಿಂಗಿಗೆ ಕಳುಹಿಸಿದ್ದೆನು. ಅದು ಪಾಸಾಗಿದೆಯೆಂದು ತಿಳಿಯಬರುತ್ತದೆ.

ಈ ತನ್ಮಧ್ಯೆ ಡಿಸ್ಟ್ರಿಕ್ಟ ಬೋರ್ಡು ಪ್ರೆಸಿಡೆಂಟರವರಿಗೆ ಈ ಸ್ಕೂಲಿನ ಸಮ್ಮಂಧವಾಗಿಯೇ ಒಂದು ಅರ್ಜಿ ತಯಾರಿಸಿ ಸುತ್ತಮುತ್ತಲಿನ ರೈತರ ಸೈನ್ ತೆಗೆದು ಅರ್ಜಿದಾಸ್ತು ಮಾಡಿರುತ್ತೇವೆ. ಆ ಅರ್ಜಿಗೆ ಪ್ರೆಸಿಡೆಂಟರವರು ತುಂಬಾ ನಿಗಕೊಟ್ಟು ಈ ಸ್ಕೂಲಿನ ವಿಷಯ ಇಷ್ಟೆಲ್ಲಾ ತೊಂದರೆಬರಲು ಕಾರಣವೇನೆಂದು ಪರಿಶೀಲಿಸಿ ಒಡನೆ ಗ್ರ್ಯಾಂಟುಗಳನ್ನು ನಿಲ್ಲಿಸಿ ಸ್ಕೂಲನ್ನು ಡಿಸ್ಟ್ರಿಕ್ಟ ಬೋರ್ಡು ಸ್ವಾಧೀನ ತೆಗೆದುಕೊಳ್ಳುವಂತೆ ಅಪ್ಪಣೆ ಮಾಡುವರೆಂದು ನಾವು ತುಂಬಾ ಕುತೂಹಲಿಗಳಾಗಿರುತ್ತೇವೆ.

ಇನ್ನಾದರೂ ಮೇಲಧಿಕಾರಿಗಳು ಕಣ್ಣು ತೆರೆದು ಸ್ಕೂಲಿನ ವಿಷಯ ಆಲೋಚನೆ ಮಾಡ್ಯಾರೆಂಬ ಭರವಸೆಯಿಂದ ಬಡದ ಈ ಬಾತ್ಮಿಗೆ ಒಡನೆ ಪ್ರತಿಫಲವು ದೊರೆಯಲಿ.

ಜಮ್ಮಾಡ ಮಾದಪ್ಪ.

ಸಂಪಾಜೆ ಆಸ್ಪತ್ರೆ

ಅಯ್ಯಾ,

ಮಲೇರಿಯಾ ಜ್ವರವು ತುಂಬ ತುಳಕುವ ಈ ಸಂಪಾಜೆ ಗ್ರಾಮದ ಸಂಪಾಜೆ ಸರಕಾರಿ ಬಂಗ್ಲೆಯಲ್ಲಿ ಇದೇ ತಾರೀಕು 6–4–25ರಲ್ಲು ಹಂಗಾಮಿಯಾಗಿ ಒಂದು ಆಸ್ಪತ್ರೆಯನ್ನು ತೆರೆದಿರುತ್ತಾರೆ. ಸದ್ರಿ ಆಸ್ಪತ್ರೆಗೆ ದಿನಕ್ಕೆ 150 ಮಂದಿ ರೋಗಿಗಳಿಗಿಂತಲೂ ಹೆಚ್ಚು ಮಂದಿ ಬಂದು ಮದ್ದನ್ನು ಪಡೆಯುತ್ತಿರುವರು. ಸದರಿ ರೋಗಿಗಳಿಗೆಲ್ಲಾ ಮಾ. ರಾ. ರಾ. ಡಾಕ್ಟರ್ ಅಜ್ಜಮಾಡ ಕಾಳೈಯ್ಯನವರು ಪ್ರೀತಿಯಿಂದಲೂ ಶ್ರದ್ಧೆಯಿಂದಲೂ ಕೆಲಸ ಮಾಡುತ್ತಿರುವರು. ಮಲೇರಿಯಾ ತುಂಬಿರುವ ಈ ಪ್ರಾಂತ್ಯದವರಿಗೆ ಸದರಿ ಆಸ್ಪತ್ರೆಯನ್ನು ಖಾಯಂ ಇರಗೊಡಿಸುವಂತೆ ಸಮ್ಮಂಧಪಟ್ಟ ಅಧಿಕಾರಿಗಳು ನಿಗಾ ಇಟ್ಟು ನಡಿಸುವರಾಗಿ ನಂಬುವೆವು.

'ಬಡ ರೋಗಿ.'

ಮಾಂಸಾಹಾರ.

ಮಹನೀಯರೆ,

ಮಾಂಸಾಹಾರವು ಮನುಷ್ಯನಿಗೆ ಸ್ವಭಾವ ವಿರುದ್ಧವಾದುದು. ಪದಾರ್ಥ ವಿಜ್ಞಾನಿಗಳೂ ಅಂಗಶೋಧಕರೂ ಸಹ ಹಣ್ಣು ಹಂಪಲುಗಳನ್ನು ತಿನ್ನುವ ಪ್ರಾಣಿಗಳಂತೆಯೇ ನಮ್ಮ ದೇಹವು ಕೂಡಾ ನಿರ್ಮಾಣ ಮಾಡಲ್ಪಟ್ಟಿರುವದೆಂದೂ, ಮಾಂಸಾಹಾರ ಮಾಡುವ ಪ್ರಾಣಿಗಳವುಗಳಿಗೆ ಹೋಲುವುದಿಲ್ಲವೆಂದೂ ಒಂದೇ ಅಭಿಪ್ರಾಯವುಳ್ಳವರಾಗಿರುವರು. ಆದುದರಿಂದ ಕೊಲ್ಲಲ್ಪಟ್ಟ ಪ್ರಾಣಿಗಳ ಮಾಂಸವನ್ನು ಭುಜಿಸುವುದು ನಮ್ಮ ಸೃಷ್ಟಿಕರ್ತನ ಮನಸ್ಸಿಗೂ, ಸಂಕಲ್ಪಕ್ಕೂ ವಿರೋಧವಾಗಿರುವುದು.

ಮಾಂಸಾಹಾರವು ಅನಾವಶ್ಯಕವಾದುದು. ಈ ಪ್ರಪಂಚದ ಅರ್ಧ ಜನಾಂಗದವರು ಮಾಂಸಾಹಾರಿಗಳಾಗಿರುವುದಿಲ್ಲ. ಅನೇಕ ದೊಡ್ಡ ದೊಡ್ಡ ಜನಾಂಗದವರು ಮಾಂಸಾಹಾರವನ್ನು ತ್ಯಜಿಸುತ್ತಲಿದ್ದಾರೆ. ಅಮೇರಿಕಾ ದೇಶದ ಏಲ್ ಮತ್ತು ಹಾರ್‌ವರ್ಡ್ ಪಟ್ಟಣದಲ್ಲಿ ಸದರಿ ಯೂನಿವರ್ಸಿಟಿಯವರು ಮಾಡಿದ ಶೋಧನೆಯಿಂದಲೂ, ವಿಲಾಯತಿಯಲ್ಲಿ ಡಾಕ್ಟರ್ ಜೋಸಿಯ್ಯ ಓಲ್ಡ್‌ಫೀಲ್ಡರವರು ಮತ್ತು ಬ್ರಸಲ್ಸ್ ಪಟ್ಟಣದ ಯೂನಿವರ್ಸಿಟಿಯವರು ಮಾಡಿದ ಶೋಧನೆಯಿಂದಲೂ, ಮಾಂಸಾಹಾರವನ್ನು ತ್ಯಜಿಸಿದವರು ಸರಿಯಾಗಿ, ಹಣ್ಣು, ಧಾನ್ಯ, ಮತ್ತು ಹಾಲು, ಮೊಸರು ಮುಂತಾದವುಗಳನ್ನು ಆಹಾರವನ್ನಾಗಿ ಉಪಯೋಗಿಸಿದಲ್ಲಿ, ಮಾಂಸಾಹಾರವನ್ನು ಭುಜಿಸುವವರಿಗಿಂತ ಹೆಚ್ಚು ಆರೋಗ್ಯವುಳ್ಳವರಾಗಿಯೂ, ಸಹನೆವುಳ್ಳವರಾಗಿಯೂ ಇರುವರೆಂದು ಗೊತ್ತುಮಾಡಿರುವರು.

ಮಾಂಸಾಹಾರವು ಶರೀರದ ಆರೋಗ್ಯಕ್ಕೆ ಆಗಾಗ್ಯೆ ಬಹಳ ಕೆಡಕನ್ನುಂಟುಮಾಡುತ್ತವೆ. ಈ ಮಾಂಸಾಹಾರದಿಂದ ಹುಣ್ಣು, ಕ್ಷಯ, ಗೂರಲು, ಶೋಭೆ ಮುಂತಾದ ರೋಗಗಳು ಉಂಟಾಗುವವು. ನಾವು ತಿನ್ನುವ ಪ್ರಾಣಿಗಳು ಶೇಕಡ 50ರಂತೆ ರೋಗ ಕ್ರಿಮಿಗಳನ್ನು ಹೊಂದಿರುತ್ತವೆ. ಇವುಗಳಿಗೆ ಆಗಾಗ್ಯೆ ಅನೇಕ ವಿಧವಾದ ರೋಗಗಳು ತಲೆದೋರುತ್ತಿರುವುದಲ್ಲದೆ ಇವುಗಳಲ್ಲಿ ಅನೇಕ ಕ್ರಿಮಿಗಳೂ ಸಹ ಇರುತ್ತವೆ. ಇದಲ್ಲದೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಿನಹ ಇತರ ಗ್ರಾಮಗಳಲ್ಲಿ ಮಾಂಸವನ್ನು ಪರೀಕ್ಷಿಸುವದು ಕೂಡ ಇಲ್ಲ. ಇಂಥಾ ಗ್ರಾಮದ ಜನಗಳು ತಾವು ತಿಂದು, ತಮ್ಮ ಮಕ್ಕಳಿಗೂ ಕೂಡ ಕೊಡುವುದರಿಂದ ಅನೇಕ ರೋಗಗಳಿಗೆ ಗುರಿಯಾಗುವರು.

ಹೆಚ್ಚಾಗಿ ಕುಡಿಯಬೇಕೆಂಬ ಅಭಿಲಾಷೆ ಉಂಟಾಗುವದು ಮಾಂಸಾಹಾರದಿಂದಲೇ. ಯಾವ ದೇಶದಲ್ಲಿ ಮಾಂಸಹಾರವು ವಿಶೇಷ ರೂಢಿಯಲ್ಲಿರುವುದಿಲ್ಲವೋ ಅಲ್ಲಿ ಕುಡಿತತನವು ವಿಶೇಷವಾಗಿರುವುದಿಲ್ಲ. ಹಣ್ಣು ಹಂಪಲುಗಳನ್ನು ತಿನ್ನುವವರು ಕುಡಿಯುವುದು ಕಡಿಮೆಯಾಗಿದೆ. ಸುಮಾರಾಗಿ ಕುಡಿತವನ್ನು ಅಭ್ಯಾಸ ಮಾಡಿರುವವರಿಗೆ, ಹಣ್ಣು ಹಂಪಲುಗಳನ್ನು ಆಹಾರವಾಗಿ ಕೊಡುವುದರಿಂದ, ಅವರನ್ನು ಕುಡಿತದಿಂದ ಬಿಡುಗಡೆ ಮಾಡಬಹುದು.

ಮುಕ್ಕಾಲು ಭಾಗ ನಮ್ಮ ದಾರಿದ್ರ್ಯಕ್ಕೂ ಅಪರಾಧಗಳಿಗೂ ಈ ಕುಡಿತವೇ ಕಾರಣವಾಗಿರುವುದು. ಆದುದರಿಂದ ಈ ಕೆಡಕುಗಳನ್ನು ತಪ್ಪಿಸುವುದಕ್ಕೋಸ್ಕರ ಆಹಾರದಲ್ಲಿ ಸ್ವಲ್ಪ ಬದಲಾವಣೆ ಮಾಡುವುದು ಬಹಳ ಮುಖ್ಯವಾದುದು. ಕೋಪೋದ್ರೇಕವನ್ನು ಉಂಟುಮಾಡದೆ ಇರತಕ್ಕ ಆಹಾರವನ್ನು ತೆಗೆದುಕೊಳ್ಳುವುದರಿಂದ, ಅಕ್ಕಿ, ಗೋಧಿ, ಬೆಣ್ಣೆ, ಮೊಸರು ಮತ್ತು ಎಲ್ಲಾ ತರದ ಹಣ್ಣುಗಳೇ ಮುಂತಾದವುಗಳನ್ನು (ಮನುಷ್ಯನ ಪೋಷಣೆಗೆ ಬೇಕಾದ ಸಕಲ ಪದಾರ್ಥಗಳು ಇದರಲ್ಲಿ ಅಡಗಿರುತ್ತವೆ). ಆಹಾರವಾಗಿ ಉಪಯೋಗಿಸುವುದರಿಂದ ಕುಡಿತದಲ್ಲಿ ಅಭಿರುಚಿಯು ಕಡಿಮೆಯಾಗುವದು, ಮತ್ತು ಇವುಗಳಲ್ಲಿ ವಿಶೇಷ ಮಾದಕದ್ರವವು ಸೇರಿರುವುದಿಲ್ಲ.

ಮಾಂಸಾಹಾರವನ್ನು ಮಾಡುವ ಮನುಷ್ಯರೂ ಪ್ರಾಣಿಗಳೂ ಯಾವಾಗಲೂ ಜಗಳದಲ್ಲಿ ಆಸಕ್ತಿವುಳ್ಳವರಾಗಿಯೂ, ಶಸ್ತ್ರವನ್ನು ಹಿಡಿಯುವುದರಲ್ಲಿ ಯಾವಾಗಲೂ ಅಭಿಲಾಷೆವುಳ್ಳವರಾಗಿಯೂ ಆಗುತ್ತಾರೆ. ಮಾಂಸಾಹಾರವನ್ನು ಮಾಡದೆ ಇರತಕ್ಕವರು ಯಾವಾಗಲೂ ಶಾಂತ ಸ್ವಭಾವವುಳ್ಳವರಾಗಿರುತ್ತಾರೆ. ಹಣ್ಣು ಹಂಪಲು ಮುಂತಾದುದನ್ನು ತಿನ್ನುವುದರಿಂದ ಯುದ್ಧಾಶಕ್ತಿಯು ಕಡಿಮೆಯಾಗುವುದು. ಹೀಗೆ ಮಾಡುವುದರಿಂದ ಮುಂದೆ ಪ್ರಪಂಚದಲ್ಲಿ ಶಾಂತಿಯೂ, ಸೌಭ್ರಾತೃತ್ವಭಾವವೂ ಹೆಚ್ಚುವುದು.

ಮಾಂಸಾಹಾರವನ್ನು ಮಾಡುವುದು ವಿಶೇಷ ಕ್ರೂರತ್ವಕ್ಕೂ ಬಾಧೆಗೂ ಕಾರಣವಾಗುತ್ತದೆ. ದಯೆದಾಕ್ಷಿಣ್ಯಗಳಿಲ್ಲದೆ, ಕ್ರೂರ ಸ್ವಭಾವವುಂಟಾಗಿ, ಬಲಾತ್ಕಾರದಿಂದ ಜೀವ ವಧೆಯನ್ನು ಮಾಡುವ ಆಸಕ್ತಿಯು ಉಂಟಾಗುತ್ತದೆ. ಕ್ರೈಸ್ತಮತವನ್ನು ಅವಲಂಭಿಸಿರುವ ಅನೇಕ ದೇಶಗಳಲ್ಲಿ ಪ್ರತಿ ದಿವಸವೂ ಅನೇಕ ಪ್ರಾಣಿಗಳು ಇದಕ್ಕಾಗಿ ಕೊಲ್ಲಲ್ಪಡುತ್ತವೆ. ಈ ಬಾಧೆಗಳಲ್ಲದೆ ವಿಶೇಷವಾಗಿ ಗೋಕರುಗಳನ್ನು ಸಾಕಿ, ಅವು ಅನ್ಯ ದೇಶಗಳಿಗೆ ಸಾಗಿಸಲ್ಪಡದಿದ್ದರೆ, ಹತ್ಯ ಮಾಡಲಾರವು. ಇಂಥಾ ಕಾರ್ಯ ಮತ್ತು ರಕ್ತಮಯವನ್ನುಂಟುಮಾಡುವ ಕಾರ್ಯವು ಅನಾವಶ್ಯಕವಾದುದು. ಅದು ವಾಸ್ತವವಾದ ಸದಾಚಾರಕ್ಕೂ ಕ್ರೈಸ್ತ ಮತಕ್ಕೂ ವಿರೋಧವಾದುದಲ್ಲದೆ ಕ್ಷಮಿಸಲ್ಪಡದ ಅಪರಾಧವಾಗಿರುವುದು.

ಮಾಂಸಾಹಾರ ಪದ್ಧತಿಯು ಕ್ರೌರ್ಯವನ್ನು ಹೆಚ್ಚಿಸುವುದು. ಕೊಲೆಪಾತಕ ಕೆಲಸದಲ್ಲಿ ಆಸಕ್ತಿವುಳ್ಳ ಸಾವಿರಾರು ಗಂಡಸರು, ಹೆಂಗಸರು ಮತ್ತು ಹುಡುಗರನ್ನು ಬಹಳ ನಿಕೃಷ್ಟಕ್ಕೆ ಗುರಿಮಾಡುತ್ತದೆ, ಇದು ಅವರ ಅಭಿವೃದ್ಧಿಗೆ ಕುಂದಕವನ್ನುಂಟುಮಾಡುವುದಲ್ಲದೆ, ಇವರ ಸಂಸಾರದಲ್ಲಿ ಅನರ್ಥವನ್ನುಂಟುಮಾಡುತ್ತದೆ.

ಮಾಂಸಾಹಾರವನ್ನು ತ್ಯಜಿಸಿ, ಧಾನ್ಯಾಹಾರವನ್ನು ಪಯೋಗಿಸುವುದರಿಂದ ವ್ಯವಸಾಯಕ್ಕೆ ಗಿರಾಕಿಯು ಹೆಚ್ಚಿ ಅದಕ್ಕೆ ಉತ್ತೇಜನ ಕೊಟ್ಟಂತಾಗುತ್ತದೆ. ಪ್ರಾಣಿಗಳನ್ನು ಕೊಲ್ಲುವುದರಲ್ಲಿ ತೋರಿಸುವ ಆಸಕ್ತಿಯನ್ನು ವ್ಯವಸಾಯ (ಎಂದರೆ ಧಾನ್ಯ, ಹಣ್ಣು, ಹಂಪಲುಗಳು, ತರಕಾರಿ) ಮಾಡುವುದರಲ್ಲಿ ತೋರಿಸಿದರೆ, ಈಗಿರುವ ಭೂಮಿಗಳಿಗಿಂತ ಎಷ್ಟು ಜನಗಳಿಗೆ ಆಹಾರವನ್ನು ಒದಗಿಸಬಹುದೋ, ಅದಕ್ಕೆ ಎಂಟರಷ್ಟು ಜನಗಳಿಗೆ ಆಹಾರವನ್ನು ಒದಗಿಸಬಹುದು. ಗ್ರಾಮಗಳಲ್ಲಿ ಜನಸಾಂದ್ರತೆ ಕಡಿಮೆಯಾಗಿರುವದನ್ನು ಹೆಚ್ಚಿಸಬಹುದು. ಮತ್ತು ದ್ವೇಷ, ಪಟ್ಟಣಗಳಲ್ಲಿ ವಿಶೇಷ ಜನ ಸಾಂದ್ರತೆ ಮುಂತಾದವುಗಳನ್ನೆಲ್ಲಾ ಸಾಧ್ಯವಾದಷ್ಟು ಕಡಿಮೆ ಮಾಡಲು ಸಹಾಯ ಮಾಡಿದಂತಾಗುತ್ತದೆ. ಆದುದರಿಂದ ಆಹಾರ ಬದಲಾವಣೆ ಮಾಡುವದು ಮುಖ್ಯವಾದುದಾಗಿದೆ.

ಮಾಂಸಾಹಾರವು ಮನುಷ್ಯನ ಬೆಳವಣಿಗೆಗೂ, ಬುದ್ಧಿಯ ಪ್ರಾಬಲ್ಯಕ್ಕೂ ಕುಂದಕವನ್ನುಂಟುಮಾಡುತ್ತದೆ. ಇದು ಮನುಷ್ಯನನ್ನು ಅಜ್ಞಾನಿಯನ್ನಾಗಿಯೂ, ಕ್ರೂರ ಸ್ವಭಾವವುಳ್ಳವನನ್ನಾಗಿಯೂ ಮಾಡುತ್ತದೆ. ಆದುದರಿಂದ ಎಲ್ಲಾ ಮಹಾಪುರುಷರುಗಳೂ, ಶಾಸ್ತ್ರಜ್ಞರೂ, ವೇದಾಂತಿಗಳೂ ಈ ವಿಚಾರವನ್ನು ಚನ್ನಾಗಿ ಪರ್ಯಾಲೋಚಿಸಿ ಜಗನ್ನಿಯಾಮಕನ ಇಚ್ಛೆಗೆ ವಿರುದ್ಧವಾದ ಈ ದುರಾಹಾರವನ್ನು ತ್ಯಜಿಸುವುದು ಉತ್ತಮವು.

ಅಹಿಂಸಾಪೇಕ್ಷಿ.

SEE! HOW DECORATIVE!



Our "TIC-TAK" (Registered) wall clock has earned a name, that cannot be beaten. The best and reliable time-keeper. Universally approved. Insist always on

'Tic-Tak'

(Registered)

WALL CLOCKS

Price rupees Three only.

GERMAN ALARAM TIMEPIECE.

Offered at a greatly reduced price.



A cheap and very useful Alaram Timepiece. Mechanism four inches dial in nickel case 30 hours keyless. It will go in any position. This timepiece can be easily taken in travelling cases. It is very useful for students and every one who has got to do anything in time. It is equally useful for night duty man. Whenever it is desired that the alaram should ring the little hand on the dial should be set from the back of the alaram. At the time punctually, at that very moment the alaram will ring. Guaranteed for 3 years.

Price Rupees 5 only.

22-Ct. ROLLED GOLD WRIST WATCHES.



This is a very new style watch fitted with high grades Swiss mechanism Glass crystal lined, figures Arabic or Roman. Its design and finish will satisfy the most critical test. And an appearance equal to sovereign gold. Very charming to look at and perfect timekeeper. Guaranteed for 5 years, Rs 12-8.

18-Carat Rolled gold wrist watch Rs. 7.

American 'Big Ben' Clock with repeater and alaram Rs. 10-8-0.

Baby timepiece with hour and half hour strike Rs 7.

Baby Timepiece with hour and half hour strike and alaram Rs. 8.

Guaranteed for 3 years.

German alaram Timepiece Rs. 5.

German Negro Alarm Timepiece Rs 5.

German Double Bell Alaram Timepiece Rs 6.

World-famed 'B' Timepiece Rs. 2-8.

'Emden' Fountain Pen 14-Carat Rolled Gold Nib. Rs. 2-8.

Apply to— **V. S. Watch Coy.**

Post Box 105, MADRAS.

12—3

ನೋಟೀಸು.

ಬನಿವಾಸುದೇವರ ಸಂಘದ ಆರ್ಗನೈಜರಾಗಿ ದಕ್ಷಿಣ ಕೊಡಗಿಗೆ ಮೆ|| ಜಾಗಂಡ ಕುಟ್ಟಪ್ಪನವರನ್ನೂ, ಉತ್ತರ ಕೊಡಗಿಗೆ ಮೆ|| ಉದಯಂಡ ಪೂಚ್ಚಯ್ಯನವರನ್ನೂ ನೇಮಿಸಲಾಗಿದೆ. ಪ್ರಚಾರ ಕೆಲಸಕ್ಕೆ ಗ್ರಾಮಕಮಿಟಿಗಳು ಇವರಿಗೆ ಸಹಾಯ ಕೊಡಬೇಕಾಗಿಯೂ, ಮೆಂಬರುಗಳು ಇವರಿಗೆ ಚಂದಾ ಪಾವತಿಮಾಡಬೇಕಾಗಿಯೂ, ಚಂದಾ ವಸೂಲ್ ಮಾಡಿರುವವರು ಆ ಹಣಗಳನ್ನು ಇವರಿಗೆ ಕೊಡಬೇಕಾಗಿಯೂ ಕೋರುತ್ತೇನೆ.

ಮಡಿಕೇರಿ. ಸಿ. ಯಸ್. ವೆಂಕಪ್ಪಯ್ಯ,

17—4—'25. ಜನರಲ್ ಸೆಕ್ರೆಟರಿ.

ದಯಮಾಡಿ ಪರೀಕ್ಷಿಸಿ ನೋಡಿರಿ!

X. L. ALOIL.

ಹೊಸ ಸಮೂನೆಯ ಮೀನಿನ ಎಣ್ಣೆ

ಅಶಕ್ತರಾದವರೂ, ಸಣ್ಣಮಕ್ಕಳೂ ಶಕ್ತಿ ಕುಂದಿದವರೂ ಮತ್ತು ಎದೆನೋವು ವಗೈರೆಗಳಿಂದ ಪೀಡಿತರಾದವರೂ ಇದ ಸೇವಿಸುವದರಿಂದ ಒಡನೆ ಪುಷ್ಟಿಯಾಗುವರು. "ಕಾಡ್ ಲಿವರ್ ಆಯಿಲ್ ಎಮಲ್‍ಷನ್" ಎಂಬದರ ಬದಲಿಗೆ ಇದು ಉತ್ತಮತರದ ಕ್ಷೀರ ರಸವಾಗಿದೆ. ವಾಸನೆ ಇಲ್ಲ. ಬೆಲೆ ಬಹಳ ಕಡಿಮೆ.

M. P. BALA & Co.,

CHEMISTS.

12—11 *Tellicherry*

Or VIRAJPET WORKS,

Virajpet.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊಆಪರೇಟಿವ್ ಸೊಸೈಟೀಸ್ ಆಕ್ಟ್ಸ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಹಣಗಳು	....	7,720
ಬಂದಿರುವ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೫ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.

ಕೊಂಡೀರ ಕುಟ್ಟಯ್ಯನವರು, ಯಂ. ಸುಬ್ಬಂಗರಾಯರು

ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ.

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಕು 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಕೇಶವಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ತಪ್ಪದೆ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ:—

ಮೇನೇಜರ್, ಶ್ರೀ ಧನ್ವಂತರಿ,

ಶೃಂಗೇರಿ, ಮೈಸೂರುಸ್ಟೇಟ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.

Telegraphic Address:-"SHOOTER" Bombay.

[52 35] Please write for latest Catalogues.

ಮಹನೀಯರೇ,

1323ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿದೆ.

ಕೃಷ್ಣ ಸಂಬೀಶರ್ ಮತ್ತು ನಾರಾಯಣ ಸಂಬೀಶರ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ. ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹತ್ತು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ.

ಸಂಬೀಶರ ಮತ್ತು ಕಂಪೆನಿ,

ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.

ಕಲ್ಲೂರು, ವೀರಾಜಪೇಟೆ ಮತ್ತು

52-6 **ಗೋಣಿಕೊಪ್ಪಲು.**

ಇಂಡಿಯಾ ಸಾಬೂನ್.

ಬೆಲೆ ಅಗ್ಗ!! ಸರ್ವೋತ್ತಮ!!

ನಮ್ಮ "ಇಂಡಿಯಾ ಸಾಬೂನ್" ಸರ್ವೋತ್ತಮವಾದುದೆಂದು ತಿಳಿದು ಎಲ್ಲಾ ಕಡೆಗಳಲ್ಲಿಯೂ, ಎಲ್ಲಾ ಊರುಗಳ ಅಂಗಡಿಗಳಲ್ಲಿಯೂ ಇದನ್ನೇ ಮಾರುತ್ತಿದ್ದಾರೆ. ಇದರಿಂದ ಒಗೆಯುವ ವಸ್ತ್ರಗಳು ಸ್ವಚ್ಛವಾಗುವವಲ್ಲದೆ, ಅವುಗಳ ನೂಲಿಗೆ ಇದರಿಂದ ಯಾವ ವಿಧವಾದ ಉಪಹತಿಯೂ ಉಂಟಾಗದೆ, ಸರಿಯಾದ ಬಾಳಿಕೆ ಬರುವವು. ಈ ವಿಷಯವನ್ನು ಒಂದು ಸಲ ಆಜಮಾಯಿಷಿ ಮಾಡಿದರೆ ಎಲ್ಲರಿಗೂ ಮನದಟ್ಟಾಗುವದು. ನಮ್ಮ ಗಿರಾಕಿಗಳಿಗೆ ಹೆಚ್ಚು ಲಾಭ!! ಧಾರಾಳವಾದ ಕಮೀಷನ್ ದೊರೆಯುವದು. ಆರ್ಡರುಗಳಿಗೆ ಮಾಲನ್ನು ಬಂದೋಬಸ್ತಾಗಿ ಪ್ಯಾಕ್‍ಮಾಡಿ ಅವರ ಅಡ್ರೆಸಿಗೆ ಅಥವಾ ಅವರು ಅಪೇಕ್ಷಿಸುವ ಸಮೀಪದ ರೈಲ್ವೆ ಸ್ಟೇಷನಿಗೆ ರವಾನಿಸುತ್ತೇವೆ.

ಇಷ್ಟು ಮಾತ್ರವೇ ಅಲ್ಲ; ನಮ್ಮ ಗಿರಾಕಿಗಳಿಗೆ ಅವರವರ ಅದೃಷ್ಟ ಪರೀಕ್ಷಾರ್ಥವಾಗಿ ನಾವು ಕಳುಹಿಸುವ ಯಾವದೋ ಒಂದು ಸೋಪ್ ಪ್ಯಾಕ್‍ನಲ್ಲಿ ೧೦ ರುಪಾಯಿನ ಅರ್ಧ ನೋಟನ್ನು ಇಟ್ಟಿರುತ್ತೇವೆ. ಅಂಥಾ ಅರ್ಧ ನೋಟಿನ ಪ್ಯಾಕನ್ನು ಹೊಂದಿದವರು ಆ ಅರ್ಧ ನೋಟಿನ ನಂಬರನ್ನು ತಿಳಿಸಿದಲ್ಲಿ ಬಾಕಿ ಅರ್ಧ ನೋಟನ್ನೂ ಅವರಿಗೆ ಬಹುಮಾನವಾಗಿ ತಕ್ಷಣವೇ ಕಳುಹಿಸಿಕೊಡುವೆವು. ಪ್ರಯತ್ನಿಸಿ! ವ್ಯಾಪಾರಕ್ಕೆ ವ್ಯಾಪಾರ!! ಅದೃಷ್ಟಕ್ಕೆ ಅದೃಷ್ಟ!!!

ಎನ್. ಕೃಷ್ಣಯ್ಯ ಶೆಟ್ಟಿ,

12—12 ನಗರ್‍ಪೇಟೆ, ಬೆಂಗಳೂರು ಸಿಟಿ.

Printed & published by Kodandera Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.
If not delivered please return to "KODAGU" OFFICE, MERCARA.

ಕೊಡಗು.

ವಾರ್ಷಿಕ ಚಂದಾ ರೂ ೩—೦—೦

ಐಕ್ಯೇನ ಭೂತದಯಾಸೌ ವಿದ್ಯಾ ನೀತಿ ಪ್ರಯುಕ್ತಕಾಃ ‖ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಷ್ಟ್ರ ಸಂಪದಾ ‖

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೪] ಕೊಡಗು, ಸನ್ ೧೯೨೪ನೇ ಇಸವಿ ಮೇ ತಾರೀಕು ೧ನೆಯ ಶುಕ್ರವಾರ [ಸಂಚಿಕೆ ೪೨

ಆ ರೋ ೀ ಗ್ಯ ಚ ಂ ದ್ರಿ ಕೆ .

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು· ರಾಮರಾವ್,
ಯಮ್. ಎಲ್· ಸಿ. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದೆಶೆಗಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ: 'ಆರೋಗ್ಯ ಚಂದ್ರಿಕೆ' 323,
ತಂಬುಚೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ಬಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸ್.

"ಕೊಡಗು" ಪತ್ರಿಕೆಯ ಬಳಿ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಸೇರುಹಣ ಸಲ್ಲಿಸಬೇಕಾದವರೂ ದಯವಿಟ್ಟು ವೀರರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮೇನೇಜರ್,
[illegible] 'ಕೊಡಗು' ಲಿಮಿಟೆಡ್.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City

ನೋಟೀಸು.

ಸ್ಪೆನ್ಸರ್ ಕಂಪೆನಿ ಲಿಮಿಟೆಡ್, ಮಡಿಕೇರಿ.

ಈ ಮೇಲ್ಕಂಡ ಕಂಪೆನಿಯಲ್ಲಿ ಮಾರುವ ಉತ್ತಮ ತರದ ಒಂಟಿಕೊಳವಿನ ಬ್ರೀಚ್‌ಲೋಡಿಂಗ್ ಕೋವಿಗಳು ತೀರಿ ಹೋದುದರಿಂದ ಈಗ 4ನೆಯ ಸಂಗ್ರಹಣವು ನಮಗೆ ಬರುವುದು. ಆದ್ದರಿಂದ ಮೊದಲು ಪಡೆಯಲು ಅಪೇಕ್ಷಿಸುವ ನಮ್ಮ ಗಿರಾಕಿದಾರರು ಕೂಡಲೆ ತಮ್ಮ ಆವಶ್ಯಕತೆಯನ್ನು ಬರೆದು ಒಡನೆ ತಿಳಿಸುವುದು.

ಮತ್ತು ಜೋಡುಕೊಳವಿನ ಬ್ರೀಚ್‌ಲೋಡಿಂಗ್, ಒಂಟಿ ಮತ್ತು ಜೋಡು ಕೊಳವಿನ-ಕೇಪು ಕೋವಿಗಳು. ತೋಟ ಚಿಲ್ಲು, ಮದ್ದು, ಕೇಪು ವಗೈರೆ ನಮ್ಮ ಭಂಡಾರದಲ್ಲಿರುವುದು.

"ಆಶೆಗೆ ನಿರಾಶೆಯಾಗದಹಾಗೆ ಬೇಗನೆ ಬರುವುದು ಲೇಸು."

Spencer & Co. Ltd.,
MERCARA & POLLIBETTA.
28

ಪ್ರ ಕ ಟ ಣೆ .

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಂಟಾದ ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ
17.9.24. ಮೇನೇಜರ್.

Old Students' Quarterly.

Editor, Mr. P. B. Medappa, B.A., B.L., M.L.C.

Vol. II. No. 2 is now out.

Subscription—Yearly Rs. 2, post free. Most delightful! Scholarly articles! Read and enjoy!

CONTENTS.

1. National welfare—
   (includes thoughts on Free and Compulsory educ tion in Coorg.
2. Swarajya—A Canarese Drama.
3. Are Coorgs Kannadigas?
4. Ancient Coorg.
5. Peep into Heavens.
6. Frivolity page,
   etc. etc.

If you become a subscriber now you will get a very beautiful calendar for 1925 free—bsolutely free!

Apply to—
Manager,
O. S. Association,
Mercara.

ಪ್ರ ಕ ಟ ಣೆ .

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲುಪಿರುವುದರಿಂದ, 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ. ಮೇನೇಜರ್.
'ಕೊಡಗು' ಲಿಮಿಟೆಡ್

ಒಂದು ಪ್ರಬಲವಾದ ಪ್ರಶ್ನೆ.

ದೇಶಾಭಿಮಾನವೆಂದರೇನು?

ಕೈರಾಟೆಯಿಂದ ನೂಲುತಯಾರಿಸಿ ಮಾಡಿದಬಟ್ಟೆಯನ್ನು ಧರಿಸಿ ಆ ಮೂಲಕ ಲಕ್ಷೋಪಲಕ್ಷ ಗರೀಬ ಜನರಿಗೆ ಅನ್ನವನ್ನೊದಗಿಸುವದೇ ದೊಡ್ಡ ದೇಶಾಭಿಮಾನ.

ಇಂಥಾ 'ಖಾದಿ' ಬಟ್ಟೆಯನ್ನು ಎಲ್ಲಾ ಜನರಿಗೂ ಸುಲಭಕ್ರಯದಲ್ಲಿ ಒದಗಿಸಲಿಕ್ಕೆ ಈಗತಾನೇ ವೀರರಾಜಪೇಟೆಯಲ್ಲಿ ಒಂದು ಖಾದಿ ಭಂಡಾರವನ್ನು ತೆರೆದಿರುತ್ತೇವೆ. ಈಭಂಡಾರದಲ್ಲಿ ಎಲ್ಲಾ ತರದ ನಾಜೂಕಾದ ಮತ್ತು ಗಟ್ಟಿಯಾದ ಖಾದಿಬಟ್ಟೆಗಳೂ ವಸ್ತ್ರಗಳೂ ಸೀರೆಗಳೂ, ಟವಲುಶಾಲುಗಳೂ, ಖಾದಿರೇಶ್ಮೆಯಿಂದ ತಯಾರಾದ ಎಲ್ಲಾ ತರದಬಟ್ಟೆಗಳೂ ದೊರೆಯುತ್ತವೆ. ಬಟ್ಟೆಗಿರುವ ಎಲ್ಲಾ ಆರ್ಡರನ್ನು ತಕ್ಷಣವೇ ಒದಗಿಸಲಾಗುತ್ತೆ. ಊರೂರಿನಲ್ಲಿರುವ ಎಲ್ಲಾ ಜನರಿಗೆ ಬಟ್ಟೆಯನ್ನೊದಗಿಸಲುತಕ್ಕ ಏರ್ಪಾಡುಮಾಡಲ್ಪಟ್ಟಿದೆ. ದೇಶಾಭಿಮಾನಿಗಳ ಪ್ರೋತ್ಸಾಹವನ್ನು ನಿರೀಕ್ಷಿಸುತ್ತಲೇ ಇರುತ್ತೇವೆ. ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

'ಮೇನೇಜರ್'
12—10 ಖಾದಿ ಭಂಡಾರ, ವೀರರಾಜಪೇಟೆ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಕೋಟಿರ ಚಿಣ್ಣಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಭಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಮೆ. ಕೆ. ಚಿಣ್ಣಪ್ಪನವರ ಆಫೀಸಿನಲ್ಲಿ.
ಮೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ ಮೆ. ಮಚಿಯಂಡ ದೇವಯ್ಯನವರು.
ನಾಪೋಕ್ಲು—ಮೆ. ಪೊನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮೆ. ಮುಕ್ಕಾಟಿರ ಪೂಣಚ್ಚನವರು.
ಪೊನ್ನಂಪೇಟೆ—ಮೆ. ಚೆಕ್ಕೆರ ಮುದ್ದಮ್ಮಯ್ಯನವರು.
ಹುದಿಕೇರಿ—ಮೆ. ಜಿ. ಮಾದಪ್ಪನವರು.
ಅಮ್ಮತ್ತಿ ಸಿದ್ದಾಪುರ—ಮೆ. ಐನಂಡ ಮಾದಪ್ಪನವರು.
ಮೆ. ಚಂಗಂಡ ಉತ್ತಪ್ಪನವರು.

ಕೋದಂಡ ಉತ್ತಯ್ಯ,
ಮೇನೇಜಿಂಗ್ ಡೈರೆಕ್ಟರು, "ಕೊಡಗು" ಲಿಮಿಟೆಡ್.

"ಕೊಡಗು"

ಸ೯ ೧೯೩೫ನೇ ಇಸವಿ ಮೇ ತಾ.
೧ನೇ ಶುಕ್ರವಾರ.

'ಮಡಿಕೇರಿವಾರ' ಮತ್ತು ರಾಷ್ಟ್ರೀಯ ವಾರ.

'ಮಡಿಕೇರಿ ವಾರ' ಕಳೆಯಿತು. 'ಮಡಿಕೇರಿ ವಾರ' ವೆಂದರೆ ಯೂರೋಪಿಯನ್ ಕಾಫೀಪ್ಲಾಂಟರುಗಳು ಮಡಿಕೇರಿಯಲ್ಲಿ ಆಟಪಾಟಗಳಿಂದ ಸಂತೋಷಪಡೆಯುವ ವಾರವೆಂಬ ಅರ್ಥದಲ್ಲಿ ಯೂರೋಪಿಯನ್ ಪ್ಲಾಂಟರುಗಳೇ ಇಟ್ಟುಕೊಂಡ ಹೆಸರಾಗಿದೆ. ಕುದುರೆ ಶರತ್ತು, ಕ್ರಿಕೆಟ್ ಪಂಥದಾಟಗಳು, ಟೆನ್ನಿಸ್ ಪಂಥದಾಟಗಳು, ಕುಣಿತಗಳು ಇವೇ ಮೊದಲಾದ ಸಂತೋಷ ಕಾರ್ಯಗಳಲ್ಲಿ ಪ್ಲಾಂಟರುಗಳು ವಿನೋದವಾಗಿ ವಾರವನ್ನು ಕಳೆದು ತಮ್ಮ ತಮ್ಮ ತೋಟಗಳಿಗೆ ತೆರಳಿದರು. ಕ್ರಿಕೆಟ್ ಪಂಥದಾಟದಲ್ಲಿ ದೇಶೀಯರು ಅನೇಕರು ಭಾಗಿಗಳಾಗದ್ದರಿಂದ ಮಡಿಕೇರಿ ವಾರವು ಒಬ್ಬೇ ಯೂರೋಪಿಯನರಿಗೇ ಎಂತ ಹೇಳಲಾಗುವದಿಲ್ಲ. ಶರತ್ತುಗಳಲ್ಲಿಯೂ ಕೆಲವು ದೇಶೀಯರನ್ನು ನೋಡಿಕೊಂಡರು. ಕುದುರೆ ಶರತ್ತುಗಳಲ್ಲಿ ಅನೇಕ ದೇಶೀಯರು ಜೂಜಾಡಿ ಹಣಸಂಪಾದಿಸಿದವರೂ ಇರಬಹುದು. ಕಳಕೊಂಡವರೂ ಇರಬಹುದು. ದೇಶೀಯರದ್ದೇ ಟೆನ್ನಿಸ್ ಪಂಥದಾಟಗಳೂ ಇದ್ದವು. ಆದ್ದರಿಂದ ಮಡಿಕೇರಿ ವಾರವು ಒಬ್ಬರುತ್ತಾ ದೇಶೀಯರಿಗೂ ವ್ಯಾಪಿಸಿಕೊಳ್ಳುತ್ತಿದೆ.

ಮಡಿಕೇರಿಯಲ್ಲಿ ವರ್ಷಕ್ಕೊಂದಾವರ್ತಿ ಈ ರೀತಿ ಮೆರೆಯಲು ಅನುಕೂಲವಿರುವ ದೇಶೀಯ ಜನರು ಬಹಳ ಕಡಿಮೆ. ಅನುಕೂಲವಿದ್ದವರು ಆ ರೀತಿ ಸಂತೋಷ ಪಡಲು ನಮ್ಮ ಆಕ್ಷೇಪಣೆ ಏನೂ ಇಲ್ಲ. ಆದರೂ ಯೂರೋಪಿಯನರು ನುಡಿಸಡುವ ರೀತಿಗಳು ಕೆಲವು ದೇಶೀಯರಿಗೆ ತಿಳಿದು ಬರುವದು ಈ ಮಡಿಕೇರಿ ವಾರದಲ್ಲೇ. ಅವರ ಕ್ಲಬ್ಬಿನಲ್ಲಿ ಡ್ಯಾಂಡ್ ವಾಡಿಸುತ್ತಾ ರಾತ್ರಿವೇಳೆಯಲ್ಲಿ ಕುಣಿಯುವದು ರಸ್ತೆಯಲ್ಲಿ ಹೋಗುವವರಿಗೆಲ್ಲಾ ಕೇಳಿಸುತ್ತಿತ್ತು. ಹೀಗೆ ಕುಣಿಯಬೇಕಾದರೆ ಕುಡಿಯುವವರು ತುಂಬಾ ಕುಡಿದು ಇರಬೇಕೆಂತ ದೇಶೀಯ ಜನರು ನಂಬುತ್ತಾರೆ. ರೇಸ್‌ಕ್ಲಾಸ್ ಸಂಘದ ಪ್ರಯೋಜನಕ್ಕಾಗಿ ಸರ್ಕಸ್ ಆಡಿದ ದಿನ ಕೆಲವು ಯೂರೋಪಿಯನ್ ಮಹನೀಯರು ಸರ್ಕಸ್ ಡೇರೆಯಲ್ಲೇ ಕುಡಿಯುತ್ತಾ ಸಂತೋಷ ಪಡುತ್ತಿದ್ದರೆಂತ ತಿಳಿಯುತ್ತೇವೆ. ಇದರಿಂದ ಸಭ್ಯಗೃಹಸ್ಥ (ಜಂಟಲ್ ಮ್ಯಾನ್) ಆಗಬೇಕಾದರೆ ಮಿಪಾನಸೇವನೆ ಮಾಡಬೇಕೆಂಬ ಅಭಿಪ್ರಾಯವು ಇಂಗ್ಲಿಷ್ ವಿದ್ಯಾವಂತರಿಗೆ ಮಾತ್ರವಲ್ಲ ಸಾಧಾರಣ ದೇಶೀಯ ಮನುಷ್ಯರಿಗೂ ತೋಚಬಹುದು. ಈ ರೀತಿ ಬಹಿರಂಗದಲ್ಲಿ ಮಿಪಾನಸೇವನೆ ಮಾಡದ್ದನ್ನೂ ಮಿಪಾನಸೇವನೆಯ ಮತ್ತಿನಲ್ಲಿ ಬಹಿರಂಗದ ಜನರಿಗೆ ಕೇಳುವಂತೆ ಕುಣಿಕೊಳ್ಳುವದನ್ನೂ ನಾವು ಮನಃಪೂರ್ತಿಯಾಗಿ ಆಕ್ಷೇಪಿಸಬೇಕಾಗಿದೆ. ಪ್ರಪಂಚದಲ್ಲಿ ಅತ್ಯಂತ ದೊಡ್ಡ ಸಾಮ್ರಾಜ್ಯವುಳ್ಳವರಾದ ಈ ಜನರು ಮಿಪಾನಸೇವನೆ ಮಾಡಿದರೂ ತಮ್ಮ ರಾಜ್ಯವನ್ನು ಕಳಕೊಳ್ಳದೆ ಇರುವಾಗ ಹಿಂದೀಯರು ಯಾಕೆ ಮಿಪಾನಸೇವನೆ ಮಾಡಬಾರದೆಂತ ಮಿಪಾನಸೇವನೆಯ ಪಕ್ಷಪಾತಿಗಳು ವಾದಿಸಬಹುದು. ಆದ್ದರಿಂದ ಇನ್ನು ಮುಂದಕ್ಕಾದರೂ ಪಬ್ಲಿಕ್ ಸ್ಥಳಗಳಲ್ಲಿ ಮಿಪಾನಸೇವನೆಗೆ ಎಡೆಕೊಡಲಾರರೆಂತ ನಂಬುತ್ತೇವೆ.

ಪಾಶ್ಚಿಮಾತ್ಯ ದೇಶಗಳಲ್ಲೂ ಮಿಪಾನನಿಷೇಧದ ಜನರು ಮುಂದೆ ಬಂದು ಕೆಲಸಮಾಡುತ್ತಿದ್ದಾರೆ. ಅಮೇರಿಕದಲ್ಲಂತೂ ಮಿಪಾನಸೇವನೆಯನ್ನೇ ನಿಲ್ಲಿಸಿ ಬಿಟ್ಟಿದ್ದಾರೆ. ಆದರೆ ಈ ಸಂಗತಿಗಳೆಲ್ಲಾ ಸಾಧಾರಣ ಮನುಷ್ಯನ ತಿಳುವಳಿಕೆಗೆ ಒದಗುವದು ಕಷ್ಟ. ತಮ್ಮ ಕಣ್ಣೆದುರಿಗೆ ನಡೆಯುವ ಸಂಗತಿಯನ್ನು ಮಾತ್ರ ನಂಬುತ್ತಾರೆ. ನಮ್ಮ ದೇಶದ ಜನರಿಗೆ ನಾವು ಎಚ್ಚರಕೊಡುವದೇನೆಂದರೆ, ಯೂರೋಪಿಯನ್ ಜನರು ಮಿಪಾನಸೇವನೆ ಮಾಡುವದರಿಂದ ಅವರಿಗೂ ಸಹ ಕೆಡಕೇ ಹೊರತು ಗುಣವಿಲ್ಲ. ಆದರೂ ಅವರು ಅನುಕೂಲ ಸ್ಥಿತಿಯಲ್ಲಿಯೂ, ದೊಡ್ಡ ಸಾಮ್ರಾಜ್ಯದ ಅಧಿಪತಿಗಳಾಗಿಯೂ ಇರುವದರಿಂದ ಅವರ ಐಶ್ವರ್ಯವು ಈ ಮಿಪಾನಸೇವನೆಯನ್ನು ತಡೆದುಕೊಂಡೀತು. ಅತ್ಯಂತ ಬಡತನದಲ್ಲಿ ಇರುವ ನಮ್ಮ ದೇಶದಲ್ಲಿ ಮಿಪಾನಸೇವನೆಯ ಯೋಚನೆಯನ್ನು ಕೂಡ ಅನುಕೂಲವಿರುವವರೂ ಸಹ ಮಾಡಬಾರದು. ಅನುಕೂಲಸ್ಥರು ಮಾಡುವಂತೆ ಸಾಧಾರಣ ಜನರು ಮಾಡುವದು ಪದ್ಧತಿಯಾಗಿದೆ. ಆದ್ದರಿಂದ ಅನುಕೂಲಸ್ಥರು ಗಳೇ ಬಡಗೆ ಒಳ್ಳೇ ಮೇಲ್ಪಂಕ್ತಿಯನ್ನು ಹಾಕಿಕೊಡಬೇಕು. ದೇಶೀಯರ ಸೂಧಾರಾಟದ ಸ್ಥಳದಲ್ಲೂ ಮಿಪಾನಸೇವನೆ ಇತ್ತೆಂಬ ಸಂಗತಿಯನ್ನು ತುಂಬಾ ವಿಷಾದದೊಡನೆ ತಿಳಿಯುತ್ತೇವೆ. ಯೂರೋಪಿಯನ್ ಜನರು ಉಪಯೋಗಿಸುವಾಗ ನಾವು ಉಪಯೋಗಿಸದಿದ್ದರೆ ನಾವು ಸಭ್ಯಗೃಹಸ್ಥರು (ಜೇಂಟಲ್‌ಮ್ಯಾನ್) ಎನಿಸಿಕೊಳ್ಳದೆ ಹೋದೇವೋ ಎಂಬ ಭಯವಿರಬಹುದು. ಆದರೆ ದೇಶೀಯ ಅನುಕೂಲಸ್ಥ ಜನರು ತಮ್ಮ ಬಡಹೋದರರನ್ನು ನೆನೆಸಿಕೊಂಡು ಒಳ್ಳೇ ಉದಾಹರಣೆಯನ್ನು ತೋರಿಸಬೇಕೆಂತ ನಾವು ಧೈರ್ಯದಿಂದ ಇವರಲ್ಲಿ ಕೇಳಿಕೊಳ್ಳುತ್ತೇವೆ.

ಮಡಿಕೇರಿವಾರದಲ್ಲಿ ದೇಶೀಯರ ತಿಳುವಳಿಕೆಗೆ ಬರುವ ಇನ್ನೊಂದು ದುರ್ಗುಣವು ಜೂಜಾಟ. ಕುದುರೆ ಶರತ್ತಿನ ಸ್ಥಳದಲ್ಲಿ ನಿರಾತಂಕವಾಗಿ ಜೂಜಿಗೆ ಅನುಕೂಲವಿರುವದರಿಂದ ಕೆಲವು ಮಟ್ಟಿಗೆ ಗರೀಬರು ಸಹ ಇದರಲ್ಲಿ ಸೇರಿಕೊಳ್ಳುತ್ತಾರೆ. ಕೆಲವು ಚಿಕ್ಕ ಹುಡುಗರು ಸಹ ಜೂಜಿನಲ್ಲಿ ಹಣಕಟ್ಟಿದ್ದರು. ಈ ಪಬ್ಲಿಕ್ ಜೂಜಿನಿಂದ ದೇಶೀಯರಲ್ಲಿ ಜೂಜಾಡುವ ಸ್ವಭಾವದವರಿಗೆ ಉತ್ತೇಜನ ಕೊಟ್ಟಂತಾಗುತ್ತದೆ. ಆದರೆ ಕುದುರೆ ಶರತ್ತುಗಳಲ್ಲಿ ಜೂಜಾಡುವ ಪದ್ಧತಿಯನ್ನೇ ನಮ್ಮ ದೇಶದಲ್ಲಿ ಮಾತ್ರ ನಿಲ್ಲಿಸಲು ಸಾಧ್ಯವಿಲ್ಲ. ಒಟ್ಟು ಇಂಡಿಯಾದೇಶದಲ್ಲೇ ನಿಲ್ಲಿಸುವಂತೆ ಮಾಡಲು ದೇಶದ ಮುಖಂಡರು ಪ್ರಯತ್ನಿಸಬೇಕೆಂತ ನಮ್ಮ ಕುತೂಹಲವನ್ನೂ ಸೂಚಿಸಿದ್ದೇವೆ.

ಮಡಿಕೇರಿವಾರ ಮಡಿಕೇರಿಯಲ್ಲಿ ಕಳೆಯುವ ಸ್ವಲ್ಪ ಮುಂಚೆ ರಾಷ್ಟ್ರೀಯವಾರವು ಒಟ್ಟು ಹಿಂದೂಸ್ಥಾನದಲ್ಲಿ ಕಳೆಯಿತು. ರಾಷ್ಟ್ರೀಯದ್ವಾರದ ಕೆಲಸವು ಅತ್ಯಂತ ಜರೂರಿನಿಂದ ವರ್ಷಕ್ಕೆ ಒಂದು ವಾರವಾದರೂ ಮಾಡಬೇಕೆಂಬ ಮುಖಂಡರ ಉದ್ದೇಶದಿಂದ ಈ ವಾರವನ್ನು ನಡಿಸಿಪದಾಗಿದೆ. ಈ ವರ್ಷ ರಾಷ್ಟ್ರೀಯ ಮಹಾಸಭೆಯು ಉದ್ದೇಶವನ್ನು ಜಾರಿ ಮಾಡುವದರಲ್ಲಿ ಈ ವಾರವನ್ನು ಕಳೆಯಬೇಕೆಂತ ಮಹಾತ್ಮಜೀಯವರ ಅಪೇಕ್ಷೆ ಇತ್ತು. ಹಿಂದುಸ್ಥಾನದ ಇತರ ಭಾಗಗಳಲ್ಲಿ ತೃಪ್ತಿಕರವಾಗಿ ಅಲ್ಲದಿದ್ದರೂ ಕೆಲವು ಮಟ್ಟಿಗಾದರೂ ನಡೆಯಿತು. ನಮ್ಮ ದೇಶದಲ್ಲಿ ರಾಷ್ಟ್ರೀಯವಾರದ ನಡಿಸಿಂದ ಅಲ್ಲದಿದ್ದರೂ ಅದೇ ವಾರದ ಒಂದು ದಿವಸದಲ್ಲಿ ಜಮೀನ್ದಾರರ ಸಂಘದ ಮಹಾ ಸಭೆಯು ನಡೆಯಿತು. ಆ ಮಹಾಸಭೆಯಲ್ಲಿ ಪಾಸಾದ ಠರಾವುಗಳಲ್ಲಿ ದೇಶದ ಜನರಿಗೆ ಅತ್ಯಂತ ಪ್ರಯೋಜನಕರವಾಗಿ ಬಹುದಾದ ಠರಾವು ಒಂದು ಮಂಜೂರಾಗಿದೆ. ಮಿಪಾನನಿಷೇಧದ ಕೆಲಸವನ್ನು ಮಾಡಲು ಒಂದು ಕಮಿಟಿಯು, ಕೈನೂಲು ತಯಾರಿಸುವ ಮತ್ತು ಖಾದಿ ಪ್ರಚಾರ ನಡೆಸುವ ಒಂದು ಕಮಿಟಿಯು ನೇಮಕವಾಗಿದೆ. ಈ ಕಮಿಟಿಗಳನ್ನು ನೇಮಿಸುವದರಲ್ಲಿ ಹೊಸ ರೀತಿಯನ್ನು ಅನುಸರಿಸಿದ್ದಾರೆ. ಯಾವದೆಂದರೆ—ತಾವಾಗಿ ಮನಃಪೂರ್ತಿಯಾಗಿ ಕೆಲಸ ಮಾಡುತ್ತೇವೆಂತ ಮುಂದೆ ಬಂದವರನ್ನೇ ಈ ಕಮಿಟಿಗೆ ಆರಿಸಿದ್ದಾಗಿದೆ. ಆದ್ದರಿಂದ ಈ ಕಮಿಟಿಗಳು ತುಂಬಾ ಕೆಲಸ ಮಾಡಿಯಾರೆಂತ ನಮ್ಮ ಆಶೆ ಇದೆ. ಈ ಲೇಖನವು ಪ್ರಕಟವಾಗುವ ಮುಂಚೆ ಸಂಘದ ಕಮಿಟಿ ಮೀಟಿಂಗ್ ಒಂದು ನಡೆಯುತ್ತೆ. ಅದರಲ್ಲಿ ಈ ಖಾದಿ ಪ್ರಚಾರದ ಮತ್ತು ಮಿಪಾನನಿಷೇಧದ ಕಮಿಟಿಗಳನ್ನು ಎಚ್ಚರಿಸಿ ಅವರಿಂದ ಕೆಲಸ ತೆಗೆದುಕೊಳ್ಳುವ ಏರ್ಪಾಡು ಮಾಡುಲಾರರೆಂತ ನಾವು ನಂಬುತ್ತೇವೆ.

ಸ್ವಯಂಸೇವಕದಳವನ್ನು ಖಾಯಮಾಗಿಸ್ಥಾಪಿಸಲು ಇನ್ನೊಂದು ಕಮಿಟಿಯು ನೇಮಕವಾಗಿದೆ. ಈ ಕಮಿಟಿಯು ಬಹು ಮಹತ್ವದ್ದೇ. ದೇಶದಲ್ಲಿ ದೇಶಸೇವಕರ ಸಂಖ್ಯೆ ಕಡಿಮೆಯಾದದ್ದರಿಂದಲೇ ದೇಶದ ಜನರೇ ಕಷ್ಟ ಸ್ಥಿತಿಯಲ್ಲಿ ಇರುವದಾಗಿದೆ. ಆದ್ದರಿಂದ ದೇಶಸೇವಕರ ಒಂದು ದಳವನ್ನೇ ತಯಾರಿಸಲು ಕೈಕೊಂಡ ಕಮಿಟಿಯಿಂದ ದೇಶಕ್ಕೆ ತುಂಬಾ ಪ್ರಯೋಜನವಾದೀತೆಂಬದರಲ್ಲಿ ಏನೂ ಸಂಶಯವಿಲ್ಲ. ಪ್ರಜಾಜನರ ಹಣದಿಂದಲೇ ತರಬೇತು ಹೊಂದುತ್ತಿರುವ ಟೆರಿಟೋರಿಯಲ್ ಪಟಾಲಾಮಿಗೆ ಸೇರಿದ ಸೇನಾಪತಿಗಳೂ ಶಿಪಾಯಿಗಳೂ ಸಹ ದೇಶಸೇವಾ ಮಂಡಲಕ್ಕೆ ಸೇರಿ ಸಹಾಯ ಮಾಡಿದರೆ ನಮ್ಮ ದೇಶವನ್ನು ಸ್ವರ್ಗಲೋಕದಂತೆ ಮಾಡಿಕೊಳ್ಳಬಹುದು. ಈ ಟೆರಿಟೋರಿಯಲ್ ಪಟಾಲಾಮಿನಲ್ಲಿ ಕೆಲಸ ಮಾಡುವ ರೀತಿಯಲ್ಲಿ ದೇಶಾಭಿವೃದ್ಧಿಗಾಗಿ ಒಂದು ತಿಂಗಳು ಕೆಲಸಮಾಡಿದರೆ ಬಹಳ ಪ್ರಯೋಜನವಾದೀತೆಂತ ಶಿಪಾಯಿಗಳು ಅರಿಕೊಳ್ಳುತ್ತಾರೆ. ಆದರೆ ಈ ಪಟಾಲಾಮಿನಲ್ಲಿ ಪೋಲಿಸರುಗಳ ಹುಕುಮುಗಳನ್ನು ಜಾರಿಮಾಡಲಿಕ್ಕಾಗಿ ರಾತ್ರಿ ಹಗಲು ಕೆಲಸಮಾಡುತ್ತಾರೆ. ಗ್ರಾಮಾಭಿವೃದ್ಧಿಗಾಗಿ ಕೆಲಸಮಾಡಲು ಅಂಥಾ ಉತ್ಸಾಯವ್ಯಾವದೂ ಇಲ್ಲ. ಅದಕ್ಕಾಗಿಯೇ 'ಸ್ವಯಂ' ಎಂಬ ಅಕ್ಷರಗಳು ಸೇರಿದ ಸೇವಕಂ ದಳವನ್ನು ತಯಾರಿಸಬೇಕಾಗಿದೆ. ಟೆರಿಟೋರಿಯಲ್ ಪಟಾಲಾಮಿಗೆ ಸೇರಿದವರೆಲ್ಲರೂ ದೇಶಸೇವೆಗೆ ಸ್ವಯಂಸೇವಕರಾಗಿ ಬಂದಾರೆಂತ ನಮಗೆ ತೋರುವದಿಲ್ಲ. ಅದರಲ್ಲಿ ಕೆಲವರಾದರೂ ತಮ್ಮ ತರಬೇತು ತೀರಿದನಂತರ ಮುಂದೆ ಬಂದು ಕೆಲಸಮಾಡಬೇಕೆಂತ ನಾವು ಕೋರಿಕೊಳ್ಳಬೇಕಾಗಿದೆ. ಈ ಸ್ವಯಂಸೇವಕರದಳವನ್ನು ತಯಾರಿಸಲು ಏರ್ಪಾಡಾದ ಕಮಿಟಿಯವರು ಶೀಘ್ರದಲ್ಲೇ ಕೆಲಸ ಪ್ರಾರಂಭಿಸಬೇಕೆಂತ ನಮ್ಮ ಅಪೇಕ್ಷೆ.

ಜಮೀನ್ದಾರರ ಸಂಘದ ವಾರ್ಷಿಕ ಸಭೆ.

(ಮುಂದುವರಿದದ್ದು.)

ಚುನಾಯಿತ ಅಧ್ಯಕ್ಷರನ್ನು ಪದ್ಧತಿಮೇರೆ ಅಧ್ಯಕ್ಷರಾಗಿ ಪುನಹ ಸೂಚಿಸಿ ಒಪ್ಪಿಕೊಂಡ ಮೇಲೆ ಸ್ವಾಗತ ಕಮಿಟಿಯ ಅಧ್ಯಕ್ಷರು ಹೂವಿನ ಮತ್ತು ಕೈ ನೂಲಿನ ಹಾರಗಳನ್ನು ಅವರಿಗೆ ಹಾಕಿದರು. ಅಧ್ಯಕ್ಷರು ಪ್ರಿಂಟುಮಾಡಿಸಿದ್ದ ತಮ್ಮ ಉದ್ದವಾದ ಭಾಷಣವನ್ನು ಸುಮಾರು ಎರಡು ಗಂಟೆಕಾಲ ಓದಿದರು.

ನಂತರ ಸಹಕಾರಿ ಸಂಘಗಳ ರಿಜಿಸ್ಟ್ರಾರಾದ ಮಿ. ಕೆ. ಎನ್. ಸುಬ್ರಾಯರು ಕೋ ಆಪರೇಟಿವ್ ಸೊಸೈಟಿಗಳ ವಿಷಯ ಒಂದು ಭಾಷಣವನ್ನು ಮಾಡಿದರು. ಇವರ ಉಪನ್ಯಾಸವು ಬಹಳ ಉದ್ದವಾಗಿದ್ದದರಿಂದಲೂ, ರಾಜಕೀಯ ವಿಷಯಗಳ ಮಧ್ಯದಲ್ಲಿ ಸಹಕಾರ ಚಳವಳದ ಮಾತು ಜನರಿಗೆ ಹೆಚ್ಚು ಮನಸ್ಸಿಗೆ ನಾಟದಂತೆ ತೋರಿದರಿಂದಲೂ, ಭಾಷಣವನ್ನು ಪೂರ್ತಿ ಮಾಡದೆ ಸಂಕ್ಷೇಪವಾಗಿ ಮುಗಿಸಲ್ಪಟ್ಟಿತು. ಹ್ಯಾಗೂ ಜಮೀನುದಾರರ ಏಳಿಗೆಗೆ ಮುಖ್ಯ ಸಾಧನವಾದ ಸಹಕಾರ ಸಂಘಗಳಿಗೆ ಜನರು ತುಂಬಾ ಸಿಗವಿಡಬೇಕೆಂದು ಉಪನ್ಯಾಸಕರು ಅಪ್ಪೀಲು ಮಾಡಿದರು.

ಹಳೇ ತಾಲೂಕು ವಾರು ಐದು ಮೆಂಬರುಗಳನ್ನು ವಿಷಯ ನಿಯಾಮಕ ಸಮಿತಿಗೆ (ಸಬ್ಜೆಕ್ಟ್ ಕಮಿಟಿಗೆ) ಚುನಾಯಿಸಿ, ಇಂಥಾ ಚುನಾಯಿತ ಮೆಂಬರುಗಳು ಮಾತ್ರ ಐದೂವರೆ ಗಂಟೆಗೆ ಪುನಹ ಸೇರುವಂತೆ ನಿರ್ಣಯವಾಗಿ ಸಭೆಯು ನಾಳ್ಕೂವರೆ ಗಂಟೆಗೆ ಬರಕಾಸ್ತಾಯಿತು.

ಕಾಫಿ ಮತ್ತು ಟೀಗಾಗಿ ಒಂದು ಗಂಟೆ ವಿಶ್ರಾಂತಿಯಾದ ನಂತರ 5½ ಗಂಟೆ ವಿಷಯ ನಿಯಾಮಕ ಸಮಿತಿಯ ಮೀಟಿಂಗು ಪ್ರಾರಂಭವಾಯಿತು. ಸುಮಾರು ಎರಡು ಗಂಟೆಕಾಲ ಚರ್ಚೆಮಾಡಿ ಪಟ್ಟಿಯಲ್ಲಿದ್ದ ಠರಾವುಗಳ ಅರ್ಧ ಸಂಖ್ಯೆಯನ್ನು ಮುಗಿಸಿದರು. ಮಳೆಯು ಬರಬಹುದೆಂಬ ಸಂಶಯದಿಂದ ಕಮಿಟಿ ಮೀಟಿಂಗನ್ನು ನಿಲ್ಲಿಸಿದರು. ರಾತ್ರಿ ಎಂಟುಗಂಟೆಯಿಂದ ಹನ್ನೊಂದು ಗಂಟೆಯವರೆಗೆ ಸಭೆಯ ಮಂದಿರದಲ್ಲಿ ಹರಿಕಥೆಯು ಮಾಡಲಾಯಿತು. ನಂತರ ಅಲ್ಲಿಯೇ ಮ|| ಸಂಜೀವರಾವ್ ಬಿ. ಎ. ಬಿ. ಎಲ್. ರವರು ರೆಡ್‌ಕ್ರಾಸ್ ಸಂಘದವರವಾಗಿ ಮಲೇರಿಯ ಜ್ವರದ ಸಮ್ಮಂಧದ ಸೊಳ್ಳೆಮೊದಲಾದವುಗಳ ಚಿತ್ರಗಳನ್ನು ಮೇಜಿಕ್‌ಲೇಂಟರ್ನಿನ ಮೂಲಕ ತೋರಿಸಿ ಜನರಿಗೆ ವಿವರಿಸಿ ಹೇಳಿದರು.

ಎರಡನೇ ದಿನ.

ತಾ. 12 ರಲ್ಲು ವಿಷಯ ನಿಯಾಮಕ ಸಮಿತಿಯು ಬೆಳಿಗ್ಗೆ 8 ರಿಂದ 9 ಗಂಟೆ ವರೆಗೆ ಸಭೆಯ ಮಂದಿರದಲ್ಲು ಕೂಡಿ ಠರಾವುಗಳನ್ನು ಚರ್ಚಿಸಿತು. ನಂತರ ಅಲ್ಲಿಯೇ ಅವ್ಯಕ್ತಮಯ ಸಂಘದ ವಾರ್ಷಿಕ ಜನರಲ್ ಮೀಟಿಂಗು ನಡೆಯಿತು. ಮ|| ಕೋದಂಡ ತಿಮ್ಮಯ್ಯನವರು ಅಧ್ಯಕ್ಷರಾಗಿದ್ದರು. ಸಂಘದ ಸೆಕ್ರೆಟರಿಯಾದ ಮಿ. ಬಿದ್ದಂಡ ಐಯ್ಯಪ್ಪನವರು ಕಳೆದ ವರ್ಷದ ವರದಿಯನ್ನು ಓದಿದ ನಂತರ ಅಧ್ಯಕ್ಷರು ತಮ್ಮ ಭಾಷಣವನ್ನು ಓದಿದರು. ಸಭೆಯ ಕೆಲವು ಮೆಂಬರುಗಳೂ ಮಿಪಾನನಿಷೇಧದ ವಿಷಯ ಮಾತುಗಳನ್ನಾಡಿದರು.

ಅವ್ಯಕ್ತಮಯ ಸಂಘದ ಮೀಟಿಂಗು ಮುಗಿದೊಡನೆ ಕಲ್ಲಿಕೋಟೆಯಿಂದ ಬಂದ ಆರ್ಯಸಮಾಜ ಪ್ರಚಾರಕರಾದ ಶ್ರೀಯುತ ಇ. ಸೂಲಪಾಣಿಯವರು ಆರ್ಯಸಮಾಜದ ವಿಷಯ ಉಪನ್ಯಾಸ ಕೊಟ್ಟರು. ಇವರು ಮಲೆಯಾಳ ಭಾಷೆಯಲ್ಲಿ ಮಾತಾಡಿದರು. ಮಲೆಯಾಳದಲ್ಲಿರುವಂತೆಯೇ ಕೊಡಗಿನಲ್ಲೂ ವಾಡಿಕೆಯಾಗಿರುವ ವಿಗ್ರಹಾರಾಧನೆ, ಪ್ರಾಣಿಬಲಿ ಮೊದಲಾದವುಗಳನ್ನು ವಿರೋಧಿಸಿ ಅವುಗಳನ್ನು ಆದಷ್ಟು ಬೇಗನೆ ನಿಲ್ಲಿಸಬೇಕೆಂದು ಮುಂತಾಗಿ ಮಾತಾಡಿದರು. ಇದಕ್ಕೆ ಜವಾಬು ಕೊಡಲಿಚ್ಛೈಸಿದವರಿಗೆ ಸಮಯವಿಲ್ಲದ್ದರಿಂದ ಮಾತಾಡಲು ಎಡೆ ಕೊಡಲಾಗಲಿಲ್ಲ.

ಕೂಡಲೆ ವೆಟರಿನರಿ ಅಸಿಸ್ಟೆಂಟರಾದ ಮೆ|| ಕೋದಂಡ ಸೋಮಣ್ಣನವರು ದನಗಳ ಪೋಷಣೆಯ ವಿಷಯ ತಮ್ಮ ಉಪನ್ಯಾಸವನ್ನು ಓದಿದರು. ಈ ಉಪನ್ಯಾಸವು ಬಹು ಸ್ವಾರಸ್ಯವುಳ್ಳದ್ದಾದುದರಿಂದಲೂ ಇದರಲ್ಲಿರುವ ಸಂಗತಿಗಳ ತಿಳುವಳಿಕೆ ಜಮೀನುದಾರರಿಗೆ ಪ್ರಯೋಜನಕರವಾಗಿರುವುದರಿಂದಲೂ ಕಳೆದ ವಾರ ಪ್ರಕಟಿಸಲಾಯಿತು.

ಮಧ್ಯಾಹ್ನ ಒಂದು ಗಂಟೆಗೆ ಸಂಘದ ಸಭೆಯು ಪ್ರಾರಂಭವಾಗುವ ಮೊದಲೆ ಸಬ್‌ಅಸಿಸ್ಟೆಂಟ್ ಸರ್ಜನರಾದ ಮಿ. ಪಂದಿಕುತ್ತಿರ ಗಣಪತ್ತಿಯವರು ಮಲೇರಿಯ ಜ್ವರವಿಷಯ ಬರೆದುಕೊಂಡು ಬಂದಿದ್ದ ಉಪನ್ಯಾಸವನ್ನು ಓದಿದರು. ಕೂಡಲೆ ಸಭೆಯ ಕೆಲಸವು ಶುರುವಾಯಿತು. ಮೊದಲನೆ ದಿನದಷ್ಟು ಜನರು ಇಲ್ಲದಿದ್ದರೂ ಸುಮಾರು ೮೦೦ವರೆಗೆ ನೆರೆದಿದ್ದರೆಂದು ಹೇಳಬಹುದು. ಸಭೆಯಲ್ಲಿ ಚರ್ಚಿಸಲ್ಪಟ್ಟ ಠರಾವುಗಳು:—

1· ನಾಕ್ರಿ ಕರಾರಿನ ಕಾನೂನನ್ನು ಕೊಡಗಿನಲ್ಲಿ ಪುನಹ ಜಾರಿಗೆ ತರಬೇಕು. ಎಂಬ ಠರಾವನ್ನು ಮಿ. ಕೆಂಬಡತಂಡ ಮೊಣ್ಣಪ್ಪನವರು ಸೂಚಿಸಿ ಕೊಡಗಿನ ವ್ಯವಸಾಯವು ಹೆಚ್ಚಾಗಿ ಪರಪ್ರಾಂತ್ಯಗಳ ಆಳುಗಳಿಂದ ನಡೆಯಬೇಕಾಗಿರುವುದರಿಂದಲೂ, ಇಲ್ಲಿ ಯಜಮಾನರು ಆಳುಗಳಿಗೆ ಬೇರೆ ಕಡೆಗಳಂತೆ ಹೆಚ್ಚು ಹೊಂದರೆ ಕೊಡದೆ ಇರುವುದರಿಂದಲೂ, ಆಳುಗಳಿಗೆ ಸಾಲಿ ಕೊಡಲು ಕಷ್ಟವಾಗಬಹುದಾದುದರಿಂದಲೂ ಈ ಕಾನೂನನ್ನು ತೆಗೆದುಹಾಕಬಾರದೆಂದು ಹೇಳಿದರು. ಮಿ. ಪಾಂಡಂಡ ಚಂಗಪ್ಪನವರು ಅನುಮೋದಿಸಿದಕ್ಕೆ ಮಿ. ಪಳಂಗಂಡ ಮುತ್ತಣ್ಣನವರು ಉತ್ಸಾಹದಿಂದ ಮಾತಾಡಿದರು.

ಮಿ. ಕೊಳ್ಳಿಮಾಡ ಕಮುಂಬೈಯ್ಯನವರು ಠರಾವಿಗೆ ವಿರೋಧಿಸಿ, ದೇಶವೆಲ್ಲಾ ಸ್ವಾತಂತ್ರ್ಯಕ್ಕೆ ಹೋರಾಡುತ್ತಿರುವಲ್ಲಿ ಆಳುಗಳನ್ನು ಗುಲಾಮರಾಗಿ ಇಟ್ಟುಕೊಳ್ಳುವುದು ನ್ಯಾಯವಲ್ಲವೆಂತಲೂ, ಆಳುಗಳಾದರೂ ಅವರು ಮನುಷ್ಯರಾಗಿರುವುದರಿಂದ ಅವರಿಗೆ ಸ್ವಲ್ಪವಾದರೂ ಸ್ವಾತಂತ್ರ್ಯ ಕೊಡಬೇಕಾದುದು ಮನುಷ್ಯಗುಣವೆಂತಲೂ, ಈ ಕಾನೂನಿನಿಂದ ಆಳುಗಳೆಲ್ಲರೂ ದೊಡ್ಡ ಅಸ್ತಿವಂತರಲ್ಲೇ ಸೇರಿ ಚಿಕ್ಕ ಹಿಡುವಳಿದಾರರಿಗೆ ತೊಂದರೆಯುಂಟಾಗುವದೆಂತಲೂ ಮುಂತಾಗಿ ವಾದಿಸಿದರು. ಮಿ. ಚೆಪ್ಪುಡೀರ ಪೂವೈಯ್ಯನವರನ್ನು ಅನುಮೋದಿಸಿ ಕೆಲವು ಮಾತುಗಳನ್ನಾಡಿದರು. ಠರಾವು ಓಟಿಗೆ ಹಾಕಲಾಗಿ ನಾಕ್ರಿಕರಾರಿನ ಕಾನೂನು ಇಡಬೇಕೆನ್ನುವವರು 182, ಬೇಡವೆನ್ನುವವರು 83. ಠರಾವು ಮಂಜೂರಾಯಿತು.

12 ಮೀಟಿಂಗುಗಳಾದರೆ ದೊಡ್ಡದು. ವರ್ಷ ವರ್ಧಂತಿಯಂತೂ ಇಲ್ಲವೇ ಇಲ್ಲ. ಇದ್ದರೂ ನಾಮಕಾವಸ್ಥೆಗೆ. ಬೋರ್ಡಿಂಗಿನಲ್ಲಿ ನೇಮಿಸಲ್ಪಡುವ ರೆಸಿಡೆಂಟು ಟೀಚರುಗಳು, ಹುಡುಗರು ನಾಲ್ಕು ಘಂಟೆಗೆ ಮಿಠಾಯಿ ಅಂಗಡಿಗೆ ಹೋಗುತ್ತಾರೆಯೇ, ಹೊತ್ತಾರೆ ಸಮಯಕ್ಕೆ ಸರಿಯಾಗಿ ಹಾಸಿಗೆ ಬಿಟ್ಟು ಏಳುತ್ತಾರೆಯೇ, ಎಂದು ನೋಡಿಕೊಂಡಿದ್ದರೆ ಸಾಕೇನು ? ಕೆಲವು ಸಮಯಗಳಲ್ಲಿ ಅಷ್ಟು ಕೆಲಸವೂ ಅವರಿಂದ ಸಾಗಲಿಲ್ಲವೆಂದರೆ ಅತಿಶಯೋಕ್ತಿ ಯಾದೀತೇ ? ರೆಸಿಡೆಂಟು ಟೀಚರುಗಳು ಮಾಡಬೇಕಾದ ಕೆಲಸಗಳು ಇವೇ ಎಂದು ವಿವರಿಸುವ ಆವಶ್ಯಕತೆ ಇಲ್ಲದಿದ್ದರೂ ಸಹ ವಿದ್ಯಾರ್ಥಿಗಳು ಸದರಿ ಸಂಸ್ಥೆಯ ಪ್ರಯೋಜನವನ್ನು ಹೊಂದಿಕೊಳ್ಳುವಂತೆ ನೋಡುವುದೂ ಅವರ ಕರ್ತವ್ಯವೆಂದೇ ನಾನು ಹೇಳುವೆನು.

ಲೈಬ್ರರಿಯಲ್ಲಿ ಎಷ್ಟು ಪುಸ್ತಕಗಳಿವೆ ಎಂಬ ಲಿಷ್ಟು ಸಹ ಸರಿಯಾಗಿ ಮಡಗಿಲ್ಲ. ವಿದ್ಯಾರ್ಥಿಗಳಿಗೆ ಓದಲಿಕ್ಕೆ ಕೊಡಲ್ಪಡುವ ಪುಸ್ತಕಗಳೆಲ್ಲವೂ ಹಿಂತಿರುಗಿ ಕೊಡಲ್ಪಡುತ್ತವೋ ಎಂಬ ಎಚ್ಚರಿಕೆಯನ್ನು ತೆಗೆದುಕೊಳ್ಳುವವರಿಲ್ಲವೆಂದರೆ ಏನೊಂದು ವಿಷಾದಕರ. ಹೇಗೂ ವರ್ಷಕ್ಕೆ 50—60ಪುಸ್ತಕಗಳು ಬೀರುವಿನಿಂದ ಕಮ್ಮಿಯಾಗುತ್ತವೆಂದರೆ ವಿಶೇಷವಲ್ಲ.

ಹಾಗೆಯೇ ಡಿಬೇಟಿಂಗ್ ಸಂಸ್ಥೆಯೂ ಸಹ ಇನ್ನೂ ಅದರ ಶೈಶವಾವಸ್ಥೆಯಲ್ಲಿಯೇ ಇದೆ. ಅಲ್ಲವೇ ? ಇದರ ಲೈಬ್ರರಿಯಲ್ಲಿ 50 ಪುಸ್ತಕಗಳಿದ್ದರೆ ದೊಡ್ಡದು. ಕ್ಲಾಸಿಂದ ಒಂದೊಂದು ವಾರಕ್ಕೆ ಹೋಗದೆ ಅವಿತಾಗ ಮಾತ್ರ ಆ ರೂಮಿಗೆ ಮೆಂಬರುಗಳು ನುಗ್ಗುವುದು, ಹಾಗೆ ಮಾಡಲಿಕ್ಕಿಲ್ಲವೇನೋ ? ಇವುಗಳ ಎಚ್ಚರಿಕೆಯನ್ನು ಹೈಸ್ಕೂಲು ಹೆಡ್ಮಾಸ್ಟರು ತೆಗೆದುಕೊಳ್ಳಲಿಕ್ಕಿಲ್ಲವೇನು ? ಅವರು ಈ ಸಂಸ್ಥೆಗಳ ಪ್ರೆಸಿಡೆಂಟರಾಗಿ ಇಲ್ಲದಿರಲೂ ಬಹುದು. ಆ ಮಾತ್ರಕ್ಕೆ ಅವುಗಳ ಎಚ್ಚರಿಕೆಯನ್ನು ತೆಗೆದುಕೊಳ್ಳದಿದ್ದರೆ ಆ ಹಸುಳೆಗಳು ಏನು ಮಾಡಿಯಾವು ? ಪಾಠ ಮಾಡಲಿಕ್ಕೆ ಕ್ಲಾಸಿಗೆ ಡ್ರಿಲ್ಲಿಂಗ್ ಕಲಿಸಲು ಅವರೇ ಹೋಗಬೇಕೆಂದಿರುವಾಗ ಅವರು ಮಾತ್ರ ಏನುಮಾಡಿಯಾರು ? ಸಮಯದ ಅಭಾವ! ಅದೇ ಕೊರತೆ.

ಈ ಮಧ್ಯೆ ಎಸ್. ಎಚ್. ಆರ್ ಯೂನಿಯನು ಮೆಂಬರುಗಳಾಗಿರುವ ಬೋರ್ಡರುಗಳಿಗೂ ಸಹ ನನ್ನದೊಂದು ಭಿನ್ನಹ. ಮುಂದಿನ ಜನಾಂಗವನ್ನು ಯಶಸ್ಸಿಗೆ ತರಲಿರುವ ಯುವಕರಿರಾ, ನೀವು ನಿಮ್ಮ ಸಂಸ್ಥೆಯನ್ನು ಅಭಿವೃದ್ಧಿಗೆ ತರಲಿರುವ ಭಾರವು ನಿಮ್ಮಲ್ಲಿಯೇ ಕೂಡಿದೆ ಎಂಬುದನ್ನು ನೀವೇಕೆ ಯೋಚಿಸುವುದಿಲ್ಲ ? ನಿಮ್ಮ ಸಣ್ಣ ಸಣ್ಣ ತಪ್ಪುಗಳಾದ ಇವೆಲ್ಲವೂ ಹೋಗಲಿ ತಂದೆಯವರು ವಿದ್ಯಾರ್ಜನೆಗೆಂದು ಕೊಟ್ಟ ಹಣವನ್ನು ಮಿಠಾಯಿ ಅಂಗಡಿಯಲ್ಲಿ ವಿರ್ಚುಮಾಡುವುದೂ, ಅಲ್ಲಿಗೆ ಹೋದಲ್ಲಿ, ಊಟವಾದಮೇಲೆ—ಧೂಮಪಾನಮಾಡುವುದೂ, ರೆಸಿಡೆಂಟು ಟೀಚರುಗಳು ನಿಮ್ಮ ತಪ್ಪಿಗೆ ಶಿಕ್ಷಿಸಲು ಯತ್ನಿಸಿದರೆ ಅವನು ಯಾವಾಗ ನನ್ನ ಕೈಗೆ ಹೊಡೆಯಿಸಲು ಸಿಕ್ಕುವನು ಎಂದು ಯೋಚಿಸುವುದೂ, ಏನು ? ಇವೆಲ್ಲವೂ ಹೋಗಲಿ. ಆದರೆ ನಿಮ್ಮಲ್ಲಿ ಹಿರಿಯರಲ್ಲಿ ಕೆಲವರೇಕೆ ನಿಮ್ಮ ಒಳ್ಳೇದಕ್ಕೆ ಇರುವ ಈ ಸಂಸ್ಥೆಯನ್ನು ನಾಮಾವಶಿಷ್ಟ ಮಾಡಲು ಯತ್ನಿಸುವಿರಿ ? ಲೈಬ್ರರಿಯಿಂದ ಪುಸ್ತಕಗಳನ್ನು ತೆಗೆದುಕೊಂಡರೆ ನೀವೇಕೆ ಹಿಂತಿರುಗಿ ಕೊಡುವುದಿಲ್ಲ. ವಾರವಾರವೂ ಮೀಟಿಂಗುಗಳನ್ನು ಮಾಡಿ ಎಲ್ಲರೂ ಸ್ವಾಮಿ ವಿವೇಕಾನಂದನಂತಹ ವಾಗ್ಮಿಗಳಾಗಲು ಪ್ರಯತ್ನಿಸದಿರಲೇಕೆ ?

ತಾವು ಹುಟ್ಟಿದ್ದಕ್ಕೆ ತಮ್ಮ ಪಿತೃ ದೇಶಕ್ಕೆ ಯಶಸ್ಸನ್ನು ...ವೆವೆಂದು ಆದೇಕೆ ನೀವು ದೃಢನಿಶ್ಚಯಮಾಡಿ ಕೆಲಸಮಾ...ವುದಿಲ್ಲ ? ನಮ್ಮ ಪೂರ್ವಿಕರು ಮೊದಲು ಯುದ್ಧದಲ್ಲಿ ಕೀ...ಯನ್ನು ತಂದಿದ್ದರೆ ಈಗ ನಾವು ವಿದ್ಯಾಬುದ್ಧಿಯಲ್ಲಿ ಕೀರ್ತಿ...ನ್ನು ತರಬಾರದೆಂದೇಕೆ ನಿಶ್ಚಯಿಸುವುದಿಲ್ಲ ? ಧ್ರುವ ಇಲ್ಲ 'ವಿಬ್ರಹಾಮು ಗಾರ್' ಫೀಲ್ಡರಂತೆ ಖ್ಯಾತಿಯನ್ನು ಪಡೆಯ ಮನಸ್ಸೇಕೆ ಮಾಡುವುದಿಲ್ಲವೆಂಬ ಚಿಂತೆಯನ್ನು ಒದಗಿಟ್ಟ ಸಹ ಮೊನ್ನೆ ಮೊನ್ನೆ ಬಚ್ಚ ಸ್ವಾಮಿಗಳವರಂದಂತೆ ...ತ ರಕ್ತವು ನಿಮ್ಮ ನಾಳಗಳಲ್ಲಿ ಹರಿಯುತ್ತಿರುವಲ್ಲಿ ನೀವು ಹೀಗೆ ಜಡರಾಗಿ ಕಾಲ ಹರಣ ಮಾಡುವುದು ಯುಕ್ತವೇ?

ಹರಿ ಪ್ರಸಾದ.

"ಕೊಡಗು ಪತ್ರಿಕೆಯ ಫಲ."

...ನೀಯರೆ,

...ನಾಡು 'ಹಳ್ಳಿಗಳಲ್ಲೂ ಮತ್ತು ಪೇಟೆಗಳಲ್ಲೂ ಈಗೀಗ ... ಮಹಾಶಯರು "ಕೊಡಗು" ಪತ್ರಿಕೆಯ ಫಲಿತಾಂಶ ...ಬ ಪ್ರಶ್ನೆಯನ್ನು ಹಾಕುತ್ತಿರುವದರಿಂದ ಅದಕ್ಕೆ ಜವಾ... ಕೆಲವು ಮಾತನ್ನು ವಾಚಕರ ಮುಂದಿಡಬೇಕಾಗಿದೆ.

...ಈ ಪತ್ರಿಕೆಯು ಹೊರಡಲಾರಂಭವಾಯಿತನಿಂದ ನಮ್ಮ ಕೊ...ದೇಶದ ಹಳ್ಳಿಹಳ್ಳಿಯವರೂ ಸಹ ಇದು ವಾರ ವಾರ ...ಸೇರುವದರಿಂದ ಓದುವದಕ್ಕೂ ಬುದ್ಧಿವಂತಿಕೆಯು ಮ...ದ್ಧವಾದ ಕನ್ನಡದ ಲೇಖನ ಬರೆಯುವದಕ್ಕೂ ಸಮರ್ಥ... ಈ ವಿಷಯದಲ್ಲಿ ಈ ಪತ್ರಿಕೆ ಹುಟ್ಟಿದ ಸಮಯ ...ತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ವಾರ್ತೆಗಳಿಗೂ ಈಗೀ...ಳಿಗೂ ಹೋಲಿಸಿನೋಡಿದರೆ ಚನ್ನಾಗಿ ವ್ಯಕ್ತವಾಗುತ್ತದೆ. ...ತ್ರವಲ್ಲ, ಮೀಟಿಂಗಿಗೆ ಸೇರತಕ್ಕ ಉತ್ಸಾಹವು ಜನ...ಲ್ಲಿ ಹುಟ್ಟಿ ಎಂಥಾ ಸಭೆಗಳಲ್ಲೂ ಸ್ವಾವಲಂಬನಾ...ಗಿ ನಿರ್ಭಯದಿಂದ ಮಾತಾಡಲು ಸಹ ಅಭ್ಯಾಸಿಸಿದರು. ಮತ್ತು ಅದಕ್ಕೆ ಉತ್ತೇಜನವೂ ಅವಕಾಶವೂ ಆಯ್ತು.

ಅಲ್ಲದೆ ಈ ಪತ್ರಿಕೆಯು ನಿರ್ಭಯವಾಗಿ ಸರ್ವ ವಿಷಯಗಳನ್ನೂ ದೇಶದೇಶ ಗ್ರಾಮಗ್ರಾಮ ಮನೆಮನೆ ತಿರುಗಿ ಜನರಿಗೆ ಬೋಧನೆ ಕೊಡುವದಲ್ಲದೆ ಸರಕಾರದ ಕುಂದುಕೊರತೆಗಳನ್ನು ಜನರಿಗೂ ಜನರ ಕುಂದುಕೊರತೆಗಳನ್ನು ಸರಕಾರಕ್ಕೂ ಮತ್ತು ಇತರ ದೇಶಗಳಿಗೂ ತಿಳಿಸಿ ತಪ್ಪಿದ ಸ್ಥಾನಕ್ಕೆ ಅಪಹಾಸ್ಯ ಇಲ್ಲವೆ ಅವಮರ್ಯಾದೆ ತರತಕ್ಕದಾದ್ದರಿಂದಲೂ, ಮತ್ತು ಹಾಗೆ ತಂದದರಿಂದಲೂ, ಇದರ ನೆರಯಿಂದ ಎಷ್ಟೋ ನಾಂಕುಶ ನಡತೆಯ ಅಧಿಕಾರಿಗಳಿಗೂ, ಸ್ವೇಚ್ಛಾಪ್ರವರ್ತಕರಾದ ಧನಿಕರಿಗೂ ಭೀತಿಯುಂಟಾಗಿದೆ, ಮತ್ತು ಉಂಟಾದೀತೆಂಬ ಸಂಶಯವು ಮನಸ್ಸಿನಲ್ಲಿ ನೆಲೆಗೊಳಿಸಿದೆ. ಕೆಲವರಿಗೆ ಅನುಭವಸಿದ್ಧವೂ ಮಾಡಿಕೊಟ್ಟಿದೆ. ಆದಕಾರಣ ಯಾರಿಗೂ ಸ್ವಚ್ಛಂದವಾಗಿ ನಡೆಯಲು ಇದರ ಭಯವೊಂದು ಅಂಥವರಿಗೆ ಸ್ವಲ್ಪ ತಡೆಗಟ್ಟುತ್ತಿದೆ. ಅಲ್ಲದೆ ಇದರ ಅಗ್ರಲೇಖನಗಳ ರೋಧನೆಯಿಂದಲೂ ಇತರ ಲೇಖನಗಳ ಮೊರೆಯಿಂದಲೂ ಕೌನ್ಸಿಲು ವಗೈರೆ ಎಷ್ಟೋ ಮಾರ್ಪಾಡುಗಳನ್ನು ನಮ್ಮ ಘನ ಸರ್ಕಾರದವರಿಂದ ನಮಗೆ ಕೊಡಿಸಿ ಕೊಟ್ಟಿದೆ. ಮತ್ತು ರೈತರುಗಳಲ್ಲಿ ಆಫೀಸರುಗಳಿಗೆ ಸ್ವಲ್ಪದಯೆ ಬರುವಂತೆ ಸಹಮಾಡಿದೆ. ಈಗ ಗುಟ್ಟಿನಲ್ಲಾಗುವ ಎಲ್ಲಾ ವಿಚಾರಗಳನ್ನು ಧನಿಕ ಬಡವ ರೆಂಬ ಭೇದವಿಲ್ಲದೆ ಜಾಗ್ರತೆಯಿಂದ ಬಹಿರಂಗಪಡಿಸುತ್ತದೆ ಈ ಪತ್ರಿಕೆಯ ಮೂಲಕ ಜಮಾಬಂದಿ ಸಂಘವು ಸಹ ಬಹಳ ಉನ್ನತ ಸ್ಥಿತಿಗೆ ಬಂದಿದೆ. ಮತ್ತು ಈ ಸಂಘದ ಸ್ಥಾಪನೆಯ ಹೆಸರನ್ನು ದೇಶದೇಶಕ್ಕೂ ಹರಡಿಸಿ ಈ ಸಂಘವು ಕೊಡಗಿನ "ತಾಯಿ ಬೇರು" ಎನ್ನುವ ಬಲವನ್ನು ಕಲ್ಪಿಸಿದೆ. ಮತ್ತು ಅದರ ಗುಣಾವಗುಣಗಳು, ಅದರ ಫಲಿತಾಂಶ, ನಡೆಯುವ ವಿದಾನಗಳನ್ನೆಲ್ಲಾ ಜನರ ತಿಳುವಳಿಕೆಗೆ ತರುವದರಿಂದ ಹೆಚ್ಚಿನ ಮೆಂಬರರು ಸೇರಲು ಉತ್ತೇಜನ ಕೊಟ್ಟಿದೆ, ಮತ್ತು ಕೊಡುತ್ತಿದೆ.

ಭೂಲೋಕದ ವ್ಯವಹಾರಗಳನ್ನೆಲ್ಲಾ ಎತ್ತಿ ಚರ್ಚಿಸುತ್ತಾ ಬರುವದರಿಂದ ಇಲ್ಲಿಯೂ ಕೂಡ ನಿಷಾನಿಷೇಧ, ಅಸ್ಪೃಶ್ಯತೆ ಜಾತಿ ಮೊದಲಾದ ಚಳವಳಗಳನ್ನು ಹೂಡಿಕೊಂಡು ಅವರ ಅಭಿವೃದ್ಧಿಗೆ ಉತ್ತೇಜನಕೊಡುತ್ತಿದೆ

ಅಲ್ಲದೆ ದುಂದುಗಾರಿಕೆಯನ್ನು ಆದಷ್ಟು ಮಟ್ಟಿಗೆ ಕಮ್ಮಿ ಮಾಡಬೇಕೆಂದು ಜನರಿಗೆ ವಾರವಾರ ತಮ್ಮ ಹಿತಚಿಂತಕರಂತೆ ಒತ್ತಿ ಹೇಳುತ್ತದೆ. ಮತ್ತು ಅದರ ಚಳವಳಕ್ಕೂ ಪ್ರಾರಂಭವನ್ನು ಕಲ್ಪಿಸಿರುತ್ತದೆ

ಜೀವನ ನಡಿಸುವ ಕೈಗಾರಿಕೆ, ವ್ಯಾಪಾರ, ಕೃಷಿ, ವಿದ್ಯೆ ವಗೈರೆ ಅಭಿವೃದ್ಧಿ ಪಡಿಸುವ ವಿಧಾನಗಳನ್ನು ಆಗಾಗ್ಯೆ ತೋರಿಸಿಕೊಂಡು ಬರುತ್ತಾ ಇದೆ. ಅಷ್ಟು ಮಾತ್ರವಲ್ಲ, ಎಲ್ಲಾ ದೇಶಗಳಂತೆ ಈ ಕೊಡಗು ಹೆಚ್ಚಾಗಿ ಮುಂದುವರಿದ ದ್ರವ್ಯದ ಅಭಾವವು ಬಲವತ್ತರವಾಗಿರುವದರಿಂದ ಅದರ ನಿವಾರಣೋಪಾಯವನ್ನೂ ಮತ್ತು ಅದಕ್ಕಾಗಿಯೂ ಅಂಥಾ ಮುಂದುವರಿದವರ ಯೂ ಗರೀಬರ ಹಿತಕ್ಕಾಗಿಯೂ ಸ್ಥಾಪಿಸಿದ ಕೋಆಪರೇಟೀವ್ ಸೊಸೈಟಿಗಳ ಪ್ರಯೋಜನವನ್ನೂ ಜನರಿಗೆ ಆಗಾಗ್ಯೆ ಮನವರಿಕೆ ಮಾಡುತ್ತಾ ಯಾವ ಕೆಲಸವು ಹಣವಿಲ್ಲದೆ ಆಗಲಾರದರಿಂದ ಪ್ರತಿ ಒಬ್ಬರು ಅದರ ವಿಷಯದಲ್ಲಿ ಹೆಚ್ಚಿನ ಗಮನ ತೆಗೆದುಕೊಳ್ಳಬೇಕೆಂಬ ಮುಖ್ಯವಾದ ಬುದ್ಧಿವಂತಿಕೆಯನ್ನು ಹೇಳುತ್ತಾ ಬರುತ್ತಿದೆ.

ಇದಲ್ಲದೆ ಇನ್ನೂ ಎಷ್ಟೋ ಹೆಚ್ಚಿನ ಪ್ರಯೋಜನವನ್ನು ಕಲ್ಪಿಸಿದ ಪತ್ರಿಕೆಗೆ ಹಲವರು ಇದರ ಪ್ರಯೋಜನವೇನೆಂದೂ, ಏನು ಪ್ರಯೋಜನ ಮಾಡಿತೆಂದೂ ಮುಂತಾಗಿ ಪ್ರಶ್ನಿಸುವವರ ಕುರಿತು ಬಹಳ ವ್ಯಸನಪಡಬೇಕಾಗಿದೆ. ಪರಂತು ಈ ಪ್ರಶ್ನೆ ಮಾಡತಕ್ಕವರು ಇದನ್ನು ತರಿಸಿದವರಲ್ಲ, ಓದಿದವರಲ್ಲವೆಂದೇ ನನ್ನ ಭಾವನೆ. ಅದು ಹಾಗಿರಲಿ. ಕೌನ್ಸಿಲು ಚುನಾವಣೆ ಕಾಲದಲ್ಲು ಓಟರರಲ್ಲರೂ ಕೌನ್ಸಿಲಿಗೆ ಹೋದ ಮೆಂಬರರು ಏನು ಮಾಡುತ್ತಾರೆಂಬ ಕುತೂಹಲದಿಂದ ಕೇಗೆ ಓಟುಕೊಟ್ಟರೋ ಹಾಗೆಯೇ ಈಗಲೂ ಕಳುಹಿಸಿದ ಮೆಂಬರರು "ಹಾದು ಒಸವಣ್ಣರೊ" ಇಲ್ಲವೆ ನ್ಯಾಯವಾಗಿ ಪ್ರಜೆಗಳ ಅಭಿಪ್ರಾಯಕ್ಕೆ ಸರಿಯಾಗಿ ಕೆಲಸ ಮಾಡತಕ್ಕವರೋ ಎಂದು ತಿಳಿಯುವದು ಓಟರರ ಕರ್ತವ್ಯ. ಹಾಗೆ ತಿಳಿಯಬೇಕಾದರೆ ಈ ಪತ್ರಿಕೆಯೊಂದೇ ಸಹಕಾರಿಯಾಗಿರುವುದರಿಂದ ಪ್ರತಿ ಒಬ್ಬರೂ ದಯವಿಟ್ಟು ಚಂದಾದಾರರಾಗಿ ಈ ಪತ್ರಿಕೆಗೂ ಇದರ ಸಹೋದರಭಾವವಾದ ಗ್ರಾಮಗಳ ಪರಸ್ಪರ ಸಹಾಯಸಂಘಕ್ಕೂ ಜಮಾಬಂದಿ ಸಂಘಕ್ಕೂ ಸೇರಿ ದೇಶವನ್ನು ಉನ್ನತ ಸ್ಥಿತಿಗೆ ತರಬೇಕಾಗಿ ನಾನು ಈ ಮೂಲಕ ಸರ್ವರನ್ನು ಕೇಳಿಕೊಳ್ಳುತ್ತೇನೆ.

ಸಿ. ಕುಟ್ಟಪ್ಪ.

ಮೂರ್ನಾಡು ಕಾನ್‌ಫರೆನ್ಸಿನ ಅಧ್ಯಕ್ಷರ ಭಾಷಣ.

ವಾಚಕ ಪ್ರಿಯರೇ!

ಮೊನ್ನೆ ಮೂರ್ನಾಡಿನಲ್ಲು ನಡೆದ ಜಮಾಬಂದಿ ರೈತ ಸಂಘದ ಅಧ್ಯಕ್ಷರ ಭಾಷಣದ ವಿಷಯದಲ್ಲಿ ಕೆಲವು ಕಡೆ ಭಿನ್ನಾಭಿಪ್ರಾಯಗಳು ಕಂಡುಬರುತ್ತಿದೆಯಾದರೂ ಖಂಡನೆ ಮಾಡುವ ಕಾರ್ಯವಿಲ್ಲದ್ದರಿಂದ ಕೆಲವು ಆ ವಿಷಯವಾಗಿ ಸಂಶಯ ಹುಟ್ಟಿದ ನನ್ನ ಅಭಿಪ್ರಾಯವನ್ನು ವಾಚಕರ ಮುಂದಿಡುವುದೇ ನನ್ನ ಲೇಖನೋದ್ದೇಶವಾಗಿದೆ. ಇವರು ತಮ್ಮ ಭಾಷಣಾವಸರದಲ್ಲಿ ಮುಸಲ್ಮಾನರು 50 ಸಾವಿರ ದನಗಳನ್ನು ಮಾತ್ರ ತಮ್ಮ ಸ್ವಂತವಾಗಿ ಕುಯ್ಯುತ್ತಾರೆಂದೂ ಬಾಕಿ ಎಲ್ಲಾ ಹಿಂದುಗಳೇ ಕೊಡುವದೆಂದೂ, ಹೀಗೆ ಕೊಡುವದರಿಂದಲೇ ಮುಸಲ್ಮಾನರಿಗೆ ಕುಯ್ಯಲು ಅವಕಾಶವಾಯಿತೆಂಬ ಅಪವಾದವನ್ನು ಹಿಂದುಗಳ ಮೇಲೆ ಹೊರಿಸಿರುತ್ತಾರೆ. ಇರಲಿ, 8 ಕೋಟಿ ದನಗಳನ್ನು ಕುಯ್ಯುತಕ್ಕ ಮುಸಲ್ಮಾನರು ಇರುವಾಗ ಹೆಚ್ಚು ಕಮ್ಮಿ ದೊಡ್ಡ ಲೆಕ್ಕಹಾಕಿ ನೋಡಿ ಸರಾಸರಿ ಒಂದು ಕುಟುಂಬದಲ್ಲಿ ಎಂಟು ಜನರಂತೆ ಕಟ್ಟಿದರೂ ಒಂದು ಕೋಟಿ ಕುಟುಂಬವಾಯಿತು. ಮೊನ್ನೆ ಕಂಠೀರವ ಪತ್ರಿಕೆಯಲ್ಲು ಹೀಗೆ ಕನ್ನಡ ಜಿಲ್ಲೆಯ ಲೆಕ್ಕ ಹಾಕುವಾಗ ಆ ಜಿಲ್ಲೆಯ ಜನಸಂಖ್ಯೆಯಷ್ಟೇ ವರುಷಂಪ್ರತಿ ದನಗಳು ಕುಯ್ಯಲ್ಪಡುತ್ತವೆಂದು ಸಾಮಾನ್ಯ ಲೆಕ್ಕ ಹಿಡಿದಾತೆಯೇ ಒಂದು ವರುಷಕ್ಕೆ ಕುಟುಂಬ ಒಂದಕ್ಕೆ ಹ್ಯಾಗೂ ಒಂದು ದನ ಕುಯ್ಯುತ್ತಾರೆ. ಹಾಗೆ ಲೆಕ್ಕ ನೋಡಿದರೆ ಇವರು ಕುಯ್ಯುವ ದನವು ಕಮ್ಮಿ ಪಕ್ಷ 1 ಕೋಟಿಯಾಯಿತು. ಒಂದು ಕೋಟಿಯಲ್ಲಿ ಕೆಲಸಕ್ಕೆ ಬಾರದವು ಎಷ್ಟೋ ಇರಬಹುದು. ಮತ್ತು 1 ಕೋಟಿ ಕುಟುಂಬದಲ್ಲಿ ಅವರು ಜಿರಾಯ್ತಿದಾರರಾಗಿರುವಾಗ ಪ್ರತಿ ಕುಟುಂಬಕ್ಕೂ ದನಗಳಿರುವದು ಅವಶ್ಯವಾಗಿದೆ. ಹ್ಯಾಗೂ ಒಂದು ಕುಟುಂಬದಲ್ಲಿ ಕೆಲಸಕ್ಕೆ ಬಾರದ್ದು ಒಂದು ದನವಾದರೂ ಇರಬಹುದು. ಹಾಗೆ ಪ್ರತಿ ಕುಟುಂಬದಲ್ಲು ಅವರವರ ಕೆಲಸಕ್ಕೆ ಬಾರದ್ದನ್ನೇ ಕುಯಿದರೂ ಹಾಗೂ ಒಂದು ಕೋಟಿಯಾಯಿತು. ಅಥವಾ ಅರ್ಧ ಕೋಟಿಗೆ ಕಡಮೆ ಇಲ್ಲವಷ್ಟೆ. ಹಾಗಾದರೂ ಇವರು ಹಿಂದುಗಳ ಮೇಲೆ ಹೊರಿಸಿದ ಬಾರವು ಸತ್ಯವೇ? ಅದಂತಿರಲಿ ಇನ್ನು ಕೊಡಗಿನವರು ಹಂದಿ ತಿನ್ನುವದನ್ನು ಬಿಟ್ಟರೆ ಗೋವಧೆಯನ್ನು ನಾನು ನಿಲ್ಲಿಸುತ್ತೇನೆಂದು ಹೇಳುತ್ತಾರೆ. ಇದು ಸಹ ಎಷ್ಟರ ಮಟ್ಟಿನ ಶಕ್ತಿಯೋ, ಇಲ್ಲವೆ, ಆಕಾಶದಲ್ಲಿ ಅರಮನೆಕಟ್ಟುವ ಅಭಿಪ್ರಾಯವೆ. ಅದಕ್ಕೂ ಇದಕ್ಕೂ ಏನು ಗಂಟು? ಗೋವಧೆಯನ್ನು ನಿವಾರಿಸುವದಕ್ಕೆ ಹಿಂದೂಸ್ಥಾನದ ಹಿಂದುಗಳೆಲ್ಲರು ಒಡ್ಡಿ ಕಂಕಣರಾಗಿರುವಾಗ ಇದಕ್ಕೆ ಸೂಕರವಧೆಯ ಗಂಟು ಸೇರಿಸುವದು ಅವರಿಗೆ ತಾನೇ ನ್ಯಾಯವಾಗಿ ತೋರುವದೆ, ಅಂದರೆ ಇದು ಅದ ಕಾಲವು ಇಲ್ಲ, ಇದು ನಿಂತ ಕಾಲವೂ ಇಲ್ಲ, ಎಂಬ ಸಂಶಯದಿಂದಲೇ ಈ ಕಂಠೋಕ್ತ ಉದ್ಗಾರ ಮಾಡಿದ್ದಾಗಿರುತ್ತದೆ. ಇಲ್ಲದಿದ್ದರೆ ಇಡೀ ಜನಸಮುದಾಯ ನೇರ ಇತ್ಯರ್ಥಿಸತಕ್ಕ ಕಾರ್ಯಕ್ಕೆ ಒಬ್ಬನೇ ಹೇಗೆ ಜವಾಬು ಮಾಡಬಹುದು. ಕಳೆದ ವರ್ಷ ಕನ್ನಡ ಜಿಲ್ಲೆಯ ಕ್ರೈಸ್ತ ಸಹೋದರರಿಗೆ ಕೆಲವು ಬ್ರಾಹ್ಮಣರು ಗೋವಧೆ ಮಾಡಬಾರದೆಂದು ಹೇಳುವಾಗ್ಯೆ ಅವರು ನೀವು ಕಾಫಿ ಕುಡಿಯುವದನ್ನು ಕಾಫಿ ಹೊಟೇಲುಗಳನ್ನು ನಷ್ಟ ಮಾಡಿದರೆ ನಾವು ಇದನ್ನು ಬಿಡಲು ತಯಾರಿದ್ದೇವೆಂದು ಸಮಾಧಾನ ಕೊಟ್ಟಿದ್ದರು. ಬೆಕ್ಕು ಇಲಿಗಳನ್ನು ಹಿಡಿಯುವಾಗ ಎಚ್ಚರವಾಗುವಂತೆ ಬೆಕ್ಕಿಗೆ ಮಣಿಕಟ್ಟಬೇಕೆನ್ನುವ ಇಲಿಗಳ ಪಂಚಾಯಿತಿಕೆ ಯಾಯಿತೆ ಹೊರತು ಕಾರ್ಯವಾಗಲಿಲ್ಲ.

ಇನ್ನೊಂದು ಕಡೆ ಮತವಾರರ ಸಂಖ್ಯೆಯ ದಾಮಾಷ ಪ್ರಕಾರ ಆಡಳಿತೆಯಲ್ಲು ಹಕ್ಕು ಸಿಕ್ಕ ಬೇಕನ್ನುತ್ತಾರೆ. ಇದೂ ಕೂಡ ಉತ್ತಮವಲ್ಲ. ಆಡಳಿತೆಯ ಹಕ್ಕು ದೇಶದ ಪ್ರೀತಿ ಪಾತ್ರನಿಗೆ ಸಿಕ್ಕ ಬೇಕೇ ಹೊರತು ಕೋಮುವಾರು ಆದರೆ ದೇಶದ ಅಭಿವೃದ್ಧಿಗೆ ಬಹಳ ತೊಂದರೆಯುಂಟಾದೀತು. ಪರಂತು ಯಾವ ದೇಶಾಭಿಮಾನಿಗೂ ಸಿಕ್ಕ ತಕ್ಕ ಸ್ವಾತಂತ್ರ ಇರಬೇಕಷ್ಟೆ. ಮತದಾರರ ಲೆಕ್ಕ ಮಾಡುವದಾದರೆ ಕೊಡಗಿನಲ್ಲು ನೂರಾರು ನೂರೆಂಟು ಮತ ಪಂಗಡಗಳಿರಬಹುದು. ಅವರುಗಳಲ್ಲಾ ಈ ಚಿಕ್ಕ ದೇಶದಲ್ಲಿ ಕೊಡುವದೆಂದರೆ ಹೇಗೆ? ಅಥವಾ ಕೆಲವರಿಗೆ ಕೊಟ್ಟು ಕೆಲವು ಮತದವರನ್ನು ಬಿಡುವುದೂ, ಇಲ್ಲವೆ ಎರಡು ಮೂರು ಮತಗಳನ್ನು ಒಂದು ಕೂಡಿಸುವುದು ಕೂಡ ಅದೊಂದು ಮತ ವೈಷಮ್ಯಕ್ಕೆ ಕಾರಣ. ಇನ್ನು ಕೊಡಗನ್ನು ಮದ್ರಾಸಿಗೆ ಸೇರಿಸಿದರ ಬಹಳ ಒಳ್ಳೆಯದೆನ್ನುತ್ತಾರೆ. ಆದರೆ ಮದ್ರಾಸಿನ ಗೋಳು ಅದಕ್ಕೆ ಸೇರಿದ ಇತರ ಪ್ರಾಂತ್ಯಗಳಲಿದ್ದ ಯಾವನೂ ಕೂಡ ಅದು ನಮ್ಮ ಹಗೆಯವನಿಗೂ ಬೇಡವೆಂದೇ ಹೇಳಿಯಾನು. ಅಲ್ಲಿ ಇದ್ದು ನೋಡ ಬೇಕಷ್ಟೆ. ಆದರೆ ಇದು ಹಾಗೆ ಆಗಬಾರದೆಂದು ಈಗ ಯಾರೂ ಹೇಳಬಹುದು. ಆದರೆ ಆ ಕೊಡಗು ಮದ್ರಾಸಿಗೆ ಸೇರಿದ ಕೆಲವು ವರ್ಷಗಳಲ್ಲಿ ಖಂಡಿತವಾಗಿಯೂ ಇದಕ್ಕೂ ಗೋಳು ತಪ್ಪದಿರಲಾರದು. ಸಾವಿರಾರು ಕೊಡಗು ಎಂಬುದು ನಮ್ಮ ಮೈಸೂರು, ಕನ್ನಡಜಿಲ್ಲೆ, ಮಲಬಾರು ಈ ಪ್ರಾಂತ್ಯಗಳಿಂದ ಈಗ ನೂರು ಪಾಲು ಸುಭಿಕ್ಷದಲ್ಲಿದೆ. ಅಲ್ಲಿನ ಸಂಕಷ್ಟಗಳ ಬರೆದು ಪೂರೈಸುವದಿಲ್ಲ. ಆದರೆ ಬೆಟ್ಟ ದೂರಕ್ಕೆ ನುಣ್ಣಗೆಯಷ್ಟೆ. ಬಡ ಸ್ಥಿತಿಯಲ್ಲಿದ್ದು ವಾಸಿಸಿ ನೋಡಬೇಕು. ಮತ್ತು ಇವರ ಭಾಷಣದ ಪ್ರತಿ ದಿಕ್ಕಿನಲ್ಲು ಮತ, ಮತ ಎಂಬ ಉದ್ಗಾರ ಆಗಾಗ್ಯೆ ಎತ್ತಿರುತ್ತಾರೆ. ಇದರ ನಿಜವಾದ ಅರ್ಥವು ಸರಿಯಾಗಿ ತೋರಿಬರುವುದಿಲ್ಲ. ಲೈಫ್ ಇನ್ಶೂರೆನ್ಸ್ ಮಾಡುವುದು ಮತ ಪ್ರಕಾರ ಸರಿಯಲ್ಲವೆಂದು ಹೇಳಿದರ ಅರ್ಥವು ತಿಳಿಯದು. ಹೇಗೂ ಇಂಥಾ ಅಧಿಕ ಪ್ರಸಂಗ ಮತಗಳಿಂದ ಪಾರಾಗಬೇಕು. ಮತವೆಂದು ಸಾರ್ವಜನಿಕ ಸಂಸ್ಥೆಯಲ್ಲು ಮತಾಭಿಮಾನವನ್ನೇ ಎತ್ತುತ್ತಾ ಬಂದರೆ ಮನಸ್ಸು ಯಾವಾಗಲೂ ಸ್ವಚ್ಛವಾಗಲಾರದು. ಮತವೆಲ್ಲವೂ ಮನೆಯಲ್ಲೇ ಇಟ್ಟು ಬಹಿರಂಗ ಸ್ಥಳದಲ್ಲಿ ಐಕಮತ ಪ್ರಕಾರ ಕೆಲಸ ಮಾಡಿದರೆ ದೇಶವು ಕ್ರಮೇಣ ಉನ್ನತ ಸ್ಥಿತಿಗೆ ಬರದಿರಲಾರದು.

ಸ್ವ. ಕೆ. ಕೆ.

SEE! HOW DECORATIVE!



Our "TIC-TAK" (Registered) wall clock has earned a name, that cannot be beaten. The best and reliable time-keeper. Universally approved. Insist always on

'Tic-Tak'

(Registered) WALL CLOCKS

Price rupees Three only.

GERMAN ALARAM TIMEPIECE.

Offered at a greatly reduced price.

A cheap and very useful Alaram Timepiece' Mechanism four inches dial in nickel case. 30 hours keyless. It will go in any position. This timepiece can be easily taken in travelling cases. It is very useful for students and every one who has got to do anything in time. It is equally useful for night duty man. Whenever it is desired that the alaram should ring the little hand on the dial should be set from the back of the alaram. At the time punctually, at that very moment the alaram will ring. Guaranteed for 3 years.

Price Rupees 5 only.

22-Ct. ROLLED GOLD WRIST WATCHES.

This is a very new style watch fitted with high grades Swiss mechanism. Glass crystal lined, figures Arabic or Roman. Its design and finish will satisfy the most critical test. And an appearance equal to sovereign gold. Very charming to look at and perfect timekeeper. Guaranteed for 5 years, Rs 12-8.

18-Carat Rolled gold wrist watch Rs. 7.

American 'Big Ben' Clock with repeater and alaram Rs. 10-8-0.

Baby timepiece with hour and half hour strike Rs 7

Baby Timepiece with hour and half hour strike and alaram Rs. 8.

Guaranteed for 3 years.

German alaram Timepiece Rs. 5.

German Negro Alarm Timepiece Rs. 5.

German Double Bell Alaram Timepiece Rs. 6

World-famed 'B' Timepiece Rs. 2-8.

'Emden' Fountain Pen 14-Carat Rolled Gold Nib Rs. 2-8.

Apply to— V. S. Watch Coy.
Post Box 103. MADRAS.
12—4

ದಯಮಾಡಿ ಪರೀಕ್ಷಿಸಿ ನೋಡಿರಿ!

X. L. ALOIL.

ಹೊಸ ನಮೂನೆಯ ಮೀನಿನ ಎಣ್ಣೆ

ರೋಗಾತುರಾದವರೂ, ಸಣ್ಣಮಕ್ಕಳೂ ಶಕ್ತಿ ಕುಂದಿದವರೂ ಮತ್ತು ಎದೆನೋವು ವಗೈರೆಗಳಿಂದ ಪೀಡಿತರಾದವರೂ ಇದ ಸೇವಿಸುವದರಿಂದ ಒಡನೆ ಪುಷ್ಟಿಯಾಗುವರು. "ಕಾಡ್ ಲಿವರ್ ಆಯಿಲ್ ಎಮಲ್ಶನ್" ಎಂಬದರ ಬದಲಿಗೆ ಇದು ಉತ್ತಮವಾದ ಕ್ಷೀರ ರಸವಾಗಿದೆ. ವಾಸನೆ ಇಲ್ಲ. ಬೆಲೆ ಬಹಳ ಕಡಿಮೆ.

M. P. BALA & Co.
CHEMISTS.
12—12 *Tellicherry*
Or VIRAJPET WORKS,
Virajpet

ಕರ್ಣಾಟಕ

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝ ಆದಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦

ಟಪ್ಪಾಲು ಖರ್ಚು ಬೇರೆ

ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು. ೯—೨—೦

ಏಜಂಟರು ಬೇಕು, ಕೊಡಗಿನ ಸ್ಥಳಿಕರಾದವರುಗಳು ತಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ.

12—1 ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಜಮೊಬಂದ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರರವರು ಲೆಕ್ಕ ತನಿಖೆಯಿಸಿ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ, ಬಿ.ಎಲ್.

ಸಕ್ರೆಟರಿ.
ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್
ತಾರೀಕು 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ಣಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಕೇಶವಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾರ್ಥಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ:—

ಮ್ಯಾನೇಜರ್, ಶ್ರೀ ಧನ್ವಂತರಿ, ಶೃಂಗೇರಿ, ಮೈಸೂರುಸ್ಟೇಟ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.
Telegraphic Address:-"SHOOTER" Bombay.

[52 36] Please write for latest Catalogues.

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿದೆ.

ಕೃಷ್ಣ ನಂಬೀಶನ್ ಮತ್ತು ನಾರಾಯಣ ನಂಬೀಶನ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ. ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ.

ನಂಬೀಶನ್ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲೂರು, ವೀರಾಜಪೇಟೆ ಮತ್ತು
52-7 **ಗೋಣಿಕೊಪ್ಪಲು.**

ಪ್ರಕಟಣೆ.

ಭಾರತಮಾತೆಯ ಕಷ್ಟವನ್ನು ತಪ್ಪಿಸಬೇಕೆಂದು ಹೋರಾಡುತ್ತಿರುವ ಶ್ರೀಮಾನ್ ಲಾಲಾ ಲಜಪತ್‌ರಾಯ್, ಪಂಡಿತ ಮೋತಿಲಾಲ್ ನೇಹರು ಮೊದಲಾದ ದೇಶಭಕ್ತರುಗಳಾದ ಭಾರತ ಪುತ್ರರಿಂದ ಸ್ಥಾಪಿತವಾಗಿರುವ

ದಿ ಲಕ್ಷ್ಮೀ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು ಲಾಹೋರು, ಮ್ಯಾನೇಜಿಂಗ್ ಡೈರೆಕ್ಟರು, ಪಂಡಿತ ಕೆ. ಸಂತಾನ[illegible]

ಮೂಲಧನ ೧೦ ೦೦,೦೦೦.

ಶೇರು ದರಖಾಸ್ತು ೧೦ ೦೦,೦೦೦.

ಇಂಡಿಯಾ ಸರಕಾರದ ಲೈಫ್ ಇನ್‌ಷ್ಯೂರೆನ್ಸ್ ಆ[illegible] ಅನುಸರಿಸಿ ರಿಜಿಸ್ಟರಾಗಿ ಇಂಡಿಯಾ ಸರಕಾರದಲ್ಲಿ ರೂ[illegible] ಪ್ರಕಾರ ಮೊಬಲಗು ಸೆಕ್ಯೂರಿಟಿ ಡಿಪಾಜಿಟ್ ಇಡಲ್ಪಟ್ಟಿತ್ತೆ.

ಎಲ್ಲಾ ತಾಲೋಕು ಮತ್ತು ಡಿಸ್ಟ್ರಿಕ್ಟುಗಳಲ್ಲಿಯೂ ಏಜಂಟರುಗಳು ಧಾರಾಳವಾದ ಕಮಿಷನ್‌ನಿಂದ ಕೆಲಸ ಮಾಡತಕ್ಕವರು ಬೇಕಾಗಿರುತ್ತೆ. ರೂಲ್ಸುಗಳು ತಿಳಿಯಬೇಕಾದಲ್ಲಿ, ಏಜನ್ಸಿ ರೂಲ್ಸು, ವಿಮೆ ದರಖಾಸ್ತು ಫಾರಂ ಇ[illegible]ದಗಳಿಗೆ ಬರೆಯಿರಿ.

ಚೀಫ್ ಏಜಂಟರ ಆಫೀಸು
ದಿ ಲಕ್ಷ್ಮೀ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿ[illegible]
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂ[illegible]
4—2

Printed & published by Kod[illegible] Appayya, R.B., Chairman, Board [of] Directors, at "Kodagu" Press, Me[rcara] for "Kodagu" Ltd.

Reg. No. M. 1350.
If not delivered please return to "KODAGU" OFFICE, MERCARA

ಕೊಡಗು.

ವಾರ್ಷಿಕ ಚಂದಾ ರೂ—೬—೦.

ಶಕ್ಯೇನ ಧೂರ್ತಯಾತ್ರ ವಿದ್ಯಾ ಲೀತಿ ಕ್ರಿಯಾಶ್ರಮ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೪] ಕೊಡಗು, ಸ ೧೯೨೪ನೇ ಇಸವಿ ನೋ ತಾರೀಕು ೧ನೆಯ ಶುಕ್ರವಾರ [ಸಂಚಿಕೆ ೪೬

ಆರೋಗ್ಯ ಚಂದ್ರಿಕೆ.

ಮದ್ರಾಸ್

ಸಂಪಾದಕರು. ಡಾಕ್ಟರ್ ಟಿ ರಾಮರಾವ್,
ಯಮ್. ಎಚ್ ಸಿ.ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾದ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0 ಬಿಡಿ ಪತ್ರಿಕೆ 1ಕ್ಕೆ 0-2-0 ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಪತ್ರವ್ಯವಹಾರಕ: 'ಆರೋಗ್ಯಚಂದ್ರಿಕೆ' 323,
ತಂಬುಶೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ಶಿಲ್ಪ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ವಿಳಾಸಕ್ಕೆ ಕಳುಹಿಸಬೇಕು. 3. ಚಾತ್ರಿ ನಾರದ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ಪ್ರತ್ಯುತ್ತರಕ್ಕೆ ಕಳುಹಿಸುವ ಕಾಗದಗಳು ಕಾಗದದ ಒಂದೇ ಕಡೆಯೂ ಸ್ಪಷ್ಟವಾಗಿಯೂ, ಶಾಯಿ ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆಯದಿದ್ದಲ್ಲಿ ಈ ಪತ್ರಗಳು ಪ್ರಕಟಿಸಲ್ಪಡುವುವು. 5. ಪ್ರಕಟಿಸಲಾಗದ ಕಾಗದಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭದಲ್ಲಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೋಸ್ಕರ ಬರೆದು ತಿಳಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾ ಕೊಡಬೇಕಾಗಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಶೇರುಹಣ ಸಲ್ಲಿಸಬೇಕಾಗಿರುವವರು ದಯವಿಟ್ಟು ವೀರರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮೇನೇಜರ್,
13.3.24. "ಕೊಡಗು" ಲಿಮಿಟೆಡ್.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City

ನೋಟೀಸು.

ಸ್ಪೆನ್ಸರ್ ಕಂಪೆನಿ ಲಿಮಿಟೆಡ್, ಮಡಿಕೇರಿ.

ಈ ಮೇಲ್ಕಂಡ ಕಂಪೆನಿಯಲ್ಲಿ ಮಾರುವ ಉತ್ತಮ ತರದ ಒಂಟಿಕೋವಿನ ಬ್ರೀಚ್‌ಲೋಡಿಂಗ್ ಕೋವಿಗಳು ತೀರಿಹೋದುದರಿಂದ ಈಗ 4ನೆಯ ಸಂಗ್ರಹಣವು ನಮಗೆ ಬರುವುದು. ಆದ್ದರಿಂದ ಮೊದಲು ಪಡೆಯಲು ಅನಿವಾರ್ಯವಾದವನ್ನು ಗಿರಾಕಿದಾರರು ಕೂಡಲೆ ತಮ್ಮ ಆವಶ್ಯಕತೆಯನ್ನು ಬರೆದು ಒಡನೆ ತಿಳಿಸುವುದು.

ಮತ್ತು ಜೋಡುಕೋವಿನ ಬ್ರೀಚ್‌ಲೋಡಿಂಗ್, ಒಂಟಿ ಮತ್ತು ಜೋಡು ಕೋವಿನ ಕೇಪು ಕೋವಿಗಳು. ತೋಟ ಚಿಲ್ಲು, ಮದ್ದು, ಕೇಪು ವಗೈರೆ ನಮ್ಮ ಭಂಡಾರದಲ್ಲಿರುವುದು.

"ಆಕೆಗೆ ನೋಡಬೇಕಾಗದಹಾಗೆ ಬೇಗನೆ ಬರುವುದು ಲೇಸು."

Spencer & Co. Ltd.,

MERCARA & POLLIBETTA.
29

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಚಾಪು ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ನಮ್ಮ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ
17-9-24. ಮೇನೇಜರ್.

Old Students' Quarterly.

Editor, Mr. P B. Medappa, B A., B L., M L.C

Vol. II No. 2 is now out.

Subscription—Yearly Rs 2, post free. Most delightful! Scholarly articles! Read and enjoy!

CONTENTS

1. National welfare—(includes thoughts on Free and Compulsory education in Coorg.
2. Swarajya—A Canarese Drama.
3. Are Coorgs Kannadigas?
4. Ancient Coorg.
5. Peep into Heavens.
6. Frivolity page,
etc. etc.

If you become a subscriber now you will get a very beautiful calendar for 1925 free—absolutely free!

Apply to—
Manager,
O. S. Association,
Mercara

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲುಪಿರುವುದರಿಂದ, 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ. ಮೇನೇಜರ್,
'ಕೊಡಗು' ಲಿಮಿಟೆಡ್

ಒಂದು ಪ್ರಬಲವಾದ ಪ್ರಶ್ನೆ.

ದೇಶಾಭಿಮಾನವೆಂದರೇನು?

ಕೈರಾಟೆಯಿಂದ ನೂಲುತೆಗೆದು ಮಾಡಿದಬಟ್ಟೆಯನ್ನು ಧರಿಸಿ ಆ ಮೂಲಕ ಲಕ್ಷೋಪಲಕ್ಷ ಗರೀಬ ಜನರಿಗೆ ಅನ್ನವನ್ನೊದಗಿಸುವದೇ ದೊಡ್ಡ ದೇಶಾಭಿಮಾನ.

ಇಂಥಾ 'ಖಾದಿ' ಬಟ್ಟೆಯನ್ನು ಎಲ್ಲಾ ಜನರಿಗೂ ಸುಲಭಕ್ರಯದಲ್ಲಿ ಒದಗಿಸಲಿಕ್ಕೆ ಈಗತಾನೇ ವೀರರಾಜಪೇಟೆಯಲ್ಲಿ ಒಂದು ಖಾದಿ ಭಂಡಾರವನ್ನು ತೆರೆದಿರುತ್ತೇವೆ. ಈಭಂಡಾರದಲ್ಲಿ ಎಲ್ಲಾತರದ ನಾಜೂಕಾದ ಮತ್ತು ಗಟ್ಟಿಯಾದ ಖಾದಿಬಟ್ಟೆಗಳೂ ವಸ್ತ್ರಗಳೂ ಶೀರೆಗಳೂ, ಟವಲುಕಾಲುಗಳೂ, ಖಾದಿರೇಷ್ಮೆಯಿಂದ ತಯಾರಾದ ಎಲ್ಲಾತರದಬಟ್ಟೆಗಳೂ ದೊರೆಯುತ್ತವೆ. ಬಟ್ಟೆಗಿರುವ ಎಲ್ಲಾ ಆರ್ಡರನ್ನು ತಕ್ಷಣವೇ ಜರಗಿಸಲಾಗುತ್ತೆ. ಊರೂರಿನಲ್ಲಿರುವ ಎಲ್ಲಾ ಜನರಿಗೆ ಬಟ್ಟೆಯನ್ನೊದಗಿಸಲುತಕ್ಕ ಏರ್ಪಾಡುಮಾಡಲ್ಪಟ್ಟಿದೆ. ದೇಶಾಭಿಮಾನಿಗಳ ಪ್ರೋತ್ಸಾಹವನ್ನು ನಿರೀಕ್ಷಿಸುತ್ತಲೇ ಇರುತ್ತೇವೆ. ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

'ಮೇನೇಜರ್'
12—11 ಖಾದಿ ಭಂಡಾರ, ವೀರರಾಜಪೇಟೆ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮ. ಕೋಟೆರ ಚಿಣ್ಣಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಮ. ಕೆ. ಚಿಣ್ಣಪ್ಪನವರ ಆಫೀಸಿನಲ್ಲಿ.
ಮೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ ಮ. ಮದೆಯಂಡ ದೇವಯ್ಯನವರು.
ನಾಪೋಕ್ಲು—ಮ. ಪೊನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮ. ಮುಕ್ಕಾಟಿರ ಪೂಣಚ್ಚನವರು.
ಪೊನ್ನಂಪೇಟೆ—ಮ. ಪುತ್ತಮನೆ ಮುದ್ದಯ್ಯನವರು.
ಮಡಿಕೇರಿ—ಮ. ಜಿ. ಮಾದಮ್ಮನವರು.
ಅಮ್ಮತ್ತಿ, ಸಿದ್ದಾಪುರ—ಮ. ಐಚಂಡ ಮಾದಪ್ಪನವರು.
ಮ. ಚಂಗಂಡ ಕುಟ್ಟಪ್ಪನವರು.

ಕೋದಂಡ ಉತ್ತಯ್ಯ.
ಆರ್ಗನೈಜಿಂಗ್ ಏಜೆಂಟ್ "ಕೊಡಗು" ಲಿಮಿಟೆಡ್

"ಕೊಡಗು"

ಸೆ ೧೯೨೫ನೇ ಇಸವಿ ನೇ ತಾ.
೬ನೇ ಶುಕ್ರವಾರ.

ಕರ್ಮಕ್ಕೆ ತಕ್ಕ ಫಲ.

'ಕರ್ಮಕ್ಕೆ ತಕ್ಕ ಫಲ' ವೆಂಬ ತತ್ವವು ಲೋಕ ಸಿದ್ಧಾಂತವಾದುದಾದರೂ ಅನೇಕರು ಇದರಲ್ಲಿ ವಿಶ್ವಾಸವಿಟ್ಟಿರುವಂತೆ ಕಾಣುವುದಿಲ್ಲ. ಕರ್ಮವನ್ನು ಮಾಡಿದಾಗಲೇ ಅದರ ಫಲವು ಲಭಿಸಿದರೆ ಮಾತ್ರ ಈಗಿನವರು ಅದನ್ನು ನಂಬುವದಾಗಿದೆ. ಒಂದು ಜನ್ಮದಲ್ಲಿ ಮಾಡಿದ ಕರ್ಮದ ಫಲವನ್ನು ಇನ್ನೊಂದು ಜನ್ಮದಲ್ಲಿ ಅನುಭವಿಸಬೇಕೆಂಬುದು ಪೂರ್ವಕಾಲದ ಮಾತಾಗಿ ಹೋಗಿದೆ. ಎಲ್ಲಾದರೂ ಕೆಲವು ಹಳಬರು ಮತ್ತು ಹೆಚ್ಚು ಜ್ಞಾನವುಳ್ಳವರು ಮಾತ್ರ ಇದನ್ನು ನಂಬುವವರಾಗಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಹಿಂದೂ ಮತದ ಮುಖ್ಯ ತತ್ವಗಳಲ್ಲಿ ಒಂದಾದ ಈ ತತ್ವದಲ್ಲಿ ಈಗಿನ ಕಲಿಯುಗದ ಜನರಿಗೆ ವಿಶ್ವಾಸವು ಕಡಿಮೆಯಾಗುತ್ತಾ ಬರುವುದರಿಂದಲೇ ಇಡೀ ಹಿಂದೂ ದೇಶದ ಸ್ಥಿತಿಯು ಹೀನವಾಗುತ್ತಾ ಬರುತ್ತಿದೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಹಿಂದೂ ದೇಶದಲ್ಲಿ ಈಗ ಕೆಲವು ಮುಂದಾಳುಗಳು ಕಣ್ಣು ತೆರೆದು ತಮ್ಮ ತಪ್ಪನ್ನು ತಿಳಿದವರಾಗಿ ಜನರಿಗೆ ಬೋಧಿಸ ತೊಡಗಿ ಅಧೋಗತಿಯ ದಾರಿಯಲ್ಲಿದ್ದ ಭಾರತ ಭೂಮಿಯನ್ನು ಉದ್ಧಾರಮಾಡುವ ಕೆಲಸವನ್ನು ಕೈಕೊಂಡಿರುವರು.

ಹಿಂದೂ ದೇಶದ ಪರಿಸ್ಥಿತಿಯು ಹೀಗಿರುವಾಗ ಭಾರತಭೂಮಿಯಲ್ಲಿ ಒಂದು ಮಣಿಯಂತಿರುವ ನಮ್ಮ ಕೊಡಗು ದೇಶದ ಅವಸ್ಥೆಯು ಹ್ಯಾಗಿದೆ ಎಂಬುದನ್ನು ಸ್ವಲ್ಪ ವಿಚಾರಿಸುವ. ಶ್ರೀ ಕಾವೇರಮ್ಮನವರ ಪುಣ್ಯ ಭೂಮಿಯೆಂದು ಹೆಸರುವಾಸಿಗೊಂಡಿದ್ದರೂ ನಮ್ಮ ದೇಶದಲ್ಲಿ ಬಡತನಕ್ಕೇನೂ ಕಡಿಮೆ ಇಲ್ಲವೆಂಬುದನ್ನು ಎಲ್ಲರು ಒಪ್ಪತಕ್ಕದ್ದಾಗಿದೆ. ಧರ್ಮಸ್ಥಳ ಎಂಬ ಹೆಸರು ಇಲ್ಲದಿದ್ದರೂ ಕಾರ್ಯತಃ ಧರ್ಮಸ್ಥಳವಾಗಿದ್ದ ಈ ದೇಶದಲ್ಲಿ ಈಗ ಹೊಟ್ಟೆ ಹಸಿದು ಬಂದವನಿಗೆ ಒಂದು ಹಿಡಿ ಅನ್ನವಾಗಲಿ (ಅಕ್ಕಿಯೊ ಗೀ) ದೊರೆಯುವುದೇ ದುರ್ಲಭವೆಂದರೆ ಸುಳ್ಳಾಗಲಾರದು. ದೇಶವು ಇಷ್ಟು ಹೀನಸ್ಥಿತಿಯಲ್ಲಿರುವದನ್ನು ಎಲ್ಲರೂ ಅರಿತವರಾದರೂ, ಇದಕ್ಕೆ ಕಾರಣಗಳ್ಯಾವವು, ಅವುಗಳನ್ನು ಹೋಗಲಾಡಿಸುವ ಬಗೆ ಹ್ಯಾಗೆ ಎಂಬ ವಿಚಾರ ಮಾಡುವವರು ಕಡಿಮೆಯಾದುದೇ ನಮ್ಮ ದೇಶದ ದೌರ್ಭಾಗ್ಯವೆಂದು ಹೇಳಲೆ ಕಳೆಯದು. ದೇಶದ ಹಿತಚಿಂತಕರಾದವರು ಯೋಚಿಸಿದರೆ ಬಡತನದ ಕಾರಣಗಳನ್ನೇನೋ ಕಂಡುಹಿಡಿಯಬಹುದು. ಆದರೆ ಅವುಗಳನ್ನು ಹೋಗಲಾಡಿಸುವದು ಯೋಚಿಸುವಷ್ಟು ಸುಲಭವಲ್ಲವೆಂದು ಹೇಳಬಲ್ಲೆವು. ದೇಶದ ಪ್ರತಿಯೊಬ್ಬನೂ ಈ ಕೆಲಸಕ್ಕೆ ಸಹಕಾರಿಯಾದರೆ ಸುಲಭದಲ್ಲೇ ದೇಶವು ವೃದ್ಧಿ ಹೊಂದುವದು.

ದೇಶದ ಬಡತನಕ್ಕೆ ಒಂದನೇ ಕಾರಣವು ದೇಶೀಯರ ಶಕ್ತಿ ಜೀವನವೆಂದೇ ನಮ್ಮ ಅಭಿಪ್ರಾಯ. ಬಡತನವು ಆವರಿಸಿಕೊಂಡಿರುವ ಯಾವ ಕಡೆ ನೋಡಿದರೂ ಜನರು 'ಕಂಬಳಿ ಇರುವಷ್ಟು ಕಾಲು ನೀಡುವದಿಲ್ಲ' ವೆಂಬುದು ಕಂಡುಬರುತ್ತದೆ. ಪೂರ್ವ ಕಾಲದ ಅವಿಭಕ್ತ ಕುಟುಂಬ ಪದ್ಧತಿಯು ನಾಶವಾಗುತ್ತಾ ಬಂದು ಒಂದು ಮನೆಯಲ್ಲಿ ಹತ್ತಾರು ಭಾಗಗಳುಂಟಾಗಿ, ಆಯಾಯ ಭಾಗದ ಯಜಮಾನನ ಸ್ಥಿತಿಯನ್ನು ಹೇಳಿ ಪೂರೈಸಲಾಗುವುದಿಲ್ಲ. ಸುಲಭದಲ್ಲಿ ಹೇಳುವುದಾದರೆ ಅವನ ನಿಜಸ್ಥಿತಿಯು ಯಾರಿಗೂ ಗೊತ್ತಾಗಿರುವುದಿಲ್ಲ. 'ಚಟ್ಟಿಯು ಸತ್ತ ಮೇಲೆ ಚಟ್ಟಿಯ ಸಾಲ ತಿಳಿಯುವುದು' ಎಂಬ ಹೇಳಿಕೆಗನುಸಾರವಾಗಿ ಅವನ ಮರಣದನಂತರ ಮಾತ್ರ ಅವನ ಸತ್ಯಸ್ಥಿತಿಯು ತಿಳಿಯುವುದು. ಅವನು ಜೀವಿತನಾಗಿರುವಾಗ್ಯೆ ತನ್ನ ನಡವಳಿಗೆಯಿಂದಲೂ ಉಡುಪು ವಗೈರೆಗಳಿಂದಲೂ ಬೇರೆ ಜನರಿಗೆ ತಾನು ಐಶ್ವರ್ಯವಂತನೆಂದು ತೋರಿಸಿಕೊಳ್ಳುತ್ತಾನೆ. ಹೊಟ್ಟೆ ತುಂಬ ಹಾಕುವಷ್ಟು ಅನುಕೂಲವಿಲ್ಲದಿದ್ದರೂ, ಬಸ್ಸು ಸ್ಟ್ಯಾಂಡಿನಲ್ಲಿ, ಮೋಟಾರು ಕಾರಿನಲ್ಲಾಗಲೀ ಪ್ರಯಾಣಮಾಡುವನು. ಸುಲಭ ಕ್ರಯದ ಮತ್ತು ಒಗೆದು ಶುಚಿಯಾಗಿ ಇಟ್ಟುಕೊಳ್ಳಬಹುದಾದ ಸ್ವದೇಶದ ನೂಲಿನ ಬಟ್ಟೆಯಿಂದ ತೃಪ್ತನಾಗದೆ ಹೆಚ್ಚು ಬೆಲೆಯ ಮತ್ತು ಆಗಾಗ್ಗೆ ತೊಳೆಯಲು ಅನಾನುಕೂಲವಾದ ಅಲ್ಪಾಕ, ಸರ್ಜ, ಫ್ಲಾನಲ್, ರೇಶ್ಮೆ ಮೊದಲಾದ ಪರದೇಶದ ಬಟ್ಟೆಗಳನ್ನು ಸಾಲಮಾಡಿಯಾದರೂ ಧರಿಸುವನು. ಮನೆಯಲ್ಲಿ ಊಟಕ್ಕೆ ಇಲ್ಲದೆಹೋದರೂ ಹೀಗೆ ನಟಿಸುವುದರಿಂದ ಜನರು ತನ್ನನ್ನು ದೊಡ್ಡ ಮನುಷ್ಯನೆಂದು ತಿಳಿದುಕೊಳ್ಳುತ್ತಾರೆಂಬುದೇ ಅವನ ಭಾವನೆ. ವಿದ್ಯಾವಂತನೆಂದೂ ಸಭ್ಯ ಗೃಹಸ್ಥನೆಂದೂ ತೋರಿಸಿಕೊಳ್ಳಲಿಕ್ಕಾಗಿ ಸಾಕ್ಷಿ ಮಾತ್ರದ ಉಡುಪಾದ ಹ್ಯಾಟ್, ಬೂಟ್, ಕಾಲರ್, ಟೈ ಮೊದಲಾದವುಗಳನ್ನು ಉಪಯೋಗಿಸುವನು. ಇವುಗಳೆಲ್ಲವೂ ನಮ್ಮ ದೇಶಕ್ಕೆ ಸರಿಯಾದ ಉಡುಪುಗಳಲ್ಲದಿದ್ದರೂ ಈ ವಿಷಯದಲ್ಲಿ ಯುರೋಪಿಯನರನ್ನು ಅನುಕರಿಸುತ್ತಿರುವುದೂ ನಮ್ಮ ದೇಶೀಯ ಉಡುಪನ್ನು ಹೀಯಾಳಿಸುತ್ತಿರುವುದೂ ಶೋಚನೀಯವಾದುದಾಗಿದೆ. ಸಾಲದಕ್ಕೆ ಧೂಮಪಾನ ಮತ್ತು ಮದ್ಯಪಾನಗಳೂ ಕೂಡ ಸಭ್ಯ ಗೃಹಸ್ಥರುಗಳು ಅವಶ್ಯವಾದ ಗುಣಗಳೆಂದು ತಿಳಕೊಂಡಿರುವನು. ಈ ದುರ್ಗುಣಗಳಿಂದ ಉಂಟಾಗ ಶ್ರೀಮಂತ ಕಷ ನಷ್ಟಗಳನ್ನು ಬೇರೆ ವಿವರಿಸಬೇಕಾದ ಅಗತ್ಯವಿಲ್ಲ. ಅವು ಎಲ್ಲರಿಗೂ ತಿಳಿದ ಮಾತ್ರವಲ್ಲ, ಅನುಭವವಿರುವ ಸಂಗತಿಗಳಾಗಿವೆ. ಹೀಗೆಲ್ಲಾ ಮಾಡಿ ಬೇರೆ ಜನರ ಕಣ್ಣು ಕಟ್ಟಿದ್ದಾಯಿತು. ನೆಂಟರಿಷ್ಟರು ಮನೆಗೆ ಬಂದರೆ ತನ್ನ ಅನುಕೂಲಕ್ಕೆ ಸರಿಯಾದ ಮರ್ಯಾದೆ ಮಾಡದೆ ತನ್ನ ಶಕ್ತಿ ಮೀರಿ ಖರ್ಚುಮಾಡಿ ಉಪಚರಿಸುವನು. ಮದುವೆ ಮುಂಜಿ ತಿಥಿ ಕರ್ಮಾಂತರಗಳಲ್ಲಿ ಸಾಲ ತೆಗೆದಾದರೂ ಅದ್ದಾದಿದ್ದಿ ವೆಚ್ಚಮಾಡುವನು. ತಾನು ಐಶ್ವರ್ಯವಂತರ ಮದುವೆಯಲ್ಲಿ ಉಂಡು ತಿಂದವರ ಅರ್ಧವನ್ನಾದರೂ ತನ್ನ ಮನೆ ಮದುವೆಯಲ್ಲಿ ಸೇರಿದವರಿಗೆ ಕೊಡಬೇಕೆಂಬ ಹಠದಿಂದ ಖರ್ಚುಮಾಡುವನು. ತನ್ನ ಅನುಕೂಲಕ್ಕೆ ಸರಿಯಾಗಿ ನಂಬಿದವರಿಗೆ ಸಂತೋಷಪಡಿಸುವುದಲ್ಲದೆ ಮದುವೆಯು ಮುಯ್ಯಿಗೆ ಮುಯ್ಯಿ ಮಾಡುವದಲ್ಲವೆಂಬುದನ್ನು ಪೂರ್ತಿ ಮರೆತುಬಿಡುತ್ತಾನೆ. ಆದುದರಿಂದ ತಾನು ತನ್ನ ನೆರೆಯವರಿಗಾಗಲೀ ಊರವರಿಗಾಗಲೀ ಕಡಿಮೆ ಇಲ್ಲವೆಂಬುದನ್ನು ತನ್ನ ಸಾಲ ಹಚ್ಚಿಸಿಕೊಳ್ಳುವುದರಲ್ಲಿ ತೋರಿಸುತ್ತಾನೆ. ಈ ಕಟ್ಟ ಹಠವೇ ನಮ್ಮ ದೇಶೀಯರನೇಕರನ್ನು ತಲೆ ಎತ್ತದಂತೆ ಮಾಡುತ್ತಿದೆ.

ಇಷ್ಟೇ ಅಲ್ಲ. ಇವನ ನಟನೆಯು ಇಲ್ಲಿಗೇನೇ ತೀರಲಿಲ್ಲ. ತನ್ನ ಆಪ್ತರಾದ ಹೆಂಡತಿ ಮಕ್ಕಳಿಗೂ ಸಹ ತನ್ನ ನಿಜಸ್ಥಿತಿಯನ್ನು ತಿಳಿಸುವುದಿಲ್ಲವೆಂದರೆ ಆಶ್ಚರ್ಯವುಂಟಾಗಬಾರದು. ಅಂದರೆ ತನ್ನ ಅನುಕೂಲವನ್ನು ತನ್ನ ಸಂಸಾರಕ್ಕೆ ಮಂಚನೆ ಇಲ್ಲದೆ ತಿಳಿಸುವ ಬದಲು ಅವರಿಗ ತಿಳಿಯದೇನೇ ಸಾಲ ಮಾಡುತ್ತಾ ಅವರ ಕೋರಿಕೆಗಳು ತನಗ ಮಿತಿಮೀರಿದವುಗಳಾದರೂ ಅವುಗಳನ್ನು ನೆರವೇರಿಸುತ್ತಾ ಇರುವನು. ಹೀಗೆ ಮಾಡುವುದರಿಂದ ಅವನ ಗುಟ್ಟು ಅವನು ಇಹವನ್ನು ಬಿಟ್ಟಮೇಲೆ ಮಾತ್ರ ಹೊರಬೀಳುವುದು. ಈ ಲೋಕದ ಪಟ್ಟಿಗೆ ಅವನ ಹಿಂದೆ ಉಳಿಯುವ ಸಂಸಾರಕ್ಕೆ ಕಷ್ಟ ಉಂಟಾಗುವದು. ಆದರ ಪರಲೋಕದ ವಿಚಾರದಲ್ಲಿ ಅವನ್ನು ತನ್ನನ್ನೇ ವಂಚಿಸಿದಂತಾಗುವುದು. ತನ್ನ ಜೀವನ ಪ್ರಾರಂಭದಲ್ಲೇ ತನ್ನ ಸ್ಥಿತಿಯನ್ನು ತಾನು ಚನ್ನಾಗಿ ಅರಿತವನಾಗಿ ಅದಕ್ಕೆ ಅನುಗುಣವಾಗಿ ವರ್ತಿಸಲು ಧೈರ್ಯದಿಂದ ಅಭ್ಯಾಸಿಸಿದ್ದೇ ಆದರ ಅವನು ತನ್ನ ತನ್ನ ಸಂಸಾರದ್ವಾರಿಂದ ಬಿಗಿದವರ ಮಾತ್ರವಲ್ಲ ದೇಶದ ಮಕ್ಕಳಿಯನ್ನೇ ಸಾಧಿಸಿಕೊಳ್ಳುವನು.

ಈ ದೇಶದಲ್ಲಿ ಹೊಟ್ಟೆಕಿಚ್ಚೆಂಬ ದುರ್ಗುಣವು ಹೆಚ್ಚುತ್ತಾ ಬರುತ್ತಿದೆ. ತನ್ನ ನೆರೆಯವನ್ ಆಗಲಿ ನಂಟನಿಷ್ಟನೇ ಆಗಲಿ ಉತ್ತಮ ಪದವಿಗೆ ಬರುತ್ತಿರುವುದನ್ನು ಒಬ್ಬನು ಕಂಡರೆ ಸಹಿಸಲಾರದಷ್ಟು ನೋವು ಅವನಿಗ ಉಂಟಾಗುವುದು. ಆದರೆ ಈ ನೋವಿನಿಂದ ಅವನಂತೆಯೇ ಕಷ್ಟಪಟ್ಟು ತಾನೂ ವೃದ್ಧಿ ಹೊಂದಬೇಕೆಂಬ ಪ್ರಯತ್ನ ನಡೆದೆ ಅವನನ್ನು ಹಾಳುಮಾಡಬೇಕೆಂಬ ಇರಾದೆಯಿಂದ ಅವನ ಮೇಲ ಇಲ್ಲದ ಆರೋಪಣೆಗಳನ್ನು ಹೊರಿಸುವನು. ತಾನು ಬೇರೆ ಅನುಕೂಲಸ್ಥರಂತೆ ಆಗಲು ಹಠಮಾಡದೆ ದಂಡುಗಾರಿಕೆಯಲ್ಲಿ ಸ್ಪರ್ಧಿ ನಡಿಸುವನು.

ಮಿಸಾಪಾನ, ಇಸ್ಪೀಟ್ ತೊಡಗಗಳಲ್ಲ ದುಂದುಗಾರಿಕ ಮತ್ತು ಕೋರ್ಟುಕಚೇರಿಗಳ ವ್ಯವಹಾರಗಳಲ್ಲಿ ಅನಾವಶ್ಯಕ ದ್ರವ್ಯವ್ಯಯ, ಈ ಮೂರೇ ದೇಶದ ಬಡತನಕ್ಕೆ ಮುಖ್ಯಕಾರಣಗಳಾಗಿವೆ. ಇವುಗಳನ್ನು ಹೋಗಲಾಡಿಸಲು ಪ್ರಯತ್ನಿಸಬೇಕಾದದ್ದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಅನುಕೂಲಸ್ಥರೂ ವಿದ್ಯೆ ತಿಳುವಳಿಕೆಯುಳ್ಳವರೂ ಬಡವರು ಮತ್ತು ತಿಳಿಗೇಡಿಗಳಿಗೆ ಉದಾಹರಣೆಯಾಗಿಯೂ ದೇಶದುದ್ಧಾರಕ್ಕಾಗಿಯೂ ಸುಲಭ ತರದ ಜೀವನವನ್ನು ನಡಿಸಬೇಕಾಗಿದೆ. ತಮ್ಮ ಸ್ಥಿತಿಯನ್ನು ತಾವು ಅರಿತುಕೊಳ್ಳದೆ ಬೇರೆಯವರ ಮೇಲೆ ಹಠಕ್ಕಾಗಿ ದುಂದುಗಾರಿಕೆಯಲ್ಲಿ ಮಗ್ನರಾಗುವವರು ತಮ್ಮ ಕರ್ಮಕ್ಕೆ ತಕ್ಕ ಫಲವನ್ನು ಅನುಭವಿಸದೆ ಇರರು. ಇದನ್ನು ನಿತ್ಯವೂ ಕಣ್ಣಾರೆ ನೋಡುತ್ತಿದ್ದೇವೆ. ಈ ವಿಷಯದಲ್ಲಿ ನಮ್ಮ ದೇಶದ ಜನಸಮುದಾಯವು ಯಾವಾಗ ಎಚ್ಚರಗೊಳ್ಳುವುದೋ ತಿಳಿಯೆವು!

ಕೊಡಗು ಸೇವಾ ಸಹಾಯಕರ ದಳ

ಈ ವಿಷಯದ ಲೇಖನ ಒಂದು ಇನ್ನೊಂದು ಕಡೆ ಪ್ರಕಟಿಸಲ್ಪಟ್ಟಿದೆ. ಸ್ವಯಂ ಸೇವಕರ ದಳದ ಈ ರಚನೆಯು ಜನಸಮುದಾಯದ ಸಂಘದಿಂದ ಇದಕ್ಕಾಗಿ ನೇಮಿಸಲ್ಪಟ್ಟ ಕಮಿಟಿ ಮೆಂಬರೊಬ್ಬರಿಂದ ಯೋಚಿಸಲ್ಪಟ್ಟದ್ದಾಗಿದೆ. ಇದರ ವಿಷಯ ದೇಶದ ಜನರ ಅಭಿಪ್ರಾಯವನ್ನು ತಿಳಿಯಲಿಕ್ಕಾಗಿ ಲೇಖಕರು ಪತ್ರಿಕೆಯಲ್ಲಿ ಪ್ರಕಟಿಸಿದ್ದಾಗಿದೆ. ಇದರಲ್ಲಿ ತಿದ್ದುಪಡಿಗಳನ್ನು ಸೂಚಿಸಲಿಚ್ಛಿಸುವವರು ನಮ್ಮ ಮೂಲಕ ಲೇಖಕರಿಗೆ ಬರೆಯಬಹುದು. ದೇಶ ಹಿತಚಿಂತಕರು ದೇಶದ ಏಳಿಗೆಗೆ ಅವಶ್ಯವಿರುವ ಈ ಸಂಸ್ಥೆಯ ವಿಷಯ ಚನ್ನಾಗಿ ಆಲೋಚಿಸಿ ತಮ್ಮ ಅಭಿಪ್ರಾಯಗಳನ್ನು ಕೊಡುವರಾಗಿ ನಂಬುತ್ತೇವೆ.

ನಿಶಾ ನಿಷೇಧ

ತಾರೀಕು 1೭ರಲ್ಲು ಮಡಿಕೇರಿಯಲ್ಲಿ ನಡೆದ ಅಮೃತಪಾನ ನಿಷೇಧ ಸಂಘದ ಜನರಲ್ ಮೀಟಿಂಗಿನಲ್ಲಿ ಅಧ್ಯಕ್ಷರಾದ ಮೇಕೇರಿರ ತಿಮ್ಮಯ್ಯನವರು ಮಾಡಿದ ಭಾಷಣ.

ನಿಶಾಪಾನವನ್ನು ತ್ಯಜಿಸುವುದರ ಸಂಬಂಧ ಉಪನ್ಯಾಸ ಮಾಡಬೇಕಾಗಿ ಕೇಳಿಕೊಂಡದ್ದಾಗಿದೆ. ಕೊಡಗಿನಲ್ಲಿ ಈ ಕೆಳಗೆ ನಮೂದಿಸಿರುವ ಸರಕುಗಳಿಗೆ ಸುಂಕವಿಧಿಸೋಣಾದ್ದರಿಂದ ಉಂಟಾಗುವ ಆದಾಯಕ್ಕೆ ಯಕ್ಸೈಜ ಇಲ್ಲವೆ ಸಾರ್ವತ್ರಿ ಆದಾಯವನ್ನು ತ್ತಾರೆ.

(1) ಸರಾಯಿ (ಇದನ್ನು ಬೆಲ್ಲದಿಂದ ಇಲ್ಲವೆ ಕಬ್ಬಿನ ರಸದಿಂದ ತಯಾರುವಾಗಿದೆ)

(2) ಸೇಂದಿ (ಇದನ್ನು ಬೈನೆ, ತೆಂಗು, ಈಚಲು ಮರಗಳಿಂದ ಇಳಿಸುತ್ತಾರೆ)

(3) ಹೊರಗಿನ ತಂದ ಸರಕುಗಳು ಅಂದರೆ, ಯುರೋಪಿನಿಂದ ತರುವ ವಿಸ್ಕಿ, ಬ್ರ್ಯಾಂಡಿ, ವೈನ್, ಬೀರ್ ವಗೈರೆ ದ್ರಾವಕಗ

(4) ಹಿಂದೂಸ್ತಾನದಲ್ಲಿ ತಯಾರಾದ ಪರಸ್ಥಳದ ಪಾನ ಮತ್ತು

(5) ಅಮಲುಉಂಟುಮಾಡುವ ಮೂಲಿಕೆಗಳು ಅಂದರೆ ಗಾಂಜ ಮತ್ತು ಅಫೀಮು

ಇವುಗಳಿಂದುಂಟಾಗುವ ಆಮದು ಮತ್ತು ಖರ್ಚನ್ನು ವಿವರಿಸುವದಕ್ಕ ಸುಮಾರು 3½ಲಕ್ಷ ರೂಪಾಯಿ ಅಂದಾಜು ಪಟ್ಟಿಮುಂಬದಾಗಿ ಕಾಣಬರುತ್ತೆ.

1921—22ರ	ಆದಾ 3,47,792 ರೂ	ಖರ್ಚು	14,999 ರೂ	
1922—23ರ	3,28,464	"	14 146	
1923—24ರ	3,47,368	"	6,074	

1924—25ರ ಜಮಾಬಂದಿನ ಲೆಕ್ಕ ಸಿಕ್ಕಲಿಲ್ಲ.

1925—26ರ ಅಂದಾಜು ಪಟ್ಟಿ ಅಂದರ ಬಡ್ಜೆಟ್ ಎಸ್ಟಿಮೇಟ್ ಮೇರೆ 3,690 ರೂಪಾಯಿ ಆದಾಯ.

1922—23ನೇ ಇಸವಿಯಲ್ಲಿ ಆದಾಯ ಕಮ್ಮಿಯಾಗಲಿಕ್ಕೆ ಕಾರಣವೇನೆಂದರೆ ಮಡಿಕೇರಿ ಬಾಂಡೆಡ್ ವೇರ್ ಹೌಸಿನಿಂದ ಅಂದರೆ ಗೊಡಾವಿನಿಂದ ಮಾರಲ್ಪಟ್ಟ ಸರಾಯಿ ಕಮ್ಮಿಯಾದ್ದರಿಂದಲೂ ಮತ್ತು ಹರಾಜಿನಲ್ಲಿ ಸರಾಯಿ ಮತ್ತು ಸೇಂದಿ ಅಂಗಡಿಗಳ ಗುತ್ತಿಗೆದಾರರು ಕಮ್ಮಿಯಾದ್ದರಿಂದ. 1923—24ರಲ್ಲಿ ಆಮದು ಹೆಚ್ಚಾಗಲಿಕ್ಕೆ ಕಾರಣವೇನೆಂದರೆ, ಸರಾಯಿ ಮತ್ತು ಸೇಂದಿ ಅಂಗಡಿಗಳು ಹೆಚ್ಚು ಮೊಬಲಗಿಗೆ ಹರಾಜಿನಲ್ಲಿ ಕೊಡಲ್ಪಟ್ಟದ್ದರಿಂದ.

1922—23ನೇ ಇಸವಿಯಲ್ಲಿ 2 ಸೇಂದಿ ಅಂಗಡಿಗಳು ಮಾತ್ರ ಮುಚ್ಚಲ್ಪಟ್ಟವು, 23—24ರಲ್ಲಿ ಅಷ್ಟೇ ಅಂಗಡಿಗಳು ಮುಚ್ಚಲ್ಪಟ್ಟವು. 1901ನೇ ಇಸವಿಯಲ್ಲಿ 36 ಸರಾಯಿ ಅಂಗಡಿಗಳಿದ್ದವು. ಈಗ 25 ಇವೆ, ಹಾಗಾದರೆ 100,000 ಜನರಿಗೆ 18 ಶಾಪು ಇದ್ದಿತಾಯಿತು. ಆದರೆ ಮದ್ರಾಸಿನಲ್ಲಿ 22 ಶಾಪುಗಳಿವೆ. ಕಳೆದ 25 ವರುಷದಲ್ಲಿ 386 ಸೇಂದಿ ಅಂಗಡಿಗಳಿದ್ದು ಈಗ 41 ಅಂಗಡಿಗಳು ಮಾತ್ರ ಇವೆ.

1925ನೇ ಮಾರ್ಚಿ 31ರ ವರೆಗ ಸರಾಯಿಯನ್ನು 30 ಡಿಗ್ರಿ ಸಾಧ್ಯಾಂತವೆನಿಸಿ ಮಾರತೊಡಗಿದರು. ಈ ಚಗೆ ಅಂದರೆ 1925ನೇ ಇಸವಿ ಏಪ್ರಿ 1ರಿಂದ 35 ಡಿಗ್ರಿ, ಅಂದರೆ ಹಿಂದಿನವರುಷಕ್ಕಿಂತ ಕಮ್ಮಿ ಶಕ್ತಿ ಸರಾಯಿಯನ್ನು ಇಳಿಸಿ ಮಾರಾಟ ಮಾಡುತ್ತಾರೆ. ಇದರಿಂದ ನಾವು ತಿಳುಕೊಳ್ಳಬೇಕಾದದ್ದೇನೆಂದರೆ, ಇಷ್ಟು ವರುಷ ನಿಷವಿರುವ 30 ಡಿಗ್ರಿ ಪ್ರೂಫಿಯಿರುವ ಸರಾಯಿಯನ್ನು ಡಿಪೋದಿಂದ ಕೊಂಡುಕೊಂಡರ ಗ್ಯಾಲನ್ ಒಂದಕ್ಕೆ ರೂ—9—6 ಕೊಡಬೇಕಿತ್ತು. ಈಗಿನ ದರದ 35 ಡಿಗ್ರಿ ಕಮ್ಮಿ ನಿಷವಿರುವ ಒಂದು ಗ್ಯಾಲನ್ ಸಾರಾಯಕ್ಕೆ ರೂ 7—1—0 ಕೊಡಬೇಕಾಗಿದೆ. ಈಗ ಒಂದು ಗೇಲನ್ ಸರಾಯಿಕ್ಕೆ ರೂ 27—6 ಹೆಚ್ಚಿಗೆ ಕೊಡಬೇಕಾಗುತ್ತೆ. ಮೊದಲು ಅಂಗಡಿಯವನೆ ರೂ 1—5—0 ಮಾತ್ರ ಸಿಕ್ಕುತ್ತಿತ್ತು. ಆದರೆ 1 ಡ್ರಾಪ್ ಸರಾಯಿ ಅಂಗಡಿಯವನಿಂದ ತಗದುಕೊಳ್ಳಬೇಕಾದರೆ ಈಗ ದರ 3 ಆಣೆ. ಮೊದಲಿನ ದರ 2 ಆಣೆ 2 ಪೈ ಆಗಿತ್ತು. ಅಂಗಡಿಯವನಿಂದ ತೆಗದುಕೊಳ್ಳುವ ಒಂದು ಗ್ಯಾಲನಿಗೆ ರೂ, 9—4—0 ಕೊಡಬೇಕು. ಮೊದಲು ಒಂದು ಗ್ಯಾಲನಿಗ ಡ್ಯೂಟಿ ರೂ 3—15—0 ಈಗ ರೂ 5—8—0 ಆಗಿದ.

1925—6ನೇ ಇಸವಿಯ ಅಂದಾಜು ಪಟ್ಟಿ ಮೇರೆ 3 69,000 ರೂಪಾಯಿ ಸಿಕ್ಕಬಹುದಾಗಿ ಮೊದಲೇ ಹೇಳಿದೆನಷ್ಟೆ. ಇದ್ದು ವರ್ಣಿಸಬೇಕಾದರೆ ಹಾಲಿವರುಷ ಕೊಡಗಿನಲ್ಲಿ ಎಷ್ಟು ಸರಾಯಿ ಖರ್ಚಾಗುತ್ತೆ ಅದರ ಕ್ರಯದಿಂದ ಹೇಳಬೇಕೇ ವಿನಾಯಿ ಅನ್ಯಥಾ ಹೇಳುವುದಕ್ಕೆ ಆಗುವುದಿಲ್ಲ.

ಹಾಲಿವರುಷ ಗಾಂಜ ಅಂಗಡಿಗಳು 6ರಿಂದ 2ಕ್ಕೆ ಕಮ್ಮಿ ಮಾಡಲ್ಪಟ್ಟಿದ್ದುಂಟದಾಗಿ ಫೈನಾನ್ಸ ಮೆಂಬರು ಅಂದರೆ ಕಮಿಷನರ್ ರವರು ಕಳೆದ ಕೌನ್ಸಿಲ್ ಮೀಟಿಂಗಿನಲ್ಲಿ ಹೇಳಿದರು. 20 ವರುಷದೀಚೆಗೆ ಗಾಂಜ ಸೇವನೆಯು 800 ಸೇರಿನಿಂದ 250 ಸೇರಿನವರೆಗೆ ಕಮ್ಮಿಯಾಗಿದೆ. ಆದರೆ ಸುಂಕವು 4 ರೂಪಾಯಿಯಿಂದ 21½ ರೂಪಾಯಿ ವರೆಗೆ ಹೆಚ್ಚಿಸಲ್ಪಟ್ಟಿದೆ. ಅದೇ ಮೇರೆ ಆದಾಯವೂ ಸಹ 4,000 ರೂಪಾಯಿಯಿಂದ 10,000 ರೂಪಾಯಿ ವರೆಗೆ ಏರಿದೆ. ಇಲ್ಲಿ ಗಾಂಜ ಸೇವನೆಯು ಮದ್ರಾಸು ಅಧಿಪತ್ಯಕ್ಕಿಂತ ಬಹಳ ಕಮ್ಮಿಯಾಗಿದೆ. ಈ ಸಂಬಂಧ ರಾಜಕೀಯ ಕ್ರಮವೇನೆಂದರೆ, ಕಮ್ಮಿ ಖರ್ಚಿನಿಂದ ಹೆಚ್ಚು ಆದಾಯವನ್ನು ಕೂಡಿಹಾಕಬೇಕೆಂಬುದೇ.

1922—23ನೆಯ ಇಸವಿಯಲ್ಲಿ ಬಚ್ಚಿದ ಮತ್ತು ಸೇಂದಿಯ ಸರಾಯಿಯನ್ನು ಇಳಿಸಿದಕ್ಕೆ 6 ಮೊಕದ್ದಮೆಗಳು ಮಾತ್ರ ತರಲ್ಪಟ್ಟವು.

1923—24ರಲ್ಲಿ ಬಚ್ಚಿದ ಸರಾಯಿ ಬಟ್ಟಿ ಇಳಿಸಿದಕ್ಕು ಮತ್ತು ಸ್ವಾಧೀನದಲ್ಲಿಟ್ಟದ್ದಕ್ಕು 10 ಮೊಕದ್ದಮೆಗಳು ತರಲ್ಪಟ್ಟವು.

ಸೇಂದಿಯಲ್ಲಿ ಸರಾಯಿಯಷ್ಟು ಹೆಚ್ಚು ಅಮಲು ಉಂಟುಮಾಡುವ ದ್ರಾವಕ ಇರುವುದಿಲ್ಲ. ಆದರೆ ...

ಸಾರಾಯದಷ್ಟು ಕೇಡುಮಾಡುವುದಿಲ್ಲ. ಆದ್ದರಿಂದ ಸೇಂದಿ ಕುಡಿಯ ಬಹುದು. ಸಾರಾಯಿ ಕುಡಿಯ ಬಾರದೆಂದಲ್ಲ. ಎರಡೂ ಕೇಡು ಮಾಡುತ್ತವೆ. ಎರಡನ್ನೂ ಕುಡಿಯ ಬಾರದೆಂಬುದೇ ಭಾವನೆ. ಆದರೆ ಹುಳಿ ಸೇಂದಿಯು ಜೀರ್ಣಶಕ್ತಿಗೆ ಕೆಡಕು ಉಂಟು ಮಾಡುತ್ತದೆ. ಸಾರಾಯವು ಶರೀರಕ್ಕೆಲ್ಲ ಕೆಡಕು ಮಾಡುತ್ತದೆ. ದಕ್ಷಿಣ ಹಿಂದುಸ್ಥಾನದಲ್ಲಿ ಕಾನೂನಿಗೆ ವಿರೋಧವಾಗಿ ತಯಾರಿಸಿದ, ಯಾ, ಇಡಲ್ಪಟ್ಟ ನಿಷಿದ್ಧ ದ್ರವ್ಯ ಯೂರೋಪ್ ದೇಶದಲ್ಲಿ ಸಿಕ್ಕುವದಕ್ಕಿಂತ ಹೆಚ್ಚಾಗಿ ಸಿಕ್ಕುತ್ತೆ. ಇದು ಹ್ಯಾಗೆಂದರೆ ಸಾರಾಯಿ ಯಾ ಸೇಂದಿ ಅಂಗಡಿಗಳು ಮುಚ್ಚಲ್ಪಟ್ಟಿದ್ದರೆ ಹಿತ್ತಲಿನಲ್ಲಿ ಕಟ್ಟಿರತಕ್ಕ ಬೈನೆ ಮರದಿಂದ ಸುಲಭವಾಗಿ ಸೇಂದಿ ಇಳಿಸಿ ಸೇವನೆ ಮಾಡಬಹುದು. ಇದಕ್ಕೆ ಯಾವ ಅಡಚಣೆಯೂ ಇರುವುದಿಲ್ಲ. ಹೀಗಿರುವಾಗ್ಯೆ ಠಾಪುಗಳನ್ನೂ ಅಂಗಡಿಗಳನ್ನೂ ಮುಚ್ಚುವದರಿಂದ ಪ್ರಯೋಜನವಿದೆಯೋ? ಸಾರಾಯ ಮತ್ತು ಸೇಂದಿ ವಗೈರೆ ಅಂಗಡಿಗಳನ್ನು ಮುಚ್ಚಿಬಿಟ್ಟರೆ ಸುಮಾರು 3½ ಲಕ್ಷ ರೂಪಾಯಿಯಷ್ಟು ಆದಾಯವು ಕಮ್ಮಿಯಾಗುತ್ತವೆ. ಮುಚ್ಚದಿದ್ದರೆ ಮುಂದಿನ ಜನಾಂಗದ ಬೆಳವಣಿಗೆಯು ಈಗಲೇ ಕ್ಷೀಣಸ್ಥಿತಿಗೆ ಬಂದಿದೆ. ಇನ್ನೂ ಅತ್ಯಂತ ಹೀನ ಸ್ಥಿತಿಗೆ ಒರುವುದರಲ್ಲಿ ಯಾವ ಸಂದೇಹವು ಇರುವುದಿಲ್ಲ. ಆದ್ದರಿಂದ ನಿಷಿದ್ಧವಾಗಿರುವ ಅಂಗಡಿಗಳನ್ನು ಇಟ್ಟುಕೊಂಡು 3½ ಲಕ್ಷ ರೂಪಾಯಿ ಆದಾಯವನ್ನು ಒದಗಿಸಿಕೊಳ್ಳುವದು ಒಳ್ಳೆದೋ, ಯಾ ಜನಾಂಗದ ಅಭಿವೃದ್ಧಿ ವಿಷಯ ನಿಗಕೊಟ್ಟು ಈ 3½ ಲಕ್ಷ ರೂಪಾಯಿಯನ್ನು ಆದಾಯ ಪಟ್ಟಿಯಿಂದ ವಜಮಾಡುವದು ಒಳ್ಳೇದೋ ಎಂಬ ಸಂಗತಿಯನ್ನು ಇತ್ಯರ್ಥ ಮಾಡಬೇಕಾದದ್ದು ನಮ್ಮ ಕರ್ತವ್ಯವಾಗಿದೆ. ಎಲ್ಲರೂ ಏಕಾಭಿಪ್ರಾಯದಿಂದ 3½ ಲಕ್ಷ ರೂಪಾಯಿಯ ಆದಾಯವನ್ನು ತೆಗೆದು ಬಿಡಬೇಕಾಗಿ ಇರಾದೆ ಪಡುವವರು ಅನೇಕರು ಈ ಸ್ಥಾನವನ್ನು ಅಲಂಕರಿಸಿದಂತೆ ಕಾಣುತ್ತೆ. ಆದ್ದರಿಂದ ಇದಕ್ಕೆ ತಕ್ಕ ನಿವಾರಣೆ ಏನು?

ಸಾರಾಯಿ ಸೇಂದಿ ಇತರ ಅಮಲು ಮಾಡುವಂತ ಯಾವದೇ ಆಗಲೀ ಅಂಥಾ ದ್ರಾವಕವನ್ನು ಮನ್ನಾ ಮಾಡಬೇಕಾದರೆ ಅಮೇರಿಕಾದಂತೆ ಪೂರ್ತಿ ನಿಷೇಧವನ್ನು ಬಿಡಬೇಕಾದರೆ ಕಮ್ಮಿ ಹತ್ತು ವರುಷ ಬೇಕು. ಕೂಡಲೆ ಜಾರಿಗೆ ತರಬೇಕೆಂಬದಾಗಿ ಹೇಳಿದರೆ ಅನೇಕ ಪ್ರಯೋಜನಕರವಾದ ಈಗ ಜಾರಿಯಲ್ಲಿರತಕ್ಕ ಸಂಸ್ಥೆಗಳನ್ನು ಮುಚ್ಚಬೇಕಾಗುತ್ತೆ. ಹೀಗೆ ಮಾಡಿದಲ್ಲಿ ಅನೇಕ ನಷ್ಟವೂ ಮತ್ತು ಕಷ್ಟವೂ ಸಹ ಉಂಟಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಕೂಡಲೆ ಜಾರಿಗೆತರುವುದರಿಂದ ಬದಲು 1ನೇ, ರಿಟ್ರೆಂಚ್‌ಮೆಂಟ್ ಕಮಿಟಿಯಂದರೆ, ಖರ್ಚು ಕಮ್ಮಿ ಮಾಡಬೇಕಾಗಿ ಏರ್ಪಾಡು ಮಾಡಿದ ಕಮಿಟಿಯವರ ಶಿಫಾರಸು ಮೇರೆ ಉಳಿಯಬಹುದಾದ ಆದಾಯವನ್ನು, 2ನೇ, ಶಿರೋಭಾರವಾದ ಸರಕಾರದ ಉದ್ಯೋಗಸ್ಥರ ಬದಲು ಸ್ಥಳೀಕ ಜನರಿಗೆ ಉದ್ಯೋಗವನ್ನು ಕೊಟ್ಟಲ್ಲಿ ಇದರಿಂದ ಉಳಿತಾಯವಾಗುವ ಮೊಬಲಗಿನಿಂದಲೂ, 3ನೇ, ನಿಷಿದ್ಧ ಪದಾರ್ಥಗಳನ್ನು ತಯಾರಿಸಲಿಕ್ಕೆ ಉಪಯೋಗಿಸತಕ್ಕ ಧಾನ್ಯಗಳನ್ನು ಕಟ್ಟಡಗಳನ್ನೂ, ಯಂತ್ರಗಳನ್ನೂ ಬಟ್ಟಿಮಾಡಲಿಕ್ಕೆ ಉಪಯೋಗಿಸುವ ಸಾಮಾನು ವಗೈರೆಗಳನ್ನೂ ಮಾರಿ, ಅದರಿಂದ ಬರುವ ಉತ್ಪತ್ತಿಗಳಿಂದಲೂ ಮತ್ತು ಇವುಗಳ ಮೇಲ್ವಿಚಾರಣೆಗೆ ಅಧಿಕಾರಿಗಳನ್ನು ವಜಮಾಡುವದರಿಂದಲೂ ಈ 3½ ಲಕ್ಷ ರೂಪಾಯಿಗಳನ್ನು ಶೇಖರಿಸಲಿಕ್ಕೆ ಆಗದೆಹೋದ ಪಕ್ಷದಲ್ಲಿ 1ನೇ, 50 ರೂಪಾಯಿಗೆ ಮೇಲ್ಪಟ್ಟ ಭೂಮಿ ಕಂದಾಯ ಕೊಡತಕ್ಕವರಿಂದ ಹೆಚ್ಚಿಗೆ ಕಂದಾಯ ವಸೂಲಿ ಮಾಡಬೇಕು. ಇದು ಕಮ್ಮಿ ಕಂದಾಯ ಕೊಡತಕ್ಕ ಗರೀಬ ಜನರಿಗೆ ವ್ಯಾಪಿಸುವುದಿಲ್ಲ. 2ನೇ, ಇನ್‌ಕಂಟ್ಯಾಕ್ಸ್ ಹೆಚ್ಚಿಸಬೇಕು, 3ನೇ ಅತ್ಯಾವಶ್ಯವಿದ್ದಲ್ಲಿ ವರ್ಷದ ಅಂತ್ಯದಲ್ಲಿ ಉಳಿಯತಕ್ಕ ಸಿಲ್ಕನ್ನು ಸಹ ಕಮ್ಮಿಮಾಡಿದ್ದಲ್ಲಿ ಶರಾಬಿನಿಂದ ಉಂಟಾಗುವ ಆದಾಯವನ್ನು ಪೂರ್ತಿ ಆದಾಯದ ಅಂದಾಜು ಪಟ್ಟಿಯಿಂದ ತೆಗೆದುಹಾಕಬಹುದು. 4ನೇ ನಿಷಾಸೇವನೆಯು ಕಮ್ಮಿಯಾದಲ್ಲಿ ಆಲಸ್ಯವು ಹೋಗಿ ಭೂಮಿಯು ಹೆಚ್ಚು ರೂಢಿತಕ್ಕೆ ಒಂದು ಸರಕಾರಕ್ಕೆ ಆದಾಯವು ಹೆಚ್ಚಾಗುತ್ತದೆ. ಈಗ ಪ್ರತಿ ಗ್ರಾಮದಲ್ಲಿಯೂ ಸಹಕಾರಿಸಂಘಗಳು ಇವೆಯಷ್ಟೆ. ಇಲ್ಲವಾದರೆ ಹೆಚ್ಚು ಸಂಘಗಳನ್ನು ಏರ್ಪಡಿಸಬೇಕು. ಪ್ರತಿಯೊಂದು ಗ್ರಾಮಸ್ಥರು ಒಗ್ಗಟ್ಟಾಗಿ ಸೇರಿಕೊಂಡು ಸೇಂದಿ ಕಟ್ಟದಂತೆ ಮಾಡಬೇಕು. ಮತ್ತು ನಿಷಾಖೋರರು ಅಂಥಾ ಗ್ರಾಮಗಳಲ್ಲಿದ್ದರೆ ಅವರಿಗೆ ತಪ್ಪುವಿಧಿಸಬೇಕಾದದ್ದು ಆವಶ್ಯಕವಾಗಿದೆ. ಶುಭ ಅಶುಭ ಕಾರ್ಯಗಳಲ್ಲಿ ನಿಷಿದ್ಧ ಪದಾರ್ಥವನ್ನು ಉಪಯೋಗಿಸದಂತೆ ಪ್ರತಿಯೊಬ್ಬರೂ ನಿಗವಿಡಬೇಕು. ಇದನ್ನು ಜಾರಿಯಲ್ಲಿ ತರಬೇಕಾದರೆ "ತಾನು ಪರರಿಗೆ, ಪರರು ತನಗೆ, ತನಗೆಲ್ಲರೂ, ಎಲ್ಲರಿಗೆ ತಾನೂ" ಎಂಬ ಸಹಕಾರದ ಮಹತ್ತಾದ ಕ್ರಮವನ್ನು ಪ್ರತಿ ಒಂದು ಗ್ರಾಮದಲ್ಲಿ ಜಾರಿಗೆ ತರಬೇಕು. ಈ ಮೇಲೆ ನಮೂದಿಸಿದವುಗಳೆಲ್ಲಾ ಜಾರಿಯಲ್ಲಿ ತರಬೇಕಾದರೆ ನಮ್ಮ ಕೌನ್ಸಿಲ್ ಮೆಂಬರುಗಳೂ ಮತ್ತು ಅವರವರ ತ್ಯಾಗಕ್ಕೆ ನಾವೂ ಸಹ ಕುಮ್ಮಕ್ಕು ಕೊಟ್ಟಲ್ಲಿ ಮದ್ಯಪಾನವನ್ನು ನಿಲ್ಲಿಸಬಹುದು. ನಾವು ತಿಳಿಯಬೇಕಾದ ಮುಖ್ಯ ಸಂಗತಿ ಯಾವುದೆಂದರೆ, ನಿಷಾಪಾನವನ್ನು ಮಾರುವ ಅಂಗಡಿಗಳು ಇಲ್ಲದೆ ಸೇವನೆಗೆ ಅವಕಾಶವಿಲ್ಲವಾಯಿತು. ಈಗ ತತ್ಕಾಲಕ್ಕೆ ಮಾಡಬೇಕಾದ ನಿವಾರಣೆಗಳು ಯಾವುವೆಂದರೆ,

1ನೇ ಸ್ಥಳೀಕ ಜನರ ಒಂದು ಕಮಿಟಿಯನ್ನು ಏರ್ಪಡಿಸಿ ಆ ಕಮಿಟಿಯವರು ಸಾರಾಯ ಮತ್ತು ಸೇಂದಿ ಅಂಗಡಿಗಳನ್ನು ತೆರೆದು ಬಿಡಬೇಕಾಗಿ ನಿರ್ಣಯಿಸಿದರೆ ಅಂಥಾ ಅಂಗಡಿಗಳನ್ನು ಹರಾಜು ಮಾಡುವದು ವಾಜಿಬಿಯಾಗಿದೆ.

2ನೆದು, ಸೇಂದಿ ಅಂಗಡಿಗಳನ್ನು ಹರಾಜು ಮಾಡುವುದರ ಬದಲು ಕ್ಲಿಪ್ತವಾದ ಫೀಜಿಗೆ ಸೇಂದಿಯನ್ನು ಮಾರುವದಕ್ಕೆ ಲೈಸನ್ಸನ್ನು ಕೊಡಬೇಕು. ಆದರೆ ಇದನ್ನು ಜಾರಿಗೆ ತರಬೇಕಾದರೆ ಕ್ಲಿಪ್ತ ಮೇಲು ವಿಚಾರಣೆ ಬೇಕು.

3ನೆ, ಮುನಿಸಿಪಾಲಿಟಿಗಳ ಹೊರಗೆ ಸಾರಾಯ ಮತ್ತು ಸೇಂದಿ ಅಂಗಡಿಗಳನ್ನು ಇಡಬೇಕು.

4ನೆ. ಸಾರಾಯ ಮತ್ತು ಸೇಂದಿ ಅಂಗಡಿಗಳನ್ನು ಪ್ರತಿನಿತ್ಯವೂ ಸಾಯಂಕಾಲ 4ಗಂಟೆಗೆ ಮುಚ್ಚಬೇಕಲ್ಲದೆ ಸಂತೆ ದಿನಗಳಲ್ಲಿ ಅಂಥಾ ಅಂಗಡಿಗಳನ್ನು ಪೂರ್ತಿಯಾಗಿ ಮುಚ್ಚಬೇಕು.

5ನೆ. ಸೇಂದಿ ಇಳಿಸಿ 8ಗಂಟೆಯಾದನಂತರ ಅಂಥಾ ಸೇಂದಿಯು ಹುಳಿಯಾಗುವುದರಿಂದ ಅದನ್ನು ಚೆಲ್ಲಬೇಕು.

ಕುಡುಕತನದಿಂದ ಉಂಟಾಗುವ ಕೆಲವು ಕೆಡಕನ್ನು ಇಲ್ಲಿ ವಿವರಿಸುತ್ತೇನೆ. ದಯವಿಟ್ಟು ಲಾಲಿಸಬೇಕು.

ಕುಡುಕತನವು ಬುದ್ಧಿ ಶೂನ್ಯಮಾಡುತ್ತೆ. ಜ್ಞಾಪಕ ಶಕ್ತಿಯನ್ನು ಕಮ್ಮಿಮಾಡುತ್ತೆ. ಕಾಯುವೃತ್ತಿಯನ್ನು ರೋಗಕ್ಕೆ ಆಧೀನವನ್ನಾಗಿ ಮಾಡುತ್ತೆ. ಸೌಂದರ್ಯದ ಕಳೆಯನ್ನು ಕುಂದಿಸುತ್ತದೆ. ಬಲಹೀನಮಾಡುತ್ತೆ. ಮಿದುಳನ್ನು ಹೀನಸ್ಥಿತಿಗೆ ತರುತ್ತೆ. ಶರೀರದ ಒಳಗೂ ಹೊರಗೂ ಅಸಂಖ್ಯಾತವಾದ ಘಾಯಗಳನ್ನುಂಟುಮಾಡುತ್ತೆ. ಜ್ಞಾನೇಂದ್ರಿಯಗಳನ್ನೆಲ್ಲಾ ಮರುಳುಗೊಳಿಸುತ್ತದೆ. ಹಣವಿನ ಚೀಲಕ್ಕೆ ಕಳ್ಳರಂತೆ ಕೈಹಾಕಿಸುತ್ತದೆ. ಹೆಂಡ ಮಕ್ಕಳನ್ನು ದುಃಖಸಾಗರದಲ್ಲಿ ಮುಳುಗಿಸುತ್ತೆ. ಮನುಷ್ಯನನ್ನು ಹುಚ್ಚನನ್ನಾಗಿ ಗುರಿಮಾಡಿ ಆತ್ಮಹತ್ಯವನ್ನು ಮಾಡಿಕೊಳ್ಳುವನ್ನು ದುರ್ದೆಶೆಯನ್ನು ತಂದು ಹಾಕುತ್ತೆ. ಇತರರ ಕ್ಷೇಮಕ್ಕೆ ಕುಡಿಯುವಂತಹವನು ತನ್ನ ಆರೋಗ್ಯವನ್ನು ಕಡಿಸಿಕೊಳ್ಳುತ್ತಾನೆ. ಕುಡುಕತನವು ವ್ಯಭಿಚಾರಕ್ಕೆ ಕೆಲಕರಣೆಗಳನ್ನುಂಟು ಮಾಡುತ್ತದೆ. ಕೊಡಗಿನಲ್ಲಿ ಕುಡುಕತನದಿಂದ ನಮ್ಮೆಲ್ಲರಿಗೂ ತಿಳಿದಹಾಗೆ ಅನೇಕ ಆಸು ಕೂಲದ ಕುಟುಂಬಸ್ಥರು ಮೂಲೆಗೆ ಒತ್ತಲ್ಪಟ್ಟಿದ್ದಾರೆ. ಅಲ್ಲದೆ ಕುಡುಕತನವು ಆಲಸ್ಯವನ್ನುಂಟುಮಾಡಿ ಕೂತಲ್ಲಿಂದ ಏಳದಂತೆ ಅಂಥವ ತಾನು ಮಾಡಬೇಕಾದ ಕೆಲಸಕ್ಕೆ ಇಂದು ನಾಳೆಯೆಂದು ಕಾಲಹರಣ ಮಾಡಲಿಕ್ಕೆ ಅವಕಾಶಕೊಡುತ್ತೆ.

ಇಷ್ಟನೋಡಿ ಇದೇನಾಶ್ಚರ್ಯ! ನಮ್ಮ ಈ ಮಂದಿರದ ಒಳಿ ಒಂದು ಬೈನಮರವು ಬಗ್ಗಿಹೋಗಿದೆ. ಇದು ನಿಶಾಸೇವನೆಯನ್ನು ತ್ಯಜಿಸಿ ಎಂಬದನ್ನು ತೋರ್ಪಡಿಸುವುದಕ್ಕೆ ಮುಂದಾಳಾಗಿ ನಿಂತು ಶುಭ ಸೂಚನೆಯನ್ನು ತೋರಿಸುವಂತೆ ಕಾಣುವುದಿಲ್ಲವೇ? ಈ ನಮ್ಮ ಜಮೀನುದಾರರ ಸಂಘದ ಸಭಾವಳಿಕೆಗಳು ತೀರುವ ಪರಿಯಂತರ ಅಂದರೆ 3 ದಿನದವರೆಗೆ ಈ ಮಾರ್ನಾಡಿನಲ್ಲಿ ಸಾರಾಯ ಅಂಗಡಿಗಳನ್ನು ಮುಚ್ಚಲಿಕ್ಕೆ ಆರ್ಡರ್ ಮಾಡಿದ ಮತ್ತು ಸಾರಾಯ ಅಂಗಡಿಗಳ ಕಂತುಗಳನ್ನು ವಾಯಿದೆಗೆ ಸರಿಯಾಗಿ ಪಾವತಿ ಮಾಡದಿದ್ದರೆ ಅಂಥಾ ಅಂಗಡಿಗಳನ್ನು ಕೂಡಲೆ ಹರಾಜುಮಾಡಬೇಕಾಗಿಯೂ ಮತ್ತು ಅಂಗಡಿಗಳನ್ನು ಚೆಕ್‌ಮಾಡುವ ಬಾಬಿನಲ್ಲಿ ಸೌಕರಣೆಗಳನ್ನು ಮಾಡುವದಾಗಿ ಬರವಸಕೊಟ್ಟ ಕಮಿಷನರ್ ಮತ್ತು ಟ್ರಾಸ್ಟರ್‌ರವರಿಗೆ ವಂದನೆಮಾಡುವ ವಿಷಯದಲ್ಲಿ ಕೃತಜ್ಞತೆಯನ್ನು ಮಾಡುವಿದಾಗಿ ನಂಬಿದ್ದೇನೆ. ಏನೋ, ಹೇಳದರಿಂದವಾಗಿ ಉದಾಸೀನವಾಗದೆ ಕೂಂಚಬಾಬುಗಳನ್ನಾಗಲಿ ಪ್ರತಿಯೊಬ್ಬರು ಜಾರಿಗೆ ತರಬೇಕಾಗಿ ನನ್ನ ಪ್ರಾರ್ಥನೆ.

೧೧ನೆಯ ಕರ್ನಾಟಕ ವಿದ್ಯಾರ್ಥಿಸಮ್ಮೇಲನ ಬೆಳಗಾವಿ. ಬಿನ್ನಹ.

ಕಳೆದ ಡಿಸೆಂಬರ್ ತಿಂಗಳಿನಲ್ಲಿ ಬೆಳಗಾವಿಯಲ್ಲಿ ಕೂಡಿಸಿದ ಒಂದನೆಯ ಅಖಿಲಭಾರತೀಯವಿದ್ಯಾರ್ಥಿ ಸಮ್ಮೇಲನದಲ್ಲಿ ಗೊತ್ತಾದ ಮೇರೆಗೆ, ಬರುವ ಮೇ ತಿಂಗಳಿನ ತಾ. 9ರಿಂದ 11 ರ ಮೂರು ದಿವಸಗಳಲ್ಲಿ (ಬೆಳಗಾವಿಯಲ್ಲಿ ಜರಗುವ 11ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನದೊಂದಿಗೆ) ಮೊದಲನೆಯ ಕರ್ನಾಟಕ ವಿದ್ಯಾರ್ಥಿ ಸಮ್ಮೇಲನವನ್ನು ಕೂಡಿಸುವುದು ಗೊತ್ತಾಗಿದೆ. ಕನ್ನಡ ಮಾತು ತಿಳಿಯುವ ಹಾಗೂ ಯಾವದಾದರೊಂದು ಶಿಕ್ಷಣ ಸಂಸ್ಥೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಪ್ರತಿನಿಧಿಗಳಾಗಿ ಬರಬಹುದು. ಮಾತ್ರ ಪ್ರತಿನಿಧಿಗಳ ವಯಸ್ಸು ೧೬ ವರ್ಷಗಳಿಗೆ ಕಡಿಮೆಯಾಗಿರಬಾರದು. ಪ್ರತಿನಿಧಿಯ ಚಂದಾ ೪ ಆಣೆ ಇರುವುದು. ಸಾಹಿತ್ಯ-ಸಮ್ಮೇಲನಕ್ಕೆ ಪ್ರತಿನಿಧಿಗಳಾಗಿ ಬಂದ ವಿದ್ಯಾರ್ಥಿಗಳಿಗೆ ಇರುವ ಸ್ಥಳದ ಮತ್ತು ಊಟದ ಏರ್ಪಾಟು ಮಾಡಲಾಗುವದು.

ಸಮ್ಮೇಲನದಲ್ಲಿ ಮುಖ್ಯವಾಗಿ ಕೆಳಗೆ ಬರೆದ ನಾಲ್ಕು ವಿಷಯಗಳ ಚರ್ಚೆಯಾಗುವದು.

(೧) ಪ್ರಾಥಮಿಕ ಶಾಲೆಗಳಲ್ಲಿ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಒಂದೇ ಬಗೆಯ ಕ್ರಮಿಕ ಪುಸ್ತಕಗಳಿರಬೇಕು.

(೨). ಹೈಸ್ಕೂಲುಗಳ ಶಿಕ್ಷಣಕ್ರಮದಲ್ಲಿ ಇಂಗ್ಲಿಷ ಭಾಷೆಯೊಂದನ್ನುಳಿದು, ಬೇರೆ ಎಲ್ಲ ವಿಷಯಗಳನ್ನು ಕನ್ನಡದಲ್ಲಿಯೇ ಹೇಳುವದು.

(೩). ಉಚ್ಚಪ್ರತಿಯ ಶಿಕ್ಷಣದಲ್ಲಿ ಕನ್ನಡಕ್ಕೆ ಇರಬೇಕಾದ ಸ್ಥಾನವು.

(೪). ಕರ್ನಾಟಕದ ಬೇರೆ ಬೇರೆ ಭಾಗಗಳ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಬಳಿಕೆಯಾಗಲಿಕ್ಕೆ ಮಾಡಬೇಕಾದ ಉಪಾಯಗಳು.

ಈ ವಿಷಯಗಳಲ್ಲೊಂದನ್ನಾದರೂ, ಪ್ರತಿನಿಧಿಗಳು ಲೇಖವನ್ನು ಬರೆದು ತರಬಹುದು.

ಸ್ವಾಗತ ಸಂಘದ ಅಧ್ಯಕ್ಷರು-ಬೆಳವಿ ಬಳವಂತರಾಯರು, ಬಿ. ಎ.

ಸಮ್ಮೇಲನದ ಅಧ್ಯಕ್ಷರು-ತಲ್ಲಕ್ ವೆಂಕಣಯ್ಯನವರು, ಎಮ್. ಎ.

ಬೆಂಗಳೂರಿನ ಸೆಂಟ್ರಲ್‌ಕಾಲೇಜಿನಲ್ಲಿಯ ಕನ್ನಡ ಪಂಡಿತರು.

ವಿದ್ಯಾರ್ಥಿಗಳೆಲ್ಲರೂ ಸಮ್ಮೇಲನಕ್ಕೆ ಅವಶ್ಯವಾಗಿ ಬಂದು, ಅದನ್ನು ಯಶಸ್ವಿಯಾಗಿ ಮಾಡಬೇಕೆಂದು ಬೇಡಿಕೊಳ್ಳುತ್ತೇವೆ.

ತಾ|| ೨೮-೪ ೩೫, ೧೪೮೭ ದೇಶಪಾಂಡೆ ಓಣಿ ಬೆಳಗಾವಿ.	ಮದ್ದಯ್ಯನವರ ಬಿ. ಎ. ತೆರಗೊಂಡಿ ಹ. ರಾ. } ಸ. ಕಾ ದರ್ಶಿಗಳು.

ಜಮೀನುದಾರರ ವಾರ್ಷಿಕ ಸಭೆ.

(ಮುಂದುವರಿದದ್ದು.)

13. ಅಧ್ಯಕ್ಷರು, ಸಂಘದ ಸೆಕ್ರೆಟರಿಯವರನ್ನೂ—ಮೆ. ಬಿ ಯಂ. ಕಾರ್ಯಪ್ಪನವರನ್ನೂ ಆರ್ಗನೈಜರ್ ಕಲಸ ಯಾಕೆ ನಡಿಯಲಿಲ್ಲವೆಂಬದನ್ನು ವಿವರಿಸಬೇಕೆಂತ ಕೇಳಿಕೊಂಡರು.

ಕಮಿಟಿಯವರು, ಆರ್ಗನೈಜರಿಂದ ಯಾಕೆ ಕೆಲಸ ತೆಗೆದುಕೊಳ್ಳಲಿಲ್ಲವೆಂಬದನ್ನು ಮೊದಲು ವಿವರಿಸಬೇಕೆಂತ ಕೆಲವರ ಮತವಾಗಿದ್ದದ್ದರಿಂದ ಸೆಕ್ರೆಟರಿಯವರು ರಿಪೋರ್ಟಿನಲ್ಲಿ ಬರೆದ ಕಾರಣಗಳನ್ನೇ ಪುನಹ ಹೇಳಿದರು. ಮೇ. ಬಿ. ಯಂ. ಕಾರ್ಯಪ್ಪನವರಿಂದ ವಿವರಣೆ ಕಮಿಟಿಯವರು ಮೊದಲು ತೆಗೆದುಕೊಳ್ಳಬೇಕಿತ್ತ ಸಭೆಯ ಅಭಿಪ್ರಾಯವಾದ್ದರಿಂದ ಮೆ. ಕಾರ್ಯಪ್ಪನವರು ತಮ್ಮ ವಿವರಣೆಯನ್ನು ಸಭೆಯಲ್ಲಿ ಹೇಳಲಿಲ್ಲ.

14. ಹಿಂದುಳಿದ ಪಂಗಡದವರನ್ನು ಎಲ್ಲಾ ಶಾಲೆಗಳಲ್ಲೂ ನಿರಾಬಂಕವಾಗಿ ಸೇರಿಸಿಕೊಳ್ಳಬೇಕು.

ಒಮ್ಮತದಿಂದ ಮಂಜೂರಾಯಿತು.

15. ಎಲ್ಲಾ ಪ್ರೈಮರಿ ಶಾಲೆಗಳಲ್ಲೂ ಕೈನೂಲು ಮಾಡುವದನ್ನು ಕಲಿಸುವಂತೆ ಸರಕಾರವನ್ನು ಕೇಳಿಕೊಳ್ಳಬೇಕು.

ಒಮ್ಮತದಿಂದ ಮಂಜೂರಾಯಿತು.

16. ಜಮ್ಮದ ಭೂಮಿಯನ್ನು 5 ವರ್ಷದ ವರೆಗೆ ವಾರಸಾಗುವಳಿಗೆ ಕೊಡಲು ಸರಕಾರ ಮಂಜೂರಾತಿ ಬೇಡವೆಂತ ರೂಲ್ ಮಾಡಬೇಕೆಂತ ಸರಕಾರವನ್ನು ಕೇಳಬೇಕು.

ಒಮ್ಮತದಿಂದ ಮಂಜೂರಾಯಿತು.

17. ಮಾರ್ಗದಲ್ಲಿ ಇರುವ ದನಕರುಗಳನ್ನು ದೊಡ್ಡಿಗೆ ಹಾಕಿ ಮಾಲೀಕರನ್ನು ಪ್ರೊಸಿಕ್ಯೂಶನ್ ಮಾಡುವ ಡಿಸ್ಟ್ರಿಕ್ಟ್ ಬೋರ್ಡ್ ರೂಲಿಗೆ ಸಂಘವು ಬಲವಾಗಿ ವಿರೋಧಿಸುತ್ತದೆ.

ಒಮ್ಮತದಿಂದ ಮಂಜೂರಾಯಿತು.

18. ಯಡವನಾಡಿನ ಜಮ್ಮರೈತರಿಗೆ ಜಾಣೆ ಇಲ್ಲದ್ದರಿಂದ ಸೈಸಾರಿಯಿಂದ ಸೌದೆ, ಸೊಪ್ಪು ಮುಂತಾದ ವ್ಯವಸಾಯದ ಆವಶ್ಯಕತೆಗಳನ್ನು ತೆಗೆದುಕೊಳ್ಳಲಿಕ್ಕೆ ಬಿಡಬೇಕೆಂತ ಸರಕಾರವನ್ನು ಕೇಳಬೇಕು.

ಒಮ್ಮತದಿಂದ ಮಂಜೂರಾಯಿತು.

19. ನೇಗಲೆ ಕತ್ತಿಗೆ ನಾಲೆಯನ್ನು ರಿಪೇರಿ ಮಾಡಿ ಕೊಡಬೇಕೆಂತ ಸಂಬಂಧಪಟ್ಟ ಇಲಾಖೆಯನ್ನು ಈ ಸಂಘವು ಕೇಳಿಕೊಳ್ಳುತ್ತದೆ.

ಒಮ್ಮತದಿಂದ ಮಂಜೂರಾಯಿತು.

20. ಎಲ್ಲಾ ಗ್ರಾಮ ರಸ್ತೆಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕೆಂತ ಡಿ. ಬೋರ್ಡನ್ನು ಸಂಘವು ಕೇಳಿಕೊಳ್ಳುತ್ತದೆ.

ಒಮ್ಮತದಿಂದ ಮಂಜೂರಾಯಿತು.

21. ಪಬ್ಲಿಕ್ ಕಾಲುದಾರಿಗಳಿಗೆ ಅಡ್ಡವಾದ ಹೊಳೆಗಳಲ್ಲೆಲ್ಲಾ ಬೇಕಾದ ಪಾಲಗಳನ್ನು ಹಾಕಲು ಡಿ. ಬೊ. ನವರು ಹಣ ಕೊಡಬೇಕೆಂತ ಸಂಘವು ಕೇಳಿಕೊಳ್ಳುತ್ತದೆ.

ಪಾಸಾಯಿತು.

22. ಸರಕಾರದವರು ಡಿಸ್ಟ್ರಿಕ್ಟ್ ಬೋರ್ಡ್ ಆಕ್ಟಿನ ಮಸೂದೆಯನ್ನು ಕೌನ್ಸಿಲಿಗೆ ಇನ್ನೂ ತರಲಿಲ್ಲವೆಂಬದಕ್ಕೆ ಸಂಘವು ವಿಷಾದಿಸುತ್ತದೆ. ಹೇಗೂ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯನ್ನು ಕೂಡಲೇ ಮಾಡಬೇಕೆಂತ ಸಂಘವು ಕೇಳಿಕೊಳ್ಳುತ್ತದೆ.

ಮಂಜೂರಾಯಿತು.

23. ಸಂಘದ ಉದ್ಯೋಗಸ್ಥರ ಚುನಾವಣೆ— ...ವು

ಮೆ. ಬಿ. ಯಮ್. ಸುಬ್ಬಯ್ಯನವರು, ರಾ. ಬಾ. ಕೆ ...ಯ್ಯನವರನ್ನ ಅಧ್ಯಕ್ಷರಾಗಿ ಚುನಾಯಿಸಬೇಕೆಂತ ಸೂಚಿಸ್ಗ...

ಮೆ. ಯು. ಮಾಚಯ್ಯನವರು ರಾ. ಬಾ. ಕೆ ಅಪ್ಪ...ವರನ್ನು ಸೂಚಿಸಿದರು.

ಮೆ. ಪಳಂಗಂಡ ಮುತ್ತಣ್ಣನವರು ...ಪ್ಪನವರನ್ನು ಸೂಚಿಸಿದರು. ...ರು ನಮ್ಮ ದೇಶದಲ್ಲಿ...

ಮೆ. ಜೆ. ತಿಮ್ಮಯ್ಯನವರು ... ಖಾದಿ ...ವರನ್ನು ಸೂಚಿಸಿದರು. ...ಲ್ಲಿ ಖಾದಿ ಇನಾಮನ್ನ ಕೊಡಬೇಕೆಂತ ಹೇಳಿದರು. ...ಡು ಅದರಂತೆ ನಡೆಯಬೇಕಾಗಿ ಅತಿವಿನಯದಿಂದ ಬೇಡಿಕೊಳ್ಳುತ್ತೇನೆ.

ಪ್ರತ್ಯೇಕ "ಖಾದಿ ಪ್ರೇಮಿ"

ಮೆ. ನಿಡ್ಡದ ಸುಬ್ಬಣ್ಣೈಯ್ಯನವರು ಮತ್ತು ಕೆ ಅಪ್ಪೈಯ್ಯನವರು ಸಹ ವೈಸ್ ಪ್ರೆಸಿಡೆಂಟರುಗಳಾಗಿ ಚುನಾಯಿತರಾದರು.

ಸೆಕ್ರೆಟರಿ ಸ್ಥಾನಕ್ಕೆ ಸಿ. ಎನ್. ವೆಂಕಪ್ಪೈಯ್ಯ, ಸಿ. ಟಿ. ಕುಶಾಲಪ್ಪ ಮತ್ತು ಬಲ್ಲಚಂಡ ಬೆಳ್ಯಪ್ಪನವರ ಹೆಸರುಗಳು ಸೂಚಿಸಲ್ಪಟ್ಟವು, ಮೆ. ಕುಶಾಲಪ್ಪನವರು ತನಗೆ ಬೇಡವೆಂತ ಹೇಳಿದರು.

ಓಟು ತೆಗೆಯುವಾಗ ವೆಂಕಪ್ಪೈಯ್ಯನವರಿಗೆ ಬಹುಮತದಿಂದ ಮಂಜೂರಾಯಿತು.

ಮೆ. ಯಂ. ಚಿಣ್ಣಪ್ಪನವರು ಖಜಾನ್ಜಿಯಾಗಿ ಒಮ್ಮತದಿಂದ ಚುನಾಯಿತರಾದರು.

ಮೆ. ಬಿ. ಎಸ್. ಕೃಷ್ಣಪ್ಪನವರು ಕೊಳ್ಳಿಮಾಡ ಕರುಂಬೈಯ್ಯನವರು, ಮೆ. ಐನಂಡ ಮಾದಪ್ಪನವರು, ಮೆ. ಕೆ. ಪಿ. ಚಿಣ್ಣಪ್ಪನವರು, ಮೆ. ಮನಿಯಪ್ಪಂಡ ಬೆಳ್ಯಪ್ಪನವರು ಜಾಯಿಂಟ್ ಸೆಕ್ರೆಟರಿಗಳಾಗಿ ಚುನಾಯಿತರಾದರು.

ಇತರ ಕಮಿಟಿ ಮೆಂಬರುಗಳು—ಮಡಿಕೇರಿ ತಾಲೋಕು. 1. ಮೆ ಕೋದಂಡ ತಿಮ್ಮೈಯ್ಯನವರು, 2. ಕೊಂಗೆಟ್ಟಿರ ಅಪ್ಪೈಯ್ಯನವರು, 3. ಪಾಂಡಂಡ ಚಂಗಪ್ಪನವರು, 4. ಮಡೆಯಂಡ ದೇವೈಯ್ಯನವರು, 5. ಕೆಕ್ಕಡ ಪೂವೈಯ್ಯನವರು, 6. ಸೋರಪಂಡ ಪೊನ್ನಪ್ಪನವರು, 7. ಬಾಪುಜಾನ್ ಸಾಬರು, 8. ಯಂ. ಸಿದ್ಧಲಿಂಗಪ್ಪನವರು.

ಪಾಡಿನಾಲ್ಕುನಾಡು ತಾಲೋಕು. 1 ಬಿದ್ದಂಡ ಬೋಪೈಯ್ಯನವರು, 2. ಬಿದ್ದಾಟಂಡ ಮಾದಪ್ಪನವರು, 3. ಮೂಕಿರ ಅಪ್ಪೈಯ್ಯನವರು, 4. ಪಟ್ಟಮಾಡ ಚಂಗಪ್ಪನವರು, 5. ಚೌರಿರ ಅಪ್ಪೈಯ್ಯನವರು, 6 ಯಸ್. ಯನ್ ಶಂಕರ ನಾರಣೈಯ್ಯನವರು, 7. ಬೆಳ್ಯಚೆಟ್ಟಿರ ಅಚ್ಚೈಯ್ಯನವರು, 8. ಉದಿಯಂಡ ಮಾಚೈಯ್ಯನವರು

ಯೆಡೆನಾಲ್ಕುನಾಡು. 1. ಅಪ್ಪಾರಂಡ ಚಂಗಪ್ಪನವರು, 2. ನಡಿಕೇರಿಯಂಡ ಸೋಮೈಯ್ಯನವರು, 3. ಬಲ್ಲಚಂಡ ಬೆಳ್ಯಪ್ಪನವರು, 4. ಕಳ್ಳಿರ ಮಾದಪ್ಪನವರು 5 ಬಿದ್ದಂಡ ಐಯ್ಯಪ್ಪನವರು, 6. ದಾವೂದ್‌ಖಾನ್ ಬ್ಯಾರಿಯವರು, 7. ಮೇಳಪಂಡ ಚಿಣ್ಣಪ್ಪನವರು, 8. ಚೊಟ್ಟೆರ ಬೆಳ್ಯಪ್ಪನವರು.

ಕಿಗ್ಗಟ್ಟುನಾಡು. 1. ಚೋಳಿರ ಕರುಂಬೈಯ್ಯನವರು, 2. ಚೆಪ್ಪುಡಿರ ಪೂವೈಯ್ಯನವರು, 3 ಸಿ. ಟಿ. ಕುಶಾಲಪ್ಪನವರು, 4. ಒಮ್ಮಣ ಮಾದಪ್ಪನವರು, 5. ಪಿ. ಗಣಪೈಯ್ಯನವರು, 6 ಅಜ್ಜಮಾಡ ಮಾದಪ್ಪನವರು, 7. ಅಜ್ಜಿಕುಟ್ಟಿರ ಪೊನ್ನಪ್ಪನವರು, 8. ತೀತಿರ ಅಪ್ಪೈಯ್ಯನವರು.

ಸಂಜರಾಜಪಟ್ಣ. 1. ಗುಡಿಹಟ್ಟಿ ಮರಿಯಪ್ಪನವರು, 2. ಚೌಡ್ಲು ಕಾಳಪ್ಪನವರು, 3. ಕೊತ್ತನಳ್ಳಿ ದೊಣ್ಣಾಂಡ ಪೊನ್ನಪ್ಪನವರು, 4. ಬಾಚಿನಾಡ ಕುಶಾಲಪ್ಪನವರು, 5, ಕರ್ಕಳ್ಳಿ ಪುಟ್ಟೈಯ್ಯನವರು, 6. ಗರಗಂದೂರು ಸೋಮೈಯ್ಯನವರು, 7 ಮೈಸೂರ ರಾಮೈಯ್ಯ ಶೆಟ್ಟರು, 8. ಇ. ಯಸ್. ಶಂಕರೈಯ್ಯನವರು.

24. ಈ ವರ್ಷ ಚಂದಾ ವಸೂಲ್ ಮಾಡಿದವರಿಗೆ ಶೇಕಡ 25ರಂತೆಯೂ ಮೆ. ಜಿ ಕುಟ್ಟಪ್ಪನವರು ಮಿದ್ದಾಗಿ ವಸೂಲ್ ಮಾಡಿದ ಮೊಬಲಗಿನ ಮೇಲೆ ಶೇಕಡ 25ರಂತೆಯೂ ಕಮಿಶನ್ ಕೊಡಬೇಕೆಂತ ಮಂಜೂರಾಯಿತು.

25. ಸ್ವಂತ ಜಾಗದಿಂದ ಗಂಧ ಕಿತ್ತು ತೆಗೆದುಕೊಂಡು ಹೋಗುವಾಗ ಫಾರೆಸ್ಟ್ ಇಲಾಖೆಯವರು ರಶೀದಿ ಕೊಡದೆ ತೆಗೆದುಕೊಂಡು ಹೋಗುತ್ತಾರೆಂತಲೂ ರಶೀದಿಕೊಟ್ಟೇ ತೆಗೆದುಕೊಂಡು ಹೋಗುವಂತೆ ಹುಕ್ಕುಂ ಮಾಡಬೇಕಾಗಿಯೂ ಕಮಿಶನರಿಗೆ ತಿಳಿಸಬೇಕು.

ಮಂಜೂರಾಯಿತು.

26. ರಿಡೀಮ್ ಜಾಗದಿಂದ ಗಂಧ ಕಿತ್ತಾಗ ಗಂಧದ ಕ್ರಯ ಮೊದಲೇ ಸರಕಾರಕ್ಕೆ ಸಂದಿದೆಯೆಂಬದನ್ನು ಮಾಲೀಕನು ರುಜುವಾತುಪಡಿಸಬೇಕೆಂತ ಇಲಾಖೆಯವರು ಮಾಡುವದು ತಪ್ಪೆಂತಲೂ ಸರಕಾರದವರೇ ಗಂಧಕ್ಕೆ ಕ್ರಯಕೊಡಲಿಲ್ಲವೆಂಬದನ್ನು ರುಜುವಾತುಪಡಿಸಬೇಕೆಂತ ಕಮಿಶನರನ್ನು ಕೇಳಿಕೊಳ್ಳಬೇಕು.

ಪಾಸಾಯಿತು.

27. ದರ್ಖಾಸ್ತು ಜಾಗದಲ್ಲಿ ಭೂಮಿ ಮಾಡಿದಾಗ ಯಾವ ಶರತ್ತು ಇಲ್ಲದೆ ಬಾಣೆಕೊಡಿಸಬೇಕು.

ಪಾಸಾಯಿತು.

28. ಜಮೀನ್‌ದಾರರ ಸಂಘದ ಉದ್ದೇಶಗಳಲ್ಲಿ ಇಷ್ಟರ ರೆಗೆ ಸರಕಾರಕ್ಕೆ ನಮ್ಮ ಹಾಲುಹವಾಲುಗಳನ್ನು ಹೇಳಿಕೊ ವಷ್ಟರ ಮಟ್ಟಿಗೆ ಇಷ್ಟು ವರ್ಷಗಳು ಕೆಲಸಮಾಡಿದ್ದಾದ ದಿಂದಲೂ ಮತ್ತು ದೇಶದ ಅಭಿವೃದ್ಧಿಗೆ ಮಾಡಬೇಕಾ [illegible]ಸಗಳನ್ನು ಸಂಘವು ಮಾಡದೆ ಇರುವ ಕಾರಣ ಸಂಘದ [illegible]ಗಳಿಂದ ಕೆಳಗಣ 5 ನಿಯಮಗಳನ್ನು ತೆಗೆದು ಹಾಕಿ [illegible] ಚಂದಾಹಣ ಒಂದು ರೂಪಾಯಿಯನ್ನು ನಾಲ್ಕಾ [illegible]ಸಬೇಕು

ಸುವಿ[illegible] ಚರ್ಚೆ ನಡೆದನಂತರ ವಾಪಾಸು ತೆಗೆದುಕೊಂ ಡುಗಳ್ಲದಿದ್ದರೂ [illegible] [illegible]ಸುತ್ತಿರುವುದೂ ನಮ್ಮ [illegible]ಕೆಲಸಗಳನ್ನು ಮಾಡದೆ ಹಣ [illegible]ಸುತ್ತಿರುವುದೂ ಶೋಚನೀ[illegible] ಹಣದ ಅವಶ್ಯವಿಲ್ಲ ಧೂಮಪಾನ ಮತ್ತು ಮದ್ಯಪಾನಗಳ[illegible]ಡಬೇಕಾದ ಕೆಲ [illegible]ಗಲು ಅವಶ್ಯವಾದ ಗುಣಗಳೆಂದು [illegible]ಂದಲೂ ಇನ್ನು [illegible]ಗಳಿಂದ ಉಂಟಾಗುತ್ತಿರುವ [illegible] ಉದ್ದೇ[illegible]

ಶವ ಚರ್ಚೆಯೇ ಆದ್ದರಿಂದಲೂ ಠರಾವು ವಾಪಾಸು ತೆಗೆದುಕೊಳ್ಳಲ್ಪಟ್ಟದ್ದಾಗಿದೆ.

29. ಪೊನ್ನಂಪೇಟೆ ಬಳಿ ಅರಳು ಗುಡ್ಡೆಯಿಂದ ಧನುಗಾಲ, ಬಾಳೆಲೆ, ಮಾಯಮುಡಿ, ನೊಕ್ಯಕ್ಕಾಗಿ ತಿತಿಮತಿಗೆ ಒಂದು ರಸ್ತೆ ಮಾಡಿಕೊಡಬೇಕು.

ಮಂಜೂರಾಯಿತು.

30. ಲಕ್ಷ್ಮಣ ತೀರ್ಥಕ್ಕೆ ಅಣೆಕಟ್ಟುಕಟ್ಟಿ ನಾಲ್ಕೇರಿ ಕೋತೂರು, ಕುಮಟೂರು, ಬಾಡಗ, ಕುಟ್ಟಗೇರಿ ಕಾನೂರು ಗ್ರಾಮದ ಗದ್ದೆಗಳಿಗೆ ನೀರು ಸರಬರಾಯಿ ಮಾಡಿಕೊಡಬೇಕು.

ಪಾಸಾಯಿತು.

31. ಕುಟ್ಟ, ಮಂಚಳ್ಳಿ, ಕುರ್ಚಿ, ಬೀರುಗ, ತೆರಾಲು, ಬಿರುನಾಣಿ, ಪರಕಟಗೇರಿ ಗ್ರಾಮಗಳ ಪಕ್ಕಿನಲ್ಲಿ ಇರುವ ಫಾರೆಸ್ಟ್ ಬೌಂಡ್ರಿಯು ರೈತರಿಗೆ ತುಂಬಾ ತೊಂದರೆಯನ್ನುಂಟುಮಾಡುವದರಿಂದ 2ಮೈಲು ದೂರಕ್ಕೆ ಹಿಂದಕ್ಕೆ ಹಾಕಬೇಕು.

ಮಂಜೂರಾಯಿತು.

32. ವ್ಯವಸಾಯದ ಜಮೀನುಗಳಿಗೆ ಸಮೀಪವಿರುವ ಎಲ್ಲಾ ರಿಜರ್ವ್ ಫಾರೆಸ್ಟ್ ಬೌಂಡ್ರಿಯನ್ನು ದೂರಕ್ಕೆ ತೆಗೆದುಹಾಕಬೇಕು,

ಅಧ್ಯಕ್ಷರಿಂದ ಸೂಚಿಸಲ್ಪಟ್ಟು ಮಂಜೂರಾಯಿತು.

33. ಹುದಿಕೇರಿಯಲ್ಲಿ ಕಂದಾಯದ ಹುಗಾಮಿನಲ್ಲಿ ಒಬ್ಬ ಶ್ಯಾನುಭೋಗನನ್ನು ಇಟ್ಟು ಕಂದಾಯ ವಸೂಲ್ ತೆಗೆದುಕೊಳ್ಳುವಂತೆ ಮಾಡಿಕೊಡಬೇಕು.

ಪಾಸಾಯಿತು.

34 ಕರೆಗಾಡು ವ್ಯಾಪಾರಿಯಾದರೂ ಕಡಿಯುವ ಹಕ್ಕನ್ನು ಕೊಡಬೇಕು ಪ್ರತ್ಯೇಕವಾಗಿ ಅರ್ಜಿಬರಕೊಂಡರೆ ಪಡೆಬಹುದೆಂಬ ಹುಕುಂ ತೃಪ್ತಿಕರವಲ್ಲ. ಸಾಧಾರಣವಾಗಿ ಈ ಹಕ್ಕನ್ನು ಕೊಡಬೇಕು.

ಪಾಸಾಯಿತು.

3.. ಟಕಾವಿ ಸಾಲಕ್ಕೆ ವಾಯಿದೆ ಕೊಟ್ಟಾಗ ಬಡ್ಡಿ ವಸೂಲ್ ಮಾಡುವದರಲ್ಲಿ ಅಕ್ರಮವಿದೆ. ಅದನ್ನು ಸರಿಪಡಿಸಿ ಹೆಚ್ಚಾಗಿ ವಸೂಲ್‌ಮಾಡಲ್ಪಟ್ಟ ಹಣವನ್ನು ವಾಪಸು ಕೊಡಬೇಕು.

ಚರ್ಚೆ ನಡೆದು ಕಮಿಟಿಗೆ ಬಿಡಬೇಕೆಂತ ತೀರ್ಮಾನವಾಯಿತು.

36. ಮಡಿಕೇರಿ ಮೂರ್ನಾಡು ರಸ್ತೆಯಿಂದ ಹಾಕತ್ತೂರು ಕಟ್ಟೆಮಾಡಿಗಾಗಿ ಸಿದ್ದಾಪುರಕ್ಕೆ ರಸ್ತೆಮಾಡಿ ಕೊಡಬೇಕಾಗಿ ಸಂಘವು ಪುನಃ ಕೇಳಿಕೊಳ್ಳುತ್ತದೆ.

ಮಂಜೂರಾಯಿತು.

37. "ಕೊಡಗು" ಕಂಪೆನಿಗೆ ಕೊಟ್ಟಸಾಲವನ್ನು ಕಮಿಟಿಯವರು ಜನರಲ್ ಬಾಡಿಯ ಅನುಮತಿ ಇಲ್ಲದೆ ಕೊಟ್ಟದ್ದರಿಂದ ಅದನ್ನು ಕೂಡಲೇ ವಾಪಾಸು ಪಡೆಯಬೇಕು.

ನಾಪಾಸಾಯಿತು.

38 ಮೆ. ಬೇರೆರ ಚಿಣ್ಣಪ್ಪನವರ ಅಪೇಕ್ಷೆ ಮೇರೆ ನ್ಯಾಶನಲ್ ಸ್ಕೂಲಿನ ವಿಷಯ ನಡೆದ ಕರೆಸ್‌ಪಾಂಡೆನ್ಸನ್ನು ಸಭೆಯ ಮುಂದೆ ಇಡಲಾಯಿತು.

39 ಕಳೆದ ವರ್ಷದ ಪ್ರೋಸೀಡಿಂಗ್ಸನ್ನು ಕಿಗ್ಗಟ್ಟುನಾಡು ತಾಲೋಕು ಸ್ವಾಗತಮಂಡಲಿಯವರು ರೂಪಾಯಿಯಲ್ಲಿ ಆರಾಣೆ ಕೊಟ್ಟರೆ ಪ್ರಿಂಟ್ ಮಾಡಿಸಬೇಕು.

ಚರ್ಚೆ ನಡೆದು ಬಹುಮತದಿಂದ ನಾಪಾಸಾಯಿತು.

40. ಸಂಘದ ಆಶ್ರಯದಲ್ಲಿ ಒಂದು ಸ್ವಯಂಸೇವಕರ ದಳವನ್ನು ಏರ್ಪಡಿಸಬೇಕು.

ಪಾಸಾಯಿತು.

41. ಮೇಲಿನ (40ನೇ) ಠರಾವನ್ನು ಜಾರಿಮಾಡಲಿಕ್ಕೆ ಕೆಳಗಿನವರ ಒಂದು ಉಪಸಭೆಯು ನೇಮಕವಾಯಿತು.

ಮೆ. ಕೆ. ಪಿ. ಚಿಣ್ಣಪ್ಪನವರು.
ಮೆ. ಬಿದ್ದಂಡ ಐಯ್ಯಪ್ಪನವರು.
ಮೆ. ಪಾಂಡಂಡ ಮುತ್ತಣ್ಣನವರು.
ಮೆ. ಕೊಳ್ಳಿಮಾಡ ಕರುಂಬೈಯ್ಯನವರು.
ಮೆ. ಸಿ. ಟಿ. ಕುಶಾಲಪ್ಪನವರು.

ಪಾಸಾಯಿತು.

42. ಸಂಘದ ಮೀಟಿಂಗಿನ ರಿಕಾರ್ಡುಗಳನ್ನು ಕನ್ನಡದಲ್ಲಿಡಬೇಕು.

ಪಾಸಾಯಿತು.

43. ಸಂಘದ ವಾರ್ಷಿಕ ಮಹಾ ಸಭೆಗೆ ಗ್ರಾಮಗಳಿಂದ ಪ್ರತಿನಿಧಿಗಳನ್ನು ಚುನಾಯಿಸುವ ಪದ್ಧತಿಯನ್ನು ಅನುಸರಿಸಬೇಕು.

ಚರ್ಚೆ ನಡೆದು ಬಹುಮತದಿಂದ ನಾಪಾಸಾಯಿತು.

44. ಸಂಪಾಜೆ ನಾಡಿನಲ್ಲಿ ಕಾಡಾನೆಗಳ ಕಾಟ ಹೆಚ್ಚಾಗಿರುವದರಿಂದ ಲೈಸೆನ್ಸ್ ಇರುವ ರೈತರು ಕೋವಿ ತೆಗೆದುಕೊಂಡು ಫಾರೆಸ್ಟ್ ಒಳಗೆ ನುಗ್ಗಿ ಆನೆಗಳನ್ನು ಓಡಿಸುವ ಹಕ್ಕು ಕೊಡಬೇಕು.

ಪಾಸಾಯಿತು.

45. ಸಂಪಾಜೆ ಗ್ರಾಮದ ರೈತರು ಭೂಮಿವ್ಯವಸಾಯಕ್ಕೆ ಬೇಕಾದ ಕಾಡುಮರಗಳ ಸೊಪ್ಪು ತರಗೆಲೆ ಎಣ ಸಾದೆ ತರಲಿಕ್ಕೂ ಮತ್ತು ದನಗಳು ನಿರಾತಂಕವಾಗಿ ಮೇಯಲಿಕ್ಕೂ ರಿಜರ್ವ್ ಫಾರೆಸ್ಟಿನಲ್ಲಿ ಬಿಡಬೇಕು.

ಪಾಸಾಯಿತು.

46. ಕಂದಾಯದ ಕಂತು ಫೆಬ್ರವರಿ, ಮಾರ್ಚ ಇರುವದನ್ನು ಮೂರು ಕಂತು ಮಾಡಿ ಏಪ್ರಿಲಿಗೂ ಒಂದು ಕಂತು ಇಡಬೇಕು.

ಈ ಠರಾವು ಚರ್ಚೆಯಾಗಿ ಈಗ ಇರುವ ರೀತಿಯನ್ನು ಬದಲಾಯಿಸುವದು ಬೇಡವೆಂತ ತೀರ್ಮಾನವಾಯಿತು.

47. ಅಡಿಕೆ ಕಳವು ಹೆಚ್ಚಾಗಿ ಇರುವದರಿಂದ ಅಡಿಕೆಯನ್ನು ಸಾಗಿಸಲಿಕ್ಕೆ ಮಾಲೀಕರಿಂದ ರಹದಾರಿ ತೆಗೆದುಕೊಳ್ಳಬೇಕೆಂತ ಕಾನೂನು ಮಾಡಬೇಕು.

ಪಾಸಾಯಿತು,

48. ಹಳೇ ತಾಲೋಕು ಸ್ಥಳಗಳಲ್ಲೆಲ್ಲಾ ಲೋವರ್ ಸೆಕಂಡರಿ ಶಾಲೆಗಳನ್ನೇ ಮಾಡಿಕೊಡಬೇಕು.

ಹೈಯರ್ ಎಲಿಮೆಂಟರಿ ಶಾಲೆಗಳು ತೃಪ್ತಿಯಿಲ್ಲವೆಂತ ವಾದ ನಡೆದು ಪಾಸಾಯಿತು.

49. ಪೊನ್ನಂಪೇಟೆ, ಹುದಿಕೇರಿ, ನಾಪೋಕ್ಲು, ಮೂರ್ನಾಡು, ವೀರರಾಜಪೇಟೆಗಳಲ್ಲಿ ಬೀಜದ ಹೋರಿಗಳನ್ನು ಬಿಡಬೇಕು. ಇದು ಸಾಧ್ಯವಾಗುವದಕ್ಕಾಗಿ ಬೀಜದ ಹೋರಿಯನ್ನು ಬೆಳೆಸುವ ಒಂದು ಫಾರಮನ್ನು ಏರ್ಪಡಿಸಬೇಕು.

ಮಂಜೂರಾಯಿತು.

50. ಹುದಿಕೇರಿ, ಪೊನ್ನಂಪೇಟೆ ಗರ್ಲ್ಸ ಸ್ಕೂಲ್‌ಗಳಲ್ಲಿ ಇಂಗ್ಲಿಷ್ ಕಲಿಸಬೇಕು

ಚರ್ಚೆ ನಡೆದು ಓಟಿನಲ್ಲಿ ಸರಿಸಮವಾಗಿ ಅಧ್ಯಕ್ಷರ ಓಟಿನಿಂದ ನಾಪಾಸಾಯಿತು.

51. ಹುದಿಕೇರಿ, ಶಾಕೋಟೆಪರಂಬು, ಕೊಟ್ಟೂರು, ಮೂರ್ನಾಡು, ನಾಪೋಕ್ಲುಗಳಲ್ಲಿ ಸ್ಕೂಲ್ ಮಾಸ್ಟರುಗಳಿಗೆ ಇಳಕೊಳ್ಳಲಿಕ್ಕೆ ಸರಕಾರವು ಮನೆಗಳನ್ನು ಕಟ್ಟಿಸಿಕೊಡಬೇಕು.

ಪಾಸಾಯಿತು.

52. ಜೋಡಿ ಭೂಮಿಗಳು ಎರಡು ತರದವು ಇರುವದರಿಂದಲೂ, ಅಂಥಾ ಭೂಮಿಗಳ ಹಕ್ಕುದಾರಿಕೆ ವಿಷಯದಲ್ಲಿ ಅಲ್ಲಲ್ಲಿ ತಕರಾರುಗಳು ಬರುತ್ತಿರುವುದರಿಂದಲೂ, ಜೋಡಿ ಭೂಮಿಗಳ ಹಕ್ಕುದಾರಿಕೆಯನ್ನು ಅಜಮಾಯಿಸಲಿಕ್ಕೆ ಒಂದು ಕಮಿಟಿಯನ್ನು ಸರಕಾರವು ನೇಮಿಸಬೇಕು.

ಪಾಸಾಯಿತು,

53. ಕೊಡಗಿಗೆ ಬಂದ ಅಥವ ಬರುವ ರಾಜಕೀಯ ಉಪನ್ಯಾಸಕರನ್ನು ಉಪನ್ಯಾಸಮಾಡಲು ಬಿಡುವದಿಲ್ಲವೆಂಬ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಸಾಧಾರಣ ಪದ್ಧತಿಯನ್ನು ಸಂಘವು ಬಲವಾಗಿ ಆಕ್ಷೇಪಿಸುತ್ತದೆ.

ಮಂಜೂರಾಯಿತು.

54. ಒಂದು ಲೈಬ್ರರಿಯನ್ನು ಇಡಬೇಕೆಂಬ ಕಳೆದ ವರುಷದ ಠರಾವನ್ನು ಜಾರಿಗೆ ತರಬೇಕು.

ಪಾಸಾಯಿತು,

55 ಸಂಘದ ಪ್ರಚಾರಕರನ್ನು ನೇಮಿಸುವ ಶರತ್ತುಗಳಿಗೆ ಅವರು ಹದಿನೈದು ದಿನಗಳಿಗೊಂದು ರಿಪೋರ್ಟ ಕಳುಹಿಸಬೇಕೆಂಬ ಶರತ್ತನ್ನು ಸೇರಿಸಬೇಕು.

ಮಂಜೂರಾಯಿತು.

56. ಈ ಲಾಗಾಯಿತು ಎರಡು ತಿಂಗಳೊಳಗೆ ಪತ್ರಿಕೆಯಲ್ಲಿ ಪ್ರಕಟಿಸಿ ಪ್ರಚಾರಕರನ್ನು ನೇಮಿಸಬೇಕು.

57. ಎರಡು ತಿಂಗಳ ವರೆಗೆ ಮೆ. ಚಂಗಂಡ ಕುಟ್ಟಪ್ಪನವರೂ ಉದಿಯಂಡ ಮಾಚೈಯ್ಯನವರೂ ಪ್ರಚಾರಕರಾಗಿರಬೇಕು.

ಪಾಸಾಯಿತು,

58. ಕಮೀಷನರು ಇನ್‌ಸ್ಪೆಕ್ಷನ್ ಬಂಗ್ಲೆಯನ್ನು ಕೊಟ್ಟದ್ದಕ್ಕೂ ಸಾರಾಯಿ ಅಂಗಡಿ ಮುಚ್ಚಿದ್ದಕ್ಕೂ, ಶಾಲಾ ಇನ್ಸ್‌ಪೆಕ್ಟರು ಶಾಲಾ ಕಟ್ಟಡಗಳನ್ನು ಕೊಟ್ಟದ್ದಕ್ಕೂ ಅವರಿಗೆ ವಂದನೆಗಳನ್ನು ಕಳುಹಿಸಬೇಕು.

ಪಾಸಾಯಿತು,

59. ಕೋರ್ಟುಕಚೇರಿಗಳಲ್ಲಿ ಕಕ್ಷಿಗಾರರನ್ನು ಮತ್ತು ಸಾಕ್ಷಿಯರನ್ನು ಕರೆಯುವಾಗ ಬಹುವಚನದಿಂದ ಕರೆಯಬೇಕು.

ಮಂಜೂರಾಯಿತು.

60. ಸರಾಧೀನಕ್ಕೆ ಬಾಣೆಜಾಗಕೊಡುವ ಸಮಯದಲ್ಲಿ ಟಿಂಬರ್‌ಬಿಲ್ಲು ವಸೂಲ್ಮಾಡುವದು ರೆವಿನ್ಯೂ ರೆಗ್ಯುಲೇಶನ್ 214ಕ್ಕೆ ವಿರೋಧವಾಗಿದೆ. ಮರ ಮಾರಾಟ ಕಾಲದಲ್ಲಿ ಮಾತ್ರ ಸಪ್ರು ರೂಲಿನಲ್ಲಿ ಹೇಳುವಮೇರೆ ಮರದ ಕ್ರಯ ವಸೂಲ್ಮಾಡುವಂತೆ ಸರಕಾರದವರನ್ನು ಕೇಳಿಕೊಳ್ಳಬೇಕು.

ಪಾಸಾಯಿತು

ಮೆ. ಕೆ. ಅಪ್ಪೈಯ್ಯನವರು ತನ್ನನ್ನು ಅಧ್ಯಕ್ಷನನ್ನಾಗಿ ಚುನಾಯಿಸಿದ್ದಕ್ಕೆ ವಂದಿಸಿ ದೇಶದವರೆಲ್ಲರೂ ಸಂಘಕ್ಕೆ ಸಹಾಯಕರಾಗ ಬೇಕಂತ ಕೇಳಿಕೊಂಡರು. ಸ್ವಾಗತ ಮಂಡಲಕ್ಕೆ ಸ್ವಯಂಸೇವಕರಿಗೂ ಅಭಿವಂದನೆಗಳು ಸೂಚಿಸಲ್ಪಟ್ಟವು.

ಸ್ವಾಗತಮಂಡಲದ ಅಧ್ಯಕ್ಷರು ಜವಾಬು ಕೊಡುವದರಲ್ಲಿ ಲಿಂಗಾಯತ ಮೆಂಬರುಗಳಿಗೆ ಊಟಉಪಚಾರ ಮಾಡಲು ಸಾಧ್ಯವಾಗದೆ ಇರಲು ಮಡಿಕೇರಿಯಿಂದ ಅಡಿಗೆಯವರನ್ನು ಕಳುಹಿಸುತ್ತೇವೆಂದವರು ಕಳುಹಿಸದೆ ಇದ್ದದ್ದೇ ಕಾರಣವೆಂತಲೂ, ಕ್ಷಮಿಸಬೇಕೆಂತಲೂ ಕೇಳಿಕೊಂಡರು.

ಅಧ್ಯಕ್ಷರು ಉಪಸಂಹಾರದ ಭಾಷಣ ಮಾಡಿ ಸಭೆಯನ್ನು ಬರ್ಖಾಸ್ತು ಮಾಡಿದರು;

ವಿಮರ್ಶೆ.

"ದಿ ವಲಂಟಿಯರ್" ಎಂಬ ಮಾಸಿಕ ಪತ್ರವು ವಿನಯ ಪುರಸ್ಸರವಾಗಿ ನಮ್ಮಿಂದ ಸ್ವೀಕೃತವಾಯಿತು. ಇದರ ಸಂಪಾದಕರಾದ ಮಿ. ಹರ್ಡೀಕರರು ಸ್ವದೇಶಾಭಿಮಾನಿಗಳು ಮತ್ತು ಇವರ ಲೇಖನಗಳು ಸ್ಕೌಟ್‌ಗಳಿಗಲ್ಲದೆ, ಇತರರಿಗೂ ಪ್ರಿಯವಾದುವು. ಸಮಗ್ರ ಭಾರತ ಖಂಡದ ಸ್ಕೌಟ ಛಳವಳವನ್ನು ಕುರಿತ ಲೇಖನಗಳು ಇದರಲ್ಲಿ ಬರುತ್ತವೆ. ನಮಗೆ ಬಂದಿರುವ ಎಪ್ರಿಲ್ ತಿಂಗಳ ಪತ್ರಿಕೆಯಲ್ಲಿ ಶ್ರವಣ ಬೆಳಗೊಳದಲ್ಲಿ ಜೈನ ಕಾನ್‌ಫರೆನ್ಸು ಸಮಯಕ್ಕೆ ವಾಲಂಟಿಯರರು ಮಾಡಿದ ಸೇವೆಯ ವರ್ಣನೆಯೂ, ಹಿಂದೂ ದೇಶದಲ್ಲಿನ ಸ್ಕೌಟ ಛಳವಳವನ್ನು ಕುರಿತ ಲೇಖನವೂ, ಹಿಂದೂಸ್ಥಾನಿ ಸೇವಾದಳದ ಕಾನೂನು ಕಟ್ಟಳೆಗಳೂ ಇಂಗ್ಲೀಷು ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಹಿಂದಿಯಲ್ಲಿ ಎರಡು ಲೇಖನಗಳಿವೆ. ಸ್ವಾರ್ಥತೆಯಿಂದ ಹಿಂದೂ ದೇಶವು ಅವನತಿಯನ್ನು ಹೇಗೆ ಹೊಂದಿತೆಂದು ಮಿ. ಸಹಸ್ರಬುದ್ಧೇಯವರು ತಮ್ಮ ಲೇಖನದಿಂದ ತೋರಿರುವರು. ಗೌತಮ ಸನ್ಯಾಸಿಯ ಬರವಣಿಗೆಯಲ್ಲಿ ಹೆಚ್ಚು ರಸವಿದೆ. ಕನ್ನಡಿಗರೂ, ಮತ್ತು ಭಾರತೀಯರೂ ಈ ಪತ್ರಿಕೆಗೆ ಆಶ್ರಯವನ್ನು ನೀಡಲು ಹಿಂಜರಿಯಲಾರರು. ಇವರು ಈ ಪತ್ರಿಕೆಯನ್ನು ಚಿರಕಾಲ ನಡೆಸಲೆಂದು ಹಾರೈಸುತ್ತೇವೆ.

ಆಧ್ಯಾತ್ಮ ಪ್ರಕಾಶ.

ಇದೊಂದು ಆಧ್ಯಾತ್ಮೀಯ ಮಾಸಿಕ ಪತ್ರ

ಮಿ. ಬಿ. ಸುಬ್ಬರಾಯರು ಸಂಪಾದಕರು. ಚಂದಾ ಮೊಬಲಗು, ಹಾಸಲು ಸೇರಿ ರೂಪಾಯಿ 3. ವಿಳಾಸ;—2ನೇ ಬೀದಿ, ಚಾಮರಾಜಪೇಟೆ, ಬೆಂಗಳೂರು ಸಿಟಿ.

"ಈ ಪತ್ರಿಕೆಯಲ್ಲಿ ಸುಪ್ರಸಿದ್ಧ ಭಾಷ್ಯಕಾರರ ಪ್ರಸ್ಥಾನತ್ರಯ ಭಾಷ್ಯಗಳು, ಪ್ರಕರಣಗಳು, ಅಧ್ಯಾತ್ಮ ಸಂಬಂಧವಾದ ಕಥೆ, ಕಾದಂಬರಿ, ಕೀರ್ತನೆ, ನಾಟಕ, ಕರ್ಮ ಭಕ್ತಿ ವೈರಾಗ್ಯ ಇವುಗಳ ವಿಚಾರ; ಸಾಧುಗಳ ಚರಿತ್ರೆ ಇತ್ಯಾದಿ ಲೇಖನಗಳು ಪ್ರಕಟವಾಗುವುವು" ಕರ್ನಾಟಕ ಪ್ರಾಂತ್ಯದಲ್ಲಿ ಇಂಥ ಪತ್ರಿಕೆಗಳು ನಮಗೆ ಗೋಚರವಿರುವುದು ಅಪರೂಪ. ಧರ್ಮಾಭಿಗಳು ಮಾತ್ರವಲ್ಲದೆ, ಇತರ ಸಾಮಾನ್ಯ ಜನಗಳು ಈ ಪತ್ರಿಕೆಯಿಂದ ಲಾಭವನ್ನು ಹೊಂದಬಹುದು. ಭಾಷೆಯು ಸರಳವಾಗಿಯೂ, ಶೈಲಿಯೂ ಇಂಪಾಗಿಯೂ ಇವೆ. ಇಂಥ ಪತ್ರಿಕೆಗಳನ್ನು ಓದುವುದರಿಂದ ಮನುಷ್ಯನು ಇಹದಲ್ಲಿ ಮಾನವನ್ನೂ, ಪರದಲ್ಲಿ ಮೋಕ್ಷವನ್ನೂ ಸಂಪಾದಿಸುವನು. ಆದುದರಿಂದ ಇದಕ್ಕೆ ಯೋಗ್ಯ ಪೋಷಣೆ ದೊರಕಲೆಂದು ಅಪೇಕ್ಷಿಸುತ್ತೇವೆ.

ವರ್ತಮಾನ ಸಂಗ್ರಹ.

ಒಳದೇಶ.

ಮಿ. ಪಾಂಡಂಡ ಸೋಮಪ್ಪನವರು ಮದ್ರಾಸು ಯುನಿವರ್ಸಿಟಿಯ ಯಲ್. ಎಮ್. ಅಂಡ್ ಎಸ್. ಪರೀಕ್ಷೆಯಲ್ಲಿ ತೇರ್ಗಡೆಯಾದದನ್ನು ತಿಳಿಯಲು ಸಂತೋಷಪಡುತ್ತೇವೆ.

ಮಡಿಕೇರಿ ಬೆಂಚ್‌ಕೋರ್ಟ ಮೇಜಿಸ್ಟ್ರೇಟರಾಗಿದ್ದ ಮಾ. ರಾ. ಶ್ರೀ. ಗಳಾದ ರಾ. ಬಾ. ಕೋದಂಡ ಅಪ್ಪಯ್ಯನವರು (ಚೇರ್‌ಮೇನ್) ಅಸ್ಟಾರಂಡ ಅಪ್ಪಚ್ಚನವರು, ಕೊಂಡೇರ ತಿಮ್ಮಯ್ಯನವರು, ಅರ್. ಸಿ. ಮಂಜಯ್ಯನವರು ಮತ್ತು ಕೋದಂಡ ಎ. ತಿಮ್ಮಯ್ಯನವರು, ಇವರುಗಳ ಈ ಉದ್ಯೋಗದ ಅವಧಿಯನ್ನು 1925ನೇ ಎಪ್ರಿಲ್ 15ರಿಂದ ಇನ್ನೂ ಐದು ವರ್ಷಗಳವರೆಗೆ ಮುಂದರಿಸಲಾಗಿದೆ.

ಟೆರಿಟೋರಿಯಲ್ ಪಟಾಲಮಿನ ಸ್ಪೋರ್ಟ್ಸ್ ತಾ. 6ರಲ್ಲು ಸಾಯಂಕಾಲ 4 ಗಂಟೆಯಿಂದ 6½ ಗಂಟೆವರೆಗೆ ಮ್ಯಾನ್ಸ್ ಮೈದಾನದಲ್ಲಿ ನಡೆಯಿತು. ಗೆದ್ದವರಿಗೆ ಅನೇಕ ಇನಾಮುಗಳೂ ಮೂರು ವರುಷಗಳ ಹಿಂದೆ ಕೊಡಗಿನ ಕೆಲವು ಮಹನೀಯರಿಂದ ಕೊಡಲ್ಪಟ್ಟ ಬೆಳ್ಳಿ ಬಟ್ಟಲುಗಳೂ ಮಿಸೆಸ್ ಟಾಸ್ಕರರವರಿಂದ ಕೊಡಲ್ಪಟ್ಟವು. ಮಿ. ರಸೂಲ್‌ಖಾನ್ ಸಾಹೇಬ್ ಯಂ. ಎಲ್. ಸಿ. ಯವರು ಒಂದು ಬಟ್ಟಲನ್ನು ಕೊಡುತ್ತೇನೆಂದು ಹೇಳಿದರು. ಆಮಂತ್ರಣ ಕಳುಹಿಸಲ್ಪಟ್ಟಿದ್ದ ಮಹನೀಯರನೇಕರು (ಯೂರೋಪಿಯನರೂ ಹಿಂದೀಯರೂ) ನೆರೆದಿದ್ದರು. ಆಟ ಓಟಗಳ ಸಮಯದಲ್ಲಿ ನೆರೆದಿದ್ದವರಿಗೆ ತಿಂಡಿ ತೀರ್ಥಗಳು ಹಂಚಲ್ಪಟ್ಟವು. ಮಳೆಯು ಹನಿಕುತ್ತಾ ಇತ್ತು.

ನಾಪೋಕ್ಲು ಪೇಟೆ ಮತ್ತು ಸುತ್ತಮುತ್ತಲು 5 ಮೈಲು ದೂರದವರೆಗೆ ಬೆಂಚ್ ಮೇಜಿಸ್ಟ್ರೇಟರಾಗಿ ಮಾ. ರಾ. ಗಳಾದ ಕೋಡಿಮಣಿಯಂಡ ಮೊಣ್ಣಪ್ಪನವರು (ಚೇರ್‌ಮ್ಯಾನ್) ಮಾದಂಡ ಮಂದಣ್ಣನವರು, ನಡಿಕೇರಿಯಂಡ ನಂಜಪ್ಪನವರು, ಕುಂಜಿಟ್ಟಿ ಸುಬ್ಬಯ್ಯನವರು, ಬಿದ್ದಾಟಂಡ ಮಾದಪ್ಪನವರು, ಇವರು ಐವರನ್ನು 5 ವರುಷಗಳ ವರೆಗೆ ನೇಮಿಸಿರುವರು.

ಕೊಡಗು ವೆಸ್ಲಿಯನ್ ಮಿಶನಿನ ಸುಪರಿಂಟೆಂಡೆಂಟರಾಗಿದ್ದ ರೆವೆರೆಂಡ್ ಎಫ್. ಡಬ್ಲ್ಯು. ಸ್ಪೆನ್ಸರರವರು ಮೈಸೂರು ಮಿಶನ್ ಹೈ ಸ್ಕೂಲಿನ ಹೆಡ್ ಮಾಸ್ಟರರಾಗಿಯೂ, ಅಲ್ಲಿಯ ಹೆಡ್ ಮಾಸ್ಟರಾದ ರೆವೆರೆಂಡ್ ಪಿ. ಸಿ. ಬ್ರಾಂಟಾರವರು ಕೊಡಗಿಗೂ ವರ್ಗಾಯಿಸಲ್ಪಟ್ಟಿರುವರು. ಕಳೆದ ತಾರೀಖು 30ರಲ್ಲು ಮಿಶನ್‌ರವರು ಚರ್ಚಿನಲ್ಲಿ ರೆ. ಸ್ಪೆನ್ಸರರವರಿಗೆ ವಂದನೋಕ್ತಿಗಳನ್ನು ಅರ್ಪಿಸಿದರು. ರೆ. ಬ್ರಾಂಟಾರವರು 35—4—1925ರಲ್ಲು ಚಾರ್ಜ್ ತೆಗೆದುಕೊಂಡಿರುವರು,

'ಕೊಡಗು' ಆಫೀಸಿನ ಹುಡುಗನೊಬ್ಬನು ತಾರೀಖು 4ರಲ್ಲು ಮನಿಯಾರ್ಡರ್ ಮಾಡಲು ಹತ್ತತ್ತು ರೂಪಾಯಿಗಳ ಎರಡು ನೋಟುಗಳನ್ನು ಮನಿಯಾರ್ಡರ್ ಫಾರಮಿನೊಂದಿಗೆ ಜೇಬಿನಲ್ಲಿ ಹಾಕಿಕೊಂಡು ಪೋಸ್ಟಾಫೀಸಿನ ಕಿಟಕಿಬಳಿ ನಿಂತುಕೊಂಡಿರಲು ಹತ್ತಿರವಿದ್ದ ಬಿಲ್ಲವನೊಬ್ಬನು 10 ರೂಪಾಯಿಯ ಒಂದು ನೋಟನ್ನು ಮೆಲ್ಲಗೆ ತೆಗೆದುಬಿಟ್ಟದ್ದು ಕೂಡಲೇ ಹುಡುಗನಿಗೆ ತಿಳಿಯಲಾಗಿ ಪೋಲೀಸ್ ಸ್ಟೇಶನಿಗೆ ರಿಪೋರ್ಟುಮಾಡಿ ಬಿಲ್ಲವನನ್ನು ಹುಡುಕಿಸಿದಲ್ಲು ಅವನ ಶರೀರದಲ್ಲು ಏನೂ ಸಿಕ್ಕದೆ ಆ ವೇಳೆಯಲ್ಲು ಸ್ವಲ್ಪ ದೂರ ಹಾಕಿಬಿಟ್ಟಿದ್ದ ಅವನ ಕೊಡೆಯೊಳಗೆ ನೋಟು ಸಿಕ್ಕಿದ್ದರ ಮೇಲೆ ಕೇಸು ವಿಚಾರದಲ್ಲಿದೆ. ಜನರು ತುಂಬು ಇಲ್ಲದಂತ ಮಡಿಕೇರಿ ಪೋಸ್ಟಾಫೀಸಿನಲ್ಲೂ ಕಳ್ಳನ ಧೈರ್ಯವೇ !

ಪೊನ್ನಂಪೇಟೆ ಮತ್ತು ಸುತ್ತಮುತ್ತಲು 5 ಮೈಲಿಗೆ ಬೆಂಚ್ ಮೇಜಿಸ್ಟ್ರೇಟರಾಗಿ ಈ ಕೆಳಗಿನ 5 ಜನರನ್ನು 5 ವರುಷಗಳ ವರೆಗೆ ನೇಮಿಸಿರುವರು. ಮಾ. ರಾ ಗಳಾದ ಕೊಹಂದೇರ ಬೆಳ್ಯಪ್ಪನವರು (ಚೇರ್ ಮ್ಯಾನ್) ಮನೆಯಪಂಡ ನಾಣಯ್ಯನವರು, ಇಟ್ಟೀರ ಪೊನ್ನಪ್ಪನವರು, ಪುಚ್ಚಿಮಾಡ ಕುಟ್ಟಪ್ಪನವರು ಮತ್ತು ಚೆಪ್ಪುಡೀರ ಬೆಳ್ಯಪ್ಪನವರು.

ದೇಶದಲ್ಲಿ ಮಳೆಗಾಲವು ಪ್ರಾರಂಭವಾದಂತೆಯೇ ಕಾಣುತ್ತದೆ. ಪ್ರತಿನಿತ್ಯ ಇಲ್ಲದಿದ್ದರೂ ಎರಡು ಮೂರು ದಿನಕ್ಕೊಂದಾದರೂ ಮಳೆ ಹೊಡೆಯುತ್ತಾ ಇದೆ. ಸೂರ್ಯನ ದರ್ಶನವೂ ಕಡಿಮೆಯಾಗುತ್ತಿದೆ. ಮಳೆಯು ಇಷ್ಟು ಬೇಗನೆ ಶುರುವಾದುದರಿಂದ ಮಳೆಗಾಲವು ನಂಬುಗೆ ನಡೆಯುವುದೋ ಎಂಬ ಸಂಶಯ ತೋರುತ್ತದೆ.

ಓರಿಯಂಟಲ್ ಜೀವ ವಿಮೆಯ ಕಂಪೆನಿಯವರ ಏಜಂಟರಾದ ಮಿ. ಕೋಟೆರ ಚಿಣ್ಣಪ್ಪನವರು ಕಳೆದವರ್ಷ ನದ್ರಿ, ಕಂಪನಿಯ ಏಜನ್ಸಿಯನ್ನು ತೆಗದುಕೊಂಡು ತುಂಬಾ ಕೆಲಸಮಾಡಿದ್ದಕ್ಕಾಗಿ ಕಂಪನಿಯವರು ಅವರಿಗೆ ಒಂದು ಬೋನಸ್ಸು ಮೆಡಲನ್ನು ಕೊಟ್ಟಿರುತ್ತಾರಾಗಿ ತಿಳಿಯುತ್ತೇವೆ.

ಕೊಡಗು ಪತ್ರಿಕೆಯು ಹಳೆ ಚಂದಾದಾರರು ಹಣ ಕೊಡಲಿಕ್ಕಿರುವವರೂ, ಹೊಸದಾಗಿ ಚಂದಾದಾರರಾಗಬೇಕೆಂದಿರುವವರೂ ಮತ್ತು ಶೇರುಹಣ ಸಲ್ಲೆ ಮಾಡಲಿಕ್ಕಿರುವವರೂ, ಪಾವತಿ ಬಗ್ಗೆ ವೀರರಾಜಪೇಟೆ ಖಾದಿ ಭಂಡಾರದ ಮೇನೇಜರನವರಿಗೆ ಪಾವತಿಮಾಡುವಂತೆ ಕೋರಿಕೆ.

ಸೆಂಟ್ರಲ್ ಬ್ಯಾಂಕಿನಿಂದ ಸಾಲ ಹೊಂದಿಕೊಳ್ಳಬೇಕಾದವರು ಪ್ರಿಂಟಾದ ಅಪ್ಲಿಕೇಶನ್ ಫಾರಮಿನ ಕಲಮುಗಳನ್ನೆಲ್ಲಾ ಸರಿಯಾಗಿ ಬರಾಯಿಸಿ ಕಳುಹಿಸಬೇ ಬೇರೆ ಕಾಗದದಲ್ಲಿ ಅಪ್ಲಿಕೇಶನ ಕಳುಹಿಸಿದರೆ ಗಮನಕೊಡಲಾಗುವುದಿಲ್ಲವೆಂದು ಅದರ ಸೆಕ್ರೆಟರಿಯವರು ತಿಳಿಸಿರುವರು.

ಟೆರಿಟೋರಿಯಲ್ ಪಟಾಲಮಿನವರ ತರಬೇತು ತಾರೀ ತಾ. 8ರಲ್ಲಿ ಬಿಡುಗಡೆ ಮಾಡಲ್ಪಟ್ಟಿರುವರು;

ನೋಟೀಸು.

ದಕ್ಷಿಣ ಕೊಡಗಿನಲ್ಲಿ ಮದುವೆಕಾಗದ, ನೋಟೀಸು ಮತ್ತು ಬೇರೆ ಪ್ರಿಂಟಿಂಗ್ ಕೆಲಸ ಮಾಡಿಸಬೇಕೆಂದಿರುವವರು ದಯವಿಟ್ಟು ಎಲ್ಲಾ ಆರ್ಡರುಗಳನ್ನು ನಮ್ಮ ಏಜಂಟರಾದ ವೀರರಾಜಪೇಟೆ ಖಾದಿಭಂಡಾರದ ಮೇನೇಜರವರಿಗೆ ಕೊಟ್ಟರೆ, ಶೀಘ್ರದಲ್ಲೇ ಪ್ರಿಂಟುಮಾಡಿಸಿ ಕಳುಹಿಸಲಾಗುವುದು.

'ಮೇನೇಜರ್',

"ಕೊಡಗು" ಪ್ರೆಸ್, ಮಡಿಕೇರಿ.

ಹಿಂದೂ ದೇಶ.

ಬಂಗಾಳ ಕೌನ್ಸಿಲು ಮೆಂಬರಾದ ಮಿ. ಅಡ್ಡಿಯವರು ಬಂಗಾಳ ಅರ್ಡಿನೆನ್ಸಿಗೆ ಪರವಾಗಿ ಓಟುಕೊಟ್ಟದ್ದರಿಂದ ಕಲ್ಕತ್ತದ ಕಾರ್ಪೊರೇಷನ ನೇಶನಲ್ ಮೆಂಬರರವರು ಅವರನ್ನು ಅದರ ಎಗ್ಸಿಕ್ಯುಟಿವ್ ಕಮಿಟಿಯಿಂದ ತೆಗೆದು ಹಾಕಿರುವರು.

ಕಳೆದ ದಂಗೆಯಲ್ಲಿ ಮೃತಪಟ್ಟ ಮಾಪಿಳ್ಳೆಗಳ ಜ್ಞಾಪಕಾರ್ಥವಾಗಿ ಉತ್ಸವವನ್ನ ನಡಸಿದರೆ ಹೆಚ್ಚಿನ ತೊಂದರೆಗೆ ಕಾರಣವಾಗಬಹುದಾದುದರಿಂದ ಅಂಥಾ ಉತ್ಸವವನ್ನ ನಡಿಸಕೂಡದೆಂದು ಮಲಬಾರಿನ ಡಿಸ್ಟ್ರಿಕ್ಟ್‌ಮೇಜಿಸ್ಟ್ರೇಟರು ಪೂಕತ್ತೂರಿನ ಮಾಪಿಳ್ಳೆಗಳಿಗೆ ಹುಕುಂ ಮಾಡಿರುವರು.

ಈ ಸಾರಿ ಬಂಗಾಳಪ್ರಾಂತಿಕ ಕಾನ್‌ಫರೆನ್ಸು ಮಿ. ಸಿ. ಆರ್. ದಾಸ್‌ರವರ ಅಧ್ಯಕ್ಷತೆಯಲ್ಲಿ ಫರೀದ್ ಪುರದಲ್ಲಿ ನಡಿಯಿತು. ರಾಷ್ಟ್ರೀಯ ಕೋರಿಕೆಗಳನ್ನೊಳಕೊಂಡ ಹಲವು ಠರಾವುಗಳನ್ನೂ ರಾಜಕೀಯ ಕೈದಿಗಳನ್ನು ವಹಿಸಿ ಬಿಡುಗಡೆಮಾಡಬೇಕೆಂಬ ಠರಾವನ್ನೂ ಪಾಸುಮಾಡಿದರು. ಮಹಾತ್ಮಗಾಂಧಿಯವರೂ ಅಲ್ಲಿಗೆ ಹೋಗಿದ್ದರು.

ಮದ್ರಾಸು ಯುನಿವರ್ಸಿಟಿಯ ರಿಜಸ್ಟ್ರಾರಾಗಿದ್ದ ಮಿ. ಬಟ್ಲರ್‌ರವರು ರಜೆಯಲ್ಲಿರುವದರಿಂದ ರಿಜಸ್ಟ್ರಾರಾಗಿ ಮಿ ಪಿಸ್. ವರ್ಧ್ಮನತರರವರನ್ನು ನೇಮಿಸಿರುವರು.

ಬರ್ಕನ್ ಹೆಡ್ ಪ್ರಭುವಿಗೂ ಮಿ. ಸಿ. ಆರ್. ದಾಸ್‌ರವರಿಗೂ ನಡೆಯುವ ರಾಜಕೀಯ ಚರ್ಚೆಯಲ್ಲಿ ಗುಪ್ತವೇನೂ ಇಲ್ಲವೆಂದೂ ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ನಡಸಲು ಎಲ್ಲರೂ ಪ್ರಯತ್ನಿಸಬೇಕೆಂದೂ ಮಹಾತ್ಮಗಾಂಧಿಯವರು ತಮ್ಮ ಫರೀದ್‌ಪುರ ಭಾಷಣದಲ್ಲಿ ಹೇಳಿದರು.

ತಾ. 3ರಲ್ಲು ದಕ್ಷಿಣಕನ್ನಡದ ಕಾರ್ಕಳದಲ್ಲಿ ಶ್ರೀಮಾನ್ ಎಸ್. ಶ್ರೀನಿವಾಸಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಸ್ವರಾಜ್ಯ ಪಾರ್ಟಿಯ ಕಾನ್‌ಫರೆನ್ಸ್ ಒಂದು ನಡೆಯಿತು, ಈ ಜಿಲ್ಲೆಯಲ್ಲಿ ಸ್ವರಾಜ್ಯಪಾರ್ಟಿಯೊಂದನ್ನು ಸ್ಥಾಪಿಸಬೇಕೆಂಬುದೇ ಪಾಸಾದ ಮುಖ್ಯ ಠರಾವು. ಸುಮಾರು 40ಕ್ಕಿಂತ ಹೆಚ್ಚು ಜನರು ಮೆಂಬರುಗಳಾದರು.

ಸರ್ ಸುರೇಂದ್ರನಾಥ್ ಬೆನಾರ್ಜಿಯವರು ಅಸಹಕಾರವನ್ನು ಖಂಡಿಸಿ ಸ್ವರಾಜ್ಯಸಂಗಡದವರ ಅಭಿಪ್ರಾಯ ಬದಲಾವಣೆಗಳು ಸರಿಯಲ್ಲವೆಂದು ಹೇಳಿ, ಬಂಗಾಳದ ಲಿಬರಲ್ ಪಾರ್ಟಿಯವರು ಮಂತ್ರಿಗಳನ್ನು ಇಡಲು ಪೂರ್ತಿ ಒತ್ತಾಸೆಯುಳ್ಳವರಾಗಿರುವರೆಂದೂ ಪ್ರಕಟಿಸುವರು.

ಮಹಾತ್ಮ ಗಾಂಧಿಯವರು ಈಗ ಬಂಗಾಳದಲ್ಲಿರುವರು. ಅವರು ಕಲ್ಕತ್ತಕ್ಕೆ ತಲಪಿದಾಗ ತುಂಬಾ ಉತ್ಸಾಹದಿಂದ ಸಾವಿರಗಟ್ಲೆ ಜನರು ನೆರೆದು ತಕ್ಕ ರೀತಿಯಲ್ಲಿ ಸ್ವಾಗತವನ್ನೀಡಿದರು. ತಾರೀಖು 1ರಲ್ಲಿ ಅವರು ಮಿರಜಾಪುರ ಪಾರ್ಕಿನಲ್ಲಿ ದೊಡ್ಡ ಸಭೆ ಸೇರಿದಲ್ಲಿ ಖದ್ದರನ್ನು ಉಪಯೋಗಿಸಬೇಕೆಂದೂ ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕೆಂದೂ ಅಪ್ಪೀಲು ಮಾಡಿದರು.

ನಾರ್ತ್ ವೆಸ್ಟರ್ನ್ ರೈಲ್ವೆ ಮುಷ್ಕರದಲ್ಲಿ ಏನೊಂದು ಬದಲಾವಣೆಯೂ ಆಗಿರುವುದಿಲ್ಲ. ಕೆಲಸಕ್ಕೆ ಹೋಗದವರನ್ನು ರೈಲ್ವೆ ಕ್ವಾರ್ಟರ್ಸ್‌ಗಳಿಂದ ಹೊರಗಟ್ಟುತ್ತಿರುವರು.

ಬರ್ಮಾದ ಒಕ್ಕೊ ಎಂಬಲ್ಲಿ ಬೆಂಕಿಬಿದ್ದು ಮೂರು ಲಕ್ಷ ಕುಕ್ಕೆ ಅಕ್ಕಿ ಇದ್ದ 9 ಉಗ್ರಾಣಗಳು ಸುಟ್ಟು ಹೋಗಿ ಸುಮಾರು ಆರೂವರೆ ಲಕ್ಷ ರುಪಾಯಿ ನಷ್ಟವಾಗಿದೆಯಂತೆ.

ವೈಸರಾಯರಾದ ಲಾರ್ಡ್ ಲಿಟ್ಟನ್‌ರವರು ಊಟಕಮಂಡದಿಂದ ಸಿಮ್ಲಾಕ್ಕೆ ಹಿಂತಿರುಗಿ ಹೋಗಿರುವರು.

ಸ್ವಾಮಿದಯಾನಂದ ಸರಸ್ವತಿಯವರ ಜನ್ಮಶತಾಬ್ದಿ ಮಹೋತ್ಸವವನ್ನು ತಾ. 10ರಿಂದ 14ರ ವರೆಗೆ ಬೊಂಬಾಯಿಯ ಆರ್ಯಸಮಾಜದವರು ನಡಿಸಿದಾಗ್ಯೆ ಮೊದಲು ಹಿಂದೂಗಳಾಗಿದ್ದು ಕ್ರಿಶ್ಚಿಯನ್ ಮತ್ತು ಮಹ್ಮದೀಯ ಮತವನ್ನು ಅವಲಂಬಿಸಿದ್ದ ಸುಮಾರು ಒಂದು ಸಾವಿರ ಮಂದಿ ಪುನಹ ಶುದ್ಧಿ ಸಂಸ್ಕಾರವನ್ನು ಹೊಂದಿ ವೈದಿಕ ಧರ್ಮಾವಲಂಬಿಗಳಾದರು.

ವಿದೇಶ.

ಐರ್ಲೆಂಡಿನ ಸಿನ್‌ಫೀನರು ಪಡಾಹತು ಸ್ವಾತಂತ್ರ್ಯ ಕೇಳಿದಾಗ ಹ್ಯಾಗೆ ಇಂಗ್ಲೆಂಡಿನವರು ಒಪ್ಪಂದಕ್ಕೆ ಬಂದರೋ ಹಾಗೆಯೇ ಈಗ ಸಿ. ಆರ್. ದಾಸ್‌ರವರು ಕೇಳುವ ಮಾರ್ಪಾಡಿಗೆ ಐರ್ಲೆಂಡಿನ ಕೌಲಿಗೆ ರುಜು ಮಾಡಿದ ಲಾರ್ಡ್ ಬರ್ಕನ್ ಹೆಡ್‌ರವರು ಸ್ವಲ್ಪವಾದರೂ ಒಪ್ಪದೆ ಇರಲಿಕ್ಕಿಲ್ಲವೆಂದೂ, ಮಿ. ದಾಸ್‌ರವರ ಹೊಸ ಕೋರಿಕೆಗಳಿಗೆ ಮಿ. ಗಾಂಧಿಯವರು ಒಪ್ಪಿದರೆ ಹಿಂದೂ ದೇಶದಲ್ಲಿ ಅಸಹಕಾರವೇ ನಿಂತು ಹೋಗುವದೆಂದೂ ಲಂಡನ್ನಿನ "ದಿ ವೆಸ್ಟ್ ಮಿನಿಸ್ಟರ್ ಗಜೇಟ್" ಪತ್ರಿಕೆಯು ಹೇಳುತ್ತದೆ.

ಈಗ ಆಫ್ರಿಕದಲ್ಲಿ ಸಂಚರಿಸುತ್ತಿರುವ ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ದಕ್ಷಿಣ ಆಫ್ರಿಕ ಸರಕಾರದವರು ಕೇಪ್ ಟೌನಿನಲ್ಲಿ ಒಂದು ಔತಣವನ್ನು ಕೊಟ್ಟರು. ಎಲ್ಲಾ ಪಾರ್ಟಿಗಳ ಮುಂದಾಳುಗಳೂ ಹಾಜರಿದ್ದರು.

ಬೊಂಬಾಯಿಯ ಮಾಜಿ ಗವರ್ನರಾದ ಲಾರ್ಡ್ ಜಾರ್ಜ್ ಲಾಯಿಡ್‌ರವರು ಲಾರ್ಡ್ ಎಲೆನ್ಬಿಯವರನಂತರ ಈಜಿಪ್ಟಿನ ಹೈ ಕಮಿಷನರಾಗಿ ನೇಮಿಸಲ್ಪಡುವರು ತೀರ್ಮಾನವಾಗಿದೆ ಎಂದು ವರ್ತಮಾನ.

ಇಬ್ನ್ ಸಾಡ್‌ರವರು ಹೆಡ್ಜಾಜಿನ ಬಂದರುಗಳ ಮೇಲೆ ಯುದ್ಧವನ್ನು ನಿಲ್ಲಿಸಿ ಅದರ ಅಧಿಕಾರಿಗಳ ಸಂಗಡ ರಾಜಿ ವ್ಯವಹಾರಗಳನ್ನು ನಡಿಸುತ್ತಿರುವರು.

ಮಿ. ಚೇಂಬರ್ಲಿನ್‌ರವರನ್ನು ಕೊಲ್ಲಲು ಒಳಸಂಚು ನಡೆಯುತ್ತಿದೆಂಬ ವರ್ತಮಾನವು ಹೊರಗಿನಿಂದ ಹುಟ್ಟಿದೆಯಂತೆ. ಆದರೆ ಸ್ಕಾಟ್‌ಲೆಂಡ್‌ಯಾರ್ಡಿನಲ್ಲಿ ಇದು ನಿಜವೆಂದು ತಿಳಿದು ಬಂದಿರುವುದಿಲ್ಲ.

ಜರ್ಮನಿಯ ಪ್ರೆಸಿಡೆಂಟ್‌ತನಕ್ಕೆ ವಾನ್ ಹಿಂಡೆನ್ ಬರ್ಗ್‌ರವರನ್ನು ಚುನಾಯಿಸಿದ್ದು ಇಂಗ್ಲೆಂಡ್ ಮತ್ತು ಫ್ರಾನ್ಸಿನಲ್ಲಿ ಆಶ್ಚರ್ಯವನ್ನೂ ಗಾಬರಿಯನ್ನೂ ಉಂಟುಮಾಡಿದೆ. ಆದರೆ ಅಮೇರಿಕದಲ್ಲಿ ಏನೊಂದೂ ಗಲಿಬಿಲಿ ಉಂಟಾಗಿರುವುದಿಲ್ಲ.

ಮೆಡಿಟರೇನಿಯನ್ ಸಮುದ್ರದ ತೀರದಲ್ಲಿ ಸ್ಪಂಜಿಗಾಗಿ ಜಲಗಾರನು ಮುಳುಗಿದಲ್ಲು ಒಬ್ಬನು ಒಬ್ಬ ಸುಂದರವಾದ ಸ್ತ್ರೀಯನ್ನು ಕಂಡು ಆಶ್ಚರ್ಯದಿಂದ ಭಯ ಭರಿತನಾಗಿ ಮೇಲಕ್ಕೆ ಬಂದು ತನ್ನ ಸಂಗಾತಿಗಳೊಂದಿಗೆ ಹೇಳಿದನು. ಅವರು ಕೆಲವರು ಮುಳುಗಿನೋಡಲು ಅದೊಂದು ಗ್ರಾಮ ದೇವತೆಯ ಪ್ರತಿಮೆಯೆಂದೂ ಅಲ್ಲಿ ಒಂದು ದೊಡ್ಡ ಪಟ್ಟಣವೇ ಇತ್ತೆಂದೂ ಕಂಡು ಬಂತಂತೆ. ಇದು "ಹೋಮರಿನ ಒಲಿಯಡ್" ಗ್ರಂಥದಲ್ಲಿ ಹೇಳಿರುವ 'ಲೋಟಸ್ ಈಟರ್ಸ್" ಎಂಬ ಜನರ ಸಸ್ಥಾನವೆಂದು ಊಹಿಸಲಾಗಿದೆ.

ರು ನಮ್ಮ ದೇಶದಲ್ಲಿ

FOR S[illegible] ಮವರಿಂದ ಖಾದಿ

One Camera, folding ಲ್ಲಿ ಖಾದಿ ಇನಾಮನ್ನೇ ಕೊ

powerful German ದು ಅದರಂತೆ ನಡೆಯಬೇಕಾಗಿ ಆತನ

to be sent to ಳ್ಳುತ್ತೇನೆ

"ಖಾದಿ ಪ್ರೇಮಿ"

ಸರ್ ಪಿ ಟಿ ತ್ಯಾಗರಾಜ ಚೆಟ್ಟಿಯವರ ಮರಣ

(ಲೇಖಕ— "ಬಂಧು")

ಮಿ. ತ್ಯಾಗರಾಜಚೆಟ್ಟರು (ಪಿಟ್ಟಿ) ಕಳೆದ ತಿಂಗಳ 29ನೇ ತಾರೀಖಿನಲ್ಲಿ ಮದ್ರಾಸಿನಲ್ಲಿ ದಿವಂಗತರಾದ ನೆಸೆಯಿಂದ ಅಬ್ರಾಹ್ಮಣ ಸಮುದಾಯದ ಮೇಲೆ ಪೋಡ ಕವಿದಂತಾಗಿದೆ. ಡಾಕ್ಟರ ನಾಯರ ಮರಣಾನಂತರ ಹಿಂದುಳಿದ ಅಬ್ರಾಹ್ಮಣ ಸಂಗಡದ ಏಳ್ಗೆಗೆ ಬಹಳವಾಗಿ ಇವರು ಕಷ್ಟಪಟ್ಟರು. ಪಿಟ್ಟಿ ಎಂಬುದು ಇವರ ಅಡ್ಡ ಹೆಸರು.

ತ್ಯಾಗರಾಜಚೆಟ್ಟರು ತಮ್ಮ ಚಿಕ್ಕವಯಸ್ಸಿನಲ್ಲಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದರು. ಇವರು, ವ್ಯಾಸಂಗ ಪೂರ್ಣವಾದ ಮೇಲೆ, ಸರಕಾರಿ ನೌಕರಿಯನ್ನು ಅಪೇಕ್ಷಿಸಲಿಲ್ಲ. ಇವರು ಐಶ್ವರ್ಯವಂತರಾದರೂ, ಚಿಕ್ಕಂದಿನಿಂದಲೂ ನಿರಹಂಕಾರಿಗಳಾಗಿ, ಇತರ ಜನರಿಗೆ ಒಬ್ಬ ಮಾದರಿ ಪುರುಷನಂತಿದ್ದರು. ನಮ್ಮ ಕಾಲದಲ್ಲಿ ಅಪ್ಪನ ಆಸ್ತಿಯನ್ನು ಕಳೆಯುವವರೆ ಹೆಚ್ಚು. ಆದರೆ ಪಿಟ್ಟಿ ಗುರುಹಿರಿಯರ ಆಸ್ತಿಯನ್ನು ಬಹಳವಾಗಿ ವೃದ್ಧಿಪಡಿಸಿದರು. ಇವರು ದೇವಾಂಗಮತದವರಾದ ಕಾರಣ, ನೇಯಿಗೆ ಕಸಬನ್ನು ಹೆಚ್ಚಾಗಿ ಬೆಳೆಯಿಸಿ, ಸ್ವದೇಶಿ ಛಳವಳವನ್ನು ತಮ್ಮ ಕೈಲಾಗುವ ಮಟ್ಟಿಗೆ ಹರಡಿದರು. ಇವರಿದ್ದ ಕೊಂಡಾದ್ರಿಪೇಟೆಯಲ್ಲಿ ಅನೇಕ ಕೈಮಗ್ಗಗಳಿಗೆ ಆಶ್ರಯ ದೊರಕಿದವು. ಹಲವು ಮಗ್ಗಗಳನ್ನು ಇವರು ನಡಿಸುತ್ತಿದ್ದರೆಂದು ಕೇಳುತ್ತೇವೆ.

ವ್ಯಾಪಾರದಲ್ಲಿ ಇವರು ಬಹಳ ಪರಿಣತಿಯುಳ್ಳವರಾಗಿದ್ದರು. ಆದುದರಿಂದಲೇ ಇವರು ಸೌತ್ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ "ಎಂಬ ಸಂಘದಧ್ಯಕ್ಷತೆಯನ್ನಲಂಕರಿಸಿದ್ದರು. ಮದ್ರಾಸು ಮುನಿಸಿಪಾಲಿಟಿಗಾಗಿ ಸುಮಾರು ಐವತ್ತುವರುಷಗಳು ಸೇವೆಮಾಡಿದರು. ಇವರ ಉತ್ತಮತರದ ಕೆಲಸಕ್ಕಾಗಿ ಸರ್ಕಾರದವರು "ಸರ್" ಎಂಬ ಬಿರುದನ್ನು ದಯಪಾಲಿಸಿದರು.

ಅಬ್ರಾಹ್ಮಣರ ದುಃಖನಿವಾರಣೆಗಾಗಿ "ಜಸ್ಟೀಸ್" ಎಂಬ ದೈನಿಕ ಪತ್ರವನ್ನು, ಪಿಟ್ಟಿಯವರು ಹಾಗು ಡಾಕ್ಟರ್ ನಾಯರರು ಸ್ಥಾಪಿಸಿದರು. ಅಬ್ರಾಹ್ಮಣರ ಸಂಗಡದ ವತಿಯಿಂದ ಪತ್ರಿಕೆಯು ಹೊರಟು ಬ್ರಾಹ್ಮಣರ ಅಕೃತ್ಯಗಳನ್ನು ಮಂದಿಗಳ ಕಣ್ಣೆದುರಿಗೆ ಹಾಕಿ ಈ ಜನರು ಯೋಗ್ಯರೀತಿಯಿಂದ ಜಾಗರಿಸುವಂತೆ ಮಾಡಿತು. ಒಮ್ಮೊಮ್ಮೆ ಬ್ರಾಹ್ಮಣರನ್ನು ಕಠಿಣವಾಗಿ ದೂರಿದರೂ ಉತ್ತಮ ಬ್ರಾಹ್ಮಣರ ಕಡೆಗ ಮೆಚ್ಚಿಗೆಯನ್ನು ತೋರದೆ ಎದುರಾಡುವ ಪತ್ರಿಕೆಗಳಿರುವುದರಿಂದ ಪ್ರಯೋಜನವು ಹೆಚ್ಚಿರುತ್ತದೆ ಯಾದಕಾರಣ, ಅನೇಕ ವಿದ್ಯಾವಂತ ಬ್ರಾಹ್ಮಣರು ಈ ಪತ್ರಿಕೆಯ ಕೈಹಿಡಿದಿರುವರು.

ಪಿಟ್ಟಿಯವರು ಶೀಲವಂತರು, ಸದ್ಗುಣಿಗಳು, ಶಾಂತ ಸ್ವಭಾವಕರು. ಯಾವದಾದರೂ ಚರ್ಚೆಯ ಸಂದರ್ಭದಲ್ಲಿ, ಇವರನ್ನು ಕಠಿಣವಾಗಿ ನಿಂದಿಸಿದರೂ ಸಮಪಿಸಿ ಗುಣವುಳ್ಳ ಯೋಗಿಯಂತೆ ಮೌನವನ್ನು ಧರಿಸುತ್ತಿದ್ದರು. ಇವರ ಬುದ್ಧಿ ಪರಿಣಾಮಕ್ಕಾಗಿ ಅನೇಕ ಸಣ್ಣ ದೊಡ್ಡ ಮನುಷ್ಯರು ಇವರಲ್ಲಿಗೆ ನಿರ್ಭೀತರಾಗಿ ದಯಮಾಡಿಸುತಿದ್ದರು. ಈಚೆಗೆ ಹೊಸ ಕ್ರಮ, ಹಿಂದೂ ದೇಶದ ನ್ಯಾಯನಿರ್ಮಾಣಕಸಭೆಗಳು ಮಾರ್ಪಾಡಾದ ಮೇಲೆ, ಪಿಟ್ಟಿಯರಿಗೆ ಮಂತ್ರಿತ್ವವನ್ನು ಮದ್ರಾಸ್ ಗವರ್ನರರು ಕೊಡಲಿಕ್ಕೆ ಹೋದರು. ಆದರೆ ಪಿಟ್ಟಿಯವರು ತನಗಿದ್ದ ಮದ್ರಾಸು ಮುನಿಸಿಪಾಲಿಟಿಯ ಅಧ್ಯಕ್ಷತೆಯ ಭಾರವೆ ಸಾಕಾಗಿದೆಂದು ಹೇಳಿ, ಮಂತ್ರಿಯ ಕೆಲಸವನ್ನು ಕೈಬಿಟ್ಟರು. ಆದರೂ, ಇವರು ಮುಂದೆ ಹಾಡಿದ ಜನರನ್ನೇ ಮಂತ್ರಿಗಳನ್ನಾಗಿ, ಗವರ್ನರರು ನೇಮಿಸಿಕೊಂಡರು.

'ಪಿಟ್ಟಿ'ಯಂತ ಪುರುಷರ ಸಂಖ್ಯೆಯು ಕೇವಲ ಕಡಿಮೆ. ಇವರು ಮದ್ರಾಸಿಗಾಗಿಯೂ ಹಾಗು ಭಾರತಮಾತೆಗಾಗಿಯೂ ಮಾಡಿದ ಸೇವೆಯು ಚಿರಸ್ಮರಣೀಯವಾದದ್ದಾಗಿದೆ. ಇವರ ಗೌರವವನ್ನೂ, ದೊಡ್ಡಸ್ಥಿತಿಯನ್ನೂ, ಸೇವೆಯ ಮಹತ್ವವನ್ನೂ ಅರಿದು ತಿಳಕೊಳ್ಳಬೇಕಾದರೆ, ಇವರ ಸಾವಿಗೆ ನಾವು ಹೋಗಬೇಕಿತ್ತು ಅದರೆ ದೂರದಲ್ಲಿರುವ ನಮ್ಮಂಥವರಿಗೆ ಪತ್ರಿಕೆಗಳು ಇವರ ವಿಷಯವಾಗಿ ಹೊಗಳುವ ಸಂಗತಿಗಳನ್ನು ಓದಿನೋಡಿಕೊಂಡರೆ ಸಾಕು.

'ಪಿಟ್ಟಿ'ಯವರ ಮರಣದಿಂದ ದೇವಾಂಗದ ಕುಲಕ್ಕೆ ಒಂದು ದೊಡ್ಡ ವಿಪತ್ತು ಸಂಭವಿಸಿದಂತಾಗಿದೆ. ಇವರ ಪದವಿಯನ್ನು ವಹಿಸುವ ಯೋಗ್ಯ ಪುರುಷನು ಯಾವನೂ ಇಲ್ಲ. ಇವರ "ಆತ್ಮ"ಕ್ಕೆ ಶಾಂತಿಯೂ, ಸುಖವೂ ದೊರಕಲೆಂದು ದೇವರನ್ನು ಬೇಡುತ್ತೇನೆ.

ನೋಟೀಸು.

...ವಿದನುದ್ಧಾರದಸಂಘದ ಪ್ರಚಾರ ಕೆಲಸ ನಡಿಸಲಿಕ್ಕಾಗಿ ಉ...ಲ್ಲದಿದ್ದರೂ ... ದಕ್ಷಿಣಕೊಡಗಿಗೆ ಇಬ್ಬರು ಆಗ ...ಸುತ್ತಿರುವುದೂ ನಮ್ಮ ಕೆಲಸದ ಶರತ್ತುಗಳಿಗೆ ಈ ಕೆಳಗಿ...ತ್ತಿರುವುದು ಹೋಚಿಸಿದ್ದೇವೆ. ವರು ವಚನ ಅಸ್ಲಿ ಧೂಮಪಾನ ಮತ್ತು ಮದ್ಯಪಾನಗಳು.

ರಾಗಲು ಅವಶ್ಯವಾದ ಗುಣಗಳೆಂದು ... ವಂಕಪ್ಪಯ್ಯ, ... ದುರ್ಗುಣಗಳಿಂದ ಉಂಟಾಗುತ್ತಿರುವ ...

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ, ಗದಗ.

ಇಸವಿ ಸನ್ ೧೯೨೫ನೆಯ ಮೇ ತಿಂಗಳ ೧೩ನೆಯ ತಾರೀಖು ಬುಧವಾರ ದಿವಸ ಸಂಜೆಯ ೬ ಘಂಟೆಗೆ ಬೆಳಗಾವಿಯಲ್ಲಿ ಜಿ. ಕಾ. ಕ, ಯ ಕಚೇರಿಯಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸಾಧಾರಣ ಅಧಿವೇಶನವು ಜರಗುವದು. ಎಲ್ಲ ಸದಸ್ಯರು ಬರಬೇಕೆಂದು ಬೇಡಿಕೆಯದೆ.

— ಚರ್ಚಿಸತಕ್ಕ ವಿಷಯಗಳು. —

(೧) ಬೆಳಗಾವಿಯ ರಾಷ್ಟ್ರೀಯ ಮಹಾಸಭೆಯ ಅಧಿವೇಶನದಲ್ಲಿ ಹಾಕಿಕೊಟ್ಟ ಕಾರ್ಯಕ್ರಮವನ್ನು ಮುಂದುವರಿಸುವ ಕುರಿತು ಮಾಡತಕ್ಕ ಯೋಜನೆಯು.

(೨) ಈ ವರ್ಷದ ಆಯ—ವ್ಯಯದ ಅಂದಾಜು ಪತ್ರಿಕೆಯನ್ನು ತಯಾರಿಸುವದು.

(೩) ಕಳೆದ ವರ್ಷದ ಲೆಖ್ಖವನ್ನು ಮಂಜೂರ ಮಾಡುವದು.

(೪) ಕಳೆದ ಅಧಿವೇಶನದಲ್ಲಿ ಚರ್ಚಿಸದೆ ಉಳಿದ ವಿಷಯಗಳ ವಿಚಾರಣೆ.

(೫) ಅಧ್ಯಕ್ಷರ ಅಪ್ಪಣೆಯ ಮೇರೆಗೆ ಅನ್ಯ ವಿಷಯಗಳು.

ಗದಗ,	ಮಧ್ವರಾವ ಕೆಂಭಾವಿ
೨೭—೪—೨೫.	ಕಾರ್ಯದರ್ಶಿ ಕ. ಪ್ರಾ. ಕಾ. ಕ.

ದಿವಂಗತ ಮಿ. ಸಿ. ಟಿ. ಸುಬ್ಬೈಯ್ಯನವರು.

ತಾ. 3ರಲ್ಲು ನಡೆದ ಮಡಿಕೇರಿ ಯುನೈಟೆಡ್ ಕ್ಲಬ್ಬಿನ ಮೆಂಬರುಗಳ ವಿಶೇಷ ಮೀಟಿಂಗಿನ ವಿವರ.

1. (ಎ) ಈ ಕ್ಲಬ್ಬಿನ ಧೀರ್ಘಕಾಲ ಮೆಂಬರಾಗಿದ್ದ ಮಿ ಸಿ ಟಿ ಸುಬ್ಬೈಯ್ಯನವರ ಅಕಾಲ ಮರಣಕ್ಕೆ ಇಲ್ಲಿ ಸೇರಿದ ಮೆಂಬರುಗಳು ತಮ್ಮ ಅಗಾಧವಾದ ವ್ಯಸನವನ್ನು ತೋರಿಸುವದಲ್ಲದೆ ಶೋಕಕ್ಕೊಳಗಾದ ಅವರ ಸಂಸಾರಕ್ಕೆ ತಮ್ಮ ಮನಃಪೂರ್ತಿಯ ಪರಿತಾಪವನ್ನು ಸೂಚಿಸುತ್ತಾರೆ.

(ಬಿ) ಲೇಟ್ ಮಿ. ಸಿ. ಟಿ. ಸುಬ್ಬೈಯ್ಯನವರು ಈ ಕ್ಲಬ್ಬಿನ ಮೆಂಬರಾಗಿ ಮುಖ್ಯವಾಗಿ ಅನೇಕ ವರ್ಷಗಳವರೆ ಕ್ಯಾಪ್ಟನ್ನಾಗಿ ಮಾಡಿದ ಶ್ರೇಯಸ್ಕರವಾದ ಕೆಲಸವನ್ನು ಕ್ಲಬ್ಬು ಒಪ್ಪುತ್ತದೆ.

ಇವೆರಡು ಠರಾವುಗಳನ್ನು ಮೆಂಬರುಗಳೆಲ್ಲರೂ ನಿಂತುಕೊಂಡು ಒಮ್ಮತದಿಂದ ಮಂಜೂರು ಮಾಡಿದರು

2. ಮೇಲಿನ ಠರಾವುಗಳನ್ನು "ಕೊಡಗು" ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಸರ್ವಸಮ್ಮತದಿಂದ ಪಾಸಾಯಿತು.

ಕೆ. ಎ. ಮಂದಣ್ಣ.
(ಪ್ರೆಸಿಡೆಂಟ್).

ಕೊಡಗು ಸೇವಾ ಸಹಾಯಕರ ದಳ ಏರ್ಪಾಡು.

ಹೆಸರು—ಈ ದಳವನ್ನು ಕೊಡಗು ಸೇವಾ ಸಹಾಯಕರೆಂದು ಕರೆಯುವದು.

2 ಉದ್ದೇಶ—ಕೊಡಗು ದೇಶದಲ್ಲು ಮುಖ್ಯವಾಗಿ ಯಿಂದ ಕೆಲಸಮಾಡಲು ಮುಂದೆ ಬರುವ ಯುವಕರನ್ನು ನ್ಯಾಯವಾದ ರೀತಿ ತರಬೇತಿನಿಂದಲೂ, ಕಾಲಕ್ರಮಗಳಿಗನುಸಾರವಾದ ತಿದ್ದುಪಾಟು ಮತ್ತು ತಿಳುವಳಿಕೆಗಳನ್ನು ಕೊಟ್ಟು ಆಯಾಯ ಕಡೆಯಲ್ಲು ಜರಗುವ ಎಲ್ಲಾ ಕೂಟ, ನಾರಿಕೆ ಮತ್ತು ಹೆಚ್ಚಿನ ಜನರು ಕೂಡುವ ಜಾತ್ರೆ ವಗೈರೆಗಳಲ್ಲು ನ್ಯಾಯವಾದ ಕ್ರಮ ಜರಗಿಸಿ ಎಲ್ಲಾ ವಿಧದ ಸಹಾಯಮಾಡಲು ಏರ್ಪಾಡು

3. ಮೆಂಬರರು—18 ವರುಷ ಪ್ರಾಯ ಮೀರಿರುವ ಪ್ರತಿಯೊಬ್ಬ ಕೊಡಗಿನ ನಿವಾಸಿಯು ಓದುಬರಹ ಕಲಿತು ಒಳ್ಳ ನಡತೆ ನೀತಿಯುಳ್ಳವರನ್ನು ಚುನಾಯಿಸಲ್ಪಡುವದು.

4. ಸಂಖ್ಯೆ—ಸದ್ಯಕ್ಕೆ 120 ಜನರನ್ನು ಮಾತ್ರ ತರಬೇತು ಮಾಡುವದು.

ಜಿಲ್ಲಾ ದಳ—100 ಸಹಾಯಕರು ಯಾನೆ ವಾಲಂಟಿಯರುಗಳು.

1 ಕೂಟ, 10 ನಾಯಕರು (ಪ್ರತಿ 10 ಸಹಾಯಕರಿಗೆ ಒಬ್ಬ ನಾಯಕ) ಕೂಟ,

1 ಪುಂಡು. 5 ಪಾಳ್ಯದಾರರು (ಪ್ರತಿ 20 ಸಹಾಯಕರಿಗೆ ಒಬ್ಬ ಪಾಳ್ಯದಾರ) ಪುಂಡು.

1 ಕೇಪು 2 ಸುಭೇದಾರರು (ಪ್ರತಿ 50 ಸಹಾಯಕರಿಗೆ ಒಬ್ಬ ಸುಭೇದಾರ) ಕೇಪು

1 ಕಾರ್ಯಕಾರ (ಸೇನಾಪತಿ) (ಸರ್ವ ಯಜಮಾನ) ದಳ.

1 ಕಾರ್ಯದರ್ಶಿ (Secretary).

1 ಕಣಿಗೀಕ (Treasurer).

10 ಸಹಾಯಕರ ಒಂದು ಕೂಟವೆಂತಲೂ, 2 ಕೂಟಕ್ಕೆ ಒಂದು ಪುಂಡು ಎಂತಲೂ ಕರೆಯುವದು.

50 ಸಹಾಯಕರ ಒಂದು ಕೇಪು, 2 ಕೇಪು ಕೂಡಿ ಒಂದು ದಳ ಯಾ ಪೌಜು ಎಂತ ಕರೆಯುವದು.

5. ಆಡಳಿತವು—ಕೊಡಗುದೇಶದಲ್ಲಿ ವರುಷಂಪ್ರತಿ ಜರಗುವ ಜಮಾನ್ದಾರರ ಸಂಘದಿಂದ ಆಯಾಯ ವರುಷ ಚುನಾಯಿತರಾದ 5 ಜನರ ಒಂದು (Advisory) ಕಮಿಟಿಯವರು ಈ ಸೇವಾದಳದ ಎಲ್ಲಾ ಕಾರುಬಾರುಗಳನ್ನು ನಡೆಸಿಕೊಂಡು ಇವರು ಮಾಡಿದ ನೇಮಕ್ಕೆ (Rules) ಅನುಸಾರವಾಗಿ ನಡೆಯುವದು.

6. ಮಧ್ಯಸ್ಥಳವು—ವೀರಾಜಪೇಟೆ ಮತ್ತು ಅಮ್ಮತ್ತಿಯಲ್ಲು ಟ್ರೈಯಿನಿಂಗ್ ಮತ್ತು ವಾಸಸ್ಥಳಕ್ಕೆ ಏರ್ಪಾಡು ಆಗಿರುತ್ತದೆ.

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

"ನೌಕ್ರಿ ಬರಾರು'—

ಅಯ್ಯಾ'

ಈ ತಾರೀಕು 1ರ ಪತ್ರಿಕೆ ಓದಲಾಯಿತು. ಬೇರೆ ದೇಶಗಳಲ್ಲ ನೌಕ್ರಿಬರಾರು ರದ್ದುಮಾಡಬೇಕೆಂತ ಹೋರಾಡುವಾಗ ನಮ್ಮ ದೇಶದ ಪರವಾಗಿ ಅದನ್ನು ಮುಂದರಿಸಬೇಕೆಂತ ಜಮೀನ್ದಾರರಸಂಘವು ಬಹುಮತದಿಂದ ನಮ್ಮತಪಟ್ಟದ್ದು ಆಶ್ಚರ್ಯವೆಂತ ಯಾರು ತಾನೇ ಹೇಳದಿರುವರು. ಸುಮಾರು 35 ವರ್ಷಗಳ ಹಿಂದೆ ಸಾವಿರಾರು ಜನರು ಬೇರೆ ದೇಶದಿಂದ ನಮ್ಮಲ್ಲಿಗೆ ಬಂದು ಅಡ್ವಾನ್ಸು ಇಲ್ಲದೆ ಕೆಲಸಮಾಡಿಕೊಂಡು ಹೋಗುತ್ತಿದ್ದರು. ಕೊಡಗಿನ ಹೆಚ್ಚಿನ ಜನರು ಭೂಮಿಹಿಡುವಳಿದಾರರು. ಇವರು ಸದಾ ಆಳುಯಿದ್ದರೂ ಇಲ್ಲದಿದ್ದರೂ ತಮ್ಮ ಕೆಲಸವನ್ನು ಮಾಡುತ್ತಾ ಇದ್ದರು. ಬ್ರಿ. ಆಫ್. ಕಂಟ್ರಾಕ್ಟು ಆಕ್ಟು ಜಾರಿಗೆ ಬಂದನಂತರ ಬಡಪಾಪಿಗಳು ತಮ್ಮ ಹೆಂಗಸರು ಮಕ್ಕಳ ಒಡವೆವಸ್ತುಗಳನ್ನು ಅಡವಿಟ್ಟು ಆಳುಗಳಿಗೆ ಅಡ್ವಾನಸು ಕೊಟ್ಟುಕೊಂಡು ಆಳಿನಿಂದ ಕೆಲಸ ಮಾಡಿಸುತ್ತೇನೆಂಬ ಹೆಮ್ಮೆಯಿಂದ ತಾನೂ ತನ್ನ ಕುಟುಂಬವೂ ಸೋಮಾರಿತನದಿಂದ ನಲಿದಾಡುತ್ತಾ, ಕೆಲಸದ ಕಾಲ ಒದಗಿದಾಗ ಆಳುಗಳೆಲ್ಲ ಬೇರೆಕಡೆ ದಾಟಿಹೋಗಿ ತನ್ನ ಹಣವನ್ನೂ, ಉತ್ಪತ್ತಿಯನ್ನೂ, ಒಡವೆಗಳನ್ನು ಸಹ ಕಳಕೊಂಡು ದುಃಖಿಸುವುದಲ್ಲದೆ ವಾರಂಟಿಗೆ ದುಡ್ಡು ಇಲ್ಲದೆ ಅಥವಾ ಹ್ಯಾಗಾದರು ದುಡ್ಡು ಒದಗಿಸಿ ವಾರಂಟುತೆಗೆದು ಆಳುಗಳನ್ನು ಹಿಡಿಯಲಿಕ್ಕೆ ಸಾಧ್ಯವಿದೆ ಅನೇಕ ನಷ್ಟಕಷ್ಟಪಡುವದು ಯಾರಿಗತಾನೆ ಅನುಭವವಿಲ್ಲ. ನಿತ್ಯಪದಾರ್ಥವು ಹೆಚ್ಚು ಹೆಚ್ಚಿಗೆ ಒದಗಿದರೆ ಬಾಯಾರಿಕೆ ಹೆಚ್ಚು ಹೆಚ್ಚು ಆಗುತ್ತೇಯೆಂಬದು ತಿಳಿದೇಯಿದೆ. ಗರೀಬ ಜನರನ್ನು ಸೋಮಾರಿತನಕ್ಕೆ ಕೆಡಗುವ ಮತ್ತು ಅವರನ್ನು ಪೂರ್ತಿ ಹಾಳುಮಾಡುವ ಈ ಆಕ್ಟಿಗೆ ಉತ್ತೇಜನ ಕೊಡುವ ನಮ್ಮ ದೇಶದವರಿಗೆ ಯಾರಿಂದ ಏನು ಹೇಳಲಿಕ್ಕಾಗುತ್ತೆ? ಈ ಆಕ್ಟು ಮುಂದರಿಸಿದ ಹಾಗೆಲ್ಲಾ ಮೋಸಗಾರಿಕೆ ಹೆಚ್ಚುತ್ತಾ ಬರುವದು ಗೊತ್ತೇ ಇದೆ. ನಮ್ಮ ದೇಶದ ಬಡತನದ ಕಾರಣಗಳ ಪೈಕಿ ಇದೊಂದು ಅಲ್ಲವೆಂತ ಯಾರು ತಾನೆ ಹೇಳುವರು.

ಅಡ್ವಾನಸು ಹೊಂದಿಕೊಳ್ಳುವ ಆಳುಗಳ ಪೈಕಿ ನೂರಕ್ಕೆ ತೊಂಬತ್ತೈದು ಜನರು ತಮ್ಮ ದುಡ್ಡುಗಳನ್ನು ನಿತ್ಯಪದಾರ್ಥಕ್ಕೆ ಖರ್ಚುಮಾಡುವದಲ್ಲದೆ ಒಡವೆಯಾಗಲಿ, ದನಕರವಾಗಲಿ, ಮನೆಮಠವಾಗಲಿ ಸಂಪಾದಿಸುವದಕ್ಕೆ ಉಪಯೋಗಿಸುವದಿಲ್ಲವೆಂಬದು ಯಾರಿಗೆತಾನ ತಿಳಿಯದ ಸಂಗತಿ. ಒಂದು ವೇಳ್ಯ ತತ್ಕಾಲಕ್ಕೆ ಜಮೀನ್ದಾರರಸಂಘವು ಆಕ್ಟಿಗೆ ಒತ್ತಾಸೆಕೊಟ್ಟರೂ ಇದರಲ್ಲಿ ಬದಲಾವಣೆ ಯಾವದೂ ಸೂಚಿಸಿರುವುದಿಲ್ಲ. ಒಬ್ಬ ಗಂಡಾಳಿಗೆ 15 ರೂ. ಯ ಮೇಲೂ, ಹೆಣ್ಣಾಳಿಗೆ 10 ರೂ. ಯ ಮೇಲೂ ಕೊಡಕೂಡದೆಂಬ ರೂಲ್ ಮಾಡಬೇಕೆಂತ ಸರಕಾರವನ್ನು ಕೇಳುವುದು ಉತ್ತಮವಾಗಿದೆ. ತತ್ಕಾಲಕ್ಕೆ ಇದು ಹೊಸ ಜಾರಿಗೆ ತರಬೇಕಾದ್ದಾಗಿದೆ. ಬ್ರಿ. ಆಫ್. ಕಂಟ್ರಾಕ್ಟು ರೂಲ್ ಭೂಮಿಹಿಡುವಳಿದಾರರಿಗೆ ಸಹಾಯಕರವಾದದ್ದಲ್ಲವೆಂತ ನಾನು ಖಂಡಿತವಾಗಿ ಹೇಳುತ್ತೇನೆ. ಕೊಡಗಿನ ಕಚೇರಿಗಳಲ್ಲಿ ಇರತಕ್ಕ ಬ್ರಿ. ಆ. ಕಂಟ್ರಾಕ್ಟು ಕೇಸುಗಳ ಲೆಕ್ಕ ತೆಗದರೆ ಚೆನ್ನಾಗಿ ಎಲ್ಲರಿಗೂ ವೇದ್ಯವಾಗುತ್ತೆ. ಈ ಆಕ್ಟಿನಿಂದ ಆಳುಗಳಿಗ ಒಂದುತರದ ವ್ಯಾಪಾರವಾಗಿದೆ. ಕೊಟ್ಟರೂ ಕೆಟ್ಟ, ಕೊಡದಿದ್ದರೂ ಕೆಟ್ಟ, ಕೊಟ್ಟರೆ ಎರಡು ಕಷ್ಟ, ಕೊಡದಿದ್ದರೆ ಒಂದೇ ಕಷ್ಟ.

ಬಿ. ಕುಶಾಲಪ್ಪ

ಟೆರಿಟೋರಿಯಲ್ ಸೈನ್ಯವೂ ಆಸ್ಪತ್ರೆ ಖರ್ಚೂ.

ಅಯ್ಯಾ,

ಟೆರಿಟೋರಿಯಲ್ ಸೈನ್ಯವು ಮಡಿಕೇರಿಯಲ್ಲಿ ಇರುವಾಗ ಅನೇಕ ಸಿಪಾಯಿಗಳು ಖಾಯಿಲೆಕ್ಕೆ ಬೀಳುತ್ತಿರುವದು ಎಲ್ಲರಿಗೂ ತಿಳಿದ ವಿಷಯ. ಸಿಪಾಯಿಗಳು ಕೆಲಸ ಮಾಡಲು ಅಶಕ್ತರೋ, ಅಥವಾ ಆಸ್ಪತ್ರೆಗೆ ಕಳುಹಿಸಲ್ಪಡಬೇಕೋ ಎಂಬದನ್ನು ನೋಡಲಿಕ್ಕೆ ಮಿಲಿಟರಿ ಡಾಕ್ಟರು ಇದ್ದಾರೆ. ಖಾಯಿಲೆ ಬಲವಾದ ಕೂಡಲೇ ಖಾಯಿಲಸ್ಥರನ್ನು ಸಿವಿಲ್ ಆಸ್ಪತ್ರೆಗೆ ಕಳುಹಿಸುತ್ತಾರೆ. ಮಡಿಕೇರಿ ಮುನಸಿಪಾಲಿಟಿಯು ಜನರಿಗೆ ಔಷಧಿ ಕೊಡುವ ಬಗ್ಗೆ ಮುನಸಿಪಾಲಿಟಿಯಿಂದ ದೊಡ್ಡ ಹಣವನ್ನು ಸರಕಾರದವರು ತೆಗೆದುಕೊಳ್ಳುತ್ತಾರೆ. ಆದ್ದರಿಂದ ಮಿಲಿಟರಿಯವರಿಗ ಔಷಧಿ ಉಪಚಾರ ಕೊಡುವ ಖರ್ಚನ್ನು ಮಿಲಿಟರಿ ಇಲಾಖೆಯವರು ಕೊಡಬೇಕಾದದ್ದು ನ್ಯಾಯವಲ್ಲವೇ? ಎಷ್ಟು ಜನರು ಆಸ್ಪತ್ರೆಯಲ್ಲೇ ಮಲಗಿದ್ದರೆಂಬದನ್ನು ಎಷ್ಟು ಜನರಿಗೆ ಡಿಸ್ಪೆನ್ಸರಿಯಿಂದ ಔಷಧಕೊಟ್ಟರೆಂಬದನ್ನು ವಿಚಾರಿಸಿ ತಿಳಿದುಕೊಂಡು ಈ ಬಗ್ಗೆ ಆಗುವ ಖರ್ಚನ್ನು ಮಿಲಟರಿ ಇಲಾಖೆಯಿಂದ ತೆಗೆದುಕೊಳ್ಳಬೇಕಾದದ್ದು ಧರ್ಮವಾಗಿದೆ.

ಆಸ್ಪತ್ರೆಯಲ್ಲಿ ಅನುಕೂಲಸ್ಥರು ಔಷಧಿ ತೆಗೆದುಕೊಂಡರೆ ಔಷಧಿ ಕ್ರಯವನ್ನು ವಸೂಲ್ ಮಾಡುತ್ತಾರೆ. ಮಿಲಿಟರಿ ಇಲಾಖೆಗಿಂತ ಐಶ್ವರ್ಯವಂತರು ಇಂಡಿಯದಲ್ಲಿ ಯಾರು ಇದ್ದಾರೆ? ಹಣವನ್ನು ನೀರಿಗಿಂತ ಧಾರಾಳವಾಗಿ ಖರ್ಚಾಗುವದು ಈ ಇಲಾಖೆಯಲ್ಲಿ. ಹಾಗಿರುವಾಗ ಕೊಡಗಿನ ಬಡ ಸರಕಾರದವರು ಮಿಲಿಟರಿ ಇಲಾಖೆಯವರನ್ನು ಹದಲಿಕೆ ಕೇಳುವದರಲ್ಲಿ ನ್ಯಾಯವೂ ಇದೆ. ಮಿಲಿಟರಿ ಇಲಾಖೆಯವರು ಹದಲಿಕೆಯನ್ನು ಕೊಡಲು ತಯಾರು ಇರಬಹುದು. ಕೊಡಗಿನ ಕಮಿಶನರು ಸ್ವಲ್ಪ ಧೈರ್ಯ ತಂದುಕೊಂಡು ಈ ಹಣವನ್ನು ಮಿಲಿಟರಿಯವರಿಂದ ಕೇಳಬೇಕಷ್ಟೆ. ಕಮಿಶನರು ಎಚ್ಚರ ತಗೆದುಕೊಳ್ಳದೆ ಹೋದರೆ ಕೌನ್ಸಿಲ್ ಮೆಂಬರುಗಳಾದರೂ ಈ ವಿಷಯದಲ್ಲಿ ನಿಗಾತೆಗೆದುಕೊಂಡಾರೆಂತ ನಂಬುತ್ತೇನೆ.

"ಸ್ವದೇಶಿ."

ಡಿಸ್ಟ್ರಿಕ್ಟ್ ಬೋರ್ಡು.

ಸಂಪಾದಕರೇ,

ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುಗಳನ್ನು ಚುನಾಯಿಸುವ ಹಕ್ಕು ಕೊಡಬೇಕೆಂತಲೂ, ಚುನಾಯಿತ ಮೆಂಬರುಗಳ ಸಂಖ್ಯೆ ಹೆಚ್ಚಾಗಿ ಇರಬೇಕೆಂತಲೂ ದೇಶದ ಜನರು ಅನೇಕ ವರ್ಷಗಳಿಂದಲೂ ಕೇಳಿಕೊಳ್ಳುತ್ತಾ ಬಂದರು. ಕೌನ್ಸಿಲ್ ಬಂದ ಕೂಡಲೇ ಈ ಸ್ವತಃಸಿದ್ಧ ಹಕ್ಕು ಮತ್ತು ಸರಕಾರದವರಿಂದ ಒಪ್ಪಲ್ಪಟ್ಟ ಹಕ್ಕು ಸಿಕ್ಕೀತೋ ಸಿಕ್ಕುತ್ತೆ ಎಂತ ಜನರು ಆಶಾಭರಿತರಾಗಿದ್ದರು. ಕೌನ್ಸಿಲಿನಲ್ಲಿ ರಿಸಲ್ಯೂಶನೋ ಒಂತು. ಸರಕಾರದಿಂದ ಮಂಜೂರು ಆಯಿತು. ಆದರೆ ಖಾನೂನಿನ ಬಿಲ್ ಇನ್ನೂ ಕೌನ್ಸಿಲಿನ ಮುಂದೆ ಬಂದಿರುವದಿಲ್ಲ. ಆದರೆ ಕಾಫಿಪ್ಲಾಂಟರುಗಳಿಗೆ ಬೇಕಾದ ನೌಕ್ರಿ ಬಿರಾರಿನ ಖಾನೂನನ್ನು ಬಾರಿಗೆ ತರಬೇಕೆಂತ ಮೊನ್ನೆ ನಡೆದ ಕೌನ್ಸಿಲ್ ಮೀಟಿಂಗಿನಲ್ಲಿ ಮಂಜೂರಾಯಿತು. ಈಗಾಗಲೇ ಆ ಖಾನೂನಿನ ಮಸೂದೆ ತಯಾರಿಸಲು ಕಮಿಟಿಯು ನೇಮಕವಾಗುತ್ತಲಿವೆ ಎಂತ ತಿಳಿಯುತ್ತೇವೆ. ದೇಶದ ಜನರಲ್ಲಿ ಒಂದು ಕಸುಬಿನವರಾದ ತೋಟಗಾರರಿಗೆ ಬೇಕಾದ ಖಾನೂನನ್ನು ಜಾರಿಮಾಡಲು ಇಷ್ಟು ಆತುರವನ್ನು ಸರಕಾರದವರು ತೋರಿಸುತ್ತಿರುವಾಗ ದೇಶದ ಸರ್ವ ಜನರಿಗೂ ಅದರಲ್ಲೂ ಗ್ರಾಮಾಂತರಗಳಲ್ಲಿ ವಾಸಮಾಡುವ ಬಡಜನರಿಗೆ ಪ್ರಯೋಜನವಾಗಬಹುದಾದ ಡಿಸ್ಟ್ರಿಕ್ಟ್ ಬೋರ್ಡಿನ ಖಾನೂನನ್ನು ತಯಾರಿಸುವ ಯೋಜನೆಯಲ್ಲೇ ಇಲ್ಲದಿರುವದು ವಿಷಾದಕರವಲ್ಲವೇ? "ಕೊಡಗು" ಸಂಪಾದಕರು ಈ ವಿಷಯ ಆಗಿಂದಾಗ್ಯೆ ಬರೆದರು. ಆದರೂ ಇನ್ನೂ ಸರಕಾರದವರ ಗಮನಕ್ಕೆ ಬಂದಿರುವಂತೆ ಕಾಣುವದಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿಗೆ ಸರಕಾರದವರು ಹೆಚ್ಚಿಗೆ ಹಣಕೊಡಬೇಕೆಂತ ಕೌನ್ಸಿಲಿನಲ್ಲಿ ಕೇಳಿದರೆ ಡಿಸ್ಟ್ರಿಕ್ಟ್ ಬೋರ್ಡಿನ ಅರ್ಜಿ ಇಲ್ಲವೆಂತ ಕಮಿಶನರು ಕೌನ್ಸಿಲಿನಲ್ಲಿ ಹೇಳಿದರು. ಡಿಸ್ಟ್ರಿಕ್ಟ್ ಬೋರ್ಡನ್ನು ರೈತರ ಪ್ರತಿನಿಧಿಗಳ ಸ್ವಾಧೀನಕ್ಕೆ ಕೊಡದೆ ಈ ಮಾತನ್ನು ಕಮಿಶನರು ಆಡಿದ್ದರಲ್ಲಿ ನ್ಯಾಯವಿಲ್ಲ.

ರೈತರ ಪರವಾಗಿ ನೇಮಿಸಲ್ಪಡುವ ಆರು ಜನ ಮೆಂಬರುಗಳು ಸಹ ನಾಲ್ಕು ವರ್ಷಗಳಿಂದ ಮೆಂಬರುಗಳಾಗಿಯೇ ಇದ್ದಾರೆ. ಕಳೆದ ವರ್ಷವೇ ಹೊಸನೇಮಕವಾಗಬೇಕಾಗಿತ್ತು. 1925ನೇ ಇಸವಿ ಮಾರ್ಚ ವಳಗೆ ಹೊಸಖಾನೂನು ಬರಬಹುದೆಂತ ಭರವಸೆಯಿಂದ ಹಳೇಮೆಂಬರುಗಳ ಕಾಲವನ್ನೇ ಒಂದು ವರ್ಷ ಹೆಚ್ಚಿಸಿದರು. ಮಾರ್ಚತಿಂಗಳು ಕಳೆದುಹೋದರೂ ಹೊಸ ಚುನಾವಣೆಯೇನೂ ಆಗಲೇ ಇಲ್ಲ. ಕಮಿಶನರು ಈ ವಿಷಯಗಳನ್ನು ಕೂಡವೆ ಇದ್ದರೂ ನಿಯಮಿತ ಮೆಂಬರುಗಳಾದರೂ ರಾಜೀನಾಮೆ ಕೊಡಬೇಕಾಗಿತ್ತೆಂತ ನನಗೆ ತೋರುತ್ತದೆ. ಆಗ ಹೊಸಚುನಾವಣೆ ಆಗಿಯೇ ತೀರಬೇಕಿತ್ತು.

"ಸೆಸ್ ಕೊಡುವವ"

ಕೊಡಗಿನ ಬಸ್ ಸರ್ವಿಸ್‌ಗಳು.

ಈಗ ಸುಮಾರು ಮೂರು ತಿಂಗಳ ಕೆಳಗೆ ಕೊಡಗಿನ ಎಲ್ಲಾ ಬಸ್ ಸರ್ವಿಸ್‌ಗಳಲ್ಲೂ ಮೈಲಿಗೆ ಒಂದಾಣೆ ದರಕ್ಕಿಂತ ಹೆಚ್ಚಿಗೆ ತೆಗೆದುಕೊಳ್ಳಕೂಡದೆಂತ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಸಾಹೇಬರು ಪ್ರಯಾಣಿಕರ ಮೇಲೆ ದಯವಿಟ್ಟು ಹುಕುಂ ಮಾಡಿದರು. ಈ ಹುಕುಮನ್ನು ಅನುಸರಿಸಿ ಸಂಪಾಜೆಘಟ್ಟ ಹತ್ತಿ ಬರಬೇಕಾದ ಶಂಕರ್ ವಿಟ್ಠಲ್ ಮತ್ತು ಸಿ. ಪಿ. ಸಿ ಕಂಪನಿಯವರು ಸಹ ಮೈಲಿಗೆ ಒಂದಾಣೆ ರೇಟ್ ಮಾಡಿಬಿಟ್ಟರು. ಒಂದೇ ಮೈಲಿಗಾದರೂ ಒಂದಾಣೆಯೇ ತೆಗೆದುಕೊಳ್ಳುತ್ತಾರೆ. ನಮ್ಮ ದೇಶದಲ್ಲಿ ಕನ್ನಡ ಜಿಲ್ಲೆಯವರು ಕೆಟ್ಟವರು ಎಂಬ ಅಭಿಪ್ರಾಯವು ಸಾಧಾರಣವಾಗಿ ಹಬ್ಬಿಯದೆ. ಆದರೆ ಮೆಜಿಸ್ಟ್ರೇಟರ ಹುಕುಮನ್ನು ಇವರು ತಕರಾರು ಇಲ್ಲದೆ ಅನುಸರಿಸಿದ್ದು ನೋಡಿದರೆ ಗರೀಬ ಪ್ರಯಾಣಿಕರ ಕ್ಷೇಮವನ್ನು ನೋಡುವದರಲ್ಲಿ ಕನ್ನಡ ಜಿಲ್ಲೆಯವರೇ ಮುಂದೆ ಎಂಬಂತೆ ಕಾಣುತ್ತದೆ. ಯಾಕೆಂದರೆ ನಮ್ಮ ದೇಶದವರೇ ನಡಿಸುತ್ತಿರುವ ಎರಡು ಸರ್ವಿಸಿನವರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಆರ್ಡರನ್ನು ನಿರಾಕರಿಸಿಬಿಟ್ಟಿರುತ್ತಾರೆ. ಮಡಿಕೇರಿಯಿಂದ ಕಾಟಕೇರಿವರೆಗೆ ಹೋಗುವ ಪ್ರಯಾಣಿಕರಿಂದ ಶ್ರೀಕಾವೇರಿ ಬಸ್ ಸರ್ವಿಸಿನವರು ಮೈಲಿಗೆ 1 ಕಾಲಾಣೆಯೇ ತೆಗೆದುಕೊಳ್ಳುತ್ತಾರೆ. ನಿರಪರಾಧಸ್ತೇಶನಿಗೆ ತೆಗೆದುಕೊಂಡರೆ ಒಂದಾಣೆಯೆಂತಲೂ ಮುಗ್ಗಕ್ಕಾದರೆ 1 ಕಾಲಾಣೆಯೆಂತಲೂ ನಿಶ್ಚೈಸಿಕೊಂಡಿದ್ದಾರಂತೆ. ಮೂರ್ನಾಡಿಗೆ ಟಿಕೆಟ್ ತೆಗೆದುಕೊಂಡರೆ ಹತ್ತಾಣೆ, 9 ಮೈಲಿಗೆ ಮಾತ್ರ ಅಂದರೆ ಮೂರ್ನಾಡಿಗಿಂತ ಅರ್ಧ ಮೈಲು ಕಡಿಮೆ ದೂರಕ್ಕೆ ಟಿಕೆಟ್ ತೆಗೆದುಕೊಂಡರೆ ಹನ್ನೊಂದು ಕಾಲಾಣೆ. ಇದೇ ರೀತಿ ವಿಕ್ಟೋರಿಯ ಬಸ್ ಸರ್ವಿಸಿನಲ್ಲಿಯೂ ನಡಿಯುತ್ತಿದೆ ಎಂತ ತಿಳಿಯುತ್ತೇನೆ. ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ತಿಳುವಳಿಕೆಗೆ ಈ ಸಂಗತಿ ಬಂದಿರಲಾರದೆಂತ ನಂಬುತ್ತೇನೆ. ಬಂದಿದ್ದರೆ ಈ ರೀತಿ ಅಕ್ರಮವು ನಡಿಯಲು ಬಿಡುತ್ತಿರಲಿಲ್ಲ. ಈಗಲಾದರೂ ಅವರ ಮನಸ್ಸಿಗೆ ಈ ವಿಷಯವು ಹೋದೀತೆಂತ ನಂಬುತ್ತೇನೆ.

'ಪ್ರಯಾಣಿಕ'

ಮದ್ಯಪಾನ.

ಮಹಾಶಯರೇ,

"ಉರುಪಿಯ ಕೊಡ್‌ತ್ ಪಿರಾಂದ್ ಮೂಂಜ" ಎಂದೆನ್ನುವ ಮಾಪಿಳ್ಳೆಯವರ ಮಾತಿನಂತೆ ಹಣಕೊಟ್ಟು ಹುಚ್ಚೇರಿಸಿಕೊಳ್ಳುವ ಕುಡುಕರ ಉದ್ಧಾರಕ್ಕಾಗಿ ಕೆಲಸ ಮಾಡಬೇಕೆಂದು ಹೇಳುವವರು ನಮ್ಮ ದೇಶದಲ್ಲಿ ಅನೇಕರಿರುವರು. ಆದರೆ ಸ್ವಾರ್ಥತ್ಯಾಗ ಮಾಡಿ ಕೆಲಸಮಾಡಲು ಮುಂದೆ ಬರುವವರು ಬಹಳ ಕಡಿಮೆ. ದೃಶ್ಯರೂಪದಲ್ಲಿ ಪ್ರತಿಫಲವಿಲ್ಲದ ಇಂಥಾ ಕೆಲಸಗಳಿಗೆ ತಾವಾಗಿ ಮುಂದೆ ಬರುವವರು ನಮ್ಮ ದೇಶದಲ್ಲಿ ಇಲ್ಲವೇ ಇಲ್ಲವೆಂದು ನಾನು ನಂಬಿದ್ದೆನು. ಆದರೆ ಜಮೀನುದಾರರ ಸಂಘದ ಮೂರ್ನಾಡು ಕಾನ್ಫರೆನ್ಸಿನಲ್ಲಿ ನನ್ನ ಈ ನಂಬಿಕೆಯು ಸುಳ್ಳುಮಾಡಲ್ಪಟ್ಟದ್ದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ನನ್ನ ಆಶ್ಚರ್ಯಕ್ಕೆ ಆ ಮೀಟಿಂಗಿನಲ್ಲಿ ಕೆಲವರು ಈ ಉತ್ತಮವಾದ ಕೆಲಸಕ್ಕೆ ತಾವಾಗಿಯೇ ಮುಂದೆ ಬಂದರು. ದೇಶದಲ್ಲಿ ನಿಷಾನಿಷೇಧವನ್ನು ಸಾಧಿಸಲಿಕ್ಕಾಗಿ ಒಂದು ಕಮಿಟಿಯು ನೇಮಿಸಲಾಯಿತು.

ಮೂರ್ನಾಡು ಮೀಟಿಂಗಿನಲ್ಲು ಈ ಕಮಿಟಿಯಲ್ಲಿ ಕೆಲಸ ಮಾಡಲು ಮುಂದು ಬಂದ ಮಹನೀಯರ ಉತ್ಸಾಹವನ್ನು ನೋಡಿದಾಗ್ಯೆ ನಮ್ಮ ದೇಶದ ದುರ್ದೆಶೆಯು ನೀಗಲು ಪ್ರಾರಂಭವಾಗಿ ಕಷ್ಟವು ಬೇಗನೆ ಪರಿಹರಿಸಲ್ಪಡುವದೆಂದು ನನಗೆ ತೋರಿತು. ಆದರೆ ಇತ್ತಲಾಗಿ ನೋಡವುಕಿಯುತ್ತಾ ಒಂದು ಮಳೆಯುಸಿರುವಾಗಿ ಅವರಉತ್ಸಾಹಕ್ಕೆ ಚಳಿಯುಹಿಡಿದಂತೆ ಕಂಡುಬರುತ್ತದೆ. ಯಾಕಂದರೆ ದೇಶದಲ್ಲಿ ನಿಷಾದೇವಿಯ ಅನಾಹುತವು ಹೆಚ್ಚಾಗಿರುವುದು ಈಸಮಯದಲ್ಲೇ ತಗಿದೆ ಮದುವೆಯಕಾಲವಾದ ಈಸಮಯದಲ್ಲು ಅನೇಕರು ತಮ್ಮ ಮಗನ ಯಾ ಮಗಳ ಮದುವೆಯಲ್ಲಿ ನಿಷಾದೇವಿಗೆ ಆಮಂತ್ರಣ ಕೊಡಲೇ ಯಾ ಬೇಡವೇ ಎಂಬ ಸಂಶಯದಲ್ಲಿರುವರು "ಕಡಿಸದು ಕುಡಿಸದು ಇಲ್ಲ್‌ತ್ ಕೊಡವಡ ಮಂಗಲ ಚಾಯಿಲ್ಲೆ" ಎಂಬ ಅರ್ಥವಿಲ್ಲದ ಮಾತ್ರವಲ್ಲ ಕೊಡವ ಜನಾಂಗದವರ ಹೆಸರಿಗೆ ಕುಂದತೆಯನ್ನುಂಟುಮಾಡುವಂಥ ಹೇಳಿಕೆಗೆ ಈಡಾಗುವಂಥ ಬಲಹೀನರು ಎಷ್ಟೋ ಇರುವರು!

ಕೆಲವು ವರ್ಷಗಳ ಹಿಂದೆ ತಾನು ಬೇರೆಯವರ ಮದುವೆಗಳಲ್ಲಿ ವಿಸ್ಕಿ, ಬ್ರಾಂದಿ ಮೊದಲಾದುವುಗಳನ್ನು ಕುಡಿದಿರುವಾಗ್ಯೆ ತಾನು ಈಗ ಅವರಿಗೆ ಬರೇ ನೀರಾದರೂ ಕೊಡದೆ ಇರುವದು ನ್ಯಾಯವೇ ಎಂದು ಮುಂತಾಗಿ ನಪಹೇಳುವವರು ಎಷ್ಟಿಲ್ಲ! ಅಯ್ಯೋ ಪಾಪ! ನಿಷಾದೇವಿಯ ಪಕ್ಷಪಾತಿಗಳ ಇಂಥಾ ಕುರುಡು ಕಾರಣಗಳಿಗೂ ಒಳಗಾಗುವವರನ್ನು ನಾವು ನೋಡುತ್ತಿರುವೆವಲ್ಲಾ! ಒಬ್ಬನ ಮನೆಯಲ್ಲಿ ಮದುವೆಗೆ ತಿಂದದ್ದನ್ನು ಮುಯ್ಯಿಕೊಡಲಿಕ್ಕಾಗಿ ತಾನು ಮದುವೆ ಮಾಡುವುದಲ್ಲವೆಂದೂ, ಹಾಗೆ ಮಾಡಲು ಅನೇಕರಿಗೆ ಸಾಧ್ಯವಿಲ್ಲವೆಂದೂ ಹೇಳಬೇಕಾಗಿಲ್ಲ. ಹೀಗೆ ಒಬ್ಬ ಮಾಡಿದನೆಂದು ತಾನು ಮಾಡಲಿಕ್ಕೆ ಪ್ರಯತ್ನಿಸಿಯೇ ನಮ್ಮ ದೇಶವು ಇಷ್ಟು ಹೀನಸ್ಥಿತಿಗೆ ಬಂದಿದೆಯೆಂಬುದರಲ್ಲಿ ಏನೊಂದು ಸಂಶಯವಿಲ್ಲ.

ಶುಭಾಶುಭಕಾರ್ಯಗಳಲ್ಲಿ ಅಮಲುಪದಾರ್ಥವನ್ನು ನೀಡಿಸಬಾರದೆಂಬದಾಗಿ ಅನೇಕ ಕಡೆಗಳಲ್ಲಿ ಊರುಕಟ್ಟು ನಾಡುಕಟ್ಟು ಆಗಿ ದೇಶದಲ್ಲೆಲ್ಲಾ ಚಳವಳನಡೆಯುತ್ತಿರುವಲ್ಲು ತಾನು ಹ್ಯಾಗೆ ಮದುವೆಗೆ ನಾರಾಯಿನೇರಿಸಲಿ, ನೇರಿಸಿದರೆ ತನಗ ಬೇಕಾದ ಕೆಲವು ನಂಟರಿಷ್ಟರೂ ಮಿತ್ರರೂ ಮದುವೆಗೆ ಬರಲು ಇಷ್ಟಪಡೆಯುತ್ತಾ, ತನ್ನ ಮನೆಯ ಯಾ ಊರಿನ ಯುವಕರನೇಕರು ಅನುಲುಪಿನಾಚಿಯನ್ನು ಮದುವೆಮನೆಗೆ ಒರಗೊಡಿಸಿದರೂ ಯಾವ ಕಾರ್ಯವು ಸರಿಯಾಗಿ ನಡಿಯುವುದಿಲ್ಲವಾದುದರಿಂದ ಅದನ್ನು ದೂರೀಕರಿಸಬೇಕೆಂದು ಒತ್ತಾಯ ಮಾಡುತ್ತಲೂ ಇರುವಾಗ ತಾನು ನಾರಾಯ ಕೊಡುವದು ನ್ಯಾಯವೇ ಎಂದು, ಮುಂತಾಗಿ ತಮ್ಮೊಳಗೆ ತಾವೇ ಚರ್ಚಿಸುವವರು ಅನೇಕರಿರುವರು. ಇಂಥವರಿಗೆ ಧೈರ್ಯಕೊಡುವುದೂ ಮೋಸಹೇಳಿದಂತ ನಿಷಾದೇವಿಯ ಪಕ್ಷಪಾತಿಗಳಿಗೆ ನಯನುಡಿಗಳಿಂದ ಭೋಧಿಸಿ ಅವರಿಂದ ಅದನ್ನು ಬಹಿಷ್ಕರಿಸುವಂತೆ ಮಾಡುವುದೂ ನಿಷಾನಿಷೇಧಕಮಿಟಿಯ ಈಗಿನ ಒಂದು ಮುಖ್ಯ ಕೆಲಸವಾಗಿದೆ. ಈಗ ಒಂದುತಿಂಗಳು ಕಳೆದುಹೋದರೆ ಈಕೆಲಸಕ್ಕೆ ಅನುಕೂಲವಾದ ಇಂಥ ಸಮಯವು ಒಂದು ವರ್ಷದವರೆಗೆ ದೊರೆಯಲಾರದು. ಆದುದರಿಂದ ಆಕಮಿಟಿಯವರು ಒಡನೆಮೀಟಿಂಗುಮಾಡಿ ತಮ್ಮ ಕೆಲಸವನ್ನು ಪ್ರಾರಂಭಿಸಬೇಕಾಗಿ ಅತಿವಿನಯದಿಂದ ಕೋರುವ

"ಸುಧಾರಕ"

ಖಾದಿ ಪ್ರಚಾರ.

ಅಯ್ಯಾ,

ಒಂದೆರಡು ವರುಷಗಳ ಹಿಂದೆ ಸ್ವದೇಶಿ ಬಟ್ಟೆಯು ತುಚ್ಛೀಕಾರದಿಂದ ಕಾಣಲ್ಪಡುತ್ತಿದ್ದದ್ದು ಯಾರಿಗೂ ತಿಳಿಯದ್ದಲ್ಲ. ಆದರೂ ಅಲ್ಪಸ್ವಲ್ಪ ಜನರು ಅಲ್ಲಲ್ಲಿ ಜನರ ಮುಖ್ಯವಾಗಿ ಕೆಲವು ಸರಕಾರಿ ಉದ್ಯೋಗಸ್ಥರ ಅಧೈರ್ಯದ ಮಾತುಗಳಿಗೆ ಗಮನ ಕೊಡದೆ ಖಾದಿ ಬಟ್ಟೆಯನ್ನು ಉಪಯೋಗಿಸುತ್ತಾ ಬಂದರು. ಸುಮಾರು ಮೂರು ವರುಷಗಳ ಹಿಂದೆ ಮಡಿಕೇರಿ ಪೋಲೀಸು ಸ್ಟೇಶನಿನಲ್ಲಿ ಇನ್‌ಸ್ಪೆಕ್ಟರವರು ಮೆ ಬಿ. ರಾಮೈಯ್ಯನವರ ಖಾದಿ ಟೊಪ್ಪಿಯನ್ನು ತೆಗೆದು ಮೇಲಿನ ಅಧಿಕಾರಿಗೆ ಕಳುಹಿಸಿದ ಸಂಗತಿಯು ಅನೇಕರಿಗೆ ಜ್ಞಾಪಕದಲ್ಲಿರಬಹುದಾಗಿ ನೆನಸುತ್ತೇನೆ. ಆ ವಿಷಯವನ್ನು ಈಗ ಯೋಚಿಸಿದರೆ ಯಾರಿಗೆತಾನೇ ನಗು ಬರದೆ ಇರುವುದು! ಆ ಕಾಲವು ಹೋಯಿತು. ಈಗ ಖಾದಿಯ ಮೇಲೆ ಪ್ರೇಮವು ನಮ್ಮ ದೇಶದಲ್ಲಿ ಹೆಚ್ಚುತ್ತಾ ಬರುತ್ತಿರುವುದು ಸಂತೋಷಕರವಾದ ವಿಷಯವಾಗಿದೆ. ಕಳೆದ ಡಿಸೆಂಬರು ತಿಂಗಳಲ್ಲು ಕೊಡಗಿನಿಂದ ಕೆಲವರು ಬೆಳಗಾಂ ಕಾಂಗ್ರೆಸ್ಸಿಗೆ ಹೋಗಿ ಬಂದಂದಿನಿಂದ ಕೊಡಗಿನಲ್ಲಿ ಖಾದಿಯ ಪ್ರಚಾರವು ಹೆಚ್ಚಚ್ಚಾಗುತ್ತಿದೆಂಬುದರಲ್ಲಿ ಸಂಶಯವಿಲ್ಲ. ಬರೇ ಮೂವತ್ತು ಜನರು ನಮ್ಮ ದೇಶದಿಂದ ಕಾಂಗ್ರೆಸ್ ಮಹಾ ಸಭೆಗೆ ಹೋದದರಿಂದ ಇಷ್ಟರಮಟ್ಟಿಗೆ ಖಾದಿ ಪ್ರಚಾರಕ್ಕೆ ಉತ್ತೇಜನಕ್ಕೆ ದೊರೆತಿರುವಾಗ್ಯೆ ನೂರಾರು ಜನರು ಅದರಲ್ಲೂ ಪಾಶ್ಚಿಮಾತ್ಯರ ಫ್ಯಾಶನಿನಲ್ಲಿ ಮುಳುಗಿರುವ ಐಶ್ವರ್ಯವಂತರೂ ಮತ್ತು ಇಂಗ್ಲೀಷು ವಿದ್ಯಾವಂತರೂ ಬೆಳಗಾಂ ಕಾಂಗ್ರೆಸಿಗೆ ಹೋಗಿ ಅಲ್ಲಿ ಮಹಾತ್ಮ ಗಾಂಧಿಯವರ ಸ್ವಚ್ಛ ಮನಸ್ಸಿನ ಬೋಧನೆಯನ್ನು ಕೇಳಿಯೂ, ಅಲ್ಲಿ ನೆರೆದಿದ್ದ ಸಾವಿರಗಟ್ಟಲೆ ಜನರ ಉದಾಹರಣೆಯನ್ನು ನೋಡಿಯೂ ಬಂದಿದ್ದೇ ಆದರೆ ಇಷ್ಟರವರೆಗೆ ನಮ್ಮ ದೇಶವು ಖಾದಿಮಯವಾಗಿ ಬಿಡುತ್ತಿತ್ತೆಂದೇ ತೋರುತ್ತದೆ. ಇತ್ತೀಚೆಗೆ ವೀರರಾಜಪೇಟೆಯಲ್ಲಿ ಇಟ್ಟಿರುವ ಖದ್ದರ್ ಸ್ಟೋರಿನ ಬಟ್ಟೆ ಖರ್ಚಿನಿಂದಲೇ ನಮ್ಮ ದೇಶೀಯರಿಗೆ ಸ್ವದೇಶಿ ಬಟ್ಟೆ ಮೇಲೆ ಎಷ್ಟು ಪ್ರೀತಿ ಇದೆ ಎಂಬುದು ಗೊತ್ತಾಗುತ್ತದೆ. ಬೇಕಾದ ಬಟ್ಟೆಯು ಆ ಸ್ಟೋರಿನಲ್ಲಿ ದೊರೆಯುವದಿಲ್ಲವೆಂದೇ ಅನೇಕರ ಫಿರ್ಯಾದು. ಮದುವೆಯ ಕಾಲವಾದುದರಿಂದ ಈಗಲೇ ಬಟ್ಟೆಯ ಖರ್ಚು ಹೆಚ್ಚು. ಈ ವೇಳೆಯಲ್ಲು ಖದ್ದರ್ ಸ್ಟೋರಿನವರು ಲಾಭದ ಮೇಲೆ ಹೆಚ್ಚು ದೃಷ್ಟಿ ಇಡದೆ ಜನರಿಗೆ ಬೇಕಾದಂಥಾ ಬಟ್ಟೆಗಳನ್ನು ತರಿಸಿಕೊಡುವರಾಗಿ ನಂಬುತ್ತೇನೆ.

ಅಲ್ಲದೆ ಖದ್ದರಿನ ಮೇಲೆ ಪ್ರೀತಿ ಇರುವವರೆಲ್ಲಾ ತಮ್ಮ ನಂಟರ ಮತ್ತು ಸ್ನೇಹಿತರ ಮದುವೆಗಳಲ್ಲೆಲ್ಲಾ ರೂಪಾಯಿ, ಯಾ ಬೇರೆ ಇನಾಮುಗಳನ್ನು ಕೊಡುವದರ ಬದಲು, ಅದೇ ಮೌಲ್ಯದ ಖಾದಿಯನ್ನು ಕೊಡುವಂತೆ ನಿಶ್ಚೈಸಿಕೊಳ್ಳಬೇಕು. ಇನಾಮುಗಳಿಗೆ ಲಾಯಕ್ಕಾದ ಖಾದಿ ಸಾಮಾನುಗಳು ಬೇಕಾದಷ್ಟು ಖದ್ದರ್ ಸ್ಟೋರಿನಲ್ಲಿ ದೊರೆಯುತ್ತವೆಂದು ತಿಳಿಯಬರುತ್ತದೆ. ಮದುವೆಯಲ್ಲಿ ಹಣ ಕೊಡುವದನ್ನು ಕೆಲವರು ನಿಷಾ ಪದಾರ್ಥ ಸೇವನೆ ಮೊದಲಾದ ದುಷ್ಕೃತ್ಯಗಳಿಗೆ ಉಪಯೋಗಿಸುವುದರಿಂದ ಹಣದ ಬದಲು ಖಾದಿ ಬಟ್ಟೆಯನ್ನು ಇನಾಮು ಮಾಡಿದರೆ ಸ್ವದೇಶಿ ಕೈಗಾರಿಕೆಯನ್ನು ಹೆಚ್ಚಿಸಿ ಅದನ್ನು ಮಾಡುವ ಬಡವರಿಗೆ ಅನ್ನ ಕೊಟ್ಟಂತಾಗುವುದಲ್ಲದೆ, ಮದುಮಗನ ಯಾ ಮದುಮಗಳ ಉಪಯೋಗಕ್ಕೆ ಉಡುಪು ಕೊಟ್ಟಂತಾಗುವುದಲ್ಲವೇ? ಬಡವರಿಗೆ ಇದೊಂದು ಉತ್ತಮವಾದ ಸಹಾಯವಲ್ಲವೇ? ಐಶ್ವರ್ಯವಂತರಲ್ಲಿ ಖಾದಿ ಉಪಯೋಗಕ್ಕೆ ಇದೊಂದು ಸುಲಭದ ದಾರಿಯಲ್ಲವೇ?

ಮಾತ್ರವಲ್ಲ. ನಮ್ಮ ದೇಶದಲ್ಲಿ ಸರಕಾರಿ ಉದ್ಯೋಗಸ್ಥರಿಗೆ ಖಾದಿ ಉಪಯೋಗವೆಂದರೆ ತಮ್ಮ ಊಟದ ಬಾಯಿಗೆ ಮಣ್ಣು ಎಂದು ತಿಳುಕೊಂಡ ಹಾಗೆ ಕಾಣುತ್ತದೆ. ಖಾದಿಯನ್ನು ಪ್ರೀತಿಸುವ ಉದ್ಯೋಗಸ್ಥರು ಅನೇಕರಿದ್ದರೂ, ಅದನ್ನು ಉಪಯೋಗಿಸಲು ಧೈರ್ಯವಿರುವವರು ಶೇಕಡ ಒಂದರಷ್ಟೂ ಇಲ್ಲವೆಂದೇ ಹೇಳಬೇಕಾಗಿದೆ. ಬೇರೆ ಪ್ರಾಂತ್ಯಗಳಲ್ಲಿ ಉದ್ಯೋಗಸ್ಥರನೇಕರು ನಿತ್ಯವೂ ಖಾದಿಯನ್ನೇ ಉಪಯೋಗಿಸುತ್ತಿರುವರು. ಅವರನ್ನು ಉದ್ಯೋಗದಿಂದ ಓಡಿಸಿಬಿಟ್ಟಿರುವುದಿಲ್ಲ. ಸರಕಾರದವರು ಇಲ್ಲಿಯೂ ಖಾದಿ ಬಟ್ಟೆಯನ್ನು ಉಪಯೋಗಿಸಬಾರದೆಂದು ಉದ್ಯೋಗಸ್ಥರಿಗೆ ಹುಕುಂ ಮಾಡಿರುವದಿಲ್ಲ. ನಮ್ಮ ದೇಶೀಯ ಉದ್ಯೋಗಸ್ಥರಲ್ಲಿ ಕೆಲವರೇ ತಮ್ಮ ಕೈಕೆಳಗಿನವರನ್ನು ಹೆದರಿಸುವರೆಂದು ತೋರುತ್ತದೆ. ಇಲ್ಲವಾದರೆ ಕೆಲವರಾದರೂ ಖಾದಿಯನ್ನು ಧರಿಸದೆ ಇರರು. ಉದ್ಯೋಗಸ್ಥರ ಈ ಹೆದರಿಕೆಯನ್ನೂ ನಿಷವನ್ನೂ ಹೋಗಲಾಡಿಸಲು ಮದುವೆಯಲ್ಲು ಖಾದಿಯನ್ನು ಇನಾಮು ಕೊಡುವುದು ಒಂದು ಒಳ್ಳೇ ಉಪಾಯವಾಗಿದೆ. ಪ್ರೀತಿಪೂರ್ವಕ ಇನಾಮು ಕೊಟ್ಟದ್ದನ್ನು ಉದ್ಯೋಗಸ್ಥರೇ ಆಗಲಿ ಉಪಯೋಗಿಸದೆ ಇರರು. ತಾವಂತೂ ಕ್ರಯಕೊಟ್ಟು ಖಾದಿಯನ್ನು ತೆಗೆಯದೆಹೋದರೂ, ತಮ್ಮ ನಂಟರಿಷ್ಟರು ಇನಾಮಾಗಿ ಕೊಡುವ ಖಾದಿಬಟ್ಟೆಯನ್ನು ಉಪಯೋಗಿಸದೆ ಇರುವ ಕಠಿಣಹೃದಯದ ಜನರು ನಮ್ಮ ದೇಶದಲ್ಲಿ ಇರಲಿಕ್ಕಿಲ್ಲವಾಗಿ ನಂಬುತ್ತೇನೆ. ಆದುದರಿಂದ ಖಾದಿ ಪ್ರೇಮಿಗಳೇ, ನೀವೆಲ್ಲರೂ ಮದುವೆಗಳಲ್ಲಿ ಖಾದಿ ಇನಾಮನ್ನೇ ಕೊಡುವಂತೆ ನಿಶ್ಚೈಸಿಕೊಂಡು ಅದರಂತೆ ನಡೆಯಬೇಕಾಗಿ ಅತಿವಿನಯದಿಂದ ಬೇಡಿಕೊಳ್ಳುತ್ತೇನೆ.

ಎಷ್ಟು ಲಕ್ಷಣವಾಗಿದೆ! ನೋಡಿರಿ!

ನಮ್ಮ ಟಿಕ್ ಟಾಕ್ (ರಜಿಸ್ಟ್ರರ್ದ)



ಎಂಬ ಗೋಡೆಗೆ ತಗಲಿಸುವ ಗಡಿಯಾರವು ಸರಿಹೋಲದಂತ ಪ್ರಖ್ಯಾತಿಗೊಂಡಿದೆ. ಸರಿಯಾದ ಗಂಟೆಯನ್ನು ತೋರಿಸುವ ಉತ್ತಮವಾದ ಗಡಿಯಾರು ಎಲ್ಲರೂ ಮೆಚ್ಚುರುವಂಥಾದ್ದು ಯಾವಾಗಲೂ **ಟಿಕ್ ಟಾಕ್** ಗಡಿಯಾರವನ್ನೇ ತರಿಸಿರಿ ಕ್ರಯ. ರೂ 3—0—0 ಮಾತ್ರ.

ಜರ್ಮನ್ ಎಲಾರ್ಮ್ ಗಡಿಯಾರು.



ಕ್ರಯವು ಬಹಳ ಕಡಿಮೆ ಮಾಡಲ್ಪಟ್ಟಿದೆ. ಹೆಚ್ಚು ಪ್ರಯೋಜನದ, ಕಡಿಮೆ ಕ್ರಯದ ಟಯಮ್ ಪೀಸ್. 4 ಇಂಚು ಡಯಲಿನ ನಿಕ್ಕಲ್ ಗಡಿಯಾರು 30 ಗಂಟೆ ವರೆಗೆ ಬೀಗಕೊಡಬೇಕಾಗಿಲ್ಲ ಹ್ಯಾಗೆ ಇಟ್ಟರೂ ನಡೆಯುತ್ತದೆ. ಪ್ರಯಾಣಕ್ಕೆ ಒಳ್ಳೇ ಗಡಿಯಾರು. ಇದು ವಿದ್ಯಾರ್ಥಿಗಳಿಗೂ, ಸಮಯದ ಬೆಲೆ ಅರಿತವರಿಗೂ ಬಹಳ ಉಪಯೋಗವುಳ್ಳದು. ರಾತ್ರಿ ಕೆಲಸದವರಿಗೂ ಉತ್ತಮವಾದದ್ದು. ಎಲಾರ್ಮು ಹೊಡೆಯಬೇಕೆಂದಿರುವಾಗ ಡಯಲಿನ ಮೇಲಿರುವ ಸಣ್ಣ ಕೈಯನ್ನು ಹಿಂದುಗಡೆಯಿಂದ ತಿರುಗಿಸಿದರೆ ಕಾಲಕ್ಕೆ ಸರಿಯಾಗಿ ಎಲಾರ್ಮು ಕೊಡುತ್ತದೆ ಮೂರು ವರ್ಷದ ಭರವಸೆ ಇದೆ. ಕ್ರಯ. ರೂ 5 ಮಾತ್ರ.

22 ಕ್ಯಾರೆಟ್ಟಿನ ಚಿನ್ನದ ಹೊದಿಕೆಯ ಕೈ ಗಡಿಯಾರ.

ಉತ್ತಮವಾದ ಸ್ವಿಸ್ ಸಾಮಾನುಗಳಿಂದ ಮಾಡಿದ ಹೊಸ ನಮೂನೆಯ ಗಡಿಯಾರವಿದು. ಕ್ರಿಸ್ಟಲ್ ಕನ್ನಡಿಯು ಅರೇಬಿಕ್ ಯಾ ರೋಮನ್ ಅಂಕಗಳುಳ್ಳದ್ದು. ಇದರ ಕೆಲಸವು ಎಂಥಾ ಪರಿಶೋಧನೆಯನ್ನು ತೃಪ್ತಿಪಡಿಸುವುದು ಇದು ಪಾಲಿಶ್‌ನ ಚಿನ್ನದಂತೆ ಕಾಣುತ್ತದೆ ನೋಟಕ್ಕೆ ಬಹಳ ಅಂದವಾಗಿಯೂ ಸರಾರು ಗಂಟೆ ಕೊಡುವುದಾಗಿಯೂ ಇದೆ. ಐದು ವರ್ಷದ ಖಾತ್ರಿ ಕ್ರಯ ರೂ. 12—8—0

18 ಕೇರೆಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚು. ರೂ. 7.

ಎಲಾರ್ಮು ಮತ್ತು ರಿಪೀಟರ್ ಇರುವಂಥ ಅಮೇರಿಕದ "ಬಿಗ್ ಬೆನ್" ಗಡಿಯಾರ. ರೂ 10—8—0.

ಗಂಟೆ ಮತ್ತು ಅರ್ಧಗಂಟೆ ಹೊಡೆಯುವಂಥಾ "ಬೇಬಿ" ಗಡಿಯಾರ. ರೂ. 7—0—0

ಮೇಲಿನ "ಬೇಬಿ" ಗಡಿಯಾರು ಎಲಾರ್ಮು ಸಮೇತ. ರೂ. 8—0—0.

ಮೂರುವರ್ಷದ ಖಾತ್ರಿ.

ಜರ್ಮನ್ ಎಲಾರ್ಮ್ ಗಡಿಯಾರು, ರೂ. 5.

ಮೂನ್ ಸೀಗ್ನೊ ಎಲಾರ್ಮ್ ಗಡಿಯಾರು, ರೂ. 5.

ಜರ್ಮನ್ ಡಬ್ಬಲ್ ಬೆಲ್ ಎಲಾರ್ಮ್ ಟಯಮ್‌ಪೀಸು ರೂ 6—0—0.

ಲೋಕಪ್ರಸಿದ್ಧವಾದ "ಬಿ" ಟಯಮ್ ಪೀಸ್. ರೂ. 2—8—0

ಎವ್ಸನ್ ಫೌಂಟನ್‌ಪೆನ್ 14 ಕೇರೆಟ್ ರೋಲ್ಡ್‌ಗೋಲ್ಡ್ ನಿಬ್ಬು ರೂ. 2—8—0.

Apply to— Post Box 105 — **V. S. Watch Coy MADRAS.**

12—5

ನೋಟೀಸು

ಎಲ್ಲಾ ಸಹಕಾರಿಸಂಘಗಳಿಗೂ ತಿಳಿಯಪಡಿಸುವದೇನಂದರೆ — ಬ್ಯಾಂಕಿನಿಂದ ಸಾಲಕ್ಕೆ ಒರೆಯುವ ಅರ್ಜಿಗಳನ್ನು ಬ್ಯಾಂಕಿನಿಂದ ಕೊಡಲ್ಪಡುವ ಫಾರಂಗಳಲ್ಲೇ ಬರೆಕೊಳ್ಳಬೇಕು. ಖಾಲಿಕಾಗದದಲ್ಲಿ ಅರ್ಜಿ ಬರೆಕೊಂಡರೆ ಗಮನ ಕೊಡಲಾಗುವದಿಲ್ಲ.

ತಾ. 2—5—1925.

ಸಿ. ಯನ್. ವೆಂಕಪ್ಪಯ್ಯ.
ಗೌ. ಕಾರ್ಯದರ್ಶಿ.

ಕರ್ಣಾಟಕ
ಎಗ್ಯೂ ಮಿಕ್ಶ್ಚರ್

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝಾ ಆದಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦

ಟಪ್ಪಾಲು ಚಾರ್ಜು ಬೇರೆ

ಡಜನ್ ಬಾಟ್ಲಿಗಳಿಗೆ ಟಪ್ಪಾಲುಸಹಿತ ರು. ೯—೨—೦

ಏಜಂಟರು ಬೇಕು, ಕೊಡಗಿನ ಸ್ಕೂಲ್‌ಮಾಸ್ಟರುಗಳು ತಮ್ಮೂರಿನ ನೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ.

12—2

ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	9080
ಜಮೂಬಂದ ಠೇವಣಾತಿ	....	78,000

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6—4—0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡಿಸಿ ಕೊಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ರಾಯ್ ಬಹದ್ದೂರ್.	ಯಂ. ಭುಜಂಗರಾಯರು ಬಿ.ಎ., ಬಿ.ಎಲ್.

ಸೆಕ್ರೆಟರಿ.
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಕು 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುತು ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ—

ಮೇನೇಜರ್, ಶ್ರೀ ಧನ್ವಂತರಿ, ಶೃಂಗೇರಿ, ಮೈಸೂರುಸ್ಟೇಟ

ARMS & AMMUNITION MART.

Mahomedally-Noorbhoy.

337, Abdul Rehman Street, near Crawford Market, BOMBAY.
Telegraphic Address:- "SHOOTER" Bombay.

[52 37] Please write for latest Catalogues.

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿದೆ.

ಕೃಷ್ಣ ನಂಬೀಶರ್ ಮತ್ತು ನಾರಾಯಣ ನಂಬೀಶರ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ.

ನಂಬೀಶರ ಮತ್ತು ಕಂಪನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲೂರು, ವೀರಾಜಪೇಟೆ ಮತ್ತು ಗೋಣಿಕೊಪ್ಪಲು.

52-8

ಪ್ರಕಟಣೆ.

ಭಾರತಮಾತೆಯ ಕಷ್ಟವನ್ನು ತಪ್ಪಿಸಬೇಕೆಂದು ಹೋರಾಡುತ್ತಿರುವ ಶ್ರೀಮಾನ್ ಲಾಲಾ ಲಜಪತ್‌ರಾಯ್, ಪಂಡಿತ ಮೋತಿಲಾಲ್ ನೇಹರು ಮೊದಲಾದ ಧುರೀಣರುಗಳಾದ ಭಾರತ ಪುತ್ರರಿಂದ ಸ್ಥಾಪಿತವಾಗಿರುವ

ದಿ ಲಕ್ಷ್ಮೀ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು ಲಾಹೋರು, ಮ್ಯಾನೇಜಿಂಗ್ ಡೈರೆಕ್ಟರು, ಪಂಡಿತ ಕೆ. ಸಂತಾನಂ.

ಮೂಲಧನ ೧೦ ೦೦,೦೦೦.

ಶೇರು ದರಖಾಸ್ತು ೧೦ ೦೦,೦೦೦.

ಇಂಡಿಯಾ ಸರಕಾರದ ಲೈಫ್ ಇನ್‌ಷ್ಯೂರೆನ್ಸ್ ಆಕ್ಟು ಅನುಸರಿಸಿ ರಿಜಿಸ್ಟರಾಗಿ ಇಂಡಿಯಾ ಸರಕಾರದಲ್ಲಿ ರೂಲ್ಸು ಪ್ರಕಾರ ಮೊಬಲಗು ಸೆಕ್ಯೂರಿಟಿ ಡಿಪಾಜಿಟ್ ಇಡಲ್ಪಟ್ಟಿರುತ್ತೆ.

ಎಲ್ಲಾ ತಾಲೋಕು ಮತ್ತು ಡಿಸ್ಟ್ರಿಕ್ಟುಗಳಲ್ಲಿಯೂ ಏಜಂಟರುಗಳು ಧಾರಾಳವಾದ ಕಮಿಷನ್ನಿಂದ ಕೆಲಸ ಮಾಡತಕ್ಕವರು ಬೇಕಾಗಿರುತ್ತೆ. ರೂಲ್ಸುಗಳು ತಿಳಿಯಬೇಕಾದವುಗಳ್ಳ, ಏಜನ್ಸಿ ರೂಲ್ಸು ವಿಮೆ ದರಖಾಸ್ತು, ಫಾರಂ ಇತ್ಯಾದಿಗಳಿಗೆ ಬರಿಯಿರಿ

ಚೀಫ್ ಏಜಂಟರ ಆಫೀಸು,
ದಿ ಲಕ್ಷ್ಮೀ ಇನ್‌ಷ್ಯೂರೆನ್ಸ್ ಕಂಪೆನಿ ಲಿಮಿಟೆಡ್,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

4—3

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.
If not delivered please return to "KODAGU" OFFICE, MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩—೦—೦.

ಸತ್ಯೇನ ಧರ್ಮದಯನಾ ವಿದ್ಯಾ ನೀತಿ ಪ್ರಯುಕ್ತತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೪] ಕೊಡಗು, ಸನ್ ೧೯೨೪ನೇ ಇಸವಿ ಸೆಪ್ಟೆಂಬರ್ ತಾರೀಕು 22ನೆಯ ಶುಕ್ರವಾರ [ಸಂಚಿಕೆ ೬೩.

ಆ ರೋ ೕ ಗ್ಯ ಚ ಂ ದ್ರಿ ಕೆ .

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು· ರಾಮರಾವ್,
ಯಮ್. ಎಲ್· ಸಿ. ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ: 'ಆರೋಗ್ಯ ಚಂದ್ರಿಕೆ' 323,
ತಂಬುಶೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು' ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು' ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ವಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ವಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ವಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ದೆಚ್ಚಂಗತಿಗೆ ಮೇನೇಜರಿಗೆ ಬರೆದು ತಿಳಿದು ಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾ ಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರನಾಗ ಬೇಕೆಂದಿರುವವರೂ, ಮತ್ತು ಲೇಖನ ಸಲ್ಲಿಸಿ ಮಾಡಲಿಕ್ಕಿರುವವರೂ ದಯವಿಟ್ಟು ವೀರರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ — ಮೇನೇಜರ್,
13.9.24. — 'ಕೊಡಗು' ಲಿಮಿಟೆಡ್.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City

ನೋಟೀಸು.

ಸ್ಪೆನ್ಸರ್ ಕಂಪೆನಿ ಲಿಮಿಟೆಡ್, ಮಡಿಕೇರಿ.

ಈ ಹೇಲ್ಯಾಂಡ ಕಂಪೆನಿಯಲ್ಲಿ, ಮಾರುವ ಉತ್ತಮ ತರದ ಒಂಟಿಕೊಳವಿನ ಬ್ರೀಚ್‌ಲೋಡಿಂಗ್ ಕೋವಿಗಳು ತೀರಿ ಹೋದುದರಿಂದ ಈಗ 4ನೆಯ ಸಂಗ್ರಹಣವು ನಮಗೆ ಬರುವದು. ಆದ್ದರಿಂದ ಮೊದಲು ಪಡೆಯಲು ಅವಸರದರ್ಪವಾದ ನಮ್ಮ ಗಿರಾಕಿದಾರರು ಕೂಡಲೆ ತಮ್ಮ ಅವಶ್ಯಕತೆಯನ್ನು ಬರೆದು ಒಡನೆ ತಿಳಿಸುವದು.

ಮತ್ತು ಜೋಡುಕೊಳವಿನ ಬ್ರೀಚ್‌ಲೋಡಿಂಗ್, ಒಂಟಿ ಮತ್ತು ಜೋಡು ಕೊಳವಿನ ಕೇಪು ಕೋವಿಗಳು. ತೋಟ ಜೆಲ್ಲು, ಮದ್ದು, ಕೇಪು ಇತ್ಯಾದಿ ನಮ್ಮ ಭಂಡಾರದಲ್ಲಿರುವದು.

"ತಡೆಗೆ ಮೋಸವಾಗದಹಾಗೆ ಬೇಗನೆ ಬರುವುದಲೇಸು."

Spencer & Co. Ltd.,
MERCARA & POLLIBETTA.
31

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಬ್ರಿಹಾವು ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ
17.9.24 — ಮೇನೇಜರ್.

Old Students' Quarterly.

Editor, Mr. P. B. Medappa, B.A., B.L., M.L.C.

Vol. II. No. 2 is now out.

Subscription—Yearly Rs. 2, post free. Most delightful! Scholarly articles! Read and enjoy!

CONTENTS.

1. National welfare—
   (includes thoughts on Free and Compulsury education in Coorg.
2. Swarajya—A Canarese Drama.
3. Are Coorgs Kannadigas?
4. Ancient Coorg.
5. Peep into Heavens.
6. Frivolity page,
   etc. etc.

If you become a subscriber now you will get a very beautiful calendar for 1925 free—absolutely free!

Apply to—
Manager.
O. S. Association,
Mercara.

ಪ್ರ ಕ ಟ ಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲುಪಿರುವದರಿಂದ, 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್,' 'ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ. — ಮೇನೇಜರ್,
'ಕೊಡಗು' ಲಿಮಿಟೆಡ್.

ಒಂದು ಪ್ರಭಲವಾದ ಪ್ರಶ್ನೆ.

ದೇಶಾಭಿಮಾನವೆಂದರೇನು?

ಕೈರಾಟೆಯಿಂದ ನೂಲುತಯಾರಿಸಿ ಮಾಡಿದಬಟ್ಟೆಯನ್ನು ಧರಿಸಿ ಆ ಮೂಲಕ ಲಕ್ಷೋಪಲಕ್ಷ ಗರೀಬ ಜನರಿಗೆ ಅನ್ನವನ್ನೊದಗಿಸುವದೇ ದೊಡ್ಡ ದೇಶಾಭಿಮಾನ.

ಇಂಥಾ 'ಖಾದಿ' ಬಟ್ಟೆಯನ್ನು ಎಲ್ಲಾ ಜನರಿಗೂ ಸುಲಭಕ್ರಯದಲ್ಲಿ ಒದಗಿಸಲಿಕ್ಕೆ ಈಗತಾನೇ ವೀರರಾಜಪೇಟೆಯಲ್ಲಿ ಒಂದು ಖಾದಿ ಭಂಡಾರವನ್ನು ತೆರೆದಿರುತ್ತೇವೆ. ಈ ಭಂಡಾರದಲ್ಲಿ ಎಲ್ಲಾ ತರದ ನಾಜೂಕಾದ ಮತ್ತು ಗಟ್ಟಿಯಾದ ಖಾದಿಬಟ್ಟೆಗಳೂ ವಸ್ತ್ರಗಳೂ ಶೀರೆಗಳೂ, ಟವಲು ಶಾಲುಗಳೂ, ಖಾದಿರೇಶ್ಮೆಯಿಂದ ತಯಾರ್ಮಾಡಿದ ಎಲ್ಲಾ ತರದ ಬಟ್ಟೆಗಳೂ ದೊರೆಯುತ್ತವೆ. ಬಟ್ಟೆಗಿರುವ ಎಲ್ಲಾ ಆರ್ಡರನ್ನು ತಕ್ಷಣವೇ ಜರಗಿಸಲಾಗುತ್ತೆ. ಊರೂರಿನಲ್ಲಿರುವ ಎಲ್ಲಾ ಜನರಿಗೆ ಬಟ್ಟೆಯನ್ನೊದಗಿಸಲು ತಕ್ಕ ಏರ್ಪಾಡು ಮಾಡಲ್ಪಟ್ಟಿದೆ. ದೇಶಾಭಿಮಾನಿಗಳ ಪ್ರೋತ್ಸಾಹವನ್ನು ನಿರೀಕ್ಷಿಸುತ್ತಲೇ ಇರುತ್ತೇವೆ. ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

'ಮೇನೇಜರ್'
12—12 — ಖಾದಿ ಭಂಡಾರ, ವೀರರಾಜಪೇಟೆ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟು ಮೆ. ಕೋಟೆರ ಚಿಣ್ಣಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಮೆ. ಕೆ. ಚಿಣ್ಣಪ್ಪನವರ ಆಫೀಸಿನಲ್ಲಿ.
ಮೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ ಮೆ. ಮಡೆಯಂಡ ದೇವಯ್ಯನವರು.
ನಾಪೋಕ್ಲು—ಮೆ. ಪೊನ್ನಚೆಟ್ಟಿರ ಮುದ್ದಪ್ಪನವರು.
ಗೋಣಿಕೊಪ್ಪಲು—ಮೆ. ಮುಕ್ಕಾಟಿರ ಪೂಣಚ್ಚನವರು.
ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಮ್ಮಯ್ಯನವರು.
ಮಡಿಕೇರಿ—ಮೆ. ಜಿ. ಮಾದಮ್ಮನವರು.
ಅಮ್ಮತ್ತಿ, ಸಿದ್ದಾಪುರ—ಮೆ. ಐನಂಡ ಮಾದಪ್ಪನವರು.
ಮೆ. ಬಾಗಂಡ ಕುಟ್ಟಪ್ಪನವರು.

ಕೋದಂಡ [illegible]
[illegible] ಮನ್ನಿಸಬೇಕೆಂದು ನಾವು | ನೋಡಿದರ ಅದು ಒಂದು [illegible]ದೇಂದ್ರಪೇಟೆ.

ಕುಷ್ಟರೋಗ ನಿವಾರಣೆ.

ಬ್ರಿಟಿಷ್ ಸಾಮ್ರಾಜ್ಯದೊಳಗಿನಿಂದ ಕುಷ್ಟರೋಗವನ್ನು ನಿವಾರಣೆ ಮಾಡುವ ಉದ್ದೇಶದಿಂದ ಇಗ್ಲೆಂಡಿನ ಯುವರಾಜರೇ ಮುಖ್ಯಸ್ಥರಾಗಿ ಒಂದು ಕಮಿಟಿಯನ್ನು ಏರ್ಪಡಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ಈ ಸಾಮ್ರಾಜ್ಯಕ್ಕೆಲ್ಲಾ ವ್ಯಾಪಿಸುವ ಕಮಿಟಿಯು ಒಂದು ಶಾಖೆಯು ಹಿಂದುಸ್ಥಾನದಲ್ಲಿಯೂ ಏರ್ಪಾಡಾಗಿ ಇದರ ಪರವಾಗಿ ವೈಸ್‌ರಾಯರವರು ದೇಶದವರಲ್ಲಿ ಒಂದು ವಿನಂತಿಯನ್ನು ಮಾಡಿಕೊಂಡಿದ್ದಾರೆ. ಅವರ ಮಾತುಗಳನ್ನೇ ಇಲ್ಲಿ ಕೊಟ್ಟಿರುತ್ತೇವೆ

"ಕುಷ್ಟರೋಗ ನಿವಾರಣಾಸಂಘ ಪರವಾಗಿ ಹಿಂದುಸ್ಥಾನಕ್ಕೆ ನಾನು ಈ ವಿನಂತಿಯನ್ನು ಮಾಡುತ್ತೇನೆ. ಐಶ್ವರ್ಯವಂತರೂ ಬಡವರೂ ಮತ್ತು ಜಾತಿ ಮತಭೇದವಿಲ್ಲದೆ ಸರ್ವರೂ ನನ್ನ ವಿನಂತಿಗೆ ಗಮನ ಕೊಟ್ಟಾರೆಂತ ನಂಬುತ್ತೇನೆ. ಈ ರೋಗದಿಂದ ಪೀಡಿತರಾಗಿರುವವರ ಕಷ್ಟವೂ ಈ ರೋಗವು ಹರಡುವ ಅಪಾಯವೂ ತಿಳಿಯದೆ ಇರುವ ಜನರು ಇತರರು ಕುಷ್ಟರೋಗಿಗಳ ಕಷ್ಟ ನಿವಾರಣೆಗಾಗಿಯೂ, ಕುಷ್ಟರೋಗವು ಹರಡದಂತೆಯೂ ತಗಲಿದವರಿಗೆ ವಾಸಿಮಾಡಲಿಕ್ಕೂ ಈಗಾಗಲೇ ತುಂಬಾ ಕೆಲಸವು ಇಂಡಿಯದಲ್ಲಿ ನಡೆಯುತ್ತಿದೆಯೆಂತ ನನಗೆ ಗೊತ್ತಿದೆ. ಹೊಸವಾಗಿ ಕಂಡು ಹಿಡಿದು ಚಿಕಿತ್ಸೆಗಳಿಂದ ರೋಗದ ಕಷ್ಟವನ್ನು ಕಡಿಮೆ ಮಾಡಬಹುದು ವಾಸಿ ಸಹ ಮಾಡಬಹುದೆಂತ ತಿಳಿದು ಬಂದಿದೆ ಆದರೆ ಹಣವಿಲ್ಲದೆ ಕೆಲಸವು ಮುಂದುವರಿಯುವದಿಲ್ಲ. ಕುಷ್ಟರೋಗಿಗಳ ಚಿಕಿತ್ಸೆಯ ಆಸ್ಪತ್ರೆಗಳನ್ನು ಇಡಲಿಕ್ಕೂ, ಶಾಸ್ತ್ರೀಯ ಸಂಬಂಧ ಹೆಚ್ಚಿನ ಅಜಮಾಯಿಸಿಕೆಗೂ ಧನಸಹಾಯ ಬೇಕಾಗಿದೆ ಈ ಅಸಹ್ಯ ರೋಗನಿವಾರಣೆಯ ಧರ್ಮಸಹಾಯಕ್ಕೆ ಸರ್ವರೂ ಸಹಾಯಕರಾಗಬೇಕೆಂತ ಕೇಳಿಕೊಳ್ಳುತ್ತೇನೆ."

ಈ ವಿನಂತಿಯನ್ನು 1925ನೇ ಇಸವಿ ಜನವರಿ ಅಖೈರಿನಲ್ಲಿ ಪ್ರಕಟಿಸಿದರು. ಈಗಾಗಲೇ ಹನ್ನೊಂದು ಲಕ್ಷದ ಐವತ್ತು ಸಾವಿರ ರೂಪಾಯಿ ಜಮೆಯಾಗಿದೆಯಂತೆ. ನಮ್ಮ ದೇಶದ ಯಥಾಶಕ್ತಿ ಸಹಾಯ ಸಹ ದೊರಕಿಸಿಕೊಳ್ಳುವ ಉದ್ದೇಶದಿಂದ ತಾ. 24—4—25ರಲ್ಲಿ ಮಡಿಕೇರಿಯಲ್ಲಿ ನಡೆದ ರೆಡ್ ಕ್ರಾಸ್ ಸಂಘದ ಮೀಟಿಂಗಿನ ಸಮಯದಲ್ಲಿ ಕಮೀಶನರು ವೈಸ್‌ರಾಯರ ವಿನಂತಿಯನ್ನು ತಿಳಿಸಿ ಸಂಘದ ಉದ್ದೇಶಗಳನ್ನು ಸೂಕ್ಷ್ಮವಾಗಿ ವರ್ಣಿಸಿದರ ಮೇಲೆ ಕೆಲವು ಕಮಿಟಿ ಮೆಂಬರುಗಳನ್ನು ಆರಿಸಿಕೊಂಡರು. ಈ ಸದುದ್ದೇಶಕ್ಕೆ ದೇಶದವರು ಮುಖ್ಯವಾಗಿ ಅನುಕೂಲಸ್ಥರು ಕೈಲಾದ ಮಟ್ಟಿಗೆ ಸಹಾಯ ಮಾಡಬೇಕಾದದ್ದು ಅವರ ಕರ್ತವ್ಯವೆಂತ ನಮ್ಮ ಅಭಿಪ್ರಾಯವಾಗಿದೆ.

ಈ ಕುಷ್ಟರೋಗವು ನಮ್ಮ ದೇಶದಲ್ಲಿ ಹೆಚ್ಚಿನ ಜನರಿಗೆ ತಗಲಿರುವಂತೆ ಕಂಡುಬರುವದಿಲ್ಲ ಆದರೂ ಈ ರೋಗದಿಂದ ಪೀಡಿತರಿಲ್ಲವೆಂತ ಹೇಳಲು ಸಾಧ್ಯವಿಲ್ಲ. ಪೇಟೆಯಲ್ಲಿ ಅಲ್ಲಲ್ಲಿ ನೆಲ್ಲಗಾಗುವದಕ್ಕೂ ಕೆಲವರು ಕುಷ್ಟರೋಗವೆನ್ನುತ್ತಾರೆ ಆ ಕಷ್ಟ. ಇದು ಮೈಯಲ್ಲಿ ಅಲ್ಲಲ್ಲಿ ಹುಳಕಡಿಯಂತೆ ಪ್ರಾರಂಭವಾಗಿ ಕ್ರಮಕ್ರಮವಾಗಿ ಮಾಂಸವೇ ಕೊಳೆತು ಮೂಳೆಯು ಸಹ ತಿಂದು ಬಿಡುವ ಖಾಯಿಲೆಯಾಗಿದೆ. ಇದರಿಂದ ಮರಣ ಭಯವಿಲ್ಲದಿದ್ದರೂ ಈ ಖಾಯಿಲೆಯಿಂದ ಕೈಕಾಲುಗಳಿಗೆ ಹೀನ ಬಂದು ಅರೂಪವಾಗುವದು ಮಾತ್ರವಲ್ಲದೆ ಸಂಪರ್ಕಕ್ಕೆ ಯೋಗ್ಯರಲ್ಲವೆನಿಸಿಕೊಳ್ಳುತ್ತಾರೆ. ಆದ್ದರಿಂದ ಸಾವು ಕೂಡಲೇ ಬರದೆ ಇದ್ದರೂ ಇದು ತಗಲಿದ ಮನುಷ್ಯನು ಜೀವಚ್ಛವವೇ ಎಂದರೆ ಉತ್ಪ್ರೇಕ್ಷೆಯಾಗಲಾರದು.

ಈ ರೋಗವು ಒಂದಾವರ್ತಿ ತಗಲಿದರೆ ವಾಸಿಯೇ ಆಗುವದಿಲ್ಲವೆಂತ ಈ ವರೆಗೆ ತಿಳಿದಿದ್ದರು. ಹಿಂದುಗಳಂತೂ ಪೂರ್ವಜನ್ಮದ ಫಲವೆಂತಲೇ ಭಾವಿಸಿಕೊಂಡಿದ್ದಾರೆ. ಆದರೆ ಈಗ ಈ ರೋಗವನ್ನು ಪ್ರಾರಂಭವಾಗುವಾಗಲೇ ಕಂಡು ಹಿಡಿದುಕೊಂಡರೆ ವಾಸಿಮಾಡಬಹುದೆಂತ ನಿರ್ಧರಿಸಿದ್ದಾರೆ. ಯೂರೋಪ್ ದೇಶದಲ್ಲಿ ಈ ರೋಗವನ್ನು ನೂರಾರು ವರ್ಷಗಳ ಪ್ರಯತ್ನದಿಂದ ನಿರ್ಮೂಲ ಮಾಡಿದ್ದಾರೆ. ಜನತನವೂ, ಮೂರ್ಖತನವೂ ತುಂಬಾ ಹೆಚ್ಚಾಗಿ ಇರುವ ಹಿಂದುಸ್ಥಾನದಲ್ಲಿ ಸಹ ಮೂವತ್ತು ನಾಲ್ವತ್ತು ವರ್ಷಗಳೊಳಗೆ ಈ ರೋಗವನ್ನು ನಿರ್ಮೂಲ ಮಾಡಬಹುದೆಂತ ನಿರ್ಧರಿಸಿದ್ದಾರೆ.

ಈ ರೋಗ ನಿವಾರಣೆಗೆ ಅವರುಗಳು ಈ ಕೆಳಗಿನವೆಂತ ಹೇಳುತ್ತಾರೆ. ಸಾಧಾರಣ ಡಾಕ್ಟರುಗಳಿಗನೇ ಈ ರೋಗವು ಪ್ರಾರಂಭವಾದಾಗ ತಿಳಿದುಕೊಳ್ಳಲು ಆಗುವದಿಲ್ಲ. ಡಾಕ್ಟರುಗಳಿಗನೇ ತಿಳಿದುಕೊಳ್ಳಲು ಸಾಧ್ಯವಿಲ್ಲದಿರುವಾಗ ರೋಗಪೀಡಿತನಿಗೂ ಇಂಥಾ ಕಠಿಣ ರೋಗವು ತಗಲಿದ್ದು ಗೊತ್ತಾಗುವದಿಲ್ಲ. ಈ ರೋಗವಿದೆಯೆಂತ ತಿಳಿದರೆ ಸಮಾಜವು ಅವನನ್ನು ದೂರಪಡಿಸುವದರಿಂದ ರೋಗವು ಬಹಳ ಪ್ರಬಲವಾಗುವ ವರೆಗೆ ಗುಪ್ತವಾಗಿಯೇ ಇಟ್ಟುಕೊಳ್ಳುತ್ತಾರೆ. ಈ ವಿಷಯ 2-5-1925.

ಗಳಲ್ಲಿ ಡಾಕ್ಟರುಗಳಿಗೆ ತಿಳುವಳಿಕೆ ಕೊಡುವದಕ್ಕೂ, ಖಾಯಿಲಸ್ತರಿಗೆ ತಿಳುವಳಿಕೆ ಕೊಡುವದಕ್ಕೂ, ಈಗ ಇರುವ ಆಸ್ಪತ್ರೆಗಳಲ್ಲೇ ಈ ರೋಗಕ್ಕೆ ಚಿಕಿತ್ಸೆ ಕೊಡಲಿಕ್ಕೂ, ಬೇರೆ ಆಸ್ಪತ್ರೆಗಳನ್ನು ಅವಶ್ಯವಿದ್ದಲ್ಲಿ ಏರ್ಪಡಿಸಲಿಕ್ಕೂ, ಮತ್ತು ರೋಗಪೀಡಿತರಿಗೆ ತಮ್ಮ ಅನ್ನ ತಾವೇ ಒದಗಿಸಿಕೊಳ್ಳಲು ಸಾಧ್ಯವಿಲ್ಲದೆ ಹೋದಾಗ ಅವರನ್ನು ಪ್ರತ್ಯೇಕಿಸಿ ಇಟ್ಟು ಅವರ ಜೀವನೋಪಾಯ ನಡಿಸಲಿಕ್ಕೂ ಹಣಬೇಕಾಗಿದೆ. ಕಲ್ಕತ್ತಾದಲ್ಲಿ ಈ ರೋಗ ಪರೀಕ್ಷೆಯ ಮತ್ತು ಚಿಕಿತ್ಸೆಯ ಬಹಳ ದೊಡ್ಡದೊಂದು ಆಸ್ಪತ್ರೆಯಿದೆ ಅಲ್ಲಲ್ಲಿ ಕ್ರಿಶ್ಚಿಯನ್ ಮಿಶನರಿಗಳು ಏರ್ಪಡಿಸಿದ ಕುಷ್ಟರೋಗಿಗಳನ್ನು ಇಟ್ಟುಕೊಳ್ಳುವ ಮನೆಗಳಿವೆ. ಆದರೆ ಈಗ ಇರುವ ಅನುಕೂಲಗಳು ಖಾಯಿಲೆಯಿಂದ ಪೀಡಿತರ ಪೈಕಿ ಶೇಕಡ ಎರಡು ಸಂಖ್ಯೆಯವರಿಗೂ ಅನುಕೂಲ ದೊರೆಯುವದಿಲ್ಲವಂತೆ. ಕಳೆದ ಖಾನೆಷುಮಾರಿಯಲ್ಲಿ ಹಿಂದುಸ್ಥಾನದಲ್ಲಿ ಒಂದು ಲಕ್ಷ ಜನರು ಕುಷ್ಟರೋಗ ಪೀಡಿತರಿದ್ದರೆಂತ ಲೆಕ್ಕ ಸಿಕ್ಕಿದೆ. ಆದರೆ ಖಾಯಿಲೆ ಇರುವದು ತಿಳಿಯದೆಯೂ ನಾಚಿಕೆಯಿಂದಲೂ ಖಾನೆಷುಮಾರಿ ಸಿಕ್ಕದೆ, ಇರುವ ಸಂಖ್ಯೆ ಇನ್ನೂ ನಾಲ್ಕರಷ್ಟು ಇರಬಹುದೆಂತ ನಂಬಿದ್ದಾರೆ ಆದ್ದರಿಂದ ಹಿಂದುಸ್ಥಾನದ ಧನಿಕರು ಈ ರೋಗ ಪೀಡಿತರ ಕಷ್ಟ ನಿವಾರಣೆಗೆ ಧನಸಹಾಯ ಮಾಡಬೇಕಾದದ್ದು ಅತಿ ಅವಶ್ಯ.

ನಮ್ಮ ಈ ದೇಶದಲ್ಲಿ ಇದಕ್ಕಿಂತ ಹೆಚ್ಚು ಪ್ರಬಲವಾಗಿರುವ ಖಾಯಿಲೆಗಳು ಇರುವಾಗ ಇದಕ್ಕೆ ಯಾಕೆ ಸಹಾಯ ಮಾಡಬೇಕೆಂತ ಕೆಲವರಿಗೆ ತೋರ ಬಹುದು. ಕೆಲವು ದಿವಸಗಳ ಹಿಂದೆ ಕೊಡಗಿನಲ್ಲಿ ಇದ್ದ ಒಬ್ಬ ಕುಷ್ಟರೋಗಿಯನ್ನು ಕುಷ್ಟರೋಗಿಗಳನ್ನು ಇಟ್ಟಿರುವ ಯಾವದಾದರೂ ಆಸ್ಪತ್ರೆಗ ಕಳುಹಿಸಬೇಕೆಂದರೆ ಸಾಧ್ಯವಾಗಲಿಲ್ಲವೆಂತ ತಿಳಿಯುತ್ತೇವೆ. ಮಿಶನರಿಗಳು ಇಟ್ಟಿರುವ ಆಸ್ಪತ್ರೆಗಳಿಗೆ ಕ್ರಿಶ್ಚಿಯನರನ್ನು ಮಾತ್ರ ತೆಗೆದುಕೊಳ್ಳುತ್ತಾರಂತೆ. ಈ ರೀತಿ ಅನಾನುಕೂಲವಾಗುವದನ್ನು ತಪ್ಪಿಸಿ ಯಾವ ಜಾತಿಯವನಿಗಾದರೂ ಅನುಕೂಲ ದೊರಕುವಂತೆ ಮಾಡಬೇಕಾದರ ಧನಸಹಾಯ ಬೇಕಾಗಿದೆ ಸಮುದಾಯದ ಕಡಿಮೆ ದಾಮಾಶಾಹಿ ಜನರಿಗಾಗಿ ಸರಕಾರವು ಹೆಚ್ಚು ಹಣ ಖರ್ಚುಮಾಡಲಾರದು. ಆದ್ದರಿಂದ ಒಟ್ಟು ಹಿಂದುಸ್ಥಾನದ ರೋಗಿಗಳ ಕಷ್ಟ ನಿವಾರಣೆಗಾಗಿ ನಮ್ಮ ದೇಶದವರೂ ಸಹ ಯಥಾಶಕ್ತಿ ಸಹಾಯ ಮಾಡುವದು ಅವಶ್ಯವಾಗಿದೆ ನಮ್ಮ ದೇಶವು ಹಿಂದುಸ್ಥಾನದಿಂದ ಪ್ರತ್ಯೇಕವಾಗಿ ಇಲ್ಲ ಆದ್ದರಿಂದ ಹಿಂದುಸ್ಥಾನದ ಕಷ್ಟಸುಖಗಳಲ್ಲಿ ನಮ್ಮ ದೇಶವು ಸಮಭಾಗಿಯಾಗುವದು ನ್ಯಾಯವಾಗಿಯೂ ಇದೆ, ಅವಶ್ಯವಾಗಿಯೂ ಇದೆ

ಶ್ರೀ ರಾಮನವಮಿ.

ಶ್ರೀ ಮಹಾವಿಷ್ಣುವಿನ ಅವತಾರಗಳು ಅನಂತವಾಗಿ ಆಗಿರುವವು, ಇದರ ಅವುಗಳಲ್ಲಿ ಹತ್ತು ಅವತಾರಗಳು ಪ್ರಸಿದ್ಧವಾಗಿರುತ್ತವೆ. ಈ ಎಲ್ಲಾ ಅವತಾರಗಳೂ ಧರ್ಮರಕ್ಷಣೆಗಾಗಿ ಆದವುಗಳಾದ್ದರಿಂದ ಸಾಧಕರು ಅವುಗಳು ಆದ ಕಾಲ, ಆಗ ನಡೆದ ಲೀಲೆ ಮುಂತಾದವುಗಳನ್ನು ಆಗಾಗ್ಯೆ ಸ್ಮೃತಿಪಥಕ್ಕೆ ತಂದುಕೊಳ್ಳುತ್ತಿರುವದು ಒಳ್ಳೆಯದು. ಚೈತ್ರದಲ್ಲಿ ಮತ್ಸ್ಯಾವತಾರವೂ ರಾಮಾವತಾರವೂ ಆದವು; ವೈಶಾಖದಲ್ಲಿ ಪರಶುರಾಮ, ನರಸಿಂಹ, ಮತ್ತು ಕೂರ್ಮ-ಈ ಅವತಾರಗಳಾದವು; ಶ್ರಾವಣದಲ್ಲಿ ಕಲ್ಕಿ, ಕೃಷ್ಣ-ಈ ಅವತಾರಗಳಾದವು; ಭಾದ್ರಪದದಲ್ಲಿ ವರಾಹಾವತಾರವೂ ವಾಮನಾವತಾರವೂ ಸಂಭವಿಸಿದವು; ಆಶ್ವಯುಜದಲ್ಲಿ ಬೌದ್ಧಾವತಾರವು ಆಯಿತು ಈ ಅವತಾರವಾದ ದಿನಗಳನ್ನು ಜಯಂತಿಗಳೆಂದು ಕರೆಯುವದು ರೂಢಿಯಲ್ಲಿದೆ. ನಮ್ಮ ದೇಶದಲ್ಲಿ ರಾಮಕೃಷ್ಣ ಜಯಂತಿಗಳಲ್ಲಿ ಬಹು ಜನರು ಪೂಜಾದಿಗಳನ್ನು ವಿಶೇಷವಾಗಿ ನಡೆಸುವರು. ನರಸಿಂಹವಾಮನಜಯಂತಿಗಳನ್ನೂ ಕೆಲವರು ಆಚರಿಸುವರು. ಈ ಲೇಖನದಲ್ಲಿ ಶ್ರೀರಾಮನ ಜನ್ಮ ದಿನವನ್ನು ಮುಮುಕ್ಷುಗಳು ಹೇಗೆ ಕಳೆಯುವದು ಒಳ್ಳೇಯದೆಂದು ಶಾಸ್ತ್ರಕಾರರು ಹೇಳಿರುವರೋ ಅದನ್ನು ವಾಚಕರ ಮುಂದೆ ಇಡುವೆವು

ಭಗವಂತನ ಅವತಾರವಾದದ್ದು ಮುಖ್ಯವಾಗಿ ಧರ್ಮದ ಉದ್ಧಾರಕ್ಕಾಗಿ; ಮಿಕ್ಕ ಸಂಗತಿಗಳು ನಿಮಿತ್ತಮಾತ್ರವಾಗಿವೆ ಆದ್ದರಿಂದ ಈ ಜಯಂತಿಗಳಲ್ಲಿ ಧರ್ಮಕಾರ್ಯಗಳನ್ನು ವಿಶೇಷವಾಗಿ ನಡಸಬೇಕಾದದ್ದು ಯುಕ್ತವಾಗಿದೆ ಇಂಥಾ ಶುಭಕಾಲದಲ್ಲಿ ಸಾಕ್ಷಾದ್ಧರ್ಮಮೂರ್ತಿಯಾದ ಭಗವಂತನನ್ನು ನೆನಸಿಕೊಳ್ಳುತ್ತಲೂ ಭಗವದ್ಭಾವನೆಗೆ ತಕ್ಕ ಸ್ಥಿತಿಗೆ ಮನಸ್ಸು ಬರುವಂತೆ ಹೆಚ್ಚಾಗಿ ಪ್ರಯತ್ನಮಾಡುತ್ತಲೂ ಇರಬೇಕು. ಉದಾಹರಣೆಗೆ ಪರಮಾತ್ಮನು ರಾಮಾವತಾರಮಾಡಿದ ಶುಭದಿನವು ನವಮಿ

ಶ್ಲೋ॥ ಚೈತ್ರೇ ನವಮ್ಯಾಂ ಪ್ರಾಕ್ಪಕ್ಷೇ ದಿವಾ ಪುಣ್ಯೇ ಪುನರ್ವಸೌ ।
ಉದಯೇ ಗುರುಗೌರಾಂಶ್ಚೋಃ ಸ್ವೋಚ್ಚಸ್ಥೇ ಗ್ರಹಪಂಚಕೇ ॥
ಮೇಷಂ ಪೂಷಣಿ ಸಂಪ್ರಾಪ್ತೇ ಲಗ್ನೇ ಕರ್ಕಟಕಾಹ್ವಯೇ ।
ಆವಿರಾಸೀತ್ಸ ಕಲಯಾ ಕೌಸಲ್ಯಾಯಾಂ ಪರಃ ಪುಮಾನ್ ॥

(ಚೈತ್ರಶುಕ್ಲ ನವಮಿಯ ಹಗಲು ಪುನರ್ವಸು ನಕ್ಷತ್ರದಲ್ಲಿ ಕರ್ಕಾಟಕಲಗ್ನದಲ್ಲಿ ಶುಭಮುಹೂರ್ತದಲ್ಲಿ ಪರಮಪುರುಷನಾದ ಶ್ರೀರಾಮನು ಅವತೀರ್ಣನಾದನು)

ಆದ್ದರಿಂದ ಆ ನವಮಿಯ ದಿನ ಉಪವಾಸವನ್ನೂ ಜಾಗರಣೆಯನ್ನೂ ಮಾಡಬೇಕು. ಪುನರ್ವಸುನಕ್ಷತ್ರವು ಕೆಲವು ವೇಳೆ ಎರಡು ದಿನವೂ ಬರುವದುಂಟು. ಕೆಲವು ವೇಳೆ ಎರಡು ದಿನದಲ್ಲಿಯೂ ಮಧ್ಯಾಹ್ನಭಾಗಕ್ಕೆ ಹತ್ತಿಕೊಂಡು ಇರುವದು ಅಥವಾ ಮಧ್ಯಾಹ್ನಭಾಗ ಪೂರ ಇರುವದು. (ಹಗಲಿನ ಐದನೆಯ ಭಾಗಗಳಲ್ಲಿ ಒಂದನೆಯ ಅಂಶವು ಪ್ರಾತಃಕಾಲ, ಎರಡನೆಯ ಅಂಶವು ಸಂಗಮಕಾಲ, ಮೂರನೆಯದು ಮಧ್ಯಾಹ್ನ.) ಮಧ್ಯಾಹ್ನದಲ್ಲಿ ಹೀಗೆ ಎರಡು ದಿನವೂ ಪುನರ್ವಸು ನಕ್ಷತ್ರದ ಸಂಬಂಧವಿದ್ದರೆ ಎರಡನೆಯ ದಿನವನ್ನೇ ಜಯಂತಿಗೆ ತೆಗೆದುಕೊಳ್ಳಬೇಕೆಂದು ಅಗಸ್ತ್ಯಸಂಹಿತೆಯಲ್ಲಿ ಹೇಳಿದೆ. ಇದೇ ಮೊದಲಾದ ಶಾಸ್ತ್ರವಚನಗಳಿಂದ ಜಯಂತಿಯ ದಿನವನ್ನು ಗೊತ್ತುಮಾಡಿಕೊಂಡು ಅದರ ಪೂರ್ವದ ದಿನವೇ ಭಗವದಾರಾಧನೆಗೆ ಸಿದ್ಧನಾಗಬೇಕು. ಇದರ ವಿವರವನ್ನು ಶಾಸ್ತ್ರಕಾರರು ಹೇಳಿರುವ ಬಗೆ ಏನೆಂದರೆ-ಅಷ್ಟಮಿಯ ದಿನ ತಾವು ಎಂದಿನಂತೆ ಸ್ನಾನಮಾಡಿ ಪೂಜಾದಿಗಳನ್ನು ನಡೆಸಬೇಕು. ಯೋಗ್ಯನಾದ ಒಬ್ಬ ಬ್ರಾಹ್ಮಣನನ್ನು ಮನೆಗೆ ಕರೆತರಬೇಕು. ಈ ಸಂದರ್ಭಕ್ಕೆ ಅವನಿಗೆ ಬೇಕಾದ ಮೊದಲನೆಯ ಯೋಗ್ಯತೆ ಏನೆಂದರೆ, ಆ ಬ್ರಾಹ್ಮಣನು ಇಂದ್ರಿಯವಶನಾಗಿರಬಾರದು ಏಕೆಂದರೆ ವಿಷಯಗಳಲ್ಲಿಯೇ ಆಸಕ್ತಿಯುಳ್ಳವರಾಗಿ ಚಪಲರಾಗಿರುವವರ ಆರಾಧನೆಯಿಂದ ನಮಗೆ ಉತ್ತಮಫಲವೇನೂ ದೊರೆಯಲಾರದು ಎರಡನೆಯದು ಆತನು ಕುಟುಂಬಿಯಾಗಿರಬೇಕು, ಮಕ್ಕಳುಮರಿಗಳಿಲ್ಲದೆ ಸಿಕ್ಕಿದಂತೆ ಅಲೆಯುತ್ತಿರುವವರಿಗೆ ಜಿತೇಂದ್ರಿಯತ್ವವು ಇರುವ ಸಂಭವವು ಕಡಿಮೆ. ಮೂರನೆಯದು, ಆತನು ವೇದಶಾಸ್ತ್ರಪರನಾಗಿರಬೇಕು ಯಾರು ಶಾಸ್ತ್ರಾದಿಗಳನ್ನು ಓದಿ ಉತ್ತಮಸಂಸ್ಕಾರವನ್ನು ಹೊಂದಿರುವರೋ ಅವರಲ್ಲಿ ಉತ್ತಮಸ್ವಭಾವವೇ ಮೂಡುವದು. ಇದೂ ಅಲ್ಲದೆ ಈ ದಿನದ ಅತಿಥಿಯು ಮುಖ್ಯವಾಗಿ ಶ್ರೀರಾಮಭಕ್ತನಾಗಿರಬೇಕು, ಬರಿಯ ಬಾಯಿವೇದಾಂತವನ್ನು ಹೇಳುವ ದುರ್ಮಿತ್ರಬ್ರಾಹ್ಮಣನಿಂದೇನು ಪ್ರಯೋಜನ? ಶ್ರೀರಾಮಮಂತ್ರವನ್ನು ಜಪಿಸುತ್ತ ಶ್ರೀರಾಮಧ್ಯಾನದಿಂದಲೇ ತಾನು ಕೃತಕೃತ್ಯನೆಂದು ಭಾವಿಸುವ ಪುಣ್ಯಾತ್ಮನನ್ನು ಕರೆಯಬೇಕು, ತಾನು ಆರಾಧಿಸುವ ಇಷ್ಟದೇವತೆಯಲ್ಲಿ ಪರಮಭಕ್ತಿಯುಳ್ಳ ಮಹಾತ್ಮನ ಸಂಗವೇ ಈಶ್ವರಾರಾಧನೆಯಾಗುವದು ಆದ್ದರಿಂದ ಇಂಥ ಗುಣಗಳುಳ್ಳ ಶ್ರೀರಾಮಭಕ್ತನನ್ನು ಅವಶ್ಯವಾಗಿ ಹುಡುಕಿ ತರಬೇಕು ಅತ್ಯುತ್ತಮನಾದ ಸಾಧುವು ಸಿಕ್ಕದಿದ್ದರೆ ಕೆಟ್ಟಗುಣಗಳಿಲ್ಲದೆ ಶ್ರೀರಾಮಭಕ್ತಿಯನ್ನು ಸಂಪಾದಿಸಬೇಕೆಂಬ ಕುತೂಹಲವಾದರೂ ಇರುವಾತನನ್ನು ಕರೆದುಕೊಂಡು ಬರಬೇಕು, ಅಂಥ ಬ್ರಾಹ್ಮಣನಿಗೆ ಸ್ನಾನಾದಿಗಳಿಂದ ಉಪಚಾರಮಾಡಿ ಶ್ರೀರಾಮಮಂತ್ರವನ್ನು ಆತನೊಡನೆ ಮಾಡುತ್ತಿದ್ದು ಮೇಲೆ ಹೇಳಿದಂತೆ ಮಾರನೆಯ ದಿನದ ಉಪವಾಸ, ಜಾಗರಣೆ-ಇವುಗಳಿಗೆ ಸಿದ್ಧನಾಗಬೇಕು

ಉಪವಾಸವೆಂದರೆ ಹೊಟ್ಟೆಗೇನೂ ತೆಗೆದುಕೊಳ್ಳದೆ ಸಂಕಟ ಪಡುತ್ತಾ ಕೂತುಕೊಳ್ಳುವದೂ ಅಲ್ಲ, ಫಲಹಾರವೆಂಬ ನೆವದಿಂದ ಕೋಸಂಬರಿ ಪಾನಕ-ಮುಂತಾದವುಗಳನ್ನು ಮಿತಿಮೀರಿ ತಿಂದು ಶರೀರಕ್ಕೆ ರೋಗರುಜಿನವನ್ನು ಕಟ್ಟಿಕೊಳ್ಳುವದೂ ಅಲ್ಲ. ಕೈಲಾದಮಟ್ಟಿಗೆ ನಿರಾಹಾರನಾಗಿ ಶ್ರೀರಾಮಚಿಂತನೆಯಿಂದ ಭಗವತ್ಸಮೀಪದಲ್ಲಿ ಮನಸ್ಸು ವಾಸಮಾಡುವಂತೆ ನಡೆಸುವ ಪ್ರಯತ್ನವೇ ಉಪವಾಸವು. ಶ್ರೀರಾಮನವಮಿಯ ದಿನ ಶ್ರೀರಾಮಪ್ರತಿಮೆಯನ್ನು ಪೂಜೆಮಾಡಿ ದಾನಮಾಡುವದು ಪುಣ್ಯಕರವು ಮನೆಯ ಉತ್ತರಭಾಗದಲ್ಲಿ ನಾಲ್ಕು ಬಾಗಿಲು ಧ್ವಜ, ಮೇಲುಕಟ್ಟು, ತಳಿರುತೋರಣ ಪುಷ್ಪಾದಿಗಳು-ಇವುಗಳಿಂದ ಕೂಡಿ ಮನೋಹರವಾಗಿರುವಂತೆ ಒಂದು ಮಂಟಪವನ್ನು ರಚಿಸಿ ನಾಲ್ಕು ಬಾಗಿಲುಗಳಲ್ಲಿಯೂ ಶಂಖ, ಚಕ್ರ, ಗದೆ, ಪದ್ಮ-ಎಂಬ ಆಯುಧಗಳನ್ನೂ ಹನುಮಂತನೇ ಮುಂತಾದ ಸೇವಕರನ್ನೂ ಕಲ್ಪಿಸಿ ನಡುವೆ ನಾಲ್ಕು ಹಸ್ತಪ್ರಮಾಣದ ವೇದಿಕೆಯನ್ನು ರಚಿಸಬೇಕು ಸರ್ವತೋಭದ್ರವೆಂಬ ಮಂಡಲವನ್ನು ಬರೆದು ಅದರ ನಡುವೆ ಒಂದು ಕಲಶವನ್ನಿಡಬೇಕು. ಆ ಕಲಶದ ಮೇಲೆ ಷಟ್ಕೋಣಾಕೃತಿಯನ್ನು ಬರೆದು ತನ್ನ ಶಕ್ತಿಗೆ ಅನುಸಾರವಾಗಿ ಒಂದು ಶ್ರೀರಾಮನ ಚಿನ್ನದ ಪ್ರತಿಮೆಯನ್ನು ಮಾಡಿಸಿ ಇಡಬೇಕು ವಿಗ್ರಹವು ಎರಡು ಭುಜಗಳಿಂದ ಕೂಡಿ ಬಲಗೈಯಲ್ಲಿ ಜ್ಞಾನಮುದ್ರೆಯನ್ನು ಧರಿಸಿರಬೇಕು! ಸೀತಾಸಮೇತನಾದ ಶ್ರೀರಾಮನನ್ನು ಅದರಲ್ಲಿ ಆವಾಹನೆಮಾಡಿ, ವಿಧಿಯಲ್ಲಿರುವಂತೆ ಹದಿನಾರು ಉಪಚಾರಗಳನ್ನೂ ಭಕ್ತಿಯಿಂದ ಮಾಡಿ ಮುಗಿಸಬೇಕು. ಆಮೇಲೆ ರಾಮಕಥಾಶ್ರವಣ, ರಾಮಭಕ್ತರ ಸಹವಾಸ, ನೃತ್ಯಗೀತಗಳು-ಈರೀತಿಯಿಂದ ಹಗಲೆಲ್ಲ ಕಳೆಯಬೇಕು.

ಇದರಂತೆಯೇ ರಾತ್ರಿ ಜಾಗರಣೆ ಮಾಡಬೇಕು. ಜಾಗರಣೆ ಎಂದರೆ ವ್ಯವಹಾರಕ್ಕೆ ಬೀಳದೆ ಪರಮಾರ್ಥವಿಚಾರದಿಂದ ಎಚ್ಚರವಲ್ಲಿಯೇ ಇರುವದು. ಸಾಮಾನ್ಯವಾಗಿ ಪ್ರಾಪಂಚಿಕರು ಬಂದಿಲ್ಲದಿದ್ದರೆ ಮತ್ತೊಂದು ವಿಷಯವನ್ನು ಉಪಭೋಗಿಸುತ್ತ ಕಾಲವನ್ನು ಕಳೆಯುತ್ತಿರುವರಾದುದರಿಂದ, ಅವರಿಗೆ ಗೊತ್ತೇ ಇಲ್ಲದಂತೆಯೇ ಅವರು ಪ್ರಪಂಚದ ಪಾತಿಗೆ ಬಾಯಿಹಾಕುವರು. ಇದೇ ನಿದ್ರೆಯು ಈ ದಿನ ಮಿತಹಾರದಿಂದಲೂ ಶ್ರೀರಾಮಚಿಂತನದಿಂದಲೂ ಅಲೌಕಿಕವಿಚಾರಗಳನ್ನು ಮನಸ್ಸಿಗೆ ಹೆಚ್ಚಾಗಿ ಹತ್ತಿಸಿಕೊಳ್ಳದೆ ಇರಬೇಕು, ಆ ವಿಷಯದಲ್ಲಿ ಜಾಗರೂಕನಾಗಿರುವದೇ ಜಾಗರಣೆ ಹಗಲು ಕಾಲ ಕಳೆದಂತೆಯೇ ರಾತ್ರಿಯೂ ಶ್ರೀರಾಮಚಿಂತೆಯಲ್ಲಿಯೇ ಇರಬೇಕು; ಆಟಪಾಟ ಮುಂತಾದವುಗಳಿಂದ ನಿದ್ರೆಗೆಟ್ಟರೆ ಅದು

ಎಂದಿಗೂ ಬಾಗಿಲಹಾಕಿಸಬಾರದು.

ಪೂರ್ಣಿಮೆಯದಿನ ಸ್ನಾನಸಂಧ್ಯಾದಿಗಳನ್ನು ತೀರಿಸಿಕೊಂಡು ದೇವತಾರ್ಚನೆಯನ್ನು ಮಾಡಿ, ಮಂತ್ರದಿಂದ ಹೋಮವನ್ನು ಮಾಡಿ ತಾನು ಮೊದಲೇ ಕರೆತಂದಿದ್ದ ಶ್ರೀರಾಮಭಕ್ತನನ್ನು ಬಹುವಿಧವಾಗಿ ಅರ್ಚಿಸಿ, ಶ್ರೀರಾಮಪ್ರತಿಮೆಯನ್ನು ದಾನಮಾಡಬೇಕು, ಅನುಕೂಲವಿದ್ದಂತೆ ರಾಮಭಕ್ತರಿಗೆ ಸಂತರ್ಪಣೆಯನ್ನೂ ಮಾಡಿಸಬೇಕು.

ಮುಖ್ಯವಾಗಿ ಆಯಾ ಕುಟುಂಬದಲ್ಲಿರುವ ಅನುಕೂಲತೆಗಳನ್ನನುಸರಿಸಿ ಮಂಗಳವಾದ್ಯಅಲಂಕಾರಗಳೂ ಪೂಜಾಸಂಭಾರಗಳೂ ದಾನಾದಿಗಳೂ ಏರ್ಪಡಬೇಕಾಗಿರುವದರಿಂದ ಆ ವಿಷಯದಲ್ಲಿ ಇಷ್ಟಿಷ್ಟೇ ಮಾಡಬೇಕೆಂದು ಯಾರಿಂದಲೂ ಕಟ್ಟುಮಾಡಲು ಸಾಧ್ಯವಿಲ್ಲ. ಆದರೆ ಇಷ್ಟು ಮಾತ್ರ ಪ್ರಯತ್ನಪಡುವದು ಎಲ್ಲರಿಗೂ ಸಾಧ್ಯವಾಗಿರುವದು, ಮತ್ತು ಅಗತ್ಯವಾಗಿರುವದು: ಅಷ್ಟಮಿಯಿಂದ ದಶಮಿಯವರೆಗೆ ಮುಖ್ಯವಾಗಿ ಶ್ರೀರಾಮಚಿಂತನ, ಶ್ರೀರಾಮಪೂಜನೆ, ಶ್ರೀರಾಮಕಥಾಶ್ರವಣ, ಶ್ರೀರಾಮಭಜನ, ಶ್ರೀರಾಮಭಕ್ತರ ಸೇವೆ-ಇವುಗಳೇ ಪ್ರಚುರವಾಗಿದ್ದು ಸರ್ವವೂ ಶ್ರೀರಾಮಮಯವಾಗಿರಬೇಕು. ಪ್ರತಿಮಾದಾನದ ಶ್ಲೋಕವನ್ನು ನೋಡಿದರೆ ಈ ಅರ್ಥವು ಸ್ಪಷ್ಟವಾಗುವುದು.

ಶ್ಲೋ || ಇಮಾಂ ಸ್ವರ್ಣಮಯೀಂ ರಾಮಪ್ರತಿಮಾಂ ಸಮಲಂಕೃತಾಂ |
ಚಿತ್ರವಸ್ತ್ರಯುಗಚ್ಛನ್ನಾಂ ರಾಮೋಽಹಂ ರಾಘವಾಯ ತೇ |
ಶ್ರೀರಾಮಪ್ರೀತಯೇ ದಾಸ್ಯೇ ತುಷ್ಟೋ ಭವತು ರಾಘವಃ ||

(ಭಾವಾರ್ಥ.—ಈ ಚಿನ್ನದ ರಾಮಪ್ರತಿಮೆಯನ್ನು ಚೆನ್ನಾಗಿ ಅಲಂಕಾರಮಾಡಿ, ವಿಚಿತ್ರವಾದ ವಸ್ತ್ರದ್ವಯವನ್ನು ಹೊದ್ದಿಸಿ, ರಾಮರೂಪನಾದ ನಾನು ರಾಮರೂಪಿಯಾದ ನಿನಗೆ ಶ್ರೀರಾಮಪ್ರೀತಿಗಾಗಿ ಕೊಡುತ್ತಲಿರುವೆನು; ಇದರಿಂದ ಶ್ರೀರಾಮನು ಪ್ರೀತನಾಗಲಿ)

ಹೀಗೆ ತನ್ನಲ್ಲಿಯೂ ಪ್ರಪಂಚದಲ್ಲಿಯೂ ಎಲ್ಲೆಲ್ಲಿಯೂ ಭಗವಂತನನ್ನೇ ಕಾಣುವಂಥ ಮಹನೀಯರೇನು ಧನ್ಯರು. ನಮಗೆ ಮತ್ತೆ ಯಾವ ಅನುಕೂಲಗಳು ಇರಲಿ, ಇಲ್ಲದಿರಲಿ, ಶ್ರೀರಾಮನವಮಿಯ ದಿನ ಮುಖ್ಯವಾಗಿ ಶ್ರೀರಾಮಭಾವನೆಯು ನಮ್ಮಲ್ಲಿ ಪೂರ್ಣವಾಗಿ ಮೈಗೂಡುವಂತೆ ನಾವು ಸ್ಮರಣೆಯನ್ನಾದರೂ ಮಾಡಿದರೆ ಶ್ರೀರಾಮನವಮಿಯ ಉತ್ಸವವು ಸರ್ವವಿಧದಲ್ಲಿಯೂ ಪರಿಪೂರ್ತಿಯಾದಂತಾಗುವದೆಂಬದರಲ್ಲಿ ಸಂದೇಹವಿಲ್ಲ.

"ಅ. ನ."

ಮನುಷ್ಯದೇಹದ ಸಾಮಾನ್ಯ ಅನುಭವಗಳು.

ನಮ್ಮ ದೇಹದ ಯಾವ ಯಾವ ಭಾಗಗಳು ಎಲ್ಲೆಲ್ಲಿ ಹೇಗೆ ರಚಿಸಲ್ಪಟ್ಟಿವೆ? ಅವು ಯಾವ ಯಾವ ಕೆಲಸಗಳನ್ನು ಮಾಡುತ್ತವೆ? ಎಂಬೀ ವಿಷಯಗಳನ್ನು ನಾವು ಮನುಷ್ಯದೇಹಶಾಸ್ತ್ರವನ್ನು ಓದುವುದರಿಂದ ತಿಳಿದುಕೊಳ್ಳುತ್ತೇವೆ. ಕಣ್ಣುಗಳು, ಮೂಗು, ಬಾಯಿ, ಕಿವಿಗಳು, ಇವು ನಮ್ಮ ಶರೀರದ ಬೇರೆ ಬೇರೆ ಭಾಗಗಳು. ಇವುಗಳಲ್ಲಿ ಒಂದೊಂದು ಭಾಗವೂ ಪ್ರತ್ಯೇಕ ಕೆಲಸಗಳನ್ನು ಮಾಡುತ್ತದೆ. ನಾವು ಕಣ್ಣುಗಳಿಂದ ನೋಡುತ್ತೇವೆ. ವಸ್ತುಗಳ ಪರಿಮಳವನ್ನು ಅಥವಾ ವಾಸನೆಯನ್ನು ಗೊತ್ತುಹಚ್ಚಲಿಕ್ಕೆ ನಮಗೆ ಮೂಗು ಉಂಟು. ನಾವು ಬಾಯಿಂದ ತಿನ್ನುತ್ತೇವೆ, ಕಿವಿಗಳಿಂದ ಕೇಳುತ್ತೇವೆ, ಕೈಗಳಿಂದ ಕೆಲಸ ಮಾಡುತ್ತೇವೆ. ಕಣ್ಣು ಮಾಡುವ ಕೆಲಸವನ್ನು ಕೈ ಮಾಡಲಾರದು. ಬಾಯಿಂದ ಆಗುವ ಕೆಲಸವು ಕಿವಿಯಿಂದ ಆಗುವುದಿಲ್ಲ. ಕಾಲಿನಿಂದ ಆಗುವ ಕೆಲಸಗಳು ಎದೆ ಅಥವಾ ಹೊಟ್ಟೆಯಿಂದ ಆಗಲಾರವು. ಹೀಗೆ ನಮ್ಮ ಶರೀರದ ಒಂದೊಂದು ಭಾಗಕ್ಕೆ ಒಂದೊಂದು ಪ್ರತ್ಯೇಕ ಕೆಲಸವಿದ್ದೇ ಇರುತ್ತದೆ. ನಮ್ಮ ಪ್ರಾಣವನ್ನು ಕಾಪಾಡುವದಕ್ಕೆ ಅಗತ್ಯವಿದ್ದ ಬೇರೆಬೇರೆ ಕೆಲಸಗಳನ್ನು ಮಾಡುತ್ತಿರುವ ನಮ್ಮ ದೇಹದ ಬೇರೆ ಬೇರೆ ಭಾಗಗಳಿಗೆ ಅಂಗಗಳು ಎಂದು ಹೆಸರು. ತಲೆ, ಎದೆ, ಬೆನ್ನು, ಹೊಟ್ಟೆ, ಕೈಕಾಲುಗಳು, ಇವು ನಮ್ಮ ದೇಹದಲ್ಲಿರುವ ಕೆಲವು ಅಂಗಗಳಾಗಿವೆ. ದೇಹದ ದೊಡ್ಡ ಭಾಗಗಳಿಗೆ "ಅಂಗಗಳು" ಎಂದೂ, ಚಿಕ್ಕ ಚಿಕ್ಕ ಭಾಗಗಳಿಗೆ "ಉಪಾಂಗಗಳು" ಎಂದೂ ಹೆಸರು ಕೊಟ್ಟಿರುವರು. ತಲೆ ಎಂಬ ಅಂಗದಲ್ಲಿ ಕಣ್ಣು, ಕಿವಿ, ಮೂಗು, ಬಾಯಿ, ತುಟಿ, ಕೆನ್ನೆ, ಹಲ್ಲು, ನಾಲಗೆ ಎಂಬ ಹಲವು ಉಪಾಂಗಗಳು ಇರುತ್ತವೆ. ಹೀಗೆಯೇ ನಮ್ಮ ತೋಳಿನಲ್ಲಿ ರಟ್ಟೆ, ಮೊಣಕೈ, ಮುಂಗೈ, ಅಂಗೈ, ಬೆರಳುಗಳು ಎಂಬ ಉಪಾಂಗಗಳು ಉಂಟು. ಹೀಗೆ ನಮ್ಮ ಶರೀರದಲ್ಲಿ ಬೇರೆ ಬೇರೆ ಅಂಗಗಳೂ, ಉಪಾಂಗಗಳೂ ಇರುವುವು.

ನಮ್ಮ ದೇಹದ ಅಂಗೋಪಾಂಗಗಳಲ್ಲಿ, ಕೆಲವು ನಮ್ಮ ಕಣ್ಣಿಗೆ ಕಾಣುವಂತೆ ದೇಹದ ಹೊರಗೂ, ಕೆಲವು ನಮ್ಮ ಕಣ್ಣಿಗೆ ಕಾಣಿಸದಂತೆ ಶರೀರದ ಒಳಗೂ, ಭದ್ರವಾಗಿ ಇಡಲ್ಪಟ್ಟಿವೆ. ತಲೆ, ಎದೆ, ಹೊಟ್ಟೆ, ಬೆನ್ನು, ಕಿವಿ, ಮೂಗು, ಕಣ್ಣು, ಬಾಯಿ, ಕೈಕಾಲುಗಳು ಇವೆಲ್ಲಾ ಹೊರಗಿರುವ ಅಂಗಗಳು. ನಾಲಗೆ, ಹಲ್ಲು, ಎದೆಗುಂಡಿಗೆ, ಶ್ವಾಸಕೋಶಗಳು, ಅನ್ನಕೋಶ, ಕರುಳುಗಳು, ಕಾಳಿಜ, ಮೂತ್ರಕೋಶ, ಮೂತ್ರ[illegible]ಗ, ಒಳಗಿರುವ ಅಂಗಗಳು. ನಮ್ಮ ದೇಹದಲ್ಲಿರುವ ಬೇರೆ ಬೇರೆ ಅಂಗಗಳು ಅವರ ಬೇರೆ ಬೇರೆ ಭಾಗಗಳಲ್ಲಿ ಇರುವುವಾದರೂ, ಅವು ತಮ್ಮ ತಮ್ಮ ಕೆಲಸಗಳನ್ನು ತಪ್ಪದೆ ಮಾಡುತ್ತವೆಂಬುದು ಮಾತ್ರವಲ್ಲ, ಇವು ದೇಹದ ಇತರ ಅಂಗಗಳಿಗೂ ಸಹಾಯಮಾಡುತ್ತವೆ. ಮನೆಯ ಕೆಲಸಗಳನ್ನು ಮಾಡಿಸಲಿಕ್ಕೆ ಮನೆಗೆ ಒಬ್ಬ ಯಜಮಾನನು ಇರುವಂತೆ, ನಮ್ಮ ದೇಹದ ಅಂಗೋಪಾಂಗಗಳ ಕೆಲಸಗಳನ್ನು ನಡೆಸಲಿಕ್ಕೆ ನಮ್ಮ ತಲೆಬುರುಡೆಯೊಳಗೆ ಮಿದುಳೆಂಬ ಯಜಮಾನನು ಇರುತ್ತಾನೆ. ಇವನು ದೇಹವೆಂಬ ಮನೆಯ ಎಲ್ಲಾ ಕೆಲಸಗಳನ್ನೂ ತನ್ನ ಆಳುಗಳೆಂಬ ಅಂಗೋಪಾಂಗಗಳ ಸಹಾಯದಿಂದ ಸುಸೂತ್ರವಾಗಿ ಮಾಡಿಸುವನು. ಇವನ ಅಪ್ಪಣೆಯನ್ನು ಕೇಳಿಕೊಂಡು ದೇಹವೆಂಬಮನೆಯೊಳಗಿರುವ ಅಂಗೋಪಾಂಗಗಳು ತಮ್ಮ ಕೆಲಸಗಳನ್ನು ತಪ್ಪದೆ ಮಾಡುವುವು. ಇಷ್ಟೇ ಅಲ್ಲ! ದೇಹದ ಇತರ ಅಂಗಗಳಿಗೆ ಅಪಾಯವು ಸಂಭವಿಸಿದರೆ, ಅದನ್ನು ಹೋಗಲಾಡಿಸಲಿಕ್ಕೆ ಪ್ರತಿಯೊಂದು ಅಂಗವೂ ಪ್ರಯತ್ನಮಾಡುತ್ತದೆ. ನಾವು ನಡೆಯುವಾಗ ನಮ್ಮ ಕಣ್ಣಿಗೆ ಥಕ್ಕನೆ ಕಸ ಅಥವಾ ಧೂಳು ಬಿದ್ದೊಡನೆ ಅದನ್ನು ತೆಗೆಯಲಿಕ್ಕೆ ನಮ್ಮ ಕೈಬೆರಳುಗಳು ಕಣ್ಣಿನ ಹತ್ತಿರ ಹೋಗಿ, ಆ ಕಸ, ಅಥವಾ ಧೂಳನ್ನು ಕಣ್ಣಿಂದ ಹೊರಗೆ ತೆಗೆಯಲಿಕ್ಕೆ ಸಹಾಯ ಮಾಡುತ್ತವೆ. ಕಾಲಿಗೆ ಮುಳ್ಳು ಚುಚ್ಚಿಕೊಂಡರೆ, ಕಾಲಿನಿಂದ ಆ ಮುಳ್ಳನ್ನು ತೆಗೆಯಲಿಕ್ಕೆ ನಮ್ಮ ಕೈಗಳೆ ಒತ್ತಾಸೆ ಮಾಡುವುವು. ನಮ್ಮ ಮೈಗೆ ಪೆಟ್ಟು ಬೀಳುವಾಗ ಅದನ್ನು ತಪ್ಪಿಸಲಿಕ್ಕೆ ನಮ್ಮ ಕೈಗಳು ಅಡ್ಡವಾಗಿ ಬರುವುವು. ಹೀಗೆ ನಮ್ಮ ದೇಹದ ಪ್ರತಿ ಒಂದು ಅಂಗವೂ ತನ್ನ ತನ್ನ ಕೆಲಸವನ್ನು ಮಾಡುವುದಲ್ಲದೆ, ಅದು ನಮ್ಮ ದೇಹದ ಬೇರೆ ಅಂಗಗಳಿಗೆ ಬರುವ ಅಪಾಯಗಳನ್ನೂ ತಪ್ಪಿಸಲಿಕ್ಕೆ ನೋಡುತ್ತದೆ.

ನಮ್ಮ ದೇಹದ ಕೆಲವು ಅಂಗಗಳಿಗೆ ಸಣ್ಣ ಪೆಟ್ಟು ತಗಲಿದರೂ ಅದರಿಂದ ನಾವು ಕೂಡಲೆ ಸಾಯಬಹುದು. ಆದರೆ ನಮ್ಮ ದೇಹದ ಕೆಲವು ಅಂಗಗಳಿಗೆ ಅಪಾಯ ಸಂಭವಿಸಿದರೂ ನಮಗೆ ಪ್ರಾಣಹಾನಿಯು ಆಗುವುದಿಲ್ಲ. ಪೆಟ್ಟು ಬಿದ್ದ ಕೂಡಲೆ ಪ್ರಾಣಾಪಾಯವಾಗುವ ಅಂಗಗಳನ್ನು ನಾವು ಕೋಮಲವಾದ ಅಂಗಗಳೆಂದು ಕರೆಯುತ್ತೇವೆ. ಇವುಗಳಿಗೆ ಅಪಾಯವು ತಟ್ಟಿತೆಂದರೆ, ಇವುಗಳ ಕೆಲಸಗಳು ನಿಂತುಹೋಗುವುದಲ್ಲದೆ, ದೇಹದ ಇತರ ಅಂಗಗಳ ವ್ಯಾಪಾರಗಳು ನಡೆಯದೆ ನಮಗೆ ಮರಣಪ್ರಾಪ್ತಿಯಾಗಬಹುದು. ಇವು ನಮ್ಮ ಪ್ರಾಣರಕ್ಷಣೆಯ ವಿಷಯದಲ್ಲಿ, ಶರೀರದ ಮುಖ್ಯವಾದ ಮತ್ತು ಕೋಮಲವಾದ ಅಂಗಗಳಾಗಿರುವ ಕಾರಣ, ಇವುಗಳನ್ನು ನಾವು ಜಾಗ್ರತೆಯಿಂದ ಕಾಪಾಡುವುದು ಅತ್ಯವಶ್ಯವಾಗಿದೆ. ಇವು ನಮ್ಮ ಪ್ರಾಣಧಾರಣೆಗೆ ಮುಖ್ಯವಾದ ಅಂಗಗಳಾಗಿರುವುದರಿಂದ ಇವನ್ನು "ಪ್ರಾಣಾಂಗ"ಗಳೆಂದು ಹೇಳುವರು. ಮಿದುಳು, ಶ್ವಾಸಕೋಶಗಳು ಮತ್ತು ಎದೆಗುಂಡಿಗೆ, ಇವು ಪ್ರಾಣಾಂಗಗಳು. ಈ ಕೋಮಲವಾದ ಅಂಗಗಳಿಗೆ ಅಪಾಯ ಸಂಭವಿಸಿ ಪ್ರಾಣನಷ್ಟವಾಗದಂತೆ, ಇವನ್ನು ನಮ್ಮ ಶರೀರನಿರ್ಮಾಣಕನಾದ ದೇವರು ಗಟ್ಟಿಯಾದ ಎಲುಬುಗೂಡುಗಳೊಳಗೆ ಭದ್ರವಾಗಿ ಇರಿಸಿರುವನು. ನಾವು ನಮ್ಮ ನಗನಾಣ್ಯಗಳನ್ನು ಕಳ್ಳಕಾಕರು ಕದ್ದೊಯ್ಯದಂತೆ ಅವನ್ನು ನಮ್ಮ ಮನೆಗಳಲ್ಲಿ ಪೆಟ್ಟಿಗೆಗಳೊಳಗೆ ಭದ್ರವಾಗಿಟ್ಟು, ಬೀಗಹಾಕಿ ಮುಚ್ಚಿಡುವಂತೆ, ದೇವರು ಈ ಪ್ರಾಣಾಂಗಗಳನ್ನು ಎಲುಬುಪೆಟ್ಟಿಗೆಗಳೊಳಗೆ ಸುರಕ್ಷಿತವಾಗಿ ಇರಿಸಿರುವನು. ಮಿದುಳನ್ನು ಕಪಾಲದ ಅಥವಾ ತಲೆಬುರುಡೆಯ ಎಲುಬುಪೆಟ್ಟಿಗೆಯೊಳಗೂ, ಶ್ವಾಸಕೋಶ, ಎದೆಗುಂಡಿಗೆಗಳನ್ನು ಎಲುಬಿನ ಎದೆಗೂಡಿನೊಳಗೂ ಭದ್ರವಾಗಿ ಇಟ್ಟಿರುವುದರಿಂದ, ಅವುಗಳಿಗೆ ಅಪಾಯವು ಉಂಟಾಗಲಿಕ್ಕೆ ಅವಕಾಶವಿಲ್ಲ. ಈ ಎಲುಬುಪೆಟ್ಟಿಗೆಗಳ ಮೇಲೆ ಮಾಂಸದ ಮುದ್ದೆಗಳನ್ನು ಅಂಟಿಸಿ, ಕೊಬ್ಬಿನ ಹಾಸಿನಿಂದ ಬಿಗಿದು ಅದರ ಮೇಲೆ ಚರ್ಮದಿಂದ ಗಟ್ಟಿಗೊಳಿಸಿ, ಇವುಗಳ ಮೇಲೆ ಕೂದಲುಗಳನ್ನೂ ನಿರ್ಮಿಸಿರುವನು. ಈ ಮೂರು ಪ್ರಾಣಾಂಗಗಳನ್ನು ಪ್ರಾಣಧಾರಣೆಗೆ ಅತ್ಯಗತ್ಯವಿರುವ 'ಮೂರು ಕಾಲಿನ ಪೀಠ' ಎಂದು ಶಾಸ್ತ್ರಜ್ಞರು ಹೇಳುವರು.

ಕಲ್ಲು, ಮಣ್ಣು, ಇಟ್ಟಿಗೆ, ಮರ ಅಥವಾ ಬಿದಿರು, ಕಬ್ಬಿಣ, ಸುಣ್ಣ, ಹಂಚು ಅಥವಾ ಹುಲ್ಲು ಮೊದಲಾದವುಗಳಿಂದ ನಾವು ನಮ್ಮ ಮನೆಗಳನ್ನು ಕಟ್ಟುವಂತೆ, ಎಲುಬು, ಮೃದ್ವಸ್ಥಿ, ಮಾಂಸ, ಕೊಬ್ಬು, ರಕ್ತ, ನರಗಳು, ರಕ್ತನಾಳಗಳು, ಚರ್ಮ ಮೊದಲಾದವುಗಳಿಂದ ದೇವರು ನಮ್ಮ ಶರೀರವನ್ನು ನಿರ್ಮಿಸಿರುವನು. ನಮ್ಮ ಶರೀರನಿರ್ಮಾಣಕ್ಕೆ ಸೇರಿರುವ ಮೇಲೆ ಹೇಳಿದ ವಸ್ತುಗಳು ಬೇರೆ ಬೇರೆ ಪದಾರ್ಥಗಳಿಂದ ಸೃಜಿಸಲ್ಪಟ್ಟಿವೆ. ಎಲುಬು ಒಂದು ಪದಾರ್ಥದಿಂದಲೂ, ಮಾಂಸವು ಇನ್ನೊಂದು ವಸ್ತುವಿನಿಂದಲೂ ನಿರ್ಮಿತವಾಗಿರುವುವು. ರಕ್ತವು ಒಂದು ಬಗೆಯ ವಸ್ತುವಿನಿಂದಲೂ, ಕೊಬ್ಬು ಇನ್ನೊಂದು ಬಗೆಯ ಪದಾರ್ಥದಿಂದಲೂ ನಿರ್ಮಿಸಲ್ಪಟ್ಟಿದೆ. ಹೀಗೆ ಮೇಲೆ ಬರೆದ ವಸ್ತುಗಳು ಬೇರೆ ಬೇರೆ ಪದಾರ್ಥಗಳಿಂದ ಮಾಡಲ್ಪಟ್ಟಿರುವುವು. ಶರೀರದ ಬೇರೆ ಬೇರೆ ವಸ್ತುಗಳು ಬೇರೆ ಬೇರೆ ಪದಾರ್ಥಗಳಿಂದ ರಚಿಸಲ್ಪಟ್ಟಿರುವ ಕಾರಣ, ಆಯಾ ವಸ್ತುಗಳಿಂದ ಮಾಡಲ್ಪಟ್ಟ ಆಯಾ ಪದಾರ್ಥಗಳಿಗೆ ನಿರ್ಮಾಣಸಾಮಗ್ರಿಗಳೆಂದು ಶಾಸ್ತ್ರಜ್ಞರು ಹೇಳುವರು. ಹೀಗೆ ಎಲುಬು, ಮೊದಲಾದ ವಸ್ತುಗಳು ಬೇರೆ ಬೇರೆ ಪದಾರ್ಥಗಳಿಂದ ರೂಪಿಸಲ್ಪಟ್ಟಿರುವ ಕಾರಣ, ಇವು ಬೇರೆ ಬೇರೆ ಬಗೆಯ ನಿರ್ಮಾಣಸಾಮಗ್ರಿಗಳಿಂದ ನಿರ್ಮಿಸಲ್ಪಟ್ಟಿವೆಯೆಂದು ನಾವು ಸುಲಭವಾಗಿ ತಿಳಿದುಕೊಳ್ಳಬಹುದು.

ಒಂದು ಜಾತಿಯ ನಿರ್ಮಾಣಸಾಮಗ್ರಿಯನ್ನು ಬಲವಾದ ಭೂತಕನ್ನಡಿಯ ಅಡಿಯಲ್ಲಿಟ್ಟು ಪರೀಕ್ಷಿಸಿ ನೋಡಿದರೆ, ಅದೂ ಬಗೆಬಗೆಯ ಸೂಕ್ಷ್ಮವಾದ ವಸ್ತುಗಳ ಸಂಯೋಗದಿಂದ ನಿರ್ಮಿಸಲ್ಪಟ್ಟಿರುವುದೆಂದು ನಾವು ಗೊತ್ತು ಹಚ್ಚಿಕೊಳ್ಳಬಹುದು. ಹೀಗೆ ನಿರ್ಮಾಣಸಾಮಗ್ರಿಗಳ ರಚನೆಯನ್ನುಂಟುಮಾಡಲಿಕ್ಕೆ ಸೇರಿರುವ ಹಲವು ಸೂಕ್ಷ್ಮ ಪದಾರ್ಥಗಳಿಗೆ ಅಣುಕೋಶಗಳೆಂದು ಹೆಸರು. ಹಲವು ಸೂಕ್ಷ್ಮವಾದ ಅಣುಕೋಶಗಳು ಒಟ್ಟುಗೂಡಿ ನಮ್ಮ ಶರೀರನಿರ್ಮಾಣಸಾಮಗ್ರಿಯಾಗಿದೆ. ವಿವಿಧ ಶರೀರನಿರ್ಮಾಣಸಾಮಗ್ರಿಗಳಲ್ಲಿರುವ ಪದಾರ್ಥಗಳು ಏಕರೀತಿಯಲ್ಲಿರದೆ ಭಿನ್ನಭಿನ್ನವಾಗಿವೆ. ಈ ಕಾರಣದಿಂದಲೇ ನಮ್ಮ ದೇಹನಿರ್ಮಾಣಸಾಮಗ್ರಿಗಳು ಬಗೆಬಗೆಯಾಗಿ ಇರುತ್ತವೆ. ಭೂಮಿಯಲ್ಲಿ ವಾಸಿಸುವ ಬೇರೆ ಬೇರೆ ಪ್ರಾಣಿಗಳಲ್ಲಿಯೂ, ವಸ್ತುಗಳಲ್ಲಿಯೂ ಇರುವ ಅಣುಕೋಶಗಳು ಜೀವವಿರುವ ಸೂಕ್ಷ್ಮವಾದ ಅಣುಗಳಿಂದ ರಚಿಸಲ್ಪಟ್ಟಿವೆ. ಭೂಮಿಯಲ್ಲಿ ಜೀವಿಸುವ ಎಲ್ಲಾ ಪ್ರಾಣಿಗಳ ಮತ್ತು ವಸ್ತುಗಳ ಬೆಳವಣಿಗೆಗೆ ಮತ್ತು ವೃದ್ಧಿಗೆ ಸೂಕ್ಷ್ಮವಾದ ಈ ಜೀವಾಣುಗಳೇ ಕಾರಣವಾಗಿವೆ.

ನಮ್ಮ ದೇಹವನ್ನು ನಾವು ಒಂದು ಮನೆಗೆ ಸರಿಹೋಲಿಸಬಹುದು. ಮನೆಯಲ್ಲಿ ಬೇರೆ ಬೇರೆ ಕೋಣೆಗಳಿರುವಂತೆ ನಮ್ಮ ಶರೀರದಲ್ಲಿ ಬೇರೆ ಬೇರೆ ಅಂಗಗಳು ಇವೆ. ಮನೆಯ ಅಸ್ತಿವಾರದ ಮೇಲೆ ಕಟ್ಟಲ್ಪಟ್ಟಿರುವಂತೆ ನಮ್ಮ ದೇಹವು ಎಲುಬುಗೂಡಿನ ಮೇಲೆ ನಿಂತಿರುವುದು. ದೇಹವೆಂಬ ಮನೆಗೆ ಕಿವಿಬಾಯಿಗಳೆಂಬ ಬಾಗಿಲುಗಳಿವೆ, ಕಣ್ಣು, ಮೂಗುಸೊಳ್ಳೆಗಳೆಂಬ ಕಿಟಿಕಿಗಳಿವೆ. ನಮ್ಮ ದೇಹಕ್ಕೆ ಮಾಂಸದ ಗೋಡೆಯೂ, ಚರ್ಮದ ಮಾಡವೂ ಉಂಟು. ಈ ಮಾಡಿಗೆ ಕೂದಲು ರೋಮಗಳೆಂಬ ಹುಲ್ಲುಗಳನ್ನು ಹೊದಿಸಿರುವರು. ನಮ್ಮ ದೇಹವೆಂಬ ಮನೆಗೆ ಕಾಲುಗಳೆಂಬ ಗಟ್ಟಿಯಾದ ಕಂಬಗಳಿವೆ, ಈ ಮನೆಯನ್ನು ಕೈಗಳೆಂಬ ಕಾವಲುಗಾರರು ಹಗಲು ರಾತ್ರಿ ಕಾಯುತ್ತಿರುವರು. ಮನೆಯಲ್ಲಿರುವ ಕಸಕಡ್ಡಿ, ಧೂಳು ಇತ್ಯಾದಿಗಳನ್ನು ಗುಡಿಸಿ ಹೊರಗೆ ಬಿಸಾಕುವಂತೆ ನಮ್ಮ ದೇಹದಲ್ಲಿ ಆಗಾಗ ಸಂಗ್ರಹವಾಗುವ ಬೆವರು ಮೂತ್ರ, ಕೆಟ್ಟಗಾಳಿ, ಮುಂತಾದ ಕೊಳಕು ಪದಾರ್ಥಗಳನ್ನು ಚರ್ಮ, ಮೂತ್ರಪಿಂಡ, ಮತ್ತು ಶ್ವಾಸಕೋಶಗಳೆಂಬವು, ದೇಹದಿಂದ ಹೊರಗೆ ಹಾಕುತ್ತವೆ. ಮನೆಗೆ ಒಳ್ಚಲು, ಹಟ್ಟಿಕೊಟ್ಟಿಗೆ, ಮತ್ತು ಪಾಯಿಖಾನೆಗಳಿರುವಂತೆ ನಮ್ಮ ದೇಹದಿಂದ ಕೆಟ್ಟ ಗಾಳಿ, ಬೆವರು, ಮಲ ಮೂತ್ರಗಳೆಂಬ ಕೊಳಕುವಸ್ತುಗಳನ್ನು ಹೊರಗೆ ಹಾಕಲಿಕ್ಕೆ ನಮ್ಮ ಶರೀರದಲ್ಲಿ ಶ್ವಾಸಕೋಶಗಳು, ಚರ್ಮ, ಆಹಾರಕಾಲುವೆ, ಮತ್ತು ಮೂತ್ರಪಿಂಡಗಳು ಇರುವುವು. ನಮ್ಮ ದೇಹವೆಂಬ ಮನೆಯಲ್ಲಿರುವ ಹಲ್ಲುಗಳೇ ಕಡೆಯುವ ಕಲ್ಲುಗಳು. ಹೀಗೆ ಶರೀರಕ್ಕೂ ಮನೆಗೂ ಮುಖ್ಯ ಹೋಲಿಕೆಗಳಿವೆ.

ಮನೆಗೂ ದೇಹಕ್ಕೂ ಕೆಲವು ವ್ಯತ್ಯಾಸಗಳೂ ಇವೆ. ನಾವು ಮನೆಯನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಒಯ್ಯಲಾರೆವು. ಆದರೆ ದೇಹವು ಇಷ್ಟವಿದ್ದ ಕಡೆಗೆ ಹೋಗಬಲ್ಲುದು. ಎಂದರೆ, ಮನೆಗೆ ಚಲನ ಇಲ್ಲ. ಆದರೆ ದೇಹಕ್ಕೆ ಚಲನೆ ಉಂಟು. ಮನೆಗೆ ಜೀವ ಇಲ್ಲ, ಆದರೆ ದೇಹಕ್ಕೆ ಜೀವ ಉಂಟು. ಮನೆಯು ಕೆಲಸ ಮಾಡಲಾರದು. ಹೊಸದಾಗಿ ಕಟ್ಟಿದ ಮನೆಯು ಬೇಗನೆ ಹಾಳಾಗುವುದಿಲ್ಲ; ಆದರೆ ದೇಹವು ಬೇರೆ ಬೇರೆ ಕೆಲಸಗಳನ್ನು ಮಾಡುವುದರಿಂದ, ಪ್ರತಿಕ್ಷಣ ಸವೆದು ಹೋಗಿ, ಪುನಃ ಬೆಳೆಯುತ್ತದೆ. ಮನೆಗೆ ಬೆಳವಣಿಗೆಯೂ ಇಲ್ಲ, ಆದರೆ ದೇಹವು ಬೆಳೆಯುತ್ತದೆ. ಮನುಷ್ಯನ ಬೆಳವಣಿಗೆಗೆ ಆಹಾರವೂ ನೀರೂ ವಾಯುವೂ ಬೇಕು; ಆದರೆ ಮನೆಗೆ ಇವು ಅಗತ್ಯವಿಲ್ಲ. ಮನುಷ್ಯನು ಆಹಾರವಿಲ್ಲದೆ ಬದುಕಲಾರನು, ಮನೆಯು ಆಹಾರವಿಲ್ಲದೆ ಬದುಕುತ್ತದೆ.

ಜೀವಿಸಿಕೊಂಡಿರುವ ಮನುಷ್ಯನಿಗೂ ಸತ್ತವನಿಗೂ ಹಲವು ಭೇದಗಳಿವೆ. ಜೀವವಿರುವವನು ಹಲವು ಬಗೆಯ ಕಾರ್ಯಗಳನ್ನು ಮಾಡಬಲ್ಲನು. ಅವನು ಕೂತಲ್ಲಿಯೇ ಕೂತುಕೊಂಡಿರದೆ, ಯಾವುದಾದರೊಂದು ಕೆಲಸವನ್ನು ಮಾಡುತ್ತಾ ಇರುತ್ತಾನೆ. ಜೀವವಿರುವ ಮನುಷ್ಯನು ಮಾತಾಡುತ್ತಾನೆ, ನಡೆಯುತ್ತಾನೆ, ನಗುತ್ತಾನೆ, ಬರೆಯುತ್ತಾನೆ, ಓದುತ್ತಾನೆ ಓಡುತ್ತಾನೆ, ಹಾರುತ್ತಾನೆ, ಕುಣಿಯುತ್ತಾನೆ, ಸೀಗೆಪಾರಿಸುತ್ತಾನೆ, ಇತ್ಯಾದಿ ಹಲವು ಕೆಲಸಗಳನ್ನು ಮಾಡುತ್ತಾನೆ. ಆದರೆ ಮರಣಹೊಂದಿದವನಿಂದ ಇವನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಅವನ ದೇಹವು ಮಣ್ಣಿನ ಮುದ್ದೆಯಂತೆ, ಅಥವಾ ಮರದ ಕೊರಡಿನಂತೆ ಬಿದ್ದಲ್ಲಿಯೇ ಬಿದ್ದುಕೊಂಡಿರುತ್ತದೆ. ಅದಕ್ಕೆ ಯಾವ ಬಗೆಯ ಚಲನೆಯೂ ಇಲ್ಲ. ಜೀವವಿರುವ ಮನುಷ್ಯನಂತೆ ಅದು ಉಣ್ಣುವುದಿಲ್ಲ, ತಿನ್ನುವುದಿಲ್ಲ, ಮಾತಾಡುವುದಿಲ್ಲ, ಚಲಿಸುವುದಿಲ್ಲ, ಅದು ಕೆಲಸ ಮಾಡುವುದೂ ಇಲ್ಲ. ಅದು ಕಲ್ಲಿನಂತೆ ಇದ್ದಲ್ಲಿಯೇ ಇರುತ್ತದೆ. ಒಬ್ಬ ಮನುಷ್ಯನು ನಿ[illegible]
ಮಾಡುವುದಾದರೂ ಅವನು ಸಾಯದೆ ಬದುಕಿರುವನೆ[illegible]
ನಾವು ಕೆಲವು ಗುರುತುಗಳಿಂದ ತಿಳಿದುಕೊಳ್ಳುತ್ತೇವೆ.
ಅವನನ್ನು ಗುದ್ದಿದರೆ, ಚಿವುಟಿದರೆ, ಅಥವಾ ಕರೆದರೆ
ಅವನಿಗೆ ನಾವು ಉಪದ್ರವಕೊಟ್ಟರೆ, ಅವನು ಎ[illegible]
ನ್ನು ಹೊಡೆಯಲಿಕ್ಕೆ ಬರುವನು. [illegible]
ಜೀವಂತನಾಗಿರುವನು ಎಂದು ನಾವು [illegible]
ಕೊಳ್ಳಬಹುದು? [illegible]
ನೋಡಿದರೆ ಅದು ಒಂದೇ [illegible]
ನಲ್ಲಿ ಕಾಣುತ್ತದೆ. [illegible]

ಸಿದ್ದೆಯಲ್ಲಿಯೂ ಉಸಿರಾಡುತ್ತಾನೆ ಎಂಬುದು ನಮಗೆ ಗೊತ್ತಾಗಬಹುದು. ಅವನು ಬಾಯಿಯನ್ನು ಮುಗಿನ ಸೊಳ್ಳೆಗಳನ್ನೂ ತೆರೆದುಕೊಂಡು ಮಲಗಿರುವುದರಿಂದ ಅವನು ಗಾಳಿಯನ್ನು ಒಂದು ಸಲ ಒಳಗೆ ತೆಗೆದುಕೊಳ್ಳುತ್ತಲೂ, ಇನ್ನೊಂದು ಸಲ ಹೊರಬಿಡುತ್ತಲೂ ಇರುವುದನ್ನು ನಾವು ನೋಡುವೆವು. ಇದಲ್ಲದೆ ಅವನ ಎದೆಗುಂಡಿಯ ಮೇಲೆ ನಾವು ಕೈಯನ್ನು ಇಟ್ಟರೆ ಅವನ ಎದೆಗುಂಡಿಗೆಯು ಬಡಿಯುವುದನ್ನು ನಾವು ಕೇಳಬಹುದು. ಇಷ್ಟಲ್ಲದೆ ಅವನ ಮಣಿಕಟ್ಟಿನ ಹತ್ತಿರ ಅವನ ಕೈಯನ್ನು ನಾವು ಮುಟ್ಟಿನೋಡಿದರೆ, ಅವನ ನಾಡಿಯಾಟವು ಸ್ಪಷ್ಟವಾಗಿ ಗೋಚರವಾಗುವುದು.

ಮಲಗಿರುವ ಮನುಷ್ಯನ ಮೈಮೇಲೆ ನಾವು ಕೈ ಇಟ್ಟು ಸ್ವಲ್ಪಹೊತ್ತು ಪರೀಕ್ಷಿಸಿ ಅನಂತರ ನಮ್ಮ ಕೈಯನ್ನು ಕಲ್ಲಿನ ಸ್ಲೇಟು, ಗೋಡೆ, ಮರ ಇತ್ಯಾದಿಗಳ ಮೇಲೆ ಇಟ್ಟು ನೋಡಿದರೆ ಯಾವುದು ಬಿಸಿಯಾಗಿ ಕಾಣುತ್ತವೆ ಪರೀಕ್ಷಿಸಿ ತಿಳಿದುಕೊಳ್ಳಿರಿ. ಹಾಗೆಯೇ ಹೆಣದ ಮೇಲೆ ಕೈ ಇಟ್ಟು ನೋಡಿರಿ. ಹೀಗೆ ನೀವು ಪರೀಕ್ಷಿಸಿದರೆ ಜೀವವಿರುವ ಮನುಷ್ಯನ ಮೈಯು ಇತರ ವಸ್ತುಗಳಿಗಿಂತ ಬಿಸಿಯಾಗಿದೆ, ಎಂದು ನೀವು ತಿಳಿದುಕೊಳ್ಳುವಿರಿ.

ಜೀವವಿರುವ ಮನುಷ್ಯನು ತಿನ್ನುವ ಆಹಾರವು ಅವನು ಮಾಡುವ ಕೆಲಸದಿಂದ ಕರಗುತ್ತದೆ, ಮತ್ತು ಅವನ ಶರೀರವು ಬೆಳೆಯುತ್ತದೆ. ಇಷ್ಟಲ್ಲದೆ ಅವನ ಶರೀರದಿಂದ ನಷ್ಟವಾದ ಭಾಗಗಳು ಪೋಷಿಸಲ್ಪಡುತ್ತವೆ. ಆದರೆ ಸತ್ತವನಿಗೆ ಹಸಿವು ಬಾಯಾರಿಕೆಗಳಿಲ್ಲ. ಅವನು ತಿಂದ ಆಹಾರವು ಕರಗುವುದಿಲ್ಲ. ಜೀವವಿರುವ ಮನುಷ್ಯನ ಮೈಯಲ್ಲಿ ರಕ್ತವು ಚಲಿಸುತ್ತದೆಂಬುದನ್ನು ನಾವು ಪರೀಕ್ಷಿಸಿ ತಿಳಿಯಬಹುದು. ಅವನ ಮೈಗೆ ಸೂಜಿಯನ್ನು ಚುಚ್ಚಿದರೆ ಅವನಿಗೆ ನೋವಾಗುವುದಲ್ಲದೆ ರಕ್ತವೂ ಬರುವುದು. ಅವನ ಗಾಯದಿಂದ ರಕ್ತವು ಹರಿಯುವುದು. ಈ ದೃಷ್ಟಾಂತಗಳಿಂದ ಅವನ ದೇಹದಲ್ಲಿ ರಕ್ತ ಸಂಚಾರವಿದೆಯೆಂದು ಗೊತ್ತು ಹಚ್ಚಿಕೊಳ್ಳಬಹುದು. ಹೆಣಕ್ಕೆ ಗುಂಡುಸೂಜಿಯಿಂದ ಚುಚ್ಚಿದರೂ ನೋವಾಗುವುದಿಲ್ಲ; ರಕ್ತವೂ ಬರುವುದಿಲ್ಲ.

ನಮ್ಮ ಶರೀರವು ಕೆಲಸ ಮಾಡುವ ಯಂತ್ರವೆಂದು ನಾವು ತಿಳಿಯಬಹುದು. ಉಗಿಬಂಡಿಯು ಅಥವಾ ಉಗಿಹಡಗು ನಡೆಯಬೇಕಾದರೆ ಅದಕ್ಕೆ ಉಗಿಯು ಬೇಕು. ನೀರನ್ನು ಕುದಿಸಲಿಕ್ಕೆ ಬೆಂಕಿಯು ಬೇಕು. ಬೆಂಕಿಯನ್ನು ಉರಿಸಬೇಕಾದರೆ ಕಲ್ಲಿದ್ದಲು ಅಥವಾ ಕಟ್ಟಿಗೆ ಬೇಕು. ಕಲ್ಲಿದ್ದಲು ಅಥವಾ ಕಟ್ಟಿಗೆ ಸಹಾಯದಿಂದ ಮತ್ತು ಉಗಿಯ ಬಲದಿಂದ ಹಬಗಾಡಿ ಅಥವಾ ಹೊಗೆಹಡಗವು ನಡೆಯುವಂತೆ, ನಮ್ಮ ಶರೀರವೆಂಬ ಸಜೀವವಾದ ಯಂತ್ರವು ನಮ್ಮ ದೇಹದಲ್ಲಿ ಹುಟ್ಟುವ ಉಷ್ಣದಿಂದಲೂ, ನಾವು ತಿನ್ನುವ ಆಹಾರದಿಂದಲೂ ನಿಯಮಿತ ಕೆಲಸಗಳನ್ನು ಸುಸೂತ್ರವಾಗಿ ಜರಗಿಸುತ್ತದೆ. ಈ ಕೆಲಸಗಳಿಂದ ನಮ್ಮ ದೇಹದಲ್ಲಿ ಉಂಟಾಗುವ ಕೊಳೆಕಸ್ಮಲಗಳನ್ನು ದೇಹದ ಕೆಲವು ಅಂಗಗಳು ಹೊರಗೆ ಹಾಕುವುದರಿಂದ ನಾವು ಆರೋಗ್ಯವಂತರಾಗಿ ಬದುಕುತ್ತೇವೆ.

ಒಂದು ಗಡಿಯಾರವು ಸರಿಯಾದ ಸಮಯವನ್ನು ಸೂಚಿಸಬೇಕಾದರೆ, ಅದರ ಸಣ್ಣ ದೊಡ್ಡ ಚಕ್ರಗಳೂ, ಮುಳ್ಳುಗಳೂ ತಮ್ಮ ತಮ್ಮ ಕೆಲಸಗಳನ್ನು ತಪ್ಪದೆ ಮಾಡಬೇಕು. ಗಡಿಯಾರದ ಕೆಲಸವು ಸರಿಯಾಗಿ ನಡೆಯಬೇಕಾದರೆ ಅದರ ಭಾಗಗಳು ಒಕ್ಕಟ್ಟಿನಿಂದ ಅನ್ಯೋನ್ಯವಾಗಿ ಕೆಲಸ ಮಾಡಲಿಕ್ಕೆ ಅವುಗಳ ಸಹಾಯವು ಅಗತ್ಯವಿದೆ. ಹಾಗೆಯೇ ನಮ್ಮ ದೇಹವು ಬೇರೆ ಬೇರೆ ವ್ಯಾಪಾರಗಳನ್ನು ಮಾಡುವ ಅಂಗಗಳಿಂದ ಕೂಡಿಕೊಂಡಿರುತ್ತದೆ. ಇವು ನಮ್ಮ ಶರೀರದ ಬೇರೆ ಬೇರೆ ಭಾಗಗಳಲ್ಲಿ ಇದ್ದುಕೊಂಡು, ತಮ್ಮ ತಮ್ಮ ಕೆಲಸಗಳನ್ನು ತಪ್ಪದೆ ಮಾಡುತ್ತಾ ಇದ್ದರೂ, ಶರೀರದ ಒಟ್ಟು ಕ್ಷೇಮವನ್ನು ಸಂಪಾದಿಸಲಿಕ್ಕೂ, ಐಕಮತ್ಯದಿಂದ ಒಕ್ಕಟ್ಟಾಗಿ ಕೆಲಸಮಾಡಿಕೊಂಡಿರಲಿಕ್ಕೂ ದೇಹದ ಬೇರೆ ಬೇರೆ ಅಂಗಗಳ ಸಹಾಯವು ಅತ್ಯಾವಶ್ಯಕವಾಗಿ ಇದೆ.

ನಮ್ಮ ದೇಹದೊಳಗಿರುವ ಅಂಗಗಳನ್ನು ಅವು ಮಾಡುವ ಕೆಲಸಗಳಿಗೆ ಅನುಸಾರವಾಗಿ ಕೆಳಗೆ ಕಾಣಿಸಿದ ರೀತಿಯಲ್ಲಿ ವಿಂಗಡಿಸಬಹುದು.—

(1) ಎಲುಬಿನ ಗೂಡು (ಅಸ್ಥಿಪಂಜರ).
(2) ಮಾಂಸಭಾಗ.
(3) ಆಹಾರಜೀರ್ಣಾಂಗಗಳು.
(4) ಆಹಾರಗ್ರಹಣಾಂಗಗಳು.
(5) ರಕ್ತಚಲನಾಂಗಗಳು.
(6) ಉಸಿರಾಡುವ ಅಂಗಗಳು.
(7) ಕಲ್ಮಷವಿಸರ್ಜನಾಂಗಗಳು.
(8) ಮಿದುಳು ಮತ್ತು ನರಗಳು.
(9) ಪಂಚೇಂದ್ರಿಯಗಳು.

"ಆರೋಗ್ಯ ಚಂದ್ರಿಕೆ"

June 1925 between 9 and 11 A M at the Civil Surgeon's Office, Mercara where a list of the same can be seen.

The undersigned will fix the price collectively or individually in person. Parts sold should be paid for on the spot and removed within 24 hours from the Civil Surgeon's Office.

Mercara, F. R. Thornton,
13th May 1925. Captain, I. M S.
Civil Surgeon, Coorg.

ಮಾರಾಟಕ್ಕೆ.

"ಎಕ್ಸ್ ರೇ" ಉಪಕರಣಗಳು ಒಟ್ಟಾಗಿ, ಅಲ್ಲದೆ, ಭಾಗಗಳಾಗಿ, ಕ್ರಯಕ್ಕೆ ತೆಗೆದುಕೊಳ್ಳಲು ಇಚ್ಛೈಸುವವರು ಈ ಉಪಕರಣಗಳ ಪಟ್ಟಿ ಇಟ್ಟಿರುವ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ ತಮಗೆ ಬೇಕಾದ ಭಾಗಗಳನ್ನು 1925ನೇ ಜೂನ್ ತಿಂಗಳ ಸೋಮವಾರಗಳಲ್ಲಿ ಅಂದರೆ 8, 15 ಮತ್ತು 22ರಲ್ಲಿ ಪರೀಕ್ಷಿಸಿ ಆರಿಸಿಕೊಳ್ಳಬಹುದು.

ಕೆಳಗೆ ರುಜು ಹಾಕಿದವರಿಂದ ಒಟ್ಟಾರೆಯೂ, ಬೇರೆ ಬೇರೆಯಾಗಿ ಕ್ರಯವು ಖುದ್ದಾಗಿ ನಿಶ್ಚಯಿಸಲ್ಪಡುವುದು. ಕೊಂಡುಕೊಂಡ ಭಾಗಗಳ ಕ್ರಯವು ಕೂಡಲೇ ಕೊಡಲ್ಪಡಬೇಕಲ್ಲದೆ ಸಿವಿಲ್ ಸರ್ಜನರ ಆಫೀಸಿನಿಂದ ಅವುಗಳನ್ನು 24 ಗಂಟೆಗಳೊಳಗೆ ತೆಗೆದುಕೊಂಡು ಹೋಗತಕ್ಕದ್ದು.

ಮಡಿಕೇರಿ, ಎಫ್. ಆರ್. ತಾರ್ನ್‌ಟನ್,
13—5—25. ಕ್ಯಾಪ್ಟನ್; ಐ. ಎಂ. ಎಸ್.,
ಸಿವಿಲ್ ಸರ್ಜನ್.

ವರ್ತಮಾನ ಸಂಗ್ರಹ.

ಒಳದೇಶ.

ಸೇಲಮಿನಲ್ಲಿ ಅಸಿಸ್ಟೆಂಟ್ ಇಂಜನಿಯರಾಗಿದ್ದ ಮಿ. ಸಿ. ಎ. ರಾಜಗೋಪಾಲ ಐಯ್ಯಂಗಾರ್‌ರವರನ್ನು ಉತ್ತರ ಕೊಡಗಿನ ಸಬ್ ಡಿವಿಜನ್ ಆಫೀಸರಾಗಿ ನೇಮಿಸಿರುವರು. ಅವರು ತಾ. 12ರಲ್ಲಿ ಮಡಿಕೇರಿಗೆ ಒಂದು ಚಾರ್ಜು ತೆಗೆದುಕೊಂಡಿರುವರು.

ತಾ. 9ರಲ್ಲು ರಾಜಾಸೀಟ್ ಮೈದಾನದಲ್ಲಿ ಪೋಲೀಸು ಸ್ಪೋರ್ಟ್ಸ್ ನಡೆಯಿತು. ಆಮಂತ್ರಣ ಕಳುಹಿಸಲ್ಪಟ್ಟಿದ್ದ ಅನೇಕ ಅತಿಥಿಗಳಿಗೆ ಟೀಪಾರ್ಟಿಯೂ ಇತ್ತು. ಆಟಬಿಟಗಳಲ್ಲಿ ಗದ್ದವರಿಗೆ ಮಿಸೆಸ್ ಟಾಸ್ಕರ್‌ರವರು ಇನಾಮುಗಳನ್ನು ಹಂಚಿದರು. ಮಳೆಯಗಲಾಟ ಇಲ್ಲದ್ದರಿಂದ ಎಲ್ಲವೂ ಚನ್ನಾಗಿ ನಡೆಯಿತು.

"ಕೊಡಗು" ಕಂಪೆನಿಯ ಡೈರೆಕ್ಟರುಗಳ ವರದಿಯನ್ನು ಮತ್ತು ಕಂಪೆನಿಯ ಲೆಕ್ಕಗಳನ್ನು ಕಾಲಕ್ಕೆ ಸರಿಯಾಗಿ ಪ್ರಿಂಟು ಮಾಡಲು ಸಾಧ್ಯವಾಗದ್ದರಿಂದ ಡೈರೆಕ್ಟರುಗಳ ಕಳೆದ ಮೀಟಿಂಗಿನಲ್ಲಿ ತೀರ್ಮಾನಿಸಿದಂತೆ ಕಂಪೆನಿಯ ಶೇರುದಾರರ ಜನರಲ್ ಮೀಟಿಂಗು ಈ ತಾ. 28ರಲ್ಲು ನಡಿಸಲಾಗುವುದಿಲ್ಲವೆಂದೂ, ಸದರಿ ಮೀಟಿಂಗನ್ನು ಜೂನ್ ತಿಂಗಳಲ್ಲಿ ನಡಿಸುವಂತೆ ತೀರ್ಮಾನಿಸಲು ಡೈರೆಕ್ಟರುಗಳ ಮೀಟಿಂಗು ಬೇಗನೆ ಮಾಡಲ್ಪಡುವುದೆಂದೂ ಡೈರೆಕ್ಟರುಗಳ ಬೋರ್ಡಿನ ಚೇರ್‌ಮ್ಯಾನರು ತಿಳಿಸುತ್ತಾರೆ.

ಮದ್ರಾಸು ಶ್ರೀರಾಮಕೃಷ್ಣ ಮಠದ ಅಧ್ಯಕ್ಷರಾದ ಶ್ರೀ ಸ್ವಾಮಿ ಶರ್ವಾನಂದಜೀಯವರು ಈ ತಾರೀಕು 30ರಲ್ಲಿ ಮಡಿಕೇರಿಗೆ ಬರುವರು. ಇವರ ಸನ್ನಿಧಿಯಲ್ಲಿ ಶ್ರೀರಾಮಕೃಷ್ಣ ಪರಮಹಂಸರ ತೊಂಬತ್ತನೇ ಜಯಂತ್ಯುತ್ಸವನನ್ನು ತಾರೀಕು 31ರಲ್ಲಿ ಮಡಿಕೇರಿ ವೇದಾಂತ ಸಂಘದವರು ನಡಿಸುವರಾದ ಕಾರಣ ದೇಶದ ಮಹನೀಯರು ಸದರಿ ಉತ್ಸವಕ್ಕೆ ದಯಮಾಡಿಸಿ ಪ್ರಸಿದ್ಧ ಸ್ವಾಮಿಯವರ ಉಪನ್ಯಾಸ ಶ್ರವಣದಿಂದ ಕೃತಾರ್ಥರಾಗಬೇಕೆಂದು ವೇದಾಂತ ಸಂಘದ ಅಧ್ಯಕ್ಷರ ಕೋರಿಕೆ.

ಮಿ. ಐಚೆಟ್ಟಿರ ಸುಬ್ಬಯ್ಯನವರು ಬಿ. ಎ. ಆನರ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾದದ್ದನ್ನು ತಿಳಿಯಲು ಸಂತೋಷಪಡುತ್ತೇವೆ.

ಮಡಿಕೇರಿ ಹುಡುಗಿಯರ ಹೈಸ್ಕೂಲಿನ ಇನಾಮು ಹಂಚುವಿಕೆಯು ತಾರೀಕು 20ರಲ್ಲು ಮಿ. ಟಿ. ಜಿ. ಟಾಸ್ಕರ್, ಐ.ಸಿ.ಎಸ್., ಮಿಸೆಸ್ ಟಾಸ್ಕರ್‌ರವರ ಅಧ್ಯಕ್ಷತೆಯಲ್ಲಿ ನಡೆಯಲಿಕ್ಕಿದೆ. ಒಂದು ಚಿಕ್ಕ ನಾಟಕವು ಅಭಿನಯಿಸಲ್ಪಡುವುದಂತೆ.

ಡಿ. ಪಿ. ಡಬ್ಲ್ಯು. ಇಲಾಖೆಯ ಮಡಿಕೇರಿ ಸೆಕ್ಷನಿನಲ್ಲಿದ್ದ ಮಿ. ದೇವದಾಸಂರವರು ಮದ್ರಾಸಿಗೆ ವರ್ಗಾಯಿಸಲ್ಪಟ್ಟದ್ದರಿಂದ ಅವರ ಬದಲು ಮದ್ರಾಸು ಪ್ರಾಂತ್ಯದ ಚೆಂಗಯ್ಯನ

FOR SALE.

Chevrolet touring car. In perfect running order. Owner driver.
Price Rs. 2,300 or nearest offer.

Apply to— Car
C/o "Kodagu"
Mercara.

ಹಿಂದೂ ದೇಶ.

ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯ ಮೀಟಿಂಗು ತಾ. 28ರಲ್ಲು ಕಲ್ಕತ್ತದಲ್ಲಿ ನಡೆಯುವುದು.

ಮಹಾತ್ಮ ಗಾಂಧಿಯವರು ಬಂಗಾಳದಲ್ಲಿ ಸಂಚರಿಸುತ್ತಿದ್ದಾರೆ. ಅವರಿಗೆ ಹೋದ ಕಡೆಗಳಲ್ಲೆಲ್ಲಾ ಜನರು ಸಾವಿರಗಟ್ಟಲೆಯಲ್ಲಿ ಸೇರಿ ಬಿನ ವತ್ತಪತ್ರಿಕೆ ಸಮೇತ ಸ್ವಾಗತವನ್ನೀಯುತ್ತಿರುವರು. ಅವರಾದರೋ ಖಾದಿಧರಿಸುವಿಕೆಯ ವಿಷಯ ಒತ್ತಿ ಭೋಧಿಸುತ್ತಿದ್ದಾರೆ.

ಬವಾಲ್ಲಾ ಮೊಖದಮ್ಮೆಯಲ್ಲಿ ಸಾಕ್ಷಿಗಳ ವಿಚಾರದ ಮೇಲೆ ಬೊಂಬಾಯಿಯ "ಟಯಿಮ್ಸ್ ಆಫ್ ಇಂಡಿಯಾ" ಪತ್ರಿಕೆಯು ಅಪರಾಧಿಗಳಿಗೆ ಪರವಲ್ಲದ ಅಭಿಪ್ರಾಯವನ್ನು ಸೂಚಿಸಿದ್ದಕ್ಕಾಗಿ ಆ ಪತ್ರಿಕೆಯ ಮೇಲೆ ವ್ಯವಹಾರ ನಡಸಲಿಕ್ಕಾಗಿ ಹುಕುಂ ಕೊಡಬೇಕೆಂದು ಮಿ. ಜಿನ್ನಾರವರು ಜಸ್ಟಿಸ್ ಕ್ರಂಪ್‌ರವರಿಗೆ ಅರ್ಜಿಬರೆದದನ್ನು ಜಸ್ಟಿಸ್‌ರವರು ತಳ್ಳಿಬಿಟ್ಟಿರುವರು.

ತಿರುವಾಂಕೂರು ಸಂಸ್ಥಾನದ ನೆಯ್ಯತ್ತಿನ ಕರೆಯು ಎಂಬ ಊರಿನಲ್ಲಿ ಎಳುವ ಜಾತಿಯ ಒಬ್ಬ ಹೆಂಗಸಿಗೆ ಒಂದು ವಿಕಾರ ಕೂಸು ಹುಟ್ಟಿತ್ತಂತೆ. ಅದು ಹುಟ್ಟುವಾಗಲೇ ಎರಡು ವರುಷ ಪ್ರಾಯದ ಶಿಶುವಿನಷ್ಟು ದೊಡ್ಡದಾಗಿತ್ತು. ಆದರೆ ಹೆರಿಗೆಯ ಕಾಲದಲ್ಲಿ ತಾಯಿಗೇನೂ ವೇದನೆಯುಂಟಾಗಲಿಲ್ಲ. ಆ ಕೂಸಿನ ಮೈಯಲ್ಲಿ ಒಂದು ಇಂಚು ಉದ್ದದ ಕೂದಲೂ, ತಲೆಯ ಹಿಂಭಾಗದಲ್ಲಿ ಒಟ್ಟು ಮೂರು ಬುಗುಟೆಗಳೂ ಇದ್ದವು. ಕಣ್ಣುಗಳು ಹುಬ್ಬಿನ ಮೇಲಿದ್ದು ಕೈಕಾಲುಗಳು ಉದ್ದವಾಗಿದ್ದವು. ಹುಟ್ಟಿದ ಕೂಡಲೇ ಅದು ಕೈಯೂರಿ ಎದ್ದು ನಿಂತಿತಂತೆ! ಅದು ಮೊಲೆ ಹಾಲು ಕುಡಿಯಲಿಲ್ಲ. ತೆಂಗಿನ ಕಾಯಿಯ ನೀರು ಕುಡಿಸಿದರು. ಆದರೆ ಹುಟ್ಟಿ 21 ಗಂಟೆಗಳಲ್ಲಿಯೇ ಸತ್ತಿತು. ಇದು ರಾಕ್ಷಸ ಅವತಾರವೋ?

ಕಾ. ಧು

ಮಹಾತ್ಮ ಗಾಂಧಿಯವರು ಪೂರ್ವ ಬಂಗಾಳದ ಸಂಚಾರಕ್ಕೆ ಕಲ್ಕತ್ತಾ ಪಟ್ಟಣವನ್ನು ಬಿಟ್ಟ ಮುಂಚೆ ಡಾಕ್ಟರ್ ಮೊರೆನೊರವರಿಗೆ ಸಂಭಾಷಣೆವನ್ನಿತ್ತಾಗ ಆಂಗ್ಲೋ ಇಂಡಿಯನರ ಬಡತನಕ್ಕೆ ಚರ್ಕಾದಿಂದ ನೂಲುನೂಡಿ ಖಾದಿಯನ್ನು ಧರಿಸುವುದೇ ಔಷಧಿ ಎಂದು ಹೇಳಿದರು.

ಮಿ. ಸಿ. ಆರ್. ದಾಸ್‌ರವರು ಲಾರ್ಡ್ ಬರ್ಕನ್ ಹೆಡ್‌ರವರ ಸಂಗಡ ನಡಿಸುತ್ತಿರುವ ಸೆಟ್ಟಗಲ್ಲದ ರಾಜಕೀಯ ಒಪ್ಪಂದದ ಮಾತುಗಳು ನೀತಿಗೆಡಿಸುವಂಥಾವುಗಳಾಗಿವೆಯೆಂದು ಮಿ. ಪುರುಶೋತ್ತಮದಾಸ್ ಟಾಂಡನ್‌ರವರ ಅಭಿಪ್ರಾಯ.

ತಿರುವಾಂಕೂರು ದಿವಾನರಾಗಿರುವ ದಿವಾನ್ ಬಹದ್ದೂರ್ ಟಿ. ರಾಘವಯ್ಯರವರು ಬೇಗನೆ ದಿವಾನ ಪದವಿಯನ್ನು ಬಿಟ್ಟು ರವಿನ್ಯು ಬೋರ್ಡಿನ ಮೆಂಬರಾಗುವರೆಂತಲೂ, ಚೀಫ್ ಜಸ್ಟಿಸ್ ರಾವ್ ಬಹದ್ದೂರ್ ಆರ್. ವೀರರಾಘವ ಐಯ್ಯಂಗಾರ್‌ರವರು ಹಂಗಾಮಿ ದಿವಾನರಾಗುವರೆಂದೂ ವದಂತಿ.

ವೈಸರಾಯರು ಸ್ಥಾಪಿಸಿರುವ ಕುಷ್ಟರೋಗ ನಿವಾರಣೆ ಫಂಡಿಗೆ ಗ್ವಾಲಿಯರಿನ ಮಹಾರಾಜರು 60,000ರೂ. ಜಯಪುರದ ದರ್ಬಾರಿನವರು ರೂ. 10,000, ಕೋಟಾ ಮಹಾರಾಣಿಯವರು ರೂ. 2000 ಗಳನ್ನು ಕೊಟ್ಟಿರುತ್ತಾರೆ. ಈಗ ಹೆಡ್ಡ್ ಕ್ವಾರ್ಟರ್ ಫಂಡಿಗೆ 2,09,574 ರೂ.ಗಳೂ ಪ್ರಾಂತಿಕ ಫಂಡುಗಳಿಗೆ 9,34,618ರೂ. ಗಳೂ ಕೂಡಿಸಲ್ಪಟ್ಟಿವೆ.

ಅಸ್ಸಾಮಿನ ಖಾಸೀ ಬೆಟ್ಟಗಳ ಮೇಲಿರುವ ಚರ್ರಾಪುಂಜಿಯು ಪ್ರಪಂಚದಲ್ಲೆಲ್ಲಾ ಹೆಚ್ಚು ಮಳೆ ಬೀಳುವ ಪ್ರದೇಶವಾಗಿದೆ. ಇಲ್ಲಿ 1861ನೇ ಇಸವಿಯಲ್ಲಿ 905 ಅಂಗುಲ ಮಳೆಯಾಯಿತೆಂದೂ ಆ ವರುಷದ ಜೂನ್ 14ರಲ್ಲಿ ಒಂದೇ ದಿನ 40 ಅಂಗುಲ ಮಳೆಯಾಯಿತೆಂದೂ ತಿಳಿಯಬಂದಿದೆ. ಇದರಂತೆ ವಿಲಾಯಿತಿಯಲ್ಲಿ ಅತಿಯಾಗಿ ಮಳೆ ಹೊಯಿದು ಹೆಚ್ಚಾಗಿ ಮಳೆ ಬಿದ್ದ ಪ್ರದೇಶದಲ್ಲಿ ದಿನಕ್ಕೆ 9¼ ಅಂಗುಲ ಮಳೆಯು ರಿಕಾರ್ಡು ಮಾಡಲ್ಪಟ್ಟಿದೆ.

ಮಹಾತ್ಮ ಗಾಂಧಿಯವರು ತಾ. 6ರಲ್ಲು ಕಲ್ಕತ್ತದಲ್ಲಿ ಒಂದು ಹೊಸ ಆಯುರ್ವೇದಿಕ್ ಕಾಲೇಜಿನ ಅಡಿಪಾಯ ಕಲ್ಲನ್ನು ಇಟ್ಟದ್ದಲ್ಲದೆ ಮಿರ್ಜಾಪುರ ಪಾರ್ಕಿನಲ್ಲಿ ಒಂದು ದೊಡ್ಡ ನೂಲುವ ಪ್ರದರ್ಶನವನ್ನು ನೋಡಿದರು.

ರೇಶ್ಮೆ ಬೆರೆತಿರುವ ಬಟ್ಟೆಗಳಿಗೆಲ್ಲಾ ಅವುಗಳ ಕ್ರಯದ ಮೇಲೆ ಶೇಕಡ 33ರಂತೆ ಸುಂಕ ಹಾಕಬೇಕೆಂದು ವಿಲಾಯಿತಿಯಲ್ಲಿ ತೀರ್ಮಾನವಾಗಿರುವುದು. ಆದುದರಿಂದ ರೇಶ್ಮೆ ಅಂಚಿನ ಬಟ್ಟೆಗಳಿಗೆಲ್ಲಾ ಕ್ರಯವು ತೇಜ್ಜುವುದು.

ಕಳೆದ 100ವರ್ಷಗಳಲ್ಲಿ ಈ ವರ್ಷದಂತೆ ಧೂಮಕೇತುಗಳ ಹಾವಳಿಯುಂಟಾಗಲಿಲ್ಲ. ಈ ವರ್ಷ ಐವತ್ತಕ್ಕಿಂತ ಹೆಚ್ಚು ಧೂಮಕೇತುಗಳು ಕಾಣಬರುವಂತೆ, ಕೆಲವು ಭೂಮಿಯ ಹತ್ತಿರಕ್ಕೆ ಬರುವುದರಿಂದ ಇವುಗಳಿಗೂ ಪೃಥ್ವಿಗೂ ಆಕರ್ಷಣೆಯುಂಟಾಗಿ ಭೂಮಿಗೆ ದೋಷವುಂಟಾಗುವದೆಂಬ ಭಯವಿದೆ

ದಿ.
ದಿಲ್ಲ.
ದೂರದಿ.

FOR SALE.

... pment in whole or in parts ... sers may inspect and ... or parts they may
2—5—1925.

ಅಮೇರಿಕದಿಂದ ಹಿಂದೂಸ್ಥಾನಕ್ಕೆ ಬಂದ ಹೆಸರುವಾಸಿಗೊಂಡ ಕಾಮಗಾಟುಮಾರು ಹಡಗದಲ್ಲಿ ನಡೆದ ಕೊಲೆಯ ನಂತರ ಸರಕಾರದವರು ಹಡಗಿನಲ್ಲಿದ್ದ ಸಾಮಾನುಗಳನ್ನು ಒಪ್ಪಿಸದಿದ್ದುದರಿಂದ ತನಗುಂಟಾದ ಎರಡೂವರೆ ಲಕ್ಷ ರೂಪಾಯಿಯ ನಷ್ಟವನ್ನು ಕೂಡಿಸಿ ಕೊಡಬೇಕೆಂದು ಸರದಾರ ಗುರುದತ್ತಸಿಂಗರು ಸರಕಾರದ ಮೇಲೆ ಕಲ್ಕತ್ತಾ ಹೈಕೋರ್ಟಿನಲ್ಲಿ ದಾವ ಹಾಕಿರುವರು.

ಹಿಂದುಸ್ಥಾನದಲ್ಲಿ ಮಿಶನರಿಗಳ 400 ಆಸ್ಪತ್ರೆಗಳೂ, 1500 ಮಂದಿ ಡಾಕ್ಟರರೂ, 143 ಅನಾಥಾಲಯಗಳೂ, 99 ವರ್ತಮಾನಪತ್ರಿಕೆಗಳೂ, 43 ಛಾಪಖಾನೆಗಳೂ, 610 ಶಾಲೆಗಳೂ, 117 ಉದ್ಯೋಗಿಕ ಸಂಸ್ಥೆಗಳೂ, 51 ಕಾಲೇಜುಗಳೂ, 61 ಟ್ರೈನಿಂಗ್ ಸ್ಕೂಲುಗಳೂ ಇವೆಯೆಂದು ತಿಳಿಯ ಬಂದಿದೆ.

ಬೆಂಗಳೂರಿನ ದಟ್ಟ ಮನೆಗಳನ್ನು ಕಡಿಮೆಮಾಡುವದಕ್ಕೂ, ಪಟ್ಟಣದ ಆರೋಗ್ಯವನ್ನು ವೃದ್ಧಿಗೊಳಿಸುವುದಕ್ಕೂ ಅಲ್ಲಿಯ ಮುನ್ಸಿಪಾಲಿಟಿಯವರು ಸರ್ಕಾರದಿಂದ ಒಂದೂವರೆ ಲಕ್ಷ ರೂಪಾಯಿಗಳನ್ನು ಸಾಲ ತೆಗೆದು ಬಡ ಜನರಿಗೆ ಚಿಕ್ಕ ಚಿಕ್ಕ ಮನೆಗಳನ್ನು ಕಟ್ಟಿಕೊಡುವರು. ನಮ್ಮ ಕೊಡಗಿನ ಮುನ್ಸಿಪಾಲಿಟಿಗಳು ಏನು ಮಾಡುತ್ತಿರುವವು ?

Coorg Commissioner's Office.
Dated the 12th May 1925,

NOTICE

Applications are invited from candidates willing to undergo training for a Veterinary Assistant Surgeon's post in Coorg on a salary of Rs. 60—3—120 (efficiency bar at Rs 90) The training will be in the Madras Veterinary college and the period will be three years from July next A scholarship of Rs 25 per mensem will be given by Government together with cost of books The annual college fee of Rs. 400 (to be paid in advance) and lodging fees and any other miscellaneous expenditure will be met by the cadidate selected Applications should reach the Commissioner by the 25th May 1925.

T J Tasker,
Commissioner

ವಿದೇಶ.

ರಷ್ಯಾದ ಟ್ರಾಟ್‌ಸ್ಕಿಯವರು ಸೋವ್ಯೆಟ್ ಸರಕಾರಕ್ಕೆ ವಿರೋಧವೆಂದು ಅನೇಕ ಪತ್ರಿಕೆಗಳು ಪ್ರಕಟಿಸುವುದು ಪೂರಾ ಸುಳ್ಳೆಂತಲೂ, ತಾನು ಸೋವ್ಯೆಟ್ ಸರಕಾರಕ್ಕೆ ವಿರೋಧಿಸುವ ಬದಲು ಪೂರ್ತಿ ಉತ್ತೇಜನ ಕೊಡುವವನಾಗಿದ್ದೇನೆಂದು ಅವರು ಹೇಳಿರುವರು.

ಬ್ರಿಟಿಷ್ ಸಾಮ್ರಾಜ್ಯ ಪ್ರದರ್ಶನವು ತಾರೀಕು 9ರಲ್ಲು ರಾಜರಿಂದ ವೆಂಬ್ಲಿಯಲ್ಲಿ ತೆರೆಯಲ್ಪಟ್ಟಿತು. ಜನರು ತುಂಬ ಕಷ್ಟ ತಡೆಯಲು ಕಷ್ಟಸಾಧ್ಯವಾಗಿತ್ತಂತೆ.

ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ಬಾಲ ವಿವಾಹವು ಪ್ರಚಾರದಲ್ಲಿದೆ. ಅಲ್ಲಿ 16 ವರುಷವಾಗುವ ಮುಂಚೆ ವಿವಾಹ ಮಾಡಿಕೊಂಡ 7 ಲಕ್ಷ ಜನರಿದ್ದಾರೆ ಅಲ್ಲಿಯ ಸರಕಾರಿ ಕಾನೂನಿನಲ್ಲಿ ಬದಲಾವಣೆ ಮಾಡಲು ಅನೇಕರಿಗ ಇಷ್ಟವಿಲ್ಲ. ಅಲ್ಲಿಯ 14 ಪ್ರಾಂತ್ಯಗಳಲ್ಲಿ ಇದಕ್ಕಿಂತ ಚಿಕ್ಕ ವಯಸ್ಸಿನಲ್ಲಿ ಸಹ ಮದುವೆಯಾಗಬಹುದು. ನ್ಯೂಯಾರ್ಕ್ ಮೊದಲಾದ ಪ್ರಾಂತ್ಯಗಳಲ್ಲಿ ಬಾಲ ವಿವಾಹ ಮಾಡುವ ಪ್ರಯೋಗವು ಮಾಡುವುದಕ್ಕೆ ಕಾನೂನು ಮಾಡಲ್ಪಟ್ಟಿದೆ. ಈ ಕಾನೂನಿನಂತೆ 17 ವಯಸ್ಸಿಗೆ ಹುಡುಗಿಯು ಮದುವೆಯಾಗಿ 18 ವರುಷದೊಳಗ ಗಂಡನೊಡನೆ ಸಹವಾಸವಿಲ್ಲದೆ ಹೋದರೆ ಮಕ್ಕಳಾದರೂ ಸಹ ವಿವಾಹ ಸಮ್ಮಂಧವನ್ನು ಕಳಕೊಳ್ಳಬಹುದಂತೆ. ಇದೇ ಸಂಸ್ಥಾನಗಳಲ್ಲಿ 12 ವರುಷದ ಹುಡುಗಿಯರೂ 14 ವರುಷದ ಹುಡುಗರೂ ತಂದೆ ತಾಯಿಗಳ ಸಮ್ಮತಿ ಇದ್ದರೆ ಮದುವೆಯಾಗಬಹುದು.

ಜರ್ಮನಿಯ ಪ್ರೆಸಿಡೆಂಟರಾಗಿ ವಾನ್‌ಹಿಂಡನ್‌ಬರ್ಗ್‌ರ ಚುನಾವಣೆಯನ್ನು ಬರ್ಲಿನಿನ ಚುನಾವಣೆಕೋರ್ಟು ಮಂಜೂರುಮಾಡಿದೆ.

ಬೆಲ್ಜಿಯಮಿನ ಕೆಥೋಲಿಕಾ ಮುಂದಾಳಾದ ವಾನಾ ಡೇವಿಯೂರಾರವರು ಹೊಸ ಮಂತ್ರಿಮಂಡಲಿಯನ್ನು ಏರ್ಪಡಿಸಲು ಒಪ್ಪಿರುವರು.

FOR SALE.

The Camera, folding browny No. 2 with powerful German lens, is for sale. Offers to be sent to

Photo
C/o "Kodagu"
Mercara

ನೋಟೀಸು.

ದಕ್ಷಿಣ ಕೊಡಗಿನಲ್ಲಿ ಮುದ್ರಣಕಾಗದ, ನೋಟೀಸು ಮತ್ತು ಬೇರೆ ಪ್ರಿಂಟಿಂಗ್ ಕೆಲಸ ಮಾಡಿಸಬೇಕೆಂದಿರುವವರು ದಯವಿಟ್ಟು ಎಲ್ಲಾ ಆರ್ಡರುಗಳನ್ನು ನಮ್ಮ ಏಜಂಟರಾದ ವೀರಾಜಪೇಟೆ ಖಾದಿಭಂಡಾರದ ಮೇನೇಜರವರಿಗೆ ಕೊಟ್ಟರೆ, ಶೀಘ್ರದಲ್ಲೇ ಪ್ರಿಂಟುಮಾಡಿಸಿ ಕಳುಹಿಸಲಾಗವುದು.

'ಮೇನೇಜರ್',
"ಕೊಡಗು" ಪ್ರೆಸ್, ಮಡಿಕೇರಿ.

ಎಲ್ಲಾ ಮತಗಳ ಒಗ್ಗಟ್ಟು.

ಮೇ ತಾರೀಕು 7ರಲ್ಲು ಕಲ್ಕತ್ತದ ಬೌದ್ಧ ವಿಹಾರದಲ್ಲಿ "ಮಹಾಬೋಧಿ" ಸಂಘದವರು ಬುದ್ಧರ 2549ನೆಯ ಜನ್ಮದಿನ ವಾರ್ಷಿಕೋತ್ಸವವನ್ನು ನಡೆಸಿದಾಗ ಮಹಾತ್ಮ ಗಾಂಧಿಯವರು ಅಧ್ಯಕ್ಷರಾಗಿ ಮಾಡಿದ ಭಾಷಣದ ಸಾರಾಂಶ.—

ಎಲ್ಲಾ ಮತಗಳ ತತ್ವಜ್ಞಾನಿಗಳೂ ನನ್ನನ್ನು ಅವರ ಮತಕ್ಕೆ ಸೇರಿದವನೆಂದು ಹೇಳುವುದು ಆಶ್ಚರ್ಯವಾಗುತ್ತಿದೆ ಜೈನರು ನಾನು ಒಬ್ಬ ಜೈನನೆಂದು ತಿಳಿದುಕೊಂಡಿದ್ದಾರೆ. ಅನೇಕ ಬೌದ್ಧ ಸ್ನೇಹಿತರು ನಾನು ಬುದ್ಧನ ಹಿಂಬಾಲಕನೆಂದು ಹೇಳುತ್ತಾರೆ ನೂರಾರು ಕ್ರೈಸ್ತ ಸ್ನೇಹಿತರು ಈಗಲೂ ನನ್ನನ್ನು ಕ್ರೈಸ್ತನೆಂದು ಹೇಳುತ್ತಿರುವುದಲ್ಲದೆ, ಕೆಲವರು ನನ್ನನ್ನು ಹೇಡಿ ಎಂದು ಹೇಳಲು ಹಿಂಜರಿಯದೆ, ನನಗೆ ಹೇಳುವುದೇನೆಂದರೆ "ನೀನೊಬ್ಬ ಕ್ರೈಸ್ತನೆಂಬುದು ನಮಗೆ ಗೊತ್ತಿದೆ. ಆದರೆ ಹಾಗೆಂದು ಒಪ್ಪಿಕೊಳ್ಳಲು ನೀನು ಹೆದರುತ್ತೀ, ನೀನು ಯೇಸುಕ್ರೈಸ್ತನಲ್ಲಿಯೂ ಅವನ ಮುಕ್ತಿಮಾರ್ಗದಲ್ಲಿಯೂ ನಂಬುತ್ತೀ ಎಂದು ಧೈರ್ಯವಾಗಿ ಹೇಳಲಿಕ್ಕೇನು ?"

ನಾನೊಬ್ಬ ಮುಸಲ್ಮಾನನೆಂದು ಹೇಳಿಕೊಳ್ಳದಿದ್ದರೂ ಎಲ್ಲಾ ವಿಷಯಗಳಲ್ಲಿಯೂ ನಾನು ಅವರ ಮತಕ್ಕೆ ಸೇರಿದವನಂತೆಯೇ ಇದ್ದೇನೆಂದು ಅನೇಕ ಮುಸಲ್ಮಾನರೂ ಹೇಳುತ್ತಿರುವರು ಇದೆಲ್ಲಾ ಮಿತಿಮೀರಿದ ಹೊಗಳಿಕೆಯಾಗಿದೆ. ಇದು ಅವರಿಗೆ ನನ್ನ ಮೇಲಿರುವ ಪ್ರೀತಿ ಮತ್ತು ಮರ್ಯಾದೆಯ ಗುರುತೆಂದು ನಾನು ನೆನಸುತ್ತೇನೆ ಹೇಗೂ. ನಾನೊಬ್ಬ ದೀನ ಹಿಂದುವೆಂದು ನಂಬಿದ್ದೇನೆ. ಆದರೆ ಹಿಂದೂಮತವನ್ನು ವಿಚಾರಿಸಿದಷ್ಟು ಅದು ಅಭಿರಾಂಡದಷ್ಟು ವಿಶಾಲವಾದದೆಂಬ ಮತ್ತು ಭೂಲೋಕದಲ್ಲಿ ಒಳ್ಳೆಯದೆನ್ನಿಸಿಕೊಳ್ಳುತ್ತಿರುವುದೆಲ್ಲವು ಅದರಲ್ಲಿ ಅಡಕವಾಗಿದೆ ಎಂಬ ನಂಬಿಕೆಯು ನನ್ನಲ್ಲಿ ಪ್ರಬಲವಾಗುತ್ತಿರುವುದರಿಂದ ಎಲ್ಲಾ ಮತಗಳಲ್ಲಿಯೂ ವಿಶ್ವಾಸವಿಡಬಹುದೆಂದೂ, ಹಾಗೇ ಅವುಗಳಿಗೆ ನಾನು ಮರ್ಯಾದೆ ತೋರಿಸುವುದರಿಂದ ನಾನು ನಿಜವಾದ ಹಿಂದೂವೆಂದೂ ನನ್ನ ಅಂತರಂಗದಲ್ಲಿ ಹೊಳೆಯುತ್ತಿರುವುದು

ಸುಮಾರು 40 ಯಾ, 38ವರ್ಷಗಳ ಹಿಂದೆ ನಾನು ಹುಡುಗನಾಗಿದ್ದಾಗ್ಗ ಇಂಗ್ಲಂಡಕ್ಕೆ ಹೋದಾಗ್ಯೆ ನನಗೆ ಕೊಡಲ್ಪಟ್ಟ ಪ್ರಥಮ ಮತ ಪುಸ್ತಕವು (Light of Asia) "ಏಷ್ಯಖಂಡದ ಬೆಳಕು " ಎಂಬುದಾಗಿತ್ತು. ಅಷ್ಟರವರೇಗೂ ನಾನು ಯಾವ ಮತದ ವಿಷಯವಾಗಲೀ ಓದಿರಲಿಲ್ಲ. ಹಿಂದೂ ಮತದ ವಿಷಯ ನನ್ನ ತಂದೆ ತಾಯಿಗಳು ಅವರ ಆಚರಣೆಯಿಂದ ಕಲಿಸಿದಷ್ಟಲ್ಲದೆ ಅವರು ನನ್ನನ್ನು 'ರಾಮರಕ್ಷ್ಯ'ವನ್ನು ಕಲಿಯಲಿಕ್ಕೆ ಏರ್ಪಡಿಸಿದ್ದ ಒಬ್ಬ ಬ್ರಾಹ್ಮಣನಿಂದ ಸ್ವಲ್ಪ ಹೆಚ್ಚು ತಿಳಿದುಕೊಂಡಿದ್ದನು ನಾನು ಇಂಗ್ಲೆಂಡಕ್ಕೆ ಹೊರಟಾಗ್ಗ ನನಗೆ ತಿಳಿದಿದ್ದುದು ಇಷ್ಟೇ ಆದ್ದರಿಂದ "ಏಸ್ಯದ ಬೆಳಕು" ನನ್ನ ಕೈ ಸೇರಿದಾಗ್ಯೆ ಅದನ್ನು ನಾನು ಬಹು ಆತುರದಿಂದ ಓದಿದೆನು. ಗ್ರಂಥಾದಿಗಳನ್ನು ಓದುವ ಪ್ರೀತಿಯು ನನಗಿಲ್ಲದಿದ್ದರೂ ಈ ಪುಸ್ತಕದ ರುಚಿಯಿಂದ ಅದನ್ನು ಪೂರ್ತಿಮುಗಿಸುವವರೇಗೂ ನನಗೆ ಸಮಾಧಾನವಿರಲಿಲ್ಲ. ಮುಗಿಸಿದೊಡನೆ ಅದರಲ್ಲಿ ಸರ್ ಎಡ್ವಿನ್ ಆರ್ನಾಲ್ಡರವರು ಚೆನ್ನಾಗಿ ವಿವರಿಸಿರುವ ಬೋಧನೆಗಳಲ್ಲಿ ನನಗೆ ತುಂಬಾ ಸನ್ಮಾನವುಂಟಾಯಿತು. ಪುನಃ ಆ ಪುಸ್ತಕವನ್ನು ದಕ್ಷಿಣ ಆಫ್ರಿಕಾದಲ್ಲಿ ಲಾಯರ ಕೆಲಸ ಮಾಡಿಗಿದ್ದಾಗ್ಯೆ ಓದಿದೆನು. ಅಷ್ಟರಲ್ಲಿ ಭೂಲೋಕದ ಬೇರೆ ದೊಡ್ಡ ಮತಗಳ ವಿಷಯ ಓದಿ ಸ್ವಲ್ಪ ತಿಳಿದುಕೊಂಡಿದ್ದೆನು ಆದರೆ ಈ ಪುಸ್ತಕವನ್ನು ಎರಡನೇ ಸಲ ಓದಿದಾಗ್ಯೆ ಅದರಲ್ಲಿ ನನಗಿದ್ದ ಸನ್ಮಾನವು ಸ್ವಲ್ಪವೂ ಕಮ್ಮಿಯಾಗಲಿಲ್ಲ. ಅದಕ್ಕಿಂತ ಹೆಚ್ಚು ನನಗೆ ಬೌದ್ಧಮತದ ವಿಷಯ ಗೊತ್ತಿರುವುದಿಲ್ಲ. ಎರವಾಡಾ ಜೈಲಿನಲ್ಲಿ ಈ ಮತ ಸಮ್ಮಂಧ ಗ್ರಂಥಗಳನ್ನು ಸ್ವಲ್ಪ ಹೆಚ್ಚು ಓದಿದೆನು. ಆದರೆ ಇಂಥಾ ಸಂದರ್ಭಗಳಲ್ಲಿ ಅವ್ರು ಬುದ್ಧ ಯಾ, ಮಹಾವೀರ ಅಥವಾ ಏಸು ಕ್ರೈಸ್ತನಿಗೆ ಸಮ್ಮಂಧಪಟ್ಟಲ್ಲಿ, ಅಧ್ಯಕ್ಷನಾಗಲು ನನ್ನನ್ನು ಕೇಳುವುದು ಅವರ ಬೋಧನೆಗಳನ್ನು ನನಗೆ ತಿಳಿದಷ್ಟು ಮಟ್ಟಿಗೆ ನನಗೆ ಸಾಧ್ಯವಾದಷ್ಟು ಜಾರಿಗೆ ತರಲು ಪ್ರಯತ್ನಿಸುವುದೇ ಕಾರಣವೆಂದು ನನಗೆ ಗೊತ್ತಿದೆ.

ನಾನು ನನ್ನ ಜೀವನಕ್ರಮದಲ್ಲಿ ಬುದ್ಧನ ಬೋಧನೆಗಳನ್ನು ಉದಾಹರಿಸುತ್ತಿದ್ದೇನೆಂದು ಅನೇಕ ಸ್ನೇಹಿತರು ಯೋಚಿಸುತ್ತಾರೆ ಅವರ ಶ್ಲಾಘನೆಯನ್ನು ನಾನು ಒಪ್ಪುತ್ತೇನೆ ಮತ್ತು ಅವನ ಬೋಧನೆಗಳನ್ನು ಜಾರಿಗೆ ತರಲು ನನ್ನ ಕೈಲಾದಷ್ಟು ಪ್ರಯತ್ನಿಸುತಿದ್ದೇನೆಂದು ನಾನು ಹೇಳಬಲ್ಲೆನು; ಬ್ರಾಹ್ಮಮತದ ತತ್ವಜ್ಞಾನಿಗಳನೇಕರಂತೆಯೂ ಮತ್ತು ಹಲವು ಹಿಂದೂ ಮತದ ತತ್ವಜ್ಞಾನಿಗಳಂತೆಯೂ, ಹಿಂದೂ ಮತಕ್ಕೂ ಮತ್ತು ಬೌದ್ಧಮತಕ್ಕೂ ನಾನು ಭೇದಗಳನ್ನು ಕಲ್ಪಿಸಲಾರೆನು. ಬುದ್ಧನು ಹಿಂದೂ ಮತವನ್ನು ತಾನು ಜೀವಿಸಿದನೆಂದೇ ನನ್ನ ಅಭಿಪ್ರಾಯ ಅವನು ಒಬ್ಬ ದೊಡ್ಡ ಸುಧಾರಕನಾಗಿದ್ದನೆಂಬುದರಲ್ಲಿ ಸಂಶಯವಿಲ್ಲ ಅಂದರೆ, ತನ್ನ ಬೆಳವಣಿಗೆಗೂ ಶರೀರದ ಏಳಿಗೆಗೂ ಅವಶ್ಯವೆಂದು ಕಂಡು ಬರುವ ಸುಧಾರಣೆಗೆ ಎಷ್ಟು ಕಷ್ಟಪಟ್ಟರೂ ಸ್ವಲ್ಪವೆಂದೇ ನಂಬಿದ್ದನು ಚರಿತ್ರೆಗಳಲ್ಲಿ ಹೇಳಿದ ಸಂಗತಿಗಳು ನಿಜವಾದರೆ ಆಗಿನ ಸ್ವಾರ್ಥಪರರ ಬ್ರಾಹ್ಮಣರು ಅವನ ಸುಧಾರಣೆಯನ್ನು ನಿರಾಕರಿಸಿದರು. ಆದರ ಜನಸಮುದಾಯವು ತಮ್ಮ ಸಮಯವನ್ನು ಯೋಚನೆಯಲ್ಲಿ ಕಳೆಯುವಂಥಾ ತತ್ವಜ್ಞಾನಿಗಳಾಗಿರದೆ, ಅವರು ಕಾರ್ಯಥಾ ತತ್ವಜ್ಞಾನಿಗಳಾಗಿದ್ದರು ಅವರಿಗೆ ಸಾಮಾನ್ಯ ಜ್ಞಾನವು ಚೆನ್ನಾಗಿದ್ದುದರಿಂದ ಬ್ರಾಹ್ಮಣರ ಸ್ವಾರ್ಥತೆಯನ್ನು ತಿರಸ್ಕರಿಸಿ ತಮ್ಮ ಮತವನ್ನು ಉದಾಹರಿಸಿದ ಬುದ್ಧನನ್ನು ಹಿಂಬಾಲಿಸಲು ಹೆದರಲಿಲ್ಲ, ನಾನು ಜನಸಮುದಾಯದಲ್ಲಿ ಒಬ್ಬನಾದುದರಿಂದ ಬೌದ್ಧಮತವು ಹಿಂದೂ ಮತದಿಂದ ಬೇರೆಯಲ್ಲವೆಂದು ತಿಳಿದುಕೊಂಡೆನು.

ಬುದ್ಧನ ಸುಲಭ ಬೋಧನೆಗಳಿಂದ ಹೆಚ್ಚು ತಿಳುವಳಿಕೆಯುಳ್ಳ ಜನರು ತೃಪ್ತರಾಗುವುದಿಲ್ಲ. ಅವರು ತಮ್ಮ ಮೇಧಸ್ಸನ್ನು ತೃಪ್ತಿಪಡಿಸಲು ಈ ಬೋಧನೆಗಳನ್ನು ನೋಡುವದರಿಂದ ಅವರು ನಿರಾಶಿತರಾಗುವರು. ಮತವು ಎಲ್ಲದಕ್ಕಿಂತಲೂ ಹೆಚ್ಚಾಗಿ ಹೃದಯದ್ದಾಗಿದೆ. ಮೇಧಸ್ಸು ಶಕ್ತಿಯ ಹೆಮ್ಮೆಯಿಂದ ಅದನ್ನು ನೋಡುವವರೆಲ್ಲರೂ ನಿರಾಶ್ರಿತರಾಗುವಲ್ಲಿ ಸಂಶಯವಿಲ್ಲ. ಬುದ್ಧನು ನಾಸ್ತಿಕನಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆನು. ಹೆಮ್ಮೆಯಿಂದ ಹೋಗುವ ಯಾವ ಭಕ್ತನನ್ನಾಗಲೀ ದೇವರು ನೋಡಲು ತಿರಸ್ಕರಿಸುವನು.

ನೆಲಕ್ಕೆ ಮೂಗುಗಳನ್ನು ಉಜ್ಜುವವರನ್ನು ಅವನು ನಂಬುವದಿಲ್ಲ ಅವರ ಮೂಗಿನ ಮೇಲೆ ಗುರುತುಗಳನ್ನು ನೋಡಬೇಕಂದಿಲ್ಲ; ಅನೇಕ ಮಹಮದೀಯರು ತಮ್ಮ ಹಣೆಯ ಮೇಲೆ ಈ ಗುರುತುಗಳನ್ನು ಒಯ್ಯುತ್ತಿರೆಂದು ನಿಮ್ಮಲ್ಲಿ ಕೆಲವರಿಗೆ ಗೊತ್ತಿಲ್ಲದಿರಬಹುದು. ಅವರು ಮೂಗು ನೆಲಕ್ಕೆ ತಗಲುವಂತೆ ದಿನೇದಿನೇ ನಮಸ್ಕಾರ ಮಾಡುವದರಿಂದ ಹಣೆಯ ಮೇಲೆ ರೂಪಾಯಿಯ ಅಗಲ ಯಾ ಹೆಚ್ಚು ಗುರುತು ಉಂಟಾಗುತ್ತದೆ ದೇವರಿಗೆ ಈ ಗುರುತುಗಳು ಬೇಡ. ಅವನು ಅಂತರಂಗವನ್ನು ನೋಡುತ್ತಾನೆ. ಹೃದಯದಲ್ಲಿ ಘಾಯವಾಗಿ ಅದರಿಂದ ರಕ್ತಹರಿಯದೆ ಬರೀ ಮೂಗನ್ನು ಕತ್ತರಿಸಿಕೊಂಡು ಅವನ್ನು ನೆಲಕ್ಕ ಉಜ್ಜಿದರೆ ದೇವರು ಅವನಕಡೆಗೆ ಎಂದಿಗೂ ನೋಡುವುದಿಲ್ಲ ಜನಸಮುದಾಯವು ಹೆಮ್ಮೆಯೆಂಬುದನ್ನು ಅರಿಯದೆ ಸಂಪೂರ್ಣ ದೀನಸ್ವಭಾವದಿಂದ ದೇವರನ್ನು ಸಮೀಪಿಸುವುದರಿಂದ ಅವರು ಕಾರ್ಯತಾ ಒಳ್ಳೇ ತತ್ವಜ್ಞಾನಿಗಳಾಗುತ್ತಾರೆ ಇದೇ ಬೌದ್ಧಮತದ ಮುಖ್ಯ ತತ್ವವೆಂದು ನನ್ನ ಅಭಿಪ್ರಾಯ. ಅದು ಪ್ರಾಮುಖ್ಯವಾಗಿ ಜನಸಮುದಾಯದ ಮತವಾಗಿದೆ.

ನಾನು ನಿರಾಶಿತನಾಗಿರುವುದಿಲ್ಲ. ಬೌದ್ಧ ಮತವು ಹಿಂದೂದೇಶದಿಂದ ಹೊರಗಟ್ಟಲ್ಪಟ್ಟಿದೆಯೆಂದು ನಾನು ಒಂದು ನಿಮಿಷವಾದರೂ ನೆನಸುವುದಿಲ್ಲ. ಹೆಸರಿಗೆ ಮಾತ್ರ ಬೌದ್ಧಮತವನ್ನು ಆಚರಿಸುತ್ತೇವೆಂದು ಹೇಳುವ ಚೈನಾ, ಸಿಲೋನ್ ಮತ್ತು ಜಪಾನ್ ದೇಶಗಳಿಗಿಂತ ಹೆಚ್ಚಾಗಿ ಹಿಂದೂ ದೇಶದಲ್ಲಿ ಈ ಮತದ ಮುಖ್ಯ ತತ್ವಗಳನ್ನು ಕಾರ್ಯತಾ ಆಚರಿಸುತ್ತಿರುವರು. ನಮ್ಮ ಬರ್ಮಾ ಸ್ನೇಹಿತರಿಗಿಂತ ಹೆಚ್ಚಾಗಿ ನಾವು ಹಿಂದೂಸ್ಥಾನದಲ್ಲಿ ಬುದ್ಧನ ಬೋಧನೆಗಳನ್ನು ಕಾರ್ಯದಲ್ಲಿ ನಡಸುತ್ತಿದ್ದೇವೆಂದು ಹೇಳಬಲ್ಲೆನು. ಬುದ್ಧನನ್ನು ಹೊರಗಟ್ಟುವುದು ಅಸಾಧ್ಯ ಹಿಂದೂಸ್ಥಾನದಲ್ಲಿ ಅವನು ಒಸ್ತುತ್ತಿದನ್ನು ನಿಮ್ಮಿಂದ ತಪ್ಪಿಸಲಿಕ್ಕಾಗುವದಿಲ್ಲ. ಅವನ ಜೀವಮಾನಕಾಲದಲ್ಲಿಯೇ ಅಳಿಸಿಹೋಗದಂಥ ಹೆಸರುವಾಸಿಯನ್ನು ಪಡೆದಿರುವನು. ಈಗಲೂ ಅವನು ಕೋಟ್ಯಾಂತರ ಮನುಷ್ಯ ಜನ್ಮಗಳಲ್ಲಿ ವಾಸಿಸುತ್ತಿದ್ದಾನೆ ಆದುದರಿಂದ ಈ ಮತಕ್ಕೆ ಹೆಚ್ಚು ಉತ್ತೇಜನ ಕೊಡಲಿ, ಯಾ, ಹೊಸಲೂರಿನಿಂದ ಒಬ್ಬ ಮಹಿಳೆಯು (ಮಿಸ್ ಮೇರಿ ಫಾಸ್ಟರ್ ಎಂಬವಳು ಬೌದ್ಧಮತ ಪ್ರಚಾರಕ್ಕೆ 80,000 ರೂಪಾಯಿ ಕೊಟ್ಟಿರುವಳು.) ಧನಸಹಾಯಮಾಡಲಿ, ಯಾ ಮಾಡದಿರಲಿ ಅದರಿಂದ ಏನಾಗುವುದು ? ನಾನು ಎಷ್ಟರ ಮಟ್ಟಿಗೆ ಬುದ್ಧನ ಶನಿತರ ಮತ್ತು ಕರುಣೆಯ ಬೋಧನೆಯನ್ನು ಜಾರಿಗೆ ತಂದಿರುತ್ತೇನೆಂದು ಪ್ರಶ್ನೆ ಬಿಡನು ತನ್ನನ್ನು ಕೇಳಿಕೊಳ್ಳದೆ, ನಾವು ಎಷ್ಟರ ಮಟ್ಟಿಗ ಅವನ ತತ್ವಗಳನ್ನು ಕಾರ್ಯತಾ ಆಚರಿಸುತ್ತೇವೋ ಅಷ್ಟರ ಮಟ್ಟಿಗೆ ಆ ಮನುಷ್ಯಜಾತಿಯ ಆ ಮಹಾಗುರುವಿಗೆ ಭಕ್ತರಾಗಲು ಯೋಗ್ಯರಾಗುತ್ತೇವೆ.

ಭೂಲೋಕವು ಇರುವವರೆಗೆ ಬುದ್ಧನು ಅತಿ ದೊಡ್ಡದಾದ ಗುರುಗಳಲ್ಲಿ ಒಬ್ಬನಾಗಿರುವನೆಂಬುದಕ್ಕೆ ಸ್ವಲ್ಪವೂ ಸಂಶಯವಿಲ್ಲ. 2500 ವರ್ಷಗಳ ಹಿಂದೆ ಬುದ್ಧನು ನಮಗೆ ಕೊಟ್ಟಂಥ ಆಲೋಚನೆಗಳು ಎಂದಿಗೂ ಮಾಯವಾಗವು ಬೇರೆಯೆಂದು ಮತದಂತೆ ಬೌದ್ಧಮತವೂ ಈಗ ಒಳ್ಳೆ... ಲ್ಲದಿದ್ದರೂ ಎಲ್ಲಾ ದೊಡ್ಡ ಮತಗಳು ಮೋಸಗಾರರ, ರಕ್ಷಕರ ಸುಳ್ಳುಗಾರಿಕೆಗಳಿಂದ [illegible] ದಿನವು ಸಮೀಪಿಸುತ್ತಿದೆಯೆಂದು ನನಗೆ ಆದು ಕಳೆಯುವವನಿಗೆ ಸತ [illegible]

ಣ್ಯದ ಎರಡು ಮುಖಗಳೆಂದೂ, ಆ ನಾಣ್ಯವೇ ಬಾಬಿನಲ್ಲಿರುವ ಸರಿಯೂ ನಾಣ್ಯವೆಂದೂ ಪ್ರಿಯ ವ್ಯಗಳೆಲ್ಲಾ ರಕ್ತ ನಾಣ್ಯಗಳೆಂದೂ ಕಂಡುಒರುವ ದಿನವನ್ನು ಬೇಗನೆ ನೋಡುವೆವು. ನಾವು ಹಿಂದೂಗಳೆಂದು ಅಂದುಕೊಳ್ಳಲಿ, ಕೊಳ್ಳದಿರಲಿ ಆ ಮಹಾತ್ಮ ಬುದ್ಧನ ಉದ್ದೇಶವನ್ನು ಅರಿತುಕೊಂಡು ಅವನ ಬೋಧನೆಯಂತೆ ನಡೆಯಲು ನಮಗೆ ದೇವರು ಸಹಾಯಮಾಡಲಿ.

ತಾರೀಕು 1—5—1925ರಲ್ಲಿ ಶೆಟ್ಟಿಗೇರಿ ಸ್ಕೂಲು ಒಳಿಮೆ ಮಚ್ಚಮಾಡ ಮುದ್ದಯ್ಯನವರ ಅಧ್ಯಕ್ಷತೆಯಲ್ಲು ಮತ್ತು ಮರೆನಾಡು ದೇವಾ ಮಾಳದ ಮೈದಾನದಲ್ಲು ತಾ 3 5 25ರಲ್ಲು ಮ ನೆಲ್ಲಿರ ಮಾಚಯ್ಯನವರ ಅಧ್ಯಕ್ಷತೆಯಲ್ಲೂ ಕುತ್ತುನಾಡು ಮಹಾ ದೇವಸ್ಥಾನದಲ್ಲು ಚೇರಂಡ ಮ ಮುದ್ದಯ್ಯನವರ ಅಧ್ಯಕ್ಷತೆಯಲ್ಲೂ ಮೀಟಿಂಗು ನಡಿಸಿ ಜಮೀನ್ದಾರರ ಸಂಘದ ಬಾಕಿಯಾದ ವಾರ್ಷಿಕ ಚಂದಾ ವಸೂಲಿಗನ್ನು ಮತ್ತು ಮುಂದಿನ ಚಂದಾವನ್ನು ವಸೂಲ್ಮಾಡುವ ವಿಷಯಕ್ಕಾಗಿ ಈ ಕೆಳಗೆ ಕಾಣಿಸಿರುವ ಗ್ರಾಮವಾರು ಕಮಿಟಿಯನ್ನು ನೇಮಕ ಮಾಡಲ್ಪಟ್ಟಿದೆ

	ಗ್ರಾಮ	ಕಮಿಟಿಯವರು
1	ತಾವಳಗೇರಿ	. ಮ ತಡಿಯಂಗಡ ನಾಣೈಯ್ಯನವರು ಮತ್ತು ಮಾಣ್ಣಪ್ಪನವರು, ನೂರೆರ ಮುದ್ದಯ್ಯನವರು.
2	ಶೆಟ್ಟಿಗೇರಿ	ಮ. ಚಪ್ಪಂಡ ಬೋಪ್ಪನವರು, ಉಳುವಂಡ ಪೊನ್ನಪ್ಪನವರು
3	ನಮ್ಮಲೆ	ಮ. ಕುಂಞಂಗಡ ಕಾರ್ಯಪ್ಪನವರು ಚೊಟ್ಟೆಯಂಡಮಾಡ ಐಮ್ಮಯ್ಯನವರು
4	ಬಿರುನಾಣಿ	... ಮ ನೆಲ್ಲಿರ ಮಾಚಯ್ಯನವರ, ಕರ್ತಮಾಡ ಕುಶಾಲಪ್ಪನವರು
5.	ಪರಕಟಕೇರಿ	... ಮ ಕಾಳಿಮಾಡ ಗಣಪತಿಯವರು ಮತ್ತು ಕರುಂಬೈಯ್ಯನವರು.
6	ಬೆರಾಲು	. ಮ ಕೇಕಿರ ಅಪ್ಪೈಯ್ಯನವರು, ಬೊಳ್ಳಿರ ಅಣ್ಣೈಯ್ಯನವರು
7.	ಪೊರಾಡು	ಮ ಅಣ್ಣೀರ ಬಿದ್ದೈಯ್ಯನವರು, ಮಲ್ಲೆಂಗಡ ಅಚ್ಚೈಯ್ಯನವರು
8.	ಬಾಡಗರಕೇರಿ	. ಮ ಕಾಯಮಂಡ ತಮ್ಮಯ್ಯನವರು, ಮಲ್ಲೆಂಗಡ ಚಂಗಪ್ಪನವರು
9.	ಕೊಂಗಣ	.... ಮ ಕಡೆಮಾಡ ಐಯ್ಯಪ್ಪನವರು, ಕುಂಞಂಗಡ ಕುಞಪ್ಪನವರು.
10	ಕುಟ್ಟಂದಿ	. . ಮ ಕೂಳ್ಳಿರ ಚಂಗಪ್ಪನವರು, ಚೇರಂಡ ದೇವೈಯ್ಯನವರು
11.	ಬಿ ಶೆಟ್ಟಿಗೇರಿ	ಮ ಚೆಟ್ಟಿಮಾಡ ಕಂಬಪ್ಪನವರು, ಕರ್ತೂರ ಮಾದಪ್ಪನವರು

ಸಿ ಕ. ಕುಟ್ಟಪ್ಪ,
(ಪ್ರಚಾರಕ.)

ಶ್ರೀರಾಮಕೃಷ್ಣ ಪರಮಹಂಸರ ವಚನಗಳು.

ಬ್ರಹ್ಮನು ವಿದ್ಯೆ ಮತ್ತು ಅವಿದ್ಯೆಗಳ ಆಚೆಯ ಕಡೆಗೆ ಇರುತ್ತಾನೆ ಬ್ರಹ್ಮನೆಂಬ ಪರ್ವತದ ಮೇಲೆ ಏರಲಿಕ್ಕೆ ಹೋಗುವದಕ್ಕಾಗಿ ಮೆಟ್ಟಲು (ಸೋಪಾನ) ಗಳ ಸಾರ್ಥಕಂತಿದ್ದ ವಿದ್ಯೆಯೋ ಉತ್ತಮ ವಿದ್ಯೆಯು ಬ್ರಹ್ಮನು ತ್ರಿಗುಣ ರೂಪಿಯಾಗಿದ್ದಾನೆ. ಮಾಯೆಯೆಂದರೆ ಎಲ್ಲ ಕಡೆಯಲ್ಲಿ ಭಾಸವಾಗುವ ಜಗತ್ತು. ಅಂದರೆ ವಿದ್ಯೆ ಮತ್ತು ಅವಿದ್ಯೆಗಳ ಮಿಶ್ರಣವು ಅರ್ಥಾತ್ ಬ್ರಹ್ಮನು ಮಾಯೆಯಿಂದ ಪರವಾಗಿ ಮಾಯೆಯ ಆಚೆಯ ಕಡೆಗೆ ಇರುತ್ತಾನೆ.

ಬ್ರಹ್ಮನು ಪಾಪಪುಣ್ಯ ಸುಖದುಃಖಗಳಿಂದ ಅಲಿಪ್ತ ಅಂದರೆ ದೂರದಲ್ಲಿರುವನು. ಆತನು ಪಾಪಪುಣ್ಯಾದಿಗಳಿಗೆ ಕೇವಲ ಸಾಕ್ಷಿ ರೂಪನಾಗಿರುವನು ಈ ದ್ವಂದ್ವಗಳು ಜೀವದಂತಿರುತ್ತವೆ ದೀಪದ ಪ್ರಕಾಶದಲ್ಲಿ ಶ್ರೀಮದ್ಭಾಗವತದಂಥ ಪವಿತ್ರ ಗ್ರಂಥಗಳನ್ನು ಓದಬಹುದು ಅದರಂತೆಯೇ ದೀಪದ ಪ್ರಕಾಶದಲ್ಲಿಯೇ ದುಷ್ಟ ಹೇತುವಿನಿಂದ ಸುಳ್ಳು ದಸ್ತಾವೇಜನ್ನೂ ತಯಾರಿಸಬಹುದು. ಅಥವಾ ಬ್ರಹ್ಮನು ಸರ್ಪದಂತಿದ್ದಾನೆ. ಸರ್ಪದ ಹಲ್ಲುಗಳಲ್ಲಿ ವಿಷವು ತುಂಬಿರುತ್ತದೆ. ಆದರೆ ಆ ವಿಷದ ಬಾಧೆಯು ಅದಕ್ಕಾಗುವುದಿಲ್ಲ. ತನ್ನ ವಿಷದಿಂದ ಅದು ಸಾಯುವುದಿಲ್ಲ. ಸರ್ಪದ ಹಲ್ಲುಗಳಲ್ಲಿನ ವಿಷವು ಬೇರೆಯವರ ವಿಷವಾದರೂ ಸರ್ಪಕ್ಕೆ ಅದು ವಿಷವೇ ಅಲ್ಲ. ಆದರೆ ಅದು ವಿಷವೆಂಬುದು ಸುಳ್ಳಲ್ಲ.

ಸಂಸಾರದೊಳಗಣ ಯಾವದೇ ವಿಪತ್ತು, ಯಾವದೇ ಪಾಪ, ಯಾವದೇ ದುಃಖವನ್ನು ತೆಕ್ಕೊಳ್ಳಿರಿ ಆ ವಿಪತ್ತು, ಆ ಪಾಪ, ಆ ದುಃಖಗಳು ತನ್ನ ಸಂಬಂಧದಲ್ಲಿ ಮಾತ್ರ ನಿಜವಿರುತ್ತವೆ ದಿಲ್ಲ ಪರಮೇಶ್ವರನಿಗೆ ಅವುಗಳ ಸ್ಪರ್ಶವೂ ಇಲ್ಲ ಬ್ರಹ್ಮನು ಅನೆ ದೂರವಿದ್ದಿನಂತೆ ಪರದಲ್ಲಿ ಅಂದರೆ ಅವುಗಳಾಚೆಗೆ ಇರುತ್ತಾನೆ ತ... ಗುಪ್ತವಾಗಿಲ್ಲಿದ್ದ ವಿಷವು ಸರ್ಪದ ವಿಷಯದಲ್ಲಿ ಹ್ಯಾಗೆ ವಿಷ... ಸಂಸಾರದೊಳಗಿನ ದುಃಖವು ಶುದ್ಧ... ದೊಡನೆ ನೋಡಲು ಅದು ದುಃಖ... ಪಾಪಪುಣ್ಯ ಸುಖದುಃಖಗಳಿಂದ ದೂ

ಆ. 2—5—1925

ಬ್ರಹ್ಮನು ಎಲ್ಲವುಗಳಿಂದ ಅಲಿಪ್ತನಿರುತ್ತಾನೆ ಆ ಬ್ರಹ್ಮನ ಪರೀಕ್ಷೆಯನ್ನು ಮಾನವ ಸುಖದುಃಖದ ಕಷ್ಟದಿಂದ ಬ್ರಹ್ಮನನ್ನು ನೋಡುವದರಿಂದ ಪ್ರಯೋಜನವಿಲ್ಲ ಆತನ ಸೂರ್ಯನು ಸುಖದುಃಖಗಳ ಮೇಲೆ ಸಮವಾಗಿ ಪ್ರಕಾಶ ಕೊಡುವಂತಿರುವನು

ಉಚ್ಛಿಷ್ಟ ಅನ್ನವು ಹ್ಯಾಗೆ ಭ್ರಷ್ಟವಾಗಿರುವದೋ ಹಾಗೆಯೇ ಎಲ್ಲವುಗಳು—ಬಿಚ್ಚಿಗೆ ಹೇಳುವುದೇನು, ಅಪೌರುಷವಾದ ವೇದ ಪುರಾಣ, ತಂತ್ರ ಈ ಎಲ್ಲ ಧರ್ಮಗ್ರಂಥಗಳೂ ಮನುಷ್ಯರ ಮುಖದ ಸ್ಪರ್ಶವಾದ ಮೂಲಕ ಭ್ರಷ್ಟವಾದಂತೆಯೇ ಇರುತ್ತವೆ ಈ ನಿಯಮಕ್ಕೆ ಅಪವಾದಾತ್ಮಕವಾದ ಕೇವಲ ಒಂದೇ ವಸ್ತುವಿರುವದು ಆ ಅಪವಾದಾತ್ಮಕವಾದ ವಸ್ತುವೆಂದರೆ ಬ್ರಹ್ಮನೇ ಸರಿ ಯಾಕಂದರೆ ನೀವು ವೇದಗಳನ್ನು ಇಲ್ಲವೆ ಧರ್ಮಗ್ರಂಥಗಳನ್ನು ಓದುವಾಗ ವಾಗಿಂದ್ರಿಯದ ಉಪಯೋಗಮಾಡಬೇಕಾಗುವದು ಈ ರೀತಿಯಿಂದ ಧರ್ಮಗ್ರಂಥಕ್ಕೆ ನಿಮ್ಮ ಉಚ್ಛಿಷ್ಟತೆಯಾಗುವದು ಇದರಲ್ಲಿ ಸಂದೇಹವಿಲ್ಲ ಇದರಿಂದ ಉಚ್ಛಿಷ್ಟಾನ್ನದಂತೆ ಇವೆಲ್ಲವು ಭ್ರಷ್ಟವಾಗಿವೆಯೆನ್ನಲು ಅಡ್ಡಿಯಿಲ್ಲ. ಆದರ ಇಂದಿನ ವರೆಗೆ ಜಗತ್ತಿನಲ್ಲಿ ಯಾವ ಪ್ರಾಣಿಗೂ ಬ್ರಹ್ಮನ ಯಥಾರ್ಥ ವರ್ಣನೆಯನ್ನು ಮಾಡಲಿಕ್ಕೆ ಬರಲಿಲ್ಲ ಬ್ರಹ್ಮನು ಅನಿರ್ವಚನೀಯ, ಅಚಿಂತನೀಯ, ಅಕಲ್ಪನೀಯನಿರುತ್ತಾನೆ

ಬ್ರಹ್ಮನು ಅಗಾಧ ಸಾಗರದಂತಿದ್ದಾನೆ ಆತ ಯಾವದೇ ಲಕ್ಷಣವನ್ನು ಹೇಳಲು ಬರುವಂತಿಲ್ಲ ಪ್ರತ್ಯಕ್ಷ ವೇದಗಳಿಗೂ ಸಹ ಆತನ ವರ್ಣನೆಯನ್ನು ಮಾಡುವದು ಅಶಕ್ಯವಾಯಿತು ಆತನ ವರ್ಣನೆಯನ್ನು ಮಾಡುತ್ತ ಮಾಡುತ್ತ ದಣಿದುಹೋಗಿ ಬ್ರಹ್ಮನೆಂದರೆ "ಕೇವಲ ಆನಂದ' ಎಂದು ಅಂದು ವೇದಗಳು ಮೌನವೃತ್ತಿಯನ್ನು ಧರಿಸಬೇಕಾಯಿತು

ಕಾ ದು

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ ಸಂ

"ಜಮೀನ್ದಾರರ ಸಂಘ"

(ಅರ್ಗನೈಜರವರಿಂದ)

ಜಮೀನ್ದಾರಸಂಘವೆಂದರೇನು ? ಇದರಿಂದಾಗುವ ಪ್ರಯೋಜನವೆಷ್ಟು ? ಎಂಬಿತ್ಯಾದಿ ಸಂಗತಿಗಳ ಕುರಿತು ಯೋಚಿಸುತ್ತಾ ಹೋದರೆ ಕೊಡಗಿಗೆ ಈ ಸಂಘವು ಕೌನ್ಸಿಲಿಗಿಂತಲೂ ಹೆಚ್ಚು ಜವಾಬ್ದಾರಿಕೆಯುಳ್ಳ ಸಂಘವೆಂದು ನಿಸ್ಸಂಶಯವಾಗಿ ಹೇಳಬಹುದು ಒಂದು ಗೃಹಕೃತ್ಯಕ್ಕೆ ಯಜಮಾನನು ಹೇಗೋ, ಒಂದು ದೇಶಕ್ಕೆ ಸ್ವಾತಂತ್ರ್ಯವುಳ್ಳ ಪ್ರಜಾಪ್ರತಿನಿಧಿಸಭೆ ಹೇಗೋ ಹಾಗೆಯೇ ಈ ದೇಶಕ್ಕೆ ಈ ಸಂಘವು ಅಷ್ಟು ಪ್ರಾಮುಖ್ಯವುಳ್ಳ ಸಂಘವಾಗಿದೆ ಆದರೆ ಈ ಸಂಘವೇನೋ ಪ್ರಾಮುಖ್ಯವಂದೂ, ಸಂಘದ ಸಾಮರ್ಥ್ಯವೆಲ್ಲವೂ ಮೆಂಬರರ ಸಂಖ್ಯೆಯಲ್ಲಿದೆ ಯಾವ ಸಂಘವೇ ಆಗಲಿ ಮೆಂಬರರು ತುಂಬಿದ್ದರೆ ಆ ಸಂಘದ ಘನತೆಯನ್ನು ವರ್ಣಿಸಲಾಗದು ಒಂದು ದೇಶದಲ್ಲಿ ಸರಕಾರದ ಪರವಾದ ಯಾವ ಕೌನ್ಸಿಲು ಮುಂತಾದ ಹೆಚ್ಚು ಜವಾಬ್ದಾರಿಕೆಯುಳ್ಳ ಸಭೆಯಿದ್ದರೂ, ಆ ದೇಶದಲ್ಲಿ ಪ್ರತಿಯೊಬ್ಬರೂ ಬಿಡದೆ ಮೆಂಬರಾಗಿ ಸೇರಿಕೊಂಡಿರುವ ಯಾವದೇ ಒಂದು ಸಂಘವಿದ್ದರೆ ಈ ಸಂಘಕ್ಕೆ ಸರಕಾರವು ಸ್ಥಾಪಿಸಿದ ಸಭೆಯು ಸರಿಬಾರದು ಸರಕಾರವು ಯಾವಾಗಲೂ ಹೆಚ್ಚಿನ ಜನರು ಕೂಡಿಮಾಡುವ ಕಾರ್ಯಕ್ಕೆ ಮನ್ನಣೆ ಕೊಡುತ್ತದೆ ಯಾವದೇಶದಲ್ಲಿ ದೇಶದ ಮೆಂಬರರೆಲ್ಲರೂ ಸೇರಿ ಕೆಲಸಮಾಡತಕ್ಕ ಒಂದು ಸಂಘವಿದ್ದರೆ ಆ ದೇಶಕ್ಕೆ ಸರಕಾರದ ಕೌನ್ಸಿಲೇ ಬೇಡವಾಗುವದು. ಅಂದರೆ ಅದಕ್ಕಿಂತಲೂ ಈ ಸಂಘದವರ ಭೀತಿಯು ಸರಕಾರಕ್ಕಿರುತ್ತದೆ ಕೌನ್ಸಿಲುಗಳಾದರೋ ದೇಶದವರ ಪ್ರತಿನಿಧಿತ್ವದಲ್ಲಿ ಕೂಡಿರುವದಾದರೂ ಅಲ್ಲಿನ ಮೆಂಬರರು ಹೆಚ್ಚಿಲ್ಲದ್ದರಿಂದಲೂ ದೇಶದ ಎಲ್ಲರ ಅಭಿಪ್ರಾಯಕೊಡಲು ಅನುಕೂಲವಿಲ್ಲದ್ದರಿಂದ ಸರ್ವರೂ ಸೇರತಕ್ಕ ಇಂಥಾ ಸಭೆಗಳಿದ್ದರೆ ಈ ಮೂಲಕ ಸರ್ವರಿಗೂ ಚರ್ಚಿಸಿ ಒಗ್ಗಟ್ಟಿನಿಂದ ಸರಕಾರದ ಕೆಲಸವನ್ನು ಖಂಡಿಸಬಹುದಾಗಿದೆ ಮತ್ತು ಜನಸಮುದಾಯವು ಒಗ್ಗಟ್ಟಿನಿಂದ ಕೆಲಸ ಮಾಡಿಕೊಂಡು ಆ ಮೂಲಕ ಜನಗಳು ಬಯಸುತ್ತಾರೋ ಅಲ್ಲಿನ ಸರಕಾರದ ಕೃಪೆಯು ಇತರ ಕಾರ್ಯಗಳೂ ಕೂಡಲೇ ಆಗುತ್ತವೆ ಕೌನ್ಸಿಲು ಮುಂತಾದವುಗಳಲ್ಲಿಯಾದರೋ ಹತ್ತಿಪ್ಪತ್ತು ಇಲ್ಲವೆ ನೂರಜೊಳಗಿನ ಮೆಂಬರರು ಬಾಯಿಬಿಡಕೊಂಡರೆ ಸರಕಾರವು ಅಷ್ಟು ಗಣನೆಗೆ ತರುವದೂ ಇಲ್ಲ ಮತ್ತೂ ಅಂಥಾವುಗಳನ್ನು ದೇಶದ ಎಲ್ಲರ ಅಭಿಪ್ರಾಯವೆಂದು ಎಣಿಸುವದೂ ಇಲ್ಲ ಹೀಗಾದರೆ ದೇಶದವರೆಲ್ಲರೂ ಆಗಾಗ್ಯೆ ಸೇರುತ್ತಾ ತಮ್ಮ ಮನೋಗತಕ್ಕೆ ಸರಕಾರವು ತಕ್ಕಷ್ಟು ಲಕ್ಷ್ಯಕೊಡುವಂತೆ ಅಲ್ಲವೆ ನಮ್ಮ ಕೊಡಗಿಗೆ ಬೇರೆ ಪ್ರಾಂತ್ಯಗಳಿಗೆ ಕೊಟ್ಟ ಕೌನ್ಸಿಲನ್ನೂ ಕೊಡದೆಯೂ ಸರಕಾರವು ಹೆಚ್ಚಿನ ಅಭಿಪ್ರಾಯಗಳನ್ನು ತೆಗೆದುಕೊಳ್ಳದೆಯೂ ಇರುವುದರಿಂದ ನಮ್ಮ ಈ ದೇಶದಲ್ಲಿ ದೇಶದ ಎಲ್ಲಾ ಮೆಂಬರರು ಕೂಡತಕ್ಕ ಈ ಜಮೀನ್ದಾರಸಂಘವು ಅತ್ಯಾವಶ್ಯಕವಾಗಿದೆ. ಆದುದರಿಂದ ಯಾರು ... ಸಂಘದಲ್ಲಿ ... ಯಾರಿಗಾದರೂ ಪ್ರಯೋಜನವೇನೆಂದು ಕೇ...ಳಿಕೊಂಡು ತರ್ಕಿಸಬಾರದು. ಪ್ರಯೋಜನಗಳು ಅನೇಕವಾಗಿವೆಯಾದರೂ ಹೆಚ್ಚಿನ ದೊಡ್ಡ ಪ್ರಯೋಜನ ಹೊಂದದೆ ಇರಲು ಈ ದೇಶದಲ್ಲಿ ಸಾಧಾರಣ ಒಂದುವರೆ ಲಕ್ಷ ಜನರಲ್ಲಿ ನಾಲ್ಕು ಸಾವಿರ ಮೆಂಬರರು ಸಹ ಆಗದಿರುವದೇ ಮುಖ್ಯ ಕಾರಣ. ಹಾಗೂ, ಇದು ಉದ್ಭವಿಸಿ ಸುಮಾರು 15 ವರುಷಗಳಾದರೂ ಇನ್ನೂ ಇದರ ಗುಣಾಂಶಕ ಇಲ್ಲವೆ ಭವಿಷ್ಯತ್ ಪ್ರಯೋಜನ ತಿಳಿದು ಮೆಂಬರರು ಸೇರದಿರುವದು ಬಹಳ ವಿಷಾದಕರವಾದ ಸಂಗತಿಯಾಗಿದೆ ಇತರ ದೇಶಗಳಲ್ಲಿ ಅಂದರೆ ವಿಜಾರ, ಮೈಸೂರು ದಕ್ಷಿಣ ಕನ್ನಡ ಮೊದಲಾದ ಜಿಲ್ಲೆಗಳಲ್ಲಿ ಪಟ್ಟ ಬಟ್ಟು ಇತರ ಸ್ಥಳಗಳಲ್ಲಿ ಸಾಧಾರಣ ಓದತಕ್ಕಷ್ಟು ವಿದ್ಯೆ, ಇಲ್ಲವೆ ತಿಳುವಳಿಕೆ ಇಲ್ಲದವರೂ, ಪಟ್ಟಾದಾರರಲ್ಲದವರೂ, ಇರುವಂತೆ ನಮ್ಮಲ್ಲಿ ಇಂಥವರು ಶೇಕಡ ಐದರಷ್ಟು ಸಿಕ್ಕುವದೂ ಸಹ ದುರ್ಲಭವಾಗಿದೆ ಹೀಗಿರುವಾಗ ಈ ಸಂಘಕ್ಕೆ ಹೆಚ್ಚಿನ ಜನರು ಸೇರದಿರುವದು ಈ ದೇಶದ ದೌರ್ಭಾಗ್ಯವೆಂದರೆ ತಪ್ಪಾಗಲಾರದು ನಮ್ಮ ಈ ಸುಸ್ತಿ 19 ಸಮನ್ನ ಪಟ್ಟೆದಾರರೂ, ಹೆಂಗಸರೂ ಸೇರಬಹುದಾದುದರಿಂದ ಹೇಗೂ ಅರ್ಧ ಲಕ್ಷ ಜನ ಮೆಂಬರರಾಗಬಹುದು. ಹಾಗೂ ಇಪ್ಪತ್ತುಸಾವಿರಕ್ಕೆ ಕಡಿಮೆಯೂ ಗಲಾರದಷ್ಟೆ ನಮ್ಮ ಉದಾಸೀನತನವನ್ನು ಸರಕಾರವು ಲಕ್ಷ್ಯಕ್ಕೆ ತಂದುಕೊಂಡೇ ಈಗ ಒಂದೇ ಸಾರಿ ಜವಾಬ್ದಾರಿಯುಳ್ಳ ಕೌನ್ಸಿಲನ್ನು ಕೊಡಲು ಈಗ ಸಾಧ್ಯವಿಲ್ಲವೆಂದಾಗಿದೆ ದೇಶದ ನಾವೆಲ್ಲರೂ ಈ ಸಂಘಕ್ಕೆ ಸೇರಿಕೊಂಡು ಕೆಲಸ ಮಾಡಿಕೊಂಡು ಬಂದಿದ್ದರೆ ಸರಕಾರದವರನ್ನು ಕುರಿತು ಯಾವದನ್ನೂ ಕೇಳಿದರೂ ಅದನ್ನು ಕೂಡಲೆ ನೆರವೇರಿಸಿಕೊಡುತ್ತಿದ್ದರು ನಮಗೆ ಬೇಕಾದ ಕೆಲಸವು ನಿರಾಯಾಸದಿಂದ ಆಗುತ್ತಿತ್ತು ಈಗ ನಾವು ಚಿಕ್ಕ ಸಮುದಾಯವಾಗಿಕೊಂಡು ಸರಕಾರವನ್ನು ಕುರಿತು ಯಾವದನ್ನೇ ಕೇಳಿದರೂ, ಯಾವ ಕಾರ್ಯಗಳೆಂದರೂ ನೆರವೇರುವದಿಲ್ಲ ಮತ್ತು ಸರಕಾರವು ಕೂಡ ಈ ಸಂಘಕ್ಕೆ ಸೇರದವರು ಹೆಚ್ಚಿನ ಜನವಿರುವದರಿಂದ ನಮ್ಮ ಮಾತಿಗೆ ಹೆಚ್ಚಿಗೆ ಬೆಲೆ ಕೊಡುವದಿಲ್ಲವೆಂದು ಹೇಳುವರು ಹೀಗಾದ್ದರಿಂದಲೇ ಕಳೆದ ವರುಷದ ಅಧ್ಯಕ್ಷರು ನಮಿತಿ ದ ಟೌನ್ ಹಾಲ್ ಕಟ್ಟಲು ಅನಾನುಕೂಲವಾದದ್ದು ಮತ್ತು ಈ ವರುಷ ಸಂಘದ ವಾರ್ಷಿಕ ಸಭೆಗೆ ಕಾಂಗ್ರೆಸ್ ಕಮಿಟಿಯವರೊಬ್ಬರನ್ನು ಎರಬೇಸದ ಹಾಗೆ ಆದದ್ದು

ಇನ್ನಾದರೂ ನಾವು ಎಚ್ಚತ್ತುಕೊಂಡು ಸರಕಾರದ ಸಾಂಕುಚಿತ ಪ್ರವರ್ತನದಿಂದ ತತ್ಕಾಲ ಪಾರಾಗದಿದ್ದರೂ ಈ ಯಾವ ದೇಶದಲ್ಲೂ ಇಲ್ಲದ ಅವಸ್ಥೆಯಾದ ಸ್ಥಳೀಯ ಸರಕಾರದ ಸ್ವೇಚ್ಛೆಯಿಂದ ಪಾರಾಗದಿದ್ದರೆ ನಾವು ಮನುಷ್ಯ ಜನ್ಮಕ್ಕೇನೇ ಬಂದವರಲ್ಲವೆಂಬುದಕ್ಕೂ ಮತ್ತೂ ಇತರ ದೇಶದವರ ಹಾಸ್ಯಾಸ್ಪದಕ್ಕೂ ಗುರಿಯಾಗಬೇಕಾಗುತ್ತದೆ ಆದರೆ ಸರಕಾರವು ಹೀಗೆ ಮಾಡಿದ್ದು ನಮಗೆ ಕಡೆಕಿಗೆಂದೂ ನಾವು ಒಮ್ಮೆಯೂ ನೆನಸಲಾಗದು. ಇದು ನಮ್ಮ ಆಲಸ್ಯತನವನ್ನು ಇತರ ದೇಶೀಯರಿಗೆ ತೋರಿಸಿಕೊಟ್ಟದ್ದಾಗಿದೆ ಈ ನಮ್ಮ ಸಂಘದಲ್ಲು ದೇಶದವರೆಲ್ಲರೂ ಸೇರಿದ್ದ ಪಕ್ಷದಲ್ಲಿ ಸರಕಾರವು ಒಮ್ಮೆಯೂ ಹೀಗೆ ಮಾಡುತ್ತಿದ್ದಿಲ್ಲ. ನಾವು ಯಾವಾಗ ಈ ಸಂಘದಲ್ಲಿ ಕುಂದುಕೊಂಡೆವೋ ಅಂದಿನಿಂದ ನಮಗೆ ಯಾವ ವಿಪತ್ತೂ ಬರಲಾರದು ಮತ್ತು ನಾವು ಹೇಳಿದಂತೆ ನಮ್ಮ ಸರಕಾರವು ಖಂಡಿತವಾಗಿಯೂ ವರ್ತಿಸದಿರಲಾರದು ಸರಕಾರವು ಕೌನ್ಸಿಲುಗಳನ್ನು ಸ್ಥಾಪಿಸಿಕೊಂಡದ್ದು ಯಾಕೆಂದರೆ ದೇಶದ ಕಷ್ಟ ಸುಖಗಳು ಸರಕಾರಕ್ಕೂ ಸರಕಾರದ ನಿಬಂಧನೆಗಳನ್ನು ದೇಶಕ್ಕೆ ತಿಳಿಯಪಡಿಸಿ ವ್ಯವಹಾರ ಮಾಡಿದರೆ ಪ್ರಜೆಗಳಿಗೆ ಸುಖವಾದೀತೆಂಬ ತಿಳುವಳಿಕೆ ಗೊತ್ತುಪಡಿಸಿಕೊಳ್ಳುವದಕ್ಕೆ ಮಾತ್ರ ಸ್ಥಾಪಿಸಿದ್ದಾಗಿದೆ ಆ ಮೆಂಬರರು ಪ್ರಜೆಗಳಿಂದ ಚುನಾಯಿತರಾದರೂ ಅವರು ಕೆಲವು ವೇಳೆ ಕೊಡುವ ಅಭಿಪ್ರಾಯಗಳು ದೇಶದ ಸರ್ವರಿಗೂ ಸಮ್ಮತವಲ್ಲವೆ ಇರಬಹುದಾದುದರಿಂದಲೂ ದೇಶದವರಿಗೆ ಈ ಸರಕಾರವನ್ನು ಪ್ರಶ್ನಿಸಲು ಅನುಕೂಲವಿಲ್ಲದ್ದರಿಂದಲೂ ಇಂಥಾ ಸಂಘದಿಂದ ಸರ್ವರಿಗೂ ಸೇರಿ ಸರ್ವರ ಐಕ್ಯ ಅಭಿಪ್ರಾಯದೊಡನೆ ಸರಕಾರವನ್ನು ಕೇಳಲು ಬಹಳ ಅನುಕೂಲ ಮತ್ತು ಸರಕಾರದವರು ಗಮನಿಸತಕ್ಕದ್ದು ಅವರ ಕರ್ತವ್ಯ ಸಹ ಆಗಿದೆ, ಇಲ್ಲದಿದ್ದರೆ ದೇಶದ ಸರ್ವದಿಕ್ಕಿನಲ್ಲೂ ಚಳವಳಿ ಎದ್ದೀತೆಂಬ ಅಂಜಿಕೆಯು ಸರಕಾರಕ್ಕಿರುವದು. ಆದ್ದರಿಂದ ದಯವಿಟ್ಟು ತಮ್ಮ ಮತ್ತು ದೇಶದ ಪುರೋಭಿವೃದ್ಧಿ ಬಯಸಿ ಸರ್ವರೂ ಈ ಜಮೀನ್ದಾರರ ಸಂಘಕ್ಕೆ ಸೇರಿ ದೇಶವನ್ನು ಉದ್ಧಾರಮಾಡಬೇಕಾಗಿದೆ.

ಜ್ಞಾನ ಮತ್ತು ಭಕ್ತಿಮಾರ್ಗ.

ಅಯ್ಯಾ,

ನಮ್ಮ ದೇಶವು ಕಾಡುಪ್ರದೇಶವಂತಲೇ ಕರೆಯಲ್ಪಟ್ಟದೆ ನಮಗಳ ಮನೆಯು ಪೈರಿಗೆ ಒಂದೊಂದು. ನಮಗಳ ದೇವಸ್ಥಾನದಲ್ಲಿ ವರುಷಕ್ಕೆ ಒಂದು ಹಬ್ಬ ಇದಕ್ಕೆ ನೂರಾರು ಜನರ ಪ್ರತಿ ನಾಲ್ಕು ಜನರು ಸೇರುವರು ಸುಮಾರು 4 ಗಂಟೆಗೆ ಗಂಡಸರೂ ಹೆಂಗಸರೂ ಸೇರುವ ವಾಡಿಕೆ. ಹೆಂಗಸರು ಗಂಡಸರ ಒಬ್ಬೇ ವಾಕ್ಯಗಳನ್ನೂ ತಮಾಷೆಗಳನ್ನೂ ನೋಡಲಿಕ್ಕೆ ಮಾಗವೇಶವನ್ನು ಧರಿಸಿ ಒಂದು ಕಡೆಗೆ ಕುಳಿತು ನೋಡುತ್ತಿರುವರು. ಗಂಡಸರಂತು ಒಂದೊಂದು ಕಡೆಯಲ್ಲಿ ಹುಂ, ಹು, ಟ್ರಂ ಎಂತ ಗದರಿಸಲಿಕ್ಕೆ ಸುರುಮಾಡುವ ಅಷ್ಟರಲ್ಲೇ ಕೆಲವರು ಎದ್ದು ಚಕ್ಕ ಪಕ್ಕ ಎಂತ ನಾಚ ಕುಣಿಯಲಿಕ್ಕೆ ಸು...

ಬೋಧಕರಾದ ಕೂಡಲೆ ಇವರು ಅವರನ್ನು ಎದುರುಗೊಂಡು ನೀನು ತಾನು ಎಂಬ ಒರಟು ಸಂಭಾಷಣೆಯಿಂದ ೧ಗಂಟೆಗೆ ಹಬ್ಬ ಮುಕ್ತ ನೂರಾರು ರೂಪಾಯಿ ಕ್ರಯದ ಜರತಾರಿ ಸೀರೆ ಉಟ್ಟುಕೊಂಡು ಗಂಡಸರ ಆನಂದ ಮತ್ತು ಜ್ಞಾನವಾಕ್ಯಗಳನ್ನು ಆಟಪಾಠಗಳನ್ನು ಕೇಳಲೂ ನೋಡಲೂ ಹೋದ ಹೆಂಗಸರು ಮಕ್ಕಳು ಬಾಯಿಗೆ ಕೈವಸ್ತ್ರ ಮುಚ್ಚಿಕೊಂಡು ಸೀರೆ ಅಂಚಿಗೆ ದೂಳು ತುಂಬಿಸಿಕೊಂಡು ಅವರವರ ಮನೆಗೆ ಹೋಗುವರೇ. ನಾವುಗಳು ಇನ್ನೂ ಎಷ್ಟು ಕತ್ತಲೆಯಲ್ಲಿದ್ದೇವೆಂಬದು ವರ್ಣಿಸಲಿಕ್ಕಾಗುವದಿಲ್ಲ, ಆದ್ದರಿಂದ ನಮ್ಮ ಮುಂದಾಳುಗಳೂ ಧನ್ಯಾವಂತರೂ ಕೊಂದರೆ ತೆಗೆದುಕೊಂಡು ಆಗುವಷ್ಟು ತುರಿತವಾಗಿಯೂ ಕೆಳಗಿನ ಕೆಲಸವನ್ನು ಕೈಕೊಂಡು ಕೀರ್ತಿಯನ್ನು ಸ್ವರ್ಗದ ದಾರಿಯನ್ನು ಸಂಪಾದಿಸುವರಾಗಿ ನಂಬುತ್ತೇನೆ

ಪ್ರತಿ ನಾಲ್ಕು ಗ್ರಾಮದ ಮಧ್ಯ ಸ್ಥಳದಲ್ಲಿ ಒಂದು ವಿಸ್ತಾರವಾದ ಕಟ್ಟಡ ಕಟ್ಟಿಸಬೇಕು 4 ಗ್ರಾಮದ ಗಂಡಸರು ಹೆಂಗಸರು ಮತ್ತು ಮಕ್ಕಳು ಸಹ ಆ ಕಟ್ಟಡದಲ್ಲಿ ಕೂಡಲಿಕ್ಕೆ ಸ್ಥಳವಿರಬೇಕು. ಆ ಕಟ್ಟಡಕ್ಕೆ "ಹಿಂದು ಜ್ಞಾನಾಲಯ" ಅಥವಾ ತಕ್ಕದಾದ ಒಂದು ಹೆಸರು ಇಡಬೇಕು ಆ ಕಟ್ಟಡಕ್ಕೆ ಹದಿನೈದು ದಿನಕ್ಕೆ ಒಂದಾವರ್ತಿ ಗಂಡಸರೂ ಹೆಂಗಸರೂ ಮಕ್ಕಳೂ ಸಹ ಸೇರಬೇಕು ಹೀಗನೇ ಇಡೀ ಕೊಡಗಿನೊಳಗೆ ಪ್ರತಿ 4 ಗ್ರಾಮದ ಮಧ್ಯೆ ಕಟ್ಟಡ ಮಾಡಬೇಕು ಒಂದೊಂದು ನಾಡಿಗೆ ಒಬ್ಬೊಬ್ಬನಂತೆ ನೀತಿಶಾಸ್ತ್ರಜ್ಞನ ಶಾಸ್ತ್ರವನ್ನು ತರಬೇತು ಹೊಂದಿಸಿ ಅವರನ್ನು ಬೋಧಿಸಲಿಕ್ಕೆ ಏರ್ಪಾಡು ಮಾಡಬೇಕು ಸ್ಕೂಲಿನಲ್ಲಿ ಹೇರಳವಾದ ದ್ರವ್ಯ ಕಟ್ಟಡಗಳಿಗೆ ಅವಶ್ಯವಿರುವದಿಲ್ಲ. ಇಡಿ ಕೊಡಗಿಗೆ ಹೆಚ್ಚು ಕಮ್ಮಿ ಎಪ್ಪತ್ತು ಸಾವಿರ ರೂಪಾಯಿ ಸಾಕಾಗಬಹುದು ಪ್ರತಿಯೊಬ್ಬ ಭೂಮಿ ಹಿಡುವಳಿದಾರನು ನೂರು ಒಟ್ಟೆ ಭೂಮಿಗೆ ಹೆಚ್ಚು ಕಮ್ಮಿ ಮೂರು ವರುಷ ಮಾತ್ರ ಹತ್ತು ರೂಪಾಯಿ ಮೇರೆ ಕೊಡುವಂತೆ ವಿಧಿಸಬೇಕಾಗಿದೆ ಪ್ಲಾಂಟರ್ ಮತ್ತು ಉದ್ಯೋಗಸ್ಥರು ಹೆಚ್ಚಿನ ಉದಾರತ್ವ ತೋರಿಸಬೇಕು. ಪ್ರಮೇಣ ಕಟ್ಟಡಗಳನ್ನು ಅಲಂಕರಿಸ ಬಹುದಾಗಿದೆ ಈ ಕೆಲಸವನ್ನು ಕೈಕೊಂಡರೆ ನಮ್ಮವ ಚಿಕ್ಕ ದೇಶದ ಜನರು ಬಹು ಬೇಗನೆ ಅಭಿವೃದ್ಧಿಗೆ ಬರುವದಲ್ಲದೆ ಹೆಂಗಸರು ಮಕ್ಕಳು ಸಹ ಜ್ಞಾನ ಮಾರ್ಗದಲ್ಲಿ ಮುಕ್ತರಾಗಿ ಅಭಿವೃದ್ಧಿ ಹೊಂದುವದರಲ್ಲಿ ಸಂದೇಹವಿಲ್ಲ ಈ ಕೆಲಸಕ್ಕೆ ಯಾರೂ ಹಿಂಜರಿಯುವದಿಲ್ಲವಾಗಿ ನಂಬುತ್ತೇನೆ 1926ನೇ ಜನವರಿ 1ರಿಂದ ಸುರುಮಾಡಬೇಕಾಗಿದೆ ಈಗಲೆ ಈ ಕೆಲಸವನ್ನು ಕೈಕೊಂಡರೆ ಆ ಸಮಯಕ್ಕೆ ಸರಿಯಾಗಿ ನಡಿಸಬಹುದಾಗಿದೆ ಸುರುವಿನಲ್ಲಿ ಬಹಳ ಅಗಾಧವಾದ ಕೆಲಸವಂತೆ ಕಾಣಬಹುದು ಆದರೆ ಈ ಕಾರ್ಯದಿಂದ ಉಂಟಾಗುವ ಗುಣಗಳನ್ನು ಇಲ್ಲಿ ಈಗ ವರ್ಣಿಸಲು ಸಾಧ್ಯವಿಲ್ಲ ಇದು ಕೂಡಲೇ ಸ್ಥಾಪನೆ ಮಾಡಿದರೆ ನಮ್ಮ ಜವಿಾನ್‌ದಾರರ ಸಂಘಕ್ಕೆ ಬಹಳವಾದ ಮರ್ಯಾದೆಯೂ ಕೀರ್ತಿಯೂ ಇದೆ ಎಂಬದರಲ್ಲಿ ಯಾರೂ ಸಂಶಯ ಪಡಲಿಕ್ಕಿಲ್ಲ.

ಬಿ. ಕೆ ಎಸ್

ಕೊಡಗಿನ ವಿದ್ಯಾರ್ಥಿಗಳು

ಮಹನೀಯರೆ,

ಕೊಡಗಿನ ವಿದ್ಯಾಗಳು ಸ್ಕೂಲುಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಒಡನೆಯೇ ಹೇಗೋ ಕಷ್ಟಪಟ್ಟು ಹಾಗೂ ಹೀಗೂ ವಿದ್ಯಾಭ್ಯಾಸವನ್ನು ಮುಂದರಿಸಲಿಕ್ಕಾಗಿ ಬೇರೆ ದೇಶಗಳಿಗೆ ಹೋಗುತ್ತಾರೆ. ಹೀಗೆ ಇಲ್ಲಿಂದ ಹೋದ ವಿದ್ಯಾರ್ಥಿಗಳಲ್ಲಿ ಎಷ್ಟೊಂದು ಸಂಖ್ಯೆ ಬಡ ತಂದೆ ತಾಯಿಗಳ ಮಕ್ಕಳು! ತಂದೆ ತಾಯಿಗಳು ಎಷ್ಟೆತ್ತು ಅನ್ನ ಉಂಡೂ ಒಂದು ಬೆಂದಿಬಟ್ಟೆ ಸುತ್ತಿಯೂ ಹೇಗೂ ಬೇಕಾದಕ್ಕಿಂತ ಸ್ವಲ್ಪ ಕಮ್ಮಿಯಾಗಿಯಾದರೂ ತಮ್ಮ ಮಕ್ಕಳಿಗೆ ಹಣ ಕಳುಹಿಸುತ್ತಾರೆಂದು ಯೋಚಿಸುವ ಆ ವಿದ್ಯಾರ್ಥಿಗಳು ತಮಗೆ ಸಿಕ್ಕುವ ಕಮ್ಮಿ ಹಣದಿಂದ ಸರಿಸಮಾನರೊಂದಿಗೆ ತಮ್ಮ ಮರ್ಯಾದೆಯನ್ನು ಉಳಿಸಿಕೊಳ್ಳಲು ಯತ್ನಿಸಬೇಕಾದದ್ದೊಂದು ಕಷ್ಟ ಬಗ್ಗದ ಹವೆಯಲ್ಲಿ ಒದ್ದಾಡುವುದೊಂದು ಕಷ್ಟ. ಇಷ್ಟೆಲ್ಲಾ ಕಷ್ಟ ಪಟ್ಟದ್ದಕ್ಕೆ ಕೊನೆಯಲ್ಲಿ ತಮ್ಮ ಮಾತಾಪಿತೃಗಳ ಆಶೆ ಕೊನೆಯಾದರೆ ಸ್ವಲ್ಪವಾದರೂ ಫಲ ಇಲ್ಲದಿದ್ದರೆ ಅವರು ಹೊಟ್ಟೆಕಟ್ಟಿ ಹಣ ಕಳುಹಿಸಿದುದು ವ್ಯರ್ಥವು ಅಲ್ಲವೆ? ಆ ಆಶೆಯನ್ನು ಕೊನೆಗಾಣಿಸಲು ಏನಾದರೂ ಮಾರ್ಗವಿದೆಯೋ? ಸಾಕ ಇದೆ. ನಮ್ಮ ಹೈಸ್ಕೂಲಿನ ಸ್ಥಿತಿಯನ್ನು ಉದ್ಧರಿಸಿ ವಿದ್ಯಾರ್ಥಿಗಳನ್ನು ಮೇಲ್ಪಂಗತಿಗೆ ತರಲೆತ್ನಿಸುವುದು ಇಲ್ಲ ನಾವರ, ಮಹನೀಯರೆ, ನಿಮ್ಮ ಮಕ್ಕಳು ನಿಮಗಿಂತಲೂ ಹೀನರನ್ನಿಸಿಕೊಳ್ಳುವರು ಇದನ್ನು ತಪ್ಪಿಸಿ ಚಿಕ್ಕದಾದ ಈ ಕೊಡಗು ಅನೇಕಾನೇಕ ವಿದ್ಯಾಸಂಪನ್ನರಿಂದ ಕೂಡಿ ಭಾರತ ಮಾತೆಯ ಇತರರೊಡನೆ ಕಳೆಯಬೇಕೆಂದಿದ್ದರೆ ನಿಮ್ಮ ಪ್ರಯತ್ನಗಳು ಸಾರ್ಥವಾಗಲಿ "ನಾನೇನು ಮಾಡಬೇಕೆಂದು ನೀವು ಕೇಳುವಿರೇ? ನಮ್ಮ ಬೇಕಕ್ಕೆ ದೊರೆತಿರುವ ಆ ಕೌನ್ಸಿಲ್ಲಿ ಪೇಚಾಡಿ ನಮ್ಮ ಹೈಸ್ಕೂಲಿಗೆ ತಕ್ಕ ವಿದ್ಯಾ ಪ್ರವೀಣರಾದ ಪಂಡಿತರನ್ನು ನೇಮಿಸಿ ಅವರು ನಿಗತೆಗೆದುಕೊಂಡು ಬಿಸಮಾಡುವಂತೆ ಏರ್ಪಾಡು ಮಾಡಲಾರಿರೇ?

ನಮ್ಮ ಬಂಧು ಭಗಿನಿಯರಲ್ಲಿ ಅನೇಕರಿಗೆ ಹೊರಗೆ ಹೀಗೆ ಓದಲಿಕ್ಕೆ ತಮ್ಮ ಹುಡುಗರು ಹೋಗಿರುವರು ಎಂಬದು ಸ್ವಲ್ಪವೂ ಗೊತ್ತಿಲ್ಲವಲ್ಲವೇ? ಹೈಸ್ಕೂಲಿನಲ್ಲಿ ನಮ್ಮ ಹುಡುಗರು ವರ್ಷಾಕಾಲವು ಮೈಗಳ್ಳರಂತೆ ಸಿಂಬರಿಸ್ವರ ಮನಗಳಿಗೆ ಹೋಗುತ್ತಾ ಬರುತ್ತಾ ತಮ್ಮ ಪಾಠಗಳನ್ನು ಸರಿಯಾಗಿ ಅಭ್ಯಾಸಿಸದೆ ಕಾಲಕಳೆಯುವದು ಇಲ್ಲವೇ? ಕೊನೆಗೆ ಪರೀಕ್ಷಾ ಕಾಲದಲ್ಲಿ ಹಗಲಿರುಳು ನಿದ್ದೆಮಾಡದೆ ಓದಿ ತಮ್ಮ ಅದೃಷ್ಟ ಬಲದಿಂದಲೋ, ಕ್ಲಾಸು ಮಾರ್ಕುಗಳ ದೆಸೆಯಿಂದಲೋ, ತೇರ್ಗಡೆ ಹೊಂದುವರು. ಹೀಗೆ ತೇರ್ಗಡೆಯಾದವರಲ್ಲಿ ಕೆಲವರು ಕಾಲೇಜ್ ವಿದ್ಯಾಭ್ಯಾಸವು ಅವೆಂತಹುದಿಹುದೆಂದು ತಿಳಿಯದಿದ್ದು, ಇಲ್ಲಿ ದಬಾಯಿಸಿದಂತೆ ಅಲ್ಲಿ ಸಹ ದಬಾಯಿಸುತ್ತೇನೆಂದು ನಿಷ್ಕರ್ಷಿಸಿ ಹೊರಟು ಹೋಗುವದೇನೋ? ಹೀಗೆ ಹೋದವರು ದೊಡ್ಡದೊಡ್ಡ ಪಟ್ಟಣಗಳಲ್ಲಿ ಇಳಿದ ಕೂಡಲೇ ತಮಗೆ ಉತ್ತಮ ತರಹದ ಪಾದರಕ್ಷೆ ಬೇಕು, ಕುತ್ತಿಗೆಗೆ ನೇಣು ಹಗ್ಗ ಹಾಕಬೇಕು, ಸೊಂಟಕ್ಕೆ ಸರಿಯಾಗಿ ಕತ್ತರಿಸಿದ ಅಂಗಿ ಆಗಬೇಕು ಎಂದು ಅವಕ್ಕೆ ತಾವು ತಂದಹಣವನ್ನು ಖರ್ಚು ಮಾಡಿದುದಾಯಿತು ಆಮೇಲೆ ಪುಸ್ತಕಕ್ಕೆ ಹಣಸಾಲದಾಗಲು ಬಬ್ಬನು ಪೋಸ್ಟಾಫಿಸಿಗೆ ಒಂದು ಅದಷ್ಟು ಜಾಗ್ರತೆಯಿಂದ ಹಣಕಳುಹಿಸುವುದೆಂದು ತಂದೆಗೆ ಒಂದು ಕಾರ್ಡು ಬರೆಯುವನು ಅದಕ್ಕೆ ಉತ್ತರಬಾರದ್ದನ್ನು ನೋಡಿ ಒಂದು ಪತ್ರವನ್ನು ಬರೆಯುವನು. ಮರುದಿನವೇ ಒಂದು ತಂತೀ ವರ್ತಮಾನ!

ಇದನ್ನು ಕಂಡಪಿತನು ಅಯ್ಯೋ, ಪಾಪ! ನನ್ನ ಕಂದನಿಗೆ ಎಷ್ಟೊಂದು ತೊಂದರೆಯೋ ಎಂದು ಅತಿಶಯ ಚಿಂತೆಯಿಂದ ಮನಸೂಂದು ಹೇಗೂ ಸರಿಮಾಡಿ ಹಣಕಳುಹಿಸುತ್ತಾನೆ ಆದರೆ ಆ ವಿದ್ಯಾರ್ಥಿಯು ತನ್ನ ತಂದೆಯು ಕಳುಹಿಸಿದ ಹಣವನ್ನು ಮಿತವ್ಯಯಮಾಡಿ ಅದಕ್ಕೆ ತಕ್ಕಪ್ರತಿಫಲವನ್ನು ಕೊಡಬೇಕೆಂದೂ' ಬೇರೆದೇಶಿಯ ವಿದ್ಯಾರ್ಥಿಗಳ ಕಲವರಹಾಗೆ ತಾನೂ ದೊಡ್ಡ ಪಂಡಿತನೇಕಾಗೆನೆಂದು, ಸಿಕ್ಷಯಮಾಡಿ ಕಷ್ಟಪಡಚೆತ್ನಿಸಿದರೆ—ಹಾಯ್! ಆವನೀಗ ಎಷ್ಟೊಂದು ಚಿಂತಿಸುವನು' ಎಷ್ಟೊಂದು ಪಶ್ಚಾತ್ತಾಪ ಪಡುವನು! ಎಲೈ ಹಿಂದೆಬರುವ ಪ್ರಿಯಮಿತ್ರರಿರಾ, ಏನೆಂದು ಕೇಳುವಿರಾ, ನನ್ನ ಸಮಯವನ್ನು ವ್ಯಸ್ನಾನದಲ್ಲಿ ವ್ಯರ್ಥವಾಗಿ ಕಳೆದುಬಿಟ್ಟೆನಲ್ಲಾ ಎಂದು. ಎಲೈ ಮಿತ್ರರೇ, ಇದೆಲ್ಲಾ ಅರಣ್ಯರೋಧನವೇ? ನೀವು ಸಹ ಇಲ್ಲಿಗೆ ಬಂದರೆ ಹೀಗೆಯೇ ವ್ಯಸನಪಡುವಿರಿ! ಆದ್ದರಿಂದ ಎಚ್ಚರಿಕೆಯುಳ್ಳವರಾಗಿರುವುದು!

ನಾವು ಇಲ್ಲಿ ಪಾಲ್ಗೊಳ್ಳುವ ಸ್ಕಾಟಿನ ಅಥವಾ ಚಾರ್ಲ್ಸ್ ಡಿಕನ್ಸ್ ಕಾದಂಬರಿಯೊಂದನ್ನು ಓದುವ ಎಂದು ಕೈಯಲ್ಲಿ ಹಿಡಿದುಕೊಂಡರೆ ಸಾಕು ಇಲ್ಲಿನವರು ಹೇ! ಏನು? ಅವು ಇನ್ನೂ ನಿಮ್ಮ ಕೈಯಲ್ಲಿಯೇ ಇವೆಯೋ? ಅವು ಮಾರ್ಗದ ಆಚೆಯೇ ಎಂದರೆ ಹೈಸ್ಕೂಲಿನಲ್ಲಿರುವಾಗಲೇ ಮುಗಿಸಲ್ಪಡಬೇಕಾಗಿದ್ದಿತ್ತೆಂದು ಹೇಳುವರು. ಎಷ್ಟೊಂದು ನಮ್ಮ ಯುವಕರು ನಾವು ಏಕೆ ಇಲ್ಲಿಗೆ ಬಂದೆವು ಇನ್ನಾದರೂ ಹಿಂದಕ್ಕೆ ದಫ್ತಾರ ಕಟ್ಟಿದರೇ ಎಂದು ಯೋಚಿಸುವರು. ಏನೆನ್ನುವಿರಿ ಆದ್ದರಿಂದ ಪುನಹ ಎಚ್ಚರಿಕೆ. ನೀವು ನಿಮ್ಮ ಪಾಠಪುಸ್ತಕಗಳನ್ನು ಪದ್ಯಮಾಡಿ ಪರೀಕ್ಷೆಯಲ್ಲಿ ಉತ್ತೀರ್ಣರಾದರೆ ಸಾಲದು ಹೈಸ್ಕೂಲು ಲೈಬ್ರರಿಯಲ್ಲಿರುವ ಅಷ್ಟು ಇಂಗ್ಲಿಷ್ ಪುಸ್ತಕಗಳನ್ನಾದರೂ ಓದಿ ನಿಮ್ಮ ತರಗತಿಯನ್ನು ಉತ್ತಮಸ್ಥಿತಿಗೆ ತನ್ನಿ. ನನ್ನ ಸ್ವಂತ ಅನುಭವವಿದು ಆದ್ದರಿಂದ ಈ ಹೇಳಿಕೆ.

ನಮ್ಮ ದೇಶದ ಐಶ್ವರ್ಯವಂತರು ಎಷ್ಟೋ ವಿಧಗಳಲ್ಲಿ ತಮ್ಮ ದ್ರವ್ಯವನ್ನು ವ್ಯಯ ಮಾಡುತ್ತಿರುವರು, ನಮ್ಮ ಮುಂದಿನ ಜನಾಂಗದ ಏಳಿಗೆಯನ್ನು ಬಯಸಿ ಬೇರೆ ದೇಶಗಳಿಗೆ ವಿದ್ಯಾರ್ಜನೆಗೆಂದು ಹೋಗುವ ನಿಮ್ಮ ಬಾಲರು ಇಳಕೊಳ್ಳಲಿಕ್ಕೆ ಸಮರ್ಪಕವಾದ ಸ್ಥಳವು ಇಲ್ಲದೆ ಎಷ್ಟೊಂದು ಕಷ್ಟಪಡುತ್ತಿರುವರು ಅವುಗಳನ್ನೇಕೆ ನೀಗಲಾಗುವುದಿಲ್ಲ? ಬಂಧುಮಾತೆ, ಮನೆಂದರೆ ಸದ್ಯಕ್ಕೆ ಮಂಗಳೂರಿನಲ್ಲಾದರೂ ವಿದ್ಯಾರ್ಥಿಗಳು ಉಳುಕೊಳ್ಳಲು ಧರ್ಮಾರ್ಥವಾಗಿ ಒಂದು ಕಟ್ಟಡವನ್ನು ಕಟ್ಟಿಕೊಟ್ಟರೆ, ನಾವೇನು ಮಾಡುವವು ಎಂದು ಬಲ್ಲಿರಾ? ನಮ್ಮ ಹೃದಯಗಳಲ್ಲಿ ಸ್ವರ್ಣಾಕ್ಷರಗಳಲ್ಲಿ ನಿಮ್ಮ ಹೆಸರು ಶಾಶ್ವತವಾಗಿರುವಂತೆ ಕೆತ್ತಿಇಡುವೆವು

ಯಂ ಎ ಕಾವೇ

ಮಹದೇವಪೇಟೆಯ ನೀರಿನ ಕ್ಷಾಮ

ಅಯ್ಯಾ,

ಎಷ್ಟೋ ವರುಷಗಳಿಂದ ಪೇಟೆಯವರು ಬೇಸಿಗೆಯಲ್ಲಿ ನೀರಿಲ್ಲದೆ ಕಷ್ಟವನ್ನನುಭವಿಸುತ್ತಿರುವ ವಿಚಾರವು ಮುನಿಸಿಪಾಲ್ ಕಮಿಟಿಯವರಿಗೆ ತಿಳಿದಿರಬಹುದೇ! ಒಂದುವೇಳೆ ತಿಳಿಯದಿದ್ದರೆ ಬಾಧಕವೇನು? ನೀರಿನ ಅಭಾವವು ಅವರಿಗಿರಲಾರದಷ್ಟೇ ಅವರ ಮನೆಯಲ್ಲಿ ರಾತ್ರಿಬೆಳಗೂ ನಲ್ಲಿನೀರು ಕುಡಿಯಲಿಕ್ಕೂ, ಸ್ನಾನಕ್ಕೂ, ತೋಟಕ್ಕೂ, ಬಟ್ಟೆ ಒಗೆಯಲಿಕ್ಕೂ ಉಪಯೋಗಕ್ಕೆ ಇದ್ದೇ ಇರುತ್ತದೆ. ಇತರ ಕೆಲ ಮನುಷ್ಯರು ನಲ್ಲಿಗಳನ್ನಿಟ್ಟುಕೊಂಡಿರುವುದಾದರೂ, ಅವರ ನಲ್ಲಿಗಳಲ್ಲಿ ನೀರು ಏರಬರುವುದಿಲ್ಲ, ನುಂದಿಗಳನ್ನು ನೋಡಿ ಹಣ ಹಾಕುವ ಪದ್ಧತಿಯು ಹೊಸದಲ್ಲ. ಅದೃಷ್ಟಹೀನರಿಗೆ ಸಣ್ಣ ಕೆರೆಯಿಂದಲೂ, ಅದೃಷ್ಟಶಾಲಿಗಳಿಗೆ ದೊಡ್ಡ ಕೆರೆಯಿಂದಲೂ, ನೀರು ಸರಬರಾಯಿ ಆಗುವುದು ವಾಡಿಕೆಯಾಗಿ ಹೋಗಿದೆ.

ಏನೂ ಆಗಲಿ ಮನೆಯಲ್ಲಿ ನಲ್ಲಿಗಳನ್ನಿಟ್ಟುಕೊಂಡವರಿಗೆ ಅಲ್ಪಸ್ವಲ್ಪವಾದರೂ ಸಣ್ಣ ಕೆರೆಯಿಂದ ಲಾಭವಿದೆ. ಆದರೆ ಏರಿಮೇಲಿರುವ ಗರೀಬ ಜನರ ಗತಿ ಏನು? ದಿನಕ್ಕೆ ಎರಡು ಕೊಡ ನೀರು ಸಿಕ್ಕದೆ ಇದ್ದರೆ, ಈ ಜನರ ದುಃಸ್ಥಿತಿಯು ಎಂತಿದ್ದಿರಬಹುದು!

ಒಮ್ಮೊಮ್ಮೆ ಪ್ರಯಾಣಿಕರಿಗೆ ತಮ್ಮ ತೃಷೆಯನ್ನು ನೀಗಿಕೊಳ್ಳಲಿಕ್ಕೆ ಪೇಟೆಯ ನಲ್ಲಿಗಳಲ್ಲಿ ನೀರಿರುವುದಿಲ್ಲ. ಒಂದು ದಿನ ಪಾಲೆ ಜನರು ದಾರಿಯಲ್ಲಿ ಬರುತ್ತಾ ತೃಷೆಯಿಂದ ಬಳಲಿ ಜೆಂಗಾರಿ ತನುಗಾಗಿ ನಿಂತಿರುವ ನಲ್ಲಿಗಳಲ್ಲಿ ಹೋಗಿ "ನೀರೆರೆಯಿರಿ, ನಾವು ಬಹಳವಾಗಿ ದಣಿದಿದ್ದೇವೆ" ಎಂದರೆ, ಆ ನಲ್ಲಿಗಳು "ನಾವು ಪಾಪಿಗಳು, ನಮ್ಮನ್ನೇಕೆ ಇಲ್ಲಿರಿಸಿರುವರೋ ನಾವು ಅರಿಯೆವು ನೀರಿಗಾಗಿ ಬಂದವರೆಲ್ಲರೂ ನಮ್ಮನ್ನು ದೂರುತ್ತಾರೆ. ಆಗಲಿ, ನಾವೇನು ಮಾಡೋಣ. ಮೆಂಬರರ ಹೇಳಿಕೆಯಂತೆ ನಾವು ಆಚರಿಸಬೇಕಾಗಿದೆ ಹಿಂದಕ್ಕಾದರೆ ಕೆರೆಬಾವಿಗಳಿದ್ದವು ಯಾವಾಗಲೂ ನೀರು ಸಿಕ್ಕುತಿತ್ತು, ಈಗ ನೀವು ನಮ್ಮನ್ನು ನಂಬಿ ಹಾಳಾದಿರಿ ಆದರೆ ಮಹಾಂಗದಂತೆ ಮಳೆಬಂದರೂ, ಮೆಂಬರರುತಲೆಯ ಮೇಲಿರುವ ಕೆರೆಯಲ್ಲಿ ನೀರಿಲ್ಲ ಎನ್ನುವರು ಎಂದು ಹೇಳಿ" ತಟ್ಟನೆ ನಿಶ್ಯಬ್ದರಾದವು.

ಈ ಪಾಲೆ ಜನರು ಮುಂದೆ ಮುಂದೆ ಹೋಗುತ್ತಾ, ಇದ್ದಂತೆ, ಮೆ. ನಿಂಗಣ್ಣಶೆಟ್ರ ಮನೆ ಸಮೀಪದಲ್ಲಿರುವ ಕಾವಲಿಯಲ್ಲಿ ಹರಿದು ಬರುತ್ತಿದ್ದ ಕೆಟ್ಟನೀರನ್ನು ನೋಡಿ, ಹತ್ತಿರಕ್ಕೆ ಸಾರಿದು, ಆ ದೂಷಿತ ನೀರನ್ನೇ ಕುಡಿದು ಹಿಗ್ಗಿ ಹೆಗ್ಗೋಡಾದರು ಈ ವಿಚಾರವು ಸುಳ್ಳೆಂದು ಮೆಂಬರರು ಭ್ರಮಿಸಬಹುದು ಆದರೆ, ಸರಿಸಿಹೋಗುವ ಕಣ್ಣುಳ್ಳ ಮನುಷ್ಯ ಮಾತ್ರದ ಮಾತಿರಲಿ, ಸಾಕ್ಷಾತ್ ಪರಮಾತ್ಮನೇ ಈ ಸಂಗತಿಯನ್ನು ನೋಡಿದ್ದಾನೆ.

ಪೇಟೆಯಿಂದ ಮುನಿಸಿಪಲ್ ಸಭೆಗೆ ಚುನಾಯಿತರಾಗಿರು ಮೆಂಬರರು ಪೇಟೆಯವರಿಗೆ ತಕ್ಕಷ್ಟಾದರೂ ನೀರನ್ನು ದೊರಕಿಸಿ ಕೊಡಲು ಯತ್ನಿಸುವಿರಾಗಿ ನಂಬಲಾಗಿದೆ ಪೇಟೆಯ ಕೆಲವು ಓಣಿಗಳು ಹರಂಡಿಗಳೂ ಶುಚಿಯಾಗಿಲ್ಲ. ಪಟ್ಟಣದ ಇತರ ಜನರಿಗೆ ಕೊಟ್ಟಿರುವ ಸೌಕರ್ಯಗಳು ನಮಗೂ ಇರುವುದು ಯೋಗ್ಯವಲ್ಲವೇ?

ಪೇಟೆಯ ಪ್ರಜೆ,

ಅಯ್ಯಾ,

ಕೊಡಗಿನ ಜಮ್ಮದ ಗೌಡುಗಳೂ, ಜಾಗಿನ ಗೌಡುಗಳೂ ಕಡಗಿನ ಪೂರ್ವನಿವಾಸಿಗಳಿಂದಲೂ ಅಮರ ಸುಳ್ಯನಿವಾಸಿಗಳಿಂದಲೂ ಮತ ವಿಚಾರದಲ್ಲಿ ಕ್ಷಯಿಸಿದ ಚಂದ್ರನಂತಿದ್ದವರು ಶುಕ್ಲಪಕ್ಷದ ಪೂರ್ಣ ಚಂದ್ರನಂತೆ ಇದ್ದಾರೆಂಬುದನ್ನು ನಾವು ಎಷ್ಟು ಹೇಳಿದರೂ ಸ್ವಲ್ಪವಾಗಿರುವುದು.

ವಿಕಾಂತುಗಳನ್ನು ಪುನರ್ವಿವಾಹ ಮಾಡಿಕೊಳ್ಳುವುದು ಬಂಟರಿಂದ ಕಲಿತರೆಂಬ ಮಾತು ತಂಬಾ ಅವೇವೇಕವು ಯಾತಕ್ಕಂದರೆ ದಕ್ಷಿಣ ಕನ್ನಡ ಜಿಲ್ಲೆಯ ಗೌಡುಗಳು ವಿಕಾಂತುಗಳನ್ನು ಪುನರ್ವಿವಾಹ ಮಾಡಿದವರಿಂದ ಗುರುದಕ್ಷಿಣೆಯನ್ನು ಗುರುಮಠಕ್ಕೆ ಕೊಡಿಸುತ್ತಾ ಇದ್ದಾರೆ ಅಂಥಾದ್ದು ತಪ್ಪು ಕಾರ್ಯ ಆಗಿದ್ದ ಪಕ್ಷದಲ್ಲಿ ಗುರುಗಳು ಕಾಣಿಕೆಯನ್ನು ಹೊಂದುವರೋ ಎಂಬುದನ್ನು ನೀವೇ ಯೋಚಿಸಿ ನೋಡಿ ಮತ್ತು ಈ ದೇಶದ ರಾಜಾಜ್ಞೆ ಮೇರೆ ಉಡುಪುಗಳನ್ನು ಶೋಭಿಕತ್ತಿ ಮುಂತಾದ ಬಿರುದುಗಳನ್ನು ಹೊಂದಿಕೊಂಡು ನಿಮಗಿಂತಲೂ ಎಷ್ಟೋ ಮುಂದರಿಸಿರುವುದೇ ಹೊರತು ಹಿಂದುಳಿದಿರುವುದಿಲ್ಲ ಅವರ ಪೂರ್ವಿಕರು ಅನುಸರಿಸಿಕೊಂಡು ಬಂದ ಕುಲಧರ್ಮಕ್ಕೆ ಅನುಸಾರವಾಗಿ ಈಗಲೂ ಇದ್ದಾರೆ ಅಲ್ಲದೆ ಈ ದೇಶದಲ್ಲಿರತಕ್ಕಂತೆ ಸುಮಾರು ಹದಿನಾರುಸಾವಿರ ಗೌಡುಗಳು ಒಂದೇ ಮತಸ್ಥರಾಗಿರುತ್ತಾರೆ ಆದರೆ ನೀವು ಮತ್ತು ನಿಮ್ಮ ಸರೀಕರು ನಿಮ್ಮ ಮತದಲ್ಲಿ ಹಿಂದುಳಿದವರೆಂದು ಹೇಳಲು ನೂ ಸಂಶಯವಿಲ್ಲ ನೀವು ಯಾವುದಾದರೂ ಒಂದು ಮಕ್ಕಳ ಸಮ್ಮಂಧಪಟ್ಟವರಾಗಿದ್ದ ಪಕ್ಷದಲ್ಲಿ ಅಂಥಾ ಮಾತನ್ನು ಆಡಲು ಅಪೇಕ್ಷಿಸುತ್ತಿರಲಿಲ್ಲ ಎಂದು ಭಾವಿಸ ಬೇಕಾಗಿದೆ

ನಮ್ಮ ಮಾತೃಭೂಮಿಯು ಈ ಭರತಖಂಡವಲ್ಲದೆ ಬೇರೆಲ್ಲ ಹಿಂದೂ ಮತದಲ್ಲಿ ಒಂದು ಕುಲವಾದ ಗೌಡುಗಳ ಭೂಮಿಯು. ಕೈಗೂರು ಎಂಬುದು ತಿಳುವಳಿಕೆ ಇಲ್ಲದ ಮಾತಾಗಿದೆ ತಿಳುವಳಿಕೆ ಇಲ್ಲದವರು ಎಲ್ಲವರ ಆಕ್ಷೇಪಣೆಗೆ ಗುರಿಯಾಗುವುದಲ್ಲದೆ, ತಪ್ಪಿತಕ್ಕೂ ಸಹ ಗುರಿಯಾಗಬಾರದೀತು.

ನೀವು ಒಂದು ಮತವನ್ನು ಹಿಡಿದು ಆಕ್ಷೇಪಿಸಿರುವುದರಿಂದ ಅಂಥವರು ಎಂಥಾ ದೊಡ್ಡ ತಪ್ಪಿತಕ್ಕೆ ಗುರಿಯಾದವರೆಂಬುದನ್ನು ಹಿಂದಿನಿಂದ ತಿಳಿಯಲಾಗುವದು

ಟಿ ಕಾಳಪ್ಪ

ಮಾರಾಟಕ್ಕೆ! ಸ್ವಿಚಾಸ್ತ್ರಿ!! ಮಾರಾಟಕ್ಕೆ!!!

ವೀರರಾಜೇಂದ್ರಪೇಟೆಗೆ ಐದು ಮೈಲಿ ಒಳಗೆ ಕುತ್ತ್ಲೂರು ಗ್ರಾಮದಲ್ಲಿ ರಸ್ತೆಬಾಜು ಸುಮಾರು 14 ಎಕರೆ ಜಾಗು ಭೂಮಿಯೂ, ಅದಕ್ಕೆ ಸೇರಿದ ಸುಮಾರು 16 ಎಕರೆ ಬಾಣೆ ಜಾಗವೂ ಮತ್ತು ಒಂದು ಕೌಕೋಲು ಹಾಕಿ ಮಂಗಳೂರು ಹಂಚು ಹಾಕಿದ ಮಹಡಿಮನೆಯೂ ವಿಕರಿಗೆ ಇದೆ

ಹೆಚ್ಚಿನ ಸಂಗತಿಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

ಜೆ. ಗರುಡಾಚಾರ್,
೩-೨ ಹರ್ಷವೀಧಿ,
ವೀರರಾಜೇಂದ್ರ ಪೇಟೆ

ಎಷ್ಟು ಲಕ್ಷಣವಾಗಿದೆ! ನೋಡಿರಿ!

ನಮ್ಮ ಟಿಕ್ ಟಾಕ್ (ರಿಜಿಸ್ಟರ್ಡ)



ಎಂಬ ಗೋಡೆಗೆ ತಗಲಿಸುವ ಗಡಿಯಾರವು ಪರಿಹೋಲದಂತ ಪ್ರಖ್ಯಾತಿಗೊಂಡಿದೆ ಸರಿಯಾದ ಗಂಟೆಯನ್ನು ತೋರಿಸುವ ಉತ್ತಮವಾದ ಗಡಿಯಾರು ಎಲ್ಲರೂ ಮೆಚ್ಚಿರುವಂಥಾದ್ದು. ಯಾವಾಗಲೂ **ಟಿಕ್ ಟಾಕ್** ಗಡಿಯಾರವನ್ನೇ ತರಿಸಿರಿ ಕ್ರಯ ರೂ 3—0—0 ಮಾತ್ರ.

ಜರ್ಮನ್ ಎಲಾರ್ಮ್ ಗಡಿಯಾರು.



ಕ್ರಯವು ಬಹಳ ಕಡಿಮೆ ಮಾಡಲ್ಪಟ್ಟಿದೆ ಹೆಚ್ಚು ಪ್ರಯೋಜನದ, ಕಡಿಮೆ ಕ್ರಯದ ಟಯಮ್ ಪೀಸ್. 4 ಇಂಚು ಡಯಲಿನ ನಿಕ್ಕಲ್ ಗಡಿಯಾರು 30 ಗಂಟೆ ವರೆಗೆ ಕೀಗಕೊಡಬೇಕಾಗಿಲ್ಲ ಹ್ಯಾಗೆ ಇಟ್ಟರೂ ನಡೆಯುತ್ತದೆ. ಪ್ರಯಾಣಕ್ಕೆ ಒಳ್ಳೇ ಗಡಿಯಾರು ಇದು ವಿದ್ಯಾರ್ಥಿಗಳಿಗೂ, ಸಮಯದ ಬೆಲೆ ಅರಿತವರಿಗೂ ಬಹಳ ಉಪಯೋಗವುಳ್ಳದು ರಾತ್ರಿ ಕೆಲಸದವರಿಗೂ ಉತ್ತಮವಾದದ್ದು ಎಲಾರ್ಮ್ ಹೊಡೆಯಬೇಕೆಂದಿರುವಾಗ ಡಯಲಿನ ಮೇಲಿರುವ ಸಣ್ಣ ಕೈಯನ್ನು ಹಿಂದುಗಡೆಯಿಂದ ತಿರುಗಿಸಿದರೆ ಕಾಲಕ್ಕೆ ಸರಿಯಾಗಿ ಎಲಾರ್ಮ್ ಹೊಡೆಯುತ್ತದೆ. ಮೂರು ವರ್ಷದ ಬರವಸ ಇದೆ ಕ್ರಯ ರೂ 5 ಮಾತ್ರ.

22 ಕ್ಯಾರೆಟ್ಟಿನ ಚಿನ್ನದ ಹೊದಿಕೆಯ ಕೈ ಗಡಿಯಾರ.

ಉತ್ತಮವಾದ ಸ್ವಿಸ್ ಸಾಮಾನುಗಳಿಂದ ಮಾಡಿದ ಹೊಸ ನಮೂನೆಯ ಗಡಿಯಾರವಿದು ಕ್ರಿಸ್ಟಲ್ ಕನ್ನಡಿಯ ಅಲೇಬಿಕ್ ಯಾ ರೋಮನ್ ಅಂಕಗಳುಳ್ಳದ್ದು ಇದರ ಕೆಲಸವು ಎಂಥಾ ಪರೀಕ್ಷೆಯನ್ನು ತೃಪ್ತಿಪಡಿಸುವುದು ಇದು ಪೌನಿನ ಚಿನ್ನದಂತೆ ಕಾಣುತ್ತದೆ ಸ್ಟೀಕ್ಕ ಉತಳ ಅಂದವಾಗಿಯೂ ಕರಾರು ಗಂಟೆ ಕೊಡುವುದಾಗಿಯೂ ಇದೆ ಐದು ವರ್ಷದ ಖಾತ್ರಿ ಕ್ರಯ ರೂ 12—8—0

18ಕೇರೆಟ್ ರೋಲ್ಡ್ ಗೋಲ್ಡ್ ರಿಸ್ಟ್ ವಾಚು ರೂ 7.

ಎಲಾರ್ಮ್ ಮತ್ತು ರಿಪೀಟರ್ ಇರುವಂಥ ಅಮೇರಿಕದ "ಬಿಗ್ ಬೆನ್" ಗಡಿಯಾರ ರೂ 10—8—0

ಗಂಟೆ ಮತ್ತು ಅರ್ಧಗಂಟೆ ಹೊಡೆಯುವಂಥಾ "ಬೇಬಿ" ಗಡಿಯಾರ, ರೂ. 7—0—0

ಮೇಲಿನ 'ಬೇಬಿ' ಗಡಿಯಾರು ಎಲಾರ್ಮ್ ಸಮೇತ. ರೂ. 8—0—0.

ಮೂರುವರ್ಷದ ಖಾತ್ರಿ.

ಜರ್ಮನ್ ಎಲಾರ್ಮ್ ಗಡಿಯಾರು ರೂ 5

ಜರ್ಮನ್ ರೇಡಿಯೋ ಎಲಾರ್ಮ್ ಗಡಿಯಾರು ರೂ. 5

ಜರ್ಮನ್ ಟೆಬ್ಬಲ್ ಬೆಲ್ ಎಲಾರ್ಮ್ ಟಯಮ್ ಪೀಸು ರೂ 6—0—0.

ಲೋಕಪ್ರಸಿದ್ಧವಾದ "ಜಿ" ಟಯಮ್ ಪೀಸ್ ರೂ. 2—8—0

ಎಮ್ಮೆನ್ ಫೌಂಟನ್ ಪೆನ್ 14ಕೇರಟ್ ರೋಲ್ಡ್ ಗೋಲ್ಡ್ ನಿಬ್ಸ್ ರೂ. 2—8—0.

Apply to— V. S. Watch Coy
Post Box 105 **MADRAS.**

12—೬—

ಕರ್ಣಾಟಕ
ವಿದ್ಯುತ್ ಚಿಕಿತ್ಸಾಲಯ

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝಾ ಟಿಡಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು

ಬಿಲೆ ಬಾಟ್ಲಿಯೊಂದಕ್ಕೆ ರು. ೦—೧೪—೦

ಟಪ್ಪಾಲು ಚಾರ್ಜು ಬೇರೆ

ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು. ೯—೨—೦

ಏಜಂಟರು ಬೇಕು, ಕೊಡಗಿನ ಸ್ಕೂಲ್ಮಾಸ್ಟರುಗಳು ತಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ

12—೬—4 ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	..	9080
ಜಮೆಯಾದ ಠೇವಣಾತಿ	....	78,000

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. ೬-1-0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಯಂ ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ
ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಕು 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.— ವಿದ್ವಾನ್ ಕೆ. ಕೇಶವಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆ ಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರೂಪಾಯಿ

ವಿಳಾಸ—

ಮೇನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.
Telegraphic Address:-"SHOOTER" Bombay.

[52 ೬ Please write for latest Catalogues.

ಮಹನೀಯರೇ,

1923ನ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿದೆ

ಕೃಷ್ಣ ಸಂಬೀಶರ್ ಮತ್ತು ನಾರಾಯಣ ಸಂಬೀಶರ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ ನಾರಾಯಣನ್ ಮೂಸ್ ಎಂಬ ಮಹಾನುಭಾವರ ಶಿಷ್ಯರಾಗಿ ಹಲವು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ

ಇವರಲ್ಲನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ

ಸಂಬೀಶರ್ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲೂರು, ವೀರಾಜಪೇಟೆ ಮತ್ತು
52-೬-10 **ಗೋಣಿಕೊಪ್ಪಲು.**

ಪ್ರಕಟಣೆ.

ಜಾತಕಮೋಕೆಯ ಕಷ್ಟವನ್ನು ತಪ್ಪಿಸಬೇಕೆಂದು ಸೋದರಾ ಉತ್ತರಾಪ ಶ್ರೀಮಾನ್ ಲಾಲಾ ಲಜಪತ್‌ರಾಯ್, ಪಂಡಿತ ಮೋತಿಲಾಲ್ ನೇಹರು ಮೊದಲಾದ ದೈಶ್ಯಕ್ರರುಗಳಾದ ಬಾರತ ಪುತ್ರರಿಂದ ಸ್ಥಾಪಿತವಾಗಿರುವ

ದಿ ಲಕ್ಷ್ಮೀ ಇನ್‌ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು ಲಾಹೋರು, ಮ್ಯಾನೇಜಿಂಗ್ ಡೈರೆಕ್ಟರು, ಪಂಡಿತ ಕೆ. ಸಂತಾನಂ.

ಮೂಲಧನ ೧೦,೦೦,೦೦೦.

ಶೇರು ದರಖಾಸ್ತು ೧೦,೯೦,೦೦೦.

ಇಂಡಿಯಾ ಸರಕಾರದ ಲೈಫ್ ಇನ್‌ಶ್ಯೂರೆನ್ಸ್ ಆಕ್ಟು ಅನುಸರಿಸಿ ರಿಜಿಸ್ಟರಾಗಿ ಇಂಡಿಯಾ ಸರಕಾರದಲ್ಲಿ ರೂಲ್ಸು ಪ್ರಕಾರ ಮೊಬಲಗು ಸಕ್ಯೂರಿಟಿ ಡಿಪಾಜಿಟ್ ಇಡಲ್ಪಟ್ಟಿರುತ್ತೆ.

ಎಲ್ಲಾ ತಾಲೋಕು ಮತ್ತು ಡಿಸ್ಟ್ರಿಕ್ಟುಗಳಲ್ಲಿಯೂ ಏಜಂಟರುಗಳು ಧಾರಾಳವಾದ ಕಮಿಷನಿನಿಂದ ಕೆಲಸ ಮಾಡತಕ್ಕವರು ಬೇಕಾಗಿರುತ್ತೆ. ರೀಲ್ಸುಗಳು ಹೊಂದಿರಬೇಕಾದವುಗಳಲ್ಲಿ, ಏಜನ್ಸಿ ರೂಲ್ಸು, ವಿಮೆ ದರಖಾಸ್ತು ಫಾರಂ ಇತ್ಯಾದಿಗಳಿಗೆ ಬರೆಯಿರಿ

ಚೀಫ್ ಏಜಂಟರ ಆಫೀಸು,
ದಿ ಲಕ್ಷ್ಮೀ ಇನ್‌ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

4—4

ನೋಟೀಸು

ಎಲ್ಲಾ ಸಹಕಾರಿಸಂಘಗಳಿಗೂ ತಿಳಿಯಪಡಿಸುವದೇನೆಂದರೆ:— ಬ್ಯಾಂಕಿನಿಂದ ಸಾಲಕ್ಕೆ ಒರೆಯುವ ಅರ್ಜಿಗಳನ್ನು ಬ್ಯಾಂಕಿನಿಂದ ಕೊಡಲ್ಪಡುವ ಫಾರಂಗಳಲ್ಲೇ ಬರೆಯಲ್ಪಡಬೇಕು. ಫಾರಂಗಳಲ್ಲಿ ಬರೆಯದ ಅರ್ಜಿ ಒರಕೊಂಡರೆ ಗಮನ ಕೊಡಲಾಗುವದಿಲ್ಲ.

ಸಿ ಯಸ್. ವೆಂಕಪ್ಪಯ್ಯ
ಗೌ. ಕಾರ್ಯದರ್ಶಿ.

೩—೬—1925.

Printed & published by Kodandera Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.

If not delivered please return to "KODAGU" OFFICE, MERCARA.

ಕೊಡಗು.

ಸತ್ಯೇನ ಧಾರ್ಮಿಕರಯಸ್ಯ ವಿದ್ಯಾ ಸೀತಿ ಪ್ರಯುಕ್ತತಾಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೪] ಕೊಡಗು, ಸ ೧೯೨೪ನೇ ಇಸವಿ ನೋ ತಾರೀಕು ... ನೆಯ ಶುಕ್ರವಾರ [ಸಂಚಿಕೆ ...

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು. ಡಾಕ್ಟರ್ ಯು. ರಾಮರಾವ್,
ಯಮ್. ಎಲ್. ಸಿ. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣೆ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ: 'ಆರೋಗ್ಯ ಚಂದ್ರಿಕೆ' 323,
ತಂಬುಚೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ಬಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಲಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಕೀಲುಹಣ ಸಲ್ಲಿಸಬೇಕಾಗಿರುವವರೂ ದಯವಿಟ್ಟು ವೀರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮೇನೇಜರ್,
[illegible] ಲಿಮಿಟೆಡ್.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City

ನೋಟೀಸು.

ಸ್ಪೆನ್ಸರ್ ಕಂಪೆನಿ ಲಿಮಿಟೆಡ್, ಮಡಿಕೇರಿ.

ಈ ಮೇಲ್ಕಂಡ ಕಂಪೆನಿಯಲ್ಲಿ ಮಾರುವ ಉತ್ತಮ ತರದ ಒಂಟಿಕೊಳವಿನ ಬ್ರೀಚ್‌ಲೋಡಿಂಗ್ ಕೋವಿಗಳು ತೀರಿ ಹೋದುದರಿಂದ ಈಗ 4ನೆಯ ಸಂಗ್ರಹಣವು ನಮಗೆ ಬರುವುದು. ಆದ್ದರಿಂದ ಮೊದಲು ಪಡೆಯಲು ಅವಸರವಿರುವ ನಮ್ಮ ಗಿರಾಕಿದಾರರು ಕೂಡಲೆ ತಮ್ಮ ಆವಶ್ಯಕತೆಯನ್ನು ಬರೆದು ಒಡನೆ ತಿಳಿಸುವುದು.

ಮತ್ತು ಜೋಡುಕೊಳವಿನ ಬ್ರೀಚ್‌ಲೋಡಿಂಗ್, ಒಂಟಿ ಮತ್ತು ಜೋಡು ಕೊಳವಿನ ಕೇಪು ಕೋವಿಗಳು. ತೋಟ ಚಿಲ್ಲು, ಮದ್ದು, ಕೇಪು ವಗೈರೆ ನಮ್ಮ ಭಂಡಾರದಲ್ಲಿರುವುದು.

"ಆರಿಗೆ ಮೋಸವಾಗದಹಾಗೆ ಬೇಗನೆ ಬರುವುದೇ ಲೇಸು."

Spencer & Co. Ltd.,

MERCARA & POLLIBETTA.

೩೨

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಹಾವು ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ
17-9-24. ಮೇನೇಜರ್.

Old Students' Quarterly.

Editor, Mr P. B Medappa, B.A., B.L., M.L.C.

Vol. II. No. 2 is now out

Subscription—Yearly Rs. 2, post free. Most delightful! Scholarly articles! Read and enjoy!

CONTENTS.

1. National welfare—(includes thoughts on Free and Compulsory education in Coorg.
2. Swarajya—A Canarese Drama.
3. Are Coorgs Kannadigas?
4. Ancient Coorg.
5. Peep into Heavens.
6. Frivolity page, etc. etc.

If you become a subscriber now you will get a very beautiful calendar for 1925 free—absolutely free!

Apply to—
Manager,
O. S. Association,
Mercara.

ಪ್ರಕಟಣೆ.

ಈಗ ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲುಪಿರುವುದರಿಂದ, 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್,' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ. ಮೇನೇಜರ್,
'ಕೊಡಗು' ಲಿಮಿಟೆಡ್

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿವೆ.

ಕೃಷ್ಣ ಸಂಜೀವರ ಮತ್ತು ನಾರಾಯಣ ಸಂಜೀವರ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ. ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ.

ಸಂಜೀವರ ಮತ್ತು ಕಂಪೆನಿ,

ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.

ಕಲ್ಲೂರು, ವೀರಾಜಪೇಟೆ ಮತ್ತು ಗೋಣಿಕೊಪ್ಪಲು.

52-10-11

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಕೋಟೆರ ಚಿಣ್ಣಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಮೆ. ಕೆ. ಚಿಣ್ಣಪ್ಪನವರ ಆಫೀಸಿನಲ್ಲಿ.
ಪೊನ್ನಂಗಾಡು—ಕಮರ್ಶಿಯಲ್ ಸ್ಟೋರಿನಲ್ಲಿ ಮೆ. ಮಡೆಯಂಡ ದೇವಯ್ಯನವರು.
ನಾಪೋಕ್ಲು—ಮೆ. ಪೊನ್ನಚಂಡ ಮುತ್ತಪ್ಪನವರು.
ಗೋಣಿಕೊಪ್ಪಲು—ಮೆ. ವಬಕ್ಕಾ ವೆಂಕಟಾಚಲನವರು.
ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಮ್ಮಯ್ಯನವರು.
ಮಡಿಕೇರಿ—ಮೆ. ಜಿ. ಮಾದಪ್ಪನವರು.
ಅಮ್ಮತ್ತಿ, ಸಿದ್ದಾಪುರ—ಮೆ. ಐನಂಡ ಮಾದಪ್ಪನವರು.
ಮೆ. ಚಂಗಂಡ ಕುಟ್ಟಪ್ಪನವರು.

ಕೋದಂಡ ಉತ್ತಯ್ಯ,
ಆರ್ಗನೈಜಿಂಗ್ ಡೈರೆಕ್ಟರು "ಕೊಡಗು," ಲಿಮಿಟೆಡ್.

"ಕೊಡಗು"

೧೯೨೯ನೇ ಇಸವಿ ಜೂನ್ ತಾ.
೨೨ನೇ ಶುಕ್ರವಾರ.

ಕನ್ನಡ ಸಾಹಿತ್ಯ ಸಮ್ಮೇಳನ.

ಕನ್ನಡ ಭಾಷೆಯನ್ನು ಅಭಿವೃದ್ಧಿಗೊಳಿಸಲಿಕ್ಕೆ ಬೊಂಬಾಯಿ ಆಧಿಪತ್ಯದೊಳಗೆ ಅಡಗಿರುವ ಕನ್ನಡಿಗರೂ, ಮೈಸೂರವರೂ ಕೆಲವು ಮಟ್ಟಿಗೆ ದಕ್ಷಿಣಕನ್ನಡಜಿಲ್ಲಾ, ಬಳ್ಳಾರಿಜಿಲ್ಲೆಯವರೂ ಸಹ ಸೇರಿ ಹತ್ತುವರ್ಷಗಳಿಂದ ಅಲ್ಲಲ್ಲಿ ವರ್ಷಕ್ಕೊಂದಾವರ್ತಿ ಸಭೆ ಸೇರಿ ಕೆಲವು ಠರಾವುಗಳನ್ನು ಮಂಜೂರುಮಾಡಿಕೊಳ್ಳುತ್ತಲೂ, ಒಂದು ಪರಿಷತ್ಪತ್ರಿಕೆಯೆಂಬ ಮೂರು ತಿಂಗಳಿಗೊಂದು ಸಂಚಿಕೆಯಿರುವ ಪತ್ರಿಕೆಯೊಂದನ್ನು ಪ್ರಕಟಿಸುತ್ತಲೂ ಇದ್ದಾರೆ. ಈ ವರ್ಷ ಈ ಸಭೆಯು ಬೆಳಗಾವಿಯಲ್ಲಿ ತಾ॥ 9—10—11ನೇ ದಿನಗಳಲ್ಲಿ ಕೂಡಿತು. ಮದ್ರಾಸ್ ಸರಕಾರದ ಕನ್ನಡ ಟ್ರಾನ್ಸ್ಲೇಟರಾದ ಜನಾಬ್ ರಾಮರಾವ್ ಎಮ್. ಎ ಯವರು ಅಧ್ಯಕ್ಷರಾಗಿದ್ದರು. ಇವರ ಭಾಷಣವು ಇನ್ನೊಂದುಕಡೆ ಪ್ರಕಟಿಸಲ್ಪಟ್ಟಿದೆ. ನಮ್ಮ ದೇಶದ ಮುಖ್ಯ ಜನಾಂಗವಾದ ಕೊಡಗರಿಗೆ ಮಾತೃಭಾಷೆಯು ಕನ್ನಡವಲ್ಲವಾದುದರಿಂದ ಇಲ್ಲಿ ಕನ್ನಡಭಾಷೆಗೆ ಪ್ರೋತ್ಸಾಹ ಕಡಿಮೆಯಾಗಿದೆ. ನಮ್ಮ ದೇಶದ ಯುವಕರಿಗೆ ಕನ್ನಡ ಭಾಷೆಯಲ್ಲಿ ಪರೀಕ್ಷೆಯಲ್ಲಿ ಪಾಸಾಗುವದು, ಇಂಗ್ಲಿಷ್ ಭಾಷೆಯಲ್ಲಿ ಪಾಸಾಗುವದಕ್ಕಿಂತ ಕಷ್ಟವಾಗುತ್ತದೆಂತ ಹೇಳುತ್ತಾರೆ. ಇದು ಶೋಚನೀಯವಾದ ಸಂಗತಿಯಾಗಿದೆ. ಕೊಡಗರಿಗೂ ಅನ್ಯೋನ್ಯ ವ್ಯವಹಾರ ಭಾಷೆಯೊಂದು ಬೇಕಾದದ್ದು ಆವಶ್ಯವೆಂಬದನ್ನು ಎಲ್ಲರೂ ಒಪ್ಪಬೇಕಾದ ವಿಷಯವಾಗಿದೆ. ಇಂಗ್ಲಿಷ್ ಭಾಷೆಯನ್ನು ಸಾಧಾರಣ ಮಟ್ಟಿಗೆ ಕಲಿತಮೇಲೆ ಇಂಗ್ಲಿಷ್ ಭಾಷೆಯಲ್ಲಿ ಆತ್ತತ್ತ ಪತ್ರವ್ಯವಹಾರಗಳನ್ನು ನಡಿಸಿಕೊಳ್ಳುವ ಪದ್ಧತಿಯಿದೆ. ಆದರೆ ಇಂಗ್ಲಿಷ್ ತಿಳಿದ ಜನರೆಷ್ಟು? ವಿದ್ಯಾಜನರೆಲ್ಲರೂ ತಮ್ಮ ಕಾಗದ ಪತ್ರಗಳನ್ನೆಲ್ಲಾ ಕನ್ನಡದಲ್ಲೇ ಮಾಡುತ್ತಾರಲ್ಲವೇ? ತಮ್ಮ ಅಭಿಪ್ರಾಯವನ್ನು ಕೊಡಗಿನ ನಿವಾಸಿಗಳೆಲ್ಲರಿಗೂ ತಿಳಿಸಬೇಕಾದರೆ ಕನ್ನಡ ಭಾಷೆಯಲ್ಲೇ ಉಪನ್ಯಾಸಕೊಡಬೇಕಲ್ಲವೇ? ಆದುದರಿಂದ ದೇಶಭಾಷೆಯೊಂದು ಆವಶ್ಯವೆಂಕಲೂ ಅಂಥಾ ಭಾಷೆಯು ಕನ್ನಡಭಾಷೆಯಾಗಿದೆಯೆಂತ ಈಗಿನ ವಿದ್ಯಾಭ್ಯಾಸದಿಂದ ನಿರ್ಧರಿಸಿದಂತಾಯಿತು. ಇಂಗ್ಲಿಷ್ ಭಾಷೆಯನ್ನರಿತ ಯುವಕರೂ ಸಹ ದೇಶಭಾಷೆಗೆ ಪ್ರಾಧಾನ್ಯ ಕೊಡದೆ ಇಂಗ್ಲಿಷಿನಲ್ಲೇ ಮಾತನಾಡುವರು. ಒಬ್ಬೊಬ್ಬರು ಸ್ವಲ್ಪ ಯೋಚಿಸುವದು ಸಹ ಆದರೆ ದೇಶವಾತ್ಸಲ್ಯವು ಹೇಗೆ ಬೆಳೆದೀತು? ಒಂದು ಜನಾಂಗಕ್ಕೆ ಸ್ವಭಾಷೆಯಿಲ್ಲವೆಂತ ಹೇಳುವದು ಬಹಳ ನಾಚಿಕೆಗೇಡಲ್ಲವೇ. ಮಾತೃಭಾಷೆಯು ಬರಹದ ಭಾಷೆಯಲ್ಲವಾದರೆ ಯಾವುದಾದರೊಂದು ಭಾಷೆಯನ್ನು ಉಪಯೋಗದಲ್ಲಿ ಇಟ್ಟುಕೊಂಡು ಅದನ್ನು ಅಭಿವೃದ್ಧಿಗೊಳಿಸಿ ಆ ಭಾಷೆಯ ಮೂಲಕ ಸಂಸ್ಕೃತಿ (Culture)ಯು ಗ್ರಾಮವಾಸಿಗಳಿಗೂ ಹಬ್ಬುವಂತೆ ಮಾಡಬೇಕಾದದ್ದು ಮುಂದಾಳುಗಳ ಕರ್ತವ್ಯವಾಗಿದೆ. ಸ್ವದೇಶಪ್ರೀತಿ ಸರಿಯಾಗಿ ಬೆಳೆಯಬೇಕಾದರೆ ಸ್ವಭಾಷೆಯಲ್ಲಿ ತುಂಬಾ ಪ್ರೇಮವಿರಬೇಕು. ಸ್ವಶಕ್ತಿಯಲ್ಲಿ ನಂಬಿಕೆ ಕಟ್ಟುಹೋಗಿರಲು ಒಂದು ಕಾರಣವು ಸ್ವಭಾಷೆಯಲ್ಲಿ ನಂಬಿಕೆಯಿಲ್ಲದಿರುವದು ಒಂದು ಕಾರಣವಾಗಿದೆ. ದೇಶೀಯ ಮಹಾಪುರುಷರಿಲ್ಲ, ದೇಶೀಯ ಚರಿತ್ರೆಯಿರಲಿಲ್ಲ, ದೇಶೀಯ ಸಂಸ್ಕೃತಿ ಇರಲಿಲ್ಲ, ದೇಶೀಯ ಭಾಷೆಗೆ ಗೌರವಕ್ಕೆ ಅರ್ಹತೆಯಿಲ್ಲ ಎಂಬ ಅಭಿಪ್ರಾಯವು ಒಂದು ಜನಾಂಗದಲ್ಲಿ ಬೆಳೆಯುತ್ತಾ ಹೋದರೆ ಆ ಜನಾಂಗವು ಹೇಗೆ ತಾನೇ ಸ್ವಾತಂತ್ರ್ಯವನ್ನು ಪಡೆದೀತು. ಈ ತರದ ನಂಬಿಕೆಯು ಇಂಗ್ಲಿಷ್ ಓದಿದವರಲ್ಲಿ ಮಾತ್ರವಲ್ಲ, ಸಾಧಾರಣ ಜನರಲ್ಲಿ ಸಹ ಹಬ್ಬಿಹೋಗಿದೆ. ಇಂಥಾ ಸುಳ್ಳು ಅಭಿಪ್ರಾಯಗಳನ್ನು ಕಿತ್ತುಹಾಕುವದು ಕಷ್ಟಸಾಧ್ಯ. ಆದರೆ ಎಂದಾದರೂ ಕಿತ್ತುಹಾಕಿದ ವಿನಹ ದೇಶಕ್ಕೆ ಜೀವಕಳೆಯಿಲ್ಲ. ಐರ್ಲೆಂಡಿನವರು ಈಗ ಸ್ವತಂತ್ರರಾದರು. ಇವರ ಸ್ವತಂತ್ರದ ಹೋರಾಟದಲ್ಲಿ ಸ್ವಭಾಷೆಯ ಹೋರಾಟವೇ ಮೊದಲನೇ ಮೆಟ್ಟಾಗಿತ್ತು. ಜಂಗಾಳದಲ್ಲಿ ರಾಷ್ಟ್ರಭಕ್ತಿ ಬಹಳ ಮುಂದುವರಿದು ಇರಲಿಕ್ಕೆ ಸ್ವಭಾಷೆ ಪ್ರೇಮವೇ ಕಾರಣವಾಗಿದೆ. ಆದುದರಿಂದ ಸ್ವಭಾಷೆಯ ಕಡೆಗೆ ಜನರು ಪೂರ್ತಿ ಮನಸ್ಸು ಕೊಡಬೇಕಾದದ್ದು ಅಗತ್ಯ.

ಈ ಕನ್ನಡ ಭಾಷಾಭಿವೃದ್ಧಿಯೇ ಉದ್ದೇಶವಾಗಿರುವ ಪರಿಷತ್ತಿನ ಕಾರ್ಯಕಾರೀ ಮಂಡಲಿಕ್ಕೆ ಮಿ. ಮನೆಯಪ್ಪಂಡ ಮುತ್ತಣ್ಣನವರು ಸದಸ್ಯರಾಗಿದ್ದರು. ಆದುದರಿಂದಲೇ ಜನರು ಈ ಪರಿಷತ್ತುದೇಶೋದ್ಧಾರದ ಸಭೆಗಳಲ್ಲಿ ಒಂದು ಎಂಬದನ್ನು ನಂಬುವರು. ಆದರೆ ಸುತರಾಂ ಕೊಡಗು ದೇಶದ ಪ್ರತಿನಿಧಿ ಎನಿಸಿಕೊಳ್ಳಬಹುದಾದವರು ಈ ಕಾರ್ಯಕಾರೀ ಮಂಡಲದಲ್ಲಿ ಸಭಿಕರಾಗಿರುವದಿಲ್ಲ. ಇದಕ್ಕೆ ಕಾರಣವೇನೆಂದರೆ ಈ ದೇಶದ ಜನರು ಈ ಸಭೆಯ ಕಾರ್ಯಗಳಿಗೆ ಇನ್ನೂ ಸಾಕಷ್ಟು ಮನಸ್ಸುಕೊಡಲಿಲ್ಲವೆಂಬದು. ಈಗಲಾದರೂ ಮುಂದಾಳುಗಳು ಎಚ್ಚತ್ತು ಕಂಡು ಪರಿಷತ್ತಿನ ಮೆಂಬರುಗಳಾಗಿ ಭಾಷಾಪ್ರೇಮಿಗಳಲ್ಲಿ ಭಾಗಿಗಳಾಗಬೇಕಾದದ್ದು ಅವಶ್ಯವಾಗಿದೆ.

ಪರಿಷತ್ತಿನಿಂದ ಎಲ್ಲರ ಕೋರಿಕೆಗೂ ತಕ್ಕ ಒದಗುವ ಪ್ರಯೋಜನಗಳು ಇನ್ನು ಕಂಡುಬಾರದಿದ್ದರೂ ಅನೇಕ ಪ್ರಯೋಜನಗಳಾಗಿವೆಯೆಂತ ಅಧ್ಯಕ್ಷರು ಹೇಳಿದ್ದಾರೆ. ಬೊಂಬಾಯಿ ಆಧಿಪತ್ಯದಲ್ಲಿ ಕನ್ನಡ ಭಾಷೆಯ ಜಿಲ್ಲೆಗಳಿವೆ ಎಂಬ ಕೊಡಗು ದೇಶದ ಕೆಲವರಿಗಾದರೂ ತಿಳಿದದ್ದು ಈ ಭಾಷಾಪರಿಷತ್ತಿನ ಸಭೆಗಳಿಂದಲೇ. ಬೊಂಬಾಯಿ ಕರ್ನಾಟಕದ ಶಾಲೆಗಳಲ್ಲಿ ಉಪಯೋಗದಲ್ಲಿ ಇರುವ ಕನ್ನಡ ಪಾಠಪುಸ್ತಕಗಳಲ್ಲಿ ಕೆಲವಾದರೂ ಈ ದೇಶದಲ್ಲಿ ಉಪಯೋಗಕ್ಕೆ ಬಂದದ್ದು ಈ ಪರಿಷತ್ತಿನ ಕಾರ್ಯದ ಫಲವಾಗಿದೆಯೆಂತ ನಮ್ಮ ಅಭಿಪ್ರಾಯ. ಬೊಂಬಾಯಿ ಕನ್ನಡ ಪಾಠಪುಸ್ತಕಗಳಲ್ಲಿ ರಾಷ್ಟ್ರಭಕ್ತಿಯ ಬೀಜಗಳು ಅಲ್ಲಲ್ಲಿ ಇವೆ. ಅಲ್ಲದೆ ದೊಡ್ಡ ಪ್ರಾಂತ್ಯದ ಜನರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವದರಿಂದ ಮನಸ್ಸು ಹೆಚ್ಚಿಗೆ ವಿಕಾಸವಾಗುತ್ತದೆ. ಈ ಕಾರಣ ಬೊಂಬಾಯಿ ಪುಸ್ತಕಗಳು ಇಲ್ಲಿಗೆ ಉಪಯೋಗಕ್ಕೆ ಬಂದದ್ದು ಒಳ್ಳೇದೆಂತ ನಾವು ಹೇಳುವದಾಗಿದೆ. ಅಲ್ಲದೆ ಬೊಂಬಾಯಿ ಕರ್ನಾಟಕದ ಅನೇಕ ವೃತ್ತಪತ್ರಗಳು ಈ ದೇಶದಲ್ಲಿ ಪ್ರಚಾರದಲ್ಲಿ ಇವೆ. ಇದಕ್ಕೂ ಪರಿಷತ್ತೇ ಕಾರಣವೆಂತ ಹೇಳಬಹುದು. ಬೊಂಬಾಯಿ ಕರ್ನಾಟಕದ ಪತ್ರಿಕೆಗಳಲ್ಲಿ ಇರುವ ದೇಶಭಕ್ತಿ ಹುಟ್ಟಿಸುವ ಲೇಖನಗಳು ಮೈಸೂರು ಪತ್ರಿಕೆಗಳಲ್ಲಾಗಲೀ ಕನ್ನಡ ಜಿಲ್ಲೆಯ ಪತ್ರಿಕೆಗಳಲ್ಲಾಗಲೀ ಇಲ್ಲ.

ಕನ್ನಡಭಾಷೆಯುದೊಡ್ಡ ವಾಙ್ಮಯ(Literature) ಉಳ್ಳದ್ದಾಗಿದೆ. 'ಕನ್ನಡ ಕವಿಚರಿತೆ' ಎಂಬ ಪುಸ್ತಕದಲ್ಲಿ ಸುಮಾರು 400 ಪ್ರಾಚೀನ ಗ್ರಂಥ ಕರ್ತರುಗಳ ಹೆಸರನ್ನು ಕೊಟ್ಟಿದ್ದಾರೆ. ಇಷ್ಟು ದೊಡ್ಡ ವಾಙ್ಮಯವುಳ್ಳ ಭಾಷೆಯನ್ನು ಇನ್ನೂ ಬೆಳೆಸಿಕೊಂಡು ಈಗಿನ ಕಾಲಕ್ಕೆ ಅವಶ್ಯವಿರುವಂತೆ ಉಪಯೋಗಿಸಿಕೊಳ್ಳುವದು ಬಹಳ ಸುಲಭದ ಕೆಲಸವಾಗಿದೆ. ಕನ್ನಡ ಭಾಷೆಯನ್ನಾಡುತ್ತಿದ್ದ ಜನರು ವಿಜಯನಗರದ ಸಂಸ್ಥಾನವನ್ನು ನಡಿಸಿದರು. ವಿಜಯನಗರದಂಥ ಊರನ್ನು ನಿರ್ಮಿಸಬೇಕಾದ ನಾಗರೀಕತೆಯೂ ಕಲಾಕೌಶಲ್ಯವೂ ಇದ್ದ ಜನರ ಭಾಷೆಯನ್ನು ಬೆಳಸುವದು ನಮ್ಮ ಕರ್ತವ್ಯವಾಗಿದೆ.

ಜಗತ್ತಿನ ತಂದೆ.

(ಲೇ. ಮಹಾತ್ಮ ಗಾಂಧಿ ನವಜೀವನ)

"ಒಕ್ಕಲಿಗನೇ, ನೀನು ನಿಜವಾಗಿ ಜಗತ್ತಿನ ತಂದೆಯಾಗಿರುವಿ"

ಈ ಬಗೆಯಾಗಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಹೊಂದುತಿರುವ ಕಾಲಕ್ಕೆ ನಾವು ಕಲಿತಿರುವೆವು. ಅದರ ಅರ್ಥವೇನು. ಹಾಗು ಜಗತ್ತಿನ ತಂದೆಯ ಬಗ್ಗೆ ನಮ್ಮ ಭಕ್ತಿಯು ಎಷ್ಟು ಅಲ್ಪವಾಗಿರುವದು. ಇದರ ಸ್ಮರಣವು ಶ್ರೀ ಚಂದುಲಾಲರ ಈ ಸಂಚಿಕೆಯಲ್ಲಿ ಮುದ್ರಿಸಿದ ಲೇಖದಿಂದ ನಮಗಾಗುವದು.

ಶ್ರೀ. ಚಂದುಲಾಲರು ಒಕ್ಕಲಿಗನ ಸ್ಥಿತಿಯ ಬಗ್ಗೆ ಸ್ವಲ್ಪದರಲ್ಲಿಯಾದರೂ ಪರಿಣಾಮಕಾರಕವಾಗುವಂತೆ ಬಂದಿರುವರು. ಅವರು ಕಾರಿಯೂನಾಡದ ಒಕ್ಕಲಿಗರನ್ನುದ್ದೇಶಿಸಿ ಬರೆದಿರುವರು; ಆದರೆಕಾರಿಯೂನಾಡದಒಕ್ಕಲಿಗರ ವಿಷಯದಲ್ಲಿ ನಿಜವಿದ್ದ ಮಾತು ಬೇರೆ ಬೇರೆ ರೂಪದಲ್ಲಿ ಸಮಗ್ರ ಹಿಂದುಸ್ಥಾನದ ಒಕ್ಕಲಿಗರ ವಿಷಯದಲ್ಲಿಯಾದರೂ ನಿಜವಿರುವದು. ಎಲ್ಲಿಯ ವರೆಗೆ ಒಕ್ಕಲಿಗರ ಸ್ಥಿತಿಯನ್ನು ಶಿಕ್ಷಿತ ವರ್ಗವು ವಿಚಾರಿಸುವದಿಲ್ಲವೋ, ತಿಳಿದುಕೊಂಡಿಲ್ಲವೋ, ಅನುಭವಿಸುವದಿಲ್ಲವೋ ಅಲ್ಲಿಯ ವರೆಗೆ ಈ ಸ್ಥಿತಿಯಲ್ಲಿ ಸುಧಾರಣೆಯಾಗುವದು ಅಶಕ್ಯವು.

ಒಕ್ಕಲಿಗರ ಸ್ಥಿತಿಯ ಬಗ್ಗೆ ನಮ್ಮ ಮುಂದಾಳುಗಳು ಅಲ್ಪ ಮಾಹಿತಿಯನ್ನು ದೊರಕಿಸಿರುವರು, ಅಲ್ಪಮಟ್ಟಿಗೆ ಬರೆದಿರುವರು; ಕೌನ್ಸಿಲುಗಳಲ್ಲಿಯೂ ಚರ್ಚಿಸಿರುವರು, ಆದಾಗ್ಯೂ ವಸ್ತುಸ್ಥಿತಿಯ ಅನುಭವವು ಇಲ್ಲದ್ದರಿಂದ ನಿಜವಾದ ಸುಧಾರಣೆಯು ಆಗಿಲ್ಲ.

ಸರಕಾರೀ ಅಮಲುದಾರರು ಒಕ್ಕಲಿಗರ ಸ್ಥಿತಿಯನ್ನು ನಿಜವಾಗಿ ಬಲ್ಲರು; ಆದರೆ ಅಮಲುದಾರರ ಸ್ಥಿತಿಯೇ ಮೊದಲು ಕನಿಕರವಾಗಿರುವದು. ಇವರು ಅನುಂದಾರೀ ದೃಷ್ಟಿಯಿಂದ—ಅಂದರೆ, ತೆರಿಗೆಯನ್ನು ಕೂಡಿಸುವ ದೃಷ್ಟಿಯಿಂದ—ಒಕ್ಕಲಿಗರನ್ನು ನೋಡುವರು, ಸರಕಾರಕ್ಕೆ ಹೆಚ್ಚಿಗೆ ತೆರಿಗೆಯನ್ನು ಕೂಡಿಸಿ ಕೊಡುವ ಅಮಲುದಾರರು ಹೆಚ್ಚಿಗೆ ಅಧಿಕಾರಗಳನ್ನು ಪಡೆಯುವರು ಬಿರುದುಗಳನ್ನು ಹೊಂದುವರು ಮತ್ತು ಸರಕಾರದಲ್ಲಿ ಜಾಣರೆಂದು ಎಣಿಸಲ್ಪಡುವರು. ಯಾವ ವಸ್ತುವನ್ನು ನಾವು ಯಾವ ದೃಷ್ಟಿಯಿಂದ ನೋಡುತ್ತೇವೆಯೋ ಅದೇ ಬಗೆಯಾಗಿ ನಮಗದು ಕಾಣುತ್ತದೆ. ಅದ್ದರಿಂದ ಎಲ್ಲಿಯ ವರೆಗ ನಾವು ಒಕ್ಕಲಿಗರ ದೃಷ್ಟಿಯಿಂದ ಒಕ್ಕಲಿಗನ ಸ್ಥಿತಿಯನ್ನು ನೋಡುವದಿಲ್ಲವೋ ಅಲ್ಲಿಯವರೆಗೆ ಸ್ಥಿತಿಯು ನಮಗೆ ಇದ್ದಕ್ಕಿದ್ದಂತೆ ತೋರುವದಿಲ್ಲ.

ನಮಗೆ ಕೆಲವುಕಡೆಗಳಿಂದಾದರೂ ಒಕ್ಕಲಿಗನ ಸ್ಥಿತಿಯು ಚನ್ನಾಗಿರುವದು. ಹಿಂದುಸ್ಥಾನವು ಕಂಗಾಲಾಗಿರುವದು ಹಿಂದುಸ್ಥಾನದಲ್ಲಿ ಲಕ್ಷಾವಧಿ ಜನರಿಗೆ ಒಪ್ಪತ್ತು ಊಟ ಇರಬೇಕಾಗುವದು. ಇದರ ಅರ್ಥವೇನೆಂದರೆ ಹಿಂದುಸ್ಥಾನದ ಒಕ್ಕಲಿಗರು ಕಂಗಾಲಾಗಿರುವರು. ಮತ್ತು ಅನೇಕರು ಒಪ್ಪತ್ತು ಊಟ ಜೀವಿಸಬೇಕಾಗುವದು. ಈ ಒಕ್ಕಲಿಗರಾರು? ನೂರಾರು ಕೂರಿಗೆ ಭೂಮಿಯಿದ್ದವನೂ ಒಕ್ಕಲಿಗನು, ಕೂರಿಗೆ ಅರ ಕೂರಿಗೆ ಭೂಮಿಯಿದ್ದವನೂ ಒಕ್ಕಲಿಗನು, ಮತ್ತು ತನ್ನ ಸ್ವಂತದ್ದೇನೂ ಭೂಮಿಯಿಲ್ಲದೆ ಎರಡನೇಯವರ ಭೂಮಿಯನ್ನು ಸಾಗಿಸಿ ಚೀಲ ಎರಡು ಚೀಲ ಧಾನ್ಯವನ್ನು ಸಂಪಾದಿಸುವವನೂ ಒಕ್ಕಲಿಗನು. ಚಂಪಾರಣ್ಯ ಮೊದಲಾದ ಸ್ಥಳಗಳಲ್ಲಿ ನಾವೇ ಜನರ ಹಾಗೂ ನಮ್ಮ ವರ ಕೇವಲ ದಾಸ್ಯವನ್ನು ಮಾಡಿ ಇಡೀ ಒಕ್ಕಲನ್ನು ಗುಲಾಮಗಿರಿಯಲ್ಲಿಯೇ ಕಳೆಯುತ್ತಿರುವಂಥ ಒಕ್ಕಲಿಗರನ್ನಾದರೂ ನಾನು ನೋಡಿರುವೆನು. ಈ ಬೇರೆ ಬೇರೆ ತರದ ಒಕ್ಕಲಿಗರ ಯದಾರ್ಥ ಸಂಖ್ಯೆಯು ನನಗೆಂದೂ ದೊರೆಯದು. ವಸ್ತಿ ಪತ್ರಿಕೆಯನ್ನು (ಖಾನೆಸುಮಾರಿಯ ಪತ್ರಿಕೆಯನ್ನು) ತಯಾರಿಸುವದಾದರೂ ಒಂದು ರೀತಿ ಇರುವದು. ಒಕ್ಕಲಿಗರ ಸ್ಥಿತಿಯನ್ನು ಪರೀಕ್ಷಿಸುವ ಉದ್ದೇಶವನ್ನು ಹಿಡಿದು ವಸ್ತಿ ಪತ್ರಿಕೆಯನ್ನು ತಯಾರಿಸಿದರೆ ನಮ್ಮನ್ನು ಆಶ್ಚರ್ಯಗೊಳಿಸುವಂಥ ಹಾಗೂ ನಾಚಿಸುವಂಥ ವಸ್ತುಸ್ಥಿತಿಗಳು ಪ್ರಸಿದ್ಧಿಗೆ ಬರುವವು. ಒಕ್ಕಲಿಗರ ಸ್ಥಿತಿಯು ದಿನೇ ದಿನೇ ಸುಧಾರಿಸುತ್ತ ಹೋಗದೇ ಕೆಡುತ್ತ ನಡೆದಿರುವಂತೆ ನನ್ನ ಅನುಭವವಿದೆ. ಕೊಲ್ಲಿನ ಶರದ ಮಳೆಯಿಂದೆಂಬಲ್ಲಿ ಹರುವ ಖೇಡಾ ಜಿಲ್ಲೆಯಲ್ಲಿ ಸಹ ಪೂರ್ವಜರಿಂದ ಕಟ್ಟಿಸಲ್ಪಟ್ಟಿರುವ ದೊಡ್ಡ ಮನೆಗಳಲ್ಲಿ ವಾಸಿಸುತ್ತಿರುವ ಅವರ ವಂಶಜರು ಆ ಮನೆಗಳನ್ನು ರಿಪೇರಿಮಾಡಿಕೊಂಡು ಅವುಗಳನ್ನು ಇದಕ್ಕಿದ್ದಂತೆ ಒಳ್ಳೇಸ್ಥಿತಿಯಲ್ಲಿಟ್ಟುಕೊಂಡಿಲು ಈಗ ಶಕ್ತಿಯಿಲ್ಲದವರಾಗಿರುವರು. ಅವರ ದೋರಿಯ ಮೇಲೆ ನವ್ಯಾನ್ನು ಅಲಂಕರಣ ಮಾಡುವಂಥ ತೇಜವು ಕಂಡು ಬರುವುದಿಲ್ಲ. ಅವರ ಶರೀರಗಳು ಎಷ್ಟು ಗಟ್ಟಿಯಾಗಿರಬೇಕೋ ಅಷ್ಟಿರುವದಿಲ್ಲ ಅವರ ಹುಡುಗರು ನಿರುತ್ಸಾಹಿಗಳೂ ನಿಸ್ತೇಜರೂ ಆಗಿರುವರು. ಹಳ್ಳಿಗಳಲ್ಲಿ ಸುಂಕುಬೇನೆಗಳು ನೆಲೆಗೊಂಡಿರುವವು. ಬೇರೆ ಹಿಡುಗಗಳಿಂದಲೂ ಜನರು ಪೀಡಿತರಾಗಿರುವರು. ದೊಡ್ಡ ರೈತರು ಸಾಲದ ಭಾರದ ಕೆಳಗೆ ಬಗ್ಗಿ ಹೋಗಿರುವರು. ಮದ್ರಾಸ್ ಇಲಾಖೆಯೊಳಗಿನ ಹಳ್ಳಿಗಳ ಸ್ಥಿತಿಯಂತೂ ಹೃದಯದ್ರಾವಕವಾಗಿರುವದು. ಬೇರೆ ಪ್ರಾಂತ್ಯ ಚಂಪಾರಣ್ಯಗಳ ಬಗ್ಗೆ ಇದ್ದದನ್ನು ಅನುಭವವು ಮದ್ರಾಸದ ಬಗ್ಗೆ ನನಗ ಇಲ್ಲದಿದ್ದರೂ ಅಲ್ಲಿ ನಾನು ನೋಡಿದ ಹಳ್ಳಿಗಳ ಸ್ಥಿತಿಯ ಮೇಲಿಂದ ಮದ್ರಾಸದ ಒಕ್ಕಲಿಗರ ದೈನ್ಯಾವಸ್ಥೆಯ ಯದಾರ್ಥ ಕಲ್ಪನೆಯು ನನಗ ಆಗುವಂತಿದೆ.

ಹಿಂದುಸ್ಥಾನದೊಳಗೆ ದೊಡ್ಡದರಲ್ಲಿ ದೊಡ್ಡ ಪ್ರಶ್ನೆಯಂದರೆ ಇದೇ ಈ ಪ್ರಶ್ನವನ್ನು ಬಿಡಿಸುವದೆಂತು? ಒಕ್ಕಲಿಗರ ಸ್ಥಿತಿಯನ್ನು ಸುಧಾರಿಸುವದು ಹೇಗೆ? ಇದರ ವಿಚಾರವನ್ನು ಪ್ರತಿಕ್ಷಣದಲ್ಲಿಯೂ ಮಾಡುವದವಶ್ಯವು. ಹಿಂದುಸ್ಥಾನವು ಅದರಲ್ಲಿಯ ಪಟ್ಟಣಗಳಲ್ಲಿರುವದಿಲ್ಲ, ಹಿಂದುಸ್ಥಾನವು ಹಳ್ಳಿಗಳಲ್ಲಿ ವಾಸವಾಗಿರುವದು. ಮುಂಬೈ, ಕಲಕತ್ತೆ, ಮದ್ರಾಸ ಮುಂತಾದ ಪಟ್ಟಣಗಳಲ್ಲಿ ವಾಸವಾಗಿರುವ ಜನರ ಸಂಖ್ಯೆಯು ಒಂದು ಕೋಟಿಯ ಒಳಗಿರುವದು. ಹಿಂದುಸ್ಥಾನದಲ್ಲಿ ಪ್ರಸಿದ್ಧವಾದ ಪಟ್ಟಣಗಳು ನೂರರ ಒಳಗಿರುವವು. ಆದರೆ ನೂರರಿಂದ ಸಾವಿರ ಜನರ ವಸ್ತಿಯುಳ್ಳ ಹಳ್ಳಿಗಳ ಲೆಕ್ಕವಿಲ್ಲ. ಅದ್ದರಿಂದ ನಾವು ಪಟ್ಟಣಗಳನ್ನು ಎಷ್ಟೇ ಸುಸಂಪನ್ನವಾಗಿ ಮಾಡಿದರೂ, ಅವುಗಳನ್ನು ಎಷ್ಟೇ ಸುಧಾರಿಸಲೆತ್ನಿಸಿದರೂ ಹಳ್ಳಿಗಳ ಮೇಲೆ ಅದರಿಂದ ಯಾವ ಪರಿಣಾಮವೂ ಆಗದು. ನಾವು ಹಳ್ಳಿಗಳ ಜೀವನದಲ್ಲಿ ಸುಧಾರಣೆಯನ್ನುಂಟು ಮಾಡಿದರೆ, ಅದನ್ನು ವಿನಾಶಗೊಳಿಸಿದರೆ ಉಳಿದದ್ದೆಲ್ಲವೂ ತನ್ನಿಂದ ತಾನೇ ಸರಿಯಾಗುವದು.

ಒಕ್ಕಲಿಗರ ಸ್ಥಿತಿಯೇ ನಿರಂತರವಾಗಿ "ನವಜೀವನ" ದ ದೃಷ್ಟಿಬಿಂದುವಾಗಿರುವದು. ಈ ಸ್ಥಿತಿಯನ್ನು ಹೇಗೆ ಸುಧಾರಿಸಲು ಶಕ್ಯವಾಗುವದು. ಈ ಕಾರ್ಯದಲ್ಲಿ ಸಣ್ಣವರೂ ದೊಡ್ಡವರೂ ಹೇಗೆ ಕೆಲಸ ಮಾಡಬಲ್ಲರು, ಮತ್ತು ನಮ್ಮಲ್ಲಿ ಈ ಕಾರ್ಯವನ್ನು ಕೈಕೊಳ್ಳಲು ಸ್ವಲ್ಪ ಜನರೇ ಮುಂದೆ ಬಂದರೂ ಅವರು ಕೇವಲ ಸತ್ಯವನ್ನೇ ಆಶ್ರಯಿಸಿ ತಮ್ಮ ಕರ್ತವ್ಯದಲ್ಲಿ ನಿರತರಾದರೆ ಅಲ್ಪಾವಧಿಯಲ್ಲಿ ನಾವೆಷ್ಟು ಪ್ರಗತಿಯನ್ನು ಹೊಂದಬಲ್ಲೆವು ಎಂಬೀ ಮಾತುಗಳನ್ನು ನಾವು ಇನ್ನು ಮುಂದೆ ಸಮಾಲೋಚಿಸುವಾ.

ಕನ್ನಡಿಗ.

೧೧ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರಾದ ಮಿ. ಬಿ. ರಾಮರಾಯರ ಭಾಷಣದ ಸಾರಾಂಶ.

ಕರ್ನಾಟಕ ರತ್ನ ಸಿಂಹಾಸನಾಧೀಶ್ವರರಾದ ಶ್ರೀಮತ್ಕೃಷ್ಣರಾಜೇಂದ್ರ ಒಡೆಯರವರ ಉದಾರಾಶ್ರಯದಿಂದಲೂ, ಪ್ರತಿಭಾಸಂಪನ್ನರೂ, ದೇಶಸೇವಾಗ್ರಣಿಗಳೂ ಆದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಪ್ರೋತ್ಸಾಹದಿಂದಲೂ, ಪರಿಷತ್ತಿನ ಪ್ರಥಮಸ್ಥಾನಾಚಾರ್ಯರಾದ ಶ್ರೀಮಾನ್ ಹೆಚ್. ವಿ. ನಂಜುಂಡಯ್ಯನವರ ಸಾಹಸದಿಂದಲೂ, ಎಲ್ಲ ಕನ್ನಡಿಗರ ಭಾಷಾಪ್ರೇಮದಿಂದಲೂ ಹತ್ತುವರ್ಷಗಳ ಹಿಂದೆ ಕರ್ನಾಟಕಸಾಹಿತ್ಯ ಪರಿಷತ್ತು ಸ್ಥಾಪಿತವಾಯಿತು. ಮೊದಲನೆಯ ಪರಿಷತ್ತಿಗೆ ಅಖಿಲ ಕರ್ನಾಟಕದ ಕನ್ನಡಿಗರೆಲ್ಲರೂ ಮಹಾರಾಜರ ಅತಿಥಿಗಳಾಗಿ ಬಂದು,ಮಹದುತ್ಸಾಹದಿಂದ ಕೆಲಸಕಾರ್ಯಗಳನ್ನು ನಡಿಸಿದರು. ಅಂದಿನಿಂದ ಇದುವರೆಗೂ ಪ್ರತಿವರ್ಷವೂ ಕರ್ನಾಟಕ ಸಾಹಿತ್ಯ ಸಮ್ಮೇಳನವು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ, ಪ್ರತಿಭಾಸಂಪನ್ನರ, ಭಾಷಾಪಿತೃತಿಗಳ ಅಧ್ಯಕ್ಷತೆಯಲ್ಲಿ ನೆರೆ, ಕನ್ನಡಿಗರಲ್ಲಿ ಮಾತೃ[illegible]ವನ್ನು ಹೆಚ್ಚಿಸುತ್ತಿದೆ. ಅಂದಿನಿಂದ

ಕನ್ನಡಿಗರಲ್ಲಿ ಸೋದರಭಾವವು ಹೆಚ್ಚುತ್ತಿದೆ.

ಪರಿಷತ್ತಿನ ಧ್ಯೇಯಗಳು.

ದೇಶಭಾಷೆಯನ್ನುದ್ಧಾರಮಾಡುವದೇ ಪರಿಷತ್ತಿನ ಧ್ಯೇಯ. ಉದಾಸೀನಭಾವದಿಂದಿರುವ ಕನ್ನಡಿಗರಲ್ಲಿ ಭಾಷಾಭಿಮಾನವನ್ನು ಹುಟ್ಟಿಸುವುದೇ ಪರಿಷತ್ತಿನ ಧ್ಯೇಯ. ಹಳತು, ಕೊಳೆತು; ನಾಶವಾಗುತ್ತಿರುವ ಗ್ರಂಥಗಳನ್ನು ಪ್ರಕಟಿಸಿ ಕನ್ನಡಿಗರ ಮುಂದಿಟ್ಟು ಅವರಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸುವುದೇ ಪರಿಷತ್ತಿನ ಧ್ಯೇಯ. ಇದಕ್ಕೆ ಅನೇಕ ಮಾರ್ಗಗಳುಂಟು. ಅವುಗಳಲ್ಲಿ, ಗ್ರಂಥಪ್ರಕಟನೆ, ಗ್ರಂಥಕರ್ತರಿಗೆ ಪ್ರೋತ್ಸಾಹ, ಭಾಷಾವಿಷಯಕವಾದ ಚರ್ಚೆ, ಪರಭಾಷೆಗಳಿಂದ ಭಾಷಾಂತರ ಮಾಡಿಸುವಿಕೆ, ಮಾಸಪತ್ರಿಕೆ, ಸಾಹಿತ್ಯದಲ್ಲಿ ಸಂಶೋಧನಾಕಾರ್ಯ ಮಾಡುವವರಿಗೆ ಪ್ರೋತ್ಸಾಹ, ಮುಂತಾದುವು ಮುಖ್ಯವಾದುವು. ಅಲ್ಲದೆ ಕನ್ನಡ ನಾಡಿನಲ್ಲೆಲ್ಲಿಯೂ ವಾಚನಾಲಯಗಳನ್ನೂ, ಪುಸ್ತಕ ಭಂಡಾರಗಳನ್ನೂ ಸ್ಥಾಪಿಸುವುದು ಕನ್ನಡ ನಾಡಿನಲ್ಲೆಲ್ಲ ವ್ಯಾಖ್ಯಾನಗಳನ್ನು ಕೊಡಿಸುವುದು, ಪರೀಕ್ಷೆಗಳನ್ನಿಟ್ಟು ಉತ್ತೀರ್ಣರಾದವರಿಗೆ ತಕ್ಕ ಬಿರುದು ಬಲ್ಲೆಗಳನ್ನು ಕೊಡಿಸುವುದು. ಹೀಗೆಯೇ ಅನೇಕ ಮಾರ್ಗಗಳುಂಟು. ಪರಿಷತ್ತಿನವರು ಹತ್ತುವರ್ಷದಿಂದಲೂ ಸಾಧ್ಯವಾದ ಮಟ್ಟಿಗೆ ಇವೆಲ್ಲವುಗಳಿಗೂ ಲಕ್ಷ್ಯಕೊಟ್ಟಿರುವರು. ಆದರೆ ಇದಕ್ಕಿಂತಲೂ ಹೆಚ್ಚು ಲಕ್ಷ್ಯವನ್ನು ಅವರು ಹಲವು ವಿಚಾರಗಳಿಗೆ ತೋರಿಸಬಹುದಿತ್ತೆಂದಮಾತ್ರಕ್ಕೆ ಅವರ ಮೇಲೊಂದು ಆರೋಪವನ್ನು ಹೊರಿಸದಂತಾಗಲಿಲ್ಲ, ಟೀಕೆ ಮಾಡುವುದು ಸುಲಭ. ಕಾರ್ಯಕ್ಷೇತ್ರವನ್ನ ಹೊಕ್ಕಾಗ ಕಷ್ಟ ಸುಖಗಳು ಗೊತ್ತಾಗುತ್ತವೆ. ಹತ್ತು ವರ್ಷಗಳಿಂದ ಪರಿಷತ್ತಿನಿಂದಾಗಿರುವ ಕೆಲಸವನ್ನು ನೋಡಿ ಪ್ರತಿಯೊಬ್ಬ ಕನ್ನಡಿಗನೂ ಹಿಗ್ಗಬೇಕಾದುದೇ. ಇಂದು ಎಲ್ಲ ಕನ್ನಡಿಗರಲ್ಲಿ ಸೋದರಭಾವವು ಹೆಚ್ಚಿದೆ. ಇಂದು ಧಾರವಾಡ ಕನ್ನಡ ಬೆಂಬ ಕುಹಕದ ಮಾತುಗಳಿಲ್ಲ. ಇಂದು ನಾವೆಲ್ಲರೂ ಅಖಿಲ ಕರ್ನಾಟಕ ದೃಷ್ಟಿಯಿಂದ ನಮ್ಮ ದೇಶದ ವಿಚಾರಗಳೆಲ್ಲವನ್ನೂ ನೋಡುತ್ತಿದ್ದೇವೆ. ಇಂದು ನಮಗೆ ಒಂದು ಪ್ರಾಂತ್ಯಬೇಕೆಂದು ವಾದಿಸಲು ಸಿದ್ಧರಾಗಿದ್ದೇವೆ. ಹತ್ತು ವರ್ಷಗಳ ಹಿಂದೆ ಈ ಸಮಿಕನಸಿಗೆ ಅವಕಾಶವಿತ್ತೇ ?

ನಾವು ಎಣಿಸಿದ್ದೆಲ್ಲವೂ ಭಾವಿಸಿದ್ದೆಲ್ಲವೂ, ಪರಿಷತ್ತಿನಿಂದಾಗದಿರಬಹುದು. ಇದಕ್ಕಾಗಿ ಪರಿಷತ್ತನ್ನು ನಿಂದಿಸಿ ಫಲವಿಲ್ಲ. ಧನಸಹಾಯವೂ ಜನಸಹಾಯವೂ ಇಲ್ಲದೆ ಈ ಕಲಸವು ಯಾರಿಂದಲೂ ಸಾಧ್ಯವಿಲ್ಲ. ಆದುದರಿಂದ ಪರಿಷತ್ತಿನ ಒಂದೆರಡು ಲೋಪಗಳನ್ನು ಮೊಡ್ಡವುಮಾಡಿ ನಿಂದಿಸದೆ, ಎಲ್ಲ ಕನ್ನಡಿಗರೂ ತಮ್ಮ ಸಹಾನುಭೂತಿಯನ್ನು ತೋರಿಸಿದರೆ, ಸಹಾಯವನ್ನು ಕೊಟ್ಟರೆ, ನಮ್ಮೆಲ್ಲರ ಆಶೆಯು ಫಲಿಸುತ್ತದೆ. ವ್ಯಕ್ತಿಗಳಿಗಿಂತಲೂ ವಿಷಯಕ್ಕೆ ಪ್ರಾಧಾನ್ಯ ಕೊಡಬೇಕೆಂದು ಎಲ್ಲರಿಗೂ ಬಿನ್ನಹ.

ಪರಿಷತ್ತಿನ ವಿಚಾರವಾಗಿ ಅನೇಕರಿಗೆ ತಪ್ಪು ತಿಳುವಳಿಕೆಯಿದೆ. ಇದನ್ನು ಹೋಗಲಾಡಿಸುವುದು ಪರಿಷತ್ತಿನವರ ಕರ್ತವ್ಯ. ಇದಕ್ಕಾಗಿ ಅವರು ಹತ್ತು ವರ್ಷಗಳಲ್ಲಿ ತಮ್ಮಿಂದಾದ ಕೆಲಸವನ್ನೂ, ಬಂದ ಕಷ್ಟ ಪರಂಪರೆಗಳನ್ನೂ ಎಲ್ಲವನ್ನು ಕುರಿತು ಒಂದು ವರದಿಯನ್ನ ಬರದು ಕನ್ನಡಿಗರ ಮುಂದಿಡಬೇಕು. ಆಗ ಪರಿಷತ್ತಿನ ವಿಚಾರದಲ್ಲಿ ಹಲವರಲ್ಲಿ ಬೇರೂರಿರುವ ಅನುಮಾನಗಳು ಮಾಯವಾಗುತ್ತವೆ.

ಭಾಷಾಭಿವೃದ್ಧಿ

ಭಾಷಾಸೇವೆಗಾಗಿತನೇಕರುಮುಂದಾಳುಗಳಾಗಿರುವರು.. ಅತ್ಯುತ್ತಮ ಗ್ರಂಥಗಳೂ, ಪ್ರತಿಭಾಶಾಲಿಗಳಾದ ಲೇಖಕರೂ ಇನ್ನೂ ಹೊರಬಿದ್ದಿಲ್ಲವಾದರೂ ಅನೇಕ ಲೇಖಕರು ಮುಂದೆ ಬಂದಿರುವರು. ಗದ್ಯ ಲೇಖನವು ಹೊಸ ಹೊಸ ಹಾದಿಗಳನ್ನು ಹಿಡಿದು ರೂಪುಗೊಳ್ಳುತ್ತಲಿದೆ. ಸಣ್ಣಕತೆಯೆಂಬುದು ಈ ಕಾಲದ ಸೃಷ್ಟಿಯೆಂದೇ ಹೇಳಬೇಕು.

ನಾಟಕರಚನೆಯಲ್ಲಿ ನಾವು ಬಹಳ ಹಿಂದೆ ಬಿದ್ದಿರುವೆವು ಗಣಿಸಬಹುದಾದ ನಾಟಕ ವೊಂದಾದರೂ ಇದು ವರೆಗೆ ಹೊರಬೀಳದಿರುವುದು ನಮ್ಮ ದುರದೃಷ್ಟವೇ ಸರಿ. ಹಲವು ಜೀವನ ಚರಿತ್ರೆಗಳು ಬರೆಯಲ್ಪಟ್ಟಿವೆ. ಚರಿತ್ರೆ, ಭೂಗೋಳ ವಿಜ್ಞಾನ ಮುಂತಾದವು ಅತಿವಿರಳ. ವಿಮರ್ಶಾಗ್ರಂಥಗಳು ಸ್ವತಂತ್ರ ಸಂಶೋಧನಾಗ್ರಂಥಗಳೂ ಇಲ್ಲವೆ ಇಲ್ಲ. ಕವಿತೆಯೆಂಬುದು ಅಂತರಿಕ್ಷ ಕುಸುಮವೇ ಸರಿ. ಹಳೆಗನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ. ಹೊಸಗನ್ನಡದಲ್ಲಿ, ಹೊಸಹಾದಿಯಲ್ಲಿ, ಪ್ರತಿಭಾಯುತವಾಗಿ ಬರೆಯುವವರು ಹುಟ್ಟಿಲ್ಲ. ಬರೆಯುವರೇನೊ ಬಹಳ ಮಂದಿಯಿರುವರು. ಹೊಸಹಾದಿಯನ್ನು ಹಾಕಲು ಹಲವರು ಮುಂದೆ ಬಂದಿರುವರು. ಆದರೆ ಅವರಿಗೆ ತಕ್ಕ ಸಾಧನಸಂಪತ್ತಿಯು, ಪ್ರತಿಭೆಯೂ, ಭಾವನಾಶಕ್ತಿಯೂ ಇಲ್ಲದಿರುವುದರಿಂದ ಅವರು ತಮ್ಮ ಬರಹಗಳಿಂದ ಕನ್ನಡಕ್ಕೊಂದು ಸೇವೆಯನ್ನು ಮಾಡುತ್ತಿರುವರೆಂದು ಹೇಳಲಾರದು. ಗದ್ಯನಾಟಕಗಳಲ್ಲಿ ಹಲವರು ಉಪಯೋಗಿಸುತ್ತಿರುವ ವ್ಯಾವಹಾರಿಕ ಭಾಷೆಯ ವಿಚಾರದಲ್ಲಿ ಇದೇ ಮಾತನ್ನೇ ಹೇಳಬೇಕಾಗುತ್ತದೆ. ವ್ಯಾವಹಾರಿಕ ಭಾಷೆಯ ಉಪಯೋಗದಿಂ ಭಾಷೆಯ ಏಕೀಕರಣ ಉದ್ಯಮಕ್ಕೆ ಪ್ರತಿಬಂಧವುಂಟಾಗುವದರಲ್ಲಿ ಸಂದೇಹವಿಲ್ಲ. ಆಂಧ್ರದೇಶದಲ್ಲಿ ಈ ಕಷ್ಟವು ಹೆಚ್ಚಾಗಿ ಕಂಡೂ ಕಂಡೂ ನಾವು ಆ ಗುಂಡಿಗೆ [illegible] ಬೀಳಬಾರದು. ನಮ್ಮ ಭಾಷಾವ್ಯಕ್ತಿತ್ವಕ್ಕೆ [illegible] ಯನ್ನೂ ತರದು. ಸುಪ್ರಚಾರಕ್ಕೆ ವಿಘ್ನ [illegible]

ಇನ್ನು ನಮ್ಮ ವೃತ್ತಪತ್ರಿಕೆಗಳ ಸ್ಥಿತಿ. ಸುತ್ತಮುತ್ತಲಿನ ನಮ್ಮ ಸಹೋದರ ರಾಷ್ಟ್ರಗಳನ್ನು ಕಂಡರೆ ಈ ವಿಚಾರದಲ್ಲಿ ನಾವು ಶೋಚನೀಯಾವಸ್ಥೆಯಲ್ಲಿರುವೆವೆಂದೇ ಹೇಳಬೇಕು. ಹೆಸರು ಹೇಳಲು ಅಖಿಲಕರ್ನಾಟಕಕ್ಕೊಂದು ಚಲೋದಾದ ದಿನ ಪತ್ರಿಕೆಯಿಲ್ಲ! ವಾರಪತ್ರಿಕೆಗಳೇನೋ ಹಲವಿವೆ. ಆದರೇನು? ಅವುಗಳದು ನಾವುಜೀವನ! ನಿರಂತರ ಬಡತನ! ಮಾಸಪತ್ರಿಕೆಗಳ ಅವಸ್ಥೆಯಂತೂ ಇನ್ನು ಹೇಳತೀರದು; ಪ್ರೋತ್ಸಾಹವಿಲ್ಲ. ಕನ್ನಡಿಗರಿಗೆ ಏನೂಬೇಕಿಲ್ಲ. ಆಂಧ್ರ, ಬಂಗಾಳ, ಮರಾಠ ದೇಶದ ಉದ್ಯಮಗಳನ್ನು ನೋಡಿದರೆ ನಾಚಿಕೆಯಾಗುತ್ತದೆ.

ರೆವರೆಂಡು ಕಿಟ್ಟೆಲರ ನಿಘಂಟುವಿನ ತರುವಾಯ ಬೇರೆ ಉದ್ಯಮವೇ ಇಲ್ಲ. ಕವಿಚರಿತ್ರೆಗಳನ್ನು ಬರೆದು ಶ್ರೀ ನರಸಿಂಹಾಚಾರ್ಯರು ಎಲ್ಲ ಕನ್ನಡಿಗರ ಗೌರವಕ್ಕೆ ಪಾತ್ರರಾಗಿರುವರು. ಡಾ ಫ್ಲೀಟರೊಡನೆಗಳು ಮ. ರಾಯಿಸಸಾಹೇಬರು ಪ್ರಾಚೀನ ಶಿಲಾಶಾಸನ ಪ್ರಾಚೀನ ಗ್ರಂಥಗಳ ಸಂಶೋಧನದ ವಿಷಯದಲ್ಲಿ ಮಾಡಿದ ಉದ್ಯೋಗವು ಕನ್ನಡಿಗರ ಕೃತಜ್ಞತೆಗೆ ಪಾತ್ರವಾಗಿದೆ. ಏನಾದರೇನು? ಎಲ್ಲರಂತೆ ನಾವು ತಲೆಯೆತ್ತಿ ನಿಲ್ಲಬೇಕಾದರೆ ನಾವಿನ್ನೂ ಬಹಳ ಮಟ್ಟಿಗೆ ಕೃಷಿಮಾಡಬೇಕು, ಕಷ್ಟಪಡಬೇಕು ಸೇವೆಗೆ ಸಿದ್ಧರಾಗಬೇಕು ಹೀಗಾದರೆ ನಾವು ಉಚ್ಚಸ್ಥಾನವನ್ನು ಬಹುಬೇಗ ಸಾಧಿಸುವೆವೆಂದು ನಂಬುಗೆಯುಂಟು.

ಹಲವು ಸಲಹೆಗಳು

೧ ಪುರಾತನಗ್ರಂಥಸಂಗ್ರಹ— ಪ್ರತಿಯೊಂದು ಭಾಗದ ಕನ್ನಡಿಗರು ಆಯಾಯ ಸರಕಾರಕ್ಕೇ ಒತ್ತಾಯಮಾಡಿ, ಪುರಾತನ ಗ್ರಂಥಗಳನ್ನು ಸಂಗ್ರಹಿಸುವಂತೆ ಮಾಡಬೇಕು ಈ ಕೆಲಸಮಾಡಲು ಮದರಾಸು ಸರಕಾರದವರನ್ನು ಕೇಳಿಕೊಳ್ಳಲು ಪ್ರಯತ್ನಗಳು ನಡೆಯುತ್ತಲಿವೆ. ಇತರರೂ ಹೀಗೆಮಾಡಬೇಕು. ಇಲ್ಲವಾದರೆ ಅಮೌಲ್ಯವಾದ ಗ್ರಂಥಗಳು ಹಾಳಾಗ ದಿರಲ್ಲಿ ಸಂಶಯವಿಲ್ಲ. ಕಾಲೇಜು ವಿದ್ಯಾರ್ಥಿಗಳೂ, ವಿರಾಮಕಾಲಗಳಲ್ಲಿ ಹಳ್ಳಿಗಳಿಗೆ ಹೋಗಿ ಕನ್ನಡವಾಙ್ಮಯ ವಿಷಯದಲ್ಲಿ ಜನರಲ್ಲಿ ಶ್ರದ್ಧೆಯನ್ನು ಹುಟ್ಟಿಸಬಹುದಾದ ಗ್ರಂಥಸಂಗ್ರಹವನ್ನೂ ಮಾಡಬಹುದು

೨ ಗ್ರಂಥಪ್ರಕಟನೆ— ಇದು ದುಡ್ಡಿನವಿಚಾರ ಎಲ್ಲರಿಂದಲೂ ಸಾಧ್ಯವಿಲ್ಲ. ಮೈಸೂರು ಆರ್ಕಿಯೋಲಾಜಿಕಲ್ ಡಿಪಾರ್ಟ್‌ಮೆಂಟಿನವರೂ ಓರಿಯಂಟಲ್ ಲೈಬ್ರೆರಿಯವರೂ; ಹಲವು ಗ್ರಂಥಗಳನ್ನು ಪ್ರಕಟಿಸಿರುವರು. ಮೈಸೂರು ವಿಶ್ವವಿದ್ಯಾನಿಲಯದವರೂ ಕೊಂಚ ಲಕ್ಷ್ಯಕೊಟ್ಟಿರುವರು. ಆದರೆ ಅವರಿಂದಲೇ ಈ ಕಲಸವಾಗಲಾರದು. ಸಾಹಿತ್ಯಪರಿಷತ್ತು ಕರ್ನಾಟಕ ವಿದ್ಯಾವರ್ಧಕ ಸಂಘಗಳು ಈ ಕೆಲಸವನ್ನು ಕೈಗೆ ತೆಗೆದುಕೊಳ್ಳಬೇಕು. ಮಂಗಳೂರು ಜಿಲ್ಲೆಯಲ್ಲಿ ಹಲವು ಯುವಕರು ಪ್ರಕಟನಾಕಾರ್ಯಕ್ಕೆ ಕೈಹಾಕಿರುವರು. ಈ ಸಂದರ್ಭದಲ್ಲಿ ವಚನಶಾಸ್ತ್ರವನ್ನು ಪ್ರಕಟಿಸಿದ ರಾವ್‌ಸಾಹೇಬ್ ಹಳಕಟ್ಟಿಯವರನ್ನೂ ಸರ್ವಜ್ಞಮೂರ್ತಿಯ ವಚನಗಳನ್ನು ಪ್ರಕಟಿಸಿದ ಶ್ರೀ ಉತ್ತಂಗಿಯವರನ್ನೂ ನಾವೆಷ್ಟು ಶ್ಲಾಘಿಸಿದರೂ ಅಲ್ಪವೇ ಸರಿ. ಜೈನರೂ, ಲಿಂಗಾಯಿತರೂ, ಬ್ರಾಹ್ಮಣರೂ ಬೇರೆ ಬೇರೆ ಗುಂಪುಕೂಡಿ ತಮ್ಮ ತಮ್ಮ ಪಂಗಡದ ಗ್ರಂಥಗಳು ಪ್ರಕಟಿಸಲು ಪ್ರಯತ್ನಪಡಬೇಕು.

ಕನ್ನಡವೂ ಶಿಕ್ಷಣಪದ್ಧತಿಯೂ.

ಈ ಬಗ್ಗೆ ಪರಿಶೀಲಿಸಿದರೆ ಮದರಾಸು ಅಧಿಪತ್ಯದಲ್ಲಿ ಪ್ರಾಥಮಿಕ ಶಿಕ್ಷಣವು ಸಾಮಾನ್ಯವಾಗಿ ದೇಶಭಾಷೆಗಳಲ್ಲೇ ಪಾಠ ಹೇಳಿಕೊಡಲ್ಕೆ ಅಧ್ಯಾಪಕರಿಗೂ ದೇಶ ಭಾಷೆಗಳಲ್ಲೇ ಪ್ರಶ್ನೆ ಪತ್ರಿಕೆಗಳಿಗೆ ಉತ್ತರ ಕೊಡಲು ವಿದ್ಯಾರ್ಥಿಗಳಿಗೂ ಅವಕಾಶವುಂಟು. ಈ ಅವಕಾಶವನ್ನು ಅಧ್ಯಾಪಕರೂ, ವಿದ್ಯಾರ್ಥಿಗಳೂ ಉಪಯೋಗಪಡಿಸಿಕೊಂಡಂತೆ ಕಂಡುಬರುವದಿಲ್ಲ. ವಿಶ್ವವಿದ್ಯಾನಿಲಯದಲ್ಲಿ ದೇಶಭಾಷೆಗಳ ವೃದ್ಧಿವಿಕಾಸಕ್ಕೆ ಹಿಂದಿದ್ದ ಸೌಕರ್ಯಗಳು ಇಂದಿಲ್ಲ. ಮುಂದೆ ಆಗುವುದಕ್ಕೆ ಸಾಹಸಪಡುತ್ತಿರುವರು.

ಮೈಸೂರು ಸಂಸ್ಥಾನದಲ್ಲಿ ಕನ್ನಡ ಭಾಷೆಗೆ ಹೆಚ್ಚು ಲಕ್ಷ್ಯವುಂಟು. ಅಲ್ಲಿನ ವಿಶ್ವವಿದ್ಯಾಲಯದ ಪಾಠ ಪ್ರವಚನದಲ್ಲಿ ಕನ್ನಡಕ್ಕೆ ಶ್ರೇಷ್ಠಸ್ಥಾನವನ್ನೇ ಕೊಟ್ಟಿರುತ್ತಾರೆ. ಆ ವಿಶ್ವವಿದ್ಯಾಲಯವನ್ನೇ ಕರ್ನಾಟಕ ಭಾಷೆಯ ಮೂಲಕ ಶಿಕ್ಷಣಕೊಡುವದನ್ನಾಗಿ ಮಾಡುವ ಯೋಜನೆಯು ಸದ್ಯಕ್ಕೆ ಸಾಧ್ಯವಿಲ್ಲ. ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಯನ್ನು ಆ ಸರಕಾರದವರು ತೆಗೆದು ಹಾಕಿದುದು ಕನ್ನಡ ಭಾಷಾಭಿವೃದ್ಧಿಯ ದೃಷ್ಟಿಯಿಂದ ಹಾನಿಕರವಾದುದೆಂದು ಹೇಳಬೇಕಾಗುತ್ತದೆ. ಮುಂಬಯಿ ವಿಶ್ವವಿದ್ಯಾಲಯದವರು ದೇಶಭಾಷೆಗಳ ಕಡೆಗೆ ಹೆಚ್ಚಾಗಿ ಗಮನ ಕೊಡಲು ಪ್ರಯತ್ನಪಡುತ್ತಿರುವರೆಂದು ಸುದ್ದಿ. ಈ ಸಂದರ್ಭದಲ್ಲಿ ಒಂದು ಸಲಹೆ. ಕನ್ನಡ ನಾಡಿನಲ್ಲೆಲ್ಲ ಅಸ್ಥಿರವಿಲ್ಲದೆ, ಐಕ್ಯಮತವಾಗಿ ಭಾಷಾಭಿವೃದ್ಧಿಯಾಗಬೇಕಾದರೆ ಅಲ್ಲಿನ ಶಿಕ್ಷಣಕ್ರಮವು ಏಕರೂಪವಾಗಬೇಕು. ಆಶಯವನ್ನು ಸಾಧಿಸಬೇಕಾದರೆ ಮೈಸೂರು, ಮುಂಬಯಿ, ಮದರಾಸು ಹೈದರಾಬಾದ ವಿಶ್ವವಿದ್ಯಾನಿಲಯಗಳ ಪ್ರತಿನಿಧಿಗಳಿದ್ದೊಂದು ಉಪಸಭೆಯನ್ನು ಈ ಸಮ್ಮೇಳನ ಅಥವಾ ಪರಿಷತ್ತಿನವರು ರಚಿಸಬೇಕು. ಆ ಉಪ ಸಭೆಯ ಮೂಲಕ ಎಲ್ಲ ಕನ್ನಡ ನಾಡಿನಲ್ಲೂ ಏಕರೂಪವಾದ ಕನ್ನಡ ಭಾಷಾ ಶಿಕ್ಷಣವನ್ನು ಕೊಡಬಹುದು.

ಹಿಂದೂಸ್ಥಾನದಲ್ಲಿ ವಿಶ್ವವಿದ್ಯಾಲಯಗಳು ವರ್ಷೇ ವರ್ಷೇ ಹೆಚ್ಚುತ್ತಿವೆ ಈಗಾಗಲೇ ೧೬ಇವೆ. ದಕ್ಷಿಣದೇಶದಲ್ಲಿ ಆಂಧ್ರರೂ ಕೇರಳರೂ ಪ್ರತ್ಯೇಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಪ್ರಯತ್ನಪಡುತ್ತಿರುವರು. ಸರಕಾರದವರೂ ಅತ್ತ ಕಡೆಗೆ ಲಕ್ಷಕೊಟ್ಟಿರುವರು. ಆದರೆ ನಮ್ಮ ದೇಶದ ಗತಿಯೇನು? ನಮ್ಮ ಪಂಡಿತರಿಗೆ ಈಗ ತಕ್ಕ ಗೌರವವು ಸಲ್ಲುತ್ತಿಲ್ಲ. ಇಂಗ್ಲೀಷು ಕಲಿತ ಮಾತ್ರಕ್ಕೆ ವಿದ್ವಾಂಸರೆಂದೆಣಿಸಬಾರದು. ಸಂಸ್ಕೃತ ಅಥವಾ ಕನ್ನಡದಲ್ಲಿ ಪಾಂಡಿತ್ಯ ಸಂಪಾದಿಸಿದ ಮಾತ್ರಕ್ಕೆ ಅವರನ್ನು ನಿಕೃಷ್ಟವಾಗೆಣಿಸಬಾರದು. ಈಗೆ ಸರಕಾರದಲ್ಲೂ ವಿಶ್ವವಿದ್ಯಾಲಯಗಳಲ್ಲೂ ಇದೇ ಭಾವವೇ ಅಧಿಕಾರಿಗಳಲ್ಲಿ ಬೇರೂರಿದೆ. ಈ ಕೊರತೆಯನ್ನು ನಾವು ಹೋಗಲಾಡಿಸಬೇಕು.

ಸಂಸ್ಕೃತಭಾಷಾಭ್ಯಾಸವನ್ನು ಹೆಚ್ಚಿಸಬೇಕು. ಸಂಸ್ಕೃತಕ್ಕೆ ಮೃತ್ಯಭಾಷೆಯೆಂದು ಹೆಸರಿಟ್ಟು ಅದನ್ನು ಹಳಿಳುವದು ತರವಲ್ಲ. ಸಂಸ್ಕೃತವು ಮೃತ್ಯಭಾಷೆಯಲ್ಲ! ಸಂಸ್ಕೃತವು ಆರ್ಯಸಂಸ್ಕೃತಿಯ ಭಾಷೆ! ಭರತಖಂಡದ ಮಾತೃ ಭಾಷೆ ನಮ್ಮ ಸಂಕುಚಿತದೃಷ್ಟಿಯನ್ನು ಬಿಟ್ಟು ಸಂಸ್ಕೃತಾಭ್ಯಾಸಕ್ಕೆ ಮೊದಲಿಡಬೇಕು.

ವಿಶ್ವವಿದ್ಯಾನಿಲಯಗಳು ಗ್ರಂಥರಚನೆಗೆ ಪ್ರೋತ್ಸಾಹಕೊಡಬೇಕು. ಮೈಸೂರು ವಿದ್ಯಾನಿಲಯದವರು ಹಾಗೆ ಮಾಡುತ್ತಿದ್ದರು. ದ್ರವ್ಯಾಭಾವದಿಂದೀಗ ನಿಲ್ಲಿಸಿರುವರು. ಮೈಸೂರು ಶಿಕ್ಷಣಖಾತೆಯವರು ಈಗ ಪ್ರೋತ್ಸಾಹ ಕೊಡುತ್ತಿರುವರು. ಧಾರವಾಡದ ವಿದ್ಯಾವರ್ಧಕ ಸಂಘ, ಬೆಂಗಳೂರಿನ ಅಮೇಚೂರು ನಾಟಕ ಮಂಡಲಿ ಅನಂತಪುರದ ಸರಸ್ವತೀ ಕೇತನ ಮುಂತಾದ ಸಾರ್ವಜನಿಕಸಂಸ್ಥೆಗಳೂ ತಕ್ಕಷ್ಟು ಗ್ರಂಥರಚನೆಗೆ ಪ್ರೋತ್ಸಾಹ ಕೊಡತಲಿವೆ. ಮೈಸೂರು ಶ್ರೀನುನ್ಮಹಾರಾಜರವರ ಆಸ್ಥಾನದಲ್ಲಿ ಅನೇಕ ಕವಿಗಳಿರುವರು. ವಿದ್ಯಾಪಕ್ಷಪಾತಿಗಳಾದೀಮಹಾರಾಜರು ಮಂಡಲಿಯನ್ನು ನೇಮಿಸಿ, ಸಂಸ್ಕೃತ, ಕನ್ನಡಗಳಲ್ಲಿ ಆಶುಕವಿತ್ವವನ್ನು ಹೇಳಿಸಿ, ಈ ಸ್ಪರ್ಧೆಯಲ್ಲಿ ಜಯಶಾಲಿಗಳಾದವರಿಗೆ ಪಿಲ್ಲತ್ತುಗಳನ್ನೂ ಬಿರುದುಗಳನ್ನೂ ಕೊಟ್ಟು ಬಹುಮಾನಿಸುತ್ತಿರುವರು, ಚಿಕ್ಕ ದೇವರಾಜ ಒಡೆಯರು; ಮುಮ್ಮಡಿ ಕೃಷ್ಣರಾಜ ಒಡೆಯರಂತೆಯೇ ಈ ನಾಲ್ಮಡಿ ಶ್ರೀಮತ್ಕೃಷ್ಣಭೂಪತಿಗಳೂ ಕರ್ನಾಟಕ ಭೋಜನಂತೆಯೇ ವಿರಾಜಿಸುತ್ತಿರುವರು. ಕನ್ನಡಿಗರೆಲ್ಲರೂ ಅವರಿಗೆಷ್ಟು ಕೃತಜ್ಞರಾಗಿದ್ದರೂ ಸಾಲದು.

ಸ್ಥೂಲವಾಗಿ ಕನ್ನಡನಾಡಿನ ಪರಿಸ್ಥಿತಿಯನ್ನೂ ಕನ್ನಡ ವಾಙ್ಮಯದ ಸ್ಥಿತಿಯನ್ನೂ ವಾಙ್ಮಯಸಭಾಪತಿತ್ವವನ್ನೂ, ಸೂಚಿಸಿದ್ದಾಯಿತು. ಕನ್ನಡಿಗರು ದೇಶಭಾಷೆಯಲ್ಲಿ, ಮಾತೃಭಾಷೆಯಲ್ಲಿ ನಿಷ್ಕಲಂಕವಾದ ಅಭಿಮಾನವುಳ್ಳವರೇ ಆದರೆ ಅತ್ಯಲ್ಪಕಾಲದಲ್ಲೇ ಕರ್ನಾಟಕರಾಷ್ಟ್ರವನ್ನು ಬೆಳಗಿಸಬಹುದು. ಕರ್ನಾಟಕಕ್ಕೊಂದು ಕರ್ತವ್ಯವುಂಟೆಂದು ತಿಳಿದು, ಒಂದು ಸಂದೇಶವುಂಟೆಂದು ಭಾವಿಸಿ ಎಲ್ಲರೂ ಒಂದು ಮನಸ್ಸಿನಿಂದ ಕೆಲಸಮಾಡಿದರೆ ಕರ್ನಾಟಕವು ಇತರ ಪ್ರಾಂತಗಳಿಗೆ ಸರಿಸಮಾನವಾಗಿ ನಿಲ್ಲಲಿಕ್ಕೆ ಅಡ್ಡಿಯೇ ಇಲ್ಲ

ಕನ್ನಡಿಗರಿಗೆ ಈ ಕರ್ತವ್ಯನಿರ್ವಹಣೆಯಲ್ಲಿ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀಯುತ ಕರ್ಪೂರ ಶ್ರೀನಿವಾಸರಾಯರೇ ದಾರಿ ತೋರಿಸಲು ಸಿದ್ಧರಾಗಿರುವರು. ಕನ್ನಡಿಗರಿಗೆ ಕರ್ನಾಟಕ ಮಾತೆಯಲ್ಲಿ ಅಚಂಚಲವಾದ ಆ ನಮ್ರ ಭಾವವು ಹುಟ್ಟಿತೆಂದರೆ ಮುಂದಿನ ಮಾರ್ಗವು ಸುಗಮವಾಗುವದು.

(ಕರ್ನಾಟಕವೃತ್ತ).

ಸೋಟೀಸು!

ನಮ್ಮ ಒಬ್ಬ ಕಂಪೋಜಿಟರ ಮನೆಯಲ್ಲಿ ಕಾಯಿಲೆಯಿದ್ದುದರಿಂದ ಆತನು ಕೆಲಸಕ್ಕೆ ಹಾಜರಾಗದ್ದರಿಂದ ಪತ್ರಿಕೆಯನ್ನು ಆರು ಪುಟವಾಗಿ ಪ್ರಕಟಿಸಿದ್ದೇವೆ. ವಾಚಕರು ಮನ್ನಿಸಬೇಕಾಗಿ ಕೋರುತ್ತೇವೆ.

ಮೇನೇಜರ್,
"ಕೊಡಗು"

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ ಕಾನ್ವೆಂಟ್ ಸ್ಕೂಲಿನಲ್ಲಿ ಇನಾಮುಗಳ ಹಂಚುವಿಕೆಯು ತಾರೀಖು ೨೦ರಲ್ಲು ಕೊಡಗು ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯಿತು. ವಿದ್ಯಾರ್ಥಿ ಬಾಲಿಕೀಯರು ಚಿಕ್ಕದೊಂದು ಇಂಗ್ಲಿಷ್ ನಾಟಕವನ್ನು ಅಭಿನಯಿಸಿದರು. ಇತರ ಆಟಗಳೂ, ಹಾಡುಗಾರಿಕೆಯೂ ನಡೆದುವು. ಶಾಲಾ ರಿಪೋರ್ಟಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದೆ ಎಂತಲೂ ಮೈಸ್ಕೂಲ್‌ಕ್ಲಾಸುಗಳಲ್ಲೀ ಈಗ ಇಪ್ಪತ್ತು ಹುಡುಗಿಯರಿದ್ದಾರೆಂತಲೂ, ಈ ವರ್ಷ ಮೆಟ್ರಿಕ್ಯುಲೇಶನ್ ಸ್ಕೂಲ್ ಫೈನಲ್ ಪರೀಕ್ಷೆಗೆ ವಿದ್ಯಾರ್ಥಿಗಳು ಈ ಶಾಲೆಯಿಂದ ಹೋಗಿದ್ದಾರೆಂತಲೂ, ಇನ್ಸ್‌ಪೆಕ್ಟರು ಶಾಲೆಯ ಸ್ಥಿತಿಯನ್ನು ನೋಡಿ ಒಳ್ಳೆ ಅಭಿಪ್ರಾಯ ಬರೆದಿದ್ದಾರೆಂತಲೂ, ಶಾಲೆಗೆ ಕಟ್ಟಡ ಸಾಲದೆಂತಲೂ, ಬರೆದಿತ್ತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದ್ದೇನೆಂದರೆ ತಾನು ಹಿಂದಿನ ದಿವಸ ಯಶವನಾಡಿನ ಒಂದು ಹಳ್ಳಿ ಶಾಲೆಯಲ್ಲಿ ಇದ್ದೆನೆಂತಲೂ, ತನ್ನನ್ನು ಅಧ್ಯಕ್ಷನಾಗಿರಬೇಕೆಂತ ಶಾ

ಲಾ ಅಧಿಕಾರಿಗಳು ಕೇಳಿಕೊಂಡದ್ದರಿಂದಲೂ, ತನ್ನ ಜೊತೆಯಲ್ಲೇ ಇದ್ದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ರಾಯಬಹದ್ದೂರ್ ಮಿ. ಕೇಟೋಳಿರ ಚಂಗಪ್ಪನವರ ಮಗಳು ಈ ದಿನದ ಆಟಪಾಟಗಳಲ್ಲಿ ಬಾಗಿಯಾಗಿದ್ದಾಳೆಂತ ತಿಳಿದು ಬಂದದ್ದರಿಂದ ಅವರನ್ನು ತಡಿಯುವುದು ನ್ಯಾಯವಲ್ಲವೆಂತಲೂ, ಈ ಸಂಸ್ಥೆಯಲ್ಲಿ ಸರಕಾರಕ್ಕೆ ಇರುವ ಸಹಾನುಭೂತಿಯನ್ನು ತೋರಿಸಲಿಕ್ಕಾಗಿಯೂ ನಾನು ಬಂದದ್ದಾಗಿದೆ. ಇಲ್ಲಿನ ಬೋಧನಾಕ್ರಮವು ಬಹಳ ಚೆನ್ನಾಗಿದೆ ಇಂಗ್ಲಿಷ್ ಭಾಷೆಯಲ್ಲಿ ವಿದ್ಯಾರ್ಥಿಗಳಿಗೆ ಇರುವ ತಿಳುವಳಿಕೆಯು ಆಯಾಯ ದರ್ಜೆಯ ಇಂಗ್ಲಿಷ್ ಬಾಲಕೀಯರ ತಿಳುವಳಿಕೆಯಷ್ಟೇ ಇದೆ ಈ ಶಾಲೆಯು ವಿಷಯದಲ್ಲಿ ಸ್ವಲ್ಪ ಅತೃಪ್ತಿಯು ಒಸರಲ್ಲಿ ತೋರಿಬಂದರೂ ವಿದ್ಯಾರ್ಥಿಗಳ ತಂದೆತಾಯಿಗಳು ಸಂಪೂರ್ಣ ಸಹಾನುಭೂತಿ ತೋರಿಸುತ್ತಿರುವುದರಿಂದ ಶಾಲೆಯು ಕಲಸವು ಮುಂದುವರಿಯುವುದರಲ್ಲಿಯೇನೂ ಸಂಶಯವಿಲ್ಲ ಕಟ್ಟಡಕ್ಕೆ ಹಣಬೇಕಾದರೂ ಸಹ ಶಾಲಾರಿಪೋರ್ಟಿನಲ್ಲಿ ಬರೆದಂತೆ ವಿದ್ಯಾರ್ಥಿಗಳ ತಂದೆತಾಯಿಗಳಿಂದಲೇ ಒದಗ ಬೇಕಾಗಿದೆ. ಸರಕಾರದ ಸಹಾನುಭೂತಿ ಇದ್ದೇ ಇದೆ ಎಂತ ಭಾಷಣದಲ್ಲಿ ಹೇಳಿದರು. ವಿದ್ಯಾರ್ಥಿಗಳಿಗೆ ಇನಾಮು ಕೊಡಲಿಕ್ಕೆ ಮಿ ರಾಯಬಹದ್ದೂರು ಕೋದಂಡೇರ ಕುಟ್ಟಯ್ಯನವರು, ಮಿ ಸಬ್‌ಜಡ್ಜಿಯವರು ಅಪ್ಪಾಚಂಡ ಕಾರ್‍ಯಪ್ಪ ನವರ್, ಮುನ್ಸೀಫ್ ಕೂತವಂಡ ಮುತ್ತಣ್ಣನವರೂ ಸಹ ಧನ ಸಹಾಯಮಾಡಿದ್ದಾರೆಂತ ತಿಳಿಯಿತು ಸಬ್‌ಜಡ್ಜಿ ಕಾರ್‍ಯಪ್ಪನವರು ಆರೋಗ್ಯ ಸ್ಥಿತಿಯಲ್ಲಿ ಮೊದಲನೇ ಬರುವ ವಿದ್ಯಾರ್ಥಿಯರಿಗೆ ಇನಾಮು ಕೊಡಲಿಕ್ಕಾಗಿ ಧನಸಹಾಯ ಮಾಡಿದ್ದಾಗಿ ತಿಳಿಯಿತು.

ಕೊಡಗು ವೇದಾಂತಸಂಘದವರು ಶ್ರೀ ರಾಮಕೃಷ್ಣಪರಮಹಂಸರ ಜನ್ಮೋತ್ಸವವನ್ನು ಇದೇ ತಾರೀಖು 31ನೇ ಆದಿತ್ಯವಾರ ದಿನ ಮದ್ರಾಸು ಶ್ರೀ ರಾಮಕೃಷ್ಣಮಠದ ಸ್ವಾಮಿಗಳಾದ ಶರ್ವಾನಂದಜಿಯವರ ಸನ್ನಿಧಿಯಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ನಡೆಸಲು ಏರ್ಪಡಿಸಿರುವರು. ಸ್ವಾಮಿ ಶರ್ವಾನಂದಜಿಯವರು ಜೂನ್ ತಾರೀಖು 1ರಲ್ಲು ಹಿಂದೂಮತದ ಸಾರಾಂಶವನ್ನೂ, 2ರಲ್ಲು ವೇದಾಂತ ಮತ್ತು ಈಗಿನ ಜೀವನದ ವಿಷಯವನ್ನೂ, 3 ಮತ್ತು 5ರಲ್ಲು ವೇದಾಂತದ ವಿಷಯ ಸಂಭಾಷಣೆಯನ್ನೂ, 4ರಲ್ಲು ಭಕ್ತಿಮಾರ್ಗದ ವಿಷಯವನ್ನೂ, ಮತ್ತು 6ರಲ್ಲು ಮತದ ಏಕತ್ವವನ್ನೂ ಭೋಧಿಸುವರಾಗಿ ತಿಳಿಯುತ್ತೇವೆ

ಕುಕ್ಲೂರು ಗ್ರಾಮದ ಶ್ರೀಮೂಲ ಭದ್ರಕಾಳಿ ದೇವಿಯ ವಾರ್ಷಿಕೋತ್ಸವವು ಇದೇ ಮೇ ತಾರೀಖು 23 24 ಮತ್ತು 25 (ಶನಿವಾರದಿಂದ ಸೋಮವಾರದವರೆಗೆ) ಈ ಮೂರು ದಿನವೂ ನಡಿಯುತ್ತೆ

ಮಡಿಕೇರಿಯಿಂದ ಫ್ರೇಜರ್‌ಪೇಟೆ ಮೇಲೆ ಮೈಸೂರಿಗೆ ಒಂದು ಹೊಸ ಮೋಟಾರ್ ಸರ್ವಿಸ್ ಶುರುವಾಗಿ ಇದೆ ಬೆಳಿಗ್ಯೆ 7ಘಂಟೆಗೆ ಮಡಿಕೇರಿಯಿಂದ ಹೊರಡುತ್ತದೆ. ಸಾಯಂಕಾಲ 6ಘಂಟೆಗೆ ಮಡಿಕೇರಿಗೆ ಬರುತ್ತದೆ. ಮಡಿಕೇರಿಯಿಂದ ಮೈಸೂರಿಗೆ ನಾಲ್ಕು ರೂಪಾಯಿ ಚಾರ್ಜು ಎಂತ ತಿಳಿದುಬಂದಿದೆ

ಕುಷ್ಟರೋಗನಿವಾರಣೆಗೆ ಸಹಾಯದ ಫಂಡಿಗೆ ಹಣ ವಸೂಲ್ ಮಾಡುವ ಕಮಿಟಿಗೆ ಈ ಕೆಳಗಿನ ಮಹನೀಯರುಗಳು ಮೆಂಬರುಗಳಾಗಿದ್ದಾರೆ ಮಡಿಕೇರಿ- ರಾಯಬಹದ್ದೂರ್ ಕೋದಂಡ ಅಪ್ಪಯ್ಯನವರು, ತಿಪಾಟಾರದ ಒಸಪ್ಪನವರು, ಕೋದಂಡ ತಿಮ್ಮಯ್ಯನವರು, ಕೊಡಂದೇರ ತಿಮ್ಮಯ್ಯನವರು ಸೋಮವಾರಪೇಟೆ- ಶಾಂತವಲ್ಲಪ್ಪನವರು, ಸಿದ್ದಪ್ಪಶೆಟ್ಟರು, ಕೊಡ್ಲಿಪೇಟೆ- ಅರಕರ ಒಸಪ್ಪಶೆಟ್ಟರು, ಉದ್ದೂರು ವೀರಪ್ಪನವರು, ಮೂರ್ನಾಡು- ಪಾಂಡಂಡ ಮುತ್ತಣ್ಣನವರು, ವೀರರಾಜಪೇಟೆ- ಯಸ್ ಯಮ್ ಫಿಂಟೋ ಯಂ. ಎಲ್. ಸಿ, ಮಹಮ್ಮದ್ ಹುಸೇನ್‌ಸಾಹೇಬ್, ಅಪ್ಪಾಚಂಡ ಚಂಗಪ್ಪನವರು ಯಂ. ಯಲ್, ಸಿ, ಕುಪ್ಪಂಡ ಮುತ್ತಯ್ಯನವರು ಪೊನ್ನಂಪೇಟೆ- ಪಿ ಟಿ ಕುಶಾಲಪ್ಪನವರು ಯಂ ಯಲ್, ಸಿ, ಪಿ ಗಣಪಮ್ಮಯ್ಯನವರು ಯಂ ಯಲ್. ಸಿ, ಚೆಪ್ಪುಡೀರ ಚೆಟ್ಟಪ್ಪನವರು, ಭಾಗಮಂಡಲ- ಬಿ ಶ್ರೀಪತಿರಾಯರು ಯಂ ಯಲ್, ಸಿ, ಯುರೋಪಿಯನ್ನರು- ಎ ಯಮ್ ವೆಸ್ಟ್‌ಮಕಾಟ್, ಮತ್ತು ಡಬ್ಲು ಎ ಯಫ್. ಬ್ರಾಕ್ಮನ್. ಮ ಎ. ಬಿ. ಕಾರ್ಯಪ್ಪನವರು ಸೆಕ್ರೆಟೇರಿಯಾಗಿಯೂ ಇರಲು ಒಪ್ಪಿದ್ದಾರೆ

ಮಡಿಕೇರಿನಾಡು ಹೆರವನಾಡು ಗ್ರಾಮದಲ್ಲಿ ಒಂದು ಬ್ಯೆನೆಮರದ ಅಡಿಯಲ್ಲಿ ಕೊಡಿಗ ಚಂಗಪ್ಪನೆಂಬುವನು ಸತ್ತು ಬಿದ್ದಿದ್ದನು ಇಲ್ಲವನು ಸೇಂದಿ ತೆಗೆಯಲು ಬೆಳಿಗ್ಯೆ ಬರುವಾಗ ಕಂಡು ಪಟೇಲರಿಗೆ ತಿಳಿಸಿದನು. ಸೇಂದಿ ಕದಿಯಲಿಕ್ಕಾಗಿ ಬ್ಯೆನೆಮರ ಹತ್ತಿದಾಗ ಬಿದ್ದು ಸತ್ತಿದ್ದಾಗಿರಬೇಕೆಂತ ಊಹಿಸಲಾಗಿದೆಯೆಂತ ತಿಳಿದು ಬಂದಿದೆ

ಮಿ ಬಿಟ್ಟಿಯಂಡ ತಿಮ್ಮಯ್ಯನವರು ಬಿ ಎ. ಪರೀಕ್ಷೆಯಲ್ಲಿಯೂ ಮಿ ಕೇತಿರ ಮೇದಯ್ಯನವರು ಇಂಟರ್ ಮಿಡಿಯೇಟ್ ಪರೀಕ್ಷೆಯಲ್ಲಿ 1ನೇ ಕ್ಲಾಸಿನಲ್ಲಿಯೂ, ಮಿ. ನಿಡ್ಯಮಲೆ ಸೋಮಪ್ಪನವರೂ ಮತ್ತು ಕೆದಂಬಾಡಿ ಸೋಮಯ್ಯನವರೂ ಸಹ ಇಂಟರ್ ಮಿಡಿಯೇಟ್ ಪರೀಕ್ಷೆಯಲ್ಲಿ ಪಾಸಾಗಿದ್ದಾರೆ.

ನೋಟೀಸು.

ಕೊಡಗು ಜಮೀನ್ದಾರರಸಂಘದ ಲೆಕ್ಕವನ್ನು ಆಡಿಟ್ ಮಾಡಿಸಬೇಕಾಗಿರುವುದರಿಂದ ಕಳೆದ ವರ್ಷ ಮಿ ಬಿದ್ದಂಡ ಕಾರ್‍ಯಪ್ಪನವರು ಏರ್ಪಡಿಸಿದ ನಾಡು ಕಮಿಟಿಗಳಿಗೆ ಹಣ ವಸೂಲಾತಿಗೆ ಕೊಟ್ಟಂತ ರಶೀತಿ ಬುಕ್ಕುಗಳು ಕಳೆದ ವರ್ಷದ ವಾರ್ಷಿಕ ಕಾನ್‌ಫರನ್ಸ್ ಕಳೆದ ಕೂಡಲೇ ಪುನಹ ಹಣ ವಸೂಲಾತಿಗೆ ಆಯಾಯ ಕಮಿಟಿಗಳಿಗೆ ಕೊಟ್ಟಿರುವುದರಿಂದ ಎಲ್ಲಾ ಕಮಿಟಿಯವರೂ ತಮ್ಮ ಹತ್ತಿರವಿರುವ ರಶೀತಿ ಬುಕ್ಕುಗಳನ್ನು ಮತ್ತು ಈ ವರ್ಷ ಉದಿಯಂಡ ಮಿ. ಮಾಚೈಯ್ಯನವರು, ಮಿ ಚಂಗಂಡ ಕುಟ್ಟಪ್ಪನವರು' ಮಿ ಕೋಟೆರ ಚಿಣ್ಣಪ್ಪನವರು ಮತ್ತು ಇನ್ನೂ ಕೆಲವು ಏಜಂಟರು ಹಣ ವಸೂಲಾತಿಗೆ ಕೊಟ್ಟ ರಶೀತಿ ಬುಕ್ಕುಗಳನ್ನೂ ಸಹ ವಸೂಲಾದ ಹಣವಿದ್ದ ಪಕ್ಷ ಹಣ ಸಮೇತ ಜಮೀನ್ದಾರರಸಂಘದ ಮಡಿಕೇರಿಯಲ್ಲಿರುವ ಆಫೀಸಿಗೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇನೆ

ಹಿಂದೂ ದೇಶ.

ಸರ್ ಶಂಕರನಾಯರು ಕೌನ್ಸಿಲ್ ಆಫ್ ಸ್ಟೇಟಿಗೆ ಮೆಂಬರಾಗಲು ಉಮೇದ್ವಾರರಾಗಿ ನಿಂತಿದ್ದಾರಂತ ವರ್ತಮಾನ ಬಂದ

ಪೂನಾಪೋಸ್ಟಾಫೀಸಿನಲ್ಲಿ 3000 ರೂಪಾಯಿನ ಸ್ಟಾಂಪು ಕಾಣದ್ದಕ್ಕಾಗಿ ಪೋಸ್ಟ್ ಮಾಸ್ಟರ್ ಕ್ಲಾರ್ಕ್ ಎಂಬವರನ್ನೂ ಇನ್ನು ಮೂವರನ್ನೂ ದಸ್ತಗಿರಿ ಮಾಡಿದ್ದಾರೆ

ಹೈದರಾಬಾದ' ಸಂಸ್ಥಾನದೊಳಗ ಮದನಮೋಹನ ಮಾಳವೀಯರು ಪ್ರವೇಶ ಮಾಡಕೂಡದೆಂತ ಹುಕ್ಕುಂ ಆಗಿದೆ

ಸಿಂಧ್ ಹೈದರಾಬಾದಿನಲ್ಲಿ ಮೂಖ್ ಎಂಬ ಇಂಜನೀಯರು ಕೆಲವು ಗ್ರಾಮವಾಸಿಗಳ ಗುಂಪಿಗೆ ಗುಂಡು ಹಾರಿಸಿ ಕೆಲವರಿಗೆ ಗಾಯಪಡಿಸಿದ ಮೊಕದ್ದಮೆ ನಡಿಯುತ್ತಿದೆ ಒಂದು ಕಾಲುವೆ ಮಾಡಲಿಕ್ಕಾಗಿ ಮಣ್ಣನ್ನು ಯಂತ್ರದ ಮೂಲಕ ತೋಡುತ್ತಿದ್ದದ್ದನ್ನು ನೋಡಲಿಕ್ಕಾಗಿ ಗ್ರಾಮದವರು ಗುಂಪು ಕೂಡಿದ್ದರು. ಅವರ ಭಾಷೆ ಇಂಜಿನೀಯರಿಗೆ ಗೊತ್ತಾಗದ್ದರಿಂದ ಏನೋ ಪುಂಡುಮಾಡಲು ಬಂದಿರಬೇಕೆಂತ ಊಹಿಸಿ ಗುಂಪಿಗೆ ಗುಂಡು ಹಾರಿಸಿದರಂತೆ

ಬೊಂಬಾಯಿ ಹೈಕೋರ್ಟಿನಲ್ಲಿ ಬಾವ್ಲಾ ಖೂನಿಕೇಸು ನಡಿಯುತ್ತಲೇ ಇದೆ

ಅಂಡಮಾನ್ ದ್ವೀಪದಲ್ಲಿ ವಾಸಕ್ಕಾಗಿ ಕೆಲವು ಆಂಗ್ಲೋ ಇಂಡಿಯನರು (ಯುರೇಷಿಯನರು) ಹೋಗಿದ್ದಾರೆ ಕ್ಯಾಪ್ಟನ್ ಅಂಜರ್ ಎಂಬವರು ಆ ದ್ವೀಪದಲ್ಲಿ ಕೆಲವು ಸ್ಥಳವನ್ನು 99 ವರ್ಷಕ್ಕೆ ಗೇಣಿಗೆ ತೆಗದುಕೊಂಡು ವ್ಯವಸಾಯ ಮಾಡಿ ನೋಡಿ ಬಹಳ ಲಾಯಕ್ಕಾಗಿ ಕೃಷಿಯಾಗುತ್ತೆಂತ ಕಂಡು ಹಿಡಿದು ಜನರನ್ನು ಅಲ್ಲಿ ಭೂಮಿ ವ್ಯವಸಾಯಕ್ಕೆ ಕರೆದುಕೊಂಡು ಹೋಗಿದ್ದಾರೆ

ಮಹಾತ್ಮ ಗಾಂಧಿಯವರು ಪೂರ್ವ ಬಂಗಾಳದಲ್ಲಿ ಸಂಚರಿಸುತ್ತಲೇ ಇದ್ದಾರೆ ಡಕ್ಕಾ ಪಟ್ಣದಲ್ಲಿ ಅವರಿಗೆ ಎಂಟು ಬಹುಮಾನಪತ್ರಗಳು ಒಪ್ಪಿಸಲ್ಪಟ್ಟವು. ಅವರ ಬೋಧನೆಯು ಚರ್ಖಾ ಮತ್ತು ಖದ್ದರಿನಲ್ಲೇ ಅಡಕವಾಗಿದೆ

ಮದ್ರಾಸಿನಿಂದ ಉತ್ತರಕ್ಕೆ ಬೆಜವಾಡ ಪ್ರಾಂತ್ಯದಲ್ಲಿ 16 ನೇ ತಾರೀಕಿನಲ್ಲಿ ಹೊಡದ ಮಳೆ ಗಾಳಿಯಿಂದ ಆದ ನಷ್ಟಗಳ ತಪಸೀಲು ಮದ್ರಾಸ್ ಪತ್ರಿಕೆಗಳಲ್ಲಿ ಬರುತ್ತಲೇ ಇವೆ ಎಲ್ಲೋರಿನಲ್ಲಿ ಒಂದು ಗಿರಣಿ ಮನೆ ಒದ್ದು ಅದರ ಒಳಗೆ ಇದ್ದವರೆಲ್ಲಾ ಅಪಾಯವಾಗಿ 30 ಜನರು ಸತ್ತುಹೋದರಂತ ತಿಳಿದಿದೆ ಸಮುದ್ರದಲ್ಲಿ ಇದ್ದ ಎರಡು ಹಡಗುಗಳಿಗೆ ತುಂಬಾ ಅಪಾಯವಾಗಿದ ಒಂದು ಹಡಗಿನಲ್ಲಿ ಅಕ್ಕಿತುಂಬಿತ್ತು ಇದು ಪೂರ್ತಿ ಸಮುದ್ರದ ಉಪ್ಪುನೀರಿನಿಂದ ನೆನಯಿಸಲ್ಪಟ್ಟದ್ದರಿಂದ ಸಮುದ್ರಕ್ಕೆ ಹಾಕಬೇಕಾಯಿತು ಎಲ್ಲೋರು ಪ್ರಾಂತ್ಯದಲ್ಲಿ ನೂರಾರು ದನಕರುಗಳು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಲ್ಪಟ್ಟವೆ

ಮಹಾತ್ಮ ಗಾಂಧಿಯವರ ಖಾದಿಪ್ರಚಾರದ ಕೆಲಸಕ್ಕಾಗಿ ಕಥ್ಯಾವಾಡ' ಪ್ರಾಂತ್ಯದಲ್ಲಿ ಕಲವು ವಾರಗಳೊಳಗ 6000 ರೂಪಾಯಿ ವಸೂಲಾಗಿದೆ.

ಮದ್ರಾಸ್ ವಿದ್ಯಾ ಇಲಾಖೆಯ ಮಂತ್ರಿಯವರು ಲೋವರ್ ಸೆಕಂಡರಿ ಶಾಲೆಗಳಲ್ಲಿ ಕಲಿಸತಕ್ಕ ವಿಷಯಗಳ ಕುರಿತು ಒಂದು ಕಮಿಟಿಯನ್ನು ನೇಮಿಸುವ ಏರ್ಪಾಡಿನಲ್ಲಿ ಇದ್ದಾರೆ. ಈಗ ಕೊಡುವ ವಿದ್ಯೆಯು ಸರಕಾರದ ಉದ್ಯೋಗಕ್ಕೆ ಮಾತ್ರ ಯುವಕರನ್ನು ತಯಾರಿಸುತ್ತಿದೆ ಯುವಕರ ಸ್ವಶಕ್ತಿಯನ್ನು ಬೆಳಸುವ ದೇಶದ ಪೂರ್ವ ಸಂಸ್ಕೃತಿಗೆ ಅನುಕೂಲವಾಗಿರುವ ವಿದ್ಯೆಯನ್ನು ಕೊಡಬೇಕೆಂಬುದೇ ಉದ್ದೇಶವಾಗಿದೆ. ಈ ಶಾಲೆಗಳಲ್ಲಿ ಸಾಧ್ಯವಾದ ಮಟ್ಟಿಗೆ ಕೈಗಾರಿಕೆಗಳನ್ನು ಕಲಿಸಬೇಕೆಂತಲೂ ಅಭಿಪ್ರಾಯಪಡುವಂತೆ ಕಾಣುತ್ತದೆ.

ಕರ್ನಾಟಕದ ಏಕೀಕರಣದ ಸಭೆ

ಕನ್ನಡ ಸಾಹಿತ್ಯದ ಏಕೀಕರಣ ಸಭೆಯು ಮುಗಿದೊಡನೆಯೇ ಕರ್ನಾಟಕದ ಏಕೀಕರಣ ವಿಚಾರಣೆಯ ಸಭೆಯು ಕೆಲಸವಾಯಿತು. ಈ ಸಭೆಯು ಬೆಳಗಾಂವಿಯ ಸೋಷಿಯಲ್ ಕ್ಲಬ್ ಅಥವಾ ಕ್ರೀಡಾಭವನದ ವಿಶಾಲವಾದ ಸಭಾಮಂಟಪದಲ್ಲಿ ಸೋಮಮಂಗಳವಾರ ಬೆಳಿಗ್ಗೆ ೮॥ ಗಂಟೆಗೆ ಕೂಡಿತು. ಸಭೆಯ ಅಧ್ಯಕ್ಷರಾದ ಶ್ರೀ ಕೌಜಲಗಿ ಶಿದ್ದಪ್ಪನವರು ಎಂ. ಎಲ್ ಸಿ ಇವರು ಸಭೆಗೆ ಬಾರದ್ದರಿಂದ ಉಪಾಧ್ಯಕ್ಷರಾದ ಶ್ರೀ ಜೋಗ ವಿಶ್ವನಾಥರಾಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಕಾರ್ಯದರ್ಶಿಗಳಾದ ಶ್ರೀ ಮ ರಂಗನೇಡೆ ಶ್ರೀನಿವಾಸರಾಯರು ೪ ತಿಂಗಳ ಕೆಲಸದ ಸಂಕ್ಷೇಪ ವರದಿಯನ್ನು ಹೇಳಿದರು. ಸಭೆಯ ಮುಂದಿನ ಕೆಲಸಗಳು ನಡೆಯುವದಕ್ಕೆ ಹಣದ ಆವಶ್ಯಕತೆ ಬಹಳವಾಗಿದ್ದುದರಿಂದ ಸ್ಟ್ಯಾಂಡಿಂಗ ಕಮಿಟೀಯು ಸಭಾಸದರಾಗಿದ್ದವರು ೫ ರೂಪಾಯಿಯಂತೆ ಕಾಣಿಕೆಕೊಡಬೇಕೆಂದು ಗೊತ್ತಾಯಿತು ಅಧ್ಯಕ್ಷರು ಹತ್ತು ರೂಪಾಯಿಗಳನ್ನು ಕೊಟ್ಟರು. ಎ ಸ್ಥ ... ಅಲ್ಲಿಯೇ ಹಣವನ್ನು ಕೊಟ್ಟರು ... ಕನ್ನಡ ಭಾಷೆಯನ್ನಾಡುವ ಜನರು ವಾಸವಾಗಿರುವ ಪ್ರದೇಶವನ್ನೆಲ್ಲ ಒಂದುಗೂಡಿಸಿ ಒಂದೇ ಪ್ರಾಂತ್ಯವಾಗಿ ಏರ್ಪಡಿಸುವ ವಿಚಾರವಾಗಿ ಶ್ರೀ. ಕೌಜಲಗಿ ಶ್ರೀನಿವಾಸರಾಯರು ಮೂರುಸೂಚನೆಗಳನ್ನು ಸಭೆಯ ಮುಂದಿಟ್ಟರು ಇವುಗಳ ವಿಷಯವಾಗಿ ತುಸುಹೊತ್ತು ಒಳ್ಳೇ ಹುರುಪಿನ ಚರ್ಚೆಯಾಗಿ ಆ ವಿಷಯಗಳನ್ನು ಕೂಲಂಕಷವಾಗಿ ವಿಚಾರಿಸಿ ಮುಂದಿನ ನಡೆಗೆ ಪರಿಯನ್ನಿಷ್ಟಿಸುವದಕ್ಕೆ ಒಂದು ಕಮಿಟಿಯು ನೇಮಿಸಲ್ಪಟ್ಟಿತು. ಬೆಳಗಾಂವಿಯ ಕಾಂಗ್ರೆಸಿನ ಉಳಿತಾಯದ ಹಣದೊಳಗಿಂದ ಏಕೀಕರಣ ಸಭೆಗೆ ೫ಸಾವಿರ ರೂಪಾಯಿಗಳ ಸಹಾಯಬೇಡಬೇಕೆಂಬ ಠರಾವನ್ನು ಶ್ರೀ. ಅಂಗಡಿ ಎಮ್ ಎಲ್ ಸಿ ಯವರು ಸೂಚಿಸಿದರು. ಇದು ಸರ್ವಾನುಮತದಿಂದ ಅಂಗೀಕೃತವಾಯಿತು ಸಭೆಯಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ಮುಂದಾಳುಗಳೆಲ್ಲ ನೀರಕ್ಷೀರನ್ಯಾಯದಿಂದ ಏಕಜೀವವಾಗಿ ವಿಷಯಚರ್ಚೆಯನ್ನು ನಿರ್ವಿಕಲ್ಪ ಭಾವನೆಯಿಂದ ನಡೆಯಿಸಿದ್ದುದ್ದನ್ನು ನೋಡಿದ ಕಣ್ಣುಗಳಿಗೆ ಕರ್ನಾಟಕದೊಳಗಿನ ಬ್ರಾಹ್ಮಣ ಬ್ರಾಹ್ಮಣೇತರ ವಿವಾದವೆಂಬುದು ನೀಲಿಕಟ್ಟ ಸುದ್ದಿಯೆಂದು ತೋರದಿರಲಾರದು ಇದೇ ಕರ್ನಾಟಕದ ಮುಂದಿನ ಉತ್ಕರ್ಷದ ಸ್ಪಷ್ಟ ಚಿನ್ಹವಾಗಿದೆ.

ಕರ್ನಾಟಕ ವೃತ್ತ'

ವಿದೇಶ.

ಲಂಡನ್ನಿನಲ್ಲಿ ಈಸ್ಟ್ ಇಂಡಿಯನ್ ಅಸೋಸಿಯೇಶನ್ ಎಂಬ ಸಭೆಯು ಮುಂದೆ ಸ್ಟೇಟ್ ಸೆಕ್ರೆಟರಿಯವರಾಗಿದ್ದ ಲಾರ್ಡ್ ಪೀಲರ ಅಧ್ಯಕ್ಷತೆಯಲ್ಲಿ ಒಂದು ಭಾಷಣವನ್ನು ಓದಿದರು ಹಿಂದುಸ್ಥಾನದ ಗ್ರಾಮವಾಸಿಗಳ ಸ್ಥಿತಿಯನ್ನು ... ಮಾಡಿಸಲು ಚಕ್ರವರ್ತಿಯವರಿಂದಲೇ ನೇಮಿಸಲ್ಪಡುವ ಒಂದು ಕಮಿಟಿಯು ಏರ್ಪಡಾಗಬೇಕೆಂತ ವಾದಿಸಿದರು. ಭೂಮಿಯು ಪಾಲುಪಾಲಾಗಿ ಒಬ್ಬನ ಪಾಲಿಗೆ ಬಂದಿರುವ ಭಾಗವು ಅತ್ಯಲ್ಪವಾಗಿರುವದರಿಂದ ಅನೇಕ ರೈತರಿಗೆ ವರ್ಷ ಇಡೀ ಕೆಲಸವಿಲ್ಲ ರೈತರು ಸಾಲದಲ್ಲಿ ಮುಣುಗಿ ಹೋಗಿದ್ದಾರೆ. ತಮ್ಮ ಉತ್ಪತ್ತಿಗಳನ್ನು ಮಾರಲಿಕ್ಕೆ ಬೇಕಾದ ಅನುಕೂಲಗಳಿಲ್ಲ ಬೆಲ್ಜಿಯಮಿನಲ್ಲಿ ಎಕರೆಗೆ 37 ಬುಶಲ್ ಗೋಧಿಬೆಳೆಯುವಾಗ ಹಿಂದುಸ್ಥಾನದಲ್ಲಿ ಎಕರೆಗೆ 12 ಬುಶಲ್ ಬೆಳೆಯುವದೇ ಕಷ್ಟವಾಗಿದೆ ಇದರಿಂದ ಭೂಮಿಯು ಎಷ್ಟರ ಮಟ್ಟಿಗೆ ಸಾಲದಿಲ್ಲದ್ದಾಗಿದೆಯೆಂತ ತಿಳಿಯುತ್ತದೆ ಗ್ರಾಮದ ಆರೋಗ್ಯ ಹೆಚ್ಚಲಿಕ್ಕೆ ಸಹ ವಿದ್ಯೆಕೊಡಬೇಕಾಗಿದೆ ಇದನ್ನೆಲ್ಲಾ ಆಲೋಚಿಸಲಿಕ್ಕೆ ಕಮಿಶನ್ ಬಂದು ನೇಮಕವಾದರೆ ಗ್ರಾಮವಾಸಿಗಳ ಹಿತಚಿಂತನೆಯು ಸರಕಾರಕ್ಕೆ ಇದೆ ಎಂಬದು ವ್ಯಕ್ತಗೊಳಿಸಿದಂತೆ ಆಗುತ್ತದೆ ಮುಂತಾಗಿ ವಾದಿಸಿದರು.

ವೆಂಬ್ಲಿಪ್ರದರ್ಶನವು ಚಕ್ರವರ್ತಿಯವರಿಂದ ತೆರೆಯಲ್ಪಟು 15ನೇ ತಾರೀಕಿನವರೆಗ 350000 ಜನರು ಸಂದರ್ಶಿಸಿದರು 16ನೆ ತಾರೀಕಿನ ಒಂದು ದಿನದಲ್ಲಿ 99252 ಜನರು ಸಂದರ್ಶಿಸಿದರು

ಅಮೇರಿಕಾ ದೇಶದ ಯುನೈಟಿಡ್ ಸ್ಟೇಟ್ಸ್ ಸಂಸ್ಥಾನದವರು ತಮ್ಮಿಂದ ಯುದ್ಧದಲ್ಲಿ ಸಾಲ ಹೊಂದಿಕೊಂಡವರಿಂದ ಸಾಲ ವಸೂಲಿ ತರದೂದು ಶುರುಮಾಡಿದ್ದಾರೆ.

ಇಟಲಿ ದೇಶದಲ್ಲಿ ಗುಪ್ತಸಂಘಗಳೇ ಇರಕೂಡದೆಂತ ಒಂದು ಕಾನೂನು ಮಾಡುವದರಲ್ಲಿ ಇದ್ದಾರೆ. ಇದರಿಂದ 'ಮೇಸನ್' ಸಂಘಗಳು ಸಹ ಆ ದೇಶದಲ್ಲಿ ಇರಕೂಡದೆಂತಾಗುತ್ತದೆ.

ಗ್ಲಾಸ್‌ಗೋ ಪಟ್ಣದಲ್ಲಿ ಒಂದು ಮನೆಯಲ್ಲಿ ಇಬ್ಬರು ಹಿಂದೀಯರು ರಾತ್ರಿ ಊಟ ಮಾಡುತ್ತಿದ್ದಾಗ ಯರೋ ತುಂಟರು ಬಂದು ಅವರಿಗೆ ಮುರದ ತುಂಡುಗಳಿಂದಲೂ ಕತ್ತಿಗಳಿಂದಲೂ ಹೊಡದು ಒಬ್ಬನು ಕತ್ತಿಯ ತಿವಿತದಿಂ ಸತ್ತನು. ಇತರನಿಗೆ ತುಂಬಾ ಗಾಯವಾಗಿದೆ. ಕಳ್ಳತನವೇ ಈ ತುಂಟತನಕ್ಕೆ ಕಾರಣವೆಂತ ಊಹಿಸಿದ್ದಾರೆ

ಇಂಗ್ಲಿಷ್ ಮಂತ್ರಿಯಾದ ಮಿ ಚಾಲ್ಮರ್ಸನ ತಾಯಿಯವರು 80 ವರ್ಷ ಪ್ರಾಯದಲ್ಲಿ ಸತ್ತರೆಂತ ಈ ವಾರದಲ್ಲಿ ವರ್ತಮಾನ ಬಂದಿದೆ

ಕೊಡಗು ಪತ್ರಿಕೆಯನ್ನೋದುವ ಎಲ್ಲಾ ಮಹಾಶಯರಲ್ಲಿ ವಿನಂತಿ.

"ಕೊಡಗು" ಪತ್ರಿಕೆಯು ಹೊರಟು ಅತ್ಯಲ್ಪ ಕಾಲದ ದೇಶದ "Kodagu" ... ಪತ್ರಿಕೆಗಳಲ್ಲಿಯೂ, ನೂಲೆಮಂತ್ರಿ ... ಆಲೋಚನಾಶಕ್ತಿಯು ಎಷ್ಟರ

ಗೆ ಹೆಚ್ಚಾಯಿತೆಂಬುದನ್ನು ನಾನು ಹೇಳಬೇಕಾಗಿಲ್ಲ. ಬೂದಿ ಮುಚ್ಚಿದ ಕೆಂಡದಂತಿದ್ದ ಅನೇಕ ಹಳ್ಳಿಮೂಲೆಗಳಲ್ಲಿದ್ದ ಮಹನೀಯರ ನಿಜವಾದ ಯೋಗ್ಯತೆಯು ಪ್ರಕಾಶಕ್ಕೆ ಬಂದು ದೇಶದ ಅಭಿವೃದ್ಧಿಯ ವಿಷಯ ಅನೇಕ ಲೇಖನಗಳನ್ನು ಈ ಪತ್ರಿಕೆಯಲ್ಲೇ ಬರೆಯುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ. ಯಾವದಾದರೊಂದು ಪತ್ರಿಕೆಯನ್ನು ಚೆನ್ನಾಗಿ ನಡೆಸಿದರೆ ಎಂಥಾ ಆಳರಸರಾದರೂ ಹೆದರದೆ ನಿವೃತ್ತಿ ಇಲ್ಲ. ಇವನು ಅರಸನು, ಇವನು ರೈತನು, ಇವನು ಐಶ್ವರ್ಯವಂತನು, ಇವನು ದರಿದ್ರನು ಎಂಬ ಭೇದಭಾವವನ್ನು ಕಲ್ಪಿಸದೆ ಕೆಲಸಮಾಡುತ್ತಿರುವ ನಮ್ಮ ದೀನಬಂಧುವಾದ "ಕೊಡಗು" ಪತ್ರಿಕೆಯ ವಿಷಯ ನಾನು ಒತ್ತಿ ಹೇಳಬೇಕೇ. ಇಷ್ಟು ಒಳ್ಳೆ ಕೆಲಸಮಾಡುತ್ತಿರುವ ಪತ್ರಿಕೆಗೆ ಅನೇಕ ಮಹನೀಯರು ವಾರ್ಷಿಕಾ ಚಂದಾ 3—8—0 ಕಳುಹಿಸಿಕೊಡುತ್ತೇವೆಂಬುದಾಗಿ ವಾಗ್ದಾನ ಬಹಿರಂಗ ರುಜುಮಾಡಿಕೊಟ್ಟು, ಪತ್ರಿಕೆಯನ್ನು ಒಂದು ವರ್ಷದಿಂದ ಓದುತ್ತಾಬಂದು ಹಣ ಪಾವತಿ ಮಾಡದೆ ಇರುವ ಉದಾಸೀನವು ಬಹಳ ಸೋಜಿಗವನ್ನುಂಟುಮಾಡುತ್ತೆ. ಈ ನೋಟಿಸ ಸಂಕಟವು ಘೋರವಾದ ಸಮಯದಲ್ಲಿ ಅನೇಕರು ಈ ಪತ್ರಿಕೆಯ ವಿಷಯ ದುರ್ಭಾಷೆ ಹುಟ್ಟಿಸಿಕೊಂಡು ತಿರುಗಾಡುತ್ತಿದ್ದಾರೆ. ಇಂಥಾ ಸಂದು ಕಟ್ಟಿನಲ್ಲಿ ದೇಶದ ಸಮುದಾಯಕ್ಕೆ ಮಾರ್ಗದರ್ಶಕವನ್ನು ಮಾಡುವ ಈ ಪತ್ರಿಕೆಯನ್ನು ಉಳಿಸಲು ದೇಶದ ಎಲ್ಲಾ ಮಹನೀಯರು ಪ್ರಯತ್ನಪಡದೆ ಹೋದರೆ (ಅಂದರೆ ಚಂದಾದಾರರ ಹಣವನ್ನು ಪಾವತಿಗೆ ಕೊಂಡರೆ ತಗೆದುಕೊಳ್ಳುವುದೂ, ಹೊಸ ಚಂದಾದಾರರಾಗುವುದಕ್ಕೆ ರೂ. 3—8—0 ಮುಂಗಡವಾಗಿ ಕಳುಹಿಸಿಕೊಡುವುದೂ). "ಜನವ ಮಡಗಿದ್ದಲ್ಲ" ಎಂಬ ಗಾದೆಗೆ ಅನುಸಾರವಾಗಿ, ನಮ್ಮ ಸ್ಥಿತಿಯು ಶೋಚನೀಯವಾಗಿಯೂ ಆಗುತ್ತೆ. ಆದುದರಿಂದ ಇದು ಸ್ಥಿತಿಯನ್ನು ತಪ್ಪಿಸಲು, ದೇಶದ ಎಲ್ಲಾ ಮಹನೀಯರು ಈ ಪತ್ರಿಕೆಗೆ ಪ್ರೋತ್ಸಾಹ ಕೊಟ್ಟಂತೆ, ಇನ್ನು ಮುಂದಕ್ಕೂ ಕೊಟ್ಟು, ಈ ಪತ್ರಿಕೆಯೂ ನಡೆ ತಮ್ಮ ಶಾಲೆಗೆ ಹೋಗುವ ಮಗುವಿನ ಹಾಗೆ ಒಂದು ಮಗುವೆಂದು ಭಾವಿಸಿ ಅದರ ವಿದ್ಯಾಭ್ಯಾಸಕ್ಕೆ (3—8—0) ದಯವಿಟ್ಟು ಖರ್ಚುಮಾಡಬೇಕಾಗಿ ಅಂಗಲಾಚಿ ಬೇಡಿಕೊಳ್ಳುತ್ತೇನೆ.

ತಮಗಳ ಸೇವಕ,
ಕೋಟೆರ ಚೆಣ್ಣಪ್ಪ.

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಮಹದೇವಪೇಟೆ ಸಹಕಾರಸಂಘ.

ಈ ಸಂಘದ ವಾರ್ಷಿಕ ಸಭೆಯು ಇದೇ ತಿಂಗಳ 21ನೇ ತಾರೀಕಿಗೆ ಜರುಗತಕ್ಕದಿದೆಯೆಂದು ಪ್ರಕಟಣೆಗಳು ಹೊರಟಿದ್ದಿವೆ. ಇತ್ಯಂಭೂತ ನಡೆದ ಸಭೆಗಳಲ್ಲಿ ಮೆಂಬರರು (ಶೇರುದಾರರು) ಬಾರದೆ ಮತ್ತೊಂದು ತಾರೀಕಿಗೆ ಕಾರ್ಯಕ್ರಮವನ್ನು ಇಡಬೇಕಾಗಿ ಬರುತ್ತಿತ್ತು. ಎರಡನೇ ಸಾರಿ ನಡೆದ ಸಭೆಗಳಲ್ಲಿ, ಎಷ್ಟೇ ಹೆಚ್ಚಾದರೂ, 20 ಮಂದಿಗಳಿಗಿಂತ ಅಧಿಕ ಜನರು ಇರುತ್ತಿರಲಿಲ್ಲ. ಜನರು ಸಂಘದ ಕಡೆಗೆ ಈ ತರದ ಧೋರಣವನ್ನಿಟ್ಟರೆ, ಸಂಘವು ಉದ್ಧಾರವಾಗುವ ಬಗೆಯಾದರೂ ಎಂತು?

ಆದಕಾರಣ ಎಲ್ಲಾ ಶೇರುದಾರರು ನಾಳಿನ ಮಹಾಸಭೆಗೆ ಹಾಜರಾಗಿ, ಸಂಘದ ಏಳ್ಗೆಗೆ ಕೈಲಾದಷ್ಟು ಯತ್ನ ಮಾಡುವರೆಂದು ನಂಬಲಾಗಿದೆ. ಶೇರುದಾರರು ಮಹಾಸಭೆಗಳಿಗೆ ಹಾಜರಾಗದಿದ್ದರೆ, ಸಂಘವು ಯಾವ ರೀತಿಯಲ್ಲಿ ತನ್ನ ಕೃತಿಯನ್ನು ನಡೆಸುತ್ತಿದೆಂಬುದು ಇವರಿಗೆ ಗೊತ್ತಾಗಲಾರದು. ಇವರು ಪಂಚಾಯತ ಸಭೆಗೂ ಹಾಜರಾಗಿ, ಸಂಘದ ದಿನ ದಿನದ ಪ್ರಗತಿಯನ್ನು ಗೊತ್ತುಹಚ್ಚಬಹುದು. ಶೇರುದಾರರು ಜಾಗರೂಕರಾಗಿದ್ದಷ್ಟು ಸಂಘದ ಕಾರ್ಯಕ್ಕೆ ಸೌಲಭ್ಯತೆಯು ದೊರಕುವುದು. ಆದರೆ ಇವರು ತೊಂದಿಕೊಂಡ ಸಾಲವನ್ನು ರೀತಿಗೆ ಸರಿಯಾಗಿ ಮರಳಿಸದಿದ್ದರೆ, ಪಂಚಾಯತ ಹಾಗು ಮಹಾಸಭೆಗಳಿಗೆ ಬಾರದಿರಲಿಕ್ಕೆ ಇವರಿಗೆ ಅಂಜಿಕೆಯಾಗುತ್ತೆ. ಆದಮೇಲೆ ಸಂಘದ ಅವನತಿಯು ಕರತಲಾಮಲಕದಂತೆ ಕಣ್ಣೆದುರಿಗಿದೆಯಲ್ಲವೇ?

ಶೇರುದಾರರೇ! ಸಂಘವು ನಾಮಶೇಷವಾಗದಂತೆ ನೋಡಿಕೊಳ್ಳಿ, ಸಂಘವು 'ನಮಗೆ ಸಾಲಕೊಡಲಿಲ್ಲ'ವೆಂದು ಅದರ ಕಡೆಗೆ ಉದಾಸೀನತೆಯನ್ನು ತೋರುವುದು ವಿಹಿತವಲ್ಲ. ಮುಳುಗುತ್ತಿರುವ ಸಂಘವನ್ನು ಎತ್ತುವ ಯೋಚನೆಯನ್ನು ಕಂಡುಹಿಡಿಯಿರಿ. ಎಡರುಗಳು ಸಿಕ್ಕಿದಷ್ಟು, ಧೈರ್ಯಶಾಲಿಗಳಿಗೆ ಉತ್ತೇಜನ ಹೆಚ್ಚಿಗೆಯಾಗುತ್ತದೆ.

ಸಂಘವು ನಾಶವಾದರೆ, ಪೇಟೆಜನಗಳು ಬಹಳ ಕೆಡುಕನ್ನು ಪಡೆವರು. ಇಡೀ ಹಿಂದೂದೇಶವು ತನ್ನ ಏಳ್ಗೆಗೆ ಸಹಕಾರವನ್ನೇ ಸಂಜೀವನವೆಂದು ಸ್ವೀಕರಿಸಿದೆ. ಸಹಕಾರದಿಂದ ಅನೇಕ ಅತಿ ಗರೀಬ ಪಾಶ್ಚಾತ್ಯ ಜನಾಂಗಗಳು ಉದ್ಧಾರವಾಗಿವೆ.

ಈ ಸಂಘವು ಜನ್ಮವೆತ್ತಿದಂದಿನಿಂದಾಗಿಯೂ, ಕಷ್ಟಕಾಲದಲ್ಲಿ ಬಂದು ಒದಗಿದ್ದುದಿದೆ. ಸಂಘಕ್ಕೆ ಈಗಿರುವ ಶೋಚನೀಯ ಸ್ಥಿತಿಯನ್ನು ದೂರ ಮಾಡುವುದಕ್ಕೆ [illegible] ಮಹಾಸಭೆಗೆ ಚಿಕಿತ್ಸಕರಾಗಿ [illegible]

ಸುಮಾರು 7 ಯಾ 8 ಸಾವಿರ ರೂಪಾಯಿಗಳು ಸಾಲದ ರೂಪಿನಲ್ಲಿ ಶೇರುದಾರರ ಮೇಲೆ ಬಿದ್ದಿವೆ. ಬಹಳ ಕಾಲದಿಂದಲೂ ಸಾಲವನ್ನು ಮರಳಿಸದೆ ಇರುವ ಶೇರುದಾರರನ್ನು ಸಂಘದಿಂದ ಹೊರಗೆ ಹಾಕಿ, ಯೋಗ್ಯರಾದವರನ್ನು ಮಾತ್ರ ಇಟ್ಟುಕೊಂಡು, ಸಂಘದ ಬಂಡವಾಳವನ್ನು ಎರಡು ಅಥವಾ ಮೂರು ಸಾವಿರ ರೂಪಾಯಿಗಳಿಗೆ ಇಳಿಸಿ, ಸಂಘದ ಕೆಲಸವನ್ನು ಸುಸಾಂಗವಾಗಿ ಮುಂದರಿಸುವುದು ಒಳಿತಾಗಿದೆ.

ಶೇರುದಾರರು ಸಭೆಯಲ್ಲಿ ಉಪಸ್ಥಿತರಾಗಿ ಒಳ್ಳೇ ಕಾರ್ಯನಿರ್ವಾಹಕರನ್ನು ಚುನಾಯಿಸಿ, ಹಿಂದಿನ ಕಮಿಟಿಯವರು ಮಾಡಿದ ಕೆಲಸವು ಅತೃಪ್ತಿಕರವೆಂದು ತೋರಿದ ಪಕ್ಷದಲ್ಲಿ, ಇವರ ಚಲನವಲನಗಳ ಕುರಿತು ಪ್ರತ್ಯಕ್ಷ ನಿಂದನೆ ಮಾಡುವದು ಲೇಸು. ಪರೋಕ್ಷದಲ್ಲಿ ಏನು ಹೇಳಿದರೂ ಸಾಫಲ್ಯವಿಲ್ಲ.

"ಶೇರುದಾರ"

ಮಹನೀಯರೇ,

ಕೊಡಗಿನಲ್ಲಿ ಕೊಡಗರಾದ ಒಬ್ಬರು ಒಬ್ಬ ಬ್ರಾಹ್ಮಣ ವಿಧವೆಯನ್ನು ಕೊಡಗರ ಕೂಡಾವಳಿ ಪದ್ಧತಿ ಪ್ರಕಾರ ಪುನರ್ವಿವಾಹ ಮಾಡಿಕೊಂಡರೆಂದೂ ಈ ಕಾರ್ಯವು ಊರವರೂ ನೆಂಟರಿಷ್ಟರೂ ಸೇರಿ ಎಲ್ಲರ ಸಮ್ಮತದಿಂದಲೂ ನಡೆಯಿತೆಂದೂ ಕೊಡಗು ಪತ್ರಿಕೆಯ ಒಂದು ಸಂಚಿಕೆಯಲ್ಲಿ ಓದಿ ನೋಡಿದೆನು. ಈ ವಿಷಯ ಪತ್ರಿಕೆಯಲ್ಲಿ ಪ್ರಕಟಿಸಿದ್ದು ಒಳ್ಳೇದು ಮತ್ತು ಇದರ ವಿಷಯ ಕೊಡಗಿನ ಮುಖ್ಯಸ್ಥರನೇಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ಖಂಡಿತವಾಗಿಯೂ ಈ ಮೊದಲೇ ಪ್ರಕಟಿಸುವರೆಂದು ಕುತೂಹಲದಿಂದ ಕೊಡಗು ಪತ್ರಿಕೆಯನ್ನು ನೋಡುತ್ತಿದ್ದೆನು. ನನ್ನ ಕುತೂಹಲವು ತೃಪ್ತಿಹೊಂದಲಿಲ್ಲ. ಆದರೂ ನನ್ನ ಈ ಕೆಲವು ಅಭಿಪ್ರಾಯಗಳನ್ನು ಈ ಕೆಳಗೆ ಬರೆದು ವಾಚಕರ ಗಮನಕ್ಕೆ ತರುತ್ತೇನೆ.

ಮೇಲಿನ ಮಹನೀಯರು ಬ್ರಾಹ್ಮಣ ವಿಧವೆಯನ್ನು ಕೂಡಾವಳಿ ಪದ್ಧತಿ ಪ್ರಕಾರ ಪುನರ್ವಿವಾಹ ಮಾಡಿದ್ದು ಬಹಳ ಒಳ್ಳೆಯದೆಂದೂ ಇದು ಈಗಿನ ಹೊಸ ಸುಧಾರಣೆ (Social Reforms)ಯನ್ನು ಅನುಸರಿಸಿ ಮಾಡಿದ ಕಾರ್ಯವೆಂದೂ ಕೊಡಗರನೇಕರು ಊಹಿಸಬಹುದು. ಆದರೆ ಹೀಗೆಯೇ ಬ್ರಾಹ್ಮಣರಲ್ಲಿ ಕೆಲವು ಮಹನೀಯರುಗಳು ಈ ಹೊಸ ಸುಧಾರಣೆಯನ್ನೇ ಅನುಸರಿಸಿ ಕೊಡಗು ವಿಧವೆಯರುಗಳನ್ನು ಪುನರ್ವಿವಾಹ ಮಾಡಿಕೊಂಡು ಅವರವರ ಮನೆಗೂ ಜಾತಿಗೂ ಸೇರಿಸಿಕೊಂಡು ಹುಟ್ಟಿದ ಮಕ್ಕಳಿಗೆ ಎಲ್ಲಾ ತರದ ಹಕ್ಕು ಭಾಧ್ಯತೆಗಳನ್ನು ಕೊಟ್ಟುಬರುವವರಾದರೆ ಮೇಲಿನ ಊಹನೆಯು ಸ್ವಲ್ಪಮಟ್ಟಿಗೆ ಸರಿಯಾಗ ಬಹುದು. ಇದೇನೂ ಇಲ್ಲದೆ ಕೊಡಗರು ಮಾತ್ರ ಬ್ರಾಹ್ಮಣ ವಿಧವೆಯರನ್ನೂ ಮತ್ತು ಇತರ ಜಾತಿಯ ಹೆಂಗಸರನ್ನೂ ಇಟ್ಟುಕೊಂಡು ಅವರನ್ನು ತಮ್ಮ ಜಾತಿಗೂ ಮನೆಗೂ ಸೇರಿಸಿಕೊಂಡು ಅವರಲ್ಲಿ ಹುಟ್ಟಿದ ಮಕ್ಕಳಿಗೆ ಹಕ್ಕು ಬಾಧ್ಯತೆಗಳನ್ನು ಕೊಡಲು ಸಮ್ಮತಿಸುವುದು ಯಾವ ಸುಧಾರಣೆಗೊಳಪಟ್ಟದ್ದು ಅಥವಾ ಯಾವ ಶಾಸ್ತ್ರಕ್ಕೊಳಪಟ್ಟದ್ದೆಂಬುದು ವಾಚಕರಲ್ಲಿ ತಿಳಿದವರು ಒರೆಯಬೇಕಾಗಿ ಕೋರುತ್ತೇನೆ. ಮೇಲಿನ ಮಹನೀಯರನ್ನು ಹಿಂಬಾಲಿಸಿ ಇನ್ನೂ ಅನೇಕ ಕೊಡಗು ಯುವಕರು ಬ್ರಾಹ್ಮಣ ವಿಧವೆಯರನ್ನೋ ಅಥವಾ ಬೇರೆ ಜಾತಿಯ ಹೆಂಗಸರನ್ನೋ ಇಟ್ಟುಕೊಳ್ಳುತ್ತಾ ಬಂದಲ್ಲಿ ಕೊಡಗು ಯುವತಿಯರಲ್ಲಿ ತಕ್ಕಷ್ಟು ವಯಸ್ಸಾಗಿಯೂ ಮದುವೆಯಾಗದವರ ಸಂಖ್ಯೆಯು ಹೆಚ್ಚುವುದೇನೋ ಖಂಡಿತ. ಹೀಗೆ ಮದುವೆಯಾಗದೆ ನಿಂತುಹೋದ ಯುವತಿಯರ ಗತಿ ಏನಾದೀತು. ಈ ಯುವತಿಯರು ಆತ್ಮಹತ್ಯ ಮಾಡಿಕೊಂಡು ಸಾಯಬೇಕು. ಈ ಅವಸ್ಥೆಯನ್ನು ತಮ್ಮ ಯುವತಿಯರಿಗೆ ತಾವೇ ತಂದು ಹಾಕುವುದು ಎಂದೂ ನ್ಯಾಯವಲ್ಲವೆಂದು ಯಾರೂ ಒಪ್ಪದೆ ಇರಲಾರರು.

ಇದೂ ಅಲ್ಲದೆ ಕೊಡಗರು ಶುದ್ಧವಾದ ಒಂದು ಚಿಕ್ಕ ಹಿಂದೂ ಕ್ಷತ್ರಿಯ ಜನಾಂಗವೆಂದು ಕರೆಯಲ್ಪಡುವ ಒಳ್ಳೇ ಹೆಸರನ್ನೂ ನಾವು ಕಳಕೊಳ್ಳುವ ಸಂದರ್ಭವು ಮೇಲಿನ ರೀತಿ ಮಾಡುವುದರಿಂದ ಬರಬಹುದು. ಕೊಡಗರೆಂದರೆ ಅನೇಕ ಜಾತಿಯ ಹೆಂಗಸರಲ್ಲಿ ಹುಟ್ಟಿ ಉತ್ಪತ್ತಿಯಾದ ಒಂದು ಜನಾಂಗವೆಂದು ಹೊರಗಿನ ದೇಶದವರು ಹೇಳುವುದನ್ನು ಕೇಳುವ ಅಥವಾ ಇನ್ನು ಮುಂದೆ ಕೊಡಗರ ಚರಿತ್ರೆಯನ್ನು ಬರೆಯುವ ಯಾರಾದರೂ ಹೀಗೆಂದು ಬರೆದದ್ದನ್ನು ಓದಿನೋಡುವ ಯಾವ ಕೊಡಗನ ಮನಸ್ಸು ನೋಯದೆ ಇದ್ದೀತು? ಶುದ್ಧತ್ವವು (Purity) ಒಬ್ಬೊಬ್ಬನ ಹೃದಯದಲ್ಲಿಯೂ ಮನಸ್ಸಿನಲ್ಲಿಯೂ ಇರಬೇಕಾದದ್ದು ಹ್ಯಾಗೆ ಅವಶ್ಯವೋ ಹಾಗೆಯೇ ಒಂದೊಂದು ಜನಾಂಗದಲ್ಲಿಯೂ ಶುದ್ಧತ್ವವು ಅವಶ್ಯವು. ಹೀಗೆಂದು ಹೇಳಿದರೆ ಮಿಕ್ಕ ಎಲ್ಲಾ ಜನಾಂಗಗಳನ್ನೂ ದೂಷಿಸಬೇಕೆಂದೂ ತಮ್ಮದಕ್ಕಿಂತ ಕಮ್ಮಿ ತರದ್ದೆಂದು ನೆನಸಬೇಕೆಂಬುದೂ ಎಂಬರ್ಥ ಎಂದೂ ಆಗಲಿಕ್ಕಿಲ್ಲ. ಒಬ್ಬ ಶುದ್ಧ ಇಂಗ್ಲಿಷಿನವನಿಗೆ ಒಬ್ಬ ಇಂಡಿಯನ್ ಹೆಂಗಸಿನಲ್ಲಿ ಹುಟ್ಟಿದ ಮಕ್ಕಳು ಇಂಗ್ಲಿಷಿನವರೆಂದು ಎಂದೂ ಕರೆಯಲ್ಪಡಲಾರರು. ಇದು ನ್ಯಾಯವಾದದ್ದು. ಹಾಗೆಯೇ ಕೊಡಗರಿಗೆ ಕೊಡಗರಲ್ಲದ ಹೆಂಗಸರಲ್ಲಿ ಹುಟ್ಟಿದ ಮಕ್ಕಳು ಕೊಡಗರೆಂದು ಕರೆಯಿಸಿಕೊಳ್ಳತಕ್ಕದ್ದು. ಇತರ ಜಾತಿಯ ಹೆಂಗಸರನ್ನು ಕೊಡಗರ ಐನ್‌ಮನೆಗಳಲ್ಲಿ ಇಟ್ಟುಕೊಳ್ಳಲೂ ಕೂಡದು. ಈ ತರದ ನಿಬಂಧನೆಗಳು ಒಂದೊಂದು ಜನಾಂಗಕ್ಕೂ ಆಯಾಯ ಜನಾಂಗದ ಏಳಿಗೆಗೂ ಮರ್ಯಾದೆಯನ್ನು ಕಾಪಾಡಿಕೊಳ್ಳುವುದಕ್ಕೂ ಅತ್ಯಾವಶ್ಯವು. ಈ ನಿಬಂಧನೆಗಳನ್ನೆಲ್ಲಾ ಆಗಿಂದಾಗ್ಯೆ ಬೋಧಿಸಲು ಕೊಡಗರಿಗೂ ಒಬ್ಬ ಗುರುಗಳು ಅತ್ಯಾವಶ್ಯವಲ್ಲವೇ? ಅದ್ದರಿಂದಲ್ಲವೇ ಕೊಳಕಂಡ ಅಪ್ಪಯ್ಯ ಡಾಕ್ಟರವರು ಕೊಡಗರು ಹಿಂದೂ ಮತಸ್ಥರೆಂದೂ ಕ್ಷತ್ರಿಯ ಜನಾಂಗವೆಂದೂ ಹೇಳಿಕೊಳ್ಳಬೇಕಾದರೆ ಆದಷ್ಟು ಬೇಗನೇ ಶೃಂಗೇರಿ ಮಠದ ಶ್ರೀ ಜಗದ್ಗುರುಗಳನ್ನು ತಮ್ಮ ಮೂಲ ಗುರುವಾಗಿ ಅಂಗೀಕರಿಸಿಕೊಂಡು ಅವರ ಬೋಧನೆಯಂತೆಯೂ ಆಜ್ಞೆಯಂತೆಯೂ ನಡದು ಬರುವುದು ಅತ್ಯಾವಶ್ಯವೆಂದು ಒತ್ತಿ ಹೇಳುವರು.

ಕಾಳಪ್ಪ.

ಕೊಡಗು ಡಿಸ್ಟ್ರಿಕ್ಟು ಬೋರ್ಡು.

ಕಳೆದ ವಾರದ ಪತ್ರಿಕೆಯಲ್ಲಿ ಡಿಸ್ಟ್ರಿಕ್ಟು ಬೋರ್ಡಿನ ಮತ್ತು ಅದರ ಮೆಂಬರುಗಳ ವಿಷಯ ಬರೆದ ಬಾತ್ಮಿಯೊಂದನ್ನು ನೋಡಿದೆನು. ಕೌನ್ಸಿಲಿನಲ್ಲಿ ಕಳೆದ ವರ್ಷ ಡಿಸ್ಟ್ರಿಕ್ಟು ಬೋರ್ಡಿನ ಪೂರ್ಣ ಸ್ವಾತಂತ್ರ್ಯವನ್ನು ರೈತರ ಪ್ರತಿನಿಧಿಗಳ ಬಹುಮತದೊಡನೆ ಬಿಟ್ಟುಕೊಡಬೇಕೆಂದು ಮಂಜೂರಾದರೂ ನಮ ಸರಕಾರವು ಈ ವಿಷಯ ಚುನಾವಣೆ ಪಟ್ಟಿಯನ್ನು ಮಾಡಿ ಹೊಸ ಚುನಾವಣೆ ಮಾಡದಿರುವುದು ವ್ಯಸನಕರ. ಈಗಿರುವ ಮೆಂಬರುಗಳ ಅವಧಿಯು ಕಳೆದ ಮಾರ್ಚ ತಿಂಗಳಿಗೆ ಮುಗಿದಿರುತ್ತದೆ. ಅಲ್ಲಿಂದೀಚೆಗೆ ಇವರು ಮೆಂಬರುಗಳಲ್ಲ. ಏತಕ್ಕೆಂದರೆ ಅವರ ಅವಧಿಯು ಹೆಚ್ಚಿಸಲ್ಪಡಲಿಲ್ಲ. ಈ ಕಾರಣದಿಂದ ಅವರು ಅನೇಕರು ಹೇಳುವಂತೆ ರಾಜಿನಾಮೆ ಕೊಡಬೇಕಾದ ಕಾರಣವಿಲ್ಲ. ದೇಶದ ಎಲ್ಲಾ ಕಡೆಗಳಲ್ಲಿಯೂ ಮೀಟಿಂಗ್ ಮಾಡಿ ಸರಕಾರದವರು ಹೊಸ ಚುನಾವಣೆಯನ್ನು ಬೇಗನೆ ಮಾಡುವಂತೆಯೂ ಪೂರ್ಣಸ್ವಾತಂತ್ರ್ಯವನ್ನು ರೈತರ ಬಹುಮತದ ಪ್ರತಿನಿಧಿಗಳಿಗೆ ಕೊಡುವಂತೆಯೂ ಕೇಳಿಕೊಳ್ಳಬೇಕಾದದ್ದು, ದೇಶೀಯರ ಕರ್ತವ್ಯವೆಂದು ನಾನು ಹೇಳಬೇಕಾಗಿಲ್ಲ. ಈ ವಿಷಯ ಚಳವಳವೆಬ್ಬಿಸಲು, ಉಮೇದ್ವಾರರಾಗ ತಕ್ಕವರೆಲ್ಲರೂ ಮುಂದಕ್ಕೆ ಬರುವರೆಂದು ಕೋರುತ್ತೇನೆ.

ಕೆ. ಪಿ. ಚೆಣ್ಣಪ್ಪ.

ಡಿಸ್ಟ್ರಿಕ್ಟ್ ಬೋರ್ಡಿನ ಆಸ್ಪತ್ರೆಗಳು.

ಅಯ್ಯಾ,

ನಾನು ಕಳೆದ ವಾರ ಪೊನ್ನಂಪೇಟೆಗಾಗಿ ದಾಟಿದೆನು. ಅಲ್ಲಿ ಬೀದಿಗೆ ಮನುಷ್ಯರೊಬ್ಬರು ಈಗತಾನೇ ಮುಗಿದ ಔಷಧಾಲಯವನ್ನು ನೋಡಿದೆನು. ಅಲ್ಲಿ ವಿಚಾರಿಸುವಾಗ್ಯೆ ಅಸಂಖ್ಯಾತ ರೋಗಿಗಳು ಬರುತ್ತಾರೆಂದೂ, ತಿಂಗಳಿಗೆ ಸುಮಾರು ಐದು ನೂರು ರೂಪಾಯಿಯ ಔಷಧಿಯು ಖರ್ಚಾಗುತ್ತದೆಂದೂ ತಿಳಿದೆನು. ಇದನ್ನು ಕೇಳಿ ನನಗೆ ಸಂತೋಷವೂ ಅತ್ಯಂತ ವ್ಯಸನವೂ ಆಯಿತು. ಸಂತೋಷವೇತಕ್ಕೆಂದರೆ ಜನರು ಔಷಧಿಯ ಬೆಲೆಯನ್ನರಿತು ಕ್ರಯ ಕೊಟ್ಟಾದರೂ ಪಡಕೊಳ್ಳುವುದಕ್ಕೆ ಮತ್ತು ಆ ಆಸ್ಪತ್ರೆಯನ್ನು ಮಾಡಿಗಿದ ಮಿ ರಾಮಸ್ವಾಮಿ ಐಯ್ಯರವರ ಪ್ರಯತ್ನಕ್ಕೂ. ವ್ಯಸನವೇತಕ್ಕೆಂದರೆ, ನಮ್ಮ ಡಿಸ್ಟ್ರಿಕ್ಟು ಬೋರ್ಡು ಆಸ್ಪತ್ರೆಗಳ ಸ್ಥಿತಿಯನ್ನು ವಿಚಾರಿಸಿ, ಒಂದೊಂದು ಡಿಸ್ಟ್ರಿಕ್ಟು ಬೋರ್ಡು ಆಸ್ಪತ್ರೆಗೆ ನಾಲ್ಕು ನೂರು ರೂಪಾಯಿಯಿಂದ ಸಾವಿರ ರೂಪಾಯಿ ವರೆಗೆ ವರ್ಷಕ್ಕೆ ಖರ್ಚು ಮಾಡುತ್ತಾರಂತೆ. ಈ ಔಷಧಿಯು ಜನರಿಗೆ ಸಾಕೋ, ಸ. ಅ ಸರ್ಜನ್ನರಿಗೆ ಇಷ್ಟು ಅಲ್ಪ ಔಷಧಿಗಳನ್ನಿಟ್ಟುಕೊಂಡು ಮನಃಪೂರ್ತಿಯಾಗಿ ಕೆಲಸ ಮಾಡಲು ಅನುಕೂಲವಿದೆಯೋ ಎಂಬ ಪ್ರಶ್ನೆಯು ನನ್ನಲ್ಲಿ ಹೊಳೆಯಿತು. ಗೋಣಿಕೊಪ್ಪಲು ಶ್ರೀಮಂಗಲದಲ್ಲಿ ಡಿ. ಬೋ. ಆಸ್ಪತ್ರೆಗಳಿದ್ದಾಗ್ಯೂ ಇವು ಮಧ್ಯಭಾಗವಾದ ಪೊನ್ನಂಪೇಟೆಯಲ್ಲಿ ತಿಂಗಳಿಗೆ ಈ ರೀತಿ ಔಷಧಿ ಖರ್ಚಾಗುವದನ್ನು ಕೇಳಿದವೆ ಯಾರಿಗೆ ತಾನೇ ಆಶ್ಚರ್ಯವಾಗದಿರದು. ಡಿ. ಬೋ. ಅಧಿಕಾರಿಗಳು ಅಷ್ಟು ಚಿನ್ನ ಮೊತ್ತವನ್ನು ಮಂಜೂರುಮಾಡಿ ದೊಡ್ಡ ಹೆಸರಿನಿಂದ ಆಸ್ಪತ್ರೆ ಎಂಬುದನ್ನಿಡುವುದಕ್ಕಿಂತ ಮುಚ್ಚುವುದೇ ಲೇಸಲ್ಲವೇ. ಅನೇಕ ವೇಳೆ ಡಿ. ಬೋ. ಆಸ್ಪತ್ರೆಯಲ್ಲಿ ಔಷಧಿ ಕೇಳಿದರೆ, ತಕ್ಕ ಔಷಧಿಯೇ ಇಲ್ಲವೆಂದು ಹೇಳುತ್ತಾರೆ. ಇಂಥಾ ಕೊರತೆಯನ್ನು ನಮ್ಮ ಈಗಿನ ಸಿವಿಲ್ ಸರ್ಜನರು ದಯವಿಟ್ಟು ಪರ್ಯಾಲೋಚಿಸಿ, ಪ್ರತಿ ಡಿ. ಬೋ. ಆಸ್ಪತ್ರೆಗೂ ಧಾರಾಳವಾಗಿ ಔಷಧಿ ಒದಗಿಸಬೇಕಾಗಿ ನನ್ನ ಕೋರಿಕೆ. ಇದು ಆಗದ ಪಕ್ಷ ಆಸ್ಪತ್ರೆಗಳನ್ನಾದರೂ ಮುಚ್ಚಿಬಿಟ್ಟರೆ, ರೈತರು ಸ್ವಂತ ಔಷಧಿಯನ್ನು ಉಪ್ಪಿತಕ್ಕೆ ತರುವುದಕ್ಕೆ ಪ್ರಯತ್ನ ಪಟ್ಟಾರು.

ವೆಂಕಟ

ಒಬ್ಬ ಮಡಿಕೇರಿ ನಿವಾಸಿಯ ಹಿಗ್ಗುವಿಕೆ

ಅಯ್ಯಾ,

ಒಂದು ಬಾರಕ್ಕೆ ಮೊದಲು ನಾನೊಬ್ಬ ಮಡಿಕೇರಿ ನಿವಾಸಿಯಾದ ದೊಡ್ಡ ಮನುಷ್ಯನೊಡನೆ ಸಂಭಾಷಿಸಿದೆನು. ಸಂಭಾಷಣೆಯು ಪ್ರಾರಂಭವಾದೊಡನೇ ಸ್ವರಾಜ್ಯವು ನಮಗೇತಕ್ಕೆ ಬೇಕು. ಅದು ನಮಗೆ ಇದ್ದೇ ಇದೆ ಎಂದು ಹೇಳಿದರು. ಅದಕ್ಕೆ ನಾನು ಅದು ಹೇಗೆ ಎಂದು ಪ್ರಶ್ನೆಮಾಡಿದೆನು. ಅವರು ಹೇಳಿದ್ದೇನೆಂದರೆ—"ನೋಡು, ಸರದಾರರು ಯಾವಾಗ

ಲೂ ನಮ್ಮನ್ನು ಮಿತ್ರಭಾವದಿಂದ ಕಾಣುತ್ತಾರೆ ನಮ್ಮೊ ಡನೆ ಆಡಲಿಕ್ಕೂ, ಕುಡಿಯಲಿಕ್ಕೂ, ಎಲ್ಲಾ ಸಂದರ್ಭಕ್ಕೂ ಏನೂ ಭೇದವಿಲ್ಲದೆ ಕೂಡ್ಯಾಡುತ್ತಾರೆ ಅದ್ದರಿಂದ ನಾವೂ ಅವರೂ ಯಾವಾಗಲೂ ಸರಿಯೇ. ನಮ್ಮಲ್ಲಿ ಅವರು ವರ್ಣ ಭೇದವನ್ನುಂಟು ಮಾಡಲಿಲ್ಲ. ಅವರು ನಮ್ಮನ್ನು ಇಷ್ಟು ಸಂತೋಷದಿಂದ ನೋಡುತ್ತಿರುವಾಗ ಅವರಲ್ಲಿ ತಿರಸ್ಕಾರಮಾಡಿ ಕ್ಕೊಂಡು, ಸ್ವರಾಜ್ಯದ ಪ್ರಾಶಸ್ತ್ಯವು ಒಂದೇ ಪ್ರಾಂತದಲ್ಲಿ ವೇ ಎಂಬುದಾಗಿ ಹೇಳಿ ತನ್ನ ಸಂಭಾಷಣೆಯನ್ನು ತೀರಿಸಿದರು.

ಈ ಸಂಭಾಷಣೆಯನ್ನು ನಾನೊಬ್ಬನೇ ಯೋಚಿಸುತ್ತ ಸುರುಮಾಡಿದೆನು. ಯೋಚಿಸುವಾಗ ಚೀಫ್ ಕಮಿಶನರಂತ ಮಾನ್ಯ ಅಧಿಕಾರಿಗಳು ನಮ್ಮ ದೇಶವು [illegible] ದೇಶ ವೆಂದೂ, ಐಶ್ವರ್ಯವಂತರಾದೂ [illegible] ವರೆಂದೂ, ದೇಶವ್ಯಾಪಿಯೂ ಇಲ್ಲವೆಂದೂ [illegible] ಸಂ ಭಾಷಕರಂತ ಅನೇಕ ಮಹನೀಯರು ಪತ್ರಿಕೆಗಳಿಗೆ ಚೀಫ್ ಕಮಿ ಶನರು ಒಂದೊಡನೇ [illegible] ಇಟ್ಟಿರುವ ಕೂ ಡಲೇ, ದೇಶದ [illegible] ಸ್ಥಿತಿಯನ್ನು ವಿಚಾರಿಸುವ ಪದ್ಧತಿಯುಂಟು [illegible] ಮಹನೀಯರು ದೇಶದ ಸ್ಥಿತಿಯು ಚೆನ್ನಾಗಿದೆ [illegible] ಐಶ್ವರ್ಯವಂತ ಕೊ ಡಗಿನ [illegible] ಒಳ್ಳೆದ. ಸರ್ಕಾರೂ [illegible] ಯಾವ ಕರದ ಪರಾ [illegible] ದೂ [illegible] ಹೇಳುತ್ತಿರುವುದನ್ನು ಸಂ ಭಾಷಕರಂತ [illegible] ಬಾಯಿಯಿಂದಲೇ ಕೇಳಿದ್ದೇನೆ.

ಇದರ [illegible] ಪತ್ರಿಕೆಯಲ್ಲಿ ಪ್ರಕಟವಾದರೊಂದು ನಮ್ಮಲ್ಲಿ [illegible] ಮಹಿಳೆಯರ ಮತ್ತು ಮಹನೀಯರ [illegible] ಮಾಡಿದಾಕ್ಷಣವೇ, [illegible] ರೂ [illegible] ಇರಲಿಕ್ಕಿಲ್ಲ ಸಂಭಾಷಕರಂತ ಅನೇ ಕ ಮಹನೀಯರು ಪತ್ರಿಕೆಯವರೇ ಕೊಡಗು ದೇಶವೆಂದೂ, ಪತ್ರಿಕೆಯವರಿಗೆ ಯುಕ್ತತೋರುವ ಎಲ್ಲಾ ಸಂಗತಿಯು ದೇಶದವರಿಗೆ ಸಂಯೋಗಲೇ ಬೇಕೆಂಬುದಾಗಿ ಹೇಳಿಕೊಳ್ಳುವಂತ ಮಾತು ನನ್ನ ಕಿವಿಗೆ ಅನೇಕಾವರ್ತಿ ಕೇಳಿದ್ದೇನೆ

ಇಂಥಾ ತಪ್ಪು ಅಭಿಪ್ರಾಯದಿಂದ ಕೂಡಿದ ಪತ್ರಿಕೆ [illegible] ಮ ಅನೇಕ ಮಹನೀಯರಿಗೆ ನನ್ನದೊಂದು ಚಿಕ್ಕ ಬಿನ್ನಹವೇ ನೆಂದರೆ, ದಯವಿಟ್ಟು ಗ್ರಾಮಗಳ ಕಡೆಗೆ ತಿರುಗಿ ನೋಡಿ ಗಳ್ಳಿನ [illegible] ರೈತರ ಸ್ಥಿತಿಗತಿಯನ್ನು ವಿಚಾರಿಸಿ ತಕ್ಕ ಅನು ಕೂಲವನ್ನುಂಟು ಮಾಡಿ [illegible] ಗ್ರಾಮದ ರೈತರೇ ದೇಶ ಬಲವೆಂದು ತಿಳಿದು [illegible] ಗ್ರಾಮದ ಸ್ಥಿತಿಯನ್ನು [illegible] ಪಟ್ಟಣವನ್ನು ಮಿತ್ರಾಶೃಂಗರಿಸಿದರೆ, ಜೀವವಿಲ್ಲದ ಶರೀರವನ್ನು ಶೃಂಗರಿಸಿದಂತೆಂದು ತಿಳಿದು [illegible] ದಲ್ಲಿ ಶ್ರೇಷ್ಠ ವಾದ ದೇವರ ಸೇವೆಯು ಮಾನವ ಸೇವೆಯು ಯಾವ ಗ್ರಾಮದಲ್ಲಾದರೂ ಹೋಗಿ ರೈತರ ಅನುಕೂಲವಿರುವ ಯಾವ ಕಲಸವನ್ನೂ ಮಾಡದೆ [illegible] ರೈತರು ಸೋಮಾರಿ ಗಳೆಂದು [illegible] ಕೊಡಗಿನ ರೈತರು [illegible] ದ್ರರು ಅವರು ತಕ್ಕ ರೀತಿಯಲ್ಲಿ ನಡೆಯ ಕತಾಕ್ಷಣವೇ ನಡ ತೆಯನ್ನು ತಿದ್ದಿಕೊಳ್ಳಬಲ್ಲರು. ಇದಕ್ಕೆ ಬದಲಾಗಿ ಯಾವ ದೊಂದು ಅಭಿಪ್ರಾಯವನ್ನು ಮಾಡಲಿಕ್ಕಿದ್ದರೂ, ಹಳ್ಳಿಯವ ರೆಂಬ ತುಚ್ಛಭಾವದಿಂದ ದಯವಿಟ್ಟು ನೋಡಬೇಡಿ.

ಸಂಭಾಷಕ

ಮಾರಾಟಕ್ಕೆ! ಸ್ಥಿರಆಸ್ತಿ!! ಮಾರಾಟಕ್ಕೆ!!!

ವೀರರಾಜೇಂದ್ರಪೇಟೆಗೆ ಒಂದು ಮೈಲಿ [illegible] ಕ್ಕೆ [illegible] ರು ಗ್ರಾಮದಲ್ಲು ರಸ್ತೆ ಬಾಜು ಸುಮಾರು 14 ಎಕರೆ ಸಾ ಗು ಬಾವಿಯೂ ಅದಕ್ಕೆ ಸೇರಿದ ಸುಮಾರು 16 ಎಕರ ಬಾ ಣೆ ಬಾಗವೂ ಮತ್ತು ಒಂದು ಕಾಫೀತೋಟ [illegible] ಹೆಂಚು ಹಾಕಿದ ಮನೆಯೂ ವಿಕರಿಗೆ ಇವೆ.

ಹೆಚ್ಚಿನ ಸಂಗತಿಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿ ಯಬಹುದು.

ಜೆ ಗಣು ರಾಜಾರಾವ್,
ಪ್ಲೀಡರ್
ವೀರರಾಜೇಂದ್ರಪೇಟೆ

೩-೨

ARMS & AMMUNITION MART.

Mahomedally-Noorbhoy.



337, Abdul Rehman, Street, near Crawford Market, BOMBAY.

Telegraphic Address :- "SHOOTER" Bombay.

[illegible] Please write for latest Catalogues.

ಎಷ್ಟು ಲಕ್ಷಣವಾಗಿದೆ! ನೋಡಿರಿ!

ನಮ್ಮ ಟಿಕ್ ಟಾಕ್ (ರಿಜಿಸ್ಟರ್ಡ)



ಎಂಬ ಗೋಡೆಗೆ ತ ಗಲಿಸುವ ಗಡಿಯಾರವು ಸಂಪೂರ್ಣದಂತ ಪ್ರ ಖ್ಯಾತಿಗೊಂಡಿದೆ. ಸರಿ ಯಾದ ಗಂಟೆಯನ್ನು ತೋರಿಸುವ ಉತ್ತಮ ವಾದ ಗಡಿಯಾರು ಎ ಷ್ಟರ ಮಟ್ಟಿಗುಮಂಥಾ ದ್ದು ಯಾವಾಗಲೂ ಟಿಕ್ ಟಾಕ್ ಗಡಿಯಾ ರವನ್ನೇ ತರಿಸಿರಿ ಕ್ರ ಯ ರೂ' 3—0—0 ಮಾತ್ರ.

ಜರ್ಮನ್ ಎಲಾರ್ಮ್ ಗಡಿಯಾರು.

ಕ್ರಯವು ಬಹಳ ಕಡಿಮೆ ಮಾ ಡಲ್ಪಟ್ಟಿದೆ. ಹೆಚ್ಚು ಪ್ರಯೋಜನ ದ, ಕಡಿಮೆ ಕ್ರಯದ ಟಯಿಮ್ ಪೀಸ್ 4 ಇಂಚು ಡಯಲಿನ ಸಿ ಕ್ಕಲ್ ಗಡಿಯಾರು 30 ಗಂಟೆ ವ ರೆಗ ಬೀಗಕೊಡಬೇಕಾಗಿಲ್ಲ ಹ್ಯಾ ಗಿ ಇಟ್ಟರೂ ನಡೆಯುತ್ತದೆ ಪ್ರ ಯೋಣಕ್ಕೆಲ್ಲೇ ಗಡಿಯಾರು. ಇ ದು ವಿದ್ಯಾರ್ಥಿಗಳಿಗೂ, ಸಮಯದ ಬೆಲೆ ಅರಿತವರಿಗೂ ಬಹಳ ಉಪ ಯೋಗವುಳ್ಳದು. ರಾತ್ರಿ ಕೆಲಸದವರಿಗೂ ಉತ್ತಮವಾದದ್ದು ಎಲಾರ್ಮ್ ಹೊಡೆಯಬೇಕೆಂದಿರುವಾಗ ಡಯಲಿನ ಮೇಲಿ ರುವ ಸಣ್ಣ ಕೈಯನ್ನು ಹಿಂದುಗಡೆಯಿಂದ ತಿರುಗಿಸಿದರೆ ಕಾ ಲಕ್ಕೆ ಸರಿಯಾಗಿ ಎಲಾರ್ಮ್ ಕೊಡುತ್ತದೆ ಮೂರು ವರ್ಷ ದ ಭರವಸ ಇದೆ. ಕ್ರಯ ರೂ 5 ಮಾತ್ರ.

22 ಕ್ಯಾರೆಟ್ಟಿನ ಚಿನ್ನದ ಹೊದಿಕೆಯ ಕೈ ಗಡಿಯಾರ.

ಉತ್ತಮವಾದ ಸ್ವಿಸ್ ಸಾಮಾನುಗಳಿಂದ [illegible] ದ ಹೊ ಸ ನಮೂನೆಯ ಗಡಿಯಾರವಿದು. ಕ್ರಿಸ್ಟಲ್ ಕನ್ನಡಿಯು ಅರೇ

ಬಿಕ್ ಯೂ ರೇಡಿಯಮ್ ಅಂಕಗಳುಳ್ಳದ್ದು ಇದರ ಕಲಸವು ಎಂದಾ ಪರೀಕ್ಷಿಸಿಯ ನ್ನು ತೃಪ್ತಿಪಡಿಸುವುದು ಇದು ಪ್ಲಾಟಿ ನ ಚಿನ್ನದಂತೆ ಕಾಣುತ್ತದೆ ನೋಟಕ್ಕೆ ಬಹಳ ಅಂದವಾಗಿಯೂ ಕರಾರು ಗಂಟೆ ಕೊಡುವುದಾಗಿಯೂ ಇದೆ ಐದು ವ ರ್ಷದ ಖಾತ್ರಿ ಕ್ರಯ ರೂ. 12—8—0

18 ಕೇರೆಟ್ ರೋಲ್ಡ್‌ಗೋಲ್ಡ್ ರಿಸ್ಟ್ ವಾಚು ರೂ. 7

ಎಲಾರ್ಮ್ ಮತ್ತು ರಿಪೀಟರ್ ಇರುವಂಥ ಅಮೇರಿಕದ "ಬಿಗ್ ಬೆನ್" ಗಡಿಯಾರ ರೂ 10—8—0

ಗಂಟೆ ಮತ್ತು ಅರ್ಧಗಂಟೆ ಹೊಡೆಯುವಂಥಾ "ಬೇಬಿ' ಗಡಿಯಾರ. ರೂ. 7—0—0

ಮೇಲಿನ "ಬೇಬಿ' ಗಡಿಯಾರು ಎಲಾರ್ಮ್ ಸಮೇತ ರೂ 8—0—0

ಮೂರುವರ್ಷದ ಖಾತ್ರಿ.

ಜರ್ಮನ್ ಎಲಾರ್ಮ್ ಗಡಿಯಾರು. ರೂ 5.

ಜರ್ಮನ್ ಸೀಗ್ನೊ ಎಲಾರ್ಮ್ ಗಡಿಯಾರು. ರೂ. 5.

ಜರ್ಮನ್ ಡಬ್ಬಲ್ ಬೆಲ್ ಎಲಾರ್ಮ್ ಟಯಿಮ್‌ಪೀಸು ರೂ· 6—0—0.

ಲೋಕಪ್ರಸಿದ್ಧವಾದ "ಬಿ" ಟಯಿಮ್ ಪೀಸ್. ರೂ. 2—8—0.

ಜರ್ಮನ್ ಫೌಂಟನ್‌ಪೆನ್ 14 ಕೇರೆಟ್ ರೋಲ್ಡ್‌ಗೋಲ್ಡ್ ನಿಬ್ಬು ರೂ. 2—8—0.

Apply to—
Post Box 105.

V. S. Watch Coy
MADRAS.

12—೫೪

ನೋಟೀಸು

ಎಲ್ಲಾ ಸಹಕಾರಿಸಂಘಗಳಿಗೂ ತಿಳಿಯಪಡಿಸುವದೇ ನಂದರೆ. — ಬ್ಯಾಂಕಿನಿಂದ ಸಾಲಕ್ಕೆ ಬರೆಯುವ ಅರ್ಜಿಗ ಳನ್ನು ಬ್ಯಾಂಕಿನಿಂದ ಕೊಡಲ್ಪಡುವ ಫಾರಂಗಳಲ್ಲೇ ಬರ ಕೊಳ್ಳಬೇಕು. ಖಾಲಿಕಾಗದದಲ್ಲಿ ಅರ್ಜಿ ಬರಕೊಂಡರೆ ಗಮ ನ ಕೊಡಲಾಗುವದಿಲ್ಲ.

ಸಿ ಯಮ್. ವೆಂಕಪ್ಪಯ್ಯ.
ಗೌ. ಕಾರ್ಯದರ್ಶಿ.

ತಾ. 2—5—1925.

ಕರ್ಣಾಟಕ

ಜಳೆಜ್ವರ, ಸುಳೀಯ ಜ್ವರ, [illegible] ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಚಿಲಿ ಬಾಟ್ಲಿಯೊಂದಕ್ಕೆ ರು. ೦—೧೪—೦

ಟಪ್ಪಾಲು ಚಾರ್ಜು ಬೇರೆ

ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು. ೯—೨—೦

ಏಜಂಟರು ಬೇಕು, ಕೊಡಗಿನ ಸ್ಕೂಲ್ ಮಾಸ್ತರುಗಳು ತ ಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ.

12—೪

ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	..	9080
ಬಡ್ಡಿಬರುವ ಠೇವಣಾತಿ	....	76 000

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗ ಳಿಗೆ ಮಾತ್ರ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ [illegible] ತಿಗಳಿಗ ಶೇಕಡ ಸಾಲಿಯಾನ ರೂ 6—4—0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವ ಣಾತಿಗಳಿಗೆ ಶೇಕಡ ಸಾಲಿಯಾನ ೫ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೊಡಂದೇರ ಕುಟ್ಟಯ್ಯನವರು, ರಾಯ್ ಬಹದ್ದೂರ್.

ಟ್ರೆಜರರ್. ಯಂ ಭುಜಂಗರಾಯರು ಬಿ.ಎ, ಬಿ.ಎಲ್.

ಸಿಕ್ರೆಟರಿ.
ಸಿ ಯಮ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್

ತಾರೀಕು 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.— ವಿದ್ವಾನ್ ಕೆ. ಶೇಷಶಾಸ್ತ್ರೀ ಆಯು ರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯ ದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿ ಕೆಯಿದು. ಇದೇ ಆರೋಗ್ಯವಂತನಾಗಿ ಬಹುಕಾಲ ಜೀ ವಿಸಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿ ಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊ ಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡು ದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪ ತ್ರಿಕೆಯನ್ನು ಓದಲೇ ಬೇಕು. ವಿಶೇಷವೇನೆಂದರೆ ಮನೆಯಲ್ಲಿ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾ ವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ —

ಮೇನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್

Printed & published by Kodan[illegible] App[illegible] R.B., Chairman, Board Di[illegible], at [illegible] "Kodagu" Press, Merc[illegible] "Kodagu" [illegible] " Ltd.

1925-26

Reg. No. M. 1550.

If not a loved please return to KODAGU OFFICE MERCARA.

ಕೊಡಗು.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಎಡಿಟರ್ [illegible]

ಸಂಪುಟ ೫] ಕೊಡಗು, [illegible] [ಸಂಚಿಕೆ [illegible]

ಆರೋಗ್ಯ ಚಂದ್ರಿಕೆ.

ಮದ್ರಾಸ್

ಸಂಪಾದಕರು ಡಾಕ್ಟರ್ [illegible]

[illegible]

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು [illegible] ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ಕೊಡುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ [illegible] ಗ್ರಂಥವಾಗುವುದು ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0 ಬಿಡಿ ಪ್ರತಿಗೆ 1ಕ್ಕೆ 0-2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು

ಪತ್ರವ್ಯವಹಾರಕ್ಕೆ 'ಆರೋಗ್ಯ ಚಂದ್ರಿಕೆ 323 ತಂಬುಶೆಟ್ಟಿ ಬೀದಿ, ಮದ್ರಾಸ್

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1 ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು 2 ಲೇಖನಗಳನ್ನು ಸಂಪಾದಕರು 'ಕೊಡಗು ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು 3 ವಾರ್ತಾದಾರರ ಅಭಿಪ್ರಾಯಕ್ಕೆ ಈ ಪತ್ರಿಕಾಕರ್ತರು ಜವಾಬ್ದಾರರಲ್ಲ 4 ನಮ್ಮಲ್ಲಿಗೆ ಕಳುಹಿಸುವ ವಾರ್ತೆಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು 5 ಪ್ರಕಟಿಸಲಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾ ಬಾಕಿ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ ಮತ್ತು ಶೇರು ಹಣ ಸಲ್ಲಿಸಲಿಕ್ಕಿರುವವರೂ ದಯವಿಟ್ಟು ಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಮಡಿಕೇರಿ, **ಮೇನೇಜರ್,**

13-8-2[illegible] **ಕೊಡಗು' ಲಿಮಿಟೆಡ್.**

Health is Wealth.

[illegible] strength and [illegible] ration from [illegible] rail and a stamp [illegible] photographs with full particulars [illegible]

Director Physical Culture

P O BASAVANAGUDI

Bangalore City

The Clinton Cycle complete with bell tool bag, tools and pump cast Rs 135

Mamoties and Digging forks sold at reduced prices to clear stock

Spencer & Co. Ltd.,

MERCARA & POLLIBLTTA.

31

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ [illegible] ಅರ್ಜಿಗಳ ಪ್ರಿಂಟಾದ [illegible] ಫಾರಮುಗಳೂ ಮತ್ತು ಅಪ್ಲೀಕೇಶನ್ (complaint) ಫಾರಂಗಳೂ [illegible] ಮಾರಾಟಕ್ಕೆ ತಯಾರಿವೆ ಬೇಕಾದವರು 'ಕೊಡಗು' ಆಫೀಸಿನಿಂದ ಪಡೆಕೊಳ್ಳಬಹುದು

ಮಡಿಕೇರಿ

17-9-24 ಮೇನೇಜರ್

Old Students' Quarterly.

Editor Mr P B Me[illegible] MLC

Vol II No [illegible]

Subscription—Year [illegible]

Most de[illegible]

Read and en[illegible]

CONTENTS

National we[illegible]—
(includes thoughts [illegible] Free [illegible]
Compulsory education in Coorg

2 Swarajya—A Kanarese Drama
3 Are Coorgs K[illegible]?
4 Ancient Coorg
5 Peep into Heavens
6 Frivolity page
etc etc

If you become a subscriber [illegible] will get a very beautiful calendar for [illegible] free—absolutely free!

Apply to—

Manager

O S Association

Mercara

ನೋಟೀಸು

ಎಲ್ಲಾ [illegible] ಸಂದರ್ಭ — ಬ್ಯಾಂಕಿನಿಂದ [illegible] ಕನ್ನು ಬ್ಯಾಂಕಿನಿಂದ ಕೊಡಲ್ಪಡುವ [illegible] ಕೊಳ್ಳಬೇಕು ಬಾಕಿ ಕಾಗದದಲ್ಲಿ [illegible] ನ ಕೊಡಲಾಗುವದಿಲ್ಲ.

ಎ. ಯಮ್. ವೆಂಕಟ್ಟಯ್ಯ

ತಾ. 2—5—1925, ಗೌ. ಕಾರ್ಯದರ್ಶಿ.

ಪ್ರಕಟಣೆ.

[illegible]

[illegible]

ಮಡಿಕೇರಿ [illegible]

[illegible]

ಕೊಡಗು [illegible]

[illegible]

ಕೊಡಗು [illegible]

ನೋಟೀಸು

[illegible]

[illegible]

[illegible]

ಕೊಡಗಿನ [illegible]

[illegible] "ಕೊಡಗು" ಲಿಮಿಟೆಡ್

"ಕೊಡಗು"

ಸ ೧೯೨೫ನೇ ಇಸವಿ ಜೂನ್ ೫ನೇ ಶುಕ್ರವಾರ

ಸ್ವಾ[illegible]ಯ.

ಈ ದಿನ ತನ್ನ ಐದನೇ ವರುಷಕ್ಕೆ ಕಾಲಿಕ್ಕಿ 'ಕೊಡಗು' ಪತ್ರಿಕೆಯನ್ನು ಶಿಶುತ್ವದಲ್ಲಿ ಕಾಪಾಡಿ ಬಾಲ್ಯಾವಸ್ಥೆ[illegible] ನಮ್ಮ ವಾಚಕ ಮಹಾಶಯರಿಗೆ ನಮ್ಮ ಅಭಿನಂದನೆಗಳು. ದೇಶೀಯರ ಶಿಶುವಾದ 'ಕೊಡಗು' ಇಷ್ಟು ವರುಷಗಳವರೆಗೆ ಕಲಿತು ಈಗ ಚನ್ನಾಗಿ ಮಾತಾಡಬಲ್ಲುದು. ಸಂಗತಿಗಳನ್ನು ಇದ್ದಕ್ಕಿದ್ದ ಹಾಗೆಯೇ ವಿವರಿಸಲು ಜ್ಞಾನವನ್ನೂ ಧೈರ್ಯವನ್ನೂ ಸಂಪಾದಿಸಿದೆ. ಇಂಥಾ ಜ್ಞಾನ ಮತ್ತು ಧೈರ್ಯ ಸಂಪಾದನೆಯಲ್ಲಿ ಎಷ್ಟೊ ಕಷ್ಟ ನಿಷ್ಟುರಗಳಿಗೆ ಈಡಾಗಿ[illegible] ಎಂಬುದು ನಮ್ಮ ವಾಚಕರಿಗೆ ತಿಳಿಯದ್ದಲ್ಲ. ಇನ್ನೂ ನಮ್ಮ ಮುಂದೆ ಎಷ್ಟು ಗುಡ್ಡ ಬೆಟ್ಟಗಳೂ ಹಳ್ಳ ಕೊಳ್ಳಗಳೂ [illegible] ಆದರೆ ಶಿಶುತ್ವದಲ್ಲಿ ಚನ್ನಾಗಿ ತ್ರಾಣ ಇಲ್ಲದೆ ಇರುವಾಗ ಎಲ್ಲವನ್ನೂ ದಾಟಲು ಸಹಾಯ ಮಾಡಿದ ನಮ್ಮ ಶೇರುದಾರರು ಮತ್ತು ಚಂದಾದಾರರು ತಮ್ಮ ಸಹಾನುಭೂತಿಯ[illegible] ನಮ್ಮ ಕಡೆಗೆ ಇನ್ನೂ ಹೆಚ್ಚಿಸುವರೆಂಬ ನಂಬಿಕೆಯಿಂದ ಮುಂದೆ ಸಾಗಲು ಸೊಂಟಕಟ್ಟಿದ್ದೇವೆ. ನಾವು ನಮ್ಮ ದೇಶೀಯರ ಮೇಲೆ ಇಟ್ಟಿರುವ ವಿಶ್ವಾಸವು ಸುಳ್ಳಾಗಲಿಕ್ಕಿಲ್ಲವೆಂ[illegible] ನಮ್ಮ ಕಳೆದ ನಾಲ್ಕು ವರುಷಗಳ ಅನುಭವದಿಂದ ಧೈರ್ಯವಾಗಿ ಹೇಳಬಲ್ಲೆವು.

ವರ್ತಮಾನ ಪತ್ರಿಕೆಗಳನ್ನು ನಡಿಸುವ ಜವಾಬ್ದಾರಿಯು ಸಾಧಾರಣವೇನೂ ಅಲ್ಲ. ದೇಶದಲ್ಲಿ ಹಲವು ಜನರು ಇರು[illegible]ದರಿಂದ ಹಲವು ಅಭಿಪ್ರಾಯಗಳು ಇರಬೇಕಾದುದರಿಂದ [illegible]ಕೆಯಲ್ಲಿ ಬರೆಯಲ್ಪಡುವ ಪ್ರತಿಯೊಂದು ಲೇಖನ[illegible] ಎಲ್ಲರಿಗೂ ತೃಪ್ತಿಕರವಾಗಲಿಕ್ಕಿಲ್ಲ. ಆದರೆ ಹೆಚ್ಚಿನ ಜನಸಂಖ್ಯೆಯ ಹಿತವನ್ನು ಕಾಯುವುದೇ ನಮ್ಮ ಪತ್ರಿಕೆಯು [illegible] ಸಾಧಿಸುತ್ತಿರುವ ಉದ್ದೇಶವಾಗಿದೆ. ಪತ್ರಿಕೆಗಳ ಜವಾಬ್ದಾರಿಯನ್ನು ಕುರಿತು ಬ್ರಿಟನ್ನಿನ ಪ್ರಧಾನ ಮಂತ್ರಿಯಾದ [illegible]ಬಾಲ್ಡ್ವಿನ್ನರವರು ತಮ್ಮದೊಂದು ಭಾಷಣದಲ್ಲಿ ಹೀಗೆ ಸೂಚಿಸಿರುವರು. 'ಈಗಿನ ಕಾಲದಲ್ಲಿ ವರ್ತಮಾನ ಪತ್ರಿ[illegible] ಸರಕಾರದ ಒಂದು ಮುಖ್ಯವಾದ ಭಾಗವಾಗಿದೆ. ಪತ್ರಿಕೆ[illegible] ರಾಜಕೀಯ ವಿಷಯಗಳಿಲ್ಲದೆ ನಡೆಯಬಹುದು, ಆದರೆ ರಾ[illegible]ಯ ಕಾರ್ಯವು ಪತ್ರಿಕೆಗಳಿಲ್ಲದೆ ಸಾಗಬಾರದು, ಯಾಕಂದರೆ[illegible] ದಿನ ಕಾಲದಲ್ಲಿ ರಾಜಕೀಯ ಮುಂದಾಳುಗಳು ಕೆಲಸ ನಡಿ[illegible], ಅವರ ಮೇಲೆ ಪತ್ರಿಕೆಗಳು ಟೀಕೆ ಬರೆದವು. ಆಗಿನ ಕಾಲ[illegible] ಪತ್ರಿಕೆಗಳು ರಾಜಕೀಯ ಮುಂದಾಳುಗಳ ಸೂಚನೆಯಂತೆ [illegible]ನಡೆಸಲ್ಪಡುತ್ತಿದ್ದವು. ಆದರೆ ಈಗ ಹಾಗಿಲ್ಲ, [illegible]ಂದ ಪತ್ರಿಕಾಕ[illegible]ರಾದ ಮಿ ಸ್ಪಂಡರವರ ಮಾತನ್ನು ತಕ್ಕಮಟ್ಟಿಗೆ ನಿಜವಿದೆ. ಅನೇಕ ಪತ್ರಿಕಾಕರ್ತರು ತಮ್ಮ ಮನದಾ[illegible] ದಾರರಂತೆ ಯೋಚಿಸ್ವುದು ನಿಜವಾಗಿದೆ, ಆದರೆ ರಾಜಕೀಯ ಮುಂದಾಳುಗಳು ಹುಮತದಂತೆ ಯೋಚಿಸುವ ಸಂದರ್ಭಗಳು ಎಷ್ಟೋ ಇವೆ, ಒಳ್ಳೆ ಪತ್ರಿಕಾಕರ್ತರು ಸತ್ಯ ಸಂಗತಿಯ ಹಲವು ತೋರಿಕೆ[illegible] ಮಾತ್ರ ಪ್ರಕಟಿಸುತ್ತಾರೆಂದು. ರಾಜಕೀಯ ಧುರೀಣರು [illegible]ನಾರಿ ದೂರಿದರೂ, ಸತ್ಯಕ್ಕೆ ಅನೇಕ ತೋರಿಕೆಗಳಿವೆ ಎಂಬ[illegible], ಸತ್ಯವನ್ನು ಸಂಪೂರ್ಣವಾಗಿ ಹೇಳುವದು ಯೋಚಿಸು[illegible] ಸುಲಭವಲ್ಲವೆಂಬ ದೂರು ಸುಳ್ಳಲ್ಲ. ನಡೆದ ಒಂದು ಸಮಾ[illegible]ರವನ್ನು ಒಂದೇ ತರವಾಗಿ ವಿವರಿಸುವ ಇಬ್ಬರು ಇಲ್ಲವೇ [illegible] ಮತ್ತು ಪಾರ್ಲಿಮೆಂ[illegible] ಮೆಂಬರುಗಳ ತಪ್ಪುಗಳನ್ನು [illegible]ಚಿಸಿದರೆ ಪತ್ರಿಕೆಗಳ [illegible]ಮರ್ಶದ ಕೆಲಸವು ನನಗೆ ಸಲವುಸ್ಟು ಆಶ್ಚರ್ಯವನ್ನುಂ[illegible]ಗಟ್ಟಿ[illegible]ಡುತ್ತದೆ. ಪ್ರಜಾಪ್ರತಿನಿಧಿ ಸರ್ಕಾರವು ಸ್ಥಾಪಿತವಾ[illegible]ಬುದ್ದಿ[illegible]ದರೆ, ಜನ ಸಮುದಾಯವನ್ನು ಎ[illegible] [illegible]ಚ್ಛಾ[illegible]ದವ[illegible]ಯನ್ನು ಹುರಿದುಂಬಿಸಬೇಕಾದರೆ ಪತ್ರಿಕೆಗಳು [illegible]ರಿಂದಾ ಹ[illegible] ಹೊಟ್ಟೆಗಿಗ ಸೇರುವ ಜನರು [illegible] [illegible]ಟ್ಟಿಸುವ ಮತ್ತ[illegible]ಗುವುದಿಲ್ಲ. ಈಗಿನಷ್ಟು ಅಭಿಪ್ರಾಯ [illegible] [illegible], ಅದನ್ನು ಹುರಿದಿಸು[illegible] [illegible]ತ್ರ್ಯವು, ಮತ್ತು[illegible]ರ ಕಾರ್ಯಸಿದ್ಧಿಯ ಧೃಢತೆಯೂ ಎಂದಿಗೂ ಇರಲಿಲ್ಲ. [illegible]ಕುರುವ ಕೋಟ್ಯಾಂತರ ಜನರಿಗೆ ದೇಶದ ಆಡಳಿತದಲ್ಲಿ [illegible]ರಾ ಭಾಗಿಗಳಾಗಲು ಎಡೆ ಇಲ್ಲ ದಿದ್ದರೂ ಸರಕಾರದ [illegible] ಮುಖ್ಯ ಪ್ರಶ್ನೆಗಳು ಅವರಿಗೆ ಒಪ್ಪುವಂತವು ಹೌದು ಇಲ್ಲವೆ[illegible] ಅದನ್ನು ಸೂಚಿಸಲು ಅವರಿಗೆ ಅಧಿಕಾರವಿದೆ ಎಂಬುದು [illegible]. ಜನ ಸಮುದಾಯದ [illegible] ಆದರ ಮಾತಿನಿಂದ [illegible]ಬೇಕಾಗುವುದೇ ಪ್ರಜಾಪ್ರತಿನಿಧಿ ಸರಕಾರವು. * * ಈಗಿನ ಕಾಲದಲ್ಲಿ ಜನ ಸಮುದಾಯದ ಮೇಲೆ [illegible] ಜವಾಬ್ದಾರಿಯು ದೊಡ್ಡ ಭಾರವನ್ನು ಹೊರಲು ಅವನನ್ನು [illegible]ನಾಗಿ ಮಾಡುವವು ಮುಂದಾಳುಗಳ ಮತ್ತು ಪತ್ರಿಕೆ[illegible] ಕರ್ತವ್ಯವಾಗಿದೆ. ಆದರೆ ಈ ವಿಷಯದಲ್ಲಿ ಪತ್ರಿಕೆಗಳ [illegible]ಯು ಬಹಳ ಹೆಚ್ಚಾಗಿದೆ. * * * ಪತ್ರಿಕೆಯನ್ನು [illegible]ದರ ವಿಷಯ, ಹ[illegible]ಗೊಂಡಿರುವ "ದಿ ಮ್ಯಾಂಚಿಸ್ಟರ್ ಗಾರ್ಡಿಯನ್" [illegible]ಪಾದಕರಾದ ಮಿ ಸ್ಕಾಟ್‌ರವರು ಹೇಳಿರುವುದೇ [illegible]—ಪತ್ರಿಕೆಯ ಕೆಲಸವೆಂದರೆ ವಾಚಕರಿಗೂ ಸಮಾಜಕ್ಕೂ ಮುಖ್ಯವಾಗಿ ಪ್ರಮಾಣಿಕತ್ವ, ಶುದ್ಧತೆ, ಧೈರ್ಯ, ನ್ಯಾಯ ಮತ್ತು ಕರ್ತವ್ಯ ಶೀಲತೆಯುಳ್ಳದ್ದಾಗಿದೆ. ಅದರ ಮುಖ್ಯ ಕೆಲಸವು ವರ್ತಮಾನಗಳನ್ನು ಸಂಗ್ರಹಿಸುವುದು. ಎಷ್ಟೇ ಆದರೂ ಅದು ಸತ್ಯಬಿಡಬಾರದು. ಅದರಲ್ಲಿ ಹೊರಡುವ ವರ್ತಮಾನಗಳು ರಂಗು ಹಾಕಲ್ಪಡದೆ ಸತ್ಯದ ನಿಜ ರೂಪದಲ್ಲಿರಬೇಕು. ಅಭಿಪ್ರಾಯವು ಸ್ವತಂತ್ರವಾಗಿರಬಹುದು, ಆದರೆ ಸಂಗತಿಗಳು ಪವಿತ್ರವಾದುವು. ಸ್ನೇಹಿತರದಂತೆಯೇ ವಿರೋಧಿಗಳ ಅಭಿಪ್ರಾಯವೂ ಪ್ರಕಟಿಸಲ್ಪಡಬೇಕು. ಟೀಕೆಗಳಿಗೆ ಮಿತಿ ಇರಬೇಕು. ನಿಷ್ಕಪಟವಾಗಿರುವುದು ಒಳ್ಳೇದು. ಯಥಾರ್ಥವಾಗಿರುವುದು ಉತ್ತಮ."

ಮೇಲೆ ಸೂಚಿಸಿರುವ ಧ್ಯೇಯಗಳನ್ನು ಅನುಸರಿಸಿ ನಡೆಯಲು ಆಗುವಷ್ಟು ಮಟ್ಟಿಗೆ ಪ್ರಯತ್ನಿಸುತ್ತಿದ್ದೇವೆ. ದೂರದ ಗ್ರಾಮಗಳಲ್ಲಿಯೂ ಪಟ್ಟಣಗಳಲ್ಲಿಯೂ ಇರುವವರು ಬರೆದು ಕಳುಹಿಸುವ ಪತ್ರಗಳನ್ನು ಬರೆದವರ ಮೇಲೆ ನಂಬಿಕೆ ಇಟ್ಟು ಪ್ರಕಟಿಸಬೇಕಾಗುತ್ತೆ. ಇಂಥಾ ಲೇಖನಗಳಲ್ಲಾಗಲೀ ವರ್ತಮಾನಗಳಲ್ಲಾಗಲೀ ನಿಜವಲ್ಲದ ಸಂಗತಿಗಳಿದ್ದರೆ ಅದಕ್ಕೆ ಯಾರು ಜವಾಬ್ದಾರರೆಂದು ವಾಚಕರೇ ಊಹಿಸಿಕೊಳ್ಳಬಹುದು. ಆದುದರಿಂದ ಪತ್ರಿಕೆಯ ಪತ್ನನ್ನು ಕಾಪಾಡಬೇಕಾದರೆ ನಮ್ಮ ಬಾತ್ಮಿದಾರರು ಮತ್ತು ಲೇಖಕರೂ ಸತ್ಯ ಸಂಗತಿಗಳನ್ನೇ ನಡದಂತೆಯೇ ಬರೆದು ಕಳುಹಿಸಬೇಕಾಗಿ ಕೋರುತ್ತೇವೆ. ಇಲ್ಲವಾದರೆ ಬರೆದವರಂತೂ ನಗೆಗಾರರಾಗುವುದಲ್ಲದೆ ಪತ್ರಿಕೆಯ ಮೇಲೂ ಜನರಿಗೆ ವಿಶ್ವಾಸವು ಕಡಿಮೆಯಾಗುವುದು. ಆದುದರಿಂದಲೇ ಬರಹಗಾರರಲ್ಲಿ ನಮ್ಮ ಈ ವಿನಂತಿ.

ಮಂತ್ರಿವರ್ಯರ ಭಾಷಣದಲ್ಲಿ ಹೇಳಿರುವಂತೆ ಪ್ರಜಾಪ್ರತಿನಿಧಿ ಸರಕಾರಕ್ಕೆ ಉತ್ತೇಜನ ಕೊಡುವುದೇ ನಮ್ಮ ಧ್ಯೇಯವಾಗಿದೆ. ಪ್ರಜೆಗಳಿಂದ ಪ್ರತ್ಯೇಕವಾಗಿ ದೂರದಲ್ಲಿರುವ ಬ್ಯೂರಾಕ್ರಸಿಯ ಆಳುವಿಕೆಯು ಹೆಚ್ಚಿನ ಜನರಿಗೆ ತೃಪ್ತಿಕರವಲ್ಲವಾದುದರಿಂದ ಜನರು ತಾವಾಗಿಯೇ ಚುನಾಯಿಸಿದ ಪ್ರತಿನಿಧಿಗಳಿಂದ ತಮ್ಮ ದೇಶಾಡಳಿತವನ್ನು ನಡಿಸಿಕೊಳ್ಳುವದು ಉತ್ತಮವೆಂಬುದೇ ಈಗಿನ ಕಾಲದಲ್ಲಿ ಮುಂದುವರಿದವರ ಅಭಿಪ್ರಾಯವಾಗಿದೆ. ಇಂಥಾ ಸರಕಾರಕ್ಕಾಗಿ ಲೋಕದ ಜನರೆಲ್ಲರೂ ಪ್ರಯತ್ನಿಸುತ್ತಿರುವರು. ಕೌನ್ಸಿಲ್ ಸರಕಾರವು ಇದರ ಒಂದು ಮೆಟ್ಟಿಲಾಗಿದೆ. ಮೊದಲು ಏನೂ ಅರಿಯದೆ ಇದ್ದಂಥ ಪ್ರಜೆಗಳಿಗೆ ಈಗ ತಮ್ಮ ದೇಶದ ಆಡಳಿತ ವಿಷಯ ಸ್ವಲ್ಪ ಸ್ವಲ್ಪವಾಗಿ ತಿಳಿಯುತ್ತಾ ಬರುತ್ತದೆ. ಇಂಥಾ ತಿಳುವಳಿಕೆಗೆ ಈ ಪತ್ರಿಕೆಯೇ ಕಾರಣ. ಪತ್ರಿಕೆಯೊಂದು ಇಲ್ಲದೆ ಹೋಗಿದ್ದರೆ ಕೌನ್ಸಿಲ್ ಸರಕಾರವು ದೇಶಕ್ಕೆ ಇಷ್ಟು ವೇಗನೆ ದೊರೆಯುತ್ತಿಲ್ಲ, ಮಾತ್ರವಲ್ಲ, ಅದರಿಂದ ದೇಶಕ್ಕೆ ಹೆಚ್ಚಿನ ಪ್ರಯೋಜನವೂ ಉಂಟಾಗುತ್ತಿರಲಿಲ್ಲ. ಇದರಿಂದ ಕೌನ್ಸಿಲ್ ಸರಕಾರದಿಂದ ದೇಶಕ್ಕೆ ತುಂಬಾ ಪ್ರಯೋಜನ ಉಂಟಾಗಿದೆಯೆಂದಲ್ಲ. ಆದರೂ ಸರಕಾರ ವಿಧಾನಗಳು ಪ್ರಜೆಗಳಿಗೆ ತಿಳಿಯಲು ಅನುಕೂಲವಾದದ್ದಲ್ಲದೆ ಅವರ ಅಭಿಪ್ರಾಯಗಳನ್ನೂ ಅಭಿಲಾಷೆಗಳನ್ನೂ ಸರಕಾರಕ್ಕೆ ಸೂಚಿಸಲು ಕೌನ್ಸಿಲೂ, ಪತ್ರಿಕೆಯೂ ಸಹಾಯವಾಗಿವೆ. ಕೌನ್ಸಿಲಿನ ತೀರ್ಮಾನಗಳನ್ನು ಸರಕಾರದವರು ಜಾರಿಗೆ ತಾರದೆ ಇದ್ದರೂ ಕೊಡ ಜನರು ಸತ್ಯ ಮತ್ತು ನ್ಯಾಯವಾದ ಸಂಗತಿಗಳನ್ನು ಎಡೆಬಿಡದೆ ಪತ್ರಿಕೆಯಲ್ಲಿ ಪ್ರಕಟಿಸುತ್ತಾ ಬಂದರೆ ಅದಕ್ಕೆ ಸರಕಾರದವರು ಗಮನಕೊಟ್ಟೇ ಕೊಡಬೇಕಾಗುವುದು. ಆದುದರಿಂದ ಹೆಚ್ಚಿನ ಸುಧಾರಣೆಗೂ ಪತ್ರಿಕೆಯೇ ಸಾಧನವೆಂಬುದನ್ನು ದೇಶೀಯರು ಮರೆಯಬಾರದು.

ಕಳೆದ ವರುಷ ನಮ್ಮ ಪತ್ರಿಕೆಯು ಮಾಡಿದ ಸೇವೆಗಳನ್ನು ಒಂದೊಂದಾಗಿ ವಿವರಿಸಿ ಬರೆಯುವ ಅವಶ್ಯವು ಇಲ್ಲ. ಅವು ನಮ್ಮ ವಾಚಕ ಮಹಾಶಯರಿಗೆ ಚನ್ನಾಗಿ ಗೊತ್ತಿವೆ. ಆದರೂ ಕೂಡ ಪತ್ರಿಕೆಯ ಪ್ರಯೋಜನವನ್ನು ತಿಳಿದೋ, ತಿಳಿಯದೆಯೋ ದೇಶೀಯರು ಅದಕ್ಕೆ ಸಾಕಷ್ಟು ಪ್ರೋತ್ಸಾಹವನ್ನು ಕೊಟ್ಟಿರುವುದಿಲ್ಲವೆಂದು ಹೇಳಲು ವ್ಯಸನಪಡುತ್ತೇವೆ. ಇದು ನಮ್ಮ ದೇಶದಲ್ಲಿ ಮಾತ್ರವಲ್ಲ. ಇಡೀ ಕರ್ನಾಟಕ ಪ್ರಾಂತ್ಯದಲ್ಲಿಯೂ ಕನ್ನಡ ಪತ್ರಿಕೆಗಳ ಗತಿಯು ಹೀಗೆಂದು ಒಂದೆರಡು ವಾರಗಳ ಹಿಂದೆ ಈ ಪತ್ರಿಕೆಯಲ್ಲಿ ಪ್ರಕಟವಾದ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಭಾಷಣದಲ್ಲಿ ಮಿ. ಬ ರಾಮರಾಯರು ಹೇಳಿರುವರು. "ಇನ್ನು ನಮ್ಮ ವೃತ್ತಪತ್ರಿಕೆಗಳ ಸ್ಥಿತಿ. ಸತ್ಯಮುತ್ತಿನ ನಮ್ಮ ಸಮೋದು[illegible] ಕಾಷ್ಟಗಳನ್ನು ಕಂಡರೆ ಈ ವಿಚಾರದಲ್ಲಿ ನಾವು ಶೋಚನಿಯಾವಸ್ಥೆಯಲ್ಲಿರುವೆವೆಂದೇ ಹೇಳಬೇಕು. ಹೆಸರು ಹೇಳಲು ಅಖಿಲಕರ್ನಾಟಕಕ್ಕೊಂದು ಜಲೋದವಾದ ದಿನ ಪತ್ರಿಕೆಯಿಲ್ಲ! ವಾರಪತ್ರಿಕೆಗಳೇನೋ ಹಲವಿವೆ. ಅವರೇನು? ಅವುಗಳದು ನಾವು ಜೀವನ! ನಿರಂತರ ಜಡತನ! ಮಾಸಪತ್ರಿಕೆಗಳ ಅವಸ್ಥೆಯಂತೂ ಇನ್ನು ಹೇಳತೀರದು. ಪ್ರೋತ್ಸಾಹವಿಲ್ಲ. ಕನ್ನಡಿಗರಿಗೆ ಏನೂ ಬೇಕಿಲ್ಲ. ಆಂಧ್ರ, ಬಂಗಾಳ, ಮರಾಠ ದೇಶದ ಉದ್ಯಮಗಳನ್ನು ನೋಡಿದರೆ ನಾಚಿಕೆಯಾಗುತ್ತದೆ."

ನಮ್ಮ ಕಂಪನಿಯ ಕೆಲಸವನ್ನು ನಡಿಸುವಷ್ಟು ಚಂದಾದಾರರು ನಮಗಿರುವರು. ಆದರೆ ಅವರಲ್ಲಿ ಕೆಲವರ ಉದಾಸೀನತೆಯು ಪತ್ರಿಕೆಯ ಕೆಲಸವನ್ನು ಸರಾಗವಾಗಿ ಜರಗಿಸಲು ಅನುಕೂಲಿಸುವುದಿಲ್ಲ. ಈ ವಿಷಯ ಚಂದಾದಾರರು ತುಂಬಾ ಗಮನ ಕೊಡಬೇಕಾಗಿ ಕೋರುತ್ತೇವೆ.

ಪತ್ರಿಕೆಯ ಆರ್ಥಿಕ ಸ್ಥಿತಿಯೊಂದಿಗೆ ಇನ್ನೊಂದು ವಿಷಯಕ್ಕೂ ಜನರು ಗಮನಕೊಡಬೇಕೆಂದು ಆಶಿಸುತ್ತೇವೆ. ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವ ಅಭ್ಯಾಸವು ನಮ್ಮ ದೇಶೀಯರಿಗೆ ಬಹಳ ಕಡಿಮೆ ಎಂದು ಹೇಳಿದರೆ ಸುಳ್ಳಾಗದು. ಬರೆಯಲು ಶಕ್ತರು ಅಗ[illegible]ರು. ಆದರೆ ನ್ಯಾಯವಾದ ದೇಶ ಹಿತಕ್ಕಾಗಿ ಹೊಸ ಅಭಿಪ್ರಾಯಗಳಿಂದ ಕೂಡಿದ ಲೇಖನಗಳನ್ನು ಬರೆಯಲು ಕೊಂಡರೆ ತೆಗೆದುಕೊಳ್ಳುವವರು ಅತಿ ವಿರಳ. ಅಲ್ಲದೆ ನಮ್ಮ ಈ ಚಿಕ್ಕ ದೇಶದಲ್ಲಿ ಆಗಾಗ್ಗೆ ಬರೆಯಲು ಸಾಕಷ್ಟು ವಿಷಯಗಳಿಲ್ಲದೆ ಇರುವುದರಿಂದಲೂ, ನಮ್ಮ ದೇಶದವರ ಅಭಿಪ್ರಾಯಗಳು ವಿಶಾಲವಾಗಬೇಕಾಗಿರುವುದರಿಂದಲೂ, ಬೇರೆ ದೇಶಗಳ ಮುಂದಾಳುಗಳು ಯೋಚಿಸಿ ಬರೆದಂಥಾ ಉತ್ತಮ ಲೇಖನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತಾ ಬರಬೇಕಾಗಿದೆ. ಇದು ನಮ್ಮ ಪತ್ರಿಕೆಗೆ ಮಾತ್ರ ವಿಶೇಷವಾದದ್ದಲ್ಲ. ಚನ್ನಾಗಿ ನಡಿಸಲ್ಪಡುವ ಯಾವ ಪತ್ರಿಕೆಯನ್ನು ನೋಡಿದರೂ ಬೇರೆಯವರಿಂದ ಬರೆಯಲ್ಪಡುವ ಲೇಖನಗಳು ಅನೇಕ ಇರುವವು. ಬೇರೆ ಪತ್ರಿಕೆಗಳ ಲೇಖನಗಳನ್ನು ಆರಿಸಿ ತೆಗೆದು, ಹಾಗೆ ತೆಗೆದದ್ದೆಂದು ಒಪ್ಪಿಕೊಳ್ಳದೆ ತಮ್ಮದೆಂದೇ ಪ್ರಕಟಿಸುವುದಕ್ಕಿಂತ ತೆಗೆದ ಪತ್ರಿಕೆಯ ಹೆಸರನ್ನು ಸೂಚಿಸಿ ಪ್ರಕಟಿಸುವುದೇ ಉತ್ತಮವೆಂದು ನಮ್ಮ ಅಭಿಪ್ರಾಯ.

'ಕೊಡಗ'ನ್ನು ಮಡಿಕೇರಿಯಲ್ಲಿಯೇ ಅಚ್ಚು ಹಾಕಲು ಪ್ರಾರಂಭಿಸಿ ಒಂದು ವರುಷವಾಗಲಿಕ್ಕಾಯಿತು. ಇಲ್ಲಿ ಪ್ರಿಂಟು ಮಾಡಿಸಲು ತೊಡಗಿದಂದಿನಿಂದ ನಮಗೆ ಅನೇಕ ತೊಂದರೆಗಳುಂಟಾದದ್ದು ವಾಚಕ ಮಹಾಶಯರಿಗೆ ಚನ್ನಾಗಿ ಗೊತ್ತಿರಬಹುದು. ಪ್ರಿಂಟಿಂಗ್ ಮಿಶನಿನ ಗಲಾಟೆಯಿಂದಲೂ, ಕಂಪೋಜಿಟರುಗಳ ಕಾಯಿಲೆಯಿಂದಲೂ, ಕಾಗದವು ಕಾಲಕ್ಕೆ ಸರಿಯಾಗಿ ತಲುಪದ್ದರಿಂದಲೂ ಕೆಲವುಸಾರಿ ಪತ್ರಿಕೆಯು ಪುಟಗಳು ಕಡಿಮೆಯಾಗಿಯೂ, ಸ್ವಲ್ಪ ಕಾಲವಿಳಂಬಿಯೂ ಕಳುಹಿಸಲ್ಪಟ್ಟಿದೆ. ಕಂಪೋಜಿಟರುಗಳೂ ಪ್ರಿಂಟಿಂಗ್ ಕಾಗದವೂ ಸಿಕ್ಕದ ಈ ಸ್ಥಳದಲ್ಲಿ ಹೊಸದಾಗಿ ಪ್ರಿಂಟಿಂಗ್ ಪ್ರಾರಂಭಿಸಿದಾಗ ಇಂಥಾ ತೊಂದರೆಗಳು ಸಂಭವಿಸುವುದು ಆಶ್ಚರ್ಯವೇನೂ [illegible]. ಪತ್ರಿಕೆಯು ನಮ್ಮ ದೇಶದಲ್ಲಿಯೇ ಅಚ್ಚು ಹಾಕಲ್ಪಡುತ್ತದೆಂಬ ಸಂತೋಷದಿಂದ ಇಂಥಾ ನ್ಯೂನತೆಗಳನ್ನು ಮನಸ್ಸಿಗೆ ತೆಗೆದುಕೊಳ್ಳದೆ ತಾಳ್ಮೆಯಿಂದ ಕ್ಷಮಿಸಬೇಕಾಗಿ ವಾಚಕರನ್ನು ಮೊದಲೇ ಕೋರಿದ್ದೇವೆ. ಇನ್ನೂ ಕೋರುತ್ತೇವೆ. ಮುಂದಕ್ಕೆ ನ್ಯೂನತೆಗಳು ಬಾರದಂತೆ ನಡಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪತ್ರಿಕೆಯ ಉತ್ತೇಜನಕ್ಕಾಗಿ ತನು, ಮನ, ಧನ ಸಹಾಯ ಮಾಡಿದ ಮಹನೀಯರಿಗೆಲ್ಲಾ ಪುನಃ ವಂದಿಸುವವರಾಗಿದ್ದೇವೆ. ಇಷ್ಟರವರೆಗೆ ನಮ್ಮನ್ನು ಪ್ರೋತ್ಸಾಹಿಸಿದಂತೆಯೇ ಇನ್ನು ಮುಂದಕ್ಕೂ ದೇಶದ ಸೇವೆಯನ್ನು ಮಾಡಲು 'ಕೊಡಗಿ'ಗೆ ಅವಕಾಶಕೊಡುವಂತೆ ನಮ್ಮ ಶೇರುದಾರರೂ, ಚಂದಾದಾರರೂ ತಮ್ಮ ತಮ್ಮ ಬಾಕಿಗಳನ್ನು ಪಾವತಿ ಮಾಡಿ ಮಾ, [illegible]ನ ಜನರನ್ನು ಕಂಪನಿಗೂ, ಪತ್ರಿಕೆಗೂ, ಸೇರಿಸಿಯೂ ಸಹಾಯಮಾಡಬೇಕಾಗಿ ಅತಿ ವಿನಯದಿಂದ ಬೇಡುತ್ತೇವೆ.

ಸ್ವಾಮಿ ಸರ್ವಾನಂದರವರು.

ಮದ್ರಾಸಿನಲ್ಲಿರುವ ರಾಮಕೃಷ್ಣ ಮಿಶನಿನ ಅಧ್ಯಕ್ಷರಾದ ಸ್ವಾಮಿ ಸರ್ವಾನಂದರು ಮಡಿಕೇರಿಗೆ ಒಂದು ಉಪನ್ಯಾಸ ಕೊಡುತ್ತಿರುವರು. ಮಡಿಕೇರಿ ವೇದಾಂತ ಸಂಘದವರು ಇವರ ಪ್ರಯಾಣದ ಖರ್ಚನ್ನು ಕೊಟ್ಟು ಕರೆಯಿಸಿ ಜನರಿಗೆ ಮತ ಬೋಧನೆ ದೊರೆಯುವಂತೆ ಮಾಡಿದ್ದಕ್ಕೆ ಸಂಘವನ್ನು ನಾವು ಬಹಳವಾಗಿ ಅಭಿನಂದಿಸುತ್ತೇವೆ. ವಿವೇಕಾನಂದ ಸ್ವಾಮಿಗಳ ಜನ್ಮ ದಿವಸದಲ್ಲೂ ಮಡಿಕೇರಿ ನಿವಾಸಿಗಳ ಅದೃಷ್ಟದಿಂದ ಸ್ವಾಮಿ ಶಂಕರಾನಂದ ಎಂಬವರು ಯಾರೂ ಕರೆಯದೆ ಅಕಸ್ಮಾತ್ ಒಂದು ಜನರಲ್ಲಿ ಹಿಂದೂ ಮತದ ವಿಷಯ ಕೆಲವು ಮಟ್ಟಿಗೆ ಹುರಿದುಂಬಿಸಿ ಹೋದರು. ಅವರ ಬೋಧನೆಯಿಂದ ಹುಟ್ಟಿದ ಉತ್ಸಾಹದಲ್ಲಿ ಹಿಂದೂ ಸಭೆಯ ಶಾಖೆಯೊಂದನ್ನು ಇಲ್ಲಿ ಏರ್ಪಡಿಸುವ ಕೆಲಸವು ನಡೆಯಿತು. ಅದರ ಜನರು ಪುನಃ ಮರೆತು ನಿದ್ರಿತರಾಗಿದ್ದರು. ಹೀಗಿರುವಾಗ ಸರಿಯಾಗಿ ಸರ್ವಾನಂದ ಸ್ವಾಮಿಜೀಯವರು ಮಡಿಕೇರಿಗೆ ಬಂದದ್ದು ಒಳಳ ಪ್ರಯೋಜನಕಾರಿಯಾಗಬಹುದೆಂತ ನಮಗೆ ಆಸೆ ಇದೆ. ಹಿಂದೂ ಸಭೆಯನ್ನು ಸ್ಥಾಪಿಸುವ ವಿಷಯದಲ್ಲಿ ರಾಜಕೀಯ ವಿಷಯ ಮಿಶ್ರವಿದೆಯೋ ಎಂತ ಕೆಲವರಿಗೆ ಸಂದೇಹವಿರಬಹುದು. ಆದರೆ ರಾಮಕೃಷ್ಣ ಮಿಶನಿನವರು ಬೋಧಿಸುವ ಬೋಧನೆಗಳನ್ನು ಹಿಂಬಾಲಿಸಲಿಕ್ಕೆ ಯಾವ ಸಂಶಯವೂ ಇಲ್ಲ. ಹಿಂದೂ ಧರ್ಮದ ಸಾರವಾದ ವೇದಾಂತದ ವಿಷಯಗಳನ್ನು ಸಾಧಾರಣ ಜನರಿಗೂ ತಿಳಿಯುವಂತೆ ಬೋಧಿಸುವದೇ ಅವರ ಕೆಲಸವಾಗಿದೆ. ತತ್ವವಿಚಾರವನ್ನು ಮಾಡಬೇಕಾದರೆ ಬ್ರಾಹ್ಮಣನಾಗಿರಬೇಕೆಂಬ ಸಾಧಾರಣವಾದ ನಂಬಿಕೆಯನ್ನು ಹೋಗಲಾಡಿಸಿ ಮನುಷ್ಯ ಜನ್ಮವೆತ್ತಿದವರಲ್ಲಾ ಆತ್ಮವಿಚಾರ ಮಾಡುವ ಹಕ್ಕಿದೆಯೆಂತ ತಿಳಿಸಿಕೊಟ್ಟು ಆಯಾ ಮನುಷ್ಯನ ಯೋಗ್ಯತೆಗೆ ಸರಿಯಾದ ಮತವಿಚಾರ ಮಾಡಲು ಸಹಾಯ ಕೊಡುತ್ತಾರೆ. ಆರ್ಯ ಸಮಾಜದ

ಆತ್ಮಯಜ್ಞದ ಧರ್ಮವು.

[ಶ್ರೀಯುತ—ಮ. ಗಾಂಧಿ ನವಜೀವನ]

ಯಜ್ಞಕ್ಕೆ ಅನೇಕ ಅರ್ಥಗಳಾಗಬಲ್ಲವು, ಆದರೆ ಸರ್ವ ಧರ್ಮಗಳಿಗೆ ಸಾಮಾನ್ಯವಾದ ಯಜ್ಞಕ್ಕೆ ಒಂದೇ ಅರ್ಥವಿರುವದು, ಮತ್ತು ಅದಾವುದೆಂದರೆ,—ನಿಜವಾದ ಉನ್ನತಿಗಾಗಿ ಸ್ವಾರ್ಥತ್ಯಾಗವನ್ನು ಮಾಡುವದಕ್ಕೆ ಸಿದ್ಧನಾಗುವದು. ಪಾರ್ವತಿಗೆ ಶ್ರೀ ಶಂಕರನು ತನ್ನ ಪತಿಯಾಗಬೇಕೆಂದು ಅಭಿಲಾಷೆಯಿದ್ದಿತು. ಅದಕ್ಕಾಗಿ ಅವಳು ತಪಸ್ಸು ಮಾಡಿದಳು. ಅವಳು ಎಂಥ ಉಗ್ರವಾದ ತಪಸ್ಸು ಮಾಡಿದಳೆಂಬುದನ್ನು ತಿಳಿಯಲಪೇಕ್ಷೆಯುಳ್ಳವರು ತುಲಸೀದಾಸರ ಅಪೂರ್ವ ಗ್ರಂಥವನ್ನು ನೋಡಬಹುದು. ತಾಯಿಯು ಆತ್ಮಯಜ್ಞವನ್ನು ಮಾಡಿ ಮಗುವಿಗೆ ಜನ್ಮವನ್ನೀಯುವಳು ಮತ್ತು ಅನೇಕ ಕಷ್ಟಗಳನ್ನು ಸಹಿಸಿ ಬೆಳಿಸುವಳು. ಮೃತ್ಯುವಿನೊಳಗಿಂದ ಜನ್ಮವು ಸಂಭವಿಸುವದು. ಧಾನ್ಯದ ಕಾಳು ಭೂಮಿಯಲ್ಲಿ ಪ್ರವೇಶಿಸಿ ಒಡೆದು ಮಣ್ಣುಗೂಡಿದರೆ ಮಾತ್ರ ಮುಂದೆ ಬೆಳೆಯು ಬರುವದು. ಹರಿಶ್ಚಂದ್ರನು ಸತ್ಯವನ್ನು ಪ್ರಕಟಿಸುವದಕ್ಕೋಸ್ಕರ ಮಿತಿಮೀರಿ ದುಃಖವನ್ನು ಸಹಿಸಬೇಕಾಯಿತು. ಜನರನ್ನು ಉದ್ಧರಿಸುವದಕ್ಕಾಗಿ ಯೇಸುಕ್ರಿಸ್ತನು ಮುಳ್ಳಿನ ಮುಕುಟವನ್ನು ಧರಿಸಿದನು, ತನ್ನ ಕೈ ಕಾಲುಗಳಲ್ಲಿ ಮೊಳೆಗಳನ್ನು ಜಡಿಸಿಕೊಂಡನು ಮತ್ತು ಅಸಹ್ಯವಾದ ಯಾತನೆಗಳನ್ನು ಅನುಭವಿಸುತ್ತ ಪ್ರಾಣವನ್ನು ಬಿಟ್ಟನು! ಈ ಬಗೆಯಾಗಿ ಯಜ್ಞವನ್ನು ಮಾಡುವದು ಅನಾದಿಕಾಲದಿಂದ ನಡೆಯುತ್ತ ಬಂದ ವಿಧಿಯಾಗಿರುವದು. ಯಜ್ಞವಿಲ್ಲದೆ ಸೃಷ್ಟಿಯು ಒಂದು ಗಳಿಗೆಯಾದರೂ ನಡೆಯದು. ತುರ್ಕರು ಇಸ್ತಂಬೂಲವನ್ನು ಕೈವಶಮಾಡಿಕೊಳ್ಳುವ ಮೊದಲು ಅನೇಕ್ಕ ಸೈನಿಕರ ಹೋಮವನ್ನು ಮಾಡಿದರು ಮತ್ತು ಅವರ ಹೆಣಗಳಿಂದ ಸೇತುವೆ ಕಟ್ಟಿದರು. ಹಿಂದುಸ್ಥಾನದಲ್ಲಿ ಆತ್ಮಯಜ್ಞವು ಅನಾದಿಕಾಲದಿಂದ ನಡೆಯುತ್ತ ಬಂದಿರುವ ಅಚಲಿತವಾದ ಧರ್ಮವಾಗಿರುವದು.

ನಾವು ಸಂಪೂರ್ಣ ಸ್ವರಾಜ್ಯವನ್ನೇನೋ ಇಚ್ಛಿಸುತ್ತೇವೆ. ಆದರೆ ತ್ಯಾಗಾಹುತಿಯನ್ನು ಕೊಡಲು ಒಬ್ಬನಿಗೂ ಇಷ್ಟವಿಲ್ಲ. ಇಷ್ಟೇ ಏಕೆ? ದುಡ್ಡು ಕಳೆದುಕೊಳ್ಳದೆ ಕೂಡ ಕೆಲಸವನ್ನು ಮಾಡಲಿಕ್ಕೆ ಬರುತ್ತಿದ್ದರೆ ನೋಡಬೇಕು, ಕಸ್ಟವ ಜನರೆಷ್ಟಿಲ್ಲ? ಅಸಹಕಾರದ ಬಗ್ಗೆ ಅನೇಕರಿಗೆ ಬಹು ಭಯವೆನಿಸುತ್ತದೆ. ನೌಕರಿಯನ್ನು ಬಿಟ್ಟುಕೊಟ್ಟರೆ ಹೊಟ್ಟೆಗಿಲ್ಲದೆ ಸಾಯುವೆವೆಂದು ಮೊದಲನೇ ಹೆದರಿಕೆ, ಮತ್ತು ಯಾರಾದರೂ ಏನಾದರೂ ತಪ್ಪಾಗಿ ಸರಕಾರದವರು ಮದ್ದು ಗುಂಡು ಹಾರಿಸುತ್ತಿದರೆ ಸಾವಿರಾರು ಜನರು ಸಾಯಬೇಕಾಗುವದೆಂದು ಎರಡನೇ ಹೆದರಿಕೆ. ಈ ಬಗೆಯಾಗಿ ನಾವು ನಮ್ಮ ಸ್ವರಾಜ್ಯದ ಪ್ರಾಪ್ತಿಯನ್ನೂ ಸ್ವಲ್ಪ ಸಹ ಕಷ್ಟವನ್ನನುಭವಿಸದೆ ಪಡೆಯಬೇಕೆಂದು ನಮ್ಮ ಆಶಯಿದೆ. ಅಸಹಕಾರವೊಂದು ಅತ್ಯಂತ ಸುಲಭವಾದ ಯಜ್ಞವಾಗಿರುವದು, ಮತ್ತು ಸಣ್ಣ ತಪಸ್ಸಾಗಿರುವದು, ಅದರಲ್ಲಿ ಸ್ವಲ್ಪ ಸ್ವಾರ್ಥತ್ಯಾಗವಿರುವದು. ಇಪ್ಪತ್ತು ಇಪ್ಪತ್ತೈದು ಸಾವಿರ, ಅಥವಾ ಲಕ್ಷ ಒಂದುವರೆ ಲಕ್ಷ ಜನರು, ನ್ಯಾಯವನ್ನು ದೊರಕಿಸುವದಕ್ಕಾಗಿ ಅನ್ಯಾಯದಲ್ಲಿ ಭಾಗ ತೆಗೆದುಕೊಳ್ಳುವದನ್ನು ನಿಲ್ಲಿಸಬೇಕಾಗಿ ತಮ್ಮ ನೌಕರಿಯನ್ನು ಬಿಟ್ಟುಕೊಟ್ಟರೆ ದುಃಖಪಡಲು ಕಾರಣವೇನು? ಸುವ್ಯವಸ್ಥಿತವಾದ ಸಂಸ್ಥೆಯು ನಡೆಯುತ್ತಿರುವಲ್ಲಿ ಇಂಥ ಪ್ರಸಂಗವು ಸ್ವಾಭಾವಿಕವಾಗಿರುವದು, ಮತ್ತು ಜನರಾದರೂ ಅದಕ್ಕಂಜದೆ ಹಿಂಜರಿಯದೆ ಹರ್ಷಪೂರ್ವಕವಾಗಿ ಅದನ್ನು ಅದರಿಸುವದುಂಟು. ಸ್ವರಾಜ್ಯವನ್ನು ಸಂಪಾದಿಸುವಂಥ ಮಹತ್ಕಾರ್ಯಕ್ಕೋಸ್ಕರ ಸಾವಿರಾರು ಜನರು ನಷ್ಟಹೊಂದಿದರೆ ನಾನು ಎಳ್ಳಷ್ಟೂ ಚಿಂತಿಸೆನು. ಅದನ್ನು ನಾನು ಧರ್ಮ ಭಾವನೆಯ ಪರೀಕ್ಷೆಯೆಂದು ಗಣಿಸುವೆನು. ಈ ತರದ ಕಷ್ಟನಷ್ಟಗಳನ್ನು ಭೋಗಿಸುವ ಹೊರ್ತು ನಮಗೆ ಯಶಸ್ಸು ದೊರೆಯದೆಂದು ನನ್ನ ಮತವುಂಟು ಮತ್ತು ಈ ತರದ ಕಷ್ಟನಷ್ಟಗಳನ್ನು ಅನೇಕರು ಭೋಗಿಸಿದರೆ ಯಶಸ್ಸು ದೊರೆಯದಿರದೆಂದೂ ನನ್ನ ಮತವಿದೆ.

ಅಸಹಯೋಗವನ್ನು ಅವಲಂಬಿಸುವದರಿಂದ ಸರಕಾರವು ನಮ್ಮನ್ನು ಅನೇಕ ದುಃಖಗಳಿಗೆ ಗುರಿಮಾಡುವದೆಂಬ ಮಾತಿನಿಂದ ನನಗೆ ಕ್ಷೋಭವಾಗಲಿ ಭಯವಾಗಲಿ ಉಂಟಾಗುವದಿಲ್ಲ. ಸರಕಾರದಿಂದ ನಮಗೆ ಪೀಡೆಯು ಹೆಚ್ಚಾದಂತೆ ನಮ್ಮ ಸ್ವರಾಜ್ಯದ ಪ್ರಾಪ್ತಿ ಯಾದರೂ ಬೇಗನೆ ಹತ್ತಿರವಾದೀತು. ನಾನು ದೃಢವಾಗಿ ನಂಬಿದ್ದೇನೆ.

ಆದರೆ ಒಂದು ಮಾತ್ರ ಭಯವಿರುವದು ಅದೇನೆಂದರೆ,—ಜನರು ತಪ್ಪು ಮಾಡಿ ಅನ್ಯಾಯಾವಿ ಬಿದ್ದು ಶಿಕ್ಷೆಗೆ ಪಾತ್ರರಾಗುವರೆಂಬುದು; ಯಾವನಾದರೂ ಸಂತಾಪದ ಭರದಲ್ಲಿ ಯಾವನೊಬ್ಬ ಅಧಿಕಾರಿಯನ್ನು ಗಾಯಗೊಳಿಸಿದರೆ ಇಲ್ಲವೆ ಕೊಂದು ಹಾಕಿದರೆ ನಮ್ಮ ಕೆಲಸವು ಮಣ್ಣುಗೂಡುವದೆಂಬುದಕ್ಕೆ ಸಂದೇಹವೇನು? ಹೀಗೆ ಜನರು ಉನ್ಮಾರ್ಗಿಗಳಾದರೆ ಆತ್ಮಯಜ್ಞದ ಶುದ್ಧ ಧರ್ಮಕ್ಕೆ ಹಾನಿಯಾಗುವದು ಮತ್ತು ಅಷ್ಟು ಮಟ್ಟಿಗೆ ನಮ್ಮ ಇಷ್ಟವು ಕೈಗೂಡಲೂ ಕಠಿಣವಾಗುವದು. ವಿಶುದ್ಧ ವಸ್ತುಗಳ ಆಹುತಿಯನ್ನೇ ಕೊಡತಕ್ಕದ್ದು. ಹವಿರ್ದ್ರವ್ಯದಲ್ಲಿ ಸ್ವಲ್ಪವಾದರೂ ಅಪವಿತ್ರತೆಯಿದ್ದುದಾಗಿದ್ದರೆ ಆದನು ರಾಜ್ಯತ್ಯಾಗ ಮಾಡಿದನೆಂಬ ಒಂದೇ ಮಾತಿನಿಂದ ನಾವು ಈಗಿನಂತೆ ಅವನ ಮಹಿಮೆಯನ್ನು ಕೊಂಡಾಡುತ್ತಿದ್ದಿಲ್ಲ. ಯೇಸುಕ್ರಿಸ್ತನಲ್ಲಿ ಸಂಪೂರ್ಣ ನಿರ್ದೋಷತೆಯನ್ನು ಕಲ್ಪಿಸಿಯೇ ಕ್ರಿಸ್ತಮತಾನುಯಾಯಿಗಳು ಅವನನ್ನು ಶ್ರೇಷ್ಠದ್ಧಾರಕನೆಂದು ತಿಳಿದುಬರುವರು. ಈ ಬಗೆಯಾಗಿ ನಾವು ತಿಳಿದು ನೋಡಿದರೆ ನಮ್ಮ ಕಾರ್ಯದಲ್ಲಿ ... ಂದ ತಪ್ಪಾಗದಂತೆ ನಾವು ಎಚ್ಚರಿಕೆಯಿಂದಿದ್ದ ಪಕ್ಷದಲ್ಲಿ ... ಕಾರವು ವೇಗದಿಂದ ಸಾಗದಿರದೆಂದು ತಿಳಿದುಬರುವದು. ಈ ಮಾತನ್ನು ಲಕ್ಷದಲ್ಲಿಟ್ಟುಕೊಂಡು, ಆತ್ಮಯಜ್ಞವು ಹಿಂದುಸ್ಥಾನದ ಉನ್ನತಿಗಾಗಿ ಅವಶ್ಯಕವಾದ ಧರ್ಮವಾಗಿರುತ್ತದೆಂಬದನ್ನು ತಿಳಿದುಕೊಂಡರೆ ಅಸಹಕಾರದ ಬಗ್ಗೆ ನಮಗೆ ಕಿಂಚಿತ್ತಾದರೂ ಹೆದರಿಕೆಯುಂಟಾಗಲು ಕಾರಣವಿಲ್ಲ. ಇಷ್ಟೇ ಅಲ್ಲ. ಅಸಹಕಾರ ಅಥವಾ ಇದೇ ಬಗೆಯ ಬೇರೆ ಯಾವದೊಂದು ಯಜ್ಞ ಇಲ್ಲವೆ ತಪಸ್ಸು ಮಾಡದ ಹೊರ್ತು ಸ್ವರಾಜ್ಯವು ಸರ್ವಥಾ ನಮ್ಮ ಹಸ್ತಗತವಾಗದು.

ಗೌಡುಗಳ ಸಭೆ.

ಗೌಡುಗಳ ವಿದ್ಯಾಭಿವರ್ಧಿನಿ ಸಂಘದ 1924-25ನೇ ಸಂವತ್ಸರದ ವಾರ್ಷಿಕ ಮಹಾಸಭೆಯು ತಾರೀಖು 23—5—1925 ರಲ್ಲಿ ಮಡಿಕೇರಿ ಗೌಡ ವಿದ್ಯಾರ್ಥಿ ಬೋರ್ಡಿಂಗ್ ಮಂದಿರದಲ್ಲಿ ಮ. ರಾ. ರಾ. ಸಿದ್ದಮುಲೆ ಮುದ್ದಪ್ಪ ಬಿ. ಎ. ಬಿ. ಎಲ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಮುಂದಿಟ್ಟ ಅನೇಕ ಠರಾವುಗಳ ಪೈಕಿ ಈ ಕೆಳಗಿನವುಗಳು ಬಹು ಮತದಿಂದ ಮಂಜೂರು ಮಾಡಲ್ಪಟ್ಟವು—

1 ವಿದ್ಯಾಭಿವರ್ಧಿನಿ ಸಂಘಕ್ಕೆ ಮ. ರಾ. ರಾ. ಸಿದ್ದಮುಲೆ ಮುದ್ದಪ್ಪ ಬಿ. ಎ., ಬಿ. ಎಲ್. ರವರು ಸಭೆಯ ಸರ್ವಸಮ್ಮತದಿಂದ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟರು.

2. ಜಮಾ ವಸೂಲಾತಿಯನ್ನು ಅಲ್ಲಲ್ಲಿ ನಾಡು ಮತ್ತು ಗ್ರಾಮಗಳ ಕಮಿಟಿ ಮೆಂಬರುಗಳು ಮಾಡಬೇಕಾಗಿ ನಿರ್ಣೈಸಿ ಕಮಿಟಿ ಮೆಂಬರುಗಳನ್ನು ಚುನಾವಣೆ ಮಾಡಲಾಯಿತು.

3 ಈ ಕೆಳಗೆ ಕಂಡು ಬರುವ ಅಭಿಪ್ರಾಯಗಳನ್ನು ಕೆಲವು ಮೆಂಬರುಗಳು ಸೂಚಿಸಿದರು. ಅದರಂತೆ ಕೆಲವು ಠರಾವುಗಳನ್ನು ಮಂಜೂರುಮಾಡಿ ಕೊಡಗು ಕಮಿಷ್ನರ್ ಸಾಹೇಬರಿಗೆ ಕಳುಹಿಸುವಂತೆ ತೀರ್ಮಾನ ಪಡಿಸಲಾಯಿತು.

ಕೊಡಗು ಸರ್ಕಾರವು ಇಲ್ಲಿಯ ಹಿಂದುಳಿದ ಜನರನ್ನು ಕಾಣುವ ರೀತಿಗೂ ಬ್ರಿಟಿಷ ಸರಕಾರವು ಹಿಂದೂ ದೇಶದ ಇತರ ಕಡೆಗಳಲ್ಲಿ ಹಿಂದುಳಿದ ಮತಸ್ಥರನ್ನು ಕಾಣುವ ರೀತಿಗೂ ಬಹಳ ವ್ಯತ್ಯಾಸಗಳು ಕಂಡು ಬರುತ್ತವೆ. ಬ್ರಿಟಿಷ್ ಇಂಡಿಯಾದ ಇತರ ಕಡೆಗಳಲ್ಲಿ ವಿದ್ಯೆಯಲ್ಲಿ ಹಿಂದುಳಿದವರಿಗೆ ಸರಕಾರದವರು ಹೆಚ್ಚಿನ ಉತ್ತೇಜನ ಕೊಟ್ಟು ಅವರನ್ನು ದೇಶದ ಮುಂದುವರಿದ ಪಂಗಡದವರಲ್ಲಿ ಎಲ್ಲಾ ತರದಲ್ಲಿಯೂ ಸರಿ ಸಮಾನರನ್ನಾಗಿ ಮಾಡಲು ಬಹಳ ಪ್ರಯತ್ನ ಪಡುತ್ತಿರುವದನ್ನು ನಾವು ನಿತ್ಯವೂ ನೋಡುತ್ತಾ ಇದ್ದೇವೆ. ಆದರೆ ಕೊಡಗಿನಲ್ಲಿ ಮಾತ್ರ ಅಂಥಾ ವಿಷಯಗಳನ್ನು ಕುರಿತು ಆಲೋಚನೆ ಸಹ ಮಾಡಲಿಲ್ಲ. ಮದ್ರಾಸು ಮತ್ತು ಬೊಂಬಾಯಿ ಸರಕಾರದವರು ಸರಕಾರ ಎಲ್ಲಾ ಇಲಾಖೆಗಳಲ್ಲಿಯೂ ಹಿಂದುಳಿದ ಪಂಗಡದವರಿಗೆ ಕಡಮೆ ಪಕ್ಷ ಇಷ್ಟೇ ಉದ್ಯೋಗಗಳನ್ನು ಕೊಡಬೇಕೆಂದು ನಿರ್ಧರಿಸಿದ್ದಾರೆ. ಅಲ್ಲದೆ ಕೌನ್ಸಿಲುಗಳಲ್ಲಿ ಕೋಮುವಾರು ಚುನಾವಣೆಯ ಮುಖಾಂತರ ದೇಶದ ಎಲ್ಲಾ ಜನಾಂಗದವರೂ ಸರಕಾರ ಆಡಳಿತದಲ್ಲಿ ಭಾಗಿಗಳಾಗುವಂತೆ ಮಾಡಿದ್ದಾರೆ. ಕೊಡಗಿನಲ್ಲಿ ಕೋಮುವಾರು ಚುನಾವಣೆಯಂತೂ ಇಲ್ಲ; ಸರಕಾರದವರು ತಾವೇ ಹಿಂದುಳಿದ ಪಂಗಡದವರನ್ನು ಚುನಾಯಿಸಿ (Nomination) ತೆಗೆದುಕೊಂಡದ್ದೂ ಇಲ್ಲ. ಹೀಗಾದ್ದರಿಂದ ಗೌಡ ಜನರಂಥ ದೊಡ್ಡದೊಂದು ಪಂಗಡವು ದೇಶದ ಆಡಳಿತವನ್ನು ನಡಿಸುವ ಕೌನ್ಸಿಲಿನಲ್ಲಿ ಭಾಗಿಯಾಗದೆ ಹೋಯಿತು.

ಇದೂ ಅಲ್ಲದೆ ಕೊಡಗು ಸರ್ಕಾರದ ಆಡಳಿತವೆಲ್ಲವೂ ಕೊಡಗಿನ ಜನ ಸಂಖ್ಯೆಯ ಪೈಕಿ ಕಾಲುಪಾಲಷ್ಟಿರುವ ಕೊಡಗರ ಮತ್ತು ಬ್ರಾಹ್ಮಣರಲ್ಲಿ ಅಡಗಿರುವುದು ನಮಗೆ ಬಹಳ ಅತೃಪ್ತಿಕರವಾಗಿದೆ. ಮತ್ತು ಹೀಗಿದ್ದಲ್ಲಿ ಮುಂದೆ ಹೆಚ್ಚಿನ ಸುಧಾರಣೆಗಳು ದೊರೆತಾಗ ಹಿಂದುಳಿದ ಜನರು ಅಂತಹ ಆಡಳಿತದಲ್ಲಿ ಭಾಗಿಗಳಾಗಲು ಸಂದರ್ಭವಿಲ್ಲ.

ಅಲ್ಲದೆ ಪ್ರತಿ ಯೂರೋಪಿಯನ್ ಉದ್ಯೋಗಸ್ಥರೂ ಇಲ್ಲಿ ಐದುವರ್ಷಗಳಕಾಲ ಮಾತ್ರ ಇರುವರು. ಇಷ್ಟು ಸ್ವಲ್ಪ ಸಮಯದಲ್ಲಿ ದೇಶದ ಎಲ್ಲಾ ಜನರ ವಿಷಯವನ್ನು ತಿಳಿದುಕೊಳ್ಳಲು ಅವರಿಗೆ ಸಂದರ್ಭವಿಲ್ಲ. ಅವರು ಇಲ್ಲಿ ಇರುವಷ್ಟು ಕಾಲ ಇಲ್ಲಿ ಮುಖ್ಯವಾಗಿರುವ ದೇಶೀಯ ಉದ್ಯೋಗಸ್ಥರ ಆಲೋಚನೆಯ ಮೇರೆ ನಡೆಯಬೇಕಾಗುವುದು. ಇಂಥಾ ದೇಶೀಯ ಉದ್ಯೋಗಸ್ಥರು ಬಹಳ ಕಾಲದವರೆಗೆ ಇಲ್ಲಿಯೇ ಇದ್ದು ಅವರ ಮನಸ್ಸೆಲ್ಲವೂ ಕಿಂಚಿತ್ತಾಗುವ್ವದರಿಂದ ಅವರು ಪಕ್ಷಪಾತವಿಲ್ಲದೆ ಕೆಲಸಮಾಡಲು ಅಸಾಧ್ಯವಾಗುವುದು. ಹೀಗೆ ಸ್ಥಳೀಕ ಜನರೇ ಮೊಡ್ಡ ದೊಡ್ಡ ಕೆಲಸಗಳನ್ನು ಹೊಂದಿ ಅನೇಕಕಾಲ ಒಂದೇ ಕಡೆಯಲ್ಲಿರುವುದು ಕೊಡಗಿನಲ್ಲಿ ಮಾತ್ರವಲ್ಲದೆ ಇನ್ಯಾವ ನಾಗರೀಕತೆ ಹೊಂದಿದ ದೇಶದಲ್ಲಿಯೂ ಇಲ್ಲ.

ಮೇಲೆ ಹೇಳಿದ ವಿಷಯಗಳಲ್ಲದೆ ಇನ್ನೊಂದು ವಿಷಯವನ್ನು ಸಹ ನಾವು ಹೇಳಬೇಕಾಗಿರುವುದು. ಕೊಡಗಿಗೆ ಕೌನ್ಸಿಲು ದೊರೆತದ್ದರಿಂದ ಗೌಡ ಜನರ ಆಶೆಗಳೆಲ್ಲವೂ ನಿರಾಶೆಗಳಾದವೇ ಹೊರತು ಅವರ ಸ್ಥಿತಿಯೇನೂ ಉತ್ತಮವಾಗಲಿಲ್ಲ. ನಮಗೆ ಕೌನ್ಸಿಲಿನಲ್ಲಿ ಸ್ಥಳ ದೊರಕಿಸಿಕೊಳ್ಳಲು ಸಾಧ್ಯವಾಗದೆ ಹೋದುದರಿಂದ ಕೌನ್ಸಿಲಿನಿಂದ ನಮಗೆ ಏನೊಂದು ಪ್ರಯೋಜನವೂ ದೊರಕದೆ ಹೋಯಿತು.

ಈ ಕಾರಣಗಳಿಂದ ಗೌಡ ಮತಸ್ಥರಾದ ನಾವು ಕೊಡಗು ಸರಕಾರದ ಮುಂದೆ ಈ ಕೆಳಗೆ ಕಾಣಿಸಿದ ನಮ್ಮ ಕೋರಿಕೆಗಳನ್ನು ಅರಿಕೆಮಾಡಿಕೊಳ್ಳುತ್ತೇವೆ.

1. ಸರಕಾರದ ಎಲ್ಲಾ ಇಲಾಖೆಗಳಲ್ಲಿಯೂ ಶೇಕಡ ... ಷ್ಟು ಉದ್ಯೋಗಗಳನ್ನು ಗೌಡುಗಳಿಗೆ ಪ್ರತ್ಯೇಕ ಇಟ್ಟಿರಬೇಕು.

2. ಗೌಡ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವೇತನಗಳನ್ನು ಕೊಟ್ಟು ಅವರಿಗೆ ವಿದ್ಯಾಭ್ಯಾಸದಲ್ಲಿ ಉತ್ತೇಜನ ಕೊಡಬೇಕು.

3. ಕೌನ್ಸಿಲಿನಲ್ಲಿ ಕೋಮುವಾರು ಚುನಾವಣೆಯನ್ನು ... ಬೇಕು. ಅಲ್ಲದೆ ಹೋದರೆ ಇಬ್ಬರು ಗೌಡುಗಳನ್ನಾದರೂ ಸರಕಾರದವರೇ ಕೌನ್ಸಿಲಿಗೆ ಚುನಾಯಿಸಿ ತೆಗೆದುಕೊಳ್ಳಬೇಕು.

4, ಕೊಡಗು ಕೌನ್ಸಿಲಿನ ಠರಾವುಗಳನ್ನು ಸರಕಾರದವರು ಗಮನಕ್ಕೆ ತರುವಾಗ ಗೌಡುಗಳಂಥ ಒಂದು ದೊಡ್ಡ ಪಂಗಡವು ಕೌನ್ಸಿಲಿನಲ್ಲಿ ಇಲ್ಲದೆ ಇರುವುದನ್ನು ಜ್ಞಾಪಕದಲ್ಲಿಟ್ಟಿರಬೇಕು.

5. ಈಗ ಇರುವ ಯೂರೋಪಿಯನ್ ಉದ್ಯೋಗಸ್ಥರಲ್ಲದೆ, ಸೆಂಟ್ರಲ್ ಹೈಸ್ಕೂಲ್ ಹೆಡ್‌ಮಾಸ್ಟರ ಕೆಲಸವನ್ನೂ, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಹುದ್ದೆಯನ್ನೂ, ಪೋಲೀಸ್ ಸುಪರಿಂಟೆಂಡೆಂಟರ ಕೆಲಸವನ್ನೂ, ಕೆಲವು ವರ್ಷಗಳ ತನಕ ಯೂರೋಪಿಯನರಿಗೇನೇ ಅಥವಾ ಈ ದೇಶದಲ್ಲಿ ಹೆಚ್ಚಿನ ಸಮ್ಬಂಧವಿಲ್ಲದ ಪರಸ್ಥಳದವರಿಗೇನೇ ಕೊಡಬೇಕು.

6 ದೇಶೀಯ ದೊಡ್ಡ ಉದ್ಯೋಗಸ್ಥರನ್ನು ಒಂದೇ ಸ್ಥಾನದಲ್ಲಿ ಮೂರು ವರ್ಷಕ್ಕಿಂತ ಹೆಚ್ಚು ಕಾಲ ಇಡ ಕೂಡದು.

ಮೇಲೆ ಕಾಣಿಸಿದ ಠರಾವುಗಳು ಮಂಜೂರುಮಾಡಲ್ಪಟ್ಟ ನಂತರ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿದ ನಂತರ ಸಭೆಯನ್ನು ಬರಖಾಸ್ತು ಮಾಡಲಾಯಿತು.

ಎಸ್. ಮುದ್ದಪ್ಪ,
ಅಧ್ಯಕ್ಷರು.

ಕುಣಿತದ ರೋಗವು.

"ಇಂಡಿಯನ್ ಮೆಡಿಕಲ್ ರೆಕಾರ್ಡ" ಎಂಬ ಮಾಸಪತ್ರಿಕೆಯಲ್ಲಿ ಕೆಲವು ಶತಮಾನಗಳ ಹಿಂದೆ, ಯುರೋಪದಲ್ಲಿ ಕುಣಿತದ ರೋಗವು ಹಬ್ಬಿದ ಬಗ್ಗೆ ಮನೋರಂಜಕವಾದ ಲೇಖವು ಬಂದಿದೆ, ಅದರ ಸಾರಾಂಶವೇನಂದರೆ—

"೧೩೭೪ನೆಯ ಇಸವಿಯಲ್ಲಿ ಎಲಾಚೆ ಪಟ್ಟಣದಲ್ಲಿ ಈ ಕುಣಿಯುವ ಹುಚ್ಚು ಪ್ರಾರಂಭವಾಯಿತು. ಜನರು ಗುಂಪುಗಟ್ಟಿಕೊಂಡು ಒಬ್ಬರ ಕೈಯಲ್ಲಿ ಒಬ್ಬರು ಕೈಹಾಕಿ ಹುಚ್ಚರಂತೆ ಕುಣಿಯಲಿಕ್ಕೆ ಹತ್ತಿದರು. ಅವರ ಮೈಮೇಲೆ ಎಚ್ಚರವಿದ್ದಿಲ್ಲ. ಅವರೆಲ್ಲರೂ ಕುಣಿದು ಕುಣಿದು ದಣಿದು ದೊಪ್ಪನೆ ನೆಲಕ್ಕೆ ಬಿದ್ದರು. ಅವರು ಆಗ ಶಕ್ತಿಹೀನರಾದರು. ತಮಗೆ ಸಾಯುವವೇದನೆಗಳಾಗುತ್ತವೆಂದು ಒಳಪುತ್ತಿದರು. ಆಗ ಅವರ ಬೆನ್ನಿಗೆ ಕೋಲುಕಟ್ಟಿ ಅವರು ಹೊತ್ತುಕೊಂಡು ಒಯ್ಯಲ್ಪಟ್ಟರು. ಮುಂದೆ ಸ್ವಲ್ಪ ದಿವಸಗಳಲ್ಲಿ ಅವರಿಗೆ ತಾನೇ ಗುಣವಾಯಿತು. ಆ ಊರಿಂದ ಅದು ಮುಂದೆ ಲೀಜ, ಉಟ್ರೆಕ್ಟ್, ಟೊಂಗರ್‍ಸ್ ಮತ್ತು ನೆದರ್ಲಂಡ ಮುಂತಾದ ಸ್ಥಳಗಳಿಗೆ ಹಬ್ಬಿತು. ಬೀದಿಗಳಿಂದಲೂ ಗುಡ್ಡಗಳಿಂದಲೂ ಅನೇಕರಿಗೆ ಈ ರೋಗವು ವಾಸಿಯಾಯಿತು. ಈ ರೋಗವು ಉಂಟಾದ ರೋಗಿಗಳ ಮನಸ್ಸು ವಿಚಿತ್ರಣ ಬಗೆಯದಾಗಿತ್ತು. ಕೆಂಪು ವಸ್ತುಗಳನ್ನು ಕಂಡರೆ ಅವರಿಗೆ ಬಹಳ ಸಿಟ್ಟು. ಕೆಂಪು ವಸ್ತ್ರವನ್ನು ನೋಡಿದೊಡನೆಯೇ ಅವರ ತಲೆತಿರುಗುತ್ತಿತ್ತು. ಕೆಲವರಿಗೆ ಬರಹನೆಯುವರೂ ಅಳುವದನ್ನು ನೋಡುವದಕ್ಕಾಗುತ್ತಿದ್ದಿಲ್ಲ.

ಕೋಲೋನದಲ್ಲಿ ೫೦೦ ಜನರಿಗೆ ಈ ರೋಗವು ತಗಲಿತು ಮೆಟ್ಜ ಎಂಬಲ್ಲಿ ೧೧೦೦ ಜನರಿಗೆ ಈ ಹುಚ್ಚು ಹಿಡಿಯಿತು.

೧೪೧೮ದಲ್ಲಿ ಈ ರೋಗವು ಪುನಃ ತಲೆದೋರಿತು. ಜರ್ಮನಿಯಲ್ಲಿ ಒಬ್ಬಳು ಇಡೀ ಒಂದು ತಿಂಗಳ ವರೆಗೆ ಒಂದೇ ಸಮನೆ ಕುಣಿದಳಂತೆ! ಈ ಹುಚ್ಚು ಹಿಡಿದ ಜನರನ್ನು ಆಸೆಂಟ್ ವ್ಹಿಟಸ್ ಎಂಬವನ ದೇವಾಲಯಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ಕೆಲವರಿಗೆ ಸಮಾಧಾನವಾಗಿ ಗುಣವಾಗುತ್ತಿತ್ತು, ಸೆಂಟ್ ವ್ಹಿಟಸನ ಹಬ್ಬವೇ ಹೋದ ಮೇಲೆ ಪುನಃ ಈ ಹುಚ್ಚು ಹಿಡಿಯುತ್ತಿದ್ದಿಲ್ಲ. ಸೆಂಟ್ ವ್ಹಿಟಸನೆಂಬವನು ಸಿಸಿಲಿಯ ಒಬ್ಬ ಸಾಧುಪುರುಷನು. ಆತನು ೩೦೩ನೇ ಇಸ್ವಿಯಲ್ಲಿ ಧರ್ಮಕ್ಕೋಸ್ಕರ ಪ್ರಾಣಕೊಟ್ಟಿದ್ದನು. ಆದಕಾರಣ ಜನರಿಗೆ ಆತನಲ್ಲಿ ವಿಶ್ವಾಸ. 'ಇಂಥ ಹುಚ್ಚು ಏಕೆ ಹಿಡಿಯುತ್ತದೆಂಬುದು ಶೋಧನೆಯಿಂದ ತಿಳಿಯಬೇಕಾದ ಸಂಗತಿಯು.

Indian Medical Journal.

ನೋಟೀಸು.

ದಕ್ಷಿಣ ಕೊಡಗಿನಲ್ಲಿ ಮದುವೆ ಕಾಗದ, ನೋಟೀಸು ಮತ್ತು ಬೇರೆ ಪ್ರಿಂಟಿಂಗ್ ಕೆಲಸ ಮಾಡಿಸಬೇಕೆಂದಿರುವವರು ದಯವಿಟ್ಟು ಎಲ್ಲಾ ಆರ್ಡರುಗಳನ್ನು ನಮ್ಮ ಏಜಂಟರಾದ ವೀರರಾಜಪೇಟೆ ಖಾದಿಭಂಡಾರದ ಮೇನೇಜರವರಿಗೆ ಕೊಟ್ಟರೆ, ಶೀಘ್ರದಲ್ಲೇ ಸುಲಭ ಚಾರ್ಜಿಗೆ ಗಿಲಿಟು ಪಾಕಿ ಪ್ರಿಂಟುಮಾಡಿಸಿ ಕಳುಹಿಸಲಾಗವುದು.

'ಮೇನೇಜರ್',
"ಕೊಡಗು" ಪ್ರೆಸ್, ಮಡಿಕೇರಿ,

(೨ನೇ ಪುಟದಿಂದ ಮುಂದರಿದದ್ದು.)

ಷ್ಟ ಬಳಿಕ ಉತ್ತಮರೀತಿಯಿಂದ ದೇಶಸೇವೆಯನ್ನೂ ಪ್ರಚಾರವನ್ನೂ ಮಾಡುತ್ತಾರೆ. ಆದರೆ ಅವರು ವ್ಯಕ್ತಿಗಳಿಗೆ ಅವರ ಮತವನ್ನು ನಿರೋಧಿಸುವುದರಿಂದ ಸಾಧಾರಣ ಹಿಂದೂಧರ್ಮದಿಂದ ರಾಮಕೃಷ್ಣರ ಬೋಧನೆಯಿಂದ ಅತೃಪ್ತಿ ಹುಟ್ಟುತ್ತದೆ. ಮತಬೋಧಕ ಸಂಸ್ಥೆ ಕೃಷ್ಣಾ ಮಿಶನಿನಷ್ಟು ಅನುಕೂಲವಾದ ಸಂಸ್ಥೆಯು ಬೇರೆ ಇಲ್ಲವೆಂತ ನನ್ನ ಅಭಿಪ್ರಾಯವಾಗಿದೆ.

ಈ ಮಿಶನಿನವರು ಆರ್ಯಸಮಾಜದವರಂತೆಯೇ ಸಮಾಜಸೇವೆಯನ್ನು ಮಾಡುತ್ತಾರೆ. ಕ್ಷಾಮ, ರೋಗ, ಪ್ರವಾಹ ಇತ್ಯಾದಿ ಕಷ್ಟಗಳು ಬಂದಾಗ ಇತರಸಂಸ್ಥೆಯವರು ಕಷ್ಟನಿವಾರಣೆ ಕೆಲಸ ಮಾಡುತ್ತಾರೆ. ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕೆಂತ ವಿವೇಕಾನಂದ ಸ್ವಾಮಿಗಳು ಮುಂಚಿತವಾಗಿ ಹೇಳಿದ್ದಾರೆ. ಈ ದೇಶದ ಹಿತಚಿಂತಕರು ರಾಮಕೃಷ್ಣ ಮಿಶನಿನ ಸಂಸ್ಥೆಯನ್ನು ಬಲಪಡಿಸಿ ಶಕ್ತಿವಂತ ಸ್ವಾಮಿಯವರನ್ನು ಖಾಯಂ ಆಗಿ ಇಟ್ಟುಕೊಂಡರೆ ಹಿಂದೂಮತೋದ್ಧಾರವು ಬಹಳ ಮಟ್ಟಿಗೆ ಚನ್ನಾಗಿ ನಡೆದೀತು.

ಈ ಲೇಖನವನ್ನು ಬರೆಯುವಾಗ ಶರ್ವಾನಂದ ಸ್ವಾಮಿಜೀಯವರ ಎರಡು ಉಪನ್ಯಾಸಗಳು ನಡೆದಿವೆ. ಮೊದಲನೇದು ಶ್ರೀ ರಾಮಕೃಷ್ಣ ಪರಮ ಹಂಸರ ಜೀವನ ಚರಿತ್ರೆ ಮತ್ತು ಅವರ ಬೋಧನೆಗಳು. ಎರಡನೇದು ಹಿಂದೂಧರ್ಮದ ಮುಖ್ಯ ಅಂಶಗಳು. ಈ ಎರಡು ಉಪನ್ಯಾಸಗಳು ಬಹಳ ಸ್ವಾರಸ್ಯವಾಗಿಯೂ ಇದ್ದವು. ಉಪನ್ಯಾಸಗಳ ಕೆಲವು ಭಾಗಗಳು ಅನೇಕರಿಗೆ ಗೊತ್ತಾಗದೆ ಇರಬಹುದು. ಯಾಕಂದರೆ ವೇದಾಂತದ ಮೂಲ ತತ್ವಗಳ ವಿಷಯವನ್ನು ವಿಚಾರಿಸದವರಿಗೆ ತತ್ವಬೋಧೆಯು ಮನಸ್ಸಿಗೆ ಹೋಗುವುದು ಸ್ವಲ್ಪ ಕಷ್ಟವೇ. ಹಿಂದುಸ್ಥಾನದಲ್ಲಿ ಧರ್ಮವು ಕ್ಷೀಣವಾಗಿ ಅಧರ್ಮವು ಹೆಚ್ಚಾದಾಗ ಪರಮಾತ್ಮನ ಅವತಾರವಾಗಿ ಧರ್ಮಸ್ಥಾಪನೆಯಾಗುತ್ತದೆಯೆಂಬ ಹಿಂದುಗಳ ನಂಬಿಕೆಗೆ ಅನುಸಾರವಾಗಿ ಹಿಂದುಸ್ಥಾನದಲ್ಲಿ ಪಾಶ್ಚಿಮಾತ್ಯರ ಐಹಿಕ ಭೋಗದ ಥಳಕಿನಿಂದ ಧರ್ಮವನ್ನು ಹಿಂದುಗಳು ಮರೆಯುವ ಸಮಯದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು ಅವತರಿಸಿ ವೇದಾಂತವನ್ನು ಪ್ರವರ್ತಿಸಿದರು. ಪ್ರತಿಯೊಬ್ಬನು ಅನುಭವಿಸಬಹುದೆಂಬ ಸತ್ಯವನ್ನು ಸಿದ್ಧಗೊಳಿಸಿ ತೋರಿಸಿದರು ಎಂತ ಹೇಳಿ ಹಿಂದುಸ್ಥಾನದ ಈಗಿನ ಶೋಚನೀಯ ಸ್ಥಿತಿಯನ್ನು ಹೋಗಲಾಡಿಸಿ ಉನ್ನತ ಸ್ಥಿತಿಗೆ ತರಬೇಕಾದರೆ ಮತಪ್ರಚಾರವೇ ಮುಖ್ಯವೆಂತಲೂ, ಹಿಂದೂ ಜನರು ಸ್ವಶಕ್ತಿಯಲ್ಲಿ ನಂಬಿಕೆ ತಪ್ಪಿದವರಾಗಿರುವದರಿಂದ ಪ್ರತಿಯೊಬ್ಬನ ಜೀವವು ಪರಮಾತ್ಮನ ಸ್ವರೂಪವೆಂಬ ನಂಬಿಕೆ ಹುಟ್ಟಿಸಿ ಆತ್ಮಶಕ್ತಿಯನ್ನು ಬೆಳಸಿದರೆ ಸ್ವರಾಜ್ಯ ಸ್ಥಾಪನೆಯು ಬಡತನ ನಿವಾರಣೆಯೂ ತನ್ನಷ್ಟಕ್ಕೇ ಆಗುತ್ತದೆಂತಲೂ ಮೊದಲನೇ ಉಪನ್ಯಾಸದಲ್ಲಿ ಬೋಧಿಸಿದರು. ಎರಡನೇ ಉಪನ್ಯಾಸದಲ್ಲಿ ಹಿಂದೂ ಧರ್ಮದ ಮುಖ್ಯ ಅಂಶಗಳನ್ನು ವಿವರಿಸಿದರು. ಪ್ರಪಂಚವು ಸೃಷ್ಟಿಯಾಗುವ ಮುಂಚೆ ನಾಮರೂಪವಿಲ್ಲದ ಪರಮಾತ್ಮ ವಸ್ತುವಂದೇ ಇತ್ತು. ಅನಂತರ ಪ್ರಕೃತಿ ಪುರುಷವೆಂಬ ಭೇದವಾಗಿ ಪ್ರಪಂಚದ ಸೃಷ್ಟಿಯಾಯಿತು. ಪ್ರತಿಯೊಂದು ಜೀವಾತ್ಮವು ಪರಮಾತ್ಮನ ಅಂಶವಾಗಿದೆ. ಜೀವಾತ್ಮಗಳು ಕರ್ಮ ಬದ್ಧವಾಗಿವೆ. ಅಂದರೆ ಜೀವಾತ್ಮಗಳ ಈಗಿನ ಸ್ಥಿತಿಯು ಪೂರ್ವ ಜನ್ಮದ ಕರ್ಮದ ಫಲವಾಗಿದೆ. ಜೀವಾತ್ಮಗಳು ಹುಟ್ಟಿ ಸಾಯುವದೆಂತ ಇಲ್ಲ. ಕಣ್ಣಿಗೆ ತೋರುವ ಸ್ಥೂಲ ದೇಹವು ಹುಟ್ಟಿ ಸಾಯುತ್ತದೆಯೇ ಹೊರ್ತು ಜೀವಾತ್ಮವು ಸಾಯುವದಿಲ್ಲ, ಎಂಬವೇ ಹಿಂದೂ ಧರ್ಮದ ಮುಖ್ಯ ಅಂಶಗಳಾಗಿವೆ ಎಂತ ಹೇಳಿ ಮುಕ್ತಿಯ ಸಾಧನೆಗಳಾದ ಉಪಾಸನೆಗಳು ಅಂದರೆ ಮೂರ್ತಿ ಪೂಜೆ ಮುಂತಾದ್ದನ್ನು ವಿವರಿಸಿದರು.

ಮನೆಯಲ್ಲಿ ಮತದ ಕಟ್ಟು ಕಡಿಮೆಯಾಗುತ್ತಾ ಪ್ರತಿಯೊಬ್ಬನು ಸ್ವೇಚ್ಛೆಯಾಗಿ ಇರಬೇಕೆಂತ ಹೇಳುತ್ತಿರುವ ಕಾಲದಲ್ಲಿ ಈ ರೀತಿ ಮತಬೋಧಕರು ಮುಂದೆ ಬಾರದಿದ್ದರೆ ನಾಸ್ತಿಕತ್ವವು ಹೆಚ್ಚಿ ಹೋದೀತು. ಮಡಿಕೇರಿಯ 5000 ಜನಸಂಖ್ಯೆಯಲ್ಲಿ ಒಂದೇ ನೂರು ಯಾ ಇನ್ನೂರು ಜನರು ಮಾತ್ರ ಹಾಜರಿದ್ದರೆಂಬುದನ್ನು ನೋಡಿ ನಮಗೆ ತುಂಬಾ ವ್ಯಸನವಾಯಿತು. ಉಪನ್ಯಾಸವು ಇಂಗ್ಲಿಷಿನಲ್ಲಿ ಇದ್ದದರಿಂದ ಹೆಚ್ಚಿನ ಜನರಿಗೆ ಕೇಳಲಿಕ್ಕೆ ಅನುಕೂಲವಾಗಲಿಲ್ಲವೆಂಬುದು ನಮಗೆ ಗೊತ್ತಿದೆ. ಉಪನ್ಯಾಸಗಳನ್ನು ಹಿಂದೀ ಭಾಷೆಯಲ್ಲಿ ಮಾಡಿಸಿದರೆ ಹೆಚ್ಚು ಪ್ರಯೋಜನವಾದೀತೆಂತ ಕೇಳಬಹುದಿತ್ತು. ಆದರೆ ಇಲ್ಲಿ ಹಿಂದಿ ತಿಳಿದವರು ಕಡಿಮೆ, ಉಪನ್ಯಾಸಗಳು ಅರ್ಥವಾಗದಿದ್ದರೂ ಹಿಂದೀಭಾಷೆಯನ್ನು ಜನರು ಸುಲಭದಲ್ಲಿ ಕಲಿತುಕೊಳ್ಳಬಹುದು. ಈ ರಾಷ್ಟ್ರ ಭಾಷೆಯ ಕಡೆಗೆ ಜನರು ಮನಸ್ಸು ಕೊಡದೆ ಇರುವದರಿಂದಲೇ ಇಂಥಾ ಸಾರವತ್ತಾದ ಉಪನ್ಯಾಸಗಳನ್ನು ಕೇಳುವ ಅವಕಾಶ ಇಲ್ಲದಂತಾಗಿದೆ.

ಸ್ವಾಮಿಜೀಯವರ ಬೋಧನೆಯಿಂದ ಕೆಲವು ಮುಟ್ಟಿಗಾದರೂ ಜನರಲ್ಲಿ ಆತ್ಮಸಿಂಹಾರದ ಆಸೆ ಹುಟ್ಟೀತೆಂತಲೂ ಅದರಿಂದ ಸತ್ಯಲಕ್ಷ್ಯಾಗಿ ದೇಶವನ್ನು ಬಿಡಲಿಕ್ಕಾದರೂ ಸಿದ್ಧರಾಗುವ ಜನರು ತಯಾರಾದಾರೆಂತಲೂ ಆಶಿಸುತ್ತೇನೆ.

ಜೀವವಿಮೆಯ ಕಂಪೆನಿಯ ವಿಮರ್ಶೆ.

ಓರಿಯಂಟಲ್ ಜೀವವಿಮೆ ಕಂಪೆನಿಯ 1924ನೇ ವರುಷದ ವರದಿಯು ನಮ್ಮ ಕೈಸೇರಿದೆ. ಈ ಕಂಪೆನಿಯು ಕೆಲಸ ಪ್ರಾರಂಭಿಸಿ 1924ಕ್ಕೆ 50 ವರುಷಗಳಾದವು. ಈ ವರದಿಯು ಕಂಪೆನಿಯ ಸ್ಥಿತಿಯನ್ನು ವಿವರಿಸಿದೆ. ಕಂಪೆನಿಯು ಅಭಿವೃದ್ಧಿ ಹೊಂದಿದೆ ಎಂಬುದರಲ್ಲಿ ಸಂಶಯವಿಲ್ಲ. ನಮ್ಮ ದೇಶದಲ್ಲೂ ಅನೇಕ ಮಹನೀಯರು ಈ ಕಂಪೆನಿಯಲ್ಲಿ ಪಾಲಿಸಿದಾರರಾಗಿರುವದರಿಂದ ಅವರ ತಿಳುವಳಿಕೆ ಬಗ್ಗೆ ಈ ವರದಿಯ ಕೆಲವು ಮುಖ್ಯ ಅಂಶಗಳನು ಇನ್ನೊಂದು ಕಡೆ ಕೊಟ್ಟಿದ್ದೇವೆ.

ಈ ಕಂಪೆನಿಯು ಜೀವವಿಮೆ ಕೆಲಸವು ೫೦ ವರ್ಷದಿಂದ ನಮ್ಮ ದೇಶದಲ್ಲಿ ಚೆನ್ನಾಗಿ ನಡೆದಿದೆ. ಅದು ದೂರದ ಹಳ್ಳಿ ಮೂಲೆಗಳಿಗೂ ಹಬ್ಬಿದೆ. ಜೀವವಿಮೆ ಏನೆಂಬುದು ಅನೇಕರಿಗೆ ತಿಳಿದು ಬಂದಿದೆ. ಆದರೆ ಅದರಿಂದ ಹೆಚ್ಚಿನ ಪ್ರಯೋಜನವಿಲ್ಲವೆಂದು ಹೇಳುವವರು ಕೆಲವರಿರುವರು. ಈ ವಿಷಯದಲ್ಲಿ ನ್ಯಾಯಾಧೀಶ ಮಿ ವಿ ಎಸ್ ಶ್ರೀನಿವಾಸ ಶಾಸ್ತ್ರಿಯವರು ಹೇಳಿರುವುದೇನೆಂದರೆ—

"ಈಗ ಜೀವ ವಿಮೆಯು ಹಲವು ವಿಧದವು. ಇರುವದರಿಂದ ಯಾರೂ ತನ್ನ ಸ್ಥಿತಿಗೆ ಸರಿಯಾದ ಶರತ್ತಿನ ವಿಮೆ ಇಲ್ಲವೆಂತ ಈಗ ಹೇಳಲು ಸಾಧ್ಯವಿಲ್ಲ. ತನ್ನ ಅಧೀನರ ಪ್ರಯೋಜನಕ್ಕಾಗಿ ಮಾಡಬೇಕಾದ ಈ ಮೊದಲನೇ ಕರ್ತವ್ಯವನ್ನು ಮಾಡದಿರಲು ಈಗ ನ್ಯಾಯವಾದ ಯಾವ ಕಾರಣವೂ ಇಲ್ಲ. ತನ್ನ ಅನಂತರ ತನ್ನ ಪಾಪದ ಮಕ್ಕಳಿಗೆ ಏನೂ ಕೂಡಿ ಇಡಬೇಕಾದದ್ದಿಲ್ಲವೆಂತ ಬಹಳ ಐಶ್ವರ್ಯವಂತರೂ ಹೇಳುವದುಂಟು. ಮಕ್ಕಳಿಲ್ಲದವನು ತನ್ನ ಅನಂತರ ಯಾರಿಗೂ ಅನುಕೂಲವನ್ನು ಇಡಬೇಕಾದದ್ದಿಲ್ಲ. ವಿಧವೆಗೆ ಸ್ವಲ್ಪ ಇದ್ದರೇ ಹೆಚ್ಚಾಗುತ್ತದೆ ಎಂತ ಹೇಳುವದುಂಟು. ಅಂಥವರಿಗೆಲ್ಲರಿಗೂ ನಾನೂ ಈ ಸವಾಲುಗಳನ್ನು ಮಾಡುತ್ತೇನೆ. (1) ನಿನಗೆ ಬಡನೆಂಟರಾಗಲೀ ನಂಬಿಗಸ್ತ ಆಳುಗಳಾಗಲೀ ಇಲ್ಲವೇ? (2). ಆಸ್ಪತ್ರೆಗಳೂ, ಛತ್ರಗಳೂ, ಶಾಲೆಗಳೂ, ರೋಗಿಗಳ ವಾಸದ ಮನೆಗಳು ಇಲ್ಲವೇ?"

ಇದರಿಂದ ಜೀವವಿಮೆಯಿಂದ ಪ್ರತಿಯೊಬ್ಬನಿಗೂ ಪ್ರಯೋಜನವಿದೆಯೆಂದು ಗೊತ್ತಾಗುತ್ತದೆ. ಆದರೆ ಯಾರೂ ತಮ್ಮ ಶಕ್ತಿಮೀರಿ ಜೀವವಿಮೆಗೆ ಸೇರುವುದು ಉಚಿತವಲ್ಲ. ಪ್ರತಿ ವರ್ಷವೂ ತಮ್ಮ ಪ್ರೀಮಿಯಮ್ ಕೊಡುವಷ್ಟು ಅನುಕೂಲವಿದ್ದರೆ ಮಾತ್ರ ಜನರು ಜೀವವಿಮೆಗೆ ಸೇರಬೇಕು. ಒಂದೇ ವರ್ಷದ ಪ್ರೀಮಿಯಮ್ ಕೊಡದೆ ಹೋದರೆ ಪೋಲಿಸಿ ನಿಂತುಹೋಗುವ ಸಂಭವ ವಿರುವುದರಿಂದ ಗ್ರಾಹಕರು ಸೇರುವ ಮುಂಚೆ ತಮ್ಮ ಸ್ಥಿತಿಯನ್ನು ಚನ್ನಾಗಿ ತಿಳಕೊಳ್ಳಬೇಕು. ಸೇರಿದ ಮೇಲೆ ತಪ್ಪದೆ ಪ್ರೀಮಿಯಮ್ ಕೊಡುತ್ತಾ ಬಂದರೆ ಜೀವವಿಮೆಯಿಂದ ಎಲ್ಲರಿಗೂ ಪ್ರಯೋಜನ ಉಂಟೆಂಬುದರಲ್ಲಿ ಸಂಶಯವಿಲ್ಲ. ಪಾಲಿಸಿ ತೆಗೆದುಕೊಳ್ಳುವ ಮುಂಚೆ ವಿಮೆದಾರರು ಕಂಪೆನಿಯ ಭದ್ರತೆಯನ್ನು ಚೆನ್ನಾಗಿ ವಿಚಾರಿಸಬೇಕಾಗಿದೆ. ಓರಿಯಂಟಲ್ ಕಂಪೆನಿಯ ಭದ್ರತೆಯು ಅವರ ವರದಿಯಿಂದಲೇ ಸ್ಪಷ್ಟವಾಗುತ್ತದೆ. ಅದರಿಂದಲೇ ಈ ಕಂಪೆನಿಯು ನಮ್ಮ ದೇಶದಲ್ಲಿ ಹೆಚ್ಚು ಜನಪ್ರಿಯವಾದದ್ದಾಗಿದೆ.

ಬಾಳೇ ಹಣ್ಣಿನಲ್ಲಿರುವ ಶ್ರೇಷ್ಠವಾದ ಗುಣಗಳು.

ಸಮಸ್ತ ಕಾಲದಲ್ಲಿಯೂ ಶುಭಾಶುಭಾದಿಗಳಲ್ಲಿ ಅಂದರೆ ಮದುವೆ, ಉತ್ಸವಕಾಲ ಮುಂತಾದವುಗಳಲ್ಲಿ ಕೂಡ ಕದಳೀ ಫಲವು ಶ್ರೇಷ್ಠತೆಯನ್ನು ಪಡೆದಿರುವುದು. ದೇವರಿಗೆ ನೈವೇದ್ಯಕ್ಕೋಸ್ಕರ "ಕದಳೀ ಫಲ ನೈವೇದ್ಯಂ ಸಮರ್ಪಯಾಮಿ" ಎಂಬ ಶ್ಲೋಕವನ್ನು ಹೇಳಿ ವಿನಿಯೋಗಿಸುವರು. ಅನೇಕ ವೈದ್ಯರು ಕೂಡ ಬಾಳೆಯ ಹಣ್ಣನ್ನು ಔಷಧವಾಗಿ ಉಪಯೋಗಿಸುವರು. ತಪೋನಿಷ್ಠರು, ಯೋಗಿ ಜನರು, ಗುರು ಹಿರಿಯರು ಮುಂತಾದ ಮಹಾತ್ಮರು ಕೂಡ ಕದಳೀ ಫಲವನ್ನು ಫಲಾಹಾರವಾಗಿ ಉಪಯೋಗಿಸುವರು. ಅಂದರೆ ಬಾಳೆ ಹಣ್ಣಿಗೆ ಇಷ್ಟು ಪ್ರಾಶಸ್ತ್ಯವು ಬರುವುದಕ್ಕೆ ಕಾರಣವೇನೆಂಬುದನ್ನು ವಿಚಾರಮಾಡುವ.

ಅನುಭವದಲ್ಲಿ ಬಾಳೆಯ ಹಣ್ಣು ಅತ್ಯುತ್ತಮವಾದ ಆಹಾರ ಪದಾರ್ಥವು. ಆದರೆ ಹಣ್ಣು ಚನ್ನಾಗಿ ಮಾಗಿರಬೇಕು. ಅಂದರೆ ಕಳಿತುಹೋದ ಹಣ್ಣಲ್ಲ. ಸಾಧಾರಣವಾಗಿ ಪಕ್ವಕ್ಕೆ ಬಂದಿರುವ ಹಣ್ಣು ಗೊನೆಯನ್ನೇ ಕಡಿಯುವರು. ಥಾಮ್ಸನ್ (A. R. Thompson) ಎಂಬೊಬ್ಬ ಶಾಸ್ತ್ರಜ್ಞನು ಹಸುರು ಕಾಯಿಯಲ್ಲಿ ಸುಮಾರು ಶೇಕಡಾ 1ಕ್ಕೆ 20 ಭಾಗದಷ್ಟು ಪಿಷ್ಟ (Starch) ಭಾಗವು ಇರುವುದೆಂದೂ, ಮಾಗಿದ ಹಣ್ಣಿನಲ್ಲಿ ಪಿಷ್ಟ ಭಾಗವು ಶುದ್ಧಾಂಗವಾಗಿ ಇಲ್ಲವೆಂದೂ ನಿರ್ಧರಿಸಿರುವನು. ಹಣ್ಣು ಮಾಗಿರುವುದರಿಂದ ಪಿಷ್ಟವೆಲ್ಲವೂ ಸಕ್ಕರೆಯ ರೂಪಾಂತರವನ್ನು ಹೊಂದುವುದು.

ಅರ್ಧ ಮಾಗಿರುವಾಗ ಬಾಳೆಯ ಹಣ್ಣು ಸ್ವಲ್ಪ ಹುಳಿ. ಮಾಗಿದನಂತರ ಈ ಹುಳಿಯು ಇರುವುದಿಲ್ಲ.

ಬಾಳೇ ಹಣ್ಣು ಆರೋಗ್ಯಕರವು.

ಚನ್ನಾಗಿ ಪಕ್ವವಾಗಿರುವ ಹಣ್ಣೇ ಆರೋಗ್ಯಕಾರಿ ಮತ್ತು ಸುಲಭವಾಗಿ ಜೀರ್ಣವಾಗಲ್ಪಡುವುದು. ಮಾಗಿದ ಹಣ್ಣು ಅಂಗಡಿ ಮುಂಗಟ್ಟು ಮುಂತಾದ ಎಲ್ಲಾ ಕಡೆಗಳಲ್ಲಿಯೂ ಮಾರಾಟಕ್ಕೆ ಇರುವದು. ಕೊಂಡುಕೊಳ್ಳುವಾಗ ಹಣ್ಣನ್ನು ನೋಡಿ ತಗದುಕೊಳ್ಳಬೇಕು. ಹಣ್ಣು ಚನ್ನಾಗಿ ಮಾಗಿದ್ದಾಗಿರಬೇಕು. ಸಣಕಲು ಹಣ್ಣುಗಳನ್ನು ತಗಿದುಕೊಳ್ಳಬಾರದು. ಹಸುರು ಕಾಯಿಗಳನ್ನು ಕೊಂಡುಕೊಂಡಾಗ್ಯೂ ಅವುಗಳು ಚನ್ನಾಗಿ ಮಾಗುವಂತೆ ಬಿಸಿಯಾದ ಸ್ಥಳದಲ್ಲಿ ಇಡಬೇಕು, ತಿನ್ನಬೇಕಾದರೆ ಸಿಪ್ಪೆಯು ಸ್ವಲ್ಪ ಕಪ್ಪು ಮಿಶ್ರವಾದ ಹಳದಿ ಬಣ್ಣಕ್ಕೆ ಬಾರಿರಬೇಕು. ಕಾಯಿ ಚನ್ನಾಗಿ ಪಕ್ವವಾಗಿದ್ದರೆ ಮಾತ್ರಗಿರುವದು. ಈ ಸ್ಥಿತಿಗೆ ಬಂದಾಗ ಹಣ್ಣಿನಲ್ಲಿರುವ ಭಾಗವೆಲ್ಲವೂ ಶರ್ಕರಾಂಶವಾಗಿರುವುದು (Sugar). ಪಿಷ್ಟ (Starch) ದ ಅಂಶವು ಇರುವುದೇ ಇಲ್ಲ. ಇಂಥ ಹಣ್ಣು ಶರೀರಕ್ಕೆ ಪ್ರತ್ಯಕ್ಷ ಸುಲಭವಾಗಿ ಜೀರ್ಣಕ್ಕೆ ಬರುವುದು. ಹಣ್ಣಿನ ಪ್ರತಿಯೊಂದು ಅಂಶವನ್ನೂ ಚನ್ನಾಗಿ ಅಗಿದು ನುಂಗಬೇಕು. ಅಗಿದು ನುಂಗುವುದಕ್ಕೆ ಮಾಡಲು ಹಣ್ಣುಗಳನ್ನು ಪುಷ್ಟಿ ಜೀರ್ಣವಾದ ರೂಪಕ್ಕೆ ಒಂದೇ ಹಣ್ಣು ಬಂದನ್ನು ಸಣ್ಣ 'ಟಂಬ್ಲರ್' (ಲೋಟ)ದ ಒಳಕ್ಕೆ ಹಾಕಿ ಚಾಕು ಅಥವ ಚಮಚದಿಂದ ನುರುಕಿ (Crush) ನ್ಯೂನವಾದ ರೂಪಕ್ಕೆ ತರಬೇಕು. ಈ ರೀತಿಯಾಗಿ ಹಣ್ಣನ್ನು ಸೇವಿಸಿದಲ್ಲಿ ಇದಕ್ಕಿಂತಲೂ ಸುಲಭವಾಗಿ ಜೀರ್ಣಕ್ಕೆ ಬರುವ ಹಣ್ಣು ಮತ್ತಾವುದೂ ಇಲ್ಲ.

ಹಣ್ಣುಗಳಲ್ಲಿರತಕ್ಕ ಮಲನಿವಾರಕ (Laxative) ಗುಣ.

ಸಾಮಾನ್ಯವಾಗಿ ಎಲ್ಲ ಹಣ್ಣುಗಳಲ್ಲಿಯೂ ಸಕ್ಕರೆಯೂ, ಕ್ಷಾರಕವೂ (Acidity) ಇರುವುವು. ಇವುಗಳ ದೆಸೆಯಿಂದ ಕರುಳಿನ ರಸವು ಸುಲಭವಾಗಿ ಬೆರೆತು ಮಲವು ಸರೀಸಾಗಿ ಕಳೆಯುವುದಕ್ಕೆ ಅನುಕೂಲವಾಗುವುದು. ಮೇಲ್ಕಂಡ ಹಣ್ಣಿನಲ್ಲಿರತಕ್ಕ ಮಲನಿವಾರಕ ವಸ್ತುಗಳಿಂದ ಕರುಳಿನ ಒಳಭಾಗದ ಸ್ನಾಯುಗಳಿಗೆ ಯಾವ ಬಾಧಕ ಅಥವ ಉರಿಯು ಉಂಟಾಗುವುದಿಲ್ಲ. ಆದರೆ ಔಷಧ ರೂಪವಾಗಿ ಉಪಯೋಗಿಸುವ ಬಾಜಾರಿನ ಮಾತ್ರೆ, ಭೇದಿಯ ಔಷಧ, ಆಸ್ಪತ್ರೆಯಲ್ಲಿ ಕೊಡತಕ್ಕ "ಮೆಗ್ನಿಷಿಯಂ ಸಲ್ಫೇಟ್" (Magnesium Sulphate) ಎಂಬ ಕ್ಷಾರ (Salt), ಕತ್ತಾಳೆ ರಸದಿಂದ ಮಾಡಿದ ದ್ರಾವಕ (Aloes) ಕ್ಯಾಸ್ಕರಸ್ಯಾಗ್ರಡ (Cascara Sagrada) ಮುಂತಾದ ಭೇದಿಯ ಔಷಧಗಳಿದ್ದಾಗ್ಯೂ ಅವುಗಳಿಂದ ಬಹಳ ಕೆಡಕುಂಟಾಗುವುದು. ಅವುಗಳಿಂದ ಉರಿಯೂ ಬಾಧೆಯೂ ಉಂಟಾಗುವುವು.

ನಿಂಬೆಹಣ್ಣಿನ ರಸ (Lemon Juice).

ಎಲ್ಲಾ ವಿಧವಾದ ಹಣ್ಣುಗಳಲ್ಲಿಯೂ ಅನ್ನಕೋಶದಲ್ಲಿರುವ ಜೀರ್ಣರಸ Gastric Juice ವನ್ನು ಹೆಚ್ಚಿಸಿ ಆಹಾರವು ಜೀರ್ಣವಾಗುವುದಕ್ಕೆ ಸಹಕಾರಿಯಾಗುವುವು. ಹೊಟ್ಟೆಯಲ್ಲಿ ಜೀರ್ಣರಸವು ಕಡಿಮೆಯಾದಾಗ ಹಣ್ಣುಗಳನ್ನು ಸೇವಿಸಿದ್ದೇ ಆದರೆ ಈ ರಸವು ಹುಟ್ಟುವುದು. ಹಣ್ಣಿನಲ್ಲಿರತಕ್ಕ ಕ್ಷಾರವಸ್ತುಗಳು ಜೀರ್ಣಕರವಾಗಿ ಪರಿಣಮಿಸುವುದು.

ಕಿತ್ತಳೆ ಹಣ್ಣು —ಪ್ರಕೃತಿಯು ಮನುಷ್ಯನ ಉಪಯೋಗಕ್ಕೆ ನಿರ್ಮಿಸಿರುವ ವಸ್ತುಗಳಲ್ಲಿ ಕಿತ್ತಳೆ ಹಣ್ಣು ಸರ್ವೋತ್ಕೃಷ್ಟವಾದುದು. ಈ ಹಣ್ಣಿನಲ್ಲಿ ಆಹಾರದ್ರವ್ಯವು ಮೊದಲೇ ಪರಿಪಕ್ವಸ್ಥಿತಿಯಲ್ಲಿ (Predigested) ಸಿದ್ಧವಾಗಿರುವುದು; ಬಹು ರುಚಿಕರವಾಗಿಯೂ ಅತ್ಯಲ್ಪ ಕಾಲದಲ್ಲಿ ರಕ್ತಕ್ಕೆ ಸೇರುವುದೂ ಆಗಿರುವುದು. ಖಾಯಿಲೆ ಬಂದವನಿಗೆ ಅಥವಾ ನಿಶ್ಶಕ್ತಿಪರನಿಗೂ ಕಿತ್ತಳೆ ಹಣ್ಣು ಬಹು ಪ್ರಿಯವಾದ ವಸ್ತು. ಹಣ್ಣಿನಲ್ಲಿ ಸಿಹಿ ಹೆಚ್ಚಾಗಿದ್ದಷ್ಟು ಅಷ್ಟು ಆರೋಗ್ಯಕರ ಮತ್ತು ಬಲಕಾರಿ.

ರಾತ್ರಿ ನಿದ್ರೆ ಹೋಗುವುದಕ್ಕೆ ಮೊದಲು ಮತ್ತು ಬೆಳಗ್ಗೆ ಎದ್ದ ಮೇಲೆ ಒಂದೆರಡು ಕಿತ್ತಳೆ ಹಣ್ಣನ್ನು ತೆಗೆದುಕೊಳ್ಳುತ್ತಾ ಬಂದಲ್ಲಿ ಮಲಪ್ರವೃತ್ತಿಯು ಚನ್ನಾಗಿ ಆಗುವುದು. ನಿಶ್ಶಕ್ತಿಪರರೂ, ಮಲಕಟ್ಟಿರುವವರೂ (Constipants) ಸಹ ಕಿತ್ತಳೆ ಹಣ್ಣನ್ನು ಸೇವಿಸುತ್ತ ಬಂದಲ್ಲಿ ಹೆಚ್ಚು ಗುಣವನ್ನು ಹೊಂದುವರು.

'ಶ. ವ್ಯಾಯಾಮ.'

ಪತ್ರವ್ಯವಹಾರ.

ಹುರುಕಲಿನ ವಿಶೇಷ.

ಅಯ್ಯಾ,

ತಾರೀಕು 26—5—25ನೇ ದಿವಸ ಫ್ರೇಜರ್ ಪೇಟೆ ಸಂತೆಯಲ್ಲಿ ಒಬ್ಬ ಹುರುಕಲು ಮಾರುವವನ ಹತ್ತಿರದಿಂದ ಹುರುಕಲು ಕ್ರಯಕ್ಕೆ ತೆಗದು ತಿಂದ ಸುಮಾರು 60 ಮಂದಿ ಜನರಿಗೆ ತಿಂದ ಸ್ವಲ್ಪ ಸಮಯದಲ್ಲಿಯೇ ವಾಂತಿಭೇದಿ ಸುರುವಾಗಿ ಬಹು ಕಷ್ಟದಿಂದ ಇದ್ದದ್ದನ್ನು ಅಲ್ಲಿಯ ಸಬ್ ಅಸಿಸ್ಟಾಂಟ್ ಸರ್ಜನರು ತಿಳಿದು ರಾತ್ರಿಯಲ್ಲಿಯೇ ಅವರಿಗೆಲ್ಲಾ ಔಷಧಿಯನ್ನು ಕೊಟ್ಟು ಪ್ರಾಣರಕ್ಷಣೆಯನ್ನು ರಾತ್ರಿಯೆಲ್ಲಾ ಪ್ರಯತ್ನಿಸಿ ಕಾಪಾಡಿದರಿಂದ, ತಿಳದು ಮಾರಣೆ ದಿನ ಹೊತ್ತಾರೆ ಆ ಸಂಗತಿಯನ್ನು ವಿಚಾರಿಸಲು ಅದು ಹುರುಕಲು ತಿಂದದ್ದರಿಂದ ಬಂದಿತೆಂದು ಸ. ಅ. ಸರ್ಜನರಿಂದಲೇ ತಿಳಿದೆನು. ಮಾರಣೆ ದಿನ ಕೂಡ ಮಂಗಳೂರಿನಲ್ಲಿ ಒಂದು ಸಂಘದ ಮೀಟಿಂಗಿನ ಉದ್ದಿಶ್ಯ ಹೋಗಿದ್ದ ಸಮಯದಲ್ಲಿ ಅಲ್ಲಿಯೂ ಕೆಲವರು ಇದೇ ರೀತಿಯಿಂದ ನರಳುತಿದ್ದದ್ದನ್ನು ತಿಳಿದು ವಿಚಾರಿಸಲು ಹುರುಕಲು ತಿಂದದರಿಂದಲೇ ಬಂದಿತೆಂದು ವ್ಯಕ್ತವಾಯಿತು. ಕೂಡಲೆ ಅವರಿಗೆ ಆಸ್ಪತ್ರೆ ಔಷಧಿ ತೆಗದುಕೊಳ್ಳುವಂತೆ ಹೇಳಿದೆನು. ಪ್ರಾಣಕ್ಕೆ ಅಪಾಯವೇನು ಬಂದ ಸಂಗತಿ ತಿಳಿದಿರುವದಿಲ್ಲ. ಈ ಸಂಗತಿಯನ್ನು ಅಧಿಕಾರಿಗಳು ಯಾವ ಕಾರಣದಿಂದ ಬಂದಿತೆಂದು ವಿಚಾರಿಸಿ ತಕ್ಕ ಪರಿಹಾರಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಿ. ಸಿ. ಶೆಂಗಪ್ಪ.

WANTED.

A candidate with Inter qualification in Science to undergo Motor Engineering training on a scholarship of Rs 30 per mensem. Applicant must bind himself to serve the company for six years Pay after training, from 75 to Rs. 100 per mensem. Applications with testimonials should reach the undersigned before the 1st July 1925.

K. KUTTAYYA,
Managing Director.
Sri Kavery Motor Service.
MERCARA

4—1.

ವರ್ತಮಾನ ಸಂಗ್ರಹ.

ಒಳದೇಶ.

ಬೇತರಿಯ ತಾತ್ಕಾಲಿಕ ಸೇತುವೆಯು ಹೊಳೆಯಲ್ಲಿ ನೀರು ಹೆಚ್ಚಾಗಿ ಮುರಿದು ಹೋದದ್ದರಿಂದ ಬಸ್ಸ್ ಸರ್ವೀಸು ಕೆಲವು ದಿವಸಗಳವರೆಗೆ ನಿಂತುಹೋಗಿತ್ತು. ಆದರೆ ತಾರೀಖು 5ರಿಂದ ಹೊಳೆಯ ಎರಡು ಕಡೆಗಳಲ್ಲಿ ಎರಡು ಬಸ್ಸುಗಳನ್ನಿಟ್ಟು ಸರ್ವೀಸು ನಡಿಸುತ್ತಾರಾಗಿ ತಿಳಿಯುತ್ತೇನೆ

ಮ. ರಾ. ರಾ ಗಳಾದ ನಿಡ್ಡದ ಸುಬ್ಬಯ್ಯನವರು, ಅಪ್ಪಾರಂಡ ಚಂಗಪ್ಪನವರು, ಪಾರುವಂಗಡ ಕುಶಾಲಪ್ಪನವರು ಮತ್ತು ಡಿ ಡೈರೆಕ್ಟರಾದ ಕೆ. ಎಸ್. ಸುಬ್ಬರಾಯರು, ಇವರು ನಾಲ್ವರು ಮೆಂಬರುಗಳಾಗಿರುವ ಧನಗಳ ವಿಚಾರ ಕಮಿಟಿ ಮೀಟಿಂಗ, ಮಡಿಕೇರಿಯಲ್ಲಿ ತಾರೀಖು 6ರಲ್ಲಿ ನಡೆಯುವುದು.

ಉತ್ತರ ಕೊಡಗು ತಾಲೋಕು ಕಚೇರಿಯನ್ನು ಸೋಮವಾರಪೇಟೆಯಲ್ಲಿ ಇಡುವಂತೆ ತೀರ್ಮಾನವಾಗಿದೆ. ಕೆಲವು ದಿವಸಗಳಲ್ಲೇ ಮಡಿಕೇರಿಯಿಂದ ವರ್ಗಾಯಿಸಲ್ಪಡುವುದು

ಮಡಿಕೇರಿ ಮುನ್ಸಿಪಾಲಿಟಿ ಕಮಿಟಿ ಮೆಂಬರುತನಕ್ಕೆ ಮೆ. ಹೆಚ್. ತಿರುಮಲಾಚಾರ್, ಬಿ. ಎ. ಬಿ. ಎಲ್.ರವರು ರಾಜಿನಾಮೆ ಕೊಟ್ಟದ್ದರಿಂದ ಆ ಸ್ಥಳಕ್ಕೆ ಮೆ. ಎಸ್. ಬಸಪ್ಪನವರು ಚುನಾಯಿಸಲ್ಪಟ್ಟಿರುವರು.

ಎಳೆಂಟು ವರುಷಗಳಿಂದ ಕೊಡಗಿಗೆ ಬಾರದೆ ಇದ್ದ ಮೆ. ಕೋದಂಡ ಪೂಣಚ್ಚಯ್ಯನವರ ಪತ್ನಿಯವರು ಬೆಂಗಳೂರಿಂದ ಮಡಿಕೇರಿಗೆ ಬಂದು ಕೆಲವು ದಿವಸಗಳಲ್ಲಿಯೇ ಜ್ವರಪೀಡಿತರಾಗಿ ಕಳೆದ ತಾರೀಖು 29ರಲ್ಲಿ ಶಿವಾಧೀನರಾದರು

1872ರ ಇಂಡಿಯನ್ ಕ್ರಿಶ್ಚಿಯನ್ ಮ್ಯಾರೇಜ್ ಆಕ್ಟಿನ 7ನೇ ಸೆಕ್ಶನ್ ಮೇರೆ ಕೊಡಗು ಪ್ರಾಂತ್ಯಕ್ಕೆ ಮದುವೆ ರಿಜಿಸ್ಟ್ರಾರಾಗಿ ಕಮಿಷನರವರು ನೇಮಿಸಲ್ಪಟ್ಟಿರುವರು.

ಮೆ ಪಿ. ಜಿ. ಟಿಪ್ಪಿಂಗ್‌ರವರು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರುತನಕ್ಕೆ ರಾಜಿನಾಮೆಕೊಟ್ಟು ಇಂಗ್ಲೆಂಡಿಗೆ ಹೊರಟು ಹೋದದ್ದರಿಂದ ಯೂರೋಪಿಯನರು ಮೆ. ಲಯನೆಲ್ ನ್ಯೂಕಮ್‌ರವರನ್ನು ಕೌನ್ಸಿಲಿಗೆ ಅವರ ಪರ ಮೆಂಬರಾಗಿ ಚುನಾಯಿಸಿರುವರು.

ತಾರೀಖು 2ರಲ್ಲು ನಡೆದ ಸೆಂಟ್ರಲ್ ಬ್ಯಾಂಕು ಡೈರೆಕ್ಟರುಗಳ ಮೀಟಿಂಗಿನಲ್ಲಿ ಈ ಕೆಳಗಿನ ಸಂಘಗಳಿಗೆ ಸಾಲ ಮಂಜೂರಾಗಿದೆ. ಮ ಗುಟಗೇರಿ ಸಂಘಕ್ಕೆ ರೂ. 700. ಹೊದ್ದೂರು ಸಂಘಕ್ಕೆ ರೂ. 1,000. ದೇವಣಗೇರಿ ಸಂಘಕ್ಕೆ ರೂ. 500. ಹುದಿಕೇರಿ ಸಂಘಕ್ಕೆ ರೂ 1,000. ಅಮ್ಮತ್ತಿ ಸೊಸೈಟಿಗೆ ರೂ. 500 ಬಾಳುಗೋಡು ಸೊಸೈಟಿಗೆ ರೂ. 2,000. ಬೆಟ್ಟಗೇರಿ ಸಂಘಕ್ಕೆ ರೂ. 1,000. ಕದನೂರು ಸೊಸೈಟಿಗೆ ರೂ. 1,500.

ವೇಕ್ಸಿನ್ (ಗೋ ಮೈಲಿ) ತೆಗೆಯಲಿಕ್ಕಾಗಿ ತಿಂಗಳು ವಾರು 6ರಿಂದ 10ರವರೆಗೆ ಕರುಗಳನ್ನು ಬಾಡಿಗೆಗೆ ಒದಗಿಸಿಕೊಡಲು ಕಂಟ್ರಾಕ್ಟಿಗಾಗಿ ಅರ್ಜಿಗಳು ಈ ತಾರೀಖು 15ನೇ ಸೋಮವಾರ ಬೆಳಿಗ್ಗೆ 11 ಗಂಟೆ ವರೆಗೆ ಸಿವಿಲ್ ಸರ್ಜನರ ಮಡಿಕೇರಿ ಆಫೀಸಿನಲ್ಲು ತೆಗೆದುಕೊಳ್ಳಲ್ಪಡುವವು.

ಶ್ರೀಯುತ ಹರೀಂದ್ರನಾಥ ಚಟ್ಟೋಪಧ್ಯಾಯರು ತಾರೀಖು 1ರಲ್ಲು ಪಬ್ಲಿಕಿನವರಿಗೂ, ತಾರೀಖು 3ರಲ್ಲು ವಿದ್ಯಾರ್ಥಿಗಳಿಗೂ ಸೆಂಟ್ರಲ್ ಹೈಸ್ಕೂಲು ಹಾಲಿನಲ್ಲಿ ಸಂಗೀತ ನಾಟಕಗಳನ್ನು ಕೊಟ್ಟರು.

ಮಡಿಕೇರಿ ವೇದಾಂತ ಸಂಘದವರು ಶ್ರೀ ರಾಮಕೃಷ್ಣ ಪರಮಹಂಸರ ತೊಂಭತ್ತನೇ ಜಯಂತಿ ಉತ್ಸವವನ್ನು ಮೇ ತಾರೀಖು 31ರಲ್ಲು ಮದ್ರಾಸು ಶ್ರೀ ರಾಮಕೃಷ್ಣ ಮಠದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಶರ್ವಾನಂದಜೀಯವರ ಸನ್ನಿಧಿಯಲ್ಲಿ ಬಹು ವಿಜೃಂಭಣೆಯಿಂದ ನಡಿಸಿದರು. ಅಲ್ಲದೆ ಸ್ವಾಮಿಜೀಯವರು ಈ ವಾರ ಪ್ರತಿ ದಿನ ಸಾಯಂಕಾಲವೂ ಹೈಸ್ಕೂಲ್ ಹಾಲಿನಲ್ಲಿ ವೇದಾಂತದ ವಿಷಯ ಸ್ವಾರಸ್ಯವಾದ ಉಪನ್ಯಾಸಗಳನ್ನು ಮಾಡಿದರು.

ಮಲ್ಲೇಂಗಡ ಪಿ. ಮುತ್ತಣ್ಣನವರು ಮೈಸೂರು ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿಯಬರುತ್ತದೆ

ಮದ್ರಾಸು ಇಂಜಿನೀಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದ ಮೆ. ಚೇಂದಿರ ಸುಬ್ಬಯ್ಯನವರು ಬಿ. ಇ. ಡಿಗ್ರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು. ಇವರು ನಮ್ಮ ದೇಶದಲ್ಲಿ ಎರಡನೇ ಬಿ. ಇ. ಡಿಗ್ರಿಯವರು.

ಬೆಂಗಳೂರು ಶ್ರೀ ರಾಮಕೃಷ್ಣ ಮಠದ ಪ್ರೆಸಿಡೆಂಟರಾದ ಸ್ವಾಮಿ ನಿರ್ಮಲಾನಂದರವರು ಮತ್ತು ಸದರಿ ಮಠಕ್ಕೆ ಸೇರಿದ ಮೆ. ಕೇಲಪಂಡ ಚಂಗಪ್ಪನವರು (ಈಗ ಸ್ವಾಮಿ ವೀರಚೈತನ್ಯರವರು) ತಾ 2ರಲ್ಲಿ ವೀರಾಜಪೇಟೆಗೆ ಬಂದಿರುವರು. ಅವರು ಪೊನ್ನಂಪೇಟೆ ಕಡೆಗೆ ಹೋಗುವವರ್ತಮಾನವೂ ಇದೆ

ಹರೀಂದ್ರನಾಥ ಚಟ್ಟೋಪಾಧ್ಯಾಯರು ತಾ 6ನೇ ಶನಿವಾರ ವೀರಾಜಪೇಟೆಯಲ್ಲಿ ಒಂದು ಗಾಯನ ಪಾರ್ಟಿಯನ್ನು ಕೊಡುವರಾಗಿ ತಿಳಿಯುತ್ತೇವೆ

ಚೀಫ್ ಕಮಿಷನರಾದ ಮೆ. ಡಬ್ಲ್ಯು ಪಿ ಬಾರ್ಟನ್‌ರವರು ತಾ. 6ರಲ್ಲಿ ಬೆಂಗಳೂರಿನಿಂದ ಮಡಿಕೇರಿಗೆ ಬರುವರು ಆ ದಿನ ಸಾಯಂಕಾಲ 4½ಗಂಟೆಗೆ ಕೊಡವರು ಮಡಿಕೇರಿ ಕೋಟೆಯಲ್ಲಿ ಅವರಿಗೊಂದು "ಎಟ್ ಹೋಮ್" ಕೊಡುವರು.

ಕಳೆದ ಆದಿತ್ಯವಾರ, ಸೋಮವಾರ ಮತ್ತು ಮಂಗಳವಾರದ ಮಳೆಗಾಳಿಯಿಂದ ಮಳೆಗಾಲವು ಪ್ರಾರಂಭಿಸಿತೆಂದು ತೋರಿತು. ಆದರೆ ಸಂತರ ಗಾಳಿ ಇದ್ದರೂ ಮಳೆ ಇಲ್ಲದೆ ಬಿಸಿಲು ಕಾಯುತ್ತಿದೆ

ಸೋಮವಾರ ಪೇಟೆ ಸ್ಪೆಶಲ್ ಮ್ಯಾಜಿಸ್ಟ್ರೇಟ್ ಆಫೀಸರಾಗಿದ್ದ ಮೆ. ಕೆಸೀದಂಡ ಮಾ. ನಂಜಪ್ಪನವರನ್ನು ನಾಗರ ಹೊಳೆಗೆ ರೇಂಜ್ ಆಫೀಸರಾಗಿ ವರ್ಗಾಯಿಸಿರುವರು.

ಉತ್ತರ ಕೊಡಗು ತಾಲೋಕು ಭಾಗಮಂಡಲ ನಾಡು ಚೇರಂಬಾಣೆ ಗ್ರಾಮದ ದೊಡ್ಡಿಯು ಕಳೆದ ಮೇ ತಾರೀಖು 15ರಿಂದ ಮುಚ್ಚಲ್ಪಟ್ಟಿದೆ.

ನೋಟೀಸು.

ಸಿದ್ದಾಪುರ ನಾಡು ಗ ಯ್ಯ ಗ್ರಾಮ ದಿಂದ 'ಗ್ರೀನ್ ಹಿಲ್ಸಿ'ಗೆ ಸೇರಿದ ಕರೀವರ್ಣದ, ಬೀಜ ಒಡೆಯದ, ಸಾಧಾರಣ ಒಂದು ಮೊಳ ಉದ್ದ ಕೊಂಬಿರುವ, ಎಡದಕಣ್ಣು ಹೂವುಮುಚ್ಚಿಕೊಂಡಿರುವ ಮತ್ತು ಒಳ್ಳೇ ಪುಷ್ಟಿಯಾಗಿರುವ ಒಂದು ಕೋಣವು ಎರಡುವಾರಗಳ ಹಿಂದೆ ಕಾಣದೆ ಹೋಗಿದೆ. ಇದರ ವಿಷಯ ಈ ಕೆಳಗಿನವರಿಗೆ ವರ್ತಮಾನ ಕೊಟ್ಟವರಿಗೆ ಮೂರು ರೂಪಾಯಿ ಬಹುಮಾನ ಕೊಡಲ್ಪಡುವುದು.

ಎ ಬಿ ಚಂಗಪ್ಪ,
'ಗ್ರೀನ್ ಹಿಲ್ಸ್'
ವೀರಾಜಪೇಟೆ.

ಹಿಂದೂ ದೇಶ.

ಆಂಗ್ಲೋ ಇಂಡಿಯನರ ರಾಜಕೀಯ ಭವಿಷ್ಯತ್ತಿನ ವಿಷಯ ಮಹಾತ್ಮ ಗಾಂಧಿಯವರು ಡಾಕ್ಟರ್ ಮೊರನೊರವರಿಗೆ ಪುನಃ ಒಂದು ಸಂಭಾಷಣೆಕೊಟ್ಟರು. ಅಕೋಮಿನವರೂ ಚರಕದಿಂದ ನೂಲು ಮಾಡಬೇಕೆಂದು ಪುನಃ ಒತ್ತಿಹೇಳಿದರು.

ಕರಾಚಿಯಲ್ಲಿ ನಡೆದ ಒಂದು ಪಬ್ಲಿಕ್ ಮೀಟಿಂಗಿನಲ್ಲಿ ಡಾಕ್ಟರ್ ಅನಿಬೆಸೆಂಟರವರ ಇಂಡಿಯಾ ಕಾಮನ್‌ವೆಲ್ತ್ ಮಸೂದೆಗೆ ಒತ್ತಾಸೆಕೊಡಬೇಕೆಂಬ ಠರಾವು ದೊಡ್ಡ ಬಹುಮತದಿಂದ ಸ್ವಾಗತಿಸಲಾಯಿತು.

ದಕ್ಷಿಣ ಕನ್ನಡದ ಈಂದುಬೆಟ್ಟು ಗ್ರಾಮದಲ್ಲಿ ಎರಡು ವರ್ಷಗಳ ಹಿಂದೆ ಕ್ರಿಶ್ಚಿಯನ್ ಮತಕ್ಕೆ ಸೇರಿದ್ದ 50 ಪಂಚಮರನ್ನು ಸ್ವಾಂತಾತ್ಮನ ಸಂಘದವರು ಶುದ್ಧಿಸಂಸ್ಕಾರ ಮಾಡಿ ಹಿಂದೂ ಮತಕ್ಕೆ ವಾಪಸು ತೆಗೆದುಕೊಂಡು ಮದ್ಯಪಾನ ಮತ್ತು ಮಾಂಸಹಾರ ವರ್ಜಿಸುವಂತೆಯೂ ಪ್ರತಿನಿತ್ಯ ಬೆಳಿಗ್ಗೆ ಸ್ನಾನ ಮಾಡುವಂತೆಯೂ ಅವರಿಗೆ ಬೋಧಿಸಿದರು. ಅವರಲ್ಲಿ ಕೆಲವರು ಬೋಧನೆಯಂತೆ ನಡೆಯಲು ಪ್ರತಿಜ್ಞೆಮಾಡಿಕೊಂಡು ಅದನ್ನು ಕಾರ್ಯತಃ ಆಚರಿಸಲು ಪ್ರಾರಂಭಿಸಿದರು

ಅಸಹಕಾರದ ಸಮಯದಲ್ಲಿ ಸರ್ಕಾರದವರು ಸೂರತ್ ಮುನ್ಸಿಪಾಲಿಟಿಯನ್ನು ಸಸ್ಪೆಂಡ್ ಮಾಡಿದ ಕಾರಣ ಅಲ್ಲಿಯ ಅಸಹಕಾರಿಗಳು ಮುನ್ಸಿಪಲ್ ಟ್ಯಾಕ್ಸ್ ಕೊಡುತ್ತಿರುವುದಿಲ್ಲ. ಆ ಬಾಕಿ ಬರುವುದು ಈಗ ನಾಲ್ಕು ಲಕ್ಷ ರೂಪಾಯಿ ಆಗಿದೆಯಂತೆ!

ವಾಯವ್ಯ ಪ್ರಾಂತ್ಯದ ರೈಲ್ವೆ ಯೂನಿಯನ್‌ನವರ, ಆಲ್ಲಿಯ ಮುಷ್ಕರದ ಕಾರಣವನ್ನು ವಿಚಾರಿಸಬೇಕೆಂದು ಇಂಡಿಯಾ ಸ್ಟೇಟ್ ಸಕ್ರೇಟರಿಯವರಿಗೂ, ಮೆ ಲ್ಯಾನ್ಸ್‌ಬರಿ ಮತ್ತು ಮೆ. ತಾಮಸ್‌ರವರಿಗೂ ತಂತಿ ಕಳುಹಿಸಿರುವರು.

ಮಹಾತ್ಮ ಗಾಂಧಿಯವರು ಕಳೆದ ವಾರ ಮೂರು ದಿವಸ ಶಾಂತಿನಿಕೇತನದಲ್ಲಿ ವಿಶ್ರಾಂತಿ ತೆಗೆದುಕೊಂಡರು. ಅಲ್ಲಿ ರವೀಂದ್ರನಾಥ ಠಾಗೋರರವರಿಗೂ, ಕವಿಶ್ರೇಷ್ಠ ರವೀಂದ್ರನಾಥ ಠಾಗೋರರವರಿಗೂ, ನಾಲ್ಕು ವರ್ಣಭೇದಗಳ ವಿಷಯವೂ, ರಾಜಕೀಯ ಮತ್ತು ಮತ ವಿಚಾರದ ವಿಷಯವೂ ಸಂಭಾಷಣೆಗಳೂ ಚರ್ಚೆಗಳೂ ನಡೆದವು.

ಮೈಸೂರು ಪ್ರಾಂತ್ಯದಲ್ಲಿ ತಪ್ಪಿತಸ್ಥರನ್ನು ಪಾಠಿಗೆ ಕೊಡುವದನ್ನು ನಿಲ್ಲಿಸುವಂತ ನ್ಯಾಯ ವಿಧಾಯಕ ಸಭೆಯಲ್ಲಿ ಮೆ. ಎ. ವೆಂಕಟ ಕೃಷ್ಣಯ್ಯನವರು ಚರ್ಚೆಗೆ ತರುವರಂತೆ.

ಪ್ಯಾರಿಸ್ ಪಟ್ಟಣದಲ್ಲಿ ಕಾಯಿಲೆಬಿದ್ದಿರುವ ಗ್ವಾಲಿಯರದ ಮಹಾರಾಜರಿಗೆ ಗುಣವಾಗುತ್ತಾ ಬರುತ್ತಿದೆಯೆಂದು ವರ್ತಮಾನ.

ಎರಡು ವಾರಗಳ ಹಿಂದೆ ಮಂಗಳೂರು ಬಂದರದಲ್ಲಿ ವಿಲಾಯಿತಿಗೆ ಹೋಗುತ್ತಿದ್ದ ಸ್ಟೀಮರಿಗೆ ಕಾಫಿ ತೆಗೆದುಕೊಂಡು ಹೋಗುತ್ತಿದ್ದ ಎರಡು ಮಂಜಿಗಳು ಮುಳುಗಿ ಹೋಗಿ ಸುಮಾರು 50ಸಾವಿರ ರೂಪಾಯಿಯ ಮಾಲುನಷ್ಟ ವಾಗಿದೆ.

ಟ್ರಾನ್ಸ್‌ಫರ್ ಇಲಾಖೆಗಳ ಖರ್ಚಿಗೆ ಸರಿಯಾದ ಉತ್ಪತ್ತಿಯನ್ನು ಉಂಟುಮಾಡುವುದಕ್ಕೆ ಬಂಗಾಳ ಸರ್ಕಾರದವರು ರಿಜಿಸ್ಟ್ರೇಶನ್ ಫೀಸನ್ನು ಹೆಚ್ಚಿಸುವಂತೆ ತೀರ್ಮಾನಿಸಿರುವರು.

ಲಾರ್ಡ್ ರೀಡಿಂಗ್‌ರವರ ವೈಸರಾಯಿತನವು ಇನ್ನು ಎರಡು ವರ್ಷ ಮುಂದರಿಸಲ್ಪಡುವದೆಂಬ ವರ್ತಮಾನವು ಸುಳ್ಳೆಂದು ಸರ್ಕಾರದವರು ಸೂಚಿಸಿರುವರು.

ಮಧ್ಯಪ್ರಾಂತ್ಯದಲ್ಲಿ ಅಸಹಕಾರವನ್ನು ವಿರೋಧಿಸಲಿಕ್ಕಾಗಿ ಸರ್ಕಾರಿ ಉದ್ಯೋಗಸ್ಥರು ರಾಜಕೀಯ ಚಳವಳದಲ್ಲಿ ಭಾಗಿಗಳಾಗ ಬಹುದೆಂಬ ಸರ್ಕ್ಯುಲಾರನ್ನು ಸರಕಾರದವರು ಈಗ ರದ್ದುಮಾಡಿರುವರು.

ಆಕ್ಟಿಂಗ್ ಗವರ್ನರಾದ ಸರ್ ಜಾನ್ ಕರೆರವರು ಬಾರಿಸಾಲಿಗೆ ಹೋಗುವಾಗ್ಯೆ ಅಲ್ಲಿಯ ಸಂಘಗಳ್ಯಾವವೂ ಅವರಿಗೆ ಸನ್ಮಾನಿತ ಪತ್ರಗಳನ್ನು ಅರ್ಪಿಸಬಾರದೆಂದು ಅಲ್ಲಿಯ ಜನರು ಮೀಟಿಂಗ ಮಾಡಿ ಠರಾವು ಪಾಸುಮಾಡಿರುವರು

ಕೌನ್ಸಿಲ್ ಆಫ್ ಸ್ಟೇಟ್ ಮೆಂಬರಾಗಿದ್ದ ಮೆ. ರಾಉಫ್ ... ಮುಂಬಾಯಿ ಸರ್ಕಾರದ ಎಗ್ಜಿಕ್ಯುಟಿವ್ ಕೌನ್ಸಿಲ್ ಮೆಂಬರಾಗಿ ನೇಮಿಸಲ್ಪಟ್ಟಿರುವರು.

ಇಂದೂರು ಮಹಾರಾಜರವರು ಅವರ ಸಂಸ್ಥಾನಕ್ಕೆ ಏಳು ಜನಾಯಿತ, ಒಬ್ಬ ನೇಮಿತ ಮೆಂಬರುಗಳುಳ್ಳ ಒಂದು ಲೆಜಿಸ್ಲೇಟಿವ್ ಕಮಿಟಿಯನ್ನು ಮಂಜೂರು ಮಾಡಿರುವರು.

ವಿದೇಶ.

ಚೈನಾದಲ್ಲಿ ಪರದೇಶಸ್ಥರ ಅಧಿಕಾರದ ಮೇಲೆ ದ್ವೇಷವು ಹೆಚ್ಚುತ್ತಿದೆ. ಶಂಗಹಾಯ ಪಟ್ಟದಲ್ಲಿ ವಿದ್ಯಾರ್ಥಿಗಳು ದಂಗೆ ಎದ್ದಿರುವರು ಅವರಿಗೂ ಪೋಲೀಸಿನವರಿಗೂ ಜಗಳವಾಗಿ ಅತ್ತಿತ್ತ ಕೆಲವು ಮರಣಗಳೂ, ಹಲವರಿಗೆ ಘಾಯಗಳುಂಟಾಗಿವೆ. ವಿದ್ಯಾರ್ಥಿಗಳು ಕೆಲಸಗಾರರನ್ನು ತಮ್ಮ ಕಡೆ ಸೇರಿಸಿಕೊಳ್ಳಲು ಪ್ರಯತ್ನಿಸುತ್ತಿರುವರು. ಅವರು ಒಂದು ಮೀಟಿಂಗ್ ನಡಿಸಿ ಪರದೇಶಸ್ಥರ ಬ್ಯಾಂಕಿಗೂ, ಬ್ಯಾಂಕು ನೋಟುಗಳಿಗೂ ಬಹಿಷ್ಕಾರ ಹಾಕಬೇಕೆಂದೂ, ಪರದೇಶಸ್ಥರ ಹಡಗುಗಳನ್ನು ಹಾಂಗ್‌ಪೂ ನದಿಯಿಂದ ಹೊರಡಿಸಬೇಕೆಂತಲೂ ಮುನ್ಸಿಪಲ್ ಪೋಲೀಸಿನವರು ಚೈನಾದವರ ಅಧೀನದಲ್ಲಿರಬೇಕೆಂದೂ ಮುಂತಾಗಿ ತೀರ್ಮಾನಿಸಿರುವರು.

ಚೈನಾದ ಮೂರು ಸೇನಾಧಿಪತಿಗಳು ಅಫೀಮಿನ ವ್ಯಾಪಾರದ ವಿಷಯ ವಿಚಾರಿಸಲು ಸ್ವಸ್ಥದ ಹೆಡ್ ಕ್ವಾರ್ಟರ್ಸಿಗೆ ಬಂದಿದ್ದಾಗ ಅವರಲ್ಲಿ ಜಗಳ ಉಂಟಾಗಿ ಒಬ್ಬರು ಕೊಲ್ಲಲ್ಪಟ್ಟರು ಮತ್ತು ಇಬ್ಬರಿಗೆ ಘಾಯಗಳುಂಟಾಗಿವೆ.

ಲಂಡನ್ ಪಟ್ಟದಲ್ಲಿ ಬೆಟ್ರಿಸ್ ಹೆಲಿ ಎಂಬವಳ ಹೆಂಡತಿಯು ಒಂದೇಸಾರಿ ನಾಲ್ಕು ಶಿಶುಗಳನ್ನು ಹೆತ್ತಿರುವಳು. ಇವುಗಳಲ್ಲಿ ಎರಡು ಸತ್ತು ಹೋದವು ಎರಡು ಮಾತ್ರ ಜೀವಿಸುತ್ತಿರುವವು. ಇವಳ ತಾಯಿಯೂ ಒಂದೇ ಸಲ ಮೂರು ಕೂಸುಗಳನ್ನು ಹೆತ್ತಿರುವಳು. ಈ ಮೂರು ಮಕ್ಕಳ ಪೈಕಿ ಇವಳೊಬ್ಬಳಾಗಿರುವಳು.

ಅಬ್ಸೀನಿಯದ ಅರಸನಾದ ಜೋರಿಸವರು ಪತ್ನಿ ಹುಡುಕುತ್ತಾ ಸಂಚಾರ ನಡಿಸುತ್ತಿರುವರು! ಕಳೆದ ಹತ್ತು ವರ್ಷಗಳಿಂದ ಇವರಿಗೆ ಸರಿಯಾದ ಪತ್ನಿ ದೊರೆಯಲಿಲ್ಲವೆಂದೂ ಬಹು ರಾಜಕುಮಾರಿಯರೊಡನೆ ಸ್ನೇಹಬೆಳಸಿದರೂ, ಅವರ್ಯಾರನ್ನೂ ಮದುವೆಯಾಗಲಿಲ್ಲವೆಂದೂ, ಇವರು ಬೇರೆ ಅರಸರಷ್ಟು ಐಶ್ವರ್ಯವಂತರಲ್ಲದ್ದರಿಂದ ಇವರಿಗೆ ರಾಜಕುಮಾರಿಯರು ಸಿಕ್ಕುವುದು ಕಷ್ಟವೆಂದು ವರ್ತಮಾನ.

ರಿಫ್ ಸೇನಾಧಿಪತಿಯಾದ ಅಬ್ದೆಲ್ ಕ್ರಿಮ್‌ರವರು ತಮ್ಮ ಕೈಕೆಳಗೆ ಯೂರೋಪಿಯನ್, ಇಂಡಿಯನ್ ಮತ್ತು ಈಜಿಪ್ಷಿಯನ್ ಸ್ವಯಂಸೇವಕ ... ತಿಗಳನ್ನು ಇಟ್ಟುಕೊಂಡಿರುವರು.

ಪ್ರಕಟಣೆ.

ಇದುವರೆಗೆ ನಾನು ನನ್ನ ಹೆಸರು ಅಲಿ ಎಂಬದನ್ನು ಅರಬಿ ಅಕ್ಷರದಲ್ಲಿ ಲಿಕಾವಟ್ಟು, ಕಾಗದ ಪತ್ರ ಮನ್ನೆ ರಗಳಿಗೆ ರುಜುಹಾಕುತ್ತಿದ್ದೆನು. ಆದರೆ ಕೆಲವು ತಿಂಗಳುಗಳ ಹಿಂದೆ ನನ್ನ ಎರಡು ಅರಬಿ ಅಕ್ಷರದ ರುಜುವು ಸುಲಭವಾದುದರಿಂದ ಒಬ್ಬರು ನಕಲು ಮಾಡಿದ ಕಾರಣ ಇನ್ನು ಮುಂದೆ ನಾನು ಆ ಅಕ್ಷರದಲ್ಲಿ ರುಜು ಹಾಕುವದಿಲ್ಲವೆಂತಲೂ, ಕರಾರು ಪತ್ರ ಮುಂತಾದವುಗಳಿಗೆಲ್ಲಾ ಎಡದ ಹೆಬ್ಬೆಟ್ಟಿನ ಗುರ್ತನ್ನೇ ಹಾಕುತ್ತೇನೆಂತಲೂ ಈ ಮೂಲಕ ನನ್ನಲ್ಲಿ ವ್ಯವಹಾರ ನಡಿಸುವವರಿಗೆಲ್ಲಾ ತಿಳಿಸಲಾಗಿದೆ.

ಹೂಪಿಳ್ಳೆ ಕೊತಂಬಟ್ಟಿ ಅಲಿಕಾಕ,
ನರಿಯಂದಡ ಗ್ರಾಮ,
ನಾಪ್ಲೋಕ್ಲು ನಾಡು

2—1

(2ನೇ ಪುಟದಿಂದ ಮುಂದರಿದದ್ದು)

ಬಹಳ ಉತ್ತಮರೀತಿಯಿಂದ ದೇಶಸೇವೆಯನ್ನೂ ಪ್ರಚಾರವನ್ನೂ ಮಾಡುತ್ತಾರೆ. ಆದರೆ ಅವರು ಸ್ತ್ರೀಗಳಿಗೆ ಅವರನ್ನು ನಿಷೇಧಿಸುವದರಿಂದ ಸಾಧಾರಣ ಹಿಂದು ಜನರಿಂದ ರಾಮಕೃಷ್ಣ ಬೋಧನೆಯಿಂದ ಅತೃಪ್ತಿ ಹುಟ್ಟುತ್ತದೆ. ಸಮತಬೋಧಕ ಸಂಸ್ಥೆಗಳ್ನಾ ಮಿಶನಿನಷ್ಟು ಅನುಕೂಲ ಬೇರೆ ಇಲ್ಲವೆಂತ ನನ್ನ ಅಭಿಪ್ರಾಯವಾಗಿದೆ.

ಈ ಮಿಶನಿನವರು ಆರ್ಯಸಮಾಜದವರಂತೆಯೇ ಸಮಾಜಸೇವೆಯನ್ನು ಮಾಡುತ್ತಾರೆ. ಕ್ಷಾಮ, ರೋಗ, ಪ್ರವಾಹ ಕಷ್ಟಗಳು ಬಂದಾಗ ಇವರಸಂಸ್ಥೆಯವರು ಕಷ್ಟ ನಿವಾರಣೆಗೆ ಕೆಲಸ ಮಾಡುತ್ತಾರೆ. ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕಂತ ವಿವೇಕಾನಂದ ಸ್ವಾಮಿಗಳು ಘಂಟಾಘೋಷವಾಗಿ ಹೇಳಿದ್ದಾರೆ. ಈ ದೇಶದ ಹಿತಚಿಂತಕರು ರಾಮಕೃಷ್ಣ ಮಿಶನಿನ ಸಂಸ್ಥೆಯನ್ನು ಬಲಪಡಿಸಿ ಶಕ್ತಿವಂತ ಸಾಧನವನ್ನಾಗಿ ಇಟ್ಟುಕೊಂಡರೆ ಹಿಂದೂಮತೋದ್ಧಾರ ಬಹಳ ಮಟ್ಟಿಗೆ ಚನ್ನಾಗಿ ನಡೆದೀತು.

ಈ ಲೇಖನವನ್ನು ಬರೆಯುವಾಗ ಶರ್ವಾನಂದ ಸ್ವಾಮಿಯವರ ಎರಡು ಉಪನ್ಯಾಸಗಳು ನಡೆದಿವೆ. ಮೊದಲನೇ ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆ ಮತ್ತು ಅವರ ಬೋಧನೆಗಳು. ಎರಡನೇದು ಹಿಂದೂಧರ್ಮದ ಮುಖ್ಯ ಅಂಶಗಳು. ಈ ಎರಡು ಉಪನ್ಯಾಸಗಳು ಬಹಳ ಸ್ವಾರಸ್ಯವಾಗಿಯೂ ಇದ್ದವು. ಉಪನ್ಯಾಸಗಳ ಕೆಲವು ಭಾಗಗಳು ಓದುಗರಿಗೆ ಗೊತ್ತಾಗದೆ ಇರಲಾರದು. ಯಾಕೆಂದರೆ ವೇದಾಂತದ ಮೂಲ ತತ್ವಗಳ ವಿಷಯವನ್ನು ವಿಚಾರಿಸದವರಿಗೆ ಸ್ವಬೋಧನೆಯು ಮನಸ್ಸಿಗೆ ಹೋಗುವದು ಸ್ವಲ್ಪ ಕಷ್ಟವೇ. ಉಪನ್ಯಾಸದಲ್ಲಿ ಧರ್ಮವು ಕ್ಷೀಣವಾಗಿ ಅಧರ್ಮವು ಹೆಚ್ಚಾಗ ಪರಮಾತ್ಮನ ಅವತಾರವಾಗಿ ಧರ್ಮಸ್ಥಾಪನೆಯಾಗುತ್ತೆಂಬ ಹಿಂದುಗಳ ನಂಬಿಕಗ ಅನುಸಾರವಾಗಿ ಹಿಂದುಸ್ಥಾನದಲ್ಲಿ ಪಾಶ್ಚಿಮಾತ್ಯರ ಐಹಿಕ ಭೋಗದ ಧಳಕಿನಿಂದ ಧರ್ಮ ನಷ್ಟವಾದ ಸಮಯದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು ಅವತರಿಸಿ ವೇದಾಂತವನ್ನು ಪ್ರಯುಕ್ತರದ ಪ್ರತಿಯೊಬ್ಬನು ಅನುಭವಿಸಬಹುದೆಂಬ ಸತ್ಯವನ್ನು ಸಿದ್ಧಪಡಿಸಿ ತೋರಿಸಿದರು ಎಂತ ಹೇಳಿ ಹಿಂದುಸ್ಥಾನದ ಈಗಿನ ಶೋಚನೀಯ ಸ್ಥಿತಿಯನ್ನು ಹೋಗಲಾಡಿಸಿ ಉನ್ನತ ಸ್ಥಿತಿಗೆ ಬರಬೇಕಾದರೆ ಮತಪರಿವರ್ತನೆಯೇ ಮುಖ್ಯವೆಂತಲೂ, ಹಿಂದೂಗಳು ಸ್ವಶಕ್ತಿಯಲ್ಲಿ ನಂಬಿಕೆ ತಪ್ಪಿದವರಾಗಿರುವದರಿಂದ ಪ್ರತಿಯೊಬ್ಬನ ಜೀವನ ಪರಮಾತ್ಮನ ಸ್ವರೂಪವೆಂಬ ನಂಬಿಕೆ ಹುಟ್ಟಿಸಿ ಆತ್ಮಶಕ್ತಿಯನ್ನು ಬೆಳಸಿದರೆ ಸ್ವರಾಜ್ಯ ಸ್ಥಾಪನೆಯು ದೇಶ ನಿವಾರಣೆಯೂ ತನ್ನಷ್ಟಕ್ಕೇ ಆಗುತ್ತದೆಂತಲೂ ಮೊದಲನೇ ಉಪನ್ಯಾಸದಲ್ಲಿ ಬೋಧಿಸಿದರು. ಎರಡನೇ ಉಪನ್ಯಾಸದಲ್ಲಿ ಹಿಂದೂ ಧರ್ಮದ ಮುಖ್ಯ ಅಂಶಗಳನ್ನು ವಿವರಿಸಿ ಈ ಪ್ರಪಂಚವು ಸೃಷ್ಟಿಯಾಗುವ ಮುಂಚೆ ನಾಮರೂಪವಿಲ್ಲದ ಪರಮಾತ್ಮ ವಸ್ತುವಾದೇ ಇತ್ತು. ಆನಂತರ ಪ್ರಕೃತಿಪುರುಷವೆಂಬ ಭೇದವಾಗಿ ಪ್ರಪಂಚದ ಸೃಷ್ಟಿಯಾಯಿತು. ಪ್ರಕೃತಿಯೊಂದು ಜೀವಾತ್ಮವು ಪರಮಾತ್ಮನ ಅಂಶವಾಗಿದೆ. ಜೀವಾತ್ಮಗಳು ಕರ್ಮ ಬದ್ಧವಾಗಿವೆ. ಅಂದರೆ ಜೀವಾತ್ಮಗಳ ಈಗಿನ ಸ್ಥಿತಿಯು ಪೂರ್ವ ಜನ್ಮದ ಕರ್ಮದ ಫಲವಾಗಿದೆ. ಜೀವಾತ್ಮಗಳು ಹುಟ್ಟಿ ಸಾಯುವದೆಂತ ಇಲ್ಲ. ಕಣ್ಣಿಗೆ ತೋರುವ ಸ್ಥೂಲ ದೇಹವು ಹುಟ್ಟಿಸಾಯುತ್ತದಯೇ ಹೊರತು ಜೀವಾತ್ಮನು ಸಾಯುವದಿಲ್ಲ ಎಂಬುವೇ ಹಿಂದೂಧರ್ಮದ ಮುಖ್ಯ ಅಂಶಗಳಾಗಿವೆ ಎಂತ ಹೇಳಿ ಮುಕ್ತಿಸಾಧನಗಳಾದ ಉಪಾಸನೆಗಳು ಅಂದರೆ ಮೂರ್ತಿ ಪೂಜೆ ಮುಂತಾದ್ದನ್ನು ವಿವರಿಸಿದರು.

ಮನೆಯಲ್ಲಿ ಮತದ ಶಿಕ್ಷಣ ಕಡಿಮೆಯಾಗುತ್ತಾ ಪ್ರತಿಯೊಬ್ಬನು ಸ್ವೇಚ್ಛೆಯಾಗಿ ಇರಬೇಕೆಂತ ಹೇಳುತ್ತಿರುವ ಕಾಲದಲ್ಲಿ ಈ ರೀತಿ ಮತಬೋಧಕರು ಮುಂದೆ ಬಾರದಿದ್ದರೆ ನಾಸ್ತಿಕತ್ವವು ಹೆಚ್ಚಿ ಹೋದೀತು. ಮಡಿಕೇರಿಯ 5000 ಜನ ಸಂಖ್ಯೆಯಲ್ಲಿ ಐವತ್ತು ನೂರು ಯಾ ಇನ್ನೂರು ಜನರು ಮಾತ್ರ ಹಾಜರಿದ್ದರೆಂಬದನ್ನು ನೋಡಿ ನಮಗೆ ತುಂಬಾ ವ್ಯಸನವಾಯಿತು. ಉಪನ್ಯಾಸವು ಇಂಗ್ಲಿಷಿನಲ್ಲಿ ಇದ್ದದರಿಂದ ಸ್ವಲ್ಪ ಜನರಿಗೆ ಕೇಳಲಿಕ್ಕೆ ಅನನುಕೂಲವಾಗಿಲ್ಲವೆಂಬದು ನಮಗೆ ಗೊತ್ತಿದೆ. ಉಪನ್ಯಾಸಗಳನ್ನು ಹಿಂದೀ ಭಾಷೆಯಲ್ಲಿ ಮಾಡಿಸಿದರೆ ಹೆಚ್ಚು ಪ್ರಯೋಜನವಾದೀತೆಂತ ಹೇಳಬಹುದಿತ್ತು. ಆದರೆ ಇಲ್ಲಿ ಹಿಂದಿ ತಿಳಿದವರು ಕಡಿಮೆ. ಉಪನ್ಯಾಸಗಳು ಅರ್ಥವಾಗುವಷ್ಟು ಹಿಂದೀಭಾಷೆಯನ್ನು ಜನರು ಸುಲಭದಲ್ಲಿ ಕಲಿತುಕೊಳ್ಳಬಹುದು. ಈ ರಾಷ್ಟ್ರ ಭಾಷೆಯ ಕಡೆಗೆ ಜನರು ಮನಸ್ಸುಕೊಡದೆ ಇರುವದರಿಂದಲೇ ಇಂಥಾ ಸಾರವತ್ತಾದ ಉಪನ್ಯಾಸಗಳನ್ನು ಕೇಳುವ ಅವಕಾಶ ಇಲ್ಲದಂತಾಗಿದೆ.

ಸ್ವಾಮಿಜಿಯವರ ಬೋಧನೆಯಿಂದ ಕೆಲವು ಮಟ್ಟಿಗಾದರೂ ಜನರಲ್ಲಿ ಆತ್ಮವಿಚಾರದ ಆಸೆ ಹುಟ್ಟೀತೆಂತಲೂ ಆದರಿಂದ ಸತ್ಯಕ್ಕಾಗಿ ದೇಹವನ್ನು ಬಿಡಬೇಕಾದರೂ ಸಿದ್ಧರಾಗುವ ಜನರು ತಯಾರಾದಾರೆಂತಲೂ ಆಶಿಸುತ್ತೇವೆ.

ಜೀವವಿಮೆಯ ಕಂಪೆನಿಯ ವಿಮರ್ಶೆ.

ಓರಿಯಂಟಲ್ ಜೀವವಿಮೆ ಕಂಪೆನಿಯ 1924ನೇ ವರುಷದ ವರದಿಯು ನಮ್ಮ ಕೈಸೇರಿದೆ. ಈ ಕಂಪೆನಿಯು ಕೆಲಸ ಪ್ರಾರಂಭಿಸಿ 1924ಕ್ಕೆ 50 ವರುಷಗಳಾದವು. ಈ ವರದಿಯು ಕಂಪೆನಿಯ ಸ್ಥಿತಿಯನ್ನು ವಿವರಿಸಿದೆ. ಕಂಪೆನಿಯು ಅಭಿವೃದ್ಧಿ ಹೊಂದಿದೆ ಎಂಬುದರಲ್ಲಿ ಸಂಶಯವಿಲ್ಲ. ನಮ್ಮ ದೇಶದಲ್ಲಿ ಅನೇಕ ಮಹನೀಯರು ಈ ಕಂಪೆನಿಯಲ್ಲಿ ಪಾಲಿಸಿದಾರರಾಗಿರುವದರಿಂದ ಅವರ ತಿಳುವಳಿಕೆ ಬಗ್ಗೆ ಈ ವರದಿಯ ಕೆಲವು ಮುಖ್ಯ ಅಂಶಗಳನ್ನು ಇನ್ನೊಂದು ಕಡೆ ಕೊಟ್ಟಿದ್ದೇವೆ.

ಈ ಕಂಪೆನಿಯ ಜೀವವಿಮೆ ಕೆಲಸವು ೫೦ ವರ್ಷದಿಂದ ನಮ್ಮ ದೇಶದಲ್ಲಿ ಚೆನ್ನಾಗಿ ನಡೆದಿದೆ. ಅದು ದೂರದ ಹಳ್ಳಿಪಟ್ಟಣಗಳಿಗೂ ತಲಪಿದೆ. ಜೀವವಿಮೆ ಎನ್ನುಬುದು ಅನೇಕರಿಗೆ ತಿಳಿದು ಬಂದಿದೆ. ಆದರೆ ಅದರಿಂದ ಹೆಚ್ಚಿನ ಪ್ರಯೋಜನವಿಲ್ಲವೆಂದು ಹೇಳುವವರು ಕೆಲವರಿರುವರು. ಈ ವಿಷಯದಲ್ಲಿ ನಾವು ರಾ. ಮ. ಎಸ್. ಶ್ರೀನಿವಾಸ ಶಾಸ್ತ್ರಿಯವರು ಹೇಳಿರುವುದೇನಂದರೆ—

"ಈಗ ಜೀವ ವಿಮೆಯು ಹಲವು ವಿಧದವು ಇರುವದರಿಂದ ಯಾರೂ ತನ್ನ ಸ್ಥಿತಿಗೆ ಸರಿಯಾದ ಶರತ್ತಿನ ವಿಮೆ ಇಲ್ಲವೆಂತ ಈಗ ಹೇಳಲು ಸಾಧ್ಯವಿಲ್ಲ. ತನ್ನ ಅಧೀನರ ಪ್ರಯೋಜನಕ್ಕಾಗಿ ಮಾಡಬೇಕಾದ ಈ ಮಾದಲನೇ ಕರ್ತವ್ಯವನ್ನು ಮಾಡದಿರಲು ಈಗ ನ್ಯಾಯವಾದ ಯಾವ ಕಾರಣವೂ ಇಲ್ಲ. ತನ್ನ ಅನಂತರ ತನ್ನ ಹೆಂಡತಿ ಮಕ್ಕಳಿಗೆ ಏನೂ ಕೂಡಿ ಇಡಬೇಕಾದದ್ದಿಲ್ಲವೆಂತ ಒಬ್ಬೊಬ್ಬ ಐಶ್ವರ್ಯವಂತನು ಹೇಳಬಹುದು. ಮಕ್ಕಳಿಲ್ಲದವನು ತನ್ನ ಅನಂತರ ಯಾರಿಗೂ ಅನುಕೂಲಮಾಡಿ ಇಡಬೇಕಾದದ್ದಿಲ್ಲ. ವಿಷಯಗಳು ಸ್ವಲ್ಪ ಇದ್ದರೇ ಹೆಚ್ಚಾಗಿ ತ್ತದೆ ಎಂತ ಹೇಳುವವರುಂಟು. ಅಂದವರಿಗ್ಗೆಲ್ಲ ರಿಗೂ ನಾನೂ ಈ ಸವಾಲುಗಳನ್ನು ಮಾಡಿಕ್ಕೇನ. (1) ನಿಮ್ಮ ನಿಗ ಬಡನೆಂಟರುಗಳಿಲ್ಲ ನಂಬಿಗಸ್ತ ಆಳುಗಳಾಗಲೀ ಇಲ್ಲವೇ? (2) ಆಸ್ಪತ್ರೆಗಳೂ, ಧರ್ಮತ್ರಗಳೂ ಶಾಲೆಗಳೂ, ರೋಗಿಗಳ ವಾಸದ ಮನೆಗಳು ಇಲ್ಲವೇ?

ಇದರಿಂದ ಜೀವವಿಮೆಯ ಪ್ರತಿಯೊಬ್ಬನಿಗೂ ಪ್ರಯೋಜನವಿದೆಯೆಂದು ಗೊತ್ತಾಗುತ್ತದೆ. ಅದು ಯಾರೂ ತನ್ನ ಶಕ್ತಿಮೀರಿ ಜೀವವಿಮೆಗೆ ಸೇರಬಾರದು. ಉಚಿತವಿಲ್ಲ. ಪ್ರತಿ ವರ್ಷವೂ ತನ್ನ ಪ್ರೀಮಿಯಮ್ ಕೊಡುವಷ್ಟು ಅನುಕೂಲವಿದ್ದರ ಮಾತ್ರ ಜನರು ಜೀವವಿಮೆಗೆ ಸೇರಬೇಕು. ಒಂದೇ ವರ್ಷದ ಪ್ರೀಮಿಯಮ್ ಕೊಡದೆ ಹೋದರ ಪಾಲಿಸಿ ನಿಂತುಹೋಗುವ ಸಂಭವ ವಿರುವದರಿಂದ ಗ್ರಾಹಕನು ಸೇರುವ ಮುಂಚೆ ತನ್ನ ಸ್ಥಿತಿಯನ್ನು ಚೆನ್ನಾಗಿ ತೂಕಮಾಡಬೇಕು. ಸೇರಿದ ಮೇಲೆ ತಪ್ಪದೆ ಪ್ರೀಮಿಯಮ್ ಕೊಡುತ್ತಾ ಬಂದರೆ ಜೀವವಿಮೆಯಿಂದ ಎಲ್ಲರಿಗೂ ಪ್ರಯೋಜನ ಉಂಟೆಂಬುದರಲ್ಲಿ ಸಂಶಯವಿಲ್ಲ. ಪಾಲಿಸಿ ತೆಗೆದುಕೊಳ್ಳುವ ಮುಂಚೆ ವಿಮೆದಾರರು ಕಂಪೆನಿಯ ಭದ್ರತೆಯನ್ನು ಚೆನ್ನಾಗಿ ವಿಚಾರಿಸಬೇಕಾಗಿದೆ. ಓರಿಯಂಟಲ್ ಕಂಪೆನಿಯ ಭದ್ರತೆಯು ಅವರ ವರದಿಯಿಂದಲೇ ಸ್ಪಷ್ಟವಾಗುತ್ತದೆ. ಆದುದರಿಂದಲೇ ಈ ಕಂಪೆನಿಯು ನಮ್ಮ ದೇಶದಲ್ಲಿ ಹೆಚ್ಚು ಜನಪ್ರಿಯವಾದದ್ದಾಗಿದೆ.

ಬಾಳೇ ಹಣ್ಣಿನಲ್ಲಿರುವ ಶ್ರೇಷ್ಠವಾದ ಗುಣಗಳು.

ಸಮಸ್ತ ಕಾಲದಲ್ಲಿಯೂ ಶುಭಾಶುಭದಿನಗಳಲ್ಲಿ ಅಂದರೆ ಮದುವೆ ಉತ್ಸವಕಾಲ ಮುಂತಾದವುಗಳಲ್ಲಿ ಕೂಡ ಕದಳೀ ಫಲವು ಶ್ರೇಷ್ಠತೆಯನ್ನು ಪಡೆದಿರುವುದು. ದೇವರಿಗೆ ನೈವೇದ್ಯಕ್ಕಾಗಿಸಿದರೆ 'ಕದಳೀ ಫಲ ನೈವೇದ್ಯಂ ಸಮರ್ಪಯಾಮಿ' ಎಂಬ ಶ್ಲೋಕವನ್ನು ಹೇಳಿ ವಿನಿಯೋಗಿಸುವರು. ಅನೇಕ ವೃದ್ಧರು ಕೂಡ ಬಾಳೆಯ ಹಣ್ಣನ್ನು ಔಷಧವಾಗಿ ಉಪಯೋಗಿಸುವರು. ತಪೋನಿಷ್ಠರು, ಯೋಗಿ ಜನರು, ಗುರು ಹಿರಿದವರು ಮುಂತಾದ ಮಹಾತ್ಮರು ಕೂಡ ಕದಳೀ ಫಲವನ್ನು ಫಲಾಹಾರವಾಗಿ ಉಪಯೋಗಿಸುವರು. ಅಂದರೆ ಬಾಳೆ ಹಣ್ಣಿಗೆ ಇಷ್ಟು ಪ್ರಾಶಸ್ತ್ಯವು ಬರುವುದಕ್ಕೆ ಕಾರಣವೇನೆಂಬುದನ್ನು ವಿಚಾರಮಾಡುವ.

ಆನುಭವದಲ್ಲಿ ಬಾಳೆಯ ಹಣ್ಣು ಅತ್ಯುತ್ತಮವಾದ ಆಹಾರ ಪದಾರ್ಥವು. ಆದರೆ ಹಣ್ಣು ಚನ್ನಾಗಿ ಪಕ್ವಗಿರಬೇಕು. ಅಂದರೆ ಕಳಿತುಹೋದ ಹಣ್ಣಿನಲ್ಲಿ ಸಾಧಾರಣವಾಗಿ ಪಕ್ವಕ್ಕೆ ಬಂದಿರುವ ಹಳದಿ ಬಣ್ಣವನ್ನೇ ಕಡಿಯುವರು. ಥಾಮ್ಸನ್ (A. R. Thompson) ಎಂಬೊಬ್ಬ ಶಾಸ್ತ್ರಜ್ಞರು ಹಸುರು ಕಾಯಿಯಲ್ಲಿ ಸುಮಾರು ಶೇಕಡಾ 1ಕ್ಕೆ 20 ಭಾಗದಷ್ಟು ಪಿಷ್ಟ (Starch) ಭಾಗವು ಇರುವುದೆಂದೂ, ಮಾಗಿದ ಹಣ್ಣಿನಲ್ಲಿ ಪಿಷ್ಟ ಭಾಗವು ಹಿಡಿದ್ದಾಂಗವಾಗಿ ಇಲ್ಲವೆಂದೂ ನಿದರ್ಶಿಸಿರುವರು. ಹಣ್ಣು ಮಾಗಿರುವುದರಿಂದ 3 ಷ್ಟರಷ್ಟಿಷ್ಟೂ ಸಕ್ಕರೆಯ ರೂಪಾಂತರವನ್ನು ಹೊಂದುವುವು.

ಅರ್ಧ ಮಾಗಿರುವಾಗ ಬಾಳೆಯ ಹಣ್ಣು ಸ್ವಲ್ಪ ಹುಳಿ. ಮಾಗಿದನಂತರ ಈ ಹುಳಿಯು ಇರುವುದಿಲ್ಲ.

ಬಾಳೇ ಹಣ್ಣು ಆರೋಗ್ಯಕರವು.

ಚನ್ನಾಗಿ ಪಕ್ವವಾಗಿರುವ ಹಣ್ಣೇ ಆರೋಗ್ಯಕರವಾದುದು. ಸುಲಭವಾಗಿ ಜೀರ್ಣವಾಗಲ್ಪಡುವುದು. ಮಾಗಿದ ಹಣ್ಣು ಅಂಗಡಿ ಮುಂಗಟ್ಟು ಮುಂತಾದ ಎಲ್ಲಾ ಕಡೆಗಳಲ್ಲಿಯೂ ಮಾರಾಟಕ್ಕೆ ಇರುವದು. ಕೊಂಡುಕೊಳ್ಳುವಾಗ ಹಣ್ಣನ್ನು ನೋಡಿ ತೆಗೆದುಕೊಳ್ಳಬೇಕು. ಹಣ್ಣು ಚನ್ನಾಗಿ ಮಾಗಿಸ್ಸಾಗಿರಬೇಕು. ಜನರು ಹಣ್ಣುಗಳನ್ನು ಮಾಡಿಕೊಳ್ಳಬಾರದು. ಹಸುರು ಕಾಯಿಗಳನ್ನು ಕೊಂಡುಕೊಂಡರೂ ಅವುಗಳು ಚನ್ನಾಗಿ ಮಾಗುವಂತೆ ಬಿಸಿಯಾದ ಸ್ಥಳದಲ್ಲಿ ಇಡಬೇಕು. ತಿನ್ನಬೇಕಾದರೆ ಸಿಪ್ಪೆಯು ಸ್ವಲ್ಪ ಕಪ್ಪು ವಿಶ್ರವಾದ ಹಳದಿ ಬಣ್ಣಕ್ಕೆ ಬಂದಿರಬೇಕು. ತಿರುಳು ಚನ್ನಾಗಿ ಪಕ್ವವಾಗಿದ್ದರ ಮತ್ತಗಿರುವುದು. ಈ ಸ್ಥಿತಿಗೆ ಬಂದಾಗ ಹಣ್ಣಿನಲ್ಲಿರುವ ಭಾಗವೆಲ್ಲವೂ ಶರ್ಕರಾಂಶವಾಗಿರುವುದು (Sugar) ಪಿಷ್ಟ (Starch) ದ ಅಂಶವು ಇರುವುದೇ ಇಲ್ಲ. ಇಂಥ ಹಣ್ಣು ಅರೋಗ್ಯಕರವು ಮತ್ತು ಸುಲಭವಾಗಿ ಜೀರ್ಣಕ್ಕೆ ಬರುವುದು. ಹಣ್ಣಿನ ಸ್ಥಿತಿಯೊಂದು ಬಂದಿಲ್ಲ ಚನ್ನಾಗಿ ಅಗಿದು ನುಂಗಬೇಕು. ಆ ವ ನಂಗ ನುಸ್ತೆ ಮಾಡಿದು ಹಣ್ಣು ಗೋಲಿಯಷ್ಟು ಆದರೆ ಜೀರ್ಣವಾದ ಶೀಘ್ರವಾಗಿ ಬರಬೇಕು. ಹಣ್ಣು ಬಂದನ್ನು ಸಣ್ಣ 'ಟಂಬ್ಲರ್' (ಲೋಟಾ)ದ ಬಟ್ಟಲ ಆಕಾರದ ಅಥವ ಚಮಚದಿಂದ ನುರುಕಿ (Crush) ಮೃದುವಾದ ರೂಪಕ್ಕೆ ತರಬೇಕು. ಈ ರೀತಿಯಾಗಿ ಹಣ್ಣನ್ನು ಸೇವಿಸಿದಲ್ಲಿ ಇದಕ್ಕಿಂತಲೂ ಸುಲಭವಾಗಿ ಜೀರ್ಣಕ್ಕೆ ಬರುವ ಹಣ್ಣು ಮತ್ತಾವುದೂ ಇಲ್ಲ.

ಹಣ್ಣುಗಳಲ್ಲಿರತಕ್ಕ ಮಲಶೋಧಕ (Laxative) ಗುಣ

ಸಾಮಾನ್ಯವಾಗಿ ಎಲ್ಲ ಹಣ್ಣುಗಳಲ್ಲಿಯೂ ಸಕ್ಕರೆಯೂ, ಕಾರತವು (Acidity) ಇರುವುವು. ಇವುಗಳ ದೆಸೆಯಿಂದ ಕರುಳಿನ ರಸವು ಸಲೀಲವಾಗಿ ಜಿರಿತು ಮಲವು ಸಲೀಸಾಗಿ ಹೊರಡುವುದಕ್ಕೆ ಅನುಕೂಲವಾಗುವುದು. ಮೇಲ್ಕಂಡ ಹಣ್ಣಿನಲ್ಲಿರತಕ್ಕ ಮಲಶೋಧಕ ವಸ್ತುಗಳಿಂದ ಕರುಳಿನ ಒಳ ಹೊಗಿಗೆ ಸ್ವಲ್ಪವೂ ಯಾವ ಬಾಧಕ ಅಥವ ಉರಿಯು ಉಂಟಾಗ ವುದಿಲ್ಲ. ಆದರ ಔಷಧ ರೂಪವಾಗಿ ಉಪಯೋಗಿಸುವ ಜಾಪಾಳ ಮಾತ್ರೆ, ಭೇದಿಯ ಔಷಧ, ಆಸ್ಪತ್ರೆಯಲ್ಲಿ ಕೊಡತಕ್ಕ 'ಮೆಗ್ನೀಷಿಯಂ ಸಲ್ಫೇಟ್' (Magnesium Sulphate) ಎಂಬ ಕ್ಷಾರ (Salt), ಕತ್ತಾಳೆ ರಸದಿಂದ ಮಾಡಿದ ದ್ರಾವಕ (Aloes) ಕ್ಯಾಸ್ಕರಸಾಗ್ರಡ (Cascara Sagrada) ಮುಂತಾದ ಭೇದಿಯ ಔಷಧಗಳದ್ದಾಗಿಸ್ಯ ಅವುಗಳಿಂದ ಒಳಗೆ ಕಡಕುಂಟಾಗುವುದು. ಅವುಗಳಿಂದ ಒಳ ಯೂ ಜಾಡೆಯೂ ಉಂಟಾಗುವುವು.

ನಿಂಬೆಹಣ್ಣಿನ ರಸ (Lemon Juice).

ಎಲ್ಲಾ ವಿಧವಾದ ಹಣ್ಣುಗಳಲ್ಲಿಯೂ ಅನ್ನಕೋಶದಲ್ಲಿರುವ ಜೀರ್ಣರಸ Gastric Juice ವನ್ನು ಹುಟ್ಟಿಸಿ ಆಹಾರವು ಜೀರ್ಣವಾಗುವುದಕ್ಕೆ ಸಹಕರಿಸುವುವು. ಹೊಟ್ಟೆಯಲ್ಲಿ ಜೀರ್ಣರಸವು ಕಡಮೆಯಾದಾಗ ಹಣ್ಣುಗಳನ್ನು ಸೇವಿಸಿದರೆ ಅದರ ಈ ರಸವು ಹುಟ್ಟುವುದು. ಹಣ್ಣಿನಲ್ಲಿರತಕ್ಕ ಕ್ಷಾರವಸ್ತುಗಳು ಜೀರ್ಣರಸವಾಗಿ ಪರಿಣಮಿಸುವುದು.

ಕಿತ್ತಳೆ ಹಣ್ಣು.—ಪ್ರಕೃತಿಯು ಮನುಷ್ಯನ ಉಪಯೋಗಕ್ಕೆ ನಿರ್ಮಿಸಿರುವ ವಸ್ತುಗಳಲ್ಲಿ ಕಿತ್ತಳೆ ಹಣ್ಣು ಸರ್ವೋತ್ಕೃಷ್ಟವಾದುದು. ಈ ಹಣ್ಣಿನಲ್ಲಿ ಆಹಾರದ್ರವ್ಯವು ಮೊದಲೇ ಪರಿಪಕ್ವಸ್ಥಿತಿಯಲ್ಲಿ (Predigested) ಸಿದ್ಧವಾಗಿರುವುದು. ಬಹು ರುಚಿಕರವಾಗಿಯೂ ಅತ್ಯಲ್ಪ ಕಾಲವಲ್ಲಿ ರಕ್ತಕ್ಕೆ ಸೇರುವುದೂ ಆಗಿರುವುದು. ಎಳೆ ಒಂದವನಿಗ ಅಥವಾ ನಿಶ್ಶಕ್ತಿಪರನಿಗೂ ಕಿತ್ತಳೆ ಹಣ್ಣು ಬಹು ಪ್ರಿಯವಾದ ವಸ್ತು. ಹಣ್ಣಿನಲ್ಲಿ ಸಿಹಿ ಹೆಚ್ಚಾಗಿದ್ದಷ್ಟೂ ಅಷ್ಟು ಆರೋಗ್ಯಕರ ಮತ್ತು ಬಲಕರ.

ರಾತ್ರಿ ನಿದ್ರೆ ಹೋಗುವುದಕ್ಕೆ ಮೊದಲು ಮತ್ತು ಬೆಳಿಗ್ಗೆ ಎದ್ದ ಮೇಲೆ ಒಂದೆರಡು ಕಿತ್ತಳೆ ಹಣ್ಣನ್ನು ತೆಗೆದುಕೊಳ್ಳುತ್ತಾ ಬಂದಲ್ಲಿ ಮಲಪ್ರವೃತ್ತಿಯು ಚನ್ನಾಗಿ ಆಗುವುದು. ನಿಶ್ಶಕ್ತಿ ಪರರೂ, ಮಲಕಟ್ಟಿರುವವರೂ (Constipants) ಕಿತ್ತಳೆ ಹಣ್ಣನ್ನು ಸೇವಿಸುತ್ತ ಬಂದಲ್ಲಿ ಹೆಚ್ಚು ಗುಣವನ್ನು ಹೊಂದುವರು.

'ಶ. ವ್ಯಾಯಾಮ'

ಪತ್ರವ್ಯವಹಾರ.

ಹುರುಕುಲಿನ ವಿಶೇಷ.

ಅಯ್ಯಾ,

ತಾರೀಕು 26—5—25ನೇ ದಿವಸ ಫ್ರೇಜರ್ ಪೇಟೆ ಸಂತೆಯಲ್ಲಿ ಒಬ್ಬ ಹುರುಕುಲು ಮಾರುವವನ ಹತ್ತಿರದಿಂದ ಹುರುಕಲು ಕ್ರಯಕ್ಕೆ ಕೊಂಡು ತಿಂದ ಸುಮಾರು 60 ಮಂದಿ ಜನರಿಗೆ ತಿಂದ ಸ್ವಲ್ಪ ಸಮಯದಲ್ಲಿಯೇ ವಾಂತಿಭೇದಿ ಸುರುವಾಗಿ ಬಹು ಕಷ್ಟದಿಂದ ಇದ್ದದ್ದನ್ನು ಅಲ್ಲಿಯ ಸಬ್ ಅಸಿಸ್ಟಾಂಟ್ ಸರ್ಜನರು ತಿಳಿದು ರಾತ್ರಿಯಲ್ಲಿಯೇ ಅವರಿಗೆಲ್ಲಾ ಔಷಧಿಯನ್ನು ಕೊಟ್ಟು ಪ್ರಾಣರಕ್ಷಣೆಯನ್ನು ರಾತ್ರಿಯೆಲ್ಲಾ ಪ್ರಯತ್ನಿಸಿ ಕಾಪಾಡಿದರೆಂದು ತಿಳಿದು ಮಾರನೇ ದಿನ ಮಹತ್ತರ ಸಂಗತಿಯನ್ನು ವಿಚಾರಿಸಲು ಅದು ಹುರುಕುಲು ತಿಂದದ್ದರಿಂದ ಬಂದಿರುವದು ಸ. ಅ. ಸರ್ಜನರಿಂದಲೇ ತಿಳಿದೆನು. ಮೂರನೇ ದಿನ ಕೂಡ ಮಂಗಳೂರಿನಲ್ಲಿ ಒಂದು ಸಂಘದ ವಿಟಿಂಗ ಇನ್ಸ್‌ಪೆಕ್ಟರು ಹೋಗಿದ್ದ ಸಮಯದಲ್ಲಿ ಅಲ್ಲಿಯೂ ಕೆಲವರು ಇದೇ ರೀತಿಯಿಂದ ನರಳುತಿದ್ದದ್ದನ್ನು ತಿಳಿದು ವಿಚಾರಿಸಲು ಹುರುಕುಲು ತಿಂದುದರಿಂದಲೇ ಬಂದಿತೆಂದು. ಸ್ವಲ್ಪವಾಯಿತು ಕೂಡಲೆ ಜನರಿಗ ಆಸ್ಪತ್ರೆ ಔಷಧಿ ತೆಗೆದುಕೊಳ್ಳಬಂತೆ ಹೇಳಿದೆನು. ಪ್ರಾಣಕ್ಕೆ ಅಪಾಯವೇನು ಬಂದ ಸಂಗತಿ ತಿಳಿದಿರುವದಿಲ್ಲ. ಈ ಸಂಗತಿಯನ್ನು ಅಧಿಕಾರಿಗಳು ಯಾವ ಕಾರಣದಿಂದ ಬಂದಿತೆಂದು ವಿಚಾರಿಸಿ ತಕ್ಕ ಪರಿಹಾರಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಿ. ಸಿ. ಭೂಗನ್ನ.

WANTED

A candidate with Inter qualification in ience to undergo Motor Engineering aining on a scholarship of Rs 30 per ensem Applicant must bind himself to rve the company for six years Pay ter training, from 75 to Rs 100 per mens m Applications with testimonials ould reach the undersigned before the st July 1925

K KUTTAYYA,
Managing Director
Sri Kavery Motor Service
MERCARA

4—1

ವರ್ತಮಾನ ಸಂಗ್ರಹ.

ಒಳದೇಶ.

ಬೇತರಿಯ ತಾತ್ಕಾಲಿಕ ಸೇತುವೆಯು ಹೊಳೆಯಲ್ಲಿ ನೀರ ಹೆಚ್ಚಾಗಿ ಮುರಿದು ಹೋದದ್ದರಿಂದ ಬಸ್ಸ್ ಸರ್ವೀಸು ಕೆಲವು ದಿವಸಗಳವರೆಗೆ ನಿಂತುಹೋಗಿತ್ತು ಆದರೆ ತಾರೀಕು ರಿಂದ ಹೊಳೆಯ ಎರಡು ಕಡೆಗಳಲ್ಲಿ ಎರಡು ಬಸ್ಸ್‌ಗಳನ್ನಿಟ್ಟು ಸರ್ವೀಸು ನಡಿಸುತ್ತಾರಾಗಿ ತಿಳಿಯುತ್ತೇವೆ

ಮ ರಾ ರಾ ಗಳಾದ ನಡ್ಡುಡ ಸುಬ್ಬಯ್ಯನವರು ಕಪ್ಪಾರಂಡ ಚಂಗಪ್ಪನವರು, ಪಾರುವಂಗಡ ಕುಶಾಲಪ್ಪನವರು ಮತ್ತು ಡಿ ಸ್ಪೈರಕ್ಟರಾದ ಕ ಎಸ್ ಸುಬ್ರಾಯರು, ಇವರು ನಾಲ್ಕರು ಮೆಂಬರುಗಳಾಗಿರುವ ನಸಗೃಹ ವಿಚಾರ ಕಮಿಟಿ ಮೀಟಿಂಗ ಮಡಿಕೇರಿಯಲ್ಲಿ ತಾರೀಕು 6ರಲ್ಲಿ ನಡೆಯುವುದು.

ಉತ್ತರ ಕೊಡಗು ತಾಲ್ಲೋಕು ಕಚೇರಿಯನ್ನು ಸೋಮವಾರಪೇಟೆಯಲ್ಲಿ ಇಡುವಂತೆ ತೀರ್ಮಾನವಾಗಿದೆ ಕೆಲವು ದಿವಸಗಳಲ್ಲೇ ಮಡಿಕೇರಿಯಿಂದ ವರ್ಗಾಯಿಸಲ್ಪಡುವುದು

ಮಡಿಕೇರಿ ಮುನ್ಸಿಪಾಲಿಟಿ ಕಮಿಟಿ ಮೆಂಬರ ತನಕ್ಕೆ ಮಿ. ಹಚ್ ತಿರುಮಲಾಚಾರ ಬಿ ಎ ಬಿ ಎಲ್ ರವರು ರಾಜಿನಾಮೆ ಕೊಟ್ಟದ್ದರಿಂದ ಆ ಸ್ಥಳಕ್ಕೆ ಮ ಎಸ್ ಬಸಪ್ಪನವರು ಚುನಾಯಿಸಲ್ಪಟ್ಟಿರುವರು

ಎಳಂಟು ವರುಷಗಳಿಂದ ಕೊಡಗಿಗೆ ಬಾರದೆ ಇದ್ದ ಮಿ ಕೋದಂಡ ಮಾಚಯ್ಯನವರ ಪತ್ನಿಯವರು ಬೆಂಗಳೂರಿಂದ ಮಡಿಕೇರಿಗೆ ಬಂದು ಕೆಲವು ದಿವಸಗಳಲ್ಲಿಯೇ ಜ್ವರದಿಂದ ಪೀಡಿತರಾಗಿ ಕಳೆದ ತಾರೀಕು 20ರಲ್ಲಿ ಶಿವಾಧೀನರಾದರು

1872ರ ಇಂಡಿಯನ್ ಕ್ರಿಶ್ಚಿಯನ್ ಮ್ಯಾರೇಜ್ ಆಕ್ಟಿನ 7ನೇ ಸೆಕ್ಷನ್ ಪ್ರಕಾರ ಕೊಡಗು ಪ್ರಾಂತ್ಯಕ್ಕೆ ಮದುವೆ ರಿಜಿಸ್ಟ್ರಾರಾಗಿ ಕಮಿಷನರವರು ನೇಮಿಸಲ್ಪಟ್ಟಿರುವರು

ಮಿ ಪಿ ಜಿ ಟಿಪ್ಪಿಂಗ್‌ರವರು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರತನಕ್ಕೆ ರಾಜಿನಾಮೆಕೊಟ್ಟು ಇಂಗ್ಲೆಂಡಿಗೆ ಹೊರಟು ಹೋದದ್ದರಿಂದ ಯೂರೋಪಿಯನರು ಮಿ ಲಯನಲ್ ನ್ಯೂಕಮರವರನ್ನು ಕೌನ್ಸಿಲಿಗೆ ಅವರ ಪರ ಮೆಂಬರಾಗಿ ಚುನಾಯಿಸಿರುವರು

ತಾರೀಕು 2ರಲ್ಲು ನಡೆದ ಸೆಂಟ್ರಲ್ ಬ್ಯಾಂಕು ಡೈರೆಕ್ಟರುಗಳ ಮೀಟಿಂಗಿನಲ್ಲಿ ಈ ಕೆಳಗಿನ ಸಂಘಗಳಿಗೆ ಸಾಲ ಮಂಜೂರಾಗಿದೆ ಮುಗುಟಗೇರಿ ಸಂಘಕ್ಕೆ ರೂ 750 ಹೊದ್ದೂರು ಸಂಘಕ್ಕೆ ರೂ 1,000 ದೇವಣಗೇರಿ ಸಂಘಕ್ಕೆ ರೂ 500 ಮಡಿಕೇರಿ ಸಂಘಕ್ಕೆ ರೂ 1,000 ಅಮ್ಮತ್ತಿ ಸೊಸೈಟಿಗೆ ರೂ 500 ಬಾಳುಗೋಡು ಸೊಸೈಟಿಗೆ ರೂ. 2,000 ಹಬ್ಬಾಲೆ ಸಂಘಕ್ಕೆ ರೂ 1,000 ಕದನೂರು ಸೊಸೈಟಿಗೆ ರೂ 1,500

ವೇಕ್ಸಿನ್ (ಗೋ ಸೈಲಿ) ತಗಲಿಸುವುದಕ್ಕಾಗಿ ತಿಂಗಳು ವಾರು 6ರಿಂದ 10ರವರೆಗೆ ಕರುಗಳನ್ನು ಬಾಡಿಗೆಗೆ ಒದಗಿಸಿಕೊಡುವ ಕಂಟ್ರಾಕ್ಟಿಗಾಗಿ ಅರ್ಜಿಗಳು ಈ ತಾರೀಕು 1ನೇ ಸೋಮವಾರ ಬೆಳಗ್ಗೆ 11 ಗಂಟೆ ವರೆಗೆ ಸಿವಿಲ್ ಸರ್ಜನರ ಮಡಿಕೇರಿ ಆಫೀಸಿನಲ್ಲು ತೆಗೆದುಕೊಳ್ಳಲ್ಪಡುವವು

ಶ್ರೀಯುತ ಹರೀಂದ್ರನಾಥ ಚಟ್ಟೋಪಾಧ್ಯಾಯರು ತಾರೀಕು 1ರಲ್ಲು ಪಬ್ಲಿಕಿನವರಿಗೂ, ತಾರೀಕು 3ರಲ್ಲು ವಿದ್ಯಾರ್ಥಿಗಳಿಗೂ ಸೆಂಟ್ರಲ್ ಹೈಸ್ಕೂಲು ಹಾಲಿನಲ್ಲಿ ಸಂಗೀತ ಪಾರ್ಟಿಗಳನ್ನು ಕೊಟ್ಟರು.

ಮಡಿಕೇರಿ ವೇದಾಂತ ಸಂಘದವರು ಶ್ರೀ ರಾಮಕೃಷ್ಣ ಪರಮಹಂಸರ ತೊಂಭತ್ತನೇ ಜಯಂತಿ ಉತ್ಸವವನ್ನು ಮೇ ತಾರೀಕು 31ರಲ್ಲು ಮಡಿಕೇರಿ ಶ್ರೀ ರಾಮಕೃಷ್ಣ ಮಠದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ನಿರ್ಮಲಾನಂದಜೀಯವರ ಸನ್ನಿಧಿಯಲ್ಲಿ ಬಹು ವಿಜೃಂಭಣೆಯಿಂದ ನಡಿಸಿದರು ಅಲ್ಲದೆ ಸ್ವಾಮಿಜೀಯವರು ಈ ವಾರ ಪ್ರತಿ ದಿನ ಸಾಯಂಕಾಲವೂ ಹೈಸ್ಕೂಲ್ ಹಾಲಿನಲ್ಲಿ ವೇದಾಂತದ ವಿಷಯ ಸ್ವಾರಸ್ಯವಾದ ಉಪನ್ಯಾಸಗಳನ್ನು ಮಾಡಿದರು

ಮಲ್ಲೇಂಗಡ ಪಿ ಮುತ್ತಣ್ಣನವರು ಮೈಸೂರು ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವನೆಂದು ತಿಳಿಯಬರುತ್ತದೆ.

ಮದ್ರಾಸು ಇಂಜಿನೀಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದ ಮ ಚೇಂದಿರ ಸುಬ್ಬಯ್ಯನವರು ಎ ಇ ಡಿಗ್ರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು ಇವರು ನಮ್ಮ ದೇಶದಲ್ಲಿ ಎರಡನೇ ಎ ಇ ಡಿಗ್ರಿಯವರು

ಬೆಂಗಳೂರು ಶ್ರೀ ರಾಮಕೃಷ್ಣ ಮಠದ ಪ್ರೆಸಿಡೆಂಟರಾದ ಸ್ವಾಮಿ ನಿರ್ಮಲಾನಂದರವರು ಮತ್ತು ಸದರಿ ಮಠಕ್ಕೆ ಸೇರಿದ ಮ ಕೇಲಸಂಡ ಚಂಗಪ್ಪನವರು (ಈಗ ಸ್ವಾಮಿ ಶೀರಬ್ಜೈತನ್ಯರವರು) ತಾ 2ರಲ್ಲಿ ವೀರಾಜಪೇಟೆಗೆ ಬಂದಿರುವರು ಅವರು ಪೊನ್ನಂಪೇಟೆ ಕಡೆಗೆ ಹೋಗುವವರ್ತಮಾನವೂ ಇದೆ

ಹರೀಂದ್ರನಾಥ ಚಟ್ಟೋಪಾಧ್ಯಾಯರು ತಾ 6ನೇ ಶನಿವಾರ ವೀರಾಜಪೇಟೆಯಲ್ಲಿ ಒಂದು ಗಾಯನ ಪಾರ್ಟಿಯನ್ನು ಕೊಡುವರಾಗಿ ತಿಳಿಯುತ್ತೇವೆ

ಚೀಫ್ ಕಮಿಷನರಾದ ಮಿ ಡಬ್ಲ್ಯು ಪಿ ಬಾರ್ಟನ್‌ರವರು ತಾ 6ರಲ್ಲಿ ಬೆಂಗಳೂರಿನಿಂದ ಮಡಿಕೇರಿಗೆ ಬರುವರು ಆ ದಿನ ಸಾಯಂಕಾಲ 4½ ಗಂಟೆಗೆ ಕೊಡವರು ಮಡಿಕೇರಿ ಕೋಟೆಯಲ್ಲಿ ಅವರಿಗೊಂದು ಎಟ್ ಹೋಮ್' ಕೊಡುವರು

ಕಳೆದ ಆದಿತ್ಯವಾರ, ಸೋಮವಾರ ಮತ್ತು ಮಂಗಳವಾರದ ಮಳೆಗಾಳಿಯಿಂದ ಮಳೆಗಾಲವು ಪ್ರಾರಂಭಿಸಿದಂತೆ ತೋರುತ್ತು ಅದರ ನಂತರ ಗಾಳಿ ಇದ್ದರೂ ಮಳೆ ಇಲ್ಲದೆ ಬಿಸಿಲು ಕಾಯುತ್ತಿದೆ

ಸೋಮವಾರಪೇಟೆ ಸ್ಪೆಶಿಯಲ್‌ಡ್ಯೂಟಿರೇಂಜ್ ಆಫೀಸರಾಗಿದ್ದ ಮ ಕೋದಂಡ ಯಸ್ ಸುಬ್ಬಪ್ಪನವರನ್ನು ನಾಗರ ಹೊಳೆಗೆ ರೇಂಜ್ ಆಫೀಸರಾಗಿ ವರ್ಗಾಯಿಸಿರುವರು

ಉತ್ತರ ಕೊಡಗು ತಾಲ್ಲೋಕು ಭಾಗಮಂಡಲ ನಾಡು ಚೇರಂಬಾಣೆ ಗ್ರಾಮದ ದೊಡ್ಡಿಯು ಕಳೆದ ಮೇ ತಾರೀಕು 15ರಿಂದ ಮುಚ್ಚಲ್ಪಟ್ಟಿದೆ

ನೋಟೀಸು.

ಸಿದ್ದಾಪುರ ನಾಡು ಗುಯ್ಯ ಗ್ರಾಮದಿಂದ ಗ್ರೀನ್‌ಹಿಲ್ಸಿಗ ತಂದ ಕರೀವರ್ಣದ ಜಾತಿ ಒಡೆಯದ ಸಾಧಾರಣ ಒಂದು ವರುಷ ಬದ್ದ ಕೊಂಬಿರುವ ಎಡಕಣ್ಣು ಹೂವು ಮುಚ್ಚಿಕೊಂಡಿರುವ ಪತ್ತಿ ಬಳ್ಳೇ ಪುಸ್ತಿಯ ರದ ಒಂದು ಕೋಣವು ಎರಡುವಾರಗಳ ಹಿಂದೆ ಕಾಣದೆ ಹೋಗಿದೆ ಇದರ ವಿಷಯ ಈ ಕೆಳಗಿನವರಿಗೆ ವರ್ತಮಾನ ಕೊಟ್ಟವರಿಗೆ ಮೂರು ರೂಪಾಯಿ ಬಹುಮಾನ ಕೊಡಲ್ಪಡುವುದು

ಎ ಪಿ ಚಂಗಪ್ಪ
'ಗ್ರೀನ್ ಹಿಲ್ಸ್'
ವೀರಾಜಪೇಟೆ

ಹಿಂದೂ ದೇಶ.

ಆಂಗ್ಲೋ ಇಂಡಿಯನರ ರಾಜಕೀಯ ಪರಿಸ್ಥಿತಿಯ ವಿಷಯ ಮಹಾತ್ಮ ಗಾಂಧಿಯವರು ಡಾಕ್ಟರ್ ಮೋರನೋರವರಿಗ ಪುನಹ ಒಂದು ಸಂಭಾಷಣೆಕೊಟ್ಟರು ಆಕೋಮಿನವರು ಹರ್ಷದಿಂದ ನೂಲು ನೂಲಬೇಕೆಂದು ಪುನಹ ಒತ್ತಿ ಹೇಳಿದರು

ಕರಾಚಿಯಲ್ಲಿ ನಡೆದ ಒಂದು ಪಬ್ಲಿಕ್ ಮೀಟಿಂಗಿನಲ್ಲಿ ಡಾಕ್ಟರ ಅನಿಬೆಸೆಂಟರವರ ಇಂಡಿಯಾ ಕಾಮನ್‌ವೆಲ್ತ್ ಮಸೂದೆಗೆ ಒತ್ತಾಸೆಕೊಡಬೇಕೆಂಬ ಠರಾವು ದೊಡ್ಡ ಬಹುಮತದಿಂದ ಪಾಸಾಯಿತು

ದಕ್ಷಿಣ ಕನ್ನಡದ ಈಂದುಬೆಟ್ಟು ಗ್ರಾಮದಲ್ಲಿ ಎರಡು ವರ್ಷಗಳ ಹಿಂದೆ ಕ್ರಿಶ್ಚಿಯನ್ ಮತಕ್ಕೆ ಸೇರಿದ್ದ 50 ಪಂಚಮರನ್ನು ಸ್ವಾತಂತ್ರ್ಯಾನ ಸಂಘದವರು ಶುದ್ಧಿಸಂಸ್ಕಾರ ಮಾಡಿ ಹಿಂದೂ ಮತಕ್ಕೆ ವಾಪಸು ತೆಗೆದುಕೊಂಡು ಮದ್ಯಪಾನ ಮತ್ತು ಮಾಂಸಹಾರ ವರ್ಜಿಸುವಂತೆಯೂ ಪ್ರತಿನಿತ್ಯ ಬೆಳಗ್ಗೆ ಸ್ನಾನ ಮಾಡುವಂತೆಯೂ ಅವರಿಗೆ ಬೋಧಿಸಿದರು ಅವರಲ್ಲಿ ಕೆಲವರು ಬೋಧನೆಯಂತೆ ನಡೆಯಲು ಪ್ರತಿಜ್ಞೆಮಾಡಿಕೊಂಡು ಅದನ್ನು ಕಾರ್ಯತಃ ಆಚರಿಸಲು ಪ್ರಾರಂಭಿಸಿದ್ದಾರೆ

ಅಸಹಕಾರದ ಸಮಯದಲ್ಲಿ ಸರ್ಕಾರದವರು ಸೂರತ್ ಮುನ್ಸಿಪಾಲಿಟಿಯನ್ನು ಸಸ್ಪೆಂಡ್ ಮಾಡಿದ ಕಾರಣ ಅಲ್ಲಿಯ ಅಸಹಕಾರಿಗಳು ಮುನ್ಸಿಪಲ್ ಟೇಕ್ಸ್ ಕೊಡುತ್ತಿರುವುದಿಲ್ಲ ಈ ಬಾಬಲಗು ಈಗ ನಾಲ್ಕು ಲಕ್ಷ ರೂಪಾಯಿ ಆಗಿದೆಯಂತೆ

ವಾಯುವ್ಯ ಪ್ರಾಂತ್ಯದ ರೈಲ್ವೆ ಯೂನಿಯನ್‌ನವರು ಅಲ್ಲಿಯ ಮುಷ್ಕರದ ಕಾರಣವನ್ನು ವಿಚಾರಿಸಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೂ, ಮಿ ಲ್ಯಾನ್ಸ್‌ಬರಿ ಮತ್ತು ಮಿ ತಾಮಸ್‌ರವರಿಗೂ ತಂತೀ ಕಳುಹಿಸಿರುವರು

ಮಹಾತ್ಮ ಗಾಂಧಿಯವರು ಕಳೆದ ವಾರ ಮೂರು ದಿವಸ ಶಾಂತಿನಿಕೇತನದಲ್ಲಿ ವಿಶ್ರಾಂತಿ ತೆಗೆದುಕೊಂಡರು ಅಲ್ಲಿ ರುವಾಗ್ಗ ಅವರಿಗೂ ಕವಿಶ್ರೇಷ್ಠ ರವೀಂದ್ರನಾಥ ಠಾಗೋರರವರಿಗೂ, ನಾಲ್ಕು ವರ್ಣಭೇದಗಳ ವಿಷಯವೂ ರಾಜಕೀಯ ಮತ್ತು ಮತ ವಿಚಾರದ ವಿಷಯವೂ ಸಂಭಾಷಣೆಗಳೂ ಚರ್ಚೆಗಳೂ ನಡೆದವು.

ಮೈಸೂರು ಪ್ರಾಂತ್ಯದಲ್ಲಿ ತಪ್ಪಿತಸ್ಥರನ್ನು ಪಂಚಿಗೆ ಕೊಡುವದನ್ನು ನಿಲ್ಲಿಸುವಂತ ನ್ಯಾಯ ವಿಧಾಯಕ ಸಭೆಯಲ್ಲಿ ಮಿ ಎ. ವೆಂಕಟ ಕೃಷ್ಣಯ್ಯನವರು ಚರ್ಚೆಗೆ ತರುವರಂತೆ

ಪ್ಯಾರಿಸ್ ಪಟ್ಟದಲ್ಲಿ ಕಾಪಿಟೆಯೊಗಿರುವ ಗ್ಯಾಲಿಯೂರದ ಮಹಾರಾಜರಿಗೆ ಗುಣವಾಗುತ್ತಾ ಬರುತ್ತಿದೆಯೆಂದು ವರ್ತಮಾನ

ಎರಡು ವಾರಗಳ ಹಿಂದೆ ಮಂಗಳೂರು ಬಂದರದಲ್ಲಿ ವಿಲಾಯಿತಿಗೆ ಹೋಗುತ್ತಿದ್ದ ಸ್ಟೀಮರಿಗೆ ಕಾಫಿ ತೆಗೆದುಕೊಂಡು ಹೋಗುತ್ತಿದ್ದ ಎರಡು ಮಂಜಿಗಳು ಮುಳುಗಿ ಹೋಗಿ ಸುಮಾರು 50ಸಾವಿರ ರೂಪಾಯಿಯ ನಷ್ಟಸಪ್ಪ ವಾಗಿದೆ

ಟ್ರಾನ್ಸ್‌ಪೋರ್ಟ್ ಇಲಾಖೆಗಳ ಖರ್ಚಿಗೆ ಸೇರಿದ ಉತ್ಪತ್ತಿಯನ್ನು ಉಂಟುಮಾಡುವುದಕ್ಕೆ ಬಂಗಾಳ ಸರ್ಕಾರದವರು ರಿಜಿಸ್ಟ್ರೇಶನ್ ಫೀಸನ್ನು ಹೆಚ್ಚಿಸುವಂತೆ ತೀರ್ಮಾನಿಸಿರುವರು

ಲಾರ್ಡ್ ರೀಡಿಂಗ್‌ರವರ ವೈಸರಾಯಿತನವು ಇನ್ನು ಎರಡು ವರ್ಷ ಮುಂದರಿಸಲ್ಪಡುವದೆಂಬ ವರ್ತಮಾನವು ಸುಳ್ಳೆಂದು ಸರ್ಕಾರದವರು ಸೂಚಿಸಿರುವರು

ಮಧ್ಯಪ್ರಾಂತ್ಯದಲ್ಲಿ ಅಸಹಕಾರವನ್ನು ವಿರೋಧಿಸುವುದಕ್ಕಾಗಿ ಸರ್ಕಾರಿ ಉದ್ಯೋಗಸ್ಥರು ರಾಜಕೀಯ ಚಳವಳದಲ್ಲಿ ಭಾಗಿಗಳಾಗ ಬಹುದೆಂಬ ಸರ್ಕ್ಯುಲಾರನ್ನು ಸರಕಾರದವರು ಈಗ ರದ್ದುಮಾಡಿರುವರು

ಆಕ್ಟಿಂಗ್ ಗವರ್ನರ ದ ಸರ ಜಾನ್ ಕೆರರವರು ವಾರಿಸಾಲಿಗೆ ಹೋಗುವಾಗ್ಗೆ ಅಲ್ಲಿಯ ಸಂಘಗಳ್ಯಾವವೂ ಅವರಿಗೆ ಸನ್ಮಾನಿತ ಪತ್ರಗಳನ್ನು ಅರ್ಪಿಸಬಾರದೆಂದು ಅಲ್ಲಿಯ ಜನರು ಮೀಟಿಂಗು ಮಾಡಿ ಠರಾವು ಪಾಸ ಮಾಡಿರುವರು

ಕೌನ್ಸಿಲ್ ಆಫ್ ಸ್ಟೇಟಿನ ಮೆಂಬರಾಗಿದ್ದ ಮಿ ಲಾಲುಭಾಯಿ ಸಮಲ್ದಾಸ್‌ರವರು ಬೊಂಬಾಯಿ ಸರ್ಕಾರದ ಎಗ್ಸಿಕ್ಯುಟಿವ್ ಕೌನ್ಸಿಲ್ ಮೆಂಬರಾಗಿ ನೇಮಿಸಲ್ಪಟ್ಟಿರುವರು

ಇಂದೂರು ಮಹಾರಾಜರವರು ಅವರ ಸಂಸ್ಥಾನಕ್ಕೆ ಏಳು ಚುನಾಯಿತ, ಐದು ನೇಮಿತ ಮೆಂಬರುಗಳುಳ್ಳ ಒಂದು ಲೆಜಿಸ್ಲೇಟಿವ್ ಕಮಿಟಿಯನ್ನು ಮಂಜೂರು ಮಾಡಿರುವರು

ವಿದೇಶ.

ಚೈನಾದಲ್ಲಿ ಪರದೇಶಸ್ಥರ ಅಧಿಕಾರದ ಮೇಲೆ ದ್ವೇಷವು ಹೆಚ್ಚುತ್ತಿದೆ ಶಂಗಹಾಯಿ ಪಟ್ಟದಲ್ಲಿ ವಿದ್ಯಾರ್ಥಿಗಳು ದಂಗೆ ಎದ್ದಿರುವರು ಅವರಿಗೂ ಪೋಲೀಸಿನವರಿಗೂ ಜಗಳವಾಗಿ ಅತ್ಯಂತ ಕೆಲವು ಮರಣಗಳೂ ಹಲವರಿಗೆ ಗಾಯಗಳುಂಟಾಗಿವೆ ವಿದ್ಯಾರ್ಥಿಗಳು ಕೆಲಸಗಾರರನ್ನು ತಮ್ಮ ಕಡೆ ಸೇರಿಸಿಕೊಳ್ಳಲು ಪ್ರಯತ್ನಿಸುತ್ತಿರುವರು ಅವರು ಒಂದು ಮೀಟಿಂಗ್ ನಡಿಸಿ ಪರದೇಶಸ್ಥರ ಬ್ಯಾಂಕಿಗೂ, ಬ್ಯಾಂಕು ನೋಟುಗಳಿಗೂ ಬಹಿಷ್ಕಾರ ಹಾಕಬೇಕೆಂದೂ, ಪರದೇಶಸ್ಥರ ಹಡಗುಗಳನ್ನು ಹಾಂಗ್‌ಪೂ ನದಿಯಿಂದ ಹೊರಡಿಸಬೇಕಂತಲೂ ಮುನ್ಸಿಪಲ್ ಪೋಲೀಸಿನವರು ಚೈನಾದವರ ಅಧೀನದಲ್ಲಿರಬೇಕೆಂದೂ ಮುಂತಾಗಿ ತೀರ್ಮಾನಿಸಿರುವರು

ಚೈನಾದ ಮೂರು ಸೇನಾಧಿಪತಿಗಳು ಅಫೀಮಿನ ವ್ಯಾಪಾರದ ವಿಷಯ ವಿಚಾರಿಸಲು ಸ್ವಸ್ಥದ ಹೆಡ್ ಕ್ವಾರ್ಟರ್ಸಿಗೆ ಬಂದಿದ್ದಾಗ ಅವರಲ್ಲಿ ಜಗಳ ಉಂಟಾಗಿ ಒಬ್ಬರು ಕೊಲ್ಲಲ್ಪಟ್ಟರು ಮತ್ತು ಇಬ್ಬರಿಗೆ ಘಾಯಗಳುಂಟಾಗಿವೆ

ಲಂಡನ್ ಪಟ್ಟದಲ್ಲಿ ಬೆಟ್ರಿಕ್ ಜೆಲಿ ಎಂಬವನ ಹೆಂಡತಿಯು ಒಂದೇಸಾರಿ ನಾಲ್ಕು ಶಿಶುಗಳನ್ನು ಹೆತ್ತಿರುವಳು ಇವುಗಳಲ್ಲಿ ಎರಡು ಸತ್ತು ಹೋದವು ಎರಡು ಮಾತ್ರ ಜೀವಿಸುತ್ತಿರುವವು ಇವಳ ತಾಯಿಯೂ ಒಂದೇ ಸಲ ಮೂರು ಕೂಸುಗಳನ್ನು ಹೆತ್ತಿರುವಳು ಈ ಮೂರು ಮಕ್ಕಳ ಪೈಕಿ ಇವಳೊಬ್ಬಳಾಗಿರುವಳು.

ಅಬ್ಸೀನಿಯದ ಅರಸರಾದ ಬೋರಿಸರವರು ಪತ್ನಿ ಹುಡುಕುತ್ತಾ ಸಂಚಾರ ಹೊರಟಿರುವರು! ಕಳೆದ ಹತ್ತು ವರ್ಷಗಳಿಂದ ಇವರಿಗೆ ಸರಿಯಾದ ಪತ್ನಿ ದೊರೆಯಲಿಲ್ಲವೆಂದೂ ಏನು ರಾಜಕುಮಾರಿಯೊಡನೆ ಸ್ನೇಹಬೆಳೆಸಿದರೂ, ಅವರ್‍ಯಾರನ್ನೂ ಮದವೆಯಾಗಲಿಲ್ಲವೆಂದೂ, ಇವರು ಬೇರೆ ಅರಸರಷ್ಟು ಐಶ್ವರ್ಯವಂತರಲ್ಲದ್ದರಿಂದ ಇವರಿಗೆ ರಾಜಕುಮಾರಿಯರು ಸಿಕ್ಕುವುದು ಕಷ್ಟವೆಂದು ವರ್ತಮಾನ

ರಿಫ್ ಸೇನಾಧಿಪತಿಯಾದ ಅಬ್ದೆಲ್ ಕ್ರಿಮ್‌ರವರು ತಮ್ಮ ಕೈಕೆಳಗ ಯೂರೋಪಿಯನ್, ಇಂಡಿಯನ್ ಮತ್ತು ಈಜಿಪ್ಷಿಯನ್ ಸೈನ್ಯಶಿಕ್ಷಕರನ್ನು ಇಟ್ಟುಕೊಂಡಿರುವರು.

ಪ್ರಕಟನೆ.

ಇದುವರೆಗೆ ನಾನು ನನ್ನ ಹೆಸರು ಆಲಿ ಎಂಬವನ್ನು ಅರಬಿ ಅಕ್ಷರದಲ್ಲಿ ಬರೆದಿಟ್ಟು ಕಾಗದ ಪತ್ರ ಮಗೈರೆಗಳಿಗೆ ರುಜುಹಾಕುತ್ತಿದ್ದೆನು ಆದರೆ ಕೆಲವು ತಿಂಗಳುಗಳ ಹಿಂದೆ ನನ್ನ ಎರಡು ಅರಬಿ ಅಕ್ಷರದ ರುಜುವು ಸೆ ಬಂಧವಾದುದರಿಂದ ಒಬ್ಬರು ಸೃಷ್ಟಿಮಾಡಿದ ಕಾರಣ ಇನ್ನು ಮುಂದೆ ನಾನು ಆ ಅಕ್ಷರದಲ್ಲಿ ರುಜು ಹಾಕುವುದಿಲ್ಲವೆಂತಲೂ, ಕರಾರು ಪತ್ರ ಮುಂತಾದವುಗಳಿಗೆಲ್ಲಾ ಎಡದ ಹೆಬ್ಬೆಟ್ಟಿನ ಗುರ್ತನ್ನೇ ಹಾಕುತ್ತೇನೆಂತಲೂ ಈ ಮೂಲಕ ನನ್ನಲ್ಲಿ ವ್ಯವಹಾರ ನಡಿಸುವವರಿಗೆಲ್ಲಾ ತಿಳಿಸಲಾಗಿದೆ

ಮೊಳ್ಳೆ ಕೂತಂಬಟ್ಟಿ ಆಲಿಕಾಕ,
ನರಿಯಂದಡ ಗ್ರಾಮ,
ನಾಪೋಕ್ಲು ನಾಡು

2—4

ಓರಿಯಂಟೆಲ್ ಜೀವವಿಮೆ ಕಂಪೆನಿ.

ಓರಿಯಂಟಲ್ ಜೀವವಿಮೆಯ ಕಂಪೆನಿಯ 1924ನೇ ವರ್ಷದ ವರದಿಯ ಕೆಲವು ಮುಖ್ಯ ಅಂಶಗಳು—

"ನಮ್ಮ ಕಂಪೆನಿಯು ಎಂದಿನಂತೆಯೇ ತುಂಬ ಅಭಿವೃದ್ಧಿ ಸ್ಥಿತಿಯಲ್ಲಿರುವದೆಂದು ಕೇಳಲು ಡೈರೆಕ್ಟರುಗಳು ಸಂತೋಷಪಡುತ್ತಾರೆ. ವಿಮೇದಾರರುಗಳಿಗೆ ಭದ್ರತೆಯಾಗಿರುವ ಶೇಖರಿಸಿರುವ ಮೂಲಾಧಾರವು ಈಗ 6,19,41,505—4—5 ರೂ. ಆಗಿರುತ್ತದೆ. ಈ ಸಾಲಿನ ಸರಾಸರಿ ಬಡ್ಡಿಯ ದರವು ವರಮಾನದ ತೆರಿಗೆಗಳು ಬಾತ ಕಳೆದು 5.3ರ ಮೇರೆಗೆ ಸಂದಿರುತ್ತದೆ.

"ಈ ಸಾರಿ ಹೊಸದಾಗಿ ಸೇರಿದ ವಿಮೇದಾರರುಗಳ ವಿಮೆ ಹಣದ ಮೊತ್ತವು 4,37,31,125 ರೂ. ಆಗುತ್ತದೆ. ಈ ಪೈಕಿ ಮುಂಗಡಗಳ ವರಮಾನವು(ಪ್ರೀಮಿಯಂ) 11,10,158—14—0 ರೂ. 1407335—8—0 ರೂ. ಸಾಲಿಯಾನ ಕೊಡತಕ್ಕ ಮುಂಗಡಗಳಾಗಿಯೂ 1,823—6—0 ರೂ. ಒಟ್ಟಿಗೆ ಕೊಡಲ್ಪಟ್ಟ ಮುಂಗಡಗಳಾಗಿಯೂ ಇರುತ್ತವೆ.

"ಈ ಸಾಲಿನಲ್ಲಿ ಒಬ್ಬ ವಿಮೇದಾರನಿಂದಲೆ ವಿಮೆ ಮಾಡಲ್ಪಟ್ಟ ಮೊಬಲಗಿನ ಅತ್ಯಂತ ದೊಡ್ಡ ಸಂಖ್ಯೆಯು 01,000 ರೂ ಆಗಿರುತ್ತದೆ

"ಈ ಸಾಲಿನಲ್ಲಿ ಹಕ್ಕುದಾರರಿಗೆ ಕೊಡಲ್ಪಟ್ಟ ಹಣದ ವಿವರ —

ಮೃತಿಹೊಂದಿದ 1,111 ವಿಮೆದಾರರುಗಳ 1,366 ವಿಮೆ ಪತ್ರಗಳ ಮೇಲೆ ಕೊಟ್ಟ ಮೊಬಲಗು ರೂ. 31,29,537—12—9. ವಾಯಿದೆ ಮುಗಿದ ಕ್ಲುಪ್ತಕಾಲದ 1,186 ವಿಮೆ ಪತ್ರಗಳ ಮೇಲೆ 1,101 ವಿಮೇದಾರರುಗಳಿಗೆ ರೂ. 25,01,193—4—6

ಒಟ್ಟು ರೂ. 56,30,731—1—3

"ಈ ಸಾಲಿನಲ್ಲಿ ಹೊಸದಾಗಿ ಬಂದ ವಿಮೆದಾರರುಗಳ ಸಂಖ್ಯೆಯು ಅತ್ಯಂತ ಸಮರ್ಪಕವಾಗಿದೆ ಎನ್ನುವ ವಿಷಯವನ್ನು ಗಮನಿಸಬೇಕೆಂದು ಡೈರೆಕ್ಟರುಗಳು ಕುತೂಹಲಪಡುತ್ತಾರೆ, 10,260 ವಿಮಾಪತ್ರಗಳು 237 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಮಾಡಲ್ಪಟ್ಟವು. ಈ ವಿಮೆ ಪತ್ರಗಳ ಸಂಖ್ಯೆಯು ಹಿಂದಿನ ಸಾಲಿಗಿಂತ 2,470 ಜಾಸ್ತಿಯಾಗಿಯೂ ವಿಮೆ ಹಣವು 63 ಲಕ್ಷ ರೂ ಗಳು ಜಾಸ್ತಿಯಾಗಿಯೂ ಇರುತ್ತವೆ. ಈ ಕಂಪೆನಿಯ ಹಕ್ಕುದಾರರ ಅನುಭವವು ಎಂದಿನಂತೆ ಒಮ್ಮಟ್ಟಿಗೆ ತೃಪ್ತಿಕರವಾಗಿರುತ್ತದೆ. ಹಿಂದಿನ ಕೆಲವು ವರುಷಗಳಿಂದೀಚೆಗೆ ಸೆಕ್ಯುರಿಟಿಗಳ ಬೆಲೆಯು ಹೆಚ್ಚುತ್ತಿರುವುದರಿಂದ ಕಂಪೆನಿಯ ಇನ್‌ವೆಸ್ಟ್‌ಮೆಂಟ್‌ಗಳು ತುಂಬ ತೃಪ್ತಿಕರವಾದ ರೀತಿಯಲ್ಲಿರುತ್ತವೆ. 1924ನೇ ಡಿಸಂಬರು 31ನೇ ತಾರೀಕಿನ ಇನ್‌ವೆಸ್ಟ್‌ಮೆಂಟುಗಳ ಮಾರ್ಕೆಟ್ ಬೆಲೆ ಪ್ರಕಾರ ಇನ್‌ವೆಸ್ಟ್‌ಮೆಂಟಿನ ರಿಸರ್ವ್ ಫಂಡಿಗೆ 38½ ಲಕ್ಷ ರೂಪಾಯಿ ಸೇರಿದಂತಾಯಿತು. ಅಂದರೆ ಸೆಕ್ಯೂರಿಟಿಗಳಲ್ಲಿ ಮುಂದೆ ಬೆಲೆಗಳ ಹೆಚ್ಚು ಕಡಿಮೆಗಳ ಕಡೆಗೆ ರಿಸರ್ವ್ ಸಹಿತವಾಗಿ 43 ಲಕ್ಷ ರೂಪಾಯಿ ಬೇರೆ ಮಾಡಲ್ಪಟ್ಟಂತಾಗಿದೆ.

"ಈ ಮೇಲೆ ವಿವರಿಸಿರುವ ಅಂಶಗಳಿಂದ ಈ ಕಂಪೆನಿಯು ಅತ್ಯುತ್ತಮವಾದ ಸ್ಥಿತಿಯಲ್ಲಿದೆ ಎಂದು ಹೇಳಲು ನನಗೆ ತುಂಬ ಸಂತೋಷವಾಗುತ್ತದೆ. ವಿಮೇದಾರರಾಗಲು ಬೇಕಾದ ಭದ್ರತೆಗೆ ಅರ್ಹತೆಯನ್ನು ಮಾತ್ರವಲ್ಲದೆ ಅವರುಗಳ ಹಕ್ಕು ವ್ಯವಸ್ಥೆಯ ವಿಷಯದಲ್ಲಿಯೂ ಸಾಕಾದಷ್ಟು ನಂಬಿಕೆಯನ್ನು ಕೊಡುವುದಾಗಿದೆ. ಅಲ್ಲದೆ ಷೇರ್ ಹೋಲ್ಡರುಗಳಿಗೂ ವಿಮೆದಾರರುಗಳಿಗೂ ಲಾಭವು ದೊರೆಯುವ ಕಂಪೆನಿಯಾಗಿದೆ,

"ಈ ವಿಷಯಗಳಲ್ಲಿ ಕಂಪೆನಿಯು ಈಗಿರುವ ಸ್ಥಿತಿಯನ್ನು ನಿಮಗೆ ವ್ಯಕ್ತಪಡಿಸಬೇಕೆಂದಿದ್ದೆನು. ಆದರೆ ಈಗ ನಡೆಯುತ್ತಿರುವ ತನಿಖೆಯು ಪೂರ್ತಿಯಾಗದಿರುವ ಕಾರಣ ಹಾಗೆ ಮಾಡಲು ಅವಕಾಶವಾಗಲಿಲ್ಲ, ಆದಾಗ್ಯೂ ನಾನು ಹಿಂದಿನ ಸಾಲಿನಲ್ಲಿ ಹೇಳಿದಂತೆ ತನಿಖೆಯ ಫಲವು ಅತ್ಯಂತ ತೃಪ್ತಿಕರವಾದ ಸ್ಥಿತಿಯಲ್ಲಿರುತ್ತದೆಂದು ದೃಢವಾಗಿ ಹೇಳಬಲ್ಲೆನು. ಈ ವಿಷಯವು ಸದ್ಯದಲ್ಲಿಯೇ ನಿಮಗೆ ತಿಳಿಯುವುದಾಗಿದೆ."

ಹಳ್ಳಿಯೋ ಸುಖ.

ಭಾಮಿನೀ ಷಟ್ಪದಿ.

ಯೇಕೆ ಪೊಗಳುವಿರೇಕೆ ಸುಮ್ಮನೆ,
ಬೇಕೆ ಹೆಚ್ಚೆಂದೆನುತ ಸಿಟಿಯನು |
ಸಾಕು ಸಾರುವ ನಿಮ್ಮ ಬಿರುನುಡಿ ಸಾಟಿಯಿಲ್ಲದಲೆ ||
ಭೂಲೋಕನಾಕ ಪಟ್ಟಣದೊಳಿರುತಿಹ |
ನೇಕ ಕುಮಾರ್ಗಗಳೆಲ್ಲ ತಿಳಿದಿರ |
ಬೇಕೆನುತ ಬಯಸುವರೆ ಸಿಟಿಯ ಸುಖಗಳನೂ || ೧ ||
ಬರಿಯ ಊಹೆಗಳಿಂದ ಹಳ್ಳಿಯ |
ಜರಿದು ಒರೆವುದದೆಂದು ಯುಕುತಿಯೆ |
ಪಿಡುಗನೋಡಾಗಳೀವುದು ಹಳ್ಳಿಸುಖ ಪ್ರೀತಿ ವಹಿಸುವೆಂಬರ ||
ನೀತಿ ಬೆರಸಿದ ಪಾಲಿಸುಂಬಿಕೆ |
ಸಾರವಿಲ್ಲದ ಜಗ್ಗು ತಿಂಬರ |
ಘೋರ ಕಾಲವಧೀನರುಗಳ ನಾಲಿಸಿರಿಗೇ ಕೊರತೆ ಎತ್ತಣದು || ೨ ||
ದಣಿಯುವರು ಬೇಬಿಸಿಲಿನಲಿ |
ಮಣಿಯುವರು ಭೂದೇವಿಗೆಬುಡದಿ |
ಕುಣಿವರು ಕಣಗಳಲ್ಲಿ ಸುಗ್ಗಿಯ ದಿನದಿ ಹಳ್ಳಿಗರು ||
ಹಣವೆ ಮುಖ್ಯವು ಸಿಟಿಯ ಜನರಿಗೆ |
ಗುಣವೆ ಮುಖ್ಯವು ಹಳ್ಳಿಯವರಿಗೆ |
ಗುಣಕೆ ಮತ್ಸರವೇತಕೆಂಬುದ ಪೇಳಿಹರು ಬುಧರೂ || ೩ ||
ಕಾಡು ಹಳ್ಳಿಯುದೆಂದು ಜರಿದಿರಿ |
ಕಾಡೆ ಪಟ್ಟಣವಾಗಿ ಇರುತಿಪುದೆಂಬ |
ಭೇದಭಾವವ ಮರೆತಿರೇತಕೆ ಸಿಟಿಯ ಮೋಹವದೇ ||
ಕಾಡಿನಿಂ ಕಟ್ಟಿಗೆಯು ಬರದಿರೆ |
ಪಾಡು ನೋಡಲು ಬೇಕೆ ಸಿಟಿಯಲಿ |
ಬೇಡಬೇಡೆಂದೆನುತ ನುಡಿವರು ಪಟ್ಟಣದಿ ಸುಖಬಲುದುಃಖ || ೪ ||
ಕೊಳಕು ಒಟ್ಟಿಗಳಿಂದ ಬಾಳ್ವರು |
ಬೆಳಕ ಗಾಳಿಗಳಿಲ್ಲ ಮನೆಯೊಳು |
ಕೊಳೆತ ಹಳ್ಳಿಲಿ ಸುಖಿಸಂತೆನುದೆಂದು ಜರಿವರೇಂಬಡರೋ ||
ಮುಖದನಾತನ್ನ ಮುಂದೆಯೆ |
ಮಲಿನಸಿಟಿ ಕರ್ದಮ ಇಂಗಿಗಲ್ಲಿಲಿ |
ಒಳಸಿರಲುಶುಭ್ರವಸ್ತ್ರಗಳಿಂದಸ್ತ್ರೀ ಪುರುಷ ಸಿಟಿಯಬಳಗಟ್ಟು || ೫ ||
ಕಾಯಕ್ಲೇಶದಿ ಪಡೆದ ಧನವನು |
ಆಯಸದಿ ನುಂಗಿಸುವರು ಹಳ್ಳಿಗರ್ |
ಮಾಯಮದ ಗರ್ವಂಗಳಿಲ್ಲದೆ ನಿತ್ಯದಿಂ ಸುಖಿಪರ್ ||
ತಾಯಿ ತಂಗಿಯರೆಂಬ ಭಾವವು |
ಮಾಯವಾಗದೆ ಹಳ್ಳಿ ಜನರೊಳು |
ಧ್ಯೇಯದಿಂದಿರುತಿಹುದು ಹಳ್ಳಿಗಾ ವಿವರಣೆಗಳೂ || ೬ ||
ಮೋಡಿಮಂತ್ರಗಳೆಂಬುದರಿಯದೆ
ನಾಡಿಗೊಡೆಯನ ದಯದಿ ಬೆಳೆವರು ಬೆಳೆಯ ಬಹುವಿಧದಿ,
ತಂದು ಸುರಿವರು ಪಟ್ಟಣಕ್ಕೆ ಬಹು ||
ತಾಪದಾದಿನಸುಗಳನೆಲ್ಲವು |
ತಿಂದು ಜರಿವುದೇತಕೆ ಹಳ್ಳಿಯ ನೆರೆಯು ಬಲುಪರಿಯೆ || ೭ ||
ಕೇಳುವುದೇನಕಟ ನೀರಿನ
ಗೋಳು ಸಿಟಿಯಲಿ ಹಗಲಿರುಳು,
ಕಲ್ಲ ಕೊಡಗಳ ಹಿಡಿದು ನಿಂದಿಹರಲ್ಲಿ ಒಳಿಯಲ್ಲಿ ||
ಕೆರೆಗಳೊಳಗಿರುತಿಹುದು ನಿರ್ಮಲ
ಜಲವು ಕೆಲವೆಡೆಗಳಲ್ಲಿರದಿರಲು |
ಹಾಳುಹಳ್ಳಿಯ ಕೆರೆಯನೆನ್ನುತೆಪ್ಪಾದರದನುಡಿಯಲ್ಲಿರೇಳು ಎರಿ ಲ.
ಕಟ್ಟುಪಟ್ಟಣದಲ್ಲಿ ಹಳ್ಳಿಯ
ಒಟ್ಟುಸ್ವೈದಿ ಸುಖಿಸುವರು
ಕಟ್ಟುಪಾಡ್ ತಾಕೂರ ಸೇರುವ ತೆರದೊಳೀರುತಲಿ ||
ನಿಕ್ಕುಶಾಲರ್ಗಾಗಿ ತೆಗೆಯುತ,
ಬಿಸಿಟ್ಟುಟೈಲೆಗಳನು ಬೋಳಿಸಿ
ನಟ್ಟಿರುತಿಹರೇನನೆಂಬೆನು ವಿಲೇಜ್ ಉದರದಲಿ || ೯ ||
ಪಾರಿನೋಟಗಳಿಂದ ಕರೆಯುವ,
ನಾರಿಯರು ಅಲ್ಲಲ್ಲಿ ಮುಗುಳ್ನಗೆ |
ಜಾರೆಯರು ಗುಪ್ತದ ಲಿಪಿಗಳನೋದನರಿಯದೆಲೆ ||
ಚಾದುತರ ಶೃಂಗಾರ ಭಾವವು
ಮೂರಿ ಹಳ್ಳಿಯ ನಾರಿಜನರೊಳು
ಸೇರದೆಂದಿಗು ಕೋರಿಕೊಡಿ ಮೇಲಿನ ಆವಿಭಾವಗಳ || ೧೦ ||
ಜಾತಿಕಾಹಿಸಿಹ ಕಾಫಿಕ್ಲಬ್‌ಗಳು
ನೀತಿಗೆಡಿಸಿಹ ಸಿನಿಮ ನಾಟಕ |
ದಾಟಿ ೦ ಓಡಾಡುತಿಹ ಮೋಟಾರ್ ಗಾಡಿ ಕೋಚ್ ಗಾಡಿ ||
ರೀತಿ ತಪ್ಪುವ ಭಾಷೆ ವಿಧಗಳು |
ನೂತಕಿಡಿಸುವ ಮೂಗುಕನ್ನಡಿ |
ಈ ವಿಧದ ವೈಯ್ಯಾರವೆಸೆವುದಲ್ಲಿ ಹಳ್ಳಿಯಲಿ || ೧೧ ||
ಎಷ್ಟು ಒರೆದರು ಬರೆಯಬಹುದಾ,
ಗಷ್ಟು ಕಾಂತಿಗಳೆಂಬ ವಾಚಕ |
ನಿಷ್ಟುರಿಗೆ ಬೇಸರವಿದೆನ್ನುತ ಮಲವು ಕಾರಣದಿ ||
ಇಷ್ಟದಿಂ ಬರೆದಿಹೆನು ಮಿತ್ಯಸಾ |
ಕಿಷ್ಟು ತಿಳಿಯಲು ಬೇಕೆಲ್ಲ |
ಕಷ್ಟಕಸನೆಲ್ಲದೆಂಬುದೆ ವಿಕಟನ ನೀತಿ ತಂತ್ರದೊಳು || ೧೨ ||

"ವಿಕಟ ವಿನೋದಿನಿ."

ಪತ್ರವ್ಯವಹಾರ.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಮತ ಬದಲಾವಣೆ.

ಅಯ್ಯಾ,

ಕ್ರೈಸ್ತ ಮತದ ಮಿಶ್ಯನರಿಗಳ ಮತಾ ಪ್ರಚಾರವು ಕೊಡಗಿನಲ್ಲಿ ಹೆಚ್ಚು ವ್ಯಾಪಿಸಿರಲಿಲ್ಲವೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಅವರಲ್ಲೂ ಕೊಡವರನ್ನು ಬೇರೆ ಮತಕ್ಕೆ ಸೇರಿಸುವುದು ಬಹಳ ಕಷ್ಟವೆಂದು ಹೇಳುವದನ್ನು ನಾನು ಹಲವು ಸಾರಿ ಕೇಳಿರುತ್ತೇನೆ. ಆದರೂ ಒಬ್ಬಿಬ್ಬ ಕೊಡವರು ಕ್ರೈಸ್ತ ಮತಾವಲಂಬಿಗಳಾದದ್ದುಂಟು. ಇವುಗಳ ಕಾರಣವನ್ನು ಇಲ್ಲಿ ವಿವರಿಸಲವಶ್ಯವೂ ಇಲ್ಲ. ಅಪೇಕ್ಷಿಸುವುದೂ ಇಲ್ಲ. ಆದರೆ ಅವರು ಕೂಡ ಸಮಾಜ ಸ್ಥಿತಿಯಲ್ಲಿ ಪಡುತ್ತಿರುವ ಕಷ್ಟವನ್ನೂ ತೊಂದರೆಯನ್ನೂ ಎಲ್ಲರೂ ನೋಡುತ್ತಿದ್ದೇವೆ. ಅಂಥವರು ಸಮಾಜದಿಂದ ಬಹಿಷ್ಕೃತರಾಗುವುದರಿಂದಲೂ, ಅವರೊಂದಿಗೆ ಅವರ ನೆಂಟರಿಷ್ಟರೂ ಕೂಡ ಒಡನಾಡದೆ ಇರುವುದರಿಂದಲೂ, ಇಂಥಾ ಮತ ಬದಲಾವಣೆಗೆ ಉತ್ತೇಜನ ದೊರೆಯುವುದಿಲ್ಲ! ಆದುದರಿಂದ ಕೊಡಗರು ಈ ವಿಷಯದಲ್ಲಿ ಸರಿಯಾಗಿ ವರ್ತಿಸಿದರೆಂದೇ ನನ್ನ ಅಭಿಪ್ರಾಯ.

ಕಳೆದವಾರದ ಪತ್ರಿಕೆಯಲ್ಲಿ ಬೆಂಬು ಗ್ರಾಮದಲ್ಲಿ ಎಂಟು ಗೌಡುಗಳವರು ಕ್ರೈಸ್ತಮತಕ್ಕೆ ಸೇರಲ್ಪಟ್ಟರೆಂಬ ವರ್ತಮಾನವನ್ನು ಕೇಳಿ ಯಾವ ಹಿಂದೂವಿಗೆ ತಾನೇ ವ್ಯಸನ ಉಂಟಾಗದೆ ಇದ್ದಿರ ಬಹುದು? ಹಿಂದೂ ವೆನಿಸಿಕೊಳ್ಳುವವರು ಇಂತಾ ಸಂಗತಿಗಳಿಗೆ ಗಮನಕೊಡದೆ ಹೋದರೆ ಹಿಂದೂ ಮತವು ಹ್ಯಾಗೆ ತಾನೇ ಉದ್ಧಾರವಾಗುವುದು? ಬೇರೆ ಮತದವರನ್ನು ಹಿಂದೂ ಮತಕ್ಕೆ ತೆಗೆದುಕೊಳ್ಳದೆ, ಹೀಗೆ ಹಿಂದೂಗಳ ಸಂಖ್ಯೆಯು ಕಡಿಮೆಯಾಗುತ್ತಾ ಬಂದರೆ ವರ್ಷಗಳು ಕಳೆಯುತ್ತಾ ಬಂದಹಾಗೆ ಹಿಂದೂ ಮತದ ಗತಿ ಏನಾಗ ಬಹುದೆಂದು ಯೋಚಿಸಬೇಕಾದ ಸಂಗತಿಯಾಗಿದೆ. ಹೀಗೆನ್ನುವದರಿಂದ ನಾನು ಕ್ರೈಸ್ತ ಮತವನ್ನಾಗಲೀ ಮಹಮ್ಮದೀಯ ಮತವನ್ನಾಗಲೀ ದ್ವೇಷಿಸುವವನಂದಲ್ಲ. ಆದರೆ ನನ್ನ ಹುಟ್ಟು ಮತವಾದ ಹಿಂದೂ ಮತವನ್ನು ಎಲ್ಲದಕ್ಕಿಂತಲೂ ಹೆಚ್ಚಾಗಿ ಪ್ರೀತಿಸುವವನಾಗಿದ್ದೇನೆ. ಎಲ್ಲಾ ಮತಗಳಲ್ಲಿ ಸತ್ಯವಿದೆಯೆಂದೂ, ಪ್ರತಿ ಒಂದು ಮತದ ತತ್ವಗಳಿಗನುಸಾರವಾಗಿ ವರ್ತಿಸಿದರೆ ಮೋಕ್ಷವು ದೊರೆಯುವುದೆಂದೂ ನನ್ನ ನಂಬಿಕೆಯಾಗಿದೆ. ಹೀಗಿರುವಲ್ಲಿ ಕೆಲವರು ತಮ್ಮ ಮತವೇ ನಿಜವಾದ ದೇವರ ಮತವೆಂದೂ, ಬಾಕಿ ಎಲ್ಲವೂ ಪಿಶಾಚನ ಮತಗಳೆಂದೂ ಹೇಳಿ ಅಜ್ಞಾನಿಗಳಾದ ಜನರಿಗೆ ಬೋಧಿಸಿ, ಲೋಕ ಸಮ್ಮಂಧದ ವಿಷಯಗಳಲ್ಲಿ ಭಾಷೆ ಕೊಟ್ಟು ಅನ್ಯ ಮತಸ್ಥರನ್ನು ಉಪಾಯದಿಂದಾಗಲೀ ಬಂದು ತರದ ಬಲಾತ್ಕಾರದಿಂದಾಗಲೀ ತಮ್ಮ ಮತಕ್ಕೆ ಸೇರಿಸಿಕೊಳ್ಳುವದು ಎಂದೂ ನ್ಯಾಯವಲ್ಲ. ಹೀಗೆ ನಡೆಯುವ ಬೋಧನ, ಮೋಸಗಳಿಂದಲೇ ಮತಗಳಿಗೆ ಒಂದರ ಮೇಲೊಂದಕ್ಕೆ ಶತ್ರುತ್ವವು ಉಂಟಾಗುವುದಾಗಿದೆ. ಯಾರೇ ಆಗಲೀ ತಾನು ಹುಟ್ಟಿದ ಮತದ ತತ್ವಗಳನ್ನು ಮೊದಲು ಚೆನ್ನಾಗಿ ಅರಿತುಕೊಳ್ಳತಕ್ಕದ್ದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಹೀಗೆ ಮಕ್ಕಳಿಗೆ ಮತವಿಚಾರವನ್ನು ಮನೆಯಲ್ಲಿ ತಂದೆತಾಯಿಗಳಾಗಲೀ, ಶಾಲೆಯಲ್ಲಿ ಉಪಾಧ್ಯಾಯರುಗಳಾಗಲೀ ಕಲಿಸಿಕೊಡಬೇಕು. ಆದರೆ ಈಗಿನ ಕಾಲದ ವಿದ್ಯೆಯು ಬಹು ವಿಶೇಷ ತರದ್ದಾಗಿದೆ. ಈಗಿನ ಶಾಲೆಗಳಲ್ಲಿ ಕಲಿಸುವ ವಿದ್ಯೆಯಲ್ಲಿ ಮತದ ವಾಸನೆ ಇಲ್ಲ. ಒಂದು ವೇಳೆ ಇದ್ದರೂ ಅದು ಕ್ರೈಸ್ತ ಮತಕ್ಕೆ ಸಮ್ಮಂಧಪಟ್ಟದ್ದಾಗಿರುತ್ತದೆ. ತಂದೆತಾಯಿಗಳಂತೂ ಮಕ್ಕಳನ್ನು ಶಾಲೆಗೆ ಕಳುಹಿಸಿ ಬಿಟ್ಟರೆ ಸಾಕು, ಅಲ್ಲಿ ಅವರಿಗೆ ಬೇಕಾದದ್ದನ್ನೆಲ್ಲಾ ಕಲಿಸುವರು ಎಂಬ ಭಾವನೆಯಿಂದ ತಮ್ಮ ಮಕ್ಕಳ ವಿದ್ಯಾಭ್ಯಾಸದ ಗೋಚರಕ್ಕೇನೇ ಹೋಗುವುದಿಲ್ಲ. ಹೀಗಾದ ಮೇಲೆ ಮಕ್ಕಳಿಗೆ ಮತಜ್ಞಾನವು ಹ್ಯಾಗೆ ತಾನೇ ಬರುವುದು? ಈ ವಿಷಯ ಬರೆಯುವದಾದರೆ ಕಾಲವೂ ಕಾಗದವೂ ವಿಳಂಬವಾಗುವುದು. ಸಂಕ್ಷೇಪವಾಗಿ ಹೇಳುವದಾದರೆ, ಮತವಿಚಾರವೂ ಜ್ಞಾನಾರ್ಜನೆಯೂ ವಿದ್ಯಾಭ್ಯಾಸದ ಮುಖ್ಯೋದ್ದೇಶವಾಗಿರಬೇಕು. ಮತವಿಲ್ಲದ ವಿದ್ಯೆಯು ವಿದ್ಯೆಯಲ್ಲ. ಮತವಿಚಾರ ಕಲಿಸದೆ ಅಥವಾ ಕಲಿಸಲು ಅನುಕೂಲ ಕೊಡದ ಸರ್ಕಾರವು ಸರ್ಕಾರವಲ್ಲ, ಎಂದೆಂದರೆ ಅರ್ಥವಾಗಲಾರದೆ?

ಮತಜ್ಞಾನವೂ ದೈವಭಕ್ತಿಯೂ ಕಡಿಮೆಯಾಗಿಯೇ ಲೋಕದ ಸ್ಥಿತಿ ಇಷ್ಟು ಕಷ್ಟತರದಾಗಿದೆ ಎಂದು ಯಾರೂ ತಾನು ತಿಳಿಯದ ಸಂಗತಿಯಾಗಿದೆ? ಅದರಲ್ಲೂ ಇಂಗ್ಲೀಷು ವಿದ್ಯೆಯು ಹಿಂದೂಸ್ಥಾನದಲ್ಲಿ ಪ್ರಬಲವಾಗುತ್ತಾ ಬಂದ ಹಾಗೆ ಹಿಂದೂಸಂಸ್ಕಾರಗಳು ವಿದ್ಯಾವಂತರೆನಿಸಿಕೊಳ್ಳುವವರಿಂದ ಮೂಲೆಗೊತ್ತಲ್ಪಡುತ್ತಾ ಬರುವುದು ಅತಿ ಶೋಚನೀಯವಾದ ಸಂಗತಿಯಾಗಿದೆ. ವಿದ್ಯಾವಂತರಗತಿಯು ಹೀಗಾಗಲು ಮತಭಕ್ತಿ ಇರುವ ಅವಿದ್ಯಾವಂತರಾದ ಜನಸಮುದಾಯವನ್ನು ಹೆಚ್ಚಾಗಿ ಹಿಂದುಳಿದ ವಂಗಡದವರನ್ನು ಬೇರೆ ಮತದ ಬೋಧಕರು ಹಲವು ವಿಧದ ಬೋಧನೆಗಳಿಂದಲೂ ಉಪಾಯಗಳಿಂದಲೂ ಅವರ ಮತಕ್ಕೆ ಸೇರಿಸುತ್ತಿರುವುದರಿಂದ ಹಿಂದೂ ಮತವು ಕ್ಷೀಣವಾಗುವುದರಲ್ಲಿ ಸಂದೇಹವಿಲ್ಲ. ಇದನ್ನು ನೋಡಿಯೇ ಹಿಂದೂ ಮುಂದಾಳುಗಳು ಸಾಂಗಠನ್ ಚಳವಳಿಯನ್ನು ಹೂಡಿ ಹಿಂದೂ ಮತದಿಂದ ಬೇರೆ ಮತಗಳಿಗೆ ಸೇರಿಹೋದವರಲ್ಲಿ ಈಗ ಮರಳಿ ಹಿಂದೂ ಮತಕ್ಕೆ ಬರುವವರನ್ನು ವಾಪಸು ತೆಗೆದುಕೊಳ್ಳುತ್ತಿರುವರು. ಹಿಂದೂ ಮಹಾಸಭೆಯು ಈ ಚಳವಳಿಯನ್ನು ಭದ್ರಪಡಿಸುತ್ತಿದೆ.

ನಮ್ಮ ಈ ಚಿಕ್ಕ ದೇಶದಲ್ಲಿ ಮತ ಸಮ್ಮಂಧ ಮುತುವರ್ಜಿ ತೆಗೆದುಕೊಳ್ಳುವವರು ಯಾರೂ ಇಲ್ಲದಿರುವದು ಯಾರ ದುರ್ದೆಶೆ? ಮತದ್ರೋಹ, ಯಾ ದೇಶದ್ರೋಹ? ವಾಚಕರೇ ಹೇಳಿ. ಯಾಕೆ, ಕೆಲವು ತಿಂಗಳುಗಳ ಹಿಂದೆ ಮಡಿಕೇರಿಯಲ್ಲಿ ಹಿಂದೂ ಮಹಾಸಭೆಯ ಶಾಖೆಯೊಂದು ಸ್ಥಾಪಿತವಾಯಿತ್ತೆಂದೋ ಯಾ, ಸ್ಥಾಪಿತ ಮಾಡುವುದಕ್ಕೆ ಒಂದು ಕಮಿಟಿ ನೇಮಿಸಲ್ಪಟ್ಟಿತ್ತೆಂದೋ, ಇದೇ ಪತ್ರಿಕೆಯಲ್ಲಿ ಪ್ರಕಟವಾಯಿತ್ತೆಂದು ತೋರುತ್ತದೆ. ಇದು ನಿಜವಾದರೆ ಈ ಶಾಖೆಯು ಅಥವಾ ಕಮಿಟಿಯು ಏನು ಮಾಡುತ್ತಿದೆಯೆಂದು ಬಲ್ಲವರು ತಿಳಿಸಬೇಕಾಗಿ ಕೋರುತ್ತೇನೆ. ಅವರು ಮಳೆಗಾಲ ಪ್ರಾರಂಭಿಸಿತ್ತೆಂದು ನಿದ್ರೆ ಮಾಡಿರುವರೋ? ಬೆಂಬು ಗ್ರಾಮದಲ್ಲಿ ನಮ್ಮ ಸಹೋದರ ಸಹೋದರಿಯರಲ್ಲಿ ಎಂಟು ಜನರು ಅನ್ಯ ಮತಕ್ಕೆ ಒಂದೇ ಸಲ ಸೇರಿಸಲ್ಪಟ್ಟಿದ್ದಾರೆಂಬ ವರ್ತಮಾನವಾದರೂ ಅವರನ್ನು ನಿದ್ರೆಯಿಂದ ಎಬ್ಬಿಸ ಬಾರದೇ! ಇದು ಹೆಸರುವಾಸಿಯ ಕಮಿಟಿಯೋ ಅಥವಾ ಕೆಲಸ ಮಾಡಲು ಹೊರಟ ಕಮಿಟಿಯೋ ಎಂಬದನ್ನು ಇನ್ನಾದರೂ ತಿಳಿಸಬಾರದೇ? ಏಳಿ, ಎದ್ದೇಳಿ. ನಿಮ್ಮ ಎದುರಾಳುಗಳ ಕೆಲಸವು ಬಹಳ ಮುಂದರಿದಿದೆ. ಇನ್ನು ನಿದ್ರೆಯೆಂದರೆ (ನಿಮ್ಮ ಉದ್ದೇಶಕ್ಕೆ) ನಾಶವಲ್ಲದೆ ಬೇರೆಯೊಂದಲ್ಲ!

"ಹಿಂದು"

ಕೈಗಾರಿಕೆ ಶಾಲೆ

ಜಗಿಗೊಂದು ಕೈಗಾರಿಕೆಯು (ಇಂಡಸ್ಟ್ರಿಯಲ್) ಎಂಬುದನ್ನು ಯಾರೂ ವಿರೋಧಿಸಲಾರರು. ದೇಶವು ರ ಸೀಮೆಯಾದರೆ, ಕೃಷಿಗಾರರಿಗೆ ಬೇಕಾಗುವ ಮರದ ವ ತ್ತು ಬೆತ್ತದ ಸಾಮಾನುಗಳನ್ನು ಮಾಡು ವಿಕೆಯು ದೇಶದಲ್ಲಿ ಇಲ್ಲದೆ ಹೋದರೆ ರೈತರಿಗುಂಟಾ ಗುವ ಕಷ್ಟಗಳನ್ನು ವಿವರಿಸಲು ಸಾಧ್ಯವಿಲ್ಲ. ಈ ಕೆಲಸ ಪರಸ್ಥಾಂತ್ಯದವರನ್ನು ಕಾಯಬೇಕಾಗಿದೆ. ಅವ ರಿವ ಚಾರ್ಜು ಕೊಡಬೇಕಾಗುತ್ತದೆ. ಮಿತಿಮೀರಿದ ಕೊಟ್ಟರೂ ಕಾಲಕ್ಕೆ ಸರಿಯಾಗಿ ದೊರೆಯುವುದು ದು ಅಲ್ಲದೆ ನಮ್ಮ ದೇಶದ ಯುವಕರನೇಕರು (ವಿದ್ಯಾ , ಅವಿದ್ಯಾವಂತರೂ) ಕೆಲಸವಿಲ್ಲದೆ ಅಲೆದಾಡುತ್ತಿರು ವಿದ್ಯಾವಂತರು ಹಲವರು ಕೆಲಸದ ಗೌರವವನ್ನು ಸರಕಾರ ಕೆಲಸ ಒಂದಲ್ಲದೆ ಬೇರೆ ಯಾವ ತರಹ ಗವನ್ನೂ ಕೈಕೊಳ್ಳಲು ಹಿಂಜರಿಯುವರು. ಈ ಮೊ ಕಾರಣಗಳಿಂದ ದೇಶದ ಆರ್ಥಿಕ ಸ್ಥಿತಿಯು ದಿನೇ ದಿ ಣವಾಗುತ್ತಾ ಬರುತ್ತಿದೆ.

ದನ್ನೆಲ್ಲಾ ಆಲೋಚಿಸಿಯೇ ಸ್ಥಳೀಯ ಕೌನ್ಸಿಲು ಮೆಂ ರು ಕೊಡಗಿನ ಮಧ್ಯಸ್ಥಳವಾದ ವೀರರಾಜಪೇಟೆಯಲ್ಲಿ ಕೈಗಾರಿಕೆಯ ಶಾಲೆಯನ್ನು ಸ್ಥಾಪಿಸಬೇಕೆಂಬ ಠರಾವ ದ ವರುಷವೇ ಕೌನ್ಸಿಲಿನ ಮುಂದಿಟ್ಟರು. ಓಟರುಗ ಮ್ಮ ಜವಾಬ್ದಾರಿಯನ್ನು ತಿಳಿದ ಕೌನ್ಸಿಲ್ ಮೆಂಬರು ಠರಾವನ್ನು ಮಂಜೂರು ಮಾಡಿದರು. ಈ ವಿಷಯ ಕಾರಿ ಮೆಂಬರುಗಳು ವಿರೋಧಿಸಲಿಲ್ಲವೆಂಬುದು ಸಂ ತವಾದ ಸಂಗತಿ. ಸರಕಾರದವರೂ ಈ ಠರಾವಿಗೆ ಕೊಟ್ಟದ್ದರಿಂದಲೂ, ಚೀಫ್ ಕಮೀಷನರವರು ಇದ ಜೂರು ಮಾಡಿದ್ದರಿಂದಲೂ ಶಾಲೆಯು ಬೇಗನೆ ಪ್ರಾ ರುವದೆಂಬ ಭರವಸೆಯು ಜನರಿಗುಂಟಾಯಿತು. ಆ ವರುಷವು ಏನೊಂದೂ ನಡೆಯದೆ ಕಳೆಯಿತು. ಇ ಬಿಟ್ಟನಲ್ಲಿ ಹಣ ಮಂಜೂರಾಗಲಿಲ್ಲವೆಂಬುದೇ ಮುಖ್ಯ ಕಾರಣವೆಂದು ತಿಳಿಯಬಂದಿತು.

ನ್ಸಿಲ್ ಮೆಂಬರುಗಳು ಈ ವಿಷಯ ಸುಮ್ಮನಾಗಲಿಲ್ಲ. ವರುಷದ ಬಜೆಟ್ಟು ಮೀಟಿಂಗಿನಲ್ಲಿ ಈ ಶಾಲೆಗಾಗಿ ಮಂಜೂರು ಮಾಡಬೇಕೆಂದು ವಾದಿಸಿದರು. ಸುಮಾರು ಸಾವಿರ ರೂಪಾಯಿ ಮಂಜೂರು ಮಾಡಲಾಯಿತೆಂ ಯುತ್ತೇನೆ. ಇಷ್ಟೊಂದು ರೂಪಾಯಿ ಸಾಕಾಗುವು ದು ಪ್ರಶ್ನಿಸಿದಾಗ, ಈ ವರುಷ ಶಾಲೆಯ ಕಟ್ಟಡವ ಸುವುದಿಲ್ಲ, ಆ ಕೆಲಸವು ಬರುವ ವರುಷಕ್ಕೆ ಇಡಲಾ ಈ ವರುಷ ಬಾಡಿಗೆಯ ಕಟ್ಟಡದಲ್ಲಿ ಶಾಲೆಯನ್ನು ನ ವುದೆಂದು ಅಧಿಕಾರಿಗಳು ಜವಾಬು ಕೊಟ್ಟರೆಂದೂ ನ. ಇದು ನಿಜವಾದರೆ, ಶಾಲೆಯು ಏರ್ಪಾಡು ಯಾ ಪ್ರಾರಂಭಿಸಿರುವದಿಲ್ಲ? ಬಜೆಟು ಚೀಫ್ ಕಮೀಷ ಮಂಜೂರಾತಿ ಪಡೆದಿರುವುದಿಲ್ಲವೇ? ಇಲ್ಲವಾದರೆ ತ ರಣವೇನು? 1925—26ನೇ ವರುಷದ ಶಾಲೆಗಳೆಲ್ಲ ರಂಭವಾಗಿವೆ. ಕೈಗಾರಿಕೆಯ ಶಾಲೆಯನ್ನು ಪ್ರಾ ಇನ್ಯಾವಾಗ ಸುರುಮಾಡುವುದು? ಶಾಲೆಗಳ ಇ ರು ಈ ಶಾಲೆಯ ವಿಷಯದಲ್ಲಿ ಬಹಳ ಮುತುವ ವರೆಂದು ತಿಳಿದದ್ದಾಯಿತು. ಆದರೆ ಅವರ ಕುತೂ ನಾಯಿತು? ಅವರು ಕೊಡಗಿನಿಂದ ದೂರವಾಗಿರು ಅವರಿಗೆ ಇದರಲ್ಲಿರುವ ಹಿತವು ಕಡಿಮೆಯಾಗುತ್ತಿದೆ ವರು ಕೊಡಗಿಗೆ ಬಂದಾಗ ಮಾತ್ರ ಇಲ್ಲಿಯ ವಿಷ ಯೋಚನೆಯೋ? ಅವರಲ್ಲದಿದ್ದರೆ ಸ್ಥಳದಲ್ಲಿರುವ ಸಬ್ ಇನ್‌ಸ್ಪೆಕ್ಟರು ಏನು ಮಾಡುತ್ತಿರುವರು? ಇವ ಕರ್ತವ್ಯವನ್ನು ಈ ವಿಷಯದಲ್ಲಿ ಎಚ್ಚರಿಸಬಾರದೇ? ಯ ಅಧಿಕಾರಿಯಾದ ಕಮೀಷನರವರು ಈ ವಿಷ ಬಿಟ್ಟಿರುವರೇ? ಎಲ್ಲರೂ ಈಗ ಸುಮ್ಮನಾದರೆ ಒಂ ಗಳು ಕಳೆದನಂತರ, ಈ ವರುಷ ತಡವಾಯಿತು, ಇ ಪ್ರಾರಂಭ ಬರುವ ವರುಷವೇ ಸರಿ, ಎಂದೆನ್ನುವ ಗೆ ಕಾಲ ತಳ್ಳುತ್ತಾ ಹೋಗುವುದು ನ್ಯಾಯವಲ್ಲ. ನಮ್ಮ ಶಾಲೆಯನ್ನು ಒಡನೆ ಪ್ರಾರಂಭಿಸುವರಾಗಿ

ದೂರದೃಷ್ಟಿ

"ತಿಮ್ಮಣ್ಣನ ವಿಚಾರ"

ಮಹಾಶಯರೇ?

ನು ಹಳ್ಳಿಗಾಡಿನ ತಿಮ್ಮಣ್ಣ ಗೌಡ. ಪ್ರಪಂಚದ ದು ವಾಚಕರ ಮುಂದಿಡುವದೇ ನನ್ನ ಇಚ್ಛೆ. ವನಿಗೆ ನನ್ನ ಹಾಗೆ ಧೈರ್ಯದಿಂದ ನಡೆದ ಸಮಾ ಗಪಡಿಸುವರ ಅನುಕೂಲವಿಲ್ಲ. ನಾನಾದರೋ ಪತ್ರಿಕೆಗೆ ಇದ್ದ ತಿಪ್ಪಯ್ಯನ ಹಾಗೆಯೇ ಯಾ ಕೆಲದ ನಿರ್ಭಯವಾಗಿ ಗುಟ್ಟನ್ನು ರಟ್ಟು ಮಾಡು ದಾಸ. ಪ್ರಕೃತ ಅನೇಕರಲ್ಲಿ ಹಲವರು ಇನ್ನೂ ಪತ್ರಿಕೆಯ ಚಂದಾ ಮೊಬಲಗು ಕೊಡದೆ ಸತಾಯಿಸ ದಿನಪರಿಣ ಮಾಡುವುದಲ್ಲದೆ ವಸೂಲಿಗೆ ಹೋದ ಬದ್ಧ ಭಾಷಣ ಮಾಡುವುದರಿಂದ ಆ ಸಂಗತಿ ಕು ರಿತು ಸ್ವಲ್ಪ ವಿಷಯ ವಾಚಕರ ಮುಂದಿಡಬೇಕಾಗಿ ಬಂದವ ನಾಗಿರುತ್ತೇನೆ.

ಪ್ರಿಯರೆ ನಾನೊಂದು ಸಂತೆಗೆ ಹೋದಲ್ಲಿ ಪೇಪರಿನ ಹ ಣ ವಸೂಲು ಮಾಡುವ ಏಜಂಟರಿಗೂ ಪೇಪರಿನ ಹಣ ಕೊಡ ದ ಒಬ್ಬ ಚಂದಾದಾರನಿಗೂ ವಾಗ್ವಾದ ಹೀಗೆ ನಡೆಯಿತು.

ಏಜಂಟರು—ಏನು ಮಹನೀಯರೆ? ಕ್ಷೇಮವೇ?

ಚಂದಾದಾರರು—ಸಾಮಾನ್ಯ ಹೀಗಿದ್ದೇವೆ. ನನಗೆ ಸ್ವ ಲ್ಪ ಅವಸರದ ಕೆಲಸವಿದೆ, ಮತ್ತೆ ಕಾಣುವ

ಏ—ಆಗಲಿ. ತಮ್ಮ ಪತ್ರಿಕೆಯ ಹಣ ಇನ್ನೂ ವಸೂಲು ಬಂದಿರುವದಿಲ್ಲವಲ್ಲಾ, ದಯವಿಟ್ಟು ಕೊಡಬೇಕಾಗಿದೆ.

ಚ—ಓಹೋ! ಸಿಕ್ಕಲಿಲ್ಲವೆ! ಆಗಲಿ, ಕೊಡುವ.

ಏ—ಯಾವಾಗ?

ಚ—ಕೆಲವು ಸಮಯದಲ್ಲಿ

ಏ—ತಾವು ಹೀಗೆ ಹೇಳುವದು ಸರಿಯಲ್ಲ. ಪತ್ರಿಕೆಯ ವರ್ಷಾವಧಿ ತೀರಲಿಕ್ಕೆ ಇನ್ನು ಸ್ವಲ್ಪ ದಿವಸವೇ ಇರುವದು. ಈ ವರೆಗೂ ಓದುತ್ತಾ ಬಂದು ಅವರ ಚಂದಾ ಇನ್ನೂ ಕೊಡ ದೆ ಈಗಲೂ ಕೆಲವು ಸಮಯದಲ್ಲಿ, ಎಂದು ಹೇಳುವದು ಬಹು ವ್ಯಸನಕರವಾಗಿ ಕಾಣುತ್ತದೆ. ಇಗಾದರೂ ದಯವಿಟ್ಟು ಕೊಡಿ

ಚ—ಏನು? ನೀವೇನು? ಮನೆಯಲ್ಲಿ ಎಂದೂ ಇಲ್ಲ ಸಂತೆಯಲ್ಲಿ, ಜಾತ್ರೆ ದಿಕ್ಕಿನಲ್ಲಿ ಎಂದೂ ಇಲ್ಲದೆ ಕಂಡ ಕಂಡಲ್ಲಿ ಕೇಳುವಿರಿ. ಇದೊಂದು ಬಹಳ ದೊಡ್ಡ ಸಾಲವೆ? ನಾನೇ ನು ಕಳ್ಳನೆ?

ಏ—ಅಯ್ಯೊ, ನಾನೇನು ನಿಮ್ಮನ್ನು ಕಳ್ಳನೆಂದು ಹೇಳು ವದಿಲ್ಲ. ಪರಂತು ಕೆಲಸ ಮಾಡಿದ ಮೇಲೆ ಆಳ ಕೂಲಿಯ ನ್ನು ಯಜಮಾನನೇ ತಿಳಿದು ಕೊಡಬೇಕಾಗಿದೆ. ಇದು ಕೇ ಳಿದರೂ ಕೊಡದ ಮೇಲೆ ಆ ಧನಿಯು ಯಾವ ಹೆಸರಿನ ಪದವಿ ಗೆ ಯೋಗ್ಯನೋ, ಅದು ನನಗೆ ಗೊತ್ತಿಲ್ಲ. ಹಾಗು ಮನೆ ಯಲ್ಲು ಸಂತೆಯಲ್ಲು ದಾರಿ ಮುಂತಾದ ಯಾವ ದಿಕ್ಕಿನಲ್ಲು ಕೇ ಳಿದರೂ ಅಗಲ್ಲಿಲ್ಲವೆಂದರೆ ಇದು ಕೊಡುವ ನ್ಯಾಯವಲ್ಲವೆಂದೇ ನೆನಸಬೇಕು.

ಚ—ನಿಮಗೆ ಇಲ್ಲಿ ವಸೂಲು ಮಾಡುವರೆ ಇದು ನಿಮ್ಮ ಜ್ಯೂರಿಸ್‌ಡಿಕ್ಷನಿಗೆ ಸೇರಿದೆಯೆ?

ಏ—ಪತ್ರಿಕೆಯ ಹಣ ಯಾರಲ್ಲಿ ಬಾಕಿವೆಯೋ ಅವರ ನ್ನು ಎಲ್ಲಿ ಕಂಡರೂ ಕೇಳಬಹುದು

ಚ—ಈ ಅಧಿಕಾರ ಕೊಟ್ಟವರಾರು?

ಏ—ಅಯ್ಯೊ, ನೀವೇನು ಪೇಪರು ಓದುವದಿಲ್ಲವೆ?

ಚ—ನಿಮಗೆ ವಸೂಲು ಮಾಡಿದ್ದಕ್ಕಾಗಿ ಏನಾದರು ಪ್ರತಿಫ ಲ ಉಂಟೇ?

ಏ—ಇಲ್ಲದೆ ಇದ್ದೀತೆ? ಕರ್ಮಕ್ಕೆ ತಕ್ಕ ಫಲ ಬೇಕೇ ಬೇಕು

ಚ—ಓಹೋ, ಇದೇ ನಿಮ್ಮ ದೇಶ ಸೇವೆಯೋ, ಎಲ್ಲಾ ಗೊತ್ತಾಯಿತು. ಕುರಿ ಒಂದ ಹಾಗೆ ಸಂಬಳಗಿಂಬಳ ಎಂದಂ ದುಕೊಂಡು ಖರ್ಚು ಮಾಡುತ್ತಾ ಪೇಪರು ನಡಿಸುತ್ತೀರಿ, ಅ ನಾವಶ್ಯಕವಾದ ಈ ವಸೂಲು ಮಾಡುವದಕ್ಕೂ ಸಂಬಳವೆಂದರೆ ಈ ನಷ್ಟಕ್ಕೆ ಯಾರು ಜವಾಬ್ದಾರರು ?

ಏ—ಮಹಾಶಯ! ನಷ್ಟಕ್ಕೆ ಯಾರು ಜವಾಬ್ದಾರರೆಂ ದು ಕೇಳುವಿರಲ್ಲವೆ? ನಿಮ್ಮಂಥ, ಹಳೇ ಚಂದಾ ಬಾಕಿಮಾಡಿ ಕೊಂಡವರೇ ಕಾರಣ. ಸಕಾಲದಲ್ಲಿ ಸಲ್ಲಿಸಿದ್ದರೆ ಈ ಗಲಾಟೆ ಯಾರಿಗೆ ಬೇಕಿತ್ತು.

ಚ—ಅದೇನು? ನಾನೊಬ್ಬ ಹೋಗಲಿ, ನಿಮ್ಮ ಮಾತಿ ನ ವಿವರ ಕೇಳುವಾಗ ಇನ್ನೂ ಕೆಲವು ಜನರು ಬಾಕಿದಾರರೆಂ ದು ಕಾಣುತ್ತದೆ. ಮತ್ತೂ ಪೇಪರಿಗೆ ಹೆಚ್ಚಿನ ಜನರು ಚಂದಾ ದಾರರಾಗಿಯೂ ಇರುವದಿಲ್ಲ ಕಾರಣವೇನು?

ಏ—ಪ್ರಿಯರೆ! ಹ್ಯಾಟು, ಬೂಟು ಹಾಕಿಕೊಂಡು ಉ ಡುಪಿನಲ್ಲಿ ಶೋಭಿಸತಕ್ಕ ನೀವೇ ಈ ವರೆಗೂ ಕೊಡಲಿಲ್ಲವೆಂದ ರೆ ಬೇರೆಯವರ ಕಾರಣವನ್ನೇನು ಹೇಳಲಿ, ಹೇಗೂ ವರುಷ ವಾಗುತ್ತಾ ಬಂದರೂ ಕೊಡಗಿನಲ್ಲಿ ನಡೆಯುವ ಒಂದು ಪೇಪ ರಿನ ಹಣ ಕೊಡದೆ ಪೇಪರನ್ನು ನಾಚಿಕೆ ಇಲ್ಲದೆ ಓದಿಕೊಂಡು ಬರುವ ಮಹನೀಯರ ಕಾರಣವನ್ನೇನು ಹೇಳಲಿ, ಕೇಳದೆ ಬಾ ಕಿಯಾಗಿದ್ದರೂ ಇನ್ನಾದರು ಒಡನೆ ಪಾವತಿಮಾಡಿದ್ದರೆ ಬಹಳ ಮೇಲು ಇತ್ತು.

ಚ—ಹೀಗೆ ನೀವು ಕಠಿಣವಾಗಿ ಹೇಳುತ್ತಾ ಬರುವ ದರಿಂದಲೂ, ಕೊಡಗಿನಲ್ಲಿ ನಿಮ್ಮಂಥ ತುಂಟ ಯುವಕರು ಕೆಲ ವರು ಪತ್ರಿಕೆಯನ್ನು ಸ್ವಾಧೀನಪಡಿಸಿಕೊಂಡು ಮನಸ್ಸು ಇ ಚ್ಛೆ ಪ್ರಕಾರ ನಡಿಸುತ್ತಾ ದೊಡ್ಡ ದೊಡ್ಡ ವರನೇಕ ಮನಸ್ಥಾನ ದವರನ್ನು ಹೀಯಾಳಿಸಿಕೊಂಡು ಬಂದದ್ದರಿಂದಲೇ ಪತ್ರಿಕೆಗೆ ಈ ಪಾಡಾಯಿತು. ಜನರು ಇನ್ನೂ ಪೂರ್ತಿ ಮೆಂಬರಾ ಗಿಲ್ಲವೆಂದರೆ ಪತ್ರಿಕೆ ಬೊರಲು ಮಾರು. ಪರ ಸಮಾದರೂ, ಜ ನರ ಮನಸನ್ನು ತೃಪ್ತಿಪಡಿಸದ ಎಡಿಟರವರು ಎಂಥವರು ಹೀ ಗೆ ನೀವು ಅಬ್ಬರ ಮಾಡಿದರೆ ನಾವು ಕೂಡಲೆ ಈಗ ಹೊರಡು ವ "ಲೋಕಪಾವನದ" ಕಡೆಗೆ ಸೇರದಿರಲಾರೆವು, ಜಾಗ್ರತೆ ಇ ರಲಿ.

ಏ—ಮಹಾಶಯರೆ! ಕ್ಷಮಿಸಿ ನೀವು ಎಡಿಟರನ್ನಾಗ ಲಿ ಇತರರನ್ನಾಗಲಿ ದೂರುವದರಿಂದ ಯಾವ ಪ್ರಯೋಜನವೂ ಇಲ್ಲ. ನೀವು ಕೊಡಗಿನಲ್ಲಿ ಹೊರಡುವ ಯಾವ ಪತ್ರಿಕೆಗೆ ಸೇರಿದರೂ ನಮಗೆ ಒಳ್ಳೆಯದೇ. ಆದರೆ ಓದಿಕೊಂಡು ಆ ದರ ಹಳೇ ಚಂದಾ ಬಾಕಿಮಾಡಬಾರದಾಗಿ ನಿಮ್ಮನ್ನು ಅಡ್ಡ ಬಿದ್ದು ಬೇಡಿಕೊಳ್ಳುವೆನು.

ಪ್ರಿಯರೆ!! ಇಂಥಾ ವಾಗ್ವಾದವನ್ನು ದಯವಿಟ್ಟು ಯಾ ರೂ ಮಾಡಬಾರದು. ನಾನೇನೋ ಪೆದ್ದನೇ ಹಳ್ಳಿಯವ ನು, ದಯವಿಟ್ಟು ಕೂಡಲೆ ಬಾಕಿದಾರರು ತಮ್ಮ ತಮ್ಮ ಚಂ ದಾ ಮೊಬಲಗನ್ನು ಒಡನೆ ಪಾವತಿಮಾಡಿ ನನ್ನನ್ನು ಕೃತಾರ್ಥ ನನ್ನಾಗಿ ಮಾಡಿ, ಸಮಯವಿದ್ದರೆ ಇನ್ನೊಮ್ಮೆ ಬರುವೆನು. ಪ್ರೀತಿ ಇರಲಿ.

ತಿಮ್ಮಣ್ಣ

ಪೊನ್ನಂಪೇಟೆ ನಾಡು ರಿಜಿಸ್ಟ್ರೇಶನ್ ಆಫೀಸು.

ಅಯ್ಯಾ,

ಈಗ ಈ ಆಫೀಸಿನ ಅವಸ್ಥೆಯನ್ನು ವರ್ಣಿಸಲು ಬಹು ವ್ಯಸನವಾಗುತ್ತೆ. ಸರಕಾರಕ್ಕೆ ಈ ಆಫೀಸಿನಿಂದ ಎಂಥಾ ಆದಾಯವಿರುತ್ತದೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿ ದೆ. ಆದರಲ್ಲೂ ಈಗ ವರ್ಷ ವರ್ಷ ಆದಾಯವೂ ಹೆಚ್ಚು ತ್ತಿರುತ್ತದೆ. ಕಳೆದ ವರ್ಷಕ್ಕಿಂತ ಈ ವರ್ಷವು ಹೆಚ್ಚಿನ ರಿಜಿ ಸ್ಟ್ರೇಶನ್ ಆಗಿರುತ್ತದೆಂಬುವದಕ್ಕೆ ಏನೂ ಸಂದೇಹವಿಲ್ಲ. ಸ್ಟಾಂಪು ಕಾಗದಗಳ ದರವು ಹೆಚ್ಚಿರುವದರಿಂದಲೂ, ವ್ಯವ ಹಾರಗಳು ಹೆಚ್ಚಿರುವದರಿಂದಲೂ ಆದಾಯಕ್ಕೇನೂ ಕಡಮೆ ಯಿಲ್ಲ. ಹಾಗೆಯೇ ಆಫೀಸಿನಲ್ಲು ಟ್ರೆಜರಿ ಕೆಲಸ ನೋಡು ತ್ತಿರುವ ಆಫೀಸರು ಮಾತ್ರ ಸಹಾಯಕರಾಗಿ ರಿಜಿಸ್ಟ್ರೇಶನ್ ಕೆಲಸವು ನಡೆಯುತ್ತಿರುತ್ತದೆ. ಮೇಜಿಸ್ಟ್ರೇಟರವರೇ ರಿಜಿ ಸ್ಟ್ರೇಶನ್ ಆಫೀಸರು. ಅವರು ವಾರಕ್ಕೊಂದಾವರ್ತಿ ಮಾತ್ರ ರಿಜಿಸ್ಟ್ರೇಶನ್ ಕೆಲಸ ನಡೆಸುವರಾಗಿದೆ. ಅದೇ ದಿವ ಸವೇ ಕೋರ್ಟು ಮಾಡುವರು. ಮೊಕದ್ದಮೆಗಳನ್ನು ತೆಗೆದು ವಿಚಾರಿಸಿ ಅನಂತರ ಆರು ಯಾ ಏಳು ಗಂಟೆ ರಾತ್ರಿಯ ಸಮ ಯದಲ್ಲು ಸಮಯವಿದ್ದರೆ ಮಾತ್ರ ರಿಜಿಸ್ಟ್ರೇಶನ್ ಕೆಲಸಕ್ಕೆ ಗಮನಕೊಡುತ್ತಾರೆ.

ಈಗ ಒಂದು ತಿಂಗಳಲ್ಲಿ ನಾನು ಕೆಲವು ಕೋಆಪರೇಟಿ ವ್ ಬಿರಾರುಗಳನ್ನು ರಿಜಿಸ್ಟರು ಮಾಡಿಸುವ ಉದ್ದೇಶ್ಯ ಹೋಗಿ ಆ ದಿವಸ ರಾತ್ರೆ 8 30 ಗಂಟೆಗೆ ಕೆಲಸ ತೀರಿಸಿಕೊಂಡು ರಶೀ ತಿ ಪಡೆಯದೆ ಮನೆಗೆ 11 ಗಂಟೆಗೆ ವಾಪಾಸು ಬಂದೆನು. ಆ ದಿವಸ ಸುಮ್ಮನೆ ಕಮ್ಮಿ ಎಂದರೆ ನಲುವತ್ತು ಯಾ ಐವತ್ತು ಬಿ ರಾರುಗಳ ರಿಜಿಸ್ಟರು ಮಾಡಲ್ಪಟ್ಟಿರಬಹುದು. ಹಾಗೆಯೇ ಇ ನ್ನೂ ಎರಡು ಮೂರಾವರ್ತಿ ಹೋಗಿದ್ದಲ್ಲು ನನಹಜನರು ರಾತ್ರೆ ಸಮಯದಲ್ಲೇ ರಿಜಿಸ್ಟರ್ ಆಗಿಯೂ ಆಗದೆಯೂ ವಾಪಾಸು ಬಂದರು. ಇದೇ ಮೇರೆ ಕೋಆಪರೇಟಿವ್ ಬಿರಾರುಗಳೂ ಅಲ್ಲದೆ ಬೇರೆ ರಿಜಿಸ್ಟ್ರೇಶನ್ ಕೆಲಸಗಳೂ ಸಹ ವಾಪಾಸು ಆಗು ವದೇ ಆಯಿತು.

ಟ್ರೆಜರಿ ಆಫೀಸರ ಕೆಲಸದ ಜೊತೆಗೆ ಅವರಿಗೆ ರಿಜಿಸ್ಟ್ರೇ ಶನ್ ಕೆಲಸವೂ, ಮೇಜಿಸ್ಟ್ರೇಟರಿಗೆ ಮೊಕದ್ದಮೆ ಕೆಲಸದ ಜೊತೆಗೆ ರಿಜಿಸ್ಟ್ರೇಶನ್ ಕೆಲಸವೂ ಆಗುವದರಿಂದ ರೈತರಿಗೆ ಪೂರಾ ತೊಂದರೆಗೆ ಕಾರಣವಾಗುತ್ತದೆ

ಕೆಲವು ಸಮಯದಲ್ಲು ಮೇಜಿಸ್ಟ್ರೇಟರ ಕೆಲಸ ತೀರುವು ದಕ್ಕೇನೇ ರಾತ್ರೆ ಸಮಯವಾಗುತ್ತೆ. ತದನಂತರ ರಿಜಿಸ್ಟ್ರೇ ಶನ್ ಕೆಲಸ ತೀರಿಸಿ ರೈತರು ಮನೆಸೇರಲು ಎಂಥಾ ಕಷ್ಟಪಡ ಬಹುದು.

ಆದ್ದರಿಂದ ಮೇಲಾಧಿಕಾರಿಗಳು ಟ್ರೆಜರಿ ಆಫೀಸರಿಗೆ ಸಹಾಯಕನಾಗಿ ಒಬ್ಬ ರಿಜಿಸ್ಟ್ರೇಶನ್ ಕ್ಲಾರ್ಕನ್ನು ಕೊಡು ವಂತೆಯೂ, ಮೇಜಿಸ್ಟ್ರೇಟರು ಮೊಕದ್ದಮೆ ದಿವಸ ಬಿಟ್ಟು ಬೇರೆ ಸಮಯದಲ್ಲು ವಾರಕ್ಕೆ ಎರಡು ದಿವಸಗಳಲ್ಲಾದರೂ ರಿಜಿಸ್ಟ್ರೇಶನ್ ಕೆಲಸ ತೆಗೆದುಕೊಂಡು ನದ್ರಿ ಕ್ಲಾರ್ಕರ ಸಹಾಯದಿಂದ ಕೆಲಸವನ್ನು ಸರಾಗವಾಗಿ ನಡೆಸುವಂತೆ ಮಾಡು ವದು ಬಹು ಉತ್ತಮವಾಗಿದೆ

ಇದೇ ಮೇರೆ ರಿಜಿಸ್ಟ್ರೇಶನ್ ಕ್ಲಾರ್ಕ್ ಎಂಬುದಾಗಿ ಆಲಾಯಿದ ಸಹಾಯಕನಾಗಿ ಒಬ್ಬೊಬ್ಬ ಆಫೀಸರನ್ನು ಸೋ ಮವಾರಪೇಟೆಯಲ್ಲೂ ಮಡಿಕೇರಿಯಲ್ಲೂ ಕೊಟ್ಟಿರುತ್ತಾರೆ. ಹಾಗೆಯೇ ಇಲ್ಲಿಯೂ ಮಾಡಿ ರೈತರಿಗಿರುವ ತೊಂದರೆಗಳನ್ನು ನಿವಾರಿಸುವರಾಗಿ ನಾನು ನಂಬುತ್ತೇನೆ.

ಕೋಆಪರೇಟಿವ್ ಸಮ್ಮಂಧ ಬಿರಾರುಗಳನ್ನು ಆಯಾ ಯ ಸಮಯದಲ್ಲು ರಿಜಿಸ್ಟರು ಮಾಡದೆ ಹೋದಲ್ಲು ಸೆಂಟ್ರ ಲ್ ಬ್ಯಾಂಕಿನಿಂದಲೂ ಖಾಸಗಿಯವರಿಂದಲೂ ಪಡೆಯುವ ಹಣಕ್ಕೆ ಮೆಂಬರುಗಳಿಗೆ ಸಮಯಕ್ಕೆ ಸರಿಯಾಗಿ ಹಣ ಸಿಕ್ಕ ದೆ ತಮ್ಮ ಕೆಲಸಗಳಿಗೆ ತುಂಬಾ ಅಡಚಣೆಯಾಗುವದೆಂಬುವನ್ನು ನಾನು ಹೆಚ್ಚು ವಿವರಿಸಬೇಕಾಗಿಲ್ಲ.

ರಿಜಿಸ್ಟ್ರೇಶನ್ ವಿಷಯಕ್ಕಾಗಿಯೇ ಆಲಾಯಿದ ಒಬ್ಬ ತರಬೇತಾದ ಆಫೀಸರನ್ನೇ ನೇಮಿಸಬೇಕಾಗಿದೆ. ಯಾಕೆಂ ದರೆ ಬಿರಾರುಗಳನ್ನು ಬರೆಯುವವರಲ್ಲಿ ಕಾನೂನುಗಳು ಬಿಟ್ಟು ಹೋಗಿ ಎಷ್ಟೋ ತರದ ನ್ಯೂನತೆಗಳು ಸಂಭವಿಸುವದುಂಟು. ಅಂಥಾ ಬಿರಾರುಗಳನ್ನು ಚೆನ್ನಾಗಿ ನೋಡಿ ತಿದ್ದು ಪಡಿಮಾಡ ದೆ ರಿಜಿಸ್ಟರು ಎಡಿಸಿದ ಪಕ್ಷ ವೃಥಾ ವ್ಯಾಜ್ಯಕ್ಕೆ ಕಾರಣಗಳುಂ ಟಾಗುವ ಸಂಭವವೂ ಆಗುವದುಂಟು. ಆದ್ದರಿಂದಲೆ ತರ ಬೇತಾದ ಒಬ್ಬ ರಿಜಿಸ್ಟ್ರೇಶನ್ ಕ್ಲಾರ್ಕರಾಗಲೀ ಯಾ ಅದ ಕ್ಕಾಗಿಯೇ ಒಬ್ಬ ಆಫೀಸರನ್ನಾಗಲಿ ನೇಮಿಸಿ ರೈತರಿಗಿರುವ ತೊಂದರೆಗಳನ್ನು ಹೋಗಲಾಡಿಸಲು ಸರಕಾರದವರು ಒಡನೆ ಪ್ರಯತ್ನಿಸಬೇಕಾಗಿದೆ.

ಒಬ್ಬ ಅನುಭವಿ.

For Sale. Cars. For Sale.

(a) Two Ford Cars, one fitted with high-tensioned Magneto.

(b) One Overland, Model 75B.

(c) One Overland, Model 4, with sedan body. It is a pleasure to travel in this car.

All the above cars are in good order.

For prices and other particulars—

Apply to the Manager,

Victoria Motor Garage,

Mercara.

4—2.

LOOK HERE PLEASE LOOK HERE.

CONVERSATION BETWEEN A. & B.

A.—Good morning B. How are you?

B.—Hallo! Good-morning, my friend When did you come?

A.—I came this morning Can you tell me where I can get a good motor car for hire? I have to go to Mysore & come back.

B.—The Victoria Motor Garage, Mercara keep good cars for hire & their charges are moderate. I always hire cars from them and it is quite a pleasure to travel in their cars They have Overland and Ford cars. Mrs. B. likes their car with sedan body immensely.

A.—Thank you. I shall go to them. Good morning.

B.—GOOD MORNING

4—2.

ನೋಟೀಸು.

ಕೊಡಗು ಜಮೀನ್ದಾರರಸಂಘದ ಲೆಕ್ಕವನ್ನು ಆಡಿಟ್ ಮಾಡಿಸಬೇಕಾಗಿರುವುದರಿಂದ ಕಳೆದ ವರ್ಷ ಮೆ. ಬಿದ್ದಂಡ ಕಾರ್ಯಪ್ಪನವರು ಏರ್ಪಾಡುಮಾಡಿದ ನಾಡು ಕಮಿಟಿಗಳಿಗೆ ಹಣ ವಸೂಲಾತಿಗೆ ಕೊಟ್ಟಂತ ರಶೀತಿ ಬುಕ್ಕುಗಳು ಕಳೆದ ವರ್ಷದ ವಾರ್ಷಿಕ ಕಾನ್‌ಫರೆನ್ಸ್ ಕಳೆದ ಕೂಡಲೇ ಪುನಹ ಹಣ ವಸೂಲಾತಿಗೆ ಆಯಾಯ ಕಮಿಟಿಗಳಿಗೆ ಕೊಟ್ಟಿರುವುದರಿಂದ ಎಲ್ಲಾ ಕಮಿಟಿಯವರೂ ತಮ್ಮ ಹತ್ತಿರವಿರುವ ರಶೀತಿ ಬುಕ್ಕುಗಳನ್ನು ಮತ್ತು ಈ ವರ್ಷ ಬಿದಿಯಂಡ ಮೆ. ಪೂಚ್ಚೆಯ್ಯನವರು, ಮೆ. ಚಂಗಂಡ ಕುಟ್ಟಪ್ಪನವರು, ಮೆ. ಕೋಟೆರ ಚಿಣ್ಣಪ್ಪನವರು ಮತ್ತು ಇನ್ನೂ ಕೆಲವು ಏಜಂಟರು ಹಣ ವಸೂಲಾತಿಗೆ ಕೊಟ್ಟ ರಶೀತಿ ಬುಕ್ಕುಗಳನ್ನೂ ಸಹ ವಸೂಲಾದ ಹಣವಿದ್ದಪಕ್ಷ ಹಣ ಸಮೇತ ವಡನೆ ಜಮೀನ್ದಾರರಸಂಘದ ಮಡಿಕೇರಿಯಲ್ಲಿರುವ ಆಫೀಸಿಗೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇನೆ.

ಸಿ ಎನ್. ವೆಂಕಪ್ಪಯ್ಯ,
ಜನರಲ್ ಸೆಕ್ರಟರಿ

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.

Telegraphic Address:-"SHOOTER" Bombay.

[52 41] Please write for latest Catalogues.

ಎಷ್ಟು ಲಕ್ಷಣವಾಗಿದೆ! ನೋಡಿರಿ!



ನಮ್ಮ ಟಿಕ್ ಟಾಕ್ (ರಿಜಿಸ್ಟರ್ಡು)

ಎಂಬ ಗೋಡೆಗೆ ತಗಲಿಸುವ ಗಡಿಯಾರವು ಸರಿಹೋಲದಂತ ಪ್ರಖ್ಯಾತಿಗೊಂಡಿದೆ. ಸರಿಯಾದ ಗಂಟೆಯನ್ನು ತೋರಿಸುವ ಉತ್ತಮವಾದ ಗಡಿಯಾರು. ಎಲ್ಲರೂ ಮೆಚ್ಚಿರುವಂಥಾದ್ದು. ಯಾವಾಗಲೂ **ಟಿಕ್ ಟಾಕ್** ಗಡಿಯಾರವನ್ನೇ ತರಿಸಿರಿ. ಕ್ರಯ ರೂ. 3—0—0 ಮಾತ್ರ.

ಜರ್ಮನ್ ಎಲಾರ್ಮ್ ಗಡಿಯಾರು.



ಕ್ರಯವು ಬಹಳ ಕಡಿಮೆ ಮಾಡಲ್ಪಟ್ಟಿದೆ. ಹೆಚ್ಚು ಪ್ರಯೋಜನದ, ಕಡಿಮೆ ಕ್ರಯದ ಟಯಮ್ ಪೀಸ್. 4 ಇಂಚು ಡಯಲಿನ ನಿಕ್ಕಲ್ ಗಡಿಯಾರು. 30 ಗಂಟೆ ವರೆಗೆ ಕೀಗೊಡಬೇಕಾಗಿಲ್ಲ. ಹ್ಯಾಗೆ ಇಟ್ಟರೂ ನಡೆಯುತ್ತದೆ. ಪ್ರಯಾಣಕ್ಕೆ ಒಳ್ಳೇ ಗಡಿಯಾರು. ಇದು ವಿದ್ಯಾರ್ಥಿಗಳಿಗೂ, ಸಮಯದ ಬೆಲೆ ಅರಿತವರಿಗೂ ಬಹಳ ಉಪಯೋಗವುಳ್ಳದ್ದು. ರಾತ್ರಿ ಕೆಲಸದವರಿಗೂ ಉತ್ತಮವಾದದ್ದು. ಎಲಾರ್ಮ್ ಹೊಡೆಯಬೇಕೆಂದಿರುವಾಗ ಡಯಲಿನ ಮೇಲಿರುವ ಸಣ್ಣ ಕೈಯನ್ನು ಹಿಂದುಗಡೆಯಿಂದ ತಿರುಗಿಸಿದರೆ ಕಾಲಕ್ಕೆ ಸರಿಯಾಗಿ ಎಲಾರ್ಮ್ ಕೊಡುತ್ತದೆ. ಮೂರು ವರ್ಷದ ಭರವಸೆ ಇದೆ. ಕ್ರಯ: ರೂ 5 ಮಾತ್ರ.

೨½ ಕ್ಯಾರೆಟ್ಟಿನ ಚಿನ್ನದ ಹೊದಿಕೆಯ ಕೈ ಗಡಿಯಾರ.

ಉತ್ತಮವಾದ ಸ್ವಿಸ್ ಸಾಮಾನುಗಳಿಂದ ಮಾಡಿದ ಹೊಸ ನಮೂನೆಯ ಗಡಿಯಾರವಿದು. ಕ್ರಿಸ್ಟಲ್ ಕನ್ನಡಿಯು ಅರೇಬಿಕ್ ಯಾ ರೋಮನ್ ಅಂಕೆಗಳುಳ್ಳದ್ದು.

ಇದರ ಕೆಲಸವು ಎಂಥಾ ಪರಿಶೋಧನೆಯನ್ನು ತೃಪ್ತಿಪಡಿಸುವುದು. ಇದು ಪಾನಿನ ಚಿನ್ನದಂತೆ ಕಾಣುತ್ತದೆ ನೋಟಕ್ಕೆ ಬಹಳ ಅಂದವಾಗಿಯೂ ಸರಿಯಾದ ಗಂಟೆ ಕೊಡುವುದಾಗಿಯೂ ಇದೆ. ಐದು ವರ್ಷದ ಖಾತ್ರಿ. ಕ್ರಯ ರೂ. 12—8—0.

18ಕೇರೆಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚು. ರೂ. 7.

ಎಲಾರ್ಮ್ ಮತ್ತು ರಿಪೀಟರ್ ಇರುವಂಥ ಅಮೇರಿಕದ "ಬಿಗ್ ಬೆನ್" ಗಡಿಯಾರ. ರೂ. 10—8—0.

ಗಂಟೆ ಮತ್ತು ಅರ್ಧಗಂಟೆ ಹೊಡೆಯುವಂಥಾ "ಬೇಬಿ" ಗಡಿಯಾರ. ರೂ. 7—0—0.

ಮೇಲಿನ "ಬೇಬಿ" ಗಡಿಯಾರು ಎಲಾರ್ಮ್ ಸಮೇತ. ರೂ. 8—0—0.

ಮೂರುವರ್ಷದ ಖಾತ್ರಿ.

ಜರ್ಮನ್ ಎಲಾರ್ಮ್ ಗಡಿಯಾರು. ರೂ. 5.

ಜರ್ಮನ್ ನೀಗ್ರೊ ಎಲಾರ್ಮ್ ಗಡಿಯಾರು. ರೂ. 5.

ಜರ್ಮನ್ ಡಬ್ಬಲ್ ಬೆಲ್ ಎಲಾರ್ಮ್ ಟಯಮ್‌ಪೀಸು ರೂ 6—0—0.

ಲೋಕಪ್ರಸಿದ್ಧವಾದ "ಬಿ" ಟಯಮ್ ಪೀಸ್. ರೂ. 2—8—0.

ಎಮ್ಮೆನ್ ಫೌಂಟನ್‌ಪೆನ್ 14ಕೇರೆಟ್ ರೋಲ್ಡ್‌ಗೋಲ್ಡ್ ನಿಬ್ಸ್ ರೂ. 2—8—0.

Apply to— **V. S. Watch Coy**
Post Box 105. **MADRAS.**
12—0

ಮಾರಾಟಕ್ಕೆ! ಸ್ಥಿರಆಸ್ತಿ!! ಮಾರಾಟಕ್ಕೆ!!!

ವೀರರಾಜೇಂದ್ರಪೇಟೆಗೆ ಒಂದು ಮೈಲಿ ಒಳಗೆ ಕುಕ್ಲೂರು ಗ್ರಾಮದಲ್ಲು ರಸ್ತೆಭಾಜು ಸುಮಾರು 14 ಎಕರೆ ಸಾಗು ಭೂಮಿಯೂ, ಅದಕ್ಕೆ ಸೇರಿದ ಸುಮಾರು 16 ಎಕರೆ ಬಾಣೆ ಜಾಗವೂ ಮತ್ತು ಒಂದು ಕಾಳಿಕೋಲು ಹಾಕಿ ಮಂಗಳೂರು ಹಂಚು ಹಾಕಿದ ಮಹಡಿಮನೆಯೂ ವಿಕರಿಗೆ ಇದೆ. ಹೆಚ್ಚಿನ ಸಂಗತಿಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

ಜಿ. ಗರುಡಾಚಾರ್,
ಜಹಗೀರದಾರ,
ವೀರರಾಜೇಂದ್ರಪೇಟೆ.

4-4

ಕರ್ನಾಟ

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲ್ಯುಯೆಂ
ಡಾ ಜ್ವರ, ಮೊದಲಾದವುಗಳ ಮೇಲೆ ಅಸ್ಪತಿಮವಾ
ದವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦

ಟಪ್ಪಾಲು ಚಾರ್ಜು ಬೇರೆ

ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸ

೯—೨—೦

ಏಜಂಟರು ಬೇಕು, ಕೊಡಗಿನ ಸ್ಕೂಲ್ಮಾಸ್ಟರು
ಮುಖ್ಯರಿನ ಮೂರು ಜನ ಔಷಧದ ವ್ಯಾಪಾರಿಗಳ
ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ

12—6 ಕರ್ನಾಟಕ ಪ್ರದ

ಗಿರಗಾಂವ, ಮುಂಬಾ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಕೊ ಅಪರೇಟಿವ್ ಸೊಸೈಟೀಸ್ ಆಕ್ಟ್ಸು ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	9080
ಜಮೊಬಂದ ಠೇವಣಾತಿ	....	78,000

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ
ಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾ
ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ.
ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆ
ಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯ

ವರ್ಷಕ್ಕೊಂದಾವರ್ತಿ ಕೊ ಅಪರೇಟಿವ್ ರಿಜಿಸ್
ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್,
ಕೊಡಂದೇರ ಕುಟ್ಟಯ್ಯನವರು,	ಯಂ. ಭುಜಂಗರಾ
ರಾಯ್ ಬಹದ್ದೂರ್.	ಬಿ.ಎ., ಬಿ

ಸೆಕ್ರಟರಿ.

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.

ತಾರೀಕು 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆ

ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣ
ದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೆಯ
ಎಂದರೆ! ಇದೇ. ಆರೋಗ್ಯವಂತನಾಗಿ ಬದುಕ
ಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ
ಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿ
ಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯ
ದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ
ಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆ
ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದ
ವುದು.

ವಾರ್ಷಿಕ ಚಂದಾ ಮೂರು ರುಪಾ

ವಿಳಾಸ—

ಮೇನೇಜರ್, ಶ್ರೀ ಧನ್ವಂ
ಶೃಂಗೇರಿ, ಮೈಸೂರುಸ್ಟೆ

Printed & published by Ko Appayya, R.B., Chairman, Boa Directors, at "Kodagu" Press, M for "Kodagu" Ltd.

If not delivered please return to
"KODAGU" OFFICE, MERCARA.

ಕೊಡಗು.

ವಾರ್ಷಿಕ ಚಂದಾ ರೂ—೨—೦.

ಸತ್ಯೇನ ಧಾರಿತದಯಾ ವಿದ್ಯಾ ನೀತಿ ಪ್ರಯುಕ್ತಕಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

[ಸಂಪುಟ ೫] ಕೊಡಗು, ಸ೯ ೧೯೨೫ನೇ ಇಸವಿ ಜೂನ್ ತಾರೀಕು ೧೨ ನೆಯ ಶುಕ್ರವಾರ [ಸಂಚಿಕೆ ೨

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು ರಾಮರಾವ್,
ಯಮ್. ಎಲ್ ಸಿ. ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ನಿರ್ಮಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ: 'ಆರೋಗ್ಯ ಚಂದ್ರಿಕೆ' 323,
ತಂಬುಶೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ವಾರ್ತಾದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ 4. ನಮ್ಮಲ್ಲಿಗೆ ಕಳುಹಿಸುವ ವಾರ್ತೆಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾ ಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಶೇಕು ಹಣ ಸಕ್ಕೆ ಮಾಡಲಿಕ್ಕಿರುವವರೂ ದಯವಿಟ್ಟು ವೀರರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ,
13-9-24.

ಮೇನೇಜರ್,
ಕೊಡಗು ಲಿಮಿಟೆಡ್.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI,
Bangalore City

The Clifton Cycle complete with bell tool bag, tools and pump least Rs. 135.

Mammoties and Digging forks sold at reduced prices to clear stock

Spencer & Co Ltd,
MERCARA & POLLIBETTA.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಹಾವು ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಮೂರಾ ಅಪ್ಲಿಕೇಶನ್ (complaint) ಫಾರಂಗಳೂ ಸಹ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ
17-9-24.

ಮೇನೇಜರ್.

ನೋಟೀಸು.

ಕೊಡಗು ಜಮೀನ್ದಾರರಸಂಘದ ಲೆಕ್ಕವನ್ನು ಆಡಿಟ್ ಮಾಡಿಸಬೇಕಾಗಿರುವುದರಿಂದ ಕಳೆದ ವರ್ಷ ಮೆ. ಬಿದ್ದಂಡ ಕಾರ್ಯಪ್ಪನವರು ಏರ್ಪಾಡುಮಾಡಿದ ನಾಡು ಕಮಿಟಿಗಳಿಗೆ ಹಣ ವಸೂಲಾತಿಗೆ ಕೊಟ್ಟಂತ ರಶೀತಿ ಬುಕ್ಕುಗಳು ಕಳೆದ ವರ್ಷದ ವಾರ್ಷಿಕ ಕಾನ್‌ಪರೆನ್ಸ್ ಕಳೆದ ಕೂಡಲೇ ಪುನಹ ಹಣ ವಸೂಲಾತಿಗೆ ಆಯಾಯ ಕಮಿಟಿಗಳಿಗೆ ಕೊಟ್ಟಿರುವುದರಿಂದ ಎಲ್ಲಾ ಕಮಿಟಿಯವರೂ ತಮ್ಮ ಹತ್ತಿರವಿರುವ ರಶೀತಿ ಬುಕ್ಕುಗಳನ್ನು ಮತ್ತು ಈ ವರ್ಷ ಉದಿಯಂಡ ಮೆ. ಮಾಚೈಯ್ಯನವರು, ಮೆ. ಚಂಗಂಡ ಕುಟ್ಟಪ್ಪನವರು' ಮೆ. ಕೋಟಿರ ಚಿಣ್ಣಪ್ಪನವರು ಮತ್ತು ಇನ್ನೂ ಕೆಲವು ಏಜಂಟರು ಹಣ ವಸೂಲಾತಿಗೆ ಕೊಟ್ಟ ರಶೀತಿ ಬುಕ್ಕುಗಳನ್ನೂ ಸಹ ವಸೂಲಾದ ಹಣ ಸಮೇತ ಒಡನೆ ಜಮೀನ್ದಾರರಸಂಘದ ಮಡಿಕೇರಿಯಲ್ಲಿರುವ ಆಫೀಸಿಗೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇನೆ

ಸಿ. ಎನ್. ವೆಂಕಯ್ಯಯ್ಯ
ಜನರಲ್ ಸೆಕ್ರಟರಿ.

ನೋಟೀಸು.

ದಕ್ಷಿಣ ಕೊಡಗಿನಲ್ಲಿ ಮದುವೆಗಾಗಲಿ, ನೋಟೀಸು ಮತ್ತು ಬೇರೆ ಪ್ರಿಂಟಿಂಗ್ ಕೆಲಸ ಮಾಡಿಸಬೇಕೆಂದಿರುವವರು ದಯವಿಟ್ಟು ಎಲ್ಲಾ ಆರ್ಡರುಗಳನ್ನು ನಮ್ಮ ಏಜಂಟರಾದ ವೀರರಾಜಪೇಟೆ ಬಾದಿಭಂಡಾರದ ಮೇನೇಜರವರಿಗೆ ಕೊಟ್ಟರೆ, ಶೀಘ್ರದಲ್ಲೇ ಸುಲಭ ಚಾರ್ಜಿಗೆ ಗಿಲಿಟು ಹಾಕಿ ಪ್ರಿಂಟುಮಾಡಿಸಿ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಪ್ರೆಸ್, ಮಡಿಕೇರಿ.

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಒಂದು ತಲಪಿರುವುದರಿಂದ, 'ಲೆಟರ್ ಹೆಡ್ಸ್' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ.

ಮೇನೇಜರ್,
'ಕೊಡಗು' ಲಿಮಿಟೆಡ್

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಿನಲ್ಲಿ ತೆರೆಯಲ್ಪಟ್ಟಿದೆ.

ಕೃಷ್ಣ ನಂಬೀಶನ್ ಮತ್ತು ನಾರಾಯಣ ನಂಬೀಶನ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ. ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಗಳಿಗೆ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ.

ನಂಬೀಶನ್ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲೂರು, ವೀರರಾಜಪೇಟೆ ಮತ್ತು
ಗೋಣಿಕೊಪ್ಪಲು.

52-13

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಕೋಟಿರ ಚಿಣ್ಣಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರರಾಜಪೇಟೆ—ಮೆ. ಕೆ. ಚಿಣ್ಣಪ್ಪನವರ ಆಫೀಸಿನಲ್ಲಿ.
ಮೂರ್ನಾಡು—ಕಮರ್ಶಿಯಲ್ ಸ್ಟೋರಿನಲ್ಲಿ ಮೆ. ಮಡೆಯಂಡ ದೇವಯ್ಯನವರು.
ನಾಪೋಕ್ಲು—ಮೆ. ಪೊನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮೆ. ಮುಕ್ಕಾಟಿರಪೂಣಚ್ಚನವರು.
ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಯ್ಯನವರು.
ಮಡಿಕೇರಿ—ಮೆ. ಜಿ. ಮಾದಮ್ಮನವರು.
ಅಮ್ಮತ್ತಿ, ಸಿದ್ದಾಪುರ—ಮೆ. ಐನಂಡ ಮಾದಪ್ಪನವರು
ಮೆ. ಚಂಗಂಡ ಕುಟ್ಟಪ್ಪನವರು.

ಕೋದಂಡ ಉತ್ತಯ್ಯ.
ಆರ್ಗನೈಜಿಂಗ್ ಸೆಕ್ರೆಟರಿ, "ಕೊಡಗು" ಲಿಮಿಟೆಡ್

"ಕೊಡಗು"

೧೯೨೫ನೇ ಇಸವಿ ಜೂನ್ ೫.
೧೨ನೇ ಶುಕ್ರವಾರ.

ಹೋಗುವ ಚೀಫ್ ಕಮಿಷನರವರು.

ಕೊಡಗಿನ ಚೀಫ್ ಕಮಿಷನರೂ ಮೈಸೂರು ಸಂಸ್ಥಾನದ ರೆಸಿಡೆಂಟರೂ ಆದ ಮಿ. ಡಬ್ಲ್ಯು. ಪಿ ಬಾರ್ಟನ್‌ರವರು ತಮ್ಮ ಈ ಉದ್ಯೋಗದ ಪ್ರಾತಿನಿಧಿಕ ಕೆಲಸ ನಡಿಸಿ ಈಗ ನೈಜಾಮರ ಹೈದರಾಬಾದು ಸಂಸ್ಥಾನಕ್ಕೆ ರೆಸಿಡೆಂಟರಾಗಿ ವರ್ಗಾಯಿಸಲ್ಪಟ್ಟಿರುವರು. ಇವರ ನಂತರ ಮಿ. ಪೀಯರ್ಸ್‌ರವರು ಚೀಫ್ ಕಮಿಷನರಾಗಿ ಬರುವರು. ಇವರು ಜುಲೈ ಪ್ರಾರಂಭದಲ್ಲಿ ಮಿ. ಬಾರ್ಟನ್‌ರವರಿಂದ ಚಾರ್ಜು ತೆಗೆದುಕೊಳ್ಳುವರೆಂದು ವರ್ತಮಾನ. ವರ್ಗವಾಗಿ ಹೋಗುವ ನಮ್ಮಂಥ ಕಡೇ ಸಂದರ್ಶನಕ್ಕಾಗಿ ಚೀಫ್ ಕಮಿಷನರವರು ಕಾರೀಕಂ ಬರಲು ಮಡಿಕೇರಿಗೆ ಒಂದು ಮೂರು ದಿನ ವಾಸಾಸು ಬಂದರು. ಈ ವೇಳೆಯಲ್ಲಿ ಕೋಟೆಯಲ್ಲಿ ಅವರಿಗೆ ಒಂದು "ಎಟ್ ಹೋಮ್" ಕೊಡಲಾಯಿತು. ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ.

ಮಿ. ಬಾರ್ಟನ್‌ರವರು ಅವರ ಅಧಿಕಾರದ ಸಮಯದಲ್ಲಿ ನಮ್ಮ ದೇಶಕ್ಕೆ ಮಾಡಿದ ಕೆಲಸಗಳು ಯಾವವೆಂದು ಸ್ವಲ್ಪ ವಿಚಾರಿಸಬೇಕಾಗಿದೆ. ಎಲ್ಲಕ್ಕಿಂತಲೂ ಮುಖ್ಯವಾದ ಸಂಗತಿಯು ಕೊಡಗಿಗೆ ಲೆಜಿಸ್ಲೇಟಿವ್ ಕೌನ್ಸಿಲು ದೊರೆತದಾಗಿದೆ. ಮಿ. ಬಾರ್ಟನ್‌ರವರಿಂದಲೇ ಕೌನ್ಸಿಲು ದೊರೆತದೆಂದು ಕೆಲವರ ಅಭಿಪ್ರಾಯವಾಗಿದೆ. ಆದರೆ ಇದು ಪೂರ್ತಿ ನಿಜವಲ್ಲ. ಕಾಲಾವಸ್ಥೆಯಿಂದಲೂ ದೇಶದ ಜನರು ಜಾಗ್ರತಗೊಂಡು ನಡೆಸಿದ ಚಳವಳಿಯಿಂದಲೂ ಕೌನ್ಸಿಲು ಸರಕಾರವು ದೊರೆತದ್ದಾಗಿದೆ. ಆದರೆ ಜನರ ಅಭಿಲಾಷೆಗೆ ಉತ್ತಾಸ ಕೊಟ್ಟು ದೇಶಕ್ಕೆ ಕೌನ್ಸಿಲು ಕೊಡುವಂತೆ ಇಂಡಿಯಾ ಸರಕಾರಕ್ಕೆ ಚೀಫ್ ಕಮಿಷನರವರು ಶಿಫಾರಸ್ಸು ಬರೆದದ್ದುಂಟು. ಈ ಮಾರ್ಪಾಟಿನ ವಿಷಯದಲ್ಲಿ ಮಿ. ಬಾರ್ಟನ್‌ರವರು ತಮ್ಮ ಕರ್ತವ್ಯವನ್ನು ಅರಿತವರಾಗಿ ಸಹಾನುಭೂತಿಯನ್ನು ತೋರಿಸಿದರಲ್ಲಿ ಸಂದೇಹವಿಲ್ಲ. ಆದರೆ ಅವರಿಂದಲೇ ಕೊಡಗಿಗೆ ರಾಜಕೀಯ ಸುಧಾರಣೆ ದೊರೆಯಿತೆಂದೆಂದರೆ ಜನರ ಚಳವಳಿ ಫಲಿಸಲಿಲ್ಲವೆಂಬರ್ಥವಾಗುವುದು. ದೇಶೀಯರು ಸರಕಾರದಲ್ಲಿ ತಮಗಿರುವ ಆಕ್ಷೇಪಣೆಯನ್ನು ತೋರಿಸದೆ ಹೋಗಿದ್ದ ಪಕ್ಷ ನಮ್ಮ ಆಡಳಿತದಲ್ಲಿ ಏನೊಂದು ಬದಲಾವಣೆಯೂ ಆಗುತ್ತಿರಲಿಲ್ಲವೆಂಬುದರಲ್ಲಿ ಸಂದೇಹವಿಲ್ಲ. ಹೀಗಿಲ್ಲದೇ ಇನ್ನು ಮುಂದಕ್ಕೂ ತೃಪ್ತಿಯುಳ್ಳವರಂತೆ ಮೌನವನ್ನು ತಾಳಿದರೆ ದೇಶದ ಸ್ಥಿತಿಯು ಸಂಕಟ್ಟಲ್ಲೇ ನಿಲ್ಲುವುದು.

ಕೌನ್ಸಿಲು ದೊರೆತ ನಂತರ ಕೌನ್ಸಿಲಿನ ಕೆಲಸದಲ್ಲಿ ಇವರು ತಕ್ಕಷ್ಟು ಹಿತವನ್ನು ತೋರಿಸಿದರು. ಆದರೆ ಕೌನ್ಸಿಲಿನವರು ಸರ್ಕಾರಿ ಮೆಂಬರುಗಳ ಭರವಸೆಯ ಮೇರೆ ಅನೇಕ ಠರಾವುಗಳನ್ನು ವಾಪಸು ತೆಗೆದುಕೊಂಡು ಪಾಸು ಮಾಡಿದ ಕೆಲವನ್ನಾದರೂ ಇವರು ಮಂಜೂರು ಮಾಡದೆ ಹೋದದ್ದು ದೇಶೀಯರಿಗೆ ತೃಪ್ತಿಯನ್ನುಂಟುಮಾಡಿರುವುದಿಲ್ಲ. ಹೂಳಗಳಲ್ಲಿ ಮೀನು ಹಿಡಿಯಲಿಕ್ಕಿರುವ ಅಡಚಣೆಯನ್ನು ತೆಗೆಯಬೇಕೆಂಬುದೂ ರಿಸರ್ವ್ ಫಾರೆಸ್ಟಿನಲ್ಲಿ ಚಾರ್ಜಿಲ್ಲದ ದನಗಳನ್ನು ಮೇಯಲಿಕ್ಕೆ ಬಿಡಬೇಕೆಂಬುದೂ, ಮೊಸಳೆಯಾಗಿ ಬೇಟೆಯಾಡಲು ಬಿಡಬೇಕೆಂಬುದೂ ಸರಕಾರದವರಿಗೆ ಏನೊಂದೂ ನಷ್ಟ ಉಂಟುಮಾಡುವುದಲ್ಲವಾದರೂ ಜನರಿಗೆ ಅತ್ಯಾವಶ್ಯಕವಾಗಿರುವ ಇಂಥಾ ವಿಷಯಗಳನ್ನು ಮಂಜೂರು ಮಾಡದೆ ಹೋದದ್ದು ನ್ಯಾಯವಲ್ಲ. ಮಾಪ್ಪಕೋಟೆ ಟ್ರಾವೆಲ್ಸ್‌ಯ ವಿಷಯದಲ್ಲಿ ದೇಶದಲ್ಲಿದ್ದ ಅಸಮಾಧಾನವನ್ನು ಅರಿತುಕೊಂಡು ಸರಕಾರದ ಕೀರ್ತಿಯನ್ನು ಸದೆ ಕೌನ್ಸಿಲಿನ ತೀರ್ಮಾನದಂತೆ ಅದನ್ನು ನಿಲ್ಲಿಸಿದ್ದು ಇವರು ಜನರ ಅಭಿಪ್ರಾಯಕ್ಕೆ ಸ್ವಲ್ಪ ಮಟ್ಟಿಗಾದರೂ ಗಮನ ಕೊಡುತ್ತಾರೆಂಬುದನ್ನು ವಿಶದಪಡಿಸಿತು.

ಇವರ ಕಾಲದಲ್ಲಿ ಎಲ್ಲರಿಗೂ ತೋರುವಂಥ ಇನ್ನೊಂದು ಸಂಗತಿ ನಿಸ್ಸಂದಿಗ್ಧ ಬೆಳೆಯಾಗಿದೆ. ಇಂಪೀರಿಯಲ್ ಕಮಿಟಿಯ ಸಿಫಾರಸ್ಸಿನ ಮೇರೆ ಮಿ. ಕ್ಯಾಂಡೆಲ್‌ರವರು ಇಲ್ಲಿಗೆ ಬರುವ ಮುಂಚೆಯೇ ಚೀಫ್ ಕಮಿಷನರವರ ಗಮನವು ನಿಬ್ಬಂದಿ ಮೇಲೆ ಕಡ ಎಳೆಯಲ್ಪಟ್ಟಿತ್ತು. ಪ್ರಜೆಗಳ ಏಕ ಅಭಿಪ್ರಾಯಕ್ಕೆ ವಿರೋಧವಾಗಿ ತಂಬೂಕುಗಳು ತೆಗೆಯಲ್ಪಟ್ಟವು. ಮಿ. ಕ್ಯಾಂಡೆಲ್‌ರವರ ಶಿಫಾರಸ್ಸುಗಳು ಜಾರಿಗೆ ತರಲ್ಪಟ್ಟವು. ದೇಶದ ಸರಕಾರವು ಪ್ರತ್ಯೇಕಿಸಲ್ಪಟ್ಟಿರುವುದರಿಂದ ಇಲ್ಲಿಯ ಉತ್ಪನ್ನಗಳಿಂದಲೇ ಖರ್ಚನ್ನು ನಿಭಾಯಿಸಿಕೊಳ್ಳಬೇಕಾದ ಕಾರಣ ನಿಬ್ಬಂದಿ ಮೇಲೆ ಕಡಿಮೆ ಮಾಡಬೇಕೆಂದು ಅವರು ಸೂಚಿಸಿರುವರು. ಇದೇನೋ ನಿಜವೆ. ಆದರೆ ನಿಬ್ಬಂದಿಯೋಳಿಯ ದೊಡ್ಡ ಉದ್ಯೋಗಸ್ಥರ ಸಂಬಳ ಕಡಿಮೆ ಮಾಡುವುದಿಲ್ಲಾಗಬೇಕಿತ್ತಲ್ಲದೆ ಬಡ ನೌಕರರ ಹೊಟ್ಟೆಗೆ ಹೊಡೆಯುವುದಿಲ್ಲಾಗಬಾರದಿತ್ತೆಂಬುದೇ ನಮ್ಮ ಅಭಿಪ್ರಾಯ.

ಕಳೆದ ಎರಡು ವರುಷಗಳಲ್ಲಿ ಮಳೆಯ ಅನಾಹುತದಿಂದ ಒದಗಿದ ಕಷ್ಟ ಪರಿಹಾರ ಬಗ್ಗೆ ಸಾಕಷ್ಟು ಟಕಾವಿ ಸಾಲವನ್ನು ದೊರಕಿಸಿ ಸಹಾಯ ಮಾಡಿದರು. ಟೆರಿಟೋರಿಯಲ್ ಪಟಾಲಮನ್ನು ಏರ್ಪಡಿಸಿದರು. ಈ ತರದ ಮಿಲಿಟರಿಯ ತರಬೇತು ದೇಶಕ್ಕೆ ಪ್ರಯೋಜನಕರವೋ ಎಂಬುದರಲ್ಲಿ ಅಭಿಪ್ರಾಯಗಳು ಭಿನ್ನವಾಗಿವೆ.

ದೊಡ್ಡ ಅಧಿಕಾರಗಳಿಗೆ ಅಂದರೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್, ಪೊಲೀಸ್ ಅಸಿಸ್ಟೆಂಟ್ ಸುಪರಿಂಟೆಂಡೆಂಟ್ ಮೊದಲಾದ ಉದ್ಯೋಗಗಳಿಗೆ ದೇಶೀಯರನ್ನು ನೇಮಿಸಿದ್ದು ಇವರ ಕಾಲದಲ್ಲಾಗಿದೆ. ಇದಕ್ಕೂ ಜಮೀನ್ದಾರರ ಸಂಘದ ಮೂಲಕ ದೇಶದ ಜನರ ಚಳವಳಿಯೇ ಮುಖ್ಯ ಕಾರಣವೆಂದು ಹೇಳಿದರೆ ಸುಳ್ಳಾಗದು. ಚೀಫ್ ಕಮಿಷನರವರ ಉತ್ಸಾಹವೂ ಇತ್ತು. ಆದರೆ ಅವರಿಂದಲೇ ಆಯಿತೆಂದು ಹೇಳಲಾಗುವುದಿಲ್ಲ.

ಇವರ ಕಾಲದಲ್ಲಿ ನಡೆದ ಇನ್ನೂ ಕೆಲವು ಕೆಲಸಗಳನ್ನು ಜನರು ಮರೆಯಲು ಪ್ರಯಾಸವಾಗುವುದು. ಡಿಸ್ಟ್ರಿಕ್ಟ್ ಬೋರ್ಡು ಸೆಸ್ ಹೆಚ್ಚಿಸುವಿಕೆ, ಸ್ಟಾಂಪು ಫೀಸು ಹೆಚ್ಚಿಸುವಿಕೆ, ಕೋರ್ಟು ಫೀಸು ಹೆಚ್ಚಿಸುವಿಕೆ, ರಿಜಿಸ್ಟ್ರೇಶನ್ ಫೀಸು ಹೆಚ್ಚಿಸುವಿಕೆ ಮೊದಲಾದವು ದೇಶದ ಎಲ್ಲರಿಗೂ ವ್ಯಾಪಿಸುವುದರಿಂದ ಬೇಗನೆ ಸಾಮಾನ್ಯ ಜನರ ಮನಸ್ಸಿನಿಂದ ಅಳಿಸಿ ಹೋಗಲಾರದು.

ಅವರು ಮೊದಲ ದಿನ ಸೂಚಿಸಿದಂತೆ ಅಂದಿನ ನಾಶವು, ವ್ಯವಸಾಯ ಅಭಿವೃದ್ಧಿಯೂ ಅವರು ಸಾಧಿಸಬೇಕೆಂದಿದ್ದ 2 ಉದ್ದೇಶಗಳಂತೆ ಈ ವಿಷಯಗಳಲ್ಲಿ ಅವರು ಆಗಾಗ್ಗೆ ತಮ್ಮ ಅಭಿಪ್ರಾಯಗಳನ್ನು ಸೂಚಿಸುತ್ತಿದ್ದರು. ಆದರೆ ಅವುಗಳನ್ನು ಜಾರಿಗೆ ತರಲು ಅವರಿಗೆ ಸಾಧ್ಯವಾಗಲಿಲ್ಲವೆಂಬುದು ವೇದ್ಯವಾಗಿದೆ. ಈ ಕಾರ್ಯಗಳು ಮುಂದೆ ಬರುವ ಚೀಫ್ ಕಮಿಷನರವರಿಗೆ ಬಿಟ್ಟಂತಾಗಿದೆ.

ಒಟ್ಟಾರೆ ಮಿ. ಬಾರ್ಟನ್‌ರವರ ಪುರುಷಾರ್ಥ ಗುಣಗಳು ಒಳ್ಳೇವೆಂದು ಎಲ್ಲರೂ ಒಪ್ಪುವರು. ದೇಶದ ಅಭಿವೃದ್ಧಿಯ ಕಡೆಗೆ ಸಹಾನುಭೂತಿಯುಳ್ಳವರಾಗಿದ್ದರು. ಆದರೆ ಏನು ಕಾರಣ ಮಾಡಲಾಗುವುದು! ಇಡೀ ಹಿಂದೂ ದೇಶದ ಆಡಳಿತೆಯನ್ನು ನಡಿಸುವ ಸರಕಾರದ ಕಟ್ಟೇ ಸರಿಯಾದುದಲ್ಲ. ಈ ಕ್ರಮದ ಮೇರೆ ಪ್ರಜೆಗಳ ಅಭಿಲಾಷೆಯಂತೆ ರಾಜ್ಯಭಾರ ಮಾಡಲು ಸಾಧ್ಯವಿಲ್ಲ. ಆದುದರಿಂದಲೇ ಮಿ. ಬಾರ್ಟನ್‌ರವರಿಗೆ ದೇಶದ ಹಳಿಗೆಯ ಕಾರ್ಯಗಳನ್ನು ಜನರ ಅಭಿಪ್ರಾಯದಂತೆ ನಡಿಸಲು ಅನುಕೂಲವಾಗಲಿಲ್ಲವೆಂದು ನಮಗೆ ತೋರುತ್ತದೆ.

ಈಗಿನ ಕಾಲದ ಜೀವನಮಾನದಲ್ಲಿ ವೇದಾಂತ.

(ಸ್ವಾಮಿ ಸರ್ವಾನಂದರ ಉಪನ್ಯಾಸ)

ಬಹು ಪ್ರಾಚೀನ ಕಾಲದಲ್ಲಿ ಹಿಂದೂ ಮತದ ಪಂಡಿತರಲ್ಲಿ ಎರಡು ಪಂಗಡಗಳು ಇದ್ದವು. ಕರ್ಮಕಾಂಡಕ್ಕೆ ಪ್ರಾಮುಖ್ಯತೆಕೊಡುತ್ತಿದ್ದ ಮೀಮಾಂಸಕರೆಂಬವರೂ ವೇದಾಂತಕ್ಕೆ ಪ್ರಾಮುಖ್ಯತೆಕೊಡುತ್ತಿದ್ದ ವೇದಾಂತಿಗಳೆಂಬವರೇ ಈ ಎರಡು ಪಂಗಡಗಳು. ಆಗ ವೇದಾಂತವು ಸಮಾಜದ ನಡವಳಿಕೆಗೆ ವ್ಯಾಪಿಸಲಿಲ್ಲ. ವೇದಾಂತದ ತತ್ವಗಳನ್ನು ಗೂಢವಾಗಿ ಇಟ್ಟುಕೊಂಡಿದ್ದರು. ದೇಶದಲ್ಲಿ ಹೆಚ್ಚಿನ ಜನರು ಮೀಮಾಂಸಕರಾಗಿದ್ದರು. ಮೀಮಾಂಸಕರಲ್ಲಿ ಬ್ರಾಹ್ಮಣರೇ ಮುಖ್ಯಸ್ಥರಾಗಿದ್ದರು. ಇವರು ಅಧಿಕಾರವಾದಕ್ಕೆ ಪ್ರಾಮುಖ್ಯತೆ ಕೊಟ್ಟರು. ಅವರವರ ಗುಣಕ್ಕನುಗುಣವಾಗಿ ನಾಲ್ಕು ವರ್ಣಗಳು ಏರ್ಪಡಿಸಲ್ಪಟ್ಟವು. ಆತ್ಮಶುದ್ಧಿ ಇದ್ದು ತ್ಯಾಗಕ್ಕೆ ತಯಾರಾಗಿ ಇಂದ್ರಿಯಗಳನ್ನು ಸ್ವಾಧೀನಪಡಿಸಿಕೊಂಡಿರುವವರೇ ಮುಂದಾಳುಗಳಾಗಲು ಅರ್ಹರು. ಧರ್ಮದಲ್ಲಿಯೂ, ಬುದ್ಧಿಯಲ್ಲಿಯೂ ಶ್ರೇಷ್ಠರೆನಿಸಿಕೊಂಡು ತತ್ವ ದೃಷ್ಟಿಯಿರುವವರೇ ಬ್ರಾಹ್ಮಣರಾಗಿದ್ದರು. ಇವರೇ ಮುಂದಾಳುಗಳಾಗಿದ್ದರು. ಗುಣವನ್ನು ಅನುಸರಿಸಿ ಜಾತಿಯಾಗಬೇಕಾದದ್ದು ತಪ್ಪಿ ಜಾತಿಯು ಜನ್ಮವನ್ನು ಅನುಸರಿಸಿ ಬರಲಿಕ್ಕೆ ಪ್ರಾರಂಭವಾಯಿತು. ಜೀವಾತ್ಮನು ತನ್ನ ಅರ್ಹತೆಗೆ ಸರಿಯಾದ ಜನ್ಮವನ್ನು ತೆಗೆದುಕೊಳ್ಳುತ್ತದೆ ಎಂಬ ತತ್ವವನ್ನು ಅನುಸರಿಸಿ ಜನ್ಮ ಜಾತಿಯಾಗಲು ಕಾರಣವಾಯಿತು. ಆದರೆ ಈಗ ವರ್ಣಸಂಕರವಾಗಿ ಹೋಗಿದೆ. ಕಾರಣವೇನಾದರೂ ಇರಲಿ. ಈಗ ಹಿಂದುಗಳಲ್ಲಿ ಬಹು ಸಂಖ್ಯೆಯವರು ಶೂದ್ರರಾಗಿದ್ದೇವೆ. ಮೊದಲು ಜಾತಿಯನ್ನು ಏರ್ಪಡಿಸುವಾಗ ಒಳ್ಳೇ ಉದ್ದೇಶದಿಂದಲೇ ಮಾಡಿರಬಹುದು. ಈಗ ಎಲ್ಲಾ ಕೆಟ್ಟು ಹೋಗಿದೆ. ಜಾತಿಗಳನ್ನು ಹಿಡಿದು ಹಕ್ಕುಗಳಿಗೆ ಹೋರಾಡುವ ಕಾಲ ಬಂದಿದೆ. ಮದ್ರಾಸಿನಲ್ಲಿ 14ರೂ ಸಂಬಳಕ್ಕೆ ಸಿಕ್ಕುವ ಬ್ರಾಹ್ಮಣ ಅಡಿಗೆಯವರು ನಡತೆಯಲ್ಲಿ ಅತಿಹೀನಸ್ಥಿತಿಯಲ್ಲಿರುವವರಾದರೂ ಬ್ರಾಹ್ಮಣರ ಹಕ್ಕುಗಳಿಗೆ ಹೊಣೆದಾರುತ್ತಾರೆ. ಇತರರಿಗೆ ಬ್ರಾಹ್ಮಣರ ಗುಣಗಳೆಲ್ಲಾ ಇದ್ದರೂ ಬ್ರಾಹ್ಮಣರ ಹಕ್ಕುಗಳಿಗೆ ಅರ್ಹರಲ್ಲ. ಜಾತಿಭೇದಗಳು ಯುರೋಪಿನಲ್ಲಿಯೂ ಇವೆ. ಆಳುವ ಜನರು ತಮ್ಮ ಹಕ್ಕುಗಳಿಗೆ ಹೋರಾಡಲು ಪ್ರಾರಂಭಿಸಿದಾಗ ಜನರು ಅವರನ್ನು ರಾಜಪದವಿಯಿಂದ ಕಿತ್ತುಹಾಕಿದರು. ಪುರಾತನ ಕಾಲದಲ್ಲಿ ಹಕ್ಕುಗಳಿಗಾಗಿ ಹೋರಾಟವಿರಲಿಲ್ಲ. ಆಗ ಉದ್ಯೋಗದಲ್ಲಿ ಹಾಚಿಕೆ ಇತ್ತಷ್ಟೆ. ದೇಹದ ಬೇರೆ ಬೇರೆ ಅಂಗಗಳಿಗೆ ಬೇರೆ ಬೇರೆ ಕೆಲಸಗಳಿರುವಂತೆಯೇ ಸಮುದಾಯದ ಜನರು ತಮ್ಮ ತಮ್ಮ ಕೆಲಸಗಳನ್ನು ಹಂಚಿಕೊಂಡಿದ್ದರೂ ಪ್ರತಿಯೊಂದು ಜಾತಿಯ ಉದ್ಯೋಗವು ಗೌರವಾರ್ಹವಾಗಿಯೇ ಇತ್ತು. ಹಕ್ಕುಗಳಿಗೆ ಹೋರಾಟ ಪ್ರಾರಂಭವಾದ ಕೂಡಲೇ ಜಗಳಗಳು ಬೆಳೆದವು.

ಮೀಮಾಂಸಕರು ಅಖಂಡವಾದ ಬ್ರಹ್ಮನಲ್ಲಿ ನಂಬಿಕೆ ಇಡಲಿಲ್ಲ. ಯಜ್ಞಗಳನ್ನು ಮಾಡಿ ಇಹಲೋಕದಲ್ಲಿ ಸುಖವೂ ಮರಣಾನಂತರ ಸ್ವರ್ಗ ಸುಖವನ್ನು ಅನುಭವಿಸುವದೇ ಅವರ ಧ್ಯೇಯವಾಗಿತ್ತು. ಆದ್ದರಿಂದ ಯಜ್ಞಕ್ಕೆ ಅರ್ಹರು ಅನರ್ಹರು ಎಂಬ ಭೇದ ಮಾಡಿ ಅಧಿಕಾರ ವಾದಕ್ಕೆ ಪ್ರಾಮುಖ್ಯತೆಕೊಟ್ಟರು. ಆ ಮೇಲೆ ಬೌದ್ಧ ಮತಸ್ಥಾಪನೆಯಾಯಿತು. ಸಮುದಾಯದಲ್ಲಿ ಒಡಕು ಇರಲು ಕಾರಣವನ್ನು ಬುದ್ಧದೇವನು ಕಂಡುಹಿಡಿದನು. ಆಗಿನ ಸಮಾಜದ ಉದ್ಧಾರಕ್ಕಾಗಿ ವೇದಾಂತ ಮತವನ್ನು ಬುದ್ಧನು ಬೋಧಿಸಿದನು. ಒರಬರುತ್ತಾ ಬೌದ್ಧ ಮತವು ನಾಸ್ತಿಕವಾಗುತ್ತಾ ಬಂತು. ಆದರೆ ಬುದ್ಧದೇವನು ಬೋಧಿಸಿದ ಧರ್ಮವು ವೇದಾಂತ ಧರ್ಮವಾಗಿತ್ತು. ಆ ಬೌದ್ಧ ಧರ್ಮದ ಕಾಲವಾದ ಕ್ರಿಸ್ತಶಕ ಪೂರ್ವ 3ನೇ ಶತಮಾನದಿಂದ ಕ್ರಿ. ಶ. 5ನೇ ಶತಮಾನದವರೆಗೆ ಹಿಂದೂಸ್ಥಾನವು ಅತ್ಯುನ್ನತ ಪದವಿಯನ್ನು ಹೊಂದಿತ್ತು. ಬೌದ್ಧ ಧರ್ಮವು ಸರ್ವರಿಗೂ ಸಮಾನತ್ವ ಕೊಟ್ಟಿತು. ಬೌದ್ಧ ಧರ್ಮವು ಸಾಧಾರಣ ಸಮುದಾಯದ ಜನರ ಭಾಷೆಯಲ್ಲಿ ಬೋಧಿಸಲ್ಪಟ್ಟಿತು. ವೇದಾಂತ ಧರ್ಮವು ಸಮುದಾಯದಲ್ಲಿ ಹರಡಿದ್ದರಿಂದಲೇ ರಾಜಕೀಯ ಏಕೀಕರಣ ಸಹ ಆಗಿದ್ದು. ಕಲಾಕೌಶಲ್ಯ ಮುಂತಾದ ಶಕ್ತಿಗಳೆಲ್ಲಾ ಮುಂದುವರಿದಿತ್ತು. ಬುದ್ಧದೇವನು ಸ್ವತಃ ಕ್ಷತ್ರಿಯನಾದರೂ ಒಬ್ಬ ಕುರುಬನಾಗಲೀ ಜಾತಿಭೇದವಿಲ್ಲದೆ ತನ್ನ ಬೋಧಕರೊಟ್ಟಿಗೆ ಸೇರಿಸಿಕೊಳ್ಳುತ್ತಿದ್ದನು. ಸರ್ವರೂ ಒಬ್ಬನೇ ಪರಮಾತ್ಮನ ಶಕ್ತಿ ಇರುವವರಾದ್ದರಿಂದ ಸರ್ವರಿಗೂ ಜ್ಞಾನ ಸಂಪಾದನೆಗೆ ಅನುಕೂಲಕೊಡಬೇಕೆಂಬುದೇ ಅವರ ಬೋಧನೆಯ ಸಾರವಾಗಿತ್ತು.

ಬೌದ್ಧ ಧರ್ಮದಲ್ಲಿ ಇನ್ನೊಂದು ಮುಖ್ಯ ಅಂಶವೇನೆಂದರೆ, ನಡತೆಗೆ ವಿಶೇಷತ್ವವಿತ್ತು. ಸತ್ಯಕ್ಕೆ ಅಹಿಂಸೆಗೆ ಪ್ರಾಮುಖ್ಯತೆ ಇತ್ತು. ಒಬ್ಬನಿಗೆ ಸತ್ಯವಾದದ್ದು ಇನ್ನೊಬ್ಬನಿಗೂ ಸತ್ಯವೇ ಆದ್ದರಿಂದ ಸ್ವಾರ್ಥಕ್ಕೆ ಎಡೆಯಿಲ್ಲ. ಬುದ್ಧದೇವನ ಬೋಧನೆಯಿಂದ ಹಿಂದೂಸ್ಥಾನದ ಜನಸಮುದಾಯಕ್ಕೆ ಮಾತ್ರವಲ್ಲ ಒಟ್ಟು ಪ್ರಪಂಚದ ಜನರ ಉದ್ಧಾರಕ್ಕೆ ಎಡೆಯಾಯಿತು. ನಿಮ್ಮಲ್ಲಿ ಎಷ್ಟು ಇದೆ ಎಂಬುದು ಮನುಷ್ಯನ ಯೋಗ್ಯತೆ ತಿಳಿಯುವ ಸಾಧನವಾಗಿರಲಿಲ್ಲ. ನೀವು ಎಷ್ಟು ಕೊಡಲು ಅರ್ಹರಾಗಿದ್ದೀರೆಂಬುದೇ ಮುಖ್ಯ ಪ್ರಶ್ನೆಯಾಗಿತ್ತು. ತೆಗೆದುಕೊಳ್ಳುವವನು ಕಟ್ಟಿಗೆ ಒಳಗಾಗುತ್ತಾನೆ, ಕೊಡುವವನು ಸ್ವತಂತ್ರನಾಗುತ್ತಾನೆ. ಆದ್ದರಿಂದ ಪ್ರಪಂಚಕ್ಕೂ ಒಳ್ಳೇದು ಮಾಡಿ ಸ್ವತಂತ್ರರಾಗಬೇಕೆಂಬುದು ಬುದ್ಧ ಧರ್ಮದ ಇನ್ನೊಂದು ಬೋಧನೆಯಾಗಿತ್ತು. ಹಿಂದೂ ಜನಾಂಗವು ಸ್ವಭಾವಿಕವಾಗಿ ಆತ್ಮ ವಿಚಾರದಲ್ಲಿ ಅಭಿರುಚಿ ಇರುವವರಾಗಿದ್ದಾರೆ. ಆದ್ದರಿಂದ ಬೌದ್ಧಮತವು ಸುಲಭವಾಗಿ ದೇಶದಲ್ಲಿ ಹರಡಿತು.

ಬೌದ್ಧ ಮತವು ಕೆಡುತ್ತಾ ಬಂದಂತೆ ಪುನಃ ಬ್ರಾಹ್ಮಣರ ಬಲವು ಹೆಚ್ಚಿತು. ಕುಮಾರಿಲ ಭಟ್ಟ ಮಂಡನಮಿಶ್ರ ಮುಂತಾದವರೇ ಈ ಅಧಿಕಾರವಾದದ ಮುಖಂಡರಾದರು. ಆಗ ಶ್ರೀ ಶಂಕರಾಚಾರ್ಯರು ಅವತರಿಸಿ ನಿಜವಾದ ವೇದಾಂತವನ್ನು ಬೋಧಿಸಿದರು. ಬೌದ್ಧಮತದ ಪದ್ಧತಿಯಾದ ಮಠಸ್ಥಾಪನೆಯನ್ನು ಅನುಸರಿಸಿದರು. ಆದರೆ ಸಮುದಾಯದ ಕೆಲಸಕ್ಕೆ ಮನಸ್ಸು ಕೊಡಲಿಲ್ಲ. ವೇದಾಂತವನ್ನು ದಿನಚರಿಯ ಕಾರ್ಯಗಳಲ್ಲಿ ಉಪಯೋಗಿಸುವದನ್ನು ಜನರಿಗೇನೇ ಬಿಟ್ಟರು.

ಈಗ ಮತದ ಸ್ಥಿತಿಯೇ ಬದಲಾಗಿದೆ. ಒಡೇ ಹೊರಗಿನ ಕಾರ್ಯಗಳಿಗೆ ಪ್ರಾಮುಖ್ಯತೆ ಕೊಡುವದೇ ಮತವಾಗಿದೆ. ಈಗ ಸಮಾಜವನ್ನು ಮೂರು ಗುಂಪಾಗಿ ವಿಂಗಡಿಸಬಹುದು. ಮೊದಲನೇ ಪೂರ್ವ ಪದ್ಧತಿಯನ್ನು ಬಿಡಕೂಡದೆಂತ ಹೇಳುವವರು, ಇವರು ಒಡೇ ಬಾಹ್ಯತೋರಿಕೆಗಳಿಗೆ ಬೆಲೆಕೊಡುವವರಾಗಿದ್ದಾರೆ. ಇವರ ಸಂಖ್ಯೆ ಕಡಿಮೆ. 2ನೇ ನಾಸ್ತಿಕರು ಇವರು ಕುಡಿದು ಸಂತೋಷವಾಗಿದ್ದರೆ ಸಾಕು ಎನ್ನುವವರು. 3ನೇ ಮಧ್ಯಸ್ಥರು ಇವರಿಗೆ ಧೈರ್ಯವಿಲ್ಲ. ತಾವು ಮಾಡುವ ಕ್ರಿಯೆಗಳಲ್ಲಿ ನಂಬಿಕೆ ಇಲ್ಲ. ಹೊರಗೆ ಪ್ರತಿಭಟಿಸಿ, ವಿಧವಾವಿವಾಹ ಮುಂತಾದ್ದನ್ನು ಆಗಬಹುದೆನ್ನುತ್ತಾರೆ. ಆದರೆ ಕಾರ್ಯತಃ ನಡಿಸುವದಿಲ್ಲ. ಇವರ ಜೀವನವೇ ಎರಡು ವಿಧವಾಗಿದೆ. ಒಳಗೊಂದು ಹೊರಗೊಂದು ಸತ್ಯವೆಂಬುದು ಇಲ್ಲವೇ ಇಲ್ಲ. ಈ ತರದ ರಕ್ತ ಜೀವನದಿಂದ ಸ್ವಂತ ಬುದ್ಧಿ, ಸಾಹಸ, ಶಕ್ತಿ ಇಲ್ಲದೆ ಹೋಗಿವೆ, ಈ ಮಹತ್ವದ ಕಾರ್ಯ ಯಾವದನ್ನು ಮಾಡಲು ಯೋಗ್ಯತೆ ಇಲ್ಲದೆ ಹೋಗಿದೆ. ಸಾಧಾರಣ ಹಿಂದೂ ಜೀವನ ನಡಿಸಲೇ ಯೋಗ್ಯತೆ ಇಲ್ಲದೆ ಹೋಗಿದ್ದಾರೆ. ಸಾಧಾರಣವ ಹಿಂದುಗಳಾದ ನಾವು ಐಹಿಕ ಭೋಗಾಪೇಕ್ಷೆಯುಳ್ಳವರೂ ನಾಸ್ತಿಕರೂ, ದುರ್ಬಲರೂ ಆಗಿ ಹೋಗಿದ್ದೇವೆ. ಪ್ರಾಪಂಚಿಕ ಕಾರ್ಯಗಳಲ್ಲಿ ಸತ್ಯವೇ ಸಾಧ್ಯವಿಲ್ಲವೆಂತ ನಂಬಬಿಟ್ಟಿದ್ದೇವೆ. ಬಿಳೀ ಸುಳ್ಳು ಕಪ್ಪು ಸುಳ್ಳು ಎಂತ ಸುಳ್ಳನ್ನು ವಿಂಗಡಿಸಿಕೊಂಡು ಬಿಳೀ ಸುಳ್ಳು ಹೇಳಬಹುದೆಂತಲೂ ಕಪ್ಪು ಸುಳ್ಳು ಮಾತ್ರ ಹೇಳಬಾರದೆಂತಲೂ ಮಾಡಿಕೊಂಡು ಬಿಟ್ಟಿದ್ದೇವೆ.

ನಮ್ಮ ಅಭ್ಯುದಯವಾಗಬೇಕಾದರೆ ನಮ್ಮ ಜೀವನದ ರೀತಿಯನ್ನೇ ಬದಲಾಯಿಸ ಬೇಕಾಗಿದೆ. ಕೆಲವು ಮುಂದಾ

ಕೆಲಸ ಕಾರ್ಯಗಳಲ್ಲಿ ಸಂಪೂರ್ಣವಾಗಿ ಪಶ್ಚಿಮತ್ಯರನ್ನು ಬಾಲಿಸುವ ಎನ್ನುತ್ತಾರೆ. ಹಿಡಿದ ಕಾರ್ಯವನ್ನು ಪೂರ್ಣವಾಗಿ ಮಾಡಿ ಎಂತ ಹೇಳುತ್ತಾರೆ. ಇವರಿಗ ಪ್ರಾಪಂಚಿಕ ಸುಖವೇ ಧ್ಯೇಯವಾಗಿದೆ. ಬರೇ ಅರ್ಥ, ಕಾಮ ಪುರುಷಾರ್ಥಗಳನ್ನು ಸಂಪಾದಿಸಿದರೆ ಸಾಕೆನ್ನುತ್ತಾರೆ. ಪಶ್ಚಿಮದವರು ಅರಿಸ್ ಟೋಟಲಿನ ಕಾಲದಿಂದಲೂ ಈ ಧ್ಯೇಯಗಳನ್ನೇ ಸಾಧಿಸುತ್ತಾ ಬರುತಿದ್ದಾರೆ. ಅದರ ಪರಿಣಾಮವೇನಾಗಿದೆ? ನಾವು ಅವರ ಕ್ರಮವನ್ನು ಅನುಸರಿಸಿದರೆ ತತ್ಕಾಲ ದೊರೆಯಬಹುದು. ಹಿಂದೂಸ್ಥಾನವು ಇನ್ನೊಂದು ಇಂಗ್ಲಂಡ್, ಜರ್ಮನಿ, ಜಪಾನ್ ಆಗಬಹುದು. ಆದರೆ [illegible] ಸ್ಥಿರವಾದ ಸುಖ ಏದೆಯೇ? ಪಾಶ್ಚಿಮಾತ್ಯ ಜನಾಂಗಗಳು ಸುಖಿಗಳಾಗಿ ಇಲ್ಲ. ಕಾರಣವು ಸ್ಪಷ್ಟವಾಗಿದೆ. ಪ್ರಾಪಂಚಿಕ ಸೌಖ್ಯಕ್ಕೆ ನಡಿಸುವ ಹೋರಾಟದಲ್ಲಿ ಉತ್ಪಾತ ಹುಟ್ಟಿಯೇ ಹುಟ್ಟುತ್ತವೆ. [illegible] ಧರ್ಮನೀತಿಯೇ ಈ ಪ್ರಾಪಂಚಿಕ ಸುಖವೇ ಧ್ಯೇಯವಾಗಿರುವವರ ರೀತಿಯಾಗಿದೆ. [illegible] ಆದರೆ ಸಿಕ್ಕಿಬೀಳಬಾರದು. ಸಮಾಜದಲ್ಲಿ ಪ್ರಾಪಂಚಿಕ ಔನ್ನತ್ಯವನ್ನು ಪಡೆಯಬಹುದು. ಬಲಹೀನ ಜನಾಂಗಗಳನ್ನು ಅಧೀನದಲ್ಲಿಟ್ಟುಕೊಂಡು ಪ್ರಯೋಜನ ಹೊಂದು. 'ಬಿಳೀ ಜನರ ಜವಾಬ್ದಾರಿ' ಎಂಬ ಉಚ್ಚ ಧ್ಯೇಯವೆಂತೆ ಪ್ರಕಟಿಸಿಕೊಳ್ಳುವದರ ಅರ್ಥವೇನು? [illegible] ಇಂಥಾ ಜನಾಂಗಗಳ ದರ್ಶನಕ್ಕೆ ಪತ್ಯಾಸವು [illegible] ಇಲ್ಲ. [illegible] ಜನರ ಸುಖವನ್ನು ಕಡಿಮೆ ನಾವು [illegible] ಆಗಬಹುದು. ನಿಜವಾದ ಪ್ರಪಂಚಪ್ರವೃತ್ತಿಯಿಂದರ [illegible] ಜನರ ಹಕ್ಕುಗಳ ಇರುವಿಕೆ. ನಿಜವಾದ ಪ್ರಜಾಪ್ರಭುತ್ವವು ಆತ್ಮ [illegible] ಸಾಧ್ಯವಿದೆಯಷ್ಟೆ. [illegible] ಎಂತ ಮನಸ್ಸಿನಲ್ಲಿ [illegible] ಆತ್ಮ ಸ್ವರೂಪವೇ ಇದೆಯೆಂಬ ವೇದಾಂತತತ್ವ [illegible].

[illegible] ಯುಗದಲ್ಲಿ ರಾಜರು ಇರಲಿಲ್ಲವೆಂತಲೂ [illegible] ರಾಗಿ ಸಂತೋಷದಲ್ಲಿದ್ದರು ಎಂತ ಹೇಳುತ್ತಾರೆ. ಕಾರಣವೇನು? ಆಗ ಎಲ್ಲರೂ ಬ್ರಹ್ಮವೇತ್ತಾ ಆದರ ಪ್ರತ್ಯೇಕ [illegible] ಎಲ್ಲರಲ್ಲಿಯೂ ಪರಮಾತ್ಮ ಸ್ವರೂಪವೇ ಎಂತ ನಂಬಿದ ಕೂಡಲೇ ಸ್ವಾರ್ಥಕ್ಕೆ ಎಡೆಯಿಲ್ಲ. ಆ [illegible] ಸ್ವತಂತ್ರ ರಾಜ್ಯವಾಗಿದೆ. ಪ್ರಜಾಪ್ರಭುತ್ವದ ದೇಶವಾಗಿದೆ. ಅದರ ಆಳುವವರು ಯಾರು? ದುರ್ಬಲ ಜನಾಂಗಗಳನ್ನು ಕೆಳಗೆ ತುಳಿಯುತ್ತಾರೆ. ಇಂಗ್ಲೆಂಡ್, ಫ್ರಾನ್ಸ್ ಮುಂತಾದ ರಾಜ್ಯಗಳಲ್ಲಿ ಧನಿಕರ ಅಧಿಕಾರವೇ. ಪ್ರಾಪಂಚಿಕ ಸುಖವೇ ಧ್ಯೇಯಗಳಾಗಿದ್ದರ [illegible] ಸ್ವಭಾವದವರಾಗಿರುತ್ತೇವೆ. ಹಿಂದೂಗಳಾದ ನಾವು ಪಾರಂಪರ್ಯವಾಗಿ ಬಂದ ಸಂಸ್ಕೃತಿಯನ್ನು ಅನುಸರಿಸಿ ಮುಂದೆ ಬರಬೇಕಾಗಿದೆ. ಹಿಂದೂಗಳಾದ ನಾವು ನಾಸ್ತಿಕರಾದರೂ, ಎಷ್ಟೋ ಐಹಿಕ ಭೋಗದ ಆಸೆಯವರಾದರೂ, ಎಷ್ಟೋ ಪಾಶ್ಚಿಮಾತ್ಯರ ದಾರಿ ಹಿಡಿದಿದ್ದರೂ ಸ್ವಲ್ಪ ಅನುಕೂಲ ದೊರೆತರ ನಮ್ಮ ರಕ್ತ ನಾಳಗಳಲ್ಲಿ ಹರಿಯುವ ರಕ್ತದ ಗುಣವು ತೋರಬರದೆ ಇರುವದಿಲ್ಲ. [illegible] ಪುರುಷರಿಂದ ನಡೆದ ಬಂದ ಸಂಸ್ಕೃತಿಯನ್ನು [illegible] ಸುಲಭವಲ್ಲ. ಆದರ ನಮ್ಮ ಜೀವನದ ಸ್ಥಿತಿ ಬದಲಾಯಿಸಬೇಕಾಗಿದೆ. ಹೇಗೆ ಬದಲಾಯಿಸುವ [illegible] ವಿವೇಕಾನಂದ ಸ್ವಾಮಿಯವರು ದಾರಿ ತೋರಿಸಿದ್ದಾರೆ. ವೇದಾಂತವನ್ನು ಧರಿಗೆ ತರಬೇಕು. ಜೀವನದ ಧ್ಯೇಯ ವೇದಾಂತದ ಬಳಿ [illegible] ಬೇಕು. ಮನುಷ್ಯರು ದೇಹಗಳಿಂದೊಡಗೂ [illegible] ಪ್ರಪಂಚದ ಜೀವರಾಶಿಯನ್ನೂ, ಸಕಲ ವಸ್ತು ಯಾವುದು, ನಶ್ವರ ವಸ್ತು ಯಾವುದೆನ್ನು ತಿಳಿದುಕೊಂಡರ ವೇದಾಂತವು ನಿತ್ಯದ ಕೆಲಸಕ್ಕೆ ಬರುತ್ತದೆ. ಇದನ್ನು ಅಭ್ಯಾಸ ಮಾಡ ವಗೆ? ಈ ನಮ್ಮ ದೇಹವು ಅಶಾಶ್ವತವಾದದ್ದೆಂದೂ ಆತ್ಮವು ಪರಮಾತ್ಮನ ಸ್ವರೂಪವೇ ಎಂದೂ ಆಗಿಂದಾಗ್ಗೆ [illegible] ಬೇಕು.

ಮನುಷ್ಯನ ಆಸರೆಯು ನಾಲ್ಕು ಭಾಗವಾಗಿವೆ. ಮನೆ [illegible], ಪಾಠಶಾಲೆ ಮತ್ತು ಸ್ವಭಾವ ಮತ್ತು ಪ್ರ[illegible] ತಂದೆ ತಾಯಿಗಳು ಜೀವಾತ್ಮವು ಪರಮಾತ್ಮನ ಅಂಶವೆಂದು ನಂಬಿ ಮಕ್ಕಳ ಮನಸ್ಸಿಗೂ ಅದೇ ನಂಬಿಕೆಯನ್ನು [illegible] ನಿಂದಲೇ ಹುಟ್ಟಿಸಬೇಕು. ಮದಾಲಸೆ ಎಂಬುವ [illegible] 'ತ್ವಮಸಿ ನಿರಂಜನ' ಅಂದರೆ ನೀನೇ ಪರಮಾತ್ಮ [illegible] ಹೇಳುತ್ತಾ ತೂಗುತ್ತಿದ್ದಳಂತೆ. ಅದರಿಂದ ಮಗು [illegible] ಯಕ್ಕೆ ಬರುವಾಗ ಬ್ರಹ್ಮಜ್ಞಾನವಂತನಾದನಂತೆ. ನಮ್ಮ [illegible] ಹೇಳುತ್ತವೆ. ಸಮುದಾಯವು ಈಗ ಪೂರ್ತಿ ಕೆ[illegible]ಗಿದೆ. ಯುವಕರು ಶೃಂಗಾರಮತ್ತು ಮದುವೆ ವಿಷಯ [illegible] ವಾಗ್ಯಾಯಿಂದವರು ನೊಸ್ಗಿನ ಆಡಳಿತದ ವಿಷಯವನ್ನೂ [illegible] ತ್ತಾರೆ. ಪ್ರಸಂಗ ಧರ್ಮ ಮತ್ತು ಪರಮಾತ್ಮ ಸ್ವರೂಪ [illegible] ಮಾತಾಡುವವನೇ ಇಲ್ಲ. ಈ ಸ್ಥಿತಿಯನ್ನು ಬದಲಾಯಿಸ[illegible]ಬೇಕು. ಶಾಲೆಗಳಲ್ಲಿ ಹೇಳುವ ಪಾಠವು ವ್ಯಾಪಾರದಂ[illegible]ತಾಗಿದೆ. ವಿದ್ಯಾರ್ಥಿಗಳು ಕೊಡುವ ಪೀಸಿಗೆ ತಕ್ಕಷ್ಟು [illegible] ಪರೀಕ್ಷೆ ಪಾಸಾದರೆ ಸಾಕೆಂತ ಬಯಸುವ ಮಾಸ್ತರು [illegible] ಮುವ ಸಮಯಕ್ಕೆ ತಕ್ಕ ಏನಾದರೂ ಕಲಿಸಿದರೆ ಸಾ[illegible] ಎನ್ನುತ್ತಾರೆ. ಬುದ್ಧಿಯ ಚುರುಕು ಸ್ವಲ್ಪವಿಟ್ಟಿಗೆ [illegible] ದೆಯೋ ಹೊರತು ಹೃದಯವು ವಿಕಾಸಹೊಂದುವದ[illegible] ನತೆಯು ತಿದ್ದುವದೇ ಇಲ್ಲ, ಸ್ವತಃ ಬುದ್ಧಿಯು ಬೆಳೆ[illegible]ಲ್ಲ. ಆದುದರಿಂದಲೇ ಬುದ್ಧಿಯಲ್ಲಿ ಮುತ್ಸದ್ದ ಶಕ್ತಿ

ಇರುವದು, ನಡತೆಯಲ್ಲಿ ಶೂನ್ಯವಾಗಿರುವದು ಕಂಡುಬರುವದು. ಸ್ವಂತ ಬುದ್ಧಿ ಇಲ್ಲದೆ ಇರುವದರಿಂದಲೂ ಧೈರ್ಯವಿಲ್ಲದೆ ಇರುವದರಿಂದಲೂ ನಾವು ಯಾವ ಕೆಲಸವನ್ನು ತಲೆಯ ವರಗೆ ಸಾಧಿಸುವದಿಲ್ಲ. ಆರಂಭ ಶೂರತ್ವ ತೋರಿಸಿ ಅನಂತರ ಹಿಮ್ಮೆಟ್ಟಾಗಿ ಬಿಡುತ್ತೇವೆ. ಸ್ಕೂಲುಗಳಲ್ಲಿ ವೇದಾಂತದ ಸಾರವನ್ನು ಸ್ವಲ್ಪ ಮಟ್ಟಿಗಾದರೂ ಬೋಧಿಸಿದರೆ ಜನರು ಧೈರ್ಯಶಾಲಿಗಳಾದಾರು. ಮಾಸ್ತರುಗಳು ವಿದ್ಯಾರ್ಥಿಗಳನ್ನು ಪರಮಾತ್ಮನ ಅಂಶವೆಂತಲೇ ನೆನಪಿನಲ್ಲಿಟ್ಟುಕೊಂಡು ಭೋದಿಸಬೇಕು. ವಿದ್ಯಾರ್ಥಿಗಳಿಗಿಂತ ಹೆಚ್ಚು ತಿಳಿದವನಂತೆ ಭಾವಿಸಿ ಯಜಮಾನನಂತೆ ಇರಬಾರದು. ಒಳಗಿರುವ ಆತ್ಮ ಶಕ್ತಿಯನ್ನು ಹೊರಪಡಿಸಲು ಪ್ರಯತ್ನಿಸಬೇಕು. ಆಗ ವಿದ್ಯಾರ್ಥಿಗಳಲ್ಲಿ ಆತ್ಮ ಶಕ್ತಿಯು ಬೇಗನೇ ಬೆಳೆಯುತ್ತೆ. ದಿನಚರಿಯ ಕೆಲಸಗಳನ್ನು ಏನೂ ಬಿಡಬೇಕಾಗಿಲ್ಲ. ಪ್ರಪಂಚವನ್ನು ಪರಮಾತ್ಮನ ಸ್ವರೂಪವೆಂಬ ಭಾವನೆ ಇಟ್ಟುಕೊಂಡು ನಿತ್ಯ ಕೆಲಸ ಮಾಡುತ್ತಿರುವದರಲ್ಲಿ ಏನೂ ಆಕ್ಷೇಪವಿಲ್ಲ. ಗೃಹಸ್ಥಾಶ್ರಮವು ಬಹಳ ದೊಡ್ಡ ಆಶ್ರಮವು. ತನ್ನ ಕೆಲಸಗಳನ್ನು ವೇದಾಂತ ದೃಷ್ಟಿಯಿಂದ ನಡೆಸುತ್ತಾ ಹಸಿದವ ಸಮುದಾಯದ ಸ್ಥಿತಿಯೇ ಬದಲಾಗುತ್ತದೆ. ಇತರರ ಸಂಗಡ ವ್ಯವಹಾರದಲ್ಲಿ ಸಹ ವೇದಾಂತ ದೃಷ್ಟಿಯನ್ನು ತೋರಿಸುವದು. ಉತ್ತರ ಹಿಂದ ಸ್ಥಾನದಲ್ಲಿ ನಡೆದ ಒಂದು ಸಂಗತಿಯಿಂದ ಇದರ ಪ್ರಯೋಜನ ತಿಳಿಯುತ್ತದೆ. ಒಬ್ಬ ಸ್ವಾಮಿಗಳು [illegible] ಪೂಜ ಸಾಮಾನುಗಳನ್ನು ಒಬ್ಬ ಕಳ್ಳನು ಕದ್ದುಕೊಂಡು [illegible] ಗುತ್ತಿದ್ದದ್ದನ್ನು ಕಂಡು ಎಚ್ಚೆತ್ತುಕೊಂಡು [illegible] ಷ್ಟಿಗ [illegible] [illegible] ಆದ ಅವನನ್ನು [illegible] [illegible] ಒಂದು ಅವನೂ [illegible].

ವೇದಾಂತವನ್ನು ದಿನಚರಿಯಲ್ಲಿ [illegible] ತಂದರೆ [illegible] [illegible] ಈ ಭಾವನೆ [illegible] ಹಿಂದೂಗಳಲ್ಲಿ ಎಷ್ಟು [illegible] ಇದೆ ಎಂಬುದನ್ನು [illegible] ಆತ್ಮ ಶಕ್ತಿಗೆ ಮಹತ್ವವಿದೆಯೋ ಹಾಗೆ [illegible] ಬಿಳಿ ಇಲ್ಲ. ಸ್ವಾಮಿ ವಿವೇಕಾನಂದರೇ [illegible] ವೇದಾಂತವನ್ನು ನಿತ್ಯ ಕಲಸಗಳಲ್ಲಿ ಹೇಗೆ ಉಪಯೋಗಿಸಬೇಕು ದೆಂದನ್ನು ಬೋಧಿಸಿದರು. ನಮ್ಮೆಲ್ಲರ ಉದ್ದೇಶಗಳು ಕೈಗೂಡುವಂತೆ ದೇವರು ಸಹಾಯ ಮಾಡಲಿ ಎಂದು ಪ್ರಾರ್ಥಿಸಿ ಭಾಷಣವನ್ನು ಮುಗಿಸಿದರು.

ಸಂಪಾದಕ—ಮೇಲಿನದು ವ ಪ್ರಾಸಿನಿಂದ ಬಂದಿದ್ದ ಸ್ವಾಮಿ ಸಚ್ಚಿದಾನಂದರವರು ಸೆಂಟ್ರಲ್ ಹೈಸ್ಕೂಲು ಹಾಲಿನಲ್ಲಿ ತಾರೀಕು ೩ರಲ್ಲಿ ಮಾಡಿದ ಭಾಷಣದ ಸಾರಾಂಶವಾಗಿದೆ. ಇದು 'ಪಾರ್ಟಿ ಹ್ಯಾಂಡ್' ನೋಟ್ಸಿನ ತರ್ಜುಮೆಯಲ್ಲ. ಅವರು ಭಾಷಣ ಮಾಡುತ್ತಿದ್ದಾಗ ಸಾಧಾರಣದ ಬರಹದಲ್ಲಿ ತೆಗೆದ ಕೆಲವು ನೋಟ್ಸ್‌ಗಳ ಸಾರಾಂಶವಾಗಿದೆ. ಆದುದರಿಂದ ಇದರಲ್ಲಿರುವ ಪ್ರತಿ ಶಬ್ದವೂ ಅವರ ಬಾಯಿಯಿಂದ ಬಿದ್ದವೆಂದು ಹೇಳಲಾಗುವುದಿಲ್ಲ.

ಮಿ. ಬಾರ್ಟನ್‌ರವರಿಗೆ "ಎಟ್ ಹೋಮ್."

ಬರುವ ಜೂಲೈ ತಿಂಗಳಲ್ಲಿ ಹೈದರಾಬಾದಿಗೆ ವರ್ಗವಾಗಿ ಹೋಗುವ ಚೀಪ್ ಕಮಿಷನರ್ ಮಿ. ಡಬ್ಲ್ಯು. ಪಿ. ಬಾರ್ಟನ್‌ರವರಿಗ ತಾರೀಕು ೬ರಲ್ಲಿ ಸಾಯಂಕಾಲ ೪½ಗಂಟೆಗೆ ಮಡಿಕೇರಿ ಕೋಟೆಯಲ್ಲಿ ಕೊಡವರು ಒಂದು ಎಟ್ ಹೋಮ್ ಕೊಟ್ಟರು. ರಾಯಿ ಬಹದ್ದೂರ್ ಕೆ. ಕುಟ್ಟಯ್ಯನವರು ಸುಮಾರು 250 ಮರ್ಯಾದಸ್ಥರಿಗೆ ಆಮಂತ್ರಣ ಕಳುಹಿದ್ದರೆಂದು ತಿಳಿಯುತ್ತೇವೆ. ಎಟ್ ಹೋಮಿನ ಖರ್ಚಿಗಾಗಿ ಹತ್ತು ರೂಪಾಯಿ ಚಂದಾ ನಿರಕು ಮಾಡಿ ಚಂದಾ ಪಟ್ಟಿಯು ಮಿ. ಕುಟ್ಟಯ್ಯನವರಿಂದ ಸುಮಾರು 60 ಜನ ಕೊಡವರಿಗೆ ಕಳುಹಿಸಲಾಯಿತ್ತೆಂದು ವರ್ತಮಾನ. "ಆದರ ಆಮಂತ್ರಣವು ಚಂದಾ ಕೇಳಲ್ಪಟ್ಟ ಕೊಡವರಿಗಲ್ಲದೆ ಬೇರೆ ಕೆಲವು ಕೊಡವರಿಗೂ, ಕೊಡವರಲ್ಲದ ಕೆಲವು ಮರ್ಯಾದಸ್ಥರಿಗೂ, ಕೆಲವು ಯೂರೋಪಿಯನ್ನರಿಗೂ ಕಳುಹಿಸಲ್ಪಟ್ಟಿತ್ತೆಂದು ತಿಳಿಯ ಬರುತ್ತದೆ. ಆ ದಿನ ಕೋಟೆಯಲ್ಲಿ ಹಾಜರಿದ್ದ ಸುಮಾರು 110 ಜನರ ಪೈಕಿ ಸುಮಾರು 80 ಕೊಡವರೂ (ಕೆಲವು ಮಹಿಳೆಯರೂ) ಬಾಕಿಯವರು ಕೊಡವೇತರರೂ ಯೂರೋಪಿಯನರೂ ಆಗಿದ್ದರು.

ಕೋಟೆಯ ಎದುರುಗಡೆಯ ಕಳಗಿನ ಪಡಸಾಲೆಯಲ್ಲಿ ಜನರೆಲ್ಲರೂ ನೆರೆದಿದ್ದಾಗ 4½ಗಂಟೆಗೆ ಮಿ. ಬಾರ್ಟನ್‌ರವರು ತಮ್ಮ ಪತ್ನಿಯವರೊಂದಿಗೆ ಅಲ್ಲಿಗೆ ಬಂದರು. ರಾ [illegible] ಕೆ. ಕುಟ್ಟಯ್ಯನವರು ಮತ್ತು ರಾ. ಬಾ. ಕೆ. [illegible] ನವರು ಅವರನ್ನು ಕರೆಕೊಂಡು ಬಂದು ಅವರಿಗೆ ಅಲ್ಲಿ ನೆರೆದಿದ್ದ ಪ್ರತಿಯೊಬ್ಬನ ಪರಿಚಯವನ್ನು ಮಾಡಿದರು. ಮಿಸೆಸ್ ಬಾರ್ಟನ್‌ರವರು ಎಲ್ಲರ ಸಂಗಡವೂ ಕೈಕುಲಿಕಿದರು. (ಶೇಕ್ ಹ್ಯಾಂಡ್ ಮಾಡಿದರು) ನಂತರ ಯೂರೋಪಿಯನ್ ರೀತಿಯಲ್ಲಿ ಬಿಸ್ಕತ್ತು, ಕೇಕ್, ಚಾಕೊಲೇಟ್ ಮೊದಲಾದ ತಿಂಡಿಗಳೂ, ಟೀ ಪಾನವೂ ಸ್ವೀಕರಿಸಲಾಯಿತು. [illegible] ಮಡಿಕೇರಿಯಲ್ಲಿ ಬಂದು ಮಹಿಳೆ ಕರೆದು ನೆಲ್ಲಿಟ್ಟ [illegible] ಗಟ್ಟಿಗಾಗಿ ಅನೇಕ ಮೆಸಲ ಗಳಿರುವ ಪಾಲಿಗ [illegible] ದಿನವನು ಅಂಗಳದಲ್ಲಿ ಗಾಯನವಾಡುತ್ತಾ ಇದ್ದರು. ಮುಂದಿನ ಅಂಗಳದಲ್ಲಿ (ಟೆನ್ನಿಸ್ ಕೋರ್ಟ್‌ನಲ್ಲಿ) ಫೋಟೋ ತೆಗೆಯಲು ಎಲ್ಲರೂ ಕೂತು ಮಿ. ಕುಟ್ಟಯ್ಯನವರು ತಮ್ಮ ಭಾಷಣವನ್ನು ಪ್ರಾರಂಭಿಸುವದರಲ್ಲಿ [illegible] ಯಿತು. ಎಲ್ಲರೂ ಒಳಗೆ ಬರಬೇಕಾಯಿತು. ಸ್ವಲ್ಪ ಹೊತ್ತಿನ ನಂತರ ಮಳೆಯು ನಿಲ್ಲಲಾಗಿ ಪುನಹ ಹೊರಗೆ ಕೂತು ಮಿಸ್ಟರ್ ಮತ್ತು ಮಿಸೆಸ್ ಬಾರ್ಟನ್‌ರವರಿಗೆ ಹೂವಿನ ಸರಗಳನ್ನು ಹಾಕಿ ಫೋಟೋ ತೆಗೆಯಲಾಯಿತು. ಕೊಡಲೆ ಬಿಸ್ಕ್ ವೈನ್ ಮೊದಲಾದ ಅಮಲು ಪದಾರ್ಥವೂ ಮಿರಾಯಿಯೂ ಕಾಪಿಯೂ ಹಂಚಲಾಯಿತು.

ಇವೆಲ್ಲಾ ಮುಗಿದ ನಂತರ ಎಲ್ಲರೂ ಪಡಸಾಲೆ ಮಧ್ಯದಲ್ಲಿ ಸೇರಿದಾಗ ಮಿ. ಕುಟ್ಟಯ್ಯನವರು ಮಾಡಿದ ಭಾಷಣದ ಸಾರಾಂಶವೇನೆಂದರೆ,—

ನಮ್ಮ ಪ್ರೀತಿಗೆ ಪಾತ್ರರಾದ ಮಿ. ಬಾರ್ಟನ್ ಸಾಹೇಬರು ನಮ್ಮ ದೇಶದಿಂದ ಹೊರಟು ಹೋಗುವದರಿಂದ ನಮಗೆ ಸಂತೋಷವೂ ವ್ಯಸನವೂ ಇದೆ. ಸಂತೋಷವು ಕಂದರೆ ಇವರು ದೊಡ್ಡ ಸಂಸ್ಥಾನಕ್ಕೆ ಹೆಚ್ಚಿನ ಗೌರವವುಳ್ಳ ಉದ್ಯೋಗಕ್ಕೆ ಹೋಗುವದರಿಂದ. ವ್ಯಸನವೇಕೆಂದರೆ, ನಮ್ಮ ದೇಶದ ಮೇಲೆ ಬಹಳ ಪ್ರೀತಿ ಇರುವವರಾಗಿದ್ದು ನಮ್ಮನ್ನು ಬಿಟ್ಟು ಹೋಗುತ್ತಾರೆ ಎಂಬದರಿಂದ. ನಮ್ಮ ದೇಶಕ್ಕೆ ಇವರಿಂದ ಬಹಳ ಉಪಕಾರಗಳಾಗಿವೆ. ನಮ್ಮ ದೇಶದ [illegible] ಬೇರೆ ದೇಶಗಳ ಜೊತೆಗೆ ಸೇರಿಸಿ ರಾಜಕೀಯ ಸುಧಾರಣೆಗಳಿಗೆ ಅವಕಾಶವಿಲ್ಲದೆ ಹಾಳು ಬಿಟ್ಟಿದ್ದರು. ಇವರು [illegible] [illegible] ಬಂದವರು. [illegible] ನಮ್ಮ [illegible] ಬಂದ [illegible] ಹೋಗಲಾರದ [illegible] [illegible] ದಲ್ಲಿ ಬಹಳ [illegible] [illegible] [illegible] ಬಹಳ ಉಪಕಾರವಾಗಿ [illegible] [illegible] ದೊಡ್ಡ [illegible] [illegible] [illegible] ತಿದ್ದುಪಡಿ [illegible] [illegible] ಮಿ. ಬಾರ್ಟನ್‌ರವರ ನಮ್ಮ ದೇಶವನ್ನು ಬಿಟ್ಟು ಹೋಗುವ [illegible] ಕೊಡ ನಮ್ಮ ಚಿಕ್ಕ ದೇಶಕ್ಕೆ ಅವರ ಪ್ರೀತಿಯ ಪ್ರಥಮದಲ್ಲಿ ಒಂದಿಷ್ಟು ಸ್ಥಳವನ್ನು ಕಾದಿರಿಸಬೇಕಾಗಿ ಕೇಳಿ ನಮ್ಮ ಜನಾಂಗವು ಇದ್ದವರೆಗೆ ಇದ್ದಂತೆಯೇ ಇನ್ನು ಮುಂದಕ್ಕೂ ಪೂರ್ಣ ರಾಜಭಕ್ತರಾಗಿ ಇರುತ್ತೇವೆಂಬುದರಲ್ಲಿ ಸಂಶಯವಿಲ್ಲ.

ಮಿ. ಬಾರ್ಟನ್ ಸಾಹೇಬರು ಇನ್ನು ಮುಂದೆ ಇನ್ನೂ ಹೆಚ್ಚು ಗೌರವದ ಪದವಿಗೆ ಹತ್ತಿ ಇವರಿಗೂ ಇವರ ಪತ್ನಿಯವರಿಗೂ ಆಯುರಾರೋಗ್ಯವು ಉಂಟಾಗಲಿ ಎಂತ ಪ್ರಾರ್ಥಿಸುತ್ತೇವೆ.

ಮಿ. ಬಾರ್ಟನ್‌ರವರು ಹೇಳಿದ ಉತ್ತರದ ಸಾರಾಂಶವೇನೆಂದರೆ:—ಬಿಟ್ಟುಹೋಗುವದು ಯಾವಾಗಲೂ [illegible] ದ ಸಂಗತಿಯೇ. ಮಿ. ಕುಟ್ಟಯ್ಯನವರು ಹೇಳಿದ ನನ್ನ ವಿಷಯದ ಉಪಕಾರದ ಮಾತುಗಳಿಗೆಲ್ಲಾ ನಾನು ಮನ[illegible] ವಂದನೆಗಳನ್ನು ಅರ್ಪಿಸುತ್ತೇನೆ. ಅವರ ಅವರ [illegible] ಲ್ಲಾ ನಾನು ಅರ್ಹನಲ್ಲ. ನಾನು [illegible] [illegible] ಮಾಡದೆ ಕಡತಕ್ಕೆ ಕೆಲಸ ಮಾಡಿದೆನೆಂದು [illegible] ಬರುವದು [illegible] ತೋರುತ್ತದೆ. [illegible] ಲ್ಲಿ. ಈ ದೇಶದ ಸರಕಾರವು [illegible] ಇಲ್ಲಿಯ ಉತ್ಪತ್ತಿಗ ಸರಿಯಾಗಿ [illegible] ಬೇಕಾಯಿತು. ಇಲ್ಲವಾದರ ಸರಕಾರವು [illegible] ಬಹಳ ಕಷ್ಟ ತರಬೇಕಾಗುತ್ತಿತ್ತು. [illegible] ಮಿ ಕೆಲಸಗಳನ್ನು ಪರಿಶೀಲಿಸುವ [illegible] ದೇಶವನ್ನು ಮುಟ್ಟಿ ಕಾಣಿಸಿರುವ [illegible] ದರ ಕಡೆಗಳಿಗೆ [illegible] [illegible] ದಿಂದ [illegible] [illegible] ಕಾರಣರಾದವರು [illegible] [illegible] [illegible] ಪ್ರತಿಯೊಬ್ಬರಿಗೂ [illegible] [illegible] [illegible] [illegible] ಕೊಡಗು [illegible] ಅವರ [illegible] [illegible] [illegible] ಹೊತ್ತು ಹಿಂದಿನ [illegible] ಕಾಣಿಸಿಕೊಂಡು [illegible] ತೋರಿಸಿದೆ. [illegible] [illegible] [illegible] ಮಾಡಿರುವುದನ್ನು ಇಲ್ಲಿಗೆ ಸಮಾಪ್ತವಾಗಿ ತಿಂದವ್ವಾಗಿದೆ.

[illegible] ನ ವಿಷಯದಲ್ಲಿ ನೀವು ಇಟ್ಟು ಎಡೆಸಾಯ [illegible] ಪ್ರಸನ್ನವಾಗಿವೆ ನನತ [illegible] ವಿಭಾಗದ [illegible] ನುಡುದು, ಕೊಡಗ (ಕನಿಷ್ಠರ)ವರನ್ನ ಉದ್ಯೋಗಸ್ಥರು

ಆಡಳಿತವನ್ನು ನಡಿಸುವುದರಲ್ಲಿ ನನಗೆ ಬಹಳ ಸಹಾಯಕರಾಗಿದ್ದರು. ಮ. ಕೆ. ಚಂಗಪ್ಪನವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಉದ್ಯೋಗವನ್ನು ಬುದ್ಧಿ ಕುಶಲತೆಯಿಂದಲೂ, ಮತ್ತು ವರ್ತನೆಯಿಂದಲೂ ಜನರಿಗೆ ತೃಪ್ತಿಕರವಾಗುವಂತೆ ನಡಿಸುತ್ತಿದ್ದಾರೆ. ಪ್ರಖ್ಯಾತರಾದ ಸಬ್ ಜಡ್ಜ್ ಮ. ಕಾರ್ಯಪ್ಪನವರ, ಮೊದಲನೇ ದೇಶೀಯ ಪೋಲೀಸ್ ಅಸಿಸ್ಟೆಂಟ್ ಸುಪರಿಂಟೆಂಡೆಂಟ್ ಮ. ದೇವಯ್ಯನವರ ಮ. ಕಾಳಪ್ಪ, ಮ. ಚಂಗಪ್ಪ ಮೊದಲಾದವರ ಹೆಸರುಗಳನ್ನು ಹೇಳದೆ ಕಳೆಯದು. ಈ "ಎಟ್ ಹೋಮ್"ನ್ನು ಏರ್ಪಡಿಸಿದ ಮಹನೀಯರಿಗೆ ಮಿಸೆಸ್ ಬಾರ್ಟನ್‌ರವರು ಮತ್ತು ನಾನು ಮನಃಪೂರ್ತಿಯಾಗಿ ವಂದಿಸುತ್ತೇವೆ."

ಈ ಭಾಷಣವಾದ ಕೂಡಲೆ ಮ. ಬಾರ್ಟನ್‌ರವರು ಮತ್ತು ಅವರ ಪತ್ನಿಯವರು ಹೊರಟು ಹೋದರು ನೆರೆದಿದ್ದ ಜನರೂ ಚದರಿದರು.

ರಾಮ ನಾಮದ ಮಹಿಮೆ.

ಒಬ್ಬ ಸಜ್ಜನನು ಈ ರೀತಿ ಪ್ರಶ್ನೆ ಮಾಡುವನು.—

'ನೀವು ಕಾಠಿಯಾವಾಡದ ಪ್ರವಾಸದಲ್ಲಿ ಯಾವುದೋ ಒಂದು ಕಡೆಯಲ್ಲಿ ಭಾಷಣಮಾಡುವಾಗ ರಾಮನಾಮದ ಮಹಿಮೆಯನ್ನು ವರ್ಣಿಸುತ್ತ 'ನನ್ನ ಹತ್ತಿರ ರಾಮನಾಮವಿಲ್ಲದಿದ್ದರೆ ನಾನು ಮೂರು ಮಂದಿ ಸ್ತ್ರೀಯರನ್ನು ಭಗಿನಿಯರೆಂದು' ಕರೆಯಲು ಯೋಗ್ಯನಾಗಿರುತ್ತಿದ್ದಿಲ್ಲ ಎಂದು ಹೇಳಿದಿರಿ. ಈ ವಿಷಯವಾಗಿ 'ಸೌರಾಷ್ಟ್ರ' ಪತ್ರವು ಅನೇಕ ಅಸ್ಪಷ್ಟ ಮಾತುಗಳನ್ನು ಪ್ರಯೋಗಿಸಿ ಬರೆದಿರುತ್ತದೆ. ಮಾನಸಿಕ ಪಾಪ ಪ್ರವೃತ್ತಿಯನ್ನು ತಡೆಯಲು ನಿಮ್ಮಿಂದಾಗಲಿಲ್ಲವೆಂದು ಆ ಮಾತುಗಳಿಂದ ಅರ್ಥವಾಗುತ್ತಿದೆ. ಈ ವಿಚಾರವನ್ನು ನೀವು ಸ್ವಲ್ಪ ವಿಶದೀಕರಿಸಿದರೆ ಕೃಪೆಮಾಡಿದಂತಾಗುವುದು.'

ನನಗೆ ಪತ್ರಲೇಖಕನ ಪರಿಚಯವಿಲ್ಲ. ನಾನು ಬೊಂಬಾಯಿಯಿಂದ ಹೊರಡುವಾಗ ಅವರು ಈ ಪತ್ರವನ್ನು ನನ್ನ ಸಹೋದರನ ಮೂಲಕ ನನಗೆ ತಲ್ಪಿಸಿದರು. ಇದು ಅವನ ತೀವ್ರವಾದ ಜಿಜ್ಞಾಸೆಯನ್ನು ಸೂಚಿಸುತ್ತದೆ. ಇಂತಹ ಪ್ರಶ್ನೆಯ ಚರ್ಚೆಯು ಸಾಮಾನ್ಯವಾಗಿ ಬಾಹೀರ ರೀತಿಯಲ್ಲಾಗಬಾರದು. ಸರ್ವಸಾಧಾರಣ ಜನರು ಮನುಷ್ಯನ ಖಾಸಗಿ ಜೀವನದ ರಹಸ್ಯಗಳನ್ನು ಶೋಧಿಸುವ ರೂಢಿಯನ್ನಿಟ್ಟುಕೊಂಡರೆ ದುಷ್ಪರಿಣಾಮವಾಗದೆ ಇರಲಿಕ್ಕಿಲ್ಲ.

ಆದರೆ ಈ ಉಚಿತ ಅಥವಾ ಅನುಚಿತ ಜಿಜ್ಞಾಸೆಗೆ ನಾನು ಉತ್ತರ ಕೊಡದೆ ನನ್ನನ್ನು ರಕ್ಷಿಸಿಕೊಳ್ಳುವುದು ಶಕ್ಯವಲ್ಲ. ರಕ್ಷಿಸಿಕೊಳ್ಳುವ ಅಧಿಕಾರವು ನನಗಿಲ್ಲ, ಇಚ್ಛೆಯೂ ಇಲ್ಲ. ನನ್ನ ಖಾಸಗಿ ಜೀವನವು ಬಹಿರಂಗವಾಗಿದೆ. ಈ ಲೋಕದಲ್ಲಿ ನನಗೆ ಖಾಸಗಿಯಾಗಿಟ್ಟುಕೊಳ್ಳತಕ್ಕಂತಹ ಒಂದು ವಿಷಯವಾದರೂ ಉಳಿದಿಲ್ಲ. ನನ್ನ ಸಾಧನೆಗಳು ಆಧ್ಯಾತ್ಮಿಕವಾಗಿವೆ. ಆತ್ಮನಿರೀಕ್ಷಣೆಯ ಮೇಲೆ ಅವುಗಳ ಪ್ರಯೋಗವು ಅವಲಂಬಿಸಿಕೊಂಡಿದೆ. 'ಯಥಾ ಪಿಂಡೇ ತಥಾ ಬ್ರಹ್ಮಾಂಡೇ' ಎಂಬ ಸೂತ್ರಕ್ಕನುಸಾರವಾಗಿ ನಾನು ನನ್ನ ಪ್ರಯೋಗಗಳನ್ನು ಮಾಡಿರುತ್ತೇನೆ. ಯಾವುದು ನನ್ನ ವಿಷಯದಲ್ಲಿ ಸಂಭವನೀಯವೋ ಅದು ಇತರರ ವಿಷಯದಲ್ಲಿಯೂ ಕೂಡ ಸಾಧ್ಯವೆಂಬ ವಿಶ್ವಾಸವು ಇದರಲ್ಲಿ ಅಡಕವಾಗಿದೆ. ಆದುದರಿಂದಲೇ ನಾನು ಕೆಲವು ಗುಹ್ಯ ಪ್ರಶ್ನೆಗಳಿಗೂ ಉತ್ತರ ಕೊಡಬೇಕಾಗುತ್ತದೆ.

ಅಲ್ಲದೆ ಮೇಲಿನ ಪ್ರಶ್ನೆಗೆ ಉತ್ತರವನ್ನೀಯುವಾಗ ರಾಮನಾಮದ ಮಹಿಮೆಯನ್ನು ವ್ಯಕ್ತಪಡಿಸಲು ಸಿಗುವ ಸುಸಂದರ್ಭವನ್ನು ನಾನು ಹೇಗೆ ಬಿಟ್ಟುಬಿಡಲಿ?

ಈ ಪ್ರಶ್ನೆಯನ್ನು ಕೇಳಿದವನಿಗೂ ಇತರ ಪ್ರಶ್ನೆಗಳನ್ನು ಕೇಳಿಬಿಟ್ಟಿರುವವರಿಗೂ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಅವರು ಯಾವುದಾದರೊಂದು ವರ್ತಮಾನ ಪತ್ರದ ಆಧಾರದಿಂದ ತಮ್ಮ ಪ್ರಶ್ನೆಗಳನ್ನು ರೂಪಿಸಿದ್ದರೆ ನನಗೆ ಆ ಪತ್ರಗಳನ್ನು ಅಗತ್ಯವಾಗಿ ಕಳುಹಿಸಬೇಕಾಗಿ ನಾನು ಅಪೇಕ್ಷಿಸುತ್ತೇನೆ. ನಾನು ಹೆಚ್ಚಾಗಿ ವರ್ತಮಾನ ಪತ್ರಿಕೆಗಳನ್ನು ಓದುವುದಿಲ್ಲವೆಂದು ಅನೇಕ ಸಲ ತಿಳಿಸಿರುವೆನು, ಓದಲು ನನಗೆ ಸಾಧ್ಯವಾಗುವುದಿಲ್ಲ. 'ಸೌರಾಷ್ಟ್ರ' ಪತ್ರವು ಏನು ಬರೆದಿದೆಯೆಂದು ನನಗೆ ಗೊತ್ತಿಲ್ಲ. ನನ್ನ ಭಾಷಣಗಳ ಸಾರವನ್ನು ಬರೆದುಕೊಳ್ಳುವ ಕೆಲಸವು ಸುಲಭವಲ್ಲ. ಗೂಢ ಅಥವಾ ನವವಿಚಾರಗಳನ್ನು ವಿವರಿಸುವಾಗ ಒಂದು ಶಬ್ದವನ್ನು ಮರತರೆ ಅನರ್ಥವಾಗುವುದು. ಪರಿಚಯವಿಲ್ಲದ ಲೇಖಕರು ನನ್ನ ಭಾಷಣವನ್ನು ಬರೆದುಕೊಂಡಾಗ ಅವರ ಮೇಲೆ ವಿಶ್ವಾಸವನ್ನಿಡಬಾರದೆಂದು ನಾನು ಮೊದಲೇ ಸೂಚಿಸಿರುವೆನು. ಯಾರಿಗಾದರೂ ಒಂದು ವಿಷಯದಲ್ಲಿ ಸಂಶಯವು ಉತ್ಪನ್ನವಾದರೆ ಅವರು ನನ್ನ ಹತ್ತಿರ ಕೇಳಬೇಕು. ಹಾಗೆ ಕೇಳುವ ಸಂದರ್ಭದಲ್ಲಿ ಯಾವ ಪತ್ರಿಕೆಯಿಂದ ನನ್ನ ಭಾಷಣವನ್ನು ಓದಿರುವರೋ ಆ ಪತ್ರಿಕೆಯ ಪ್ರತಿಯನ್ನು ಕಳುಹಿಸಕೊಡಬೇಕು.

ಇಷ್ಟು ಪ್ರಸ್ತಾವನೆಯಾದ ಬಳಿಕ 'ಸೌರಾಷ್ಟ್ರ' ಪತ್ರವು ಏನು ಬರೆದಿರುತ್ತದೆಂದು ನನಗೆ ಗೊತ್ತಿಲ್ಲವಾದರೂ ನನ್ನನ್ನು ಈ ಪ್ರಸಂಗಗಳಲ್ಲಿ ಈಶ್ವರನು ಹೇಗೆ ಕಾಪಾಡಿದನೆಂದು ವರ್ಣಿಸುವೆನು. ಮೂರು ಪ್ರಸಂಗಗಳೂ ವೇಶ್ಯಾಸ್ತ್ರೀಯರ ಸಂಬಂಧವಾಗಿದೆ. ಇಬ್ಬರ ಬಳಿಗೆ ಬೇರೆ ಬೇರೆ ಸಂದರ್ಭಗಳಲ್ಲಿ ಮಿತ್ರರು ನನ್ನನ್ನು ಕರದುಕೊಂಡು ಹೋಗಿದ್ದರು.

ಮೊದಲಿನ ಸಂದರ್ಭದಲ್ಲಿ ನಾಚಿಕೆಯ ತಪ್ಪು ಭಾವನೆಯಿಂದ ನಾನು ಹೋಗಿದ್ದೆನು. ಈಶ್ವರನು ರಕ್ಷಿಸದಿದ್ದರೆ ಆ ಸಲ ನಾನು ಅವಶ್ಯವಾಗಿ ಅಧೋಗತಿಯನ್ನು ಹೊಂದುತ್ತಿದ್ದೆನು. ಆದರೆ ನಾನು ಯಾರ ಮನೆಯನ್ನು ಪ್ರವೇಶಿಸಿದ್ದೆನೋ ಆ ಸ್ತ್ರೀಯು ನನ್ನನ್ನು ತಿರಸ್ಕರಿಸಿದಳು. ಇಂತಹ ಸಂದರ್ಭಗಳಲ್ಲಿ ಯಾವ ರೀತಿಯಲ್ಲಿ ಏನು ಹೇಳಬೇಕೆಂದೂ ಹೇಗೆ ವರ್ತಿಸಬೇಕೆಂದೂ ನನಗೆ ಸ್ವಲ್ಪವಾದರೂ ಗೊತ್ತಿರಲಿಲ್ಲ. ಇದಕ್ಕೆ ಮುಂಚೆ ಪರನಾರಿಯರ ಬಳಿಯಲ್ಲಿ ಕುಳಿತುಕೊಳ್ಳುವುದೂ ದೋಷಯುಕ್ತವೆಂದು ನಾನು ಭಾವಿಸುತ್ತಿದ್ದುದರಿಂದ ಮನೆಯನ್ನು ಪ್ರವೇಶಿಸುವಾಗ ನನ್ನ ಎದೆಯು ನಡುಗುತ್ತಿತ್ತು. ಒಳಗೆ ಹೋದಾಗ ಆ ಸ್ತ್ರೀಯರ ಮುಖವನ್ನು ದೃಷ್ಟಿಸಿ ನೋಡಲು ಅಸಮರ್ಥನಾದೆನು. ನನಗೆ ಅವಳ ಮುಖವು ಹೇಗಿತ್ತೆಂಬುದರ ಸ್ಮರಣೆಯು ಕೂಡ ಇಲ್ಲ. ಇಂತಹ ಮೂರ್ಖನನ್ನು ಅವಳು ಹಿಂದೆ ಕಳುಹಿಸದೆ ಏನು ಮಾಡುವಳು? ಅವಳು ನಾಲ್ಕೈದು ತಿರಸ್ಕಾರದ ಮಾತುಗಳನ್ನಾಡಿ ನನ್ನನ್ನು ಹೊರಡಿಸಿಬಿಟ್ಟಳು. ಆ ಸಮಯದಲ್ಲಿ ನನ್ನನ್ನು ಈಶ್ವರನು ಕಾಪಾಡಿದನೆಂದು ತಿಳಿಯದೆ ಹೋದೆನು. ಖಿನ್ನಮನಸ್ಕನಾಗಿ ಹೊರಗೆ ಬಂದೆನು, ಲಜ್ಜಿತನಾಗಿ ನನ್ನ ಮೂರ್ಖತೆಗಾಗಿ ದುಃಖಪಟ್ಟೆನು. ನನ್ನ ಮೂರ್ಖತೆಯೇ ನನ್ನ ರಕ್ಷಾಕವಚವಾಯಿತೆಂದು ನಾನು ಮತ್ತೆ ತಿಳಿದೆನು. ದೇವರು ನನ್ನನ್ನು ಮೂರ್ಖನನ್ನಾಗಿರಿಸಿ ಪಾರಗಾಣಿಸಿದನು. ಇಲ್ಲವಾದರೆ ದುರಾಚಾರದ ಮನೆಯನ್ನು ಪ್ರವೇಶಿಸಿದ ನಾನು ಕೆಡದೆ ಉಳಿಯುದು ಹೇಗೆ?

ಎರಡನೇ ಪ್ರಸಂಗವು ಇದಕ್ಕಿಂತಲೂ ಭಯಂಕರವಾಗಿತ್ತು. ಇಲ್ಲಿ ನನ್ನ ಬುದ್ಧಿಯು ಮುಂಚಿನಂತೆ ನಿರ್ದೋಷವಾಗಿರಲಿಲ್ಲ. ನನ್ನ ಪೂಜನೀಯ ಮಾತೆಯ ಹತ್ತಿರ ಕೈಕೊಂಡ ಪ್ರತಿಜ್ಞಾರೂಪದ ಕವಚವು ನನ್ನೊಡನೆ ಇತ್ತು. ಈ ಸಲದ ಪ್ರದೇಶವು ವಿಲಾಯತಿಯಾಗಿದ್ದಿತು. ನಾನು ಯೌವ್ವನದ ಭರದಲ್ಲಿದ್ದೆನು. ನಾವಿಬ್ಬರು ಮಿತ್ರರು ಒಂದೇ ಮನೆಯಲ್ಲಿ ವಾಸಿಸುತ್ತಿದ್ದೆವು. ಕೆಲವು ದಿನಗಳಿಗಾಗಿ ಆ ಊರಿಗೆ ಹೋಗಿದ್ದೆವು. ಮನೆಯ ಯಜಮಾನಿಯು ಅರ್ಧ ವೇಶ್ಯೆಯಂತಿದ್ದಳು. ಅವಳೊಡನೆ ನಾವಿಬ್ಬರು ಇಸ್ಪೀಟಾಡಲು ಕುಳಿತ್ತಿದ್ದೆವು. ಆ ದಿನಗಳಲ್ಲಿ ನಾನು ಸಂದರ್ಭ ಒದಗಿದಾಗ ಇಸ್ಪೀಟಾಡುತ್ತಿದ್ದೆನು. ವಿಲಾಯತಿಯಲ್ಲಿ ತಾಯಿಯೂ ಮಗನೂ ನಿರ್ದೋಷಬುದ್ಧಿಯಿಂದ ಇಸ್ಪೀಟಾಡಬಲ್ಲರು, ಆಡಲೂ ಬಹುದು. ಆ ವೇಳೆಯಲ್ಲಾದರೂ ರೂಢಿಗನುಸಾರವಾಗಿ ಆಡಲಾರಂಭಿಸಿದೆವು. ಆರಂಭವು ಪೂರ್ಣ ನಿರ್ದೋಷವಾಗಿತ್ತು. ಆ ಸಮಯ ಯಜಮಾನಿಯು ಶರೀರವನ್ನು ಮಾರಾಟ ಮಾಡುವ ನಾಚಿಕೆಯನ್ನು ತೊರೆದಿದ್ದಳೆಂದು ನಾನು ತಿಳಿದಿರಲಿಲ್ಲ. ಆಟವು ಮುಂದರಿದಂತೆ ಬಣ್ಣವು ಬದಲಾಯಿತು. ಸ್ತ್ರೀಯು ವಿಷಯ ಚೇಷ್ಟೆಗೆ ಆರಂಭಮಾಡಿತು. ನಾನು ನನ್ನ ಮಿತ್ರನನ್ನು ನೋಡುತ್ತಲಿದ್ದೆನು. ಅವನು ತನ್ನ ಮೇರೆಯನ್ನು ದಾಟಿ ಹೋಗಿದ್ದನು. ನಾನು ಬಲೆಗೆ ಬೀಳುವೆನು. ನನ್ನ ಮುಖವು ಕೆಂಪೇರಿತು. ವ್ಯಭಿಚಾರದ ಭಾವವು ಅದರಲ್ಲಿ ಪ್ರವೇಶಿಸಿತ್ತು. ನಾನು ಅಧೀನನಾದೆನು.

ಆದರೆ ಯಾರನ್ನು ರಾಮನು ರಕ್ಷಿಸುವನೋ ಅವನನ್ನು ಯಾರು ಮುಟ್ಟಬಲ್ಲರು? ಆ ವೇಳೆಯಲ್ಲಿ ನನ್ನ ಮುಖದಲ್ಲಿ ರಾಮನು ಇರಲಿಲ್ಲವಾದರೂ ಅವನು ನನ್ನ ಹೃದಯದ ಸ್ವಾಮಿಯಾಗಿದ್ದನು! ನನ್ನ ಬಾಯಿಯಲ್ಲಿ ವಿಷಯೋತ್ತೇಜಕವಾದ ಭಾಷೆಯು ನಲಿಯುತ್ತಿತ್ತು. ನನ್ನ ಪ್ರಿಯ ಸ್ನೇಹಿತನು ನನ್ನ ಮನೋಭಾವವನ್ನು ತಿಳಿದುಕೊಂಡನು. ನಮ್ಮಲ್ಲಿ ಒಬ್ಬರಿಗೊಬ್ಬರ ಪರಿಚಯವು ಚೆನ್ನಾಗಿ ಇತ್ತು. ಬಹಳ ಕಠಿಣ ಪ್ರಸಂಗಗಳಲ್ಲಿ ಕೂಡ ನಾನು ಇಚ್ಛಾಪೂರ್ವಕವಾಗಿ ಪವಿತ್ರನಾಗಿದ್ದುದು ಅವನ ಸ್ಮರಣೆಯಲ್ಲಿತ್ತು. ಈಗ ನನ್ನ ಬುದ್ಧಿಯು ಕೆಟ್ಟುಹೋಗಿತ್ತೆಂದು ಅವನು ನೋಡಿದನು. ಇದೇ ಸ್ಥಿತಿಯಲ್ಲಿ ರಾತ್ರಿಯ ಹೆಚ್ಚಿನ ಅಂಶವು ಕಳೆದರೆ ಅವನಂತೆ ನಾನೂ ಪತನಹೊಂದುವೆನೆಂದು ಅವನು ಕಂಡುಕೊಂಡನು.

ವಿಷಯಾಸಕ್ತನಾದ ಮನುಷ್ಯನಲ್ಲಿ ಕೂಡ ಸದ್ಭಾವನೆಗಳಿರಬಹುದೆಂದು ಇದೇ ಮೊದಲು ಬಾರಿ ನನಗೆ ಈ ಮಿತ್ರನು ತೋರಿಸಿ ಕೊಟ್ಟನು. ನನ್ನ ದೀನ ಸ್ಥಿತಿಯನ್ನು ಕಂಡು ಅವನು ವ್ಯಾಕುಲಗೊಂಡನು. ಪ್ರಾಯದಲ್ಲಿ ಅವನಿಗಿಂತ ನಾನು ಸಣ್ಣವನಾಗಿದ್ದೆನು. ಅವನ ಮೂಲಕ ರಾಮನು ನನಗೆ ಸಹಾಯಮಾಡಿದನು. ಅವನು ಪ್ರೇಮಬಾಣವನ್ನು ಹೂಡಲಾರಂಭಿಸಿದನು. 'ಮೋನಿಯಾ! (ಇದು ನನ್ನ ತಾಯಿ, ತಂದೆ ಮತ್ತು ಕುಟುಂಬದ ಹಿರಿಯರು ನನ್ನನ್ನು ಪ್ರೀತಿಯಿಂದ ಕರೆಯುವ ಹೆಸರಾಗಿತ್ತು. ಇದೇ ಹೆಸರನ್ನು ಉಪಯೋಗಿಸಿದ ಈ ಮಿತ್ರನು ನನ್ನ ಧರ್ಮಭ್ರಾತೃವಾದನು.) ಮೋನಿಯಾ ಎಚ್ಚರದಿಂದಿರು! ನಾನು ಕೆಟ್ಟೆನೆಂಬುದನ್ನು ನೀನು ನೋಡಿರುವಿ. ಆದರೆ ನಿನ್ನನ್ನು ಕೆಟ್ಟುಹೋಗಲು ಬಿಡಲಾರೆನು. ತಾಯಿಯೊಡನೆ ಮಾಡಿದ ಪ್ರತಿಜ್ಞೆಯನ್ನು ಸ್ಮರಿಸು. ಇದು ನಿನಗೆ ಹೇಳಿದ ಕೆಲಸವಲ್ಲ. ಇಲ್ಲಿಂದ ಓಡು. ಮಲಗಲಿಕ್ಕೆ ಹೋಗು. ಎಲೆಗಳನ್ನು ಬಿಸಾಡು."

ನಾನು ಉತ್ತರವಿತ್ತೆನೋ ಇಲ್ಲವೋ ಎಂದು ನನಗೆ ನೆನಪಿಲ್ಲ. ಎಲೆಗಳನ್ನು ಬಿಸಾಡಿದೆನು. ಸ್ವಲ್ಪ ಹೊತ್ತಿನ ವರೆಗೆ ದುಃಖಪಟ್ಟೆನು, ಲಜ್ಜಿತನಾದೆನು. ಎದೆಯು ಹಾರಲಾರಂಭಿಸಿತು. ಎದ್ದು ನಿಂತೆನು. ಹೋಗಿ ಮಲಗಿದೆನು.

ಎಚ್ಚರವಾದೊಡನೆ ರಾಮನಾಮವನ್ನು ಜಪಿಸತೊಡಗಿದೆನು. ಮನಸ್ಸಿನಲ್ಲಿಯೇ 'ಯಾರು ರಕ್ಷಿಸಿದರು, ಹೇಗೆ ರಕ್ಷಿಸಲ್ಪಟ್ಟೆನು! ಧನ್ಯ ಪ್ರತಿಜ್ಞೆ! ಧನ್ಯ ಮಾತೆ! ಧನ್ಯ ಮಿತ್ರ! ಧನ್ಯ ರಾಮ!' ಎಂದು ಹೇಳಿಕೊಂಡೆನು. ನನಗಾಗಿ ಈ ಚಮತ್ಕಾರವಾಗಿತ್ತು. ನನ್ನ ಸ್ನೇಹಿತನು ನನ್ನ ಮೇಲೆ ರಾಮಬಾಣವನ್ನು ಉಪಯೋಗಿಸದಿದ್ದರೆ ನನ್ನ ಸ್ಥಿತಿಯು ಏನಾಗುತ್ತಿತ್ತು?

ರಾಮಬಾಣ ವಾಗ್ಯಾಂ ರೇ ಹೋಯ ತೇ ಜಾಣೆ
ಪ್ರೇಮಬಾಣ ವಾಗ್ಯಾಂ ರೇ ಹೋಯ ತೇ ಜಾಣೆ

ನನ್ನ ಮಟ್ಟಿಗೆ ಈ ಸಂದರ್ಭದಲ್ಲಿ ಈಶ್ವರನ ಸಾಕ್ಷಾತ್ಕಾರವಾಯಿತು.

ಈಗ ಇಡೀ ಲೋಕವೇ ಈಶ್ವರನಿಲ್ಲವೆಂದೂ ರಾಮನಿಲ್ಲವೆಂದೂ ಸಾಧಿಸಿದರೆ ನಾನು ಅದು ಸುಳ್ಳೆಂದು ಹೇಳುವೆನು. ಆ ಭಯಂಕರ ರಾತ್ರಿಯಲ್ಲಿ ಪತನಹೊಂದಿದ್ದರೆ ಇಂದು ಸತ್ಯಾಗ್ರಹದ ಯುದ್ಧಗಳನ್ನು ಹೂಡುತ್ತಿರಲಿಲ್ಲ; ಅಸ್ಪೃಶ್ಯತೆಯ ಕಳಂಕವನ್ನು ತೊಳೆಯುತ್ತಿದ್ದಿಲ್ಲ; ರಾಟೆಯ ಪವಿತ್ರ ನಾಮವನ್ನು ಉಚ್ಚರಿಸುತ್ತಿರಲಿಲ್ಲ. ಇಂದು ಕೋಟ್ಯಂತರಯರ ದರ್ಶನವನ್ನು ಮಾಡಿ ಪಾವನಗೊಳ್ಳಲು ನನಗೆ ಅಧಿಕಾರವಿದೆಯೆಂದೆಣಿಸುತ್ತಿರಲಿಲ್ಲ; ಲಕ್ಷಗಟ್ಟಳೆ ಸ್ತ್ರೀಯರು ನನ್ನ ಬಳಿಯಲ್ಲಿ ಒಬ್ಬ ಬಾಲಕನ ಬಳಿಯಲ್ಲಿ ಕುಳಿತುಕೊಳ್ಳುವಂತೆ ಕುಳಿತುಕೊಳ್ಳುತ್ತಿರಲಿಲ್ಲ. ನಾನು ಅವರ ಹತ್ತಿರದಿಂದ ದೂರ ಹೋಗುತ್ತಿದ್ದೆನು, ಅವರು ಕೂಡ ನನ್ನಿಂದ ದೂರವಿರುವುದೇ ಉತ್ತಮವೆಂದೆಣಿಸುತ್ತಿದ್ದರು. ನನ್ನ ಜೀವನದಲ್ಲೆಲ್ಲ ಇದು ಅತ್ಯ ಭಯಂಕರವಾದ ಸಂದರ್ಭವಾಗಿತ್ತೆಂದು ನಾನು ತಿಳಿಯುತ್ತೇನೆ. ಪ್ರಜ್ಞಾಹೀನನಾಗಿರುವಾಗ ನಾನು ಸಂಯಮವನ್ನು ಕಲಿತುಕೊಂಡೆನು. ರಾಮನನ್ನು ಮರೆತುಬಿಡುವಾಗಲೇ ರಾಮನ ದರ್ಶನವಾಯಿತು.

ರಘುವೀರ ತುಮಕೋ ಮೇರೀ ಲಾಜ
ಹಾಂ ತೋ ಪತಿತ ಪುರಾತನ ಕಹಿಯೋ
ಪಾರ ಉತಾರೋ ಜಹಾಜ।

(ಮುಂದುವರಿಯುವುದು.)

ಶ್ರೀ ರಾಮಕೃಷ್ಣ ಪರಮಹಂಸರ ಜನ್ಮ ದಿ

ಮೇ ತಾರೀಕು 31ನೇ ಆದಿತ್ಯವಾರ ಮಡಿಕೇರಿ ವೇದಾಂತ ಸಂಘದವರು ಶ್ರೀ ರಾಮಕೃಷ್ಣ ಪರಮಹಂಸರ 91ನೇ ಜಯಂತಿ ಉತ್ಸವವನ್ನು ಸೆಂಟ್ರಲ್ ಹೈ ಸ್ಕೂಲಿನಲ್ಲಿ ನಡಿಸಿದರು. ಬೆಳಿಗ್ಗೆ 8 ಗಂಟೆಯಿಂದ 9 ಗಂಟೆಯ ವರೆಗೆ ಸಭೆಯ ಕೋಣೆಯಲ್ಲಿ ಭಜನೆಯು ನಡೆಯಿತು. ಇಷ್ಟರಲ್ಲಿ ಸರ್ವಾನಂದ ಸ್ವಾಮಿಯವರು, ರಾ. ಬಾ. ಕೋಡಂಡ ಅಪ್ಪಯ್ಯನವರು, ಮ. ಕೂರವಂಡ ಮುತ್ತಣ್ಣ ಮ., ಕೆ. ಎನ್. ಸುಬ್ರಾಯರು ಇನ್ನೂ ಅನೇಕ ಮಹನೀಯರೊಂದಿಗೆ ಭಜನೆಯು ಸ್ಥಳಕ್ಕೆ ಒಂದು ಸ್ವಾಮೀಜೀಯವರ ಧರ್ಮ ಗುರು ಕಾಳೀ ದೇವರ ಧ್ಯಾನಮೂರ್ತಿ ಸಹಿತ ಶ್ರೀ ರಾಮಕೃಷ್ಣ ಪರಮಹಂಸರ ಭಾವಚಿತ್ರ ಮೆರವಣಿಗೆಯು ಸಂಘದ ಕೋಣೆಯಿಂದ ಹೊರಟು ಓಂಕಾರೇಶ್ವರ ದೇವಸ್ಥಾನದ ಬಳಿಗಾಗಿ ಒಂದು ಕೋಟೆ ದ್ವಾರದ ಮಾರ್ಗದಿಂದ ಮಹಾದೇವ ಪೇಟೆಯ ಉದ್ದ ಬ್ಯಾಂಡ್ ಪಾರ್ಟಿಯೊಂದಿಗೆ ಸುತ್ತಿ ಗಣಪತಿ ಬೀದಿಗಾಗಿ ತಿರುಗಿ ಹೈ ಸ್ಕೂಲ್ ಹಾಲಿಗೆ ಬಂದು ಅಲ್ಲಿ ಭಾವಚಿತ್ರವನ್ನಿಡಲಾಯಿತು. ಮೆರವಣಿಗೆಯ ಸಮಯದಲ್ಲಿ ಬೀದಿಯ ಭಾವಚಿತ್ರವನ್ನು ನೋಡಿ ಅನೇಕರು ಹಣ್ಣು ಕಾಯಿಗಳನ್ನರ್ಪಿಸಿದರು. ಅನಂತರ ಮ. ಕೆ. ಎನ್. ಸುಬ್ರಾಯರು ನಾರಾಯಣರಿಗೆ ಕೆಲವು ಬುದ್ಧಿವಾದದ ಮಾತುಗಳನ್ನಾಡಿದರು. ಪ್ರತಿ ಒಬ್ಬ ಬಡ ನಾರಾಯಣನಿಗೂ ಅರ್ಧ ಅಕ್ಕಿಯೂ ಅರ್ಧ ಆಣೆಯೂ ಕೊಡಲಾಯಿತು. 2 ರಿಗಿಂತ ಹೆಚ್ಚು ಬಡವರಿಗೆ ಭಿಕ್ಷೆಯು ಕೊಡಲಾಯಿತು.

ಮಧ್ಯಾಹ್ನದ ಮೇಲೆ 2 ಗಂಟೆಯಿಂದ 3½ ಗಂಟೆಯ ವರೆಗೆ ಭಜನೆಯು ಮಾಡಲಾಯಿತು. ಇದಾದ ಮೇಲೆ ವೀರ ನಾರಾಯಣರವರು (ಉಪಾಧ್ಯಾಯರು) ವೇದಾಂತ ವಿಷಯ ಸ್ವಾರಸ್ಯವಾದ ಕನ್ನಡದಲ್ಲಿ ಭಾಷಣಮಾಡಿದರು. ದಿನದ ಮೀಟಿಂಗಿಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದ ರಾ. ಕೋದಂಡ ಅಪ್ಪಯ್ಯನವರು ಸ್ವಾಮಿ ಸರ್ವಾನಂದರ ವಿಷಯ ಕೆಲವು ಮಾತುಗಳನ್ನಾಡಿ ನೆರೆದಿದ್ದ ಜನರಿಗೆ ಪರಿಚಯವನ್ನುಂಟುಮಾಡಿದರು. 4½ ಗಂಟೆಯಿಂದ 6 ರ ವರೆಗೆ ಸ್ವಾಮೀಜೀಯವರು ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಯ ವಿಷಯವಾಗಿಯೂ ಮತ್ತು ಸ್ವಾಮಿ ವಿವೇಕಾನಂದರವರು ಹಿಂದೂ ದೇಶಕ್ಕೆ ಕೊಟ್ಟ ಬೋಧೆಯ ವಿಷಯವಾಗಿಯೂ ಎಲ್ಲರಿಗೂ ತಿಳಿಯುವಂತೆ ವಿವರಿಸಿ ಇಂಗ್ಲೀಷಿನಲ್ಲಿ ಉಪನ್ಯಾಸ ಮಾಡಿದರು. ಇದು ಹಿಂದಲೇ ಪ್ರಕಟಿಸಲಾಗುವುದು. ಅಧ್ಯಕ್ಷರು ಸಭೆಯ ಪರವಾಗಿ ಸ್ವಾಮೀಜೀಯವರನ್ನು ವಂದಿಸಿ ಕೆಲವು ಮಾತುಗಳನ್ನಾಡಿದರ ಮಂಗಳಾರತಿ ಎತ್ತಿ ಪ್ರಸಾದ ಹಂಚಿದನಂತರ ಮೀಟಿಂಗು ಮುಕ್ತಾಯಿತು.

ನೋಟೀಸು.

ಮಲಬಾರಿನ ಕೊಟುಂಬೋಯ ಹೊಳೆಗೆ ಕೊಡಚೇರಿ ರಸ್ತೆಯ 33/6 ಮೈಲಿನಲ್ಲಿರುವ ತಾತ್ಕಾಲಿಕ ಸೇತುವೆಯು ಸುಮಾರು ಜೂನ್ 20ರಲ್ಲಿ ಬಿಚ್ಚಿ ಹಾಕಲ್ಪಡುವದೆಂದು ಈ ಮೂಲಕ ಸರ್ವರಿಗೂ ತಿಳಿಸಲಾಗಿದೆ.

9—6—25. ಕಮಿಷನರ

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿಯಲ್ಲಿ ಸ್ಪೇಶಲ್ ಮೋಜಿಸ್ಟ್ರೇಟರನ್ನು ಇಡುವ ಯೋಚನೆಯು ನಡೆಯುತ್ತಾ ಇದೆಯೆಂದು ವರ್ತಮಾನ.

ಳೆದವಾರ ಓಂಕಾರೇಶ್ವರ ದೇವಸ್ಥಾನದ ಕೆರೆಯಲ್ಲಿ ಬ್ಬ ಬಟ್ಲರವನ ಹೆಣವು ಎರಡು ದಿವಸಗಳನಂತರ ಮೇ ಂದು ಕಾಣಬಂತು. ಇವನು ಅತ್ತ ಹತ್ತ ಮಾಡಲಿ ಕ್ಕಾನಾಗಿಯೇ ಕೆರಗೆ ಬಿದ್ದನೆಂದು ತಿಳಿಯಬಂದಿದೆ.

ಾಫ಼ೋಕ್ಲಿನಲ್ಲಿ ಇದ್ದ ಪ್ರೊಸಸ್ ಸರ್ವರ್ಂಗ್ ಇಲಾಖೆ ತೆಗದು ಅಲ್ಲಿದ್ದ ಆಮೀನರನ್ನು ಮಡಿಕೇರಿಗೆ ವರ್ಗಾಯಿಸಿ ವರು.

ಕ್ಷಿಣ ಕನ್ನಡದ ಕಾರ್ಕಳದಲ್ಲಿ ಕೆಲವು ದಿವಸಗಳ ಹಿಂದ ಡುವಮಂಡ ಐಯ್ಯಪ್ಪನವರು ಒಂದು ಸ್ವಾರಸ್ಯವಾ ಕಥೆಯನ್ನು ಮಾಡಿ ಅಲ್ಲಿ ನೆರದಿದ್ದ ಸುಮಾರು 800 ಜ ನರನ್ನು ಸಂತೋಷಪಡಿಸಿದರೆಂದು ಒಂದು ವಾರ್ತೆ.

ತಾ 13ರಲ್ಲು ವೀರಾಜಪೇಟೆ ಮೋಡೆಲ್‌ಸ್ಕೂಲ್ ಹಾಲಿ ದ್ಯಾಹ್ನ 1ಗಂಟೆಗ ಕೋಆಪರೇಟಿವ್ ಕಾನ್‌ಫರೆನ್ಸೂ ನ ಬೆಳಿಗ್ಗೆ 11½ಗಂಟೆಗೆ ಕೊಡಗು ಕಂಪನಿಯ ಡೈ ಗಳ ಮೀಟಿಂಗೂ ನಡೆಯುವುದು.

ಸ್ವಾಮಿ ಸರ್ವಾನಂದರವರು ಮಡಿಕೇರಿಯಲ್ಲಿ ಒಂದು ವರೆಗೆ ಮತ್ತಷ್ಟು ಅಂಥ ಉಪನ್ಯಾಸಗಳನ್ನು ಮಾಡುತ್ತಾ ತಾ 7ರಲ್ಲು ಬೆಳಿಗ್ಗೆ ಮೈಸೂರಿಗ ಹೋದರು.

ನ್‌ಸ್‌ಪೆಕ್ಟರಾದ ಮ ಬಾಟನ್‌ರವರು ತಾ 6ರ ದ್ಯಾಹ್ನ ಮಡಿಕೇರಿಗ ಒಂದು ಆ ದಿನ ಕೋರ್ಟಿನಲ್ಲಿ ಸ ಇದವರ ಎಟಾ ಪೋಮಿ ನಲ್ಲಿ ಹಾಜರಿದ್ದು ಮರ ದಿನ ಮೈಸೂರಿಗ ಹೊರಟುಹೋದರು. ಹೋಗುವಾಗ್ಗೆ ನ ದೊಡ್ಡ ಉದ್ಯೋಗಸ್ಥರು ಅವರನ್ನು ಕಳುಹಿಸಿಕೂ 'ಬೊವೆರ್' ಬಂಗ್ಲಗೆ ಹೋಗಿದ್ದರು.

ಡಿಕೇರಿ ಗಡಂಗದಲ್ಲಿ ದಫ಼ೇದಾರರಾಗಿರುವ ವ ಮನ ಡ ಮಂದಣ್ಣನವರಿಗ ನಾಲ್ಕು ತಿಂಗಳು ಕಾಯಿಲೆ ರಜ ರಾಗಿದೆಯೆಂದೂ ಅವರ ಬದಲು ಎಕ ಸೈಸ್ ಸ. ಇ ರ ಮ ಪಿ ಸುಬ್ಬಣ್ಣನವರು ಆಕ್ಟಿಂಗ್ ದಫ಼ೇದಾರ ಮ ಪುಟ್ಟಮಾಡ ಮಂದಪ್ಪನವರು ಉತ್ತರ ಕೂ ಆಕ್ಟಿಂಗ್ ಎಕ್ಸೈಸ್ ಸಬ್ ಇನ್ಸ್‌ಪೆಕ್ಟರಾಗಿಯೂ ನೇ ಟ್ಟಿರುವರೆಂದೂ ತಿಳಿಯುತ್ತೇವೆ.

ಸುತ್ತಾರುವ ಎಡಿ ಸೇಕವೆಯು ಅಪದ್ಯವಾಗಿರುವುದ ಮಡಿಕೇರಿಯಿಂದ ಮೂರ್ನಾಡಿಗಾಗಿ ವೀರಾಜಪೇಟೆಗೆ ರ್ವೀಸು ನಿಲ್ಲಿಸಲ್ಪಟ್ಟಿದೆ.

ವಾರ ಮಡಿಕೇರಿಗ ಒಂದೆರಡು ಮಳೆಮಾತ್ರ ಹೊಡೆ. ಈಗ ಬೇಸಿಗೆಯಂತೆ ಬಿಸಿಲು ಕಾಯುತ್ತದ. ಪ ಜಮಾಕುವ ನೆನ ವಾದುದರಿಂದ ಈಗ ಮಳೆಯ ಕತೆಯು ಒಪಾಪವಾಗಿದೆ. ಈ ವರ್ಷದ ಆರಂಭವು ಹ್ಯಾ ವುದೋ ಎಂಬ ಭೀತಿಯೂ ಈಗಾಗಲೇ ರೈತರಿಗ ಪ್ರಾ ರಂಭವಾಗಿದೆ.

ಳೆದವಾರ ಮಡಿಕೇರಿಯಲ್ಲಿ ಒಂದೇ ರಾತ್ರಿ ಮೂರು ಳು ನಡೆದವು. ಕೆಳ್ಳರು ಆಸ್ಪತ್ರೆ ನರ್ಸ್‌ಗಳ ಮನ ನುಗ್ಗಿ ರಿನ ಸುಮಾರು 550 ರೂಪಾಯಿಗಳ ಮಾಲುಗಳು ಮ ನುಗಳನ್ನೂ ಇನ್ಸ್‌ಪೆಕ್ಟರ ನಾಲ್ಕು ಪೌನುಗಳನ್ನೂ, ಹೈ ನಯನ್ನಾ ಟೀಚರಾದ ಮ ಕೃಷ್ಣಸ್ವಾಮಿ ಅಯ್ಯರ ಮನೆಯಿಂದ ಸುಮಾರು 20 ರೂಪಾಯಿ ಬೆಲೆಯ ಬಟ್ಟೆ ನ್ನು ಕದ್ದದ್ದಲ್ಲದೆ ಹೈ ಸ್ಕೂಲ್ ಕನ್ನಡ ಪಂಡಿತರಾದ ನಿವಾಸ ಮೂರ್ತಿಯವರ ಮನೆಗ ಹಿಂದುಗಡೆಯಿಂದ ಕೆ ಒಳಗೆ ನುಗ್ಗಿದಾಗ ಮನೆಯವರಿಗ ತಿಳಿಯಲಾಗಿ ಕ ಡಿಹೋದರಂತೆ.

ರಾ|| ಸಾ|| ಬಿಟ್ಟಿಯಂಡ ಮುತ್ತಣ್ಣನವರನ್ನು ಉತ್ತರ ನ ಂರಗಳನ್ನು ಯಾವ ರೀತಿಯಲ್ಲಿ ರಿಪೇರಿಮಾಡಬಹು ನ್ನು ಕಂಡುಹಿಡಿಯಲಿಕ್ಕಾಗಿ ಒವರ್ಸಿಯರಾಗ ನೇಮಿ ದ್ದಾರೆ.

ಜಯುಲ್ಲಿದ್ದ ರೇಂಜರ್ ಮ ಮಾಳೇಟ್ಟಿರ ದೇವಯ್ಯ ತಾ 11ರಲ್ಲು ತಮ್ಮ ವೀರಾಜಪೇಟೆ ಮನೆಯಲ್ಲು ಮೃ ರೆಂದು ತಿಳಿಯಲು ವ್ಯಸನ ಪಡುತ್ತೇವೆ. ಇವರು ಕಳೆ ಬಿನಲ್ಲಿ ಬೆಳ್ಗಾಂ ಕಾಂಗ್ರೆಸಿಗೆ ಹೋಗಿ ಅಲ್ಲಿಂದ ಮ ಹೋದಾಗ ಸಿಕ್ಕಿದ ಇವರ ಕಾಯಿಲೆಯು ವಾಸಿ ಯೇ ಇಲ್ಲವಂತೆ.

ಕೇಕಡವಿನಲ್ಲಿ ಅತ್ತಿತ್ತ ದಾಟಲು ಒಂದು ಸಣ್ಣ ಹಳೇ ಮಾತ್ರ ಇರುವುದರಿಂದ ಇದರಲ್ಲಿ ದಾಟುವುದು ಅ ಕರವೆಂತಲೂ ಬೇಗನೆ ಹೊಸ ದೋಣಿಯನ್ನು ಇಡುವು ಕ್ಯವೆಂತಲೂ ಅಪಾಯವಾದನಂತರ ಎಚ್ಚರಗೊಳ್ಳುವದ ಗಲೇ ದೋಣಿಯನ್ನು ಸರಿಪಡಿಸುವುದು ಉತ್ತಮ ಒಂದು ವಾರ್ತೆ ಬಂದಿದೆ.

ಬರಿನ ತಕಪೀಠಿಗೆ ಮ ಕಂಡ್ರಕಂಡ ಗಣಪತ್ತಿಯವ ಸಲ್ಪಟ್ಟಿರುವರು.

ಕೋರ್ಟು ಏಕೇರಿ ವರ್ತಮಾನ

ಸ್ವಾಪುರದ ಸಮೀಪವಿರುವ ಅಯ್ಯತ್ತಮಂಗಲಗ್ರಾಮ ಗಳ ಕುಸೇರಿ ಸುಬ್ಬಪ್ಪನೆಂಬವರು ಪೌತಿಯಾದಾಗ ಅ ಡನೇ ಹೆಂಡತಿ ಅಮ್ಮತಾಯಿ ಮತ್ತು ಮೊದಲನೇ ಮಗಳು ಅಮ್ಮಣ್ಣಿ ಎಂಬವರು ಇದ್ದರು. ಮಗಳು ಅಮ್ಮಣ್ಣಿಯು ಈಚೆಗೆ ಪೌತಿಯಾಗಿ ಹೋದಳು. ಅಮ್ಮತಾಯಿಯು ಎರಡನೆ ಮದುವೆಯಾದಳು ಎಂಬಕಾರಣ ಸವ ಗಿದಿಸಿ ಪೌತಿ ಸಂಬಪ್ಪನ ತಂಗಿ ಮಗ ಅಣ್ಣೈಯ್ಯನೆಂಬವನು ತಾನು ಹಕ್ಕುದಾರನೆಂತ ಮಡಿಕೇರಿ ಸಬ್ ಜಡ್ಜಿಯರ ಕೋರ್ಟಿನಲ್ಲಿ ದಾವೆ ತಂದನು. ದಾವಾ ನಡೆಯುತ್ತಿರುವಾಗ್ಗೆ ವಾದಿ ಅಣ್ಣೈಯ್ಯನು ಪೌತಾದ್ದರಿಂದ ಅವನ ದಾಯಾದಿಗಳು ವಾದಿಗಳಾಗಿ ದಾವೆಯನ್ನು ಮುಂದವರಿಸಿದರು. ಪ್ರತಿವಾದಿ ಅಮ್ಮತಾಯಿಯು ವಾದಿಯ ವಾರಿಸ್‌ದಾರಿಕೆಯನ್ನು ಒಪ್ಪದೆ ತಾನು ಎರಡನೆ ಮದುವೆಯಾದದ್ದು ನಿಜವಲ್ಲವೆಂತಲೂ, 2ನೇ ಪ್ರತಿವಾದಿಯು 1ನೇ ಪ್ರತಿವಾದಿಯನ್ನು ಇಟ್ಟುಕೊಂಡದ್ದಂತಲೂ ವಾದಾ ಮಾಡಿದರು. ಎರಡನೇ ಮದುವೆಯಾದ ವಿಷಯದಲ್ಲಿ ಅನೇಕ ಸಾಕ್ಷಿಗಳು ವಿಚಾರವಾದ್ದದ್ದಲ್ಲದೆ ಅಮ್ಮತಾಯಿಯು ಅವಳ ಗಂಡನೆಂತ ವಾದಿಯು ಹೇಳುವ 2ನೇ ಪ್ರತಿವಾದಿ ರಾಮಣ್ಣ ಸಹ ಜಾತಿಯವರಿಗೆ ತಾವು ಕೂಡಾವಳಿ ಮಾಡಿಕೊಂಡದ್ದು ಹೌದೆಂತಲೂ ತನಗ ಆಗ ಇರುವ ಗರ್ಭವು ಈ ರಾಮಣ್ಣನಿಗೆ ಆದದ್ದೆಂತಲೂ ಕೊಟ್ಟ ಮುಚ್ಚಳಿಕೆ ಸಹ ರುಜುವಾತಿಗ ಬಂದಿದೆ. ಮೂರುವರೆ ವರುಷ ಈ ವ್ಯಾಜ್ಯವು ನಡೆದು 9—6—1925ರಲ್ಲಿ ಫ಼ೈಸಲಾಯಿತು. ಕೂಡಾವಳಿಯಾದದ್ದಕ್ಕೆ ಕೊಟ್ಟ ರುಜುವಾತು ತೃಪ್ತಿಯಾದದ್ದಲ್ಲವೆಂತಲೂ ಅಮ್ಮತಾಯಿಯು ಗರ್ಭಿಣಿಯಾಗಿದ್ದಾಗ ಜಾತಿಯವರು ಅವಳ ನಡತೆ ವಿಷಯದಲ್ಲಿ ತನಿಖೆ ಮಾಡಿದಾಗ ಅವಳು ಹೆದರಿ ಈ ಮುಚ್ಚಳಿಕೆ ಕೊಟ್ಟಿರಬೇಕಂತಲೂ, ಕೂಡಾವಳಿ ಆಗಿದ್ದರೆ ಮುಚ್ಚಳಿಕೆ ಅವಶ್ಯವಿಲ್ಲವೆಂತಲೂ ಅಭಿಪ್ರಾಯಪಟ್ಟು ಕೂಡಾವಳಿ ಆದದ್ದು ನಿಜವಲ್ಲವಾಂತ ಸಬ್ ಜಡ್ಜಿಯರು ಫ಼ೈಸಲ್ ಮಾಡಿದ್ದಾರೆ. * * *

ಯಡವನಾಡು ಬಟ್ಟದಳ್ಳಿ ಗ್ರಾಮದ ಪಟೇಲ ವಗೈರೆ ರೈತರು ತಮ್ಮ ಗ್ರಾಮದ ಮಹಲಿಂಗ ದೇವರ ಹಕ್ಕಿನ ಪೈಸೆಯನ್ನು ಬೀರುಗೌಡನ ಸುಬ್ಬೈಯ್ಯನೆಂಬವನು 8 ಖಂಡುಗ ಬತ್ತ, 300 ಕಂತೆ ಹುಲ್ಲಿಗೆ ಗುತ್ತಿಗೆ ಮಾಡುತ್ತಿದ್ದನೆಂತಲೂ ಈಚೆಗೆ ಗುತ್ತಿಗೆ ಬತ್ತ ಹುಲ್ಲು ಕೊಡದೆ ತಕರಾರು ಮಾಡುತ್ತಿರುವದರಿಂದ ಭೂಮಿಯನ್ನು ದೇವರಿಗಾಗಿ ತಮ್ಮ ಸ್ವಾಧೀನಕ್ಕೆ ತರಬೇಕೆಂತ ದಾವಾ ತಂದರು. ದಾವಾ ಆಗುವ ಸ್ವಲ್ಪ ದಿನದ ಮುಂಚೆ ಅದನ್ನು ಸುಬ್ಬಯ್ಯನು ಮ ಉದಿಯಂಡ ಪೊಚ್ಚೈಯ್ಯನವರಿಗೆ ಮಾರಿದ್ದನು. ಅವರು 2ನೇ ಪ್ರತಿವಾದಿಯಾಗಿ ಸೇರಿಸಲ್ಪಟ್ಟರು. 1832ನೇ ಇಸವಿ ಲಾಗಾಯ್ತು ಈ ಹಳ ಒಮ್ಮೊಬಿ ಎಸ್ಟಾ ವೊಖಿವಮ್ಮ ಪಲ್ಲಿ ... ಯಾಗಿದೆ. 1891ನೇ ಇಸವಿ ವರಗೆ ವ್ಯವಸಾಯಗಾರರ ಹೆಸರು ದೇವರ ಜೋಡಿಯಾಗಿ ಒರದು ಆ ವರುಷ ಟ್ರಸ್ಟಿಗಳ ಹೆಸರು ದಾಖಲಾಗಿದೆ. ಅನಂತರ 1ನೇ ಪ್ರತಿವಾದಿ ಹೆಸರಿಗೇನೇ ಒಪ್ಪಿಬಂದಿಯೇ ದಾಖಲಾಗಿ ಬಂದಿದೆ. ದೇವರಿಗೆ ಭೂಮಿಗ ಹಕ್ಕಿಲ್ಲವಂತಲೂ ಕಂದಾಯಕ್ಕ ಮಾತ್ರ ಹಕ್ಕೆಂತಲೂ ಅದರ ದೇವರ ಕಾರ್ಯವಾದ್ದರಿಂದ ತಾನು ಕಂದಾಯದ ಬದಲಿಗೆ ಬತ್ತ ಹುಲ್ಲು ಕೊಡುತ್ತಿದ್ದದ್ದಾಗಿದೆಯೆಂತಲೂ ಪ್ರತಿವಾದಿಯು ವಾದಾ ಮಾಡಿದನು. ಸಬಾರ್ಡಿನೇಟ್ ಜಡ್ಜಿಯವರು 1ನೇ ಪ್ರತಿವಾದಿಯು ಗುತ್ತಿಗದಾರನಾಗಿ ವ್ಯವಸಾಯ ಮಾಡುತ್ತಿದ್ದದ್ದಲ್ಲವೆಂತಲೂ ಬತ್ತಹುಲ್ಲನ್ನು ಕಂದಾಯ ಬದಲಿಗೆ ಕೊಡುತ್ತಿದ್ದನೆಂದೂ ಅಭಿಪ್ರಾಯಪಟ್ಟು ಇನ್ನು ಮುಂದೆ ಸಹ ಬತ್ತ ಹುಲ್ಲೇ ಕೊಡುತಕ್ಕ ಒಂದರೆ ಸಾಕಂತಲೂ ಊರವರಿಗೆ ಭೂಮಿಯ ಸ್ವಾಧೀನಕ್ಕ ಹಕ್ಕಿಲ್ಲವೆಂತಲೂ ದಾವಾವನ್ನು ಡಿಸ್‌ಮಿಸ್ ಮಾಡಿದರು.

ಊರವರು ಡಿಸ್ಟ್ರಿಕ್ಟ್ ಜಡ್ಜಿಯರಿಗೆ ಅಪ್ಪೀಲ್ ಮಾಡಿದ್ದರ ಮೇಲೆ ಊರವರಿಗೆ ದೇವರಿಗಾಗಿ ಸ್ವಾಧೀನದ ಹಕ್ಕಿದೆ ಎಂತ ಫ಼ೈಸಲ್ ಮಾಡಿದ್ದಾರೆ. 1891ನೇ ಇಸವಿಗ ಮೊದಲು ದೇವರ ಜೋಡಿ ಒಸರ ಹೆಸರು ವ್ಯವಸಾಯಗಾರರಾಗಿ ಬಂದಿರುವದರಿಂದಲೂ, 1832ನೇ ಇಸವಿಯಿಂದಲೇ ದೇವರ ಜೋಡಿಯಾಗಿ ದಾಖಲಾಗಿ ಇರುವದರಿಂದಲೂ 1891ರಲ್ಲಿ ಟ್ರಸ್ಟಿಗಳ ಹೆಸರು ದಾಖಲಾಗಿ ಇರುವದರಿಂದಲೂ ಪ್ರತಿವಾದಿಯ ಹೆಸರು ಟ್ರಸ್ಟಿಯಾಗಿ 1891ನೇ ಇಸವಿಯಲ್ಲಿ ದಾಖಲಾಗಿತ್ತು ಅನಂತರ ಹಕ್ಕುದಾರನಾಗಿ ದಾಖಲಾಗಲು ತಕ್ಕ ಕಾರಣವಿಲ್ಲವೆಂತಲೂ, ಸರಕಾರದವರು ಪೂರ್ತಿ ಕೊಟ್ಟಿರಬಹುದಾದ ಎರಡು ರೂಪಾಯಿಗೂ ಕಡಿಮೆಯಾದ ಮೊಬಲಿಗಾಗಿ ಸಬ್ ಜಡ್ಜಿಯರ ಅಂದಾಜಿನ ಮೇಲೆ ೩ ರೂಪಾಯಿ ಕ್ರಯದ ಧಾನ್ಯ ಮತ್ತು ಹುಲ್ಲು ಕೊಟ್ಟರೆಂತ ನಂಬಲಿಕ್ಕ ಆಗುವದಿಲ್ಲವೆಂತಲೂ, ದೇವರಿಗೆ ಬರೇ ಎರಡು ರೂಪಾಯಿ ಮಾತ್ರ ಸರಕಾರದವರು ಕೊಟ್ಟದ್ದು ಆಗಿರಲಾರದೆಂತಲೂ, ಅಲ್ಲದೆ ಧಾನ್ಯ ಕೊಡುತ್ತಿದ್ದವರು ಹಣ ಕೊಡುವ ಸಂಭವವಿದೆಯೋ ಹೊರತು ಹಣ ಕೊಡುವ ಪದ್ಧತಿಯಾಗಲಾರದೆಂತಲೂ ಪ್ರತಿವಾದಿಯು ಹಾಜರ್‌ಪಡಿಸಿದ ರಶೀತಿಗಳಿಂದಲೇ ಅತನು ಧರ್ಮಾರ್ಥವಾಗಿ ಬತ್ತ ಹುಲ್ಲು ಕೊಡುತ್ತಿದ್ದದ್ದಲ್ಲವೆಂತ ಗೊತ್ತಾಗುತ್ತದೆ ಎಂತಲೂ, ವಾರ ಚೀಟಿ ಇಲ್ಲದೆ ಇದ್ದರೂ ಇತರ ವಿದ್ಯಮಾನಗಳಿಂದ ಗುತ್ತಿಗೆ ವಾರವು ರುಜುವಾತಾಗಿದೆ ಎಂತಲೂ, ಮತ್ತು 2ನೇ ಪ್ರತಿವಾದಿಗೆ ಮಾರಿದ್ದು ರವಿನ್ಯೂ ರೆಗ್ಯುಲೇಶನಿನ 45ನೇ ಸೆಕ್ಷನಿಗೆ ವಿರೋಧವಾಗಿದೆ ಎಂತಲೂ ಜಡ್ಜಿಮೆಂಟಿನಲ್ಲಿ ಬರದಿದೆ.

ಹಿಂದೂ ದೇಶ.

ಮಹಾತ್ಮ ಗಾಂಧಿಯವರು ಕೆಲವು ದಿವಸಗಳು ಡಾರ್ಜಿಲಿಂಗಿನಲ್ಲಿ ಮ ಸಿ. ಆರ್ ದಾಸ್‌ರವರ ಸಂಗಡವಿದ್ದು ವಿಶ್ರಾಂತಿ ತೆಗೆದುಕೊಂಡಿರುವರು. ಇವರಿಬ್ಬರಿಗೆ ನಡೆದ ಚರ್ಚೆಯ ಫಲಿತಾಂಶವಾಗಿ 'ಲಿಬರಲ್' ಮತ್ತು 'ಇಂಡಿಪೆಂಡೆಂಟ್' ಸಂಗಡಗಳು ಕಾಂಗ್ರೆಸ್ಸಿಗೆ ಸೇರಬೇಕಂದು ಇವರಿಬ್ಬರೂ ರುಜು ಮಾಡಿ ಆ ಪಂಗಡಗಳಿಗೆ ಅಪ್ಪೀಲ್ ಮಾಡುವರಾಗಿ ವರ್ತಮಾನ. ಮಹಾತ್ಮರ ಕೋರಿಕೆ ಮೇರೆ ಚರಕಾವನ್ನು ಅವರ ಕಾರ್ಯ ಕ್ರಮದಲ್ಲಿ ಸಾರ್ವಜನಿಕವಾಗಿ ಇಟ್ಟುಕೊಳ್ಳುವದಕ್ಕೆ ಮ ದಾಸ್‌ರವರು ಒಪ್ಪಿಕೊಂಡಿರುವರು.

ಟ್ರೇಡ್‌ಯೂನಿಯನ್ ಕಾಂಗ್ರೆಸ್ ಎಗ್ಸಿಕ್ಯುಟಿವ್‌ರವರು ಬಂಗಾಳದ ವಾಯುವ್ಯಪ್ರಾಂತ್ಯದ ರೈಲ್ವೆ ಮುಷ್ಕರದ ವಿಷಯ ವಿಚಾರಿಸಲು ಮ ಸಿ ಎಫ್ ಎಂಡ್ರ್ಯೂಸ್‌ರವರನ್ನು ನೇಮಿಸಿ ರಾಜಿ ಮಾಡಲು ತಕ್ಕ ಏರ್ಪಾಡು ಮಾಡುವಂತೆ ಅವರಿಗೆ ಅಧಿಕಾರ ಕೊಟ್ಟಿರುವರು.

ಹೈಕೋರ್ಟು ಜಡ್ಜಿಗಳಿಂದ ಬಿಡುಗಡೆ ಮಾಡಲ್ಪಟ್ಟಿದ್ದ ಮ ಸೇತಿಕ್‌ರವರನ್ನು ಉದಯಪುರದ ಮಹಾರಾಜ ಕುಮಾರರು ನೇಮಿಸಿದ ವಿಚಾರಕಮಿಷನಿನವರು ಒಂದು ನಿರ್ಜನಕೋಣೆಯಲ್ಲಿ 5 ವರ್ಷಕಾಲ ಸಜೆವಿಧಿಸಿರುವರು. ಇದು ಬಹಳ ಅನ್ಯಾಯವೆಂದು ಅಲ್ಲಿಯ ಜನರ ಅಭಿಪ್ರಾಯ.

ಗ್ವಾಲಿಯಾರದ ಮಹಾರಾಜರಾದ ಸರ್‌ಮಾಧವರಾವ್‌ಸಿಂಧ್ಯರವರು ಪ್ಯಾರಿಸ್ ಪಟ್ಟಣದಲ್ಲಿ ತಾ 5ರಲ್ಲು ಮೃತಪಟ್ಟರು. ಹೆಣವು ತಾ 6ರಲ್ಲಿ ಪೆರ ಲಾ ಚೇಸ್ ಸ್ಮಶಾನದಲ್ಲಿ ಸುಡಲ್ಪಟ್ಟಿತು. 'ಮಹಾರಾಣಿ' ರೀಜಂಟರವರ ಹುಕುಂ ಮೇರೆ 9 ವರ್ಷ ಪ್ರಾಯದ ರಾಜಕುಮಾರ ಜಾರ್ಜ್ ಜಿವಾಜೀರಾವ್‌ರವರು ಗ್ವಾಲಿಯಾರದ ಮಹಾರಾಜರಾಗಿ ನೇಮಿಸಲ್ಪಟ್ಟಿರುವರು.

ಮೈಸೂರಾಯರ ಎಗ್ಸಿಕ್ಯೂಟಿವ್ ಕೌನ್ಸಿಲಿನ ಸರ್ ಬಿ ಎನ್ ಮಿತ್ರರವರ ನಂತರ ಬೊಂಬಾಯಿಯ ಸರ್ ಚುನಿಲಾಲ್ ಮೆಹ್ತರವರನ್ನು ನೇಮಿಸ ಬರಿಂದು ಬೊಂಬಾಯಿಯಲ್ಲಿ ವರ್ತಮಾನ.

ಮಧುರ ಪಟ್ಟಣದ ಹೆಂಗಸರಿಗೆ ಕೈಸಾಲು ಮಾಡಲು ಉತ್ತೇಜನ ಕೊಡಲಿಕ್ಕಾಗಿ ಅಲ್ಲಿ ಮಹಿಳೆಯರ ಒಂದು ಸಂಘವು ಏರ್ಪಾಡಾಗಿದೆ.

ಸ್ವರಾಜ್ಯ ಪಾರ್ಟಿಯ ಪ್ರಚಾರ ಕೆಲಸಕ್ಕಾಗಿ ಮದ್ರಾಸಿನ ಮ ಸತ್ಯಮೂರ್ತಿಯವರು ಜೂನ್ 1ರಲ್ಲಿ ಬೊಂಬಾಯಿಯಿಂದ ಇಂಗ್ಲೆಂಡಿಗ ಹೊರಟು ಹೋದರು.

ಅಪ್ಪರ್ ಇಂಡಿಯಾದ ಪತ್ರಿಕಾಕರ್ತರ ಸಂಘದ ಕಾರಿಟಿಯವರು ಲೆಜಿಸ್ಲೇಟಿವ್ ಎಸಂಬ್ಲಿಯಲ್ಲಿ ಜರುಗ ತಕ್ಕಿದ್ದ ಕಾಂಟೆಮ್ಟ್ ಆಫ್ ಕೋರ್ಟ್ ಬಿಲ್ ಅಂದರೆ ಕೋರ್ಟಿನ ತಿರಸ್ಕಾರದ ಮಸೂದೆಗೆ ವಿರೋಧಿಸಿ ಲೆಜಿಸ್ಲೇಟಿಗೆ ಇಲಾಖೆಗ ಬರದಿರುವರು.

ಮಂಗಳೂರಲ್ಲಿ ವಿದ್ಯುಚ್ಛಕ್ತಿ ದೀಪ ಹಚ್ಚುವ ಕಾರಖಾನೆ ಇಡುವ ಕಂಪೆನಿಯೊಂದು ಹೊರಟಿದೆ. ಬಂಡವಾಳ ಏಳೂವರೆ ಲಕ್ಷ ರೂಪಾಯಿ.

ವಿದೇಶ.

ಚೈನಾದಲ್ಲಿ ವಿದ್ಯಾರ್ಥಿಗಳ ವಿ ತ್ತ ಕೂಲಿಯವರ ದಂಗೆ ಸಮ್ಮಂಧವಾದ ಮುಷ್ಕರವು ಬಹು ಜೋರಾಗಿದ್ದು ಈಗ ಶಂಗಹಾಯಿ ಮತ್ತು ಹಂಕೌದಲ್ಲಿ ಶಾಂತವಾಗುತ್ತಿದೆ. ಇದರಲ್ಲಿ ರಷ್ಯಾದವರು ಕೈಹಾಕುತ್ತಾರೆಯೇ ಎಂಬುದನ್ನು ಅಮೇರಿಕದವರು ನೋಡುತ್ತಾ ಇದ್ದಾರೆ. ಕೈಫೊಂಗಿನಲ್ಲಿ ಪರದೇಶಿಯರಿಗೆ ವಿರೋಧವಾಗಿ ವಿದ್ಯಾರ್ಥಿಗಳ ಚಳವಳಿಯು ಜೋರಾಗುತ್ತದೆ. ಜಪಾನಿನಿಂದ ಕೆಲವು ಹಡಗುಗಳು ನೌಕಾ ಸೈನ್ಯವನ್ನು ಚಳವಳಿಯ ಸ್ಥಳಗಳಿಗ ತರುತ್ತಿವೆ.

ಮೈಸರಾಯರಾದ ಲಾರ್ಡ್ ರೀಡಿಂಗ್‌ರವರು ಇಂಗ್ಲೆಂಡಿನಿಂದ ಜೂಲೈ 27ರಲ್ಲಿ ಹೊರಟು ಆಗೋಸ್ತು 7ರಲ್ಲಿ ಇಂಡಿಯಕ್ಕೆ ತಲಪುವರಂತೆ.

ಇಂಗ್ಲೆಂಡಿನ ಲಾರ್ಡ್‌ಗಳ ಪಾರ್ಲಿಮೆಂಟಿನಲ್ಲಿ ಹೆಂಗತಿಯರು ತಾವಾಗಿ ಮಾಡುವ ಸಾಲವನ್ನು ಗಂಡಂದಿರು ಕೊಡ ಕೊಡಬೇಕೋ ಬೇಡವೊ ಎಂಬ ವಿಚಾರನಡೆಯುತ್ತಿದೆ. ಕೆಲವರು ಗಂಡಂದಿರು ಕೊಡಬೇಕಂತಲೂ, ಕೆಲವರು ಕೊಡದೆಂತಲೂ ಹೇಳುತ್ತಿರುವರು. ಸ್ಕಾಟ್‌ಲೆಂಡಿನಲ್ಲಿ ಗಂಡನು ಹೆಂಡತಿಯ ಸಾಲಕ್ಕೆ ಜವಾಬ್ದಾರನಲ್ಲವೆಂಬ ಕಾನೂನಿದೆ. ಮೊದಲು ಹೆಂಡತಿಯನ್ನು ಗಂಡನು ಹೊಡೆಯಬಹುದೆಂಬ ಕಾನೂನು ಇತ್ತು. ಆಗ ಹೆಂಗಸರು ಗಂಡಸರಿಗೆ ಹೆದರಿ ನಡೆಯುತ್ತಿದ್ದರು. ಆದರೆ ಈಗ ಆ ಕಾನೂನು ರದ್ದಾಗಿರ ಪ್ರಯುಕ್ತ ಸ್ತ್ರೀಯರು ತಮ್ಮ ಮನಸ್ಸಿಗೆ ಇಚ್ಛೆ ಸಾಲಮಾಡುವಕಾರಣ ಅದನ್ನು ಗಂಡಂದಿರು ಯಾಕೆ ತೆರಬೇಕೆಂದು ಹಾರ್ಲಿಂಗ್ ಪ್ರಭುಗಳು ಹೇಳುತ್ತಾರೆ.

ಗ್ರೀಸಿನ ಆಳಿಕೆಯಲ್ಲಿರುವ ಸಾಮೋಸ್ ದ್ವೀಪದಲ್ಲಿ ಕೆಲವು ಜನರು ದಂಗೆ ಎದ್ದು ಅಲ್ಲಿಯ ಉದ್ಯೋಗಸ್ಥರನ್ನೆಲ್ಲಾ ಸರೆಹಿಡಿದು ಸ್ವಾತಂತ್ರ್ಯವನ್ನು ಸ್ಥಾಪಿಸಲು ಪ್ರಯತ್ನಿಸಿದರು. ಗ್ರೀಕ್ ಸರಕಾರವು ನೌಕಾ ಸೈನ್ಯವನ್ನು ಕಳುಹಿಸಿ ದ್ವೀಪವನ್ನು ಮುತ್ತಿಗೆ ಹಾಕಿ ದಂಗೆ ಎದ್ದವ ಮುಂದಾಳುಗಳನ್ನು ಸೆರೆಹಿಡಿದಿರುವರು.

ಲಾರ್ಡ್ ರೀಡಿಂಗ್‌ರವರ ವೈಸರಾಯಿ ಪದವಿಯ ಅವಧಿಯು ಇದರ ಮೇಲೆ ಒಂದು ವರ್ಷ ಹೆಚ್ಚಿಸುವರೆಂದೂ ಹಾಗೆ ಹೆಚ್ಚಿಸುವದಿಲ್ಲವೆಂದೂ ವಿರೋಧ ಅಭಿಪ್ರಾಯಗಳು ಲಂಡನ್ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಲಾರ್ಡ್ ಲೋಸಾಲ್ಬ ಪೆಯವರು ಅವರ ನಂತರ ವೈಸರಾಯರಾಗುವರೆಂಬ ವದಂತಿಯೂ ಇದೆಯಂತೆ.

ಮದುವೆಯ ಖರ್ಚು ಮೋಸ.

ಮದುವೆ ಕಚೇರಿನ ವಿಷಯ ಸ್ತ್ರೀ ಧರ್ಮ ವು ಹೇಳುವುದೇನಂದರೆ —

ಮದುಮಗಳ ಉಡಿಗೆಯು ಮತ್ತು ಮದ ವೆಯ ಊಟವು ಇಲ್ಲದ ಮದುವೆ ಎಂತಾದ್ದು ? ಆದರೂ ಇವೆರಡೂ ತುರ್ಕಿಯಲ್ಲಿ ಶಿಕ್ಷಿಸಲ್ಪಟ್ಟಿವೆ

ಹಬ್ಬಗ ಳಲ್ಲಿಯೂ, ಶುಭ ಕಾರ್ಯಗಳಲ್ಲಿಯೂ ದುಂದು ಕರ್ಚನ್ನು ನಿಲ್ಲಿಸುವುದಕ್ಕಾಗಿ ಧರ್ಮಗಳನ್ನು ವಿಧಾಯಿಸುವಂತೆ ತುರ್ಕಿ ಸರಕಾರವು ಕಾನ್‌ಸ್ಟ್ಯಾಂಟಿನೋಪಲ್ ಪಟ್ಟದ ಕೌನ್ಸಿಲನ್ನು ಕೇಳಿರುವುದು, ಆ ಕೌನ್ಸಿಲರು ಮದುವೆಗಳಲ್ಲಿ ಪ್ರಾರಂಭಿಸಿರುವರು

ಮದುವೆ ಊಟಗಳನ್ನು ಪೂರ್ತಿಯಾಗಿ ನಿಲ್ಲಿ ಅತಿಥಿಗಳಿಗೆ ಮಿಠಾಯಿ ಮತ್ತು ಪಾನೀಯಗಳನ್ನು ಮಾತ್ರ ಕೊಡಬೇಕೆಂದು ನಿರ್ಧರಿಸಿರುವರು ಮದುವೆ ಮೆರವಣಿಗೆಯಲ್ಲಿ ಐದು ಗಾಡಿಗಳು ಯೂ, ಕಾರ ಗಳಿಂದ ಹೆಚ್ಚು ದೂರದಿಂದ ಕೆಲವರು ಮಾತ್ರ ಇವುಗಳಲ್ಲಿ ಭಾಗಿಗಳಾಗುವರು ಮದುಮಗನು ಮದುಮಗಳಿಗೆ ಒಂದು ಇನಾಮನ್ನು (ಒಂದು ಉಂಗುರವನ್ನು) ಮಾತ್ರ ಕೊಡಬಹುದು ಮದುಮಗಳು ಒಂದು ಕೋಣೆಗೆ ಬೇಕಾದ ಸಾಮಾನು ಗಳನ್ನು ತರಬಹುದು, ವಸ್ತ್ರ ಅವಳ ಸಾವ ಗ್ರಿಗಳು ಎರಡು ಉಡುಪುಗಳಿಗಿಂತ ಮಿರಬಾರದು!

ಇದು ಹಿಂದೂ ದೇಶದಲ್ಲಿಯೂ ಹಿಂಬಾಲಿಸಲು ಯೋಗ್ಯವಾದ ಉದಾಹರಣೆಯಾಗಿದೆ

ಆರೋಗ್ಯಸೂತ್ರ ಸಂಗ್ರಹ.

(1) ಶುದ್ಧವಾದ ಗಾಳಿಯನ್ನು ದಾರಾಳವಾಗಿ ಸೇವಿಸಿರಿ!

(2) ಶುದ್ಧವಾದ ಮತ್ತು ಅಗಲೇ ಸಿದ್ಧಪಡಿಸಿದ ಆಹಾರಗಳನ್ನು, ಕಾಯಿ ಪಲ್ಯ, ಹಣ್ಣುಗಳೊಡನೆ ಸೇರಿಸಿ ಮಿತಿಯಾಗಿಯೂ, ಎಚ್ಚರಿಕೆಯಿಂದಲೂ ಭುಜಿಸಿರಿ

(3) ನಿಮ್ಮ ಮೈಮೇಲಿನ ಚರ್ಮದಲ್ಲಿ ಸ್ವಲ್ಪವೂ ಕೊಳೆ ಸೇರದಂತೆ ಶುಚಿಯಾಗಿಟ್ಟುಕೊಳ್ಳಿರಿ!

(4) ನಿಮ್ಮ ದೇಹವನ್ನು ಶಾಖವಾಗಿರಿಸ ಪುದಕ್ಕೆ ಬೇಕಾದಷ್ಟು ಅನುಕೂಲವಾದ ಬಟ್ಟೆಗಳನ್ನು ಮಾತ್ರ ಧರಿಸಿ ತ್ತ, ಅವುಗಳನ್ನು ಆಗಾಗ ಒದಲಾಯಿಸಿ ಶುಚಿಮಾಡಿರಿ! ಅದಕ್ಕೆ ಮೇಲಿನ ಉಡುಪುಗಳಿಗ ಆಸೆ ಪಡಬೇಡಿರಿ!

(5) ನಿಮ್ಮ ವೈಯಕ್ತಿಕ ಉತ್ಸತ್ತಿಯಾಗುವ ಮಲ ಪದಾರ್ಥಗಳನ್ನು ನಿವೃತ್ತಿಪಡಿಸುವುದಕ್ಕೆ ವ್ಯಾಯಾಮ ಗಳನ್ನು ಕೈಗೊಳ್ಳಿರಿ!

(6) ನಿಮ್ಮ ಅವಯವಗಳ ದಣಿವಾರಿಸುವುದಕ್ಕಾಗಿ ತಕ್ಕಷ್ಟು ವಿಶ್ರಾಂತಿಯನ್ನು ಕೊಡುತ್ತ ಬನ್ನಿರಿ

(7) ಆಹಾರ ವ್ಯವಹಾರ ಮುಂತಾದ ಸರ್ವ ವಿಷಯಗಳಲ್ಲಿಯೂ ಮಿತಿಯಾಗಿರಬೇಕಲ್ಲದೆ, ಯಾವ ಸಂಗದಲ್ಲಿಯೂ ಮಿತಿಮೀರಿ ಹೋಗಬೇಡಿರಿ!

(8) ರೋಗದ ಬಗ್ಗೆ ಪವರ್ತನೆಯಾದರೂ ಹುಟ್ಟಿದ ಹರ್ಷವನ್ನು ಕೊಂದಾಡುವ ಹಾಗೆ ನಿಮ್ಮ ದೇಹದೊಳಗಿನ ನ್ಯೂನತಾ ದೋಷಗಳನ್ನು ಡಾಕ್ಟರುಗಳ ಮೂಲಕ ಪರಿಶೋಧನೆಮಾಡಿಸಿ ತಿಳಿದುಕೊಳ್ಳಿರಿ

ಆ ಚ

FOR SALE.

The following property about ten miles from Mercara, on Somwarpett road, consisting of —

	Rs	As.	P
Wetlands, 30 93 acres or about 1000 batties at Rs 500/ per 100 batties	5000	0	0
Coffee, 33 46 acres at Rs 400/ per acre	13200	0	0
Bane and Jungle, 90 00 acres at Rs 20/ per acre	1800	0	0
Total 154 39 acres	20000	0	0

With a decent upstaired house, out houses, and cooly lines,

is open for sale

Please apply to —

R. Framjee,
Mercara.

12—1

ಪತ್ರವ್ಯವಹಾರ.

ಪ್ರತ್ಯುತ್ತರದಾರರು ನಡೆಸುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ ಸಂ

ಲೇಟ್ ಬಾಸೆಲ್ ಮಿಶ್ಶನಿನವರಿಗೆ ಅವಮಾನವಲ್ಲವೆ?

ಅಯ್ಯಾ,

ಕೊಡಗು ಪತ್ರಿಕೆಯ ಕಳೆದವರ್ಷದ 12ನೇ ಸಂಚಿಕೆಯಲ್ಲಿ ಕ್ರೈಸ್ತರಿಗೆ ಉಪವಾಸ ಲಗ್ನಕ್ಕೆ ಸಮಯವೇ? ಎಂಬುದಾಗಿ ಮಿಸ್ಟರ್ ಸಿ. ಕೆ. ಸೈಮನ್ ಎಂಬವರನ್ನು ದೂಷಿಸಿ, ಲೇಟ್ ಬಾಸೆಲ್ ಮಿಶ್ಶನಿನ ಕ್ರೈಸ್ತರೊಬ್ಬ ಎಂಬವರು ಬರೆದದ್ದನ್ನು ಸರ್ವರೂ ಓದಿರ ಬಹುದೆಂದು ನೆನಸುತ್ತೇನೆ. ಉಪವಾಸದ ದಿನಗಳಲ್ಲಿ ಲಗ್ನ ಮಾಡಿರುವದನ್ನು ತಪ್ಪು ಹಿಡಿದ ಭಕ್ತರು ಸತ್ಯವೇದದ ಯಾವ ಭಾಗದಲ್ಲೂ ಜ್ಞಾನ ಸಂಪಾದಿಸಿದವರೆಂದು ತೋರಾಗದಿಕ್ಕಿಲ್ಲ, ಕಾರಣವೇನಂದರೆ—ಮೂಲ ಬಾಸೆಲ್ ಮಿಶ್ಶನಿನ ಯಾವ ಕ್ರಮದ ಕ್ರಿಯೆಯಾದರೂ ಇಲ್ಲವೆ ಸತ್ಯವೇದದ ಯಾವ ಭಾಗದಲ್ಲಾದರೂ ಉಪವಾಸದ ದಿನಗಳಲ್ಲಿ ಲಗ್ನ ಕಾರ್ಯವನ್ನು ನಡಿಸಬಾರದೆಂದು ಬರೆದಿರುವುದಿಲ್ಲ ಅದೇ ಉಪವಾಸದ ದಿನಗಳಲ್ಲಿ ಹಿಂದೆ ಬಾಸೆಲ್ ಮಿಶ್ಶನಿಗೆ ಸೇರಿದ ಈಗ ಕೆನರೀಸ್ ಮಿಶ್ಶನ್ ಅನ್ನಿಸಿಕೊಳ್ಳುವ ಮಂಗಳೂರಲ್ಲಿ ಜಾಸಲ್ ಮಿಶ್ಶನಿನ ಇಂಗ್ಲೀಷು ಬೋಧಕರೊಬ್ಬರು ಮೂಜೀ ತಿಂಗಳಲ್ಲಿ ತಮ್ಮ ಸ್ವಂತ ಲಗ್ನವನ್ನು ನಡಿಸಿದ್ದು ಮಡಿಕೇರಿಯಲ್ಲಿ ಲೇಟ್ ಬಾಸೆಲ್ ಮಿಶ್ಶನ್ ಅನ್ನಿಸಿಕೊಳ್ಳುವವರಿಗೆ ತಿಳಿಯದೆ ಹೋದದ್ದು ಆಶ್ಚರ್ಯ ಲಗ್ನ ಸಭ್ಯರ ಕಾರ್ಯವು ಉಪವಾಸದ ದಿನಗಳಲ್ಲಿ ನಡೆಯಬಹ ದಾದರೆ ಲಗ್ನ ಕಾರ್ಯವು ಯಾತಕ್ಕೆ ಆಗಬಾರದು? ಎಂಬೀ ವಿಚಾರವು ಆಕ್ಷೇಪಕಾರರ ಗ್ರಹಿಕೆಗೆ ಬಾರದಿರುವದಕ್ಕೆ ಕಾರಣವೇನು? ಸತ್ಯವೇದದ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ ಏನಂದರೆ—' ಅವರು ಕಣ್ಣಿದ್ದರೂ ಕಾಣಲಾರರು, ಕಿವಿ ಇದ್ದರೂ ಕೇಳಲಾರರು, ಅವರ ಹೃದಯವು ಕಠಿಣವಾಗಿದೆ ' ಇಹಲೋಕದ ಅಧಿಪತಿಯು ಅವರನ್ನು ಈ ವಿಷಯಗಳನ್ನು ಗ್ರಹಿಸದಂತೆ ಮಾಡಿದ್ದಾನೆ ಅದ್ದರಿಂದ ಲೇಖಕರ ಲೇಖನವನ್ನು ಧರಿಸಿ ಪತ್ರವನ್ನು ಲೇಪಿಸಿದಕ್ಕಾಗಿ ಪ್ರಚುರಿಸ ವಮಹಾಶಯರು ಇಷ್ಟಾದರೂ ತಮ್ಮ ತಪ್ಪನ್ನು ತಿಳಿಯಲಿ! ಕೊಡಗಿನಲ್ಲಿ ಲೇಟ್ ಬಾಸೆಲ್ ಮಿಶ್ಶನಿಗೆ ಸೇರಿದವರೆಂಬವರ ಪೈಕಿ ಮಡಿಕೇರಿಯಲ್ಲಿರುವ ಎರಡು ಮೂರು ಕುಟುಂಬಗಳಿಗೆ ಫ್ರಾಂಕ್ಲಿನ್ ಮಿಶ್ಶನರ ಮಗಳಾದ ಮೇರೀ ಶಾಂತಿ ಎಂಬವರ ಕ್ರಮವನ್ನು ಹಿಡಿದು ಜೂನ್ ತಿಂಗಳು 4ನೆಲ್ಲು ಪಿಸ್ಟರ್ ಮೇಯರ್ ಚರ್ಚಿನ ಧರ್ಮೋಪದೇಶಕ ಗುರು ಪ್ರಮುಖರು ಸದರಿ ಕ್ರೈಸ್ತಮಂಡಳಿಗಳ ಸಾರವಾಗಿ ಪ್ರಮಾಣ ಪಡಿಸಿ ಬಿಎ ಮದುವೆ ಮಾಡಿಕೊಟ್ಟರು ಕ್ರೈಸ್ತರಲ್ಲಿ ಈ ತರದ ಮದುವೆಯಾದದ್ದನ್ನು ಯಾರೂ ಎಲ್ಲಿಯೂ ಕೇಳಿರಲಿಕ್ಕಿಲ್ಲವೆಂದು ನೆನಸುತ್ತೇನೆ ಬಾಸೆಲ್ ಮಿಶ್ಶನಿನ ಗುರುವಿಕ್ರಮದಲ್ಲಿಯಾದರೂ ಈ ರೀತಿಯಾಗಿ ಮದುವೆ ಆಗುವುದು ಹೇಳಿರುವದಿಲ್ಲ

ತಾವು ಲೇಟ್ ಬಾಸೆಲ್ ಮಿಶ್ಶನಿನವರೆಂದು ಪ್ರತ್ಯೇಕವಾಗಿರುವ ದೇವಸ್ತ್ರೀಯರು ಸಂದರ್ಭ ಪಾಟೀಲಿಯರು, ಮಾಡುವ ಎಲ್ಲಾ ಕೆಲಸಗಳನ್ನು ನೋಡುವಾಗ ಮೂಲ ಬಾಸೆಲ್ ಮಿಶ್ಶನಿನವರಿಗೆ ಅವಮಾನವಾದ ಕೆಲಸವಾಗಲಿಲ್ಲವೇ?

ಬಾಸಲ್ ಮಿಶ್ಶನಿನವರು ಇನ್ನು ತಾವು ಕೊಡಗಿನ ಪರಿಪಾಲನೆಯನ್ನು ಕೊಡಗಿನ ಮಿಶ್ಶನ್ನು ವಶ್ಲೆಯನ್ ಮಿಶ್ಶನಿನವರಿಗೆ ಸಂಪೂರ್ಣವಾಗಿ ಒಪ್ಪಿಸಿ ಬಿಟ್ಟಿದ್ದೇವೆಂತಲೂ 1924ನೇ ಇಸವಿ ಏಪ್ರಲ್ ತಿಂಗಳು ತಾರೀಖು 23ರಲ್ಲು ಬಾಸಲ್ ಪಟ್ಟಣದಿಂದ ಬಾಸೆಲ್ ಮಿಶ್ಶನಿನ ಪ್ರಸಿಡೆಂಟರಾದ ವಿಟ್ಟೆಲ್ಸ್ ಮತ್ತು ಕಾರ್ಯದರ್ಶಿಗಳು ಕೊಡಗಿನ ಕ್ರೈಸ್ತರಿಗೆ ಬರೆದ ಪತ್ರದಿಂದ ತಿಳಿಯುತ್ತದೆ (ಅದು ಸರ್ವರಿಗೂ ದೊರೆತಿರುತ್ತದೆ) ಬಾಸಲ್ ಮಿಶ್ಶನಿನವರು ಕೊಡಗಿಗೆ ಬರುವದಿಲ್ಲವಾದು ದರಿಂದಲೆ ಮಂಗಳೂರಿನ ಕೆನರೀಸ್ ಮಿಶ್ಶನಿನವರು ಕೂಡಾ ಕೊಡಗಿನ ಮಿಶ್ಶನನ್ನು ತಗೆದುಕೊಳ್ಳುವುದಿಲ್ಲ ಸೀಲಗಿರಿಯ ಮತ್ತು ಕೊಡಗಿನ ಮಿಶ್ಶನ್ ಕೆಲಸವನ್ನು ಆಸ್ತಿಯನ್ನೂ ವೆಸ್ಲೆಯನ್ ಮಿಶ್ಶನ್ ಸಂಘದವರಿಗೆ ಸಂಪೂರ್ಣವಾಗಿ ಒಪ್ಪಿಸಿದ್ದಾರೆ ಬಾಸೆಲ್ ಮಿಶ್ಶನಿನವರು ಒದಗುತ್ತಾರೆಂದು ಮಡಿಕೇರಿಯ ಕೆಲವು ಕ್ರೈಸ್ತರು ಅಲ್ಲಲ್ಲಿ ಹರಡಿಸುವ ವಾರ್ತೆ ಒದಗಲು ಅವರು ಸಂಗತಿಗಳನ್ನು ಪತ್ರಿಕೆಗಳಲ್ಲಿ ಬರೆಯುವದಕ್ಕಿಂತ ಸುಮ್ಮನಿದ್ದರೆ ಲೇಸಲ್ಲವೇ? ಕೊಡಗಿನ ಮಹಾಶಯರು ಗಳು ಕೂಡಾ ಇಂಥವರಿಗ ಸ್ವಲ್ಪ ಬುದ್ಧಿವಾದವನ್ನು ಹೇಳುತಿದ್ದರೆ ಒಳ್ಳೇದಿತ್ತೆಂದು ನೆನಸುತ್ತೇನೆ

ಲೇಟ್ ಬಾಸಲ್ ಮಿಶ್ಶನಿನ ಕ್ರೈಸ್ತರಲ್ಲಿ ಇನ್ನೊಬ್ಬ

ದೇವಾಂಗ ಮುತ್ತಾಭಿಮಾನಿಯವರಿಗೆ ಉತ್ತರ.

ಅಯ್ಯಾ,

ಮೇ ತಿಂಗಳ 29ನೇ ತಾರೀಕಿನ ತಮ್ಮ ಪತ್ರಿಕೆಯಲ್ಲಿ ಮಡಿಕೇರಿ ದೇವಾಂಗದ ಮತದ ಸ್ಥಿತಿ ' ಯನ್ನು ಕುರಿತು ಬರೆಯಲ್ಪಟ್ಟ ಲೇಖನವನ್ನು ಓದಿದೆನು ಮುತಾಭಿಮಾನಿಗಳು ತಮ್ಮ ಮತದ ಮೇಲೆ ಇಟ್ಟಿರುವ ಅಭಿಮಾನವು ಮೇರೆಯನ್ನು ಮೀರಿಹೋಗಿದೆ, ಎಂಬುದು ಈಗ ತಾನೇ ನನಗೆ ಗೋಚರಕ್ಕೆ ಒಂದು ನನ್ನನ್ನು ಸಂತೋಷಗೊಳಿಸುತ್ತದೆ ಅವರ ಬಾಣ ಗಯಲ್ಲಿ ಉಲ್ಲೇಖವಾಗಿರುವ ಸಂಗತಿಗಳು ಎಲ್ಲರ ಲಕ್ಷ್ಯವನ್ನು ಸೆಳೆಯುವಂತಿವೆ ಅನ್ಯರಿಂದ (ಮತದವರಿಂದ) ನಾವು ಕಡಿಮೆಯವರೆಂದು ತೋರಿಸಿಕ್ಕೆ ಮಡಿಕೇರಿಯಲ್ಲು ವಾಸಮಾಡಿಕೊಂಡಿರುವ ದೇವಾಂಗದವರ ಪ್ರಾಚೀನ ಚರಿತ್ರೆಯು ಅವಶ್ಯವಿದೆ ಕೇವಲ ಮಂಟಪಗಳ ಮೇಲೆ ಆರೋಪಣೆಯನ್ನು ಹಾಕುತ್ತಾರಾದರೂ, ಅದಕ್ಕೆ ತಕ್ಕ ಪ್ರಮಾಣವನ್ನು ಕೊಟ್ಟಿರುವುದಿಲ್ಲ ಸತ್ಯಾಸತ್ಯದ ನಿರ್ಧಾರಣೆಯು ಹೇಗಿದೆ ನೋಡುವ.

ಸಾಧಾರಣ 18ನೇ ಶತಮಾನದ ಅಂತ್ಯಭಾಗದಲ್ಲಿ ಮೈಸೂರು ಸಂಸ್ಥಾನದ ಹಳ್ಳಿ ಹಳ್ಳಿಗಳ ಪ್ರಾಂತ್ಯದಿಂದ ನಮ್ಮ ಪೂರ್ವಿಕರು ಮಡಿಕೇರಿಗೆ ಬಂದಿರಬಹುದು ಅವರು ಇಲ್ಲಿಗೆ ಒಂದೇ ಹಿಂಡಾಗಿ ಬಂದಿರಲಾರರು ಕಾಲಗತಿಸಿದಂತೆ ಒಂದೋ ಎರಡೋ ಒಕ್ಕಲುಗಳು ಬಂದು ನೆಲೆಯಾಗಿ ಜನಸಂಖ್ಯೆಯು ವೃದ್ಧಿಯಾದದ್ದನ್ನು ಕಂಡು ಒ ರಟೀಕರಣ ಭಾವನೆಯು ಅವರಲ್ಲಿ ನೆಲಸಿತು ಈ ಕಾಲ ನಮ್ಮ ಆಚಾರವಿಚಾರಗಳು ಸರಿಯಾಗಿ ಸಾಗುವಂತೆ ಮಠಾಧಿಕಾರಿಯ ಆವಶ್ಯಕತೆ ಕಾಣಬಂತು ಆಗಿನ ನಮ್ಮ ಜನರು ಬಾದ ಚಂದ್ರಪುರದ ಮಠಕ್ಕೆ ತಮ್ಮ ನ ರನ್ನಾಗಿ ನಡೆದುಕೊಳ್ಳುವುದಕ್ಕಿಂತ ವಿನಂತಿ ಮಾಡಿಕೊಂಡ ಹೇಳಿರುವದಿರ ಬರಮಾಡಿಸಿದ್ದ ಪುರದ ಮಠದ ಗುರು ಸ್ವಾಮಿಗಳು ನಮ್ಮ ಜನರಿಗೆ ಕ ಕೊಡುವಂತೆ ಅಪ್ಪಣೆ ಮಾಡಿದರು ಒದರಂತೆ ಆಗ ಕಾರಿಗಳು ನಮ್ಮ ಜಗಳ ಸರ್ವಸಮ್ಮತಿಯಿಂದ ನಿರ್ಣಯನ್ನು ನಿರ್ಧರಿಸುತ್ತಿದ್ದರು ಹೀಗೆ ಅನೇಕ ವರ್ಷಗಳು ನಮ್ಮ ಜನರು ಶಿಷ್ಯರಾಗಿ ನಡೆದುಕೊಳ್ಳುತ್ತಿದ್ದರು, ಆನಂತರ ನಮ್ಮಂಥವಾಗಿ ಕಲಹ ಹುಟ್ಟು ಕೆಲವರು ಮಾತ್ರ ಸಂಗಡ ನಾಲ್ಕು ನಿಂತರು ಈ ಸಂಗಡದಲ್ಲಿದ್ದವರು ಧ ರ್ಮಾಪೇಕ್ಷ ಸಂತಾನದವರು ಇನ್ನುಳಿದವರೆಲ್ಲರೂ ಚಂದ್ರಪುರದ ಪಕ್ಷ ಸೇರಿದ ಸಂಗಡದವರಾದರು ಜಾತಿಯವರು ಇಬ್ಭಾಗವಾದ ನಂತರ ಕಟ್ಟೆಯ ಪಂಚಾಯಿತಿಯಿಟ್ಟು, ಮಂಟಪಗಳ ಸಭೆಯು ರಾಮಪುರದ ಮಠಕ್ಕೆ ಒಳಪಟ್ಟು ನ್ಯಾಯಸಿದ್ಧವಾಯಿತು ಅದ ಈ ಮೂರ್ತಿ ನ ವರೆಗೆ ಈ ಸಭೆಯು ನಡೆದು ಬರುತ್ತಿದೆ

ಮುತಾಭಿಮಾನಿಗಳಿಗೆ ಕಟ್ಟೆಯ ಸದಸ್ಯರುಗಳ ಒಟ್ಟು ಇಡಿ ಎಂದು ತೋರುತ್ತದೆಯಲ್ಲವೇ? ಕಟ್ಟೆ ಮೇಲಿನ ಪ್ರಮುಖತ್ವವು ಪರಂಪರೆಯಾದದ್ದು ಪಂಚಾಯಿತಿ ಪ್ರಮುಖತ್ವವು ಸಾರ್ವಕಾಲಿಕ ತರದ್ದು ಪ್ರಕೃತ ಇತರ ಜಾತಿಯವರು ಪಂಚಾಯಿತಿಗೆ ಮನ್ನಣೆ ನೇಮಕ ಮಾಡಿರುವುದು ವೇದ್ಯವಾಗಿಯಷ್ಟೆ

ಹಿಂದಿನ ಕಾಲದ ನಮ್ಮ ಜನರು ಅವಿದ್ಯಾವಂತರಿಂದ ನಮ್ಮ ಜಾತಿಯ ಕಾರ ಪಾರು ಆಗಿನ ಸ್ವಲ್ಪ ಮಂತರವೂ ಮತ್ತು ಸ್ವಲ್ಪ ರಗಳೆಯಿಂದಲು ಅದವರಿಗೆ ಕ್ಷಣ ಪ್ರಕೃತಿಯಿಂದ ಅನೇಕ ದೇಶದಲ್ಲಿ ನೆಲಸುತ್ತಿದೆ ಸ್ವತಂತ್ರವಾಗಿ ಇನ್ನೂ ಹಕ್ಕರಾಗಿರಲಿಲ್ಲ ಅದುದರಿಂದ ದೂಷ್ಯ ನೇಮಕಾರಿ ನೇಮಕಮಾಡುವ ಅವಶ್ಯವಿತ್ತು ಈಗಿನ ಪ್ರಸಂಗದಲ್ಲಿ ಜಾತಿಯ ಪ್ರಸಂಗಗಳಿಗೆ ಸಹಕರಿಸುವ ವಿಚಾರವು ಆದಾಯವಾಗಿ ಎನ್ನುತ್ತದೆ ಜಗಳೆಗೆ ಮತ (ಒಟ್ಟು) ಒಲವುಗಳಿದ್ದರ ಎತ್ತ ನಮ್ಮನ್ನು ಬಾರಾಣಿ ಪುದು ಯೋಗ್ಯ ಹಿಂದಿನ ದೇಶಕ್ಕೆ ನವೀನ ಸುಧಾರಣೆಯ ಪದಕ್ಕೆ ಬೇರೆ ಪ್ರಾಂತಕ ಪಾಯಿದೆ ನಂಗೆ ಪ್ರತಿಯಾದರೂ ಹಾಗಿಟ್ಟುಬಿಡು ಮುತಾಭಿಮಾನಿಗಳಿಗೆ ತಿಳಿದಿರಬಹುದಲ್ಲವೇ? ಕಟ್ಟೆಯ ಅರ್ಥವನ್ನು ತಿಳಿದ ಯಾವ ಜನರು ಸ್ವತಂತ್ರ ಇನ್ನುಮುಂದೆ ಸ್ಥಿತಿಸಲು ಕಟ್ಟೆಯ ಅರ್ಥವನ್ನು ತಿಳಿಯದಿದ್ದವರಿಗೆ ಜನರು ಎಚ್ಚರಗೊಳ್ಳಬೇಕು. ನಮ್ಮ ಜನರಲ್ಲಿ ಕಟ್ಟೆಯ ಅರ್ಥವನ್ನು ವರಿ ವಿರುವ ಅಲ್ಲದೆ ಜಾತಿ ಸಭೆಯನ್ನು ಪಾಲಿಸುವ ಅಂತಸ್ತಿಗೆ ಏರಿಸುವ ಯೋಗ್ಯ ಇರುವ ಜನರೂ ಸಹ ಇಲ್ಲ ಕಷವು

ಮಠವು ನಮ್ಮ ಜಾತಿ ಗೌರವವನ್ನು ಕಾಪಾಡಿಕೊಳ್ಳುವದು ಮಾತ್ರವಲ್ಲದೆ ಅಪೀಲ್ ಕೋರ್ಟಿನಂತಿದ್ದು ನಮ್ಮನ್ನು ತೀರ್ಮಾನಿಸುತ್ತದ ಎಷ್ಟೋ ಸಂದರ್ಭಗಳಲ್ಲಿ ಬರಿ ತರು ಸುಖಕರ ಅನುಮತಿಯನ್ನು ಕೇಳಿ ಪಾಲಿಸಿದ್ದೇವೆ ಸಕ್ರಿಯ ವಿಶಾದವನ್ನು ಮಾಡಿದಂತೆ ಹಲವು ಮೇಲು ಮಠವು ಜವಾಬಾಯಿಸಿದೆ ಮಠವು ಅವಶ್ಯವಿದ್ದಲ್ಲ ಹನ್ನ ಪಂಚಾಯಿತಿ ಮಂಡಲಿಗೆ ಕೊಡುತ್ತದೆಂದು ಇದು ತಿಳಿಯುತ್ತಿಲ್ಲವೇ? ಹೀಗಿರುವ ಮೂರ್ತಕ್ಕೆ ರಾಮಚಂದ್ರ ಮಠಾಧಿಕಾರಿಯವರ ಸದಾ ಸಮದಾ ನಮಗೆ ಅಧಿಕಾರಿಬೇಕೆಂಬ ಅಭಿಪ್ರಾಯವಲ್ಲ ಈಗಲೂ ಮುತಾಭಿಮಾನಿಗಳು ಮತ್ತು ಅವರ ಹಿಂಬಾಲಕರು ಒಂದು ಮಹಾ ಸಭೆ ಎಲ್ಲರನ್ನು ತಮ್ಮ ಇಷ್ಟಕ್ಕೆ ಒಳಪಡುವಂತ ಮಾಡಿ ನನ್ನ ಕೈವಶವ ದಲ್ಲವೇ! ಅದರ ನಮ್ಮ ಜನರು ಸ್ವಂತವನ್ನು ಮಾತ್ರ ಬಿಡುವುದಲ್ಲದೆ ಅಪೇಯಪಾನ ಮತ್ತು ವ್ಯಾಗಮನ ಇತ್ಯಾದಿ ಕೆಟ್ಟ ವ್ಯಸನಗಳನ್ನು ತ್ಯಾಗ ಲೀತು ಹೀಗಾದ ಹೂಡಲು ಜಾತಿಯು ಉದ್ಧಾರವು ಪ್ರಸಂಗವಾದೀತು ಎಲ್ಲಿಂದ ಒಂದೀತು?

ಹಿಂದಾಳುಗಳಲ್ಲದೆ ಮುಂದಾಳುಗಳಿಂದ ಯಾವ ಪ್ರಯೋಜನ ಪಡೆಯಬಹುದು ಗೌರವ ಕಾರ್ಯ ಜಾತಿಯ ಏಳಿಗೆಗಾಗಿ ನನ್ನನ್ನು ಸೇರಿಸಲ್ಪಟ್ಟ ಸಲ ಪ್ರಯತ್ನ ಪಟ್ಟರೂ ಜನರು ಕೂಡುವುದೇ ಇಲ್ಲಗಾಗಲಿಕ್ಕೆ ಜನರಲ್ಲಿರುವ ವೈಮನಸ್ಸು ಮತ್ತು ಆಸ ಇವುಗಳೇ ಕಾರಣಗಳು " ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆಯುವದು ' ಎಂಬ ನಾಣ್ಣುಡಿಯು ಇಲ್ಲಿಗೆ ಬರುವುದು. ಜಾತಿಯುವರಲ್ಲಿರುವ ಯಾವ ತರದ ಯಾವಲಿ ನವರು ಅಪ್ಪ, ಚಿಕ್ಕಪ್ಪ, ಅಣ್ಣ, ತಮ್ಮ ಈ ಆಗಿರುವುದರಿಂದ ಕೆಲವು ದೊಡ್ಡವರು ತಮ್ಮ ಅಪ್ಪ ಒಳಗಿನವರ ಕೂಡ ಪಕ್ಷ ವಹಿಸಿಕೊಳ್ಳುವರು. ಹಾಸ್ಯವನ್ನು ಕಳವನ್ನೇ ಹೂಡುವರು ಹೀಗಿರುವುದರಿಂದ ಎಲ್ಲ

ರುಗಳ ಮೇಲೆ ಯಾವತ್ತು ತಪ್ಪುಗಳನ್ನು ಹೊರಿಸುವುದು ತಾನೆ ಹ್ಯಾಗೆ? ಮೆಂಬರರು ವೀಳ್ಯೆಯನ್ನು ಪಡಕೊಳ್ಳುವ ಮಾತಾದರೂ ಹೊಸದಲ್ಲ; ಪರಂಪರೆಯಿಂದ ನಡೆದು ಬಂದದ್ದಾಗಿದೆ ಒಂದುವೇಳೆ ಅಭಿಮಾನಿಗಳೇ ಮೆಂಬರರಾಗಿದ್ದರೆ ಯಾವ ರೀತಿ ಒದುರಾಡುತ್ತಿದ್ದರೋ ಎಂದು ನಾನು ಊಹಿಸಲಾರೆನು. ವ್ಯಕ್ತಿ ಮಾತ್ಸರ್ಯದಿಂದ ಮತಾಭಿಮಾನಿಗಳು ಹೀಗೆ ಬರೆಯುವ ನಿಮಿತ್ತವು ಅವರಿಗೆ ಒದಗಿರ ಬಹುದು. ಸಭೆಯ ವರ್ತನೆಯು ಸರಿಯಿಲ್ಲವಾದರೆ, ಸಭೆಗೆ ಇರತಕ್ಕ ಮರ್ಯಾದೆಯನ್ನು ಅವಹೇಳನ ಮಾಡುವುದರ ಬದಲು ಹೊಸ ಸಭಾ ಚುನಾವಣೆಯಾಗಬೇಕೆಂಬ ಚಳವಳವನ್ನು ಎಬ್ಬಿಸುವುದು ಯೋಗ್ಯವಾದ ರೀತಿಯಲ್ಲವೆ? ವ್ಯಕ್ತಿಕರ್ಮವು ಸಮೀಚೀನವಾಗಿದ್ದರೆ ಜಾತಿ ಕರ್ಮವು ಯೋಗ್ಯವಿದ್ದು, ರಾಷ್ಟ್ರ ಕರ್ಮಕ್ಕೆ ಬಲದೊರೆಯುತ್ತದೆ. ಜಾತಿಯಲ್ಲಿರತಕ್ಕ ಜನರು ಮಾತ್ಸರ್ಯರ್ಗಭಿಮಾನಿಗಳಾಗಿರುವಾಗ ಮತಾಭಿಮಾನಿಗಳಾಗಿರುವುದು ತಾನೆ ಹ್ಯಾಗೆ? ಹೊರಗಿನ ಪ್ರಾಂತ್ಯದ ದೇವಾಂಗದವರ ಹಜ್ಜೆಯನ್ನು ಹಿಂಬಾಲಿಸುವುದು ನಮ್ಮೂರಿನವರಿಗೂ ಯೋಗ್ಯವಿದೆ ಹೊಸ್ತ ತಾನೇ ಇಲ್ಲಿ ನಮ್ಮ ಜಾತಿಯೆಲ್ಲವೂ ಒಗ್ಗಟ್ಟಾಯಿತು. ಅದನ್ನು ಇನ್ನು ಇಬ್ಬಾಗ ಮಾಡುವ ವಿಚಾರವು ಮತಾಭಿಮಾನಿಗಳ ಲಕ್ಷದಲ್ಲಿರುವಂತೆ ತೋರುತ್ತದೆ. ಮರವಿಂದ ಉಂಟಾಗಿರುವ ಕೆಡುಕಾದರೂ ಪನಂಬಿದನ್ನು ಮತಾಭಿಮಾನಿಗಳು ಎಣ್ಣಿಸುವರೇ ?

ಮತಾಭಿಮಾನಿಗಳೇ, ನಮ್ಮ ಕುಲವು ಅಸ್ವಸ್ಥ ಸ್ಥಿತಿಯಲ್ಲಿದೆ ಎಂಬ ಮಾತಿಗೆ ಮನ್ನಣೆಯುಂಟು. ನಮಗೆ ಯಾವ ಮುಖಂಡರೇನು? ಯಾವ ಮೆಂಬರಾದರೇನು? ಜನರ ಏಳಿಗೆಯು ಬರೀ ಮೆಂಬರರ ಮೇಲೆ ಹೇಳದೆ ಎಲ್ಲ ಮತಸ್ಥರ ಸ್ವಾವಲಂಬನವನ್ನು ಆದರಿಸಿವೆ. ಮೆಂಬರರನ್ನು ಕರಿಯದೆ ಸ್ವಾಮ್ಯೇ ಕಾರ್ಯಗಳು ನಡೆಯುತ್ತಿವೆ. ದೇವಸ್ಥಾನದ ಜೀರ್ಣೋದ್ಧಾರದ ಪ್ರಯತ್ನ ನಡೆಯುತ್ತಲಿದೆ. ಈ ಕೆಲಸವನ್ನು ಮೆಂಬರರೇ ಪೂರೈಸುವಷ್ಟು ಶಕ್ತರಾಗಿಲ್ಲ. ಇದು ಹತ್ತು ಜನರ ಜವಾಬ್ದಾರಿಯ ಕೆಲಸ. ದೇವಾಲಯದ ಹಣ ಕಾಸು ಸೂಲಾಗಲಿಕ್ಕಿದೆ. ಗತಿಸಿದ ಮೆಂಬರು ಕಂಚಟ್ಟಿ ಸಂಬಸ್ಪ ಕಟ್ಟಡದಲ್ಲಿ ಲೆಕ್ಕಾಪಟ್ಟಿಗಳು ಮತ್ತು ಹಣಕಾಸು ಇದ್ದವು. ಇವರ ಮನೆಯಲ್ಲಿಯೇ ಇವೆ ಎಂದು ನಿಮಗೆ ತಿಳಿದವೆ. ಮೆಂಬರು ಕೆಲ್ಪ ಕಾಲದಿಂದೀಚೆಗೆ ವಸೂಲಾದ ಹಣವು ಹಾಲಿ ನಿತೆಂಬರಲ್ಲಿದ್ದು ಪೂಜೆ ಪುನಸ್ಕಾರಾದಿಗಳಿಗೆ ವಿನಿಯೋಗವಾಗುತ್ತಿದೆ ಎಂದು ನನ್ನ ಭಾವನೆ. ಜಾತಿ ಸಭೆಗೆ ವಾರ್ಷಿಕವಿಲ್ಲ. ಆದ ದರಿಂದ ವರದಿಯೂ ಇಲ್ಲ. ಮತಾಭಿಮಾನಿಗಳ ಮೈಯು ಕೇವಲ ನವೀನ ನಾಗರೀಕತೆಯ ಸಿಂಡನ್ನೇ ಚಿಸುತ್ತದೆ. ಪ್ರಾಚೀನ ಸಂಪ್ರದಾಯವು ಮತ್ತು ಯೋಗ್ಯವಿರುವ ನವೀನ ನಾಗರೀಕತೆಯ ವಿಚಾರಗಳು ಹೊಂದಿಕೊಂಡು ಹೋಗುವುದು ಯೋಗ್ಯವೆಂದು ಅಭಿಜ್ಞರು ಸಂಬರ.

ಮತಾಭಿಮಾನಿಯ ಹತ್ತಿರ ನೆಂಟ.

" ಕೊಡಗು ಕರ್ನಾಟಕ "

ಕ ಪ್ರಿಯರೆ,

ಈಗ ಎಲ್ಲಾ ಕರ್ನಾಟಕ ಪ್ರಾಂತ್ಯಗಳಲ್ಲಿಯೂ ಕನ್ನಡ ವಿಷಯವಾದ ಚಳವಳಗಳೂ, ಅದರ ಪುನರುಜ್ಜೀವಿತ ಮಾನ್ಯವಾದ ತಕ್ಕ ಏರ್ಪಾಡುಗಳೂ ನಡೆಯುತ್ತಿದ್ದು ದುರ್ಭಾಗ್ಯ ಈ ನಮ್ಮ ಕೊಡಗು ಸುಮ್ಮನೆ ಕಣ್ಣು ಮುಚ್ಚಿಕೊಂಡು ಕುಳಿತಿರುವದು. ಬಹು ಆಶ್ಚರ್ಯಕರವಾದ ಸಂಗತಿ. ಇಂಥಾ ತಟಸ್ಥಭಾವವನ್ನು ವಹಿಸಿಕೊಂಡಿರುವ ಈ ನಮ್ಮ ಕೊಡಗು ಕರ್ನಾಟಕಕ್ಕೆ ಸೇರಿದ್ದಲ್ಲವೋ ಸಂಶಯವು ಕಾಣಬರುವದು. ಸಾಮಾನ್ಯ ಕೊಡಗಿನ ಕು ಹಲವು ತರದದ್ದಾಗಿದ್ದರೂ ಬರಹ ಪೂರ್ತಿ ಕನ್ನಡದೆ. ಹೀಗಿರುವಾಗ ಕೊಡಗೂ ಸುಮ್ಮನೆ ಕುಳಿತಿರುವದು ಉಚಿತವಲ್ಲ. ಒಂದುವೇಳೆ ಸ್ವತಂತ್ರವಾಗಿ ಮುಂದರಿಯುವರ ಸಾಧ್ಯವಿಲ್ಲವಾದರೂ ಮುಂದುವ ಇತರ ಭಾಗದ ಕರ್ನಾಟಕ ಪ್ರಾಂತಿಕ ಸಭೆಯ ಒಂದಿಗೆ ಸೇರಬಹುದು ಒಳ್ಳೇ ಅವಕಾಶವಿದೆ. ಈ ಸನ್ನಾಹದ ಎಬ್ಬಿಸುವರ ಯಾರ ಭಯವೂ ಇಲ್ಲ. ಇದರಿಂದ ಕೇಡಿಯೂ ಇಲ್ಲ. ಆದರ ಈ ಚಳವಳವು 'ಪೂರ್ಣ ಸ್ವರಾಜ್ಯ' ಎಂಬ ವಾದದ ಮುಕ್ಕಾಲು ಭಾಗ ನಡೆದಂತಾಗುವುದು. ಆಡುವ ಭಾಷೆಯೊಂದು, ಓದುವ ಒಂದು, ವ್ಯವಹಾರ ಮಾಡುವ ಉಡುಪು ಮುಂತಾದವುಗಳೊಂದಿರುವ ಯಾವ ಜನಾಂಗವೇ ಆಗಲಿ ಅದು ಜನಾಂಗವೆಂದಾಗುವದಿಲ್ಲ. ಇದಕ್ಕೆ ಪ್ರತಿಯೊಂದು ಪೇಕ್ಷೆಯಿಂದಲೇ ಆಗಬೇಕಾಗಿದೆ. ಈ ಪುಟ್ಟವು ಕೊಡಗಿಗೆ ಹೆಚ್ಚು ಇದೆ ಎಂದರೂ ತಪ್ಪಾಗಲಾರದು. ವ್ಯವಹಾರ ಮೂರೂ ಒಂದಾಗಿರುವ ಜನಾಂಗವು ಪರಾಧೀನತ್ವಕ್ಕೆ ಹೊಂದಿಯೇ ಇರಬೇಕೆಂಬ ನಿಯಂತೆ ಈ ಮೂರನ್ನು ಒಂದುಕೂಡಿಸುವ ಕಾರ್ಯವನ್ನು ಬೇಗನೆ ಇಲ್ಲಿಯ ಮುಖಂಡರು ಉತ್ಸಾಹಪಡಬೇಕು. ಇಲ್ಲಿ ಕರ್ನಾಟಕದ ಜಾಗೃತಿಯೇ ಇಲ್ಲ. ... "ಕೊಡಗು" ಪತ್ರಿಕೆ ಹುಟ್ಟಿದ ಬಳಿಕ ಸ್ವಲ್ಪ ಜಾಗೃತಿ ತಂದುಬಂತಾಗಿದೆ. ಆ ಮೇಲೆ ಒಂದು **ಪತ್ರಿಕೆಯೂ ಒಂದು ಮಾಸ ಪತ್ರಿಕೆಯೂ ಹುಟ್ಟಿತು.** ಈಗಾಗಲೇ ಇನ್ನೊಂದು ವಾರ ಪತ್ರಿಕೆಯು ಹುಟ್ಟುವುದೆಂಬ ವದಂತಿ ಇದೆ. ಅದಲ್ಲದೆ ಇಲ್ಲಿ ಯಾವ ಕನ್ನಡಕ್ಕೆ ಸಮ್ಮಂಧಪಟ್ಟ ಪುಸ್ತಕಗಳಾಗಲಿ ಕವಿತೆಗಳಾಗಲಿ ಬೆಳೆಯಲಿಲ್ಲ. ಮತ್ತು ವಾಚನಾಲಯ, ಪುಸ್ತಕಾಲಯ ಮೊದಲೇ ಇಲ್ಲ, ಮುಂದೆ ಬೆಳೆದೂ ಇಲ್ಲ, ಇದೆಲ್ಲಕ್ಕೂ ಇಲ್ಲಿ ಉತ್ತೇಜನವೂ ಇಲ್ಲ, ಮತ್ತು ಉತ್ಸಾಹಿಸತಕ್ಕವರೂ ಇಲ್ಲ. ಆ ವಿಷಯಕ್ಕೆ ತಕ್ಕುದಾದ ಏರ್ಪಾಡು ನಡೆದಿರುವುದಿಲ್ಲ. ದೇಶದ ಹೆಸರುವಾಸಿಗೂ, ಪ್ರಸಿದ್ಧಿಗೂ ಸರ್ವ ದೇಶಗಳನ್ನು ಸಂಚರಿಸತಕ್ಕ ಇಂಥಾ ಪತ್ರಿಕೆಗಳೂ, ಕವಿತ್ವಗ್ರಂಥ ರಚನೆಗಳೇ ಮುಖ್ಯವಾದವುಗಳಾದ್ದರಿಂದ ಈ ವಿಷಯಕ್ಕೆ ದೇಶದವರು ತಕ್ಕ ಏರ್ಪಾಡು ಮಾಡಬೇಕಾಗಿದೆ. ಪುಸ್ತಗಳನ್ನು ಪ್ರಸಿದ್ಧಿಪಡಿಸುವದಕ್ಕೆ ವಾಸನೆಯು ಹೇಗೋ ಹಾಗೆಯೇ ದೇಶದ ಉನ್ನತಿಗೆ ದೇಶದ ವಾಙ್ಮಯವೇ ಮುಖ್ಯ ಕಾರಣ. ಕರ್ನಾಟಕ ಪ್ರಚಾರಕ್ಕಾಗಿ ಕರ್ನಾಟಕ ಕಾಂಗ್ರೆಸು ಕಮಿಟಿಯವರು ಜಿಲ್ಲೆ ರೆ ಏಳು ಜಿಲ್ಲೆಗೆ ಒಬ್ಬೊಬ್ಬರನ್ನು ನಿಯಮಿಸಿ, ಕೊಡಗು, ಮೈಸೂರು, ನಿಜಾಮುವನ್ನು ಬಿಟ್ಟಿರುವದು ಬಹಳ ವ್ಯಸನಕರ. ಈ ಸಂಗತಿಯನ್ನು 'ಕನ್ನಡಿಗ' ಪತ್ರಿಕೆಯು ಅವರಲ್ಲಿ ಪ್ರಶ್ನಿಸಿದ್ದರೂ ನಮ್ಮ "ಕೊಡಗೂ" ಕೂಡ ಒಂದು ಮಾತು ಕೇಳುವದು ಉತ್ತಮ. ನಮ್ಮ ಕೊಡಗಿನಲ್ಲಿ ಕೂಡ 'ಕರ್ನಾಟಕ ಸಂಘ' ವೆಂಬ ಒಂದು ಚಿಕ್ಕ ಸಂಘವನ್ನಾದರೂ ಸ್ಥಾಪಿಸಿಕೊಂಡು ಅದರ ಮೂಲಕ ಕೊಡಗಿನ ನಡೆ ನುಡಿ ವ್ಯವಹಾರಗಳನ್ನು ಆದಷ್ಟು ಮಟ್ಟಿಗೆ ತಿದ್ದಿಕೊಂಡು ಸರಕಾರದ ಕಾರ್ಯಕ್ರಮಗಳ ಸ್ವಲ್ಪವನ್ನು ದೇಶ ವ್ಯವಹಾರಕ್ಕೆ ತಕ್ಕಹಾಗೆ ಇಡಬೇಕೆಂದು ಸೂಚಿಸಿಕೊಂಡು ಕನ್ನಡಕ್ಕೆ ಆದಷ್ಟು ಉತ್ತೇಜನ ಕೊಡುವದು ಬಹಳ ಒಳ್ಳೇಯದು. ಒಂದುವೇಳೆ ಸರಕಾರವು ನಮ್ಮ ಕಡೆಗ ತಿರುಗೂಡದಿದ್ದರೂ ನಮ್ಮ ಕಾರ್ಯಕ್ರಮಗಳನ್ನು ಸರಿಮಾಡಿಕೊಳ್ಳುವರ ಯಾವ ಅಡಚಣೆಯೂ ಇರುವದಿಲ್ಲ. ಹಾಗೆ ಕೊಡಗು ದೇಶವೇ ಇದೇ ರೀತಿಯಲ್ಲಿ ಬದಲಾಯಿಸಲ್ಪಟ್ಟರೆ ಸರಕಾರವು ಸ್ವತಃವೇ ತನ್ನ ಕಾರ್ಯಕ್ರಮವನ್ನು ಬದಲಾಯಿಸುತ್ತದೆ. ಆದ್ದರಿಂದ ಮೊಟ್ಟಮೊದಲು ನಮ್ಮನ್ನೇ ನಾವು ತಿದ್ದಿಕೊಳ್ಳತಕ್ಕ ಹಂಚಿಕೆಯನ್ನೇ ಮಾಡಬೇಕು. ಸಾಮಾನ್ಯ ಈ ಸ್ಥಾಪಿಸಲ್ಪಡುವ ಕರ್ನಾಟಕ ಸಂಘದವರು ಇಲ್ಲಿ ನಡೆಯತಕ್ಕ ಪತ್ರಿಕೆಗಳಿಗೂ, ಇಲ್ಲಿನ ವಿದ್ಯಾರ್ಥಿಗಳು ಮತ್ತು ಪಂಡಿತರು ಮಾಡತಕ್ಕ ಕವಿತ ಗ್ರಂಥ ರಚನೆ ಮುಂತಾದವುಗಳಿಗೆ ಆದಷ್ಟು ಉತ್ತೇಜನ ಕೊಡಬೇಕು. ಸಾಮಾನ್ಯವಾಗಿ ಯಾವ ಕೆಲಸ ಮುಂದರಿಸುವದಕ್ಕೂ ಅದನ್ನು ನಡಯಿಸತಕ್ಕ ಜನರೂ, ಹಣವೂ ಮುಖ್ಯವಾದುದು. ಇವೆರಡೂ ಇದ್ದರೆ ಪರಾಪೇಕ್ಷೆ ಇಲ್ಲವೇ ಇಲ್ಲ, ಅದೇ ಎರಡರ ದುರ್ಭಿಕ್ಷವೇ ಎಲ್ಲಿಯೂ ಇರುವದಾದರೂ ಕೊಡಗಿಗೆ ಸ್ವಲ್ಪ ಹೆಚ್ಚು. ಅದರಲ್ಲೂ ಎರಡನೆಯದಾದ ಹಣದ ಅಭಾವವೇ ಇಲ್ಲಿ ಹೆಚ್ಚಾದ್ದರಿಂದ ಯಾವ ಚಳವಳಕ್ಕೂ ಕ್ಷೀಣತೆಯುಂಟಾಗುವುದು, ಮತ್ತೂ ಒಗ್ಗಟ್ಟೂ ಸಹ ಬಹು ಅತ್ಯಲ್ಪ. ಯಾವನಾದರೂ ಮುಂದೆ ಮೈಗೊಟ್ಟು ಕೆಲಸ ಮಾಡುವದಾದರೆ ಅತನ ತಪ್ಪುಗಳನ್ನೆಲ್ಲಾ ಪೂರ್ತಿ ಹುಡುಕುವದೂ, ಅತನ ಮೇಲೆ ಇಲ್ಲದ ಸಲ್ಲದ ಆರೋಪ ಹೊರಿಸುವದೂ ಮುಂತಾದ ಕಾರ್ಯಗಳನ್ನು ಹಿಂದೆ ನಿಂತವರು ಮಾಡುವದರಿಂದ ಪುರೋಭಿವೃದ್ಧಿಗೆ ಸ್ವಲ್ಪ ಕೆಡಕುಂಟಾಗುತ್ತದೆ, ಯಾವನು ಮುಂದೆ ನಿಂತು ಕೆಲಸಕ್ಕೆ ಆರಂಭಿಸುವನೋ ಅವನ ಹಾಗೆಯೇ ನಾವು ಪ್ರಯತ್ನಿಸಬೇಕಂಬಾಗಲಿ, ಇಲ್ಲವೆ ಆತನನ್ನು ಸುಧಾರಿಸಿಕೊಂಡು ಆತನಿಗೆ ಬೆಂಬಲ ನಿಲ್ಲುವದಾಗಲಿ ಮಾಡುವದಿಲ್ಲ. ನಾವು ನಮ್ಮ ಮುಖ್ಯ ವ್ಯವಹಾರ ಧರ್ಮವನ್ನು ಮರೆತುಕೊಂಡು ಬೇರೆ ಯಾವ ಚಳವಳ ಎಬ್ಬಿಸಿದರೂ ಪ್ರಯೋಜನವಿಲ್ಲ. ನಾವು ಯಾರು ? ನಮ್ಮ ನಡತೆ ಯಾವದು ? ಎಂಬ ವಿಚಾರವೇ ನಮ್ಮ ಒಂದನೇ ಮುಖ್ಯ ಕರ್ತವ್ಯವಾಗಿದೆ. ಭಾಷಾಭಿವೃದ್ಧಿಯು ಆದ ಹಾಗೆಲ್ಲಾ ಜ್ಞಾನಾಭಿವೃದ್ಧಿಯಾಗುತ್ತದೆ, ಜ್ಞಾನವನ್ನೂ ಕೀರ್ತಿಯನ್ನೂ ಸಂಪಾದಿಸುವದೇ ಮಾನವ ಜನ್ಮವೆತ್ತಿದ ಪ್ರತಿಯೊಬ್ಬನ ಕರ್ತವ್ಯವು. ಪ್ರತಿಯೊಬ್ಬ ಮನುಷ್ಯನೂ 'ತನ್ನಲ್ಲಿ ಇನ್ನೊಬ್ಬನು ಹೇಗೆ ವರ್ತಿಸಿದರೆ ಒಳ್ಳೇಯದೆಂದು ಕಾಣುತ್ತದೊ " ಹಾಗೆ ತಾನು ಇತರರಲ್ಲಿ ನಡೆದುಕೊಳ್ಳುವ ಕರ್ತವ್ಯತೆಯನ್ನು ಎಲ್ಲವರೂ ತಿಳಿದುಕೊಂಡರ ಒಗ್ಗಟ್ಟಿಗೆ ಕುಂದಕ ಬರುವದೇ ಇಲ್ಲ. ಇಂಥಾ ಮಹತ್ಕಾರ್ಯಗಳೆಲ್ಲವೂ ಒಗ್ಗಟ್ಟಿನ ಬಲದಿಂದಲೇ ಆಗವೇಕು. ಆದ್ದರಿಂದ ಪ್ರತಿಯೊಬ್ಬರಿಗೂ ಪರಸ್ಪರ ಪ್ರೀತಿಯು ಅವಶ್ಯಕವು. ನಾವು ಯಾವಾಗಲೂ ಕಾರ್ಯಮಾಡುವ ಮನುಷ್ಯನ ಮೇಲೆ ದೃಷ್ಟಿ ಇಡುವದು ಶ್ರೇಯಸ್ಕರವಲ್ಲ. ಆತನಾ ಕಾರ್ಯದಲ್ಲೂ, ಕಾರ್ಯದ ಪರಿಣಾಮದಲ್ಲೂ ಕಣ್ಣಿಟ್ಟು ಕುಂದುಕೊರತೆಗಳನ್ನು ಸರಿಪಡಿಸಿಕೊಳ್ಳಬೇಕು. ಮನೆಯನ್ನ ಇಲ್ಲವೆ, ಗ್ರಾಮ, ನಾಡು, ಅಥವಾ ದೇಶದಲ್ಲಿ ಎಲ್ಲವರು ಸೇರಿ ನಡೆಸತಕ್ಕ ಕಾರ್ಯಗಳ ಕಾಲವು ಸಧ್ಯಕ್ಕಿಲ್ಲ, ಪರಂತು ಆಯಾ ದಿಕ್ಕಿನ ಒಂದೆರಡು ಜನರು ಮಾತ್ರ ಉತ್ಸಾಹಪರರಾಗಿ ಕೆಲಸ ನಡಸುವುದರಿಂದ ಅವರ ಮೇಲೆ ಇಲ್ಲದ ಆರೋಪ ಹೊರಿಸುವ ಬದಲಿಗೆ ಆರೋಪಿಸುವವನೇ ಚನ್ನಾಗಿ ಮುಂದೆ ನಿಂತು ನಡೆಸುವದು ಉತ್ತಮ. ನಾವು ಕರ್ನಾಟಕ ಪ್ರಾಂತ್ಯದವರಾಗಿದ್ದುಕೊಂಡು ಈ ಮೊದಲೇ ನಮ್ಮ ನಡೆ ನುಡಿಯ ವಿಷಯದಲ್ಲಿ ತಕ್ಕ ಏರ್ಪಾಡು ಮಾಡಬೇಕಾಗಿತ್ತು. ಅದಲ್ಲದೆ ಈಗ ಎಲ್ಲಾ ಇತರ ಪ್ರಾಂತ್ಯದವರು ಬಹಳ ನಮ್ಮಿಂದ ಮುಂದೆ ಸಾಗಿದ್ದರಿಂದ ಇನ್ನಾದರು ಎಚ್ಚತ್ತು ಬೇಗನೆ ಅವರ ಸಾಲನ್ನು ಸೇರಿಕೊಳ್ಳುವದು ಬಹು ಉತ್ತಮ. **ಈಗ ಈ ವಿಷಯದಲ್ಲಿ ಎಲ್ಲಾ ಕಡೆಗಳಲ್ಲಿ**ಯೂ ಬಹಳ ಚಳವಳ ಹತ್ತಿಕೊಂಡು ಬಹುಬೇಗನೆ ಮುಂದರಿಯುವದರಿಂದ ನಮಗೆ ಸುಮ್ಮನೆ ಕುಳಿತುಕೊಳ್ಳುವರ ಇನ್ನು ಸಮಯವಿಲ್ಲ. ಆದ್ದರಿಂದ ಕರ್ನಾಟಕದ ಜಾಗೃತಿಗೆ ಮುಂದೊತ್ತುವ ವಿಷಯದಲ್ಲಿ ಕೊಡಗಿನ ಮುಂದಾಳುಗಳು ಮುಂದೆ ನಿಂತು ಕೊಡಗಿನ ಮನಸನ್ನು ಬಿಡಿಸಿ ತಕ್ಕ ಹಾಗೆ ಪ್ರಯತ್ನಿಸದಿದ್ದರೆ ನಾವು ಬಹಳ ಹಿಂದೆ ಬೀಳಬೇಕಾಗಿ ಬರುವದೆಂದು ಕಾಣುತ್ತದೆ.

ವಿ. ಬಿ.

ನಿಜ ವರ್ತಮಾನ.

ಮಹನೀಯರೇ,

ಕೆಲವು ಸರ್ಕಾರಿ ಉದ್ಯೋಗಸ್ಥರು ಹೊಸದಾಗಿ ಪ್ರಾರಂಭವಾಗುತ್ತೆಂತ ವರ್ತಮಾನವಿರುವ ಪತ್ರಿಕೆಗೆ ಚಂದಾದಾರರನ್ನು ಒದಗಿಸಿಕೊಡಲು ಪ್ರಯತ್ನಿಸುತ್ತಿದ್ದಾರೆಂತಲೂ ಅದಕ್ಕೆ ಸರ್ಕಾರದ ಹಿಮ್ಮತ್ತು ಇದೆಯೆಂಬ ವರ್ತಮಾನವನ್ನು ಹರಡುತ್ತಿದ್ದಾರೆಂತಲೂ ಭರವಸೆ ವರ್ತಮಾನ ಸಿಕ್ಕಿದ ಕಾರಣ ಸ್ಪೆ. ಕೆ ಪಿ ಚಣ್ಣಪ್ಪನವರು, ಮೆ. ಸಿ ಎನ್. ವೆಂಕಪ್ಪಯ್ಯನವರು ಮತ್ತು ನಾನು ಸಹ ಕಮಿಷನರಲ್ಲಿ ಈ ಸಂಗತಿಯನ್ನು ಮಾತಾಡಸಿಕ್ಕಾಗಿ ತಾ 10—5—'25ರಲ್ಲು ಅವರನ್ನು ನೋಡಿದೆವು. ಆ ಪತ್ರಿಕೆಗೆ ಸರ್ಕಾರದ ಸಹಾಯವಿರುವುದು ನಿಜವಲ್ಲವೆಂತಲೂ, ಸರ್ಕಾರದ ಉದ್ಯೋಗಸ್ಥರು ಅದಕ್ಕೆ ಚಂದಾದಾರರನ್ನು ಒದಗಿಸುವ ಪ್ರಯತ್ನಪಡಲು ಕಾರಣವಿಲ್ಲವೆಂತಲೂ, ನಿಮಗೆ ಸಿಕ್ಕಿದ ವರ್ತಮಾನದಲ್ಲಿ ನಿಜವಿದೆಯೋ ಎಂದು ವಿಚಾರಿಸುತ್ತೇನೆಂತಲೂ, ಹಾಗೆ ಕೆಲಸ ಮಾಡುವ ಉದ್ಯೋಗಸ್ಥರು ನಿಮಗೆ ತಿಳಿದು ಒಂದಲ್ಲಿ ನನಗೆ ತಿಳಿಸಬೇಕೆಂತಲೂ, ಕಮಿಷನರವರು ಜವಾಬು ಕೊಟ್ಟರು.

ಈ ನಮ್ಮ ಭೇಟಿಯ ವಿಷಯದಲ್ಲಿ ಕೆಲವರು ತಪ್ಪು ತಿಳುವಳಿಕೆಯನ್ನು ಪ್ರಕಟಿಸುತ್ತಿರುವುದರಿಂದ ನಿಜಸಂಗತಿಯನ್ನು ಈ ಮೂಲಕ ಪ್ರಕಟಿಸಿದ್ದಾಗಿದೆ

ಪಿ. ಟಿ ೭ ಕಾಳಪ್ಪ.

ಕೊಡಗಿನ ಯುವಕರ ಪರದೇಶಗಳಿಗೆ ಹೋಗುವಿಕೆ.

ಅಯ್ಯಾ,

ಸಧ್ಯಕ್ಕೆ ಈಗ ಕೊಡಗಿನಲ್ಲಿ ಸರಕಾರಿ ಚಾಕರಿಗಳು ಕಮ್ಮಿಯಾಗಿವೆ, ಚಾಕರಿಗಳು ಇರುವುದಕ್ಕಿಂತ ಉಮೇದುವಾರರ ಸಂಖ್ಯೆ ಬಹಳ ಹೆಚ್ಚಿರುವದೆಂದೇ ಎನ್ನಬಹುದು. ಚಾಕರಿಗಳ ಅಭಾವದಿಂದ ಜೀವನ ನಡಿಸಲು ಆಗದೆ ಇರುವಾಗ ಯುವಕರು ಪರದೇಶಗಳಿಗೆ ಹೋಗಬಾರದೇನು ?

ಜೀವನವನ್ನು ಹುಡುಕುತ್ತಾ ಪರದೇಶಗಳಿಗೆ ತೆರಳುವವರಲ್ಲಿ ಈ ವರೆಗ ಕಂಡು ಬಂದವರಲ್ಲಿ ಜಾಸ್ತಿ ಸಂಖ್ಯೆ ಯಸ್. ಎಲ್. ಸಿ ಯವರು. ಇವರು ಹೋಗಿ ತಮ್ಮ ದೇಹವನ್ನೇನೋ ಕಾಪಾಡಿಕೊಳ್ಳುವರು. ಅಷ್ಟರ ಮಟ್ಟಿಗೆ ನಮ್ಮ ಪ್ರಾಂತ್ಯವು ಅಫಲವತ್ತಾಗಿ ಹೋಗಿಲ್ಲ—ಚೆನ್ನಾಗಿ ಕಷ್ಟಪಟ್ಟರೆ ನಮ್ಮ ದೇಶದಲ್ಲಿಯೇ ಜೀವನವನ್ನು ಸಂಪಾದಿಸಿಕೊಳ್ಳುವಲ್ಲಿ ತೊಂದರೆಯಿಲ್ಲ. ಏಕೆಂದರೆ ಹೊರಗೆ ಹೋದಲ್ಲಿ ತಮ್ಮ ಹೆಸರು ಖ್ಯಾತಿಯುತವಾಗಿ ಮಾಡಲಿಕ್ಕಾಗಲೀ, ತುಂಬಾ ಹಣಸಂಪಾದನೆ ಮಾಡುವುದಕ್ಕಾಗಲೀ ಸಾಧ್ಯವೇ ಇಲ್ಲ. ಏನು ? ಸಾಲೋಮೋನನಗನಿಗಳಾಗಲೀ ಬ್ರಿಟಿಷರಿಗೆ ಇಂಡಿಯಾವಿರುವ ಹಾಗೆ ದೊಡ್ಡ ದೊಡ್ಡ ಹುದ್ದೆಗಳನ್ನು ಕರೆದು ದಯಪಾಲಿಸುವ ಅದಾವ ಪ್ರಾಂತವಾಗಲೀ ನಮಗಿಲ್ಲ, ಎನ್ನುವಲ್ಲಿ, ಏರೇ ಕೆಲವು ವರ್ಷ ಕಾಲರ್ ಟೈ ಕಟ್ಟಿ, ಕಾಲಿಗೆ ಪಾದರಕ್ಷೆಗಳು ಹಾಕಿಕೊಂಡು ದೊಡ್ಡ ದೊಡ್ಡ ಪಟ್ಣಗಳಲ್ಲಿ ತಿರುಗಾಡ ಬಯಸುವವನ್ನು ಪಡ್ಡಕ್ಕೆ. ಆದೇಕೆ ಹೊರಗೆ ಹೋಗಬೇಕು ? ಕೆಲವು ಸಮಯಗಳಲ್ಲಿ ನಮ್ಮ ಚೀಫ್ ಕಮಿಷನರವರೂ, ಕಮಿಷನರರೂ, 'ಈಗಲೀಗ ಕೊಡಗಿನ ಯುವಕರು ಹೊರಗೆ ಹೋಗುತ್ತಿರುವುದು ನಮಗೆ ಬಹಳ ಹರ್ಷವನ್ನುಂಟುಮಾಡುತ್ತಿದೆ. ಇದರಿಂದ ಖಂಡಿತವಾಗಿ ಕೊಡಗಿಗೆ ಶುಭವಾಗಲಿಕ್ಕಿದೆ.' ಎಂದು ಆಡಿರುವರು. ಈ ತತ್ವವು ನಮಗೆ ಹೇಗೆ ಸರಿಹೋಗುವುದೋ ತಿಳಿಯದು !

ಖಂಡಿತವಾಗಿಯೂ ದೇಶಸಂಚಾರ ಮಾಡುವುದರಿಂದ ಒಳ್ಳೆಯದುಂಟಾಗುವುದಿಲ್ಲವೆಂದು ನನ್ನ ಮತವಲ್ಲ. ಆದರೆ ಈ ಸಮಯಗಳಲ್ಲಿ ಜೀವನಕ್ಕಾಗಿ ಹೊರಗೆ ಹೋಗುವವರಲ್ಲಿ ಯಾರಿಗೂ ಶುಭವಾಗಲಿಕ್ಕಿಲ್ಲವೆಂದೇ ನನ್ನ ಭಾವನೆ. ಅದೇಕೆಂದು ಕೇಳುವಿರೇ ?

ಈಗ ಪರಾಧೀನವಾಗಿರುವ ದೇಶಗಳೆಲ್ಲವೂ ಸ್ವಾತಂತ್ರ್ಯವನ್ನು ಹೊಂದಲು ತಮ್ಮ ಪ್ರಕೃತಿಯನ್ನೇ ಎಚ್ಚರಿತ್ತಿದೆ. ಹಾಗೇನೆ, ದೇಶಭಕ್ತರಾದ ತರುಣರು ಕೆಲಸ ಮಾಡುವುದು ತನಗೆ ಬೇಕೆಂದು ನಮ್ಮ ದೇಶಮಾತೆಯು ಹಾ ತೊರೆಯುತ್ತಿರುವಳು. ಅದ್ದರಿಂದ ಎಲೈ ತರುಣರಾ ! ಕಾಲ ಹರಣ ಮಾಡಬೇಕೇ ? ಜನಾಂಗವು ಸ್ವಾತಂತ್ರ್ಯಕ್ಕೆ ಹೋರಾಡುತ್ತಿರುವಲ್ಲಿ, ನಮ್ಮ ಪ್ರಾಂತವು ಮಾತ್ರ, ಆವತ್ತು ಸ್ವರಾಜ್ಯ ಸಿಕ್ಕಿದರೆ ನಾವು ಅದಕ್ಕೆ ತಯಾರಿಲ್ಲದೆನ್ನುವ ಶೋಚನೀಯಾವಸ್ಥೆಗೆ ಬರುವುದು ಯಾರಿಗೆ ತರವು ?

ಛೇ, ನನ್ನಿಂದೇನು ತಾನೇ ಆದೀತು ಎಂದು ಅಧೈರ್ಯದಿಂದ ನೀವು ಮಾಡಲಿಕ್ಕಿರುವ ಕೆಲಸವನ್ನು ಅಲ್ಲಗಳೆಯುವದು ಜನ್ಮವೆತ್ತಿದಕ್ಕೆ ಸಾರ್ಥಕವಲ್ಲ. ಹೀಗೆ ಆಮೇರಿಕೆಯು ವಾಷಿಂಗ್ಟನರು ಕೈ ಕಟ್ಟಿಕೊಂಡು ಕೂತಿದರೆ ಈಗಿನ ...

ಡ್ ಸ್ಟೇಟ್ಸ್ ಏನಿರುತ್ತಿತ್ತೆಂದು ಯೋಚಿಸುವಿರಿ? ನಿಮ್ಮಲ್ಲಿ ಕೆಲಸ ಮಾಡಲು ಬೇಕಾದ ದೇಹದಾರ್ಢ್ಯ ಮತ್ತು ದೇಶಮಾತೆಗೆ ಕೆಲಸ ಮಾಡುತ್ತೇನೆಂಬ ಆ ವಂದನೀಯವಾದ ಉತ್ಸಾಹ ವಿದ್ದರೆ ಏನು ತ್ರಾಸ ಬೇಕು? ಕೆಲಸ ಮಾಡುವದೊಂದೇ ನೇರವಾದುದು. ಅಲ್ಲವೇ? ಒಂದೇ ಪಟ್ಟು ಅರಾಜಕ ಮಾತುಗಳ ಕೇಳದನ್ನು ನ್ನಾದಿ ಕೈದಿಗೆ ಹೋಗಬೇಕಾದ್ದೊಂದು ಅವಶ್ಯವಲ್ಲ. ಪ್ರತಿ ಒಂದು ಗ್ರಾಮದಲ್ಲಿ ಅಲ್ಲಿರುವ ಆಲೋಚನಾಪರ ಯುವಕನು ಸ್ವಾರ್ಥ-ತ್ವವನ್ನು ತ್ಯಜಿಸಿ ತ್ಯಾಗ ಮಂತ್ರವನ್ನು ಜಪಿಸಿ, ತನ್ನ ಸ್ವಂತ ಸಣ್ಣ ಗ್ರಾಮವನ್ನು ಮುಂದುವರಿಸಲು ಯಾರದು ತಾಣ ಅಡ್ಡಿ ಇದೆ!

ಡೆಪ್ಯುಟೇಶನುಗಳ ಸಮಯ ಎಂದು ಕಳೆದು ಹೋಯಿತೋ, ಅಂದೇ ನಾವು ಏನು ಮಾಡಬೇಕೆಂಬುದನ್ನು ಯೋಚಿಸುತ್ತಾ ಕೂರುವ ಸಮಯವು ಕಳೆದು ಹೋಯಿತು. ದೇಶಮಾತೆಯ ಉದ್ಧಾರಕ್ಕಿರುವ ದಾರಿಯಾವವು ಎಂದು ಮಹಾತ್ಮರಾರು ತೋರಿಸಿರುವವುಗಳಲ್ಲ ನಿಮಗೆ ಒಪ್ಪುವಂಥವು ಅದಾವುದೊಂದು ಇಲ್ಲವೇ? ಇಲ್ಲವೊಂದು ಅನ್ನಿ ನೋಡುವ? ಈಗ ಬೇಕಾದದ್ದು ಕೆಲಸ! ಕೆಲಸವಲ್ಲದೆ ಬರೇ ಮಾತುಗಳಲ್ಲ!

ಹರಿಪ್ರಸಾದ.

For Sale. Cars. For Sale.

(a) Two Ford Cars, one fitted with high tensioned Magneto

(b) One Overland, Model 75B

(c) One Overland, Model 4, with sedan body. It is a pleasure to travel in this car

All the above cars are in good order

For prices and other particulars—

Apply to the Manager,

Victoria Motor Garage,

Mercara

4—3

LOOK HERE PLEASE LOOK HERE

CONVERSATION BETWEEN A. & B.

A.—Good morning B. How are you?

B.—Hallo! Good morning, my friend When did you come?

A.—I came this morning Can you tell me where I can get a good motor car for hire? I have to go to Mysore & come back.

B.—The Victoria Motor Garage, Mercara' keep good cars for hire & their charges are moderate I always hire cars from them and it is quite a pleasure to travel in their cars They have Overland and Ford cars Mrs B likes their car with sedan body immensely

A.—Thank you I shall go to them. Good morning

B.—GOOD MORNING

4—3'

ARMS & AMMUNITION MART.

Mahomedaily-Noorbhoy.

337, Abdul Rehman, Street near Crawford Market, BOMBAY.

Telegraphic Address:-" SHOOTER " Bombay.

[52 42] Please write for latest Catalogues.

ಎಷ್ಟು ಲಕ್ಷಣವಾಗಿದೆ! ನೋಡಿರಿ!

ನಮ್ಮ ಟಿಕ್ ಟಾಕ್ (ಬಜಸ್ವಾದ)



ಎಂಬ ಗೋಡೆಗೆ ತಗಲಿಸುವ ಗಡಿಯಾರವು ಸರಿಹೋಲದಂತ ಪ್ರಖ್ಯಾತಿಗೊಂಡಿದೆ. ಸರಿಯಾದ ಗಂಟೆಯನ್ನು ತೋರಿಸುವ ಉತ್ತಮವಾದ ಗಡಿಯಾರು. ಎಲ್ಲರೂ ಮೆಚ್ಚಿರುವಂಥಾದ್ದು. ಯಾವಾಗಲೂ **ಟಿಕ್ ಟಾಕ್** ಗಡಿಯಾರವನ್ನೇ ತರಿಸಿರಿ. ಕ್ರಯ ರೂ 3—0—0 ಮಾತ್ರ.

ಜರ್ಮನ್ ಎಲಾರ್ಮ್ ಗಡಿಯಾರು.



ಕ್ರಯವು ಬಹಳ ಕಡಿಮೆ ಮಾಡಲ್ಪಟ್ಟಿದೆ. ಹೆಚ್ಚು ಪ್ರಯೋಜನದ, ಕಡಿಮೆ ಕ್ರಯದ ಟಯಮ್ ಪೀಸ್. 4 ಇಂಚು ಡಯಲಿನ ನಿಕ್ಕಲ್ ಗಡಿಯಾರು. 30 ಗಂಟೆ ವರೆಗೆ ಬೀಗಕೊಡಬೇಕಾಗಿಲ್ಲ. ಹ್ಯಾಗೆ ಇಟ್ಟರೂ ನಡೆಯುತ್ತದೆ. ಪ್ರಮಾಣಕ್ಕೆ ಒಳ್ಳೇ ಗಡಿಯಾರು. ಇದು ವಿದ್ಯಾರ್ಥಿಗಳಿಗೂ, ಸಮಯದ ಬೆಲೆ ಅರಿತವರಿಗೂ ಬಹಳ ಉಪಯೋಗವುಳ್ಳದ್ದು. ರಾತ್ರಿ ಕೆಲಸದವರಿಗೂ ಉತ್ತಮವಾದದ್ದು. ಎಲಾರ್ಮು ಹೊಡೆಯಬೇಕೆಂದಿರುವಾಗ ಡಯಲಿನ ಮೇಲಿರುವ ಸಣ್ಣ ಕೈಯನ್ನು ಹಿಂದುಗಡೆಯಿಂದ ತಿರುಗಿಸಿದರೆ ಶಾಲಕ್ಕೆ ಸರಿಯಾಗಿ ಎಲಾರ್ಮು ಕೊಡುತ್ತದೆ. ಮೂರು ವರ್ಷದ ಭರವಸೆ ಇದೆ. ಕ್ರಯ. ರೂ 5 ಮಾತ್ರ.

22 ಕ್ಯಾರೆಟ್ಟಿನ ಚಿನ್ನದ ಪೊದಿಕೆಯ ಕೈ ಗಡಿಯಾರ.

ಉತ್ತಮವಾದ ಸ್ವಿಸ್ ಸಾಮಾನುಗಳಿಂದ ಮಾಡಿದ ಹೊಸ ನಮೂನೆಯ ಗಡಿಯಾರವಿದು. ಕ್ರಿಸ್ಟಲ್ ಕನ್ನಡಿಯ ಅಲೇಬಿಕ್ ಯಾ ರೋಮನ್ ಅಂಕಗಳುಳ್ಳದ್ದು.

ಇದರ ಕೆಲಸವು ಎಂಥಾ ಪರಿಶೋಧನೆಯನ್ನು ತೃಪ್ತಿಪಡಿಸುವುದು. ಇದು ಪೌನಿನ ಚಿನ್ನದಂತೆ ಕಾಣುತ್ತದೆ. ನೋಟಕ್ಕೆ ಬಹಳ ಅಂದವಾಗಿಯೂ ಸರಿಯಾದ ಗಂಟೆ ಕೊಡುವುದಾಗಿಯೂ ಇದೆ. ಐದು ವರ್ಷದ ಖಾತ್ರಿ. ಕ್ರಯ ರೂ. 12—8—0

18 ಕೇರೆಟ್ ರೋಲ್ಡ್ ಗೋಲ್ಡ್ ರಿಸ್ಟ್ ವಾಚು. ರೂ. 7.

ಎಲಾರ್ಮು ಮತ್ತು ರಿಪೀಟರ್ ಇರುವಂಥ ಅಮೇರಿಕದ "ಬಿಗ್ ಬೆನ್" ಗಡಿಯಾರ ರೂ 10—8—0.

ಗಂಟೆ ಮತ್ತು ಅರ್ಧಗಂಟೆ ಹೊಡೆಯುವಂಥಾ "ಬೇಬಿ" ಗಡಿಯಾರ ರೂ. 7—0—0.

ಮೇಲಿನ "ಬೇಬಿ" ಗಡಿಯಾರು ಎಲಾರ್ಮು ಸಮೇತ. ರೂ. 8—0—0.

ಮೂರುವರ್ಷದ ಖಾತ್ರಿ.

ಜರ್ಮನ್ ಎಲಾರ್ಮ್ ಗಡಿಯಾರು ರೂ 5.

ಜರ್ಮನ್ ನೀಗ್ರೊ ಎಲಾರ್ಮ್ ಗಡಿಯಾರು. ರೂ. 5.

ಜರ್ಮನ್ ಡಬ್ಬಲ್ ಬೆಲ್ ಎಲಾರ್ಮ್ ಟಯಮ್‌ಪೀಸು ರೂ 6—0—0.

ಲೋಕಪ್ರಸಿದ್ಧ ವಾಚ "ಬಿ" ಟಯಮ್ ಪೀಸ್. ರೂ. 2—8—0.

ಎಮ್ಸನ್ ಫೌಂಟನ್ ಪೆನ್ 14 ಕೇರೆಟ್ ರೋಲ್ಡ್ ಗೋಲ್ಡ್ ನಿಬ್ಬು ರೂ. 2—8—0.

Apply to—
Post Box 105

V. S. Watch Coy MADRAS.

12—10

WANTED.

A candidate with Inter qualification in science to undergo Motor Engineering training on a scholarship of Rs 30 per mensem Applicant must bind himself to serve the company for six years Pay after training, from 75 to Rs 100 per mensem Applications with testimonials should reach the undersigned before the 1st July 1925

K KUTTAYYA,
Managing Director.
Sri Kavery Motor Service,
MERCARA

4—3

ಕರ್ಣಿಕ

ಚಳಿಜ್ವರ ಮಲೇರಿಯ ಜ್ವರ, ಇನ್‌ಫ್ಲುಎಂಝಾ ಆಡವಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦

ಟಪ್ಪಾಲು ಚಾರ್ಜು ಬೇರೆ

ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು. ೯—೨—೦

ಏಜಂಟರು ಬೇಕು, ಕೊಡಗಿನ ಸ್ಕೂಲ್ಮಾಸ್ತರುಗಳು ತಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ.

12—7

ಕರ್ಣಿಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	...	9080
ಜಮಾಬಂದ ಠೇವಣಾತಿ	....	78,000

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6 4-0 ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರು.

ಪ್ರೆಸಿಡೆಂಟರು,
ಕೊಡಂದೇರ ಕುಟ್ಟಯ್ಯನವರು,
ರಾಯ ಬಹದ್ದೂರ್.

ಟ್ರೆಜರರ್.
ಯಂ. ಭುಜಂಗರಾಯ
ಬಿ.ಎ., ಬಿ.ಎಲ್

ಸೆಕ್ರೆಟರಿ.
ಸಿ. ಯಮ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಕು 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆಂ

ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾರ್ಥ ದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಎಂದರೆ ಇದೇ. ಆರೋಗ್ಯವಂತನಾಗಿ ಬಹುಕಾಲ ಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿ ಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯು ದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಕೆಯನ್ನು ಓದಲೇ ಬೇಕು. ವಿಶೇಷವೇನು! ಮನೆ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದ ವುದು.

ವಾರ್ಷಿಕ ಚಂದಾ ಮೂರು ರುಪಾ

ವಿಳಾಸ —

ಮೇನೇಜರ್, ಶ್ರೀ ಧನ್ವಂ

ಶೃಂಗೇರಿ, ಮೈಸೂರು

Printed & Published by K Appayya, R.B., Chairman, Bo Directors, at " Kodagu " Press, M for " Kodagu " Ltd.

Reg. No. M. 1550.
If not delivered please return to
KODAGU" OFFICE MERCARA.

ಕೊಡಗು.

ವರ್ಷಕ್ಕೆ ರೂ ೩—೦—೦

ಸತ್ಯೇನ ಛೂಶದಯಾಯ ವಿದ್ಯಾ ನೀತಿ ಪ್ರಯತ್ನತಾ। || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಃ ||

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸ೯ ೧೯೨೫ನೇ ಇಸವಿ ಜೂನ್ ತಾರೀಕು ೧೮ ನೆಯ ಶುಕ್ರವಾರ [ಸಂಚಿಕೆ ೩

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು. ಡಾಕ್ಟರ್ ಯು ರಾಮರಾವ್,
ಯಮ್. ಎಲ್ ಸಿ. ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಒಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ' 323,
ತಂಬುಶೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ಬಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಶೇರುಹಣ ಸಲ್ಲಿಸಮಾಡಲಿಕ್ಕಿರುವವರೂ ದಯವಿಟ್ಟು ವೀರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, **ಮೇನೇಜರ್,**
1-9-24. **ಕೊಡಗು ಲಿಮಿಟೆಡ್.**

Health is Wealth.

WANTED all to improve health strength and vitality and thus save our nation from physical degeneracy. Send half anna stamp and get 23 specimen photographs with full particulars from

Director, Physical Culture,
P. O. BASAVANAGUDI,
Bangalore City

The Clifton Cycle complete with bell tool bag, tools and pump Rs 135.

Mammooties and Digging forks sold at reduced prices to clear stock

Spencer & Co Ltd,
MERCARA & POLLIBETTA.
34

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಚಾವು ಕಂಬ್ಯಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ
17-9-24 ಮೇನೇಜರ್.

ನೋಟೀಸು.

ಕೊಡಗು ಜಮೀನ್ದಾರಸಂಘದ ಲೆಕ್ಕವನ್ನು ಆಡಿಟ್ ಮಾಡಿಸಬೇಕಾಗಿರುವುದರಿಂದ ಕಳೆದ ವರ್ಷ ಮೆ. ಬದ್ದಂಡ ಕಾರ್‍ಯಪ್ಪನವರು ಸೆಕ್ರೆಟರಿ ಮಾಡಿದ ನಾಡು ಕಮಿಟಿಗಳಿಗೆ ಹಣ ವಸೂಲಾತಿಗೆ ಕೊಟ್ಟಂತ ರಶೀತಿ ಪುಸ್ತಕಗಳು ಕಳೆದ ವರ್ಷದ ವಾರ್ಷಿಕ ಕಾನ್‌ಫರೆನ್ಸ್ ಕಳೆದ ಕೂಡಲೇ ಪುನಹ ಹಣ ವಸೂಲಾತಿಗೆ ಆಯಾಯ ಕಮಿಟಿಗಳಿಗೆ ಕೊಟ್ಟಿರುವುದರಿಂದ ಎಲ್ಲಾ ಕಮಿಟಿಯವರೂ ತಮ್ಮ ಹತ್ತಿರವಿರುವ ರಶೀತಿ ಬುಕ್ಕುಗಳನ್ನು ಮತ್ತು ಈ ವರ್ಷ ಉದಿಯಂಡ ಮೆ. ಪೂಣ್ಯಯ್ಯನವರು ಮೆ ಜಂಗಂಡ ಕುಟ್ಟಪ್ಪನವರು, ಮೆ ಕೋಟೆರ ಚಿಣ್ಣಪ್ಪನವರು ಮುತ್ತು ಇನ್ನೂ ಕಲವು ಏಜಂಟರು ಹಣ ವಸೂಲಾತಿಗೆ ಕೊಟ್ಟ ರಶೀತಿ ಬುಕ್ಕುಗಳನ್ನೂ ಸಹ ವಸೂಲಾದ ಮೊಬಲಗು ಹಣ ಸಮೇತ ನನಗೆ ಜಮೀನ್ದಾರಸಂಘದ ಮಡಿಕೇರಿಯಲ್ಲಿರುವ ಆಫೀಸಿಗೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇನೆ.

ಸಿ. ಎನ್. ವೆಂಕಪ್ಪಯ್ಯ,
ಜನರಲ್ ಸೆಕ್ರಟರಿ

ನೋಟೀಸು.

ದಕ್ಷಿಣ ಕೊಡಗಿನಲ್ಲಿ ವಾಸುವಕರಾಗದ, ನೋಟೀಸು ಮತ್ತು ಬೇರೆ ಪ್ರಿಂಟಿಂಗ್ ಕೆಲಸ ಮಾಡಿಸಬೇಕೆಂದಿರುವವರು ದಯವಿಟ್ಟು ಎಲ್ಲಾ ಆರ್ಡರುಗಳನ್ನು ನಮ್ಮ ಏಜಂಟರಾದ ವೀರಾಜಪೇಟೆ ಖಾದಿಭಂಡಾರದ ಮೇನೇಜರವರಿಗೆ ಕೊಟ್ಟರೆ, ಶೀಘ್ರದಲ್ಲೇ ಸುಲಭ ಚಾರ್ಜಿಗೆ ಗಿಲಿಟು ಹಾಕಿ ಪ್ರಿಂಟುಮಾಡಿಸಿ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಪ್ರೆಸ್, ಮಡಿಕೇರಿ.

ಪ್ರಕಟಣೆ.

ನಮ್ಮ ಆಂಧವಾದಹೊಸ ಅಕ್ಷರಗಳು ಬಂದು ತಲುಪಿದ ಪ್ರಯುಕ್ತ, 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ ಮೇನೇಜರ್,
'ಕೊಡಗು' ಲಿಮಿಟೆಡ್

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಶೀಘ್ರದು ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿದೆ.

ಕೃಷ್ಣ ನಂಬೀಸರ್ ಮುತ್ತು ನಾರಾಯಣ ನಂಬೀಸರ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಇವರಿಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹತ್ತು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆ ಇರುವುದು.

ನಂಬೀಶರ್ ಮುತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲೂರು, ವೀರಾಜಪೇಟೆ ಮುತ್ತು
52 14 **ಗೋಣಿಕೊಪ್ಪಲು.**

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ ಕೋಟೆರ ಚಿಣ್ಣಪ್ಪನವರ ಜವಾಬುದಾರಿಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಮೆ. ಕೆ ಚಿಣ್ಣಪ್ಪನವರ ಆಫೀಸಿನಲ್ಲಿ.
ಮೂರ್ನಾಡು—ಕಾಮಧೇನು ಸ್ಟೋರಿನಲ್ಲಿ ಮೆ ಮನೇಯಂಡ ದೇವಯ್ಯನವರು.
ನಾಪೋಕ್ಲು—ಮೆ. ಪೊನ್ನಚಂಡ ಮುದ್ದಪ್ಪನವರು
ಗೋಣಿಕೊಪ್ಪಲು—ಮೆ. ಮುಕ್ಕಾಟಿರಪೂಣಚ್ಚನವರು.
ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಮ್ಮಯ್ಯನವರು.
ಮಡಿಕೇರಿ—ಮೆ. ಜೆ ಪೂದಮ್ಮನವರು.
ಅಮ್ಮತ್ತಿ ಸಿದ್ದಾಪುರ—ಮೆ. ಬಾಚಂಡ ಪೂದಪ್ಪನವರು.
ಮೆ. ಜಂಗಂಡ ಕುಟ್ಟಪ್ಪನವರು.

ಕೋಟೆರ ಚಿಣ್ಣಪ್ಪ,
ಆರ್ಗನೈಸಿಂಗ್ ಡೈರೆಕ್ಟರು "ಕೊಡಗು." ಲಿಮಿಟೆಡ್

"ಕೊಡಗು"

ಸ॥ ೧೯೨೫ನೇ ಇಸವಿ ಜೂನ್ ತಾ. ೧೯ನೇ ಶುಕ್ರವಾರ.

ಗ್ರಾಮಾಭಿವೃದ್ಧಿ.

ಹಳ್ಳಿನಿವಾಸಿಗಳ ಬಡತನವನ್ನೂ, ವ್ಯವಸಾಯ ಕ್ರಮದ ಹೀನಸ್ಥಿತಿಯನ್ನೂ ಗ್ರಾಮಗಳ ಅನಾರೋಗ್ಯಸ್ಥಿತಿಯನ್ನೂ ಅರಿತಿರುವವರ್‍ಯಾರೂ ಗ್ರಾಮಗಳ ಅಭಿವೃದ್ಧಿಯ ಕಡೆಗೆ ತಕ್ಕಷ್ಟು ಗಮನ ಕೊಡಲಾಗಿದೆಯೆಂದು ಹೇಳಲಾರರು. ಜೈನಾದ ಒಬ್ಬ ತತ್ವಜ್ಞಾನಿಯು ಹೇಳಿರುವಂತೆ, "ಒಂದು ಜನಾಂಗದ ಸುಸ್ಥಿತಿಯು ಒಂದು ಮರದಂತಿದೆ, ಕೃಷಿಯು ಅದರ ಬೇರಾಗಿದೆ, ಕೈಗಾರಿಕೆ ಮತ್ತು ವ್ಯಾಪಾರವು ಅದರ ಕೊಂಬೆಗಳು ಮತ್ತು ಜೀವವಾಗಿವೆ, ಬೇರಿಗೆ ನೋವಾಗಿ ಎಲೆಗಳು ಉದುರಿ ಕೊಂಬೆಗಳು ಮುರಿಯುತ್ತವೆ ಮತ್ತು ಮರವು ಸಾಯುತ್ತದೆ." ಒಂದು ಜನಾಂಗದ ಜೀವನದಲ್ಲಿ ವ್ಯವಸಾಯದ ಪ್ರಾಮುಖ್ಯತೆ ಇಷ್ಟರ ಮಟ್ಟಿಗೆ ಇರುವಲ್ಲಿ ಶೇಕಡ ೧೧ರಷ್ಟು ಕೃಷಿಗಾರರಿರುವ ಈ ದೇಶದಲ್ಲಿ ವ್ಯವಸಾಯಾಭಿವೃದ್ಧಿಗೆ ಎಷ್ಟು ಖರ್ಚು ಮಾಡಿದರೂ ಸ್ವಲ್ಪವೆಂದೇ ಹೇಳಬೇಕಾಗಿದೆ.

ಹಿಂದೂದೇಶದ ವ್ಯವಸಾಯಾಭಿವೃದ್ಧಿಯನ್ನು ಕುರಿತು ಪ್ರೊಫೆಸರ್ ಗಂಗೂಳಿಯವರು ವೆಸ್ಟ್ ಮಿನಿಸ್ಟರಿನಲ್ಲಿರುವ ಈಸ್ಟ್ ಇಂಡಿಯನ್ ಎಸೋಸಿಯೇಶನಿನಲ್ಲಿ ಒಂದು ಲೇಖನವನ್ನು ಓದಿದರು. ಕೃಷಿಯ ವಿಷಯದಲ್ಲಿ ಇಡೀ ಹಿಂದೂದೇಶದ ಸ್ಥಿತಿಗೂ ನಮ್ಮ ದೇಶದ ಸ್ಥಿತಿಗೂ ವ್ಯತ್ಯಾಸವೇನೂ ಇಲ್ಲದೆ ಇರುವುದರಿಂದ ಆ ಲೇಖನದ ಸಾರಾಂಶವನ್ನು ತಿಳಿಯುವುದರಿಂದ ನಮ್ಮ ವಾಚಕರಿಗೂ ಪ್ರಯೋಜನ ಉಂಟಾಗುವುದು. ಹೊಸ ತರದ ಯಂತ್ರಗಳನ್ನು ತಂದುಹಾಕಿಯು ಎಕರೆಯೂ, ಕೈಗಾರಿಕೆ ಕೆಲಸಗಳ ಅತಿಶಯವಾದ ಅಭಿವೃದ್ಧಿಯೂ, ಪಟ್ಟಣಗಳ ಮತ್ತು ಮಾರ್ಕೆಟುಗಳ ಹೆಚ್ಚಳಿಕೆಯೂ ಹೇಗೆ ಹಳ್ಳಿವಾಸವನ್ನೂ ಕೃಷಿಯನ್ನೂ ಮೂಲೆಗೆ ಒತ್ತಿತು ಎಂಬುದನ್ನೂ, ಈಗ ಕೈಗಾರಿಕೆಯಲ್ಲಿ ಹೆಚ್ಚು ಮುಂದುವರಿದ ದೇಶಗಳು ಹ್ಯಾಗೆ ವ್ಯವಸಾಯಾಭಿವೃದ್ಧಿಗೆ ಪ್ರಯತ್ನಿಸುತ್ತಿರುವುವು ಎಂಬುದನ್ನೂ ಪ್ರವಚನದಲ್ಲಿ ವಿವರಿಸಿರುವರು. "ಹಿಂದೂದೇಶದಲ್ಲಿ ಜಮೀನುಗಳು ಬಹಳ ಚಿಕ್ಕ ಚಿಕ್ಕ ಚೂರುಗಳಾಗಿ ವಿಭಾಗಿಸಲ್ಪಟ್ಟು ಅಂಥಾ ಸಣ್ಣ ತುಂಡುಗಳು ಒಬ್ಬೊಬ್ಬನ ಸ್ವಾಧೀನದಲ್ಲಿರುವುದರಿಂದ ಅನೇಕರಿಗೆ ತಕ್ಕಷ್ಟು ಕೆಲಸವಿಲ್ಲದ ಆಗಿರುವದಲ್ಲದೆ ಅವರಿಗೆ ಬೇರೆ ವೃತ್ತಿಯನ್ನು ಕೈಕೊಳ್ಳಲು ಅನುಕೂಲವಿಲ್ಲದೆ ಆಗಿದೆ. ವ್ಯವಸಾಯದ ಕೆಲಸಕ್ಕೆ ಸಾಕಷ್ಟು ದ್ರವ್ಯವಿಲ್ಲ. ರೈತರಲ್ಲಿ ಹೆಚ್ಚಿನವರು ಸಾಹುಕಾರರುಗಳ ಸಾಲಗಾರರಾಗಿರುತ್ತಾರೆ. ಅವರು ಬೆಳೆಸ ಬೆಳೆದೆಲ್ಲಾ ಸಾಲದ ಬಡ್ಡಿಗೇನೇ ಸಾಲದು. ಈ ವಿಷಯದಲ್ಲಿ ಸಹಕಾರ ಸಂಘಗಳು ಸ್ವಲ್ಪ ಮಟ್ಟಿಗೆ ಪ್ರಯೋಜನವನ್ನುಂಟು ಮಾಡಿವೆ. ಆದರೆ ಈ ಸಂಘಗಳ ಪ್ರಯೋಜನವು ಗ್ರಾಮಗಳ ಮೂಲೆಗೆ ಸಿಗ್ಗಿವೆಯೆಂದು ಹೇಳಲಾಗುವುದಿಲ್ಲ. ಗ್ರಾಮಾಂತರಗಳಲ್ಲಿ ರಸ್ತೆಯ ಅನುಕೂಲವು ಬಹಳ ಕಡಿಮೆ. ಇರುವದೂ ಒಳ್ಳೇ ಸ್ಥಿತಿಯಲ್ಲಿಲ್ಲ. ಆದುದರಿಂದ ಧಾನ್ಯಗಳಿಗೆ ಪೇಟೆಗೆ ಒಯ್ಯುವುದು ಬಹಳ ಶ್ರಮ. ಮಾರ್ಕೆಟಿಗೆ ತಲಪಿ ಬೆಲೆ ಸಿಕ್ಕಬೇಕಾದರೆ ಅನೇಕ ಮಧ್ಯವ್ಯಾಪಾರಿಗಳ ಕೈದಾಟಬೇಕಾಗುತ್ತೆ. ಇವರಿಗೆಲ್ಲಾ ಬೇರೆ ಚಾರ್ಜು ಕೊಡಬೇಕಾಗುವುದು. ಮಾರ್ಕೆಟಿನಲ್ಲಿ ದಳ್ಳಾಳಿಗಳ ಮೂಲಕ ವಿಕ್ರಯಿಸಲ್ಪಡುವುದು. ವ್ಯಾಪಾರಿಗಳು ಕೊಡುವ ಕ್ರಯ ತೆಗೆದುಕೊಳ್ಳಬೇಕಾಗುತ್ತದೆ. ಇದಲ್ಲದೆ ಹೆಚ್ಚಿನ ಬೆಳೆಯೆಲ್ಲಾ ಸಾಲಕ್ಕೆ ನಿರ್ಣಯಿಸಲ್ಪಟ್ಟಿರುತ್ತದೆ. ಆ ಕಾರಣ ಸಾಲಕೊಟ್ಟ ಸಾಹುಕಾರರು ಹೇಳುವ ಕ್ರಯವು ವಾಡಿಕೆಯಾಗಿ ಮಾರ್ಕೆಟಿನ ದರಕ್ಕಿಂತ ಬಹಳ ಕಡಿಮೆಯಾಗಿರುತ್ತದೆ" ಎಂದು ವಿಸ್ತಾರವಾಗಿ ಸೂಚಿಸಿ ರೈತನು ತನ್ನ ಧಾನ್ಯವನ್ನು ಕಣದಿಂದ ಮಾರ್ಕೆಟಿಗೆ ಸಾಗಿಸಿ ವಿಕ್ರಯಿಸುವವರೆಗೆ ಆಗುವ ನಷ್ಟಕಷ್ಟಗಳನ್ನು ಚೆನ್ನಾಗಿ ವಿವರಿಸಿರುವರು.

ನಮ್ಮ ದೇಶದಲ್ಲೂ ಅವಿಭಕ್ತ ಕುಟುಂಬ ಪದ್ಧತಿಯು ಜಾರಿಯಲ್ಲಿದ್ದಾಗ ಇಷ್ಟು ಬಡತನವಿರಲಿಲ್ಲವೆಂತಲೂ ಈಗ ಭಾಗವಿಯಲ್ಲವೂ ಚಿಕ್ಕ ಚಿಕ್ಕ ಪಾಲುಗಳಾಗುತ್ತಾ ಬಂದಹಾಗೆ ರೈತರ ಆರ್ಥಿಕಸ್ಥಿತಿಯು ಕೆಡುತ್ತಾ ಬಂದಿದೆಯೆಂತಲೂ ಅನೇಕರ ಅಭಿಪ್ರಾಯವಾಗಿದೆ. ರೈತರನೇಕರು ಸಾಲದಲ್ಲಿ ಮುಳುಗಿರುವುದು ಇಲ್ಲಿಯೂ ನಿಜವೆ. ಆದರೆ ಈ ದೇಶದಲ್ಲಿ ಸಹಕಾರ ಸಂಘದ ಚಳವಳಿಯು ಹಿಂದೂ ದೇಶದ ಇತರ ಕಡೆಗಳಿಗಿಂತ ಹೆಚ್ಚಾಗಿ ಹಳ್ಳಿಯ ಮೂಲೆಗಳಿಗೆ ಹರಡಿದೆಯೆಂದು ಹೇಳಬಹುದು. ಆದರೂ ಅದರ ಪೂರ್ಣ ಪ್ರಯೋಜನವು ಜನರಿಗೆ ದೊರೆಯುತ್ತಿರುವುದಿಲ್ಲ. ಅದರ ತತ್ವಗಳಿಗನುಸಾರವಾಗಿ ನಡೆಯಲು ಜನರು ಈಗೀಗ ಕಲಿಯಲು ಪ್ರಾರಂಭಿಸಿದ್ದಾರಷ್ಟೆ. ಸಹಕಾರಸಂಘಗಳ ಬೆಳವಣಿಗೆಯೊಂದಿಗೆ ವ್ಯವಸಾಯಗಾರರ ಆರ್ಥಿಕ ಸ್ಥಿತಿಯು ಉತ್ತಮವಾಗುತ್ತಾ ಬರುವುದೆಂಬುದರಲ್ಲಿ ಸಂಶಯವಿಲ್ಲ. ಧಾನ್ಯವನ್ನು ಮಾರ್ಕೆಟಿಗೆ ಸಾಗಿಸಲು ಇರುವ ಅನಾನುಕೂಲಗಳೂ, ಅದಕ್ಕೆ ಸಿಕ್ಕುವ ಕಡಿಮೆ ಬೆಲೆಯೂ ನಮ್ಮಲ್ಲಿಯೂ ಸಾಧಿಕವಾಗಿವೆ. ಈ ವಿಷಯಗಳಲ್ಲಿ ನಮ್ಮ ಸ್ಥಿತಿ ಏನೂ ಉತ್ತಮವಾಗಿಲ್ಲ.

"ಹಿಂದೂ ದೇಶದ ವ್ಯವಸಾಯದ ಉತ್ಪತ್ತಿಯು ಬಹಳ ಕಡಿಮೆ. 1911ರಿಂದ ಇತ್ತಲಾಗಿ ಲೆಖ್ಖ ನೋಡಿದರೆ ಆಹಾರ ಧಾನ್ಯಗಳನ್ನು ಇಂಡಿಯಾದಿಂದ ಹೊರಗೆ ಕಳುಹಿಸದೆ ಹೋಗದಿದ್ದರೂ ಕೂಡಾ ವರುಷಕ್ಕೆ ಸರಾಸರಿ 10.3 ಮಿಲಿಯ ಟನ್ ಧಾನ್ಯಗಳು ಬೇಕಾದದ್ದಕ್ಕಿಂತ ಕಡಿಮೆಯಾಗಿವೆ. ಆದುದರಿಂದಲೇ ಹಿಂದೂ ದೇಶದ ಜನಸಂಖ್ಯೆಯ ಮೂರರಲ್ಲಿ ಎರಡು ಭಾಗದವರಿಗೆ ಯಾವಾಗಲೂ ಅವರಿಗೆ ಅವಶ್ಯವಿರುವ ಆಹಾರದಲ್ಲಿ ಮುಕ್ಕಾಲು ಭಾಗ ಮಾತ್ರ ದೊರೆಯುವುದಾಗಿದೆ. ಮಣ್ಣಿನ ಸಾರವು ಕಡಿಮೆಯಾಗುತ್ತಾ ಬರುತ್ತಿದೆ. ವ್ಯವಸಾಯ ಕ್ರಮವನ್ನು ವೃದ್ಧಿಪಡಿಸಿ ಹೆಚ್ಚಿನ ಉತ್ಪತ್ತಿಯನ್ನು ಮಾಡಬಹುದೆಂಬುದರಲ್ಲಿ ಸಂಶಯವಿಲ್ಲ. ಇದಕ್ಕೆ ಹೆಚ್ಚಿನ ಗಮನ ಕೊಡಬೇಕಾಗಿದೆ" ಎಂದು ಹೇಳಿರುವರು.

ಈ ದೇಶದಲ್ಲಿ ನಿವಾಸಿಗಳ ಆಹಾರಕ್ಕೆ ಸಾಕಷ್ಟು ಧಾನ್ಯಗಳೇನೋ ಬೆಳೆಯುತ್ತವೆ. ಆದರೆ ಬತ್ತ ಬೆಳೆಯುವ ಜಮೀನುಗಳಿಗೆ ಬೇರೆ ಉತ್ಪತ್ತಿ ಏನೂ ಇಲ್ಲದಿರುವುದರಿಂದ ಧಾನ್ಯಗಳನ್ನು ಪರದೇಶಗಳಿಗೆ ಮಾರದೆ ಸಾಧ್ಯವಿಲ್ಲ. ಕೃಷಿ ಕ್ರಮವಂತೂ ಪೂರ್ವದಂತೆಯೇ ಇದೆ. ಇದರಲ್ಲಿ ಏನೊಂದೂ ಬದಲಾವಣೆಯಾದಂತೆ ಕಾಣುವುದಿಲ್ಲ. ಭೂಮಿಯ ಸಾರವು ಕೆಡುತ್ತಾ ಬಂದಿರುವುದರಿಂದಲೇ ಪೂರ್ವದಲ್ಲಿ ನೂರು ಬಟ್ಟಿ ಬತ್ತ ಬೆಳೆಯುತ್ತಿದ್ದಂಥ ನೂರು ಬಟ್ಟಿ ಗದ್ದೆಯಲ್ಲಿ ಈಗ 80ರಿಂದ 30 ಬಟ್ಟಿ ವರೆಗೂ ಇಳಿದಿರುವದಾಗಿದೆ. ಮುಂದುವರಿದ ಕೃಷಿ ಕ್ರಮವೂ ಉತ್ತಮ ರೀತಿಯ ಗೊಬ್ಬರ ಹಾಕುವಿಕೆಯೂ ಬಹಳ ಅಗತ್ಯವಾಗಿವೆ.

"ನೀಗಲ ಹಿಂದೆ ಇರುವ ಮನುಷ್ಯನ ಕಡೆಗೆ ತಕ್ಕಷ್ಟು ಗಮನಕೊಡಬೇಕಾಗಿದೆ. ರೈತರು ತುಂಬಾ ತಿಳಿಗೇಡಿಗಳಾಗಿಯೂ, ಹೆಚ್ಚು ಮತೀನರಾಗಿಯೂ ಇರುವರೆಂಬುದು ವಿಚಾರಣೆಯ ಮೂಲಕ ತಿಳಿದುಬಂದಿದೆ. ಹಿಂದೂ ದೇಶದ ಕೃಷಿಯು ಮುಖ್ಯವಾಗಿ ಮನುಷ್ಯರ ದೇಹಶಕ್ತಿಯಿಂದ ನಡೆಸಬೇಕಾಗಿರುವುದರಿಂದ ಅವರ ಆರೋಗ್ಯವನ್ನು ಚೆನ್ನಾಗಿ ನೋಡಿಕೊಳ್ಳಬೇಕಾಗಿದೆ. ಬೇರೆ ದೇಶಗಳೊಂದಿಗೆ ಹೋಲಿಸಿದರೆ ಹಿಂದೂ ದೇಶದ ರೈತರ ಜೀವಮಾನಕಾಲವು ಬಹಳ ಕಡಿಮೆಯಾಗಿ ಕಾಣುತ್ತದೆ. ಇದಲ್ಲದೆ ಅವರು ಎಷ್ಟೋ ಕಾಲ ಕಾಯಿಲೆಯಲ್ಲಿ ಕಳೆಯಬೇಕಾಗುತ್ತೆ. ಈ ವಿಷಯ ಸರಕಾರದ ಪರವಾಗಿ ಪಾರ್ಲಿಮೆಂಟಿಗೆ ಒಪ್ಪಿಸಲ್ಪಟ್ಟ ರಿಪೋರ್ಟಿನಲ್ಲಿ ಡಾಕ್ಟರ್ ಬೆಂಟ್ಲಿಯವರು ಹೀಗೆಂದು ಹೇಳಿರುವರು — "ಇಂಡಿಯಾದ ಹಳ್ಳಿಗಳಲ್ಲಿ ಜನರ ಶೇಕಡ 90 ರಷ್ಟಕ್ಕೆ ಸಮ್ಮಂಧಿಸಿದ ಅಂಕೆಗಳು ಆರೋಗ್ಯ ಸ್ಥಿತಿಗೆ ಸ್ವಲ್ಪ ಮಾತ್ರ ಸಿಗಬಲ್ಲವಾಗಿವೆ. ಸಾಧಾರಣವಾದ ಇಂಡಿಯಾದ ಗ್ರಾಮವು ವಾಡಿಕೆಯಾಗಿ ಒಂದು ತಿಪ್ಪೆ ಗುಂಡಿಯ ಮೇಲಿರುವ ಅನಾರೋಗ್ಯದ ವಾಸಸ್ಥಳಗಳ ಗುಂಪಿಗಿಂತ ಸ್ವಲ್ಪ ಉತ್ತಮವಾಗಿದೆ." ಆದುದರಿಂದ ಹಳ್ಳಿಗಳ ಆರೋಗ್ಯದ ಕಡೆಗೆ ಬಹಳ ಗಮನ ಕೊಡಬೇಕಿದೆ. ಆರೋಗ್ಯ ಸ್ಥಿತಿಯನ್ನು ಅಭಿವೃದ್ಧಿಗೊಳಿಸಬೇಕಾದರೆ ಜನರಿಗೆ ವಿದ್ಯೆ ಕೊಡಬೇಕು. ಗ್ರಾಮಗಳ ಬಡ ಜನರ ವಿದ್ಯಾಭಿವೃದ್ಧಿಯ ಕಡೆಗೆ ಇರುವ ಐಶ್ವರ್ಯವಂತರು ಪ್ರೌಢ ವಿದ್ಯಾಭ್ಯಾಸವನ್ನು ಹೊಂದುತ್ತಿರುವರೆಂದು ಸರ್ ಜಾರ್ಜ್ ಆಂಡರ್‌ಸನ್‌ರವರು ಹೇಳಿರುವುದು ನಿಜವೆ."

ಮೇಲಿನ ವಿಷಯಗಳೆಲ್ಲವೂ ನಮ್ಮ ದೇಶಕ್ಕೆ ಸರಿಹೋಗುತ್ತವೆ. ನಮ್ಮ ಗ್ರಾಮಗಳ ಹೀನ ಸ್ಥಿತಿಯನ್ನು ನಾವು ಎಷ್ಟೋ ಸಲ ವಿವರಿಸಿಬರೆದಿದ್ದೇವೆ. ಅದನ್ನು ಪುನಃ ಇಲ್ಲಿ ವಿವರಿಸುವ ಅವಶ್ಯ ಕಾಣುವುದಿಲ್ಲ. ಈ ದೇಶದ ಹಳ್ಳಿಗಳ ಏಳಿಗೆಗೆ ಸರ್ಕಾರದವರು ಸಾಕಷ್ಟು ಉತ್ತೇಜನ ಕೊಡದಿದ್ದರೂ ಕೂಡ ಕೌನ್ಸಿಲಿನ ಮೂಲಕ ಜನರ ಕೂಗನ್ನು ಕೇಳಿ ಒಂದೆರಡು ಕಮಿಟಿಗಳನ್ನು ಏರ್ಪಡಿಸಿರುವರು. ದನಗಳ ಅಭಿವೃದ್ಧಿಯ ಮತ್ತು ಮಲೇರಿಯ ಜ್ವರದ ಹಾವಳಿಯ ವಿಷಯ ವಿಚಾರಿಸಲು ನಿಯಮಿತವಾಗಿರುವ ಕಮಿಟಿಗಳ ಫಲಿತಾಂಶವನ್ನು ಎದುರು ನೋಡುತ್ತಿದ್ದೇವೆ.

ವ್ಯವಸಾಯಾಭಿವೃದ್ಧಿಗಾಗಿ ಒಂದು ರಾಯಲ್ ಕಮಿಷನನ್ನು ನೇಮಿಸಬೇಕೆಂದು ಗಂಗೂಳಿಯವರು ಸೂಚಿಸಿರುವರು. ಆದರೆ ಇಂಥಾ ಕಮಿಷನಿನಿಂದ ಹಣ ನಷ್ಟವಲ್ಲದೆ ಹೆಚ್ಚಿನ ಪ್ರಯೋಜನವಾಗಲಿಕ್ಕಿಲ್ಲವೆಂದೇ ಹಲವರ ಭಾವನೆ. ಅಲ್ಲಲ್ಲಿಯ ಸ್ಥಳೀಯ ಸರ್ಕಾರದವರೇ ಮನಸ್ಸಿಟ್ಟರೆ ಈ ಕೆಲಸವನ್ನು ಮಾಡಬಹುದು. ಬೇಕಾದದ್ದೇ ಸರಕಾರದವರ ಮನಸ್ಸು. ಅವರು ಮನಸ್ಸುಮಾಡಿದರೆ ಕೆಲಸವು ಸುಲಭ ಸಾಧ್ಯವಾದದ್ದಾಗಿದೆ.

ಡಿಸ್ಟ್ರಿಕ್ಟ್ ಬೋರ್ಡು.

ಈಗ ಕೊಡಗಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಇಲ್ಲವೆಂದರೆ ಯಾರಿಗೆ ತಾನೇ ಆಶ್ಚರ್ಯವಾಗದಿರದು! 1921ನೇ ಮಾರ್ಚ ಆಖೈರಿನಲ್ಲಿಯೇ ಮೆಂಬರುಗಳ ಅವಧಿಯು ತೀರಿತು. ಪುನಃ ಹೊಸ ಚುನಾವಣೆಯೂ ನೇಮಕವೂ ನಡೆದವೆ. ಹೆಚ್ಚು ಸುಧಾರಣೆ ಹೊಂದಿದ ಬೋರ್ಡನ್ನು ಕೊಡುವ ಯೋಚನೆಯಲ್ಲಿರುವದರಿಂದ ಒಂದು ವರ್ಷಕ್ಕಾಗಿ ಪುನಃ ಚುನಾವಣೆ ಮಾಡುವ ಅವಶ್ಯವಿಲ್ಲವೆಂತ ಆಗಿನ ಮೆಂಬರುಗಳ ಅವಧಿಯನ್ನು ಒಂದು ವರ್ಷ ಹೆಚ್ಚಿಸಿದರು. ಒಂದು ವರ್ಷವೂ ಕಳೆಯಿತು. ಆ ಮೆಂಬರುಗಳ ಅವಧಿಯೂ ತೀರಿತು. ಸುಧಾರಣೆ ಹೊಂದಿದ ಬೋರ್ಡು ಮಂಜೂರಾಗಿ ಬಂದಂತೆ ಕಾಣುವುದಿಲ್ಲ.

ಹೆಚ್ಚಿನ ಹಕ್ಕುಗಳುಳ್ಳ ಬೋರ್ಡನ್ನು ಕೊಡಬೇಕೆಂದು ಕೌನ್ಸಿಲಿನಲ್ಲಿಯೂ ಪಾಸಾಯಿತು. ಆದರ ತಡಕ್ಕೆ ಕಾರಣವೇನೆಂದು ತಿಳಿಯುವದಿಲ್ಲ. ಮೆಂಬರುಗಳ ಅವಧಿಯು ಕಳೆದ ಮಾರ್ಚ್ ಅಖೈರಿಗೆ ತೀರಿದುದರಿಂದ ಏಪ್ರಿಲ್ ಹಿಂದೀಚೆಗೆ ಡಿಸ್ಟ್ರಿಕ್ಟ್ ಬೋರ್ಡೇ ಇಲ್ಲವೆಂದು ಹೇಳಬೇಕಾಗಿದೆ. ಇದು ಕೌನ್ಸಿಲು ಸರ್ಕಾರದ ಫಲಿತಾಂಶವೋ ಏನೋ ತಿಳಿಯದು. ಈ ಸ್ಥಿತಿಗೆ ಅಧಿಕಾರಿಗಳ ಉದಾಸೀನತೆಯಲ್ಲದೆ ಮತ್ಯಾವ ಕಾರಣವೂ ಕಂಡುಬರುವುದಿಲ್ಲ. ಇಲ್ಲದೆ ಹೋದಕ್ಕೆ, ಸರಕಾರದವರು ಈ ಅವಸ್ಥೆಯ ನ್ಯಾಯವಾದ ಕಾರಣಗಳನ್ನು ಜನರ ತಿಳುವಳಿಕೆಗೋಸ್ಕರ ಪ್ರಕಟಿಸಬೇಕಾದದ್ದು ಅವಶ್ಯವಾಗಿದೆ. ಹೀಗೆ ಪ್ರಕಟಿಸದೆಯೂ ಸುಧಾರಿಸಿದ ಬೋರ್ಡಿಗೆ ಹೊಸ ಚುನಾವಣೆಯನ್ನು ಬೇಗನೆ ಮಾಡದೆಯೂ ಹೋದರೆ ದೇಶದ ಜನರಲ್ಲಿ ಅತೃಪ್ತಿಯುಂಟಾಗದೆ ಇರದು. ಈಗಾಗಲೇ ಅದರ ಕುರುಹುಗಳು ಕಂಡು ಬರುತ್ತಿವೆ. ಅದನ್ನು ಮುಂದರಿಯಲು ಬಿಡುವದು ಉಚಿತವಲ್ಲ.

"ಯಂಗ್ ಇಂಡಿಯಾ"ದಲ್ಲಿ ಕೊಡಗಿನ ವಿಚಾರ.

ಒಬ್ಬ ಬಾತ್ಮಿದಾರರು ಬರೆದಿರುವುದೇನಂದರೆ —

'ಈ ಸ ಖದ್ದರ್ ಸ್ಟೋರ್ಸ್ ಅನ್ನು ತಿಂಗಳುಗಳ ಹಿಂದೆ ಮಾತ್ರ ತೆರೆಯಲ್ಪಟ್ಟಿತು. ನಾವು ನಮಗೆ ಬೇಕಾದ ಸಿಜವಾದ ಖದ್ದರ್ ಬಟ್ಟೆಯನ್ನು ತಿರುಪ್ಪೂರಿನಲ್ಲಿರುವ ತಮಿಳುನಾಡು ಕಾಂಗ್ರೆಸ್ ಕಮಿಟಿಯ ವಸ್ತ್ರಾಲಯದಿಂದ ತರಿಸುತ್ತಿದ್ದೇವೆ. ಈಗಾಗಲೇ ೨೦೦೦ ರೂಪಾಯಿ ಕ್ರಯದ ಖಾದಿಯು ಹಂಚಲ್ಪಟ್ಟು ಮಾರಾಟವಾಗಿದೆ. ಖಾದಿಯು ಈ ದೇಶದಲ್ಲಿ ಹರಡಿದೆ. ಕೆಲವು ತಿಂಗಳುಗಳ ಹಿಂದೆ ಸಾವಿರದಲ್ಲಿ ಕೆಲವರಾದರೂ ಈ ಬಟ್ಟೆಯನ್ನು ಧರಿಸುವುದು ನಿಮಗೆ ಕಾಣುತ್ತಿರಲಿಲ್ಲ. ಆದರೆ ಬೆಳಗಾವಿ ಕಾಂಗ್ರೆಸ್ಸಿನ ನಂತರ ನೂರರಲ್ಲಿ ಅನೇಕರು ಸಿಜವಾದ ಖಾದಿಯನ್ನು ಉಡುವುದು ಕಾಣಬರುತ್ತಿದೆ.'

"ಈಗಾಗಲೇ ಹಲವು ಚರಕಗಳು ತಿರುಗಿಸಲ್ಪಡುತ್ತಿವೆ. ಕೈನೂಲು ಮಾಡುವುದಕ್ಕೆ ಉತ್ತೇಜ ಕೊಡುವುದಕ್ಕಾಗಿ ಒಂದು ಬೇರಾದ ಕಮಿಟಿಯು ನೇಮಕ ಮಾಡಲ್ಪಟ್ಟಿದೆ."

ಹೊಸ ಸಂಗತಿಗಳನ್ನು ಓದುವ ಸಂತೋಷಕರವಾದ ಅನುಭವವು ಇಂಥಾದ್ದಾಗಿದೆ. ಆದರೆ ಸ್ವಲ್ಪ ಸಮಯವಾದ ನಂತರ ಅವರು ಉದಾಸೀನರಾಗದಿರಲಿ. ಚರಕಗಳು ತಿರುಗುತ್ತಾ ಇರಲೆಂದು ಆಶಿಸುವ. ಈಗಾಗಲೇ ಪ್ರವರ್ತಕರ ಕೆಲಸ ಮಾತ್ರ ಬೇಕಾಗಿದೆ.

ಯಂ. ಕೆ. ಗಾಂಧಿ.

ಖಾದಿ ಬಟ್ಟೆಯ ವಿಷಯ ಬಾತ್ಮಿದಾರರು ಬರೆದದ್ದು ನಿಜವಾದ ಸಂಗತಿಯು. ಅದರ ಚರಕದ ವಿಷಯ ಮತ್ತು ಕೈನೂಲಿನ ಕಮಿಟಿಯ ವಿಷಯ ಬರೆದದ್ದು ಉತ್ಪ್ರೇಕ್ಷೆಯೂ ಎಂದೇ ನಮ್ಮ ಅಭಿಪ್ರಾಯ. ನಮಗೆ ತಿಳಿದ ಮಟ್ಟಿಗೆ ಕೆಲವು ಜಾಗಗಳಲ್ಲಿ ಮಾತ್ರ ಕೆಲಸ ನಡೆಯುತ್ತಿದೆ. ಆದಕ್ಕೆ ನೇಮಿತವಾದ ಕಮಿಟಿಯ ಮುತುವರ್ಜಿಯ ಕೆಲಸವೇನೂ ಕಾಣುವುದಿಲ್ಲ. ಆದರ ಮಹಾತ್ಮರಿಗೆ ಬರೆಯುವಾಗ ಸ್ವಲ್ಪವೂ ಉತ್ಪ್ರೇಕ್ಷೆ ಮಾಡಬಾರದು. ಬಾತ್ಮಿದಾರರು ಬರೆದದ್ದನ್ನು ಪೂರ್ತಿ ನಿಜ ಮಾಡಲಿಕ್ಕಾಗಿ ಬಾತ್ಮಿದಾರರೂ ಕಮಿಟಿಯವರೂ ಇನ್ನಾದರೂ ಬಹಳ ಪ್ರಯತ್ನಿಸುವರಾಗಿ ನಂಬುತ್ತೇವೆ.

ರಾಮು ನಾಮುವ ಮಹಿಮೆ.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

ಮೂರನೆಯ ಪ್ರಸಂಗವು ಹಾಸ್ಯಜನಕವಾಗಿದೆ. ಒಂದು ಪ್ರವಾಸದಲ್ಲಿ ನನಗೆ ಹಡಗಿನ ಕಪ್ತಾನನೊಂದಿಗೆ ಸ್ನೇಹವು ಬೆಳೆಯಿತು. ಹಾಗೆಯೇ ಒಬ್ಬ ಇಂಗ್ಲಿಷ್ ಪ್ರಯಾಣಿಕನೊಂದಿಗೂ ಪರಿಚಯವಾಯಿತು. ಹಡಗು ಎಲ್ಲೆಲ್ಲಿ ಬಂದರು ಮಾಡುತ್ತಿತ್ತೋ ಅಲ್ಲಿ ಕಪ್ತಾನನೂ ಬೇರೆ ಕೆಲವು ಪ್ರಯಾಣಿಕರೂ ವೇಶ್ಯಾ ಸ್ತ್ರೀಯರ ಮನೆಗಳನ್ನು ಹುಡುಕಿ ಹೋಗುವ ಪದ್ಧತಿಯಿತ್ತು. ಒಂದು ಸಲ ಕಪ್ತಾನನು ನನಗೆ ತನ್ನೊಡನೆ ಬಂದವರನ್ನು ನೋಡಲಿಕ್ಕೆ ಬರಲು ಆಮಂತ್ರಣವಿತ್ತನು. ನಾನು ಅವನ ಮಾತಿಗೆ ಅರ್ಥವನ್ನು ತಿಳಿಯಲಿಲ್ಲ. ನಾವು ಒಬ್ಬ ವೇಶ್ಯೆಯ ಮನೆಯ ಎದುರಿನಲ್ಲಿ ಬಂದು ನಿಂತೆವು. ಆಗ ಬಂದವರನು ನೋಡಲು ಹೋಗುವುದೆಂಬುದರ ಅರ್ಥವನ್ನು ತಿಳಿದುಕೊಂಡೆನು. ಮೂರು ಮಂದಿ ಸ್ತ್ರೀಯರು ನಮ್ಮೆದುರಿಗೆ ತಂದು ನಿಲ್ಲಿಸಲ್ಪಟ್ಟರು. ನಾನು ಚಕಿತನಾದೆನು. ಲಜ್ಜೆಯಿಂದ ನನಗೆ ಒಂದು ಶಬ್ದವನ್ನು ಕೂಡ ಹೇಳಲಿಕ್ಕೂ ಓಡಿಹೋಗಲಿಕ್ಕೂ ಅಸಾಧ್ಯವಾಯಿತು. ನನಗೆ ಬಾಧಿಸ್ಯಾದರೂ ವಿಷಯೋಪಭೋಗಯು ಇರಲಿಲ್ಲ. ನನ್ನ ಮಿತ್ರರಿಬ್ಬರು ಎರಡು ಕೋಣೆಗಳನ್ನು ಪ್ರವೇಶಿಸಿದರು. ಮೂರನೆಯವಳು ನನ್ನನ್ನು ತನ್ನ ಕೋಣೆಯೊಳಗೆ ಕರೆದುಕೊಂಡು ಹೋದಳು. ನಾನು ಏನು ಮಾಡಬೇಕೆಂದು ವಿಚಾರಿಸುವಷ್ಟರಲ್ಲಿ ಅವಳು ಹೊರಗೆ ಬಂದಳು. ಈ ಸ್ತ್ರೀಯು ನನ್ನ ವಿಷಯವಾಗಿ ಏನು ನೆನೆಸಿಕೊಂಡಳೋ ನಾನರಿಯೆ. ಅವಳು ನ

ನ್ನ ಮುಂದೆ ನಗುತ್ತ ನಿಂತಿದ್ದಳು. ನನ್ನ ಮೇಲೆ ಅದರಿಂದ ಯಾವ ಪರಿಣಾಮವೂ ಆಗಲಿಲ್ಲ ನಮ್ಮಿಬ್ಬರ ಭಾಷೆಯು ಭಿನ್ನವಾಗಿತ್ತು. ಆದುದರಿಂದ ನನಗೆ ಮಾತನಾಡುವ ಪ್ರಸಂಗವೇ ಬೀಳಲಿಲ್ಲ. ನನ್ನ ಸ್ನೇಹಿತರು ನನ್ನನ್ನು ಕರೆದರು ನಾನು ಹೊರಗೆ ಬಂದೆನು. ಸ್ವಲ್ಪ ನಾಚಿಕೆ ಪಟ್ಟೆನು, ಅವರು ನನ್ನನ್ನು ಇಂತಹ ವಿಷಯದಲ್ಲಿ ಮೂರ್ಖನೆಂದು ಎಣಿಸಿದರು. ತಮ್ಮೊಳಗೆ ಈ ಕುರಿತು ಸ್ವಲ್ಪ ವಿನೋದದ ಮಾತುಗಳನ್ನು ಕೂಡ ಆಡಿದರು. ಇದರ ನಂತರ ಎಂದೂ ಅವರು ನನಗೆ ಬಂದರವನ್ನು ಸಂದರ್ಶಿಸಲು ಆಮಂತ್ರಿಸಲಿಲ್ಲ. ಸ್ವಲ್ಪ ಹೆಚ್ಚು ಸಮಯ ನಿಂತಿದ್ದರೆ ಅಥವಾ ಆ ಸ್ತ್ರೀಯ ಭಾಷೆಯನ್ನು ತಿಳಿದಿದ್ದರೆ ನನ್ನ ಪಾಡೇನಾಗುತ್ತಿತ್ತೆಂದು ಹೇಳಲಾರೆ ಆದರೆ ಆದಿನ ನನ್ನ ಪುರುಷಾರ್ಥದ ಬಲದಿಂದ ನನ್ನ ರಕ್ಷಣೆಯಾಗಲಿಲ್ಲವೆಂದೂ ಈಶ್ವರನೇ ನನ್ನನ್ನು ಮೂಢನನ್ನಾಗಿರಿಸಿ ಕಾಪಾಡಿದನೆಂದೂ ಮಾತ್ರ ತಿಳಿಯುತ್ತೇನೆ

ಪತ್ರಲೇಖಕನು ಸೂಚಿಸಿರುವ ಭಾಷಣದ ಸಮಯದಲ್ಲಿ ನನಗೆ ಈ ಮೂರು ಪ್ರಸಂಗಗಳು ಸ್ಮರಣೆಗೆ ಬಂದವು ಇಂತಹ ಅನ್ಯ ಪ್ರಸಂಗಗಳು ಬರಲಿಲ್ಲವೆಂದು ವಾಚಕರು ತಿಳಿಯದಿರಲಿ. ಆದರೆ ಪ್ರತಿಯೊಂದು ಸಂದರ್ಭದಲ್ಲಿಯೂ ರಾಮನಾಮವೇ ನನ್ನನ್ನು ಕಾಪಾಡಿತೆಂದು ಅವಶ್ಯವಾಗಿ ಹೇಳಲಿಚ್ಛಿಸುತ್ತೇನೆ ಈಶ್ವರನು ಒಳ್ಳೇಗೈಯಿಂದ ಹೋಗುವ ಬಲಹೀನನಿಗೆ ಬಲವನ್ನು ಕೊಡುವನು.

ಜಬ ಲಗ ಗಜಬಲ ಅಪನೋ ಬರತ್ಯೋಂ ನೇಕ ಸರ್ಯೋ ನಹಿಂ ಕಾಮ

ನಿರ್ಬಲ ಹೋಯ ಬಲರಾಮ ಪುಕಾರ್ಯೋ ಆಯೇ ಆಧೇ ನಾಮ |

ಈ ರಾಮನಾಮವೆಂದರೇನು? ಕೇವಲ ಗಿಳಿಯಂತೆ ಉಚ್ಚಾರಣೆ ಮಾಡುವುದೋ? ಅಲ್ಲ. ಹಾಗಿದ್ದರೆ ನಾವೆಲ್ಲರೂ ಈ ಹೆಸರನ್ನು ಬಾಯಿಪಾಠ ಮಾಡಿಕೊಂಡು ಸಾಗರವನ್ನು ದಾಟಬಹುದಾಗಿತ್ತು. ರಾಮನಾಮದ ಉಚ್ಚಾರವು ಹೃದಯದಿಂದಲೇ ಆಗಬೇಕು. ಆಗ ಒಂದುವೇಳೆ ಆ ಉಚ್ಚಾರವು ಶುದ್ಧವಾಗಿರದಿದ್ದರೂ ಚಿಂತೆಯಿಲ್ಲ. ಹೃದಯದ ತೊದಲುನುಡಿಯು ಈಶ್ವರನ ಆಸ್ಥಾನದಲ್ಲಿ ಸ್ವೀಕೃತವಾಗುತ್ತದೆ. ಹೃದಯವು 'ಮರಾ ಮರಾ' ಎಂದು ಉಚ್ಚರಿಸುತ್ತಿದ್ದರೂ ಹೃದಯದಿಂದ ಹೊರಟ ಉದ್ಗಾರವು ಜಮೆಯ ಸಾಲಿಗೆ ಸೇರಿಸಲ್ಪಡುವುದು ಬಾಯಿಯಿಂದ ರಾಮನಾಮದ ಶುದ್ಧ ಉಚ್ಚಾರಣೆಯನ್ನು ಮಾಡುವಾಗ ಹೃದಯದ ಸ್ವಾಮಿಯು ಮಾತ್ರ ರಾವಣನಾಗಿದ್ದರೆ ಆ ಶಬ್ದೋಚ್ಚಾರವು ಖರ್ಚಿನ ಸಾಲಿಗೆ ಸೇರಿಸಲ್ಪಡುವುದು.

'ಬಾಯಲ್ಲಿ ರಾಮರಾಮ ಕಂಕುಳಲ್ಲಿ ಚೂರಿ' ಎಂಬಂತೆ ಇರುವ ಬಕ ಭಕ್ತರಿಗಾಗಿ ರಾಮನಾಮದ ಮಹಿಮೆಯನ್ನು ತುಲಸೀದಾಸನು ಹಾಡಲಿಲ್ಲ. ಇಂಥವರ ಹಿತವೆಂದೆಣಿಸಿದ ಪಗಡೆಯೂ ಅಹಿತವಾಗಿ ಪರಿಣಮಿಸುವುದು; ಹೃದಯದಲ್ಲಿ ರಾಮನಿಗೆ ಸ್ಥಾನವನ್ನು ಕೊಟ್ಟವರ ಪಗಡೆಯೂ ಅನುಕೂಲವಾಗಿ ತೋರದಿದ್ದರೂ ಜಯವನ್ನು ಕೊಡುವುದು. 'ಬಿಗರಿ' (ಕೆಟ್ಟವನ) ಯ ಸುಧಾರಕನು ರಾಮನೇ ಆದುದರಿಂದ ಭಕ್ತ ಸೂರದಾಸನು ಹೀಗೆ ಹಾಡಿರುವರು.

ಬಿಗರೀ ಕೌನ ಸುಧಾರೇ
ರಾಮ ಬಿನ ಬಿಗರೀ ಕೌನ ಸುಧಾರೇ ರೇ
ಬನೀ ಬನೀ ಕೇ ಸಬ ಕೋಯಿ ಸಾಥೀ
ಬಿಗರೀ ಕೇ ನಹಿಂ ಕೋಯಿ ರೇ.

ರಾಮನಾಮವು ಹೃದಯದ ಭಾವನೆಯಾಗಿದೆಯೆಂದು ವಾಚಕರು ಚೆನ್ನಾಗಿ ತಿಳಿದುಕೊಳ್ಳಲಿ. ಎಲ್ಲಿ ಮನಸ್ಸು ಮತ್ತು ವಾಕ್ಯಗಳಲ್ಲಿ ಐಕ್ಯವಿಲ್ಲವೋ ಅಲ್ಲಿ ಮಾತು ಕೇವಲ ಮಿಥ್ಯೆಯೂ, ದಂಭವೂ ಶಬ್ದಜಾಲವೂ ಆಗಿವೆ ಇಂತಹ ಉಚ್ಚಾರದಿಂದ ಒಂದುವೇಳೆ ಜಗತ್ತು ಮೋಸಹೋದರೂ ಅಂತರ್ಯಾಮಿಯಾದ ರಾಮನು ಮೋಸಹೋದಾನೆ? ಸೀತಾದೇವಿಯಿಂದ ಕೊಡಲ್ಪಟ್ಟ ಮಣಿಹಾರವನ್ನು ಹನುಮಂತನು ಒಡೆದು ಅದರಲ್ಲಿ ರಾಮನಾಮವಿದೆಯೋ ಎಂದು ಶೋಧಿಸತೊಡಗಿದನು. ತಾನು ಬುದ್ಧಿವಂತನೆಂದು ಎಣಿಸುತ್ತಿದ್ದ ಸುಭಟನು 'ಸೀತೆಯ ಮಣಿಮಾಲೆಯ ವಿಷಯದಲ್ಲಿ ಇಷ್ಟು ಅನಾದರವೇ?' ಎಂದು ಪ್ರಶ್ನೆಮಾಡಿದನು. 'ಅದರೊಳಗೆ ರಾಮನಾಮವಿಲ್ಲದಿದ್ದರೆ ಸೀತಾದೇವಿಯಿಂದ ಕೊಡಲ್ಪಟ್ಟ ಈ ಮಾಲೆಯೂ ನನಗೆ ಭಾರರೂಪವಾಗಿದೆ' ಎಂದು ಮಾರುತಿಯು ಉತ್ತರಕೊಟ್ಟನು. 'ನಿನ್ನ ಅಂತರದಲ್ಲಿ ರಾಮನಾಮವಿದೆಯೋ?' ಎಂದು ಪುನಃ ಬುದ್ಧಿವಂತನಾದ ಸುಭಟನು ನಗುತ್ತ ಕೇಳಿದನು. ಕೂಡಲೇ ಹನುಮಂತನು ಚೂರಿಯಿಂದ ತನ್ನ ಎದೆಯನ್ನು ಸೀಳಿ ತೋರಿಸಿ ಹೀಗೆಂದನು—'ಅಂತರ್ಯವನ್ನು ನೋಡು—ಇದರೊಳಗೆ ರಾಮನಾಮದ ಹೊರತು ಬೇರೇನಾದರೂ ಇದ್ದರೆ ಹೇಳು.' ಸುಭಟನು ಲಜ್ಜಿತನಾದನು. ಹನುಮಂತನ ಮೇಲೆ ಪುಷ್ಪವೃಷ್ಟಿಯಾಯಿತು. ಅಂದಿನಿಂದ ರಾಮಕಥೆಯ ಕಾಲದಲ್ಲಿ ಹನುಮಂತನ ಆವಾಹನಕ್ಕೆ ಆರಂಭವಾಯಿತು

ಇದು ಕಾವ್ಯಕಲ್ಪನೆಯಾಗಲೀ ನಾಟಕಕಾರನ ರಚನೆಯಾಗಲೀ ಆಗಿರಬಹುದು. ಆದರೆ ಇದರ ಸಾರವು ಮಾತ್ರ **ಅನಂತ ಕಾಲದವರೆಗೆ** ನಿಜವಿರುತ್ತದೆ. ಯಾವುದು ಹೃದಯ**ದಲ್ಲಿದೆಯೋ ಅದೇ ಸತ್ಯವಿರುತ್ತದೆ.**

(ಸತ್ಯಾಗ್ರಹೀ.) ಮೋ. ಕ. ಗಾಂಧೀ.

ಕರ್ನಾಟಕ ಏಕೀಕರಣವೂ ಕೊಡಗೂ.

(ಕೊಡಗು ಕನ್ನಡಿಗನಿಂದ)

೧. ಇತಿಹಾಸ ಕಾಲ.

ಕರ್ನಾಟಕವು ಯಾವುದು, ನಮಗೂ ಕರ್ನಾಟಕಕ್ಕೂ ಯಾವ ಸಂಬಂಧವಿದೆ; ಅಖಿಲ ಕರ್ನಾಟಕಕ್ಕೆ ನಾವು ಋಣಿಗಳೇ ಎಂಬ ವಿಷಯಗಳನ್ನು ಪ್ರತಿಯೊಬ್ಬ ಕೊಡಗು ನಾಡಿನ ಕನ್ನಡಿಗನೂ ತಿಳಿದುಕೊಳ್ಳುವುದು ಅವಶ್ಯಕ ಈ ವಿಷಯ ಕೊಡಗಿನವನು ತಿಳಿದು ಮಾಡಬೇಕಾದ ಕೆಲಸಗಳಾವುವೆಂಬುದನ್ನು ವಿಚಾರಿಸಿಕೊಳ್ಳಬೇಕು. ಈ ದೃಷ್ಟಿಯಿಂದ ಈ ಲೇಖನವನ್ನು ಬರೆದುದಾಗಿದೆ

ಕರ್ನಾಟಕವು ಬಹಳ ಪುರಾತನದು. ಪುರಾತನಕಾಲದಲ್ಲಿ ನಹ ಬಹಳ ಪ್ರಖ್ಯಾತಿಯನ್ನು ಹೊಂದಿತ್ತು. ಕೃತಯುಗದ ಆದಿ ಭಾಗದಲ್ಲಿ ಈಗಿನ ಕನ್ನಡನಾಡು ದಂಡಕಾರಣ್ಯದ ಒಂದು ಭಾಗವಾಗಿದ್ದು, 'ಕರ್ನಾಟಕ' ನೆಂಬ ರಾಕ್ಷಸನು ಆ ಅರಣ್ಯದ ದಕ್ಷಿಣ ಭಾಗದಲ್ಲಿದ್ದು, ಜನರಿಗೆ ಬಹಳ ತೊಂದರೆಗಳನ್ನು ಕೊಡುತ್ತಿದ್ದುದರಿಂದ "ಶ್ರೀ ಮಾತೆ" ಯೆಂಬ ಶಕ್ತಿ ದೇವತೆಯು ಆ ರಾಕ್ಷಸನನ್ನು ಕೊಂದಳೆಂದೂ, ಆ ರಾಕ್ಷಸನು ವಾಸಮಾಡಿಕೊಂಡಿದ್ದ ರಾಜ್ಯವು ಅನಂತರ "ಕರ್ನಾಟಕ" ವೆಂದು ಕರೆಯಲ್ಪಟ್ಟಿತೆಂದೂ ಪುರಾಣಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ ಈಗಿನ ಹಂಪೆಯು ರಾಮಾಯಣ ಕಾಲದ ಕಿಷ್ಕಿಂಧೆ, ಗೋಕರ್ಣವು ರಾವಣನಿಂದ ಸ್ಥಾಪಿಸಲ್ಪಟ್ಟಿತು. ಪಾಂಡವರ ಕಾಲದಲ್ಲಿ ಕರ್ನಾಟಕದ ಬೇರೆ ಬೇರೆ ಭಾಗಗಳು ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಿತ್ತು. ಕುಂತಳ, ವಿರಾಟ ರಾಜ್ಯಗಳು ಈಗಿನ ಕರ್ನಾಟಕದ ಭಾಗಗಳು ಇದೂ ಅಲ್ಲದೆ ಮಹಾಭಾರತದಲ್ಲಿಯೂ, ಆನಂದ ರಾಮಾಯಣದಲ್ಲಿಯೂ ಕರ್ನಾಟಕದ ವರ್ಣನೆಗಳಿವೆ.

ಮಹಾ ಭಾರತದ ಕಾಲದಿಂದ ಶಾಲಿವಾಹನ ಶಕದವರೆಗೆ ಕರ್ನಾಟಕದ ಚರಿತ್ರೆಯೇನೂ ಗೊತ್ತಿರುವುದಿಲ್ಲ. ಕ್ರಿಸ್ತಶಕ ಪ್ರಾರಂಭದಲ್ಲೇ ಈ ನಾಡಿನಲ್ಲಿ ದೊಡ್ಡ ರಾಜ್ಯವು ಸ್ಥಾಪಿಸಲ್ಪಟ್ಟಿತ್ತು. ಆ ಕಾಲದಲ್ಲಿ ಕನ್ನಡಿಗರು ಗ್ರೀಸ್ ಇಜಿಪ್ತ ದೇಶಗಳೊಂದಿಗೆ ವ್ಯಾಪಾರಮಾಡುತ್ತಿದ್ದರು. ಈ ಪ್ರಾಂತ್ಯವನ್ನು ಏಕ ಚಕ್ರಾಧಿಪತ್ಯದಲ್ಲಿ ಮೊದಲು ಆಳಿದವರು ಚಾಲುಕ್ಯರು ಇವರನಂತರ ರಾಷ್ಟ್ರಕೂಟರು, ಯಾದವರು, ಕದಂಬರೇ ಮೊದಲಾದ ಅರಸು ಮನೆತನದವರು ಆಳಿದರು. ಈ ರಾಷ್ಟ್ರಕೂಟರ ಕಾಲದಲ್ಲೇ ಕನ್ನಡದಲ್ಲೆಲ್ಲಾ ಅತಿ ಹಳೇದಾದ ಗ್ರಂಥ "ಕವಿರಾಜಮಾರ್ಗ" ವನ್ನು ಬರೆದ ನೃಪತುಂಗನು ಜೀವಿಸಿದ್ದು ಅವನ ಕಾಲದಲ್ಲಿ ಕರ್ನಾಟಕವು ಗೋದಾವರಿಯಿಂದ ಕಾವೇರಿಯವರೆಗೆ ಹಬ್ಬಿತ್ತೆಂದು ಬರೆದಿರುವನು.

ಹೊಯ್ಸಳ, ರಟ್ಟರೇ ಮೊದಲಾದ ರಾಜ ಮನೆತನದವರು ಕರ್ನಾಟಕದ ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆ ಸಮಯಗಳಲ್ಲಿ ಆಳುತ್ತಿದ್ದಾಗ, ವಿಜಯನಗರ ಸಾಮ್ರಾಜ್ಯವನ್ನು ಹುಕ್ಕ ಬುಕ್ಕರೆಂಬಿಬ್ಬರು ಶ್ರೀ ವಿದ್ಯಾರಣ್ಯರ ಸಹಾಯದಿಂದ ಸ್ಥಾಪಿಸಿದರು. ಸ್ಥಾಪಿಸಿದ ಕಾಲವು ಸುಮಾರು ಕ್ರಿ. ಶ ೧೩೩೬; ಸ್ಥಳ ಈಗಿನ ಹಂಪೆ. ಈ ರಾಜ್ಯವು ಶ್ರೀ ವಿದ್ಯಾರಣ್ಯ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟು, ಶುಕ್ಲಪಕ್ಷದ ಚಂದ್ರನಂತೆ ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತಾ ಹೋಗಿ ಬಹಳ ವೈಭವದಿಂದ ಕೂಡಿತು. ರಾಜಧಾನಿಯಾದ ವಿಜಯನಗರವು ಬಹಳವಾಗಿ ವಿಸ್ತರಿಸಲ್ಪಟ್ಟು, ವ್ಯಾಪಾರದಲ್ಲಿಯೂ, ಸಾಮ್ರಾಜ್ಯದಲ್ಲಿಯೂ ಪ್ರಾಮುಖ್ಯತೆಯನ್ನು ಹೊಂದಿತು. ಈ ಸ್ವಾಮಿಗಳ ಕಾಲದಲ್ಲೇ ಜಗದ್ಗುರುಗಳ ಪೀಠಸ್ಥಾನವಾದ ಶೃಂಗೇರಿಯೂ ಮುಂದುವರಿಯಿತು. ಅಲ್ಲಿ ಶ್ರೀ ವಿದ್ಯಾರಣ್ಯ ಸ್ವಾಮಿಯವರ ಬಿರುದು 'ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ" ರೆಂದು ಸುವರ್ಣಾಕ್ಷರದಲ್ಲಿ ಬರೆದುದು ಈಗಲೂ ಇದೆ. ಇವರ ಪುಣ್ಯತಿಥಿಯು ಜ್ಯೇಷ್ಠ ಬಹುಳ ೧೨ (ಜೂನ ೧೯) ಕ್ಕೆ ಆಗುತ್ತದೆ. ಪ್ರತಿಯೊಬ್ಬ ಕರ್ನಾಟಕನೂ ಆ ದಿನವನ್ನು ಆಚರಿಸಬೇಡವೇ?

ಶ್ರೀ ವಿದ್ಯಾರಣ್ಯ ಸ್ವಾಮಿಗಳು ಕಾಲವಾದನಂತರ ವಿಜಯನಗರ ಸಾಮ್ರಾಜ್ಯದಲ್ಲಿ ಸುಮಾರು ಇನ್ನೂರು ವರ್ಷಗಳವರೆಗೂ ದೊಡ್ಡ ದೊಡ್ಡ ಚಕ್ರವರ್ತಿಗಳು ರಾಜ್ಯಭಾರಮಾಡಿದರು. ಕ್ರಿ. ಶ ೧೫೦೯ರಲ್ಲಿ ವಿಜಯನಗರದ ರಾಜರುಗಳಲ್ಲೆಲ್ಲಾ ಪ್ರಖ್ಯಾತಿಸಲ್ಪ ಕೃಷ್ಣದೇವರಾಯನು ಪಟ್ಟಕ್ಕೆ ಬಂದು, ತನ್ನ ರಾಜ್ಯವನ್ನು ತುಂಗಭದ್ರಾ ನದಿಯ ಉತ್ತರಕ್ಕೆ ಬಹಳವಾಗಿ ವಿಸ್ತರಿಸಿದನು. ಅವನ ಕಾಲದಲ್ಲೇ ಕರ್ನಾಟಕದ ಉತ್ತರಭಾಗವನ್ನಾಳುತ್ತಿದ್ದ, ತುರುಕರ ಭಾಮಿನೀ ರಾಜ್ಯವನ್ನು ಸೂರೆಗೊಂಡು, ಆ ರಾಜರುಗಳನ್ನು ತನ್ನ ಕೈ ವಶದಲ್ಲಿಟ್ಟುಕೊಂಡು ದೂರದರ್ಶಿಯಾಗಿ ಬಿಜಾಪುರ ಸುಲ್ತಾನನೊಡನೆ ಸ್ನೇಹ ಭಾವದಿಂದಿದ್ದನು. ಆ ಕಾಲದಲ್ಲೇ ಏಕ ಚಕ್ರಾಧಿಪತ್ಯವು ಬಹು ಪ್ರಖ್ಯಾತಿಯನ್ನು ಹೊಂದಿದ್ದು. ಆಗ ಈ ಸಾಮ್ರಾಜ್ಯವು ಉತ್ತರದಲ್ಲಿ ಕೃಷ್ಣಾನದಿಯವರೆಗೂ, ಪೂರ್ವ ಪಶ್ಚಿಮ ದಕ್ಷಿಣದಲ್ಲಿ ಸಮುದ್ರಗಳವರೆಗೂ ಹಬ್ಬಿತ್ತು. ಹಂಪಿಯಲ್ಲಿ ಈಗಲೂ ಕಾಣುವ ಕಟ್ಟಡಗಳನ್ನು ಇವನೇ ಕಟ್ಟಿಸಿದ್ದು; ಆ ಹಾಳುಬಿದ್ದ ಹಂಪೆಯನ್ನು ನೋಡುವ ಪ್ರತಿಯೊಬ್ಬ ಕನ್ನಡಿಗನೂ ಕಣ್ಣೀರು ಸುರಿಸದಿರಲಾರನು.

ಕೃಷ್ಣದೇವರಾಯನು ಸಂತತಿಯಿಲ್ಲದೆ ೧೫೩೦ರಲ್ಲಿ ಕಾಲವಾದುದರಿಂದ, ಅವನ ಅಳಿಯ ರಾಮರಾಯನು ಪಟ್ಟಕ್ಕೆ ಬಂದನು. ಇವನು ರಾಜಕೀಯ ವಿಚಾರಗಳಲ್ಲಿ ಬುದ್ಧಿವಂತನಾಗಿದ್ದರೂ, ಅವನ ಮದ, ಅಹಂಕಾರವೇ ಮೊದಲಾದ ದುರ್ಗುಣಗಳಿಂದಲೂ, ಮಾವನ ಹಾಗೆ ದೂರದರ್ಶಿಯಾಗಿಲ್ಲದ್ದರಿಂದಲೂ, ಮಹಮದೀಯ ರಾಜರೈವರೂ ಒಂದುಗೂಡಿ ಇವನ ಮೇಲೆ ಬಿದ್ದರು. ೧೫೬೫ರಲ್ಲಿ ಬಿಜಾಪುರ ಜಿಲ್ಲೆಯ ತಾಳೀಕೋಟೆಯಲ್ಲಿ ರಾಮರಾಯನನ್ನು ಪೂರ್ಣ ಸೋಲಿಸಿ, ವಿಜಯನಗರವನ್ನು 5 ತಿಂಗಳವರೆಗೆ ಸೂರೆಮಾಡಿ, ಕರ್ನಾಟಕದ ಏಕ ಚಕ್ರಾಧಿಪತ್ಯವನ್ನು ಮುರಿದರು. ಅನಂತರ ಕರ್ನಾಟಕದ ಅನೇಕ ಸಾಮಂತ ರಾಜರುಗಳು ತಮ್ಮ ತಮ್ಮ ಅಧೀನದಲ್ಲಿದ್ದ ರಾಜ್ಯಗಳನ್ನು ತಮ್ಮದೇ ಮಾಡಿಕೊಂಡು ಚಿಕ್ಕ ಚಿಕ್ಕ ರಾಜರುಗಳಾದುದರಿಂದ ಕರ್ನಾಟಕವು ಭಿನ್ನ ಭಿನ್ನವಾಗಿ ಒಡೆದುಹೋಯಿತು. ಎಂಥಾ ವೈಭವವುಳ್ಳ ರಾಜ್ಯವು ಯಾವ ಸ್ಥಿತಿಯನ್ನು ಹೊಂದಿತು! ಇದು ಕರ್ನಾಟಕದ ಮೊದಲನೇ ವಿಭಾಗ!

ವಿಜಯನಗರ ಸಾಮ್ರಾಜ್ಯವು ಒಡೆದುಹೋದನಂತರ ಸುಮಾರು ೨೦೦ ವರ್ಷಗಳಲ್ಲಿ ಕರ್ನಾಟಕದ ಯಾವ ಚಿಕ್ಕ ರಾಜರೂ ಪ್ರಖ್ಯಾತಿಯನ್ನು ಹೊಂದಲಿಲ್ಲ. ಉತ್ತರದ ಕರ್ನಾಟಕ ಭಾಗವು ಬಿಜಾಪುರ ಸುಲ್ತಾನರ ಕೈ ಕೆಳಗಿತ್ತು. ದಕ್ಷಿಣದಲ್ಲಿ ಮೈಸೂರು ಸಂಸ್ಥಾನವು ಹಿಂದೂ ರಾಜನ ಕೈ ಕೆಳಗಿತ್ತು. ಬಿಜಾಪುರವನ್ನು ಮರಾಠರ ಮುಖಂಡರಾದ ಶಿವಾಜಿಮೊದಲಾದವರು ತಮ್ಮ ರಾಜ್ಯವನ್ನಾಗಿ ಮಾಡಿಕೊಂಡರು.

ಈ ರೀತಿಯಲ್ಲಿ ತುಂಗಭದ್ರೆಯ ಉತ್ತರದ ಕರ್ನಾಟಕವೆಲ್ಲಾ ಮಹಮದೀಯರ ಕೈ ತಪ್ಪಿ, ಹಿಂದುಗಳ ಕೈವಶವಾಗುತ್ತಿರಲು, ಅದೇ ಸಮಯ ದಕ್ಷಿಣಕ್ಕೆ ಇದ್ದ ಕರ್ನಾಟಕವು ಹಿಂದುಗಳ ಕೈತಪ್ಪಿ, ಮಹಮದೀಯರ ವಶವಾಯಿತು. ಮೈಸೂರನ್ನು ಕೃಷ್ಣದೇವರಾಯನು ಆಳುತ್ತಿದ್ದಾಗ ಆ ರಾಜನ ಕೈ ಕೆಳಗೆ ಸೈನ್ಯದಲ್ಲಿ ಸೇರಿಕೊಂಡಿದ್ದ ಹೈದರನೆಂಬ ಸೈನಿಕನು ಸಾಹಸದಿಂದಲೂ, ಧೈರ್ಯದಿಂದಲೂ ಮುಂದುವರಿಯುತ್ತಿದ್ದುದರಿಂದ ರಾಜರಿಗೆ ಅವನ ಮೇಲೆ ಕಣ್ಣುಬಿದ್ದು, ಅವನಿಗೆ ತಕ್ಕ ಪ್ರೋತ್ಸಾಹವನ್ನು ಕೊಟ್ಟರು. ಹೈದರನು ನಿರಕ್ಷರಕುಕ್ಷಿಯಾಗಿದ್ದರೂ ತನ್ನ ಪರಾಕ್ರಮದಿಂದಲೂ, ಶೌರ್ಯದಿಂದಲೂ ಕ್ರಮಕ್ರಮವಾಗಿ ದೊಡ್ಡ ಪದವಿಗಳನ್ನು ಹೊಂದುತ್ತಾ ಕಡೆಗೆ ರಾಜನನ್ನು ತನ್ನ ಕೈಕೆಳಗಿಟ್ಟುಕೊಂಡು ಮೈಸೂರಿಗೆಲ್ಲಾ ತಾನೇ ಸರ್ವಾಧಿಕಾರಿಯಾದನು.

ಹೈದರನು ರಾಜ್ಯವನ್ನು ಎಲ್ಲಾ ಕಡೆಗೆ ವಿಸ್ತರಿಸುತ್ತಾ ಹೋಗಿ, ಸಾಧಾರಣವಾಗಿ ದಕ್ಷಿಣ ಹಿಂದುಸ್ಥಾನವೆಲ್ಲಾ ಅವನ ಕೈಕೆಳಗೆ ಬಂತು. ಈ ರೀತಿಯಲ್ಲಿ ಹೈದರನು ತನ್ನ ರಾಜ್ಯವನ್ನು ಮುಂದುವರಿಸುತ್ತಿದ್ದುದನ್ನು ಇಂಗ್ಲಿಷರು ಕಂಡು ದುರ್ಬಲರಾದ ಅವರ ಕಣ್ಣು ಕಂಪೇರಿತು. ತಕ್ಷಣವೇ ಇಂಗ್ಲಿಷರು ಮರಾಠರ ಮತ್ತು ನೈಜಾಮನ ಸಹಾಯವನ್ನು ಹೊಂದಿಕೊಂಡು ಇವನನ್ನು ಮುರಿಯಲು ಪ್ರಯತ್ನಿಸಿದರು. ಆದರೂ ಹೈದರನು ಬೆದರದೇ ಇದ್ದನು. ಇವನನಂತರ ಟಿಪ್ಪುವು ಪಟ್ಟಕ್ಕೆ ಬಂದು ರಾಜ್ಯವನ್ನು ವಿಸ್ತರಿಸುತ್ತಲೂ ಬಲಪಡಿಸುತ್ತಲೂ ಇದ್ದು, ರಾಜ್ಯವು ಬಹು ಅಭಿವೃದ್ಧಿಯನ್ನು ಹೊಂದಿತು ಆದರೇನು? ದೈವಗತಿಯು ಆಗಲೇಬೇಕು! 1799ರಲ್ಲಿ ಇಂಗ್ಲಿಷರೂ, ಮರಾಠರೂ, ನೈಜಾಮನೂ ಒಟ್ಟುಸೇರಿ ಟಿಪ್ಪುವಿನ ಮೇಲೆ ಬಿದ್ದು, ಅವನನ್ನು ಕೊಂದು, ರಾಜ್ಯದ ಸ್ವಲ್ಪ ಭಾಗವನ್ನು ಹಳೆಯ ರಾಜ ಮನೆತನದವರಿಗೊಪ್ಪಿಸಿ, ಉಳಿದುದನ್ನು ತಾವು ಮೂರು ಜನರೂ ಹಂಚಿಕೊಂಡರು. ಇದೇ ಕರ್ನಾಟಕದ ಎರಡನೇ ವಿಭಾಗ!!

ಮೊದಲನೇ ಪೆಟ್ಟಿನೊಂದಿಗೆ ಮಹತ್ವವಾದ ಎರಡನೇ ಪೆಟ್ಟು ಬಿದ್ದುದರಿಂದ ಕನ್ನಡಿಗರಿಗೆ ತಿರುಗಿ ತಲೆ ನೆಗೆಯಲಾಗಲಿಲ್ಲ ಕನ್ನಡಿಗರ ಭಾಷೈಕ್ಯವು ಒಡೆದುಹೋಯಿತು, ಆರ್ಥಿಕ ಸ್ಥಿತಿಯು ಕೆಟ್ಟುಹೋಯಿತು ಈ ರೀತಿಯಲ್ಲಿ ಕರ್ನಾಟಕವು ಛಿನ್ನೀಕರಿಸಲ್ಪಟ್ಟಿತು! ಹ್ಯಾಗಿದ್ದ ಕರ್ನಾಟಕವು ಹ್ಯಾಗಾಯಿತು! ಯಾವ ರಾಜ್ಯವು ತಾನೇ ಸ್ಥಿರ!!

(ಮುಂದುವರಿಯುವುದು.)

ಆಸ್ತಿ! ಮಾರಾಟಕ್ಕೆ!! ಆಸ್ತಿ!!!

ವೀರರಾಜೇಂದ್ರಪೇಟೆ ದೇವಾಂಗದ ಬೀದಿಯಲ್ಲಿ ಅಂದರೆ ಮೆ· ತವ್ವೈಯ್ಯಾಶಾಯರವರ ಶಾಲೆಸನ್ನಿ (ಬಾಬು) ಒಂದು ಮಹಡಿಮನೆ ಇದಕ್ಕೆ ಒತ್ತಾಗಿ ಒಂದು ಪ್ರತ್ಯೇಕ ಅಧೀನವಾದ ಒಂದು ಉದ್ದವಾದ ಸರ್ವ ಕೆಲಸಕ್ಕೆ ಅನುಕೂಲವಾದ ಬೈಸ್ ಕಲ್ಲುಕಟ್ಟಿದ ಬಾವಿ, ಇದಕ್ಕೆ ಅನುಕೂಲವಾಗಿ ಒಂದು ವಿಕಾರಿ ಬಾಗ, ಇದರಲ್ಲಿ ಕೆಲವುಭಾಗ [illegible] ಕಾಫೀಹೋಟೆಲ್, ಮತ್ತಲೂ ಸರಕಾರಿ ಮೋಟರು, ಕಾರು, ಗಾಡಿ [illegible] ಅನುಕೂಲವಾಗಿ [illegible] ರೋಡು ನಹ ಇರುವ ಮತ್ತು ಮರವು [illegible] ಹೊಂದಿರುವ ಮೇಲ್ಕಂಡ ಮನೆ [illegible] ಖರೀದಿಸುವವರು ಈ ಕೆಳಗಿನ ವಿಳಾಸದಾರರಿಗೆ ತಿಳಿಸಿ ಅನುಸರಿಸಿ ಕೊಂಡುಕೊಳ್ಳಬಹುದು.

ಕೆಂಡೋತ್ ಪುಂಬಾಪ್ಪೋಕರ್ ಶಾಕ,
ವೀರರಾಜೇಂದ್ರಪೇಟೆ.

4—1

ಮತಗಳೊಳಗೆ ಅನ್ಯೋನ್ಯತೆ.

(ಸ್ವಾಮಿ ಸರ್ವಾನಂದರವರ ಇನ್ನೊಂದು ಭಾಷಣದ ಸಾರಾಂಶ)

ಈ ವಿಷಯವು ನನಗೆ ಬಹಳ ಪ್ರಿಯವಾದದ್ದಾಗಿದೆ. ಇದರ ಮೇಲೆ ಬಹಳ ವಿಸ್ತಾರವಾಗಿ ಮಾತಾಡಬೇಕೆಂದಿದ್ದೆ. ಆದರೆ ನಿಜವಾದ ಮತವೇನೆಂಬುದನ್ನು ಸ್ವಲ್ಪ ಮಟ್ಟಿಗಾದರೂ ವಿವರಿಸಬೇಕೆಂದು ಕೆಲವರು ಕೇಳಿಕೊಂಡಿರುವುದರಿಂದ ಅದರ ಮೇಲೆ ಸ್ವಲ್ಪ ಮಾತಾಡುತ್ತೇನೆ. ಇತಿಹಾಸ ದೃಷ್ಟಿಯಿಂದ ಮತದ ಮೂಲವು ಎರಡು ವಿಧವಾಗಿ ಎಣಿಸಲ್ಪಟ್ಟಿದೆ. ಒಂದು ಪಕ್ಷವು, ಮತವು ತತ್ವಗಳ ಪೂಜೆಯಿಂದ ಆರಂಭವಾಯಿತೆಂತ ಅನ್ನುತ್ತಾರೆ. ಇನ್ನೊಂದು ಪಕ್ಷವು ಸ್ವಾಭಾವಿಕ ಶಕ್ತಿಗಳನ್ನು ಪೂಜಿಸುವ ಸ್ವಭಾವದಿಂದ ಮತ ಪ್ರಾರಂಭವಾಯಿತೆಂತ ಹೇಳುತ್ತಾರೆ. ವೇದಾಂತ ಪಕ್ಷದವರ ಅಭಿಪ್ರಾಯದಲ್ಲಿ ಮತದ ಮೂಲವು ಬೇರೆಯಾಗಿದೆ. ಮನುಷ್ಯನು ಅಪೂರ್ಣನಾಗಿ ಜನ್ಮತಾಳಿದ್ದಾನೆ. ತಾನು ಬಹಳ ಚಿಕ್ಕವನೆಂತಲೂ ದೊಡ್ಡವನಾಗಬೇಕೆಂತಲೂ ಅಭಿಲಾಷೆಯು ಮನುಷ್ಯನ ಸ್ವಭಾವದಲ್ಲೇ ಇದೆ. ದೇಹದಲ್ಲಿ ಅನಾರೋಗ್ಯ ಮುಂತಾದದ್ದು ಬಂದಾಗ ತನಗಿಂತ ಹೆಚ್ಚಿಗೆ ಶಕ್ತಿ ಇರುವ ವ್ಯಕ್ತಿಗಳು ಬೇರೆ ಇವೆಯೆಂಬ ನಂಬಿಕೆಯಿಂದ ಭೂತಪಿಶಾಚಿಗಳ ಸಹಾಯತೇಳುವದು ರೂಢಿಯಿದೆಯಷ್ಟೆ. ಆದರಿಂದ ಮನುಷ್ಯನ ಸ್ವಭಾವದಲ್ಲಿ ಮೂರು ಅಭಿಪ್ರಾಯಗಳು ಇವೆ. 1 ತಾವು ಕಡಿಮೆ ಶಕ್ತಿ ಇರುವವರು, 2 ತಮಗಿಂತ ಶಕ್ತಿ ಇರುವವರು ಬೇರೆ ಇದ್ದಾರೆ. 3. ತಮ್ಮ ಅಶಕ್ತತೆಯನ್ನು ಹೋಗಲಾಡಿಸಿ ಹೆಚ್ಚಿಗೆ ಶಕ್ತಿ ಪಡೆಯಬೇಕು, ಎಂಬ ಮೂರು ಅಭಿಪ್ರಾಯಗಳು. ಬೇಕಾದಷ್ಟು ಯೋಚಿಸಿದಾಗ ಹೇಗೆ ಕತ್ತಲೆಯ ಯೋಚನೆಯು ನಂಗಡಲೇ ಇದೆಯೋ ಹಾಗೆಯೇ ತಾನು ಅಶಕ್ತನೆಂದರೆ ತನಗಿಂತ ಶಕ್ತಿಯುಕ್ತರು ಬೇರೆ ಇದ್ದಾರೆಂಬ ಅಭಿಪ್ರಾಯವು ಸಂಗಡಲೇ ಇದೆ. ಆದ್ದರಿಂದ ತನಗಿಂತ ಶಕ್ತಿ ಇರುವ ಬೇರೆ ಒಂದು ವಸ್ತು ಆಕಾರವಿರುವದಾಗಲೀ ಇಲ್ಲದಿರುವದಾಗಲೀ ಇರಲೇ ಬೇಕೆಂಬ ಅಭಿಪ್ರಾಯವು ಸ್ವಾಭಾವಿಕವು. ಸಂಪೂರ್ಣ ನಾಗರೀಕತೆಹೊಂದಿದ ಮನುಷ್ಯರಲ್ಲೂ ಈ ಭಾವನೆ ಇದ್ದೇ ಇದೆ. ನಾಗರೀಕತೆ ಏನೂ ಇಲ್ಲದ ಕಾಡು ಮನುಷ್ಯನು ಭೂತಪಿಶಾಚಿಗಳಲ್ಲಿ ನಂಬಿಕೆಯಿಡುವದು ಅಥವಾ ಪಿತೃಗಳನ್ನು ಪೂಜಿಸುವದೂ ಇರಬಹುದು. ಮನುಷ್ಯನು ನಾಗರೀಕತೆ ಹೊಂದುತ್ತಾ ಒಂದುಕಡೆ ತನಗಿಂತ ಶಕ್ತಿ ಇರುವ ವಸ್ತು ಸಹ ನಾಗರೀಕತೆ ಹೊಂದಿದ್ದೇ ಆಗುತ್ತೆ. ಕಾಡುಮನುಷ್ಯನು ಕ್ರೂರಿಯಾಗಿ ರಕ್ತಮಾಂಸದ ಅಪೇಕ್ಷೆಯುಳ್ಳವನಾಗಿದ್ದದರಿಂದ ಅವನ ದೇವತೆಯೂ ಕ್ರೂರವಾಗಿ ರಕ್ತಮಾಂಸದ ಆಹಾರವನ್ನು ಅಪೇಕ್ಷಿಸುತ್ತದೆಯೆಂತ ಭಾವಿಸುತ್ತಾನೆ. ನಾಗರೀಕತೆ ಹೊಂದಿದವನ ದೇವರು ನಾಗರೀಕತೆ ಹೊಂದಿದ ದೇವರಾಗುತ್ತಾನೆ. ತನಗಿಂತ ಶಕ್ತಿ ಇರುವ ವಸ್ತುಗಳು ಅಂದರೆ ದೇವತೆಗಳು ಒಂದಕ್ಕಿಂತ ಹೆಚ್ಚು ಆದಾಗ ಅವರನ್ನು ಆಳುವ ಮುಖ್ಯದೇವರೊಬ್ಬನೆಂತ ಅಭಿಪ್ರಾಯವು ಹುಟ್ಟುತ್ತದೆ. ಈ ಅಭಿಪ್ರಾಯದಲ್ಲೂ ತೃಪ್ತಿ ಇಲ್ಲದೆ ದೇವರೆನಿಸಿಕೊಳ್ಳುವವನು ಒಬ್ಬನೇ ಇರಬೇಕೆಂತ ನಂಬಿಕೆ ಹುಟ್ಟುತ್ತದೆ. ಆದರೆ ಒಬ್ಬೊಬ್ಬರಿಗೆ ಒಂದೊಂದಾವರ್ತಿ ಏನೋ ಒಂದು ಪೃಥ್ವಿಯ ಶಕ್ತಿಯಿಂದ ಪ್ರಪಂಚವೆಲ್ಲವೂ ಒಂದೇ ವಸ್ತುವಿನಿಂದ ತುಂಬಿದೆಯೆಂತಲೂ, ಸರ್ವವ್ಯಾಪಿಯಾದ, ಸರ್ವಜ್ಞನಾದ ಒಂದು ವಸ್ತು ಎಲ್ಲವನ್ನೂ ಆವರಿಸಿಕೊಂಡಿದೆಯೆಂತಲೂ ಹೊಳೆಯುತ್ತದೆ. ಸೇಬುಹಣ್ಣು ಮರದಿಂದ ಬೀಳುತ್ತಿರುವದನ್ನು ಸರ್ವರೂ ನೋಡುತ್ತಿದ್ದರೂ ಸಹ ಒಬ್ಬ ನ್ಯೂಟನ್ನನಿಗೆ ಮಾತ್ರ ಭೂಮಿಯ ಆಕರ್ಷಣ ಶಕ್ತಿಯು ಹೇಗೆ ಹೊಳೆಯಿತೋ ಹಾಗೆಯೇ ಈ ಪ್ರಪಂಚದ ಐಕ್ಯವು ಅಂದರೆ ಒಂದೇ ವಸ್ತುವಿನಿಂದ ವ್ಯಾಪಕವಾಗಿರುವಂಥಾ ಜ್ಞಾನವು ಒಂದು ಯುಗದಲ್ಲಿ ಒಬ್ಬರಿಬ್ಬರಿಗೆ ಹೊಳೆಯಬಹುದು. ಹಿಂದೂಸ್ಥಾನದಲ್ಲೂ ಸ್ವಭಾವ ಶಕ್ತಿಗಳನ್ನು ಪೂಜಿಮಾಡುವ ಪದ್ಧತಿಯು ಇತ್ತು. ಆದರೆ ಋಷಿಗಳಿಗೆ ಈ ಸರ್ವಶಕ್ತನ ಪ್ರಭೆಯು ಹೊಳೆದಿತ್ತು. ಋಗ್ವೇದದಲ್ಲಿ ಬೆಂಕಿ, ಮಿಂಚು ಸೂರ್ಯನಲ್ಲಿ ಇರುವ ಶಕ್ತಿಯು ಸಹ ಒಂದೇ ಎಂತ ಹೇಳಿದೆ. ಪ್ರಪಂಚದ ಕೆಲಸಗಳನ್ನು ನಡೆಸುವವನೊಬ್ಬನು ಪ್ರಪಂಚದಿಂದ ಅಲಕ್ಕಾಗಿ ಇದ್ದಾನೆಂತ ಅಭಿಪ್ರಾಯಪಟ್ಟರು. ಆಗ ಮನುಷ್ಯ ಸಹ ಸೇರಿರುವ ಪ್ರಪಂಚವೇ ಬೇರೆ ಇವನ್ನೆಲ್ಲಾ ಸೃಷ್ಟಿಸಿದ ದೇವರೇ ಬೇರೆಯೆಂತ ಅಭಿಪ್ರಾಯವಾಗುತ್ತದೆ. ಇದೇ ದ್ವೈತಮತವು. ಈ ರೀತಿ ಒಬ್ಬ ಮನುಷ್ಯನಂತೆ ಇರುವ ದೇವರು ಮನುಷ್ಯನ ಆಲೋಚನಾ ಶಕ್ತಿಗೆ ತೃಪ್ತಿಯಾಗುವದಿಲ್ಲ. ಆಗ ಸರ್ವವ್ಯಾಪಿ ಸರ್ವಜ್ಞನಾದ, ನಿರಾಕಾರವಾದ ದೇವರು ಇರಬೇಕೆಂತ ತೋರಿತು. ಇಂಥಾ ದೇವರು ದೇಶ, ಕಾಲ, ಭೇದವಿಲ್ಲದವನಾಗಿರಬೇಕು. ವ್ಯಕ್ತಿಸ್ವರೂಪನಾಗಿದ್ದರೆ ದೇಶ ಕಾಲ ಭೇದವಿಲ್ಲದೆ ಇರಲು ಸಾಧ್ಯವಿಲ್ಲ. ಸರ್ವವ್ಯಾಪಿ ಸರ್ವಜ್ಞನಾದ ದೇವರು ಸಹ ಮನುಷ್ಯನ ಬುದ್ಧಿಗೆ ತೃಪ್ತಿಯಾಗಲಿಲ್ಲ. ಬ್ರಹ್ಮಾಂಡವೇ ದೇವರು, ಪ್ರಪಂಚವೇ ದೇವರ ಎಂಬುದು ಅದ್ವೈತಭಾಗ. ಸರ್ವವ್ಯಾಪಿ, ಸರ್ವಜ್ಞ ಎಂಬ ಭಾವದಲ್ಲಿ ಸಹಿತ ದೇವರೂ, ಸೃಷ್ಟಿಯೂ ಒಂದೇ ಎಂಬ ಭಾವ ಹುಟ್ಟುವದಿಲ್ಲ. ಈ ಮತವೇ ವಿಶಿಷ್ಟಾದ್ವೈತವೆನಿಸಿಕೊಂಡಿದೆ. ಸೃಷ್ಟಿಗೂ ಪರಮಾತ್ಮನಿಗೂ ಭೇದವಿಲ್ಲವೆಂತ ಇರುವ ಮತವೇ ಅದ್ವೈತಮತ.

ಕ್ರಿಶ್ಚಿಯನ್ ಮತವು ದ್ವೈತಮತವಾಗಿದೆ. ವಿಶಿಷ್ಟಾದ್ವೈತದ ಭಾವವೂ ಅದರಲ್ಲಿ ಇದೆ. ಇಸ್ಲಾಮ್ ಮತದಲ್ಲೂ "ಮಾಶೂಕ್" ಎಂಬ ಶಬ್ದದಲ್ಲಿ ವಿಶಿಷ್ಟಾದ್ವೈತದಭಾವ ಇದೆ. ಅಲ್ಲ ಎಂಬ ಶಬ್ದಕ್ಕೆ ಶಿವ ಎಂಬ ಅರ್ಥವೇ ಇದೆ. ಪ್ರತಿ ಮತದಲ್ಲೂ ತತ್ವವಿಚಾರದ ಭಾಗವೂ, ಪುರಾಣದ ಭಾಗವೂ, ಕರ್ಮಭಾಗವೂ ಇದೆ. ಪ್ರತಿಯೊಬ್ಬಮಗನೂ ತನ್ನ ತಂದೆಯೇ ಅತಿ ಬುದ್ಧಿವಂತ, ಒಳ್ಳೆಯವ ಎಂತ ತಿಳಿದುಕೊಂಡಂತೆಯೇ ಪ್ರತಿಯೊಬ್ಬ ಮನುಷ್ಯನೂ ತನ್ನ ಮತವೇ ದೊಡ್ಡದೆಂತ ನಂಬಿರುತ್ತಾನೆ. ತನ್ನ ಮತವೇ ಅತಿ ದೊಡ್ಡದೆಂಬ ಭಾವವು ಬುದ್ಧಿಭ್ರಮೆಯ ಫಲವೆನ್ನಬಹುದು. ಪ್ರತಿಯೊಂದು ದೊಡ್ಡ ಮತದ ಬೋಧಕನೂ ಸಾಧಾರಣ ಮನುಷ್ಯನಾಗಿರಲಿಲ್ಲ. ಪ್ರತಿಯೊಂದು ಮತದಲ್ಲೂ ತತ್ವವಿದೆ. ಆದರೆ ಎಲ್ಲಾ ಸತ್ಯವೂ ಪ್ರತಿಯೊಂದು ಮತದಲ್ಲೂ ಇಲ್ಲ. ಆಯಾದೇಶ, ಜನಾಂಗಕ್ಕೆ ಸರಿಯಾದ ರೀತಿಯಲ್ಲಿ ಸತ್ಯವನ್ನು ಆಯಾ ಮತಸ್ಥಾಪಕರು ಬೋಧಿಸಿದರು. ಮತಗಳೊಳಗೆ ವ್ಯತ್ಯಾಸವಿರುವದು ಪುರಾಣ ಭಾಗದಲ್ಲಿ. ಇದು ಮತದ ಅತ್ಯವಶ್ಯದ ಭಾಗವಲ್ಲ. ಸಾಧಾರಣ ಜನರು ತತ್ವವಿಚಾರದ ರಹಸ್ಯಗಳನ್ನು ತಿಳಿಯಲಾರರು. ಪ್ರತಿಯೊಂದು ಮತದ ಪುರಾಣ ಭಾಗವನ್ನು ಆಯಾ ಜನಾಂಗದ ಸಾಧಾರಣ ಜನರಿಗೆ ಮತದ ಗೂಢಗಳನ್ನು ತಿಳಿಸಲಿಕ್ಕೆ ಏರ್ಪಡಿಸಿಕೊಂಡದ್ದಾಗಿದೆ.

ಸತ್ಯವೊಂದೇ, ದೇವರು ಒಬ್ಬನೇ. ಹಾಗಾದರೆ ಬೇರೆ ಬೇರೆ ಮತಗಳು ಏಕೆ ಎಂತ ಕೇಳುತ್ತಾರೆ. ಯಾವದಾದರೂ ಒಂದು ಮತದಲ್ಲಿ ಸತ್ಯಸೂರ್ಯ ಹೊರಬಿದ್ದಿಲ್ಲ. ಸೂರ್ಯನ ಕಡೆಗೆ ಪ್ರಯಾಣ ಮಾಡುತ್ತಿರುವವರು ಬೇರೆ ಬೇರೆ ದೂರದಿಂದ ಸೂರ್ಯನ ಫೋಟೋ ತಗೆದರೆ ಒಂದೇ ಸೂರ್ಯನು ಹೇಗೆ ಬೇರೆ ಬೇರೆಯಾಗಿ ತೋರುತ್ತದೋ, ಹಾಗೆಯೇ ಪ್ರತಿಯೊಬ್ಬ ಮಹಾಪುರುಷನು ಸತ್ಯವನ್ನು ಒಂದೊಂದು ವಿಧವಾಗಿ ವಿವರಿಸಿದ್ದಾನಷ್ಟೆ. ಆದಿ ಅಂತ್ಯ ಇಲ್ಲದಂತ ದೇವರ ಮಹಿಮೆಯನ್ನು ಆದಿ ಅಂತ್ಯ ಇಲ್ಲದಷ್ಟು ರೀತಿಯಲ್ಲಿ ವರ್ಣಿಸಬಹುದಷ್ಟೆ. ಸಾಧಾರಣವಾದ ಮನುಷ್ಯನಿಗೆ ಮತವೆಂದರೆ ನಂಬಿಕೆಯೇ, ದೇವರೆಂದರೆ ಇನ್ನೊಬ್ಬರು ಹೇಳಿದ್ದು ಕೇಳಿ ನಂಬುವದೇ ಆಗಿದೆ. ಮತದ ಗೂಢವನ್ನು ಸರಿಯಾಗಿ ತಿಳಿಯದೇನೇ ಮತದ ಹೆಸರಿನಲ್ಲಿ ರಕ್ತದ ಚೆಲ್ಲಾಟವಾಗುವದು. ಚೆನ್ನಾಗಿ ಪರಿಶೋಧಿಸಿದರೆ ಪ್ರತಿಯೊಂದು ಮತವೂ ದೇವರ ಕಡೆಗೆ ಹೋಗುವ ದಾರಿಗಳಾಗಿವೆ. ರಾಮನ ಮತ್ತು ಶಿವನ ಭಕ್ತರು ರಾಮ ದೊಡ್ಡವ, ಶಿವ ದೊಡ್ಡವ ಎಂತ ಹೋರಾಡುತ್ತಾ, ಅವರವರ ಇಷ್ಟ ದೇವತೆಗಳನ್ನು ಕರೆಸಿ ಪಂಚಾಯಿತಿ ತೀರಿಸಲು ನೋಡಿದರು. ರಾಮನೂ ಶಿವನೂ ಪರಸ್ಪರ ವ್ಯತ್ಯಾಸವಿಲ್ಲವೆಂತ ಒಪ್ಪಿದರು. ಆದರೆ ಅವರ ಹಿಂಬಾಲಕರಿಗೆ ಇದು ಒಪ್ಪಿಗೆಯಾಗಲಿಲ್ಲ. ಮೌಲಾನಾ ಮಹಮ್ಮದಾಲಿಯವರು ಗಾಂಧಿ ಎಲ್ಲರಿಗಿಂತಲೂ ದೊಡ್ಡವನೇ, ಆದರೆ ಮತದಲ್ಲಿ ಯಾವ ಮುಸಲ್ಮಾನನಾದರೂ ಗಾಂಧಿಗಿಂತ ದೊಡ್ಡವನು ಎಂತ ಹೇಳಿದರಂತೆ. ಈ ತರದ ಮೂಢಭಕ್ತಿಯಿಂದಲೇ ಕದುಕಾಗುವುದು. ಹಿಂದೂ ಧರ್ಮದಲ್ಲಿ ಎಲ್ಲಾ ದರ್ಜೆಯವರಿಗೂ ಆಗುವ ಅಂಗಗಳಿವೆ. ಅಂದರೆ ಪ್ರತಿಯೊಬ್ಬನ ಬೆಳವಣಿಗೆಗೆ ತಕ್ಕ ಬೋಧನೆಗಳಿವೆ. ನಿಜವಾದ ಮತದಲ್ಲಿ ಸುಖವಿದೆ.

ನಿಂಬೆಹಣ್ಣು.

ಪ್ರಬಲ ವೈದ್ಯರೊಬ್ಬರು ತಮ್ಮ ಅನುಭವದಿಂದ ಈ ಕೆಳಗೆ ಕಂಡ ಒಂದು ಸೂತ್ರವನ್ನು ಹೇಳಿರುವರು, ಏನಂದರೆ.

"ಪತ್ತು ವಯಸ್ಸಿಗೆ ಒಂದು ನಿಂಬೇಹಣ್ಣಿನಲೆಕ್ಕದಂತೆ ನಿಮ್ಮ ವಯಸ್ಸಿಗೆ ತಕ್ಕಷ್ಟು ನಿಂಬೆಹಣ್ಣುಗಳನ್ನು ಪ್ರತಿದಿನವೂ ಭುಜಿಸುತ್ತಬನ್ನಿರಿ! ಇದರಿಂದ ನೀವು ಬಹುಕಾಲದ್ಯುಷಕರಾಯರಾಗಿ ಜೀವಿಸುವಿರಿ" ಎಂಬುದು ಆ ಸೂತ್ರವು. ಇದರಿಂದ ಒಬ್ಬನಿಗೆ 30 ವಯಸ್ಸಾದರೆ ದಿನಕ್ಕೆ 3 ನಿಂಬೇ ಹಣ್ಣುಗಳಂತೆಯೂ, 40 ವಯಸ್ಸಾಗಿದ್ದವರು ದಿನಕ್ಕೆ 4 ನಿಂಬೇ ಹಣ್ಣುಗಳಂತೆಯೂ ಸೇವನಮಾಡಬೇಕೆಂದು ವಿಧಿಸಲ್ಪಡುವುದು.

ಆದರೆ ಈಗ ಸಾಧಾರಣವಾದ ಲೋಕಾನುಭವದಲ್ಲಿ, ಮೇಲ್ಕಂಡ ನಿಯಮವನ್ನು ಅನುಸರಿಸಿ ನಡೆಯುವುದು ಅಸಾಧ್ಯವಾಗಿಯೂ, ಅಪಾಯಕರವಾಗಿಯೂ ಜನಗಳಿಗೆ ಕಂಡು ಬರಬಹುದಾದರೂ, ಮೇಲಿನ ಸೂತ್ರದಲ್ಲಿ ಹೇಳಿರುವ ಅರ್ಥವು ಒಂದುಮಟ್ಟಿಗೆ ವಾಸ್ತವವೆಂಬುದರಲ್ಲಿ ಸಂದೇಹವಿಲ್ಲ. ನಿಂಬೆಯಹಣ್ಣಿನಲ್ಲಿ ದೇಹಾರೋಗ್ಯಕ್ಕೆ ಬೇಕಾದ ಅನೇಕ ಉತ್ತಮ ಗುಣಗಳುಂಟು. ಪ್ರತಿಯೊಬ್ಬ ಐರೋಪ್ಯನಾವಿಕನಿಗೂ ಇದರ ಗುಣಗಳು ಚೆನ್ನಾಗಿ ತಿಳಿದಿರುವುದು. ಏಕೆಂದರೆ; ಸಾಧಾರಣವಾಗಿ ನಾವಿಕರಿಗೆ ರಕ್ತ ಪಿತ್ಥರೋಗವೆಂಬ ಒಂದು ಜಾತಿಯ ವ್ಯಾಧಿಯು ತಲೆದೋರಿ, ಅದರಿಂದ ಅವರು ಬಹಳ ಬಾಧಪಡುವರು. ಅವರಿಗೆ ಈ ವ್ಯಾಧಿಯು ಹುಟ್ಟಲು ಕಾರಣವೇನೆಂದರೆ, ಅವರು ಉಪ್ಪಿನಲ್ಲಿ ಹಾಕಿಟ್ಟ ಆಹಾರಗಳನ್ನು ಹೆಚ್ಚಾಗಿ ಸೇವಿಸುವುದೊಂದು, ಹೊಸದಾದ ಕಾಯಿಪಲ್ಯಗಳು ಅವರಿಗೆ ದೊರಕದುದರಿಂದ, ಅವರು ಅದನ್ನು ಉಪಯೋಗಿಸದಿರುವುದೊಂದು, ಈ ಎರಡು ಕಾರಣಗಳಿಂದ ಅವರಿಗೆ ಮೇಲ್ಕಂಡ ಚರ್ಮ ಸಂಬಂಧವಾದ ವ್ಯಾಧಿಯು ಹುಟ್ಟುವುದು. ಈ ವ್ಯಾಧಿ ನಿವೃತ್ತಿಗೆ ನಿಂಬೆಹಣ್ಣಿನ ರಸವೇ ಅವರಿಗೆ ಜೀವನೌಷಧವೆನಿಸಿಕೊಂಡಿದೆ.

ನಿಂಬೇಹಣ್ಣಿನ ರಸದಲ್ಲಿ ಕ್ರಿಮಿಗಳನ್ನು ಕೊಲ್ಲುವ ಶಕ್ತಿಯುಂಟು. ಮತ್ತು ಇದರಲ್ಲಿ ಸನ್ನಿಪಾತಜ್ವರ, ಡಿಪ್ತೀರಿಯ ಮುಂತಾದ ಕ್ರೂರವ್ಯಾಧಿಗಳನ್ನು ನಿಗ್ರಹಿಸುವ ಶಕ್ತಿಯುಂಟು. ಸಿಸಿಲಿದೇಶದಲ್ಲಿ ಜನರು ಕಾಫಿಯ ಸಂಗಡ ನಿಂಬೆಯ ರಸವನ್ನು ಸೇರಿಸಿ ಕುಡಿಯುವರು. ಇದು ಮಲೇರಿಯಾಜ್ವರವನ್ನು ನಿವಾರಿಸುತ್ತದೆಂದು ಅವರು ಹೇಳುವರು.

ನಿಂಬೆಯ ರಸವನ್ನು ಹೊಟ್ಟೆಗೆ ತೆಗೆದುಕೊಳ್ಳುವುದು ಮಾತ್ರವಲ್ಲದೆ, ಚರ್ಮದಮೇಲೆ ಲೇಪಿಸುವುದರಿಂದಲೂ ಗುಣವುಂಟು. ನಡುತಲೆಗೆ ನಿಂಬೆಯ ರಸವನ್ನು ತಿಕ್ಕುವುದರಿಂದ ತಲೆಯಲ್ಲಿ ಆಗರು (ಅಥವಾ ಅವಿರು) ಹುಟ್ಟಲಾರದು.

ಶರೀರವು ಬಹಳ ಸ್ಥೂಲವಾಗಿ ಬೆಳೆದವರಿಗೆ ನಿಂಬೆಯರಸವು ಆ ಶರೀರ ಸ್ಥೌಲ್ಯವನ್ನು ಕರಗಿಸುವುದು. ನಿಂಬೆಯ ರಸವನ್ನು ನೀರಿನಲ್ಲಿ ಚೆನ್ನಾಗಿ ಕದಡಿ ಆ ಮಿಶ್ರಜಲವನ್ನು ದಿನಕ್ಕೆ 3 ಅಥವಾ 4 ಬಟ್ಟಲಿನಷ್ಟು ಕುಡಿಯಬೇಕು.

ಆದರೆ ಇದರಲ್ಲಿ ಬಹಳ ಎಚ್ಚರಿಕೆಯಿಂದ ಗಮನಿಸಬೇಕಾದ ಮುಖ್ಯವಿಷಯವೊಂದುಂಟು. ಈ ರಸವನ್ನು ಇತರ ಆಹಾರಗಳೊಡನೆ ಸೇರಿಸಿ ತೆಗೆದುಕೊಳ್ಳುವುದರಿಂದ, ಮೇಲೆ ಹೇಳಿದ ಗುಣಗಳೇನೂ ಉಂಟಾಗುವುದಿಲ್ಲ. ಅಲ್ಲದೆ ಅದರಿಂದ ಕೆಲವುವೇಳೆ ಆರೋಗ್ಯಕ್ಕೆ ಹಾನಿಯೂ ಏರ್ಪಡುವುದುಂಟು. ಮೇಲೆ ಹೇಳಿದಂತೆ ಆರೋಗ್ಯಕ್ಕಾಗಿ ಇದನ್ನು ಔಷಧರೂಪದಿಂದ ಸೇವನೆ ಮಾಡತಕ್ಕವರು, ಬರೀಹೊಟ್ಟೆಯಲ್ಲಿಯೇ ಎಂದರೆ ಬೆಳಿಗ್ಗೆ ಹಾಸಿಗೆಯಿಂದೆದ್ದ ಕೂಡಲೆ ತೆಗೆದುಕೊಳ್ಳಬೇಕು. ಅಥವಾ ರಾತ್ರಿಯ ಹೊತ್ತುಮಲಗುವುದಕ್ಕೆ ಮೊದಲು ತೆಗೆದುಕೊಂಡರೂ ತೆಗೆದುಕೊಳ್ಳಬಹುದು. ಮುಖ್ಯವಾಗಿ, ಊಟಮಾಡಿ ಸ್ವಲ್ಪ ದೀರ್ಘಕಾಲವು ಕಳೆದ ಮೇಲೆಯೇ ಇದನ್ನು ಸೇವಿಸಬೇಕು. ನಿಂಬೆಯರಸದ ಸೇವನೆಯಿಂದ ಅಧಿಕಗುಣವನ್ನು ಬಯಸತಕ್ಕವರು ಭುಜಿಸುವ ಹಣ್ಣಿನ ಸಂಖ್ಯೆಯನ್ನು ದಿನಕ್ರಮದಿಂದ ಮೇಲೆಮೇಲೆ ಹೆಚ್ಚಿಸುತ್ತಬರಬೇಕು. ಇದರಿಂದ ವ್ಯಾಧಿಗೆ ಪೂರ್ಣವಾದ ಬಲವು ಬರುವುದು.

ದಿನಕ್ರಮದಿಂದ ಸಂಖ್ಯೆಯನ್ನು ಹೆಚ್ಚಿಸುವುದೆಂದರೆ, ಮೊದಲನೆಯ ದಿನದಲ್ಲಿ ಒಂದು ಹಣ್ಣಿನಿಂದ ಆರಂಭಿಸಿ, 12 ಹಣ್ಣುಗಳವರೆಗೆ ದಿನಕ್ಕೊಂದು ಹಣ್ಣಿನಂತೆ ಹೆಚ್ಚಿಸುತ್ತ ಬರಬೇಕು. ಆಮೇಲೆ ದಿನಕ್ಕೊಂದು ಹಣ್ಣಿನಂತೆ ತಗ್ಗಿಸುತ್ತ ಬರಬೇಕು. ಈ ವಿಧವಾದ ನಿಯಮವು ಶರೀರಾರೋಗ್ಯಕ್ಕೆ ಬಹಳ ಒಳ್ಳೆಯದು. ನಿಂಬೆಯರಸದಲ್ಲಿ ರಕ್ತಶುದ್ಧಿ ಮಾಡುವ ಶಕ್ತಿಯುಂಟು.

ಎಚ್ಚರಿಕೆ

ನಿಂಬೆಯರಸದ ಚಿಕಿತ್ಸೆಯನ್ನು ನಡೆಸುವುದರಲ್ಲಿ ಉದ್ರೇಕಪ್ರಕೃತರು, ಮೇಲೆ ಹೇಳಿದಂತೆ ದಿನಕ್ಕೆ ಒಂದು ಅಥವಾ ಹನ್ನೆರಡರ ವರೆಗೆ ಹಣ್ಣುಗಳನ್ನು ಸೇವಿಸಿ, ಅದರಲ್ಲಿ ತಮಗೆ ತೋರಿಬಂದ ಗುಣಾವಗುಣಗಳನ್ನು ಪರೀಕ್ಷಿಸಬಹುದೇ ಹೊರತು, ಎಲ್ಲರ ದೇಹಕ್ಕೂ ಒಂದಾಗಲೀ ಈ ಚಿಕಿತ್ಸೆಯು ಅನುಕೂಲಿಸಿಬರುವುದೆಂದು ಹೇಳುವುದಕ್ಕಿಲ್ಲ. ಆದುದರಿಂದ ಡಾಕ್ಟರುಗಳ ಅನುಮತಿಯಿಲ್ಲದೆ ಮೇಲೆ ಹೇಳಿದ ಪೂರ್ಣಚಿಕಿತ್ಸೆಯನ್ನು ಆರಂಭಿಸಬಾರದು

(ನ್ಯೂ ಎಂಪೈರ್.)

ಮಾರಾಟಕ್ಕೆ ಇದೆ.

ಸೋಮವಾರಪೇಟೆ ರಸ್ತೆಯಲ್ಲಿ ಮಡಿಕೇರಿಯಿಂದ 5 ಮೈಲು ದೂರದಲ್ಲಿರುವ ಮಕ್ಕಂದೂರು ಗ್ರಾಮದಲ್ಲಿ 8½ ಎಕರು ಭೂಮಿ ಮತ್ತು ಅದಕ್ಕೆ ಸೇರಿದ ಜಾಗ ಸಹ ಮಾರಾಟಕ್ಕೆ ಇದೆ. ಕ್ರಯ ರೂ. 1500 ಯೂ ಅದರ ಸಮೀಪ. ಹೆಚ್ಚಿನ ಸಂಗತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.

ದೇವಾಂಗದ ಹನುಮಂತಯ್ಯ,
ಉಪ್ಪಿನ ವ್ಯಾಪಾರಿ,
4—1 ಮಹದೇವಪೇಟೆ, ಮಡಿಕೇರಿ.

ನೋಟೀಸು.

ಉತ್ತರ ಕೊಡಗು, ತಾಲೋಕು, ಮಡಿಕೇರಿ ನಾಡು, ಬಿಳಿಗೇರಿ ಗ್ರಾಮದಲ್ಲಿ ತೆಕ್ಕಡ ಪಿ. ಸುಬ್ಬಯ್ಯ, ಕುಶಾಲಪ್ಪ, ಸೋಮಯ್ಯ ಮತ್ತು ಉತ್ತಯ್ಯನಹ ಈ ನಾಲ್ಕು ಜನರ ಹೆಸರಿನಲ್ಲು ಜಂಟಿಜಮಾಬಂದಿ ನಡೆದು ಬರುವ ಅಂದಾಜು 400 ಬಟ್ಟಿ ಭೂಮಿ, 28 ಎಕರು ಬಾಣೆ, ಒಂದು ಹುಲ್ಲಿನ ಮನೆಯನ್ನು ಸಹ ನನ್ನ ಅಣ್ಣಂದಿರು ನನಗೆ ವಂಚಿಸಿ ಮಾರಾಟ ಮಾಡುವರಾಗಿ ವರ್ತಮಾನ ತಿಳಿಯುತ್ತೇನೆ. ಈ ಮೇಲ್ಕಂಡ ಸೊತ್ತುಗಳನ್ನು ನಮ್ಮ ತಂದೆ ಮಾಡಿದ ಪಿತ್ರಾರ್ಜಿತವಾಗಿ ಬೆರ್ಪಿಲ್ಲದೆ ನಮ್ಮೊಳಗೆ ಪಾಲು ಪಂತಿ ಸಹ ಮಾಡಿಕೊಂಡಿರುವುದಿಲ್ಲ. ಇವರಿಗೆ ಈ ಸೊತ್ತುಗಳನ್ನು ಮಾರಾಟ ಮಾಡಲು ಯಾವ ಸ್ವತಂತ್ರವೂ ಇರುವುದಿಲ್ಲ. ಹಾಗೆ ಇವರು ವಿಕ್ರಯಿಸಿ ಮೇಲ್ಕಂಡ ಸೊತ್ತುಗಳನ್ನು ಪಡಕೊಂಡವರಿಗೆ ಸಿಂಧು ಆಗಲಾರದು. ಹಾಗ ಅವರು ಸೊತ್ತುಗಳನ್ನು ಕ್ರಯಕ್ಕೆ ಪಡಕೊಂಡರೆ ಆಗ ನನಗೆ ಉಂಟಾಗುವ ಎಲ್ಲಾ ನಷ್ಟಕಷ್ಟಗಳಿಗೆ ಪಡಕೊಂಡವರೇ ಜವಾಬ್ದಾರರಾಗಬೇಕೆಂಬ ಸಂಗತಿ ಎಚ್ಚರಿಸಿರುತ್ತೇನೆ.

ತೆಕ್ಕಡ ಪಿ. ಉತ್ತಯ್ಯ,
ಪೋಸ್ಟಲ್ ಕ್ಲಾರ್ಕ್,
ಜನರಲ್ ಪೋಸ್ಟ್ ಆಫೀಸ್,
2—3 ಬೆಂಗಳೂರು.

ನೋಟೀಸು.

ಬೆಂಗಳೂರು ದೇವಾಂಗ ಸಂಘದವರು ಸ್ಕೂಲುಫೈನಲ್ ದಾಟಿದ ವಿದ್ಯಾರ್ಥಿಗಳಿಗೆ ಹಿಂದಿನ ವರ್ಷದಂತೆಯೇ ಕೆಲವು ವೇತನವನ್ನು ಈ ವರ್ಷವೂ ಕೊಡಲು ತೀರ್ಮಾನಿಸಿಕೊಂಡಿದ್ದಾರೆ. ಸಹಾಯವನ್ನು ಅಪೇಕ್ಷಿಸುವ ವಿದ್ಯಾರ್ಥಿಗಳು ಸಂಘದ ಸೆಕ್ರೆಟರಿ ಎಂ ಡಿ ಎ ಆದಿನಾರಾಯಣನವರು, ಜುಮ್ಮಾ ಮಸೀದಿ ರೋಡು, ಬೆಂಗಳೂರು ಸಿಟಿ, ಇವರ ವಿಳಾಸಕ್ಕೆ ಬರೆದುಕೊಳ್ಳಬೇಕೆಂದು ಅವರು ತಿಳಿಯಪಡಿಸಿರುತ್ತಾರೆ.

ವರ್ತಮಾನ ಸಂಗ್ರಹ.

ಒಳದೇಶ.

ಇಂಗ್ಲೆಂಡಿನಲ್ಲಿರುವ ಮಿ ನಂಜಪ್ಪ... ಅಪ್ಪಯ್ಯನವರು ಐ. ಸಿ. ಎಸ್ ಪರೀಕ್ಷೆಯಲ್ಲಿ ತೇರ್ಗಡೆಯಾದುದನ್ನು ಕೇಳಿ ಸಂತೋಷಪಡುತ್ತೇವೆ. ಅವರು ಬೇಗ ವಾಪಸು ಕೊಡಗಿಗೆ ಬರುವರೆಂದು ವರ್ತಮಾನ.

ಉತ್ತರ ಕೊಡಗಿನ ತಾಲೋಕು ಕಚೇರಿಯು ತಾ 15 ರಿಂದ ಮಡಿಕೇರಿಯಿಂದ ಸೋಮವಾರಪೇಟೆಗೆ ವರ್ಗಾಯಿಸಲ್ಪಟ್ಟಿದೆ.

ಟ್ರೆಜರಿ ಅಸಿಸ್ಟಂಟ್ ಕಮಿಷನರಾದ ಮಿ ಕೊಂಗಂಡ ತಿಮ್ಮಯ್ಯನವರು ಈ ತಾ 30 ರಿಂದ ರಜೆಯಲ್ಲಿರುವರಿಂದ ದಕ್ಷಿಣ ಕೊಡಗು ತಾಲೋಕಿನ ಸಬ್‌ಡಿವಿಜನಲ್ ಆಫೀಸರಾದ ಮಾಳೆಯಂಡ ಚಂಗಪ್ಪನವರು ಈಗ ಟ್ರೆಜರಿ ಚಾರ್ಜಿನಲ್ಲಿರುವರು.

ಸಂಪಾಜೆ ಗ್ರಾಮದಲ್ಲಿ ಚಾರ್ ವಾರದ ಹಿಂದೆ ರಕ್ತ ಭೇದಿ ಜಾಡ್ಯವು ಪ್ರಬಲವಾಗಿ ಕೃತವಿಗ ಜನರು ಕಷ್ಟಕ್ಕೆ ಅಸಹಾಯಕರಾಗಿದ್ದಾರೆಂದೂ ವೈದ್ಯರು ಆ ಸರ್ಕಾರದವರು ಆ ಕಡೆ ಹೋಗಿದ್ದರೆ ಸಹಾಯವಾಗುತ್ತಿತ್ತೆಂದೂ ಒಂದು ವಾರ್ತೆ.

ಮಿ ಪಡಿಕಿಮಾಡ ಪಳ್ಳಿಯಣ್ಣ ಬಿ. ಎ ಯವರು ಎಲ್ ಎಲ್ ಬಿ ಪರೀಕ್ಷೆಯಲ್ಲಿ ಪಾಸಾಗಿರುವರೆಂದು ತಿಳಿಸಲು ಹರ್ಷಿತರಾಗಿದ್ದೇವೆ.

ಲೇಟ್ ಮಿ ಅಪ್ಪಾರಂಡ ಬೋಪಣ್ಣನವರು ಧರ್ಮಕಾರ್ಯಕ್ಕಾಗಿ ಇಟ್ಟಿರುವ ಹಣದಿಂದ ವೀರಾಜಪೇಟೆ ಆಸ್ಪತ್ರೆಗೆ ಸೇರಿಸಿ ಮೂರು ಸ್ಪೆಷಲ್ ವಾರ್ಡುಗಳನ್ನು ಕಟ್ಟಿಸುವ ಆಲೋಚನೆ ನಡೆಯುತ್ತಿದೆ ಎಂದು ವರ್ತಮಾನ.

ಕೊಡಗು ವಿದ್ಯಾಭಿವೃದ್ಧಿ ಫಂಡಿನ ಮೀಟಿಂಗು ಯಾವಾಗ ನಡೆಯುವದೆಂದೂ, ವೇತನಗಳು ಬೇಕಾದ ವಿದ್ಯಾರ್ಥಿಗಳು ಯಾವ ತಾರೀಕಿನೊಳಗೆ ಅರ್ಜಿ ಬರೆದುಕೊಳ್ಳಬೇಕೆಂದೂ ಜನರ ತಿಳುವಳಿಕೆ ಬಗ್ಗೆ ಪ್ರಕಟಿಸದೆ ಇರುವುದು ವ್ಯಸನಕರವೆಂದು ಒಂದು ವಾರ್ತೆ ಬಂದಿದೆ.

ಈ ವಾರವೂ ಕಳೆದ ವಾರದಂತೆಯೇ ಮಳೆಯಿಲ್ಲದೆ ಬಿಸಿಲು ಕಾಯುತ್ತಾ ಕಳೆಯಿತು. ಬೀಜಹಾಕುವ ಕಾಲವು ಮಳೆಯಿಲ್ಲದೆ ಕಳೆಯುತ್ತಾ ಬರುವುದರಿಂದ ಕೃಷಿಗಾರರ ಮನಸ್ಸಿನಲ್ಲಿ ಗಲಿಬಿಲಿ ಎದ್ದಿದೆ. ಕಾಲಮೀರಿ ಬೀಜಹಾಕುವುದರಿಂದ ಬೆಳೆಯು ಚೆನ್ನಾಗಿ ಆಗುವುದಿಲ್ಲ. ದೇಶದಲ್ಲಿ ಎಲ್ಲರೂ ಮಳೆಯನ್ನು ಬಹು ಆತುರದಿಂದ ನಿರೀಕ್ಷಿಸುತ್ತಿದ್ದಾರೆ.

ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶವು ಹೊರಟಿದ್ದರೂ ಮಡಿಕೇರಿ ಸೆಂಟ್ರಲ್ ಸ್ಕೂಲಿನಲ್ಲಿ ಎಂಟ್ರೆನ್ಸ್ ಪರೀಕ್ಷೆ ... ಗಳಿಗೆ ಸರಿಯಾದ ... ವಿದ್ಯಾರ್ಥಿಗಳು ತೇರ್ಗಡೆಯಾಗಿರುವರಾದರೂ ಪಟ್ಟಣದ ... ಪಟ್ಟಿಯು ಇನ್ನೂ ಶಾಲೆಗಳಿಗೆ ತಲಪಿರುವುದಿಲ್ಲವಂತೆ.

ಸರಿಯಾಗಿ ಮಳೆ ಹಿಡಿಯಬೇಕಾಗಿದ್ದ ಈ ಕಾಲದಲ್ಲಿ ಬಿಸಿಲು ಕಾಯುತ್ತಿರುವುದರಿಂದ ದೇಶದ ಆರೋಗ್ಯ ಸ್ಥಿತಿಯು ಚೆನ್ನಾಗಿಲ್ಲ. ಜ್ವರ ಮೊದಲಾದ ಕಾಯಿಲೆಗಳು ಹರಡಿಕೊಂಡಿವೆ. ಮರಣವಾರ್ತೆಗಳೂ ಕೇಳಿಬರುತ್ತಿವೆ. ಇದರ ಮಧ್ಯೆ ಮದುವೆ ಕಾರ್ಯಗಳೂ ನಡೆಯುತ್ತಿವೆ.

ಕೋರ್ಟು ಕಚೇರಿಯ ವರ್ತಮಾನ.

ಸಬಾರ್ಡಿನೇಟ್ ಜಡ್ಜಿಯರ ಕೋರ್ಟಿನಲ್ಲಿ ಕಟ್ಟೆಮಾಡ ... ಸಾಬರು ಗೋವಿಂದಾಚಾರ್ಯರೆಂಬವರ ಮೇಲೆ ತಾರೀಕು 19—4—13ರ ಗಿರ್ವಿ ಕರಾರಿನ ಮೇಲೆ ದಾವಾ ಮಾಡಿದರು. ವಾದಿಗೆ ಗಿರ್ವಿ ಬರೆಕೊಟ್ಟವರು ಪ್ರತಿವಾದಿಗೆ 13—2—1909ರಲ್ಲಿ ಗಿರ್ವಿ ಕೊಟ್ಟಿದ್ದರು. ಗಿರ್ವಿ ಕೊಟ್ಟವರ ವಾರಿಸ್‌ದಾರರು ತಾ 13—2—1909ರ ಗಿರ್ವಿ ಕರಾರಿನ ಸಾಲ ತೀರಿಸಲಿಕ್ಕಾಗಿ ತಾ 9—11—1911ರಲ್ಲಿ ಪ್ರತಿವಾದಿ ಗೋವಿಂದಾಚಾರ್ಯರಿಗೇನೇ ಮಾರಿದ್ದರು. ಈ ದಾವಾದಲ್ಲಿ ಪ್ರತಿವಾದಿಯು ತನಗೆ 1909ರ ಗಿರ್ವಿ ಕರಾರಿನ ಸಾಲವನ್ನು ಮೊದಲು ಕಟ್ಟಿ ಅನಂತರ ವಾದಿ ಸಾಲಕ್ಕೆ ಹರಾಜು ಮಾಡಬಹುದೆಂತ ವಾದ ಮಾಡಿದನು. ಪ್ರತಿವಾದಿಯ ಗಿರ್ವಿ ಕರಾರಿನ ಸಾಲವು ಪ್ರತಿವಾದಿಯು ಗಿರ್ವಿ ಸೊತ್ತನ್ನು ಕೊಂಡುಕೊಂಡ ಪ್ರತಿಫಲಕ್ಕೆ ಅಳಿಗಿದ್ದರಿಂದ ಗಿರ್ವಿ ಸಾಲವು ಬಾಕಿ ಇಲ್ಲವೆಂತ ವಾದಿಯು ವಾದ ಮಾಡಿದನು. ಪ್ರತಿವಾದಿಯು ಹಳೇ ಗಿರ್ವಿ ಸಾಲವನ್ನು ಸಾಲವಾಗಿಯೇ ಉಳಿಸಿಕೊಳ್ಳದೆ ಇದ್ದರೂ ಸಹ ತನ್ನ ಹಳೇ ಗಿರ್ವಿಯನ್ನು ಸಾಲವಾಗಿಯೇ ಇಟ್ಟುಕೊಂಡಿದ್ದನೆಂತ ಊಹಿಸಬೇಕೆಂತ ಹೈಕೋರ್ಟ್ ಫೈಸಲ್‌ಗಳು ಇರುವದರಿಂದ ಪ್ರತಿವಾದಿಯ ಮೊದಲಿನ ಗಿರ್ವಿ ಸಾಲ ತೀರಿಸುವ ಶರತ್ತಿನಿಂದ ವಾದಿಯು ಸಾಲಕ್ಕೆ ಈಡಾಗಿರಬೇಕೆಂತ ಸಬಾರ್ಡಿನೇಟ್ ಜಡ್ಜಿಯರು ಫೈಸಲ್ ಮಾಡಿದ್ದಾರೆ.

ಹಿಂದೂ ದೇಶ.

ಅಕಾಲಿ ಜಥದ ಉಪಾಧ್ಯಕ್ಷರಾದ ಸರ್ದಾರ್ ಮಿಹಾಬ್ ಸಿಂಗ್‌ರವರನ್ನು ವಾಯುವ್ಯ ಪ್ರಾಂತ್ಯದ ಚೀಫ್ ಕಮಿಷನರವರು ಅಲ್ಲಿಂದ ಹೊರಪಡಿಸಿರುವರು.

ತಾರೀಕು 11ರಲ್ಲು ಮಹಾತ್ಮ ಗಾಂಧಿಯವರು ಬಾರಿಸಾಲನ್ನು ಸಂದರ್ಶಿಸಿದರು. ಅಲ್ಲಿ ಅವರಿಗೆ ತಕ್ಕದಾದ ಸ್ವಾಗತವು ನೀಡಲ್ಪಟ್ಟಿತು. ಅಲ್ಲಿಯ ಯೂರೋಪಿಯನರನೇಕರು ಅವರ ಸಂಗಡ ಸಂಭಾಷಣೆ ಮಾಡಲು ಎಡೆಕೊಡಬೇಕೆಂದು ಕೇಳಿಕೊಂಡಿರುವರು.

ಬಂಗಾಳದ ಈಗಿನ ಕೌನ್ಸಿಲಿನ ಅವಧಿಯು ತೀರುವವರೆಗೆ ಟ್ರಾನ್ಸ್‌ಫರ್ಡ್ ಇಲಾಖೆಗಳನ್ನು ಹಿಂದೀಯ ಮಂತ್ರಿಗಳ ವಶಕ್ಕೆ ಕೊಡಲಾಗುವುದಿಲ್ಲವೆಂದು ಅಲ್ಲಿಯ ಸರಕಾರದವರು ಪ್ರಕಟಿಸಿರುವರು.

ಕಲ್ಕತ್ತದಲ್ಲಿ ತಾರೀಕು 12ರಲ್ಲಿ ನಡೆದ ಯೂರೋಪಿಯನ್ ಅಸೋಸಿಯೇಶನಿನ ಮೀಟಿಂಗಿನಲ್ಲಿ 1929ನೇ ಮೊದಲಿನ ಫಾರಂಯ ಎಂಬ ಸ್ಟೇಟ್ಯೂಟರಿ ಕಮಿಟಿಯನ್ನು ನೇಮಿಸಬಾರದೆಂದು ಠರಾವು ಪಾಸು ಮಾಡಿರುವರು.

ಪಂಜಾಬಿ ಸತ್ಯಾಗ್ರಹದ ಸಮಯದಲ್ಲಿ ತಾತಾ ಪವರ್ ಕಂಪೆನಿಯ ಆಳುಗಳನ್ನು ಒಯ್ಯುತ್ತಿದ್ದ ರೈಲ್ ಗಾಡಿಯನ್ನು ನಾಶಮಾಡಲು ಪ್ರಯತ್ನಿಸಿದರೆಂಬ ಕಾರಣ ಮಿ ಬಾಪಟ್ ಎಂ ಎ ಯವರಿಗೆ ಏಳು ವರ್ಷವೂ ಬಾಕಿ 5 ಜನರಿಗೆ 1ರಿಂದ 5 ವರ್ಷದ ವರೆಗೆ ಕಠಿಣ ಸಜೆ ವಿಧಿಸಲಾಗಿದೆ.

ಮಹಾತ್ಮ ಗಾಂಧಿಯವರನ್ನು ಪಕ್ಷ ಮಾಡದ ಹಿಂದಾಳಿಸವರು ತನಗೆಂದ ಬಹುಮಾನವೆಂದೂ, ಕಾಂಗ್ರೆಸ್ಸಿಗೆ ಕೈಸೂಲಿನ ಹಿಂಜನ್ನು ಒದಗಾಯಿಸವ ಅವರ ಸತ್ತೆ ಇನ್ನೂ ಕಾಣುವುದಿಲ್ಲವೆಂದೂ ಅಪ್ಪದಾಜಾದಿನ ಪ್ರೀಯುತವಲ್ಲಭಾಯಿ ಪಟೇಲರವರು ಹೇಳಿದ ವರು.

ಕಲ್ಕತಾ ಯುನಿವರ್ಸಿಟಿಯು ಕಾದ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕೂತ 18,958 ವಿದ್ಯಾರ್ಥಿಗಳಲ್ಲಿ 13,975 ವಿದ್ಯಾರ್ಥಿಗಳು ಅಂದರೆ ಶೇಕಡ 74.2ರಷ್ಟು ತೇರ್ಗಡೆ ಹೊಂದಿರುವರು.

ಮಧ್ಯಪ್ರಾಂತದ ಕೌನ್ಸಿಲಿನ ತಪ್ಪಿಕೆಯನ್ನು ವಿಚಾರಿಸಲು ಎಲ್ಲಾ ರಾಜಕೀಯ ಪಂಗಡಗಳ ಕಾನ್‌ಫರೆನ್ಸು ಒಂದನ್ನು ಮಾಡಬೇಕೆಂದು ಲಿಬರಲ್ ಪಾರ್ಟಿಯವರು ಸೂಚಿಸಿರುವರು. ಸ್ವರಾಜ್ಯಪಕ್ಷದವರು ಈ ಕಾನ್‌ಫರನ್ಸಿಗೆ ಸೇರಬೇಕೋ ಎಂಬುದನ್ನು ವಿಚಾರಿಸಲು ತಮ್ಮದೊಂದು ಮೀಟಿಂಗನ್ನು ತಾ 20ರಲ್ಲಿ ಮಾಡುವರು.

ತಮ್ಮ ಟೀ ತೋಟಗಳನ್ನು ಒಂದು ನೋಡಬೇಕೆಂದು ಡಾರ್ಜಿಲಿಂಗಿನ ಯೂರೋಪಿಯನ್ ಸಂಘದ ಅಧ್ಯಕ್ಷರಾದ ಮಿ ಸ್ಟ್ರಾಕರು ಮಹಾತ್ಮ ಗಾಂಧಿಯವರನ್ನು ಕೇಳಿಕೊಂಡಿರುವರು.

ಬಂಗಾಳದ ಕೆಲವು ಪ್ರಾಂತ್ಯಗಳ ಗ್ರಾಮಗಳಲ್ಲಿ ಹಣ ಸಾಲ ಕೊಡುವ ಸಾಲಗಾರರ ಕಾಟವನ್ನು ತಡೆಯಲಾರದೆ ಕೃಷಿಗಾರರು ಅವರಿಂದ ಸಾಲ ತೆಗೆದುಕೊಳ್ಳದಿರಬೇಕೆಂದು ಹರಿಬಿಟ್ಟಿರುವರು. ಆ ಕಾರಣ ಬಡ್ಡಿಯ ದರವು ಬಹಳ ಕಡಿಮೆಯಾಗಿದೆಯಂತೆ. ಸಾಹುಕಾರರುಗಳು ಸಂಬಳ ಕೊಟ್ಟರೂ ಸಹ ರೈತರು ಅವರ ಕೆಲಸಕ್ಕೆ ಹೋಗುವುದಿಲ್ಲವಂತೆ.

ತುರ್ಕಿಸ್ತಾನದ ಮುಸಲ್ಮಾನ ವಿದ್ಯಾರ್ಥಿಗಳ ವೇತನಕ್ಕಾಗಿ ನಿಜಾಮರು ಸಾರ್ಕಾರದವರು ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿರುವರು.

ಕಲ್ಕತಾ ಪಟ್ಟಣದಲ್ಲಿ ಹತ್ತು ಸಾವಿರ ಮೋಟಾರುಗಳಿವೆಯಂತೆ. 1924ನೇ ಅಕ್ಟೋಬರಿನಿಂದ ಆರು ತಿಂಗಳ ವರೆಗೆ ಮೋಟಾರುಗಳಿಂದ 66 ಜನರು ಮೃತಪಟ್ಟಿರುವರು. 641 ಜನರಿಗೆ ಘಾಯವುಂಟಾಗಿದೆ! ಲಂಡನ್ ಒಂದರಲ್ಲಿ 685 ಜನರಿಗೆ ಮರಣ, 31,209 ಜನರಿಗೆ ಘಾಯ. ... ಪಟ್ಟಣದಲ್ಲಿ 1,09,125 ಜನರಿಗೆ ಘಾಯವು ಮತ್ತು 150 ಜನರು ಮೃತರಾದರು.

ಜಯಪುರದ ಮಹಾರಾಜರು ಯೂರೋಪಿನಲ್ಲಿ 10 ಲಕ್ಷ ರೂಪಾಯಿ ಬೆಲೆ ಕೊಟ್ಟು 5 ಬೆಲೆಯ ಮೋಟಾರುಗಳನ್ನು ಕೊಂಡುಕೊಂಡಿರುವರಂತೆ. ಇದೆಲ್ಲವೂ ಆ ಸಂಸ್ಥಾನದ ಬಡ ಜನರ ಹಣವಲ್ಲವೇ!

ಗತಿಸಿದ ಗ್ವಾಲಿಯರಿನ ಮಹಾರಾಜರನ್ನು ಹೊಗಳಿ ಅವರ ಮರಣಕ್ಕೆ ಪರಿತಾಪ ಸೂಚಕವನ್ನು ಎಂದು ಒಂದು ಗಜೆಟಿನಲ್ಲಿ ಇಂಡಿಯಾ ಸರಕಾರದವರು ಪ್ರಕಟಿಸಿರುವರು.

ಮಿ ಅಲ್ಲಭಾಯಿ ಸವ ಅಲ್ಲಾಸ್ ಮುಸ್ತಾಫರವರನ್ನು ಬೊಂಬಾಯಿ ಗವರ್ನರ ಎಗ್ಸಿಕ್ಯುಟಿವ್ ಕೌನ್ಸಿಲಿನ ಮೆಂಬರಾಗಿ ನೇಮಿಸಿರುವರು.

ಇಂಡಿಯಾ ಟ್ಯಾಕ್ಸೇಶನ್ ಕಮಿಟಿಯವರು ಬೊಂಬಾಯಿಯಲ್ಲಿ ತಮ್ಮ ವಿಚಾರವನ್ನು ತಾರೀಕು 10ರಲ್ಲು ಮುಗಿಸಿ ಪೂನಾಕ್ಕೆ ಹೋಗಿರುವರು. ಅಲ್ಲಿಂದ ಅವರು ಬೆಂಗಳೂರಿಗೆ ಒಂದು ರಿಪೋರ್ಟನ್ನು ತಯಾರಿಸುವರಂತೆ.

ಅಖಿಲಭಾರತ ಮದ್ಯ ದೀಯು ಮಹಿಳೆಯರ ಕಾನ್‌ಫರೆನ್ಸಿನ 8ನ ಸಮ್ಮೇಳನವು ಆಗೋಸ್ಟ್ 11 ಮತ್ತು 12ರಲ್ಲಿ ಪೂನಾದಲ್ಲಿ ನಡೆಯಲಿಕ್ಕಿರುವುದು.

ಮಹಾತ್ಮ ಗಾಂಧಿಯವರು ಬಂಗಾಳದಲ್ಲಿ ಒಳ್ಳೆ ಮಧ್ಯದವರಿಗೆ ಪ್ರಯಾಣ ಮಾಡುವದೆಂದೂ ಅಸ್ಸಾಮಿನ ಎರಡು ವಾರದ ಪ್ರಯಾಣವನ್ನು ಈ ತಾ 19ರಲ್ಲಿ ಪ್ರಾರಂಭಿಸುವರೆಂದೂ ಪಿ ಸಿ ರಾಯಿಯವರು ಪ್ರಕಟಿಸಿರುವರು.

ತಮಿಲು ಗುರುಕುಲದ ಉತ್ಪಾದಕರಾದ ಶ್ರೀ ವಿ ವಿ ಎಸ್ ಅಯ್ಯರವರು ಪಾಪನಾಸಂ ಜಲಪಾತದಲ್ಲಿ ಸ್ನಾನಕ್ಕೆ ಹೋದಾಗ ತನ್ನ ಮಗಳ ಸಮೇತ ನೀರಿನ ಪ್ರವಾಹದಲ್ಲಿ ಸಿಕ್ಕಿ ಮೃತಪಟ್ಟರು. ಇವರು ಪ್ರಸಿದ್ಧ ದೇಶಭಕ್ತರಾಗಿದ್ದರು.

ವಿದೇಶ.

ಟ್ರಿಪೋಲಿ ಎಂಬಲ್ಲಿ "ದಾರಿಯನ" ಅಥವಾ 'ಆಸಾಬಾಟ' ಎಂಬ ಪಟ್ಟಣವು 30ಸಾವಿರ ಜನಸಂಖ್ಯೆಯುಳ್ಳದಾಗಿಯೂ ಎಲ್ಲರೂ ಮುಸಲ್ಮಾನ ಜಾತಿಯವರೇ ಆಗಿಯೂ ಎಷ್ಟೋ ಮನೆಗಳು ಎರಡು ಮೂರು ಅಂತಸ್ತಿನವುಗಳಾಗಿಯೂ, ಮನೆಗಳೆಲ್ಲವೂ ಮೇಲ್ಗಡೆ ಕೂಡಿದ ವಿಹಾರದಂತೆಯೂ ... ಪ್ರಕಾಶವು ಸಾಕಷ್ಟು ಬೀಳದೆ ... ವಾಯುವು ಚೆನ್ನಾಗಿ ಬೀಸುತ್ತಿರುವುದರಿಂದ ಆ ... ರ ದೇಹಾರೋಗ್ಯವು ಉತ್ತಮವಾಗಿರುವುದೂ ... ಕೋಳಿಗಳನ್ನು ಸಾಕುತ್ತಿರುವ ಭೂಮಿಯ ಕೆಳಗೆ ನೆಲಗೂಡಿದ ಪಟ್ಟಣವನ್ನು ... ಪ್ರವಾಸಿಯೊಬ್ಬನು ಗುಹೆ ಮಾರ್ಗದಿಂದ ಹೋಗಿ ಕಣ್ಣಾರೆ ನೋಡಿರುವನು. ಈ ಪಟ್ಟಣವು ಎಷ್ಟೋ ಶತಮಾನದಿಂದ ನಿರ್ಮಿತವಾಗಿದೆ.

ಯಂತ್ರ ಸಹಾಯದಿಂದ ಒಬ್ಬನ ಶರೀರದಿಂದ ಮತ್ತೊಬ್ಬನ ಶರೀರದೊಳಕ್ಕೆ ಒಂದು ನಿಮಿಷಕ್ಕೆ ಒಂದು ಕಪ್ಪಿಗಿಂತ ಹೆಚ್ಚು ನೋವಾಗದಂತೆ ರಕ್ತವನ್ನು ಸೇರಿಸಿ ರಕ್ತಸ್ರಾವವಾದ ಮನುಷ್ಯನ ಪ್ರಾಣರಕ್ಷಣೆ ಮಾಡುತ್ತಾರಂತೆ. ಹೀಗೆ ರಕ್ತವನ್ನು ಕೊಟ್ಟ ಮನುಷ್ಯನಿಗೆ ಯಾವ ಅಪಾಯವೂ ಆಗಬಾರದಂತೆ. ಅಮೇರಿಕದ ಒಂದು ಯೂನಿವರ್ಸಿಟಿಯಲ್ಲಿ 150 ವಿದ್ಯಾರ್ಥಿಯರು ಈ ಹೊಸ ಸ್ವಾಲಂಬನದ ಮಾರ್ಗದಲ್ಲಿ ಉಪಜೀವನ ಮಾಡಿ ತಮ್ಮ ಅಭ್ಯಾಸವನ್ನು ನಡೆಸುವರಂತೆ. 300 ಕ್ಯೂಬಿಕ್ ಸಂಟಿಮೆಂಟರ್ ಶುದ್ಧ ಮನುಷ್ಯ ರಕ್ತಕ್ಕೆ 45ರೂ ಬೆಲೆಯಂತೆ. ಬಿದ್ದ ರಕ್ತ ಉಳ್ಳವರು ದಾಕ್ತರರಲ್ಲಿ ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿ ಅವಶ್ಯಬಿದ್ದರೆ ದಾಕ್ತರ್ ಕರೆಸಿದಾಗ ರಕ್ತವನ್ನು ಮಾರಿ ಪ್ರತಿಫಲವನ್ನು ಪಡೆಯುತ್ತಿರುವರಂತೆ.

ವಿಲಾಯಿತಿಯ ಜನಸಂಖ್ಯೆಯು 200 ವರ್ಷಗಳಿಂದೀಚೆಗೆ ಕಡಮೆಯಾಗುತ್ತಿದೆ. ಹಾಗೆಯೇ ಅಲ್ಲಿಯ ಬೆಳೆಯು ಹೆಚ್ಚುತ್ತಿದೆ. ಮೊದಲು ಒಂದು ಎಕರೆಗೆ 30 ಮಣ ಧಾನ್ಯ ಬೆಳೆಯುತ್ತಿದ್ದಲ್ಲಿ ಈಗ 60 ಮಣ ... ಮೊದಲಿಗಿಂತ 2ಪಾಲು ಹೆಚ್ಚು ಬೆಳೆಯುತ್ತಿದೆ. ವಿಲಾಯಿತಿಯ ಭೂಮಿ ಗಿಂತ ಹೆಚ್ಚು ಸಾರವನ್ನುಳ್ಳ ನಮ್ಮ ಹಿಂದೂದೇಶದ ಭೂಮಿಯಲ್ಲಿ ಬೆಳೆಯುವ ... ಇದಕ್ಕೆ ಕೇವಲ ಪ್ರತಿಕೂಲವಾಗಿದೆ. ಕೇವಲ ಕಡಮೆ. ಹಾ! ಸುಶಿಕ್ಷಿತರು ಮತ್ತು ಆಶ್ಚರ್ಯವಂತರ ಅಸಡ್ಡೆತನವೇ!

... ರವರ ವಿಕಾಸವಾದವನ್ನು ಅಮೇರಿಕ ಶಾಲೆಗಳಲ್ಲಿ ಕಲಿಸಕೂಡದೆಂದು ಬಿಹಾರ ... ಮಾಡಿರುವರು. ಅದನ್ನು ಕಲಿಸಿದ ಒಬ್ಬ ಉಪಾಧ್ಯಾಯರಿಗೆ ಶಿಕ್ಷೆಮಾಡಿರುವರು.

ಅಮೇರಿಕದಲ್ಲಿ ವಿದ್ಯಾಭ್ಯಾಸದ ಒಂದು ಹೊಸ ಕ್ರಮವನ್ನು ಪ್ರಾರಂಭಿಸಿರುವರು. ... ಎಂಬ ದೊಂದು ಹಡಗದಲ್ಲಿ ನ್ಯೂಯಾರ್ಕಿನ 45 ವಿದ್ಯಾರ್ಥಿಗಳು ಉಪಾಧ್ಯಾಯರುಗಳ ಜೊತೆಗೆ ಜಗತ್ತಿನ ಸಂಚಾರಕ್ಕೆ ಹೊರಟಿರುವರು. ಅವರು 35 ದೇಶಗಳ 50 ಬಂದರುಗಳನ್ನು ಸಂದರ್ಶಿಸಿ ಎಂಟು ತಿಂಗಳಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ವಾಪಾಸಾಗುವರಂತೆ.

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ

ಓಂಕಾರೇಶ್ವರ ದೇವಸ್ಥಾನವೋ ಮೀನು ಮಾರ್ಕೆಟ್ಟೋ?

ಅಯ್ಯಾ,

ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಕೆರೆಯಲ್ಲಿ ಇದ್ದ ಮೀನುಗಳನ್ನು ಪಬ್ಲಿಕ್ ಹರಾಜು ಮಾಡಿ ದೇವಸ್ಥಾನದ ಪೂಜೆ ಖರ್ಚಿಗೆ 10ರೂಪಾಯಿ ದೊರಕಿತಂತೆ. ತಿಳಿವಳಿಕೆ ಇಲ್ಲದ ಕೆಲವು ಗೌಂಡರು ಮೀನುಗಳನ್ನು ಹಿಡಿದುಕೊಂಡು ಅಲ್ಲೇ ಮಾರುತ್ತಿದ್ದರು. ಹಿಂದೆ ಗಸ್ತಿದವರು ... ಆಗಿ ಕಾಯುತ್ತಿದ್ದರು. ಕೆಲಬಲ ಕಳವಾಗಿದ್ದರ ಬಂತೆ ಮೀನು ಮಾರ್ಕೆಟ್ಟಿನ ಗದ್ದಲಕ್ಕಿಂತ ಕಡಿಮೆ ಆಗಿರಲಿಲ್ಲ. ನನ್ನನ್ನು ದೇವಸ್ಥಾನಕ್ಕೆ ಹೋಗಿ ನೋಡಿ ಬರಲಿಕ್ಕೆ ಹೋಗಿದ್ದೇನೆ ಎಂತ ಅನೇಕರು ಕೇಳಿದರು. ಮೀನುಮಾರಿ ಪ್ರತಿಷ್ಠಿಸಿಕೊಳ್ಳುವ ದೇವರಮೂರ್ತಿಯ ಮೇಲೆ ಜನರಿಗೆ ಭಕ್ತಿ ಹುಟ್ಟುವದು

ಹೇಗೆ ಹಿಂದೂಗಳಲ್ಲದವರಿಗೆ ಹಿಂದೂಮತದ ಮೇಲೆ ಗೌರವ ಹೇಗೆ ಇದ್ದೀತು ?

ದೇವಸ್ಥಾನದ ಕೆರೆಯಲ್ಲಿ ಮೀನು ಬೆಳೆಸಿ ಮಾರಬಹುದಾದರೆ ದೇವಸ್ಥಾನದ ಅಡಿಗೆಯಿಂದ ದೊರಕುವ ಗಂಜಿಯಿಂದಲೂ ಭತ್ತಕುಟ್ಟಿ ಬರುವ ತೌಡಿನಿಂದಲೂ ಹಂದಿಸಾಕಿ ಮಾರಬಹುದಲ್ಲವೇ ? ಕೆರೆಯಲ್ಲಿ ಬಾತುಗಳನ್ನು ಬೆಳೆಸಿ ಮಾರಬಹುದಲ್ಲವೇ ? ದೇವಸ್ಥಾನದ ಸಮ್ಮುಖದಲ್ಲಿ ದೇವಸ್ಥಾನದ ಆಶ್ರಯದಲ್ಲಿ ಜೀವ ಹಾರಕೊಂಡು ಇರುವ ಜಂತುಗಳನ್ನು ಮಾರುವದೆಂದರೆ ಮಾಂಸಹಾರಿಯಾದವರಿಗೂ ಸಹ ಅಸಹ್ಯವೆನಿಸುತ್ತದೆ. ದೇವಸ್ಥಾನಕ್ಕೆ ಉತ್ಪತ್ತಿ ದೊರಕುವದಕ್ಕೋಸ್ಕರ ಹೀಗೆ ಮಾಡಿದ್ದಾದರೆ ನಾನು ಹೇಳಿದ ಹಾಗೆ ಹಂದಿ, ಕೋಳಿ, ಬಾತು ಸಾಕಿ ಮಾರಬಹುದು. ಕೆರೆಯನ್ನು ನಿರ್ಮಲವಾಗಿ ಮಾಡುವದಕ್ಕೆ ನೀರು ಬತ್ತಿಸಿದಾಗ ಕೆಸರು ತೆಗೆಯಲಿಕ್ಕೆ ಮೀನುಗಳಿಂದ ತೊಂದರೆಯಾಗುತ್ತೆಂತ ಮಾಡಿದ್ದಾದರೆ ಮೀನುಗಳನ್ನು ಬೆಳೆಸಲೇ ಬಾರದಿತ್ತು.

ಈ ಮೀನು ಹರಾಜು ಕಮಿಟಿಯಲ್ಲಿ ಮಂಜೂರಾಗಿರಬಹುದೇ ? ಹಾಗಿದ್ದರೆ ಹತ್ತುಹದಿನೈದು ಮೆಂಬರುಗಳಲ್ಲಿ ಈ ಮೀನುಗಳ ಮೇಲೆ ಯಾರಿಗೂ ಕನಿಕರಬರಲಿಲ್ಲವೇ ? ಅಥವಾ ಓಂಕಾರೇಶ್ವರ ದೇವರಮೂರ್ತಿ ಮೇಲಾದರೂ ಕನಿಕರ ಬರಲಿಲ್ಲವೇ? ಓಂಕಾರೇಶ್ವರ ದೇವರ ಮೂರ್ತಿಯು ಮೀನು ಮಾರ್ಕೆಟ್ಟಿನ ಯಜಮಾನನೆಂಬ ಹೆಸರನ್ನು ಪಡೆಯುವಂತೆ ಮಾಡಲಿಕ್ಕೆ ಯಾರಿಗೂ ತೋರಲಿಲ್ಲವೇ ? ದೇವಸ್ಥಾನಕ್ಕೆ 50ರೂಪಾಯಿ ಖರ್ಚಿಗೆ ಸಾಲದಿಂತ ಆದರೆ ಯಾರನ್ನಾದರೂ ಬೇಡಿದ್ದರೆ 50ರೂಪಾಯಿ ಸಿಕ್ಕುತ್ತಿರಲಿಲ್ಲವೇ ?

ಸರ್ವರ ಹಕ್ಕಾದ ಹೊಳೆಗಳಲ್ಲಿ ಸಹ ದೇವಸ್ಥಾನದಿ ಸಮೀಪದ ಜಾಗಗಳಲ್ಲಿ ಮೀನು ಹಿಡಿಯಲಿಕ್ಕೆ ಬಿಡುವದಿಲ್ಲ. ಆದ ಕಾರಣದಿಂದಲೇ ಭಾಗಮಂಡ್ಲದ ಸಂಗಮದಲ್ಲಿ ತುಂಬಾ ಮೀನುಗಳು ಕಾಣಬರುತ್ತವೆ. ಅದೇ ಕಾವೇರಿಯ ಬಲಮುರಿ, ರಾಮನಾಥಪುರಗಳಲ್ಲಿ ಸಹ ಮೀನು ಹಿಡಿಯಕೂಡದೆಂತ ಇದೆಯಲ್ಲವೇ. ಹೊಳೆಯ ಮೇಲೆ ಕೆಳಗೆ ಹಿಡಿಯಬಹುದಾದರೂ ಆ ಸ್ಥಳದಲ್ಲಿ ಹಿಡಿಯಬಾರದೇನ್ನುವದೇಕೆಂದರೆ, ದೇವಸ್ಥಾನದ ಸಮೀಪದಲ್ಲಿ ಈ ಹಿಂಸಾಕಾರ್ಯಕ್ಕೆ ಎಡೆ ಇರಬಾರದೆಂಬುದೇ ಕಾರಣ. ಬೇರೆ ಯಾವ ದೇವಸ್ಥಾನಗಳಲ್ಲೂ ಇಂಥಾ ನೀಚ ಉತ್ಪತ್ತಿಯನ್ನು ಮಾಡುತ್ತಿರುವದು ನಾನು ಕೇಳಲಿಲ್ಲ. ಈ ಸಾರಿ ಮೀನು ಹಿಡಿಯುವಾಗಲಾದರೂ ಪೂರ್ತಿ ಹಿಡಿಯುವಂತೆ ಮಾಡಿ ಇನ್ನು ಮುಂದೆ ಕೆರೆಯಲ್ಲಿ ಮೀನು ಬೆಳೆಯಲಿಕ್ಕೆ ಬಿಡದೆ ಇಂಥಾ ನೀಚಕೃತ್ಯವು ದೇವರ ಸಮ್ಮುಖದಲ್ಲಿ, ದೇವರ ಹೆಸರಿನಲ್ಲಿ ನಡೆಯದಂತೆ ಮಾಡಿಯಾರೆಂತ ಹಾರೈಸುತ್ತೇನೆ

"ಹಿಂದು"

ಮನೆಗೆ ಮಾರಿ, ಪರರಿಗೆ ಉಪಕಾರಿ.

ಅಯ್ಯಾ,

ತಾರೀಖು 5—6—25ರ ಕೊಡಗು ಪತ್ರಿಕೆಯಲ್ಲಿ ತಿಮ್ಮಣ್ಣನ ವಿಚಾರದಲ್ಲಿ ಏಜಂಟರಿಗೂ ಚಂದಾದಾರರಿಗೂ ನಡೆದ ವಾಗ್ವಾದವನ್ನು ನೋಡಿದರೆ ಚಂದಾದಾರರಲ್ಲಿ ಎಷ್ಟರ ಮಟ್ಟಿಗೆ ತಿಳಿಗೇಡಿತನವಿದೆಯೆಂದು ಸೂಚಿಸುತ್ತದೆ

ಈ ಕೊಡಗು ದೇಶವೆಂಬುದು ದಕ್ಷಿಣ ಹಿಂದುಸ್ಥಾನದಲ್ಲಿ ಒಂದು ಚಿಕ್ಕ ರಾಜ್ಯವಾಗಿ ಇತರ ಕರ್ನಾಟಕ ಪ್ರಾಂತ್ಯದ ಜನರಿಗೆ ಕೊಡಗುವೆಂಬ ದೇಶವಿರುವದೇ ಪರಿಚಯವಿಲ್ಲ. ಈ ಕೊರತೆಯನ್ನು ಹೋಗಲಾಡಿಸಲು ಈ ದೇಶದಲ್ಲಿ ವೃತ್ತಾಂತ ಪತ್ರಿಕೆಯಿಲ್ಲದಿರುವ ಕಾರಣ ಮುಂದರಿದ ದೇಶದ ಜನರಿಗೆ ತಿಳಿಯಮಾಡಬೇಕೆಂಬ ಉದ್ದೇಶದಿಂದಲೇ ದೇಶದ ಹಿತಚಿಂತಕರು "ಕೊಡಗು"ಯೆಂಬ ಹೆಸರಿನಿಂದ ಒಂದು ಪತ್ರಿಕೆಯನ್ನು ಹೊರಡಿಸಿದ್ದಾಗಿದೆ.

ಕರ್ನಾಟಕ ಪ್ರಾಂತ್ಯದ ಇತರ ಭಾಗಗಳಲ್ಲಿ ಪತ್ರಿಕೆಗಳಿಗೆ ಯುಕ್ತವಾಗಿ ತೋರುವ ಹೆಸರಿನಿಂದ ವೃತ್ತಾಂತ ಪತ್ರಿಕೆಗಳು ಎಷ್ಟೋ ಇರುತ್ತವೆ. ಈ ಪತ್ರಿಕೆಗಳಲ್ಲೆಲ್ಲಾ ದೇಶದ ನಾಮಧೇಯವನ್ನು ಇಟ್ಟು ಪ್ರಕಟಿಸುವ ಕನ್ನಡ ಪತ್ರಿಕೆಗಳು ಬಹಳ ವಿರಳ. ಆದುದರಿಂದ ಕೊಡಗು ಪತ್ರಿಕೆಯನ್ನು ಕೊಡಗುವೆಂಬ ಅಭಿದಾನದಿಂದ ಹೊರಡಿಸಿದ್ದಾಗಿ ಕಂಡುಬರುತ್ತೆ.

ಈ ಪತ್ರಿಕೆಯು ಹೊರಟನಂತರ ಜನರಲ್ಲಿ ಎಷ್ಟೋ ತಿಳುವಳಿಕೆ ಉಂಟಾಗಿರುತ್ತದೆಯೆಂದು ಪ್ರತಿಯೊಬ್ಬನು ತಿಳಿಯದೆ ಇರಲಾರನು. ಪರದೇಶದಲ್ಲಿ ಹೊರಡುವ ಪ್ರಯೋಜನಕ್ಕೆ ಬಾರದ ಎಷ್ಟೋ ಕನ್ನಡ ಪತ್ರಿಕೆಗಳಿಗೆ ಈ ದೇಶದ ಜನರು ಮುಂದಾಗಿ ಅಡ್ವಾಣ್ಸು ಕೊಟ್ಟು ಚಂದಾದಾರರಾಗಿ ಪ್ರೋತ್ಸಾಹ ಕೊಟ್ಟು, ಉಲ್ಲಾಸದಿಂದ ಪತ್ರಿಕೆಯನ್ನು ತರಿಸಿ, ಓದುತ್ತಾ ಬರುವುದು ಎಲ್ಲರಿಗೂ ತಿಳಿದ ಅಂಶವೇ ಆಗಿರುತ್ತದೆ.

ಹೀಗಿರುವಾಗ ಸ್ವದೇಶದಲ್ಲಿ ಹೊರಡುವ ಮತ್ತು ಅಲ್ಪವಾದ ಚಂದ ಮೊಬಲಗುಳ್ಳ ನಮ್ಮ ಕೊಡಗು ಪತ್ರಿಕೆಗೆ ಪ್ರೋತ್ಸಾಹ ಕೊಡದೆ ಪತ್ರಿಕೆಯನ್ನು ಓದುತ್ತಾ ಕಡೆಗೆ ತಾನಾಗಿಯೇ ಚಂದ ಮೊಬಲಗನ್ನು ಕೊಡದೆ ಹೋದ್ದರಿಂದ ಈ ಪತ್ರಿಕೆಯ ಅಭಿವೃದ್ಧಿ ವಿಷಯಕ್ಕಾಗಿ ಚಂದಾ ಬಾಕಿ ಮೊಬಲಗು ವಸೂಲಾತಿ ಬಗ್ಗೆಯೂ, ಚಂದದಾರರನ್ನು ಹೆಚ್ಚಿಸುವ ಬಗ್ಗೆಯೂ ಇಷ್ಟೊಂದು ಚಿಕ್ಕ ದೇಶದಲ್ಲಿ ಅನುಕೂಲವರಿತು ಅಲ್ಲಲ್ಲಿ ಏಜಂಟರುಗಳು ನೇಮಿಸಲ್ಪಟ್ಟಿರುತ್ತಾರೆ,ಎಂದು ಪತ್ರಿಕೆಯಲ್ಲಿ ಕಂಡುಬರುತ್ತೆ. ಹೀಗಿರುವಾಗ ಏಜಂಟರು ಬಂದು, ಕೇಳುವಾಗ (ಜೂರಿಡಿಕ್ಷನ್) ಮನಸ್ಥಾನ, ಅಧಿಕಾರ, ಏಜಂಟರಿಗೆ ಪ್ರತಿಫಲವುಂಟೇ, ಏಜಿಟರವರ ದೂಷಣೆ ಮುಂತಾದ ಚರ್ಚೆನಡೆಯುವುದನ್ನು ನೋಡಿದರೆ, ನಮ್ಮ ಈ ದೇಶದ ಜನರಿಗೆ ಇರತಕ್ಕ ಮೂಢಬುದ್ಧಿಯು, ಇನ್ನೂ ದೂರವಾಗಿಲ್ಲವೆಂದೇ ತಿಳಿಯಬೇಕು ಇಂಥಾ ಸಂಭಾಷಣೆಗಳನ್ನು ಪತ್ರಿಕೆ ಓದತಕ್ಕ ಬೇರೆದೇಶಗಳ ಜನರು ನೋಡಿ ಏನು ಊಹಿಸ್ಯಾರೆಂಬದನ್ನು ಚೆನ್ನಾಗಿ ಯೋಚಿಸಬೇಕಾಗಿದೆ.

ಅಲ್ಲದೆ ತುಂಟ ಯುವಕರು ಸೇರಿಕೊಂಡು ಪತ್ರಿಕೆಯನ್ನು ಸ್ವಾಧೀನಪಡಿಸಿಕೊಂಡು ಮನಸ್ಥಾನವನ್ನು ಹಿಯಾಳಿಸಿಕೊಂಡು ಬರುವದರಿಂದಲೇ ಪತ್ರಿಕೆಗೆ ಹೆಚ್ಚಿನ ಚಂದದಾರರಾಗಿರುವದಿಲ್ಲವೆಂಬ ಪ್ರಶ್ನೆ ಸಹ ಚಂದದಾರರಿಂದ ಹೊರಡುವುದು ನೋಡಿದರೆ ಮನಸ್ಥಾನವೆಂಬ ಅರ್ಥವೇ ಚಂದದಾರರಿಗೆ ತಿಳಿಯದೆಂದು ಕಂಡುಬರುತ್ತೆ. ಮನಸ್ಥಾನಿಯೆಂದರೆ ಆತ್ಮಶುದ್ಧತೆಯಿಂದ ಸ್ಥಿರಮನಸ್ಸಿಟ್ಟು ನ್ಯಾಯನೀತಿಯಿಂದ ವರ್ತಿಸಿಕೊಂಡು ಬರುವವನು. ಅಂಥಾ ಮನಸ್ಥಾನಿಗಳು ಯಾವ ಕುಟುಂಬದಲ್ಲಿ ಜನಿಸಿದರೋ ಅಂಥಾ ಕುಟುಂಬವು ಕೀರ್ತಿಗೆ ಬಂದಲ್ಲಿ ಮನಸ್ಥಾನಯೆಂಬ ಬಿರುದು ಬರತು. ಈ ರೀತಿ ಕೊಡಗಿನಲ್ಲಿ ಮನಸ್ಥಾನಗಳಿದ್ದು ಬಂದಕಾರಣ ಸಂಬಂಧವಾದ್ದರಿಂದ ಮನಸ್ಥಾನ ಇಲ್ಲದ ಕುಟುಂಬವು ಕೊಡಗಿನಲ್ಲಿ ಎಲ್ಲಿಯೂ ಇಲ್ಲ. ಅದ್ದರಿಂದ ಅನಾವಶ್ಯಕವಾದ ಭೇದವನ್ನು ಕಲ್ಪಿಸಿಕೊಂಡು ನಮ್ಮ ದೇಶದ ಪತ್ರಿಕೆಗೆ ಪ್ರೋತ್ಸಾಹಕೊಡದೆ ಪರದೇಶದ ಪತ್ರಿಕೆಗೆ ಪ್ರೋತ್ಸಾಹ ಪಡಿಸುವದು ಮನೆಗೆ ಮಾರಿ ಪರರಿಗೆ ಉಪಕಾರಿ ಎಂಬ ನಾಣ್ಣುಡಿಗೆ ನಾವು ಈಡಾಗುವುದರಲ್ಲಿ ಸಂದೇಹವಿಲ್ಲ. ಅದ್ದರಿಂದ ಕೊಡಗು ಪತ್ರಿಕೆಗೆ ಈಗ ಸೇರಿರುವ ಚಂದದಾರರೆಲ್ಲರು ಅವರವರ ಬಾಕಿ ಸಲಿಸುವ ಹಾಗೂ ತನ್ಮೂಲಕ ಮುಂದು ಹೆಚ್ಚಿಗೆ ಚಂದದಾರರನ್ನು ಸೇರಿಸಿ ಏಜಂಟರಿಗೂ ಮತ್ತು ಕಾರಾಗಾರಿಗೂ ತೊಂದರೆ ಇಲ್ಲದ ರೀತಿ ವರ್ತಿಸುವುದೇ ಸ್ವದೇಶ ಅಭಿಮಾನವಾಗಿದೆ

ಮೇನೇಜಿಂಗ್ ಡೈರೆಕ್ಟರ್
ಕೋದಂಡ ಉತ್ತಯ್ಯ

ಗೌಡುಗಳ ದೂರು'

ಏನೆಂದು ? ಸರಕಾರವು ತಮ್ಮ ಕೈ ಬಿಟ್ಟಿರುವುದೆಂದು ! ಇವರ ಆಕ್ರೋಶವು, ನಮಗೆ ಕೌನ್ಸಿಲಿನಲ್ಲಿ ಒಂದೇ ಒಂದು ಮೆಂಬರತನವು ಇಲ್ಲವಲ್ಲಾ ಎಂದು ! ಎಲೈ ಬಾತ್ಯವರ್ಗವೇ, ನಿಮ್ಮ ಒಬ್ಬ ಉಮೇದುವಾರರನ್ನು ಕೌನ್ಸಿಲಿಗೆ ಒಬ್ಬ ನೇಮಿತ ಮೆಂಬರನಾಗಿ ಮಾಡಿದ್ದಲ್ಲ ನೀವು ಅದೆಷ್ಟು ಮಟ್ಟಿಗೆ ಸರಕಾರವನ್ನು ಹೊಗಳಿದಿರೆಂದು ನಿಮ್ಮ ಜ್ಞಾಪಕದಲ್ಲಿಲ್ಲವೇನು ? ಈಗ ಅದೇ ಬಾಳೆ ಹಣ್ಣಿನ ಸವಿಯನ್ನು ಮಹಮ್ಮದಿ ವರ್ಗದವರಿಗೆ ತೋರಿಸಿರುವಲ್ಲಿ ನಿಮಗೇಕೆ ಅಷ್ಟೊಂದು ಆಗ್ರಹ ನಿಮ್ಮ ಸಹೋದರರಾದ ಆ ಬ್ರಾಹ್ಮಣ, ಕೊಡಗ ವರ್ಗದವರು ಸ್ವಲ್ಪ ಅದೃಷ್ಟವಂತರೆಂದಾದರ ನಿಮಗೇಕೆ ಅಷ್ಟೊಂದು ಕೋಪ ? ರಾಯ ಬಹದೂರು ಮತ್ತು ರಾವು ಸಾಹೇಬ ಟೈಟಲುಗಳಂತೆ ಈ ನೇಮಿತ ಮೆಂಬರಿಕೆ ಪದವಿಯನ್ನು ಕೊಡುವುದು ಸಹ ಕೊತ್ತಿ ತಲೆಗೆ ಬೆಣ್ಣೆ ಸವರಿದ ಹಾಗೆ ಎಂದೂ ಅಲ್ಲದೆ, ಇನ್ನಿಷ್ಟು ಜನರನ್ನು ಬಗಲಲ್ಲಿ ಹಾಕಲು ಪ್ರಯತ್ನಿಸುತ್ತಿರುವ ಬ್ಯೂರೋಕ್ರಸಿಯ ಉಪಾಯದ ತಿರುಳುದು ನಿಮಗೆ ಅದೇಕ ಹೊಳೆಯುವುದಿಲ್ಲ ? ಕೊಡಗರು ವಿನಹ ಈ ಪ್ರಾಂತದಲ್ಲಿ ನೀವೇ ಅನ್ನವಂತರು. ಏಗ ಸ್ವಾರ್ಥವನ್ನು ತ್ಯಜಿಸಿ ವಿದ್ಯಾಭ್ಯಾಸದಲ್ಲಿ ಹಿಂದುಳಿದವರೆಂಬ ಆ ಅಭಿದಾನವನ್ನು ಅದೇಕೆ ನೀವು ಹೋಗಗೊಳಿಸಲು ಪ್ರಯತ್ನಿಸುವುದಿಲ್ಲ? ತತಾಬಡಕಗೆ ಜವಾಬ್ದಾರರಾರು ? ನಿಮ್ಮ ಸಹೋದರರಾದ ಕೊಡಗರನ್ನು ಅದೇಕೆ ಮಾತ್ಸರ್ಯದಿಂದ ನೋಡುವಿರಿ ? ಕೆಲವು ಕೊಡವರು ಕೊಡವ ಸಭೆಯೊಂದನ್ನು ಸ್ಥಾಪಿಸಲು ಹೊರಟಾಗ ಕೊಡವರಲ್ಲದರೂ, ಇದರಿಂದ ಕೊಡಗಿಗೆ ಅಶ್ರೇಯಸ್ಸು ಉಂಟಾಗುವುದೆಂದು ಕೊಡವ ಸಭೆಗೆ ತಮ್ಮ ಒಟ್ಟಿನ ಅನುಮತಿಯನ್ನು ಕೊಡಲಿಲ್ಲವಲ್ಲವೇ ? ಇದರಿಂದ ನಮಗೇನಾಗಬೇಕೆಂದು ಅನ್ನುವಿರೋ ?

ಆಗಲಿ, ನೀವು ಈಗ ಏನೆಂದೆನ್ನುವಿರಿ ! ಡಿ. ಮೇಜಿಸ್ಟ್ರೇಟರ, ಡಿಸ್ಟಿ ಸುಪರಿಂಟೆಂಡೆಂಟರ ಮತ್ತು ಇತರ ಪ್ರಾಮುಖ್ಯ ಹುದ್ದೆಗಳಿಗೆ ಬ್ರಾಹ್ಮಣರನ್ನು ಯಾ ಇತರ ಕೊಡಗರನ್ನು ನೇಮಿಸುವ ಬದಲು ನಿಷ್ಪಕ್ಷಪಾತ ಮತವುಳ್ಳ ಯೂರೋಪಿಯನ್ ಯಾ ಪರಪ್ರಾಂತ್ಯದವರನ್ನೇ ನೇಮಿಸಿ ಎಂದು ಬ್ಯೂರೋಕ್ರಸಿಗೆ ಮೊರೆ ಇಡುವಿರಲ್ಲವೇ ? ಹಾ ! ನೀವು ನಿಮ್ಮ ಸಹೋದರರ ಉನ್ನತಿಯನ್ನು ನೋಡಿ ನಿಮ್ಮ ಹೊಟ್ಟೆಕಿಚ್ಚಿನ ಕಣ್ಣಿಗೆ ಕಾದ್ದಿಟ್ಟ ಪದ್ದಂತಾಗಿದೆಯಲ್ಲವೇ ? ಇದು ತಾಯಿಯ ಒಬ್ಬ ಮಗನ ಕಾಯಿಲೆಗೆ ಇನ್ನೊಬ್ಬನನ್ನು ಪರಿಹಾರಕ್ಕಾಗಿ ಆಹುತಿಕೊಟ್ಟಂತಲ್ಲವೇ ? ಇವೆಂತಹ ಅತ್ಮಹತ್ಯದ ಕೆಲಸ, ದೇಶವೆಲ್ಲಾ ಒಗ್ಗಟ್ಟಾಗಿ ಬ್ಯೂರೊಕ್ರೆಸಿಯನ್ನು ಮೂಲೆಗೊತ್ತಬೇಕೆಂದು ಮಹಾತ್ಮರು ಪ್ರಯತ್ನಿಸುತ್ತಿರುವಲ್ಲಿ ನೀವು ಅವರ ಇರುವಿಕೆಯನ್ನು ಭದ್ರಪಡಿಸಲು ಹೇಸುವುದಿಲ್ಲವಲ್ಲವೇ ? ಇರಲಿ, ನಿಮ್ಮ ಹಾಗೆ ಸ್ವಪಕ್ಷ ಸಾಧನೆಗಾಗಿ ಬ್ರಾಹ್ಮಣ, ಕೊಡಗರು ಒಗ್ಗಟ್ಟಾದಲ್ಲಿ ನಿಮ್ಮ ಪಾಡೇನಾದೀತೆಂದು ಯೋಚಿಸಿದಿರಾ. ಅದೂ ಇರಲಿ, ಬ್ಯೂರೊಕ್ರೆಸಿಯು: ನೀವು ಒಂದು ಜನಾಂಗವಲ್ಲ ; ಸ್ವತಂತ್ರರಾಗಿ ಇರಲು ಯೋಗ್ಯರಲ್ಲ ಎಂದು ಇನ್ನೂ ಅಲ್ಲದ ಸಲ್ಲದ ನೆವನಗಳನ್ನು ಕೊಡಲು ನೀವು ಬ್ಯೂರೊಕ್ರೆಸಿಗೆ ಒತ್ತಾಸೆ ಕೊಡುವಿರಲ್ಲವೇ ?

ಎಲೈ ಮಹನೀಯರೇ, ಅಸ್ವಾರ್ಥತೆಯಿಂದ ದೇಶಾಭ್ಯುದಯಕ್ಕೆ ಗೌಡುಗಳು ಕೆಲಸ ಮಾಡುವದರ ಮಾದರಿಯು ತಾರೀಖು 23—5—25ರಲ್ಲಿ ಆದ ಅವರ ಮೀಟಿಂಗಿನಲ್ಲಿ ಪಾಸಾದ ರಿಸೊಲ್ಯೂಷನ್‌ಗಳನ್ನು ಇನ್ನೊಮ್ಮೆ ನೋಡಿದಿರೆಂದರೆ ಗೊತ್ತಾಗುವುದು.

ಆ ಮೀಟಿಂಗಿನ ವಿವರವನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಿದಕ್ಕೆ ಪತ್ರಿಕೆಯವರಿಗೆ ಬಹಳ ವಂದಿಸಬೇಕಾಗಿದೆ. ಈ ನಿರ್ಣಯವುಗಳು ಕಮಿಷನರವರಿಗೆ ಕಳುಹಿಸಲ್ಪಟ್ಟಿವೆಯಂತೆ. ಗೌಡುಗಳವರು ಮಾಡುತ್ತಿರುವ ಕೆಲಸವನ್ನು ಗುಟ್ಟಾಗಿಡದೆ ದೇಶದವರಿಗೆ ಬಹಿರಂಗಪಡಿಸಿದ್ದು ಉತ್ತಮವಾಗಿದೆ. ಇದರಿಂದ ಇತರರೂ ಎಚ್ಚರತರಾಗಬಹುದಲ್ಲವೇ ?

ಹರಿಪ್ರಸಾದ

ಪ್ರೈಮರಿ ವಿದ್ಯಾಭ್ಯಾಸ.

ಅಯ್ಯಾ,

ಸರಕಾರಿ ಚಾಕರಿಗಳು ಇರುವದಕ್ಕಿಂತ ಉಮೇದುವಾರರು ಇರುವರೆಂಬುದಾಯಿತು. ಅದರಂತೆ ಈಗ ಸ್ಕೂಲುಗಳಲ್ಲೆಲ್ಲಾ ಪ್ರೈಮರಿ ಅಥವಾ ಪ್ರೈಯರ್ ಎಲಿಮೆಂಟರಿ ಉಪಾಧ್ಯಾಯರುಗಳ ಬದಲು ಎಸ್. ಎಸ್ ಎಲ್. ಸಿ ಯವರು ಬರುತ್ತಿರುವರು ಇದೊಂದು ಶುಭ ಸೂಚನೆ ಏನೆಂದರೆ ಮುಂದಿನ ಜನಾಂಗನಾಗುವ ಸಣ್ಣ ಪುಟ್ಟಮಕ್ಕಳ ವಿದ್ಯಾಭ್ಯಾಸವು ಒಳ್ಳೆಯ ಯೋಗ್ಯತೆಯಿರುವವರಿಂದೇ ಆಗುವುದಿರುವುದರಿಂದ, ಸದರಿಯೋಗ್ಯರು ಜನತೆಯ ಅಭಿಲಾಷೆಯನ್ನು ಪೂರ್ತಿಗೊಳಿಸುವರೋ ಎಂದು ನೋಡಲಿಕ್ಕಿದೆಯೆಂದು ಅನ್ನುವ ಇದರ ಅಧಿಕಾರವರ್ಗವು ಈ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳುವರೆಂದು ಇಕ್ಷಿಸುತ್ತಿರುವ !

ದೇಶದಲ್ಲೆಲ್ಲಾ ಈಗ ವಷ್ಟು ಲೋವರ್ ಸೆಕೆಂಡ್ರಿ ಶಾಲೆಗಳನ್ನು ತೆರೆಯಬೇಕೆಂದು ಪ್ರಜರು ಎಷ್ಟೋ ಬಗೆ ಕೂಗಿದರೂ ಪ್ರೈಯರ್ ಎಲಿಮೆಂಟರಿ ಶಾಲೆಗಳು ಸಾಕೆಂದು ಅಧಿಕಾರವರ್ಗದವರು ಉತ್ತರವೀಯುವರು.

ಇಂತಹ ಶಾಲೆಗಳನ್ನಾದರೂ ಪ್ರೈಯರ್ ಎಲಿಮೆಂಟರಿ ಟೀಚರುಗಳ ಬದಲು ಎಸ್ ಎಸ್. ಎಲ್ ಸಿ. ಯವರ, ಇವರ ಬದಲು ಇಂಟರ್‌ಮೀಡಿಯೇಟ್ ನವರ, ಕೈಕೆಳಗಿಟ್ಟರೆ ಎಷ್ಟೊಂದು ಒಳ್ಳೆದಾಗುವ್ವದು ಎಸ್ ಎಸ್. ಎಲ್. ಸಿ. ಯವರಿಗಿಂತ ಹೇಗೂ ಇಂಟರ್‌ಮೀಡಿಯೇಟಿನವರು ಪ್ರವೀಣರೇ ಅಲ್ಲವೇ' ಹೀಗಿರಲು ಅವರ ಗ್ರೇಡು ಸ್ವಲ್ಪ ಏರಿಸಿ ಅಂದರೆ 50ರಿಂದ 80ರೂ. ಮಾಹೆಯಾನ ಸಂಬಳದಂತೆ ಮಾಡಿದರೆ ಅದೇಕಾಗುವದಿಲ್ಲ ? ಹೆಸ್ಸಾಗುವ ಕಮ್ಮಿ ದರ್ಜೆಯ ಉಪಾಧ್ಯಾಯರುಗಳ ಸ್ಥಳದಲ್ಲಿ ಹೆಚ್ಚು ಓದಿದವರೂ ಕೂಡ ಕಮ್ಮಿ ಸಂಬಳಕ್ಕೆ ನಿಲ್ಲಲು ಕೊರತೆ ಇಲ್ಲದ ಈ ಸಮಯದಲ್ಲಿ ಒಳ್ಳೆಯವರನ್ನೇ ಅದೇಕೆ ಅಧಿಕಾರವರ್ಗವು ನೇಮಿಸಲಾಗದು ?

ಬರೆಯಲಿಕ್ಕೆ ಯೋಚಿಸುದೊಂದು ಬರೆದುದೊಂದು ಆಯಿತಾದರೂ ಕೂಡ ಕಟ್ಟಕಡೆಗೆ ಇದೊಂದು ಮಾತೆಂದರೆ ತೀರಿತು. ಉಪಾಧ್ಯಾಯರ ಕೆಲಸಗಳಿಗೆ ಉಮೇದುವಾರರು ಹೆಚ್ಚಿರುವಲ್ಲಿ ಒಳ್ಳೇ ಹಾಕಿ ಟೀಮಿನ ಅಭಿಮಾನವಿಟ್ಟು ಉಮೇದುವಾರರನ್ನು ಚುನಾಯಿಸದಲ್ಲಿ ದೇಶದ ಏಳಿಗೆಗೆ ಹೆಚ್ಚೊಂದು ಉಪಯೋಗವಿಲ್ಲವೆಂಬೇ ನನ್ನ ಮತ ಪಕ್ಷ, ನನ್ನ ಈ ಊಹೆಯಲ್ಲಿ ತಪ್ಪಿದ್ದರೂ ಕೂಡ, ಉಮೇದುವಾರರನ್ನು ಚುನಾಯಿಸುವಲ್ಲಿ ಅಧಿಕಾರಿಗಳು ಹೆಚ್ಚು ಮೇಹವತ್ತನ್ನಿಟ್ಟು ಉತ್ತಮರನ್ನೇ ಚುನಾಯಿಸಲಿ. ನಮಗೆ ಬೇಕಾದದ್ದು ದೇಶದ ಏಳ್ಗೆ

ಯಮೂಜಿ

ಇದೇನು ಅನ್ಯಾಯ !

ಮಹನೀಯರೆ,

ಯಾವದು ಅನ್ಯಾಯವೆಂದು ಕೇಳುವಿರೋ ? ಅದನ್ನು ಹೇಳಲೂ ಸಹ ನನಗೆ ಬಹಳ ಮನಸು ನೋಯುತ್ತದೆ ಆದರೆ ಹೇಳದೆ ಸುಮ್ಮನಿರುವುದರಿಂದ ಪ್ರಯೋಜನವಿಲ್ಲ. ಇದನ್ನು ಬರೆಯುವುದರಿಂದ ನ್ಯಾಯ ಸಿಕ್ಕದೆ ಹೋದರೂ (ಹಾಗೆ ಆಗಲು ಕಾರಣವಿಲ್ಲ) ಮಡಿಕೇರಿಯಲ್ಲಿ ನಡೆಯುವ ಸಂಗತಿಗಳಾದರೂ ದೇಶೀಯರಿಗೆಲ್ಲಾ ತಿಳಿದಂತಾಗುವುದಲ್ಲಾ.

ಕೊಡಗಿನಿಂದ ಮೈಸೂರು ಕಡೆ ಹೋದವರಿಗೆಲ್ಲಾ ಮಡಿಕೇರಿ ಮೈಸೂರು ಮೆಯಿಲ್ ಬಸ್ಸು ಸರ್ವಿಸು ತಿಳಿಯದೆ ಇರಲಿಕ್ಕಿಲ್ಲ. ಅದರಲ್ಲಿ ಮಡಿಕೇರಿಯಿಂದಾಗಲೀ ಸಿದ್ದಾಪುರದಿಂದಾಗಲೀ ಮೈಸೂರಿಗೆ 7ರೂ. ಚಾರ್ಜು ಮಾಡುತ್ತಿದ್ದರು. ಅದರಲ್ಲಿ ಕೂರುವ ಸೀಟುಗಳ ಅನಾನುಕೂಲತೆಯನ್ನು ಹೇಳಿ ಪೂರೈಸಲಾಗುತಿತ್ತಿಲ್ಲ. ಸಾಮಾನುಗಳಿಗೆ ಪೌಂಡಿಗೆ ಒಂದಾಣೆ ಚಾರ್ಜು ಮಾಡುತ್ತಿದ್ದರು. ಪ್ರಯಾಣಿಕರಿಗೆ ಬೇಕಾದಂತೆ ಸ್ಥಳ ದೊರೆಯುವದೇ ದುರ್ಲಭವಾಗುತ್ತಿತ್ತು. ಇದಕ್ಕೆಲ್ಲಾ ಸ್ಪರ್ಧೆಯ ಇನ್ನೊಂದು ಸರ್ವಿಸು ಇಲ್ಲದೆ ಇದ್ದದ್ದೇ ಕಾರಣವಾಗಿತ್ತು.

ಆದರೆ ಜನರ ಹಾ ಕಾರಗಳು ಫಲಿಸಿಗೆ ಬರಲಿಕ್ಕಿಲ್ಲ. ಹೆಚ್ಚಿನ ಜನರ ಅಭಿಲಾಷೆಯಂತೆಯೇ ಈ ಲೈನಿನಲ್ಲಿ ಇನ್ನೊಂದು ಸರ್ವಿಸು ಇಡಲಾಗುವದೆಂಬ ವರ್ತಮಾನವು ಹುಟ್ಟಿತು. ಕೂಡಲೆ ಮೆಯಿಲ್ ಬಸ್ಸಿನಲ್ಲಿ ಚಾರ್ಜು 7ರಿಂದ 5ರೂ. ಗೆ ಇಳಿಯಿತು. ಲಗ್ಗೇಜ್ ಚಾರ್ಜು 1ಆಣೆಯಿಂದ ½ಆಣೆಗೆ ಇಳಿಸಲಾ

ಯಿತೆಂದು ವರ್ತಮಾನ ಹುಟ್ಟಿತು. ಅಷ್ಟರಲ್ಲೇ ಪ್ರಯಾಣಿಕರ ದುರ್ದೆಸೆಯಿಂದ ಹೊಸಸರ್ವಿಸಿಗೆ ಲೈಸನ್ಸು ಕೊಡಲ್ಪಡಲಿಲ್ಲವೆಂದು ತಿಳಿಯಬಂತು (ಇದು ಅನ್ಯಾಯವಲ್ಲವೇ?) ಇದನ್ನು ಕೇಳಿದ ಕೂಡಲೇ ಲಗ್ಗೇಜು ಚಾರ್ಜು ಇಳಿಸಲ್ಪಡಲಿಲ್ಲವೆಂದು ಹೇಳಿದರು. ಹೊಸ ಸರ್ವಿಸಿನವರು ಇಷ್ಟರಲ್ಲೇ ಸಿಕ್ಕಲಿಲ್ಲ. ನ್ಯಾಯಕ್ಕೆ ಹೋರಾಡಿದರು. ಹೊಸ ಸರ್ವಿಸಿನವರ ಎಡೆಬಿಡದೆ ಮಾಡಿದ ಪ್ರಯತ್ನದಿಂದ ಮಡಿಕೇರಿಯಿಂದ ಪ್ರೈವರ್ ಪೇಟಿಗಾಗಿ ಮೈಸೂರಿಗೆ ಬಸ್ಸು ನಡಿಸಲು ಹುಕುಂ ಸಿಕ್ಕಿತು. ಆದರೆ ಅಷ್ಟರಲ್ಲಿಯೇ ಆ ಸರ್ವಿಸಿನ ಕಷ್ಟವು ಏಡು ಗಡೆಯಾಗಲಿಲ್ಲ!

ನಿರಾತಂಕವಾಗದೆ ಇಷ್ಟೆಲ್ಲಾ ಪ್ರಯತ್ನಿಸಿದ ಹೊಸ ಸರ್ವಿಸೇ 'ಮೋಡರ್ನ್' ಯೂ ವಾಡಿಕೆಯಾಗಿ ಕರೆಯಲ್ಪಡುವ 'ಪಾಪರಾಪ' ಬಸ್ಸ್‌ಸರ್ವಿಸಾಗಿದೆ. ಇವರಿಗೆ ಪ್ರಯಾಣಿಕರು ಬಹಳವಾಗಿ ವಂದಿಸಬೇಕಾಗಿದೆ. ಯಾಕೆಂದರೆ, ಇವರ ಸರ್ವಿಸು ಪ್ರಾರಂಭವಾದೊಡನೆಯೇ ಮಡಿಕೇರಿಯಿಂದ ಮೈಸೂರಿಗೆ 1ರೂ ಚಾರ್ಜು ಮಾಡಿರುವರಲ್ಲದೆ ಲಗ್ಗೇಜಿಗೆ ಪೌಂಡಿಗೆ 6ಕಾಸು ಮಾಡಿರುವರು. ಹೀಗೆಯೇ ಮೈಯಿಲ್ ಬಸ್ಸಿನವರೂ ಮಾಡಬೇಕಾಯಿತು. ಇಷ್ಟು ಮಾತ್ರವಲ್ಲ, ಪ್ರಯಾಣಕ್ಕೆ "ಮೋಡರ್ನ್" ಸರ್ವಿಸಿನ ಬಸ್ಸು ಬಹಳ ಸುಖಕರವಾಗಿದೆ. ಕಾರಿನಲ್ಲಿ ಕೂತಂತೆಯೇ ಅದರಲ್ಲಿ ಆಗುತ್ತದೆ. ಅದರಿಂದ ಇದು ಹೆಚ್ಚು ಪ್ರಿಯವಾಗುವದೆಂದು ತಿಳಿದ ಮೈಯಿಲ್ ಸರ್ವಿಸಿನವರೂ ಬಳ್ಳ ಹೊಸ ಬಸ್ಸುಗಳನ್ನು ತರಿಸಿ ನಡಿಸುತ್ತಿರುವರು. ಇವೆಲ್ಲಾ ಸೌಕರ್ಯಗಳು ಮೋಡರ್ನ್ ಬಸ್ಸ್‌ಸರ್ವಿಸಿನಿಂದಾದವುಗಳೆಂದು ಯಾರು ತಾನೇ ಹೇಳಲಾರರು?

ಮೆಯಿಲ್ ಬಸ್ಸು ಮಡಿಕೇರಿಯಿಂದ 5½ಯೂ 6ಗಂಟೆಗೆ ಹೊರಡುತ್ತಿತ್ತು. ಮೋಡರ್ನ್ ಬಸ್ಸು 7ಗಂಟೆಗೆ ಹೊರಡುವಂತೆ ಹುಕುಂ ಕೊಟ್ಟರು. ಇದರಿಂದ ಪ್ರಯಾಣಿಕರಿಗೆ ಬಹಳ ಅನುಕೂಲವಾಯಿತು. ಮಡಿಕೇರಿಯ ಚಳಿಯಲ್ಲಿ ಬೆಳಿಗ್ಗೆ 6ಗಂಟೆಗೆ ಬಸ್ಸಿಗೆ ಹೋಗುವ ಕಷ್ಟವು ಅದನ್ನು ಅನುಭವಿಸಿದವರಿಗೇನೇ ಗೊತ್ತಲ್ಲದೆ ಬರದು ವಿವರಿಸಲಾಗುವದಿಲ್ಲ. ಆ ಕಾರಣ ಸ್ವಾಭಾವಿಕವಾಗಿ ಹೆಚ್ಚಿನ ಪ್ರಯಾಣಿಕರು 7ಗಂಟೆಯ ಬಸ್ಸಿನಲ್ಲಿ ಹೋಗಲು ಪ್ರಾರಂಭಿಸಿದರು. ಅಷ್ಟರಲ್ಲೇ ಯಾರದುರದೃಷ್ಟವೆಂದು ಹೇಳಲಿ! ಕಾಲವು ಮಗುಚಿತು! 6ಗಂಟೆಗೆ ಹೊರಡುತ್ತಿದ್ದ ಮಯಿಲ್ ಬಸ್ಸು 7ಗಂಟೆಗೆ ಹೊರಡಬೇಕೆಂದೂ 7ಗಂಟೆಗೆ ಹೊರಡುತ್ತಿದ್ದ ಮೋಡರ್ನ್ ಬಸ್ಸು 6½ಗಂಟೆಗೆ ಹೊರಡಬೇಕೆಂತಲೂ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರವರ ಹುಕುಂ ಆಯಿತು! ಇಂಥಾ ಹುಕುಂ ನ ಮೇಲೆ ಪ್ರಯಾಣಿಕರಲ್ಲಿರುವ ಪಾಪಸರಾದ ಬಸ್ಸಿನವರು ಏನುಮಾಡಲು ಸಾಧ್ಯ? ಅಧಿಕಾರದಲ್ಲಿರುವವರ ಹುಕುಂ ಪಾಲಿಸಲೇಬೇಕು. ಅದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಹೀಗೆ ಬದಲಾಯಿಸಲು ಅಧಿಕಾರಿಗಳು ಕಾರಣವನ್ನಾದರೂ ಕೊಟ್ಟಿದ್ದರೆ ಜನರಿಗೆ ಇದು ಅನ್ಯಾಯವೆಂದು ತೋರುತ್ತಿರಲಿಲ್ಲ. ಕಾರಣಗಳೇನೂ ಕೊಡವೆ ಇರುವಲ್ಲಿ ಇದರ ನ್ಯಾಯ ಅನ್ಯಾಯವನ್ನು ವಾಚಕರೇ ಊಹಿಸಿಕೊಳ್ಳಬಹುದು.

ಮೆಯಿಲ್ ಸರ್ವಿಸಿನವರಿಗಾದರೋ ಪೋಸ್ಟಲ್ ಇಲಾಖೆಯಿಂದ ತಿಂಗಳಿಗೆ ಸುಮಾರು ಎರಡೂವರೆ ಸಾವಿರ ರೂಪಾಯಿಗಳು ಸಿಕ್ಕುತ್ತವೆ. ಆದರಿಂದಲೇ ಅವರ ಖರ್ಚು ಎತ್ತುವದನ್ನು ಬಹುದು. ಅವರಿಗೆ ಪ್ರಯಾಣಿಕರು ಸಿಕ್ಕಲಿ ಸಿಕ್ಕದಿರಲಿ ನಷ್ಟವಾಗುವುದಿಲ್ಲ. ಆದರೆ ಪಾಪ 'ಮೋಡರ್ನ್' ಸರ್ವಿಸಿನಗತಿಯೇನು! ಪ್ರಯಾಣಿಕರ ಪ್ರಯೋಜನಕ್ಕಾಗಿಯೇ ಇದಲ್ಲಟ್ಟು ಇಷ್ಟು ಸ್ವಲ್ಪ ದಿವಸಗಳಲ್ಲಿಯೇ ಎಷ್ಟೋ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುವ ಈ ಹೊಸ ಸರ್ವಿಸಿಗೆ ಪ್ರಯಾಣಿಕರು ಸಿಕ್ಕದಿದ್ದರೆ ಅವರ ಬಸ್ಸು ಓಡುವ ಬಗೆ ಹೇಗೆ? ಅದಕ್ಕಲ್ಲವೇ ಪ್ರಯಾಣಿಕರಿಗೆ ಅನುಕೂಲವಾದ ಹೊರತು ಸಿನ ಯಕೊಡಬೇಕಾದದ್ದು? ಅದಕ್ಕೆ ಅನಾನುಕೂಲಗಳನ್ನು ಕಲ್ಪಿಸಿ ಅದನ್ನು ಮೂಲೆಗೊತ್ತಿದರೆ ಪುನಃ ಮೆಯಿಲ್ ಬಸ್ಸು ತನ್ನ ಮನಸ್ಸಿನ ಇಚ್ಛೆ ಚಾರ್ಜು ಮಾಡಲಿಕ್ಕಿಲ್ಲವೆಂದು ನಂಬುವ ಬಗೆ ಏನು? ಹೊಸ ಸರ್ವಿಸಿಗೆ ಅನುಕೂಲ ಕೊಟ್ಟು ಅದಕ್ಕೆ ಬೇಕಾದಷ್ಟು ಪ್ರಯಾಣಿಕರು ದೊರದರೆ ಏಳು ರೂ ಯಿಂದ 4ರೂ ಗೆ ಇಳಿಸಿದ ಅವರು ಇನ್ನೂ ಚಾರ್ಜನ್ನು ಇಳಿಸಿಯಾರೆಂದು ಯೋಚಿಸಬಹುದಲ್ಲವೇ?

ಸರ್ಕಾರದವರು ಪ್ರಯಾಣಿಕರ ಹಿತವನ್ನು ಬಯಸುವವರಾದರೆ ಬಹುಹಿತವಾಗಿಯೂ ಬಸ್ಸುಗಳು ಹೊರಡಬೇಕಾದ ಸಮಯ ಮೊದಲು ಬದಲಾಯಿಸಿದ ಹುಕುಮನ್ನು ರದ್ದು ಮಾಡುವರೆಂದು ನಂಬುತ್ತೇನೆ. ಸರ್ಕಾರದವರು ಪಬ್ಲಿಕ್ ಜನರ ಅಭಿಪ್ರಾಯಗಳಿಗೆ ಗಮನ ಕೊಡುವುದಿಲ್ಲವೆಂದಾದರೆ ಈ ವಿಷಯವನ್ನು ಅನ್ಯಾಯವೆಂದಲ್ಲದೆ ಬೇರೆ ಏನೆಂದು ಹೇಳುವದು?

"ಪ್ರಯಾಣಿಕ"

ಗೌಡರುಗಳ ಸ್ಥಿತಿ.

ನಮ್ಮ ದೇಶದ ಇತರ ಪಂಗಡದ ನಮ್ಮ ಸಹೋದರರು ಪ್ರಪಂಚದ ನಾಗರೀಕತೆಯೆಂಬ ರೈಲು ದಾರಿಯ ಮೇಲೆ ಮೇಯಿಲ್, ಎಕ್ಸ್‌ಪ್ರೆಸ್ಸ್ ಗಾಡಿಗಳಂತೆ ಎಷ್ಟೆಷ್ಟು ಜಾಗ್ರತೆ ಮುಂದುವರಿಯುತ್ತಿರುವರು. ನಿಮಗೆ ಈ ಯೋಚನೆ ಇಲ್ಲವೋ? ಅಥವಾ ಅಂಥಾ ಯೋಚನೆ ಮಾಡುವದು ನಿಮ್ಮ ಕರ್ತವ್ಯವೇ ಅಲ್ಲವೆಂದು ತಿಳಿದಿರುವಿರೋ? ಏಳಿ, ಏಳಿ, ಈಗಲಾದರೂ ಒಂದು ಸಲ ಕಣ್ಣು ತೆರೆದು ನೋಡಿ. ನಿಮ್ಮ ಕರ್ತವ್ಯವನ್ನು ನೀವು ಸ್ವಲ್ಪವೂ ತಿಳಿಯದೆ ಹೋದರೆ ಶ್ರೇಷ್ಠವಾದ ಮನುಷ್ಯ ವರ್ಗದಲ್ಲಿ ಹುಟ್ಟಿದುದನ್ನು ಸಾರ್ಥಕ ಪಡಿಸುವುದು ಹೇಗೆ?

ನಮ್ಮ ದೇಶದಲ್ಲಿ ಅನಂತಾನಗಳಿಂದ ಮಲ್ಲಿಕಾಲತೆಗಳು ಮುಚ್ಚಲ್ಪಟ್ಟು ಸುಗಂಧ ಬೀರದೆ ದುರ್ಗಂಧಕ್ಕೆ ಬೀರುತ್ತಿರುವುದೇ ಹಾಗೆಯೇ ನಮ್ಮ ಪಂಗಡದವರಲ್ಲಿ ಮಾರ್ಗದರ್ಶಿಗಳಿಲ್ಲದ್ದರಿಂದ ದಿನೇದಿನೇ ಕೃಷ್ಣಪಕ್ಷದ ಚಂದ್ರನಂತೆ ಕ್ಷಯಿಸುತ್ತಿರುವುದನ್ನು ನೋಡಿ ವಿಷಾದ ಪಡಬೇಕಾಗಿದೆ. ಆದರೆ ಈಗೀಗ ಕೆಲ ಮಹನೀಯರು ಮಲ್ಲಿಕಾಲತೆಗಳನ್ನು ನೆಟ್ಟು ನೀರು ಹಾಕುವಂತೆ ಕಾಣುತ್ತಿದೆ. ಮಹನೀಯರೆ ನೀವುಗಳು ಈಗೀಗ ನಡುತ್ತಿರುವ ನಮ್ಮ ಕೋಮಲವಾದ ಲತೆಗಳು ಚಿಗುರು ಚಿಗುರಿದ ಹಾಗೆಯೇ ಹೂ ಬಿಡುವ ವರೆಗೂ ಬೇಕುಬೇಕಾದ ಆಹಾರ ಸಾಮಗ್ರಿಗಳನ್ನು ಕೊಟ್ಟು ಸಾಕಿ ಪುಣ್ಯವನ್ನು ಗಳಿಸಿರಿ.

ನಮ್ಮವರಲ್ಲಿ ಎಲ್ಲರೂ ವಿದ್ಯಾವಂತರಾಗದ ಹೊರತು ನಾವು ಮುಂದುವರಿಯುವ ಹಾಗಿಲ್ಲ. ನಿಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ 7—8 ವರ್ಷ ಪ್ರಾಯವಾಗುತ್ತಲೆ ದನಗ ಳೊಡನೆ ತಿರುಗುವುದಕ್ಕಾದನೆಂದು ಮನಸ್ಸಿನಲ್ಲಿ ಹಿಗ್ಗದೆ 18—20 ವರ್ಷಗಳಾಗುವ ವರೆಗೆ ಮಗನು ಹಟ್ಟಿಲಿಲ್ಲವೆಂದು ಯೋಚಿಸಿ ಅವನ ವಿದ್ಯಾಭ್ಯಾಸಕ್ಕೆ ಅನುಕೂಲ ಕೂಡಿ ಕೆಲಬ ಕಟ್ಟಿ ಭೂಮಿಯ ಪಾಲಾಗುತ್ತಿರುವ ಆ ರೂಪಾಯಿಗಳ ಕಡೆಗೆ ನೋಡಿ!

ಮುಂದುವರಿಯಲು ಇಷ್ಟಪಡುತ್ತಿರುವ ಹಾಯಕರಾಗಿ ಹಿಂದೆ ಬೀಳುತ್ತಿರುವ ನಮ್ಮ ಬಡ ವಿದ್ಯಾರ್ಥಿಗಳನ್ನು ನಿಮ್ಮ ಉದಾರ ಹಸ್ತದಿಂದ ಮುಂದೆಳೆದ ಮುಂದಿನ ಜನ್ಮಕಾದರೂ ವಿದ್ಯಾದಾನದ ಪುಣ್ಯವನ್ನು ಸಂಪಾದಿಸಿಕೊಳ್ಳಿ.

ಸಿ ಡಿ ಮುತ್ತಣ್ಣ ಗೌಡ

"ಇದೊಂದು ಮಾತು"

ವಾಚಕ ಪ್ರಿಯರ!

ವೃತ್ತ ಪತ್ರಿಕೆಗಳಿಗೆ ಹೆಸರ ಕೊಟ್ಟು ಬರೆಯಲ್ಪಡುವ ಲೇಖನದ ಕುರಿತು ಕೆಲವು ಮಹನೀಯರು ಗುಣುಗುಟ್ಟುವುದನ್ನು ನಾನು ಸ್ವತಃ ಕೇಳಿರುವುದರಿಂದ ಆ ಸಮ್ಮಂದ ಸ್ವಲ್ಪ ಮಾತನ್ನು ಇಲ್ಲಿ ವಿವರಿಸಬೇಕಾಗಿದೆ. ಯಾವ ಲೇಖನವೇ ಆಗಲಿ ಆ ಲೇಖನದ ಅಡಿ ಇಲ್ಲವೆ ಆದಿಯಲ್ಲಿ ಲೇಖಕರ ಹೆಸರು ಸೂಚಿಸ ಬೇಕಾದದು ವಾಸ್ತವ್ಯವಾಗಿದೆ. ಹಾಗೆ ಹೆಸರು ಸೂಚಿಸಿದ ಲೇಖನವು ದೃಢ ಉದ್ದೇಶಕ್ಕಾಗಿ ಯಥಾರ್ಥವಾದುದೆಂದು ಅದನ್ನು ನೋಡಿದಕೂಡಲೆ ನಿಶ್ಚಯವಾಗುತ್ತದೆ. ಯಾವ ಲೇಖನವು ನಿಜ ಹೆಸರಿಂದಿರದೆ ಅಡ್ಡ ಹೆಸರಿನಿಂದ ಕೂಡಿರುವದೊ ಆ ಲೇಖನವು ಭಯದಿಂದ ಕೂಡಿಯೋ ಇಲ್ಲವೆ ಬಹುಸತ್ವರ ಉಳ್ಳದ್ದೋ ಆಗಿರ ಬೇಕು. ಅದನ್ನು ಹುಚ್ಚಾಗಿ ನಂಬಲು ನಂಬದೆ ಬಿಡಲು ಸ್ವಲ್ಪ ದ ಸಂಶಯ ರೂಪ ಉಳ್ಳದಾಗಿರುತ್ತದೆ. ಆದರೆ ಹೆಸರು ಸೂಚಿಸಿ ಬರೆಯುವ ಲೇಖನವು ಲೇಖನ ಕರ್ತನ ಹೆಸರು ಪ್ರಸಿದ್ಧಿಗಾಗಿಯೇ ಅದೊಂದು ಸ್ವಾರ್ಥತೆಯನ್ನು ಕೈಕೊಳ್ಳುವ ಉದ್ದೇಶದಿಂದ ಬರೆಯುವದೆಂಬುದೆ ಈ ಸಂಬಂಧ ಗುಣುಗುಟ್ಟುವ ಕೆಲ ಮಹಾಶಯರ ಅಭಿಪ್ರಾಯವು. ಇಂಥಾ ಇವರ ಅಭಿಪ್ರಾಯವು ಎಷ್ಟರ ಮಟ್ಟಿನ ತಿಳಿಗೇಡಿತನವುಳ್ಳದನ್ನು ಪ್ರಾಜ್ಞರು ತಿಳಿಯದಿರಲಾರರು. ನಾವೇನು ಲೇಖನಗಳನ್ನೆಲ್ಲಾ ಹೆಸರು ಸೂಚಿಸಿಯೆ ಬರೆಯಲ್ಪಡಬೇಕೆಂಬ ನಿಯಮವನ್ನು ಹೊರಪಡಿಸುವದಲ್ಲ. ಲೇಖನದಲ್ಲಿ ಬಹು ತರ ವಿರುವದಾದ್ದರಿಂದ ಲೇಖನದ ಒಳವನ್ನು ತಿಳಿದು ಹೀಗೆ ಕೆಲವು ಇಲ್ಲವೆ ಅಡ್ಡ ಹೆಸರು ಕೊಡುವದಾಗಲಿ ಮಾಡಬೇಕು. ಇನ್ನೂ ಕೆಲವರು ಹೆಸರು ಕೊಟ್ಟ ಲೇಖನವನ್ನು ಲೇಖನ ಕರ್ತನ ಸ್ಥಿತಿಗತಿಯನ್ನು ತಿಳಿದುಕೊಂಡು ಓದುವದಾಗಲಿ ಆತನ ಅಭಿಪ್ರಾಯಕ್ಕೆ ಮನ್ನಣೆ ಕೊಡುವದಾಗಲಿ ಮಾಡುವರು ಮಾಡುವರುದೆ ಸ್ವಾರ್ಥತೆ. ಈ ಅಂಜಿಕೆಯಿಂದ ಕೇವಲ ಮಾತ್ಸರ್ಯದಿಂದ ಮುಳುಗಿದವರಿಗೆ ಸಲ್ಲುವದೇ ಹೊರತು ವಾಚಕ ವೃಂದಕ್ಕೆ ಸಲ್ಲುವದಿಲ್ಲ. ಯಾವಾಗಲೂ ಉದಾಮತಿಯಿಂದ ಕೂಡಿದ ಲೇಖನಕ್ಕೆ ಹೆಸರು ಕೊಡಲೇ ಬೇಕು. ಅಭಿಪ್ರಾಯವನ್ನು ವಾಚಕರ ಗಣನೆಗೆ ತರಲಿತಾದರೀರಲಿ ಲೇಖನ ಕರ್ತನ ಕರ್ತವ್ಯ ಮಾಡಿದಂತಾಯಿತು. ದೊಡ್ಡ ಹೆಸರು ಪಡೆದವನ ಲೇಖನವಾಗಲಿ ಸಾಮಾನ್ಯ ನಡೆಯುವ ಬಾಲಕ್ಕೆ ವಿರೋಧವಾಗಿದ್ದರೆ ಯಾರಾಗಿ ಮನ್ನಿಸುವದಿಲ್ಲ. ಲೇಖಕನ ಪುರುಷನ ಗುಣವನ್ನು ಲೇಖನದಲ್ಲಿ ನೋಡುವದಿಲ್ಲ. ಸಮಸ್ತ ಲೋಕವು ಲೇಖನದ ಅಭಿಪ್ರಾಯವನ್ನು ಗ್ರಹಿಸುತ್ತದೆ. ಮತ್ತೆ ಕೆಲವರು ಕೆಲವು ಲೇಖನಗಳನ್ನೂ ಆತನ ಹೆಸರುಗಳನ್ನೂ ನೋಡಿಕೊಂಡು ಲೇಖನ ಕರ್ತನ ಹೀಗೆ ಇಲ್ಲದ ಮುಂದೆ ತನಗೆ ಇಲ್ಲವೆನಿಂದಾ ರೂಪವಾಗಿ ಹಾಸ್ಯ ಸಂವಾದವನ್ನು ಮಾಡುತ್ತಾರೆ. ಇದನ್ನು ವಿಚಾರಿಸುವಾಗ ಅವರೂ ಬರೆಯಲು ಸಮರ್ಥರಿಲ್ಲದವರ ಕೆಲಸವೆಂದೇ ಹೇಳಬೇಕು. ಹಾಗೂ ಕೆಲವರು ಆ ಲೇಖನ ಹಾಗೆ ಆ ಲೇಖನ ಹೀಗೆ ಎಂದು ಮುಂದಾಗಿ ಕೊಂಡು ನಿಂದಿಸುವವರು. ಇದೂ ಕೂಡ ಕ್ಷುದ್ರಬುದ್ಧಿಗಳ ಕರ್ತವ್ಯವು. ಯಾವ ಲೇಖನವೇ ಆಗಲಿ ತಪ್ಪಿದ್ದರೆ ಕೂಡಲೆ ಅದನ್ನು ಮಾಡಿಸಿ ಬರೆಯುವದಾಗಲಿ ತಿದ್ದುವದಾಗಲಿ ಮಾಡಬಹುದು. ಅದು ಬಿಟ್ಟು ಹಿಂದೆ ನಿಂದಿಸುವದರಿಂದ ಯಾವ ಪ್ರಯೋಜನವೂ ಇಲ್ಲ. ಪತ್ರಿಕೆಗಳು ಯಾವಾಗಲೂ ದೇಶವನ್ನು ಮುಂದೆ ತರುವವುಗಳಾಗಿವೆ. ಉಪಾಧ್ಯಾಯರುಗಳಿಗೆ ಟ್ರೈನಿಂಗ್ ಎಂಬ ತರಬೇತಿನ ವಿದ್ಯೆ ಹೇಗೋ ಹಾಗೆಯೇ ದೇಶದವರನ್ನು ವಿದ್ಯೆಯಿಂದಲೂ, ಅಭಿಪ್ರಾಯಗಳ ಪ್ರಸುರತೆಯಿಂದಲೂ ತರಬೇತು ಪಡಿಸಿಕೊಂಡು ತಪ್ಪು ಇದ್ದಲ್ಲಿ ತಪ್ಪನ್ನೂ ಒತ್ತಿ ಹೇಳಿಕೊಂಡು ಉತ್ಸಾಹಪರರಿಗೆ ಉತ್ತೇಜನ ಕೊಡುತ್ತಾ ಬರುವದೇ ಪತ್ರಿಕೆಯ ಕೆಲಸ. ಪತ್ರಿಕೆಯು ಮುತ್ತು ರತ್ನ ಮುಂತಾದ ಜಾಣಗಳ ಬಲಿಯು. ವರ್ತಕರಿಂದ ಹೇಗೆ ಬೇಕಾದುದೊ ಹಾಗೆ ದೇಶದ ಜನರನ್ನು ಬೇರ್ಪಡಿಸಿಕೊಂಡು ಪ್ರಜೆಗಳಿಗೂ ಸರಕಾರಕ್ಕೂ ಸಂಬಂಧ ಬೆಸೆ ತಪ್ಪ ಸಾಧನವಾಗಿದೆ. ಆದ್ದರಿಂದ ಲೇಖನವು ಪ್ರತಿಯೊಬ್ಬರಿಗೂ ತಮ್ಮ ತಮ್ಮ ಅಭಿಪ್ರಾಯ ಕೊಟ್ಟುಕೊಂಡು ನಮ್ಮ ದೇಶ ಇವುಗಳನ್ನು ನಿರ್ಮೂಲಪಡಿಸುವ ಕೆಲಸವಲ್ಲದೆ ತಮ್ಮ ಪ್ರಖ್ಯಾತಿಗಿರುವ ಧೋರಣವಲ್ಲ.

ಕೆ ಸೋಮಯ್ಯ

ಸರಕಾರಿ ನೌಕರಿ.

ಅಯ್ಯಾ ಭಾವದವರೇ,

ಈಗಿನ ಕಾಲಗಳಲ್ಲಿನ ಯುವಕರು ಸರಕಾರಿ ನೌಕರಿಯೆಂದರೇ ತಮ್ಮ ಕಾಲಹರಣವಾಗ ವುದೆಂದು ಬೇಗಾದರೂ ಕಷ್ಟಪಟ್ಟು ಒಂದು ಗುಮಾಸ್ತೆ ಚಾಕರಿ ಪಡೆದುಕೊಂಡರೆ ಬಹು ಪುಣ್ಯಶಾಲಿಯಾಗುವೆನೆಂದು ತಿಳಿದಿರುವರು. ಪ್ರಥಮ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಲೋವರ್ ಸೆಕೆಂಡರಿ ಕ್ಲಾಸಿಗೆ ಬರುವದರಿಂದ ಎಲ್ಲಿಯಾದರೂ ಇಪ್ಪತ್ತು ರೂಪಾಯಿ ಸಂಬಳ ಸಿಕ್ಕಿದರೆ ಹೇಗಾದರೂ ನಾನು ಜೀವನವನ್ನು ಕಳೆಯುವೆನೆಂದು ಎಂದು ಯೋಚಿಸಿ ಶಾಲೆಯಲ್ಲಿ ಓದುತ್ತಿದ್ದಾಗ್ಯೂ ಕಾಲೇಜು ಕಚೇರಿಗಳಿಗೆ ಅರ್ಜಿಗಳನ್ನು ಹಾಕುತ್ತಿರುವರು. ಅಯ್ಯೋ ಇವುಗಳನ್ನು ನೋಡಿದರ ನಮ್ಮ ಯುವಕರು ಎಷ್ಟು ಶ್ರದ್ಧೆಯಿಂದ ತಮ್ಮ ದಿನ ಪಾಠಗಳನ್ನು ಗಮನಿಸೂ ಡುವರೆಂದು ತಿಳಿಯುವದು. ಹ್ಯಾಗೂ ಇವರ ಅನ್ಯೋನ್ಯ ಬುದ್ಧಿಯಿಂದರೇ ಇತ್ಯಾದಿ ಕಾರಣವಿಂದಲೋ ಲೋವರ್ ಸೆಕೆಂಡರಿಯಾಗುವ ವರೆಗೆ ಇವರಿಗೆ ಯಾವ ಉದ್ಯೋಗವು ದೊರೆಯುವುದಿಲ್ಲ. ಆನೆ ಅಷ್ಟರ ಸಹಿಸಿದರೆ ಮನುಷ್ಯ ಪರೀಕ್ಷೆಗೆ ಕುಳಿತು ಕೂಡಲೇ ಪ್ರಾಕ್ಟಿಕಲ್ ಎಲ್ಲಿಯಾದರೂ ಗುಮಾಸ್ತ ಚಾಕರಿ ಸಿಗುವುದು. ಆಹಾ! ತಾನು ಗುಮಾಸ್ತನಾಗಿ ನಾವಿ ಸಲ್ಲಬೈಯುವನು ಎಂಬ ಪತಾಕೆಯು ಯುವಕನಿಗೆ ತಲುಪಿದ ಕೂಡಲೆ ಅವನ ಹೃದಯವು ಎಷ್ಟೊಂದು ಆನಂದದಿಂದ ತುಂಬುವುದು!

ಮೊದಲನೆಯ ದಿನ ಕಚೇರಿಗೆ ಹೋಗಿ ಚಾರ್ಜು ತೆಗೆದುಕೊಳ್ಳುವನು. ಆದರೆ ತಾನು ಮಾಡಬೇಕಾದ ಕೆಲಸಗಳು ಯಾವುವೆಂದು ಗೊತ್ತಿಲ್ಲದೆ ಬಹಳ ಪ್ರಯಾಸಪಡುವನು. ಜೊತೆಯವರನ್ನು ಆಗಾಗ್ಗೆ ಕೇಳುವುದು ಹ್ಯಾಗೆ ಎಂಬ ನಾಚಿಕೆ. ಅಷ್ಟರಲ್ಲಿ ಮನಸ್ಸನ್ನು ಬಿಗಿಹಿಡಿದು ಕೇಳಿದಾಗ ತನ್ನ ಸಂಗತಿ ಉದ್ಯೋಗಸ್ಥರು, "ನನಗೆ ಈಗ ಸಮಯವಿಲ್ಲ. ಬಿಡುವು ಆಗಾಗ ತೊಂದರೆ ಮಾಡಬೇಡ ತ್ತಿಯೇ" ಎಂದು ಕೇಳಿಬಿಟ್ಟರಂತೂ ಇನ್ನು ಮುಂದೆ ಯಾವುದನ್ನೂ ಕೇಳಬಾರದೆಂದಾಗುತ್ತದೆ.

ಹೀಗೆಯೇ ಕೆಲವು ದಿವಸಗಳು ಚಾಕರಿ ಮಾಡುತ್ತಾ ಯಾರು ಏನು ಹೇಳಿದರೂ ಅದಕ್ಕೆ ಮರು ಮಾತಾಡದೆ ಕಷ್ಟಪಡಬೇಕಾಗುವುದು. ಇಂಥಾ ಸಮಯದಲ್ಲಿ ನಮ್ಮ ಯುವಕನು 'ಅಯ್ಯೋ! ಯಾಕೆ ಇಲ್ಲಿ ಸೇರಿದೆನು,' ಎಂದು ಮರುಗುವನು. ಪಾಪ! ಶಾಲೆಯಲ್ಲಿದ್ದಾಗ ಎಂದರೆ ಗುಮಾಸ್ತ ಚಾಕರಿ ಎಂತಹದೆಂದು ತಿಳಿಯದ ಯುವಕನು ಕೂಲಿಗಿಂತಲೂ ಕಡೆಯಾಗಿ ಇಂದು ಕಚೇರಿಯಲ್ಲಿ ಒದ್ದಾಡುವನು. ಸ್ವತಂತ್ರ ಎಂಬ ಮಾತೇ ಅಲ್ಲಿ ಇಲ್ಲವು. ಆ ಮೇಲೆ "ಈ ಕೆಲಸವು ಬಹು ಕಷ್ಟ. ಇದು ನನಗೆ ಬೇಡ, ಅಯ್ಯೋ ಯಾರು ಇಲ್ಲಿ ಒದ್ದಾಡುತ್ತಿರುವರು" ಎಂದು ಹೇಳಿ ಆ ಉದ್ಯೋಗವನ್ನು ಬಿಟ್ಟು ತನ್ನ ಮನೆಗೆ ಹೋಗಿ ಕೂರುವನು. ಅವನೇನು ತಾನೇ ಮಾಡ್ಯಾನು? ನೇಗಿಲನ್ನು ಇವಕ್ಕೆ ಮೊದಲು ಹಿಡಿದವನಲ್ಲ. ಈಗ ಹೇಗೆ ಹಿಡಿದಾನು? ಅಂತೂ ಇಂತೂ ಒಂದು ತಿಂಗಳು ಮನೆಯಲ್ಲಿ ಕಳೆಯುವುದೆಂದರೆ ದುಸ್ತರವಾಗುವುದು. ಆದಕಾರಣ ಪುನಃ ಎಲ್ಲಿಯಾದರೂ ಚಾಕರಿ ಹುಡುಕಬೇಕಾಗುವುದು. ಹೀಗೆ ಎಲ್ಲರೂ ಕಷ್ಟಪಡುತ್ತಾ ಗಳೆಯುವನು.

ಪ್ರಿಯ ಯುವಕರೇ! ಇನ್ನಾದರೂ ನಿಮ್ಮ ಮನಸ್ಸಿನಲ್ಲಿ ಸ್ಥಿರವಾಗಿರುವ ಆ ಕುಂದಕವನ್ನು ದೂರ ನೀಗಿರಿ. ಸ್ವಲ್ಪ ಐಶ್ವರ್ಯವಂತ ಮಕ್ಕಳಾದರ ಏನಾದರೂ ಹೊಸ ಕಾರ್ಖಾನೆಗಳನ್ನು ಸ್ಥಾಪಿಸುವ ಉದ್ದೇಶ ಪ್ರಯತ್ನಪಡಿರಿ. ಬಡವರ ಮಕ್ಕಳು ಅಂಥಾ ಕಾರ್ಖಾನೆಗಳನ್ನು ಸ್ಥಾಪಿಸಲು ಶಕ್ತಿ ಇಲ್ಲದ ಕಾರಣ ಹೊಟ್ಟೆ ಹೊರೆಯುವುದಕ್ಕೆ ಎಲ್ಲಿಯಾದರೂ ದುಡಿಯಬೇಕಾದದ್ದು ಅತ್ಯಾವಶ್ಯಕ. ಐಶ್ವರ್ಯವಂತರು ಅಂಥಾ ಕಾರ್ಖಾನೆಗಳನ್ನು ಏರ್ಪಡಿಸಿದರೆ ಬಡವರ ಮಕ್ಕಳಿಗೆ ಸಮಯೋಚಿತ ಸಹಾಯ ಮಾಡಿದ ಹಾಗಾಗುತ್ತದೆ. ಮತ್ತು ನಮ್ಮ ಈ ಚಿಕ್ಕ ಕೊಡಗು ದೇಶದ ಸಂಪತ್ತನ್ನು ಹೆಚ್ಚಿಸಿದಾಗಿನ ವೃದ್ಧಿ. ಅಂಥವರನ್ನು ಎಲ್ಲರೂ ಶ್ಲಾಘಿಸುವರು.

ಸಿ. ಸ್ವಾಮಿ ಕ.

FOR SALE.

The following property about ten miles from Mercara, on Somwarpett road, consisting of -

	Rs	As	P
Wetlands, 30 93 acres or about 1000 batties at Rs 500/ per 100 batties	5000	0	0
Coffee, 33 46 acres at Rs 400/ per acre	13200	0	0
Bane and Jungle, 90 00 acres at Rs 20/ per acre	1800	0	0
Total 154 39 acres	20000	0	0

With a decent upstaired house, out houses and cooly lines is open for sale.

Please apply to —

R. Framjee,
Mercara.

12—2

For Sale. Cars. For Sale.

(*a*) Two Ford Cars one fitted with high tensionea Magneto

(*b*) One Overland Model 75B

(*c*) One Overland Model 4 with sedan body It is a pleasure to travel in this car

All the above cars are in good order

For prices and other particulars—

Apply to the Manager
Victoria Motor Garage,
Mercara

4—4

LOOK HERE PLEASE LOOK HERE

CONVERSATION BETWEEN A & B.

A —Good morning B How are you?

B —Hallo! Good morning my friend When did you come?

A —I came this morning Can you tell me where I can get a good motor car for hire? I have to go to Mysore & come back

B — The Victoria Motor Garage Mercara keep good cars for hire & their charges are modern e I always hire cars from them and it is quite a pleasure to travel in their cars They have Overland and Ford cars This B likes their car with sedan body immensely

A —Thank you I shall go to them Good morning

B —GOOD MORNING

4—4

ARMS & AMMUNITION MART.

Mahomedally-Noorbhoy.

337, Abdul Rehman Street, near Crawford Market, BOMBAY.
Telegraphic Address:-" SHOOTER" Bombay

[52 43] Please write for latest Catalogues.

ಎಷ್ಟು ಲಕ್ಷಣವಾಗಿದೆ! ನೋಡಿರಿ!

ನಮ್ಮ ಟಿಕ್ ಟಾಕ್ (ರಜಿಸ್ಟ್ರರ್ಡ)



ಎಂಬ ಗೋಡೆಗೆ ತಗಲಿಸುವ ಗಡಿಯಾರವು ಸರಿಸೋಲದಂತ ಪ್ರಖ್ಯಾತಿಗೊಂಡಿದೆ ಸರಿಯಾದ ಗಂಟೆಯನ್ನು ತೋರಿಸುವ ಉತ್ತಮವಾದ ಗಡಿಯಾರು ಎಲ್ಲರೂ ಮೆಚ್ಚಿರುವಂಥಾದ್ದು ಯಾವಾಗಲೂ **ಟಿಕ್ ಟಾಕ್** ಗಡಿಯಾರವನ್ನೇ ತರಿಸಿರಿ. ಕ್ರಯ ರೂ 3—0—0 ಮಾತ್ರ

ಜರ್ಮನ್ ಎಲಾರ್ಮ್ ಗಡಿಯಾರು.

ಕಯಿವು ಬಹು ಕಡಿಮೆ ಮಾಡಲ್ಪಟ್ಟಿದೆ ಮತ್ತು ಪ್ರಯೋಗದ, ಕಡಿಮೆ ಕ್ರಯದ ಟಯಮ್ ಪೀಸ್ 4 ಇಂಚು ಡಯಲಿನ ಸಿಕ್ಕಲ್ ಗಡಿಯಾರು 30 ಗಂಟೆ ಪರಗ ಚೀಗಕೊಡಬೇಕಾಗಿಲ್ಲ ಹ್ಯಾಗ ಇಟ್ಟರೂ ನಡೆಯುತ್ತದೆ. ಪ್ರಯಾಣಕ್ಕೆ ಒಳ್ಳೇ ಗಡಿಯಾರು ಇದು ವಿದ್ಯಾರ್ಥಿಗಳಿಗೂ ಸವಯಡಚೆಲೆ ಅರಿತವರಿಗೂ ಎಷಳ ಉಪಯೋಗವುಳ್ಳದು ರಾತ್ರಿ ಕಲಸದವರಿಗೂ ಉತ್ತಮವಾದದ್ದು ಎಲಾರ್ಮು ಹಾಡೆಯುವೀಕಂಡಿರುವಾಗ ಡಯಲಿನ ಮೇಲಿರುವ ಸಣ್ಣ ಕೈಯನ್ನು ಹಿಂದ ಗಡಿಯಿಂದ ತಿರಗಿಸಿದರ ಕಾಲಕ್ಕ ಸರಿಯಾಗಿ ಎಲಾರ್ಮು ಕಾಡುತ್ತದೆ. ಮೂರು ವರ್ಷದ ಭರವಸ ಇದೆ ಕ್ರಯ ರೂ 5 ಮಾತ್ರ

22 ಕ್ಯಾರೆಟ್ಟಿನ ಚಿನ್ನದ ಹೊದಿಕೆಯು ಕೈ ಗಡಿಯಾರ

ಉತ್ತಮವಾದ ಸ್ವಿಸ್ ಸಾಮಾನುಗಳಿಂದ ಮಾಡಿದ ಹೊಸ ನಮೂನೆಯ ಗಡಿಯಾರವಿದು ಕ್ರಿಸ್ಟಲ್ ಕನ್ನಡಿಯು ಆಚೀಟಿಕ್ ಯೂ ರೋಮನ್ ಅಂಕೆಗಳುಳ್ಳದ್ದು

ಇದರ ಕೆಲಸವು ಎಂಥಾ ಪರಿಶೋಧನೆಯನ್ನು ತೃಪ್ತಿಪಡಿಸ ಪ್ಪದು ಇದು ಪಾಲಿಸ ಚಿನ್ನದಂತೆ ಕಾಣುತ್ತದೆ ನೋಟಕ್ಕೆ ಬಹು ಅಂದವಾಗಿಯೂ ಕರಾರು ಗಂಟೆ ಕೊಡುವುದಾಗಿಯೂ ಇದೆ ಐದು ವರ್ಷದ ಖಾತ್ರಿ ಕ್ರಯ ರೂ 12—8—0

18 ಕೇರಟ್ ರೋಲ್ಡ್ ಗೋಲ್ಡ್ ರಿಸ್ಟ್ ವಾಚು ರೂ 7

ಎಲಾರ್ಮು ಮತ್ತು ರಿಪೀಟರ್ ಇರುವಂಥ ಅಮೇರಿಕದ 'ಬಿಗ್ ಬೆನ್' ಗಡಿಯಾರ ರೂ 10—8—0

ಗಂಟೆ ಮತ್ತು ಅರ್ಧ ಗಂಟೆ ಹೊಡೆಯುವಂಥಾ "ಬೀವಿ" ಗಡಿಯಾರ ರೂ 7—0—0

ಮೇಲಿನ ಬೀವಿ ಗಡಿಯಾರು ಎಲಾರ್ಮು ಸಮೇತ. ರೂ 8—0—0

ಮೂರು ವರ್ಷದ ಖಾತ್ರಿ

ಜರ್ಮನ್ ಎಲಾರ್ಮ್ ಗಡಿಯಾರು ರೂ 5

ಜರ್ಮನ್ ಸೀಕ್ರೆಟ್ ಎಲಾರ್ಮ್ ಗಡಿಯಾರು ರೂ 5

ಜರ್ಮನ್ ಡಬ್ಬಲ್ ಬೆಲ್ ಎಲಾರ್ಮ್ ಟಯಮ್‌ಪೀಸು ರೂ 6—0—0

ಲೋಕಪ್ರಸಿದ್ಧವಾದ ಬಿ ಟಯಮ್ ಪೀಸ್ ರೂ. 2—8—0

ಎಮ್ಟಿನ್ ಫೌಂಟನ್‌ಪೆನ್ 14 ಕೇರಟು ರೋಲ್ಡ್ ಗೋಲ್ಡ್ ನಿಬ್ಬು ರೂ 2—8—0

Apply to—
Post Box 105

V. S. Watch Coy
MADRAS

12—11

WANTED.

A candidate with Inter qualification in science to undergo Motor Engineering training on a scholarship of Rs 30 per mensem Applicant must bind himself to serve the company for six years Pay after training, from 75 to Rs 100 per mensem Applications with testimonials should reach the undersigned before the 1st July 1925

K Kuttayya,
Managing Director.
Sri Kavery Motor Service
MERCARA

4—3

ಕರ್ಣಾಟಕ ವಿಗ್ನನಿವಾರಣ

ಜಳಿಜ್ವರ ಮಲೇರಿಯ ಜ್ವರ ಇನ್‌ಫ್ಲುಯೆಂಜಾ ಅವಿಜ್ವರ, ಮಾದಲಾದವುಗಳ ಮೇಲೆ ಅಸ್ಸಂಮವಾದ ಔಷಧವು

ಚಿಲ ಬಾಟ್ಲಿಯೊಂದಕ್ಕೆ ರು ೦—೧೪—೦
ಟಪ್ಪಾಲು ಚಾರ್ಜು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು.
೯—೨—೦

ಏಜಂಟರು ಬೇಕು ಊಡಗಿನ ಸ್ಕೂಲ್‌ಮಾಸ್ಟರುಗಳು ತಮ್ಮ ಕಿರ್ ಮೂರು ಒಸ ಔಷಧದ ವ್ಯಾಪಾರಿಗಳ ಹಸರನ್ನು ತಿಳಿಸಿದಲ್ಲಿ ಅಂದವಾದ ವ್ಲಾಟಿಂಗ್ ಪೇಪರು ಪುಕ್ಕಟೆ

12—8

ಕರ್ಣಾಟಕ ಬ್ರದರ್ಸ್
ಗಿರಗಾಂವ, ಮುಂಬಾಯಿ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಸ್ಟರಾಗಿದೆ.

	ರು
ಶೇರ್ ಬಂಡವಾಳ .	50 000
ವಸೂಲಾದ ಶೇರ್ ಮೊಬಲಗು	9050
ಒಪ್ಪೊಬಂದ ಠೇವಣಾತಿ .	78,000

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ವಾಯಿದೆ ಅದ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗ ಶೇಕಡ ನಾಲಯಾನ ರೂ 6—4—0 ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಯಾನ 5ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರಿ ಕೊ ಅಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟುಮಾಡುತ್ತಾರೆ.

ಪ್ರೆಸಿಡೆಂಟರು — ಕೊಡಂದೇರ ಕುಟ್ಟಯ್ಯನವರು, ರಾಯ್ ಬಹದ್ದೂರ್

ಟ್ರೆಜರರ್ — ಯಂ ಭುಜಂಗರಾಯರು ಬಿ.ಎ, ಬಿ.ಎಲ್

ಸೆಕ್ರೆಟರಿ

ಸಿ ಯಂ ಪೂಣಚ್ಚಯ್ಯನವರು, ಬಿ.ಎ, ಬಿ.ಎಲ್

ತಾರೀಕು 1—7—1924

ಶ್ರೀ

ಶ್ರೀ ಧನ್ವಂತರಿ.

ಕನ್ನಾಟಕಾಯುರ್ವೇದ ಪಕ್ಷಪತ್ರಿಕೆ

ಎಡಿಟರ್.— ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ

ದೇಶೀಯ ವೈದ್ಯರನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು ವ್ಯಾಧಿ ಬಂದಾಗ ತಕ್ಕಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು

ವಾರ್ಷಿಕ ಚಂದಾ ಮೂರು ರುಪಾಯಿ

ವಿಳಾಸ —

ಮೇನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್.

Printed & published by Kodanda Appayya, R B, Chairman, Board of Directors, at " Kodagu " Press, Mercara for " Kodagu Ltd

Reg. No. M. 1550.

If not delivered please return to

KODAGU' OFFICE MERCARA.

ಕೊಡಗು.

[illegible]

ಸತ್ಯೇನ ಧೂತದಯಾ ವಿದ್ಯಾ ನೀತಿ ಶ್ರಯತ್ನತಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] **ಕೊಡಗು, ಸ ೧೯೨೪ನೇ ಇಸವಿ ಜೂನ್ ತಾರೀಖು ೨೬ ನೆಯ ಶುಕ್ರವಾರ** **[ಸಂಚಿಕೆ ೪**

ಆರೋಗ್ಯ ಚಂದ್ರಿಕೆ.

ಮದ್ರಾಸ್

ಸಂಪಾದಕರು ಡಾಕ್ಟರ್ ಯು ರಾಮರಾವ್,

ಯಮ್ ಎಲ್ ಸಿ ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು ಆರೋಗ್ಯ ಚಂದ್ರಿಕೆಯನ್ನು ಶೇಖರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮುಂಬಳಗು ವರ್ಷಕ್ಕೆ 1-8-0 ಬಿಡಿ ಪತ್ರಿಕೆ 1ಕ್ಕೆ 0 2 0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ 'ಆರೋಗ್ಯ ಚಂದ್ರಿಕೆ 323,

ತಂಬುಶೆಟ್ಟಿ ಬೀದಿ, ಮದ್ರಾಸ್

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ ಕೋಟೆರ ಚಿಣ್ಣಪ್ಪನವರ ಮತ್ತು ಮೆ ಚಂಗಂಡ ಕುಟ್ಟಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ

ಏಜಂಟರುಗಳು

ವೀರಾಜಪೇಟೆ—ಬಾರಿ ಬಂಡಾರದಲ್ಲಿ ಮ ನುಂಡೇಟಿರ ಚಿರಮಣ್ಣನವರು

ಮೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ ಮೆ ಮಪಯಂಡ ದೇವಯ್ಯನವರು

ಸಾಪೋಕ್ಲು—ಮೆ ಪೊನ್ನಚಂಡ ಮುದ್ದಪ್ಪನವರು

ಗೋಣಿಕೊಪ್ಪಲು—ಮ ಒಮ್ಮಡ ಮಾದಪ್ಪನವರು, ಮತ್ತು, ಅಯಡ ಸುಬ್ಬಯ್ಯನವರು

ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಮ್ಮಯ್ಯನವರು.

ಮಡಿಕೇರಿ—ಮೆ. ಬಿ. ಮಾದಪ್ಪನವರು.

ಅಮ್ಮತ್ತಿ ಸಿದ್ದಾಪುರ—ಮೆ ಐನಂಡ ಮಾದಪ್ಪನವರು

ಅಲ್ಲದೆ ಈ ಸಮ್ಮಂಧ ಕೋಟೇರ ಚಿಣ್ಣಪ್ಪನವರು ಮತ್ತು ಚಂಗಂಡ ಕುಟ್ಟಪ್ಪನವರು, ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಚಂದಾ ಮೊಬಲಗು ಕೊಡಬೇಕಾಗಿ ಕೋರಿಕೆ.

ಕೋದಂಡ ಉತ್ತಯ್ಯ.

ಆರ್ಗನೈಜಿಂಗ್ ಡೈರೆಕ್ಟರು "ಕೊಡಗು" ಲಿಮಿಟೆಡ್

ನೋಟೀಸ್.

"ಕೊಡಗು" ಪತ್ರಿಕೆಯ ಬಾಕಿ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಶೇರುಹಣ ಸಲ್ಲಿಸಲಿಕ್ಕಿರುವವರೂ ದಯವಿಟ್ಟು ವೀರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, 15-9-24. ಮೇನೇಜರ್, ಕೊಡಗು' ಲಿಮಿಟೆಡ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಕೂಲಿಗಳ ಬ್ರಿಟಾಪು ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ನಮ ಮೂಲಕ ಟಕ್ಕ ತಯಾರಿವೆ ಬೇಕಾದವರು 'ಕೊಡಗು' ಆ... ನಿಂದ ಪಡೆಕೊಳ್ಳಬಹುದು

ಮಡಿಕೇರಿ

17 9.24 ಮೇನೇಜರ್

ನೋಟೀಸು.

ಕೊಡಗು ಜಮೀನ್ದಾರರಸಂಘದ ಲೆಕ್ಕವನ್ನು ಆಡಿಟ್ ಮಾಡಿಸಬೇಕಾಗಿರುವುದರಿಂದ ಕಳೆದ ವರ್ಷ ಮ ಬಿದ್ದಂಡ ಕಾರ್ಯಪ್ಪನವರು ಏರ್ಪಾಡುಮಾಡಿದ ನಾಡು ಕಮಿಟಿಗಳಿಗೆ ಹಣ ವಸೂಲಾತಿಗೆ ಕೊಟ್ಟಂತ ರಶೀತಿ ಬುಕ್ಕುಗಳು ಕಳೆದ ವರ್ಷದ ವಾರ್ಷಿಕ ಕಾನ್‌ಫರನ್ಸು ಕಳೆದ ಕೂಡಲೇ ಪುನಹ ಹಣ ವಸೂಲಾತಿಗೆ ಆಯಾಯ ಕಮಿಟಿಗಳಿಗೆ ಕೊಟ್ಟಿರ ಪ್ಪದರಿಂದ ಎಲ್ಲಾ ಕಮಿಟಿಯವರೂ ತಮ್ಮ ಹತ್ತಿರವಿರುವ ರಶೀತಿ ಬುಕ್ಕುಗಳನ್ನು ಮತ್ತು ಈ ವರ್ಷ ಉದಿಯಂಡ ಮೆ ಮಾಚೈಯ್ಯನವರು, ಮೆ ಪಂಗಂಡ ಕುಟ್ಟಪ್ಪನವರು' ಮೆ ಕೋಟೆರ ಚಿಣ್ಣಪ್ಪನವರು ಮತ್ತು ಇನ್ನೂ ಕೆಲವು ಏಜಂಟರು ಹಣ ವಸೂಲಾತಿಗೆ ಕೊಟ್ಟ ರಶೀತಿ ಬುಕ್ಕುಗಳನ್ನೂ ಸಹ ವಸೂಲಾದ ಹಣವಿದ್ದಪಕ್ಷ ಹಣ ಸಮೇತ ಪಡನ ಜಮೀನ್ದಾರರಸಂಘದ ಮಡಿಕೇರಿಯಲ್ಲಿರುವ ಆಫೀಸಿಗೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇನೆ

ಸಿ ಎನ್ ವೆಂಕಪ್ಪಯ್ಯ,

ಜನರಲ್ ಸೆಕ್ರಟರಿ

ನೋಟೀಸು.

ದಕ್ಷಿಣ ಕೊಡಗಿನಲ್ಲಿ ನುಮುನೆಕಾಗದ, ನೋಟೀಸು ಮತ್ತು ಬೇರೆ ಪ್ರಿಂಟಿಂಗ್ ಕೆಲಸ ಮಾಡಿಸಬೇಕೆಂದಿರುವವರು ದಯವಿಟ್ಟು ಎಲ್ಲಾ ಆರ್ಡರುಗಳನ್ನು ನಮ್ಮ ಏಜಂಟರಾದ ವೀರಾಜಪೇಟೆ ಖಾದಿಭಂಡಾರದ ಮೇನೇಜರವರಿಗೆ ಕೊಟ್ಟರೆ, ಶೀಘ್ರದಲ್ಲೇ ಸುಲಭ ಚಾರ್ಜಿಗೆ ಗಿಲಿಟು ಹಾಕಿ ಪ್ರಿಂಟುಮಾಡಿಸಿ ಕಳುಹಿಸಲಾಗುವುದು.

'ಮೇನೇಜರ್',

"ಕೊಡಗು" ಪ್ರೆಸ್, ಮಡಿಕೇರಿ.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1 ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು 2 ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು 3 ವಾರ್ತಾದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ 4. ನಮ್ಮಲ್ಲಿಗೆ ಕಳುಹಿಸುವ ವಾರ್ತೆಗಳು ಕಾಗದದ ಒಂದೇಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು 5. ಪ್ರಕಟಿಸಲಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಒಂದು ತಲಪಿರುವುದರಿಂದ 'ಲೆಟರ್ ಹೆಡ್ಸ್, 'ವಿಸಿಟಿಂಗ್ ಕಾರ್ಡ್ಸ್ ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ

ಮಡಿಕೇರಿ ಮೇನೇಜರ್,

'ಕೊಡಗು' ಲಿಮಿಟೆಡ್

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯು ಅಲ್ಪವೇಳೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರು ವಾಸಿ ಹೊಂದಿದ ನಮ್ಮ ಕಂಪನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿದೆ

ಕೃಷ್ಣ ಸಂಪೀರ್ಸ ಮತ್ತು ನಾರಾಯಣ ಸಂಪೀಸ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ

ಸಂಪೀರ್ಸ ಮತ್ತು ಕಂಪೆನಿ,

ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.

ಕಲ್ಲೂರು, ವೀರಾಜಪೇಟೆ ಮತ್ತು

52 15 **ಗೋಣಿಕೊಪ್ಪಲು.**

Health is Wealth.

WANTED all to improve health strength and vitality and thus save our nation from physical degeneracy. Send half anna stamp and get 23 specimen photographs with full particulars from

Director, Physical Culture,

P. O. BASAVANAGUDI,

Bangalore City

The Clifton Cycle complete with bell tool bag, tools and pump Rs 135.

Mamooties and Digging forks sold at reduced prices to clear stock

Spencer & Co Ltd,

MERCARA & POLLIBETTA.

35

"ಕೊಡಗು"

ಸನ್ ೧೯೨೫ನೇ ಇಸವಿ ಜೂನ್ ತಾ.
೨೬ನೇ ಶುಕ್ರವಾರ.

ದಿವಂಗತ ಚಿತ್ತರಂಜನ ದಾಸರವರು.

ಕಳೆದವಾರದಲ್ಲಿ ಯಾರ ಮರಣವು ಇಡೀ ಹಿಂದೂ ದೇಶವನ್ನು, ಸ್ನೇಹಿತರು ಶತ್ರುಗಳೆಂಬ ಭೇದವಿಲ್ಲದೆ ದುಃಖಸಾಗರದಲ್ಲಿ ಮುಳುಗಿಸಿತೋ, ಅವರೇ ಸ್ವರಾಜ್ಯ ಪಾರ್ಟಿಯ ಮುಖಂಡರಾಗಿದ್ದ ಶ್ರೀಯುತ ದೇಶಬಂಧು ಚಿತ್ತರಂಜನ ದಾಸರವರು. ಇವರು 1870ನೇ ನವಂಬರ 5ರಲ್ಲು ಕಲ್ಕತಾದಲ್ಲಿ ಜನಿಸಿದರು. ಕಲ್ಕತಾ ಹೈಕೋರ್ಟು ಎಟರ್ನಿಯಾಗಿದ್ದ ಇವರ ತಂದೆ ಬಾಬು ಭೂಬನ್ ಮೋಹನ್‌ದಾಸ್‌ರವರು ಚಿತ್ತರಂಜನರಿಗೆ ಕಲ್ಕತಾದ ಲಂಡನ್ ಮಿಶನರಿ ಕಾಲೇಜಿನಲ್ಲಿಯೂ, ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೂ ವಿದ್ಯಾಭ್ಯಾಸ ಮಾಡಿಸಿದರು. ತನ್ನ 20ನೇ ವಯಸ್ಸಿನಲ್ಲಿ ಬಿ. ಎ. ಡಿಗ್ರಿ ಪಡೆದು, ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಗೆಂದು ಇಂಗ್ಲೆಂಡಿಗೆ ಹೋದರು. ಆದರೆ ಅವರು ಬ್ಯಾರಿಸ್ಟರ್ ಎಟ್ ಲಾ ಮಾತ್ರಪಾಸಾಗಿ ಹಿಂತಿರುಗಿ ಬಂದರು. 1894ರಲ್ಲಿ ಲಾಯರು ಕೆಲಸವನ್ನು ಕೈಕೊಂಡು ಪ್ರಾರಂಭದಲ್ಲಿ ಸ್ವಲ್ಪ ಕಷ್ಟಪಡಬೇಕಾಗಿದ್ದರೂ ಕಡೆಗೆ ಬಂಗಾಳದಲ್ಲಿ ಪ್ರಖ್ಯಾತಿಗೊಂಡ ಲಾಯರಾದರು. ಇವರು ಕಾಲೇಜಿನಲ್ಲಿ ಓದುತ್ತಿರುವಾಗಲೇ ಭಾಷಣಾ ಶಕ್ತಿಯ ಕುರುಹುಗಳು ಇವರಲ್ಲಿ ಕಂಡುಬರುತ್ತಿದ್ದವು. ಇವರು ಇಂಗ್ಲೆಂಡಿನಲ್ಲಿದ್ದಾಗ ದಾದಾಭಾಯಿ ನೌರೋಜಿಯವರ ಪಾರ್ಲಿಮೆಂಟು ಮೆಂಬರುತನದ ಚುನಾವಣೆಯಲ್ಲಿ ಕೆಲವು ಭಾಷಣಗಳನ್ನು ಮಾಡಿದರು. ಶ್ರೀಯುತ ಅರವಿಂದ ಘೋಷರವರ ಮೇಲೆ ಸರ್ಕಾರದವರು ನಡಿಸಿದ ಒಳಸಂಚಿನ ಕೇಸಿನಲ್ಲಿ ಇವರು ಘೋಷರವರ ಕಡೆ ವಾದಿಸಿ ಗೆದ್ದಂದಿನಿಂದ ಇವರ ಹೆಸರು ಮುಂದಕ್ಕೆ ಬಂತು. ಅಂದಿನಿಂದ ಲಾಯರು ಕೆಲಸದಲ್ಲಿ ಕೀರ್ತಿವಂತರಾದರು.

ಇವರು ಬಂಗಾಳಿ ಸಾಹಿತ್ಯ(ಲಿಟರೇಚರ್)ದಲ್ಲಿಯೂ ಪ್ರವೀಣರಾಗಿದ್ದರು. ಇವರು 1915ರಲ್ಲಿ ಈ ಭಾಷೆಯಲ್ಲಿ ಒಂದು ಉತ್ತಮ ತರದ ಮಾಸಪತ್ರಿಕೆಯನ್ನು ಹೊರಡಿಸಿದ್ದಲ್ಲದೆ ಕೆಲವು ಕವಿತೆಗಳನ್ನೂ ಬರೆದಿರುವರು. ಇವರಿಗೆ ತನ್ನ ದೇಶದ ಮೇಲೆ ಬಹಳ ಭಕ್ತಿ ಇತ್ತು. ಆದುದರಿಂದ ಇವರು ಯೌವ್ವನದಲ್ಲಿಯೇ ರಾಜಕೀಯ ಚಳವಳಿಗಳಲ್ಲಿ ಭಾಗಿಗಳಾಗುತ್ತಿದ್ದರು. ಇವರು ಬಹು ಮುತುವರ್ಜಿಯ ಕಾಂಗ್ರೆಸ್ ಮೆಂಬರಾಗಿದ್ದರು. ತನ್ನ ಹೊಟ್ಟೆ ಪಾಡಿನ ಕೆಲಸದ ಸಮಯ ವಿನಃ ಬಾಕಿ ಎಲ್ಲಾ ಕಾಲವನ್ನು ದೇಶದ ಏಳಿಗೆಯ ಕಾರ್ಯಗಳಲ್ಲಿ ಕಳೆಯುತ್ತಿದ್ದರು. 1918ರಲ್ಲಿ ಆನಿಬೆಸೆಂಟ್‌ರವರನ್ನು ಮದ್ರಾಸು ಸರ್ಕಾರದವರು ಕೈದು ಮಾಡಿದಾಗ ಇವರು ಅದನ್ನು ಖಂಡಿಸಿ ಬಂಗಾಳದಲ್ಲಿ ಚಳವಳವನ್ನೆಬ್ಬಿಸಿದರು. ಆ ವರ್ಷದ ಕಲ್ಕತಾ ಕಾಂಗ್ರೆಸಿನಲ್ಲಿ "ಸ್ವರಾಜ್ಯ"ದ ಸಮ್ಮಂಧ ಠರಾವಿಗೆ ಒತ್ತಾಸೆಯಾಗಿ ವಿಶೇಷವಾದ ಭಾಷಣ ಮಾಡಿದರು. 1919ರಲ್ಲಿ ಪಂಜಾಬಿನಲ್ಲಿ ನಡೆದ ಕ್ರೂರಕೃತ್ಯಗಳಲ್ಲಿ ಕಷ್ಟಕ್ಕೊಳಗಾದ ಜನರ ಪಕ್ಷವನ್ನು ವಹಿಸಿದರು. ರೌಲೆಟ್ ಬಿಲ್ಲನ್ನು ಬಲವಾಗಿ ವಿರೋಧಿಸಿದರು.

ಅಮೃತಸರ ಕಾಂಗ್ರೆಸ್ಸಿನಲ್ಲಿ ಅಸಹಕಾರವನ್ನು ಕೌನ್ಸಿಲಿನೊಳಗೆ ನಡಿಸಬೇಕೆಂಬುದರ ವಿಷಯ ಇವರಿಗೂ ಮಹಾತ್ಮ ಗಾಂಧಿಯವರಿಗೂ ಭಿನ್ನಾಭಿಪ್ರಾಯಗಳು ಹುಟ್ಟಿದಲ್ಲಿ ಲೋಕಮಾನ್ಯತಿಲಕರು ಮಧ್ಯಸ್ಥಿಕೆಯ ತೀರ್ಮಾನವನ್ನು ಮಾಡಿದರು. ಆರು ತಿಂಗಳ ನಂತರ ಮಹಾತ್ಮರು ಅಸಹಕಾರ ಚಳವಳವನ್ನು ಪ್ರಾರಂಭಿಸಿದರು. ಕಲ್ಕತ್ತಾ ಕಾಂಗ್ರೆಸ್ಸಿನಲ್ಲಿ ಅಸಹಕಾರಿಗಳು ಕೌನ್ಸಿಲಿಗೆ ಹೋಗಿ ಅಲ್ಲಿ ಸರಕಾರದ ಕೆಲಸಗಳಿಗೆ ವಿರೋಧಿಸಬೇಕೆಂಬ ಇವರ ಠರಾವು ಸೋಲಿಸಲ್ಪಟ್ಟರೂ ಇವರು ಕಾಂಗ್ರೆಸ್ಸಿಗೆ ಅವಿಧೇಯರಾಗಲಿಲ್ಲ. 1921ನೇ ಜನವರಿಯಲ್ಲಿ ಸಾವಿರಗಟ್ಲೆ ಉತ್ಪತ್ತಿ ಬರುತ್ತಿದ್ದ ತನ್ನ ಲಾಯರು ವೃತ್ತಿಯನ್ನು ಬಿಟ್ಟುಬಿಟ್ಟು ಅಸಹಕಾರವನ್ನು ಬಂಗಾಳದಲ್ಲಿ ಬೋಧಿಸತೊಡಗಿದರು. ಸಾವಿರಾರು ಜನರು ಜೈಲಿಗೆ ಹೋದರು. ಆ ವರ್ಷ ಅವರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರೂ ಕಾಂಗ್ರೆಸ್ಸಿನ ಅಧಿವೇಶನಕ್ಕೆ ಕೆಲವು ದಿವಸಗಳಿಗೆ ಮುಂಚಿತವಾಗಿ ಸೆರೆಹಿಡಿಯಲ್ಪಟ್ಟ ಕಾರಣ ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ಅವರಿಗೆ ಸಾಧ್ಯವಾಗಲಿಲ್ಲ. ಒಪ್ಪಂದದ ಕರಾರುಗಳ ವಿಷಯ ಅವರು ಲಾರ್ಡ್ ರೆಡಿಂಗ್‌ರವರ ಕೂಡ ಮಾತಾಡಿದರೂ ಫಲವೇನೂ ಆಗಲಿಲ್ಲ. ನಂತರ ಪಂಡಿತ ಮಾಲವೀಯರವರೊಡನೆ ಇವರು ವೈಸರಾಯರ ಸಂಗಡ "ರೌಂಡ್ ಟೇಬಲ್ ಕಾನ್‌ಫರೆನ್ಸಿನ ವಿಷಯ ವ್ಯವಹಾರ ನಡಿಸಿದರು. ಅದೂ ಫಲಿಸಲಿಲ್ಲ. 1922ನೇ ಫೆಬ್ರವರಿಯಲ್ಲಿ ಇವರನ್ನು ವಿಚಾರಿಸಿ ಆರು ತಿಂಗಳ ಸಜೆಗೆ ಗುರಿ ಮಾಡಿದರು. ಅದೇ ವರ್ಷ ಡಿಸೆಂಬರಿನಲ್ಲಿ ಗಯಾ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಬ್ರಿಟಿಷ್ ಆಡಳಿತೆಯ ಅನ್ಯಾಯವನ್ನು ಕುರಿತು ಮಾಡಿದ ಭಾಷಣವು ಮರೆಯತಕ್ಕದ್ದಲ್ಲ. ತದನಂತರ ಇವರು ಬಂಗಾಳದಲ್ಲಿ ಸ್ವರಾಜ್ಯ ಪಾರ್ಟಿಯನ್ನು ಏರ್ಪಡಿಸಿ ಅಲ್ಲಿಯ ಕೌನ್ಸಿಲಿಗೆ ಮೆಂಬರಾಗಿ ಚುನಾಯಿಸಲ್ಪಟ್ಟು ಅಲ್ಲಿ ಮುಂದಾಳಾಗಿ ನಿಂತು ದ್ವಿಮುಖ ಸರಕಾರವನ್ನು ಮುರಿದರು.

ಕಳೆದ ಡಿಸೆಂಬರಿನಲ್ಲಿ ಇವರು ಬೆಳಗಾಂ ಕಾಂಗ್ರೆಸಿನಲ್ಲಿ ಪೂರ್ಣಅಸಹಕಾರಿಗಳನ್ನೂ ಸ್ವರಾಜ್ಯ ಪಕ್ಷದರನ್ನೂ ಒಟ್ಟುಗೂಡಿಸಲು ಬಹು ಶ್ರಮತೆಗೆದುಕೊಂಡರು. ಅಲ್ಲಿಂದ ವಾಪಸು ಹೋದವರಿಗೆ ಕಾಯಿಲೆಯು ಶುರುವಾಗಿ ಪಾಟ್ನಾದಲ್ಲಿ ಕೆಲವು ದಿವಸ ಇದ್ದರು. ಮಾರ್ಚಿ ತಿಂಗಳಲ್ಲಿ ಕಾಯಿಲಸ್ಥರಾಗಿದ್ದರೂ ಕೂಡ ಬಂಗಾಳ ಕೌನ್ಸಿಲಿಗೆ ಹೊರಿಸಲ್ಪಟ್ಟು ಮಂತ್ರಿಗಳಿಗೆ ಸಂಬಳವನ್ನು ಕೊಡದಂತೆ ಠರಾವನ್ನು ಪಾಸುಮಾಡಿಸಿದರು. ಎಪ್ರಿಲಿನಲ್ಲಿ ಪುನಃ ಕಲ್ಕತಾ ಮುನ್ಸಿಪಾಲಿಟಿಯ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಕಾಯಿಲದ ದೆಸೆಯಿಂದ ಪುನಃ ಪಾಟ್ನಾಕ್ಕೆ ಹೋದರು. ವಿಶ್ರಾಂತಿಗಾಗಿ ಇವರು ಪರದೇಶಕ್ಕೋಗುವುದು ಉತ್ತಮವೆಂದು ಇವರ ಡಾಕ್ಟರುಗಳು ಅಭಿಪ್ರಾಯ ಪಟ್ಟರು. ಆದರೆ ಕೂಡಲೆ ಫರೀದ್‌ಪುರದಲ್ಲಿ ನಡೆದ ಬಂಗಾಳ ಪ್ರಾಂತಿಕ ಕಾನ್‌ಫರೆನ್ಸಿನ ಅಧ್ಯಕ್ಷ ಸ್ಥಾನವನ್ನು ವಹಿಸಬೇಕಾಗಿಬಂತು. ಅಲ್ಲಿ ಮಾಡಿದ ಪ್ರಖ್ಯಾತಿಗೊಂಡಿರುವ ಭಾಷಣದಲ್ಲಿ ಸರ್ಕಾರದವರಿಗೆ ದೇಶದ ರಾಜಕೀಯ ಮುಂದಾಳುಗಳೊಂದಿಗೆ ಒಪ್ಪಂದಕ್ಕೆ ಬರಲು ಎಡೆಕೊಟ್ಟರು. ಆದರ ಮೇಲೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೂ ದಾಸ್‌ರವರಿಗೂ ಪತ್ರಗಳೂ ನಡೆದರೂ ಸರ್ಕಾರದವರು ಆ ಸಂಧರ್ಭವನ್ನು ಕಳೆದುಕೊಂಡರು.

ಫರೀದ್ ಪುರದಲ್ಲಿ ಪುನಃ ಅಸ್ವಸ್ಥರಾಗಿ ಪತ್ನಿಸಮೇತ ಡಾರ್ಜಿಲಿಂಗಿಗೆ ಹೋದರು. ಅಲ್ಲಿ ಮಹಾತ್ಮ ಗಾಂಧಿಯವರಿಗೂ ಇವರಿಗೂ ಸಂಭಾಷಣೆ ನಡೆದು ಸರ್ಕಾರವನ್ನು ಮುರಿಯಲು ಕೌನ್ಸಿಲಿಗೆ ಹೋಗುವದು ಅಗತ್ಯವಾದರೂ, ಕೌನ್ಸಿಲಿನಲ್ಲಿ ನಡಿಸುವ ವಿರೋಧ ಕೆಲಸವು ಜಯವಾಗಬೇಕಾದರೆ ಚರ್ಖಾದಿಂದ ನೂಲುಮಾಡುವುದು ಅವಶ್ಯವೆಂದು ಒಪ್ಪಿಕೊಂಡು ಸ್ವತಃ ನೂಲುಮಾಡಲು ಕಲಿತರು. ಅವರ ಪತ್ನಿಯವರೂ ಮಕ್ಕಳೂ ಚರ್ಖಾ ಸುತ್ತಲು ಅಭ್ಯಾಸಿಸಿದರು. ಅವರ ಮನೆಯೇ ಚರ್ಖಾದ ಒಂದು ಕ್ಲಬ್ಬಾಯಿತಂತೆ!

ದೈವವಿಲಾಸವನ್ನು ಯಾರಿಂದ ತಾನೇ ತಡೆಯಲು ಸಾಧ್ಯ. ಯಮನ ಪಾಶವು ದೇಶಬಂಧುದಾಸರನ್ನೂ ಬಿಡಲಿಲ್ಲ. ಜೂನ್ ತಾರೀಕು 16ರಲ್ಲು ಡಾರ್ಜಿಲಿಂಗಿನಲ್ಲಿ ದೈವಾಧೀನರಾದರು. ಹಿಂದೂದೇಶದಲ್ಲೆಲ್ಲಾ ಮೋಡಕವಿದಂತಾಯಿತು. ಅವರು ಎಡಬಿಡದೆ ಪ್ರಯತ್ನಿಸಿದ ಉದ್ದೇಶಗಳಲ್ಲಿ ಒಂದು ಅವರ ಮರಣಕ್ಕೆ ಮೂರು ದಿವಸಗಳಿಗೆ ಮುಂಚೆ ಕೈಗೂಡಿತ್ತು. ಅಂದರೆ ಬಂಗಾಳದಲ್ಲಿ ಟ್ರಾನ್ಸ್‌ಫರ್ಡ್ ಇಲಾಖೆಗಳನ್ನು ರದ್ದುಮಾಡಿ ದ್ವಿಮುಖಸರಕಾರವನ್ನು ಅಂತ್ಯಗೊಳಿಸಿದರು. ದ್ವಿಮುಖ ಸರಕಾರದಿಂದ ಜನರ ಪ್ರತಿನಿಧಿಗಳಿಗೆ ಕೆಲವು ಇಲಾಖೆಗಳ ಮೇಲೆ ಹೆಸರಿಗೆ ಮಾತ್ರ ಜವಾಬ್ದಾರಿ ದೊರೆಯಿತೇ ಹೊರತು ನಿಜವಾದ ಅಧಿಕಾರ ದೊರೆಯಲಿಲ್ಲವೆಂದೂ, ಟ್ರಾನ್ಸ್‌ಫರ್ಡ್ ಇಲಾಖೆಗಳ ಅಧಿಕಾರಿಗಳಿಗೆ ಬೇಕಾಗಿ ಸಾಕಷ್ಟು ಹಣಕೊಡದೆ ಇರುವದರಿಂದಲೂ, ಅವರು ನಡಿಸಬೇಕಾದ ಕೆಲಸಗಳಿಗೆಲ್ಲಾ ಗವರ್ನರವರ ಅನುಮತಿ ಬೇಕಾಗಿರುವುದರಿಂದಲೂ ಮಂತ್ರಿಗಳಿಗೆ ಜನರ ಅಭಿಪ್ರಾಯದಂತೆ ಆಡಳಿತ ನಡಸಲು ಸಾಧ್ಯವಿಲ್ಲವೆಂದೂ ಅಂಥಾ ನಿಸ್ಸತ್ವದ ಜವಾಬ್ದಾರಿಗಿಂತ ಜವಾಬ್ದಾರಿಯೇ ಇಲ್ಲದ ಹೊಸ ಮಾರ್ಪಾಡುಗಿಂತ ಮೊದಲಿದ್ದ ಸರಕಾರವು ಇದ್ದರೂ ಇರಲಿ ಎಂದೇ ದ್ವಿಮುಖ ಸರಕಾರವನ್ನು ದಾಸರವರು ಮುರಿದದ್ದಾಗಿದೆ. ಇಂಥಾ ಸರಕಾರವು ಮುರಿಯಲ್ಪಟ್ಟು ಇನ್ನು ಮುಂದಕ್ಕೆ ಬಂಗಾಳದ ರಾಜಕೀಯ ಚಳವಳವು ಯಾವದಾರಿಯಲ್ಲಿ ತಿರುಗುವುದೋ ಎಂಬ ಈ ಬಿಕ್ಕಟ್ಟಿನ ಸಮಯದಲ್ಲಿ ಸರಕಾರವನ್ನು ಮುರಿದ ಮುಂದಾಳೇ ಇಹವನ್ನು ಬಿಟ್ಟದ್ದು ಬಹಳ ದುಃಖಕರವಾಗಿದೆ. ಇದರಿಂದ ಬಂಗಾಳಕ್ಕೆ ಎಷ್ಟು ದೊಡ್ಡ ನಷ್ಟ ಉಂಟಾಗಿದೆಯೆಂದು ಹೇಳಲು ಸಾಧ್ಯವಿಲ್ಲ. ಬಂಗಾಳದಲ್ಲಿ ಅವರ ಮುಂದಾಳುತನವನ್ನು ಬೇಗನೆ ಕೈಕೊಳ್ಳುವವರು ದೊರೆಯುವುದು ಕಷ್ಟವೆಂದೇ ಹೇಳಬೇಕು.

ದೇಶಬಂಧುದಾಸರು ಬಹಳ ಮಾನಿಷ್ಟರಾಗಿದ್ದರು. ತನ್ನ ತಂದೆಯವರು ಸಾಲ ತೀರಿಸಲಾಗದೆ ದಿವಾಳಿ ಸರ್ಟಿಫಿಕೇಟನ್ನು ಪಡೆದಿದ್ದಾಗ್ಯೂ, ತಾನು ಲಾಯರಾಗಿ ಬಂದ ಮೇಲೆ ತಂದೆಯ ದೊಡ್ಡ ಸಾಲಗಳನ್ನೆಲ್ಲಾ ತೀರಿಸಿ ಅವಮಾನವನ್ನು ಹೋಗಲಾಡಿಸಿದರು. ಉದಾರ ಗುಣವು ಇವರಲ್ಲಿ ತುಂಬಿ ತುಳುಕುತ್ತಿದ್ದಿತು. ಯೌವ್ವನದಿಂದಲೇ ಅಂದರೆ ಇವರು ಸಂಪಾದಿಸಲು ಪ್ರಾರಂಭಿಸಿದಂದಿನಿಂದಲೇ ಬಡ ವಿದ್ಯಾರ್ಥಿಗಳಿಗೂ ತನ್ನ ಸಂಗಾತಿಗಳಾದ ಹೊಸ ಲಾಯರುಗಳಿಗೂ ಬಹಳ ದ್ರವ್ಯಸಹಾಯ ಮಾಡಿದರು. ರಾಜಕೀಯ ಕೈದಿಗಳ ಪರವಾಗಿ ಫೀಜು ತೆಗೆದುಕೊಳ್ಳದೇನೇ ವಾದ ಮಾಡುತ್ತಿದ್ದರು. ಅರವಿಂದ ಘೋಷರವರ ಕೇಸಿನಲ್ಲೂ, ಪಂಜಾಬು ಕ್ರೂರಕೃತ್ಯಗಳ ಕೇಸಿನಲ್ಲೂ ಇವರು ತನ್ನ ಕೈಯಿಂದ ಸಾವಿರಗಟ್ಲೆ ರೂಪಾಯಿ ವೆಚ್ಚಮಾಡಿಕೊಂಡು ವಾದ ಮಾಡಿದರು. ಇವರ ಸ್ವಾರ್ಥತ್ಯಾಗವನ್ನು ವಿವರಿಸಲಸದಳವಾಗಿದೆ. ಈ ವಿಷಯದಲ್ಲಿ ಇವರು ಹುಚ್ಚರೆಂದೇ ಅನೇಕರಿಗೆ ತೋರುತ್ತಿತ್ತು. ದೇಶೋದ್ಧಾರದ ಕೆಲಸವನ್ನು ಕೈಕೊಳ್ಳಲಿಕ್ಕಾಗಿ 1921ರಲ್ಲು ಇವರು ತಿಂಗಳಿಗೆ ಸಾವಿರಗಟ್ಲೆ ಉತ್ಪತ್ತಿ ಇದ್ದ ತನ್ನ ಲಾಯರು ವೃತ್ತಿಯನ್ನು ಬಿಟ್ಟುಬಿಟ್ಟರು. ಅಂದಿನಿಂದೀಚೆಗೆ ತನ್ನ ತನುಮನವನ್ನು ದೇಶಕ್ಕೆ ಸ್ವಾತಂತ್ರ್ಯ ಪಡೆಯುವ ಕೆಲಸಕ್ಕಾಗಿ ಅರ್ಪಿಸಿದಲ್ಲದೆ ಎಂಟು ಲಕ್ಷ ಬೆಲೆಯ ತನ್ನ ಆಸ್ತಿಯನ್ನೂ, ನೋಡಿ ಮಹಾತ್ಮ ಗಾಂಧಿಯವರಿಗೂ ಕೂಡ ಕಣ್ಣೀರು ಬಿದ್ದಂಥ ಅರಮನೆಯಂಥ ತನ್ನ ಬಂಗ್ಲೆಯನ್ನೂ ದೇಶದ ಕೆಲಸಕ್ಕೆ ಧಾರೆ ಎರೆದರು. ಇವರಂಥಾ ತ್ಯಾಗಿಯು ಬಹು ಅಪರೂಪವೆಂದೇ ಹೇಳಬೇಕಾಗಿದೆ. ಈ ದೇಶದಲ್ಲಿ ಇವರ ರಾಜಕೀಯ ತತ್ವಗಳನ್ನು ಕೈಕೊಳ್ಳಲು ಧೈರ್ಯವಿಲ್ಲದ ಮಹನೀಯರು ಇವರ ತ್ಯಾಗ ಗುಣವನ್ನಾದರೂ ಹಿಂಬಾಲಿಸಿದರೆ ಚಿತ್ತರಂಜನರವರು ಹಿಂದೂದೇಶಕ್ಕೆ ಮಾಡಿದ ಅಮೋಘವಾದ ಕೆಲಸವನ್ನು ಸ್ಮರಿಸಿದಂತಾಗುವದು.

ಇವರ ಅಸಾಧಾರಣವಾದ ಬುದ್ಧಿಚಾತುರ್ಯವೂ ಮಿದುಳು ಶಕ್ತಿಯೂ ಮತ್ತು ಅಪರಿಮಿತವಾದ ದೇಶಭಕ್ತಿಯೂ ಇವರ ಶತ್ರುಗಳೂ ಕೂಡ ಇವರನ್ನು ಮೆಚ್ಚುವಂತೆ ಮಾಡಿವೆ. ಇವರಕಾಲದಲ್ಲಿ ಬಂಗಾಳದಲ್ಲಿ ಇವರಿಗೆ ಸರಿಯಾದ ಲಾಯರೇ ಇರಲಿಲ್ಲ. ಇವರ ಈ ಉತ್ತಮ ಗುಣಗಳಿಗಾಗಿಯೇ ಇಂಡಿಯಾಸ್ಟೇಟ್ ಸೆಕ್ರೆಟರಿ ಲಾರ್ಡ ಬರ್ಕನ್‌ಹೆಡ್ಡರವರೂ, ವೈಸರಾಯಿಗಳಾದ ರೀಡಿಂಗ್ ಮತ್ತು ಲಿಟ್ಟನ್ ಪ್ರಭುಗಳೂ, ಇಂಗ್ಲೆಂಡಿನ ಲೇಬರ್‌ಪಾರ್ಟಿಯವರೂ ಹೈಕೋರ್ಟು ಜಡ್ಜಿಗಳೂ, ಅನೇಕ ಯೂರೋಪಿಯನರೂ, ಇಂಗ್ಲೆಂಡ್, ಫ್ರಾನ್ಸ್ ಮತ್ತು ದಕ್ಷಿಣ ಆಫ್ರಿಕದಿಂದಲೂ ಇವರ ಮರಣಕ್ಕೆ ವ್ಯಸನವನ್ನು ಸೂಚಿಸಿರುವರು. ಮಹಾತ್ಮ ಗಾಂಧಿಯವರನ್ನು ಬಿಟ್ಟು ಇವರಿಗೆ ಸರಿಯಾದ ಮುಂದಾಳು ಇಂಡಿಯಾದಲ್ಲಿಲ್ಲ. ಇವರ ಮೇಲೆ ಜನರಿಗಿದ್ದ ಪ್ರೀತಿಗೆ ಮಿತಿ ಇರಲಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಕಲ್ಕತ್ತಾದಲ್ಲಿ ಇವರ ಶವದ ಮೆರವಣಿಗೆಗೆ ಖಾದಿಬಟ್ಟೆಯನ್ನು ಧರಿಸಿ ಬರಿಗಾಲಿನಲ್ಲಿ ನಡೆದಿದ್ದ ಸುಮಾರು ನಾಲ್ಕು ಲಕ್ಷ ಜನರು ಮಹಾತ್ಮರ ಸಮೇತ ಕಣ್ಣೀರು ಸುರಿಸಿದ್ದು ಇವರು ಎಷ್ಟರ ಮಟ್ಟಿಗೆ ಜನಪ್ರಿಯರಾಗಿದ್ದರೆಂಬುದನ್ನು ಸೂಚಿಸುತ್ತದೆ. ಹಿಂದೂ ಮುಸ್ಲಿಮರನ್ನು ಒಗ್ಗಟ್ಟಿನಲ್ಲಿಡಲು ಬಂಗಾಳದಲ್ಲಿ ಇವರಷ್ಟು ಶಕ್ತಿವಂತರು ಯಾರೂ ಇರಲಿಲ್ಲ. ಈ ಎರಡು ಪಂಗಡಗಳನ್ನು ಒಗ್ಗಟ್ಟಿನಲ್ಲಿ ನಡಿಸಲು ಇವರಿಗಿದ್ದ ಮಹತ್ವದಿಂದಲೇ ಬಂಗಾಳದ ಕೌನ್ಸಿಲಿನಲ್ಲಿ ಸ್ವರಾಜ್ಯಪಾರ್ಟಿಯವರಿಗೆ ಜಯವಾದದ್ದು. ಬಂಗಾಳದಲ್ಲಿ ಹೆಸರಿಗೆ ಮಾತ್ರ ಲಿಟ್ಟನ್ ಪ್ರಭುಗಳು ಗವರ್ನರಾಗಿದ್ದರಲ್ಲದೆ ನಿಜವಾಗಿಯೂ ದೇಶಬಂಧುದಾಸರು ಆ ಪ್ರಾಂತ್ಯವನ್ನು ಆಳುತ್ತಿದ್ದರೆಂದು ಅನೇಕ ಮುಂದಾಳುಗಳು ಸೂಚಿಸಿರುವರು.

ಇವರ ಉಜ್ವಲವಾದ ದೇಶಭಕ್ತಿಯಿಂದಲೇ ಇವರಿಗೆ "ದೇಶಬಂಧು"ವೆಂಬ ಬಿರುದು ಸಂದದಾಗಿದೆ. ಇವರ ಮರಣದ ಸುದ್ದಿಯು ಹಿಂದೂದೇಶದಲ್ಲಿ ಹರಡಿದೊಡನೆಯೇ ಎಲ್ಲಾ ಕಡೆಗಳಲ್ಲೂ ಜನರು ಸಂಗಡ ಭೇದಗಳಿಲ್ಲದ ಪಬ್ಲಿಕ್ ಮೀಟಿಂಗುಗಳನ್ನು ನಡಿಸಿ ಪರಿತಾಪವನ್ನು ಸೂಚಿಸಿರುವರು. ಇನ್ನೂ ಸೂಚಿಸುತ್ತಲೂ ಇದ್ದಾರೆ. ನಮ್ಮ ದೇಶದವರೂ ತಮ್ಮ ಕರ್ತವ್ಯವನ್ನು ಮರೆಯಲಿಲ್ಲ. ಮಡಿಕೇರಿಯಲ್ಲಿ ಒಂದು ಮೀಟಿಂಗು ನಡಿಸಿ ಹಿಂದೂದೇಶಕ್ಕೆ ಉಂಟಾಗಿರುವ ದೊಡ್ಡ ನಷ್ಟಕ್ಕೆ ವ್ಯಸನವನ್ನು ತೋರಿಸಿದರು. ಹಿಂದೂದೇಶದ ಎಲ್ಲಾ ಪಟ್ಟಣಗಳಲ್ಲಿಯೂ, ಗ್ರಾಮಗಳಲ್ಲಿಯೂ ಚಿತ್ತರಂಜನರವರ ಶ್ರಾದ್ಧದ ದಿನವಾದ ಜುಲೈ ಒಂದರಲ್ಲಿ ಸಾಯಂಕಾಲ 5½ ಗಂಟೆಗೆ ಜ್ಞಾಪಕಾರ್ಥ ಮೀಟಿಂಗುಗಳನ್ನು ನಡಿಸಿ ಆ ಮಹಾ ಪುರುಷರನ್ನು ಬಹುಮಾನಿಸಬೇಕೆಂದು ಮಹಾತ್ಮ ಗಾಂಧಿಯವರು ಕೋರಿರುವರು. ಈ ಕೋರಿಕೆಯನ್ನು ನಮ್ಮ ದೇಶೀಯರೂ ನೆರವೇರಿಸುವರಾಗಿ ನಂಬುತ್ತೇವೆ.

ದೇಶಬಂಧು ದಾಸರಂಥ ಮುಂದಾಳು ದೇಶದ ರಾಜಕೀಯ ಪರಿಸ್ಥಿತಿಯ ಇಂಥಾ ಬಿಕ್ಕಟ್ಟಿನ ಸಮಯದಲ್ಲಿ ದೈವಾಧೀನರಾದದ್ದು ಹಿಂದೂದೇಶದ ದುರಾದೃಷ್ಟವೆಂತಲೂ, ಇದರಿಂದ ಸ್ವರಾಜ್ಯವು ದೂರವಾಗುತ್ತಿದೆಯೆಂತಲೂ ಅನೇಕರಿಗೆ ತೋರಬಹುದು. ಆದರೆ ದೇವರು ಮಾಡುವುದೆಲ್ಲಾ ಒಳ್ಳೇದಕ್ಕೆಂದು ನಂಬಿ ಧೈರ್ಯಗುಂದದೆ ಚಿತ್ತರಂಜನರು ತಮ್ಮ ಜೀವವನ್ನೇ ಅರ್ಪಿಸಿದ ದೇಶಸೇವೆಗೆ ಪ್ರತಿಯೊಬ್ಬನೂ ತನ್ನ ಕೈಲಾದಷ್ಟು ಮಟ್ಟಿಗೆ ಸಹಾಯ ಮಾಡುತ್ತಾ ಬಂದರೆ ಖಂಡಿತವಾಗಿಯೂ ಸ್ವರಾಜ್ಯವು ದೂರವಾಗುವುದರ ಬದಲು ಸಮೀಪಿಸುವದೆಂಬುದರಲ್ಲಿ ಸಂಶಯವಿಲ್ಲ.

ಚಿತ್ತರಂಜನ ದಾಸ್‌ರವರ ಆತ್ಮಕ್ಕೆ ಶಾಂತಿಯಾಗಲೆಂದೂ ಅವರ ಸಂಸಾರಕ್ಕೆ ಶೋಕವನ್ನು ತಾಳುವಷ್ಟು ಶಕ್ತಿ ಕೊಡಲೆಂದೂ ಭಗವಂತನನ್ನು ಪ್ರಾರ್ಥಿಸುವೆ.

ಕಿತ್ತಳೆ ಮತ್ತು ಕಾಫಿ ಬೋರರ್ ಹುಳಗಳು.

ಮೈಸೂರು ಸರಕಾರದ 'ಎಂಟೊಮೋಲೊಜಿಸ್ಟರಾದ (ಹುಳುಗಳನ್ನು ಕುರಿತ ವಿದ್ಯಾಪಾರಂಗತರು) ಡಾಕ್ಟರ್ ಕುಂಞಿಕಣ್ಣನ್ ಯಂ. ಎ., ಪಿಹೆಚ್. ಡಿ. ಯವರು ನಮ್ಮ ಸರ್ಕಾರದ ಕೋರಿಕೆ ಮೇರೆ ಹತ್ತುದಿವಸಗಳವರೆಗೆ ನಮ್ಮ ದೇಶಕ್ಕೆ ಬಂದು ಇಲ್ಲಿಯ ಕಿತ್ತಳೆಗಿಡಗಳನ್ನು ನಾಶಪಡಿಸುವ ಬೋರರ್ ಹುಳವನ್ನು ಅಜಮಾಯಿಸಿ ಹೋದರು. ಇವರು ವಾಪಸು ಹೋಗುವ ಒಂದು ದಿನಕ್ಕೆ ಮುಂಚೆ, ತಾ 20ರಲ್ಲು ಮಡಿಕೇರಿಯಲ್ಲಿ ಈ ಹುಳಗಳ ವಿಷಯ ಒಂದು ಭಾಷಣಮಾಡಿದರು.

ಕಿತ್ತಳೆಗಿಡಗಳಿಗೆ ಬಾಧಿಸುವ ಹುಳದ ದೇಹವರ್ಣನೆಯನ್ನೂ ಜೀವಚರಿತ್ರೆಯನ್ನೂ ವಿವರಿಸಿ ಹೇಳಿ, ಈ ಹುಳವು ಮರದ ತುದಿಯ ಕೊಂಬೆಗಳ ಕವಲಿನ ಮಧ್ಯದಲ್ಲಿ ನೂರಾರು ಮೊಟ್ಟೆಗಳನ್ನಿಟ್ಟು ಆ ಮೊಟ್ಟೆಗಳು ಒಡೆದು ಮರಿಗಳಾಗಿ, ಅವುಗಳು ಎಳೆದಾದ ಕೊಂಬೆಗಳ ಸುತ್ತಲೂ ಮೇಲಿನಮರವನ್ನು ತಿಂದು ತ

ಹುಳಿಗೆ ನುಗ್ಗಿ ಮೇಲಿಕ್ಕೇರುತ್ತವೆಂದೂ, ಅಷ್ಟರಲ್ಲಿ ಸ್ವಲ್ಪ ಹುಟ್ಟಿಗೆ ಬೆಳೆದು ಬಂದ ಮೇಲೆ ಮರದ ತಿರುಳನ್ನು ಕೊರೆಯುತ್ತಾ ಬುಡಕ್ಕೆ ಇಳಿಯುತ್ತವೆಂದೂ, ಉಸಿರಾಡಲಿಕ್ಕೆ ಅಲ್ಲಲ್ಲಿ ಕಿಟಿಕಿಗಳನ್ನು ಮಾಡಿಕೊಳ್ಳುತ್ತವೆಂದೂ, ಆ ರಂಧ್ರಗಳ ಮೂಲಕ ಅವು ಕೊರೆದ ಮರದ ಹುಡಿಯ ಪುಡಿಯು ನೆಲಕ್ಕೆ ಬೀಳುವದು ಕಂಡುಬರುವುದೆಂದೂ, ಹೀಗೆ ಒಂದು ಸತ್ತು ಹುಳಗಳು ಮರವನ್ನು ಕೊರೆಯುವುದರಿಂದ ಮರವು ಸಾಯುತ್ತದೆಂದೂ ಹೇಳಿದರು. ಈ ಹುಳಗಳ ಕಾಟವನ್ನು ನಿವಾರಿಸಲು ಸುಲಭವಾದ ದಾರಿಯೊಂದನ್ನು ಸೂಚಿಸಿದರು. ಹುಳಗಳು ಮರದ ತುದಿಯ ಕೊಂಬೆಗಳ ಒಳಕ್ಕೆ ನುಗ್ಗುವ ಸಮಯವನ್ನು ಕಂಡುಹಿಡಿದು (ಜುಲೈ ತಿಂಗಳು) ಆ ಕಾಲದಲ್ಲಿ ಅಂಥಾ ಕೊಂಬೆಗಳು ಬಾಡುತ್ತಾ ಬರುವದನ್ನು ನೋಡಿ ಅವುಗಳನ್ನು ಒಂದು ಕವಡೆಯ ಅಥವಾ ಕೊಕ್ಕೆಯ ಸಹಾಯದಿಂದ ಸುಲಭವಾಗಿ ಮುರಿದು ಬಿಸಾಡಿದರೆ ಅದರೊಳಗಿರುವ ಎಳೇ ಹುಳಗಳು ಬೆಳೆಯಲಿಕ್ಕೆ ತಕ್ಕಷ್ಟು ಆಹಾರವಿಲ್ಲದೆ ಸಾಯುವವೆಂದು ಹೇಳಿದರು. ಈ ಕೆಲಸವು ಸುಲಭ ಚಾರ್ಜಿನಿಂದ ಆಗುವದೆಂದೂ, ಮರಕ್ಕೆ ಏರಿದನಂತರ ಹೆಚ್ಚು ಬೇಕಾಗಲಿಕ್ಕಿಲ್ಲವೆಂದೂ ಹೇಳಿದರು. ಈ ಸಮಯವನ್ನು ಪರಿಶೋಧಿಸಲಿಕ್ಕಾಗಿ ಜುಲೈ ತಿಂಗಳಲ್ಲಿ ಅವರು ಪುನಃ ಕೊಡಗಿಗೆ ಬರುವರಂತೆ.

ಕಾಫಿಯ ಮೇಲಿನ ರೋಗದ ವಿಷಯವಾಗಿಯೂ ವಿವರಿಸಿ ಹೇಳಿದರು. ಇದನ್ನು ಕುರಿತು ಅವರು ಮೈಸೂರಲ್ಲಿ ಪರಿಶೋಧನೆಗಳನ್ನು ನಡೆಸುತ್ತಿರುವರು. ಅವರ ಅನುಭವಕ್ಕೆ ಬಂದವ ಪಲ್ಲಿ ಬೋರ್ಡೋ ತೆಗೆ ಬಾಡ ತಪ್ಪಿ ಬರುವ ಸುಳಿಯನ್ನು ಕತ್ತರಿಸುವುದರಿಂದ ಮುಂಗಾರು ಮಳೆ ದಾಂತಿ ಮಾತ್ರವೂ ಹಬ್ಬುವಲ್ಲದ ಅವುಗಳನ್ನು ಸಾಧಿಸಲು ಸಾಧ್ಯವಿಲ್ಲವೆಂತ ಬಂದಸು. ಯಾಕಂದರೆ ಬೋರ್ಡೋ ತಗಲಿದರೂ ಬಂದವು ಇರುವ ಮರಗಳನ್ನು ಕತ್ತರಿಸದೆ ಬಿಡುವುದರಿಂದ ಅವುಗಳಲ್ಲಿನ ಹುಳಗಳು ಮರಿಮಾಡಿ ತೋಟದಲ್ಲಿ ಹರಡುತ್ತವೆ. ಈ ಹುಳವು ಕಾಫಿಗಿಡದ ಕೊಂಬೆಗಳ ಮೇಲಿರುವ ಸಣ್ಣ ಸಸಿಗಳ ಸಂದಿಯಲ್ಲಿ ಮೊಟ್ಟೆಗಳನ್ನಿಡುವದರಿಂದ ಗಿಡದ ಕೊಂಬೆಗಳನ್ನು ಕಡಿದು ಸುಡುವದರಿಂದಲೂ ಸ್ವಲ್ಪ ಮಟ್ಟಿಗೆ ಗಿಡವನ್ನು ಕಾಪಾಡಬಹುದು. ಆದರೆ ಇದೂ ಸಂಪೂರ್ಣ ನಿವಾರಣೆಯಲ್ಲ. ಆಕ್ಟೋಬರ ತಿಂಗಳಲ್ಲಿ (ಮೈಸೂರಲ್ಲಿ) ಈ ಹುಳಗಳು ಬೆಳೆದ ಹುಳ [illegible] ಸ್ಥಿತಿಯಲ್ಲಿ ಗಿಡಗಳ [illegible] ಬರುವದನ್ನು [illegible] ಮಂದಬುದ್ಧಿಯುಳ್ಳ [illegible] ಅವುಗಳನ್ನು ಕೈ[illegible]ಂದ ಹಿಡಿದು ಕೊಲ್ಲಬಹುದು [illegible] ನಾಶಕ್ಕೆ ಕೆಲಸವು ಹೆಚ್ಚಾಗುವುದು [illegible] ಮತ್ತು ಕೂಲಿ [illegible] ಹೆಚ್ಚು ಬೀಳುವುದು [illegible] ನಾಲ್ಕು ವರ್ಷಗಳವರೆಗೆ ಹೀಗೆ ಮಾಡುತ್ತಾ ಬಂದರೆ ಈ ರೋಗವನ್ನು ಸಂಪೂರ್ಣ ಹೋಗಲಾಡಿಸಬಹುದೆಂದು ಹೇಳಿದರು.

ಇವೆರಡು ಹುಳಗಳ ನಾಶದ ಉಪಾಯಗಳನ್ನು ಈ ದೇಶಕ್ಕೆ ತಕ್ಕಂತೆ ಕಂಡುಹಿಡಿದು ಅವುಗಳನ್ನು ಜನರ ತಿಳುವಳಿಕೆಗೆ ಪ್ರಕಟಿಸಲಾಗುವದೆಂದೂ ಹೇಳಿದರು. ಕಿತ್ತಳೆ ಹಣ್ಣಿನ [illegible] ಸಸ್ಯಯವಾ [illegible] ಕಿತ್ತಳೆ [illegible] ಕಂಡುಬಂದ [illegible] ದೆ ಇರುವ ಕೆಲವು ತೋಟ [illegible] ಬೋರ್ಡೋ [illegible] ಮಿಶ್ರಣದಿಂದ ನಾಶಪಡಿಸಬಹುದೆಂದೂ [illegible] ಇದರ ನಿವಾರಣೆಯ ಬಗ್ಗೆ ಉಪಾಯ [illegible] ಹೆಚ್ಚು [illegible] ಇನ್ನೂ [illegible] ತೋಟ [illegible] ಪರಿಹಾರದ ಬಗ್ಗೆ ಕೆಲಸ [illegible] ಆ ರೋಗಗಳೂ ಕಡಿಮೆಯಾಗಿರುವುದಿಲ್ಲ [illegible] ತಿಯು [illegible] ಕಾಣುತ್ತದೆ.

ಈ ವಿಷಯಗಳಿಗೆ ಈಗಲಾದರೂ ನಮ್ಮ ಸರಕಾರದವರು ಗಮನಕೊಡಲು ಪ್ರಾರಂಭಿಸಿರುವುದು ಸಂತೋಷಕರವೆ. [illegible]ವರು ಇದನ್ನು ಇಲ್ಲಿಯೇ ನಿಲ್ಲಿಸದೆ ಕೊನೆಯವರೆಗೂ ಸಾಧಿಸುವರಾಗಿ ಅಪೇಕ್ಷಿಸುತ್ತೇವೆ.

“ಕೊಡಗು ದೃಢಮನಸು ಮಾಡಿದೆ!”

ಹೀಗೆಂದು ಡಾಕ್ಟರ್ ಹರ್ಡೀಕರ್‌ರವರ "ವಾಲಂಟಿಯರ್" ಪತ್ರಿಕೆಯು ಹೇಳುತ್ತದೆ "ನಮ್ಮ ಕೊಡಗಿನ ಸ್ನೇಹಿತರು ಒಂದು ವಾಲಂಟಿಯರ್ ಬೋರ್ಡ್ ಏರ್ಪಡಿಸಲು ಮನಸು ಮಾಡಿದಂತೆ ಕಾಣುತ್ತದೆ ಮತ್ತು ತಮ್ಮ ಉದ್ದೇಶವನ್ನು ನೆರವೇರಿಸಲಿಕ್ಕೆ ಎಲ್ಲಾ ತೊಂದರೆಗಳನ್ನು ಎದುರಿಸುತ್ತಿರುವರು. 1925ನೇ ವರ್ಷದ ಆಖೈರಿನೊಳಗೆ ನೂರು ಸ್ವಯಂಸೇವಕರನ್ನು ತರಬೇತುಮಾಡಲು ನಿಶ್ಚಯಿಸಿರುವರು. ಸೇವಾದಳ ಹೆಡ್‌ಕ್ವಾರ್ಟರ್ಸಿನಿಂದ ಎಲ್ಲಾ ಸಹಾಯವು ಅವರಿಗೆ ಕೊಡುತ್ತಿವೆ".

ಇದು ನಿಜವಾದರೆ ಸುವಾರ್ತೆಯೇ ಸರಿ. ಜಮಾಬಂದಿ [illegible]ರ ಸಂಘದ ಕಳೆದ ಕಾನ್ಫರೆನ್ಸಿನಲ್ಲಿ ಸ್ವಯಂಸೇವಕರ ದಳವನ್ನು ತರಬೇತು ಮಾಡಲು ತಕ್ಕ ಏರ್ಪಾಡು ಮಾಡಲಿಕ್ಕಾಗಿ ಆಗಿಯೇ ಒಂದು ಕಮಿಟಿಯು ನೇಮಿತವಾದುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಸಂತಥ ಅಂಥಾದ ರಚನೆಯೊಂದು ಜನರ ಆಲೋಚನೆ ಮತ್ತು ಅಭಿಪ್ರಾಯದ ಬಗ್ಗೆ ಆ ಕಮಿಟಿ ಮೆಂಬರೊಬ್ಬರಿಂದ ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿತ್ತು. ಅದರ ಮೇಲೆ ಯಾವ ಅಭಿಪ್ರಾಯವೂ ನಮ್ಮ ಕೈಸೇರಿರುವುದಿಲ್ಲ. ಆ ಕಮಿಟಿಯವರು ತಾವಾಗಿ ಒಪ್ಪಿಕೊಂಡ ಜವಾಬ್ದಾರಿಯ ಕೆಲಸದಲ್ಲಿ ಎಷ್ಟರಮಟ್ಟಿಗೆ ಮುಂದುವರಿದಿರುವರೆಂದು ತಿಳಿಯದು. ಮಳೆಗಾಲದಲ್ಲಿ ಜಮೀನುದಾರರೆಲ್ಲರೂ ತಮ್ಮ ವ್ಯವಸಾಯದ ಕೆಲಸದಲ್ಲಿ ಮಗ್ನರಾಗಿರುವ ಕಾರಣ ಮಳೆಯು ನಿಂತ ಕೂಡಲೆ ಅಂದರೆ ಆರಂಭದ ಕೆಲಸವು ಮುಗಿದೊಡನೆ ಸ್ವಯಂಸೇವಕರ ತರಬೇತಿನ ಕೆಲಸವನ್ನು ಕಮಿಟಿಯವರು ಪ್ರಾರಂಭಿಸುವದು ಅಗತ್ಯವಾಗಿದೆ. ಇಲ್ಲವಾದರೆ ಈ ವರ್ಷದ ಅಂತ್ಯದೊಳಗೆ ನೂರು ಸ್ವಯಂಸೇವಕರನ್ನು ತಯಾರಿಸುವುದು ಸುಲಭ ಸಾಧ್ಯವಲ್ಲ. ಮತ್ತು ಕೊಡಗಿನ ದೃಢಮನಸು ಪತ್ರಿಕೆಯಲ್ಲಿ ಮಾತ್ರ ಇರುವುದಲ್ಲದೆ ಕಾರ್ಯತಃ ರೂಪಕ್ಕೆ ಬಂದಿರಲಾರದು. ಆದುದರಿಂದ ಹಿತಚಿಂತಕರು ಎಚ್ಚರಗೊಳ್ಳಲಿ.

ಹಿಂದೂ ಮತದ ಮುಖ್ಯಾಂಶಗಳು.

(ಸ್ವಾಮಿ ಸರ್ವಾನಂದರವರ ಮರ್ಕರಾದ ಭಾಷಣದ ಸಾರಾಂಶ)

ಪರಮಾತ್ಮನಲ್ಲಿ ಐಕ್ಯವನ್ನು ಹೊಂದಲು ದಾರಿ ತೋರಿಸತಕ್ಕ ಮತಗಳು ಜಗತ್ತಿನಲ್ಲಿ ಹಲವು ಇವೆ. ಅವುಗಳಲ್ಲಿ ಪುರಾತನದಿಂದ ನಡೆಯುತ್ತ ಬಂದಿರುವ ಮತಗಳ, ಮುಖ್ಯವಾಗಿ ಹಿಂದೂ, ಮಹಮ್ಮದೀಯ, ಕ್ರೈಸ್ತ, ಬೌದ್ಧ—ಇವುಗಳಲ್ಲೆಲ್ಲಾ ಹಿಂದು ಮತವೇ ಅತಿಪುರಾತನವಾದದು. ಅದೇ ಅನೇಕ ಶತಮಾನಗಳಿಂದಲೂ, ಕಷ್ಟ ಸುಖಗಳಿಗೆ ಹೆದರದೆ ನಡೆದ ಒಂದರ ಮೇಲೆ ಹೇಳಿದ ಸ್ಥಿತಿಯೊಂದು ಮತ್ತು ಪರಮಾತ್ಮನ ನೆಲೆಯನ್ನು ಕಾಣುವ ಹಿರಿಯ ತತ್ತ್ವಗಳೇ ಆದರೂ ಹಿಂದೂಮತದಷ್ಟು ವಿಕಾಸವಾಗಿ ಸುಲಭ ಸಾಧ್ಯವಾಗಿರುವುದಿಲ್ಲ. ಹಿಂದೂಮತದ ನಿಬಂಧನೆಗಳನ್ನು ಅನುಸರಿಸುವುದು ಸ್ವಲ್ಪ ಕಷ್ಟತರವಾಗಿ ಕಂಡರೂ ಒಂದರ ಅದರಷ್ಟು ಸುಲಭ ಫಲದಾಯಕವಾದ ಮತವು ಬೇರೊಂದಿರುವುದೂ ಇರುವುದಿಲ್ಲ.

ಜಗತ್ತಿನಲ್ಲಿ ಹಿಂದೂಮತವೆಂಬುದಾಗಿ ಒಂದು ಮತವಿರುವುದಿಲ್ಲ. ಭರತಖಂಡದವರು ಯಾವ ಒಂದು ಮತವನ್ನು ಅವಲಂಬಿಸಿ ಅದಕ್ಕನುಸಾರವಾಗಿ ನಡೆದುಕೊಳ್ಳುತ್ತಿರುವರೋ, ಯಾವ ಒಂದು ಮತವು ನಾನೂರು ಸಾವಿರ ವರ್ಷಗಳ ಪರ್ಯಂತ ಅನೇಕ ಕಾಲಗಳಿಂದಲೂ ನೆಲೆಯಾಗಿ ನಿಂತಿರುವುದೋ, ಅದೇ ಸನಾತನ ಧರ್ಮ ಅಥವಾ ವೇದಮತ. ಇದನ್ನೇ ಹಿಂದೂ ಮತವೆಂಬುದಾಗಿ ಹೇಳುವರು. ಈ 'ಹಿಂದೂ' ಶಬ್ದವು "ಸಿಂಧೂ" ಎಂಬ ಪದದ ಗ್ರಾಮ್ಯವು, ಗ್ರೀಕರೇ ಮೊದಲಾದ ಪರದೇಶೀಯರು ಸಿಂಧೂನದಿಯನ್ನು 'ಹಿಂದೂ' ಎಂಬುದಾಗಿ ಉಚ್ಚರಿಸಿದರು. ಅದೇ ಹೆಸರು ನಮ್ಮ ದೇಶಕ್ಕೂ, ಮತಕ್ಕೂ ಬಂದಿರುವುದು. ನಮ್ಮ ಮತವು ಹಿಂದೂ ಅಲ್ಲ; ಸನಾತನ ವೇದಮತ. ನಮ್ಮ ಈ ಸನಾತನ ಧರ್ಮಕ್ಕೂ ಕ್ರೈಸ್ತರ ಮತಕ್ಕೂ ಬಹಳ ವ್ಯತ್ಯಾಸಗಳು ಕಂಡುಬರುವುದು. ಹಿಂದೂ ಮತದವರದು ಅನುಭವದಿಂದ ಬಂದ ಜ್ಞಾನ. ಕ್ರೈಸ್ತರದು ಊಹಿಸಿಕೊಳ್ಳತಕ್ಕದ್ದು.

ಎಲ್ಲಾ ಮತದವರೂ ದೇವರು ಇದ್ದಾನೆಂಬುದನ್ನು ಒಪ್ಪಿಕೊಳ್ಳುವರು. ಆದರೆ ಆತನ ಇರುವಿಕೆ, ಸ್ವರೂಪ ಹಾಗೂ ಆತನ ಸೃಷ್ಟಿ ಕ್ರಮ ಇವುಗಳಲ್ಲಿ ಪ್ರತಿಯೊಂದು ಮತದವರ ಅಭಿಪ್ರಾಯಗಳು ಬೇರೆ ಬೇರೆಯಾಗಿವೆ. ಒಂದು ಬದಿ ಪಂಡಿತರು ಯನ್ನು ವೃದ್ಧೀಕರಿಸತಕ್ಕ ಈಗಿನ ಕೆಲವು ಭೌತಿಕ ಶಾಸ್ತ್ರಜ್ಞರು (ಸಯಂಟಿಸ್ಟ್ಸ್) ಈ ಜಗತ್ತು ಒಂದು ವಿವರಿಸಲಸಾಧ್ಯವಾದ ಸಾಮರ್ಥ್ಯದ ಬಲದಿಂದ ನಡೆಯುತ್ತದೆ. ಯಾವ ರೀತಿ ನೀರು, ಕೆಲವು ವಾಯು(gas)ಗಳ ಸಂಯೋಜನೆಯಿಂದ ಉತ್ಪನ್ನವಾಗಿದೆಯೋ ಅದೇ ರೀತಿ ಜಗತ್ತಿನ ನಿರ್ಮಾಣಕ್ಕೆ ಕಾರಣವಾದ ಸಾಮರ್ಥ್ಯವೂ ಕೆಲವು ವಾಯುಗಳ ಮಿಶ್ರಣದಿಂದ ಆಗಿರಬೇಕು ಎಂಬುದಾಗಿ ಹೇಳುವರು. ಆದರೆ ಅದರ ನಿಶ್ಚಯವನ್ನು ಕಂಡು ಹಿಡಿಯಲು ಯಾರಿಂದಲೂ ಈ ವರೆಗೆ ಸಾಧ್ಯವಾಗಿರುವುದಿಲ್ಲ. ಈ ಜಗತ್ತಿನ ಎಲ್ಲಾ ಮತಗಳ ವ್ಯಕ್ತಿ ಅನುಭವ ಜ್ಞಾನದಿಂದಲೂ ಅನ್ಯ ಶಕ್ತಿಯಿಂದಲೂ ಸಾಧ್ಯವಾದ ಮಟ್ಟಿಗೆ ಜಗತ್ತಿನ ರಚನೆಯನ್ನು ಕಂಡು ಹಿಡಿದಿರುವರು. ಭಾರತಮತ ಧರ್ಮಶಾಸ್ತ್ರಕಾರರೆಂಬವರಾಗಿ ಹೇಳುವ ನಾವು ಹರ್ಷಿತರಾಗಿರಬೇಕಾಗಿದೆ. ಈ ಭಾರತ ಧರ್ಮದ ಹಿರಿಮೆಗೆ ಕಾರಣರಾದ ಅನೇಕ ಮಹನೀಯರು ಸತ್ಯವನ್ನು ಈ ರೀತಿಯೆಂಬುದಾಗಿ ನಿಶ್ಚಯಿಸುತ್ತಾರೆ. ಈ ಪ್ರಪಂಚದ ನಿರ್ಮಾಣಕ್ಕೂ, ನೆಲೆಗೂ ಕಾರಣವಾದದ್ದು ಒಂದು ಮಹಾ ಶಕ್ತಿ. ಅದನ್ನು ಈವರೆಗೂ ಯಾರಿಂದಲೂ ವಿವರಿಸಲು ಸಾಧ್ಯವಾಗಿರುವುದಿಲ್ಲ. ಆ ಶಕ್ತಿಯ ಸಹಾಯದಿಂದಲೇ ಜಗತ್ತಿನ ನಿಯಮಿತ ನಿಮಿಷದ ವ್ಯಾಪಾರವು ನಡೆಯುತ್ತಿರುವುದು. ಅದನ್ನೇ "ಹರಿ" ಎಂಬುದಾಗಿಯೂ ಶಿವ ಎಂಬುದಾಗಿಯೂ ನಾನಾ ತರದ ನಾಮಗಳಿಂದಲೂ, ತಮಗೆ ಇಷ್ಟವಾದ ರೂಪದಿಂದಲೂ ಪೂಜಿಸುವರು. ನಾವು ನಮ್ಮ ಕೈಗಳಿಂದ ಒಂದು ಕಲ್ಲನ್ನು ಎಸೆದರೆ ಅದು ನಮ್ಮ ಶಕ್ತಿಗನುಸಾರವಾಗಿ ದೂರ ಹೋಗುವದು. ನಾವು ಆ ಶಕ್ತಿ ಏನೆಂಬುದನ್ನು, ಅದು ಹೇಗೆ ಉಂಟಾಯಿತೆಂಬುದನ್ನು ತಿಳಿಯಲಾರೆವು. ಅದೇ ಶಕ್ತಿಯೇ ಪ್ರತಿ ಒಂದು ಪರಮಾಣುಗಳನ್ನು ನಡೆಸುತ್ತಿರುವುದು. ಆ ಶಕ್ತಿಯೇ ಸೂರ್ಯ ಚಂದ್ರಾದಿಗಳು ಮೊದಲಾಗಿ ಇಡೀ ವಿಶ್ವವನ್ನೇ ಆಳುತ್ತಿರುವುದು. ಮಾತ್ರವಲ್ಲ, ಜಗತ್ತಿನ ಪ್ರತಿಯೊಂದೂ ಅದೇ ಶಕ್ತಿಯು. ಆ ಶಕ್ತಿಯು ನಾಮ ರೂಪಗಳಿಗೆ ಹೊರಗಾದದ್ದು. ಅದಕ್ಕೆ ಆದಿ, ಮಧ್ಯ ಮತ್ತು ಅಂತ್ಯಗಳು ಇರುವುದಿಲ್ಲ. ಅದರಿಂದಲೇ ಹುಟ್ಟಿದುದು ಮಾಯೆ. ಮಾಯೆಯೆಂಬುದೇ ಜಗತ್ತೂ, ಶಕ್ತಿಯೂ ಪರಮಾತ್ಮನೂ. ಪ್ರತಿಯೊಂದು ಜೀವಿಯೂ ಹುಟ್ಟುವುದು ಆತನಲ್ಲಿ, ಬೆಳೆಯುವುದೂ ಆತನಲ್ಲಿ, ಲಯವಾಗುವುದು ಸಹ ಆತನಲ್ಲೇ. ಪರಮಾತ್ಮನನ್ನು ಆನಂದಮಯನೆಂಬುದಾಗಿ ಹೇಳುವರು. ಆತನು ಆನಂದ ಸ್ವರೂಪನಾಗಿರುವ ಕಾರಣ ಆತನ ಅಂಶ ಸಂಭೂತರಾದ ನಾವುಗಳು ನಿರಂತರವೂ ಆನಂದವನ್ನೆ ಇಚ್ಛಿಸುತ್ತೇವೆ. ಆ ಆನಂದಕ್ಕೆ ತಡೆ ಬರುವುದೇ ದುಃಖ, ನೋವು. ಆಕರ್ಷ ಯಂತ್ರಕ್ಕೂ ಕಬ್ಬಿಣಕ್ಕೂ ಯಾವ ತರಹದ ಸಂಬಂಧವೋ ಅದೇ ರೀತಿಯ ಸಂಬಂಧವು ಪರಮಾತ್ಮನಿಗೂ ನಮಗೂ ಇರುವುದು. ನಾವು ಆ ಪರಮಾತ್ಮನ ಆಕರ್ಷಣದಿಂದ ದೂರ ಹೋಗಲಾರೆವು. ಆತನ ಸಮೀಪವಾದಷ್ಟು ನಮಗೆ ಆನಂದವುಂಟಾಗುವದು. ದೂರವಾದಷ್ಟು ನೋವು, ದುಃಖವುಂಟಾಗುವುದು. ಪರಮಾತ್ಮನೇ ತೇಜಸ್ಸು, ಆತನ ಕಿರಣಗಳೇ ನಾವುಗಳು.

ಪರಮಾತ್ಮನು ಜಗತ್ತಿನ ತಂದೆಯು. ಆತನು ಜಗತ್ತನ್ನು ಯಾವ ಕಾರಣಕ್ಕಾಗಿ ನಿರ್ಮಿಸಿದನೆಂಬುದನ್ನು ಕೇಳಿದಲ್ಲಿ ನಾವು ಇಷ್ಟನ್ನು ಮಾತ್ರ ಹೇಳಲು ಶಕ್ತರು. ಮಗುವಿಗೆ ಚಿಕ್ಕ ಚಿಕ್ಕ ಆಟದ ಬೊಂಬೆಗಳನ್ನಿಟ್ಟು ಆಡುವದರಿಂದ ಏನು ಸುಖ? ಎಂಬುದಾಗಿ ಕೇಳಿದರೆ, ಅದಕ್ಕೆ ಯಾವ ಉತ್ತರವೋ ಅದೇ ಉತ್ತರವು ಪರಮಾತ್ಮನು ನಮಗೂ ಕೊಟ್ಟಿ[illegible] ಸಮಾನವಾಗುವುದು. ಮಗುವಿಗೆ ತನ್ನ ಆಟದ ಸಾಮಾನುಗಳಲ್ಲಿ ಯಾವ ವಿಧವಾದ ಪ್ರೀತಿಯಿರುವುದೊ, ಮತ್ತು ಅದು ಆ ಸಾಮಾನುಗಳ ರಕ್ಷಣೆಯಲ್ಲಿ ಎಷ್ಟರ ದಕ್ಷತೆಯಿಟ್ಟಿರುವುದೋ ಅಷ್ಟೇ ಅಥವಾ ಅದಕ್ಕಿಂತಲೂ ಅಧಿಕವಾಗಿ ಪರಮಾತ್ಮನಿಗೆ ಇರುವುದರ ಅತಿಶಯವಾಗಲಾರದು.

ಜೀವಿಗಳ ಹುಟ್ಟು, ಲಯ ಇವುಗಳಲ್ಲಿ ಬೇರೆ ಬೇರೆ ಮತಗಳು ಬೇರೆ ಬೇರೆಯಾಗಿ ಹೇಳುವುವು. ಕ್ರೈಸ್ತ ಮತದವರಲ್ಲಿ ಪುನರ್ಜನ್ಮ ಎಂಬುದಿಲ್ಲ. ಒಂದು ಸಾರಿ ಹುಟ್ಟಿದವನು ದೇವರಲ್ಲಿಗೆ ಹೋಗಿಬಿಡುವನು ಎಂಬುವೇ ಅವರ ಅಭಿಪ್ರಾಯ. ಹಿಂದೂ ಮತಕ್ಕನುಸಾರವಾಗಿ ಜೀವಕ್ಕೆ ಹುಟ್ಟು, ಬೆಳವಣಿಗೆ, ಸಾವು ಎಂಬುದೇ ಇಲ್ಲ. ಅದು ಜೀವನು ಧರಿಸಿರುವ ಶರೀರಕ್ಕೆ ಮಾತ್ರ. ಜೀವನಿಗೆ ಈ ಶರೀರ ಸಂಬಂಧಗಳು ಆತನ ಕರ್ಮದಿಂದ ಉಂಟಾಗುತ್ತವೆ. ಆತನು ಮೂರ್ಖತನ ದುರ್ಗುಣಗಳಿಂದ ಮಾಡಬಾರದ ಕೃತ್ಯಗಳನ್ನು ಮಾಡಿಬಿಡುವನು. ಅದರಿಂದ ಆತನು ಪರಮಾತ್ಮನಿಗೆ ದೂರವಾಗುವನು. ಅದೇ ಅವನ ದುಃಖ. ಪ್ರತಿಯೊಂದು ಜೀವಿಗೂ ಅವರ ಕರ್ಮಕ್ಕೆ ಸರಿಯಾದ ಫಲವು ಲಭಿಸುವದು. ಕೆಲವು ಮತಗಳು ಕರ್ಮವನ್ನೇ ಹೇಳುವುದಿಲ್ಲ. ಹಾಗೆ ಫಲಗಳು ಕರ್ಮಕ್ಕನುಸಾರವಾಗಿ ಲಭಿಸುವುದಿಲ್ಲವಾದರೆ ಲೋಕದಲ್ಲಿ ಜೀವಿಗಳು ನಾನಾ ಬಗೆಯಾಗಿ ಹುಟ್ಟಲು ಕಾರಣವೇನು? ದೇವರು ಅನ್ಯಾಯವನ್ನೂ ಅತ್ಯಾಚಾರವನ್ನೂ ನಡೆಸುತ್ತಿರುವನೆಂದು ಹೇಳಲಾಗುವುದೇ? ಹಾಗೆ ಹೇಳುವುದರಿಂದ ಯಾವ ಅರ್ಥವೂ ಇರುವುದಿಲ್ಲ. ಅದು ಕಾರಣ ಜೀವಿಗೆ ಕರ್ಮವೇ ಬಂಧನವು. ಕರ್ಮವೇ ಮೋಕ್ಷವು.

ಜಗತ್ತಿನ ಕರ್ತನು ಅಂದರೆ ದೇವರು ಒಬ್ಬನೇ. ಆದರೂ ಜನರು ನಾನಾ ವಿಧವಾಗಿ ಕಲ್ಪಿಸಿಕೊಳ್ಳುವರು. ಕೆಲವರು ದೇವರು ಈ ರೀತಿ ಇರುವನೆಂದೂ, ಆ ರೀತಿ ಇರುವನೆಂದೂ, ತಮ್ಮ ಅಭಿಪ್ರಾಯಗಳಿಗೆ ತಕ್ಕ ಹಾಗೆ ಆತನನ್ನು ಕಲ್ಪಿಸಿಕೊಂಡು ಹಾಗೆ ಆ ಕಲ್ಪನೆಗೆ ಆ ಅಭಿಪ್ರಾಯಗಳಿಗೆ ಒಳಪಟ್ಟವರೇ ಒಂದು ಗುಂಪು, ಅಥವಾ ಒಂದು ಮತವೆಂಬುದಾಗಿ ಮಾಡಿಕೊಳ್ಳುವರು. ಯಾವ ರೀತಿ ಭೂಮಿಯ ಬೇರೆ ಬೇರೆ ಭಾಗಗಳಲ್ಲಿ ಒಂದೊಂದು ನದಿಗಳು ಉದ್ಭವಿಸಿ ಒಂದೊಂದು ಮಾರ್ಗವಾಗಿ ಸಾಗರವನ್ನು ಸೇರುವವೋ ಅದೇ ರೀತಿ ಈ ಪ್ರತಿಯೊಂದು ಮತಗಳೂ ಒಂದೊಂದು ವ್ಯಕ್ತಿಯಲ್ಲಿ ಹುಟ್ಟಿ ಒಂದೊಂದು ವಿಧವಾದ ಕ್ರಿಯೆಗಳಿಂದ ಪರಮಾತ್ಮನಾಗುವನ್ನು ಮುಕ್ತತತ್ತ್ವಗಳೇ ಆಗಿರುವುವು. ಪ್ರತಿಯೊಂದು ಮತದವರೂ ಅವರವರ ಇಷ್ಟಕ್ಕೆ ತಕ್ಕ ಹಾಗೆ ದೇವರನ್ನು ಕಲ್ಪಿಸಿಕೊಳ್ಳುವರು. ಅಂದರೆ ಆತನಿಗೆ ನಾಮ ರೂಪಗಳನ್ನು ಕೊಡುವರು. ಯಾವ ರೀತಿ ಜೀವನು ಶರೀರದಿಂದ ಆಕಾರವಂತನಾಗಿರುವನೋ ಅದೇ ರೀತಿ ಪರಮಾತ್ಮನು ಜೀವಿಗಳ ಆಲೋಚನೆ ಆಕಾರವಂತನಾಗುವನು. ಪರಮಾತ್ಮನು ಸಕಾರನೂ ನಿರಾಕಾರನೂ ಹೌದು. ಜನರು ಆತನ ಆಕಾರಕ್ಕೆ ತಕ್ಕ ಹಾಗೆ ಆತನನ್ನು ಪೂಜಿಸುವರು.

ಪೂಜೆಗಳಲ್ಲಿ ಮೂರು ವಿಧ. ಎಲ್ಲಾ ಮತಗಳು ಅನುಸರಿಸುವ ಪೂಜೆಗಳು ಸಹ ಈ ಮೂರರಲ್ಲಿ ಅಡಕವಾಗಿವೆ. ಅದು ಕ್ರಮವಾಗಿ ವಿಗ್ರಹ ಪೂಜೆ, ಸಮ ಪೂಜೆ ಮತ್ತು ವಿಶ್ವ ಪೂಜೆ.

ಪ್ರಾರಂಭದಲ್ಲಿ ವಿಗ್ರಹ ಪೂಜೆ. ತನ್ನ ಇಷ್ಟಕ್ಕನುಸಾರವಾಗಿ ವಿಗ್ರಹವನ್ನು ಮಾಡಿ ಅದನ್ನು ಪೂಜಿಸುವನು. ಅದು ಬಾಲ ಆರಾಧಕನಿಗೆ ಆ ವಿಗ್ರಹವೇ ದೇವರೆಂಬ ಭಾವನೆಯು ಬರುವದು. ಅನಂತರ ಆತನು ಆ ವಿಗ್ರಹವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಧ್ಯಾನಿಸುವನು.

ಎರಡನೆ ಪೂಜೆಯು ಸಮಪೂಜೆ. ಆತನು ಪ್ರತಿಯೊಂದು ಜೀವಿಯನ್ನೂ ಮರಗಳನ್ನೂ ಎಲ್ಲವನ್ನೂ ಪರಮಾತ್ಮನಂತೆ ಕಾಣುವನು. ತಂದೆಯು ತನ್ನ ಮಗನನ್ನು ದೇವರಂತೆ ಭಾ

ವಿಸುವದು ಮಗುವು ತಂದೆಯನ್ನು ದೇವರಂತೆ ಪೂಜಿಸುವುದು ಅಂತೆಯೇ ತಾಯಿಯೂ ಮಗುವೂ ಗುರುವು ಶಿಷ್ಯನನ್ನು ದೇವರಂತೆಯೂ ಶಿಷ್ಯನು ಗುರುವನ್ನು ದೇವರಂತೆಯೂ ಭಾವಿಸುವುದು. ಇದೇ ರೀತಿ ಗಂಡ ಹೆಂಡರಲ್ಲಿಯೂ ಸಹ ಮಾತ್ರವಲ್ಲದೆ, ಅತಿಥಿಗಳನ್ನೂ, ಬಂಧುಗಳನ್ನೂ ದೇವರಂತೆ ಭಾವಿಸುವುದು, ಪೂಜಿಸುವದು ದೇಶದಲ್ಲಿ ರಾಜನು ಪ್ರಜೆಗಳನ್ನೂ, ಪ್ರಜೆಗಳು ರಾಜನನ್ನೂ ದೇವರಂತೆ ಪೂಜಿಸುವದೂ ಮಾತ್ರವಲ್ಲದೆ ಗೋಪೂಜೆ, ಅಶ್ವ ಪೂಜೆ, ಅಶ್ವತ್ಥ ಪೂಜೆ, ತುಲಸೀ ಪೂಜೆ ಇತ್ಯಾದಿಗಳು ಇದೇ ಪಶು ಪೂಜೆ ಎಂಬುದು ಮೂರನೇಯ ಪೂಜೆಯೇ ವಿಶ್ವ ಪೂಜೆ ಇದನ್ನು ಜ್ಞಾನಿಯು ಮಾಡುವನು ಆತನಿಗೆ ವಿಶ್ವವೇ ದೇವರು ಆತನು ಎಲ್ಲೆಲ್ಲೂ ದೇವರನ್ನು ಕಾಣುವನೇ ಕಾಣುವನು ದೇವನೇ ಆತನಿಗೆ ವಿಶ್ವವು ಆತನು ಎಲ್ಲವನ್ನೂ ಸಮನಾಗಿ ಕಾಣುವನು ಆತನಿಗೆ ಲೋಕದಲ್ಲಿರುವ ನೀರು ಪಾದೋದಕ, ಪುಷ್ಪಗಳೇ ದೇವರಿಗೆ ಸಮರ್ಪಿಸಿದವುಗಳು

ಈ ಮೇಲಿನ ಪೂಜೆಗಳಲ್ಲಿ ಮೊದಲನೇಯದಾದ ವಿಗ್ರಹ ಪೂಜೆ, ಪಟಗಳನಿಟ್ಟು ದೇವರನ್ನು ಪೂಜಿಸುವುದು, ಮೊದಲಾದವುಗಳು ಇನ್ನ ಕಳಗಿನ ತರಗತಿ ಪೂಜೆಗಳು ಎರಡನೆ ಪೂಜೆಯು ಮಧ್ಯಮ ಉತ್ತಮ ಪೂಜೆಯೇ ವಿಶ್ವ ಪೂಜೆ ಆದರೆ ಜ್ಞಾನಿಗಳು ಅದಕ್ಕಿಂತಲೂ ಉತ್ತಮೋತ್ತಮ ಪೂಜೆಯನ್ನು ಹೇಳುವರು ಅದೇ ಸಮಾಧಿ ಅದು ಪರಮಾತ್ಮನಲ್ಲಿ ಐಕ್ಯತೆಗೆ ಸಮೀಪ ಸ್ಥಾನ ಅಲ್ಲಿಗ ತಲುಪಿದವನು ಹಿಂತಿರುಗಿ ಈ ಜಗತ್ತಿನಲ್ಲಿ ಮಿಶ್ರವಾಗಲಾರನು

ಹಿಂದುಗಳಲ್ಲಿ ಈ ಎಲ್ಲಾ ತರಹದ ಪೂಜೆಗಳೂ ಇವೆ ವಿಗ್ರಹಾರಾಧನೆಯಲ್ಲಿ ಹಿಂದೂ ಅರ್ಚಕನು ಒಂದು ದೇವರನ್ನು ತನ್ನಂತೆಯೇ ಭಾವಿಸಿಕೊಂಡು ಆ ವಿಗ್ರಹಕ್ಕೆ ಸ್ನಾನವನ್ನು ಮಾಡಿಸುವನು ಅದನ್ನು ಅನಂತರ ಗಂಧಾನುಲೇಪನಗಳಿಂದ ಸುಗಂಧಯುಕ್ತವನ್ನಾಗಿ ಮಾಡುವನು ಅದಕ್ಕೆ ಹೂಗಳನ್ನು ಮುಡಿಸಿ ಶೃಂಗರಿಸುವನು ಸೊಗಸಾದ ಭಕ್ಷ್ಯಗಳನ್ನೂ ಹಣ್ಣುಗಳನ್ನೂ ತಿನ್ನಲು ಇರಿಸುವನು ಅನಂತರ ಆರತಿಯನ್ನೆತ್ತುವನು ಎರಡನೇಯದಾದ ಪಶು ಪೂಜೆಯಲ್ಲೂ ಈ ರೀತಿ ಹಿಂದೂ ಧರ್ಮಪಾಲಕರು ಹೇಳಿರುವರು 'ಮಾತೃ ದೇವೋ ಭವ, ಪಿತೃ ದೇವೋ ಭವ ಆಚಾರ್ಯ ದೇವೋ ಭವ ಅತಿಥಿ ದೇವೋ ಭವ ತಾಯಿ, ತಂದೆ ಗುರು, ಅತಿಥಿ ಇವರನ್ನು ದೇವರಂಬದಾಗಿ ಭಾವಿಸಿ ನಮಸ್ಕರಿಸು

ಹಿಂದೂಗಳು ಅನುಸರಿಸುವ ಮೂರನೆ ತರದ ಅಂದರೆ ಉತ್ತಮವಾದ ವಿಶ್ವ ಪೂಜೆ ಪಂಚ ಭೂತಗಳು ಕಾಲ, ಸ್ಥಳ ಇವುಗಳನ್ನು ಪೂಜಿಸುವದು ಇದೇ ಮಾನಸಿಕ ಪೂಜೆ ಮನಸಿನಲ್ಲೇ ದೇವರಿಗೆ ಸಕಲವನ್ನು ಸಮರ್ಪಿಸುವುದು, ತನ್ನನ್ನೇ ಆತನಿಗೆ ದಾರೆ ಎರೆಯುವುದು ಅನಂತರ ಕೊನೆಯದಾದುದೇ ಸಮಾಧಿ ಸ್ಥಾನ ಜ್ಞಾನಿಯು ತನ್ನನ್ನು ತಾನು ಮರೆತು ಜಡವದ, ಆದ ಪರಮಾತ್ಮನಲ್ಲಿ ಐಕ್ಯತೆಗೆ ಕಡ ಮೆಟ್ಟಲು ಬೆಳಕನ್ನು (ಜ್ಯೋತಿಯನ್ನು) ಕಂಡವನು ಎಂತು ಕತ್ತಲೆಗ ಹಿಂತಿರುಗಿ ಹೋಗಲು ಇಚ್ಛಿಸಲಾರನೋ ತದೋ ರೀತಿ ಒಮ್ಮೆ ಪರಮಾತ್ಮನಲ್ಲಿ ಪ್ರೀತಿಯನ್ನು ಎರಕ ಹೊಯಿದ ಮಾನವನು ಜಗತ್ತಿನ ಹೇಯವಾದ ಪದಾರ್ಥಗಳಿಗ ಮರುಳಾಗನು ಇದೇ ಸನಾತನ ಧರ್ಮದ ಅಡಿಗಲ್ಲು ಇದನ್ನೇ ವೇದಗಳು ಸಾರಿ ಹೇಳುವುದು, ಈ ಅಭ್ಯಾಸಗಳಿಂದಲೇ ಹಿಂದೂ ಧರ್ಮವು ಶಾಶ್ವತವಾಗಿರುವುದು

ಸಹಕಾರ ಕಾನ್‌ಫರೆನ್ಸ್.

ಕೊಡಗು ಸಹಕಾರ ಸಂಘಗಳ 1924 25ನೆ ಸಂವತ್ಸರದ ವಾರ್ಷಿಕ ಕಾನ್‌ಫರೆನ್ಸ್ ವೀರರಾಜಪೇಟೆ ಹೈಸ್ಕೂಲಿನಲ್ಲಿ ತಾರೀಖು 13—6—25ರಲ್ಲಿ ಡಿ ಮ ರಾವ ರಾಯಬಹದ್ದೂರ್ ಕೇಟೋಳಿರ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು 69ಸಂಘಗಳ ಪ್ರತಿನಿಧಿಗಳಾದ ೭೫ ಮೆಂಬರುಗಳು ಹಾಜರಿದ್ದರು ಅಧ್ಯಕ್ಷರು ಪ್ರತಿನಿಧಿಗಳಿಗೆ ವಂದನೆಮಾಡಿ ಹೇಳಿದೇನೆಂದರೆ, ಈ ದಿನದ ಅಧ್ಯಕ್ಷತೆಯನ್ನು ಕೊಡಗು ಕಮಿಶನರವರು ವಹಿಸುವಂತೆ ಕೇಳಿಕೊಂಡಿದ್ದರೂ ಅವರು ಕೆಲವು ಅನಾನುಕೂಲಗಳಿಂದ ಬರಲಿಲ್ಲ ಅವರ ಬದಲಿಗೆ ನನ್ನನ್ನು ಕೇಳಿಕೊಂಡ ಮೇರೆ ನಾನು ಈ ದಿನ ಅಧ್ಯಕ್ಷನಾಗಿ ನಿಮ್ಮ ಕೆಲಸವನ್ನು ನಡಿಸಲಿಕ್ಕೆ ಒಂದಿರುತ್ತೇನೆ ಎಲ್ಲಾ ಮೆಂಬರುಗಳು ಪಟ್ಟಿಯಲ್ಲಿರುವ ವಿಷಯಗಳನ್ನು ಶಾಂತಿಯಿಂದ ಚರ್ಚೆ ನಡೇಕಾಗಿ ಕೋರುತ್ತೇನೆ. ಅಲ್ಲದೆ ಒಂದು ರಠಾವಿನ ವಿಷಯ ಒಬ್ಬನು ಒಂದೇ ಸರ್ತಿ ಮಾತಾಡವೇಕಲ್ಲದೆ, ಆಗಾಗ್ಗೆ ಎದ್ದು ನಿಂತು ಮಾತನಾಡಕೂಡದೆಂಬದಾಗಿ ಹೇಳಿ ಕಾನ್‌ಫರೆನ್ಸಿನ ಕೆಲಸಗಳನ್ನು ಪ್ರಾರಂಭಿಸಿದರು.

ಈ ಕೆಳಗಿನ ರಠಾವುಗಳು ಚರ್ಚೆಯಿಂದ ಮಂಜೂರಾತ್ಮಾದಲ್ಪಟ್ಟವು

1 ಒಮ್ಮಭೂಮಿ ಗಿರ್ವಿಗೆ ಕುಟುಂಬಸ್ಥರ 18 ವರ್ಷಕ್ಕೆ ಮೇಲ್ಪಟ್ಟ ಎಲ್ಲಾ ನೆಂಬರುಗಳ ಸಮ್ಮತಿ ತೆಗೆದುಕೊಳ್ಳಲೇ ಬೇಕೆಂಬುದರಲ್ಲಿ ಸರಕಾರದವರು ಈ ಕಾನೂನನ್ನು ಸಂಘದ ಕೆಲಸಕ್ಕೂ ಸಾಲಪಡಕೊಳ್ಳುವ ನೆಂಬರನಿಗೂ ಅಡಚಣೆ ಬಾರದಂತೆ ತಿದ್ದುಪಡಿ ಮಾಡಿಕೊಡಬೇಕೆಂದು ಈ ಸಮ್ಮೇಳನವು ಕೋರುತ್ತದೆ ಎಂಬದಾಗಿ ಮ. ಕುಟ್ಟಂಡ ಕರ್ವೈಯ್ಯನವರು ಸೂಚಿಸಿದರು. ಅನುಮೋದಕರು ಮ ಕೇಳಪಂಡ ಅಚ್ಚೈಯ್ಯನವರು, ಮ ಕೆ ಪಿ ಚಿಣ್ಣಪ್ಪನವರು ರಿಜಿಸ್ಟ್ರಾರವರು ಈ ವಿಷಯ ಸರಕಾರದ ಕಾನೂನನ್ನು ವಿವರಿಸಿ ಮಾತಾಡಿದರು

ಎಲ್ಲಾ ಮೆಂಬರುಗಳ ಒಪ್ಪಿಗೆಯು ಅವಶ್ಯವೆಂದು ಮ ಕೋದಂಡ ಅಪ್ಪೈಯ್ಯನವರೂ ಮ ಬೆಳ್ಳಚೆಟ್ಟಿರ ಅಚ್ಚೈಯ್ಯನವರೂ, ಮ ಚಂಗಂಡ ಸುಬ್ಬಯ್ಯನವರೂ ಸೂಚಿಸಿದರು

ರಠಾವಿಗೆ ಒತ್ತಾಸೆಯಾಗಿ ಪುದಿಯ ಮ ಪುತ್ತಮನೆ ಗಣಪ್ಪಮ್ಮಯ್ಯನವರೂ, ಮ ನಾಯಡ ಬೆಳ್ಯಪ್ಪನವರೂ, ಮ ನಡಿಕೇರಿಯಂಡ ಸೋಮೈಯ್ಯನವರೂ ಮ ಚಂಗಂಡ ಕುಟ್ಟಪ್ಪನವರೂ, ಮ ಮಾಚಿಮಂಡ ಬಿದ್ದಪ್ಪನವರೂ ಮಾತಾಡಿದರು

ಅಧ್ಯಕ್ಷರು ಮೇಲಿನ ರಠಾವು ಯಾವ ವಿಷಯದಲ್ಲಿಯೂ ರಿಗೂ ಬಾಧಕವಾಗದ ಕಾರಣ ಮಂಜೂರ್ ಮಾಡಬಹುದೆಂದು ಸೂಚನೆ ಕೊಟ್ಟ ಪ್ರಕಾರ ಸರ್ವಸಮ್ಮತದಿಂದ ಮಂಜೂರಾಯಿತು

2 ಸಹಕಾರ ಸಂಘದಿಂದ ಎತ್ತು, ಭತ್ತ, ಜೀವನ ವಸ್ತು ಜೋಡು ರೂಪಿತ ನಡಿಸ ವ ಉದ್ದೇಶವಲ್ಲದೆ ಸಾಲಸಿವಾಗ [illegible] ಉದ್ದೇಶಕ್ಕೆ ಕೊಡಲ್ಪಡ [illegible] ತಗದುಕೊಳ್ಳಬಹುದಂತೆ ಸರಕಾರದವರು ಮಂಜೂರಾತಿ ಕೊಡಬೇಕೆಂದು ಮ ಪುತ್ತಮನ ಗಣಪಮ್ಮಯ್ಯನವರ ಸೂಚಿದರು.

ಮ ನಡಿಕೇರಿಯಂಡ ಸೋಮೈಯ್ಯನವರು ಅನುಮೋದಿಸಿದರು

ರಠಾವು ಸರ್ವಸಮ್ಮತದಿಂದ ಮಂಜೂರಾಯಿತು

3 (1) ಕೊಡಗು ದೇಶದಲ್ಲಿ ಪಿತ್ಲಗದಗಾಮುಗಳಲ್ಲಿಯೂ [illegible] ಸಹಕಾರ ಲಂತಾನ ಸಂಘಗಳನ್ನು ಪ್ರತಿ ಗ್ರಾಮಕ್ಕೂ [illegible] ಮಾಡಬೇಕೆಂದು ಸಹಕಾರ ಸಂಘಗ [illegible] ಸಮ್ಮೇಳನವು ದೇಶದ ಎಲ್ಲಾ ಜನರಲ್ಲಿ ಒತ್ತಾಯಿಪಡಿಸುತ್ತದೆ

(2) ಸಹಕಾರ ಲಂತಾನಸಂಘವನ್ನು [illegible] ಮಾಡಿ ಲಂತಾನ [illegible] ಸಹಕಾರ ಸಂಘಗಳು [illegible] ಸಂಕಾರರ ಒತ್ತಾಯದ ಉಪದೇಶವು ಬಹಳ ಅವಶ್ಯವಾದ ಕಾರಣ ಸಹಕಾರ ಸಂಘಗಳು ಸರಕಾರವೂ ಈ ಬಾಬಿನಲ್ಲಿ ಸಹಕರಿಸಬೇಕೆಂದು ಈ ಸಮ್ಮೇಳನವು ಕೋರುತ್ತದೆ

(3) ಯಾವ ಗ್ರಾಮವು ತಮಗೆ ತಾವೇ ಸಹಾಯ ಮಾಡಿಕೊಂಡು ಮನಸಾಗಿ ತಮ್ಮ ಊರುಕೇರಿಗಳಲ್ಲಿ ಸಹಕಾರ ಲಂತಾನ ಸಂಘವನ್ನು ಸ್ಥಾಪಿಸಿಕೊಂಡು ಲಂತಾನ ಕೇಳಲು ಪ್ರಾರಂಭಿಸುತ್ತವೊ ಅಂಥ ಗ್ರಾಮದ ಕೆಲಸವನ್ನು ಸರಕಾರದವರು ಶ್ಲಾಘಿಸಿ ತಕ್ಕ ರಿವಾರ್ಡುಗಳನ್ನು ಕೊಡಬೇಕೆಂದು ಈ ಸಮ್ಮೇಳನವು ಸರಕಾರದವರಿಗೆ ಸೂಚಿಸುತ್ತದೆ

(4) ಕೊಡಗು ದೇಶದಲ್ಲಿ ಸರಕಾರದವರೇ ಮುಂದಾಗಿ ಒಂದು 'ಲಂತಾನ ವಾರ' ಎಂಬದಾಗಿ ಪ್ರತಿ ವರ್ಷದ ಅಕ್ಟೋಬರ್ 1ನೇ ವಾರದಲ್ಲಿ ಒಂದು ವಾರ ಕೋರ್ಟುಕಚ್ಚೇರಿಗಳ ಕೆಲಸದಿಂದ ಉದ್ಯೋಗಸ್ಥರನ್ನು ಬಿಡುಗಡೆ ಮಾಡಿ ವ್ಯಾಪಾರದ ಅಂಗಡಿ ಶಾಲೆ ವಗೈರೆ ಎಲ್ಲಾ ಕಾರ್ಯಾಲಯಗಳನ್ನು ತತ್ಕಾಲಕ್ಕೆ ಮುಚ್ಚುವಂತೆಯೂ ಐಶ್ವರ್ಯವಂತರು ಗರೀಬರು, ಉದ್ಯೋಗಸ್ಥರು, ವ್ಯಾಪಾರಸ್ಥರು ಎಂಬ ಬೇಧವಿಲ್ಲದೆ ಒಂದು ವಾರ ಪೂರ್ತಿಯೂ ಎಲ್ಲರಿಂದಲೂ ಲಂತಾನ ಕೇಳಿಸಲು ತಕ್ಕ ಏರ್ಪಾಡು ಮಾಡಬೇಕೆಂದು ಈ ಸಮ್ಮೇಲನವು ಸರಕಾರದವರನ್ನು ಕೇಳಿಕೊಳ್ಳುತ್ತದೆ ಎಂಬ ರಠಾವುಗಳನ್ನು ಮ ಕ ಪಿ, ಚಿಣ್ಣಪ್ಪನವರು ತಂದರು ಮ ಐನಂಡ ಕಾಯಪ್ಪನವರು ಮ ಚೊಟ್ಟೆರ ಬೆಳ್ಯಪ್ಪನವರು ಈ ರಠಾವಿಗ ಒತ್ತಾಸೆಯಾಗಿ ಮಾತಾಡಿದರು

ರಠಾವು ಸರ್ವಸಮ್ಮತದಿಂದ ಮಂಜೂರಾಯಿತು

4 ಸಹಕಾರಿಸಂಘಗಳ ರಿಜರ್ವನ್ನು ಸೆಂಟ್ರಲ್ ಬ್ಯಾಂಕಿನಲ್ಲಿಡಬೇಕೆಂದು ಮ ಕೇಳಪಂಡ ಅಚ್ಚೈಯ್ಯನವರು ಸೂಚಿಸಿದರು

ಮ ಐನಂಡ ಕಾಯಪ್ಪನವರು, ಮ ಚೋನಿರ ಕರುಂಬಯ್ಯನವರು, ಮ ಪುತ್ತಮನೆ ಗಣಪಮ್ಮಯ್ಯನವರು ವಿರೋಧಿಸಿದರು

ರಠಾವು ಮಂಜೂರಾಗಲಿಲ್ಲ

5 ಸಂಟ್ರಲ್ ಬ್ಯಾಂಕಿಗೆ ಹಣ ಪಾವತಿ ಮಾಡುವಾಗಯೂ, ಅಲ್ಲಿಂದ ತರಿಸುವಾಗ ಹಣವನ್ನು ಆಯಾಯ ಖಜಾನೆ ಡಿಕ್ಸನಿಗೆ ಒಳಪಟ್ಟ ಬಜಾರುಗಳಲ್ಲಿ ಪಾವತಿ ಮಾಡಲಿಕ್ಕೆ ತಕ್ಕ ಏರ್ಪಾಡು ಸರಕಾರದವರೊಡನೆ ರಿಜಿಸ್ಟ್ರಾರವರು ಮಾಡಬೇಕೆಂದು ಈ ಸಮ್ಮೇಳನವು ಕೋರುತ್ತದೆ ಮ. ಪುತ್ತಮನ ಗಣಪಮ್ಮಯ್ಯನವರು ಸೂಚಿಸಿದರು ಮ ಕೇಳಪಂಡ ಅಚ್ಚೈಯ್ಯನವರು ಅನುಮೋದಿಸಿದರು.

ರಠಾವು ಸರ್ವಸಮ್ಮತದಿಂದ ಮಂಜೂರಾಯಿತು.

6. ಸರಕಾರದಲ್ಲಿ ಖರ್ಚು ಕಳೆದು ಉಳಿವರಿ ಇರುವ ಜಮೆಯನ್ನು ಸೆಂಟ್ರಲ್ ಬ್ಯಾಂಕಿನಲ್ಲಿ ಡಿಪಾಜಿಟ್ಟು ಇಡಬೇಕೆಂದು ಸರಕಾರದವರನ್ನು ಈ ಸಮ್ಮೇಳನವು ಕೇಳಿಕೊಳ್ಳುತ್ತದೆ

ಮ ಪೊನ್ನಕಚ್ಚಿರ ಬೆಳ್ಯಪ್ಪನವರು ಸೂಚಿಸಿದರು. ಮ ಕೇಳಪಂಡ ಅಚ್ಚಯ್ಯನವರು ಅನುಮೋದಿಸಿದರು

ರಠಾವು ಮಂಜೂರಾಯಿತು

7 ಇನ್ನು ಮುಂದಕ್ಕೆ ಕೋಆಪರೇಟಿವ್ ಇನಸ್ಪೆಕ್ಟರುಗಳನ್ನು [illegible] ಸೂಪರ್‌ವೈಜರಗಳ ಪೈಕಿ ಯೋಗ್ಯತೆಯುಳ್ಳವರನ್ನೆ ಇನಸ್ಪೆಕ್ಟರುಗಳಾಗಿ ನೇಮಕ ಮಾಡಬೇಕೆಂದು ಸರಕಾರದವರನ್ನು ಈ ಸಮ್ಮೇಳನವು ಕೋರುತ್ತದೆ

ಸೂಚಕರು [illegible] ಮಾದಪ್ಪನವರು ಮ ಕೆ ಪಿ ಚಿಣ್ಣಪ್ಪನವರು ಅನುಮೋದಿಸಿದರು

ರಠಾವು ಸರ್ವಸಮ್ಮತದಿಂದ ಪಾಸಾಯಿತು

8 ಸಂಘಗಳ ಜೈಲಾಗಳು ಸರಕಾರದವರ ಖರ್ಚಿನಿಂದ ಕರ್ನಾಡಲ್ಲಿ ಛಾಪಿಸಬೇಕೆಂದು ಮ ಚೋನಿರ ಕರುಂಬಯ್ಯನವರು ಸೂಚಿಸಿದರು ಮ ಚಂಗಂಡ ಕುಟ್ಟಪ್ಪನವರು ಅನುಮೋದಿಸಿದರು

ರಠಾವು ಮಂಜೂರಾಯಿತು

9 [illegible]

ಮ [illegible] ಚಂಗಪ್ಪನವರ ಸೂಚಿಸಿದರು ಮ ಚಂಗಂಡ ಕುಟ್ಟಪ್ಪನವರು ಅನುಮೋದಿಸಿದರು

ರಠಾವು ಪಾಸಾಯಿತು

10 [illegible] ಗ್ರಾಮದ [illegible] ಸರಕಾರದವರು [illegible] ಬೇಕೆಂದು ಈ ಸಮ್ಮೇಳನವು ಕೇಳಿಕೊಳ್ಳುತ್ತದೆ

ಮ [illegible] ಸೂಚಿಸಿದರು ಮ ಚೋನಿರ ಕರುಂಬಯ್ಯನವರು ಅನುಮೋದಿಸಿದರು

ರಠಾವು ಸರ್ವಸಮ್ಮತದಿಂದ ಪಾಸಾಯಿತು

[illegible] ಮ ಕ ಪಿ ಚಿಣ್ಣಪ್ಪನವರು [illegible] ಪ್ರತಿನಿಧಿಗಳಿಗೆ [illegible] ವಂದನೆಗಳನ್ನು ಸಮರ್ಪಿಸಿದನಂತರ ಕಾನ್‌ಫರೆನ್ಸ್ ಬರಖಾಸ್ತು ಮಾಡಲ್ಪಟ್ಟಿತು.

ಕ ಚಂಗಪ್ಪ
ಅಧ್ಯಕ್ಷರು

ದಿವಂಗತ ಚಿತ್ತರಂಜನ ಸ್ತವನ.

(ಸ್ವಾಮಿ.ದೇವನೆ ಲೋಕಪಾಲನೆ) ಎಂಬಂತೆ

ಪೋದನೇ! ಹಾ! | ಬಾರದಂತೆಯು | ಬಾಲದಾಸನು—ಪೋದನೇ! || ಪ

ಸಂದನೇ! ಘನ | ಚಿತ್ತರಂಜನ! | ಚಿತ್ತರಂಜನ!—ಸಂದನೇ! || ಅ ಪ.

ವೈರಿಭೀಕರ | ವಂಗಸಿಂಹನು | ನಡೆದನೇ—ಕೈಲಾಸಕೆ! |
ಧಾರಿಣೀಹಿತ | ವಿಬುಧವರ್ಯನು | ನಡೆದನೇ—ಸ್ವರ್ಗಲೋಕಕೆ || ೧

ಆ ತಿಲಕನೆಡೆ | ಗೈದಿದನೆ! ಹಾ! | ದಾಸ ಕಣ್ಮರೆಯಾದನೇ
ಕೀರ್ತಿಕಾಯವ | ನುಳಿದು ಧರೆಯಲಿ | ಜಿಂದಾರ್ಜುನನಾದನೇ! || ೨

ಶ್ರೀ ವಸಂತಾದೇವಿ ಧರಿಸಿದ | ಫಾಲ ಕುಂಕುಮವಳಿಸಿದೆ
ದೇವನೇ! ನೀನೇಕೆ ಸಿದೆಯ | ನಾದೆ ಕರುಣಾ ವಾರಿಧೇ || ೩

ಅಕಟ! ಧರೆಗೇ | ವಿಧಿಯೇ? ವಿಧಿಯೇ! | ನಮ್ಮ ದಾಸನೊಯ್ದೆಯಾ!
ಸಕಲ ಜನನುತ | ದೇಶಭಕ್ತನ | ನಮ್ಮ ಬಳಿಯಿಂದೆಳೆದೆಯಾ || ೪

ದಾನ ಶೂರನು | ಕುಸುಮ ಹೃದಯನು | ಕಠಿಣ ವಜ್ರ ಶರೀರನು
ಜ್ಞಾನ ಸೂರ್ಯನು | ಭಾರತಾರ್ಯನು | ದೀನ ದಾಸನು—ದಾಸನು || ೫

ವಿಮಲ ಚರಿತನು | ಸುಗುಣ ಭರಿತನು | ಭುವನ ಮಾನ್ಯನು—ಧನ್ಯನು
ಅಮಿತ ವಿಭವಾ | ಸ್ಮಿತನು—ಖ್ಯಾತನು | ಪರಮ ಸಂತಸಸಂದನು || ೬

ಘೋಷ ಹಿತಕರ | ಗಾಂಧಿ ಪ್ರಿಯಕರ | ಭರತಖಂಡ ಶುಭಂಕರ
ದೇಶಬಾಂಧವ | ದಾಸನಾತ್ಮಕೆ | ಶಾಂತಿಯನೀಗು! ಶ್ರೀಕರಾ || ೭

(ಶೃಂಗೂರು ಲಕ್ಷ್ಮೀನಾರಾಯಣ ಪುರೋಹಿತಾಚಾರ್ಯ,
ಮಂಗಳೂರು)

ನೋಟೀಸು.

ಹಿಂದೂ ದೇಶದ ಎಲ್ಲಾ ಕಡೆಗಳಲ್ಲಿಯೂ ದೇಶಬಂಧು ಚಿತ್ತರಂಜನ ದಾಸರವರ ಮರಣದ ಜ್ಞಾಪಕಾರ್ಥವಾಗಿ ಮೀಟಿಂಗು ನಡಿಸಬೇಕಾಗಿ ಮಹಾತ್ಮ ಗಾಂಧಿಯವರು ಕೋರಿರುವ ಮೇರ ವೀರರಾಜಪೇಟೆ ಖದ್ದರ್ ಸ್ಟೋರ್ ಮಹಡಿಯಲ್ಲಿ ಜುಲೈ ತಾ|| 1ರಲ್ಲಿ ಮಧ್ಯಾಹ್ನ 1½ ಗಂಟೆಗೆ ಪಬ್ಲಿಕ್ ಮೀಟಿಂಗು ನಡೆಯಲಾಗುವುದು. ಎಲ್ಲರೂ ದಯವಿಟ್ಟು ಬರ ಬೇಕಾಗಿ ಕೋರುತ್ತೇನೆ.

ಕೋದಂಡ ಅಪ್ಪಯ್ಯ

ವರ್ತಮಾನ ಸಂಗ್ರಹ.

ಒಳ ದೇ ಶ.

ಮಡಿಕೇರಿನಾಡು ಕ...ಸ ಸರಕಾರದ ಸೊತ್ತಿನ ಸ... ...ದ ದಂಬೆ... ... ...ರ 329—1—7ಕ್ಕೆ ... ...ದ ದ ವ ಯೋಗ... ...ದ ಪೊಲೀಸಿನವರು ದಸ್ತಗಿರಿ... ...

... ... ಇಲ್ಲದ್ದರಿಂದ ... ಲ್ಲ.

ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಈ ಕೆಳಗಿನ ವಿದ್ಯಾರ್ಥಿಗಳು ಪಾಸಾದವರು —

[illegible]

ಮಡಿಕೇರಿ ಗಡಂಗದಲ್ಲಿ ... ...ರಾವಾಧೀನರಾದರು.

ತಾ|| 21ರಲ್ಲು ... ... ಅಧ್ಯಕ್ಷತೆ ... ... ಪಬ್ಲಿಕ್ ಮೀಟಿಂಗ ನಡೆದು ... ... ಹಿಂದೂ ದೇಶಕ್ಕುಂಟಾದ ದೊಡ್ಡ ನಷ್ಟಕ್ಕೆ ವ್ಯಸನವನ್ನು ಸೂಚಿಸಿ ... ...ಕ ದಾಸರವರ ಪತ್ನಿಯವರಿಗೆ ... ...

ತಾ|| 21ರಿಂದ ಸ... ... ಮಳೆಗಾಲವು ಪ್ರಾರಂಭವಾಗಿ ದೇಶದ ಎಲ್ಲಾ ಕಡೆಗಳಲ್ಲೂ ಮಳೆಯು ಹಿಡಿಯುತ್ತಾ ದೆ ಎಂದು ತಿಳಿಯ ಬೇಕು. ಈ ವರುಷ ಮಳೆಗಾಲವು ... ...

... ...

ತಾ|| 20ರಲ್ಲು ... ... ಕಾಫಿ ಪ್ಲಾಂಟರ್ ... ...

ತಾ|| 24—6—25ರಲ್ಲು ದೇಶಬಂಧು ಚಿತ್ತರಂಜನ ದಾಸ ರ ... ... ವೀರರಾಜಪೇಟೆ ... ... ಅಧ್ಯಕ್ಷತೆಯಲ್ಲಿ ನಡದು, ... ವ್ಯಸನ... ... ...

ಕೋರ್ಟುಕಚೇರಿಯ ವರ್ತಮಾನ.

ಖಾನ್ ಸಾಹೇಬ್ ... ... 10ನೇ ... ... ಮೊದಲೇ ತಿಳಿದಿಯಸ್ಸೆ, ಆ ಲಾರಿಯನ್ನು ನ ಡಿಸುತ್ತಿದ್ದ ಡ್ರೈವರ್ ಅಂತೋಣಿ ಮೇಲೆ ಪೊಲೀಸಿನವರು ಸೀಂದಿ ಕುಡಿದುಕೊಂಡು ಅಜಾಗರೂಕತೆಯಿಂದ ಲಾರಿಯನ್ನು ನಡಿಸಿ ... ... ಜೀವಕ್ಕೆ ಅಪಾಯ ಮಾಡಿದನೆಂಬ ಕೇಸನ್ನು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟಿನಲ್ಲಿ ನಡಿಸಿದರು ... ... ಮೇಲೆ ... ...

ವೀರರಾಜಪೇಟೆಯಲ್ಲಿ ಸಬ್ ಅಸಿಸ್ಟಂಟ್ ಸರ್ಜನರಾದ ... ... 215 ರುಪಾಯಿ ... ... 15 ದಿನಗಳ ವರೆಗೆ ... ... 3 ತಿಂಗಳ ... ... 9 ತಿಂಗಳು ... ...

... ...

WANTED

An auditor for auditing the Mercara ... ... should reach the undersigned by the 5th proximo.

K. KUTTIAH
President

21—6—1925

ಹಿಂದೂ ದೇಶ.

ದೇಶಬಂಧು ಚಿತ್ತರಂಜನದಾಸರವರು ತಾ|| ೧೬ ರಲ್ಲಿ ಸಾಯಂಕಾಲ ೫ಗಂಟೆಗೆ ಡಾರ್ಜಲಿಂಗಿನಲ್ಲಿ ದೈವಾಧೀನನಾದರು. ಅವರ ಶವವನ್ನು ... ... ಇಂಡಿಯಾ ಸ್ಟೀಲ್ ಸಕ್ರೆಟರಿಯವರೂ, ವೈಸರಾಯಿ ಗವರ್ನರ್ ... ... ಲೆಜಿಸ್ಲೇಟಿವ್ ... ... ಯೂರೋಪಿಯನರೂ, ಇಂಗ್ಲೆಂಡ್, ಫ್ರಾನ್ಸ್, ಜಪಾನ್, ಅಮೇರಿಕ, ಆಫ್ರಿಕ ಮೊದಲಾದ ದೇಶಗಳಲ್ಲಿನ ಜನರೂ, ಸಂತಾಪವನ್ನು ಸೂಚಿಸಿ ದಾಸರವರ ಪತ್ನಿಯವರಿಗೆ ಶಾಂತಿವರ್ತಮಾನ ಕಳುಹಿಸಿದವರು. ಇಡೀ ಹಿಂದೂದೇಶವೇ ದುಃಖ ಸಾಗರದಲ್ಲಿ ಮುಳುಗಿದೆ.

ಬೊಂಬಾಯಿಯ ... ...

ಬಂಗಾಳದಲ್ಲಿ ಸ್ವರಾಜ್ಯಪಾರ್ಟಿಯು ಮುಂದಾಳುತನವನ್ನು ... ... ವರ್ತಮಾನ ... ... ಮಹಾತ್ಮ ಗಾಂಧಿಯವರು ... ...

... ...

ಚಿತ್ತರಂಜನದಾಸರವರ ಜ್ಞಾಪಕಾರ್ಥವಾಗಿ ಕಲ್ಕತ್ತಾದಲ್ಲಿ ... ... ಮಹಾತ್ಮ ಗಾಂಧಿ ... ... ಸರ್ ಸುರೇಂದ್ರನಾಥ್ ಬೆನರ್ಜಿ ... ... 2 ಲಕ್ಷ ... ...

... ... ಸ್ವರಾಜ್ಯ ಪತ್ರಿಕೆಯ ಸಂಪಾದಕರಾ ... ...

... ... ದಿನವಾದ ಜುಲೈ 1 ರಲ್ಲು ಹಿಂದೂ ದೇಶದ ಎಲ್ಲಾ ... ... ಮಹಾತ್ಮ ಗಾಂಧಿಯವರು ... ...

ವಿದೇಶ.

ಪೆಕಿನ್‌ದಲ್ಲಿ ವಿದ್ಯಾರ್ಥಿಗಳಿಂದ ಪ್ರಾರಂಭಿಸಲ್ಪಟ್ಟ ... ... 33 ಬ್ರಿಟಿಷ್ ಮತ್ತು 9 ... ... ಇದು ತಾ|| 18ರ ವರ್ತಮಾನ.

ಮಳೆಯ ಭವಿಷ್ಯ.

ಹಿಂದೂಶಾಸ್ತ್ರದ ... ... ಈ ದಿವಸಗಳಲ್ಲಿ ಸಾಧಾ

ರಣ ಮಳೆಯು ಬೀಳುವದು. ಸೆಪ್ಟಂಬರ ತಿಂಗಳಲ್ಲಿ ತಾ ೧೦, ೧೭ ಹಾಗು ೨೪ ಈ ಸುಮಾರಕ್ಕೆ ಮಳೆಬೀಳುವ ಯೋಗವಿದೆ. ಸಾರಾಂಶ ಈ ವರ್ಷ ಮಳೆಗಾಲವು ತಡವಾಗಿ ಪ್ರಾರಂಭವಾಗುವದು. ಜೂನ್ ತಿಂಗಳಲ್ಲಿ ಮಳೆಯು ಮಂದ. ಜುಲೈ ತಿಂಗಳಲ್ಲಿ ಸರ್ವತ್ರ ಮಳೆಯಾಗುವದು. ಆಗಸ್ಟ ತಿಂಗಳಲ್ಲಿ ಮಳೆಯು ಮಧ್ಯಮ. ಸೆಪ್ಟಂಬರ ತಿಂಗಳಲ್ಲಿ ನಿಯಮಕ್ಕಿಂತ ಕಡಿಮೆ ಮಳೆಯು ಬೀಳುವದು. ಆದರೆ ಅಕ್ಟೋಬರ ತಿಂಗಳಲ್ಲಿ ಹೆಚ್ಚು ಮಳೆಯು ಬೀಳುವದು ಸೆಪ್ಟಂಬರ ತಿಂಗಳಿನ ಮಳೆಯು ಅಕ್ಟೋಬರ ತಿಂಗಳಲ್ಲಿ ಬಾಯಿಗೂಡುವದು. ನವಂಬರ ತಿಂಗಳಲ್ಲಿ ತಕ್ಕಷ್ಟು ಮಳೆಯಾಗುವುದು ಮತ್ತು ಈ ಮಳೆಯಿಂದ ರಾಗಿಯ ಬೆಳೆಗೆ ಬಹು ಅನುಕೂಲವಾಗುವದು. ಒಕ್ಕಲಿಗರು ಮೇಲಿನ ಭವಿಷ್ಯ ಅನುಭವ ಪಡೆಯಬಹುದು.

ಕರ್ನಾಟಕ ಟಾಯಿಮ್ಸ್.

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಜ್ಞಾನವೊ? ಅಜ್ಞಾನವೊ?.

ಅಯ್ಯಾ,

ನಾನು ಕೊಡಗು ಪೇಪರನ್ನು ಸದಾ ಓದುವ ಪದ್ಧತಿ ಇದೆ. ಕೊಡಗಿನ ಪೇಪರು ಅಂದರೆ ನನ್ನ ತಾಯಿಯ ತವರಿನ ಹಾಗೆ ಅದು ಮಾಡತಕ್ಕದ್ದೇನ? ಏನೋದ ಸಂಗತಿಯು ಲೇಖನವನ್ನು ಓದುವಾಗ ತೆಳಕ ಸಾಧಾರಣ, ನಾನು ಪೇಪರು ಓದಿ ಅದನಂತರವೆ ಪೇಪರಿನ ತಾರೀಕು ನೋಡುವ ಪದ್ಧತಿ ಹೀಗೆ ಓದುತ್ತಾ ಬರುವಾಗ ಮುದ್ದಪ್ಪನವರ ಅಧ್ಯಕ್ಷತೆಯ ಭಾಷಣ ಸಿಕ್ಕಿತು. ಇದನ್ನು ಮನಃಪೂರ್ವಕವಾಗಿ ಓದಲು ತೊಡಗಿದೆನು ನಾನು ಹೇಳಲು ಹೇಳವೆ ತೀರದು. ಮುತುವರ್ಜಿಯಿಂದ ಓದ ತೊಡಗಿದಾಗ ಮಗು ಒಂದು ಅಪ್ಪಾ, ಹಾಲು ಕೊಡಲಿಲ್ಲವೆಂಬ ಪುಕಾರು. ಅವನ್ನ ಸಮಾಧಾಯಿಸಿ ಓದ ತೊಡಗಲು ಆಡಿಗೆಯವನಿಂದ ಉಪ್ಪು ಕಟ್ಟಿಗೆ ಇಲ್ಲವೆಂಬ ಪುಕಾರು ಬಂತು ಅವನ್ನ ಸಮಾಧಾನಿಸಿ ಓದುವದನ್ನ ಮುಂದುವರಿಸಿದೆನು ಅಷ್ಟರಲ್ಲಿ ಮನೆಯ ಯಜಮಾನಗಿತ್ತಿ ಒಂದು ಕರ ಹಸುವಿನೊಂದಿಗೆ ಓಡಿ ಹೋಯಿತು ಎಂಬ ಪುಕಾರು ತಂದಳು. ಗಲಾಟೆಯೂ ಗೂಡದೆಯೆಂತ ಕೂಗಿಕೊಂಡೆನು. ಅವಕ್ಕೂ ತಕ್ಕ ಏರ್ಪಾಡು ಮಾಡಿ ನನ್ನ ಕೆಲಸಕ್ಕೆ ಸಮನಾದಿದೆನು. ಅತಿ ತಾಪತ್ರೆಯಿಂದ ಹಾಗೂ ಹೀಗೂ ಓದಿ ಮುಗಿಸಿದೆನು. ಪೇಪರಿನ ತಾರೀಕು ಮಾತ್ರ ನೋಡುವದು ಬಾಕಿ ಇತ್ತು. ಅಷ್ಟರಲ್ಲಿ ನನ್ನ ಇನ್ನೊಬ್ಬ ಬಾಲಕನು ಬಂದು ಅಪ್ಪಾ, ನೀನು ಇಡೀ ದಿನವೆಲ್ಲ ನಿನಗೆ ಪೇಪರೊ, ಏಳು ನಮ್ಮ ಜಾತೆಯಲ್ಲಿ ಚೆಂಡಾಡುವದಕ್ಕೆ ಬಾ, ಎಂತ ಹೇಳಿ ಪೇಪರನ್ನು ನನ್ನ ಕೈಯಿಂದ ಕಿತ್ತು ದೂರ ದೂರು ಮಾಡಿಬಿಟ್ಟನು ನನಗೆ ಕೋಪ ಬಂತು. ಮಾಡತಕ್ಕದ್ದೇನು? "ಮಕ್ಕಳ ಕೊಡೆಟ್ ಕಾರಬೆಂಗಿ ತೊಡೆನ ಅಡಪಡಿಂಡ" ಅವನನ್ನು ಸಲಪಡಿಸಿ ಮುದ್ದಪ್ಪನವರ ಭಾಷಣವನ್ನು ಮನಸ್ಸಿನಲ್ಲಿಯೇ ಯೋಚಿಸಿದೆನು ತಾರೀಕು ಪಲಾಯನವಾಯಿತು.

ಮಿ. ಮುದ್ದಪ್ಪನವರ ಭಾಷಣವು ಬಹಳ ಚೆನ್ನಾಗಿದೆ ಮುದ್ದಪ್ಪನವರು ತನ್ನ ಹೆಸರನ್ನು ತಾನು ಮನಸ್ಸಿನಲ್ಲಿ ಮರೆಸಿಕೊಳ್ಳಲಿಲ್ಲವಾಗಿ ನಂಬಬೇಕಾಗಿದೆ ಅವರ ಪಾಂಡಿತ್ಯಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ಇವರು ಬಿ. ಎ. ಬಿ. ಎಲ್. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವುದಕ್ಕೆ ನಾನು ಮತ್ತಷ್ಟು ಸಂತೋಷಪಡುತ್ತೇನೆ. ಆದರೆ ಕೊಡಗಿನ ಗೌಡುಗಳ ಪೈಕಿ ಇವರು ಒಬ್ಬರೆ ಇಂತಾ ಪಾಂಡಿತ್ಯವುಳ್ಳವರೊ ಯೂ ಬೇರೆ ಅನೇಕರು ಇದ್ದಾರೊ ಎಂಬುದು ನನಗೆ ಗೊತ್ತಿರುವುದಿಲ್ಲ ಅದು ಹಾಗಿರಲಿ. ಆದರೆ ಮುದ್ದಪ್ಪನವರು ಎಲ್ಲಾ ಚರಿತ್ರೆಗಳನ್ನು ಚೆನ್ನಾಗಿ ಓದಿರಬಹುದು. ಕೊಡಗಿನ ಚರಿತ್ರೆ, ಮಾತ್ರ ಓದದ್ದರಿಂದ ಅಂಥಾ ಭಾಷಣ ಮಾಡಿರುವದಾಗಿ ಊಹಿಸಬೇಕಾಗಿದೆ. ದೇಶದೇಶದಲ್ಲಿ ಹೆಚ್ಚಿನ ಮೇಲಧಿಕಾರವು ದೇಶಸ್ಥರಿಗೆ ಇರಬೇಕೆಂಬ ಹೋರಾಟದಲ್ಲಿರುವಾಗ್ಯೆ ಮುದ್ದಪ್ಪನವರು ಮೇಲಧಿಕಾರಕ್ಕೆ ಜನರನ್ನು ಬೇರೆದೇಶದಿಂದ ಕರೆಸಬೇಕೆಂಬ ಭಾಷಣಮಾಡಿದ್ದು ತಿಳಿಗೇಡಿತನವೊ ಏನು? ಕೊಡಗಿನ ಮೂಲನಿವಾಸಿಗಳು ಕೊಡಗರೆಂಬುದು ಮುದ್ದಪ್ಪನವರಿಗೆ ತಿಳಿಯದೋ? ಕೊಡಗರು ಪಕ್ಷಪಾತಿಗಳಾಗಿದ್ದರೆ ವೀರರಾಜ ಲಿಂಗರಾಜರ ಕಾಲದಲ್ಲಿಯೆ ಬೇರೆ ಜಾತಿಗಳನ್ನೆಲ್ಲಾ ಹಿಂದಕ್ಕೆ ಅಟ್ಟಿ ಕೊಡಗಿನಲ್ಲಿ ಅಂಗ್ಲ ಆಗಲಿ ಸ್ಥಿರ ಬೇರೆಕಡೆ ಮಾಡುತ್ತಿದ್ದರು. ಕೊಡಗು ದೇಶದಲ್ಲಿ ಯಾವ ಜಾತಿಯೇ ಆಗಲಿ, ಜನಭರಿತವಾಗಿರಬೇಕೆಂಬ ಆಲೋಚನೆಯಿಂದಲೂ ಪ್ರೀತಿಯಿಂದಲೂ ಆಗಿನ ಕೊಡಗರು ಬೇರೆಯವರಿಗೆ ಎಡೆಕೊಟ್ಟದ್ದಾಗಿದೆ ಇತರರನ್ನು ತನ್ನವರಂತೆ ಗಣಿಸಿದ್ದರಿಂದಲೇ ಬ್ರಿಟಿಷ್‌ನವರು ಕೊಡಲಿಕ್ಕೆ ಹೋದ ರಾಜತ್ವವನ್ನು ತ್ಯಜಿಸಿದ್ದು ಎಂದು ಮುದ್ದಪ್ಪನವರಿಗೆ ತಿಳಿದು ಬರಲಿಲ್ಲವೋ? ಕೊಡಗರು ಈಗಲೂ ಸಹ ತಮ್ಮ ಹಿರಿಯರು ಕೊಡಗೇತರರಿಗೆ ತೋರಿಸುತ್ತಿದ್ದ ಪ್ರೀತಿಯನ್ನೂ ಸಹಾಯವನ್ನೂ ನಡಿಸುತ್ತಾ ಬರುತ್ತಿದ್ದಾರೆ. ಒಟಾರೆ ಕೊಡಗರು ನಿಷ್ಪಕ್ಷಪಾತಿಗಳೆಂಬದಕ್ಕೆ ಅನೇಕ ಉದಾಹರಣೆಗಳು ಇವೆ. ಕೊಡಗು ದೇಶದ ನಿವಾಸಿಗಳಿಗೆನೇ (ಹಿಂದೂ, ಮುಸಲ್ಮಾನ್, ಕ್ರಿಶ್ಚಿಯನ್) ಎಲ್ಲಾ ದೊಡ್ಡ ಅಧಿಕಾರ ದೊರೆಯಬಾರದೆಂತ ಮುದ್ದಪ್ಪನವರು ಹೇಳಿದ್ದು ಸರಿಯಾದರೆ ಮುದ್ದಪ್ಪನವರು ಪುನಹ ಪ್ರೈಮರಿ ಕ್ಲಾಸಿಗೆ ಓದಲಿಕ್ಕೆ ಬಂದ ಹಾಗೆ ಆಯಿತು.

ಕೆಲವು ಕಾಲದವರೆಗೆ ದೇಶಿಯರಿಗೆ ದೊಡ್ಡ ಉದ್ಯೋಗ ಕೊಡಕೂಡದೆಂತ ಮುದ್ದಪ್ಪನವರು ಹೇಳುತ್ತಾರೆ. ಮುದ್ದಪ್ಪನವರ ಕುಟುಂಬದಲ್ಲಿ ಹೆಚ್ಚು ಜನರಿರಬಹುದು. ಆದರೂ ಈಗೆ ಅನೇಕ ಕಲಹಗಳು ನಡೆಯಬಹುದು. ಇದನ್ನೆಲ್ಲಾ ಸರಿಪಡಿಸಲಿಕ್ಕೆ ಬೇರೆದೇಶದಿಂದ ಒಬ್ಬರನ್ನು ಕರಿಸುವದು ಉತ್ತಮವಲ್ಲವೋ? ದೇಶಿಯ ಉದ್ಯೋಗಸ್ಥರು ದೇಶದವರ ಕ್ಷೇಮ ಚಿಂತಕರೆಂಬುದನ್ನೇ ಮುದ್ದಪ್ಪನವರು ಬಾವಿಸಬೇಕಾಗಿತ್ತು "ಅಂಗೈಹುಣ್ಣಿಗೆ ಕನ್ನಡಿ ಬೇಕೇ."

ದೊಡ್ಡ ಉದ್ಯೋಗಸ್ಥರನ್ನು ಮೂರು ವರುಷಕ್ಕೆ ಒಂದು ಪ್ರಾಂತ್ಯದಲ್ಲಿ ಇಡಕೂಡದೆಂತ ಮುದ್ದಪ್ಪನವರು ಹೇಳುತ್ತಾರೆ ಹೆಚ್ಚು ವರುಷ ಇದ್ದಲ್ಲಿ ಪ್ರಜೆಗಳ ಗುಟ್ಟು ತೃಪ್ತಿಕರವಾಗಿ ಸಿಕ್ಕುವದರಿಂದ ಸರಕಾರಕ್ಕೂ ಪ್ರಜೆಗಳಿಗೂ ಗಲಾಟೆ ಕಮ್ಮಿಯಾಗುತ್ತೆಯೆಂಬುದು ಮುದ್ದಪ್ಪನವರು ತಿಳಿಯಲಿಲ್ಲ ೭ವರುಷದ ಹಿಂದೆ ಒಬ್ಬ ಮೇಜಿಸ್ಟ್ರೇಟರು ಅವರು ಹುಟ್ಟಿದ ತಾಲೂಕಿನಲ್ಲೇ ಉದ್ಯೋಗ ಮಾಡಿದರು ಮೇಜಿಸ್ಟ್ರೇಟರಿಗೆ ನಮ್ಮ ಸಂಗತಿಗಳೆಲ್ಲಾ ಗೊತ್ತಿರುವದರಿಂದ ನಾವು ಅವರಲ್ಲಿಗೆ ಕೇಸುತೆಗದುಕೊಂಡು ಹೋಗುವುದಿಲ್ಲವೆಂದು ನಾಲ್ಕೈದು ಜನರು ನನ್ನಲ್ಲಿ ಹೇಳಿರುತ್ತಾರೆ. ಇದರಿಂದ ಊರಿಗ ಕ್ಷೇಮ. ಕೊಡಗು ನಿವಾಸಿಗಳ ಪೈಕಿ ಸುಮಾರು ನೂರಕ್ಕೆ ೯೦ಜನರು ಭೂಮಿ ಹಿಡುವಳಿದಾರರು. ಈ ಪೈಕಿ ೩,೫ ಜನರಿಗೆ ದೊಡ್ಡ ಉದ್ಯೋಗ ಕೊಡಗು ದೇಶವೆಂಬುದು ಅವರವರ ತಮ್ಮ ಮನಯನ್ನು ಎಚ್ಚರಿಕೆಯಿಂದ ಕಾಯಬೇಕೆಂಬ ಅಭಿಲಾಷೆಯಿಂದ ಅವರು ಪೆಷ್ಟಿನ್ ಕೊಂಡರೆ ತೆಗೆದುಕೊಳ್ಳುತ್ತಾರೆ. ಇದನ್ನ ದೇಶೀಯ ದೊಡ್ಡ ಉದ್ಯೋಗಸ್ಥರು ಮನಸ್ಸಿನಲ್ಲಿಟ್ಟುಕೊಂಡು ಮುತುವರ್ಜಿಯಿಂದ ಕೆಲಸಮಾಡುವದು. ಮುದ್ದಪ್ಪನವರಿಗೆ ಅನವಧಾನವೋ?

ರಾಗಾನು ಒಂದು ರಾಹೇಡಾ ಪಡಪಕ್ಷಿನೆ ತಾಂಯೆ। ಅವರವರ ದ್ಯಾನು ಸಂಬಂಧ ಮಾಡುವ ಉದ್ಯೋಗಕ್ಕೆ ಸಾವ್ಗಗಳು ಮನಸ್ತಾಪ ಮಾಡುವದು ನ್ಯಾಯವಲ್ಲ. ಮುಂದಿನ ಸಂಗತಿಗೆ ಎಲ್ಲಾ ಉತ್ತರು ಯಸರು, ಪನು ಎಂಬುದು ಓದಿ ತಿಳಿಯಿರಿ ಮುದ್ದಪ್ಪನವರೇ!

ಬಿ ಕುಶಾಲಪ್ಪ.

ಸಂಪಾಜೆಯಲ್ಲಿ ಒಂದು ಆಸ್ಪತ್ರೆ ಆಗತ್ಯವಲ್ಲವೇ?

ಅಯ್ಯಾ,

ಈಗಿನ ನವನಾಗರಿಕತೆಯ ಕ್ರಮಕ್ಕನುಸಾರವಾಗಿ ಸರಕಾರವು ಇಲ್ಲವೆ ಸರಕಾರವನ್ನು ಹೊಂದಿಕೊಂಡಿರುವ ಇತರ ಸಂಸ್ಥೆಗಳು ನಗರ ಸೌಕರ್ಯಕ್ಕಾಗಿ ಧಾರಾಳವಾಗಿ ಹಣ ವನ್ನ ಮಾಡುವುದಲ್ಲದೆ, ಅವುಗಳನ್ನ ಶೃಂಗರಿಸುವುದಕ್ಕೆ ನೀರಿನಂತೆ ದ್ರವ್ಯವನ್ನು ಚೆಲ್ಲುವರು ಪಟ್ಟಣಗಳಲ್ಲಿ ಎಲ್ಲಿನ (ಪೈಪಿನ) ನೀರೇನು? ಎದ್ಯುಚ್ಛಕ್ತಿಯ ದೀಪಗಳ ನೋಟವೇನು! ಆಸ್ಪತ್ರೆಗಳ ಸೌಕರ್ಯವೇನು! ಆದರೆ ಹಳ್ಳಿಹಳ್ಳಿಗಳಲ್ಲಿರುವ ಜನರ ಗತಿಯೇನು? ಅವರ ಪಾಡು ಮೂಕ ಪ್ರಾಣಿಗಳಿಗಿಂತ ಬಹಳ ಉಚ್ಛ ಸ್ಥಿತಿಯಲ್ಲಿರಲಾರದು "ಅವರಿಗ ರೋಗರುಜಿನಗಳು ಒದರೆ ದೇವರೆ ವೈದ್ಯನು, ನೀರೆ ಔಷಧಿ." ಜನಾಂಗಕ್ಕೆ ಆಧಾರ ಸ್ಥಂಭವಾಗಿರುವ ಹಳ್ಳಿಯ ಜನರ ಗತಿಯು ಹೀಗಾದುದರಿಂದಲ್ಲವೆ ಇಂದು ಹಿಂದೂ ದೇಶವು ಒದತನದ ಪಟ್ಟಿನಿಂದ ತತ್ತರಿಸ ತ್ತಿರುವುದು! ಇದರಿಂದಲ್ಲವೆ ಅಕಾಲ ಮರಣವು ಇಲ್ಲಿ ಮನೆ ಮಾಡಿಕೊಂಡಿರುವುದು!

ನಮ್ಮ ಕೊಡಗಿನ ಸ್ಥಿತಿಯು ಹಿಂದುಸ್ಥಾನದ ಇತರ ಭಾಗಗಳಿಗಿಂತ ಬಹಳ ಉಚ್ಛಸ್ಥಿತಿಯಲ್ಲಿರುವುದೇ ಇಲ್ಲ. ಕೊಡಗು ಸರಕಾರಕ್ಕೆ ತನ್ನ ಪ್ರಜೆಗಳ ಸೌಖ್ಯದ ವಿಷಯ ತುಂಬಾ ನಿಗಾ ತೆಗೆದುಕೊಳ್ಳಲಿಕ್ಕೆ ಬಹಳ ತರದಲ್ಲಿ ಅನುಕೂಲವಿದೆ ಇದು ಬಲು ಚಿಕ್ಕ ಪ್ರದೇಶ, ಇಲ್ಲಿಯ ರಾಜ್ಯಾಧಾಯವು ನಾಕಷ್ಟು ಉಚ್ಛಸ್ಥಿತಿಯಲ್ಲಿರುವುದು. ಹೀಗಿರುತ್ತಾ ಇಲ್ಲಿ ಅಲ್ಲಲ್ಲಿ ಆಸ್ಪತ್ರೆಗಳ ಸೌಕರ್ಯವನ್ನಾದರೂ ಒದಗಿಸಿಕೊಡುವಷ್ಟು ಉದಾರ ಮನಸ್ಸನ್ನು ಸರಕಾರವು ಇಲ್ಲವೆ ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡದಿರುವುದು ಬಹ ಪ್ರಜೆಗಳ ದುರ್ದಸೆಯೆಂತಲೇ ಹೇಳಬೇಕಾಗುವುದು. ಹೀಗೆ ಆಸ್ಪತ್ರೆಗಳ ಸೌಕರ್ಯವನ್ನು ಬಯಸುವ ಊರುಗಳಲ್ಲಿ ಸಂಪಾಜೆಯು ಒಂದನೆಯದಾಗಿರುವುದೆಂದು ನಿಸ್ಸಂದೇಹವಾಗಿ ಹೇಳಬಹುದು. ಈ ಸ್ಥಳವು ಘಾಟಿಗಳ ಅತಿಪ್ರದೇಶವಾದುದರಿಂದ ಮಲೇರಿಯಕ್ಕೆ ತವರುಮನೆಯಾಗಿದೆ ಇದರಲ್ಲಿ ಮಲೇರಿಯದ ಉಪದ್ರಕ್ಕೆ ತುತ್ತಾಗದ ಮನುಷ್ಯರೇ ಇಲ್ಲಿಲ್ಲ. ಜ್ವರಗಡ್ಡೆಯಿಂದ ಲಂಬೋದರರಾಗಿರುವ ಮನುಷ್ಯರು ತಮ್ಮ ಕೆಲಸಗಳನನ್ನಾದರೂ ಎಂತು ಸುಯಾಗಿ ಮಾಡಿಯಾರು? ಇಂಥಾ ಜನರಲ್ಲಿ ಜನ್ಮವೆತ್ತಿದ ಶಿಶುಗಳಾದರೂ ಎಷ್ಟು ಬಲಶಾಲಿಗಳಾದ ಮನುಷ್ಯರಾಗ ಬಹುದು! ಹುಟ್ಟಿದಂದಿನಿಂದ ಜ್ವರಕ್ಕೆ ಬಲಿ ಬೀಳುವ ಹಸುಕೂಸುಗಳು ಮುಂದೆ ಎಂತು ಮನುಷ್ಯ ಪ್ರಮಾಣಕ್ಕೆ ಬೆಳೆಯ ಬಹುದು? ಅದಲ್ಲದೆ ಇಲ್ಲಿಯಷ್ಟು ಶಿಶು ಮರಣವು ಮತ್ತೆಲ್ಲಿಯೂ ಇಲವೊದು ಕಣು ಮುಚಿ ಹೇಳಬಹುದು. ಅಂತಿರಲು ಸಂಪಾಜೆಯಲ್ಲಿ ಒಂದು ಆಸ್ಪತ್ರೆಯು ಆಗತ್ಯವಲ್ಲವೆ?

ಇಲ್ಲಿಂದ ಮಡಿಕೇರಿಗೆ 18 ಮೈಲು ದೂರವಾಗಿದೆ. ಪುತ್ತೂರು, ವಿರಾಜ ಗಾಮಗಳಿಗೆ 25 ಮೈಲು ದೂರವಾಗಿದೆ. ಆದ್ದರಿಂದ ಮಡಿಕೇರಿಗೆ ಹೋಗಿಯಾದರೂ ಔಷಧಿ ತರುವಷ್ಟು ಐಶ್ವರ್ಯವಂತರು ಇಲ್ಲಿ ಅತಿ ವಿರಳ. ಕಡೆಗೆ ಇಲ್ಲಿಯ ರೋಗರುಜಿನಗಳೆಲ್ಲಾ ಭೂತ ಪಿಶಾಚಗಳ ಉಪದ್ರವೆಂದೂ, ಅವುಗಳನ್ನು ತಾವು ಮಂತ್ರಗಳಿಂದ ಗುಣಮಾಡುತ್ತೇವೆಂದೂ, ವಂಚಿಸುವ ಮಲಬಾರಿನ ಕೆಲವು ರಕ್ಕ ವೈದ್ಯರ ಬಲೆಗೆ ಬಿದ್ದು ಕಷ್ಟನಷ್ಟಗಳಿಗೆ ಗುರಿಯಾಗುವರು. ಹೆಚ್ಚೇಕೆ ಮರಣಕ್ಕನೇ ಗುರಿಯಾಗುವರು ಇಷ್ಟು ಬಡತನದಲ್ಲಿಯೂ ಇಷ್ಟು ಮೂಢತನದಲ್ಲಿಯೂ ನರಳುವ ಪ್ರಜೆಗಳ ಹಿತವನ್ನು ಮಾಡಲು ಎಣಿಸುವದು ಡಿಸ್ಟ್ರಿಕ್ಟ್ ಬೋರ್ಡಿನ ಕರ್ತವ್ಯವಲ್ಲವೆ? ಇಲ್ಲಿಯ ಜನರ ಸ್ಥಿತಿಯು ಹೀಗಿರುವುದಲ್ಲದೆ, ಇಲ್ಲಿ ಎರಡು ರಬ್ಬರ್ ತೋಟಗಳಿದ್ದು ಅಲ್ಲಿಯ ಕೂಲಿ ಜನರ ಸ್ಥಿತಿಯು ತಮ್ಮ ಸರಿಯಪರಿಕೆಯೇ ನಿಕೃಷ್ಟ ಸ್ಥಿತಿಯಲ್ಲಿರುವುದು. ಈ ಎಲ್ಲಾ ಕಾರಣಗಳಿಂದ ದಯಾಳು ಡಿಸ್ಟ್ರಿಕ್ಟ್ ಬೋರ್ಡು ಇಲ್ಲಿಯೊಂದು ಆಸ್ಪತ್ರೆಯನ್ನು ಕೂಡಲೆ ತೆರೆಯುವಂತೆ ಏರ್ಪಡಿಸಬೇಕಾಗಿ ಪ್ರಾರ್ಥಿಸುವ,

'ಸಂಪಾಜೆಯ ಒಬ್ಬ ನಿವಾಸಿ.'

ವೃತ್ತಾಂತ ಪತ್ರಿಕೆಗಳು

ಮಹನೀಯರೇ,

ಚರಿತ್ರೆಯು ಆಯಾ ದೇಶದಲ್ಲಿ ನಡೆದ ಪೂರ್ವಕಾಲದ ವೃತ್ತಾಂತವನ್ನು ತಿಳಿಸುತ್ತದೆ ಎನ್ನುವುದು ಎಲ್ಲರಿಗೂ ತಿಳಿದೇ ಇದೆಯಷ್ಟೆ. ಆದರೆ ವರ್ತಮಾನ ಪತ್ರಿಕೆಗಳಿಲ್ಲದಿದ್ದರೆ ನಮ್ಮ ಕಾಲದಲ್ಲಿ ಏನೇನು ನಡೆಯುತ್ತಿವೆ ನಮಗೆ ತಿಳಿಯದೇ ಹೋಗುತ್ತಿತ್ತು. ಏಕೆಂದರೆ, ವರ್ತಮಾನ ಪತ್ರಿಕೆಗಳು ತತ್ಕಾಲದಲ್ಲಿ ನಡೆವ ಸಂಗತಿಗಳನ್ನು ತಿಳಿಸುವ ಚರಿತ್ರೆಯಾಗಿವೆ.

ವರ್ತಮಾನ ಪತ್ರಿಕೆಗಳನ್ನೋದುವುದು ನಿಷ್ಫಲವೆಂತಲೂ, ಅವನ್ನೋದುವುದರಲ್ಲಿ ಕಳೆದ ಕಾಲವು ವ್ಯರ್ಥವೆಂತಲೂ ಕೆಲವರು ಹೇಳುವರು ಹೀಗೆ ಹೇಳುವುದು ಸರಿಯಲ್ಲ. ಪತ್ರಿಕೆಗಳಲ್ಲಿ ಕೆಲವಂಶಗಳು ಕೆಲವರಿಗೆ ಮಾತ್ರ ಅನುಪಯುಕ್ತವಾಗಿರ ಬಹುದಾದರೂ, ಈ ಕೆಲವಂಶಗಳಿಗಾಗಿ ಪತ್ರಿಕೆಗಳೋದುವುದನ್ನೇ ಸಂಪೂರ್ಣವಾಗಿ ಬಿಡುವುದು ಅನುಚಿತವು. ವರ್ತಮಾನ ಪತ್ರಿಕೆಗಳಿಂದ ಹೊಸ ಹೊಸ ವಿಚಾರಗಳೇ ಅಲ್ಲದೆ, ಇನ್ನೂ ಹಲವು ಬಗೆಯ ವಿಷಯಗಳು ತಿಳಿಯಬರುವುವು ಮೊದಮೊದಲು ಪ್ರಕಟಿಸಿದ ವೃತ್ತಾಂತ ಪತ್ರಿಕೆಗಳಿಗೆ ರಾಜ್ಯಭಾರದ ಆಗುಹೋಗುಗಳನ್ನು ಪ್ರಜೆಗಳಿಗೆ ಬೋಧಿಸುವುದೂ, ಕ್ಷೇಮ-ವಾದ ವಿಪತ್ತಿನ ವಿಷಯದಲ್ಲಿ ಪ್ರಜೆಗಳ ಪ್ರಾರ್ಥನೆಯನ್ನು ಸರಕಾರದವರಿಗೆ ತಿಳಿಯಪಡಿಸುವುದೂ, ಮುಖ್ಯೋದ್ದೇಶಗಳಾಗಿದ್ದುವು ಈಗಿನ ಪತ್ರಿಕೆಗಳು ಈ ಕೆಲಸವನ್ನು ಮಾಡುವುದಲ್ಲದೆ ರಾಜ್ಯ ತಂತ್ರ, ನೀತಿ, ವಿದ್ಯೆ, ಜಾತಿ, ಮತ ಮುಂತಾದ ಅನೇಕ ವಿಷಯಗಳಲ್ಲಿ ತಿಳಿಯಬೇಕಾದುದನ್ನೂ ಬೋಧಿಸುತ್ತವೆ. ಈಗ ಶ್ರೇಷ್ಠವಾದ ಪತ್ರಿಕೆಗಳನ್ನು ನಡಿಸುವವರು ಸಕಲ ಶಾಸ್ತ್ರಗಳನ್ನೂ ತಿಳಿದ ಪಂಡಿತರು. ಆದುದರಿಂದ ಅವರ ಪತ್ರಿಕೆಗಳಲ್ಲಿ ಬರೆಯಲ್ಪಡುವ ವಿಚಾರಗಳು ಬಹಳ ಚೆನ್ನಾಗಿರುತ್ತವೆಯಾದುದರಿಂದ ಜನರೆಲ್ಲಾ ಓದಿ ತಿಳಿಯಬಹುದು. ಇಂಥಾ ಪತ್ರಿಕೆಗಳಿಂದ ಅಗತ್ಯ ಕೆಲಸಗಳು ಸಿದ್ಧವಾಗಿವೆ ಇವು ರಾಜ್ಯಭಾರಗಳನ್ನ ತಲೆ ಕೆಳಗೂ ಮಾಡಿಸುವುದು ಇದಲ್ಲದೆ ಭೌತಿಕ ಶಾಸ್ತ್ರ ಜ್ಯೋತಿ ಶಾಸ್ತ್ರ ಮುಂತಾದುವುಗಳಲ್ಲಿ ವಿದ್ವಾಂಸರು ಹೊಸದಾಗಿ ಕಂಡು ಹಿಡಿದ ವಿಷಯಗಳನ್ನ ನಿಯಬೇಕಾದರೂ, ವರ್ತಮಾನ ಪತ್ರಿಕೆಯನ್ನು ಬಿಟ್ಟು ಮತ್ತಾವುದೂ ಇಲ್ಲ. ಒಂದು ದೇಶದ ಪತ್ರಿಕೆಯನ್ನು ಮತ್ತೊಂದು ದೇಶದವರು ಓದುವುದರಿಂದ ಎರಡು ದೇಶದ ಆಗುಹೋಗುಗಳನ್ನ ತಿಳಿಯಲು ಪರಸ್ಪರ ಅಭಿಲಾಷೆ ಹುಟ್ಟಿ ಸ್ನೇಹ ಹುಟ್ಟಾಗಬಹುದು. ಈ ಕಾರಣಗಳಿಂದ ಪತ್ರಿಕೆಗಳನ್ನು ಸಾಮಾನ್ಯರು ಓದಬೇಕಾದುದಲ್ಲದೆ, ದೊರೆಗಳೂ ಅವರ ಮಂತ್ರಿಗಳೂ ಓದುವುದು ಅತ್ಯಾವಶ್ಯಕ ಅವರು ವರ್ತಮಾನ ಪತ್ರಿಕೆಗಳನ್ನೋದಿದ ಜನರಂಜಕವಾದ ಏರ್ಪಾಡುಗಳನ್ನೂ ಒದಬಾವಣೆಗಳನ್ನೂ ಮಾಡಲು ಬುದ್ಧಿ ಬಿಡದೆ ಪ್ರಜೆಗಳಿಗೆ ಕೇಡಾಗುವುದು. ಪತ್ರಿಕೆಗಳ ಉಪಯೋಗಗಳನ್ನ ರಿಯಬೇಕಾದರೆ ಯೂರೋಪ, ಅಮೇರಿಕ ದೇಶಗಳ ಚರಿತ್ರೆಗಳನ್ನೋದಬೇಕು. ಸುಮಾರು ಇನ್ನೂರು ವರ್ಷಗಳ ಕೆಳಗೆ ಇಂಗ್ಲೆಂಡಿನಲ್ಲಿ ಜನರ ನಡತೆ ಬಹಳ ಕೆಟ್ಟಿತ್ತಂತೆ. ಇದನ್ನು ತಿದ್ದಬೇಕೆಂದು "ಅಡಿಸನ್" ಎಂಬ ಒಬ್ಬ ಮಹಾ ಪಂಡಿತನು "ಸ್ಪೆಕ್ಟೇಟರ" ಎಂಬ ಪತ್ರಿಕೆಯನ್ನು ಹೊರಡಿಸಿ ಪ್ರತಿ ಪ್ರಾತಃಕಾಲದಲ್ಲಿಯೂ ಒಂದೊಂದು ವಿಚಾರವನ್ನು ಜನರಿಗೆ ಜ್ಞಾನೋದಯವಾಗುವಂತೆ ಪ್ರಕಟಿಸುತ್ತಾ ಬಂದನು. ಇದರಿಂದ ಅಲ್ಲಿಯ ಜನರು ಕೆಲವು ವರ್ಷಗಳಲ್ಲಿಯೇ ದುರ್ವ್ಯಾಪಾರಗಳನ್ನೆಲ್ಲಾ ಬಿಟ್ಟು ಸನ್ಮಾರ್ಗವನ್ನು ಹಿಡಿದರು. ಮೊದಲು ಇಂಗ್ಲೆಂಡಿನಲ್ಲಿ ವರ್ತಮಾನ ಪತ್ರಿಕೆಗಳು ರಾಜ್ಯತಂತ್ರ, ವಿಚಾರಗಳನ್ನು ಚರ್ಚಿಸಕೂಡದೆಂದು ನಿರ್ಬಂಧವಿತ್ತು. ಆದರೆ 1771ರಲ್ಲಿ ಮಾಡಿದ ಕಾನೂನಿನಿಂದ ಇದು ಹೋಯಿತು. ಅಂದಿನಿಂದ ಇಂಗ್ಲೆಂಡಿನಲ್ಲಿ ವೃತ್ತಾಂತ ಪತ್ರಿಕೆಗಳು, ಲೋಕೋಪಕಾರಕ್ಕಾಗಿ ಸರಕಾರದವರೊಡನೆ ಹೋರಾಡಿ ತುಂಬಾ ಗೌರವವನ್ನೂ, ಜನರಂಜನೆಯನ್ನೂ ಪಡೆದಿವೆ.

ಹಿಂದೂ ದೇಶದಲ್ಲಿಯೂ ವರ್ತಮಾನ ಪತ್ರಿಕೆಗಳಿಲ್ಲದ ದೊಡ್ಡ ಪಟ್ಟಣಗಳೇ ಇಲ್ಲ. ಇಂಗ್ಲೀಷಿನಲ್ಲಿಯೇ ಅಲ್ಲದೆ

ದೇಶಭಾಷೆಗಳಲ್ಲಿ ಪ್ರಕಟಿಸುತ್ತಿದ್ದಾರೆ. ಹಿಂದೂ ದೇಶ ಪ್ರೊಟೆಸ್ಟೆಂಟರು ಹೊರಟ ಪತ್ರಿಕೆಯಲ್ಲಿ ರಾಜ್ಯ ತಂತ್ರದವರನ್ನು ಚರ್ಚಿಸಿದುದರಿಂದ ಅದರ ಎಡಿಟರಿಗೆ ಗಡೀಪಾರು ಶಿಕ್ಷೆಯಾಯಿತು. ಈಗ ಅಂಥ ಭಯವೇನೂ ಇಲ್ಲ. ಯಾವ ವಿಷಯದಲ್ಲಿ ಬೇಕಾದರೂ ನ್ಯಾಯವನ್ನನುಸರಿಸಿ ಚರ್ಚಿಸುವ ಸ್ವಾತಂತ್ರ್ಯವನ್ನು ಇಲ್ಲಿನ ಪತ್ರಿಕೆಗಳು ಕಾಲಕ್ರಮವಾಗಿ ಹೊಂದಿವೆ. ಹೀಗಿರುವುದರಿಂದ ಎಲ್ಲರೂ ಪತ್ರಿಕೆಗಳಿಗೆ ಚಂದಾದಾರರಾಗಿ ಪತ್ರಿಕೆಗಳನ್ನೋದಿ ತಮ್ಮ ತಮ್ಮ ಪಾಂಡಿತ್ಯವನ್ನು ವೃದ್ಧಿಪಡಿಸಬೇಕಾಗಿ ವಿನಂತಿ

ಸಿ. ಡಿ. ಮುತ್ತಣ್ಣ ಗೌಡ.

ವ್ಯಾಪಾರದ ಮಹಿಮೆ.

ವಾಚಕರೆ!

ವ್ಯಾಪಾರದ ಮಹಿಮೆ ನೋಡುವಾಗ "ವ್ಯಾಪಾರೇ ವಸತಿ ಲಕ್ಷ್ಮೀ" ಎಂಬ ಹಳೇ ಶ್ಲೋಕಾಂಶವು ನೆನಪಿಗೆ ಬರುತ್ತದೆ. ಅಂದರೆ ಜನರಿಗೆ ಕೇಳಿದನ್ನು ಕೊಟ್ಟು ಅವರ ಮನಸ್ಸು ತೃಪ್ತಿಪಡಿಸುವ ಉಪಾಯಗಳು ಕೃತಯುಗದಲ್ಲಿ ಬಹಳಷ್ಟು [illegible]

[illegible]

ಇನ್ನೂ ಕಾಲವು [illegible] ಸವೇ ಬೇಕಾದ [illegible] ಬಂದರೆ [illegible] ಮೇಲಿನವು ಅವರ ಸಾಮಾನುಗಳ [illegible] ಇನ್ನೂ ಸ್ವದೇಶದವರು ಒಂದು ಒಳ್ಳೆ [illegible] ಹೆಚ್ಚಿನ ಬೆಲೆ ತೆಗೆದ ಕೆಲವು [illegible] ದೇಶಕ್ಕೆ ಹಿಂದಿರುಗಿ [illegible] ಗಿ ಈತನು ಆ ಒಳಗೆ ಬೀಳುವದೂ ಉಂಟು. ಇನ್ನು ಮೂರನೆಯ ತರಗತಿಯ ಜನರು ಎಂದರೆ [illegible] ಲಂಡನ್ ಮುಂತಾದ ದೇಶಗಳ ಸಾಮಾನುಗಳಿಂದಲೂ ಬಹಳ ಒಳ್ಳೆಯವೆಂದು ತಿಳಿದುಕೊಳ್ಳುವದಲ್ಲದೆ ತೆಗೆಯದೆ ಹಿಂತಿರುಗದೇ ಇದ್ದು ಇಂಥಾ ಮಾಲು ನೋಡುವದಕ್ಕೂ ಯೋಗ್ಯತೆ ಇಲ್ಲವೆಂದು ಕೊಂಡು, ಬಹಳವಾಗಿ ಹಿಗ್ಗಿ [illegible] ಆ ಅಂಗಡಿಬಿಟ್ಟು ಇನ್ನೊಂದು ಕಡೆಗೆ ಹೋದರೂ ಅದೂ ಕೂಡ ಇದೇ ಗತಿಯಾಗುವದರಿಂದ ಹೇಗೂ ಆಗಲಿ ಎಂದು ಕೊಂಡುಕೊಳ್ಳುವ ಕಾರಣ ಹಾಗೂ ಗುಂಡಿಗೆ ಬಿದ್ದು ಬಹಳ ಹಣ್ಣು. ದೊಡ್ಡವರನ್ನು ನೋಡುವಂತೆ ಕೆಲವು ಕಷಕಾರರಿಗೆ ದಾಕ್ಷಿಣ್ಯ ಬಿಡುವದಕ್ಕೆ ಆಗದರಿಂದ ಅವರ ನಾಚಿಕೆಗೂ ಮಾತಿಗೂ ಒಳಪಟ್ಟುಕೊಂಡು ಬಹು ಮೋಸಕ್ಕೆ ಒಳಗಾಗುತ್ತಾರಲ್ಲದೆ ಹೆಚ್ಚಿನ ಖರ್ಚಿಗೆ ಅವಕಾಶವೂ ಇಲ್ಲ ಹಾಗೆ ಅವಕಾಶ ಕೊಡುವದೂ ಇಲ್ಲ. ದೊಡ್ಡವರಿಗೂ ಕಡಕಾರರಿಗೂ, ಖರ್ಚುಮಾಡುವದೆಂಬುದು ಮನಸ್ಸಿಗೆ ಕೊರತೆ ಎಂದು ತಿಳಿದುಕೊಳ್ಳುವದಲ್ಲದೆ ಸಾಮಾನ್ಯ ಜನರೆಲ್ಲರೂ ಧನಿಕರಲ್ಲದಿದ್ದರೂ ತಾವು ಧನಿಕರಾಗಬೇಕೆಂಬ ಇಚ್ಛೆಯಿಂದ ಧನಿಕರ ವೇಷ ಕೈಕೊಳ್ಳುವದರಿಂದ ಇಂಥಾವರು ಬಹಳ ಮೋಸಕ್ಕೆ ಒಳಗಾಗುತ್ತಾರೆ. ಕೊಡಗಿನಲ್ಲಿ ಮದುವೆಯ ಒಳುವಳಿಗಳು ಹೆಚ್ಚಾದ್ದರಿಂದಲೂ, ಈ ಸಮ್ಮಂಧ "ಮೂಸಕ್ಕೆ ಸಾವೃದು" ಎಂಬ ಗೌಡುಗಳ ಗಾಧೆಗೆ ಸಮಾನದವರು ಹೆಚ್ಚು ಇರುವದರಿಂದಲೂ, ಮದುವೆ ಜವಳಿಗಳನ್ನು ಹೆಚ್ಚಾಗಿ ಸಾಲವೇ ಕೊಂಡಿಕೊಳ್ಳುವದರಿಂದ ಒಂದೇ ದಿನ ಪೂರ್ತಿ ವ್ಯಾಪಾರ ಮಾಡುವದರಿಂದಲೂ ಈ ಸಮ್ಮಂಧದ ದಿನವು ಜವಳಿ ಸಾವ್ಕಾರರ ಹಬ್ಬ ದಿನವಾಗಿದೆ. ನಾವು ಸೂಕ್ಷ್ಮ ವಿಚಾರಿಸಿದರೆ ತಿಂಗಳಿಗೆ ನೂರು ರೂ. ಸಂಬಳ ಇರುವವನಿಗೂ ಪೇಟೆಯಲ್ಲಿ ತನ್ನ ಸಂಸಾರ ಪೋಷಣೆ ಮಾಡಿಕೊಂಡು ಬರುವದು ಕಷ್ಟಕರವಾಗಿರುವಲ್ಲಿ ಹಲವು ಅಂಗಡಿಗಳಿದ್ದರೂ ಪ್ರತಿಯೊಬ್ಬರೂ ಒಬ್ಬೊಬ್ಬ ...ಗಾರಿಕೆ ಮಾಡಿಕೊಂಡು ಸ...ವಿಂದ ಕಾಲ ಕಳೆ[illegible]ಂಡು, ಪೇಟೆ ಜೀವನಸಾಗಿಸಿಕೊಂಡು ಬರುವದು ಪ್ರತ್ಯಕ್ಷ ಕಾಣಬರುವದರಿಂದ ಈ ಹಣವು ಎಲ್ಲಿಯದೆಂದು ಮೊದಲು ಯೋಚಿಸಿನೋಡಬೇಕಾಗಿದೆ.

ಹಾಗೂ ಒಬ್ಬ ಜನನು ವ್ಯಾಪಾರಿಗೂ ಒಬ್ಬ ಕ್ರೈತನಿಗೂ ಮಾಡಿದ ಸಂಗತಿ ಕುರಿತು ಈಚೆಗೆ ಹೀಗೆ ವಾಗ್ವಾದ ನಡೆಯಿತು

ಕ್ರೈತ—ಏನು ಸಾಹುಕಾರರೆ! ನಾನು ಒಂದು ಪಂಚೇರು ಜಿಲ್ಲ [illegible] ತೂಕದ [illegible] ಕಲ್ಲು ಒಂದು [illegible] ಕಲ್ಲನ್ನು ಹಾಕಿದ್ದೀರಿ, ಇದು ಪಂಚೇರು ಕಲ್ಲೋ?

ಸಾಹುಕಾರರು—ಪಂಚೇರು ಕಲ್ಲು ನಿನಗೆ ಮಣದ ಬಂಟೇ ಒಂದು ಕಡ ಲೆಕ್ಕ ಗೊತ್ತಿದೆಯೋ ?!

ಕ್ರೈ—ಗೊತ್ತಿದೆ, ಪಂಚೇರೆಂದರೆ [illegible]

ಸಾ—[illegible] ಗೊತ್ತಿಲ್ಲ. ನಾನು [illegible] ಕೊಡುವದು. ಪಂಚೇರು ನಿನಗ ಗೊತ್ತಿಲ್ಲ

[illegible]

ಆದುದರಿಂದ ಈ ವಿಷಯಕ್ಕೆ [illegible] ವಾಚಕರ ಮುಂದಿಟ್ಟು ಈ ವಿಷಯವನ್ನು [illegible] ಗೊಟ್ಟು ಈ ಮೋಸಕ್ಕೆ ಒಳಗಾಗಬೇಕಾಗುತ್ತದೆ. ಈ ವಿಷಯ ಮುಂದರಿಸಬಹುದಾದರೂ ಲೇಖಕರ ಅಭಿಪ್ರಾಯ ಹಾಗಿಲ್ಲದೆಯೂ ಇಂಥಾ ಮೋಸಗಳು ಹಲವೆಡೆಯೂ ಗುವುದರಿಂದ ವಾಚಕರ ಮುಂದಿಟ್ಟು ಈ ವಿಷಯವನ್ನಿಲ್ಲಿ ಎಚ್ಚರ ಕೆಗೆದುಕೊಂ ಡಾರೆಂಬುದಾಗಿ ಸೂಚಿಸಿದ್ದಾಗಿದೆ. ಕ್ರೈತರು ತಿಳಿಗೊಡಲಿ, ಇಲ್ಲವೆ ವಿಷಲಿ ಸತ್ಯಸಂಗತಿ ಮುಂದೆ ಬಿದ್ದುದರಿಂದ ಇನ್ನಾದರೂ ಜನರ ಮುಖನೋಡಿ ಅಳೆತೆ ಮಾಡದಿದ್ದರಾರು. ಇನ್ನು ಮುಂದಾದರೂ ವ್ಯಾಪಾರಿಗಳ ವಶವರ್ತಿಗಳಾಗದೆ ಕಡ ಕೊಡಕೊಳ್ಳುವದರಲ್ಲಿ ಮುಂಜಾಗರೂಕರಾಗಿರಬೇಕಾಗಿ ನನ್ನ ಪ್ರಾರ್ಥನೆ.

ಪ್ರತ್ಯಕ್ಷ ದರ್ಶಿ.

ಉತ್ತರ ಕೊಡಗು ತಾಲೋಕು.

ಆರ್ಯ್ಯ,

ಈ ತಾಲೋಕು ಹೆಡ್ ಕ್ವಾರ್ಟರು ಮಡಿಕೇರಿಯಿಂದ ಸೋಮವಾರಪೇಟೆಗೆ ತಾ. 15ರಲ್ಲಿ ವರ್ಗಾಯಿಸಲ್ಪಟ್ಟಿದೆ. ಮಡಿಕೇರಿಯಿಂದ ಬೇರೆ ಸ್ಥಳಕ್ಕೆ ಬದಲಾಯಿಸಿದ ಅಭಿಪ್ರಾಯವು ಸಾಧುವಾದದ್ದಾದರೂ ಸೋಮವಾರಪೇಟೆಗೆ ವರ್ಗಾಯಿಸಿದ ವಿಷಯ ಸರ್ವ ಸಮ್ಮತವಾಗುವಂತೆ ತೋರುವುದಿಲ್ಲ.

ಹೇಗೆಂದರೆ ಈಗಿನ ಉತ್ತರ ಕೊಡಗು ತಾಲೋಕಿಗೆ ಸೋಮವಾರಪೇಟೆಯು ಮಧ್ಯಸ್ಥಾನದ ಸ್ಥಳವಲ್ಲ. ಕಾಯಂತರವಾಗಿ ಬಾಗಮಂಡಲ ನಾಡಿನ ಅಥವ ನಾಪೋಕ್ಲು ನಾಡಿನ ರೈತರು ತಾಲೋಕು ಆಫೀಸಿಗೆ ಹೋಗಿ ಬರಬೇಕಾದ ಸಂದರ್ಭ ಒದಗಿದ್ದಲ್ಲಿ ಸುಮಾರು 45 ಅಥವ 50 ಮೈಲು ಕ್ರಮಿಸಬೇಕಾಗುತ್ತೆ. ಇಷ್ಟು ದೂರ ಪ್ರಯಾಣವು ಗಟ್ಟಿ [illegible] ಸಾಧ್ಯವಾದವರು ಸಹ [illegible] ಇಷ್ಟು ದೂರದ [illegible] ಬೇಕಾಗುತ್ತೆ. [illegible] ಕಾರಣ ಉತ್ತರ ಕೊಡಗು [illegible] ಈ ಅಂಶಗಳು [illegible] ಇರುವುದು ಕಂಡು ಬರುತ್ತದೆ.

ಈ ತಾಲೋಕಿನ [illegible]

[illegible]

ಸೋಮವಾರಪೇಟೆಯು [illegible]

[illegible] ಬೇರೆ ಕೋರ್ಟಿನ ದ್ವಾರ ಮಾಡಿಕೊಂಡಾಗುತ್ತೆ.

ಈ ಅಭಿಪ್ರಾಯವು ಸಾರ್ವಜನಿಕರಿಗೆ ಸೂಕ್ತವಾಗಿ ತೋರಿದರೂ ಸರಿಯಾದ ಕಟ್ಟಡಗಳು ಇಲ್ಲವೆಂಬ ಕಾರಣದಿಂದ ಮಡಿಕೇರಿಯಲ್ಲಿಯೇ ಮುಂದುವರಿಸಿ ಸ್ಥಳಾಂತರ ಮಾಡುವ ಅಭಿಪ್ರಾಯವನ್ನು ಹೇಳದಿರಬಹುದು. ಅಂದರೆ ಹೊಸ ಕಟ್ಟಡದ ಕಾರಣವೇನೂ ಇಲ್ಲ. ಈಗ ನಾಡು ಕಚೇರಿಯ ಕಟ್ಟಡವಿರುವ ಇಂಡಿಯನ್ ಆಫೀಸರ್ ಕ್ವಾರ್ಟರ್ಸ್ ಕಟ್ಟಡಗಳಿಂದ ತಾಲೋಕು ಆಫೀಸಿಗೆ ತಕ್ಕಂತೆ ಮಾಡಿಕೊಳ್ಳಬಹುದು. ಸುಭೇದಾರರವರ ವಾಸಕ್ಕೆ ಪೊಲೀಸ್ ಇನ್‍ಸ್ಪೆಕ್ಟರವರಿಗಾಗಿ ಕಟ್ಟಿದ್ದ ಬಂಗ್ಲೆಯು ಎಲ್ಲಾ ವಿಷಯಗಳಲ್ಲಿಯೂ ಅನುಕೂಲವಾಗಿರುತ್ತೆ. ಮೋಟಾರು ಕಾರುಗಳ ಸೌಲಭ್ಯಗಳಿರುವದರಿಂದ ಇಲ್ಲಿಯ ಟ್ರಾವಲರ್ಸ್ ಬಂಗ್ಲೆಗೆ ವಿಶೇಷ ಪ್ರಯೋಜನವು ಇರುವುದಿಲ್ಲವಾದರೂ ಇನ್ಸ್‌ಪೆಕ್ಷನಿಗೆ ಬರುವ ಇಂಡಿಯನ್ ಆಫೀಸರುಗಳಿಗೆ ಅಲ್ಲಿಯೋ ವಸತಿಗಳನ್ನು ಕಲ್ಪಿಸಬಹುದು.

ಈ ವಿಷಯಕ್ಕೆ ಸರಕಾರದವರೂ, ಕೌನ್ಸಿಲ್ ಮೆಂಬರುಗಳೂ, ತಾಲೋಕಿನವರೂ ಗಮನ ಕೊಡುವರಾಗಿ ನಂಬುತ್ತೇನೆ.

"ಹಿತಚಿಂತಕ"

FOR SALE.

The following property about ten miles from Mercara, on Somwarpett road, consisting of —

	Rs.	As.	P.
Wetlands, 30·93 acres or about 1000 batties at Rs. 500/ per 100 batties ...	5000	0	0
Coffee, 33·46 acres at Rs. 400/ per acre	13200	0	0
Bane and Jungle, 90·00 acres. at Rs. 20/ per acre ...	1800	0	0
Total 154·39 acres.	20000	0	0

With a decent upstaired house, out-houses, and cooly lines, is open for sale.

Please apply to —

R. Framjee,
Mercara.

12—3

ಆಸ್ತಿ! ಮಾರಾಟಕ್ಕೆ!! ಆಸ್ತಿ!!!

ವೀರರಾಜೇಂದ್ರಪೇಟೆ ದೇವಾಂಗದ ಬೀದಿಯಲ್ಲಿ ಅಂದರೆ ಮೆ· ತಮ್ಮಯ್ಯರಾಯರವರ ಸಾಲಿನಲ್ಲಿ (ಬಾಜು) ಒಂದು ಮನೆಯಿದೆ. ಇದಕ್ಕೆ ಒತ್ತಾಗಿ ಒಂದು ಪ್ರತ್ಯೇಕ ಆಫೀಸುಮನೆ, ಒಂದು ಉದ್ದವಾದ ಸರ್ವ ಕೆಲಸಕ್ಕೆ ಅನುಕೂಲವಾದ ಲೈನು, ಕಲ್ಲುಕಟ್ಟಿದ ಬಾವಿ, ಇದಕ್ಕೆ ಆಸ ಕೂಲವಾಗಿ ಒಂದು ಎಕರೆ ಜಾಗ, ಇದರಲ್ಲಿ ಕಲ್ಪವೃಕ್ಷ ಗ ಒಳ್ಳೇ ಸ್ಥಿತಿಯಲ್ಲಿರುವ ಕಾಫಿತೋಟ, ಸುತ್ತಲೂ ಸರಕಾರಿ ರೋಡು ಮತ್ತು ಕಾರು, ಗಾಡಿ ವಗ್ಯೆರೆ ಓಡಾಡಲು ಅನುಕೂಲವಾಗುವಂತೆ ರೋಡು ಸಹ ಇರುವ ಮತ್ತು ಮರಮುಟ್ಟುಗಳಿಂದ ಪೂರೈಸಿ ಹಂಚು ಹೊದಿಸಿರುವ ಮೇಲ್ಕಂಡ ಮನೆಗಳು ಬಿಕರಿಗೆ ಸಿದ್ಧವಾಗಿವೆ ಖಾಯಿ ಸವಾರರು ಈ ಕೆಳಗಿನ ವಿಳಾಸದಾರರಿಗೆ ತಿಳಿಸಿ ಅಜಮಾಯಿಸಿ ಕೊಂಡುಕೊಳ್ಳಬಹುದು

ಕಂಡಿಕೋತಾ ಕುಂಬಾಪ್ರೋಕರ್ ಶಾಪ,
ವೀರರಾಜೇಂದ್ರಪೇಟೆ

4—2

ನೋಟೀಸು.

ಉತ್ತರ ಕೊಡಗು ತಾಲೋಕು, ಮಡಿಕೇರಿ ನಾಡು, ಬಿಳಿಗೇರಿ ಗ್ರಾಮದಲ್ಲಿ ಚೆಕ್ಕಡ ಪಿ. ಸುಬ್ಬಯ್ಯ, ಕುಶಾಲಪ್ಪ, ಸೋಮಯ್ಯ ಮತ್ತು ಉತ್ತಯ್ಯ ಸಹ ಈ ನಾಲ್ಕು ಜನರ ಪೆಸರಿನಲ್ಲಿ ಜಂಟಿಜಮಾಬಂದಿ ನಡೆದು ಬರುವ ಅಂದಾಜು 400 ಬಟ್ಟಿ ಭೂಮಿ, 28 ಎಕರು ಬಾಣೆ, ಒಂದು ಹುಲ್ಲಿನ ಮನೆಯನ್ನು ಸಹ ನನ್ನ ಅಣ್ಣಂದಿಯರು ನನಗೆ ವಂಚಿಸಿ ಮಾರಾಟ ಮಾಡುವರಾಗಿ ವರ್ತಮಾನ ತಿಳಿಯುತ್ತೇನೆ ಈ ಮೇಲ್ಕಂಡ ಸೊತ್ತುಗಳನ್ನು ನಮ್ಮ ತಂದೆ ಮಾಡಿದ ಪಿತ್ರಾರ್ಜಿತವಾಗಿದೆಯಲ್ಲದೆ ನಮ್ಮೊಳಗೆ ಪಾಲು ಪಂತಿ ಸಹ ಮಾಡಿಕೊಂಡಿರುವುದಿಲ್ಲ. ಇವರಿಗೆ ಈ ಸೊತ್ತುಗಳನ್ನು ಮಾರಾಟ ಮಾಡಲು ಯಾವ ಸ್ವತಂತ್ರವೂ ಇರುವುದಿಲ್ಲ. ಹಾಗೆ ಇವರು ವಿಕ್ರಯಿಸಿ ಮೇಲ್ಕಂಡ ಸೊತ್ತುಗಳನ್ನು ಪಡಕೊಂಡವರಿಗೆ ಸಿಂಧು ಆಗಲಾರದು. ಹಾಗೆ ಅವರು ಸೊತ್ತುಗಳನ್ನು ಕ್ರಯಕ್ಕೆ ಪಡಕೊಂಡರೆ ಆಗ ನನಗೆ ಉಂಟಾಗುವ ಎಲ್ಲಾ ನಷ್ಟಕಷ್ಟಗಳಿಗೆ ಪಡಕೊಂಡವರೇ ಜವಾಬ್ದಾರರಾಗಬೇಕೆಂಬ ಸಂಗತಿ ಎಚ್ಚರಿಸಿರುತ್ತೇನೆ.

ಚೆಕ್ಕಡ ಪಿ. ಉತ್ತಯ್ಯ,
ಪೋಸ್ಟಲ್ ಕ್ಲಾರ್ಕ್,
ಜನರಲ್ ಪೋಸ್ಟ್ ಆಫೀಸ್,
ಬೆಂಗಳೂರು.

2—2

ARMS & AMMUNITION MART.

Mahomedally-Noorbhoy.



337, Abdul Rehman, Street, near Crawford Market, BOMBAY.

Telegraphic Address: "SHOOTER" Bombay

[52 44] Please write for latest Catalogues.

ಎಷ್ಟು ಲಕ್ಷಣವಾಗಿದೆ! ನೋಡಿರಿ!



ನಮ್ಮ ಟಿಕ್ ಟಾಕ್ (ರಜಿಸ್ಟ್ರರ್ಡ)

ಎಂಬ ಗೋಡೆಗೆ ತಗಲಿಸುವ ಗಡಿಯಾರವು ಸರಿಹೋಲದಂತೆ ಪ್ರಖ್ಯಾತಿಗೊಂಡಿದೆ. ಸರಿಯಾದ ಗಂಟೆಯನ್ನು ತೋರಿಸುವ ಉತ್ತಮವಾದ ಗಡಿಯಾರು. ಎಲ್ಲರೂ ಮೆಚ್ಚಿರುವಂಥಾದ್ದು. ಯಾವಾಗಲೂ ಟಿಕ್ ಟಾಕ್ ಗಡಿಯಾರವನ್ನೇ ತರಿಸಿರಿ. ಕ್ರಯ. ರೂ 3—0—0 ಮಾತ್ರ.

ಜರ್ಮನ್ ಎಲಾರ್ಮ್ ಗಡಿಯಾರು.



ಕ್ರಯವು ಬಹಳ ಕಡಿಮೆ ಮಾಡಲ್ಪಟ್ಟಿದೆ. ಹೆಚ್ಚು ಪ್ರಯೋಜನದ, ಕಡಿಮೆ ಕ್ರಯದ ಟಯಮ್ ಪೀಸ್. 4 ಇಂಚು ಡಯಲಿನ ನಿಕ್ಕಲ್ ಗಡಿಯಾರು. 30 ಗಂಟೆ ವರೆಗೆ ಕೀಕೊಡಬೇಕಾಗಿಲ್ಲ ಹ್ಯಾಗೆ ಇಟ್ಟರೂ ನಡೆಯುತ್ತದೆ ಪ್ರಯಾಣಕ್ಕೆ ಒಳ್ಳೇ ಗಡಿಯಾರು. ಇದು ವಿದ್ಯಾರ್ಥಿಗಳಿಗೂ, ಸಮಯದ ಬೆಲೆ ಅರಿತವರಿಗೂ ಬಹಳ ಉಪಯೋಗವುಳ್ಳದ್ದು. ರಾತ್ರಿ ಕೆಲಸದವರಿಗೂ ಉತ್ತಮವಾದದ್ದು. ಎಲಾರ್ಮು ಹೊಡೆಯಬೇಕಾದಿರುವಾಗ ಡಯಲಿನ ಮೇಲಿರುವ ಸಣ್ಣ ಕೈಯನ್ನು ಹಿಂದುಗಡೆಯಿಂದ ತಿರುಗಿಸಿದರೆ ಕಾಲಕ್ಕೆ ಸರಿಯಾಗಿ ಎಲಾರ್ಮು ಕೊಡುತ್ತದೆ. ಮೂರು ವರ್ಷದ ಭರವಸೆ ಇದೆ. ಕ್ರಯ: ರೂ 5 ಮಾತ್ರ.

22 ಕ್ಯಾರೆಟ್ಟಿನ ಚಿನ್ನದ ಹೊದಿಕೆಯ ಕೈ ಗಡಿಯಾರ.

ಉತ್ತಮವಾದ ಸ್ವಿಸ್ ಸಾಮಾನುಗಳಿಂದ ಮಾಡಿದ ಹೊಸ ನಮೂನೆಯ ಗಡಿಯಾರವಿದು. ಕ್ರಿಸ್ಟಲ್ ಕನ್ನಡಿಯ ಅರೇಬಿಕ್ ಯಾ ರೋಮನ್ ಅಂಕೆಗಳುಳ್ಳದ್ದು. ಇದರ ಕೆಲಸವು ಎಂಥಾ ಪರಿಶೋಧನೆಯನ್ನು ತೃಪ್ತಿಪಡಿಸುವುದು. ಇದು ಪವನಿನ ಚಿನ್ನದಂತೆ ಕಾಣುತ್ತದೆ ನೋಟಕ್ಕೆ ಬಹಳ ಅಂದವಾಗಿಯೂ ಕರಾರು ಗಂಟೆ ಕೊಡುವುದಾಗಿಯೂ ಇದೆ. ಐದು ವರ್ಷದ ಖಾತ್ರಿ. ಕ್ರಯ ರೂ. 12—8—0



18 ಕೇರೆಟ್ ರೋಲ್ಡ್ ಗೋಲ್ಡ್ ರಿಸ್ಟ್ ವಾಚು. ರೂ. 7.

ಎಲಾರ್ಮು ಮತ್ತು ರಿಪೀಟರ್ ಇರುವಂಥ ಅಮೇರಿಕದ "ಬಿಗ್ ಬೆನ್" ಗಡಿಯಾರ. ರೂ. 10—8—0.

ಗಂಟೆ ಮತ್ತು ಅರ್ಧ ಗಂಟೆ ಹೊಡೆಯುವಂಥಾ "ಬೇಬಿ" ಗಡಿಯಾರ. ರೂ. 7—0—0.

ಮೇಲಿನ "ಬೇಬಿ" ಗಡಿಯಾರು ಎಲಾರ್ಮು ಸಮೇತ. ರೂ. 8—0—0.

ಮೂರುವರ್ಷದ ಖಾತ್ರಿ.

ಜರ್ಮನ್ ಎಲಾರ್ಮ್ ಗಡಿಯಾರು. ರೂ. 5.

ಜರ್ಮನ್ ನೀಗ್ರೊ ಎಲಾರ್ಮ್ ಗಡಿಯಾರು. ರೂ. 5.

ಜರ್ಮನ್ ಡಬ್ಬಲ್ ಬೆಲ್ ಎಲಾರ್ಮ್ ಟಯಮ್‌ಪೀಸು ರೂ 6—0—0.

ಲೋಕಪ್ರಸಿದ್ಧವಾದ "ಬಿ" ಟಯಮ್ ಪೀಸ್. ರೂ. 2—8—0.

ಎಮ್ಮನ್ ಫೌಂಟನ್‌ಪೆನ್ 14 ಕೇರೆಟ್ ರೋಲ್ಡ್‌ಗೋಲ್ಡ್ ನಿಬ್ಬು ರೂ. 2—8—0.

Apply to— Post Box 105.

V. S. Watch Coy
MADRAS.

12—12

WANTED.

A candidate with Inter qualification in science to undergo Motor Engineering training on a scholarship of Rs. 30 per mensem. Applicant must bind himself to serve the company for six years. Pay after training, from 75 to Rs. 100 per mensem. Applications with testimonials should reach the undersigned before the 1st July 1925.

K KUTTAYYA,
Managing Director.
Sri Kavery Motor Service.
MERCARA.

4—4.

ಕರ್ಣಾಟಕ

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಜಾ ... ಡವಿ ಜ್ವರ, ಮೊದಲಾದವುಗಳ ಮೇಲೆ ಅಸ್ರತಿಮವಾದ ಔಷಧವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦

ಟಪ್ಪಾಲು ಚಾರ್ಜು ಬೇರೆ

ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು ೯—೨—೦

ಏಜಂಟರು ಬೇಕು, ಕೊಡಗಿನ ಸ್ಕೂಲ್ಮಾಸ್ಟರುಗಳು ... ಮನ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ.

12—9

ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಅಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	5080
ಜಮಾಬಂದ ಡೇವಣಾತಿ	....	78,000

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದು.

ಒಂದು ವರ್ಷ ಸಾವಿರ ಬೆ ಅಥವ ಹೆಚ್ಚಿನ ಪಾಯಿದೆಯ ಡೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6—4—0 ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಪಾಯಿದೆಯ ಡೇವಣಾತಿಗಳಿಗೆ ಶೇಕಡ ಸಾಲಿಯಾನ ೫ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಅಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು,
ಕೊಡಂದೇರ ಕುಟ್ಟಯ್ಯನವರು,
ರಾಯ್ ಬಹದ್ದೂರ್.

ಟ್ರೆಜರರ್.
ಯಂ. ಭುಜಂಗರಾಯರು
ಬಿ.ಎ., ಬಿ.ಎಲ್.

ಸೆಕ್ರೆಟರಿ.
ಸಿ. ಯಮ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾರ್ಥಪ್ರಾಪ್ತಿಯಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ರಿಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರೂಪಾಯಿ.

ವಿಳಾಸ.—

ಮೇನೇಜರ್, ಶ್ರೀ ಧನ್ವಂತರಿ, ಶೃಂಗೇರಿ, ಮೈಸೂರುಸ್ಟೇಟ್.

Printed & published by Kodandera Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಶಕ್ಯೇನ ಫ್ಲೂಕದಯುಕ್ತ್ಯಾ ವಿ ನೀತಿ ಪ್ರಯುಕ್ತಾ || ಐಕ್ಯಮುಕ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ ೪–೮–೦

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸನ ೧೯೨೫ನೇ ಇಸವಿ ಜುಲೈ ತಾರೀಕು ೩ ನೇ ಶುಕ್ರವಾರ [ಸಂಚಿಕೆ ೫

ಆರೋಗ್ಯ ಚಂದ್ರಿಕೆ

ಮದ್ರಾಸ್.

ಸಂಪಾದಕರು ಡಾಕ್ಟರ್ ಯು ರಾಮರಾವ್,
ಯಮ್. ಎಲ್ ಸಿ ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡು ಪತ್ರಿಕೆ 1ಕ್ಕೆ 1-2-0 ಹಿಂದಿನ ಸಂಚಿಕೆಗಳು ಇನ್ನೂ ದೊರೆಯುವವು.

ಪತ್ರವ್ಯವಹಾರಕ. 'ಆರೋಗ್ಯ ಚಂದ್ರಿಕೆ' 323,
ತಂಬುಶೆಟ್ಟಿ ಬೀದಿ, ಮದ್ರಾಸ್.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಕೋಟೆರ ಚಿಣ್ಣಪ್ಪನವರ ಮತ್ತು ಮೆ ಚಂಗಂಡ ಕುಟ್ಟಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಏಜಂಟರುಗಳು,
ವೀರಾಜಪೇಟೆ—ಖಾದಿ ಭಂಡಾರದಲ್ಲಿ ಮ ಸುಂಡೇಟಿರ ಚೆರಮಣ್ಣನವರು
ಮೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ ಮೆ ಮಡೆಯಂಡ ದೇವಯ್ಯನವರು
ನಾಪೋಕ್ಲು—ಮೆ. ಪೊನ್ನಚಂಡ ಮುದ್ದಪ್ಪನವರು
ಗೋಣಿಕೊಪ್ಪಲು—ಮೆ. ಒಮ್ಮಡ ಮಾದಪ್ಪನವರು, ಮತ್ತು ಅರೆಯಡ ಸುಬ್ಬಯ್ಯನವರು.
ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಮ್ಮಯ್ಯನವರು.
ಮಡಿಕೇರಿ—ಮೆ ಜಿ ಮಾದಮ್ಮನವರು.
ಅಮ್ಮತ್ತಿ ಸಿದ್ದಾಪುರ—ಮೆ. ಐನಂಡ ಮಾದಪ್ಪನವರು

ಅಲ್ಲದೆ ಈ ಸಮ್ಮಂಧ ಕೋಟೇರ ಚಿಣ್ಣಪ್ಪನವರು ಮತ್ತು ಚಂಗಂಡ ಕುಟ್ಟಪ್ಪನವರು, ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಸಹ ಮೊಬಲಗು ಕೊಡಬೇಕಾಗಿ ಕೋರಿಕೆ.

ಕೋದಂಡ ಉತ್ತಯ್ಯ.
ಆರ್ಗನೈಜಿಂಗ್ ಡೈರೆಕ್ಟರು "ಕೊಡಗು." ಲಿಮಿಟೆಡ್

The Clifton Cycle complete with bell tool bag, tools and pump Rs 135.

Mamooties and Digging forks sold at reduced prices to clear stock.

Spencer & Co Ltd,
MERCARA & POLLIBETTA.
36

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಬ್ರಿಚಾವು ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ ಬೇಕಾದವರು 'ಕೊಡಗು' ಪ್ರೆಸ್ಸಿನಿಂದ ಪಡಕೊಳ್ಳಬಹುದು

ಮಡಿಕೇರಿ
17-9 24 ಮೇನೇಜರ್.

ನೋಟೀಸು.

ಕೊಡಗ ಜಮೀನ್ದಾರರಸಂಘದ ಲೆಕ್ಕವನ್ನು ಆಡಿಟ್ ಮಾಡಿಸಬೇಕಾಗಿರುವುದರಿಂದ ಕಳೆದ ವರ್ಷ ಮೆ ಬಿದ್ದಂಡ ಕಾರ್ಯಪ್ಪನವರು ಏರ್ಪಾಡುಮಾಡಿದ ನಾಡು ಕಮಿಟಿಗಳಿಗೆ ಹಣ ವಸೂಲಾತಿಗೆ ಕೊಟ್ಟಂತ ರಶೀತಿ ಬುಕ್ಕುಗಳು ಕಳೆದ ವರ್ಷದ ವಾರ್ಷಿಕ ಕಾನ್ಫರೆನ್ಸು ಕಳೆದ ಕೂಡಲೇ ಪುನಹ ಹಣ ವಸೂಲಾತಿಗೆ ಆಯಾಯ ಕಮಿಟಿಗಳಿಗೆ ಕೊಟ್ಟಿರುವುದರಿಂದ ಎಲ್ಲಾ ಕಮಿಟಿಯವರೂ ತಮ್ಮ ಹತ್ತಿರವಿರುವ ರಶೀತಿ ಬುಕ್ಕುಗಳನ್ನು ಮತ್ತು ಈ ವರ್ಷ ಉದಿಯಂಡ ಮೆ. ಮಾಚೈಯ್ಯನವರು, ಮೆ ಚಂಗಂಡ ಕುಟ್ಟಪ್ಪನವರೂ ಮೆ. ಕೋಟೆರ ಚಿಣ್ಣಪ್ಪನವರು ಮತ್ತು ಇನ್ನೂ ಕೆಲವು ಏಜಂಟರು ಹಣ ವಸೂಲಾತಿಗೆ ಕೊಟ್ಟ ರಶೀತಿ ಬುಕ್ಕುಗಳನ್ನೂ ಸಹ ವಸೂಲಾದ ಹಣವಿದ್ದ ಪಕ್ಷ ಹಣ ಸಮೇತ ವಹಸೆ ಜಮೀನ್ದಾರರಸಂಘದ ಮಡಿಕೇರಿಯಲ್ಲಿರುವ ಆಫೀಸಿಗೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇನೆ

ಸಿ. ಎಸ್. ವೆಂಕಪ್ಪಯ್ಯ,
ಜನರಲ್ ಸೆಕ್ರೆಟರಿ

ನೋಟೀಸು.

ದಕ್ಷಿಣ ಕೊಡಗಿನಲ್ಲಿ ಮದುವೆಕಾಗದ, ನೋಟೀಸು ಮತ್ತು ಬೇರೆ ಪ್ರಿಂಟಿಂಗ್ ಕೆಲಸ ಮಾಡಿಸಬೇಕೆಂದಿರುವವರು ದಯವಿಟ್ಟು ಎಲ್ಲಾ ಆರ್ಡರುಗಳನ್ನು ನಮ್ಮ ಏಜಂಟರಾದ ವೀರಾಜಪೇಟೆ ಖಾದಿಭಂಡಾರದ ಮೇನೇಜರವರಿಗೆ ಕೊಟ್ಟರೆ, ಶೀಘ್ರದಲ್ಲೇ ಸುಲಭ ಚಾರ್ಜಿಗೆ ಗಿಲಿಟು ಹಾಕಿ ಪ್ರಿಂಟುಮಾಡಿಸಿ ಕಳುಹಿಸಲಾಗವುದು.

'ಮೇನೇಜರ್',
"ಕೊಡಗು" ಪ್ರೆಸ್, ಮಡಿಕೇರಿ.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2 ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ಬಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು ಸ್ಥಳವು ದೊರೆತಂತಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು 5. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಪ್ರಕಟಣೆ.

ನಮ್ಮ ಆಪವಾದಕೋಸ ಅಕ್ಷರಗಳು ಒಂದು ಕಂಪೆನಿಯಿಂದ ಪ್ರದರಿಂದ, 'ಲೆಟರ್ ಹೆಡ್ಸ್,' 'ವಿಜಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಅಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇನೆ

ಮಡಿಕೇರಿ ಮೇನೇಜರ್,
'ಕೊಡಗು' ಲಿಮಿಟೆಡ್

ಮಹನೀಯರೇ,

1923ನೆ ಇಸವಿಯಲ್ಲಿ ವೀರ ರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿದೆ.

ಕೃಷ್ಣ ಸಂಬೀಶನ್ ಮತ್ತು ನಾರಾಯಣ ಸಂಬೀಶನ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವೈದ್ಯರಾಗಿಯೂ ಸುಪ್ರಸಿದ್ಧ ಹಸರುವಾಸಿಯನ್ನು ಹೊಂದಿದವರಾಗಿಯೂ ಇರುವ ಇ ಟಿ ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹೆಚ್ಚು ದಿವಸಗಳವರೆಗೆ ಪಾಂಡಿತ್ಯವನ್ನೂ ಪರಿಚಯವನ್ನೂ ಹೊಂದಿದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ವಿಷಯಗಳಿಗೆ ಮುಖಾಂತರ ಎಲ್ಲಾ ವೈದ್ಯಶಾಲೆಗಳ ವಿಷಯಗಳ ಮಾಹಿತಿಯೂ ಕೊಡಲಾಗುವದು.

ನಂಬೀಶನ್ ಮತ್ತು ಕಂಪೆನಿ,
ಆಯುರ್ವೇದಿಕ್ ಫಾರ್ಮಸಿ ವೈದ್ಯಶಾಲೆ.
ಕಣ್ಣೂರು, ವೀರಾಜಪೇಟೆ ಮತ್ತು
32 45 ಗೋಣಿಕೊಪ್ಪಲು.

FOR SALE.

The following property about ten miles from Mercara, on Somwarpett road, consisting of :--

	Rs	As	P.
Wetlands, 30 93 acres or about 1000 batties at Rs 500/ per 100 batties	5000	0	0
Coffee, 33 46 acres at Rs 400/ per acre	13,00	0	0
Bane and Jungle, 90 00 acres at Rs 20/ per acre	1800	0	0
Total 154 39 acres	20000	0	0

With a decent upstaired house, out houses, and cooly lines,

is open for sale

Please apply to —

R. Framjee,
Mercara.

12—1

"ಕೊಡಗು"

೧೯೨೬ನೇ ಇಸವಿ ಜುಲೈ ತಾ. ೯ನೇ ಶುಕ್ರವಾರ.

ಚೈನಾದಲ್ಲಿ ಯುದ್ಧದ ಕೂಗು.

ಬಹು ಕಾಲದಿಂದಲೂ ರಾಜರಿಂದ ಆಳಲ್ಪಡುತ್ತಾ ಬಂದ ಚೈನಾದೇಶದಲ್ಲಿ ಕೆಲವು ವರ್ಷಗಳ ಹಿಂದೆ ಪ್ರಜಾಪತಿನಿಧಿತ್ವವು ಸ್ಥಾಪಿತವಾದಂದಿನಿಂದೀಚೆಗೆ ಅಲ್ಲಿ ಯಾವಾಗಲೂ ಗಲಭೆಯೇ ಕೇಳಿಬರುತ್ತಿದೆ. ಸರ್ಕಾರವು ಚುನಾಯಿತ ಪ್ರೆಸಿಡೆಂಟರಿಂದ ನಡಿಸಲ್ಪಡುವುದಾದರೂ, ಆವರ ಅಧಿಕಾರವು ಪೆಕಿನಿಗೆ ಮಾತ್ರವೆಂದೇ ಹೇಳಬೇಕು. ದೊಡ್ಡ ದೊಡ್ಡ ಪ್ರಾಂತ್ಯಗಳ ಗವರ್ನರುಗಳು ತಮ್ಮ ಕೈಕೆಳಗಿರುವ ಪ್ರದೇಶಗಳನ್ನು ತಮ್ಮ ಇಚ್ಛಾನುಸಾರವಾಗಿ ಸ್ವತಂತ್ರರಾಗಿ ಆಳುತ್ತಿರುವುದರಿಂದಲೇ ಅಲ್ಲಿ ಆಗಾಗ್ಗೆ ಪ್ರಾಂತೀಕ ಯುದ್ಧಗಳು ನಡೆಯುತ್ತಿರುವುದಾಗಿದೆ. ಹಿಂದೂದೇಶದಲ್ಲಿನಂತೆಯೇ ಅಲ್ಲಿಯೂ ತಮ್ಮ ಪ್ರಾಚೀನ ನಾಗರೀಕತೆಯನ್ನು ವೃದ್ಧಿಪಡಿಸಬೇಕೆನ್ನುವವರ ಮತ್ತು ಪಾಶ್ಚಿಮಾತ್ಯರ ನವನಾಗರೀಕತೆಯನ್ನು ಹಿಂಬಾಲಿಸಬೇಕೆನ್ನುವವರ ಸಂಘಗಳಿವೆ. ಇವರ ಅಭಿಪ್ರಾಯಗಳು ಒಂದಕ್ಕೊಂದು ಹೊಂದಿಕೊಳ್ಳದುದರಿಂದ ಅವರಲ್ಲಿ ಜಗಳಗಳುಂಟಾಗುತ್ತಿವೆ. ಮಧ್ಯ ಸರ್ಕಾರಕ್ಕೆ ಇಂಥಾ ಕದನಗಳನ್ನೆಲ್ಲಾ ಅಡಗಿಸುವಷ್ಟು ಶಕ್ತಿ ಇಲ್ಲದೆ ಇರುವುದರಿಂದ ಜನರಿಗೆ ಶಾಂತಿಯೆಂಬುದೇ ಇಲ್ಲದಂತಾಗಿದೆ.

ಭೂಲೋಕದಲ್ಲಿ ಅತ್ಯಂತ ಹೆಚ್ಚು ಜನ ಸಂಖ್ಯೆಯುಳ್ಳ ಈ ದೇಶವು ಸಾವಿರಾರು ವರುಷಗಳಿಂದ ನಿದ್ರೆ ಮಾಡುತಿದ್ದು ಈಗ ಹತ್ತು ಹದಿನೈದು ವರುಷಗಳಿಂದ ಎಚ್ಚತ್ತು ತಮ್ಮ ಹೀನ ಸ್ಥಿತಿಯನ್ನು ಅರಿತವರಾಗಿ ಅವರಲ್ಲಿ ಅತೃಪ್ತಿಯು ಪ್ರಬಲವಾಗುತ್ತಾ ಬರುತ್ತಿದೆ. ತಮ್ಮ ತಮ್ಮೊಳಗೆ ಜಗಳವಾಡುತ್ತಿದ್ದ ಇವರು ಈಗ ಅಲ್ಲಿರುವ ಪರದೇಶಿಯರ ಮೇಲೆ ತಿರುಗಿರುವರು. ಪರದೇಶಿಯರು ಅಲ್ಲಿ ಅನುಭವಿಸುತ್ತಿರುವ ರಿಯಾಯಿತಿಗಳಿಂದ ಅವರ ವ್ಯಾಪಾರದ ಅಭಿವೃದ್ಧಿಯನ್ನು ಚೈನಾದವರಿಗೆ ತಡೆಯಲಾರದೆ ಹೋಗಿದೆ ಎಂದು ತೋರುತ್ತದೆ. ಆ ಕಾರಣ ಅಲ್ಲಿಯ ದೇಶೀಯರ ವ್ಯಾಪಾರವು ಮೂಲೆಗೊತ್ತಲ್ಪಟ್ಟಿರಬೇಕು. ಪರದೇಶಿಯರು ಅಧಿಕಾರ ನಡಿಸುತ್ತಿರುವ ಕಡೆಗಳಲ್ಲಿ ದೇಶೀಯರಿಗೂ ಪರದೇಶಿಯರಿಗೂ ತೋರಿಸುತ್ತಿರುವ ವ್ಯತ್ಯಾಸಗಳು ಅಲ್ಲಿಯವರ ಅಸಮಾಧಾನಕ್ಕೆ ಕಾರಣವೆಂದು ಒಂದು ಕಡೆಯ ವರ್ತಮಾನ. ರಷ್ಯಾದ ಬೋಲ್ಷೆವಿಕರು ಒಳಗಿಂದೊಳಗೆ ಚೈನಾದವರಿಗೆ ಹಣ ಸಹಾಯ ಕೊಟ್ಟು ಪರದೇಶಿಯರ ಮುಖ್ಯವಾಗಿ ಬ್ರಿಟಿಷರ ಮೇಲೆ ಏಳುವಂತೆ ಹುರಿದುಂಬಿಸುತ್ತಿರುವರೆಂದು ಇನ್ನೊಂದು ಕಡೆಯ ಸುದ್ದಿ. ಕಾರಣಗಳ್ಯಾವವೇ ಇರಲಿ. ಚೈನಾದವರಿಗೆ ಹೆಚ್ಚಾಗಿ ಬ್ರಿಟಿಷರ ಮೇಲೆ ದ್ವೇಷವು ಪ್ರಬಲವಾಗುತ್ತಿದೆ ಎಂಬುದೇನೋ ನಿಜವಾದ ಸಂಗತಿ.

ಈ ದ್ವೇಷದ ಸೂಚನೆಯು ಕೆಲವು ದಿವಸಗಳ ಹಿಂದೆ ವಿದ್ಯಾರ್ಥಿಗಳ ಗಲಭೆಯಿಂದ ಪ್ರಾರಂಭವಾಯಿತು. ಬ್ರಿಟಿಷರ ಸಾಮಾನುಗಳನ್ನು ಬಹಿಷ್ಕಾರ ಹಾಕಬೇಕೆಂದೂ, ಅವರಿಗೆ ಅಲ್ಲಿರುವ ವ್ಯಾಪಾರದ ಅನುಕೂಲಗಳನ್ನು ತೆಗೆದುಬಿಡಬೇಕೆಂದೂ ಷಂಗ್ಹಾಯಿಯ ವಿದ್ಯಾರ್ಥಿಗಳು ಶಾಲೆಗೆ ಹೋಗುವುದರ ಬದಲು ಬೀದಿಗಳಲ್ಲಿ ಮೆರವಣಿಗೆ ಹೋಗಲು ಸುರುಮಾಡಿದರು. ಅವರ ಸಂಖ್ಯೆಯು ಹೆಚ್ಚುತ್ತಾ ಬಂದಹಾಗೆ ಕಾರ್ಖಾನೆಗಳ ಕೆಲಸಗಾರರು ಅವರೊಂದಿಗೆ ಸೇರಿ ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದರು. ಚೈನಾದ ಸೈನಿಕರನ್ನೂ ತಮ್ಮ ಕಡೆ ಸೇರಿಸಿಕೊಂಡರು. ಈ ಚಳವಳವು ಬೇರೆ ದೊಡ್ಡ ಪಟ್ಟಣಗಳಿಗೂ ಹರಡಿ ಯುದ್ಧದ ಕೂಗಿನಲ್ಲಿ ಪರಿಣಮಿಸಿದೆ. ಆ ದೇಶದ ಪ್ರಮುಖ ಸಂಸ್ಥೆಗಳ ೮೦ ಪ್ರತಿನಿಧಿಗಳು ಬ್ರಿಟನ್ನಿನೊಂದಿಗೆ ಸಮ್ಮಂಧವನ್ನು ತಪ್ಪಿಸಿ ಯುದ್ಧವನ್ನು ಪ್ರಾರಂಭಿಸಬೇಕೆಂದು ಯುದ್ಧದ ಮಂತ್ರಿಯವರನ್ನು ಕೇಳಿಕೊಂಡಿರುವರು. ಅವಶ್ಯ ಬಿದ್ದರೆ ಪ್ರಜೆಗಳ ಇಷ್ಟಾರ್ಥದಂತೆ ನಡೆದುಕೊಳ್ಳಲು ಸರ್ಕಾರವು ಹಿಂಜರಿಯುವುದಿಲ್ಲವೆಂತ ಮಂತ್ರಿಯವರ ಜವಾಬಾಗಿದೆ. ದಳನಾಯಿಗಳಲ್ಲಿ ಪ್ರಮುಖರಾದವರಲ್ಲೊಬ್ಬರಾದ ಕ್ರಿಶ್ಚಿಯನ್ ಫೆಂಗ್ ಯೂ ಹಿಯಾಂಗ್‌ರವರು ಬ್ರಿಟನ್ನಿನ ಮೇಲೆ ಯುದ್ಧ ಪ್ರಾರಂಭವಾದರೆ ರಣರಂಗಕ್ಕೆ ದಂಡೆತ್ತಿ ಹೋಗಲು ತಾನು ಮೊದಲನೆಯವನಾಗುವೆನೆಂದು ಹೇಳಿರುವರಾಗಿಯೂ ವರ್ತಮಾನ. ಚೈನಾದ ವಿದ್ಯಾರ್ಥಿಗಳೆಲ್ಲರೂ ಮಿಲಿಟರಿ ತರಬೇತು ಹೊಂದಿ ತಮ್ಮ ದೇಶಕ್ಕಾಗಿ ಹೋರಾಡಲು ತಯಾರಾಗಬೇಕೆಂದೂ ಜನರಲ್ಲಿ ದೇಶಭಕ್ತಿ ಹುಟ್ಟಿಸುವಂತೆ ಉಪನ್ಯಾಸಕರನ್ನು ಅರಸರು ಸೇನಾಧಿಪತಿಗಳನ್ನು ಒತ್ತಾಯಪಡಿಸಬೇಕೆಂದೂ ಷಂಗ್ಹಾಯಿಯ ವಿದ್ಯಾರ್ಥಿಗಳು ಮೀಟಿಂಗಿನಲ್ಲಿ ತೀರ್ಮಾನಿಸಿರುವರೆಂದು ಸುದ್ದಿ. ಈ ಮಧ್ಯೆ ತಾ. ೨೪ರಲ್ಲಿ ಕೆಂಟನ್ ಪಟ್ಟಣದಲ್ಲಿ ಮುಷ್ಕರದ ಪಂಗಡದವರಿಗೂ ಪರದೇಶಿಯರಿಗೂ ಜಗಳವಾಯಿತು. ಎರಡು ಕಡೆಯಿಂದಲೂ ಗುಂಡುಗಳು ಹಾರಿಸಲ್ಪಟ್ಟವು. ಉಭಯ ಕಡೆಯಲ್ಲಿಯೂ ಕೆಲವರಿಗೆ ಮರಣವೂ, ಹಲವರಿಗೆ ಘಾಯಗಳೂ ಉಂಟಾಗಿವೆ. ಆದರೆ ಇತ್ಯಲಾಗಿ ಈ ಲೇಖನವನ್ನು ಬರೆಯುವವರೆಗೆ ಜಗಳದ ವರ್ತಮಾನ ಏನೂ ಇಲ್ಲ.

ಇದೆಲ್ಲವನ್ನು ನೋಡಿದರೆ ಚೈನಾದ ವಿದ್ಯಾರ್ಥಿಗಳಿಗು ಮತ್ತು ಕೆಲಸಗಾರರಿಗೂ ಮಾತ್ರವಲ್ಲ, ಸೈನ್ಯಾಧಿಪತಿಗಳಿಗೂ, ಸರಕಾರದ ಮುಖಂಡರಿಗೂ ಸಹ ಬ್ರಿಟಿಷರ ಮೇಲೆ ಬಲವಾದ ಅಸಮಾಧಾನವಿರುವಂತೆ ಕಾಣುತ್ತದೆ. ಆದುದರಿಂದ ಈ ಚಳವಳವು ಎಲ್ಲಿ ಕೊನೆಗಾಣುವದೆಂದು ಹೇಳಲು ಸಾಧ್ಯವಿಲ್ಲ. ಸಮಾಧಾನವಾಗುವ ಸಂಭವವು ಕಡಿಮೆಯೆಂದೇ ತೋರುತ್ತದೆ. ಯುದ್ಧವು ಪ್ರಾರಂಭವಾದರೆ ಅದರ ಫಲಿತಾಂಶವು ಏನೇ ಆದರೂ ಅದರ ಪರಿಣಾಮವು ಪ್ರಪಂಚದ ಎಲ್ಲರಿಗೂ ತಗಲದೆ ಇರದು. ಜರ್ಮನಿಯ ಘೋರ ಯುದ್ಧದ ಪೆಟ್ಟಿನಿಂದ ಜನಾಂಗಗಳು ಇನ್ನೂ ಪೂರ್ತಿಯಾಗಿ ಚೇತರಿಸಿಕೊಂಡಿರುವುದಿಲ್ಲ. ಈಗಲೂ ಜನರು ಅದರ ಕಷ್ಟ ನಷ್ಟಗಳನ್ನು ಅನುಭವಿಸುತ್ತಿರುವರು. ಇಷ್ಟರಲ್ಲೇ ಇನ್ನೊಂದು ಯುದ್ಧವು ತೊಡಗಿದರೆ ಲೋಕದ ಸ್ಥಿತಿಯು ಎಷ್ಟರ ಮಟ್ಟಿಗೆ ಕಷ್ಟತರವಾಗುವದೆಂದು ಈಗ ವರ್ಣಿಸಲಾರೆವು. ಈ ದುಸ್ಥಿತಿಯನ್ನು ಹೋಗಲಾಡಿಸಲು ತಡವಾಗುವದಕ್ಕೆ ಮುಂಚೆಯೇ ಉಭಯ ಕಡೆಯವರೂ ದೀರ್ಘಾಲೋಚನೆಮಾಡಬೇಕಾದದ್ದು ಅತ್ಯಗತ್ಯವಾಗಿದೆ. ಇಂಥಾ ಅನಾಹುತಗಳನ್ನು ನಿವಾರಿಸಲು ಕೈ ಹಾಕದೆ ಇರುವಂಥ ಜನಾಂಗಗಳ ಕೂಟದಿಂದ ಮತ್ತೇನು ಪ್ರಯೋಜನ? ಪ್ರಾಚೀನ ನಾಗರೀಕತೆಯ ಜನಾಂಗವೂ, ನವ ನಾಗರೀಕತೆಯ ಜನಾಂಗವೂ ತಮ್ಮ ತಮ್ಮ ಏಳಿಗೆಯನ್ನು ಮಾತ್ರವಲ್ಲ, ಪ್ರಪಂಚದ ಅಭ್ಯುದಯವನ್ನೂ ಚನ್ನಾಗಿ ಮನಸ್ಸಿಗೆ ತೆಗೆದುಕೊಂಡು ಯುದ್ಧ ದೇವತೆಯ ಬಲೆಗೆ ಬೀಳದೆ ತಪ್ಪಿಸಿಕೊಳ್ಳುವರಾಗಿ ಆಶಿಸುತ್ತೇವೆ.

ದನಗಳ ರೋಗ.

ಇಂಥಾ ಮಳೆಗಾಲದಲ್ಲಿ ದೊಡ್ಡರೋಗ, ಗಂಟ್ಲುಕಟ್ಟು ಮೊದಲಾದ ದನಗಳ ಅಂಟುರೋಗಗಳು ದೇಶದಲ್ಲಿ ಮುಖ್ಯವಾಗಿ ದಕ್ಷಿಣ ಕೊಡಗಿನಲ್ಲಿ ಹರಡಿಕೊಂಡಿರುವುದು ಬಹು ವಿಶೇಷವೇನು. ಆರಂಭದ ಮುಖ್ಯ ಕಾಲವಾದ ಈ ಸಮಯದಲ್ಲಿ ಉಳುವ ಎತ್ತು ಮತ್ತು ಕೋಣಗಳಿಗೆ ಈ ಅಪಾಯಕರವಾದ ಜಾಡ್ಯಗಳು ಅಂಟಿಕೊಂಡರೆ ವ್ಯವಸಾಯವು ಹೇಗೆ ನಡೆದೀತು! ದನಗಳು ಈ ಜಾಡ್ಯಗಳಿಗೆ ತುತ್ತಾದರ (ಹೆಚ್ಚಿನವು ತುತ್ತಾಗುವುದು ವಾಡಿಕೆ) ಬಡರೈತರ ಗತಿ ಏನು? ಕ್ರಯಕ್ಕೆ ಕೊಂಡು ಕಟ್ಟಲು ವಿನೆರಡನ್ನು ಕೈಯಲ್ಲಿ ಹಣವಿಲ್ಲ, ಸಾಲದೊರೆಯುವುದೂ ಕಷ್ಟ. ಬಂದಕ್ಕಿರಬೇಕಾದ್ದು ಯಲ್ಲಿ ಸಾಲಕೊಡತಕ್ಕ ಶ್ರೀಮಂತರೂ ಮಾರಾಟದ ದನಗಳೇ ಕಡಿಮೆ. ಇರುವ ಕೆಲವುಗಳಿಗೆ ತಡೆಯಲಾರದ ಬೆಲೆ, ಒಂದುವೇಳೆ ತೆಗೆದುಕೊಂಡರೂ ರೋಗ ಅಂಟಿರುವ ಹಟ್ಟಿಗೆಯಲ್ಲಿ ತಂದು ಕೂಡುವದೆಂತು! ಒಟ್ಟಾರೆ ಈ ಸಂಕಟಕ್ಕೆ ಒಳಗಾದ ರೈತರು ಸಾಲಗಾರರಾಗಿ ಭೂಮಿಯನ್ನು ಕಾಲಿಮಾಡಿ ನಡೆವರು ಅಥವಾ ಪಾಳುಬಿಡುವರು.

ಪಶು ವೈದ್ಯರು ಸಹಾಯಮಾಡುತ್ತಿರುವುದಿಲ್ಲವೇ ಎಂದು ಕೇಳಬಹುದು. ಪಾಪ, ಅವರು ತಾನೇ ಈ ಮಳೆಗಾಲದಲ್ಲಿ ಏನು ಮಾಡಲಾಪರು. ಅವರು ಹಳೇ ತಾಲೋಕಿಗೊಬ್ಬರಂತೆ ನಾಲ್ವರು ಮಾತ್ರ ಇರುವರು. ಅದೂ ಇಲ್ಲ. ಅವರಲ್ಲಿ ಒಬ್ಬರು ಫಾರೆಸ್ಟ್ ಇಲಾಖೆಯವರು. ಅವರಿಗೆ ಮೂವತ್ತು ನಲುವತ್ತು ಮೈಲಗಳ ದೂರದಿಂದ ಜಾಡ್ಯದ ವರ್ತಮಾನ ಸಿಕ್ಕುವದೇ ದುರ್ಲಭ. ಸಿಕ್ಕಿದರೂ ಅವರು ಸಕೆಂಬು ಕಡೆಯಿಂದ ವರ್ತಮಾನ ಬಂದರೆ ಎಲ್ಲಿಗೆಂತ ಹೋಗುವರು.. ಒಂದೆರಡು ಕಡೆಗಳಿಗೆ ಹೋದರೂ ಅವರು ಅಲ್ಲಿಗೆ ತಲಪುವುದರೊಳಗೆ, ಊರಿನ ದನಗಳೆಲ್ಲಾ ಒಟ್ಟಿಗೆ ಮೇಯುವುದರಿಂದ, ರೋಗವು ಹಲವು ದನಗಳಿಗೆ ಅಂಟಿಬಿಟ್ಟಿರುತ್ತವೆ. ನಂತರ ಔಷಧಿ ಚುಚ್ಚಿದರೂ ಪ್ರಯೋಜನವಾಗುವುದಿಲ್ಲವಂತೆ. ಹೀಗಾದುದರಿಂದ ರೈತರಿಗೆ ಪಶು ವೈದ್ಯರ ಚಿಕಿತ್ಸೆಯಲ್ಲಿ ವಿಶ್ವಾಸವು ಕಡಿಮೆಯಾಗುತ್ತಿದೆ. ಅದಕಾರಣ ಅವರು ಪಶು ವೈದ್ಯರ ಸಹಾಯ ಕೇಳುವುದಕ್ಕೆ ಆತುರಪಡುವುದಿಲ್ಲ. ಆತುರಪಡುವಲ್ಲಿಗಾದರೂ ಸಹಾಯ ದೊರೆಯಲು ಸಾಕಷ್ಟು ಪಶು ವೈದ್ಯರಿಲ್ಲ.

ಇದರಿಂದ ಏನು ಕಂಡುಬರುತ್ತದೆಂದರೆ, ರೈತರ ಕ್ಷೇಮಾರ್ಥವಾಗಿ ಸರಕಾರದವರು ಮಾಡಬೇಕಾದಷ್ಟು ಹಣವೆಚ್ಚ ಮಾಡುವುದಿಲ್ಲ. ಪಶುವೈದ್ಯ ಇಲಾಖೆಯ ಪ್ರಯೋಜನವು ಗ್ರಾಮಸ್ಥರಿಗೆ ದೊರಕಬೇಕಾದರೆ ಆ ಸಿಬ್ಬಂದಿಯನ್ನು ಹೆಚ್ಚಿಸಿ ಔಷಧಿಗೆ ಸಾಕಷ್ಟು ಹಣಕೊಡಬೇಕು. ದನಗಳ ಅಭಿವೃದ್ಧಿಯ ವಿಷಯ ತಕ್ಕ ಏರ್ಪಾಡುಗಳನ್ನು ಸೂಚಿಸಲಿಕ್ಕಾಗಿ ಕೌನ್ಸಿಲಿನಲ್ಲಿ ಪಾಸಾದ ರಿಸೊಲ್ಯೂಷನಂತೆ ಒಂದು ಕಮಿಟಿಯು ನೇಮಕವಾಗಿದೆ. ಈ ಕಮಿಟಿಯು ಕಾಲವಿಳಂಬ ಮಾಡದೆ ರೋಗನಿವಾರಣೆಯ ವಿಷಯ ತಕ್ಕ ಉಪಾಯಗಳನ್ನು ಸೂಚಿಸುವರಾಗಿ ನಂಬುತ್ತೇವೆ. ಆದರೆ ಅವರ ಸಿಪಾರಸುಗಳನ್ನು ಜಾರಿಗೆ ತರಲು ಹಣವು ಮುಖ್ಯವಾಗಿ ಬೇಕಾಗುವುದು. ಬೇಕಾದಷ್ಟು ಹಣವನ್ನು ಕೊಡಲು ಸರಕಾರದವರು ಹಿಂತೆಗೆಯಬಾರದು. ನಮ್ಮ ಈ ದೇಶದಲ್ಲಿ ರೈತರ ಅಭಿವೃದ್ಧಿಯೇ ದೇಶದ ಸಂಪದಭ್ಯುದಯ, ದೇಶದ ಅಭ್ಯುದಯವೇ ಸರಕಾರದ ಉದ್ದೇಶವಾಗಿರಬೇಕೆಂಬದನ್ನು ಅಧಿಕಾರಿಗಳು ಮರೆಯದಿರಲಿ.

ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶ.

ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶವು ಕಳೆದ ವಾರ ಪ್ರಕಟವಾಯಿತು. ಮಡಿಕೇರಿಯ ಸೆಂಟ್ರಲ್ ಹೈಸ್ಕೂಲಿನಲ್ಲಿ ಪರೀಕ್ಷೆಗೆಹೋದ 39 ವಿದ್ಯಾರ್ಥಿಗಳಲ್ಲಿ 10 ಮಂದಿಯೂ, ಹುಡುಗಿಯರ ಹೈಸ್ಕೂಲಿನ ಇಬ್ಬರ ಪೈಕಿ ಒಬ್ಬಳೂ, ವೀರರಾಜಪೇಟೆ ಹೈಸ್ಕೂಲಿನಲ್ಲಿ 30 ವಿದ್ಯಾರ್ಥಿಗಳಲ್ಲಿ ಏಳು ಜನರೂ ತೇರ್ಗಡೆ ಹೊಂದಿರುವರು, ಅಂದರೆ ಕಾಲೇಜು ಕ್ಲಾಸಿಗೆ ಸೇರಿಸಿಕೊಳ್ಳಲು ಯೋಗ್ಯರಾಗಿರುವರು. ಇದಲ್ಲದೆ ಸೆಂಟ್ರಲ್ ಹೈಸ್ಕೂಲಿನಲ್ಲಿ ಕಮರ್ಶಿಯಲ್ ಪಾಠ ತೆಗೆದುಕೊಂಡ ಮೂವರಲ್ಲಿ ಒಬ್ಬನು ಪಾಸಾಗಿರುವನು.

ಇಡೀ ಕೊಡಗಿನಲ್ಲಿ 71 ವಿದ್ಯಾರ್ಥಿಗಳ ಪೈಕಿ 18 ಮಂದಿ, ಅಂದರೆ ಸುಮಾರು ಶೇಕಡ 25ರಷ್ಟು ಮಾತ್ರ ಪಾಸಾಗಿರುವರು. ಕಳೆದ ವರ್ಷದ ಫಲಿತಾಂಶವು ಇದಕ್ಕಿಂತ ಶೇಕಡ ಆರರಷ್ಟು ಹೆಚ್ಚಾಗಿತ್ತು. ಉತ್ತಮವಾಗುತ್ತಾ ಬರುವದರ ಬದಲು ಕಡಿಮೆಯಾದದ್ದು ವ್ಯಸನಕರವೆ.

ಕಳೆದ ವರ್ಷ ಶೇಕಡ 41ರಷ್ಟು ಪಾಸಾದ ಉತ್ತಮವಾದ ಫಲಿತಾಂಶಕ್ಕೆ ಮಡಿಕೇರಿ ಹೈಸ್ಕೂಲಿನವರಿಗೆ ಅಭಿವಂದನೆಗಳನ್ನು ಸೂಚಿಸಿದ್ದೆವು. ಆದರೆ ಈ ವರ್ಷ ಶೇಕಡ 25.6 ಮಾತ್ರ ಪಾಸಾಗಿ ಈ ಸಾರಿಯೂ ಅವರನ್ನು ಅಭಿನಂದಿಸಲು ಎಡೆಯಾದದ್ದರಿಂದ ವ್ಯಸನ ಪಡುತ್ತೇವೆ. ಈ ಸರದಿಯು ವೀರರಾಜಪೇಟೆ ಶಾಲೆಗೆ ಹೋಗಿದೆ. ಕಳೆದ ವರ್ಷ ಶೇಕಡ 9ರಷ್ಟು ಮಾತ್ರ ಪಾಸಾದ ಆ ಶಾಲೆಯಲ್ಲಿ ಈ ಸಲ 23.3% ತೇರ್ಗಡೆಯಾದದ್ದು ಸಂತೋಷಕರವೆ. ಕಳೆದ ಸಾರಿ ಸಂತಾಪ ತೋರಿಸಿದ ಈ ಶಾಲೆಗೆ ಈ ವರ್ಷ ಅಭಿನಂದಿಸುತ್ತೇವೆ. ಬೇರೆ ಶಾಲೆಗಳೊಂದಿಗೆ ಹೋಲಿಸಿದರೆ ಇದರ ಫಲಿತಾಂಶವು ತೃಪ್ತಿಕರವಲ್ಲದಿದ್ದರೂ, ಅಭಿವೃದ್ಧಿಯಾಗುತ್ತಾ ಬರುತ್ತಿದೆ ಎಂಬುದರಲ್ಲಿ ಸಂಶಯವಿಲ್ಲ. ಎರಡು ವರುಷಗಳಲ್ಲಿಯೇ ಇದು ಸೆಂಟ್ರಲ್ ಹೈಸ್ಕೂಲಿನ ಹೆಚ್ಚುಕಮ್ಮಿ ಜೊತೆ ಹಿಡಿದಂತೆಯೇ ಕಾಣುತ್ತದೆ. ಮುಂದಿನ ಸ್ಪರ್ಧೆಯು ಹೇಗ ನಡೆಯುತ್ತದೆಂಬದನ್ನು ನೋಡಬೇಕಾಗಿದೆ.

ಮಡಿಕೇರಿ (ಕಾನ್ವೆಂಟ್) ಹುಡುಗಿಯರ ಹೈಸ್ಕೂಲಿನ ಉತ್ತಮವಾದ ಫಲಿತಾಂಶವು ಆ ಶಾಲೆಗೆ ಶ್ರೇಯಸ್ಸನ್ನುಂಟುಮಾಡಿದೆ. ಪ್ರಥಮ ವರುಷದಲ್ಲೇ ಪರೀಕ್ಷೆಗೆ ಹೋದ ಇಬ್ಬರಲ್ಲಿ ಒಬ್ಬಳು ಅಂದರೆ 50% ತೇರ್ಗಡೆಯಾದದ್ದು ಆ ಶಾಲೆಯ ಅಧಿಕಾರಿಗಳಿಗೆ ಮಾತ್ರವಲ್ಲ, ಸ್ತ್ರೀ ವಿದ್ಯಾಭ್ಯಾಸದ ಹಿತಚಿಂತಕರಿಗೆಲ್ಲರಿಗೂ ಅತ್ಯಂತ ಸಂತೋಷವನ್ನುಂಟುಮಾಡಿದೆ. ಈ ರಸಲ್ಟಿಗೆ ಜವಾಬ್ದಾರರಾದವರಿಗೆ ನಮ್ಮ ಮನಃಪೂರ್ತಿಯ ಧನ್ಯವಾದಗಳನ್ನಲ್ಲದೆ, ತೇರ್ಗಡೆ ಹೊಂದಿರುವ ಎಲ್ಲಾ ವಿದ್ಯಾರ್ಥಿಗಳನ್ನೂ ಅಭಿನಂದಿಸುತ್ತೇವೆ.

ಕೊಡಗು ಸೆಕ್ರೆಟೆರಿಯೆಟ್.

ಬೆಂಗಳೂರಿನಲ್ಲಿ ಚೀಫ್ ಕಮೀಷನರವರ ಕೈಕೆಳಗೆ ಇರುವ ಕೊಡಗು 'ಸೆಕ್ರೆಟೇರಿಯಟ್' ಇಲಾಖೆಯ ಖರ್ಚಿಗೆ ಈ ವರ್ಷದ (1925—26ರ) ಬಜೆಟಿನಲ್ಲಿ ರೂ. 15,500 ಇಡಲ್ಪಟ್ಟಿದೆ. ಈ ಹಣವು ಮಾಹೆಯಾನ 550 ವರೆಗೆ ಸಂಬಳಬರುವ ಒಬ್ಬ ಮೇನೇಜರಿಗೂ, ಏಳು ಗುಮಾಸ್ತರಿಗೂ ಮತ್ತು ನಾಲ್ಕು ದಫೆದಾರರಿಗೂ, ಆಫೀಸು ಬೇರೆ ಖರ್ಚಿಗೂ ಉಪಯೋಗಿಸಲ್ಪಡುತ್ತಿದೆ. ಈ ಮೊಬಲಗು ಪೂರ್ತಿ ಕೊಡಗಿನ ಉತ್ಪತ್ತಿಯಾದರೂ ಆ ಇಲಾಖೆಯಲ್ಲಿ ಕೊಡಗಿನವರು ಯಾರೂ ಇಲ್ಲವಾದುದು ತಿಳಿಯಲು ವ್ಯಸನಪಡುತ್ತೇವೆ. ಎಲ್ಲಾ ಕಡೆಗಳಲ್ಲಿಯೂ ಆಯಾಯ ಸ್ಥಳೀಕರಿಗೇನೇ ಉತ್ತೇಜನ ಕೊಡುತ್ತಿರುವಲ್ಲಿ ಕೊಡಗಿನ ಹಣದಿಂದ ನಡಿಸಲ್ಪಡುತ್ತಿರುವ ಸೆಕ್ರೆಟೆರಿಯೆಟ್ಟಿನಲ್ಲಿ ಮಾತ್ರ ಈ ತತ್ವವನ್ನು ಸರ್ಕಾರದವರು ಜಾರಿಗೆ ತಾರದೆ ಇರುವುದು ಎಂದೂ ನ್ಯಾಯವಲ್ಲ.

ಅಲ್ಲಿಯ ಮೇನೇಜರವರಿಗೆ ಕೊಡಗಿನ ಅನುಭವವಿದ್ದು ಇಲ್ಲಿಯ ವಿಷಯಗಳನ್ನು ತಕ್ಕ ಮಟ್ಟಿಗೆ ಅರಿತಿರುವುದು ಅವರ ಕೆಲಸಕ್ಕೆ ಸಹಾಯಕವಾಗುವುದೆಂದು ನಮ್ಮ ಭಾವನೆ. ಅಲ್ಲದೆ ಇಲ್ಲಿಯ ಕೆಲವು ಉದ್ಯೋಗಸ್ಥರನ್ನು ಅತ್ತಿತ್ತ ವರ್ಗಾಯಿಸುವ ಅನುಕೂಲವು ದೊರೆಯುವುದು. ಆದುದರಿಂದ ಇನ್ನು ಮುಂದಾದರೂ ಸರ್ಕಾರದವರು ಕೊಡಗಿನ ನಿವಾಸಿಗಳನ್ನು ಆ ಆಫೀಸಿನಲ್ಲಿ ನೇಮಿಸುವುದು ಅಗತ್ಯವಾಗಿದೆ. ಬೇರೆ ಪ್ರಾಂತ್ಯಗಳಲ್ಲಿ ಎಡೆಸಿಕ್ಕುವದು ಕಷ್ಟಕರವಾಗಿರುವಲ್ಲಿ ಕೊಡಗಿನ ಆದಾಯವನ್ನು ವೆಚ್ಚಮಾಡುವಲ್ಲಿಯೂ ಕೊಡಗಿನವರನ್ನು ಇಷ್ಟಪಡದೆ ಹೋದರೆ ಅವರ ಗತಿಯೇನೆಂದು ಹೇಳಲಾಗುವುದಿಲ್ಲ. ಕೊಡಗು ದೇಶೀಯರು ಈ ವಿಷಯ ಇಷ್ಟರವರೆಗೆ ತಮ್ಮ ಅತೃಪ್ತಿಯನ್ನು ಬಹಿರಂಗವಾಗಿ ಸೂಚಿಸದೆ ಹೋದದ್ದೇ ಸರ್ಕಾರದವರ ಉದಾಸೀನ ಭಾವಕ್ಕೆ ಕಾರಣವೆಂದು ತೋರುತ್ತದೆ. ಇನ್ನಾದರೂ ಕೊಡಗಿನ ಜನರ ಅಭಿಪ್ರಾಯವನ್ನು ಅರಿತವರಾಗಿ ಅಧಿಕಾರಿಗಳು ಈ ಕೊರತೆಯನ್ನು ಹೋಗಲಾಡಿಸುವರಾಗಿ ನಂಬುತ್ತೇವೆ.

ಸ್ಟೇಶನರಿ ಮೇಜಿಸ್ಟ್ರೇಟ್.

ಮಡಿಕೇರಿಯಲ್ಲಿ ಉದ್ಯೋಗಗಳಲ್ಲಿ ಕೆಲವು ಬದಲಾವಣೆಗಳು ಆಗಿವೆಯೆಂತ ತಿಳಿಯುತ್ತೇವೆ. ಟ್ರೆಜರಿ ಅಸಿಸ್ಟಂಟ್ ಕಮಿಷನರ್ ಎಂಬ ಉದ್ಯೋಗವನ್ನು ತೆಗೆದು ಹಾಕಿ ಒಬ್ಬ ಸ್ಟೇಶನರಿ ಮೇಜಿಸ್ಟ್ರೇಟರನ್ನು ನೇಮಿಸಲು ಮಂಜೂರಾಗಿದೆಯಂತೆ. ಇಬ್ಬರು ಸುಬೇದಾರರುಗಳೂ, ಈ ಮೇಜಿಸ್ಟ್ರೇಟರೂ ಮತ್ತು ಮೇನೇಜರು ಸಹ ಸುಬೇದಾರರ ಗ್ರೇಡಿನವರೇ ಆಗಿರುತ್ತಾರೆ. ಇನ್ನು ಮುಂದೆ ನಾಲ್ಕು ವರ್ಷಗಳ ಒಳಗ ಇದ್ದ ಇಂಗ್ಲಿಷ್ ಆಫೀಸ್ ಮೇನೇಜರೆಂಬ ಉದ್ಯೋಗವೇ ಸ್ಥಾಪಿತವಾಗಿ ಅವರೇ ಖಜಾನೆ ಚಾರ್ಜಿನಲ್ಲಿ ಇರಬೇಕು. ಸ್ಟೇಶನರಿ ಮೇಜಿಸ್ಟ್ರೇಟರೇ ಸಬ್ ರಿಜಿಸ್ಟ್ರಾರ್ ಆಗಿರಬೇಕು. ಕೌನ್ಸಿಲಿನಲ್ಲಿ ೧೯೩೪ರಲ್ಲಿ ಮೂವರು ಸ್ಟೇಶನರಿ ಮೇಜಿಸ್ಟ್ರೇಟರಾಗಬೇಕೆಂತಲೂ ಇವರು ಪೊನ್ನಂಪೇಟೆ, ಮಡಿಕೇರಿ, ಸೋಮವಾರಪೇಟೆಯಲ್ಲಿ ಇರಬೇಕಂತಲೂ ಠರಾವು ಬಂದಿತ್ತು. ವರ್ಷದ ಮೀಟಿಂಗಿನಲ್ಲಿ ಪೊನ್ನಂಪೇಟೆ ಸೋಮವಾರಪೇಟೆಗೆ ಸ್ಟೇಶನರಿ ಮೇಜಿಸ್ಟ್ರೇಟರಾಗಬೇಕಂತ ಠರಾವು ಒಂದು ಮಂಜೂರಾಯಿತು. ಮಡಿಕೇರಿಯಲ್ಲಿ ಇಷ್ಟು ಬೇಗ ಸ್ಟೇಶನರಿ ಮೇಜಿಸ್ಟ್ರೇಟ್ ನೇಮಕವಾದೀತೆಂತ ಯಾರೂ ಊಹಿಸಿರಲಿಲ್ಲ. ಮಡಿಕೇರಿ ತಾಲೋಕಿನ ಸೆಕೆಂಡ್ ಕ್ಲಾಸ್ ಮೇಜಿಸ್ಟ್ರೇಟರು ಎಗ್ಸಿಕ್ಯೂಟಿವ್ (ಅಂದರೆ ಗ್ರಾಮಗಳಲ್ಲಿ ತಿರುಗಾಡಿ ಕೆಲಸಮಾಡುವ) ಆಫೀಸರಲ್ಲವಾದ್ದರಿಂದ ಮಡಿಕೇರಿಯಲ್ಲಿ ಸ್ಟೇಶನರಿ ಮೇಜಿಸ್ಟ್ರೇಟ್ ಕೆಲಸವನ್ನು ಕೂಡಲೇ ಸ್ಥಾಪಿಸಲು ಕೌನ್ಸಿಲರುಗಳು ಯೋಚಿಸಲಿಲ್ಲವೆಂತ ನಂಬುತ್ತೇವೆ. ಕಮಿಶನರ ಆಫೀಸ್ ಮೇನೇಜರಿಗೆ ಮೇಜಿಸ್ಟ್ರೇಟ್ ಕೆಲಸವುಳ್ಳ ಆಫೀಸ್ ಕೆಲಸ ಸರಿಯಾಗದೆ ಹೋದ್ದರಿಂದಲೂ ಟ್ರೆಜರಿ ಕೆಲಸವಿರುವ ಆಫೀಸರಲ್ಲಿ ಕ್ರಿಮಿನಲ್ ಕೇಸುಗಳು ಬಹುಕಾಲ ಬಾಕಿಯಾಗುತ್ತಾ ಬಂದದ್ದರಿಂದಲೂ ಸ್ಟೇಶನರಿ ಮೇಜಿಸ್ಟ್ರೇಟರನ್ನು ಮಡಿಕೇರಿಗೆ ಬೇಗನೇ ಮಂಜೂರ್ ಮಾಡಿಸಿಕೊಂಡರಂತ ನಂಬುತ್ತೇವೆ. ಇವರಿಗ ಉತ್ತರಕೊಡಗು ತಾಲೋಕಿನ ಸೆಕೆಂಡ್ ಕ್ಲಾಸ್ ಕೇಸುಗಳನ್ನು ವಿಚಾರಮಾಡುವ ಕೆಲಸ ಕೊಡುವದರಿಂದಲೂ ಸಬ್ ರಿಜಿಸ್ಟ್ರಾರ್ ಕೆಲಸ ಕೊಡುವದರಿಂದಲೂ ತಕ್ಕಷ್ಟು ಕೆಲಸವಿರುವದೆಂತ ನಂಬುತ್ತೇವೆ. ತಾಲೋಕು ಸಿರಸ್ತೆದಾರರು ಮಡಿಕೇರಿಯಿಂದ ಸೋಮವಾರಪೇಟೆಗೆ ಹೋದನಂತರ ಟ್ರೆಜರಿ ಆಫೀಸರು ಸಬ್ ರಿಜಿಸ್ಟ್ರಾರ್ ಕೆಲಸನೋಡುತ್ತಿದ್ದರು. ಈ ಏರ್ಪಾಡು ಜನರಿಗೆ ತೃಪ್ತಿಕೊಟ್ಟಿರಲಿಲ್ಲ. ಇನ್ನಾದರೂ ಸ್ಟೇಶನರಿ ಮೇಜಿಸ್ಟ್ರೇಟರು ಜನರಿಗೆ ತೃಪ್ತಿಕೊಟ್ಟಾರೆಂತ ನಂಬುತ್ತೇವೆ. ಕ್ರಿಮಿನಲ್ ಕೇಸುಗಳಿಗ ಪ್ರಾಮುಖ್ಯತೆ ಕೊಟ್ಟು ... ಕೆಲಸ ಹಿಂದುಳಿಯದಂತೆ ನೋಡಿಕೊಳ್ಳಬಹುದೆಂತ ನಂಬುತ್ತೇವೆ. ... ವಾರಪೇಟೆ ಪೊನ್ನಂಪೇಟೆಯಲ್ಲಿ ಸಹ ನಾಯಪತ್ತೆಗಾರರ ಮೇಜಿಸ್ಟ್ರೇಟ್ ಪದವನ್ನು ತೆಗೆದು ಅಲ್ಲಿಯೂ ಮೇಜಿಸ್ಟ್ರೇಟ್ ಕೆಲಸ ನೋಡಲಿಕ್ಕೂ ಸಬ್ ರಿಜಿಸ್ಟ್ರಾರ್ ಕೆಲಸಕ್ಕೂ ಸ್ಟೇಶನರಿ ಮೇಜಿಸ್ಟ್ರೇಟರುಗಳನ್ನು ನೇಮಿಸುವದು ಉತ್ತಮವೆಂತ ನಮ್ಮ ಅಭಿಪ್ರಾಯ.

ಹಿಂದೂ ಸಮಾಜದ ಸ್ಥಿತಿ.

ಗುಜರಾತಿನಲ್ಲಿ ನಡೆಯುತ್ತಿರುವ ಒಂದು ಜಾತಿ ಕಲಹದ ಕುರಿತು ಬರೆಯುವಾಗ ಮಹಾತ್ಮ ಗಾಂಧಿಯವರು ಹಿಂದೂ ಸಮಾಜದ ಸದ್ಯ ಸ್ಥಿತಿಯ ವಿಷಯವಾಗಿ ತಮ್ಮ ಅಭಿಪ್ರಾಯಗಳನ್ನು ಈ ರೀತಿ ವ್ಯಕ್ತಪಡಿಸಿರುವರು —

ಒಂದು ಕಡೆಯಲ್ಲಿ ಹಿಂದೂ ಧರ್ಮದ ರಕ್ಷಣೆಗಾಗಿ ಸಂಘಟನೆಯ ಕಾರ್ಯವು ನಡೆಯುತ್ತಿರುವಾಗ ಇನ್ನೊಂದು ಕಡೆಯಲ್ಲಿ ಹಿಂದೂ ಧರ್ಮದಲ್ಲಿ ಮನೆಮಾಡಿಕೊಂಡಿರುವ ದೋಷಗಳು ಅದನ್ನು ಒಳಗೆ ಒಳಗಿನಿಂದಲೇ ದುರ್ಬಲಗೊಳಿಸುತ್ತಿವೆ. ಒಂದು ಮರದ ತುಂಡಿಗೆ ಹೊರಗಿನಿಂದ ವಾರ್ನಿಷ್ ಮಾಡಲಾದುವುಗಳನ್ನು ಹಚ್ಚಿ ಎಷ್ಟು ಚಂದಗೊಳಿಸಿದರೂ, ಅದರ ಒಳಗೆ ಹುಳಗಳಿದ್ದರೆ ಅವುಗಳು ಅದನ್ನು ತಿಂದು ಬಿಡದೆ ಇರುವುದಿಲ್ಲ. ಇದೇ ರೀತಿಯಲ್ಲಿ ಹಿಂದೂ ಧರ್ಮದ ಗರ್ಭದೊಳಗೆ ಪ್ರವೇಶಿಸಿಕೊಂಡಿರುವ ಹುಳವು ಅದನ್ನು ಕೊರೆಯಲು ಆರಂಭಿಸಿದೆ. ಆ ಹುಳವು ಇರುವವರೆಗ ನಾವು ಹೊರಗಿನಿಂದ ಹಿಂದೂಧರ್ಮದ ರಕ್ಷಣೆಯನ್ನು ಮಾಡಲು ಎಷ್ಟು ಯತ್ನಿಸಿದರೂ ಅದು ನಾಶವಾಗುವುದು ನಿಶ್ಚಯ.

ವರ್ಣಬಂಧನವು ಧರ್ಮರಕ್ಷಣೆಗಾಗಿ ರಚಿಸಲ್ಪಟ್ಟಿತು. ಆದರೆ ಅದು ಈಗ ವಕ್ರವಾಗಿ ಅದರ ನಾಶವನ್ನು ಮಾಡುತ್ತಿದೆ. ಕೇವಲ ನಾಲ್ಕು ವರ್ಣಗಳ ಸ್ಥಳದಲ್ಲಿ ಈ ದಿನ ಅಸಂಖ್ಯ ಜಾತಿಗಳು ಬೆಳೆದಿವೆ. ಅವುಗಳ ಬಂಧನವು ಮಾತ್ರ ಉಳಿದಿರುತ್ತದೆ. ಯಜಮಾನನಿಲ್ಲದೆ ಅಲೆದಾಡುತ್ತಿರುವ ಪಶುಗಳನ್ನು ಕಟ್ಟಿಹಾಕುವಂತೆ ಈ ಬಂಧನಗಳು ನಮ್ಮನ್ನು ಕೈದಿಗಳನ್ನಾಗಿ ಮಾಡಿರುವುವು. ಪ್ರಜಾ ಪೋಷಕವಾಗಿದ್ದ ಈ ವ್ಯವಸ್ಥೆಯು ಈಗ ಸಮಾಜವನ್ನು ನಷ್ಟಮಾಡುತ್ತಿರುವುದು. ಹಿಂದೂಪ್ರಜೆಯ ಅಥವಾ ಹಿಂದೂಸ್ಥಾನದ ಸೇವೆಯನ್ನು ಮಾಡುವ ಬದಲಿಗೆ ನಾವು ನಮ್ಮ ಶೃಂಖಲೆಗಳನ್ನು ರಕ್ಷಿಸಿಕೊಳ್ಳುವುದರಲ್ಲಿ ಮಗ್ನರಾಗಿದ್ದೇವೆ. ಮತ್ತು ಇದರಿಂದ ಹುಟ್ಟುವ ಪ್ರಶ್ನೆಗಳ ನಿರ್ಣಯವನ್ನು ಮಾಡುವುದರಲ್ಲಿಯೇ ನಮ್ಮ ಸಮಯ ಬುದ್ಧಿ ಮತ್ತು ಧನವನ್ನು ವೆಚ್ಚಮಾಡುತ್ತಿದ್ದೇವೆ. ಬೇಡನು ಜೇನುನೊಣಗಳ ಗೂಡನ್ನೇ ನಾಶಪಡಿಸಲು ನಿಂತಿರುವಾಗ ಜೇನುನೊಣಗಳು ತಮ್ಮೊಳಗೆ ಒಂದೊಂದು ಗೂಡನ್ನು ವಶಪಡಿಸಿಕೊಳ್ಳುವುದಕ್ಕಾಗಿ ಜಗಳಾಡುವುದರಲ್ಲಿ ಕಾಲಕಳೆಯುವಂತೆ ನಮ್ಮ ಸ್ಥಿತಿಯಾಗಿದೆ. ಸಣ್ಣ ಸಣ್ಣ ಜಾತಿ ಸಂಗಡಗಳ ನಾಶವಾಗುವುದೇ ಯೋಗ್ಯವಾಗಿರುವಾಗ ಅವುಗಳಲ್ಲಿ ಯಾವುದು ಮೇಲೆಂಬ ಪ್ರಶ್ನೆಯು ಹೇಗೆ ಬರುತ್ತದೆ?

ವರ್ಣಗಳು ಕರ್ಮಾನುಸಾರವಾಗಿದ್ದುವು. ಈಗ ಅವು ಕೇವಲ ಸಹಭೋಜನ ಮತ್ತು ವಿವಾಹಸಂಬಂಧದ ಮೇಲೆ ಆಧರಿಸಿಕೊಂಡಿವೆ. ನಾನು ಈ ಎರಡು ವಿಷಯಗಳಲ್ಲಿ ಸಮಾಜದ ನಿಯಮಗಳನ್ನು ಅನುಸರಿಸುತ್ತಿರುವ ವರೆಗೆ ನಾನು ಮದ್ಯಪಾನವನ್ನು ಮಾಡಿದರೂ, ಪರದೇಶದಿಂದ ಗೋಮಾಂಸವನ್ನು ತರಿಸಿ ಮಾರಿದರೂ ಚಿಂತೆಯಿಲ್ಲ. ನಾನು ವರ್ಣಾಶ್ರಮದ ಮರ್ಯಾದೆಯನ್ನು ಹೊಂದಬಹುದು, ಜಾತಿಯ ಮುಖಂಡನೂ ಆಗಿ ಇರಬಹುದು. ನಾನು ಎಲ್ಲಿ ಆಹಾರವನ್ನು ಸೇವಿಸುತ್ತೇನೆ ಎಂಬುದನ್ನು ಜಾತಿಯು ವಿಚಾರಿಸುವುದು, ಆದರೆ ನನ್ನ ಆಚರಣೆ ಮತ್ತು ಚಾರಿತ್ರ್ಯ-ಇವುಗಳ ಕುರಿತು ವಿಚಾರಿಸುವುದು ಆವಶ್ಯವೆಂದು ತಿಳಿಯುವುದಿಲ್ಲ. ನಾನು ವಿಲಾಯಿತಿಗೆ ಹೋಗಿ ಬಂದಿರುವೆನಾದುದರಿಂದ ಕನ್ಯಾಕುಮಾರಿಯ ದೇವಾಲಯದ ಗರ್ಭಗೃಹವನ್ನು ಪ್ರವೇಶಿಸಲು ನನಗೆ ಅಧಿಕಾರವಿಲ್ಲ. ಆದರೆ ನಾನು ವ್ಯಭಿಚಾರಿಯೆಂದು ಪ್ರತಿಯೊಬ್ಬರಿಗೆ ತಿಳಿದಿದ್ದರೂ ಕೂಡ ಯಾರೂ ನನ್ನನ್ನು ಅಲ್ಲಿಗ ಪ್ರವೇಶಿಸಕೂಡದೆಂದು ತಡೆಯುವಂತಿಲ್ಲ.

ಇದರಲ್ಲಿ ಸ್ವಲ್ಪವಾದರೂ ಅತಿಶಯೋಕ್ತಿಯಿಲ್ಲ. ಇದು ಅಧರ್ಮದ ಪರಮಾವಧಿಯಾಗಿರುವುದು. ಇದರಿಂದ ವರ್ಣಧರ್ಮದ ರಕ್ಷಣೆಯಾಗಲಾರದು. ವರ್ಣಾಶ್ರಮ ಧರ್ಮದ ರಕ್ಷಣೆಯನ್ನು ಮಾಡಲು ನಾನು ಪ್ರಯತ್ನಿಸುತ್ತಿದ್ದೇನೆ, ಆದರೆ ಈ ಅಧರ್ಮವು ದೂರವಾಗುವ ವರೆಗೆ ಹಾಗೆ ಮಾಡಲು ಸಾಧ್ಯವಿಲ್ಲ. ವರ್ಣದ ಹೆಸರಿನಲ್ಲಿ ವರ್ಣಗಳ ಅತಿರೇಕವು ಪ್ರಬಲವಾಗಿರುವುದು. ಮತ್ತು ಈ ಅತಿರೇಕವನ್ನು ನಾಶಗೊಳಿಸಲು ಯತ್ನಿಸುವುದರಲ್ಲಿ ವರ್ಣದ ನಾಶವೇ ಆಗುವುದೆಂಬ ಹೆದರಿಕೆಯಿದೆ.

ಈ ಅಸಂಖ್ಯ ಜಾತಿಗಳ ರಕ್ಷಣೆ ಮಾಡಿದರೂ ಹೇಗೆ ನಡೆಯುತ್ತಿದೆ? ಅಹಿಂಸಾ ಪ್ರಧಾನವಾದ ಧರ್ಮದಲ್ಲಿ ಹಿಂಸೆಯಿಂದ ಜಾತಿಯ ರಕ್ಷಣೆಯನ್ನು ಮಾಡಲು ಯತ್ನಿಸುವರು ಯಾರು. ಜಾತಿಯ ಕೃತ್ರಿಮ ಬಂಧನಗಳನ್ನು ಮೀರಿ ನಡೆಯುವನೋ ಅವನಿಗ ಅವನ ತಪ್ಪನ್ನು ತಿಳಿಸಲು ಯತ್ನವು ನಡೆಯುವುದಿಲ್ಲ. ಅವನು ಕೂಡಲೆ ಜಾತಿಯಿಂದ ಬಹಿಷ್ಕರಿಸಲ್ಪಡುವನು. ಅವನೊಡನೆ ಭೋಜನದ ವ್ಯವಹಾರ ಮತ್ತು ವಿವಾಹಸಂಬಂಧವು ನಿಷೇಧಿಸಲ್ಪಡುವುದು. ... ಸಂಸ್ಕಾರದಲ್ಲಿ ಸಹ ಜಾತಿಯ ಸಹಾಯ ... ಡುವರು. ಈ ಶಿಕ್ಷೆಯು ಬಹಿಷ್ಕೃತ ವ್ಯಕ್ತಿಯ ಮಕ್ಕಳ ಮೇಲೂ ಬೀಳುವುದು. ಇದನ್ನು ಈ ಕಾಲದ ಭಾಷೆಯಲ್ಲಿ 'ದಾಯರ ಶಾಹಿ' ಎಂದು ಕರೆಯಬಹುದು. ಸಾವಿರ ಎರಡು ಸಾವಿರ ಮನುಷ್ಯರಿರುವ ಜಾತಿಯು ಇಂತಹ ಅತ್ಯಾಚಾರಗಳಿಂದ ನಾಶವಾಗುವದು. ಈ ಸಣ್ಣ ಸಣ್ಣ ಜಾತಿಗಳ ನಾಶವಾಗುವುದೇ ಇಷ್ಟವು. ಆದರ ಈ ಬಲಾತ್ಕಾರದಿಂದ ಆಗುವ ನಾಶವು ಹಾನಿಕಾರಕವು. ಇಚ್ಛಾಪೂರ್ವಕವಾಗಿ ಅವುಗಳ ನಾಶವನ್ನು ಮಾಡಿದರೆ ಅದರಿಂದ ಸಮಾಜಕ್ಕೆ ಪುಷ್ಟಿ ದೊರೆಯುವುದು.

ಸಣ್ಣ ಸಣ್ಣ ಜಾತಿಯ ಮಹಾಜನರು ಸೇರಿ ಒಂದೇ ಜಾತಿಯಾಗಿ ಈ ದೊಡ್ಡ ಜಾತಿಯು ಬೇರೆ ಜಾತಿಯವರೊಡನೆ ಕೂಡಿಕೊಂಡು ನಾಲ್ಕು ವರ್ಣಗಳಲ್ಲಿ ತನ್ನ ಸ್ಥಾನವನ್ನು ಪಾತ್ರಮಾಡಿಕೊಳ್ಳುವುದು ಪ್ರಕೃತ ಅತ್ಯಾವಶ್ಯಕ ಉಪಾಯವು.

ಆದರೆ ಸಮಾಜವು ಶಿಥಿಲವಾಗಿರುವ ಈ ಕಾಲದಲ್ಲಿ ಇಂತಹ ಸುಧಾರಣೆ ಬಹಳ ಮಟ್ಟಿಗೆ ಅಸಾಧ್ಯವೆಂದೇ ತೋರುವುದು.

ಧರ್ಮವನ್ನು ಪಾಲಿಸುವುದು ಎಷ್ಟು ದುಸ್ಸಾಧ್ಯವೋ ಅಷ್ಟೇ ಸುಲಭವೂ ಆಗಿದೆ. ಪ್ರತಿಯೊಂದು ಜಾತಿಯಂತೆ ಪ್ರತಿಯೊಬ್ಬ ವ್ಯಕ್ತಿಯೂ ಧರ್ಮದ ರಕ್ಷಣೆಯನ್ನು ಸಾಧಿಸಲು ಸಮರ್ಥನಿರುವನು.

ಹಾಗಾದರೆ ವ್ಯಕ್ತಿಗಳ ಕರ್ತವ್ಯವೇನು? ಅವರು ನಿರ್ಭಯರಾಗಿ ತಾವು ಧರ್ಮವೆಂದು ತಿಳಿಯುವ ಮಾರ್ಗವನ್ನು ಅನುಸರಿಸಬೇಕು. ಸಮಾಜವು ಅವರನ್ನು ಬಹಿಷ್ಕರಿಸಿದರ ಲಕ್ಷ್ಯಮಾಡದೆ ಜಾತಿಯು ವಿಧಿಸುವ ಮೂರು ಪ್ರಕಾರದ ಶಿಕ್ಷೆಗಳನ್ನೂ ವಿನಯಪೂರ್ವಕವಾಗಿ ಅಂಗೀಕರಿಸಬೇಕು. ಜಾತಿ ಭೋಜನಗಳಲ್ಲಿ ಭಾಗಿಯಾಗುವುದರಿಂದ ಲಾಭವೇನೂ ಇಲ್ಲ. ಅನೇಕವೇಳ ಅವುಗಳಲ್ಲಿ ಭಾಗಿಯಾಗದೆ ಇರುವುದರಿಂದ ಲಾಭವಿದೆ. ಜಾತಿಯಲ್ಲಿ ಪುತ್ರನಿಗೆ ಯೋಗ್ಯ ಕನ್ಯೆಯೂ ಕನ್ಯೆಗೆ ವರನೂ ದೊರೆಯದಿದ್ದರೆ ಚಿಂತೆಪಡಬೇಕಾಗಿಲ್ಲ. ಸಣ್ಣ ಸಣ್ಣ ಜಾತಿಗಳ ಅಸ್ತಿತ್ವವನ್ನು ಲಕ್ಷಿಸದಿದ್ದವನಿಗೆ ಇದು ಶಿಕ್ಷೆಯಲ್ಲ. ಕನ್ಯೆಯೂ ಪುತ್ರನೂ ಯೋಗ್ಯರಾಗಿದ್ದರೆ ಬೇರೆ ಸುಧಾರಕರೊಳಗಿಂದ ಅವರಿಗೆ ವರನೂ ಕನ್ಯೆಯೂ ದೊರೆಯಲು ಕಷ್ಟವಾಗಲಾರದು. ದೊರೆಯದಿದ್ದರೂ ಚಾರಿತ್ರ್ಯರೀತಿಯೂ ಸಂಯಮಿಯೂ ಆದವನು ಅದನ್ನು ಸಹಿಸುವುದು ಧರ್ಮವೆಂದು ತಿಳಿಯುವನು. ಯಾರಾದರೊಬ್ಬರ ಮೃತ್ಯುಕಾಲದಲ್ಲಿ ಸಹಾಯ ಮಾಡಲು ಜಾತಿಯವರು ಬಾರದಿದ್ದರೆ ಅದರಲ್ಲಿಯೂ ದುಃಖಪಡಬೇಕಾದ ಕಾರಣವಿಲ್ಲ. ಬೇರೆ ಸಹಾಯಕರು ಸಿಕ್ಕುವರು. ಗಾಡಿಯನ್ನು ಉಪಯೋಗಿಸುವುದರಿಂದ ಬಹಳ ಸ್ವಲ್ಪ ಸಹಾಯವು ಸಾಕಾಗುವುದು. ಇಲ್ಲವಾದರೆ ಹಣಕೊಟ್ಟರೆ ಜನರು ಸಿಕ್ಕುವರು. ಯಾರಹತ್ತಿರ ಹೀಗೆ ಕೊಡಲು ಹಣಕಾಸು ಇಲ್ಲವೋ ಅವರಿಗ ಪರಮಾತ್ಮನು ಎಲ್ಲಿಂದಾದರೂ ಸಹಾಯವನ್ನು ಕಳುಹಿಸದೆ ಇರಲಾರನೆಂಬ ವಿಶ್ವಾಸವನ್ನಿಟ್ಟುಕೊಳ್ಳಬೇಕು. ಶಿಕ್ಷೆಯ ಭಯವನ್ನು ಬಿಡುವುದೇ ಸತ್ಯಾಗ್ರಹವು. ಸರಕಾರದೊಂದಿಗೆ ಕಾದಾಡುವಾಗ ಮಾತ್ರವಲ್ಲದೆ ಜಾತಿ ಸರಕಾರದೊಡನೆ ಕಾದಾಡುವಾಗಲೂ ಸತ್ಯಾಗ್ರಹವು ಸಮರ್ಥ ಶಸ್ತ್ರವಾಗಿದೆ. ಸತ್ಯಾಗ್ರಹವು ಬಲಾತ್ಕಾರಕ್ಕೆ ಔಷಧವಾಗಿದೆ. ಹಿಂದೂ ಧರ್ಮದ ಎಲ್ಲ ಧರ್ಮದ ರಕ್ಷಣೆಯೂ ಕೇವಲ ಸತ್ಯಾಗ್ರಹದಿಂದಲೇ ಆಗುವುದು ಶಕ್ಯವಿದೆ.

ಪ್ರತಿಯೊಬ್ಬ ಧರ್ಮಪ್ರೇಮಿಗಳಿಗೆ ನಾನು ವಿನಯಪೂರ್ವಕವಾಗಿ ಹೇಳಬಯಸುವುದು ಇಷ್ಟೇ. ಜಾತಿಯಿಂದುಂಟಾದ ಅನೇಕ ಪ್ರಕಾರದ ಜಗಳಗಳಲ್ಲಿ ಸೇರದೆ ತನ್ನ ಕರ್ತವ್ಯದಲ್ಲಿ ದೃಢನಾಗಿರಬೇಕು. ತನ್ನ ಧರ್ಮದ ಮತ್ತು ದೇಶದ ರಕ್ಷಣೆಯನ್ನು ಮಾಡುವುದು ಕರ್ತವ್ಯವಾಗಿದೆ. ಸಣ್ಣ ಸಣ್ಣ ಜಾತಿಗಳ ರಕ್ಷಣೆಯನ್ನು ಮಾಡುವುದರಿಂದ ಧರ್ಮದ ರಕ್ಷಣೆಯಾಗಲಾರದು. ಧಾರ್ಮಿಕ ಪುನರುದ್ಧಾರದಿಂದಲೇ ಅದರ ರಕ್ಷಣೆಯಾಗುವುದು. ಸ್ವತಃ ಚಾರಿತ್ರ್ಯವಂತನಾಗುವುದರಿಂದ ಹಿಂದುತ್ವದ ರಕ್ಷಣೆಯನ್ನು ಮಾಡಿದಂತಾಗುವುದು. ಸತ್ಯ, ಬ್ರಹ್ಮಚರ್ಯ ಮತ್ತು ಅಹಿಂಸಾ ವ್ರತಗಳ ಪಾಲನೆ ಮಾಡುವುದು ಮತ್ತು ನಿರ್ಭಯನಾಗುವುದು—ಇದೇ ಚಾರಿತ್ರ್ಯವಂತನಾಗುವುದೆಂಬುದರ ಅರ್ಥ. ಮನುಷ್ಯಮಾತ್ರರ ಭಯವನ್ನು ತೊರೆದು ಈಶ್ವರನಲ್ಲಿ ಶ್ರದ್ಧೆ ಇಡುವುದು, ಪರಮಾತ್ಮನು ತನ್ನ ಎಲ್ಲಾ ಕಾರ್ಯಗಳ ಮತ್ತು ವಿಚಾರಗಳ ಸಾಕ್ಷಿಯಾಗಿರುವನೆಂದು ತಿಳಿದುಕೊಂಡಿರುವುದು, ಜೀವ ಮಾತ್ರದ ಸೇವೆಮಾಡುವುದು, ಬೇರೆ ಧರ್ಮದ ಅನುಯಾಯಿಗಳನ್ನು ಕೂಡ ಮಿತ್ರರೆಂದು ಭಾವಿಸುವುದು ಇತ್ಯಾದಿ. ಯಾವ ಜಾತಿಯು ಇದೇ ಲಕ್ಷ್ಯವು ತನ್ನ ಉಪಯೋಗಕ್ಕಾಗಿರುವುದೆಂದು ತಿಳಿಯುವುದೋ ಅದು ನಾಶವಾಗುವುದು. ಸಂಸಾರದ ಕಲ್ಯಾಣಕ್ಕಾಗಿ ತನ್ನ ಅಸ್ತಿತ್ವವಿರುವುದೆಂದು ತಿಳಿಯುವ ಜಾತಿಯು ಜೀವದಿಂದಿರುವುದು.

(ನವಜೀವನ)

ಕರ್ನಾಟಕ ಏಕೀಕರಣವೂ ಕೊಡಗೂ.

(೧೯ನೇ ಸಂಚಿಕೆಯಿಂದ ಮುಂದುವರಿದದ್ದು)

ಪಿ. ರಂಗನ ರಾವ್

ಹಿಂದಿನ ಭಾಗದಲ್ಲಿ ಏಕಛತ್ರಾಧಿಪತ್ಯದಲ್ಲಿದ್ದ ಕರ್ನಾಟಕವು ಒಡೆದು ಹೋಯಿತೆಂದು ವಾಚಕರು ಬಲ್ಲರು. ಸದ್ಯ ಕನ್ನಡಿಗರ ಬೇರೆ ಬೇರೆಯಾದ ಕರ್ನಾಟಕವು ಹೇಗಿದೆ, ಈಗ ಹ್ಯಾಗಿದೆಯೆಂಬುದು ತಿಳಿವ ಕುತೂಹಲವು ಅಗತ್ಯ.

ಕರ್ನಾಟಕದ ಸದ್ಯಸ್ಥಿತಿಯು ಬಹಳ ಶೋಚನೀಯವಾಗಿದೆ. ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿಕೊಂಡಿದ್ದ ಹಿಂದಿನ ಕರ್ನಾಟಕವು ಕರಗುತ್ತಾ, ಕರಗುತ್ತಾ ಬಂದು ಈಗ ಅದರ ಕಾಲು ಪಾಲು ಮಾತ್ರ ಉಳಿದಿದೆ. ಅದರ ಕೆಲವು ಭಾಗವನ್ನು ಮಹಾರಾಷ್ಟ್ರರೂ, ಕೆಲವು ಭಾಗವನ್ನು ಆಂಧ್ರರೂ, ಕೆಲವು ಭಾಗವನ್ನು ತಮಿಳರೂ ಕದುಕೊಂಡಿರುವರು. ಮಹಾರಾಷ್ಟ್ರವು ಮೊದಲು ಕನ್ನಡಿಗರ ದೇಶವಾಗಿತ್ತೆಂದೇ ಕೆಲವರ ಅಭಿಪ್ರಾಯ. ಆದರೆ ಲೋಕಮಾನ್ಯ ತಿಲಕರೇ ತಮ್ಮ ಪೂರ್ವಜರು ಕನ್ನಡದವರಾಗಿದ್ದಿರಬಹುದೆಂದು ಹೇಳಿರುವರು. ... ಲ್ಲಿ ಕನ್ನಡಿಗರವೆಂದು ಕರೆಯಲ್ಪಡುವ ರಾಜ್ಯಗಳಲ್ಲಿ ಚಿಕ್ಕದಾದ ಮೈಸೂರು ಸಂಸ್ಥಾನ ಒಂದು ಮಾತ್ರ ಇದೆ.

ಈಗ ಕರ್ನಾಟಕವನ್ನು ಆರು ಭಾಗಗಳಾಗಿ ವಿಭಾಗಿಸಬಹುದು. ಅವುಗಳಾವುವೆಂದರೆ — (೧) ಮದ್ರಾಸು ಕರ್ನಾಟಕ, (೨) ಮುಂಬಯಿ ಕರ್ನಾಟಕ, (೩) ದೇಶೀಯ ಸಂಸ್ಥಾನ ಕರ್ನಾಟಕ, (೪) ಹೈದರಾಬಾದು ಕರ್ನಾಟಕ, (೫) ಮೈಸೂರು, (೬) ಕೊಡಗು. ದಕ್ಷಿಣ ಹಿಂದುಸ್ಥಾನದ ನಕಾಶೆಯನ್ನು ನೋಡಿದರೆ ಕನ್ನಡ ನಾಡೆಲ್ಲವೂ ಪ್ರಸರಿಸಿರುವ ಮತ್ತು ಹರಿದುಹಂಚಿಹೋಗಿರುವುದು ತಿಳಿಯುತ್ತದೆ. ಈ ಭಾಗಗಳನ್ನು ಒಂದೊಂದಾಗಿ ವಿಚಾರಿಸುವ—

(೧) ಮದ್ರಾಸು ಕರ್ನಾಟಕ—ತೆಲುಗರಿಂದ ಆವರಿಸಲ್ಪಟ್ಟಿರುವ ಬಳ್ಳಾರಿ ಜಿಲ್ಲೆಯೂ, ಅನಂತಪುರ ಜಿಲ್ಲೆಗಳ ಕೆಲವು ತಾಲೋಕುಗಳೂ, ತಮಿಳರ ಪ್ರಾಬಲ್ಯಕ್ಕೆ ಒಳಗಾದ ಸೇಲಂ, ಕೊಯಮುತ್ತೂರಿನ ಕೆಲವು ತಾಲೋಕುಗಳು ನೀಲಗಿರಿ ಜಿಲ್ಲೆಯೂ, ಮಲೆಯಾಳದಿಂದ ಒತ್ತಲ್ಪಟ್ಟ ದಕ್ಷಿಣ ಕನ್ನಡ ಜಿಲ್ಲೆಯೂ ಈ ಕರ್ನಾಟಕಕ್ಕೆ ಸೇರಿದ್ದು. ಈ ಭಾಗದಲ್ಲಿ ಸಂಪೂರ್ಣ ಸಂಸ್ಥಾನವು ಇರುವುದು. ಇಲ್ಲಿನ ಕನ್ನಡ ಗ್ರಾಮಗಳ ಹುಡುಗರು ತಮಿಳನ್ನಾಗಲೀ ತೆಲುಗನ್ನಾಗಲೀ ಕಲಿಯಬೇಕಾಗಿರುವದು. ಇಲ್ಲಿನ ಕನ್ನಡಿಗರು ರಾಜಧಾನಿಯಾದ ಮದ್ರಾಸಿನಿಂದ ಬಹಳ ದೂರವಿರುವುದರಿಂದ, ಎಲ್ಲಾ ಕನ್ನಡಿಗರ ಸಹಾಯವಿಲ್ಲದುದರಿಂದಲೂ, ತಮಿಳರು ತೆಲುಗರು ಮಲೆಯಾಳೀಯರು ಮೊದಲಾದವರು ಸರಕಾರದ ದೊಡ್ಡ ದೊಡ್ಡ ಪದವಿಯನ್ನು ಪಡೆದುಕೊಂಡು ಕನ್ನಡವನ್ನೂ, ಕನ್ನಡಿಗರನ್ನೂ ಮೂಲೆಪಾಲು ಮಾಡಿರುವರು. ಇವರ ಸ್ಥಿತಿಯು ಬಹಳ ಶೋಚನೀಯವಾದದ್ದು.

(೨) ಮುಂಬಾಯಿ ಕರ್ನಾಟಕ—ಈ ಕರ್ನಾಟಕ ಭಾಗಕ್ಕೆ ಮದ್ರಾಸಿನಷ್ಟು ಶತ್ರುಗಳಿಲ್ಲದಿದ್ದರೂ ಅವರೆಲ್ಲರಷ್ಟು ಸಾಮರ್ಥ್ಯಶಾಲಿಯಾದ ಮರಾಠರು ಉತ್ತರದಲ್ಲಿರುವರು. ಈ ಭಾ

ಗಕ್ಕೆ ಧಾರವಾಡ, ಕಾರವಾರ, ಬೆಳಗಾಂ, ಬಿಜಾಪುರಜಿಲ್ಲೆಗಳೂ, ಕೊಲ್ಹಾಪುರದ ಕೆಲವು ಭಾಗವೂ ಸೇರಿದೆ. ಇಲ್ಲೂ ಕೂಡ ೧೮೮೮ರಿಂದ ೧೮೬೦ರ ವರೆಗೆ ಕನ್ನಡ ಶಾಲೆಗಳೇ ಇರಲಿಲ್ಲ. ಆ ವೇಳೆ ಕೆಲವು ಕನ್ನಡ ಸರಕಾರಿ ಉದ್ಯೋಗಸ್ಥರ ಕಷ್ಟದಿಂದ ಈ ಪ್ರಾಂತ್ಯದಲ್ಲಿ ಮರಾಠಿ ಶಾಲೆಗಳನ್ನು ತೆಗೆದು ಕನ್ನಡ ಶಾಲೆಗಳು ಪ್ರಾರಂಭವಾದವು. ಅಂದಿನಿಂದ ಇಲ್ಲಿ ಕನ್ನಡವು ಪ್ರಾರಂಭವಾಯಿತು. ಮತ್ತು ಕನ್ನಡ ಸಾಹಿತ್ಯವನ್ನು ಕಾಯುವುದಕ್ಕಾಗಿಯೂ ಕನ್ನಡಿಗರ ಪುರೋಭಿವೃದ್ಧಿಗೂ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವು ಸ್ಥಾಪಿಸಲ್ಪಟ್ಟು, ಕನ್ನಡಿಗರ ಸೇವೆಯನ್ನು ಮಾಡುತ್ತಾ ಇರುವುದು. ಬ್ರಿಟಿಷ್ ಸರಕಾರದ ಕೈಕೆಳಗಿರುವ ಪ್ರಾಂತ್ಯಗಳಲ್ಲಿ ಈ ಭಾಗವೇ ದೊಡ್ಡದಾಗಿರುವುದರಿಂದ ಕರ್ನಾಟಕದ ಯಾವ ಚಳವಳವು ಪ್ರಾರಂಭವಾದರೂ, ಕೆಲಸಮಾಡಲು ತಕ್ಕ ಕ್ಷೇತ್ರವು ಇದೇ ಆಗಿದೆ. ಇದೇ ಭಾಗದಲ್ಲಿ ಕಳೆದ ಭಾರತ ರಾಷ್ಟ್ರೀಯ ಮಹಾ ಸಭೆಯೂ ಸೇರಿದುದರಿಂದ ಇದಕ್ಕೆ ಮತ್ತಷ್ಟು ಪ್ರಾಮುಖ್ಯತೆಯುಂಟಾಯಿತು.

(ಇ) ಬೊಂಬಾಯಿ ಸಂಸ್ಥಾನ ಕರ್ನಾಟಕ ಇವು ವ್ಯಾಪಿಸಿಕೊಂಡಿರುವ ಎಲ್ಲಾ ಭಾಗಗಳು ಕರ್ನಾಟಕವಾಗಿಯೇ ಇತ್ತು. ಈಗಲಾದರೂ ಕೆಲವು ಭಾಗಗಳು ಕರ್ನಾಟಕೀಯವಾಗಿಯೇ ಇರುವವು. ಕೆಲವು ಸಂಸ್ಥಾನಗಳಲ್ಲಿ ಪ್ರಾಥಮಿಕ ಶಿಕ್ಷಣವು ಮರಾಠಿಯಲ್ಲೇ ಆಗುತ್ತದೆ. ಮನೆಯಲ್ಲಿ ಮಾತನಾಡುವುದು ಕನ್ನಡ, ಶಾಲೆಯಲ್ಲಿ ಕಲಿಯುವುದು ಮರಾಠಿ. ಸಂಸ್ಥಾನಾಧಿಪತಿಗಳು ಮರಾಠರಾಗಿರುವುದೇ ಇದಕ್ಕೆ ಕಾರಣ. ಈ ಭಾಗದಲ್ಲಿ ಹನ್ನೆರಡು ಸಂಸ್ಥಾನಗಳಿವೆ. ಕೊಲ್ಹಾಪುರ, ಸಾಂಗಲಿ, ಮಿರಜ, ಅಕಲಕೋಟೆಯ ದಕ್ಷಿಣ ಭಾಗಗಳೂ, ರಾಮದುರ್ಗ, ಸವಣೂರು, ಜಮಖಂಡಿ, ಕುರುಂದವಾಡ, ಜತ, ಮುಧೋಳವೇ ಮೊದಲಾದವೂ ಸೇರಿವೆ. ಈ ಭಾಗಕ್ಕೆ "ದಕ್ಷಿಣ ಮರಾಠ ಸಂಸ್ಥಾನ"ಗಳೆಂಬ ತಪ್ಪು ಹೆಸರಿನಿಂದಿದ್ದು, ಒಬ್ಬ ಇಂಗ್ಲಿಷ್ ರಾಜಕೀಯ ಅಧಿಕಾರಿಯು ಯಜಮಾನನಾಗಿರುವನು.

(ಈ) ಹೈದರಾಬಾದು ಕರ್ನಾಟಕ—ಕರ್ನಾಟಕದ ವಿಭಾಗಗಳಲ್ಲಿ ನೈಜಾಮನಿಗೂ ಕೆಲವು ಪ್ರದೇಶಗಳು ದೊರೆತವೆಂದು ಈ ಮೊದಲೇ ಹೇಳಿದೆಯಷ್ಟೆ. ಈ ಭಾಗವೆಲ್ಲಾ ಆಡಳಿತೆಗಾಗಿ ಒಂದು ಪ್ರಾಂತ್ಯವಾಗಿ ವಿಭಾಗಿಸಲ್ಪಟ್ಟಿದೆ. ಇದಕ್ಕೆ ಸುಭಾಗುಲ್ಬರ್ಗ ಅಥವಾ ಕರ್ನಾಟಕ ಪ್ರಾಂತ್ಯವೆಂದು ಹೆಸರು. ಈ ಪ್ರಾಂತ್ಯವು ಬಹಳ ಹಿಂದುಳಿದಿರುವುದು. ಒಂದು ಕಡೆ ಮರಾಠರ ಕಡೆ; ಇನ್ನುಳಿದ ಕಡೆಯಲ್ಲಿ ತೆಲುಗರು. ಇವರ ಮಧ್ಯದಲ್ಲಿ ಸಿಕ್ಕಿದ ಕನ್ನಡಿಗರ ಸ್ಥಿತಿಯು ಎಲ್ಲಾ ಕರ್ನಾಟಕಸ್ಥರಿಗಿಂತಲೂ ಶೋಚನೀಯತರ!

(ಉ) ಮೈಸೂರು ಕರ್ನಾಟಕ—ಕನ್ನಡ ನಾಡಿನಲ್ಲೆಲ್ಲಾ ಮುಂದುವರಿದ ಪ್ರಾಂತ್ಯವು ಇದೇ. ಇಲ್ಲಿ ಕನ್ನಡಿಗರೇ ರಾಜ್ಯದ ಎಲ್ಲಾ ಸ್ಥಾನಗಳಲ್ಲೂ ಇರುವರು. ಕನ್ನಡದ ಗೌರವವು ಇಲ್ಲಿಯೇ ಉಳಿದಿದೆ. ಸರ್ ಎಂ. ವಿಶ್ವೇಶ್ವರಯ್ಯನವರ ದಿವಾನಗಿರಿಯಲ್ಲಿ ಈ ರಾಜ್ಯವು ಮುಂದುವರಿಯಿತು. ಇವರಿಗೆ ಸ್ವತಂತ್ರವಾಗಿ ಒಂದು ವಿಶ್ವವಿದ್ಯಾಲಯವೂ ಇದೆ. ಆದರೆ ಇತ್ತೀಚೆಗೆ ಕನ್ನಡ ನುಡಿಗೆ ದೊರೆಯಬೇಕಾದಷ್ಟು ಪ್ರೋತ್ಸಾಹವು ದೊರೆಯದೇ ಇರುವುದು ಬಹಳ ವ್ಯಸನಕರ.

(ಊ) ಕೊಡಗು ಕರ್ನಾಟಕ—ಇದು ನಮ್ಮ ಪ್ರಾಂತ್ಯವೆಂದು ನಮ್ಮ ವಾಚಕರಿಗೆ ಹೇಳಬೇಕಾದುದಿಲ್ಲ. ಆದರೆ ಇದು ಯಾವ ಪ್ರಾಂತ್ಯಕ್ಕೂ ಸೇರದೆ ಒಂದು ಬೇರೆ ಪ್ರಾಂತ್ಯವಾಗಿದೆಯೆಂದು ಬೇರೆ ಕರ್ನಾಟಕಸ್ಥರಿಗೆ ಹೇಳಬೇಕಾಗಿದೆ. ಮೊನ್ನೆ ತಾನೇ ಬರೆದ ಒಂದು ಪುಸ್ತಕದಲ್ಲಿ ಕೊಡಗು ಮದ್ರಾಸಾಧಿಪತ್ಯಕ್ಕೆ ಸೇರಿದ್ದೆಂದಿದೆ. ಅಲ್ಲದೆ ಇದು ಆರು ತಾಲೋಕುಗಳಾಗಿ ಭಾಗಿಸಲ್ಪಟ್ಟಿದೆಯೆಂದೂ ಉತ್ತರ ಕರ್ನಾಟಕದ ಒಂದು ಪತ್ರ ಬರೆಯುತ್ತದೆ. ಇದಕ್ಕೆಲ್ಲಾ ಕಾರಣವು ಕೊಡಗು ಹಿಂದು ಬಿದ್ದಿರುವುದೇ!

ಈ ರೀತಿಯಲ್ಲಿ ಕರ್ನಾಟಕವು ಹರಿದಿರುವುದು ಕನ್ನಡಿಗರ ದುರ್ದೈವ; ಹೀಗಿರುವುದರಿಂದಲೇ ಕನ್ನಡಿಗರು ಇಷ್ಟು ಹಿಂದಿರುವುದು. ಹೀಗೆ ಹರಿದು ಹೋದ ಕರ್ನಾಟಕವನ್ನು ಭಾಷಾವಿಷಯದಲ್ಲೂ, ರಾಜಕೀಯ ವಿಷಯದಲ್ಲೂ ಏಕೀಕರಿಸಬೇಕೆಂದು ಮುಂದುವರಿದ ಕನ್ನಡಿಗರು ಕಳೆದ ಹತ್ತು ವರ್ಷಗಳಿಂದಲೇ ಪ್ರಯತ್ನ ಪಡುತ್ತಿರುವರು. ಭಾಷೆಯ ಏಕೀಕರಣದ ಸಲುವಾಗಿ ಅಖಿಲ ಕರ್ನಾಟಕಸ್ಥರು ೧೯೧೫ರಲ್ಲಿ ಒಟ್ಟು ಸೇರಿ ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಈ ಸಂಸ್ಥೆಯ ಮೂಲಕ ಭಾಷೆಯ ಏಕೀಕರಣವು ಬಹಳವಾಗಿ ನಡೆಯುತ್ತದೆ. ಭಾಷಾಪುನರುಜ್ಜೀವನವಾದ ಹಾಗೆಯೇ ರಾಷ್ಟ್ರಜನರ ಅಭಿವೃದ್ಧಿಯಾಗುವುದರಲ್ಲಿ ಸಂಶಯವಿಲ್ಲ.

ರಾಜಕೀಯ ಏಕೀಕರಣದ ಪರವಾಗಿ ೧೯೧೭ರಿಂದ ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಚಳವಳಗಳು ನಡೆಸಲ್ಪಟ್ಟವು. ಅದೇ ಪ್ರಕಾರವಾಗಿ ೧೯೨೦ರಲ್ಲಿ ಧಾರವಾಡದಲ್ಲಿ ಅಖಿಲ ಕರ್ನಾಟಕಸ್ಥರು ಸಭೆಸೇರಿ ಬ್ರಿಟಿಷ್ ಕರ್ನಾಟಕವನ್ನೇ ಒಂದು ಬೇರೆ ಪ್ರಾಂತ್ಯವನ್ನಾಗಿಯೂ, ಅಂಥಾ ಪ್ರಾಂತ್ಯಕ್ಕೆ ಬೇಕಾದ ವಿಶ್ವವಿದ್ಯಾಲಯ, ಒಂದೂವೇ ಮೊದಲಾದ ಎಲ್ಲಾ ಉಪಕರಣಗಳನ್ನು ಕೊಡಿಸಬೇಕೆಂದು ಸರಕಾರವನ್ನೂ ಕಾಂಗ್ರೆಸ್ಸನ್ನೂ ಕೇಳಿಕೊಂಡರು. ಇದೇ ಪ್ರಕಾರ ೧೯೨೦ರಲ್ಲಿ ನಾಗಪುರದಲ್ಲಿ ಸೇರಿದ ರಾಷ್ಟ್ರೀಯ ಮಹಾಸಭೆಯು ಕರ್ನಾಟಕವನ್ನು ಪ್ರಾಂತ್ಯವಾಗಿ ವಿಂಗಡಿಸಿತು. ಕೂಡಲೆ ಪ್ರಾಂತ್ಯದಲ್ಲೆಲ್ಲಾ ರಾಷ್ಟ್ರೀಯ ಚಳವಳವು ನಡೆದು, ಜನರಲ್ಲಿ ಜಾಗೃತಿಯು ಹುಟ್ಟಿತು. ಹಾಗೆಯೇ ಕಳೆದ ಡಿಸಂಬರ ತಿಂಗಳಲ್ಲಿ ಕರ್ನಾಟಕವು ಹಿಂದೀರಾಷ್ಟ್ರೀಯ ಮಹಾಸಭೆಯನ್ನು ಬರಮಾಡಿಕೊಂಡು, ಅದರ ಅಧಿವೇಶನವನ್ನು ಸಾಂಗವಾಗಿ ನೆರವೇರಿಸಿತು. ಸರಕಾರವು ಮಾತ್ರ ಇತ್ತಕಡೆ ಮನಸ್ಸೇ ಕೊಡಲಿಲ್ಲ.

ರಾಜಕೀಯವಿಷಯದಲ್ಲಿ ಕನ್ನಡನಾಡು ಏಕೀಕರಿಸಲ್ಪಡಬೇಕೆಂದು "ಕರ್ನಾಟಕ ಏಕೀಕರಣ ಸಭಾ" ಎಂಬ ಒಂದು ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ. ಇದರ ಮೂಲಕ ನಾಡಿನ ಎಲ್ಲಾ ಭಾಗದಲ್ಲೂ ಹೆಚ್ಚಿನ ಜಾಗ್ರತಿಯು ನಡೆಯುವರೀತಿಯಲ್ಲಿರುವುದು. ಈ ಸಭೆಗೂ ಕೊಡಗಿಗೂ, ಏಕೀಕರಣಕ್ಕೂ ಏನು ಸಮ್ಬಂಧವಿದೆಯೆಂದು ಸಧ್ಯದಲ್ಲೇ ವಿಚಾರಿಸೋಣ.

(ಮುಂದುವರಿಯುವುದು.)

ಟಿಪ್ಪುಸುಲ್ತಾನನ ಬೊಕ್ಕಸ.

ಕ್ರೀ. ಶ 1799ನೆ ಮೇ 4ರಲ್ಲಿ ಬ್ರಿಟಿಷರು ಶ್ರೀರಂಗಪಟ್ಟಣವನ್ನು ಲಗ್ಗೆಹತ್ತಿ ಸ್ವಾಧೀನಪಡಿಸಿಕೊಂಡರಷ್ಟೆ. ಮೇ 1ನೇ ತಾರೀಕಿನಲ್ಲಿ ಇಂಗ್ಲಿಷರ ಫಿರಂಗಿ ಗುಂಡುಗಳು ಕೋಟೆಯ ಗೋಡೆಯಲ್ಲಿ ಒಂದು ಕನ್ನ ಮಾಡಿದವು. ಮಾರನೆಯ ಎರಡು ದಿವಸಗಳಲ್ಲಿ ಈ ಕನ್ನವು ಮತ್ತಷ್ಟು ದೊಡ್ಡದಾಯಿತು. ಬ್ರಿಟಿಷರ ಆಹಾರಾದಿ ಸಂಭಾರಗಳು ಮುಗಿದು ಹೋಗಿದ್ದು ಅವರು ಮಹಾ ಅಪಾಯ ಸ್ಥಿತಿಯಲ್ಲಿದ್ದುದರಿಂದ ಜನರಲ್ ಹ್ಯಾರಿಸ್ಸನು ತಕ್ಷಣವೇ ಲಗ್ಗೆಹತ್ತದೆ ಹೋದರೆ ತನಗೆ ಉಳಿವಿಲ್ಲವೆಂದು ಭಾವಿಸಿ 4ನೇ ತಾರೀಕಿನಲ್ಲಿ ಲಗ್ಗೆಗೆ ಏರ್ಪಡಿಸಿದನು. ಜನರಲ್ ಬೇಯರ್ಡ್ ಎಂಬಾತನು 4376 ಮಂದಿ ಸೈನಿಕರೊಡನೆ ಲಗ್ಗೆಹತ್ತಲು ಹೊರಟನು. ಇವನಿಗೆ ಹಿಂದುಗಡೆ ಇಷ್ಟೇ ಸಂಖ್ಯೆಯ ದಳದೊಡನೆ ಕರ್ನಲ್ ವೆಲ್ಲೆಸ್ಲಿಯು ರಕ್ಷಕನಾಗಿ ನಿಂತುಕೊಂಡನು. ಮಾರನೆಯ ದಿವಸ 11 ಗಂಟೆಗೆ ಲಗ್ಗೆಯ ಸೇನೆಯು ಕಾವೇರಿಯನ್ನು ದಾಟಲಾರಂಭಿಸಿ 1 ಗಂಟೆಗೆ ಕೋಟೆಯ ಮೇಲೆ ಎರಡು ಭಾಗವಾಗಿ ಕೈಮಾಡಿ ಲೀಲಾಜಾಲವಾಗಿ ಕೋಟೆಯನ್ನು ಏರಿಕೊಂಡಿತು. ಇಷ್ಟೊಂದು ಕಾರ್ಯಭಾರ ನಡೆಯುತ್ತಿದ್ದಾಗಲೂ ಟೀಪುವಿನ ಸೇನೆಯು ಸ್ವಲ್ಪ ಮೇಲೆ ಎಚ್ಚರವೇ ಇಲ್ಲದೆ ಶತ್ರುಗಳ ಉದ್ಯಮವನ್ನೇ ತಿಳಿಯದೆ ಊಟೋಪಚಾರಾದಿ ಆನಂದಗಳಲ್ಲಿ ವಿನೋದಿಸುತ್ತಿದ್ದಿತು. ಅನರೆ ಶತ್ರುದಳವು ಕೋಟೆಯ ಹೊರಗೋಡೆಯ ಮೇಲೆ ಹಾಯ್ದು ಉತ್ತರದ ಬಾಗಿಲಬಳಿ ಬಂದು ಎರಡನೆ ಕೋಟೆಯನ್ನು ಹಿಡಿಯಲು ಪ್ರಯತ್ನಿಸುತ್ತಿದ್ದಾಗ ಸ್ವಯಂ ಸುಲ್ತಾನನು ಊಟವನ್ನು ಬಿಟ್ಟದ್ದು ಆ ಬಾಗಿಲ ಬಳಿ ಬಂದು ಶತ್ರುಗಳನ್ನು ತಡೆಯಲು ಪ್ರಯತ್ನಿಸಿದನು. ತನ್ನ ಕೈಯಿಂದ ಅನೇಕ ಶತ್ರುಗಳನ್ನು ಸಹ ಕೊಂದುಹಾಕಿದನು. ಇದು ಇವನ ವ್ಯಕ್ತಿಕ ಶೌರ್ಯವನ್ನು ಎಷ್ಟೇ ದೂರ ತೋರ್ಪಡಿಸಿದರೂ ಸೇನಾಪತಿಯಾದವನಿಗೆ ಸ್ವಲ್ಪವೂ ತಕ್ಕದಾಗಿರಲಿಲ್ಲ. ಸೇನೆಯು ವ್ಯಾಮರೆದಿದ್ದಾಗ ಶತ್ರುಗಳು ಒಳಕ್ಕೆ ನುಗ್ಗಿ ಅದಕ್ಕೆ ಕಳವಳವನ್ನೂ ಗಲಭೆಯನ್ನೂ ಉಂಟುಮಾಡಿದಾಗ ಸೇನಾಮುಖ್ಯನು ಅತ್ಯಂತ ಶಾಂತಿಯಿಂದ ವ್ಯವಸ್ಥೆಯನ್ನು ಉಂಟುಮಾಡಬೇಕಾಗಿತ್ತು. ಸುಲ್ತಾನನು ಯುದ್ಧ ಮಧ್ಯಕ್ಕೆ ನುಗ್ಗಿ ಹೋಗಿ ಸಾಯದೆ ಸೇನೆಯನ್ನು ಕೂಡಹಾಕಿ ಕ್ರಮವನ್ನೆಯಿಂದ ಶತ್ರುಗಳನ್ನೆದುರಿಸಲು ಏರ್ಪಡಿಸಿದ್ದರೆ ನಗರವು ಎಂದಿಗೂ ಬ್ರಿಟಿಷರ ವಶವಾಗುತ್ತಿರಲಿಲ್ಲ. ಇವನು ಉತ್ತರದ ಕೋಟೆ ಬಾಗಿಲನ್ನು ಹಾಕಿಸಿಬಿಟ್ಟಿದ್ದರೂ ಸಹ ಮೈಸೂರ ಚರಿತ್ರೆಯೇ ಬೇರೆಯಾಗುತ್ತಿತ್ತು. ಬ್ರಿಟಿಷರು ಹೊರಕೋಟೆಯಿಂದ ಮತ್ತೆರಡು ಕೋಟೆಗಳನ್ನೂ ಹಿಡಿದು ನಗರಕ್ಕೆ ಬರಲು ಅಸಾಧ್ಯವಾಗಿತ್ತು. ಆಹಾರಾದಿಗಳು ಮುಗಿದು ಹೋಗಿ ಕಷ್ಟಕ್ಕೆ ಸಿಕ್ಕಿದ್ದ ಬ್ರಿಟಿಷರಿಗೆ ಒಂದೆರಡು ದಿನಗಳ ಸಾವಕಾಶವೂ ಅಪಾಯಕರವಾಗುತ್ತಿತ್ತು. ಹೆಚ್ಚು ಕಷ್ಟವಿಲ್ಲದೆ ಕೇವಲ ಅದೃಷ್ಟ ಪ್ರಾಪ್ತಿಯಿಂದ ಇವರು ನಗರವನ್ನು ಹಿಡಿದದ್ದಕ್ಕೂ ಸಹ ಇವರು 1461 ಸೈನಿಕರನ್ನು ಬಲಿಕೊಡಬೇಕಾಯಿತು. ಸುಲ್ತಾನನು ಸೇನಾಪತಿಗೆ ಯೋಗ್ಯವಾದ ತಾಳ್ಮೆಯನ್ನು ತೊರೆದು ಪಶಾವಿಕ ಯುದ್ಧ ಮಧ್ಯಕ್ಕೆ ನುಗ್ಗಿ ಹತನಾಗಿ ರಾಜ್ಯವನ್ನು ನಾಶಮಾಡಿಕೊಂಡನೆಂಬುದಕ್ಕೆ ಒಂದ ನಿದರ್ಶನವುಂಟು. ಇವನ ಸುತ್ತಮುತ್ತಲೂ ಉತ್ತಮ ವಸ್ತ್ರಧಾರಿಗಳಾದ ಅನೇಕಮಂದಿ ಇವನ ರಾಣೀವಾಸದ ಹೆಂಗಸರು ಆ ಕೋಟೆ ಬಾಗಿಲಬಳಿ ಸತ್ತು ಬಿದ್ದಿದ್ದರು. ಸುಲ್ತಾನನು ಉನ್ಮತ್ತನಂತೆ ರಣಾಂಗಣಕ್ಕೆ ನುಗ್ಗಿದಾಗ ಅವನನ್ನು ಹಿಂದಕ್ಕೆ ಕರೆತರುವ ನಿಮಿತ್ತ ಈ ಹೆಂಗಸರು ಅಲ್ಲಿ ಬಂದು ಹತರಾಗಿರುವಂತೆ ತೋರುತ್ತದೆ. ಶ್ರೀರಂಗಪಟ್ಟಣದ ಸೋಲಿಗೆ ನಮ್ಮ ಅಜಾಗರೂಕತೆಯೂ ದುರದೃಷ್ಟವೂ ಕಾರಣವಲ್ಲದೆ ಬ್ರಿಟಿಷರ ಶೌರ್ಯವಲ್ಲ.

ನಗರವು ಇಷ್ಟು ಲೀಲಾಜಾಲವಾಗಿ ಕೈಗೆ ಸಿಕ್ಕಿದರೂ ಬ್ರಿಟಿಷರು ಅತಿ ತುಚ್ಛವಾಗಿ ವ್ಯವಹರಿಸಿ ಊರನ್ನು ಮೂರು ದಿವಸಗಳ ಕೊಳ್ಳೆಗೆ ಕೊಟ್ಟರು; ಈ ಕೊಳ್ಳೆಯಲ್ಲಿ ಸುಮಾರು 8000 ಮಂದಿ ನಿವಾಸಿಗಳು ಹತರಾದರೆಂದು ಬ್ರಿಟಿಷ್ ಚರಿತ್ರಕಾರರೇ ಒಪ್ಪಿರುವರು. ಈ ಮಹಾಪಟ್ಟಣದಲ್ಲಿ ದಕ್ಷಿಣ ಭಾರತದ ಅರ್ಧಪಾಲು ಐಶ್ವರ್ಯವು ಬೀಡುಗೊಂಡಿತ್ತೆಂದು ಹೇಳಬಹುದು. ಕ್ರಿ. ಶ ೧೮೦೦ರಲ್ಲಿ ಈ ಊರನ್ನು ನೋಡಿದ ಬುಕನನ್ ಎಂಬ ಪ್ರವಾಸಿಯು ಇಲ್ಲಿ ೧೫೦೦೦೦ ಜನಗಳಿದ್ದರೆಂದು ತಿಳಿಸಿದನು. ಆದು ವೇಳೆಗೆ ಸುಲ್ತಾನನ ೬೦—೭೦ ಸಾವಿರ ಸೇನೆಯು ಚದರಿಸಲ್ಪಟ್ಟು ರಾಜವಾಸವು ಮೈಸೂರಿಗೆ ಸಾಗಿಸಲ್ಪಟ್ಟಿತ್ತು. ಮತ್ತು ಊರಿನ ಕೈಗಾರಿಕೆಗಳೆಲ್ಲವು ಹಾಳಾಗಿದ್ದವು. ಆದ್ದರಿಂದ ೧೭೯೯ರಲ್ಲಿ ಶ್ರೀರಂಗಪಟ್ಟಣದಲ್ಲಿ ದರಿದ್ರಪಕ್ಷ ೪—೫ ಲಕ್ಷ ಜನಗಳಿದ್ದರೆಂದು ಹೇಳಬಹುದು. ಹೈದರನು ದಕ್ಷಿಣ ದೇಶದಲ್ಲಿದ್ದ ಸಕಲ ರಾಜವಾಡೆಗಳ ಐಶ್ವರ್ಯವನ್ನೂ ದೋಚಿಕೊಂಡು ಬಂದು ಇಲ್ಲಿ ಶೇಖರಿಸಿದ್ದನು. ಈ ನಗರದ ಅಪಾರವಾದ ಇಷ್ಟೊಂದು ಸಂಪತ್ತು ಆರೆಗಳಿಗೆಯಲ್ಲಿ ಕೊಳ್ಳೆಯಾಗಿ ಹೊರಟು ಹೋಯಿತು. ಈ ಪೆಟ್ಟಿನಿಂದ ಒಟ್ಟು ದಕ್ಷಿಣದೇಶವೇ ಇದುವರೆಗೂ ಚೇತರಿಸಿಕೊಂಡಿಲ್ಲವೆಂದು ಹೇಳುವುದು ಅತಿಶಯೋಕ್ತಿಯಾಗಲಾರದು.

ಉದಾಹರಣೆಗಾಗಿ ಸುಲ್ತಾನನ ಅರಮನೆಯಲ್ಲಿ ಬ್ರಿಟಿಷರಿಗೆ ದೊರೆತ ಕೊಳ್ಳೆಯೊಂದನ್ನು ನೋಡೋಣ. ಈ ಅರಮನೆಯಲ್ಲಿ ರಾಣೀವಾಸ ಮತ್ತು ದರ್ಬಾರು ಮಹಲು ಇವೆರಡನ್ನು ಬಿಟ್ಟರೆ ಮಿಕ್ಕ ಪ್ರತಿಯೊಂದು ಜಾಗವು ಧನಾಗಾರವೇ ಆಗಿಬಿಟ್ಟಿದ್ದಿತು. ಅಸಂಖ್ಯಾತವಾದ ಪೆಟ್ಟಿಗೆಗಳು ಧನದಿಂದ ಕಿಕ್ಕಿರಿಯುತ್ತ ಹೈದರ್ ಅಥವಾ ಟೀಪುವಿನ ಮೊಹರಿನಿಂದ ಅಂಕಿತವಾಗಿ ಪರಿಪರಿಯಾಗಿ ಎಲ್ಲೆಲ್ಲೂ ತುಂಬಲ್ಪಟ್ಟಿದ್ದವು. ಒಡವೆ ವಸ್ತು ಬೆಳ್ಳಿ ಪಾತ್ರೆಗಳೂ ಇವುಗಳಿಂದ ತುಂಬಿದ್ದ ಪೆಟ್ಟಿಗೆಗಳನ್ನು ಇಡುವುದಕ್ಕಾಗಿಯೇ ಸಾಲು ಕೊಠಡಿಗಳನ್ನುಳ್ಳ ಒಂದು ಮಹಲನ್ನೇ ನಿರ್ಮಿಸಿದ್ದರು. ಇಲ್ಲಿ ಎರಡು ದೊಡ್ಡ ಬೆಳ್ಳಿಯ ಹೌದಾಗಳು ಸಹ ಇದ್ದವು. ಮತ್ತೊಂದು ಕಡೆ ರತ್ನಗಳಿಂದ ಕೆತ್ತಲ್ಪಟ್ಟಿದ್ದ ಆಯುಧಗಳು ರಾಶಿರಾಶಿಯಾಗಿ ದೊರೆತವು. ಇನ್ನೊಂದು ಕಡೆ ಬಹು ರಮಣೀಯವಾಗಿ ಚಿತ್ರಾಲಂಕೃತವಾಗಿ ಬರೆಯಲ್ಪಟ್ಟು ಬಹಳ ಬೆಲೆಯುಳ್ಳ ಪುಸ್ತಕಗಳು ಅನೇಕ ಸಾವಿರಗಟ್ಟಲೆಯಲ್ಲಿ ಇಡಲ್ಪಟ್ಟಿದ್ದವು. ಬೇರೊಂದು ಕಡೆ ಬಹು ಬೆಲೆಯುಳ್ಳ ವಾದ್ಯ ವಿಶೇಷಗಳು ತುಂಬಲ್ಪಟ್ಟಿದ್ದವು. ಇವುಗಳಲ್ಲಿ ಜೀವ ಸಹಿತ ಇರುವ ಹುಲಿಯಷ್ಟು ದೊಡ್ಡದಾಗಿ ಹುಲಿಯ ಆಕೃತಿಯಲ್ಲಿದ್ದ ಒಂದು ವಾದ್ಯವಿಶೇಷವಿದ್ದಿತು. ಸುಲ್ತಾನನು ಈ ವಾದ್ಯದಲ್ಲಿ ಬಹಳ ಅಭಿರುಚಿಯುಳ್ಳವನಾಗಿದ್ದನು. ಅರಮನೆಯಲ್ಲಿ ದೊರೆತ ಶಾಲುಗಳು, ಕಿಂಕಾಪುಗಳೂ, ದುಕೂಲಗಳೇ 500 ಒಂಟೆಗಳು ಹೊರುವಷ್ಟು ದೊಡ್ಡ ಮೂಟೆಯಾಯಿತು. ಸುಲ್ತಾನನ ಸಿಂಹಾಸನಕ್ಕೆ ಮುಂದುಗಡೆ ಮರದಿಂದಲೂ ಬೆಳ್ಳಿಯಿಂದಲೂ ಮಾಡಲ್ಪಟ್ಟ ನಾಲ್ಕು ದೊಡ್ಡ ಬೆಳ್ಳಿ ಸರಪಣಿಗಳಿಂದ ತೂಗುಹಾಕಲ್ಪಟ್ಟಿತ್ತು. ಅರಮನೆಯಲ್ಲಿ ದೊರೆತ ಅತ್ಯಮೂಲ್ಯವಾದ ಪದಾರ್ಥವು ಸಿಂಹಾಸನವಾಗಿತ್ತು. ಇದನ್ನು ಗಟ್ಟಿಯಾದ ಕರಿಮರದಿಂದ ಮಾಡಿ ಮೇಲುಗಡೆ ಚಿನ್ನದ ತಗಡುಗಳನ್ನು ಹೊದಿಸಿದ್ದರು. ಇದು ಚಿನ್ನದಮಯವಾದ ಒಂದು ಹುಲಿಯ ಮೇಲೆ ಕೂಡಿಸಲ್ಪಟ್ಟಿತ್ತು. ಇದನ್ನು ಹತ್ತಲು ಬೆಳ್ಳಿಯ ಮೆಟ್ಟಲುಗಳು ಮಾಡಲ್ಪಟ್ಟಿದ್ದವು. ತಲೆಯ ಮೇಲಿನ ಕೊಡೆಯ ಒಳಮೈಯಲ್ಲಿ ಮಧ್ಯಭಾಗವನ್ನು ಚಿನ್ನದಿಂದ ಮಾಡಿ ಅದಕ್ಕೆ ಸುತ್ತಲೂ ಒಂದು ಸಾಲು ಚಿನ್ನದ ಗುಂಡು ಮತ್ತೊಂದು ಸಾಲು ನಿಜವಾದ ಮುತ್ತು ಇವುಗಳಿಂದ ಮಾಡಿದ್ದರು. ಇದಕ್ಕೆ ಮೇಲ್ಗಡೆ ರತ್ನಮಯವಾದ ನವಿಲು ರೆಕ್ಕೆಯನ್ನು ಚಚ್ಚಿಕೊಂಡು ಇದ್ದಿತು. ಈ ರೆಕ್ಕೆಗಳು ನಾನಾ ವರ್ಣದ ರತ್ನಗಳಿಂದ ಅಲಂಕೃತವಾಗಿದ್ದವು. ಇದರ ಕತ್ತನ್ನು ಒಂದು ದೊಡ್ಡ ಪಚ್ಚೆಯಿಂದ ಕಡೆದುಮಾಡಿದ್ದರು. ಈ ಪಕ್ಷಿಯು ತನ್ನ ಕೊಕ್ಕಿನಲ್ಲಿ ಅತಿ ದೊಡ್ಡದಾದ ಮತ್ತೊಂದು ಪಚ್ಚೆ ಮಣಿಯನ್ನು ಕಚ್ಚಿಕೊಂಡಿದ್ದಿತು.

ಸುಲ್ತಾನನ ಇಷ್ಟೊಂದು ಐಶ್ವರ್ಯವೂ ಪುಸ್ತಕಗಳೂ ಊರಿನವರ ಅಪಾರ ಸಂಪತ್ತೂ ಎಲ್ಲಿಗೆ ಹೋದವು?

ಜ. ಕ.

ಮೂರ್ನಾಡು ಕಾನ್ಫರೆನ್ಸಿನ ಜಮ, ಖರ್ಚು.

ತಾ 11—4—1925ರಲ್ಲಿ ಮೂರ್ನಾಡಿನಲ್ಲಿ ನಡೆದ ಜಮಾನ್ದಾರರ ಸಂಘದ ವಾರ್ಷಿಕ ಸಮ್ಮೇಳನದಲ್ಲಿ ಮಡಿಕೇರಿ ತಾಲೋಕು ಸ್ವಾಗತ ಮಂಡಳಿಯವರಿಗೆ ಉಂಟಾದ ಜಮ, ಖರ್ಚಿನ ವಿವರ—

ವಿವರ		ಜಮ.
ಯಥಾಶಕ್ತಿಯ ಚಂದ ವಸೂಲಿ	....	594— 9—0
ಚಪ್ಪರ ಇತ್ಯಾದಿಗಳ ಸಾಮಾನು ಹರಾಜು ಮಾರಾಟದಿಂದ ಜಮ	....	387— 8—3
ಮ॥ ಪಾಂಡಂಡ್ರ ಬೆಂಗಪ್ಪನವರ ಉದಾರತ್ವ		157—12—0
ಮ॥ ಕೇತಿಮನೆ ವೆಂಕಪ್ಪನವರ ಉದಾರತ್ವ	...	157—12—0
ಜುಮ್ಲ	....	1297— 9—3

ವಿವರ.		ಖರ್ಚು.
ಪೆಂಡಾಲು, ಅಡಿಗೆ ಮತ್ತು ಊಟದ ಮನೆ ಇತ್ಯಾದಿ ನಿರ್ಮಾಣದ ಖರ್ಚು	....	407— 8—6
ಪ್ರಿಂಟಿಂಗ್, ಪ್ರತಿನಿಧಿಗಳ, ಬೋಧಕರ ಉಪಚಾರ, ಪಾನಕದ ಇತ್ಯಾದಿ ಖರ್ಚು	...	890— 0—0
ಜುಮ್ಲ	....	1297— 8—6

ಮ॥ ಪಾಂಡಂಡ್ರ ಬೆಂಗಪ್ಪನವರು ಮತ್ತು ಮ॥ ಕೇತಿಮನೆ ವೆಂಕಪ್ಪನವರೂ, ತಮ್ಮ ನಾಡಿನ ಮೇಲೆಯೂ ಜಮಾನ್ದಾರರ ಸಂಘದ ಮೇಲೆಯೂ ತಮ್ಮ ಪ್ರೀತಿಯನ್ನು ವಿ

ತ್ಸವವನ್ನು ವಿಸ್ತರಿಸಿ ಸ್ವಾಗತಮಂಡಲಿಯವರಿಗೆ ತಮ್ಮ ಉದಾರತ್ವದ ಸಹಾಯವನ್ನು ನೀಡಿದ್ದಕ್ಕೆ, ಸ್ವಾಗತಮಂಡಳಿಯವರು ಅವರಿಗೆ ತುಂಬಾ ಕೃತಜ್ಞತೆಯನ್ನು ತೋರಿಸುವವರಾಗಿರುತ್ತಾರೆ, ಮತ್ತು ಇತರ ಜಮೀನ್ದಾರರ ಸಂಘದ ಮೆಂಬರುಗಳೂ, ಸ್ನೇಹಿತರೂ, ಅಭಿಮಾನಿಗಳೂ ಸಹ ಕಳೆದ ಸಮ್ಮೇಳನದ ಉತ್ತೇಜನಕ್ಕೆ ಪ್ರೋತ್ಸಾಹಿಸಿದಕ್ಕೆ ಅವರಿಗೆ ವಂದನೆ ಸಲ್ಲಿಸುವವರಾಗಿರುತ್ತಾರೆ.

ಪಿ ಯಂ. ಮುತ್ತಣ್ಣ.
ಸ್ವಾಗತ ಕಮಿಟಿ ಚೇರ್ ಮ್ಯಾನ್

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿಯಲ್ಲಿ ಸ್ಪೇಶಲ್ ಮೇಜಿಸ್ಟ್ರೇಟರ ಹುದ್ದೆಯೂ ರೆವಿನ್ಯೂ ಆಫೀಸಿನ ಮೇನೇಜರು ಮತ್ತು ಟ್ರೆಜರಿ ಆಫೀಸರ ಹುದ್ದೆಯೂ ಮಂಜೂರಾಗಿದೆಯೆಂದು ತಿಳಿಯುತ್ತೇವೆ. ಈ ಉದ್ಯೋಗಸ್ಥರನ್ನು ಬೇಗನೆ ನೇಮಿಸುವರೆಂದೂ ವರ್ತಮಾನ. ಇವೆರಡೂ ಸುಬೇದಾರರ ಗ್ರೇಡೇ ಆಗಿದೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಮಾಸ್ಟರುಗಳಾದ ಮಿ. ಮಾಚಿಮಾಡ ಚಂಗಪ್ಪನವರು ಮತ್ತು ಮಿ. ಪಟ್ಟಮಾಡ ಪೂವಯ್ಯನವರು ಮದ್ರಾಸಿಗೆ ಎಲ್. ಟಿ. ಟ್ರೈನಿಂಗಿಗೆ ಹೋಗಿರುವರು. ಇವರ ಬದಲು ಮಿ. ನರಸಿಂಹ ಕೃಷ್ಣಪ್ಪ ಬಿ. ಎ. ಯವರನ್ನೂ, ಮಿ. ಕೆ. ಎ. ವೆಂಕಟಗಿರಿ ಬಿ. ಎ. ಯವರನ್ನೂ ಮಾಸ್ಟರುಗಳಾಗಿ ನೇಮಿಸಿರುವರು.

ಜೂನ್ ತಾ 27ರಲ್ಲು "ಮೋಡರ್ನ್" ಮೋಟಾರು ಸರ್ವೀಸಿನ ಬಸ್ಸು ಬೆಳಿಗ್ಗೆ ಮಡಿಕೇರಿಯಿಂದ ಮೈಸೂರಿಗೆ ಹೋಗುವಾಗ ಮಡಿಕೇರಿ ಫ್ರೇಜರ್‌ಪೇಟೆ ರಸ್ತೆ 4ನೇ ಮೈಲ್‌ಬಳಿ ನಾರಾಯಿಕೇರಿ ಚಡಾವಿನಲ್ಲಿ ಬ್ರೇಕ್ ಹಿಡಿಯದೆ ಬಿದ್ದು ಬಸ್ಸಿಗೆ ನಷ್ಟ ಉಂಟಾಗಿರುವದಲ್ಲದೆ ಡ್ರೈವರಿಗೂ ಒಂದೆರಡು ಪ್ರಯಾಣಿಕರಿಗೂ ಗಾಯಗಳುಂಟಾಯಿತು. ಡ್ರೈವರನ್ನು ಪೋಲೀಸಿನವರು ಚಾರ್ಜುಮಾಡಿ ಕೇಸು ವಿಚಾರದಲ್ಲಿದೆ ಎಂದು ವರ್ತಮಾನ. ಅದೇ ದಿನ ಈ ಸರ್ವೀಸಿನ ಸಿದ್ದಾಪುರದಿಂದ ಮೈಸೂರಿಗೆ ಹೋಗುತ್ತಿದ್ದ ಬಸ್ಸಿಗೆ ಮರತುಂಡು ಗಾಡಿಯು ತಗಲಿ ಆ ಬಸ್ಸಿಗೂ ಮಾತ್ರ ಸ್ವಲ್ಪ ಜಖಂ ಉಂಟಾಗಿವೆಯೆಂದೂ ಗಾಡಿಯವನನ್ನು ಚಾರ್ಜುಮಾಡಿರುವರೆಂದೂ ವರ್ತಮಾನ.

ಕಳೆದವಾರ ಮಡಿಕೇರಿ ಆಸ್ಪತ್ರೆಯಿಂದ ಬಿಡುಗಡೆಯಾದ ಕಾಯಿಲೆಯವನೊಬ್ಬನು ನಡೆಯಲಾರದೆಯೂ ಹೊಟ್ಟೆಗಿಲ್ಲದೆಯೂ ಮಡಿಕೇರಿ ಮೈಸೂರು ರಸ್ತೆಯ 5ನೇ ಮೈಲಿ ಬಳಿ ಕಷ್ಟಪಡುತ್ತಿದ್ದವನ ಶವವು ಈ ವಾರ ಅಲ್ಲಿಯ ಒಂದು ತೋಡಿನಲ್ಲಿ ಕಾಣಬಂತೆಂದು ವದಂತಿ.

ಮಡಿಕೇರಿ ಕಾನ್ವೆಂಟ್ ಶಾಲೆಯು ಮಳೆಗಾಲದ ರಜೆಗಾಗಿ ಜೂನ್ ತಾ 29ರಿಂದ ಆಗೋಸ್ಟು ತಾ 5 ರವರೆಗೆ ಮುಚ್ಚಲ್ಪಟ್ಟಿದೆ.

ಮಳೆಗಾಲವು ನಿಯಮದಂತೆ ನಡೆಯುತ್ತಿದೆ. ದಕ್ಷಿಣ ಕೊಡಗಿನಲ್ಲಿ ಕಳೆದವಾರ ಮಳೆಗಾಳಿಯ ಜೋರಿನಿಂದ ಕೆಲವು ಜನರ ಉಪಟಳಕ್ಕೆ ಆಗಿಲ್ಲವಂತೆ. ಈಗ ನಿಧಾನವಾಗಿದೆ. ದನಗಳ ರೋಗಗಳು ರೈತರಿಗೆ ಬಹಳ ಕಷ್ಟವನ್ನುಂಟು ಮಾಡುತ್ತಿದೆ.

ದಿವಂಗತ ದೇಶಬಂಧು ದಾಸರವರ ಶ್ರಾದ್ಧ. ದಿನವಾದ ಈ ತಾ 1ರಲ್ಲು ಮಹಾತ್ಮ ಗಾಂಧಿಯವರ ಕೋರಿಕೆ ಮೇರೆ ಇಡೀ ಹಿಂದುಸ್ಥಾನದಲ್ಲಿ ಮೀಟಿಂಗುಗಳು ನಡಿಸಲ್ಪಟ್ಟಂತೆಯೇ ಕೊಡಗಿನ ಜನರು ವೀರರಾಜಪೇಟೆಯ ಬಸ್ಸರ್ ಸ್ಟೋರಿನ ಮಹಡಿಯಲ್ಲಿ ಮಿ. ಸಾರ್ವಂಗಡ ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ಮೀಟಿಂಗನ್ನು ನಡಿಸಿದರು. ಕೆಲವು ಮಹನೀಯರು ದಾಸರವರ ಜೀವನಚರಿತ್ರೆ, ಬೋಧನೆಗಳು, ಹಿಂದಾಲಿಕತ್ವ ಗುಣಗಳು ಮೊದಲಾದವುಗಳ ವಿಷಯ ಭಾಷಣ ಮಾಡಿದನಂತರ ದಿವಂಗತ ದಾಸರವರ ಆತ್ಮಕ್ಕೆ ಶಾಂತಿಯುಂಟಾಗಲೆಂದು ಪ್ರಾರ್ಥಿಸಿ, ಈ ವಿಷಯ ಮಹಾತ್ಮ ಗಾಂಧಿಯವರಿಗೂ, 'ಹಿಂದೂ' ಪತ್ರಿಕೆಗೂ ತಂತೀ ವರ್ತಮಾನ ಕಳುಹಿಸಲಾಯಿತು.

ತಾ. 1ರಲ್ಲು ವೀರರಾಜಪೇಟೆಯಲ್ಲಿ ನಡೆದ ಜಮೀನ್ದಾರರ ಸಂಘದ ಕಮಿಟಿ ಮೀಟಿಂಗಿನಲ್ಲಿ ಸಂಘಕ್ಕೆ ಒಂದು ಕಟ್ಟಡವನ್ನು ತೆಗೆದುಕೊಳ್ಳುವ ಅಧಿಕಾರವು ಅಧ್ಯಕ್ಷರಿಗೆ ಕೊಡಲ್ಪಟ್ಟದ್ದಲ್ಲದೆ, ಲೇಟ್ ಬಿದ್ದಂಡ ಗಣಪತಿಯವರ ಮೆಮೋರಿಯಲಿಗೆ ಹಣಸಂಗ್ರಹಕ್ಕೆ ವಿಜ್ಞಾಪನಾ ಪತ್ರಗಳನ್ನು ಪ್ರಿಂಟು ಮಾಡಿಕೊಡಲು ರೂ. 15 ವರೆಗಿನಂತೆ ಖರ್ಚು ಮಾಡಬಹುದೆಂತಲೂ ತೀರ್ಮಾನವಾಯಿತು.

ತಾ 2ರಲ್ಲು ಮಡಿಕೇರಿಯಲ್ಲು ನಡೆದ ಸೆಂಟ್ರಲ್ ಬ್ಯಾಂಕ್ ಮೀಟಿಂಗಿನಲ್ಲು ಈ ಕೆಳಗಿನ ಸಂಘಗಳಿಗೆ ಸಾಲ ಮಂಜೂರಾಯಿತು. ಗಾಳಿಬೀಡು ರೂ 150 ಈಚೂರು ರೂ.1000. ಮತ್ತೂರು ರೂ 900 ನಿಮಂದಕ ರೂ 500 ಕಂಜಿತಂಡ ರೂ 1000 ಬಿಟ್ಟಂಗಾಲ ರೂ 3000 ಸಿದ್ದಾಪುರ ರೂ. 1000. ಹುದೂರು ರೂ. 500.

ವೀರಾಜಪೇಟೆನಾಡು ಬೆಳ್ಳುಮಾಡು ಸ್ಕೂಲಿನ ಹೆಡ್‌ಮಾಸ್ಟರಾಗಿದ್ದ ಮಿ. ಕುಯಿಮಂಡ ಕಾರ್ಯಪ್ಪನವರು ಪಿಂಚೆನ್ ಸಮೇತ ರಿಟೈರಾದಾಗ ಅಲ್ಲಿಯ ಊರ ಸುಮಾರು 100ಜನರು ಸೇರಿ ಅವರಿಗೆ ಮರ್ಯಾದೆಯನ್ನು ತೋರಿಸಿದರು.

ತಾರೀಕು 29—6—25ರಲ್ಲಿ ಕೊಡಗುದೇಶದ ಚೀಫ್ ಕಮಿಷನರಾಗಿದ್ದ ಡಬ್ಲ್ಯು. ಪಿ ಬಾರ್ಟನರು ಹೈದರಾಬಾದಿಗೆ ಬೆಂಗಳೂರಿನಿಂದ ಪ್ರಯಾಣಮಾಡಿದರು.

ಕೋರ್ಟು ಕಚೇರಿಯ ವರ್ತಮಾನ.

ಹಳೇ ಬಾಸೆಲ್ ಮಿಶನಿನ ಈಗಿನ ಮಾಲೀಕರಾದ ಕಾಮನ್‌ವೆಲ್ತ್ ಟ್ರಸ್ಟ್ ಕಂಪೆನಿ(ಕಲ್ಲಿಕೋಟೆ)ಯ ಏಜೆಂಟನೆಂತ ಹೇಳಿಕೊಂಡು ಅಮ್ಮತ್ತಿ ಆನಂದಪುರದ ಎ. ಬಿ. ಕ್ರಿಸ್ಟಿ ಎಂಬವನು 1923ರಲ್ಲಿ ಮಡಿಕೇರಿ ಶ್ರೀಮತಿ ಸಿದ್ದಮ್ಮನವರಿಂದ ಕೆಲವು ಸಾಮಾನುಗಳಿಗೆ ಆರ್ಡರ್ ತೆಗೆದುಕೊಂಡು 455 ರೂಪಾಯಿಗಳನ್ನು ಅಡ್ವಾನ್ಸ್ ತೆಗೆದುಕೊಂಡು ಸ್ವಲ್ಪ ಕಾಲದ ಮೇಲೆ 84 ರೂಪಾಯಿ ಬೆಲೆಯ ಸಾಮಾನು ಮಾತ್ರ ಕಳುಹಿಸಿಕೊಟ್ಟು ಬಾಕಿ ಮಾಲನ್ನಾಗಲೀ ಹಣವನ್ನಾಗಲೀ ಕೊಡದ್ದರಿಂದ ಶ್ರೀಮತಿ ಸಿದ್ದಮ್ಮನವರು ಕಾಮನ್‌ವೆಲ್ತ್ ಟ್ರಸ್ಟ್ ಕಂಪೆನಿ ಮೇಲೂ ಕ್ರಿಸ್ಟಿ ಮೇಲೂ ಸಹ ಹಣವನ್ನು ಒರಮಾಡಿಸಲಿಕ್ಕೆ ದಾವಾಮಾಡಿದರು. ಕಂಪೆನಿಯವರು ವಾದಾ ಮಾಡಿದ್ದೇನೆಂದರೆ, ಕ್ರಿಸ್ಟಿಯೆಂಬವನು ತಮ್ಮ ಏಜಂಟನಲ್ಲ ಸಾಮಾನುಗಳಿಗೆ ಆರ್ಡರ್ ತೆಗೆದುಕೊಳ್ಳಲಿಕ್ಕೆ ಮಾತ್ರ ಅವನನ್ನು ನೇಮಿಸಿಕೊಂಡಿದ್ದದ್ದು. ಅವನು ತನ್ನ ಹಕ್ಕಿಗಿಂತ ಹೆಚ್ಚಾಗಿ ವಾದಿಗೆ ನಂಬಿಕೆ ಹುಟ್ಟಿಸಿದ್ದರೆ ಅವನೇ ಜವಾಬ್ದಾರನಾಗಬೇಕೆಂತ ವಾದಿಸಿದರು. ಏಜಂಟನು ತನ್ನ ಕೆಲಸ ನಡಿಸುವದರಲ್ಲಿ ತನ್ನ ಹಕ್ಕಿಗಿಂತ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಂಡು ಕೆಲಸ ಮಾಡಿದರೂ ಅಂಥಾ ಕೆಲಸದ ಜವಾಬ್ದಾರಿಯನ್ನು ಯಜಮಾನನು ವಹಿಸಬೇಕಾಗುತ್ತೆ ಎಂಬ ಬಾಸನವನ್ನು ಅನುಸರಿಸಿ ಕಂಪೆನಿಯೂ ಹಣವನ್ನು ಕೊಡಬೇಕೆಂತ ಸಬಾರ್ಡಿನೇಟ್ ಜಡ್ಜಿಯವರು ಪೈಸಲ್ ಮಾಡಿದ್ದಾರೆ.

ಗಿರ್ವಿ ಸ್ಥಿರಸೊತ್ತಿನ ಕಂದಾಯವನ್ನು ಗಿರ್ವಿಬರಕೊಟ್ಟವನು ಕಟ್ಟದೆ ಹೋದದ್ದರಿಂದ ಗಿರ್ವಿ ಖಾಸ್‌ಕೊಂಡವನು ಗಿರ್ವಿ ಸೊತ್ತಿನ ಕಂದಾಯವನ್ನು ಕಟ್ಟಿ ಗಿರ್ವಿ ಸಾಲದ ಮೇಲೆ ದಾವಾ ಮಾಡುವಾಗ ಕಂದಾಯದ ಹಣವನ್ನು ಸಾಲಕ್ಕೆ ಸೇರಿಸಿ ದಾವಾ ಮಾಡಿದನು. ಪ್ರತಿವಾದಿಯು ಹಾಜರಾಗಲಿಲ್ಲ. ಆದರೂ ಈ ವಿಷಯದಲ್ಲಿ ವಾದಿಗೆ ಲಾಯರು ಕಾನೂನು ತೋರಿಸಿ ಕಂದಾಯದ ಹಣ ಸಹ ಗಿರ್ವಿ ಸೊತ್ತಿನ ಜವಾಬ್ದಾರಿಯಿಂದ ವಜೆಯಾಗುವಂತೆ ಸಬಾರ್ಡಿನೇಟ್ ಜಡ್ಜಿಯವರು ಪೈಸಲ್ ಮಾಡಿದ್ದಾರೆ.

ಹಿಂದೂ ದೇಶ.

ಬಂಗಾಳದ ಸ್ವರಾಜ್ಯಪಾರ್ಟಿಯವರು ಲೇಟ್ ದೇಶಬಂಧು ದಾಸರವರ ಬದಲಿಗೆ ಮಿ. ಜೆ. ಎಂ. ಸೇನ್‌ಗುಪ್ತರವರನ್ನು ತಮ್ಮ ಮುಂದಾಳಾಗಿ ಆರಿಸಿಕೊಂಡಿರುವರು.

ಬೊಂಬಾಯಿಯ ಬೌರ್ಬ್ಲಾ ಕೇಸಿನ ಅಪರಾಧಿಗಳು ತಪ್ಪುತೋರಿಸಬೇಕೆಂದು ನ್ಯಾಯಾಧಿಪತಿಗೆ ಅರ್ಜಿಯನ್ನು ಹಿಂತೆಗೆದಿರುವರು. ಈ ಕೇಸನ್ನು ಬೊಂಬಾಯಿ ಹೈಕೋರ್ಟಿನ ಎಲ್ಲಾ ಜಡ್ಜಿಗಳು ಸೇರಿ ವಿಚಾರಿಸಬೇಕೆಂದು ಅಪ್ಪೀಲ್ ಜನರಲಿನ ಅಪ್ಪಣೆ ಕೇಳಿರುವರು. ಇದಾಗದಿದ್ದರೆ ಪ್ರಿವಿಕೌನ್ಸಿಲಿಗೆ ಅಪ್ಪೀಲು ಮಾಡುವ ವಿಚಾರದಲ್ಲಿದೆ.

ಸ್ಟಿಟೋಡಲ್ಲಿ 50 ಚಳುವಳಿಗಳು ಸೆರೆಹಿಡಿಯಲ್ಪಟ್ಟಿರುವರು. ಪಂಜಾಬಿನಿಂದ ಬಂದ ಅಕಾಲಿ ಜಾತವು ಬೊಂಬಾಯಿಗೆ ತಾ. 29ರಲ್ಲಿ ತಲುಪಿದಾಗ ಅಲ್ಲಿಯವರು ಅವರಿಗೆ ಸ್ವಾಗತವನ್ನೀಡಿದರು.

ಕೂಚ್‌ಬೆಹಾರಿನ ಮಹಾರಾಜ ನಿತ್ಯೇಂದ್ರ ನಾರಾಯಣ ರಾಜಕುಮಾರರ ಹೆಂಡತಿಯಾದ ಇಂದಿರಾ ಸಿರುಸಮಾದೇವಿಯು ತನ್ನ ಮದುವೆಯನ್ನು ರದ್ದುಪಡಿಸಿ ಗಂಡನನ್ನು ಬಿಡ ಬಾರದೆ ಅನುಕೂಲ ಪಡಿಸಿಕೊಡಬೇಕೆಂದು. ತಂದ ಕೇಸಿನಲ್ಲಿ ಅವರ ಪರವಾಗಿ ಜಡ್ಜ್‌ಮೆಂಟ್ ಆಗಿದೆ.

ತಿರುವಾಂಕೂರಿನಲ್ಲಿ ಹೊಸದಾಗಿ ಮಂಜೂರಾದ ಕೌನ್ಸಿಲು ಕೆಲಸ ಪ್ರಾರಂಭಮಾಡುವಾಗ ಮಹಾರಾಣಿಯವರು. ಗತಿಸಿದ ಮಹಾರಾಜರ ಪ್ರಯತ್ನದಿಂದ ಈ ಕೌನ್ಸಿಲು ಸ್ಥಾಪಿತವಾಯಿತೆಂತಲೂ ಇದರ ಕೆಲಸದಲ್ಲಿ ಜನರು ತುಂಬಾ ಉತ್ಸಾಹವುಳ್ಳವರಾಗಿ ಇರುವದನ್ನು ನೋಡಿ ತನಗೆ ತುಂಬಾ ಸಂತೋಷವಾಗಿದೆಯೆಂತಲೂ ಹೇಳಿ ಕೌನ್ಸಿಲಿನ ಕೆಲಸಗಳಿಗೆ ಜಯವಾಗಲೆಂದು ಹರಸಿದರು.

ತಿರುಚಿನಾಪಳ್ಳಿಯಲ್ಲಿ ಮುತ್ತರಸಪೇಟೆ ಎಂಬ ಊರಿನಲ್ಲಿ ತಾ. 29—6—25ರಲ್ಲಿ ಕಾವೇರಿನದಿಯ ಪ್ರವಾಹದಿಂದ ಅನೇಕ ಮನೆಗಳು ಮುಳುಗಿವೆಯೆಂತಲೂ ಜನರು ಊರನ್ನು ಬಿಟ್ಟಿದ್ದಾರೆಂತಲೂ ವರ್ತಮಾನ ಬಂದಿದೆ.

ಅಖಿಲಭಾರತ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯ ಮೀಟಿಂಗು ಜುಲೈ 16ರಲ್ಲು ಕಲ್ಕತ್ತಾದಲ್ಲಿ ನಡೆಯುವುದು.

ಮಹಾತ್ಮ ಗಾಂಧಿಯವರು ತಮ್ಮ ಬಂಗಾಳ ಪ್ರವಾಸವನ್ನು ತಾ 4ರಲ್ಲಿ ಪುನಹ ಪ್ರಾರಂಭಿಸುವರು.

ಪಂಜಾಬು ಕೌನ್ಸಿಲಿನ ಅಧ್ಯಕ್ಷರೇ ದೇಶಬಂಧು ದಾಸರವರ ಮರಣದ ವಿಷಯ ಸಂತಾಪವನ್ನು ಕೌನ್ಸಿಲಿನಲ್ಲಿ ಸೂಚಿಸಲು ಆದಿಮಾಡಿದರೂ ಅವರು ನೇಮಿಸಿದ್ದ ಮೆಂಬರುಗಳು ಮಾತಾಡಿದನಂತರ ಮಾತಾಡಲು ಎದ್ದು ನಿಂತಿದ್ದ ಸ್ವರಾಜ್ಯಪಕ್ಷದ ಇಬ್ಬರು ಮೆಂಬರುಗಳನ್ನು ಗಣನೆಗೆ ತಾರದೆ ಸಂತಾಪದ ವರ್ತಮಾನವನ್ನು ಕಳುಹಿಸುವಂತೆ ತೀರ್ಮಾನಿಸಿದರಂತೆ.

ಮಿ. ಎಸ್. ಸಿ ಬೋಸ್‌ರವರು ಜೈಲಿನಿಂದ ಹೊರಗೆ ಬರುವವರೆಗೂ ಅವರಿಗೆ ರಜೆಯನ್ನು ಕಲ್ಕತ್ತಾ ಮುನ್ಸಿಪಾಲಿಟಿಯವರು ಮಂಜೂರು ಮಾಡಿರುವರು.

ವಿದೇಶ.

ಬ್ರಿಟಿಷ್ ಸಾಮ್ರಾಜ್ಯದ ಚಕ್ರವರ್ತಿಯವರು ತಮ್ಮ ದೇಹಾರೋಗ್ಯದ ಅಭಿವೃದ್ಧಿಗಾಗಿಯೂ, ಹಿಂದೂದೇಶದ ರಾಜಕುಮಾರರನ್ನು ಮತ್ತು ಜನರನ್ನು ಪುನಹ ಭೇಟಿಮಾಡಬೇಕೆಂಬ ಅಭಿಲಾಷೆಯಿಂದಲೂ ಬರುವ ಚಳಿಗಾಲದಲ್ಲಿ ಇಂಡಿಯಾಕ್ಕೆ ಬರಲಿರುವರು. ಇವರ ಸಂಗಡ ಇಂಡಿಯಾ ಸ್ಟೇಟ್ ಸೆಕ್ರೆಟರಿಯಾದ ಲಾರ್ಡ್ ಬರ್ಕನ್‌ಹೆಡ್‌ರವರು ಬರುವರಂತೆ.

ದಕ್ಷಿಣ ಆಫ್ರಿಕದಲ್ಲಿ ಹಿಂದೀಯರಿಗೆ ವಿರೋಧವಾಗಿ ಬಾರೀ ನಿರ್ಬಂಧವನಂದ ಅಸ್ಸರುನ ಮಹಾತ್ಮ ಗಾಂಧಿಯವರ ಪುತ್ರ ಮಿ. ಮಣಿಲಾಲ್ ಗಾಂಧಿಯವರು ಸತ್ಯಾಗ್ರಹದ ಚಳವಳಿಯನ್ನು ಪ್ರಾರಂಭಿಸಲಿಕ್ಕಿರುವರು. ಟ್ರಾನ್ಸ್‌ವಾಲಿನಲ್ಲಿ ಪ್ರಾರಂಭವಾಗುವುದಂತೆ.

ಜಪಾನಿನ ಮಂತ್ರಿಮಂಡಲದಲ್ಲಿ ಕಲಹದ ಕಾರಣ ಮಂತ್ರಿಗಳು ರಾಜೀನಾಮೆ ಕೊಟ್ಟಿರುವರು.

ಇಂಡಿಯಾ ಮತ್ತು ನಿಸರ್ಗ ಸ್ಥಾನದ ಸ್ಥಳಗಳಲ್ಲಿರುವ ಕೆಲವು ಬ್ರಿಟಿಷ್ ಮತ್ತು ಇಂಡಿಯನ್ ಸೈನ್ಯಗಳು ಚೈನಾದ ಗಲಭೆಯ ಬಗ್ಗೆ ಅಲ್ಲಿಗೆ ಹೊರಡಲು ತಯಾರಾಗಬೇಕೆಂದು ಸೂಚಿಸಿರುವರು.

ಫ್ರಾನ್ಸಿನಲ್ಲಿ ಮೊಸ್ಯೆ ಹೆರಿಯೊ ಪ್ರಧಾನಿಯಾಗಿ ಸೇರಿ ಸರಕಾರದ ಮೇಲೆ ದಂಗೆ ಎದ್ದು ಅದನ್ನು ಸೋಲಿಸಿ ಮತ್ತೆ ಅಧಿಕಾರ ಪಡೆದವರು. ಪ್ರಧಾನ ಮಂತ್ರಿತ್ವವನ್ನು ಸ್ವೀಕರಿಸಿದರು. ಅವರ ಹೊಸ ಮಂತ್ರಿ ಮಂಡಲಿಯನ್ನು ರಚಿಸಿದರಂತೆ.

ಲಾರ್ಡ್ ರೀಡಿಂಗ್‌ರವರು ಇನ್ನೂ ಎರಡು ವರ್ಷ ವೈಸರಾಯರಾಗಲು ಒಪ್ಪಿರುವರೆಂತಲೂ ಅವರ ನಂತರ ಇಂಡಿಯಾ ಸ್ಟೇಟ್ ಸೆಕ್ರೆಟರಿಯಾಗಿರುವ ಲಾರ್ಡ್ ಬರ್ಕನ್‌ಹೆಡ್‌ರವರು ವೈಸರಾಯರಾಗಿ ಬರುವರೆಂದೂ ವದಂತಿ.

ಫ್ರೆಂಚ್ ಚೇಂಬರಿನಲ್ಲಿ ಮೊರಾಕೊದ ವಿಷಯ ಚರ್ಚೆನಡೆದು ಮುಖ್ಯ ಮಂತ್ರಿ ಪೈನ್‌ಲೀವಾರವರು ಮಾತಾಡಿದನಂತರ ಎರಡು ಪಾಗಪದವರಿಗೆ ಕೈಕೈ ಹೋಯಿತಂತೆ!

ಮಿತಿ ಮೀರಿದ ಸಂತತಿಗಳು.

ಒಬ್ಬನಿಗೆ ೬೨ ಮಕ್ಕಳು!

ಸಾಧಾರಣ ಪತ್ನಿ ಹನ್ನೆರಡು ಮಕ್ಕಳಿಂದ ಹೆಚ್ಚಿನ ಹದಿನೈದು ಇಪ್ಪತ್ತರ ವರೆಗೂ ಮಕ್ಕಳನ್ನು ಹಡೆದವರು ಇದ್ದರೂ ಇರಬಹುದು. ಇದಕ್ಕಿಂತಲೂ ಹೆಚ್ಚಿಗೆ ಸಂತಾನವೆಂದರೆ ನಂಬಲಿಕ್ಕೆ ಕಷ್ಟ ಕಾಣುತ್ತದೆ. ಆದರೆ ಇಂಗ್ಲೀಷ್ ಪತ್ರಿಕೆಯೊಂದರಲ್ಲಿ ಇದಕ್ಕೆ ವಿಸ್ತಾರದ ಹಲವು ದೊಡ್ಡ ಕುಟುಂಬಗಳ ವೃತ್ತಾಂತವು ಪ್ರಕಟವಾಗಿಯದೆ. 17ನೇ ಶತಮಾನದಲ್ಲಿ ಸ್ಕಾಟ್ಲೆಂಡ್ ದೇಶದ ಒಬ್ಬ ನೇಯಿಗೆಯವನಿಗೆ ಒಬ್ಬಳೇ ಹೆಂಡತಿಯಿಂದ 62 ಮಕ್ಕಳಾಗಿ ಇವರಲ್ಲಿ 46 ಮಂದಿ ಆತನ ಮರಣಕಾಲದಲ್ಲಿ ಜೀವಿಸಲು ಉಳಿದಿದ್ದರಂತೆ! ಇದು ಹಿಂದಿನ ಕಾಲದಲ್ಲಿ ಆಯಿತು. ಆದರೆ ಈಗಿನ ಕಾಲದಲ್ಲೂ ಇಂಥಾ ಸೋಜಿಗಗಳು ಇಲ್ಲವೆನ್ನಲಾಗುವದಿಲ್ಲ. ರಷ್ಯಾ ದೇಶದ ಪ್ರೆನೋಕಾ ಎಂಬವನಿಗೆ ಮೂರು ಸಲ ಮದುವೆಯಾಗಿ, 1ನೇ ಹೆಂಡತಿಯಿಂದ 6, 2ನೇ ಯವಳಿಂದ 24, 3ನೇ ಯವಳಿಂದ 11 ಹೀಗೆ ಒಟ್ಟು 41 ಮಕ್ಕಳಾಗಿತ್ತಂತೆ. ಪ್ರೆನೋಕಾ ಸಾಹೇಬರು 29 ಮಂದಿ ಗಂಡು ಮತ್ತು 0 ಮಂದಿ ಹೆಣ್ಣುಮಕ್ಕಳು ಮದುವೆಯಾಗಿ ಅವರಿಂದ ಒಟ್ಟು 200 ಮಂದಿಯು ದೊಡ್ಡ ಕುಟುಂಬವಾದುದನ್ನು ನೋಡಿ ಸಂತೋಷ ಹೊಂದಿದ್ದನು.

ಇತ್ತೀಚೆಗೆ ಇಂಗ್ಲಾಂಡಿನಲ್ಲಿ ವೃತ್ತಕವ್ಯಾಪಾರಿಯೊಬ್ಬನು 32 ಮಂದಿ, ಮಿಸೆಸ್ ಮೇರಿ ಜೋನ್ಸ್ ಎಂಬವಳು 33 ಮಂದಿ ಮತ್ತು ಮಿಸೆಸ್ ಅಮ್ಮಾ ಹೇಸ್ ಎಂಬವಳು 27 ಮಂದಿ ಮಕ್ಕಳನ್ನು ಪಡೆದು ತಮ್ಮ ದೇಶದ ಜನಸಂಖ್ಯೆಯನ್ನು ಹೆಚ್ಚಿಸಿದ್ದು ಹಲವರು ಕೇಳಿರಬಹುದು. ಯೋರ್ಕ್ ಶಯರಿನ ಮಿಸೆಸ್ ಉಸರ್ಲ ಕ್ರಾಟ್‌ಪ್ಲಾಟ್ ಎಂಬವಳು ತನ್ನ 91ನೇ ವಯಸ್ಸಿನಲ್ಲಿ ಮಕ್ಕಳು, ಮೊಮ್ಮಕ್ಕಳು ಮರಿಮಕ್ಕಳು, ಒಟ್ಟು 163 ಮಂದಿಯನ್ನು ನೋಡಿ ಸುಖಮರಣವನ್ನು ಹೊಂದಿದಳು

ಜೊರ್ಜಿಯಾದಲ್ಲಿ ಮಿಸೆಸ್ ಶಿವರ್ ಎಂಬಾಕೆಯು ತನ್ನ ಅವಸಾನದ ಕಡೆ ವರ್ಷದಲ್ಲಿ 310 ಪುತ್ರ ಪೌತ್ರಾದಿಗಳ ಮನೆಗಳನ್ನು ಕ್ರಮಪ್ರಕಾರ ಸಂದರ್ಶಿಸಿ ಕಳೆದಳು ಉಠಾದೇಶದ ಮಿಸೆಸ್ ಸಾರಾ ಎಂಬವಳು ನಾಲ್ಕು ತಲಾಂತರದಲ್ಲಿ 303 ಜೀವಿತ ಮೆಂಬರರುಳ್ಳ ಬಂಧುಬಳಗದವರ ನಡುವಿನಲ್ಲಿದ್ದಳು

೧೦೫೧ ಮಂದಿಯುಳ್ಳ ಕುಟುಂಬ!!

ಕಂಬರ್‌ಲೆಂಡ್ ನಿವಾಸಿಕನಾದ ಜಬ್ಬ ವೆಬ್ಸ್ ಎಂಬಾತನ ಆರು ಮಂದಿ ಗಂಡು 6 ಮಂದಿ ಹೆಣ್ಮಕ್ಕಳಲ್ಲಿ 1051 ಸಂತತಿಯಾಗಿ ಜೀವಂತವಿದ್ದುದನ್ನು ಕಣ್ಣಾರ ನೋಡಿರುವನು ಹಿರೇ ಮಗ ಜೇಕಬ್ ಎಂಬವನ ಪೀಳಿಗೆಯಲ್ಲಿ 444, ಮೈಲ್ಸ ಎಂಬವನಲ್ಲಿ 402, ಮೂರು ಜನ ಹೆಣ್ಮಕ್ಕಳಲ್ಲಿ ಕ್ರಮಪ್ರಕಾರ 230, 208, 201, ಮಂದಿಯೂ ಕಡೆ ಮಗನಲ್ಲಿ 166 ಮಂದಿಯೂ ಹುಟ್ಟಿರುವರು.

ವರ್ಷಕ್ಕೆ ಆರು ಮಕ್ಕಳು!!!

ಇನ್ನು ಅವಸರ ಅವಸರವಾಗಿ ಮಕ್ಕಳು ಜನನವಾಗುವುದನ್ನು ಕೇಳಿದರೆ ಇನ್ನಷ್ಟು ವಿಶೇಷವೋರುವದು ಬೆಲ್ಜಿಯಮ್ ದೇಶದ ಮುಖ್ಯಸ್ಥಳವಾದ ಎಂಟ್ವರ್ಪ್ ಎಂಬಲ್ಲಿ ಒಬ್ಬ ಹೆಂಗಸು ಒಸಪರಿಯಲ್ಲಿ ಒಂದೇ ಸವನ ಮೂರು ಮತ್ತು ಅದೇ ದಶಂಬರದಲ್ಲಿ ಮೂರು ಹೀಗೆ ಒಂದು ವರ್ಷದಲ್ಲಿ 6 ಮಕ್ಕಳನ್ನು ಜನನಕ್ಕೆ ತಂದಿರುವಳು ಚಿಕಾಗೊ ದೇಶದಲ್ಲಿ ಜೊಸಪ್ಯಾನ್ ಒವ್ಸ್ನೆಬ ಎಂಬಾತಳು ಮದುವೆಯಾಗಿ 7 ವರ್ಷಗಳಲ್ಲಿ ಒಂದ ಬಾರಿ ಮೂರು ಎರಡು ಸಾರಿ ಅವಳಿ ಜವಳಿ, ಮತ್ತೊಮ್ಮೆ ಒಂದೇ ಸಾರಿ 4 ಮಕ್ಕಳು, ಮೂರು ಸಾರಿ ಒಂದೊಂದು ಮಗುವನ್ನು ಹೀಗೆ ಸರಾಸರಿ ವರ್ಷಕ್ಕೆ ಎರಡು ಮಕ್ಕಳು ಎಂಬಂತೆ ಪಡೆದಿರುವಳು

"ನವಯುಗ

ಪ್ರಕಟಣೆ.

ತಾತ್ಕಾಲಿಕ ಮರದ ಸೇತುವೆಯು ಅಬದ್ರತೆಯು ದಸಯಿಂದ ಬಂಗಳೂರ ಮಂಗಳೂರು ರಸ್ತೆಯ 'ಮಾರ್ನಹಳ್ಳಿ ಕಂಪ್ ಸಾಳೆಯ ಭಾಗದಲ್ಲಿ ಮಳೆಗಾಲದಲ್ಲಿ ಗಾಡಿ ವಗೈರೆ ತಿರುಗಾಡುವದನ್ನು ತಡೆ ಮಾಡಲಾಗಿದೆ ಮಳೆಗಾಳಿಯ ಹೊಡೆತದಿಂದ ಆ ಭಾಗದಲ್ಲಿ ಬರೆ ಜಾರಿಯೂ ಮರಗಳು ಬಿದ್ದೂ ರಸ್ತೆಯು ಚಕ್ರದ ವಾಹನಗಳಿಗೆ ದಾಟಲು ಅಯೋಗ್ಯವಾಗುವುದು

ಡಿಪ್ಯುಟಿ ಕಮಿಷನರ್,
ಹಾಸನ ಡಿಸ್ಟ್ರಿಕ್ಟು

ಪತ್ರವ್ಯವಹಾರ.

ವಾರ್ತಿ ಬರೆಯರು ಬರೆವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ ಸಂ

- ❧ -

ಸಹಕಾರಿ ಸಂಘಗಳ ಕಾನ್‌ಫರೆನ್ಸಿನ 1ನೇ ಠರಾವು

ಅಯ್ಯಾ,

ಕಳೆದ ವಾರ ಪ್ರಕಟವಾದ ಪ್ರೊಸೀಡಿಂಗ್ಸಿನಲ್ಲಿ ಈ ಠರಾವಿನ ಚರ್ಚೆಯನ್ನು ಚನ್ನಾಗಿ ವಿವರಿಸಿರುವದಿಲ್ಲ ಜಮ್ಮದ ಭೂಮಿಯನ್ನು ಗಿರ್ವಿ ಕೊಡಲು ಕಮಿಶನರ ಮಂಜೂರಾತಿ ಪಡೆಯಬೇಕಾದರೆ ಕುಟುಂಬದ ಪ್ರಾಯಬಂದ ಎಲ್ಲರೂ ಒಪ್ಪಿಗೆಕೊಡಬೇಕೆಂತ ಇರುವ ಕಾನೂನನ್ನು ಬದಲಾಯಿಸಿ ಜಮಾಬಂದಿಯ 6ನೇ ಕಲಮಿನಲ್ಲಿ ದಾಖಲೆ ಇರುವ ಮನುಷ್ಯನ ಅನುಮತಿ ಮಾತ್ರ ಪಡೆದು ಮಂಜೂರಾತಿಕೊಟ್ಟರೆ ಸಾಕೆಂತ ಠರಾವಿನ ಮೊದಲಿನ ರೂಪವಿತ್ತು ಈ ಠರಾವಿಗೆ ಅನೇಕ ಮೆಂಬರುಗಳು ವಿರೋಧಿಸಿದರೇ ಹೊರತು ಪ್ರೊಸೀಡಿಂಗ್ಸಿನಲ್ಲಿ ಪ್ರಕಟಿಸಿರುವ ಠರಾವಿಗೆ ವಿರೋಧಿಸಲಿಲ್ಲ ಯಾರಿಗೂ ಆಕ್ಷೇಪವಿಲ್ಲದಂತೆ ಅಧ್ಯಕ್ಷರ ಸಲಹೆಯಿಂದ ಠರಾವು ಪ್ರಕಟವಾದ ರೂಪಿನಲ್ಲಿ ಮಂಜೂರಾದದ್ದಾಗಿದೆ ಕೊಡಗರ ನಡವಳಿಕೆ ಕಾನೂನಿನಲ್ಲಿಯೂ ಸರ್ಕಾರದವರು ಮಂಜೂರು ಮಾಡಿಟ್ಟಿರುವ ಕಾನೂನಿನಲ್ಲಿಯೂ ಕೊಡಗರ ಸೊತ್ತು ಪಾಲಾಗುವದಿಲ್ಲ ಪರಾಧೀನ ಮಾಡಕೂಡದೆಂತ ಇರುವದಕ್ಕೆ ಒಂದು ಪ್ರತಿಕ್ಷೇಧ ಮಾತ್ರ ಇದೆ ಅದು ಯಾವದೆಂದರೆ ಕಮಿಷನರ ಹುಕುಂ ಪಡೆದು ಪರಾಧೀನ ಮಾಡಿಸಬಹುದೆಂತೆ ಅದರ ಕಮಿಷನರು ಹುಕುಂ ಕೊಡಬೇಕಾದರೂ ಕುಟುಂಬದ ಪ್ರಾಯಬಂದ ಎಲ್ಲರ ಅನುಮತಿ ಪಡೆಯಬೇಕೆಂತ ರೂಲ್ಸ್ ಮಾಡಿದ್ದಾರೆಂತ ತಿಳಿಯುತ್ತೇನೆ ಹೀಗೆ ಇರುವ ಕಾನೂನಿಗೆ ವಿರೋಧವಾಗಿ ಅನುಮತಿ ಕೊಡ ಕೂಡದೆ ಜಮ್ಮದ ಭೂಮಿಯನ್ನು ಗಿರ್ವಿಕೊಟ್ಟರೆ ಆ ಗಿರ್ವಿಯು ನಡೆದೀತೇ? ನಡೆಯದೆ ಇರುವ ಗಿರ್ವಿಯನ್ನು ತಗೆದುಕೊಂಡು ಪ್ರಯೋಜನವೇನು? ಒಬ್ಬ ಮೆಂಬರನು ಜಮ್ಮದ ಸೊತ್ತನ್ನು ಹರಾಜು ಮಾಡಿಸ ಹೋದರೆ ಕೊಂಬ ತಕ್ಕ ಇರ ವದರಿಂದಲೂ ಜಮ್ಮದ ಸೊತ್ತು ಹರಾಜಾಗುವದು ಬಹಳ ಕಡಿಮೆಯಾಗಿಯೂ ಇರುವದರಿಂದಲೂ ಗಿರ್ವಿಕೊಡಲು ಎಲ್ಲರ ಅನುಮತಿ ಇಲ್ಲದಿದ್ದರೆ ಏನು? ಹೇಗಾದರೂ ಗಿರ್ವಿ ಎಂತ ಬರೆಸಿಕೊಂಡರೆ ಆಯಿತಲ್ಲ, ಎಂತ ಹೇಳಿದರು ಈ ಮಾತಿನಲ್ಲಿ ಪ್ರಮಾಣಿಕತೆಯು ಕಡಿಮೆಯಾಗಿರುವಂತೆ ತೋರುತ್ತದೆ. ಸಂಘವು ಬ್ಯಾಂಕಿನಿಂದಲೋ, ಸಂಘದ ಮೆಂಬರರಿಂದಲೋ, ಇತರರಿಂದಲೋ ಸಾಲ ತೆಗೆದುಕೊಳ್ಳುವಾಗ ಸಂಘವು ತನ್ನ ಮೆಂಬರುಗಳಿಗೆ ಕೊಡುವ ಎಲ್ಲಾ ಸಾಲಕ್ಕೂ ತಕ್ಕ ಆಧಾರ ತೆಗೆದುಕೊಂಡಿದೆಯೆಂತ ನಂಬಿಯಲ್ಲವೇ ತೆಗೆದುಕೊಳ್ಳುವದು ಹಾಗೆ ಸಾಲ ಕೊಡುವವರ ಪ್ರಯೋಜನಕ್ಕಾಗಿ ಸಂಘದ ಉದುರೆಗಳನ್ನು ವಸೂಲ್ ಮಾಡಲು ನೋಡುವಾಗ ನಿಷ್ಪ್ರಯೋಜನವಾಗಿ ಕಂಡರ ಸಾಲ ಕೊಡುವವರಿಗೆ ಮೋಸಮಾಡಿದಂತೆಯೇ ಆಗಲಿಲ್ಲವೇ? ಗಿರ್ವಿಯು ಕಾನೂನಿಗೆ ವಿರೋಧವಾಗಿ ಪರಿಣಮಿಸಿದರೆ ಸಂಘವು ಮೆಂಬರನಿಂದ ಗಿರ್ವಿ ಸೊತ್ತಿನ ಸ್ವಾಧೀನ ತೆಗೆದುಕೊಳ್ಳಲಿಕ್ಕೆ ಸಹ ಕುಟುಂಬದವರು ಆಕ್ಷೇಪಿಸಬಹುದಲ್ಲವೇ? ಅಥವಾ ಸ್ವಾಧೀನಕ್ಕೆ ಆಕ್ಷೇಪಿಸದಿದ್ದರೂ ಆಕೈರಿನಲ್ಲಿ ಸೊತ್ತನ್ನು ಹರಾಜಿಗೆ ತರಲೇ ಬೇಕಾಗಬಂದರೆ ಆಗ ಸಂಘದ ಹುಕ್ಕ ನಾಶವಾಗಲ್ಲವೇ?

ಇನ್ನೊಬ್ಬ ಠರಾವಿಗೆ ಬತ್ತಾಸೆ ಕೊಟ್ಟವರು ಹೇಳಿದ್ದೇನೆಂದರೆ ಸಂಘದ ಮೆಂಬರುಗಳು ಕೊಡುವ ಹಣಕ್ಕೆ ಸಂಘವು ಯಾವ ತರದ ಆಧಾರ ಬರೆಸಿಕೊಂಡರೂ ಸರಕಾರಕ್ಕೆ ಏನು ಸಂಬಂಧ ಸರಕಾರವು ಸಂಘದ ಒಳಗಿನ ಆಡಳಿತಕ್ಕೆ ಕೈಹಾಕಬಾರದು ಬ್ಯಾಂಕಿನವರಾಗಲಿ ಅಥವಾ ಪ್ಯೂನರ್ ಹಣ ಸಂಘಗಳಿಗೆ ಕೊಡುತ್ತಾರೆಂಬ ಕಾರಣದಿಂದ ಈಗ ಈ ಕಾನೂನನ್ನು ಜಾರಿಮಾಡುವದಾದರ ಸಂಘದ ಮೆಂಬರುಗಳ ಹಣವೇ ಹಾಳಾಗಿದ್ದರ ಆಗ ಸರಕಾರಕ್ಕೆ ನೋವಿರಲಿಲ್ಲವೇ ಎಂದ ಇತ್ಯಾದಿಯಾಗಿ ಹೇಳಿದರು ಸಮುದಾಯದ ಜನರಿಂದ ಹಣವನ್ನು ಸಾಲವಾಗಿ ತಗೆದುಕೊಳ್ಳುವ ಸಂಸ್ಥೆಗಳ ಆಡಳಿತ ಸರಿಯಾಗಿ ನಡೆಯುತ್ತಿದೆಯೋ ಎಂತ ನೋಡಿಕೊಳ್ಳುವದು ಸರಕಾರದ ಕರ್ತವ್ಯವೆಂಬದು ಸಾಧಾರಣ ರಾಜ್ಯತಂತ್ರವಾಗಿದೆ ಸಹಕಾರಿ ಕಾನೂನಿಗೆ ಒಳಪಡದ ಬ್ಯಾಂಕ್‌ಗಳ ವಿಷಯದಲ್ಲೂ ಸರಕಾರವು ತುಂಬಾ ನಿಗದಲ್ಲಿ ಇರುತ್ತದೆ ಮತ್ತು ಸರಕಾರದವರ ಮಾಡಿರುವ ಕಾನೂನೇ ಆಗಲಿ ದೇಶದ ನಡವಳಿಕೆಯಿಂದ ಬರುತ್ತಿರುವ ಕಾನೂನನ್ನೇ ಆಗಲಿ ನಡಿಸುವದು ಸರಕಾರದ ಕರ್ತವ್ಯವಾಗಿದೆ ಮೆಂಬರುಗಳ ಹಕ್ಕು ಬಾಧ್ಯತೆಗಳನ್ನು ಯೋಚಿಸದರೂ ಸಾಲಹೊಂದಿಕೊಳ್ಳುವವನಿಂದ ನ್ಯಾಯವಾದ ಆಧಾರಮಾಡಿಸಿ ಕೊಳ್ಳಬೇಕಾದದ್ದು ಯುಕ್ತವಲ್ಲವೇ? ಸಂಘಕ್ಕೆ ಬರಸಿಕೊಳ್ಳುವ ಆಗಿ ನಾಮಮಾತ್ರವಾಗಿರುವದರಿಂದ ಸಂಘದ ಉದುರೆಯು ವಸೂಲಾಗದ ಹೋದರ ಸಂಘಕ್ಕೆ ಸಾಲಕೊಟ್ಟವರ ಹಣದ ವರ್ತಿಗಾಗಿ ಸಂಘದ ಮೆಂಬರ್ಸ್ ತಮ್ಮ ಸ್ವಂತ ಸ್ವತ್ತಿನಿಂದ ಹಣ ವರ್ತಿಮಾಡಬೇಕಲ್ಲವ!

ಕುಟುಂಬದ ಎಲ್ಲಾ ಪ್ರಾಯಬಂದ ಜನರು ಒಪ್ಪಿಗೆ ಕೊಡದೆ ಇದ್ದಾಗ ಕಮಿಟಿ ಮೆಂಬರುಗಳು ತಾವು ಜವಾಬ್ದಾರಿಯೆಂತ ಬರಕೊಂಡರೆ ಅನುಮತಿ ಕೊಡಬಹುದೆಂತ ರಿಜಿಸ್ಟ್ರಾರರು ಹೇಳಿದರು ಈ ಉಪಾಯವೂ ಸರಿಯಾದದ್ದಲ್ಲ ಕಮಿಟಿ ಮೆಂಬರುಗಳು ರಿಜಿಸ್ಟ್ರಾರರಿಗೆ ಕೊಡುವ ವಾಗ್ದಾನವು ಕಾನೂನನ್ನು ಅನುಸರಿಸಿದ್ದೋ ಈ ವಾಗ್ದಾನವನ್ನು ಜಾರಿಗೆ ತರಬೇಕಾಗಿ ಬಂದರೆ ಯಾರು ತರುವದು ಸಾಧ್ಯವಿದೆಯೋ?

ಠರಾವು ಮಂಜೂರಾದ ರೂಪಿನಲ್ಲಿ ಏನೂ ಪ್ರಯೋಜನವಿಲ್ಲದೆ ಹೋಯಿತು ಸರಕಾರದವರು ಜನರ ಕಷ್ಟವನ್ನು ಪರಿಹಾರ ಮಾಡಬೇಕೆಂತ ಕೇಳುವ ಬದಲು ಹೀಗೆಯೇ ಮಾಡಬೇಕೆಂತ ಕೇಳಬೇಕಾದದ್ದಲ್ಲವೇ ಈ ಮಹಾಸಭೆಯ ಕರ್ತವ್ಯ ನಡವಳಿಯಿಂದ ಬಂದ ಕಾನೂನನ್ನು ಸರಕಾರದವರು ಹೇಗೆ ಅಲ್ಲಗಳೆಯ ಬಲ್ಲರು ಈ ಕಾನೂನಿನಿಂದಲೇ ಜನರಿಗೆ ಸಾಲ ದೊರೆಯುವದಿಲ್ಲವೆಂತ ಈಗ ಗೊತ್ತಾಗುತ್ತಾ ಬಂದಿದೆ ಈಗ ಸಂಘದ ಮೆಂಬರುಗಳೂ ಸಂಘದ ಮೆಂಬರುಗಳಲ್ಲದ ಜಮ್ಮದ ರೈತರೂ ಸೇರಿ ಚರ್ಚಿಸಿ ತಮ್ಮ ಮತವನ್ನು ಕೊಟ್ಟರೆ ಸರಕಾರವು ಅದರಂತೆ ನಡೆಸೀತೆಂತ ತೋರುತ್ತದೆ ಮಂಜೂರಾದ ಠರಾವು ಸಭೆಯ ಮುಂದೆ ಬಂದ ಠರಾವನ್ನು ಕಣ್ಮರೆ ಮಾಡಿತು ಜಮ್ಮಗಾರರೇ ಈ ವಿಷಯವನ್ನು ನಿಧಾನವಾಗಿ ಯೋಚಿಸಿ ಕಷ್ಟನಿವಾರಣೆ ಮಾಡಿಕೊಳ್ಳಬೇಕಾಗಿದೆ

'ಸಭಿಕ

ಅಯ್ಯಾ ಸಂಪಾದಕರೇ

ತಾ ೨೦ರಲ್ಲಿ ಮ ಎಸ್, ಮುದ್ದಪ್ಪನವರ ಅಧ್ಯಕ್ಷತೆಯಲ್ಲಿ ಗೌಡುಗಳ ಸಭೆಯು ತೀರ್ಮಾನ ಮಾಡಿದ ಠರಾವುಗಳನ್ನು ನೋಡಿ ತುಂಬಾ ಸಂತೋಷವೂ, ಆಶ್ಚರ್ಯವೂ ಉಂಟಾಯಿತು

ಗೌಡುಗಳ ಪೈಕಿ ಒಬ್ಬನು ಬಿ ಎ ಬಿ ಎಲ್ ಪಾಸಾಗಿ ಬಂದ ಕೂಡಲೆ ಇವರ ಮಟ್ಟಿಗೆ ತನ್ನ ಜಾತಿಯವರನ್ನು ಒಗ್ಗಟ್ಟಿನಲ್ಲಿ ತರುವಂತೆ ಮಾಡಿದರೆ ನಗದುಕೊಂಡದ್ದು ಸಂತೋಷವೇ ಆದರೆ ಇದರಿಂದ ಕೊಡಗಿನ ಜನಾಂಗಕ್ಕೆ ಒಂದು ತರದ ಆಮಲು ಕೊಟ್ಟಂತೆ ತೋರುತ್ತೆ ಕೊಡಗರು ದೊಡ್ಡ ದೊಡ್ಡ ಪದವಿಯಲ್ಲಿದ್ದು ಅನೇಕರು ದೊಡ್ಡ ದೊಡ್ಡ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಾಗ್ಯೂ ಕೂಡ ಕೊಡಗರಲ್ಲಿ ಇತರ ಜನಾಂಗದವರನ್ನು ದೂಷಿಸುವದಾಗಲಿ ಯಾ ಇವರನ್ನು ಪೀಡಿಸುವಂತೆ ಬೇರೆ ಸಂಘಗಳನ್ನಾಗಲಿ, ಸಭೆಯನ್ನಾಗಲಿ ಮಾಡುವ ಆಲೋಚನೆ ಮಾಡಿರುವುದಿಲ್ಲ ಕೊಡಗರೇ! ಇನ್ನಾದರೂ ಎಚ್ಚರಿಕೆ ತೆಗೆದುಕೊಳ್ಳುವಿರಾ!! ಮೈಸೂರಿನಲ್ಲಿ ಉದ್ಯೋಗ ವ್ಯವಹಾರವರಿಗೂ, ಮದ್ರಾಸು, ಬೊಂಬಾಯಿಯಕ್ಷಿಣವರವರಿಗೂ,ಆಗಿರುವಾಗ ಕೊಡಗಿನಲ್ಲಿ ಗೌಡುಗಳಿಗೆ ದೊಡ್ಡ ಉದ್ಯೋಗವಾದರೆ ಕೊಡಗರ ಪಾಡೇನು? ಕೊಡಗು ಸಭೆ ಇದ್ದಿದ್ದರ ಈ ಠರಾವಿಗೆ ಸರಿಯಾದ ಜವಾಬನ್ನು ಕಳುಹಿಸುತ್ತಿರಲಿಲ್ಲವೇ!! ಗೌಡ ಗಳಿರಾ, ಕೊಡಗರು ಒಗ್ಗಟ್ಟಾಗಿ ನಿಂತರೆ ಅದೇ ತಾರೀಕು ವಿದೇಶ ವರ್ತಮಾನ ಕಾಲಂನಲ್ಲಿ ಚೈನಾ ದೇಶದಲ್ಲಿ ವಿದ್ಯಾರ್ಥಿಗಳು ನಡೆಸುವಂತೆಯೂ ವಾಯುವ್ಯ ಪ್ರಾಂತ್ಯದಲ್ಲಿ ಮುಸಲ್ಮಾನರು ತಮ್ಮ ಷರತ್ತಿಗೆ ಹಿಂದುಗಳು ಒಪ್ಪದಿದ್ದರೆ ಹಿಂದುಗಳನ್ನೆಲ್ಲಾ ಅವರ ದೇಶದಿಂದ ಓಡಿಸುವ ಹಾರಾಟದಂತೆ ಕೊಡಗಿನಲ್ಲಿ ಮಾಡಿರುವದಿಲ್ಲ ಆದ್ದರಿಂದ ಕೊಡಗರೊಂದಿಗೆ ಸ್ನೇಹಭಾವದಲ್ಲಿರುವದು ಉತ್ತಮವಲ್ಲವೇ

ಮೋಡರೇಟ್ ಕೊಡಗ

'ಗೌಡುಗಳ ದೂರಲ್ಲ, ಯಥಾಸ್ಥಿತಿ

ಅಯ್ಯಾ, ಹರಿಪ್ರಸಾದರೆ,

ಸರಕಾರವು ಗೌಡುಗಳ ಕೈಬಿಟ್ಟಿದೆಯೆಂದು ಅವರ ದೂರಲ್ಲ ಸರಕಾರದವರು ಅವರನ್ನು ಹಿಡಿದುಕೊಂಡಿದಾರೆಂದು ಅವರಿಗೆ ಗೊತ್ತಿದೆ ಆದರ ಬ್ರಾಹ್ಮಣರಿಗೂ ಕೊಡಗರಿಗೂ ತಾವೇ ಮೇಲಕ್ಕೆ ಬರುವಷ್ಟು ಶಕ್ತಿ ಇರುವಾಗ ಸಾಕಷ್ಟು ಶಕ್ತಿ ಇಲ್ಲದ ಗೌಡ ಗಳಿಗೆ ಮುಂದಕ್ಕೆ ಬರಲು ಸರಕಾರವು ಸಹಾಯ ಮಾಡಬೇಕೆಂಬುದೇ ಅವರ ಯೋಚನೆಯಾಗಿದೆ ಮತ್ತು ಸರಕಾರಿ ಆಡಳಿತದಲ್ಲಿ ಭಾಗಿಯಾಗಿರುವ ಕೌನ್ಸಿಲ್‌ನಲ್ಲಿ ತಮಗೆ ಮೆಂಬರುತನ ಇಲ್ಲದೆ ಇರುವುದು ಗೌಡುಗಳಿಗೆ ನಿಜವಾಗಿಯೂ ವ್ಯಸನವನ್ನುಂಟುಮಾಡಿದೆ ಆದರೆ ತಮ್ಮ ಪ ಹೋದರ ವರ್ಗವಾದ ಮಹಮ್ಮದಿಯರಿಗೆ ಮೆಂಬರುತನ ಸಿಕ್ಕಿದಕ್ಕೆ ಗೌಡ ಗಳಿಂದಿಗೂ ಆಗ್ರಹವಿಲ್ಲ ಅಂತಾ ವಿಷಯವನ್ನು ಗೌಡ ಗಳು ಯಾವಾಗಲಾದರೂ ಯೋಚಿಸಿದ್ದೂ ಇಲ್ಲ, ಹೇಳಿದ್ದೂ ಇಲ್ಲ ಇದು ಮಹಮ್ಮದಿಯರಿಗೂ ಗೌಡುಗಳಿಗೂ ಮನಸ್ತಾಪವನ್ನುಂಟುಮಾಡಲು ನಿಮ್ಮದೊಂದು ಉಪಾಯವಾಗಿದೆ ಆದರ ಮಹಮ್ಮದಿಯರು ಇಂತಾ ಉಪಾಯಕ್ಕೆಂದಿಗೂ ಮರುಳಾಗುವಂತಿಲ್ಲ ತಮ್ಮ ಸ್ಥಿತಿಯೂ ಗೌಡುಗಳ ಸ್ಥಿತಿಯ ಸಿ ಎಕ್ಕರ ಮಟ್ಟಿಗೆ ಹಿಂದುಳಿದಿರುವುದೆಂಬುದನ್ನು ಮಹಮ್ಮದಿಯರು ಚನ್ನಾಗಿ ಬಲ್ಲವರಾಗಿದ್ದಾರೆ

ಅವರಲ್ಲಿ ಬ್ರಾಹ್ಮಣರೂ ಕೊಡಗರೂ ಬ್ಯುರೋಕ್ರಸಿಯು ಅವರ ತಲೆಗೆ ಪಟ್ಟ ಸೇರುವುದರಿಂದ ಅದೃಷ್ಟವಂತರಾದರೆ ಗೌಡುಗಳು ಯಾಕೆ ಆ ಪಟ್ಟವನ್ನು ಸೇರಿಕೊಳ್ಳಬಾರದು? ಹಾಗೆ ಸರಿ ಕ ಮಾಡಬೇಕೆಂಬುದೇ ಅವರ ಪ್ರಯತ್ನ ಬ್ಯುರೋಕ್ರಸಿಗೆ ಬ್ರಾಹ್ಮಣರೂ ಕೊಡಗರೂ ಬಲ ಮಾತ್ರ ಸ್ನೇಹಿತರಾಗಿದ್ದರ ಅವರು ಯಾಕೆ ಕೌನ್ಸಿಲಿಗೆ ಮೆಂಬರುಗಳಾದರು? ಗೌಡುಗಳು, ಬ್ರಾಹ್ಮಣರನ್ನೂ ಕೊಡಗರನ್ನೂ ಭ್ರಾತೃಭಾವದಿಂದಲೇ ನೋಡುತ್ತಿರುವರು ಅವರುದರಿಂದಲೇ ಬ್ಯುರೋಕ್ರಸಿಯು ಹಿಡಿತದಲ್ಲಿ ಆನಂದಿಸುತ್ತಿರುವ ಬ್ರಾಹ್ಮಣರ ಮತ್ತು ಕೊಡಗರ ಸುಖದಲ್ಲಿ ತಾವೂ ಸಹ ಸಮಭಾಗಿಗಳಾಗಲು ಅವರು ಪ್ರಯತ್ನಿಸುವುದು ಇದು ನಿಜವಾದ ವೈತ್ರಿಯಲ್ಲವೇ?

ಅದು ಹಾಗಿರಲಿ, ನೀವು ಗೌಡುಗಳ ಸ್ವಾರ್ಥವನ್ನು ತೃಜಿಸಬೇಕೆಂಬ ಬುದ್ಧಿವಾದವನ್ನು ಹೇಳಿದಿರಿ ಅದು ಸರಿಯಲ್ಲ ಯಾವ ಮನುಷ್ಯನೇ ಆಗಲಿ ಅಥವಾ ಯಾವ ಜನಾಂಗವೇ ಆಗಲಿ ಮುಂದಕ್ಕೆ ಬರಬೇಕಾದರೆ ಸ್ವಾರ್ಥವೇ ಮುಖ್ಯ ಇಂಗ್ಲಿಷ್ ಜನಾಂಗವು ಮುಂದಕ್ಕೆ ಬಂದದ್ದು ಸ್ವಾರ್ಥದಿಂದಲೇ ಹಿಂದ ಗಳಿಗೆ ಸ್ವರಾಜ್ಯವು ಸಿಕ್ಕಬೇಕಾದರೂ ಸ್ವಾರ್ಥವು ಬೇಕು ಗೌಡುಗಳೂ ಸಹ ಬೇರೆ ಮತದವರಂತೆ ಮುಂದಕ್ಕೆ ಬರಬೇಕಾದರೆ ಸ್ವಾರ್ಥವು ಬೇರೇ ಬೇಕು ಕೊಡಗರು ಬಂದ ಸಭೆ ಸ್ಥಾಪಿಸಿದ್ದರೆ, ಗೌಡುಗಳಿಗೆ ಅದರಿಂದ ಒಳ್ಳೆಯದಾಗಿದ್ದಿತೇ ಹೊರತು ಕೆಡಕಾಗುತ್ತಿರಲಿಲ್ಲ ಯಾಕೆಂದರೆ ಹೀಗೆ ಮಾಡುವಾಗಿದ್ದರೆ ಗೌಡುಗಳ ನಿಜವಾದ ಸ್ಥಿತಿಯು ಸರಕಾರಕ್ಕೆ ಗೊತ್ತಾಗುತ್ತಿತ್ತು, ಮತ್ತು ಗೌಡುಗಳ ಮೇಲೆ ಕೊಡಗರಿಗಿರುವ ವೈತ್ರಿಯು ಸಹ ಚನ್ನಾಗಿ ಹೊರ ಬೀಳುತ್ತಿತ್ತು

ಮೇಲೆ ಹೇಳಿದವುಗಳಲ್ಲದೆ ಇನ್ನೊಂದು ವಿಷಯವನ್ನು ಸಹ ಹೇಳಬೇಕಾಗಿದೆ ತಮ್ಮನಿಗೆ ಕಾಯಿಲೆಯಾದಾಗ ಅಣ್ಣನು ಸಹಾಯಮಾಡದೆಹೋದರ ತಮ್ಮನು ಮೂರನೆಯವನಾದ ಸ್ನೇಹಿತನಿಗೆ ಮೊರೆಯಿಡುವುದು ನ್ಯಾಯವಲ್ಲವೆ? ಅಲ್ಲದೆ ಮೊಹ್ಕ ಹುದ್ದೆಗಳನ್ನು ಯೂರೋಪಿಯನರಿಗೆ ಕೊಡಬೇಕೆಂದು ಹೇಳುವುದರಿಂದ ಗೌಡುಗಳು ಅವರ ಪಕ್ಷವನ್ನು ಸಹ ಸೇರಿದರು ಕೊಂಡಿರುವರು, ಇದನ್ನು ನೋಡಿದರೆ ದೇಶೀಯ ಉದ್ಯೋಗಸ್ಥರಿಂದ ಗೌಡುಗಳಿಗೆ ಇದ ವರಗೆ ಯಾವ ಸಹಾಯವೂ ಸಿಕ್ಕಲಿಲ್ಲವೆಂಬದನ್ನು ವ್ಯಕ್ತಪಡಿಸುತ್ತದೆ

ಇನ್ನೊಂದು ಮಾತು ದೇಶದ ಅಭ್ಯುದಯವಾಗಬೇಕಾದರೆ ಗೌಡುಗಳು ಮತ್ತು ಇತರ ಹಿಂದುಳಿದ ಮತಸ್ಥರು ಮುಂದಕ್ಕೆ ಬರಬೇಕು ಸ್ವರಾಜ್ಯವೆಂದರೆ ಯಾವದಾದರೂ ಒಂದೇ ಜನಾಂಗದ ರಾಜ್ಯವಲ್ಲ ಎಲ್ಲಾ ಮತದವರೂ ಸರಿ ಸಮಾನರಾಗಿರಬೇಕೆಂಬವೇ ಸ್ವರಾಜ್ಯದ ತತ್ವ. ಆದ್ದರಿಂದ ಹಿಂದುಳಿದವರನ್ನು ಮುಂದಕ್ಕೆ ತರುವುದೇ ದೇಶದ ಮಹನೀಯರ ಕರ್ತವ್ಯವಾಗಿದೆ

ಅಯ್ಯಾ ಹರಿಪ್ರಸಾದರೆ, ಗೌಡುಗಳು ತಂದ ಠರಾವುಗಳು ಕೊಡಗರ ಅಥವಾ ಬ್ರಾಹ್ಮಣರ ಮೇಲೆ ಹೊಟ್ಟೆಕಿಚ್ಚಿನಿಂ

ದ ತಂದ ಠರಾವುಗಳಲ್ಲಿ ಒಂದು ವೇಳೆ ನೀವು ಹಾಗೆ ತಿಳಿದುಕೊಂಡಿದ್ದರೆ ನಿಮಗ ಮುಂದಾಲೋಚನೆ ಮತ್ತು ಜ್ಞಾನಶಕ್ತಿ ಕಡಿಮೆಯೆಂದು ತಿಳಿಯಬೇಕು ಗೌಡುಗಳ ಮಾರ್ಗವು ನ್ಯಾಯವಾದ ಮಾರ್ಗವಾದುದರಿಂದಲೂ, ಅವರು ಆಡುವುವೆಲ್ಲವೂ ಸತ್ಯವಾದುದರಿಂದಲೂ ಅವರ ಕಲಸನ್ಯಾವದನ್ನು ಗುಟ್ಟಾಗಿಡದೆ ಬಹಿರಂಗಪಡಿಸಿದ್ದಾಗಿದೆ ಗೌಡುಗಳ ಠರಾವುಗಳು ದೇಶದ ಅಭ್ಯುದಯಕ್ಕಾಗಿರುವುದರಿಂದ ಎಲ್ಲರೂ ಎಚ್ಚರಿತರಾಗಬೇಕೆಂಬದೇ ಅವರ ಕೋರಿಕೆ

ಇಂತಿ ನಿಮ್ಮ ಹಿತಚಿಂತಕ

ನರದಾಸ

ಕಂದಾಯ ಬೇಕು, ಹುಲ್ಲುಬಾಣೆ ಬೇಡವೇ?

ಮಹನೀಯರೇ

ಜಮೀನ್ದಾರರ ಸಂಘದ ಪ್ರಚಾರ ಕೆಲಸಕ್ಕಾಗಿ ನಾನು ತಿರುಗುತ್ತಿರುವ ಕಿಗ್ಗಟ್ಟುನಾಡಿನಲ್ಲಿ ಕಲವು ಊರ ಗೋಳುಗಳ ಸಂಗತಿಯನ್ನು ಕಣ್ಣಾರೆ ಕಂಡೂ ಕಿವಿಯಾರೆ ಕೇಳಿಯೂ ಸೋತವನಾಗಿ ಈ ಹವಾಲನ್ನು ಪತ್ರಿಕೆಯ ಮೂಲಕ ವಿಸ್ತರಿಸಿದರೆ ಸ್ವಲ್ಪವಾದರೂ ಅವರಿಗೆ ಕ್ಷೇಮ ದೊರೆಯಬಹುದೋ ಎಂಬ ಇಚ್ಛಾಪೂರ್ವಕ ಸ್ವಲ್ಪ ಮುಂದಿಡುತ್ತೇನೆ ಕಿಗ್ಗಟ್ಟುನಾಡು ತಾಲೂಕಿನ ಹೆಸರಾದ ನದೀತೀರ ಬೇಗೂರು ಬಲವಂಡಿಗೆರೆ ಕುಟ್ಟಂದಿ ಕೊಳತ್ತೋಡು ಈ ಮೊದಲಾದ ಗ್ರಾಮಗಳ ಮುನ್ನೂರು ಮೂವತ್ತು ಸಾವಿರ ಬಟ್ಟಿ ಭೂಮಿಯ ಪೈಕಿ ಸುಮಾರು ಅರವತ್ತು ಬಟ್ಟಿ ಭೂಮಿಯು ವಳೆ ಹಿಡಿದ ಆಗಾಗಿನಿಂದ ಜನವರಿ ತಿಂಗಳವರೆಗೆ (ಮಳೆ ಕಮ್ಮಿಯಾಗುವ ವರೆಗೂ) ಜಲಮಯವಾಗಿಕೊಂಡು ಅಕ್ಟೋಬರ್ ನವಂಬರ್ ತಿಂಗಳಲ್ಲಿ ಸಾಗುವಳಿಗೆ ಹದವಾಗದೆ ಭೂಮಿಗಳ ನಡುವಿನಲ್ಲಿ ಹರಿಯುವ ನದಿಯು ಕಳಗೂ ಮೇಲಗೂ ಎತ್ತರವಾಗಿರುವುದರಿಂದಲೂ, ನಾಡಿನ ಮೇಲೆ ಇರುವ ಕಾರಣವೂ ಆ ಪ್ರಾಂತ್ಯಕ್ಕೆ ಬಿದ್ದ ಮಳೆಯ ನೀರೆಲ್ಲಾ ಇದರಲ್ಲಿಯೇ ಅಡಗುತ್ತದೆ ಒಂದು ವೇಳೆ ತೋಡು ತಗ್ಗಿಸಿಯಾದರೂ ನೋಡುವುದಾದರೆ ತೋಡು ಬಹಳ ದೂರವಿರುವುದರಿಂದಲೂ, ತಗ್ಗಿಸುವದಕ್ಕೆ ಬೇಕಾದ ಹಣ ವೆಚ್ಚವಾಗಬೇಕಾದ್ದರಿಂದಲೂ, ತೋಡಿನ ಆಚೆಬಾಜುಗಳಲ್ಲೆಲ್ಲಾ ಒಬ್ಬನ ಭೂಮಿಯಾಗಿರದೆ ಅನೇಕರ ಭೂಮಿಗಳಿರುವದಲ್ಲದೆ ಅವರೆಲ್ಲರೂ ಶ್ರೀಮಂತರಲ್ಲದ ಕಾರಣದಿಂದ ಒಬ್ಬನು ಕ್ರಮಪಟ್ಟು ತಗ್ಗಿಸಿದರೂ ಆತನ ಕೆಳಗಿನ ಭಾಗದವರು ಅಷ್ಟು ಖರ್ಚುಮಾಡಲು ಸಾಮರ್ಥ್ಯವಿಲ್ಲದೆ ಸ್ವಲ್ಪದರಲ್ಲೂ ಮುಚ್ಚಿ ಹೋಗುವವರೆಗೂ ಮೇಲೆ ನೋಡತಕ್ಕ ಸಂಗತಿಯಾಗಿದೆ ಹೀಗಾಗಿ ಹೇಗೂ ಕೆಳ ಬಾಗ ನಟ್ಟರೂ ಮಳೆ ಹೋದ ಒಂದೆರಡು ದಿನಗಳಲ್ಲಿಯೇ ಉಳಿದ ಮೇಲ್ಭಾಗದ ಭೂಮಿಗಳೆಲ್ಲವೂ ನೀರಿನ ಅಭಾವದಿಂದ ಮಳೆಯನ್ನೇ ಎದುರುನೋಡಬೇಕಾಗಿ ಬರುತ್ತದೆ ಹೇಗೂ ಅಂತೂ ಇಂತೂ ಕುಂತಿ ಮಕ್ಕಳಿಗೆ ವನವಾಸವೆಂದಂತೆ ಅವರ ಕೃಷಿಯ ಪ್ರತಿಫಲದ ಅರ್ಧವೂ ದೊರೆಯುವುದು ಬಹು ದುರ್ಲಭವೇ ಸರಿ ಅವರ ಪುಣ್ಯವಶದಿಂದ ಸರಕಾರದವರಾದರೋ—ಮಣ್ಣನ್ನು ಒಂದನೇ ತರಗತಿಗೇರಿಸಿ ಅದಕ್ಕೆ ಸರಿಯಾದ ಕಂದಾಯ ವಸೂಲು ಮಾಡುತ್ತಾರೆ ಭೂಮಿ ಸಾಗುವಳಿ ಯಾವಾಗಾದರೂ ಕಂದಾಯ ಬರ್ತಿಯಾಗಬೇಕು.

ಈ ವಿಷಯದಲ್ಲಿ ಅದೇ ಭೂಮಿಯ ನಡುವಿಗಾಗಿ ಪ್ರೊಕ್ಷೆಶೇಟಿಯಿಂದ ಮುದುಕೇರಿಗೆ ಹೋಗುವ ರಸ್ತೆ ರೋಡು ಇರುವದರಿಂದ ಮಳೆಗಾಲದಲ್ಲಿ ಸಂಚರಿಸತಕ್ಕ ಪ್ರತಿ ಒಬ್ಬರಿಗೂ ಮಾರ್ಗದ ಎಡಬಲ ಭೂಮಿಯಲ್ಲಿ ಹಾಗೆ ಹಾಗೆ ನಿಂತಿರುವದು ಚೆನ್ನಾಗಿ ಕಾಣಬರುತ್ತದೆ ಮಾತ್ರವಲ್ಲ ಸ್ವಲ್ಪ ಹೆಚ್ಚಿನ ಮಳೆಯಲ್ಲಿ ಮಾರ್ಗವೇ ಮುಚ್ಚಿ ಹೋಗುವದೂ ಉಂಟು ಅಲ್ಲದೆ ಹಳ್ಳಗಳು ಎಂಬಲ್ಲಿರುವ ಸುಮಾರು ಮೂರು ಸಾವಿರ ಬಟ್ಟಿ ಭೂಮಿಯು ನೀರಿಲ್ಲದೆ ಉರಿದು ಹೋಗುವದರಿಂದ ಹುದೂರಿನಿಂದ ನೀರು ಸರಬರಾಯಿ ಆಗಬಹುದೆಂಬ ನಂಬಿಕೆಯಿಂದ ಸರಕಾರದವರೇನೋ ಕಂದಾಯ ಬರಾಬರಿ ಹಾಕಿರುತ್ತಾರಾದರೂ ಆ ನೀರಿನ ಸಂಬಂಧ ಈ ವರೆಗೂ ಆಗದೆ ಭೂಮಿಯು ಯಾವಾಗಲೂ ಉರಿದು ಹೋಗುತ್ತದೆ. ಇದಕ್ಕೆ ನೀರನ್ನು ಹುದೂರು ಬಾಣೆಯಿಂದ ದೇವರಕಾಡು ಒತ್ತಿಗಾಗಿ ಮನೆಯಪಂಡ ಬೋಜಣ್ಣನವರ ಭೂಮಿಯ ಒತ್ತಿಗಾಗಿ ಸುಮಾರು ಅರ್ಧ ಫರ್ಲಾಂಗು ದೂರವಿರುವ ಬಾಣೆಯನ್ನು ಕಡಿದು ಸ್ವಲ್ಪ ಖರ್ಚಿನಿಂದ ನೀರು ಸರಬರಾಯಿ ಆಗುವಂತೆ ಮಾಡಬಹುದು ಯಾವದಕ್ಕೂ ಹಣದ ಅಭಾವದಿಂದ ರೈತರಿಗೆ ಸ್ವಂತ ಪರಾಪೇಕ್ಷೆ ಇಲ್ಲದೆ ಮಾಡುವದಕ್ಕೆ ಅನುಕೂಲವಿಲ್ಲ ಈ ಸಂಗತಿಗಳ ಪರಿಹಾರ ಬಗ್ಗೆ ಆಯಾ ಭೂಮಿಗಳಿಗೆ ಸಂಬಂಧಪಟ್ಟವರಾಗಲಿ ಆ ಗ್ರಾಮಸ್ಥರಾಗಲಿ ಒಕ್ಕಟ್ಟಿನಿಂದ ಸರಕಾರವನ್ನು ಬೇಡಿಕೊಳ್ಳುವದಾಗಲಿ ಅಲ್ಲಿನ ಕೌನ್ಸಿಲು ಮೆಂಬರರ ಮೂಲಕ ಸರಕಾರದ ಗಮನಕ್ಕೆ ತರುವದಾಗಲಿ, ಇಲ್ಲವೆ ಜಮೀನ್ದಾರರ ಸಂಘದಲ್ಲಿ ಠರಾವಾಗಿ ತಂದು ಆ ಮೂಲಕ ಸರಕಾರವನ್ನು ಕೇಳಿಕೊಳ್ಳುವದಾಗಲಿ ಈ ಮೊದಲೇ ಮಾಡಬಹುದಿತ್ತು ಆ ಸಂಗತಿ ಹೇಗಿದ್ದರೂ ಈ ಮಳೆಗಾಲ ಸಮೀಪಿಸಿದ್ದರಿಂದ ಕೂಡಲೆ ಈ ಸಂಗತಿಯನ್ನು ಪರಿಶೀಲಿಸಿ ತಕ್ಕ ಏರ್ಪಾಡನ್ನು ಕಂಡುಹಿಡಿಯಬೇಕಾಗಿ ನಾವು ನಮ್ಮ ಘನ ಸರಕಾರವನ್ನು ಕೇಳಿಕೊಳ್ಳುವದಲ್ಲದೆ—ಸರಕಾರವು ಕಂದಾಯ ವಸೂಲಿನಲ್ಲಿ ಹೇಗೆ ನಿಗಪಡುತ್ತದೊ ಹಾಗೆಯೆ ಕಂದಾಯಕೊಡತಕ್ಕ ರೈತರ ಹುಟ್ಟುವಳಿಗಳ ಸಾಧನದ ವಿಷಯದಲ್ಲಿಯೂ ತಕ್ಕ ಗಮನವಿಟ್ಟುಕೊಂಡು ಆ ಕಿಗ್ಗಟ್ಟುನಾಡಿನವರ ಕಷ್ಟವನ್ನು ಹೋಗಲಾಡಿಸಿ ಕೊಡಬೇಕೆಂಬದಾಗಿ ಸರಕಾರದವರನ್ನು ಕುರಿತು ನಾನು ಅರಿಕೆಮಾಡಿಕೊಳ್ಳುವದಲ್ಲದೆ ಜಮೀನ್ದಾರರ ಸಂಘದ ಪ್ರತಿನಿಧಿಗಳಲ್ಲಿಯೂ ಒಮ್ಮೆ ಅದನ್ನು ಸಂದರ್ಶಿಸಿ ತಕ್ಕ ವಿಚಾರಿ ಮಾಡಿಕೊಡಬೇಕಾಗಿ ಸಹ ಕೇಳಿಕೊಳ್ಳುತ್ತೇನೆ ಜಮೀನ್ದಾರರ ಸಂಘದ ಪ್ರತಿನಿಧಿಗಳು ನಾಡಿನ ಬಗ್ಗೆ ಯಾವತರದ ಉದಾಸೀನತೆಯನ್ನೂ ಸಹ ತೋರದೆ ಅಲ್ಲಿನ ರೈತರ ಮನಸ್ಸಿನ ತಾಪವನ್ನು ಸ್ವಲ್ಪವಾದರೂ ಹೋಗಲಾಡಿಸಬೇಕಾಗಿ ಎರಡನೆ ಪ್ರಾರ್ಥನೆ

ಸಿ ಕೆ ಕುಟ್ಟಪ್ಪ

ಹೇಳುವುದೊಂದು ಮಾಡುವುದೊಂದು!

ಅಯ್ಯಾ

ಕೊಡಗಿನ ಪ್ರತಿಯೊಬ್ಬ ತರುಣನಿಗೂ ಹಳೆ ವಿದ್ಯಾರ್ಥಿಯರ ತ್ರೈಮಾಸಿಕ ಪತ್ರಿಕೆಯನ್ನು ತಿಳಿಯದೆ ಇಲ್ಲ ಅಲ್ಲದೆ ಕೊಡಗು ಪತ್ರಿಕೆಯಲ್ಲಿ ಪ್ರತಿವಾರದಲ್ಲಿಯೂ Vol II No 2 just now out read and enjoy ಎಂದು ಮುಂತಾದ ಪ್ರಕಟನೆಯು ತೋರುತ್ತಿತ್ತು ಎರಡನೆಯ ಸಂಪುಟದ ಎರಡನೆಯ ಸಂಚಿಕೆಯು ಹೊರಟದ್ದು ಜನವರಿಯಲ್ಲಿ! ಜನವರಿ ಕಳೆದು ತಿಂಗಳು ಐದಾದರೂ ಅದರ Just now ತೀರಲಿಲ್ಲ ಕೇವಲ ಏಪ್ರಿಲ್ ತಿಂಗಳಲ್ಲೇ ಎರಡನೆಯ ಸಂಪುಟದ ಮೂರನೆಯ ಸಂಚಿಕೆಯು ಹೊರಡಬೇಕಿತ್ತು—ವರ್ಷದಾರಿಯಲ್ಲಿ ಮಾತ್ರ ಮೂರು ತಿಂಗಳಿಗೊಮ್ಮೆ ಸರಿಯಾಗಿ ಹಣ ಬೀಳುತ್ತದೆ ಇಂತಹ ಪತ್ರಿಕೆಗಳಿಗೆ ಪ್ರೋತ್ಸಾಹಕೊಡದೆ ಹೋದರೆ ದೇಶದ ಏಳಿಗೆ ಹೇಗಾದೀತು? ಆಗಬೇಕು ಎಂಬ ಸವಿ ಮಾತುಗಳನ್ನಾಡಿ ಚಂದಾ ಕೇಳಿಕೊಂಡರು ಚಂದಾ ವಸೂಲಾಗುವವರೆಗೆ ಮಾತ್ರ ಅಂತಹ ಸವಿಮಾತುಗಳೇನೋ? ಇಲ್ಲದೆ ಹೋದರೆ ಮೊದಲಿನಂತೆ ಸ್ವಲ್ಪ ಹಣ ಕಡಿಮೆಯಾಗಿ ಪ್ರಕಟಿಸಲು ಅಭ್ಯಂತರವೇನಿದ್ದಿತು? ಅಲ್ಲವೇ ಅಂದು ಪ್ರಾರಂಭಿಸಿದ ಮಳೆ ಪಾಠಕರ ಅನಾದರದಿಂದ ಹಾಗೆ ಹಿಡಿದಿದೆಯೇ? ಇದರ ಕಾರಣವು ಹೆಚ್ಚಾಗಿ ನನಗೆ ತಿಳಿಯದು!

ಹಳೆ ವಿದ್ಯಾರ್ಥಿಗಳ ತ್ರೈಮಾಸಿಕಕ್ಕೆ ಬರುವ ಸಂಚಿಕೆಯೇ ಅವಸಾನವೋ ಏನೋ! ಇನ್ನಾದರೂ ಪತ್ರಿಕಾಕರ್ತರುಗಳು ಬೇಗನೆ ಎಚ್ಚತ್ತು ಚಂದಾದಾರರ ಮನಸ್ಸನ್ನು ನೋಯದೆ ಮಾಡಿಯಾರು ಎಂದು ಅವರ ಎಚ್ಚರವನ್ನು ಎದುರುನೋಡುತ್ತಿರುವ

ಒಬ್ಬ ಚಂದಾದಾರ

ಜ್ಞಾನವಲ್ಲ ಅಜ್ಞಾನವೇ ಸರಿ

ಅಯ್ಯಾ ಪಿ ಕುಶಾಲಪ್ಪನವರೇ

ನಿಮ್ಮ ಜೂನ್ ತಾರೀಕು ೨೬ರಲ್ಲು ಕೊಡಗು ಪತ್ರಿಕೆಯಲ್ಲಿ ಹೊರಟ ವಾರ್ತೆಯನ್ನು ನೋಡಿದನು ಗೌಡುಗಳ ವಿದ್ಯಾ ಫಂಡಿನ ಮೀಟಿಂಗಿನಲ್ಲಿ ಪಾಸುಮಾಡಿದ ಠರಾವುಗಳು ಗೌಡ ಜನರೆಲ್ಲರೂ ಏಕಮತದಿಂದ ಸಂದ ಠರಾವುಗಳಾದ್ದರಿಂದ ನಾನೊಬ್ಬನೇ ಆ ವಿಷಯದಲ್ಲಿ ಏನನ್ನೂ ಬರೆಯುವ ಅಗತ್ಯವಿರಲಿಲ್ಲ ನಾನು ಅಥವ ಜ್ಞಾನದ ಮಾತ್ರಕ್ಕೆ ನಮ್ಮ ಇಡೀ ಜನಾಂಗವನ್ನು ಅಲಕ್ಷ್ಯಮಾಡಿ ನೀವು ಬರೆದುದನ್ನು ಕುರಿತು ಬರೆದದ್ದು ನೋಡಿದರೆ ಇದು ಜ್ಞಾನದ ಮಹಿಮೆಯಲ್ಲದೆ ಬೇರೆಯಲ್ಲವೆಂಬುದು ನಿಜವಾಗುತ್ತದೆ ಹೇಗೂ ನಿಮ್ಮ ಬಾಲ್ಯತನವನ್ನು ಕುರಿತ ಬರೆದುದಾದ್ದರಿಂದ ನಾನು ಎರಡಕ್ಷರ ಪ್ರತ್ಯುತ್ತರ ಕೊಡಬೇಕಾಗಿ ಬಂತು

ಅಯ್ಯಾ ಕುಶಾಲಪ್ಪನವರೇ ನೀವು ಕೊಡಗ ಪತ್ರಿಕೆಯನ್ನು ನಿಮ್ಮ ತಾಯಿಯ ತವರುಮನೆಯೆಂದು ಗ್ರಹಿಸುತ್ತೀರಾಗಿ ಹೇಳುವರಿ ಅವ ನಿಜವಾದ ಪಕ್ಷದಲ್ಲಿ ಆ ಪತ್ರಿಕೆಯ ಹಿತಕ್ಕಾಗಿ ಅದರಲ್ಲಿ ಕಂಡುಬಾರದ ವಿಷಯಗಳನ್ನು ಕಂಡಂತೆ ನೀವು ಬರೆಯಬೇಡಿ ಹೀಗೆ ಮಾಡಿದರೆ ನಿಮ್ಮ ಪ್ರೀತಿಗೆ ಪಾತ್ರವಾದ ಪತ್ರಿಕೆಗೆ ನೀವು ಕಡಕು ತಂದಂತಾಗುವುದು

ನೀವು ಬೆಳ್ಳಿಯಪ್ಪನವರ ದೂಷಣವು ಬಹಳ ಜಾಸ್ತಿಯಾಗಿದೆ ಎಂದು ಬರೆಯುತ್ತೀರಿ ನನ್ನ ಭಾಷಣವು ನಿಮಗೆ ಎಲ್ಲಿ ದೊರೆಯಿತು? ನನ್ನ ಭಾಷಣವು ನಿಜವಾಗಿಯೂ ಪ್ರಚುರವಾಗಿಲ್ಲ ಗೌಡ ಜನಾಂಗದವರು ಪಾಸುಮಾಡಿದ ಕೆಲವು ಠರಾವುಗಳು ಮಾತ್ರ ಅದರಲ್ಲಿ ಹೊರಟದ್ದು ನನಗೆ ತಿಳಿದಿದೆ

ನೀವು, ನಾನು ಬಿ ಎ ಬಿ ಎಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರ ವೃದ್ಧರ ಪಡೆದ ಸಂತೋಷಕ್ಕೆ ನಾನು ನಿಮಗೆ ಮೊದಲ ಶ್ರೇಣಿ ಕೊಡಗಿನ ಗೌಡಗಳ ಪೈಕಿ ಕೆಲವರು ನನ್ನಂಥ ವಿದ್ಯೆಯನ್ನು ಪಡೆದಿರ ವರು ಆದರೆ ಡಿಗ್ರಿಯನ್ನು ಹೊಂದಿದವನು ನಾನೊಬ್ಬನೇ ಎಂದು ತಾತ್ರ ಕುತೂಹಲವಿಲ್ಲದೆ ತಿಳಿದುಕೊಳ್ಳಬೇಡ

ಕೊಡಗಿನ ಮೂಲ ನಿವಾಸಿಗಳ ವಿಷಯ ನಿಮಗೆ ಸರಿಯಾಗಿ ತಿಳಿದಂತೆ ಕಾಣುವುದಿಲ್ಲ ಆದ್ದರಿಂದ ಆ ವಿಷಯವನ್ನು ಇಲ್ಲಿ ಬರೆಯುವುದು ಅವಶ್ಯವಿಲ್ಲ ಕೊಡಗರು ಪಕ್ಷಪಾತಿಗಳೆಂದು ನಾನಾಗಲಿ ಇತರ ಗೌಡುಗಳಾಗಲಿ ಯಾ ಭಾಗದವರೂ ಹೇಳಿರುವದು ನನಗ ಜ್ಞಾಪಕವಿಲ್ಲ ಗೌಡುಗಳು ಮಾಡಿದ ಅಭಿಪ್ರಾಯವೇ ಬೇರೆ ಆ ವಿಷಯ ನಾನೀಗ ಇಲ್ಲಿ ಬರೆಯುವದು ಅಗತ್ಯವಿಲ್ಲ ಅಲ್ಲದೆ ಕೊಡಗರಲ್ಲಿ ಎಷ್ಟೋ ಮಂದಿ ಉದಾರಮನಸ್ಕರೂ ದೇಶೋದ್ಧಾರದಲ್ಲಿ ಉತ್ಸಾಹವುಳ್ಳವರೂ ಅನೇಕರು ಈ ಮೊದಲು ಇದ್ದರಲ್ಲದೆ ಈಗ ಸಹ ಇರುವರು ಎಂಬ ಸಂಗತಿ ಗೌಡಗಳಿಗೆ ತಿಳಿದಿದೆ ಆದರೂ ಈ ದೇಶದ ಆಡಳಿತವೇ ಆಗಲಿ ಒಂದೇ ಜನಾಂಗಗಳಲ್ಲಿ ಅಡಗಿರುವುದು ದೇಶದ ಏಳಿಗೆಗೆ ಸರಿಯಲ್ಲವೆಂದು ಗೌಡಗಳು ಪಟ್ಟ ಅಭಿಪ್ರಾಯವು ನಿಜವೆಂಬುದರಲ್ಲಿ ಸಂದೇಹವಿಲ್ಲ

ವೀರರಾಜನ ಕಾಲದಲ್ಲಿ ಕೊಡಗರು ಪಕ್ಷಪಾತಿಗಳಾಗಿದ್ದರೆ ಬೇರೆ ಎಲ್ಲಾ ಜಾತಿಯವರನ್ನು ದೇಶದಿಂದ ಹಿಂದಕ್ಕೆ ಅಟ್ಟುತ್ತಿದ್ದರೆಂದು ತಾವುಗಳು ಅಭಿಪ್ರಾಯಪಡುತ್ತೀರಿ ಆದರೆ ವೀರರಾಜನು ಯಾವದಾದರೊಂದು ಜನಾಂಗಕ್ಕೆ ಪಕ್ಷಪಾತಿಯಾಗಿದ್ದನೆಂದು ಯಾವ ಯುಕ್ತಿಯಿಂದಲೂ ತಿಳಿಯಬರುವುದಿಲ್ಲ ಒಂದು ವೇಳೆ ವೀರರಾಜನ ಮೇಲೆ ಕೊಡವರಿಗೆ ಅಷ್ಟು ಅಧಿಕಾರವಿದ್ದಿದ್ದರೂ ಬೇರೆ ಜಾತಿಯವರನ್ನು ದೇಶದಿಂದ ಹೊರಗೆ ಕಳುಹಿಸುವಷ್ಟು ವೀರರಾಜನಿಗಾಗಲಿ ಕೊಡವರಿಗಾಗಲಿ ಬಂಟತನವಾಗಲಿ ಶಕ್ತಿಯಾಗಲಿ ಇರಲಿಲ್ಲ ಕೊಡಗಿನ ಗೌಡುಗಳೂ ಲಿಂಗಾಯತರೂ ಮಹಮ್ಮದಿಯರೂ, ಮತ್ತು ಕೊಡಗಿನ ಬೇರೆ ಅನೇಕ ಜನಾಂಗದವರೂ ಕೊಡಗಿಗೆ ಬಂದು ನೆಲೆಸಿ ಅನೇಕ ಶತಮಾನಗಳು ಕಳೆದು ಹೋದವು ಅವರನ್ನು ಓಡಿಸುವ ಸಾಮರ್ಥ್ಯ ಯಾರಿಗೂ ಇರುವ ಹಾಗೆ ಕಾಣುವುದಿಲ್ಲ ಅದೂ ಅಲ್ಲದೆ ಒಂದು ಜನಾಂಗವು ಇನ್ನೊಂದು ಜನಾಂಗವನ್ನು ಅವರ ದೇಶದಿಂದ ಓಡಿಸುವ ಅಭಿಪ್ರಾಯವನ್ನು ನಾನು ನಿಮ್ಮಿಂದ ಇದು ಮೊದಲು ಕೇಳಿದ್ದು ಒಂದು ವೇಳೆ ಇತರ ಜನಾಂಗಗಳು ಅವರ ಇಚ್ಛಾನುಸಾರವಾಗಿಯೇ ಬೇರೆ ಕಡೆ ಹೋಗಿದ್ದರೂ ಅವರು ಈಗ ಇಲ್ಲಿ ಇರುವದಕ್ಕಿಂತ ಎಷ್ಟೋ ಉತ್ತಮತರದಲ್ಲಿ ಬೇರೆ ಕಡೆ ಜೀವಿಸುತ್ತಿದ್ದರು

ಕೊಡಗ ದೇಶದ ನಿವಾಸಿಗಳಿಗೇನೇ ದೊಡ್ಡ ಹುದ್ದೆಗಳನ್ನು ಕೊಡತಕ್ಕದೆಂದು ನಾನು ಹೇಳಿಲ್ಲ ಅಲ್ಲದೆ ನಾನು ಆ ಮಾತು ಹೇಳಿದ್ದೆಂದು ಪ್ರಿನ್ಸ್ ಆಫ್ ವೇಲ್ಸ್ ಕಲ್ಲೇಜಿಗೆ ಹೋಗಬೇಕೆಂದು ತಾವು ಅಪವಾದ ಮಾಡುತ್ತೀರಿ ನಾನು ಈ ಮಿತ್ರ ಪ್ರೈಮರಿ ಶಾಲೆಗೆ ಹೋಗದೆ ಇರಲು ಆಗುತ್ತಿಲ್ಲದಿದ್ದರೆ, ಕೊಡಗಿನಲ್ಲಿರುವ ಎಮ್ಮೆಂಟಿ ಕಲವು ಮಹಾಶಯರ ಶಿಕ್ಷಕರಿಯು ಪ್ರೈಮರಿ ಶಾಲೆಗೆ ಹೋಗದೆ ತಿಳುವಳಿಕೆಯಿಲ್ಲದೆ ಇದ್ದಿದ್ದರಿಂದ ನಾನು ಅಂತಹ ಶಾಲೆಯಲ್ಲಿ ಸಂಭಾಷಣ ಮಾಡಬೇಕಾಗಿ ನನ್ನ ಸ್ಥಿತಿಯನ್ನು ಪ್ರೈಮರಿ ಶಾಲೆಗಳ ಸ್ಥಿತಿಗೆ ತರಬೇಕಾಗುತ್ತದೆ ಆ ಸಮಯದಲ್ಲಿ ಮಾತ್ರ ನಾನು ಪ್ರೈಮರಿ ತರಗತಿಗೆ ಬರಬೇಕಾಗುತ್ತದೆ

ದೇಶೀಯರಿಗೆ ದೊಡ್ಡ ಉದ್ಯೋಗಗಳನ್ನು ಕೊಡತಕ್ಕದೆಂದು ಹೇಳುವ ಮಾತನ್ನು ನನ್ನ ತಲೆಯ ಮೇಲೆ ಹಾಕಿರುತ್ತೀರಿ ಬಹುಶಃ ಈಗ ಗೌಡುಗಳ ಪೈಕಿ ಹಲವರು ವಿದ್ಯಾವಂತರಾಗಿರುವುದಿಲ್ಲವೆಂಬ ದಿಂದ ಈಗ ನನ್ನ ಮೇಲೆ ಮುದ್ದಪ್ಪನವರ ಹೆಸರನ್ನು ಮಾತ್ರ ಪ್ರಯೋಗಮಾಡಿದರ ತಮ್ಮ ಕಾರ್ಯ ಸಫಲವಾದಂತೆ ಕಂಡು ಬರುತದೆ

ಅಯ್ಯಾ ಕುಶಾಲಪ್ಪನವರೇ, ಒಂದು ವೇಳೆ ಗೌಡಗಳು ದೇಶದ ಉದ್ಯೋಗಗಳ ಪೈಕಿ ಕೆಲವನ್ನು ಪರಸ್ಥಳದವರಿಗೇ ಕೊಡಬೇಕೆಂದು ಹೇಳಿದರೂ ಸಹ ಅದು ಕೊಡಗು ದೇಶವೆಲ್ಲಾ ಜನರಿಗೆ ವ್ಯಾಪಿಸುತ್ತದೆಯೇ ಹೊರತು ಕೊಡವರಿಗೆ ಮಾತ್ರ ವ್ಯಾಪಿಸುವದಿಲ್ಲ ಅದರಿಂದ ಕೊಡಗರು ಮಾತ್ರ ಕೋಪಿಸಿಕೊಳ್ಳಲು ಕಾರಣವಿಲ್ಲ ಏನಾದರೂ ನೀವು ಗೌಡುಗಳು ಕೊಡವರ ಮೇಲೆ ದ್ವೇಷದಿಂದ ಆ ಮಾತು ಹೇಳಿರುವರೆಂದು ಯಾಕೆ ತಿಳಿದಿರುತ್ತೀರೋ? ಗೌಡುಗಳು ಹೇಳುವ ಮಾತು ಇನ್ನು ಮುಂದೆ ಬರುವ ಉದ್ಯೋಗಸ್ಥರಿಗೆ ಸಂಬಂಧಪಟ್ಟದ್ದೇ ವಿನಹ ಈಗ ಇರುವವರಿಗೆ ಹೊಂದಲಾರದು ಯಾಕೆಂದರೆ ಬಿಡುವಾಗ ಸರಕಾರ ಕಳುಹಿಸುವಂತೆ ಅವರನ್ನು ಸರಕಾರವು ಯಾವ ತರದಲ್ಲಿಯೂ ಬಾಧಿಸಲಾರದೆಂದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ ಅಲ್ಲದೆ ಇನ್ನು ಮುಂದೆ ಸಹ ಕೊಡಗಿನ ಎಲ್ಲಾ ಹುದ್ದೆಗಳು ಕೊಡವರಿಗೆ ಮಾತ್ರ ಸಿಕ್ಕಬೇಕೆಂಬ ಅಭಿಪ್ರಾಯವಿಲ್ಲದೆಯಿದ್ದಲ್ಲಿ ಗೌಡುಗಳ ಠರಾವಿನಿಂದ ಕೊಡಗರಿಗೆ ಮಾತ್ರ ಕೆಡುಕುಂಟಾಗುವುದಿಲ್ಲ

ನಿಮ್ಮ ಬರಹವನ್ನು ನೋಡಿದರೆ ಗೌಡಗಳು ತಂದ ಠರಾವುಗಳಾವುವನ್ನೂ ನಿಮ್ಮ ಜ್ಞಾನಶಕ್ತಿಯು ತಿಳಿದುಕೊಂಡಂತೆ ಕಾಣುವುದಿಲ್ಲ ನಮ್ಮ ಠರಾವುಗಳು ದೇಶದ ಏಳಿಗೆಗೆ ಕಂಟಕವನ್ನು ತರುವಂತೆ ಕಂಡು ಬಂದಲ್ಲಿ ಅಂಥಾ ಸಂಶಯಗಳನ್ನು ನಿವಾರಿಸಿಕೊಳ್ಳಲು ನೀವು ಮತ್ತು ನಿಮ್ಮಂತೆ ಜ್ಞಾನವುಳ್ಳ ಇನ್ನೂ ಕೆಲವರು, (ಹಿರಿಯರಾದರು ಬಂದರೂ ಒಳ್ಳೆದು) ನಾನು ಮತ್ತು ಕೆಲವು ಗೌಡುಗಳು (ಜ್ಞಾನವಿಲ್ಲದಿದ್ದರೂ ಚಿಂತೆಯಿಲ್ಲ) ನೀವು ನಿಶ್ಚಯಮಾಡಿದ (ಬೇಕಾದ ಕಡೆಗಳಲ್ಲಿ ರಚಿಸಿದ) ಸ್ಥಳದಲ್ಲಿ ಒಂದು ತಾರೀಕಿನಲ್ಲಿ ಯಾವುದಕ್ಕೂ ಬೇಕಾದ ಕೊಡಗು ಆಫೀಸಿನಲ್ಲಿ ಕೂಡಿ ಚರ್ಚಿಸೋಣ ವೃಥಾ ಸುಳ್ಳು ಮಾತುಗಳನ್ನು ಬರೆದು ಪ್ರಖ್ಯಾತವಾದ ಕೊಡಗು ಪತ್ರಿಕೆಯ ಸ್ಥಳವನ್ನು ಹಾಳುಮಾಡುವದಲ್ಲದೆ ನಿಷ್ಕಾರಣವಾಗಿ ನನ್ನನ್ನು ಹೀನವಾದ ದೂಷಣಕ್ಕೆ ಗುರಿಮಾಡಿದ ತಪ್ಪಿಗೆ ಸಹ ಒಳಗಾಗುವಿರಿ

ಯನ್ ಮುದ್ದಪ್ಪ,

ಜೋರ್ಜಿಯಾದಲ್ಲಿ ಮಿಸೆಸ್ ಶಿನರ್ ಎಂಬಾಕೆಯು ತನ್ನ ಅವಸಾನದ ಕಡೆ ವರ್ಷದಲ್ಲಿ 310 ಪುತ್ರ ಪೌತ್ರಾದಿಗಳ ಮನೆಗಳನ್ನು ಕ್ರಮಪ್ರಕಾರ ಸಂದರ್ಶಿಸಿ ಕಳೆದಳು. ಉತಾಹ್ ದೇಶದ ಮಿಸೆಸ್ ಸಾರಾ ಎಂಬವಳು ನಾಲ್ಕು ತಲಾಂತರದಲ್ಲಿ 303 ಜೀವಿತ ಮೆಂಬರರುಳ್ಳ ಬಂಧುಬಳಗದವರ ನಡುವಿನಲ್ಲಿದ್ದಳು.

೧೦೫೧ ಮಂದಿಯುಳ್ಳ ಕುಟುಂಬ!!

ಕಂಬರ್‌ಲೆಂಡ್ ನಿವಾಸಿಕನಾದ ಒಬ್ಬ ವೆಬ್ಬ್ ಎಂಬಾತನ ಆರು ಮಂದಿ ಗಂಡು 6 ಮಂದಿ ಹೆಮ್ಮಕ್ಕಳಲ್ಲಿ 1051 ಸಂತತಿಯಾಗಿ ಜೀವಂತವಿದ್ದುದನ್ನು ಕಣ್ಣಾರೆ ನೋಡಿರುವನು. ಹಿರೀ ಮಗ ಜೇಸನ್ ಎಂಬವನ ಶಾಖೆಯಲ್ಲಿ 444, ಮೈಲ್ಸ ಎಂಬವನಲ್ಲಿ 402, ಮೂರು ಜನ ಹೆಮ್ಮಕ್ಕಳಲ್ಲಿ ಕ್ರಮಪ್ರಕಾರ 230, 208, 201, ಮಂದಿಯೂ ಕಡೆ ಮಗನಲ್ಲಿ 166 ಮಂದಿಯೂ ಹುಟ್ಟಿರುವರು.

ವರ್ಷಕ್ಕೆ ಆರು ಮಕ್ಕಳು!!!

ಇನ್ನು ಅವಸರ ಅವಸರವಾಗಿ ಮಕ್ಕಳು ಜನಿಸುವಾಗುವುದನ್ನು ಕೇಳಿದರೆ ಇನ್ನಷ್ಟೂ ವಿಶೇಷತೋರುವದು. ಬೆಲ್ಜಿಯಮ್ ದೇಶದ ಮುಖ್ಯ ಪಟ್ಟಣವಾದ ಎಂಟ್ವರ್ಪ ಎಂಬಲ್ಲಿ ಒಬ್ಬ ಹೆಂಗಸು ಒಸವರಿಯಲ್ಲಿ ಒಂದೇ ಸವನೆ ಮೂರು ಮತ್ತು ಅದೇ ದಶಂಬರದಲ್ಲಿ ಮೂರು ಹೀಗೆ ಒಂದು ವರ್ಷದಲ್ಲಿ 6 ಮಕ್ಕಳನ್ನು ಜನನಕ್ಕೆ ತಂದಿರುವಳು. ಚಿಕಾಗೋ ದೇಶದಲ್ಲಿ ಜೋಸಫ್ಯಾನ್ ಒವ್ಸ್ನಾಬಿ ಎಂಬಾತಳು ಮದುವೆಯಾಗಿ 7 ವರ್ಷಗಳಲ್ಲಿ ಒಂದ ಬಾರಿ ಮೂರು, ಎರಡು ಸಾರಿ ಅವಳಿ ಜವಳಿ, ಮತ್ತೊಮ್ಮೆ ಒಂದೇ ಸಾರಿ 4 ಮಕ್ಕಳು, ಮೂರು ಸಾರಿ ಒಂದೊಂದು ಮಗುವನ್ನು ಹೀಗೆ ಸರಾಸರಿ ವರ್ಷಕ್ಕೆ ಎರಡು ಮಕ್ಕಳು ಎಂಬಂತೆ ಪಡೆದಿರುವಳು.

"ನವಯುಗ"

ಪ್ರಕಟಣೆ.

ತಾತ್ಕಾಲಿಕ ಮರದ ಸೇತುವೆಯು ಅಭದ್ರತೆಯು ದೆಸೆಯಿಂದ ಬೆಂಗಳೂರು--ಮಂಗಳೂರು ರಸ್ತೆಯ "ಸೂರ್ನಹಳ್ಳಿ ಕಂಪ ಹೊಳೆಯ" ಭಾಗದಲ್ಲಿ ಮಳೆಗಾಲದಲ್ಲಿ ಗಾಡಿ ವಗೈರೆ ತಿರುಗಾಡುವದನ್ನು ತಡೆ ಮಾಡಲಾಗಿದೆ. ಮಳೆಗಾಳಿಯ ಹೊಡೆತದಿಂದ ಆ ಭಾಗದಲ್ಲಿ ಬರೆ ಜಾರಿಯೂ ಮರಗಳು ಬಿದ್ದೂ ರಸ್ತೆಯು ಚಕ್ರದ ವಾಹನಗಳಿಗೆ ದಾಟಲು ಅಯೋಗ್ಯವಾಗುವುದು.

ಡಿಪ್ಯುಟಿ ಕಮಿಷನರ್,
ಹಾಸನ ಡಿಸ್ಟ್ರಿಕ್ಟ.

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

- - -

ಸಹಕಾರಿ ಸಂಘಗಳ ಕಾನ್‌ಫರೆನ್ಸಿನ 1ನೇ ಠರಾವು

ಅಯ್ಯಾ,

ಕಳೆದ ವಾರ ಪ್ರಕಟವಾದ ಪ್ರೊಸೀಡಿಂಗ್ಸಿನಲ್ಲಿ ಈ ಠರಾವಿನ ಚರ್ಚೆಯನ್ನು ಚನ್ನಾಗಿ ವಿವರಿಸಿರುವದಿಲ್ಲ. ಜಮ್ಮದ ಭೂಮಿಯನ್ನು ಗಿರ್ವಿ ಕೊಡಲು ಕಮಿಶನರ ಮಂಜೂರಾತಿ ಪಡೆಯಬೇಕಾದರೆ ಕುಟುಂಬದ ಪ್ರಾಯಬಂದ ಎಲ್ಲರೂ ಒಪ್ಪಿಗೆಕೊಡಬೇಕೆಂತ ಇರುವ ಕಾನೂನನ್ನು ಬದಲಾಯಿಸಿ ಜಮಾಬಂದಿಯ 6ನೇ ಕಲಮಿನಲ್ಲಿ ದಾಖಲೆ ಇರುವ ಮನುಷ್ಯನ ಅನುಮತಿ ಮಾತ್ರ ಪಡೆದು ಮಂಜೂರಾತಿಕೊಟ್ಟರೆ ಸಾಕೆಂತ ಠರಾವಿನ ಮೊದಲಿನ ರೂಪವಿತ್ತು. ಈ ಠರಾವಿಗೆ ಅನೇಕ ಮೆಂಬರುಗಳು ವಿರೋಧಿಸಿದರೇ ಹೊರತು ಪ್ರೊಸೀಡಿಂಗ್ಸಿನಲ್ಲಿ ಪ್ರಕಟಿಸಿರುವ ಠರಾವಿಗೆ ವಿರೋಧಿಸಲಿಲ್ಲ. ಯಾರಿಗೂ ಆಕ್ಷೇಪವಿಲ್ಲದಂತೆ ಅಧ್ಯಕ್ಷರ ಸಲಹೆಯಿಂದ ಠರಾವು ಪ್ರಕಟವಾದ ರೂಪಿನಲ್ಲಿ ಮಂಜೂರಾದದ್ದಾಗಿದೆ. ಕೊಡಗರ ನಡವಳಿಕೆ ಕಾನೂನಿನಲ್ಲಿಯೂ ಸರ್ಕಾರದವರು ಮಂಜೂರು ಮಾಡಿಟ್ಟಿರುವ ಕಾನೂನಿನಲ್ಲಿಯೂ ಕೊಡಗರ ಸೊತ್ತು ಪಾಲಾಗುವದಿಲ್ಲ. ಪರಾಧೀನ ಮಾಡಕೂಡದೆಂತ ಇರುವದಕ್ಕೆ ಒಂದು ಪ್ರತಿಷೇಧ ಮಾತ್ರ ಇದೆ. ಅದು ಯಾವದೆಂದರೆ, ಕಮಿಷನರ ಹುಕುಂ ಪಡೆದು ಪರಾಧೀನ ಪಡಿಸಬಹುದಂತೆ ಆದರೆ ಕಮಿಷನರು ಹುಕುಂ ಕೊಡಬೇಕಾದರೂ ಕುಟುಂಬದ ಪ್ರಾಯಬಂದ ಎಲ್ಲರ ಅನುಮತಿ ಪಡೆಯಬೇಕೆಂತ ರೂಲ್ಸ್ ಮಾಡಿದ್ದಾರೆಂತ ತಿಳಿಯುತ್ತೇನೆ. ಹೀಗೆ ಇರುವ ಕಾನೂನಿಗೆ ವಿರೋಧವಾಗಿ ಅನುಮತಿ ತೆಗೆದುಕೊಳ್ಳದೆ ಜಮ್ಮದ ಭೂಮಿಯನ್ನು ಗಿರ್ವಿಕೊಟ್ಟರೆ ಆ ಗಿರ್ವಿಯು ನಡದೀತೇ? ನಡೆಯದ ಇರುವ ಗಿರ್ವಿಯನ್ನು ತೆಗೆದುಕೊಂಡು ಪ್ರಯೋಜನವೇನು? ಒಬ್ಬ ಮೆಂಬರನು ಜಮ್ಮದ ಸೊತ್ತನ್ನು ಹರಾಜು ಮಾಡಿಸ ಕೂಡದೆಂಬ ತತ್ವ ಇರುವದರಿಂದಲೂ ಜಮ್ಮದ ಸೊತ್ತು 'ಹರಾಜಾಗುವದು ಬಹಳ ಕಡಿಮೆಯಾಗಿಯೂ ಇರುವದರಿಂದಲೂ ಗಿರ್ವಿಕೊಡಲು ಎಲ್ಲರ ಅನುಮತಿ ಇಲ್ಲದಿದ್ದರೆ ಏನು? ಹೇಗಾದರೂ ಗಿರ್ವಿ ಎಂತ ಬರಸಿಕೊಂಡರೆ ಆಯಿತಲ್ಲ, ಎಂತ ಹೇಳಿದರು. ಈ ಮಾತಿನಲ್ಲಿ ಪ್ರಮಾಣಿಕತೆಯು ಕಡಿಮೆಯಾಗಿರುವದಕ್ಕೆ ತೋರುತ್ತದೆ. ಸಂಘವು ಬ್ಯಾಂಕಿನಿಂದಲೋ, ಸಂಘದ ಮೆಂಬರರಿಂದಲೋ, ಇತರರಿಂದಲೋ ಸಾಲ ತೆಗೆದುಕೊಳ್ಳುವಾಗ ಸಂಘವು ತನ್ನ ಮೆಂಬರುಗಳಿಗೆ ಕೊಡುವ ಎಲ್ಲಾ ಸಾಲಕ್ಕೂ ತಕ್ಕ ಆಧಾರ ತೆಗೆದುಕೊಂಡಿದೆಯೆಂತ ನಂಬಿಸಿಯಲ್ಲವೇ ತೆಗೆದುಕೊಳ್ಳುವದು. ಹಾಗೆ ಸಾಲ ಕೊಡುವವರ ಪ್ರಯೋಜನಕ್ಕಾಗಿ ಸಂಘದ ಬಾಕಿಗಳನ್ನು ವಸೂಲ್ ಮಾಡಲು ನೋಡುವಾಗ ನಿಷ್ಪ್ರಯೋಜನವಾಗಿ ಕಂಡರೆ ಸಾಲ ಕೊಡುವವರಿಗೆ ಮೋಸಮಾಡಿದಂತೆಯೇ ಆಗಲಿಲ್ಲವೇ? ಗಿರ್ವಿಯು ಕಾನೂನಿಗೆ ವಿರೋಧವಾಗಿ ಪರಿಣಮಿಸಿದರೆ ಸಂಘವು ಮೆಂಬರರಿಂದ ಗಿರ್ವಿ ಸೊತ್ತಿನ ಸ್ವಾಧೀನ ತೆಗೆದುಕೊಳ್ಳಲಿಕ್ಕೆ ಸಹ ಕುಟುಂಬದವರು ಆಕ್ಷೇಪಿಸಬಹುದಲ್ಲವೇ? ಅಥವಾ ಸ್ವಾಧೀನಕ್ಕೆ ಆಕ್ಷೇಪಿಸದಿದ್ದರೂ ಆಖೈರಿನಲ್ಲಿ ಸೊತ್ತನ್ನು ಹರಾಜಿಗೆ ತರಬೇಕಾಗಿಬಂದರೆ ಆಗ ಸಂಘದ ಹಕ್ಕಿಗೆ ಮೋಸವಾಗಲಿಲ್ಲವೇ?

ಇನ್ನೊಬ್ಬ ಠರಾವಿಗೆ ಬೆಂಬಲ ಕೊಟ್ಟವರು ಹೇಳಿದ್ದೇನೆಂದರೆ, ಸಂಘದ ಮೆಂಬರುಗಳು ಕೊಡುವ ಹಣಕ್ಕೆ ಸಂಘವು ಯಾವ ತರದ ಆಧಾರ ಬರಸಿಕೊಂಡರೂ ಸರಕಾರಕ್ಕೆ ಏನು ಸಂಬಂಧ, ಸರಕಾರವು ಸಂಘದ ಒಳಗಿನ ಆಡಳಿತಕ್ಕೆ ಕೈಹಾಕಬಾರದು. ಬ್ಯಾಂಕಿನ ಋಣ, ಅಥವಾ ಮೈಸೂರು ಋಣ ಸಂಘಗಳಿಗೆ ಕೊಡುತ್ತಾರೆಂಬ ಕಾರಣದಿಂದ ಈಗ ಈ ಕಾನೂನನ್ನು ಜಾರಿಮಾಡುವದಾದರೆ ಸಂಘದ ಮೆಂಬರುಗಳ ಹಣವೇ ಹಾಳಾಗಿದ್ದರೆ ಆಗ ಸರಕಾರಕ್ಕೆ ನೋವಿರಲಿಲ್ಲವೇ ಎಂತ ಇತ್ಯಾದಿಯಾಗಿ ಹೇಳಿದರು. ಸಮುದಾಯದ ಜನರಿಂದ ಹಣವನ್ನು ಸಾಲವಾಗಿ ತೆಗೆದುಕೊಳ್ಳುವ ಸಂಸ್ಥೆಗಳ ಆಡಳಿತ ಸರಿಯಾಗಿ ನಡೆಯುತ್ತಿದೆಯೋ ಎಂತ ನೋಡಿಕೊಳ್ಳುವದು ಸರಕಾರದ ಕರ್ತವ್ಯವೆಂಬುದು ಸಾಧಾರಣ ರಾಜ್ಯತಂತ್ರವಾಗಿದೆ. ಸಹಕಾರಿ ಕಾನೂನಿಗೆ ಒಳಪಡದ ಬ್ಯಾಂಕ್‌ಗಳ ವಿಷಯದಲ್ಲು ಸರಕಾರವು ಕಂಪೆನಿ ಸೆಗದಲ್ಲಿ ಇರುತ್ತವೆ. ಮತ್ತು ಸರಕಾರದವರು ಮಾಡಿರುವ ಕಾನೂನನ್ನೇ ಆಗಲೀ ದೇಶದ ನಡವಳಿಕೆಯಿಂದ ಜನರಿಗೆ ಬಂದಿರುವ ಕಾನೂನನ್ನೇ ಆಗಲೀ ನಡಿಸುವದು ಸರಕಾರದ ಕರ್ತವ್ಯವಾಗಿದೆ. ಮೆಂಬರುಗಳ ಹಕ್ಕು ಬಾಧ್ಯತೆಗಳನ್ನು ಯೋಚಿಸಿದರೂ ಸಾಲಪಡೆಂದಿಕೊಳ್ಳುವವರಿಂದ ಸರಿಯಾದ ಆಧಾರಮಾಡಿಸಿ ಕೊಳ್ಳಬೇಕಾದದ್ದು ಮುಖ್ಯವಲ್ಲವೇ? ಸಂಘಕ್ಕೆ ಬರೆಸಿಕೊಳ್ಳುವ ಆಧಾರಗಳು ನಾಮಂಜೂರಾಗುವದರಿಂದ ಸಂಘದ ಬಾಕಿಯು ವಸೂಲಾಗದೆ ಹೋದರೆ ಸಂಘಕ್ಕೆ ಸಾಲಕೊಟ್ಟವರ ಹಣದ ಭರ್ತಿಗಾಗಿ ಸಂಘದ ಮೆಂಬರೆಲ್ಲರೂ ತಮ್ಮ ಸ್ವಂತ ಆಸ್ತಿಯಿಂದ ಹಣ ಭರ್ತಿಮಾಡಬೇಕಲ್ಲವೆ?

ಕುಟುಂಬದ ಎಲ್ಲಾ ಪ್ರಾಯಬಂದ ಜನರು ಒಪ್ಪಿಗೆ ಕೊಡದೆ ಇದ್ದಾಗ ಕಮಿಟಿ ಮೆಂಬರುಗಳು ತಾವು ಜವಾಬ್ದಾರಿಯೆಂತ ಬರಕೊಂಡರೆ ಅನುಮತಿ ತರಿಸಿಕೊಡಬಹುದೆಂತ ರಿಜಿಸ್ಟ್ರಾರರು ಹೇಳಿದರು. ಈ ಉಪಾಯವೂ ನಡಿಯತಕ್ಕದ್ದಲ್ಲ. ಕಮಿಟಿ ಮೆಂಬರುಗಳು ರಿಜಿಸ್ಟ್ರಾರರಿಗೆ ಕೊಡುವ ಖಾತರಿಯು ಕಾನೂನನ್ನು ಅನುಸರಿಸಿದ್ದಲ್ಲ. ಆ ಖಾತರಿಯನ್ನು ಜಾರಿಗೆ ತರಬೇಕಾಗಿ ಬಂದರೆ ಯಾರು ತರುವದು. ಸಾಧ್ಯವಿದೆಯೇ?

ಠರಾವು ಮಂಜೂರಾದ ರೂಪಿನಲ್ಲಿ ಏನೂ ಪ್ರಯೋಜನವಿಲ್ಲದೆ ಹೋಯಿತು. ಸರಕಾರದವರು ಜನರ ಕಷ್ಟವನ್ನು ಪರಿಹಾರ ಮಾಡಬೇಕೆಂತ ಕೇಳುವ ಬದಲು ಹೀಗೆಯೇ ಮಾಡಬೇಕೆಂತ ಕೇಳಬೇಕಾದದ್ದಲ್ಲವೇ ಈ ಮಹಾಸಭೆಯ ಕರ್ತವ್ಯ. ನಡವಳಿಕೆಯಿಂದ ಬಂದ ಕಾನೂನನ್ನು ಸರಕಾರದವರು ಹೇಗೆ ಅಲ್ಲಗಳೆಯುವದು? ಈ ಕಾನೂನಿನಿಂದಲೇ ಜನರಿಗೆ ಸಾಲ ದೊರೆಯುವದಿಲ್ಲವೆಂತ ಈಗ ಗೊತ್ತಾಗುತ್ತಾ ಬಂದಿದೆ. ಈಗ ಸಂಘದ ಮೆಂಬರುಗಳೂ ಸಂಘದ ಮೆಂಬರುಗಳಲ್ಲದ ಜಮ್ಮದ ರೈತರೂ ಸೇರಿ ಚರ್ಚಿಸಿ ತಮ್ಮ ಮತವನ್ನು ಕೊಟ್ಟರೆ ಸರಕಾರವು ಅದರಂತೆ ನಡೆಸೀತೆಂತ ತೋರುತ್ತದೆ. ಮಂಜೂರಾದ ಠರಾವು ಸಭೆಯು ಮುಂದೆ ಬಂದ ಠರಾವನ್ನು ಕಗ್ಗೊಲೆ ಮಾಡಿತು. ಜಮ್ಮಗಾರರೇ ಈ ವಿಷಯವನ್ನು ನಿಧಾನವಾಗಿ ಯೋಚಿಸಿ ಕಷ್ಟನಿವಾರಣೆ ಮಾಡಿಕೊಳ್ಳಬೇಕಾಗಿದೆ

"ಸಭಿಕ"

ಅಯ್ಯಾ ಸಂಪಾದಕರೇ,

ಡಾ. ವರಲ್ಲು ಮೆ. ಎನ್, ಮುದ್ದಪ್ಪನವರ ಅಧ್ಯಕ್ಷತೆಯಲ್ಲಿ ಗೌಡುಗಳ ಸಭೆಯು ತೀರ್ಮಾನ ಮಾಡಿದ ಠರಾವುಗಳನ್ನು ನೋಡಿ ತುಂಬಾ ಸಂತೋಷವೂ, ಆಶ್ಚರ್ಯವೂ ಉಂಟಾಯಿತು.

ಗೌಡುಗಳ ಪೈಕಿ ಒಬ್ಬನು ಬಿ. ಎ. ಬಿ. ಎಲ್. ಪಾಸಾಗಿ ಬಂದ ಕೂಡಲೆ ಇವರ ಮಟ್ಟಿಗೆ ತನ್ನ ಜಾತಿಯವರನ್ನು ಬಿಗ್ಗಟ್ಟಿನಲ್ಲಿ ತರುವಂತೆ ತೊಂದರೆ ತೆಗೆದುಕೊಂಡದ್ದು ಸಂತೋಷವೇ. ಆದರೆ ಇದರಿಂದ ಕೊಡಗಿನ ಜನಾಂಗಕ್ಕೆ ಒಂದು ತರದ ಅಮಲು ಕೊಟ್ಟಂತೆ ತೋರುತ್ತೆ. ಕೊಡಗರು ದೊಡ್ಡ ದೊಡ್ಡ ಪದವಿಯಲ್ಲಿದ್ದು ಅನೇಕರು ದೊಡ್ಡ ದೊಡ್ಡ ಪರೀಕ್ಷೆಯಲ್ಲು ತೇರ್ಗಡೆ ಹೊಂದಿದ್ದಾಗ್ಯೂ ಕೂಡ ಕೊಡಗಿನಲ್ಲು ಇತರ ಜನಾಂಗದವರನ್ನು ದೂಷಿಸುವದಾಗಲಿ ಯಾ ಇವರನ್ನು ಪೀಡಿಸುವಂತೆ ಬೇರೆ ಸಂಘಗಳನ್ನಾಗಲಿ, ಸಭೆಯನ್ನಾಗಲಿ ಮಾಡುವ ಆಲೋಚನೆ ಮಾಡಿರುವದಿಲ್ಲ. ಕೊಡಗರೇ! ಇನ್ನಾದರೂ ಎಚ್ಚರಿಕೆ ತೆಗೆದುಕೊಳ್ಳುವಿರಾ!! ಮೈಸೂರಿನಲ್ಲಿ ಉದ್ಯೋಗ ವ್ಯವಹಾರದಲ್ಲಿಗೂ, ಮದ್ರಾಸು, ಬೊಂಬಾಯಿಯಲ್ಲಿ ಆವರವರಿಗೂ ಆಗಿರುವಾಗ ಕೊಡಗಿನಲ್ಲಿ ಗೌಡುಗಳಿಗೆ ದೊಡ್ಡ ಉದ್ಯೋಗವಾದರೆ ಕೊಡಗರ ಪಾಡೇನು? ಕೊಡಗು ಸಭೆ ಇದ್ದಿದ್ದರೆ ಈ ಠರಾವಿಗೆ ಸರಿಯಾದ ಜವಾಬನ್ನು ಕಳುಹಿಸುತ್ತಿರಲಿಲ್ಲವೇ!! ಗೌಡುಗಳಿರಾ, ಕೊಡಗರು ಒಗ್ಗಟ್ಟಾಗಿ ನಿಂತರೆ ಅದೇ ತಾರೀಕು ವಿದೇಶ ವರ್ತಮಾನ ಕಾಲಂನಲ್ಲಿ ಜೈನಾ ದೇಶದಲ್ಲು ವಿದ್ಯಾರ್ಥಿಗಳು ನಡೆಸುವಂತೆಯೂ, ವಾಯವ್ಯ ಪ್ರಾಂತ್ಯದಲ್ಲಿ ಮುಸಲ್ಮಾನರು ತಮ್ಮ ಪರತ್ತಿಗೆ ಹಿಂದುಗಳು ಒಪ್ಪದಿದ್ದರೆ ಹಿಂದುಗಳನ್ನೆಲ್ಲಾ ಅವರ ದೇಶದಿಂದ ಓಡಿಸುವ ಏರ್ಪಾಡಿನಂತೆ ಕೊಡಗಿನಲ್ಲಿ ಮಾಡಿರುವದಿಲ್ಲ. ಆದ್ದರಿಂದ ಕೊಡಗರೊಂದಿಗೆ ಸ್ನೇಹಭಾವದಲ್ಲಿರುವದು ಉತ್ತಮವಲ್ಲವೆ?

ಮೋಡರೇಟ್ ಕೊಡಗ

'ಗೌಡುಗಳ ದೂರಲ್ಲ, ಯಥಾಸ್ಥಿತಿ.'

ಅಯ್ಯಾ, ಪರಿಪ್ರಸಾದರೆ,

ಸರಕಾರವು ಗೌಡುಗಳ ಕೈಬಿಟ್ಟಿದೆಯೆಂದು ಅವರ ದೂರಲ್ಲ. ಸರಕಾರದವರು ಅವರನ್ನು ಹಿಡಿದುಕೊಂಡಿವಾರೆಂದು ಅವರಿಗೆ ಗೊತ್ತಿದೆ. ಆದರೆ ಬ್ರಾಹ್ಮಣರಿಗೂ ಕೊಡಗರಿಗೂ ತಾವೇ ಮೇಲಕ್ಕೆ ಬರುವಷ್ಟು ಶಕ್ತಿ ಇರುವಾಗ ಸಾಕಷ್ಟು ಶಕ್ತಿ ಇಲ್ಲದ ಗೌಡುಗಳಿಗೆ ಮುಂದಕ್ಕೆ ಬರಲು ಸರಕಾರವು ಸಹಾಯ ಮಾಡಬೇಕೆಂಬುದೇ ಅವರ ಯೋಚನೆಯಾಗಿದೆ. ಮತ್ತು ಸರಕಾರ ಆಡಳಿತದಲ್ಲಿ ಭಾಗಿಯಾಗಿರುವ ಕೌನ್ಸಿಲಿನಲ್ಲಿ ತಮಗೆ ಮೆಂಬರುತನ ಇಲ್ಲದೆ ಇರುವುದು ಗೌಡುಗಳಿಗೆ ನಿಜವಾಗಿಯೂ ವ್ಯಸನವನ್ನುಂಟುಮಾಡಿದೆ. ಆದರೆ ತಮ್ಮ ಸಹೋದರ ವರ್ಗವಾದ ಮುಹಮ್ಮದಿಯರಿಗೆ ಮೆಂಬರುತನ ಸಿಕ್ಕದಕ್ಕೆ ಗೌಡುಗಳೆಂದಿಗೂ ಅಗ್ರವಪಡುವುದಿಲ್ಲ. ಅಂಥಾ ವಿಷಯವನ್ನು ಗೌಡುಗಳು ಯಾವಾಗಲಾದರೂ ಯೋಚಿಸಿದ್ದೂ ಇಲ್ಲ, ಹೇಳಿದ್ದೂ ಇಲ್ಲ. ಇದು ಮುಹಮ್ಮದಿಯರಿಗೂ ಗೌಡುಗಳಿಗೂ ಮನಸ್ತಾಪವನ್ನುಂಟುಮಾಡಲು, ನಿಮ್ಮದೊಂದು ಉಪಾಯವಾಗಿದೆ. ಆದರೆ ಮುಹಮ್ಮದಿಯರು ಇಂಥಾ ಉಪಾಯದಿಂದೆಂದಿಗೂ ಮರುಳಾಗುವಂತಿಲ್ಲ. ತಮ್ಮ ಸ್ಥಿತಿಯೂ ಗೌಡುಗಳ ಸ್ಥಿತಿಯೂ ಎಷ್ಟರ ಮಟ್ಟಿಗೆ ಹಿಂದುಳಿದಿರುವುದೆಂಬುದನ್ನು ಮುಹಮ್ಮದಿಯರು ಚನ್ನಾಗಿ ಬಲ್ಲವರಾಗಿದ್ದಾರೆ.

ಅಿರಲಿ, ಬ್ರಾಹ್ಮಣರೂ ಕೊಡಗರು ಬ್ಯೂರೋಕ್ರಸಿಯು ಅವರ ತಲೆಗೆ ಬೆಣ್ಣೆ ಸವರುವುದರಿಂದ ಅದೃಷ್ಟವಂತರಾದರೆ ಗೌಡುಗಳು ಯಾಕೆ ಆ ಬೆಣ್ಣೆಯನ್ನು ನೆನೆಸಿಕೊಳ್ಳಬಾರದು? ಹಾಗೆ ನೆನೆಸಿಕೊಳ್ಳಬೇಕೆಂಬುದೇ ಅವರ ಪ್ರಯತ್ನ. ಬ್ಯೂರೋಕ್ರಸಿಗೆ ಬ್ರಾಹ್ಮಣರೂ ಕೊಡಗರೂ ವಿರೋಧವಾಗಿದ್ದರೆ ಅವರು ಹ್ಯಾಗೆ ಕೌನ್ಸಿಲಿಗೆ ಮೆಂಬರುಗಳಾದರು? ಗೌಡುಗಳು, ಬ್ರಾಹ್ಮಣರನ್ನೂ, ಕೊಡಗರನ್ನೂ ಭ್ರಾತೃಭಾವದಿಂದಲೇ ನೋಡುತ್ತಿರುವರು. ಆದುದರಿಂದಲೇ ಬ್ಯೂರೋಕ್ರಸಿಯು ಹಿಡಿತದಲ್ಲಿ ಆನಂದಿಸುತ್ತಿರುವ ಬ್ರಾಹ್ಮಣರ ಮತ್ತು ಕೊಡಗರ ಸುಖದಲ್ಲಿ ತಾವೂ ಸಹ ಸಮಭಾಗಿಗಳಾಗಲು ಅವರು ಪ್ರಯತ್ನಿಸುವುದು. ಇದು ನಿಜವಾದ ವೈತ್ರಿಯಲ್ಲವೇ?

ಅದು ಹಾಗಿರಲಿ, ನೀವು ಗೌಡುಗಳು ಸ್ವಾರ್ಥವನ್ನು ತ್ಯಜಿಸಬೇಕೆಂಬ ಬುದ್ಧಿವಾದವನ್ನು ಹೇಳುವಿರಿ, ಅದು ಸರಿಯಲ್ಲ, ಯಾವ ಮನುಷ್ಯನೇ ಆಗಲಿ, ಅಥವಾ ಯಾವ ಜನಾಂಗವೇ ಆಗಲಿ ಮುಂದಕ್ಕೆ ಬರಬೇಕಾದರೆ ಸ್ವಾರ್ಥವೇ ಮುಖ್ಯ. ಇಂಗ್ಲಿಷ್ ಜನಾಂಗವು ಮುಂದಕ್ಕೆ ಬಂದದ್ದು ಸ್ವಾರ್ಥದಿಂದಲೇ. ಹಿಂದುಗಳಿಗೆ ಸ್ವರಾಜ್ಯವು ಸಿಕ್ಕಬೇಕಾದರೂ ಸ್ವಾರ್ಥವು ಬೇಕು, ಗೌಡುಗಳೂ ಸಹ ಬೇರೆ ಮತದವರಷ್ಟು ಮುಂದಕ್ಕೆ ಬರಬೇಕಾದರೆ ಸ್ವಾರ್ಥವು ಬೇಕೇ ಬೇಕು. ಕೊಡವರು ಬಂದು ಸಭೆ ಸ್ಥಾಪಿಸಿದ್ದರೆ, ಗೌಡುಗಳಿಗೆ ಅದರಿಂದ ಬಹಳ ಕೈಯದಾಗಿದ್ದಿತೇ ಹೊರತು ಕೇಡಾಗುತ್ತಿರಲಿಲ್ಲ. ಯಾಕೆಂದರೆ ಹೀಗೆ ಮಾಡಿದ್ದರೆ ಗೌಡುಗಳ ನಿಜವಾದ ಸ್ಥಿತಿಯು ಸರಕಾರಕ್ಕೆ ಗೊತ್ತಾಗುತ್ತಿತ್ತು, ಮತ್ತು ಗೌಡುಗಳ ಮೇಲೆ ಕೊಡವರಿಗಿರುವ ವೈತ್ರಿಯು ಸಹ ಚನ್ನಾಗಿ ಹೊರಬೀಳುತ್ತಿತ್ತು.

ಮೇಲೆ ಹೇಳಿದವುಗಳಲ್ಲದೆ ಇನ್ನೊಂದು ವಿಷಯವನ್ನು ಸಹ ಹೇಳಬೇಕಾಗಿದೆ. ತಮ್ಮನಿಗೆ ಕಾಯಿಲೆಯಾದಾಗ ಅಣ್ಣನು ಸಹಾಯಮಾಡದೆಹೋದರೆ ತಮ್ಮನು ಮೂರನೆಯವನಾದ ಸ್ನೇಹಿತನಿಗೆ ಮೊರೆಯಿಡುವುದು ನ್ಯಾಯವಲ್ಲವೆ? ಅಲ್ಲದೆ ದೊಡ್ಡ ಹುದ್ದೆಗಳನ್ನು ಯೂರೋಪಿಯನರಿಗೆ ಕೊಡಬೇಕೆಂದು ಹೇಳುವುದರಿಂದ ಗೌಡುಗಳು ಅವರ ಪಕ್ಷನ್ನು ಸಹ ಕೋರಿದುಕೊಂಡಿರುವರು, ಇದನ್ನು ನೋಡಿದರೆ ದೇಶೀಯ ಉದ್ಯೋಗಸ್ಥರಿಂದ ಗೌಡುಗಳಿಗೆ ಇದುವರೆಗೆ ಯಾವ ಸಹಾಯವೂ ಸಿಕ್ಕಲಿಲ್ಲವೆಂಬುದನ್ನು ವ್ಯಕ್ತಪಡಿಸುತ್ತದೆ.

ಇನ್ನೊಂದು ಮಾತು. ದೇಶದ ಅಭ್ಯುದಯವಾಗಬೇಕಾದರೆ ಗೌಡುಗಳು ಮತ್ತು ಇತರ ಹಿಂದುಳಿದ ಮತಸ್ಥರು ಮುಂದಕ್ಕೆ ಬರಬೇಕು. ಸ್ವರಾಜ್ಯವೆಂದರೆ ಯಾವದಾದರೂ ಒಂದೇ ಜನಾಂಗದ ರಾಜ್ಯವಲ್ಲ. ಎಲ್ಲಾ ಮತದವರೂ ಸರಿಸಮಾನರಾಗಿರಬೇಕೆಂಬುದೇ ಸ್ವರಾಜ್ಯದ ತತ್ವ. ಆದ್ದರಿಂದ ಹಿಂದುಳಿದವರನ್ನು ಮುಂದಕ್ಕೆ ತರುವುದು ದೇಶದ ಮಹನೀಯರ ಕರ್ತವ್ಯವಾಗಿದೆ.

ಅಯ್ಯಾ ಪರಿಪ್ರಸಾದರೆ, ಗೌಡುಗಳು ತಂದ ಠರಾವುಗಳು ಕೊಡಗರ ಅಥವಾ ಬ್ರಾಹ್ಮಣರ ಮೇಲೆ ಹೊಟ್ಟೆಕಿಚ್ಚಿನಿಂ

ದ ತಂದ ಠರಾವುಗಳಲ್ಲಿ ಒಂದುವೇಳೆ ನೀವು ಹಾಗೆ ತಿಳಿದುಕೊಂಡಿದ್ದರೆ ನಿಮಗೆ ಮುಂದಾಲೋಚನೆ ಮತ್ತು ಜ್ಞಾನಶಕ್ತಿ ಕಡಿಮೆಯೆಂದು ತಿಳಿಯಬೇಕು. ಗೌಡುಗಳ ಮಾರ್ಗವು ನ್ಯಾಯವಾದ ಮಾರ್ಗವಾದುದರಿಂದಲೂ, ಅವರು ಆಡುವುದೆಲ್ಲವೂ ಸತ್ಯವಾದುದರಿಂದಲೂ ಅವರ ಕಲಸವ್ಯಾವದನ್ನು ಗುಟ್ಟಾಗಿಡದೆ ಬಹಿರಂಗಪಡಿಸಿದ್ದಾಗಿದೆ. ಗೌಡುಗಳ ಠರಾವುಗಳು ದೇಶದ ಅಭ್ಯುದಯಕ್ಕಾಗಿರುವುದರಿಂದ ಎಲ್ಲರೂ ಎಚ್ಚರಿತರಾಗಬೇಕೆಂಬುದೇ ಅವರ ಕೋರಿಕೆ.

ಇಂತಿ ನಿಮ್ಮ ಹಿತಚಿಂತಕ,

ಸರದಾಸ.

ಕಂದಾಯ ಬೇಕು, ಹುಟ್ಟುವಳಿ ಬೇಡವೇ?

ಮಹನೀಯರೇ,

ಜಮೀನ್ದಾರರ ಸಂಘದ ಪ್ರಚಾರ ಕೆಲಸಕ್ಕಾಗಿ ನಾನು ತಿರುಗುತ್ತಿರುವ ತನ್ಮಧ್ಯ ಕಿಗ್ಗಟ್ಟು ನಾಡಿನಲ್ಲಿ ಕಲವು ಜನರ ಗೋಳುಗಳ ಸಂಗತಿಯನ್ನು ಕಣ್ಣಾರೆ ಕಂಡೂ ಕಿವಿಯಾರೆ ಕೇಳಿಯೂ ಸೋತವನಾಗಿ ಈ ಹವಾಲನ್ನು ಪತ್ರಿಕೆಯ ಮೂಲಕ ವಿಸ್ತರಿಸಿದರೆ ಸ್ವಲ್ಪವಾದರೂ ಅವರಿಗೆ ಕ್ಷೇಮ ದೊರೆಯಬಹುದೋ ಎಂಬ ಎಚ್ಚರಿಕಾ ಪೂರ್ವಕ ಸ್ವಲ್ಪ ಮುಂದಿಡುತ್ತೇನೆ. ಕಿಗ್ಗಟ್ಟುನಾಡು ತಾಲೋಕಿನ ಬೇಗೂರು, ನಡಿಕೇರಿ, ಬೇಗೂರು, ಬಲ್ಲಮಾವಟಿ, ಹಾಗೂ ಕುಟ್ಟ ಮೊದಲಾದ ಗ್ರಾಮಗಳ ೫ ನೂರು ಮೂವತ್ತು ಸಾವಿರ ಬಟ್ಟಿ ಭೂಮಿಯ ಪೈಕಿ ನೂರು ಆರುನೂರು ಭೂಮಿಯು ಮಳೆ ಹಿಡಿದ ಲಾಗಾಯಿತು ಆಗೋಸ್ಟು ಅಖೈರು ವರೆಗೆ (ಮಳೆ ಕಮ್ಮಿಯಾಗುವ ವರೆಗೂ) ಜಲಮಯವಾಗಿಕೊಂಡು ಅಕ್ಟೋಬರ್, ಸಪ್ಟಂಬರ್ ತಿಂಗಳಲ್ಲಿ ಸಾಮಾನ್ಯವಾಗಿ ಹೂಡಿ ನಡುವದಾಗಿದೆ. ಭೂಮಿಗಳ ನಡುವಿನಲ್ಲಿ ತೋಡು ಇರುವದಾದರೂ ಕಳಗಟ್ಟೂ ಮೇಲೆಗಟ್ಟೂ ಎತ್ತರವಾಗಿರುವುದರಿಂದಲೂ, ತೋಡು ಮೇಲೆ ಇರುವ ಕಾರಣವೂ ಆ ಪ್ರಾಂತ್ಯಕ್ಕೆ ಬಿದ್ದ ಮಳೆಯ ನೀರೆಲ್ಲಾ ಇದರಲ್ಲಿಯೇ ಅಡಗುತ್ತದೆ. ಒಂದು ವೇಳೆ ತೋಡು ತಗ್ಗಿಸಿಯಾದರೂ ನೋಡಬಹುದೆಂದರೆ ತೋಡು ಬಹಳ ದೂರವಿರುವದರಿಂದಲೂ, ತಗ್ಗಿಸುವದಕ್ಕೆ ವಿಪರೀತ ಹಣ ವೆಚ್ಚವಾಗಬೇಕಾದ್ದರಿಂದಲೂ, ತೋಡಿನ ಅಬುಬಾಜುಗಳಲ್ಲೆಲ್ಲಾ ಒಬ್ಬನ ಭೂಮಿಯಾಗಿರದೆ ಅನೇಕರ ಭೂಮಿಗಳಿರುವದಲ್ಲದೆ ಅವರೆಲ್ಲರೂ ಶ್ರೀಮಂತರಲ್ಲದ ಕಾರಣದಿಂದ ಒಬ್ಬನು ಶ್ರಮಪಟ್ಟು ತಗ್ಗಿಸಿದರೂ ಇತರ ಕೆಲವರೆಲ್ಲಾ ಗದ್ದೆಯನ್ನು ನಿರ್ಮೂಲಮಾಡಲು ಸಾಮರ್ಥ್ಯವಿಲ್ಲದವರಿಂದಲೂ, ಮಳೆ ಹೋಗುವವರೆಗೂ ಮೇಲೆ ನೋಡತಕ್ಕ ಸಂಗತಿಯಾಗಿದೆ. ಹೀಗಾಗಿ ಹೇಗೂ ಕೆಳ ಭಾಗ ನೆಟ್ಟರೂ ಮಳೆ ಹೋದ ಒಂದೆರಡು ದಿನಗಳಲ್ಲಿಯೇ ಉಳಿದ ಮೇಲ್ಭಾಗದ ಭೂಮಿಗಳೆಲ್ಲವೂ ನೀರಿನ ಅಭಾವದಿಂದ ಮಳೆಯನ್ನೇ ಎದುರುನೋಡಬೇಕಾಗಿ ಬರುತ್ತದೆ. ಹೇಗೂ "ಅಂತೂ ಇಂತೂ ಕುಂತಿ ಮಕ್ಕಳಿಗೆ ವನವಾಸ" ವೆಂದಂತೆ ಅವರ ಶ್ರಮದ ಪ್ರತಿಫಲದ ಅರ್ಧವೂ ದೊರೆಯುವುದು ಬಹು ದುರ್ಲಭವೇ ಸರಿ. ಅವರ ದುರ್ದೈವ ವಶದಿಂದ ಸರಕಾರದವರಾದರೋ—ಮಣ್ಣನ್ನು ಒಂದನೇ ತರಗತಿಗೇರಿಸಿ ಅದಕ್ಕೆ ಸರಿಯಾದ ಕಂದಾಯ ವಸೂಲು ಮಾಡುತ್ತಾರೆ. ಭೂಮಿ ನಡುವದು ಯಾವಾಗಾದರೂ ಕಂದಾಯ ಭರ್ತಿಯಾಗಬೇಕು.

ಈ ವಿಷಯದಲ್ಲಿ ಅದೇ ಭೂಮಿಯ ನಡುವಿಗಾಗಿ ಪೊನ್ನಂಪೇಟೆಯಿಂದ ಹುದಿಕೇರಿಗೆ ಹೋಗುವ ಹೈ ರೋಡು ಇರುವದರಿಂದ ಮಳೆಗಾಲದಲ್ಲಿ ಸಂಚರಿಸತಕ್ಕ ಪ್ರತಿ ಒಬ್ಬರಿಗೂ ಮಾರ್ಗದ ಎಡಬಲ ಭೂಮಿಯಲ್ಲಿ ಹೊಳೆಗಳ ಹಾಗೆ ನೀರು ನಿಂತಿರುವದು ಚನ್ನಾಗಿ ಕಾಣಬರುತ್ತದೆ. ಮಾತ್ರವಲ್ಲ, ಸ್ವಲ್ಪ ಹೆಚ್ಚಿನ ಮಳೆಯಲ್ಲಿ ಮಾರ್ಗವೇ ಮುಚ್ಚಿ ಹೋಗುವದೂ ಉಂಟು. ಅಲ್ಲದೆ ಹಳ್ಳಿಗಟ್ಟು ಎಂಬಲ್ಲಿರುವ ಸುಮಾರು ಮೂರು ಸಾವಿರ ಬಟ್ಟಿ ಭೂಮಿಯು ನೀರಿಲ್ಲದೆ ಉಳಿದು ಹೋಗುವದರಿಂದ ಹುದೂರಿನಿಂದ ನೀರು ಸರಬರಾಯಿ ಆಗಬಹುದೆಂಬ ನಂಬಿಕೆಯಿಂದ ಸರಕಾರದವರೇನೋ ಕಂದಾಯ ಬರಾಬರ ಹಾಕಿರುತ್ತಾರಾದರೂ ಆ ನೀರಿನ ಸರಬರಾಯಿ ಈ ವರೆಗೂ ಆಗದೆ. ಭೂಮಿಯು ಯಾವಾಗಲೂ ಉಳಿದು ಹೋಗುತ್ತದೆ. ಇದಕ್ಕೆ ನೀರನ್ನು ಹುದೂರು ಭೂಮಿಯಿಂದ ದೇವರಕಾಡು ಒತ್ತಿಗಾಗಿ ಮನೆಯಪಂಡ ಪೊನ್ನಪ್ಪನವರ ಭೂಮಿಯ ಒತ್ತಿಗಾಗಿ ಸುಮಾರು ಅರ್ಧ ಫರ್ಲಾಂಗು ದೂರದೊಳಗೆ ನಾಲೆಯನ್ನು ಕಡಿದು ಸ್ವಲ್ಪ ಖರ್ಚಿನಿಂದ ನೀರು ಸರಬರಾಯಿ ಆಗುವಂತೆ ಮಾಡಬಹುದು. ಯಾವದಕ್ಕೂ ಹಣದ ಅಭಾವದಿಂದ ರೈತರಿಗೆ ಸ್ವಂತ ಪರಾಪೇಕ್ಷೆ ಇಲ್ಲದೆ ಮಾಡುವರೆ ಅನುಕೂಲವಿಲ್ಲ. ಈ ಸಂಗತಿಗಳ ಪರಿಹಾರ ಬಗ್ಗೆ ಆಯಾ ಭೂಮಿಗಳಿಗೆ ಸಂಬಂಧಪಟ್ಟವರಾಗಲಿ ಆ ಗ್ರಾಮಸ್ಥರಾಗಲಿ ಒಕ್ಕಟ್ಟಿನಿಂದ ಸಹಕಾರವನ್ನು ಬೇಡಿಕೊಳ್ಳುವದಾಗಲಿ, ಅಲ್ಲಿನ ಕಷ್ಟಗಳು ಮೆಂಬರರ ಮೂಲಕ ಸರಕಾರದ ಗಮನಕ್ಕೆ ತರಿಸುವದಾಗಲಿ, ಇಲ್ಲವೆ ಜಮೀನ್ದಾರರ ಸಂಘದಲ್ಲಿ ಠರಾವಾಗಿ ತಂದು ಆ ಮೂಲಕ ಸರಕಾರವನ್ನು ಕೇಳಿಕೊಳ್ಳುವದಾಗಲಿ ಈ ಮೊದಲೇ ಮಾಡಬಹುದಿತ್ತು. ಆ ಸಂಗತಿ ಹೇಗಿದ್ದರೂ ಈ ಮಳೆಗಾಲ ಸಮೀಪಿಸಿದ್ದರಿಂದ ಕೂಡಲೆ ಈ ಸಂಗತಿಯನ್ನು ಪರಿಶೀಲಿಸಿ ತಕ್ಕ ಏರ್ಪಾಡನ್ನು ಕಂಡುಹಿಡಿಯಬೇಕಾಗಿ ನಾನು ನಮ್ಮ ಘನ ಸರಕಾರವನ್ನು ಕೇಳಿಕೊಳ್ಳುವದಲ್ಲದೆ—ಸರಕಾರವು ಕಂದಾಯ ವಸೂಲಿನಲ್ಲಿ ಹೇಗೆ ಸಿಗಿಬೀಳುತ್ತದೋ ಹಾಗೆಯೆ ಕಂದಾಯಕೊಡತಕ್ಕ ರೈತರ ಹುಟ್ಟುವಳಿಗಳ ಸಾಧನದ ವಿಷಯದಲ್ಲಿಯೂ ತಕ್ಕ ಗಮನವಿಟ್ಟುಕೊಂಡು ಆ ಕಿಗ್ಗಟ್ಟುನಾಡಿನವರ ಕಷ್ಟವನ್ನು ಹೋಗಲಾಡಿಸಿ ಕೊಡಬೇಕೆಂಬದಾಗಿ ಸರಕಾರದವರನ್ನು ಕುರಿತು ನಾನು ಅರಿಕೆಮಾಡಿಕೊಳ್ಳುವದಲ್ಲದೆ ಜಮೀನ್ದಾರರ ಸಂಘದ ಪ್ರತಿನಿಧಿಗಳಲ್ಲಿಯೂ ಒಮ್ಮೆ ಅದನ್ನು ಸಂದರ್ಶಿಸಿ ತಕ್ಕ ವಿಲೆವಾರಿ ಮಾಡಿಕೊಡಬೇಕಾಗಿ ಸಹ ಕೇಳಿಕೊಳ್ಳುತ್ತೇನೆ. ಜಮೀನ್ದಾರರ ಸಂಘದ ಪ್ರತಿನಿಧಿಗಳು ಸಂದರ್ಶನೆ ಬಗ್ಗೆ ಯಾವತರದ ಉದಾಸೀನತೆಯನ್ನೂ ಸಹ ತೋರದೆ ಅಲ್ಲಿನ ರೈತರ ಮನಸ್ಸಿನ ತಾಪವನ್ನು ಸ್ವಲ್ಪವಾದರೂ ಹೋಗಲಾಡಿಸಬೇಕಾಗಿ ಎರಡನೆ ಪ್ರಾರ್ಥನೆ.

ಸಿ. ಕೆ. ಕುಟ್ಟಪ್ಪ.

ಹೇಳುವುದೊಂದು ಮಾಡುವುದೊಂದು!

ಅಯ್ಯಾ,

ಕೊಡಗಿನ ಪ್ರತಿಯೊಬ್ಬ ತರುಣನಿಗೂ 'ಹಳೆ ವಿದ್ಯಾರ್ಥಿಯರ ತ್ರೈಮಾಸಿಕ' ಪತ್ರಿಕೆಯನ್ನು ತಿಳಿಯದೆ ಇಲ್ಲ. ಅಲ್ಲದೆ ಕೊಡಗು ಪತ್ರಿಕೆಯಲ್ಲಿ ಪ್ರತಿವಾರದಲ್ಲಿಯೂ Vol II. No 2 just now out read and enjyo' ಎಂದು ಮುಂತಾದ ಪ್ರಕಟನೆಯು ತೋರುತ್ತಿತ್ತು. ಎರಡನೆಯ ಸಂಪುಟದ ಎರಡನೆಯ ಸಂಚಿಕೆಯು ಹೊರಟದ್ದು ಜನವರಿಯಲ್ಲಿ! ಜನವರಿ ಕಳೆದ ತಿಂಗಳು ಐದಾದರೂ ಅದರ 'Just now' ತೀರಲಿಲ್ಲ. ಕಳೆದ ಏಪ್ರಿಲ್ ತಿಂಗಳಲ್ಲೇ ಎರಡನೆಯ ಸಂಪುಟದ ಮೂರನೆಯ ಸಂಚಿಕೆಯು ಹೊರಡಬೇಕಿತ್ತು!— ವರ್ಷವಾದಿಯಲ್ಲಿ ಮಾತ್ರ. ಮೂರು ತಿಂಗಳಿಗೊಮ್ಮೆ ಸರಿಯಾಗಿ ಹೊರಡುತ್ತದೆ. ಇಂಥಾ ಪತ್ರಿಕೆಗಳಿಗೆ ಪ್ರೋತ್ಸಾಹಕೊಡದೆ ಹೋದರೆ ದೇಶದ ಏಳಿಗೆ ಹೇಗಾದೀತು ಎಂಬ ಸುಮಾತುಗಳನ್ನಾಡಿ ಚಂದಾ ಕೇಳಿಕೊಂಡರು. ಚಂದಾ ವಸೂಲಾಗುವವರೆಗೆ ಮಾತ್ರ ಅಂಥಾ ಸವಿಮಾತುಗಳೇನೋ? ಇಲ್ಲದೆ ಹೋದರೆ ಮೊದಲಿನಂತೆ ಸ್ವಲ್ಪ ಹೆಚ್ಚುಕಡಮೆಯಾಗಿ ಪ್ರಕಟಿಸಲು ಅಭ್ಯಂತರವೇನಿದ್ದಿತು? ಅಲ್ಲವೇ ಅಂದು ಪ್ರಾರಂಭಿಸಿದ ಹಳೆ ಭಾಷೆಗಳ ಅಕಾಲಮರಣ ಹಾಗೆ ಹಿಡಿದಿದೆಯೋ? ಇದರ ಕಾರಣವು ಚನ್ನಾಗಿ ನಮಗೆ ತಿಳಿಯದು!

....

ಹಳೇ ವಿದ್ಯಾರ್ಥಿಗಳ ತ್ರೈಮಾಸಿಕಕ್ಕೆ ಎರಡನ ಸಂಚಿಕೆಯೇ ಅವಸಾನವೋ ಏನೋ! ಇನ್ನಾದರೂ ಪತ್ರಿಕಾಕರ್ತರುಗಳು ಬೇಗನೆ ಎಚ್ಚತ್ತು ಚಂದಾದಾರರಿಗೆ ಮನಸ್ಸೋಯದಂತೆ ಮಾಡಿಯಾರು ಎಂದು ಮೂರನೇ ಸಂಚಿಕೆಯನ್ನು ಎದುರುನೋಡುತ್ತಿರುವ,

ಒಬ್ಬ ಚಂದಾದಾರ.

ಜ್ಞಾನವಲ್ಲ, ಅಜ್ಞಾನವೇ ಸರಿ

ಅಯ್ಯಾ, ಬಿ ಕುಶಾಲಪ್ಪನವರೇ,

ನಿಮ್ಮ ಜೂನ್ ತಾರೀಖು 26ರಲ್ಲು ಕೊಡಗು ಪತ್ರಿಕೆಯಲ್ಲಿ ಹೊರಟ ಬಾತ್ಮಿಯನ್ನು ನೋಡಿದೆನು. ಗೌಡುಗಳ ವಿದ್ಯಾ ಫಂಡಿನ ಮೀಟಿಂಗಿನಲ್ಲಿ ಪಾಸುಮಾಡಿದ ಠರಾವುಗಳು ಗೌಡ ಜನರೆಲ್ಲರೂ ಏಕ ಮತದಿಂದ ತಂದ ಠರಾವುಗಳಾದ್ದರಿಂದ ನಾನೊಬ್ಬನೇ ಆ ವಿಷಯದಲ್ಲಿ ಏನನ್ನೂ ಬರೆಯುವ ಆವಶ್ಯವಿರಲಿಲ್ಲ. ನಾನು ಅಧ್ಯಕ್ಷನಾದ ಮಾತ್ರಕ್ಕೆ ನಮ್ಮ ಇಡೀ ಜನಾಂಗವನ್ನು ಅಲಕ್ಷ್ಯಮಾಡಿ ನನ್ನೊಬ್ಬನನ್ನು ಕುರಿತು ಬರೆದದ್ದು ನೋಡಿದರೆ ಇದು ಜ್ಞಾನದ ಮಹಿಮೆಯಲ್ಲದೆ ಬೇರೆಯಲ್ಲವೆಂಬುದು ನಿಜವಾಗುತ್ತದೆ. ಹೇಗೂ ನಿಮ್ಮ ಬಾತ್ಮಿಯು ನನ್ನನ್ನು ಕುರಿತು ಬರೆದುದಾದ್ದರಿಂದ ನಾನು ಅದಕ್ಕೆ ಪ್ರತ್ಯುತ್ತರ ಕೊಡಬೇಕಾಗಿ ಬಂತು.

ಅಯ್ಯಾ, ಕುಶಾಲಪ್ಪನವರೇ ನೀವು ಕೊಡಗು ಪತ್ರಿಕೆಯನ್ನು ನಿಮ್ಮ ತಾಯಿಯ ತವರುಮನೆಯಂತೆ ಗ್ರಹಿಸುತ್ತೀರಾಗಿ ತೋಳುವಿರಿ ಅದು ನಿಜವಾದ ಪಕ್ಷದಲ್ಲಿ ಆ ಪತ್ರಿಕೆಯ ಹಿತಕ್ಕಾಗಿ ಅದರಲ್ಲಿ ಕಂಡುಬಾರದ ವಿಷಯಗಳನ್ನು ಕಂಡಂತೆ ನೀವು ಬರೆಯಬೇಡಿ. ಹೀಗೆ ಮಾಡಿದರೆ ನಿಮ್ಮ ಪ್ರೀತಿಗೆ ಪಾತ್ರವಾದ ಪತ್ರಿಕೆಗೆ ನೀವು ಕೆಡಕು ತಂದಂತಾಗುವುದು.

ನೀವು 'ಮುದ್ದಪ್ಪನವರ ಭಾಷಣವು ಬಹಳ ಚನ್ನಾಗಿದೆ" ಎಂದು ಬರೆಯುತ್ತೀರಿ. ನನ್ನ ಭಾಷಣವು ತಮಗೆ ಎಲ್ಲಿ ದೊರೆಯಿತು? ನನ್ನ ಭಾಷಣವು ನಿಜವಾಗಿಯೂ ಪ್ರಕಟವಾಗಿಲ್ಲ. ಗೌಡ ಜನಾಂಗದವರು ಪಾಸುಮಾಡಿದ ಕೆಲವು ಠರಾವುಗಳು ಮಾತ್ರ ಅದರಲ್ಲಿ ಹೊರಟದ್ದು ನನಗೆ ತಿಳಿದಿದೆ.

ನೀವು, ನಾನು ಬಿ. ಎ. ಬಿ. ಎಲ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವುದಕ್ಕೆ ಪಡುವ ಸಂತೋಷಕ್ಕೆ ನಾನು ನಿಮಗೆ ವಂದಿಸುತ್ತೇನೆ. ಕೊಡಗಿನ ಗೌಡುಗಳ ಪೈಕಿ ಕಲವರು ಪ್ರೌಢ ವಿದ್ಯೆಯನ್ನು ಹೊಂದಿರುವರು, ಆದರೆ ಡಿಗ್ರಿಯನ್ನು ಹೊಂದಿದವನು ನಾನೊಬ್ಬನೇ ಎಂದು ತಾವು ಕುತೂಹಲವಿದ್ದಲ್ಲಿ ತಿಳಿದುಕೊಳ್ಳಬಹುದು.

ಕೊಡಗಿನ ಮೂಲ ನಿವಾಸಿಗಳ ವಿಷಯ ತಮಗೆ ಏನೂ ತಿಳಿದಂತೆ ಕಾಣುವುದಿಲ್ಲ. ಆದ್ದರಿಂದ ಆ ವಿಷಯವನ್ನು ಇಲ್ಲಿ ಬರೆಯುವದು ಅವಶ್ಯವಿಲ್ಲ. ಕೊಡಗರು ಪಕ್ಷಪಾತಿಗಳೆಂದು ನಾನಾಗಲಿ ಇತರ ಗೌಡುಗಳಾಗಲಿ ಯಾವಾಗಲಾದರೂ ಹೇಳಿರುವದು ನನಗೆ ಜ್ಞಾಪಕವಿಲ್ಲ. ಗೌಡುಗಳ ಮಾಡಿದ ಅಭಿಪ್ರಾಯವೇ ಬೇರೆ. ಆ ವಿಷಯ ನಾನೊಬ್ಬನೇ ಇಲ್ಲಿ ಬರೆಯುವದು ಅವಶ್ಯವಿಲ್ಲ. ಅಲ್ಲದೆ ಕೊಡಗರಲ್ಲಿ ಎಷ್ಟೋ ಮಂದಿ ಉದಾರಮನಸ್ಕರೂ, ದೇಶೋದ್ಧಾರದಲ್ಲಿ ಕುತೂಹಲವುಳ್ಳವರೂ ಅನೇಕರು ಆ ಪೈಕಿ ಇದ್ದರೆಂದೂ ಈಗ ಸಹ ಇರುವರು ಎಂಬ ಸಂಗತಿ ಗೌಡುಗಳಿಗೆ ತಿಳಿದಿದೆ. ಆದರೆ ಯಾವ ದೇಶದ ಆಡಳಿತವೇ ಆಗಲಿ ಒಂದೆರಡು ಜನಾಂಗಗಳಲ್ಲಿ ಅಡಗಿರುವುದು ದೇಶದ ಏಳಿಗೆಗೆ ಸರಿಯಲ್ಲವೆಂದು ಗೌಡುಗಳು ಪಟ್ಟ ಅಭಿಪ್ರಾಯವು ನಿಜವೆಂಬುದರಲ್ಲಿ ಸಂದೇಹವಿಲ್ಲ.

ವೀರರಾಜನ ಕಾಲದಲ್ಲಿ ಕೊಡಗರು ಪಕ್ಷಪಾತಿಗಳಾಗಿದ್ದರೆ ಬೇರೆ ಎಲ್ಲಾ ಜಾತಿಯವರನ್ನು ದೇಶದಿಂದ ಹೊರಕ್ಕೆ ಅಟ್ಟಿಬಿಡುತ್ತಿದ್ದರೆಂದು ತಾವುಗಳು ಅಭಿಪ್ರಾಯ ಪಡುತ್ತೀರಿ. ಆದರೆ ವೀರರಾಜನು ಯಾವದಾದರೊಂದು ಜನಾಂಗಕ್ಕೆ ಪಕ್ಷಪಾತಿಯಾಗಿದ್ದನೆಂದು ಯಾವ ಚರಿತ್ರೆಯಿಂದಲೂ ತಿಳಿಯಬರುವುದಿಲ್ಲ. ಒಂದುವೇಳೆ ವೀರರಾಜನ ಮೇಲೆ ಕೊಡವರಿಗೆ ಅಷ್ಟು ಅಧಿಕಾರವಿದ್ದಿದ್ದರೂ ಸಹ ಬೇರೆ ಜಾತಿಯವರನ್ನು ದೇಶದಿಂದ ಹೊರಗೆ ಕಳುಹಿಸಲಿಕ್ಕೆ ವೀರರಾಜನಿಗಾಗಲಿ ಕೊಡವರಿಗಾಗಲಿ ಖಂಡಿತವಾಗಿಯೂ ಶಕ್ತಿ ಇರಲಿಲ್ಲ. ಕೊಡಗಿನ ಗೌಡುಗಳೂ, ಲಿಂಗಾಯತರೂ, ಮಹಮ್ಮದಿಯರೂ, ಮತ್ತು ಕೊಡಗಿನ ಬೇರೆ ಅನೇಕ ಜನಾಂಗದವರೂ ಕೊಡಗಿಗೆ ಬಂದು ನೆಲಸಿ ಅನೇಕ ಶತಮಾನಗಳು ಕಳೆದು ಹೋದವು. ಅವರನ್ನು ಓಡಿಸುವ ಸಾಮರ್ಥ್ಯ ಯಾರಿಗೂ ಇರುವ ಹಾಗೆ ಕಾಣುವುದಿಲ್ಲ. ಅದೂ ಅಲ್ಲದೆ ಒಂದು ಜನಾಂಗವು ಇನ್ನೊಂದು ಜನಾಂಗವನ್ನು ಅವರ ದೇಶದಿಂದ ಓಡಿಸಿಬಿಡುವ ಅಭಿಪ್ರಾಯವನ್ನು ನಾನು ನಿಮ್ಮಿಂದ ಇದು ಮೊದಲು ಕೇಳಿದ್ದು. ಒಂದುವೇಳೆ ಇತರ ಜನಾಂಗಗಳು ಅವರ ಇಚ್ಛಾನುಸಾರವಾಗಿಯೋ ಬೇರೆ ಕಡೆ ಹೋಗಿದ್ದರೂ ಅವರು ಈಗ ಇಲ್ಲಿ ಇರುವುದಕ್ಕಿಂತ ಎಷ್ಟೋ ಉತ್ತಮತರದಲ್ಲಿ ಬೇರೆ ಕಡೆ ಜೀವಿಸುತ್ತಿದ್ದರು.

ಕೊಡಗು ದೇಶದ ನಿವಾಸಿಗಳಿಗೇನೇ ದೊಡ್ಡ ಹುದ್ದೆಗಳನ್ನು ಕೊಡತಕ್ಕದೆಂದು ನಾನು ಹೇಳಿಲ್ಲ. ಅಲ್ಲದೆ ನಾನು ಆಮೇಲೆ ಹೇಳಿದ್ದರಿಂದ ಹೊಸ ಪ್ರೈಮರಿ ಕ್ಲಾಸಿಗೆ ಹೋಗಬೇಕೆಂದು ತಾವು ಅಪ್ಪಣೆ ಮಾಡುತ್ತೀರಿ. ನಾನು ಈ ಸಿಮ್ಮೆತ್ರ ಪ್ರೈಮರಿ ಕ್ಲಾಸಿಗೆ ಹೋಗುವದು ಆವಶ್ಯವಿದ್ದರೂ, ಕೊಡಗಿನಲ್ಲಿರುವ ನಿಮ್ಮಂತ ಕೆಲವು ಮಹನೀಯರ ತಿಳುವಳಿಕೆಯು ಪ್ರೈಮರಿ ಹುಡುಗರ ತಿಳುವಳಿಕೆಗಿಂತಲೂ ಕಡಿಮೆಯಾದ್ದರಿಂದ ನಾನು ಅಂತವ ಜನರಲ್ಲಿ ಸಂಭಾಷಣೆ ಮಾಡುವಾಗ ನನ್ನ ಸ್ಥಿತಿಯನ್ನು ಪ್ರೈಮರಿ ಹುಡುಗರ ಸ್ಥಿತಿಗೆ ತರಲೇಬೇಕಾಗುತ್ತದೆ. ಆ ಸಮಯದಲ್ಲಿ ಮಾತ್ರ ನಾನು ಪ್ರೈಮರಿ ತರಗತಿಗೆ ಬಂದಂತಾಗುತ್ತದೆ.

ದೇಶೀಯರಿಗೆ ದೊಡ್ಡ ಉದ್ಯೋಗಗಳನ್ನು ಕೊಡಕೂಡದೆಂದು ಹೇಳುವ ಮಾತನ್ನು ನನ್ನ ತಲೆಯ ಮೇಲೆ ದಾಟಿರುತ್ತೀರಿ. ಬಹುಶಃ ಈಗ ಗೌಡುಗಳ ಪೈಕಿ ದೊಡ್ಡ ಜನರು ವಿದ್ಯಾವಂತರಾಗಿರುವುದಿಲ್ಲವಾದ ದರಿಂದ, ಈಗ ಸದ್ಯಕ್ಕೆ ಮುದ್ದಪ್ಪನವರ ಹೆಸರನ್ನು ಮಾತ್ರ ಹಾಳುಮಾಡಿದರೆ ತಮ್ಮ ಕಾರ್ಯ ಸಫಲವಾದಂತೆ ಕಂಡು ಬರುತ್ತದೆ.

ಅಯ್ಯಾ ಕುಶಾಲಪ್ಪನವರೇ, ಒಂದುವೇಳೆ ಗೌಡುಗಳು ದೇಶದ ಉದ್ಯೋಗಗಳ ಪೈಕಿ ಕೆಲವನ್ನು ಪರಸ್ಥಳದವರಿಗೇನೇ ಕೊಡಬೇಕೆಂದು ಹೇಳಿದರೂ ಸಹ ಅದು ಕೊಡಗು ದೇಶದ ಎಲ್ಲಾ ಜನರಿಗೆ ವ್ಯಾಪಿಸುತ್ತದೆಯೇ ಹೊರತು ಕೊಡವರಿಗೆ ಮಾತ್ರ ವ್ಯಾಪಿಸುವದಿಲ್ಲ. ಆದರಿಂದ ಕೊಡಗರು ಮಾತ್ರ ಆಕ್ಷೇಪಿಸಿಕೊಳ್ಳಲು ಕಾರಣವಿಲ್ಲ. ಹಾಗಾದರೆ ನೀವು ಗೌಡುಗಳು ಕೊಡವರ ಮೇಲೆ ದ್ವೇಷದಿಂದ ಈ ಮಾತು ಹೇಳಿರುವರೆಂದು ಯಾಕೆ ತಿಳಿದುಕೊಳ್ಳುತ್ತೀರಿ? ಗೌಡುಗಳು ಹೇಳುವ ಮಾತು ಇನ್ನು ಮುಂದೆ ಬರುವ ಉದ್ಯೋಗಸ್ಥರಿಗೆ ಸಂಬಂಧಿಸುತ್ತದೆಯೇ ವಿನಹ ಈಗ ಇರುವವರಿಗೆ ಹೊಂದಿಕೆಯಾದದ್ದು ಯಾಕೆಂದರೆ ಒಂದಾವರ್ತಿ ಸರಕಾರ ಕೆಲಸದಲ್ಲಿ ನೆಲೆಗೊಂಡವರನ್ನು ಸರಕಾರವು ಯಾವ ತರದಲ್ಲಿಯೂ ಬಾಧಿಸುವದಿಲ್ಲವೆಂದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಆದ್ದರಿಂದ ಇನ್ನು ಮುಂದೆ ಸಹ ಕೊಡಗಿನ ಎಲ್ಲಾ ಹುದ್ದೆಗಳು ಕೊಡಗರಿಗೆ ಮಾತ್ರ ಸಿಕ್ಕಬೇಕೆಂಬ ಅಭಿಪ್ರಾಯವಿಲ್ಲದೆಯಿದ್ದಲ್ಲಿ ಗೌಡುಗಳ ಠರಾವಿನಿಂದ ಕೊಡಗರಿಗೆ ಮಾತ್ರ ಕೆಡುಕುಂಟಾಗುವುದಿಲ್ಲ.

ನಿಮ್ಮ ಬಾತ್ಮಿಯನ್ನು ನೋಡಿದರೆ ಗೌಡುಗಳು ತಂದ ಠರಾವುಗಳ್ಯಾವವನ್ನೂ ನಿಮ್ಮ ಜ್ಞಾನಶಕ್ತಿಯು ಗ್ರಹಿಸಿಕೊಂಡಂತೆ ಕಾಣುವುದಿಲ್ಲ. ನಮ್ಮ ಠರಾವುಗಳು ದೇಶದ ಏಳಿಗೆಗೆ ಕುಂದಕವನ್ನು ತರುವಂತೆ ಕಂಡು ಬಂದಲ್ಲಿ ಅಂಥಾ ಸಂಶಯಗಳನ್ನು ನಿವಾರಿಸಿಕೊಳ್ಳಲು ನೀವು ಮತ್ತು ನಿಮ್ಮಂತೆ ಜ್ಞಾನವುಳ್ಳ ಇನ್ನೂ ಕೆಲವರು, (ಹೆಚ್ಚು ಜನರು ಬಂದರೂ ಬರಬಹುದು.) ನಾನು ಮತ್ತು ಕೆಲವು ಗೌಡುಗಳು (ಜ್ಞಾನವಿಲ್ಲದಿದ್ದರೂ ಚಿಂತೆಯಿಲ್ಲ) ನೀವು ನಿಶ್ಚಯ ಮಾಡಿದ (ಕೋರ್ಟು ಕಛೇರಿಗಳಿಗೆ ರಜೆಯಿರುವ) ಯಾವದಾದರೊಂದು ತಾರೀಕಿನಲ್ಲಿ ಉಭಯರಿಗೂ ಬೇಕಾದ ಕೊಡಗು ಆಫೀಸಿನಲ್ಲಿ ಕೂಡಿ ಚರ್ಚಿಸೋಣ. ವೃಥಾ ಸುಳ್ಳು ಸುದ್ದಿಗಳನ್ನು ಬರೆಯುವುದರಿಂದ ಅಮೌಲ್ಯವಾದ ಕೊಡಗು ಪತ್ರಿಕೆಯ ಸ್ಥಳವನ್ನು ಹಾಳುಮಾಡುವದಲ್ಲದೆ, ನಿಷ್ಕಾರಣವಾಗಿ ನನ್ನನ್ನು ವಿಶೇಷವಾದ ದೂಷಣಕ್ಕೆ ಗುರಿಮಾಡಿದ ತಪ್ಪಿಗೆ ಸಹ ಒಳಗಾಗುವಿರಿ.

ಮಾರಾಟಕ್ಕೆ ಇದೆ.

ಸೋಮವಾರಪೇಟೆ ರಸ್ತೆಯಲ್ಲು ಮಡಿಕೇರಿಯಿಂದ 5 ಮೈಲು ದೂರದಲ್ಲಿರುವ ಮಕ್ಕಂದೂರು ಗ್ರಾಮದಲ್ಲಿ 8½ ಏಕರು ಭೂಮಿ ಮತ್ತು ಅದಕ್ಕೆ ಸೇರಿದ ಜಾಗ ಸಹ ಮಾರಾಟಕ್ಕೆ ಇದೆ. ಕ್ರಯ ರೂ 1500 ಯಾ ಅದರ ಸಮೀಪ. ಹೆಚ್ಚಿನ ಸಂಗತಿಗೆ ಈ ಕೆಳಗಿನ ವಿಳಾಸಕ್ಕೆ ಬರದುಕೊಳ್ಳುವುದು

ದೇವಾಂಗದ ಹನುಮಂತೈಯ್ಯ,
ಉಪ್ಪಿನ ವ್ಯಾಪಾರಿ,
4—2 ಮಹದೇವಪೇಟೆ ಮಡಿಕೇರಿ.

ಸಂಪತ್ತಿಯ ಸಾಧನಗಳು.

ಅಯ್ಯೊ ಒಂದುಗಳೇ ಸಂಪತ್ತಿಯು ಅನ್ಯ ಚಾಕರಿಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು ಅದನ್ನು ಶೋಧಿಸಿ ತೆಗಿಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು

ಲಕ್ಷಾವಧಿ ರೈತರು ಹೀಗೆ ಅನುಭವ ತೆಗೆದುಕೊಂಡಿರುವರು ಭೂಮಿಯ ತಕ್ಕ ತರತರದ ನೇಗಿಲುಗಳೂ ಗಾಣಗಳೂ ದೊರೆಯುತ್ತವೆ ಕಿಸಾನ ಗಾಣವು ಒಂದು ಗಂಟೆಗೆ ೪೦೦ ಪೌಂಡು ಕಬ್ಬನ್ನು ಹಿಂಡಿ ಚಲ್ಲುತ್ತದೆ

"ಕೊ" ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್,
1 **ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ.**

ಆಸ್ತಿ! ಮಾರಾಟಕ್ಕೆ!! ಆಸ್ತಿ!!!

ವೀರರಾಜೇಂದ್ರಪೇಟೆ ದೇವಾಂಗದ ಬೀದಿಯಲ್ಲಿ ಅಂದರೆ ಮೆ ತಮ್ಮೈಯ್ಯಲಾಯರಮನೆ ಸಾಲಿನಲ್ಲಿ (ಬಾಲು) ಒಂದು ಮಹಡಿಮನೆ ಇದಕ್ಕೆ ಒತ್ತಾಸೆ ಒಂದು ಪ್ರತ್ಯೇಕ ಆಫೀಸುಮನೆ, ಒಂದು ಉದ್ದವಾದ ಸರ್ವ ಕೆಲಸಕ್ಕೆ ಅನುಕೂಲವಾದ ಲೈನು, ಕಲ್ಲುಕಟ್ಟಿದ ಬಾವಿ, ಇದಕ್ಕೆ ಅನುಕೂಲವಾಗಿ ಒಂದು ಏಕರೆ ಜಾಗ, ಇದರಲ್ಲಿ ಕೆಲವುಭಾಗ ಒಳ್ಳೇ ಸ್ಥಿತಿಯಲ್ಲಿರುವ ಕಾಫಿತೋಟ, ಸುತ್ತಲೂ ಸರಕಾರ ರೋಡು ಮತ್ತು ಕಾರು, ಗಾಡಿ ವಗೈರೆ ಓಡಾಡಲು ಅನುಕೂಲವಾಗುವಂತೆ ರೋಡು ಸಹ ಇರುವ ಮತ್ತು ಮರಮುಟ್ಟುಗಳಿಂದ ಪೂರೈಸಿ ಹಂಚು ಹೊದಿಸಿರುವ ಮೇಲ್ಕಂಡ ಮನೆಗಳು ವಿಕರಿಗೆ ಸಿದ್ಧವಾಗಿವೆ ಖಾಯಿಸದಾರರು ಈ ಕೆಳಗಿನ ವಿಳಾಸದಾರರಿಗೆ ತಿಳಿಸಿ ಅಜಮಾಯಿಸಿ ಕೊಂಡುಕೊಳ್ಳಬಹುದು

ಕಂಡೋತ್ ಕುಂಞಪ್ಪೋರಿರ್ ಕಾಕ,
ವೀರರಾಜೇಂದ್ರಪೇಟೆ
4—3

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.
Telegraphic Address: — "SHOOTER" Bombay
[52 45] Please write for latest Catalogues.

ಎಷ್ಟು ಲಕ್ಷಣವಾಗಿದೆ! ನೋಡಿರಿ!

ನಮ್ಮ ಟಿಕ್ ಟಾಕ್ (ರಿಜಸ್ಟರ್ಡ)



ಎಂಬ ಗೋಡೆಗೆ ತಗಲಿಸುವ ಗಡಿಯಾರವು ಪರಿಶೋಧಿಸಿದಂತೆ ಪ್ರಖ್ಯಾತಿಗೊಂಡಿದೆ ಸರಿಯಾದ ಗಂಟೆಯನ್ನು ತೋರಿಸುವ ಉತ್ತಮವಾದ ಗಡಿಯಾರು ಎಲ್ಲರೂ ಮೆಚ್ಚಿರುವಂಥಾದ್ದು ಯಾವಾಗಲೂ **ಟಿಕ್ ಟಾಕ್** ಗಡಿಯಾರವನ್ನೇ ತರಿಸಿರಿ ಕ್ರಯ ರೂ 3—0—0 ಮಾತ್ರ

ಜರ್ಮನ್ ಎಲಾರ್ಮ್ ಗಡಿಯಾರು.

ಕ್ರಯವು ಬಹಳ ಕಡಿಮೆ ಮಾಡಲ್ಪಟ್ಟಿದೆ ಹೆಚ್ಚು ಪ್ರಯೋಜನದ, ಕಡಿಮೆ ಕ್ರಯದ ಟಯಮ್ ಪೀಸ್ 4 ಇಂಚು ಡಯಲಿನ ನಿಕ್ಕಲ್ ಗಡಿಯಾರು 30 ಗಂಟೆ ವರೆಗೆ ಬೀಗಕೊಡಬೇಕಾಗಿಲ್ಲ ಹ್ಯಾಗೆ ಇಟ್ಟರೂ ನಡೆಯುತ್ತದೆ ಪ್ರಯಾಣಕ್ಕೆ ಒಳ್ಳೇ ಗಡಿಯಾರು. ಇದು ವಿದ್ಯಾರ್ಥಿಗಳಿಗೂ ಸಮಯದ ಬೆಲೆ ಅರಿತವರಿಗೂ ಬಹಳ ಉಪಯೋಗವುಳ್ಳದ್ದು ರಾತ್ರಿ ಕೆಲಸದವರಿಗೂ ಉತ್ತಮವಾದದ್ದು ಎಲಾರ್ಮ್ ಹೊಡೆಯಬೇಕೆಂದಿರುವಾಗ ಡಯಲಿನ ಮೇಲಿರುವ ಸಣ್ಣ ಕೈಯನ್ನು ಹಿಂದುಗಡೆಯಿಂದ ತಿರುಗಿಸಿದರೆ ಕಾಲಕ್ಕೆ ಸರಿಯಾಗಿ ಎಲಾರ್ಮ್ ಕೊಡುತ್ತದೆ ಮೂರು ವರ್ಷದ ಭರವಸ ಇದೆ ಕ್ರಯ ರೂ 5 ಮಾತ್ರ

22 ಕ್ಯಾರೆಟ್ಟಿನ ಚಿನ್ನದ ಹೊದಿಕೆಯ ಕೈ ಗಡಿಯಾರ.

ಉತ್ತಮವಾದ ಸ್ವಿಸ್ ಸಾಮಾನುಗಳಿಂದ ಮಾಡಿದ ಹೊಸ ನಮೂನೆಯ ಗಡಿಯಾರವಿದು ಕ್ರಿಸ್ಟಲ್ ಕನ್ನಡಿಯ ಅರೇಬಿಕ್ ಯಾ ರೋಮನ್ ಅಂಕೆಗಳುಳ್ಳದ್ದು

ಇದರ ಕೆಲಸವು ಎಂಥಾ ಪರಿಶೋಧನೆಯನ್ನು ತೃಪ್ತಿಪಡಿಸುವುದು ಇದು ಪವನಿನ ಚಿನ್ನದಂತೆ ಕಾಣುತ್ತದೆ ನೋಟಕ್ಕೆ ಬಹಳ ಅಂದವಾಗಿಯೂ ಕರಾರು ಗಂಟೆ ಕೊಡುವುದಾಗಿಯೂ ಇದೆ. ಐದು ವರ್ಷದ ಖಾತ್ರಿ ಕ್ರಯ ರೂ. 12—8—0

18ಕೇರೆಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚು ರೂ. 7.

ಎಲಾರ್ಮ್ ಮತ್ತು ರಿಪೀಟರ್ ಇರುವಂಥ ಅಮೇರಿಕದ "ಬಿಗ್ ಬೆನ್" ಗಡಿಯಾರ ರೂ 10—8—0

ಗಂಟೆ ಮತ್ತು ಅರ್ಧಗಂಟೆ ಹೊಡೆಯುವಂಥಾ "ಬೇಬಿ" ಗಡಿಯಾರ ರೂ. 7—0—0

ಮೇಲಿನ 'ಬೇಬಿ' ಗಡಿಯಾರು ಎಲಾರ್ಮ್ ಸಮೇತ ರೂ. 8—0—0

ಮೂರುವರ್ಷದ ಖಾತ್ರಿ.

ಜರ್ಮನ್ ಎಲಾರ್ಮ್ ಗಡಿಯಾರು ರೂ 5

ಮರ್ಸ್ ನೀಗ್ರೊ ಎಲಾರ್ಮ್ ಗಡಿಯಾರು ರೂ. 5

ಜರ್ಮನ್ ಡಬ್ಬಲ್ ಬೆಲ್ ಎಲಾರ್ಮ್ ಟಯಮ್‌ಪೀಸು ರೂ 6—0—0.

ಲೋಕಪ್ರಸಿದ್ಧವಾದ "ಬಿ" ಟಯಮ್ ಪೀಸ್. ರೂ. 2—8—0.

ಎಮ್ಮನ ಫೌಂಟನ್‌ಪೆನ್ 14ಕೇರೆಟ್ ರೋಲ್ಡ್‌ಗೋಲ್ಡ್ ನಿಬ್ಸ್ ರೂ. 2—8—0.

Apply to— **V. S. Watch Coy**
Post Box 105 **MADRAS.**
13

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI,
Bangalore City

ಕರ್ಣಾಟಕ
ಎಗ್ಯು ಮಿಕ್ಸ್ಚರ್

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝಾ ಅಡವಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦
ಟಪ್ಪಾಲು ಚಾರ್ಜು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು. ೯—೨—೦

ಏಜಂಟರು ಬೇಕು, ಕೊಡಗಿನ ಸ್ಕೂಲ್ಮಾಸ್ತರುಗಳು ತಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ

12—10 ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	...	50,000
ವಸೂಲಾದ ಶೇರ್ ಮೊಬಲಗು	....	9080
ಜಮಾಬಂದ ಠೇವಣಾತಿ	..	78,000

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6—4—0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಯಂ ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ.
ಸಿ. ಯಮ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್
ತಾರೀಕು 1—7—1924

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ಶಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ

ವಿಳಾಸ—

ಮೇನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್.

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.

If not delivered please return to

"KODAGU" OFFICE MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩—೦—೦.

ಕತ್ಕೇನ ಘೋತದಯಸೂ ವಿದ್ಯಾ ನೀತಿ ಪ್ರಯುಕ್ತತಾ ॥ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಂ ರಾಜ್ಯ ಸಂಪದಾ ॥

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸಗ ೧೯೨೫ನೇ ಇಸವಿ ಜುಲೈ ತಾರೀಕು ೧೭ನೇ ಶುಕ್ರವಾರ [ಸಂಚಿಕೆ ೭

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್,

ಯಮ್ ಎಲ್ ಸಿ. ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣೆ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ, 'ಆರೋಗ್ಯ ಚಂದ್ರಿಕೆ' 323, ತಂಬುಶೆಟ್ಟಿ ಬೀದಿ, ಮದ್ರಾಸ್.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಕೋಟೆರ ಚಿಣ್ಣಪ್ಪನವರ ಮತ್ತು ಮೆ. ಚಂಗಂಡ ಕುಟ್ಟಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲಪಡುವ ಭಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಬಾದಿ ಭಂಡಾರದಲ್ಲಿ ಮೆ. ಪಂಜೇಟಿರ ಚೆರಮಣ್ಣನವರು.

ಮೂರ್ನಾಡು—ಕರ್ಮಚೋಮಲ ಸ್ಟೋರಿನಲ್ಲಿ ಮೆ. ಪಡಿಯಂಡ ದೇವಯ್ಯನವರು.

ನಾಪೋಕ್ಲು—ಮೆ. ಅಳಿಯಡ ಸುಬ್ಬಯ್ಯನವರು.

ಗೋಣಿಕೊಪ್ಪಲು—ಮೆ. ಐಮ್ಮತ ಪೂವಪ್ಪನವರು.

ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಮ್ಮಯ್ಯನವರು.

ಮಡಿಕೇರಿ—ಮೆ. ಪಿ. ಮಾದಮ್ಮನವರು.

ಅಮ್ಮತ್ತಿ, ಸಿದ್ದಾಪುರ—ಮೆ. ಐನಂಡ ಮಾದಪ್ಪನವರ

ಅಲ್ಲದೆ ಈ ಸಮ್ಮಂಧ ಕೋಟೇರ ಚಿಣ್ಣಪ್ಪನವರು ಮತ್ತು ಚಂಗಂಡ ಕುಟ್ಟಪ್ಪನವರು, ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಸಹ ಮೊಬಲಗು ಕೊಡಬೇಕಾಗಿ ಕೋರಿಕೆ.

ಕೋದಂಡ ಉತ್ತಯ್ಯ.

ಆರ್ಗನೈಸಿಂಗ್ ಡೈರೆಕ್ಟರು 'ಕೊಡಗು' ಲಿಮಿಟೆಡ್

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI,
Bangalore City.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಬ್ರಿಡಾವು ಕಂಟ್ರಾಕ್ಟು ಎಗ್ರಿಮೆಂಟು ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ

17-9-24 ಮೇನೇಜರ್.

ನೋಟೀಸು.

ಕೊಡಗು ಜಮೀನ್ದಾರರಸಂಘದ ಲೆಕ್ಕವನ್ನು ಆಡಿಟ್ ಮಾಡಿಸಬೇಕಾಗಿರುವುದರಿಂದ ಕಳದ ವರ್ಷ ಮೆ. ಬಿದ್ದಂಡ ಕಾರ್ಯಪ್ಪನವರು ಏರ್ಪಾಡುಮಾಡಿದ ನಾಡು ಕಮಿಟಿಗಳಿಗೆ ಹಣ ವಸೂಲಾತಿಗೆ ಕೊಟ್ಟಂತ ರಶೀತಿ ಬುಕ್ಕುಗಳು. ಕಳದ ವರ್ಷದ ವಾರ್ಷಿಕ ಕಾನ್ಫರೆನ್ಸ್ ಕಾಲದ ಕಾಡಕೇ ಪುನಃ ಹಣ ವಸೂಲಾತಿಗೆ ಆಯಾಯ ಕಮಿಟಿಗಳಿಗೆ ಕೊಟ್ಟಿರುವುದರಿಂದ ಎಲ್ಲಾ ಕಮಿಟಿಯವರೂ ತಮ್ಮ ಹತ್ತಿರವಿರುವ ರಶೀತಿ ಬುಕ್ಕುಗಳನ್ನು ಮತ್ತು ಈ ವರ್ಷ ಉದಿಯಂಡ ಮೆ. ಮಾಚಯ್ಯನವರು, ಮೆ. ಚಂಗಂಡ ಕುಟ್ಟಪ್ಪನವರು, ಮೆ. ಕೋಟೆರ ಚಿಣ್ಣಪ್ಪನವರು ಮತ್ತು ಇನ್ನೂ ಕೆಲವು ಏಜಂಟರು ಹಣ ವಸೂಲಾತಿಗೆ ಕೊಟ್ಟ ರಶೀತಿ ಬುಕ್ಕುಗಳನ್ನೂ ಸಹ ವಸೂಲಾದ ಹಣವಿದ್ದಪಕ್ಷ ಹಣ ಸಮೇತ ವಹಸಿ ಜಮೀನ್ದಾರರಸಂಘದ ಮಡಿಕೇರಿಯಲ್ಲಿರುವ ಆಫೀಸಿಗೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇನೆ

ಸಿ. ಎಸ್. ವೆಂಕಪ್ಪಯ್ಯ,

ಜನರಲ್ ಸೆಕ್ರೆಟರಿ

ನೋಟೀಸು.

ದಕ್ಷಿಣ ಕೊಡಗಿನಲ್ಲಿ ಮದುವೆಕಾಗದ, ನೋಟೀಸು ಮತ್ತು ಬೇರೆ ಪ್ರಿಂಟಿಂಗ್ ಕೆಲಸ ಮಾಡಿಸಬೇಕೆಂದಿರುವವರು ದಯವಿಟ್ಟು ಎಲ್ಲಾ ಆರ್ಡರುಗಳನ್ನು ನಮ್ಮ ಏಜಂಟರಾದ ವೀರಾಜಪೇಟೆ ಬಾದಿಭಂಡಾರದ ಮೇನೇಜರವರಿಗೆ ಕೊಟ್ಟರೆ, ಶೀಘ್ರದಲ್ಲೇ ಸುಲಭ ಚಾರ್ಜಿಗೆ ಗಿಲಿಟು ಬಾಕಿ ಪ್ರಿಂಟುಮಾಡಿಸಿ ಕಳುಹಿಸಲಾಗುವುದು.

'ಮೇನೇಜರ',

"ಕೊಡಗು" ಪ್ರೆಸ್, ಮಡಿಕೇರಿ.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ಬಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಹೊತ್ತಿಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಬೇಕಾದವರು ಮೇನೇಜರಿಗೆ ಬರೆದುಕಳಿಸಿ ತಿಳಿದುಕೊಳ್ಳಬಹುದು.

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

ಪ್ರಕಟಣೆ.

ನಮ್ಮ ಅಂದವಾದಹೊಸ ಅಕ್ಷರಗಳು ಬಂದು ಸೇರಿರುವುದರಿಂದ, 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಅಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ

ಮಡಿಕೇರಿ ಮೇನೇಜರ್,

'ಕೊಡಗು' ಲಿಮಿಟೆಡ್

ಮಹನೀಯರೇ,

1 2 ವರ್ಷದಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯು ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿದೆ.

ಕೃಷ್ಣ ನಾಯರ್ ಮತ್ತು ನಾರಾಯಣ ನಾಯರ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿ ಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಪಿ. ಟಿ ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹತ್ತು ವರ್ಷಗಳವರೆಗೆ ಸಾಂಗತ್ಯವನ್ನೂ ಪರಿಚಯವನ್ನೂ ಹೊಂದಿದವರಾಗಿಯೂ ಇದ್ದಾರೆ.

ಇದಲ್ಲದೆ ಎಲ್ಲಾ ವಿಷಯಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ದಿನದಿನಗಳ ಚಾರ್ಜಿಗಿಂತಲೂ ಕಡಿಮೆ ಯಾಗಿದೆ.

ಸಂಚೀಕರ್ ಮತ್ತು ಕಂಪೆನಿ,

ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.

ಕಲ್ಲಾಯಿ, ವೀರಾಜಪೇಟೆ ಮತ್ತು

53 16 ಗೋಣಿಕೊಪ್ಪಲು.

ARMS & AMMUNITION MART.

Mahomedally-Noorbhoy.



337, Abdul Rehman, Street, near

Crawford Market, BOMBAY.

Telegrahic Address:—"SHOOTER"

Bombay

[52 17] Please write for latest Catalogues.

"ಕೊಡಗು"

ಸನ್ ೧೯೨೫ನೇ ಇಸವಿ ಜುಲೈ ತಾ. ೧೭ನೇ ಶುಕ್ರವಾರ.

ಸ್ಟೇಟ್ ಸೆಕ್ರೆಟರಿಯವರ ಭಾಷಣ.

ದೊಡ್ಡ ಪ್ರಾಂತ್ಯಗಳಿಗೆ ಸಿಕ್ಕಿದ ಮೊಂಟೇಗ್ಯೂ ಚೆಮ್ಸ್‌ಫರ್ಡ್ ಸುಧಾರಣೆಯು ತೃಪ್ತಿಕರವಾದದ್ದಲ್ಲ. ಇದರಿಂದ ನಿರಂಕುಶ ಪ್ರಭುತ್ವವು ಸ್ವಲ್ಪವೂ ಕಡಿಮೆಯಾಗಲಿಲ್ಲವೆಂದು ಬದಲು ಜಾಗ್ರತೆ ಸಂಪೂರ್ಣ ಸ್ವರಾಜ್ಯವನ್ನು ಸ್ಥಾಪಿಸಬೇಕೆಂಬ ಚಳವಳವು ಹಿಂದುಸ್ಥಾನದಲ್ಲಿ ಬಲವಾದದ್ದರಿಂದ ವೈಸ್‌ರಾಯರಾಗಿದ್ದ ಲಾರ್ಡ್ ರೀಡಿಂಗರು ಇಂಗ್ಲಂಡಿಗೆ ಹೋಗಿ ಸ್ಟೇಟ್ ಸೆಕ್ರೆಟರಿಯವರಲ್ಲಿ ಕೆಲವು ಕಾಲದಿಂದ ಸಂಭಾಷಣೆ ಮಾಡುತ್ತಾ ಇದ್ದು ಈ ಸಂಭಾಷಣೆಗಳ ಪರಿಣಾಮವನ್ನು 7ನೇ ತಾರೀಕಿನಲ್ಲಿ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಬರ್ಕನ್‌ಹೆಡ್ಡರವರು ಪಾರ್ಲಿಮೆಂಟಿನ ಹೌಸ್ ಆಫ್ ಲಾರ್ಡ್ಸ್‌ನಲ್ಲಿ ಹೇಳಿರುತ್ತಾರೆ. ಇವರ ಭಾಷಣದಲ್ಲಿ ಹಿಂದುಸ್ಥಾನಕ್ಕೆ ತುಂಬಾ ಪ್ರಯೋಜನವಾಗುವ ಸಂಗತಿಯನ್ನು ತಿಳಿಸುವರು ಎಂಬದಾಗಿ ಮೊನ್ನೆ ತಾನೇ ಗತಿಸಿದ ಚಿತ್ತರಂಜನ ದಾಸರು ಹೇಳಿದ್ದರು. ಭಾಷಣವಾಯಿತು, ಹಿಂದುಸ್ಥಾನಕ್ಕೆ ತತ್ಕಾಲ ಪ್ರಯೋಜನವಾಗುವ ವಿಷಯವು ಯಾವದೂ ಅದರಲ್ಲಿ ಇಲ್ಲ. ಹಿಂದುಸ್ಥಾನದ ಎಲ್ಲಾ ಸಂಗಡದವರೂ ಸೇರಿ ಸ್ವರಾಜ್ಯ ಕ್ರಮದ ಮಸೂದೆಯನ್ನು ತಯಾರಿಸಿ ಪಾರ್ಲಿಮೆಂಟಿಗೆ ಕಳುಹಿಸಿದರೆ ಅದನ್ನು ಅನುವಾಗಿಯೇ ನೋಡಲು ಆಕ್ಷೇಪಣೆ ಇಲ್ಲವೆಂತ ಹೇಳಿದ್ದಾರೆ. ಇದೊಂದು ದೊಡ್ಡ ವಿಷಯವೇ? 1919ನೇ ಇಸವಿಯ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟಿನ ಪೀಠಿಕೆಯಲ್ಲಿ ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕ್ರಮಕ್ರಮವಾಗಿ ಎಷ್ಟರಮಟ್ಟಿಗೆ ಯಾವ ರೀತಿಯಲ್ಲಿ ಕೊಡಬಹುದೆಂಬುದನ್ನು ನಿರ್ಧರಿಸಲಿಕ್ಕೆ ಇಂಗ್ಲಿಷ್ ಪಾರ್ಲಿಮೆಂಟಿಗೇನೇ ಹಕ್ಕಿರುವದು ಎಂತ ಬರೆದಿತ್ತು. ಈ ಮಾತು ಹಿಂದುಸ್ಥಾನದ ಗೌರವಕ್ಕೂ ಯುದ್ಧಕಾಲದಲ್ಲಿ ಇಂಗ್ಲಿಷ್ ಮಂತ್ರಿಗಳು ಆಡಿದ ಮಾತಿಗೂ ವಿರೋಧವಾಗಿತ್ತು. ಆಯಾ ಜನಾಂಗದ ಆಳ್ವಿಕೆಯು ಯಾವ ತರದ್ದಾಗಿ ಇರಬೇಕೆಂಬುದನ್ನು ಆಯಾ ಜನಾಂಗಗಳೇ ನಿಶ್ಚೈಸಬೇಕೆಂಬ ತತ್ವವನ್ನು ಯುದ್ಧಕಾಲದಲ್ಲಿ ಇಂಗ್ಲಿಷ್ ಮಂತ್ರಿಗಳು ಪಟ್ಟಿಯಾಗಿ ಕೂಗಿ ಹೇಳಿದರು. ಈ ಮಾತಿಗೆ ಇಂಡಿಯಾ ಆಕ್ಟಿನ ಪೀಠಿಕೆಯು ವಿರೋಧವಾಗಿದೆ. ಹಿಂದುಸ್ಥಾನವು ಯಾವ ರೀತಿಯಿಂದ ಆಳಲ್ಪಡಬೇಕೆಂಬುದನ್ನು ಹಿಂದುಸ್ಥಾನದವರೇ ನಿರ್ಣಯಿಸಿಕೊಳ್ಳಬೇಕಲ್ಲದೆ ವೈಸರಿಗೆ ಕ್ಷೇಮವಾಗುವ ಕಾರ್ಯಗಳನ್ನು ಗಾರ್ಡಿಯನ್ ನಿಶ್ಚಯಿಸಬೇಕಾದ ರೀತಿಯಲ್ಲಿ ಇಂಗ್ಲೆಂಡಿನ ಪಾರ್ಲಿಮೆಂಟು ಹಿಂದುಸ್ಥಾನದ ರಾಜ್ಯಭಾರ ಪದ್ಧತಿಯನ್ನು ನಿಶ್ಚಯಿಸಬೇಕೆಂಬುದು ಹಿಂದುಸ್ಥಾನಕ್ಕೆ ಅವಮರ್ಯಾದೆಯಲ್ಲವೇ? ಸ್ಟೇಟ್ ಸೆಕ್ರೆಟರಿಯವರ ಭಾಷಣದಲ್ಲಿ ಹಿಂದುಸ್ಥಾನಕ್ಕೆ ಬೇಕಾದ ರಾಜಕೀಯ ಪದ್ಧತಿಯ ಮಸೂದೆಯನ್ನು ತಯಾರಿಸುವ ಹಕ್ಕನ್ನು ಹಿಂದುಸ್ಥಾನಕ್ಕೆ ಕೊಟ್ಟದ್ದು ಹಿಂದುಸ್ಥಾನದ ಗೌರವವು ಹೆಚ್ಚಾದಂತೆಯೇ ಆಯಿತು. ಆದರೆ ಹಿಂದುಸ್ಥಾನದವರು ತಯಾರಿಸಿದ ಮಸೂದೆಯನ್ನು ಒಪ್ಪಿಕೊಳ್ಳುತ್ತಾರೆಂತ ಇಲ್ಲ. ಅಂಡರ್ ಸೆಕ್ರೆಟರಿಯವರು ಪಾರ್ಲಿಮೆಂಟಿನ ಹೌಸ್ ಆಫ್ ಕಾಮನ್ಸಿನಲ್ಲಿ ಮಾಡಿದ ಭಾಷಣದಲ್ಲಿ "ಸ್ಟೇಟ್ ಸೆಕ್ರೆಟರಿಯವರ ಭಾಷಣವನ್ನು ಕೆಲವರು ತಪ್ಪಾಗಿ ತಿಳಿದುಕೊಂಡಿದ್ದಾರೆ. ಹಿಂದುಸ್ಥಾನದವರು ಮಸೂದೆಯನ್ನು ತಯಾರಿಸಿದರೆ ಅದನ್ನು ಕೂಡಲೇ ಪರೀಕ್ಷಿಸುವದೂ ಇಲ್ಲ, ಜಾರಿ ಮಾಡುತ್ತೇವೆಂಬ ಭರವಸೆಯೂ ಇಲ್ಲ, ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟಿನಲ್ಲಿ ರಾಯಲ್ ಕಮಿಶನಿನವರು ಹತ್ತು ವರುಷದನಂತರ ಹಿಂದುಸ್ಥಾನದ ರಾಜಕೀಯ ಸುಧಾರಣೆಯನ್ನು ಅಜಮಾಯಿಸುವಾಗ ಹಿಂದುಸ್ಥಾನದವರು ಕಳುಹಿಸುವ ಮಸೂದೆಯನ್ನು ಆಲೋಚನೆಗೆ ತೆಗೆದುಕೊಳ್ಳಲಾಗುತ್ತದೆಂಬ ಅಭಿಪ್ರಾಯವಿದೆಯಷ್ಟೆ" ಎಂತ ವಿವರಿಸಿದ್ದಾರೆ. ಆದ್ದರಿಂದ ಇವರ ಭಾಷಣದಲ್ಲಿ ಹಿಂದುಸ್ಥಾನಕ್ಕೆ ತತ್ಕಾಲ ಪ್ರಯೋಜನವೇನೂ ದೊರಕಲಿಲ್ಲವೆಂತ ನಾವು ಮೇಲೆ ಬರೆದದ್ದು ತಪ್ಪಾಗಲಿಲ್ಲ.

ಹಿಂದುಸ್ಥಾನದ ಎಲ್ಲಾ ರಾಜಕೀಯ ಸಂಗಡಗಳು ದ್ವಿಮುಖ ಸರಕಾರ (ಸುಧಾರಣೆಯಲ್ಲಿ ದೊರತ ಆಡಳಿತವು)ವನ್ನು ಉಪಯೋಗಿಸಲು ಸಹಕರಿಸಿದರೆ ಈ ಆಡಳಿತ ಪದ್ಧತಿಯ ದೋಷಗಳನ್ನು ಹತ್ತು ವರುಷಕ್ಕೆ ಮೊದಲೇ ಅಜಮಾಯಿಸಬಹುದೆಂತ ಇನ್ನೊಂದ ಕಡೆ ಹೇಳಿದ್ದಾರೆ. ಸಾಧ್ಯವಾದರೆ ಸರಕಾರಕ್ಕೆ ತೊಂದರಕೊಡುವ ಸ್ವರಾಜ್ಯ ಸಂಗಡವನ್ನು ಮುರಿಯಲಿಕ್ಕಾಗಿ ಈ ಮಾತುಗಳನ್ನು ಆಡಿದ್ದೇ ಹೊರತು ಕಾರ್ಯತಃ ನಡೆಸಬೇಕೆಂತ ಅಲ್ಲ. 1919ನೇ ಇಸವಿಯ ಸುಧಾರಣೆಗಳಿಂದ ದೊರೆತ ದ್ವಿಮುಖ ಸರಕಾರವು ಅಡಚಣೆಗಳು ಇಲ್ಲದ ಪ್ರಾಂತ್ಯಗಳಲ್ಲೂ ಸಹ ತೃಪ್ತಿಕರವಾಗಿ ನಡಿಯಲಿಲ್ಲವಂತ ಸ್ಟೇಟ್ ಸೆಕ್ರೆಟರಿಯವರೇ ಒಪ್ಪಿರುವಾಗ ಆ ಕ್ರಮವನ್ನು ಇನ್ನೂ ಹಿಂಬಾಲಿಸಬೇಕೆಂತ ಹೇಳುವ ಮಾತಿನಲ್ಲಿ ತೂಕವಿದೆಯೇ?

ದ್ವಿಮುಖ ಸರಕಾರ ಕ್ರಮದಲ್ಲಿ ಮಂತ್ರಿಗಳ ಆಡಳಿತಕ್ಕೆ ಬಿಟ್ಟ ಇಲಾಖೆಗಳಲ್ಲೂ ಸಹ ಮಂತ್ರಿಗಳ ಅಧೀನದಲ್ಲಿ ಕೆಲಸ ಮಾಡಬೇಕಾದ ಸಿವಿಲ್ ಸರ್ವಿಸಿನವರನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲಿಕ್ಕೆ ಮಂತ್ರಿಗಳಿಗೆ ಹಕ್ಕಿಲ್ಲವೆಂಬ ಆಕ್ಷೇಪವಿದೆ ಎಂಬದನ್ನು ಸೆಕ್ರೆಟರಿಯವರು ಒಪ್ಪಿದರೂ ಸಹ ಸಿವಿಲ್ ಸರ್ವಿಸಿನವರನ್ನು ಮಂತ್ರಿಗಳ ತಾಬೆಗೆ ಬಿಟ್ಟುಕೊಡಲು ಒಪ್ಪುವುದಿಲ್ಲ. ಸರಕಾರಿ ಉದ್ಯೋಗಸ್ಥರನ್ನು ನಿರಾತಂಕವಾಗಿ ಆಕ್ಷೇಪಿಸುವ ಪದ್ಧತಿಯು ಹಿಂದುಸ್ಥಾನದಲ್ಲಿ ಕಡಿಮೆಯಾಗುವವರೆಗೆ ಸಿವಿಲಿಯನರನ್ನು ದೇಶೀಯ ಮಂತ್ರಿಗಳ ತಾಬೆಗೆ ಕೊಡಲಾಗುವದಿಲ್ಲವಂತೆ! ದೇಶೀಯ ಪ್ರತಿನಿಧಿಗಳು ಚುನಾಯಿಸುವ ಮಂತ್ರಿಗಳ ಹೇಳಿಕೆಯಂತೆಯಾದರೂ ನಡೆಯದೆ ಇರುವ ಸರಕಾರಿ ಉದ್ಯೋಗಸ್ಥರ ಕುಂದುಕೊರತೆಗಳನ್ನು ದೇಶೀಯ ಪತ್ರಿಕೆಗಳು ಎತ್ತಿ ತೋರಿಸದೆ ಇರಲು ಸಾಧ್ಯವಿದೆಯೇ? ಮಂತ್ರಿಗಳ ತಾಬೆಗೆ ಸಿವಿಲ್ ಸರ್ವಿಸಿನವರು ಒಂದಾಗ ಸಿವಿಲ್ ಸರ್ವಿಸಿನವರನ್ನು ಆಕ್ಷೇಪಿಸಲು ಕಾರಣವಿಲ್ಲ. ಆಗ ಸಿವಿಲ್ ಸರ್ವಿಸಿನವರ ಆಡಳಿತದಲ್ಲಿ ಕುಂದುಕೊರತೆಗಳು ಒಂದರೂ ಮಂತ್ರಿಯೇ ಜವಾಬ್ದಾರನಾಗುತ್ತಾನೆ. ಆಗ ಮಂತ್ರಿಯ ಮೇಲೆ ಟೀಕಿಸಿದರೆ ಸಾಕಾಗುತ್ತೆ. ಸೆಕ್ರೆಟರಿಯವರ ಮಾತಿನಿಂದ ಅರ್ಥವೇನು ಮಾಡಬಹುದೆಂದರೆ, ಬಹುಕಾಲದ ವರೆಗೂ ಸಿವಿಲ್ ಸರ್ವಿಸಿನವರನ್ನು ದೇಶೀಯ ಮಂತ್ರಿಗಳ ತಾಬೆಗೆ ಕೊಡುವದಿಲ್ಲವೆಂಬುದು ಸ್ಪಷ್ಟವಾಯಿತು. ಹೀಗಿದ್ದರೆ ಯಾವ ಸುಧಾರಣೆಯಿಂದಲೂ ಹೆಚ್ಚು ಪ್ರಯೋಜನವಾಗಲಾರದು.

ಮಿಲಿಟರಿ ಇಲಾಖೆಯ ದೊಡ್ಡ ಉದ್ಯೋಗಗಳಿಗೆ ದೇಶೀಯರನ್ನು ನೇಮಿಸುವ ವಿಷಯದಲ್ಲೂ ಸೆಕ್ರೆಟರಿಯವರು ಧಾರಾಳ ಬುದ್ಧಿ ತೋರಿಸಿರುವದಿಲ್ಲ. ಈಗಾಗಲೇ ನಿಶ್ಚೈಸಿರುವಷ್ಟು ಸಂಖ್ಯೆಗಿಂತ ಹೆಚ್ಚಿಗೆ ಹಿಂದಿಯರನ್ನು ತೆಗದುಕೊಳ್ಳಲು ಸಾಧ್ಯವಿಲ್ಲ. ಹಿಂದುಸ್ಥಾನದ ಭದ್ರತೆಯು ಸೈನ್ಯದಲ್ಲಿರುವಂದಾದ್ದರಿಂದ ಸೈನ್ಯವನ್ನು ಹಿಂದೀಯರಿಗೆ ನಿರಾತಂಕವಾಗಿ ಬಿಟ್ಟುಕೊಡಬೇಕಷ್ಟೆ ಎಂತ ಹೇಳಿದ್ದಾರೆ. ಇದೇ ಸ್ಟೇಟ್ ಸೆಕ್ರೆಟರಿಯವರು ಕೆಲವು ದಿನಗಳ ಹಿಂದೆ ಕತ್ತಿಯಿಂದಲೇ ನಾವು ಹಿಂದುಸ್ಥಾನವನ್ನು ಗೆದ್ದದ್ದು, ಕತ್ತಿಯಿಂದಲೇ ಹಿಂದುಸ್ಥಾನವನ್ನು ಅಧೀನಪಡಿಸಿಟ್ಟುಕೊಳ್ಳಬೇಕು ಎಂತ ಒಂದು ಭಾಷಣದಲ್ಲಿ ಹೇಳಿದ್ದಾರೆ. ಈ ತತ್ವವನ್ನು ನಂಬಿದವರು ಮಿಲಿಟರಿ ಇಲಾಖೆಯ ದೊಡ್ಡ ಹುದ್ದೆಗಳಿಗೆ ದೇಶೀಯರನ್ನು ತೆಗೆದುಕೊಳ್ಳಲು ಒಪ್ಪುವದು ಸಾಧ್ಯವಿಲ್ಲ. ಹಿಂದೀಯರು ಇಂಥಾ ಬೆದರಿಕೆಗೆ ಮನಸ್ಸುಕೊಡದೆ ತಮ್ಮ ಜನ್ಮಸಿದ್ಧವಾದ ಸ್ವತಂತ್ರ್ಯವನ್ನು ಪಡೆಯಲು ಅರ್ಹರಾಗಬೇಕು. ಬ್ರಿಟಿಷ್ ವಸಾಹತುಗಳನ್ನು ಹಿಂದೀ ಜನರಿಗೆ ನಾಶವಾಗದಂತೆ ವರ್ತಿಸಬೇಕೆಂತ ಬಹಳ ನಮ್ರತೆಯಿಂದ ಕೇಳಿಕೊಂಡಿದ್ದಾರೆ. ಬ್ರಿಟಿಷ್ ವಸಾಹತುಗಳಲ್ಲಿ ಬ್ರಿಟಿಷ್ ಪ್ರಜೆಗಳಾದ ಹಿಂದೀಯರಿಗೆ ಯಾವಾಗಲೂ ಅವಮರ್ಯಾದೆ ಆಗುತ್ತಾ ಇದೆ. ಇದನ್ನು ನಿಲ್ಲಿಸಿಬೇಕೆಂತ ಖಂಡಿತವಾಗಿ ಹೇಳಲು ಸೆಕ್ರೆಟರಿಯವರಿಗೆ ಧೈರ್ಯವಿಲ್ಲ. ಹಿಂದುಸ್ಥಾನದಿಂದ ಬ್ರಿಟಿಷ್ ಸಾಮ್ರಾಜ್ಯಕ್ಕೆ ತುಂಬಾ ಪ್ರಯೋಜನವಿದೆ. ಆದ್ದರಿಂದ ಅವರನ್ನು ನೋಯಿಸಬೇಡವಂತ ಹೇಳಿದರು. ಬ್ರಿಟಿಷ್ ಸಾಮ್ರಾಜ್ಯದ ಪ್ರಯೋಜನಕ್ಕಾಗಿಯೇ ಹಿಂದುಸ್ಥಾನವನ್ನು ಅಧೀನದಲ್ಲಿ ಇಟ್ಟುಕೊಳ್ಳುವದೆಂಬುದನ್ನು ಸ್ಪಷ್ಟವಾಗಿ ಒಪ್ಪಿಕೊಂಡದ್ದು ಅಲ್ಲದೇ ಇನ್ನೊಂದು ಸಹಜವಾದ ಸಂಗತಿಯನ್ನು ಒಪ್ಪಿಕೊಳ್ಳದೆ 'ಮೂವತ್ತು ಕೋಟಿ ನಿವಾಸಿಗಳ ಪೈಕಿ ಬರೀ 80 ಲಕ್ಷ ಜನರಿಗೆ ಮಾತ್ರ ಕೌನ್ಸಿಲ್‌ಗಳಿಗೆ ಓಟು ಕೊಡುವ ಹಕ್ಕಿದೆ. ಉಳಿದ 29 ಕೋಟಿ ಚಿಲ್ಲರೆ ಜನರನ್ನು ಕಾಪಾಡುವ ಭಾರ ನಮ್ಮ ಮೇಲೆ ಬಿದ್ದಿದೆ. ಆದ್ದರಿಂದ ದೇಶಕ್ಕೆ ಇನ್ನೂ ಹೆಚ್ಚಿಗೆ ಹಕ್ಕುಗಳನ್ನು ಗಡಿಬಿಡಿಯಲ್ಲಿ ಕೊಡಲು ಸಾಧ್ಯವಿಲ್ಲವೆಂತ ಹೇಳುತ್ತಾರೆ'. ಈ 29 ಕೋಟಿ ಜನರ ಸ್ಥಿತಿಯನ್ನು ನೋಡಿ ಕಣ್ಣಿನಿಂದ ನೀರಲ್ಲ ರಕ್ತವನ್ನೇ ಸುರಿಸುತ್ತಾ ಮಹಾತ್ಮ ಗಾಂಧಿಯವರು ಸ್ವತಂತ್ರವನ್ನು ಕೇಳುವದಾಗಿದೆ. ಸೆಕ್ರೆಟರಿಯವರ ಹೇಳಿಕೆಯನ್ನೂ ಮಹಾತ್ಮರ ನಡವಳಿಕೆಯನ್ನೂ ವಾಚಕರೇ ಹೋಲಿಸಿ ನೋಡಬೇಕು. ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ನೂರರಲ್ಲಿ 80ರಷ್ಟು ಜನರು ಪಟ್ಟಣವಾಸಿಗಳಾಗಿರುವಲ್ಲಿ ಹಿಂದುಸ್ಥಾನದಲ್ಲಿ 80ರಷ್ಟು ಗ್ರಾಮವಾಸಿಗಳಾಗಿದ್ದಾರೆ. ಆದ್ದರಿಂದ ಹಿಂದುಸ್ಥಾನದ ಕೃಷಿಯನ್ನು ಅಭಿವೃದ್ಧಿಗೊಳಿಸಿದರೆ ಹಿಂದುಸ್ಥಾನದ ಸುದಿನವು ಒಂದೇ ಬರವದೆಂತ ಹೇಳಿದ್ದಾರೆ. ಈಗಿನ ಹಿಂದುಸ್ಥಾನದ ಸರಕಾರದವರು ಗ್ರಾಮವಾಸಿಗಳಿಂದ ತುಂಬಾ ತೆರಿಗೆಗಳನ್ನು ವಿಧವಿಧದಲ್ಲಿ ತೆಗೆದುಕೊಳ್ಳುತ್ತಿದ್ದಾರಾದರೂ ಅವರಿಗೆ ತಕ್ಕ ಪ್ರತಿ ಸಹಾಯ ಮಾಡುವದಿಲ್ಲವೆಂತ ಮುಂದಾಳುಗಳು ಆಗಿಂದಾಗ್ಗೆ ಸರಕಾರಕ್ಕೆ ಎಚ್ಚರ ಕೊಡುತ್ತಿದ್ದಾರೆ. ಗ್ರಾಮವಾಸಿಗಳಿಗೆ ಅಂದರೆ ಕೃಷಿಕರಿಗೆ ಈ ಸೆಕ್ರೆಟರಿಯವರ ಕಾಲದಲ್ಲಿ ತುಂಬಾ ಸಹಾಯಮಾಡುವ ಅಭಿಪ್ರಾಯವಿದೆಯೆಂತ ಇವರ ಭಾಷಣದಲ್ಲಿ ಇದೆ. ಈ ಸಹಾಯವು ಯಾವ ರೂಪವನ್ನು ತಾಳುತ್ತದೆಯೋ ಗೊತ್ತಿಲ್ಲ. ಈ ಇಲಾಖೆಗೆ ಇನ್ನು ದೊಡ್ಡ ದೊಡ್ಡ ಸಂಬಳದ ಹುದ್ದೇದಾರರನ್ನು ನೇಮಿಸುವುದರಲ್ಲೇ ಸೆಕ್ರೆಟರಿಯವರ ಸದುದ್ದೇಶವು ಸಮಾಪ್ತಿಯಾಗುವ ಸಂಭವವುಂಟು. ಆಯಾ ಸರಕಾರದವರು ಇಂಥಾ ನಿಷ್ಪ್ರಯೋಜನ ರೂಪ ತಾಳಲು ಬಿಡದೆ ಕೃಷಿಕನಿಗೆ ನಿಜವಾಗಿಯೂ ಪ್ರಯೋಜನವಾಗುವ ಕ್ರಮಗಳನ್ನು ತೋರಿಸಿಕೊಟ್ಟು, ಒಂದು ತೆನೆ ಬೆಳೆಯುವಲ್ಲಿ ಎರಡು ಬೆಳೆಯುವಂತೆ ಮಾಡಲು ಬೇಕಾದ ಮುಟ್ಟುಗಳನ್ನೂ ಗೊಬ್ಬರಗಳನ್ನೂ ಒದಗಿಸಿಕೊಟ್ಟರೆ ಪ್ರಯೋಜನವಾದೀತು. ಹಿಂದುಸ್ಥಾನದ ಕೃಷಿಕರು ಸ್ವಾಭಾವಿಕವಾಗಿ ಮುಂದುವರಿಯುವವರಲ್ಲ. ತಮ್ಮ ಹಳೇ ಪದ್ಧತಿಯನ್ನು ಬಿಟ್ಟುಹೋಗುವವರಲ್ಲ, ಎಂಬ ಇತ್ಯಾದಿ ಆಕ್ಷೇಪಣೆಗಳನ್ನು ಸೆಕ್ರೆಟರಿಯವರು ಹೇಳಿರುತ್ತಾರೆ. ಈ ಆಕ್ಷೇಪಣೆಗೆ ಕಾರಣವೇನೆಂದರೆ—ರೈತನ ಹಳೆ ಕ್ರಮವನ್ನು ಬಿಟ್ಟು ಹೊಸ ಕ್ರಮವನ್ನು ಏಕಾಏಕಿ ಅವಲಂಬಿಸುವಂತೆ ಹೇಳುವರು. ರೈತರ ವ್ಯವಸಾಯ ಕ್ರಮವನ್ನೇ ಕ್ರಮಕ್ರಮವಾಗಿ ಅಭಿವೃದ್ಧಿಗೊಳಿಸುತ್ತಾ ಬರಬೇಕಾದದ್ದೇ ಕೃಷಿ ಇಲಾಖೆಯ ಕೆಲಸವಾಗಿದೆ.

ಹಿಂದುಸ್ಥಾನದ ಜಾತಿ ಜಗಳಗಳನ್ನು ಎತ್ತಿ ತೋರಿಸಿ ಇದನ್ನೇ ಸ್ವರಾಜ್ಯಕೊಡಲು ಅಡ್ಡಿಯಾಗಿ ಇಟ್ಟಿದ್ದಾರೆ. ಜಾತಿ ಜಗಳಗಳನ್ನು ಕಡಿಮೆ ಮಾಡಿ ಈ ಆಕ್ಷೇಪವನ್ನು ತಪ್ಪಿಸಿಕೊಳ್ಳುವದು ದೇಶದವರ ಕೈಯ್ಯಲ್ಲಿದೆ.

ವೀರರಾಜಪೇಟೆ ಮುನಿಸಿಪಾಲಿಟಿ.

ಮಡಿಕೇರಿ ಮುನಿಸಿಪಾಲಿಟಿಯಲ್ಲಿ ಮೆಂಬರುಗಳನ್ನು ಚುನಾಯಿಸುವ ಹಕ್ಕು ಮುನಿಸಿಪಲ್ ಕಂದಾಯ ಕೊಡುವವರಿಗೆ ಬಹುಕಾಲದಿಂದಲೇ ಇದ್ದರೂ ಸಹ ವೀರರಾಜಪೇಟೆ ಮುನಿಸಿಪಾಲಿಟಿಯಲ್ಲಿ ಮೆಂಬರುಗಳನ್ನು ಸರಕಾರಿ ಅಧಿಕಾರಿಗಳು ನೇಮಿಸುತ್ತಲೇ ಇದ್ದಾರೆ. ಈ ವಾರದಲ್ಲಿ ನಮ್ಮ ಕೈಸೇರಿದ ಗಜೆಟಿನಲ್ಲಿ ವೀರರಾಜಪೇಟೆ ಮುನಿಸಿಪಾಲಿಟಿಗೆ ಮೆಂಬರುಗಳನ್ನು ಕಂದಾಯ ಕೊಡುವವರು ಆರಿಸುವ ಹಕ್ಕು ಕೊಡುವ ಮಸೂದೆ ನೋಟಿಫಿಕೇಶನನ್ನು ಚೀಫ್ ಕಮಿಶನರು ಪ್ರಕಟಿಸಿದ್ದಾರೆ. ಈ ಮಸೂದೆಯನ್ನು ಆಗಸ್ಟ್ 1ನೇ ತಾರೀಕಿನಲ್ಲಿ ಆಲೋಚನೆಗೆ ತೆಗೆದುಕೊಳ್ಳಲಾಗುತ್ತದೆಯೆಂತಲೂ ಗಜೆಟಿನಲ್ಲಿ ಇದೆ. ಆ ಮುನಿಸಿಪಾಲಿಟಿಗೆ ಮೆಂಬರರನ್ನು ಚುನಾಯಿಸುವ ಹಕ್ಕು ಕೊಟ್ಟು ಬಹುಕಾಲವಾಗಬೇಕಾಗಿತ್ತು. ಈಗಲಾದರೂ ಈ ಹಕ್ಕನ್ನು ಕೊಡಲು ಯೋಚಿಸಿದಕ್ಕೆ ನಾವು ಸರಕಾರವನ್ನು ಅಭಿನಂದಿಸುತ್ತೇವೆ. ಚುನಾಯಿತ ಮೆಂಬರುಗಳು ಹತ್ತು ಜನರು. ಅದರಲ್ಲಿ ಇಬ್ಬರು ಕ್ರಿಸ್ತಿಯರ, ಮೂವರು ಮುಸಲ್ಮಾನರ ಮತ್ತು ಉಳಿದ ಐದು ಜನರು ಹಿಂದೂಗಳ ಮತ್ತು ಇತರ ಜನರ ಪ್ರತಿನಿಧಿಗಳಾಗಿರಬೇಕು ಎಂತ ಇದೆ. ಹೊಸದಾಗಿ ಚುನಾವಣೆ ಹಕ್ಕು ಕೊಡುವಾಗಲೂ ಸಹ ಕೋಮುವಾರು ಪದ್ಧತಿಯನ್ನು ಏರ್ಪಡಿಸಿರುವದು ವ್ಯಸನಕರ. ಪ್ರಜಾಪ್ರತಿನಿಧಿ ಸಂಸ್ಥೆಗಳಲ್ಲಿ ಕೋಮುವಾರು ಪ್ರತಿನಿಧಿತ್ವವನ್ನು ಇಡುವದು ಒಗ್ಗಟ್ಟಿನ ಬೆಳವಣಿಗೆಗೆ ಕಂಟಕವೆಂತ ಅನುಭವಸ್ಥರೆಲ್ಲರೂ ಹೇಳುವಾಗ ಮುನಿಸಿಪಲ್ ಚುನಾವಣೆಯಲ್ಲೂ ಸಹ ಇದನ್ನು ಶಾಶ್ವತಗೊಳಿಸುವದು ಯುಕ್ತವಲ್ಲ. ವೀರರಾಜಪೇಟೆ ಮುನಿಸಿಪಾಲಿಟಿಯ ಒಳಗೆ ಇರುವ ಮುಸಲ್ಮಾನ್ ಮತ್ತು ಕ್ರಿಶ್ಚಿಯನ್ ಬಂಧುಗಳು ಈ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸಿ ತಮಗೆ ಪ್ರತ್ಯೇಕ ಸೀಟುಗಳು ಬೇಡವೆಂತ ಹೇಳಬೇಕೆಂತ ನಾವು ಕೋರುತ್ತೇವೆ. ಮುನಿಸಿಪಲ್ ಕೆಲಸದಲ್ಲಿ ಯಾರು ನಿಗಾ ತೆಗೆದುಕೊಳ್ಳುತ್ತಾರೋ, ಅಂಥವರನ್ನು ಜನರು ಆರಿಸುತ್ತಾರೆಂಬದರಲ್ಲಿ ಸಂಶಯವಿಲ್ಲ. ಆದ್ದರಿಂದ ಕೋಮುವಾರು ಚುನಾವಣೆ ಬೇಡವೆಂತ ಹೇಳುವದು ವೀರರಾಜಪೇಟೆ ನಿವಾಸಿಗಳ ಕರ್ತವ್ಯವಾಗಿದೆ.

ವೀರರಾಜಪೇಟೆ ಮುನಿಸಿಪಾಲಿಟಿಗೆ ಉದ್ಯೋಗಸ್ಥರಲ್ಲದ ವೈಸ್ ಪ್ರೆಸಿಡೆಂಟರನ್ನು ಸ್ವಲ್ಪ ವರ್ಷಗಳಿಂದ ಕೊಟ್ಟಿದ್ದಾರಾದರೂ ಪ್ರೆಸಿಡೆಂಟರನ್ನು ಆರಿಸಿಕೊಳ್ಳುವ ಹಕ್ಕನ್ನು ಈ ವರೆಗೆ ಕೊಟ್ಟಿರಲಿಲ್ಲ. ಈಗ ಮಸೂದೆ ನೋಟಿಫಿಕೇಶನ್ ಒಂದದ್ದರಲ್ಲಿ ಈ ಹಕ್ಕನ್ನು ಸಹ ಕೊಟ್ಟಿದ್ದಾರೆ. ವೀರರಾಜಪೇಟೆಯಲ್ಲಿ ಈ ಜವಾಬ್ದಾರಿಯ ಕೆಲಸವನ್ನು ನೋಡಲು ಅರ್ಹರಾದವರು ಇಲ್ಲವೆಂಬ ಕೊರತೆಯನ್ನು ಸರಕಾರದವರು ಈ ಮೊದಲು ಹೇಳಿದ್ದರು. ಅಂಥಾ ಕೊರತೆಯನ್ನು ಹೋಗಲಾಡಿಸಲು ಈಗಲಾದರೂ ಯೋಚಿಸಿದ್ದು ಸಂತೋಷಕರ. ಕೌನ್ಸಿಲಿನಲ್ಲಿ ಸ್ಥಳೀಯ ಸ್ವರಾಜ್ಯವನ್ನು ಸಂಪೂರ್ಣವಾಗಿ ಪ್ರಜಾಪ್ರತಿನಿಧಿಗಳಿಗೆ ಬಿಟ್ಟುಕೊಡಬೇಕಂತ ಪಾಸಾದ ಠರಾವು ಜಾರಿಯಾಗಲು ಪ್ರಾರಂಭವಾಗಿದೆಯೇ ಎಂಬ ಸಂಶಯವಿದೆ. ಆದರೂ ಡಿಸ್ಟ್ರಿಕ್ಟ್ ಬೋರ್ಡನ್ನು ದೇಶದವರಿಗೆ ಬಿಟ್ಟು ಕೊಡುವವರೆಗೂ ಸ್ಥಳೀಯ ಸ್ವರಾಜ್ಯದ ವಿಷಯದಲ್ಲಿ ಸರಕಾರವು ತನ್ನ ಕರ್ತವ್ಯವನ್ನು ಮಾಡಿದಂತಾಗುವದಿಲ್ಲ.

ಮುನ್ಸಿಪಾಲಿಟಿಯಲ್ಲಿ ಆಡುಗಳು.

ವೀರರಾಜಪೇಟೆ ಮುನಿಸಿಪಾಲಿಟಿಯಲ್ಲಿ ಆಡುಗಳನ್ನು ಮಾಲೀಕರ ಜಾಗದಿಂತ ಹೊರಬಿಟ್ಟರೆ 10ರುಪಾಯಿ ವರೆಗೆ ಜುಲ್ಮಾನೆಗೆ ಗುರಿಯಾಗಬೇಕಂತಲೂ ಒಂದಾವರ್ತಿಗಿಂತ ಹೆಚ್ಚಾಗಿ ಈ ತಪ್ಪನ್ನು ಮಾಡಿದರೆ ಪ್ರತಿಸಲಕ್ಕೂ 2ರುಪಾಯಿ ಹೆಚ್ಚಿಗೆ ಜುಲ್ಮಾನೆಗೆ ಗುರಿಯಾಗಬೇಕಂತಲೂ ಪ್ರೆಸಿಡೆಂಟರು ಟಾಮ್ ಟಾಮ್ ಮಾಡಿಸಿ ರೋಡು ಮತ್ತು ಪಬ್ಲಿಕ್ ಸ್ಥಳಗಳಲ್ಲಿ ಇರುವ ಆಡುಗಳನ್ನು ನಾಶಪಡಿಸಲು ಹುಕುಂ ಕೊಡುವ ಹಕ್ಕಿರಬೇಕೆಂತಲೂ ಹೊಸ ಕಾನೂನನ್ನು ಮಾಡುವ ಯೋಜನೆ ಇದೆಯೆಂತಲೂ ಈ ಮಸೂದೆ ಕಾನೂನನ್ನು ಜುಲೈ 15ರಲ್ಲಿ ಆಲೋಚನೆಗೆ ತೆಗೆದುಕೊಳ್ಳಲಾಗುವದೆಂತಲೂ ಗಜೆಟಿನಲ್ಲಿ ಪ್ರಕಟನೆ ಇದೆ. ಈ ಕಾನೂನು ಅತಿ ಕಠಿಣವಾಯಿತು. ಆಡುಗಳನ್ನು ಹಿಡಿದು ದೊಡ್ಡಿಗೆ ಹಾಕಲು ಕಷ್ಟವಿಲ್ಲ. ದೊಡ್ಡಿ ಆಫೀಸರೆ ಮೊಖದ್ದನ್ನು ಮಾಡುವ ಹಕ್ಕು ಸಹ ಇದೆ. ಆದ್ದರಿಂದ ಹೊಸ ಕಾನೂನು ಅವಶ್ಯವಿಲ್ಲ. ಪಟ್ಟಣದಲ್ಲಿ ಇರುವ ಬಡನಿವಾಸಿಗಳಲ್ಲಿ ಕೆಲವರು ಆಡುಗಳನ್ನು ಸಾಕಿ ಕೆಲವು ಹುಟ್ಟಿಗೆ ಪ್ರಯೋಜನ ಹೊಂದುತ್ತಾರೆ. ಈ ಹೊಸ ಕಾನೂನನ್ನು ಜಾರಿಗೆ ತಂದರೆ ಈ ಗರೀಬ ಜನರಿಗೆ ಕಷ್ಟವಾಗುತ್ತದೆ. ಈ ಕಾನೂನನ್ನು ಮಾಡಲೇಬೇಕಾದರೂ ಈಗ ಹೊಸದಾಗಿ ಏರ್ಪಾಡಾಗಲಿಕ್ಕಿರುವ ಚುನಾಯಿತ ಮುನಿಸಿಪಲ್ ಕಮಿಟಿಯಾದನಂತರ ಅವರ ಅಭಿಪ್ರಾಯಕ್ಕೆ ಬಿಡುವದು ಉತ್ತಮ.

ಕಿತ್ತಳೆ ಬೋರರ್.

ಡಾಕ್ಟರ್ ಕೋಲ್‌ಮನ್ ಕಲ್ಲಾಸ್ ಯವರ್ ಎ. ಪಿ ಹೆಚ್. ಡಿ ಯವರು ತಾ. 20—6—25ರಲ್ಲಿ ಮಡಿಕೇರಿ ಹೈಸ್ಕೂಲು ಹಾಲಿನಲ್ಲಿ ಕೊಟ್ಟ ಭಾಷಣ.

ನಾನು ಈ ಸಾರಿ ಕೊಡಗಿಗೆ ಬಂದಿರುವಾಗ ನನ್ನ ಪ್ರೋಗ್ರಾಮಿಗೆ ಈ ಉಪನ್ಯಾಸವು ಸೇರಲಿಲ್ಲ. ಡೆಪ್ಯುಟಿ ಡೈರೆಕ್ಟರು ಕಾಫಿ ಮತ್ತು ಕಿತ್ತಳೆ ಬೋರರಾಗ ವಿಷಯದಲ್ಲಿ ಉಪನ್ಯಾಸ ಕೊಡಬೇಕೆಂತ ಹೇಳಿದರು. ಕಾಫಿ, ಕಿತ್ತಳೆ ವ್ಯವಸಾಯಗಾರರ ಭೇಟಿ ತನಗೆ ದೊರಕಲು ಅನುಕೂಲವಾಗುತ್ತದೆಂತಲೂ ಈ ವ್ಯವಸಾಯಗಳಿಗೆ ಇರುವ ಕೇಡನ್ನು ಹೇಗೆ ಸುಲಭದಲ್ಲಿ ನಿವಾರಿಸಿಕೊಳ್ಳಬಹುದೆಂಬುದನ್ನು ಇವರಿಗೆ ತಿಳಿಸಲು ಅನುಕೂಲವಾಗುವುದೆಂತಲೂ ನಾನು ಒಪ್ಪಿಕೊಂಡೆನು.

ಈ ರೋಗವನ್ನು ಬಹುಕಾಲದಿಂದಲೇ ಅನುಭವಿಸುತ್ತಿದ್ದಾರೆ. ಆದರೂ ತಕ್ಕ ಉಪಶಮನವನ್ನು ಇನ್ನೂ ಕಂಡು ಹಿಡಿದಿರುವದಿಲ್ಲ. ಮೈಸೂರಲ್ಲಿ ನಿಂಬೆ ಗಿಡಕ್ಕೆ ಬಂದು ತರದ ರೋಗಗಳು ನಿಂಬೆ ವ್ಯವಸಾಯಗಾರರಿಗೆ ತುಂಬಾ ತೊಂದರೆ ಕೊಡುತ್ತಿತ್ತು. ಮೂರು ವರ್ಷಗಳ ಕೆಳಗೆ ನಾನು ಈ ವಿಷಯ ಅಭ್ಯಾಸಿಸಲಿಕ್ಕೆ ಪ್ರಾರಂಭಿಸಿ ಎರಡು ವರ್ಷಗಳ ಕೆಳಗೆ ಒಂದು ಉಪಾಯವನ್ನು ಕಂಡು ಹಿಡಿದೆ. ಈಗ ಅದೇ ಉಪಾಯವು ಕಿತ್ತಳೆಗೂ ಆಗಬಹುದೆಂತ ನಾನು ಯೋಚಿಸಿದ್ದೆ. ಈಗ ಒಂದು ವಾರದ ಕೆಳಗೆ ವರೆಗೂ ಕಿತ್ತಳೆ ಗಿಡಕ್ಕೆ ತಗಲುವ ಹುಳವು ನಿಂಬೆ ಗಿಡಕ್ಕೆ ತಗಲುವದಕ್ಕಿಂತ ಬೇರೆಯೆಂತ ಭಾವಿಸಿದ್ದೆ. ಆದ್ದರಿಂದ ಇದಕ್ಕೆ ಬೇರೆ ಉಪಾಯವು ಇನ್ನೂ ಇದಕ್ಕೆ ಆದೀತೆಂತ ಯೋಚಿಸಿರಲಿಲ್ಲ.

ಕಿತ್ತಳೆ ಗಿಡಗಳಿಗೆ ಈ ಹುಳದ ಕಾಟವು ಹೇಗೆ ತಗಲುತ್ತದೆ ಎಂಬುದನ್ನು ವಿವರಿಸುತ್ತೇನೆ. ಕಿತ್ತಳೆ ಗಿಡದ ಕೊಂಬೆಗಳನ್ನು ಮುರಿದು ನೋಡಿದವರು ಒಂದು ತರದ ಹುಳವು ಅದರ ಒಳಗೆ ಕೊರೆಯುತ್ತಾ ಹೋಗುವದನ್ನು ನೋಡಿರಬಹುದು. ಮರದ ಅಲ್ಲಲ್ಲಿ ತೂತುಗಳಾಗಿ ಅವುಗಳಿಂದ ಪಿಳ್ಳೆ ಹುಡಿಯು ಹೊರಗೆ ಬೀಳುವದನ್ನು ನೋಡಿದರೆ ಹುಳದ ಕೆಲಸ ನಡೆಯುತ್ತಿದೆ ಎಂತ ಗೊತ್ತಾಗುತ್ತದೆ. ಇಂಥಾ ಹುಡಿ ಬಿದ್ದಿರುವುದನ್ನು ಕಂಡ ಕೂಡಲೇ ಆ ಮರಕ್ಕೆ ಹುಳ ಹಿಡಿದಿದೆ ಎಂಬುದು ನಿಶ್ಚಿತ. ಈ ಹುಳವು ಕಿತ್ತಳೆ ಮರದಲ್ಲಿ ಒಂದೇ ರೂಪದಲ್ಲಿರದೆ ಬೆಳೆಯುತ್ತಲೇ ಹೋಗುತ್ತದೆ ಎಂತ ಸಾಧಾರಣ ಅಭಿಪ್ರಾಯವಾಗಿದೆ [illegible] ನಲ್ಲ. (ಗಿಡದ ಒಳಗೆ ಕೊರೆಯುವ [illegible] ಹುಳವನ್ನು ಸಭಿಕರಿಗೆ ತೋರಿಸಿದರು) ಆದರೆ ಆ ಹುಳ [illegible] ಒಂದು ಚಿಟ್ಟೆ ಹುಳವಾಗುತ್ತದೆ. ಇದರ ಮೈ ಹಸುರು ಮತ್ತು ನೀಲಿ ಬಣ್ಣ ಉಳ್ಳದ್ದಾಗಿ ಲೋಹದಂತೆ ಹೊಳೆಯುತ್ತಿ ಒಂದು ತರದ ಸುವಾಸನೆ ಸಹ ಇರುತ್ತದೆ. (ಈ ಚಿಟ್ಟೆ ಹುಳವನ್ನು ಸಭಿಕರಿಗೆ ತೋರಿಸಿದರು) ಇವು ಗಂಡೂ ಹೆಣ್ಣೂ ಇರುತ್ತವೆ. ಹೆಣ್ಣು ಹುಳವು ಗಂಡಿಗಿಂತ ಸ್ವಲ್ಪ ದೊಡ್ಡದು. ಸಾಧಾರಣವಾಗಿ ಇವು ಮೇ ತಿಂಗಳ ಕಡೆಯಲ್ಲಿ ಕಾಣಿಸಿಕೊಳ್ಳುತ್ತವೆ. ಮೇ ತಿಂಗಳಲ್ಲೂ ಜೂನ್ ಮಧ್ಯದ ವರೆಗೂ ಕಿತ್ತಳೆ ಮರಗಳನ್ನು ನೋಡಿದರೆ ಎಲೆಗಳ ಮೇಲೆ ಮುಖ್ಯವಾಗಿ ಬೆಳಗಿನ ಹೊತ್ತು ಈ ಹುಳಗಳನ್ನು ಕಾಣಬಹುದು. ಬೇಗಿನ ಹೊತ್ತಿನಲ್ಲಿ ಇವು ಓಡ್ಯಾಡುವದಿಲ್ಲ. ಬಿಸಿಲಿನ ಕಾವು ಜೋರಾದ ಮೇಲೆ ಮಧ್ಯಾಹ್ನದ ಮೇಲೆ ಗಂಡು ಹುಳವು ಹೆಣ್ಣನ್ನು ಹುಡುಕುತ್ತದೆ. ಜೊತೆಯಾದ ನಂತರ ಶೀಘ್ರದಲ್ಲೇ ಗಂಡು ಹುಳವು ಸತ್ತು ಹೋಗುತ್ತದೆ. ಹೆಣ್ಣು ಇನ್ನೂ ಸ್ವಲ್ಪ ಸಮಯ ಬದುಕಿ ತನ್ನ ಮೊಟ್ಟೆ ಇಡಲು ತಕ್ಕ ಸ್ಥಳವನ್ನು ಹುಡುಕುತ್ತದೆ. ಸಾಧಾರಣವಾಗಿ ಕಿತ್ತಳೆ ಮರದ ಎಲೆ ರೆಂಬೆಗಳ ಸಂದಿನಲ್ಲಿ ಮೊಟ್ಟೆ ಇಡುತ್ತದೆ. ಮೊಟ್ಟೆಗಳು ನಿಂಬೆ ಬೀಜದ ಬಣ್ಣದಲ್ಲಿ ಇರುತ್ತವೆ. ಒಂದು ತರದ ಅಂಟು ಹತ್ತಿರುತ್ತದೆ. ಸುಮಾರು ಎರಡು ವಾರಗಳಲ್ಲಿ ಮೊಟ್ಟೆ ಒಡೆಯುತ್ತದೆ. ಆಗ ಮರವನ್ನು ಕೊರೆಯುವ ದೊಡ್ಡ ಹುಳದ ತರದಲ್ಲೇ ಚಿಕ್ಕದಾಗಿ [illegible]ದುರೆಹುಳದಂತೆ ಬಣ್ಣದ ಹುಳವಾಗುತ್ತದೆ. ತನ್ನ ಕೆಲಸ [ಪ್ರಾ]ರಂಭಿಸುತ್ತದೆ. ಈ ಚಿಕ್ಕ ಹುಳವು ಚಿಕ್ಕ ರೆಂಬೆಯ ಸತ್ತ [illegible]ರೆಯುತ್ತವೆ. ತಿಪ್ಪೆಯನ್ನಲ್ಲ, ಮರವನ್ನೇ ಕೊರೆಯುತ್ತವೆ. [illegible]ಲ್ಲಿಂದ ಮುಂದಕ್ಕೆ ಕಡ್ಡಿಯ ಒಳಕ್ಕೆ ನುಗ್ಗಿ ಕೊರೆಯುತ್ತಾ [illegible]ಳಕ್ಕೆ ಹೋಗುತ್ತದೆ. ಅಲ್ಲಲ್ಲಿ ಹೊರಕ್ಕೆ ತೂತುಗಳನ್ನು [ಮಾ]ಡಿ ಗಾಳಿ ಬರಲು ಅನುಕೂಲ ಪಡಿಸಿಕೊಳ್ಳುತ್ತದೆ. [illegible]ಯ ಸುತ್ತಲು ಯಾಕೆ ಕೊರೆದದ್ದು? ವರ್ಷದ ಈ ಸಮ[ಯ]ದಲ್ಲಿ (ಜೂನ್ 20) ಮೊಟ್ಟೆ ಇಡುವದಾಗಿ—ಜೋರು ಮ[ಳೆ]ಯಲ್ಲಿ ಮೊಟ್ಟೆ ಒಡೆಯುವದಾಗಿದೆ. ಆ ಸಮಯದಲ್ಲಿ ಮ[ರದ]ಲ್ಲಿ ಸಾರವು ತುಂಬಾ ಓಡ್ಯಾಡುತ್ತದೆ. ಕಿತ್ತಳೆ ಗಿಡದ [ಸಾರ]ವು ತಕ್ಕಷ್ಟು ಅಂಟಾಗಿರುತ್ತದೆ. ಮೊದಲೇ ಕಡ್ಡಿಯ [illegible]ಲು ಕೊರೆಯದೆ ಹೋದರೆ ಅದು ಹೋಗುವ ಗಾಳಿ ತೂ[ತು] ಈ ಸಾರದಿಂದ ಮುಚ್ಚಿ ಹೋಗಿ ತನಗೆ ಗಾಳಿ ಇಲ್ಲದ[ಂತಾ]ಗುತ್ತವೆ. ಕಡ್ಡಿಯ ಸುತ್ತಲೂ ಕೊರೆಯುವದ[ರಿಂದ] ಮರದ ಸಾರವು ಆ ಕಡ್ಡಿಗೆ ಏರಿ ಹೋಗುವದಿಲ್ಲ. ಹೀ[ಗೆ ಕೆ]ಲಸ ಮಾಡುವ ಚಿಕ್ಕ ರೆಂಬೆಯ ಕಡ್ಡಿಯಲ್ಲಿ ಈ ಚಿಕ್ಕ ಹು[ಳವು] ಒಂದೆರಡು ತಿಂಗಳುಗಳ ವರೆಗೆ ಇರುತ್ತದೆ. ಇಷ್ಟೇ [illegible]ವಿರುತ್ತದೆ ಎಂತ ಖಂಡಿತವಾಗಿ ಇನ್ನೂ ನಿರ್ಧರಿಸಲು [illegible]ವಾಗಲಿಲ್ಲ. ಅಂತೂ ಎರಡು ತಿಂಗಳ ವರೆಗೆ ಇರುತ್ತ[ದೆಂ]ತ ಊಹಿಸುವ. ಅನಂತರ ಹಿಂದಕ್ಕೆ ತಿರುಗಿ ಮರದ ಬುಡದ ಕಡೆಗೆ ಹೊರಡುತ್ತದೆ. ಆಗ ತೂತುಗಳಿಂದ ಹುಡಿ ಬೀಳುವದು ಕಾಣುತ್ತದೆ. ಇಷ್ಟರಲ್ಲಿ ಹುಳುವು ತಕ್ಕಷ್ಟು ಬೆಳೆದಿರುವದರಿಂದ ಮರದ ಸಾರದಿಂದ ಇದು ಈಗ ಬಗ್ಗುವದಿಲ್ಲ. ಹೀಗಾದ ಈ ಹುಳವು ಮರದ ಬುಡಕ್ಕೆ ತಲುಪುವ ತನಕ ಕೊರೆಯುತ್ತ ಹೋಗುತ್ತದೆ. ಈ ತೂತುಗಳು ಮರದ ಸಾರದ ಹೆಚ್ಚಿನ ಭಾಗವನ್ನು ತೆಗೆದು ಬಿಡುವದರಿಂದ ಮರದ ಬಲ ಕಡಿಮೆಯಾಗಿ ಹಣ್ಣುಗಳ ಗುಣವೂ ಸಂಖ್ಯೆಯೂ ಕಡಿಮೆಯಾಗುತ್ತವೆ. ಈ ಹುಳಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಬಂದು ಕಾಟವು ಬಹಳ ಹೆಚ್ಚಿ ಹೋಗಿದೆ. ಇನ್ನೂ ಕೆಲವು ಮರಗಳಾದರೂ ಉಳಿದಿರುವದೇ ಆಶ್ಚರ್ಯವಾಗಿದೆ.

ಉಪಶಮನ.

ಈಗ ವಿವರಿಸುವದರಿಂದಲೇ ಉಪಶಮನವೇನೆಂಬುದನ್ನು ಊಹಿಸಬಹುದು. ಚಿಕ್ಕ ರೆಂಬೆಗಳು ಒಣಗಿದಲ್ಲಿ ಹುಳವು ಮರವನ್ನು ಕೊರೆಯುತ್ತದೆ ಎಂತ ಮೊದಲೇ ಹೇಳಿದ್ದೆನಲ್ಲ. ಅದರಿಂದ ಒಂದು ತಿಂಗಳೊಳಗೆ ಆ ಕೊನೆಯು ಒಣಗುತ್ತಾ ಬರುತ್ತದೆ. ಅದ್ದರಿಂದ ಈ ಒಣಗುವ ಚಿಕ್ಕ ಕೊನೆಗಳನ್ನು ಮುರಿದರೆ ಉಚಿತ. ಇದು ಬಹಳ ಸುಲಭ. ಒಂದು ಉದ್ದವಾದ ಕೋಲನ್ನು ತೆಗೆದು ಕೊಂಡು ಅದರ ತಲೆಯಲ್ಲಿ ಒಂದು ಕತ್ತಿಯನ್ನು ಕಟ್ಟಿಕೊಳ್ಳಬೇಕು. ಒಣಗಲು ಕೊನೆಯು ಬಿದ್ದರೆ ಈ ಕತ್ತಿಯನ್ನು ಹಾಕಿ ಥಟ್ಟನೆ ಕತ್ತರಿಸಿದರೆ ಒಣಗಿದ ಕೊನೆ [illegible] ಹೋಗುತ್ತದೆ. [illegible] ಅನಂತರ ಬೇರೆ [illegible] ಅನುಕೂಲವಿಲ್ಲದೆ ಸಾಯುತ್ತದೆ. [illegible] ಈ ಚಿಕ್ಕ ಕೊನೆಗಳನ್ನು ಮುರಿಯುವದರಿಂದ ಏನೂ ಕೆಡಕಾಗುವದಿಲ್ಲ. [illegible] ಈ ಕೆಲಸ ನಡಿಸಿದರೆ ಕಿತ್ತಳೆ ಬೋರರ್ ಪೂರ್ತಿ ನಾಶವಾಗುತ್ತದೆಂತ ನಾನು ನಂಬುತ್ತೇನೆ.

ಈ ಹುಳವೊಂದೇ ಕಿತ್ತಳೆ ಗಿಡದ ನಾಶಕ್ಕೆಂತ ತಿಳಿಯಬೇಡಿ. ಗಿಡಗಳನ್ನು ಹತ್ತಿರ ಬೆಳೆಸುವದರಿಂದಲೂ, ಗಿಡಗಳಿಗೆ ಗೊಬ್ಬರ ಹಾಕದ ಕಾರಣದಿಂದಲೂ ಇರಬಹುದು. ಭೂಮಿಯ ಸತ್ವಕ್ಕೆ ಮಿತಿ ಇದೆ. ಗಿಡಗಳು ಫಲ ಬಿಡುವದರಿಂದ ಭೂಮಿಯ ಸಾರ ಕಡಿಮೆಯಾಗುವದರಿಂದ ಗಿಡಗಳಿಗೆ ಒಳ್ಳೆ ಗೊಬ್ಬರ ಹಾಕುವದು ಬಹಳ ಅವಶ್ಯ.

ಇನ್ನೊಂದು ದೊಡ್ಡ ಕೇಡನ್ನುಂಟುಮಾಡುವ ರೋಗವುಂಟು. ಇದರಲ್ಲಿ ಚಿಕ್ಕ ಕೊನೆಗಳು ಒಣಗುತ್ತವೆ. ಈ ರೋಗವು ಬಂದು ತರದ ಬೂಷ್ಟು ಕಲೆಯಿಂದ ಬರುವದಾಗಿದೆ. ಗಿಡಗಳಿಗೆ ಹುಳ ತಗಲಿ ಗೊಬ್ಬರವಿಲ್ಲದೆ ಬಲಹೀನವಾಗಿರುವಾಗ ಈ ಬೂಷ್ಟು ಕಲೆಯು ಬಹಳ ಕಾಟ ಕೊಡುತ್ತದೆ. ಆದ್ದರಿಂದ ಬೋರರನ್ನು ಹೋಗಲಾಡಿಸಿ ಗಿಡಗಳಿಗೆ ಗೊಬ್ಬರ ಹಾಕಿದರೆ ಈ ರೋಗ ಪ್ರಬಲವಾಗುವದಿಲ್ಲ.

ಇನ್ನೂ ಕೆಲವು ವಿಷಯಗಳಿವೆ. ಈ ಹೊಟ್ಟೆಗಳು ಎಲ್ಲಾ ಹೊಟ್ಟೆಗಳಂತೆ ಆಹಾರ ಪದಾರ್ಥಗಳಾಗಿವೆ. ಇನ್ನೊಂದು ತರದ ಹುಳವು ಈ ಹೊಟ್ಟೆಗಳನ್ನು ತಿಂದು ಹಾಕುತ್ತದೆ. ಆದರೆ ಅಂಥಾ ಹುಳಗಳು ಸಾಕಷ್ಟು ಇಲ್ಲ. ಆದ್ದರಿಂದ ಒಣ ಕಡ್ಡಿಗಳನ್ನು ಮುರಿಯುವದೇ ಉಪಾಯ.

ಕೊಡಗು ವ್ಯವಸಾಯದ ಇಲಾಖೆಯವರು ಗಿಡಗಳ ಚಿಕ್ಕ ಕೊನೆಗಳನ್ನು ಪರೀಕ್ಷಿಸುತ್ತಾ ಇರುತ್ತಾರೆ. ಸಕಾಲದಲ್ಲಿ ಎಚ್ಚರಿಕೆ ನನ್ನ ಸಲಹೆಗಳನ್ನೊಳಗೊಂಡ ಹಸ್ತಪತ್ರಿಕೆಯೊಂದನ್ನು ಪ್ರಕಟಿಸುತ್ತಾರೆ. ಆಗ ತೋಟಗಾರರು ಅದರಲ್ಲಿ ನಾನು ಹೇಳಿದಂತೆ ಮಾಡಬೇಕು. ಇಲಾಖೆಯವರು ಸುತ್ತುತ್ತಾ ಸಲಹೆಗಳನ್ನು ಕೊಡುತ್ತಾರೆ. ಅದರಂತೆ ನಡಿಸಿದರೆ ಸಾಕು. ಮೂರು ವರ್ಷದಲ್ಲಿ ಹುಳವಿರುವದಿಲ್ಲವೆಂತ ನಾನು ಖಾತರಿ ಮಾಡುತ್ತೇನೆ. ಬರ್ಜ ಬಹಳಿಲ್ಲ; ಮರಕ್ಕೆ ಏರಬೇಕಾದರೆ ಸಾಕು. ಈ ಹಾವು ಸರಕಾರದ ಪರೀಕ್ಷೆಗೆ ಹೋಗುವದಿಲ್ಲ. ಕಡ್ಡಿ ಮುರಿಯುವ ಆಳಿಗೆ ಕೊಡಬೇಕಾದದ್ದು.

("ಕಾಫಿಬೋರರ" ಮುಂದುವರಿಯುವುದು.)

ಮನುಷ್ಯತ್ವ.

(ಬರೆದು ಬಂದದ್ದು)

ಸ್ವದೇಶೀಯರೇ, ಹಿಂದುಗಳಾದ ನಾವು ಇಷ್ಟು ಹೀನಸ್ಥಿತಿಯಲ್ಲಿರಲು ಕಾರಣವೇನೆಂದು ಹುಡುಕಿ ನೋಡಿದರೆ, ನಾವು ಮನುಷ್ಯತ್ವವನ್ನು ಕಳೆದುಕೊಂಡಿರುವುದರಿಂದಲೇ ಅಲ್ಲದೆ ಬೇರೆಯಲ್ಲವು. ಮಹಮ್ಮದೀಯರು ಹಿಂದು ದೇಶವನ್ನು ಜಯಿಸಿದಂದಿನಿಂದ ಇಂದಿನವರೆಗೆ, ಅಂದರೆ ಸುಮಾರು ಒಂದು ಸಾವಿರ ವರುಷಗಳ ಪರಿಯಂತರ ನಾವು ಬೇರೆಯವರಿಂದ ಆಳಲ್ಪಟ್ಟದ್ದರಿಂದ, ದಾಸತ್ವವೆಂಬುದು ನಮ್ಮ ರಕ್ತದೊಳಗೆ ಸಹ ಸೇರಿಕೊಂಡಿರುವುದು. ಈಗ ನಮ್ಮ ಮುಖ್ಯ ಕರ್ತವ್ಯವು ಈ ದಾಸತ್ವವನ್ನು ಹೋಗಲಾಡಿಸುವುದರಲ್ಲಿದೆ. ಪ್ರತಿ ಒಬ್ಬ ಸಹೋದರ ಸಹೋದರಿಯರೂ ಈ ವಿಷಯಕ್ಕೆ ಚನ್ನಾಗಿ ನಿಗ ಕೊಡಬೇಕಾದುದು ಕರ್ತವ್ಯವಲ್ಲವೆ? ಹಾಗಾದರೆ ಇದನ್ನು ಹೋಗಲಾಡಿಸುವ ರೀತಿ ಹೇಗೆ? ನಮಗೆ ಈ ದಿನವೇ ಸ್ವರಾಜ್ಯ ಸಿಕ್ಕಿದರೆ ಈ ಕುಂದು ಕೊರತೆಯು ನಮ್ಮನ್ನು ಬಿಟ್ಟು ಹೋಗುವುದೆ? ಖಂಡಿತವಾಗಿಯೂ ಪೂರ್ತಿಯಾಗಿ ಹೋಗಲಾರದು. ಹಾಗಾದರೆ ಇದನ್ನು ಹೇಗೆ ತೆಗೆದು ಹಾಕುವ? ಇದನ್ನು ಹೋಗಲಾಡಿಸಬೇಕಾದರೆ ನಾವೆಲ್ಲರೂ ನಮ್ಮ ಚಿತ್ತವನ್ನು ಶುದ್ಧಗೊಳಿಸಬೇಕಾಗಿದೆ. ಚಿತ್ತ ಶುದ್ಧಿಯಾಗಬೇಕಾದರೆ ನಮ್ಮ ಪವಿತ್ರರಾದ ಋಷಿವರ್ಯರು ಬರೆದಿಟ್ಟಿರುವ ವೇದ, ಗೀತೆ, ಪುರಾಣ ಮತ್ತು ಇತಿಹಾಸಗಳಲ್ಲಿನ ಧರ್ಮಗಳನ್ನು ಪ್ರತಿದಿನದ ಆಚರಣೆಯಲ್ಲಿ ತರಬೇಕಾಗಿದೆ. ಬಾಲಕರು ಬಾಲಿಕೆಯರು, ತಂದೆ, ತಾಯಿಗಳು, ವ್ಯಾಪಾರಿಗಳು ಮತ್ತು ವ್ಯವಸಾಯಕರು, ತಾಬೇದಾರರು, ಯಜಮಾನರು ಮತ್ತು ಗುರುಗಳು ಮತ್ತು ರಾಜರು ಸಹ ತಾವು ಆತ್ಮ ವಸ್ತುವೆಂದು ತಿಳಿದುಕೊಳ್ಳಬೇಕಾಗಿದೆ. ಇದೊಂದನ್ನು ತಿಳಿಯದ್ದರಿಂದಲೇ ನಮ್ಮ ಹಿಂದು ದೇಶದಲ್ಲಿ ಮಾತ್ರವಲ್ಲ ಇಡೀ ಪ್ರಪಂಚದಲ್ಲಿಯೂ ಸಹ ಬಹಳ ಅನ್ಯಾಯಗಳು ನಡೆಯುತ್ತಿರುವವು. ಆದ್ದರಿಂದ ನಮ್ಮ ಮೊದಲ ಕರ್ತವ್ಯವು ನಾವು ಪ್ರತಿ ಒಬ್ಬರೂ ಆತ್ಮವಸ್ತುವೇ ಎಂಬುದನ್ನು ತಿಳಿದುಕೊಳ್ಳಬೇಕಾದುದು. ಇಷ್ಟು ಮಾಡಿದರಾಯಿತೇ? ಎಂದಿಗೂ ಆಗಲಿಲ್ಲ. ಮತ್ತೆ ನಮ್ಮ ಇತರ ಸಹೋದರ ಮತ್ತು ಸಹೋದರಿಯರಲ್ಲಿಯೂ ಸಹ ನನ್ನಲ್ಲಿರುವಂತ ಆತ್ಮನೇ ನೆಲೆಯಾಗಿರುವನೆಂಬುದನ್ನು ತಿಳಿಯಬೇಕಾಗಿದೆ. ನಾನು ಹೇಳುವುದು ಬರಿ ಧ್ವನಿಯಲ್ಲ, ಅಥವಾ ಸ್ವಪ್ನದ ಮಾತಲ್ಲ. ನನ್ನಲ್ಲಿರುವ ಜೀವವಿರುವದು ನಿಜವಾದರೆ ಅಥವಾ ಯಾರಾದರೂ ನನಗೆ ಮಾತ್ರ ಜೀವವಿದೆ, ನನ್ನ ಆಳಿಗೆ ಜೀವವಿಲ್ಲ, ನಾನು ರಾಜನು ನನಗೆ ಜೀವವಿದೆ, ನನ್ನ ಪ್ರಜೆಗಳಿಗೆ ಜೀವವಿಲ್ಲ, ನಾನೊಬ್ಬ ದೊಡ್ಡ ಗಜೆಟೆಡ್ ಆಫೀಸರು ನನಗೆ ಮಾತ್ರ ಜೀವವಿದೆ ನನ್ನ ತಾಬೇದಾರರಿಗೆ ಇಲ್ಲವು, ನಾನೊಬ್ಬ ದೊಡ್ಡ ಕಾಫಿ ಪ್ಲಾಂಟರು ನನ್ನ ತೋಟದಲ್ಲಿ [illegible] ನನಗೆ ಜೀವವಿಲ್ಲವೆಂಬದಾಗಿ ಹೇಳಬಲ್ಲರೆ? [illegible] ಯಾರೂ ಹೀಗೆ ಹೇಳಲಾರರಲ್ಲ! ಹಾಗೆಂದರೆ ಜೀವವೆಂದರೇನು, ಆತ್ಮದ ಮತ್ತೊಂದು ಹೆಸರು, ಇಷ್ಟೇ ಅಲ್ಲದೆ ಹೇಗೆ [illegible] ಯುದ್ಧವರೂ ಸಮಾನವಾಗಿ ಸೇರಿಂದು ಕರೆಯುವವನೋ ಅದೇ ರೀತಿ ಆತ್ಮನು ನಮ್ಮ ಶರೀರದ ಸಂಪ್ರದಾಯದಿಂದ ಜೀವನೆಂದು ಕರೆಯಲ್ಪಡುವನು. ನಾವು ಈಗ ಏನನ್ನು ತಿಳಿದ ಹಾಗಾಯಿತು? ಆತ್ಮನು ಎಲ್ಲರಲ್ಲಿಯೂ ಇರುವನು ಎಂಬುವನ್ನು ತಿಳಿದೆನು. ಹಾಗಾದರೆ ಈ ಆತ್ಮನು ಒಬ್ಬನಲ್ಲಿ ದೊಡ್ಡದು ಮತ್ತೊಬ್ಬನಲ್ಲಿ ಚಿಕ್ಕದು ಎಂಬದಾಗಿ ಹೇಳುವವರು ಯಾರಾದರುಂಟೇ? ಹಾಗಿದ್ದರೂ ಅವರನ್ನು ಮನುಷ್ಯರೆಂದು ಭಾವಿಸುವರೇ ಹೊರತು ಮನುಷ್ಯರೆಂದು ಎಣಿಸಲಾಗದು. ಎಲ್ಲರಲ್ಲೂ ಆತ್ಮವನ್ನು ಏಕವೆಂದು ತಿಳಿದ ಮೇಲೆ ಹೀಗಾದ ಮೇಲೆ ನಾವು ಎಲ್ಲರಲ್ಲೂ ಈ ಆತ್ಮ ಒಂದನ್ನು ನೋಡಬೇಕಲ್ಲವೆ? ಇದೀಗ ನಾವು ಮಾಡದಿರುವುದು. ಎಲ್ಲರಲ್ಲಿಯೂ ಪ್ರತಿ ಒಬ್ಬನೂ ಈ ಆತ್ಮವನ್ನು ನೋಡುವನಾದರೆ ಲೋಕದಲ್ಲಿ ನಡೆಯುತ್ತಿರುವ ದುಷ್ಕೃತ್ಯಗಳು, ಅನ್ಯಾಯಗಳು, ಯುದ್ಧಗಳು, ದಾಸತ್ವವು ನಿಂತು ಹೋಗುವುವು, ಯಾರು ಎಷ್ಟು ಕಡಿಮೆ ಎಂಬ ವಾದವು [illegible].

ಆದುದರಿಂದ ನಾವು ಕಳೆದುಕೊಂಡಿರುವ ಮನುಷ್ಯತ್ವವನ್ನು ಪುನಃ ಪಡೆಯಬೇಕಾದರೆ ಈ ಆತ್ಮ ವಸ್ತುವನ್ನು ಎಲ್ಲರಲ್ಲಿಯೂ ನೋಡಬೇಕಾಗಿದೆ. ಸಿಕ್ಕಿದ ಒಡೆಯನ ನನ್ನ ಸಹೋದರ [illegible] ತಾನು ಆತ್ಮನೆಂದು ತನ್ನನ್ನು ಅಭಿಮಾನಿಸುವ ಯಜಮಾನನಲ್ಲ; ಇದೇ ಆತ್ಮನಿರುವಂತಹ, ಆದ್ದರಿಂದ ಆತನಲ್ಲಿ ನಾನು ಹೇಗೆ ವಾಡಿಗೆ ಕೆಲಸ ಮಾಡಿದರೂ ಆತನಲ್ಲಿರುವಷ್ಟು ಮನುಷ್ಯತ್ವವು ನನ್ನಲ್ಲೂ ಇದೆ ಎಂದು ತಿಳಿಯಬೇಕಾಗಿದೆ. ಕೆಲಸ ಮಾಡಿಸುವ ಯಜಮಾನ ಸಹೋದರನು ಸಹ ನನ್ನ ಆಳಿನಲ್ಲಿ ಇದೇ ಆತ್ಮವಿದೆ, ಆದ್ದರಿಂದ ಆತನ ಮನುಷ್ಯತ್ವಕ್ಕೂ ನನ್ನ ಮನುಷ್ಯತ್ವಕ್ಕೂ ಯಾವ ಭೇದವೂ ಇಲ್ಲವೆಂದು ಚನ್ನಾಗಿ ತಿಳಿಯಬೇಕಾಗಿದೆ. ಇದೇ ರೀತಿ ದೊಡ್ಡ ರಾಜನೂ ಸಹ ತನ್ನ ಪ್ರಜೆಯನ್ನು ನೋಡಬೇಕಾಗಿದೆ, ಪ್ರಜೆಯೂ ಸಹ ಈ ಭಾವನೆಯಿಂದಲೇ ರಾಜನನ್ನು ನೋಡಬೇಕಾಗಿದೆ. ಗಜೆಟೆಡ್ ಆಫೀಸರು ಸಹ ತನ್ನ ತಾಬೇದಾರರನ್ನು ಈ ರೀತಿ ಕಾಣಬೇಕಾಗಿದೆ, ಮತ್ತು ತಾಬೇದಾರರೂ ಸಹ ಇವರನ್ನು ಮನಃಪೂರ್ತಿಯಾಗಿ ತಿಳಿದುಕೊಂಡು ಅದರಂತೆ ನಡೆಯಬೇಕಾಗಿದೆ. ದೊಡ್ಡ ಪ್ಲಾಂಟರು ಸಹ ತನ್ನ ಆಳುಗಳನ್ನು ಈ ರೀತಿ ಪ್ರೀತಿಸಬೇಕಲ್ಲದೆ, ಆಳುಗಳೂ ಸಹ ತಮ್ಮ ಮನುಷ್ಯತ್ವವನ್ನು ತಿಳಿದು ಯಜಮಾನನನ್ನು ಪ್ರೀತಿಸಬೇಕಾಗಿದೆ. ಉಪಾಧ್ಯಾಯರುಗಳು ಸಹ ತಮ್ಮ ವಿದ್ಯಾರ್ಥಿಗಳನ್ನು ಈ ರೀತಿ ನೋಡಬೇಕಾಗಿದೆ, ವಿದ್ಯಾರ್ಥಿಗಳು ಸಹ ತಾವೆಲ್ಲರೂ ಆತ್ಮವಸ್ತುವೆಂಬುದನ್ನು ತಿಳಿದುಕೊಂಡು ತಮ್ಮ ಉಪಾಧ್ಯಾಯರ ಕುಂದುಕೊರತೆಗಳನ್ನು ನೋಡದೆ ಅವರನ್ನು ಪ್ರೀತಿಸುತ್ತಾ ಇರಬೇಕಲ್ಲವೆ? ಇದೇ ಅಲ್ಲ, ಹಿಂದುಗಳು ಮಹಮ್ಮದಿಯ ಸಹೋದರರನ್ನು ಸಹ ಈ ರೀತಿಯಿಂದಲೇ ಕಾಣಬೇಕಾಗಿದೆ. ಮಹಮ್ಮದಿಯರು ಹಿಂದುಗಳನ್ನು ಇದೇ ಕಣ್ಣಿನಿಂದ ನೋಡಬೇಕಾಗಿದೆ. ಹಿಂದೂ ಮಹಮ್ಮದಿಯರೂ, ಯೂರೋಪಿಯನರನ್ನು ಇದೇ ರೀತಿಯಿಂದ ನೋಡಬೇಕಾಗಿದೆ, ಅಲ್ಲದೆ ಯೂರೋಪಿಯನರೂ ಸಹ ಇದನ್ನು ಗಮನಕ್ಕೆ ತೆಗೆದುಕೊಂಡು ಹಿಂದುಗಳನ್ನೂ ಮಹಮ್ಮದಿಯರನ್ನೂ ಅದೇ ರೀತಿಯಿಂದ ನೋಡಬೇಕಲ್ಲದೆ, ಆಫ್ರಿಕಾ ನೀಗ್ರೊ ಜನರನ್ನು ಸಹ ಹಾಗೆಯೆ ನೋಡಬೇಕಲ್ಲವೆ? ಮೊಕೆಯರಾದ ಜಂಗಮರು ಇವನ್ನು ಎಲ್ಲಾ ಚನ್ನಾಗಿ ಅರಿತುಕೊಳ್ಳಬೇಕಾಗಿದೆ.

ಇದನ್ನು ಅರಿತುಕೊಂಡರೆ ಏನನ್ನು ಅರಿತಂತಾಯಿತು? ನಾವು ಎಲ್ಲರನ್ನೂ ಏಕರೀತಿಯಿಂದ ಪ್ರೀತಿಸಬೇಕೆಂದಲ್ಲವೆ? ಇದೀಗ ನಮ್ಮ ಹಿಂದು ದೇಶಕ್ಕೆ ಮಾತ್ರವಲ್ಲ, ಪ್ರಪಂಚಕ್ಕೇನೆ ಬೇಕಾದ ಒಂದು ಅವಶ್ಯಕವಿದೆ. ನಾವು ಸಹೋದರ ಸಹೋದರಿಯರೆಲ್ಲರೂ ಪ್ರಪಂಚದ ಎಲ್ಲರನ್ನೂ ಪ್ರೀತಿಸಬೇಕಾದುದೇ ನಮ್ಮ ಮುಖ್ಯ ಕರ್ತವ್ಯವಾಗಿದೆ. ಆದುದರಿಂದ ನಾವೆಲ್ಲರು—ಹಿಂದುಗಳೇ ಆಗಲಿ, ಮಹಮ್ಮದಿಯರೇ ಆಗಲಿ—

ಈ ಆತ್ಮವಸ್ತು ಎಂಬುದನ್ನು ತಿಳಿದುಕೊಂಡು ಈ ಆತ್ಮವನ್ನೇ ಇತರರಲ್ಲೂ ನೋಡುತ್ತಾ ಬಂದರೆ ಆಗ ತಾನೆ ಪ್ರಪಂಚದಲ್ಲಿ ನಾಗರಿಕತೆಯು ಇದೆ ಎಂದು ಹೇಳಲಾಗುವುದು. ನಮಗೆ ಸ್ವತಂತ್ರವು ಬೇಕಾದರೆ ಇನ್ನೊಬ್ಬನಿಗೂ ಅದೇ ಆತ್ಮವಾಗಿರುವಾಗ ನಾವು ಆ ಸ್ವತಂತ್ರವನ್ನು ಕೊಡಬೇಡವೇ? ಹೀಗೆ ಮಾಡದಿದ್ದಕೆ ನಮ್ಮಲ್ಲಿ ಮನುಷ್ಯತ್ವವು ಇಲ್ಲವೆಂದಾಯಿತಲ್ಲ!

ಹಾಗಾದ ಮೇಲೆ ನಾವೆಲ್ಲರೂ ಆತ್ಮವಸ್ತುವೆಂಬುದನ್ನು ತಿಳಿದುಕೊಂಡು ನಮ್ಮ ಹೃದಯದಿಂದ ದಾಸತ್ವವನ್ನು ತೆಗೆದು ಹಾಕುವ ಆಗ ತಾನೆ ಮನುಷ್ಯತ್ವವು ತಾನಾಗಿ ಬೆಳಗುವುದು. ಆತ್ಮವೆಂಬುದು ಏನೆಂದು ತಿಳಿದಿರಿ? ಅದೇ ಪರಮಾತ್ಮನ ಒಂದು ಅಂಶವಲ್ಲವೇ. ಅಂದರೆ ನಾವೆಲ್ಲರೂ—ಹುಡುಗನೇ ಆಗಲಿ, ಆಳಾಗಲಿ ರಾಜನಾಗಲಿ, ಹೆಂಗಸಾಗಲಿ ಆಫೀಸರನಾಗಲಿ, ಮುಸ್ಲಿಯಾಗಲಿ ಯಾ ಗುಪಿಯಾಗಲಿ—ಪರಬ್ರಹ್ಮ ವಸ್ತುವಿನ ಒಂದೊಂದು ಕಿಡಿಗಳಾಗಿವೆ. ಎದ್ದೇಳಿರಿ ನೀವುಗಳೆಲ್ಲರೂ ಪರಮಾತ್ಮ ವಸ್ತುವೇ ಈ ರೂಪಾಗ ನಿಮಗೇಕೆ ಹೆದರಿಕೆ. ಯಾವ ಕೆಲಸವಲ್ಲಿದ್ದರೂ ತಾನೆ ಏನಾಯಿತು. ಧೈರ್ಯಗೊಳ್ಳಿರಿ. ರಾಮನಾಗಲು, ಕೃಷ್ಣನಾಗಲೂ, ಅರ್ಜುನನಾಗಲೂ ಭೀಮನಾಗಲು ಅಭಿಮನ್ಯುನಾಗಲೂ, ಕರ್ಣನಾಗಲೂ, ಸೀತಾದೇವಿಯಾಗಲೂ ಚಂದ್ರಮತಿಯಾಗಲೂ ನಳ, ದಮಯಂತಿಯರಾಗಲೂ, ಸ್ಯಾಕ್ರೆಟಿಸ್ ಸತ್ಯವಾನ್‌ನಾಗಲೂ ಪ್ರಯತ್ನಿಸಿರಿ. ಯುರೋಪಿಯನರಲ್ಲರೂ ಯೇಸುಕ್ರೈಸ್ತನಾಗಲೂ ಮತ್ತು ನೀರಿಯಾಗಲೂ ಸೆಯಿಂಟ್‌ಪಾಲ್ ಆಗಲೂ ಯತ್ನಿಸಿರಿ. ಮಹಮ್ಮದೀಯರು ಪರಮಾತ್ಮನಾದ ಮಹಮ್ಮದ್ ಆಗಲು ಯತ್ನಿಸಿರಿ. ಪಾರ್ಶಿಗಳು ಜೋರಾಸ್ಟ್ರ ಆಗಲು ಯತ್ನಿಸಿರಿ. ಆಗಲ್ಲವೇ ಲೋಕದಲ್ಲಿ ಸತ್ಯವು ನೆಲೆಗೊಳ್ಳುವುದು. ಮನುಷ್ಯತ್ವವು ಉಳಿಯುವುದು!

ಕೆಟ್ಟ ಚಟಗಳು.

ರಾಗ—ಕಾಂಬೋದಿ ತಾಳ ಝಂಪಾ

ಕಲಿಯುಗದಿ ಜನರೇನು ಮರುಳರಯ್ಯಾ ‖ ಪಲ್ಲ ‖

ಎಸರಾದ ನೀರೊಳಗೆ ಕಸದ ಪುಡಿಯನ್ನಿರಿಸಿ ಹಸನಾದ ಹಾಲು ಸಕ್ಕರೆಯ ಬೆರಸಿ। ನಮಕಿನೊಳಗೇಳುತಲೆ। ಮುಸುಕಿನಲ್ಲೇ ತಾವು। ಬಿಸಿಬಾಯ ಹಚ್ಚಿ ಕಸ। ವಿಸಿ ಎಡುವರಯ್ಯೋ ‖ ೧ ‖

ಬಗೆ ಒಗೆಯ ಬೀಡಿಗಳ। ಮಿಗೆ ಸೇದುತಲೆ ತಾವು, ಹೊಗೆ ಬಿಡುತ ನಿರ್ದಯದಿ ತಿರುಗುತಿಹರಯ್ಯೋ। ಮಿಗೆಪೇಳಲಾರೆ ನಾ ಬಿಗಪಾತನಾ ನನು। ಗೆ ಬರುವದೀ ಜನರ ಬಗೆಯನ್ನು ನೋಡಿ ‖ ೨ ‖

ಮೂಸೆ ಮೇಲ್ ಕೈಹಾಕಿ। ನಾಸಿಪುಡಿ ಡಬ್ಬಿಯನು। ನೋಸಿನಿಂಬಿಡದು ತೆಗೆಯುತ್ತಲದನು। ಹಾನುಗೈಯೊಳು ಸುರಿದು। ನೋಸಿನೂಬೆರಳಿನಿಂ ನಾಸಿಕದ ಹೊರಳೆಯೊಳು ತಂಬುತಿಹರಯ್ಯೋ ‖ ೩ ‖

ಹೆಂಡದಂಗಡಿಗ್ಹೋಗಿ। ಬ್ರಾಂಡಿಯನು ಕುಡಿಯುತಲಿ। ರಂಡೆಯರ ಮನೆಯೊಳಗೆ ಕಾಲಕಳೆದು ‖ ಹೆಂಡರನ ಬಡಿಯುತಲಿ। ಪುಂಡರ ಮಾಳ್ಪರೈ। ಬಂತು ನೋಡಬ್ಯಾಗದೆನ್ನಿಂದ ಹರಿಯೇ ‖ ೪ ‖

ಬಿಡಿಸು ದುಷ್ಟ ಚಟಗಳಿಂ। ತೊಡಗಿಸು ಸುಮಾರ್ಗ-ದೊಳ್। ಒಡಲಿಗಾಭರನೆ ತಡಮಾಡದೀಗ ‖ ಕಡುದಯವ ತೋರ್ಪುದೈ। ಬಡ ಒಕ್ಕಲ ಜನರೊಳಗೆ। ಒಡೆಯ ಶ್ರೀಪುಷ್ಪ ಪುರೇಶ ವೆಂಕಟೇಶ ‖ ೫ ‖

ಲೋ॰ ಭ॰ ವಾಸುದೇವಾಚಾರ್ಯ ಪುರೋಹಿತ

ನಮ್ರತೆಯ ಆವಶ್ಯಕತೆ.

(ಮೋ. ಕ. ಗಾಂಧಿ)

ಒಂಗಾಲದಲ್ಲಿ ಕೆಲಸಗಾರರೊಡನೆ ಮಾತನಾಡ ಪಾಗ ತನ್ನ ಮತ್ತು ತನ್ನ ಜೊತೆ ಕೆಲಸಗಾರರ ಬ್ರಹ್ಮಚರ್ಯಕ್ಕಾಗಿ ತನಗೆ ಜನರು ಮನ್ನಣೆ ಕೊಡಬೇಕೆಂದು ಹೇಳುತ್ತಿದ್ದ ಒಬ್ಬ ಯುವಕನನ್ನು ನೋಡಿದೆನು. ಮನ್ನಣೆಯನ್ನು ಹೊಂದಲು ಅವನು ತನ್ನ ಅಧಿಕಾರವನ್ನು ತೋರಿಸಿದ ಕ್ರಮವೂ ಅವನು ತೋರಿಸಿದ ಆತ್ಮ ವಿಶ್ವಾಸವೂ ನನಗೆ ಅಸಹ್ಯವಾಗಿ ತೋರಿದವು. ಅವನು ತನಗೆ ಗೊತ್ತಿಲ್ಲದ ವಿಚಾರಗಳನ್ನು ಕುರಿತು ಮಾತನಾಡುತ್ತಿದ್ದನೆಂದು ನನಗೆ ತೋರಿತು. ಅವನ ಜೊತೆ ಕೆಲಸಗಾರರು ಈ ಹಕ್ಕನ್ನು ನಿರಾಕರಿಸಿದರು. ಆ ಯುವಕನಿಗೆ ನಾನು ಪುನಹ ಪ್ರಶ್ನೆ ಮಾಡಿದ್ದಲ್ಲಿ ಅವನೂ ಈ ಹಕ್ಕನ್ನು ಸ್ಥಾಪಿಸಲು ಅಸಮರ್ಥನಾದನು. ದೇಹದಿಂದ ಪಾಪವನ್ನಾಚರಿಸದೆ ಇದ್ದರೂ ಮನಸ್ಸಿನಲ್ಲಿ ಪಾಪಮಾಡಿದರೆ ಒಬ್ಬನು ಬ್ರಹ್ಮಚಾರಿ ಎನ್ನಿಸಲಾರನು. ಎಷ್ಟು ಸೌಂದರ್ಯವತಿ ಸ್ತ್ರೀಯನ್ನಾದರೂ ನೋಡಿ ವಿಚಲಿತನಾಗದೆ ಇರಲಾಗದವನು ಬ್ರಹ್ಮಚಾರಿಯಲ್ಲ. ಅವಶ್ಯವಿದ್ದುದರಿಂದ ದೇಹವನ್ನು ಸಂಯಮದಲ್ಲಿರಿಸುವವನು ಒಳ್ಳೆಯದನ್ನೆ ಮಾಡುವನು. ಆದರೂ ಅವನು ಬ್ರಹ್ಮಚಾರಿಯಲ್ಲ. ಪವಿತ್ರ ಶಬ್ದಗಳನ್ನು ಮನಬಂದಂತೆ ಉಪಯೋಗಿಸಿ ಅವುಗಳ ಬೆಲೆಯನ್ನು ಕಡಿಮೆ ಮಾಡಲಾಗದು. ನಿಜವಾದ ಬ್ರಹ್ಮಚರ್ಯಕ್ಕೆ ಇರುವ ಪರಿಣಾಮಗಳನ್ನು ಪರೀಕ್ಷೆ ಮಾಡಿ ಕಂಡುಕೊಳ್ಳಬಹುದು. ಈ ಗುಣವನ್ನು ಅಭ್ಯಾಸಮಾಡುವುದು ಬಹಳ ಪ್ರಯಾಸವಿದೆ. ಇದನ್ನು ಅನೇಕರು ಸಾಧಿಸುತ್ತಾರೆ. ಆದರೆ ಜಯಹೊಂದುವವರು ಬಹಳ ಕಡಿಮೆ. ಸನ್ಯಾಸಿಗಳ ವೇಷವನ್ನು ಧರಿಸಿ ಅಲ್ಲಲ್ಲಿ ತಿರುಗುವವರಲ್ಲಿ ಅನೇಕರು ಸಾಮಾನ್ಯ ಜನರ ಹಾಗೆಯೇ ಬ್ರಹ್ಮಚಾರಿಗಳಲ್ಲ. ಸಾಮಾನ್ಯ ಮನುಷ್ಯನು ತಾನು ಬ್ರಹ್ಮಚಾರಿಯೆಂದು ನಟಿಸುವುದಿಲ್ಲವಾದುದರಿಂದ ಅವನೇ ಶ್ರೇಷ್ಠನು. ಅವನ ಮನಸ್ಸಿನ ಗುಣದೋಷಗಳು ಭಗವಂತನಿಗೆ ಗೊತ್ತಿವೆ ಎಂದು ಅವನು ತೃಪ್ತನಾಗಿರುವನು. ತಾನು ಅನ್ಯಾಯಮಾಡಿದರೆ ಆ ಮಟ್ಟಿಗೆ ತಾನು ಅನ್ಯಾಯಗಾರನನ್ನಿಸಿಕೊಳ್ಳಲು ಅವನು ಹಿಂಜರಿಯುವುದಿಲ್ಲ. ಅವನು ಮಾಡಿದ ಒಳ್ಳೆಯದನ್ನು ಲೋಭಿಯಂತೆ ಕಾಪಾಡಿ ಇಡುವನು. ಅದನ್ನು ಎಲ್ಲರ ಮುಂದೆ ತೋರಿಸದಿರುವಷ್ಟು ನಮ್ರತೆಯು ಅವನಲ್ಲಿ ಇರುವುದು. ಇಂಥ ಮನುಷ್ಯನಿಗೆ ಒಳ್ಳೆಯದಾಗುವ ಸಂದರ್ಭವುಂಟು. ಸಂಯಮದ ವಿಚಾರವನ್ನೆ ಅರಿಯದೆ ತನ್ನಲ್ಲಿ ತಾನು ತೃಪ್ತಿಪಡುವ ಸನ್ಯಾಸಿಗಾದರೂ ಹಾಗಲ್ಲ. ಸಾರ್ವಜನಿಕ ಕೆಲಸಗಾರರೂ ಸನ್ಯಾಸಿಗಳ ಉಡುಪನ್ನು ಧರಿಸದಿದ್ದರೂ ಸ್ವಾರ್ಥತ್ಯಾಗ ಬ್ರಹ್ಮಚರ್ಯ ಇತ್ಯಾದಿಗಳ ಕುರಿತು ಮನಸ್ಸಿನ ಮಾತನಾಡಿ ತಮ್ಮ ಮತ್ತು ತಮ್ಮ ಸೇವಾಕಾರ್ಯದ ಹೆಸರಿಗೆ ಕುಂದು ತರುವ ಸಂಭವವಿದೆ.

ಸಾಬರಮತಿ ಆಶ್ರಮದ ಬಗ್ಗೆ ನಿಯಮಗಳನ್ನು ರಚಿಸಿದಾಗ ನಾನು ಅವುಗಳನ್ನು ಸಮಾಲೋಚನೆಗಾಗಿ ಕೆಲವು ಮಂದಿ ಮಿತ್ರರಿಗೆ ಕಳುಹಿಸಿದೆನು. ಒಂದು ಪ್ರತಿಯನ್ನು ಸ್ವರ್ಗೀಯ ಸರ್ ಗುರುದಾಸ ಬ್ಯಾನರ್ಜಿಯವರಿಗೂ ಕಳಿಸಿದೆನು. ಅವರು ಅದನ್ನು ಸ್ವೀಕರಿಸಿ ಬರೆಯುವಾಗ ನಿಯಮಗಳಲ್ಲಿ ಸೂಚಿತವಾದ ಪ್ರತಿಜ್ಞೆಗಳಿಗೆ ನಮ್ರತೆಯ ವ್ರತವನ್ನೂ ಸೇರಿಸಬೇಕೆಂದು ಸೂಚಿಸಿದರು. ಈಗಿನ ನವಯುವಕರಲ್ಲಿ ನಮ್ರತೆಯ ಅಭಾವವು ಕಂಡುಬರುವುದೆಂದು ಅವರು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ನಾನು ಅವರ ಅಭಿಪ್ರಾಯದ ಬೆಲೆಯನ್ನೂ ನಮ್ರತೆಯ ಆವಶ್ಯಕತೆಯನ್ನೂ ಸಂಪೂರ್ಣವಾಗಿ ತಿಳಿದಿರುವೆನಾದರೂ ಅದನ್ನು ಪ್ರತಿಜ್ಞಾ ವಚನಗಳಲ್ಲಿ ಸೇರಿಸುವುದರಿಂದ ಅದರ ಗೌರವವನ್ನು ಕಡಿಮೆ ಮಾಡಿದಂತಾಗುವುದೆಂದು ಅವರಿಗೆ ತಿಳಿಸಿದೆನು. ಯಾರು ಅಹಿಂಸೆ ಮತ್ತು ಬ್ರಹ್ಮಚರ್ಯಗಳ ಪಾಲನೆಯನ್ನು ಮಾಡುವರೋ ಅವರು ಅವಶ್ಯವಾಗಿಯೂ ನಮ್ರರಾಗಿ ಇರುವರೆಂದು ನಾವು ತಿಳಿದಿರಬೇಕು. ನಮ್ರತಾಹೀನ ಸತ್ಯವು ಒಂದು ಉದ್ಧತ ಹಾಸ್ಯಚಿತ್ರವಾಗುವುದು. ಯಾರು ಸತ್ಯವನ್ನು ಆಚರಿಸಲು ಇಚ್ಛಿಸುತ್ತಾನೋ ಅವನಿಗೆ ಅದು ಎಷ್ಟು ಕಠಿಣವೆಂದು ತಿಳಿಯುವುದು. ಲೋಕವು ಅವನ ವಿಜಯದ ಬಗ್ಗೆ ಅವನ ಪ್ರಶಂಸೆಯನ್ನು ಮಾಡಬಹುದು, ಅದಕ್ಕೆ ಅವನ ಸೋಲಿನ ಸಂದರ್ಭಗಳ ಪರಿಚಯವಿರುವುದಿಲ್ಲ. ಸತ್ಯಪರಾಯಣನಾದ ಮನುಷ್ಯನು ನಮ್ರನಾಗುವ ಅವಶ್ಯಕತೆ ಇದೆ. ಯಾರು ಇಡೀ ಸಂಸಾರದೊಡನೆ—ಶತ್ರುಗಳೊಂದಿಗ ಕೂಡ—ಪ್ರೇಮವನ್ನು ಬೆಳಸಲು ಇಚ್ಛಿಸುವನೋ ಅವನಿಗೆ ಕೇವಲ ತನ್ನ ಬಲದಮೇಲೆ ಹೀಗೆ ಮಾಡುವುದು ಎಷ್ಟು ಅಸಂಭವವೆಂದು ತಿಳಿಯುವುದು. ಅಹಿಂಸೆಯ ತತ್ವಗಳನ್ನು ಗ್ರಹಣಮಾಡಬೇಕಾದರೆ ಅವನು ಮೊದಲು ತಾನು ಧೂಳಿಯಂತೆ ಅಲ್ಪನೆಂದು ತಿಳಿಯಬೇಕು. ಅವನ ಪ್ರೇಮವು ಬೆಳೆದಂತೆ ನಮ್ರತೆಯೂ ಬೆಳೆಯುತ್ತದೆ. ಯಾವ ಮನುಷ್ಯನೂ ಪ್ರತಿಯೊಬ್ಬ ಸ್ತ್ರೀಯನ್ನೂ ತನ್ನ ಸಹೋದರಿಯಾಗಲೀ ತಾಯಿಯೆಂದು ತಿಳಿಯಲು ಇಚ್ಛಿಸುವನೋ ಅವನು ಕ್ಷುದ್ರವಾದ ಧೂಳಿಗಿಂತಲೂ ತಾನು ಅಲ್ಪನೆಂದು ಭಾವಿಸಬೇಕು. ಅವನು ದೊಡ್ಡ ಗುಂಡಿಯ ಬದಿಯಲ್ಲಿ ನಿಂತಿರುವನು. ತಲೆಯು ಸ್ವಲ್ಪ ತಿರುಗಿತೆಂದರೆ ಕೆಳಗೆ ಬೀಳುವನು. ಅವನು ತನ್ನ ಗುಣಕಥನವನ್ನು ತನ್ನ ಮನಸ್ಸಿಗೆ ಕೂಡ ಹೇಳುವ ಸಾಹಸವನ್ನು ಮಾಡಲಾಗದು. ಯಾಕೆಂದರೆ ಇನ್ನೊಂದು ಕ್ಷಣದಲ್ಲಿ ಅವನ ಗತಿ ಏನಾಗುವುದೆಂದು ಅವನು ತಿಳಿಯಲಾರನು. ಅಭಿಮಾನವು ವಿನಾಶಕ್ಕೂ ಗರ್ವವು ಪತನಕ್ಕೂ ಕಾರಣವಾಗುವುದೆಂದು ಅವನು ತಿಳಿಯಬೇಕು. ಕೆಳಗಿನ ಗೀತಾವಚನವು ಸತ್ಯವೇ ಇದೆ.

ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ
ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ‖

ಎಲ್ಲಿಯವರೆಗೆ ಅಭಿಮಾನವು ನಾಶವಾಗುವುದಿಲ್ಲವೋ ಅಲ್ಲಿಯವರೆಗೆ ಈಶ್ವರ ದರ್ಶನವು ಸಾಧ್ಯವಿಲ್ಲ. ಅವನು ಈಶ್ವರನನ್ನು ಕಾಣಬೇಕೆಂದಿರುವುದಾದರೆ ತಾನು ಶೂನ್ಯವತ್ ಆಗಬೇಕು. ಈ ಸಂಘರ್ಷಪೂರ್ಣ ಸಂಸಾರದಲ್ಲಿ ತಾನು ಜಯಿಸಿರುವೆನೆಂದು ಯಾರು ಹೇಳಬಲ್ಲರು? ನಮ್ಮಿಂದಲ್ಲ, ಈಶ್ವರನಿಂದಲೇ ವಿಜಯಪ್ರಾಪ್ತಿಯಾಗುವುದು.

ಈ ಗುಣಗಳ ಬೆಲೆಯನ್ನು ಕಡಿಮೆಮಾಡಿ ನಮಗೆಲ್ಲ ಅವುಗಳಿಗೆ ಅಧಿಕಾರವಿದೆಯೆಂದು ತೋರಿಸಲು ಯತ್ನಿಸದಿರೋಣ. ಭೌತಿಕ ವಿಷಯದಲ್ಲಿ ಸತ್ಯವಾದ ಮಾತು, ಆಧ್ಯಾತ್ಮಿಕ ವಿಚಾರದಲ್ಲಿಯೂ ಸತ್ಯವಿದೆ. ಒಂದು ವಿಶೇಷ ಯುದ್ಧದ ತಾತ್ಕಾಲಿಕ ವಿಜಯಕ್ಕಾಗಿ ಯುರೋಪ ದೇಶವು ಮಿಲಿಯಗಟ್ಟಲೆ ಜನರ ಪ್ರಾಣವನ್ನು ಬಲಿಕೊಟ್ಟಿತಾದರೆ ಸಂಸಾರದಲ್ಲಿ ಒಬ್ಬ ಪೂರ್ಣ ಮನುಷ್ಯನ ಉದಾಹರಣೆಯು ಉಳಿಯುವಂತೆ ಮಾಡಬೇಕಾದ ಪ್ರಯತ್ನದ ಆಧ್ಯಾತ್ಮಿಕ ಯುದ್ಧದಲ್ಲಿ ಮಿಲಿಯಗಟ್ಟಲೆ ಜನರು ನಾಶವಾಗಬೇಕಾದರೆ ಆಶ್ಚರ್ಯವೇಕೆ? ಆಸೀಮ ನಮ್ರತೆಯಿಂದ ಯತ್ನಿಸುವುದು ಮಾತ್ರ ನಮ್ಮ ಕೆಲಸ.

ಈ ಉಚ್ಚಗುಣಗಳ ಪ್ರಾಪ್ತಿಗಾಗಿ ಮಾಡುವ ಪರಿಶ್ರಮವೇ ಅದರ ಪುರಸ್ಕಾರವಿರುತ್ತದೆ. ಇವನ್ನು ಉಪಯೋಗಿಸಿ ವ್ಯಾಪಾರಮಾಡಲೆಳಸುವವನು ತನ್ನ ಆತ್ಮದ ನಾಶವನ್ನು ತಂದುಕೊಳ್ಳುವನು. ಸದ್ಗುಣಗಳು ವ್ಯಾಪಾರಕ್ಕಾಗಿ ಇರುವುದಿಲ್ಲ. ನನ್ನ ಸತ್ಯ ನನ್ನ ಅಹಿಂಸೆ ನನ್ನ ಬ್ರಹ್ಮಚರ್ಯ ಇವು ನನಗೂ ನನ್ನ ಸೃಷ್ಟಿಕರ್ತನಿಗೂ ಮಾತ್ರ ಸಂಬಂಧಪಟ್ಟ ವಿಷಯಗಳು. ಅವು ವ್ಯಾಪಾರದ ವಸ್ತುಗಳಲ್ಲ. ಅವುಗಳನ್ನು ಮಾರುವ ಸಾಹಸಮಾಡುವ ಯುವಕನು ನಾಶವನ್ನು ತಂದುಕೊಳ್ಳುವನು. ಈ ವಸ್ತುಗಳನ್ನು ತುಲನೆಮಾಡಲು ಯೋಗ್ಯವಾದ ತಕ್ಕಡಿ ಜಗತ್ತಿನಲ್ಲಿಲ್ಲ. ಅವು ಪರೀಕ್ಷೆಗೆ ಸಿಕ್ಕಿರುವ ವಸ್ತುಗಳು. ಆದ್ದರಿಂದ ಕೆಲಸಗಾರರಾದ ನಾವು ಈ ಗುಣಗಳನ್ನು ನಮ್ಮ ಆತ್ಮಶುದ್ಧಿಗಾಗಿ ಬೆಳಸಬೇಕು. ಜಗತ್ತು ನಮ್ಮ ಕೆಲಸಗಳನ್ನು ನೋಡಿ ನಮ್ಮ ವಿಚಾರಮಾಡಲಿ. ಮಹಾಜನರ ಸಹಾಯವನ್ನು ಅಪೇಕ್ಷಿಸುವ ಯಾವದೇ ಸಂಸ್ಥೆ ಅಥವಾ ಆಶ್ರಮಕ್ಕೆ ಒಂದು ಭೌತಿಕ ಪ್ರಯೋಜನದ ಉದ್ದೇಶವಿರಬೇಕು—ಉದಾಹರಣೆಗಾಗಿ ಒಂದು ಆಸ್ಪತ್ರೆ, ಶಾಲೆ ನೂಲುವುದು ಮತ್ತು ನೇಯುವುದು ಇತ್ಯಾದಿ. ಈ ಕೆಲಸಗಳ ಯೋಗ್ಯತೆಯನ್ನು ತಿಳಿದುಕೊಳ್ಳಲು ಜನರಿಗೆ ಅಧಿಕಾರವಿದೆ. ಅವರಿಗೆ ತೃಪ್ತಿಯಾದರೆ ಮಾತ್ರ ಅವರು ಸಹಾಯಮಾಡುವರು. ಈ ಶರ್ತಗಳು ಸ್ಪಷ್ಟವಾಗಿಯೇ ಇವೆ. ವ್ಯವಸ್ಥಾಪಕರಲ್ಲಿ ಯಥಾರ್ಥತೆಯೂ ಯೋಗ್ಯತೆಯೂ ಇರಬೇಕು. ಶಿಕ್ಷಕನ ಯೋಗ್ಯತೆ ಇಲ್ಲದಿದ್ದರೆ ಅವನು ಯಥಾರ್ಥ ಬುದ್ಧಿಯವನಾದರೂ ಉಪಾಧ್ಯಾಯನಾಗಲು ಅವನಿಗೆ ಅಧಿಕಾರವಿರಲಾರದು. ಸಾರ್ವಜನಿಕ ಸಂಸ್ಥೆಗಳು ಕ್ರಮವಾದ ಮತ್ತು ಪರಿಶೋಧಿಸಲ್ಪಡುವ ಲೆಕ್ಕಗಳನ್ನು ಮಹಾಜನರ ಮುಂದಿರಿಸಬೇಕು. ವ್ಯವಸ್ಥಾಪಕರು ಈ ಶರ್ತಗಳಿಗೆಲ್ಲ ಒಪ್ಪಬೇಕಾಗುವುದು. ಅವರ ಸಚ್ಚಾರಿತ್ರವನ್ನು ಜನರ ಆದರಕ್ಕೂ ಆಶ್ರಯಕ್ಕಾಗಿಯೂ ಮುಂದೆ ತರುವುದು ಯೋಗ್ಯವಲ್ಲ.

(ಸತ್ಯಾಗ್ರಹೀ)

ಆರೋಗ್ಯ ಸೂತ್ರ ಸಂಗ್ರಹ.

(1) ಪ್ರತಿದಿನವೂ ತಪ್ಪದೆ ಎರಡು ಮೂರು ಬಟ್ಟಲಿನಷ್ಟು ಶುದ್ಧವಾದ ನೀರನ್ನು ಕುಡಿಯಿರಿ! ಏಕೆಂದರೆ, ಸ್ನಾನಾದಿಗಳಿಂದ ಬಾಹ್ಯಶುದ್ಧಿಯು ಹೇಗೋ ಅದಕ್ಕಿಂತಲೂ ದೇಹದೊಳಗಿನ ಶುದ್ಧಿಯು ಬಹಳ ಮುಖ್ಯವಾದುದು.

(2) ನಮ್ಮ ಪಾಲಿಕ್ಕೆ ಸಹಜಲಭ್ಯವಾಗಿರುವ ಶುದ್ಧವಾದ ನೀರೇ ಒಳ್ಳೇ ಜೀವನೌಷಧವು. ಪರಿಮಳ ಮಾಧುರ್ಯ ಮುಂತಾದುವುಗಳಿಂದ ಅದನ್ನು ಪರಿಷ್ಕರಿಸುವ ಪ್ರಯತ್ನವನ್ನು ಮಾಡಬೇಡಿರಿ.

(3) ಸುಖ ನಿದ್ರೆಯನ್ನು ಅನುಭವಿಸಿದಷ್ಟೂ ಆಯುಃಕಾಲವು ಹೆಚ್ಚುವುದೆಂಬುದನ್ನು ಮರೆಯಬೇಡಿರಿ.

(4) ನಿಮ್ಮ ಹೃದಯಕ್ಕೆ (ಮನಸ್ಸಿಗೆ) ಆಗಾಗ ಸ್ವಲ್ಪ ಮಟ್ಟಿಗಾದರೂ ವಿಶ್ರಾಂತಿಯನ್ನು ಕೊಡುತ್ತಿರಬೇಕು. ಹಾಗಿಲ್ಲದಿದ್ದರೆ ಅದೇ ನಿಮಗೆ ಪೂರ್ಣ ವಿಶ್ರಾಂತಿಯನ್ನು ಕೊಟ್ಟು ಬಿಡುವುದು (ಎಂದರೆ ಪ್ರಾಣಹಾನಿಗೆ ಕಾರಣವಾಗುವುದು)

(5) ರಾತ್ರಿಯ ಪೂರ್ವ ಭಾಗದಲ್ಲಿ ಒಂದು ಘಂಟೆಯ ಕಾಲದ ಸುನಿದ್ರೆಯು ಅಪರಾರ್ಧದಲ್ಲಿ ಎರಡು ಘಂಟೆಗಳ ನಿದ್ರೆಗೆ ಸಮಾನವು.

(6) ದೇಹಾರೋಗ್ಯವೂ, ನಾಡಾಯಿ ಮುಂತಾದ ದುರ್ವ್ಯಸನಗಳ ನಿವೃತ್ತಿಯೂ ಯಾವಾಗಲೂ ಒಂದಾಗಿ ಸೇರಿ ಅನ್ಯೋನ್ಯ ಮೈತ್ರಿಯಿಂದಿರುವುವು. ಅವುಗಳಲ್ಲಿ ಒಂದನ್ನು ಬಿಟ್ಟು ಮತ್ತೊಂದು ನಿಲ್ಲಲಾರದು.

(7) ದೇಹಕ್ಕೆ ವ್ರಣಗಳು ಹೇಗೋ ಮನಸ್ಸಿಗೆ ಚಿಂತೆ ವ್ಯಸನ ಅಪಮಾನ ಮುಂತಾದವು ಬಹಳ ಹಾನಿಕರಗಳು.

(8) ಮನುಷ್ಯನಿಗೆ ಜೀವಯಾತ್ರೆಯಲ್ಲಿ ಯಾವಾಗಲೂ ನೊರಳಾದ ಸ್ಥಳಗಳು ಸಹಜವಾಗಿ ಸಿಕ್ಕುತ್ತಲೇ ಇರುವುವು. ಆದಷ್ಟು ಹೆಚ್ಚಾಗಿ ಸೂರ್ಯ ರಶ್ಮಿಯಲ್ಲಿ ಕಾಲಕಳೆಯುವುದನ್ನು ಅಭ್ಯಾಸ ಮಾಡಿಯೇ ಕಲಿಯಬೇಕು.

ಅ ಪ

FOR SALE.

Property of Mr G K Maitin

About 9½ acres good land situat above Abial Estate, about 6 miles fro Mercara, suitable for coffee, and go bungalow site

For particulars apply —

W G L PARSONS,
DALQUARREN,
CHETHALLI, P O
COOK

ನೋಟೀಸ್.

ಕೊಡಗು ವಿದ್ಯಾಭಿವೃದ್ಧಿ ಸಂಘದ ಜನರಲ್ ಮೀಟಿಂಗ್ ಈ ಜುಲೈ ತಾರೀಕು 20ನೇ ಸೋಮವಾರ 5 ಗಂಟೆಗೆ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲಿ ನಡಿವುದರಿಂದ ಚಂದಾದಾರರೆಲ್ಲರೂ ದಯವಿಟ್ಟು ಹಾಜರಾಗಬೇಕಾಗಿ ಕೇಳಿಕೊಳ್ಳಲಾಗಿದೆ.

ಮಡಿಕೇರಿ, ಯಂ ಭೀಮಯ್ಯ
ತಾ 11—7—25. ಗೌ॰ ಸೆಕ್ರಟರಿ.

ಚಂದಾದಾರರಲ್ಲಿ ವಿನಂತಿ.

'ಕೊಡಗು" ಪತ್ರಿಕೆ ಬೇಕೆಂದು ಅಪ್ಪಣೆ ಕೊಟ್ಟು, ಆ ತಾರೀಕಿನಿಂದ ಒಂದು ತಿಂಗಳೊಳಗೆ ಬಾಕಿ ರೂಪಾಯಿಗಳನ್ನು ಪಾವತಿ ಮಾಡುತ್ತೇವೆಂದೂ, ಹಾಗೆ ಪಾವತಿಮಾಡಲು ತಪ್ಪಿದರೆ ವಿ. ಪಿ ಮೂಲಕ ಪತ್ರಿಕೆಯನ್ನು ಹೊಂದಿಕೊಳ್ಳುತ್ತೇವೆಂದೂ ಆರ್ಡರ್ ಫಾರಮಿಗೆ ರುಜುಮಾಡಿ ಕಳುಹಿಸಿದ ಚಂದಾದಾರರು ತಮ್ಮ ವಾಯಿದೆಯೊಳಗೆ ಬಾಕಿ ರೂಪಾಯಿಗಳನ್ನು ಪಾವತಿ ಮಾಡಬೇಕಾಗಿಯೂ, ಇಲ್ಲವಾದರೆ ಅವರಿಗೆ ವಿ ಪಿ ಕಳುಹಿಸಲಾಗುವುದೆಂದೂ ಈ ಮೂಲಕ ತಿಳಿಸಲಾಗಿದೆ. ವಿ ಪಿ ಕಳುಹಿಸಿದಲ್ಲಿ ವಿ ಪಿ ಚಾರ್ಜ 3 ಆಣೆ ಹೆಚ್ಚು ಚಂದಾದಾರರು ಕೊಡಬೇಕಾಗುವುದು

ಮೇನೇಜರ್

ವರ್ತಮಾನ ಸಂಗ್ರಹ.

ಒಳದೇಶ.

ಕುಂಬಳಗೇರಿ ಗ್ರಾಮದ ಆಜ್ಜಿಪ್ಪಿರ ಮುತ್ತಣ್ಣನೆಂಬ ಹುಡುಗನೊಬ್ಬನು ಕಳೆದವಾರ ಕತ್ತಿಗೆ ನೇಣು ಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡನಂತೆ. ಕಾರಣವು ಇನ್ನೂ ತಿಳಿಯಬಂದಿರುವದಿಲ್ಲ

ಕೊಡಗು ವಿದ್ಯಾಭಿವೃದ್ಧಿ ಫಂಡಿನ ಜನರಲ್ ಮೀಟಿಂಗು ತಾ 20ರಲ್ಲು ಮಡಿಕೇರಿಯಲ್ಲಿ ನಡೆಯುವುದು.

ಪಾಲಿಬೆಟ್ಟದ ಮಿ ಸಿ ವಿ ವೆಂಕಟಸುಬ್ಬರವರನ್ನು ಪೊನ್ನಂಪೇಟೆಗೆ ವೆಟರಿನರಿ ಅಸಿಸ್ಟೆಂಟ್ ಸರ್ಜನರಾಗಿ ನೇಮಿಸಿರುವರು ಇವರು ಈಗ ಮಡಿಕೇರಿಯಲ್ಲಿರುವರಾದರೂ ಕೆಲವು ದಿವಸಗಳಲ್ಲಿಯೇ ಪೊನ್ನಂಪೇಟೆಗೆ ಹೋಗುವರು

ದೇಶದ ಕೆಲವು ಕಡೆಗಳಿಗೆ ಮಡಿಕೇರಿಯಂತೆ ಕಳೆದ ಶುಕ್ರವಾರದಿಂದಲೂ, ಬಾಕಿ ಕಡೆಗಳಿಗೆ ಕಳೆದ ಆದಿತ್ಯವಾರದಿಂದಲೂ ಮಳೆಯು ಪುನಹ ಪ್ರಾರಂಭವಾಗಿ ಜೋರಾಗಿ ಹೊಡೆಯುತ್ತಾ ಇದೆ ಕೆಲವು ಕಡೆಗಳಲ್ಲಿ ಉಕ್ಕಲಿಕ್ಕೂ ತೊಂದರೆಯಾಗಿದೆಯಂತೆ

ಮೆಯಿಲ್ ಬಸ್ಸು ಬೆಳಿಗ್ಗೆ 7½ ಗಂಟೆಗೆ ಮಡಿಕೇರಿಯಿಂದ ಹೊರಡುವದಾದರೂ ಟಪ್ಪಾಲನ್ನು ಈ ಮೊದಲಿನಂತೆ ಮುಂದಿನ ರಾತ್ರಿ 7 ಗಂಟೆಗೆ ಕಟ್ಟುತ್ತಾರೆಂದು ಪುನಹ ತಿಳಿಯುತ್ತೇವೆ

ಇರಟಿ ಕಡುವಿನಲ್ಲಿ ಮತ್ತು ಕೂಟುಹೊಳೆಯಲ್ಲಿ ಕಳೆದ ವರ್ಷ ಮುರಿದುಹೋದ ಸೇತುವೆಗಳು ರಿಪೇರಿಯಾಗದೆ ಈಗ ನೀರಿನ ಪ್ರವಾಹವು ಹೆಚ್ಚಾಗಿರುವುದರಿಂದ ನಾಲ್ಕೈದು ದಿವಸಗಳಿಂದ ಆ ದಾರಿಗಾಗಿ ಮಲೆಯಾಳ ಮತ್ತು ಅತ್ತಿತ್ತ ಹೋಗಿ ಬರುತಿರುಗಾಡುವುದು ನಿಂತುಹೋಗಿದೆಯೆಂದು ತಿಳಿಯಬರುತ್ತದೆ

'ಕೊಡಗು" ಆಫೀಸಿನ ಹುಡುಗನೊಬ್ಬನು ಎರಡು ತಿಂಗಳ ಹಿಂದೆ ಮಣಿಯಾರ್ಡರ್ ಮಾಡಲು ತೆಗೆದುಕೊಂಡು ಹೋಗಿದ್ದ 20 ರೂ. ಪೈಕಿ 10 ರೂಪಾಯಿಯನ್ನು ಪೋಸ್ಟಾಫೀಸಿನಲ್ಲಿ ಒಬ್ಬ ಬಿಲ್ಲವನು ಕದ್ದದಕ್ಕಾಗಿ ಅವನಿಗೆ ಪ್ರೊಬೆಷನರಿ ಅಸಿಸ್ಟೆಂಟ್ ಕಮಿಷನರವರ ಕೋರ್ಟಿನಲ್ಲಿ ಆರು ತಿಂಗಳು ಸಜ ವಿಧಿಸಲಾಯಿತು

ತಾ 13ನೇ ಸೋಮವಾರ ಪೊನ್ನಂಪೇಟೆಯಲ್ಲಿ 3 ಇಂಚು 28 ಸೆಂಟು ಮಳೆ ಬಿದ್ದಿರುತ್ತದೆಂದು ವರ್ತಮಾನ

ಕೊಡ್ಲಿಪೇಟೆಯಲ್ಲಿ ಬಸ್ವೇಶ್ವರ ದೇವಸ್ಥಾನದಲ್ಲಿ ವೀರಶೈವರ ವಿದ್ಯಾಭಿವೃದ್ಧಿ ಸಂಘದ ಮೀಟಿಂಗು ಮಹಾಮೊಸ್ತರ್ ಮ ಕೆ ಎನ್. ಕರಿಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಈ ಫಂಡನ್ನು ರಿಜಿಸ್ಟರ್ ಮಾಡಿಸುವಂತೆ ತೀರ್ಮಾನಿಸಿ ಈ ಬಗ್ಗೆ ನಿಯಮಗಳನ್ನು ತಯಾರಿಸಲು ಒಂದು ಕಮಿಟಿಯನ್ನು ನೇಮಿಸಿದಲ್ಲದೆ ಫಂಡನ್ನು ವೃದ್ಧಿಪಡಿಸುವ ವಿಷಯ ಚರ್ಚೆ ನಡೆಯಿತು.

ವೀರಾಜಪೇಟೆಯ ಸಕ್ಕಿನ ಕಟ್ಟಡಗಳ ಚಾರ್ಜಿನಲ್ಲಿದ್ದ ಮೆ. ಪಾಲಂದಿರ ಬೋಪಣ್ಣಪ್ಪನವರನ್ನು ಸೋಮವಾರಪೇಟೆ ಸಕ್ಕಿನಿಗೆ ಅಲ್ಲಿದ್ದ ಮೆ ಮಂಡೆಯಂಡ ಮುದ್ದಣ್ಣನವರನ್ನು ಮಡಿಕೇರಿಗೂ ವರ್ಗಾಯಿಸಿರುವರು ಈ ಸಂದರ್ಭ ತಾ 14ರಲ್ಲು ಸೋಮವಾರಪೇಟೆ ಕ್ಲಬ್ಬಿನವರು ಮುದ್ದಣ್ಣನವರಿಗೆ ಒಂದು ಔತಣವನ್ನು ಕೊಟ್ಟರು

ಮಡಿಕೇರಿ ಫ್ರೇಜರ್‌ಪೇಟೆ ರಸ್ತೆಯಲ್ಲಿ ಗಂಧದ ಕೋಟೆಯ ಬಳಿಯಲ್ಲಿರುವ ತಗ್ಗಿನಲ್ಲಿ ಕಾವೇರಿ ನದಿಯ ನೀರು ತುಂಬಿಕೊಂಡು ತಾ 15 ರಿಂದ ಮೋಟಾರು ಗಾಡಿ ವಗೈರೆ ದಾಟುವುದು ನಿಂತಿತ್ತು

ಕೋರ್ಟು ಖಚೇರಿಯ ವರ್ತಮಾನ.

ಮೆ ಸೋಮೆಯಂಡ ಅಚ್ಚಯ್ಯನೆಂಬವರು ಅಮ್ಮತ್ತಿ ನಾಡು ಖಚೇರಿಯಲ್ಲಿ 1921ನೇ ಇಸವಿ ಜೂನ್ ತಿಂಗಳಲ್ಲಿ ಒಬ್ಬರಿಗೆ ಸರ್ಕಲ್ ಶ್ಯಾನುಭೋಗನಾಗಿದ್ದಾಗ ತನ್ನ ಸರಕಾರ ಕೆಲಸಕ್ಕೆ ಸೇರಿದ್ದ ಸರ್ವೆ ಮಾಡಿದ್ದಕ್ಕಾಗಿ ಮ ಮಂಡೇಪಂಡ ಬಿದ್ದಯ್ಯನವರಿಂದ 6 ರೂಪಾಯಿ ಲಂಚ ತೆಗೆದುಕೊಂಡರೆಂದು ಪೋಲೀಸಿನವರು ಚಾರ್ಜುಮಾಡಿ ಕೊಡಗು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟಿನಲ್ಲಿ ವಿಚಾರ ನಡೆದ್ದು ಅಪರಾಧಿಗೆ ಕುಲಾಸಾಗಿದೆ ಮೊಕದ್ದಮ್ಮೆಯ ವಿದ್ಯಮಾನಗಳೇನಂದರೆ, ಮೆ ಬಿದ್ದಯ್ಯನವರು ಕೆಲವು ಭೂಮಿಬಾಣೆಯನ್ನು ಬೇರೆಯವರಿಂದ ಕೊಂಡಿದ್ದರು. ಸದರಿ ಸೊತ್ತಿನ ಬೌಂಡ್ರಿಯನ್ನು ತೋರಿಸಿಕೊಡಲಿಕ್ಕೆ ಸರ್ಕಲ್ ಶ್ಯಾನುಭೋಗರನ್ನು ಕಳುಹಿಸಿಕೊಡಬೇಕಾಗಿ ಪಾರುಪತ್ಯಗಾರರಿಗೆ ಬರಕೊಂಡರು. ಪಾರುಪತ್ಯೆಗಾರರು ಅಪರಾಧಿಯನ್ನು ಕಳುಹಿಸಿದರು ಈ ಬೌಂಡ್ರಿ ತೋರಿಸಿದ್ದಕ್ಕಾಗಿಯೇ ಸರಕಾರಕ್ಕೆ ಚಾರ್ಜು ಕೊಡಬೇಕೆಂತ ಕೇಳಿ ಅಪರಾಧಿಯು ತೆಗೆದುಕೊಂಡನೆಂತ ಮೆ ಬಿದ್ದಯ್ಯನವರು ಹೇಳುತ್ತಾರೆ ಪಾರುಪತ್ಯಗಾರರ ಹುಕುಂ ಮೇರೆ ಮಾಡಬೇಕಾದ ಕೆಲಸವನ್ನು ಜೂನ್ 10ನೇ ತಾರೀಕಿನ ಒಳಗೆ ತೀರಿಸಿವೆನೆಂದೂ, ಬೇರೆ ಬಾಣೆ ಜಾಗವನ್ನು ಸರ್ವೆಮಾಡಿ ವಿಂಗಡಿಸಿ ಕೊಡಬೇಕೆಂತ ಮೆ ಬಿದ್ದಯ್ಯನವರು ಕೇಳಿಕೊಂಡ ಮೇರೆ 11ನೇ ತಾರೀಕಿನಿಂದ 15ನೇ ತಾರೀಕಿನ ವರೆಗೆ ಈ ಸರ್ವೆಯನ್ನು ಮಾಡಿ ಇದರ ಫೀಸ್ ತಾನು ತೆಗೆದುಕೊಂಡದ್ದಾಗಿದೆಯೆಂತಲೂ 11ನೇ ತಾರೀಕಿನ ಅನಂತರ ತನಗೆ ಸರಕಾರಿ ಕೆಲಸವಿರಲಿಲ್ಲವೆಂತಲೂ ಅಪರಾಧಿಯು ವಾದಿಸಿದನು ಜೂನ್ ತಾರೀಕು 10ರ ವರೆಗೆ ಬದಲಿ ಕೆಲಸಕ್ಕೆ ನೇಮಿಸಿದ ಆರ್ಡರ್ ಇದ್ದರೂ 11ರಿಂದ 20ರ ವರೆಗೆ ಕೆಲಸವಿತ್ತೆಂಬದಕ್ಕೆ ಹುಕುಂ ಇಲ್ಲವೆಂತಲೂ 20ನೇ ತಾರೀಕಿನ ವರೆಗೆ ಸರಕಾರಿ ಕೆಲಸ ತನಗೆ ಇತ್ತೋ ಇಲ್ಲವೋ ಎಂಬ ಸಂಶಯವು ಅಪರಾಧಿಗೆ ಇದ್ದದ್ದರಿಂದ ಪ್ರೈವೇಟ್ ಕೆಲಸವನ್ನು ತೆಗೆದುಕೊಂಡದ್ದಾಗಿದೆಯೆಂತಲೂ ಬರೆದು ಅಪರಾಧಿಗೆ ಸಂಶಯದ ಫಲವನ್ನು ಕೊಟ್ಟು ಕುಲಾಸ್ ಮಾಡಿದರು

ಹಿಂದೂ ದೇಶ.

ಪಂಜಾಬು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಪಾಸಾಗಿರುವ ಗುರುದ್ವಾರ ಬಿಲ್ಲಿನ ಶರತ್ತುಗಳಿಗನುಸಾರವಾಗಿ ನಡೆಯುತ್ತೇವೆಂದು ಒಪ್ಪಿದರೆ ಕೈದುಮಾಡಲ್ಪಟ್ಟಿರುವ ಅಕಾಲಿ ಖಯಿದಿಗಳನ್ನು ಬಿಡುಗಡೆ ಮಾಡುವುದಾಗಿ ಪಂಜಾಬಿನ ಗವರ್ನರವರು ತಮ್ಮ ಭಾಷಣದಲ್ಲಿ ಹೇಳಿರುವರು

ಕಲ್ಕತ್ತಾ ಮುನ್ಸಿಪಾಲಿಟಿಯ ಅಧ್ಯಕ್ಷ ಪದವಿಗೆ ಬಂಗಾಳ ಸ್ವರಾಜ್ಯಪಾರ್ಟಿಯ ಮುಂದಾಳಾದ ಮಿ ಸೆನ್ ಗುಪ್ತರವರನ್ನು ಸ್ವರಾಜ್ಯ ಪಾರ್ಟಿಯವರು ಸೂಚಿಸಿರುವರು. ಈ ಮೊದಲು ದಿವಂಗತ ಸಿ ಆರ್ ದಾಸ್‌ರವರು ಅಧ್ಯಕ್ಷರಾಗಿದ್ದರು.

ಬೊಂಬಾಯಿ ಪ್ರಾಂತೀಕ ಲಿಬರಲ್ ನ್ಯಾಷನಲ್ ಕಾನ್ಫರನ್ಸು ಆಗಸ್ಟು ತಿಂಗಳಲ್ಲಿ ಪೂನಾದಲ್ಲಿ ಮಿ ಸಿ. ವೈ ಚಿಂತಾಮಣಿಯವರ ಅಧ್ಯಕ್ಷತೆಯಲ್ಲಿ ನಡೆಯಲಿಕ್ಕಿರುವುದು.

ಬೊಂಬಾಯಿ ರೈಲ್ವೇ ಸ್ಟೇಶನ್ ಆಫೀಸುಗಳಲ್ಲಿ ರಿಜಿಸ್ಟರ್ ಮಾಡುವ ಲಿಕಾಪತ್ತುಗಳ ನಕಲನ್ನು ಫೋಟೋ ಮೂಲಕ ತೆಗೆಯುವ ಏರ್ಪಾಡು ನಡೆಯುತ್ತಿದೆ ಇದನ್ನು ವಿರೋಧಿಸಿ ಪೂನಾದವರು ಪಬ್ಲಿಕ್ ಮೀಟಿಂಗಿನಲ್ಲಿ ಒಂದು ಠರಾವನ್ನು ಪಾಸು ಮಾಡಿರುವರು

ಚಿತ್ತರಂಜನ ದಾಸರ ಜ್ಞಾಪಕಾರ್ಥವಾಗಿ ಏನು ಮಾಡಬೇಕೆಂಬುದನ್ನು ನಿಶ್ಚಯಿಸಲಿಕ್ಕೆ ಕಲ್ಕತ್ತಾದ ಕಾರ್ಪೋರೇಶನಿನವರು ಒಂದು ಸ್ಪೆಶ್ಯಲ್ ಕಮಿಟಿಯನ್ನು ನೇಮಿಸಿರುವರು ಈ ಕೆಲಸಕ್ಕಾಗಿ ಒಂದು ಲಕ್ಷ ರೂಪಾಯಿ ಬೇಕಾಗುವುದೆಂದು ತೀರ್ಮಾನಿಸಿರುವರು

ಕೆಲವು ದಿನಗಳ ಹಿಂದೆ ಪ್ಯಾರಿಸ್ ಪಟ್ಟಣದಲ್ಲಿ ಸ್ವರ್ಗಸ್ಥರಾದ ಗ್ವಾಲಿಯರಿನ ಮಹಾರಾಜರವರ ಬೂದಿಯನ್ನು ತಾ 13ರಲ್ಲು ಅಲಹಾಬಾದಿನಲ್ಲಿ ಗಂಗಾನದಿಗೆ ಹಾಕಿದಾಗ ಒಂದು ಸಂಭ್ರಮದ ಮೆರವಣಿಗೆಯಾಯಿತು. ಅನೇಕ ಮುಂದಾಳುಗಳೂ, ಯೂರೋಪಿಯನ್ ಮತ್ತು ಇಂಡಿಯನ್ ಉದ್ಯೋಗಸ್ಥರೂ ಹಾಜರಿದ್ದರು.

ಲಾರ್ಡ್ ಬರ್ಕನ್‌ಹೆಡ್‌ರವರು ಹೌಸ್ ಆಫ್ ಲಾರ್ಡ್ಸಿನಲ್ಲಿ ಹಿಂದೂದೇಶದ ಮಾರ್ಪಾಡುಗಳ ವಿಷಯ ಮಾಡಿದ ಭಾಷಣವು ತುಂಬಾ ಅತೃಪ್ತಿಕರವೆಂದು ಇಂಡಿಯನ್ ಪತ್ರಿಕೆಗಳೆಲ್ಲಾ ಸೂಚಿಸಿರುವವು

ಕಾಮನ್‌ವೆಲ್ತ್ ಆಫ್ ಇಂಡಿಯಾ ಮಸೂದೆಯ ಸಲುವಾಗಿ ಡಾಕ್ಟರ್ ಆನಿಬೆಸಂಟರವರು ತಾ 9ರಲ್ಲು ಬೊಂಬಾಯಿಯಿಂದ ಇಂಗ್ಲಂಡಿಗೆ ಹೊರಟುಹೋದರು

ಮಹಾತ್ಮ ಗಾಂಧಿಯವರು ತಮ್ಮ ಬಂಗಾಳ ಪ್ರವಾಸವನ್ನು ತಾ. 11ರಲ್ಲು ಪುನಹ ಪ್ರಾರಂಭಿಸಿರುವರು

ವಿದೇಶ.

ರಿಫ್ ಜನರಿಗೆ ರಾಜಿಯ ಕರಾರುಗಳು ಒಂದು ನವೀನ ದಾಖಲೆಯನ್ನು ಫ್ರೆಂಚ್ ಮಂತ್ರಿಯವರು ಸೂಚಿಸಿರುವರು ತನ್ನ ರಾಜಿಯ ಶರತ್ತುಗಳನ್ನು ವರ್ತಮಾನಪತ್ರಗಳಲ್ಲಿ ಪ್ರಕಟಿಸಿ ರಿಫ್ ಜನರಲ್ಲಿ ಹಂಚುವರಂತೆ 'ಅವರು ಅದನ್ನು ನೋಡಿ ಅವರ ಮುಂದಾಳಾದ ಅಬ್ದುಲ್ ಕ್ರಿಮ್‌ರವರನ್ನು ರಾಜಿಗೆ ಒತ್ತಾಯಪಡಿಸುವರೆಂದು ಅವರ ಅಭಿಲಾಷೆಯಾಗಿರಬಹುದು.

ಚೈನಾದಲ್ಲಿ ಗಲಭೆಯು ಇನ್ನೂ ಕೊನೆಗಂಡಿರುವುದಿಲ್ಲ ತಾ 9ರ ರಾತ್ರಿ ಬ್ರಿಟಿಷ್ ಹಡಗುಗಳಿಗೆ ಸಾಮಾನುಗಳನ್ನು ಒದಗಿಸಿಕೊಡುವ ಚೈನಾದ ಒಂದು ಕಂಪೆನಿಯ ಕಟ್ಟಡಕ್ಕೆ ಬಾಂಬುಗಳು ಹಾಕಲ್ಪಟ್ಟವು ಮರಣವೇನೂ ಆಗಲಿಲ್ಲ. ಆಗಳ ಮುಷ್ಕರವು ನಡೆಯುತ್ತಲೇ ಇದೆ ಪರದೇಶೀಯ ಅಧಿಕಾರಿಗಳಿಗೂ ಚೈನಾದವರಿಗೂ ವಿರೋಧ ಅಭಿಪ್ರಾಯಗಳು ಮುಂದುವರಿಯುತ್ತಿವೆ ಕ್ಯಾಂಟನ್ ದ ಮೂಲಕ ವಿಮಾನಗಳು ಶೆಕಿಂಗಿಗೆ ತಲುಪಿವೆ ಬ್ರಿಟಿಷ್ ಬ್ಯಾಂಕುಗಳಿಗೆ ಬಹಿಷ್ಕಾರ ಹಾಕುವ ಏರ್ಪಾಡು ನಡೆಯುತ್ತಿದೆ

ದಕ್ಷಿಣ ಆಫ್ರಿಕದಲ್ಲಿ ವರ್ಣಭೇದದ (ಹಿಂದೀಯರಿಗೆ ವಿರೋಧವಾದ) ಮಸೂದೆಯನ್ನು ಅಲ್ಲಿಯ ಸೆನೆಟಿನವರು ಬಹುಮತದಿಂದ ತಿರಸ್ಕರಿಸಿರುವರು.

ಮಾರಾಟಕ್ಕೆ ತಯಾರಿವೆ.

ಬಗೆ ಬಗೆಯ ಚಕ್ರಾಗಳು ವೀರಾಜಪೇಟೆಯ ಬಿದ್ದರ್ ಸ್ಟೋರಿನಲ್ಲಿ ಮಾರಾಟಕ್ಕೆ ತಯಾರಿವೆ. ಹೆಚ್ಚಿನ ವಿವರಕ್ಕೆ ಈ ಕಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ಬಿ ಸಿ ಐಯ್ಯಪ್ಪ,
ಬಿದ್ದರ್ ಸ್ಟೋರ್ಸ್,
ವೀರಾಜಪೇಟೆ

FOR SALE·

Property of Maj H S Muller's

One 4/5 H P· Beordmone Precision single cylinder motor cycle and sidecar

For particulars apply to—

W G L PARSONS
DALQUARRIN,
CHETHALLI, P O
COORG

ನೋಟೀಸು.

1925ನೇ ಇಸವಿ ಜುಲೈ ತಾರೀಕು 20ನೇ ಸೋಮವಾರ ದಿನ ಮಧ್ಯಾಹ್ನ 2 ಗಂಟೆಗೆ ವೀರಾಜಪೇಟೆಯಲ್ಲಿ ಬಿದ್ದರ್ ಸ್ಟೋರ್ ಮಹಡಿಯಲ್ಲಿ 'ಕೊಡಗು' ಕಂಪೆನಿಯ ಶೇರುದಾರರ ಜನರಲ್ ಮೀಟಿಂಗು ಸೇರುವುದೆಂದು ಈ ಮೂಲಕ ತಿಳಿಸಲಾಗಿರುತ್ತೆ

ಆ ದಿನದಲ್ಲಿ ಈ ಕೆಳಗೆ ಕಂಡ ವಿಷಯಗಳು ಚರ್ಚಿಸಲ್ಪಡುತ್ತವೆ

1 1923—1924 ಮತ್ತು 1924—1925ನೇ ವರುಷಗಳ ಆಡಳಿತ ವರದಿಯನ್ನು ಮತ್ತು ಆದಾಯ ವೆಚ್ಚ ಮತ್ತು ಲಾಭನಷ್ಟಗಳ ಪಟ್ಟಿಗಳನ್ನೂ ಮತ್ತು ಲೆಕ್ಕ ಪರಿಶೋಧಕರ ಸರ್ಟಿಫಿಕೇಟನ್ನೂ ಸಭೆ ಸದಸ್ಯರ ಮುಂದೆ ಇಡುವುದು.

2 ಆಡಿಟರನ್ನು ನೇಮಿಸುವುದು

3 1923—1924 ಮತ್ತು 1924—1925ನೇ ವರುಷಗಳಿಗೆ ಆಡಿಟರವರಿಗೆ ಕೊಡಬೇಕಾದ ಫೀಜು ನಿಶ್ಚಯ ಮಾಡುವಿಕೆ

4 1921—1922ನೇ ವರುಷದ ವಸೂಲಾಗಬೇಕಾದ ಚಂದಾ ರೂಪಾಯಿಗಳ ವಿಷಯ

5 ಶೇರು ರೂಪಾಯಿಗಳು ಬಾಕಿಯಾಗಿರುವುದಕ್ಕೆ ಏನು ಮಾಡಬೇಕೆಂಬ ವಿಷಯ

6 ಡೈರೆಕ್ಟರುಗಳ ಚುನಾವಣೆ

ಕ ಅಚ್ಚಯ್ಯ,
ಕಾರ್ಯಾಧ್ಯಕ್ಷರು

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ.   ಸಂ.

- ❧ -

ವೇದಾಂತಸಂಘದವರ ವಂದನೆ

ಶ್ರೀರಾಮಕೃಷ್ಣ ಪರಮಹಂಸರ ಜನ್ಮೋತ್ಸವದ ಜಯಂತಿ ಉತ್ಸವವನ್ನು ನಡಿಸಲಿಕ್ಕೂ ಮತ್ತು ಶ್ರೀ ಸ್ವಾಮಿಗಳವರನ್ನು ಮದ್ರಾಸಿನಿಂದ ಕರೆಯಿಸಲಿಕ್ಕೂ ಹಣ ಮತ್ತು ಹಣ್ಣುಹಂಪಲುಗಳನ್ನು ಕಳುಹಿಸಿ ಸಹಾಯ ಮಾಡಿದ ಸರ್ವ ಮಹನೀಯರಿಗೂ ಮತ್ತು ಮಹಿಳೆಯರಿಗೂ ಈ ಮೂಲಕ ನಮ್ಮ ವಂದನೆಯನ್ನು ಅರ್ಪಿಸುತ್ತೇವೆ

ಇದಲ್ಲದೆ ಸ್ವಾಮಿಯವರ ವಾಸಕ್ಕೆ ತಮ್ಮ ಮನೆ (ಗೆಸ್ಟ್ ಹೌಸ್) ಯನ್ನು ಬಿಟ್ಟುಕೊಟ್ಟಿದ್ದ ಶ್ರೀ, ನಾಣಮ್ಮನವರನ್ನು ಎಷ್ಟು ವಂದಿಸಿದರೂ ಸ್ವಲ್ಪವೇ ಆಗಿದೆ

ಮತ್ತು ವಿಕ್ಟೋರಿಯಾ ಗೀರ್ಲ್ಸ್ ಸ್ಕೂಲಿನ ಮಾನ್ಯರಾದ ಶ್ರೀ ತಿ. ಸುಬ್ಬಾಶಾಸ್ತ್ರಿಯವರು ಸ್ವಾಮಿಗಳ ಪ್ರಯಾಣಕ್ಕೆ ಒಂದು ದಿನ ಮುನ್ನ ಮತ್ತು ಹಿಂದಿನ ದಿವಸಗಳಲ್ಲಿ ಕಡಿಮೆ ಚಾರ್ಜಿನಿಂದಲೂ ತಮ್ಮ ಕಾರುಗಳನ್ನು ಕೊಟ್ಟದ್ದಕ್ಕೆ ಅವರನ್ನು ಸಹ ವಂದಿಸುತ್ತೇವೆ

ಭಜನೆ ಮಾಡಲು ಸಹಾಯ ಮಾಡಿದ ನಮ್ಮ ಮಿತ್ರರವರನ್ನೂ ಸ್ವಾಮಿಯವರಿಗೆ ಅಡಿಗೆ ಮಾಡಲು ಒಪ್ಪಿಕೊಂಡ ಸಹೋದರರನ್ನೂ ನಾವು ಈ ವೇಳೆ ವಂದಿಸದಿದ್ದರೆ ನಮ್ಮ ಕರ್ತವ್ಯ ಮಾಡಿದಂತಾಗಲಿಲ್ಲ

ಸಕ್ರೆಟರಿ ವೇದಾಂತ ಸಂಘ

ಮಕ್ಕಳ ವಿದ್ಯಾಭ್ಯಾಸ

ಈಗಿನ ಪರಿಸ್ಥಿತಿಯಲ್ಲಿನ ಸ ಚಿಕ್ಕ ಚಿಕ್ಕ ಮಕ್ಕಳ ತಿಳುವಳಿಕೆಯು ಬಲವು ಅವರ ಕಾರಣದಿಂದಲೋ ಕಷ್ಟ ವಾಗುವಂತೆ ಕಂಡುಬರುತ್ತದೆ ಕೆಲವು ವರ್ಷಗಳ ಹಿಂದೆ ಅಂದರೆ ಸಾಧಾರಣ 1916—17ಕ್ಕೆ ಮೊದಲು ಎಂದು ಹೇಳಬಹುದು, ಫಸ್ಟ್ ಫಾರ್ಮುಗೂ ಸಹ ಎಲ್ಲಾ ಶಾಲೆಗಳಿಗೂ (ಬಂದರಷ್ಟು ಉಳಿದು) ಗ್ರಾಜುಯೇಟ್ ಉಪಾಧ್ಯಾಯರುಗಳೇ ಬೋಧಕರಾಗಿದ್ದರು ಆದರೆ ಇತ್ತೀಚಿನ ಕಾಲದಿಂದ ಗ್ರಾಜುಯೇಟ್ ಮಾಸ್ತರುಗಳನ್ನು ಕಡಿಮೆ ಮಾಡಿ ಸೆಕಂಡರಿ ಗ್ರೇಡ್ ಉಪಾಧ್ಯಾಯರುಗಳನ್ನು ಅವರ ಸ್ಥಳದಲ್ಲಿ ನಿಯಮಿಸಿ

ರುವರು. ಅಲ್ಲದೆ ಮೊದಲು ಸರ್ವಸಾಧಾರಣವಾಗಿ ಲೋವರ್ ತರಗತಿಗಳಲ್ಲಿಯೂ ಇಂಗ್ಲಿಷ್ ಭಾಷೆಯು ಬಾಲಕರ ಬಳಿಕೆಗೆ ಬರಲೆಂಬ ಆಲೋಚನೆಯಿಂದ ಕೆಲವು ಪಾಠಗಳನ್ನು ಇಂಗ್ಲಿಷಿನಲ್ಲಿಯೇ ಮಾಡುತ್ತಿದ್ದರು ಕ್ರಮೇಣ ಅದು ತಿದ್ದುಪಾಟಾಗಿ ಇಂಗ್ಲಿಷ್ ಪಾಠವೊಂದುಳಿದು ಇತರ ಪಾಠಗಳು ಕನ್ನಡ ಭಾಷೆಯಲ್ಲಿಯೇ ಕಲಿಸಲು ತೊಡಗಲಾಯಿತು. ಆಯಾ ತರಗತಿಯ ಪಠ್ಯ ಪುಸ್ತಕಗಳು ಎರಡು ವರ್ಷಕ್ಕೊಂದುಸರ್ತಿ ಬದಲಾಗುವ ಆಚರಣೆಯು ಬಹಳ ವರ್ಷಗಳಿಂದಲೂ ಇತ್ತು. ಆದರೆ ಈಗ ಕೆಲವು ವರ್ಷಗಳಿಂದ ಆ ಆಚರಣೆಯು ಕಂಡು ಬರುವುದಿಲ್ಲ. ಮ ಪಟ್ಸ್ ದೊರೆಗಳವರ ಎರಡನೆಯ ಇಂಗ್ಲಿಷ್ ಪಠ್ಯ ಪುಸ್ತಕವು ಮೊದಲು ನಾಲ್ಕನೇ ಕ್ಲಾಸಿನ ಪಠ್ಯ ಪುಸ್ತಕವಾಗಿತ್ತು. (1916) ಅನಂತರ ಸದರಿಪುಸ್ತಕವು ಫಸ್ಟ್ ಫಾರ್ಮಿಗೂ ಪಠ್ಯ ಪುಸ್ತಕವಾಯಿತು. ಮರು ವರ್ಷ ಸದರಿಯವರ ಮೂರನೆಯ ಪುಸ್ತಕವು ಫಸ್ಟ್ ಫಾರ್ಮಿಗೂ ನಾಲ್ಕನೆಯ ಪುಸ್ತಕವು ಸೆಕೆಂಡ್ ಫಾರ್ಮಿಗೂ ಪಠ್ಯ ಪುಸ್ತಕವಾಯಿತು. ಅಷ್ಟು ಕಠಿಣವಾದುದರಿಂದ ಆ ಭಾಷೆಯಲ್ಲಿ ಆಯಾಯ ತರಗತಿಯ ಬಾಲಕರು ಚೆನ್ನಾಗಿ ವೃದ್ಧಿಗೊಂಡಿದ್ದರು. ಆದರೆ ಈ ವರ್ಷ ಸದರಿ ಎರಡನೆಯ ಪುಸ್ತಕವು ಸೆಕೆಂಡ್ ಫಾರ್ಮಿನ ಬಾಲಕರಿಗೆ ಪಠ್ಯ ಪುಸ್ತಕವಾದುದು ಬಹಳ ಶೋಚನೀಯ; ಈ ಸ್ಟೇಂಡರ್ಡಿಗೆ ಸ್ವಲ್ಪ ಇನ್ನೂ ಕಠಿಣ ತರಹದ ಇಂಗ್ಲಿಷ್ ಪುಸ್ತಕವು ಅವಶ್ಯವೆಂದು ನಾನು ತಿಳಿಯುತ್ತೇನೆ. ಇದರ ಫಲಿತಾಂಶವೇನೆಂದರೆ, ಈಗ್ಗೆ ಎರಡು ಮೂರು ವರುಷಗಳ ಹಿಂದಿನ ಫಸ್ಟ್, ಸೆಕೆಂಡ್ ಫಾರ್ಮುಗಳ ವಿದ್ಯಾರ್ಥಿಗೂ ಈಗಿನ ಅದೇ ತರಗತಿಗಳ ವಿದ್ಯಾರ್ಥಿಗೂ ತಿಳುವಳಿಕೆಯಲ್ಲಿ ಬಹಳ ತಾರತಮ್ಯವಿರುವುದೆಂದು ಹೇಳಬಹುದು. ಬಾಲಕರಲ್ಲಿ ಪ್ರಬಂಧ ರಚನಾ ಶಕ್ತಿಯು (Composition) ಹೆಚ್ಚೇಕೆ ವಾಕ್ಯ ರಚನೆಯೂ ಬಹಳ ಕೆಳಗಿನ ತರಗತಿಗೆ ಇಳಿದು ಹೋಗಿರುವುದು. ಈ ವಿಷಯದಲ್ಲಿ ಬಾಲಕರ ಮುಂದಿನ ಅಭಿವೃದ್ಧಿಯನ್ನು ಬಯಸಿ ಸ್ವಲ್ಪ ಕಠಿಣ ತರಹದ ಪಠ್ಯ ಪುಸ್ತಕಗಳನ್ನಿಟ್ಟು ಅವರ ಅಭ್ಯಾಸ ಕ್ರಮವನ್ನು ಸ್ವಲ್ಪ ಹೈಯರ್ ಸ್ಟೇಂಡಾರ್ಡಿಗೆ ತರಲು ಶ್ರಮವಹಿಸಬೇಕಾಗಿ ಕೋರಿಕೆ

ಶಾಲೆಯ ಪಾಠ ಕ್ರಮದ ಸ್ಟೇಂಡಾರ್ಡ್ ಹಿಂದೆ ಉಳಿದುದರಿಂದ ಬಾಲಕರ ತಂದೆ ತಾಯಿಗಳು ತಮ್ಮ ಮಕ್ಕಳ ವಿದ್ಯಾವನ್ನೇ ಮುಖ್ಯವಾಗೆಣಿಸಿ ಮನೆಗೊಬ್ಬ ಅಧ್ಯಾಪಕನನ್ನು (Tutor) ನಿಯಮಿಸಿಕೊಳ್ಳಬೇಕಾಯಿತು. ಶಾಲಾಧ್ಯಾಯಪಕರು ಹೇಳುವುದೊಂದು, ಮನೆಮಾಸ್ಟರು ಕಲಿಸುವುದೊಂದು, ವಿದ್ಯಾರ್ಥಿಯು ಕಲಿಯುವುದೊಂದು ಈ ತರದ ಮೂರು ಮೂರು ವಿಧವಾಗಿ ಪರಿಣಮಿಸಿ ವಿದ್ಯಾರ್ಥಿಗೆ ಕೊನೆಗೆ ಅಪಲಾಭವೂ ದೊರೆತಂತೆ ತೋರುವುದಿಲ್ಲ. ಕಳೆದ ಸಂವತ್ಸರ ಹೈಸ್ಕೂಲಿನ ಹೆಡ್ಮಾಸ್ಟರು ಹೊಸದಾಗಿ ಮಾಡೆಲ್ ಸ್ಕೂಲಿನಲ್ಲಿಯೇ ಪಾಠ ಹೇಳಿದುದಾಯಿತು. ಆ ಕಾಲದ ಅವರ ಪಾಲಿಗೆ ಬಿದ್ದ ಹೈಸ್ಕೂಲ್ ತರಗತಿಯ ಪಾಠಕ್ಕೆ ಒಂದು ಎರಡು ಮೂರು ತರಗತಿಗಳನ್ನು ಒಂದುಗೂಡಿಸಿ, ಚಿಕ್ಕ ಚಿಕ್ಕ ಮಕ್ಕಳಿಗೆ ಪಾಠ ಹೇಳುವುದು ಅತಿ ಪ್ರಯಾಸವಾದರೂ ನಿರ್ಬಂಧದಿಂದ ಕೆಲವು ಸಾರಿ ಹಾಗೂ ನಡೆಯಿತು. ಅಂತೂ ವಿದ್ಯಾರ್ಥಿಗಳ ಜ್ಞಾನಸಂಪಾದನೆಯು ಕೆಲವು ಸಂಗತಿಗಳಲ್ಲಿ ಹಿಂದುಳಿದಿದೆಯಾದ ದರಿಂದ ವಿದ್ಯಾ ಇಲಾಖೆಯವರು ಶ್ರಮತೆಗೆದುಕೊಂಡು ವಿದ್ಯಾರ್ಥಿಗಳ ಉನ್ನತಿಯನ್ನು ಬಯಸಿ ತಕ್ಕ ಏರ್ಪಾಡುಗಳನ್ನು ಮಾಡಬೇಕಾಗಿ ಈ ಮೂಲಕ ಕೇಳಿಕೊಂಡಿದೆ

ಒಬ್ಬ ಗೆಳೆಯ.

ಸ್ಪೀಕಿಂಗ್ ಡಿಬೇಟಿಂಗ್ ಸೊಸೈಟಿ.

ಅಯ್ಯಾ,

ವೀರರಾಜೇಂದ್ರಪೇಟೆಯ ಸ್ಪೀಕಿಂಗ್ ಡಿಬೇಟಿಂಗ್ ಸೊಸೈಟಿಯ ಮೀಟಿಂಗು ಪ್ರತಿವಾರವೂ ನಡೆಯುತ್ತಿರುವುದು. ಅನೇಕ ವಿದ್ಯಾರ್ಥಿಗಳು ಇವುಗಳಲ್ಲಿ ಭಾಗಿಗಳಾಗುವುದಾದರೂ ಕೆಲವರು ಬಾರದೆ ಇರುವ ಸಂಗತಿ ಸ್ವಲ್ಪ ವ್ಯಸನಕರವೇ ಸರಿ. ಆದ್ದರಿಂದ ಅಂಥವರು ಇನ್ನು ಮುಂದಕ್ಕಾದರೂ ಮೀಟಿಂಗುಗಳಿಗೆ ನಿತ್ಯವೂ ಸೇರಿ, ಅದರಲ್ಲಿ ನಡೆಯುವ ಕೆಲಸದಲ್ಲಿ ಭಾಗಿಗಳಾಗಿ, ಈ ಸೊಸೈಟಿಯ ಬೆಳವಣಿಗೆಗೆ ಉತ್ತೇಜನ ಕೊಟ್ಟಲ್ಲಿ ಇದರ ಕೆಲಸವು ಖಂಡಿತವಾಗಿಯೂ ಅಭಿವೃದ್ಧಿಗೆ ಬರುವುದು.

ಈ ವರುಷಕ್ಕೆ ನಾಲ್ಕೈದು ಮೀಟಿಂಗುಗಳು ನಡೆದು ವಿಷಯಗಳು ಚರ್ಚಿಸಲ್ಪಟ್ಟವು. ತಾರೀಕು ೨೮ರಲ್ಲಿ ನಡೆದ ಕೂಟದಲ್ಲು, ಈಗ ಮಡಿಕೇರಿ ಕಾನ್ವೆಂಟಿನಲ್ಲು ಕನ್ನಡ ಪಂಡಿತರಾಗಿರುವ ಮ. ಶ್ರೀನಿವಾಸರಾಯರು ಪೀಠವನ್ನು ವಹಿಸಿದ್ದರು. ಬಾಲಕರೂ ಬಾಲಕೀಯರೂ ಉಪಾಧ್ಯಾಯರೂ ಸೇರಿ, ಸುಮಾರು ಇನ್ನೂರು ಜನರು ನೆರೆದಿದ್ದರು.

ಎಂದಿನಂತೆ ಸೆಕ್ರೆಟರಿಯವರು ಮುಂಚಿನ ಕೂಟದ ಟಿಪ್ಪಣಿಯನ್ನು ಓದಿದರು. ಸಭೆಯವರೆಲ್ಲರಿಂದಲೂ ಇದು ಒಪ್ಪಲ್ಪಟ್ಟಿತು. ದೇವರ ಪ್ರಾರ್ಥನೆಯೂ, ಒಂದು ಪದ್ಯವೂ ಇಬ್ಬರು ವಿದ್ಯಾರ್ಥಿಗಳಿಂದ ಸಭೆಗೆ ಉಲ್ಲಾಸಕರವಾಗುವಂತೆ ಹಾಡಲ್ಪಟ್ಟನಂತರ ಮತ್ತೊಬ್ಬ ವಿದ್ಯಾರ್ಥಿಯು ನಾನು ಭಜನೆಯ ವಿಷಯ ಒಂದು ಪ್ರಬಂಧವನ್ನೋದಿದನು. ಭಾರತ ಕಥಾನಾಯಕರಾದ ಕರ್ಣಾರ್ಜುನರಲ್ಲಿ ಯಾರು ವೀರರೆಂಬ ವಿಷಯವನ್ನು ಚರ್ಚಿಸಲು, ಯಂ. ಸಿ. ಕಾಳಪ್ಪನವರು ಅರ್ಜುನನಪರವಾಗಿಯೂ, ಯನ್. ಪಿ. ಅಪ್ಪಯ್ಯನವರು ಕರ್ಣನ ಪರವಾಗಿಯೂ ವಾದಿಸಿದರು. ಅವರ ಗುಣ, ಕೆಲಸ ಮತ್ತು ಗಟ್ಟಿಗತನವನ್ನು ಕುರಿತು ಸಭೆಯಲ್ಲಿ ಅನೇಕರು ಬಹಳ ಮಟ್ಟಿಗೆ ಚರ್ಚಿಸಿದರು. ಕೆಲವರು ಅರ್ಜುನನ ವೀರತ್ವವನ್ನು ಮೆಚ್ಚಿದರು; ಕೆಲವರು ಕರ್ಣನನ್ನು ಕೊಂಡಾಡಿದರು. ಕಡೆಗೆ ಓಟುತೆಗೆಯಲಾಯಿತು. ಅರ್ಜುನನಿಗಿಂತಲೂ ಕರ್ಣನಿಗೇ ಹೆಚ್ಚು ಓಟು ಬಂದದ್ದರಿಂದ ಕರ್ಣನೇ ಅರ್ಜುನನಿಗಿಂತ ವೀರನೆಂದು ತೀರ್ಮಾನವಾಯಿತು.

ಆಮೇಲೆ ಅಧ್ಯಕ್ಷರು ಭಾಷಣಮಾಡಿದರು. ಭಾರತಕಥಾನಾಯಕರಲ್ಲಿ, ಕೆಲವರ ಗುಣ, ಶಕ್ತಿ ಮತ್ತು ವೀರತ್ವವನ್ನು ಸೂಚಿಸಿ, ಕೆಲವು ಉದಾಹರಣೆಗಳನ್ನು ಕೊಟ್ಟು ಕರ್ಣಾರ್ಜುನ, ಇವರ ಇಬ್ಬರ ಪರವಾಗಿಯೂ ಭಾಷಣಮಾಡಿದರು. ಇಂಥ ಕಥಾ ನಾಯಕರಲ್ಲಿ ಯಾರು ಮತ್ತೊಬ್ಬರಿಗಿಂತ ವೀರರೆಂಬುದನ್ನು ಹೇಳಲು ಅಸಾಧ್ಯವೆಂಬುದೇ ಅವರ ಭಾಷಣದ ಸಾರಾಂಶ

ಬರುವ ವಾರ ಇಂಗ್ಲಿಷ್ ಮೀಟಿಂಗಿನಲ್ಲಿ, "ಕೊಡಗಿನಲ್ಲಿ ಬಾಲಕಿ ವಿದ್ಯಾರ್ಥಿಗಳಿಗೆ ಕಾನ್ವೆಂಟು ಇರುವುದು ಒಳ್ಳೆಯದೊ" ಎಂಬ ವಿಷಯವು ಚರ್ಚಿಸಲ್ಪಡುವುದು.

ಸೆಕ್ರೆಟರಿ

ಅಯ್ಯಾ,

ದೇಶಬಾಂಧವರೆ, ಬಡಪ್ರಾಣಿಯಾದ ನನ್ನ ಪ್ರಯಾಣದ ಕಷ್ಟವನ್ನು ದೇಶಬಾಂಧವರ ಮುಂದೆ ಇಡುತ್ತೇನೆ

ಮಡಿಕೇರಿಯಿಂದ ಸೋಮವಾರಪೇಟೆವರೆವಿಗೂ ಬಸ್ಸುಗಳು ವರ್ಷವರ್ಷ ರಿಪೇರಿಯಾಗುತ್ತಿತ್ತು. ಈ ವರ್ಷ ರಿಪೇರಿಯಾಗದೆ ಬಸ್ಸಿನಲ್ಲಿ ಪ್ರಯಾಣಮಾಡುವವರ ಪಾಡು ಒಬ್ಬೊಂದು ಹೇಳಿದರೂ ತೀರುವದಿಲ್ಲ. ಮೋಟಾರುಗಳ ಪ್ರಯಾಣ ಜಾಸ್ತಿಯಾಗಿ ಬಸ್ಸಿನವಾದು ಬಡಜನರ ಕಷ್ಟವು ಈ ದೇಶದ ಅಧಿಕಾರಿಗಳಿಗೂ ಮೆಂಬರುಗಳಿಗೂ ಇದುವರೆಗೆ ಬಸ್ಸ್ ರಿಪೇರಿ ನೆನಪಿಗೆ ಬರಲಿಲ್ಲವಾಗಿ ಹೇಳಿದರೆ ತಪ್ಪಲ್ಲ. ನನವು ಮಾಡಿದಹಾಗೆ ಆಗುತ್ತೆ. ಈಗಲಾದರೂ ಸರಕಾರದವರು ಬಸ್ಸ್ ರಿಪೇರಿ ಮಾಡಿಸಿ ಪ್ರಯಾಣಸ್ಥರಿಗೆ ಕ್ಷೇಮವನ್ನು ಮಾಡಬೇಕಾಗಿ ನನ್ನ ಪ್ರಾರ್ಥನೆ

ಮನನೊಂದವ.

"ಕೊಡಗು ಮುಜರಾಯಿ ಇಲಾಖೆ"

ಪಾಕ್ಷರಾಗಿದ್ದ ಕೋದಂಡ ನಂಜಪ್ಪನವರು ಅವರ ಜೀವಿತ ಕಾಲದಲ್ಲಿ ಕಾವೇರಿ ದೇವಸ್ಥಾನದ ಬಳಿ ಒಂದು ಛತ್ರ ಕಟ್ಟಿಸಬೇಕಾಗಿ ಐದು ಸಾವಿರ ರುಪಾಯಿಗಳನ್ನು ತಾನು ಸತ್ತನಂತರ ದೇವಸ್ಥಾನಕ್ಕೆ ಕೊಡಬೇಕಾಗಿ ನಿರೂಪಿಸಿದರ ಮೇರೆ ದಿವಂಗತರ ಧರ್ಮ ಪತ್ನಿಯು ತನ್ನ ಹೆಸರಿನಲ್ಲಿ ಬ್ಯಾಂಕಿನಲ್ಲಿರುವ ಐದು ಸಾವಿರ ರೂಪಾಯಿಯನ್ನು ತೆಗೆದು ಪತಿಯ ನಿರೂಪಣದ ಮೇರೆ ಮುಜರಾಯಿ ಇಲಾಖೆಯವರಿಗೆ ಒಪ್ಪಿಸಿರುತ್ತಾರೆಂಬುದು ವಾಚಕರ ತಿಳುವಳಿಕೆಗೆ ಬಂದಿರಬಹುದಷ್ಟೆ. ಆ ಪ್ರಕಾರ ಕಟ್ಟಡದ ಕೆಲಸವನ್ನು ನಮ್ಮಂಥವಸ್ತು ಇಲಾಖೆಯವರು ತೀರಿಸಿದರು. ಆದರೆ ಹೀಗೆ ಧರ್ಮಮಾಡಿದ ಕಾರ್ಯಕ್ಕೆ ದಿವಂಗತ ನಂಜಪ್ಪನವರ ಜ್ಞಾಪಕಾರ್ಥವನ್ನು ಸೂಚಿಸುವ ವಿಷಯದಲ್ಲಿ ದಿವಂಗತರ ಧರ್ಮಪತ್ನಿಯವರಿಂದ ದಿವಂಗತರ ಜ್ಞಾಪಕಾರ್ಥವು ನೆರವೇರಿತೆಂಬ ಸೂಚನೆ ಸಹ ಸೇರಿಸಬೇಕೆಂದು ಅವರ ಪತ್ನಿಯವರು ಅಪೇಕ್ಷಿಸಿದ್ದರೂ ದಾನ ಮಾಡಿದವರ ಹೆಸರು ಸೂಚಿಸದೆ ಮೃತರೆಬ್ಬರ ಜ್ಞಾಪಕಾರ್ಥವನ್ನೇ ಹಣ ಹೊಂದಿಕೊಂಡ ಇಲಾಖೆಯವರು ಸೂಚಿಸಿದ್ದು ಬಹಳ ವಿಷಾದಕರವಾಗಿದೆ. ಇಲಾಖೆಯವರಿಗೆ ದಾನ ಯಾರು ಮಾಡಿದರೋ ಅವರ ಸೂಚನೆ ತೆಗೆದುಕೊಳ್ಳುವದು ಸಾಧುವಾಗಿತ್ತು.

ನ್ಯಾಯಮೂರ್ತಿ

ಮ ಬಾರ್ಟನ್‌ರವರಿಗೆ ಎಟ್‌ಹೋಮ್.

ಮ ರಾ ಬಾ. ಕುಟ್ಟಯ್ಯನವರೇ ಆದಿಯಾಗಿ ಮಡಿಕೇರಿಯಲ್ಲಿ ಕಳೆದ ಜೂನ್ ತಾರೀಕು ೨೮ರಲ್ಲಿ ವರ್ಗವಾಗಿ ಹೋಗುವ ಚೀಫ್‌ಕಮಿಷನರಾಗಿದ್ದ ಮ ಬಾರ್ಟನ್‌ರವರಿಗೆ ಎಟ್‌ಹೋಮ್ ಕೊಟ್ಟರೆಂದು ಪತ್ರಿಕೆಯ ಮೂಲಕ ಓದಿದೆನು. ಮ. ಬಾರ್ಟನ್‌ರವರು ನಿಜವಾಗಿಯೂ ನಮ್ಮ ದೇಶದವರಿಂದ ತಕ್ಕ ಮರ್ಯಾದೆ ಹೊಂದಿಕೊಳ್ಳಲಿಕ್ಕೆ ಯೋಗ್ಯರೆಂದೇ ನನ್ನ ಅಭಿಪ್ರಾಯ. ಅವರ ರಾಜ್ಯಾಡಳಿತದಲ್ಲಿ ಒಳ್ಳೇದೂ ಕೆಟ್ಟದೂ ಮಿಶ್ರವಾಗಿರುತ್ತೆ. ಬಹಳ ಪ್ರಯತ್ನದಿಂದ ನಮ್ಮ ಪುಟ್ಟ ದೇಶಕ್ಕೆ ದೊಡ್ಡ ಹೆಸರಿನ ಲೆಜಿಸ್ಲೇಟಿವ್ ಕೌನ್ಸಿಲ್ ಎಂಬ ಯಾವ ಅಧಿಕಾರವೂ ಇಲ್ಲದ ಆಲೋಚನಾ ಸಭೆಯನ್ನು ದಯಪಾಲಿಸಿರುತ್ತಾರೆ. ಇವರ ವಿಷಯ ಕೊಡಗು ಪತ್ರಿಕೆಯ ಸಂಪಾದಕರು ತಕ್ಕಮಟ್ಟಿಗೆ ವಿವರಿಸಿ ಬರೆದು ತಮ್ಮ ಕರ್ತವ್ಯವನ್ನು ಮಾಡಿರುತ್ತಾರೆ.

ಈ ಸತ್ಕಾರವನ್ನು ಬಹಳ ಚಮತ್ಕಾರದಿಂದ ಏರ್ಪಡಿಸಿದ ಹಾಗೆ ಕಾಣುತ್ತೆ. ಕೆಲವರಿಗೆ ಮಾತ್ರ ಚಂದಾಪಟ್ಟಿ ಕಳುಹಿಸಿದರಂತೆ, ಕೆಲವರಿಗೆ ಬರೀ ಆಮಂತ್ರಣ ಮಾತ್ರ ಕಳುಹಿಸಿದರಂತೆ. ಬರೀ ಕೊಡಗರು ಮಾತ್ರ ಕೊಟ್ಟದ್ದಂತೆ, ಚೆನ್ನಾಗಿ ಯೋಚಿಸುವಾಗ್ಗೆ ನಮ್ಮ ಕಮಿಷನರವರಿಗೂ ಚೀಫ್‌ಕಮಿಷನರವರಿಗೂ ಕೊಡಗಿನ ಇತರ ಜನಗಳನ್ನೂ, ರಾಜಕೀಯ ಭಿನ್ನಾಭಿಪ್ರಾಯವಿರುವವರನ್ನೂ ಅಲ್ಲಗಳೆಯಲು ಈ ತರದ ಸತ್ಕಾರ ನಡೆಯುತ್ತೆಂದೇ ಅನೇಕರು ಅಭಿಪ್ರಾಯಪಡುತ್ತಾರೆ

ಜಮ್ಮ ಸಾಗು ಎಂಬ ಭೇದವನ್ನು ಕಲ್ಪಿಸಿದ್ದು ದೇಶಕ್ಕೆ ಪೂರಾ ಅನ್ಯಾಯ. ಅದರಲ್ಲಿಯೂ ಕೊಡಗು ಜನರಿಗೆ ಇದು ಪೂರಾ ಅನ್ಯಾಯ. ಈ ಭೇದವಿರದಿದ್ದರೆ, ಕಳೆದ ಕೌನ್ಸಿಲ್ ಚುನಾವಣೆಯಲ್ಲಿ ಎಲ್ಲಾ ಸಾಗಿನ ಜಾಗೆಕ್ಕೂ ಕೊಡಗರು ಉಮೇದ್ವಾರರಾಗುತ್ತಿದ್ದರು. ದೇಶದ ದೊಡ್ಡ ಉದ್ಯೋಗಗಳೆಲ್ಲವನ್ನೂ ನಮ್ಮ ಜನರಿಗೆ ಕೊಟ್ಟಿರುತ್ತೆಂಬುದಾಗಿ ಹೇಳಿದ್ದಾರೆ. ಅರ್ಹತೆ ಇರುವವರಿಗೆ ಉದ್ಯೋಗ ಸಿಕ್ಕಿಯೇ ಸಿಕ್ಕಬೇಕು. ಅಲ್ಲದೆ ಉದ್ಯೋಗಗಳನ್ನು ಇಂಡ್ಯಾನೈಜ್ ಮಾಡಲಿಕ್ಕೆ ಪ್ರಾರಂಭ ಮಾಡಿದರ ಮೇಲೆ ಇಡೀ ಹಿಂದೂಸ್ಥಾನಕ್ಕೆ ಮಾಡಿದಂತೆ ನಮ್ಮ ದೇಶಕ್ಕೆ ಕೊಟ್ಟದ್ದಾಗಿದೆ. ಟೆರಿಟೋರಿಯಲ್ ಪಟಾಲಮ್, ನಮ್ಮ ಜಾತಿಯವರಿಗೆ ಪ್ರತ್ಯೇಕ ಮಾಡಲಿಲ್ಲ.

ಕೂಡುವರ್ತಿತ.

ಸ್ಯಾನಿಟೇಶನ್.

ಅಯ್ಯಾ,

ಸ್ಯಾನಿಟೇಶನ್ ಎಂಬುದು ನಮ್ಮ ದೇಶಕ್ಕೆ ಗೊತ್ತೇ ಇಲ್ಲದ ಹಾಗೆ ಆಗಿದೆ. ಆ ಇಲಾಖೆಗೆಲ್ಲಾ ಎಲ್ಲೋ ಒಬ್ಬರು ಇದ್ದಾರಂತೆ. ಇಡೀ ದೇಶಕ್ಕೆಲ್ಲಾ ಒಬ್ಬರಿದ್ದರೆ ಅವರು ತಾನೆ ಏನು ಮಾಡಲಾಪರು? ದೊಡ್ಡ ದೊಡ್ಡ ಪಟ್ಟಣಗಳಾದ ಮಡಿಕೇರಿ ವೀರರಾಜಪೇಟೆಗಳಲ್ಲೇನೋ ತಕ್ಕ ಮಟ್ಟಿಗೆ ನಿಗ ಇರಬಹುದು. ಆದರೆ ಚಿಕ್ಕ ಚಿಕ್ಕ ಟೌನುಗಳಲ್ಲಿ ಕೇಳುವ ದಿಕ್ಕೇ ಇಲ್ಲದಾಗಿದೆ. ಅಂಥಾ ಸ್ಥಳಗಳಲ್ಲಿನ ಹೊಟೇಲುಗಳೂ ಮಿಠಾಯಿ ಅಂಗಡಿಗಳೂ ಹಣ್ಣುಹಂಪಲಿನ ಅಂಗಡಿಗಳೂ ಮಾಂಸದ ಅಂಗಡಿಗಳೂ ಅಶುಚಿಯ ತವರು ಮನೆಗಳಾಗಿವೆ. ಅಲ್ಲದೆ ಶುಚಿ ಎಂಬುದು ಅವರಿರುವ ಪ್ರಾಂತ್ಯದಲ್ಲಿ ಸಹ ಇಲ್ಲ. ಅನೇಕ ಚಿಕ್ಕ ಪಟ್ಟಣಗಳಲ್ಲಿ ಅನೇಕಾವೃತ್ತಿ ಕೆಟ್ಟು ದುರ್ಗಂಧ ಹುಟ್ಟಿ ಹುಳುವಾದ ಮಾಂಸವನ್ನು ಮಾರುವುದನ್ನು ಕಂಡುಹಿಡಿದು ಶಿಕ್ಷಿಸಿದುಂಟು. ಅಲ್ಲಲ್ಲಿ ಕಂಡು ಕಾಣದಂತೆ ಅಡಗಿಸಲ್ಪಟ್ಟ ಸಂಗತಿಗಳು ದಿನಚರ್ಯದ ಮಾತಾಗಿವೆ. ಹೋಟೇಲಿನ ಅವಸ್ಥೆಯನ್ನು ಹೇಳಲೇ ತೀರದು. ಕುಡಿದ ಬಟ್ಲು ಗ್ಲಾಸುಗಳನ್ನು ತೊಳೆಯುವದಕ್ಕೆ ಸಪ ಮಾತ್ರಕ್ಕೆ ಸ್ವಲ್ಪ ನೀರನ್ನು ಇಟ್ಟು ಅದೇ ನೀರಿನಲ್ಲಿ ಆ ದಿನವೆಲ್ಲಾ ತೊಳೆಯುತ್ತಿರುವರು. ಒಂದಾವೃತ್ತಿ ಬೇಯಿಸಿದ ಟೀ ಹುಡಿಯನ್ನು ಬಿಸಾಡುವ ಕೆಲಸವು ಹಲವು ಹೋಟೇಲಿನವರಿಗೆ ಗೊತ್ತೇ ಇಲ್ಲ. ಅದರ ಜೊತೆಗೇನೇ ಬೇಕಾದಾಗ ಟೀ ಹುಡಿಯನ್ನು ಹಾಕಿ ಕುದಿಸಿ ಟೀ ಮಾಡುವರು. ಹೀಗೆ ಮಾಡುವುದರಿಂದ ಟೀ ಕೆಟ್ಟು ಹೋಗಿ ಆರೋಗ್ಯವನ್ನು ಕೆಡಿಸುವದೆಂಬುದು ತಿಳಿದ ಸಂಗತಿಯಾಗಿದೆ. ಬೇಸಿಗೆಯಲ್ಲಿ ಹಣ್ಣು ಹಂಪಲುಗಳ ಮೇಲೂ ಮಿಠಾಯಿ ಮೊದಲಾದ ತಿಂಡಿ ಸಾಮಾನುಗಳ ಮೇಲೂ ದಾಳಿಸಿ ಒಂದು ಹೊದಿಕೆ ಹೊದಿಸಿದಂತಿರುತ್ತದೆ. ಕಾಯಿಲೆ, ಸಾಯಲಿಕ್ಕಾದ ಅಡುಕುರಿಗಳನ್ನು ಕಟುಕರು ಕಡಿಯುತ್ತಿರುವುದು ಅಪರೂಪವಲ್ಲ. ಇವುಗಳನ್ನೆಲ್ಲಾ ಆಯಾಯ ಕಾಲದಲ್ಲಿ ನೋಡಿ ಎಚ್ಚರಿಸದಿದ್ದರೆ ಜನರ ಆರೋಗ್ಯವು ಕೆಡುವದು ಎಂಬುದು ತಿಳಿದ ಸಂಗತಿ. ಇದಕ್ಕಾಗಿ ಹೆಚ್ಚಿನ ಸಿಬ್ಬಂದಿಯನ್ನು ಇಡುವದು ಅನಾನುಕೂಲವೆಂದಾದರೆ ನಮ್ಮ ದಕ್ಷಿಣ ಕೊಡಗಿನ ಚಿಕ್ಕ ಟೌನುಗಳನ್ನು ವಾರಕ್ಕೊಂದಾವೃತ್ತಿಯಾದರೂ ಭೇಟಿ ಮಾಡುವಂತೆ ವೀರರಾಜಪೇಟೆಯ ಮುನಿಸಿಪಲ್ ಓವರ್ಸೀಯರನ್ನು ನೇಮಿಸಿ ಅಲ್ಪ ಸಂಬಳ ಬಡ್ತಿಯಿಂದಾಗಲೀ ಇಲ್ಲವೇ ಬತ್ಯ ಕೊಡುವದರಿಂದಾಗಲೀ ತೃಪ್ತಿಪಡಿಸಿದರೆ ಹೆಚ್ಚಿನ ಖರ್ಚೆಂದು ಕೂಗುವದು ತಪ್ಪುವದು. ಈಗಿನ ಮುನಿಸಿಪಲ್ ಓವರ್ಸೀಯರು ಸ್ಯಾನಿಟೇಷನಿನಲ್ಲಿ ತರಬೇತು ಹೊಂದಿದವರು ಇವರಿಂದ ಈ ಕೆಲಸವು ಸರಾಗವಾಗಿ ನಡಿಯಬಹುದು. ಇದೇ ರೀತಿ ಉತ್ತರಕೊಡಗಿನ ಚಿಕ್ಕ ಪಟ್ಟಣಗಳನ್ನೂ ನೋಡುವಂತೆಯೂ ಮಾಡಿದ ಹೆಚ್ಚಿನ ಸಂಗತಿಗಳಿಗೆ ಅವಶ್ಯವಿದ್ದರೆ ದಕ್ಷಿಣ ಕೊಡಗಿಗೂ ಬರುವಂತೆ ಈಗಿನ ಸ್ಯಾನಿಟರಿ ಇನ್‌ಸ್ಪೆಕ್ಟರನ್ನೂ ಮಾಡಿ ದೇಶದ ಜನರ ಆರೋಗ್ಯವನ್ನು ಕಾಪಾಡುವಂತೆ ನಮ್ಮ ಘನ ಸರಕಾರವನ್ನು ಕೇಳಿಕೊಳ್ಳುವದಲ್ಲದೆ ಪ್ರಜಾ ಪ್ರೀತಿಗೆ ಪಾತ್ರರಾದ ನಮ್ಮ ಹಜರತ್ ಕಮಿಶನರ್ ಸಾಹೇಬರವರೂ ಈ ವಿಷಯದಲ್ಲಿ ಒಡನೆ ನಿಗ ಕೊಡುವರಾಗಿ ಕೋರುವ.

ಐ ಮಾದಪ್ಪ.

ಕಾವೇರಿ ಬಸ್ಸ್ ಸರ್ವಿಸಿನ ಅಕ್ರಮ.

ಅಯ್ಯಾ,

ಕಾಲವು ಕೆಟ್ಟುಹೋಗ್ತಾ ಬಂದಿತು. 'ಕೊಡಗು' ಪತ್ರಿಕೆಯಲ್ಲಿ ಆಗಿಂದಾಗ್ಗೆ ಪ್ರಕಟವಾಗುತ್ತಿದ್ದ ಕಾವೇರಿ ಬಸ್ಸ್ ಸರ್ವಿಸಿನವರ ಮೇಲಣ ದೋಷಾರೋಪಣೆಯನ್ನು ನೋಡಿ ಅದು ಯಾರೋ, ಅವರಿಗೆ ವಿರೋಧಿಗಳು ಬರೆಯುವುದೆಂದು ತಿಳಿದೆನು. ಆದರೆ ಮೊನ್ನೆ ಜೂನ್ ತಾ. 4ನೇ ಶನಿವಾರ ದಿವಸ ಕಾರ್ಯನಿಮಿತ್ತದಿಂದ ಮಡಿಕೇರಿಯಿಂದ ವೀರರಾಜಪೇಟೆಗೆ ಹೋದೆನು. ಆಗ್ಯೆ ನನ್ನ ಜೊತೆಯಲ್ಲಿ ಮಡಿಕೇರಿಯಿಂದ ಸಿದ್ದಾಪುರಕ್ಕೆ ಹತ್ತಿರವಿರುವ ಚೆಟ್ಟಳ್ಳಿ ಎಂಬ ಸ್ಥಳಕ್ಕೆ ಒಬ್ಬಾನೊಬ್ಬ

...ನು ಟಿಕೇಟು ತೆಕ್ಕೊಂಡು ಕುಳಿತ್ತಿದ್ದನು. ಹಾಗೆ ಒರುತ್ತಿರುವಾಗ ಚೆಟ್ಟಳ್ಳಿ ಗ್ರಾಮವು ಬಂದಿತು. ಬಸ್ಸಿನ ಕಂಡಕ್ಟರು ಪ್ರಯಾಣಿಕರನ್ನು ಇಳಿಯುವುದಕ್ಕೆ ಹೇಳಿದನು. ಆಗ ...ವನು ಅಯ್ಯಾ, ಚೆಟ್ಟಳ್ಳಿ ಎಂಬುದು ಇಗೋ ಅಲ್ಲಿ ಮಾಪಿಳ್ಳೆಯ ಅಂಗಡಿಯಿದೆಯಲ್ಲ, ನಾನು ಅಲ್ಲಿ ಇಳಿದುಬಿಡುತ್ತೇನೆ ಎಂದನು. ಇದನ್ನು ಕೇಳಿದ ಡ್ರೈವರನು "Charge him extra" ಎಂಬದಾಗಿ ಹೇಳುತ್ತ ಬಸ್ಸನ್ನು ಮುಂದುವರಿಸಿದನು. ಸದ್ರಿ ಮಾಪಿಳ್ಳೆ ಅಂಗಡಿಯು ಬಂದಿತು. ಆ ಮನುಷ್ಯನು ಇಳಿಯಲುದ್ಯುಕ್ತನಾದನು. ಆಗ್ಯೆ ಹೆಚ್ಚಿನ ಚಾರ್ಜ ಕೊಡಿ ಎಂಬುದಾಗಿ ಕಂಡಕ್ಟರು ಅಪ್ಪಣೆ ಕೊಡಿಸಿದರು. ಎಷ್ಟೆಂಬುದಾಗಿ ಆ ಪ್ರಯಾಣಿಕನು ಪ್ರಶ್ನಿಸಿದನು. ಆ ... ಇಲ್ಲಿಂದ ಸಿದ್ದಾಪುರಕ್ಕೆ ಇರುವ ಛಾರ್ಜು 0—5—ಗೆ, ಅಷ್ಟು ಕೊಟ್ಟುಬಿಡಿ, ಎಂಬುದಾಗಿ ಉತ್ತರವಿತ್ತರು. ಆಗ್ಯೆ ಪಾಪದ ಪ್ರಯಾಣಿಕನು ಅರೆಮನಸ್ಸಿನಿಂದ ನಾನು ಇಳಿಯಬೇಕಾದ ಸ್ಥಳದಿಂದ ಇಲ್ಲಿಗೆ ಎಷ್ಟು ದೂರವಿದೆಯೆಂದು ವಿಚಾರಿಸಲು ...ಕ್ಕಾಲು ಮೈಲು ಎಂಬುದಾಗಿ ತಿಳಿಯಿತು. ಆಗ ಒಂದು ಮೈಲಿನ ಛಾರ್ಜಾದ 0—1—3ನ್ನು ಕೊಡಲು ಹೋದನು. ಇದನ್ನು ನೋಡಿದ ಡ್ರೈವರು ಏನಯ್ಯಾ! ನೀನು ಹೇಳಿದ ಹಾಗೆ ನಡೆಯಬೇಕೋ ಅಥವಾ ಕಂಪೆನಿಯ ರೂಲ್ಸಿಗೆ ಒಳಗಾಗಬೇಕೋ ಎಂಬುದಾಗಿ ಸ್ವಲ್ಪ ಗದರಿಸಿದರು. ಇದನ್ನು ನೋಡಿದ ಆ ಪ್ರಯಾಣಿಕನು 0—5—0ನ್ನು ಕೊಟ್ಟುಬಿಟ್ಟನು. ದೇಶಸ್ಥರು ಇಷ್ಟು ಕಠಿಣವಾದ ಬಾಯಿದೆಗಳನ್ನು ಮಾಡಬಹುದೇ! ಪರದೇಶದವರೇ ನಮಗೆ ಹೆಚ್ಚು ದಾಕ್ಷಿಣ್ಯವನ್ನು ತೋರಿಸುವುದಾಯಿತಲ್ಲ! ಒಹೋ! ದುರ್ದಿನ ಆಸಗೋರ ದೇಶೀಯರನ್ನು! ಜಾತಿಯಸ್ಥರನ್ನು!! ಇಂದಾ ನಿರ್ಬಂಧ ... ಬಳಪಡಿಸಬಹುದೇ? ಇಂಥಾ ಕಾನೂನುಗಳನ್ನು ಇನ್ನಾದರೂ ದೇಶದವರ ಮೇಲೆ ಪ್ರೇಮವಿಟ್ಟು ರದ್ದುಪಡಿಸಿಯಾರು ಎಂದು ನಂಬುತ್ತೇನೆ.

ಪ್ರತ್ಯಕ್ಷದರ್ಶಿ.

ದೇವಾಂಗ ಮಠದ ಸ್ಥಿತಿ

ಅಯ್ಯಾ,

ಕೆಲವು ದಿನಗಳಿಗೆ ಹಿಂದೆ ದೇವಾಂಗ ಮಠದ ಸ್ಥಿತಿಯನ್ನು ಕುರಿತು ಕೊಡಗು ಪತ್ರಿಕೆಯಲ್ಲಿ ಬರೆದ ಲೇಖನಗಳನ್ನು ನೋಡಿ ಅನುಮೋದಿಸ ಯುಕ್ತನಾಗಿರುವುದರಿಂದ ನಾನು ಸಹ ಒಂದೆರಡು ನುಡಿಗಳನ್ನು ಆಡಲು ಅಪೇಕ್ಷಿಸುತ್ತೇನೆ.

ನಮ್ಮ ಜಾತಿಯು ಪರವಾಗಿ ನಾಲ್ಕೈದು ವರುಷಗಳಾಗಿರಬಹುದು. ನಮ್ಮ ... ಸಮಗ್ರ ದೇವಾಂಗ ಮತದವರೂ ಒಂದು ಪಿಳ್ಳ ... ಒಟ್ಟುಹೋಗಿದೆ. ರಾಮಚಂದ್ರಪುರ ಮಠದ ವಿಶ್ವಪುಂಜಾಕ್ರಾಂತರಾಗಿರುವರು. ನೋಟ ಒಂದಾದರೂ ಜಾತಿಯಲ್ಲಿ ಮಡಗನ್ನೇ ತುಮುರು ತುಮು... ಮಾಡುವಂತ ಒಂದೆರಡು ಒಡೆಗೂಗಳಿವೆ. ಈ ಪಿಡುಗುಗಳು ಒಳ್ಳೆ ಕಾವಣ್ತಿನಲ್ಲಿರುವುದರಿಂದ ತಮ್ಮ ಶಕ್ತಿ ಶೌರ್ಯಾತಿಶಯವನ್ನು ತೋರಿಸುವ ಉದ್ದೇಶ್ಯ ಮಠದ ಮೇಲೆ ದಾಳಿಯನ್ನು ನಡಿಸಬೇಕೆಂದಿದ್ದಾರೆ. ಆದರೆ ಇವರಿಗೆ ಅನುಯಾಯಿಗಳಿಲ್ಲ, ಇರಲಿ.

ಮಠ ಬೇಕೆನ್ನುವವರು ಶೇಕಡ ತೊಂಬತ್ತೊಂಬತ್ತು ಮಂದಿ. ಮಠದಿಂದ ನಮ್ಮ ಜನರಿಗೆ ಅಷ್ಟೊಂದು ವಿಶೇಷಗಳೇನು ಉಂಟಾಗುವಂತೆ ಕಾಣುವುದಿಲ್ಲ. ಆದುದರಿಂದ ಮಠ ಇವರು ಕಟ್ಟುಬೀಳಲಿಕ್ಕೆ ಇದೇ ಪ್ರಮುಖ ಕಾರಣ.

ನಮ್ಮೊಳಗಿನ ಆ ಪ್ರೀತಿಗೆ ಮತ್ತೊಂದು ಕಾರಣ ಉಂಟು. ಈಗಿನ ಪ್ರೆಸಿಡೆಂಟರಾದ ಮ. ರಾಃ ಶೆಟ್ರ ಸಕುನೈಯ್ಯಶೆಟ್ರು, ಮ. ಕೆಂಚಶೆಟ್ರ ನಂಜಪ್ಪಶೆಟ್ಟರವರಾಗಲೀ, ಕಾರಣಾಂತರದಿಂದ ಪ್ರೆಸಿಡೆಂಟರ ಪದವಿಗೆ ರಾಜೀನಾಮೆ ಕೊಟ್ಟ ಮೇಲೆ ... ನೇಮಕವಾಗಿ, ಮ. ನಂಜಪ್ಪಶೆಟ್ಟರು ದಿವಂಗತರಾದನಂತರ ಮ. ಶಕುನೈಯ್ಯಶೆಟ್ಟರೇ ಕಾಯಂ ಪ್ರೆಸಿಡೆಂಟರಾಗಿ ಮಂದಿಯಿಂದ ನಿಯಮಿಸಲ್ಪಟ್ಟ ಸಂಗತಿಯೇ ಒಂದೆರಡು ಒಕ್ಕಲುಗಳ ಕಣ್ಣುಬ್ಬರಕ್ಕೆ ಮೂಲ. ನಮ್ಮ ಜಾತಿಯ ಬಹು ಸಂಖ್ಯಾಕರು ಮ. ಶಕುನೈಯ್ಯಶೆಟ್ಟರು ಪ್ರೆಸಿಡೆಂಟರಾಗಿರುವುದರಿಂದ ಕೆಡಕೇನಿಲ್ಲವೆಂದು ನಂಬಿದ್ದಾರೆ. ಇವರ ಅಧಿಕಾರಕ್ಕೆ ... ಆಗಬಾರದೆಂಬುದೇ ಮೇಲಿನ ಒಂದೆರಡು ಒಕ್ಕಲುಗಳ ಪ್ರಯತ್ನ. ಆದರೆ ಇವರೆಷ್ಟೇ ಹೋರಾಡಿದರೂ ಫಲವು ಉಪಯುಕ್ತವಾಗುವುದು ಅಸಾಧ್ಯ! ಅರವತ್ತೊಕ್ಕಲಿಗೆ ಬೇಕಾದ ಪ್ರೆಸಿಡೆಂಟರು ಎರಡೊಕ್ಕಲಿಗೆ ಬೇಡವೇ?

ಅಸಹಿಷ್ಣುತೆ ಮತ್ತು ಅಸಹಕಾರ ಇವೆರಡು ಈ ಒಕ್ಕಲುಗಳಿಗೆ ರಾಮಬಾಣಗಳಾಗಿ ತೋರಿದರೂ, ಇವು ರಾವಣಬಾಣಗಳೆಂದು ನಾನು ತಿಳಕೊಂಡಿದ್ದೇನೆ. ಈಗ ಪಂಚಾಯತಿಯಲ್ಲಿ ಕೆಲವು ಮೆಂಬರುಗಳ ಜಾಗಗಳು ಖಾಲಿಯಿರುವಂತೆ ತೋರುತ್ತದೆ. ಈ ಒಕ್ಕಲುಗಳ ಜನರು ಮತ್ತು ಇವರ ಹಿತರ ಅಷ್ಟ ಜನರು ಖಾಲಿ ಇರತಕ್ಕ ಮೆಂಬರುಗಳ ಸ್ಥಾನಗಳಿಗೆ ತಮ್ಮ ಜನರನ್ನು ಕೂರಿಸುವಂತೆ ಯತ್ನ ಮಾಡುವುದು ಒಳ್ಳೇ ಹಂಚಿಕೆಯಲ್ಲವೇ? ಹೀಗಾದರೆ ಅಸಹಿಷ್ಣುತೆಯ ಅಭಾವವು ಸತ್ಯಾಗ್ರಹಿಗಳಿಂದ ಸಾಧ್ಯವಲ್ಲದೆ ನಿಮ್ಮ ನಮ್ಮಂತವರಿಂದ ಸಾಗದು. ಆದುದರಿಂದ ಎಲ್ಲರೂ ಸಹಕರಿಸಿ ನಡೆಯುವುದುತ್ತಮ. ಇದರಿಂದ ಜಾತಿಯು ಪ್ರಗತಿಯನ್ನು ಹೊಂದುವುದು.

ಒಂದುವೇಳೆ ಮಠ ಬೇಡೆನ್ನುವವರಿದ್ದಾರೆಂದು ಕಾಣಬರಬಹುದಾದರೂ, ಇವರು ಸಹ ಜಾತಿ ಏಳ್ಗೆಯ ಕಡೆಗೆ ದೃಷ್ಟಿಯನ್ನಿಟ್ಟು, ಈಗಿರುವ ಮೆಂಬರರೊಂದಿಗೆ ಸಹಕರಿಸಿ ನಡೆಯುತ್ತಿದ್ದರೆ ನಮ್ಮ ಜನರೊಳಗೆ ಮರವಿಡಬೇಕೆಂಬ ಒಮ್ಮತ ನಟ್ಟು ಹುಟ್ಟುತ್ತದೆ. ಆಗ ಮಠದಿಂದ ನೀಗುಬಿಕೊಳ್ಳುವ ಯತ್ನವನ್ನು ನಾವೆಲ್ಲರೂ ಕೈಕೊಳ್ಳಬಹುದು. ತಗ್ಗಿ ನಡೆದಷ್ಟು ಮುಗ್ಗರಿಸುವುದು ಕಡಿಮೆಯಲ್ಲವೇ!

ಜಾತಿಯವರೆಲ್ಲರ ಒಡನಾಡಿಕೊಂಡಿರುವುದು. ಮೇಲು ಜಾತಿ ಜಗಳದಿಂದ ನಮ್ಮ ಪೂರ್ವಿಕರು ಹಾಳಾದರು. ನಮ್ಮನ್ನು ಸಹ ವಿಕಲಾಂಗರನ್ನಾಗಿ ಮಾಡಿದರು. "ಸತ್ಯಂವದಾ, ಧರ್ಮಂಚರಾ" ಎಂಬೀ ಲೋಕೋಕ್ತಿಯನ್ನು ಮನಗಾಣಿರಿ, ಅಂತೆಯೇ ಆಚರಿಸಿರಿ. ನೀವೆಲ್ಲರೂ ಸಹಿಷ್ಣುಗಳಾಗಿರಿ. ನಮ್ಮ ಏಳ್ಗೆಗೆ ಸಹಕಾರವೇ ತರಣೋಪಾಯವು. ಈ ಕಾರಣ ಎಲ್ಲರೂ ಒಕ್ಕಟ್ಟಾಗಿರಿ. ಕಲಹವನ್ನು ಬಿಡಿರಿ. ಓಂ ಶಾಂತಿ.

'ನಿರುಪಮಾನಿ'

ಸರಕಾರದವರಲ್ಲು ನನ್ನದೊಂದು ವಿನಂತಿ

ಅಯ್ಯಾ,

ಸರಕಾರದವರು ರೈತರನ್ನು ಎಷ್ಟರಮಟ್ಟಿಗೆ ದಯಾಳುವಾಗಿ ದೃಷ್ಟಿಯನ್ನು ರೈತರಾದ ನಾವುಗಳು ನಮ್ಮ ಕೈಲಾದಮಟ್ಟಿಗೆ ಆಲೋಚಿಸಬೇಕಾದದ್ದು ಮುಖ್ಯ ಕರ್ತವ್ಯವಾಗಿದೆ.

ರೈತರ ಬಾಳಿಕೆ ಅನುಕೂಲವಾಗಿದ್ದರೆ, ದೇಶದ ಬಾಳಿಕೆಯು ಅನುಕೂಲವಾಗಿದೆಯೆಂದು ಹೇಳಬಹುದು. ಸರ್ವ ಉತ್ಪತ್ತಿಗೆ ಹೇಗೆ ಮಳೆ ಅವಶ್ಯವೋ ಹಾಗೆ ದೇಶದ ಏಳಿಗೆಗೆ ರೈತನೇ ಮುಖ್ಯಾಧಿಕಾರಿಯೆಂದರೆ ಅತಿಶಯೋಕ್ತಿಯಾಗಲಾರದು. ರೈತನು ಕಷ್ಟಾರ್ಜಿತದಿಂದ ಎಷ್ಟು ಜೀವನ ಆಧಾರವಾಗುತ್ತವೆಂದರೆ ಪಟ್ಟಣವಾಸಿಗಳ ಜೀವನ, ಸರಕಾರ ಆಫೀಸ, ಕಂಪನಿ ವಗೈರೆಗಳಲ್ಲಿ ಕೆಲಸಮಾಡುವವರ ಮಿಲಿಟರಿ ಆಫೀಸರ ಅಂದರೆ ರೈತನಲ್ಲದೆ ಬಾಕಿ ಎಲ್ಲರ ಜೀವನವು ರೈತನ ಕಷ್ಟಪರಿಣಾಮದಿಂದಲೇ ಒದಗುವದಾಗಿದೆ. ಎಲ್ಲಾ ಭಾರವು ಈ ಬಡ ರೈತನಮೇಲೆ ಹೇರಿದ್ದಾಗಿದೆ. ಇಷ್ಟು ದಯಾಳುವಾದ ರೈತನಿಗೆ ಸರಕಾರದವರು ಎಷ್ಟರಮಟ್ಟಿಗೆ ಸಹಾಯಕರಾಗಬೇಕು. ಜೀವನ ಪಥದಲ್ಲೆಲ್ಲಾ ಸಹಾಯ ಮಾಡಬೇಕೆಂಬುದೆ ಅವರ ಮನಸ್ಸಿಗೆ ಬಂದಂತೆ ಕಾಣುವುದಿಲ್ಲ. ಅವರ ಮನಸ್ಸಿನಲ್ಲಿ ಇರತಕ್ಕದ್ದು ತುಂಬಾ ಅನುಕೂಲಸ್ಥರಾದ ದೊಡ್ಡ ದೊಡ್ಡ ಆಫೀಸರುಗಳಿಗೆ ಒದ್ದಿ ಕೊಡಬೇಕು. ಅವರು ಹೋದಕಡೆ ಕೂತಕಡೆ ನಿಂತಕಡೆಯಲ್ಲೆಲ್ಲಾ ಅವರಿಗೆ ಯಾವ ವಿಧದಲ್ಲು ಕೊರತೆ ಇಲ್ಲದ ರೀತಿ ಸೌಕರ್ಯಗಳು, ಒಳ್ಳೆ ಇಂಗ್ಲಿಷ ಅನೇಕ ತರದ ಸೌಕರ್ಯಗಳಂದರ ಹೇಳತೀರದು. ಇವರಿಗೆಲ್ಲಾ ದೇಶದ ರೂಢತಕ್ಕ ರೈತನ ಸೌಕರ್ಯ ಯಾವದೆಂದರೆ, ರೈತನ ವ್ಯವಸಾಯಕ್ಕೆ ಬೇಕಾದ ಮುತುವರ್ಜಿ ಸಲಕರಣೆಗಳಿಲ್ಲ. ರೈತನ ಸುಭಿಕ್ಷ ಮತ್ತು ದೇಶದ ಮೇಲ್ಮೆಗೆ ಬೇಕಾದ ದನಕರುಗಳಿಗಿರುವ ಚಿಕಿತ್ಸೆ ಆರೋಗ್ಯಕ್ಕೆ ಬೇಕಾದ ಪ್ರೋತ್ಸಾಹ ಇರುವುದಿಲ್ಲವಲ್ಲ. ಅಯ್ಯೋ! ರೈತನ ದುರಾದೃಷ್ಟವೇ. ಇನ್ನಾದರೂ ಬೇರೆ ಯಾವ ಜನ್ಮ ತಾಳಿದರೂ ರೈತನಾ ಜನ್ಮ ಬೇಡ ಶಂಕರಾ! ನಮ್ಮ ದೇಶವನ್ನು ಹೊಂದಿದ ರೈತರು ಕೃಷಿ ವಗೈರೆ ಎಲ್ಲಿ ಹೆಚ್ಚು ನಡೆಯುತ್ತೋ ಅಂದ ಕಡೆಯಲ್ಲಿವೆಲ್ಲಾ ಪಶುವೈದ್ಯಶಾಲೆ ಇಡಿಸಿಕೊಡಬೇಕಾಗಿ ಹಿಂದೆ ಕೌನ್ಸಿಲ್ ಮೀಟಿಂಗಿನಲ್ಲಿ ಠರಾವು ಬಂದದ್ದಕ್ಕೆ ನಮ್ಮ ದಯಾಳುವಾದ ಚೀಫ್‌ಕಮಿಷನರ್ ಸಾಹೇಬರು ಮತ್ತೆ ಕಿಗ್ಗಟ್ಟುನಾಡು ತಾಲೋಕಿನಲ್ಲು ಒಂದು ಪಶುವೈದ್ಯಶಾಲೆ ಇಡಿಸಿಕೊಡುತ್ತೇವೆಂದು ಉತ್ತರ ಕೊಟ್ಟರು. ಸದ್ರಿಯವರ ವಾಗ್ದಾನದ ಮೇರೆ ಒಡನೆ ಆಗ ತ್ವರೆಯಿಂದು ಚಾತಕಪಕ್ಷಿಯಂತೆ ನಿರೀಕ್ಷಿಸುತ್ತಿದ್ದ ರೈತರಿಗೆ ಪಶುವೈದ್ಯಶಾಲೆಯ ಬದಲಿಗೆ ಗೋವುಗಳ ಮೃತ್ಯುಶಾಲೆ, ಬಂದು ರೋಗದ ಶಾಲೆ ಪ್ರಾಪ್ತವಾಯ್ತು. ಇದರ ಚಿಕಿತ್ಸೆಗೆ ಕುಂದಲ ಪಶುವೈದ್ಯದ ಡಾಕ್ಟರಿಗೆ ತಿಳಿಸುವದೆಂದರೆ ಇವರ ವಾಸಸ್ಥಾನವು ನಮಗೆ ಕೇಳದಷ್ಟು ದೂರ, ಅಲ್ಲಿಗೆ ಪತ್ರಮೂಲಕ ಕೊಟ್ಟರೆ ಅವರು, ನಾನು ಒಬ್ಬ ಎಲ್ಲಿಗೆಲ್ಲಾ ಹೋಗಲಿ, ಕುಟ್ಟದ ಮಲೆಯಿಂದ ಚೊಟ್ಟದ ಮಲೆಯವರೆಗೆ ಒಬ್ಬ ನಿತ್ಯಬೇಕಿನ್ನುತ್ತಾರ. ಹಾಗೂ ಹೀಗೂ ಒಬ್ಬ ರೈತರಿಗೆ ಅವರ ಭೇಟಿಯಾಗುವಾಗ್ಯೆ ಇವನ ಕೊಟ್ಟಿಗೆಯೇ ಖಾಲಿ. ಅಥವಾ ಒಂದೆರಡು ಉಳಿದದ್ದ ಪಕ್ಕ ಔಷಧಿ ಮುಗಿದು ಹೋಗಿದೆಯೆಂಬ ಉತ್ತರ ಒಂದದ್ದಕ್ಕೆ ಎಳೆ ಎರಡು ಪ್ರಸ್ತಾಪನೆ ಮಾಡಿ ಕಳುಹಿಸಿದ್ದೇನಾಗಿ ನಾಳೆ ಒರುತ್ತೇನೆಂದು ಹೇಳಿ ಹೋದ ವೈದ್ಯರು ಪತ್ತೇ ಇಲ್ಲ. ಹಾಯ! ಅವರೇನು ಮಾಡ್ತಾರು? ಅವರಿಗೆ ನಮಯವಿರುವಷ್ಟು ಕೆಲಸಮಾಡುವರು. ಒಂದು ತಾಲೋಕಿಗೆ ಒಬ್ಬ ವೈದ್ಯರು ಇಲ್ಲದ ಮೇಲೆ ನಮ್ಮ ಗತಿಯೇನಾಗಬೇಕು?

ಫಾರೆಸ್ಟಿನವರಿಗೆ ಮಾತ್ರ ಒಬ್ಬರು ಖಾಯಂ ಬೇಕಂತೆ ಈ ದೇಶಕ್ಕೆಲ್ಲಾ ಇಬ್ಬರು ಮೂವರು ಇದ್ದರೆ ಸಾಕೆ? ನೀನೇ ಆಲೋಚಿಸಿ ವೈದ್ಯಶಾಲೆ ಇಲ್ಲವೆಂದೆ ಖಂಡಿತವಿದ್ದರೆ ನಮ್ಮ ಪೂರ್ವದ ಗಿಡಮೂಲಿಕೆಗಳನ್ನಾದರೂ ಮರೆಯುತ್ತಿರಲಿಲ್ಲ. ಇವರನ್ನೆಲ್ಲಾ ನಂಬಿ ನಮ್ಮದನ್ನು ಮರೆತೆವು. ನೆನೆಯಕ್ಕ ಇವರಿಲ್ಲ; ಅಂತು ಇಂತು ಕುಂತಿ ಮಕ್ಕಳಿಗೆ ವನವಾಸವೆಂಬ ನಾಣ್ಣುಡಿಯಾಯ್ತು. ನಮ್ಮ ಈ ಕಿಗ್ಗಟ್ಟುನಾಡು ತಾಲೋಕಿನಲ್ಲಿ ಈಗ ಕನಿಷ್ಠ ಪಕ್ಷ ರೋಗದಿಂದ ಹತ್ತು ಸಾವಿರ ರುಪಾಯಿ ಮೇಲ್ಪಟ್ಟು ದನಕರುಗಳು ಮೃತಿಯನ್ನು ಹೊಂದಿರುತ್ತೆ. ಹೀಗಾದರೆ ಬಡ ರೈತನ ಪಾಡೇನು? ಇನ್ನೂ ಸಾಯುವುದು ತಪ್ಪಲೇ ಇಲ್ಲ. ಇನ್ನಾದರೂ ನಮ್ಮ ದೇಶದ ಕಷ್ಟವನ್ನು ಮನಮುಟ್ಟಿ ಆಲೋಚಿಸಿ ರೈತನ ವ್ಯವಸಾಯಕ್ಕೆ ಬೇಕಾದ ಪಶುವೈದ್ಯಶಾಲೆ ಯಾವ ಕಡೆಯಲ್ಲು ಬೇಕೋ ಆ ಕಡೆಯಲ್ಲಿ ಎಲ್ಲಾ ಸ್ಥಾಪಿಸಿ ದೇಶದ ಏಳಿಗೆಗೂ ಗೋವುಗಳ ಕಾಪಾಡಿದ ಪುಣ್ಯಕ್ಕೂ ಸಹ ಭಾಗಿಗಳಾಗ ಬೇಕೆಂಬುದೇ ನನ್ನ ಪ್ರಾರ್ಥನೆ. ನೋಡಿ, ಕಂಡು, ಕೇಳಿ, ಅನುಭವಿಸಿದ ನನ್ನ ವಿನಂತಿ.

ರೈತ.

"ಅಜ್ಞಾನಕ್ಕೆ ಕಾರಣ"

ಅಯ್ಯಾ ಯನ್ ಮುದ್ದಪ್ಪನವರೇ,

1. ನಿಮ್ಮ ಜುಲೈ 3ನೇ ತಾರೀಕಿನ ಜವಾಬು ನೋಡಲಾಯಿತು. ಗೌಡರುಗಳ ವಿದ್ಯಾಫಂಡಿನ ಮೀಟಿಂಗಿನ ಠರಾವು ಹೌದು, ಗೌಡರುಗಳಿಗಾಗಿ ನಿಮ್ಮ ಹೆಸರನ್ನೇ ನಮೂದಿಸಿದ್ದೆ ಹೊರತು ನಿಮ್ಮನ್ನೇ ಅಲ್ಲ.

2. ಆನರವರ ಅಭಿಪ್ರಾಯ ಮತ್ತು ತಿಳುವಳಿಕೆಯನ್ನು ಬರಿಯುವದರಿಂದ ಪತ್ರಿಕೆಗೆ ಅಭಿವೃದ್ಧಿಯೂ ಜನಾಂಗಕ್ಕೆ ನಾಗರೀಕತೆಯೂ ಹೆಚ್ಚುವದೇ ಹೊರತು ಪತ್ರಿಕೆಗೆ ಕೆಡುಕು ಒದಗುವದಾಗಿ ಕಾಣುವುದಿಲ್ಲ.

3. ಅಧ್ಯಕ್ಷ ಪದವಿಗೆ ಕೆಲವು ಅಧಿಕಾರವು ಇರುವುದಾದ್ದು ಎಲ್ಲರಿಗೂ ತಿಳಿದದಾಗಿದೆ. ಅಧ್ಯಕ್ಷರ ಪದವಿಯನ್ನು ಅಂಗೀಕರಿಸಿದಾಗ ಭಾಷೆಯೂ ಆಗಿದೆ.

4. ನೀವು ... ... ಎಲ್ ಪರೀಕ್ಷೆ ತೇರ್ಗಡೆ ಹೊಂದಿದಕ್ಕೆ ನಾನು ಸಂತೋಷಪಡುವದಲ್ಲದೆ ಗೌಡರುಗಳಲ್ಲಿ ಅನೇಕರು ಪ್ರಾವಿಡೆಯನ್ನು ಹೊಂದಿರುವದು ಪತ್ರಿಕೆ ಮೂಲಕ ತಿಳಿದು ಹರ್ಷಿತನ ಸಂತೋಷಪಡುತ್ತೇನೆ.

5. ಉದ್ಯೋಗ ಒದಗಿಸುವದಕ್ಕೆ ಸ್ಥಳ ದೊರೆಯದಾರದು. ಕೊಡಗಿಗೆ ರಾಜನನ್ನು ಓಡಿಸಿ ರಾಜ್ಯಭಾರ ನಡಿಸಿಕೊಂಡು ಬಂದದ್ದೇ ಕೊಡಗರು. ಅದ್ದರಿಂದಲೆ ಅವರು ಮೂಲನಿವಾಸಿಗಳು ... ಅಧ್ಯಕ್ಷತೆಯಲ್ಲಿ ಕೂಡಾ ಮೂಲನಿವಾಸಿಗಳಿಗೇನೇ ದೊಡ್ಡ ಉದ್ಯೋಗ ಕೆಲವು ವರುಷ ಕೊಡ ಬಾರದೆಂದು ಠರಾವು ಪಾಸುಮಾಡದಕ್ಕೆ ಉದಹರಣೆಗಾಗಿ ಕೊಡಗರ ನಡವಳಿಕೆಯನ್ನು ವಿವರಿಸಿದಾಗಿದೆ. ಆ ಠರಾವು ಎಷ್ಟಾದವನ್ನು ಇಂಜಿನಿಯರ್ ನಡಿಸಬೇಕಾಗಿದೆ. ಸ್ವಂತವಾಗಿ ನಡಿಸಿದರೆ ನನ್ನ ಗತಿಯೇನು? ಅವರಲ್ಲಿ ಕೂತವರ ಪಾಡೇನು? ಉದ್ಯೋಗಕ್ಕೆ ಲಾಯಕ್ಕಾದವರು ಆ ಪದವಿ ಅನುಭವಿಸ ತ್ಯಾಜಿ. ಗೌಡರುಗಳಿಗೆ ಆ ಪದವಿ ಒದಗಲಿಕ್ಕಿಲ್ಲವೆಂದೆ ಕಂಡಿರುತ್ತಾರೆಗೆ? ಕೊಡಗಿನ ನಿವಾಸಿಗಳನ್ನು ಒರೆಸುವಾಗ ಗೌಡರುಗಳ ಕಿಚ್ಚೇನು ಮತ್ತೆ ಸಿಸು? ಗೌಡರುಗಳು ಹಚ್ಚ ಅಭಿಪ್ರಾಯವು ಯಾರೂ ನಿಜವೆಂದು ನಂಬಲಿಕ್ಕಿಲ್ಲ.

6. ರಾಜರ ಕಾಲದಲ್ಲಿ ಕೊಡಗರು ಮನಸ್ಸಿಟ್ಟಿದ್ದರೆ ಇತರರನ್ನು ನಿರಿಸುತ್ತಿರಲಿಲ್ಲ. ಕೊಡಗರ ಅನೇಕರನ್ನು ಹೊರಗಿನಿಂದ ಕರಿಸಿ ನೆಲೆಗೊಳಿಸಿದ ವ ಸಂಗತಿ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಬ್ರಿಟಿಷ್ ರೂಲ್ ನ್ಯಾಯನಿಷ್ಠೆಯಿಂದೀಚಿಗ ಸಾಧ್ಯವಲ್ಲವೆಂಬದು ನಿಮಗೆ ಚನ್ನಾಗಿ ಗೊತ್ತಿದೆ. ಸತ್ಯ ಎಷ್ಟೇ ಗದ್ದಲ ಹೆಚ್ಚು ಇತ್ತೆಂತ ಹೇಳುವಂತೆ ಈ ದೇಶದಿಂದ ಬಿಟ್ಟು ಬೇರೆ ದೇಶಕ್ಕೆ ಹೋದವನು ಉತ್ತಮ ತರದಲ್ಲಿದ್ದಾನೆಂತ ಹೇಳುವದೂ ಸಾಧಾರಣ ಮಾತಾಗಿದೆ.

7. ನನ್ನ ಜಾತಿಯನ್ನು ಚೆನ್ನಾಗಿ ಓದಲಿಲ್ಲವಾಗ ನಂಬುತ್ತೇನೆ. ಯುರೋಪಿಯನರಿಗೇನೇ ಅಥವ ಈ ದೇಶದಲ್ಲಿ ಹೆಚ್ಚು ಸಮ್ಮಂಧಿಕರಲ್ಲದ ಪರಸ್ಥಳದವರಿಗೇನೇ ದೊಡ್ಡ ಉದ್ಯೋಗ ಕೊಡಬೇಕೆಂಬದರ ಅರ್ಥವೇನು? ಹತ್ತು ಜ್ಞಾನಿಯರೊಂದಿಗೆ ಒಬ್ಬ ಅಜ್ಞಾನಿ ಸೇರಿದರೆ ಅವನು ಸಹ ಜ್ಞಾನಿಯೆ.

8. ಗೌಡರುಗಳ ಗುಂಪಿಗೆ ನೀವು ಮುಖಂಡರಾದದ್ದರಿಂದ ನಿಮ್ಮ ಹೆಸರನ್ನು ಎತ್ತಿ ಹೇಳಿದ್ದೇ ಹೊರತು ಅನು ಬೇರೆ ಯಾವದಕ್ಕೂ ಪ್ರಯೋಗಿಸುವದಿಲ್ಲ. ನಿಮ್ಮ ಹೆಸರನ್ನು ಹಾಳುಮಾಡುವದಕ್ಕೆ ಯಾರೂ ಪ್ರಯತ್ನಿಸುವದಿಲ್ಲವೆಂಬ ಸಂಗತಿ ನಿಮಗೆ ತಿಳಿಯ ಬರಬಹುದು.

9. ಗೌಡರುಗಳ ಜನಾಂಗವು ಕೊಡಗಿನ ಬೇರೆ ಎಲ್ಲಾ ಜನಾಂಗವನ್ನು ದೂರಿಸುವಾಗ ಕೊಡಗರು ಆ ಜನಾಂಗಕ್ಕೆ ಸೇರಲಿಲ್ಲವೇ? ನಾನು ಮೊದಲು ಕೊಡಗರ ನಡವಳಿಕೆಯನ್ನು ವಿವರಿಸಿ ಮತ್ತೆ ಜನಾಂಗದ ಕಡೆ ತಿರುಗಿದಾಗಿದೆ. ಈಗ ಕೊಡಗರು ಬ್ರಾಹ್ಮಣರೂ ಹೆಚ್ಚಿನ ದೊಡ್ಡ ಉದ್ಯೋಗದಲ್ಲಿರುವ ಮತ್ಸರಕ್ಕೆ ಮುಂದಿನ ಬೇಲಿಕಟ್ಟಿದ್ದು ಎಂಬದನ್ನು ಯಾರು ತಾನೇ ಊಹಿಸಲಾರರು? ಕ್ಲೇಶವಿಲ್ಲದ ಪಕ್ಷ ಅಂತಾ ಠರಾವು ಪಾಸು ಮಾಡಲು ಕಾರಣವಿಲ್ಲ.

ನನ್ನ ಜಾತಿಯು ತಕ್ಕಷ್ಟು ಜ್ಞಾನಶಕ್ತಿಯಿಂದಲೆ ವಿವರಿಸಿದ್ದು. ನನ್ನಾ ಅಭಿಪ್ರಾಯವು ದೇಶದ ಏಳಿಗೆಗೆ ಕುಂದಕವೆಂಬದನ್ನು ಚೆನ್ನಾಗಿ ತಿಳಿದುಕೊಳ್ಳಿ. ಅವಶ್ಯವಿದ್ದರೆ ಕೊಡಗು ಅಫೀಸಿನಲ್ಲಿ ಚರ್ಚಿಸಲು ತಯಾರಿದ್ದೇನೆ, ಆದರೆ ಸಮಯವನ್ನು ನೀವೆ ಏರ್ಪಡಿಸ ಬೇಕಾಗಿದೆ. ಯಥಸ್ಥಿತಿ ಬರವದಕ್ಕೆ ನಾಚಿಕೆಗೂ ತಪ್ಪಿತಕ್ಕೂ ಕಾರಣವಿಲ್ಲ.

ಒಗ್ಗಟ್ಟಿಗೆ ಒಂಬತ್ತು ಗುಣ

ಪಿ. ಕುಶಾಲಪ್ಪ

ಮಾರಾಟಕ್ಕೆ ಇದೆ.

ಸೋಮವಾರಪೇಟೆ ರಸ್ತೆಯಲ್ಲು ಮಡಿಕೇರಿಯಿಂದ 5 ಮೈಲು ದೂರದಲ್ಲಿರುವ ಮಕ್ಕಂದೂರು ಗ್ರಾಮದಲ್ಲಿ 8|ಎಕರು ಭೂಮಿ ಮತ್ತು ಅದಕ್ಕೆ ಸೇರಿದ ಬಾಗೆ ಸಹ ಮಾರಾಟಕ್ಕೆ ಇದೆ ಕ್ರಯ ರೂ. 1500 ಯಾ ಅದರ ಸಮೀಪ ಹೆಚ್ಚಿನ ಸಂಗತಿಗೆ ಈ ಕೆಳಗಿನ ವಿಳಾಸಕ್ಕೆ ಬರದುಕೊಳ್ಳುವುದು

ದೇವಾಂಗದ ಹನುಮಂತೈಯ್ಯ,
ಉಪ್ಪಿನ ವ್ಯಾಪಾರಿ,
4—4 ಮಹದೇವಪೇಟೆ, ಮಡಿಕೇರಿ.

FOR SALE.

The following property about ten miles from Mercara, on Somwarpett road, consisting of —

	Rs	As.	P
Wetlands, 30 93 acres or about 1000 batties at Rs 500/ per 100 batties	5000	0	0
Coffee, 33 46 acres at Rs 400/ per acre	13200	0	0
Bane and Jungle, 90 00 acres. at Rs 20/ per acre	1800	0	0
Total 154 39 acres	20000	0	0

With a decent upstaired house, out houses, and cooly lines,

is open for sale

Please apply to —

12-6. R. Framjee, Mercara.

PRICES REDUCED.

WHISKY —

	Rs		
King George	6	14	0
White horse	6	14	0
Dewars'	6	14	0
Perfection	6	14	0
Vat No 69	6	14	0

BRANDY —

	Rs		
La Rupee D'or	6	0	0
Exshaws' No 1	7	1	0
Exshaws' No 2	6	4	0
Meartell's spl	6	6	0
Hennessey's XXX	7	8	0

Old Tone Gin Rs 5—0—0, N P Vermouth 2—14—0 Special terms for trade

Spencer & Co. Ltd,
MERCARA & POLLIBETTA.
38

ಸಂಪತ್ತಿಯ ಸಾಧನಗಳು.

ಅಯ್ಯಾ ಒಂದ ಗಳೇ ಸಂಪತ್ತಿಯು ಅನ್ಯ ಜಾಗದಿ ಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು ಅದನ್ನು ಶೋಧಿಸಿ ತೆಗೆಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು

ಲಕ್ಷಾವಧಿ ರೈತರು ಹೂ. ಅನುಭವ ತೆಗೆದುಕೊಂಡಿರುವರು ಭೂಮಿಯು ತಕ್ಕ ತರತರವ ನೇಗಿಲುಗಳೂ ಗಾಣಗಳೂ ದೊರೆಯುತ್ತವೆ ಕಿಸಾನ ಗಾಣವು ಒಂದು ಗಂಟೆಗೆ ೪೦೦ ಪೌಂಡು ಕಬ್ಬನ್ನು ಹಿಂಡಿ ಚೆಲ್ಲುತ್ತದೆ

ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್,
3 ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯಕ್ರಯ ವಾಪಾಸು ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ

ಟ್ರೇಡ್‌ಮಾರ್ಕ |ರಿಜಿಸ್ಟರ್ ಮಾಡಿದ್ದು |ನೋಡಿ ತೆಕ್ಕೊಳ್ಳಿರಿ

ಅಗಸ್ತ್ಯ ಮನ್ಮಥ ಚಿಂತಾಮಣಿ ಲೇಹ

ಆಬಾಲವೃದ್ಧ ಸ್ತ್ರೀ ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾದದ್ದು ಮೇಹ ವಿಕಾರವಿದ್ದವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ, ಬಾಣಂತಿ ಸುಬಾಣಂತಿಗಳಿಗೂ ಉಪಯೋಗವುಳ್ಳ ಬಹುಪರಮಾನಂದ ಔಷಧಿ 1ಸೇರು 48ದಿವಸ ಸೇವಿಸಬಹುದು 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0 ½ಸೇರು ಡಬ್ಬಿ 1ಕ್ಕೆ ರುಪಾಯಿ 1—1—0 ವಿ ಪಿ ಕರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ

ವಿಳಾಸ—ದೇವಣ್ಣ ನಾರಾಯಣಸೇಟ್,
ಗೋಳಿಕಟ್ಟಾ,
ಮಂಗಳೂರು,
12—1 ದ ಕ

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝಾ ಡವಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦
ಟಪ್ಪಾಲು ಚಾರ್ಜು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು:
೯—೨—೦

ಏಜಂಟರು ಬೇಕು, ಕೊಡಗಿನ ಸ್ಕೂಲ್ಮಾಸ್ಟರುಗಳು ಮ್ಯಾರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ

12—12 ಕರ್ಣಿಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಸ್ಟರಾಗಿದೆ.

		ರೂ.
ಶೇರ್ ಬಂಡವಾಳ	. .	50,000
ವಸೂಲಾದ ಶೇರ್ ಮೊಬಲಗು	..	7080
ಜಮಾಬಂದ ಠೇವಣಾತಿ		78,000

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ವಾಯಿದ ಆದವ ಪಕ್ಕಿನ ವಾಯಿದೆ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 6—4—0 ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯು ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟುಮಾಡುತ್ತಾರೆ

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಯಂ. ಮುಬಂಗರಾಯರ
ರಾಯ್ ಬಹದ್ದೂರ್ ಬಿ ಎ, ಬಿ ಎಲ್

ಸೆಕ್ರೆಟರಿ.
ಸಿ ಯಸ್ ವೆಂಕಪ್ಪಯ್ಯನವರು, ಬಿ ಎ, ಬಿ ಎಲ್
ತಾರೀಕು 1—7—1724

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾರ್ಥಿವಾಗಿ ದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ ಇದೇ ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು

ವಾರ್ಷಿಕ ಚಂದಾ ಮೂರು ರುಪಾಯಿ

ವಿಳಾಸ—

ಮೇನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್

GOOLAMHUSAIN ALLIBHOY & SONS,

Largest Importers of Fire Arms and Ammunition, Cheapest priced firm in India,

210 Abdul Rehman Street, BOMBAY.



We stock Arms, Ammunition and shooting requisites of almost all the kinds and classes ranging from Re 1/— to Rs 3,600/—

Use our **Brilliant Search Light Lamp for Big Game Night shooting** price Rs 40/— Free Delivery

Apply for the Current Catalogue.
24—2

Printed & published by Kodand Appayya, R.B, Chairman, Board of Directors, at "Kodagu" Press, Mercara for "Kodagu" Ltd

Reg. No. M. 1550.
If not delivered please return to
KODAGU" OFFICE. MERCARA.

ಕೊಡಗು.

ವಾರ್ಷಿಕ ಚಂದಾ ರೂ. ೪—೦—೦.

ಸತ್ಯೇನ ಧರ್ಮದಯಯಾ ವಿದ್ಯಾ ನೀತಿ ಪ್ರಯತ್ನತಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸ ೧೯೨೫ನೇ ಇಸವಿ ಜುಲೈ ತಾರೀಕು ೨೪ನೇ ಶುಕ್ರವಾರ [ಸಂಚಿಕೆ ೮

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು ಡಾಕ್ಟರ್ ಯು. ರಾಮರಾವ್,
ಯಮ್. ಎಲ್. ಸಿ. ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಹೊಬಲಗು ವರ್ಷಕ್ಕೆ ... ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ. 'ಆರೋಗ್ಯ ಚಂದ್ರಿಕೆ' 323,
ತಂಬುಶೆಟ್ಟಿ ಬೀದಿ, ಮದ್ರಾಸ್.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಕೋಟೆರ ಚಿಣ್ಣಪ್ಪನವರ ಮತ್ತು ಮೆ. ಚಂಗಂಡ ಕುಟ್ಟಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರರಾಜಪೇಟೆ—ಟಿಂಬರ್ ಭಂಡಾರಗಲ್ಲಿ ಮ. ಮುಂಡೇಟಿರ ಚಿಣ್ಣಮಣ್ಣನವರು.

ಮೂರ್ನಾಡು—ಕಮರ್ಶಿಯಲ್ ಸ್ಟೋರಿನಲ್ಲಿ ಮೆ. ಪಡೆಯಂಡ ದೇವಯ್ಯನವರು.

ನಾಪೋಕ್ಲು—ಮೆ. ಅಪ್ಪಚೆಟ್ಟೋಳಂಡ ಸುಬ್ಬಯ್ಯನವರು.
ಮೆ. ಪೊನ್ನಚಂಡ ಮುದ್ದಪ್ಪನವರು.

ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು.

ಪೊನ್ನಂಪೇಟೆ—ಮೆ. ಸ್ವತ್ವಮನೆ ಮುದ್ದಮ್ಮ ಕೃಷ್ಣನವರು.

ಮಡಿಕೇರಿ—ಮೆ. ಜಿ. ನಾಡಮ್ಮನವರು.

ಅಮ್ಮತ್ತಿ ಸಿದ್ದಾಪುರ—ಮೆ. ಐನಂಡ ಮಾದಪ್ಪನವರು
ಮೆ. ಕಲಿಯಂಡ ಸೋಮಯ್ಯನವರು.

ಅಲ್ಲದೆ ಈ ಸಮ್ಮಂಧ ಕೋಟೇರ ಚಿಣ್ಣಪ್ಪನವರು ಮತ್ತು ಚಂಗಂಡ ಕುಟ್ಟಪ್ಪನವರು, ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಹಣ ಕೊಡಬಹುದು. ಕೊಡಬೇಕಾಗಿ ಕೋರಿಕೆ.

ಕೋದಂಡ ಉತ್ತಯ್ಯ.
ಆರ್ಗನೈಸಿಂಗ್ ಸೆಕ್ರೆಟರಿ, "ಕೊಡಗು" ಲಿಮಿಟೆಡ್

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಚಾಪು ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿಂದ ಪಡಕೊಳ್ಳಬಹುದು

ಮಡಿಕೇರಿ
17-9-24 ಮೇನೇಜರ್.

ನೋಟೀಸು.

ಕೊಡಗು ಜಮೀನ್ದಾರರಸಂಘದ ಲೆಕ್ಕವನ್ನು ಆಡಿಟ್ ಮಾಡಿಸಬೇಕಾಗಿರುವುದರಿಂದ ಕಳದ ವರ್ಷ ಮೆ. ಬಿದ್ದಂಡ ಕಾರ್ಯಪ್ಪನವರು ವಿಭಾಗಮಾಡಿದ ನಾಡು ಕಮಿಟಿಗಳಿಗೆ ಹಣ ವಸೂಲಾತಿಗೆ ಕೊಟ್ಟಂತ ರಶೀತಿ ಬುಕ್ಕುಗಳು, ಕಳದ ವರ್ಷದ ವಾರ್ಷಿಕ ಕಾನ್ಫರೆನ್ಸ್ ಕಳೆದ ಕೂಡಲೇ ಪುನಹ ಹಣ ವಸೂಲಾತಿಗೆ ಆಯಾಯ ಕಮಿಟಿಗಳಿಗೆ ಕೊಟ್ಟಿರುವುದರಿಂದ ಎಲ್ಲಾ ಕಮಿಟಿಯವರೂ ತಪ್ಪದೆ ಹತ್ತಿರವಿರುವ ರಶೀತಿ ಬುಕ್ಕುಗಳನ್ನು ಮತ್ತು ಈ ವರ್ಷ ಇದಿಯಂಡ ಮೆ. ಮಾಚಯ್ಯನವರು, ಮೆ. ಚಂಗಂಡ ಕುಟ್ಟಪ್ಪನವರು ಮೆ. ಕೋಟೆರ ಚಿಣ್ಣಪ್ಪನವರು ಮತ್ತು ಇನ್ನು ಕೆಲವು ಏಜಂಟರು ಹಣ ವಸೂಲಾತಿಗೆ ಕೊಟ್ಟ ರಶೀತಿ ಬುಕ್ಕುಗಳನ್ನೂ ಸಹ ವಸೂಲಾದ ಹಣವಿದ್ದಪಕ್ಷ ಹಣ ಸಮೇತ ಮಡಸೆ ಜಮೀನ್ದಾರರಸಂಘದ ಮಡಿಕೇರಿಯಲ್ಲಿರುವ ಆಫೀಸಿಗೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇನೆ

ಸಿ. ಎಸ್. ವೆಂಕಪ್ಪಯ್ಯ,
ಜನರಲ್ ಸೆಕ್ರೆಟರಿ

ನೋಟೀಸು.

ದಕ್ಷಿಣ ಕೊಡಗಿನಲ್ಲಿ ಮದುವೆಕಾಗದ, ನೋಟೀಸು ಮತ್ತು ಬೇರೆ ಪ್ರಿಂಟಿಂಗ್ ಕೆಲಸ ಮಾಡಿಸಬೇಕೆಂದಿರುವವರು ದಯವಿಟ್ಟು ಎಲ್ಲಾ ಆರ್ಡರುಗಳನ್ನು ನಮ್ಮ ಏಜಂಟರಾದ ವೀರರಾಜಪೇಟೆ ಖಾದಿಭಂಡಾರದ ಮೇನೇಜರವರಿಗೆ ಕೊಟ್ಟರೆ, ಶೀಘ್ರದಲ್ಲೇ ಸುಲಭ ಚಾರ್ಜಿಗೆ ಗಿಲಿಟು ಹಾಕಿ ಪ್ರಿಂಟುಮಾಡಿಸಿ ಕಳುಹಿಸಲಾಗುವುದು.

'ಮೇನೇಜರ್',
"ಕೊಡಗು" ಪ್ರೆಸ್, ಮಡಿಕೇರಿ.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ವಾತ್ತಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ವಾತ್ತಿಗಳು ಕಾಗದದ ಒಂದೇಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ವಾತ್ತಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಒಂದು ತಲುಪಿರುವುದರಿಂದ, 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಅಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ

ಮಡಿಕೇರಿ. ಮೇನೇಜರ್,
'ಕೊಡಗು' ಲಿಮಿಟೆಡ್

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯು ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿದೆ.

ಕೃಷ್ಣ ನಂಬೀಶನ್ ಮತ್ತು ನಾರಾಯಣ ನಂಬೀಶನ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಪಿ. ಟಿ. ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ

ನಂಬೀಶನ್ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲೂರು, ವೀರಾಜಪೇಟೆ ಮತ್ತು
52-18 ಗೋಣಿಕೊಪ್ಪಲು.

ARMS & AMMUNITION MART.
Mahomedally-Noorbhoy.



337, Abdul Rehman, Street, near
Crawford Market, BOMBAY.
Telegrahic Address:-"SHOOTER"
Bombay
[52 48] Please write for latest Catalogues.

"ಕೊಡಗು"

೧೯೨೫ನೇ ಇಸವಿ ಜುಲೈ ತಾ. ೨೪ನೇ ಶುಕ್ರವಾರ.

ಲಂತಾನ.

ಕೊಡಗಿನಲ್ಲಿ ಲಂತಾನದ ಕಾಟದಿಂದ ರೈತರಿಗೆ ಬಹಳ ನಷ್ಟವಿದೆಯೆಂತ ಸರ್ವರೂ ಒಪ್ಪತಕ್ಕ ಮಾತಾಗಿದೆ. ದನಕರಗಳು ವೃದ್ಧಿಯಾಗದೆ ಇರಲು ಈ ಲಂತಾನದ ಸೊಪ್ಪನ್ನು ತಿನ್ನುವದೂ ಮತ್ತು ಮೇವಿಗೆ ಇದ್ದ ಜಾಗವೆಲ್ಲಾ ಲಂತಾನ ಮುಚ್ಚಿದ್ದರಿಂದ ದನಗಳಿಗೆ ಮೇವಿಲ್ಲದೆ ಹೋದದ್ದೂ, ಲಂತಾನಕಾಡಿನಲ್ಲಿ ಹುಲಿಗೆ ಆಶ್ರಯ ದೊರೆತದ್ದೂ ಸಹ ಕಾರಣಗಳಾಗಿರಬೇಕೆಂತ ಅನುಭವಸ್ಥರ ಅಭಿಪ್ರಾಯವಾಗಿದೆ. ದನಕರಗಳ ಮರಣದಿಂದ ದೇಶಕ್ಕೆ ಲಕ್ಷಾಂತರ ರೂಪಾಯಿ ನಷ್ಟ ವರುಷ ವರುಷ ಆಗುತ್ತಿದೆಯೆಂತಲೂ ಇದರಿಂದಲೇ ರೈತನ ಬಡತನವು ಹೆಚ್ಚು ಹೆಚ್ಚು ಆಗುತ್ತಾ ಹೋಗುತ್ತಿದೆ ಎಂತಲೂ ಎಲ್ಲರಿಗೂ ಅನುಭವದ ವಿಷಯವಾಗಿದೆ. ಈ ಪರ್ವತ ಶ್ರೇಣಿಯಲ್ಲಿ, ಮಳೆ ಧಾರಾಳವಾಗಿ ಬೀಳುವ ದೇಶದಲ್ಲಿ ದನಗಳಿಗೆ ಮೇವು ಸರಿಯಾಗಿ ದೊರೆಯುವದಿಲ್ಲವೆಂಬ ಮಾತು ಆಶ್ಚರ್ಯಕರವಲ್ಲವೇ? ಈಗ ಸುಮಾರು 30 ವರುಷಗಳ ಹಿಂದೆ ಸಹ ದನಕರಗಳು ಒಳ್ಳೇ ಸ್ಥಿತಿಯಲ್ಲಿದ್ದವು. ನಾಲ್ಕುನಾಡು ಪ್ರಾಂತ್ಯದಲ್ಲಿ ಒಳ್ಳೇ ಆರೋಗ್ಯವಾದ ಎತ್ತುಗಳೂ ಹೋರಿಗಳೂ ಬಾಣೆ ಮೇಲೆ ಮೇಯುತ್ತಿರುವದನ್ನು ಸಾಧಾರಣವಾಗಿ ನೋಡಬಹುದಿತ್ತು. ಈಗಲಾದರೋ ಇಂಥಾ ನೋಟವು ಬಹಳ ಅಪರೂಪವಾಗಿದೆ. ಕಿಗ್ಗಟ್ಟುನಾಡು ಪ್ರಾಂತ್ಯದಲ್ಲೂ ಇದೇ ರೀತಿ ಸ್ವಲ್ಪ ಕಾಲದಿಂದ ಈಚೆಗೆ ದನಗಳು ಕ್ಷೀಣವಾಗುತ್ತಾ ಬರುತ್ತಿವೆ. ಈ ರೀತಿ ದನಗಳು ಕ್ಷೀಣವಾಗುತ್ತದೆಂಬ ಕಾರಣದಿಂದ ತುಂಬಾ ಹಣ ಖರ್ಚು ತಗಲುವ ಒಂದು ಕಮಿಟಿಯನ್ನು ಸರಕಾರದವರು ನೇಮಿಸಿದ್ದಾರೆ. ಈ ಕಮಿಟಿಯವರು ದೇಶದ ಎಲ್ಲಾ ಕಡೆಗಳಲ್ಲೂ ತಿರುಗಿ ದನಗಳ ಕ್ಷೀಣತೆಗೆ ಕಾರಣವೇನಂತ ವಿಚಾರಿಸಿ ಅಂಥಾ ಕಾರಣಗಳನ್ನು ಹೋಗಲಾಡಿಸಿ ರೈತನ ಆರ್ಥಿಕ ಸ್ಥಿತಿಯ ಪಾಯವಾದ ದನಗಳನ್ನು ಅಭಿವೃದ್ಧಿಗೊಳಿಸಲು ತಕ್ಕ ಶಿಫಾರಸ್ಸು ಮಾಡಿಯಾರೆಂತಲೂ ಅಂಥಾ ಶಿಫಾರಸ್ಸನ್ನು ಕೌನ್ಸಿಲಿನಲ್ಲಿ ಚರ್ಚಿಸಿ ಸರಕಾರದವರು ಜಾರಿಗೆ ತಂದಾರೆಂತಲೂ ಆಶಿಸುತ್ತೇವೆ. ಆದರೆ ದನಗಳ ಅನಾರೋಗ್ಯಕ್ಕೂ, ಕ್ಷೀಣತೆಗೂ, ಲಂತಾನವು ಒಂದು ದೊಡ್ಡ ಕಾರಣವಾಗಿದೆಯೆಂತ ಎಲ್ಲರಿಗೂ ತಿಳಿದ ವಿಷಯವಾದ್ದರಿಂದ ಈ ಕಾಟವನ್ನು ತಪ್ಪಿಸಿಕೊಳ್ಳಲಿಕ್ಕೆ ದೇಶದವರು ಕಮಿಟಿಯ ಶಿಫಾರಸ್ಸಿಗೆ ಕಾಯದೆ ಕೂಡಲೆ ಸೊಂಟಗಟ್ಟಬೇಕಾಗಿದೆ.

ಈ ಲಂತಾನದ ಹಾವಳಿಯನ್ನು ನಾಶಪಡಿಸಲಿಕ್ಕೆ ಈ ಗತಾನೇ ಹೊರಟುಹೋದ ಚೀಫ್‌ಕಮಿಷನರು ತುಂಬಾ ಮುತುವರ್ಜಿಯಲ್ಲಿದ್ದರು. ಅವರ ಉತ್ಸಾಹವನ್ನು ಕೆಲವು ಮಟ್ಟಿಗೆ ಕಮಿಷನರವರು ವಹಿಸಿಕೊಂಡಿದ್ದಾರಾಗಿ ತಿಳಿಯುತ್ತೇವೆ. ಬಜೆಟ್ಟಿನಲ್ಲಿ ಲಂತಾನ ನಾಶಕ್ಕೆ 5,000 ರುಪಾಯಿ ಇಟ್ಟಿದ್ದಾರೆ. ಈ ಹಣವನ್ನು ಪೂರ್ತಿಯಾಗಿ ಖರ್ಚು ಮಾಡುವುದರಲ್ಲಿ ಕಮಿಷನರು ಉದ್ಯುಕ್ತರಾಗಿದ್ದಾರೆಂತ ತಿಳಿಯಲು ಸಂತೋಷಪಡುತ್ತೇವೆ. ಆದರೆ ಸಾವಿರಾರು ಎಕರೆ ಪೈಸಾರಿ ಜಾಗವೆಲ್ಲಾ ಲಂತಾನದಿಂದ ಮುಚ್ಚಿರುವಾಗ ಈ ಸ್ವಲ್ಪ ಹಣದಿಂದ ವಿಶೇಷ ಪ್ರಯೋಜನವಾಗಲಾರದು. ಆದರೆ ದೇಶದ ಮುಖ್ಯ ಅಧಿಕಾರಿಗಳು ಈ ವಿಷಯದಲ್ಲಿ ದೃಢಸಂಕಲ್ಪ ಮಾಡಿದರೆ ಪ್ರಯೋಜನವಾಗುವುದರಲ್ಲಿ ಸಂಶಯವಿಲ್ಲ. ವೆ. ಹ್ಯಾರಿಸ್ ಸಾಹೇಬರು ಲಂತಾನದ ಮೇಲೆ ನಡಿಸಿದ ಯುದ್ಧದಿಂದ ಆದ ಪ್ರಯೋಜನವನ್ನು ಅನೇಕರು ಈಗ ಆಡಿಕೊಳ್ಳುತ್ತಾರೆ. ರೈತನ ದೊಡ್ಡ ಶತ್ರುವಾದ ಈ ಲಂತಾನವನ್ನು ನಾಶಪಡಿಸುವ ಕೆಲಸವು ರೈತನಿಗೆ ತತ್ಕಾಲ ವಿಶೇಷ ಫಲದಾಯಕವಲ್ಲದ್ದರಿಂದ ಅದಕ್ಕಾಗಿ ಕೆಲಸಮಾಡಲು ಮನಸ್ಸು ಇರುವದಿಲ್ಲ. ಸರಕಾರಿ ಕಾನೂನು ಜಾರಿಮಾಡಿದರೆ ರೈತನಿಗೆ ಇನ್ನಷ್ಟು ಕಷ್ಟವೂ ಬೇಸರವೂ ಆಗುತ್ತದೆ. ರೈತರು ಈ ವಿಷಯವನ್ನು ಚೆನ್ನಾಗಿ ಮನಸ್ಸಿಗೆ ಹಚ್ಚಿಕೊಂಡು ಸರಕಾರಿ ಕಾನೂನು ಜಾರಿಗೆ ತರುವದು ಅವಶ್ಯವಿಲ್ಲದಂತೆ ಮಾಡಿಕೊಳ್ಳುವದು ಒಳ್ಳೇದು. ಲಂತಾನ ಆಕ್ಟಿಗೆ ಕೊಡಗು ಜಮೀನ್ದಾರರ ಸಂಘವು ಪ್ರತಿ ವರುಷವೂ ವಿರೋಧಿಸಿದೆ ಎಂಬದು ನಮಗೆ ತಿಳಿದಿದೆ. ಲಂತಾನಾ ಆಕ್ಟಿನಲ್ಲಿ ಅಧಿಕಾರಿಗಳು ರೈತನಿಗೆ ಲಂತಾನ ತೆಗೆಯದೆ ಇದ್ದರೆ ಜುಲುಮಾನೆ ಹಾಕುವ ಹಕ್ಕಿತ್ತು. ಕೆಲವರ ಮೇಲೆ ಆ ಪ್ರಕಾರ ಜಾರಿಯೂ ಆಯಿತು. ಇದಕ್ಕೆ ತುಂಬಾ ಆಕ್ಷೇಪಣೆಯು ರೈತರಲ್ಲಿ ಹುಟ್ಟಿದ್ದರಿಂದ ಲಂತಾನಾ ಆಕ್ಟು ಹೋಯಿತು. ಆದರೂ ಅವರ ಹಿಂದುಗಡೆ ಇನ್ನೊಂದು ಮದ್ರಾಸ್ ಆಕ್ಟನ್ನು ತಯಾರಿಸಿ ಇಟ್ಟುಕೊಂಡಿದ್ದಾರೆ. ಈ ಆಕ್ಟು ಪ್ರಕಾರ ಜುಲುಮಾನೆ ಹಾಕಬೇಕಾದರೆ ಮೇಜಿಸ್ಟ್ರೇಟರಲ್ಲಿ ವಿಚಾರ ನಡೆದು ತಪ್ಪಿತಸ್ಥನು (ಲಂತಾನ ತೆಗೆಯದವನು) ಕಾರಣಗಳನ್ನು ಹೇಳಿಕೊಳ್ಳಲು ಅನುಕೂಲವಿದೆ. ಆ ಆಕ್ಟನ್ನು ಇನ್ನೂ ಜಾರಿಗೆ ತಂದಿರುವದಿಲ್ಲ. ಲಂತಾನ ಆಕ್ಟಿಗೂ ಈಗ ಮಂಜೂರಿನಲ್ಲಿರುವ ಆಕ್ಟಿಗೂ ವ್ಯತ್ಯಾಸವಿದ್ದರೂ ರೈತರಿಗೆ ತಪ್ಪು ಕಟ್ಟೀತೆಂಬದರಲ್ಲಿ ಸಂಶಯವಿಲ್ಲ. ಆದ್ದರಿಂದ ಲಂತಾನದ ಪೀಡೆಯನ್ನು ಜನರು ತಾವಾಗಿಯೇ ನಿರ್ಮೂಲಮಾಡಲು ಹೊರಟು ಕಾನೂನು ಜಾರಿಗೆ ಎಡೆಕೊಡಬಾರದು.

ಹೊರಟುಹೋದ ಚೀಫ್ ಕಮಿಷನರ್ ಮಿ ಬಾರ್ಟನ್‌ರವರು ಲಂತಾನವನ್ನು ಸಹಕಾರಿ ಸಂಘಗಳ ಮೂಲಕ ತೆಗೆಯಬೇಕೆಂತ ಆಗಿಂದಾಗ್ಗೆ ಹೇಳಿದ್ದರು. ಅಂಥಾ ಸೊಸೈಟಿಗಳು ಇನ್ನೂ ಏರ್ಪಾಡಾಗಲಿಲ್ಲ. ರಿಜಿಸ್ಟ್ರಾರವರು ಆಗಿಂದಾಗ್ಗೆ ಕೆಲವು ಗ್ರಾಮಗಳಲ್ಲಿ ಈ ವಿಷಯವನ್ನು ಬೋಧಿಸಿದರೂ ಸಹ ಕೆಲಸಮಾಡಲು ನಿಶ್ಚೈಸಿ ಸಂಘವನ್ನು ರಿಜಿಸ್ಟರ್ ಮಾಡಿಸಿಕೊಳ್ಳುವ ಕೆಲಸವು ಗ್ರಾಮ ನಿವಾಸಿಗಳ ಮೇಲೆಯೇ ಇದೆ. ಈಗ ದಕ್ಷಿಣ ಕೊಡಗಿನ ಕೆಲವು ಗ್ರಾಮಗಳು ಲಂತಾನ ಸಂಘಗಳನ್ನು ಮಾಡಿಕೊಳ್ಳಲು ಉದ್ಯುಕ್ತರಾಗಿದ್ದಾರೆಂಬ ಶುಭವರ್ತಮಾನವು ಬಂದಿದೆ. ಇವರ ಪ್ರಯತ್ನಕ್ಕೆ ಜಯವಾಗಲಿ ಎಂತ ಹಾರೈಸುತ್ತೇವೆ. ಇಂಥಾ ಸಂಘಗಳು ಜಯಪ್ರದವಾಗಬೇಕಾದರೆ ಸಂಘಗಳ ಮುಖ್ಯ ಅಧಿಕಾರಿಗಳು ಸ್ವಾರ್ಥತೆ ಇಲ್ಲದವರಾಗಿ, ಸಮಾಧಾನಯುಕ್ತರಾಗಿ ಮೇಲು ಕೀಳು ಭಾವವು ಜನರಲ್ಲಿ ಹುಟ್ಟದಂತೆ ಮಾಡಿ ಸರ್ವರನ್ನೂ ಕೆಲಸಕ್ಕೆ ಪ್ರಾರಂಭಿಸುವಂತೆ ಮಾಡಬೇಕು. ಸಂಬಳ ಕೊಟ್ಟು ಆಳಿಡಲು ಶಕ್ತರಾದವರೂ ಸಹ ಮೇಲ್ಪಂಕ್ತಿಗಾಗಿ ತಾವಾಗಿಯೇ ಲಂತಾನ ನಾಶದ ಕೆಲಸಕ್ಕೆ ಇಳಿಯಬೇಕು.

ಈಗ ವ್ಯವಸಾಯದ ಕೆಲಸದ ಸಮಯವಾಗಿದೆ. ಲಂತಾನ ಕೀಳುವ ಕೆಲಸವನ್ನು ಯೋಚಿಸಲು ಸಹ ಸಮಯವಿಲ್ಲ. ಆದರೆ ಇನ್ನೊಂದು ತಿಂಗಳೊಳಗಾಗಿಯೇ ಅನೇಕರ ವ್ಯವಸಾಯದ ಕೆಲಸ ತೀರಿ ವಿಶ್ರಾಂತಿ ತೆಗೆದುಕೊಳ್ಳುವ ಕಾಲಬರುತ್ತದೆ, ಮತ್ತು ಮಳೆ ಸಾದಾರಣ ಇರುವಾಗಲೆ ಲಂತಾನವನ್ನು ಕೀಳಲು ಒಳ್ಳೆ ಸಮಯ. ಮಳೆ ಪೂರ್ತಿ ಹೋದಾಗ ಲಂತಾನದ ಸಮೀಪ ಹೋಗುವದೆ ಕಷ್ಟವಾಗುತ್ತದೆ. ಆದ್ದರಿಂದ ಕಾಲಬರಲಿ ಎಂತ ಕಾದುಕೊಂಡಿರಲು ಸಮಯವಿಲ್ಲ. ಮುಂದಾಳುಗಳು ಈ ಸಂಘಗಳನ್ನು ಏರ್ಪಡಿಸಲು ಬೇಕಾದ ಕೆಲಸಗಳನ್ನು ಮಾಡಲು ಕೂಡಲೆ ಹೊರಡಬೇಕು. ದಕ್ಷಿಣ ಕೊಡಗಿನ ಸಹಕಾರಿಗಳು ಎಚ್ಚರದಲ್ಲಿ ಇದ್ದಾರೆಂತ ಕಳೆದ ಸಹಕಾರಿ ಸಮ್ಮೇಳನದಿಂದ ತಿಳಿದಿದೆ. ಉತ್ತರ ಕೊಡಗಿನ ಸಹಕಾರರೂ ಲಂತಾನ ನಾಶಕ್ಕೆ ತುಂಬಾ ನಿಗ ಕೊಟ್ಟಿದ್ದಾರೆಂತ ತಿಳಿಯುತ್ತೇವೆ. ಅಧಿಕಾರಿಗಳೂ ರೈತರೂ ತಾರತಮ್ಯವಿಲ್ಲದೆ ಲಂತಾನ ನಾಶದ ಕೆಲಸವನ್ನು ಶೀಘ್ರದಲ್ಲೇ ಕೈಕೊಳ್ಳುವದು ಉತ್ತಮ.

ಸ್ವರಾಜ್ಯ ಪಕ್ಷದ ತೀರ್ಮಾನ.

ಕಳೆದವಾರ ನಾವು ಅಗ್ರ ಲೇಖನದಲ್ಲಿ ಟೀಕಿಸಿದ್ದ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಭಾಷಣವನ್ನು ಸ್ವರಾಜ್ಯಪಕ್ಷದವರು ಜುಲೈ 16ನೇ ತಾರೀಕಿನಲ್ಲಿ ಕಲ್ಕತ್ತಾದಲ್ಲಿ ಸಭೆ ಸೇರಿ ಯೋಚನೆಗೆ ತೆಗೆದುಕೊಂಡರು. ಈ ಭಾಷಣವು ಈ ಪಾರ್ಟಿಯವರಿಗೆ ಏನೂ ತೃಪ್ತಿಯನ್ನು ಉಂಟುಮಾಡಿರುವದಿಲ್ಲವಂತಲೂ ಭಾಷಣದ ಕೆಲವು ಮಾತುಗಳಿಂದ ಸರಕಾರದ ಸಂಗಡ ಸಹಕರಿಸುವದು ಅಸಾಧ್ಯವಲ್ಲದಿದ್ದರೂ ಹೆಚ್ಚು ಕಷ್ಟವಾಗಿದೆಯೆಂತಲೂ ಆದರೆ ಸ್ಟೇಟ್ ಸೆಕ್ರೆಟರಿಯವರು ಹೇಳಿದ ಮೇರೆ ಹಿಂದೂಸ್ಥಾನಕ್ಕೆ ಹೆಚ್ಚಿನ ಸ್ವತಂತ್ರ ಕೊಡುವ ವಿಷಯದಲ್ಲಿ ಹಿಂದೂಸ್ಥಾನದ ನ್ಯಾಯ ವಿಧಾಯಕ ಸಭೆಯಲ್ಲಿ ಚರ್ಚೆಯೂ ದಸಂತರ ಕಡೇ ತೀರ್ಮಾನವೂ ಆಗುವಾಗಲಾದರೂ ತೃಪ್ತಿಕರವಾದ ತೀರ್ಮಾನವು ದೊರೆತರೆ ಆಗ ಕೌನ್ಸಿಲ್ ಒಳಗಿನ ತಮ್ಮ ಅಸಹಕಾರದ ತತ್ವವನ್ನು ಬಿಡುವ ವಿಷಯ ಪುನಃ ಯೋಚಿಸಬಹುದೆಂತಲೂ ತೀರ್ಮಾನಿಸಿಕೊಂಡಿದ್ದಾರೆ.

ಈ ಪಂಗಡದ ಮುಖ್ಯಸ್ಥರಾಗಿದ್ದ ಚಿತ್ತರಂಜನ ದಾಸರು ಫರಿದ್ಪುರದಲ್ಲಿ ನಡೆದ ಬಂಗಾಳದ ಕಾನ್‌ಫರೆನ್ಸಿನಲ್ಲಿ ಮಾಡಿದ ಭಾಷಣದಲ್ಲಿ ಸರಕಾರಕ್ಕೆ ಕೌನ್ಸಿಲಿನಲ್ಲಿ ಅಡ್ಡಿಯಾಗಿ ನಿಲ್ಲುವದೇ ತಮ್ಮ ಧ್ಯೇಯವಾಗಿ ಇದ್ದದ್ದನ್ನು ಕೆಲವು ಶರತ್ತುಗಳಿಗೆ ಒಳಪಟ್ಟು ಬಿಡಬಹುದೆಂತ ಹೇಳಿದ್ದರು. ತಮ್ಮ ಪಾರ್ಟಿಯನ್ನು ಸ್ಥಾಪಿಸಿದವರು ಈ ರೀತಿ ಸರಕಾರಕ್ಕೆ ಶರತ್ತುಗಳನ್ನು ಕೊಟ್ಟು ಅಸಹಕಾರವನ್ನು ಬಿಡಲು ಒಪ್ಪಿದ್ದರಿಂದ ಅವರ ಮರಣದನಂತರ ಅವರ ಹಿಂಬಾಲಕರು ಅವರಿಗೆ ಗೌರವಿಸಬೇಕೆಂಬ ಅಭಿಪ್ರಾಯದಿಂದ ತಮ್ಮ ಪಾರ್ಟಿಯ ಧ್ಯೇಯವನ್ನೇ ಬದಲಾಯಿಸಿದ್ದಾರೆ. ಈಗ ಸರಕಾರದವರು ದೇಶದ ಮುಖ್ಯ ಮತ್ತು ಬಲವಾದ ಈ ಸ್ವರಾಜ್ಯ ಪಂಗಡದವರೊಂದಿಗೆ ರಾಜಿಮಾಡಿಕೊಳ್ಳಲು ಸುಸಮಯವಾಗಿದೆ. ದೇಶಬಂಧು ದಾಸರು ಕೊಟ್ಟ ಶರತ್ತುಗಳು ಖಂಡಿತವಾಗಿಯೂ ಕಠಿಣತರದವಲ್ಲ. ಬಂಗಾಳದಲ್ಲಿ ಈಚೆಗೆ ಜಾರಿಗೆ ತಂದ ಸ್ಪೆಶಲ್ ವಿಚಾರವಿಲ್ಲದೆ ಜೈಲಿಗೆ ಕಳುಹಿಸುವ ಹಕ್ಕನ್ನು ಉಂಟುಮಾಡಿಕೊಂಡ ಕಾನೂನನ್ನು ರದ್ದುಪಡಿಸಬೇಕೆಂತಲೂ, ಆ ಕಾನೂನು ಮೇರೆ ಜೈಲಿನಲ್ಲಿ ಇಟ್ಟಿರುವ ಜನರನ್ನೆಲ್ಲಾ ಬಿಡುಗಡೆ ಮಾಡಬೇಕೆಂತಲೂ, ಹಿಂದುಸ್ಥಾನಕ್ಕೆ ತತ್ಕಾಲದಲ್ಲೇ ಬ್ರಿಟಿಷ್ ಸಾಮ್ರಾಜ್ಯದೊಳಗೆ ಸ್ವರಾಜ್ಯ ಕೊಡುತ್ತೇವೆಂಬ ಭರವಸೆ ಕೊಡಬೇಕೆಂತಲೂ ಹೇಳಿದರು. ಬಂಗಾಳದಲ್ಲಿ ರಾಜಕೀಯ ಕೊಲೆಗಳು ಹೆಚ್ಚಾಗುತ್ತಾ ಇದ್ದದ್ದರಿಂದಲೂ ಸ್ವರಾಜ್ಯ ಪಂಗಡದವರು ಆ ದಂಗೆಖೋರರ ಗುಂಪಿಗೆ ಸಹಾಯ ಕೊಡುತ್ತಾರೆಂಬ ಸಂಶಯವು ಸರಕಾರಕ್ಕೆ ಇದ್ದದ್ದರಿಂದಲೂ ಈ ನ್ಯಾಯವಿಲ್ಲದ ಕಾನೂನನ್ನು ಜಾರಿಗೆ ತಂದರು. ಸ್ವರಾಜ್ಯ ಪಾರ್ಟಿಯವರು ದಂಗೆಖೋರರಿಗೆ ಸಹಾಯ ಮಾಡುವದಿಲ್ಲವೆಂತಲೂ ಕೊಲೆಪಾತಕದ ದಾರಿಗೆ ಸ್ವರಾಜ್ಯ ಪಾರ್ಟಿಯವರ ಸಹಾನುಭೂತಿ ಇಲ್ಲವೆಂತಲೂ ಪಂಗಡದ ಮುಖಂಡರು ಫರಿದ್ಪುರದಲ್ಲಿ ಹೇಳಿದ್ದಾರೆ. ಅದೇ ಅಭಿಪ್ರಾಯವನ್ನೇ ಮೊನ್ನೆ ಕಲ್ಕತ್ತಾದಲ್ಲಿ ನಡೆದ ಪಂಗಡದ ಮೀಟಿಂಗಿನಲ್ಲೂ ಠರಾವಾಗಿ ಮಂಜೂರುಪಡಿಸಿಕೊಂಡಿದ್ದಾರೆ. ಕೊಲೆಪಾತಕರನ್ನು ಶಿಕ್ಷೆಗೆ ಗುರಿಪಡಿಸಲು ಪೀನಲ್ ಕೋಡೇ ಇದೆ. ದೇಶದಲ್ಲೆಲ್ಲಾ ಪ್ರಬಲವಾಗಿದ್ದ ಸ್ವರಾಜ್ಯಪಕ್ಷದ ಬೆಂಬಲವಿದ್ದರೆ ಇಂಥಾ ಕಾನೂನಿನ ಅವಶ್ಯವಿದ್ದರೂ ಇರಬಹುದೆಂತ ಸರಕಾರದವರು ಹೇಳಬಹುದಿತ್ತು. ಸ್ವರಾಜ್ಯ ಪಾರ್ಟಿಯವರು ಕೊಲೆಪಾತಕರಿಗೆ ಸಹಾನುಭೂತಿ ತೋರಿಸುವದಿಲ್ಲವೆಂತ ಹೇಳಿದ ಮೇಲೆ ಇಂಥಾ ದಬ್ಬಾಳಿಕೆಯ ಕಾನೂನಿನ ಆವಶ್ಯಕತೆಯೇ ಇಲ್ಲ. ಸ್ವರಾಜ್ಯ ಪಂಗಡದವರೇ ಹೆಚ್ಚಾಗಿ ಜೈಲಿಗೆ ಈ ಕಾನೂನಿನಿಂದ ಕಳುಹಿಸಲ್ಪಟ್ಟವರಾಗಿದ್ದಾರೆ. ಆದ್ದರಿಂದ ಅಂಥಾ ಕೈದಿಗಳನ್ನು ಬಿಡುವದರಿಂದ ದೇಶದಲ್ಲಿ ಅಶಾಂತತೆ ಏನೂ ಬೆಳೆಯುವದಿಲ್ಲ.

ತತ್ಕಾಲ ಸ್ವರಾಜ್ಯವನ್ನು ಹಿಂದುಸ್ಥಾನಕ್ಕೆ ಕೊಡುತ್ತೇವೆಂಬ ಭರವಸೆ ಬೇಕೆಂತ ದಾಸರು ಕೇಳಿದ್ದಾರೆ. 1917ನೇ ಇಸ್ವಿಯಲ್ಲಿ ಪಾರ್ಲಿಮೆಂಟಿನಿಂದ ಹೊರಟ ಪ್ರಕಟಣಾ ಪತ್ರದಲ್ಲೇ ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡಲು ಬ್ರಿಟಿಷ್ ಸರಕಾರವು ನಿರ್ಣಯಿಸಿದೆಯೆಂತ ಇದೆ. ಆದರೆ ಅದರಲ್ಲಿ ಈ ಸ್ವರಾಜ್ಯವನ್ನು ಕ್ರಮಕ್ರಮವಾಗಿ ಸ್ವಲ್ಪಸ್ವಲ್ಪ ಕೊಡುವದೆಂತ ಇದೆ. ಸ್ವರಾಜ್ಯ ಪಂಗಡದವರು ಅಷ್ಟು ನಿದಾನವಾಗಿ ಸ್ವರಾಜ್ಯವನ್ನು ಪಡೆಯಲು ಒಪ್ಪುವದಿಲ್ಲ. ಆದಷ್ಟು ಬೇಗನೆ ಅಂದರೆ ನಮ್ಮ ಅಭಿಪ್ರಾಯದಲ್ಲಿ ಹತ್ತು ವರ್ಷದೊಳಗಾದರೂ ಸಂಪೂರ್ಣ ಸ್ವತಂತ್ರ ಕೊಡುತ್ತೇವೆಂತ ಬ್ರಿಟಿಷ್ ಸರಕಾರವು ಈಗಲೇ ಹೇಳಿ, ಅಂಥಾ ಸ್ವರಾಜ್ಯದ ನಿಜವಾದ ಮತ್ತು ಪಟ್ಟಿಯಾದ ಪಾಯವನ್ನು ಈಗಲೇ ಹಾಕಬೇಕು. ಲಾರ್ಡ್ ರೀಡಿಂಗ್‌ರವರು ಹೋದವಾರ ಇಂಗ್ಲಂಡಿನಲ್ಲಿ ಒಂದು ಭಾಷಣದಲ್ಲಿ ಹಿಂದುಸ್ಥಾನವನ್ನು ಇಂಗ್ಲಿಷರು ಕಳಕೊಳ್ಳಬಾರದೆಂತಲೂ ಹಿಂದೀಯರನ್ನು ಇಂಗ್ಲಿಷರು ಗೌರವದಿಂದ ನೋಡಬೇಕೆಂತಲೂ ಹೇಳಿದ್ದಾರೆ. ಈ ಗೌರವದ ಬುದ್ಧಿಯನ್ನು ಕಾರ್ಯತಃ ತೋರಿಸಬೇಕಾದರೆ ಇದೀಗ ಸಮಯ. ಪ್ರಾಂತ್ಯಗಳ ಸರಕಾರಗಳಿಗೆ ಪೂರ್ತಿ ಸ್ವತಂತ್ರಕೊಟ್ಟು ಎಲ್ಲಾ ಇಲಾಖೆಗಳನ್ನು ಪ್ರಜೆಗಳ ಜವಾಬ್ದಾರಿಕೆಗೆ ಒಪ್ಪಿಕೊಟ್ಟರೆ ಸ್ವರಾಜ್ಯದ ಪಾಯ ಹಾಕಿದಂತೆಯೂ ಆಯಿತು, ಹಿಂದೀಯರನ್ನು ಗೌರವಿಸಿದಂತೆಯೂ ಆಯಿತು. ಆದ್ದರಿಂದ ಸ್ವರಾಜ್ಯ ಪಾರ್ಟಿಯವರ ಶರತ್ತುಗಳು ಕಠಿಣವಲ್ಲ. ಹಿಂದುಸ್ಥಾನವನ್ನು ಬ್ರಿಟಿಷ್ ಸಾಮ್ರಾಜ್ಯದೊಳಗೆ ಇಟ್ಟುಕೊಳ್ಳುವುದು ಬ್ರಿಟಿಷರ ಸ್ವಾರ್ಥತೆಗಾಗಿ ಅಲ್ಲವೆಂಬುದನ್ನು ನಿದರ್ಶಿಸಲು ಇದಕ್ಕಿಂತ ಬೇರೆ ಸಮಯ ಒದಗಲಿಕ್ಕಿಲ್ಲ. ಸರಕಾರದವರ ತೀರ್ಮಾನವನ್ನು ಒಟ್ಟು ಹಿಂದುಸ್ಥಾನವೇ ಬಹು ಕುತೂಹಲದಿಂದ ಎದುರು ನೋಡುತ್ತಾ ಇದೆ.

ಚೈನಾದಲ್ಲಿ ದಬ್ಬಾಳಿಕೆ.

(ರಿಟೈರ್ಡ್ ಐ ಸಿ ಯಸ್ ಆಫೀಸರಾದ ಬರ್ನಾರ್ಡ್ ಹೌಟನ್‌ರವರ "ಹಿಂದು" ಪತ್ರಿಕೆಯಲ್ಲಿದ್ದ ಲೇಖನದ ತರ್ಜುಮೆ.)

ಪ್ರತಿಯೊಂದು ಸರಕಾರವು ಆಯಾ ದೇಶದ ಆಳುವ ಜನರ ಗುಂಪಿನ ಕಾರ್ಯಕಾರೀ ಮಂಡಲಿಯಾಗಿದೆ. ಇದಕ್ಕಿಂತ ಉತ್ತಮ ವಾಕ್ಯವು ಎಂದಿಗೂ ಹೇಳಲ್ಪಟ್ಟಿಲ್ಲ. ಆಳುವ ಜನರ ಗುಂಪು ಚಿಕ್ಕದಾಗಿದ್ದಾಗ ಈ ಸಂಗತಿಯನ್ನು ಪ್ರಕಟಿಸಿಕೊಳ್ಳುವದಿಲ್ಲ. ಎಲ್ಲರ ಗುಣಕ್ಕಾಗಿ ಆಳುವದೆಂತ ನಟಿಸುತ್ತದೆ. ಆಳಿಸಿಕೊಳ್ಳುವವರಿಗೆ ಏನು ಬೇಕೆಂತ ತಿಳಿದುಕೊಂಡು ಅವರನ್ನು ಮತ್ತಷ್ಟು ಗುಲಾಮರನ್ನಾಗಿ ಮಾಡಿಕೊಳ್ಳುತ್ತದೆ. ಇಂಥಾ ಕೆಲಸವನ್ನೇ ರಾಷ್ಟ್ರೀಯತ್ವ, ದೇಶಭಕ್ತಿ ಮುಂತಾಗಿ ಕರೆದುಕೊಳ್ಳುತ್ತದೆ. ಅದರ ಕೆಲಸಗಳನ್ನು ಅಭಿಮಾಯಿಸುತ್ತಾ ಹೋದರೆ ರಾಷ್ಟ್ರೀಯದ ಕ್ಷೇಮವೆಂದರೆ ಆಳುವ ಗುಂಪಿನ ಕ್ಷೇಮವೇ ಆಗಿರುತ್ತದೆ.

ಚೈನಾ ದೇಶದಲ್ಲಿ ನಡೆಯುವ ಕೃತ್ಯಗಳಿಗೆ ಈ ತತ್ವವೇ ಕಾರಣ. ಬ್ರಿಟನ್ ದೇಶವು ಐಶ್ವರ್ಯವಂತರ ಗುಂಪಿನಿಂದ ಆಳಲ್ಪಡುತ್ತಿದೆ. ಈಗ ಬ್ರಿಟಿಷ್ ಸರಕಾರವು ಹಣ ಸಾಲಕೊಡುವವರ ಕೈಗಾರಿಕೆ ಮಾಲೀಕರ ಮತ್ತು ದೊಡ್ಡ ಜಮೀನ್ದಾರರ ಒಗ್ಗಟ್ಟಿನಿಂದ ನಡಿಸಲ್ಪಡುತ್ತಿರುವದಾಗಿದೆ. ಈ ಗುಂಪಿನಲ್ಲಿ ಬ್ಯಾಂಕರುಗಳೇ ಮುಖಂಡರಾಗಿದ್ದಾರೆ. ಚೈನಾದ ಕೊಂದರೆಗೆ ಕಾರಣವೇನೆಂದರೆ, ಅಲ್ಲಿರುವ ಪರದೇಶ ಧನಿಕರು ಅಲ್ಲಿನ ಕೂಲಿ ಜನರನ್ನು ಕ್ರೂರತನದಿಂದ ಉಪಯೋಗಿಸಿಕೊಂಡು ಪ್ರಯೋಜನ ಹೊಂದಿಕೊಳ್ಳುತ್ತಿರುವದೇ ಕಾರಣ. ಕ್ರೂರತನವೆಂಬದರಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ಮಕ್ಕಳನ್ನೂ ಚಿಕ್ಕ ಮಕ್ಕಳನ್ನೂ ಸಹ ದಿವಸಕ್ಕೆ 12 ಗಂಟೆ ಕೆಲಸಮಾಡಿಸಿ ಗಂಡು, ಹೆಣ್ಣು ಮಕ್ಕಳಿಗೂ ಸಹ ಬರೇ ಅನ್ನಕ್ಕೆ ತಕ್ಕಷ್ಟು ಮಜೂರಿ ಮಾತ್ರ ಕೊಡುವ ಪದ್ಧತಿಯನ್ನು ಕ್ರೂರವೆಂತಲ್ಲದೆ ಬೇರೆ ಹೇಗೆ ವರ್ಣಿಸಬೇಕು. ಜಪಾನ್ ಕಾರ್ಖಾನೆಗಳಲ್ಲಿ ತೊಂದರೆಯುಂಟಾದ್ದೇನೋ ನಿಜ. ಭಯಂಕರ ಗುಣವು ಎಲ್ಲರಲ್ಲಿಯೂ ಒಂದೇ. ಮೊದಲನೇ ಸಹಿಸಲಾರದಂಥ ಕ್ರೂರ ಕೃತ್ಯಗಳನ್ನು ಜಪಾನದವರು ಮಾಡಿದ್ದಾದರೂ ಬ್ರಿಟಿಷರು ಮಾ

ದಲು ಗುಂಡು ಹಾರಿಸಿದರು. ಪ್ರತಿಯೊಂದು ಸರಕಾರವೂ ಕೂಲಿಗಾರರ ಕಷ್ಟ ಪರಿಹಾರ ಸಹಾಯ ಮಾಡುವ ಬದಲು, ಬೇರೆ ಮಾಲೀಕರ ಸಹಾಯಕ್ಕೆ ಹೋಗುತ್ತದೆ. ಈ ಕೃತ್ಯದಿಂದ ಸರಕಾರವು ಸಂಗಡದವರಿಗೆ ಸಹಾಯ ಮಾಡುವದೆಂಬುದನ್ನು ನಿದರ್ಶಿಸುತ್ತದೆ. ದಸಪಂತರ ಗುಂಪಿನ ಸರಕಾರವು ತನ್ನ ದೇಶದಲ್ಲೇ ಆದರೂ ತನ್ನ ಗುಂಪಿನವರ ಸಹಾಯಕ್ಕೆ ಹೋಗುವದು ಸ್ವಭಾವವಾಗಿದೆ. ಆದ್ದರಿಂದ ಪರದೇಶದಲ್ಲಿ ಪರಕೀಯರ ಮೇಲೆ ಕೈಮಾಡುವಾಗ ತನ್ನ ಗುಂಪಿನವರ ಹಿಮ್ಮತ್ತಿಗೆ ಸೇರಿಕೊಳ್ಳುವದು ಇನ್ನಷ್ಟು ಖಂಡಿತ.

ಶ್ಯಾಂಗ್ಹೈಯಲ್ಲಿ ಪರದೇಶಿ ಕಾರ್ಖಾನೆ ಮಾಲೀಕರ ಅಭಿರುಚಿಯೇನು? ದೊಡ್ಡ ಲಾಭ. ಆದ್ದರಿಂದ ಕೂಲಿ ಜನರು ಸ್ವತಂತ್ರತೆಯನ್ನು ಕೇಳತೊಡಗಿದರೆ ಅಥವಾ ತಮ್ಮ ಮಜೂರಿಯನ್ನು ಮರ್ಯಾದೆಯ ಮನುಷ್ಯತ್ವಕ್ಕೆ ಬೇಕಾದಷ್ಟು ಏರಿಸಲು ಪ್ರಯತ್ನಿಸಿದರೆ ಈ ಕಾರ್ಖಾನೆ ಮಾಲೀಕರ ಪ್ರತಿರೋಧಕ್ಕೆ ಅಡಸಲ್ಲವೇ? ಇವರು ಅಗಳಿನ ವರೆಗೂ ಕಾದುತ್ತಾರಲ್ಲವೇ? ಇವರ ಸಂಗಡಲೇ ಬ್ಯಾಂಕುಗಳು ಇವೆ. ಈಗಿನ ಕಾಲದ ವ್ಯಾಪಾರಿಕರೆಲ್ಲರೂ ಬ್ಯಾಂಕುಗಳ ಹಣ ಸಹಾಯದ ಮೇಲೆ ಇವೆ. ಆದ್ದರಿಂದ ಕಾರ್ಖಾನೆಗಳು ಪಚ್ಚೆ ಸಂಪಾದಿಸಿಕೊಳ್ಳಬೇಕಾದದ್ದು ಬ್ಯಾಂಕುಗಳ ಕ್ಷೇಮಕ್ಕೇ ಆಗಿದೆ. ಆದ್ದರಿಂದ ದೊಡ್ಡ ಕಾರ್ಖಾನೆಗಳೆಲ್ಲವೂ ಬ್ಯಾಂಕುಗಳ ಅಧೀನದಲ್ಲಿ ಇರುತ್ತವೆ. ತಮ್ಮ ಸಾಮ್ರಾಜ್ಯವನ್ನು ಬೆಳೆಸಬೇಕೆಂತ ಇರುವ ಇಂಗ್ಲೆಂಡ್, ಯುನೈಟೆಡ್ ಸ್ಟೇಟ್ಸ್, ಫ್ರಾನ್ಸ್ ಮತ್ತು ಜಪಾನಿನ ಸರಕಾರಗಳು ಜೈನಾದ ಕೂಲಿಕಾರರ ಮೇಲೆ ಕೈಮಾಡುವದು ಸ್ವಾಭಾವಿಕವಲ್ಲವೇ?

ಹೀಗೆ ಮಾಡುವದರಲ್ಲಿ ಅನ್ಯತಸರದಲ್ಲಿ ನ್ಯಾಯರ್ ಮಾಡಿದಂತ ಮತಿವಿಕಾರ ಹೋಗುವುದು. ಒಟ್ಟು ಜೈನಾ ದೇಶದ ಜನರನ್ನೇ ಸಿಟ್ಟಿಗೆಬ್ಬಿಸಿದೆ. ತಮ್ಮ ಮೇಲೂ ತಮ್ಮ ಒಗರ ಮೇಲೆ ಅನ್ಯಸರದನಂತರ ಹಿಂದುಸ್ಥಾನದಲ್ಲಿ ಆದಂತೆಯೇ ಜೈನಾದಲ್ಲಿ ಅತ್ಯಂತ ವಿರೋಧವನ್ನು ಕಟ್ಟಿಕೊಂಡಿದೆ (ಅನ್ಯತಸರದ ಹೋಲಿಕೆಯು ಇಂಗ್ಲಂಡದವರಲ್ಲಿಯೂ ಸರಿ ಹೋಗುತ್ತದೆ. ಯಾರಾರು ಜೈನಾ ಜನರು ವ್ಯತಸಟ್ಟು ಮತ್ತು ಗಾಯಪಟ್ಟವರಾಗ ಯುರೋಪಿಯನರಲ್ಲಿ ಗಾಯಪಟ್ಟವರು ಒಬ್ಬರೂ ಇಲ್ಲ) ಧನವಂತರ ದಬ್ಬಾಳಿಕೆಯು ಒಡ್ಡಿಯು ಇಂದಾ ಸಂದರ್ಭದಲ್ಲೇ ಹೊರಬೀಳುವದು. ತಿಳಿದೋ ತಿಳಿಯದೆಯೋ ಯಾವ ಜನರಿಂದ ಪ್ರಯೋಜನ ಹೊಂದಬೇಕೆಂತ ಇರುತ್ತದೂ ಅಂಥವರನ್ನ ಜಾನುವಾರುಗಳಂತೆ ಭಾವಿಸುತ್ತದೆ. ಆದರೆ ಮನುಷ್ಯರು ಮೃಗಗಳಲ್ಲ. ಅವರಿಗೆ ಆಲೋಚನಾ ಶಕ್ತಿ ಇದೆ. ಅವರಿಗೂ ಆತ್ಮಾಭಿಮಾನವು ಇರುತ್ತದೆ. ಪ್ರಪಂಚದ ಚರಿತ್ರೆಯಲ್ಲಿ ಅನೇಕಾವರ್ತಿ ಪರರಿಂದ ದಬ್ಬಾಳಿಕೆಯು ಜಯಪ್ರದವಾದಂತೆ ತೋರಿದರೂ ಇದು ಬಯವು ಸ್ವಲ್ಪ ಕಾಲಕ್ಕ ಮಾತ್ರ ಇರತಕ್ಕಂಥಾದ್ದು. ದಬ್ಬಾಳಿಕೆಗೆ ಗುರಿಯಾದ ಜನರು ತಮ್ಮ ಪೂರ್ವಿಕರ ಬಿದ್ದುಹೋಗಿದ್ದರೂ ತಮಗಾದ ಅನ್ಯಾಯಗಳನ್ನು ಮನನಮಾಡುತ್ತಾ ತಮ್ಮ ಸಮಯವನ್ನು ಕಾಯುತ್ತಿರುತ್ತಾರೆ. ಎಂದಾದರೂ ಚಕ್ರವು ಪೂರ್ಣಯಾಗಿ ಸುತ್ತಿಯೇ ಸುತ್ತುತ್ತದೆ. ದಬ್ಬಾಳಿಕೆಗೆ ಗುರಿಯಾದವರು ತಮ್ಮ ಸ್ವತಂತ್ರವನ್ನು ಪಡದೇ ಪಡೆಯುತ್ತಾರೆ. ಇದನ್ನು ಪೋಲ್ಯಾಂಡಿನಲ್ಲಿ ನೋಡಿದ್ದೇವೆ. ಐರ್ಲ್ಯಾಂಡಿನಲ್ಲಿ ನೋಡಿದ್ದೇವೆ, ಇನ್ನೂ ಅನೇಕ ದೇಶಗಳಲ್ಲಿ ನೋಡಿದ್ದೇವೆ. ಈಗೀಗ ಚಕ್ರವು ಬೇಗ ಸುತ್ತುತ್ತದೆ. ದಬ್ಬಾಳಿಕೆ ನಡಿಸಿದವರು ಅನುಭವಿಸುವ ಕಾಲ ಬೇಗನೆ ಬರುತ್ತದೆ. ಈಗಿನ ಸೈಯನ್ಸಿನ ಬಲದಿಂದ ಭೂಮಿಯೇ ಚಿಕ್ಕದಾದಂತೆ ಆಗಿದೆ. ಭೂಮಿಯ ಒಂದು ತಲೆಯಿಂದ ಇನ್ನೊಂದು ತಲೆಗೆ ಜನರೂ ಸಾಮಾನುಗಳೂ ಮಾತ್ರವೇ ಶೀಘ್ರವಾಗಿ ಹೋಗುವುದಲ್ಲ. ಅಭಿಪ್ರಾಯಗಳು ಸಹ ಶೀಘ್ರವಾಗಿ ತಲುಪುತ್ತವೆ. ಪತ್ರಿಕೆಗಳು ಹೇಳುವಂತೆ ಕಡೆಗೆ ಅಭಿಪ್ರಾಯಗಳು ಹೋಗುತ್ತವೆ ಎಂಬ ಮಾತು ತಿರುಳಾಗಿ ಸಿದ್ಧವಾಗಿದೆ. ಎಲ್ಲೆಲ್ಲಿಯೂ, ಸ್ವಾತಂತ್ರ್ಯದ ಸ್ವರಾಜ್ಯದ ಮರ್ಯಾದೆಯುಕ್ತವಾದ ಆತ್ಮಗೌರವದ ಜೀವನದ ಆಶೆಯು ಹಬ್ಬಿ ಹೋಗಿದೆ. ಇಂಥಾ ಅಭಿಪ್ರಾಯಗಳ ಮೇಲೆ ಆಕಾಶ ವಿಮಾನಗಳು ಎಸೆದ ಬಾಂಬುಗಳು ನಿಷ್ಪ್ರಯೋಜನ. ಜೈನಾದಲ್ಲಿ ಸ್ವಾಭಾವಿಕವಾಗಿ ಎಬ್ಬಿಸಲ್ಪಟ್ಟ ಸಿಟ್ಟಿನಲ್ಲಿ ಬಾಲ್ಶೆವಿಕ್ಕರ ಒಳಸಂಚು ಇದೆಯೆಂದು ಬ್ರಿಟಿಷ್ ಪತ್ರಿಕೆಗಳು ಬರೆಯುವುದು ಸ್ವಾಭಾವಿಕವೇ. ಈ ಪತ್ರಿಕೆಗಳ ಲೇಖಕರನ್ನ ಗಾಬರಿಪಡಿಸುವದಕ್ಕೆ ಪ್ರಪಂಚವೆಲ್ಲಾ ದುಡಿಯುವ ಜನರನ್ನು ಶೋಷಣೆಮಾಡುತ್ತಿರುವ ಸರಕಾರಗಳನ್ನು ಮುರಿಯುವದೇ ಉದ್ದೇಶವಾಗಿ ಇಟ್ಟುಕೊಂಡಿವೆ ಎಂದು ನಂಬಬಹುದು. ಯಾವ ಉದ್ದೇಶದಲ್ಲೇ ಆಗಲೀ, ಯಾವನಾದರೂ ಧೈರ್ಯದಿಂದ ಸ್ವಾತಂತ್ರ್ಯಕ್ಕಾಗಿಯೂ ಮನುಷ್ಯ ಮಾತ್ರದ ಹಕ್ಕಿಗಾಗಿಯೂ ತಲೆ ಎತ್ತಿದರೆ ಅವನನ್ನು ಬಾಲ್ಶೆವಿಕ್ ಎಂತ ಹೇಳದೆ ಇರುವದಿಲ್ಲ. ಇಲ್ಲೂ ದನಿಕರು ಮತಿಮೀರಿ ಹೋಗಿದ್ದಾರೆ.

ಗ್ರಾಮಾಭಿವೃದ್ಧಿ.

(ಬಿ. ಪಿ. ಯವರಿಂದ ಬರೆದು ಬಂದದ್ದು)

ದೇಶೋನ್ನತಿಯ ಕಾರ್ಯದಲ್ಲಿ ಗೃಹಾಭಿವೃದ್ಧಿ, ಗ್ರಾಮಾಭಿವೃದ್ಧಿ, ದೇಶಾಭಿವೃದ್ಧಿ ಎಂಬ ಮೂರು ತರದ ಅಭಿವೃದ್ಧಿಗಳು ನಡಿಸತಕ್ಕ ಕಾರ್ಯವಿರುತ್ತದೆ. ಇವುಗಳಲ್ಲಿ ಮೊಟ್ಟಮೊದಲು ಗ್ರಾಮಾಭಿವೃದ್ಧಿಯನ್ನು ಪಡಿಸಿಕೊಳ್ಳಬೇಕು. ಗ್ರಾಮಾಭಿವೃದ್ಧಿಗಿಂತ ಮುಂಚೆ ಗೃಹಾಭಿವೃದ್ಧಿಯಾಗಬೇಕಾದರೂ ಗ್ರಾಮದಲ್ಲಿ ಅನೇಕ ಕುಟುಂಬಗಳಿರುತ್ತಾ ಸಾಮಾನ್ಯ ಕುಟುಂಬದವರಲ್ಲಿ ಪರಸ್ಪರ ಪ್ರೀತಿ, ನಂಬಿಕೆಗಳು ಕಡಿಮೆಯಾಗಿಕೊಂಡು ಅನ್ಯೋನ್ಯವಿರುದ್ಧ ಭಾವದಲ್ಲಿರುವದರಿಂದ ಕುಟುಂಬದವರಿಗೆ ತಮ್ಮ ಗೃಹಾಭಿವೃದ್ಧಿಗೆ ತಕ್ಕ ಯಾವ ಏರ್ಪಾಡುಮಾಡಲು ಅನಾನುಕೂಲವಾಗಿರುವದರಿಂದ ಗ್ರಾಮಾಭಿವೃದ್ಧಿಯ ಸಂಘಗಳಿದ್ದರೆ ಆ ಮೂಲಕ ಇತರರು ಗೃಹದವೈಮನಸ್ಸನ್ನು ತಿರುಗಿಸಿ ಒಟ್ಟು ಕೂಡಲು ಅನುಕೂಲವಾಗುತ್ತದೆ. ಯಾವ ಕುಟುಂಬದಲ್ಲೇ ಆಗಲಿ ತಮ್ಮೊಳಗೆ ಉಂಟಾದ ವಿಪರೀತವನ್ನು ಹೋಗಲಾಡಿಸುವರೆ ಅನ್ಯರು ಬೇಕೇಬೇಕು. ಆದ್ದರಿಂದ ಗೃಹಾಭಿವೃದ್ಧಿಗೆ ಮುಂದೆ ಗ್ರಾಮಾಭಿವೃದ್ಧಿ ಪಡಿಸುವದೇ ಒಂದನೇ ಪಲಿತಾರ್ಥವು. ಯಾವ ಗ್ರಾಮದಲ್ಲೇ ಆಗಲಿ ಇಲ್ಲವೆ ಸಾಮಾನ್ಯ ಮುಂದುವರಿದುಕೊಂಡಿದೆಯೆಂಬ ಯಾವ ಗ್ರಾಮವೇ ಆಗಲಿ ಆ ಗ್ರಾಮದ ಕೆಲವು ಸದ್ಗೃಹಸ್ಥರಸತ್ತೆ ರೀತಿ ಸೇರುವಿಕೆಗಳ ದೆಸೆಯಿಂದ ಮುಂದುವರಿದುಕೊಂಡು ಒಂದಿರುವದಲ್ಲದೆ ಆ ಗ್ರಾಮದ ಎಲ್ಲರೂ ಕೂಡಿ ಆಗಿದೆಂತಲೂ, ಆಗುವದೆಂತಲೂ ಯೋಚಿಸಕೂಡದು. ಆದ್ದರಿಂದ ಗ್ರಾಮಾಭಿವೃದ್ಧಿಯು ಸೇರುವಿಕೆಯಲ್ಲಿ ಪ್ರತಿ ಮನೆಯ ಒಬ್ಬೊಬ್ಬರು ಸೇರಿ ಕೆಲಸ ನಡೆಸಬಹುದಾದ್ದರಿಂದ ಮುಂದೆ ನಡೆಸತಕ್ಕ ಗ್ರಾಮಾಭಿವೃದ್ಧಿಯ ಪ್ರಯತ್ನದಲ್ಲಿ ಅಡ್ಡಿಯೆಂದು ಏನು ಇರುವದಿಲ್ಲ. ಒಂದು ಸಾಮಾನ್ಯವಾಗಿ ಗ್ರಾಮದ ಒಗ್ಗಟ್ಟಿನ ಪತ್ತೋಟಿಗ ಬಂದು ಅಭಿವೃದ್ಧಿಗ ಪ್ರಾರಂಭವಾಯಿತೋ ಅವೇಳೆ ಆ ಗ್ರಾಮದ ಪ್ರತಿ ಗೃಹಾಭಿವೃದ್ಧಿಯ ಕಡೆಗ ಗಮನಿಸಬೇಕು. ಹಾಗೆ ಗೃಹ ಮತ್ತು ಗ್ರಾಮಗಳು ಅಭಿವೃದ್ಧಿ ಹೊಂದಿದ ಮೇಲೆ ದೇಶಾಭಿವೃದ್ಧಿಯ ಕಡೆಗ ಮನಸ್ಸು ಹರಿದು ಅನುಕೂಲವಾಗುತ್ತೆ. ಮತ್ತು ಹಾಗೆಯು ಪ್ರತಿ ಗ್ರಾಮದವರು ಈ ರೀತಿ ನಡೆದುಕೊಂಡು ಬಂದರೆ ಶೀಘ್ರ ದೇಶಾಭಿವೃದ್ಧಿಯೇ ಆಗುತ್ತದೆ. ಅದಕ್ಕಾಗಿ ಯಾವ ಹೆಚ್ಚಿನ ಶ್ರಮವೂ ಅವಶ್ಯಕತೆಯೋ ಬೀಳುವದಿಲ್ಲ. ಪ್ರಕೃತದ ನಡತೆಯವರೋ "ಒಬ್ಬೊಬ್ಬರು ಒಂದು ಸಭೆಯನ್ನು ರಾತ್ರಿ ಹೊತ್ತು ಕಟ್ಟಿಕೊಂಡು ಮನೆಯಲ್ಲಿ ಗೀಪತೊತ್ತಿಸುವದು ಅನುಕೂಲವಿಲ್ಲದೆ ಬೀದಿಯಲ್ಲಿ ನಡೆಯುವ ದಸರೆಯಿಂದ ಮಾರ್ಗದಲ್ಲಿ ನಡೆಸಿ ಪಡುಕುತ್ತಿದ್ದಂತೆ" ನಡೆಯಿಂದ ಏನು ದೊರಕುವುದೋ ಅದಿಂದ ದೇಶಾಭಿವೃದ್ಧಿ! ದೇಶಾಭಿವೃದ್ಧಿಯೆಂದು ಕೂಗಿಕೊಳ್ಳುವದರಿಂದ ಯಾವ ಪ್ರಯೋಜನವಿಲ್ಲ. ಹೀಗೆ ಬಾಯಿಯಲ್ಲಿ ಆಡಂಬರ ಮಾಡುವದೂ ಹಿಂದೆ ನಮ್ಮ ದೇಶವು ಹಾಗೆ ಇತ್ತು ಹೀಗೆ ಇತ್ತು ಎಂದು ಮುಂದಾಗಿ ಗತವೈಭವವನ್ನು ವರ್ಣಿಸಿಕೊಂಡು ಕುಳಿತುಕೊಳ್ಳುವದೂ ಸಹ ದಿವಾಳಿ ಹೊಂದಿದ ವರ್ತಕನು ತನಗೆ ಬರಬೇಕಾದ ಲೆಕ್ಕಗಳನ್ನು ನೋಡಿ ಕುಳಿತುಕೊಂಡು ಯೋಚಿಸುವಂತೆ ಯಲ್ಲದೆ ಬೇರೆಯಾವ ಫಲವೂ ಇಲ್ಲ.

ನಮ್ಮ ದೇಶವಾಸಿಗಳು ಗ್ರಾಮಗಳಲ್ಲಿ ಪುರಾಣಕಾಲದ ಅಭಿವೃದ್ಧಿಗಳ ಯೋಚನೆಮಾಡುವದಕ್ಕಿಂತಲೂ ಆ ರೀತಿಗೆ ತಕ್ಕ ಉಪಾಯವನ್ನೂ ತಕ್ಕ ಸಾಧನವನ್ನೂ ಮಾಡುವದೇ ಒಂದನೇ ಕರ್ತವ್ಯವು. ಇಂದಾ ಅಭಿವೃದ್ಧಿಗಾಗಿ ಆಯಾ ಗ್ರಾಮ ಜನರು ಹೆಚ್ಚಿನ ಗಮನಕೊಡಬೇಕು. ಯಾವ ಅಭಿವೃದ್ಧಿಗೇ ಆಗಲಿ ಅವಿದ್ಯೆ (ತಿಳುವಳಿಕೆ ಇಲ್ಲದಿರೋಣ) ಎಂಬುದೇ ಮೊದಲ ಅಡ್ಡಿಯಾಗಿರತಕ್ಕ ಒಂದು ದೊಡ್ಡ ವಸ್ತುವು. ಅದಕಾರಣ ಮೊದಲು ಇದರ ಬೀಜವನ್ನೇ ನಾಶಮಾಡಬೇಕು. ಇಂದ ತಿಳುವಳಿಕೆಗೆ ಐಕ್ಯಮತ್ಯವೇ ಕಾರಣ. ಐಕ್ಯಮತ್ಯವಂದರ ಗ್ರಾಮದವರೆಲ್ಲರೂ ತಿಂಗಳಿಗೆರಡು ಸಾರೆಯಾದರೂ ಒಂದು ಕಡೆ ಸೇರಿ ಪರಸ್ಪರ ಭಾಷಣವಾಡಿಕೊಂಡಾಗ ಅವರು ತಿಳಿದಾಗಲಿ, ಅಥವಾ ಓಳಿಯದಾಗಲಿ ಜ್ಞಾನಾಭಿವೃದ್ಧಿಯನ್ನೂ ಐಕಮತ್ಯವನ್ನೂ ಪಡಕೊಳ್ಳುತ್ತಾರೆಂಬುದು ಅನುಭವಸಿದ್ಧಾಂತವಾಗಿದೆ. ಆದರೆ ಸ್ವಾನ ಕಾಡುವವರನ್ನು ಪ್ರತಿನಿತ್ಯ ಐದುಸಾರಿಯಾದರೂ ಒಟ್ಟು ಸೇರಿ ನಮಾಜ್ ಮಾಡಬೇಕೆಂದು ಮಹಮ್ಮದ್ ಪೈಗಂಬರನು ಬೋಧಿಸಿದ ಯುಕ್ತಿಯು ಜಾಣ್ಮೆಯು ಬೆಳಕಿಂದ ಜನವಿಡಿ ಹೋಗಿದ್ದ ಅರಬಿಜನಗಳು ಒಂದು ರಾಷ್ಟ್ರದವರಾದರು, ಮತ್ತು ಅವರ ಮತ ಒಗ್ಗಟ್ಟು ಅಷ್ಟು ಪ್ರಬಲವಾಗಲು ಕಾರಣವಾಯಿತು. ಆದ್ದರಿಂದ ಪ್ರತಿ ಗ್ರಾಮದವರೂ ಹೆಚ್ಚಿನ ಶ್ರಮವಿಲ್ಲದ ಈ ಕೆಲಸವನ್ನು ಕೈಕೊಂಡರೆ, ತಿಂಗಳಿಗೆರಡು ಸಾರಿಯಾದರೂ ಒಂದು ನಿರ್ದಿಷ್ಟವಾದ ಸ್ಥಳದಲ್ಲಿ ಸೇರಿ ಒಳ್ಳೇ ವಿಷಯಗಳನ್ನು ಕುರಿತು ಪರಾಮರ್ಶನದಂತಾದವುಗಳನ್ನು ಮಾಡಿಕೊಂಡು ಬಂದರೆ ಅವಿದ್ಯೆಯೆಂಬುದು ತೊಲಗಿ ಹೋಗುತ್ತದೆ. ಯಾವ ಕೆಟ್ಟ ವೃತ್ತಿಯವನೇ ಆಗಲಿ ಹೀಗೆ ಸಮೂಹ ಸೇರಿದ್ದಲ್ಲಿ ಆ ಸಮಯದ ಮಟ್ಟಿಗಾದರೂ ತಾನೂ ಒಬ್ಬ ಗೃಹಸ್ಥನ ಹಾಗಿರಬೇಕೆಂದೆಣಿಸುವದಲ್ಲದೆ ಆ ಸಮ್ಮಂಥದ ಮಾತುಗಳನ್ನೂ ಸಹ ಎತ್ತುವನು.

ಹೀಗಾಗುತ್ತಾ ಕೆಲವು ಸಮಯದಲ್ಲೇ ಅತನ ಕೆಟ್ಟ ಗುಣಗಳು ಹೋಗಬಹುದು. ಈ ಉಪಾಯವೇ ವಿಶ್ವಾಸ ಪ್ರಸಾದವೆಂದೆನ್ನಿಸಿಕೊಳ್ಳುತ್ತದೆ. ಹೀಗೆ ಕೂಡುವಲ್ಲಿ ತಮ್ಮ ದೇಶದಲ್ಲಿ ಸಂಚರಿಸ ತಕ್ಕ ಎಲ್ಲಾ ಪತ್ರಿಕೆಗಳನ್ನೂ ತರಿಸಿಕೊಂಡು ಓದುವವರಾಗಲಿ ಇಲ್ಲವೆ ಅವರ ಅಭಿಪ್ರಾಯದ ಮೇಲೆಯಾಗಲಿ ದೇಶದ ಮೇಲೆಯಾಗಲಿ ಟೀಕ ಮಾಡುವದನ್ನೂ ಸಹ ಆರಂಭಿಸಬೇಕು. ಪತ್ರಿಕೆಗಳಿಗೆ ಲೇಖನ ಬರೆಯುವದರಿಂದಲೂ ಓದುವದರಿಂದಲೂ ಅತ್ಯುತ್ತಮವಾದ ಜ್ಞಾನವು ಪ್ರತ್ಯೇಕ ಉಂಟಾಗುತ್ತದೆ. ಇಂಗ್ಲಂಡು, ಅಮೇರಿಕ ಮುಂತಾದ ದೇಶಗಳಲ್ಲಿ ದಿನ ಪತ್ರಿಕೆ ಸಹ ತಮ್ಮ ಬೆಳಿಗೆ ಸಿಕ್ಕುವದೆಂದೂ ಪ್ರತಿಯೊಬ್ಬರೂ ಅದನ್ನು ಓದುವದೆಂದೂ ಅಲ್ಲಿನ ವಿಶ್ವವಿದ್ಯಾಲಯಗಳಿಗೆ ಕಾಲಿಡದ ಜನರೂ ಸಹ ಹಿಂದುಸ್ಥಾನದ ವಿಶ್ವವಿದ್ಯಾಲಯ ವಿದ್ಯಾರ್ಥಿಗಳಿಗಿಂತಲೂ ಚತುರರಾಗಿದ್ದಾರಂತೆ. ಅದಕಾರಣ ನವ ಸೇರುವಿಕೆ, ಪತ್ರಿಕೆಯ ಪ್ರಸಾರಗಳೇ ಹೆಚ್ಚಿನ ಜ್ಞಾನಾರ್ಜನೆಗ ಮುಖ್ಯಕಾರಣವಾಗಿವೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಮನೆಗೆ ಬರುವ ಇಲ್ಲವ ಯಾವದೋ ಒಂದು ವರ್ಷದ ಪತ್ರಿಕೆಯನ್ನು ಗ್ರಹಿಸಿಕೊಂಡು, ವರ್ಷಕ್ಕೆ ಸಾಮಾನ್ಯ ಹತ್ತು ರೂಪಾಯಿ ಅರ್ಥಗಳಿಸ ... ಪತ್ರಿಕೆಗಳಿಗಾಗಿಯೇ ಮಾಡಬೇಕು. ತಿಳುವಳಿಕೆಯು ಸಂಪಾದನೆಯೇ ಒಂದ ವಸ್ತುವಿನ ಪ್ರತಿಯೊಬ್ಬ ಮಾನವನ ಕರ್ತವ್ಯವು. ಹೀಗೆ ಪ್ರತಿಗ್ರಾಮದವರು ಸೇರಿಕೊಂಡು ಮಾಡತಕ್ಕ ಈ ಅಭಿವೃದ್ಧಿಗೆ ಯಾವ ಧನವೂ ಇಲ್ಲ. ಮತ್ತು ಯಾರ ಸಹಾಯವೂ ಅವಶ್ಯವಿಲ್ಲ. ಆದರ ಈ ವಿಷಯವು ಕೆಲವರಿಗೆ ಸಮಯ ನಷ್ಟಕರವೆಂದು ಕಂಡುಬಂದರೂ ಸಮಯದ ಬೆಲೆಯನ್ನು ತಿಳಿಯತಕ್ಕ ಜ್ಞಾನಕ್ಕೆ ಇದೇ ಕಾರಣವು. ಕೆಲವರು ಪತ್ರಿಕೆಗಳು ಕೇವಲ ನಷ್ಟಕ್ಕೇನೇ ಇರುವವೆಂದೂ ಪತ್ರಿಕಾ ಪತ್ರಿಕಾಕರ್ತರ ಸಂಪಾದನೆಯ ಮಾರ್ಗವೆಂದೂ ಗ್ರಹಿಸುತ್ತಾರೆ. ಈ ಗ್ರಹಿಕೆಯು ತಾನು ಯಾಕೆ ಸ್ಪರ್ಶ ಪ್ರವೇಶಿಸಿದನೆಂಬ ಅಂಶವಿಲ್ಲದ ತಿಳಿಗೇಡಿಗಳದ್ದಲ್ಲದೆ ಜ್ಞಾನಿಗಳ ಮಾತು ಎಂದಿಗೂ ಹೀಗೆ ಒಡಲಾರದು.

ಜಗತ್ತಿನ ತಂದೆ.

(೨)

(ಲೇ — ಮಹಾತ್ಮ ಗಾಂಧಿ)

ಹಿಂದಿನ ಸಂಚಿಕೆಯಲ್ಲಿ ನಾವು ಒಕ್ಕಲಿಗರ ಸ್ಥಿತಿಯ ಬಗ್ಗೆ ಸ್ವಲ್ಪ ವಿಚಾರಮಾಡಿದೆವು. ಈಗ ಈ ಸ್ಥಿತಿಯು ಹೇಗೆ ಸುಧಾರಿಸಬಲ್ಲದೆಂಬುದನ್ನೇ ಆಲೋಚಿಸುವಾ.

ಎರಡು ರಾಷ್ಟ್ರೀಯ ಮಹಾಸಭೆಯ ಕಾಲಕ್ಕೆ ಪ್ರದರ್ಶನದ ಒಂದು ವಿ. ಆಲ್ಲೇಕ್ಸ್ ಕಲೆ ... ಹಿಂದುಸ್ಥಾನದ ಹಳ್ಳಿಗಳ ನಿಜವಾದ ಚಿತ್ರವನ್ನಿಂದ ಕೊಟ್ಟಿರುವರು. "ಹಿಂದುಸ್ಥಾನದ ಹಳ್ಳಿಗಳು ತಿಪ್ಪೆಗುಂಡಿಗಳ ಮೇಲೆ ಕಟ್ಟಲ್ಪಟ್ಟಿರುವವೆಯೋ ಏನೋ ಎಂಬಂತೆ ಕಾಣುತ್ತವೆ. ಮನೆಗಳು ಬೀಳುತ್ತಿರುತ್ತವೆ, ಇಲ್ಲವೆ ಬಿದ್ದು ಹೋಗಿರುತ್ತವೆ. ನೀರಾವರಿ ಮೂಲಕ ಬೇಕಾದಷ್ಟು ತೃಪ್ತಿ ಸ್ವಚ್ಛತೆಯು ಇರುತ್ತಿರುವುದಿಲ್ಲ. ಬೀದಿಗಳಲ್ಲಿ ಕಸಗಟ್ಟು ಹೋಗುತ್ತವೆ. ಹಳ್ಳಿಗಳ ಸುತ್ತುವನ್ನು ಬಗ್ಗೆ ಯಾವ ವಿಚಾರವಿಲ್ಲವೋ ಎನ್ನುವಂತೆ ಸರ್ವಸಾಧಾರಣ ಸ್ಥಿತಿಯಾಗಿರುತ್ತದೆ.

ಈ ವರ್ಣನೆಯಲ್ಲಿ ಅತಿಶಯೋಕ್ತಿಯು ಇರುವದಿಲ್ಲ. ಇನ್ನೂ ಹೆಚ್ಚಿಗೇನೇ ಕೂಡಿಸಲು ಬರುವಂತಿದೆ. ಮುಖ್ಯವಿಷಯವಾದ ಹಳ್ಳಿಗಳ ರಚನೆಯಲ್ಲಿ ಒಳ್ಳೆಯದೇ ಇರುವುದಿಲ್ಲ. ಹಳ್ಳಿಗಳ ಓಣಿಗಳು ಅವ್ಯವಸ್ಥಿತವಾಗಿರುವದೆ ಕಲ್ಲಿದ್ದು ಯೋಗ್ಯವಾದ ಆಕಾರದಲ್ಲಿರಬೇಕು. ಮತ್ತು ಸರಿಯಾದ ಹಿಂದುಸ್ಥಾನದಲ್ಲಿ ಕಲ್ಲೇಷಿಯಾಥಿ ಬಂಗಾಲಿಸಿಂದ ನಕಲಿಸುತ್ತಾರೆ. ಅಲ್ಲಲ್ಲಿಯ ಗ್ರಾಮಗಳಲ್ಲಿ ರಸ್ತೆಗಳು ಅತ್ಯಂತ ಸ್ವಚ್ಛವಾಗಿರಬೇಕು. ಕೃಷಿಯ ರಸ್ತೆಗಳ ಮೇಲೆ ಆದ್ದರಿಂದಲೂ ಮತ್ತು ಮಳೆಗಳಲ್ಲೂ ಕೂಡ ಹೇಸಿಗೆಯು ಆಗದಂತೆ ಅವು ಸ್ವಚ್ಛವಾಗಿರತಕ್ಕದ್ದು. ರಸ್ತೆಗಳು ಗಟ್ಟಿಯಾಗಿ (ಪಕ್ಕಾ) ಇದ್ದು ಎರಡು ಬದಿಗಳಲ್ಲಿಯೂ ನೀರು ಹರಿದು ಹೋಗುವ ಚರಂಡಿಗಳು ಇರಬೇಕು. ದೇವಾಲಯಗಳೂ ಮಸೀದಿಗಳೂ ಹಸನಾಗಿದ್ದು ನೋಡಿದಾಗ್ಗೆಲ್ಲಾ ಅವು ಹೊಸವಿವೆಯೆಂಬಂತೆ ಕಾಣಬೇಕು. ಮತ್ತು ಅವುಗಳಲ್ಲಿ ಪ್ರವೇಶಿಸುವ ಜನರಿಗೆ ಶಾಂತಿಯು ದೊರೆತು ಅವರ ಮನಸ್ಸು ಪ್ರಸನ್ನವೂ ಆಗುವಂತಿರಬೇಕು. ಊರಲ್ಲಿ ಮತ್ತು ಊರಿನ ಸಮೀಪದಲ್ಲಿ ಉಪಯುಕ್ತ ಗಿಡಗಳೂ ವೃಕ್ಷಗಳೂ ಇರಬೇಕು. ಊರಿಗ ಹೊರಗೆ ಧರ್ಮಶಾಲೆಯು ವಿದ್ಯಾಲಯಗಳೂ, ಜೇನಿಯುವ ಔಷಧಕ್ಕೆಗಾಗಿ ಚಿಕ್ಕ ಔಷಧಾಲಯಗಳೂ ಇರಬೇಕು. ಶೌಚ ಮಾಡಲಾದ ನಿರ್ದಿಷ್ಟ ಸ್ಥಳ ಕಾರ್ಯಗಳಿಗೋಸ್ಕರ ಹವೆ, ನೀರು ಕೆಡದಂತೆಯೂ ಹಾದಿಗಳು ಹೊಲಸಾಗದಂತೆಯೂ, ಉತ್ತಮ ರೀತಿಯ ವ್ಯವಸ್ಥೆ ಇರಬೇಕು. ಪ್ರತಿಯೊಂದು ಊರಿನ ಜನರಲ್ಲಿ ತಮ್ಮ ತಮ್ಮ ಅನ್ನವಸ್ತ್ರಗಳನ್ನು ಹುಟ್ಟಿಸುವ ಸಾಮರ್ಥ್ಯವು ಇರಬೇಕು. ಮತ್ತು ಕಳ್ಳರಿಂದ ಹುಲಿ ಮೊದಲಾದ ಕ್ರೂರ ಮೃಗಗಳಿಂದಲೂ, ಅವರ ರಕ್ಷಣೆಯನ್ನು ಮಾಡಿಕೊಳ್ಳಲು ಬಲವಿರಬೇಕು. ಒಂದು ಕಾಲದಲ್ಲಿ ಹಿಂದುಸ್ಥಾನದ ಹಳ್ಳಿಗಳಲ್ಲಿ ಈ ಬಗೆಯ ಅನೇಕ ಸಾಧನಗಳಿದ್ದವು. ಇನ್ನು ಬಿಟ್ಟೆಂದು ಹೇಳಿಯನ್ನಾಗದಿದ್ದರೆ ಅದು ಈ ಅವಶ್ಯಕತೆಯೇ ಇದ್ದು ಉಪಯುಕ್ತವಾಗಿ ಇರುತ್ತಿದ್ದರೆ ಆ ಅವಶ್ಯಕತೆಯು ಇರುವಿ, ಅಥವಾ ಇರದಿರಲಿ, ನಾನು ಮೇಲೆ ವರ್ಣಿಸಿದಂಥ ಹಳ್ಳಿಯ ವ್ಯವಸ್ಥೆಯು ಇರಬೇಕು. ಮಾಡಿನ ಬಗ್ಗೆಯಾದರೂ ಸಂಶಯವಿಲ್ಲ. ತಿಳಿಯಬಲ್ಲರು. ಈ ಹಳ್ಳಿಗಳೇ ಸ್ವಾಶ್ರಯಿಗಳಾಗಿರಬೇಕೆಂದು ಹೇಳಬಹುದು ಮತ್ತು ಎಲ್ಲ ಹಳ್ಳಿಗಳು ಬೇಗನೆ ಹಿಂದುಸ್ಥಾನವನ್ನು ಪ್ರೀತಿಸಿ ಸಹಕರಿಸಿ ಉಪಾಯಗಳ ನಮೂನೆಗಳು ತೀರ ಕಡಿಮೆಯಾಗುವವು.

ಇಂಥ ಸ್ಥಿತಿಯನ್ನುಂಟು ಮಾಡುವದು ಅಶಕ್ಯವೆಂತ ಇರುವದಿಲ್ಲ, ಆದರೆ ಗಮನಿಸುವಷ್ಟು ಕಠಿಣವೂ ಇರುವದಿಲ್ಲ ಹಿಂದುಸ್ಥಾನದಲ್ಲಿ ಏಳೂವರೆ ಲಕ್ಷ ಹಳ್ಳಿಗಳೆವೆಂದು ಹೇಳುತ್ತಾರೆ. ಸರಾಸರಿ ಒಂದು ಹಳ್ಳಿಯ ಜನಸಂಖ್ಯೆಯು ೪೦೦ರ ಆಗುವದು. ಅನೇಕ ಹಳ್ಳಿಗಳಲ್ಲಿ ೧೦೦ ರ ಕಿಂತಲೂ ಕಡಿಮೆಯಾದ ಜನವಸ್ತಿಯಿರುವದು. ಇಂಥ ಚಿಕ್ಕ ವಸ್ತಿಯ ಹಳ್ಳಿಗಳಲ್ಲಿ ಒಳ್ಳೇ ವ್ಯವಸ್ಥೆಯನ್ನಿಡುವದು ಬಹು ಸುಲಭವೆಂದು ನನ್ನ ಮತವಿದೆ. ಅದಕ್ಕೋಸ್ಕರ ಉದ್ದ ಭಾಷಣಗಳ ಇಲ್ಲವೆ ಕಾಯ್ದೆ ಕೌನ್ಸಿಲುಗಳು ಅಥವಾ ಕಾಯ್ದೆಗಳ ಆವಶ್ಯಕತೆಯಿರುವದಿಲ್ಲ. ಆದರೆ ಒಂದೇ ಒಂದು ಮಾತಿನ ಅವಶ್ಯಕತೆಯಿರುವದು. ಅದಾವದೆಂದರೆ ಶುದ್ಧ ಭಾವದಿಂದ ಲೋಕಸೇವೆಯನ್ನು ಮಾಡುವ ನಾಲ್ಕಾರು ಜನಸ್ತ್ರೀಪುರುಷರದು. ಅವರು ತಮ್ಮ ಆಚಾರಣದಿಂದಲೂ ಸೇವಾಭಾವದಿಂದಲೂ ಪ್ರತಿಯೊಂದು ಹಳ್ಳಿಯಲ್ಲಿ ಬೇಕಾದ ಸುಧಾರಣೆಯನ್ನು ಮಾಡಬಲ್ಲರು. ಅವರು ಹಗಲಿರುಳು ಇದೇ ಕೆಲಸದಲ್ಲಿ ನಿರತರಾಗಿರಬೇಕೆಂಬುದೇನೂ ಇಲ್ಲ. ಅವರು ತಮ್ಮ ಚರಿತಾರ್ಥದ ಕೆಲಸವನ್ನು ಮಾಡುತ್ತಲೂ, ತಮ್ಮ ಹಳ್ಳಿಯಲ್ಲಿ ಮಹತ್ವದ ಸುಧಾರಣೆಯನ್ನುಂಟುಮಾಡಬಲ್ಲರು.

ಈ ಸೇವಕರಿಗೆ ವಿಶೇಷ ಲಕ್ಷಣದ ಅವಶ್ಯಕತೆಯೇನೂ ಇರುವದಿಲ್ಲ. ಸ್ವಲ್ಪ ಸಹ ಅಕ್ಷರಜ್ಞಾನವಿಲ್ಲದಿದ್ದರೂ ಕೂಡ ಹಳ್ಳಿಗಳ ಸುಧಾರಣೆಯ ಕೆಲಸವು ನಡೆಯಬಲ್ಲದು. ಇದರಲ್ಲಿ ಸರಕಾರವಾಗಲಿ ದೇಶೀ ಸಂಸ್ಥಾನಗಳಾಗಲಿ ನಡುವೆ ಬರಬಾರದು. ಅವರ ಸಹಾಯವಾದರೂ ಸ್ವಚಿತ್ತದಿಂದಾಗಿಯೇ ಬೇಕಾಗುವದು. ಪ್ರತಿಯೊಂದು ಹಳ್ಳಿಯಲ್ಲಿ ಈ ಪ್ರಕಾರ ಸ್ವಯಂಸೇವಕರು ಮುಂದುವರಿದು ಬಂದರೆ ಸ್ವಲ್ಪಾದರೂ ಆಡಂಬರವಿಲ್ಲದೆ ವಿಶೇಷ ಚಳವಳಿಯಿಲ್ಲದೆ ಸಮಸ್ತ ಹಿಂದುಸ್ಥಾನದ ಕಾರ್ಯವು ಆಗಬಲ್ಲದು, ಮತ್ತು ಅತ್ಯಲ್ಪ ಪ್ರಯತ್ನದಿಂದ ಕಲ್ಪನಾತೀತವಾದ ಪರಿಣಾಮವು ಉಂಟಾಗಬಲ್ಲದು. ಇದಕ್ಕೆ ದ್ರವ್ಯದ ಅವಶ್ಯಕತೆಯೂ ಅಷ್ಟೊಂದಿರುವದಿಲ್ಲೆಂಬುದನ್ನು ವಾಚಕರು ಸಹಜವಾಗಿ ತಿಳಿಯಬಲ್ಲರು. ಸದಾಚಾರದ ಅಂದರೆ ಧರ್ಮವೃತ್ತಿಯ ಅವಶ್ಯಕತೆಯು ಮಾತ್ರ ಇರುವದು.

ಇದು ಒಕ್ಕಲಿಗರ ಉನ್ನತಿಯ ಅತಿ ಸುಲಭವಾದ ಮಾರ್ಗವೆಂದು ನಾನು ಸ್ವಾನುಭವದಿಂದ ಕಂಡಮಾತು. ಈ ಬಗೆಯ ೯. ಪ್ರಯತ್ನ ಮಾಡಲು ಯಾವದೊಂದು ಹಳ್ಳಿಯವರಿಗೆ ಬೇರೊಂದು ಹಳ್ಳಿಯವರ ಹಾದಿನೋಡಲು ಕಾರಣವಿಲ್ಲ. ಯಾವದೊಂದಾದರು ಹಳ್ಳಿಯಲ್ಲಿ ಲೋಕಸೇವೆಯನ್ನು ಮಾಡಬೇಕೆಂಬ ಪವಿತ್ರವಿಚಾರವುಳ್ಳ ಸ್ವಯಂಸೇವಕನಿದ್ದುದಾದರೆ ಅವನು ಒಂಟಿಗನಾಗಿಯೇ ಈ ಕ್ಷಣವೇ ಈ ಕಾರ್ಯವನ್ನು ಪ್ರಾರಂಭಿಸಬಹುದು. ಇದರಿಂದ ಅವರು ಇಡೀ ಹಿಂದುಸ್ಥಾನದ ಸಂಪೂರ್ಣ ಸೇವೆಯನ್ನು ಮಾಡಿದಂತಾಗುವದು. ಹಳ್ಳಿಗಳಲ್ಲಿ ವಾಸಿಸುವ ಜನರಲ್ಲಿ ಯಾರ ಕೈಯಲ್ಲಾದರೂ "ನವಜೀವನದ" ಈ ಸಂಚಿಕೆಯು ಬಂದರೆ ನಾನು ಸೂಚಿಸಿದ ಪ್ರಯೋಗವನ್ನು ಅವರು ಆರಂಭಿಸುವರೆಂದೂ ಅಲ್ಪಸಮಯದಲ್ಲಿಯೇ ತಮ್ಮ ಪ್ರಯೋಗದ ಸುಪರಿಣಾಮವನ್ನು ದೇಶಕ್ಕೆಲ್ಲ ತೋರಿಸುವರೆಂದೂ ನಾನು ಆಶಿಸುತ್ತೇನೆ. ಈ ಪ್ರಯೋಗವನ್ನು ಪ್ರಾರಂಭಿಸುವದೆಂತೆಂಬ ಬಗ್ಗೆ ನಾನು ನನ್ನ ಕೆಲವು ಅನುಭವಗಳನ್ನು ಇನ್ನು ಮುಂದಿನ ಸಂಚಿಕೆಯಲ್ಲಿ ವಾಚಕರ ಮುಂದಿಡುವೆನು. ಆದರೆ ಯಾರಿಗಾದರೂ ಈ ಮಾತಿನ ಮಹತ್ವವು ತಿಳಿದು ಬಂದಿದ್ದರೆ ಆ ಸೇವಕರು ಮುಂದಿನ ವಾರದ ವರೆಗೆ ಹಾದಿಯನ್ನು ನೋಡದೆ ತಮ್ಮ ಕಾರ್ಯವನ್ನು ಪ್ರಾರಂಭಿಸುವರೆಂದು ನಾನು ಆಶಿಸುತ್ತೇನೆ.

"ಕನ್ನಡಿಗ"

FOR SALE.

Property of Maj H. S. Muller's.

One 4/5 H. P. Beordmone Precision single cylinder motor cycle and sidecar

For particulars apply to—

W. G. L. PARSONS
DALQUARREN,
CHETHALLI, P. O.

4—2 COORG.

ಕಾಫಿ ಬೋರರ್.

ಡಾಕ್ಟರ್ ಕ. ಜಾ'ಕಂಗಾನ್ ಎಮ್. ಎ. ಪಿ. ಹೆಚ್. ಡಿ ಯವರು ಮಡಿಕೇರಿಯಲ್ಲಿ ತಾರೀಖು 20—6—25 ರಲ್ಲಿ ಮಾಡಿದ ಭಾಷಣ (ಮುಂದುವರಿದುದು).

ಕಾಫಿಬೋರರಿನಿಂದ ಆಗುವ ಅತಿ ಕಠಿಣವಾದ ಆಡಕನ್ನು 18೬೦ರಲ್ಲೇ ಇಂಡಿಯಾದಲ್ಲಿ ತನಿಖೆ ಮಾಡಲು ಪ್ರಾರಂಭಿಸಿದ್ದರು. ಕಾಫಿಬೋರರಿನ ಜೀವನ ಚರಿತ್ರೆಯು ಪ್ಲಾಂಟರ್ ಗಳಿಗೆ ಗೊತ್ತಿರಲೇಬೇಕು. ಕಿತ್ತಳೆಗಿಡದ ಸೊಗಸಾದ ಬಣ್ಣದ ಬೋರರ್ ಹುಳದಂತೆ ಇಲ್ಲ. ಕಾಫಿಬೋರರ್‌ಹುಳವು ಕುರೂಪದ ಬಣ್ಣವುಳ್ಳದ್ದಾಗಿದೆ. ಮೈಸೂರಿನಲ್ಲಿ ಈ ಹುಳದ ಕಾಟವು ಬಹಳ ಹೆಚ್ಚಾಗಿತ್ತು. ಉತ್ಪತ್ತಿಯ ಶೇಕಡ ಹತ್ತರಷ್ಟು ಬೋರರಿನಿಂದ ನಷ್ಟವಾಗುತ್ತಿತ್ತು. 1867 ರಲ್ಲಿ ನಡಿಸಿದ ತನಿಖೆಯಿಂದ ಈ ಹುಳ ತಗಲಿದ ಗಿಡಗಳನ್ನು ಕಿತ್ತು ಬಿಟ್ಟರೆ ಕೆಡಕು ಬಹಳ ಕಡಿಮೆಯಾಗುತ್ತದೆಂತ ಕಂಡುಹಿಡಿದರು. ಹುಳತಗಲಿದ ಗಿಡಕಿತ್ತದ್ದರಿಂದ ಕಾಟ ಕಡಿಮೆಯಾಗುವದು ಹೇಗೆ?

ಕಾಫಿಬೋರರಿನ ಚರಿತ್ರೆ

ಕಪ್ಪುಬಣ್ಣದ ಬೊಟ್ಟುಗಳೂ ಬರೆಗಳೂ ಇರುವ ಚಿಕ್ಕ ಹುಳಗಳು ಸಾಧಾರಣವಾಗಿ ಅಕ್ಟೋಬರಿನಲ್ಲೂ ಡಿಸೆಂಬರಿನಲ್ಲೂ ಡಿಸೆಂಬರ್ 1ನೆ ವಾರದಲ್ಲೂ ಹೊರಗೆ ಬರುತ್ತವೆ. ಇದು ನನ್ನ ಮೈಸೂರು ಅನುಭವವಾಗಿದೆ. ಕೊಡಗಿನ ಈ ಸಮಯವು ಸ್ವಲ್ಪವ್ಯತ್ಯಾಸವಾಗಿದ್ದರೂ ಇರಬಹುದು. ಕಿತ್ತಳೆ ಬೋರರಿನಂತೆಯೇ ಇವೂ ಗಂಡೂ ಹೆಣ್ಣೂ ಇರುತ್ತವೆ. ಗಂಡಿಗಿಂತ ಹೆಣ್ಣು ಸ್ವಲ್ಪ ದೊಡ್ಡದಾಗಿರುತ್ತದೆ. ಇವು ಮೊಟ್ಟೆ ಇಡುವಸ್ಥಳ ಮಾತ್ರ ಬೇರೆಯಾಗಿದೆ. ಕಾಫಿಗಿಡದ ಮೈಮೇಲೆ ಬಿರಕುಗಳು ಮೂಲೆಗಳೂ ಇರುತ್ತವೆ. ಹೆಣ್ಣು ಬೋರರ್ ಹುಳವು ಬೆಳಗಿನ ಹೊತ್ತು ಸುಮ್ಮನೆ ಇದ್ದು ಬಿಸಿಲು ಹೆಚ್ಚಾದಂತೆ ಸ್ವಲ್ಪ ಸ್ವಲ್ಪ ದೂರ ಹಾರಾಡುತ್ತಾ ಮರದ ಸಿಪ್ಪೆಯ ಇಂಥಾ ಸಂದುಗಳಲ್ಲಿ ಸಿಪ್ಪೆಗೂ ಮರಕ್ಕೂ ಮಧ್ಯದಲ್ಲಿ ಒಂದು ಅಥವಾ ಎರಡು ಮೊಟ್ಟೆಗಳನ್ನು ಇಡುತ್ತವೆ. ಮೈಸೂರಲ್ಲಿ ಮೊಟ್ಟೆ ಒಡೆದು ಹುಳವಾಗಲು ಏಳರಿಂದ ಹತ್ತು ದಿವಸಗಳವರೆಗೆ ಆಗುತ್ತೆ. ಮೊಟ್ಟೆ ಒಡೆದ ಕೂಡಲೇ ಹುಳವು ಮರದ ಸುತ್ತಲೂ ಇರುವ ಜೀವದ ಸಿಪ್ಪೆಯನ್ನು ತಿನ್ನುತ್ತದೆ. ಹೀಗೆ ಸಾಧಾರಣ ೬೩ ತಿಂಗಳುಗಳಲ್ಲಿ ಮರಕ್ಕೆ ಎರಡು ಸುತ್ತು ಹಾಕುತ್ತದೆ. ಇಷ್ಟರಲ್ಲಿ ಹುಳವು ಬಲವಾದ ಶಕ್ತಿಯುಳ್ಳ ದವಡೆಗಳುಳ್ಳದ್ದಾಗುತ್ತದೆ. ಆಗ್ಯ ಮರವನ್ನು ಕೊರೆದು ಮರದ ಒಳಕ್ಕೆ ನುಗ್ಗುತ್ತದೆ. ಮರವನ್ನು ಕೊರೆಯುತ್ತಾ ತಾನು ನಿಂತುಕೊಳ್ಳಲು ಒಂದು ಜಾಗಮಾಡಿಕೊಳ್ಳುತ್ತದೆ. ಅಲ್ಲಿ ಒಂದು ಗರ್ಭಕೋಶಮಾಡಿಕೊಳ್ಳುತ್ತದೆ. ಅಲ್ಲಿ ಒಂದು ತಿಂಗಳುವರೆಗೆ ಇದ್ದು ಒಂದು ಓಡುಹುಳವಾಗಿ ಹೊರಕ್ಕೆ ಹೊರಡುತ್ತದೆ. ಇದೇ ಹುಳದ ಜೀವನ ಚರಿತ್ರೆಯಾಗಿದೆ.

ಇದನ್ನು ನಾಶಪಡಿಸುವ ಉಪಾಯ.

ಹುಳತಗಲಿದ ಎಲ್ಲಾ ಮರಗಳನ್ನು ಕಿತ್ತರೆ ಮಾರನೇವರ್ಷಕ್ಕೆ ಹುಳದ ಕಾಟ ಕಡಿಮೆಯಾಗುತ್ತದೆ. ಒಂದು ಗಿಡದೊಳಗೆ 30,40 ಹುಳಗಳೂ ಇದ್ದದ್ದುಂಟು. ಹುಳತಗಲಿದ ಪ್ರತಿ ಮರವನ್ನೂ ಕಿತ್ತ ವಿನಹ ಈ ಉಪಾಯವು ಸಂಪೂರ್ಣ ಪ್ರಯೋಜನಕಾರಿಯಾಗುವದಿಲ್ಲ. ಒಂದು ಗಿಡದಲ್ಲಿ ಮೂರು ಯಾ ನಾಲ್ಕು ಬೋರರ್‌ಗಳು ಇದ್ದರೂ ಗಿಡವು ಆರೋಗ್ಯವಾಗಿಯೇ ಕಾಣುತ್ತದೆ. ಇಂಥಾ ಎಲ್ಲಾ ಗಿಡಗಳನ್ನೂ ಪ್ಲಾಂಟರುಗಳು ಕೀಳುವದಿಲ್ಲ. ಫಲಕ್ಕೆ ಬಂದದ್ದನ್ನೂ ಕಳೆದುಕೊಳ್ಳಲಿಕ್ಕೆ ಮನಸ್ಸು ಬರುವದಿಲ್ಲ. ಆದ್ದರಿಂದ ಶೇಕಡ ಹತ್ತರಷ್ಟು ಗಿಡಗಳನ್ನು ಕಿತ್ತರೂ ಸಹ ಉಳಿದ ಗಿಡಗಳಲ್ಲಿ ೫೦ರಷ್ಟರಲ್ಲಿ ಬೋರರ್‌ಗಳು ಇರುತ್ತವೆ. ಇವುಗಳಿಂದ ಮುಂದಿನ ವರ್ಷಕ್ಕೆ ಹುಳಗಳ ಸಂಖ್ಯೆ ಹೆಚ್ಚುತ್ತದೆ. ಆದ್ದರಿಂದ ಗಿಡಗಳನ್ನು ಕೀಳುವ ಉಪಾಯವು ಕೆಡುಕನ್ನು ಕಡಿಮೆಮಾಡಿತೇ ಹೊರತು ಸಂಪೂರ್ಣಪ್ರಯೋಜನಕಾರಿಯಾಗಲಿಲ್ಲ. ಆದ್ದರಿಂದ ಇದಕ್ಕಿಂತ ಉತ್ತಮ ಉಪಾಯವೊಂದನ್ನು ಕಂಡುಹಿಡಿಯಬೇಕಾಯಿತು. ಮೊಟ್ಟೆಯೊಡೆದು ಚಿಕ್ಕ ಕ್ರಿಮಿಯು ಮೊದಲನೆ 2½ತಿಂಗಳಲ್ಲಿ ಮರದ ಹೊರಗೆ ಸುತ್ತುವಾಗ ಯೂನೈಟೆಡ್‌ಸ್ಟೇಟ್ಸಿನಿಂದ ತರಿಸಿದ ಒಂದು ಔಷಧಿಯಿಂದ ಗಿಡವನ್ನು ತೊಳೆದು ನೋಡಿದೆ. ಇದರಿಂದ ತುಂಬಾ ಪ್ರಯೋಜನವಾಯಿತು. ಆದರೆ ಸಮಯದ ಔಷಧಿಯನ್ನು ಬೇಕಾದಷ್ಟು ಒದಗಿಸಿಕೊಳ್ಳುವದೇ ಕಷ್ಟವಾಯಿತು. ಆದ್ದರಿಂದ ಈ ಉಪಾಯಗಳನ್ನು ಬಿಟ್ಟುಬಿಡಬೇಕಾಯಿತು. ಆಚೆವರ್ಷ ಎರಡು ಕ್ರಮಗಳನ್ನು ಉಪಯೋಗಿಸಿ ನೋಡಿದೆ. ಗಿಡಕ್ಕೆ ತಾಳೆಎಲೆಯನ್ನಾಗಲೀ ಕಾಗದವನ್ನಾಗಲೀ ಸುತ್ತಿದರೆ ಒಳಗಿದ್ದ ಹುಳಕ್ಕೆ ಹೊರಡಲು ಮತ್ತು ಹೊರಗಿದ್ದ ಹುಳವು ಒಳಕ್ಕೆ ನುಗ್ಗಿ ಮೊಟ್ಟೆ ಇಡಲು ಸಹಾಯವಾಗುವುದಿಲ್ಲ. ಇದು ಕಷ್ಟಸಾಧ್ಯವಾಗಿ ಕಂಡುಬಂತು. ನಾನು ಉಪಯೋಗಿಸಿದ ಇನ್ನೊಂದು ಉಪಾಯ ಯಾವದೆಂದರೆ ಬೆಳಗಿನಹೊತ್ತಿನಲ್ಲಿ ಹುಳವು ಇದ್ದಲ್ಲೇ ಇರುವಾಗ ಚಿಕ್ಕ ಹುಡುಗರನ್ನು ಬಿಟ್ಟು ಹುಳಗಳನ್ನು ಹೆಕ್ಕಿಸಿಬಿಡುವದು. ಈ ಉಪಾಯವು ಬಹಳ ಸುಲಭವಾಗಿ ಕಂಡು ಬಂತು. ಕೂಲಿ ಆಳುಗಳ ಮಕ್ಕಳನ್ನು ಅಕ್ಟೋಬರ್ ನವಂಬರ್ ತಿಂಗಳುಗಳಲ್ಲಿ ಈ ಕೆಲಸಕ್ಕೆ ಬಿಟ್ಟರೆ ಆಯಿತು. ಇದಕ್ಕೆ ಎಕರೆಗೆ 10 ರೂಪಾಯಿಗಿಂತ ಹೆಚ್ಚಿಗೆ ಖರ್ಚಾಗುವುದಿಲ್ಲ. ಕ್ರಮವಾಗಿ ಈ ಕೆಲಸ ನಡಿಸಿದರೆ ಮೂರು ನಾಲ್ಕು ವರ್ಷಗಳಲ್ಲಿ ಈ ಬೋರರ್‌ಗಳ ಕಾಟವನ್ನು ಕಡಿಮೆಮಾಡಬಹುದು.

ನನಗೆ ತೋರಿಬರುವ ಇನ್ನೊಂದು ಉಪಾಯವೇನೆಂದರೆ—ಈ ಓಡುಹುಳಕ್ಕೆ ಬಿಸಿಲಿನ ಮೇಲೆ ಪ್ರೇಮವಿರುವಂತೆ ಕಾಣುತ್ತದೆ. ನೆರಳು ಕಡಿಮೆಯಾದ ಸ್ಥಳಗಳಲ್ಲಿ ಹುಳ ತೊಡೆಯುವದು ಹೆಚ್ಚು. ಇನ್ನೂ ಅಜಮಾಯಿಷಿ ಮಾಡಿ ಇದು ನಿಜವಾಗಿ ಕಂಡರೆ ಹುಳಗಳನ್ನು ಹೆಕ್ಕಿಸಬೇಕಾದ ಸ್ಥಳವು ಕಡಿಮೆಯಾಗುತ್ತದೆ. ಮುನ್ನೂರು ಎಕರೆಯ ತೋಟದಲ್ಲಿ ನೆರಳು ಕಡಿಮೆಯಾದ ಇಂಥಾ ತುಂಡುಗಳು 30 ಎಕರೆಗಿಂತ ಹೆಚ್ಚಾಗಲಾರದು. 30 ಎಕರೆಗೆ 300 ರೂ. ಖರ್ಚಾದರೆ ಆಯಿತು. ನಾನು ಮಾಡುವ ಅಜಮಾಯಿಷಿಕೆ ಫಲಿತಾಂಶವನ್ನು ಬರುವ ವರ್ಷ ಒಂದು ಹಸ್ತ ಪತ್ರಿಕೆಯಲ್ಲಿ ಪ್ರಕಟಿಸುತ್ತೇನೆ. ತನ್ಮಧ್ಯ ಇ ಕೆಲಸವನ್ನು ಮಾಡಲು ಅಪೇಕ್ಷಿಸುವ ಪ್ಲಾಂಟರುಗಳಿಗೆ ಸಹಾಯ ಮಾಡಲು ನಾನು ತಯಾರಾಗಿ ಇರುತ್ತೇನೆ.

ಗಿಡವನ್ನು ಉಜ್ಜಿಸುವದು.

ಗಿಡದ ಮೈಮೇಲೆ ಬಿರುಕು ಬಿರುಕಾದ ಚರ್ಮವಿದ್ದರೇನೇ ಹುಳಕ್ಕೆ ಮೊಟ್ಟೆ ಇಡಲು ಅನುಕೂಲವಿರುವದಾದ್ದರಿಂದ ಮೊಟ್ಟೆ ಇಡುವ ಸಮಯಕ್ಕೆ ಮೊದಲಾಗಿ ಗಿಡಗಳನ್ನು ಉಜ್ಜಿಸಿ ನಯಮಾಡಿದರೆ ಹುಳಕ್ಕೆ ಮೊಟ್ಟೆ ಇಡಲು ಅನುಕೂಲವಿಲ್ಲದೆ ಹೋಗುತ್ತದೆ. ಆದರೂ ಮೊಟ್ಟೆಗಳು ಬಹಳ ಚಿಕ್ಕವಾದ್ದರಿಂದ ಮೊಟ್ಟೆ ಇಡಲಿಕ್ಕೆ ಜಾಗ ಸಿಕ್ಕಬಹುದು. ಹೀಗೂ ಮರವನ್ನು ಉಜ್ಜಿಸುವದರಿಂದ ಹುಳಕ್ಕೆ ಎಡೆ ಇಲ್ಲದೆ ಹೋಗುವದೂ ಅಲ್ಲದೆ, ಒಂದು ತರದ ಬಂದಣಿಕೆ ಹಿಡಿಯಲು ಸಹ ಅನುಕೂಲ ಕಡಿಮೆಯಾಗುತ್ತದೆ. ಹುಳಗಳು ಮರದ ಹೊರಗೆ ಬರುವ ಮುಂಚೆ ಅಂದರೆ ಸುಮಾರು ಅಕ್ಟೋಬರ್ ಮಧ್ಯ ಅಥವಾ ಅಂತ್ಯದೊಳಗೆ ಮರಗಳನ್ನು ಉಜ್ಜಿಸಿದರೆ ಮರಗಳು ಆರೋಗ್ಯವಾಗಿ ಕಾಣುತ್ತವೆ. ಹುಳಕ್ಕೆ ಮೊಟ್ಟೆ ಇಡಲು ಅನುಕೂಲವಿರುವದಿಲ್ಲ. ಮೊಟ್ಟೆ ಇಟ್ಟರೂ ಮೊಟ್ಟೆ ಒಡೆದ ನಂತರ ಚಿಕ್ಕ ಹುಳಕ್ಕೆ ಗಿಡಕ್ಕೆ ಅಂಟಿಕೊಳ್ಳಲು ಅನುಕೂಲವಿರುವದಿಲ್ಲ. ಯಾವ ಕ್ರಮವನ್ನು ಅನುಸರಿಸಬೇಕೆಂಬುದು ಆಯಾ ತೋಟದ ಸ್ಥಿತಿಯನ್ನು ಅನುಸರಿಸಿದೆ.

FOR SALE.

Property of Mr. G. K. Martin.

About 9½ acres good land situated above Abial Estate, about 6 miles from Mercara, suitable for coffee, and good bungalow site.

For particulars apply:—

W. G. L. PARSONS,
DALQUARREN,
CHETHALLI, P. O.

4—2 COORG.

ಕೊಡಗು ವಿದ್ಯಾಭಿವೃದ್ಧಿ ಸಂಘ.

ಕೊಡಗು ವಿದ್ಯಾಭಿವೃದ್ಧಿ ಸಂಘದ ಜನರಲ್ ಮೀಟಿಂಗು ತಾ 20 ರಲ್ಲು ಸಾಯಂಕಾಲ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಮಹಡಿಯಲ್ಲಿ ರಾ. ಬಾ. ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು 20ಜನರು ಹಾಜರಿದ್ದರು. ಸಂಘದ ಕಳೆದ ಎರಡು ವರ್ಷಗಳ ವರದಿಯು ಓದಲಾಗಿ ಒಪ್ಪಲಾಯಿತು.

1. ರಾ. ಬಾ. ಕೆ. ಚಂಗಪ್ಪನವರು ಅಧ್ಯಕ್ಷರಾಗಿಯೂ, 2. ಮ. ಕೀತಿಯಂಡ ಕಾಳಪ್ಪನವರು ಸೆಕ್ರೆಟರಿಯಾಗಿಯೂ, 3. ಮ. ಮೋರಿಯಂಡ ಭೀಮಯ್ಯನವರು ಖಜಾನ್ಚಿಯಾಗಿಯೂ, ಮಾ. ರಾ. ಶ್ರೀ. ಗಳಾದ 4 ರಾ. ಬಾ ಕೆ. ಕುಟ್ಟಯ್ಯನವರು, 5 ರಾ. ಸಾ. ಪಿ ದೇವಯ್ಯನವರು, 6 ನಡಿಕೇರಿಯಂಡ ಕಾಳಪ್ಪನವರು, 7. ಕೋದಂಡ ಕಾಳಪ್ಪನವರು, 8. ನಡಿಕೇರಿಯಂಡ ಚಿಣ್ಣಪ್ಪನವರು, 9 ಪಾಲೇಕಂಡ ಮೇದಪ್ಪನವರು, 10 ಅಪ್ಪಾರಂಡ ಚಂಗಪ್ಪನವರು, 11 ಪಿ. ಸಿ. ಚಂಗಪ್ಪನವರು, 12. ಅದೇಂಗಡ ಸುಬ್ರಾಯನವರು 13. ಪಾಂಡಂಡ ಮುತ್ತಣ್ಣನವರು, 14 ಐನಂಡ ಕಾರ್ಯಪ್ಪನವರು ಮತ್ತು 15 ಪಟ್ಟಡ ಉತ್ತಯ್ಯನವರು ಕಮಿಟಿ ಮೆಂಬರುಗಳಾಗಿಯೂ ಚುನಾಯಿಸಲ್ಪಟ್ಟರು.

ಸಂಘದ ಲೆಕ್ಕ ಆಡಿಟ್‌ಮಾಡಲು ಮೆ. ಬಿ. ಯಂ. ಕುಶಾಲಪ್ಪನವರನ್ನೂ ಮತ್ತು ಮೆ. ಪಟ್ಟಮಾಡ ಪೊನ್ನಪ್ಪನವರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

MY SCIENTIFIC SYSTEM OF GRADUATED PHYSICAL CULTURE.

SENT FREE TO EVERY ONE.

This will show you some of my remarkable achievements in Health building exercises, many pages with nice photographs of myself and a number of my pupils Read what they say about my system. Don't take my word for it. This book will be an impetus an inspiration to every young man. All I ask is the price of postage two annas. Remember this does not obligate you in any way, so don't delay one minute in your life. Write for this big book now while it is on your mind.

Prof. M. V. Krishna Rao,

P. O. Basuvangudi.
BANGALORE CITY (S. I.)

ಚಂದಾದಾರರಲ್ಲಿ ವಿನಂತಿ.

"ಕೊಡಗು' ಪತ್ರಿಕೆ ಬೇಕೆಂದು ಅಡ್ವಾನ್ಸು ಕೊಟ್ಟು, ಆ ತಾರೀಕಿನಿಂದ ಒಂದು ತಿಂಗಳೊಳಗೆ ಬಾಕಿ ಮೊಬಲಗನ್ನು ಪಾವತಿ ಮಾಡುತ್ತೇವೆಂದೂ ಹಾಗೆ ಪಾವತಿಮಾಡಲು ತಪ್ಪಿದರೆ ವಿ ಪಿ ಮೂಲಕ ಪತ್ರಿಕೆಯನ್ನು ಹೊಂದಿಕೊಳ್ಳುತ್ತೇವೆಂದೂ ಆರ್ಡರ್ ಫಾರ್ಮಿಗೆ ರುಜುಮಾಡಿ ಕಳುಹಿಸಿದ ಚಂದಾದಾರರು ತಮ್ಮ ವಾಯಿದೆಯೊಳಗೆ ಬಾಕಿ ಮೊಬಲಗನ್ನು ಪಾವತಿ ಮಾಡಬೇಕಾಗಿಯೂ, ಇಲ್ಲವಾದರೆ ಅವರಿಗೆ ವಿ ಪಿ ಕಳುಹಿಸಲಾಗುವುದೆಂದೂ ಈ ಮೂಲಕ ತಿಳಿಸಲಾಗಿದೆ. ವಿ ಪಿ ಕಳುಹಿಸಿದಲ್ಲಿ ವಿ ಪಿ ಚಾರ್ಜು 3 ಆಣೆ ಹೆಚ್ಚು ಚಂದಾದಾರರು ಕೊಡಬೇಕಾಗುವುದು

ಮೇನೇಜರ್

ವರ್ತಮಾನ ಸಂಗ್ರಹ.

ಒ ಳ ದೇ ಶ.

ಈಗ ಫ್ರೇಜರ್‌ಪೇಟೆಗೆ ಬಸ್ಸುಗಳು ನಡೆಯುತ್ತಿವೆ

ಮಡಿಕೇರಿ ಸಂಟ್ರಲ್ ಸ್ಕೂಲಿಗೆ ತಾ 17ರಲ್ಲು ಮೂರು ವಾರ ಮಳೆಗಾಲದ ರಜಾ ಕೊಡಲಾಗಿದೆ

ಮ ಒಡ್ಡಂಡ ಭೀಮಯ್ಯನವರು ಬೊಂಬಾಯಿ ಯುನಿವರ್ಸಿಟಿಯ ಎಂ ಬಿ ಬಿ ಯಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು

ಪ್ಲೀಡರಾಗಿದ್ದ ಮ ಕಾಳೇಯಂಡ ಪದ್ಮನಾಭಯ್ಯನವರು ತಾ 17ರ ರಾತ್ರಿ ಮಡಿಕೇರಿಯಲ್ಲಿ ಶಿವಾಧೀನರಾದರು

ವೀರಾಜಪೇಟೆ ಮುನಿಸಿಪಾಲಿಟಿಗೆ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರ ಅಧಿಕಾರವು ಕೊಡಲ್ಪಟ್ಟಿದೆ

ಮ ನಡಿಕೇರಿಯಂಡ ಅಪ್ಪಯ್ಯ ಯಂ ಆರ್ ಸಿ ಎಸ್ ರವರು ಪೂನಾದ ಸಸ್ಸೂನ್ ಆಸ್ಪತ್ರೆಯಲ್ಲಿ ಗೌರವ ಸರ್ಜನರಾಗಿ ನೇಮಿಸಲ್ಪಟ್ಟಿರುವರು

ಮಡಿಕೇರಿಯಿಂದ ಮೈಸೂರಿಗೆ ಹೋಗುವ ಮೋಟರ್ ಸರ್ವಿಸ್ ಬಸ್ಸು ಬೆಳಿಗ್ಗೆ 7 ಗಂಟೆಗೆ ಮಡಿಕೇರಿಯಿಂದ ಹೊರಡುವಂತೆ ಹುಕುಂ ಕೊಟ್ಟಿರುವರು

ಶಾಯಿಲದ ರಜೆಯಲ್ಲಿದ್ದ ಮ ಕೇಂಗಂಡ ಅಪ್ಪಯ್ಯನವರು ತಾ 21ರಲ್ಲು ತಿರುಗಿ ಒಂದು ಟ್ರೆಜರಿ ಅಸಿಸ್ಟೆಂಟ್ ಕಮಿಷನವರ ಹುದ್ದೆಯ ಚಾರ್ಜನ್ನು ವಹಿಸಿಕೊಂಡರು ಮ ಪಾಲೇಕಂಡ ಬಂಗಣ್ಣನವರು ವೀರಾಜಪೇಟೆಗೆ ಹಿಂತಿರುಗಿರುವರು

ಬಿದಿಗೇರನಾಡು ನಾಪನ ಮನೆಯವನೊಬ್ಬನು ಹಲಸಿಕ್ಕಾಗಿ ಹಟ್ಟಿ ಹೊಳೆಯನ್ನು ದಾಟುತ್ತಿದ್ದಾಗ ಹೊಳೆಗೆ ಬಿದ್ದು ಮೃತಪಟ್ಟವನ ಶವವು ಎರಡು ಮೂರು ದಿವಸಗಳನಂತರ ಸಿಕ್ಕಿ ತಾ 21 ರಲ್ಲು ಮಡಿಕೇರಿ ಆಸ್ಪತ್ರೆಗೆ ತರಲ್ಪಟ್ಟಿತ್ತು

ಕೊಡಗು ವಿದ್ಯಾಭಿವೃದ್ಧಿ ಸಂಘದ ಜನರಲ್ ಮೀಟಿಂಗು ತಾ 20ರಲ್ಲು ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲು ರಾ ಬಾ ಕೆ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ

ಮಡಿಕೇರಿ—ವೀರಾಜಪೇಟೆ— ಗೋಣಿಕೊಪ್ಪಲು— ಪೊನ್ನಂಪೇಟೆ ಲೈನಿಗಾಗಿ ಬಸ್ಸು ನಡೆಸು ಇಡಲು ಲೈಸನ್ಸಿಗಾಗಿ ನಾಲ್ಕೈದು ಅರ್ಜಿಗಳೂ, ಮಡಿಕೇರಿ—ಸೋಮವಾರಪೇಟೆ ಲೈನು ಲೈಸನ್ಸಿಗೆ ಒಂದೆರಡು ಅರ್ಜಿಗಳೂ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ ಕಳುಹಿಸಲ್ಪಟ್ಟಿವೆಯೆಂದು ವರ್ತಮಾನ

ಮಡಿಕೇರಿ ಮಂಗಳೂರು ರಸ್ತೆಯ ಜಾಲಸ್ಸೂರು ಎಂಬಲ್ಲಿ ರಸ್ತೆಯ ಮಧ್ಯದಲ್ಲಿ ಬಿಳುವದ್ದರಿಂದ ಬಸ್ಸುಗಳ ವೈವಾಟವು ಒಂದು ವಾರದಿಂದ ನಿಂತಿದೆ ಇದನ್ನು ದುರುಸ್ತುಮಾಡುತ್ತಿರುವುದರಿಂದ ಕೆಲವು ದಿವಸಗಳಲ್ಲಿಯೇ ಪುನಹ ಮಡಿಕೇರಿಯಿಂದ ಮಂಗಳೂರಿಗೆ ಬಸ್ಸುಗಳು ಓಡಾಡುವುವು

ಇದೇ ತಾ 20ರಲ್ಲು ಕೊಡಗು ಲಿಮಿಟೆಡ್ ಕಂಪೆನಿಯ ಶೇರುದಾರರ ವಾರ್ಷಿಕ ಜನರಲ್ ಮೀಟಿಂಗು ವೀರಾಜಪೇಟೆಯ ಬ್ಯಾಂಕಿನ ಭಂಡಾರದ ಮಹಡಿಯಲ್ಲು ನಡೆಯಿತು. ರಾ ಬಾ ಕೋದಂಡ ಅಪ್ಪಯ್ಯನವರು ಅಧ್ಯಕ್ಷರಾಗಿದ್ದರು ಮೀಟಿಂಗಿನ ವಿವರವು ಬರುವವಾರ ಪ್ರಕಟಿಸಲ್ಪಡುವುದು

ಶನಿವಾರದಂತೆ ಸೋಮವಾರದ ಊರು ಉಡುಪಿಗಳಲ್ಲಿ ಕ ದಲಿಕ್ಕಾಗಿ ಸುಮಾರು ಮುನ್ನೂರು ಕಸಿಮಾವಿನ ಗಿಡಗಳನ್ನು ಸರ್ಕಾರದವರು ಮೈಸೂರಿನಿಂದ ತರಿಸಿ ಅಲ್ಲಿಯ ಊರವರಿಗೆ ಹಂಚಿರುವರು ಇದು ಸಾಲದೆ ಇನ್ನೂ ಹೆಚ್ಚು ಬೇಕೆಂದು ಅಲ್ಲಿಯವರು ಕೇಳಿಕೊಂಡಿರುವರಂತೆ

ಚೇರಂಬಾಣ, ಬೇಂಗೂರು, ನುಕೇರಿ ತೋಡುಮಕೇರಿ, ಬಲ್ಲಮಾವಟಿ, ಚಿಕ್ಕಮುಂಡೂರು ಗ್ರಾಮಗಳ ಕೊಲ್ಲಿಬೈಲು ಗದ್ದೆಗಳಲ್ಲಿ ಈಗ ವಾರದಲ್ಲಿ ಸುರಿದಮಳೆಯಿಂದ ಸಮುದ್ರದಂತೆ ನೀರುತುಂಬಿಕೊಂಡಿದೆಯೆಂದೂ ವ್ಯವಸಾಯಮಾಡಲು ಮಳೆ ಪೂರ್ತಿಸಿಲ್ಲದೆ ಯತ್ನ ವಿಲ್ಲವೆಂತಲೂ ಒಬ್ಬನು ಬರೆಯುತ್ತಾನೆ

ಕೋಟೆಹೊರ ಪಾಂಡಿಕಡನೆನ್ನಿ ಒಬ್ಬ ಟಪ್ಪಾಲಿನವನು ಮತ್ತು ಇಬ್ಬರು ಪ್ರಯಾಣಿಕರು ಈಗ ಹೊಳೆ ಹಾಯುತ್ತಿದ್ದಾಗ ನೀರಿನ ಪ್ರವಾಹವು ಜೋರಾಗಿದ್ದದರಿಂದ ಕೊಲೆ ಬಳ್ಳಿ ಮುರಿದು ಪಾಂಡಿಯ ಮೇಲೆ ಇವರು ಕಳಕ್ಕೆ ಬಿದ್ದು ಬೀಳುತ್ತಿದ್ದಾಗ ಇವರಲ್ಲಿ ಒಬ್ಬರು ನೀರಿಗೆ ಬಿದ್ದು ಕೊಲೆ ಬಳ್ಳಿಯನ್ನು ಹಿಡಿದು ದಡಕ್ಕೆ ಎಳೆದುಕೊಂಡು ಬಂದ ಕಾರಣ ಅವರ ಪ್ರಾಣರಕ್ಷಣೆಯಾಯಿತೆಂದು ಸುದ್ದಿ

ಕಳೆದವಾರ ಎಡೆಬಿಡದೆ ಜೋರಾಗಿ ಹೊಡೆಯುತ್ತಿದ್ದ ಮಳೆಯು ಈ ವಾರ ಬದಲಾಗಿದೆ. ಮಳೆಯು ಕಡಿಮೆಯಾಗಿರುವುದರಿಂದ ಬಿಸಿಲಿಗೆ ಎಡೆಬಿಟ್ಟು ಹೊಡೆಯುತ್ತಿದೆ ಕಳೆದವಾರದ ಮಳೆಯಲ್ಲಿ ನಾಡುಗಳಲ್ಲಿ ಗದ್ದೆಗಳಿಗೆ ಅದರಲ್ಲೂ ರಿವರ್‌ಸೈಡ ಮಾಡಿದಲ್ಲಿ ತುಂಬಾ ನಷ್ಟ ಉಂಟಾಗಿದೆಯೆಂದು ತಿಳಿಯುತ್ತದೆ ಹೀಗೆ ಒರೆ ಹಾರಿಯೂ ಕೋಡು ಒಡೆದೂ ಗದ್ದೆಗಳಿಗೆ ಬಹಳ ನಷ್ಟ ಉಂಟಾದ ಗ್ರಾಮಗಳಲ್ಲಿ ಇವು ಕೆಲವು— ಕಂಡಂಗಾಲ, ಬಾಡಗ, ಹುದೂರು, ಈಚೂರು, ನೆಟ್ಟಿಗೇರಿ ಮತ್ತು ಮುಗುಟಗೇರಿ

ಹಿಂದೂ ದೇಶ.

ನಾಭಾದಲ್ಲಿ ಅನೇಕ ಅಕಾಲಿ ಕೈದಿಗಳನ್ನು ಬಿಡುಗಡೆಮಾಡಿರುವರೆಂದು ವರ್ತಮಾನ

ಮಹಾತ್ಮ ಗಾಂಧಿಯವರು ಬಾರಿಸಾಲಿಗೆ ಹೋದಾಗ ಅಲ್ಲಿಯವರು ಅವರಿಗೆ 38ಲಕ್ಷ ಗಜ ಖಾದೀಬಟ್ಟೆಯನ್ನು ಅರ್ಪಿಸಿದರು

ಪಂಡಿತ ಮೋತಿಲಾಲ್ ನಹರುರವರಿಗೆ ಗೂರಲು ಕಾಯಿಲೆಯು ಸ್ವಲ್ಪ ಜೋರಾಗಿ ನಿದ್ರೆಯಿಲ್ಲದೆ ರಾತ್ರಿಗಳನ್ನು ಕಳೆಯುತ್ತಿರುವರು

ಸ್ವರಾಜ್ಯ ಪಕ್ಷದ ಬಂಗಾಲ್ ಕೌನ್ಸಿಲಿನವರು ಪಂಡಿತ ಮೋತಿಲಾಲನೆಹರುರವರನ್ನು ತಮ್ಮ ಅಧ್ಯಕ್ಷರಾಗಿ ಚುನಾಯಿಸಿರುವರು.

ಕಲ್ಕತ್ತಾ ಮುನ್ಸಿಪಲ್ ಕೌನ್ಸಿಲಿನವರು ಮ ಸೆನ್‌ಗುಪ್ತರವರನ್ನು ದೊಡ್ಡ ಬಹುಮತದಿಂದ ಕಾರ್ಪೊರೇಷನಿನ ಪ್ರಸಿಡೆಂಟರಾಗಿ ಚುನಾಯಿಸಿರುವರು

ಕಾನ್‌ಪುರದ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಮದ್ರಾಸು ಪ್ರಾಂತ್ಯದ ಕಾಂಗ್ರೆಸ್ ಕಮಿಟಿಯವರು ಬಾಬು ಅರವಿಂದ ಘೋಷ್, ಮ ಕಸ್ತೂರಿರಂಗ ರವರ ಹೆಸರುಗಳನ್ನು ಸೂಚಿಸಿರುವರು

ಸ್ವರಾಜ್ಯಪಕ್ಷದ ಬಂಗಾಲ್ ಕೌನ್ಸಿಲಿನ ಮೀಟಿಂಗು ಕಲ್ಕತ್ತಾದಲ್ಲಿ ನಡೆದು ದಾಸ್‌ರವರ ಫರೀದ್ಪುರದ ಭಾಷಣಕ್ಕನುಸಾರವಾಗಿ ಸರಕಾರದೊಂದಿಗೆ ಸಹ ಕರಿಸುವಂತೆ ತೀರ್ಮಾನಿಸಿರುವರು

ಕಲ್ಕತ್ತಾದ ಯೂರೋಪಿಯನ್ ಸಂಘದ ಒಬ್ಬ ಮೀಟಿಂಗಿಗೆ ಮಹಾತ್ಮ ಗಾಂಧಿಯವರನ್ನು ಆಹ್ವಾನಿಸಿಕೊಂಡು ಸ್ವರಾಜ್ಯ ಪಾರ್ಟಿಯ ನಾಯಕರಾದ ಯಾರ ಕಲ್ಕತ್ತಾ ಮುನ್ಸಿಪಾಲಿಟಿಯ ಅಧ್ಯಕ್ಷರಾಗಬೇಕೆಂಬುದನ್ನು ಮಹಾತ್ಮರೊಂದಿಗೆ ಆ ದರ ಮೆಂಬರುಗಳು ಚರ್ಚಿಸಿದ ವರಂತೆ

ಕಳೆದವಾರದ ಮಳೆಯ ಜೋರಿನಿಂದ ಮೈಸೂರು ತಂಜಾವೂರು ಪ್ರದೇಶಗಳಲ್ಲಿ ಕಾವೇರಿ ನದಿಯಲ್ಲಿ ಬಹಳ ನೀರು ಏರಿ ನಷ್ಟವುಂಟಾಗಿದೆ ಹಾಗೆಯೇ ದಕ್ಷಿಣ ಮಲಬಾರಿನಲ್ಲಿಯೂ ಹೊಳೆಯ ನೀರು ಏರಿಯೂ, ಬರಗಳು ಜರಿದೂ ನಷ್ಟ ಉಂಟಾಗಿದೆ

ತಾ 20 ರಲ್ಲಿ ನಾಗಪುರದಲ್ಲಿ ನಡೆದ ಸೆಂಟ್ರಲ್ ಪ್ರಾವಿನ್ಸಿನ ಎಲ್ಲಾ ಸಂಗಡಿಗಳ ಮಜದೂರುಗಳ ಮೀಟಿಂಗಿನಲ್ಲಿ, ಮತ್ತಿತ್ಯವನ್ನು ಕೈಕೊಂಡು ಸದಾಚಾರಣೆಯನ್ನು ಕಾಪಾಡಲಿಕ್ಕಾಗಿ ಆದಷ್ಟು ಬೇಗನೆ ನಾಗಪುರದಲ್ಲಿ ಒಬರುಗಳು ಒಂದು ಕಾನ್‌ಫರನ್ಸನ್ನು ಮಾಡ ಬೇಕೆಂತ ತೀರ್ಮಾನವಾಯಿತು

ಬೊಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಲಾರ್ಡ್ ಬರ್ಕನ್‌ಹೆಡ್ಡರವರ ಭಾಷಣವನ್ನು ಚರ್ಚಿಸಲು ತಂದ ಎಡ್ಜರ್ನಮೆಂಟ್ ಠರಾವನ್ನು ಗವರ್ನರವರು ಬಿಡಲಿಲ್ಲ ಲೇಟ್ ಸಿ ಆರ್ ದಾಸ್‌ರವರ ಮರಣಕ್ಕೆ ಪರಿತಾಪ ಸೂಚಕ ಠರಾವನ್ನು ಕೌನ್ಸಿಲಿನಲ್ಲಿ ಪಾಸು ಮಾಡಿದರು.

ಹಿಂದೂ ದೇಶದ ಯುವಕರಿಗೆ ಕೆಲಸ ದೊರೆಯದೆ ಜೀವನ ನಡೆಸುವುದು ಕಷ್ಟಕರವಾದುದರಿಂದ ಕೃಷಿಯಿಂದ ಅನೇಕರು ಯೋಗ್ಯರೀತಿ ಜೀವನ ನಡೆಸಬಹುದೆಂದು ತಿಳಿದು, ಕಲ್ಕತ್ತಾ ಕಾಲೇಜುಗಳಲ್ಲಿ ವ್ಯವಸಾಯ ರೀತಿಗಳನ್ನು ಕಲಿಸಲು ಏರ್ಪಡಿಸಿದವರು ಇದಕ್ಕಾಗಿ ಸಮೀಪ ಜಮೀನನ್ನೂ ಗೊತ್ತುಮಾಡಿರುವರು ಇದಕ್ಕೆ ಸರಕಾರದವರ ಅನುಮತಿಯಾ ಸಹಾನುಭೂತಿಯೂ ಇವೆ.

ಕಲ್ಕತ್ತಾದಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ಸಿನವರ್ಕಿಂಗ್ ಕಮಿಟಿಯ ಮೀಟಿಂಗಿನ ಅವತ್ತಿನಲ್ಲಿ ಕಾಂಗ್ರೆಸ್ಸಿನಲ್ಲಿ ಸ್ವರಾಜ್ಯ ಪಕ್ಷದವರ ಬಹುಮತವಿರುವುದರಿಂದ ಆ ಪಕ್ಷದ ಅಧ್ಯಕ್ಷರಾದ ಪಂಡಿತ ಮೋತಿಲಾಲ್ ನಹರುರವರೇ ಕಾಂಗ್ರೆಸ್ಸಿನ ಅಧ್ಯಕ್ಷರಾಗ ಬೇಕು ಒಳ್ಳೆಯದೆಂದೂ ತಾನು ಪ್ರೆಸಿಡೆಂಟಾಗಿರಲು ಇಚ್ಛೈಸುವದಿಲ್ಲವೆಂದೂ ಮಹಾತ್ಮ ಗಾಂಧಿಯವರು ನಹರುರವರಿಗೆ ಬರೆದು ಕಳುಹಿಸಿದರಂತೆ ಇದು ಸ್ವರಾಜ್ಯ ಪಕ್ಷದವರಲ್ಲಿ ಸ್ವಲ್ಪ ಗಲಿಬಿಲಿಯನ್ನುಂಟುಮಾಡಿದರೂ ಈ ವರ್ಷದ ಅಂತ್ಯದವರೆಗೆ ಮಹಾತ್ಮರೇ ಕಾಂಗ್ರೆಸ್ಸಿನ ಅಧ್ಯಕ್ಷರಾಗಿರಬೇಕೆಂದು ತೀರ್ಮಾನಿಸಿದರು

ಗೊಂಡಲ್ ಸ್ಟೇಟಿನ ಪಟ್ಟಣವಾದ ಗೊಂಡಲಿನಲ್ಲಿ 16 ವಯಸ್ಸಿನ ಒಬ್ಬ ಹಿಂದೂ ಕನ್ಯೆಯನ್ನು ಒಬ್ಬ ಹೊಗಡು ಮೋಟಾರಿನಲ್ಲಿ ಉಪಾಯದಿಂದ ಕರೆದುಕೊಂಡುಹೋಗಿ ಆ ದೇ ರಾತ್ರಿ ಒಬ್ಬ ಮುಸ್ಸಲ್ಮಾನನಿಗೆ ಮದುವೆಮಾಡಿದನಂತರ ಆ ಹುಡುಗಿಯು ಬಹಳ ಚಿಂತಾಕ್ರಾಂತಳಾಗಿರುವಳು ಈ ವಿಷಯವು ಅಲ್ಲಿ ಬಹಳ ಗಲಿಬಿಲಿ ಯನ್ನುಂಟುಮಾಡಿದೆ ಜನರು ಹರತಾಳವನ್ನು ಆಚರಿಸಿದ್ದಲ್ಲದೆ ಸುಮಾರು ಆರುಸಾವಿರ ಜನರು ಅಲ್ಲಿಯ ಠಾಕೋರ್ ಸಾಹೇಬರ ಬಳಿ ಫಿರ್ಯಾದು ಹೇಳಲು ಹೋಗಿದ್ದರು

ವಿದೇಶ.

ವೈಸರಾಯರಾದ ಲಾರ್ಡ್‌ರೀಡಿಂಗ್‌ರವರು ತಮ್ಮ ಪತ್ನಿಯೊಂದಿಗೆ ಲಂಡನ್ನಿನಿಂದ ಇಂಡಿಯಕ್ಕೆ ಜುಲೈ 29ಕ್ಕೆ ಹೊರಡುವರು

ಚೈನಾದ ಸ್ಜೆಚುವಾನ್ ಪ್ರದೇಶದಲ್ಲಿ (ಸಿಂಗ್) ಅವರೊಳಗೊಳಗೆ ಯುದ್ಧವು ಪ್ರಾರಂಭವಾಗಿದೆ ಒಬ್ಬ ಸೇನಾಧಿಪತಿಯೂ ಇನ್ನೊಬ್ಬ ಸೇನಾಧಿಪತಿಯ ಮೇಲೆ ದಂಡೆತ್ತಿ ಹೋಗಿರುವನು

ಮೊರಾಕ್ಕೊದಲ್ಲಿ ರಿಫ್ ಜನರಿಗೂ ಫ್ರೆಂಚರಿಗೂ ಯುದ್ಧವು ನಡೆಯುತ್ತಲೇ ಇದೆ ಎರಡು ಕಡೆಗಳಿಗೂ ಸ್ವಲ್ಪದ ನಷ್ಟವುಂಟಾಗಿದೆ ಫ್ರೆಂಚರ ಹೊಸ ಸೇನಾಧಿಪತಿಯು ಒಯ್ದ ಭರವಸ ಕೊಡುತ್ತಿದ್ದಾನೆ ಇನ್ನೊಂದು ಕಡೆ ಸ್ಪೇನಿನವರು ರಿಫ್ ಜನರೊಂದಿಗೆ ಕಾದಾಡುತ್ತಿರುವರು

ತಾ 19ರಲ್ಲು ಫ್ರೋಜ್‌ನಗರ್ ದೇಶದಲ್ಲಿ ಕೆಲವು ಮಿಲಿಟರಿಯವರೂ ಒಂದು ನಾವಿಕ ಹಡಗೂ ದಂಗೆ ಎದ್ದರು ಅದರ ನಂಗೆಯ ಮುಂದಾಳುಗಳನ್ನು ಸರಕಾರದವರು ಸರಹಿಡಿದರು ದೇಶದಲ್ಲಿ ಯುದ್ಧದ ದಂಡನೆಯ ಶಾಸನವನ್ನು ಜಾರಿಗೆ ತಂದಿರುವರು

ತುರ್ಕಿಸ್ಥಾನದ ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲಿ ಕುಮಾರಿಯೊಬ್ಬಳು 21ನೇ ವಯಸ್ಸಿನಲ್ಲಿ ಕುಮಾರನಾಗಿದ್ದಾಳೆ! ಇದು ನಾಟಕದ ಕಥೆಯಲ್ಲ ಆದರೆ ಶಿಶುವಾಗಿಯೂ ಹುಡುಗನಾಗಿದ್ದವನು ಗಂಡಸಾಗಿರುವನು! ಡಾಕ್ಟರರು ಪರೀಕ್ಷಿಸಿ ಆ ಕುಮಾರನೆಂದೇ ನಿರ್ಧರಿಸಿರುವರು ಮೊದಲು ಅವಳು ಕುಮಾರಿ ಆಗಿದ್ದಾಗ ಆಕೆಯನ್ನು ಕುಮಾರನು ಪ್ರೀತಿಸುತ್ತಿದ್ದರು ಈಗ ವರ್ಯರೇ ಜೊತೆ ಹೆಚ್ಚಿರುವರು ಇದೇನು, ಕಲಿಯುಗದ ಮಹಾತ್ಮೆಯೋ !!

ಕಡ್ಡದಿಗ

ಲಾರ್ಡ್‌ಬರ್ಕನ್‌ಹೆಡ್ಡರವರು, ಹಾಸು ಹೌಸ್ ಆಫ್ ಲಾರ್ಡ್ಸನಲ್ಲಿ ಮಾಡಿದ ಭಾಷಣದ ತತ್ವಕ್ಕೆ ಲಿಬರಲ್ ಮತ್ತು ಲೇಬರ್ ಪಾರ್ಟಿಯವರೂ ಒಪ್ಪಿರುವುದರಿಂದ ಆ ಭಾಷಣದ ಅಭಿಪ್ರಾಯವು ಕನ್ಸರ್ವೇಟಿವ್ ಪಾರ್ಟಿಯವರದು ಮಾತ್ರವಲ್ಲ, ಇಡೀ ಇಂಗ್ಲಿಷ್ ಜನಾಂಗದ ಚೆನ್ನಾಗಿ ಯೋಚಿಸಲ್ಪಟ್ಟ ಅಭಿಪ್ರಾಯವಾಗಿದೆ, ಇಂಡಿಯಾದವರು ಸರಕಾರದೊಂದಿಗೆ ಮನಸ್ಪೂರ್ವಕ ಒಯ್ಯಕ್ಕೆ ಸಹಕರಿಸಿದರೆ ಮುಂದಿನ ಸುಧಾರಣೆಗೆ ಎಲ್ಲಾ ಬಾಗಿಲುಗಳು ತೆರೆಯಲ್ಪಡುವುವು ಒದಲು ಪ್ರತಿಭಟನೆಗೆ ಅಡಚಣೆ ಒಡ್ಡಿದರೆ ಎಲ್ಲಾ ಬಾಗಿಲು ಮುಚ್ಚಲ್ಪಡುವುದೆಂದು, ಇನ್ನೊಂದು ಭಾಷಣದಲ್ಲಿ ಸೂಚಿಸಿರುವರು

FOR SALE.

Overland 91, 1924 Model, in perfect running order, never been sick or sorry, only driven 12000 miles Price Rs 1800 Fitted 5 Michelin Baloon Tyres two Back new

THE HUNSUR WORKS, HUNSUR.

2—1

ದೇಶಬಂಧು ಚಿತ್ತರಂಜನದಾಸರ ಮರಣದ ಸಂತಾಪಸೂಚಕ

(ಭಾಮಿನಿಷಟ್ಪದಿ)

ರಚನಾ ಇರ್ದನಂತು ವಿಪನ ಸಮಿಯುತಿದೆ ಕಣ್ಣಾಲಿ ಕಂ ಬನಿ | ಹಮ ದೇಶದ ಬಂಧು ದಾಸನು ತ್ಯಜಿಸಿ ಪೋದನಲಾ || ಪರಮ ಧಾರ್ಮಿಕ ಶೌರ್ಯ ಗುಣವರ ದೇಶ ಸದ್ಗುಣಚಿತ್ತರಂಜನ ವರುಣ ಸ್ವರ್ಗಪ ನೀರ ಎಂಬನಿ ಮಿಸಿದ ಲೋಕಕಾ || ೧ ||

ಜಾಲತನದಲಿ ಸೆರಲ ವಿದ್ಯೆ ಮೇಳಿಸಿ ನಾಗಿಸೆ ಪ್ರವೃತ್ತಿಹೊಂದಿದೆ | ಮೇಲು ಎಸ್ಟನ ಕಲಿಯತೋನಗ ಪೋದ ವಿಲಾಯಿತಿಗೆ || ಅಲ್ಲಿ ಬಹುತರ ವಿದ್ಯೆ ಇಂದಲಿ ಸಲ್ಲಲಿತ ಬ್ಯಾರಿಸ್ಟರಾಗಿಯೆ | ಮೆಲ್ಲನಡಿ ಇಟ್ಟನು ಸ್ವದೇಶಕೆ ಕೀರ್ತಿಯುತನಾಗಿ || ೨ ||

ಜಾನಧರ್ಮ ಸತೀಪತಿಕಾರವು ಮೂಡಿವನ ಸತ್ಯಾಸ್ತಮೆಂಬುದ | ತಾನರಿತು ಕೋರ್ಟಿನಲಿ ವಾದವ ನಡಿಸಿದಿಂದಿಗದನೆ || ಮಾನನಿಧಿ ಅರವಿಂದ ಘೋಷರ ಮಾನಭಂಗದ ರಾಜದ್ರೋಹದಿ | ಜಾಣಕನದಿಂ ವಾದ ಮಾಡುತ ಗೆಲ್ಲಿಸಿದವನು ಯೆ || ೩ ||

ಊರವರಧಿಕಾರಿಗಳು ಪ್ರವೇಶ ಪ್ರಾಂತನದಿಂ ಅಮೃತ ಸರದ ಹೋರಾ ಕೃತ್ಯದ ಪೀಡಿಸಿದವನ್ನಾಯ ಮನಗ ನೀಡು || ಧೀರತನದಲಿ ಪೀರ ಇಲ್ಲದೆ ಹೋರಾಡಿದ ಕಿತಿ ಮಾಡಿಗಳ | ವೀರ ಮಾಡಿದೆ ಸ್ವ ನಡೆಸುವ ದೇಶದಾಸ್ಯದ || ೪ ||

ಧರೆಯೊಳೆಲ್ಲವು ನಿಸ್ವ ಕೀರ್ತಿಯು ಮೆರೆಯೆ ಮುದ್ರಿತ ಕೀರ್ತಿ ಲಕ್ಷ್ಮಿಯು ವರಿಸಿ ನಿಂತಿಲನು ನಿನ್ನವಳೆಯ ಮನ ಧಾರುಣಿಶನ || ಮನವುಳಿಸಿ ಬಗೆ ಅಕ್ಕೆಯು ಅನು ನಿನ್ನಿನಿ ದಾನವ ಸ್ಥಿರವೆನಿಸಿ ಚಿತ್ತರಂಜನ ನೀನಗೆ ನಮಿಸಿ ಬಾಗಿ ||೫||

ಎಲ್ಲಿಹುದು ಋಣಭಯವು ಮನುಜರೊಳಿಲ್ಲಿಹುದು ದೇವಾಂಶವೆಂಬುದ | ಸೊಲ್ಲರಿತು ನೀ ಪಿತನ ಸಾಲವ ಸಲ್ಲಿಸಿದೆ ಜಗದಿ || ಬಲ್ಲದನೆ ದೇಶಾಭಿಮಾನದ ಸೊಲ್ಲು ಹೃದಯದಿ ಊಡೆ ನಿನ್ನಯ | ಸಲ್ಲಲಿತ ಭಾಗ್ಯಂಗಳೆಲ್ಲವ ದೇಶಕೊಪ್ಪಿಸಿ ||೬||

ಭರತಮಾತೆಯು ತನ್ನ ಜನನಿಯು ಭರತಜರು ಸೋದರರೆನ್ನುವ | ಪರಿಯ ವಿಶ್ವಾಸದಲಿ ಹೋರಿದೆ ಸರ್ವವನು ನೀಗಿ || ಅರಿಯರೇ ಸೋದರರು ನಿನ್ನಯ ಪರಮ ಧರ್ಮದ ದೇಶಸೇವೆಯ | ಕರಕರಿಸದಿರುತಿಹರೆ ನಿನ್ನಯ ಗುಣಗಳನು ನೆನೆದು ||೭||

ಎಲೆಲೆ ಭಾರತ ಜನನಿ ನಿನ್ನನು ಸಲಿಸಿದವಗೆ ತಕ್ಕ ಫಲವೇ | ಫಲಿತ ಮರನನು ನಾಶಗೊಳಿಪುದು ನ್ಯಾಯವೇ ನಿನಗೆ || ನೆಲದೊಳಿಸಿತೊಪುತ್ರರಿರುತಿರೆ ನಲಿ ವಿಚಾರಿಸೆ ನಿನ್ನ ನೀಪ | ಚಲುವ ಪುತ್ರನ ಕಳೆದೆಸೀ ನಿನ್ನೆಂದು ಮರೆಯುವೆಯಾ ||೮||

ಕೆ. ತಿಮ್ಮಯ್ಯ.

ಪತ್ರವ್ಯವಹಾರ.

ಬಾತ್ಮಿದಾರರು ಸೂಚಿಸುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಪ್ರೈಮರಿ ಸ್ಕೂಲ್ ಮಾಸ್ಟರುಗಳು

ತಾರೀಕು 10—7—25ರ ಪತ್ರಿಕೆಯಲ್ಲಿ ಮಾತೃಭಾಷಾ ವಿಚಯವನ್ನು ಓದಿದೆನು. ಅದನ್ನು ನೋಡಿದಾಗ್ಯೆ ಇದು ಜ್ಞಾಪಕಕ್ಕೆ ಬಂತು. ಅದೇನೆಂದರೆ, ಪ್ರೈಮರಿ ಶಾಲಾ ಉಪಾಧ್ಯಾಯರುಗಳ ಬೋಧನೆಗೋಸ್ಕರ (Training) ಟ್ರೈನಿಂಗ್ ಆದ ಮಾಸ್ಟರುಗಳೇ ಆಗಬೇಕಂತಲೂ ಸ್ಕೂಲ್ ಫೈನಲ್ ಯಾ ಲೋವರ್ ಸೆಕೆಂಡ್ರಿ ಆದವರೇ ಟ್ರೈನಿಂಗ್ ಬಗ್ಗೆ ಹೋಗಬೇಕಂತಲೂ ವಿದ್ಯಾ ಇಲಾಖೆಯವರ ರೂಲ್ಸ್ ಅಂತೆ, ಅದೇನೂ ಸರಿ. ಆದರೆ ನಮ್ಮ ದೇಶಕ್ಕೆ ಬೇಕಾದದ್ದು ಕೈಗಾರಿಕೆ, ಈ ಕೈಗಾರಿಕೆ ಕಲಿತ ಸ್ಕೂಲ್ ಫೈನಲ್ ಮತ್ತು ಲೋವರ್ ಸೆಕೆಂಡ್ರಿ ಪಾಸಾದ ಹಳೇ ಮಾಸ್ಟರುಗಳೆ ಇಲ್ಲದಿರುವಾಗ್ಯೆ ಕೈಗಾರಿಕೆಯನ್ನು ಬೋಧಿಸುತ್ತಲಿರುವ ಪ್ರೈಮರಿ ಪಾಸಾದ ಸರ್ವಿಸಿನ ಉಪಾಧ್ಯಾಯರುಗಳನ್ನು ಯಾಕೆ ಕಳುಹಬಾರದೆಂಬುದು ಗೊತ್ತಾಗುವದಿಲ್ಲ. ಇದಕ್ಕನುಗುಣವಾಗಿ ಕಸಬೆ ಸ್ಕೂಲ್ ಕೈಗಾರಿಕೆ ಮಾಸ್ಟರನ್ನು ಟ್ರೈನಿಂಗ್ ಬಗ್ಗೆ ತೆಗೆದುಕೊಳ್ಳಲು ಅವರ ಪ್ರೈಮರಿ ಸರ್ಟಿಫಿಕೇಟ್ ಪತ್ರ ತರಿಸಿಕೊಂಡು ಈಗ ಪ್ರೈಮರಿ ಪಾಸಾದವರನ್ನು ತೆಗದುಕೊಳ್ಳುವದಿಲ್ಲವೆಂದರೆ ಇನ್ನು ಮುಂದೆ ಈ ಶಾಲೆಯಲ್ಲಿ ಕೈಗಾರಿಕೆ ಕಲಿಸುವವರು ಯಾರು? ಇಂಥಾ ಸಂದರ್ಭಗಳಲ್ಲಿ ಯಾಕೆ ಇಂತಾ ಕೈಗಾರಿಕೆ, ಸಂಸ್ಕೃತ ವಗೈರೆ ಕಲಿತ ಪ್ರೈಮರಿ ಮಾಸ್ಟರುಗಳನ್ನು ಟ್ರೈನಿಂಗ್ ಬಗ್ಗೆ ಕಳುಹಬಾರದು. ಈ ಬಾಬಿನಲ್ಲಿ ವಿದ್ಯಾ ಇಲಾಖೆಯವರು ಚೆನ್ನಾಗಿ ಪರ್ಯಾಲೋಚಿಸಿ ಟ್ರೈನಿಂಗಿಗೆ ಕಳುಹಿಸುವರಾಗಿ ವಿನಂತಿ.

ದೇಶಾಭಿಮಾನಿ

ಅಯ್ಯಾ,

ನಮ್ಮ ಉತ್ತರಕೊಡಗು ಸೋಮವಾರಪೇಟೆ ನಾಡಿನ ಹಳ್ಳಿಗಳಲೆ ಕರಕಳ್ಳಿ ಗ್ರಾಮದ ನಾಲೆಯ ನೀರಿನ ಆಶ್ರಯದಿಂದ 3 ಸಾವಿರ ಬಟ್ಟಿ ಭೂಮಿಯು ಬೆಳೆಯಬೇಕಾಗಿದೆ. ಕಳೆದ ವರ್ಷ ಇದೇ ಕಾಲದಲ್ಲಿ ಮಳೆಯ ಅನಾಹುತದಿಂದ ಒಡೆದು ಹೋದದನ್ನು ರಿಪೇರಿ ಮಾಡಿಕೊಡಬೇಕಾಗಿ ಆ ಕಾಲದಿಂದಲೂ ಸರಕಾರದವರನ್ನು ಎಡೆಬಿಡದೆ ಗ್ರಾಮಸ್ಥರಾದ ನಾವು ಕೇಳಿಕೊಳ್ಳುತ್ತಾ ಬಂದೆವು. ಈಗ ಮೊನ್ನೆ ತಾನೆ ಕೊಡಗು ಕಮೀಷನರ್ ಸಾಹೇಬರವರು ಇಲ್ಲಿಗೆ ಬಂದಿದ್ದಾಗ ಗ್ರಾಮಸ್ಥರೆಲ್ಲರೂ ಅವರ ಬಂಗ್ಲೆಗೆ ಹೋಗಿ ಕೇಳಿಕೊಂಡೆವು. ಕೂಡಲೆ ರಿಪೇರಿ ಮಾಡುವಂತೆ ಇಂಜಿನಿಯರವರಿಗೆ ಹುಕುಂ ಮಾಡುತ್ತ್ಯೆಯಾಗಿ ಹೇಳಿದ ರೀತಿ ನಾಲೆ ಕೆಲಸವನ್ನು ಈಗ ಸುಮಾರು ಒಂದು ತಿಂಗಳಲ್ಲಿ ಸುರುಮಾಡಿದ್ದಾಗಿದೆ. ಈಚೆಗೆ ದೇವರು ಕೆಟ್ಟರೂ ಪೂಜಾರಿ ಕೊಡ ಎಂಬ ಗಾದೆಗೆ ಸರಿಯಾಗಿ ಕೆಲಸವನ್ನು ಬಿಟ್ಟಂತೆ ನನಗೆ ಕಂಡುಬಂದದರಿಂದ ವಿಚಾರಿಸುವಲ್ಲಿ ಒಬ್ಬ ಕಂಟ್ರಾಕ್ಟರಿಗೆ ಸದರಿ ನಾಲೆ ಕೆಲಸ ಕೊಡಿಸಿರುವದಾಗಿ ತಿಳಿದೆನು. ಸದರಿ ಕಂಟ್ರಾಕ್ಟುದಾರರನ್ನು ವಿಚಾರಿಸುವಾಗ್ಯೆ ಇದುವರೆಗೆ ಮಳೆ ಜೋರಾಗಿತ್ತು, ಕೆಲಸ ಮಾಡಲಿಲ್ಲವೆಂದರು. ಅದಕ್ಕೆ ನಾನು ಈ ವಾರ ಬಿಸಿಲು ಕಾಯುತ್ತಾ ಇದೆ. ನಾವು ಇನ್ನೂ ಬೀಜ ಹಾಕಿಲ್ಲ, ನೀರಿಲ್ಲವೆಂಬದಾಗಿ ಹೇಳಿದಕ್ಕೆ, ಅವಕ್ಕೆ ನಾವೇನು ಮಾಡುವದು 1 ಆಳಿಗೆ 12 ಆಣೆ ಚಾರ್ಜ್ ಕೇಳುತ್ತಾರೆ, ಹಾಗೆ ಕೊಟ್ಟರೆ ನಮಗೇನು ಉಳಿಯುವದು ಎಂಬದಾಗಿಯೂ ಆಳಿಸ್ತರೂ ಸಿಕ್ಕಾರು ಇಲ್ಲ, ನನ್ನ ಕೈಯಿಂದಲೇ 2 ಗುದ್ದಲಿ ಕೊಟ್ಟಿದ್ದೇನೆಯಾಗಿ ನನ ಹೇಳಿದರು. ಇದು ನಿಜವಾದರೆ ಪಾಪ, ಹತ್ಯಾರು ಇಲ್ಲದೆ ಕಂಟ್ರಾಕ್ಟುದಾರರು ತಾನೆ ಏನು ಮಾಡ್ಯಾರು? ಅವರು ಮೇಲೆ ಹೇಳಿದ ರೀತಿ ಲಾಭಗೋರನಾದರೆ ರೈತರ ಪಾಡೇನಾಗಬೇಕು? ಮರುಕಸಿಸಬೇಕಾಗಿದೆ. ಈ ಕಂಟ್ರಾಕ್ಟುದಾರರು ಹದ ಇರುವಾಗ ಉಗುರು ಇಲ್ಲ, ಉಗುರು ಇರುವಾಗ ಹದ ಇಲ್ಲವೆಂಬ ಗಾದೆಯನ್ನು ಅನುಸರಿಸಿ ಕೆಲಸ ಮಾಡುವವರಾಗಿದ್ದಾರೆಯಾಗಿ ಕಾಣುತ್ತದೆ.

ಆದ್ದರಿಂದ ಸರಕಾರಕ್ಕೆ ಕಳೆದ ವರ್ಷ ಈ ಬಾಬಿನಲ್ಲಿ ನಮ್ಮ ಗ್ರಾಮದ ಕಂದಾಯದಿಂದ ಕೆಲವು ರುಪಾಯಿ ನಷ್ಟವಾಗಿರಬಹುದು; ಈ ವರುಷ ನೂರು ಎಕ್ರೆಯಲು ಪಾಲು ಕಂದಾಯ ನಷ್ಟವಾಗುವದರಲ್ಲಿ ಏನೂ ಸಂದೇಹವಿಲ್ಲ. ಅಲ್ಲದೆ ಈ ನಾಲೆ ಕೆಲಸ ಹೀಗೆ ನಿಧಾನವಾಗುವದನ್ನು ರೈತರು ನೋಡಿ ಈ ವರ್ಷವೂ ನೀರು ಸರಾಸರಿ ಆಗುವದಿಲ್ಲವೆಂದು ಗದ್ದೆಯನ್ನು ಮಾಡಿರುವದಿಲ್ಲ. ಕೆಲವು ಹಳೇ ಗದ್ದೆ ಇರುವವರು ಮಾತ್ರ ಸ್ವಲ್ಪ ನಾಟಿ ಮಾಡಿರುತ್ತಾರೆ. ಮತ್ತು ಮಕ್ಕಿಗದ್ದೆಗೆ ನನು ಮಳೆಯ ನೀರಿನಿಂದ ಇದ್ದ ಬೀಜದ ಭತ್ತವನ್ನು ಊಟಕ್ಕಿಲ್ಲದಂತೆ ಹಾಕಿಕೊಂಡು ನಾಲೆಯ ಕೆಲಸ ಆಗುತ್ತದೋ ಇಲ್ಲವೋ ಎಂಬ ವ್ಯಸನದಲ್ಲಿದ್ದಾರೆ. ಆದ್ದರಿಂದ ಸರಕಾರಕ್ಕೆ ಕಳೆದ ವರ್ಷದ ಕಂದಾಯದಲ್ಲಿ ಸ್ವಲ್ಪ ನಷ್ಟ. ಅಂತೂ ಈ ವರ್ಷ ಕಾಲಕ್ಕೆ ಸರಿಯಾಗಿ ನಾಲೆ ರಿಪೇರಿ ಮಾಡಿಕೊಡದೆ ಹೋದರೆ ಈ ವರ್ಷವೂ ನಷ್ಟ. ಆಮೇಲೆಗೆ ನಾಲೆ ರಿಪೇರಿ ಮಾಡುವದೇನೋ ಖಂಡಿತ. ಹೀಗೆ ಸರಕಾರವು ಈ ಬಾಬಿನಲ್ಲಿ ನಷ್ಟಹೊಂದುವದಕ್ಕಿಂತ ಮೇಲ್ಕಂಡಂತೆ ಕಂಟ್ರಾಕ್ಟುದಾರರು ಹೇಳಿದ ರೀತಿ 1 ಆಳಿಗೆ 12 ಆಣೆ ಸಂಬಳ ಕೊಟ್ಟು ಮಾಡಿಸಿದರೂ ಸರಕಾರಕ್ಕೆ ನಷ್ಟವಿಲ್ಲವೆಂದೇ ಹೇಳಬೇಕಾಗಿದೆ. ಆದ್ದರಿಂದ ಘನಸರಕಾರದವರು ಮೇಲೆ ಬಿಸಿಲು ಎಂಬದನ್ನು ನೋಡದೆ ತುರ್ತು ನಾಲೆ ಕೆಲಸ ಪೂರೈಸಿಕೊಟ್ಟು ಗರೀಬ ರೈತರನ್ನು ಉದ್ಧಾರಮಾಡಬೇಕಾಗಿ ಬೇಡುತ್ತೇನೆ.

ಕೆ. ಪುಟ್ಟಯ್ಯ.

ಮೈಸೂರು ಮೋಟಾರ ಸರ್ವಿಸ್

ಅಯ್ಯಾ,

ಇದೇ ಜೂನ್ ತಾರೀಕು 19 ರ ತಮ್ಮ ಸಂಚಿಕೆಯಲ್ಲಿ ಮೋಡರ್ನ್ ಮೋಟಾರ್ ಸರ್ವಿಸ್ಸಿಗೆ ಉಂಟು ಮಾಡಿರುವ ಅನ್ಯಾಯವನ್ನು ಉದ್ಧರಿಸಿ ಬರೆದ ಲೇಖನವು ಯುಕ್ತಿಯುಕ್ತವಾದದ್ದು. ಆದರೆ ಮೈಲ್ ಮೋಟಾರ್ ಬಸ್ಸು ಮಡಿಕೇರಿಯಿಂದ 7½ ಗಂಟೆಗೆ ಹೊರಡಲು ಹುಕುಂ ಆಗಿದೆಯೆಂತ ತಿಳಿಯುತ್ತೇನೆ. 'ಇದು ಪೋಸ್ಟಾಫೀಸ್' ಅಧಿಕಾರಿಗಳ ಹುಕುಂ ಆಗಿದೆ.

ಈ ಹೊಸ ಸರ್ವಿಸಿನಿಂದ ಮೈಸೂರಿಗೆ ತಿರುಗುವ ಪ್ರಯಾಣಿಕರಿಗೆ ಮಾತ್ರ ಸೌಲಭ್ಯಗಳು ಉಂಟಾದುವಲ್ಲದೆ ಫ್ರೇಜರ್‌ಪೇಟೆಯ ವರೆಗೂ ಏನೂ ಅನುಕೂಲವಾಯಿತು. ಮಡಿಕೇರಿಯಿಂದ ಸೋಮವಾರಪೇಟೆಗೆ ನಡಿಯುವ ಎಕ್ಸ್‌ಪ್ರೆಸ್ ಸರ್ವಿಸಿನ ಬಸ್ಸುಗಳ ಸ್ಥಿತಿ ಹೇಗಿತ್ತು ಎಂಬ ಸಂಗತಿಯನ್ನು ತಮ್ಮ ಅನೇಕ ಸವಾದ ಪತ್ರಿಕೆಯ ಹಿಂದಿನ ಒಂದಾನೊಂದು ಸಂಚಿಕೆಯಲ್ಲಿ ಓರ್ವ ಬಾತ್ಮಿದಾರರು ಬರದಿದ್ದದ್ದು ವಾಚಕರ ಮತ್ತು ಅನುಭವಶಾಲಿಗಳ ಜ್ಞಾಪಕದಲ್ಲಿರಬಹುದು. ಇವರು ಮೈಲಿಗೆ 0—1—3 ಯಂತೆ ಇದ ದರವನ್ನು ಮಾಚ ರಾಮಾರವರ ಮೋಟಾರ್ ಫ್ರೇಜರ್‌ಪೇಟೆಯ ಮಾರ್ಗವಾಗಿ ಬರುತ್ತಲೂ ನಮೂದಾರ ತಿಳಿದ ಒಡನೆಯೇ ಒಂದಾಣೆಗೆ ಇಳಿಸಿದ್ದಲ್ಲದೆ ಸದರಿ ಬಸ್ಸು ಒಂದ ದಿವನವೇ ಚಾರ್ಜನ್ನು ಮೊದಲಿಗಿಂತ ಕಮ್ಮಿಮಾಡಿದರು. ಈ ಬಸ್ಸಿನಲ್ಲಿ ಫ್ರೇಜರ್‌ಪೇಟೆಯ ವರೆಗೆ ತಿರುಗುವ ಪ್ರಯಾಣಿಕರ ಸಂಖ್ಯೆಯು ಕಮ್ಮಿಯಾಗುತ್ತಾ ಬಂದದ್ದರಿಂದ ಈಚೆಗೆ ಒಂದು ಹೊಸ ಬಸ್ಸನ್ನೇ ತರಿಸಿದರು. ಈ ಸೌಕರ್ಯಗಳೆಲ್ಲವೂ ಉಂಟಾಗಲು ಯಾವ ಕಾರಣ? ಅಂಥವರ ವಿಷಯದಲ್ಲಿ ಅನುಕೂಲ ಕಲ್ಪಿಸಿ ನಡೆಯುವರ ಬಸ್ಸು ಖಾಯಮ್ಮಾಗಿ ನಡಿಯುವಂತೆ ತಕ್ಕ ಪ್ರೋತ್ಸಾಹ ಕೊಡುವುದು ಸರ್ಕಾರದವರ ಕರ್ತವ್ಯವಲ್ಲವೇ?

ಹೊರಡುವ ಸಮಯದ ಅನಾನುಕೂಲತೆಯಿಂದ ಈಗಾಗಲೆ ಆ ಬಸ್ಸಿನವರಿಗೆ ಉಂಟಾಗುತ್ತಿರುವ ನಷ್ಟಕಷ್ಟಗಳು ಯಾರಿಗೆ ತಾನೆ ತಿಳಿಯದು. ಒಂದೊಂದು ದಿವಸ ಪ್ರಯಾಣಿಕರಿಲ್ಲದೆ ಖಾಲಿಯಾಗಿಯೂ, ಕೆಲವು ಸಂದರ್ಭಗಳಲ್ಲಿ 2 3 ಜನರನ್ನು ಮಾತ್ರ ಕೂಡಿಸಿಕೊಂಡು ಹೋಗುತ್ತಿರುವುದು ಚೆನ್ನಾಗಿ ನೋಡುತ್ತಿದ್ದೇನೆ. ಮಳೆಗಾಲವಾದ ಈಗ ಯಾರಿಗೆ ತಾನೇ 6-30 ಘಂಟೆಗೆ ಹೊರಡಲು ಅನುಕೂಲಿಸುತ್ತೆ? ಮೊದಲು 5 ಗಂಟೆಗೆ ಹೊರಡುತ್ತಿರಲಿಲ್ಲವೇ ಎಂದು ಕೇಳಬಹುದು. ಆಗ ಬೇರೆ ಅನುಕೂಲಗಳು ಯಾವವೂ ಇಲ್ಲದ್ದರಿಂದ ವಿಧಿಯಿಲ್ಲದೆ ಯಾವ ಬೈಲುಗಾಡಿಯಲ್ಲಾದರೂ ಹೊರಡಬೇಕಿತ್ತು. ಈಗಲಾದರೋ ಒಂದು ಗಂಟೆ ನಿಧಾನವಾಗಿ ಹೊರಟರೆ ಬೇಕೊಂದು ಮೋಟಾರು ಸಿಗುತ್ತೆ. ಆದ್ದರಿಂದ ಚಳಿಯಲ್ಲಿ ಹೊರಟು ನು ಪಾಪರಾಮ್‌ರವರ ಬಸ್ಸಿನಲ್ಲಿ ಹೋಗಬೇಕೆಂಬ ಕುತೂಹಲವು ಯಾರಿಗೆ ತಾನೆ ಇದ್ದೀತು? ಈ ರೀತಿ ಯಾದಿ ನಷ್ಟವೆ ಆಗುತ್ತಿದ್ದರೆ ಒಂದಲ್ಲಿ ಕೆಲವು ದಿವಸಗಳಲ್ಲಿಯೇ ಹೊಸ ಸರ್ವಿಸನ್ನು ನಿಲ್ಲಿಸುವುದು ಆಲೋಚನೆಯನ್ನು ಮಾಡಿದರೂ ಮಾಡಬಹುದು. ಅನಂತರ ಮಯಿಲ್ ಸರ್ವಿಸಿನವರು ಮತ್ತು ಎಕ್ಸ್‌ಪ್ರೆಸ್ ಸರ್ವಿಸಿನವರು ನಹ ಮೊದಲಿನ ಚಾರ್ಜಿಗೆ ಏರಿಸಬಹುದು, ಅಥವಾ ಹೆಚ್ಚಿಸಲೂಬಹುದು.

ನಷ್ಟ ಸಂಭವಿಸಿ ಒಂದು ವೇಳೆ ಹೊಸ ಸರ್ವಿಸು ನಿಂತು ಹೋದರೆ ಮಡಿಕೇರಿಯವರಿಗೆ ಅಷ್ಟೇನು ತೊಂದರೆಯಾಗಲಾರದು. ಅಲ್ಲಿ ಐಶ್ವರ್ಯದಿಂದ ತುಂಬಿತುಳುಕುತ್ತಿರುವ ಕಾಫೀಪ್ಲಾಂಟರುಗಳು, ದೊಡ್ಡ ಸಂಬಳದ ಅಧಿಕಾರಿಗಳೂ, ಪೆನ್ಷನ್‌ದಾರರೂ ಇರುವುದರಿಂದ ಎಷ್ಟು ಚಾರ್ಜನ್ನಾದರೂ ಕೊಡಲಿಕ್ಕೆ ಸಮರ್ಥರು. ಆದರೆ ಕುಂಟಿಕೊಪ್ಪ, ಫ್ರೇಜರ್‌ಪೇಟೆ, ಸೋಮವಾರಪೇಟೆ ಪ್ರಾಂತ್ಯದವರಿಗೆ ಮೈಸೂರಿಗೆ ಹೋಗಬೇಕಾದರೆ ಬೇರೆ ಯಾವ ಮೋಟಾರ್ ಸರ್ವಿಸಿನ ಅನುಕೂಲತೆಯೂ ಇರುವುದಿಲ್ಲ. ಅಲ್ಲದೆ ಹೆಚ್ಚು ಹಣ ಕೊಡುವ ಅನುಕೂಲತೆಯೂ ಕಡಿಮೆ.

ಇದರಿಂದ ಸರ್ಕಾರಕ್ಕೆ ಲೈಸನ್ಸ್ ಫೀಜಲ್ಲದೆ ಫ್ರೇಜರ್‌ಪೇಟೆಯ ಟೋಲ್‌ಗೇಟ್ ಮುಖಾಂತರ ಈ ಸಾರಿ ಸುಮಾರು 700—0—0 ರೂಪಾಯಿ ಜಾಸ್ತಿಯಾಗಿ ಉತ್ಪತ್ತಿ ಬಂದಿರುತ್ತೆ. ಪ್ರತಿ ಸಾರಿ ಹರಾಜಿನಲ್ಲಿಯೂ ಕಮ್ಮಿ ಮೊಬಲಗಿಗೆ ಹೋಗುತ್ತಿದ್ದ ಈ ಟೋಲ್‌ಗೇಟು ಬಸ್ ಬರುವದೆಂಬ ನಿರೀಕ್ಷಣೆಯಿಂದ ಹಿಂದಲ ವರ್ಷ ನಷ್ಟಪಟ್ಟಿದ್ದ ಕಂಟ್ರಾಕ್ಟರೆ ಪುನಹ ಮೇಲ್ಕಂಡ ಮೊಬಲಗನ್ನು ಹೆಚ್ಚಿಸಿ ತೆಗೆದುಕೊಂಡಿದ್ದು. ಇದು ಖಾಯಮ್ಮಾಗಿ ನಡೆದಲ್ಲಿ ಮುಂದಲ ಹರಾಜಿನಲ್ಲಿ ಸರ್ಕಾರಕ್ಕೆ ಇನ್ನೂ ಹೆಚ್ಚು ಉತ್ಪತ್ತಿ ಬರುವುದೆಂಬುದರಲ್ಲಿ ಸಂಶಯವಿಲ್ಲ.

ಮೇಲ್ಕಂಡ ತೊಂದರೆಗಳನ್ನೂ ಇನ್ನಾದರೂ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಸಾಹೇಬರವರು ಚಿತ್ತಕ್ಕೆ ತೆಗೆದುಕೊಂಡು ತಮ್ಮ ಉದಾರವಾದ ಮನಸ್ಸನ್ನು ಇತ್ತಕಡೆಗೆ ನೀಡಿ ಪ್ರಜೆಗಳ ಸೌಕರ್ಯವೇ ತಮ್ಮ ಅಭ್ಯುದಯವೆಂದು ಗ್ರಹಿಸಿ ಮು ಪಾಪರಾಮ್‌ರವರ ಮೋಟಾರು ಮಡಿಕೇರಿಯಿಂದ 7—15 ಘಂಟೆಗೆ ಹೊರಡುವಂತೆ ಅಪ್ಪಣೆಯನ್ನು ದೊರಕಿಸುವುದರ ಮೂಲಕ ನ್ಯಾಯಶಾಲಿಗಳೂ, ನಿಷ್ಪಕ್ಷಪಾತಿಗಳೂ ಎಂಬ ಬಿರುದನ್ನು ಹೊಂದಬೇಕೆಂದು ಸೂಚಿಸುತ್ತೇನೆ.

ನ್ಯಾಯವಾದಿ.

೭೦—೮೦ ವರ್ಷಗಳಲ್ಲಿ ಕೊಡಗಿನ ಸ್ಥಿತಿಯ ಬದಲಾವಣೆ.

ಉದಾಹರಣೆಗಾಗಿ ನೂರು ವರ್ಷದ ಮೊದಲಿನ ಒಬ್ಬ ಕೊಡಗನನ್ನು ವಿಮರ್ಶೆಗೆ ತೆಗೆದುಕೊಂಡು ನೋಡುವ. ಆ ಮನುಷ್ಯನು ಸರಾಸರಿ ಎತ್ತರದಲ್ಲಿ ತಪ್ಪದೆ ೬ಅಡಿ ಇರುತ್ತಿದ್ದನು. ಅವನಂತಹ ಗಟ್ಟಿಮುಟ್ಟು ಮನುಷ್ಯನು ಈಗ ಸಿಕ್ಕಲಿಕ್ಕಿಲ್ಲ. ಅವನಂತಹ ಧೀರ ಸಿಪಾಯಿಯು ನಮಗೆ ಇಂಡಿಯಾದಲ್ಲೆಲ್ಲಾ ಈಗ ಹುಡುಕಿದರೂ ಮೂದರಿಗೆ ಕೆಲವರೇ ಸಿಕ್ಕುತ್ತಿದ್ದರೇನೋ. ಹೆಚ್ಚೇನು? ಅವನಂತಹ ಸಾಹಸಿಯೂ, ಚಲ್ವನೂ, ಧೀರನೂ, ಸ್ವಾಭಾವಿಕ ಬುದ್ಧಿವಂತನೂ, ಗೌರವಸ್ಥನೂ ಅತಿಥಿ ಬಾಂಧವನೂ ನಮಗೆ ಈಗ ಮೂದರಿಗೆ ಬೇಕಂತ ಹುಡುಕಿದರೆ ಇಡೀ ದೇಶದಲ್ಲಾಗಿ ಎಷ್ಟು ಜನ ಸಿಕ್ಕಿಯಾರು? ಅವನು ತೋರಿಸಿದ ಧೀರತನವನ್ನಂತೂ ಹೇಳಲೇ ಬೇಕಾಗಿಲ್ಲ, ಅವನು ತನ್ನ ಸ್ವಂತ ಕೈಯಿಂದ ಕಟ್ಟಿದ ಮನೆಯನ್ನು ನೋಡಿ ಮನೆಯೊಳಕ್ಕೆ ಹೋಗಿ ಉಪ್ಪು ಸಾಮಾನುಗಳನ್ನು ಕರುತ್ತಿದ್ದ ಸಾಹಸವನ್ನು ತಾಳ್ಮೆಯನ್ನು ಯೋಚಿಸಿ. ತಪಸ್ವಲರಾದ ಮಳೆಗಾಲಗಳಲ್ಲಿ ಕಷ್ಟಪಟ್ಟು ಬೆಳೆಸಿದ ಭತ್ತವನ್ನು ನನು ಮನಿದಾರರೆ ಬಾಳಗುಂಡಿಯಲ್ಲಿ ಸುರಿಯುತ್ತಿದ್ದರೂ ಕೂಡ ಅದುಹೇಗೆ ಅವನು ತನ್ನ ಬರುವ ಮುಂದುಗಾರ ಸಂಸಾರಕ್ಕ ಅಷ್ಟು ಹಣ ಹೂತಿಟ್ಟನು! ಚಿತ್ರವ್ಯಯವಲ್ಲವೇ?

ಅದೂ ಹೋಗಲಿ. ಧೂರ್ತನಾಗಿದ್ದ ಆ ಎಂಬನೆಯ ಮೆಸ್ರಿಯ ಕಾಲದಲ್ಲಿ ನಹ ಸ್ವತಂತ್ರ ಪ್ರಿಯರಾಗಿದ್ದ ಇಂಗ್ಲೀಷರು ತಮ್ಮ ಸ್ವತಂತ್ರತೆಯನ್ನು ರಕ್ಷಿಸಿಕೊಳ್ಳಲು ಅವರಿಂದ ಪ್ರಯತ್ನಿಸಲು ಕೂಡಲಿಲ್ಲ. ಆದರೆ ನಮ್ಮ ಅಂತಹ ಕೊಡಗು ರಾಜರ ಕಾಲದಲ್ಲಿ ಇವರು ಅದೇ ಸಾಧನೆಯನ್ನು ಮಾಡಿದ್ದು ನಮ್ಮ ಜ್ಞಾಪಕದಲ್ಲಿಲ್ಲವೇನು? ಆದರೆ ದೈವವಿಲಾಸವು ಬೇರ ಇದ್ದಿತೆಂದು ಹೇಳುವ.

ಈಗಿನವರು ಹುಟ್ಟಿದಂದಿನಿಂದಲೇ ಪುಷ್ಟಿದಾಯಕವಾದ ಹಾಲು ಮೊಸರನ್ನು ಉಪಯೋಗಿಸುವ ಬದಲು ಕಾಫಿ, ಚಾವನ್ನು ಉಪಯೋಗಿಸುತ್ತಾರೆ. ತನಗೆ ಉಣ್ಣಲಿಕ್ಕಿಲ್ಲದಿದ್ದರೂ ಸರಿ, ಪೋಷಾಕಿನಿಂದ ಬಟ್ಟೆಗಳನ್ನು ಧರಿಸುವನು. ಅಪೇಯಪಾನ, ಅಭಕ್ಷ್ಯ ಭೋಜನಗಳಿಂದ ನಿರ್ಜೀವನಾಗಿರೀಕನ ದೇಹದಾರ್ಢ್ಯವು ಕಮ್ಮಿಯಾಗಿರುವುದಲ್ಲದೆ ಧೈರ್ಯವೂ ಕಂದಿ ಕುಂದಿರುವುದು. ಮನೆಯಲ್ಲಿ ಹೇಗಿದ್ದರೂ ಸರಿಯೇ, ತಾನು ಜನನ್ನಾಗಿ ಬಾಹ್ಯದಲ್ಲಿ ತೋರ್ಪಡಿಸಿಕೊಳ್ಳಬೇಕೆಂಬ ಇಚ್ಛೆಯು ಬಲವಾದುದರಿಂದ ಡಾಂಭಿಕನಾಗಿರುವನು. ತಾನು ಭೂಮಿಯಲ್ಲಿ ಹುಟ್ಟಿದುದಕ್ಕೆ ಸಾರ್ಥಕವೇನು, ದೇಶಮಾತೆಯ ಏಳ್ಗೆಗೆ ಕೆಲಸಮಾಡಲು ಸೊಂಟಕಟ್ಟುವನು ಎಂಬ ಆ ಉಚ್ಚ ಧ್ಯೇಯದಿಂದ ಹೃದಯವು ಸ್ಫೂರ್ತಿಗೊಳ್ಳುವ ಬದಲು, ಈಗ ಆ ಡಾಂಭಿಕತನದಲ್ಲಿ ಹೇಗೂ ದಿನ ಕಳೆದರ ಸಾಕೆಂಬ ಆ ಬಡತೆಯಲಿರುವನಿರುವುದು. ಅದೇನು ಸಿಪಾಯಿ ಪದಕ್ಕೆ ಸೇರುವನೆಂದರೆ, ಅಧಿಕಾರಿಗಳು ನಿಮಗೆ ಭೂಮಿ ಕೊಡಿಸಿ ಕೊಡುತ್ತೇನೆ. ನಿಮ್ಮ ಮಕ್ಕಳಿಗೆ ಶಾಲೆಯಲ್ಲಿ ಓದಲು ವೇತನಗಳನ್ನು ದೊರಕಿಸಿಕೊಡುತ್ತೇನೆ. ಫೀಸು ಮಾಫಿ ಮಾಡಿಸುತ್ತೇನೆ ಎಂಬ ಆಶೆಗಳನ್ನು ಕೊಟ್ಟದ್ದರಿಂದಲ್ಲದೆ, ದೊಡ್ಡವರೂ ಸೇರುತ್ತಾರೆ, ಸೇರುವುದರಿಂದ ಅದೆಷ್ಟು ಒಳ್ಳೆತಿದೆ ಎಂತ ಹೇಳಿದ್ದರಿಂದ ಸೇರಿದ್ದಾಗಿದೆ ಎಂತ ಜವಾಬು ಸಿಕ್ಕುತ್ತದೆ. ಕ್ಷತ್ರಿಯ ಸ್ವಭಾವದಿಂದ ಸೇರಿದವರು ಎಷ್ಟಿರಬಹುದು?

ಲೋವರ್ ಸೆಕೆಂಡರಿ ತರಗತಿವರೆಗೆ ಓದಿದರೆ ಸಾಕು! ಗವರ್ನಮೆಂಟು ನೌಕರಿ ಎಂಬ ವಿಚಾರ ಮನೆಯಲ್ಲಿ ಓದು ಬರಹ ತಿಳಿಯದ ನಾಡವನಂತೂ, ತನ್ನ ಪೂರ್ವಿಕರ ಯೋಗ್ಯ ಕಸುಬುಗಳು ಅವೆಲ್ಲವನ್ನು ಮರೆತಿರುವುದೂ ಇರಲಿ, ಭೂಮಿ ವ್ಯವಸಾಯ ಮಾಡಲಿಕ್ಕ ಗೊತ್ತಿಲ್ಲ. ಗದ್ದೆ ನಾಟಿಯಿದಿನ ಉಳಲಿಕ್ಕೆ ಎತ್ತುಕಟ್ಟುವಾಗ ಹಾ! ಗದ್ದೆ ತುಂಬಾ ನೀರಿದೆ ಎಂದು ನೀರು ಬಿಡುವವರೂ ಇದ್ದಾರೆ. ಎಂತಹ ಗೌರವಶಾಲಿಗ

ವು? ನಮ್ಮ ಭೂಮಿ ಕಾಣಿಗಳನ್ನು ಸರಿಯಾಗಿ ಮಡಗಿಕೊಳ್ಳದೆ, ವರ್ಷದ ಏಪ್ರಿಲ್ ತಿಂಗಳಿಂದಲೇ ಊಟಕ್ಕಿರುವುದಿಲ್ಲ ಹಲವರಿಗೆ! ಯಾರೇ ಆಗಲಿ, ಪಟ್ಟಣಗಳಲ್ಲಿ ಪೋಷಾಕಿನಿಂದ ತಿರುಗುವವರನ್ನು ಕಂಡರೆ ಸಾಕು "ಸಲಾಂ ದೇವರು!" ಎಂಬುದು ಆ ಕುಳುವಾಡಿ ಸಲಾಂ! ಯಾರ ಹಂಗೂ ಇಲ್ಲದೆ, ಜೀವಿಸುವ ನಾಡವನು ಮಡಗಿಕೊಂಡಿರುವ ಸ್ವಾಭಿಮಾನವು! ಅತಿಥಿ ಸತ್ಕಾರದಲ್ಲಿ ಮಾತ್ರ ನಾಡವರು ಪೂರ್ವಿಕರ ನಡವಳಿಕೆಗಳನ್ನು ಮರೆಯದಿರುವುದು ಶ್ಲಾಘನೀಯ! ಆದರೆ ನಮ್ಮ ಪಟ್ಟಣಗಳಲ್ಲಿ ವಾಸಿಸುವ ಕೆಲವರು ಆ ವಿಷಯದಲ್ಲಿ! ಅವರ ಮನೆಗಳಲ್ಲಿ 10ವರ್ಷಕ್ಕೆ ಒಂದು ಸಲ ಒಬ್ಬ ಅಪರಿಚಿತನು ಸತ್ಕಾರಹೊಂದುವುದು ದುರ್ಲಭ! ದಾರಿಯಲ್ಲಿ ಹೋಗುವವನೊಬ್ಬನನ್ನಾದರೂ ದಿನಕ್ಕೊಂದು ಸಲವಾದರೂ ಕಂಡು ಸತ್ಕಾರಮಾಡಿ ತಾನು ಭೋಜನಮಾಡಬೇಕೆಂಬ ಆ ಯೋಗ್ಯ ಪೂರ್ವಿಕರ ನಿಯಮದಲ್ಲಿ ನಡೆಯುತ್ತಿಲ್ಲವೆಂದು ನನ್ನ ದೂರಿಕೆಯಲ್ಲ! ಅಂಥವರ ಮನೆಯಲ್ಲಿ ಒಬ್ಬ ಅಪರಿಚಿತನಿಗೆ ಒಂದು ದಿನದ ಆಶ್ರಯಸಿಕ್ಕುವುದು ಇರಲಿ, ಭಿಕ್ಷುಕನಿಗೆ ಒಂದು ಹಿಡಿ ಅಕ್ಕಿ ಸಿಕ್ಕುವುದು ಕಷ್ಟ. "ಯು ಲೇಜಿ ಲೂನ್, ಗೋ ಟು ವರ್ಕ್" ಎಂಬ ಸತ್ಕಾರ!

ಹರಿಪ್ರಸಾದ.

ಕಷ್ಟದಲ್ಲಿ ಸಹಾಯ

ಸ್ವಾಮಿ,

ಇದೇ ಜುಲೈ ತಾರೀಕು 2ರಲ್ಲಿ ಸಿರಂಗಾಲ ಸ್ಟೋರ್ ನೌಕರರಾಗಿದ್ದ ಸ್ವಾಮಿಯಕ್ಕಳ ಐಯ್ಯಪ್ಪನೆಂಬವರು ಸಡನ್ನಾಗಿ ಕಾಯಿಲೆಯಾಗಿ ಗಾಡಿಮಾಡಿಕೊಂಡು ಒರುವಾಗ್ಯೆ ಬಾಳುಗೋಡು ಸರಕಾರಿ ಬಂಗ್ಲೆ ಹತ್ತಿರ ಒರುವಾಗ್ಯೆ ಗಾಡಿಯಲ್ಲಿ ಮೃತಪಟ್ಟರು. ನದ್ರಿ ಊರಿನಲ್ಲಿ ಸಬ್ ಓವರ್‌ಸಿಯರ್ ಆಗಿರುವ ಮಾ॥ ರಾ॥ ಪುಲಿಯಂಡ ಮುತ್ತಪ್ಪನೆಂಬವರು ಆ ದಿನ ರಾತ್ರಿ ಎಲ್ಲಾ ಶವವನ್ನು ಕಾದಿದ್ದು ಮಾರನೇದಿವಸ ಬೆಳಿಗ್ಗೆ ಅವರ ಸ್ವಂತ ಖರ್ಚಿನಿಂದ ತಂತಿವರ್ತಮಾನಕೊಟ್ಟು ಸ್ಪೆಶಲ್ ಕಾರ್ ತರಿಸಿ ಶವವನ್ನು ಅವರ ಮನೆಗೆ ತಲಪಿಸಿದರು. ಇದರ ವಿಷಯವಾಗಿ ಅವರು ತಗೆದುಕೊಂಡ ತೊಂದರೆಯನ್ನು ಅಸ್ಪಷ್ಟಂ ಹೇಳಲಾಗುವುದಿಲ್ಲ. ಅವರ ಉದಾರಭಾವವನ್ನು ಎಷ್ಟಂ ಶ್ಲಾಘಿಸಿದಾಗ್ಯೂ ಸಾಲದು. ಇಂಥಾ ಉದಾರಭಾವವನ್ನು ತೋರಿಸಿದಕ್ಕೆ ಭಗವಂತನು ಅವರಿಗೆ ದೀರ್ಘಾಯುಷ್ಯವನ್ನು ಕೊಡಲಿ. ಅವರು ಮಾತ್ರ ಈ ತೊಂದರೆ ತೆಗೆಯದಿದ್ದರೆ ಹೆಣವು ಏನಾಗುತ್ತಿತ್ತು ಎಂದು ಗೊತ್ತಾಗುವುದಿಲ್ಲ. ಹೀಗೆಯೇ ಮಹಾನುಭಾವರೆಲ್ಲರೂ ಕಷ್ಟಕಾಲದಲ್ಲಿ ಪರೋಪಕಾರ ಮಾಡಬೇಕಾಗಿ ನನ್ನ ಅಭಿವಂದನ.

"ಗ್ರಾಮವಾಸಿ"

ಕೊಡಗಿನ ಹೊಸ ಡಾಕ್ಟರರೊಬ್ಬರು.

ಸ್ವಾಮಿ,

ನಡಿಕೇರಿಯಂಡ ಡಾಕ್ಟರ್ ಅಪ್ಪಯ್ಯ, ಯಮ್. ಆರ್. ಸಿ. ಯಸ್. ರವರು ಇದೇ ಜುಲೈ ತಾರೀಕು 9ನೇ ಗುರುವಾರ ಸಾಯಂಕಾಲ 4½ ಗಂಟೆಗೆ ಇಂಗ್ಲಂಡಿನ ಮೈಲ್ ಸ್ಟೀಮರಿನಲ್ಲಿ ಬೊಂಬಾಯಿಗೆ ಬಂದು ತಲಪಿದರು. ಇವರು ಬರುವ ವರ್ತಮಾನವನ್ನು ಮೊದಲೇ ತಿಳಿಸಿದ್ದರಿಂದ ನಮ್ಮ ಬೊಂಬಾಯಿಯ ಕೊಡಗರ ಪೈಕಿ ಕೆಲವರು ಡಾಕ್ಕಿಗೆ ಹೋಗಿ ಅವರನ್ನು ಬಹಳ ಬಹುಮಾನದಿಂದ ಎದುರುಗೊಂಡರು. ಅವರು ನಮ್ಮ ಸ್ವಂತ ದೇಶವನ್ನೂ ಜನರನ್ನೂ ಬಿಟ್ಟು ಸುಮಾರು ಐದುವರ್ಷಗಳವರೆಗೆ ವಿಲಾಯತಿಯಲ್ಲಿಯೇ ಇದ್ದ ಕಾರಣ, ತಮ್ಮ ಸ್ವಂತ ದೇಶಕ್ಕೆ ಬಂದು ತಲಪಿ ತಮ್ಮ ಜನರನ್ನು ಕಂಡಾಗ ಅವರಿಗೆ ಅತ್ಯಂತ ಸಂತೋಷವಾಯಿತು. ನಮಗೆಲ್ಲರಿಗೂ ಮತ್ತಷ್ಟು ಸಂತೋಷವಾಯಿತು. ಲೇಟ್ ಡಾಕ್ಟರ್ ನಂಜಪ್ಪನವರು ಹೇಗೆ ನಮ್ಮ ಸ್ವಜನರಿಗೆ ಅತಿಶ್ರಮೆಯನ್ನು ತಾಳಿ ಸಹಾಯ ಮಾಡುತ್ತಿದ್ದರೋ ಹಾಗೆಯೇ ಅದಕ್ಕಿಂತ ಮುಂದರಿಸಿ ಎಷ್ಟೆಷ್ಟು ನಮ್ಮ ಜನರ ಪ್ರೇಮಪಾತ್ರಕ್ಕೆ ಒಳಗಾಗುವವರಾಗಿಯೇ ದೇವರು ಇವರಿಗೆ ಸಹಾಯಮಾಡಿದರೆಂಬುದಾಗಿ ನಂಬಬೇಕಾಗಿದೆ.

ಇದೇ ತಾರೀಕು 12ನೇ ಆದಿತ್ಯವಾರ ಅವರಿಗೆ ಬೊಂಬಾಯಿಯ "ಕೂರ್ಗ್ ಎಸೋಸಿಯೇಶನ್" ನಿಂದ ಔತಣ ಸತ್ಕಾರವಾಯಿತು. ಇದು ಗಿರ್‌ಗಾಮಿನಲ್ಲಿ ಮಾ॥ ರಾ॥ ಶ್ರೀ॥ ಯಂ. ಯಸ್ ಮುತ್ತಣ್ಣ ಬಿ. ಎ ಎಲ್ ಎಲ್ ಬಿ. ಯವರ ಕ್ವಾರ್ಟರ್ಸಿನಲ್ಲಿ ನಡೆಯಿತು. ಬೊಂಬಾಯಿಯ ಕೊಡಗರ ಪೈಕಿ ಸುಮಾರು ಮುಕ್ಕಾಲುಪಾಲು ಜನರು ಸೇರಿದ್ದರು. ಸುಮಾರು 3½ ಗಂಟೆಗೆ ಸಭೆಯಾಗಿ ಎಲ್ಲರೂ ಸೇರಿದರು. ಮಾ॥ ರಾ॥ ಶ್ರೀ॥ ಯಂ ಯಸ್. ಮುತ್ತಣ್ಣ ಬಿ. ಎ. ಎಲ್ ಎಲ್ ಬಿ ಯವರು ಡಾಕ್ಟರ್ ಅಪ್ಪಯ್ಯನವರ ವಿಷಯ ಭಾಷಣಮಾಡಿದರು. ಮೇಲೆ ಡಾಕ್ಟರ್ ಅಪ್ಪಯ್ಯನವರು ಅವರ ಪಾಶ್ಚಿಮಾತ್ಯ ವಿದ್ಯಾಭ್ಯಾಸದ ವಿಷಯವಾಗಿಯೂ, ಮತ್ತೂ ಅಲ್ಲಿಯ ನಡತೆ ರೀತಿಗಳ ವಿಷಯವಾಗಿಯೂ ಸಾಂಗವಾಗಿ ಭಾಷಣಮಾಡಿದರು. ಅವರು ಇಂಡಿಯಕ್ಕೆ ಬಂದು ನಮ್ಮ ಜನರಿಗೆ ಸಹಾಯಮಾಡಲಿಚ್ಛಿಸಿದ ಅಭಿಪ್ರಾಯವನ್ನು ಸಹ ಹೇಳಿದರು. ಮತ್ತು, ಅವರಿಗೆ ನಮ್ಮ ಸ್ವಂತ ದೇಶವೆಂದರೆ ಕೊಡಗಿನಲ್ಲಿಯೇ ಕೆಲಸವನ್ನು ತೆಗೆದುಕೊಂಡು ನಮ್ಮ ಸ್ವಜನರಿಗೆ ಸಹಾಯಮಾಡಬೇಕೆಂದಿದ್ದ ಕುತೂಹಲವನ್ನೂ, ಅದು ಹೇಗೆ ಸಾಧ್ಯವಾಗುವುದಿಲ್ಲವೆಂಬುದನ್ನೂ ವಿವರವಾಗಿ ಹೇಳಿದರು.

ಇದಾದ ಕೂಡಲೇ ಅವರಿಗೆ ಯೋಗ್ಯವಾದಂಥ ಟೀಪಾರ್ಟಿಯಾಯಿತು. ಟೀ ಆದನಂತರ ಕೆಲವು ಸಮಯದವರೆಗೆ ಸಂಗೀತವೊದಲಾದ ವಿನೋದವನ್ನು ಮಾಡುತ್ತಿದ್ದು ಆಮೇಲೆ ಎಲ್ಲರೂ ಅವರವರ ಮನೆಗಳಿಗೆ ತೆರಳಿದರು.

ಡಾಕ್ಟರ್ ಅಪ್ಪಯ್ಯನವರ ಸುಮಾರು 5ವರ್ಷಗಳವರೆಗೆ ವಿಲಾಯಿತಿಯಲ್ಲಿದ್ದರೂ, ತನ್ನ ಮಾತೃಭಾಷೆಯನ್ನೂ, ನಡತೆ ನೀತಿಗಳನ್ನು ಮರೆಯದೆ ಇರುವುದೂ ಡಂಭವೆಂಬ ಶಬ್ದವೇ ಅವರ ಡಿಕ್ಷ್ನರಿಯಲ್ಲಿ ಇಲ್ಲದೆ ಇರುವುದೂ ನೋಡುವಾಗ ಅವರು ತಾನು ಅಭ್ಯಾಸಮಾಡಿದ ವಿದ್ಯಕ್ಕೆ ಯೋಗ್ಯರೆಂದೂ ಅವರ ವಿದ್ಯದಲ್ಲಿ ಪಾಂಡಿತ್ಯವನ್ನು ಪಡೆದು ಜನರ ಪ್ರೇಮಕ್ಕೆ ಒಳಗಾಗುತ್ತಾರೆಂಬುದಕ್ಕೆ ಸಂಶಯವಿಲ್ಲ. ಇವರಿಗೆ ದೇವರು ದೀರ್ಘಾಯುಷ್ಯವನ್ನು ಕೊಡಲಿ ಎಂದು ಎಲ್ಲರೂ ಪ್ರಾರ್ಥಿಸುತ್ತೇವೆ.

ಐ ಸಿ. ಸೋಮಯ್ಯ

ಅನಾಚಾರ

ಕಳೆದ ಜೂನ್ ತಾರೀಕು 5ರ ಗೌಡುಗಳ ಸಭೆಯ ರಿಪೋರ್ಟಿಗೆ ಪ್ರತ್ಯುತ್ತರವನ್ನು ಮ॥ ಕೆ ಪಿ. ಚಿಣ್ಣಪ್ಪನವರು ಕೊಟ್ಟದ್ದು ನೋಡುವಾಗ ಸಭ್ಯತ್ವವಿಲ್ಲವೆಂದು ತಿಳಿದ ಯಾವ ವಿಚಾರವಂತರಿಗೂ ತೋರದಿರಲಾರದು. ಮ॥ ಚಿಣ್ಣಪ್ಪನವರು ಗೌಡುಗಳೇನು ವಿದ್ಯಾಭಿವೃದ್ಧಿಯಲ್ಲಿ ಹಿಂದೆ ಬಿದ್ದಿರುವುದು ನಿಜವೆಂದು ಒಪ್ಪಿಕೊಳ್ಳುವಂತೆ ಕೊಡಗರು ಬ್ರಾಹ್ಮಣರು ಎಷ್ಟರ ಮಟ್ಟಿಗೆ ಹಿಂದೆ ಬಿದ್ದಿರುವರೆಂಬ ಸಂಗತಿಯನ್ನು ಅವರ ಕಡೆಗೆ ತಿರುಗಿ ನೋಡಿದರೂ ಮತಿಗೆ ಬಹಳ ಆಶ್ಚರ್ಯ ಕಾಣುತ್ತದೆ. ಇವರ ಬಾತ್ಮಿಯಿಂದ ಕೊಡಗರು ಬ್ರಾಹ್ಮಣರು ಬಹಳ ಮುಂದುವರಿಕೊಂಡಿದ್ದಾರೆಂಬುದು. ಅದುವಾಗಿರುವದರಿಂದ ಇಂಥಾ ಬಾತ್ಮಿಯು ದೇಶದ ಮೇಲ್ವರ್ಗದವರಿಗೆ ಕಷ್ಟಬರಾಯ ಹುಟ್ಟಿಸಿದ ಹಾಗಾಗುವದಿಲ್ಲವೆ? ಈಗೀಗ ಪ್ರತಿ ಒಂದು ಕೋರ್ಸುಗಳಾಗಿ ನಾವು ಕಾಣುವಂತೆ ವೇತನಗಳನ್ನು ಒದಗಿಸಿ ಯುವಕರನ್ನು ತರಬೇತುಮಾಡುವದು ನೋಡುತ್ತೇವೆ. ವಿದ್ಯಾಭಿವೃದ್ಧಿಯಲ್ಲಿ ಮುಂದಕ್ಕೆ ಒಂದು ಇತರರೊಡನೆ ಹೋರಾಡುವದೇ ಬಲ ಮತ್ತು ಅನುಕೂಲವಾದ ಮ॥ ಚಿಣ್ಣಪ್ಪನವರ ಬಾತ್ಮಿಗೆ ವ್ಯಸನಿಸುತ್ತೇನೆ. ಹೀಗೆ ಅಭಿಪ್ರಾಯಪಡುವದಕ್ಕಿಂತ ಅನ್ಯೋನ್ಯ ಪ್ರೀತಿಯಿಂದ ಸಹಕರಿಸುವ ಅಭ್ಯಾಸವನ್ನು ಕಲಿಯುವದೆ ಸ್ವರಾಜ್ಯದ ಪ್ರಥಮದ ಅಭ್ಯಾಸವೆಂದಿದ್ದರೆ ಸ್ವಾರ್ಥತ್ಯಾಗವಾಗುತ್ತಿರಲಿಲ್ಲವೆ? ದೇಶೀಯ ದೊಡ್ಡ ಉದ್ಯೋಗಸ್ಥರ ವರ್ಗಾವರ್ಗಿ ವಿಷಯ ಮುದ್ದಪ್ಪನವರ ಒಂದಿದ್ದ ಪ್ರಾರ್ಥನೆಯು ತಾತ್ಪರ್ಯವೆಂದು, ಚಿಣ್ಣಪ್ಪನವರು ಒಪ್ಪುತ್ತಾ ಅದೇ ಪ್ರಕಾರದಲ್ಲು ಕೊಡಗಿನಲ್ಲಿ ದೊಡ್ಡ ಉದ್ಯೋಗಸ್ಥರೇ ಕಡಮೆಯಾದ್ದರಿಂದ ಉದ್ಯೋಗಸ್ಥರಿಗೆ ದೊಡ್ಡ ಉದ್ಯೋಗಕ್ಕೆ ಹೋಗಲು ಅನುಕೂಲವಿಲ್ಲವೆಂದೂ, ಮಾರನೆ ಪ್ರಾಂತದಲ್ಲಿ ದೊಡ್ಡ ಉದ್ಯೋಗಗಳನ್ನು ನಮ್ಮ ದೇಶೀಯರಿಗೆ ಕೊಡಕೂಡದೆಂಬ ರಾಗ ನಾನು ವ್ಯಸನಪಡುತ್ತೇನೆಂದು ಹೇಳುವ ಇವರ ಮಾತು ಒಂದಕ್ಕೊಂದು ವಿರೋಧ ಒರ ಪದನ್ನು ವಾಚಕರೇ ಊಹಿಸಿರಿ. ಉದ್ಯೋಗಸ್ಥರು ಎಷ್ಟೇ ಸತ್ಯವಂತರಾದರೂ ಮನುಷ್ಯ ಸ್ವಭಾವ ಮೀರಿಯಿಂದ ಮೇಲೆ ದೂರದಿಂದ ಬರತಕ್ಕ ಉದ್ಯೋಗಸ್ಥನು ಮನುಷ್ಯ ಸ್ವಭಾವದವನಲ್ಲವೆ? ಏನಾದರೂ ಅವನಲ್ಲಿ ಮನುಷ್ಯ ಸ್ವಭಾವದ ಗುಣಗಳು ಬಿಟ್ಟಿರುವುದೇ? ಮೊದಲು ತಮ್ಮನ್ನು ಆ ಮೇಲೆ ತಮ್ಮ ಸಮ್ಮಂಧಿಕರನ್ನು ನೋಡಿಕೊಳ್ಳುವ ಧರ್ಮವು ಜಗತ್ತಿನಲ್ಲಿಯೇ ಇದ್ದ ಸ್ವಭಾವಗುಣವಾಗಿರುವಾಗ ಈ ವರ್ಗಾವರ್ಗಿಯಲ್ಲಿ ಯಾವ ಪ್ರಯೋಜನವೂ ಇಲ್ಲ. ಅಥವಾ ಒಂದು ವೇಳೆ ವರ್ಗಾವರ್ಗಿಯಲ್ಲಿ ಪರದೇಶಿಯರು ಬಂದರೆ ಲಂಚಕೊಡುವ ಪ್ರಯೋಜನ ಒಂದು ಮಾತ್ರ ಧೈರ್ಯತರಿಗೆ ಅನುಕೂಲಿಸಿದಂತಾಗುವುದು. ಯಾವ ದೇಶವೇ ಆಗಲಿ ಆ ದೇಶದ ಜನಾಂಗಗಳಿಂದ ಆಳಿಕೊಂಡು ಬರುವ ಬಗೆಲು ಅದರ ಶಾಂತಭಾವಕ್ಕೆ ಇತರರನ್ನು ನೇಮಿಸದರ ಆದರ ಯಾರಿಗೆ ನೀ ಕಾರಣವಾಗುತ್ತದೆ. ಯಾವ ದೇಶವು ಹೆಚ್ಚಿನ ವಿಸ್ತಾರವಿಲ್ಲದೆ ಚಿಕ್ಕ ಪರಿಮಿತಿಯುಳ್ಳದ್ದಾಗಿ ಆ ದೇಶೀಯರಿಂದಲೇ ನಡಿಸಿಕೊಂಡು ಬರುವನೋ ಆ ದೇಶದ ಮಹತ್ವವೆ ಬೇರೆಯಾಗಿದೆ. ಅವರೇ ಸ್ವರಾಜ್ಯಕ್ಕೆ ಅರ್ಹರು. ಆದುದರಿಂದಲೆ ನಮ್ಮ ಕೊಡಗು ದೇಶದಲ್ಲಿ ಲಂಚವೆಂಬ ಸುಳಿವೆ ಅವರಿಗೂ ಇಲ್ಲದಿರಲು ಕಾರಣವಾಯಿತು. ಇವರ ನಾಲ್ಕನೇ ಪ್ರಕರಣದಲ್ಲಿ ಲಾಯರುಗಳ ವಾದೇನಾಗುತ್ತಿತ್ತು ಎಂದು ಮುಂತಾಗಿ ಬೇಡಿಕೆಯನ್ನು ನೋಡುವಾಗ ಲಾಯರುಗಳಿಗೆಗಾಗಿ ಜಡ್ಜಿಗಳ ವರ್ಗಾವರ್ಗಿಗಳು ಅವಶ್ಯಕವೆಂದು ಬರದಂತೆ ಕಾಣುವದು. ಇದು ಬಹುಶಃ ನಿಜವಾಗಿರಬಹುದು, ಜಡ್ಜಿಗಳು ಬಂದೇ ಕೋರ್ಟಿನಲ್ಲಿ ಹೆಚ್ಚು ಕಾಲವಿರುವದರಿಂದ ಆ ಕೋರ್ಟಿಗೆ ಬರತಕ್ಕ ಕಕ್ಷಿಗಾರರ ನಡತೆಯು ಲಾಯರುಗಳ ನಡತೆಯುಗೊತ್ತಾಗುವದರಿಂದ ಕಪಟದ ನಡೆಸುವವರಿಗೆ ಬಹಳ ಕಷ್ಟಕರವಾಗಿದೆ. ಅಂಥಾ ಲಾಯರು ಕಕ್ಷಿಗಾರರು ಮೂಲೆಗೆ ಬಿಕ್ಕಬಾರದೇ? ಲಾಯರಂಥ ಕಕ್ಷಿಗಾರರಂಥ ಜಡ್ಜಿಗಳು ಸಿಕ್ಕಿದರೆ ತಪ್ಪಿಕ್ಕೆ ನೋಟ್ಟ ಬಿದ್ದಂತಾಗಲಿಲ್ಲವೆ? ಈ ಮಾತ್ರಕ್ಕೆ ವರ್ಗಾವರ್ಗಿಯ ಅವಶ್ಯಕತೆಯನ್ನು ಬಣ್ಣಿಸಿದ ಈ ಪರಿಶ್ರಮವು ಲೇಖಕರಿಗೆ ವ್ಯರ್ಥವೆಂದೇ ಹೇಳಬೇಕಾಗಿದೆ. ಆ ವರ್ಗಾವರ್ಗಿಯ ಸಮಯದಲ್ಲಿ ಮಾತ್ರವೇ ಇದೆ. ದೇಶೀಯರಾದವರಿಗೆ ತಕ್ಕ ಉದ್ಯೋಗಸ್ಥರಿಗೆ ತಮ್ಮ ಹುಟ್ಟು ದೇಶವಾದ್ದರಿಂದ ತಾವು ಉದ್ಯೋಗದಲ್ಲಿರುವಾಗ ಏನಾದರೂ ದೇಶಕ್ಕೆ ಕೇಡು ಉಂಟುಮಾಡಿದರೆ ಅದರ ಫಲ ಅನುಭವಿಸುವದಕ್ಕೆ ಅವರು ಸಹ ಒಂದು ಪಾಲುದಾರರಾಗುವದಲ್ಲದೆ ತಾವು ಕೆಲಸದಿಂದ ನಿವೃತ್ತರಾದ ಮೇಲೆ ಇಲ್ಲಿಯೇ ವಾಸಿಸಬೇಕಾಗಿರುವದರಿಂದ ಅವರಿಗೆ ದೇಶದವರೊಡನೆ ವಿರೋಧವಾಗಿರಲಿಕ್ಕೆ ಎಷ್ಟುಮಾತ್ರಕ್ಕೂ ಅವಕಾಶವಿಲ್ಲ. ಲೇಖಕರಾದ ಮ॥ ಮುದ್ದಪ್ಪ ಚಿಣ್ಣಪ್ಪನವರಿಗಾದರೂ ದೊಡ್ಡ ಉದ್ಯೋಗ ಸಿಕ್ಕಿದ್ದ ಪಕ್ಷ ಅವರು ಕೂಡ ತಮ್ಮಿಂದ ಮಾಡತಕ್ಕಷ್ಟು ಸಹಾಯವನ್ನು ತಮ್ಮ ಇಷ್ಟಗಾರರಾದ ನೆರೆಹೊರೆಯವರಿಗೂ ಬಂಧುಗಳಿಗೂ ಮಾಡದೆಬಿಡುತ್ತಿರಲಿಲ್ಲವೆಂಬ ದು ಮನುಷ್ಯ ಸ್ವಭಾವಿಕ ಗುಣವಾಗಿರುವಾಗ ಇಂಥಾ ಬಾತ್ಮಿಯನ್ನು ನಮ್ಮ ಜನರ ಮೇಲೆ ಹೊರಡಿಸಿದುದರ ವಿಷಯಕ್ಕೆ ವಿಷಾದಪಡಬೇಕಾಗಿದೆ. ಬೇರೆ ಪರದೇಶಿಗಳು ಬಂದು ಕೆಲಸಮಾಡಿಕೊಂಡಿದ್ದರೆ ನಮಗೆ ಎಷ್ಟು ಕಷ್ಟವಿರುತ್ತಿತ್ತೆಂಬುದು, ಕೊಡಗಿನಲ್ಲಿ ಈ ವರೆಗೆ ಪರದೇಶಿಯರಾದ ಜಾತಿಗ ವಗೈರೆಗಳಿಂದ ವ್ಯಕ್ತವಾಗುವದಿಲ್ಲವೆ?

ನವ ಗ ಹೊರದೇಶಗಳಿಂದ ಯಾವದಾದರು ಕೆಲಸಮಾಡಿಕೊಂಡುಬರಬೇಕಾದರೆ ಲಂಚ ವಿಷಯ ಆಗುವದೇ ಇಲ್ಲವಾದ್ದರಿಂದ ಪರದೇಶಿಯರದಯ ಸ್ವಭಾವವು ಈ ಲೇಖಕರಿಗೆ ತಿಳಿಯದಿದ್ದದರಿಂದಲೇ ಲೇಖಿಸಿದಂತೆ ಕಾಣುತ್ತದೆ. ಪರದೇಶದ ಉದ್ಯೋಗಸ್ಥರ ದೆಸೆಯಿಂದ ಉಂಟಾಗುವ ದೈಕರ ತೊಂದರೆಯ ವಿಷಯಕ್ಕೆ ಜುಲೈ ತಿಂಗಳ ಕಂಠೀರವ ಪತ್ರಿಕೆಯ "ಲಂಚಪ್ರಪಂಚ" ವೆಂಬ ಲೇಖನ ನೋಡಿದರೆ ಚನ್ನಾಗಿ ವ್ಯಕ್ತವಾಗುತ್ತದೆ. ದೇಶೀಯರಲ್ಲಿ ಒಬ್ಬಿಬ್ಬರು ಅನ್ಯಾಯಮಾಡಿದ ಮಾತ್ರಕ್ಕೆ ದೇಶದವರೆಲ್ಲಾ ಅನ್ಯಾಯಗಾರರೆಂದು ಹೇಳುವದಕ್ಕಾಗದೇ? ಗವರ್ನರಾಗಿದ್ದ ವಾರನ್‌ಹೇಸ್ಟಿಂಗ್ಸನು ಆ ಮೊದಲು ಹಿಂದುಸ್ಥಾನಕ್ಕೆ ಮಾಡಿದಂಥಾ ಅನ್ಯಾಯವನ್ನು ಯೂರೋಪ್ ಜನಾಂಗಕ್ಕೆಲ್ಲಾ ಹೋಲಿಸಬಹುದೆ? ಹಿಂದ ಳಿದವರನ್ನಬೇಕಾದರೆ ಯಾರ ದ ಸ್ತದಿಂದ ಹಿಂದೆಬಿದ್ದಿರುವರೂ ಅವರಲ್ಲದೆ ದ್ರವ್ಯವನ್ನು ಮಾಕಷ್ಟು ಕಿಲುಬಿಹಿಡಿಸಿವೆ? ಅಥವಾ ಸದ್ವಿನಿಯೋಗಮಾಡುವದಕ್ಕೆ ಆಶಕ್ತರೊ, ವಿದ್ಯೆಯಿಲ್ಲದೆ ಹಿಂದೆ ಬಿದ್ದದ್ದಕ್ಕೆ ಯಾರು ಜವಾಬ್ದಾರರು? ಲೇಖಕರು ಮುದ್ದಯ್ಯ ಮುತ್ತಣ್ಣ ನಂಜಪ್ಪನವರೇ ಮುಂತಾದವರ ಪಾಪಸ್ ವರ್ಗಿಸಿದ್ದಾರೆ. ಆ ಮಹನೀಯರಾದರೂ ನನ್ನ ಪಡೆಯುವ ಮೂಲಕ್ಕೆ ಪತ್ತೆದ್ದಲ್ಲದೆ ಒಂದೇ ಸಲ ಪತ್ತಲ್ಲಿ. ಮತ್ತು ಹಾಗೆ ಪತ್ತವದಕ್ಕೂ ಸಹ ಆಗುವದಲ್ಲ. ಈಗ ಪತ್ತಿದವರೂ ಹಾಗೆಯೇ ಆಗಿದೆ. ಈ ದೇಶವು ಬಹಳ ಚಿಕ್ಕದಾಗಿರುವದರಿಂದ ವರ್ಗಾವರ್ಗಿ ಎಲ್ಲಿಗೆ ಮಾಡಬೇಕೆಂಬುದನ್ನು ಸೂಚಿಸಿದ್ದರೆ ಒಳ್ಳೆಯದಿತ್ತು. ಕಳೆದುಕೊಂಡ ನೂರರಷ್ಟು ಗ್ರಾಮಗಳುಳ್ಳ ಪತ್ತೂರು ಸೀಮೆ ಸಿಕ್ಕುವಂತೆ ಪ್ರಯತ್ನ ಮಾಡಿ ಆ ಮೇಲೆ ಲೇಖನ ಬರೆದಿದ್ದರೆ ಬಹು ಒಳ್ಳೆಯದೆಂದು ನನಗೆ ತೋರುವದು. ಲೇಖಕರು ವರ್ಗಾವರ್ಗಿಯ ವಿಷಯದಲ್ಲಿ ವಾದ ಮಾಡುವದಕ್ಕಿಂತ ದೊಡ್ಡ ಉದ್ಯೋಗವು ಪ್ರಾಯಶಃ ಹೋದವರಿಗೆ ಸಿಕ್ಕುವಂತೆ ಪ್ರಯತ್ನಪಡುವದೇ ಬಹಳ ಮೇಲು. ಏಕೆಂದರೆ ಅಂಥಾವರಿಗೆ ಉದ್ಯೋಗದಲ್ಲಿ ಹೆಚ್ಚಿನ ತಿಳುವಳಿಕೆಯು ಲೋಕವ್ಯವಹಾರ ಪರಿಜ್ಞಾನವು ಸಾಧುಸ್ವಭಾವವು ಇರುವವರಿದ್ದರೆ ಇವರು ಹೇಳುವಂತೆ ಸುಮಾರು ನಾಲ್ಕೈದು ವರ್ಷದೊಳಗೆ ಪೆನ್ಶನ್ ಪಡೆದು ಮನೆಗೆ ಹಿಂತಿರುಗುವ ಕಾಲ ಸಹ ಬರುತ್ತದೆ. ಆದ್ದರಿಂದ ಮ॥ ಚಿಣ್ಣಪ್ಪನವರು ಅಂಥಾ ಅನರ್ಥಕರವಾದ ವಿಷಯವನ್ನು ಕಾನ್ಸಿಲಿನಲ್ಲಿ ತಂದು ದೇಶವನ್ನು ಅನ್ಯಾಯಕ್ಕೆ ಗುರಿಪಡಿಸಿ ನಮ್ಮ ದೇಶೀಯರಿಗೆ ಅಹಿತವನ್ನುಂಟುಮಾಡುವ ಆ ಕರ್ಮಕ್ಕೆ ಅವರೇ ಜವಾಬ್ದಾರರಾಗುವದಲ್ಲದೆ ಇಂಥಾ ವಿಷಯಕ್ಕೆ ಬೆಂಬಲವಾಗಲೀ ಅನುಮೋದನೆ ಸಹ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ.

ಬಿದ್ದಂಡ ಸುಬ್ಬಯ್ಯ

"ಲೋಕರಹಸ್ಯ."

ಕೃಷಿಯ ಅತ್ಯುತ್ತಮ ರೀತಿಗಳು, ವ್ಯಾಪಾರದ ವಿಷಯಗಳು, ಹೆಂಗಸರಿಗೆ ಬೇಕಾದ ಗೃಹಕೃತ್ಯದ ವಿಷಯಗಳು, ಹೋಳಿಗೆ, ಮಕ್ಕಳನ್ನು ಸಾಕುವ ವಿಷಯಗಳು, ಬಡವರಿಗೆ ಬೇಕಾದ ಹಣ ಸಂಪಾದನೆಯ ವಿಷಯಗಳು, ರಸಿಕರಿಗ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದಮುನಾನಿ ವೈದ್ಯ ಸಂಗ್ರಹ, ಪ್ರತಿಯೊಬ್ಬನೂ ತಿಳಿಯಬೇಕಾದ 'ಲಾ' ವಿಚಾರ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂದಲೂ, ತುಂಬಿ ತುಳುಕುತ್ತಿರುವ ಈ ಹೊಸ ಪತ್ರಿಕೆಗೆ ವರ್ಷಕ್ಕೆ ಚಂದಾ ರೂ 1—8—0 ಮಾದರಿ ಸಂಚಿಕೆಗೆ 0—1—0

ಪ್ರತಿ ತಿಂಗಳಲ್ಲೂ 60 ಪುಟಗಳಿಗ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

"ಲೋಕರಹಸ್ಯ" ಆಫೀಸು,
ವೀರರಾಜೇಂದ್ರಪೇಟೆ.
(ಕೊಡಗು.)

ಮೂರಾಟಕ್ಕೆ ತಯಾರಿವೆ.

ಬಗೆ ಬಗೆಯ ಚಕರಾಗಳು ವೀರಾಜಪೇಟೆಯ ಬಿದ್ದರ್ ಸ್ಟೋರಿನಲ್ಲಿ ಮಾರಾಟಕ್ಕೆ ತಯಾರಿವೆ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ಬಿ. ಸಿ, ಐಯ್ಯಪ್ಪ,
ಬಿದ್ದರ್ ಸ್ಟೋರ್ಸ್,
4--2 ವೀರಾಜಪೇಟೆ.

FOR SALE.

The following property about ten miles from Mercara, on Somwarpett road, consisting of —

	Rs	As.	P
Wetlands, 30-93 acres or about 1000 batties at Rs. 500/ per 100 batties ...	5000	0	0
Coffee, 33 46 acres at Rs 400/ per acre ...	13200	0	0
Bane and Jungle, 90 00 acres. at Rs. 20/ per acre ..	1800	0	0
Total 154·39 acres.	20000	0	0

With a decent upstaired house, out houses, and cooly lines,
is open for sale

Please apply to :—

R, Framjee,
12-7. Mercara.

PRICES REDUCED.

WHISKY :—				
King George	Rs.	6	14	0
White horse	"	6	14	0
Dewars'	"	6	14	0
Perfection	"	6	14	0
Vat No. 69.	"	6	14	0
BRANDY :—				
La Rupee D'or	Rs	6	0	0
Exshaws' No 1.	"	7	1	0
Exshaws' No 2.	"	6	4	0
Meartell's spl	"	6	0	0
Hennessey's XXX	"	7	8	0

Old Tone Gin Rs. 5-0-0; N P Vermouth 2-14-0. Special terms for trade.

Spencer & Co.Ltd,
MERCARA & POLLIBETTA.
39

ಸಂಪತ್ತಿಯ ಸಾಧನಗಳು.

ಅಯ್ಯೋ ಬಂಧುಗಳೇ ಸಂಪತ್ತಿಯು ಅನ್ಯ ಚಾಕರಿಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು. ಅದನ್ನು ಶೋಧಿಸಿ ತೆಗಿಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು.

ಲಕ್ಷಾವಧಿ ರೈತರು ಹೀಗಿ ಅನುಭವ ತೆಗೆದುಕೊಂಡಿರುವರು. ಭೂಮಿಯ ತಕ್ಕ ತರತರದ ನೇಗಿಲುಗಳೂ ಗಾಣಗಳೂ ದೊರೆಯುತ್ತವೆ. ಕಿಸಾನ ಗಾಣವು ಒಂದು ಗಂಟೆಗೆ ೪೦೦ ಪೌಂಡು ಕಬ್ಬನ್ನು ಹಿಂಡಿ ಚಲ್ಲುತ್ತದೆ

ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,
4. ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯಕ್ರಯ ವಾಪಾಸು. ವೀರ್ಯಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ

ಟ್ರೇಡ್‌ಮಾರ್ಕ (ರಜಿಸ್ಟರ್ಡ್‌ವಾದದ್ದು) ನೋಡಿ ಕೊಳ್ಳಿರಿ.

ಅಗಸ್ತ್ಯ ಮನ್ಮಥ ಚಿಂತಾಮಣಿ ಲೇಹ

ಆಬಾಲವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾದದ್ದು ಮೇಹ ವಿಕಾರವಿದ್ದವರಿಗೂ, ನಿದ್ರೆ ಇಲ್ಲದವರಿಗೂ, ಸ್ವಸ್ಥೇಂದ್ರಿಯವಾಗುವ ಬಾಲಕರಿಗೂ, ಜ್ಞಾನಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಬಹುಪರಮಾನಂದ ಔಷಧಿ 1ಸೇರು 48ದಿವಸ ಸೇವಿಸಬಹುದು. 1ಸೇರು ಡಬ್ಬ 1ಕ್ಕೆ ರುಪಾಯಿ 2-0-0 ½ಸೇರು ಡಬ್ಬ 1ಕ್ಕೆ ರುಪಾಯಿ 1-1-0, ವಿ ಪಿ. ಕರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ

ವಿಳಾಸ—ದೇವಣ್ಣ ನಾರಾಯಣಸೇಟ್,
ಗೋಳಿಕಟ್ಟಾ,
ಮಂಗಳೂರು,
12—2 ದ ಕ.

ಕರ್ಣಾಟಕ ಎಗ್ಯೂ ಮಿಕ್ಸ್ಚರ್

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝಾ ಬಿಡಪಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಚಿಲಿ ಬಾಟ್ಲಿಯೊಂದಕ್ಕೆ ರು. ೦--೧೪—೦
ಟಪ್ಪಾಲು ಚಾರ್ಜು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು.
೯—೨—೦

ಏಜಂಟರು ಬೇಕು, ಕೊಡಗಿನ ಸ್ಕೂಲ್ಮಾಸ್ತರುಗಳು ತಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ.

12—13 ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	...	9080
ಜನರಿಂದ ಠೇವಣಾತಿ	....	78,000

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ, ಬಿ.ಎಲ್.

ಸೆಕ್ರೆಟರಿ.
ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್
ತಾರೀಕು 1—7—1924.

GOOLAMHUSAIN ALLIBHOY & SONS,

Largest Importers of Fire Arms and Ammunition, Cheapest priced firm in India,

210 Abdul Rehman Street, BOMBAY.



We stock Arms, Ammunition and shooting requisites of almost all the kinds and classes ranging from Re. 1/- to Rs 3,600/-.

Use our **Brilliant Search Light Lamp for Big Game Night shooting** price Rs. 40/- Free Delivery.

Apply for the Current Catalogue.
24—3

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.
ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ:—

ಮೇನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್.

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ವಾರ್ಷಿಕ ಚಂದಾ ರೂ ೩—೮—೦

ಸತ್ಯೇನ ಭೂಷಿತವಯುತಾ ವಿದ್ಯಾ ನೀತಿ ಪ್ರ ಕಾಶಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸನ್ ೧೯೨೪ನೇ ಇಸವಿ ಜುಲೈ ತಾರೀಕು ೩೦ನೇ ಶುಕ್ರವಾರ [ಸಂಚಿಕೆ ೯

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು, ಡಾಕ್ಟರ್ ಯು ರಾಮರಾವ್,
ಯಮ್. ಎಲ್ ಸಿ. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0 2.0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ' 321,
ತಂಬುಚೆಟ್ಟಿ ಬೀದಿ, ಮದ್ರಾಸ್.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ ಕೋಟೆರ ಚಣ್ಣಪ್ಪನವರ ಮತ್ತು ಮೆ ಚಂಗಂಡ ಕುಟ್ಟಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯಮಾಡಿ ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಾದ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಶಾಬಿ ಭಂಡಾರದಲ್ಲಿ ಮ. ಮಂಡೇಟಿರ ಚೆನ್ನಣ್ಣನವರು.

ಮೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ ಮೆ ಮಡೆಯಂಡ ದೇವಯ್ಯನವರು.

ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು.

" ಮೆ ಪೊನ್ನಚಂಡ ಮುದ್ದಪ್ಪನವರು.

ಗೋಣಿಕೊಪ್ಪಲು—ಮೆ. ಚಮ್ಮಡ ಮೊದಪ್ಪನವರು.

ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಮ್ಮಯ್ಯನವರು.

ಮಡಿಕೇರಿ—ಮೆ. ಜಿ. ಮೊದಮ್ಮನವರು.

ಅಮ್ಮತ್ತಿ ಸಿದ್ಧಾಪುರ—ಮೆ ಐನಂಡ ಮೊದಪ್ಪನವರ

" ಮೆ. ಕಲಿಯಂಡ ಸೋಮಯ್ಯನವರು

ಅಲ್ಲದೆ ಈ ಸಮ್ಮಂಧ ಕೋಟೇರ ಚಣ್ಣಪ್ಪನವರು ಮತ್ತು ಚಂಗಂಡ ಕುಟ್ಟಪ್ಪನವರು, ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಸಹ ಮೊಬಲಗು ಕೊಡಬೇಕಾಗಿ ಕೋರಿಕೆ.

ಕೋದಂಡ ಉತ್ತಯ್ಯ.

ಆರ್ಗನೈಜಿಂಗ್ ಡೈರೆಕ್ಟರು, "ಕೊಡಗು" ಲಿಮಿಟೆಡ್

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಂಟಾದ ಕಂಟ್ರ್ಯಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ
17.9.24 ಮೇನೇಜರ್

ನೋಟೀಸು.

ಕೊಡಗು ಒಮಿನ್ನಾರದಸೋಷದ ಲೆಕ್ಕವನ್ನು ಆಡಿಟ್ ಮಾಡಿಸಬೇಕಾಗಿರುವುದರಿಂದ ಈ ವರ್ಷ ಮ. ಐನ್ನಂಡ ಕಾರ್ಯಪ್ಪನವರು ಬಿಸಾಡುವಾಗಿನ ನಾಡು ಕಮಿಟಿಗಳಿಗೆ ಹಣ ವಸೂಲಾತಿಗೆ ಕೊಟ್ಟಂಥ ರಶೀತಿ ಬುಕ್ಕುಗಳು ಕಳೆದ ವರ್ಷದ ವಾರ್ಷಿಕ ಕಾನ್ಫರೆನ್ಸ್ ಕಳೆದ ಕೂಡಲೇ ಪುನಹ ಹಣ ವಸೂಲಾತಿಗೆ ಆಯಾಯ ಕಮಿಟಿಗಳಿಗೆ ಕೊಟ್ಟಿರುವುದರಿಂದ ಎಲ್ಲಾ ಕಮಿಟಿಯವರೂ ತಮ್ಮ ಹತ್ತಿರವಿರುವ ರಶೀತಿ ಬುಕ್ಕುಗಳನ್ನು ಮತ್ತು ಈ ವರ್ಷ ಉದಿಯಂಡ ಮ. ಸು ಬ್ಬಯ್ಯನವರು, ಮೆ ಚಂಗಂಡ ಕುಟ್ಟಪ್ಪನವರು, ಮೆ ಕೋಟೆರ ಚಣ್ಣಪ್ಪನವರು ಮತ್ತು ಇನ್ನೂ ಕೆಲವು ಮಹನೀಯರು ಹಣ ವಸೂಲಾತಿಗೆ ಕೊಟ್ಟ ರಶೀತಿ ಬುಕ್ಕುಗಳನ್ನು ಸಹ ವಸೂಲಾದ ಹಣವಿದ್ದರೆ ಹಣ ಸಹಿತ ವಡನೆ ಒಮಿನ್ನಾರಸೋಷದ ಮಡಿಕೇರಿಯಲ್ಲಿರುವ ಆಫೀಸಿಗೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇನೆ

ಸಿ. ಎನ್ ವೆಂಕಪ್ಪಯ್ಯ,
ಜನರಲ್ ಸೆಕ್ರೆಟರಿ

ನೋಟೀಸು.

ದಕ್ಷಿಣ ಕೊಡಗಿನಲ್ಲಿ ಮದುವೆ ಕಾಗದ, ನೋಟೀಸು ಮತ್ತು ಬೇರೆ ಪ್ರಿಂಟಿಂಗ್ ಕೆಲಸ ಮಾಡಿಸಬೇಕೆಂದಿರುವವರು ದಯವಿಟ್ಟು ಎಲ್ಲಾ ಆರ್ಡರುಗಳನ್ನು ನಮ್ಮ ಏಜಂಟರಾದ ವೀರಾಜಪೇಟೆ ಖಾದಿ ಭಂಡಾರದ ಮೆ. ಬೇಚರವರಿಗೆ ಕೊಟ್ಟರೆ, ಶೀಘ್ರದಲ್ಲೇ ಸುಲಭ ಚಾರ್ಜಿಗೆ ಗಿಲೀಟು ಹಾಕಿ ಪ್ರಿಂಟುಮಾಡಿಸಿ ಕಳುಹಿಸಲಾಗುವುದು.

'ಮೇನೇಜರ್',
"ಕೊಡಗು" ಪ್ರೆಸ್, ಮಡಿಕೇರಿ.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ಸ್ತ್ರೀ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ 'ಕೊಡಗು' ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು 2. ಲೇಖನಗಳನ್ನು ಸಂಪಾದಕರು 'ಕೊಡಗು' ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು 3. ಬಾತ್ಮೀದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ 4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ವೀಕೃತ ದೂರಿಕೆಗಳಲ್ಲಿ ಅ ಎಲ್ಲರಿಗೂ ಪ್ರಕಟಿಸಲ್ಪಡುವವು. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲಪಿರುವುದರಿಂದ, ಲೆಟರ್ ಹೆಡ್ಸ್, 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ

ಮಡಿಕೇರಿ ಮೇನೇಜರ್,
'ಕೊಡಗು' ಲಿಮಿಟೆಡ್

ಮಹನೀಯರೇ,

1923ನೇ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿದೆ.

ಕೃಷ್ಣ ನಾಯರ್ ಮತ್ತು ನಾರಾಯಣ ನಂಬೀಶನ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಪಿ. ಎಸ್ ನಾರಾಯಣನ್ ಮೂಸ್ ಎಂಬ ಮಹಾನುಭಾವರ ಹತ್ತಿರ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನು ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ

ನಂಬೀಶನ್ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಣ್ಣೂರು, ವೀರರಾಜಪೇಟೆ ಮತ್ತು
52-19 ಗೋಣಿಕೊಪ್ಪಲು.

ARMS & AMMUNITION MART.

Mahomedally-Noorbhoy.

337, Abdul Rehman Street, near
Crawford Market, BOMBAY.
Telegraphic Address :- "SHOOTER"
Bombay
[52-49] Please write for latest Catalogues.

"ಕೊಡಗು"

ಸ॥ ೧೯೨೫ನೇ ಇಸವಿ ಜುಲೈ ೩೧.
೩೧ನೇ ಶುಕ್ರವಾರ.

ಕಾಂಗ್ರೆಸ್=ರಾಜಕೀಯ ಸಭೆ.

ಅಖಿಲ ಭಾರತ ಕಾಂಗ್ರೆಸ್ ಮೊದಲಿನಂತೆಯೇ ಈಗ ರಾಜಕೀಯ ಸಭೆಯಾಗಿದೆ. ಮಹಾತ್ಮ ಗಾಂಧಿಯವರ ಅಸಹಕಾರ ತತ್ವವನ್ನು ಕಾಂಗ್ರೆಸ್ ಸಭೆಯು ಕೈಕೊಂಡಂದಿನಿಂದ ರಾಷ್ಟ್ರೀಯಸಭೆಯು ರಾಜಕೀಯ ಚಳವಳವನ್ನು ಬಿಟ್ಟಂತೆಯೇ ಆಗಿತ್ತು. ಸರಕಾರದ ಸಂಗಡ ಸಹಕರಿಸಬೇಡವೆಂತ ತೀರ್ಮಾನವಾದ್ದರಿಂದ ಸರಕಾರದ ಅನುಕೂಲದ ಅಥವಾ ಸರಕಾರಿ ಉದ್ಯೋಗಸ್ಥರ ಕೆಲಸಕಾರ್ಯಗಳ ಮೇಲೆ ಟೀಕಿಸಿ ಸರಕಾರಕ್ಕೆ ಬರೆಕೊಳ್ಳುವ ಕೆಲಸವೇ ನಿಂತುಹೋಯಿತು. ದೇಶದಲ್ಲಿ ಹಿಂದೂ ಮುಸಲ್ಮಾನರ ಒಗ್ಗಟ್ಟು, ಹಿಂದೂಗಳಲ್ಲಿ ಅಸ್ಪೃಶ್ಯತೆಯ ನಿವಾರಣೆ ಮತ್ತು ದೇಶದ ಆರ್ಥಿಕ ಸ್ಥಿತಿ ಬೆಳೆಯಲು ಬೇಕಾದ ಕೈನೂಲು ಕೈಮಗ್ಗಗಳ ಪ್ರಚಾರ, ಈ ಕೆಲಸಗಳನ್ನು ಮಾಡಿ ಸಂಪೂರ್ಣ ಸಹಕಾರಿಯಾದಮೇಲೆ ಸರಕಾರದ ಕಂದಾಯ ಕೊಡದಿರ ಬಹುದೇ ಮುಂತಾದ ನವೀನಯುಕ್ತಿ ದೇಶಭಂಗಗಳನ್ನು ನಡಿಸುವ ದೂರದೃಷ್ಟಿ ಇಟ್ಟಿದ್ದರಷ್ಟೆ. ಕಳೆದ ಬೆಳ್ಗಾಂ ಕಾಂಗ್ರೆಸ್ಸಿನಲ್ಲಿ ಅಧ್ಯಕ್ಷರಾದ ಮಹಾತ್ಮರು ಕಾಂಗ್ರೆಸನ್ನು ಒಳ್ಳೇ ಸೂಲುವ ಜನರ ಕೂಟಮಾಡಲು ನಿಶ್ಚೈಸಿದ್ದೇನೆಂತ ಹೇಳಿದರು. ಈ ಮತಕ್ಕೆ ಸ್ವರಾಜ್ಯರು ಒಪ್ಪಿಗೆ ಕೊಟ್ಟು ತಿಂಗಳಿಗೆ ೨೦೦೦ಗಜ ಕೈನೂಲು ಕೊಡುವವರು ಮಾತ್ರ ಕಾಂಗ್ರೆಸ್ಸಿನ ಮೆಂಬರುಗಳಾಗ ಬಹುದು ಎಂಬ ಠರಾವನ್ನು ಸಹ ಪಾಸುಮಾಡಿದರು. ಈ ಕಾಂಗ್ರೆಸ್ ಮಹಾಸಭೆಯ ಕಳೆದ ಡಿಸಂಬರಿನ ಕೂಟಕ್ಕಿಂತ ಸ್ವಲ್ಪ ಕಾಲದ ಮುಂಚೆ ಸ್ವರಾಜ್ಯಸಂಗಡದ ಮುಖಂಡರಿಗೂ ಮಹಾತ್ಮ ಗಾಂಧಿಯವರಿಗೂ ಒಂದು ಒಡಂಬಡಿಕೆಯಾಗಿತ್ತು. ಸ್ವರಾಜ್ಯಸಂಗಡದವರು ಕೈನೂಲು ಮಾಡಲಿಕ್ಕೂ ಅದರ ಪ್ರಚಾರಕ್ಕೂ ಮತ್ತು ಹಿಂದು ಮುಸಲ್ಮಾನ್ ಒಗ್ಗಟ್ಟು, ಹಿಂದುಗಳ ಅಸ್ಪೃಶ್ಯತಾ ನಿವಾರಣೆಗೂ ಸಹ ಒಪ್ಪುವಪಾದರೆ ಸ್ವರಾಜ್ಯಸಂಗಡದವರು ಕಾಂಗ್ರೆಸ್ಸಿನ ಹೆಸರಿನಲ್ಲಿ ಕೌನ್ಸಿಲ್ ಪ್ರವೇಶಮಾಡಿ ಸರಕಾರದ ಆಡಳಿತಕ್ಕೆ ಅಡಚಣೆಮಾಡಬಹುದೆಂಬ ಒಪ್ಪಂದವಾಯಿತು. ಈ ಒಪ್ಪಂದವನ್ನು ಅನುಸರಿಸಿಯೇ ಸ್ವರಾಜ್ಯಸಂಗಡದವರೂ ಬೆಳ್ಗಾಂ ಕಾಂಗ್ರೆಸ್ಸಿನ ಒಂದು 'ಕಾಂಗ್ರೆಸ್ ಮೆಂಬರುತನಕ್ಕೆ ಕೈನೂಲು ಕೊಡುವವರೇ ಅರ್ಹರು' ಎಂಬ ಠರಾವಿಗೆ ಒತ್ತಾಸೆಕೊಟ್ಟರು. ಕಳೆದ ಡಿಸೆಂಬರ್ ತಿಂಗಳಿನ ಈಚಗೆ ಬಂಗಾಲದಲ್ಲಿ ಹೊಸ ಸಧಾರಣೆಯಿಂದ ದೊರೆತ ದ್ವಿಮುಖ ಸರಕಾರವನ್ನು ಸ್ವರಾಜ್ಯಸಂಗಡದವರ ಕೌನ್ಸಿಲ್ ಮೆಂಬರುಗಳು ಒಗ್ಗಟ್ಟಾಗಿ ಮುರಿದರು. ಸ್ವರಾಜ್ಯಸಂಗಡದ ಮುಂದಾಳಾಗಿದ್ದ ದೇಶಬಂಧು ದಾಸರು ಸಾವ್ರ ಕಳೆದವಾರ ತಿಳಿಸಿದಂತೆ ಸರಕಾರದೊಂದಿಗೆ ಬೆರೆತು ರಾಜ್ಯಭಾರ ನಡಿಸಲು ಕೆಲವು ಶರತ್ತುಗಳಿಗೆ ಒಳಪಟ್ಟು ಒಪ್ಪಿದರು. ಆದರೆ ಸ್ಟೇಟ್ ಸೆಕ್ರೆಟರಿಯವರು ಅವರ ಶಾಂತಿಶರತ್ತುಗಳಿಗೆ ಎಳ್ಳಷ್ಟು ಗಮನಕೊಡದೆ ಪುನಃ ಬೆದರಿಕೆಯ ಮಾತುಗಳನ್ನೇ ಆಡಿದರು. ಅದಕ್ಕಾಗಿ ಸ್ವರಾಜ್ಯಪಾರ್ಟಿಯವರು ಮಾಡಿಕೊಂಡ ತೀರ್ಮಾನವನ್ನು ಕಳೆದವಾರ ತಿಳಿಸಿದ್ದೇವೆ. ಈ ವಾರದಲ್ಲಿ ಸ್ಟೇಟ್ ಸೆಕ್ರೆಟರಿಯವರ ಭಾಷಣಕ್ಕೆ ಇನ್ನೊಂದು ಬಲವಾದ ಜವಾಬು ಸಿಕ್ಕಿದೆ.

ಮಹಾತ್ಮ ಗಾಂಧಿಯವರು ಕಾಂಗ್ರೆಸ್ ಮೆಂಬರುತನಕ್ಕೆ ಕೈನೂಲು ಚಂದಾಕೊಡಬೇಕೆಂತ ಮಾಡಿಕೊಂಡಿದ್ದ ತೀರ್ಮಾನವನ್ನು ಬಿಟ್ಟುಬಿಡಬಹುದೆಂತ ಹೇಳಿದ್ದಾರೆ. ಮಹಾತ್ಮ ಗಾಂಧಿಯವರಿಗೂ ಸ್ವರಾಜ್ಯ ಸಂಗಡದ ಮುಖಂಡರಿಗೂ ಆಗಿದ್ದ ಒಪ್ಪಂದವನ್ನು ಮಹಾತ್ಮರು ರದ್ದುಪಡಿಸಿದ್ದಾರೆ. ಕಾಂಗ್ರೆಸನ್ನು ಸಂಪೂರ್ಣವಾಗಿ ರಾಜಕೀಯ ಸಭೆಯಾಗಿ ಮಾಡಿಕೊಳ್ಳಲು ಒಪ್ಪಿರುತ್ತಾರೆ. ಸ್ವರಾಜ್ಯ ಪಾರ್ಟಿಯನ್ನು ಬಲಪಡಿಸುವದು ಅತಿ ಅವಶ್ಯವಾಗಿದೆಯೆಂತ ಪ್ರಕಟಿಸಿದ್ದಾರೆ. ಸ್ವರಾಜ್ಯ ಪಾರ್ಟಿಗೆ ತನ್ನಿಂದ ಸಾಧ್ಯವಿರುವಷ್ಟು ಸಹಾಯವನ್ನು ಮನಃಪೂರ್ತಿಯಾಗಿ ಕೊಡಲು ಮಾತುಕೊಟ್ಟಿದ್ದಾರೆ. ಹಿಂದುಸ್ಥಾನದ ಚಳವಳಕ್ಕೆ ನಿಜವಾದ ಕಾರಣವೇನೆಂದು ತಿಳಿದುಕೊಳ್ಳದೆ ಬ್ರಿಟಿಷ್ ಸಾಮ್ರಾಜ್ಯವು ಹಿಂದುಸ್ಥಾನವನ್ನು ಕಳಕೊಳ್ಳಬಾರದೆಂಬ ಒಂದೇ ಸ್ವಾರ್ಥ ಅಭಿಪ್ರಾಯದಿಂದ ಸ್ವರಾಜ್ಯಪಾರ್ಟಿಯವರು ಕೊಟ್ಟ ಶರತ್ತುಗಳಿಗೆ ಸ್ಟೇಟ್ ಸೆಕ್ರೆಟರಿಯವರು ಒಪ್ಪಲಿಲ್ಲ. ಇದಕ್ಕೆ ಪ್ರತಿಯಾಗಿ ರಾಷ್ಟ್ರೀಯ ಕಾಂಗ್ರೆಸ್ಸಿನ ಮೂಲಕ ಹಿಂದುಸ್ಥಾನವು ತನ್ನ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸಬೇಕಾದ ಕಾಲಬಂದಿದೆ ಎಂತ ಕಾಂಗ್ರೆಸ್ಸಿನ ಅಧ್ಯಕ್ಷರಾದ ಮಹಾತ್ಮರು ನಿಶ್ಚೈಸಿದ್ದಾರೆ. ಇವರ ತೀರ್ಮಾನವನ್ನು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಒಪ್ಪಿಕೊಂಡಾರೆಂತ ನಮಗೆ ನಂಬಿಕೆ ಇದೆ. ಆದ್ದರಿಂದ ದೇಶದಲ್ಲಿ ಚಳವಳವು ಬಹಳ ಬಿರುಸಾಗಿ ನಡಿಯುವ ಸಂಭವಗಳು ತೋರುತ್ತವೆ.

ಕಾಂಗ್ರೆಸ್ಸಿಗೆ ಮೆಂಬರಾಗಲು ಕೈನೂಲು ನೂತುಕೊಡುವವರೇ ಆಗಬೇಕು, ಅಥವಾ ಕೈನೂಲು ಒದಗಿಸಿಯಾದರೂ ಕೊಡುವವರು ಆಗಬೇಕಂತ ಇದ್ದದ್ದರಿಂದ ಕಾಂಗ್ರೆಸ್ಸಿನ ಸಭಾಸದರ ಸಂಖ್ಯೆಯು ಬಹಳ ಕಡಿಮೆಯಾಗಿ ಹೋಗಿತ್ತು. ಸ್ವದೇಶಿ ಬಟ್ಟೆಯನ್ನೇ ಉಪಯೋಗಿಸಬೇಕು, ಹಿಂದೀ ಕಾರ್ಖಾನೆ ನೂಲಿನಿಂದ ಮಾಡಿದ ಬಟ್ಟೆಯನ್ನು ಸಹ ಉಪಯೋಗಿಸಬಾರದೆನ್ನುವ ತತ್ವಕ್ಕೆ ಒಪ್ಪುವ ಜನರು ದೇಶದಲ್ಲಿ ಬಹುಮಂದವರಾಗಿದ್ದಾರೆ. ಆದರೆ ಸ್ವತಃ ತಾವೇ ನೂಲುಮಾಡುವ ಜನರು ಅತಿವಿರಳ. ಕಾಂಗ್ರೆಸ್ಸಿನ ಮಹತ್ವವನ್ನು ತಿಳಿದು, ಅಖಿಲ ಹಿಂದುಸ್ಥಾನವನ್ನು ಕಣ್ಣೆದುರಿಗೆ ಇಟ್ಟುಕೊಳ್ಳುವಷ್ಟು ತಿಳುವಳಿಕೆ ಇರುವವರೇ ಕಾಂಗ್ರೆಸ್ಸಿಗೆ ಮೆಂಬರಾಗುವರೆಂಯೆಂತ ಊಹಿಸಬಹುದು. ಇಂಥಾ ದೇಶಭಕ್ತರು ಕೈನೂಲುಮಾಡುವದನ್ನು ಇತರರಿಗೆ ಮೇಲುಪಂಕ್ತಿಯಾಗಿ ಮಾಡಿ ತೋರಿಸದಿದ್ದರೆ ಇತರರು ಕೈಯಿಂದ ನೂಲುಮಾಡುವ ಸಂಭವವು ಕಡಿಮೆ ಎಂಬದನ್ನು ನಾವು ಒಪ್ಪುತ್ತೇವೆ. ಆದರೆ ಕಾರ್ಯತಃ ದೇಶಭಕ್ತಿ ಇರುವವರೆಲ್ಲರೂ ಕೈನೂಲುಮಾಡಲು ಪ್ರಾರಂಭಿಸಲಿಲ್ಲವೆಂಬದು ಎಲ್ಲರಿಗೂ ತಿಳಿದಿದೆ. ಆದ್ದರಿಂದ ಎಲ್ಲಾ ದೇಶಭಕ್ತರಿಗೂ ಕಾಂಗ್ರೆಸ್ಸಿನ ಮೆಂಬರಾಗಲಿಕ್ಕೆ ಅನುಕೂಲದೊರೆತದ್ದು ಬಹಳ ಒಳ್ಳೇದಾಯಿತೆಂತ ನಮ್ಮ ಅಭಿಪ್ರಾಯ. ಲಿಬರಲ್ ಪಕ್ಷವಂತ ಹೆಸರಿಟ್ಟುಕೊಂಡಿರುವ ಶ್ರೀಯುತ ವಿ ಎಸ್ ಶ್ರೀನಿವಾಸ ಶಾಸ್ತ್ರಿಗಳೇ ಮುಂದಾಗಿರುವ ಸಂಗಡದವರೂ ಸಹ ಕಾಂಗ್ರೆಸ್ಸಿನ ಒಳಕ್ಕೆ ಪ್ರವೇಶಿಸಲಿಕ್ಕೆ ಅನುಕೂಲ ದೊರೆಯಿತು. ಆದ್ದರಿಂದ ಎಲ್ಲಾ ವಿಧದಲ್ಲೂ ದೇಶದ ಒಗ್ಗಟ್ಟು ಬೆಳೆಯಲು ಸಂಪೂರ್ಣ ಅನುಕೂಲವಾಯಿತು.

ಮಹಾತ್ಮರ ಈ ತೀರ್ಮಾನದ ಸಂಗಡಲೇ ದೇಶಬಂಧು ಚಿತ್ತರಂಜನ ದಾಸರ ಜ್ಞಾಪಕಾರ್ಥವಾಗಿ ಗ್ರಾಮಾಭಿವೃದ್ಧಿ ಕೆಲಸವನ್ನು ಕೈಕೊಳ್ಳಲು ಒಂದು ಸ್ಮಾರಕ ಫಂಡನ್ನು ಒಟ್ಟು ಹಿಂದುಸ್ಥಾನದವರು ಕೂಡಿಸಬೇಕಂತ ಮಹಾತ್ಮ ಗಾಂಧಿಯವರ ರವೀಂದ್ರನಾಥ ಟಾಗೂರ್ ಮುಂತಾದವರು ಸೈನ್ ಹಾಕಿ ಒಂದು ವಿಜ್ಞಾಪನಾ ಪತ್ರವನ್ನು ಪ್ರಕಟಿಸಿದ್ದಾರೆ. ಕೈನೂಲು ಕೈಮಗ್ಗಗಳನ್ನು ಗ್ರಾಮಾಂತರಗಳಲ್ಲಿ ಪ್ರಚಾರಕ್ಕೆ ತರುವದಕ್ಕಾಗಿ ಈ ಫಂಡನ್ನು ಉಪಯೋಗಿಸಿ ಗ್ರಾಮಾಭಿವೃದ್ಧಿಯಾಗಬೇಕಂತ ಈ ಪ್ರಕಟಣೆಯಲ್ಲಿ ವಿವರಿಸಿದ್ದಾರೆ. ಇದನ್ನು ನೋಡಿದರೆ ಕೈನೂಲು ಕೈಬಟ್ಟೆಗೆ ಇರುವ ಪ್ರಾಮುಖ್ಯತೆ ಏನೂ ಕಡಿಮೆಯಾಗಲಿಲ್ಲವೆಂಬದು ಪ್ರತ್ಯಕ್ಷವಾಗುತ್ತದೆ. ಆದ್ದರಿಂದ ಕೈನೂಲು, ಕೈಮಗ್ಗಗಳ ಪ್ರಚಾರವೇ ಕಾಂಗ್ರೆಸ್ಸಿನ ಮುಖ್ಯ ಕಾರ್ಯವಾಗಿರದೆ ಸ್ವರಾಜ್ಯ ಪಕ್ಷದವರ ಚಳವಳವಾಗಿದ್ದ ಕೌನ್ಸಿಲ್‌ಗಳಲ್ಲೂ ಸ್ಥಳೀಯ ಸ್ವರಾಜ್ಯ ಸಂಸ್ಥೆಯೆಂದರೆ ಡಿಸ್ಟ್ರಿಕ್ಟ್ ಬೋರ್ಡ್ ಮುನಿಸಿಪಾಲಿಟಿಗಳಲ್ಲೂ ಸ್ವರಾಜ್ಯ ಪಕ್ಷದವರೇ ಅಂದರೆ ಇನ್ನುಮುಂದೆ ಕಾಂಗ್ರೆಸ್ಸಿನವರೇ ಮೆಂಬರುಗಳಾಗಿ ಹೋಗಿ ಸ್ಥಳೀಯ ಸ್ವರಾಜ್ಯ ಸಂಸ್ಥೆಗಳ ಆಡಳಿತವನ್ನೂ ಸರಕಾರದ ಸಂಗಡ ಹೋರಾಟವನ್ನೂ ನಡಿಸುವದೇ ಪ್ರಾಮುಖ್ಯತೆಗೆ ಬರುತ್ತದೆ. ಖಾದಿ ಪ್ರಚಾರ ಮತ್ತು ಅಸ್ಪೃಶ್ಯತಾ ನಿವಾರಣೆಗಳು ಶಾಖೆಗಳಾಗಿ ನಡಿಸಲ್ಪಡುವವು. ಕಾಂಗ್ರೆಸ್ಸಿನ ಒಳಗೂ ಹೊರಗೂ ಭಿನ್ನಾಭಿಪ್ರಾಯಗಳು ಈಗ ಸುಮಾರು ಎರಡು ವರುಷದಿಂದಲೇ ತೋರಿಬರುತ್ತಿದ್ದು ಈಗ ಒಗ್ಗಟ್ಟಾಗುವದು ದೇಶದ ಅಭ್ಯುದಯಕ್ಕೆ ಎಂಬದರಲ್ಲಿ ಏನೂ ಸಂಶಯವಿಲ್ಲ.

ಬಳ್ಳಾರಿಯು ಕರ್ನಾಟಕವಲ್ಲವೇ?

ಬೇಗನೆ ಬಳ್ಳಾರಿಯನ್ನು ಆಂಧ್ರ ವಿಶ್ವವಿದ್ಯಾಲಯದ ಒಂದು ಮಧ್ಯವರ್ತಿ ಸ್ಥಳವಾಗಿ ಮಾಡುವ ಪ್ರಯತ್ನವು ನಡೆಯುತ್ತಿದೆ. ಬಳ್ಳಾರಿಯ ಆರು ತಾಲೋಕುಗಳು ಕನ್ನಡ ಪ್ರಾಂತ್ಯಕ್ಕೆ ಸೇರಿದವೆಂದೂ ಉಳಿದ ಮೂರು ತಾಲೋಕುಗಳು ಆಂಧ್ರಕ್ಕೆ ಸೇರಿದವೆಂದೂ ಕೆಲವು ಕಾಲದ ಹಿಂದೆ ನೇಮಿಸಿದ ಪಂಚಾಯಿತರು ತೀರ್ಮಾನಿಸಿರುವದಲ್ಲದೆ ಅಖಿಲ ಭಾರತ ಕಾಂಗ್ರೆಸ್ಸಿನವರು ಹೀಗೆಯೇ ನಿರ್ಣಯಿಸಿರುವಲ್ಲಿ ಬಳ್ಳಾರಿಯು ಕರ್ನಾಟಕ ಪ್ರಾಂತ್ಯಕ್ಕೆ ಸೇರುದೆಂಬದರಲ್ಲಿ ಸಂಶಯವಿಲ್ಲ. ಹೀಗಿರುವಲ್ಲಿ ಆಂಧ್ರ ಕಾಲೇಜನ್ನು ಇಡುವದರಲ್ಲಿ ನ್ಯಾಯವೇನೂ ಇಲ್ಲ. ಅಲ್ಲಿಯ ಹೆಚ್ಚು ಜನಸಂಖ್ಯೆಯ ಭಾಷಾ ಪ್ರಚಾರಕ್ಕೆ ಕುಂದಕ ತರುವದು ವಿಶ್ವವಿದ್ಯಾಲಯದ ವ್ಯವಸ್ಥಾಪಕರಿಗೆ ಸರಿಯಲ್ಲ. ಹೀಗೆ ಕರ್ನಾಟಕ ಪ್ರಾಂತ್ಯದ ಭಾಗಗಳು ನೆರೆ ಪ್ರಾಂತ್ಯಗಳಿಂದ ಸೆಳೆಕೊಳ್ಳುತ್ತಾ ಒಂದಷ್ಟೇ ಆದರೆ ಕರ್ನಾಟಕಪ್ರಾಂತ್ಯವೇ ಇಲ್ಲವಾಗುವ ದಿನವು ಬರಬಹುದು. ಆದುದರಿಂದ ಮುಖ್ಯವಾಗಿ ಬಳ್ಳಾರಿಯ ಕನ್ನಡಿಗರು ಈ ನ್ಯಾಯವಲ್ಲದ ವರ್ತನೆಗೆ ಸಂಪೂರ್ಣವಾಗಿ ವಿರೋಧಿಸ ಬೇಕಲ್ಲದೆ, ಬೇರೆ ಕರ್ನಾಟಕಸ್ಥರು ಬಳ್ಳಾರಿಯ ತಮ್ಮ ಸಹೋದರರಿಗೆ ಬೆಂಬಲವಾಗ ನಿಲ್ಲುವುದು ಅಗತ್ಯವಾಗಿದೆ.

ದಾಸರ ಸ್ಮಾರಕ ಫಂಡು.

ಚಿತ್ತರಂಜನ ದಾಸರವರ ಅಖಿಲ ಭಾರತ ಸ್ಮಾರಕಫಂಡು ಒಂದನ್ನು ಸ್ಥಾಪಿಸಬೇಕೆಂದೂ, ಆ ಫಂಡನ್ನು ದಾಸರವರ ಮುಖ್ಯ ಉದ್ದೇಶವಾಗಿದ್ದ ಗ್ರಾಮಾಭಿವೃದ್ಧಿಗೆ ಅಂದರೆ ಗ್ರಾಮಗಳಲ್ಲಿ ಚರಕಾ ಮತ್ತು ಖಾದಿ ಪ್ರಚಾರಕ್ಕೆ ಉಪಯೋಗಿಸಬೇಕೆಂದೂ ಮಹಾತ್ಮ ಗಾಂಧಿಯವರೇ ಮೊದಲಾದ ಹಿರಿಯರು ದೇಶದ ಮುಂದಾಳುಗಳು ದೇಶದವರಲ್ಲಿ ವಿನಂತಿ ಮಾಡಿಕೊಂಡಿರುವರು. ಈ ವಿಷಯದಲ್ಲಿ ನಮ್ಮ ದೇಶಸ್ಥರೂ ತಮ್ಮ ಶಕ್ತಿಮೀರಿ ಧನ ಸಹಾಯಕೊಡಬೇಕಾದದ್ದು ಅವಶ್ಯವಾಗಿದೆ. ಯಾಕೆಂದರೆ ಈ ಹಣದಲ್ಲಿ ನಮ್ಮ ದೇಶದ ಗ್ರಾಮಗಳ ಅಭಿವೃದ್ಧಿಯ ಪಾಲಿನ ಹಣವು ಈ ದೇಶಕ್ಕೆ ದೊರೆಯದೆ ಇರದು. ಆದದರಿಂದ ದೇಶದ ಆರ್ಥಿಕ ಸ್ಥಿತಿಯನ್ನು ಕಾಪಾಡುವ ಖಾದಿ ಪ್ರಚಾರದಲ್ಲಿ ಹಿಂದುಳಿದಿರುವ ನಮ್ಮ ದೇಶವನ್ನು ಈ ವಿಷಯದಲ್ಲಿ ಮುಂದುವರಿಸಲು ದೇಶೀಯರಿಗೆ ಉದಾರ ಭಾವವನ್ನು ತೋರಿಸಲು ಇದೊಂದು ಸಮಯ. ಒಬ್ಬೊಬ್ಬರಾಗಿ ಅಖಿಲ ಭಾರತ ಫಂಡಿನ ಸೆಕ್ರೆಟರಿ ಯಾ ಖಜಾಂಚಿಯವರಿಗೆ ಹಣ ಕಳುಹಿಸುವುದರ ಬದಲು ನಮ್ಮ ದೇಶದಲ್ಲಿ ಒಂದು ಕಮಿಟಿಯನ್ನು ಏರ್ಪಡಿಸಿಕೊಂಡು ಆ ಮೂಲಕ ಇಲ್ಲಿಯ ಚಂದವನ್ನೆಲ್ಲಾ ಒಟ್ಟುಗೂಡಿಸಿ ಒಟ್ಟಿಗೆ ಆ ಫಂಡಿನವರಿಗೆ ಕಳುಹಿಸುವುದು ಉತ್ತಮವಾದುದರಿಂದ ಮುಂದಾಳುಗಳು ಈ ವಿಷಯ ಬೇಗನೆ ಆಲೋಚಿಸಬೇಕಾಗಿ ಸೂಚಿಸುತ್ತೇವೆ.

ಹಿಂದೀ—ಭಾರತೀಯರ ಮಾತೃಭಾಷೆ.

ಈ ವಿಷಯ ಲೇಖನ ಒಂದು ಇನ್ನೊಂದು ಕಡೆ ಪ್ರಕಟವಾಗಿದೆ. ಹಿಂದಿಯು ಸಕಲ ಭಾರತದ ರಾಷ್ಟ್ರಭಾಷೆಯಾಗಬೇಕೆಂಬುದಕ್ಕೆ ನ್ಯಾಯವಾದ ಕಾರಣಗಳನ್ನು ಸೂಚಿಸಿರುವ ಆ ಲೇಖನವನ್ನು ಎಲ್ಲರೂ ಲಕ್ಷ್ಯವಿಟ್ಟು ಓದಬೇಕಾಗಿದೆ. ಕೊಡಗು ದೇಶವು ಭಾರತದ ಚಿಕ್ಕದಾದರೂ, ಒಂದು ಭಾಗವೆಂಬುದನ್ನು ನಾವು ದೇಶೀಯರು ಮರೆಯಬಾರದು. ಹಿಂದೂದೇಶದ ಬೇರೆ ಕಡೆಗಳಲ್ಲಿ ಹಿಂದೀಭಾಷಾ ಪ್ರಚಾರವು ದಿನೇ ದಿನೇ ಹೆಚ್ಚುತ್ತಿರುವಲ್ಲಿ ಕೊಡಗಿನಲ್ಲಿ ಈ ಪ್ರಸ್ತಾಪವೇ ಇಲ್ಲದಿರುವುದು ಶೋಚನೀಯ. ಇನ್ನಾದರೂ ಹಿಂದೀಯರೆನಿಸಿಕೊಳ್ಳಲು ನಾಚಿಕ ಪಡದವರು ಈ ವಿಷಯಕ್ಕೆ ತಕ್ಕಷ್ಟು ಗಮನಕೊಡುವರಾಗಿ ಆಶಿಸುತ್ತೇವೆ.

ಒಟ್ಟು ಹಿಂದೂಸ್ಥಾನದ ದಾಸರ ಸ್ಮಾರಕ ಫಂಡಿನ ಬಗ್ಗೆ ಹೊರಟ ವಿಜ್ಞಾಪನೆ ಪತ್ರಿಕೆ.

ದೇಶಬಂಧು ಚಿತ್ತರಂಜನ ದಾಸರ ಸ್ಮರಣೆಗಾಗಿ ಅಖಿಳ ಬಂಗಾಳದ ಫಂಡ್ ಎಷ್ಟರ ಮಟ್ಟಿಗೆ ಅವಶ್ಯವೋ ಅಷ್ಟೇ ಅಖಿಳಭಾರತ ಫಂಡ್ ಒಂದು ಅವಶ್ಯವಾಗಿದೆ. ಅವರು ಎಷ್ಟರ ಮಟ್ಟಿಗೆ ಅಖಿಳಬಂಗಾಳದ ಮನುಷ್ಯರಾಗಿದ್ದರೋ ಅಷ್ಟೇ ಅಖಿಳಭಾರತದ ಮನುಷ್ಯರಾಗಿದ್ದರು. ಅಖಿಳಬಂಗಾಳ ಸ್ಮಾರಕವು ಯಾವ ರೂಪದ್ದಿರಬೇಕೆಂಬದನ್ನು ದಾಸರು ಹೇಳಬಹುದಿತ್ತೆಂಬದು ನಮಗೆ ತಿಳಿದಿರುವಂತೆಯೇ ಅಖಿಳಭಾರತ ಸ್ಮಾರಕವು ಯಾವ ರೂಪದ್ದಿರಬೇಕೆಂತ ಅವರು ಅಭಿಪ್ರಾಯಪಡಬಹುದಿತ್ತೆಂಬದು ನಮಗೆ ಗೊತ್ತಿದೆ. ಹಿಂದೂಸ್ಥಾನದ ಉದ್ಧಾರಕ್ಕೂ ಶಾಂತತೆಯಿಂದಲೂ ಕ್ರಮವಾದ ಬೆಳವಣಿಗೆಯಿಂದಲೂ ಹಿಂದೂಸ್ಥಾನಕ್ಕೆ ಸ್ವರಾಜ್ಯ ದೊರಕಿಸಲು ಗ್ರಾಮವಾಸಿಗಳ ಅಭಿವೃದ್ಧಿಯೇ ಶ್ರೀಯುತ ದಾಸರಿಗೆ ಅತ್ಯಂತ ಪ್ರಿಯವಾದ ಮತ್ತು ಅವಶ್ಯವಾಗಿ ತೋರಿದ್ದ ವಿಷಯವೆಂಬದು ಅವರು ಒಂದು ವರ್ಷದ ಕೆಳಗೆ ಹೇಳಿದ್ದರು. ಮತ್ತು ಅದೇ ಅಭಿಪ್ರಾಯವನ್ನು ಫರಿದ್ಪುರದ ಭಾಷಣದಲ್ಲೂ ಪುನಃ ಹೇಳಿದ್ದಾರೆ. ಅಂಥಾ ಗ್ರಾಮಾಭಿವೃದ್ಧಿಯ ಮೂಲವೂ, ಸ್ತಂಭವೂ ಗ್ರಾಮಗಳಲ್ಲಿ ಕೈನೂಲು ತಯಾರಿಯನ್ನು ಹೆಚ್ಚಿಸುವದರಲ್ಲೂ, ಖದ್ದರ್ ಬಟ್ಟೆಯ ಉಪಯೋಗದಲ್ಲೂ ಇದೆ ಎಂತ ಶ್ರೀಯುತ ದಾಸರವರು ನಂಬಿದ್ದಾರೆಂತ ನಮಗೆ ಗೊತ್ತಿದೆ. ಒಟ್ಟು ಇಂಡಿಯಾದ ಎಲ್ಲಾ ಭಾಗಗಳಲ್ಲೂ ನಡಿಸಲು ಸಾಧ್ಯವಿರುವ ಚಳವಳವು ಇದೊಂದೇ. ಇದರಷ್ಟು ಕಡಿಮೆ ಖರ್ಚಿನಲ್ಲಿ ಬೇರೆ ಯಾವ ಚಳವಳವೂ ಸಾಧ್ಯವಿಲ್ಲ. ಸ್ವಲ್ಪವಾದರೂ ತತ್ಕಾಲ ಫಲ ಸಿಕ್ಕಬೇಕಾದರೆ ಈ ಚಳವಳದಿಂದಲೇ ಸರಿ. ವಿದ್ಯಾವಂತರೂ, ಬಡವರೂ, ಯೌವನಸ್ಥರೂ, ಮುದುಕರೂ, ಗಂಡಸರೂ, ಹೆಂಗಸರೂ ಎಂಬ ಭೇದವಿಲ್ಲದೆ ಸರ್ವರು ಸ್ವತಃ ಕೆಲಸಮಾಡಿ ಸಹಾಯಮಾಡಬಹುದಾದ ಚಳವಳವಾಗಿದೆ. ಈ ಚಳವಳವನ್ನು ಕೈಕೊಂಡರೆ ಪಟ್ಟಣವಾಸಿಗಳಿಗೂ ಗ್ರಾಮವಾಸಿಗಳಿಗೂ ಸಂಬಂಧವು ಬೆಳೆಯುವದಲ್ಲದೆ ವಿದ್ಯಾವಂತರಿಂದ ಗ್ರಾಮವಾಸಿಗಳಿಗೆ ಇದರಿಂದಲೇ ಪ್ರಯೋಜನವಾಗಬೇಕಷ್ಟೆ. ಎಲ್ಲಾ ಪ್ರಾಂತ್ಯಗಳಲ್ಲೂ ಎಲ್ಲಾ ಜಾತಿಗಳಲ್ಲೂ ಸಾಧ್ಯವಿರುವ ಚಳವಳವು ಇದೆ. ಇದರಿಂದಲೇ ಅತ್ಯಧಿಕತಮ ಪ್ರಯೋಜನವೆನೆಂದ ಬಹುದು. ಈ ಚಳವಳಕ್ಕೆ ರಾಜಕೀಯ ಸಂಬಂಧವಿದ್ದರೂ ಇದು ಮುಖ್ಯವಾಗಿ ಆರ್ಥಿಕ ಮತ್ತು ಸಾಮಾಜಿಕ ಚಳವಳವಾಗಿದೆ. ಆದ್ದರಿಂದ ರಾಜಕೀಯ ಸಂಗಡ ಭೇದವಿಲ್ಲದೆ ಆರ್ಥಿಕ ಪ್ರಯೋಜನ ಕಾಣುವಂಥಾದ್ದೆಂತಲೂ, ಗ್ರಾಮಾಭಿವೃದ್ಧಿಗೆ ಸಹಾಯಕವಾದ್ದೆಂತಲೂ ನಂಬುವವರೆಲ್ಲರೂ ಇದರಲ್ಲಿ ಭಾಗಿಗಳಾಗಬಹುದು. ಆದ್ದರಿಂದ ಚರಖಾ ಮತ್ತು ಖಾದಿಯನ್ನೂ ಸರ್ವ ಜನಗಳಲ್ಲೂ, ಭಾಗದಲ್ಲೂ ಹಬ್ಬಿಸುವದಕ್ಕಿಂತ ದೊಡ್ಡ ಮತ್ತು ತಕ್ಕಂಥ ಸ್ಮಾರಕವನ್ನು ಯೋಚಿಸಲು ನಮಗೆ ಸಾಧ್ಯವಿಲ್ಲ. ಆದಕಾರಣಗಿಯೇ ಧನಸಹಾಯವನ್ನು ನಾವು ಬೇಡುತ್ತೇವೆ.

ಇಷ್ಟೇ ಮೊಬಲಗು ಬೇಕಂತ ಕೇಳುವದಿಲ್ಲ. ಯಾಕೆಂದರೆ ಎಷ್ಟು ಹಣ ಬಂದರೂ ಈ ಚಳವಳಕ್ಕೆ [illegible]

ಬಹುದು. ಜನರು ಕೊಡುವ ಚಂದಾದಿಂದ ಗತಿಸಿದ ದೇಶಭಕ್ತರಲ್ಲಿ ಅವರಿಗೆ ಇದ್ದ ವಿಶ್ವಾಸವನ್ನು ಸ್ಮಾರಕದ ರೂಪ ಅಂದರೆ ಚರ್ಖಾ ಮತ್ತು ಖದ್ದರಿನ ಪ್ರಚಾರದಲ್ಲಿ ಇರುವ ನಂಬಿಕೆಯನ್ನು ಮತ್ತು ಈ ಹಣವನ್ನು ವಿನಿಯೋಗಿಸುವವರಲ್ಲಿ ಇರುವ ನಂಬಿಕೆಯನ್ನು ತಿಳಿಯಬೇಕಾಗಿದೆ. ಈ ಹಣವನ್ನು ಉಪಯೋಗಿಸುವವರು ಯಾರೆಂದರೆ ಎಂ. ಕೆ. ಗಾಂಧಿ, ಪಂಡಿತ ಮೋತಿಲಾಲ್ ನೆಹರು, ಮೌಲಾನಾ ಶೌಕತ್ ಅಲಿ, ಡಾಕ್ಟರ್ ಪ್ರಫುಲ್ಲ ಚಂದ್ರರಾಯ್, ಶ್ರೀಮತಿ ಸರೋಜಿನಿನಾಯಿಡು, ಸೇಟ್ ಜಮ್ನಾಲಾಲ್ ಬಜಾಜ್ ಮತ್ತು ಪಂಡಿತ ಜವಾಹರ್‌ಲಾಲ್ ನೆಹರೂ ಇವರ ಜೊತೆಗೆ ಬೇರೆಯವರನ್ನು ಸೇರಿಸಿಕೊಳ್ಳಬಹುದು. ಈ ಟ್ರಸ್ಟಿಗಳಿಗೆ ಜವಾಹರ್‌ಲಾಲ್ ನೆಹರೂರವರು ಸೆಕ್ರೆಟರಿಯಾಗಿಯೂ ಸೇಟ್ ಜಮ್ನಾಲಾಲ್ ಬಜಾಜರು ಖಜಾಂಚಿಯಾಗಿಯೂ ಕೆಲಸಮಾಡಲು ಒಪ್ಪಿರುತ್ತಾರೆ. ಹಣಗಳನ್ನು ಜಮ್ನಾಲಾಲ್ ಬಜಾಜ್ 395, ಕಾಲ್ಬಾದೇವಿರೋಡ್ ಬೊಂಬಾಯಿ ಅಥವಾ ಪಂಡಿತ ಜವಾಹರ್‌ಲಾಲ್ ನೆಹರೂ 107 ಮ್ಯೂಯಿರ್‌ರೋಡ್ ಅಲ್ಲಹಾಬಾದ್ ಎಂಬ ವಿಳಾಸಗಳಿಗೆ ಕಳುಹಿಸಬಹುದು. ಹಣಕೊಡುವವರ ಪ್ರತಿ ಪಟ್ಟಿಯನ್ನು ವಾರ ವಾರ ಪತ್ರಿಕೆಗಳ ಮೂಲಕ ಪ್ರಕಟಿಸಲಾಗುವುದು.

ಸೈನ್ ಹಾಕಿದವರು:—ಎಮ್. ಕೆ. ಗಾಂಧಿ, ಎ. ಕೆ. ಆಜಾದ್, ಪಿ. ಸಿ. ರಾಯ್, ಜಮ್ನಾಲಾಲ್ ಬಜಾಜ್, ರವೀಂದ್ರನಾಥಟಾಗೂರ್, ಶ್ಯಾಮ್, ಎಸ್. ಚಕ್ರವರ್ತಿ, ಸಿ. ಎಫ್. ಆಂಡ್ರ್ಯೂಸ್, ಸರೋಜಿನಿನಾಯಿಡು, ಜೆ. ಎಮ್. ಸೆನ್ ಗುಪ್ತ, ನೀಲರತನ ಸರ್ಕಾರ್, ಸತೀಶ್ ದಾಸ್, [illegible] ಯೂಸುಫ್ ಬರೂಚಾ, [illegible] ಚಂದ್ರ [illegible], ಬಿ. ಸಿ. ರಾಯ್, ಸತ್ಯಾನಂದ ಬೋಸ್, ಸರತ್ ಚ. ಬೋಸ್, ಮತ್ತು ನಳಿನೀರಂಜನ ಸರ್ಕಾರ್.

ಹಿಂದಿ—ಭಾರತೀಯರ ಮಾತೃಭಾಷೆ.

ಲೇಖಕ " ಹಿಂದಿಗೆಳೆಯ

ಭಾರತೀಯರಿಗೆ ರಾಷ್ಟ್ರಭಾಷೆ ಯಾವುದಾಗಬೇಕೆಂಬ ವಿಷಯದಲ್ಲಿ ಭರತಖಂಡದ ನಾನಾ ಕಡೆಗಳಲ್ಲಿ ಚರ್ಚೆ ನಡೆಯುತ್ತಿದೆ. ಒಬ್ಬನ ಅಭಿಪ್ರಾಯವನ್ನು ಮತ್ತೊಬ್ಬನು ತಿಳಿದುಕೊಳ್ಳುವುದೇ ಭಾಷೆಯ ಮುಖ್ಯ ಉದ್ದೇಶ. ರಾಷ್ಟ್ರದ ಏಕೀಕರಣಕ್ಕೆ ಒಂದು ಸಾಮಾನ್ಯ ಭಾಷೆ ಬೇಕು. ಭರತಖಂಡದ ಭಾಷೆಗಳಲ್ಲಿ ಎರಡು ವರ್ಗ. ಒಂದು ಆರ್ಯವರ್ಗ, ಇನ್ನೊಂದು ದ್ರಾವಿಡ ವರ್ಗ. ಬಂಗಾಳಿ, ಹಿಂದಿ, ಗುಜರಾತಿ, ರಾಜಸ್ಥಾನಿ, ಮರಾಠಿ ಇವೇ ಮೊದಲಾದುವುಗಳು ಆರ್ಯಭಾಷೆಗಳು. ತಮಿಳು, ತೆಲುಗು, ಕನ್ನಡ, ಮಲೆಯಾಳ ಇವೇ ಮೊದಲಾದುವುಗಳು ದ್ರಾವಿಡ ಭಾಷೆಗಳು. ಈ ಭಾಷೆಗಳಲ್ಲದೆ ಇಂಗ್ಲಿಷ್ ಭಾಷೆಯು ಸಹ ಪ್ರಚಾರದಲ್ಲಿದೆ.

ಹಿಂದಿಯರಿಗೂ ಇಂಗ್ಲೀಷಿನವರಿಗೂ ಪರಸ್ಪರ ಸಂಬಂಧ ಉಂಟಾಗಿ ಸಾಧಾರಣ ೨೦೦ ವರ್ಷಗಳಿಗಿಂತಲೂ ಹೆಚ್ಚಾಗಿರಬಹುದು. ಇಂಗ್ಲಿಷರು ಹಿಂದುಸ್ಥಾನಕ್ಕೆ ಬರೀ ವ್ಯಾಪಾರಸ್ಥರಾಗಿ ಬಂದು, ಕ್ರಮೇಣ ಇಡೀ ದೇಶವನ್ನೇ ಸ್ವಾಧೀನಪಡಿಸಿಕೊಂಡು ತಮ್ಮ ಶಾಸನವನ್ನು ಸ್ಥಾಪಿಸಿದರು. ಭಾರತೀಯರಲ್ಲಿ ಒಗ್ಗಟ್ಟು ಸಾಲದೆ ಹೋದುದರಿಂದ ಹಿಂದೂದೇಶವು ಪರರ ಆಳಿಕೆಗೆ ಒಳಗಾಯಿತು. ಮುಸಲ್ಮಾನರ ಆಳಿಕೆಯಲ್ಲಿ ಜನರು ಬಹಳವಾಗಿ ಸಂಕಟ ಪಟ್ಟರು. ತಮ್ಮ ಜಾತಿ ಕುಲ ಕಳೆದುಕೊಂಡರು. ಮೊಗಲಾಯ ರಾಜರು ಲೋಲುಪತಿಗಳಾದುದರಿಂದಲೂ, ಇವರ ಮಕ್ಕಳು ಹಿಂದು ಮೊಗಲರ ಹೊಟ್ಟೆಯಲ್ಲಿ ಹುಟ್ಟಿ ವೀರ್ಯಹೀನರಾದುದರಿಂದಲೂ ಮೊಗಲ ದರ್ಬಾರು ಹಾಸ್ಯವಾಯಿತು. ಆಂಗ್ಲೇಯರು ಮೊಗಲಾಯರನ್ನು ಹಿಮ್ಮೆಟ್ಟಿದರು. ಅವರಂತೆ ತಾವೂ ಅಧಿಕಾರಿಗಳಾದರು. ಕಾಲ ಸರಿದಂತೆ ತಮ್ಮ ಭಾಷೆಯನ್ನು ಕಲಿಯುವುದರಿಂದ ಜೀವನ ಸುಲಭವಾಗಿ ನೀಗುವುದೆಂದು ನಮ್ಮ ಜನರಿಗೆ ತೋರಿತು. ತನ್ನಾತ್ತಾ ನಮ್ಮ ಜನವರ್ಗದ [illegible] ಕೋರ್ಟು ಕಚೇರಿಗಳಲ್ಲಿ ಮುತ್ಸದ್ದಿಗಳಾದರು. ಇವತ್ತಿಗೂ ಕೇವಲ ಇಂಗ್ಲಿಷ್ ಕಲಿತವನಿಗೆ ಮರ್ಯಾದೆ ಸಿಕ್ಕುವಷ್ಟು ಬೇರೆ ಯಾವ ಪಂಡಿತನಿಗೂ ಇಲ್ಲ.

ನಾವು ಇಂಗ್ಲಿಷರ ಸಹಯೋಗವನ್ನು ಬೆಳೆಯಿಸಿದ ಕಾರಣ ಇಂಗ್ಲಿಷ್ ಭಾಷೆಯೂ ಬಹು ಪ್ರಾಬಲ್ಯಕ್ಕೆ ಬರುತ್ತಿದೆ. ಶಾಲೆಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಕಲಿಸಲೇ ಬೇಕು. ಇಂಗ್ಲಿಷ್ ಇಲ್ಲದ ಶಾಲೆಯ ಕಡೆಗೆ ಜನರ ದೃಷ್ಟಿ ಹೋಗುವುದೇ ಇಲ್ಲ. ತಮ್ಮ ಮಕ್ಕಳಿಗೆ ಸರ್ಕಾರ ನೌಕ್ರಿ ಸಿಕ್ಕಬೇಕೆಂಬುದೇ ಇವರ ದುರಾಕಾಂಕ್ಷೆ. ಈಗೀಗ ಸಿಬ್ಬಂದಿಯ ಕೊರತೆಯ ದೆಸೆಯಿಂದಲೂ, ರಾಷ್ಟ್ರಚಳವಳಿಯಿಂದಲೂ ಈ ಹೀನ ಅಭಿಪ್ರಾಯವು ದೂರವಾಗುತ್ತಲಿದೆ. ಇಂಗ್ಲಿಷ್ ಭಾಷೆಯನ್ನು ಕಲಿಯದಿದ್ದರೆ ಮರ್ಯಾದೆ ಸಿಕ್ಕಲಾರದೆಂಬ ಭಾವನೆಯು ಮೇಲಿನ ಕಾರಣಗಳ ದೆಸೆಯಿಂದ ಮೂಲೆ ಪಾಲಾಗುತ್ತಿದೆ. ಮುಂದೆ ಏನನ್ನು ಕಲಿತುಕೊಳ್ಳಬೇಕಾದರೆ ಸ್ವಭಾಷೆಯೇ ಅತ್ಯಗತ್ಯ. ಹೆಚ್ಚು ಬುದ್ಧಿವಂತನಾಗಿ ದೇಶೋದ್ಧಾರವನ್ನು ಕೈಕೊಳ್ಳತಕ್ಕ ಮಾನವನಿಗೆ ಪರಭಾಷೆಯನ್ನು ಕಲಿಯುವುದು ಯೋಗ್ಯವಲ್ಲವೆಂದು ನಾವು ಹೇಳಲಾರೆವು. ಹಳ್ಳಿ ಶಾಲೆಗಳಲ್ಲಿ ಇಂಗ್ಲಿಷ್ (Optional) ಐಚ್ಛಿಕ-ಭಾಷೆಯಾಗಿ ಕಲಿಸಲ್ಪಡುತ್ತಿದೆ. ಹೈಸ್ಕೂಲುಗಳಲ್ಲಿ ಪಾಠ ಪ್ರವಚನಗಳು ಇಂಗ್ಲಿಷಿನಲ್ಲೇ ನಡೆಯುತ್ತಿವೆ. ಮಾತೃಭಾಷೆಯು ಕಡೆಗೆ ಮಕ್ಕಳ ಗಮನ ಕಡಮೆ. ಹಲವು ವಿದ್ವಾಂಸರು ಹೋರಾಡಿದ್ದರಿಂದ ಹೈಸ್ಕೂಲುಗಳಲ್ಲಿ ಆಯಾ ಪ್ರಾಂತಿಕ ಭಾಷೆಗಳಲ್ಲಿ ಪಾಠ ನಡೆಯಿಸಬಹುದೆಂದು ಸರಕಾರದವರು ಈಗ ವ್ಯವಹರಿಸುತ್ತಾರೆ. ಇದೊಂದು ದೊಡ್ಡ ಪ್ರಯೋಜನ. ಇದು ಸರಕಾರದವರಿಗೆ ಅಭಿನಂದನೀಯವೆನಿಸುತ್ತದೆ.

ಇಂಗ್ಲಿಷ್ ಭಾಷೆಯನ್ನು ಹಿಂದಿಯರ ಸ್ವಭಾಷೆಯನ್ನಾಗಿ ಮಾಡಲು ಪ್ರಯತ್ನಿಸಿದ ಮಹಾನುಭಾವನು ಮೆಕಾಲೆಯು. ಒಂದು ಶತಮಾನಕ್ಕೆ ಹಿಂದೆ ಇತನು ಈ ರೀತಿ ಬರೆದನು. ಆದರೆ ಈಗಿನ ಸಂಸಾರವು ಬದಲಾವಣೆಯನ್ನು ಹೊಂದಿದೆ. "ಇಂಗ್ಲಿಷ್ ಭಾಷೆಯಲ್ಲಿರುವಷ್ಟು ಗ್ರಂಥಗಳು ಮತ್ತಾವ ಭಾಷೆಯಲ್ಲಿಯೂ ಇಲ್ಲ. ಹೀಗಾಗಲಿಕ್ಕೆ ಆಂಗ್ಲೇಯರ ಸತತ ಯತ್ನವೇ ಕಾರಣ. ಆಂಗ್ಲೇಯರ ರಾಜ್ಯವು ಬೆಳೆದಂತೆ, ಅವರ ಐಶ್ವರ್ಯವು ಹೆಚ್ಚಿತು. ಐಶ್ವರ್ಯವು ಹೆಚ್ಚಿದಂತೆ ಅವರೊಳಗೆ ವಿದ್ಯೆಯೂ ವೃದ್ಧಿಗೊಂಡಿತು. ವಿದ್ಯಾವಂತರು ಹೆಚ್ಚಾದ ಹಾಗೆ ಗ್ರಂಥಗಳ ರಾಶಿಯು ಗಗನಕ್ಕೇರಿತು." ಹಿಂದೂ ದೇಶದಲ್ಲಿ ಎಲ್ಲಿ ನೋಡಿದರೂ ಇಂಗ್ಲಿಷ್ ಪುಸ್ತಕಗಳೇ! ನಮ್ಮ ಹಳೇ ಗ್ರಂಥಗಳೆಲ್ಲ ಮಾಯವಾದುವು. ಇಂಗ್ಲಿಷ್ ಭಾಷೆಯ ಪ್ರಭಾವದಿಂದ ನಮ್ಮ ಇತಿಹಾಸ, ನಮ್ಮ ಶಾಸ್ತ್ರ, ನಮ್ಮ ಆಚಾರವಿಚಾರ ಇವೆಲ್ಲವೂ ಮಣ್ಣುಪಾಲಾಗುವಂತಾದವು. ಹೀಗಾದರೂ ಇಂಗ್ಲಿಷ್ ಭಾಷೆಯ ಮೇಲೆ ನಮಗೆ ಅತ್ಯಧಿಕ ಪ್ರೀತಿ. ನಮ್ಮ ದ್ರಾವಿಡ ಭಾಷೆಗಳಿಗೆ ತಾಯಿಯಾದ ಸಂಸ್ಕೃತವು ಸಾಮಾನ್ಯವೇ? ನಮ್ಮಲ್ಲಿ ಸಂಸ್ಕೃತವನ್ನು ಅಭ್ಯಾಸಿಸಿದವರ ಸಂಖ್ಯೆಯು ಕಡಮೆಯಾಗಿದೆ. [illegible] ಮಂದಿ [illegible] ಕಲಿತವರು ಇದ್ದರೂ [illegible] ಮಂದಿ ನಮ್ಮಲ್ಲಿರುವರು. [illegible] ಸಂಸ್ಕೃತ, [illegible] ಕನ್ನಡ [illegible] ಇವರ ಮನಸ್ಸಿನಲ್ಲಿ [illegible] ದಲ್ಲಿ ಹಿಂದೆ ದೇಶವಿದ್ದ ಸ್ಥಿತಿಯನ್ನು ನೋಡಿದರೆ, ಸಂಸ್ಕೃತಕ್ಕೆ ಎಷ್ಟು ಗೌರವವಿತ್ತೆಂದು ತಿಳಿಯುವುದು. ಹಿಂದಕ್ಕೆ ರಾಜಾಮಹಾರಾಜರು ಭಾರತೀಯ ಭಾಷೆಗಳಿಗೆ ಹೆಚ್ಚು ಮನ್ನಣೆಯನ್ನು ಕೊಡುತ್ತಿದ್ದರು. ಅಂಥ ಮನ್ನಣೆ ಭಾಷೆಗಳಿಗೆ ಈಗ ಇದೆಯೇ? ಸರಕಾರದ ಸಹಾಯವಿಲ್ಲದ ಭಾಷೆಯು ಮೇಲ್ಮೈಗೆ ಬರುವುದು ತಾನೇ ಹೇಗೆ? [illegible] ಇಲ್ಲ. ಜನಸಹಾಯವಿದ್ದರೆ, ಅದು ಉತ್ಕರ್ಷಕ್ಕೆ ಬಾರದೆ ಹೋದೀತೇ?

ಪ್ರಪಂಚವನ್ನೆಲ್ಲ ಒಂದೇ ಭಾಷೆಯ ಹಿಡಿತದಲ್ಲಿಡ [illegible] ಬೇಕೆಂದು ಯುಕ್ತಿಸುತ್ತಾರೆ. ಅಂಥಾ ವಿಶ್ವಭಾಷೆ [illegible] ಇಂಗ್ಲಿಷ್ ಆಗಬೇಕಂತೆ!" ಎಷ್ಟೇ ಹಣಗಾಡಿ [illegible] ಒಂದೇ ಭಾಷೆ ಮಾತ್ರ ಉಳಿಯುವುದು ಸಾಧ್ಯವೇ? ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಕಾಡುಜನರ ಭಾಷೆಯನ್ನು ಸಹ ಕಲಿಸುತ್ತಿರುವರು. ಹೀಗಿರುವಲ್ಲಿ ಎಲ್ಲ ಭಾಷೆಗಳು ನಾಮಾವಶೇಷವಾಗುವುದು ಹೇಗೆ? ನಮ್ಮ ಅಭಿಪ್ರಾಯದಲ್ಲಿ ಪ್ರಾಂತಿಕ ಭಾಷೆಗಳೂ ಇರಬೇಕು. ರಾಷ್ಟ್ರಭಾಷೆಯೂ ಬೇಕು. ಇದೇ ಲೋಕಮಾನ್ಯರ ಅಭಿಮತ.

ಆಧುನಿಕ ನಾಗರೀಕ ವಿದ್ಯಾಮಹನೀಯರೊಳಗೆ ಕೆಲವರು ಇಂಗ್ಲಿಷೇ ರಾಷ್ಟ್ರಭಾಷೆಯಾಗಬೇಕೆಂದು ಎನ್ನುವರು. ಇಂಗ್ಲಿಷ್ ಭಾಷೆಯ ದೆಸೆಯಿಂದ ಹಿಂದೂದೇಶವು ಪ್ರಪಂಚದ ದೊಡ್ಡ ದೊಡ್ಡ ದೇಶಗಳ ಸಮಾಗಮವನ್ನು ಬೆಳೆಸಿತೆಂದೂ, ಇದರಿಂದ ನಮ್ಮ ದೇಶದ ಐಶ್ವರ್ಯವು ಹೆಚ್ಚಿತೆಂದೂ, ಮತ ಮತ್ತು ಜಾತಿ ಭೇದಗಳು ಮೇಲಿಗೆದ್ದವೆಂದೂ, ವಿದ್ಯೆಯು ದೇಶದ ಎಲ್ಲಾ ವರ್ಗಗಳಲ್ಲಿಯೂ ಪಸರಿಸುತ್ತಿದೆಯೆಂದೂ ಹಲವರ ಅಭಿಪ್ರಾಯ. ಹೀಗಾದುದು ಇಂಗ್ಲಿಷ್ ಭಾಷೆಯಿಂದಲೇ ಎಂದು ಹೇಳಬಹುದೇ? ಇಂಗ್ಲಿಷ್ ಭಾಷೆಯಿಂದ ಬಹಳ ಪ್ರಯೋಜನವಾಗಿದೆಯೆಂದು ನಾವು ನಂಬುತ್ತೇವೆ. ಆದರೆ ನಮ್ಮ ದೇಶೋನ್ನತಿಯು ಇಂಗ್ಲಿಷ್ ಭಾಷೆಯಿಂದಲೇ ಆಯಿತೆಂದೂ ಅಥವಾ ಆಗದಿದ್ದರೆ ಇನ್ನು ಮೇಲಾದರೂ ಆಗಬಹುದೆಂದೂ ನಾವು ನಂಬಿಲ್ಲ. ಜಪಾನರು ಮುಂದೆ ಬರಲು ಇಂಗ್ಲಿಷ್ ಭಾಷೆಯೇ ಕಾರಣವೋ? ಇಲ್ಲವೆ ಜಪಾನೀಯರ ಸ್ವಭಾಷಾಭಿಮಾನವೋ? ಇಂಗ್ಲಿಷು ಭಾಷೆಯಿಂದ ಅವರಿಗೆ ಕಾಂಚನಲಾಭ ಉಂಟಾಗಿರಬಹುದು. ಇಂಗ್ಲಿಷು ಭಾಷೆಯಿಂದಲ್ಲದೆ ಬೇರೆ ಯಾವ ಭಾಷೆಯಿಂದಲೂ ಭರತಖಂಡದ ಏಕೀಕರಣವು ಸಾಧ್ಯವಿಲ್ಲವೆಂದು ನಾವು ಕನಸಿನಲ್ಲಿಯೂ ಊಹಿಸಲಾರೆವು.

ಇಂಗ್ಲಿಷು ಭಾಷೆಯು ಹಿಂದೂದೇಶದ ಸಾಮಾನ್ಯಭಾಷೆಯಾಗಲಾರದೆಂದು ತೋರುತ್ತದೆ. ಹಾಗಾದರೆ ರಾಷ್ಟ್ರಭಾಷೆಯಾವುದೆಂದು ಹುಡುಕೋಣ. 1901ರ ಜನಸಂಖ್ಯೆಯ ಪಟ್ಟಿಯಲ್ಲಿ ಮುಖ್ಯ ಆರ್ಯಭಾಷೆಗಳನ್ನು ಮಾತಾಡುವ ಜನರು ಹೀಗಿರುವರು.

ಹಿಂದಿಭಾಷೆಯಾಡುವ ಜನ		60000000
ಬಂಗಾಳಿ	,,	45000000
ಬಿಹಾರಿ	,,	34000000
ಮರಾಠಿ	,,	18000000
ಪಂಜಾಬಿ	,,	17000000
ರಾಜಸ್ಥಾನಿ	,,	10000000

ಇದರಿಂದ ಹಿಂದಿಯೇ ರಾಷ್ಟ್ರಭಾಷೆಯಾಗತಕ್ಕದ್ದೆಂದು ತೋರುವುದು. ಒಂದು ಕೋಟಿಜನರು ಆಡುವ ರಾಜಸ್ಥಾನಿಯೂ ಹಿಂದಿಗೆ ಹತ್ತಿರವಾದ ಭಾಷೆ. ಶ್ರೀಯುತ ರಾಜೇಂದ್ರಸಿಂಹ ಇವರು, ಹಿಂದೂದೇಶದಲ್ಲಿ ಇಂಗ್ಲಿಷ್ ತಿಳಿದವರು ಶೇಕಡ 5 ಮಂದಿ ಎಂದೂ, ಹಿಂದುಸ್ಥಾನಿಯನ್ನು (ಪ್ರಾಂತೀಕ ಮತ್ತು ರಾಷ್ಟ್ರಭಾಷೆಯಾಗಿ) ಮಾತಾಡುವವರು ಶೇಕಡ 60 ಮಂದಿ ಎಂದೂ ಹೇಳಿರುತ್ತಾರೆ. ಹಿಂದೂದೇಶದಲ್ಲಿ ಹಳ್ಳಿಹಳ್ಳಿ, ನಾಡುನಗರ, ಊರುಕೇರಿಗಳಲ್ಲಿ ಹಿಂದುಸ್ಥಾನಿಯನ್ನಾಡದ ಜನರೇ ಇಲ್ಲ. ಇಂಗ್ಲಿಷು ಆಡುವವರು ಕೇವಲ ಧನಿಕರು; ರಣವೀರರಲ್ಲ. ರಣವೀರನಾಗಬೇಕೆಂಬ ಪ್ರತಿವ್ಯಕ್ತಿಯೂ ಹಿಂದುಸ್ಥಾನಿಯನ್ನು ಕಲಿಯಬೇಕು. ಎಲ್ಲಾ ಪ್ರಾಂತಗಳಲ್ಲಿಯೂ ಹಿಂದಿಯು ಹರಡಿದ ವಿನಹ ದೇಶಕ್ಕೆ ಅಭ್ಯುದಯವುಂಟಾಗಲಾರದು.

ಹಿಂದೂದೇಶದಲ್ಲಿ ಹಿಂದಿ ಮತ್ತು ಉರ್ದುಭಾಷೆಗಳಲ್ಲಿ ಯಾವುದು ರಾಷ್ಟ್ರಭಾಷೆಯಾಗಬಹುದು? ಇದೊಂದು ತೊಡಕಿನ ಪ್ರಸಂಗವೇ ಸರಿ. ಹಿಂದಿಯು ರಾಷ್ಟ್ರಭಾಷೆಯಾಗಬಾರದೆಂದು ಕೆಲಜನರು ವಾದಿಸುತ್ತಾರೆ. ಉರ್ದು ಭಾಷೆಯು ಅರಬ್ಬಿ ಶಬ್ದಗಳನ್ನೊಳಗೊಂಡಿರುವುದರಿಂದ ಅದು ಹಿಂದುಗಳಿಗೆ ಒಗ್ಗುವುದಿಲ್ಲವೆಂದೂ, ಹಿಂದೀಭಾಷೆಯು ಸಂಸ್ಕೃತ ಶಬ್ದಗಳುಳ್ಳದ್ದಾದುದರಿಂದ ಮುಸಲ್ಮಾನರಿಗೆ ಅದು ಒಪ್ಪಿಗೆಯಿಲ್ಲವೆಂದೂ ಚರ್ಚೆ ನಡೆಯುತ್ತಿದೆ. ಕಟ್ಟಾಸಿ ಭರತಖಂಡದಲ್ಲಿ ಹಿಂದುಗಳ ಸಂಖ್ಯೆಯೇ ಹೆಚ್ಚು. ಇವರ ಸಂಖ್ಯೆ ಸುಮಾರು 27 ಕೋಟಿ, ಮುಸಲ್ಮಾನರು 6 ಕೋಟಿ ಮಾತ್ರ. ಇದುದರಿಂದ ಹಿಂದಿಯನ್ನೇ ಎಲ್ಲರೂ ಕಲಿಯಬೇಕು. ಉರ್ದು ಮತ್ತು ಹಿಂದಿಗೆ ವ್ಯವಹಾರದಲ್ಲಿ ಹೆಚ್ಚೇನೂ ವ್ಯತ್ಯಾಸವಿಲ್ಲ. ಬರವಣಿಗೆಯಲ್ಲಿ ಮಾತ್ರ ವೈಲಕ್ಷಣ್ಯ. ಈ ವಿಷಯದಲ್ಲಿ ನಮಗೆ ಆಗ್ರಹವೇನೂ ತೋರುವುದಿಲ್ಲ. ಹಿಂದಿಯನ್ನು ಕಲಿತ ಮೇಲೆ ಪ್ರಾಂತಿಕ ಭಾಷೆಗಳು ಸಹ ಬೆಳಕಿಗೆ ಬರುವುವು. ಹಿಂದಿಯು ಸಂಸ್ಕೃತದಿಂದುಂಟಾದ ಪ್ರಾಕೃತ ಭಾಷೆಯಿಂದುದಿಸಿದೆ ಎಂಬುದನ್ನು ನಾವು ಮರೆಯಬಾರದು. 3000 ವರುಷಗಳಿಗೆ ಹಿಂದಕ್ಕೆ ಆರ್ಯರ ಭಾಷೆಯಾದರೋ ಸಂಸ್ಕೃತವೇ ಆಗಿತ್ತು. ಕಾಲಗತಿಗನುಸಾರವಾಗಿ ಸಂಸ್ಕೃತವು ಹಲವು ಪ್ರಾಕೃತ ಭಾಷೆಗಳಾಗಿ ಪರಿಣಮಿಸಿತು. ಸಕಲ ದ್ರಾವಿಡ ಮತ್ತು ಆರ್ಯ ಭಾಷೆಗಳಿಗೆ ಸಂಸ್ಕೃತವು ಜನನಿ ಎನಿಸಿಕೊಂಡಿದೆ. ಆದುದರಿಂದ ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿ ಸ್ವೀಕರಿಸಿದರೆ ಆಯಾಯ ಪ್ರಾಂತಿಕ ಭಾಷೆಗಳು ವೃದ್ಧಿಯಾಗುವುದೇ ಮಾತ್ರವಲ್ಲದೆ, ಜನರಿಗೆ ತಂತಮ್ಮ ಧರ್ಮ ವಿಚಾರದ ಮೇಲೆ ಮನಸ್ಸು ತಿರುಗುವುದು. ಆತ್ಮಮುಕ್ತಿ ಪಥವು ಸುಗಮವಾಗುವುದು. ಪ್ರಾಂತಿಕ ಭಾಷೆಗಳು ಉದ್ಧಾರವಾಗಬೇಕಾದರೆ ಹಿಂದಿ ಕಲಿಯಿರಿ. ನಿಮಗೆ ಮುಕ್ತಿ ಸಿಕ್ಕಬೇಕಾದರೆ ಹಿಂದಿ ಕಲಿಸಿರಿ, ಮೊಗಲರು ತಮ್ಮ ಪ್ರಭುತ್ವ ನಡೆಸಿದ್ದು ಹಿಂದಿಯಲ್ಲೇ ಅಲ್ಲವೇ?

ಇಂಗ್ಲಿಷ್ ಭಾಷೆಯನ್ನು ಕಲಿಯಲು ಮಹಾಕಷ್ಟ. ಒಂದು ಅಕ್ಷರಕ್ಕೆ ಒಂದೇ ಉಚ್ಚಾರಣೆ ಇಲ್ಲ, ನಾನಾತರ. ಇದೇ ಹಿಂದಿಯಲ್ಲಿ ಒಂದು ಅಕ್ಷರಕ್ಕೆ ಒಂದು ಉಚ್ಚಾರಣೆ. ಇಂಗ್ಲಿಷಿನ ಸಾಮಾನ್ಯ ತಿಳುವಳಿಕೆ ಹೊಂದಬೇಕಾದರೆ, ಬಹುಶಃ ಹದಿನಾಲ್ಕು ವರ್ಷ ಓದಿದರೂ ಸಾಲದು. ಆದರೆ ಪ್ರಾಂತೀಕ ಭಾಷೆಯನ್ನು ಕಲಿಯುತ್ತ ಒಬ್ಬನು ಹಿಂದಿಯನ್ನು ನಾಲ್ಕು ಅಥವಾ ಐದು ವರ್ಷಗಳಲ್ಲಿ ಕಲಿಯಬಹುದು. ಭಾರತೀಯರೇ! ಹಿಂದಿಯು ನಮ್ಮ ಪೂರ್ವಜರ ಭಾಷೆ. ಈ ಭಾಷೆಯನ್ನು ಕಲಿತರೆ ಅವರ ಮೇಲೆ ನಮ್ಮ ಪ್ರೀತಿ ಹೆಚ್ಚಾಗುವುದು. ನಾವು ಅವರ ಸುಪುತ್ರರೆನ್ನಿಸಿಕೊಳ್ಳುವೆವು.

ಕೆನಿಯಾದ ಸ್ಥಿತಿಯನ್ನು ನೋಡಿದರೆ ನಮಗೆ ಅಪರಿಮಿತ ದುಃಖ ಉಂಟಾಗುವುದು. ಕೆನಿಯಾದಲ್ಲಿ ಆಂಗ್ಲೇಯರಿಗಿಂತ ಎಷ್ಟೋ ಮೊದಲೆ ನಮ್ಮ ಜನರು ವಾಸಿಸಿದರು. ಆದಾಗ್ಯೂ ನಮ್ಮವರಿಗೆ ಯಾವ ಹಕ್ಕೂ ಇಲ್ಲ. ನಾವು ನೀಗ್ರೊ ಜನರಿಗಿಂತ ಕಡೆಯಾದೆವು. ಇಂಗ್ಲಿಷ್ ಕಲಿತದ್ದರ ಫಲವು ಇದೆಯೋ? ನಾಮಧಾರಿ ಶಾಸ್ತ್ರಿಗಳ ವಿಶ್ವಪ್ರಯತ್ನದ ಫಲವೇನು? ವರ್ಣಭೇದವು ಶಾಶ್ವತವಾಗಿರಬೇಕೆಂಬುದಲ್ಲವೇ? ಸರ್ ಮು. ತೇಜಬಹದ್ದೂರ ಸಪ್ರುಗಳಿಗೆ ಸ್ಮಟ್ಸ್ ಸಾಹೇಬರು ಕೊಟ್ಟ ಉತ್ತರವನ್ನು ಪರಿಶೀಲಿಸಿದರೆ, ಆಂಗ್ಲಾ ಭಾಷೆಯಿಂದ ಏಕೀಕರಣವು ಎಷ್ಟರಮಟ್ಟಿಗೆ ಸಾಧ್ಯವೆಂದು ಪ್ರಪಂಚದ ಜನರಿಗೆ ತಿಳಿಯದಿರದು. ರವೀಂದ್ರರು ಇಂಗ್ಲಿಷು ವಿದ್ಯೆಯನ್ನು ಕಲಿತು, ತಮ್ಮ ಓಜಸ್ಸಿನಿಂದ ಪೌರ್ವಾತ್ಯರನ್ನು ಪಾಶ್ಚಾತ್ಯರನ್ನು ಒಂದುಗೂಡಿಸುವ ಯತ್ನ ನಡೆಸುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಸಾಧ್ಯವೋ ನೋಡಬೇಕು.

ಕೆಲವರು ಹಿಂದೂಜನರ ಐಕ್ಯತೆಗೆ ಹಿಂದಿಭಾಷೆಯೇನು ಬೇಕಾಗಿಲ್ಲ. ಹಿಂದುಸ್ಥಾನದಲ್ಲಿಯೂ ಐಕ್ಯತೆಯುಂಟಾಗಬೇಕಾದರೆ ಹಿಂದಿಯೇ ನಮ್ಮ ರಾಷ್ಟ್ರಭಾಷೆಯಾಗಬೇಕು. ಇಂಗ್ಲಿಷನ್ನು ಕಲಿಯಲೇ ಬಾರದೆಂದು ನಮ್ಮ ಅಭಿಪ್ರಾಯವಲ್ಲ. ನಮ್ಮ [illegible] ಬೇಕಾದರೆ ನಾವು ಇಂಗ್ಲಿಷ್ ಕಲಿಯಲೇ ಬೇಕು. ಆದರೆ ನಾವು [illegible] ಹಿಂದಿಭಾಷೆಯನ್ನೇ ಉಪಯೋಗಿಸಬೇಕು. ಇದೇ ಹಿಂದುಸ್ಥಾನದಲ್ಲಿ ಹಿಂದಿಭಾಷಾಪ್ರಚಾರವು ಅತಿ ಶೀಘ್ರದಲ್ಲಿ ನಡೆಯಲಿ. ಭಗವಂತನನ್ನು ನಾವು [illegible] ನಮ್ಮ ಪೂರ್ವಜರು [illegible] ನಮ್ಮ ಮಕ್ಕಳುಮರಿಗಳೂ ಬೇಗನೆ ಹಿಂದಿಯಲ್ಲಿ ಮಾತಾಡಲು ಯೋಗ್ಯರಾಗುವಂತೆ [illegible] ಭಾರತೀಯರಿಗೆ ಚಿರಾಯುವಾಗಿ ಸ್ವಾತಂತ್ರ್ಯ ದೊರೆಯುವುದು, ಹಿಂದೂಧರ್ಮವೂ ಉಳಿ

ಯುವುದು, ಪಾಶ್ಚಿಮಾತ್ಯದ ನಿಸ್ಸಾರವಾದ ಸಭ್ಯತೆಯ ಅನುಕರಣವು ನಮ್ಮಲ್ಲಿ ನಿಂತುಹೋಗುವುದು. ಮಾಯಾವಾದಿಗಳೆಂಬ ಮಾತು ಸುಳ್ಳಾಗುವುದು.

ಶ್ರೀ ಹಿಂದಿಭಾಷೆಯು ಆರ್ಯವರ್ತದ ಹಳೇಭಾಷೆ; ಬಹುಮಂದಿಯ ಭಾಷೆ. ಈ ಭಾಷೆಯು ತಮಿಳು, ತೆಲುಗು ಕನ್ನಡ ಪ್ರಾಂತ್ಯಗಳಲ್ಲಿ ಪ್ರಚಾರಕ್ಕೆ ಬರುತ್ತದೆ. ದಿವ್ಯಭಾಷೆಯನ್ನು ಕಲಿಯಿರಿ, ಪಾಶ್ಚಾತ್ಯರಂತೆ ಬಾಹ್ಯಾಡಂಬರಕ್ಕೆ ಒಳಗಾಗಬೇಡಿರಿ. ಹಿಂದಿಯನ್ನು ಕಲಿತು ಕೃತಕಾರ್ಯರಾಗಿರಿ, ದೇಶೋದ್ಧಾರ ಮಾಡಿರಿ ನೀವು ಯಾವಾಗ ಭಾರತಮಾತೆಯನ್ನು ಹಿಂದಿಭಾಷೆಯಲ್ಲಿ ಮಾತನಾಡಿಸುವಿರೋ ಆ ದಿನವೇ ಶುಭದಿನ. ಇಂದು ಮಾತೆಯು ಕಣ್ಣು ಬಿಟ್ಟು ನಿಮ್ಮನ್ನು ಹರಸುವಳು

ವಂದೇಮಾತರಂ

ಚೈನಾದ ಜನರು ಪ್ರಪಂಚದ ಜನರಿಗೆ ಕಳುಹಿಸಿದ ವಿನಂತಿ.

ಪ್ರಪಂಚದ ಜನರ ಮುಂದೆ ಚೈನಾದ ಕ್ಯಾಂಟನ್ ಎಂಬಲ್ಲಿನ ರಾಷ್ಟ್ರೀಯ ಸರಕಾರದ ಪರವಾಗಿ ಕಳುಹಿಸಲ್ಪಟ್ಟ ಈ ವಿಜ್ಞಾಪನಾ ಪತ್ರಿಕೆಯು ಮಹಾತ್ಮ ಗಾಂಧಿಯವರಿಗೆ ಕಳೆದ ವಾರ ತಂತಿ ಮೂಲಕ ತಲುಪಿದೆ

ಪ್ರಪಂಚದ ರಾಜ್ಯಗಳೊಳಗೆ ಚೀನಾದೇಶಕ್ಕೆ ಈಗ ಇರುವ ಹೀನಸ್ಥಿತಿಗಾಗಿ ನಡೆಯುತ್ತಿರುವ ಹೋರಾಟವು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ ಆದರೆ ಈ ಹೋರಾಟವು ಅಲ್ಪಸ್ವಲ್ಪಾದ ವ್ಯಕ್ತಿಗಳಿಂದ ಪರಕೀಯ ದುಷ್ಟ ಸಮುದಾಯದೊಡನೆ ನಡಿಸಲ್ಪಡುತ್ತಿದೆಯೆಂತ ನಿಮ್ಮನ್ನು ನಂಬಿಸಿದ್ದಾರೆ ಚೀನಾದೇಶದ ಜನರ ಕ್ಷೇಮ ಮಾತ್ರವಲ್ಲ, ಒಟ್ಟು ಪ್ರಪಂಚದ ಜನರ ಕ್ಷೇಮವೇ ಒಳಕೊಂಡ ಹೋರಾಟವನ್ನೂ ಮರೆಸಿ ತಪ್ಪು ಅಭಿಪ್ರಾಯವನ್ನೂ ಹುಟ್ಟಿಸುತ್ತಿದ್ದಾರೆ. ಚೈನಾದೇಶವು ಸ್ವತಂತ್ರ ದೇಶವಾಗಿಲ್ಲವೆಂಬುದು ಚೈನಾದ ಜನರಿಗೆ ಈಗ ತಿಳಿಯುತ್ತಾ ಬಂದಿದೆ ಹಿಂದೂಸ್ಥಾನ ಮತ್ತು ಕೊರಿಯ ಇತ್ಯಾದಿ ದೇಶಗಳಂತೆ ಒಂದೇ ದೇಶದ ಅಧೀನವಾದ ವಸಾಹತು ಸಹ ಅಲ್ಲ. ಅಫೀಮು ಸಂಬಂಧದ ಯುದ್ಧ ನಡೆದಂದಿನಿಂದಲೂ ಪರರಾಜರು ನಮ್ಮ ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗೆ ಅಡ್ಡಿಯಾಗುವಂತ ರಾಜಿಕರಾರುಗಳಿಂದ ಬಂಧಿಸಿದ್ದಾರೆ. ನಮ್ಮಲ್ಲಿ ಎಚ್ಚೆತ್ತ ಜನರೆಲ್ಲರೂ ಈ ರಾಜಿಕರಾರುಗಳನ್ನು ಅಸಮಾನತ್ವದಲ್ಲಿ, ಅನ್ಯಾಯದಲ್ಲಿ, ಅಮಾನುಷವಾದದ್ದೆಂತಲೇ ತಿಳಿದುಕೊಂಡಿದ್ದಾರೆ. ಚೈನಾದೇಶದ ಜನರು ಬಲಹೀನರಾಗಿದ್ದಾಗ ಅವರನ್ನು ಬಂಧಿಸಿದ ಈ ರಾಜಿಕರಾರುಗಳಿಂದ ಚೈನಾದೇಶದ ಹೆಬ್ಬಾಗಿಲುಗಳ ಬೀಗದ ಕೈಯ್ಯನ್ನೆಲ್ಲಾ ಪರರಾಜರು ವಶಮಾಡಿಕೊಂಡಿದ್ದಾರೆ. ಆದ್ದರಿಂದ ಚೈನಾದ ಆಮದುಗಳನ್ನು ವ್ಯಾಪಾರವನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲಿಕ್ಕೆ ಚೈನಾದವರಿಗೆ ಸಾಧ್ಯವಿಲ್ಲದಾಗಿದೆ

ಚೈನಾದ ಆಮದುಗಳನ್ನು ಸರಕುಗಳ ಮೇಲೆ ಹಾಕುವ ದಾಟುಸುಂಕದ ವಿಷಯದಲ್ಲಿ ಅಭಿಪ್ರಾಯಕೊಡುವದಕ್ಕೆ ಚೈನಾದವರಿಗೆ ಹಕ್ಕಿಲ್ಲ. ನಿಮ್ಮ ದೇಶದ ಜನರು ನಿಮ್ಮ ದೇಶವನ್ನು ಬಿಟ್ಟು ಹೊರಡಬೇಕಾದರೆ ಅಥವಾ ಪರಕೀಯರು ಮಾಡುವ ನಿಬಂಧನೆಗಳಿಗೆ ಒಳಪಡಬೇಕೆಂತಾದರೆ ನಿಮ್ಮ ರಾಜ್ಯದ ವಿಷಯ ನಿಮಗೆ ಯಾವತರದ ಅಭಿಪ್ರಾಯ ಹುಟ್ಟೀತು? ಈ ಸ್ಥಿತಿಯಲ್ಲಿ ನಾವು ಇದ್ದೇವೆ. ಯಾವ ಸಮಯದಲ್ಲಾದರೂ ನಮ್ಮ ಮನೆಯೊಳಗೆ ಅಥವಾ ಮನೆಯಿಂದ ಹೊರಗೆ ನಮ್ಮನ್ನು ತಡದು ಇಡಬಹುದು. ಯಾಕೆಂದರೆ ಹೆಬ್ಬಾಗಿಲುಗಳ ಬೀಗದ ಕೈ ಪರಕೀಯರಲ್ಲಿ ಇದೆ. ನಮ್ಮ ಆರ್ಥಿಕ ಸ್ಥಿತಿಯು ಬೆಳೆಯಬೇಕಾದರೆ ಯಾವ ಯಾವ ಸ್ಥಳಗಳು ನಮ್ಮ ಕೈಯ್ಯಲ್ಲಿ ಇರಬೇಕೋ, ಅವು ಪರಕೀಯರ ಕೈವಶವಾಗಿವೆ. ನಮ್ಮ ಬಂದರುಗಳು ಪರಕೀಯರ ಪಟ್ಟಣಗಳಾಗಿವೆ. ಇಂಥಾ ಪಟ್ಟಣಗಳಲ್ಲಿ ನಮ್ಮ ಕಾನೂನು ಜಾರಿಯಲ್ಲಿಲ್ಲ. ಪರಕೀಯ ಸರಕಾರದ ಕಾನೂನುಗಳು ಜಾರಿಯಲ್ಲಿವೆ. ನ್ಯಾಯಾಧೀಶರೆಲ್ಲಾ ಪರಕೀಯರೇ ಆಗಿ ಪರಕೀಯರ ಪ್ರಯೋಜನಕ್ಕಾಗಿ ನ್ಯಾಯತೀರ್ಪುಗಳನ್ನು ಮಾಡಿಕೊಳ್ಳುತ್ತಾರೆ. ನಮ್ಮ ದೇಶದ ಸುತ್ತಿರುವ ಸಮುದ್ರವೆಲ್ಲಾ ನಮ್ಮ ಸ್ವಾಧೀನದಲ್ಲಿಲ್ಲ. ನಮ್ಮ ಹಡಗುಗಳು ತಿರುಗಲು ಸಾಧ್ಯ ಇಲ್ಲ. ಮತ್ತು ದೇಶದೊಳಗೆ ಇರುವ ಪರಕೀಯರು ಚೈನಾದ ಕಾನೂನಿಗೆ ಒಳಪಡುವದಿಲ್ಲ. ಈ ರೀತಿ ಪರದೇಶೀಯರಿಗೆ ಇರುವ ಅನುಕೂಲದಿಂದಲೇ ನಮ್ಮ ರಾಜ್ಯದೊಳಗೆ ಅನ್ಯೋನ್ಯ ಯುದ್ಧಗಳಾಗುತ್ತಿರುವದು. ಪರಕೀಯರು ಇಂಥಾ ಯುದ್ಧಗಳಿಗೆ ಉತ್ತೇಜನಕೊಡುತ್ತಾರೆ. ಪರರಾಜರ ಸ್ವಾಧೀನ ಇರುವ ಪಟ್ಟಣಗಳಲ್ಲೇ ನಮ್ಮ ಸ್ವತಂತ್ರಕ್ಕೆ ವಿರೋಧವಾದ ಮತ್ತು ಪ್ರಜಾಹಿತವಾದಚಳವಳಿಗಳಿಗೆ ವಿರೋಧವಾದ ಪಿತೂರಿಗಳ ಮೊಳಕೆಯೊಡೆಯುವದು. ಇಂಥಾ ಪಿತೂರಿಗಳಿಗೆ ಸಾಧಾರಣವಾಗಿ ಪರಕೀಯ ಸರಕಾರ ಅಥವಾ ಅವುಗಳ ಏಜೆಂಟರುಗಳೇ ಕಾರಣರಾಗಿದ್ದಾರೆ ನಮ್ಮ ದೇಶದ ಮಿಲಿಟರಿ ದಬ್ಬಾಳಿಕೆಗೆಲ್ಲಾ ಪರಕೀಯ ಸರಕಾರದವರು ನಮ್ಮ ದೇಶದ ಮೇಲೆ ಉಪಯೋಗಿಸುವ ಶಕ್ತಿಯೇ ಕಾರಣವಾಗಿದೆ ಮೇಲೆ ಹೇಳಿದ ರಾಜಿಕರಾರುಗಳು ಜಾರಿಯಲ್ಲಿರುವಷ್ಟು ಕಾಲ ನಮ್ಮ ಒಳದೇಶದ ಸ್ಥಿತಿಯನ್ನು ಸರಿಪಡಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಕೂಡಲೇ ನಮ್ಮನ್ನು ಬಂಧಿಸಿರುವ ರಾಜಿಕರಾರುಗಳನ್ನೆಲ್ಲಾ ರದ್ದುಪಡಿಸಿ ಬೇರೆ ರಾಜ್ಯಗಳ ಸಮಮಾನತ್ವವನ್ನು ಪಡೆಯಲು ನಿಶ್ಚೈಸಿರುತ್ತೇವೆ.

ನಾವು ಬೇರೆ ರಾಜ್ಯಗಳಿಗೆ ಕೊಡಲು ಒಪ್ಪುವ ಸ್ವತಂತ್ರತೆಯನ್ನು ಅನ್ಯೋನ್ಯ ಸರಿಸಮಾನತ್ವವನ್ನೂ ನಾವು ಕೇಳುವದಾಗಿದೆ. ಇದಾಗಬೇಕಾದರೆ ನಮ್ಮ ಪಟ್ಟಣಗಳಲ್ಲಿ ಪರಕೀಯ ಕಾನೂನುಗಳು ಇರಕೂಡದು ಪರಕೀಯರಿಗೆ ಹೆಚ್ಚಿನ ವ್ಯಾಪಾರದ ಅನುಕೂಲಗಳು ಇರಕೂಡದು. ನಮ್ಮ ದೇಶದ ಬೆಳವಣಿಗೆಗೆ ಬೇಕಾದ ರೀತಿಯಲ್ಲಿ ವ್ಯಾಪಾರದ ಸುಂಕಗಳನ್ನು ಹಾಕಿಕೊಳ್ಳಲು ನಮಗೆ ಸ್ವತಂತ್ರತೆಯನ್ನೂ ಕೇಳುವದಾಗಿದೆ ನಮ್ಮ ದೇಶದ ಹೆಬ್ಬಾಗಿಲುಗಳ ಬೀಗದ ಕೈಯ್ಯನ್ನು ಕೇಳುವದಾಗಿದೆ.

ಪ್ರಪಂಚದ ಜನರೇ, ನಿಮ್ಮ ದೇಶದ ಅಲ್ಪಸ್ವಲ್ಪ ಧನಿಕರ ಮಾತುಗಳಿಂದ ಮೋಸ ಹೋಗಬೇಡಿ. ಸ್ವಾರ್ಥಪರ ವ್ಯಕ್ತಿಗಳಿಂದ ಈಗ ನಡೆಯುವ ಪರಕೀಯರ ಮೇಲಿನ ಹೋರಾಟವು ನಡೆಯುತ್ತಿರುವುದಿಲ್ಲ. ಚೈನಾದ ಮೇಲೆ ಪರಕೀಯರು ನಡಿಸುವ ಅನ್ಯಾಯದಿಂದ ಮನನೊಂದು ಚೈನಾದವರು ಎಚ್ಚೆತ್ತಿರುವದಾಗಿದೆ. ಈ ಅನ್ಯಾಯಗಳನ್ನು ಚೈನಾವು ಇನ್ನು ಮುಂದೆ ಸಹಿಸಲಾರದು. ನಿಮ್ಮಿಂದ ನ್ಯಾಯ ದೊರಕೀತೆಂಬ ಆಶೆಯಿಂದ ಈ ವಿಜ್ಞಾಪನೆಯನ್ನು ಕಳುಹಿಸಿರುವದಾಗಿದೆ. ನಮ್ಮ ದೇಶದ ಮುಖ್ಯ ಪಟ್ಟಣಗಳಲ್ಲಿ ಈಚೆಗೆ ನಡೆದ ಕೊಲೆಪಾತಕಗಳಂಥಾ ಕೊಲೆಗಳಿಂದ ನಮ್ಮ ದೇಶದ ಎಲ್ಲಾ ಜನರನ್ನು ಕೊಲ್ಲಲು ಸಾಧ್ಯವಿಲ್ಲ. ಇಂಥಾ ಕೃತ್ಯಗಳಿಂದ ನಮ್ಮ ಸ್ವತಂತ್ರ ಸ್ಥಾಪನೆಯ ಹೊಸತ್ತ ಹೊಸ್ತಿಗೆ ಉತ್ತೇಜನಸಿಕ್ಕುತ್ತದಷ್ಟೆ ಈ ಅಸಮಾನತ್ವದ ಕರಾರುಗಳನ್ನು ರದ್ದುಪಡಿಸಲು ಸಹಾಯಕರಾಗಿರಿ

"ಕ್ಯಾಂಟನಿನ ರಾಷ್ಟ್ರೀಯ ಸರಕಾರದ ಮಂತ್ರಿಯಿಂದ"

"ಕೊಡಗು" ಕಂಪೆನಿಯ ಜನರಲ್ ಮೀಟಿಂಗು.

ಕಳೆದ ಜುಲಾಯಿ ತಾ. 20 ರಲ್ಲು ಮಧ್ಯಾಹ್ನ 2 ಗಂಟೆಗೆ "ಕೊಡಗು" ಕಂಪನಿಯ ಶೇರುದಾರರ ವಾರ್ಷಿಕ ಜನರಲ್ ಮೀಟಿಂಗು ವೀರಾಜಪೇಟೆ ಖಾದಿಭಂಡಾರದ ಮಹಡಿಯಲ್ಲು ನಡೆಯಿತು 71 ಶೇರುದಾರರು ಹಾಜರಿದ್ದರು. ಕಂಪೆನಿಯ ಕಾರ್ಯಾಧ್ಯಕ್ಷರಾಗಿರುವ ರಾ ಬಾ. ಕೋದಂಡ ಅಪ್ಪಯ್ಯನವರು ಅಧ್ಯಕ್ಷರಾಗಿದ್ದರು.

1. ಶೇರುದಾರರಿಗೆಲ್ಲಾ ಮೊದಲೇ ಕಳುಹಿಸಲ್ಪಟ್ಟಿದ್ದ ಕಂಪೆನಿಯ 1923—1924 ಮತ್ತು 1924—1925ರ ವರದಿಯು ಓದಲಾಯಿತು ಪ್ರಿಂಟಾದಾಗ ಉಂಟಾದ ಈ ಕೆಳಗಿನ ತಪ್ಪುಗಳು ತಿದ್ದಲ್ಪಟ್ಟವು. ವರದಿಯ, ಮುಂದಿನ ಪುಟದ 4 ನೇ ಪಂಕ್ತಿಯಲ್ಲಿ 'ಶೇರುದಾರರಿಂದಬರಬೇಕಾದ ಮೊಬಲಗು' ರೂ 13,000 ರ ಬದಲು ರೂ. 13610 ಎಂದೂ, 5 ನೇ ಪಂಕ್ತಿಯಲ್ಲಿ 9502 ಬದಲು 9572 ಎಂದೂ ಆಗಬೇಕು 5 ನೇ ಪುಟದ 6 ನೇ ಇಸುಮಿನನಂತರ ಜುಮ್ಲ 6882—10—0 ಬದಲು 6883—10 ಆಗಬೇಕು 9 ನೇ ಪುಟದಲ್ಲಿ 1 ನೇ ಇಸುಮಿನ 2 ನೇ ಕಂತಿನ ಬಿ ಪಿ. ಮೊಬಲಗು 652—0—0 ಬದಲು 652—8—0 ಆಗಬೇಕು 12 ನೇ ಪುಟದ 13 ನೇ ಇಸುಂ ವಿ ಪಿ ಚಾರ್ಜು 9—8—0 ಬದಲು 0—8—0 ಯೂ, 25 ನೇ ಇಸುಂ ಬಂದು ಗೋಣಿಚೀಲ 0—1—0 ಬದಲು 0—14—0 ಆಗಬೇಕು 15 ನೇ ಪುಟದ 3 ನೇ ಇಸುಂ ಜುಮ್ಲ 2659—1—9 ಬದಲು 2689—1—0 ಆಗಬೇಕು ವರದಿಯ ಪ್ರತಿಗಳು ಎರಡು ಸಾರಿ ಮುದ್ರಿಸಲ್ಪಟ್ಟ ಕಾರಣ ಮೇಲಿನ ತಪ್ಪುಗಳು ಕೆಲವು ಪ್ರತಿಗಳಲ್ಲಿ ಮಾತ್ರ ಇವೆ

ಅನಂತರ ವರದಿಯ ಮೇಲೆ ಸ್ವಲ್ಪ ಚರ್ಚೆಯೂ ನಡೆಯಿತು. ಮ. ಬಿ ಯಂ ಕಾರ್ಯಪ್ಪನವರು ಸೂಚಿಸಿದ ಮೇರೆ ವರದಿಯ 9 ನೇ ಪುಟದಲ್ಲಿ 2 ನೇ ಇಸುಂನಲ್ಲಿ "1923—24 ರ ಬಡ್ಡಿ "ಎಂಬ ಪಂಕ್ತಿಯು ಕೆಳಗೂ, "ಪಸೂಲಾದ ಒಟ್ಟು ಹಿಂದಿನ ಬಾಕಿ" ಎಂಬುದು ಮೇಲಿನ ಪಂಕ್ತಿಯಲ್ಲಿಯೂ ಬರಬೇಕೆಂದು ತಿದ್ದಲಾಯಿತು.

ವರದಿಯನ್ನು ಮಂಜೂರುಮಾಡಬಹುದೆಂದು ಮ ಉದಿಯಂಡ ಕುಂಞಪ್ಪನವರು ಸೂಚಿಸಿದನ್ನು ಮ. ಪುಲಿಯಂಡ ಬೋಪಯ್ಯನವರು ಅನುಮೋದಿಸಿದರು. ಠರಾವು ಸರ್ವಸಮ್ಮತದಿಂದ ಪಾಸಾಯಿತು.

2 1925—26 ಕ್ಕೆ ಮ. ಬಿ ಶ್ಯಾಮಣ್ಣನವರನ್ನು ಕಂಪೆನಿಯ ಆಡಿಟರಾಗಿ ನೇಮಿಸಬೇಕೆಂದು ಮ ನಡಿಕೇರಿಯಂಡ ಸೋಮಯ್ಯನವರು ಸೂಚಿಸಿದರು. ಮ. ಚೆಂಬಾಂಡ ಮುತ್ತಣ್ಣನವರು ಅನುಮೋದಿಸಿದರು. ಇದು ಒಮ್ಮತದಿಂದ ಮಂಜೂರಾಯಿತು.

3. 1923—24 ಮತ್ತು 1924—25 ನೇ ವರ್ಷಗಳಿಗೆ ಆಡಿಟರವರಿಗೆ ಕೊಡಬೇಕಾದ ಫೀಜು ನಿಶ್ಚೈಸುವ ವಿಷಯ ಡೈರೆಕ್ಟರುಗಳಿಗೆ ಬಿಡಬೇಕೆಂಬ ಠರಾವನ್ನು ಮ. ಸಿ. ಯಸ್ ಉತ್ತಯ್ಯನವರು ಮುಂದಿಟ್ಟರು. ಅದನ್ನು ಮ. ಬಿ ಯಂ ಸುಬ್ಬಯ್ಯನವರು ಅನುಮೋದಿಸಿದರು ಯಾರೂ ವಿರೋಧಿಸದೆ ಪಾಸಾಯಿತು.

4. 1921—22 ನೇ ವರ್ಷದ ಚಂದಾ ಬಾಕಿ ವಿಷಯದಲ್ಲಿ ಬಹಳ ಚರ್ಚೆ ನಡೆದು, ಮ. ಸಿ ಎಸ್. ಉತ್ತಯ್ಯನವರು ಸೂಚಿಸಿ, ಮ. ಮಂಡೆಯಂಡ ಬೋಜಪ್ಪನವರು ಅನುಮೋದಿಸಿದ ಮೇರೆ ಅದನ್ನು ಲೆಖ್ಖದಿಂದ ವಜಾಮಾಡಬೇಕೆಂಬ ಠರಾವು ಓಟಿಗೆ ಹಾಕಲಾಗಿ 31 ಓಟು ಠರಾವಿನ ಪರವಾಗಿಯೂ 5 ಓಟು ವಿರೋಧವಾಗಿಯೂ ಬಂದದ್ದರಿಂದ ಠರಾವು ಬಹುಮತದಿಂದ ಪಾಸಾಯಿತು.

5. ಶೇರಿನ 2 ನೇ 3 ನೇ ಕಾಲ್‌ನ ಹಣವನ್ನು ಕೊಡದೆ ಇರುವವರಿಗೆ ಅದನ್ನು ಕೊಡಲು 1926 ನೇ ಮಾರ್ಚಿ ಆಖೈರ್ ವರೆಗೆ ವಾಯಿದೆಕೊಡಬೇಕೆಂತಲೂ ಆ ಮೇಲೆ ಅಂಥಾ ಬಾಕಿ ಇರುವ ಶೇರ್‌ಗಳನ್ನು ಮುಟ್ಟುಗೋಲು ಹಾಕುವ ಯೋಚನೆ ಮಾಡಬಹುದೆಂಬ ಠರಾವು ಮ. ಚೆಂಬಾಂಡ ಮುತ್ತಣ್ಣನವರಿಂದ ಸೂಚಿಸಲ್ಪಟ್ಟು ಮ ಪುಲಿಯಂಡ ಉತ್ತಯ್ಯನವರಿಂದ ಅನುಮೋದಿಸಲ್ಪಟ್ಟು ಮಂಜೂರಾಯಿತು.

6. ಡೈರೆಕ್ಟರುಗಳ ಪೈಕಿ 3ನೇ ಒಂದರಷ್ಟು ಸಂಖ್ಯೆಯಾದ 5 ಜನರ ಬದಲಿಗೆ ಹೊಸಚುನಾವಣೆಯಾಗಬೇಕೆಂಬ ರೂಲಿಗೆ ಅನುಸಾರವಾಗಿ ಚುನಾಯಿತರಾಗಿ ಹೆಚ್ಚು ಕಾಲವಿದ್ದ ಮ. ಯನ್ ಆರ್. ಸುಬ್ಬಯ್ಯನವರು, ಮ. ಪುತ್ತಮನೆ ಗಣಪಯ್ಯನವರು, ಮ. ನಡಿಕೇರಿಯಂಡ ಸೋಮಯ್ಯನವರು ಡೈರೆಕ್ಟರ ತನದಿಂದ ಮುಕ್ತರಾದರು. ಮ. ಗಣಪಯ್ಯನವರು ಮತ್ತು ನಡಿಕೇರಿಯಂಡ ಸೋಮಯ್ಯನವರು ಬೇರೆಯವರ ಬದಲಿಗೆ ಡೈರೆಕ್ಟರುಗಳಿಂದ ಚುನಾಯಿಸಲ್ಪಟ್ಟವರಾದ್ದರಿಂದ ಮೊದಲಿದ್ದ ಡೈರೆಕ್ಟರುಗಳ ಚುನಾವಣೆಯ ಕಾಲವೇ ಗಣನೆಗೆ ತೆಗೆದುಕೊಳ್ಳಬೇಕೆಂಬ ರೂಲಿಗೆ ಅನುಸರಿಸಿ ಇವರು ಡೈರೆಕ್ಟರು ತನದಿಂದ ಮುಕ್ತರಾದದ್ದು. ಮುಕ್ತರಾಗಬೇಕಾದ ಇನ್ನಿಬ್ಬರು ಡೈರೆಕ್ಟರುಗಳ ಹೆಸರು ಒಂದೇ ಕಾಲದಲ್ಲಿ ಚುನಾಯಿತರಾದ ಮ. ಜಮ್ಮಡ ಮಾದಪ್ಪನವರು ಮ. ಕೋದಂಡ ಉತ್ತಯ್ಯನವರು, ಸಿ. ಯನ್. ವೆಂಕಟಯ್ಯನವರು, ಪುಲಿಯಂಡ ಉತ್ತಯ್ಯನವರು, ಬಿದ್ದಂಡ ಕಾರ್ಯಪ್ಪನವರು, ತೆಕ್ಕಡ ಪೂವಯ್ಯನವರು, ಮತ್ತು ಉದಿಯಂಡ ಮಾಚಯ್ಯನವರು, ಈ ಏಳು ಜನರ ಪೈಕಿಯಿಂದ ಇಬ್ಬರ ಹೆಸರನ್ನು ಚೀಟಿಹಾಕಿ ತೆಗೆಯಲಾಗಿ ಮ. ಸಿ ಯಸ್ ಉತ್ತಯ್ಯನವರೂ ಮತ್ತು ಜಮ್ಮಡ ಮಾದಪ್ಪನವರೂ ಮುಕ್ತರಾಗಬೇಕಾಗಿ ಬಂತು.

ಅಂತು ಈ ಐದುಜನರ ಬದಲಿಗೆ ಚುನಾವಣೆ ನಡೆಯುವದರಲ್ಲಿ ಮ. ಕೋದಂಡ ಉತ್ತಯ್ಯನವರು, ಯನ್. ಆರ್. ಸುಬ್ಬಯ್ಯನವರು, ಐನಂಡ ಮಾದಪ್ಪನವರು, ನಡಿಕೇರಿಯಂಡ ಸೋಮಯ್ಯನವರು ಯನ್. ಯನ್ ಶಂಕರನಾರಾಯಣಯ್ಯನವರು, ಪಿ ಗಣಪಯ್ಯನವರು, ಯ. ನ. ಮುದ್ದಪ್ಪ ಬಿ. ಎ ಬಿ ಎಲ್. ರವರು, ಕೂಂಗೇಟ್ಟಿರ ಅಪ್ಪಯ್ಯನವರು, ಕೆ. ಪಿ ಚಿಣ್ಣಪ್ಪನವರು, ಅ ಬ್ದುಲ್‌ಗಫೂರ್ ಖಾನ್ ಸಾಹೇಬರು ಮತ್ತು ಜಮ್ಮಡ ಮಾದಪ್ಪನವರು ಸಹ ಇಂತಿಷ್ಟು ಜನರ ಹೆಸರು ಸೂಚಿಸಲ್ಪಟ್ಟವು. ಮ. ಜಮ್ಮಡ ಮಾದಪ್ಪನವರು ತನಗೆ ಚುನಾವಣೆಗೆ ನಿಲ್ಲಲು ಇಷ್ಟವಿಲ್ಲವೆಂತ ಹೇಳಿದ ಮೇಲೆ ಉಳಿದ ಹತ್ತು ಜನರಿಗೆ ಓಟು ತೆಗೆಯಲಾಗಿ ಮ. ಸಿ ಯನ್. ಉತ್ತಯ್ಯನವರೂ, ಮ. ಕೆ. ಪಿ. ಚಿಣ್ಣಪ್ಪನವರೂ, ಮ. ನಿಡ್ಯಮಲೆ ಮುದ್ದಪ್ಪನವರೂ, ಮ. ನಿಡ್ಯ ಸುಬ್ಬಯ್ಯನವರೂ, ಮತ್ತು ಮ. ಕೂಂಗೆಟ್ಟಿರ ಅಪ್ಪಯ್ಯನವರೂ ಡೈರೆಕ್ಟರಾಗಿ ಚುನಾಯಿತರಾದರು

ಅಧ್ಯಕ್ಷರಿಗೆ ವಂದನೆಗಳಿಂದ ಮೀಟಿಂಗು 5½ ಗಂಟೆಗೆ ಬರಖಾಸ್ತಾಯಿತು.

ಕೆ. ಅಪ್ಪಯ್ಯ,
(ಅಧ್ಯಕ್ಷರು).

ಕಣ್ಣುಗಳ ಪೋಷಣೆ.

ನೇತ್ರೇಂದ್ರಿಯದ ಪಟುತ್ವವನ್ನು ಕಾಪಾಡಿ ಕೊಳ್ಳುವ ವಿಚಾರದಲ್ಲಿ ಲಂಡನ್ ನಗರದ "ಇಲ್ಯೂಮಿನೇಟಿಂಗ್ ಸೊಸೈಟಿ" ಎಂಬ ಸಂಘದವರಿಂದ ಈ ಕೆಳಗೆ ಕಂಡ ಅಮೂಲ್ಯವಾದ ಸೂಚನೆಗಳು ಪ್ರಕಟಿಸಲ್ಪಟ್ಟಿವೆ.

(1) ಬಹಳವಾಗಿ ಥಳಥಳಿಸುವ ಬೆಳಕಿನಲ್ಲಿ ಕಣ್ಣಿಗೆ ಕಲಸ ಕೊಡಬೇಡಿರಿ!

(2) ದೀಪಕ್ಕೆ ಯಾವುದಾದರೂ ಮರೆಮಾಡಿಕೊಳ್ಳದೆ, ಅದರ ಪ್ರಕಾಶವು ನೇರ್ಪಾಗಿ ದೃಷ್ಟಿಗೆ ಬೀಳುವ ಹಾಗೆ ಕೆಲಸ ಮಾಡಬೇಡಿರಿ

(3) ಅತಿಪ್ರಕಾಶವಾದ ದೀಪಗಳೇ ಅಲಂಕಾರಕ್ಕೆ ಮುಖ್ಯವೆಂದು ನೆನಸಬೇಡಿರಿ.

(4) ದೀಪದ ಮುಂದೆ ಬಹಳವಾಗಿ ಕೆಲಸಮಾಡಬೇಡಿರಿ.

(5) ಲ್ಯಾಂಪುಗಳಿಗೆ ಗಾಜಿನ ಗ್ಲೋಸನ್ನಾಗಲಿ, ಮರೆಯನ್ನಾಗಲಿ, ಪ್ರತಿಫಲಿಸತಕ್ಕ ಕನ್ನಡಿಯ ಬಿಲ್ಲೆಗಳನ್ನಾಗಲಿ ಸರಿಯಾದದನ್ನು ನೋಡಿ ಉಪಯೋಗಿಸಿರಿ.

(6) ಸಾಕಾದಷ್ಟು ಬೆಳಕನ್ನಿಟ್ಟುಕೊಂಡೇ ಕೆಲಸಮಾಡಿ.

(ಸಾಧಾರಣವಾಗಿ ಓದುವಾಗ ಎರಡು ಮೂರು ಕ್ಯಾಂಡಲುಗಳ ಬೆಳಕಿದ್ದರೆ ಸಾಕು. ಕಸೂತಿ ಮುಂತಾದ ಸಣ್ಣ ಕೆಲಸಗಳನ್ನು ಮಾಡುವುದಕ್ಕೆ ಇನ್ನೂ ಹೆಚ್ಚು ಬೆಳಕು ಬೇಕಾಗುವುದು).

(7) ಲ್ಯಾಂಪಿಗೆ ಹಾಕುವ ಗ್ಲಾಸು (ಅಥವಾ ಗ್ಲೋಬು) ಮರೆ, ಪ್ರತಿಫಲಿಸುವ ಕನ್ನಡಿ, ಇವುಗಳನ್ನು ಶುಚಿಯಾಗಿ ಇಟ್ಟುಕೊಳ್ಳಿರಿ.

(8) ನೀವು ಕೆಲಸಮಾಡುವಾಗ ಅಥವಾ ಓದುವಾಗ ದೀಪಗಳನ್ನು ಅನುಕೂಲವಾದ ಕಡೆಗೆ ಇಟ್ಟುಕೊಳ್ಳಿರಿ.

(9) ನೀವು ನೋಡುವ ಪದಾರ್ಥಗಳ ಮೇಲೆ ಮಾತ್ರ ಬೆಳಕು ಬೀಳಬೇಕೇ ಹೊರತು ನಿಮ್ಮ ದೃಷ್ಟಿಗೆ ನೇರವಾಗಿ ಬೀಳಬಾರದು.

(ಜನರಲ್ ಆಫ್ ಇಂಡಸ್ಟ್ರಿಯಲ್ ಹೈಜಿನ್ ನವೆಂಬರ್ 1924)

ಆ ಚ.

ಚಂದಾದಾರರಲ್ಲಿ ವಿನಂತಿ.

"ಕೊಡಗು" ಪತ್ರಿಕೆ ಬೇಕೆಂದು ಅಪ್ಪಣೆಯನ್ನು ಕೊಟ್ಟು, ಆ ತಾರೀಕಿನಿಂದ ಒಂದು ತಿಂಗಳೊಳಗೆ ಬಾಕಿ ಮೊಬಲಗನ್ನು ಪಾವತಿ ಮಾಡುತ್ತೇವೆಂದೂ, ಹಾಗೆ ಪಾವತಿಮಾಡಲು ತಪ್ಪಿದರೆ ವಿ. ಪಿ. ಮೂಲಕ ಪತ್ರಿಕೆಯನ್ನು ಹೊಂದಿಕೊಳ್ಳುತ್ತೇವೆಂದೂ ಆರ್ಡರ್ ಫಾರ್ಮಿಗೆ ರುಜುಮಾಡಿ ಕಳುಹಿಸಿದ ಚಂದಾದಾರರು ತಮ್ಮ ವಾಯಿದೆಯೊಳಗೆ ಬಾಕಿ ಮೊಬಲಗನ್ನು ಪಾವತಿ ಮಾಡದೇಕಾಗಿಯೂ, ಇನ್ನುಮೇಲೆ ಅವರಿಗೆ ವಿ. ಪಿ. ಕಳುಹಿಸಲಾಗುವುದೆಂದೂ ಈ ಮೂಲಕ ತಿಳಿಸಲಾಗಿದೆ. ವಿ. ಪಿ. ಕಳುಹಿಸಿದಲ್ಲಿ ವಿ. ಪಿ. ಚಾರ್ಜು 3 ಆಣೆ ಹೆಚ್ಚು ಚಂದಾದಾರರು ಕೊಡಬೇಕಾಗುವುದು.

ಮೇನೇಜರ್

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿಯಿಂದ ಮಂಗಳೂರಿಗೆ ಈಗ ಪುನಹ ಒನ್ನು ಸರ್ವಿಸುಗಳು ಎಂದಿನಂತೆ ನಡೆಯುತ್ತಿವೆ.

ವೀರಾಜಪೇಟೆಯಿಂದ ಗೋಣಿಕೊಪ್ಪಲಿಗಾಗಿ ಮೈಸೂರಿಗೆ ಒಸ್ಸು ಇಡಲು ಲೈಸೆನ್ಸಿಗೆ ಮ್ಯನೂಬನವರಾಜ್ಜರು ಅರ್ಜಿ ಬರೆದಿರುವರೆಂದು ತಿಳಿಯುತ್ತೀವೆ.

ತಮೂಷನರವರು ಮತ್ತು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಬರುವ ತಾ. 3ರಲ್ಲು ಪ್ರೊಸ್ಪಂಪೇಟೆಗೆ ಹೋಗಿ ಆ ಪ್ರಾಂತ್ಯದಲ್ಲಿ ಒಂದೆರಡು ವಾರಗಳವರೆಗೆ ಇರುವರೆಂದು ವದಂತಿ.

ಉಪಾಧ್ಯಾಯರ ತರಬೇತಿಗಾಗಿ ಕಳೆದ ವರ್ಷ ಇಂಗ್ಲೆಂಡಿಗೆ ಹೋದ ಮ. ಬಿದ್ದಂಡ ಕುಶಾಲಪ್ಪನವರು ತಮ್ಮ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಈಗ ಇಂಡಿಯಾಕ್ಕೆ ವಾಪಾಸು ಹೊರಟಿರುವರು.

ಮಡಿಕೇರಿಯ ಗಡಂಗದ ದರೋಗಿಗೆ ಶಕ್ತಿಸ್ವಲ್ಪ ಕುಂದಿಲ್ಲದೆ ಇರುವುದರಿಂದ, ಆ ಉದ್ಯೋಗವನ್ನು ಬಿಡದು ನಾಕಿ ಜೈಲರವರು ಈ ಕೆಲಸವನ್ನು ನೋಡಿಕೊಳ್ಳುವಂತೆ ಏರ್ಪಾಡು ಮಾಡುವರಾಗಿ ವರ್ತಮಾನವಿದೆ.

ಮಡಿಕೇರಿ ಕಾನ್ವೆಂಟು ಹೈಸ್ಕೂಲು ರಜೆ ಬಿರಿ ಆಗೋಸ್ಟು 3 ರಲ್ಲಿ ತೆರೆಯಲ್ಪಡುವುದೆಂದೂ, ಹಾಸ್ಟಲಿನಲ್ಲಿ ಉಳಕೊಳ್ಳುವ ವಿದ್ಯಾರ್ಥಿನಿಯರು ಆ ತಾ. 2 ರಲ್ಲಿಯೇ ಬಂದು ಸೇರಬೇಕಾಗಿಯೂ ಆ ಶಾಲೆಯ ಹೆಡ್ಮಿಸ್ಟ್ರೆಸ್ಸಾದವರು ತಿಳಿಸಿರುವರು.

ಮಡಿಕೇರಿ ಮಹದೇವಪೇಟೆಯಲ್ಲಿ ತಾ. 30 ರ ರಾತ್ರಿ ಸಿಡುಬಿನಿಂದ ಒಂದು ಮರಣ ಸಂಭವಿಸಿತು. ಈ ವರ್ಷ ಎರಡನೇ ಸಾರಿ ಸಿಡುಬು ಪ್ರಾರಂಭಿಸಿದ ನಂತರ ಮಡಿಕೇರಿಯಲ್ಲಿ ಇದು 2ನೇ ಮರಣ. ಈ ವರೆಗೆ ಸಿಡುಬು 6 ಜನರಿಗೆ ತಗಲಿದೆ.

ತಾ. 27—7—25 ರಲ್ಲು ನಡೆದ ಸೆಂಟ್ರಲ್ ಬ್ಯಾಂಕು ಡೈರೆಕ್ಟರುಗಳ ಮೀಟಿಂಗಿನಲ್ಲು ಈ ಕೆಳಗಿನ ಸಹಕಾರ ಸಂಘಗಳಿಗೆ ಸಾಲ ಮಂಜೂರಾಗಿದೆ. ಪಾಲಂಗಾಲ ಸಂಘಕ್ಕೆ ರೂ. 500, ಸೋಮವಾರಪೇಟೆ ಸಂಘ ಲಿಮಿಟೆಡಿಗೆ ರೂ. 1000, ಕಿರುಗೂರು ಸಂಘಕ್ಕೆ ರೂ. 600, ಕಂಗಳತ್ತುನಾಡು ಸಂಘಕ್ಕೆ (2ನೇ ಸಾಲ) ರೂ. 1000.

ಡಾಕ್ಟರ್ ಎನ್. ಸಿ. ಅಪ್ಪಯ್ಯ ಎಂ. ಬಿ. ಬಿ. ಎಸ್. ಸಿ. ಪಿ. ಯವರು ತಾ. 26ರಲ್ಲು ಕೊಡಗಿಗೆ ಬಂದಿರುವರು. ಇವರಿಗೆ ಇವರ ಕುಟುಂಬದವರೂ ಗ್ರಾಮಸ್ಥರೂ ಸೇರಿ ತಾ. 28ರಲ್ಲು ಒಂದು ಔತಣವನ್ನು ಕೊಟ್ಟರು. ಇವರಿಗೆ ಪೂನಾದ ಸಸ್ಸೂನ್ ಆಸ್ಪತ್ರೆಯಲ್ಲಿ ಗೌರವ ಸರ್ಜನರ ಹುದ್ದೆಯು ಸಿಕ್ಕಿದೆಯೆಂದು ಕಳೆದವಾರ ಪ್ರಕಟವಾದದ್ದು ನಿಜವಲ್ಲವೆಂದೂ, ಈ ಹುದ್ದೆಗೆ ಇವರು ಹಾಕಿರುವ ಅರ್ಜಿಗೆ ಇನ್ನೂ ಜವಾಬು ಬಂದಿರುವದಿಲ್ಲವೆಂದೂ ಇತ್ತಲಾಗಿ ತಿಳಿಯುತ್ತೇವೆ.

ತಾ. 28ರಲ್ಲು ಮಡಿಕೇರಿಯಲ್ಲು ಪ್ಲಾಂಟೇಶನ್ ಪಂಡಿನ ಮೀಟಿಂಗು ನಡೆದು ಮ. ಐಚೆಟ್ಟಿರ ಪುಟ್ಟೀರ್ಯನವರಿಗೂ, ಮ. ಕೋಡಿರ ಮುದ್ದಪ್ಪನವರಿಗೂ, ಮತ್ತು ಶ್ರೀಮತಿ ಕೇಕಡಂಡ ಯಂ. ಮುತ್ತಮ್ಮನವರಿಗೂ ತಿಂಗಳಿಗೆ ರೂ. 150 ಸೊಸ ವೇತನಗಳು ಮಂಜೂರುಮಾಡಲ್ಪಟ್ಟವು. ಈ ಪಂಡಿನ ಆಡಳಿತೆಯಲ್ಲಿರುವಂಥ ಡಾಕ್ಟರ್ ಸಿ. ನಂಜಪ್ಪ ಬೆಳ್ಯಪ್ಪನವರ ವೇತನದ ಒಂದು ಭಾಗದ ರೂ. 10 ಕಳೆದ ವರ್ಷ ಸ್ಟೂವಕ್ಕಾಡು ದೇವಯ್ಯನವರಿಗೆ ಕೊಡುತ್ತಿದ್ದನ್ನು ಈ ವರ್ಷ ಶ್ರೀಮತಿ ಐಚೆಟ್ಟಿರ ಕೆ. ಮುದ್ದಮ್ಮನವರಿಗೆ ಮಂಜೂರು ಮಾಡಿರುವರು. ಇಂಪೀರಿಯಲ್ ಸ್ಕಾಲರ್ ಶಿಪ್ಪುಗಳು ಈ ವರ್ಷ ಮ. ತೀತಿರ ಮೇದಪ್ಪನವರಿಗೂ ಮತ್ತು ಶ್ರೀಮತಿ ಕೋದಂಡ ಪಿ. ಬೋಜಮ್ಮನವರಿಗೂ ಕೊಡಲ್ಪಟ್ಟಿದೆಯೆಂದು ತಿಳಿಯುತ್ತೇವೆ.

ರಾ. ಬಾ. ಕೋದಂಡ ಅಪ್ಪಯ್ಯನವರು ಮತ್ತು ಏಳು ಜನರು, 50 ಒನರ ಒಂದು ಕಂಪೆನಿ ಮಾಡಿ ಮಡಿಕೇರಿಯಿಂದ ವೀರಾಜಪೇಟೆಗಾಗಿ ಪೊನ್ನಂಪೇಟೆಗೆ ಬಸ್ಸುಗಳನ್ನು ನಡಿಸಲು ಲೈಸನ್ಸು ಕೊಡಬೇಕೆಂದು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ ಬರೆದ ಅರ್ಜಿಗೆ ಪ್ರಯಾಣಿಕರ ಉಪಯೋಗಕ್ಕಾಗಿ ಇಡುವ ಮೋಟಾರುಗಾಡಿಗಳನ್ನು ನಡಿಸುವದರ ವಿಷಯ ಮತ್ತು ಅವುಗಳಿಗೆ ಹಾಕಬೇಕಾದ ಫೀಸಿನ ಮತ್ತು ಸಮ್ಮಂಧಪಟ್ಟ ಸಂಗತಿಗಳ ಮೇಲೆ ರೂಲ್‌ಗಳು ತಯಾರಾಗುತ್ತಿವೆಯೆಂದೂ ಅವು ಮಂಜೂರಾಗುವ ವರೆಗೆ ಲೈಸೆನ್ಸಿಗೆ ಬರುವ ಅಪ್ಲಿಕೇಶನ್‌ಗಳನ್ನು ಬಾಕಿ ಇಡಲಾಗುವುದೆಂದೂ ಜವಾಬು ಬಂದಿದೆಯಂತೆ. ಇದೇ ರಸ್ತೆಗಾಗಿ ಲೈಸೆನ್ಸು ಕೇಳಿದ ಮ. ಸಭಾಪತಿಯವರಿಗೂ, ಮ. ಮುಕ್ಕಾಟಿರ ಅಪ್ಪಣ್ಣನವರಿಗೂ ಹೀಗೆಯೆ ಜವಾಬು ಬಂದಿದೆಯೆಂದು ವರ್ತಮಾನ.

FOR SALE.

Property of Mr G K Martin

About 9½ acres good land situated above Abial Estate, about 6 miles from Mercara, suitable for coffee, and good bungalow site.

For particulars apply:—

W G L. Parsons,
Dalquarren,
Chethalli, P. O.
4—3 Coorg

ಹಿಂದೂದೇಶ.

ಧಾರವಾಡದಲ್ಲಿ ಕರ್ನಾಟಕದ ಏಕೀಕರಣದ ವಿಷಯವಾಗಿ ಒಂದು ಸಭೆ ನಡೆದು, ಬ್ರಾಹ್ಮಣೇತರರೆಂಬ ಭೇದವಿಲ್ಲದೆ ಎಲ್ಲರೂ ಸೇರಿ ಒಂದು ಪ್ರಯತ್ನ ನಡೆಯಿತು.

ಬೆಂಗಳೂರಿಗೆ ಬಂದಿದ್ದ ಇಂಡಿಯಾದ ಮುಖ್ಯ ಸೇನಾಧಿಪತಿಯವರಾದ ಸರ್ ಕ್ಲಾಡ್ ಜೇಕಬ್‌ರವರು ತಾ. 27ರಲ್ಲು ಕುಂದಾಪುರಕ್ಕೆ ಒಂದು ಅಲ್ಲಿಂದ ಕಲ್ಕತ್ತೆಯ ಕಡೆಗೆ ಒಂದರು.

ಬಂಗಾಳದ ಚಿತ್ತರಂಜನದಾಸರವರ ಬಂಗಾಳದ ಗವರ್ನರು [illegible] ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡುವ ವಿಷಯ ನಡೆಯುತ್ತಿದ್ದದ್ದು ನಿಜವೆಂಬುದೂ ಅದರ ಅವುಗಳನ್ನು ಪ್ರಕಟಪಡಿಸಿದರಿಂದ ಪ್ರಯೋಜನವಿಲ್ಲವೆಂತ ಮಹಾತ್ಮ ಗಾಂಧಿಯವರು ತಿಳಿಸಿದ್ದಾರೆ.

ಬೊಂಬಾಯಿ ಬೆಳಗಾಂ ಕಾಲೇಜಿನಲ್ಲಿ ಗಲ್ಲಿಕ್ಕಬೇಕಾದ ಕೈದಿಯನ್ನು ಇಟ್ಟಿದ್ದದರಲ್ಲಿ ಒಬ್ಬ ಕಾರಿದ ಒಂದೇಮೊಂದು ರಾತ್ರಿ ಜೈಲಿನಲ್ಲಿ ಹುಚ್ಚುಹಿಡಿದಿರುವುದರಿಂದ ಅವನನ್ನು ಮರಣದಂಡನೆ ಮಾಡುವ ಬದಲು ಹುಚ್ಚರ ಆಸ್ಪತ್ರೆಗೆ ಕಳುಹಿಸಿರುವರು. ಹುಚ್ಚು ಬಿಟ್ಟನಂತರ ಅವನನ್ನು ಗಲ್ಲಿಕ್ಕ ಹಾಕಲಿರುವರು.

ದಾಸರವರ ಸ್ಮಾರಕ ಫಂಡಿಗೆ ತಾ. 27.7.25ರ ವರೆಗೆ 5,47,000 ರೂಪಾಯಿ ವಸೂಲಾಗಿದೆ. ಈ ಫಂಡಿಗೆ 10 ಲಕ್ಷ ರೂಪಾಯಿ ವಸೂಲಿಯಾದನಂತರವೇ ಗಾಂಧಿಯವರು ಬಂಗಾಳದಿಂದ ಹೊರಡುವರೆಂದೂ ಬೇಕಾದರೆ ಇದಕ್ಕಾಗಿ ಜೀವನವನ್ನು ಅಲ್ಲಿ ಕಳೆಯುವರೆಂದೂ ಒಂಗಾಳಿಯಲ್ಲಿ ಪರಂದೂ ಸರ್ ಪಿ. ಸಿ. ರಾಯಿಯವರು ತಿಳಿಸಿರುವರು.

ಅಹಮದಾಬಾದಿನಿಂದ ಮೂಲಾ ಎಂಬಲ್ಲಿಗೆ ಯಾತ್ರೆಗೆ ಹೋಗಿದ್ದ ಒಂದು ಕುಟುಂಬವೇ ರೈಲಾದ ಕರೆಸ್ಸಿನಿಂದ [illegible] ಆಗಿದೆ. ಆ ಕುಟುಂಬದ ಹೆಂಗಸು [illegible] ಇದ್ದಾಗ ಆಕೆ ಸ್ವಾಧೀನದಲ್ಲಿ 30 ಐದು ರೂಪಾಯಿನ ರಿಕಾರಿ ನೋಟುಗಳಿದ್ದವು. ಆಕೆ ಗಂಡನ ಸ್ವಾಧೀನದಲ್ಲಿ ಅಂಥಾ 280 ನೋಟುಗಳಿದ್ದವು.

ಲಾಹೋರಿನಲ್ಲಿ ನಡೆಯುತ್ತಿರುವ ಒಂದು ಕೇಸಿನಲ್ಲಿ "[illegible] ಜಯವಾಗಲಿ" ಎಂದು ಸರಕಾರದ ವಿರುದ್ಧವಾಗಿ ಕೂಗಿದರೂ ಇನ್ನಿತರ [illegible] ಒಬ್ಬರು ಪೋಲೀಸ್ ಪಕ್ಷದವರ ಸಹಕಾರದಿಂದ ಸ್ವಲ್ಪವೂ ಜಯವಾಗಿರುವದಿಲ್ಲ. ಸಹಕಾರಕ್ಕೂ ಅಸಹಕಾರಕ್ಕೂ ಮಧ್ಯೆ ಒಂದು ದಾರಿಯನ್ನು ಕಂಡುಹಿಡಿದುಕೊಳ್ಳಬೇಕು ಎಂತ ಹೇಳಿದ್ದಾರೆ.

ಬಂಗಾಳದಲ್ಲಿ ಬಂಗಾಳಿ [illegible] ರಾಜಕೀಯದಲ್ಲಿ ಬರುವಂತಹ [illegible] ಸ್ಥಿತಿಯನ್ನು ಸಿದ್ಧಪಡಿಸುವುದೂ, ಅದು ತಂದವರಿಗಿಂತ ಹೆಚ್ಚು ಸಮವಾಗಿದ್ದರೂ ರಾಜಕೀಯ ಖೈದಿಗಳನ್ನು ಕೌನ್ಸಿಲ್ ಚುನಾವಣೆಗೆ ನಿಲ್ಲಲು ಬಿಡಬೇಕೆಂತಲೂ ಜೈಲಿನಲ್ಲಿ ಖೈದಿಗಳಿಗೆ ಬಾರುಕೋಲಿನಿಂದ ಹೊಡೆಯುವದನ್ನು ನಿಲ್ಲಿಸಬೇಕೆಂತಲೂ ಅಲ್ಲಿಯ ಕೌನ್ಸಿಲಿನ ಬರುವ ಮೀಟಿಂಗಿನ ಚರ್ಚೆಗೆ ನಿರ್ಣಯಗಳನ್ನು ಮೆಂಬರುಗಳು ಸೂಚಿಸಿರುವರು.

ಲಾಹೋರಿನ ಸಮೀಪ ಲೈಯಾಲ್‌ಪುರದ ಸಬ್ ಜಡ್ಜಿಯವರಾಗಿದ್ದ ಖ್ವಾಜಾ ಅಬ್ದುಲ್ ಸಮದ್ ಎಂಬವರು ತನ್ನ ಸರಹದ್ದಿನೊಳಗೆ ತಂಬಾ ನಾಮಕಾವಸ್ತರಿಂದ ನಾಲುಕಿಗೆದುಕೊಂಡಿದ್ದರಿಂದಲೂ, ಒಬ್ಬ ನಾಮಕಾರಾರು ನಾಲುಕೇಳಿಕೊಂಡದ್ದರಿಂದ ಅವರ ಎಲ್ಲಾ ಕೇಸುಗಳನ್ನು ಅವರಿಗೆ ಅನುಗುಣವಾಗಿ ತೀರ್ಮಾನ ಮಾಡಿದರೆಂತಲೂ, ಇವರಮೇಲೆ ತನಿಖೆ ನಡೆದು ನೌಕರಿ ಬಿಟ್ಟುಬಿಡುವಂತೆಯೂ ತಪ್ಪಿತಗಳಿಗೆ ಗುರುಮಾಡಿದ್ದರು. ವಿಚಾರ ನಡೆಯುತ್ತಿದೆ.

ಮದ್ರಾಸ್ ಸರಕಾರದವರು ಕೋರ್ಟುಫೀಸನ್ನು ಮೂರು ವರ್ಷಗಳ ಕಳಗೆ ಹೆಚ್ಚಿಸಿದ್ದರಿಂದ ವ್ಯಾಜ್ಯಗಳು ಕಡಿಮೆಯಾಗಿದೆಯೋ ಎಂತಲೂ ಅವರವರ ಅಭಿಪ್ರಾಯಗಳನ್ನು ಕೊಡಬೇಕೆಂತಲೂ ಅಧಿಕೃತದ ಎಲ್ಲಾ ಅಧಿಕಾರಿಗಳ ಸಮೂಹಗಳಿಗೆ ಬರೆದಿರುವಂತೆ ಕಾಣುತ್ತದೆ. ಕೋರ್ಟುಫೀಸು ಹೆಚ್ಚಿಸಿದ್ದರಿಂದ ವ್ಯಾಜ್ಯಗಳು ಕಡಿಮೆಯಾಗಿದೆ ಎಂತಲೂ ಬೊಡಕು ದರಕ್ಕಾಗಿ ಇಳಿಸಬೇಕೆಂತಲೂ ಅನೇಕ ಕಡೆಗಳಿಂದ ಅಭಿಪ್ರಾಯಗಳು ಬರುತ್ತಿವೆ.

ಹಿಂದುಸ್ಥಾನದ ಸಮುದ್ರತೀರದಲ್ಲಿನ ವ್ಯಾಪಾರವನ್ನು ಹಿಂದೂಯರ ಸ್ವಾಧೀನಕ್ಕೇನೇ ಸಿಕ್ಕುವಂತೆಯೂ ಅದು ಬೇಕಿ [illegible] ಅನುಕೂಲವಾಗುವಂತೆ ಒಂದು ಕಾನೂನುಮಾಡ [illegible] ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಒಂದು ಮಸೂದೆ ತರಲು ನನ್ನ ಪತ್ರಲು ಮಹಾರಾಷ್ಟ್ರಾಂತ್ಯದ ಮೆಂಬರಾದ ಹಾಜಿ ಬಿಂಜ್ಜಿಯವರು ನೋಟೀಸ್ ಕೊಟ್ಟಿರುತ್ತಾರೆ. ಈ ಬಿಲ್ಲಿನ ಸೂಚನೆಯಿಂದ ಸಮುದ್ರತೀರಗಳಲ್ಲಿ ವ್ಯಾಪಾರನಡೆಸುವಂಥಾ ಹಡಗುಗಳು ಹಿಂದೀಯರದೇ ಆಗುವಂತೆ ಮಾಡುವದೇ ಉದ್ದೇಶವಾಗಿದೆ.

ಬೊಂಬಾಯಿಯಲ್ಲಿ 48 ವರುಷದ ನೂರ್‌ಮಹಮ್ಮದ್ ಎಂಬ ಮುಸಲ್ಮಾನರವನು ಸಮುದ್ರದಲ್ಲಿಬಿದ್ದು ಪ್ರಾಣಬಿಡುತ್ತಿದ್ದಾಗ ಒಬ್ಬ ಯುರೋಪಿಯನ್ ಯುವಕನು ಸಮುದ್ರಕ್ಕೆ ಧುಮುಕಿ ಮುಸಲ್ಮಾನನನ್ನು ಜೀವಸಹಿತ ಹೊರಕ್ಕೆತಂದನು. ಮುಸಲ್ಮಾನರವನು ಮಾರನೇದಿನ ಆಸ್ಪತ್ರೆಯಲ್ಲಿ ಸತ್ತನು. ಸಾಲಬಾಧೆತಾಳದೆ ಆತ್ಮಹತ್ಯಮಾಡಿಕೊಳ್ಳಲು ಸಮುದ್ರಕ್ಕೆ ಬಿದ್ದನೆಂತ ತಿಳಿದುಬಂದಿದೆ. ತನ್ನ ಜೀವಕ್ಕೆ ಅಪಾಯಬರುವದನ್ನು ಎಣಿಸದೆ ಇನ್ನೊಬ್ಬನ ಜೀವ ಕಾಪಾಡಲು ಪ್ರಯತ್ನಿಸಿದ ಯೂರೋಪಿಯನ ಯುವಕನ ಉದಾರಗುಣವು ಸ್ತೋತ್ರಾರ್ಹವಾಗಿದೆಯೆಂತ ಬೊಂಬಾಯಿಯಿಂದ ವರ್ತಮಾನಬಂದಿದೆ.

ಕೊಚ್ಚಿ ಸರಕಾರದವರು ಮುದುಕರಿಗೂ ಅಸಹಾಯಕರಾದ ವಿಧವೆಯರಿಗೂ ಪೆನ್ಸನ್‌ಕೊಡಲು ಕಾನೂನುಮಾಡಲು ನಿಶ್ಚಿಸಿದ್ದಾರೆ. ಪೇದೆಬೇಡಿಗಳಲ್ಲಿ ಭಿಕ್ಷೆಬೇಡುವದುಸಹಾ ಬಹಳ ನಾಚಿಕೆಗೇಡಾಗಿದೆ. ಪೂರ್ವಪುರಾಣ ಬಗದಂತೆ ನೋಡಿಕೊಳ್ಳಬೇಕಾದ ಸರಕಾರವು ಅನ್ನಕ್ಕಿಲ್ಲದವರಿಗೆ ಅನ್ನವನ್ನು ಕೊಡಬೇಕು. ಮುದುಕರಿಗೆ ತಿಂಗಳಿಗೆ 5 ರೂಪಾಯಿ, ವಿಧವೆಯರಿಗೆ ತಿಂಗಳಿಗೆ 3 ರೂಪಾಯಿ ಮತ್ತು ಮಕ್ಕಳಿದ್ದರೆ ಸ್ವಲ್ಪ ಹೆಚ್ಚು ಸಹಾಯ ಕೊಡಲು ಯೋಚಿಸಿದ್ದಾರೆ. ಈ ಪೆನ್ಸನಿಗೆ ಯಾರು ಅರ್ಹರೆಂಬುದನ್ನು ಹಳ್ಳಿಗಳಲ್ಲಿ ಮುನಿಸಿಪಲ್ ಕಮಿಟಿಯವರೂ, ಗ್ರಾಮಗಳಲ್ಲಿ ಗ್ರಾಮಪಂಚಾಯಿತಿಗಳೂ ತೀರ್ಮಾನಿಸಬೇಕು.

FOR SALE.

Overland 91, 1924 Model, in perfect running order never been sick or sorry, only driven 12,000 miles Price Rs 1800. Fitted 5 M ch ? in Baloon Tyres two Back new

THE HUNSUR WORKS, HUNSUR.

4—2

ವಿದೇಶ.

ಮದ್ರಾಸಿನ ಹಿಂದೂ [illegible] ಬಂದು [illegible] ನಾಮ್‌ನಾರಾಯಣ [illegible] ಅಪರಾಧವಾಗಿದ್ದುದರಿಂದ, ಹಾಗೆ ಮೋಸೆಸಿದ ಸ್ತ್ರೀಯನ್ನು ಅಲ್ಲಿಯ ಜಡ್ಜರು ಸಾ[illegible] ಡಾಲರ್ ದಂಡ ವಿಧಿಸಿದರು.

98 ಪೌಂಡು ತೂಕ ಮಾತ್ರವಿರುವ 17 ವರ್ಷ ಪ್ರಾಯದ ಜೆಕ್ಸಾ ಎಂಬ ಪಾಶ್ಚಾತ್ಯ ಕನ್ಯೆಯೊಬ್ಬಳನ್ನು ನಿಂತಕೊಂಡಲ್ಲಿಂದ ಅತ್ತಿತ್ತ ಕದಲಿಸಲು ಎಂಥಾ ಶಕ್ತಿವಂತನಿಗೂ ಸಾಧ್ಯವಾಗಿಲ್ಲವಂತೆ! ಕೈಯಲ್ಲಾಗಲಿ, ಮುಷ್ಟಿಯಿಂದಲ್ಲೂ, ದೊಡ್ಡ ಹಲಗೆಯನ್ನು ಎತ್ತುವದರಲ್ಲಿ ಜಗತ್ತಿನಲ್ಲೇ ಹೆಸರುಗೊಂಡಿರುವ ಪೈಲ್ವಾನರುಗಳು ಈ ಯುವತಿಯನ್ನು ಎತ್ತಲು ಪ್ರಯತ್ನಿಸಿ [illegible] ಶಕ್ತಿಗೆ ಅಕೆಯ [illegible] ಇಲ್ಲದೆ ಹೋದುದು ಆಶ್ಚರ್ಯವಾಗಿದೆ.

ಮೊರೋಕ್ಕದ ಅಬ್ದುಲ್ ಕ್ರಿಮಾರವರು ಎದುರಾಳಿಗಳಾದ ಫ್ರೆಂಚ್ ಮತ್ತು ಸ್ಪೈನ್‌ರವರಿಗೆ ಈ ಕೆಳಗಿನ ರಾಜಿಶರತ್ತುಗಳನ್ನು ಕಳುಹಿಸಿರುವರು. ರಾಷ್ಟ್ರ ಸಂಘದವರು ಮೊರೋಕ್ಕದ [illegible] ದವರ ಸ್ವಾತಂತ್ರ್ಯ ಮತ್ತು ತನಗೆ ಅಮೀರ್ ಎಂಬ ಬಿರುದು ಕೊಡಬೇಕು. ರಿಫ್ ಜನರಿಗೆ ತಾನು ಸುಲ್ತಾನನೆಂದು ಒಪ್ಪಬೇಕು. ಸ್ಪೈನಿನವರು ಸೀಯುಟಾ ಮತ್ತು ಮೆಲಿಲಾ ವನ್ನು ಇಟ್ಟುಕೊಳ್ಳಬಹುದು. ಮತ್ತು ವರದಾನದಿಯ ಉತ್ತರದವರೆಗೆ ಇರುವ ಪ್ರದೇಶವು ರಿಫ್‌ಗೆ ಸೇರಬೇಕು. ಈ ಶರತ್ತುಗಳು ಫ್ರಾನ್ಸ್ ಮತ್ತು ಸ್ಪೈನಿನಲ್ಲಿ ಆತ್ಮೀಯನ್ನುಂಟುಮಾಡಿದೆ.

FOR SALE.

Property of Maj H. S. Muller's

One 4, 5 H P Beordmone Precision single cylinder motor cycle and sidecar.

For particulars apply to—

W. G L Parsons
Dalquarren,
Chethalli, P. O
4—3 Coorg

ಪತ್ರವ್ಯವಹಾರ.

ಪಾತ್ರದಾರರು ಪತ್ರದ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ. ಸಂ.

ಭಾಗಮಂಡಲದ ಹೊಸ ಛತ್ರ.

ಸಂಪಾದಕರೇ,

ನಿಮ್ಮ ಜುಲೈ ತಾರೀಕು 17ರ ಸಂಚಿಕೆಯಲ್ಲಿ "ಕೊಡಗು ಮುಜರಾಯಿ ಇಲಾಖೆ" ಎಂಬ ಬಾತ್ಮಿಯನ್ನು ನೋಡಿ ಸಂತೋಷಪಟ್ಟೆನು. ಆದರೆ ಅದರ ಕೊನೆಯಲಿನ ವಾಕ್ಯವು ನನಗೆ ತಿಳಿದಮಟ್ಟಿಗೆ ಸ್ವಲ್ಪ ತಪ್ಪಾಗಿದೆ.

ದಿವಂಗತ ಕೋದಂಡ ಸಂಜಪ್ಪ ಡಾಕ್ಟರವರು ಅವರ ಅವಸಾನಪತ್ರದಲ್ಲಿ ತನ್ನ ಪತ್ನಿಯು ಜೀವನಾಂಶದ ಸಲುವಾಗಿ 20,000 ರುಪಾಯಿಗಳ ಬಡ್ಡಿಯನ್ನು ಮಾತ್ರ ಉಪಯೋಗಿಸಿಕೊಳ್ಳಬೇಕೆಂದೂ, ಒಂದುವೇಳೆ ಪುನರ್ವಿವಾಹವಾದರೆ 5,000 ರುಪಾಯಿಗಳನ್ನು ಪಡಕೊಳ್ಳುವದೆಂದೂ ನಿರೂಪಿಸಿರುವರಂತೆ. ಡಾಕ್ಟರ್ ಸಂಜಪ್ಪನವರ ವಿಧವೆಯರು ತನ್ನ ಪತಿಯ ಮತ್ತು ಒಬ್ಬನೇ ಇದ್ದ ಮಗನ ಪ್ರೀತಿಗೋಸ್ಕರ ಇವರ ಅಕಾಲ ಮರಣಾನಂತರ ನಷ್ಟದಿಂದ ತನಗುಂಟಾದ ದುಃಖ, ಕಷ್ಟದ ಮತ್ತು ತನ್ನ ಪತಿಯ ಮತ್ತು ಮಗನ ಜೀವಿತಕಾಲದಲ್ಲಿ ಪಟ್ಟಂಥ ಸುಖ ಮತ್ತು ಪದವಿಯ ಆಶೆ ಇಟ್ಟು, ತನ್ನ ಪತಿಯ ಜೀವಿತಕಾಲದಲ್ಲಿ ಬಡಸಾಯಿಗಳಾದ ಅನೇಕ ದೇಶಗಳ ರೋಗಿಗಳು ಹೇಗೆ ಪ್ರಾಣದಾನವನ್ನು ಮಾಡಿಸಿಕೊಂಡರೋ, ಹಾಗೆಯೇ ಅವರ ಹೆಸರಿನಲ್ಲಿ ಶ್ರೀಕಾವೇರಿ ಭಕ್ತಜನರು ಮತ್ತು ತನ್ನಂತೆ ವಿಧವೆಯರಾಗಿ ತಮ್ಮ ಪತಿಗಳಿಗೆ ಪಿಂಡಪ್ರದಾನವನ್ನು ಮಾಡಲಿಕ್ಕೆ ಬರುವ ಯಾತ್ರಿಕರು ತನ್ನ ಪತಿಯ ಹೆಸರಿನ ನೆರಳನ್ನು ಹೊಂದಿದರೆ ತನ್ನ ಜೀವಿತಕಾಲಕ್ಕೆ ಆಗುವಂಥ ಸರ್ವ ಸಮಾಧಾನವೆಂದು ಗ್ರಹಿಸಿ ತನ್ನ ಪತಿಯ ಅವಸಾನಪತ್ರದ ಮುಖ್ಯಸ್ಥರಾಗಿದ್ದ ಲೇಟ್ ಮಾದೈಯ್ಯನವರಿಗೆ ತನ್ನ ಅಭಿಲಾಷೆಯನ್ನು ಹೇಳಿಕೊಂಡದ್ದರ ಮೇಲೆ, ರಾ. ಬಾ. ಮಾದೈಯ್ಯನವರು ತನ್ನ ಸಹೋದರನ ವಿಧವೆಯು ಪುನರ್ವಿವಾಹವಾಗಲಿಕ್ಕೆ ಇಷ್ಟಪಡದೆ ಪುಣ್ಯಕಾರ್ಯಕ್ಕೆ ಇಷ್ಟಪಡುವ ವಿಷಯಕ್ಕೆ ವಿಸ್ಮಯಪಡದೆ ಒಪ್ಪಕೊಟ್ಟಮೇಲೆ, ಡಾಕ್ಟರ್ ಸಂಜಪ್ಪನವರ ವಿಧವೆಯು ತನ್ನ ಹೆಸರಿನಲ್ಲಿದ್ದ ಇಪ್ಪತ್ತು ಸಾವಿರ ರೂಪಾಯಿಯ ಪೈಕಿ 5,000 ರುಪಾಯಿಗಳನ್ನು ಲೇಟ್ ಮಾದೈಯ್ಯನವರಮೂಲಕ ಮುಜರಾಯಿ ಇಲಾಖೆಯ ಪ್ರೆಸಿಡೆಂಟರಿಗೆ ಈ ಛತ್ರಕ್ಕೋಸ್ಕರ ಕಳುಹಿಸಿದ್ದರಂತೆ.

ಈ ಹಣವನ್ನು ಕಳುಹಿಸಿದ ಸ್ವಲ್ಪ ದಿನಗಳಲ್ಲೇ ಬಡ ವಿಧವೆಯ ದುರ್ದೈವದಿಂದ ರಾ. ಬಾ. ಮಾದೈಯ್ಯನವರು ಪರಲೋಕವನ್ನೈದಿದರು ಎಂಬದಕ್ಕೆ ವಿಷಾದಪಡುತ್ತೇನೆ. ಆ ಮೇಲೆ ಈ ಕಟ್ಟಡದ ವಿಷಯದಲ್ಲಿ ತನ್ನ ಹೆಸರು ತನ್ನ ಪತಿಯ ಜ್ಞಾಪಕಾರ್ಥಕ್ಕೆ ಸೇರದೆ ಇರುವ ವಿಷಯದಲ್ಲೂ ಇಲಾಖಾ ಪ್ರೆಸಿಡೆಂಟರು ಮತ್ತು ಕಮಿಟಿಯವರಿಗೆ ಸಹ ಮೂರುಸಾರಿ ಕಾಗದ ಬರೆದದ್ದಕ್ಕೆ ಸರಿಯಾದ ಜವಾಬು ದೊರೆಯದೆ ಇರುವ ಕಾರಣ ಬಹಳ ವ್ಯಸನಪಡುತ್ತಿದ್ದಾರೆಂದು ತಿಳಿಯಲು ವಿಷಾದಪಡುತ್ತೇನೆ. ಇನ್ನಾದರೂ ಇಲಾಖೆಯವರು ದಾನಮಾಡಿದವರ ಹೆಸರನ್ನು ಸೂಚನೆಗೆ ತೆಗೆದುಕೊಂಡರೆ ದಿವಂಗತರ ಧರ್ಮಪತ್ನಿಯವರಿಗೆ ಸಹಾನುಭೂತಿಯಿಂದ ಅನುಮತಿಕೊಟ್ಟ ಎಲ್ಲಾ ವಿಷಯದಲ್ಲೂ ತಂದೆಯೋಪಾದಿಯಲ್ಲಿ ದಿವಂಗತರಿಗೆ ಸಹಾಯಮಾಡಿದ ಲೇಟ್ ಮಾದೈಯ್ಯನವರಿಗೆ ಇದ್ದ ಸಂಕಲ್ಪಕ್ಕೆ ವಿಘ್ನ ಮಾಡದಂತಾಗುತ್ತದೆ. ಈ ಧರ್ಮ ಯೋಚನೆಯನ್ನು ನೆರವೇರಿಸುವ ಭಾರವು ಮುಜರಾಯಿ ಇಲಾಖಾ ಪ್ರೆಸಿಡೆಂಟರಿಗೂ ಮತ್ತು ಕಮಿಟಿಯವರಿಗೂ ಸೇರಿದೆ ಎಂಬದು ನಮ್ಮೆಲ್ಲರ ನಂಬಿಕೆಯಾಗಿದೆ.

ಇನ್ನೊಬ್ಬ ನ್ಯಾಯಮೂರ್ತಿ.

ಎಚ್ಚರ, ಎಚ್ಚರ, ಲೋಕಪಾವನದ ಮಂತ್ರ.

ಮಹನೀಯರೆ,

ಲೋಕಪಾವನವೇನೋ ಗೀತೆಯ 4ನೇ ಅಧ್ಯಾಯದ 22ನೇ ಶ್ಲೋಕವನ್ನು ಮುಂದಿಟ್ಟುಕೊಂಡು ಒಂದು ಅಗ್ರಲೇಖನವನ್ನು 2ನೇ ಸಂಚಿಕೆಯಲ್ಲಿ ಬರೆದ. ಇದನ್ನು ಓದಿದವರಿಗೆ ಖಾದಿ ಬಿಟ್ಟು ಉಡಲು ನಾಚಿಕೆಯಾಗುವಂತಿದೆ. ಕಳ್ಳನಾಗಲಿ, ಯೋಗಿಯಾಗಲಿ, ಭೋಗಿಯಾಗಲಿ, ಸನ್ಯಾಸಿಯಾಗಲಿ ತನ್ನ ಕರ್ತವ್ಯವನ್ನು ತನ್ನ ದೇಶದಲ್ಲಿ ಆದ ಉಡುಪಿನಿಂದ ಸಾಗಿಸಿದರೆ ಅದು ಅಧರ್ಮವೇ? ಅದು ಮಂಕು ಬೂದಿಯೇ? ಪಾಶ್ಚಾತ್ಯರ ಉಬ್ಬಿನಿಕೆಯಲ್ಲಿ ವ್ಯಾಮೋಹಿತರಿಗೆ ಇದನ್ನು ನೋಡಲೂ ಸಹ ಲಜ್ಜೆಯೇ? ಇಡೀ ಲೋಕವೇ ಸನ್ಯಾಸಿಯೆಂದು ಒಪ್ಪಿದ ಮಹಾತ್ಮರ ಪ್ರೀತಿಗಾಗಿ ಮಣಿ ಪೋಣಿಸಿದ ಖಾದಿಯ ನೂಲೂ ಕಳ್ಳನ ಖಾದೀ ವಸ್ತ್ರವೂ ಸಹ ಪವಿತ್ರವಲ್ಲವೇ? ಖಾದಿಯೇ ತೀರ್ಥ, ಖಾದಿಯೇ ಲೋಕಪಾವನ, ಖಾದಿಯೇ ಬುದ್ಧಿ, ಖಾದಿಯೇ ತಾಯಿ, ಖಾದಿಯೇ ತಂದೆ, ಖಾದಿಯೇ ಮೋಕ್ಷ. ಈ ಖಾದಿಯನ್ನು ಪ್ರಚಾರಕ್ಕೆ ತಂದ ಪುಣ್ಯಾತ್ಮರೂ ಕಳ್ಳರೇ? ಕಾಸು ಲಾಭವಿಲ್ಲದೆ ಮಾರಲಿಕ್ಕೆ ಅವರೇನು ಕೋಟ್ಯಾಧೀಶರೇ? ಅನೇಕ ವರ್ಷಗಳಿಂದ ಮಡಿಕೇರಿಯಲ್ಲಿ ತಮ್ಮ ಸ್ವಾರ್ಥತೆಯನ್ನು ನೆರವೇರಿಸಿಕೊಳ್ಳುತ್ತಿದ್ದು ಮುಂದಾಳುಗಳೆಂದು ಖ್ಯಾತಿಯಿಂದ ಹಿಗ್ಗಿಕೊಂಡು ಇಡೀ ಇಂಡ್ಯಾವು ಮುಂದು ಬಂದು ರಾಜಕೀಯದಲ್ಲಿ ಅನ್ಯಾಯಕ್ಕೀಡಾಗುವಾಗ ನಮ್ಮನ್ನು ಇರುಳಿಗಳಂತೆ ಇಟ್ಟು ಹಿಂದುಳಿದ ಪಂಗಡಕ್ಕೆ ಸೇರಿಸಿದ ಮಹನೀಯರ ಹೊಲಸನ್ನು ಹೆಕ್ಕಳಿಸಿ ಹಳ್ಳಿ ಮೂಲೆಗಳಲ್ಲಿ ಸಂಚರಿಸಿ ಜನರನ್ನು ಎಚ್ಚರಿಸಿದ ಮಹನೀಯರು ಪುಣ್ಯಾತ್ಮರಲ್ಲದೆ ಪಾಪಿಗಳೇ? ಲೋಕಪಾವನವು ಜನಮನವನ್ನು ಅರಿತಂತೆ ಕಾಣುವದಿಲ್ಲ.

ಅಯ್ಯಾ, ಲೋಕಪಾವನ—ಇವರೇನು ದೇಶದ ಪ್ರೀತಿಗೆ ಪಾತ್ರರಾಗುವಷ್ಟು ಯೋಗ್ಯರು ಅಲ್ಲ * * ಮುಂತಾಗಿ ಅನ್ನುವಿಯಲ್ಲಾ, ಈ ಗುಣಗಳಿಂದ ಸರಿದ ಕಲವರ ಹೆಸರನ್ನು ಕೊಡುವಿಯೋ? ಅವರನಾ ದರೂಹಿಂಬಾಲಿಸೋಣ. ಒಂದನ್ನು ಆಲಿಸು. ನೀನು ನಿಂದಿಸುವವರೇ ಕೌನ್ಸಿಲಿನಲ್ಲಿ ತಮ್ಮ ಶಕ್ತಿಮೀರಿ ಕಾದುತ್ತಿದ್ದಾರೆ. ಅದು ಸಾಕು. ಇವರು ಮುಂದಕ್ಕೆ ಬಂದದರಿಂದಲೇ ಸತ್ಯವು ಹೊರಬಿತ್ತೆಂದು ಯೋಚಿಸು. ತಿರುಗಿ ದೇಶವನ್ನು ಹಿಂದಕ್ಕೆ ಎಳೆಯುತ್ತಿರುವಿಯೋ? ಈಗ ದೇಶಕ್ಕೆ ಸಿಕ್ಕಿದ ಹಿಂಡು ದ' ಎಂಬ ಬಿರುದು ಸಾಕು. ನೀನೂ ಒದ್ದು, ದೇಶವನ್ನು ಕೆಡಿಸುವ ಯೋಚನೆ ಇಡದಿರು.

ವೃತ್ತ ಪತ್ರದ ರುಚಿಯನ್ನು ದೇಶಕ್ಕೆ ಹುಟ್ಟಿಸಿದ್ದು ಕೊಡಗೇ ಆಗಿದೆ. ಇದು ನಮ್ಮ ಪತ್ರವಾಗಿದೆ. ನಮ್ಮ ಹಣವಾಗಿದೆ. ಲಾಭವೂ ನಷ್ಟವೂ ನಮ್ಮದಾಗಿದೆ. ನಾಂದಲ್ಲಿ ಹಾಳಾಗುತ್ತದೆಂದು ವಾಚಕರನ್ನು ಬೆದರಿಸಿ ಧೈರ್ಯ ಕುಂದಿಸುತ್ತಿದ್ದೀ. ಇದನ್ನು ಬತ್ತಿಗಿಡು, ಸುತ್ತಿ ಇಡು. ಇದರ ಸಾಲವೇ ಜನಾಂಗದ ಸಾಲ. ಇದರ ಮೂಲವೇ ಜನಾಂಗದ ಮೂಲ. ಇದರ ಜೀವವೇ ಜನಾಂಗದ ಜೀವ. ಇದರ ಮರಣವೇ ನಮ್ಮ ಮರಣ, ಹೆದರುವಂತಿಲ್ಲ.

ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರಕಾರವು ಇಂಡಿಯಾ ದೇಶವನ್ನು 50 ಲಕ್ಷ ಪೌಂಡುಗಳಿಗೆ ಸಾಲಕ್ಕೆ ಕೊಂಡುಕೊಂಡು ಈ ಸಾಲವು ಈಗ 200 ಲಕ್ಷ ಪವನು ಆಗಿದೆ, ಆದರೂ ಇಂಡಿಯಾದ ಭದ್ರತೆಯು ಹಾಳಾಗಿಲ್ಲ. ಸಾಲವಿಲ್ಲದೆ ಯಾವ ದೊಡ್ಡ ಕಾರ್ಯವೂ, ಕಂಪೆನಿಯೂ ಈ ವರೆಗೆ ಆದೆಯೋ? ಹಳ್ಳಿಗರ ಹಣ ಸೂರೆ ಹೋಯಿತೆಂದು ಮೊರೆಯಿಡುವೆಯಲ್ಲಾ, ಮೊಸಳೆಯ ಕಣ್ಣೀರನ್ನು ತಿಳಿಯಲಾರದ ಹಳ್ಳಿಗರು ಇನ್ನೂ ಇದ್ದಾರೆಯೇ? ಈ ಕಣ್ಣೀರನ್ನು ದೇಶಬಾಂಧವ ದಾಸರ ಮರಣಕಾಲದಲ್ಲಾದರೂ ಅತ್ತು ಆ ಕಣ್ಣನ್ನು ಖಾದಿ ಕೈ ವಸ್ತ್ರದಿಂದ ಒರಸಿದ್ದರೆ ನಿನಗಿತ್ತು ದೀರ್ಘಾಯುಷ್ಯ * * ಕೂಸಿನ ಕಷ್ಟಯ ಗಾದೆಯನ್ನು ಮರೆತು ಕೊಡಗು ದೇಶವಿರಲಿ, ಇಂಡಿಯಾ ದೇಶದ ಚಳವಳವನ್ನು ನಿಗ್ರಹಿಸಲು ಹೊರಟಿರುವಿಯೂ—ಇದು ಸಾಗೀತೇ—ಐಶ್ವರ್ಯವಂತರನ್ನೂ ಪಟ್ಟಣವಾಸಿಗಳನ್ನೂ ಕೌನ್ಸಿಲಿಗೆ ಚುನಾಯಿಸಿದ್ದು ನಿನಗೆ ದುಃಖವೇ? ದೇಶೋಪಕಾರಕ್ಕೆ ಕರ್ಜುಮಾಡಿದಂಥಾ ದಾಸರು ಕೌನ್ಸಿಲಿಗೆ ಬಾರದೆ ಬಿಟ್ಟು ಹೋಗಿದ್ದಾರೆಯೇ? ನಿನ್ನ ಮಂತ್ರವು ಇದೇ ಅಲ್ಲವೇ? ನೀನು ಬರುವಾಗಲೇ ನಿನ್ನ ಧ್ಯೇಯವನ್ನು ಬಿಚ್ಚಿದ್ದು ಸಂತೋಷ.

ಲೋಕೋದ್ಧಾರವು ಬ್ರಾತೃವಾತ್ಸಲ್ಯದಲ್ಲದೆ ಇದನ್ನು ಮೂಲೆಗೊತ್ತಿ ಕಲವು ದ್ರವ್ಯವಂತರ ಸುಖಕ್ಕೆಂದು ಲಕ್ಷಾಂತರ ಬಡವರನ್ನು ಕಷ್ಟಕ್ಕೀಡುಮಾಡುವದು ಎಂಬಂತೆ ಇಂದೂ ನಡೆಯುತ್ತಿದೆ.

ಇದು ನಿನಗೆ ಸಲ್ಲದು, ಲೋಕಪಾವನ.

ಅಂಜದವ.

ಭಾಗಮಂಡ್ಲದ ಹೊಸಛತ್ರ

ಅಯ್ಯಾ,

ಕೊಡಗು ಪೇಪರಿನ ಇದೇ ಮಾಹೆಯ 17ನೆ ಸಂಚಿಕೆಯಲ್ಲಿ "ಕೊಡಗು ಮುಜರಾಯಿ ಇಲಾಖೆ" ಎಂಬ ಹೆಡ್ಡಿಂಗಿನಲ್ಲಿ ಮೈಸೂರು ಸೀಮೆಯ ಸೀನಿಯರ್ ಸರ್ಜನರಾಗಿದ್ದು ಗತಿಸಿದ ಕೋದಂಡ ಸಂಜಪ್ಪನವರ ಜ್ಞಾಪಕಾರ್ಥವಾಗಿ ಭಾಗಮಂಡ್ಲದಲ್ಲಿ ಕಟ್ಟಿಸಿದ ಧರ್ಮಛತ್ರದ ವಿಷಯ ಪ್ರಕಟಿಸಿರುವ ಕೆಲವು ಸಂಗತಿಗಳು ರಿಕಾರ್ಡಿಗೂ ಮತ್ತು ವಿದ್ಯಮಾನಗಳಿಗೂ ವಿರೋಧವಾಗಿರುವದರಿಂದ ಈ ಲೇಖನ ಬರೆಯಲಾಯಿತು. ಈ ಛತ್ರ ಕಟ್ಟಿಸುವ ವಿಷಯವಾಗಲಿ ಅಥವಾ ಇದಕ್ಕೆ ಖರ್ಚು ಮಾಡಿರುವ 5,000 ರುಪಾಯಿಗಳ ವಿಷಯವಾಗಲಿ ಡಾಕ್ಟರ್ ಸಂಜಪ್ಪನವರು ಅವರ ವಿಲ್ಲಿನಲ್ಲಿ ಧರ್ಮಾರ್ಥವಾಗಿ ಬಿಟ್ಟ ಸುಮಾರು 50,000 ರುಪಾಯಿಗಳಿಗೆ ಸೇರಿರುವದಿಲ್ಲ. ಇವರ ಒಟ್ಟು ಆಸ್ತಿ ಲೆಖ್ಖಾಚಾರ ಮಾಡಿದನಂತರ ಸದರಿ ಸಂಜಪ್ಪನವರು ಅವರ ವಿಲ್ಲಿನಲ್ಲಿ ಅಂದಾಜು ಮಾಡಿದಕ್ಕಿಂತ ಹೆಚ್ಚಾಗಿ 5,000 ರುಪಾಯಿಗಳು ಕೂಡಿಬಂದವು. ಈ ಜೋಬಲಗನ್ನು ಎಗ್ಸಿಕ್ಯೂಟರಾಗಿದ್ದ ರಿಟಯರ್ಡ್ ಕೌನ್ಸಿಲರ್ ಗತಿಸಿದ ಕೋದಂಡ ಮಾದೈಯ್ಯನವರು ಸಮ್ಮಂಧಪಟ್ಟ ವಾರಿಸ್‌ದಾರರ ಸಮ್ಮತಿ ಪಡದು ಸದರಿ ಛತ್ರವನ್ನು ಡಾಕ್ಟರ್ ಸಂಜಪ್ಪನವರ ಹೆಸರಿನಲ್ಲಿ ಕಟ್ಟಿಸಿರುವುದಾಗಿದೆ. ಹೆಚ್ಚಿನ ಸಂಗತಿಗಳನ್ನು ತಿಳುಕೊಳ್ಳಬೇಕೆಂಬ ಪ್ರಮೇಯವಿದ್ದಲ್ಲಿ ಹಾಲಿ ಎಗ್ಸಿಕ್ಯೂಟರ್ ಮೊ. ರಾ. ರಾ. ಕೋದಂಡ ಕಾಳಪ್ಪಯ್ಯನವರನ್ನಾಗಲಿ ಇಲ್ಲವೆ ಮೊ. ರಾ. ರಾ. ರಾವ್ ಬಹದೂರ್ ಕೇಟೋಳಿ ಚಂಗಪ್ಪನವರನ್ನು ಕೇಳಿಕೊಳ್ಳಬಹುದು.

ಓಕಾರ್ಡ್ಸ್

ಕೊಡಗು ವಿದ್ಯಾಭಿವೃದ್ಧಿ ಸಂಘ

ಕೊಡಗು ವಿದ್ಯಾವರ್ಧಕ ಸಂಘದ ಜನರಲ್ ಮೀಟಿಂಗು ತಾ. 20—7—೧೯೨೫ನ್ನ ಆಯಿತು. ಒಂದು ಸಲ! ಎರಡು ಸಲ! ಕೋರಂ ಸಿಕ್ಕದೆ ಮುಂದರಿಸಲ್ಪಟ್ಟ ಮೀಟಿಂಗು ಕಳೆದ ಸೋಮವಾರ ದಿನ ಕೋರಂ ಸಿಕ್ಕಿ ಮೀಟಿಂಗು ಹೇಗೂ ಜರಗಿತು! ಕಮಿಟಿಯು ಚುನಾವಣೆ ಆಯಿತು! ಮಡಿಕೇರಿಯವರೂ, ಉದ್ಯೋಗಸ್ಥರೂ ಹೆಚ್ಚಿನ ಕಮಿಟಿ ಮೆಂಬರುಗಳೇ ಆದರು ಅಲ್ಲವೇ? ಇಲ್ಲದಿದ್ದರೆ ಅವೇಕೆ ಮಡಿಕೇರಿಯಲ್ಲಿ 3 ಸಲ ಕೋರಂ ಸಿಕ್ಕದಿದ್ದರೂ ಕೂಡ ಪುನಹ ಅಲ್ಲಿಯೇ ಆ ಮೀಟಿಂಗನ್ನು ಮಾಡಬೇಕಾದದ್ದು? ಆ ಫಂಡಿಗೆ ಹಣಕೊಟ್ಟವರೇನು ಮಡಿಕೇರಿಯವರೇ? ಹಾ! ತಿಳಿಯಿತು! ವೀರರಾಜಪೇಟೆಯಲ್ಲಿ ಮಾಡಿದ್ದರೆ ಆ ದಿವಸ 'ಕೊಡಗು' ಕಂಪೆನಿಯ ಮೀಟಿಂಗಾದುದರಿಂದ ಇವರಿಗಿಷ್ಟವಿಲ್ಲದವರು ಮೀಟಿಂಗಿಗೆ ಹಾಜರಾಗಿದ್ದರೇ? ಅದ್ದರಿಂದಲ್ಲವೇ ಇಡೀ ದೇಶಕ್ಕೆ ಸಂಬಂಧಪಟ್ಟ "ಕೊಡಗು" ಕಂಪೆನಿಯ ಮೀಟಿಂಗು ವೀರರಾಜಪೇಟೆಯಲ್ಲಾಗುವಾಗ ಅದೇ ದಿವಸ ಮಡಿಕೇರಿಯಲ್ಲಿ ಮೀಟಿಂಗನ್ನು ಮಾಡಿದುದು. ಇದರ ಅರ್ಥವೇನು? 'ಕೊಡಗು' ಕಂಪನಿಯ ಮೀಟಿಂಗಿನಲ್ಲಿ ಹಾಜರಾಗುವ ಮೆಂಬರುಗಳನ್ನು ಈ ಮೀಟಿಂಗಿಗೆ ಹಾಜರಾಗಬಾರದೆಂದು ಮಾಡಿದ ಉಪಾಯವಲ್ಲವೇ?

ಇನ್ನೇನು? ಮಡಿಕೇರಿಯಲ್ಲಿರುವ ಕಲವರು ಸಾಧ್ಯವಾದರೆ ತಾವೇ ಕೊಡಗು ಕೌನ್ಸಿಲನ್ನು ಆಕ್ರಮಿಸಬೇಕೆಂದು ಯೋಚಿಸಿರಲಿಕ್ಕೂ ಸಾಕು! ಆದರೆ ಎಚ್ಚರಿಕೆ!

ಜನತೆಯನ್ನು ಸಕ್ಕರೆಯಿಂತಿರುವ ಸವಿಯಾದ ಮಾತುಗಳಿಂದ ಮನಗೂಳಿಸುವಂತಹ ಕಾಲವು ಅದೆಂದೋ ಕಳೆದು ಹೋಗಿದೆ. ಆದ್ದರಿಂದ ಪುನಹ ಎಚ್ಚರಿಕೆಯೆಂಬ ಈ ಮಾತಿದು!

ಹರಿಪ್ರಸಾದ

ಕೊಡಗು ಸೆಕ್ರೆಟರೇಟು

ಮಹನೀಯರೇ,

ಕೊಡಗು ದೇಶದ ಆಡಳಿತೆಯಲ್ಲಿ ಇನ್ನೂ ಕೆಲವು ಶಾಖೆಗಳ ಜವಾಬ್ದಾರಿ ಉದ್ಯೋಗಗಳು ದೇಶೀಯರಲ್ಲದವರಿಂದಲೇ ನಡಿಸಲ್ಪಡುತ್ತಿವೆ. ಅದರಲ್ಲೂ ಮುಖ್ಯ ಪಟ್ಟ ಕೊಡಗು ಸೆಕ್ರೆಟರೇಟು ಅಂದರೆ ನಮ್ಮ ಎಲ್ಲಾ ಶಾಖೆಗಳ ಆಡಳಿತವನ್ನು ಮೇಲ್ವಿಚಾರಿಸುವ ಕೊಡಗು ಕಮೀಷನರವರ ಆಫೀಸಿನ ಮುಖ್ಯಪಟ್ಟ ಉದ್ಯೋಗಗಳೆಲ್ಲಾ ದೇಶೀಯರಲ್ಲದವರಲ್ಲೇ ನೆಲೆಗೊಂಡಿರುತ್ತವೆನ್ನುವರು ನಾಚಿಕೆ ಮತ್ತು ಅದ್ಭುತವಾದ ವಿಷಯವಾಗಿರುತ್ತೆ. ದೇಶೀಯರು ಅದರಲ್ಲೂ ನಮ್ಮ ಹಿಡುವಳಿದಾರರು ಇಲ್ಲದಿರೋಣವು ಬಹು ಗೋಚರವಾಗಿ ಕಾಣುತ್ತದೆ. ಬಹುಶಃ ಸಂದುಕಟ್ಟಿನಿಂದ ಇದ್ದರೂ ಕೂಡ ಅದು ಪ್ರತಿರೋಧವಾಗಿರುತ್ತೆ. ಈ ಆಫೀಸಿನಲ್ಲಿ ಮುಖ್ಯಪಟ್ಟ ಉದ್ಯೋಗಗಳು ಕಲವು ಕಾಲ ಹಿಂದೆ ದೇಶೀಯರಿಂದಲೇ ನಡಿಸಲ್ಪಡುತ್ತಿತ್ತೆಂದು ಇಲ್ಲಿ ಒತ್ತಿ ಹೇಳಬೇಕಾಗಿಲ್ಲ. ತಕ್ಕ ಕಾರಣದಿಂದಲೇ ದೇಶೀಯರನ್ನೇ ಹೆಚ್ಚಾಗಿ ಪ್ರೋತ್ಸಾಹಿಸುತ್ತಿದ್ದರೆಂದರೆ ತಪ್ಪಾಗಲಾರದು. ಕೊಡಗಿನ ಚರಿತ್ರೆಯೆಂದರೆ, ಇಂಗ್ಲಿಷು ಅಧಿಕಾರಿಗಳು ನಮ್ಮ ಹಕ್ಕು ಭಾಧ್ಯತೆಗಳನ್ನು ಸಂಪೂರ್ಣವಾಗಿ ಕಾಪಾಡುವವರೆಂಬ ಭರವಸೆಯಿಂದ ಬ್ರಿಟಿಷರವರಿಗೆ ನಮ್ಮ ರಾಜ್ಯದ ಅಧಿಕಾರವನ್ನು ಬಿಟ್ಟುಕೊಟ್ಟದ್ದಾಗಿರುತ್ತೆ. ಈ ವರ್ತನೆಗೆ ಎರಡು ಕಾರಣಗಳು —(1) ನಾವು, ರಾಜಭಕ್ತಿಯುಳ್ಳಂಥ ಜನಾಂಗವಾದ ಕಾರಣ ಸರಕಾರದವರಲ್ಲಿ ಸಂಶಯವಿಲ್ಲದಂಥ ವಿಶ್ವಾಸವು. (2) ಸರಕಾರದವರಲ್ಲಿ ನಮ್ಮ ಹಕ್ಕು ಭಾಧ್ಯತೆಗಳನ್ನು ತಿಳಿಯುವ ರೀತಿಯಲ್ಲಿ ಹೇಳಬೇಕಾದ ಸಾರ್ವಜನಿಕ ಅಭಿಪ್ರಾಯವು ಇಲ್ಲದಿರುವಿಕೆಯು. ಇದು ನಮ್ಮ ಭೂಮಿ ಹಿಡುವಳಿ ಮತ್ತು ಅದಕ್ಕೆ ಸಮ್ಮಂಧಪಟ್ಟ ವಿಷಯಗಳಲ್ಲಿ ದೇಶದವರ ಮತ ನಯನ್ನು ವಿಷದ ಪಡಿಸುತ್ತೆ. ಈ ಮೇಲಣ ಕಾರಣಗಳಿಂದ, ಆಗಿನ ದಯವುಳ್ಳ ನಿರಂಕುಶ ಪ್ರಭುತ್ವದ ಪ್ರತಿನಿಧಿಗಳು ಕಮೀಷನರವರ ಆಫೀಸಿನ ಮುಖ್ಯ ಉದ್ಯೋಗಗಳನ್ನು ನಮ್ಮ ಗಾರರಿಗೇನೇ ಕೊಡುವ ನಿರ್ಬಂಧ ಮಾಡಿಕೊಂಡಿದ್ದರು. ಏನು ಕಾರಣಗಳಿಂದ ಈ ಸೂತ್ರವು ಮೂಲೆಗೆ ಸೂಕಲ್ಪಟ್ಟಿತೆಂದು ಪರಿಶೋಧಿಸಲು ನನ್ನಿಂದ ಅಸಾಧ್ಯವು. ತಪ್ಪು ವಿಚಾರದಿಂದ ಕಲವು ಕಡೆಗಳಲ್ಲಿ ದೇಶೀಯರನ್ನು ಕಮೀಷನರವರ ಆಫೀಸಿನಿಂದ ಬಹಿಷ್ಕರಿಸತಕ್ಕಲಿರುವರೆಂಬ ಅಭಿಪ್ರಾಯವು ದಿನೇ ದಿನೇ ಪುಷ್ಟೀಕರಿಸಲ್ಪಡುತ್ತಲಿರುವುದು. ಮತ್ತು ಮೇಲೆ ಸೂಚಿಸಿದ ಕಮೀಷನರವರ ಆಫೀಸಿನಲ್ಲಿನ ತೋರುವಿಕೆಯು ಈ ವಿಷಯದಲ್ಲಿ ದೇಶದವರಲ್ಲಿ ಒಂದು ಅಸಾಧಾರಣವಾದ ವಿಶೇಷತ್ವದಿಂದ ಕೂಡಿದ ಆಲೋಚನೆಯನ್ನು ಹುಟ್ಟಿಸುತ್ತಲಿವೆ. ಇಂಥಾ ಅಸಾಧಾರಣವಾದ ವಿಶೇಷತ್ವಕ್ಕೆ ಕಾರಣವೇನೆಂದರೆ, ಆದರೂ ಕೂಡ ದೇಶದ ಕಷ್ಟಸುಖಗಳು ಮತ್ತು ಹಕ್ಕುಭಾಧ್ಯತೆಗಳ ವಿಷಯದಲ್ಲಿ ದೇಶೀಯರಿಗೇನೇ ನ್ಯಾಯವಾದ ತಿಳುವಳಿಕೆಯು ಇರುವ ಕಾರಣ, ಕಮೀಷನರವರ ಆಫೀಸಿನ ಜವಾಬ್ದಾರಿಕ ಉದ್ಯೋಗಗಳನ್ನು ದೇಶೀಯರಿಗೇನೆ ಕೊಡಬೇಕೆಂಬುದು ದೇಶದವರ ಅಪೇಕ್ಷೆಯಾಗಿರುತ್ತೆ. ಅಲ್ಲದೆ ಕಮೀಷನರವರಿಗೂ ಕೂಡ ದೇಶದಲ್ಲಿನ ಭೂಮಿ ಹಿಡುವಳಿ ಮತ್ತು ರೆವಿನ್ಯೂ ವ್ಯವಸ್ಥೆಗಳಿಗೆ ಸಮ್ಮಂಧಪಟ್ಟ ಅನೇಕ ದೊಡ್ಡ ಪಾರಿಭಾಷಿಕ (Technical) ಮತ್ತು ವಿಶೇಷ ಕಷ್ಟವಾದಂಥ ಪ್ರಶ್ನೆಗಳನ್ನು ಅರಿತುಕೊಳ್ಳಲು ಸಹ ಅನುಕೂಲವಾಗುವದು. ಈ ಮೇಲೆ ಸಮೂದಿಸಿದ ಕಾರಣಗಳಿಂದಲೂ, ನಮ್ಮ ದೇಶದಲ್ಲು ಪ್ರೌಢವಿದ್ಯೆಯುಳ್ಳ ದಿನೇ ದಿನೇ ಯುವಕರು ಹೆಚ್ಚುತಲಿರುವುದರಿಂದಲೂ ಮತ್ತು ಈಗಿನ ದೇಶೀಯ ಉದ್ಯೋಗಸ್ಥರಲ್ಲಿ ಯೋಗ್ಯಮತ್ತು ಅನುಭವಶಾಲಿಗಳಾದ ಅನೇಕರುವರವರಿಗಿಂತಲೂ ಇರುವದರಿಂದಲೂ, ಬೆಂಗಳೂರಿನಲ್ಲಿ ಚೀಫ್ ಕಮೀಷನರವರ ಆಫೀಸಿನ ನಮ್ಮ ದೇಶದ ಖರ್ಚಿನಿಂದ ಇಡಲ್ಪಟ್ಟಂಥಾ

ಅಲ್ಲಾ ಉದ್ಯೋಗಗಳು ಕೂಡ ನಮ್ಮ ದೇಶಸ್ಥರಿಗೇನೆ ಸಿಕ್ಕ ಬೇಕೆಂಬ ವಿಷಯವು ದೇಶದವರ ಕೋರಿಕೆಗೆ ಬಂದು ಈ ಕೂಡಲೇ "ಕೊಡಗು" ಪತ್ರಿಕೆಯಲ್ಲೂ ಸೂಚಿಸಲಾಗಿದೆ. ನಮ್ಮ ಕಮೀಷನರವರು ಕರುಣೆ, ದಯಾಳು ನ್ಯಾಯಸ್ಥರೆಂಬುದು ದೇಶೀಯರು ಅರಿತವರಾಗಿರುತ್ತಾರೆ. ಮತ್ತು ಕೆಲವು ದಿನಗಳ ಹಿಂದೆ ವರ್ಗವಾಗಿ ಹೋದ ಚೀಫ್ ಕಮಿಷನರ್ ಮಿ॥ ಬಾರ್ಟನ್ ಸಾಹೇಬರವರಿಗೆ ಕೊಟ್ಟ ಟೀ ಪಾರ್ಟಿಯಲ್ಲಿ ಅವರ (ಚೀಫ್ ಕಮಿಷನರ) ಭಾಷಣದಲ್ಲಿ ನಮ್ಮ ದೇಶದ ಮುಖ್ಯ ಬಾಧ್ಯತೆಗಳು ಈಗಿನ ಕಮಿಷನರವರ ಕೈಯ್ಯಲ್ಲಿ ಸುರಕ್ಷಿತವಾಗಿರುವದೆಂದು ನಂಬಿಕೊಟ್ಟಿರುವದು ದೇಶದವರಿಗೆ ಅರಿತ ಸಂಗತಿಯಲ್ಲವೇ? ಈ ಸಂಬಳವು ಜೋಕ್ಯಾಗಲಾರದೆಂದೇ ದೇಶದವರ ಭಾವನೆ.

ಪಿ ಯಂ. ಮುತ್ತಣ್ಣ.

ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶ

ಅಯ್ಯಾ,

ಜುಲೈ 3ನೇ ತಾರೀಕಿನ ನಿಮ್ಮ ಅಮೂಲ್ಯವಾದ ಸಂಚಿಕೆಯಲ್ಲಿ ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶದ ವಿಷಯದ ಲೇಖನವನ್ನು ನೋಡಿದೆನು. ಈ ವರ್ಷ ವೀರರಾಜಪೇಟೆ ಹೈಸ್ಕೂಲು ಉತ್ತಮವಾದ ಫಲಿತಾಂಶವನ್ನು ತೋರಿದಕ್ಕೆ ನಿಮ್ಮ ಅಭಿವಂದನೆಗಳನ್ನು ಸೂಚಿಸಿದ್ದು ಸಂತೋಷವೇ ಸರಿ. ಮಡಿಕೇರಿ ಹೈಸ್ಕೂಲು ಕಳೆದ ವರ್ಷಕ್ಕಿಂತ ಈ ವರ್ಷ ಕ್ಷೀಣ ಸ್ಥಿತಿಯನ್ನು ಹೊಂದಿದಕ್ಕೆ [illegible] ಸಹಜವೇ, ಆದರೆ ನೀವು ಮಡಿಕೇರಿ ಹೈಸ್ಕೂಲನ್ನು ವೀರರಾಜಪೇಟೆ ಹೈಸ್ಕೂಲಿನೊಂದಿಗೆ ಪರೀಕ್ಷೆಯ ಫಲಿತಾಂಶದ ವಿಷಯದಲ್ಲಿ ಹೋಲಿಸುವುದು ಕೊಂಚ ತಪ್ಪಾಗಿ ಕಂಡು ಬರುತ್ತದೆ. ಯಾಕೆಂದರೆ, ಮಡಿಕೇರಿ ಶಾಲೆಯಲ್ಲಿ [illegible] ಮತ್ತು ಗಣಿತ ಈ ಎರಡು ಶಾಖೆಗಳೂ ಇವೆ. ವೀರರಾಜಪೇಟೆಯಲ್ಲಾದರೋ ಒಂದೇ ಚರಿತ್ರೆಯ ಒಂದೇ ಶಾಖೆ ಇರುವದು. ಈ ಕಾರಣದಿಂದ ಕಾಯದಲ್ಲಿ ಪ್ರಾಣವಿದ್ದರೂ, ರಕ್ತವನ್ನು ಹೀರಲ್ಪಟ್ಟರೆ ದೇಹವು ತ್ರಾಣಗೆಟ್ಟು ಯಾವರೀತಿಯಲ್ಲಿ ದುರ್ಬಲವಾಗಿರುತ್ತೋ ಹಾಗೆಯೇ ವೀರರಾಜಪೇಟೆ ಹೈಸ್ಕೂಲು ಸ್ವಲ್ಪ ಆಡಚಣೆಯಲ್ಲಿಯೂ, ನಿಶಕ್ತಿಯಲ್ಲಿಯೂ, ಇರುತ್ತಿದೆ. ಹ್ಯಾಗೆಂದರೆ 1st ಫಾರಂನಿಂದ IVth ಫಾರಂವರೆಗೆ ಕಲಿಯತಕ್ಕ ಸುಮಾರು ಅರ್ಧ ಡಜನಿಗಿಂತ ಹೆಚ್ಚಿನ ಗಣಿತದ ವಿದ್ಯಾರ್ಥಿಗಳು ಪ್ರತಿವರ್ಷವೂ Optional ವಿದ್ಯಾಶಕ್ತಿಯುಳ್ಳ "ಗಣಿತ" ಶಾಖೆಯನ್ನು ತೆಗೆಯುವ ದೆಸೆಯಿಂದ ಮಡಿಕೇರಿಗೆ ಹೋಗುತ್ತಾರೆ, ಸಾಧಾರಣವಾಗಿ ಗಣಿತ ಶಾಖೆಯನ್ನು ತೆಗೆದುಕೊಂಡವರು ಚರಿತ್ರೆ ಶಾಖೆಯವರಿಗಿಂತ ಹೆಚ್ಚು ಮಂದಿ ಪರೀಕ್ಷೆಯಲ್ಲಿ ತೇರ್ಗಡೆಹೊಂದುವುದು ವಾಡಿಕೆ. ಇಲ್ಲದೆ ಕೆಲವು ಮಟ್ಟಿಗೆ ದಡ್ಡರಾದ ಹುಡುಗರೂ ಸಹ "ಚರಿತ್ರೆ" ಯನ್ನು ಬಿಟ್ಟು "ಗಣಿತ" ವನ್ನು ತೆಗೆದುಕೊಳ್ಳುತ್ತಾರೆ. ಡಾಕ್ಟರ್, ಇಂಜನೀಯರ್, ಫಾರೆಸ್ಟ್, ಇವೇ ಮೊದಲಾದ ಪ್ರವೃತ್ತಿಗಳಿಗೆ ಗಣಿತವಿಲ್ಲದೆ ಆಗುವುದಿಲ್ಲ. ಚರಿತ್ರೆಯವರಾದರೋ, ಬಿ. ಎ. ವರೆಗೆ ಓದದೆ ನಿವೃತ್ತಿಯೇ ಇಲ್ಲ. ಎಫ್. ಎ. (ಇಂಟರ್ ಮೀಡಿಯೇಟ್) ಪರೀಕ್ಷೆ ಆದನಂತರ ಚರಿತ್ರೆಯ ಹುಡುಗರಿಗೆ, ಬಿ. ಎ. ಆಗದೆ ಯಾವುದೊಂದು ಒಳ್ಳೆ ಮಾರ್ಗವೂ ಇಲ್ಲ. ಈ ಕಾರಣದಿಂದಲೇ ಈಗಿನ ವಿದ್ಯಾರ್ಥಿಗಳು IVth ಫಾರಂ ಆದನಂತರ V Form.ನಲ್ಲಿ ಹೇಗಾದರೂ ಮಾಡಿ ಗಣಿತಶಾಖೆಯನ್ನು ತೆಗೆಯುವುದರಲ್ಲಿ ತುಂಬಾ ಆಸಕ್ತಿಯುಳ್ಳವರಾಗಿದ್ದಾರೆ. ಈ ಶಾಖೆಯನ್ನು ವೀರರಾಜಪೇಟೆ ಹೈಸ್ಕೂಲಿನಲ್ಲಿ ಇಡದೆ ಇರುವುದರಿಂದ ಇಲ್ಲಿಯ ಜನರಿಗೆ ಉಂಟಾದ ಮತ್ತು ಉಂಟಾಗುವ ಅನಾನುಕೂಲತೆಗಳು ಎಷ್ಟು ವರ್ಣಿಸಿದರೂ ಸ್ವಲ್ಪವಾಗುವದು. ಪ್ರಥಮದಲ್ಲಿ ಮೇಲೆ ಸೂಚಿಸಿದ ರೀತಿಗೆ ವೀರರಾಜಪೇಟೆ ಹೈಸ್ಕೂಲಿನಲ್ಲಿ 1st ಫಾರಂನಿಂದ Vth ಫಾರಂ ವರೆಗೆ ಚನ್ನಾಗಿ ಕಲಿಯತಕ್ಕ ಉತ್ತಮವಾದ ಹುಡುಗರು ಗಣಿತಶಾಖೆಯನ್ನು ತೆಗೆಯಲೋಸುಗ ಪ್ರತಿವರ್ಷವೂ, ಮಡಿಕೇರಿಗೆ ಹೋಗುವದರಿಂದ ಕೊನೆಯಲ್ಲಿ ಭತ್ತವಂತೇ ಆದರೂ ವೃಥವಿಲ್ಲದ ಕಾಳಿನಿಂದ ಕೂಡಿರುವ ಭತ್ತದ ರಾಶಿಯೋಪಾದಿ ವೀರರಾಜಪೇಟೆ ಹೈಸ್ಕೂಲಿನಲ್ಲಿ Vth ಮತ್ತು VIth ಫಾರಂಗಳ ಸ್ಥಿತಿಯು ಬಸವೋಗಿ ಕಸನಂತರಂತೆ ಚರಿತ್ರೆಯನ್ನು ತೆಗೆದುಕೊಳ್ಳುವ ಸಾಮಾನ್ಯರಾದ ಹುಡುಗರು ಮಾತ್ರ ಬಾಕಿ ಉಳಿಯುತ್ತಾರೆ. ಇವರು ಗಣಿತದಲ್ಲಿ ಸಹಜವಾಗಿ ಬಲಹೀನರಾದುದರಿಂದ ಇತರರನ್ನು ತರಪೇತು ಮಾಡುವುದೆಂದರೆ ನಿಜವಾಗಿಯೂ ಕಷ್ಟ ಕೆಲಸವಾಗಿದೆ. ಮಡಿಕೇರಿಯ Vth ಮತ್ತು VIth ನೇ ಫಾರಂಗಳ ಗಣಿತಶಾಖೆಯನ್ನು ಹೀಗೆ ಪ್ರತಿವರ್ಷವೂ ವೀರರಾಜಪೇಟೆಯಿಂದ ಗಣಿತದಲ್ಲಿ ಉದ್ಯುಕ್ತಬುದ್ಧಿಯುಳ್ಳ (Mathematics Students) ಹುಡುಗರು ಪೋಷಿಸುತ್ತಿದ್ದಾರೆ. ಎರಡನೇದು, ವೀರರಾಜಪೇಟೆಯ ಬಡ ರೈತರು ತಮ್ಮ ಮಕ್ಕಳನ್ನು ಗಣಿತ ಅಭ್ಯಾಸಕ್ಕೆ ಕಳುಹಿಸಲು ಹಣವಿಲ್ಲದೆ ಗೋಳಿಡುತ್ತಾರೆ. 3ನೇದು ಮಡಿಕೇರಿ ಹೈಸ್ಕೂಲಿಗಿಂತ ಸುಮಾರು 150 ಯಾ 200 ಮಂದಿ ಹೆಚ್ಚು ಹುಡುಗರು ವೀರರಾಜಪೇಟೆಯಲ್ಲಿಯೇ ಇರುವುದರಿಂದ ಇಲ್ಲಿ ಗಣಿತಶಾಖೆ ತೆರೆಯುವುದು ಅತ್ಯಾವಶ್ಯಕತೆ. 4ನೇದು ವೀರರಾಜಪೇಟೆ ಪಟ್ಟೆಯಲ್ಲಿಯೂ, ಜನಸಂಖ್ಯೆಯಲ್ಲಿಯೂ, ಅಲ್ಲದೆ ಎಲ್ಲಾ ಇತರ ವಿಷಯಗಳಲ್ಲಿಯೂ, ಕೊಡಗಿನ ಮಧ್ಯ ಸ್ಥಳವಾದರೂ, ಇಲ್ಲಿ ಬೋರ್ಡಿಂಗಿಗೆ ಸರಿಯಾದ ಕಟ್ಟಡವಿಲ್ಲ. ಅದನ್ನು ನೋಡುವದಕ್ಕೆ ಮಡಿಕೇರಿಯಲ್ಲಿಯು ಹಾಗೆ ಸರಕಾರದಿಂದ ನೇಮಿಸಿದ ಒಬ್ಬ ಪಾರುಪತ್ಯಗಾರರಿಲ್ಲ. ಶಾಲೆಯಲ್ಲಿ ಒಂದೊಂದು ತರಗತಿಯಲ್ಲಿ 50ಯಾ60 ಹುಡುಗರಿರುವುದರಿಂದ ಸ್ಥಳ ಸಂಕೋಚವಾಗಿದ್ದರೂ ಅದನ್ನು ಸರಿಪಡಿಸುವ ಏನೊಂದು ಏರ್ಪಾಡೂ ಇಲ್ಲ. ಹುಡುಗರಿಗೆ ಓದಲು ಅತ್ಯಾವಶ್ಯವಾದ ಲೈಬ್ರರಿ, ಬೇಕಾದ ಒಳ್ಳೇ ಪುಸ್ತಕಗಳಿಲ್ಲ. ಹುಡುಗರಿಗೆ ಬಹುಮುಖ್ಯವಾಗಿ ಆಟವಾಡುವುದಕ್ಕೆ ಬೇಕಾದ ಅನುಕೂಲವಾಗಿ ಒಂದು ಆಟದ ಮೈದಾನ ಇಲ್ಲ. ಈ ಎಲ್ಲಾ ವಿಷಯಗಳಲ್ಲಿಯೂ ಈ ಶಾಲೆಯು ಬಹಳ ದುರ್ದೆಶೆಯಲ್ಲಿದೆ. ಈ ಎಲ್ಲಾ ಕುಂದು ಕೊರತೆಗಳ ಹೋಗಲಾಡಿಸಿ, ಇಲ್ಲಿ ಗಣಿತ ಶಾಖೆಯನ್ನು ಸ್ಥಾಪಿಸಿದ್ದೇ ಆದರೆ ಮರುದಿವಸವೇ ಈ ಸ್ಕೂಲಿನ ಸ್ಥಿತಿಯು ಹೇಗಿರುತ್ತೆಂಬುದನ್ನು ಜನರೇ ಊಹಿಸಬಲ್ಲರು. ಗಣಿತ ಶಾಖೆಯನ್ನು ಇಲ್ಲಿ ತೆರೆಯಲು ಅಂಥಾ ಕಷ್ಟವೇನೂ ಕಾಣುವುದಿಲ್ಲ. ಆದರಿಂದ ಹಣ ಖರ್ಚು ಕಡಿಮೆ. ಆದರ ಉಪಯೋಗವನ್ನು ಎಷ್ಟು ವರ್ಣಿಸಿದರೂ ಅವರ ಸದ್ಯಕ್ಕೆ ಗಣಿತ ಶಿಕ್ಷಣದಲ್ಲಿ ತೆರೆಯುವಂತೆ ನಮ್ಮ ಎಜುಕೇಷನ್ ಅಧಿಕಾರಿಯವರುಗಳು ಕಮೀಷನರವರೊಂದಿಗೆ ಮಾತಾಡಿದಲ್ಲಿ ಕಾರ್ಯವು ಒಡನೇ ಕೈಕೊಡುತ್ತೆ ಎನ್ನುವುದಕ್ಕೆ ಯಾವ ಸಂದೇಹವೂ ಇಲ್ಲ. ಇದನ್ನು ಘನಸರಕಾರವೂ, ಕೌನ್ಸಿಲ್ ಮೆಂಬರುಗಳೂ ಗಮನಕ್ಕೆ ತಂದಲ್ಲಿ ಒಪ್ಪತಕ್ಕವರಿಗೆ ತುಂಬಾ ಉಪಕಾರವಾಗುವದು. ಪತ್ರಿಕಾ ಸಂಪಾದಕರೇ! ಈ ಮೇಲೆ ಕಾಣಿಸಿರುವ ಕುಂದು ಕೊರತೆಗಳನ್ನು [illegible] ವೀರರಾಜಪೇಟೆ ಸ್ಕೂಲ್ ಫೈನಲ್ ಪರಿಣಾಮದ [illegible] ಹೈಸ್ಕೂಲಿನ ಫಲಿತಾಂಶಕ್ಕೆ [illegible] ಆದ್ದರಿಂದ ಒಳ್ಳೆ [illegible] ಅಭ್ಯಾಸ [illegible] ಉತ್ಸಾಹ, ಶಕ್ತಿಗೂ ಅನುಕೂಲವಾದ ದಾರಿ, ವೀರರಾಜಪೇಟೆಯಲ್ಲಿ ಗಣಿತ ವಿದ್ಯಾಭ್ಯಾಸದ ಶಾಖೆಯೊಂದನ್ನು ತೆರೆಯುವುದೇ ಆಗಿದೆ. ಆದ್ದರಿಂದ ನಾವು [illegible] ಕೌನ್ಸಿಲ್ ಮೆಂಬರ [illegible] ಈ ಸಂಗತಿಗಳನ್ನು ಶೀಘ್ರದಲ್ಲಿಯೇ ಚಿತ್ತಕ್ಕೆ ತಂದು ಸರಕಾರದವರ ಮನಸ್ಸಿಗೆ ಈ ಸಂಗತಿ ಹಿಡಿಸುವಂತೆ ಮಾಡಬೇಕೆಂಬುದೇ ಮಕ್ಕಳ ತಂದೆಯಾದ ನನ್ನ ಬಿನ್ನಹ ಕೋರಿಕೆ.

ಮಕ್ಕಳ ತಂದೆ

ಬಳ್ಳಾರಿಯ ಬಿನ್ನಹವು.

ಬಳ್ಳಾರಿ ಜಿಲ್ಲೆಯು ಕನ್ನಡನಾಡಾಗಿರುತ್ತದೆ. ಜನಸಂಖ್ಯೆಯು [illegible] ಲಕ್ಷ ಇದ್ದು ಅದರಲ್ಲಿ [illegible] ಲಕ್ಷ ಜನರು ಕನ್ನಡಿಗರಿರುತ್ತಾರೆ. ಇದಕ್ಕೆ ಸರಕಾರದವರ ಪ್ರಕಟ ಮಾಡಿದ ಜನಸಂಖ್ಯೆಯೇ ಸಾಕ್ಷಿಯು. [illegible] ಸಾಲು ಇದರಲ್ಲಿ All India congress committee ಯವರು ಈ ಜಿಲ್ಲೆಯನ್ನು ಕನ್ನಡ ನಾಡಿನಲ್ಲಿ ಎಣಿಸಿ ಅದನ್ನು ಕರ್ನಾಟಕ ಪ್ರಾಂತಿಕ ಮಂಡಲದಲ್ಲಿ ಸೇರ್ಪಡೆ ಮಾಡಿದರು. ಇದನ್ನು ಆಂಧ್ರರು ಅಸಂತುಷ್ಟರಾಗಿ ತಕರಾರು ಮಾಡಿದರು. ಆಮೇಲೆ ಈ ಪ್ರಶ್ನೆಯು ನಿರ್ಣಯಕ್ಕೋಸ್ಕರವಾಗಿ ಪಂಚಾಯಿತಿಗೆ ಒಪ್ಪಿಸಲ್ಪಟ್ಟಿತು. ಪಂಚರಲ್ಲಿ ಇಬ್ಬರು ತೆಲುಗರಾಗಿದ್ದರು ಇಬ್ಬರು ಕನ್ನಡಿಗರಾಗಿದ್ದರು. ಪೂನೆಯ ಶ್ರೀ ನರಸಿಂಗರಾವ ಕೇಳಕರವರು ಸರಪಂಚರಾಗಿದ್ದರು. ಈ ಪ್ರಾಂತದ ವಿವಾದವಾದ ಕೋರ್ಟು ವಗೈರೆ ವಿಷಯಗಳವರೆಗೆ [illegible] ಸಹ ಬಳ್ಳಾರಿಯಲ್ಲಿ ಬಳ್ಳಾರಿಯಲ್ಲಿ ಈ ಪಂಚರ ಎದುರು ಮಾಡಿತು. ಉಭಯಪಕ್ಷದವರಿಂದ ಸರಕಾರಿ ಅಧಿಕಾರಸ್ಥರ ಮತ್ತು ಸರಕಾರಿ ದೊಡ್ಡಮನುಷ್ಯರ ಸಾಕ್ಷಿಗಳಾದವು. ಪುರಾವೆಯ ಒಟ್ಟು ಐನೂರು ಉತ್ತರಗಳೂ ಗ್ಯಾಜೇಟಿಯರ ಉತ್ತರಗಳೂ ಹಾಜರುಮಾಡಲ್ಪಟ್ಟವು. ಪಂಚರು ಈ ಜಿಲ್ಲೆಯಲ್ಲಿಯ ಏಳು ತಾಲೂಕುಗಳು (ಬಳ್ಳಾರಿ ತಾಲೂಕ ಪಟ್ಟಣ ಸಹಿತ) ಕನ್ನಡನಾಡೆಂದೂ, ಆದವಾನಿ, ರಾಯದುರ್ಗ, ಆಲೂರ ಈ ಮೂರು ತಾಲೂಕುಗಳು ಆಂಧ್ರದೇಶಕ್ಕೆ ಸೇರಿರುತ್ತವೆಂದು ತೀರ್ಮಾನಿಸಿಟ್ಟರು. ಆಮೇಲೆ ವರುಷ ದಿಲ್ಲಿಯಲ್ಲಿ ನಡೆದ ರಾಷ್ಟ್ರೀಯಸಭಾ ಕಮಿಟಿಯಲ್ಲಿ ಈ ತೀರ್ಮಾನವು ಸ್ಥಿರಪಡಿಸಲಟ್ಟಿತು. ಆದುದರಿಂದ ಈ ವರುಷವು ಬಳ್ಳಾರಿಯ ಡಿಸ್ಟ್ರಿಕ್ಟ ಕಾಂಗ್ರೆಸ ಕಮಿಟಿಯು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಮಂಡಲಕ್ಕೆ ಒಳಪಟ್ಟು ತನ್ನ ಕಾರ್ಯವನ್ನು ಮಾಡುತ್ತಲಿದೆ.

ಇನ್ನು ಸ್ವಲ್ಪ ದಿವಸಗಳಲ್ಲಿಯೇ ಆಂಧ್ರ ವಿಶ್ವವಿದ್ಯಾಲಯವು ಸ್ಥಾಪಿಸಲ್ಪಡತಕ್ಕದ್ದಿದೆ. ಮುಂದಿನ ಆಗಸ್ಟ ತಿಂಗಳಲ್ಲಿ ಮದ್ರಾಸ ಕಾಯದೇಮಂಡಳದಲ್ಲಿ ಈ ಬಗ್ಗೆ ಒಂದು ಬಿಲ್ಲು ಚರ್ಚೆಗಾಗಿ ಇಡಲ್ಪಡುವದು. ಸದ್ಯಕ್ಕೆ ಆಂಧ್ರದೇಶದಲ್ಲಿ ನಾಲ್ಕು ಸ್ಥಳಗಳು ವಿಶ್ವವಿದ್ಯಾಲಯಕ್ಕೆ ಆಧೀನವಾಗಿರುವವು, ಕಾಲಾಂತರದಲ್ಲಿ ಇವುಗಳೇ ಪೂರ್ಣವಾಗಿ ಸ್ವತಂತ್ರ ಯುನಿವರ್ಸಿಟಿಗಳಾಗುವಂತೆ ಮತ್ತು ನಿರ್ದಿಷ್ಟವಾದ ಒಳ್ಳೆ ವ್ಯವಸ್ಥೆ ಮಾಡುತ್ತದೆಂದು ಈ ಯುನಿವರ್ಸಿಟಿಯ ಕುರಿತು ಶಿಕ್ಷಣ ಅಧಿಕಾರಿಗಳಾದ ಮಿ॥ ಸ್ಟೇತಮ್ ಸಾಹೇಬರು ತಮ್ಮ ವಾಖ್ಯಾನಗಳಲ್ಲಿ ಹೇಳಿರುತ್ತಾರೆ

ಸದ್ಯಕ್ಕೆ ಬಳ್ಳಾರಿಯಲ್ಲಿ ಕಾಲೇಜವಿಲ್ಲ. ಆದರ ನೆರೆಯ ಜಿಲ್ಲೆಯಾದ ಅನಂತಪುರದಲ್ಲಿ ಒಂದು ಕಾಲೇಜವಿರುತ್ತದೆ. ಅದನ್ನೇ ಬಳ್ಳಾರಿಗೆ ತಂದು ಬಳ್ಳಾರಿಯನ್ನೇ ಆಂಧ್ರ ವಿಶ್ವವಿದ್ಯಾಲಯದ ಒಂದು ಮಧ್ಯವರ್ತಿ ಸ್ಥಳವಾಗಿ ಮಾಡಬೇಕೆಂದು ಬಳ್ಳಾರಿಯ ಕೆಲವು ಆಂಧ್ರಭಾಷಾಭಿಮಾನಿಗಳು ದೀರ್ಘ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಮೊನ್ನೆ ೩ನೆಯ ತಾರೀಖಿನ ದಿವಸ ಬಳ್ಳಾರಿಯಲ್ಲಿ ಒಂದು ಸಭೆಯನ್ನು ನೆರೆಯಿಸಿ ಅದರಲ್ಲಿ ಅವರು ಬಳ್ಳಾರಿಯು ಆಂಧ್ರ ವಿಶ್ವವಿದ್ಯಾಲಯದ ಮಧ್ಯವರ್ತಿ ಸ್ಥಾನವಾಗುವದು ಅವಶ್ಯವಿರುತ್ತದೆಂದು, ಬ್ಯಾಗೋ ಬಹುಮತದಿಂದ ಒಂದು ಠರಾವನ್ನು ಮಂಜೂರ ಮಾಡಿಕೊಂಡರು. ಈ ಠರಾವಿಗೆ ಯಾರ ಬೆಂಬಲವಿಲ್ಲೆಂದೂ, ಇದು ಪೊಳ್ಳಾದ ಠರಾವೆಂದೂ ನಾವು ಹೇಳಲಿಕ್ಕೆ ಬಳ್ಳಾರಿಯಲ್ಲಿಯ ಕನ್ನಡಿಗರು ಮತ್ತೊಂದು ಸಭೆಯನ್ನು ನೆರೆಯಿಸತಕ್ಕದ್ದಾಗಿರುತ್ತದೆ. ಬಳ್ಳಾರಿಯ ಆಂಧ್ರರ ಈ ಮನೋರಥವು ಕನ್ನಡಿಗರ ದುರ್ದೈವದಿಂದ ಕೈಗೂಡಿದರೆ, ಸಂಪೂರ್ಣ ಬಳ್ಳಾರಿ ಜಿಲ್ಲೆಯು [illegible] ದಾಗಿ ಹೋಗುವದು. ಮತ್ತು ಈಗ ಹಂಚಿಹೋಗಿರುವ ಕರ್ನಾಟಕದ ಭಾಗಗಳನ್ನೆಲ್ಲ ಒಟ್ಟುಗೂಡಿಸಿ ಒಂದು ಮಹಾಕರ್ನಾಟಕ ರಾಷ್ಟ್ರವನ್ನು ನಿರ್ಮಾಣ ಮಾಡುವ ನಮ್ಮ ಸಂಕಲ್ಪವು ಅಡಗಿ ಹೋಗುವದು.

ಸದ್ಯಕ್ಕೆಯೇ ಬ್ರಿಟಿಷ್ ಕರ್ನಾಟಕವು ೩ ತುಂಡು ಬಿಕ್ಕ ಪ್ರದೇಶವಿರುತ್ತದೆ. ಮುಂಬಯಿ ಇಲಾಖೆಯಲ್ಲಿ ನಾಲ್ಕು ಜಿಲ್ಲೆಗಳಿರುತ್ತವೆ. ಮದ್ರಾಸ ಇಲಾಖೆಯಲ್ಲಿ ಎರಡು ಜಿಲ್ಲೆಗಳಿರುತ್ತವೆ. ಇವರಡಲ್ಲಿ ಬಳ್ಳಾರಿಯು ಒಂದಾಗಿರುತ್ತದೆ. [illegible] ಈ ರಾಜ್ಯಗಳು ಬೇರೆಬೇರೆ ಜಿಲ್ಲೆಯು [illegible] ವಿಶ್ವವಿದ್ಯಾಲಯಕ್ಕೆ ಅಧೀನವಾಗುವ [illegible] ಇರುವರು. ಈ ಪ್ರಕಾರ ನಮಗೆ ದುಷ್ಟ [illegible] [illegible] ಬಳ್ಳಾರಿಯು ನಮ್ಮ [illegible] ಸ್ವತಂತ್ರವಾದ [illegible] [illegible] ಕರ್ನಾಟಕ [illegible] ಕರ್ನಾಟಕ ಪ್ರಾಂತಗಳಲ್ಲಿಯ [illegible] ಜನರನ್ನು ಮಾಡಿ ಬಳ್ಳಾರಿಯ [illegible] ಬೆಂಬಲವಾಗಿ [illegible] ಈ [illegible] ಟಿಕ್ಕರ ಮಾಡಬೇಕೆಂಬ [illegible]

ರಾಜ್ಯ [illegible]
ನಾರಾಯಣ ರಾವ ದೇಶಪಾಂಡೆ.

MY SCIENTIFIC SYSTEM OF GRADUATED PHYSICAL CULTURE.

SENT FREE TO EVERY ONE.

This will show you some of my remarkable achievements in health building exercises, many pages with nice photographs of myself and [illegible] of my pupils. Read what they say about my system. Don't take my word for it. This book will be an impetus and inspiration to every young man. All I ask is the price of postage two annas. Remember this does not obligate you in any way, so don't delay one minute in your life. Write for this big book now while it is on your mind.

Prof. M. V. Krishna Rao,

P. O. Basavangudi

BANGALORE CITY (S. I.)

"ಲೋಕರಹಸ್ಯ."

ಕೃಷಿಯ ಅಭಿವೃದ್ಧಿ [illegible] ವಿಷಯಗಳು, ಹೆಂಗಸರಿಗೆ ಬೇಕಾದ ಗೃಹಕೃತ್ಯದ ವಿಷಯಗಳು, ಹೇಳಿಗೆ [illegible] ಯುಗಳು, ಒತ್ತರಿಗೆ ಬೇಕಾದ [illegible] ವಿಷಯಗಳು, ರಸಿಕರಿಗೆ [illegible] ಕೀಯ ವಿಷಯಗಳು, ಆಯುರ್ವೇದ [illegible] ಸಂಗ್ರಹ, ಪ್ರತಿಯೊಬ್ಬನೂ ತಿಳಿಯಬೇಕಾದ [illegible] ವಿಚಾರ, ವಿದ್ಯಾ ವಿಷಯ, [illegible] ದಲೂ, ತುಂಬ ತುಳುಕುತ್ತಿರುವ ಈ ಮಾಸ ಪತ್ರಿಕೆಗೆ ವರ್ಷ [illegible] 3—8—0 [illegible] ಕಗೆ 0—[illegible]—0

ಪ್ರತಿ ತಿಂಗಳು 60 ಪುಟಗಳಿಗೆ [illegible] ಲ್ಲದ ವಿಷಯಗಳಿರುತ್ತವೆ.

"ಲೋಕರಹಸ್ಯ" ಆಫೀಸು,
ವೀರರಾಜೇಂದ್ರಪೇಟೆ.
(ಕೊಡಗು.)

ಮಾರಾಟಕ್ಕೆ ತಯಾರಿವೆ.

ಬಗೆ ಬಗೆಯ ಚಕ್ರಾಗಳು ವೀರರಾಜಪೇಟೆಯ ಬಿದ್ದರ್ ಸ್ಟೋರಿನಲ್ಲಿ ಮಾರಾಟಕ್ಕೆ ತಯಾರಿವೆ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ಬಿ. ಪಿ. ಐಯ್ಯಪ್ಪ,
ಬಿದ್ದರ್ ಸ್ಟೋರ್ಸ್,
4—3 ವೀರರಾಜಪೇಟೆ.

FOR SALE.

The following property about ten miles from Mercara, on Somwarpett road, consisting of —

	Rs.	As.	P.
Wetlands, 30 93 acres or about 1000 batties at Rs. 500/ per 100 batties	5000	0	0
Coffee, 33 46 acres at Rs 400/ per acre	13200	0	0
Bane and Jungle, 90 00 acres. at Rs 20/ per acre	1800	0	0
Total 154 39 acres.	20000	0	0

With a decent upstaired house, out-houses, and cooly lines,

is open for sale.

Please apply to —

R. Framjee,
12-8, Mercara.

PRICES REDUCED.

WHISKY —				
King George	Rs.	6	14	0
White horse	"	6	14	0
Dewars'	"	6	14	0
Perfection	"	6	14	0
Vat No 69	"	6	14	0
BRANDY —				
La Rupee D'or	Rs	6	0	0
Exshaws' No 1.	"	7	1	0
Exshaws' No 2.	"	6	4	0
Meartell's spl	"	6	6	0
Hennessey's XXX	"	7	8	0

Old Tone Gin Rs 5—0—0; N. P Vermouth 2—14—0. Special terms for trade.

Spencer & Co.Ltd,
MERCARA & POLLIBETTA.
40

ಸಂಪತ್ತಿಯ ಸಾಧನಗಳು.

ಅಯ್ಯೋ ಬಂಧುಗಳೇ ಸಂಪತ್ತಿಯು ಅನ್ಯ ಬಾಕಲ ಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರ ಪದ. ಅದನ್ನು ಶೋಧಿಸಿ ತೆಗಿಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು.

ಲಕ್ಷಾವಧಿ ರೈತರು ಹೂಪಿ ಅನುಭವ ತೆಗದು ಕೊಂಡಿರುವರು. ಭೂಮಿಯ ತಕ್ಕ ತರತರದ ನೇಗಿಲುಗಳೂ ಗಾಣಗಳೂ ದೊರೆಯುತ್ತವೆ ಕಿಸಾನ ಗಾಣವು ಒಂದು ಗಂಟೆಗೆ ४०० ಪೌಂಡು ಕಬ್ಬನ್ನು ಹಿಂಡಿ ಚಲುತ್ತದೆ

ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್,
5 **ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ.**

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯಕ್ರಯ ವಾಪಸು. ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ

ಟ್ರೇಡ್‌ಮಾರ್ಕ] ರಿಜಿಸ್ಟರ್ ಆದದ್ದು | ನೋಡಿ ತೆಕ್ಕೊಳ್ಳಿರಿ.

ಅಗಸ್ತ್ಯ ಮನ್ಮಥ ಚಿಂತಾಮಣಿ ಲೇಹ

ಆಬಾಲವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾದದ್ದು. ಮೇಹ ವಿಕಾರವಿದ್ದವರಿಗೂ, ಸಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ, ಬಾಣಂತಿ ಸುಬಾಣಂತಿಗಳಿಗೂ ಉಪಯೋಗವುಳ್ಳ ಬಹುಪರಮಾನಂದ ಔಷಧಿ 1ಸೇರು 48ದಿವಸ ಸೇವಿಸಬಹುದು. 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0. ½ಸೇರು ಡಬ್ಬಿ 1ಕ್ಕೆ ರುಪಾಯಿ 1—1—0 ವಿ. ಪಿ. ಕರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ.

ವಿಳಾಸ—ದೇವಣ್ಣ ನಾರಾಯಣಸೇಟ್,
ಗೋಳಿಕಟ್ಟಾ,
ಮಂಗಳೂರು,
12—3 ದ ಕ

ಕರ್ಣಿಕ

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝಾ ಚಳಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦
ಟಪ್ಪಾಲು ಚಾರ್ಜು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು.
೯—೨—೦

ಏಜಂಟರು ಬೇಕು, ಕೊಡಗಿನ ಸ್ಕೂಲ್ಮಾಸ್ಟರುಗಳು ತಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ

12—14 ಕರ್ಣಿಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಸ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	9080
ಜಮಾಬಂದ ಠೇವಣಾತಿ	....	78,000

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಅಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ, ಬಿ.ಎಲ್.

ಸಕ್ರಟೆರಿ.
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್
ತಾರೀಕು 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.
ಎಡಿಟರ್.—ವಿದ್ವಾನ್ ಕೆ. ಕೇಶವಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುತು ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ.—

ಮೇನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್.

GOOLAMHUSAIN ALLIB) / & ON ,

Largest Importers of Fire Arms and Ammunition, Cheapest priced firm in India,

210 Abdul Rehman Street, BOMBAY.



We stock Arms, Ammunition and shooting requisites of almost all the kinds and classes ranging from Re 1/— to Rs 3,000/—

Use our **Brilliant Search Light Lamp for Big Game Night shooting** price Rs 40/— Free Delivery.

Apply for the Current Catalogue.
24—4

Printed & published by Kodanda Appayya, K.B., Chairman, Board of Directors, at " Kodagu " Press, Mercara for " Kodagu " Ltd.

Reg. No. M. 1550.

If not delivered please return to
. KODAGU OFFICE MERCARA.

ಕೊಡಗು.

ಶಕ್ಯೇನ ಧೂಕರದಯುತ ವಿದ್ಯಾ ಜೀತಿ ಪ್ರಯತ್ನತಾಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಷ್ಟ್ರ ಸಂಪದಾ ||

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸನ್ ೧೯೨೫ನೇ ಇಸವಿ ಆಗೊಸ್ತು ತಾರೀಕು ೭ನೇ ಶುಕ್ರವಾರ [ಸಂಚಿಕೆ ೧೦

ಆರೋಗ್ಯ ಚಂದ್ರಿಕೆ.

ಮದ್ರಾಸ್

ಸಂಪಾದಕರು ಡಾಕ್ಟರ್ ಯು ರಾಮರಾವ್,
ಯಮ್. ಎಲ್ ಸಿ ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವದು

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ರೂಪಾಯಿಗಳು ವರ್ಷಕ್ಕೆ 1-8-0 ಬಿಡಿ ಪತ್ರಿಕೆ 1ಕ್ಕೆ 0-2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ 'ಆರೋಗ್ಯ ಚಂದ್ರಿಕೆ' 323,
ತಂಬುಶೆಟ್ಟಿ ವೀಧಿ, ಮದ್ರಾಸ್

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮ. ಕೋಟೆರ ಚೆಣ್ಣಪ್ಪನವರ ಮತ್ತು ಮ. ಚಂಗಂಡ ಕುಟ್ಟಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ

ಏಜಂಟರುಗಳು

ವೀರಾಜಪೇಟೆ—ಬಿದಿರ ಮಂದಾರವಲ್ಲಿ ಮ. ಮುಂಡೇಟಿರ ಬಿರಮಣ್ಣನವರು

ಮೂರ್ನಾಡು—ಕಮಿಷನ್ ಏಜಂಟ್ ಸ್ಟೋರಿನಲ್ಲಿ ಮ. ಮಚ್ಚಿಯಂಡ ದೇವಯ್ಯನವರು

ನಾಪೋಕ್ಲು—ಮ. ಅರೆಯಡ ಸುಬ್ಬಯ್ಯನವರು.
" ಮ. ಪೊನ್ನಚಂಡ ಮುದ್ದಪ್ಪನವರು.

ಗೋಣಿಕೊಪ್ಪಲು—ಮ. ಚಿಮ್ಮಚ್ಚಿರ ಪೆಮ್ಮಯ್ಯನವರು

ಪೊನ್ನಂಪೇಟೆ—ಮ. ಪುತ್ತಮನೆ ಮುದ್ದಮ್ಮಯ್ಯನವರು

ಸುಂಟಿಕೊಪ್ಪ—ಮ. ಜಿ. ಮಾದಮ್ಮನವರು

ಅಮ್ಮತ್ತಿ, ಸಿದ್ದಾಪುರ—ಮ. ಐಸಂಡ ಮಾದಪ್ಪನವರು
" ಮ. ಚಲಿಯಂಡ ಸೋಮಯ್ಯನವರು

ಅಲ್ಲದೆ ಈ ಸಮ್ಮಂಧ ಕೋಟೇರ ಚೆಣ್ಣಪ್ಪನವರು ಮತ್ತು ಚಂಗಂಡ ಕುಟ್ಟಪ್ಪನವರು, ಕೊಡಗಿನ ಎಲ್ಲಾ ಕಡೆಗಳಲ್ಲು ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಸಹ ಮಾಲಗು ಕೊಡಬೇಕಾಗಿ ಕೋರಿಕೆ

ಕೋದಂಡ ಉತ್ತಯ್ಯ
ಆರ್ಗನೈಸಿಂಗ್ ಡೈರೆಕ್ಟರು "ಕೊಡಗು" ಲಿಮಿಟೆಡ್

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಬ್ರಿಟಾಷ್ ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು

ಮಡಿಕೇರಿ
17-7-24 ಮೇನೇಜರ್

ನೋಟೀಸು.

ಕೊಡಗು ಬಿಸಿನಾ ಪರಿಸ್ಥಿತ ಲೆಕ್ಕವನ್ನು ಆಡಿಟ್ ಮಾಡಿಸಬೇಕಾಗಿರುವದರಿಂದ ಈ ವರ್ಷ ಮೇ ವರೆಗೆ ಕಾರ್ಯಸ್ಥರು ಬಿಸಿನಾ ಹೋದ ನಾಡು ಹಬ್ಬ ಬಗೆಗೆ ಹಣ ವಸೂಲಾತಿಗೆ ಕೊಟ್ಟಂತ ರಶೀತಿ ಬುಕ್ಕುಗಳು ಕಳೆದ ವರ್ಷದ ವಾರ್ಷಿಕ ಕಾನ್‌ಫರೆನ್ಸ್ ಕಳೆದ ಕೈ ಫಂಡು ಹಣ ವಸೂಲಾತಿಗೆ ಆಯಾಯ ಕಮಿಟಿಗಳಿಗೆ ಕೊಟ್ಟಿರ ಪ್ರಯುಕ್ತ ಎಲ್ಲಾ ಕಮಿಟಿಯವರೂ ತಮ್ಮ ಹತ್ತಿರವಿರುವ ರಶೀತಿ ಬುಕ್ಕುಗಳನ್ನು ಮತ್ತು ಈ ವರ್ಷ ಉದಿಯೂರ ಮ. ಪಟ್ಟಚೆರುವಂಡ ಮ. ಚಂಗಂಡ ಕುಟ್ಟಪ್ಪನವರು ಮ. ಕೋಟೇರ ಚೆಣ್ಣಪ್ಪನವರು ಮತ್ತು ಇನ್ನು ಕೆಲವು ಏಜಂಟರು ಹಣ ವಸೂಲಾತಿಗೆ ಕೊಟ್ಟ ರಶೀತಿ ಬುಕ್ಕುಗಳನ್ನು ಸಹ ವಸೂಲಾದ ಹಣವಿದ್ದ ಪಕ್ಷ ಹಣ ಸಮೇತ ಪಡಸ ಜವಾನ್ನಾ ಪರಸಂಘದ ಮಡಿಕೇರಿಯಲ್ಲಿರುವ ಆಫೀಸಿಗೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇನೆ

ಸಿ ಎಸ್ ಪಂಕಪ್ಪಯ್ಯ,
ಜನರಲ್ ಸೆಕ್ರೆಟರಿ

ನೋಟೀಸು.

ದಕ್ಷಿಣ ಕೊಡಗಿನಲ್ಲಿ ಪುಸ್ತಕಗಳ, ನೋಟೀಸು ಮತ್ತು ಬೇರೆ ಪ್ರಿಂಟಿಂಗ್ ಕೆಲಸ ಮಾಡಿಸಬೇಕೆಂದಿರುವವರು ದಯವಿಟ್ಟು ಎಲ್ಲಾ ಆರ್ಡರುಗಳನ್ನು ನಮ್ಮ ಬ್ರಾಂಚಿನವರ ವೀರಾಜಪೇಟೆ ಬಾದಿಭಂಡಾರದ ಮೇನೇಜರವರಿಗೆ ಕೊಟ್ಟರೆ, ಶೀಘ್ರದಲ್ಲೇ ಸುಲಭ ಚಾರ್ಜಿಗೆ ಗಿರಿಟು ಹಾಕಿ ಪ್ರಿಂಟು ಮಾಡಿಸಿ ಕಳುಹಿಸಲಾಗುವುದು

'ಮೇನೇಜರ್',
"ಕೊಡಗು" ಪ್ರೆಸ್, ಮಡಿಕೇರಿ.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ಸೇಶಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟನೆಗಳನ್ನು ಮೇನೇಜರ್ 'ಕೊಡಗು' ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು 2 ಲೇಖನಗಳನ್ನು ಸಂಪಾದಕರು 'ಕೊಡಗು' ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು 3 ತ್ರೈಮಾಸಿಕ ಎರಡಾವೃತ್ತಿ ... ಪತ್ರಿಕಾಕರ್ತರು ... 4 ... ಕಳುಹಿಸುವ ... [illegible] ... ಪ್ರಕಟಿಸಲಾಗು ... [illegible]

ಪ್ರಕಟಣೆಗಳು.

[illegible]

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲುಪಿರುವುದರಿಂದ, 'ಲೆಟರ್ ಹೆಡ್' 'ವಿಸಿಟಿಂಗ್ ಕಾರ್ಡ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಅಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ

ಮಡಿಕೇರಿ ಮೇನೇಜರ್,
'ಕೊಡಗು' ಲಿಮಿಟೆಡ್

ಮಹಾಶಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯು ಬಹಳ ಬೇಗನೆ ಅನೇಕ ಜನರ ಸ್ವಾಸ್ಥ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿದೆ

ಕೃಷ್ಣ ಸಂಗೀತ ಮತ್ತು ನಾರಾಯಣ ನಂಬೀಶ ಎಂಬ ಹೆಸರಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಪ್ಪೊತ್ತು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರತಕ್ಕಾರೆ

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ಪ್ಲೇಗ್ ರಕ್ಷಣೆಗಾಗಿ ... ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜಮಂತ್ರದ ... ವೈದ್ಯರಾಗಿಯೂ ... ಪಡೆದವರಾಗಿಯೂ ... ಎಂಬ ಮಹಾನುಭಾವರ ಕೃತಿಗಳ ... ವರ್ಷಗಳಿದ್ದು ಪಾಂಡಿತ್ಯವನ್ನು ಪರಿಚಯವನ್ನು ಪಡೆದವರಾಗಿಯೂ ಇದ್ದಾರೆ

ಇವರಲ್ಲಿನ ಎಲ್ಲಾ ವಿಷಯಗಳಿಗೆ ಸಂಬಂಧಿಸಿ ಎಲ್ಲಾ ವೈದ್ಯ ... ವಿಷಯಗಳ ಬಾಜಾರ ಗಿಂತಲೂ ಕಡಿಮೆಯಲ್ಲಿ

ನಂಬಿಯಾರ್ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಬ್ಬೂರು, ವೀರಾಜಪೇಟೆ ಮತ್ತು
52 ಗೋಣಿಕೊಪ್ಪಲು.

ARMS & AMMUNITION MART.

Mahomedally-Noorbhoy.

[illegible]

"ಕೊಡಗು"

ಸ ೧೯೩೫ನೇ ಇಸವಿ ಆಗೊಸ್ತು ತಾ. ೭ ನೇ ಶುಕ್ರವಾರ.

ಪಬ್ಲಿಕ್ ಮೋಟಾರ್ ಗಾಡಿಗಳು.

ಪಬ್ಲಿಕ್ಕಿನ ಉಪಯೋಗಕ್ಕಾಗಿ ಇಡುವ ಮೋಟಾರ್ ಗಾಡಿಗಳನ್ನು ನಡಿಸುವ ಸಂಬಂಧವಾಗಿಯೂ ಮತ್ತು ಇಂಥಾ ಮೋಟಾರ್ ಗಾಡಿಗಳಿಗೆ ಎಷ್ಟು ತೆರಿಗೆ ಹಾಕಬೇಕೆಂಬ ವಿಷಯವಾಗಿಯೂ ಸ್ಥಳೀಕ ಸರ್ಕಾರದವರು ರೂಲ್ಸ್ ಮಾಡುತ್ತಿದ್ದಾರೆಂತ ತಿಳಿಯುತ್ತೇವೆ. ಬಹುಶಃ ಕರಡ ರೂಲ್ಸುಗಳನ್ನು ಮಾಡಿ ಪಬ್ಲಿಕ್ ಜನರ ಟೀಕೆ ಬಗ್ಗೆ ಪ್ರಕಟಿಸಿಯಾರೆಂತ ನಂಬುತ್ತೇವೆ. ಆದರೆ ಮೊನ್ನೆ 1ನೇ ತಾರೀಕಿನ ದಿವಸ ಪಬ್ಲಿಕ್ ಮೋಟಾರ್ ಬಸ್ಸುಗಳ ಮಾಲೀಕರನ್ನೆಲ್ಲಾ ಸೇರಿಸಿಕೊಂಡು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಒಂದು ಮೀಟಿಂಗು ಮಾಡಿದರಂತೆ. ಈ ಮೀಟಿಂಗಿನಲ್ಲಿ ಇಂಥಾ ಬಸ್ಸುಗಳಿಗೆ ರಸ್ತೆ ಕಂದಾಯ ಎಷ್ಟು ಹಾಕಬೇಕೆಂತ ಯೋಚಿಸಿದರಾಗಿ ತಿಳಿಯಬಂದಿದೆ. ಈ ಸಂಬಂಧದಲ್ಲಿ ತೀರ್ಮಾನಮಾಡತಕ್ಕವರು ಯಾರಾಗಿರಬೇಕು ಮತ್ತು ಯಾವ ದರ ನ್ಯಾಯವಾದೀತು ಎಂಬದನ್ನು ನಾವು ಯೋಚಿಸಬಹುದಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೈಲಿಗೆ ಅರ್ಧಾಣೆ ದರದಲ್ಲಿ ಪ್ರತಿಯೊಂದು ಪಬ್ಲಿಕ್ ಬಸ್ಸಿಗೂ ರೋಡ್ ತೆರಿಗೆ ಹಾಕಿದ್ದಾರೆ. ಮೈಸೂರ್ ದೇಶದಲ್ಲಿ ಮೈಲಿಗೆ ಮೂರುಕಾಸು ಹಾಕಿದ್ದಾರೆ. ನಮ್ಮ ದೇಶದಲ್ಲೂ ಮೈಲಿಗೆ ಒಂದು ನ್ಯಾಯವಾದ ದರ ಹಾಕಿದರೆ ಆಗಬಹುದೆಂತ ನಮ್ಮ ಅಭಿಪ್ರಾಯ. ಬಸ್ಸುಗಳ ಓಡಿಯಾಟದಿಂದ ರಸ್ತೆಗಳು ಬಹಳ ಕೆಡುತ್ತವೆ. ಅದಕ್ಕಾಗಿ ಬೇಕಾಗುವ ಹೆಚ್ಚಿನ ಖರ್ಚಿಗೆ ಸರ್ವಜನರು ಕೊಡುವ ಕಂದಾಯದ ಹಣವನ್ನು ಉಪಯೋಗಿಸುವದು ನ್ಯಾಯವಲ್ಲ. ಕೊಡಗುದೇಶದಲ್ಲಿ ಇರುವ ಒಟ್ಟು ಉತ್ಪತ್ತಿಯಲ್ಲಿ ಒಂದೂವರೆಲಕ್ಷ ರೂಪಾಯಿ ಈಗಾಗಲೇ ರಸ್ತೆಗಳಿಗೆ ಖರ್ಚಾಗುತ್ತದೆ. ಬಸ್ಸುಗಳು ಓಡುವ ರಸ್ತೆಗಳಿಗೆ ಇನ್ನುಮೇಲೆ ಹೇಗಾದರೂ ಸಾವಿರಾರು ರೂಪಾಯಿ ಹೆಚ್ಚಾಗಿ ಖರ್ಚಾಗಬೇಕಾಗುತ್ತದೆ. ಈ ಹಣವನ್ನು ಸರಕಾರದ ಉತ್ಪತ್ತಿಯಿಂದಲೇ ಕೊಟ್ಟರೆ ಅಷ್ಟರಮಟ್ಟಿಗೆ ಪ್ರಜೆಗಳ ಉಪಯೋಗಕ್ಕೆ ಸಿಕ್ಕಬಹುದಾದ ಹಣವು ಕಡಿಮೆಯಾಗುತ್ತದೆ. ಆದ್ದರಿಂದ ಬಸ್ಸುಗಳ ಮಾಲೀಕರು ತಮ್ಮ ಉತ್ಪತ್ತಿಯಲ್ಲಿ ಅತಿ ಸ್ವಲ್ಪ ಭಾಗವಾದ ಮೈಲಿಗೆ 3 ಯಾ 6 ಕಾಸಿನ ದರದಲ್ಲಿ ಕೊಡುವದು ನ್ಯಾಯವಿದೆ. ಈಗ ಇರುವ ಬಸ್ಸುಗಳಿಗೆ ಮೈಲಿಗೆ ಅರ್ಧಾಣೆ ದರದಲ್ಲಿ ಕಂದಾಯಹಾಕಿದರೆ ಒಂದು ವರ್ಷಕ್ಕೆ 5000 ರೂಪಾಯಿ ಕಡಿಮೆಯಿಲ್ಲದೆ ಉತ್ಪತ್ತಿಯಾಗುವದು. ಅಷ್ಟರಮಟ್ಟಿಗೆ ಪ್ರಜೆಗಳಿಗೆ ಪ್ರಯೋಜನವಾಗುತ್ತದೆ.

ಈ ರೀತಿ ಹೆಚ್ಚಿಗೆ ತೆರಿಗೆ ಹಾಕಿದರೆ ಪ್ರಯಾಣಿಕರ ಮೇಲೆ ಈ ಹೊರೆ ಬೀಳುವುದೆಂತ ಕೆಲವರು ಆಕ್ಷೇಪಿಸಬಹುದು. ಪ್ರಯಾಣಿಕರಮೇಲೆ ಬೀಳದಂತೆ ಮಾಡಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾರಿಯಲ್ಲಿರುವ ಪದ್ಧತಿಯಂತೆ ಕೇಳಿದಷ್ಟು ಜನರಿಗೆ ಲೈಸೆನ್ಸ್ ಕೊಡಬೇಕು. ಆಗ ಮಾಲೀಕರು ಅಲ್ಪ ಸ್ವಲ್ಪ ಲಾಭ ಸಿಕ್ಕಿದರೂ ತೃಪ್ತರಾಗಿ ಪ್ರಯಾಣಿಕರಿಗೆ ಹಾಕುವ ಚಾರ್ಜನ್ನು ಕಡಿಮೆಮಾಡುತ್ತಾರೆ. ಮಂಗಳೂರಿನಿಂದ ಪುತ್ತೂರಿಗೆ ಮೂವತ್ತೊಂದು ಮೈಲು ಇರುವದು. ಈ ದೂರಕ್ಕೆ ಪ್ರಯಾಣಿಕರಿಂದ ಒಂದೇ ರೂಪಾಯಿ ವಸೂಲಿ ಮಾಡುತ್ತಾರೆ. ಮೈಲಿಗೆ ಸುಮಾರು ಅರ್ಧಾಣೆ ಬಿತ್ತಲ್ಲವೇ ? ನಮ್ಮ ದೇಶದಲ್ಲೂ ಈಗ ಕೆಲವು ಕಂಪೆನಿಯವರು ಮೈಲಿಗೆ ಒಂದುಕಾಲುಆಣೆ ಚಾರಿಜು ಮಾಡುತ್ತಿದ್ದಾರೆ ! ಮೈಲಿಗೆ ಒಂದಾಣೆ ದರವೆಂತಲೇ ಏಣಿಕೆಮಾಡಿದರೂ ಕೊಡಗಿನ ಬಸ್ಸು ಮಾಲೀಕರು ತುಂಬಾ ಲಾಭ ಸಂಪಾದಿಸುತ್ತಿರಬೇಕು. ಎರಡು ಹೊತ್ತು ಸರಿಯಾಗಿ ಊಟಕ್ಕೆ ಇಲ್ಲದ ರೈತರ ಮೇಲೆ ಕೆಲವುವರ್ಷಗಳಿಂದೀಚೆಗೆ ಹೊಸ ಹೊಸ ತೆರಿಗೆಗಳು ಅನೇಕ ಏರಿರುವಾಗ ತುಂಬಾ ಲಾಭಮಾಡಿಕೊಳ್ಳುತ್ತಿರುವ ಬಸ್ಸುಮಾಲೀಕರ ಮೇಲೆ ಅವರ ಉತ್ಪತ್ತಿಗೆ ತಕ್ಕಂತೆ ಕಂದಾಯಹಾಕಬೇಕಾದದ್ದು ಅಧಿಕಾರಿಗಳ ಕರ್ತವ್ಯವಾಗಿದೆ. ಕೇಳಿದವರಿಗೆಲ್ಲಾ ಲೈಸೆನ್ಸ್ ಕೊಟ್ಟು ಬಸ್ಸುಗಳು ಧಾರಾಳ ಓಡುತ್ತಿರುವಂತೆ ಮಾಡಿದರೆ ಮೈಲುಕೆರಿಗೆ ಹೆಚ್ಚಾದರೂ ಪ್ರಯಾಣಿಕರ ಮೇಲೆ ಹೆಚ್ಚಿನ ಭಾರಬೀಳುವ ಸಂಭವವಿಲ್ಲ.

ಸಂಬಂಧಪಟ್ಟ ಇಲಾಖೆಯವರು ಈ ವರೆಗೆ ದೇಶದ ಒಳಗೆ ಓಡುವ ಬಸ್ಸುಗಳ ಮೇಲೆಯೂ, ಕಾರ್‌ಗಳ ಮೇಲೆಯೂ ಕಂದಾಯ ಹಾಕದಿರುವದು ಬಹಳ ವ್ಯಸನಕರ. ದೇಶದಿಂದ ಹೊರಕ್ಕೆ ಹೋಗಿಬರುವ ಕಾರ್‌ಗಳೂ ಬಸ್ಸುಗಳೂ ಸುಂಕದ ಕಟ್ಟೆಗಳಲ್ಲಿ ಸುಂಕಕೊಡುತ್ತವೆ. ಆದರೆ ದೇಶದೊಳಗೆ ಓಡ್ಯಾಡಿ ಸಾವಿರಾರು ರೂಪಾಯಿ ಲಾಭಗಳಿಸುತ್ತಿರುವ ಕಂಪೆನಿಗಳಿಗೆ ಸುಂಕವೇನೂ ಇಲ್ಲದಿರುವದು ಅಧಿಕಾರಿಗಳ ದೃಷ್ಟಿಗೆ ಬೀಳಲೇ ಇಲ್ಲವೇ? ಎತ್ತಿನ ಗಾಡಿಯು ಬಡಮಾಲೀಕನಿಗೆ ಸಂಪಾದನೆಯಾಗಬೇಕಾದರೆ ದೇಶದ ಹೊರಗೆ ಹೋಗಲೇ ಬೇಕು. ಆವನು ಸುಂಕ ಕೊಟ್ಟೇ ಕೊಡುತ್ತಾನೆ. ದೇಶದೊಳಗೆ ವ್ಯಾಪಾರವಾಗುವದು ಕಡಿಮೆಯಾದ್ದರಿಂದ ಪೂರ್ವದಲ್ಲಿ ಸುಂಕದ ಕಟ್ಟೆಗಳನ್ನು ಇಟ್ಟ ಅಧಿಕಾರಿಗಳು ದೇಶದಿಂದ ಹೊರಕ್ಕೆ ಹೋಗುವ ಮತ್ತು ದೇಶದಿಂದ ಒಳಕ್ಕೆ ಬರುವ ಸಾಮಾನುಗಳಿಗೆ ಮಾತ್ರ ಸುಂಕ ಹಾಕಿದರೆ ಸಾಕೆಂತ ಯೋಚಿಸಿರಬೇಕು. ಈಗ ಕೊಡಗಿನ ಸರಹದ್ದು ದಾಟದೆ ಸಾಯಿಬೆ ಮಾಡಿಕೊಳ್ಳುತ್ತಿರುವ ಬಸ್‌ಗಳೂ ಕಾರ್‌ಗಳೂ ರಸ್ತೆ ರಿಪೇರಿ ಬಗ್ಗೆ ತೆರಿಗೆ ಕೊಡದಿರುವುದು ನ್ಯಾಯವಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆಗಳಲ್ಲಿ ಅಲ್ಲಲ್ಲಿ ಸುಂಕದ ಕಟ್ಟೆಗಳಿವೆ. ಹಾಗೆ ಆಗಬೇಕೆಂತ ನಾವು ಹೇಳುವದಿಲ್ಲ. ತುಂಬಾ ಲಾಭಗಳಿಸುವ ಮೋಟಾರು ಬಸ್ಸುಗಳೂ ಕಾರ್‌ಗಳೂ ರಸ್ತೆ ರಿಪೇರಿ ಖರ್ಚಿನ ಬಗ್ಗೆ ತೆರಿಗೆ ಕೊಡಬೇಕೆಂತ ನಾವು ಹೇಳುವದಾಗಿದೆ.

ಈ ದರವನ್ನು ನಿರ್ಣಯಿಸುವವರು ಯಾರು ? ಮೊನ್ನೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ನಡಿಸಿದ ಮೀಟಿಂಗಿನಲ್ಲಿ ಈ ತೆರಿಗೆಯ ವಿಷಯ ಮಾತು ಬಂದದ್ದರಿಂದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರೇ ಈ ದರವನ್ನು ನಿರ್ಣಯಿಸುತ್ತಾರೆ, ಅಥವಾ ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತಾರೆಂತ ಊಹಿಸಬೇಕಾಗಿದೆ. ಆದರೆ ಈ ಸಂಗತಿಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ನಿರ್ಣಯಿಸಬೇಕಾದದ್ದು ಯುಕ್ತವೆಂತ ನಮಗೆ ತೋರುತ್ತದೆ. ಈಗ ಬಸ್ಸುಗಳು ಓಡಿಯಾಡುವ ರಸ್ತೆಗಳು ಇಂಪೀರಿಯಲ್ ರಸ್ತೆಗಳಾದರೂ, ಇಂಪೀರಿಯಲ್ ರಸ್ತೆಗಳಲ್ಲಿ ಸುಂಕ ವಸೂಲ್ ಮಾಡುವ ಹಕ್ಕು ಡಿಸ್ಟ್ರಿಕ್ಟ್ ಬೋರ್ಡಿಗೆ ಇರುವದರಿಂದ ಈ ತೆರಿಗೆಯನ್ನು ವಿಧಿಸುವ ಹಕ್ಕು ಸಹ ಡಿಸ್ಟ್ರಿಕ್ಟ್ ಬೋರ್ಡಿಗೇನೇ ಇರಬೇಕು. ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಪ್ರಜಾಪ್ರತಿನಿಧಿಗಳು ಇರುವದರಿಂದ ಪ್ರಯಾಣಿಕರ ಅಭಿಪ್ರಾಯವನ್ನು ಸಹ ಲಕ್ಷ್ಯಕ್ಕೆ ತೆಗೆದುಕೊಂಡು ನ್ಯಾಯವಾದ ದರವನ್ನು ವಿಧಿಸಲು ಆ ಬೋರ್ಡಿಗೆ ಅನುಕೂಲವಿದೆ.

ಮೈಲಿಗೆ ಅರ್ಧಾಣೆ ದರವನ್ನೇ ವಿಧಿಸಿ ಮಾಡಬೇಕೆಂತ ನಾವು ವಾದಿಸುವದಿಲ್ಲ. ದೊಡ್ಡ ಬಸ್ಸುಗಳಿಗೆ ಹೆಚ್ಚಿನ ದರದಲ್ಲೂ ಚಿಕ್ಕವುಗಳಿಗೆ ಕಡಿಮೆ ದರದಲ್ಲೂ, ಕಾರ್‌ಗಳಿಗೆ ಇನ್ನೂ ಕಡಿಮೆ ದರದಲ್ಲೂ ತೆರಿಗೆ ಹಾಕಬಹುದು. ಕಾರ್‌ಗಳಿಗೆ ಮೈಲು ದರದಲ್ಲಿ ಹಾಕಲು ಸಾಧ್ಯವಿಲ್ಲ. ಅವುಗಳಿಗೆ ನ್ಯಾಯವಾಗುವಂಥ ಯಾವುದಾದರೂ ಒಂದು ದರವನ್ನು ಡಿಸ್ಟ್ರಿಕ್ಟ್ ಬೋರ್ಡಿನವರಾಗಲೀ ಅಧಿಕಾರಿಗಳಾಗಲೀ ನಿಶ್ಚಯಿಸಿಕೊಳ್ಳುವುದು ಉತ್ತಮ.

— — —

ರಿಜಿಸ್ಟ್ರೇಶನ್ ಇಲಾಖೆ.

ಮಡಿಕೇರಿಯಿಂದ ತಾಲೋಕು ಸುಬೇದಾರರು ಸೋಮವಾರಪೇಟೆಗೆ ವರ್ಗಾಯಿಸಲ್ಪಟ್ಟಂದಿನಿಂದ ಟ್ರೆಜರಿ ಅಸಿಸ್ಟೆಂಟ್ ಕಮಿಷನರವರು ರಿಜಿಸ್ಟ್ರೇಶನ್ ಕೆಲಸವನ್ನು ನೋಡುತ್ತಿರುವರು. ಇವರ ಕೈಕೆಳಗೆ ಒಬ್ಬ ಕ್ಲಾರ್ಕರಿರುವರು. ಟ್ರೆ ಅ ಕಮಿಷನರವರಿಗೆ ಈ ಕೆಲಸ ನೋಡಲು ಸಮಯ ದೊರಕುವದು ಕಷ್ಟವಾದುದರಿಂದ ಎಲ್ಲಾ ಕೆಲಸವನ್ನು ಗುಮಾಸ್ತರೇ ನೋಡುವುದಾಗಿದೆ. ಆದುದರಿಂದ ಈ ಕೆಲಸವು ತೃಪ್ತಿಕರವಾಗಿ ನಡೆಯುತ್ತಿರುವುದಿಲ್ಲವೆಂದು ಅನೇಕರ ಫಿರ್ಯಾದು. ದಾಖಲೆಗಳನ್ನು ರಿಜಿಸ್ಟರ್ ಮಾಡಿಸಲಿಕ್ಕೆ ಬರುವವರು ಬಂದ ದಿನವೇ ತಮ್ಮ ಕೆಲಸತೀರದೆ ಮಡಿಕೇರಿಯಲ್ಲಿ ಹೆಚ್ಚು ಸಮಯ ಕಾಯಬೇಕಾಗಿಬರುತ್ತದೆ. ಸ್ಪೇಶಲ್ ಮೇಜಿಸ್ಟ್ರೇಟರನ್ನು ನೇಮಿಸಿ ಅವರ ರಿಜಿಸ್ಟ್ರೇಶನ್ ಕೆಲಸವನ್ನೂ ನೋಡಿಕೊಳ್ಳುವಂತೆ ಏರ್ಪಾಡು ನಡಿಯುತ್ತಿದೆಯೆಂದು ಈ ಮೊದಲೇ ತಿಳಿದುಬಂದಿದೆ. ಈ ಏರ್ಪಾಡನ್ನು ಆದಷ್ಟು ಬೇಗನೆ ಜಾರಿಗೆ ತಂದು ಜನರ ತೊಂದರೆಗಳನ್ನು ನಿವಾರಿಸುವುದು ಅಗತ್ಯವಾಗಿದೆ. ಈ ಏರ್ಪಾಡನ್ನು ಪ್ರಾರಂಭಿಸಲು ತಡವಾಗುವಪಕ್ಷ ರಿಜಿಸ್ಟ್ರೇಶನಿಗೆ ಕೂಡಲೆ ಬೇರೆ ಏರ್ಪಾಡು ಮಾಡಬೇಕಾಗಿದೆ.

ಹೀಗೆಯೇ ಪೊನ್ನಂಪೇಟೆಯಲ್ಲೂ ರಿಜಿಸ್ಟ್ರೇಶನ್ ಕೆಲಸದ ತೊಂದರೆಗಳ ವಿಷಯ ಕೆಲವು ತಿಂಗಳುಗಳ ಹಿಂದೆ ಒಂದು ವಾರ್ತೆಯು ಪ್ರಕಟವಾಗಿತ್ತು. ಈ ವಾರವೂ ಇನ್ನೊಂದು ವಾರ್ತೆಯು ಪ್ರಕಟವಾಗಿದೆ. ಅಲ್ಲಿ ಈ ಕೆಲಸಕ್ಕಾಗಿಯೇ ಒಬ್ಬ ಗುಮಾಸ್ತರನ್ನು ನೇಮಿಸಿ ಪ್ರತಿದಿನವೂ ದಾಖಲೆಗಳನ್ನು ರಿಜಿಸ್ಟರ್ ಮಾಡಿಸುವ ಏರ್ಪಾಡಿಗೆ ಅಧಿಕಾರಿಗಳು ಪಡನೆ ಕೈಹಚ್ಚುವರಾಗಿ ನಂಬುತ್ತೇವೆ.

ಕೋಳಿಗಳನ್ನು ಸಾಕುವ ಉದ್ಯೋಗ.

ಕೋಳಿ ಮತ್ತು ಬಾತುಗಳನ್ನು ಸಾಕುವ ವೃತ್ತಿಯ ವಿಷಯ ಒಂದು ಲೇಖನವು ಇನ್ನೊಂದುಕಡೆ ಪ್ರಕಟವಾಗಿದೆ. ಈ ವಿಷಯದಲ್ಲಿ ಪ್ರವೀಣರಾದವರೊಬ್ಬರಿಂದಲೇ ಆ ಲೇಖನವು ಬರೆಯಲ್ಪಟ್ಟಿರುವುದರಿಂದ ಅದರಲ್ಲಿ ಕಾರ್ಯತಃ ಆಚರಿಸಬಹುದಾದ ಸೂಚನೆಗಳಿವೆಯೆಂದು ಹೇಳಬೇಕಾಗಿಲ್ಲ. ನಮ್ಮ ದೇಶದಲ್ಲಿ ಕೋಳಿ ಸಾಕಲು ಬೇಕಾದ ಅನುಕೂಲಗಳೂ, ಸಾಕುವ ಜನರೂ ತುಂಬಾ ಇದ್ದರೂ ಕೂಡ ಇಲ್ಲಿಯವರ ಉಪಯೋಗಕ್ಕೆ ಸಾಕಷ್ಟು ಕೋಳಿಗಳೂ ಕೋಳಿಮೊಟ್ಟೆಗಳೂ ದೊರಕದೆ ನೆರೆಪ್ರಾಂತ್ಯಗಳಿಂದ ತಂದು ಇಲ್ಲಿ ಮಾರುತ್ತಿರುವುದು ಸಾಮಾನ್ಯವಾಗಿರುವುದು ವ್ಯಸನಕರ. ಇದಕ್ಕೆ ಕೋಳಿ ಸಾಕುವವರೂ ಆದ ಪ್ರಧಾನ ಗೊತ್ತಿಲ್ಲದಿರುವುದೇ ಕಾರಣವೆಂದು ತೋರುತ್ತದೆ. ಜನರು ಈ ಲಾಭಕರವಾದ ವೃತ್ತಿಯ ಕಡೆ ಸ್ವಲ್ಪ ಗಮನಕೊಟ್ಟು ಮೊಟ್ಟೆಗಳನ್ನು ಬೇರೆಕಡೆ ಕಳುಹಿಸಲು ಸಾಧ್ಯವಾಗದಿದ್ದರೂ ದೇಶದವರಿಗೆ ಬೇಕಾದಷ್ಟನ್ನಾದರೂ ಒದಗಿಸಲು ಪ್ರಯತ್ನಿಸುವುದರಿಂದ ತಮ್ಮ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವರೆಂಬುದರಲ್ಲಿ ಸಂಶಯವಿಲ್ಲ.

— —

ಲಾರ್ಡ್ ಬರ್ಕನ್ ಹೆಡ್ಡ್‌ರವರ ಭಾಷಣದ ಮೇಲೆ ಮಹಾತ್ಮ ಗಾಂಧಿಯವರ ಲೇಖನ.

ಲಾರ್ಡ್ ಬರ್ಕನ್ ಹೆಡ್ಡ್‌ರ ಭಾಷಣವು ಎರಡು ವಿಧದಿಂದ ಮೋಸಕರವಾಗಿದೆ. ಅದನ್ನು ಎರಡನೇ ಸಾರಿ ಓದುವಾಗ ಮೊದಲನೇಸಾರಿ ಓದುವಾಗ ತೋರುವಷ್ಟು ಕ್ರೂರವಾಗಿ ಕಾಣುವುದಿಲ್ಲ. ಆದರೆ ಎರಡನೇಸಾರಿ ಓದುವಾಗ ಮೊದಲನೇಸಾರಿಗಿಂತ ಹೆಚ್ಚಿಗೆ ಆಶಾಭಂಗವನ್ನುಂಟುಮಾಡುತ್ತದೆ. ಅದರಲ್ಲಿ ಇರುವ ಕ್ರೂರತನವನ್ನು ಬೇಕೆಂತ ತೋರಿಸಿದ್ದಲ್ಲ. ಸ್ಟೇಟ್ ಸೆಕ್ರೆಟರಿಯವರಿಗೆ ಬೇರೆ ರೀತಿಯಿಂದ ಮಾಡಲು ಸಾಧ್ಯವಿರಲಿಲ್ಲ. ಅವರಿಗೆ ತೋರಿದಂತೆ ಅಥವಾ ಅವರಿಗೆ ತೋರಲು ಕಲಿಸಿಕೊಟ್ಟಂತೆ ಮಾತಾಡಬೇಕಾಗಿತ್ತು. ಆದರೆ ಅವರ ವಾಗ್ದಾನಗಳು ತೋರಿಕೆಗೆ ಮಾತ್ರ ಪ್ರಯೋಜನಕರವಾಗಿ ಕಂಡುಬರುತ್ತವೆ. ಚೆನ್ನಾಗಿ ಓದಿನೋಡಿದರೆ ಆ ಭಾಷಣವನ್ನು ಮಾಡಿದವರಿಗೆ ಅದರಲ್ಲಿ ಇರುವ ವಾಗ್ದಾನಗಳನ್ನು ತಾನು ನಡಿಸಬೇಕಾಗುವದೇ ಇಲ್ಲವೆಂತ ತಿಳಿದಿತ್ತು ಎಂತ ಸ್ಪಷ್ಟವಾಗುತ್ತದೆ. ಅದರಲ್ಲಿ ಇರುವ ಮಹಾ ಪ್ರಯೋಜನವಾಗಿ ತೋರುವ ವಾಗ್ದಾನವನ್ನು ನೋಡೋಣ. "ನಿಮ್ಮ ಆಡಳಿತದ ಕ್ರಮವನ್ನು ತಯಾರಿಸಿ ನಾವು ಆಲೋಚಿಸುತ್ತೇವೆ" ಎಂತ ಇದೆ. ಮೂವತ್ತೈದುವರ್ಷಗಳಿಂದ ನಮಗೆ ಸಂಪೂರ್ಣ ತೃಪ್ತಿ ಇರುವ ಅರ್ಜಿಗಳನ್ನು ಬರಕೊಂಡದ್ದಕ್ಕೆಲ್ಲಾ 'ಚೆನ್ನಾಗಿ ಆಲೋಚಿಸಿ ತಿರಸ್ಕರಿಸಲ್ಪಟ್ಟಿದೆ' ಎಂತ ಹುಕುಂ ಬರುವದು ನಮ್ಮ ಅನುಭವಸಿದ್ಧವಾಗಿಲ್ಲವೇ ? ಈ ಅನುಭವವಿದ್ದದ್ದರಿಂದಲೇ 1920ರಲ್ಲಿ ಭಿಕ್ಷಾ ಪಾತ್ರೆಯನ್ನು ಎಸೆದುಬಿಟ್ಟು ನಮ್ಮ ಸ್ವಪ್ರಯತ್ನದಿಂದಲೇ ಜಯಿಸಲು ಪ್ರಯತ್ನಿಸಲು (ಪ್ರಯತ್ನದಲ್ಲಿ ನಾವು ನಾಶವಾಗಿ ಹೋದರೂ ಸಹ) ತೀರ್ಮಾನಿಸಿಕೊಂಡದ್ದಾಗಿದೆ. ಈ ಪ್ರಭುಗಳು ಬರವಣಿಗೆಯ ಚಮತ್ಕಾರವನ್ನು ನಿಜವಾಗಿ ಕೇಳುವದಿಲ್ಲ. ತನ್ನ ಕೋರಿಕೆಯಂತೆ ತಯಾರಾಗುವದೂ ಇಲ್ಲ, ಸಾಧ್ಯವೂ ಇಲ್ಲವೆಂತ ತಿಳಿದೇ ತಳವಾರತನವನ್ನು ತೋರಿಸಿ ಎಂತ ಕೇಳುವದಾಗಿದೆ. ಈ ಅರ್ಥಕ್ಕೆ ಭಾಷಣದಲ್ಲೇ ಆಧಾರಗಳಿವೆ. ಮುಡ್ಡಿಮನ್ ಕಮಿಟಿಯ ಕಡಿಮೆಸಂಖ್ಯೆಯವರ ಮತ ಅಂದರೆ ಇಂಡಿಯಾದಲ್ಲಿ ಇರುವ ಅತಿ ಗಟ್ಟಿಗ ಲಾಯರುಗಳಲ್ಲಿ ಇಬ್ಬರಾದ ಅಸಹಕಾರದ ತತ್ವಕ್ಕೆ ಎಂದೂ ಗುರಿಯಾಗದ—ಇವರಲ್ಲಿ ಒಬ್ಬರು ಇಂಡಿಯಾ ಸರಕಾರದ ಲಾ ಮೆಂಬರಾಗಿದ್ದವರು—ಡಾಕ್ಟರ್ ಸಪ್ರು ಮತ್ತು ಮಿ॥ ಜಿನ್ನಾರವರ ಮತವು ಸ್ಟೇಟ್ ಸೆಕ್ರೆಟರಿಯವರ ಮುಂದೆ ಇತ್ತು. ಅವರಿಗೆ ತಾವು ಕೈಕೊಂಡ ಕೆಲಸವನ್ನು ತಿಳಿದುಕೊಳ್ಳಲು ಶಕ್ತಿಯಿಲ್ಲವೆಂಬ ಬಹುಮಾನ ಸಿಕ್ಕಿತು. ಹಾಗಾದರೆ ಪಂಡಿತ ಮೋತಿಲಾಲ್ ನೆಹರುರವರಿಂದ ತಯಾರಿಸಲ್ಪಟ್ಟು ನಾಮದಾರಿ ಶ್ರೀನಿವಾಸಶಾಸ್ತ್ರಿಯವರಿಂದ ಒಪ್ಪಿಗೆಪಡೆಯಬಹುದಾದ ಬರವಣಿಗೆಗೆ ಹೆಚ್ಚಿಗೆ ಮರ್ಯಾದೆ ಸಿಕ್ಕುವ ಸಂಭವವು ಎಲ್ಲಿ ಇದೆ ? ಲಾರ್ಡ್‌ಬರ್ಕನ್‌ಹೆಡ್ಡ್‌ರವರು ತೋರಿಸುವ ಆಶೆಯು ಎಚ್ಚರ ತಪ್ಪಿದವರನ್ನು ಹಿಡಿಯಲು ಒಡ್ಡಿಗ ಬಲೆಯಲ್ಲವೇ ? ಈಗಿನ ದೇಶದ ಸ್ಥಿತಿಗೆ ತಕ್ಕಂತೆ ಒಂದು ಆಡಳಿತಕ್ರಮವನ್ನು ತಯಾರಿಸಿಕೊಟ್ಟರೆ ಅದನ್ನು ಅಸಾಧ್ಯವೆಂತ ಕೂಡಲೇ ಹೇಳಿ ಅದಕ್ಕಿಂತ ಬಹಳ ಕಡಿಮೆಯಾದದ್ದೇನನ್ನಾದರೂ ತೆಗೆದುಕೊಳ್ಳಿ

ಎಂತ ಜವಾಬು ಸಿಕ್ಕುವದಿಲ್ಲವೇ ? ನನಗೆ ಇನ್ನೂ 20 ವರ್ಷ ಪ್ರಾಯವಾಗುವಮುಂಚೆ ನನಗೆ 4 ಆಣೆ ಬೇಕಾದರೆ 16 ಆಣೆ ಕೇಳಬೇಕೆಂತ ಕಲಿಸಿದ್ದರು. ನಾನು ಆಪಾಠವನ್ನು ಕಲಿತುಕೊಳ್ಳಲಿಲ್ಲ ಯಾಕೆಂದರೆ ಬೇಕಾದಷ್ಟೇ ಕೇಳ್ಳಿ ಅದಕ್ಕಾಗಿ ಹೋರಾಡುವದೇ ನನ್ನ ಮತವಾಗಿದೆ. ನನಗೆ ಕಲಿಸ್ಸಿ ಬುದ್ಧಿವಾದದಲ್ಲಿ ತುಂಬಾ ಸತ್ಯವಿದೆಯೆಂಬದನ್ನು ನಾನು ತಿಳಿದಿದ್ದೇನೆ.

ಅತ್ಯಂತ ನಿಷ್ಪ್ರಯೋಜನವಾದ ಆಡಳಿತ ಕ್ರಮದ ರಚನೆಯಾದರೂ ಬಲದ—ಹಿಂಸಾಯುಕ್ತವಾಗಲೀ ಅಹಿಂಸಾಯುಕ್ತವಾಗಲೀ ಬೆಂಬಲವಿದ್ದರೆ ಒಂದುತರದ ಬಲದ ಪ್ರಯೋಜನವನ್ನು ತಿಳಿದುಕೊಂಡ ಬ್ರಿಟಿಷರಿಂದ ಶೀಘ್ರದಲ್ಲೇ ಗಮನಿಸಲ್ಪಡುತ್ತದೆ.

ಹಿಂದುಸ್ಥಾನದ ನಿರಂತರ ಸೇವಕರಾದ ಡಾಕ್ಟರ್ ಬಿಸಾಂಟಮ್ಮನವರು ಇಂಗ್ಲೆಂಡಿಗೆ ತೆಗೆದುಕೊಂಡು ಹೋಗಿರುವ ಕಾಮನ್‌ವೆಲ್ತ್ ಬಿಲ್ಲನ್ನು ನೋಡುವ—ಅದಕ್ಕೆ ಅನೇಕ ಪ್ರಖ್ಯಾತ ಹಿಂದೀಯರು ಸ್ವಹಸ್ತಾಕ್ಷರ ಹಾಕಿದ್ದಾರೆ. ಆ ಬಿಲ್ಲಿಗೆ ಕಸದ ಕಾಪಿಯೇ ಗತಿಯೆಂಬುದು ತಿಳಿದಿರುವದರಿಂದಲೇ ಅದಕ್ಕೆ ಇನ್ನೂ ಕೆಲವರು ಸೈನ್ ಹಾಕದೆ ಇರಲು ಕಾರಣವಾಗಿದೆ. ಅದಕ್ಕೆ ದೊರಕುವ ಸಂಪೂರ್ಣ ತಿರಸ್ಕಾರದಿಂದ ದೇಶಕ್ಕೆ ಆಗುವ ಅವಮಾನ [illegible]ವನ್ನು ಒದಗಿಸಿಕೊಳ್ಳುವದರಲ್ಲಿ ಜನಗಳಾಗಬಾರದೆಂತಲೇ ಸೈನ್ ಹಾಕದೆ ಇರುವದಾಗಿದೆ. ಹಿಂದುಸ್ಥಾನದ ಸಾರ್ವಜನಿಕ ಅಭಿಪ್ರಾಯವನ್ನು ಸೂಚಿಸುವ ಪಾರ್ಟಿಯಾಗಲೀ ಪಾರ್ಟಿಗಳಾಗಲೀ ತಯಾರಿಸುವ ಆಡಳಿತ ರಚನಾಕ್ರಮವನ್ನು ಅಂಗೀಕರಿಸುತ್ತೇನೆಂತ ಲಾರ್ಡ್ ಬರ್ಕನ್‌ಹೆಡ್ಡರು ಹೇಳಲಿ, ಒಂದುವಾರದೊಳಗೆ ಅಂತಾ ರಚನೆಯು ತಯಾರಾಗುತ್ತದೆ. ಡಾಕ್ಟರ್ ಬಿಸಾಂಟಮ್ಮನವರ ಬಿಲ್ಲಿಗೆ ಪಂಡಿತ ಮೋತಿಲಾಲ್ ಮುಂತಾದ ಕೆಲವರು ಒಪ್ಪಿಗೆ ಕೊಟ್ಟರೆ ಅದನ್ನು ಅಂಗೀಕರಿಸಿಕೊಳ್ಳಬಹುದೆಂತ ಲಾರ್ಡ ಬರ್ಕನ್ ಹೆಡ್ಡರು ಬಹಿರಂಗವಾಗಿ ವಾಗ್ದಾನಕೊಡಲಿ, ಅಂಥ ಸ್ವಸ್ಥಗಳನ್ನು ಒದಗಿಸಿಕೊಡಲು ನಾನು ಒಪ್ಪಿಕೊಳ್ಳುತ್ತೇನೆ. ಯಥಾರ್ಥವೇನೆಂದರೆ ವಾಗ್ದಾನದಲ್ಲಿ ಪ್ರಾಮಾಣಿಕದ ಹೊಳೆತವಿಲ್ಲ.

ಅವರ ವಾಗ್ದಾನದಲ್ಲಿ ಪ್ರಾಮಾಣಿಕತೆಯಿಲ್ಲದಿರುವದಕ್ಕೆ ಸ್ಟೇಟ್ ಸೆಕ್ರೆಟರಿಯವರು ಬಾಧ್ಯರಲ್ಲ. ಏನನ್ನು ಕೇಳಲೂ ನಾವು ಇನ್ನೂ ತಯಾರಿಲ್ಲ. ಆದ್ದರಿಂದ ಬ್ರಿಟಿಷ್ ಸರಕಾರದವರು ನಮಗೆ ಏನನ್ನು ಕೊಡುತ್ತೇನೆಂಬದನ್ನು ತಿಳಿಸುವದು ಅವರ ಕೆಲಸವಾಗಿದೆ. ಕೊಡುವಂಥಾದ್ದು ನಮಗೆ ಸಾಲದೆಂತ ತೋರಿದರೆ ತಿರಸ್ಕರಿಸುವದು ನಮ್ಮ ಕೆಲಸವಾಗಿದೆ. ಹೊಸ ಕಮೊಂಡರ್ [illegible] ಯಾವದನ್ನು ಪಡೆಯಲು ಸಾಧ್ಯವಿಲ್ಲವೆಂತ ಹೇಳುತ್ತಾರೋ ಅದಕ್ಕಾಗಿಯೇ ಜೀವಿಸುವದೂ, ಹೋರಾಡುವದೂ ಸಾಯುವದೂ ನಮ್ಮ ಕರ್ತವ್ಯವಾಗಿದೆ. ಜನ್ಮಸಿದ್ಧ ಹಕ್ಕನ್ನು ಪಡೆಯುವ [illegible] ಸ್ವರಾಜ್ಯವು ಜನ್ಮಸಿದ್ಧ ಹಕ್ಕೆಂತ ಲೋಕಮಾನ್ಯರು ನಮಗೆ ಕಲಿಸಿದ್ದಾರೆ. ತತ್ಕಾಲ ಹಾಳಾಗಿ ಆಳಿದರೂ ನಮ್ಮನ್ನು ನಾವೇ ಆಳಿಕೊಳ್ಳುವದು ಎಂಬುದೇ ಆ ಸ್ವರಾಜ್ಯ ಶಬ್ದದ ಅರ್ಥವಾಗಿದೆ. ನಾವು ಇಂಗ್ಲಿಷರೂ ಹಿಂದೀಯರೂ ತುಂಬಾ ಗಲಿಬಿಲಿಯಲ್ಲಿದ್ದೇವೆ. ನಮ್ಮ ಕ್ಷೇಮಕ್ಕೆ ಬ್ರಿಟಿಷ್ ಸರಕಾರದವರು ಟ್ರಸ್ಟಿಗಳೆಂತ ಲಾರ್ಡ ಬರ್ಕನ್‌ಹೆಡ್ಡರು ತಿಳಿದುಕೊಂಡಿದ್ದಾರೆ. ತಮ್ಮ ಪ್ರಯೋಜನಕ್ಕಾಗಿಯೇ ನಮ್ಮನ್ನು ಬಂಧನದಲ್ಲಿ ಇಟ್ಟುಕೊಂಡಿದ್ದಾರೆಂತ ನಾವು ಯೋಚಿಸುತ್ತೇವೆ. ಟ್ರಸ್ಟಿಗಳು ತಮ್ಮ ಆಜನಾರರ ಉತ್ಪತ್ತಿಯ ಶೇಕಡ 75ರಷ್ಟನ್ನು ತಮ್ಮ [illegible] ತೆಗೆದುಕೊಳ್ಳುವುದಿಲ್ಲ. ನಮ್ಮ ೯ ಮತಗಳು, 130 ಜಾತಿಗಳು ಇರುವಾಗ ನಾವು ಒಂದು ಜನಾಂಗವಾಗಲಾರೆವೆಂತ [illegible] ಹಿಂದುಸ್ಥಾನದ [illegible] ಅಭಿಪ್ರಾಯವನ್ನು ದೂರಮಾಡಲಿಕ್ಕೂ ನಾವು [illegible] ಜನಾಂಗ [illegible] ನಾವು ತಿಳಿದಿದ್ದೇವೆ. ಅಸಹಕಾರವು [illegible] ಅವರು ಯೋಚಿಸಿದ್ದಾರೆ. ಅಸಹಕಾರದಿಂದಲೇ ನಿದ್ರಿಸುತ್ತಿದ್ದ ಜನಾಂಗವು ತನ್ನ ಬಂಧನವನ್ನು ಬಿಡುವಂತೆ ಮಾಡಿತೆಂತಲೂ ಆದರಿಂದಲೇ ಈ ಜನಾಂಗಕ್ಕೆ ಅತ್ಯಧಿಕ ಬಲವಿರುವ ಶಕ್ತಿಯನ್ನು ಕೊಟ್ಟಿದೆಯಂತ ನಮ್ಮಲ್ಲಿ ಹೆಚ್ಚಿನ ಜನರು ತಿಳಿದುಕೊಂಡಿದ್ದೇವೆ. ಸ್ವರಾಜ್ಯಪಾರ್ಟಿಯ ಶಕ್ತಿಯಿಂದಲೇ ಹುಟ್ಟಿದ ಹಿಂದುಮುಸಲ್ಮಾನರ ಜಗಳಗಳಲ್ಲಿ ಬ್ರಿಟಿಷ್ ಸರಕಾರವು ಕೈ ಹಾಕಲಿಲ್ಲವೆಂತ ಅವರು ಹೇಳುತ್ತಾರೆ. ನಮ್ಮೊಳಗಿನ ಜಗಳಗಳಲ್ಲಿ ಹೆಚ್ಚಿನವುಗಳಿಗೆ ಬ್ರಿಟಿಷ್ ಸರಕಾರವೇ ಬಾಧಿತವಾ[illegible]ಯೂ ಜವಾಬ್ದಾರಿಯೆಂತ ಹಿಂದುಸ್ಥಾನದವರೆಲ್ಲರೂ ತಿಳಿದುಕೊಂಡಿದ್ದಾರೆ. ನಾವು ಅವರ ಸಂಗಡ ಸಹಕರಿಸಬೇಕೆಂತ ಪ್ರಭುಗಳು ಯೋಚಿಸುತ್ತಾರೆ. ಅವರ ಅಭಿಪ್ರಾಯ ಬೇರೆದಾದಾಗ ಅಥವ ಅವರ ಬುದ್ಧಿ ಬದಲಾದಾಗ ನಮ್ಮ ಸಂಗಡ ಸಹಕರಿಸುತ್ತಾರೆಂತ ನಾವು ಹೇಳುತ್ತೇವೆ. ಶಕ್ತಿ ಇರುವ ಮಂದಿಗಳು ಸುಧಾರಣೆಗಳನ್ನು ಉಪಯೋಗಿಸುವದಕ್ಕೆ ಮುಂದೆ ಬರಲಿಲ್ಲವೆಂತ ಪ್ರಭುಗಳು ಹೇಳುತ್ತಾರೆ. ಮಿ. ಶಾಸ್ತ್ರಿಗಳೂ, ಚಿಂತಾಮಣಿಯವರೂ ಮತ್ತು ಇನ್ನು ಅನೇಕರು ಸುಧಾರಣೆಯನ್ನು ಪ್ರಯೋಜನಕಾರಿಯಾಗಿ ಮಾಡಲು ಶಕ್ತಿಯುಳ್ಳವರಾಗಿದ್ದರು. ಪ್ರಪಂಚದಲ್ಲಿ ಇರುವ ಪೂರ್ತಿ ಸ್ನೇಹಭಾವ ತೋರಿಸಿದರೂ ಸುಧಾರಣೆಯನ್ನು ಪ್ರಯೋಜನಕಾರಿಯಾಗಿ ಮಾಡಲು ಸಾಧ್ಯವಾಗಲಿಲ್ಲ. ದೇಶಬಂಧುದಾಸರು ಒಂದು ದಾರಿಯನ್ನು ತೋರಿಸಿದರು. ಆ ದಾರಿಯಲ್ಲಿ ನಡೆಯಲು ದೇಶವು ಈಗಲೂ ತಯಾರಾಗಿದೆ.

ಆದರೆ ಅವರ ಶರತ್ತುಗಳನ್ನು ಅಂಗೀಕರಿಸುವ ಸಂಭವವಿಲ್ಲದೆ? ಇಂಗ್ಲಿಷರೂ, ಹಿಂದೀಯರೂ ಬೇರೆಬೇರೆಯಾಗಿ ಅಭಿಪ್ರಾಯಪಡಲು ಕಾರಣಗಳು ಇದ್ದೇ ಇವೆ. ಎರಡು ಜನಾಂಗಗಳು ರಾಜಿ ತೀರ್ಮಾನಿಸಿಕೊಳ್ಳುವುದು ಸಾಧ್ಯವಿದೆಯೋ? ಅವಶ್ಯವಾಗಿಯೂ ಇದೆ.

ನಾವು ಎರಡು ಜನಾಂಗದವರು ಅಸ್ವಾಭಾವಿಕಸ್ಥಿತಿಯಲ್ಲಿ ಇದೇವೆ. ಆಳುವವರು ಆಳಿಸಿಕೊಳ್ಳುವವರು ಎಂಬ ತಾರತಮ್ಯದಲ್ಲಿದ್ದೇವೆ. ನಮ್ಮಲ್ಲಿ ಯಾವದಾದರೂ ಒಂದು ತರದ ಶಕ್ತಿಯಿದ್ದರೆ ಅವರ ಸಮಾನರಾಗಬಹುದು. 1921ರಲ್ಲಿ ನಮಗೆ ಈ ಶಕ್ತಿಯಿದೆಯೆಂತ ಯೋಚಿಸಿದೆವು. ಒಂದು ವರ್ಷದೊಳಗೆ ಸ್ವರಾಜ್ಯವು ನಮಗೆ ಸಿಕ್ಕುತ್ತದೆಂತ ತೋರಿತು. ಈಗ ಯಾವಾಗ ಸ್ವರಾಜ್ಯ ಸಿಕ್ಕುತ್ತೆಂತ ಯಾರಿಂದಲೂ ಹೇಳಲು ಸಾಧ್ಯವಿಲ್ಲ. ಆ ಶಕ್ತಿಯನ್ನು—[illegible] ಅಹಿಂಸಾ ಶಕ್ತಿಯನ್ನು—[illegible]—ಅಗಸಮಾನರಾಗುತ್ತೇವೆ. ಇದು [illegible] ಸಜವಾದ ಸಂಗತಿಯಾಗಿದೆ. [illegible] ಟೀಕಿಸುತ್ತಿದ್ದಂತ [illegible] ವೃತ್ತಗಳನ್ನು ಈಗ ಟೀಕಿಸದೆ ಇರಲು ಕಾರಣವೇನೆಂದರೆ—[illegible] [illegible] ಭಂಗದ [illegible] ಹಿಂದೂದೇಶದ [illegible] ಉಪದೇಶಗಳಲ್ಲಿ [illegible] ರಚನೆಯಿಂದ ಟೀಕಿಸದೆ ಇರುವದಾಗಿದೆ. [illegible] ತಯಾರಾದಾಗ [illegible] ಮುಂದಾಳು ಗತಿಸಿದ ವಿಯೋಗದ [illegible] [illegible] ಹಿಂದುಸ್ಥಾನದ [illegible] [illegible] ಯೋಚಿಸದೆ [illegible] ಆವರಂತೆ [illegible] ನಾನೂ ಅನುಭವಿಸುತ್ತೇನೆಂಬುದನ್ನು [illegible] ಬರ್ಕನ್ ಹೆಡ್ಡರ ಭಾಷಣದ [illegible] ಟೀಕಿಸಿರುವದಾಗಿದೆ. [illegible] ಸ್ವರಾಜ್ಯ [illegible] ಮುಂದಾಳುಗಳ [illegible] ರುವಾಗ ನನ್ನ ಗುಣ [illegible] ಬೇಕಾದ ವಾತಾವರಣವ[illegible] [illegible] ಕ್ರಮವನ್ನು ನಾನು ಮಾಡುತ್ತೇನೆ [illegible] ತಿಯಾದಾವರೂ ಆವಕ್ಕಿಂತ [illegible] ಹೀನವಾದದ್ದು [illegible] ವನ್ನು ಅವಲಂಭಿಸುವದೇ ಮೇಲೆಂತ [illegible] ಯನ್ನು [illegible] ರು ಹೇಳಲಿಲ್ಲವೇ ?

ಕೋಳಿ, ಬಾತುಗಳನ್ನು ಸಾಕುವ ವೃತ್ತಿ.

(ಕೋಳಿ ಬಾತುಗಳನ್ನು ಸಾಕುವ ವೃತ್ತಿಯ ಎಕ್ಸ್ ಪರ್ಟರಾದ ಸಂಯುಕ್ತ ಪ್ರಾಂತದ ಮಿಸ್ಟರ್ ಎ ಎಫ್ ಫ್ರೀಮನ್ ಎಂಬ ಇಂಗ್ಲಿಷ ಸ್ತ್ರೀಯ ಲೇಖನದಿಂದ ಎತ್ತಿ ಬರೆದದ್ದು.)

ಕೋಳಿ ಬಾತುಗಳನ್ನು ಸಾಕುವ ಹಾಗೂ ಕೋಳಿ ಮೊಟ್ಟೆಗಳನ್ನು ಸಂಗ್ರಹಿಸಿ ಮಾರುವುದರ ಆರ್ಥಿಕ ವಿಶೇಷತೆಯನ್ನು ನಮ್ಮ ದೇಶದಲ್ಲಿ ಬಲೇ ಸ್ವಲ್ಪ ಮಂದಿ ಮಾತ್ರವೇ ಅರಿತಿರುವರು. ಅನೇಕ ಮಂದಿ ಕೋಳಿಸಾಕುವ ವೃತ್ತಿಯಿಂದ ಜನಾಂಗದ ಆರ್ಥಿಕ ಸ್ಥಿತಿಯನ್ನು ಹೇಗೆ ಹೆಚ್ಚಿಸಬಹುದೆಂದು ಹೀಯಾಳಿಸಬಹುದು. ಆದರೆ ಸಂಯೋಗಿ ವಿಚಾರಿಸಿದರೆ ಇದು ನಿಜವಾದುದು. ಇದಕ್ಕೆ ಪಾಶ್ಚಾತ್ಯ ಮತ್ತು ಪೌರ್ವಾತ್ಯದ ಎರಡು ದೇಶಗಳ ಉದಾಹರಣೆಯನ್ನಿಲ್ಲಿ ಕೊಡುತ್ತೇನೆ.

ಪಾಶ್ಚಾತ್ಯ ದೇಶಗಳಲ್ಲಿ ಕೋಳಿಮೊಟ್ಟೆಯನ್ನು ಸಾಮಾನ್ಯವಾಗಿ ಎಲ್ಲರೂ ಪ್ರತಿದಿನವೂ ಉಪಯೋಗಿಸುತ್ತಾರೆ. ಈಗ ಮಾದರಿಗಾಗಿ [illegible] [illegible] ಆ ದೇಶದ ಜನಸಂಖ್ಯೆಯು 35 ಲಕ್ಷವಾಗಿದ್ದರೂ, ಅವರು [illegible] ಬೇಕಾದಷ್ಟು ಕೋಳಿಮೊಟ್ಟೆ ಬಳಸಿಕೊಂಡು [illegible] ಮೊಟ್ಟೆಗಳನ್ನು ಪರದೇಶಗಳಿಗೆ ಕಳುಹಿಸುತ್ತಾರೆ. ಇದರಿಂದ ಅವರಿಗೆ 10 ಲಕ್ಷ ರೂಪಾಯಿಗಳ ಆದಾಯವಾಗುತ್ತದೆ.

ಪೌರ್ವಾತ್ಯ ದೇಶಗಳಿಂದ ಮಾದರಿಯಾಗಿ ಹೇಳುವದಾದರೆ—ಚೀನಾದೇಶವು ಪರದೇಶಗಳಿಗೆ ಕೋಳಿಮೊಟ್ಟೆಯನ್ನು ಮಾರಿ ವರ್ಷಕ್ಕೆ ಲಕ್ಷಗಟ್ಟಲೆ ಹಣನು ದುಡಿಯುತ್ತದೆ. ಕೋಳಿ ಮೊಟ್ಟೆಯನ್ನು ಒಣಗಿಸಿ ಪುಡಿಯಾಗಿಮಾಡಿ ಅವರು ಮಾರುತ್ತಾರೆ. ಇದಕ್ಕೆ ಈಗೀಗ ಹೊಸ ಮಾದರಿಯ ಯಂತ್ರಗಳೂ ಆಗಿವೆಯಂತೆ. ಅಲ್ಲಿ ಕೋಳಿ, ಬಾತುಗಳನ್ನು ಸಾಕುವ ದೊಡ್ಡ ದೊಡ್ಡ ಫಾರ್ಮ್ಸ್ (Poultry Farms) ಗಳೂ ಇವೆ. ಆದರೆ, ಹೆಚ್ಚಾಗಿ ಕೋಳಿಗಳನ್ನು ಸಾಕಿ ಮೊಟ್ಟೆಗಳನ್ನು ಸಂಗ್ರಹಿಸಿ ಪಟ್ಟಣಗಳಲ್ಲಿ [illegible] ಈ ವ್ಯಾಪಾರದ ಕೇಂದ್ರ ಸ್ಥಳಗಳಿಗೆ ಕಳುಹಿಸುವವರು ಹಳ್ಳಿಗಳಲ್ಲಿರುವ ಕೃಷಿ ವರ್ಗದವರಾಗಿದ್ದಾರೆ. ಅಲ್ಲಿ ಅವನ್ನು ತ್ವರಿತವಾಗಿ ಮಂತ್ರ [illegible] ಒಣಗಿಸಿ ಪುಡಿಮಾಡಿ ಪರದೇಶಕ್ಕೆ ಕಳುಹಿಸುತ್ತಾರೆ.

ಹಿಂದೂದೇಶದಲ್ಲೂ ಈ ವೃತ್ತಿಯು ಸಾಧ್ಯವಿದೆ.

ಪರದೇಶಗಳು ಕೈಕೊಂಡಿರುವ ಈ ವೃತ್ತಿಯನ್ನು ಹಿಂದೂದೇಶಕ್ಕೂ ಕೈಕೊಳ್ಳಲು ಸಾಧ್ಯವಿದೆ. [illegible] ಚೀನಾ ದೇಶದಲ್ಲಿ ಎಷ್ಟೋ ಅಂತಃಕಲಹ ನಡೆಯುತ್ತಿರುವುದರಿಂದ ಪಾಶ್ಚಾತ್ಯದೇಶಗಳಿಂದ ಈ ಒಣಗಿಸಿದ ಕೋಳಿಮೊಟ್ಟೆಗೆ ಬಹಳ ಹೆಚ್ಚಾದ ಗಿರಾಕಿ ಇದೆ. ಇಂಗ್ಲೆಂಡೊಂದೇ ತನ್ನ ಸ್ವಂತ ಉಪಯೋಗಕ್ಕಾಗಿ 1800 ಲಕ್ಷ [illegible] [illegible] ಕೋಳಿಮೊಟ್ಟೆಗಳನ್ನು ಪರದೇಶಗಳಿಂದ ತರಿಸುತ್ತದೆ. [illegible]

ಇತರ ಪಾಶ್ಚಾತ್ಯ ದೇಶಗಳೂ ದೂರದೂರದ ದೇಶಗಳಿಂದ ಮೊಟ್ಟೆಗಳನ್ನು ತರಿಸುತ್ತವೆ. ಇನ್ನೂ ಅವರಿಗೆ ಎಷ್ಟೋ ಬೇಕಾಗಿದೆ. ಹೀಗಿರಲು ಹಿಂದೂದೇಶವು ಪಾಶ್ಚಾತ್ಯ ದೇಶಗಳಿಗೆ ಕೋಳಿಮೊಟ್ಟೆ ಕಳುಹಿಸಿಕೊಡುವ ಚೀನಾ, ಆಸ್ಟ್ರೇಲ್ಯ, ದಕ್ಷಿಣಾಫ್ರಿಕಗಳಿಗಿಂತ ಹತ್ತಿರವಿರುವುದರಿಂದ ಕಡಿಮೆ ದರದಲ್ಲಿ ಅವನ್ನು ಮಾರಿ ಆ ವ್ಯಾಪಾರವನ್ನು ತನ್ನ ಕೈವಶಮಾಡಿಕೊಳ್ಳಬಹುದು. ಈಚೆಗೆ ಕೆಲವರೂ ಕೂಡ ಈ ವ್ಯಾಪಾರ ನಡಿಸುತ್ತಿದ್ದಾರಾದರೂ, ಗಿರಾಕಿಯು ಇನ್ನೂ ಬಹಳವಿದೆ.

ನಮ್ಮ ದೇಶದಲ್ಲಿ ಇದಕ್ಕೆ ಅನುಕೂಲತೆಗಳೇನಿವೆ?

ನಮ್ಮ ದೇಶದಲ್ಲಿ ಬಹುಮಟ್ಟಿಗೆ ಪ್ರತಿಯೊಂದು ಹಳ್ಳಿಯಲ್ಲೂ ಕೋಳಿಗಳಿವೆ. ಈಗಿರುವಂಥಾ ಕೋಳಿಗಳು ಮೊಟ್ಟೆಗಳನ್ನಿಡುವುದು ಬಹಳ ಕಡಿಮೆ. ವರ್ಷಕ್ಕೆ ಹೆಚ್ಚೆಂದರೆ 50-60 ಮೊಟ್ಟೆಗಳನ್ನಿಟ್ಟರೆ ತೀರಿತು. ಆದರೆ ನನ್ನ ಉದ್ದೇಶವೇನೆಂದರೆ ಈ ಹಳ್ಳಿಯ ಕೋಳಿಗಳು ಹೆಚ್ಚು ಮೊಟ್ಟೆಗಳಿಡುವಂತೆ ಮಾಡುವುದಾಗಿದೆ. ಪಾಶ್ಚಾತ್ಯ ದೇಶಗಳಲ್ಲಿಯೂ ಇಂಡಿಯದಲ್ಲೂ ಮಾಡಿದ ಪರಿಶೋಧನೆಯಿಂದ [illegible] ಊರಕೋಳಿಗಳಿಗೆ [illegible] ಮೊಟ್ಟೆಯಿಡುವ ಜಾತಿಯ ಗಂಡು ಕೋಳಿಗಳನ್ನು ಬೆರೆಸಿದರೆ ಅದರಿಂದ ಹುಟ್ಟುವ ಮರಿಗಳು [illegible] ಹೆಚ್ಚು ಮೊಟ್ಟೆಯಿಡುತ್ತವೆಂದು [illegible] ರೀತಿಯಿಂದ ವಿಚಾರಿಸಿಯಲ್ಲಿ ಕೋಳಿಗಳು [illegible] ನೂರು ಮೊಟ್ಟೆಗಳನ್ನು ಇಡುವಂತೆ ಮಾಡಿದ್ದಾರೆ. [illegible] ಈ ಒಳ್ಳೆ ಜಾತಿಯ ಗಂಡು ಕೋಳಿಗಳು [illegible] ಹಿಂದೂದೇಶದಲ್ಲಿ [illegible] [illegible] ಬಹಳ [illegible] ಈ ಒಳ್ಳೇ ಜಾತಿಯ ಗಂಡು ಕೋಳಿಗಳಿವೆ. ಅವರ ಬದಲಿಗೆ [illegible] ಕೋಳಿಗಳ ಸಂತಾನವು ಒಳ್ಳೇ [illegible] ಉಪಯೋಗಿಸಿಕೊಳ್ಳಬಹುದು.

[illegible] ಸಂಯುಕ್ತ ಪ್ರಾಂತದಲ್ಲಿ ಒಂದು ಸಂಸ್ಥೆಯು [illegible] ಕೋಳಿ [illegible] ಗಳನ್ನು ಸಾಕುವ ಮತ್ತು ಒಳ್ಳೆ ಜಾತಿಯ ಕೋಳಿಗಳನ್ನು ಮಾಡುವ ಕೆಲಸ ನಡಿಸುತ್ತಿದೆ [illegible] ಸರಕಾರವು [illegible] ಈ ವೃತ್ತಿಗಾಗಿ ಪ್ರತ್ಯೇಕ ಡಿಪಾರ್ಟ್‌ಮೆಂಟನ್ನು ಮಾಡಿ, ಹಳ್ಳೀ ಕೋಳಿಗಳ ಸಂತಾನವನ್ನು ಒಳ್ಳೇದಾಗಿ ಮಾಡಲು ಕಲಿತ ವಿದ್ಯಾವಂತ ಹಿಂದೀಯರನ್ನು ನೇಮಿಸುವದಾಗಿದೆ. ಮತ್ತು ಅವರಿಗೆ ಹೊಸರೀತಿಯಲ್ಲಿ ಕೋಳಿ ಸಾಕುವ ಕ್ರಮ, ಅವುಗಳ ರೋಗಚಿಕಿತ್ಸೆ, ಮೊಟ್ಟೆಗಳನ್ನು ಪರದೇಶಕ್ಕೆ ಕಳುಹಿಸಲು ತಯಾರಿಸುವ ಕ್ರಮ ಇವೇ ಮೊದಲಾದವನ್ನು ಕಲಿಸಲು [illegible] ಬೇಕೆಂದಿದೆ. ಆ ವಿದ್ಯಾರ್ಥಿಗಳು ತಮ್ಮ [illegible] ಬಳಿಕ ಹಳ್ಳಿಗಳಿಗೆ ಹೋಗಿ ಜನರಿಗೆ ಈ ಹೊಸಕ್ರಮಗಳನ್ನು ಕಲಿಸಿಕೊಡುವರು. [illegible] ಕೋಳಿ ಮೊಟ್ಟೆಗಳನ್ನು ಸಂಗ್ರಹಿಸ[illegible] ಯಾ ಕಡೆಗಳಲ್ಲಿ ಚಿಕ್ಕ ಚಿಕ್ಕ ಸಂಘಗಳನ್ನು ಮಾಡಿ, ಅಲ್ಲಿ ರಫ್ತುಮಾಡುವ ಕೋಳಿಮೊಟ್ಟೆಗಳನ್ನು ತಕ್ಕ ರೀತಿಯಲ್ಲಿ ತಯಾರಿಸುವಂತೆಯೂ ಮಾಡುವರು. ಹಳ್ಳಿಯವರಿಗೆ [illegible] ಅನುಕೂಲವಾಗುವಂತೆ ಈ ಕೆಲಸವನ್ನು ಕೋಆಪರೇಟಿವ್ ಸೊಸೈಟಿಯವರು ಕೈಕೊಂಡರೆ ಉತ್ತಮ.

"ನವಯುಗ."

ಭಾವೀ ಮಹಾಯುದ್ಧದ ಸಿದ್ಧತೆಯು

ಶಸ್ತ್ರಾಸ್ತ್ರಗಳ ಬಲವನ್ನು ಪ್ರತಿಬಂಧಿಸಿ, ಜಗತ್ತಿನಲ್ಲಿ ಸ್ಥಿರವಾದ ಶಾಂತತೆಯನ್ನು ನೆಲೆಗೊಳಿಸಲೋಸುಗ ಜಿನೀವಾ ಪಟ್ಟಣದಲ್ಲಿ ರಾಷ್ಟ್ರ ಸಂಘದ ನೇತೃತ್ವದಲ್ಲಿ ಒಂದು ಪರಿಷತ್ತು ಸೇರಿತು. ಆ ಪರಿಷತ್ತು ಜೂನ ತಿಂಗಳ ಮೂರನೇ ವಾರದಲ್ಲಿ ಮುಕ್ತಾಯವಾಯಿತು. ಪರಿಷತ್ತಿಗೆ ಬರಲೊಪ್ಪಿಸಿದ ಮಿತ್ರರಾಷ್ಟ್ರದ ಪ್ರತಿನಿಧಿಗಳು "ಶಸ್ತ್ರಾಸ್ತ್ರಗಳ ಬಲ ಪ್ರತಿಬಂಧದ ಕರಾರನಾಮೆ"ಗೆ ತಮ್ಮ ಒಪ್ಪಿಗೆಯನ್ನಾದರೂ ಕೊಟ್ಟಿದ್ದರು. ಆದರೆ ಪರಿಷತ್ತಿನಲ್ಲಿಯ ಅವರ ಬಾಂಧಿಕ ಮತ್ತು ಔಪಚಾರಿಕ ಭಾಷಣಗಳು ಜಗತ್ತಿನಲ್ಲಿ ಶಾಂತತೆಯನ್ನು ಸ್ಥಿರಪಡಿಸುವ ಧ್ಯೇಯಕ್ಕೆ ಸ್ವಲ್ಪವಾದರೂ ಪುಷ್ಟಿಯನ್ನೀಯಲಿಲ್ಲ. ಜಗತ್ತಿನಲ್ಲಿ ಶಾಂತತೆಯನ್ನು ನೆಲೆಗೊಳಿಸಲು ಕಂಕಣಬದ್ಧರಾಗಿದ್ದೇವೆಂದು ಜಂಬ ಬಡಿಯುವ ಸರ್ವ ಪ್ರಬಲರಾಷ್ಟ್ರಗಳು ಮಹಾಯುದ್ಧದ ಸಿದ್ಧತೆಯನ್ನು ಬಹು ಜೋರಿನಿಂದ ನಡಿಸಿರುವವೆಂಬುದ ನ್ನತ್ತ ಆ ಪರಿಷತ್ತಿನಿಂದ ವ್ಯಕ್ತವಾಯಿತೆಂದು ಜಾರ್ಜ ಗ್ಲಾಸ್ಗೊ ಎಂಬವರು 'ಡೇಲಿ ಹೆರಾಲ್ಡ್' ಪತ್ರಿಕೆಯಲ್ಲಿ ಬರೆದಿದ್ದಾರೆ. ಮತ್ತು ಅಭಿಪ್ರಾಯದ ಪುಷ್ಟ್ಯರ್ಥವಾಗಿ ಕೆಳಗಿನ ಕಾರಣಗಳನ್ನಾದರೂ ಮನ್ನೀಸಿದ್ದಾರೆ.

(೧) ಯುರೋಪಿನ [illegible] ಇತರ ರಾಷ್ಟ್ರಗಳು ಭಾವೀ ಮಹಾಯುದ್ಧದ ಸಿದ್ಧತೆಯು [illegible] ನಡೆಸುತ್ತಿವೆ (೨) ಸ್ಫೋಟಕವನ್ನು ಶಸ್ತ್ರಗಳನ್ನು ಆ ದೇಶದ [illegible] [illegible] ಪ್ರಯತ್ನಿಸುತ್ತಿರುತ್ತಾರೆ (ಜಾಸ್ತಿಗೇ ದಂಡಗಳವರು ಶಸ್ತ್ರಾಸ್ತ್ರಗಳನ್ನು ತಯಾರಿಸ ಕೂಡದೆಂದು ಆ ಕರಾರನಾಮೆಯ ೮ ನೇ ಕಲಮಿನಿಂದ ವ್ಯಕ್ತವಾಗುತ್ತಿದ್ದಾಗ್ಯೂ) (೩) ಸ್ವಾಪಥಿಯಲ್ಲಿಯೇ ಶತ್ರುಗಳಾಗಬಹುದೆಂಬ ಭೀತಿಯನ್ನು ನೂರೀಕರಿಸಿ ಇಂಗ್ಲೆಂಡವು ಜಗತ್ತನ್ನು ನಿಶಸ್ತ್ರಗೊಳಿಸಲು ಬೆಂಬತ್ತುತ್ತದೆ. ಅಮೇರಿಕಯು ಜಗತ್ತನ್ನು ನಿಶಸ್ತ್ರಗೊಳಿಸುವ ಕಾರ್ಯದಲ್ಲಿ ಪ್ರಾಮಾಣಿಕತೆಯನ್ನು ತಪ್ಪುತ್ತದೆ.

(೮) ಸರ್ವ ಪ್ರಬಲ ರಾಷ್ಟ್ರಗಳು ಅಂತರಂಗದಲ್ಲಿಯೇ ತಮ್ಮ ಸೈನ್ಯದ ಸಿದ್ಧತೆಯನ್ನು ನಡಸಿರುವರೆಂದು ಸಣ್ಣ ರಾಷ್ಟ್ರಗಳ ಕಲ್ಪನೆಯಾಗಿರುತ್ತದೆ. ಅರ್ಥಾತ್ ಪ್ರಬಲ ರಾಷ್ಟ್ರಗಳು ಶರಣಾಗತಿಯ ಆನೇ ಕಲಂನ್ನು ಉಲ್ಲಂಘಿಸುತ್ತಿರುವರೆಂಬುವದು ಮೇಲೆ ನಮೂದಿಸಿದ ಅವರ ಕೃತಿಗಳಿಂದ ವ್ಯಕ್ತವಾಗುತ್ತದೆ. ಚಾರ್ಲಸ್ ಬಕ್ಸ್‌ಟನ್ನರ ಅಭಿಪ್ರಾಯವು ನಿಜವಾಗಿದ್ದರೆ—ಜಗತ್ತಿನಲ್ಲಿ ಅರಾಜಕತೆಯ ಕೊಳ್ಳಿಯನ್ನು ಹಚ್ಚಿದರೆಂದು ಬೋಲ್ಶೆವಿಕರನ್ನು ಆರೋಪಿಸಲಿಕ್ಕೆ ಆಂಗ್ಲ ಮತ್ತು ಇತರ ರಾಷ್ಟ್ರಗಳ ಪ್ರತಿನಿಧಿಗಳಿಗೆ ಹೇಗೆ ಬುದ್ಧಿ ಹುಟ್ಟಿತೋ ನಮಗಂತೂ ತಿಳಿಯದು.

'ಕನ್ನಡಿಗ.'

ಬಲಪೂರ್ವಕ ಸಂಯಮ.

ಬಾಲ ವಿಧವೆಯೊಬ್ಬಳು ಗಾಂಧಿಜಿಯವರಿಗೆ ಬಹಳ ಕರುಣಾಜನಕವಾದ ಒಂದು ಪತ್ರವನ್ನು ಬರೆದಿರುವಳು. ಆ ಪತ್ರದಲ್ಲಿ ಬಾಲ ವಿಧವೆಯರ ದುರ್ದೈವವು ಎಷ್ಟು ಅನುಕಂಪನೀಯವಾಗಿದೆಯೆಂದೂ ಕುಟುಂಬದಲ್ಲಿ ಅವರೊಡನೆ ಯಾವ ರೀತಿಯ ದುರ್ವ್ಯವಹಾರ ನಡೆಸುತ್ತಿರುವದೆಂದೂ ಯಾವ ರೀತಿಯಲ್ಲಿ ಅವರು ಸಂಯಮವನ್ನು ಪಾಲಿಸುವಂತೆ ಬಲಾತ್ಕಾರವು ನಡೆಸಲ್ಪಡುವುದೆಂದೂ ಇದರಿಂದ ಕೆಲ ವಿಧವೆಯರು ಹೇಗೆ ದುರಾಚಾರದಲ್ಲಿ ಪ್ರವೃತ್ತರಾಗುವರೆಂದೂ ವರ್ಣಿಸಲ್ಪಟ್ಟಿದೆ. ಈ ಪತ್ರದ ಕುರಿತ ತಮ್ಮ ವಿಚಾರಗಳನ್ನು ಗಾಂಧೀಜಿಯವರು 'ನವಜೀವನ'ದಲ್ಲಿ ಈ ರೀತಿ ವ್ಯಕ್ತಪಡಿಸಿರುವರು.

ಇಂಥ ಪತ್ರಗಳು ನನಗೆ ಆಗಾಗ ಬರುತ್ತಿವೆ. ಮಾತ್ರವಲ್ಲ ನಾನು ದೇಶದಲ್ಲೆಲ್ಲಾ ಬಾಲ ವಿಧವೆಯರ ಸ್ಥಿತಿಯನ್ನು ನೋಡುತ್ತಿರುವೆನು. ಅಸಂಖ್ಯ ಭಗಿನಿಯರು ನನ್ನನ್ನು ನೋಡಲು ಬರುವರು. ಇದರಿಂದ ನಾನು ಅವರ ದುಃಖವನ್ನು ತಿಳಿಯಬಲ್ಲೆನು. ಅವರ ದುಃಖದಲ್ಲಿ ಪುರುಷರಿಗೆ ಸಾಧ್ಯವಿದ್ದಷ್ಟು ಮಟ್ಟಿಗೆ ಸಹಭಾಗಿಯಾಗಲು ನಾನು ಸ್ತ್ರೀಸಮನಾಗಿರುವೆನು, ಇನ್ನು ಹೆಚ್ಚಿಗೆ ಆಗಲು ಪ್ರಯತ್ನಿಸುತ್ತಿದ್ದೇನೆ. ಅನೇಕ ಭಗಿನಿಯರಿಗೆ ತಾಯಿಯಂತಿರಲು ನಾನು ಯತ್ನ ಮಾಡುತ್ತಿರುವೆನು. ಈ ಕಾರಣದಿಂದ ಈ ಭಗಿನಿಯ ದುಃಖವನ್ನು ನಾನು ಸಂಪೂರ್ಣವಾಗಿ ತಿಳಿಯಬಲ್ಲೆನು.

ಲೋಕದಲ್ಲಿ ಬಾಲ ವಿಧವೆಯಂತಹ ಸ್ವಕೃತವಿರುದ್ಧ ವಸ್ತುವೇ ಇರಕೂಡದೆಂಬ ನನ್ನ ಅಭಿಪ್ರಾಯವು ದಿನೇ ದಿನೇ ಬಲಗೊಳ್ಳುತ್ತಿದೆ. ವೈಧವ್ಯವು ಧರ್ಮವಲ್ಲ, ಸಂಯಮವು ಧರ್ಮವಾಗಿರುವುದು. ಬಲಪ್ರಯೋಗ ಮತ್ತು ಸಂಯಮ—ಇವು ಪರಸ್ಪರ ವಿರುದ್ಧವಾಗಿವೆ. ಒಂದರಿಂದ ಮನಸ್ಸಿನ ಉನ್ನತಿಯೂ ಆಗುವುದು. ಬಲಾತ್ಕಾರಪೂರ್ವಕವಾಗಿ ಆಚರಿಸಲ್ಪಡುವ ವೈಧವ್ಯವು ಪಾಪವು, ಸ್ವೇಚ್ಛೆಯಿಂದ ಪಾಲಿಸುವ ವೈಧವ್ಯವು ಧರ್ಮಕ್ಕೂ ಆತ್ಮಕ್ಕೆ ಶೋಭೆಯನ್ನು ಕೊಡುವಂತಹದೂ ಸಮಾಜದ ಪಾವಿತ್ರ್ಯದ ಕವಚವೂ ಆಗಿದೆ. ಹದಿನೈದು ವರುಷದ ಹುಡುಗಿಯು ಸ್ವೇಚ್ಛೆಯಿಂದ ವೈಧವ್ಯವನ್ನು ಪಾಲಿಸುವಳೆಂದ ಹೇಳಿದರೆ ಔದ್ಧತ್ಯವನ್ನೂ ಅಜ್ಞಾನವನ್ನೂ ಪ್ರಕಟಗೊಳಿಸುವುದಲ್ಲದೆ ಬೇರೆಯಲ್ಲ. ಹದಿನೈದು ವರುಷದ ಬಾಲಕಿಯು ವೈಧವ್ಯದ ವೇದನೆಯೆಂದರೇನೆಂದು ಹೇಗೆ ತಿಳಿಯಬಲ್ಲಳು? ಅವಳ ವಿವಾಹಕ್ಕೆ ಎಲ್ಲ ಅನುಕೂಲತೆಗಳನ್ನು ಮಾಡಿಕೊಡುವುದು ತಾಯಿತಂದೆಗಳ ಧರ್ಮವಿದೆ. ಈ ರೀತಿಗೆ ಅಧೀನವಾಗಿರುವುದು ಪಾಮರದ ಲಕ್ಷಣವು. ಅದನ್ನು ವಿರೋಧಿಸುವುದರಲ್ಲಿ ಪುರುಷಾರ್ಥವಿದೆ.

ಯುವತಿಯರಾದ ವಿಧವೆಯರಿಗೆ ನಾನು ಯಾವ ಸೂಚನೆಯನ್ನು ಮಾಡಲಿ? ಇದರ ವಿಚಾರವನ್ನು ಮಾಡುವಾಗ ನಾನು ಎಷ್ಟು ಅಸಮರ್ಥನಿರುವೆನೆಂದು ನನಗೆ ತಿಳಿಯುವುದು. ಅವರಿಗೆ ವಿವಾಹವನ್ನು ಮಾಡಿಕೊಳ್ಳುವ ಸೂಚನೆಯನ್ನು ಕೊಡುವುದು ಸುಲಭ. ಆದರೆ ಅವರು ಯಾರೊಡನೆ ವಿವಾಹವನ್ನು ಮಾಡಿಕೊಳ್ಳಬೇಕು? ಪತಿಯ ಶೋಧವನ್ನು ಯಾರು ಮಾಡಬೇಕು? ಬೇರೆ ಜಾತಿಯವರೊಡನೆ ವಿವಾಹ ಸಂಬಂಧವನ್ನು ಮಾಡಿಕೊಳ್ಳಬೇಕೆ? ಜಾಹೀರಾತನ್ನು ಪ್ರಕಟಿಸಿ ಪತಿಯನ್ನು ಹುಡುಕಬೇಕೆ? ವಿವಾಹವೇನು ವ್ಯಾಪಾರವೋ? ಲೋಕಮತವು ವಿರುದ್ಧ ಅಥವ ಉದಾಸೀನವಿದ್ದಲ್ಲಿ ಪತಿಯನ್ನು ಹುಡುಕುವುದು ಬಹಳಮಟ್ಟಿಗೆ ಅಸಂಭವನೀಯವಿದೆ. ಮತ್ತು ಸುಯೋಗ್ಯ ಪತಿಯು ದೊರೆಯದಿದ್ದರೆ ಯಾರೊಡನೆಯೂ ಆಗಲೀ ಬಂಧಿಸಲ್ಪಡಬೇಕೆಂದು ನಾನು ಹೇಗೆ ಹೇಳಲಿ?

ಆದುದರಿಂದ ನಾನು ಬಾಲ ವಿಧವೆಯರ ತಾಯಿತಂದೆಗಳೊಡನೆಯೂ ಪಾಲಕರೊಡನೆಯೂ ಪ್ರಾರ್ಥನೆಯನ್ನು ಮಾಡುವೆನು. ಆದರೆ 'ನವಜೀವನ'ವು ಅವರ ಕೈಗೆ ಎಲ್ಲಿ ಸಿಕ್ಕುವುದು? ಇಂತಹ ಜನರಲ್ಲಿ ಹೆಚ್ಚಿನವರಿಗೆ 'ನವಜೀವನ'ವು ಮುಟ್ಟುವುದಿಲ್ಲ. ಅಂತಹ ಧರ್ಮಸಂಕಟವು ಉಪಸ್ಥಿತವಾಗಿದೆ.

ಪರಂತು ವಿಧವೆಯರಿಗೆ ಇಷ್ಟು ಬುದ್ಧಿವಾದವನ್ನು ಅಗತ್ಯವಾಗಿಯೂ ಕೊಡುವೆನು. ಅವರು ಸಮಾಧಾನದಿಂದ ತಮ್ಮ ದುಃಖವನ್ನು ಸಹಿಸಿಕೊಳ್ಳಬೇಕು. ತಮ್ಮ ಪುರುಷ ಅಥವ ಸ್ತ್ರೀಪಾಲಕರೊಡನೆ ತಮ್ಮ ಹೃದಯವನ್ನು ಬಿಚ್ಚಿ ಹೇಳಿ ತಮ್ಮ ಎಲ್ಲ ಇಚ್ಛೆಗಳನ್ನು ಅವರಿಗೆ ತಿಳಿಸಬೇಕು. ಅವರು ಮಾತನ್ನು ಕೇಳದಿದ್ದರೆ ನಿಶ್ಚಿಂತರಾಗಿರಬೇಕು. ಯೋಗ್ಯ ಪತಿಯು ದೊರೆತರೆ ಮದುವೆಯಾಗಬೇಕು. ಇಂತಹ ಪತಿಯನ್ನು ಪಡೆಯುವುದಕ್ಕೆ ದಮಯಂತಿ, ಸಾವಿತ್ರಿ, ಪಾರ್ವತಿಯರು ಯಾವ ರೀತಿಯಲ್ಲಿ ತಪಶ್ಚರ್ಯೆಯನ್ನು ಮಾಡಿದರೋ ಅದೇ ರೀತಿಯಲ್ಲಿ ಈ ಯುಗಕ್ಕೆ ಅನುಕೂಲವಾದ ತಪಸ್ಯೆಯನ್ನು ಆಚರಿಸಬೇಕು. ಅಭ್ಯಾಸವೇ ಈ ತಪಸ್ಯೆಯು. ಶಾರೀರಕ ಮಾನಸಿಕ, ಆಧ್ಯಾತ್ಮಿಕ ಅಭ್ಯಾಸಕ್ಕಿಂತ ಮನಸ್ಸನ್ನು ಸ್ಥಿರಮಾಡಲು ಉತ್ತಮ ಸಾಧನವಿಲ್ಲ. ಅವರು ತಮ್ಮ ಪ್ರತಿಯೊಂದು ಕ್ಷಣವನ್ನು ಚರಕವನ್ನು ತಿರುಗಿಸುವುದರಲ್ಲಿ ಉಪಯೋಗಿಸಿ ಶಾರೀರಕ ತಪಸ್ಸನ್ನು ಮಾಡಬೇಕು. ಅಕ್ಷರ ಜ್ಞಾನವನ್ನು ಪ್ರಾಪ್ತಮಾಡಿಕೊಂಡು ಮಾನಸಿಕ ತಪಸ್ಸನ್ನೂ ಆತ್ಮಶುದ್ಧಿಯನ್ನೂ ಆತ್ಮದ ಪರಿಚಯವನ್ನೂ ಮಾಡಿಕೊಂಡು ಆಧ್ಯಾತ್ಮಿಕ ತಪಸ್ಸನ್ನೂ ಆಚರಿಸಬೇಕು. ಈ ಮೂರು ಕಾರ್ಯಗಳಲ್ಲಿ ಅವರ ಪಾಲಕರು ಅವರಿಗೆ ಅಡ್ಡಿಮಾಡಲಾರರು. ಒಂದುವೇಳೆ ಅದು ನಿರರ್ಥಕವಾಗುವುದು. ಈ ಮೂರು ಅಧಿಕಾರಗಳು ಪ್ರತಿಯೊಬ್ಬ ವ್ಯಕ್ತಿಗೂ ಇರತಕ್ಕದು. ಈ ಅಧಿಕಾರಗಳನ್ನು ಕೂಡಲು ನಿರಾಕರಿಸಿದರೆ ವಿಧವೆಯು ಅಗತ್ಯವಾಗಿ ಸತ್ಯಾಗ್ರಹವನ್ನು ಆಚರಿಸಬಹುದು.

ಈ ಉಪಾಯವು ಕೂಡ ಕಠಿಣವಾದುದೆಂದು ನನಗೆ ಗೊತ್ತಿದೆ. ಆದರೆ ಈ ಪಾಯವು ಕಠಿಣವೆಂದು ತೋರಿಬಂದರೂ ನಿಜವಾಗಿ ಕಷ್ಟವಾಗಿರುವುದಿಲ್ಲ. ಇದು ಭಗವದ್ವಾಕ್ಯವು.

ವಿಧವೆಯರ ಪಾಲಕರು ಈ ವಿಷಯಕ್ಕೆ ಗಮನಕೊಡದಿದ್ದರೆ ಪಶ್ಚಾತ್ತಾಪ ಪಡುವರು. ಎಲ್ಲಾ ಕಡೆಗಳಲ್ಲಿಯೂ ನಾನು ದುರಾಚಾರವನ್ನು ನೋಡುತ್ತಿರುವೆನು. ವಿಧವೆಯರನ್ನು ಬಲಾತ್ಕಾರದಿಂದ ತಡೆಯುವುದರಿಂದ ಅವರಿಗಾಗಲಿ ಅವರ ಕುಟುಂಬಕ್ಕಾಗಲಿ ಹಿತವಾಗಲಾರದು, ಧರ್ಮರಕ್ಷಣೆಯೂ ಆಗಲಾರದು. ಮೂರರ ನಾಶವನ್ನೂ ನಾನು ಕಣ್ಣಾರೆ ಕಾಣುತ್ತಿರುವೆನು. ಯಾರ ಆಶ್ರಯದಲ್ಲಿ ಬಾಲ ವಿಧವೆಯರು ಇರುವರೋ ಅವರು ತಿಳಿದುಕೊಳ್ಳಲಿ.

ಸತ್ಯಾಗ್ರಹೀ

ಅದ್ಭುತ ಬಾಲಕನು.

ಜರ್ಮನ ದೇಶದಲ್ಲಿ ಇಠಾವರಿ ನದಿಯ ಸಂಗಮ ಸ್ಥಾನದಲ್ಲಿನ ಒಂದು ದ್ವೀಪದಲ್ಲಿ ಐದು ವರ್ಷಗಳ ಹಿಂದೆ ಒಬ್ಬ ಹುಡುಗನು ಜನ್ಮವೆತ್ತಿದನು. ಆತನ ಹೆಸರು 'ರುನ್‌ತಿಯಾನ್' ಎಂದು. ಆತನಿಗೆ ಒಬ್ಬ ಚಿಕ್ಕ ಸಹೋದರನಿರುವನು. ಈ ಬಾಲಕನು ಅದ್ಭುತ ವಾಕ್ಚಾತುರ್ಯವನ್ನು ಹೇಳಲಳವಲ್ಲ. ಆತನು ತನ್ನನ್ನು ನೋಡ ಬಂದ ಜನರಿಗೆ ಪಾರಮಾರ್ಥಿಕ ವಿಚಾರವಾಗಿ ಉಪನ್ಯಾಸಮಾಡುತ್ತಿರುವನು. ಉಪನ್ಯಾಸವನ್ನು ಕೊಡಲು ಉನ್ನತಸ್ಥಾನವನ್ನೇರಿದೊಡನೆಯೇ (Platform) ಆತನ ಬಾಯಿಯಿಂದ ವಾಕ್ಪ್ರೌಢಿಮೆಯು ಹೊರಬೀಳುವುದು. ಇತರ ವೇಳೆಗಳಲ್ಲಿ ಆತನು ಚಿಕ್ಕ ಮಕ್ಕಳಂತೆ ಆಡುತ್ತ ಕುಳಿತು ಕೊಳ್ಳುವನು. ಇವನನ್ನು ನೋಡಲು ಬರತಕ್ಕ ಜನರ ಸಂಖ್ಯೆಗೆ ಮಿತಿಯಿಲ್ಲ. ಇದೇನೋ ಭೂತದ ಉಪದ್ರವಿರಬೇಕೆಂದು ಜನರು ಊಹಿಸಿ ಅದಕ್ಕೆ ತಕ್ಕ ಉಪಶಮನವನ್ನು ಮಾಡಲೆತ್ನಿಸಿದರು. ಅಂತ ಪರೀಕ್ಷೆಗಳಲ್ಲಿ ಬಾಲಕನು ಚೆನ್ನಾಗಿ ತೇರ್ಗಡೆ ಹೊಂದಿದನು. ಅವನನ್ನು ನೋಡಲು ಬಯಸುವವರು ಕುತೂಹಲವನ್ನು ತೀರಿಸಲಿಕ್ಕೊಡಿಸಲು ಒಂದೆರಡು ಕಡೆಗಳಲ್ಲಿ ಅವನ ಉಪನ್ಯಾಸವನ್ನಿಡಿಸಿದರು. ಅದಕ್ಕೆ ಇರುವ ಜನರನ್ನು ಸಾಗಿಸಲು, ಸ್ಪೆಶಲ್ ಟ್ರೈನುಗಳನ್ನು ಓಡಿಸಬೇಕಾಯಿತು, ಆತನನ್ನು ಮೋಟಾರ್ ಗಾಡಿಯಿಂದ ಆ ಊರಿನಿಂದ ಉಪನ್ಯಾಸವಿದ್ದ ಇನ್ನೊಂದು ಊರಿಗೆ ಒಯ್ದರು. ಹಾದಿಯುದ್ದಕ್ಕೂ ಅವನನ್ನು ನೋಡಲು ಮಿತಿಯಿಲ್ಲದ ಜನರ ತಂಡಗಳು ನೆರೆದಿದ್ದುವು.

ಇಷ್ಟೊಂದು ಚಿಕ್ಕ ವಯಸ್ಸಿನಲ್ಲಿ, ಯಾರೊಬ್ಬರೂ ಹೇಳಿ ಕೊಡದಿದ್ದರೂ, ಅವನಲ್ಲಿ ಪರ ಭಾಷೆಯ ಜ್ಞಾನ ಉಂಟಾಗಿದೆ. ಆತನು ಒಂದು ಕಷ್ಟ ಶಬ್ದವನ್ನೂ ಆಡುತ್ತಲಿಲ್ಲ. ಮಾತನಾಡುವಾಗ 'ಪ್ರಪಂಚವು ಅಸ್ಥಿರವಾದದ್ದು, ಬಾಹ್ಯಾಡಂಬರಕ್ಕೆ ಮರುಳಾಗಿ ಪಾರಮಾರ್ಥಿಕ ದೃಷ್ಟಿಯನ್ನು ಕಳೆದುಕೊಳ್ಳಬೇಡಿರಿ' ಎಂಬುವುದೇ ಅವನ ಎಲ್ಲಾ ಉಪನ್ಯಾಸಗಳ ಸಾರಾಂಶ.

"ವಸಂತ"

ವರ್ತಮಾನ ಸಂಗ್ರಹ.

ಒಳದೇಶ.

ಈ ವಾರ ಮಡಿಕೇರಿ ಗಣಪತಿ ಬೀದಿಯಲ್ಲಿ ಸಿಡುಬಿನಿಂದ ಪುನಹ ಒಂದು ಮರಣ ಉಂಟಾಯಿತು.

ತಾ. 5ರಲ್ಲು ಮಧ್ಯಾಹ್ನ ಮಡಿಕೇರಿ ಟೋಲ್‌ಗೇಟಿನಲ್ಲು ಟೋಲ್ ಕಂಟ್ರಾಕ್ಟರವರ 56 ರೂ. ಕಳವುಮಾಡಲ್ಪಟ್ಟಿತು.

ಮ ಪುಟ್ಟಮಾಡ ಮೇದಪ್ಪನವರು ತಾ 30 ರಲ್ಲು ರಾತ್ರಿ ಶಿವಾಧೀನರಾದರೆಂದು ತಿಳಿಯುತ್ತೇವೆ.

ಮಡಿಕೇರಿ ಕಾನ್ವೆಂಟು ಹೈಸ್ಕೂಲು ಈ ತಾ. 3ರಲ್ಲು ತೆರೆಯಲ್ಪಟ್ಟಿದೆ. ಆದರೆ ಸಿಡುಬಿನ ಪೇಟೆ ಕಡೆಯಿಂದ ಮಕ್ಕಳನ್ನು ಶಾಲೆಗೆ ಹೋಗಲು ಬಿಡುವುದಿಲ್ಲವೆಂದು ತಿಳಿಯುತ್ತೇವೆ.

ಸುಂಟಿಕೊಪ್ಪಲಿನ ಮ. ಗುಂಡುಗುಟ್ಟಿ ಮುಂಜಯ್ಯನವರು ಕೆಲವು ತಿಂಗಳು ಕಾಯಿಲೆಯಾಗಿ ಬೆಂಗಳೂರಿನಲ್ಲಿದ್ದವರು ಕೆಲವು ದಿವಸಗಳ ಹಿಂದೆ ತಮ್ಮ ತೋಟಕ್ಕೆ ಬಂದು ತಾ. 6ನೇ ಪ್ರಾತಃಕಾಲ ಶಿವಾಧೀನರಾದರು.

ಕಳೆದವಾರ ಪೊನ್ನಂಪೇಟೆ ನಾಡು ಕಚ್ಚೇರಿ ಕ್ಲಾರ್ಕರ ಒಂದು ನೂರು ರೂಪಾಯಿ ಕರೆನ್ಸಿ ನೋಟನ್ನು ಕಚ್ಚೇರಿಯ ಮೇಜಿನೊಳಗಿಟ್ಟು ಬೀಗ ಹಾಕದೆ ಬಿಟ್ಟು ಮಾರನೆದಿನ ಹೋಗಿ ನೋಡುವಾಗ್ಯೆ ಆ ನೋಟು ಅಲ್ಲಿಂದ ಕಾಣದೆ ಆಗಿದೆಯೆಂದು ಸುದ್ದಿ.

ಹಾಸೂರು ಗ್ರಾಮದ ಕುಟ್ಟಂಡ ದೇವಯ್ಯನವರ ಉಪಮತ್ತು ಮತ್ತು ಹಸು, ಎಮ್ಮೆ, ಕರುಸೇರಿ ಸುಮಾರು ನಲ್ವತ್ತು ಜಾನುವಾರು ಪರಿಗೆ ರೋಗದಿಂದ ಮೃತಪಟ್ಟಿರುವದಾಗಿ ತಿಳಿಯಬಂದಿದೆ. ಇನ್ನೆಷ್ಟು ಜನರಿಗೆ ಹೀಗೆಯೇ ನಷ್ಟ ಉಂಟಾಗಿದೆಯೋ ತಿಳಿಯದು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಮಳೆಗಾಲದ ರಜೆ ತೀರಿ ಈ ತಾ 10ರಲ್ಲು ತೆರೆಯಬೇಕಾಗಿತ್ತು. ಆದರೆ ಪಟ್ಟಣದಲ್ಲಿ ಸಿಡುಬಿನ ದೆಸೆಯಿಂದ ಶಾಲೆಯು ತಾ 16ರ ವರೆಗೆ ಪುನಹ ಮುಚ್ಚಲ್ಪಟ್ಟಿದೆ ಎಂದೂ ನಂತರವೂ ಮುಚ್ಚಲ್ಪಡುವುದು ಸಿಡುಬಿನ ಹರಡುವಿಕೆಯ ಮೇಲಿದೆಯೆಂದೂ ಆ ಶಾಲೆಯ ಹೆಡ್ಮಾಸ್ಟರವರು ತಿಳಿಸಿರುವರು.

ಈ ವರುಷದ ಮಳೆಗಾಲವು ಏಕೇಪ್ರಕಾರದ್ದೆಂದೇ ಹೇಳಬೇಕಾಗಿದೆ. ಕಳೆದ ಎರಡು ವಾರಗಳಿಂದ (ಕರ್ಕಟ ತಿಂಗಳಲ್ಲಿ!) ದೇಶದಲ್ಲೆಲ್ಲಾ ಆಗಾಗ್ಗೆ ಬಿಸಿಲು ಕಾಯುತ್ತಾ ಮಳೆಯು ಬಹಳ ಕಡಿಮೆಯಾಗಿದೆ. ಜಲ ಎದ್ದಿರುವ ಕಡೆಗಳಲ್ಲಿ ಅದಂಥಕ್ಕೆ ಅನುಕೂಲವಾಗಿದೆ. ಜಲ ಇಳಿದಿ ಇರುವ ಕೆಲವು ಕಡೆಗಳಲ್ಲಿ ನೀರಿಗೆ ತೊಂದರೆಯಾಗಿದೆಯೆಂದು ತಿಳಿಯಬರುತ್ತದೆ.

ಪೊನ್ನಂಪೇಟೆ ನಾಡಿನ ಕೋಣಗೇರಿ, ಚಿಕ್ಕಮುಂಡೂರು ಮೊದಲಾದ ಕೆಲವು ಗ್ರಾಮಗಳಲ್ಲಿ ಇನ್ನೂ ದನಗಳ ಕಾಯಿಲೆಯು ಹಾವಳಿಯು ನಿಂತಿಲ್ಲವೆಂದೂ, ಈ ಕಾಯಿಲೆಗೆ ಬೇಕಾದ ಸೀರಂ ಒದಗಿಸತಕ್ಕವರ ವಿಷಯ ಪೊನ್ನಂಪೇಟೆಯಲ್ಲಿರುವ ಕಪೂರ್ಷರವರು ತೊಂದರ ತೆಗೆದುಕೊಳ್ಳುತ್ತಿದ್ದಾರೆಂದೂ, ಹೀಗೆ ಮೇಲಧಿಕಾರಿಗಳು ಗ್ರಾಮಗಳನ್ನು ಸಂಚರಿಸಿದರೇನೇ ಬಡ ರೈತರ ಕಷ್ಟನಷ್ಟಗಳು ಅವರಿಗೆ ತಿಳಿಯಬರುವುದೆಂದೂ ಒಂದು ವಾರ್ತೆ.

ಕೋರ್ಟುಕಚೇರಿಯ ವರ್ತಮಾನ.

ಕೊಡಗು ಸಬಾರ್ಡಿನೇಟ್ ಜಡ್ಜಿಯರ ಕೋರ್ಟಿನಲ್ಲಿ ದಾಖಲಾಗಿದ್ದ 1922ನೇ ಇಸ್ವಿ ಸ. ಅ. ನಂ 15ರ ಮೊಕದ್ದಮೆಯ ತೀರ್ಪಿನ ಮೇಲೆ ಡಿಸ್ಟ್ರಿಕ್ಟ್ ಜಡ್ಜಿಯರ ಕೋರ್ಟಿನಲ್ಲಿ ಅಪ್ಪೀಲ್ ನಡೆದು ಕಳೆದವಾರ ಫೈಸಲಾಗಿದೆ. ಆರಮಣಮಾಡ ಮನೆಯ ಒಂದು ಭಾಗದವರು ತಮ್ಮ ಭಾಗಕ್ಕೆ 1881ನೇ ಮತ್ತು 1908ನೇ ಇಸವಿಗಳಲ್ಲಿ ಪಾಲಿನಲ್ಲಿ ಬಂದ ಕೆಲವು ಭೂಮಿಯನ್ನು ಕುಟುಂಬದ ಇತರ ಭಾಗದವರಾದ ಪ್ರತಿವಾದಿಯರು, ವಾದಿಯರು ಮೈನರುಗಳಾಗಿದ್ದಾಗ ಅಕ್ರಮ ಸ್ವಾಧೀನಪಡಿಸಿಕೊಂಡಿದ್ದಾರೆ, ಅದನ್ನು ವಾಪಸು ಕೊಡಿಸಿ ಕೊಡಬೇಕೆಂತ ದಾವಾ ಮಾಡಿದರು. ಪ್ರತಿವಾದಿಯರು, ಜೀವನಾಂಶಕ್ಕೆ ಪಾತ್ರರಾದದ್ದು ನಿಜವಲ್ಲವೆಂತಲೂ ಈ ಕುಟುಂಬಸ್ಥರು ಅವರವರ ಅನುಕೂಲಕ್ಕೆ ಸರಿಯಾಗಿ ಬೇರೆಬೇರೆ ಭೂಮಿಯನ್ನು ಅನುಭವಿಸಿಕೊಂಡು ಬಂದಹಂತಲೂ ದಾವಾದಲ್ಲಿ ಕೇಳುವ ಸೊತ್ತು ವಾದಿಯರ ಪಾಲಿಗೆ ಹೋಗಿತ್ತಲ್ಲವೆಂತಲೂ ವಾದಿಸಿದರು. ಸಬಾರ್ಡಿನೇಟ್ ಜಡ್ಜಿಯರು ಈ ದಾವಾವನ್ನು ಸಿವಿಲ್ ಕೋರ್ಟಿನಲ್ಲಿ ಹಿಡಿಯಕೂಡದಾಗಿ ಡಿಸ್‌ಮಿಸ್ ಮಾಡಿದರು. ರೆವಿನ್ಯೂ ರೆಗ್ಯುಲೇಶನ್ನಿನ 145ನೇ ಸೆಕ್ಷನ್ನಿನಲ್ಲಿ ಕೊಡಗರೊಳಗೆ ಪಾಲಿನ ದಾವಾ ಅಥವಾ ಭೂಮಿ ಹಂಚಿಕೆಯ ಯಾವ ಸಂಬಂಧದ ದಾವಾ ಸಹ ಹಿಡಿಯಕೂಡದೆಂತ ಇರುವದರಿಂದ ಈ ದಾವಾವು ಸಹ ಆ ಸೆಕ್ಷನಿಗೆ ಒಳಪಟ್ಟಿದೆಯೆಂತ ಫೈಸಲ್‌ಮಾಡಿದರು. ಜೀವನಾಂಶದ ಪಾಲು ಹಿಂದುಲಾದ ಪಾಲಲ್ಲ. ಆದ್ದರಿಂದ ರೆವಿನ್ಯೂ ರೆಗ್ಯುಲೇಶನಿನ 145ನೇ ಸೆಕ್ಷನ್ ಹಿಂದೂಲಾದ ಮೇಲೆ ಆಗುವ ಪಾಲಿಗೆ ಸಂಬಂಧ ಪಡುತ್ತದೆಯೋ ಹೊರತು ಜೀವನಾಂಶದ ಪಾಲಿಗೆ ಸಂಬಂಧ ಪಡುವದಿಲ್ಲವೆಂತ ಡಿಸ್ಟ್ರಿಕ್ಟ್ ಜಡ್ಜಿಯರು ಫೈಸಲ್‌ಮಾಡಿ ಬಾಕಿ ವಿವಾದಾಂಶಗಳನ್ನು ಫೈಸಲ್‌ಮಾಡಿ ತೀರ್ಪುಕೊಡಲು ಕೆಳಗಿನ ಕೋರ್ಟಿಗೆ ಕಟ್ಟನ್ನು ಕಳುಹಿಸಿದ್ದಾರೆ.

ಕೊಡಗು ಲಾಕ್ಕೆ ಸಂಬಂಧಪಡುವ ಇನ್ನೊಂದು ತೀರ್ಪು ಸಹ ಈ ವಾರದಲ್ಲಿ ಹೊರಬಂದಿದೆ. ಇದರಲ್ಲಿ ಸಹ ಜೀವನಾಂಶದ ಪಾಲನ್ನು ಸಿವಿಲ್ ಕೋರ್ಟಿನವರು ಅಂಗೀಕರಿಸಬೇಕೋ ಬೇಡವೋ ಎಂಬುದು ತೀರ್ಮಾನವಾಗಿದೆ. ಪೊನ್ನಂಪೇಟೆ ನಾಡು ಬೆಕ್ಕೆಸೊಡ್ಲೂರು ಗ್ರಾಮದ ಮಚ್ಚಮಾಡ ಮನೆಯ ಒಂದು ಭಾಗದವರು ಇತರರ ಮೇಲೆ ಕುಟುಂಬದ ಕೆಲವು ಸೊತ್ತುಗಳ ಬಟಸ್ವಾಧೀನಕ್ಕೆ ಸಬಾರ್ಡಿನೇಟ್ ಜಡ್ಜಿಯರ ಕೋರ್ಟಿನಲ್ಲಿ ಸ ಅ. ನಂ. 142/1923ರ ದಾವಾ ತಂದರು. ಕುಟುಂಬದಲ್ಲಿ ಜೀವನಾಂಶಕ್ಕೆ 80 ವರ್ಷಗಳ ಕೆಳಗೇನೇ ಪಾಲಾಗಿತ್ತೆಂತಲೂ ರೆವಿನ್ಯೂ ರೆಗ್ಯುಲೇಶನಿನ 145ನೇ ಸೆಕ್ಷನ್ ಮೇರೆ ಈ ದಾವಾ ಹಿಡಿಯ ಕೂಡದೆಂತಲೂ ಪ್ರತಿವಾದಿಯರು ವಾದಿಸಿದರು. ಸಬಾರ್ಡಿನೇಟ್ ಜಡ್ಜಿಯರು ತಮ್ಮ ಜಡ್ಜಿಮೆಂಟಿನಲ್ಲಿ ಬರೆದಿರುವದೇನೆಂದರೆ—1858ನೇ ಇಸ್ವಿಯ ವರೆಗೆ ಕೊಡಗು ಕುಟುಂಬ ಸೊತ್ತುಗಳು ಪಾಲಾಗುತ್ತಿದ್ದುವು. ಆಗ ಕುಟುಂಬದ ಸೊತ್ತು ಹೊರಗೆ ಹೋಗುವುದನ್ನು ಕಂಡು ಕೊಡಗರು ಸರಕಾರದವರನ್ನು ಕೇಳಿಕೊಂಡ ಮೇರೆ ಸರಕಾರದವರು ಪಾಲನ್ನು ಪ್ರತಿಬಂಧಪಡಿಸಿದರು. ಆದದರಿಂದ ಜೀವ

ನಾಂಶದ ಪಾಲು ಕೂಡಿಗೆ ಬಂತು. ಸೊತ್ತನ್ನು ಪರಾಧೀನ ಮಾಡ ಕೂಡದೆಂಬಲಾ ತಡೆಯಾಯಿತು. ತಮ್ಮ ತಮ್ಮ ಅನುಕೂಲಕ್ಕೆ ಸರಿಯಾಗಿ ಕುಟುಂಬದವರು ಜೀವನಾಂಶದ ಪಾಲು ಮಾಡಿಕೊಂಡನಂತರ ಆಯಾ ಭಾಗದವರ ಸೊತ್ತಿಗೆ ಇತರರು ಪ್ರವೇಶಿಸಿದರೆ ಕ್ರಿಮಿನಲ್ ಕೋರ್ಟಿನಲ್ಲಿ ಶಿಕ್ಷೆಯಾಗುತ್ತದೆ. ಹೀಗಿರುವಾಗ ಕುಟುಂಬದ ಒಬ್ಬನು ಒಟ್ಟು ಸೊತ್ತಿನ ಬಾಟಿ ಸ್ವಾಧೀನ ಕೇಳುವದು ಹೇಗೆ? ಹೀಗೆ ಸ್ವಾಧೀನ ಕೊಡುವದಾದರೆ ಕೊಡಗು ಕುಟುಂಬಗಳೆಲ್ಲಾ ಅಲ್ಲೋಲಕಲ್ಲೋಲವಾದೀತು. ನಿತ್ಯವೂ ಜಗಳವಿದ್ದೀತು. ಜೀವನಾಂಶಕ್ಕೆ ಈ ಪಾಲಾಗಿ 80 ವರ್ಷವಾಯಿತೆಂತ ಕಾಣುವಾತು ಇದೆ. ಆದ್ದರಿಂದ ದಾವಾ ಡಿಸ್‌ಮಿಸ್ ಮಾಡುತ್ತೇನೆಂತ ಬರೆದರು. ಅಪ್ಪೀಲ್ ಜಡ್ಜಿಮೆಂಟಿನಲ್ಲಿ ಬರೆದಿರುವದೇನಂದರೆ—ಜೀವನಾಂಶಕ್ಕೆ ಪಾಲಾಗಿತ್ತೋ ಇಲ್ಲವೋ ಎಂತಲೂ ಮತ್ತು ಕುಟುಂಬದ ಒಂದು ಕುತ್ತಿ ನಾಶವಾಗಿರುವದರಿಂದ ಆ ಸೊತ್ತು ಪಾಲಾಗಬೇಕೋ ಇಲ್ಲವೋ ಎಂತಲೂ ಇಶ್ಯೂ ಮಾಡಲಿಲ್ಲ, ಆದ್ದರಿಂದ ನ್ಯಾಯವಾದ ತೀರ್ಮಾನವಾಗಲಿಲ್ಲವೆಂದು ಅಪ್ಪೀಲ್ ವಾದಿಗಳು ವಾದಿಸಿದರು. ಒಂದು ಕುತ್ತಿಯು ನಾಶವಾಗಿ ಅವರ ಸೊತ್ತು ಪ್ರತಿವಾದಿಯರಲ್ಲಿ ಇದೆ ಎಂತ ದಾವಾದಲ್ಲಿ ಹೇಳದ್ದರಿಂದ ಈಗ ಆ ವಿಷಯವನ್ನು ವಾದಿಸಲು ಬರುವುದಿಲ್ಲ. ಜೀವನಾಂಶದ ಪಾಲಾಗಿತ್ತೋ ಇಲ್ಲವೋ ಎಂತ ಕೆಳಗಿನ ಕೋರ್ಟಿನಲ್ಲಿ ಇಶ್ಯೂವಿನ ಮೇಲೆ ಉಭಯ ಕಡೆಯವರೂ ರುಜುವಾತು ಕೊಟ್ಟಿರುವದರಿಂದ ಕೆಳಗಿನ ಕೋರ್ಟಿನ ನ್ಯಾಯವನ್ನು ರದ್ದು ಮಾಡುವದಿಲ್ಲ. ಆದರೂ ಇಂಥಾ ಕೇಸುಗಳಲ್ಲಿ ಕೋರ್ಟುಗಳು ಜೀವನಾಂಶದ ಪಾಲು ಆಗಿದೆಯೋ ಇಲ್ಲವೋ ಎಂಬದನ್ನು ಕಂಡುಹಿಡಿಯಬೇಕು—ಹೀಗೆಂತ ಹೇಳಿ ಅಪ್ಪೀಲನ್ನು ಖರ್ಚಿನೊಡನೆ ತಳ್ಳಿದ್ದಾರೆ.

—

ಹಿಂದೂದೇಶ.

ಸರಕಾರದವರು ನೇಮಿಸಿರುವ [illegible] ಕಮಿಟಿಯಲ್ಲಿ ಪಂಡಿತ ಮೋತಿಲಾಲ್ ನೆಹರುರವರು ಇರಲು ಒಪ್ಪಿದರು.

ಧಾರವಾಡದ ಕರ್ಮವೀರ ಪತ್ರಿಕೆಯ ಸಂಪಾದಕರಾಗಿದ್ದ ಪ್ರೊಫೆಸರ್ ದಿವಾಕರರು ತಾ 3ರಲ್ಲು ಜೈಲಿನಿಂದ ಬಿಡುಗಡೆಯಾಗಿರುವರು.

ಆಗೋಸ್ತು ತಾ 1ರಲ್ಲು ಲೋಕಮಾನ್ಯ ತಿಲಕರವರ ೫ನೇ ಮರಣ ವರ್ಧಂತಿಯನ್ನು ಹಿಂದೂದೇಶದ ಅನೇಕ ಮುಖ್ಯ ಪಟ್ಟಣಗಳಲ್ಲಿ ಆಚರಿಸಿದರು. ಪೂನಾದಲ್ಲಿ ಅವರ ಸ್ಮಾರಕ ಮಂದಿರ ಒಂದು ತೆರೆಯಲಾಯಿತು.

ಲಾರ್ಡ್ ಬರ್ಕನ್‌ಹೆಡ್ಡರವರ ಭಾಷಣಕ್ಕೆ ಜವಾಬಾಗಿ ಮಾಡದವರು ಒಂದು ಸ್ವರಾಜ್ಯಪಾರ್ಟಿಯನ್ನು ಸ್ಥಾಪಿಸಿರುವ [illegible] ವಿ. ಯು. ಟೊಕ್ಕ ಯಂ ಎಲ್ ಎ ಯವರು ಪಂಡಿತ ಮೋತಿಲಾಲ್ ನೆಹರುರವರಿಗೆ ತಂತೀ ಕಳುಹಿಸಿರುವರು.

ನೀಲಗಿರಿ ಮತ್ತು ವಯನಾಡಿನಲ್ಲಿ ಮಳೆಯು ಬಹಳಜೋರಾಗಿದ್ದರೂ ಕೊಯಮುತ್ತೂರು ಜಿಲ್ಲೆಯ ಎರನಾಡಿನಲ್ಲಿ ಮಳೆಯಿಲ್ಲದೆ ಕುಡಿಯಲಿಕ್ಕೆ ನೀರಿಗೆ ಬಹಳ ಕಷ್ಟವಾಗಿದೆ. ದುಡ್ಡು ಕೊಟ್ಟರೂ ಸಿಕ್ಕುವದಿಲ್ಲವಂತೆ. ಕಾಡು ಮರದ ಎಲೆಗಳನ್ನು ದನಗಳಿಗೆ ಹಾಕುತ್ತಿರುವರು. ಅವೂ ಒಣಗಿ ಹೋಗಿವೆ.

ಬಂಗಾಳ ಲೆಜಿಸ್ಲೇಟಿವ್ ಕೌನ್ಸಿಲಿನ ಅಧ್ಯಕ್ಷರನ್ನು ಬರುವ ಮೀಟಿಂಗಿನಲ್ಲಿ ಚುನಾಯಿಸುವರು. ಆ ಸ್ಥಾನಕ್ಕೆ ಸ್ವರಾಜ್ಯ ಪಂಗಡದ ಮೂವರೂ, ಇಂಡಿಪೆಂಡೆಂಟ್ ಪಕ್ಷದ ಇಬ್ಬರು, ಮುಸಲ್ಮಾನರ ಪಂಗಡದ ಒಬ್ಬರು ಮತ್ತು ಆಂಗ್ಲೋ ಇಂಡಿಯನ್ ಪಕ್ಷದ ಒಬ್ಬರೂ ಉಮೇದ್ವಾರರಾಗಿ ನಿಲ್ಲುವರಂತೆ.

ಬರುವ ಲೆಜಿಸ್ಲೇಟಿವ್ ಎಸೆಂಬ್ಲಿಯ ಮೀಟಿಂಗಿನಲ್ಲಿ ಪೋಸ್ಟ್ ಕಾರ್ಡುಗಳಿಗೆ ಮುಂದೆ ಇದ್ದಂತೆ ಮೂರು ಕಾಸು ಆಗಬೇಕೆಂದೂ ಎಲ್ಲಾ ರೈಲ್ವೆಗಳಲ್ಲಿ ಮೂರನೆ ತರಗತಿಯ ಚಾರ್ಜು ಕಮ್ಮಿಮಾಡಬೇಕೆಂದೂ, ಧರ್ಮ ಮತ್ತು ಅವಶ್ಯಕ ಕಾರಣವಿರತು ಕರೆಯುವ ದನಗಳನ್ನು ಕೊಲ್ಲುವುದನ್ನು ನಿಲ್ಲಿಸಬೇಕೆಂದೂ ಠರಾವುಗಳು ಚರ್ಚೆಗೆ ಬರಲಿಕ್ಕಿವೆ.

ಇಂಗ್ಲೆಂಡಿಗೆ ಹೋಗಿದ್ದ ವೈಸರಾಯಿ ಲಾರ್ಡ್ ರೀಡಿಂಗರವರು ತಾ. 6 ರಲ್ಲಿ ಬೊಂಬಾಯಿಯಲ್ಲಿ ಬಂದು ಇಳಿದು ಅಲ್ಲಿಂದ ಸ್ಪೆಶ್ಯಲ್ ಟ್ರೈನಿನಿಂದ ಡಿಲ್ಲಿಗೆ ಹೋದರು. ತಾ 2[illegible] ರಂದು ಪ್ರಾರಂಭವಾಗುವ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಇವರು ಹಿಂದೂದೇಶದ ರಾಜಕೀಯ ಸುಧಾರಣೆಯ ವಿಷಯ ಒಂದು ಮಹತ್ವದ ಭಾಷಣ ಮಾಡಲಿಕ್ಕಿರುವರೆಂದು ಸುದ್ದಿ.

ಈ ವರ್ಷ ಮೊಹರಂ ಹಬ್ಬವು ಹಿಂದೂದೇಶದ ಅನೇಕ ಸ್ಥಳಗಳಲ್ಲಿ ಏನೊಂದು ಗಲಾಟೆಯಿಲ್ಲದೆ ನಡೆಯಿತು. ಆದರೆ [illegible]ಪೇಟೆಯಲ್ಲಿ ಮುಸಲ್ಮಾನರ ಒಂದು ಮೆರವಣಿಗೆಯನ್ನು ನೂರು ಒಂದು ಸಾವಿರ ಹಳ್ಳಿಯವರು ಕೈಯಲ್ಲಿ ದೊಣ್ಣೆ [illegible]ಗಳನ್ನು ಹಿಡಿದುಕೊಂಡು ಸುಮಾರು ಮೂರು ಗಂಟೆಗೆ ತಡೆದು ಬಿಟ್ಟರು. ಪೋಲೀಸಿನವರು [illegible] ಹಳ್ಳಿಗರ ಪೈಕಿ ಸುಮಾರು 300 ಜನರು ಸೆರೆಯಲ್ಪಟ್ಟಿರುವರು.

ಜುಲೈ ತಾ 3[illegible]ರಲ್ಲು ನಾಗಪುರದಲ್ಲಿ ಮಧ್ಯಪ್ರಾಂತ್ಯ ಸುಧಾರಣೆಗಳನ್ನು ಕಾಪಾಡಲಿಕ್ಕಾಗಿ ಒಂದು [illegible] ಕಾನ್‌ಫರೆನ್ಸು ನಡೆಯಿತು. ಇದನ್ನು ಏರ್ಪಡಿಸಿದವರು [illegible]ಲ್ ಪಕ್ಷದವರು. ಸ್ವರಾಜ್ಯಪಕ್ಷದವರು ಇದಕ್ಕೆ ವಿರೋಧಿಸಿದ್ದರಿಂದ ಮೀಟಿಂಗಿನಲ್ಲಿ ತುಂಬಾ ಗಲಭೆಯುಂಟಾಯಿತು. ಮೀಟಿಂಗನ್ನು ಮುಂದರಿಸುವ ಪ್ರಯತ್ನವು ಜಯಿಸಲಿಲ್ಲ. ಸರ್ ಬಿ ಯಂ ಚಿಟ್ನಾವಿಸ್‌ರವರು ಅಧ್ಯಕ್ಷರಾಗಿದ್ದರು. ಎಲ್ಲಾ ರಾಜಕೀಯ ಪಾರ್ಟಿಗಳು ಕಾಂಗ್ರೆಸ್ಸಿಗೆ ಸೇರಬೇಕೆಂತಲೂ, ಸ್ಟೇಟ್ ಸೆಕ್ರೆಟರಿಯವರ ಭಾಷಣವು ಅತೃಪ್ತಿಕರವಾದರೂ ಮಂತ್ರಿತ್ವವನ್ನು ಕೈಕೊಂಡು ಅವಶ್ಯವಿದ್ದರೆ ಮಂತ್ರಿಮಂಡಲಿಯಲ್ಲು ಸಹಕರಿಸದೆ ಇರಬಹುದೆಂತಲೂ ಠರಾವುಗಳನ್ನು ಪಾಸುಮಾಡಿದರು.

ಕೋಟಾಸಂಸ್ಥಾನದಲ್ಲಿ ಒಂದು ಊಟದ ಭಾಷಣದಲ್ಲಿ ವೈಸರಾಯರು ಹೀಗೆಂತ ಹೇಳಿದ್ದಾರೆ. "ಪ್ರಜೆಗಳ ಕ್ಷೇಮ ಮತ್ತು ಸುಖದಿಂದ ಸರಕಾರದ ಗುಣವನ್ನು ಕಂಡುಹಿಡಿಯಬೇಕಾಗಿದೆ. ನಾವು ಇಂಗ್ಲೆಂಡಿನಿಂದ ಅನೇಕ ಶತಮಾನಗಳಿಂದ ಬೆಳೆದ ಪ್ರಜಾಪ್ರತಿನಿಧಿ ಸರಕಾರವನ್ನು ಹಿಂದೂಸ್ಥಾನದಲ್ಲಿ ಬೆಳೆಸಲು ಪ್ರಯತ್ನಿಸುತ್ತಿದ್ದೇವೆ. ಆದರೆ ಪ್ರಜಾಪ್ರತಿನಿಧಿ ಸರಕಾರವು ಹಿಂದೂಸ್ಥಾನಕ್ಕೆ ಸರಿಯಾದುದರಿಂದ ನಮ್ಮ ಪ್ರಯತ್ನವು ಬೇಗ ಸಫಲವಾಗುವದಿಲ್ಲ. ಹಿಂದೂಸ್ಥಾನವು ಬ್ರಿಟಿಷರ ಅಧೀನಕ್ಕೆ ಬಂದದ್ದರಿಂದ ಹಿಂದೂಸ್ಥಾನಕ್ಕೆ ಮಾತ್ರ ಪ್ರಯೋಜನವಾಯಿತೆಂತ ಇಂಗ್ಲಿಷರು, ಇಂಗ್ಲೆಂಡಿಗೆ ಮಾತ್ರ ಪ್ರಯೋಜನವಾಯಿತೆಂತ ಹಿಂದೂದೇಶೀಯರು ಹೇಳುತ್ತಾರೆ. ಆದರೆ ಈ ಎರಡು ದೇಶಗಳ ಸಂಬಂಧವನ್ನು ದೇವರು ಎರಡು ದೇಶಗಳ ಪ್ರಯೋಜನಕ್ಕಾಗಿಯೇ ಉಂಟುಮಾಡಿದ್ದಾನೆಂತ ನಾನು ನಂಬುತ್ತೇನೆ."

ವಿದೇಶ.

ಯುರೋಪಿನ ಪತ್ರಿಕೆಗಳಲ್ಲಿ [illegible] ಮಂತ್ರಿಮಂಡಲಿಯು ರಾಜೀನಾಮೆ ಕೊಟ್ಟಿದೆ.

ಫಸ್ಟ್ ಕ್ಲಾಸ್ ಸಿವಿಲ್ ಸರ್ವಿಸ್ ಪರೀಕ್ಷೆಗೆ ಈ ವರ್ಷ ಇಂಗ್ಲೆಂಡಿನಲ್ಲಿ 14 ಯುವತಿಯರು ಕುಳಿತಿರುವರು. [illegible] ಈ ಪರೀಕ್ಷೆಗೆ ಕುಳಿತದ್ದು ಇದೇ [illegible].

[illegible] ಗಾಡಿಗಳು ಮಾಡುವ ಕಾರ್ಖಾನೆಯು [illegible] 1923ರಲ್ಲಿ 30 ಸಾವಿರ [illegible] 1924ರಲ್ಲಿ ಈ ಸಂಖ್ಯೆಯು 60 ಸಾವಿರಕ್ಕೆ ಏರಿತು!

ಪಟಿಯಾಲದ ಮಹಾರಾಜರವರು ಈಗ ಲಂಡನ್ನಿನ [illegible] ಹೋಟೆಲಿನಲ್ಲಿ ಇರುವರು. ಹೋಟೆಲಿನ ಬಾಡಿಗೆಗೆ ತೆಗೆದ ಕೋಣೆಗಳ [illegible] ಅಲ್ಲಿಯ ಪತ್ರಿಕೆಗಳು [illegible] ಕಟ್ಟಿರುವವು.

ರಿಫ್ ಯುದ್ಧದಲ್ಲಿ [illegible] ಸೈನಿಕರಿಗೆ [illegible] ಜರ್ಮನಿಯಿಂದ ವಿಮಾನಗಳ ಸಹಾಯವು ದೊರಕಿದೆಯೆಂದ ವರ್ತಮಾನ.

ಚೈನಾದ ಅಮೋಯಿ [illegible] ಸಂಘವು ಪರದೇಶೀಯರಿಗೆ ಸಹಾಯಮಾಡಿದ ಚೈನಿಯರನ್ನು [illegible] ಗಂಡು ಹೆಂಡರು [illegible] ಪರದೇಶದ ಸಾಮಾನುಗಳನ್ನು ಪೂರ್ತಿಯಾಗಿ ಬಹಿಷ್ಕರಿಸುತ್ತಿರುವರು.

ಇಂಡಿಯಾದಲ್ಲಿ ಯೂರೋಪಿಯನ್ ಶಾಲೆಗಳನ್ನು ನಡಿಸಲು ಇಂಡಿಯನ್ ಶಾಲೆಗಳನ್ನು ನಡಿಸುವದರ ಎರಡರಷ್ಟು ಖರ್ಚಾಗುವುದರಿಂದ ಆಂಗ್ಲೋ ಇಂಡಿಯನರ [illegible] ಸರಕಾರದವರೂ [illegible] ಮಾಡಬೇಕೆಂದು ಲಂಡನ್ನಿನ ಆಂಗ್ಲೋ ಇಂಡಿಯನ್ ಸಂಘದವರು ಪ್ರಕಟಿಸಿರುವರು.

ನವನಗರದ ಮಹಾರಾಜ ಜಾಮ್ ಸಾಹೇಬರು ಲಂಡನ್ನಿನಲ್ಲಿ ರಾತ್ರಿ ಒಂದು ನಾಟಕಶಾಲೆಯಿಂದ ಹೊರಗೆ ಬಂದು ತಮ್ಮ ಮೋಟಾರು ಕಾರನ್ನು ಹತ್ತುತ್ತಿರುವಾಗ ಅವರ ಕೈಚೀಲವನ್ನು ಯಾರೋ ಕದ್ದಿದ್ದರು. ಅದರಲ್ಲಿ ಅವರ ತಂದೆ ತಾಯಿಗಳ ಫೋಟೊಗಳೂ, 500 ಪೌನುಗಳೂ ಬೇರೆ ಕೆಲವು ಕಾಗದಪತ್ರಗಳೂ ಇದ್ದವಂತೆ. ಅವರ ತಂದೆತಾಯಿಗಳ ಇದ್ದ ಒಂದೇ ಫೋಟೊವು ಕಳವಾದಕಾರಣ ಅದನ್ನು ತಂದುಕೊಡುವವರಿಗೆ ದೊಡ್ಡ ಬಹುಮಾನವನ್ನು ಕೊಡುವೆವೆಂದು ಹೇಳಿರುವರು.

FOR SALE.

Property of Mr H S Muller's
One 4.5 H P Beardmore Precision single cylinder motor cycle and sidecar
For particulars apply to—

W. G. L. PARSONS
DALQUARREN
CHETTALLI, P. O.
COORG

4—4

ಕುಮಾರಿಯು ಕುಮಾರನಾದದ್ದು!

([illegible])

ಈ ಪತ್ರಿಕೆಯಲ್ಲಿ ಎರಡು ವಾರಗಳ ಹಿಂದೆ ಪ್ರಕಟವಾದ ಈ ಆಶ್ಚರ್ಯಕರವಾದ ವರ್ತಮಾನದ ವಿಷಯ ಕಾನ್‌ಸ್ಟಾಂಟಿನೋಪಲಿನ ಪತ್ರಿಕೆಯಲ್ಲೊಂದರಲ್ಲಿ ಜೂನ ತಾ 15ರಲ್ಲು ಬರೆದಿರುವುದೇನಂದರೆ —

ಸ್ತ್ರೀ ಮತ್ತು ಪುರುಷರ ಜನನೇಂದ್ರಿಯಗಳು ಮೂಲರೂಪದಲ್ಲಿದ್ದು, ಕೆಲವು ಸಂದರ್ಭಗಳಲ್ಲಿ ಬೆಳೆಯುತ್ತಾ ಬಂದ ಹಾಗೆ ಪುರುಷ ಇಂದ್ರಿಯವು ಪರಿಪೂರ್ತಿಯಾಗುತ್ತದೆಂಥ ಮನುಷ್ಯಜನ್ಮಗಳಿದ್ದವೆಂಬುದನ್ನು ಇಸ್ಲಾಮಿನ ಉನ್ನತಿಯ ಸಮಯದಲ್ಲಿ ಮಹಮ್ಮದೀಯ ವೈದ್ಯರು ಕಂಡು ಹಿಡಿದಿದ್ದರೆಂದು ನಾವು ಓದುತ್ತಿದ್ದೆವು. ಅಂಥವರು ಪೂರ್ವಕಾಲದ ಆ ಪ್ರವೀಣ ಶಾಸ್ತ್ರಜ್ಞರಿಂದ "ಖುನ್ಸೆ ಮುಷ್ಕಿಲ್" ಎಂದು ಕರೆಯಲ್ಪಡುತ್ತಿದ್ದರು. ಇಂಥಾ ವಿಕಾರದ ಮತ್ತು ಆಶ್ಚರ್ಯಕರವಾದ ಜನ್ಮಗಳ ವಿಷಯ ನನಗೆ ಯೋಚಿಸಲೇ ಸಾಧ್ಯವಾಗಲಿಲ್ಲ ಮತ್ತು ಇಂಥಾ ವಿಷಯವು ಈಗಿನ ಕಾಲದಲ್ಲಿ ನನ್ನ ತಿಳುವಳಿಕೆಗೆ ಬರಲಿಲ್ಲ. ಆದರೆ ನಿನ್ನೆಯ ಸಂಗತಿಯು ಪೂರ್ವದ ಆ [illegible] ಅಭಿಪ್ರಾಯದ ನಿಜತ್ವವನ್ನು ದೃಢೀಕರಿಸಿತು.

ತಾನು [illegible] ಗಂಡಾಗಲು ಅದನಾ ಹೆಂಗಸಾಗಿಯೋ ತಿಳಿಸಲ್ಪಡಲೊ! [illegible] ನಾಯಿಮಾ ಹಾನಂ ಎಂಬವಳು ತಾ 13ನೇ ರಾತ್ರಿ [illegible] 21 ವರ್ಷ [illegible] ಸಾಯಿಮಾ ಹಾನುಮು [illegible] ಪುರುಷ ಇಂದ್ರಿಯವು [illegible] 11 ವರ್ಷಗಳಿಂದಲೇ [illegible] ತಾನು [illegible] ಹೆಂಗಸೆಂಬವನ್ನು ಅವಳು [illegible] ಒಪ್ಪಲಿಲ್ಲ [illegible] ಕೆಲವು [illegible] ಅವಳ ಗಂಡ [illegible] ಅವರನ್ನು ತಿರಸ್ಕರಿಸಿದಳು. ಗಂಡಸಾಗಬೇಕೆಂದು ತನ್ನಲ್ಲಿ ಉಂಟಾಗುತ್ತಿದ್ದ [illegible] ಹೊರಬೀಳುವ ದಿನವು ಕಡೆಗೆ ಬಂತೇ ಬಂತು. ಅವಳ ಬಾಲ್ಯದಿಂದಲೇ ಅವಳಿಗೆ ಹುಡುಗರೊಂದಿಗೆ ಆಟ [illegible] ಗಂಡಸರಂತೆ ನಡೆಯುವುದೂ [illegible] ಮೀಸೆಯೂ ಗಡ್ಡವೂ ಬೆಳೆಯುತ್ತಾ [illegible] ಅವಳಿಗೆ ಬಹಳ ತೊಂದರೆಯಾಗುತ್ತಿತ್ತು. ಅವಳು ಯಾವಾಗಲೂ [illegible] ತುಂಬಾ ಮುಖದ [illegible] ಹಾಕಿ ಸ್ತ್ರೀಯ ಮುಖದಂತೆ ತೋರಿಸಿಕೊಳ್ಳುತ್ತಿದ್ದಳು. ಆದರೆ ಗಂಡಸರಂತೆ ಬದಲಾದ ಆ ಸ್ವರವನ್ನು ಬದಲಾಯಿಸುವುದು ಅವಳಿಗೆ ಹೇಗೆ ಸಾಧ್ಯ? [illegible] ಅವಳು [illegible] ತನ್ನ [illegible] ಒಂದು ತನ್ನ ಕುಟುಂಬಕ್ಕೆ ಈ ವಿಷಯವನ್ನು ತಿಳಿಸಲು ಅಲ್ಲಿದ್ದ ಎಲ್ಲರೂ [illegible]ದರು! ಒಬ್ಬ ಡಾಕ್ಟರರಿಂದ ಪರೀಕ್ಷಿಸುವಂತೆ ಅವಳ ತಾಯಿಯು ಅವಳಿಗೆ ಹೇಳಿದಳು. ಮೊದಲು ಅವಳು [illegible] ಇದ್ದಾಗ ಡಾಕ್ಟರರಿಂದ ಪರೀಕ್ಷಿಸಿದ್ದರು. ಆದರೆ ಅದು [illegible] ಎಂದು ಹೇಳಿದ್ದರು. ಅವಳ ಕುಟುಂಬದ ವೈದ್ಯನು ಪರೀಕ್ಷಿಸಿ ಅವಳು ಒಬ್ಬ ಕುಮಾರನಾಗಿರುವಳೆಂದು ಸಿದ್ಧಾಂತ[illegible]. ಆದರೆ ಇದು ಸಾಲದು. ಅವನು ಹೇಳಿದಂತೆ ಹಾಗಿರುವ ಸಾಕ್ಷಿಯನ್ನು [illegible] ಪವಿತ್ರವಾದ ಸಮಾಜಕ್ಕೆ ಸೇರುವ ಮೊದಲು, ಅಧಿಕಾರ ಹೊಂದಿದ ಮೆಡಿಕಲ್ ಕಮಿಷನಿನಿಂದ ತಾ 13ರ ಬೆಳಿಗ್ಗೆ ಪರೀಕ್ಷಿಸಲ್ಪಡತಕ್ಕದ್ದಾಗಿತ್ತು. ಅದುದರಿಂದಲೇ ಅವರಿಗೆ ಇದು ನಿದ್ರಾಭಂಗದ ರಾತ್ರಿ!

ಅವಳನ್ನು ಚೆನ್ನಾಗಿ ಪರೀಕ್ಷಿಸಿದರು. ನಾಯಿಮಾ ಹಾನುಂ ಎಂಬವಳು ನಾಯಿಮಾ ಬೆ ಎಂಬವನಾಗಿ ಆಸ್ಪತ್ರೆಯಿಂದ ಹೊರಗೆ ಬಂದಳು. ಗಂಡಸರ ಉಡುಪನ್ನು ಧರಿಸಿಕೊಂಡು ತನ್ನ ಜನ್ಮಕಾಲದಲ್ಲಿ ಪ್ರಥಮತಃ [illegible] ಪ್ರಾರ್ಥನೆಗೆ ಹೋದಳು. ಈಗ ನಾಯಿಮಾ ಬೆ ಯು ವರ್ತಮಾನ ಪತ್ರಿಕೆಗಳಿಗೆ ತನ್ನ ಜೀವಚರಿತ್ರೆಯನ್ನು ಹೇಳಿಕೊಡುತ್ತಿರುವನು. ಇದನ್ನು ಪ್ರಕಟಿಸುವ ಪತ್ರಿಕೆಗಳು [illegible] ಸಂಗತಿಯಿಂದ, ಕೆಲವು ವರ್ಷಗಳ [illegible] ಪುರುಷ [illegible] ಹೇಳುವರು.

[illegible] ಗಂಡಿಗೆ [illegible] ಗುವಂತೆ ಗಂಡಸರ [illegible] ಸ್ತ್ರೀಯರ ಸ್ವಭಾವವನ್ನು, ಗುಣಗಳನ್ನು ಹೇಳಿಕೊಡಬೇಕೆಂದು [illegible] ಅದನ್ನು ಕೇಳುತ್ತಿರುವರು. ಅಲ್ಲಿಯ [illegible] ಯೌವನಸ್ಥರ ತಕ್ಕ ಸ್ವಭಾವವಿಲ್ಲದೆ ಇರುವ ಎಷ್ಟು ಮನುಷ್ಯರನ್ನು ನೋಡಲು ಕುಮಾರಿ

ಯರು ಅವನ ಬಳಿ ತುಂಬುತ್ತಿರುವರು ತನ್ನನ್ನು ಮದುವೆ ಮಾಡಿಕೊಳ್ಳಬೇಕೆಂದು ಅನೇಕರು ಅವನಿಗೆ ಸೂಚಿಸುತ್ತಿರುವರು ಅಂಥಾ ಹುಡಿಗಿಯೊಬ್ಬಳ ಪತ್ರವು ಪ್ರಕಟವಾಗಿಯೇ ಬಿಟ್ಟಿದೆ. ತನ್ನನ್ನು ಪ್ರೀತಿಸದೆ ತನ್ನ ಐಶ್ವರ್ಯವನ್ನು ಪ್ರೀತಿಸುತ್ತಿರುವ ಯುವಕರಲ್ಲಿ ಬೇಸರಗೊಂಡಿರುವ, ರೂಪಿಗಳೂ, ಐಶ್ವರ್ಯವಂತಳೂ, ವಿದ್ಯಾವಂತೆಯೂ, ಆಗಿರುವ ಮತ್ತು ಮೇಲ್ತರಗತಿಯ ಒಂದು ಕುಟುಂಬದ ಒಬ್ಬಳೇ ಮಗಳಾದ ಕನ್ಯೆಯೊಬ್ಬಳು ಇವನನ್ನು ಮದುವೆಯಾಗಲು ಇಚ್ಛಿಸುತ್ತೇನೆಂದು ಸೂಚಿಸಿರುವಳು ಒಳ್ಳೇ ಹುಡುಗಿಯರು ದೊರೆಯುವುದು ಕಷ್ಟವಾದ ಈ ಕಾಲದಲ್ಲಿ ನಾಯಿಮರಿಯು ಅದೃಷ್ಟವಂತನೇ ಸರಿ

ನಾಯಿಮರಿಯು ಇಲ್ಲ ಸ್ತ್ರೀಪುರುಷರಿಗುಂಟಾಗುವ ಜಗಳಗಳಲ್ಲಿ ರಾಜಿಗಾರನಾಗುವನೆಂದು ಊಹಿಸಲಾಗಿದೆ ಈಗಾಗಲೇ ಅವನು ಎರಡುಜಾತಿಯವರಿಗೂ ಬುದ್ಧಿವಾದವನ್ನು ಹೇಳಿರುವನು ತನ್ನ ನಿಸ್ಸೀಯ ಸಹೋದ್ಯೋಗಿಗೆ—ಗಂಡನೊಂದಿಗೆ ಜಗಳವಾಡುಚುಕಬೇಡಿ ಗಂಡನೊಂದಿಗೆ ಜಗಳವಾಡದಿರುವುದು ಬಹಳ ಕಷ್ಟವೆಂದು ನನಗೆ ಗೊತ್ತಿದೆ ತನ್ನ ನಾಯಿಯ ಸಹೋದರರಿಗೆ ಸ್ನಾನ ಮಾಡುವುದನ್ನು ವಾಲಿಸ ಮಾಡಿ ಅವರ ಜೀವನದಲ್ಲಿ ಪಾತಿವ್ರತ್ಯವನ್ನು ಕಲಿಸಬೇಡಿ.

ಪತ್ರವ್ಯವಹಾರ.

ಬಾತ್ಮಿದಾರರ ಬರುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ ಸಂ

ವಂದನಾ ಪೂರ್ವಕ ತಿರಸ್ಕರಿಸಲ್ಪಟ್ಟ ಬಾತ್ಮಿಗಳು —

1 ಮೆ ಚಿಂಡುಳೀರ ಪೂವೈಯ್ಯ

2 "ಲೋಕಪಾವನದ ತಪೋದಯ"

3 ವೈಚಿತ್ರ್ಯ ಪ್ರಹಸನ

4 ಕುತೂಹಲಿ 5 ಕೈಬಲಿರ ತಮ್ಮಯ್ಯನವರ ಮರಣದ ವಿಷಯ ರುಜುವಿಲ್ಲದ ಬಾತ್ಮಿ 6 ಎಮ್ಮೆ

7 ಶ್ರೀರಾಕೃಷ್ಣ ಹಾಸ್ಟೆಲು 8 ಸಿ ಮುತ್ತಣ್ಣ ಗೌಡರಪದ್ಯ

ಹಳೇವಿದ್ಯಾರ್ಥಿಯರ ತ್ರೈಮಾಸಿಕ

ಜಯ್ಯಾ,

ಕಳೆದ ತಿಂಗಳೊಳಗಾಗಿ ತ್ರೈಮಾಸಿಕವು ಪ್ರಕಟಿಸಲ್ಪಡುವುದೆಂದು ಮೇನೇಜರವರು ವಾಗ್ದಾನಮಾಡಿದರು ಆದರೆ ಹಾಲಿ ತಿಂಗಳು ಆಗಸ್ಟು ತಿಂಗಳು—ಈತಿಂಗಳ ಅಂತ್ಯದೊಳಗಾದರೂ ಅದು ಪ್ರಕಟವಾಗುವ ಸಂಭವವಿದೆಯೋ ತಿಳಿಯದು. ದುಡ್ಡಿಗೆ ತಾಪತ್ರಯವ್ರೋ? ಅದು ನಹ ಗೊತ್ತಾಗದು ನೀತಿಗ ಸರಿಯಾಗಿ ನಡೆದಿಯುವ ರ ಕಡೆಗೆ ಜನರ ದೃಷ್ಟಿಬಿದ್ದು ಆದುದರಿಂದ ಮೇನೇಜರರು ಈ ವಿಷಯಕ್ಕೆ ಕೂಡಲೆ ಗಮನಕೊಡುವರಾಗಿ ನಂಬಿದ್ದೇನೆ

ಹಳೇವಿದ್ಯಾರ್ಥಿ

ಕೊಡಗು ವಿದ್ಯಾಭಿವೃದ್ಧಿ ಸಂಘ.

ಹರಿ ಪ್ರಸಾದವೆಂಬ ನಾಮಧೇಯದಿಂದ 31—7—25 ರಲ್ಲಿ "ಕೊಡಗು" ಪೇಪರಿನಲ್ಲಿ ಬರೆದ ಸಂಗತಿ ನೋಡಿದರೆ ಜರ್ತೃಹರಿ ನೀತಿಶತಕದ ನೊನಲಿನ ಅನ್ಯಾಯದ ಕೆಲವು ಪದ್ಯಗಳು ನನ್ನ ಜ್ಞಾಪಕಕ್ಕೆ ಬರುವುವು

ನೆಪ ಮಾತ್ರಕ್ಕೆ ಮೆಂಬರನಿನಿಕೊಂಡು ಸಂಘಗಳಿಗೆ ಸೇರಿ "ಬಟ್"ಗೆ ಒಳ ಸೂತ್ರ ನಡಿಸಿ ಹಣಗಾರರನ್ನೂ ಮರ್ಯಾದಸ್ಥರನ್ನೂ ಉದ್ಯೋಗಸ್ಥರನ್ನೂ ದೂಷಿಸಿ "ಮುಖ್ಯ"ಮೆಂಬರುಗಳೆನಿಸಿಕೊಂಡು ಹಣಸಹಾಯಮಾಡಿದವರನ್ನು ಮೂಲೆಗೊತ್ತಿಸಿ ದೇಶಸೇವೆ ಮಾಡುವವರನ್ನು ಚೆನ್ನಾಗಿ ಬಲ್ಲೆವು. ಅದೇ ರೀತಿ ಈ ಸಂಘಕ್ಕೂ ಸೇರಿ ಈ ಸಂಘವನ್ನು ಸಹ ಹಾಳುಮಾಡಲು ಎಷ್ಟೋ ಜನರು ಹೋರಾಡುತ್ತಿರುವುದೂ ಗೊತ್ತಿದೆ.

ಈ ಬಾತ್ಮಿದಾರರು ಜಗಳಗಂಟಿಯೂ ಕಪಟ ಸನ್ಯಾಸಿಯೂ ಅಲ್ಲದಿದ್ದರೆ ತನ್ನ ಪೂರಾಹೆಸರನ್ನು ಮುಂದಿನ ಸಂಚಿಕೆಯಲ್ಲಿ ಬರೆಯಬೇಕು ಹಾಗಾದರೆ ಇವರಾಗಲೀ "ಕೊಡಗು" ಪೇಪರಿನ ಏಜೆಂಟರು ಹೋಗಿದ್ದ ಇತರ್ಯಾರಾಗಲೀ ಈ ಸಂಘಕ್ಕೆ ಧನಸಹಾಯ ಮಾಡುವವರೆಂದು ಸೆಕ್ರಟರಿಯವರಿಂದ ತಿಳಿದು ಬಂದರೆ ನಾನು ಕಮಿಟಿ ಮೆಂಬರುಗಳಲ್ಲಿ ರಾಜಿನಾಮೆ ಕೊಡುವದಲ್ಲದೆ ಇನ್ನೆಕಿ ಎಷ್ಟು ಜನರು ಕಮಿಟಿಗೆ ಸೇರಲು ಕುತೂಹಲವುಳ್ಳವರೋ ಅಷ್ಟು ನನ್ನ ಸ್ನೇಹಿತರನ್ನು ರಾಜಿನಾಮೆಕೊಡಿಸಿ ಕಮಿಟಿಯಲ್ಲಿ ಅವರನ್ನು ಸೇರಿಸಲು ನನ್ನ ಕೈಯ್ಯಲ್ಲಾದ ಪ್ರಯತ್ನವನ್ನು ಮಾಡುವೆನು

ಹಣಗಾರರನ್ನು ಉದ್ಯೋಗಸ್ಥರನ್ನು ನಿಂದಿಸಿ ದುರಹಂಕಾರ ತೋರಿದ್ದರಿಂದ ಈ ಸಂಘದ ಅರ್ಧ ಜೀವವು ಹೋಗಿ ಮುಖ್ಯವಾಗಿ ಮಡಿಕೇರಿಯಲ್ಲಿರುವ ಕೆಲವು ಪುಣ್ಯಾತ್ಮರ ಮತ್ತು ಉದ್ಯೋಗಸ್ಥರ ಸಹಾಯದಿಂದಲೇ ಮಿಕ್ಕ ಅರ್ಧ ಜೀವವು ಉಳಿದಿದೆಂದು ಖಂಡಿತವಾಗಿಯೂ ತಿಳಿಯಬೇಕು.

ಪೂರ ಹೆಸರಿಲ್ಲದೆ ಈ ವಿಷಯ ಬಾತ್ಮಿಗಳ ಬಂದರೆ ಜವಾಬು ಕೊಡಲು ತಿರಸ್ಕರಿಸುವನು

ನಡಿಕೇರಿಯಂಡ ಚಿಣ್ಣಪ್ಪ.

ಮಹದೇವಪೇಟೆ ಸಹಕಾರಿಸಂಘ

ಅಯ್ಯಾ,

ಈ ಸಂಘವು ಈಗ್ಗೆ ಸಾಧಾರಣ ಆರುವರ್ಷಗಳಿಗೆ ಹಿಂದೆ ರಿಜಿಸ್ಟರ್ ಆಯಿತು ಪ್ರಾರಂಭದಲ್ಲಿ ಸ್ವಲ್ಪಕಾಲ ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಯನ್ನು ಹೊಂದಿ ಅನಂತರ ಸ್ವಲ್ಪಕಾಲ ಕೃಷ್ಣಪಕ್ಷದ ಚಂದ್ರನಂತೆ ನಿದ್ರಾವಸ್ಥೆಯಲ್ಲಿದ್ದಿತು ಇದರ ಕಾರಣವು ಜನರಿಗೆ ತಿಳಿಯದ್ದಲ್ಲ ಆದ್ದರಿಂದ ಅದನ್ನು ಇಲ್ಲಿ ವಿವರಿಸಬೇಕಾಗಿಲ್ಲ ಪುನಃ ಇದು ಸಾಧಾರಣ ಎರಡು ವರ್ಷಗಳಿಗೆ ಹಿಂದೆ ನಿದ್ರಾವಸ್ಥೆಯನ್ನು ಬಿಟ್ಟು ಮೇಲಕ್ಕೆದ್ದಿತು ಹೊಸ ಪ್ರೆಸಿಡೆಂಟರೂ ಆಡಳಿತ ಮೆಂಬರುಗಳೂ ಚ ನಾಯಿಸಲ್ಪಟ್ಟರು ಆದರೆ ಪ್ರಾರಂಭದಲ್ಲಿ ಎಲ್ಲರೂ ಉತ್ಸಾಹದಿಂದ ಕೆಲಸಮಾಡುವದು ವಾಡಿಕೆಯಾಗಿದೆ ಅದೇ ರೀತಿಯಲ್ಲಿ ಪ್ರಾರಂಭದಲ್ಲಿ ಇವರೂ ಸಹ ಬಹಳ ಚೆನ್ನಾಗಿ ಕೆಲಸ ಮಾಡಿ ಅನಂತರ ನಿರುತ್ಸಾಹಿಗಳಾದರು. ಇವರ ಉತ್ಸಾಹಕ್ಕೆ ಕ್ಷೀಣಸ್ಥಿತಿಗೆ ಬರಲು ಬಿಡಲಿಲ್ಲ ಅಷ್ಟು ಉತ್ಸಾಹದಿಂದ ಕೆಲಸಮಾಡಿದವರಾದರೂ ಮೂರು ನಾಲ್ಕು ಮಂದಿ ಮಾತ್ರವೆ ಮೀಟಿಂಗುಗಳಿಗೆ ಬರುವುದೆಂದರೆ ಇವರಿಗೆ ಮಹಾಕಷ್ಟ ಹಾಗೂ ಹೀಗೂ ಅವರ ನಿರ್ಣಯದ ಕಾಲವು ತೀರಿತು ಪುನಃ ಇದೇ ವರ್ಷ ಜುಲೈ 4 ರಲ್ಲಿ ಒಂದು ಮಹಾಸಭೆಯು ನಡದು ಬೇರೆ ಬೇರೆ ಆಡಳಿತ ಮೆಂಬರುಗಳು ಚುನಾಯಿಸಲ್ಪಟ್ಟರು ಇವರು ಬಂದ ಮೇಲೆ ಈಗೆ ಎರಡು ಮೂರು ಮೀಟಿಂಗುಗಳಾಗಿ ಕೆಲವು ವಿಷಯಗಳೆಲ್ಲಾ ಚರ್ಚಿಸಲ್ಪಟ್ಟವೆಂದಾಗಿ ತಿಳಿಯಿತು ಇವರು ಹೀಗೆ ಶುರುವಿನಲ್ಲಿ ಉತ್ಸಾಹಪರಿತರಾಗಿ ಕೆಲಸಮಾಡಿ ನಂತರ ಇವರ ಹಿಂದಿನವರ ಮಾರ್ಗವನ್ನನುಸರಿಸದೆ ಯಾವಾಗಲೂ ಹೀಗೆಯೇ ಉತ್ಸಾಹದಿಂದ ಕೆಲಸಮಾಡುವರಾಗಿ ನಂಬಿದ್ದೇನೆ ಇದೇ ರೀತಿಯನ್ನನುಸರಿಸಿದರೆ ಈ ನಮ್ಮ ಸಂಘವು ಕುಂದುಕೊರತೆಗಳಿಲ್ಲದೆ ಅಭಿವೃದ್ಧಿಯನ್ನು ಹೊಂದುವುದು ಇವರು ಆದಷ್ಟು ಪ್ರಯತ್ನಪಟ್ಟು ಸಾಲಗಾರರಿಂದ ಬಾಕಿನಿಂತಿರುವ ಸುಮಾರು 700 ರೂಪಾಯಿಗಳನ್ನು ವಸೂಲು ಮಾಡಿ ಕ್ರಮಕ್ಕೆ ತರುವರೆಂದು ಭಾವಿಸಿದ್ದೇನೆ

ಆದರೆ ಸಂಘದವಳಿಗೆಯು, ಪ್ರೆಸಿಡೆಂಟರು, ಆಡಳಿತಮೆಂಬರುಗಳು ಮತ್ತು ಕಾರ್ಯದರ್ಶಿ ಇವರುಗಳಿಂದ ಮಾತ್ರವೇ ನೊರವೇರುವದಿಲ್ಲ ಸಂಘದ ಮೆಂಬರುಗಳಾದ ನಾವೆಲ್ಲರೂ ಇದಕ್ಕೆ ಕಾರಣಭೂತರಾಗಿದ್ದೇವೆ ಇದನ್ನು ನಾವು ತಿಳಿಯದೆ ಸುಮ್ಮನೆ ಮೇಲಿನವರನ್ನು ದೂಷಿಸುವುದು ನಮ್ಮ ತಪ್ಪು ನಾವು ಪಡಕೊಂಡ ಹಣವನ್ನು ಕಾಲಕ್ಕೆ ಸರಿಯಾಗಿ ಕಟ್ಟದೆ ತಪ್ಪಿತಸ್ಥರಾದರೆ ಅವರು ಏನುತಾನೆ ಮಾಡ್ಯಾರು? ಸಂಘದ ಕಾರುಬಾರುಗಳು ಚೆನ್ನಾಗಿ ನಡೆಯಬೇಕಾದರೆ ಹಣದ ವ್ಯವಹಾರವು ಆಗಾಗ್ಗೆ ನಡಯುತ್ತಿರಬೇಕು ಅದಕ್ಕೇ ನಾವು ನಿಲ್ಲಿಸಿಬಿಟ್ಟು ಮುಖಂಡರನ್ನು ದೂಷಿಸಿದರ ಏನಾಗುವುದು? ನಮ್ಮಲ್ಲಿ ತಪ್ಪಿಟ್ಟುಕೊಂಡು ನಮ್ಮ ಹಣಕ್ಕೆ ಬಡ್ಡಿಯು ಸಿಕ್ಕುವುದಿಲ್ಲವೆಂದರೆ ಅವರು ಎಲ್ಲಿಂದ ತಾನೆ ಕೊಡುವರು? ಬೈಲಾ ಮೇರೆ ನಡಯ ತಕ್ಕದ್ದು ಅವರ ಕೆಲಸವಾಗಿದೆ ಆದ್ದರಿಂದ ನಾವು ಅವರನ್ನು ನಿಂದಿಸಿ ಫಲವಿಲ್ಲ ಈಚೆಗೆ ಬಹಳ ಜನ ತಮ್ಮ ಶೇರುಹಣವನ್ನು ವಾಪಾಸು ಕೇಳುತ್ತಾರೆಂಬವ ವರ್ತಮಾನ ತಿಳಿಯಿತು ಇದು ಅವರ ಮೂರ್ಖತನವೇ ಸರಿ ಕ್ಷೇಮನಿಧಿಯು (ರಿಸರ್ವ್ ಫಂಡ) ಸಾಧಾರಣ 1500 ರೂಪಾಯಿಗಳವರೆಗೆ ಇರುವುದು ಅವರಿಗೆ ಮರೆತು ಹೋಯಿತೆ? ಇದರ ಹಕ್ಕನ್ನು ಈಗ ಬಿಟ್ಟುಬಿಡವೇಕೇ? ಈ ವಿಷಯವು ಅನೇಕರಿಗೆ ತಿಳಿಯದೆ ತಮ್ಮ ಶೇರುಹಣವನ್ನು ಕೇಳಿರಬಹುದೆಂಬದಾಗಿ ನಾನು ಭಾವಿಸುತ್ತೇನೆ ನಮ್ಮ ಅಭಿವೃದ್ಧಿಗೆ ಈ ಸಂಘವು ಇರುವವುದರಿಂದ ಇದನ್ನು ಕೆಡಿಸಿಕೊಳ್ಳುವದು ತರವಲ್ಲ ಇನ್ನುಮುಂದೆಯಾದರೂ ಈ ವಿಷಯಗಳನ್ನು ತಿಳಿದು ಪಾಲುದಾರರು ಹಣವನ್ನು ವಾಪಾಸು ಕೇಳುವುದಿಲ್ಲವೆಂಬದಾಗಿ ನಾನು ಪೂರ್ಣ ನಂಬಿದ್ದೇನೆ

ಸಂಘದ ಪಾಲುದಾರರೇ! ಇನ್ನುಮುಂದೆ ನಮಗೆ ಸಂಘದ ವಿಷಯದಲ್ಲಿ ಸಂಶಯವಿರುವದು ಕಡಿಮೆ. ಈಗಿನ ಪ್ರೆಸಿಡಂಟರು ಮತ್ತು ಆಡಳಿತ ಮೆಂಬರುಗಳು ಮನಃಪೂರ್ವಕವಾಗಿ ಕೆಲಸಮಾಡುತ್ತಾರೆಂಬದಾಗಿ ಭರವಸವಿದೆ ಅವರು ನಮ್ಮನ್ನು ಆಶಾಭಗ್ನರನ್ನಾಗಿ ಮಾಡುವದಿಲ್ಲ, ಕೂಡಲೆ ತಾವು ಪಡೆದುಕೊಂಡಿರುವ ಸಾಲಗಳನ್ನು ತೀರಿಸಲು ಪ್ರಯತ್ನಿಸಿರಿ ಹಿಂದಿನದನ್ನು ತೀರಿಸಿದರ ಮುಂದೆ ನಮಗೆ ಕೇಳಿದಾಗ ಹಣ ಸಿಕ್ಕುತ್ತೆ ಮರೆಯಬೇಡಿರಿ! ಎಚ್ಚರ ಹೊಂದಿರಿ! ಪ್ರತಿಯೊಬ್ಬರೂ ಸಹೋದರ ಭಾವದಿಂದಿದ್ದು ನಾವು ಸಹಕಾರತತ್ವವನ್ನು ತಿಳಿಯಿರಿ

ಪಾಲುದಾರರವರಲ್ಲೊಬ್ಬ

ಪೊನ್ನಂಪೇಟೆ ಸಬ್ ರಿಜಿಸ್ಟರ್ ಆಫೀಸು.

ಅಯ್ಯಾ,

ಪೊನ್ನಂಪೇಟೆ ನಾಡು ಜನರ ಸಿಬಂಗ್ಗಳನ್ನು ಹೆಚ್ಚುತ್ತಾ ಬರುವದಲ್ಲದೆ ಪರಿಹಾರವಾಗುವದು ಕಾಣುವದಿಲ್ಲ ನಮ್ಮ ಜನನಾಯಕರಾದ ಶ್ರೀ ಶಾನೇರಿಯವರ ಭೂಮಿಯಲು ಇಷ್ಟು ದುರಾದೃಷ್ಟದವರು ಬೇರೆಯಿಲ್ಲವೆಂದು ಹೇಳಬಹುದು ಈ ತಾಲೋಕಿನಲ್ಲಿ ಇದ್ದ ನಾಲ್ಕು ಜನ ಪಾರುಪತ್ತಿಗಾರರು ಹೋಗಿ ಈಗ ಎರಡು ಜನರಾದರು ಅದರಲ್ಲಿ ಪೊನ್ನಂಪೇಟೆಯಲ್ಲಿ ಒಬ ಸುಬೇದಾರರು, ಇವರಿಗೆ ಆರು ಜನರು ಮುನಿಶಿಯರು, ಒಬ್ಬ ಸಬ್ ರಿಜಿಸ್ಟ್ರಾರರು, ಇವರಿಗೆ ಒಬ್ಬ ಮುನಿಶಿಯರು ಇದ್ದರು ಇದು ಅಲ್ಲದೆ ಈ ನಾಡಿಗೆ ಒಬ್ಬ ಪಾರುಪತ್ತಿಗಾರರು, ಇವರಿಗೆ ಮೂರು ನಾಲ್ಕು ಜನ ಶ್ಯಾನ್ ಭೋಗರು ಮುನಿಶಿಯರು ಇದ್ದರು ಸಿಬ್ಬಂಧಿಕೋತೆಯೆಂಬ ಮಹತಾಯಿ ನುಗ್ಗಿ ಇವರನ್ನೆಲ್ಲಾ ಉದ್ಧಾರ ಮಾಡಿ ಈಗ ಈ ಪೊನ್ನಂಪೇಟೆಯಲ್ಲಿ ಇರುವ ಒಬ್ಬ ಪಾರುಪತ್ತಿಗಾರರಿಗೆ ಈ ಸಂಪತ್ತನ್ನೆಲ್ಲಾ ವಹಿಸಿದರು ಇವರಿಗೆ ಇನ್ನು 50 ರೂಪಾಯಿ ಒಳಗೆ ಇರುವ ಸಿವಿಲ್ ಮೊಕದ್ದಮೆಗಳನ್ನು ತೀರ್ಮಾನ ಮಾಡುವ ಅಧಿಕಾರವನ್ನು ವಹಿಸಿದರ ಇವರ ಪುಣ್ಯಕ್ಕೆ ಎಣೆ ಇಲ್ಲ ಇವರಿಗೆ ಮೂರು ನಾಲ್ಕು ಮುನಿಶಿಯರಂತೆ ಇವರಿಗೆಲ್ಲಾ ಮೊದಲು ಎರಡೆರಡು ಜನರು ಮಾಡುವ ಕೆಲಸಗಳನ್ನು ವಹಿಸಿ ಕೆಲಸ ನಡಿಸುತ್ತಾ ಬರುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ ಹೀಗಿರಲ್ಲಾ ಆಗ ನಮ್ಮ ಪಾಡೇನು? ಕ್ರಿಮಿನಲ್ ಮೊಕದ್ದಮ್ಮೆ ಕೋರ್ಟಿಗೆ ಹೋದರ ಪೂರ್ವಾಹ್ನ 10 ಗಂಟೆಯಿಂದ ರಾತ್ರಿ 7½ 8 ಗಂಟೆವರೆಗೆ ಕೇಸು ವಿಚಾರಣೆ ಇದು ಕ್ರಿಮಿನಲ್ ಕೇಸು ವಹಿಸಿಕೊಂಡವರಿಗೇನೋ ಒಂದು ತರದ ಬುದ್ಧಿ ಕಲಿಸಿದಂತೆ ಆ ಗುತ್ತದೆ ಆದರೆ ಕೇಸಿನಲ್ಲಿ ಸಾಕ್ಷಿಯಾಗಿ ಹೋದವರು ಸಹ ಈ ನೋವನ್ನು ಅನುಭವಿಸಬೇಕಾಯಿತಲ್ಲವೇ? ವಾರಕ್ಕೆ ಒಂದೆರಡು ದಿನದಲ್ಲಿ ಮಾತ್ರ ಮಾಡಿದಮ್ಮಯಿಟ್ಟು ಇದು ಹೀಗಾಯಿತು ಇನ್ನು ವಾರಕ್ಕೆ ಒಂದಾವರ್ತಿ ಕರಾರು ರಿಜಿಸ್ಟರ್ ಮಾಡುವ ಪದ್ಧತಿ ಇಟ್ಟುಕೊಂಡಿರುತ್ತಾರೆ ಹಣದ ಲೇವಾದೇವಿಯಿಲ್ಲದೆ ಲೋಕವು ನಡಿಯುವದಿಲ್ಲವೆಂಬ ಸಂಗತಿಯೂ ಮರಣ ಶಾಸನ ಕರಾರು (ವಿಲ್) ಮನುಷ್ಯನ ಅಪಾಯ ಕಾಲದಲ್ಲಿ ಉಂಟಾಗತಕ್ಕದೆಂಬ ಸಂಗತಿಯೂ ಎಲ್ಲರಿಗೂ ಗೊತ್ತಿದೆ ಹೀಗಿರುವಾಗ ಮುದುಕರು, ಪ್ರಾಯದವರು, ಹೆಂಗಸರು ಸಹ ರಿಜಸ್ಟರ್ ಕಾಲದಲ್ಲಿ ಕಚೇರಿಗೆ ಹೋಗಬೇಕಾಗುವದು ಅತ್ಯಾವಶ್ಯವಾದ ಮಾತಾಗಿರುತ್ತೆ ಆ ದಿನವು ಸಹ 11 ಗಂಟೆಯಿಂದ ೬, 7 ಗಂಟೆವರೆಗೆ ರಿಜಿಸ್ಟರ್‌ಮಾಡಿ ತೀರದೆ ಹಿಂದಕ್ಕೆ ಹೋದವರು ಎಷ್ಟೋ ಜನರು ಇರುತ್ತಾರೆ ಎಷ್ಟೋ ಮೈಲು ದೂರದಿಂದ ಬಂದವರು ರಾತ್ರಿಯಾದನಂತರ ಅವರವರ ಮನೆಗೆ ಹ್ಯಾಗೆ ಹೋಗಬೇಕು? ಇದಕ್ಕಲ್ಲವೋ ಪೂರ್ವದವರು 11 ಗಂಟೆಯಿಂದ 5 ಗಂಟೆವರೆಗೆ ಕಚೇರಿಮಾಡಲಿಕ್ಕೆ ಮಾಡಿದ್ದು ಆಗ ಜನರಿಗೆ ಹೋಗಲಿಕ್ಕೂ ಬರಲಿಕ್ಕೂ ಅನುಕೂಲವಿತ್ತು ಹೀಗೆ ವಾರಕ್ಕೊಂದಾವರ್ತಿ ಕರಾರು ರಜಿಸ್ಟರ್ ಮಾಡುವದು ವಾರಕ್ಕೊಂದೆರಡು ದಿವಸ ಕೇಸು ವಿಚಾರಮಾಡುವದು, ಜನರಿಗೆ ಅತ್ಯಂತ ಕಷ್ಟವಿರುವ ವಿಷಯಗಳನ್ನು ಇದೇ ಪತ್ರದಲ್ಲು ಒಬ್ಬ ಅನುಭವಿಯು ಮೊದಲು ಬರದ ಲೇಖನವು ವಾಚಕರ ದೃಷ್ಟಿಗೆ ಗೋಚರವಾಗಿರಬಹುದು ಕೌನ್ಸಿಲ್‌ನಲ್ಲಿ ರರಾವು ಪಾಸಾದ ಮೇರೆ ಇಲ್ಲಿಗೂ, ಈವತ್ತು ನಾಳ ಸ್ಟೇಶನರಿ ಮೇಜಿಸ್ಟ್ರೇಟರು ನೇಮಕವಾಗುತ್ತೆ, ಜನರ ಈ ತರದ ಕಷ್ಟ ನೀಗುತ್ತೆಯೆಂದು ಕಾದು, ಅದು ಇಲ್ಲಿಯ ಜನರ ಪುಣ್ಯಕ್ಕೆ ದಾರಿ ತಪ್ಪಿದಂತ್ತೆ ಕಾಣುತ್ತೆ ನಮ್ಮ ದಯಾಹೃದಯದವರಾದ ಕಮಿಷನರ್ ಸಾಹೇಬರವರು ಮತ್ತು ಇಲ್ಲಿ ಅನೇಕಕಾಲ ಉದ್ಯೋಗದಲ್ಲಿ ಇದ್ದು ಇಲ್ಲಿಯ ಜನರ ಸ್ಥಿತಿಯನ್ನು ಸರಿಯಾಗಿ ಅನುಭವವಿರುವ ನಮ್ಮ ಡಿ ಸಿ ಸಾಹೇಬರವರು ಇಲ್ಲಿಯ ಜನರ ಕಷ್ಟವನ್ನು ಪರಿಹರಿಸಲೋಚಿಸಿ ವಾರಕ್ಕೊಂದಾವರ್ತಿ ಕರಾರು ರಿಜಿಸ್ಟರ್ ಮಾಡುವ ಪದ್ಧತಿಯನ್ನು ಬದಲಾಯಿಸಿ ವೀರರಾಜೇಂದ್ರಪೇಟೆಯಲ್ಲು ಮಾಡಿದ ಹಾಗೆ ಒಬ್ಬ ಮುನಿಶಿಯರನ್ನು ನೇಮಕಮಾಡಿ ಪ್ರತಿದಿನವೂ ಕರಾರು ರಿಜಿಸ್ಟರ್ ಮಾಡುವಂತೆ ವಡನೆ ಏರ್ಪಾಡು ಮಾಡಿ ನಮ್ಮ ಕಷ್ಟವನ್ನು ಪರಿಹರಿಸುವರೆಂದು ನಂಬಿ ಪ್ರಾರ್ಥಿಸುತ್ತೇನೆ

ರೈತ

ಪರಸ್ಪರ ಸಹಾಯ ಸಂಘ

ಮಹನೀಯರೆ,

ನಮ್ಮ ಈ ಚಿಕ್ಕ ಪ್ರಾಂತ್ಯದಲ್ಲಿ ಪರಸ್ಪರ ಸಹಾಯ ಸಂಘಗಳು ಎಷ್ಟು ಪ್ರಯೋಜನಗಳನ್ನು ಮಾಡಿವೆ ಮತ್ತು ಈಗ ಅವು ಎಷ್ಟು ಅಭಿವೃದ್ಧಿಗೆ ಬರುತ್ತಿವೆ ಎಂಬ ಸಂಗತಿಗಳನ್ನು ಕೆಲವು ಮಹನೀಯರುಗಳು ತಿಳಿಯದೆ ಅದರ ಅನುಭವವಿಲ್ಲದೆ ತಪ್ಪು ಅಭಿಪ್ರಾಯಗಳನ್ನು ಪತ್ರಿಕೆಯಲ್ಲಿ ಬರೆಯುವುದೂ ಮತ್ತು ತಮ್ಮ ಅಭಿಪ್ರಾಯಗಳನ್ನು ಮಾತಾಡುವುದೂ ಕೇಳಿ ನಾನು ಆಶ್ಚರ್ಯಚಕಿತನಾಗಿ ಕೆಲವು ಸಂಗತಿಗಳನ್ನು ಅವರ ತಿಳುವಳಿಕೆಗೋಸ್ಕರ ಬರೆಯುತ್ತೇನೆ ಅದೇನೆಂದರೆ, ಪರಸ್ಪರ ಸಹಾಯ ಸಂಘಗಳು ಸ್ಥಾಪನೆಯಾದಂದಿನಿಂದ ಊರೂರಿನಲ್ಲಿದ್ದ ಹಣ ಬಡ್ಡಿಗೆ 1ಕ್ಕ 2ರಂತೆ ಕೊಡುವ ಚಿಕ್ಕ ಸಾಹುಕಾರರು ಎಷ್ಟು ಜನ ಪಲಾಯನಮಾಡಿದ್ದಾರೆಂಬ ಸಂಗತಿ ರಸ್ತೆಬದಿಯಲ್ಲಿ ವ್ಯಾಪಾರಮಾಡಿಕೊಂಡಿದ್ದ ಈಗ ಪಾಳುಬಿದ್ದಿರುವ ಮನೆಗಳ ಸಂಖ್ಯೆಯನ್ನು ತೆಗೆದು ನೋಡಿದರ ಅವರಿಗೆ ಚೆನ್ನಾಗಿ ವೇದ್ಯವಾಗುವದು ಆಗ ರೈತರಿಗೆ ಸಾಲವು ಎಷ್ಟು ಸುಲಭದಲ್ಲಿ ಸಿಕ್ಕುತ್ತದೆಂಬದೂ ಪೂರ್ವದಲ್ಲಿ ಒಬ್ಬನಿಂದ ಸಾಲ ಸಿಕ್ಕಬೇಕಾದರ ಎಷ್ಟು ಶ್ರಮದಿಂದ ಸಿಕ್ಕುತ್ತಿತ್ತೆಂಬದನ್ನೂ ತಿಳಿಯ

ಸಹಕಾರಿ ಸಂಘಗಳು ಸ್ಥಾಪನೆಯಾದಂದಿನಿಂದ ಪ್ರತಿ ವರುಷವೂ ಏನೇನು ಬದಲಾವಣೆಗಳಾಗಿವೆ ಎಂಬದನ್ನು ತಿಳಿಯಬೇಕು. ಸಹಕಾರಿ ಸಂಘಗಳಿಂದ ಈ ಚಿಕ್ಕ ಪ್ರಾಂತ್ಯವು ಎಷ್ಟು ಪ್ರಯೋಜನವನ್ನು ಹೊಂದಿದ್ದಾರೆಂದೂ ತಿಳಿಯಬೇಕು. ಪರಸ್ಪರ ಸಹಾಯ ಸಂಘಗಳು ಅಭಿವೃದ್ಧಿಗೆ ಬರುತ್ತಿದ್ದಲ್ಲಿ ಹೇಗೆ ದಿನೇದಿನೇ ಸಂಘಗಳು ಹೆಚ್ಚುತ್ತಿವೆಯೆಂಬುದೂ ತಿಳಿಯಬೇಕು. ಇಂಥಾ ಸಂಗತಿಗಳನ್ನೆಲ್ಲಾ ತಿಳಿಯದೆ ಯಾವ ಸಂಘದ ಕೆಲಸದಲ್ಲಿ ಭಾಗಿಯಾಗದೆ ಸಂಘದ ಲೆಕ್ಕಪತ್ರಗಳು ಸರಿಯಿಲ್ಲ, ಸಂಘಗಳಿಂದ ಹೆಚ್ಚು ಪ್ರಯೋಜನ ಕಾಣುವದಿಲ್ಲ ಎಂದು ಬರಿಯುವದು ಯಾವ ತರದಲ್ಲಿಯೂ ನ್ಯಾಯವಾಗಿ ತೋರುವದಿಲ್ಲ. ಒಂದುವೇಳೆ ಸಂಘದ ಲೆಕ್ಕಪತ್ರಗಳು ಸರಿಯಿಲ್ಲದಿದ್ದರೆ ಲೋಕಕ್ಕೋಸ್ಕರ ಅಂಥಾ ಬುದ್ಧಿವಂತರು ಸೇರಿ ಸರಿಪಡಿಸಬಾರದು? ಹೀಗೆ ವಿದ್ಯಾವಂತರು ಸಂಘಕ್ಕೆ ಸೇರದೆ ಅದರ ಈಗಿನ ಸ್ಥಿತಿಯನ್ನು ಹೀಯಾಳಿಸಿ ಬರೆಯುವುದರಿಂದ ಬುದ್ಧಿ ಶಕ್ತಿಯನ್ನು ತೋರಿಸಿದಂತೆ ಕಾಣುವುದಿಲ್ಲ, ಮತ್ತು ಅದು ಪರಸ್ಪರ ಸಹಾಯತತ್ವವನ್ನು ಅನುಸರಿಸಿದಂತೆಯೂ ಕಾಣುವುದಿಲ್ಲ. ಈಗ ತಾನೆ ರಿಜಿಸ್ಟ್ರಾರರವರಿಗೆ ಹಿಂದಿನ ಸಿಬ್ಬಂದಿ ಸಿಕ್ಕಿ ಕಡೆಯಲ್ಲಿಯೂ ಚಳವಳ ನಡೆಯುತ್ತಿದೆ. ಸಂಘಗಳ ಸ್ಥಿತಿ ಎಲ್ಲಾ ವಿಧದಲ್ಲಿ ಅಭಿವೃದ್ಧಿಗೆ ಬರುತ್ತಿದೆ ಎಂಬ ಸಂಗತಿ ಈ ಸಂಘದ ಎಲ್ಲಾ ಮೆಂಬರುಗಳಿಗೆ ತಿಳಿದಿರಬಹುದೆ. ಮೊದಲಿಗೆ ಕಷ್ಟವೆನಿಸಬಹುದು. ಪ್ರಪಂಚದ ಪ್ರತಿ ಮೂಲೆಯಲ್ಲಿ ಇದೆ. ಸರಕಾರದ ಸಹಾಯದಿಂದಲೇ ಕೆಲಸ ಆಗುತ್ತಿದೆ. ಅಂಥಾದ್ದರಲ್ಲಿ ಈಗ ಕೊಡಗಿನಲ್ಲಿರುವ ಸುಮಾರು 110 ಸಂಘಗಳ ಲೆಕ್ಕಪತ್ರಗಳು ಸರಿಯಾಗಿಲ್ಲ ಎಂದು ಯಾರಿಗೂ ಹೇಳಲಿಕ್ಕಾಗುವುದಿಲ್ಲ. ಈಗತಾನೇ ಹೊಸ ಹೊಸದಾಗಿ ಸುರುವಾದ್ದರಿಂದ ಇನ್ನು ಮುಂದೆ ಇದರ ಕೆಲಸ ಉಚಿತವಾಗಿಯೂ ಉತ್ತಮ ಸ್ಥಿತಿಗೆ ಬರುತ್ತದೆಂದು ನಾನು ಒಬ್ಬ ಸಹಕಾರಿಯಾಗಿ ಹೇಳುತ್ತೇನೆ. ಇದರಿಂದ ಹೀಯಾಳಿಸಿ ಸಹಕಾರಿ ಸಂಘಗಳನ್ನು ಪ್ರೋತ್ಸಾಹಿಸದೆ ನಡೆ ಮೇಲೆ ತಪ್ಪು ಹೊರಿಸುವದು ಸಹಕಾರದ ವಿಷಯದ ಅನಭಿಜ್ಞತ್ವವನ್ನು ತೋರಿಸಿದಂತಾಗುತ್ತದೆ. ಇದರಿಂದ ಇಷ್ಟು ಬುದ್ಧಿವಂತರೂ, ವಿದ್ಯಾವಂತರೂ ಇದರ ಸಹಕಾರತತ್ವವನ್ನು ಅರಿತು ಅದರಲ್ಲಿ ಭಾಗಿಗಳಾಗಬೇಕೆಂಬುದೇ ನನ್ನ ಕೋರಿಕೆ.

'ಸಹಕಾರಿ'

ಕೊಪ್ಪಪೇಟೆ ಹಳೇ ವಿದ್ಯಾರ್ಥಿಗಳ ಸಂಘ.

ಉತ್ತರ ಕೊಡಗು ಕೊಪ್ಪಪೇಟೆ ಬೋರ್ಡ್, ಹೈಯರ್ ಎಲಿಮೆಂಟರಿ ಸ್ಕೂಲಿನ ಹಳೇ ವಿದ್ಯಾರ್ಥಿಗಳ ಸಂಘವೊಂದು ಧರ್ಮ ಸಂಯೋಗದಿಂದ ತಾರೀಕು 15—7—25ರಲ್ಲಿ ಶ್ರೀ. ಎಸ್. ಕರಿಬಸಪ್ಪ, ಹೆಡ್‌ಮಾಸ್ಟರವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿತು. ಕೋಮುವಾರು ಹಳೇ ವಿದ್ಯಾರ್ಥಿಗಳೆಲ್ಲ ಹೇಗೋ ಒಂದುಕಡೆ ಸ್ನೇಹಗೊಂಡು, ತಮಗಿನ ವ್ಯಾಪಾರ ವ್ಯವಸಾಯ, ಹಾಗೂ ಜ್ಞಾನಾಭಿವೃದ್ಧಿಗಳನ್ನು ಈ ಸಂಘದ ಬಲದಿಂದ ಸಂಪಾದಿಸಿಕೊಳ್ಳಲು ಹೊರಟಿರುವರು. ಈ ಸಂಘದ ಕಾರ್ಯಭಾರಗಳನ್ನು ನಿರ್ವಹಿಸುವರೇ ಮೆಂಬರುಗಳ ಪೈಕಿ ಕೆಲವರು ಪ್ರೆಸಿಡೆಂಟರು, ವೈಸ್ ಪ್ರೆಸಿಡೆಂಟ್ ಸೆಕ್ರೆಟರಿಯವರು, ಹಾಗೂ ಟ್ರೆಜರಿಯವರು ಅಲ್ಲದೇ ಮ್ಯಾನೇಜಿಂಗ್ ಕಮಿಟಿ ಮೆಂಬರುಗಳಾಗಿ ಚುನಾಯಿಸಲ್ಪಟ್ಟಿರು.

ಚುನಾಯಿತ ಮೆಂಬರುಗಳು ತಾವು ವಹಿಸಿಕೊಂಡಿರುವ ಕೆಲಸಗಳ ಪಾತ್ರಾಪಾತ್ರಗಳನ್ನು, ತಮ್ಮ ಸ್ಮೃತಿಪಥಕ್ಕೆ ತಂದುಕೊಂಡು ಪೂರ್ಣ ದೃಢ ಮನಸ್ಸಿನಿಂದ, ಈಗ ಚಿತ್ರರೂಪ ಅನ್ಯೋನ್ಯತೆಯಿಂದಿರುವ ತಮ್ಮ ಪ್ರೀತಿಯನ್ನೂ ಬಾಗಿಲಿರವನ್ನು ಹೇಗೆ ಚಿತ್ರಕ್ಕೆ ಹಾಕಿ ಜೀವ ಪಡೆದಿರೋ ಹಾಗೆ ತಮ್ಮ ತನು, ಮನ, ಧನಗಳನ್ನು ಸಂಘಕ್ಕೆ ಮನ ಒಪ್ಪಿಸಿ ವೃದ್ಧಿಗೊಳಿಸುವ ಇರಾದೆಯೆಂದು ನಂಬಿದ್ದೇನೆ.

ಸಂಘದ ಪ್ರತಿಯೊಂದು ಕಾರ್ಯಗಳನ್ನು ಅದರ ಆಜೀವ ಮೆಂಬರುಗಳು ಬದ್ಧಾಕಂಕಣರಾಗಿ ಮುಂದೆ ನಿಂತುಕೊಂಡು ಸಂಘದ ಅಭಿವೃದ್ಧಿಯನ್ನೂ ಚಿರಾಯುವನ್ನೂ ಕಾಯಬೇಕೆನ್ನ ಈ ವಿನಂತಿಯನ್ನು ಕೊಡಗು ಪತ್ರಿಕಾ ಮುಖೇನ ಅವಗಾಹನೆಗೆ ತಂದುಕೊಂಡಿರುವೆನು.

ಒಬ್ಬ ಪ್ರತ್ಯಕ್ಷದರ್ಶಿ.

ಇದ್ದೋ, ಇಲ್ಲವೋ.

(ಶ್ರೀಮಹಾರಾಯನೇ ಸೂರ ಸಹಸ್ರ ಸುಧಸಂಡಿತ) ಎಂಬುವದನ್ನು ಕೊಡಗು ಪದ್ಧತಿಗಳನ್ನೆಲ್ಲಾ ಪಟ್ಟೋಲೆ ಪಳಮೆ ಎಂಬ ಪುಸ್ತಕದಲ್ಲಿ ಬರೆದಿದ್ದಾರೆ. ಆದರೆ 18 ವರುಷ ಕಳೆದ ನಂತರ ಒಬ್ಬನು ಭಕ್ತಿಗೋ ಭಯ, ಮುಕ್ತಿಗೋ, ಪುತ್ರ ಸಂತಾನಕ್ಕೋ, ಕಷ್ಟದ ಕಕ್ಕೋ, ವ್ಯಸನದಲ್ಲಿಯೋ, ಸಂತೋಷದಿಂದ ದೇಶಾಂತರ ಹೋಗಿಬಿಟ್ಟು, 20, 25 ವರುಷ ಕಳೆದರೆ ಅವನು ಬದುಕಿದ್ದು ವರ್ತಮಾನ ಇಲ್ಲದಿದ್ದರೆ ಅವರ ಪರಿಯುಲಿಕ್ಕೆ ಮಾಡುವ ಕರ್ಮ ಇಲ್ಲವೋ?

ನಾನು ಹಿರಿಯರನ್ನು ಕೇಳಿನೋಡಿದಲ್ಲಿ ಇದೆಯಂತ ತಿಳಿದೆನು. ಹೇಗಂದರೆ, ಒಂದು ಮಗು ಹುಟ್ಟಿ 12ದಿನದಲ್ಲಿ ಹೆಸರಿಟ್ಟು ಶಕ್ತಿಗೆ ಸರಿಯಾಗಿ ಊಟಕೊಡುವಂತೆ, 7 ವರುಷ ಪ್ರಾಯ ಕಳೆದು 18 ವರುಷ ಒಳಗೆ ಸತ್ತರೆ ಕಾಕೆಪೊಳೆಯೆಂದು ಸೀ ಪದಾರ್ಥದಿಂದ ಊಟಕೊಟ್ಟು ಹೆಸರು ಮರೆಯುವದು. 18 ವರುಷ ಪ್ರಾಯ ಕಳೆದು ಸತ್ತರೆ 11, 12ನೆ ದಿನಕ್ಕೆ ತಿತಿಕರ್ಮ ಮಾಡಿ ಹೆಸರು ತೆಗೆದದ್ದನ್ನು ಹೆಸರುಬಿಡುವದಂತೆ. ಹೀಗೆಯೇ ದೇಶಾಂತರ ಹೋಗಿ 12 ವರುಷದ ವರೆಗೆ ಏನೊಂದು ವರ್ತಮಾನ ಊರು ನಾಡು ಮನೆಯವರಿಗೆ ಸಿಕ್ಕದವರು 12 ವರುಷ ಕಳೆದು ಅವರ ಹೆಸರಿನಲ್ಲಿ ಕರಿಯುವರು ದೀಕ್ಷಾಬದ್ಧರಾಗಿ 12ನೆ ದಿನ ತಿತಿಕರ್ಮ ಮಾಡಿ ಹೆಸರು ಮರೆಯುವ ಪದ್ಧತಿ ಇದೆಯಂತೆ. 12 ವರುಷ ಯಾಕಂದರೆ, 1/ ದಿನಕ್ಕೆ ದಿನ ಒಂದರ 365 ದಿನದಂತೆ ಸಮಯಕೊಟ್ಟು ಸಹ ವರ್ತಮಾನ ಇಲ್ಲದ್ದಕ್ಕಂತೆ.

ಪ್ರಾಯ ಒಂದುವೇಳೆ ಅವರು ಬದುಕಿದ್ದರೆ ಅವರಿಗೆ ಮನೆ ಪಕ್ಷಿಯಾಗ ನಮ್ಮ ಕಟ್ಟು ಇದೆಯಂತೆ. ಆದ್ದರಿಂದ ಹಾಗಿರುವವರು ಯಾರಾದರೂ ಇದ್ದರೆ ಉಚಿತ ತಿತಿಕರ್ಮಾಂತರ ತೀರಿಸಿಕೊಳ್ಳದವರಿಗೆ ಮುಕ್ತಿಗೆ ದಾರಿತೋರಿಸುವಂತೆ ಅತಿ ವಿನಯದಿಂದ ಒತ್ತಿ ಹೇಳುತ್ತೇನೆ.

ಹಾಗೆ ಇದ್ದವರ ಹೆಸರು ಬೇಕೆಂದು ಕುತೂಹಲ ಇದ್ದು ಪದ್ಧತಿ ಇಲ್ಲವೆಂದು ಬಿಟ್ಟಿದ್ದವನ್ನ ನನ್ನನ್ನು ಕೇಳಿದರೆ ಅಂಥಾವರುಗಳ ಹೆಸರನ್ನು ವಿವರವಾಗಿ ಅವರವರಿಗೆ ಕಾಗದಮೂಲಕ ತಿಳಿಸಲು ಸಿದ್ಧನಾಗಿದ್ದೇನೆ.

ಅಸತೋ ಮಾ ಸದ್ಗಮಯ ... ತಮಸೋ ಮಾ ಜ್ಯೋತಿರ್ಗಮಯ ... ಮೃತ್ಯೋರ್ಮಾ ಅಮೃತಂ ಗಮಯ ... ಇದೆ

ಪಾಂಡವರು ವನವಾಸವನ್ನು ಹಿಮವತ್ಪರ್ವತಕ್ಕಾಗಿ ನಾವು ವೃಕೋದರನಿಗೆ ಹೋಗುತ್ತೇವೆಂದು. ಹಾಗೆ ಪರೀಕ್ಷೆ ದ್ರೌಪದಿಗೆ ನಷ್ಟಕಟ್ಟಿ ಹೇಳಿದರು. ಆದರೆ ಸತ್ತದ್ದನ್ನು ಪರೀಕ್ಷೆ ಮಾಡುವ ಧರ್ಮರಾಯ ನೋಡಿದ್ದಿಲ್ಲವಲ್ಲ. ಪಾಂಡವರು ದೇಶಾಂತರ ಹೋದಹಾಗೆ ಆಯಿತು. ಅಗ್ನಿ ಯಾಕೆ ಅವರ ಕರ್ಮಾಂತರ ಮಾಡಿದ್ದು? ಬ್ರಾಹ್ಮಣರಿಗೆ ಯಾಕೆ ಭೋಜನಕೊಟ್ಟದ್ದು? ಬ್ರಾಹ್ಮಣರಿಗೆ ಭೋಜನವನ್ನು ಕೊಟ್ಟು ತುಂಬಿಸಲಿಕ್ಕೋ? ಈಗ ಯಾಕೆ ಕೊಡುವಾರದು, ಮತ್ತೇನು ಪಟ್ಟೋಲೆ ಮತ್ತೇನು ಪದ್ಧತಿ. ಒಬ್ಬ ಸತ್ತು 6 ದಿನ ಕಳೆದು ಅದೇ ಮನೆಯಲ್ಲಿ ಪುನಃ ಒಬ್ಬರು ಸತ್ತು 5 ದಿನವಾದರೆ ಮುದ್ದುಕನ ಯಾವ ಕ್ರಿಯೆ ಪದ್ಧತಿಯಲ್ಲಿದೆ?

ಪಕ್ಷ 7, ಪಕ್ಷ 9 ಅಶುದ್ಧವಲ್ಲವೊ? ಮನಸ್ಸೋಲೆ ಪ ಪಾಡೇವ, ಮೊಡ್ಡನದೆಲ್ಲ ಪದ್ಧತಿ.

ಸಿ. ಎ. ಐಯ್ಯಪ್ಪ.

ವಿಕ್ಟೋರಿಯ ಮೋಟಾರು ಸರ್ವಿಸು.

ಆಯ್ಯಾ,

ತಾರೀಕು 31—7—25ನೆಯ 'ಲೋಕಪಾವನ' ದಲ್ಲಿ ವಿಕ್ಟೋರಿಯ ಮೋಟಾರ್ ಸರ್ವಿಸವರು ಮಡಿಕೇರಿಯಿಂದ ಸುಂಟಿಕೊಪ್ಪಕ್ಕೆ ಒಂದು ರೂಪಾಯಿಯ ಚಾರ್ಜನ್ನು ವಸೂಲು ಮಾಡಿಸಬಹುದಾಗಿ ಒಬ್ಬ ಪ್ರಯಾಣಿಕರು ಬರೆದಿರುವ ವಿಚಾರವು ಸಹಜವೇ ಸರಿ.

ತಾರೀಕು 25—7—25ನೆಯ ದಿನ ಬೆಳಿಗ್ಗೆ ಸದರಿ ಪ್ರಯಾಣಿಕರು ತನಗೆ ಸುಂಟಿಕೊಪ್ಪಕ್ಕೆ ಒಂದು ಟಿಕೇಟು ಕೊಡಬೇಕೆಂಬುದಾಗಿಯೂ, ತಾನು ಇತರ ಪ್ರಯಾಣಿಕರೊಡನೆ ಕುಳಿತುಕೊಳ್ಳಲು ಇಷ್ಟಪಡುವುದಿಲ್ಲವಾದ ಕಾರಣ ಡ್ರೈವರನ ಸಂಗಡದಲ್ಲಿ ಪ್ರತ್ಯೇಕ ಸ್ಥಳಕೊಡಬೇಕೆಂಬುದಾಗಿಯೂ ನನ್ನನ್ನು ಕೇಳಿದರು.

ಇವರು ಹೆಚ್ಚಿನ ಐಶ್ವರ್ಯವಂತರೂ, ಪೆನ್ಶನ್ದಾರರಾದ ದೊಡ್ಡ ಮನುಷ್ಯರೂ, ಲೋಕೋಪಕಾರಿಗಳೂ ಎಂಬುದನ್ನು ಚನ್ನಾಗಿ ಅರಿತಿದ್ದ ನಾನು ಇವರ ಯೋಗ್ಯತೆಗೆ ಅನುಸಾರವಾದ ಫಸ್ಟ್ ಕ್ಲಾಸು ಟಿಕೇಟನ್ನು ತೆಗೆದುಕೊಳ್ಳಲು ಸಮ್ಮತಿಸುವಿರೋ ಎಂದು ಅತಿ ದೈನ್ಯಭಾವದಿಂದ ಕೇಳಿದೆನು. ಅದಕ್ಕೆ ಆ ಮಹಾತ್ಮರು ಒಪ್ಪಿ ಒಂದು ರೂಪಾಯಿ ಕೊಟ್ಟ ನಂತರ ನಾನು ಅವರಿಗೊಂದು ಫಸ್ಟ್ ಕ್ಲಾಸ್ ಟಿಕೇಟನ್ನು ಕೊಟ್ಟು ಅವರ ಇಚ್ಛಾನುಸಾರವಾಗಿ ಬಸ್ಸಿನಲ್ಲಿ ಕುಳ್ಳಿರಿಸಿ ಕಳುಹಿಸಿದೆನಲ್ಲದೆ, ನಾನು ಇವರಿಂದ ಬಲಾತ್ಕಾರದಿಂದ ಹೆಚ್ಚಿನ ಹಣ ವಸೂಲು ಮಾಡಲಿಲ್ಲ.

ಇವರು ಇವರ ಗೌರವವನ್ನು ಉಳಿಸಿಕೊಳ್ಳಲಿಕ್ಕಾಗಿಯೂ ಹೆಚ್ಚಿನ ಅನುಕೂಲತೆಗಾಗಿಯೂ ಅರ್ಧರೂಪಾಯಿಯ ಮೊಬಲಗನ್ನು ಹೆಚ್ಚು ಕೊಟ್ಟು, ಈ ಅಲ್ಪ ವಿಷಯವನ್ನು ತಮ್ಮ ವೈಯುಕ್ತಿಕ ಆಟದ ಕೆಸರನ್ನು ತನ ಸೆಳೆದರೇ ತಿಳಿದಿರುವಂತೆ ಪ್ರಜೆಗಳಲ್ಲಿ ಬಹಿರಂಗಪಡಿಸಿ ಸಿಹಿಪಡಿಸುವ ಸ್ವಭಾವ ಮತ್ತು ನಮ್ಮ ಬಸ್ಸು ಸರ್ವಿಸನ್ನು ದೂಷಿಸುವ ಇಂಥ ಮಹಾನುಭಾವರಿಗೆ ನಮ್ಮಲ್ಲಿ ಕಾಯುವಲ್ಲ ಮೊಬಲಗನ್ನು ತಿಳಿಸಲು ತುಂಬಾ ವ್ಯಸನಪಡುತ್ತೇನೆ.

ಇವರು ನಾವು ಕೊಟ್ಟ ಟಿಕೇಟನ್ನು ಭದ್ರವಾಗಿಟ್ಟಿರುತ್ತೇನೆಂದು ಬರೆದಿರುತ್ತಾರೆ. ಇದನ್ನು ಇವರು ಇನ್ನು ಭದ್ರವಾಗಿ ಒಂದು ರೂಪಾಯಿಯೊಂದು ಮಹತ್ತಾದ ಬೆಲೆ ಬಾಳುವ ಸ್ಥಿರ ವಸ್ತುವೆಂದು ಭಾವಿಸಿ ಕಬ್ಬಿಣದ ಪೆಟ್ಟಿಗೆಯಲ್ಲಿ ಇಟ್ಟರೆ ನನಗೆ ಇನ್ನೂ ಸಂತೋಷ.

*   *   *   *   *

*   *   *   *   *

ದುಡ್ಡಿನ ಮೇಲೆ ಅತಿಆಶೆ ಇರುವ ಮನುಷ್ಯರು ಅನುಕೂಲತೆಯನ್ನು ತೃಣೀಕರಿಸಿ, ಕಾರ್ ಮತ್ತು ಬಸ್ಸಿನಲ್ಲಿ ಪ್ರಯಾಣ ಮಾಡುವುದನ್ನು ಬಿಟ್ಟು ದೇವರು ದಯಪಾಲಿಸಿರುವ ಕಾಲುಗಳಿಂದ ನಡೆಯುವುದೇ ಮೇಲು.

'ಏಜೆಂಟ್.'

"ಲೋಕರಹಸ್ಯ."

ಕೃಷಿಯ ಉತ್ಕೃಷ್ಟವಾದ ರೀತಿಗಳು, ವ್ಯಾಪಾರದ ವಿಷಯಗಳು, ಹೆಂಗಸರಿಗೆ ಬೇಕಾದ ಗೃಹಕೃತ್ಯದ ವಿಷಯಗಳು, ರೋಗಗಳು, ಮಕ್ಕಳನ್ನು ಸಾಕುವ ವಿಷಯಗಳು, ಬಡವರಿಗೆ ಬೇಕಾದ ಹಣ ಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದಯುನಾನಿ ವೈದ್ಯಸಂಗ್ರಹ, ಪ್ರತಿಯೊಬ್ಬನೂ ತಿಳಿಯಬೇಕಾದ 'ಲಾ' ವಿಚಾರ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂದೊಡಗೂಡಿ, ಹೊರಡುತ್ತಿರುವ ಈ ಮಾಸಪತ್ರಿಕೆಗೆ ವರ್ಷಕ್ಕೆ ಚಂದಾ ರೂ. 3—0—0 ಮಾದರಿ ಸಂಚಿಕೆಗೆ 0—5—0

ಪ್ರತಿ ತಿಂಗಳಲ್ಲೂ 60 ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

"ಲೋಕರಹಸ್ಯ" ಆಫೀಸು,
ವೀರರಾಜೇಂದ್ರಪೇಟೆ.
(ಕೊಡಗು.)

MY SCIENTIFIC SYSTEM OF GRADUATED PHYSICAL CULTURE.

SENT FREE TO EVERY ONE.

This will show you some of my remarkable achievements in Health building exercises, many pages with nice photographs of myself and a number of my pupils. Read what they say about my system. Don't take my word for it. This book will be an impetus an inspiration to every young man. All I ask is the price of postage two annas. Remember this does not obligate you in any way, so don't delay one minute in your life. Write for this big book now while it is on your mind.

Prof. M. V. Krishna Rao,

P. O. Basavangudi.

BANGALORE CITY (S. I.)

FOR SALE.

Property of Mr G. K. Martin.

About 9½ acres good land situated ove Abial Estate, about 5 miles from Mercara, suitable for coffee, and good bungalow site.

For particulars apply:—

W. G. L. PARSONS,
DALQUARREN,
CHETHALLI, P. O.
COORG.

ನೂರಾಟಿಕ್ಕೆ ತಯಾರಿದೆ.

- ಒಗೆ ಒಗೆಯ ಚಕ್ರಾಗಳು ವೀರರಾಜೇಂದ್ರಪೇಟೆಯ ಮಿದ್ದರ್ ಸ್ಟೋರ್‍ನಲ್ಲಿ ಮಾರಾಟಕ್ಕೆ ತಯಾರಿದೆ ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರುದುಕೊಳ್ಳಿ

ಎ ಪಿ ಎಯ್ಯಪ್ಪ
ಮಿದ್ದರ್ ಸ್ಟೋರ್ಸ್
4 ವೀರರಾಜಪೇಟೆ

FOR SALE.

The following property about ten miles from Mercara on Somwarpett road, consisting of —

	Rs	As	P
Wetlands 30.0; acres or about 1000 butties at Rs 500 per 100 butties	5000	0	0
Coffee 5.46 acres at Rs 400 per acre	13200	0	0
Bane and Jungle, 90.00 acres at Rs 20 per acre	1800	0	0
Total 154.39 acres	20000	0	0

With a decent upstaired house out houses and cooly lines is open for sale

Please apply to —

R. Framjee,
12-9 Mercara

ARMS & AMMUNITION.

NEW ARRIVALS! REVISED PRICES!!

Shot cartridges Nos 1-8 at Rs 13½ per 100
S G & L G cartridges at Rs 15 "
Bullet cartridges at Rs 19 "
Leather bullet cartridges at Rs 30

Book your orders early to avoid disappointment

Spencer & Co. Ltd,
MERCARA & POLLIBETTA
41

ಸಂಸತ್ತಿಯ ಸಾಧನಗಳು.

ಆಯಾ ಋತುಗಳಿಗೆ ಸಂಪತ್ತಿಯು ಅನ್ನ ಬಾಕರಿ ಯಲ್ಲಿದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು ಅದನ್ನು ಶೋಧಿಸಿ ತೆಗೆಯಲು ಕಿರ್ಲೋಸ್ಕರ ಕೃಷಿ ಸಾಯ ಮಟ್ಟುಗಳೇ ಯೋಗ್ಯವಾದ ಸಾಧನಗಳು.

ಲಕ್ಷಾವಧಿ ರೈತರು ಹೂಡಿ ಅನುಭವ ತೆಗೆದು ಕೊಂಡಿರುವರು ಭೂಮಿಯು ತಕ್ಕ ತರತರದ ನೇಗಿಲುಗಳೂ ಗಾಣಗಳೂ ದೊರೆಯುತ್ತವೆ ಕಿಸಾನ ಗಾಣವು ಒಂದು ಗಂಟೆಗೆ ೩೦೦ ಪೌಂಡು ಕಬ್ಬನ್ನು ಹಿಂಡಿ ಬಿಡುತ್ತದೆ

" ಕೊ ಗಾಬು ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್,
6 ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರು ದಿನಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯಕ್ರಯ ವಾಪಾಸು ಜಿ ಣಶಕ್ತಿ ರಕ್ತವೃದ್ಧಿ ಧಾತುಪುಷ್ಟಿ ಮನೋಲ್ಲಾಸ ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ

ಟ್ರೇಡ್‍ಮಾರ್ಕ್ [ರಿಜಿಸ್ಟರ್ ಮಾಡಿದ್ದು [ನೋಡಿ ತೆಕ್ಕೊಳ್ಳಿರಿ

ಅಗಸ್ತ್ಯಮನ್ಮಥ ಚಿಂತಾಮಣಿ ಲೇಹ

ಬಾಲವೃದ್ಧ ಸ್ತ್ರೀ ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾದದ್ದು ಮೇಹ ವಿಕಾರವಿದ್ದವರಿಗೂ, ನಿದ್ರೆ ಇಲ್ಲದವರಿಗೂ ಸ್ವಪ್ನೇಂದ್ರಿಯವಾಗುವ ಬಾಲಕರಿಗೂ ಜ್ಞಾನಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಬಹುಪರಿಮಾಣದ ಔಷಧಿ 1ಸೇರು 48ದಿವಸ ಸೇವಿಸುವದು ನಂ (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0 ½ಸೇರು ಡಬ್ಬಿ 1ಕ್ಕೆ ರುಪಾಯಿ 1—3— ನಂ (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0 ½ ಸೇರು ಡಬ್ಬಿ 1ಕ್ಕೆ 1—1—0 ವಿ ಪಿ ಖರ್ಚ ಪ್ರತ್ಯೇಕ ವಿಶೇಷ ಮಾಹಿತಿಗೆ ಬರೆಕೊಳ್ಳಿರಿ

ವಿಳಾಸ—ದೇವಣ್ಣ ನಾರಾಯಣಶೆಟ್ಟಿ
ಗೋಳಿಕಟ್ಟಾ
ಮಂಗಳೂರು
12-4 ದ ಕ

ಕರ್ಲೋ

ಚಳಿಜ್ವರ ಮಲೇರಿಯ ಜ್ವರ ಇನ್‍ಫ್ಲುಯೆಂಜ ಜ್ವರ ಮೊದಲಾದವುಗಳ ಮೇಲೆ ಅಪ್ರತಿಮವಾದವು

ಚಿಲೆ ಬಾಟ್ಲಿಯೊಂದಕ್ಕೆ ರು ೦—೧೪—೦
ಟಪ್ಪಾಲು ಚಾರ್ಜು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ
೯—೨—೦

ಏಜಂಟರು ಬೇಕು ಕೊಡಗಿನ ಸ್ಯಾಂಪಲ್ಸ್‍ರ ಮುಖ್ಯರಿನ ವರ್ತಕ ಅನ ಔಷಧದ ವ್ಯಾಪಾರಿಗಳು ತಿಳಿಸಿದಲ್ಲಿ ಅಂದವಾದ ವ್ಯಾಲಿಟಿಂಗ್ ಪೇಪರು ಪ್ರಕಟ
1°—1 ಕರ್ಲೋ ಕ ಫ್ರಬ್‍
ಗಿರಗಾಂವ, ಮುಂಬಾ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ
ಶೇರ್ ಬಂಡವಾಳ	10 000
ವಸೂಲಾದ ಶೇರ್ ಹಣಗಳು	908
ಜಮೆಯಾದ ಠೇವಣಾತಿ	78 000

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 6 ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯು

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರರು ಲೆಕ್ಕ ಆಡಿಟು ಮಾಡುತ್ತಾರೆ

ಪ್ರೆಸಿಡೆಂಟರು ಟ್ರೆಜರರ
ಕೊಡಂದೇರ ಕುಟ್ಟಯ್ಯನವರು ಯಂ ಭುಜಂಗರಾ
ರಾಯ್ ಬಹದ್ದೂರ್ ಬಿ.ಎ.

ಸಕ್ರೆಟರಿ
ಸಿ ಯಂ ವಂಕಪ್ಪಯ್ಯನವರು ಬಿ.ಎ., ಬಿ.
ತಾರೀಖು 1—7—1924

GOOLAMHUSSAIN ALI BHOY & SONS,

Largest Importers of Fire Arms and Ammunition, Cheapest priced firm in India,

210 Abdul Rehman Street, BOMBAY



We stock Arms Ammunition and shooting requisites of almost all the kinds and classes ranging from Re 1/- to Rs 3 600/-

Use our **Brilliant Search Light Lamp for Big Game Night shooting** price Rs 40/- Free Delivery

Apply for the Current Catalogue.
74-3

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ
ಎಡಿಟರ್ — ವಿದ್ವಾನ್ ಕೆ. ಶೇಷಶಾಸ್ತ್ರೀ ಆ
ವೇದವರ್ಧನ, ಇತ್ಯಾದಿ

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣತಾ ದಿಂದ ಕನ್ನಡ ಭಾಷೆಯಲ್ಲಿ ಪ್ರಕಟಿಸುವ ಮೊದಲನೇಯ ಎಂದರೆ! ಇದೇ ಆರೋಗ್ಯಸಂರಕ್ಷಣಾರ್ಥ ಬಹುತಾ ಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬರಿಗೂ ಈ ಯು ಬೇಕೇಬೇಕು ವ್ಯಾಧಿ ಬಂದಾಗ ತಕ್ಷಣ ತಿ ಳುವಂತೆ ಆಯಾ ರೋಗಗಳಿಗಿ ಚಿಕಿತ್ಸೆಗಳು ಬರೆಯ ದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿ ಯವರೂ ಕಯನ್ನು ಓದಲೇ ಬೇಕು ವಿಶೇಷವೇನು? ಮನೆ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದ ವದು

ವಾರ್ಷಿಕ ಚಂದಾ ಮೂರು ರುಪಾ

ವಿಳಾಸ—
ಮೇನೇಜರ್, ಶ್ರೀ ಧನ್ವಂತ
ಶೃಂಗೇರಿ, ಮೈಸೂರುಸ

Printed & published by Ko Appayya, R B, Chairman, Boar Directors, at " Kodagu " Press Me for " Kodagu Ltd

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧರ್ಮೇಣ ವಿದ್ಯಾ ನೀತಿ ಪ್ರಯತ್ನತಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೫] ಕೊಡಗು, ಸ [illegible] [illegible]ನೇ [illegible] ಶುಕ್ರವಾರ [illegible] ಸಂಚಿಕೆ ೧೦

ಆರೋಗ್ಯ ಚಂದ್ರಿಕೆ.

ವ [illegible]

ಸಂಪಾದಕರು [illegible] ರಾಮರಾವ್

[illegible] ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಜನರಿಗೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ ಈ ಮಾಸಪತ್ರಿಕೆಯು [illegible] ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರ್ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವದು

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅತಿ ಯೋಗ್ಯಗಳಾಗಿರುವವು ಆರೋಗ್ಯ ಚಂದ್ರಿಕೆಯನ್ನು ತರಿಸಿ ಜೈಂಡು ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೆ ಉಪಯುಕ್ತವಾಗುವ [illegible] ಗ್ರಂಥವಾಗುವದು ಅಂಚೆಯ ವೆಚ್ಚ ಸೇರಿ [illegible] ಚಂದಾ ಮಾಬಲು ರೂಪಾಯಿ 1 8 [illegible] 0-2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ ಆರೋಗ್ಯ ಚಂದ್ರಿಕೆ 323

ತಂಬುಚೆಟ್ಟಿ ವೀದಿ ಮದ್ರಾಸು

2 ನೋಟೀಸು.

ಈ [illegible] ಮಹನೀಯರು ಕೊಡಗು ಪತ್ರಿಕೆಯ ಏಜಂಟರಾಗಿ ಕೆಲಸ ಮಾಡಲು ಒಪ್ಪಿಕೊಂಡದ್ದರಿಂದ ಅವರಿಗೆ ರಶೀದಿಪುಸ್ತಕಗಳನ್ನು ನಮ್ಮ [illegible] ಕೂಟದ ಚಿಣ್ಣಪ್ಪನವರ ಮತ್ತು ಮ ಪಂಗಂಡ [illegible]ವರ ಜವಾಬುದಾರಿಕೆಯಮೇಲೆ ಕೊಡಲಾ [illegible] ಚಂದಾ ರಕ್ಕಹಣ ಅವರವರಿಗೆ [illegible]ಗದಲ್ಲಿ [illegible] ಕೊಡಬೇಕಾಗಿ ಕೋರಿಕೆ

ವಿರಾಜಪೇಟೆ—[illegible] ಮಣ್ಣನವರು

ಮೂರ್ನಾಡು—ಕರ್ವರ್ಣಯಲ್ ಸ್ಟೋರಿನಲ್ಲಿ ಮ ಮ ಚೆಯಂಡ ದೇವಯ್ಯನವರು

ನಾಪೋಕ್ಲು—ಮ ಅರೆಯಡ ಸುಬ್ಬಯ್ಯ ವರ ಮ ಪೊನ್ನಚಂಡ ಮುದ್ದಪ್ಪನವರು

ಗೋಣಿಕೊಪ್ಪಲು—ಮ ಬಿಮ್ಮಡ ಮ ದಪ್ಪನವರು

ಪೊಂ[illegible]ಟೆ—ಮ [illegible] ಮ[illegible]ಯ್ಯನವರು

ಹುಕೇರಿ—ಮ ಜಿ ಮಾದಯ್ಯನವರು

ಸಿದ್ದಾಪುರ—ಮ [illegible] ಪೂವಪ್ಪನವರು ಮ ಚಲಿಯಂಡ ಸೋಮಯ್ಯನವರು

ಈ ಸಮ್ಮಂಡ [illegible] ಚಿಣ್ಣಪ್ಪನವರ ಮತ್ತು ಗಂಡಕುಟ್ಟಪ್ಪನವರ ಕೊಡಗು [illegible] ಕಡೆಗಳಲ್ಲಿಯ ದಿಭಾಗುನಾರ ಸುತ್ತುತ್ತಿರುವಾಗ ಅವರಿಗೂ ಸಹ ಮಾ[illegible]ಡಬೇಕಾಗಿ ಕೋರಿಕೆ

ಕೋಸಂಡ ಉತ್ತಯ್ಯ

ಮ್ಯಾನೇಜಿಂಗ್ ಡೈರೆಕ್ಟರು 'ಕೊಡಗು' ಲಿಮಿಟೆಡ್

ಪ್ರಕಟನೆ.

[illegible]

ದ [illegible]

ಮಡಿಕೇರಿ

1792

ಮ್ಯಾನೇಜರ್

ನೋಟೀಸು.

[illegible] ಲ್ಲಿ [illegible] ಪ್ರವರದ [illegible] ಶ್ಲಾಪತ್ತು [illegible] ಸೆಪ್ಟೆಂಬರ [illegible] ತಾರೀಖಿನಿಂದ [illegible] ಕಾರ್ಯಕ್ರಮ [illegible] ನಾನು ಸಾರ್ವತ್ರಿಕವಾಗಿ [illegible] ಪತ್ರಿಕೆಗಳು [illegible] ಹಾಗೂ ಇನ್ನೂ ಕೆಲವು ಏಜಂಟರು ಹಾಗೂ [illegible] ಕೊಟ್ಟ ರಶೀತಿ ಪುಸ್ತಕಗಳನ್ನು ಸಹ ನನ್ನ ವಶದಲ್ಲಿ ಇದ್ದಪಕ್ಷ ಹಣ ಸಮೇತ ಪಡೆದ ಸ್ಥಳದಲ್ಲಿ ಮಡಿಕೇರಿಯಲ್ಲಿರುವ [illegible] ಕಳುಹಿಸಬೇಕಾಗಿ ಅಪೇಕ್ಷಿಸುತ್ತೇನೆ

ಸಿ ಎಸ್ ವೆಂಕಟಯ್ಯ

[illegible] ಸಲ್ಲ

ನೋಟೀಸು.

ದಕ್ಷಿಣ ಕೊಡಗಿನಲ್ಲಿ ಮದುವೆಕಾಗದ, ನೋಟೀಸು ಮತ್ತು ಬೇರೆ ಪ್ರಿಂಟಿಂಗ್ ಕೆಲಸ ಮಾಡಿಸಬೇಕೆಂದಿರುವವರು [illegible] ಏಜಂಟರಾದ [illegible] ರವರುಗಳ [illegible] ಮ್ಯಾನೇಜರವರಿಗೆ ಕೊಟ್ಟರೆ [illegible] ಶೀಘ್ರದಲ್ಲೇ [illegible] ಗಿಲೆಟ್ [illegible] ಮಾಡಿಸಿ ಒಪ್ಪಿಸಲಾಗುವದು

ಮ್ಯಾನೇಜರ್,

[illegible] ಮಡಿಕೇರಿ.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ

[illegible] ಕೊಡಗು [illegible] ಪತ್ರಿಕಾಕರ್ತರು [illegible] ವರ್ತಮಾನಗಳು ಕಾಗದ [illegible] ಕೊಡಗಿನ [illegible] ವಾಚಕರೆಲ್ಲ [illegible]

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮ್ಯಾನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

ನ್ಯೂ [illegible]

[illegible]

ಮಡಿಕೇರಿ ಮ್ಯಾನೇಜರ್,

ಕೊಡಗು ಲಿಮಿಟೆಡ್

ಮಹನೀಯರೇ,

1921ನೇ ಇಸವಿಯಲ್ಲಿ [illegible] ಸಾದ್ಯವಾದ [illegible] ಹೊಂದಿದ ನಮ್ಮ ಕಂಪೆನಿಯ [illegible] ಗೋಣಿಕೊಪ್ಪಲಿನಲ್ಲಿ [illegible]ದೆ

ಕೃಷ್ಣ ಸಂಸ್ಥೆ ಮತ್ತು ನಾರಾಯಣ ಸಂಸ್ಥೆ [illegible] ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು [illegible] ಇರುತ್ತಾರೆ

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ಪೈದ್ಯರತ್ನ [illegible] ಹೊಂದಿದವರಾಗಿಯೂ [illegible] ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ [illegible] ಪಡೆದವರಾಗಿಯೂ ಇರ [illegible] ನಾರಾಯಣನ್ ಮೂಸ್ ಎಂಬ ಮಹಾನುಭಾವರ [illegible] ವರ್ಷಗಳಿದ್ದು [illegible] ಪಡೆದವರಾಗಿಯೂ

[illegible] ಮಲಬಾರಿನ [illegible] ಕಡಿಮೆ

ಸಂಬೀರ [illegible] ಮತ್ತು ಕಂಪೆನಿ,

ಆರ್ಯವೈದ್ಯ [illegible] ಡಿಸ್ಪೆನ್ಸರಿ.

[illegible] ಮತ್ತು

ಗೋಣಿಕೊಪ್ಪಲು.

52 1

ARMS & AMMUNITION MART.

Mahomedally-Noorbhoy.



337, Abdul Rehman Street, near Crawford Market, BOMBAY.

Telegrahic Address:- "SHOOTER" Bombay

[52 51] Please write for latest Catalogues.

"ಕೊಡಗು"

ಸನ್ ೧೯೨೫ನೇ ಇಸವಿ ಆಗೊಸ್ಟು ತಾ. ೧೪ ನೇ ಶುಕ್ರವಾರ.

ದೇಶಭಕ್ತರ ಔದಾರ್ಯ.

ಒಂದುಸಾವಿರದ ಆರುನೂರು ರೂಪಾಯಿ ಕ್ರಯಕೊಟ್ಟು ಒಂದು ಮನೆಮತ್ತು ನಿವೇಶನವನ್ನು ಈ ತಾರೀಕು 8ರಲ್ಲಿ ಮ. ರಾ. ಶ್ರೀ. ನಿಡ್ಮದ ಸುಬ್ಬಯ್ಯನವರು ಕೊಡಗು ಜಮೀನ್ದಾರರ ಸಂಘಕ್ಕೆ ಉಚಿತವಾಗಿ ಕೊಡಿಸಿರುವರು. ಕೆಲವು ಕಾಲದಿಂದಲೇ ಈ ಸಂಘಕ್ಕೆ ಒಂದು ಕಟ್ಟಡವನ್ನು ಮಾಡಿಕೊಳ್ಳಬೇಕೆಂತ ಸಂಘದ ಪ್ರೆಸಿಡೆಂಟರೇ ಮೊದಲಾದವರು ಆಲೋಚಿಸುತ್ತಲೂ ಪ್ರಯತ್ನಿಸುತ್ತಲೂ ಇರುವುದು ದೇಶಕ್ಕೆ ತಿಳಿದ ಸಂಗತಿಯಾಗಿದೆ. ದೇಶದ ಹಿತಚಿಂತಕರ ಔದಾರ್ಯವನ್ನು ನಂಬಿ ಮೆ. ಮಾರ್ಗನಾರವರ ಮಡಿಕೇರಿ ಪೋಸ್ಟಾಫೀಸು ಬಳಿ ಇರುವ ಮನೆಯನ್ನು ಎಂಟುಸಾವಿರ ರೂಪಾಯಿ ಕ್ರಯವಾದರೂ ಕೊಟ್ಟು ಕೊಂಡುಕೊಳ್ಳಲಕ್ಕಾಗಿ ಸಂಘದವರು ಪ್ರಯತ್ನಿಸಿ ಸಫಲವಾಗಲಿಲ್ಲ. ಅನಂತರ ಕಟ್ಟಡ ಕಟ್ಟಲು ಮಡಿಕೇರಿಯಲ್ಲಿ ತಕ್ಕದಾದ ಸ್ಥಳ ಕೊಡಬೇಕೆಂದು ಕಮೀಷನರವರಿಗೆ ಬರೆಕೊಳ್ಳಲಾಯಿತು. ಸಂಘದವರು ಕೇಳಿದ ಒಂದು ಸ್ಥಳವು ಮಿಲಿಟರಿಯವರ ಉಪಯೋಗದ್ದೆಂದೂ, ಇನ್ನೊಂದು ಪೋಲೀಸಿನವರ ಕವಾತಿನ ಮೈದಾನವೆಂದೂ ಕಾರಣಕೊಟ್ಟು ಕೊಡಲು ಸಾಧ್ಯವಿಲ್ಲವೆಂಬ ಜವಾಬು ಬಂತು. ಈ ರೀತಿ ಎರಡಾವರ್ತಿ ಆಶಾಭಂಗರಾದ ಸಂಘದವರು ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಬಳಿ ಸ್ವಲ್ಪ ಕಾಲದ ಹಿಂದೆ ಗಡಂಗವಿದ್ದ ಕಟ್ಟಡ ಮತ್ತು ಅದರ ಹಿತ್ತಲನ್ನು ಅದರ ಮಾಲೀಕರಿಂದ ಕ್ರಯಕ್ಕೆ ಕೊಂಡುಕೊಳ್ಳಬೇಕೆಂದು ಯೋಚಿಸಿ ಈ ಬಗ್ಗೆ ಕೆಲವು ದಿವಸಗಳ ಹಿಂದೆ ವೀರಾಜಪೇಟೆಯಲ್ಲಿ ಕಮಿಟಿ ಮೀಟಿಂಗನ್ನು ನಡಿಸಿ ಸಂಘಕ್ಕೆ ಒಂದು ಕಟ್ಟಡವನ್ನು ಎರಡುಸಾವಿರ ರೂಪಾಯಿಯೊಳಗೆ ಕೊಂಡುಕೊಳ್ಳಲು ಅಧ್ಯಕ್ಷರಿಗೆ ಅಧಿಕಾರವು ಕೊಡಲಾಯಿತು.

ಮನೆಯ ಮಾಲೀಕರ ಸಂಗಡ ಪತ್ರವ್ಯವಹಾರ ನಡಿಸಿ 1600 ರೂಪಾಯಿಗೆ ಕ್ರಯಖಂಡನೆ ಮಾಡಿದ್ದಾಯಿತು. ಇದನ್ನರಿತ ಮ. ರಾ. ಶ್ರೀ. ನಿಡ್ಮದ ಸುಬ್ಬಯ್ಯನವರು ಈ ಮನೆ ಕೊಂಡುಕೊಳ್ಳಬೇಕಾದ ಪೂರ್ತಿ ಹಣವನ್ನು ತಾನು ಕೊಡುತ್ತೇನೆಂದು ಅಧ್ಯಕ್ಷರಿಗೆ ತಿಳಿಸಿದಲ್ಲಿ ಅವರು ಒಪ್ಪಿದಕಾರಣ ಹಣವನ್ನು ಕೊಟ್ಟರು. ಈ ವಿಶೇಷವಾದ ಧಾರಾಳ ಮನಸ್ಸಿನ ದಾನದಿಂದ ಈಗಾಗಲೆ ಮೇಲಿನ ಕಟ್ಟಡವು ಸಂಘದ ಸ್ವಾಧೀನಕ್ಕೆ ಬಂದಿದೆಯೆಂದು ತಿಳಿಸಲು ಬಹಳ ಸಂತೋಷಪಡುತ್ತೇವೆ. ಈ ಮಹನೀಯರಿಗೆ ನಮ್ಮ ಮನಃಪೂರ್ತಿ ವಂದನೆಗಳನ್ನು ಅರ್ಪಿಸುತ್ತೇವೆ.

ಕೊಡಗು ದೇಶದಲ್ಲಿ ಮತಸಂಬಂಧವಾದ ಕಾರ್ಯಗಳಿಗೂ ಕಟ್ಟಡಗಳಿಗೂ ಮತ್ತು ವಿದ್ಯಾಭಿವೃದ್ಧಿಗಾಗಿಯೂ ದೊಡ್ಡ ದೊಡ್ಡ ಉಚಿತಾರ್ಥಗಳನ್ನು ಕೊಟ್ಟ ಉದಾಹರಣೆಗಳಿವೆ. ಆದರೆ ರಾಜಕೀಯ ಚಳವಳವನ್ನು ಪ್ರೋತ್ಸಾಹಿಸುವ ಸಂಸ್ಥೆಗೆ ಇಷ್ಟು ದೊಡ್ಡ ಧನ ಸಹಾಯವನ್ನು ಮಾಡಿದ್ದು ಇದೇ ಮೊದಲು. ಧಾರ್ಮಿಕ ಬುದ್ಧಿಯಿಂದ ಮಾಡುವ ಉಚಿತ ಕಾರ್ಯಗಳಲ್ಲಿ ಮೇಲ್ಮೆ ಇದೆ. ಆದರೆ ಸ್ವತಂತ್ರವನ್ನು ಕಳಕೊಂಡು ಅಧೀನವಾಗಿರುವ ಹಿಂದುಸ್ಥಾನದ ಒಂದು ಭಾಗವಾದ ಕೊಡಗಿನ ಸ್ವತಂತ್ರಕ್ಕಾಗಿ ಹೋರಾಡುತ್ತಿರುವ ಜಮೀನ್ದಾರರ ಸಂಘಕ್ಕೆ ಕೊಟ್ಟಿರುವ ಈ ಉಚಿತವು ಬಹಳ ಮಹತ್ವದ್ದೆಂತ ನಮ್ಮ ಅಭಿಪ್ರಾಯವಾಗಿದೆ. ಈ ಉದಾರ ಮನಸ್ಸಿನ ಮಹನೀಯರು ಬ್ರಾಹ್ಮಣ ವರ್ಗದ ಯುವಕರ ವಿದ್ಯಾಭ್ಯಾಸಕ್ಕೆ ಅನುಕೂಲವನ್ನು ಒದಗಿಸಿಕೊಡಲಿಕ್ಕಾಗಿ ಒಂದುಸಾವಿರದ ಆರುನೂರು ರೂಪಾಯಿ ಕ್ರಯಕೊಟ್ಟು ಎರಡು ಕಟ್ಟಡಗಳನ್ನು ಕೊಡುಕೊಟ್ಟರು. ಈ ಉಚಿತವು ಸ್ತೋತ್ರಾರ್ಹವೇ. ಆದರೆ ಒಟ್ಟು ಕೊಡಗು ದೇಶದ ಜನಾಂಗದ ಅಭ್ಯುದಯಕ್ಕಾಗಿ ಜಾತಿಮತ ಭೇದವಿಲ್ಲದೆ ಹೋರಾಡುತ್ತಿರುವ ಜಮೀನ್ದಾರರ ಸಂಘಕ್ಕಾಗಿ ಮಾಡಿರುವ ಸಹಾಯವು ಅತಿ ಶ್ಲಾಘನೀಯವಾಗಿದೆ.

ರಾಜಕೀಯ ಚಳವಳಕ್ಕೆ ಉತ್ತೇಜನ ಕೊಡಬೇಕಾದರೆ ಕೆಲವುಮಟ್ಟಿಗೆ ಧೈರ್ಯವಿರಬೇಕು. ಎಲ್ಲಾವರ ಪ್ರೀತಿಯನ್ನು ಇದರಿಂದ ಸಂಪಾದಿಸಲು ಸಾಧ್ಯವಿಲ್ಲವೆಂತ ತಿಳಿದೂ ಸಹ ದೇಶದಲ್ಲಿ ರಾಜಕೀಯ ತಿಳುವಳಿಕೆಯು ಹಬ್ಬಬೇಕೆಂಬ ತಮ್ಮ ಮನಸ್ಸಾಕ್ಷಿಯನ್ನು ಅನುಸರಿಸಿ ಈ ಉಚಿತವನ್ನು ಕೊಟ್ಟಿದ್ದಾಗಿರಬೇಕು. ರಾಜಕೀಯ ಆಡಳಿತವು ಹೇಗೆ ನಡೆಯುತ್ತಿದೆ ಎಂಬುದನ್ನೂ ದೇಶವು ಸ್ವತಂತ್ರವನ್ನು ಕಳಕೊಂಡು ಬಹಳ ಶೋಚನೀಯ ಸ್ಥಿತಿಯಲ್ಲಿ ಇದೆ ಎಂಬುದನ್ನೂ ಸಾಧಾರಣವಾಗಿ ಇಂಗ್ಲಿಷ್ ಭಾಷೆ ತಿಳಿದ ವಿದ್ಯಾವಂತರೇ ಅರಿತಿರುವರೆಂಬ ಅಭಿಪ್ರಾಯವು ಹರಡಿಕೊಂಡಿರುವದಾಗಿದೆ. ಆದರೆ ಮ. ರಾ. ಶ್ರೀ ಸುಬ್ಬಯ್ಯನವರು ಇಂಗ್ಲಿಷ್ ಓದು ಬರಹ ತಿಳಿಯದಿದ್ದರೂ ರಾಜಕೀಯ ಎಚ್ಚರಿಕೆಯನ್ನು ದೇಶದಲ್ಲಿ ಹುಟ್ಟಿಸಿ, ಕಳೆದುಕೊಂಡ ಸ್ವತಂತ್ರವನ್ನು ಸಂಪಾದಿಸಬೇಕೆಂಬ ಕುತೂಹಲವು ಅವರಲ್ಲಿ ಎಷ್ಟರಮಟ್ಟಿಗೆ ಇದೆಯೆಂಬುದು ಅವರ ಈ ಮಹತ್ವದ ಉದಾರದಿಂದ ಗೊತ್ತಾಗುತ್ತದೆ. ಇಂಗ್ಲಿಷ್ ತಿಳಿಯದವರಾದರೂ ಜನರ ಸ್ಥಿತಿಯನ್ನು ತಿಳಿದುಕೊಂಡು ಅವರ ಹಿತಕ್ಕಾಗಿ ಸಾರ್ವಜನಿಕ ಸಂಸ್ಥೆಗಳಲ್ಲಿ ಸೇರಿ ಹೋರಾಡುವದು ಎಲ್ಲರಿಗೂ ಸಾಧ್ಯವಿದೆ ಎಂಬುದನ್ನೂ ಇವರು ಸಿದ್ಧಪಡಿಸಿರುವರು.

ಮ. ರಾ. ಶ್ರೀ ಸುಬ್ಬಯ್ಯನವರು ಸಂಘವು ಉತ್ಪನ್ನವಾದಂದಿನಿಂದಲೂ ಅದರ ಎಗ್ಸಿಕ್ಯೂಟಿವ್ ಕಮಿಟಿಯಲ್ಲಿ ಇದ್ದು 1922ನೇ ಇಸವಿಯಿಂದ ಅದರ ವೈಸ್ ಪ್ರೆಸಿಡೆಂಟರಾಗಿದ್ದಾರೆ. ಸಂಘಕ್ಕಾಗಿ ಸಂಚಾರಮಾಡಿ ತಾಲೋಕಿನಲ್ಲಿ ತುಂಬಾ ಕೆಲಸಮಾಡಿ ರಾಜಕೀಯ ವಿಷಯದಲ್ಲಿ ಹಿಂದೆ ಬಿದ್ದ ಆ ತಾಲೋಕಿನ ಜನರನ್ನು ಕೆಲವು ಮಟ್ಟಿಗಾದರೂ ಎಚ್ಚರಗೊಳಿಸಿರುವರು. ಈ ದೇಶಭಕ್ತರ ಉದಾಹರಣೆಯನ್ನು ಸಾಧ್ಯವಿರುವ ದೇಶೀಯರನೇಕರು ಹಿಂಬಾಲಿಸಿದರೆ ಸಂಘಕ್ಕೆ ಅನೇಕ ವರುಷಗಳಿಂದಲೂ ಇರುವ ಕೊರತೆಯನ್ನು ಸುಲಭದಲ್ಲಿ ಹೋಗಲಾಡಿಸಿಕೊಳ್ಳಬಹುದು.

ಅವರ ಈ ಮಹದುಪಕಾರವು ಚಿರಸ್ಮರಣೀಯವಾಗಿರುವಂತೆ ತಕ್ಕ ಏರ್ಪಾಡನ್ನು ಸಂಘದವರು ಮಾಡದೆ ಇರಲಿಕ್ಕಿಲ್ಲವೆಂತ ನಂಬುತ್ತೇವೆ.

ದಿವಂಗತ ಸರ್ ಸುರೇಂದ್ರನಾಥ್ ಬೆನಾರ್ಜಿಯವರು.

ಈಗಿನ ಕಾಲದ ಜನರಲ್ಲು ಹಿಂದುಳಿದವರನ್ನು ಮುಂದಕ್ಕೆ ತರಬೇಕೆಂಬುದೇ ನಮ್ಮನ್ನಾಳುವ ಜನ ಸರಕಾರದವರ ಧ್ಯೇಯವಾಗಿರುತ್ತದೆ. ಹಾಗಾದರೆ ಹಿಂದುಳಿದವರನ್ನು ಮುಂದಕ್ಕೆ ತರುವುದಕ್ಕಾಗಿ ನಮ್ಮ ಪ್ರಭುಗಳು ಮಾಡಬೇಕಾದ ಕೆಲಸಗಳೇನು? ಈ ಕೊಡಗು ದೇಶದಲ್ಲಿ ಕೇವಲ ಹಿಂದ ಉಳಿದವುಗಳು ಕಣ್ಣಿಗೆ ಬೀಳುತ್ತವೆ. ಗಡಿಪ್ರದೇಶಗಳಲ್ಲಿ, ಹಿಂದುಳಿದ ಸ್ಥಳಗಳಲ್ಲಿ ಸಂಚರಿಸಬೇಕಾದ ತಾಪತ್ರಯಗಳು ಅನೇಕ. ವಾಣಿಜ್ಯಕ್ಕಾಗಿ ಇವುಗಳು ದೇಶದ ಅಂತ್ಯ ಭಾಗಗಳಲ್ಲಿವೆ. ಈ ಮೂಲೆಗಳಲ್ಲಿ ಇರುವವರನ್ನು ಮುಂದಕ್ಕೆ ತರಬೇಕಾದರೆ ಏನು ಉಪಾಯ? ಗಡಿಯ ಈ ಕಡೆಗಳಲ್ಲಿ ಬ್ರಾಂಚ್ ಪೋಸ್ಟಾಫೀಸುಗಳನ್ನು ತೆರೆದರೆ ದೇಶದ ಈಗಿನ ಸ್ಥಿತಿಗೆ ಕ್ರಮೇಣ ಉತ್ತಮ ಸ್ಥಿತಿ ಬರುವುದು. ... ಇದರ ಎಲ್ಲ ... ಮಹಾಜನರ ... ಸರ್ಕಾರದ ... ಜೊತೆಗೆ ... ಇಂದ ಕೆಲವು ಪೋಸ್ಟಾಫೀಸುಗಳನ್ನು ತೆರೆಯುವ ... ಸಂಚಿಕೆಯ ... ಕೊಡಗು ಪತ್ರಿಕೆಯ ... ವಿಷಯದಲ್ಲಿ ... ತರುವ ಬ್ರಾಂಚ್ ಪೋಸ್ಟಾಫೀಸು ... ಬಗ್ಗೆ ... ಒಂದು ಪೋಸ್ಟಾಫೀಸು ... ಎಂಬ ದಿನಕ್ಕೆ ಒಂದು ಸಲ ... ಕಾಗದ ಪತ್ರಗಳು ... ಪೋಸ್ಟ್ ಮಾಸ್ತರು ... ಪೋಸ್ಟಾಫೀಸಿನ ಬ್ಲಾಂಚ್ ... ಇದು ಯಾವ ನ್ಯಾಯ? (ಕುಗ್ರಾಮದ ... ವಾದವರು ವಲ್ಲಿ) ಆದ ಇದ್ದಕಡೆ ಪೋಸ್ಟಾಫೀಸು ಇದ್ದುತ್ತು ದಂತೆ, ನನ್ನ ಇರುವ ಕಡೆ ತೆಗೆಯಬೇಕೆಂತ ಇದು ದೈವಿಕರ ಪರಿಪಾಲನೆಯಾಡುವ ಸರಕಾರದ ಕೆಲಸವೋ? ವ್ಯಾಪಾರಸ್ಥರ ಸಹಾಯಕ್ಕೆಂತರೂಲ್ಲವೇ? ಇದಕ್ಕೆ ದೃಷ್ಟಾಂತರ - ಕಕ್ಕಬೆ ಪೋಸ್ಟಾಫೀಸನ್ನು ಬಂದಾವರ್ತಿ ತೆಗೆದು ಹಾಕಬೇಕೆಂದು ಆ ರಾಯ ಪೆಡ್ಡ ನೋಡಿದರು. ಮತ್ತೊಂದಾವರ್ತಿ ದಿನಕ್ಕೆ ಟಪ್ಪಾಲು ಬೇಡ ಎರಡು ದಿನಕ್ಕೊಮ್ಮೆ ಎಂದು ಮಾಡಿದರು. ಈಗ ಏಜೆಂಟ್ ಫೋ ಸ್ಟಾಂಪ್ ಬೇಡ, ಪೋಸ್ಟಾಫೀಸಿನ ಕಾಗದ, ಪಾರ್ಸೆಲ್, ಮನಿಆರ್ಡರ್ ವಗ್ಗರೆ ಒಟನಾಡಿ ಹೋಗಿ ಕೊಳ್ಳಬೇಕು, ಇದಕ್ಕೆ ಇವರಿಗೆ ಹಟಗ ಎಲೋವೆನ್ಸ್ ಅಂತೆ. ಈ ಕಕ್ಕಬೆ ಪೋಸ್ಟಾಫೀಸಿಗೆ ಸೇರಿದ ಗ್ರಾಮಗಳು ಬೆಟ್ಟ ಕಾಡು, ಹೊಳೆ ತೆಂಡಗಳಿಂದ ತುಂಬಿ ದಾರಿಯಿಲ್ಲದ ಪೋಲೀಸ್ ಸ್ಟೇಷನ್ ಆಗಲಿ ಸಂಬಂಧಪಟ್ಟ ಪ್ರದೇಶ ... ಇವರಿಗೆ ಇನಾಸ್ಪೆಕ್ಟರು, ರಿಜಿಸ್ಟರ್, ಪಾರ್ಸೆಲು ... ಈ ಪೋಸ್ಟಾಫೀಸಿಗೆ 20 ... ಜನರ ಸಹಾಯದಿಂದ ... ಅಪ್ಪೆರಾದು, ಮನೆವಾರು, ವರದಿ ... ಇಂತ ... ಗ್ರಾಮ ... ದ ಇರುವ ಇವರ ... ಕಾಗದ ಒಟನಾಡಿಗೆ ... ಪ ದರ ಅಧಿಕಾರಿ ... ವರ ... ಈ ... ಗ್ಗ ... ವ ಕೊಡಗು ... ಪೋಸ್ಟಾಫೀಸು ... ಆಗಬೇಕು ... ಮೇಲಿನ ... ಗ್ರಾಮದ ... ಸಂಜೆ ಬರಬೇಕು. ... ಟಪ್ಪಾಲು ... ಗ್ಗಾಂಟ್ ... ಆ ... ಕೆ ... ಸದರಿ ಈ ಗನ್ನ ಪೋಸ್ಟಾಫೀಸಿಗೆ ಆಗುವ ನಷ್ಟವನ್ನು ಕೂಡಿಸದರೂ ಮಾಡಿ ಈ ನಾಡಿನ ಗರೀಬ ರೈತರಿಗೆ ಸಹಾಯವಾಗುವಂತೆ ಸರಿಯಾಗಿ ಕಾಗದಪತ್ರ, ಒಟನಾಡೆಯಾಗ ... ನಡವಳಿಕಾಗಿ ಸರಕಾರದವರು ... ಗ್ರಾಮಗಳಿಗೂ ನವ ಸಂಗತಿ

ಒಬ್ಬ ರೈತ

FOR SALE.

The following property about ten miles from Mercara, on Somwarpett road, consisting of —

	Rs	As	P
Wetland 30.93 acres or about 1000 butties at Rs 500/ per 100 butties	5000	0	0
Coffee, 33.46 acres at Rs 400 per acre	13200	0	0
Bane and Jungle 40.00 acres at Rs 20 per acre	1800	0	0
Total 104.39 acres	20000	0	0

With a decent upstaired house, out houses, and cooly lines,

is open for sale

Please apply to —

R Framjee,

12-3 Mercara.

"ಲೋಕರಹಸ್ಯ."

ಕೃಷಿಯ ಅಭ್ಯುದಯ ರೀತಿಗಳು, ನ್ಯಾಯಾರವ ವಿಷಯಗಳು, ಹಣಗಳಿಗೆ ಬೇಕಾದ ಗೃಹಕೃತ್ಯದ ವಿಷಯಗಳು, ಮಕ್ಕಳನ್ನು ಸಾಕುವ ವಿಷಯಗಳು, ಒಡನಾಡಿ ಪೇಲಾದ ಹಣ ಸಂಪಾದನೆಯ ವಿಷಯಗಳು, ದೀರ್ಘ ಜೀವನ ವಿಚಾರ, ರಾಜಕೀಯ ವಿಷಯಗಳು, ಜಾದೂಗಾರಿಯ ವಿನಾನಿ ವೃದ್ಧಿ ಸಂಗ್ರಹ ಪ್ರತಿಯೊಬ್ಬರ ಆವಶ್ಯಕವಾದ 'ಆಚಾರ, ವಿಚಾರ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂದ ತುಂಬಿ ತುಳುಕಾಡುವ ಈ ಮಾಸ ಪತ್ರಿಕೆಗೆ ವರ್ಷಕ್ಕೆ ಅಂಚೆ ಸಹ 3-8-0 ಮಾದರಿ ಸಂಚಿಕೆಗೆ 0-5-0

ಪ್ರತಿ ತಿಂಗಳೂ 60 ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ

"ಲೋಕರಹಸ್ಯ" ಆಫೀಸು,
ವೀರರಾಜೇಂದ್ರಪೇಟೆ
(ಕೊಡಗು.)

ಬೇಟೆಗೆ ಅವಶ್ಯವಾದ

ಕೋವಿ ಮದ್ದು ಪೌಂಡಿಗೆ ರೂ ೩-೪-೦

ಕೇಪು ಕೋವಿನ ಕಟ್ಟುಗಳು, ೩,೦೦೦ ಉಳ್ಳ ಪೆಟ್ಟಿಗೆಗೆ ೯-೬-೦



ಆರ್ಡರು ಕಳುಹಿಸುವಾಗ್ಗೆ ಮುಂಗಡವಾಗಿಯೂ ರೂ 5 ಅಡ್ವಾನ್ಸು ಕಳುಹಿಸತಕ್ಕದ್ದು. ಜಮ್ಮು ಹಿಡುವಳಿದಾರರು ಆರ್ಡರು ಕಳುಹಿಸುವಾಗ ಮೊದಲನೇ ಸಾರಿಮಾತ್ರ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರಿಂದ ವಿನಾಯತಿ (ಎಕ್ಸೆಂಪ್ಷನ್) ಸರ್ಟಿಫಿಕೇಟನ್ನು ಕಳುಹಿಸಬೇಕು ... ಈ ಸರ್ಟಿಫಿಕೇಟು ... ತಯಾರಾಗಿದೆ.

ಈ ... ಕನ್ನಡ ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿ ನಡೆಸತಕ್ಕದ್ದು.

S Venkitarangam Chetty,
Ammunition Sulphur Merchant
No 9 China Bazar
12—1 Madras

MY SCIENTIFIC SYSTEM OF CRAI (?) ATED PHYSICAL CULTURE

SENT FREE TO EVERY ONE

This will show you some of my remarkable achievements in Health building exercises, many pages with nice photographs of myself and a number of my pupils. Read what they say about my system. Don t take my word for it. This book will be an impetus and inspiration to every young man. All I ask is the price of postage two annas. Remember this does not obligate you in any way, so don t delay one minute in your life. Write for this big book now while it is on your mind.

Prof. M. V. Krishna Rao,
P O Basavangudi
BANGALORE CITY (S. I.)

ARMS & AMMUNITION.

NEW ARRIVALS! REVISED PRICES!!

Shot cartridges Nos 1 & at Rs 13| per 100
S G & L G cartridges at Rs 15 "
Bullet cartridges at Rs 19 "
Leather bullet cartridges at Rs 30

Book your orders early to avoid disappointment

Spencer & Co.Ltd,
42 MERCARA & POLLIBETTA.

ನೀರಿನ ಚಿಂತೆಯನ್ನು ತಪ್ಪಿಸುವ ಕಿರ್ಲೋಸ್ಕರ ಪಂಪು.

ಮನೆಗಳಲ್ಲಿ ನೀರು ಸೇದುವದೊಂದು ಬಹು ಕಷ್ಟವಾದುದು. ಇದರಲ್ಲಿ ಈ ಕೆಲಸವನ್ನು ಕರ್ನಾಟಕದಲ್ಲಿ ಬಹು ಕರೆ ಸ್ತ್ರೀಯರೇ ಮಾಡಬೇಕಾದ್ದರಿಂದ ಅದು ಇನ್ನು ದಿ ಕಷ್ಟವಾಗುತ್ತೆ. ಮನೆಯಲ್ಲಿ ಶ್ರೀಮಂತರಿದ್ದಾಗ್ಯೂ ನೀರಿನ ವಿಷಯದಲ್ಲಿ ಸತತ ಸೇದಬೇಕಾಗುತ್ತದೆ. ಆದ್ದರಿಂದ ಈ ಅಡಚಣೆಗಳು ... ದೂರವಾಗುವದಕ್ಕೆ

ಕಿರ್ಲೋಸ್ಕರ ಪಂಪುಗಳನ್ನೇ ...

... ಬಾವಿಗಳಲ್ಲಿ ... ಇವುಗಳು ... ಅನುಕೂಲವಾಗುವದರಿಂದ ... ಗಳು ಇರುತ್ತವೆ.

...

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
ಜಿ. ಸಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರು ದಿವಸಗಳಲ್ಲಿ ಗುಣ ಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು. ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮಾಡುವದು ಸುಖ ಜೀವನಕ್ಕೆ ಬೇಕಾದ ಆರೋಗ್ಯ ದಾಯಿನಿ

ಟ್ರೇಡ್‌ಮಾರ್ಕ |ರಿಜಿಸ್ಟರ್ ಮಾಡಿದ್ದು |ನೋಡಿ ತೆಕ್ಕೊಳ್ಳಿರಿ

ಅಗಸ್ತ್ಯ ಮನ್ಮಥ ಚಿಂತಾಮಣಿ ಲೇಹ

ಅಬಾಲವೃದ್ಧ ಸ್ತ್ರೀ ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾದದ್ದು. ಮೇಹ ವಿಕಾರವಿದ್ದವರಿಗೂ, ಸಿದ್ದ ... ದವರಿಗೂ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ, ಬ್ರಹ್ಮಚಾರಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಒಹುಪರಮಾನಂದ ಔಷಧಿ 1ಸೇರು 18ದಿವಸ ಸೇವಿಸಬಹುದು. ನಂ (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0 1ಸೇರು ಡಬ್ಬಿ 1ಕ್ಕೆ ರುಪಾಯಿ 1—9—0 ನಂ (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, 1 ಸೇರು ಡಬ್ಬಿ 1ಕ್ಕೆ 1—1—0, ವಿ ಪಿ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ

ವಿಳಾಸ —ವೈದ್ಯ ನಾರಾಯಣಶೆಟ್ಟಿ
ಗೂಳೀಕಟ್ಟಾ,
ಮಂಗಳೂರು,
12—3 ದ ಕ

ಕರ್ಣಾಟಕ

ಚಳಿಜ್ವರ ಮಲೇರಿಯ ಜ್ವರ ಇನ್‌ಫ್ಲೂಯೆಂಝಾ ಆದಿ ಜ್ವರ ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು

ಚಿಕ್ಕ ಬಾಟ್ಲಿಯೊಂದಕ್ಕೆ ರು ೦—೧೪—೦

ಟಪ್ಪಾಲು ಚಾರ್ಜು ಬೇರೆ

ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು. ೯—೦—೦

ಏಜಂಟರು ಬೇಕು ಕೊಡಗಿನ ಸ್ಥಳ... ಮೈಸೂರಿನ ... ಡಿವಿಜನ್ ... ಹೆಸರನ್ನು ... ಬರೆದವರಿಗೆ ...

12—2 ಕರ್ಣಾಟಕ ಸ್ಟೋರ್ಸ್
ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ

	ರೂ
ಶೇರ್ ಬಂಡವಾಳ	50 000
ವಸೂಲಾದ ಶೇರ್ ಮೊಬಲಗು ...	9040
ಒಟ್ಟು ಬಂದ ಠೇವಣಾತಿ	78 000

ಈ ಬ್ಯಾಂಕಿನಿಂದ ಕೊಡಗು ... ಸಹಕಾರಿ ಸಂಘಗಳಿಗೆ ಸಾಲ ... ಕೊಡಲ್ಪಡುವದು.

ಒಂದು ವರ್ಷ ... ಬಡ್ಡಿಯ ದರದಲ್ಲಿ ... ಠೇವಣಾತಿಗಳಿಗೆ ... ರೂ 6-4-0ರ ದರದಲ್ಲಿ ಬಡ್ಡಿ ... ಠೇವಣಾತಿಗಳಿಗೆ ಶೇಕಡ ನಾಲ್ಕುವರೆ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು	ಟ್ರೆಜರರ್.
ಕೇಚಮಾಡೇರ ಕುಟ್ಟಯ್ಯನವರು,	ಯಂ ಭುಜಂಗರಾಯರು
ರಾಯ್ ಬಹದ್ದೂರ್	ಬಿ.ಎ , ಬಿ ಎಲ್

ಸೆಕ್ರಿಟರಿ

ಸಿ ಯಂ ಮಂಕಪ್ಪಯ್ಯನವರು, ಬಿ.ಎ, ಬಿ ಎಲ್

ತಾರೀಕು 1—7—1924

GOOLAMHUSSAIN ALLIBHOY & SONS,

Largest Importers of Fire Arms and Ammunition, Cheapest priced firm in India,

210 Abdul Rehman Street, BOMBAY

Brilliant Search light tied over the hat.



Use of Brilliant Search Light Lamp for Hunting, Camping, Fishing Trapping and all kinds of out door shorts during the night, price Rs 40/- Free Delivery

12 and 16 bore Zeppelin bullet cartrdges **recommendable for big Game shooting,** Rs 30/-100.

We stock Arms, Ammunition and shooting requisites of almost all the kinds and classes ranging from Re 1/- to Rs 3,600/-

Apply for the Current Catalogue.
24—6

ಶ್ರೀ

ಶ್ರೀ ಧನ್ವಂತರಿ.

... ಮಾಸ ಪತ್ರಿಕೆ

ಎಡಿಟರ್.— ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಅಕ್ಕಾಣಿ.

ದೇಶೀಯ ವೈದ್ಯವನ್ನು ನವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೆಯ ಪತ್ರಿಕೆ ಎಂದರೆ ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ... ಈ ಪತ್ರಿಕೆಯು ... ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇಬೇಕು ... ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವು ವೈದ್ಯನೂ ಇದ್ದಂತಾಗುವುದು

ವಾರ್ಷಿಕ ಚಂದಾ ಮೂರು ರುಪಾಯಿ

ವಿಳಾಸ.—

ಮ್ಯಾನೇಜರ್, ಶ್ರೀ ಧನ್ವಂತರಿ, ಶೃಂಗೇರಿ, ಮೈಸೂರುಸ್ಟೇಟ್.

Printed & published by Kodandi Appayya, R B Chairman, Board of Directors, at " Kodagu " Press, Mercara for " Kodagu " Ltd

If not delivered please return to
"KODAGU" OFFICE. MERCARA.

ಕೊಡಗು.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಕೊಡಗು, ಸನ್ [illegible] ಇಸವಿ ಆಗೋಸ್ತು ತಾರೀಕು [illegible] ನೇ ಶುಕ್ರವಾರ

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು ರಾಮರಾವ್,
ಯಮ್. ಎಲ್ ಸಿ ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ತಿಳುವಳಿಕೆ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾದರೂ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8 0. ಬಿಡಿ ಪತ್ರಿಕೆ 1ಕ್ಕೆ 0-2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ. 'ಆರೋಗ್ಯ ಚಂದ್ರಿಕೆ' 323,
ತಂಬುಶೆಟ್ಟಿ ಬೀದಿ, ಮದ್ರಾಸ್.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಕೋಟೆರ ಚಿಣ್ಣಪ್ಪನವರ ಮತ್ತು ಮೆ. ಜಂಗಂಡ ಕುಟ್ಟಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಬಾಗದಲ್ಲಿ ಪಾವತಿ ಕೊಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರರಾಜಪೇಟೆ—ಖಾದಿ ಭಂಡಾರದಲ್ಲಿ ಮೆ ಮಂಡೇಟಿರ ಚೆರಮಣ್ಣನವರು

ಮೂರ್ನಾಡು—ಕಮರ್ಶಿಯಲ್ ಸ್ಟೋರಿನಲ್ಲಿ ಮೆ. ಮಡೆಯಂಡ ದೇವಯ್ಯನವರು

ಸಾಪೋಕ್ಲು—ಮೆ. ಅರೆಯಂಡ ಸುಬ್ಬಯ್ಯನವರು
,, ಮೆ ಪೂಣಚಂಡ ಮುದ್ದಪ್ಪನವರು.

ಗೋಣಿಕೊಪ್ಪಲು—ಮೆ. ಐಮ್ಮಂಡ ಮಾದಪ್ಪನವರು

ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಪ್ಪಯ್ಯನವರು.

ಮಡಿಕೇರಿ—ಮೆ. ಪಿ. ಮಾದಪ್ಪನವರು.

ಅಮ್ಮತ್ತಿ ಸಿದ್ದಾಪುರ—ಮೆ. ಐನಂಡ ಮಾದಪ್ಪನವರು.
ಮೆ. ಕಲಿಯಂಡ ಸೋಮಯ್ಯನವರು

ಇಲ್ಲದೆ ಈ ಸಮ್ಮಂಧ ಕೋಟೇರ ಚಿಣ್ಣಪ್ಪನವರು ಮತ್ತು ಜಂಗಂಡ ಕುಟ್ಟಪ್ಪನವರು, ಕೊಡಗಿನ ಎಲ್ಲಾ ಕಡೆಗಳಲ್ಲಿ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಚಂದಾ ಮೊಬಲಗು ಕೊಡಬೇಕಾಗಿ ಕೋರಿಕೆ.

ಕೋಟೇರ ಉತ್ತಯ್ಯ.
ಆರ್ಗನೈಜಿಂಗ್ ಡೈರೆಕ್ಟರು, "ಕೊಡಗು" ಲಿಮಿಟೆಡ್

ಪ್ರಕಟಣೆ.

ಒಂದು ಕಡ [illegible] ಕನ್ನಡದಲ್ಲಿ [illegible] ಪ್ರಕಾಶ [illegible] ದ ಪಡಕೊಳ್ಳಬಹುದು.

ಮಡಿಕೇರಿ
17-1 24 ಮೇನೇಜರ್.

ನೋಟೀಸು.

ಕೊಡಗು ಜಮೀನ್ದಾರರಸಂಘದ ಲೆಕ್ಕವನ್ನು ಆಡಿಟ್ ಮಾಡಿಸಬೇಕಾಗಿರುವ್ವದರಿಂದ [illegible] ಕಾರ್ಯಪ್ಪನವರು [illegible] ಹಣ ವಸೂಲಾತಿಗೆ ಕೊಟ್ಟಂತ ರಶೀತಿ [illegible] ವಸೂಲಾತಿಗೆ [illegible] ರು ಮೆ ಜಂಗಂಡ ಕುಟ್ಟಪ್ಪನವರು, ಮೆ. ಕೋಟೆರ ಚಿಣ್ಣಪ್ಪನವರು ಮತ್ತು ಇನ್ನು [illegible] ವಸೂಲಾತಿಗೆ ಕೊಟ್ಟ ರಶೀತಿ ಪುಸ್ತಕಗಳನ್ನೂ [illegible] ಮಡಿಕೇರಿಯಲ್ಲಿರುವ ಆಫೀಸಿಗೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇನೆ

ಸಿ. ಎಸ್ [illegible]
ಜನರಲ್ ಸಕ್ರೆಟರಿ

ನೋಟೀಸು.

ದಕ್ಷಿಣ ಕೊಡಗಿನಲ್ಲಿ ಮದುವೆಕಾಗದ, ನೋಟೀಸು ಮತ್ತು ಬೇರೆ ಪ್ರಿಂಟಿಂಗ್ ಕೆಲಸ ಮಾಡಿಸಬೇಕೆಂದಿರುವವರು ದಯವಿಟ್ಟು ಎಲ್ಲಾ ಆರ್ಡರುಗಳನ್ನು ನಮ್ಮ ಏಜಂಟರಾದ ವೀರರಾಜಪೇಟೆ ಖಾದಿಭಂಡಾರದ ಮೇನೇಜರವರಿಗೆ ಕೊಟ್ಟರೆ, ಶೀಘ್ರದಲ್ಲೇ ಸುಲಭ ಚಾರ್ಜಿಗೆ ಗಿಲಿಟು ಹಾಕಿ ಪ್ರಿಂಟುಮಾಡಿಸಿ ಕಳುಹಿಸಲಾಗುವುದು.

'ಮೇನೇಜರ್,
"ಕೊಡಗು" ಪ್ರೆಸ್, ಮಡಿಕೇರಿ.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ

1 ಪ್ರತಿಗಳನ್ನು [illegible] ಸಂಪಾದಕರು "ಕೊಡಗು" [illegible] ಹಿಸಬೇಕು. 3 ಜಾಹಿರಾತಿನ [illegible] ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ [illegible] ವ ಜಾಹಿರಾತುಗಳು [illegible] 5. ಪ್ರಕಟಿಸಲಾಗದ [illegible] ಜಾಹಿರಾತುಗಳನ್ನು [illegible]

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಬೆಲೆಯನ್ನು ಸಂಘದ ಮೇನೇಜರಿಗೆ ಬರದು ತಿಳಿದು ಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಪ್ರಕಟಣೆ.

[illegible]

ಮಡಿಕೇರಿ [illegible]

ಮಹನೀಯರೇ,

1923ನೇ ಇಸವಿಯಲ್ಲಿ [illegible]

[illegible]

[illegible]

ಇವರಲ್ಲಿನ ಎಲ್ಲಾ ಔಷಧಗಳಿಗೆ [illegible]

ಸಂಜೀವ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
[illegible], ವೀರರಾಜಪೇಟೆ ಮತ್ತು
52-12 ಗೋಣಿಕೊಪ್ಪಲು.

ARMS & AMMUNITION [illegible]
Mahomedally [illegible]



[illegible] Abdul Rehman [illegible], near
Crawford Market, BOMBAY
Telegraphic Address:—"SHOOTER" Bombay
[illegible] Please write for latest Catalogues.

"ಕೊಡಗು"

ಸನ್ ೧೯೨೫ನೇ ಇಸವಿ ಆಗೊಸ್ಟು ತಾ. ೨೧ ನೇ ಶುಕ್ರವಾರ.

ಕೊಡಗಿನ ಕೌನ್ಸಿಲು ಖಾನೂನು ಮಾಡುವ ಸಭೆಯೋ?

ನಮ್ಮ ದೇಶದಲ್ಲಿ ಗ್ರಾಮ ಪಂಚಾಯತಿಗಳನ್ನು ಸ್ಥಾಪಿಸಿಕೊಡಬೇಕೆಂತ ಬಹುಕಾಲದಿಂದಲೂ ಜನರು ಸರಕಾರವನ್ನು ಕೇಳಿಕೊಳ್ಳುತ್ತಾ ಇದ್ದು ಈ ಬಗ್ಗೆ ಕೌನ್ಸಿಲಿನಲ್ಲಿ ಮೆಂಬರುಗಳ ಪೈಕಿ ಒಬ್ಬರು ಠರಾವು ತಂದು ತಾ. 24-3-24ರಲ್ಲೇ ಪಾಸಾಯಿತು. ಅನಂತರ ಇತರ ಕೆಲವು ಪಾಸಾದ ಠರಾವುಗಳಂತೆಯೇ ಇದೂ ಮೂಲೆಗೆ ಬಿದ್ದುಹೋದಂತೆ ಕಾಣುತ್ತದೆ. ಹೀಗೆ ಪಾಸಾದ ನೌಕರಿ ಖರಾರಿನ ಆಕ್ಟ್ ಬೇಕೆಂಬ ಠರಾವನ್ನು ವಿಚಾರಿಮಾಡಲಿಕ್ಕೆ ಒಂದು ಉಪ ಕಮಿಟಿಯು ನೇಮಕವಾಗಿ ಈ ಖಾನೂನಿನ ಮಸೂದೆಯು ತಯಾರಾಗಿ ಇಂಡಿಯಾ ಸರಕಾರಕ್ಕೆ ಈಗಾಗಲೇ ಕಳುಹಿಸಬಹುದು. ಮುಖ್ಯವಾಗಿ ಪ್ಲಾಂಟರುಗಳಿಗೆ ಬೇಕಾದ ಈ ಠರಾವಿನಮೇಲೆ ಸರಕಾರವು [illegible] ದು ಆತುರದಲ್ಲಿ ಇರುವಾಗ ಪ್ರಜೆಗಳಿಗೆ ತುಂಬಾ ಪ್ರಯೋಜನವಾಗುವ ಗ್ರಾಮ ಪಂಚಾಯತಿಗಳನ್ನು ಮಂಜೂರು ಮಾಡುವ ಖಾನೂನನ್ನು ಕೌನ್ಸಿಲಿಗೆ ಚರ್ಚೆಗೆ ತರದೆ ಇರುವದು ತುಂಬಾ ವಿಷಾದಕರವಾಗಿದೆ. ಕಳೆದ ವರುಷದ ಆದಿಯಲ್ಲಿ ಚುನಾಯಿತರಾದ ಕೌನ್ಸಿಲ್ ಮೆಂಬರುಗಳ ಅವಧಿಯು ಅಗಲೇ ಅರ್ಧ ತೀರಿಯೇ ಹೋಯಿತು. ಕೌನ್ಸಿಲ್ ಅಂದರೆ ಖಾನೂನುಮಾಡುವ ಸಭೆಯಾದರೂ ಇನ್ನೂ ಒಂದು ಖಾನೂನಿನ ಮಸೂದೆಯಾದರೂ ಚರ್ಚೆಗೆ ಬಾರದೆ ಇರುವದು ಹಾಸ್ಯಾಸ್ಪದವಾಗಿದೆ.

ಡಿಸ್ಟ್ರಿಕ್ಟ್‌ಬೋರ್ಡಿನಹಕ್ಕುಗಳನ್ನು ಹೆಚ್ಚಿಸಿ ಈ ಸಂಸ್ಥೆಯನ್ನು ಪ್ರಜಾ ಪ್ರತಿನಿಧಿಗಳ ಅಧೀನಮಾಡಿ ಕೊಡಬೇಕೆಂಬ ಠರಾವು ಮಂಜೂರಾದರೂ ಇದರ ಗತಿಯೂ ಕಪಾಟಿನ ಮೂಲೆಯೇ ಆಗಿಹೋಗಿದೆ. ಈ ರೀತಿ ಸರಕಾರದ ವರ್ತನವಾದರೆ ಈಗ ಚುನಾಯಿತರಾದ ಮೆಂಬರುಗಳ ಅವಧಿಯಲ್ಲಿ ನೌಕರಿ ಖರಾರಿನ ಖಾನೂನು ಒಂದೇ ಚರ್ಚೆಗೆ ಬಂದು ತೀರ್ಮಾನ ಹೊಂದುವ ಸಂಭವವು ತೋರುತ್ತದೆ. ಈ ಆಕ್ಷೇಪಣೆಯನ್ನು ನಿವಾರಿಸಿಕೊಳ್ಳಲಿಕ್ಕೆ ಮೇಲೆ ವಿವರಿಸಿದ ಪಂಚಾಯತ್ ಆಕ್ಟ್ ಮತ್ತು ಡಿಸ್ಟ್ರಿಕ್ಟ್ ಬೋರ್ಡು ಆಕ್ಟ್ ಎಂಬ ಖಾನೂನುಗಳ ಮಸೂದೆಯನ್ನು ಸರಕಾರವು ಕೌನ್ಸಿಲ್ ಮುಂದೆ ತಕ್ಷಣವೇ ಚರ್ಚೆಗೆ ತರಬೇಕು. ಮಸೂದೆಯನ್ನು ಸ್ಥಳೀಯ ಸರಕಾರದವರು ತಯಾರಿಸಿ ಇಂಡಿಯಾ ಸರಕಾರಕ್ಕೆ ಕಳುಹಿಸಬೇಕು ಅಲ್ಲಿ ದೊಡ್ಡ ಕಾರುಬಾರುಗಳ ಮಧ್ಯೆ ಈ ಚಿಕ್ಕ ಕೆಲಸಕ್ಕೆ ಗಮನ ದೊರೆಯುವದೇ ಬಹಳ ತಡವಾಗುತ್ತದೆ. ಅಲ್ಲಿಂದ ಮಸೂದೆಯು ಮಂಜೂರಾಗಿ ಕೌನ್ಸಿಲಿಗೆ ಚರ್ಚೆಗೆ ಬರಲು ಬಹಳ ಕಾಲ ಹೋಗುತ್ತದೆ. ಆದ್ದರಿಂದ ಈ ಮೇಲ್ಕಂಡ ಎರಡು ಖಾನೂನುಗಳ ಮಸೂದೆಯನ್ನು ಸ್ಥಳೀಯ ಸರಕಾರದವರು ಕೂಡಲೇ ತಯಾರಿಸಿ ಇಂಡಿಯಾ ಸರಕಾರಕ್ಕೆ ಕಳುಹಿಸಬೇಕು. ಈಗ ಈ ಮಸೂದೆಯನ್ನು ತಯಾರಿಸಲು ಸ್ಥಳೀಯ ಸರಕಾರದವರು ಮನಸ್ಸುಮಾಡಿದರೆ 1926ನೇ ಇಸವಿ ಫೆಬ್ರವರಿಗಾದರೂ ಕೌನ್ಸಿಲ್ ಮುಂದೆ ಚರ್ಚೆಗೆ ಬರಬಹುದು. ಪ್ರಜೆಗಳ ಹಿತಕ್ಕಿರುವ ಈ ಎರಡು ಖಾನೂನುಗಳನ್ನು ಕೌನ್ಸಿಲ್ ಚರ್ಚೆಗೆ ತರಲು ಒಂದು ನಿಮಿಷವಾದರೂ ತಡಮಾಡಬಾರದೆಂತ ನಮ್ಮ ಅಭಿಪ್ರಾಯವಾಗಿದೆ. ಸರಕಾರವು ಈ ವಿಷಯಕ್ಕೆ ಮನಸ್ಸು ಕೊಡದೆಹೋದರೆ ಚುನಾಯಿತ ಮೆಂಬರರಲ್ಲಿ ಯಾರಾದರೂ ಇಂಥಾ ಮಸೂದೆ ಖಾನೂನನ್ನು ಕೌನ್ಸಿಲ್ ಚರ್ಚೆಗೆ ತಂದಾರೆಂತ ಆಶಿಸುತ್ತೇವೆ.

ಜಮ್ಮ

ಇದು ಹೊಸ ವಿಷಯವೇನೂ ಅಲ್ಲ. ದೇಶದ ಜಮ್ಮ ಹಿಡುವಳಿದಾರರ ಪವಿತ್ರವಾದ ಹಕ್ಕನ್ನು ಹೋಗಲಾಡಿಸಲು ಸರಕಾರದವರು ಪ್ರಯತ್ನಿಸಿದ್ದಾರೆಂಬುದೂ ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಜಮ್ಮ ಹಿಡುವಳಿಯ ಮೇಲೆ ಸಿರಕುಕಂಗಾಯಿ ಹಾಕುವ ಹಕ್ಕನ್ನು ತೆಗೆದುಹಾಕಿದ ಕಳೆದ ಸೆಟ್ಲ್‌ಮೆಂಟನ್ನು ರದ್ದುಪಡಿಸಬೇಕೆಂದು ಜಮೀನ್ದಾರರ ಸಂಘವು ಅನೇಕ ವರ್ಷಗಳಿಂದ ಪ್ರತಿ ವರ್ಷವೂ ಠರಾವು ಪಾಸುಮಾಡುತ್ತಿರುವದೂ, ಈ ಪತ್ರಿಕೆಯು ಹೊರಟಂದಿನಿಂದ ಈ ಸಂಗತಿಯನ್ನು ಕುರಿತು ಸರಕಾರದವರು ಮಾಡಿರುವ ಅನ್ಯಾಯವನ್ನು [illegible] ಅನೇಕ ಸಾರಿ ಬರೆದಿರುವದೂ ದೇಶೀಯರಿಗೆಲ್ಲಾ ತಿಳಿದ ಸಂಗತಿಯಲ್ಲ. ಕೌನ್ಸಿಲಿನಲ್ಲಿ ಬಹುಮತದಿಂದ ಪಾಸಾದ 'ಜಮ್ಮ ಹಿಡುವಳಿಯ ಕಂದಾಯವನ್ನು ಹೆಚ್ಚಿಸಿದ [illegible] ರದ್ದು ಪಡಿಸಬೇಕೆಂಬ ಮತ್ತು ಜಮ್ಮಗಾರರಿಂದ [illegible] 'ಹಿಟ್ಟಿ ಬಿಟ್ಟಿ' ಚಾಕರಿಯನ್ನು ಹೋಗಲಾಡಿಸಬೇಕೆಂಬ ಠರಾವುಗಳನ್ನು ಚರ್ಚೆಗೆ ತಂದವರು ಈ ಪತ್ರಿಕೆಯಲ್ಲಿಯೂ ಜಮೀನ್ದಾರರ ಸಂಘದಲ್ಲಿಯೂ ಕೆಲಸ ನಡೆಸುತ್ತಿರುವ ಒಬ್ಬ ಮೆಂಬರೇ. ಕೌನ್ಸಿಲಿನಲ್ಲಿ 'ಹಿಟ್ಟಿ ಬಿಟ್ಟಿ' ಯನ್ನು ನಿಲ್ಲಿಸಬೇಕೆಂದು ತಂದ ಠರಾವಿಗೆ [illegible] ಈಗ ಹಿಟ್ಟಿ ಬಿಟ್ಟಿ ಯು ಒಟ್ಟು ಇರುವಾಗ [illegible] ಬಿಟ್ಟುಹೋಗುವದರಲ್ಲಿ ಮಾತ್ರ ಆಶೆ ಇದೆಯೆಂತ [illegible] ಹೇಳಿದರು. [illegible] 'ಹಿಟ್ಟಿ ಬಿಟ್ಟಿ'ಗೆ ಅಡಗಿದೆಯೆಂತ [illegible] ಹಿಡುವಳಿದಾರರಿಂದ ಮಾಡಿಸುತ್ತಿದ್ದ ಸರಕಾರದ [illegible] ಅಧಿಕಾರಿಯವರು 'ಹಿಟ್ಟಿ ಬಿಟ್ಟಿ' ಯಲ್ಲಿ ಮೇಲೆ ಹೇಳಿದ ಅವಮರ್ಯಾದೆಯ ಕೆಲಸಗಳು ಸೇರಲ್ಲವೆಂತ ಹೇಳುವದಾಗಿ ಆದದ್ದು ಜಮೀನುದಾರರ ಸಂಘದ ನಿರಂತರ ಹೋರಾಟದಿಂದಲೇ ಅಲ್ಲವೇ? ಹೀಗಿರುವಲ್ಲಿ ಜಮ್ಮ ಹಿಡುವಳಿದಾರರ ಹಕ್ಕನ್ನು ಕಾಪಾಡಲು ಹೊರಟ ಜಮೀನ್ದಾರರ ಸಂಘವೂ "ಕೊಡಗು" ಪತ್ರಿಕೆಯೂ ಆ ವಿಷಯವನ್ನು [illegible] ಹಾಕಿದೆ ಎಂದು [illegible] ಇನ್ನೊಂದು ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿ ಸೂಚಿಸಿರುವದರಲ್ಲಿ ಎಷ್ಟರ ಮಟ್ಟಿಗೆ ನಿಜವಿದೆ ಎಂಬುದನ್ನು ಸಾರ್ವಜನಿಕರೇ ಹೇಳಬೇಕು. ಜಮೀನ್ದಾರರ ಸಂಘದ ಮತ್ತು "ಕೊಡಗು" ಪತ್ರಿಕೆಯ ಉದ್ದೇಶಗಳಲ್ಲಿ ದೇಶದ ರಾಜಕೀಯ ಅಭ್ಯುದಯವೂ ಅಡಗಿದೆ ಎಂಬುದು ಇವೆರಡು ಸಂಸ್ಥೆಗಳ ವಿಷಯ ಸ್ವಲ್ಪವಾದರೂ ತಿಳುವಳಿಕೆ ಇರುವ ಮಹನೀಯರಿಗೆ ಗೊತ್ತೇ ಇದೆ.

'ಜನ್ಮದಾಸತ್ವವೋ ಜಮ್ಮವೋ' ಎಂದು [illegible] ಈ ಪತ್ರಿಕೆಯಲ್ಲಿ ಜಮ್ಮವನ್ನು ಜನ್ಮದಾಸತ್ವವೆಂದು ಬರೆದಿದ್ದರೆಂದೂ ಆ ಲೇಖನಗಳಲ್ಲಿ ಆಕ್ಷೇಪಿಸಿರುವರು. ಜಮ್ಮಗಾರರಿಂದ ಬಲಾತ್ಕಾರದಿಂದ ಸರ್ಕಾರದವರು 'ಹಿಟ್ಟಿ ಬಿಟ್ಟಿ' ಚಾಕರಿಮಾಡಿಸುತ್ತಿರುವುದರಿಂದ ಜಮ್ಮ ಹಿಡುವಳಿಗಾರರಸ್ಥಿತಿಯನ್ನು ಜನ್ಮದಾಸತ್ವದ ಮಟ್ಟಕ್ಕೆ ಇಳಿಸಿಬಿಟ್ಟಿರುವರೆಂದು ಸರ್ಕಾರದವರನ್ನು ದೂಷಿಸಿದ್ದಲ್ಲದೆ ಜಮ್ಮವು ಜನ್ಮದಾಸತ್ವವೆಂದು ಈ ಪತ್ರಿಕೆಯಲ್ಲಿ ಎಂದೂ ಪ್ರಕಟಿಸಲಿಲ್ಲ. ಜಮ್ಮದ ಹಕ್ಕನ್ನು ಹೋಗಲಾಡಿಸಿಕೊಳ್ಳಬೇಕೆಂದು ಜೇನಪಲ್ಲಿಯಾರೂ ಪ್ರಯತ್ನಿಸುತ್ತಿರುವುದೂ ಇಲ್ಲ. ಈ ವಿಷಯಗಳನ್ನೆಲ್ಲಾ ವೇದಿಕೆಗೆ ಈ ಮೊದಲೇ ಎಷ್ಟೋಸಾರಿ ವಿವರವಾಗಿ ಬರೆದು ತಿಳಿಸಿರುವದರಿಂದ ಪುನಃ ಇಲ್ಲಿ ಹೆಚ್ಚು ಬರೆಯುವ ಅವಶ್ಯಕತೆ ಕಾಣುವದಿಲ್ಲ. ಆದರೆ ನಿಜವಲ್ಲದ ಕೆಲವು ಸಂಗತಿಗಳು ಲೇಖನದಲ್ಲಿ ಪ್ರಕಟವಾಗುತ್ತಿರುವದರಿಂದ ವಾಚಕ ಮಹಾಶಯರಿಗೆ ಸೂಚನೆ ಕೊಟ್ಟದ್ದಾಗಿದೆ.

ಈ ವಿಷಯದಲ್ಲಿ ದೇಶೀಯರು ಇಷ್ಟರವರೆಗೆ ತೋರಿಸಿದಂತೆಯೇ ಕೌನ್ಸಿಲಿನಲ್ಲಿ ಜಮ್ಮದ ಮತ್ತು ಹಿಟ್ಟಿ ಬಿಟ್ಟಿಯ ವಿಷಯ ಪಾಸಾಗಿರುವ ಠರಾವುಗಳನ್ನು ಜಾರಿಗೆ ತರುವಂತೆ ಮಂಜೂರುಮಾಡುವಂತೆ ಕೌನ್ಸಿಲಿನ ತೀರ್ಮಾನಕ್ಕೆ ಬೆಂಬಲ ಕೊಡುತ್ತಿರಬೇಕಾದದ್ದೇ ದೇಶದವರ ಕರ್ತವ್ಯವಾಗಿದೆ.

ನಾರೆಸ್ಟು ಇಲಾಖೆಯ ಆಡಳಿತೆ.

ಕೊಡಗಿನ ಫಾರೆಸ್ಟು ಇಲಾಖೆಯ ಕಳೆದ ವರುಷದ ಆಡಳಿತದ ವಿಷಯ ಚೀಫ್ ಕಮಿಷನರು ಬರೆದಿರುವದರ ಮೇಲೆ "ಮದ್ರಾಸು ಮೆಯಿಲ್" ಪತ್ರಿಕೆಯು ಇದೇ ತಾ. 12ರಲ್ಲಿ ಒಂದು ಅಗ್ರಲೇಖನವನ್ನು ಪ್ರಕಟಿಸಿದೆ. ಈ ಪತ್ರಿಕೆಗೆ ಚೀಫ್ ಕಮಿಷನರವರು ಬರೆದದ್ದು ಎಲ್ಲಿಂದ ದೊರೆಯಿತೋ ತಿಳಿಯದು. ಸರಕಾರದವರು ಕಳುಹಿಸಿದ್ದ ಪಕ್ಷದಲ್ಲಿ ಈ ವಿಷಯ ಒಂದೆರಡು ಮಾತು ಬರೆಯದೆ ಕಳೆಯದು. ನಮ್ಮ ದೇಶದಲ್ಲಿ ಕೆಲವರು ಮಾತ್ರ ಓದುವ ಮದ್ರಾಸಿನ ಪತ್ರಿಕೆಗೆ ಕಳುಹಿಸಿ, ದೇಶದಲ್ಲಿ ಸಾವಿರಾರು ಜನರಿಗೆ ತಲುಪುವ ಸ್ಥಳೀಯ ಪತ್ರಿಕೆಗಳಿಗೆ ಫಾರೆಸ್ಟು ಆಡಳಿತ ಕುರಿತು ತುಂಬಾ ಚರ್ಚೆ ನಡೆಸುತ್ತಿರುವ ಕೌನ್ಸಿಲ್ ಮೆಂಬರುಗಳಿಗೂ ಅದರ ಪ್ರತಿಗಳನ್ನು ಕಳುಹಿಸದೆ ಇರುವದರಲ್ಲಿ ನ್ಯಾಯವಿಲ್ಲ. ಕೊಡಗಿನ ಆಡಳಿತದ ವಿಷಯ ಮೊದಲಾಗಿ ಪರಪ್ರಾಂತ್ಯದ ಪತ್ರಿಕೆಯಿಂದ ದೇಶದವರು ಓದಬೇಕೆಂಬುದು ಶೋಚನೀಯ. ನಮ್ಮ ದೇಶಕ್ಕೆ ಸಮ್ಮಂಧಪಟ್ಟ ಸಂಗತಿಗಳ ಮೇಲೆ ಅಭಿಪ್ರಾಯಗಳು ಮೊದಲಾಗಿ ನಮ್ಮ ದೇಶದಿಂದಲ್ಲವೇ ಹೊರಡಬೇಕಾದದ್ದು? ಅಧಿಕಾರಿಗಳು ಇಂಥಾ ಸಂಗತಿಗಳಲ್ಲಿ ಇನ್ನು ಮುಂದಾದರೂ ಟೀಕೆಗೆ ಎಡೆಕೊಡಲಿಕ್ಕಿಲ್ಲವಾಗಿ ನಂಬುತ್ತೇವೆ.

"ಖಾದಿಯ ಬೆಲೆ ಹೆಚ್ಚು."

ಜಮ್ಶೇದಪುರದಿಂದೊಬ್ಬ ಬಾತಿದಾರರು ಸಮಾಜದಲ್ಲಿಯ ಸಾಮಾನ್ಯ ಅಥವಾ ಮಧ್ಯಮ ವರ್ಗದ ಜನರಿಗೆ ಖಾದಿಯ ಬೆಲೆಯು ಬಹಳ ಹೆಚ್ಚಾಗುವದೆಂದು ಬರೆಯುತ್ತಾರೆ. ಅದು ಹೆಚ್ಚು ಸಮಯ ಉಪಯೋಗಕ್ಕೂ ಬರುವದಿಲ್ಲ. ಬೇಗನೆ ಕೊಳಕಾಗುತ್ತದೆ, ಅದನ್ನು ಸ್ವಚ್ಛವಾಗಿಡುವುದೆಂದರೆ ಇನ್ನಷ್ಟು ಹೆಚ್ಚಿನ ಖರ್ಚು. ಈ ಸಂದರ್ಭದಲ್ಲಿ ನಮ್ಮಂಥ ಜನರು ಖಾದಿಯನ್ನು ಧರಿಸುವ ಬಗೆ ಹೇಗೆಂದು ವಿವರಿಸುವಿರಾ? ಎಂದು ಅವರು ನನಗೆ ಕೇಳಿರುವರು.

ಇಂಥಾ ಪ್ರಶ್ನೆಗಳಿಗೆ ನಾನು ಎಷ್ಟೋ ಬಾರಿ ಉತ್ತರ ಕೊಟ್ಟಿರುವನಾದರೂ ಅದನ್ನೇ [illegible] ಹೇಳುವದರಿಂದ ನಷ್ಟವಿಲ್ಲ. ಈಗಿನ ಸಮಯದಲ್ಲಿ [illegible] ಖಾದಿಯ ಬೆಲೆಯು ಹೆಚ್ಚಾಗಿರುವದೆಂಬುದು ನಿಜ. [illegible] ಅದರ ನನ್ನ ಅನುಭವದ ಮಟ್ಟಿಗೆ ಖಾದಿ [illegible] ಧರಿಸುವವರ [illegible] ತಿಳಿಯದೆ ಆಗಲಿ ಅವರ [illegible] ಖಾದಿ [illegible] ಅನುಭವವಲ್ಲ. [illegible] ಇಂಥ [illegible] ಖಾದಿಯು ಹಚ್ಚ ಸಮಯ ಉಳಿಯುತ್ತದೆ. [illegible] ಬಿಳಿಯ ಖಾದಿಯು ಒಳ್ಳೆಯದಾಗುತ್ತ ಬರುತ್ತದೆ. ಆಗಾಗ ಕೈಯಲ್ಲಿ ಒಗೆಯಲು ಕೊಡುವುದಕ್ಕಿಂತ ಮನೆಯಲ್ಲೇ ಒಗೆದರೆ ಅವರ ಖರ್ಚು ಕಡಿಮೆ ಆಗುವದು. ಅವಕಾಶವಿ ಹೊರಡಬೇಕಿಲ್ಲ. ಸಾಬೂನು ಹಾಕಿ [illegible] ಒಗೆಯಬಹುದು.

ಖಾದಿ ಬಿಳಿಯು ಬೇಗನೆ ಕೊಳಕಾಗುವದೆಂದು ಹೇಳುವಾಗ ಅದು ಬಿಳೀ ಬಟ್ಟೆಯಾದುದರಿಂದ ಹೀಗಾಗುವದೆಂದು ಲೇಖಕರು ಸೂಚಿಸುತ್ತಾರೆಂದು ಎಣಿಸುತ್ತೇನೆ. ಕೊಳಕಾದುದನ್ನು ತಿಳಿಯದಂತೆ ಮಾಡುವ ಉದ್ದೇಶವಿದ್ದರೆ ಗಿರಣಿ ಬಟ್ಟೆಯಂತೆಯೇ ಬಣ್ಣ ಹಾಕಬಹುದು. ಈಗಿನ ಸಮಯದಲ್ಲಿ ಬೇಕಾದಷ್ಟು ಬಣ್ಣ ಹಾಕಿದ ಖಾದಿಯೂ ಮಾರಾಟಕ್ಕೆ ಸಿಕ್ಕುತ್ತದೆ. ಅದರ ಪ್ರತಿಯೊಂದು ವಿಚಾರದಲ್ಲಿಯೂ ಮಧ್ಯಮ ತರಗತಿಯ ಜನರು ಖಾದಿಯನ್ನು ಗಿರಣಿ ಬಟ್ಟೆಯೊಂದಿಗೆ ಹೋಲಿಸಿ ಲಾಭನಷ್ಟ ನೋಡುವುದಾದರೆ ಖಾದಿ ಪ್ರಚಾರವು ಹೆಚ್ಚು ಮುಂದರಿಯುವಂತಿಲ್ಲವೆಂದು ಒಪ್ಪುತ್ತೇನೆ. ಮಧ್ಯಮ ತರಗತಿಯ ಜನರು ದೇಶೀಯ ಭಾವನೆಗಾಗಿ ಖಾದಿಯನ್ನು ಕೊಂಡುಕೊಳ್ಳಬೇಕು. ಖಾದಿಯನ್ನು ಪ್ರಚಾರಕ್ಕೆ ತರಲು ಅದರಿಂದ ಸ್ವಲ್ಪ ನಷ್ಟವಾದರೂ ಸಹಿಸಿಕೊಳ್ಳಬೇಕು.

ಸರಕಾರವು ನಮ್ಮ ಕೈಯಲ್ಲಿದ್ದರೆ ಕಾನೂನಿನಿಂದ ಖಾದಿಗೆ ಪ್ರೋತ್ಸಾಹ ಕೊಡಬಹುದಿತ್ತು. ಆದರೆ ನಮ್ಮ ಸರಕಾರವು ನಮ್ಮ ಕೈಯಲ್ಲಿಲ್ಲ. ಅದು ಖಾದಿಗೆ ವಿರುದ್ಧವಿಲ್ಲದಿದ್ದರೂ ಅದಕ್ಕೆ ಸಹಾಯ ಮಾಡುತ್ತಲೂ ಇಲ್ಲ. ಈ ಸಂದರ್ಭದಲ್ಲಿ ರಾಷ್ಟ್ರಕ್ಕೆ ಖಾದಿಯಿಂದ ಪ್ರಯೋಜನವಿರುವದೆಂದು ನಂಬುವವರು ಖಾದಿಯನ್ನು ಧರಿಸುವದರಿಂದ ತೊಂದರೆಯಾದರೂ, ನಷ್ಟವಿದ್ದರೂ ಅದನ್ನೇ ಧರಿಸಿ ಅದನ್ನು ಪ್ರಚಾರಗೊಳಿಸದೆ ಅದು ಎಲ್ಲಾ ಕಡೆಗಳಲ್ಲಿ ಹಬ್ಬುವ ಬಗೆ ಹೇಗೆ? ಐದು ವರುಷಗಳ ಕೆಳಗೆ ಕೆಟ್ಟ ನೂಲಿನ, ಸರಿಯಾಗಿ ನೇಯದ, ದೊರಗು ಖಾದಿಯನ್ನು ಗಜಕ್ಕೆ ೧೭ ಆಣೆಯಂತೆ ನಾನು ಮಾರಿದ್ದೇನೆ. ಇಷ್ಟು ಕೆಟ್ಟ ಖಾದಿಯು ಈಗೆಲ್ಲಿಯೂ ನೋಡಲಿಕ್ಕೆ ಸಿಕ್ಕುವುದಿಲ್ಲ. ಖಾದಿಯ ಪ್ರಗತಿಯು ಎಷ್ಟು ಬೇಗನೆ ಆಗಿರುವದೆಂಬುದು ಅದಕ್ಕಿಂತ ಎಷ್ಟೋ ಒಳ್ಳೆಯ ಖಾದಿಯು ಅದೇ ಸ್ಥಳದಲ್ಲಿ ಗಜಕ್ಕೆ ೯ ಆಣೆಯಂತೆ ಸಿಕ್ಕುತ್ತಿದೆಯೆಂದು ನೋಡಿದರೆ ಗೊತ್ತಾಗುತ್ತದೆ. ಖಾದಿಯ ಬೆಲೆಯನ್ನು ಕಡಿಮೆ ಮಾಡಲು ಎಲ್ಲ ಪ್ರಯತ್ನಗಳೂ ನಡೆಯಲ್ಪಡುತ್ತಿವೆ. ಅಖಿಲ ಭಾರತ ದೇಶಬಂಧು ಸ್ಮಾರಕವು ಯಶಸ್ವಿಯಾಗಿ ಈಗ ಯೋಚಿಸಿರುವ ಯೋಜನೆಯು ಕಾರ್ಯರೂಪಕ್ಕೆ ಬಂದರೆ ಬೆಲೆಯು ಇನ್ನೂ ಕಡಿಮೆಯಾಗುವದರಲ್ಲಿ ಸಂಶಯವಿಲ್ಲ.

ನಾನು ಬಿಬಗಾಗಿನಲ್ಲಿ ಹೇಳಿದ ಮಾತನ್ನು ಪುನಃ ವಾಚಕರ ಸ್ಮರಣೆಗೆ ತರಲು ಇಚ್ಛಿಸುತ್ತೇನೆ. ಖಾದಿಯು [illegible] ಯವಾದರೆ ಸ್ವಾತಂತ್ರ್ಯವು ಅದಕ್ಕಿಂತ ಪ್ರಿಯವಾಗಿದೆ. [illegible] ಮಾತೃ ಜನನಿಯ ಮೇಲೆ ಪ್ರೇಮವಿದ್ದವರು ಈ ಆರಂಭದ ಸಮಯದಲ್ಲಿ ಅವನಿಗೆ ಹೆಚ್ಚಿಗೆ ಸಲ್ಲುವ ಈ ಖಾದಿಯ ಬೆಲೆಯಲ್ಲಿಯ ಸ್ವಲ್ಪ ಹಣಕ್ಕಾಗಿ ದುಃಖಿಸುವದು ಉಚಿತವಲ್ಲ.

ಮೋ. ಕ. ಗಾಂಧಿ.
"ನವಜೀವನ"

ಗೋವಧೆ.

(ಭಾ|| ಷ||)

ಹೆತ್ತ ತಾಯಿಯ ತೆರದೊಳಿರುತಿಹ|
ಉತ್ತಮೋತ್ತಮವಾದ ಗೋವ್ಗಳ|
ಕುತ್ತಿಗೆಯ ಕೊಯ್ಯುತಲಿ ವಧೆಯನ್ನಂತು ಮಾಡುವರೊ||
ಮತ್ತು ಶಿಶುವಿನ ಆದಿಯಿಂದಲಿ|
ಸತ್ತುಹೋಗುವವರೆಗು ಗೋವ್ಗಳು|
ಇತ್ತ ಕ್ಷೀರವ ಕುಡಿದು ನರನೀ ಕೃತ್ಯ ಮಾಡುವನೈ||೧||

ಭತ್ತ ಬೆಳೆಯಲು ಒಂಡಿ ಎಳೆಯಲು|
ಎತ್ತುಗಳು ಸಮಗಾಗಿ ತಾವ್ಗಳು|
ಕುತ್ತಿಗೆಯೊಳತಿ ಭಾರ ಹೊರುತಲಿ ಸತತ ದುಡಿಯುವವು||
ನಿತ್ಯದಲಿ ದನ ವಸದಿ ಮೇಯುತ|
ಹೊತ್ತು ಹೊತ್ತಿಗೆ ಹಾಲನೀವುವು|
ಸತ್ತಮೇಲದು ತೊಗಲ ನರನುಪಯೋಗಕೀಯುವದು||೨||

ಹೀಗೆ ನರಗನೇಕಪರಿಯಲಿ|
ಆಗುವದು ಈ ಗೋವ್ಗಳಿಂದುಪ
ಯೋಗವದನಂ ನರರು ಸ್ಮರಿಸದೆ ಉಂಡ್ಮನೆಗೆ ಗುಂಡ|
ನೀಗುವವರಂದದಲಿ ಮನುಜರು|
ಹ್ಯಾಗೆ ಗೋವಧೆ ಮಾಳ್ಪರೋ ಹರ|
ಪೋಗಲಿಲ್ಲವೆ ಕರುಣವೆಂಬುದು ಅವರ ಹೃದಯದಲಿ||೩||

ಕೊಡುವರೈ ಹಣವಾಸೆಯಿಂದಲಿ
ದುಡಿದುಡಿದು ಬಡಕಾದ ದನಗಳ
ಕಡಿದು ತಿನ್ನರೆ ಕಟುಕರಿಗೆ ಅತಿಪಾಪಿಗಳು ಅವು||
ಮಡಿಯುವವು ಲಕ್ಷಾಂತರೆಣಿಕೆಯ|
ಬಡ ದನಗಳೊಂದೊಂದು ವರ್ಷದ
ನಡುವೆ ನಮ್ಮ ಭಾರತದೊಳಿದು ಪಾಪಮಯವಲ್ತೇ||೪||

ಬಂಧು ಜನರೇ ಮೂಕ ಪ್ರಾಣಿಯ
ಕೊಂದು ತಿನ್ನುವ ಘೋರಕೃತ್ಯವು|
ಮುಂದೆ ರಾಷ್ಟ್ರಕ್ಕೆ ಘಾತುಕವು ಎಂಬುದನು ಮರೆಯದಲೆ||
ಇಂದಿನಿಂದೀ ಕ್ರೂರ ಗೋವಧೆ|
ಯೊಂದು ನಿಲ್ಲಿಸುವಂತೆ ಯತ್ನಿಸಿ|
ಹಿಂದಿಮಾತೆಯ ಕಂದನೀಗಿ ಉಮಾಂಬೆ ಕರುಣದಲಿ||೫||

ಕಾ. ಧು.

ಪಾರಿವಾಳಗಳ ಉಪಕಾರ.

ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ತಮಾನಗಳನ್ನು ಕಳುಹಿಸತಕ್ಕ ಅತ್ಯಂತ ವಿಶೇಷವಾದ ಆಧುನಿಕ ಶೋಧಗಳು ನವ ನಿರುಪಯೋಗವೆಂದಾಗ, ಈ ಪಾರಿವಾಳಗಳು ಪ್ರಾಚೀನ ಯುಗದಲ್ಲಿ ಪ್ರಚಾರದಲ್ಲಿದ್ದಂತೆ, ಈಗಲೂ ಉಪಯೋಗಕ್ಕೆ ಬರುತ್ತಿರುವುವು

ಇಂತಹ ಪಾರಿವಾಳಗಳು ೧೦೦ ಇಲ್ಲವೆ ೨೦೦ ಮೈಲು ಹಾರಾಟ ಮಾಡುವುದು ಸಾಮಾನ್ಯವಾಗಿ ರೂಢಿಯಾಗಿದೆ. ಅವುಗಳು ೧೦೦೦ ಮೈಲಿಗಿಂತ ಹೆಚ್ಚಾಗಿ ಹಾರುವುದೂ ಉಂಟು. ಅಂತಹ ವೇಳೆಗಳಲ್ಲಿ ಅವುಗಳು ಮಳೆಗಾಳಿಗಳನ್ನು ಲಕ್ಷಿಸದೆ, ಹಗಲೆಲ್ಲಾ ಹಾರಾಡುತ್ತ ರಾತ್ರಿಯಾಗೊಡನೆಯೇ ಎಲ್ಲಾದರೂ ವಿಶ್ರಾಂತಿಯನ್ನು ತೆಗೆದುಕೊಳ್ಳುವುವು ಮಳೆಯಿಂದ ಇವುಗಳಿಗೆ ಬಾಧೆಯಾಗದಂತೆ ಅವುಗಳ ಗರಿಗಳ ಮೇಲೆ ಒಂದು ವಿಧವಾದ, ನೀರು ನೋಕದ ಹಿಟ್ಟಿರುವುದು.

ಈ ವಿದ್ಯೆಯನ್ನು ಪಾರಿವಾಳಗಳಿಗೆ ಕಲಿಸುವುದರ ಸಲುವಾಗಿ ಅದನ್ನು ಸಾಕತಕ್ಕವರು, ಅವುಗಳಿಗೆ ಒಂದು ವಿಶೇಷ ತರದ ಪೆಟ್ಟಿಗೆಗಳಲ್ಲಿ ಆಹಾರವನ್ನಿಟ್ಟು, ಅದನ್ನು ಆ ಹಕ್ಕಿಯು ಪ್ರವೇಶಿಸಿ ತನ್ನ ಕಲಸವನ್ನು ಪೂರೈಸಿಕೊಳ್ಳಲು ಬರುವ ವಿದ್ಯೆಯನ್ನು ಹೇಳಿಕೊಡುವರು. ಆಗ ಆ ಪಂಜರದ್ವಾರವು ಮುಚ್ಚಲ್ಪಡುವುದು. ಆ ವಿದ್ಯೆಯು ಅದಕ್ಕೆ ಬಂದೊಡನೆ, ಅವರು ಪಕ್ಷಿಗಳನ್ನು ಮನೆಯಿಂದ ಒಂದು ಮೈಲಿ ದೂರಕ್ಕೆ ತಂದು ಹಾರಿಸಿಬಿಡುವರು. ಆಗ ಪಕ್ಷಿಯು ಸ್ವಭಾವಸಿಗಾಗಿಯೂ, ಆಹಾರದಾಸೆಗಾಗಿಯೂ ಪಂಜರವನ್ನು ಸೇರುವುದು. ಹೀಗೆಯೇ ದೂರವನ್ನು ದಿನೇ ದಿನೇ ಹೆಚ್ಚಿಸುತ್ತ, ೫೦೦ ವ ೬೦೦ ಮೈಲಿಗಳನ್ನು ಹಾರುವುದೆಂಬುದು ಅವುಗಳಿಗೆ ರೂಢಿಯಾಗಿ ಹೋಗುವುದು. ಎಷ್ಟೋ ಪಕ್ಕಿಗಳು ಮಿನಿಟಿಗೆ ಒಂದು ಮೈಲಿಯ ವೇಗದಲ್ಲಿ ಹಾರುವುವು.

ಮೊನ್ನೆ ನಡೆದ ಮಹಾ ಯುದ್ಧದಲ್ಲಿ, ಅಮೇರಿಕವು ಬಹು ವೇಗವಾಗಿ ಮುಂದೊತ್ತಿ ಸೈನ್ಯವನ್ನು ಸಾಗಿಸಬೇಕಾಗಿ ಬಂದುದರಿಂದ, ಅವರಿಗೆ ದಾರಿಯಲ್ಲಿ ವಾರ್ತಾವ್ಯವಸ್ಥೆಯನ್ನು ಚೆನ್ನಾಗಿ ಮಾಡಲು ಅನುಕೂಲವಾಗಲಿಲ್ಲ. ಗುಂಡಿನ ಶಬ್ದಗಳು ವಿಶೇಷವಾಗಿದ್ದು ವಾತಾವರಣವು ಅಲ್ಲೋಲಕಲ್ಲೋಲವಾದುದರಿಂದ 'ಟೆಲಿಫೋನ್' ಮತ್ತು 'ರೇಡಿಯೊ' ಯಂತ್ರಗಳು ಉಪಯೋಗಕ್ಕೆ ಬಾರದೆ ಹೋದವು. ಇಂತಹ ಅಪತ್ಕಾಲದಲ್ಲಿ 'ಮಾಕರ್' ಎಂಬ ಪಕ್ಕಿಯು ಬ್ಯೂಮಾಂಟ್ ಪಟ್ಟಣದಿಂದ ಅತೀ ದೂರದಲ್ಲಿದ್ದ ಅಮೇರಿಕನರ ಯುದ್ಧಭೂಮಿಗೆ ಬಂದಿತು. ದಾರಿಯಲ್ಲಿ ಅದರ ಒಂದು ಕಣ್ಣು ಗುಂಡಿನಿಂದ ನಾಶವಾಯಿತು. ತಲೆಯಿಂದ ರಕ್ತ ಸುರಿಯುತ್ತಿತ್ತು. ಇಷ್ಟಿದ್ದರೂ ಆ ಪಕ್ಷಿಯು ಸಕಾಲಕ್ಕೆ ವಾರ್ತೆಯನ್ನು ತಂದು ಕೊಟ್ಟಿತು. ಅದರ ಕುತ್ತಿಗೆಗೆ ಕಟ್ಟಿದ್ದ ಪತ್ರದ ಸಹಾಯದಿಂದ ಅವರು ದಶಕ್ರುಗಳ ಪತ್ತೆಯನ್ನು ತಿಳಿದುಕೊಂಡು ಆಗಬಹುದಾಗಿದ್ದ ಮಹಾ ವಿಪತ್ತನ್ನು ತಪ್ಪಿಸಿಕೊಂಡರು.

ಸೈನ್ಯದ ಕುಂದಕಗಳ ಮೇಲೆ ಶತ್ರುವಿನಿಂದ ವಿಷಗಾಳಿಯು ಹರಡಲ್ಪಟ್ಟೊಡನೆಯೇ ಕಾಲ್ಬಲದವರು ಈ ಪಕ್ಕಿಯ ಮೂಗಿಗೆ, 'ಆಮ್ಲ ಜನಕ' ವಾಯುವಿನ ಒಂದು ಚೀಲವನ್ನು ಹಿಡಿದು ಅದನ್ನುಳಿಸಿದರು.

1916ನೇ ಇಸವಿಯಲ್ಲಿ ಫ್ರೆಂಚರು ಒಂದು ಬಗೆಯ ಅತಿ ಚಿಕ್ಕದಾಗಿಯೂ ಹಗುರವಾಗಿಯೂ ಇರುವ 'ಕೆಮರಾ'ವನ್ನು ತಯಾರಿಸಿ ಅದನ್ನು ಈ ಪಾರಿವಾಳದ ಎದೆಯ ಮುಂಭಾಗಕ್ಕೆ ಕಟ್ಟಿ ಮೇಲಕ್ಕೆ ಬಿಡುತ್ತಿದ್ದರು. ಹೀಗೆ ಆ ಪಕ್ಕಿಯು ಮೇಲಕ್ಕೆ ಹಾರುವಾಗ ಆ ಯಂತ್ರದ ಜತೆಯಲ್ಲಿರುವ ಒಂದು ರಬ್ಬರ ಚಂಡಿನಲ್ಲಿ ತುಂಬಿದ ವಾಯುವು ಅದಕ್ಕಿರುವ ಒಂದು ಚಿಕ್ಕದಾದ ರಂಧ್ರದಿಂದ ಕಡಿಮೆಯಾಗುತ್ತ ಬಂದು, ಕೊನೆಗೆ ಸಂಪೂರ್ಣ ಖಾಲಿಯಾದೊಡನೆ ತನ್ನನ್ನು ಒತ್ತಿ ಹಿಡಿದ ಒಂದು ಕೀಲಿಯನ್ನು ಸಡಿಲಿಸಲು, ಅದರಿಂದ ಆ ಕೆಮರಾದಲ್ಲಿ, ಎದುರಿಗಿರುವ ದೃಶ್ಯದ ಭಾವಚಿತ್ರವು ತೆಗೆಯಲ್ಪಡುವುದು. ಈ 'ಕಮರ'ಕ್ಕೆ ಎರಡು ಬಾಯಿಗಳು, ಕೆಳಗೆ ನೋಡುವಂತೆ ಒಂದು, ಇದಿರುಗಡೆಯಲ್ಲಿ ಇನ್ನೊಂದು. ಹೀಗೆ ಚಿತ್ರವನ್ನು ತೆಗೆದ ಬಳಿಕ ಆ ಪಕ್ಕಿಯು ಕೆಳಕ್ಕೆ ಬರುವುದು. ಆಗ ಆ ಚಿಕ್ಕದಾದ ಚಿತ್ರವನ್ನು ಸೂಕ್ಷ್ಮದರ್ಶಕ ಯಂತ್ರದ ಸಹಾಯದಿಂದ ದೊಡ್ಡದಾಗಿ ಕಂಡು, ಅದರಿಂದ ಶತ್ರುಗಳ ಸ್ಥಾನಶೋಧನೆಯನ್ನು ಮಾಡುವರು.

ವಸಂತ

ಇತಿಹಾಸಿಕ ಕಥೆಗಳು.

೧

ಕೂರ್ಮಾದೇವಿ.

ಮೋಹಿಲರ ನೂರ ನಲುವತ್ತನಾಲ್ಕು ಹಳ್ಳಿಗಳ ಅಧಿಕಾರ ಮಾಣಿಕರಾಯನು. ಅವನ ಮಂಡೋವ ಪಟ್ಟಣವು. ಬಂಧು ಪ್ರಜೆಗಳನ್ನು ಬಹಳ ಪ್ರೀತಿಯಿಂದ ಆಳುತ್ತಿದ್ದನು. ರಾಜ್ಯದಲ್ಲೆಲ್ಲಾ ಸುಭಿಕ್ಷವಾಗಿದ್ದು ರಾಮರಾಜ್ಯವಾಗಿತ್ತು. ರಾಜನ ಖ್ಯಾತಿಯು ಎಲ್ಲಾ ದಿಕ್ಕುಗಳಲ್ಲೂ ಹಬ್ಬಿತ್ತು. ಆದರೆ ಮಾಣಿಕ ರಾಯನಿಗೆ ಗಂಡು ಸಂತತಿಯಿರಲಿಲ್ಲ. ಒಬ್ಬಳೇ ಮಗಳು, ಅವಳ ಹೆಸರು ಕೂರ್ಮಾದೇವಿ. ಇವಳು ಜಾಣೆಯಾಗಿಯೂ ಸುಂದರಿಯಾಗಿಯೂ ಅಧಿಕಿಸತ್ಕಾರಗಳಲ್ಲಿ ಬಹಳ ನಿಪುಣೆಯಾಗಿಯೂ ಇದ್ದಳು. ಅರಮನೆಗೆ ಬಂದ ಅತಿಥಿಗಳೆಲ್ಲರೂ ಈ ಸುಂದರಿಯಿಂದಲೇ ಆತಿಥ್ಯವನ್ನು ಹೊಂದುತ್ತಿದ್ದರು. ಅಂಥವರಿಂದ ದೂರ ದೇಶದ ಕಥೆಗಳನ್ನೂ, ಆಚಾರ ವಿಚಾರಗಳನ್ನೂ, ಅವರುಗಳ ಪ್ರಯಾಣಗಳಲ್ಲುಂಟಾದ ಕಷ್ಟಸುಖಗಳನ್ನೂ ಕೇಳುವುದರಲ್ಲಿ ಬಹಳ ಆಶೆಯುಳ್ಳವಳಾಗಿದ್ದಳು.

ಹೀಗಿರುತ್ತಿರಲು ಒಂದಾನೊಂದು ದಿನ ಅರಮನೆಗೆ ಒಬ್ಬ ಯುವಕನು ಬಂದನು; ಒಂದೊಡನೇ ಪ್ರಪಂಚದಲ್ಲೆಲ್ಲಾ ಅವನಂಥಾ ಬೇರೆ ಪುರುಷನಿಲ್ಲವೆಂದು ಕೂರ್ಮಾದೇವಿಯು ತಿಳಿದುಕೊಂಡಳು. ಆ ವ್ಯಕ್ತಿಯು ರಜಪೂತನಾದ ಮರುಭೂಮಿಯ ಒಂದು ಚಿಕ್ಕ ರಾಜ್ಯವೊಡೆಯನು. ಮಹಾ ಧೈರ್ಯಶಾಲಿ, ಗಾಂಭೀರ್ಯವಂತ, ರಣಧೀರ ಮತ್ತು ಸುಂದರ ಪುರುಷ. ಅಂದಮೇಲೆ ಕೂರ್ಮಾದೇವಿಯು ಅವನನ್ನು ಪ್ರೀತಿಸಿದ್ದು ತಪ್ಪೇ! ಅವನು ಶಕ್ತಿವಂತನೆಂದೂ, ಧೈರ್ಯ ಸ್ಥೈರ್ಯಗಳಿಂದ ಕೂಡಿದವನೆಂದೂ ರಜಪೂತಾನ, ಪಂಜಾಬುಗಳಲ್ಲಿ ಮಾತ್ರವಲ್ಲ, ಕಾಶ್ಮೀರದ ವರೆಗೂ ಕೀರ್ತಿಯು ಹಬ್ಬಿತ್ತು. ಅಂಥಾ ಧೀರನು ಆ ಪಾರ್ಶ್ವದಲ್ಲೇ ಇರಲಿಲ್ಲ.

ಈ ವೀರನ ಸಾಹಸ ಕಾರ್ಯಗಳ ವಿಷಯ ಮಾಣಿಕರಾಯನೂ ಸಹ ಎಷ್ಟೋ ಕಥೆಗಳನ್ನು ಕೇಳಿದ್ದನು; ಅಂಥವನನ್ನು ಸತ್ಕರಿಸುವದಕ್ಕೋಸ್ಕರ ತನ್ನ ಪಟ್ಟಣಕ್ಕೆ ಕರೆಸಿದನು. ಲೂಟಿ ಮಾಡಿದ ಸಾಮಾನುಗಳನ್ನು ತೆಗೆದುಕೊಂಡು ತನ್ನೂರಿಗೆ ತಿರುಗಿದ ಸಮಯದಲ್ಲಿ ಮಾಣಿಕ ರಾಯನ ಅರಮನೆಯನ್ನು ಅಲಂಕರಿಸಿದನು. ಸಾಧುವನ್ನು (ಹೀಗೆಂದು ಅವನನ್ನು ಕರೆಯುತ್ತಿದ್ದರು) ಕೂರ್ಮಾದೇವಿಯು ಕಂಡೊಡನೇ ಮೋಹಿಸಿದಳು.

ಈ ಧೀರನು ಮಾಣಿಕರಾಯನ ಅರಮನೆಗೆ ಬರುವುದಕ್ಕೆ ಸ್ವಲ್ಪ ಮುಂಚೆಯೇ ಮಣಿಘೋರ ಮನೆತನದ ರಾಹುತ ನೆಂಬೊಬ್ಬ ರಾಜಕುಮಾರನು ದೇವಿಯನ್ನು ಮದುವೆ ಮಾಡಿಕೊಳ್ಳಲು ಬಂದಿದ್ದನು. ಸಾಧುವಿನಷ್ಟು ಧೀರನಲ್ಲದಿದ್ದರೂ, ಅವನ ಸಮಾನನಾಗಿದ್ದನು. ಮಾಣಿಕರಾಯನೂ ಈ ಮದುವೆ ವಿಚಾರದಲ್ಲಿ ಸಮ್ಮತಿಸಿದ್ದನು. ಈ ಸಾಧುವು ಬಾರದಿದ್ದರೆ ಎಲ್ಲವೂ ನೆರವೇರುತ್ತಿತ್ತು! ಆದರೆ ಅವನ ಆಗಮನದಿಂದ ದೇವಿಯ ಮನವು ಬದಲಿತು. ಮಾತುಗಳು ಕೆಲವೇ ಆದವು. ಮಗಳಲ್ಲುಂಟಾದ ಈ ಬದಲಾವಣೆಗಳನ್ನು ತಂದೆಯು ತಿಳಿದು, ವಿನಯದಿಂದ ಕಾರಣಗಳನ್ನು ಕೇಳಿದನು. ಕಣ್ಣೀರಿಕ್ಕುತ್ತಾ ಸಾಧುವನ್ನು ಪ್ರೀತಿಸುತ್ತಿರುವುದನ್ನು ತಿಳಿಸಿದಳು. ತಂದೆಯು ಬಹಳವಾಗಿ ಮರುಗಿ ಹೀಗೆಂದು ಹೇಳಿದನು —

ತಂದೆ—"ಮಗಳೇ, ನೀನು ಅವನನ್ನು ಪ್ರೀತಿಸುವುದು ಯೋಗ್ಯವಲ್ಲ. ರಾಹುತನಿಗೆ ಮಾತುಕೊಟ್ಟಾಗಿದೆ; ಮಾತಿಗೆ ತಪ್ಪಲಾಗದು. ಒಂದುವೇಳೆ ಮಾತಿಗೆ ತಪ್ಪಿದರೆ, ಅವನು ಹಗೆ ತೀರಿಸಿಕೊಂಡಾನು. ನೀನು ಅವನನ್ನು ಪ್ರೀತಿಸಬೇಡ. ಕೆಟ್ಟ ಯೋಚನೆಯನ್ನು ಬಿಡು."

ಮಗಳು—"ಇಲ್ಲ, ಇಲ್ಲ, ತಂದೆಯೇ, ಖಂಡಿತವಾಗಿಯೂ ಆಗುವುದಿಲ್ಲ" ಎಂದು ಬಿಕ್ಕಿ ಬಿಕ್ಕಿ ಅತ್ತಳು.

ತಂದೆ—"ಸ್ವಲ್ಪ ನಿಧಾನದಿಂದ ಆಲೋಚಿಸು," ಎಂದು ಮೆಲ್ಲಗೆ ಹೇಳಿ ಕೈಯಲ್ಲಿ ಮಗಳನ್ನು ಎತ್ತಿಕೊಂಡು "ಆ ವೀರನು ಇಲ್ಲಿಂದ ಹೋದನಂತರ ನಿನ್ನ ಮನಸ್ಸು ಸರಿಯಾಗುವುದೆಂದು ತೋರುತ್ತದೆ" ಎಂದು ಹೇಳಿದನು.

ಮಗಳು ಕ್ಷಣಮಾತ್ರದಲ್ಲಿ ತಂದೆಯ ಪಾದಗಳಲ್ಲಿ ಬಿದ್ದು "ತಂದೆಯೇ, ನಾನು ರಾಹುತನನ್ನು ಖಂಡಿತವಾಗಿ ಮದುವೆಯಾಗಲಾರೆನು. ನಾನು ಯಾರನ್ನು ಪ್ರೀತಿಸುತ್ತೇನೋ ಅವನನ್ನೇ ಮದುವೆಯಾಗುವೆನು. ನನ್ನ ಬಿಟ್ಟು ಅವನನ್ನು ಹೋಗಗೊಡೆನು. ನಾನು ಅವನನ್ನು ಮನಃಪೂರ್ವಕವಾಗಿ ಪ್ರೀತಿಸುತ್ತೇನೆ" ಎಂದಳು.

ಮಾಣಿಕರಾಯನು ಬಹಳವಾಗಿ ಬೇಜಾರಪಟ್ಟನು. ಆದರೂ ತನ್ನ ಕೈಯಲ್ಲಾಗುವ ಎಲ್ಲಾ ಸಹಾಯಗಳನ್ನೂ ಮಾಡುವೆನೆಂದು ಹೇಳಿ ಮಗಳನ್ನು ಸಮಾಧಾನಪಡಿಸಿದನು; ಮರುದಿನ ಸಾಧುವಿನ ಹತ್ತಿರ ಹೋಗಿ ಈ ವಿಷಯವನ್ನೆಲ್ಲಾ ಹೇಳಿದನು. ಸಾಧುವಿನ ಸಂತೋಷಕ್ಕಂತೂ ಪಾರವೇ ಇರಲಿಲ್ಲ. ಈ ಧೀರೆಗೆ ಆ ವೀರನು ಮಾತ್ರ ಯೋಗ್ಯ ಪುರುಷನಾಗಿ ಕಂಡನು. ಆದರೂ ಸಾಧುವು ಮಣಿಘೋರನಿಗೆ ಕೊಟ್ಟ ಮಾತನ್ನು ತಪ್ಪಿಸಬಾರದೆಂದು ತಿಳಿದು, "ರಾಜನೇ, ನಾನು ಹೋಗುತ್ತೇನೆ, ಸುಂದರಿಯನ್ನು ನೋಡುವುದೇ ಇಲ್ಲ. ಇಂಥಾ ಒಳ್ಳೇ ಮನೆತನಕ್ಕೆ ನಾನು ಕೆಟ್ಟ ಹೆಸರು ತರಲಾರೆನು" ಎಂದನು. ಮಾಣಿಕನು ಸಂತೋಷಪಟ್ಟು "ನೀನು ಕೊಳ್ಳೆ ಹೊಡೆದ ಸಾಮಾನುಗಳನ್ನು ತೆಗೆದುಕೊಂಡು ಹೋಗುವುದು ಒಳ್ಳೆಯದು. ಮಗಳ ಇಷ್ಟವು ಹ್ಯಾಗೆ ಇದೆಯೆಂದು ಹಿಂದಿನಿಂದ ತಿಳಿಸುತ್ತೇನೆ" ಎಂದನು.

ಸಾಧುವು ಹಾಗೆಯೇ ಹೊರಟು ಹೋದನು. ಆದರೆ ಕೂರ್ಮಾದೇವಿಯ ಸೇವಕನೂ ಹಿಂದೆಯೇ ಹೋದನು ಮತ್ತು ಹೀಗೆಂದು ಹೇಳಲು ಹೇಳಿದ್ದಳು —"ನನ್ನ ಮನಸ್ಸನ್ನು ಯಾರೂ ಬದಲಾಯಿಸಲಾರರು. ನನ್ನ ಪ್ರೀತಿಗೆ ಕೊನೆಯೇ ಇಲ್ಲ. ತಂದೆಯು ಇದಕ್ಕೊಪ್ಪುವುದಿಲ್ಲವೆಂದು ತಿಳಿಯಲು ಬಹಳ ವ್ಯಸನವಾಗುತ್ತದೆ. ಆದರೂ ನಾನು ನಿನ್ನವಳೇ! ಇನ್ನೊಬ್ಬನನ್ನು ವರಿಸುವುದೆಂದರೆ ಪಾಪಕರವು. ಆದುದರಿಂದ ನನ್ನನ್ನು ಕರೆದುಕೊಂಡು ಹೋಗು."

ಮಗಳ ಮಾತನ್ನು ಮೀರಿದ್ದರಿಂದ ತಂದೆಯು ತನ್ನಲ್ಲೇ ಸಮಾಧಾನವನ್ನು ತಂದುಕೊಂಡನು. ಮಣಿಘೋರ ಮನೆತನದ ಖ್ಯಾತಿಯು ಎಲ್ಲಾ ಮೂಲೆಗೊತ್ತಲ್ಪಟ್ಟಿತು. ಅವರ ಮರ್ಯಾದೆಗೆ ಭಂಗವಾಯಿತು. ಇದೆಲ್ಲವೂ ಆ ಮರಳುಕಾಡಿನ ವಡಯನಿಗಾಗಿ! ಅಂದಬಳಿಕ ಮಣಿಘೋರ ರಾಜಮನೆತನದವರಿಂದ ಭೀತಿಯು ತಪ್ಪೀತೇ?

ಆದರೂ ಮಾಣಿಕರಾಯನು ತನ್ನ ಮಗಳ ಮದುವೆಯನ್ನು ಬಹು ವಿಜೃಂಭಣೆಯಿಂದ ನಡಿಸಿದನು. ರಾಜಪುತ್ರಿಗೆ ಕೊಡುವ ಎಲ್ಲಾ ಸಾಮಾನುಗಳೂ ಕೊಡಲ್ಪಟ್ಟವು. ಆಭರಣಗಳನ್ನೂ ಚಿನ್ನ ಬೆಳ್ಳಿ ಪಾತ್ರೆಗಳನ್ನೂ, ಚಿನ್ನದ ಒಂದು ಒಸುವನನ್ನೂ, ಅನೇಕ ರೇಶ್ಮೆ ಬಟ್ಟೆಗಳನ್ನೂ ಅಲ್ಲದೆ ಹದಿಮೂರು ಯೋಗ್ಯ ದಾಸಿಯರನ್ನೂ ಸಹ ಕಳುಹಿಸಿಕೊಟ್ಟನು. ಮದುವೆ ಎಲ್ಲವೂ ಸಾಂಗವಾಗಿ ನಡೆಯಿತು. ಕಡೆಗೆ ವಧುವು ವರನ ಮನೆಗೆ ಹೋಗುವ ಸಮಯದಲ್ಲಿ ಮೋಹಿಲ ರಾಜನು ಬಂದಾನೆಂದು ತಿಳಿದು, ಸೈನ್ಯವನ್ನು ಜೊತೆಯಲ್ಲಿ ಕರೆದುಕೊಂಡು ಹೋಗಲು ಬಹಳವಾಗಿ ಹೇಳಿದನು. ರಾಹುತನು ದಾರಿಯಲ್ಲಿ ಇದ್ದಾನೆಂದು ಹೆದರಿಕೆಯಿತ್ತು. ಆದರೂ ಸಾಧುವು ನೆಗಾಡಿ ತನ್ನ ಏಳುನೂರು ಜನರಿದಿರನ್ನಲ್ಲಿ ಯಾರು ತಾನೆ ಬಂದಾರು! ಬಂದರೂ ಅವನನ್ನು ಗೆಲ್ಲಬಲ್ಲೆನೆಂದನು!! ಹಾಗೆಯೇ ಯಾರ ಭಯವೂ ಇಲ್ಲದೆ ವಧೂವರರು ಹೊರಟರು.

ಆದರೆ ರಾಹುತನು ತನ್ನ ಹಗೆ ತೀರಿಸಿಕೊಳ್ಳಬೇಕೆಂದು ಗಟ್ಟಿಮುಟ್ಟಾದ ನಾಲ್ಕುಸಾವಿರ ಸೈನಿಕರನ್ನು ಕರೆದುಕೊಂಡು ದಾರಿಯಲ್ಲಿ ಕಾದಿದ್ದನು. ಇದನ್ನು ಸಾಧುವು ಕಂಡು ಯುದ್ಧವು ನಿರ್ವಾಹವಿಲ್ಲವೆಂದು ತಿಳಿದನು. ಆಗ ಮಣಿಘೋರನು ತನ್ನ ನಾಲ್ಕುಸಾವಿರ ಜನರು ಏಳುನೂರು ಮಂದಿಯ ಮೇಲೆ ಬೀಳುವುದು ಯೋಗ್ಯವಲ್ಲವೆಂದು ನೆನಸಿ, ದ್ವಂದ್ವಯುದ್ಧವನ್ನೇರ್ಪಡಿಸಿದನು. ಸಾಧುವಿನ ಕಡೆ ಅವನ ಕುಟುಂಬಿಕನೊಬ್ಬನು ಮುಂದೆ ಬಂದನು. ರಾಹುತನ ಕಡೆಯಿಂದ ಒಬ್ಬ ಧೀರನೊಬ್ಬನು ರಣರಂಗಕ್ಕಿಳಿದನು. ಇಬ್ಬರೂ ಹೋರಾಡಿ ಭೂಮಿಯಲ್ಲಿ ಬಿದ್ದರು. ನಂತರ ಬೇರೆ ಬೇರೆ ಧೀರರೊಳಗೆ ಯುದ್ಧವಾಯಿತು. ಅಲ್ಲದೆ ಚಿಕ್ಕ ಚಿಕ್ಕ ಪಂಗಡಗಳಾಗಿ ಬಡಿದಾಟವೂ ಮುಗಿಯಿತು. ಇವುಗಳನ್ನೆಲ್ಲಾ ಎರಡುಕಡೆಯ ಯುವತಿಯರು ಕುಳಿತು ನೋಡುತ್ತಿದ್ದರು.

ಕಡೆಗೆ ಇದೆಲ್ಲಾ ಸಾಗುವುದಿಲ್ಲವೆಂದು ತಿಳಿದು ಸಾಧುವೂ ಯುದ್ಧಕ್ಕೆ ಇಳಿದನು. ಎಲ್ಲಾ ಆಯುಧಗಳನ್ನು ಧರಿಸಿದ್ದನು. ಭರ್ಜಿ ಈಟಿಗಳನ್ನು ತೆಗೆದುಕೊಂಡು ರಾಹುತನ ಸೈನ್ಯದ ಮೇಲೆ ಎರಡು ಸಾರಿ ಬಿದ್ದನು. ಎರಡುಸಾರಿಯೂ ಎದುರು ಪಂಗಡಗಳಲ್ಲಿ ಕೆಲವರು ಮಡಿದರು. ಆದರೂ ಕಡೆಗೆ ಸಾಧುವಿನ ಕಡೆ ಅರ್ಧಜನರು ಬಿದ್ದರು; ರಾಹುತನ ಕಡೆ ಅರುನೂರು ಜನರು ಸತ್ತರು. ತಾನು ರಣರಂಗದಲ್ಲಿ ಸಾಯಬೇಕು, ಇಲ್ಲವೆ ತನ್ನ ಶತ್ರುವನ್ನು ಕೊಲ್ಲಬೇಕೆಂದು ನಿಶ್ಚಯಿಸಿ ಕಡೆಯ ಸಾರಿ ತನ್ನ ಪ್ರೀಯೆಯ ಅಪ್ಪಣೆಯನ್ನು ಪಡಕೊಂಡನು. ಪತ್ನಿಯೂ ಪತಿಗೆ ತಕ್ಕವಳಾಗಿದ್ದಳು. ಗಂಡನಿಗೆ ಬಿತ್ಸಾಹವನ್ನು ಕೊಟ್ಟಳು.

'ಇಂಗ್ ಸ್ತ್ರೀ ಹೊರತ್ತ ನನ್ನ ನೋಡುವೆನು ನೀನು ಬಿದ್ದ ರೆ, ನಾನೂ ನ್ನ ಜೊತೆಯಲ್ಲೇ ಇರುವೆ' ಎಂದಳು

ರಾಜಪುತರರು ಯುದ್ಧಸನ್ನದರಾದರು. ಮಯೂರ್ ದೇಶದಿಂದಲೂ, ಗಾಂಧೀಯಾ ದಿಂದಲೂ ತಮ್ಮ ತಮ್ಮ ಪೊದ ಲನೆಯ ಮನೆಗಳನ್ನು ಬಿಡುಗಾಡಿಸಿಕೊಂಡರು ಕಡೆಗೆ ಸಾ ಧುವು ತನ್ನ ಎಡಬದಿಯ ಬಂದಾದ ಪಟ್ಟನ್ನು ರಾಜುತನ ಕುತ್ತಿ ಗೆಯಲ್ಲಿ ಎಷ್ಟು ಬಿರುಸಾಗಿಟ್ಟನೋ ಅಷ್ಟೇ ಬೇಗನೆ ರಾಜು ತನು ಕತ್ತಿಯನ್ನು ಸಾಯುವಿನ ತಲೆಗಿಟ್ಟನು ಇಬ್ಬರೂ ನೆಲ ಸಸುವಾದರು ಸಾಧುವು ಮರಣಹೊಂದನಯಿಂದ, ರಾಜುತನು ಗಾಯದ ನೋವಿನಿಂದ

ಈ ಅನಾಹುತಕ್ಕೆಲ್ಲಾ ಕಾರಣಳಾದ ಕುಮಾರಿ ವೇಣಿಯು ತನ್ನ ಪ್ರಿಯನ ಪರುಷಶವವನ್ನು ನೋಡಲು ಮುಂದೆ ಒಂ ದಳು ಪ್ರೀತಿಯಿಲ್ಲವು ಉಕ್ಕಿ ಬಂತು ಮೊಡತಕ್ಕದ್ದೇನು! ದೈವ ಇಚ್ಛೆಯೂ ಅದೇ ಬೇಕು! ನಂತರ ಒಂದು ಪಿಸ್ತೂಲನ್ನು ತೇಳಿಕೊಂಡು ತನ್ನ ಎಡದ ಕೈಯನ್ನು ಕತ್ತರಿಸಿ, ಇದನ್ನು ತೆಗೆದುಕೊಂಡು ಹೋಗಿ ನನ್ನ ಪತಿಯ ತಂದೆಗೆ ಕೊಟ್ಟು ಇ ದು ತನ್ನ ಸೊಸೆಯ ಕೈಯೆಂದು ಹೇಳು ಎಂದಪ್ಪಣೆಮಾಡಿ ದ್ದಳು

ನಂತರ ವ್ಯಸನಾಕ್ರಾಂತಳಾಗಿ ನಿಂತಿದ್ದ ಮೋಹಿನಿ ಜನರ ನ್ನು ನೋಡಿ ತನ್ನ ಬಲಕೈಯನ್ನು ಕತ್ತರಿಸಲು ಹೇಳಿ ಇ ದನ್ನು ತೆಗೆದುಕೊಂಡು ಹೋಗಿ ನನ್ನ ತಂದೆಗೆ ಕೊಡಿ ಅದರ ಜೊತೆಯಲ್ಲಿ ನನಗೆ ಕೊಟ್ಟ ಎಲ್ಲಾ ಚಿನ್ನಾಭರಣಗಳನ್ನೂ ಹಿಂ ದಕ್ಕೆ ತೆಗೆದುಕೊಂಡು ಹೋಗಿ ಎಂದು ಹೇಳಿದಳು

ಆ ಸರ್ವಾಂಗ ಸುಂದರಿಯು ತನ್ನ ಪ್ರಿಯ ಪತಿಯ ಬ ದ್ದಲ್ಲೇ ಒಂದು ಚಿತೆಯನ್ನು ನಿರ್ಮಿಸಲು ಹೇಳಿದಳು ತನ್ನ ಗಂಡನ ಜೊತೆಯಲ್ಲೇ ವೀರಸ್ವರ್ಗವನ್ನು ಪಡೆದಳು

ಆರು ತಿಂಗಳಲ್ಲೇ ಪ ಣಾದೂರರಾ ಗಾಯವು ವಾಸಿಯಾಗ್ದಾಗಿ ಜೋರಾಗಲು ಅವನೂ ಆ ನೋವಿನಿಂದಲೇ ಪರ ಲೋಕವನ್ನೈದಿದನು ಮ ನ ಮಡಿಕೇರಿ

—

ಬಿಳಿಯ ಶೀರೆಗಳು.

ಸ್ತ್ರೀಯರಿಗೆ ನಾನಾ ವರ್ಣಗಳಿಂದ ಹೊಳೆಯುವ ಶೀರೆ ಗಳನ್ನುಟ್ಟುಕೊಳ್ಳುವುದೆಂದರೆ ಬಹಳ ಇಷ್ಟ ನಾನಾ ವರ್ಣ ಗಳ ಶೀರೆಗಳು ಪ್ರಚಾರದಲ್ಲಿವೆ ಜಗತ್ತಿನಲ್ಲಿ ಪರಮಾತ್ಮನು ಪುಷ್ಪ ಜಾತಿಯಲ್ಲಿ ಎಷ್ಟೆಲ್ಲ ವರ್ಣಗಳನ್ನು ಕೊಟ್ಟಿರುವನೋ ಅಷ್ಟೇ ಬಣ್ಣಗಳ ಶೀರೆಗಳು ಸಿಕ್ಕುತ್ತವೆ ಚೆನ್ನಾಗಿ ಹೊಳೆ ಯುವ ಬಣ್ಣದ ಶೀರೆಗಳನ್ನುಟ್ಟುಕೊಳ್ಳುವುದರಿಂದ ಸ್ತ್ರೀಯರ ಸೌಂದರ್ಯವು ಚೆನ್ನಾಗಿ ಶೋಭಿಸುವುದೆಂದು ಸಾಮಾನ್ಯವಾ ದೊಂದು ಅಭಿಪ್ರಾಯವು ಪ್ರಚಾರದಲ್ಲಿದೆ ಹೂಬಣ್ಣ, ಆ ಕಾಶ ನೀಲ ಮೊದಲಾದ ವರ್ಣಗಳನ್ನು ಹೆಚ್ಚಾಗಿ ಪ್ರೀತಿಸುವ ರು

ಮುತ್ತೈದೆಯರು ಶುದ್ಧ ಬಿಳಿಯ ಶೀರೆಗಳನ್ನು ಉಟ್ಟು ಕೊಳ್ಳುವುದು ನಿಷಿದ್ಧವೆಂದು ಕೆಲವರು ಹೇಳುವುದುಂಟು ಅಂ ಥ ನಿಯಮವು ಇರಲಿ, ಇಲ್ಲದಿರಲಿ ಬಿಳಿಯ ಶೀರೆಗಳು ಇತ್ತ ಲಾಗ ಸಾಮಾನ್ಯವಾಗಿ ಉಪಯೋಗಿಸಲ್ಪಡುವುದಿಲ್ಲವೆಂಬುದು ನಿಜವಾಗಿದೆ ಇಂಥ ನಿಯಮವಿರುವುದಾದರೆ ಅದೆಲ್ಲಿಂದ ಬಂತೋ ನಾವರಿಯೆವು ಈ ವಿಚಾರದಲ್ಲಿ ಲೋಕರೂಢಿ ಯಲ್ಲದೆ ಬೇರಾವ ತರದ ನಿಯಮಗಳೂ ಇರುವಂತಿಲ್ಲ

ಸೌಂದರ್ಯಕ್ಕೂ ಬಣ್ಣಗಳಿಗೂ ಇರುವ ಹತ್ತಿರದ ಸಂ ಬಂಧವನ್ನು ಒಂದೇ ಮಾತಿನಲ್ಲಿ ತಿಳಿಸಿದಂತಾಗುವುದಿಲ್ಲ ಚಿ ತ್ರಕಲೆಯಲ್ಲಿ ಸ್ವಲ್ಪವಾದರೂ ಅಭಿರುಚಿಯುಳ್ಳವರು ವರ್ಣಗಳ ಬೆಲೆಯನ್ನು ತಿಳಿಯದೆ ಇಲ್ಲ ಬಣ್ಣಬಣ್ಣಗಳ ಶೀರೆಯನ್ನುಡ ಬೇಕೆನುವವರನ್ನು ನಾವು ನಿಷೇಧಿಸುವುದಿಲ್ಲ

ಆದರೂ ನಾನಾ ವರ್ಣಗಳ ಶೀರೆಗಳೆಲ್ಲವುಗಳಿಗಿಂತ ಶು ಭ್ರವಾದ ಬಿಳಿಯ ಶೀರೆಯೇ ಶ್ರೇಷ್ಠವಾದುದೆಂದು ಹೇಳುವು ದೇ ಈ ಲೇಖನದ ಉದ್ದೇಶ ಬಿಳಿಯ ಶೀರೆಯೇ ಹೆಚ್ಚು ಅಂದವಾದುದು ಅದನ್ನು ಉಪಯೋಗಿಸುವುದರಿಂದ ಸೌಂ ದರ್ಯವು ಶೋಭಿಸುವಂತೆ ಇನ್ನಾವ ವರ್ಣದಿಂದಲೂ ಶೋ ಭಿಸುವಂತಿಲ್ಲವೆಂಬುದೇ ನಮ್ಮ ಹೇಳಿಕೆ

ನಿಜವಾದ ಸೌಂದರ್ಯವೇನೆಂಬುದನ್ನು ಸ್ವಲ್ಪ ಮಟ್ಟಿ ಗಾದರೂ ಕಲ್ಪಿಸಿಕೊಳ್ಳದೆ ಇದನ್ನು ಸ್ಪಷ್ಟಗೊಳಿಸುವುದು ಸಾ ಧ್ಯವಿಲ್ಲ, ಸೌಂದರ್ಯವೆಂಬುದು ಎಲ್ಲರ ಅಭಿಪ್ರಾಯದಲ್ಲಿ ಯೂ ಒಂದೇ ರೀತಿಯಲ್ಲಿಲ್ಲದಿರುವುದರಿಂದ ಅದು ಇಂಥದೇ ಎಂದು ಹೇಳಲಾಗುವುದು ಸಾಗದ ಮಾತು ಸೌಂದರ್ಯದಲ್ಲಿ ಎ ರಡು ವಿಧಗಳಿವೆಯೆಂಬುದನ್ನು ಎಲ್ಲರೂ ಒಪ್ಪಬೇಕು ಕಣ್ಣಿಗೆ ಕಾಣುವ ಸೌಂದರ್ಯವು ಒಂದು ವಿಧ ಮನಸ್ಸಿನಲ್ಲಿ ಹೊ ಳೆಯುವ ಸೌಂದರ್ಯವು ಇನ್ನೊಂದು ವಿಧ ಮನಸ್ಸಿಗೆ ಪ್ರಿಯವಾಗುವಂಥದೇ ಮಾನಸಿಕ ಸೌಂದರ್ಯ

ಪುಷ್ಪಗಳನ್ನು ಕುರಿತು ವಿಚಾರಿಸಿರಿ ಎಷ್ಟೋ ಬಣ್ಣದ ಪುಷ್ಪಗಳಿವೆ ಪಾಶ್ಚಾತ್ಯ ಪದ್ಧತಿಯನ್ನನುಸರಿಸಿ ಕಟ್ಟಲ್ಪಟ್ಟ ಒಂದು ಹೂದೋಟಕ್ಕೆ ಹೋಗಿ ನೋಡಿದರೆ ಅಲ್ಲಿ ಎಲ್ಲಾ ವರ್ಣಗಳ ಪುಷ್ಪಗಳನ್ನೂ ನೋಡಬಹುದು. ಮಾತ್ರವಲ್ಲ ನಾ ನಾ ವರ್ಣಗಳು ರಮ್ಯವಾಗಿ ತೋರಬೇಕೆಂದು ಅವನ್ನು ಒ ಳ್ಳೆಯ ಕ್ರಮವನ್ನನುಸರಿಸಿ ಇರಿಸುವರು ಅಂಥ ಹೂದೋ ಟಗಳಲ್ಲಿ ಗುಲಾಬಿಯೊಂದನ್ನು ಬಿಟ್ಟರೆ ಉಳಿದ ಪುಷ್ಪಗಳಿಗೆ ಹೆ ಚ್ಚಿನ ಸುವಾಸನೆಯಿರುವುದಿಲ್ಲ ಮನೋಹರವಾದ ಬಣ್ಣಗ ಳು ಮಾತ್ರ ಬೇಕಷ್ಟು ಇರುತ್ತವೆ ಆ ಪುಷ್ಪಗಳಿಗೆ ಸೌಂ ದರ್ಯವಿಲ್ಲವೆಂದು ಯಾರು ತಾನೆ ಹೇಳಬಲ್ಲರು?

ಬಣ್ಣಗಳಿಲ್ಲದೆ ಶುಭ್ರವಾದ ಬಿಳಿಯ ಬಣ್ಣದಿಂದ ಮಾತ್ರ ಕೂಡಿರುವ ಪುಷ್ಪಗಳೂ ಇವೆ ಮಲ್ಲಿಗೆಯೇ ಮೊದಲಾಗಿ ಹಿಂದೂ ಸ್ತ್ರೀಯರು ಹೆಚ್ಚಾಗಿ ಪ್ರೀತಿಸುವ ಪುಷ್ಪಗಳು ಸಾ ಮಾನ್ಯವಾಗಿ ಈ ತರದವುಗಳೇ ಆಗಿವೆ ಬರೀ ಬಣ್ಣಗಳಿಗಾ ಗಿ ಮಾತ್ರ ಪುಷ್ಪಗಳನ್ನು ಪ್ರೀತಿಸುವುದು ನಮ್ಮಲ್ಲಿ ಹೆಚ್ಚು ಪ್ರ ಚಾರದಲ್ಲಿಲ್ಲ ಇಂಥ ಪುಷ್ಪಗಳಿಗೆ ಸೌಂದರ್ಯವಿಲ್ಲವೆನ್ನು ವರ್ಯಾರು? ಅದು ಸಾಮಾನ್ಯವಾಗಿ ಕಣ್ಣಿಗೆ ಹೊಳೆಯು ವ ಸೌಂದರ್ಯವಲ್ಲ

ಬಣ್ಣಬಣ್ಣಗಳಿಂದ ಕೂಡಿರುವ ನಾನಾ ತರದ ಪುಷ್ಪಗಳಿ ಗಿಂತ ಮಲ್ಲಿಗೆಯೇ ಶ್ರೇಷ್ಠವಾದುದೆಂದು ಯಾವ ಸ್ತ್ರೀಯು ಒಪ್ಪುವುದಿಲ್ಲ? ಮಲ್ಲಿಗೆಯೇ ಶ್ರೇಷ್ಠವೇಕೆಂದು ನಾವು ಹೇಳ ಲಾರೆವು. ಆದರೆ ಸ್ತ್ರೀಸಮಾಜವು ಆ ಅಭಿಪ್ರಾಯವನ್ನೇ ಹೇ ಳುವುದೆಂಬುದು ಮಾತ್ರ ನಿಸ್ಸಂಶಯವಾದ ಮಾತು

ಮಲ್ಲಿಗೆಯಲ್ಲಿ ಸುವಾಸನೆಯಿದೆ ಅದಕ್ಕಾಗಿಯೇ ಅ ದರ ಸೌಂದರ್ಯವು ಅಧಿಕವೆನ್ನುವರು ಸೌಂದರ್ಯವು ಬಣ್ಣಗಳ ಮೇಲೆಯೇ ಹೊಂದಿಕೊಂಡಿಲ್ಲವೆಂಬುದು ನಿರ್ವಿವಾ ದವೆಂದು ಹೇಳಬಹುದು

ಸ್ತ್ರೀಯರ ಸೌಂದರ್ಯವೂ ಅದೇ ರೀತಿ ಕಣ್ಣಿಗೆ ತೋರುವ ರೂಪದಲ್ಲಿಯೇ ನಿಜವಾದ ಸೌಂದರ್ಯವಿದೆಯೆಂ ದು ತಿಳಿಯುವುದು ಸರಿಯಾಗಲಾರದು

ಶ್ರೇಷ್ಠ ಸೌಂದರ್ಯವು ನಿಜವಾಗಿ ಮಾನಸಿಕ ವಿಷಯ ವೇ ಆಗಿದೆ ಆದುದರಿಂದಲೇ ಪಾಶ್ಚಾತ್ಯರಲ್ಲಿ ಪ್ರಸಿದ್ಧ ಕಲಾ ವಿಜ್ಞನಾದ ರಸ್ಕಿನ್ ಮೊದಲಾದವರು ಸತ್ಯವೇ ಸೌಂದರ್ಯ ವೆಂದು ಸಾರಿರುವರು. ಸತ್ಯವೇ ಮಾನವ ಹೃದಯಕ್ಕೆ ಸ್ವಾ ಭಾವಿಕವಾಗಿ ಪ್ರಿಯವಾದುದು ಸದ್ಗುಣಗಳೇ ಸೌಂದ ರ್ಯದ ಮೂಲ

ಶುಭ್ರವಾದ ಖಾದಿಯ ಬಿಳೀ ಶೀರೆಯಲ್ಲಿ ಕಣ್ಣಿಗೆ ಹೊ ಳೆಯುವ ರೂಪವಿಲ್ಲದಿರಬಹುದು ಆದರಲ್ಲಿ ಸತ್ಯವಿದೆ ರಾ ಷ್ಟ್ರಾಭಿಮಾನವಿದೆ ಬಡಬಗ್ಗರ ಮೇಲಿನ ಅಂತಃಕರಣದ ಪ್ರೇ ಮಭಾವವಿದೆ. ಇಂಥ ಶೀರೆಯೇ ಅತ್ಯಂತ ಸುಂದರವಾದು ದೆಂದೂ ಸರ್ವೋತ್ಕೃಷ್ಟವಾದುದೆಂದೂ ಹೇಗೆ ತಾನೆ ನಿರಾಕ ರಿಸಬಹುದು? ಖಾದಿಯ ಶೀರೆಯ ಶುಭ್ರವಾದ ಬಿಳಿಯ ಬ ಣ್ಣವೇ ಅಂತಃಕರಣದ ಪಾವಿತ್ರ್ಯವನ್ನೂ ಶುಭ್ರತೆಯನ್ನೂ ಸೂ ಚಿಸಿ ಅದನ್ನು ಧರಿಸುವ ಸ್ತ್ರೀಯರ ಸೊಬಗನ್ನು ಬೆಳಗಿಸುತ್ತದೆ

ಸತ್ಯಾಗ್ರಹೀ

— — —

ನೋಟೀಸ್.

19 5 ನೇ ಸೆಪ್ಟಂಬರು 1 ರಿಂದ ಮಡಿಕೇರಿಯಲ್ಲಿ ಸ್ಪೇಶ ಲ್ ಮ್ಯಾಜಿಸ್ಟ್ರೇಟರ ಕೋರ್ಟು ಒಂದು ತೆರೆಯಲ್ಪಡುವುದೆಂ ದು ಇದರಿಂದ ಸಮಸ್ತರಿಗೂ ತಿಳಿಯಪಡಿಸಲಾಗಿದೆ

ಕೊಡಗು ಕಮಿಷನರ ಆಫೀಸು ಕಮಿಷನರು

ತಾ 20-8-'2

ಮಡಿಕೇರಿ ಕೈಲ್ ಮುಹೂರ್ತ ಮೀಟಿಂಗು.

(ಹಾಜರಿದ್ದ ವರದಿಗಾರರಿಂದ)

ತಾ 17ರಲ್ಲು ಓಂಕಾರೇಶ್ವರ ದೇವಸ್ಥಾನದ ಮಹಡಿಯ ಲ್ಲಿ ರಾ ಬ ಕೆ ಕುಟ್ಟೈಯ್ಯನವರ ಅಧ್ಯಕ್ಷತೆಯಲ್ಲು ಮಡಿಕೇ ರಿ ಕೊಡವರ ಒಂದು ಮೀಟಿಂಗು ನಡೆಯಿತು. ಸುಮಾರು 35 ಜನರು ಹಾಜರಿದ್ದರು ಮಡಿಕೇರಿಯಲ್ಲಿ ಕೈಲ್‌ಮುಹೂರ್ತ ಹಬ್ಬವನ್ನು ಹೇಗ ನಡಿಸಬೇಕೆಂಬ ಚರ್ಚೆಯು ನಡೆಯಿತು ಹೆಂಗಸರು ಮಕ್ಕಳು ಇರುವವರಿಗೆ ರಾತ್ರಿಯ ಊಟ ಅನಾ ನುಕೂಲವಾದುದರಿಂದ ತೆಂಗಿನಕಾಯಿ ಗುರಿ ಹೊಡೆದನಂತರ ಒಳೇ ತಿಂಡಿ ಮತ್ತು ಟೀ ಸಾಕೆಂತ ಕೆಲವರೂ, ಸಾಯಂಕಾ ಲ ಟೀಯೂ ರಾತ್ರಿ ಊಟವೂ ಆಗಬೇಕೆಂದು ಇನ್ನು ಕೆಲವ ರೂ ವಾದಿಸಿದರು ಈ ಠರಾವನ್ನು ಓಟಿಗೆ ಹಾಕಬೇಕೆನ್ನು ವಲ್ಲಿ ಕೆಲವರು ಮುಲಾಜಿನ ಮೇಲೆ ಕೈ ಎತ್ತಬಹುದಾದುದರಿಂ ದ ಚೀಟಿ ಮೂಲಕ ಓಟು ತೆಗೆಯಬೇಕೆಂದೂ ಕೆಲವರೂ, ಹಾ ಗೆ ಕೂಡದು, ಮುಲಾಜಿನ ಮೇಲೆ ಯಾರೂ ಓಟು ಕೊಡುವ ದಿಲ್ಲವೆಂದೂ ಚೀಟಿ ಮೂಲಕ ಓಟು ತೆಗೆಯುವುದು ಕೊಂದರೆ ಯೆಂದೂ ಇನ್ನು ಕೆಲವರೂ ಚರ್ಚಿಸಿದರು ಈ ಪ್ರಶ್ನೆಯು ಅ ಧ್ಯಕ್ಷರ ತೀರ್ಮಾನಕ್ಕೆ ಬಿಡಲಾಗಿ ಅಧ್ಯಕ್ಷರು ನಿಸ್ಸಾರವಾದಾ ಧಾರದ ವಿಷಯವಾದರೆ ಜನರು ಮುಲಾಜಿನಮೇಲೆ ಓಟು ಕೊ ಡಬಹುದು ಊಟ ಯಾ ಟೀ ವಿಷಯ ಮುಲಾಜು ಇರ ಲಿಕ್ಕಿಲ್ಲವಾದುದರಿಂದ ಕೈ ಎತ್ತಿದರೆ ಸಾಕೆಂದು ಹೇಳಿದರು. ಹೀಗೆ ಓಟು ತಗೆಯಲಾಗಿ ಊಟಬೇಕೆನ್ನುವವರ ಕಡೆ ಬಹು ಮತವಾಯಿತು ಊಟದಲ್ಲಿ ಅಮಲು ಪದಾರ್ಥ ಸೇರಿಸಬೇ ಕೋ ಎಂಬ ಪ್ರಶ್ನೆ ಹುಟ್ಟಿತು ಕಳೆದ ವರ್ಷ ಇದರ ದೆಸೆ ಯಿಂದ ಬಹಳ ಚರ್ಚೆಯಾಗಿ ಗಲಾಟೆಯಾಯಿತು, ಆದುದರಿಂದ ಈ ವರ್ಷ ಅದು ಬೇಡವೆಂದು ಅಧ್ಯಕ್ಷರು ಹೇಳಿದರು ಇಷ್ಟ ಇರುವವರು ಕುಡಿಯಬಹುದು, ಇಲ್ಲದವರು ಸುಮ್ಮನಿರಬಹುದು ಹೇಗೂ ನಿಸಾಪದಾರ್ಥ ಇರಲೇಬೇಕೆಂದು ಕೆಲವರು ಹೇಳಿದರು ಕಳೆದವರ್ಷದ ಕೈಲ್‌ಮುಹೂರ್ತದಲ್ಲಿ ಇನ್ನು ಮುಂದೆ ಮಡಿಕೇ ರಿಯಲ್ಲಿ ಈ ಹಬ್ಬಕ್ಕೆ ನಿಸಾ ಸೇರಿಸುವುದಿಲ್ಲವೆಂದು ತೀರ್ಮಾನಿ ಸುವುದರಿಂದಲೂ ದೇಶದವರಿಗೆ ಒಳ್ಳೇ ಉದಾಹರಣೆ ಹಾಕಬೇ ಕಾದುದರಿಂದಲೂ ಇದನ್ನು ಸೇರಿಸಬಾರದೆಂದು ಇನ್ನು ಕೆಲವ ರು ಕೇಳಿಕೊಂಡರು ಠರಾವಿಗೆ ಕೈ ಎತ್ತಲಾಗಿ ನಿಸಾ ಸೇರಿಸ ಬೇಕೆಂಬುದಕ್ಕೆ ಬಹು ಮತದವರು ಓಟು ಕೊಟ್ಟರು. ಎರಡು ಠರಾವುಗಳಿಗೂ ಕೆಲವರು ಯಾವ ಕಡೆಯೂ ಕೈ ಎತ್ತಲಿಲ್ಲ

ಕೂಡಲೆ ಪಿ ಉತ್ತೈಯ್ಯನವರು ಮತ್ತು ಇನ್ನಿಬ್ಬರು ಮೀಟಿಂಗು ಬಿಟ್ಟು ಹೋದರು ಬಹುಮತದಂತೆ ನಡೆಯು ವುದು ಎಲ್ಲರ ಕರ್ತವ್ಯವೆಂದು ಕೆಲವರು ಹೇಳಿದರು ಮೆ ಬ ಬೆಳ್ಯಪ್ಪನವರು ಕಳೆದ ವರ್ಷದ ತೀರ್ಮಾನಕ್ಕೆ ವಿರೋಧ ವಾದಂಥ ಮತ್ತು ಒಗ್ಗಟ್ಟಿಗೆ ಎಡೆ ಕೊಡದಂಥ ಈ ಠರಾವಿಗೆ ವ್ಯಸನವನ್ನು ಸೂಚಿಸಿ ಸಭೆಯವರಿಗೆ ನಮಸ್ಕರಿಸಿ ಮೀಟಿಂಗನ್ನು ಬಿಟ್ಟರು ನಂತರ ಉತ್ತೈಯ್ಯ ಮತ್ತು ಬೆಳ್ಯಪ್ಪನವರು ಮೀ ಟಿಂಗಿನಿಂದ ಬಿಟ್ಟು ಹೋದದ್ದು ತಪ್ಪೆಂತಲೂ ಅದಕ್ಕೆ ಅವರು ತಕ್ಕ ಕಾರಣಗಳನ್ನು ಪತ್ರದ ಮುಂತೆ ಕೊಡಬೇಕೆಂದು ಅವ ರಿಗೆ ಬರೆಯುವಂತೆ ಚರ್ಚೆ ನಡೆದು ಬಹುಮತದಿಂದ ತೀರ್ಮಾ ನಿಸಿದರು. ಕೈಲ್ ಮುಹೂರ್ತವನ್ನು ಸೆಪ್ಟೆಂಬರು 2ರಲ್ಲು ನ ಡಿಸಲು ತಕ್ಕ ಏರ್ಪಾಡು ಮಾಡಲು 6 ಮೆಂಬರುಗಳ ಒಂದು ಕಮಿಟಿ ಮಾಡಲಾಯಿತು

ದಿ ಮೈಸೂರು ಎಗ್ರಿಕಲ್ಚರಲ್ ಡೆವಲಪ್ ಮೆಂಟ್ ಕೊ., ಲಿಮಿಟೆಡ್.

ಹೆಡ್ ಆಫೀಸು ಕರಿಜಾರ ಕಾಟನ್‌ಪೇಟೆ.

ಬಡ ವ್ಯವಸಾಯಗಾರನಿಗೂ ಐಶ್ವರ್ಯವಂತ ಜಮೀನುದಾರನಿಗೂ ಒಂದು ಅಪರೂಪವಾದ ಉಪಕಾರ! (1) ದನಗಳು, ಕುದುರೆಗಳು ಆನೆಗಳು ಮತ್ತು ಇತರ ಜೀವಧನಗಳ ಜೀವವಿಮೆ (2) ಒಂದು ವರುಷದ ಒಳಗೆ ಮೃಗವು ಸತ್ತರೆ ವಿಮೆಯ ಮುಂಗಡದ (ಪ್ರೀಮಿಯಮು) ಒಂದುಭಾಗವನ್ನು ಕೊಡಲು ಗ್ಯಾರಂಟಿ (3) ವಿಮೆದಾರರಿಗೆ ಸತ್ತ ಮೃಗದ ಬದಲಿಗೆ ಇನ್ನೊಂದನ್ನು ತೆಗೆದುಕೊಳ್ಳಲು ಒಂದು ವರುಷದಲ್ಲು ವಾಪಸು ಕೊಡತಕ್ಕಂತೆ 9 % ಬಡ್ಡಿಯ ಸಾಲ (4) ಒಂದು ವರುಷದೊಳಗೆ ವಾಪಸುಕೊಡಬೇಕಾದ ವ್ಯವಸಾಯದ ಕೆಲಸಕ್ಕೆ 12 % ಬಡ್ಡಿಯ ಸಾಲ (5) ಪಾಲಿಸಿ, ಮತ್ತು ಶೇರುದಾರರಿಗೆ ಭೂಮಿ ಮತ್ತು ಸ ಗೆಲ್ಲ ತೆಗೆದುಕೊಳ್ಳಲು ಸಾಲ — ಈ ಸಾಲವನ್ನು 12 % ಬಡ್ಡಿಯಿಂದ ಸರಿಯಾಗಿ 12½ ವರುಷ ಗಳಲ್ಲಿ ವಾಪಸುಕೊಡುವುದು (6) ಒಂದು ವ ರುಷದನಂತರ 12 ವರುಷಗಳೊಳಗೆ ವ್ಯತಸ ಟ್ಟರೆ ಅಥವಾ 12 ವರುಷಗಳ ಮೇಲೆ ಬದುಕಿದರೆ ಮೃಗದ ಪೂರ್ತಿ ಬೆಲೆಯು ಲಾಭ ಸಮೇತ ಕೊಡಲಾಗುವುದು

ಜರೂರಿನಿಂದ ಬೇಕಾಗಿದೆ.

ಒಳ್ಳೇ ಸಂಬಳದಲ್ಲಿ ಕೊಡಗಿನಲ್ಲೆಲ್ಲಾ ಪ್ರತಿಷ್ಠಿತರಾದ ಮತ್ತು ನಂಬಿಗಸ್ಥರಾದ ಏಜಂಟರುಗಳು ಬೇಕಾಗಿವೆ ಜವಾಬಿಗೆ ಸ್ಟಾಂಪು ಸಮೇತ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

V K R ACHARYA,
C/o U. RAGHAVENDRA RAO,
Brahmins Lane,
MERCARA

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ ಮಹದೇವಪೇಟೆಯಲ್ಲಿ ಕಳೆದವಾರ ಪುನಃ ಇಬ್ಬರಿಗೆ ಸಿಡುಬು ಅಂಟಿದೆ.

ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ 22ರಲ್ಲು ಮಡಿಕೇರಿ ಮುನ್ಸಿಪಲ್ ಆಫೀಸಿನಲ್ಲಿ ನಡೆಯುವುದು.

ಕುಂಟಿಕೊಪ್ಪನಾಡು ಕೆದಕಲ್ ಗ್ರಾಮದಲ್ಲೂ, ಉಲುಗುಲಿ ತೋಟದಲ್ಲೂ ಸಿಡುಬು ಕಾಣಿಸಿಕೊಂಡಿದೆಯೆಂದು ತಿಳಿಯುತ್ತೇವೆ

ವೀರಾಜಪೇಟೆ-ಮುನ್ಸಿಪಲ್ ಕಮಿಟಿಗೆ ಚುನಾವಣೆಗೆ ಉಮೇದ್ವಾರರಾಗಿ ನಿಲ್ಲಲು ಅಪೇಕ್ಷಿಸುವವರು ಸೆಪ್ಟೆಂಬರು ತಾ. 5ರೊಳಗೆ ಅಪ್ಲಿಕೇಶನ್ ಕೊಡಬೇಕಾಗಿದೆ

ಕೊಡಗಿನವರು ಮತ್ತು ಯೂರೋಪಿಯನರು ಸೇರಿದ ಒಂದು ಕ್ರಿಕೆಟ್ ಟೀಮು ತಾ 21ರಲ್ಲು ಬೆಂಗಳೂರಿಗೆ ಹೋಗಿ ಅಲ್ಲಿ 22ರಲ್ಲು ಪಂಧ್ಯದ ಆಟವಾಡುವರೆಂದು ತಿಳಿಯುತ್ತೇವೆ

ಜಮೀನುದಾರರ ಸಂಘದ ಕಾರ್ಯನಿರ್ವಾಹಕ ಕಮಿಟಿಯ ಮೀಟಿಂಗು ಸೆಪ್ಟೆಂಬರು ತಾ 6ನೇ ಆದಿತ್ಯವಾರ ಸಾಯಂಕಾಲ ನಾಲ್ಕು ಗಂಟೆಗೆ ಮಡಿಕೇರಿಯಲ್ಲಿ ಸಂಘದ ಆಫೀಸಿನಲ್ಲು ನಡೆಯುವುದು

ದಕ್ಷಿಣ ಕೊಡಗಿನ ಸುಬೇದಾರರಾಗಿರುವ ಮೆ ಪಾಲೇಕಂಡ ಚಂಗಪ್ಪನವರನ್ನು ಸೆಪ್ಟೆಂಬರು ತಾ 1ರಿಂದ ಮೆರ್ಕಾರಿಯಲ್ಲು ಸ್ಪೇಶಲ್ ಸಬ್ ಮೇಜಿಸ್ಟ್ರೇಟರಾಗಿಯೂ ಮ ಕೀತಿಯಂಡ ಕಾಳಪ್ಪನವರನ್ನು ದಕ್ಷಿಣ ಕೊಡಗಿನ ಸುಬೇದಾರರಾಗಿಯೂ ನೇಮಿಸಿರುವರು.

ಭಾಗಮಂಡ್ಲದ ಪಾರುಪತ್ಯಗಾರರಾಗಿರುವ ಮ ಮೆ ಕಂಡ್ರಂಡ ಪೊನ್ನಪ್ಪನವರನ್ನು ಬರುವ ತಿಂಗಳು 1ರಿಂದ ದಕ್ಷಿಣ ಕೊಡಗಿನಲ್ಲಿ ಕಿತ್ತಳೆ ಬೋರರ್ ಹುಳದ ವಿಷಯ ಪರಿಶೋಧನೆ ಮಾಡುವ ಉದ್ಯೋಗಕ್ಕೆ ನೇಮಿಸಿರುವರು.

ಶನಿವಾರಸಂತೆ ಪಾರುಪತ್ಯಗಾರರಾಗಿರುವ ಮ ಪಾಲೇಕಂಡ ಪೂಣಚ್ಚನವರನ್ನು ಉತ್ತರ ಕೊಡಗಿನ ಜೀರ್ಣವಾದ ಗ್ರಾಮಗಳನ್ನು ಅಭಿವೃದ್ಧಿಗೊಳಿಸಲಿಕ್ಕಾಗಿ ಡಿವೆಲಪ್‌ಮೆಂಟು ಆಫೀಸರಾಗಿ ಸೆಪ್ಟಂಬರ್ 1ರಿಂದ ನೇಮಿಸಿರುತ್ತಾರೆ ಮೆ ಪೆಮ್ಮಂಡ ಪೊನ್ನಪ್ಪನವರನ್ನು ಶನಿವಾರಸಂತೆ ಪಾರುಪತ್ಯಗಾರರಾಗಿ ಕಳುಹಿಸುವರೆಂದು ವರ್ತಮಾನ

ಮಡಿಕೇರಿ ಓಂಕಾರೇಶ್ವರ ಶ್ರೀಮತ್ಕನ್ನಿಕಾಪರಮೇಶ್ವರ ದೇವಸ್ಥಾನದಲ್ಲು ಈ ತಾ 14ರಲ್ಲು ಗೌರಿಯಬ್ಬದ ವಾರ್ಷಿಕ ಜನರಲ್ ಮೀಟಿಂಗು ಮ ಮಿ ಲಿಂಗಣ್ಣಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಹಬ್ಬದ ಏರ್ಪಾಡುಗಳನ್ನು ನಿಶ್ಚಿಸಿದ ನಂತರ ಮಂಗಳಾರತಿಯಿಂದ ಮೀಟಿಂಗು ಬರಕಾಸ್ತಾಯಿತು

ವೀರಾಜಪೇಟೆಯಿಂದ ಮೆ ಕೀತಿಯಂಡ ಬೆಳ್ಯಪ್ಪನವರನ್ನು ಸಬ್ ಜಡ್ಜ್ ಕೋರ್ಟಿನ ಸಿರಸ್ತೆದಾರರಾಗಿಯೂ (ಮೆ ಕೆ ಕಾಳಪ್ಪನವರ ಸ್ಥಳಕ್ಕೆ) ಡಿ. ಮೆ. ಕೋರ್ಟಿನಿಂದ ಮೆ ಕೋಲಂಡ ಕಾಳಪ್ಪನವರನ್ನು ವೀರಾಜಪೇಟೆಯ ಪಾರುಪತ್ಯಗಾರರಾಗಿಯೂ, ನಾಪೋಕ್ಲಿನಿಂದ ಮೆ ನೆಲ್ಲಮಕ್ಕಳ ಸುಬ್ಬಯ್ಯನವರನ್ನು ಡಿ ಮೇಜಿಸ್ಟ್ರೇಟರ ಕೋರ್ಟಿನ ಸಿರಸ್ತೆದಾರರಾಗಿಯೂ, ಪೊನ್ನಂಪೇಟೆಯಿಂದ ಮೆ ಕರವಂಡ ಚಂಗಪ್ಪನವರನ್ನು ನಾಪೋಕ್ಲು ಪಾರುಪತ್ಯಗಾರರಾಗಿಯೂ, ಸೋಮವಾರಪೇಟೆಯಿಂದ ಮೆ ಕೋಡಿರ ಉತ್ತಯ್ಯನವರನ್ನು ಪೊನ್ನಂಪೇಟೆ ಪಾರುಪತ್ಯಗಾರರಾಗಿಯೂ, ರೆವಿನ್ಯೂ ಆಫೀಸಿನಿಂದ ಮೆ ರಂಗಯ್ಯನವರನ್ನು ಸೋಮವಾರಪೇಟೆ ಪಾರುಪತ್ಯಗಾರರಾಗಿಯೂ, ಇಂಗ್ಲಿಷ್ ಆಫೀಸಿನಿಂದ ಮೆ ವೆಂಕಟಾದ್ರಿಯವರನ್ನು ರೆವಿನ್ಯೂ ಆಫೀಸು ಹೆಡ್‌ಕ್ಲಾರ್ಕರಾಗಿಯೂ ಜುಡಿಶಿಯಲ್ ಆಫೀಸಿನಿಂದ ಮೆ ಕೋಳೆರ ಕುಟ್ಟಪ್ಪನವರನ್ನು ಇಂಗ್ಲಿಷ್ ಆಫೀಸು ಹೆಡ್‌ಕ್ಲಾರ್ಕರಾಗಿಯೂ, ಇಂಗ್ಲಿಷ್ ಆಫೀಸಿನಿಂದ ಮೆ ಸಿ ಕೃಷ್ಣರಾವ್‌ರವರನ್ನು ಜುಡಿಶ್ಯಲ್ ಆಫೀಸು ಹೆಡ್‌ಕ್ಲಾರ್ಕರಾಗಿಯೂ, ದಕ್ಷಿಣ ಕೊಡಗಿನ ಎಕ್ಸ್‌ಟ್ರ ಸಿ ಇನ್ಸ್‌ಪೆಕ್ಟರಾದ ಮೆ ಬಲ್ಲಚಂಡ ಅಪ್ಪಯ್ಯನವರನ್ನು ಇಂಗ್ಲಿಷ್ ಆಫೀಸು ಎರಡನೇ ಕ್ಲಾರ್ಕರಾಗಿಯೂ, ಲ್ಯಾಂಡ್ ರಿಕಾರ್ಡ್ ಆಫೀಸಿನಿಂದ ಮೆ ಮೇರಿಯಂಡ ತಿಮ್ಮಪ್ಪನವರನ್ನು ಸೋಮವಾರಪೇಟೆ ತಾಲೋಕು ಸಿರಸ್ತೆದಾರರಾಗಿಯೂ ವರ್ಗಾಯಿಸಿರುವರೆಂದು ತಿಳಿಯುತ್ತೇವೆ

ಹಿಂದೂದೇಶ.

ದಾನಸ್ಮಾರಕ ಫಂಡಿಗೆ ತಾ 1ರ ವರೆಗೆ ರೂಪಾಯಿ 6,76,547—9—0 ಜಮೆಯಾಗಿದೆ.

ಪೋರ್ಚುಗೀಸ್ ಇಂಡಿಯಾದಲ್ಲಿ ಕಡ್ಡಾಯ ಮಿಲಿಟರಿ ಸರ್ವಿಸನ್ನು ಇಡುವನಾಗಿ ಲಿಸ್ಬನ್‌ನಲ್ಲಿ ಸುದ್ದಿ

ದಾದಾಭಾಯಿ ನೌರೋಜಿಯವರ ಶತಮಾನ ಜಯಂತ್ಯುತ್ಸವವು ತಾ 16ರಲ್ಲು ಬೊಂಬಾಯಿಯಲ್ಲಿ ಯೋಗ್ಯರೀತಿಯಲ್ಲಿ ನಡೆಸಲ್ಪಟ್ಟಿತು

ಕೊಚ್ಚಿಸಂಸ್ಥಾನದ ಎಲ್ಲಾ ಶಾಲೆಗಳಲ್ಲಿಯೂ ನೂಲುವುದನ್ನು ಕಡ್ಡಾಯವಾಗಿ ಕಲಿಸಬೇಕೆಂಬ ಠರಾವು ಒಂದು ಅಲ್ಲಿಯ ಕೌನ್ಸಿಲಿನಲ್ಲಿ ಬೇಗನೆ ಚರ್ಚೆಗೆ ಬರಲಿರುವುದು

ಕ್ಯಾನ್‌ಪುರದ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಅರವಿಂದ ಘೋಷ್, ಸಾರೋಜಿನಿನಾಯಿಡು ಮತ್ತು ವಿ ಜೆ ಪಟೇಲರವರ ಹೆಸರುಗಳನ್ನು ಡೆಲ್ಲಿ ಕಾಂಗ್ರೆಸ್ ಕಮಿಟಿಯವರು ಸೂಚಿಸಿರುವರು.

ಪುದುಕೋಟೆ ಸಂಸ್ಥಾನದ ಅರ್ಮಿರಾಲಂ ಎಂಬಲ್ಲಿ ವಾಂತಿಬೇಧಿ ಸುರುವಾಗಿ 10 ದಿನಗಳಲ್ಲಿ 28 ಮರಣಗಳು ಸಂಭವಿಸಿರುವವು ಶೇಕಡ 90ರಷ್ಟು ಮನೆಗಳನ್ನು ಜನರು ಬಿಟ್ಟು ಹೋಗಿರುವರು

ಮಂಗಳೂರು ಮುನ್ಸಿಪಾಲಿಟಿಯ ಮೆಂಬರುಗಳ ಬರುವ ಚುನಾವಣೆಗೆ ಸ್ವರಾಜ್ಯಪಕ್ಷದ ಮೆಂಬರುಗಳನ್ನು ನಿಲ್ಲಿಸಬೇಕೆಂದು ಆ ತಾಲೋಕಿನ ಸ್ವರಾಜ್ಯಪಕ್ಷದ ಕಮಿಟಿಯವರು ತೀರ್ಮಾನಿಸಿರುವರು

ಮದ್ರಾಸು ಮುನ್ಸಿಪಾಲಿಟಿಗೆ ತಾ 17ರಲ್ಲು ನಡೆದ ಚುನಾವಣೆಯಲ್ಲಿ ಎರಡು ಡಿವಿಜನ್‌ಗಳಲ್ಲಿ ಜಸ್ಟಿಸ್ ಪಾರ್ಟಿಯವರೂ ಒಂದರಲ್ಲಿ ಕಾಂಗ್ರೆಸ್ ಉಮೇದ್ವಾರರೂ ಚುನಾಯಿಸಲ್ಪಟ್ಟಿರುವರು.

ಬರುವ ಕ್ಯಾನ್‌ಪುರ ಕಾಂಗ್ರೆಸ್ಸಿಗೆ ಅಧ್ಯಕ್ಷನನ್ನಾಗಲು ತನಗೆ ಇಷ್ಟವಿಲ್ಲವೆಂಬ ಸಂಗತಿಯನ್ನು ಎಲ್ಲಾ ಕಾಂಗ್ರೆಸ್ ಕಮಿಟಿಗಳಿಗೆ ತಿಳಿಸುವಂತೆ ಕ್ಯಾನ್‌ಪುರದ ಸ್ವಾಗತಕಮಿಟಿಯವರಿಗೆ ಅರವಿಂದ ಘೋಷರವರು ಬರೆದಿರುವರು

ಗುಮ್ಟಿ ನದಿಯಲ್ಲಿ ನೆರೆ ಬಂದು ನಿಂತಿತಾಗಿಲ್ಲ ತುಂಬಾ ನಷ್ಟ ಉಂಟಾಗಿದೆ ಹುಳ್ಳಿ ಗ್ರಾಮಗಳು ನೀರಿನ ಅಡಿಯಲ್ಲಿವೆ ಲಾಹೋರ್ ಪಟ್ಣದ ನೀರು ನಲ್ಲಿಯು ನೆರೆಯ ನೀರಿನಿಂದ ಮುಚ್ಚಲ್ಪಟ್ಟಿರುವ ಕಾರಣ ಆ ಪಟ್ಣವಾಸಿಗಳಿಗೆ ಪಂಪುನೀರು ದೊರೆಯದೆ ತೊಂದರೆಯಾಗಿದೆ

ಗ್ರಾಮಗಳ ಗೌರವ ಮೇಜಿಸ್ಟ್ರೇಟರುಗಳನ್ನು ನೇಮಿಸಲಿಕ್ಕಾಗಿ ಕೌನ್ಸಿಲಿನ ಚುನಾಯಿತ ಮೆಂಬರುಗಳು ಒಂದು ಕಮಿಟಿಯನ್ನು ನೇಮಿಸಬೇಕೆಂದು ಸ್ವರಾಜ್ಯಪಕ್ಷದ ಮುಂದಾಳಾದ ದಿ ಮುಂಜೆಯವರು ಸೆಂಟ್ರಲ್ ಪ್ರಾಂತ್ಯದ ಕೌನ್ಸಿಲಿನಲ್ಲಿ ಚರ್ಚೆಗೆ ತಂದ ಠರಾವು ಸರಕಾರದವರು ವಿರೋಧಿಸಿದರೂ ಬಹುಮತದಿಂದ ಪಾಸಾಯಿತು.

ಬೊಂಬಾಯಿ ಲಜಿಸ್ಲೇಟಿವ್ ಕೌನ್ಸಿಲಲ್ಲಿ ಸ್ವರಾಜ್ಯಪಕ್ಷದವರ ಕೆಲವು ಕಾಯಿದೆ ಮಸೂದೆಗಳನ್ನು ಚರ್ಚೆಗೆ ಬಿಡದೆ ಹೋದರೆಂದು, ಬ್ರಾಹ್ಮಣೇತರ ಮೆಂಬರುಗಳು ಸರಕಾರದ ಪಕ್ಷ ಸೇರಿದರಿಂದ ಸ್ವರಾಜ್ಯಪಕ್ಷದ ಮೆಂಬರುಗಳು ಕೌನ್ಸಿಲಿನಲ್ಲಿ ಏನೊಂದೂ ಕೆಲಸ ಮಾಡದೆ ಅಸಹಕಾರವನ್ನು ಆಚರಿಸಿರುವರು. ಇದರಿಂದ ಬ್ರಾಹ್ಮಣೇತರ ಮೆಂಬರುಗಳೂ ಸರಕಾರಕ್ಕೆ ವಿರೋಧವಾಗಿರುವ ತಮ್ಮ ಠರಾವುಗಳನ್ನು ಸ್ವರಾಜ್ಯಪಕ್ಷದ ಸಹಾಯವಿಲ್ಲದೆ ಪಾಸುಮಾಡಿಕೊಳ್ಳಲು ಕಷ್ಟವಾಗಿದೆ

ಮಹಾತ್ಮ ಗಾಂಧಿಯವರು ಜಮ್ಷೆದ್ಪುರದಲ್ಲಿ ಟಾಟಾ ಕಂಪೆನಿಯ ಕೆಲಸಗಾರರಿಗೆ ಕೊಟ್ಟ ಭಾಷಣದ ಆಖೈರಿನಲ್ಲು ಹೇಳಿದ್ದೇನೆಂದರೆ— ಕಾರ್ಖಾನೆಗಳ ಮಾಲೀಕರು ತಾವಂದಿಗೂ ಮಿತಿಮೀರಿ ಅಮಲು ಪದಾರ್ಥವನ್ನು ಕುಡಿಯುವುದಿಲ್ಲವೆಂದು ಹೇಳುತ್ತಾರೆ ಆದರೆ ಅವರು ಚಿಕಿತ್ಸಾಲಯಗಳಲ್ಲಿ ಅಲ್ಲ ಅವರ ಮನೆಗಳಲ್ಲಿ ಕುಡಿದು ಒರಗಿಕೊಳ್ಳುತ್ತಿರುವುದನ್ನು ನೋಡಿದ್ದೇನೆ ಆದುದರಿಂದ ಐಶ್ವರ್ಯವಂತರಿಗೆ ನಾನು ಒತ್ತಿ ಹೇಳುವುದಾಗಿದೆ ಭೂಲೋಕವೇ ನಿಷಾ ಪದಾರ್ಥವಿಲ್ಲದೆ 'ಒಣಗ'ಬೇಕಾಗಿದೆ ಕಡೆಗೆ ಇಂಡಿಯಾವಾದರೂ ಅಮಲು ಪದಾರ್ಥಕ್ಕೆ ಪೂರ್ತಿ ಬಹಿಷ್ಕಾರ ಹಾಕಬೇಕು ನುವಿಕಿನ ಆಶೆ ವೈನಿಲ್ಲದೆ ಕಳೆಯುವುದ ನನ್ನ ಇಂಗ್ಲಿಷ್ ಸ್ನೇಹಿತನೊಬ್ಬನು ಹೇಳಿದ್ದನು ಆದರೆ ನಾನು ಮೂರು ಚಳಿಗಾಲಗಳನ್ನು ಒಂದು ಹನಿ ವೈನಾದರೂ ಉಪಯೋಗಿಸದೆ ಇಂಗ್ಲೆಂಡಿನಲ್ಲಿ ಕಳೆದೆನು

ವಿದೇಶ.

ಬೇಗನೆ ಮೆಡಿಟರೇನಿಯಕ್ಕೆ ಹೊರಡಲಿಕ್ಕಿರುವ ಬೆಲ್ಜಿಯಮ್ಮಿನ ರಾಜಾ ಮತ್ತು ರಾಣಿಯವರು ಹಿಂದೂ ದೇಶಕ್ಕೂ ಬರುವ ಸಂಭವವಿದೆಯಂತೆ

ಲಂಡನ್ನಿನಲ್ಲಿರುವ ಪಟಿಯಾಲದ ಮಹಾರಾಜರವರು ಲೇಟ್ ಸ್ಪ್ರಿಟನ್ನಿನ ಲಾರ್ಡ್ ಕರ್ಜನ್ ಸ್ಮಾರಕನಿಧಿಗೆ ಒಂದು ಚಿತ್ರವನ್ನು ಕೊಟ್ಟರು

ಚೀನಾದ ನಾಗೋಯ ಎಂಬಲ್ಲಿ ನೆರೆ ಬಂದು ಬಹು ನಷ್ಟವುಂಟಾಗಿದೆ ಹತ್ತು ಮಿಲಿಯನ್ ನಷ್ಟವಾಗಿರಬಹುದಂತೆ ಪ್ರಾಣನಷ್ಟವೂ ತುಂಬಾ ಆಗಿದೆಯಂತೆ

ಇಟಲಿಗೂ ಅಫ್ಘಾನಿಸ್ತಾನಕ್ಕೂ ರಾಯಭಾರಿವ್ಯವಹಾರವು ಮುರಿಯುವ ಹಾಗೆ ಇದೆ ಇಟಲಿಯ ರಾಯಭಾರಿಯು ಕಾಬೂಲನ್ನು, ಅಫ್ಘಾನಿಸ್ತಾನದ ರಾಯಭಾರಿಯು ರೋಮ್ ಪಟ್ಣವನ್ನು ಬಿಟ್ಟಿರುವರು.

1800 ವರ್ಷಗಳ ಹಿಂದೆ ಬರೆಯಲ್ಪಟ್ಟ "ಅರೇಬಿಯನ್ ನೈಟ್ಸ್" ಎಂಬ ಕಥೆಗಳ ಪರ್ಶಿಯನ್ ಭಾಷೆಯ ಪ್ರಥಮ ನಕಲು ರಷ್ಯಾದ ಮುಖ್ಯ ಪಟ್ಟಣವಾದ ಲೆನಿನಗ್ರಾಡಿನಲ್ಲಿ ಈಗ ಅಗೆದು ತೆಗೆಯಲ್ಪಟ್ಟಿದೆಯೆಂದು ವರ್ತಮಾನ

ತುರ್ಕಿಯ ರಿಪಬ್ಲಿಕ್ ಸರಕಾರವನ್ನು ಮುರಿಯಲು ಒಳಸಂಚು ನಡಿಸಿದ 11 ಜನರನ್ನು ತಾ. 17ರಲ್ಲು ಗಲ್ಲಿಕ್ಕೆ ಹಾಕಿದರು. ಏಳು ಜನರಿಗೆ 5ರಿಂದ 15ವರ್ಷಗಳವರೆಗೆ ಕಠಿಣ ಸಜೆಯು ವಿಧಿಸಲಾಯಿತು ಬಾಕಿ 19ಜನರು ಬಿಡುಗಡೆ ಮಾಡಲ್ಪಟ್ಟರು.

ಶಂಗಹಾಯಿ ಗಲಭೆಯನ್ನು ವಿಚಾರಿಸಲು ಪರದೇಶದ ಸರಕಾರದವರು ನೇಮಿಸಬೇಕೆಂದಿರುವ ಕಮೀಷನನ್ನು ಚೈನಾದವರ ಕಣ್ಣು ಕಟ್ಟಲಿಕ್ಕೆ ಮಾತ್ರ ಮಾಡ ಪವೆಂದು ತಿಳಿದು ಅದಕ್ಕೆ ತಾವು ಒಪ್ಪುವದಿಲ್ಲವೆಂದು ಚೈನಾದ ಸರಕಾರದವರು ತಿಳಿಸಿರುವರು

ರಿಫ್ ಜನರಿಗೆ ಸ್ವಾತಂತ್ರ್ಯ ಕೊಡಬೇಕೆಂಬ ಅಬ್ದಿಲ್ ಕ್ರಿಮ್‌ರವರ ರಾಜಕೀಯ ಅತಿಶಯೋಕ್ತಿಯಾದದ್ದೆಂದೂ ಫ್ರೆಂಚರೊಂದಿಗ ತಮ್ಮ ಶರತ್ತುಗಳನ್ನು ಜೋಡಿಸಿರುವೆವೆಂದೂ ಸ್ಪೈನ್ ಸರಕಾರದವರು ಸೂಚಿಸಿರುವರು ಸ್ಪೈನಿನವರು 40,000 ಸೈನಿಕರನ್ನು ರಿಫ್ ರಣರಂಗಕ್ಕೆ ಕಳುಹಿಸಿರುವರು.

ತುರ್ಕಿಸಂಸ್ಥಾನ ಸರ್ಕಾರದ ಪ್ರಸಿಡೆಂಟರಾದ ಮುಸ್ತಾಫಾ ಕಮಲ್ ಪಾಷಾರವರು ತನ್ನ ಪತ್ನಿ ಲಾತೀಫ ಹಾನುಂ ಎಂಬವಳನ್ನು ಬಿಟ್ಟು ಬಿಟ್ಟಿರುವರು ಅವಳಿಗೆ ಪರಿಹಾರ 5000 ಪೌನುಗಳನ್ನು ಇಟ್ಟಿರುವರು ಇನ್ನು ಮದುವೆಯಾಗುವುದಿಲ್ಲವೆಂದು ಪಾಷಾರವರು ಪ್ರತಿಜ್ಞೆಮಾಡಿರುವರೆಂದು ವರ್ತಮಾನ

ಸ್ವರಾಜ್ಯಪಕ್ಷದವರ ಸರ್ಕಾರವನ್ನು ವಿರೋಧಿಸವೆ ಈಗಿನ ಸುಧಾರಣೆಗಳನ್ನು ಉಪಯೋಗಿಸುವದಾದರೆ ಪ್ರಾಂತ್ಯಗಳ ಸರ್ಕಾರಕ್ಕೆ ತಮ್ಮ ಆದಾಯ ವೆಚ್ಚದ ಮೇಲೆ ಹಕ್ಕು ಕೊಡಲಾಗುವುದೆಂದೂ, ಒಂದು ರೌಂಡ್ ಟೇಬಲ್ ಕಾನ್ಫರೆನ್ಸ್ ಕೂಡಲಾಗುವದೆಂದೂ ಚಕ್ರವರ್ತಿಯವರು ಬರುವ ವರ್ಷ ಇಂಡಿಯಾಕ್ಕೆ ಬಂದು ಡೆಲ್ಲಿಯಲ್ಲಿ ಒಂದು ದೊಡ್ಡ ದರ್ಬಾರನ್ನು ಮಾಡುವರೆಂದೂ, ಲಂಡನಿನ ಹಲವು ಗಾಳಿ ವರ್ತಮಾನಗಳಲ್ಲಿ ಬಂದು.

ತಹಬೇ ಎಂಬ ಫಕೀರನೊಬ್ಬನು ಲಂಡನ್ಪಟ್ಟದಲ್ಲಿ ತನ್ನ ಮಂತ್ರಶಕ್ತಿಯನ್ನು ಸಾಧಿಸಿ ಅತಿ ವಿಚಿತ್ರವಾದ ಕಾರ್ಯಗಳನ್ನು ನಡೆಸುತ್ತಲಿದ್ದಾನೆ ಕಳೆದ ವಾರ ಎರಡು ಸಾವಿರ ಜನರು ಕೂಡಿದ್ದ ಒಂದು ಸಭೆಯಲ್ಲಿ ತನ್ನ ಅದ್ಭುತ ಕಾರ್ಯಗಳಿಂದ ನೆರೆದಿದ್ದವರನ್ನೆಲ್ಲಾ ವಿಸ್ಮಯಮಾಡಿದನು ತನ್ನ ಕತ್ತಿನ ಕೆಳಗೂ ಕಾಲಿನ ಕೆಳಗೂ ಎರಡು ಹರಿತವಾದ ಚಾಕುಗಳನ್ನಿಟ್ಟುಕೊಂಡು ಅದರ ಮೇಲೆ ಮಲಗಿಕೊಂಡನು ಅವನ ಮೇಲೆ 112 ಪೌಂಡುಗಳ ತೂಕವಿದ್ದ ಕಲ್ಲನ್ನಿಟ್ಟು ಬಡಿಗೆಗಳಿಂದ ಹೊಡೆದು ಪುಡಿಮಾಡಿದಾಗ್ಯೂ ಚಾಕುಗಳು ಮುರಿಯದೆಯೂ ಫಕೀರನಿಗೆ ಅಪಾಯವಾಗದೆಯೂ ಇತ್ತು ಅತಿ ಕ್ರೂರವಾದ ಮೊಳೆಗಳಿಂದ ತಯಾರಿಸಿದ್ದ ಹಾಸಿಗೆಯ ಮೇಲೆ ಮಲಗಿಕೊಂಡು ತನ್ನ ಮೇಲೆ ಒಬ್ಬ ಮನುಷ್ಯನು ಕುಣಿಯುತ್ತಲಿದ್ದಾಗ ಫಕೀರನಿಗೆ ಗಾಯವೇನೂ ಆಗಲಿಲ್ಲ. ಒಂದು ಹರಿತವಾದ ಚೂರಿಯಿಂದ ತನ್ನ ಎದೆಯನ್ನು ಇರಿದುಕೊಂಡನು ಈ ಗಾಯದಿಂದ ಸ್ವಲ್ಪ ಹೊತ್ತು ರಕ್ತವೇ ಹೊರಡಲಿಲ್ಲ ಅನಂತರ ಫಕೀರನು ಇಷ್ಟಪಟ್ಟದರಿಂದ ಕೂಡಲೇ ಯಥೇಷ್ಟವಾಗಿ ರಕ್ತವು ಸುರಿಯುವಂತಾಯಿತು ಅಲ್ಲಿ ನೆರೆದಿದ್ದ ವೈದ್ಯರು ಪ್ರಾರ್ಥಿಸಿಕೊಂಡ ದರಿಂದ ತಕ್ಷಣವೇ ರಕ್ತವನ್ನು ತಾನಾಗಿಯೇ ನಿಲ್ಲಿಸಿಬಿಟ್ಟನು. ನಮೂಹದಲ್ಲಿದ್ದ ಬೆಕ್ಕುಗಳು ತನ್ನ ಕೈಕಾಲುಗಳನ್ನು ಇಟ್ಟಾಗ್ಯೂ ಸುಡಲಿಲ್ಲ. ಕಡೆಗೆ ಒಂದು ಪೆಟ್ಟಿಗೆಯಲ್ಲಿ ಫಕೀರನು ಕುಳಿತುಕೊಂಡು ಹೂಳಲ್ಪಟ್ಟನು 20 ನಿಮಿಷಗಳಾದನಂತರ ಪೆಟ್ಟಿಗೆಯನ್ನು ಒಡೆದುನೋಡುವಲ್ಲಿ ಫಕೀರನು ಎದ್ದುನಿಂತನು. ಸೊರಕ್ಕೆ ಬಂದನು ಈ ವಿಚಿತ್ರವಾದ ಮತ್ತು ಅದ್ಭುತವಾದ ಕಾರ್ಯಗಳ ಮರ್ಮವನ್ನು ತಿಳಿಯದ ಅನೇಕಾನೇಕ ಜನರು ಪ್ರತಿನಿತ್ಯವೂ ಫಕೀರನ ಸಾಧನೆಗಳನ್ನು ನೋಡಿಬರುತ್ತಿರುವುದಾಗಿ ಪ್ರಕಟವಾಗಿದೆ

CARS FOR HIRE·

For easy and comfortable travelling with little cost please run up to T R. Ramiah, Agent, C P C Co Ltd, Booking Office, Chowk, Mercara, where Ford and Overland cars are ever ready for hire

ಬಾಡಿಗೆಗೆ ಮೋಟಾರುಗಳು.

ಸುಲಭ ಚಾರ್ಜಿನಲ್ಲಿ ಅನುಕೂಲವಾಗಿ ಪ್ರಯಾಣ ಮಾಡಬೇಕಾದರೆ ಮೋಟಾರು ಕಾರುಗಳು ಬಾಡಿಗೆಗೆ ಸಿಕ್ಕುವ ಮಡಿಕೇರಿ ಚೌಕಿಯ ಸಿ ಪಿ ಸಿ ಕಂಪೆನಿ, ಲಿಮಿಟೆಡ್ ಬುಕ್ಕಿಂಗ್ ಆಫೀಸಿನಲ್ಲಿರುವ ಏಜೆಂಟ್. ಟಿ. ಆರ್. ರಾಮೈಯ್ಯನವರಲ್ಲಿ ದಯವಿಟ್ಟು ಹೋಗಿರಿ

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಕೋರಿಕೆಯು ನೆರವೇರಿತೇ ?

ಕೊಡಗು ನ್ಯಾಯವಿಧಾಯಕ ಸಭೆಯ ಮೆಂಬರುಗಳಲ್ಲಿ ಗ್ರಾಮ ಉದ್ಯೋಗಸ್ಥರದೊಂದು ವಿಜ್ಞಾಪನೆ

ಮಹನೀಯರೆ,

ಪಟೇಲರೆಂಬ ಗ್ರಾಮ ಉದ್ಯೋಗಸ್ಥರು ಎಲ್ಲಾ ಪ್ರಾಂತಗಳಿಗೂ ಉದ್ಯೋಗವೆಂಬ ಕಟ್ಟುಕಟ್ಟಳೆ ತಳಹದಿಯಂತೆ ಇದ್ದು ಕಾರ್ಯ ನಿರ್ವಹಿಸುತ್ತಿರುವರು. ಅದರಂತೆಯೇ ಕೊಡಗಿನಲ್ಲಿಯೂ ಪಟೇಲರೆಂಬ ಗ್ರಾಮ ಉದ್ಯೋಗಸ್ಥರಿರುವರು. ಪರಂತು ವಾಸ್ತವದಲ್ಲಿ ಮಾತ್ರ ಇತರ ಪ್ರಾಂತಗಳಿಗಿಂತ ಬಹಳ ಹಿಂದಿರುವರು. ಇಲ್ಲಿ ಪಟೇಲರೇ ಸ್ವತಃ ಕೆಲಸ ಮಾಡಬೇಕೇ ಹೊರತು ಉಗ್ರಾಣಿ ಇಲ್ಲ. ತಲಬಿ ತಿಂಗಳುಗಟ್ಟಲೆ ಎಣಿಸಲಿಕ್ಕೆ ಸಾಧ್ಯವಿಲ್ಲದೆ ವರುಷಕ್ಕೆ 18/ರ ಲಾಗಾಯಿತು 60/ರೂ ಒಳಗಿರುವುದು.

ಇತರ (ಮದ್ರಾಸು) ಪ್ರಾಂತಗಳಲ್ಲಿ ಪ್ರತೀ ಪಟೇಲರಿಗೂ ಒಬ್ಬ ಉಗ್ರಾಣಿಯು ತಿಂಗಳಿಗೆ ಹದಿನೈದು ರೂಪಾಯಿ ಸಂಬಳವೂ ಸಿಗುವುದಲ್ಲದೆ ಹೆಸರಿಗೆ ತಕ್ಕದಾದ ಗೌರವವೂ ಇರುವದು. ಪಟೇಲನೇ ಸ್ವತಃ ಕಂದಾಯ ವಸೂಲು ಮಾಡಿ ರಶೀದಿ ಕೊಡುವನು. ಹಣವನ್ನು ಸೀದಾ ತಾಲೋಕಿಗೆ ಕಳುಹಿಸುವನು. ಜನನ ಮರಣವನ್ನು ತಿಂಗಳಿಗೊಂದಾವರ್ತಿ ತಾಲೋಕಿಗೆ ಕಳುಹಿಸುವನು. ಈ ಕೆಲಸವನ್ನೆಲ್ಲಾ ಉಗ್ರಾಣಿಯ ಮುಖಾಂತರ ನಿರ್ವಹಿಸುವನು.

ಆದರೆ ಇಷ್ಟೆಲ್ಲಾ ಅನುಕೂಲತೆ ಇತ್ತೀಚೆಗೆ ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿಯೂ ಕೂಡ ನಾಮಧಾರ ಪ್ರತಿನಿಧಿಗಳು ಚರ್ಚಿಸಿ ತಕ್ಕ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿರುತ್ತಾರೆಂಬುದು ಸರ್ವರಿಗೂ ತಿಳಿದ ಅಂಶವೇ ಸರಿ

ಹೀಗಿರುತ್ತಾ ಕೊಡಗಿನ ಪಟೇಲರ ಸ್ಥಿತಿಯನ್ನು ಸಾಕಷ್ಟು ಉಚ್ಛಸ್ಥಿತಿಗೆ ತರುವರೆ ಈ ರಿಟ್ರೆಂಚ್‌ಮೆಂಟಿನ ಕಾಲದಲ್ಲಿ ಹೆಚ್ಚು ಗಮನಕ್ಕೆ ತಾರದೆ ಇರುವುದು ಪಟೇಲ ವರ್ಗಕ್ಕೆ ವಿಷಾದಕ್ಕೆಡೆಯಾಗಿರುವುದು.

ಆದುದರಿಂದ ಕೊಡಗಿನ ನ್ಯಾಯವಿಧಾಯಕ ಸಭೆಯಲ್ಲಿ ನಾಮಧಾರ ಮೆಂಬರರು ಚರ್ಚಿಸಿ ಮುಂದೆಯಾದರೂ ಇತರ ಪ್ರಾಂತದ ಪಟೇಲ ವರ್ಗಕ್ಕೂ ಈ ಪ್ರಾಂತದ ಪಟೇಲ ವರ್ಗಕ್ಕೂ ಇರುವ ವ್ಯತ್ಯಾಸವನ್ನು ಗ್ರಹಿಸಿಕೊಂಡು ಅವರ ಮುಕ್ಕಣ್ಣಿತಿರುವ ಕೊಡಗಿನ ಪಟೇಲರ ಸ್ಥಿತಿಯನ್ನು ಉಚ್ಛಸ್ಥಿತಿಗೆ ತಂದು ನಮ್ಮ ಕೋರಿಕೆಯನ್ನು ನೆರವೇರಿಸುವಂತೆ ಕೋರುವ,

"ಒಬ್ಬ ಗ್ರಾಮ ಉದ್ಯೋಗಸ್ಥ."

'ಲೋಕಪಾವನದ' ಧ್ಯೇಯ ಒಂದು.

ಮಹನೀಯರೆ,

'ಲೋಕಪಾವನವು' ಬೆಳದಿಂಗಳಲ್ಲಿ ಜನಿಸಿದಂತೆ ಕಾಣುತ್ತದೆ. ಹುಟ್ಟಿದಂದಿನಿಂದ ನಿಜವಾದ ತಾರೆಯನ್ನು ಕಾಣದೆ ತಡವರಿಸುತ್ತಿರುವಂತೆ ಕಾಣುತ್ತದೆ. ಪರದೇಶದ ಪತ್ರಗಳನ್ನು ಓದುತ್ತಿರುವವರಿಗೆ ಈ ಪತ್ರವನ್ನು ನೋಡಿದ ಕೂಡಲೆ ಹಿಮಾಚಲದಂತ ವ್ಯತ್ಯಾಸವು ಕಂಡು ಬರುತ್ತದೆ. ಇಂಡಿಯಾ ದೇಶದ ಆಳುವಿಕೆಯ ಕ್ರಮವು ಬದಲಾಯಿಸಬೇಕೆಂದು ಎಲ್ಲಾ ಪತ್ರಗಳು ಬೊಬ್ಬೆ ಇಡುತ್ತಿವೆ. ಲೋಕಪಾವನವು "ನಾಕ್ ಆ ಪೇಪರೂ ಬೋಂತ, ನೀನಲ್ಲಿ ಕೂಡಾನದಾ ನಾಕ್ ಇಷ್ಟ ಇಲ್ಲೆ" ಎಂದು ಹರಿದ ಮಣೆಯ ಮೇಲೆ ಕುಕ್ಕುರಿಸಿಕೊಂಡು ಶಾಲಾ ಸ. ಅ. ಇನ್ಸ್‌ಪೆಕ್ಟರರ ಕಣ್ಣನ್ನೇ ಮಿಟಿಮಿಟಿ ನೋಡುತ್ತಾ ಇರುವದನ್ನು ನೋಡಿದರೆ ನಗೆ ಬರುತ್ತಿದೆ. ಇದೇನು ಪಾಪ, ರಜದ ಪಟ್ಟಿ ಶಾಲೆಗಳಿಗೆ ಕಳುಹಿಸಲಿಲ್ಲವಂತೆ. ಪರೀಕ್ಷೆಯ ಫಲಿತಾಂಶ ಬರಲಿಲ್ಲವಂತೆ. ಇವೇನೋ ವಿದ್ಯಾ ಇಲಾಖೆಯ ಕುಂದುಕೊರತೆಗಳು? ಪಂಚಮರಿಗೆ ಶಾಲೆಗಳು ಸಾಕೇ? ಫೀಜು ಕೊಡಲಾರದೆ ಈ ದೇಶದಲ್ಲಿ ಎಷ್ಟು ಮಕ್ಕಳು ಕಾಡುಪಾಲಾಗುತ್ತಿದ್ದಾರೆ? ಶಾಲೆಯಲ್ಲಿ ಜ್ವರದಿಂದ ನಡುಗುತ್ತಿರುವ ಎಷ್ಟು ಮಕ್ಕಳಿಗೆ ಕೊಯಿನಾ ಒಟವಾಡಿ ಮಾಡಲು ಅನುಕೂಲವಿದೆ? ಸ್ತ್ರೀ ವಿದ್ಯಾಭ್ಯಾಸಕ್ಕೆ ತಕ್ಕ ಉತ್ತೇಜನ ಸಾಕೇ? ಶಾಲಾ ಉಪಾಧ್ಯಾಯರಿಗೆ ಉಳಕೊಳ್ಳಲು ಮನೆಗಳಿವೆಯೇ? ಈಗಿನ ವಿದ್ಯೆಯು ದೇಶದ ಅಭಿವೃದ್ಧಿಗೆ ಸರಿಯಾದ ವಿದ್ಯೆಯೇ? ಅಯ್ಯೋ, ನೇಶನಲ್ ಪದ್ಧತಿ ವಿದ್ಯಾಭ್ಯಾಸ ಪಾರಾಂಗತರಾದ 'ಲೋಕಪಾವನದ' ಎಡಿಟರರೇ, ಮಂಕುಬೂದಿಗೆ ಮರುಳಾಗದಿರಿ. "ನಾಕು ಆ ಪೇಪರ್ ಬೋಂತ, ನೀನಲ್ಲಿ ಕೂಡಾನದ್ ನಾಕ್ ಇಷ್ಟ ಇಲ್ಲೆ" ಎಂಬದನ್ನು ಎತ್ತಿ ಆಗಾಗ್ಯೆ ಬರೆಯುತ್ತೀರಲ್ಲಾ. ಇದರ ಫಲಿತಾಂಶವೇನು ಎಂಬುದನ್ನು ಯೋಚಿಸಿ ನೋಡಿ. ಇದನ್ನು ಎತ್ತಿ ಬರೆಯುವದರಿಂದ ಉಂಟಾಗುವ ಪರಿಣಾಮವೇನೆಂದು ನೀವು ಯೋಚಿಸಲ್ಲವೆಂದು ಕಾಣುತ್ತದೆ. 'ಲೋಕಪಾವನ'ವೇ, ಇದೇನು ಪ್ರಥಮದಲ್ಲೇ ವಿದ್ಯಾ ಇಲಾಖೆಯ ಮತ್ತು ಶಾಲಾ ಸ. ಅ. ಇನ್ಸ್‌ಪೆಕ್ಟರವರ ಮೇಲೆ ಹಾರಿ ಬೀಳುತ್ತೀ. ಬೇರೆ ಇಲಾಖೆಗಳ ಕುಂದು ಕೊರತೆಗಳು ಕಾಣುವದಿಲ್ಲವೇನು? ಸ. ಅ. ಇನ್ಸ್‌ಪೆಕ್ಟರವರು ಕೊಡ್ಲಿಯಿಂದ ಕುಟ್ಟದ ವರೆಗೆ ಒಬ್ಬರೇ ಎಂಬದು ಗೊತ್ತಿದೆಯೇ?

ರೆವಿನ್ಯೂ ಇಲಾಖೆ ಸರಿಯಾಗಿದೆಯೇ? ದಕ್ಷಿಣ ಕೊಡಗಿನಲ್ಲಿ ಕಳೆದ ಮಳೆಯಲ್ಲು ರೈತರಿಗೆ ಉಂಟಾದ ನಷ್ಟವನ್ನು ಈ ವರೆಗೂ ಸುಬೇದಾರರು ನೋಡದೆ ಇರುವ ಸ್ಥಳಗಳು ಎಷ್ಟಿವೆಯೆಂದು ಗೊತ್ತಿದೆಯೇ? ದಕ್ಷಿಣ ಕೊಡಗಿನ 3 ತಾಲೋಕುಗಳನ್ನು ಒಂದು ತಾಲೋಕು ಮಾಡಿ 10 ಕ್ಲಾರ್ಕಗಳಿದ್ದದ್ದನ್ನು 3ರಕ್ಕೆ ಇಳಿಸಿ ರೈತರ ಅರ್ಜಿಗಳು ತಿಂಗಳು ಆರು ಆದರೂ ತೀರ್ಮಾನವಾಗದೆ ಇರುವದು ನಿನಗೆಗೊತ್ತಿದೆಯೇ? ರಾತ್ರೆಹಗಲು ಕೆಲಸ ಮಾಡಿದರೂ ಕೆಲಸ ತೀರದೆ ಮೇಲಧಿಕಾರಿಗಳ ತಾಪದಲ್ಲಿ ಬೇಯುತ್ತಿರುವ ಕ್ಲಾರ್ಕಗಳ ಗೋಳು ಕಡೆ ಗೊತ್ತಿ, ಹೋಗಲಿಲ್ಲವೇ? ಸೇನಿಟರಿ ಇಲಾಖೆ ಮತ್ತು ಬೇರೆ ಇಲಾಖೆಗಳ ಕುಂದುಕೊರತೆ ನಿನಗೆ ಗಣನೆಗೆ ಬರಲಿಲ್ಲವೇ? ಅಲ್ಲ, ಮೊದಲು ಸ್ಕೂಲು ಸ. ಅ. ಇನ್ಸ್‌ಪೆಕ್ಟರನ್ನು ಆಗುವಷ್ಟು ಜರಿದು ಬೇರೆ ಕಡೆ ತಿರುಗಲು ಯೋಚಿಸಿದ್ದಿಯಾ? ಅಲ್ಲ, ಮ. ಚಿಣ್ಣಪ್ಪನವರೇ ಮೊದಲಾದ ದೇಶಸೇವೆಯನ್ನು ಮಾಡುತ್ತಿರುವವರನ್ನೇ ನಾಗಬಡಿಯುತ್ತಾ ನಿನ್ನ ಆಯುಷ್ಯ ಕಳೆಯುತ್ತಿರುವಿಯಾ! ನಿನ್ನ 3 X 3 = 9, 9 X 9 = 81, ಈ ಗುಣಾಕಾರ ನೋಡಿ ಸಾಕಾಯಿತು. ನಿನ್ನದು ಭಾಗಕಾರ – ಮತ್ತು ವ್ಯವಕಲನ – ಅದು ತೀರಲಿ ಇದರಲ್ಲೇ ಇರು, ಅದು ಚೆನ್ನಾಗಿ ತೀರಿದ ನಂತರ ಗುಣಾಕಾರವನ್ನು ಪ್ರಾರಂಭಿಸು. ನಿನ್ನ ಪಾಪವೇ, ನಿನ್ನ ತಾಪವೇ, ನಿನ್ನ ಧ್ಯೇಯವೇ, ನಿನ್ನನ್ನು ನೋಡಿದರೆ ವ್ಯಸನವಾಗುತ್ತೆ. 2 ವರ್ಷಕ್ಕೆ ಮುಂಚೆಯಾದರೂ ಜನಿಸಿದಿಯಾ, ಈಗ ಕಾಲವು ಮೀರಿದ ಸಮಯವಾಯಿತಲ್ಲಾ! ನಿನ್ನಿಂದ ಆಗತಕ್ಕ ಅನೇಕ ಕೆಲಸಗಳಿವೆ. ಅದನ್ನು ಬಿಟ್ಟು ಕಾಡು ದಾರಿ ಹಿಡಿಯದಿರು. ಇನ್ನಾದರೂ ಎದ್ದೇಳು, ಪರವಶನಾಗದಿರು, ಎಚ್ಚರ! ಇದ್ದದ್ದು ಹೋಯಿತು ಮದ್ದಿನ ಗುಣ ಎಂಬ ಗಾದೆಯಾದೀತು.

ಅಂಜದವ.

ಅವಿಚಾರವಲ್ಲ' ನ್ಯಾಯ'

ಮಹನೀಯರೆ,

ಮ. ಬಿದ್ದಂಡ ಸುಬ್ಬಯ್ಯನವರು ತಾ. 24-7-25 ರ "ಕೊಡಗು" ಪತ್ರಿಕೆಯಲ್ಲಿ "ಅವಿಚಾರ"ವೆಂಬ ಬಾತ್ಮಿಯನ್ನು ಬರೆದದನ್ನು ಓದಿ ನನಗೆ ಆಶ್ಚರ್ಯವುಂಟಾಯಿತು. ಅವರು ಬರೆದ ಆ ಬಾತ್ಮಿಯೇ "ಅವಿಚಾರ" ದಿಂದ ತುಂಬಿರುವುದು ಎಲ್ಲರಿಗೂ ಸ್ಪಷ್ಟವಾಗಿರಬಹುದಾದ ಕಾರಣ ಅದಕ್ಕೆ ಜವಾಬು ಕೊಡುವ ಅವಶ್ಯವಿಲ್ಲವೆಂದು ನನಗೆ ತೋರಿ ಇಷ್ಟರವರೆಗೆ ಸುಮ್ಮನಿದ್ದೆನು. ಆದರೆ ಅವಿಚಾರಗಳನ್ನು ನ್ಯಾಯವೆಂದು ತಿಳಿದುಕೊಳ್ಳುವವರು ಕೆಲವರಿರುವರೆಂದೂ, ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿಯ ವಿಷಯಕ್ಕೆ ಸರ್ಕಾರದವರು ಬೇಗನೆ ಗಮನ ಕೊಡಬೇಕಾಗಿರುವುದರಿಂದಲೂ ಮ. ಸುಬ್ಬಯ್ಯನವರ "ಅವಿಚಾರ" ವನ್ನು ಎಲ್ಲರಿಗೂ ವಿವರವಾಗಿ ತೋರಿಸಲಿಕ್ಕಾಗಿ ಈ ಬಾತ್ಮಿ ಬರೆದದ್ದಾಗಿದೆ.

ಕೂಡೊಳಗಾಗಲಿ, ಚಟ್ಟಿಣಗಳಾಗಲಿ, ಕೊಡಗರು ಮತ್ತು ಬ್ರಾಹ್ಮಣರು ಗೌಡುಗಳಿಗಿಂತ ವಿದ್ಯಾಬುದ್ಧಿಯಲ್ಲಿ ಮುಂದುವರಿದಿರುವರೆಂಬ ನಿಜ ಸಂಗತಿಯು ಮ. ಸುಬ್ಬಯ್ಯನವರ ಹೇಳಿಕೆಯಿಂದೇನೂ ಸುಳ್ಳಾಗಲಾರದು. ರಾಜಕೀಯ ಸುಧಾರಣೆಗಾಗಿ ಹೋರಾಡುವಾಗ, ನಮ್ಮ ದೇಶವು ಹಿಂದೂದೇಶದ ಅನೇಕ ಪ್ರಾಂತ್ಯಗಳಿಗಿಂತ ವಿದ್ಯಾಬುದ್ಧಿಯಲ್ಲಿ ಮುಂದುವರಿದಿರುವುದಾದರೂ ರಾಜಕೀಯದಲ್ಲಿ ಹಿಂದುಹಾಕಿರುವುದು ಸರ್ಕಾರದವರಿಗೆ ನ್ಯಾಯವಲ್ಲವೆಂದು ದೇಶದ ಪ್ರತಿಯೊಬ್ಬ ಮುಂದಾಳು ಘಂಟಾಘೋಷವಾಗಿ ಹೇಳುತ್ತಿರುವಲ್ಲಿ 'ಕೊಡಗರು ಬ್ರಾಹ್ಮಣರು ಮುಂದುವರಿದು ಕೊಂಡಿದ್ದಾರೆಂಬುವುದು' ಗೌಡಗಣದವರಿಗೆ ತಪ್ಪಭಿಪ್ರಾಯ ಹುಟ್ಟಿಸುವುದೆಂದು ಬರೆದದ್ದು ಅವಿಚಾರ ವಲ್ಲವೇ? ಈ ದೇಶದವರು ವಿದ್ಯಾಬುದ್ಧಿಯಲ್ಲಿ ಮುಂದುವರಿದಿರುವದಿಲ್ಲವೆನ್ನುವ ಸುಬ್ಬಯ್ಯನವರು ರಾಜಕೀಯ ಸುಧಾರಣೆಯ ವಿಷಯದಲ್ಲಿ ಸರ್ಕಾರದವರ ರೊಟ್ಟಿಗೆ ತುಪ್ಪ ಹಾಕಿದಂತಾಗುವುದಿಲ್ಲವೇ?

ನಮ್ಮ ದೇಶೀಯರಿಗೆ ದೊಡ್ಡ ಉದ್ಯೋಗಗಳನ್ನು ಕೊಡಕೂಡದೆಂಬ ರಹಾವಿಗೆ ವ್ಯಸನ ಪಡುತ್ತೇನೆಂದೂ, ಮತ್ತು ಕೊಡಗಿನಲ್ಲಿ ದೊಡ್ಡ ಉದ್ಯೋಗಗಳೇ ಕಡಿಮೆಯಾಗಿರುವುದರಿಂದ ಉದ್ಯೋಗಸ್ಥರಿಗೆ ದೊಡ್ಡ ಉದ್ಯೋಗಕ್ಕೆ ಹೋಗಲು ಅನುಕೂಲವಿಲ್ಲವೆಂದೂ ಬರೆದ ಮ. ಚಿಣ್ಣಪ್ಪನವರ ಮಾತುಗಳು ಒಂದಕ್ಕೊಂದು ವಿರೋಧವಲ್ಲವೆಂದು ವಾಚಕರು ಚೆನ್ನಾಗಿ ತಿಳಿದುಕೊಂಡಿರುವರು. ಸುಬ್ಬಯ್ಯನವರಿಗೆ ಮಾತ್ರ ಇನ್ನು ವಿರೋಧವೆಂದೂ ಹ್ಯಾಗೆ ತೋರಿತೋ ತಿಳಿಯದು.

'ಮೊದಲು ತನ್ನನ್ನು, ಆ ಮೇಲೆ ತನ್ನ ಸಮ್ಮಂಧಿಕರನ್ನು ನೋಡಿಕೊಳ್ಳುವದು' ಮನುಷ್ಯ ಸ್ವಭಾವವೆಂದು ಸುಬ್ಬಯ್ಯನವರು ಒಪ್ಪಿರುವಾಗ ಪರಪ್ರಾಂತ್ಯದವರಿಗೆ ಇಲ್ಲಿ ತಮಗೆ ಬೇಕಾದವರೂ, ಸಮ್ಮಂಧಿಕರೂ ಕಡಿಮೆ, ಯಾಕೆ, ಇಲ್ಲವೆಂದಿರುವಾಗ ಅವರಿಗೆ ಪಕ್ಷಪಾತ ಮಾಡಲು ಎಡೆ ಇಲ್ಲವೆಂದೂ ನಮ್ಮ ದೇಶೀಯರಿಗೆ ಹೀಗೆ ಮಾಡಲು ಅವಕಾಶವಿರುವುದೆಂದೂ ಸ್ಪಷ್ಟವಾಗುವುದಿಲ್ಲವೇ? ಮನುಷ್ಯರ ಸ್ವಭಾವದಲ್ಲಿರುವ ಈ ಕೊರತೆಗಳಿಗೆ ಅವಕಾಶ ಕೊಡದೆ ಮಾಡುವುದಕ್ಕಾಗಿಯೇ ಉದ್ಯೋಗಸ್ಥರನ್ನು ಆಗಾಗ್ಯೆ ವರ್ಗಾಯಿಸಬೇಕೆಂಬದಾಗಿದೆ. 'ಪರದೇಶಿಯರು ಬಂದರೆ ಲಂಚ ಕೊಡುವ ಪ್ರಯೋಜನ ಒಂದು ಮಾತ್ರ ರೈತರಿಗೆ ಅನುಕೂಲಿಸಿದಂತಾಗುವುದು' ಎಂದು ಬರೆದಿರುತ್ತಾರೆ. ಇದು **ಪೂರಾ ತಪ್ಪಭಿಪ್ರಾಯ**ವೆಂದು ಎಲ್ಲರಿಗೂ ಗೊತ್ತಾಗುವುದು. ನಮ್ಮ ಈ ಚಿಕ್ಕ ದೇಶದಲ್ಲಿ ಮುಖ್ಯವಾಗಿರುವ 3 ಯಾ 4 ಇಲಾಖೆಗಳ ಪೈಕಿ ಹೆಚ್ಚು ಆದಾಯ ವೆಚ್ಚ ಇರುವ ಫಾರೆಸ್ಟು ಮತ್ತು ಡಿ. ಪಿ. ಡಬ್ಲ್ಯು ಇಲಾಖೆಗಳ ಗಜೆಟೆಡ್ ಮತ್ತು ಬೇರೆ ದೊಡ್ಡ ಆಫೀಸರುಗಳು ಮದ್ರಾಸು ಪ್ರಾಂತ್ಯದಿಂದಲೇ ಬರುವವರಾಗಿರುತ್ತಾರೆ. ಲಂಚಕ್ಕೆ ತವರು ಮನೆಯಂತಿರುವ ಈ ಎರಡು ಇಲಾಖೆಗಳಲ್ಲಿ ಕೊಡಗಿನಲ್ಲಿ ಲಂಚದ ಅಕ್ರಮಗಳೇನೂ ಇಲ್ಲದಿರುವಲ್ಲಿ ಪರದೇಶದವರು ಲಂಚ ಕೋರಿಗಳೆಂದು ಹೇಳುವುದರಲ್ಲಿ ದ್ವೇಷವಲ್ಲದೆ ಮತ್ತೇನೂ ಕಾಣುವುದಿಲ್ಲ.

'ನಮ್ಮ ಕೊಡಗು ದೇಶದಲ್ಲಿ ಲಂಚವೆಂಬ ಸುಳಿವೇ ಈ ವರೆಗೂ ಇಲ್ಲ' ವೆಂದೆನ್ನುವ ಸುಬ್ಬಯ್ಯನವರು ಈ ವರೆಗೂ ಕೊಡಗಿನಲ್ಲಿ ಪರ ಪ್ರಾಂತ್ಯದವರು ಉದ್ಯೋಗ ಮಾಡಲಿಲ್ಲವೆಂದೆನ್ನುತ್ತಾರೋ? ಪರದೇಶದ ಉದ್ಯೋಗಸ್ಥರಿಂದ ನಮಗೆ ಕೇಡುಕ್ಕುಂಟಾಗಿದೆ ಎಂಬುದಕ್ಕೆ ಮ. ಬಾಳಿಗ ವಗೈರೆರ ಉದಾಹರಣೆ ಸೂಚಿಸಿರುವರು. ಮ. ಬಾಳಿಗರವರು ಉದ್ಯೋಗದಲ್ಲಿದ್ದಾಗಾಗಲಿ, ಅವರು ಜೀವಿತರಾಗಿದ್ದಾಗಾಗಲಿ, ಅವರ ಮೇಲೆ ಸುಬ್ಬಯ್ಯನವರು ಹೀಗೆ ಬರೆಯುತ್ತಿದ್ದರೇ? ಅವರ ಮರಣದ ನಂತರ ಅವರನ್ನು ದೂಷಿಸುವುದು ಯಾರಿಗೆ ಸಂದದ್ದೆಂದು ವಾಚಕರು ಊಹಿಸಿಕೊಳ್ಳಬಹುದು. 'ದೇಶದಲ್ಲಿ ಒಬ್ಬಿಬ್ಬರು ಅನ್ಯಾಯ ಮಾಡಿದ ಮಾತ್ರಕ್ಕೆ ದೇಶದವರೆಲ್ಲಾ ಅನ್ಯಾಯಗಾರರೆಂದು ಹೇಳುವುದಲ್ಲಾ ದೀಕ್ಷೇ' ಎಂದ 'ಅವಿಚಾರ' ಬಾತ್ಮಿದಾರರು ಒಂದೆರಡು ಉದಾಹರಣೆಗಳಿಂದ ಪರದೇಶಿಯರೆಲ್ಲರೂ ಲಂಚ ತೆಗೆಯುವವರೆಂದು ಹೇಳಬಹುದೇ? ನ್ಯಾಯಶಾಲಿಗಳೆಂದೂ ಸತ್ಯಮೂರ್ತಿಗಳೆಂದೂ ಇಂದೂ ಪ್ರತಿಯೊಬ್ಬನ ಬಾಯಲ್ಲಿರುವ ಮುನಸೀಫರಾಗಿದ್ದ ಗೋಪಾಲರಾಯರನ್ನೂ ಲಕ್ಷ್ಮೀನಾರಾಯಣ ರಾಯರನ್ನೂ ಇವರೇಕೆ ಮರೆತರು? ಇವರು ಪರಪ್ರಾಂತ್ಯದವರಲ್ಲವೇ? ಒಳ್ಳೆಯವರೂ ಕೆಟ್ಟವರೂ ಎಲ್ಲಲ್ಲಿಯೂ ಇರುವರು. ಲಂಚಕೊಡುವವರಿದ್ದರೆ ತೆಗೆದುಕೊಳ್ಳುವವರು ಎಲ್ಲಲ್ಲಿಯೂ ಇರುವರು. ಸಿಕ್ಕಿ ಬಿದ್ದರೆ ಶಿಕ್ಷಿಸಲು ಅದಕ್ಕೆ ಸರಿಯಾದ ಖಾನೂನು ಇದೆ. ಈ ದೇಶದ ಗ್ರಾಮವಾಸಿಗಳು ಬೇರೆ ಪ್ರಾಂತ್ಯಗಳ ಊರವರಿಗಿಂತ ಸ್ವಲ್ಪ ಹೆಚ್ಚು ತಿಳುವಳಿಕೆಯುಳ್ಳವರಾಗಿರುವುದರಿಂದಲೂ ಬಡವರಾಗಿರುವುದರಿಂದಲೂ ಇಲ್ಲಿ ಲಂಚ ಕೊಡುವವರು ಕಡಿಮೆ ಎಂದು ಹೇಳಬಹುದಷ್ಟೆ; ಅನ್ಯಥಾ ಅಲ್ಲ.

ವಿದ್ಯಾರ್ಥಿಗಳ ಸಹಾಯಕ್ಕಾಗಿ ಸ್ಥಾಪಿಸಲ್ಪಟ್ಟ ನಮ್ಮ ಸಂಘವು ದಿನೇ ದಿನೇ ಕೃಷ್ಣಪಕ್ಷದ ಚಂದ್ರನಂತೆ ಕ್ಷಯಿಸುತ್ತಿರುವ ವಿಚಾರಕ್ಕೆ ವಿಷಾದಪಡಬೇಕಾಗುತ್ತೆ. ನಮ್ಮ ಜನಾಂಗದವರು ಪಟ್ಟಣನಿವಾಸಿಗಳಲ್ಲವಾದುದರಿಂದ ಸುಲಭದಿಂದ ಒದಗತಕ್ಕ ಪ್ರಯೋಜನಗಳು ಅವರಿಗೆ ಸಿಕ್ಕಿಲ್ಲ. ಆದುದರಿಂದ ನಮ್ಮ ಸಂಘವನ್ನು ಅಭಿವೃದ್ಧಿಯ ಮುಂದಕ್ಕೆ ತರುವ ಏರ್ಪಾಡು ಮಾಡಬೇಕಾಗಿದೆ. ಗೌಡವರ್ಗದಲ್ಲಿ ಅನೇಕ ಒಳಪಂಗಡಗಳಿವೆ. ನಮ್ಮವರ ಒಗ್ಗಟ್ಟೂ ಸ್ನೇಹವೂ, ಸಂಘವೃದ್ಧಿಯೂ ಆಗಬೇಕಾದರೆ, ನಮ್ಮ ಒಳಪಂಗಡದವರಲ್ಲಿ ಸ್ನೇಹವೂ ಭ್ರಾತೃಭಾವವೂ ಅತ್ಯಾವಶ್ಯಕವಾಗಿದೆ. ಮೈಸೂರು ಸೀಮೆಯ ಒಕ್ಕಲಿಗ ಗೌಡರ ಸಂದಿಮೊಂದಲ್ಲಿ ನಡೆಸಲಿದ್ದಾಗ ಅಲ್ಲಿಯ ಮೀಟಿಂಗಿನಲ್ಲಿ ಅವರ ಪ್ರೆಸಿಡೆಂಟರವರು ಒಳಪಂಗಡದ ಗೌಡರುಗಳಲ್ಲಿ ಬಂಧುತ್ವವನ್ನು ಬೆಳೆಸುವುದು ಗೌಡರುಗಳ ಒಗ್ಗಟ್ಟಿಗೆ ಮುಖ್ಯಾಂಶವೆಂದು ಒತ್ತಿ ಸೂಚಿಸಿರುತ್ತಾರೆ. ಅದೇ ಮೇರೆಗೆ ನಮ್ಮವರು ಒಕ್ಕಲಿಗ ಗೌಡರುಗಳೊಡನೆ ಬಂಧುತ್ವವನ್ನು ಬೆಳೆಸುವಲ್ಲಿ ಲಾಭವಿರುವುದಲ್ಲದೆ ಒಗ್ಗಟ್ಟು ವೃದ್ಧಿಯಾಗುತ್ತೆಯಾದುದರಿಂದ ನಮ್ಮ ದೇಶೀಯರ ಅಭಿಪ್ರಾಯಗಳನ್ನು ಮುಂಬನವಾರದ ಪತ್ರಿಕೆಯಲ್ಲಿ ಪ್ರೆಸಿಡೆಂಟರೇ ಮೊದಲಾದ ಮಹಾನುಭಾವರು ವಿವರವಾಗಿ ತಿಳಿಯಪಡಿಸಿ ಗೌಡರುಗಳ ಒಗ್ಗಟ್ಟನ್ನು ಕಾಪಾಡಬೇಕಾಗಿ ವಿನಂತಿ.

ಸಿ. ಮುತ್ತಣ್ಣ ಗೌಡ.

ಕೊಡಗು ವಿದ್ಯಾಭಿವೃದ್ಧಿ ಸಂಘ

ಅಯ್ಯಾ ಚಿನ್ನಪ್ಪನವರೆ,

'ಹರಿಪ್ರಸಾದ'ರು ತನ್ನ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಬಿಟ್ಟರೆ ಅವರ 'ಒಗೆಗಂಟಿ ಮತ್ತು ಕಪಟ ಸನ್ಯಾಸಿ' ಎಂದು ನೀವು ಬಗೆಯುವಿರೆಂದೂ, ಪೂರ್ತಿ ಹೆಸರಿಲ್ಲದ ಬಾತ್ಮಿಗೆ ನೀವು ಜವಾಬು ಕೊಡುವುದಿಲ್ಲವೆಂದೂ ಮುಂತಾಗಿ ತಾ. 7-8-35ರಲ್ಲಿ ಬರೆದ ಬಾತ್ಮಿಯನ್ನು ನೋಡಿ ಬಹಳ ಆಶ್ಚರ್ಯವೂ ವ್ಯಸನವೂ ಉಂಟಾಯಿತು. 'ಹರಿಪ್ರಸಾದ'ರು ನಿಮ್ಮ ಹಾಗೆ ಉತ್ತರ ಕೊಡಗಿನಲ್ಲಿ ಅಲ್ಲ ಅಧಿಕಾರವಿರುವ ಒಬ್ಬ ಪೋಲೀಸು ಇನ್ಸ್‌ಪೆಕ್ಟರೋ ಏನಿ ಅದಕ್ಕೆ ಸರಿಸಮಾನವಾದ ಅಥವಾ ಮೇಲಿನ ಉದ್ಯೋಗಸ್ಥರೋ ಆಗಿದ್ದರೆ ನಿಮ್ಮ ಬಾತ್ಮಿಗೆ ಉತ್ತರವನ್ನು ಹೆಸರಿನೊಂದಿಗೆ ಪ್ರಕಟಿಸುವರೆಂದು ನಾನು ಈ ವರೆಗೆ ಕಾಣೆನು. ಆದರೆ ಅವರ ಜವಾಬು ಹೊರಬೀಳದೆ ಇರುವುದನ್ನು ನೋಡುವಾಗ ಅವರು ನನ್ನಂತೆ ಒಬ್ಬ ಬಡ ರೈತನಾಗಿರಬೇಕೆಂದು ತೋರುತ್ತದೆ. ಬಡ ರೈತರಾದ ಅವರು ಯಾ ನಾನು ನಿಮ್ಮ ಬಾತ್ಮಿಯನ್ನು ಖಂಡಿಸಿ ಬರೆಯುವ ಉತ್ತರದಲ್ಲಿ ಹೆಸರನ್ನು ಪ್ರಕಟಿಸಿ ನಿಮ್ಮ ದೃಷ್ಟಿಗೆ ಬೀಳಬೇಕೆಂದು ನಿಮ್ಮ ಅಭಿಪ್ರಾಯವೇ? ನಿಮ್ಮಂಥ ದೊಡ್ಡ ಅಧಿಕಾರಿಗಳ ಕಣ್ಣಿಗಲ್ಲೂ ಪೋಲೀಸು ಉದ್ಯೋಗಸ್ಥರ ದೃಷ್ಟಿಗೆ ಬಿದ್ದ ಮೇಲೆ ಅವನ ಪಾಡೇನಾಗುವುದೆಂದು ಬಡ ರೈತನಿಗೇನೇ ಗೊತ್ತು! ಹೀಗಿರುವಲ್ಲಿ ನಿಮ್ಮ ಬಾತ್ಮಿಗೆ ಯಾರೂ ಜವಾಬು ಕೊಡಬಾರದೆಂಬ ಅಪೇಕ್ಷೆಯಿಂದ ನೀವು ಹಾಗೆ ಬರೆದಿದ್ದೀರೋ ನಾನೋ ತಿಳಿಯೆ. ಬಾತ್ಮಿಯಲ್ಲಿ ಹೆಸರು ಇರಲಿ, ಇಲ್ಲದಿರಲಿ ಅದರಿಂದ ನಿಮಗೇನು? ಅದರಲ್ಲಿ ಬರೆದಿರುವುದು ನ್ಯಾಯವೋ, ಅನ್ಯಾಯವೋ ಎಂಬುದನ್ನು ಮಾತ್ರ ನೀವು ಗಣನೆಗೆ ತೆಗೆದುಕೊಳ್ಳಬೇಕಷ್ಟೆ. ಬಾತ್ಮಿದಾರನ ಹೆಸರು ಗೊತ್ತಾದ ಕ್ಷಣ ಬಾತ್ಮಿಯ ಅರ್ಥವೇನೂ ಬದಲಾಗುವುದಿಲ್ಲವಷ್ಟೆ! 'ಹರಿಪ್ರಸಾದ'ರು ಬರೆದ ಬಾತ್ಮಿಯಲ್ಲಿ ಅನ್ಯಾಯವಿದ್ದರೆ ಅದನ್ನು ಖಂಡಿಸಿ ಬರೆಯುವುದು ಬಿಟ್ಟು, ವೀರರಾಜಪೇಟೆಯಲ್ಲಿ ಮೀಟಿಂಗನ್ನು ಯಾಕೆ ಮಾಡಲಿಲ್ಲವೆಂಬುದಕ್ಕೆ ವೀರರಾಜಪೇಟೆಯಲ್ಲಿ ಮೀಟಿಂಗಿದ್ದ ದಿನವೇ ಮಡಿಕೇರಿಯಲ್ಲಿ ಮೀಟಿಂಗು ಮಾಡಲು ಕಾರಣವೇನೆಂಬುದಕ್ಕೂ ಜವಾಬುಕೊಡುವವರ ಬದಲು * * * ದೇಶಸೇವೆ ಮಾಡುವವರನ್ನು ಜನನ್ಯಾ ಬಲ್ಲೆವು. ಬಾತ್ಮಿದಾರರಿಗೆ ಕಟಿಬಂಧಗಳು ಇಷ್ಟವಿದ್ದಲ್ಲಿ ತಾನು ದಾನಿ ನಾನೇ ಕೊಡುತ್ತೇನೆಂದು ಮೊದಲಾಗಿ ಬರೆಯುವುದರಲ್ಲಿ ಅರ್ಥವೇನಿದೆ? ಮೀಟಿಂಗಿಗೆ ಬರಲು ಇಷ್ಟಪಡುವವರೆಲ್ಲರೂ ಕಟಿ ಬಂಧಿತರಾಗಿರಬೇಕೆ? * * * * ಹಣಗಾರರನ್ನೂ ಮನಸ್ವಾಧೀನರನ್ನೂ ಉದ್ಯೋಗಸ್ಥರನ್ನೂ, ದೂಷಿಸಿ * * * ದೇಶಸೇವೆ ಮಾಡುವವರು ... ಬಲ್ಲೆವು' ಎಂದು ಬರೆದಿರುವಿರಿ. ಈ ಹರಿಪ್ರಸಾದರ 'ಬಾತ್ಮಿಯ' ಸಾರವನ್ನು ಸಂಗ್ರಹಿಸಿದ ನೀವು ಮನಸ್ವಾಧೀನರು ಎಂಬುದರ ಅರ್ಥವೇನು, ಕೊಡವರಲ್ಲಿ ಮನಸ್ವಾಧೀನರು ಯಾರು, ಮನಸ್ವಾಧೀನರಲ್ಲದವರು ಯಾರು, ಎಂಬುದನ್ನು ವಿವರಿಸಿಬಿಟ್ಟು ತಿಳಿಸುವಿರಾ? ಬಿಳಿ ಬಟ್ಟೆಯುಡುವವರು ಮನಸ್ವಾಧೀನರೋ ಅಥವಾ ಇತ್ತೀಚೆಗೆ ಕೊಡವರಾದವರೆಂದು ನಂಬಿರುವವರು ಮನಸ್ವಾಧೀನರೋ, ರಾಜರ ಕಾಲದಲ್ಲಿ ದಿವಾನಗಿರಿ ಮಾಡಿದವರ ಮನೆಯವರು ಮನಸ್ವಾಧೀನರೋ, ಟೈಟಲ್ ಪಡೆದವರ ಮನೆಯವರು ಮನಸ್ವಾಧೀನರೋ, ದೊಡ್ಡ ತೋಟ ಇರುವವರ ಮನೆಯವರು ಮನಸ್ವಾಧೀನರೋ, ದೊಡ್ಡ ಉದ್ಯೋಗಸ್ಥರ ಮನೆಯವರು ಮನಸ್ವಾಧೀನರೋ, ಮೋಟಾರು ಗಾಡಿ ಇಟ್ಟಿರುವವರ ಮನೆಯವರು ಮನಸ್ವಾಧೀನರೋ, ಹಣಗಾರರ ಮನೆಯವರು ಮನಸ್ವಾಧೀನರೋ, ಎಂಬುದನ್ನು ತಮ್ಮ ಒಪ್ಪಿಗೆ ವಿವರಿಸುವಿರಾ? ಈ ಪ್ರಶ್ನೆಗಳಿಗೆ ನಿಮ್ಮ ಜವಾಬು ಪ್ರಕಟವಾದ ಮೇಲೆ ಮುಂದೆ ಬರೆಯುವೆನು. ಉದ್ಯೋಗಸ್ಥರ ಸ್ನೇಹಕ್ಕೆ ಬೀಳಲು ಹೆದರುವ,

"ಒಬ್ಬ ಬಡ ರೈತ"

ಅಯ್ಯಾ ಪತ್ರಿಕಾಕರ್ತರೇ!

ಕೊಡಗು, ತಾರೀಖು 14ನೆಯ ... ಶಾಂತಿ ಯವರ ಬಾತ್ಮಿಯಲ್ಲಿ "ಹಿಂದೂಸ್ಥಾನದ ಕಿಂಗ್ ಎಡ್ವರ್ಡ್ ಮೆಡಿಕಲ್ ಕಾಲೇಜು ... ಕಟಾದವರೆ" ಎಂಬುವ ... ಸಂಗತಿಯನ್ನು ಓದಿ ನನಗೆ ಸಂತೋಷವಾಯಿತು. ಆದರೆ ಅದು ನಮ್ಮ ಕೊಡಗಿಗಮಾತ್ರ ನಿಮ್ಮ ಮುಂದಾಳೆಂಬ ಅರ್ಥವನ್ನು ಕಲ್ಪಿಸಿತಿಯಂತೆ. ಸ್ವಜ ಗುಣಗಳಿಂದ ಉಪಯೋಗಿಸಿರುವರಾದರೂ, ಸದ್ವಿ ಮುಂದಾಳೆಂಬವರು ಸೌಶೀಲ್ಯ ತ್ಯಾಗದೇಶದ ಜನರ ಮನಸ್ಸಿಗೆ ವಿಷಮ್ಯವನ್ನು ಮುಂದಾಳುಗಳೆನಿಸು ಕರೆಯಬಹುದೋ? ಇಂಥಾ ಪದವಿ ಅರ್ಹೆಯಿಲ್ಲದೆ ಒಬ್ಬೊಬ್ಬರೆ ನಾಲ್ಕಾರು ಕೆಲಸಗಳಿಗೆ ಕೈಹಚ್ಚಿಕೊಂಡು, ಸ್ವಾರ್ಥತೆಯ ತಮ್ಮ ಜೋಕ್ಕನ ನಡೆಸುವ ನೆವದಿಂದ ತಿಳಿಯದ ನನ್ನಂಥವರಿಗೆ ನಿಜವಲ್ಲದ ಅನೇಕ ವರ್ತಮಾನಗಳನ್ನು ಈ ಮೆ ನಾಡುಗಳಲ್ಲೆಲ್ಲ ತುಂಬಿಸಿಕೊಂಡು, ಆ ಮೂಲಕ ಜನರನ್ನು ವಂಚಿಸಿಕೊಂಡು ದೊಡ್ಡ ದೇಶಾಭಿಮಾನಿ, ಭಾಷಾಭಿಮಾನಿ ಎಂದೆಂದುಕೊಂಡು, ಜನರ ಗುಣವರನ್ನು ಮುಂದಾಳುಗಳೆನ್ನಬಹುದೆ? ಪ್ರತಿ ಸಮಯವನ್ನು ಸ್ವಾರ್ಥತೆಗಾಗಿ ಕಳೆಯುತ್ತಾ, ಬಾಯಲ್ಲಿ ಮಾತ್ರ ತಾನೊಬ್ಬ ದೊಡ್ಡ ದೇಶಸೇವಕನೆಂದುಕೊಂಡು, ಸಾಲದಕ್ಕೆ ಆ ಗಾಂಧಿಯವರ ಪವಿತ್ರ ಹೆಸರೆತ್ತಿ ಹೊಟ್ಟೆ ಹೊರಕೊಳ್ಳುವವರು ನಿಜವಾಗಿಯೂ ಮುಂದಾಳುಗಳೇ? ತಪ್ಪು ಜೋಕ್ಕನಗಳನ್ನು ಸರಿಮಾಡಿಕೊಳ್ಳುತ್ತಾ, ಯಾವ ಪ್ರತಿ ಫಲವೂ ಇಲ್ಲದ ಕೆಲಸ ಮಾಡುವವರ ಮೇಲೆ ಇಲ್ಲಸಲ್ಲದ ವರ್ತಮಾನಗಳಿಂದ ದೇಶದ ಬಡ ಜನರ ಮನಸ್ಸಿಗೆ ದುರ್ಬುದ್ಧಿ ತುಂಬಿಸಿದರೆ ಒಗ್ಗಟ್ಟಿನ ಸಂಭವ ಬರುವದೆ?

ಇವರಲ್ಲಿ ಯಾವದಾದರು ಒಂದು ಒಳ್ಳೇ ಗುಣವಿದ್ದರೆ, ಸಾಹಸ ಗುಣ ಹೀನತ್ವದ, ತಮ್ಮ ಹೊಟ್ಟೆ ಕೈಚೀಲ ತುಂಬಿಸುವ ಉದ್ದಿಷ್ಟ ದೇಶಾಭಿಮಾನಿ ಭಾಷಾಭಿಮಾನಿಯೆಂದುಕೊಂಡು ಹೊಟ್ಟೆ ಹೊರಕೊಳ್ಳುತ್ತಾ ದೇಶದ ತಿಳಿಯದ ಜನರಲ್ಲಿ ಪರಸ್ಪರ ವೈಷಮ್ಯ ಕಲ್ಪಿಸುವವರು ಮುಂದಾಳುಗಳೇ? ಇವರ ದುರ್ಗುಣಗಳನ್ನು ಈಗಲೇ ಖಂಡಿಸದಿದ್ದರೆ, ದೇಶಕ್ಕೆ ಶ್ರೇಯಸ್ಸು ಬರುವದೆ? ಒಗ್ಗಟ್ಟು ಬರುವದೆ? ಪ್ರೀತಿ ಬರುವದೆ? ಮುಳ್ಳುಗಳಿರುವ ಗುಲಾಬಿ ಹೂವು ಅತ್ಯಂತ ಮುಳ್ಳುಗಳಿರುವ, ಯಾ ಕಷ್ಟಕರವಾದ ಸ್ಥಳಗಳಲ್ಲಿದ್ದರೆ, ಅದು ಸ್ವೀಕರಿಸುವದಕ್ಕೆ ಯೋಗ್ಯವಾದರೂ, ಅದರ ಬಳಿಗೆ ಹೋಗುವರೆ? ವಿಳಂಬದ ರೋಗಿ ವೈದ್ಯ, ಔಷಧಿಯನ್ನು ನಂಬಿಸಲಾರದ, ಅವನ ಒಳ್ಳೆ ಔಷಧಿಯಿಂದ ಪ್ರಯೋಜನವೇನು? ಅಪಾಯಕರವಲ್ಲವೇ? ಸಿಡು ಮೋರೆಯುಳ್ಳ ಯಾ ನಗೆಯನ್ನಾಡುವ ಚಿತ್ರಗಾರನು ಕುರೂಪಿಯಾದರೇನು ಯಾ ಸುಂದರನಾದರೇನು? ಆತನ ಹುಳ್ಳಿನ ಸ್ವಭಾವಕ್ಕೆ ಪರ ಕೊಂಡುಕೊಳ್ಳುವದರಲ್ಲಿ ನಿರಾಶೆಯಾಗಿರುವದಿಲ್ಲವೆ? ಕೆಸರಿನಲ್ಲಿ ಹುಟ್ಟಿದ ಕಮಲವು ನೋಡುವುದಕ್ಕೆ ಯೋಗ್ಯವಾಗಿದ್ದರೂ, ಪರಿಮಳದಲ್ಲಿ ಯೋಗ್ಯವಲ್ಲವೆಂಬುದನ್ನು ಮರೆತು ಬಿಟ್ಟಿರೆ? ಮೇಲೆ ನಾನು ವಿವರಿಸಿದ ಸಾಹಸ್ರಗುಣಹೀನ, ವಿಕಗುಣಸಂಪನ್ನರಾದ ಮುಂದಾಳುಗಳನ್ನು ಹಿಂದೂಸ್ಥಾನದಲ್ಲಿ ಎಂದಾದರೂ ವರ್ಣಿಸಿರುತ್ತಾರೆಯೇ? ಇವರು ದೇಶವನ್ನು ಇಗ್ಗಟ್ಟು ಮಾಡಿ ತಮ್ಮ ಹೊಟ್ಟೆ ಹೊರಕೊಳ್ಳುವದಕ್ಕೆ ಹೋರಾಡುತ್ತಾರಲ್ಲದೆ, ದೇಶಕ್ಕೆ ಹಿತವನ್ನೇ ಬೋಧಿಸಿರೆಂದು ಬಿಟ್ಟರೆ ಶಾಂತಿಯವರು ಹೇಳುವಂತೆ ಮಹಾತ್ಮರ ಮಾತಿಗೆ ವಿರೋಧವಾಗಿ, ಕೆಡುಕನ್ನೇ ಬೋಧಿಸಿಕೊಂಡು ದೇಶವನ್ನು ಹಡಕು ಮಾಡಿಬಿಟ್ಟಿರುವ ಅಂಥವರ ಸ್ವಜಗುಣಕೇನೆನ್ನುವಿರಿ? ತಪ್ಪುಮಾಡುವಲ್ಲಿ ತಪ್ಪೆಂದು ಹೇಳಿ ಖಂಡಿಸದಿದ್ದರೆ, ತಂದೆಯ ಹೆಗಲಲ್ಲಿದ್ದ ಮಗನು ಬಾಳೆಯ ಹಣ್ಣನ್ನು ಕದ್ದದ್ದಕ್ಕೆ ಸಂತೋಷಪಡಲಾಗಿ ಕ್ರಮೇಣ ಮಗು ದೊಡ್ಡದಾದರೂ ದುರ್ಗುಣಗಳನ್ನು ಬಿಡದೆ, ದೊಡ್ಡ ಶಿಕ್ಷೆಗೆ ಒಳಬಿದ್ದ ಪರಿಣಾಮವಲ್ಲವೆ? ಮಗನ ತಪ್ಪನ್ನು ಖಂಡಿಸದ್ದಕ್ಕೆ ತಂದೆಯು ವ್ಯಸನಕ್ಕೆ ಅತ್ಯಂತನಾಡುತ್ತೆ, ಇಂದು ದೇಶವು ಸುಮ್ಮನಿದ್ದರೆ, ನಾಳೆ ವ್ಯಸನಕ್ಕೆ ಗುರಿಯಾಗುವ ಸಂಭವವು ಬರುವದರಿಂದ ಈ ಸಂಗತಿ ಈಗಲೆ ಖಂಡಿಸುವದು ಉತ್ತಮವಲ್ಲವೆ? ಸಾಮಾನ್ಯ ಇಲ್ಲಿನ ಮುಂದಾಳುಗಳೆಂದು ಕೊಂಡು ತಿರುಗುವವರಲ್ಲಿ ಅನೇಕರು ತಮ್ಮ ಹೊಟ್ಟೆ ತುಂಬಿಸುವದರಲ್ಲೇ ಮಗ್ನರಾಗಿಕೊಂಡು ಸ್ವಾರ್ಥಪರಾಯಣರಾಗಿ ದೇಶದ ಪ್ರತಿಯೊಂದು ಕಾರ್ಯದಲ್ಲಿ ಮೇಲೆ ಬಿದ್ದುಕೊಂಡು, ದಾಸ್ಯತಾವಾಗಿಯೇ ರಾರಾಜಿಸುತ್ತಾ ಎಣ್ಣೆ ಆಳದ ಪಾತ್ರದಂತೆ ಕಾಲಹರಣ ಮಾಡಿಕೊಂಡು ಬರುವದು ನಮ್ಮ ವಾಚಕರಿಗೆ ತಿಳಿಯದ ಸಂಗತಿಯಲ್ಲ. ಆದರೆ ಅಂಥ ಸಂಗತಿಗಳನ್ನು ಬಾಯಿ ಬಿಚ್ಚಿ ಹೇಳದಿದ್ದರೆ ದೇಶದಲ್ಲಿ ಉಂಟಾಗ ತಕ್ಕ ಅನರ್ಥಗಳಿಂದ ಒಗ್ಗಟ್ಟು ಖಂಡಿತ ಬರಲಾರದೆಂಬ ಭೀತಿಯಿಂದ ಈ ಬಾತ್ಮಿಯು ಬರೆಯಲು ಕಾರಣವಾಯಿತು.

ಬಿದ್ದಂಡ ಸುಬ್ಬಯ್ಯ

ಬೊಂಬಾಯಿಯಲ್ಲಿ ಒಬ್ಬ ಕೊಡಗ ಡಾಕ್ಟರು

ಅಯ್ಯಾ,

ಡಾಕ್ಟರ್ ಬಿದ್ದಂಡ ಭೀಮಯ್ಯ ಯಂ. ಬಿ. ಬಿ. ಯಸ್‌ನವರು ತಮ್ಮ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವರ್ತಮಾನವನ್ನು ಕೆಲವು ದಿವಸಗಳ ಹಿಂದೆ ಪ್ರಕಟಿಸಿದ್ದನ್ನು ಕಂಡು ಅತ್ಯಂತ ಸಂತೋಷವಾಯಿತು. ಯಂ. ಬಿ. ಬಿ. ಯಸ್. ಪರೀಕ್ಷೆಯಲ್ಲಿ ಪಾಸಾಗಿದ್ದು ಕೊಡಗಿನಲ್ಲಿ ಇವರು ಒಬ್ಬರೇ. ಇವರು ತಮ್ಮ ಫೈನಲ್ ಯಂ. ಬಿ. ಬಿ. ಯಸ್ ಪರೀಕ್ಷೆಯಲ್ಲಿ 2-3 ಸಾರಿ ಅಪಜಯವನ್ನು ಹೊಂದಿದರೂ ಅವರ ಕೊನೆಯ ಪ್ರಯತ್ನದಲ್ಲಿ ಬಹಳ ಘನವಾಗಿ ಪಾಸಾದರು.

ಡಾಕ್ಟರ್ ಭೀಮಯ್ಯನವರು ಬೊಂಬಾಯಿಯ ನಮ್ಮ ಕೊಡಗು ಜನರಿಗೆ ಬಹಳ ಸಹಾಯಕರಾಗಿದ್ದರು. ಇವರು ನಮ್ಮ ಜನರ ಕಷ್ಟಕಾಲದಲ್ಲಿ ಸಹಾಯ ಮಾಡಿದ್ದನ್ನು ಹೇಳಿ ಪೂರೈಸಲಾರದು. ಇವರು ನಮ್ಮನ್ನು ಬಿಟ್ಟು ಹೋದದ್ದು ನಮಗೆಲ್ಲರಿಗೂ ವ್ಯಸನಕರವೇ. ಕಷ್ಟ ಕಾಲದಲ್ಲಿ ಹಣವನ್ನು ಸಹಾಯಮಾಡುವುದು ವಿಶೇಷವಲ್ಲ. ಕಷ್ಟವನ್ನು ನಿವಾರಣೆ ಮಾಡುವುದು ವಿಶೇಷ. ನಮಗೇನಾದರೂ ಕಾಯಿಲೆಯಾದರೆ ಡಾಕ್ಟರ್ ಭೀಮಯ್ಯನವರನ್ನು ಸಂಪರ್ಕಿಸುತ್ತಿದ್ದೆವು. ಅವರು ಮನಸ್ಸಿಟ್ಟು ಸಹಾಯಮಾಡುತ್ತಿದ್ದರು. ಈಗ ಇಲ್ಲಿ ನಮಗೆ ಸಹಾಯಕರಾದ ಡಾಕ್ಟರಿಲ್ಲದ್ದಾಗಿದೆ. ಆದರೂ ಅವರ ಹೆಸರನ್ನು ಯಾರಿಗಾದರೂ ಹೇಳಿದರೆ ಅವರು ನಮಗೆ ಸಹಾಯ ಮಾಡುತ್ತಾರೆಂಬ ಭರವಸೆಯಿದೆ. ಇದೇ ಒಳ್ಳೆಯ ನಡತೆಯಿಂದುಂಟಾಗುವ ಫಲವು. ನಮ್ಮ ಒಳ್ಳೆಯ ನಡತೆಯು ನಮಗೆ ಪ್ರಯೋಜನಕ್ಕೆ ಬಾರದಿದ್ದರೂ ಬೇರೆಯವರಿಗೆ ಖಂಡಿತವಾಗಿಯೂ ಪ್ರಯೋಜನಕ್ಕೆ ಬರುತ್ತದೆ. ಬೊಂಬಾಯಿಯಲ್ಲಿರುವ ನಮ್ಮ ಜನರ ಪೈಕಿ ಎಲ್ಲರೂ ವಿದ್ಯಾವಂತರಲ್ಲ, ಎಲ್ಲರೂ ಹಣಗಾರರೂ ಅಲ್ಲ, ಎಲ್ಲರೂ ಹಣವಿರುವ ತಂದೆ ತಾಯಿಗಳ ಮಕ್ಕಳಲ್ಲ. ಐಶ್ವರ್ಯವಂತರ ಮಕ್ಕಳೂ, ವಿದ್ಯಾವಂತರೂ, ದ್ರವ್ಯವಿರುವವರೂ, ಬಡವರೂ ಒಂದಾಗಿದ್ದೇವೆ. ಆದರೆ ಇವರು ಎಲ್ಲರನ್ನೂ ಒಂದೇ ತರವಾಗಿ ಕಂಡು ಎಲ್ಲರ ಪ್ರೀತಿಗೂ ಪಾತ್ರರಾಗಿದ್ದರು. ಬಡಜನರಿಗೆ ಸಹಾಯಮಾಡುವವರೇ ಇವರು; ಇವರು ಅಭ್ಯಾಸ ಮಾಡಿದ ವಿದ್ಯೆಕ್ಕೂ, ಅವರ ಗುಣಕ್ಕೂ ಶೋಭಿಸುತ್ತದೆ.

ಇವರು ನಮ್ಮನ್ನೆಲ್ಲಾ ಬಿಟ್ಟು ಹೋಗುವುದಕ್ಕಾಗಿಯೂ ಅವರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಸಂತೋಷಕ್ಕಾಗಿಯೂ, ಅವರಿಗೆ ಒಂದು ಔತಣವು ಬೊಂಬಾಯಿ ಕೊಡಗರ ಬಿಡಾರದಲ್ಲಿ ಕೊಡಲಾಯಿತು. ಅವರ ಮೇಲೆ ನಮಗಿಷ್ಟ ಪ್ರೇಮಸೂಚನೆಯನ್ನು ತೋರಿಸುವುದಕ್ಕಾಗಿಯೇ ಅದನ್ನು ಬಹು ಸಂಭ್ರಮದಿಂದ ನಡೆಸಿದೆವು. ಅದಕ್ಕೆ ಮುಖ್ಯವಾಗಿ ಅವರ ಹಿತಚಿಂತಕರೇ ಸೇರಿದ್ದರು, ಗಾನ ವಿನೋದಾದಿಗಳಿಂದ ಇದನ್ನು ನೆರವೇರಿಸಿದೆವು.

ಬಿ. ಪಿ. ಸೋಮಯ್ಯ

ಸರಕಾರದ ಭರವಸೆಯುಳ್ಳ

ಓರಿಯಂಟಲ್ ಜೀವವಿಮೆಯ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು—ಬೊಂಬಾಯಿ. ಸ್ಥಾಪಿತವಾದುದು 1874. ಇನ್ಶೂರೆನ್ಸ್ ಫಂಡು 6½ ಕೋಟಿ ರುಪಾಯಿಗಳು.

ಐವತ್ತು (50) ವರುಷಗಳಿಗೆ ಹಿಂದೆ ಸ್ಥಾಪಿತವಾಗಿ ದಿನದಿನಕ್ಕೂ ಉಚ್ಛ್ರಾಯಸ್ಥಿತಿಗೆ ಬರುತ್ತಿರುವ ಈ ಕಂಪೆನಿಯ ಆಫೀಸುಗಳು—

ಅಹಮ್ಮದಾಬಾದ್	ಬೆಂಗಳೂರು	ಡೆಲ್ಲಿ	ಕ್ವಾಲಾಲುಂಪೂರ್	ಮದ್ರಾಸ್	ನಾಗಪೂರ್	ರಾವಲ್ಪಿಂಡಿ
ಅಜ್ಮೀರ್	ಕಲ್ಕತ್ತಾ	ಕ್ಯಾಂಡಿ	ಲಾಹೋರ್	ಮೊಂಡಲೆ	ಪೂನ	ತಿರುವೇಂದ್ರಮ್
ಅಲಹಾಬಾದ್	ಕೊಲೊಂಬೊ	ಕರಾಚಿ	ಲಕ್ನೋ	ಮಂಗಳೂರು	ರಂಗೂನ್	

ಮೊದಲಾದ ಹಿಂದೂಸ್ಥಾನದ ಎಲ್ಲಾ ಮುಖ್ಯ ಸ್ಥಳಗಳಲ್ಲಿಯೂ ಇವೆ.

ಈ ಕಂಪೆನಿಯು 1924ನೇ ಡಿಸೆಂಬರು 31ಕ್ಕೆ ಆಖೈರಾದ ಹಿಂದಿನ ಮೂರು ವರ್ಷಗಳ ಕಾಲದಲ್ಲಿ ಅತ್ಯಂತ್ಯ ಶ್ರೇಷ್ಠತರವಾಗಿರುತ್ತದೆ

ಈ ಬಾರಿ ಹಂಚುವ ಲಾಭದ ಮೊತ್ತ (51 ಲಕ್ಷ ರೂಪಾಯಿಗಳು) ರೂ. 51,00,000
ವಿಮೆದಾರರುಗಳಲ್ಲಿ ಬೋನಸ್ ಹಂಚಿಕೆ—

ಜೀವಿತ ಕಾಲದ ವಿಮೆದಾರರಿಗೆ—ರೂ. 1000 ವಿಮೆ ಹಣಕ್ಕೆ ಒಂದು ವರ್ಷಕ್ಕೆ 22½ ರೂ

ನಿಶ್ಚಯಕಾಲದ ವಿಮೆದಾರರಿಗೆ—ರೂ 1000 ವಿಮೆ ಹಣಕ್ಕೆ ಒಂದು ವರ್ಷಕ್ಕೆ 18 ರೂ

ಇಷ್ಟು ದೊಡ್ಡ ಬೋನಸ್ ಹಂಚಿಕೆಯನ್ನು ಹಿಂದೂದೇಶದ ಬೇರೆ ಯಾವ ಜೀವವಿಮೆ ಕಂಪೆನಿಯವರೂ ಇದುವರೆಗೂ ಮಾಡಿಲ್ಲ

ಕಂಪೆನಿಯ ಲೆಕ್ಕಪರಿಶೋಧಕರು ಈ ಕಂಪೆನಿಯ ಆದಾಯದ ತನಿಖೆಯ ವರದಿಯಲ್ಲಿ ಇದರ ವಿಷಯವನ್ನು ಸೂಚಿಸುತ್ತಾ ಈ ಕಂಪೆನಿಯ ಸ್ಥಿರತ್ವಕ್ಕೂ ಅಭಿವೃದ್ಧಿಗೂ ಇದಕ್ಕಿರುವ ಕಟ್ಟುನಿಟ್ಟಾದ ಮೇಲ್ವಿಚಾರಣೆಯೇ ಕಾರಣವಾಗಿದೆ. ಆದುದರಿಂದಲೇ ವಿಮೆದಾರರೂ ಶೇರುದಾರರೂ ಇದರಲ್ಲಿ ಇಟ್ಟಿರುವ ನಂಬಿಕೆಗೆ ಸಂಪೂರ್ಣವಾದ ಅರ್ಹತೆಯನ್ನು ಪಡೆದಿರುತ್ತದೆ. ಇದರ ಆದಾಯವನ್ನು ಪರಿಶೋಧಿಸಿದರೆ ವಿಮೆದಾರರಿಗೆ ಬೋನಸ್ ಹಣವು ಈ ಬಾರಿ ಯಾವ ದರದ ಮೇಲೆ ಹಂಚಲ್ಪಡುವುದೋ ಅದೇ ದರವೇ ಮುಂದಕ್ಕೂ ಇರುವುದಾಗಿ ಅವರ ಭರವಸೆಯನ್ನು ಇಟ್ಟುಕೊಳ್ಳಬಹುದು ಎಂದು ತಿಳಿಸುತ್ತಾರೆ

ಲಾಭಸಹಿತ ಪಾಲಿಯಾದ ಕಂಪೆನಿಯ ಮೇರೆ ವಿಮೆದಾರರಾಗುವವರು ಮುಂದಿನ ಡಿಸಂಬರು 31ನೇ ತಾರೀಕಿನೊಳಗೆ ವಿಮೆಮಾಡಬೇಕು. ಹಾಗೆ ವಿಮೆಮಾಡಿದ ಪತ್ರಗಳು 1927ನೇ ಡಿಸೆಂಬರು ಆಖೈರಿನಲ್ಲಿಯೂ ಚಾಲ್ತಿ ಇದ್ದರೆ ಅದರ ಆ ವಿಮೆದಾರರು ಆಗ ಹಂಚಲ್ಪಡುವ ಮೂರು ವರ್ಷಗಳ ಲಾಭವನ್ನು ಪಡೆಯಲು ಪಾತ್ರರಾಗುತ್ತಾರೆ

ವಿಮೆದಾರರಾಗಲು ಇಷ್ಟಪಡುವವರು ಕಾರ್ಯಾಲಯ ಬೊಂಬಾಯಿಯ ಹೆಡ್ ಆಫೀಸಿಗಾಗಲಿ, ಕಂಪೆನಿಯ ಬ್ರಾಂಚ್ ಆಫೀಸುಗಳಿಗಾಗಲಿ ಅಥವಾ ಏಜಂಟರುಗಳಿಗಾಗಲಿ ಬರೆದು ಬೇಕಾದ ವಿಷಯಗಳನ್ನು ತಿಳಿದುಕೊಳ್ಳಬೇಕೆಂದು ಕೋರುತ್ತೇವೆ

ಪಿ. ವಿ. ಸುಬ್ರಮಣಿ ಅಯ್ಯರ್,
ಬ್ರಾಂಚ್ ಸೆಕ್ರಟರಿ,
ಬೆಂಗಳೂರು.

ಎಚ್. ಎಡ್ವಿನ್ ಜೋನ್ಸ್ ಎಫ್. ಎಫ್. ಎ., ಎ. ಐ. ಎ.,
ಮ್ಯಾನೇಜರು,
ಬೊಂಬಾಯಿ.

ಸಜ್ಜನ ದುರ್ಜನ ಪ್ರಶ್ನ

ಪ್ರಶ್ನೆ— ದುರ್ಜನರ ವಿಶೇಷ [illegible] ಸಜ್ಜನ [illegible] ವನು

ಉತ್ತರ— [illegible] ಗಾಢಾ [illegible] ಎತ್ತಿ ದುಮಾಡುವನೆ ಎಷ್ಟು ಶಿಕ್ಷಾದರೂ [illegible] ನಿಂದಿಸು ಹಿಂಸೆಯನ್ನೇ ಮಾಡುವನೇ [illegible] ಅದು ನಿನ್ನ ಸ್ವಭಾವ [illegible] ಅಭಿಪ್ರಾಯಪಟ್ಟುಕೊಂಡು ಸುಮ್ಮನಿರುವನು

ಪ್ರ— ದುರ್ಜನ ಸಜ್ಜನರ ಸ್ವಭಾವ ಹೇಗಿರುವದು

ಉ— ದುರ್ಜನಸಂಪರ್ಕದ ಮೊದಲ್ಲೆ ದುಗ್ಧ [illegible] ಎಂತೆ ಮಂದಿಯು ದುರ್ಗಂಧವನ್ನೇ [illegible] ದುರ್ಜನನು ಮನುಷ್ಯರ [illegible] ತಪ್ಪು [illegible] ಸ್ವಭಾವ [illegible] ಸಜ್ಜನನಾದರೋ "[illegible]" [illegible] ಇವರ ಸ್ವಭಾವದ ವ್ಯತ್ಯಾಸ

ಪ್ರ— ದುರ್ಜನ ಸಜ್ಜನರ ನಡತೆಗಳ [illegible]

ಉ— [illegible] "[illegible]" ಎಂಬಂತೆ ದುರ್ಜನನು [illegible] ಜನರಲ್ಲಿ ಬಹಳ ಸಹವಾಸ [illegible] ಕಾಲ ಹೋದ ಹಾಗೆ ಕ್ರಮ ಕ್ರಮವಾಗಿ [illegible] ಲಾಭಪಡೆದುಕೊಂಡು ಜನರನ್ನು ವಂಚಿಸುವವನಾಗುವನು [illegible] ಮಧ್ಯಾಹ್ನದ [illegible] ಕಾಲ [illegible] ಸಮಯ ಮುಂದೆ [illegible] ಜನರಿಂದಲೂ [illegible] ನಾಗುವನು ಇದೇ ಇವರ ನಡತೆಯ ವ್ಯತ್ಯಾಸ

ಪ್ರ— ಸಾಧಾರಣ ದುರ್ಜನರ ಲಕ್ಷಣವೇನು?

ಉ— [illegible] ಎಂತೆ [illegible] ಸಮೂಲವಾಗಿಯೂ [illegible] ವಾದ ವೃಕ್ಷವು [illegible] ಸ್ವಾರ್ಥವನ್ನು [illegible] ಜನರನ್ನು [illegible] ಲಕ್ಷಣವು [illegible]

ಪ್ರ— ದುರ್ಜನ ಸಜ್ಜನರಲ್ಲಿರುವ ಅನ್ಯೋನ್ಯ [illegible]

ಉ— (ಒಂದು [illegible] ಎಂಬುವದು) ಅಂದರೆ "[illegible]" ಸಜ್ಜನನಿಗೆ [illegible] ದುರ್ಜನನಾದ [illegible] ಎಂಬ [illegible] ಎಂದು ಮೂರು ವಿಧವಾಗಿರುತ್ತದೆ

ಪ್ರ— ದುರ್ಜನ ಸಜ್ಜನರು [illegible] ವಿದ್ಯಾ [illegible] ಹೇಗೆ ಉಪಯೋಗಿಸುವರು?

ಉ— ದುರ್ಜನನು ತನ್ನ ವಿದ್ಯಾ [illegible] ಧನವನ್ನು [illegible] ಉಪಯೋಗಿಸುವನು ಆದರೆ [illegible] ಧನವನ್ನು [illegible] ಶಕ್ತಿಯನ್ನು [illegible] ಉಪಯೋಗಿಸುವನು

ಪ್ರ— ದುರ್ಜನನನ್ನು ಪ್ರಸನ್ನೀಕರಿಸತಕ್ಕ ಬಗೆ ಯಾವುದು?

ಉ— ಸಜ್ಜನನಿಗಿಂತ ಮುಂಚಿತವಾಗಿ ದುರ್ಜನನಿಗೆ ಸಲಾಂ ಮಾಡುವದರಿಂದ ಪ್ರಸನ್ನನಾಗುವನು [illegible] ಸಜ್ಜನನಿಗಿಂತ ಮುಂಚಿತವಾಗಿ ದುರ್ಜನನಿಗೆ ನಮಸ್ಕರಿಸುವದರಿಂದ ಪ್ರಸನ್ನನಾಗಬಹುದು.

ಪ್ರ— ದುರ್ಜನರು [illegible] ತಕ್ಕ [illegible] ವನು

ಉ— [illegible] ಕ್ರೂರ [illegible] ಬಲವಾದ [illegible]

ಅಷ್ಟರಿಂದ ದುರ್ಗುಣಗಳೆ [illegible] ದುರ್ಗುಣದಾಗಿಯೇ [illegible] ಒಮ್ಮೆ ಶ್ರೀ ಕೃಷ್ಣನಲ್ಲಿ ಅರ್ಜುನನು ದುರ್ಜನ ಸಜ್ಜನರಿಗಿರುವ ಭೇದವೇನೆಂದು ಕೇಳಲು ಭಗವಂತನು ಉದಾಹರಣೆಗಾಗಿ ಕೌರವ ಧರ್ಮರಾಯರಿಬ್ಬರನ್ನು ಕರೆದು ಕೌರವನಲ್ಲಿ ಸಜ್ಜನರು ಎಷ್ಟು ಮಂದಿ ಲೋಕದಲ್ಲಿ ಇರುವರೆಂಬುದನ್ನು ವಿಚಾರಿಸಿ ಹೇಳಬೇಕೆಂದೂ, ಹಾಗೆಯೇ ಧರ್ಮರಾಯನಿಗೆ ದುರ್ಜನರೆಷ್ಟು ಮಂದಿ ಇರುವರೆಂಬುದನ್ನು ವಿಚಾರಿಸಿ ಹೇಳಬೇಕೆಂದೂ ಆಜ್ಞಾಪಿಸಿ ಕಳುಹಿದನು. ಕೆಲವು ಸಮಯದ ನಂತರ ಕೌರವನು ಸಜ್ಜನರಾರೆಂಬುದನ್ನು ಹುಡುಕುವಲ್ಲಿ ಯಾರೂ ದೋಷವರ್ಜಿತರಾಗಿ ಸಿಕ್ಕದ್ದರಿಂದ ಸಜ್ಜನರಾರೂ ಇಲ್ಲವೆಂದು ಎಣಿಸಿ ಭಗವಂತನ ಬಳಿಗೆ ಬಂದು ಹಾಗೆಯೇ ಸ್ವಾಮಿ! ನಾನು ಸಜ್ಜನರಾರನ್ನೂ ನೋಡಲಿಲ್ಲವೆಂದನು. ಧರ್ಮರಾಯನು ಕೂಡ ಹಾಗೆಯೇ ವಿಚಾರಿಸಿ ದುರ್ಜನರಾರೂ ಸಿಕ್ಕದ್ದರಿಂದ ನಾನು ನಿಮ್ಮ ಬಳಿಗೆ ಬಂದು ದುರ್ಜನರಾರೂ [illegible] ಪ್ರತಿ ಒಬ್ಬರಲ್ಲಿ ಒಂದೊಂದು ಸದ್ಗುಣಗಳು ಇದ್ದೇ ಇವೆ ಎಂದು ಭಿನ್ನವಿಸಲು ಬಳಿಕ ಭಗವಂತನು ಅರ್ಜುನನನ್ನು ಕುರಿತು ಎಲೈ ಪ್ರಿಯನೇ! ನೋಡಿದೆಯೋ! ದುರ್ಜನ ಸಜ್ಜನರಿಗಿರುವ ಭೇದವೂ ಇದೇ! ಯಾರು ಯಾವದರ ದುರ್ಗುಣವನ್ನೇ ಹುಡುಕುವನೋ ಅವನೇ ನಿಜವಾಗಿಯೂ ದುರ್ಜನನು [illegible] ದುರ್ಜನನಿಗೆ ಲೋಕವೇ ದುರ್ಜನಮಯವಾಗಿರುವದು. ಅದು ಅವನ ಸ್ವಭಾವ ಗುಣ. ಇದಕ್ಕಾಗಿ ಮಹಾತ್ಮರು ಬಂಧಿಸತಕ್ಕ ಕೆಲಸವಿಲ್ಲವೆಂದನು. ಅಂತಹ ಒಳ್ಳೆ ಕೆಟ್ಟ ನಡೆಗಳನ್ನು ಎತ್ತುವದು ಜ್ಞಾನಿಗಳಿಗೆ ನ್ಯಾಯವಲ್ಲ.

"ಸೋಮಶೇಖರ ಶರ್ಮ"

ಬಡ ವ್ಯವಸಾಯಗಾರನಿಗೂ ಐಶ್ವರ್ಯವಂತ ಜಮೀನುದಾರನಿಗೂ ಒಂದು ಅಪರೂಪವಾದ ಉಪಕಾರ (1) ದನಗಳ ಕುದುರೆಗಳ, ಆನೆಗಳ ಮತ್ತು ಇತರ ಜೀವಧನಗಳ ಜೀವವಿಮೆ (2) ಒಂದು ವರುಷದ ಒಳಗೆ ಮೃಗವು ಸತ್ತರೆ ವಿಮೆಯ ಮುಂಗಡದ (ಪ್ರೀಮಿಯಮ್) ಒಂದರಷ್ಟರಷ್ಟು ಕೂಡಲೇ ಗ್ಯಾರಂಟಿ (3) ವಿಮೆ ಮಾಡಿದ ಸತ್ತ ಮೃಗದ ಬದಲು ಇನ್ನೊಂದನ್ನು ತೆಗೆದುಕೊಳ್ಳಲು ಒಂದು ವರುಷದಲ್ಲಿ ವಾಪಸು ಕೊಡಬೇಕಾದಂತ 9% ಬಡ್ಡಿಯ ಸಾಲ (4) ಒಂದು ವರ ಪಡೆದೊಳಗೆ ವಾಪಸು ಕೊಡಬೇಕಾದ ವ್ಯವಸಾಯದ ಕಾಲಕ್ಕೆ 12% ಬಡ್ಡಿಯ ಸಾಲ (ಗೊಬ್ಬರ) ಮತ್ತು ಬೀಜ [illegible] ಮತ್ತು [illegible] ಗಳನ್ನು ತೆಗೆದುಕೊಳ್ಳಲು ಸಾಲ— ಈ ಸಾಲವನ್ನು 12% ಬಡ್ಡಿಯಿಂದ ಸರಿಯಾಗಿ 12½ ವರುಷಗಳಲ್ಲಿ ವಾಪಸು ಕೊಡತಕ್ಕದ್ದು (b) ಒಂದು ವರುಷದನಂತರ 12 ವರುಷಗಳೊಳಗೆ ಮೃತಪಟ್ಟರೆ ಅಥವಾ 12 ವರುಷಗಳ ಮೇಲೆ ಬದುಕಿದರೆ ಮೃಗದ ಪೂರ್ತಿ ಬೆಲೆಯು ಲಾಭ ಸಮೇತ ಕೊಡಲಾಗುವುದು.

ಧಿ ಮೈಸೂರು ಎಗ್ರಿಕಲ್ಚರಲ್ ಬಯರ್ಸ್ ಹೌಸ್ ಕೋ., ಲಿಮಿಟೆಡ್.
ಹಲ ಸಣ್ಣ ಕೃಷಿಕಾರ ಕಾರ್ಖಾನೆಗಳನ್ನು ಕೊಂಡಿದೆ.

ಜರೂರಿನಿಂದ ಬೇಕಾಗಿದೆ.

ಒಳ್ಳೇ ಸಂಬಳದಲ್ಲಿ ಕೊಡಗಿನಲ್ಲೆಲ್ಲಾ ಜವಾಬುದಾರರಾದ ಮತ್ತು ನಂಬಿಗಸ್ಥರಾದ ಏಜಂಟರುಗಳು ಬೇಕಾಗಿದ್ದಾರೆ. [illegible] ಸ್ಟಾಂಪು ಸಮೇತ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

V. K. K. ACHARYA
C/o U. RAGHAVENDRA RAO,
Brahmins Lane
MERCARA

4 2

ಬೇಟೆಗೆ ಅವಶ್ಯವಾದ

ಕೋವಿ ಮದ್ದು ಪೌಂಡಿಗೆ ರೂ. ೩-೮-೦

ಕೆಡು ಕೋವಿನ ಕೇಪ್ಪುಗಳು, ೨೫೦ರಲ್ಲ ಪೆಟ್ಟಿಗೆ ಗೆ ೧-೮-೦

ಆರ್ಡರು ಕಳುಹಿಸುವಾಗ್ಗೆ ಮೂ ವಾಗಲಾ ರೂ. ೫ ಅಡ್ವಾನ್ಸು ಕಳು ಹಿಸತಕ್ಕದ್ದು. ಜಮ್ಮ ಹಿಡುವಳಿದಾ ರರು ಆರ್ಡರು ಕಳುಹಿಸುವಾಗ ಮೊ ದಲನೇ ಸಾರಿಮಾತ್ರ ಡಿಸ್ಟ್ರಿಕ್ಟ್ ಮ್ಯಾ ಜಿಸ್ಟ್ರೇಟರವರಿಂದ ವಿನಾಯತಿ (ಎ ಕ್ಸೆಂಪ್ಷನ) ಸರ್ಟಿಫಿಕೇಟನ್ನು ಕಳುಹಿ ಸಬೇಕು. ತಪ್ಪಿದಲ್ಲಿ ... ವೇ ಆ ಸರ್ಟಿಫಿಕೇಟನ್ನು ... ಕ್ಷೆಯು ತಯಾರಾಗಿದ್ದೇವೆ

ಈ ಕಳಗಿನ ವಿಳಾಸಕ್ಕೆ ಆರ್ಡರುಗ ಳನ್ನೂ ಪತ್ರವ್ಯವಹಾರಗಳನ್ನೂ ಇಂಗ್ಲಿಷಿನಲ್ಲಿ ಬರೆಯತಕ್ಕದ್ದು

S. Venkatarangam Chetty,
Ammunition & Stationer Merchant,
No. ., China Bazar,
12—3 Madras

MY SCIENTIFIC SYSTEM OF GRADUATED PHYSICAL CULTURE.

SENT FREE TO EVERY ONE.

This will show you some of my remarkable achievements in Health building exercises, ... pages with nice photographs of myself and a number of my pupils. Read what they say about my system. Don't take my word for it. This book will be an impetus an inspiration to every young man. All I ask is the price of postage two annas. Remember this does not obligate you in any way, so don't delay one minute in your life. Write for this big book now while it is on your mind.

Prof. M. V. Krishna Rao,
P. O. Basavangudi
BANGALORE CITY (S. I.)

ARMS & AMMUNITION.

NEW ARRIVALS! REVISED PRICES!!

Shot cartridges Nos 1 8 at Rs 13½ per 100
S G. & L. G. cartridges at Rs 15 "
Bullet cartridges at Rs. 19 "
Leather bullet cartridges at Rs 30 "

Book your orders early to avoid disappointment.

Spencer & Co. Ltd,
44 MERCARA & POLLIBETTA.

ನೀರಿನ ಚಿಂತೆಯನ್ನು ತಪ್ಪಿಸುವ ಕಿರ್ಲೋಸ್ಕರ ಪಂಪು.

ಮನೆಗಳಲ್ಲಿ ನೀರು ಸೇದುವದೊಂದು ಬಹು ಕಷ್ಟದಾಯಕವು. ಆದದ್ದರಿಂದ ಈ ಕೆಲಸವನ್ನು ಕರ್ನಾಟಕದಲ್ಲಿ ಬಹುಜನ ಸ್ತ್ರೀಯರೇ ಮಾಡಬೇಕಾದದರಿಂದ ಅವರಿಗೆ ಬಹಳ ಕಷ್ಟವಾಗುತ್ತೆ. ಮನೆಯಲ್ಲಿ ಸ್ತ್ರೀ ... ಮಂತರಿದ್ದಾಗ್ಯೂ ನೀರಿನ ವಿಷಯದಲ್ಲಿ ಸ್ವತಃ ಸೇದ ... ಕಾಗುತ್ತದೆ. ಆದ್ದರಿಂದ ಈ ಅಡಚಣೆಗಳು ... ದೂರವಾಗುವದಕ್ಕೆ

ಕಿರ್ಲೋಸ್ಕರ ಪಂಪುಗಳನ್ನೇ

ಉಪಯೋಗಿಸಿ. ಇದರಿಂದ ... ಯುವದು. ... ಇವುಗಳ ಬಿಡಿಭಾಗಗಳು ನಮ್ಮ ... ತಯಾರಾಗುವದರಿಂದ ... ಬಾಳಿಕೆಯಲ್ಲಿ ಗಟ್ಟಿ ... ಸಗಳು ಇರುತ್ತವೆ

ಬೆಲೆ ಮುಂತಾದ ಸವಿಸ್ತಾರ ಸಂಗತಿಯು ಬಗೆ ... ದುಕೊಳ್ಳಿರಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
9 ಜಿ. ಸಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸಗಳಲ್ಲಿ ಗುಣಕೊಡುವದೆಂದು ... ನಾಪಾದ ... ಶಕ್ತಿ, ರಕ್ತ ... ಸ್ಕೋರ್ಬ್ಯಾಸ್ ... ಬೇಕಾದ ಅರೋಗ್ಯ ...

ಟ್ರೇಡ್ ಮಾರ್ಕ್ ರಿಜಿಸ್ಟರ್ ಆದದ್ದು ...

ಅಗಸ್ತ್ಯಮಸ್ತಕ ಚಿಂತಾಮಣಿ ಲೇಪ

ಆಚಾರ್ಯರ ... ಗುಣ ಕಾರಿಯವಾದದ್ದು ... ಸಿದ್ಧಿ ... ಚಿಕಿತ್ಸೆ ... ಒಂದು ಡಬ್ಬಿ 18ದಿವಸ ... 1ನೇ ರು ಡಬ್ಬಿ 1ಕ್ಕೆ ರೂಪಾಯಿ 1—1— ... ರೂಪಾಯಿ 1—9—0, ನಂ. (2) 1ನೇರು ಡಬ್ಬಿ 1ಕ್ಕೆ ರೂ. 2—0—0, ½ ಸೇರು ಡಬ್ಬಿ 1ಕ್ಕೆ 1—1—0 ... ಪ್ರತ್ಯೇಕ. ... ಬರೆಯಿರಿ

... ಆಯುರ್ವೇದ ...
ಗಣೇಶ ...
ಮಂಗಳೂರು.
12—7 ದ. ಕ.

ಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝಾ ಅ ಥವ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷ ಧವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦

ಟಪ್ಪಾಲು ಚಾರ್ಜು ಬೇರೆ

ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು. ೯—೩—೦

ಏಜಂಟರು ಬೇಕು, ಕೊಡಗಿನ ಸ್ಟಿಕ್ಲಾನ್ನುಗಳು ... ಮೂರು ... ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಪ್ಲಾಟಿಂಗ್ ಪೇಪರು ಪುಕ್ಕಟೆ.

12—4 ಕರ್ನೇಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	..	೯೧೧೦
... ಶೇರ್ ಹಣವು ...	....	...
... ಠೇವಣಿ	....	78 ...

... ಸಹಕಾರಿ ಸಂಘಗ ...

...

... ಪ್ರತಿನಿಧಿ ... ಇವೆ ...

— ಡೈರೆಕ್ಟರು ಟ್ರಜರರ್.
ಕುಪಂಡ ... ಯಂ. ಭುಜಂಗರಾಯರು
ರಾಯ್ ಬಹದ್ದೂರ್ ... ಮ್. ಮ್.

ಸೆಕ್ರೆಟರಿ.

... ಬಿ. ಎ., ಬಿ. ಎಲ್.

ತಾರೀಕು 1—7—192 .

"ಲೋಕರಹಸ್ಯ."

... ವಿಷಯಗಳ, ... ವಿಷಯಗಳು, ... ಪುಸ್ತಕವನ್ನು ... ಯಗಳು, ಜನರಿಗೆ ಬೇಕಾದ ... ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜ ಕೀಯ ವಿಷಯಗಳು, ಆಯುರ್ವೇದಯುನಾನಿ ವೈದ್ಯ ಸಂಗ್ರಹ, ಪ್ರತಿಯೊಬ್ಬನೂ ತಿಳಿಯಬೇಕಾದ ... ವಿಚಾರ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂ ದಲೂ, ತುಂಬ ಹುಳುಕುತ್ತಿರುವ ಈ ಮಾಸ ಪತ್ರಿಕೆಗೆ ವರ್ಷಕ್ಕೆ ಚಂದಾ ರೂ. 3—8—0 ಮಾದರಿ ಸಂಚಿಕೆಗೆ 0—5—0.

ಪ್ರತಿ ತಿಂಗಳಲ್ಲೂ 60 ಪುಟಗಳಿಗೆ ಕಡಿಮೆಯಿ ಲ್ಲದೆ ವಿಷಯಗಳಿರುತ್ತವೆ

ಲೋಕರಹಸ್ಯ ಆಫೀಸು,
ವೀರರಾಜೇಂದ್ರಪೇಟೆ.
(ಕೊಡಗು.)
6

GOOLAMHUSSAIN ALLIBHOY & SONS.

Largest Importers of Fire Arms and Ammunition, Cheapest priced firm in India,

210 Abdul Rehman Street, BOMBAY.

Brilliant Search light tied over the hat.

Use our Brilliant Search Light Lamp for **Hunting, Camping, Fishing, Trapping** and all kinds of out door sports during the night, price Rs 40/— Free Delivery

·12 and ·16 bore Zeppelin Bullet cartrdges **recommendable for big Game shooting,** Rs. 30/—100.

We stock Arms, Ammunition and shooting requisites of almost all the kinds and classes ranging from Re. 1/— to Rs. 3,600/—

Apply for the Current Catalogue.
24—8

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

If not delivered please return to
KODAGU" OFFICE MERCARA

ಕೊಡಗು.

ಪ್ರಜ್ಞೇನ ಭೂಷಿತಯುತ ವಿದ್ಯಾ ನೀತಿ ಪ್ರಯತ್ನತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ೧೯೨೫ನೇ ಇಸವಿ ಸೆಪ್ಟೆಂಬರ್ ತಾರೀಕು ೪ನೇ ಶುಕ್ರವಾರ [ಸಂಚಿಕೆ ೧೮

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು ಡಾಕ್ಟರ್ ಯು ರಾಮರಾವ್,
ಯಮ್. ಎಲ್ ಸಿ. ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾದ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ 'ಆರೋಗ್ಯ ಚಂದ್ರಿಕೆ' 323,
ತಂಬುಶೆಟ್ಟಿ ಬೀದಿ, ಮದ್ರಾಸ್.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ ಕೋಟೆರ ಚಿಣ್ಣಪ್ಪನವರ ಮತ್ತು ಮೆ. ಚಂಗಂಡ ಕುಟ್ಟಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಬಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಏಜಂಟರುಗಳು

ವೀರಾಜಪೇಟೆ—ಬಾಳಿ ಭಂಡಾರದಲ್ಲಿ ಪಿ. ಮಂಡೇಪಂಡ ಚರ ಮಣ್ಣನವರು

ಮೂರ್ನಾಡು—ಕಮರ್ಶಿಯಲ್ ಸ್ಟೋರಿನಲ್ಲಿ ಪಿ. ಮಹೆಯಂಡ ದೇವಯ್ಯನವರು

ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು
" ಮೆ ಪೊನ್ನಚಂಡ ಮುದ್ದಪ್ಪನವರು.

ಗೋಣಿಕೊಪ್ಪಲು—ಮೆ.. ಜಮ್ಮಡ ಮಾದಪ್ಪನವರು,

ಪೊನ್ನಂಪೇಟೆ—ಮೆ.. ಪುತ್ತಮಾಡ ಮುದ್ದಮ್ಮೈಯ್ಯನವರು.

ಸುಂಟಿಕೊಪ್ಪ—ಮೆ. ಜಿ. ಮಾದಮ್ಮನವರು.

ಅಮ್ಮತ್ತಿ ಸಿದ್ದಾಪುರ—ಮೆ ಐನಂಡ ಮಾದಪ್ಪನವರು
ಮೆ. ಕಲಿಯಂಡ ಸೋಮಪ್ಪಯ್ಯನವರು.

ಅಲ್ಲದೆ ಈ ಸಮ್ಮಂಡ ಕೋಟೇರ ಚಿಣ್ಣಪ್ಪನವರು ಮತ್ತು ಚಂಗಂಡ ಕುಟ್ಟಪ್ಪನವರು, ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಹಣ ಸಲ್ಲಿಸಬೇಕಾಗಿ ಕೋರಿಕೆ.

ಕೋದಂಡ ಉತ್ತಯ್ಯ.
ಮ್ಯಾನೇಜಿಂಗ್ ಡೈರೆಕ್ಟರು "ಕೊಡಗು." ಲಿಮಿಟೆಡ್

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಕೂಲಿಗಳ ಬ್ರಿಟಾವು ಕಂಟ್ರಾಕ್ಟ್ ಎಗ್ರಿಮೆಂಟ್ ಫಾರಂಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು

ಮಡಿಕೇರಿ
17.9.24

ಮ್ಯಾನೇಜರ್,
ಕೊಡಗು ಆಫೀಸು

ಶ್ರೀ ಗುರು ಕೃಪೆಯ, ಅನುಭವಸಿದ್ಧ
ಎರಡು ಔಷಧ ರತ್ನಗಳು.

೧. ಬಾಲ ಭೀಮ ಟೋನಿಕ್.

ಇದು ಬಾಲಕರ ಉತ್ತಮ ಶಕ್ತಿ ವರ್ಧಕ, ರೋಗ ನಿವಾರಕ ಉತ್ತೇಜಕ, ಔಷಧ. ಹುಡುಗರ ಎಲ್ಲಾ ತರದ ಅಶಕ್ತ, ಕೃಶ ಶರೀರ ಸೆಗಡಿ, ಕೆಮ್ಮೆ, ಅಜೀರ್ಣ, ಜ್ವರ, ಪಿತ್ತ, ರೋಗಗಳು ಹಂದೆ ತಾಯಿಗಳಿಂದ ಬಂದ ಗರ್ಭ... ವಾತ ರೋಗಗಳಿಗೆ ಅತ್ಯಂತ ಗುಣಕಾರಿ. ಅಷ್ಟೇಕೆ, ಒಮ್ಮೆ ತರಿಸಿ ಸಮ್ಮತಿಸಬಾರದೇ? ಬಾಟ್ಲಿ ೧ಕ್ಕೆ ರೂ ೧—೪—೦, ಡಜನ್ ೧ಕ್ಕೆ ೧೨—೦—೦.

೨. ಬಾಲಾರಿಷ್ಟ ನಿವಾರಕ ತೈಲ.

ಈ ತೈಲಾಭ್ಯಂಗ ಸ್ನಾನದಿಂದ ಹುಡುಗರ ಅಶಕ್ತ ಬಾಲಗ್ರಹ ಕಜ್ಜಿ ಪಸ್ಸಿರ ವ್ಯಾಧಿಗೆ ಗುಣಕರ. ಬಾಟ್ಲಿ ೧ಕ್ಕೆ ರೂ. ೧—೪—೦, ಡಜನ್ ೧ಕ್ಕೆ ರೂ ೧—೮—೦.

ತನು ಭಗಿನಿಯ ಪತ್ತೆ—ಶ್ರೀಮತಿ ತಿಪ್ಪುಬಾಯಿ, ಸಹಿಹಿತಲ, ಠಾಕುರ್ದ್ವಾರ ಸಿರ್, ಉ. ಕಾಸದಾ, ಮುಂಬಯಿ

12 2

ಮಾರಾಟಕ್ಕೆ ತಯಾರಿವೆ.

ಒಗೆ ಒಗೆಯ ಚಕಾಣಿಗಳು ವೀರಾಜಪೇಟೆಯ ಏಬ್ಬರ್ ಸ್ಟೋರಿನಲ್ಲಿ ಮಾರಾಟಕ್ಕೆ ತಯಾರಿವೆ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ಪಿ. ಸಿ. ಐಯ್ಯಪ್ಪ,
ಏಬ್ಬರ್ ಸ್ಟೋರ್ಸ್,
ವೀರಾಜಪೇಟೆ

5

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ, ವಿಜ್ಞಾನ ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮ್ಯಾನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2 ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3 ಬಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಿಲ್ಲದಿದ್ದಲ್ಲಿ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮ್ಯಾನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

SPENCERS-
FOUNTAIN PEN SPECIALISTS.
Watermans pens at Rs 12½, & 9 each
Swan pens at Rs 14½ 9½, 9½ & 6½ each
Onoto pens at Rs 11½ each
Blackbird at Rs 5½ each
Jackdaw at Rs 4 each
Spencers S 1 at Rs 5½ each.
Spencers ordy at Rs 2½ each
"Order by post
"Distance makes
No difference"
Get a copy of our Revised wine and store price lists, very handy

Spencer & Co.Ltd,
MERCARA & POLLIBETTA.

45

ಮಹನೀಯರೇ,

1923ನೇ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯು ಶೀಘ್ರದಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪನಿಯ ಮತ್ತೊಂದು ಶಾಖೆಯು ಈಗಾಗಲೇ ಗೋಣಿಕೊಪ್ಪಲಲ್ಲಿ ತೆರೆಯಲ್ಪಟ್ಟಿದೆ.

ಕೃಷ್ಣ ಸಂಜೀವಕ ಮತ್ತು ನಾರಾಯಣ ಸಂಜೀವಕ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆಯಾಗಿದೆ

ಸಂಜೀವಕ ಮತ್ತು ಕಂಪನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕೆಲ್ಲೂರು, ವೀರಾಜಪೇಟೆ ಮತ್ತು
52 24 ಗೋಣಿಕೊಪ್ಪಲು.

ARMS & AMMUNITION MART.
Mahomedally-Noorbhoy.



357, Abdul Rehman, Street, near
Crawford Market, BOMBAY.
Telegrahic Address: - " SHOOTER
Bombay
[52 2] Please write for latest Catal-

"ಕೊಡಗು"

ಸನ್ ೧೯೨೫ನೇ ಇಸವಿ ಸೆಪ್ಟೆಂಬರ್ ತಾ. ೪ನೇ ಶುಕ್ರವಾರ.

ಗ್ರಾಮ ಪಂಚಾಯತಿಗಳು.

ಈ ದೇಶದಲ್ಲಿ ಪಂಚಾಯತಿಗಳನ್ನು ಏರ್ಪಡಿಸಿಕೊಡದೇಕೆಂತ ಇನ್ನೂ ಕೇಳುತ್ತಾ ಇರುವಲ್ಲಿ ಮದ್ರಾಸ್ ಆಧಿಪತ್ಯದಲ್ಲಿ ಗ್ರಾಮ ಪಂಚಾಯತಿಗಳ ಪ್ರತಿನಿಧಿಗಳ ಕಾನ್‌ಫರೆನ್ಸ್ ನಡೆಯಲು ಪ್ರಾರಂಭವಾಗಿ ಹೋಗಿದೆ. ಆಗೊಸ್ತು [illegible]ನೇ ತಾರೀಕಿನಲ್ಲಿ ಮಧುರೆ ಜಿಲ್ಲೆಯ ಶಿವಕಾಶಿ ತಾಲೋಕಿನ 20 ಪಂಚಾಯತಿಗಳ ಕಾನ್‌ಫರೆನ್ಸ್ ಒಂದು ನಡೆಯಿತು. ಈ ಕಾನ್‌ಫರೆನ್ಸಿಗೆ ಜಿಲ್ಲಾ ಕಲೆಕ್ಟರು ಅಧ್ಯಕ್ಷರಾಗಿದ್ದರು. ಈ ದೇವದ ಕೌನ್ಸಿಲಿನಲ್ಲಿ ಗ್ರಾಮ ಪಂಚಾಯತಿಗಳನ್ನು ಸ್ಥಾಪಿಸಿಕೊಡಬೇಕೆಂತ ಠರಾವು ಚರ್ಚೆಯಾದಾಗ ಕಮೀಷನರಾದ ಮೆ| ಟಾಸ್ಕರವರ, ಪ್ರಯಾಣದ ಅನುಕೂಲತೆಯೂ, ವಿದ್ಯಾಭಿವೃದ್ಧಿಯೂ ಹೆಚ್ಚಾಗಿ, ಗ್ರಾಮದ ಸಮಾಜ ರಚನೆಯೂ ವ್ಯತ್ಯಾಸವಾಗಿರುವ ಈ ಕಾಲದಲ್ಲಿ ಗ್ರಾಮ ಪಂಚಾಯತಿಗಳನ್ನು ಸ್ಥಾಪಿಸುವದು ಒಳ್ಳೇದೋ ಎಂತ ಸಂಶಯಪಟ್ಟರು. ಇಂಥಾ ಸಂಶಯಗಳಿಗೆ ರಾಮನಾಡ್ ಜಿಲ್ಲೆಯ ಕಲೆಕ್ಟರಾದ ಮೆ| ರಾಮಮೂರ್ತಿ ಐ. ಸಿ. ಯಸ್. ರವರ ಭಾಷಣದಲ್ಲಿ ಜವಾಬುಗಳಿವೆ. " ಈಗಿನ ಸಂಸ್ಕಾರವೂ ಸರಕಾರವನ್ನು ನಡಿಸಲು ಭಾಗಿಗಳಾಗುವ ದೇಶೀಯ ಪ್ರತಿನಿಧಿಗಳೂ ಸಹ ಆಡಳಿತದ ಖರ್ಚನ್ನು ಕಡಿಮೆ ಮಾಡಬೇಕಾದರೆ ಗ್ರಾಮವಾಸಿಗಳನ್ನು ಆಡಳಿತದ ಅಡಿಪಾಯವಾಗಿ ಮಾಡಿಕೊಳ್ಳಬೇಕೆಂತ ಯೋಚಿಸುತ್ತಿದ್ದಾರೆ. ಈ ರೀತಿ ಆಡಳಿತ ಕ್ರಮವನ್ನು ವ್ಯತ್ಯಾಸ ಮಾಡುವಾಗ ಗ್ರಾಮವಾಸಿಗಳಿಗೆ ಅವರಿಂದ ಆಗುವ ಕೆಲಸವನ್ನೆಲ್ಲಾ ವಹಿಸಿಕೊಡಬೇಕು. ಉಳಿದ ರಾಷ್ಟ್ರೀಯ ಕೆಲಸವನ್ನು ಸಾಧ್ಯವಿರುವಷ್ಟು ತಾಲೋಕು ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳು ಮಾಡಬೇಕು. ಮಿಕ್ಕದ್ದನ್ನು ಮಾತ್ರ ಮಧ್ಯವರ್ತಿ ಸರಕಾರವು ನಡಿಸಬೇಕು ...... 2000 ವರ್ಷಗಳ ಕೆಳಗೆ ಕೌಟಿಲ್ಯನೆಂಬವನು ಬರೆದ ಅರ್ಥ ಶಾಸ್ತ್ರದಲ್ಲಿ ವಿವರಿಸಿದ ಗ್ರಾಮಸ್ಥಿತಿಗೂ ಈಗಿನ ಗ್ರಾಮ ಸ್ಥಿತಿಗೂ ವಿಶೇಷ ವ್ಯತ್ಯಾಸವಿಲ್ಲ. ಮಧ್ಯವರ್ತಿ ಸರಕಾರಕ್ಕೆ ಜೀವ ಕಳೆಯೇ ಗ್ರಾಮಗಳಿಂದ ದೊರೆತಿತ್ತು. ಬ್ರಿಟಿಷ್ ಆಡಳಿತ ಪ್ರಾರಂಭವಾದಂದಿನಿಂದ ಮಧ್ಯವರ್ತಿ ಸರಕಾರವು ಬಲವಾಯಿತು. ರಾಜ್ಯವನ್ನು ಆಳಲಿಕ್ಕೆ ಬರುವ ಇಂಗ್ಲಿಷ್ ಅಧಿಕಾರಿಗಳು ಕಡಿಮೆ ಇದ್ದದ್ದರಿಂದ ಅಧಿಕಾರವನ್ನೆಲ್ಲಾ ತಮ್ಮ ಕೈಯ್ಯಲ್ಲೇ ಇಟ್ಟುಕೊಳ್ಳಲಿಕ್ಕಾಗಿ ಮಧ್ಯವರ್ತಿ ಸರಕಾರಕ್ಕೇನೇ ಪ್ರಾಮುಖ್ಯತೆ ಕೊಟ್ಟರು. .... ಈಗ ಆಡಳಿತ ಕ್ರಮವು ತಲೆಕೆಳಗಾಗಿದೆ. ಪಾಯವು ಮೇಲಾಗಿ ಕಟ್ಟಡದ ಮೇಲ್ಭಾಗವು ಕೆಳಗಾಗಿದೆ. ಆಡಳಿತದ ಅಲ್ಪ ಸ್ವಲ್ಪ ಪ್ರಯೋಜನ ಮಾತ್ರ ಗ್ರಾಮಗಳಿಗೆ ತಲಪುತ್ತದೆ. ಆದ್ದರಿಂದ ಸರಕಾರದ ಕ್ರಮವನ್ನು ಬದಲಾಯಿಸಿ ಗ್ರಾಮವಾಸಿಗಳಿಗೆ ಹೆಚ್ಚಿಗೆ ಹಕ್ಕುಗಳನ್ನೂ, ಆ ಮೂಲಕ ಅನುಕೂಲತೆಗಳನ್ನೂ, ಕೊಟ್ಟರೆ ಸರಕಾರದ ಮೇಲೆ ಇರುವ ವಿರೋಧವು ಬಹು ಮಟ್ಟಿಗೆ ಕಡಿಮೆಯಾಗುತ್ತದೆ" ಎಂತ ಮುಂತಾಗಿ ಹೇಳಿರುತ್ತಾರೆ. ಈ ರೀತಿ ಅಭಿಪ್ರಾಯ ಪಟ್ಟ ಅನೇಕ ದೇಶೀಯರು ಇರುವರಾದರೂ ಈಗಿನ ಪಾಶ್ಚಿಮಾತ್ಯ ನಾಗರೀಕತೆಯನ್ನು ಸಂಪೂರ್ಣ ಹೊಂದಿದ ಒಂದು ಜಿಲ್ಲೆಯ ಅಧಿಕಾರಿಯೊಬ್ಬರು ಮೊನ್ನೆ ತಾನೇ ಆಡಿದ ಮಾತುಗಳಿಂದ ನಮ್ಮ ದೇಶದ ಕಮಿಷನರವರಿಗೂ ಈಗಿನ ನಾಗರೀಕತೆಗೆ ಗ್ರಾಮ ಪಂಚಾಯತಿಗಳು ವಿರೋಧವೆನ್ನುವ ಇತರರಿಗೂ ಮನಸ್ಸಿನ ಸಂಶಯಗಳು ಹೋಗಬಹುದೆಂತ ಕಲೆಕ್ಟರ್ ರಾಮಮೂರ್ತಿಯವರ ಮಾತುಗಳನ್ನು ಎತ್ತಿ ಇಲ್ಲಿ ಬರೆದಿರುವದಾಗಿದೆ.

ಗ್ರಾಮ ಪಂಚಾಯತಿಗಳೆಂದರೆ ಸಾಧಾರಣವಾಗಿ ವ್ಯಾಜ್ಯಗಳನ್ನು ತೀರ್ಮಾನಿಸತಕ್ಕಿರುವ ಕೂಟಗಳೆಂಬ ಅಭಿಪ್ರಾಯ ಹುಟ್ಟುತ್ತದೆ. ವ್ಯಾಜ್ಯಗಳ ತೀರ್ಮಾನಗಳು ಗ್ರಾಮಗಳ ಆಡಳಿತದ ಒಂದು ಭಾಗ ಮಾತ್ರವಾಗಿವೆ. ಮೆ| ರಾಮಮೂರ್ತಿಯವರು ಏನು ಹೇಳುತ್ತಾರೆಂದರೆ " ಗ್ರಾಮಗಳಿಗೆ ಸಂಬಂಧಪಡುವ ಎಲ್ಲಾ ಕಾರುಭಾರುಗಳನ್ನು ಗ್ರಾಮಪಂಚಾಯತಿಗೆ ನಾನು ಬಿಟ್ಟೇನು. ಗ್ರಾಮ ಉದ್ಯೋಗಸ್ಥರನ್ನು ನೇಮಿಸುವುದಕ್ಕೆ ಅಭಿಪ್ರಾಯಕೊಡುವ ಮತ್ತು ಅವರನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವ ಅಧಿಕಾರ ಸಹ ಕೊಟ್ಟೇನು. ಉತ್ಪತ್ತಿಯು ಇಂತಿಷ್ಟು ಖಂಡಿತ ಸಿಕ್ಕುತ್ತೆಂತಾದರೆ ಗ್ರಾಮವನ್ನು ಶುಚಿಯಾಗಿ ಇಟ್ಟುಕೊಳ್ಳಬಹುದು, ಶಾಲೆಯೊಂದನ್ನು ನಡಿಸಬಹುದು, ಆಯುರ್ವೇದ ವೈದ್ಯನೊಬ್ಬನನ್ನು ನೇಮಿಸಿಕೊಳ್ಳಬಹುದು. ಹೆಚ್ಚು ಮಾತೇನು? ಗ್ರಾಮವಾಸಿಯ ಜೀವನವನ್ನು ಉತ್ತಮ ರೀತಿಗೆ ತಂದುಕೊಂಡು ಗ್ರಾಮದ ಒಗ್ಗಟ್ಟನ್ನು ಹೆಚ್ಚಿಸಬಹುದು." ಗ್ರಾಮ ರಸ್ತೆಗಳನ್ನು ಸೂಚಿಸಲು ಬಿಟ್ಟಿದ್ದಾರೆ. ಈ ರೀತಿ ಸರಕಾರವು ಗ್ರಾಮಕ್ಕೆ ಏನೇನು ಸಹಾಯಗಳನ್ನು ಒದಗಿಸಿಕೊಡಬೇಕೋ ಅದನ್ನೆಲ್ಲಾ ಗ್ರಾಮದವರೇ ನೋಡಿಕೊಳ್ಳಲು ಬಹುದು, ಎಂತ ಖಂಡಿತವಾಗಿಯೂ ಹೇಳಿರುತ್ತಾರೆ.

ಈ ಆಡಳಿತವನ್ನು ನಡಿಸಲು ಹಣವೆಲ್ಲಿಂದ ಎಂಬ ಪ್ರಶ್ನೆಗೂ ಮೆ| ರಾಮಮೂರ್ತಿಯವರೇ ಜವಾಬು ಹೇಳುತ್ತಾರೆ. ಗ್ರಾಮದಲ್ಲಿ ವಸೂಲಾಗುವ ಕಂದಾಯದ ಒಂದು ಚಿಕ್ಕ ಭಾಗವನ್ನು ಗ್ರಾಮಕ್ಕೆ ಬಿಟ್ಟುಕೊಟ್ಟರೆ ಗ್ರಾಮವಾಸಿಗಳ ಅನುಕೂಲಗಳನ್ನೆಲ್ಲಾ ಸುಲಭವಾಗಿ ಒದಗಿಸಿಕೊಳ್ಳಬಹುದು. ಸರಕಾರದವರು ಗ್ರಾಮಗಳಲ್ಲಿ ವಸೂಲುಮಾಡುವ ಕಂದಾಯದ ಹಣವು ಸರಕಾರದ ಮಧ್ಯವರ್ತಿ ಬೊಕ್ಕಸಕ್ಕೆ ಒಂದಾವರ್ತಿ ಹೋಗಿ ಅಲ್ಲಿಂದ ವಾಪಸು ಗ್ರಾಮಕ್ಕೆ ಅಲ್ಪ ಸ್ವಲ್ಪ ಕೊಡುವದರ ಬದಲು ವಸೂಲಾದದ್ದರಲ್ಲಿ ಸ್ವಲ್ಪ ಭಾಗವನ್ನು ಗ್ರಾಮದವರೇ ಉಪಯೋಗಿಸಿಕೊಳ್ಳುವ ಅನುಕೂಲ ಕೊಡಬೇಕು, ಎಂಬ ಸುಲಭೋಪಾಯವನ್ನು ತೋರಿಸಿಕೊಟ್ಟಿರುತ್ತಾರೆ. ಸರಕಾರವು ವಸೂಲು ಮಾಡುವ ಹಣವನ್ನು ಗ್ರಾಮ ಪಂಚಾಯಿತಿಗೆ ಕೊಡುವದೆಂದರೆ ಸಾಧಾರಣ ಜನರಿಗೆ ಆಶ್ಚರ್ಯವಾಗಬಹುದು. ಸರಕಾರವೆಂದರೆ ಪ್ರಜೆಗಳು ತಮ್ಮ ಅಭಿವೃದ್ಧಿಗೆ ಕ್ಷೇಮಕ್ಕೂ ಮಾಡಿಕೊಂಡಿರುವ ಒಂದು ಏರ್ಪಾಡು ಎಂಬ ವಿಷಯವನ್ನು ಗ್ರಾಮವಾಸಿಗಳು ಮರೆತಿರುವದರಿಂದಲೇ ಸರಕಾರದ ಹಣವನ್ನು ಗ್ರಾಮದವರು ಹಕ್ಕಾಗಿ ಕೇಳಲು ಹೆದರುವದಾಗಿದೆ. ಪ್ರಜೆಗಳು ಕೊಟ್ಟ ಹಣವನ್ನು ಖರ್ಚುಮಾಡುವ ಹಕ್ಕು ಪ್ರಜೆಗಳಿಗೇನೇ ಇರುವದು ಎಂಬ ತತ್ವವನ್ನು ಪ್ರಜೆಗಳು ಚನ್ನಾಗಿ ತಿಳಿದುಕೊಂಡು ಹೋರಾಡಬೇಕಾದದ್ದು ಅವಶ್ಯವಾಗಿದೆ. ಈ ಜ್ಞಾನವು ಜನರಲ್ಲಿ ಹರಡಲಿಲ್ಲವೆಂಬದನ್ನೇ ಸ್ವರಾಜ್ಯ ಸ್ಥಾಪನೆಗೆ ಅಡ್ಡಿಯಾಗಿ ಸರಕಾರ ಪಕ್ಷದವರು ಸೂಚಿಸುವದಾಗಿದೆ. ಈ ಜ್ಞಾನ ಹುಟ್ಟಬೇಕಾದರೆ ಪಟ್ಟಣಗಳಲ್ಲಿ ವಾಸವಿರುವ ಅಥವಾ ಇಂಗ್ಲಿಷ್ ಭಾಷೆಯನ್ನರಿತ ಕೆಲವರನ್ನು ಮಾತ್ರ ಕೌನ್ಸಿಲುಗಳಿಗೆ ಬರಲು ಅನುಕೂಲಕೊಟ್ಟರೆ ಸಾಲದು. ಗ್ರಾಮವಾಸಿಗಳು ಇಂಗ್ಲಿಷ್ ಭಾಷೆಯನರಿಯದವರಾದರೂ ಸಾಧಾರಣ ಪ್ರಪಂಚ ಜ್ಞಾನ ಚನ್ನಾಗಿರುವವರಾದರೆ ಗ್ರಾಮ ಆಡಳಿತದಲ್ಲಿ ಭಾಗಿಗಳಾಗಲು ಅನುಕೂಲತೆಕೊಟ್ಟರೆ ಸ್ವರಾಜ್ಯ ಪಡೆಯಬೇಕೆಂಬ ಆಶೆಯು ಪ್ರಜಾಸಮೂಹದಲ್ಲಿ ವಿದ್ಯುಚ್ಛಕ್ತಿಯ ವೇಗದಲ್ಲಿ ಹರಡುತ್ತದೆಂಬದರಲ್ಲಿ ಸಂಶಯವಿಲ್ಲ. ಕೋಆಪರೇಟಿವ್ ಸಂಘಗಳ ಆಡಳಿತದಿಂದಲೇ ಗ್ರಾಮವಾಸಿಗಳಿಗೆ ಎಷ್ಟೋ ಅನುಭವ ಬಂದಿದೆಯೆಂತ ಎಲ್ಲರೂ ಒಪ್ಪುತ್ತಾರೆ. ಬರೇ ಸಾಲ ಒದಗಿಸಿಕೊಳ್ಳುವ ಸಂಸ್ಥೆಯ ಆಡಳಿತದಿಂದ ಸಾಮಾನ್ಯ ಜನರಿಗೆ ತಿಳುವಳಿಕೆ ಹೆಚ್ಚಿರುವಾಗ ಗ್ರಾಮದಲ್ಲಿ ನಡೆಯಬೇಕಾದ ಸರಕಾರದ ಕೆಲಸವನ್ನೆಲ್ಲಾ ನಡಿಸುವ ಹಕ್ಕು ಸಿಕ್ಕಿದರೆ ಗ್ರಾಮವಾಸಿಗಳ ತಿಳುವಳಿಕೆಯು ಬಹು ವೇಗದಿಂದ ಹೆಚ್ಚುತ್ತದೆ ಎಂಬದರಲ್ಲಿ ಸಂಶಯವಿದೆಯೇ?

ಗ್ರಾಮಗಳಲ್ಲಿ ಇರುವ ಒಬ್ಬೊಬ್ಬ ಧನಿಕ ಅಥವ ತಿಳುವಳಿಕೆ ಇರುವ ಸ್ವಾರ್ಥಪರ, ಇಂಥವರ ಹೇಳಿಕೆಯಲ್ಲಿಯೇ ಗ್ರಾಮ ಪಂಚಾಯಿತಿಗಳು ನಡೆದು ಗ್ರಾಮಗಳಿಗೆ ಕಷ್ಟವಾಗಬಹುದೆಂತ ಗ್ರಾಮವಾಸಿಗಳಲ್ಲೇ ಅನೇಕರಿಗೆ ಭಯವಿದೆ. ಈ ಭಯಕ್ಕೆ ಕೆಲವು ಗ್ರಾಮಗಳಲ್ಲಿ ಅವಕಾಶವಿರಬಹುದು. ಇಂಥಾ ತಪ್ಪುಗಳು ಆಗುವ ಸಂಭವವಿದ್ದರೂ ಕ್ರಮೇಣ ಗ್ರಾಮವಾಸಿಗಳಲ್ಲಿ 'ಪ್ರತಿಯೊಬ್ಬನೂ' ತನ್ನ ತನ್ನ ಹಕ್ಕನ್ನು ತಿಳಿದುಕೊಂಡು ಒಬ್ಬೊಬ್ಬನ ಆಳ್ವಿಕೆಗೆ ಒಳಗಾಗಲಾರನೆಂಬ ನಂಬಿಕೆ ಇಟ್ಟು ಕೆಲಸ ಮಾಡಬೇಕಾಗಿದೆ. ಈಗ ದೇಶದಲ್ಲಿ ತುಂಬಿರುವ ಸಹಕಾರ ಸಂಘಗಳಲ್ಲಿ ಪಕ್ಷಪಾತ ನಡೆಯುವ ವರ್ತಮಾನ ಕೇಳುವದು ಕಡಿಮೆ. [illegible] ಗ್ರಾಮಗಳಿಗೆ ಒಂದರಂತೆ ಸಂಘಗಳು ಇದ್ದಾಗ ಬಲಾಢ್ಯರ ಮಾತೇ ನಡಿಯುವ ಸಂಭವವಿತ್ತು. ಒಂದೊಂದು ಗ್ರಾಮಕ್ಕೆ ಒಂದೊಂದು ಸಂಘವಾದಲ್ಲಿ ಅಕ್ರಮ ನಡಿಯುವದು ಕಡಿಮೆಯೆಂತಲೇ ತಿಳಿದುಬಂದಿದೆ. ಪಂಚಾಯತಿಗಳನ್ನು ಏರ್ಪಡಿಸುವಾಗಲೂ ಒಂದು ಅಥವಾ ಎರಡು ಗ್ರಾಮಗಳಿಗೆ ಒಂದು ಪಂಚಾಯತಿ ಮಾಡಿದರೆ ಅಕ್ರಮಗಳಿಗೆ ಎಡೆ ಕಡಿಮೆ ಇದ್ದೀತು. ಆದುದರಿಂದ ಗ್ರಾಮಗಳ ಏಳಿಗೆಗೆ ಮುಖ್ಯವಾದ ಗ್ರಾಮ ಪಂಚಾಯತಿಗಳನ್ನು ಏನೂ ತಡಮಾಡದೆ ಸರಕಾರದವರು ಏರ್ಪಡಿಸಲಿ ಎಂತ ಹಾರೈಸುತ್ತೇವೆ.

ಮಳೆಗಾಲದ ವಿಶೇಷ.

ಈಗ ಕೆಲವು ವರುಷಗಳಿಂದ ಮಳೆಗಾಲವು ಪ್ರತಿ ವರುಷವೂ ಒಂದೊಂದು ತರದ ವಿಶೇಷವುಳ್ಳದ್ದಾಗಿದೆಯೆಂಬುದು ಸರ್ವರಿಗೂ ತಿಳಿದ ಸಂಗತಿ. ಒಂದು ವರುಷ ಅಕಾಲ ವೃಷ್ಟಿ; ಇನ್ನೊಂದು ವರುಷ ಕಾಲಕ್ಕೆ ಸರಿಯಾಗಿ ಬಿದ್ದರೂ ವಿಪರೀತ ಮಳೆ; ಮತ್ತೊಂದು ವರುಷ ಮಳೆಯೇ ಕಡಿಮೆ, ಹೀಗೆಲ್ಲಾ ಆಗುತ್ತಿರುವುದರಿಂದ ಒಬರಿಗೆ ಪೂರ್ವಕಾಲದಂತೆ ಮಳೆಗಾಲದ ಮೇಲೆ ನಂಬಿಗೆಯೇ ಇಲ್ಲದಂತಾಗಿದೆ. ಎಲ್ಲಿ ನೋಡಿದರೂ ಮಳೆಯ ವಿಷಯ ಸಂಶಯ, ಅಪನಂಬಿಗೆ, ಇವೇ ರೈತರಲ್ಲಿ ವಾಡಿಕ ಮಾತು.

ಈ ವರುಷದ ಮಳೆಗಾಲವು ಎರಡು ವಿಧದಲ್ಲಿ ಅಸಾಧಾರಣವಾದದ್ದೆಂದು ಹೇಳಬಹುದು. ಹಲವು ಗ್ರಾಮಸ್ಥರು ಹೇಳುವಂತೆ 'ಕಾಲವು ಮಗುಚಿದಂತೆ' ತೋರುತ್ತದೆ. ದೇಶದಲ್ಲಿ ತುಂಬ ನಾಟಿ ಕೆಲಸದ ಸಮಯವಾದ 'ಕಕ್ಕಡ' ತಿಂಗಳು (ಸುಮಾರು ಜುಲೈ 15ರಿಂದ ಆಗೊಸ್ತು 15ರ ವರೆಗೆ) ಮಳೆಗಾಲದ ಮಧ್ಯಪ್ರಾಯದ ಸಮಯ; ಆಗಲೇ ನ್ಯಾಯವಾಗಿ ಜೋರಾದ ಮಳೆ ಹೊಡೆಯಬೇಕಾದದ್ದು. ಆದರೆ ಈ ವರುಷ 'ಕಕ್ಕಡ' ತಿಂಗಳಲ್ಲು 'ಆದ್ರೆ' ತಿಂಗಳಂತೆ ಬಿಸಿಲು ಕಾಯುತ್ತಾ ಮಳೆಯು ಬಹಳ ಕಡಿಮೆಯಾಗಿತ್ತು. ಚಿಂಬಳ್ಯಾವು ತಿಂಗಳಲ್ಲಿ 'ಕಕ್ಕಡ' ತಿಂಗಳಂತೆ ಮಳೆಯು ಜೋರಾಗುತ್ತಾ ಇದೆ. ಮುಂದೆ ಹೇಗಾಗುತ್ತದೋ ಹೇಳಲು ಸಾಧ್ಯವಿಲ್ಲ. ಅದರಲ್ಲೂ ಈ ವರುಷ ಎಂಟು ದಿವಸ ಮಳೆಯು ಜೋರಾದರೆ ನಂತರ ಎರಡು ಮೂರು ವಾರ ಸೂರ್ಯನು ಪ್ರಕಾಶಿಸುತ್ತಾನೆ. ಇದೆಲ್ಲವೂ ಹಳಬರಿಗೆ ಕಲಿಯುಗದ ಮಹಿಮೆಯೆಂದು ತೋರದೆ ಇರದು!

ಇಡೀ ವರುಷದಲ್ಲಿ ಮಳೆಗಾಲದಷ್ಟು ಆರೋಗ್ಯವಾದ ಕಾಲವು ಬೇರೊಂದಿಲ್ಲವೆಂಬುದು ಸಿದ್ಧಾಂತವಾದ ಮಾತು. ಇದೂ ಈ ಸಂವತ್ಸರದಲ್ಲಿ ಸುಳ್ಳಾಗಿ ಹೋಗಿದೆ. ಗ್ರಾಮಾಂತರಗಳಲ್ಲಿರುವ ದನಗಳರೋಗಗಳ ವಿಷಯ ವಿವರಿಸಿ ಪೂರೈಸಲಾಗುವುದಿಲ್ಲ. ದೇಶದ ರೈತರು ಈ ತರಹದ ನಷ್ಟದಿಂದ ಬಹಳ ಕಷ್ಟಕ್ಕೊಳಗಾಗಿರುವರು. ಮನುಷ್ಯರ ಆರೋಗ್ಯವೂ ಈಗ ಚನ್ನಾಗಿರುವುದಿಲ್ಲ. ಎತ್ತ ಹೋದರೂ ಕಾಯಿಲೆಗಳ ಸುದ್ದಿ. ಸಿಡುಬಿನಂತ ಅಂಟುರೋಗವೂ ಕೂಡ ಈಗ ದೇಶದ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದೆ. ಮಡಿಕೇರಿಯಲ್ಲಿ ನೆಲಸಿ ಆಗಲೇ ಹಲವು ತಿಂಗಳುಗಳಾದವು. ವರುಷದ ಉತ್ತಮ ಭಾಗವಾದ ಮಳೆಗಾಲದಲ್ಲೇ ಹೀಗಾದರೆ ಬರುವ ಬೇಸಿಗೆಯಲ್ಲಿ ದೇಶದ ಆರೋಗ್ಯ ಸ್ಥಿತಿಯ ಭವಿಷ್ಯತ್ತನ್ನು ಯಾರಾದರೂ ಈಗ ಊಹಿಸಬಲ್ಲರೇ!

ಲೋಕದ ಭವಿಷ್ಯತ್ತು.

ಜರ್ಮನ್ ಜ್ಯೋತಿಶಾಸ್ತ್ರಜ್ಞರಾದ ಎ. ಯಂ. ಗ್ರಿವಸ್ ಎಂಬವರು 1971 ನೇ ಇಸ್ವಿಯ ವರೆಗಿನ ಲೋಕದ ಜಾತಕವನ್ನು ಬರೆದಿರುವರು. ಈ ಭವಿಷ್ಯತ್ತಿನ ಪ್ರಕಾರ 1926 ನೇ ಇಸ್ವಿಯಲ್ಲಿ ಲೋಕದಲ್ಲಿ ಸ್ತ್ರೀಯರದೊಂದು ಉತ್ಕ್ರಾಂತಿಯಾಗುವುದು. ಈ ಕಷ್ಟವೊಂದು ಮಾತ್ರವಲ್ಲದೆ ಬರುವ ವರ್ಷ ಮಳೆ ಬಾರದೆ ಬರಗಾಲ ಬಂದು ಕೆರೆತೊರೆಗಳು ಆರಿಹೋಗುವುವು ಮತ್ತು ಉತ್ಕ್ರಾಂತಿಕಾರರಿಂದ ಒಬ್ಬ ಅಧ್ಯಕ್ಷನಾಗಲಿ ಅರಸನಾಗಲಿ ಹೊಡೆದಬ್ಬಲ್ಪಡುವನು. ಆದರೆ ಇದು ಸ್ತ್ರೀಯರ ಉತ್ಕ್ರಾಂತಿಯಿಂದಲ್ಲ. ಆಸ್ಟ್ರೇಲಿಯದ ಪರ್ವತ ಪ್ರದೇಶದಲ್ಲಿ ದೊಡ್ಡದೊಂದು ಭೂಕಂಪವು ಬರುವ ವರ್ಷ ಉಂಟಾಗಲಿಕ್ಕಿದೆ. ಇದನ್ನು ಅವರು ಗ್ರಹಗಳ ಆಧಾರದಿಂದ ಹೇಳಿರುವರು. 1927 ನೇ ವರ್ಷವು ಇನ್ನೂ ಕಠಿಣವಾಗಿರುತ್ತದೆ. ಸ್ತ್ರೀಯರ ಉತ್ಕ್ರಾಂತಿಯ ಬದಲಿಗೆ ಈ ವರ್ಷ ಸಾಮಾನ್ಯವಾಗಿ ಸ್ಥಿರ ಸೈನ್ಯಗಳೆಲ್ಲಾ ಬಂಡಾಯವೆಬ್ಬಿಸುವವಂತೆ!

1928 ರಲ್ಲಿ ದೊಡ್ಡ ಚಕ್ರವರ್ತಿಯೊಬ್ಬನು ಮರಣ ಹೊಂದುವನು. ಇದರನಂತರ ಸ್ವಲ್ಪ ಸಮಯ ದೊಡ್ಡದೊಂದು ಯುದ್ಧವಾಗುವುದು.

1929 ರಲ್ಲಿ ಅಷ್ಟೊಂದು ಪ್ರಾಮುಖ್ಯವಾದುದಾವುದೂ ಸಂಭವಿಸುವುದಿಲ್ಲ. ಆದರೆ 1930—1940 ರ ವರೆಗೆ ಯೂರೋಪಿನಲ್ಲಿ ಚಿಕ್ಕ ದೊಡ್ಡ ಉತ್ಕ್ರಾಂತಿಗಳೂ, ಲೋಕದಲ್ಲೆಲ್ಲಾ ನಾನಾ ವಿಧ ಸಾಂಕ್ರಾಮಿಕ ರೋಗಗಳೂ ಹಬ್ಬುವವು. 1946 ನೇ ವರ್ಷವೊಂದು ಈ ಎಲ್ಲಾ ವರ್ಷಗಳಿಗಿಂತ ಒಳ್ಳೇದಾಗಿರುತ್ತದೆ.

1930—1940ರ ವರೆಗಿನ ವರ್ಷಗಳಲ್ಲಿ ರಷ್ಯದಲ್ಲಿ ಅಲ್ಲಿಯ ಚಕ್ರವರ್ತಿಯಾಗಿದ್ದ ಝಾರನ ಪರವಾಗಿ ದೊಡ್ಡದೊಂದು ಉತ್ಕ್ರಾಂತಿಯೆದ್ದು ಬೊಲ್ಷೆವಿಕರೆಲ್ಲರೂ ದೇಶದಿಂದ ಹೊರತಳ್ಳಲ್ಪಡುವರು. ಕೆಥೋಲಿಕ್ ಮತಸ್ಥನೊಬ್ಬನು ಆಸ್ಥಾನವನ್ನೇರುವನು. ಆದರೆ ಇದರಿಂದ ಬೊಲ್ಷೆವಿಕ್ ಚಳವಳವು ಅಂತ್ಯವಾಗದೆ 1960ರಲ್ಲಿ ಆಸ್ಟ್ರಿಯವು ಬೊಲ್ಷೆವಿಕರ ವಶವಾಗುವುದು

" ನವಯುಗ "

ಗ್ರಾಮೋಭಿವೃದ್ಧಿ.

[ಲಾಲಾ ಲಜಪತರಾಯರ ಅಭಿಮತ]

ಗ್ರಾಮಾಭಿವೃದ್ಧಿಯ ವಿಷಯವಾಗಿ ನಾನು ಬಹಳ ವಿಷಯ ಕೇಳಿರುತ್ತೇನೆ. ಆದರೆ ಅವು ಅಷ್ಟು ಸ್ಪಷ್ಟವಾಗಿಲ್ಲ. ಈ ವಿಷಯವು ಕೇವಲ ಚರ್ಚಾಸ್ಪದವಾಗಿರುವುದರಿಂದ, ಮುಂದಾಳುಗಳ ಮಾರ್ಗ ಸೂಚನೆಗಳನ್ನೂ, ರಚನೆಗಳನ್ನೂ ವಿವರಿಸಲು ಸಾಧ್ಯವಿಲ್ಲ. ಆದರೆ ಪ್ರತಿಯೊಬ್ಬನೂ ಅವನ ಕರ್ತವ್ಯವನ್ನು ಮಾಡಲೇ ಬೇಕು. ಇತರರ ಅಭಿಮತಗಳೊಡನೆ ನನ್ನ ಅಭಿಪ್ರಾಯವೂ ಗ್ರಾಮಗಳ ಪುನರಾಭಿವೃದ್ಧಿಯ ಉತ್ತಮ ಮಾರ್ಗದರ್ಶಿಯಾಗಿರುವುದು, ಆದರೆ ವೇದವಾಕ್ಯವಲ್ಲ. ನಮ್ಮ ಜನಾಂಗದ ತವರುಮನೆಯು ಗ್ರಾಮವು. ಅವರ ಹೃದಯದಲ್ಲಿ ಪರಸ್ಪರ ಅನ್ಯೋನ್ಯತೆ, ಕಾರ್ಯಾಭಾರ ಮತ್ತು ವಿದ್ಯೆ, ಇವುಗಳಡಗಿರದೆ, ಅಜ್ಞಾನರಾಗಿ, ಅರೆಹೊಟ್ಟೆಯಿಂದ, ಹೊದೆಯಲು ಸಾಕಷ್ಟು ಬಟ್ಟೆಯಿಲ್ಲದೆ, ಜೀರ್ಣವಾದ ಮನೆಗಳಲ್ಲಿ ವಾಸಿಸುತ್ತಲಿರುವರು. ಅದೇ ಊರಿನ ಚಿಕ್ಕ ಉದ್ಯೋಗಸ್ಥರಿಂದಲೂ, ಅಧಿಕಾರಿಗಳಿಂದಲೂ ಹಿಂಸೆ ಹೊಂದುತ್ತಿರುವುದಲ್ಲದೆ, ಲಂಬರ್‌ದಾರರು ಮತ್ತು ಸಾಹುಕಾರರ ನಿರ್ದಾಕ್ಷಿಣ್ಯತೆಗೆ ಬಲಿಗಳಾಗಿ ನರಳುತಿರುವರು. ಈ ದೀನತೆಯು ನನ್ನ ಗ್ರಾಮ...

(1) ನೂಲುವುದೂ, ನೇಯುವುದೂ.

(2) ತಾರುಣ್ಯ ವಿದ್ಯಾಭ್ಯಾಸ.

(3) ಐಕ್ಯಮತ್ಯದ ಕಟ್ಟಳೆಗಳನ್ನು ಹರಡುವುದು.

(4) ಕಾಯಿಪಲ್ಯಗಳ ಬೆಳವಣಿಗೆ.

(5) ಆರೋಗ್ಯವನ್ನು ಕಲ್ಪಿಸುವುದು.

(6) ವ್ಯವಸಾಯ ಧರ್ಮ. (7) ನಿರ್ಮಲವಾದ, ಒಳ್ಳೆಯ ನೀರಿನ ಅವಶ್ಯಕತೆ.

(8) ಅಫೀಮು ಮತ್ತು ಮದ್ಯಪಾನವನ್ನು ವರ್ಜಿಸುವಿಕೆ.

["ದಿ ಪೀಪಲ್" ಎಂಬ ಪತ್ರಿಕೆಯಲ್ಲಿ ಬರೆದ ಲೇಖನದ ಸಾರಾಂಶ]

ಇಂಡಿಯಾದಲ್ಲಿ ಶಿಶುಮರಣ.

ಎಷ್ಟೇ ಎಳೆ ಮಗುವಾಗಿರಲಿ, ಅಥವಾ ಬೆಳೆದಿರಲಿ, ತನ್ನ ಮಗುವು ಸತ್ತದ್ದರಿಂದ ತಾಯಿಗುಂಟಾಗುವ ದುಃಖವು, ಎಲ್ಲಾ ವಿಧವಾದ ದುಃಖಗಳಿಗಿಂತಲೂ ಅಸಹ್ಯವಾದುದು. ಈ ಶಿಶುಮರಣದಿಂದುಂಟಾಗುವ ಅನರ್ಥವು ಇಂಡಿಯಾದೇಶದಲ್ಲಿರುವಂತೆ ಬೇರೆ ಯಾವ ದೇಶಗಳಲ್ಲಿಯೂ ಇಲ್ಲ. ಇದಕ್ಕೆ ...

...ಳನ್ನು ನೀಗಿಸುವುದಸಾಧ್ಯವು. ಈಗಿನ ಸ್ವರಾಜ್ಯಪಕ್ಷದವರು ಭಾವಿಸುವಂತೆ ಮಂತ್ರಾಲೋಚನೆಸಭೆಗಳಲ್ಲಿಯೂ, ನಿಯಮ ನಿರ್ಮಾಣಸಭೆಗಳಲ್ಲಿಯೂ ಹೋರಾಡುವ ಸದಸ್ಯರು ಸ್ವಲ್ಪ ಮಟ್ಟಿಗೆ ಅನುಕೂಲಪಡಿಸಬಹುದು. ಆದರೆ ಪ್ರಜೆಗಳು ಅವರೊಡನೆ ಸೇರಿ ಅವರಿಗೆ ಸಹಾಯಮಾಡದಿದ್ದರೆ, ಅವರೂ ಏನೂ ಮಾಡಲಾರರು. ನಮ್ಮ ಜನಾಂಗವು ಕ್ರಮೇಣ ಕ್ಷೀಣಿಸಲು ಕಾರಣವಾದ ಈ ಮರಣ ಸಂಖ್ಯೆಯನ್ನು ಕಡಿಮೆ ಮಾಡುವಂತೆ ಜನರು ನಿರ್ಧರಿಸಬೇಕು.

ಪುರುಷರಿಗಿಂತಲೂ ಸ್ತ್ರೀಯರು ಎಚ್ಚರತೆಗೊಂಡರೆ, ಬೇಗನೆ ಈ ಶಿಶುಮರಣವನ್ನು ಕಡಿಮೆ ಮಾಡಬಹುದು. ಆದರೆ ಈ ವಿಷಯದಲ್ಲಿ ಅವರಿಗೆ ಕರ್ತವ್ಯತಾ ಜ್ಞಾನವುಂಟಾಗಬೇಕು. ವಿದ್ಯಾವಂತರಾದ ಸ್ತ್ರೀಯರು ಮುಂದೆ ಬಂದು ದೇಶಹಿತಕ್ಕಾಗಿಯೂ, ಮನುಷ್ಯ ಸೌಖ್ಯಕ್ಕಾಗಿಯೂ ತಮ್ಮ ಸಮಯವನ್ನು ಒಟ್ಟುಗೂಡಿಸಬೇಕು. ಆ ರೀತಿಮಾಡಿದರೆ ಮರಣಸಂಖ್ಯೆಯನ್ನು ಕಡಿಮೆ ಮಾಡುವುದಲ್ಲದೆ, ತಮ್ಮ ಸ್ಥಿತಿಯನ್ನು ಈಗಿರುವುದಕ್ಕಿಂತ ಅಧಿಕಯುಕ್ತ ತಂದುಕೊಳ್ಳಬಹುದು. ಇಲ್ಲಿನ ಸ್ತ್ರೀಯರು ಒಟ್ಟುಗೂಡುವುದರಿಂದ ಮುಂದೆ ಹೇಳುವ ಇನ್ನೂ ಅನೇಕ ಕಾರ್ಯಗಳನ್ನು ಸಾಧಿಸಬಹುದು.

ಅವರ ಕೈಯಲ್ಲಿರುವುದು. ...ಯು ಯಾರಿಂದ ಸಾಗಬೇ... ವಿದ್ಯಾಭ್ಯಾಸವನ್ನು ಕೊಟ್ಟು, ...ದಾಯಮಾಡ ಬೇಕಾಬಾಯಿ... ಕಾಗಿ ಕೆಲಸ ಮಾಡುವಂತೆ, ...ತಮ್ಮ ಸಂಸಾರದ ಸ್ತ್ರೀ... ಅವರ ತಮ್ಮ ಜೀವಿತ... ...ನ್ನು ಸಾರ್ಥಕಪಡಿಸಿ, ಅವುಗಳ ...ಉಪಯೋಗಪಡಿಸಿಕೊಳ್ಳಲು ಬ... ಹೋದರೆಯರು ದೇಶಹಿತವನ್ನು ... ಈಗಾಗಿದರೋ, ಅವರಿಗೆ ...ಬಗೆಯೂ ತಿಳಿಯದು. ಇತರ... ...ೂ ತಿಳಿಯದು. ತನ್ನ ದೇಶ ಗೌ... ...ಎಂದು ತಿಳಿದೊಡನೆಯೇ ಅನೇಕರಿ... ...ನವರಾಗಲಿ, ಯಾವ ಪುರುಷನಾಗಲಿ ...ಾಗಿರುವುದಿಲ್ಲ. ತಾವು ಸಮಸ್ತ ಜಗಳ... ...ದ್ದಿದ್ದ ತಮ್ಮ ದೇಶದ ಗೌರವವನ್ನು ...ಎಲ್ಲರೂ ಕುಟುಂಬದ ಇತರ ಜನರೂ ...ಹುವರು. ಇಂಡಿಯಾ ದೇಶದ ಸ್ತ್ರೀ... ...ೂ ದೇಶಹಿತಕ್ಕಾಗಿ ಯಾವ ಕೆಲಸವ... ...ಆದುದರಿಂದ ಸ್ತ್ರೀಯರು ವಿದ್ಯಾವ...

...ದೇಶಭಕ್ತಿಯಲ್ಲಿಯೂ ಮಾನಸಿಕಶ... ...ನವರು ಹುಟ್ಟುವರು ತಮ್ಮ ಎಳೆಯ... ...ಂತೆ ಅವರು ಒಡನಾಡುವವರಾಗಿನೋ... ...ಬ್ಬದ ಗುಣಗಳನ್ನೂ ವೃದ್ಧಿಪಡಿಸಲು ...ಶಿಕ್ಷಣವು ಅವಶ್ಯವಿದೆ. ಈಗ ನ... ...ಕಾಗಿರುವುದೂ ಅದೇ! ಇಂಡಿಯಾ ...ನೀತಿಮಾರ್ಗಗಳನ್ನು ಬಿಟ್ಟು ಬೇರೆ ...ವರು. ದೇಶಭಕ್ತಿ, ನೀತಿ ಮ... ...ಕೇವಲ ದುರ್ಬಲರಾಗಿ ನಿರಾಶರಾ... ...ತಪ್ಪಲ್ಲ. ಅವರು ಬಾಲಕರಾಗಿರ... ...ಲು ಅವರ ವಿಚಾರದಲ್ಲಿ ವಿಶೇಷ... ...ದೇ ಕಾರಣ. ನಮ್ಮ ಸಹೋದ... ...ಕ್ತರಾಗಿ ಒಟ್ಟುಗೂಡಿದರೆ, ಇವು ...ಸ್ವದ್ಧಾರತ್ವ ಅವಲಂಬನರಾದ ಅ... ...ಹರ ಪುತ್ರರನ್ನು ಪಡೆಯಬಹುದು.

ಕಂಬ ಮತ್ತು ತೊಂದರೆಗಳಿಲ್ಲದೆ ತ... ...ಹ ವಯಸ್ಸನ್ನು ಹೆಚ್ಚಿಸಬಲ್ಲರು. ...ನವಾಬ್ದಾರಿಯು ಎಷ್ಟೆಂಬುದನ್ನು ...ವಾ 13 ವರುಷದ ಹೆಣ್ಣು ಮಕ್ಕ... ...ಯಪುಷ್ಟಿಯೂ, ಮಾನಸಿಕ ಶಕ್ತಿ... ...ಪಕ್ವವಾಗದಿರುವುದರಿಂದ ದೇಹವು ಪೂರ್ಣವಾಗಿ ...ಬೆಳೆದಿಲ್ಲವಾದ್ದರಿಂದ ಮಗುವನ್ನು ಹೆ... ...ರಿಗೂ ಅಕಾಲಮರಣಕ್ಕೆ ಹೇತು... ...ನ ಸ್ತ್ರೀಯು ಒಳ್ಳೆ ಪ್ರಯೋಜನದ ...ಮಕ್ಕಳನ್ನು ಪಡೆಯುವಳು. ಅ... ...ಯೂ ಇಲ್ಲದಿರುವುದರಿಂದ, ದಾ... ...ಉಪಚಾರದ ಕ್ರಮವು ಸ್ವಲ್ಪ ...ಮಗುವೂ ಕಷ್ಟಪಡಬೇಕಾಗು... ...ಅಕಾಲ ಮರಣಕ್ಕೆ ಗು... ...ಹೆಣ್ಣು ಮಕ್ಕಳಿಗೆ ವಿವಾಹ... ...ಇದಕ್ಕೆ ನಿವಾರಣೆ. ನಮ್ಮ ಹ... ...ಗೆ 15-16 ವರುಷಕ್ಕೆ ಪ್ರಾಪ್ತ... ...ಬಹುದೆಂಬ ಪ್ರಾಮಾಣಿಕತೆಯಲ್ಲಿ ...ನವನ್ನು, ಅವರನ್ನು ಪಾಠಶಾಲೆಗಳಿಗೆ ಕಳುಹಿಸಬೇಕು. ಇಷ್ಟನ್ನಾದರೂ ಮಾಡಿದರೆ, ಆಗ ಅವರು ತಮ್ಮ ದೇಶವನ್ನು ಕಾಪಾಡುವರು.

SUPPLEMENT TO THIS ISSUE.

ಶ್ರೀಗುರು ಕೊಟ್ಟೂರೇಶಾಯನಮಃ.

ಮಹಾಶಯರೇ ? ಈ ಅತ್ಯಂತ ಮಹತ್ವವುಳ್ಳ ಈ ಜಾಹಿರಾತನ್ನು ದಯವಿಟ್ಟು ಸಂಪೂರ್ಣ ಓದಿನೋಡಿರಿ!

ಸಮಸ್ತ ರಕ್ಷಯಾದಿ ೫ ವರ್ಷಗಳ ಜಾತಕ ಫಲ, ಶ್ರೀ ಮೃತ್ಯುಂಜಯ ಶನಿಜಪ ದಂಡಕ ಸಹಿತ

ಶ್ರೀ ಕ್ಷಯ ಸಂ॥ ತೆಲಗಿ ಹರಪನಹಳ್ಳಿ ಮಠದ ಸಿದ್ಧಾಂತ ಪಂಚಾಂಗ.

ಕಂದ ॥ ಹರಪುರಿ ಮಠದ ಸಿದ್ಧಾಂತ । ವರ ಪಂಚಾಂಗ ರತ್ನಂ ಇದು ಇಷ್ಟಸಿದ್ಧಿದು ॥
ವರುಷಂ ಕರ್ನಾಟಕದೊಳು । ಮೆರೆಯುತುದು, ಜೋಳಬಸವಶಾಸ್ತ್ರಿ ಕೃತಿಯಿಂದಂ ॥

ಈ ಕ್ಷಯ ಸಂವತ್ಸರದ ಪಂಚಾಂಗದಲ್ಲಿ ಸಂವತ್ಸರದ ಅದ್ಭುತ ಫಲ, ನವನಾಯಕರ ಫಲ, ಮಕರ ಸಂಕ್ರಮಣದ ಫಲ, ಗುರು ಶುಕ್ರರ ಅಸ್ತೋದಯ ಕಾಲನಿರ್ಣಯ, ಗ್ರಹಣ ವಿಚಾರ, ತಿಥಿ-ವಾರ-ನಕ್ಷತ್ರ ಯೋಗಾದಿಗಳು, ಆದಾಯ ವ್ಯಯ, ಕಂದಾಯ ಫಲ, ವರುಷ ಧಾನ್ಯಾದಿಗಳು, ಅಶ್ವಿನ್ಯಾದಿ ನಕ್ಷತ್ರ ಮಳೆಗಳಿಗೂ ಪ್ರತಿಯೊಂದು ಮಳೆಗೂ ವಾಹನ ಪ್ರವೇಶ, ಲಗ್ನ, ಸ್ತ್ರೀಪುರುಷ ಯೋಗ ಮುಂತಾದವುಗಳನ್ನು ಶೋಧಿಸಿ, ಮಳೆ ಬೆಳೆ-ವಿಚಾರವನ್ನು ವಿಸ್ತಾರವಾಗಿ ಹಾಕಿರುತ್ತೆ.

ಈ ಸಂವತ್ಸರ—ನೆಲ್ಲು, ಕಬ್ಬು, ಎಳ್ಳು, ಬಿತ್ತು, ನವಣೆ, ಹತ್ತಿ, ಜೋಳ, ಶೇಂಗಾ, ಮೆಣಸಿನಕಾಯಿ ಇವುಗಳು ಎಷ್ಟೆಷ್ಟು ಭಾಗ ಬೆಳೆಯಾಗುತ್ತದೆಂಬುವ ವಿಷಯವನ್ನು ಈ ಯಾವತ್ತು ಪದಾರ್ಥಗಳ ತೇಜ, ಮಂದಿ, ವಿಷಯವನ್ನು ಯಾವ ಯಾವ ಪದಾರ್ಥಗಳಿಂದ ಲಾಭವುಂಟಾಗುವ ವಿಷಯವನ್ನು ಚೆನ್ನಾಗಿ ಬರೆದು ಇರುತ್ತೆ. ಈ ವರುಷ ಯಾವ ಯಾವ ಬೆಳೆಯನ್ನು ಮಾಡಿದರೆ, ಚೆನ್ನಾಗಿ ಆಗುತ್ತದೆಂಬುವ ವಿಷಯವನ್ನೂ, ಬೆಲ್ಲ, ಗೋಧಿ, ಹತ್ತಿ, ಅರಳೆ, ಮೆಣಸಿನಕಾಯಿ, ಕಾಫಿ, ಯಾಲಕ್ಕಿ, ಅಡಿಕೆ, ಮೆಣಸು, ತಂಬಾಕು ಇವೇ ಮೊದಲಾದ ಸಮಸ್ತ ಪದಾರ್ಥಗಳ ತೇಜಿ, ಮಂದಿ ವಿಷಯವನ್ನು ವಿಸ್ತಾರವಾಗಿ ಬರೆದು ಇರುತ್ತೆ. ಈ ಸಂವತ್ಸರದಲ್ಲಿ ಉಂಟಾಗುವ ಅತ್ಯಾದ್ಭುತ ಫಲಗಳು, ರೋಗೋತ್ಪಾತಗಳು, ಯಾವ ಯಾವ ದೇಶಗಳಲ್ಲಿ ಕ್ಷಾಮಾದಿಗಳ ವಿಷಯ, ದರೋಡೆಗಳ ವಿಷಯ, ಚೈತ್ರಾದಿ ೧೨ ಮಾಸಗಳಲ್ಲಿ ಉಂಟಾಗುವ ಮಳೆ, ಬೆಳೆ, ರೋಗಾದಿಗಳ ವಿಷಯ, ಧಾನ್ಯ—ಹತ್ತಿ, ಅರಳೆ, ಬೆಲ್ಲ, ಜೋಳ, ರಾಗಿ, ಅಡಿಕೆ, ಮೆಣಸು ಇವೇ ಮೊದಲಾದ ಯಾವತ್ತು ಪದಾರ್ಥಗಳ ತೇಜಿ, ಮಂದಿ ವಿಷಯವನ್ನೂ ಹಿಂಗಾರಿ, ಮುಂಗಾರಿ, ಬೆಳೆ ವಿಷಯ. ಪ್ರತಿ ತಿಂಗಳು ವಾಸ್ತುಪುರುಷನು ಮಾಡತಕ್ಕ ರಾಜಯೋಗಾದಿ ವಿಷಯ, ರಾಜಯೋಗವುಳ್ಳ ಮಾಸಗಳಲ್ಲಿ ಯಾವ ದಿಕ್ಕಿಗೆ ಮುಖಮಾಡಿ, ಗೃಹಪ್ರವೇಶ ಮಾಡುವ ವಿಷಯವನ್ನೂ, ಹೊಸಮನೆ ಯಾವ ಕಡೆ ಹಾಕುವ ವಿಷಯ, ಆಯಾಯ ತಿಂಗಳಲ್ಲಿ ಹೊರಡುವ ಬಲವಾದ ವಿವಾಹ ಮುಹೂರ್ತ ಕುಂಡಲಿಗಳನ್ನೂ, ಲಗ್ನಪತ್ರಿಕೆ ಬರೆಯುವ ಕ್ರಮವನ್ನೂ, ತಮ್ಮ ಆಪ್ತಮಿತ್ರರಿಗೆ ಬರೆಯತಕ್ಕ ಲಗ್ನಪತ್ರಿಕೆಯ ಕ್ರಮವನ್ನು ವಿಶದವಾಗಿ ಬರೆದು ಇರುತ್ತೆ.

೬೦ ಸಂವತ್ಸರಗಳಲ್ಲಿ ಸಂಧಿ ವರುಷಗಳಾದ ಈ ಕ್ಷಯ, ಪ್ರಭವ ಸಂವತ್ಸರಗಳಲ್ಲಿ ಪ್ರತಿಯೊಬ್ಬರಿಗೂ ಜರುಗುವ ದೇಹಪೀಡೆ, ಕಂಟಕಗಳ ವಿಷಯ, ಶಾಂತಿ ಮಾಡುವ ಕ್ರಮ. ಈ ೨ ಸಂವತ್ಸರಗಳಲ್ಲಿ ಪ್ರತಿಯೊಬ್ಬರು ತಮ್ಮ ತಮ್ಮ ಕುಟುಂಬದ ಕ್ಷೇಮಾರ್ಥವಾಗಿ ಶುಭ ದಿನಗಳಲ್ಲಿ ಪಾರಾಯಣ ಮಾಡುವದಕ್ಕೆ ಶನಿ ದಂಡಕವನ್ನೂ, ಶನಿ ! ಶ್ರೀ ಮಹಾ ಮೃತ್ಯುಂಜಯ ಜಪವನ್ನು ಬಹು ಚೆನ್ನಾಗಿ ಹಾಕಿರುವೆ. ಪ್ರತಿಯೊಬ್ಬ ಮನುಷ್ಯನಿಗೆ ನಾನಾ ಮೂಲಕ ವಿಪತ್ತುಗಳಾದ ಭಯ, ಶತ್ರುಭಯ, ಅಪಮೃತ್ಯು, ದ್ರವ್ಯನಷ್ಟ, ಗೃಹಪೀಡೆಯುಂಟಾದ ಸಮಯದಲ್ಲಿ, ಈ ... ಅನುಕೂಲವಾಗಿರುತ್ತೆ. ಪ್ರತಿಯೊಬ್ಬ ಮನುಷ್ಯನಿಗೂ ಅವರ ಹೆಂಡತಿ ಮಕ್ಕಳಿಗೂ ಕ್ಷಯ, ಪ್ರಭವ, ವಿಭವ, ಶುಕ್ಲ, ಪ್ರಮೋದೂತ ಈ ಸಂವತ್ಸರಗಳಲ್ಲಿ ಉಂಟಾಗುವ ಸುಖ-ದುಃಖ, ಯಾವ ಮೂಲಕ ಲಾಭ, ನಷ್ಟ, ದೇಹಪೀಡೆ, ವ್ಯವಹಾರ, ಉದ್ಯೋಗಗಳಲ್ಲಿ ಉಂಟಾಗುವ ಫಲಗಳನ್ನೂ, ಈ ೫ ವರ್ಷಗಳ ಜಾತಕ ಫಲವನ್ನೂ, ಪ್ರತ್ಯಕ್ಷ ಅನುಭವಕ್ಕೆ ಬರುವಂತೆ ಬರೆದಿರುತ್ತೆ. ಚೈತ್ರಾದಿ ೧೨ ಮಾಸಗಳಲ್ಲಿ ರಸ-ನಿರಸ ಪದಾರ್ಥಗಳು, ತೇಜ-ಮಂದಿ ವಿಷಯವನ್ನು ಬಹು ಸುಲಭವಾಗಿ ತಿಳಿಯುವ ಕ್ರಮವನ್ನು ಚೆನ್ನಾಗಿ ಬರೆದಿರುತ್ತೆ. ದಲ್ಲಾಲಿ, ಜವಳಿ, ಕ್ಲಾಸು, ಕಿರಾಣಿ, ಅಂಗಡಿಗಳಲ್ಲಿ ಯಾವಾಗ್ಲೂ ಲಾಭವುಂಟಾಗುವದಕ್ಕೆ ಮಾಡುವ ಕ್ರಮ, ತಾವು ಮಾಡತಕ್ಕ ಹತ್ತಿ, ಅರಳೆ, ಅಡಿಕೆ, ಮೆಣಸು ಮೊದಲಾದ ಯಾವತ್ತು ಪದಾರ್ಥಗಳ ವ್ಯಾಪಾರದಲ್ಲಿ ಲಾಭವುಂಟಾಗುವದಕ್ಕೆ ಮಾಡಿಕೊಳ್ಳುವ ನೇಮ-ಕ್ರಮವನ್ನು ಬಹು ಚೆನ್ನಾಗಿ ಬರೆದಿರುತ್ತೆ. ತಾನು ಮೇಲ್ಕಂಡ ಯಾವತ್ತು ಪದಾರ್ಥಗಳನ್ನು ದಾಸ್ತಾನು ಮಾಡುವ ಕಾಲದಲ್ಲಿ, ಸದರಿ ಪದಾರ್ಥವು ಮುಂದೆ ತೇಜಿಯಾಗುವದೋ ಮಂದಿಯಾಗುವದೋ ಅದನ್ನು ಸುಲಭವಾಗಿ ತಿಳಿಯುವ ಕ್ರಮವನ್ನು ಚೆನ್ನಾಗಿ ಬರೆದಿರುತ್ತೆ. ನಾಷ, ತೆಂಗು, ನಿಂಬೆ, ಯಾಲಕ್ಕಿ, ಅಡಿಕೆ ಮೊದಲಾದ ಯಾವತ್ತು ಫಲವೃಕ್ಷಾದಿಗಳು ಹೆಚ್ಚಾಗಿ ಫಲ ಬಿಡುವಂತೆ ಮಾಡುವ ಕ್ರಮ. ಜನನಕಾಲದ ಮೇಲಿಂದ ಹೆಣ್ಣು ಅಥವಾ ಗಂಡು ಜನನವಾಗಿರುವದನ್ನು ಬಹು ಸುಲಭವಾಗಿ ತಿಳಿಯುವ ಪದರವನ್ನು ಹಾಕಿರುತ್ತೆ. ಇದು ಪ್ರತ್ಯಕ್ಷ ಅನುಭವಕ್ಕೆ ಬರುತ್ತೆ. ಗರ್ಭಿಣಿ ಸ್ತ್ರೀಯರು ಮುಂದೆ, ಯಾವ ನಕ್ಷತ್ರದಲ್ಲಿ ಎಂಥಾ ಶಿಶುವನ್ನು ಜನನವಾಗುತ್ತಾಳೆಂಬುವದನ್ನು ತಿಳಿಯುವ ಕ್ರಮ. ಸ್ತ್ರೀ - ಪುರುಷ ಶಿಶುಗಳು ಯಾವ ಯಾವ ನಕ್ಷತ್ರಗಳಲ್ಲಿ ಎಷ್ಟನೇ ಪಾದಗಳಲ್ಲಿ ಜನನ...

...ಳ್ಳಿ ತರುಣ ವಿದ್ಯಾಭ್ಯಾಸವನ್ನು ಹರಡುವುದು ಅತ್ಯಾವಶ್ಯಕ. ಗ್ರಾಮೋಭಿವೃದ್ಧಿಯ ಮಾರ್ಗದಲ್ಲಿ ಈ ಸೂಚನೆಗಳು ಅವಶ್ಯವೆಂದು ನನಗೆ ತೋರುತ್ತದೆ.

...ಲವಾದವುಗಳು.

ಸರಕಾರವೇ ಇದನ್ನು ಗಮನಿಸಿ ಇದರ ನಿವಾರಣೆಗೆ ಪ್ರವರ್ತಿಸುವವರೆಗೂ ನಾವು ನಿರೀಕ್ಷಣೆ ಮಾಡುತ್ತಿದ್ದರೆ ಇವುಗ...

...ಗಮನಿಸುವೆ, ಅವರನ್ನು ಪಾಠಶಾಲೆಗಳಿಗೆ ಕಳುಹಿಸಬೇಕು. ಇಷ್ಟನ್ನಾದರೂ ಮಾಡಿದರೆ, ಆಗ ಅವರು ತಮ್ಮ ದೇಶವನ್ನು ಕಾಪಾಡುವರು.

"ಕೊಡಗು"

ಸ ೧೯೫೫ನೇ ಇಸವಿ ಸೆಪ್ಟೆಂಬರ್ ತಾ. ೯ನೇ ಶುಕ್ರವಾರ.

ಗ್ರಾಮ ಪಂಚಾಯತಿಗಳು.

ಈ ದೇಶದಲ್ಲಿ ಪಂಚಾಯತಿಗಳನ್ನು ಏರ್ಪಡಿಸಿಕೊಡಬೇಕೆಂತ ಇನ್ನೂ ಕೇಳುತ್ತಾ ಇರುವಲ್ಲಿ ಮದ್ರಾಸ್ ಆಧಿಪತ್ಯದಲ್ಲಿ ಗ್ರಾಮ ಪಂಚಾಯತಿಗಳ ಪ್ರತಿನಿಧಿಗಳ ಕಾನ್‌ಫರೆನ್ಸ್ ನಡೆಯಲು ಪ್ರಾರಂಭವಾಗಿ ಹೋಗಿದೆ. ಆಗೋಸ್ಟ್ ಹತ್ತನೇ ತಾರೀಕಿನಲ್ಲಿ ಮಧುರೆ ಜಿಲ್ಲೆಯ ಶಿವಕಾಶಿ ತಾಲೋಕಿನ ೭೦ ಪಂಚಾಯತಿಗಳ ಕಾನ್‌ಫರೆನ್ಸ್ ... ಕಾನ್‌ಫರೆನ್ಸಿಗೆ ಜಿಲ್ಲಾ ಕಲೆಕ್ಟರ ಶಿವಕಾಶಿ ಲಿನಲ್ಲಿ ಗ್ರಾಮ ಪಂ. ಬೇಕಾದ ಠರಾವು, ಚರ್ಚೆಯೂ ಟಾಸ್ಕರವರ ಪ್ರಯೋಜನ ಅ. ದ್ವಿಪಕ್ಷ ಪಟ್ಟಿ, ಗ್ರಾಮದ ಸವಾಗಿರುವ ಈ ಕಾಲದಲ್ಲಿ ಸ್ಥಾಪಿಸುವದು ಒಳ್ಳೇದೋ ಎಂ ಸಂಶಯಗಳಿಗೆ ರಾಮನಾದ ಜೀ ಮೂರ್ತಿ ಐ. ಸಿ ಯಸ್. ರವರ ವೆ. 'ಈಗಿನ ಸರಕಾರವೂ ಸ ಗಳಾಗುವ ದೇಶೀಯ ಪ್ರತಿನಿಧಿಗ ಕಡಿಮೆ ಮಾಡಬೇಕಾದರೆ ಗ್ರಾ ಅಭಿಪ್ರಾಯವಾಗಿ ಮಾಡಿಕೊಳ್ಳಬೇ ಈ ರೀತಿ ಆಡಳಿತ ಕ್ರಮವನ್ನು ಗ್ರಾ ಮವಾಸಿಗಳಿಗೆ ಅಪರಿಂದ ಆಗುವ ಡಬೇಕು. ಉಳಿದ ರಾಷ್ಟ್ರೀಯ ವನ್ನು ತಾಲೋಕು ಮತ್ತು ಡಿಸ್ಟ್ರಿ ಡಬೇಕು. ಮಿಕದ್ದನ್ನು ಮಾತ್ರ ನಡಿಸಬೇಕು .... 2000 ವರ್ಷಗ ಬರೆದ ಅರ್ಥ ಶಾಸ್ತ್ರದಲ್ಲಿ ವಿವರಿಸಿ ಗ್ರಾಮಸ್ಥಿತಿಗೂ ವಿಶೇಷ ವ್ಯತ್ಯಾ ಕಾಲಕ್ಕೆ ಜೀವ ಕಳೆಯೇ ಗ್ರಾಮ ಷ್ ಆಡಳಿತ ಪ್ರಾರಂಭವಾದಂದಿ ವು ಬಲವಾಯಿತು. ರಾಜ್ಯವನ್ನು ಷ್ ಅಧಿಕಾರಿಗಳು ಕಡಿಮೆ ಇದ್ದ ತಮ್ಮ ಕೈಯ್ಯಲ್ಲೇ ಇಟ್ಟುಕೊ ಕಾರಕ್ಕೇನೇ ಪ್ರಾಮುಖ್ಯತೆ ಕೊ ಳಿತ ಕ್ರಮವು ತಲೆಕೆಳಗಾಗಿದೆ. ಡದ ಮೇಲ್ಭಾಗವು ಕೆಳಗಾಗಿದೆ. ಪ್ರಯೋಜನ ಮಾತ್ರ ಗ್ರಾಮಗಳಿ ಸರಕಾರದ ಕ್ರಮವನ್ನು ಬದಲಾ ಟ್ಟಿಗೆ ಹಕ್ಕುಗಳನ್ನೂ, ಆ ಮೂಲಕ ಟ್ಟರೆ ಸರಕಾರದ ಮೇಲೆ ಇರುವ ಗೆ ಕಡಿಮೆಯಾಗುತ್ತದೆ" ಎಂತ ಈ ರೀತಿ ಅಭಿಪ್ರಾಯ ಪಟ್ಟ ಅ ವರಾದರೂ ಈಗಿನ ಸಾತ್ವಿಮಾತ್ಮ ಪೂರ್ಣ ಹೊಂದಿದ ಒಂದು ಜಿಲ್ಲೆ ಮೊನ್ನೆ ತಾನೇ ಆಡಿದ ಮಾತುಗ ನರವರಿಗೂ ಈಗಿನ ನಾಗರೀಕತೆಗೆ ವಿರೋಧವೆನ್ನುವ ಇತರರಿಗೂ ಮ ಗಬಹುದೆಂತ ಕಲೆಕ್ಟರ್ ರಾಮಮೂ ಎತ್ತಿ ಇಲ್ಲಿ ಬರೆದಿರುವದಾಗಿದೆ.

ಗ್ರಾಮಪಂಚಾಯತಿಗಳಿಂದ ವ್ಯಗಳನ್ನು ತೀರ್ಮಾನಿಸಲಿಕ್ಕಾಗುವ ಹುಟ್ಟುತ್ತದೆ. ವ್ಯಾಜ್ಯಗಳ ತೀ ಡಳಿತದ ಒಂದು ಭಾಗ ಮಾತ್ರವಾಗಿದೆ. ಮಿ: ರಾಮಮೂ ರ್ತಿಯವರು ಏನು ಹೇಳುತ್ತಾರೆಂದರೆ "ಗ್ರಾಮಗಳಿಗೆ ಸಂಬಂಧಪಡುವ ಎಲ್ಲಾ ಕಾರುಭಾರುಗಳನ್ನು ಗ್ರಾಮಪಂಚಾಯತಿಗೆ ನಾನು ಬಿಟ್ಟೇನು. ಗ್ರಾಮ ಉದ್ಯೋಗಸ್ಥರನ್ನು ನೇಮಿಸುವುದಕ್ಕೆ ಅಭಿಪ್ರಾಯಕೊಡುವ ಮತ್ತು ಅವರನ್ನು ಹತೋಟಿಯಲ್ಲು ಇಟ್ಟುಕೊಳ್ಳುವ ಅಧಿಕಾರ ಸಹ ಕೊಟ್ಟೇನು. ಉತ್ಪತ್ತಿಯು ಇಂತಿಷ್ಟು ಖಂಡಿತ ಸಿಕ್ಕುತ್ತೆಂತಾದರೆ ಗ್ರಾಮವನ್ನು ಶುಚಿಯಾಗಿ ಇಟ್ಟುಕೊಳ್ಳಬಹುದು, ಶಾಲೆಯೊಂದನ್ನು ನಡಿಸಬಹುದು, ಆಯುರ್ವೇದ ವೈದ್ಯನೊಬ್ಬನನ್ನು ನೇಮಿಸಿಕೊಳ್ಳಬಹುದು. ಹೆಚ್ಚು ಮಾತೇನು? ಗ್ರಾಮವಾಸಿಯ ಜೀವನವನ್ನು ಉತ್ತಮ ರೀತಿಗೆ ತಂದುಕೊಂಡು ಗ್ರಾಮಹ ಒಗ್ಗಟ್ಟನ್ನು ಹೆಚ್ಚಿಸಬಹುದು." ಗ್ರಾಮ ರಸ್ತೆಗಳನ್ನು ಸೂಚಿಸಲು ಬಿಟ್ಟಿದ್ದಾರೆ. ಈ ರೀತಿ ಸರಕಾರವು ಗ್ರಾಮಕ್ಕೆ ಏನೇನು ಸಹಾಯಗಳನ್ನು ಒದಗಿಸಿಕೊಡಬೇಕೋ ಅದನ್ನೆಲ್ಲಾ ಗ್ರಾಮದವರೇ ನೋಡಿಕೊಳ್ಳಲು ಏವಬಹುದು, ಎಂತ ಖಂಡಿತವಾಗಿಯೂ ಹೇಳುತ್ತಾರೆ.

ಈ ಆಡಳಿತವನ್ನು ನಡಿಸಲು ಹಣವೆಲ್ಲಿಂದ ಎಂಬ ಪ್ರಶ್ನೆಗೂ ಮಿ ರಾಮ ಮೂರ್ತಿಯವರೇ ಜವಾಬು ಹೇಳುತಾರ. ...ನ ಕೇಳುವದು ಕಡಿಮೆ. ತುಂಬಾ ಗ್ರಾಮಗಳಿಗೆ ಒಂದರಂತೆ ಸಂಘಗಳು ಇದ್ದಾಗ ಬಜಾಪ್ಟರ ಮಾತೇ ನಡಿಯುವ ಸಂಭವವಿತ್ತು. ಒಂದೊಂದು ಗ್ರಾಮಕ್ಕೆ ಒಂದೊಂದು ಸಾಧವಾದಲಿ ಆಕಮ ನಡಿಯುವದು ಕಡಿಮೆಯೆಂತಲೇ ತಿಳಿಸುಬಂದಿದೆ. ಪಂಚಾಯತಿಗಳನ್ನು ಏರ್ಪಡಿಸುವಾಗಲೂ ಒಂದು ಅಥವಾ ಎರಡು ಗ್ರಾಮಗಳಿಗೆ ಒಂದು ಪಂಚಾಯತಿ ಮಾಡಿದರೆ ಅಕ್ರಮಗಳಿಗೆ ಎಡೆ ಕಡಿಮೆ ಇದ್ದೀತು. ಆದುದರಿಂದ ಗ್ರಾಮಗಳ ಏಳಿಗೆಗೆ ಮುಖ್ಯವಾದ ಗ್ರಾಮ ಪಂಚಾಯತಿಗಳನ್ನು ಏನೂ ತಡಮಾಡದೆ ಸರಕಾರದವರು ಏರ್ಪಡಿಸಲಿ ಎಂತ ಹಾರೈಸುತ್ತೇವೆ.

ಮಳೆಗಾಲದ ವಿಶೇಷ.

ಈಗ ಕೆಲವು ವರುಷಗಳಿಂದ ಮಳೆಗಾಲವು ಪ್ರತಿ ವರುಷವೂ ಒಂದೊಂದು ತರದ ವಿಶೇಷವುಳ್ಳದ್ದಾಗಿದೆಯೆಂಬುದು ಸರ್ವರಿಗೂ ತಿಳಿದ ಸಂಗತಿ. ಒಂದು ವರುಷ ಅಕಾಲ ವೃಷ್ಟಿ, ಇನ್ನೊಂದು ವರುಷ ಕಾಲಕ್ಕೆ ಸರಿಯಾಗಿ ಬಿದ್ದರೂ ವಿಪರೀತ ಮಳೆ, ಮತ್ತೊಂದು ವರುಷ ಮಳೆಯೇ ಕಡಿಮೆ, ಹೀಗೆಲ್ಲಾ ಆಗುತ್ತಿರುವುದರಿಂದ ಜನರಿಗೆ ಪೂರ್ವಕಾಲದಂತೆ ಮಳೆಗಾಲದ ಮೇಲೆ ನಂಬಿಗೆಯೇ ಇಲ್ಲದಂತಾಗಿದೆ. ಎಲ್ಲಿ ನೋಡಿದರೂ ಮಳೆಯ ವಿಷಯ ಸಂಶಯ, ಅಪನಂಬಿಗೆ, ಇವೇ ಶ್ರೈ ... ... ರೂಪವಾಗಿ ದೊಡ್ಡದೊಂದು ಉತ್ಕ್ರಾಂತಿಯೆದ್ದು ಬೊಲ್ಶೆವಿಕರೆಲ್ಲರೂ ದೇಶದಿಂದ ನೂಕಲ್ಪಡುವರು. ಕಥೋಲಿಕ್ ಮತಸ್ಥನೊಬ್ಬನು ಆಸ್ಥಾನವನ್ನೇರುವನು. ಆದರೆ ಇದರಿಂದ ಬೊಲ್ಶೆವಿಕ್ ಚಳವಳವು ಅಂತ್ಯವಾಗದೆ 1960ರಲ್ಲಿ ಆಸ್ಟ್ರಿಯವು ಬೊಲ್ಶೆವಿಕರ ವಶವಾಗುವುದು.

"ನವಯುಗ"

ವಾದರೆ, ಯಾರ್ಯಾರಿಗೆ ಬೋಪ ಉಂಟಾಗುವ ವಿಷಯವನ್ನು ಶಾಂತಿ ಮಾಡುವ ಕ್ರಮವನ್ನು ಚೆನ್ನಾಗಿ ಬರೆದಿರುತ್ತೆ. ಯುಕ್ತವಾದ ನಕ್ಷತ್ರ ದೋಷಗಳ ವಿಚಾರವು, ಅವಕ್ಕೆ ಶಾಂತಿಮಾಡುವ ಕ್ರಮ, ದುಷ್ಟ ನಕ್ಷತ್ರಗಳಲ್ಲಿ ಮರಣವಾದರೆ ಮನೆ ಬಿಡುವ ವಿಷಯ, ಬಿಟ್ಟ ಮನೆಯನ್ನು ಪ್ರವೇಶ ಮಾಡುವ ಕ್ರಮವನ್ನು ಚೆನ್ನಾಗಿ ಬರೆದಿರುತ್ತೆ. ಗಂಡ-ಹೆಂಡರಲ್ಲಿ ಮೊದಲು ಯಾರು ಮರಣ ಹೊಂದುವರೆಂಬೀ ಅದನ್ನು ಸುಲಭವಾಗಿ ತಿಳಿಯುವ ಕ್ರಮ. ಪ್ರತಿಯೊಬ್ಬರಿಗೂ ಎಷ್ಟು ಹೆಣ್ಣು, ಎಷ್ಟು ಗಂಡು, ಮಕ್ಕಳು ಎಷ್ಟು ನಷ್ಟವಾಗಿರುತ್ತದೆಂಬುವ ಪುತ್ರ ಸಂಖ್ಯೆಯನ್ನು ಬಹು ಸುಲಭವಾಗಿ ತಿಳಿಯುವ ಚಮತ್ಕಾರ ಕ್ರಮ, ಪ್ರಯಾಣ, ಉದ್ಯೋಗ, ವ್ಯಾಪಾರ, ಗೃಹಪ್ರವೇಶ ಮೊದಲಾದ ಸಮಸ್ತ ಕಾರ್ಯಗಳಲ್ಲಿ ಜಯ-ಲಾಭ ಉಂಟಾಗುವದಕ್ಕೆ ಅಮೃತಕಾಲವನ್ನು ನೋಡುವ ತಿವಲಿಪಿತ ಚಕ್ರವನ್ನು ಹಾಕಿರುತ್ತೆ. ರಾತ್ರಿಯಲ್ಲಿ ಘಡಿಯಾರವಿಲ್ಲದೆ ಎಷ್ಟು ತಾಸು ಆಗಿರುತ್ತದೆಂಬುವದನ್ನು ಬಹು ಸುಲಭವಾಗಿ ತಿಳಿಯುವ ಕ್ರಮ, ನವಗ್ರಹ ಶಾಂತಿಯನ್ನು ಮಾಡುವ ಕ್ರಮ, ಈ ಭರತಖಂಡದೊಳು ಯಾವ ಯಾವ ದೇಶಗಳಲ್ಲಿ ಕ್ಷಾಮಾದಿ ರೋಗಗಳೂ, ಮಳೆ-ಬೆಳೆ ಹ್ಯಾಗೆ ಆಗುತ್ತದೆಂಬುವದನ್ನು ತಿಳಿಯುವ ಕ್ರಮವನ್ನು ಚೆನ್ನಾಗಿ ಬರೆದು ಇರುತ್ತೆ. ಪ್ರತಿಯೊಬ್ಬ ಮನುಷ್ಯನಿಗೆ, ಯಾವಾಗ ತನಗೆ ದೇಹಪೀಡೆ ಉಂಟಾಗುತ್ತದೆಂಬುವದನ್ನು ಮುಂಚಿತವಾಗಿ ತಿಳಿಯುವ ಕ್ರಮ, ಮಳೆ ಹೋದ ಕಾಲದಲ್ಲಿಯೂ, ಗ್ರಾಮದಲ್ಲಿ ಪ್ಲೇಗು-ಮಾರಿ ಕಾದಿ ರೋಗಾದಿಗಳುಂಟಾಗಿರುವ ಸಮಯದಲ್ಲಿ, ಅವುಗಳ ಶುಭಾ-ಶುಭ ಫಲಿತಾರ್ಥವನ್ನು ತಿಳಿದುಕೊಳ್ಳುವ, ಗೌಳಿ-ಶಕುನ ಶಾಸ್ತ್ರವನ್ನು ಚೆನ್ನಾಗಿ ಬರೆದು ಇರುತ್ತೆ. ಇವುಗಳ ಪರಿಹಾರಕ್ಕೆ ಗ್ರಾಮದಲ್ಲಿ ಮಾಡಬೇಕಾದ ಶಾಂತಿ ಕ್ರಮವನ್ನು ಬರೆದು ಇರುತ್ತೆ. ನಷ್ಟ ಪದಾರ್ಥವು ಯಾವ ಸ್ಥಳದಲ್ಲಿರುತ್ತದೆಂಬುವದನ್ನು ಬಹು ಸುಲಭವಾಗಿ ತಿಳಿಯುವ ಕ್ರಮವನ್ನು ಬರೆದಿರುತ್ತೆ.

ಕಲಿಯುಗ ಮಹತ್ವವು—ಕಲಿ ಪ್ರಮಾಣ, ಕಲಿಯುಗದಲ್ಲಿ ನಡಿಯುವ ಯಾವತ್ತು ಶಕೆಗಳ ವಿವರವು. ಈ ಯುಗದಲ್ಲಿ ಜರಗತಕ್ಕ ಫಲಗಳ ವಿಚಾರವನ್ನು ವಿಸ್ತಾರವಾಗಿ ಬರೆದು ಇರುತ್ತೆ.

ಇದನ್ನು ಪ್ರತಿಯೊಬ್ಬರೂ ಅವಶ್ಯಕವಾಗಿ ನೋಡತಕ್ಕದ್ದು.

ಯಾವ ವಿಧವಾದ ಔಷಧಗಳಿಂದ ಗುಣವಾಗದೆ ಇರುವ ಮಹಾ ರೋಗಗಳು—ಅಪಮೃತ್ಯು, ಮಾಟ, ಮರುಳು, ವಿಷಜಂತುಭಯ, ಮಹಮ್ಮಾರಿಭಯ, ಧನಭಯ, ಪಿಶಾಚಭಯ, ಚೋರಭಯ, ರಾಜಭಯ, ಕ್ರೂರ-ಮೃಗಭಯ, ಭೂತ-ಪ್ರೇತ-ಪಿಶಾಚಾದಿ ಭಯ ಮೊದಲಾದ ಯಾವತ್ತು ವಿಪತ್ತುಗಳು, ಪರಿಹಾರವಾಗುವದಕ್ಕೆ ಮಾಡತಕ್ಕ ನೇಮ-ಕ್ರಮಗಳನ್ನು ಚೆನ್ನಾಗಿ ಬರೆದಿರುತ್ತೆ. ಯಾವತ್ತು ಸ್ಥರಿಗೆ ಕೋಣ-ಹುಲಿ ಮೊದಲಾದ ಪಶು-ಪಕ್ಷಿ ಭಯವಿಲ್ಲದಂತೆ ಮಾಡುವ ಕ್ರಮ, ರಾಹುಕಾಲ, ಗುಳಿಕಕಾಲ ನಿರ್ಣಯವು, ಸ್ಮಾರ್ತ-ವೈಷ್ಣವರ ಏಕಾದಶಿ ನಿರ್ಣಯವು, ವ್ರತಗಳೂ, ಎಲ್ಲಾ ವಿಧವಾದ ಹಬ್ಬಗಳೂ, ಜಯಂತಿಗಳು ಇವೇ ಮೊದಲಾದ ಇನ್ನೂ ಅನೇಕ ಅಪೂರ್ವ ವಿಷಯಗಳನ್ನು ಸ್ವಲ್ಪವಾದರೂ ಮರೆಯಿಲ್ಲದೆ, ಬಿಟ್ಟ ಕಣ್ಣಿನಿಂದ ಚಿಕ್ಕಬಾಲಕರಿಗು ಕೂಡಾ ಚೆನ್ನಾಗಿ ತಿಳಿಯುವಂತೆ ಬರೆದು ಇರುತ್ತೇವೆ.

ಇದರಲ್ಲಿರುವ ಒಂದೊಂದು ಅಪೂರ್ವ ವಿಷಯಗಳಿಗೆ ಎಷ್ಟು ಖರ್ಚು ಮಾಡಿದರೂ ದೊರೆಯಲಾರವು. ಈ ಪಂಚಾಂಗ ಒಂದು ಹತ್ತಿರವಿದ್ದ ಬಳಿಕ ಯಾವ ಪಂಚಾಂಗಗಳೂ, ಸಿದ್ಧಾಂತಿಗಳು ಖಂಡಿತವಾಗಿ ಬೇಕಾಗುವದಿಲ್ಲ. ಈ ಪಂಚಾಂಗವನ್ನು ನೀವು ಯಾವಾಗಲೂ ಬಳಿಯೆ ಹತ್ತಿರವೇ ಇಟ್ಟುಕೊಳ್ಳಿರಿ. ತಿಥಿಗಳ ಘಟಿಕಾ ನಿರ್ಣಯದ ಮೇಲಿಂದ ವ್ರತಗಳು ಹಬ್ಬಗಳನ್ನು ಮಾಡುವ ಕ್ರಮ ಮತ್ತು ಬಾಗೆ ಇಲ್ಲದಿದ್ದರೆ, ಖಂಡಿತ ವಾಪ್ಸು ಮಾಡಿರಿ.

ಕ್ರಯ—ಪಂಚಾಂಗ ಪ್ರತಿ ೧ಕ್ಕೆ ೦—೩—೦ ಮೂರಾಣೆ.

ಈಸಾರಿ ದರವರುಷದ ಪಂಚಾಂಗಗಳಿಗಿಂತಲೂ, ಒಳ್ಳೇ ಕಾಗದದಲ್ಲಿ ಒಳ್ಳೇ ಅಂದವಾಗಿ ಪ್ರಿಂಟು ಮಾಡಿಸಿರುತ್ತೇವೆ.

ಸಮಸ್ತರಿಗೂ ವಿನಂತಿ. ದರ ವರುಷ ತರಿಸಿಕೊಳ್ಳುವ ನಮ್ಮ ಪಂಚಾಂಗದ ಪೋಷಕರೆಲ್ಲರೂ ದರ ವರುಷ ತರಿಸಿಕೊಂಡಂತೆ ಈ ಸಾರಿ ಹೆಚ್ಚು ಪ್ರತಿಗಳನ್ನು ತರಿಸಿಕೊಂಡು ಪ್ರಚಾರ ಮಾಡಬೇಕು.

ಪಂಚಾಂಗದ ಬಹುಮಾನಗಳು.

೨೫ ಪಂಚಾಂಗಗಳನ್ನು ಪ್ರತಿ ೧ಕ್ಕೆ ೩ ಆಣೆ ಪ್ರಕಾರ ತರಿಸಿಕೊಂಡವರಿಗೆ, ಜಾತಕ ಪತ್ರಿಕೆಯನ್ನು ತಯಾರುಮಾಡಿ ಕಳುಹಿಸುತ್ತೇವೆ. ತಮಗೆ ಬೇಕಾದ ಉದ್ಧರಣೆಯನ್ನು ಬಹುಮಾನವಾಗಿ ಕಳುಹಿಸುತ್ತೇವೆ. ೧೨ ಪಂಚಾಂಗಗಳನ್ನು ತರಿಸಿಕೊಂಡವರಿಗೆ ಜನ್ಮಪತ್ರಿಕೆಯನ್ನು ಉಚಿತವಾಗಿ ತಯಾರುಮಾಡಿಸಿ ಕಳುಹಿಸುತ್ತೇವೆ.

ಕ್ಷಯ ಸಂವತ್ಸರದ ಚೈತ್ರಾದಿ ೧೨ ಮಾಸಗಳಲ್ಲಿ ಉಂಟಾಗುವ ಯಾವತ್ತು ಪದಾರ್ಥಗಳ ತೇಜಿ-ಮಂದಿ ನಿರ್ಣಯ ಪತ್ರಿಕೆಯನ್ನು ಕಳುಹಿಸುತ್ತೇವೆ. ೬ ಪಂಚಾಂಗಗಳನ್ನು ತರಿಸಿಕೊಂಡವರಿಗೆ ೧ ರಕ್ಷಣೆ ಮಹಾ ಯಂತ್ರವನ್ನು ಉಚಿತವಾಗಿ ಕಳುಹಿಸುತ್ತೇವೆ. ಕೆಲವರು ಬಹುಮಾನದ ವಿಷಯದಲ್ಲಿ ಜನನ ಟಿಪ್ಪಣಿಯನ್ನು ಸರಿಯಾಗಿ ಬರೆದು ಕಳುಹಿಸದೆ ಇರುವದರಿಂದ, ನಾವು ಬರೆಯುವದಕ್ಕೆ ತೊಂದರೆಯಾಗುತ್ತೆ. ಆದ್ದರಿಂದ ಜನನ ಟಿಪ್ಪಣಿಯನ್ನು ಸರಿಯಾಗಿ ಬರೆದು ಕಳುಹಿಸಿರಿ. ಈಸಾರಿ ಬಹುಮಾನ ಕಳುಹಿಸುವ ವಿಷಯದಲ್ಲಿ ಅನುಕೂಲವಾದ ಏರ್ಪಾಟು ಮಾಡಿರುತ್ತೆ.

೨೦೦-೧೦೦-೫೦ ಪಂಚಾಂಗ ಪ್ರತಿಗಳನ್ನು ತರಿಸಿಕೊಳ್ಳುವವರಿಗೆ, ಕ್ರಯ ಕಡಿಮೆಮಾಡಿ ಕಳುಹಿಸುತ್ತೇವೆ.

ಪಂಚಾಂಗಗಳಿಗೆ ಮರುಟಪಾಲಿಗೆ ಜವಾಬು ಬರಿಯಿರಿ.

ನಮ್ಮ ವಿಳಾಸ:—

ಟಿ. ಹೆಚ್. ಎಂ. ಪುಟ್ಟಯ್ಯಸ್ವಾಮಿ,

ಮೊಳ್ಕಾಲ್ಮೂರು - ಚಳ್ಳಕೆರೆ.

ಬಿ ಕೈಟ್ ಅಂಡ್ ಕಂಪನಿ, ಪನಸ್ ಪ್ರೆಸ್, ಬೆಂಗಳೂರು.

ಗ್ರಾಮೋಭಿವೃದ್ಧಿ.

[ಲಾಲಾ ಲಜಪತರಾಯರ ಅಭಿಮತ]

ಗ್ರಾಮಾಭಿವೃದ್ಧಿಯ ವಿಷಯವಾಗಿ ನಾನು ಬಹಳ ವಿಷಯ ಕೇಳಿರುತ್ತೇನೆ. ಆದರೆ ಅವು ಅಷ್ಟು ಸ್ಪಷ್ಟವಾಗಿಲ್ಲ. ಈ ವಿಷಯವು ಕೇವಲ ಚರ್ಚಾಸ್ಪದವಾಗಿರುವುದರಿಂದ, ಮುಂದಾಳುಗಳ ಮಾರ್ಗ ಸೂಚನೆಗಳನ್ನೂ, ರಚನೆಗಳನ್ನೂ ವಿಂಗಡಿಸಲು ಸಾಧ್ಯವಲ್ಲ. ಆದರೆ ಪ್ರತಿಯೊಬ್ಬನೂ ಅವನ ಕರ್ತವ್ಯವನ್ನು ಮಾಡಲೇ ಬೇಕು. ಇತರರ ಅಭಿಮತಗಳೊಡನೆ ನನ್ನ ಅಭಿಪ್ರಾಯವೂ ಗ್ರಾಮಗಳ ಪುನರಾಭಿವೃದ್ಧಿಯ ಉತ್ತಮ ಮಾರ್ಗದರ್ಶಿಯಾಗಿರುವುದು, ಆದರೆ ವೇದವಾಕ್ಯವಲ್ಲ. ನಮ್ಮ ಜನಾಂಗದ ತವರುಮನೆಯು ಗ್ರಾಮವು. ಅವರ ಹೃದಯದಲ್ಲಿ ಪರಸ್ಪರ ಅನ್ಯೋನ್ಯತೆ, ಕಾರ್ಯಭಾರ ಮತ್ತು ವಿದ್ಯೆ, ಇವುಗಳಿಲ್ಲದೆ ಅಜ್ಞಾನಿಗಳಾಗಿ, ಅರೆಹೊಟ್ಟೆಯಿಂದ, ಹೊದೆಯಲು ಸಾಕಷ್ಟು ಬಟ್ಟೆಯಿಲ್ಲದೆ, ಜೀರ್ಣವಾದ ಮನೆಗಳಲ್ಲಿ ವಾಸಿಸುತ್ತಲಿರುವರು. ಅವೇ ಊರಿನ ಚಿಕ್ಕ ಉದ್ಯೋಗಸ್ಥರಿಂದಲೂ, ಲಾಯರುಗಳಿಂದಲೂ ಹಿಂಸೆ ಹೊಂದುತ್ತಿರುವುದಲ್ಲದೆ, ಲಂಬರ್ದಾರರು ಮತ್ತು ಸಾಹುಕಾರರ ನಿರ್ದಾಕ್ಷಿಣ್ಯತೆಗೆ ಬಲಿಗಳಾಗಿ ನರಳುತ್ತಿರುವರು. ಈ ರೀತಿಯು ನಮ್ಮ ಗ್ರಾಮ ಬಂಧುಗಳ ಸ್ಥಿತಿಯು ಎಂಥವನ ಹೃದಯವನ್ನು ಸೀಳಿಬಿಡುವುದು. ಗ್ರಾಮಸ್ಥರು ರಾಜಕೀಯ ಚಳವಳಿಯಲ್ಲಿ ಕೈ ಹಾಕಿದವರಲ್ಲವೆಂಬುವ ಪಾತ್ರಮಾತ್ರದ ಪ್ರತೀತಿಯಲ್ಲಿ ಮರುಳಾದ ನಾಗರಿಕನಂತೆ ರಾಜಕೀಯ ವಿಷಯದಲ್ಲಿ ಪ್ರತಿಯೊಬ್ಬ ಗ್ರಾಮಸ್ಥನು ಮಗ್ನನಾಗಿರುವನು. ಅವನಿಗೆ ತಿಳಿದಿರುವುದು ಸ್ವಲ್ಪ, ಸ್ವಲ್ಪವನ್ನೇ ಹೇಳಬಲ್ಲನು, ಗ್ರಹಿಸುವುದು ಸ್ವಲ್ಪ. ಅವನ [illegible] ಮನಸ್ಸನ್ನು [illegible] ಜ್ಞಾನಿ ತೋರಿಸುವನು. ಗ್ರಾಮಸ್ಥನ [illegible] ಗರಿಕನಿಗಿಂತ ಉಪಕರಣವು ಅತಿ ಸ್ವಲ್ಪ. ಗ್ರಾಮಗಳು [illegible] ವಾಗಿ ಮೊತವಾದಕ್ಕೆ [illegible] ಗಳಿಗೆ ಕಲ್ಪುಬಿದ್ದು, ಆಂಗ್ಲರು 'ಗ್ರಾಮಸ್ಥರ ತಮ್ಮ ರೀತಿಗಳಿಗೂ ಸರಕಾರಗಳಿಗೂ ಪ್ರೀತಿಯನ್ನಿತ್ತಿರುವ ರಂಜಿ ಅಭಿಪ್ರಾಯವುಳ್ಳವರಾಗಿರುವರು.

ಹೀಗಿರುತ್ತಿರಲು ಗ್ರಾಮ ಪುನರಾಭಿವೃದ್ಧಿಯನ್ನು ಪ್ರತಿಯೊಬ್ಬ ಹಿಂದೂ ಮತ್ತು ಅಧಿಕಾರಿಯೂ ಇಷ್ಟಪಡತಕ್ಕ ಕರ್ತವ್ಯವಾಗಿದೆ. ಅವನ್ನ ಜೀವಕಳೆಯನ್ನು ಕಲ್ಪಿಸಿ [illegible] ರನ್ನಾಗಿಯೂ, [illegible] ಸ್ವರಾಜ್ಯ ಚಳವಳಿ ಕಾರ್ಯದಲ್ಲಿ ಸಹಾಯಕರಾಗುವಂತೆಯೂ ಮಾಡಬೇಕು. ಗ್ರಾಮಗಳಲ್ಲಿ ಕೈಗಾರಿಕೆ ಕಲಸಗಳು ಅಭಿವೃದ್ಧಿಯಾಗಬೇಕು. ಇದು ಮುಖ್ಯವಾದದು. ಮನುಷ್ಯನ ಜೀವನಕ್ಕೆ ಆಹಾರವೂ, ವಸ್ತ್ರವೂ ಅಗತ್ಯ. ವಾಸಕ್ಕೆ ಮನೆಯು ಬೇಕಾಗಿರುವದರಿಂದ ಕೃಷಿಯಿಲ್ಲದೆ ಅನ್ಯ ರೀತಿಯಲ್ಲಿ ಸಂಪಾದನೆಯನ್ನು ಅವನಿಗೆ ಕಲ್ಪಿಸಿಕೊಟ್ಟರೆ ಅವನಿಗೆ ಮನೆಯನ್ನಿತ್ತಂತಾಯಿತು. ಇದಕ್ಕಾಗಿ ಕೈಗಾರಿಕೆಯು ಸಹಾಯಕವು. (1) ಕೃಷಿಯು ಕೈಗಾರಿಕೆಗಿಂತ ಯಾವ ರೀತಿಯಲ್ಲಿ ಹೆಚ್ಚು ಉತ್ಪತ್ತಿಯುಳ್ಳದ್ದನ್ನಾಗಿ ಮಾಡಬಹುದು? (2) ಕೃಷಿಕನ ಸಂಪಾದನೆಗೆ ಆತನ ಇತರ ಕಸಬುಗಳನ್ನು ಹೇಗೆ ಕಲ್ಪಿಸುವುದು? ಈ ಎರಡು ಪ್ರಶ್ನೆಗಳು ನಮ್ಮ ಸಂಶಯವನ್ನು ನೀಗಿಸುವುದು.

ಕೈಗಾರಿಕೆಯು ಪುನರಾಭಿವೃದ್ಧಿಗೆ ಚರಕದ ಅವಶ್ಯಕತೆ.

ಮಹಾತ್ಮ ಗಾಂಧಿಯವರು ಚರಕವನ್ನು ಪ್ರೀತಿಸುವರು. ಅವರ ಪ್ರೀತಿಗೆ ಪಾತ್ರವಾದ ಇದರಲ್ಲಿ ಸರ್ವ ಸದ್ಗುಣಗಳೂ, ಸಂಗೀತ, ವಿದ್ಯೆ, ಕೈಗಾರಿಕೆ, ಕೃಷಿ, 'ಸ್ವರಾಜ್ಯ' ಮತ್ತು ಇತರ ಎಲ್ಲಾ ಇಷ್ಟ ವಸ್ತುಗಳನ್ನೂ ಕಾಣುತ್ತಿರುವರು. ಐಶ್ವರ್ಯವಂತನೂ, ಜ್ಞಾನಿಯೂ, ಹೆಂಗಸರೂ, ಗಂಡಸರೂ ಮಕ್ಕಳೂ, ಪ್ರತಿಯೊಬ್ಬರೂ ನೂಲುವ ಕೆಲಸಕ್ಕೆ ಮನಗೊಡಬೇಕೆಂದು ಅವರ ಬಯಕೆ. ಆದರೆ ನಮ್ಮೆಲ್ಲರ ಕಷ್ಟಗಳಿಗೂ ಚರಕವು ಸಂಜೀವಿಯೆಂಬ ವಿಷಯದಲ್ಲಿ ನಮ್ಮ ಅಭಿಪ್ರಾಯವು ಬೇರ್ಪಡುವುದು. ಗೋರಕ್ಷಣೆಯೂ, ತೋಟದ ಕೆಲಸವೂ, ನಾಗರೀಕನಿಗೂ, ಹಳ್ಳಿಯವನಿಗೂ ಸಮವಾಗಿ ಬೇಕಾದುದು. 1914ರಿಂದ 1918ರ ಯುದ್ಧದ ಸಮಯದಲ್ಲಿ ಪ್ರತಿಯೊಬ್ಬ ಪಟ್ಟಣವಾಸಿಯೂ ದಿನ ಸಾಕಷ್ಟು ಹೊತ್ತು ತೋಟಗಳನ್ನು ಮಾಡುವುದರಲ್ಲಿಯೂ ನಿರತನಾಗಿದ್ದುದನ್ನು ನಾನು ನೋಡಿರುವೆನು. ನ್ಯೂಯಾರ್ಕ್ ನಗರವಾಸಿಗಳು, ಎಷ್ಟೇ ಸಣ್ಣ ಸ್ಥಳವಾದರೂ, ಯೂರೋಪಿನಲ್ಲಿ ಯುದ್ಧನಿರತರಾದವರ ಜೀವನದ ಉದ್ದೇಶ್ಯವಾಗಿ ವ್ಯವಸಾಯ ಮಾಡುವರು. ತೋಟ ಮಾಡುವುದು ಮನುಷ್ಯನ ಆರೋಗ್ಯವನ್ನು ಹೆಚ್ಚಿಸುವುದು. ನಿರ್ಮಲವಾದ ಆಹಾರವನ್ನು ಹೆಚ್ಚಿಸುವುದು, ಪ್ರತಿಯೊಂದು ಸಂಗತಿಯವರೂ ಬೇರೆ ಬೇರೆ ಕೆಲಸವನ್ನು ಮಾಡುವರು. ನೂಲುವವನಿಗಿಂತಲೂ ತೋಟಗಾರನು ಉತ್ತಮನೆಂದು ನನ್ನ ಅಭಿಪ್ರಾಯ.

ತರಕಾರಿ ಮತ್ತು ಹಣ್ಣುಗಳಿಗಿಂತ ಬೆಳೆಗಳಿಗೆ ಹೆಚ್ಚು ಲಕ್ಷ್ಯವು ಅವಶ್ಯ. ವಿವೇಕಿಗಳಾದ ಜನರ ಬೆಂಬಲದಿಂದ, ತನ್ನ ಅವಿವೇಕದ ಫಲವಾಗಿ ತನ್ನ ಸಂಪಾದನೆಯನ್ನು (ಅನ್ಯಾಯದ ರೂಪದಲ್ಲಿ) ಕಳೆದುಕೊಳ್ಳುವನು. ಐಕ್ಯಮತ್ಯಕ್ಕೆ ಗ್ರಾಮಗಳಲ್ಲಿ ತರುಣ ವಿದ್ಯಾಭ್ಯಾಸವನ್ನು ನಡೆಸುವುದು ಅತ್ಯಾವಶ್ಯಕ. ಗ್ರಾಮೋಭಿವೃದ್ಧಿಯ ಪುನರ್ಘಟನೆಯ ಮಾರ್ಗದಲ್ಲಿ ಈ ಸೂಚನೆಗಳು ಅವಶ್ಯವೆಂದು ನನಗೆ ತೋರುತ್ತದೆ.

(1) ನೂಲುವುದೂ, ನೇಯುವುದೂ,

(2) ತಾರುಣ್ಯ ವಿದ್ಯಾಭ್ಯಾಸ.

(3) ಐಕ್ಯಮತ್ಯದ ಕಟ್ಟಳೆಗಳನ್ನು ಹರಡುವುದು.

(4) ಶಾಲೆಪಲ್ಯಗಳ ಬೆಳವಣಿಗೆ,

(5) ಆರೋಗ್ಯವನ್ನು ಕಲ್ಪಿಸುವುದು,

(6) ವ್ಯವಸಾಯ ಧರ್ಮ. (7) ನಿರ್ಮಲವಾದ, ಒಳ್ಳೆಯ ನೀರಿನ ಅವಶ್ಯಕತೆ,

(8) ಅಫೀಮು ಮತ್ತು ಮದ್ಯಪಾನವನ್ನು ವರ್ಜಿಸುವಿಕೆ.

["ದಿ ಸರ್ವೆಂಟ್" ಎಂಬ ಪತ್ರಿಕೆಯಲ್ಲಿ ಬರೆದ ಲೇಖನದ ಸಾರಾಂಶ]

ಇಂಡಿಯಾದಲ್ಲಿ ಶಿಶುಮರಣ.

ಎಷ್ಟೇ ಎಳೆ ಮಗುವಾಗಿರಲಿ, ಅಥವಾ ಬೆಳೆದಿರಲಿ, ತನ್ನ ಮಗುವು ಸತ್ತದ್ದರಿಂದ ತಾಯಿ ಗುಂಟಾಗುವ ದುಃಖವು, ಎಲ್ಲಾ ವಿಧವಾದ ದುಃಖಗಳಿಗಿಂತಲೂ ಅಸಹ್ಯವಾದುದು. ಈ ಶಿಶುಮರಣದಿಂದುಂಟಾಗುವ ಅನರ್ಥವು ಇಂಡಿಯಾದೇಶದಲ್ಲಿರುವಂತೆ ಬೇರೆ ಯಾವ ದೇಶಗಳಲ್ಲಿಯೂ ಇಲ್ಲ. ಇದಕ್ಕೆ [illegible] ಅಂಕಿಅಂಶಗಳು [illegible], ಈ ದೇಶದಲ್ಲಿ [illegible] ನಾವು [illegible] ಪ್ರತಿವರ್ಷ [illegible] ಲಕ್ಷಕ್ಕಿಂತಲೂ [illegible] ಎಂದು ತಿಳಿದು ಬರುವುದು. ಇದೇ ವಿಷಯವನ್ನು ಕುರಿತು ಇಂಡಿಯಾ ಸರ್ಕಾರದಿಂದ ಪ್ರಕಟಿಸಲ್ಪಟ್ಟ "1922—23ನೆಯ ವರ್ಷಗಳಲ್ಲಿ ಇಂಡಿಯಾ ದೇಶದ [illegible]" ರಿಪೋರ್ಟಿನಲ್ಲಿ ಈ ಕೆಳಗೆ ಕಂಡ ವಿಷಯಗಳು ಕಾಣಲ್ಪಡುವುವು.

[illegible] ಮಕ್ಕಳ [illegible] ಜೀವದ ಮಕ್ಕಳ [illegible] ಅನಾರೋಗ್ಯ ಕಾರಣಗಳು [illegible] ಗಿರುವುದರಿಂದ [illegible] ಜನಸಂಖ್ಯೆಯು ವಾಸ್ತವವಾದ [illegible] ಇಂಡಿಯಾದಲ್ಲಿ ಹುಟ್ಟುವ ಮಕ್ಕಳಲ್ಲಿ, ತಮ್ಮ ಮೊದಲನೆಯ ವಯಸ್ಸಿನಲ್ಲಿಯೇ ನಾಲ್ಕಕ್ಕೆ ಒಂದರಂತೆ ಸಾಯುವರೆಂದು ಹೇಳಬಹುದು. ಜನಸಾಂದ್ರತೆ ಹೆಚ್ಚಿನ ಪಟ್ಟಣಗಳಲ್ಲಿ ಅದರಲ್ಲಿಯೂ ಕೈಗಾರಿಕೆಗಳು ಪ್ರಬಲವಾಗಿರುವ ಪಟ್ಟಣಗಳಲ್ಲಿ ಮರಣ ಸಂಖ್ಯೆಯು ಇನ್ನೂ ಅಧಿಕವಾಗಿದೆ.

ದೊಡ್ಡ ಪಟ್ಟಣಗಳ ಅದರಲ್ಲಿಯೂ ಕೈಗಾರಿಕೆಗಳು ವಿಶೇಷವಾಗಿರುವ ಪ್ರದೇಶಗಳ ಶಿಶುಮರಣ ಸಂಖ್ಯೆಯನ್ನು, ಪಾಶ್ಚಾತ್ಯದೇಶಗಳಲ್ಲಿ ಮತ್ತು ಅಮೇರಿಕ ದೇಶದಲ್ಲಿ ದೊಡ್ಡ ಪಟ್ಟಣಗಳ ಮರಣ ಸಂಖ್ಯೆಯೊಡನೆ ಹೋಲಿಸಿ ನೋಡಿದರೆ ನಮ್ಮ ದೇಶದ ಶಿಶುಮರಣ ಸಂಖ್ಯೆಯು ಅತ್ಯಂತ ಹೃದಯವಿದ್ರಾವಕವಾಗಿ ಮಾಡುವುದು. 1921ನೆಯ ಇಸವಿಯಲ್ಲಿ ಪ್ರಪಂಚದ 8 ದೊಡ್ಡ ಪಟ್ಟಣಗಳಲ್ಲಿ ಮರಣ ಸಂಖ್ಯೆಯು ಈ ರೀತಿಯಾಗಿದ್ದಿತು.

1.	ಕ್ರಿಸ್ಟಿಯಾನಿಯ	1 ಸಾವಿರಕ್ಕೆ	54
2.	ನ್ಯೂಯಾರ್ಕ್	,,	71
3.	ಲಂಡನ್	,,	80
4.	ಪಾರಿಸ್ ಹಿಲ್ಸ್	,,	95
5	ಬರ್ಲಿನ್	,,	135
6,	ಕಲೋನ್	,,	140
7.	ವಿಯನಾ	,,	146
8.	ಬೊಂಬಾಯಿ	,,	666

1922 ಮತ್ತು 1923ನೆಯ ಇಸವಿಯಲ್ಲಿ ಬೊಂಬಾಯಿಯಲ್ಲಿ ಮರಣಸಂಖ್ಯೆಯು ಸುಮಾರು 100ಕ್ಕಿಂತ ಸ್ವಲ್ಪ ಹೆಚ್ಚು ಸಂಖ್ಯೆಗೆ ತಗ್ಗಿದ್ದಿತು. ಆದರೆ ಈ ಸಂಖ್ಯೆಯನ್ನು ಇತರ ರಾಜ್ಯಗಳಲ್ಲಿ ತಗ್ಗಿದ ಸಂಖ್ಯೆಯೊಡನೆ ಹೋಲಿಸಿದರೆ ಅದು ಗಣನೀಯವೇ ಅಲ್ಲ.

ಇಂಡಿಯಾದೇಶದಲ್ಲಿ ಇಷ್ಟು ಹೆಚ್ಚು ಸಂಖ್ಯೆಯ ಮರಣವಾಗುವುದಕ್ಕೆ ಕಾರಣವೇನು? ನಮ್ಮ ಜನಾಂಗದಲ್ಲಿ ಅದನ್ನು ನಿವಾರಿಸಲು ಯಾವೇನು ಮಾಡಬೇಕು?

ನನಗೆ ತೀರಿದವುಗಳಿಗೆ —

(1) ನಮ್ಮ ಸ್ತ್ರೀಯರಿಗೆ ಹೆರಿಗೆ ಮಾಡುವ ಕ್ರಮವೂ, ಉಪಚಾರ ಕ್ರಮವೂ ತಿಳಿಯದಿರುವುದು.

(2) ತಾಯಿಯರಿಗೂ ಅವರಿಂದ ಮಕ್ಕಳಿಗೂ ಪುಷ್ಟಿಕರವಾದ ಆಹಾರವಿಲ್ಲದಿರುವುದು.

(3) ತಾಯಿಯರು ತಮ್ಮ ಮಕ್ಕಳ ವಿಚಾರದಲ್ಲಿ ಕಾಯಿಲೆಯ ಗಮನವನ್ನು ತೆಗೆದುಕೊಳ್ಳದಿರುವುದು.

(4) ಮಕ್ಕಳ ವಿಷಯದಲ್ಲಿ ಉಪಚಾರ ಕ್ರಮಗಳ ಮತ್ತು ಇತರ ಎಚ್ಚರಿಕೆಯ ಗಮನವನ್ನಿಡದಿರುವುದು.

ಇವು ಮುಖ್ಯಕಾರಣಗಳು. ಅಲ್ಲದೆ—

(1) ಚಿಕ್ಕವಯಸ್ಸಿನಲ್ಲಿ ವಿವಾಹಮಾಡುವುದು.

(2) ಸ್ತ್ರೀಯರಿಗೆ ವಿದ್ಯಾಭ್ಯಾಸವಿಲ್ಲದಿರುವುದು.

(3) ಜನರ ದಾರಿದ್ರ್ಯಕ್ಕೆ ಕಿವಿಗೊಡದಿರುವುದು, ಇವೂ ಮುಖ್ಯ ಕಾರಣಗಳು.

ಸರಕಾರವೇ ಇದನ್ನು ಗಮನಿಸಿ ಇದರ ನಿವಾರಣೆಗೆ ಪ್ರವರ್ತಿಸುವವರೆಗೂ ನಾವು ನಿರೀಕ್ಷಣೆ ಮಾಡುತ್ತಿದ್ದರೆ ಇವುಗಳನ್ನು ನೀಗಿಸುವುದಸಾಧ್ಯವು. ಈಗಿನ ಸ್ವರಾಜ್ಯಪಕ್ಷದವರು ಭಾವಿಸಿರುವಂತೆ ಮಂತ್ರಾಲೋಚನಸಭೆಗಳಲ್ಲಿಯೂ, ನಿಯಮ ನಿರ್ಮಾಣಸಭೆಗಳಲ್ಲಿಯೂ ಹೋರಾಡುವ ಸದಸ್ಯರು ಸ್ವಲ್ಪ ಮಟ್ಟಿಗೆ ಅನುಕೂಲಪಡಿಸಬಹುದು. ಆದರೆ ಪ್ರಜೆಗಳು ಅವರೊಡನೆ ಸೇರಿ ಅವರಿಗೆ ಸಹಾಯ ಮಾಡದಿದ್ದರೆ, ಅವರೂ ಏನೂ ಮಾಡಲಾರರು. ನಮ್ಮ ಜನಾಂಗವು ಕ್ರಮೇಣ ಕ್ಷೀಣಿಸಲು ಕಾರಣವಾದ ಈ ಮರಣ ಸಂಖ್ಯೆಯನ್ನು ಕಡಿಮೆ ಮಾಡುವಂತೆ ಜನರು ನಿರ್ಧರಿಸಬೇಕು.

ಪುರುಷರಿಗಿಂತಲೂ ಸ್ತ್ರೀಯರು ಎಚ್ಚರಗೊಂಡರೆ, ಬೇಗನೆ ಈ ಶಿಶುಮರಣವನ್ನು ಕಡಿಮೆ ಮಾಡಬಹುದು. ಆದರೆ ಈ ವಿಷಯದಲ್ಲಿ ಅವರಿಗೆ ಕರ್ತವ್ಯತಾ ಜ್ಞಾನವುಂಟಾಗಬೇಕು. ವಿದ್ಯಾವಂತರಾದ ಸ್ತ್ರೀಯರು ಮುಂದೆ ಬಂದು ದೇಶಹಿತಕ್ಕಾಗಿಯೂ, ಮನುಷ್ಯ ಸೌಖ್ಯಕ್ಕಾಗಿಯೂ ತಮ್ಮ ಸಹೋದರಿಯರನ್ನು ಒಟ್ಟುಗೂಡಿಸಬೇಕು. ಈ ರೀತಿ ಮಾಡಿದರೆ ಮರಣಸಂಖ್ಯೆಯನ್ನು ಕಡಿಮೆ ಮಾಡುವುದಲ್ಲದೆ, ತಮ್ಮ [illegible] ಈಗಿನ ವೃದ್ಧಿಕ್ಕಿಂತ ಅತಿಶಯಕ್ಕೆ ತಂದು [illegible]. ಇಲ್ಲಿನ ಸ್ತ್ರೀಯರು ಒಟ್ಟುಗೂಡುವುದರಿಂದ ಮುಂದೆ ಹೇಳುವ ಇನ್ನೂ ಅನೇಕ ಕಾರ್ಯಗಳನ್ನು ಸಾಧಿಸಬಹುದು.

(1) ಈ ಕಾಲದ [illegible] ಅವರ ಕೈಯಲ್ಲಿರುವುದು. [illegible] ಪ್ರಬೋಧನ [illegible] ಯಾರಿಂದ ಸಾಗಬೇಕೋ ಅವರ [illegible] ವಿದ್ಯಾಭ್ಯಾಸವನ್ನು ಕೊಟ್ಟು, [illegible] ಅವರ [illegible] ಪ್ರೀತಿಸಿದಂತೆ ದೇಶ [illegible] ಕೆಲಸ ಮಾಡುವಂತೆ, ಅವರನ್ನು [illegible] ತಮ್ಮ ಸಂಸಾರದ ಸ್ತ್ರೀಯರನ್ನು [illegible] ಅವರು ತಮ್ಮ ಜೀವಿತಕಾಲದ [illegible] ಶಕ್ತಿಯನ್ನೂ [illegible] ಅವುಗಳ [illegible] ತಮ್ಮ ದೇಶಹಿತಕ್ಕಾಗಿ ಉಪಯೋಗಿಸಬೇಕೆಂಬುದು [illegible]. ಆಗಲೇ ನಮ್ಮ ಸಹೋದರಿಯರು ದೇಶಹಿತವನ್ನು ಕೋರುವ ಸ್ಥಿತಿಗೆ ಬರುವರು. ಈಗಲಾದರೋ, ಅವರಿಗೆ ತಮ್ಮ ಸಮಾಜದ ಕಷ್ಟನಷ್ಟಗಳೂ ತಿಳಿಯದು. ಇತರ ಜನರ [illegible] ಸ್ವಲ್ಪವೂ ತಿಳಿಯದು. ತನ್ನ ದೇಶ ಗೌರವಕ್ಕೆ [illegible] ತಿಳಿದವರೆಯೇ ಅವೇರಿಕದವರಾಗಲಿ, ಯುರೋಪಿನವರಾಗಲಿ, ಯಾವ ಪುರುಷನಾಗಲಿ, ಸ್ತ್ರೀಯರಾಗಲಿ ತುಚ್ಛನಾಗಿರುವುದಿಲ್ಲ. ತಾವು ಸಮಸ್ತ ಜಗಳದಲ್ಲಿ ಭಾಗಿಗಳಾಗುವುದಲ್ಲದೆ ತಮ್ಮ ದೇಶದ ಗೌರವವನ್ನು ಕಾಪಾಡಲು ತಮ್ಮ ಮಕ್ಕಳೂ ಉಭಯದ ಇತರ ಜನರೂ ಪ್ರವೇಶಿಸುವಂತೆ ಮಾಡುವರು. ಇಂಡಿಯಾ ದೇಶದ ಸ್ತ್ರೀಯರು ಅಜ್ಞಾನವಾದರೂ ದೇಶಹಿತಕ್ಕಾಗಿ ಯಾವ ಕೆಲಸವನ್ನು ಮಾಡಗೊಡಿಸರು. ಆದುದರಿಂದ ಸ್ತ್ರೀಯರು ವಿದ್ಯಾವತಿಯರಾಗಿ ಸೇರಬೇಕು.

(2) ಆಗ ಇವರಿಂದ ದೇಹಶಕ್ತಿಯಲ್ಲಿಯೂ ಮಾನಸಿಕ ಶಕ್ತಿಯಲ್ಲಿಯೂ ಅಧಿಕಬಲವುಳ್ಳವರು ಹುಟ್ಟುವರು. ತಮ್ಮ ಎಳೆಯ ಮಕ್ಕಳು ಸುಶಿಕ್ಷಿತರಾಗುವಂತೆ ಅವರು ಬಹಳ ಸುಲಭವಾಗಿ ನೋಡಿಕೊಳ್ಳಬಹುದು. ಪ್ರತಿಯೊಬ್ಬರ ಗುಣಗಳನ್ನೂ ವೃದ್ಧಿಪಡಿಸಲು ಅತ್ಯಂತ ಅವಶ್ಯಕವಾದ ಗೃಹಶಿಕ್ಷಣವು ಅವರ ಕೈಯಲ್ಲಿದೆ. ಈಗ ನಮ್ಮ ದೇಶದಲ್ಲಿ ಮೊದಲು ಬೇಕಾಗಿರುವುದೂ ಅದೇ! ಇಂಡಿಯಾ ದೇಶದ ಯುವಕರು ನಮ್ಮ ನೀತಿಮಾರ್ಗಗಳನ್ನು ಬಿಟ್ಟು ಬೇರೆ ಮಾರ್ಗಗಳಲ್ಲಿ ಪ್ರವರ್ತಿಸಿರುವರು. ದೇಹಶಕ್ತಿ, ನೀತಿ ಮತ್ತು ಮಾನಸಿಕ ಶಕ್ತಿಗಳಲ್ಲಿ ಕೇವಲ ದುರ್ಬಲರಾಗಿ ನಿರಾಶರಾಗಿರುವರು. ಇದು ಅವರ ತಪ್ಪಲ್ಲ, ಅವರು ಬಾಲಕರಾಗಿರುವಾಗ ಅವರ ಮಾತಾಪಿತೃಗಳು ಅವರ ವಿಚಾರದಲ್ಲಿ ವಿಶೇಷ ಗಮನವನ್ನು ಕೊಡದಿರುವುದೇ ಕಾರಣ. ನಮ್ಮ ಸಹೋದರಿಯರೂ ಮಾತೆಯರೂ ಶಿಕ್ಷಿತರಾಗಿ ಒಟ್ಟುಗೂಡಿದರೆ, ಇವುಗಳನ್ನು ಕ್ರಮಪಡಿಸಿ ದೇಶೋದ್ಧಾರಕ್ಕೆ ಅವಲಂಬನರಾದ ಆರೋಗ್ಯದೃಢಕಾಯವುಳ್ಳ ಶೂರ ಪುತ್ರರನ್ನು ಪಡೆಯಬಹುದು.

(3) ವಿಶೇಷ ಕಾಲವಿಳಂಬ ಮತ್ತು ತೊಂದರೆಗಳಿಲ್ಲದೆ ತಮ್ಮ ಹೆಣ್ಣು ಮಕ್ಕಳ ವಿವಾಹ ವಯಸ್ಸನ್ನು ಹೆಚ್ಚಿಸಬಲ್ಲರು. ಪ್ರಪಂಚದಲ್ಲಿ ತಾಯಿಯರ ಜವಾಬ್ದಾರಿಯು ಎಷ್ಟೆಂಬುದನ್ನು ಸ್ವಲ್ಪವೂ ತಿಳಿಯದ 12 ಅಥವಾ 13 ವರುಷದ ಹೆಣ್ಣು ಮಕ್ಕಳಿಗೆ ಹುಟ್ಟಿದ ಮಗುವಿನ ದೇಹಪುಷ್ಟಿಯೂ, ಮಾನಸಿಕ ಶಕ್ತಿಯೂ ಎಷ್ಟಿರಬೇಕು? ದೇಹಪ್ರವೃತ್ತಿಯು ದೇಹವು ಪಕ್ವವಾಗಿ ಬೆಳೆಯುವುದಕ್ಕೆ ಮೊದಲೇ ವಯಸ್ಸಿನಲ್ಲಿಯೇ ಮಗುವನ್ನು ಪಡೆಯುವ ತಾಯಿ ಮಕ್ಕಳೆಲ್ಲರಿಗೂ ಅಕಾಲಮರಣಕ್ಕೆ ಹೇತುವಾಗುವರು. ಎಳೆಯವಯಸ್ಸಿನ ಸ್ತ್ರೀಯು ಒಡನೆ ಪ್ರಯಾಸದಿಂದ ಹುಟ್ಟಿದ ದುರ್ಬಲರಾದ ಮಕ್ಕಳನ್ನು ಹಡೆಯುವಳು. ಅದೂ ಅಲ್ಲದೆ ಆಗ ತಿಳುವಳಿಕೆಯೂ ಇಲ್ಲದಿರುವುದರಿಂದ, ತಾಯಿಯರಿಗೆ ತಮ್ಮ ಮಕ್ಕಳನ್ನು ಉಪಚರಿಸುವ ಕ್ರಮವು ಸ್ವಲ್ಪವೂ ತಿಳಿಯದು. ಇದರಿಂದ ಮಗುವೂ ನಷ್ಟವಾಗುವುದಲ್ಲದೆ ಪ್ರಾಯಶಃ ಇಬ್ಬರಿಗೂ ಅಕಾಲ ಮರಣಕ್ಕೆ ಗುರಿಯಾಗುವರು. ಈ ದೇಶದ ಹೆಣ್ಣು ಹುಡುಗಿಯರ ವಿವಾಹ ವಯಸ್ಸನ್ನು ಹೆಚ್ಚಿಸುವುದೇ ಇದಕ್ಕೆ ನಿವಾರಣೆ. ನಮ್ಮ ಹಿರಿಯರು ತಮ್ಮ ಹುಡುಗಿಯರಿಗೆ 15-16 ವಯಸ್ಸಿಗೆ ಪೂರ್ವಭಾವಿಯಾಗಿ ನಿಶ್ಚಯ ಮಾಡಬೇಕು. ಪೂರ್ವಾಚಾರಗಳೆಲ್ಲ ಕಡಿಮೆಯಾದ, ಅವರನ್ನು ಪಾಠಶಾಲೆಗಳಿಗೆ ಕಳುಹಿಸಬೇಕು. ಹೀಗೆ ಮಾಡಿದರೆ ಮಾತ್ರ ಅಂದರೆ, ಆಗ ಅವರು ತಮ್ಮ ದೇಶವನ್ನು ಕಾಪಾಡುವರು.

(4) ಶಿಶು ಮರಣ ಸಂಖ್ಯೆಯನ್ನು ನಿರ್ಧರಿಸುವುದರಲ್ಲಿ ಆರ್ಥಿಕ ವಿಷಯವೂ ಬಹಳ ಮುಖ್ಯವಾದುದು. ಮಾತಾಪಿತೃಗಳ ಸಂಪಾದನೆಯು ಬಹಳ ಕಡಿಮೆಯಾಗಿರುವಾಗ, ಸಣ್ಣ ಮಕ್ಕಳ ಮರಣಸಂಖ್ಯೆಯೂ ಪ್ರಬಲವಾಗುವುದು. ದಾರಿದ್ರ್ಯ ದೋಷದಿಂದ ಒಂದೇ ಕೋಣೆಯಲ್ಲಿ ಒಂದು ಸಂಸಾರದ ಜನರೆಲ್ಲ ವಾಸಿಸುತ್ತಿದ್ದಲ್ಲಿ, ಜನಬಾಹುಳ್ಯವು ಹೆಚ್ಚಿ ವಿಸ್ತಾರವಾದ ಮನೆಗಳಲ್ಲಿ ವಾಸಿಸುವವರಿಗಿಂತಲೂ ಇವರಲ್ಲಿ ಮರಣಸಂಖ್ಯೆಯು ಒಂದಕ್ಕೆ ಎರಡುವರೆಯಷ್ಟಾಗುವುದೆಂದು ಅಮೇರಿಕ ಸಂಯುಕ್ತ ಸಂಸ್ಥಾನದಲ್ಲಿ ನಿಶ್ಚಿತವಾಗಿದೆ. ಸ್ತ್ರೀಯರು ಗರ್ಭಿಣಿಯರಾಗಿದ್ದಾಗ ಮನೆಯಲ್ಲಿ ಕೆಲಸಮಾಡುವುದರಿಂದ 1000 ಜನಕ್ಕೆ 16ರಂತೆ ಮರಣಸಂಖ್ಯೆಯು ಅಧಿಕವಾಗಿದೆ.

ಒಬ್ಬ ಯಜಮಾನನಿಗೆ 450 ಡಾಲರುಗಳ ವರಮಾನವಿದ್ದಾಗ, ಅವನ ಕುಟುಂಬದಲ್ಲಿ ನಡೆಯುತ್ತಿದ್ದ ಮರಣಸಂಖ್ಯೆಗಿಂತಲೂ, ಅವನ ವರಮಾನವು 1250 ಡಾಲರಿಗೆ ಹೆಚ್ಚಿದಾಗ, ಆ ಮರಣಸಂಖ್ಯೆಯು 3 ಪಾಲಿನಷ್ಟು ಕಡಿಮೆಯಾಯಿತಂತೆ.

ಇಂಡಿಯಾದೇಶದ ಅನೇಕ ಕುಟುಂಬದ ವರಮಾನವು ವರುಷಕ್ಕೆ ರೂ 33 ಮಾತ್ರವಾಗಿರುವುದೆಂದು ತಿಳಿದ ಮೇಲೆ, ಇಂಡಿಯಾದೇಶದಲ್ಲಿ ದಾರಿದ್ರ್ಯವು ಮಕ್ಕಳ ಮರಣಕ್ಕೆ ಮಾತ್ರವಲ್ಲದೆ, ಬೆಳೆದವರ ಮರಣಕ್ಕೂ ಹುಟ್ಟುಮಟ್ಟಿಗೆ ಕಾರಣವಾಗಿರಬಹುದೆಂದು ವಾಚಕರೇ ಊಹಿಸಬಹುದು.

ಈ ಧನಲೋಪವನ್ನು ಪರಿಹರಿಸುವುದು ಅಷ್ಟು ಸುಲಭವಲ್ಲ. ದೇಶದ ಮುಖ್ಯಸ್ಥರು ಇದನ್ನು ಗಮನಿಸಬೇಕು. ವಿದ್ಯಾವಂತರಾಗಿ ಒಟ್ಟುಗೂಡಿದ ಸ್ತ್ರೀಯರು ಪುರುಷರಿಗೆ ಸಹಕಾರಿಗಳಾಗಿ ಸಹಾಯಮಾಡಿದರೆ, ಇದನ್ನು ಜಾಗ್ರತೆಯಾಗಿಯೇ ಹೋಗಲಾಡಿಸಬಹುದು.

(5) ನಮ್ಮ ಸ್ತ್ರೀಯರಿಗೆ ಈ ಇಂಡಿಯಾದೇಶದ ಸರಿಯಾದ ಸ್ಥಿತಿಯು ತಿಳಿಯದಿರುವುದರಿಂದಲೂ, ವಿದ್ಯಾವಿಹೀನತೆಯಿಂದಲೂ ದೇಶೋದ್ಧರಣದ ಹೋರಾಟದಲ್ಲಿ ಇವರು ಭಾಗಿಗಳಾಗಲು ಸಾಧ್ಯವಿಲ್ಲದಿದೆ, ಅವರು ವಿದ್ಯಾರ್ಜನೆಯಿಂದ ಒಟ್ಟುಗೂಡಿ, ಇಂಡಿಯಾದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಕೈಲಾದ ಪ್ರಯತ್ನವನ್ನು ಮಾಡಿದರೆ, ನಮಗೆ ಸ್ವರಾಜ್ಯವು ಅರ್ಧಭಾಗ ವಶವಾದಂತೆಯೇ ಎಣಿಸಬಹುದು.

ನಮ್ಮ ಸ್ತ್ರೀಯರನೇಕರು ಸಂಘಗಳಾಗಿ ಸೇರಿ, ತಮ್ಮ ಸಮೂಹಕ್ಕೂ ಮತ್ತು ಆದರಿಂದ ಇಂಡಿಯಾದೇಶಕ್ಕೂ ಅಭಿವೃದ್ಧಿಯಾಗುವಂತೆ ಮನಃಪೂರ್ವಕವಾಗಿ ಕೆಲಸಮಾಡಲೆಂದು ಹಾರೈಸುತ್ತೇವೆ.

ಪಿ. ಪ.

ಇತಿಹಾಸಿಕ ಕಥೆಗಳು.

ಸರೋಜ ಬಾಲೆ.

(ಲೇಖಕ ಮ ಸು ಮಡಿಕೇರಿ)

ಶ್ರೀ ಶಿವಾಜೀ ಮಹಾರಾಜರು ತಮ್ಮ ರಾಜ್ಯವನ್ನು ವಿಸ್ತರಿಸುತ್ತಿದ್ದ ಸಮಯದಲ್ಲಿ ತುರಾನವೆಂಬೊಂದು ಕೋಟೆಯನ್ನು ಒಂದು ದಿನ ಕೈವಶಮಾಡಿಕೊಂಡರು. ಆಗ ಆ ದುರ್ಗದಲ್ಲೊಂದು ದುರ್ಗಾದೇವಾಲಯವನ್ನು ಕಟ್ಟಿಸಿ, ಜನಾರ್ದನದೇವನೆಂಬೊಬ್ಬ ಅರ್ಚಕನನ್ನು ಪೂಜೆಮಾಡಲು ಇಟ್ಟರು. ಮಕ್ಕಳಿಲ್ಲದಿದ್ದ ಅರ್ಚಕನು ಸರೋಜಬಾಲೆಯೆಂಬೊಬ್ಬ ಹುಡುಗಿಯನ್ನು ದತ್ತು ತೆಗೆದುಕೊಂಡು ಸಾಕುತ್ತಿದ್ದನು. ಕೆಲವು ದಿವಸಗಳಲ್ಲೇ ಅರ್ಚಕನ ಪತ್ನಿಯು ತೀರಿಕೊಂಡಳು. ಅಂದಿನಿಂದ ಅರ್ಚಕನಿಗೆ ಅವಳು ಸರ್ವಸ್ವವಾದಳು. ಸಾಕುತಂದೆಯ ಸೇವೆಯನ್ನು ಸರೋಜೆಯು ಸಾಂಗವಾಗಿ ನೆರವೇರಿಸುತ್ತಿದ್ದಳು. ದೇವಾಲಯಕ್ಕೆ ಬೇಕಾಗಿದ್ದ ಹೂಗಳನ್ನು ಆದರ ಸುತ್ತಲೂ ಇದ್ದ ಹೂದೋಟದಿಂದ ಈ ಬಾಲೆಯು ಯಾವತ್ತೂ ಕೊಯ್ಯುತ್ತಿದ್ದಳು.

ಮಹಮದಿಯರೊಂದಿಗೆ ಯುದ್ಧಮಾಡಲು ದೇವೀದರ್ಶನ ಮಾಡಿಕೊಂಡು, ಆಶೀರ್ವಾದವನ್ನು ಪಡೆಯಲು, ಶಿವಾಜೀ ಮಹಾರಾಜರಿಂದ ಕಳುಹಿಸಲ್ಪಟ್ಟ ರಘುನಾಥನೆಂಬೊಬ್ಬ ಹವಲ್ದಾರನು ಜನಾರ್ದನ ದೇವನಲ್ಲಿಗೆ ಬಂದನು. ದಾರಿ ನಡೆದು ಬಳಲಿದ್ದುದರಿಂದ, ದೇವಸ್ಥಾನದತೋಟದ ಒಂದು ಕಲ್ಲಮೇಲೆ ಸವಾರನು ಕೂತಿದ್ದನು. ಆಗ ಸರೋಜೆಯು ಆತುರದಿಂದ ಆ ತೋಟದಲ್ಲಿ ಹೂ ಕೊಯ್ಯುತ್ತಿದ್ದಳು. ಆ ಹದಿಮೂರು ವರ್ಷದ ಸುಂದರಿಯ ಮೇಲೆ ಇವನ ಕಣ್ಣುಗಳು ಬಿದ್ದವು. ಹೂ ಕೊಯ್ಯುತ್ತಿದ್ದವಳಿಗೆ ಇದು ತಿಳಿಯಲಿಲ್ಲ; ಇಬ್ಬರೂ ಒಬ್ಬರನ್ನೊಬ್ಬರು ನೋಡಿದರು.

ಅನಂತರ ರಘುನಾಥನು ಪೂಜಾರಿಯನ್ನು ಕಂಡು, ಯಜಮಾನನ ಅಪ್ಪಣೆಯನ್ನು ಹೇಳಿದನು. ಪೂಜಾರಿಯು ಇಷ್ಟದ ಮೇರೆ ಅಂದು ಅಲ್ಲೇ ಇಳಿಸಿಕೊಂಡನು. ರಾತ್ರಿ ಸರೋಜೆಯೇ ಭಕ್ಷ್ಯಗಳನ್ನು ಬಡಿಸಿದಳು. ಆದರೆ ರಘುನಾಥನಿಗೆ ಮನಸ್ಸಮಾಧಾನವೇ ಇರಲಿಲ್ಲ. ಕೆಲವು ತುತ್ತುಗಳನ್ನು ಮಾತ್ರ ಗಬಗಬನೆ ನುಂಗಿ, ನಿದ್ರೆಮಾಡಲು ಹೋದನು; ನಿದ್ರೆ ಬರಲೇ ಇಲ್ಲ. ಹಾಗೆಯೇ ಎದ್ದು ಹೂದೋಟದಲ್ಲಿದ್ದ ಒಂದು ಮುತ್ತಿನಹಾರವು ನೆಲದಲ್ಲಿ ಬಿದ್ದುದನ್ನು ಕಂಡನು. ಅದು ಒಂದು ಶುಭಸೂಚನೆಯೆಂದು ತಿಳಿದುಕೊಂಡು, ಹಾಗೆಯೇ ಹೋಗಿ ಮಲಗಿ ನಿದ್ರೆಮಾಡಿದನು. ಮರುದಿನ ಬೆಳಗ್ಗೆ ಪೂಜಾರಿಯ ಅಪ್ಪಣೆಯನ್ನು ಪಡೆದುಕೊಂಡು ಹೋಗುವುದರ ಮೊದಲು ಸರೋಜೆಯನ್ನು ಸ್ವತಃ ಕಂಡು ಮುತ್ತಿನ ಹಾರವನ್ನು ಕೊಡಬೇಕೆಂದು ನಿಶ್ಚಯಿಸಿದನು. ಅದೇ ರೀತಿಯಲ್ಲಿ ರಘುನಾಥನು ಸರೋಜೆಯನ್ನು ಹೂದೋಟದಲ್ಲಿ ಕಂಡು, ಕೆಲವು ಮಾತುಗಳನ್ನಾಡಿ ಹಾರವನ್ನು ಕೊಟ್ಟನು.

"ಹಾರವನ್ನು ಕೊಟ್ಟದ್ದಕ್ಕಾಗಿ ನಿಮಗೆ ನಾನು ಬಹಳ ಋಣಿಯಾಗಿದ್ದೇನೆ. ಈ ದೇವಸ್ಥಾನಕ್ಕೆ ಇನ್ನು ಮುಂದೆ ಬಂದರೆ, ಇಲ್ಲಿ ಬಂದು ಹೋಗಿ" ಎಂದು ಕರ್ಕಶಸ್ವರದಿಂದನುಡಿದಳು.

"ನಾನು ಇನ್ನು ಮುಂದೆ ಇಲ್ಲಿಗೆ ಬರುತ್ತೇನೋ ಇಲ್ಲವೋ, ದೇವರೇ ಬಲ್ಲ! ಆದರೆ ನಿನ್ನ ಔದಾರ್ಯ, ಆತಿಥ್ಯ ಮುಖ ಯಾವತ್ತೂ ನನ್ನ ಮನಸ್ಸಿನಲ್ಲೇ ಇರುವುದು, ಮರೆಯಲಾರೆನು" ಎಂದು ರಘುನಾಥನು ಹೇಳಿ ಹೊರಟು ಹೋದನು. ಬಾಲೆಯು ಹೆಚ್ಚು ಮಾತನಾಡದವಳಾದಳು. ನಯನಗಳಿಂದ ಕಣ್ಣೀರು ತೊಟ್ಟಿಕ್ಕಿದವು. ಆ ಅಶ್ವಾರೋಹನು ಅಗೋಚರವಾಗುವವರೆಗೂ ಅತ್ತ ಕಡೆಯೇ ನೋಡಿದಳು.

ಅಂದಿನಿಂದ ಸರೋಜೆಯಲ್ಲಿ ಮಹತ್ತಾದ ಬದಲಾವಣೆಗಳಾಗುತ್ತಿದ್ದವು. ಅವಳು ಹೂದೋಟದಲ್ಲಿ ಹೂ ಕೊಯ್ಯಲು ಬಂದಾಗಲೆಲ್ಲಾ ಸಂತೋಷಾಲೋಚನಗಳಲ್ಲಿ ಮುಳುಗಿಹೋಗುತ್ತಿದ್ದಳು. ಒಂದು ಸಲ ರಘುನಾಥನು ಯುದ್ಧಗಳಲ್ಲಿ ರಣಧೀರನಾಗಿ ಗೆದ್ದು ಬಂದಹಾಗೂ ಇನ್ನೊಂದು ಸಮಯ ಶ್ವೇತಾಶ್ವದ ಮೇಲೆ ಕುಳಿತುಕೊಂಡು ಅವಳ ಸಮೀಪ ಬಂದಹಾಗೂ, ಮತ್ತೊಂದು ಬಾರಿ ತನ್ನ ತಂದೆಯು ತನ್ನನ್ನು ರಘುನಾಥನಿಗೆ ಕೊಟ್ಟು ಮದುವೆಮಾಡಲು ಒಪ್ಪಿದ ಹಾಗೂ, ಮದುವೆಯಾಗುತ್ತಿದ್ದ ಹಾಗೂ, ಆಲೋಚನಾತರಂಗದಲ್ಲಿ ಬಿದ್ದು ಯೋಚಿಸುತ್ತಿದ್ದಳು. ಈ ರೀತಿಯಲ್ಲಿ ವಿವಿಧ ವಿಚಾರಗಳು ಒಂದೇರೀತಿಯಲ್ಲಿ ಅವಳ ಮನಸ್ಸನ್ನು ಹೊಕ್ಕುತ್ತಿದ್ದವು. ಆದರೆ ಇವುಗಳೆಲ್ಲವೂ ಸ್ವಪ್ನಗಳಾಗಿದ್ದು, ತಿಂಗಳುಗಳು ಕಳೆದು ಹೋದವು.

ಅಂತು ಶಿವಾಜಿ ಮಹಾರಾಜರ ಅಪ್ಪಣೆಮೇರೆ ಇನ್ನೊಂದು ದಿನ ಜನಾರ್ದನನನ್ನು ಕರೆದುಕೊಂಡು ಹೋಗಬೇಕೆಂದು ರಘುನಾಥನು ತುರಾನ ಕೋಟೆಗೆ ಬಂದನು. ತಾನೂ ರಘುನಾಥನೊಂದಿಗೆ ಹೋಗುವೆನೆಂದು ತಿಳಿದು ಸರೋಜೆಗೆ ಬಹಳ ಸಂತೋಷವಾಯಿತು.

ಅಂದು ರಾತ್ರಿ ಅರ್ಚಕನಿಗೂ ರಘುನಾಥನಿಗೂ ಬಹಳ ಮಾತುಕಥೆಗಳು ನಡೆದವು. ಸವಾರನು ತನ್ನ ಕುಲವೇ ಮೊದಲಾದ ವಿಷಯಗಳನ್ನು ಹೇಳಿದನು. ಇದನ್ನೆಲ್ಲಾ ಪೂಜಾರಿಯು ಸಮಾಧಾನದಿಂದ ಕೇಳಿ "ನೀನು ಕುಲೀನನೆಂದು ನನಗೆ ಗೊತ್ತಿದೆ. ಸರೋಜೆಯೂ ವಿವಾಹ ಯೋಗ್ಯ ಕ್ಷತ್ರಿಯ ಕುಲದವಳು ಈಗಿನ ಯುದ್ಧದಲ್ಲಿ ಮಹಾರಾಜರಿಗೆ ಜಯವಾದರೆ ನಿನಗೆ ಅವಳನ್ನು ಕೊಟ್ಟು ಮದುವೆಮಾಡುವೆನೆ"ಂದನು.

ಕುರುಡನಿಗೆ ಕಣ್ಣುಗಳು ಬಂದರೆ ಎಷ್ಟು ಸಂತೋಷಪಡುವನೋ ಆ ರೀತಿಯಲ್ಲಿ ರಘುನಾಥನು ಆನಂದಿಸಿದನು, ಮರೆಯಲ್ಲಿದ್ದ ಸರೋಜೆಯ ಸಂತೋಷಕ್ಕಂತೂ ಎಣೆಯೇ ಇರಲಿಲ್ಲ! ಮರುದಿನ ಮುಂಜಾನೆ ಮೂವರೂ ಪ್ರಯಾಣ ಬೆಳಸಿದರು. ಅರಮನೆಯು ಸಮೀಪಿಸಿದಾಗ ರಘುನಾಥನು "ಸುಂದರಿ, ನಾಳಿನ ದಿವಸ ನೀನು ಅರಮನೆಯಲ್ಲಿರುವಿ, ನಾನು ರಣರಂಗದಲ್ಲಿರುವೆನು" ಎಂದನು.

ಸರೋಜೆಯು ಕೇಳಿದಳು ಕಣ್ಣುಗಳಲ್ಲಿ ನೀರು ತುಂಬಿತು. ಮೆಲ್ಲನೆ "ದೇವರು ನಿನ್ನನ್ನು ಕಾಪಾಡಲಿ!" ಎಂದಳು.

ರಘು— ಈ ಪಾಪಿಯನು ಮರೆಯ ಬೇಡ!

ಸರೋ— ಹಾ! ಹ್ಯಾಗೆ ತಾನೇ ನಾನು ಮರೆಯಲಿ?

ರಘುನಾಥನು ತರುಣನಾಗಿದ್ದು, ಧೀರನಾಗಿದ್ದನು. ಯಾವತ್ತೂ ಶಿವಾಜಿ ಮಹಾರಾಜರೊಂದಿಗೆ ಇರುತ್ತಿದ್ದನು. ಅಲ್ಲದೆ ಶೈಯಸ್ತಾಖಾನನು ಮಹಾರಾಜರನ್ನು ಎದುರಿಸಿದಾಗ, ಅವರ ಪ್ರಾಣರಕ್ಷಣೆ ಮಾಡಿದ್ದೇ ಇವನು. ಇದೂ ಅಲ್ಲದೆ ಅನೇಕ ಬೇರೆ ಸಮಯಗಳಲ್ಲಿ ಮಹಾರಾಜರು ಇವನ ಧೈರ್ಯವನ್ನು ನೋಡಿ ಬಹಳ ಬಿರುದು ಕೊಟ್ಟು ಮರ್ಯಾದೆ ಮಾಡಿದ್ದನು. ಆಗ ಬಿಜಾಪುರ ಸುಲ್ತಾನನೊಂದಿಗೆ ಯುದ್ಧ ನಡೆಯುತ್ತಿದ್ದಿತು. ಸೈನ್ಯದೊಂದಿಗೆ ಮಹಾರಾಜರೂ, ರಘುನಾಥನೂ ಜನಾರ್ದನದೇವನೂ ಸರೋಜೆಯೂ ಇದ್ದರು. ಯುದ್ಧವಾಗುತ್ತಿದ್ದ ರಾತ್ರಿಗಳಲ್ಲಿ ರಘುನಾಥನು ಅರ್ಚಕ ಮತ್ತು ಅವನ ಮಗಳೆದ್ದೆಡೆಗೆ ಹೋಗಿ ರಣರಂಗದಲ್ಲಾದ ಎಲ್ಲಾ ವಿಷಯಗಳನ್ನು ಹೇಳುತ್ತಿದ್ದನು. ಬಲವಾಗಿ ಕಾಯಲ್ಪಟ್ಟಿದ್ದ ಪರಮೊಂಡಲ ಕೋಟೆಯನ್ನು ರಾತ್ರಿ ಲಗ್ಗೆ ಹತ್ತಿ ಹಿಡಿದುಕೊಳ್ಳಬೇಕೆಂದು ಮಹಾರಾಜರು ಅಪ್ಪಣೆ ಮಾಡಿದ್ದರು. ಅದೇ ಪ್ರಕಾರ ಆ ರಾತ್ರಿ ಸೈನ್ಯವು ಕೋಟೆಯ ಕಡೆಗೆ ಹೋಗುತ್ತಿತ್ತು. ರಘುನಾಥನೂ ಅವರೊಡನೆ ಹೋಗುವುದರ ಬದಲು ಸ್ವಲ್ಪ ಹಿಂದಿನಿಂದ ಹೋಗಿ ಸೈನ್ಯದೊಂದಿಗೆ ಸೇರಿಕೊಂಡನು, ಅಂದು ಕೋಟೆಯನ್ನು ಹತ್ತಿದವರುಗಳಲ್ಲಿ ನಮ್ಮ ಕಥಾನಾಯಕನೇ ಮೊದಲನೆಯವನು. ಅಂದು ಕೋಟೆಯು ಮಹಾರಾಜರ ಕೈವಶವಾಯಿತು. ಕೋಟೆಯಲ್ಲಿದ್ದ ಯವನರೆಲ್ಲರನ್ನೂ ಹಿಡಿದು ಬಂಧಿಸಿದರು. ಆದರೆ ಮಹಾರಾಜರ ಅನೇಕ ಧೀರರು ಬಲಿಯಾದರು.

ಮರುದಿನ ಬೆಳಗ್ಗೆ ಸೆರೆ ಹಿಡಿಯಲ್ಪಟ್ಟ ಎಲ್ಲಾ ಯವನರನ್ನು ಬಿಡಬೇಕೆಂದೂ, ದರ್ಬಾರು ಮುಂದೆ ಕೋಟೆಯ ಮುಖ್ಯಾಧಿಕಾರಿ ಕಿಲ್ಲೇದಾರರನ್ನು ಕರತರಬೇಕೆಂದೂ ಮಹಾರಾಜರು ಅಪ್ಪಣೆಯನ್ನಿತ್ತರು. ಕಿಲ್ಲೇದಾರನನ್ನು ಮಹಾರಾಜರು ಒಂಥ ಮುಕ್ತನನ್ನಾಗಿ ಮಾಡಿ ಆಲಿಂಗಿಸಿ ಎಲ್ಲಿ ಬೇಕಾದರೂ ಹೋಗಬಹುದೆಂದರು.

ಆ ಅಧಿಕ ಆತಿಥ್ಯವನ್ನು ಕಿಲ್ಲೇದಾರನು ನೋಡಿ ಬೆರಗಾಗಿ "ಮಹಾರಾಜರೆ, ನಿಮ್ಮ ಈ ಆತಿಥ್ಯದಿಂದ ನನ್ನನ್ನು ಕಟ್ಟಿಲ್ಲದೆ ಬಂಧಿಸಿರುವಿರಿ. ನಿಮ್ಮ ಗುಟ್ಟುಗಳೆಲ್ಲವೂ ನನಗೆ ನಿನ್ನೆಯೆ ಗೊತ್ತಾದುದರಿಂದ ನಾನು ಯುದ್ಧ ಮಾಡಲು ಸಿದ್ಧನಿದ್ದೆ. ಇಲ್ಲದೇ ಹೋಗಿದ್ದರೆ ನೀವು ಇಷ್ಟು ಜನರುಗಳನ್ನು ಕಳೆಕೊಳ್ಳಲಗತ್ಯವಿರಲಿಲ್ಲ. ನಿಮ್ಮ ಗುಟ್ಟುಗಳೆಲ್ಲವನ್ನು ನಿಮ್ಮೊಬ್ಬ ಸೈನಿಕನು ನನಗೆ ಆಗಿಂದಾಗ ತಿಳಿಸುತ್ತಾ ಬರುತ್ತಿದ್ದನು. ಅವನ ಹೆಸರನ್ನು ನಾನು ಹೇಳಲಾರೆ! ನಿಮ್ಮ ಎಲ್ಲಾ ಸೈನಿಕರೂ ಸ್ವಾಮಿನಿಷ್ಠರಾಗಿಲ್ಲ" ಎಂದು ಹೇಳಿ ಹೊರಟು ಹೋದನು.

ಈ ಮಾತುಗಳು ಮಹಾರಾಜರ ಮನಸ್ಸನ್ನು ಕೊರೆಯಿತು. ರೇಗಿದರು; ಮುಖವು ಕೆಂಪೇರಿತು; ಮೈಯೆಲ್ಲಾ ಸಿಟ್ಟಿನಿಂದ ನಡುಗಲಾರಂಭಿಸಿತು. ಸೈನಿಕರೆಲ್ಲರೂ ಕಂಭಗಳ ಹಾಗೆ ನಿಂತುಬಿಟ್ಟರು.

ಮಹಾರಾಜರ ಸಿಟ್ಟನ್ನು ಶಾಂತಗೊಳಿಸಲು ಸೇನಾಪತಿಯೊಬ್ಬನು "ಈ ಕೆಲಸವನ್ನು ಮಾಡಿದವನು ಯಾರು? ಮಹಾರಾಜರು ನಿಮ್ಮೆಲ್ಲರನ್ನೂ ಸ್ವಾಮಿನಿಷ್ಠರೆಂದು ತಿಳಿದಿರುವರು. ಯಾರು ಈ ಕೃತ್ಯವನ್ನು ಮಾಡಿರುವನೋ ಅವನು ರಣರಂಗದಲ್ಲಿ ಬಿದ್ದಿದ್ದರೆ ಅವನ ಹೆಸರು ಹೇಳಿ ಇಲ್ಲವಾದರೆ ಕರೆತನ್ನಿ" ಎಂದು ಹೇಳಿದನು.

ಚಂದ್ರರಾಯನೆಂಬೊಬ್ಬಾನೊಬ್ಬ ಸವಾರನು ಮುಂದೆ ಬಂದು ನಿನ್ನೆ ರಾತ್ರಿ ಒಬ್ಬ ಹವಾಲ್ದಾರನು ನಮ್ಮನ್ನು ಹಿಂದಿನಿಂದ ಬಂದು ಸೇರಿದನು ಎಂದನು. ಅವನ ಹೆಸರೇನು? ಬದುಕಿರುವನೋ ಎಂದು ಮಹಾರಾಜರು ಗದರಿಸಿದರು.

ಎಲ್ಲಾ ಕಡೆಗಳಲ್ಲಿಯೂ ನಿಶ್ಶಬ್ದವಾಯಿತು. ಸಾಸಿವೆ ಕಾಳು ಬಿದ್ದರೂ ಶಬ್ದವಾಗುತ್ತಿತ್ತು. ಕಡೆಗೆ ಸ್ವಾಮಿದ್ರೋಹಿಯ ಹೆಸರನ್ನು ಹೇಳಿದನು. "ಹವಲ್ದಾರ ರಘುನಾಥ"

"ದ್ರೋಹಿ, ರಘುನಾಥನ ಒಳ್ಳೇ ಹೆಸರನ್ನು ಹಾಳುಮಾಡಬೇಕೆಂದಿರುವಿಯೋ? ಅವನ ಧೈರ್ಯ ಸ್ಥೈರ್ಯಗಳನ್ನು ನಾನು ಬಲ್ಲೆನು. ಇಗೋ ನಿನಗೆ ಇನಾಂ!" ಎಂದು ಹೇಳಿ ಚಂದ್ರರಾಯನ ತಲೆಯನ್ನು ಕತ್ತರಿಸಲು ಮಹಾರಾಜರು ಖಡ್ಗವನ್ನೆತ್ತಿದರು.

"ಮಹಾರಾಜರೇ, ನಿಜ ನಾನು ನಿನ್ನೆ ಸೈನ್ಯವನ್ನು ಸೇರಲು ತಡವಾಯಿತು. ಆ ಶಿಕ್ಷೆಯು ಚಂದ್ರರಾಯನಿಗೆ ಸಲ್ಲತಕ್ಕದ್ದಲ್ಲ" ಎಂದು ರಘುನಾಥನು ಮುಂದೆ ಬಂದು ಹೇಳಿದನು.

"ರಘುನಾಥ, ನೀನು ಕೋಟೆಯನ್ನು ಗೆದ್ದವನು. ನೀನು ರಾಜದ್ರೋಹಿಯೇ? ಎಂದು ಮಹಾರಾಜರು ವಿನಯದಿಂದ ಕೇಳಿದರು.

"ಮಹಾರಾಜ, ನಾನು ಅಂಥಾ ದುಷ್ಕೃತ್ಯವನ್ನು ಮಾಡಿದವನಲ್ಲ" ಎಂದುತ್ತರವನ್ನಿತ್ತನು.

ಆದರೂ ಕಂಬದಂತೆ ನಿಂತಿದ್ದ ರಘುನಾಥನ ಕತ್ತಿನಮೇಲೆ ಕತ್ತಿಯನ್ನು ಮಹಾರಾಜರು ಎತ್ತಿದರು. ಆಗ ಸೇನಾಧಿಪತಿಯೊಬ್ಬನು ಮಹಾರಾಜರ ಕೈಯನ್ನು ಹಿಡಿದು "ಮಹಾರಾಜರೇ, ನನ್ನ ಆಯುಸ್ಸೆಲ್ಲವೂ ಯುದ್ಧರಂಗದಲ್ಲೇ ಮುಗಿಯುತ್ತಾ ಬಂದಿದೆ. ರಘುವಿನ ಮುಖವನ್ನು ನೋಡುವಾಗ, ಅಂಥ ಕೆಲಸವನ್ನು ಮಾಡಿದವನ ಹಾಗೆ ಕಾಣುವುದಿಲ್ಲ. ಈ ಧೀರನನ್ನು ಕೊಂದರೆ, ಹಿಂದಿನಿಂದ ವ್ಯಸನಪಡಬೇಕಾಗುವುದು, ಆದುದರಿಂದ ಅವನ ಜೀವವನ್ನು ಉಳಿಸಬೇಕೆಂದು ನಾನು ಬೇಡಿಕೊಳ್ಳುತ್ತೇನೆ" ಎಂದನು.

ಆ ಮಾತುಗಳಿಗೆ ಮಹಾರಾಜರು ಒಪ್ಪಿ, ಖಡ್ಗವನ್ನೊಪ್ಪಿಸಿ ದೇಶದಿಂದ ಹೊರಟುಹೋಗಲು ಅಪ್ಪಣೆಯನ್ನಿತ್ತರು. ಈ ವರ್ತಮಾನವು ಕಾಡ್ಗಿಚ್ಚಿನಂತೆ ಹಬ್ಬಿತು. ಬಾಲೆ ಸರೋಜೆಯ ಕಿವಿಗೂ ಬಿತ್ತು. ಆದರೆ ಅವಳು ರಘುನಾಥನು ರಾಜದ್ರೋಹಿ ಎಂಬುದನ್ನು ನಂಬಲಿಲ್ಲ. ಮನಸ್ಸಿನಲ್ಲಿ ಏನೇನೋ ಆಲೋಚನೆಗಳುಂಟಾದವು. ಆದರೂ ದೇವರಲ್ಲಿ ಮೊರೆ ಇಡುತ್ತಾ ಇದ್ದಳು. ಬಹಳ ದಿವಸಗಳು ಕಳೆದು ಹೋದ ನಂತರ, ಒಂದು ದಿನ ಸರೋಜೆಯು ಹೂದೋಟದಲ್ಲಿ ಕುಳಿತಿದ್ದಳು. ಆಗ ಒಬ್ಬಾನೊಬ್ಬ ಸನ್ಯಾಸಿಯು ಆ ದಾರಿಯಲ್ಲಿ ಬರುವುದನ್ನು ಕಂಡಳು.

"ನೀನು ನನ್ನೊಂದಿಗೆ ಏನನ್ನು ಕೇಳಬೇಕೆಂದಿರುವಿ" ಎಂದು ಸಾಧುವು ಹತ್ತಿರ ಬಂದೊಡನೆ ಕೇಳಿದನು. "ನಿನ್ನ ಯೋಚನೆ ಗೊತ್ತಾಯಿತು. ಲೋಕದಲ್ಲೆಲ್ಲಾ ರಾಜದ್ರೋಹಿಯೆಂದು ಕರೆಯಲ್ಪಡುತ್ತಿರುವ ಒಬ್ಬಾನೊಬ್ಬ ಸೈನಿಕನ ವಿಷಯ ನೀನು ಕೇಳಬೇಕೆಂದಿರುವಿ."

ಸರೋಜೆಯು ಸಿಟ್ಟಿನಿಂದ "ನೀನು ಕಳ್ಳನಾಗಿದ್ದರೂ ನನ್ನ ರಘುವು ರಾಜದ್ರೋಹಿಯಲ್ಲ" ಎಂದಳು.

ಸಾಧು—ನಿಮ್ಮಿಬ್ಬರಲ್ಲಿ ಪರಸ್ಪರ ಪ್ರೀತಿಯು ಬೆಳೆದಿದೆ ಎಂದು ತೋರುತ್ತದೆ. ನಾನು ಅವರನ್ನು ಇನ್ನೊಂದುಸಾರಿ ಕಂಡರೆ, ಏನಾದರೂ ಹೇಳಬೇಕೇ?

ಸರೋ—ಹಾಗಾದರೆ ಈ ಮೊದಲೇ ಅವನನ್ನು ಕಂಡಿರುವಿಯಲ್ಲವೇ? ಮುಂದಿನ ಕೆಲಸದ ವಿಷಯ ಏನಾದರೂ ಹೇಳಿರುವನೇ?

(ಮುಂದುವರಿಯುವುದು.)

ಕುಷ್ಠರೋಗನಿವಾರಣ ಸಂಘ.

ಮೇಲ್ಕಂಡ ಸಂಘಕ್ಕೆ ಒಂಡವಾಳ ಒದಗಿಸಲು ಸೇವಕ ನಾದ ಮೆಂಬರುಗಳ ಪೈಕಿ ಈ ಕೆಳಗೆ ಕಂಡ ಮೆಂಬರುಗಳು ಕೆಳಗೆ ಕಂಡ ರೀತಿ ವಸೂಲಾದ ಹಣವನ್ನು ಸೆಕ್ರೆಟರಿ ಮತ್ತು ಖಜಾನ್ಜಿಯವರ ಜವೆುಗೆ ಕಳುಹಿಸಿರುತ್ತಾರೆ.

	ರೂ. ಆ. ಪೈ
ಭಾಗಮಂಡ್ಲ.	
ಮೆ. ಬಿ. ಶ್ರೀಪತಿರಾಯರು	10—0—0
ಮಡಿಕೇರಿ.	
ಮೆ. ಕೆ. ಬಸಪ್ಪನವರು .	10—12—0
ಉತ್ತರ ಕೊಡಗು.	
ಮೆ. ಎ. ಎಸ್. ಮೇನಿಯುಕರವರು	22—0—0
ಪೊನ್ನಂಪೇಟೆ.	
ಮೆ. ಗಣಪಮ್ಮ ಘ್ಯುನವರು	10—0—0
	52—12—0
ಈ ಮೊದಲಿನ ಜಮ	7;2—1—0
ಒಟ್ಟು ಈ ವರೆಗಿನ ಜಮ	774—13—0

ತಾ. 31—8—25. A. B. Carpa,
ಗೌ ಕಾರ್ಯದರ್ಶಿ ಮತ್ತು ಖಜಾಂಚಿ

FOR SALE.

Hupmobile car recently overhauled and in good running order. For further particulars apply to P. W. F. Walpole, Mercara

ವರ್ತಮಾನ ಸಂಗ್ರಹ.

ಒಳ ದೇ ಶ.

ಕಮೀಷನರ್ ಪಿ. ಬಾಸ್ಕರವರು ಬೆಂಗಳೂರಿಗೆ ಹೋ ಗಿ ಬಂದಿದ್ದಾರೆ.

ವೀರಾಜಪೇಟೆಯಲ್ಲಿ ಕಳೆದ ಮಂಗಳವಾರ ಗೌರಿ ಗಣೇಶ ಹಬ್ಬವು ತೇರಿನ ಮೆರವಣಿಗೆಯೂ ಒಹಳ ಸಂಭ್ರಮದಿಂದ ನಡೆಯಿತು

ದಕ್ಷಿಣ ಕೊಡಗು ತಾಲೋಕಿನ ಸುಬೇದಾರರಾದ ಮೆ ಕೀತಿಯಂಡ ಕಾಳಪ್ಪನವರು ಕಳೆದ ತಾರೀಕು 31 ರಲ್ಲಿ ತಮ್ಮ ಕೆಲಸದ ಚಾರ್ಜನ್ನು ತೆಗೆದುಕೊಂಡಿರುವರು.

ಬಳ್ಳಾರಿಯ ಟಿ. ಮೆಟ್. ಯಂ. ಪುಟ್ಟಯ್ಯಸ್ವಾಮಿಯವರ ಶೆಲಗಿ ಹರಪನಹಳ್ಳಿ ನೂರದ ಸಿದ್ಧಾಂತ ಪಂಚಾಂಗದ ಸಪ್ಲಿಮೆಂಟನ್ನು ಈ ವಾರ ಪತ್ರಿಕೆಯಲ್ಲಿ ಹಂಚಲ್ಪಟ್ಟಿದೆ

ಕಳೆದವಾರ ಕುಂಜಿಲಗೇರಿ ಗಾಮದಲ್ಲು ಒಬ್ಬನ ತ್ಯಾಂಪು ಎಂಬವನು ಬೈನೆಮರ ಹತ್ತಿ ಸೇಂದಿ ತೆಗೆದುಕೊಂಡು ವಾಪಸು ಮರದಿಂದ ಇಳಿಯುವಾಗ್ಗೆ ಆಕಸ್ಮಾತವಾಗಿ ನೆಲಕ್ಕೆ ಬಿದ್ದು ಸ್ವಲ್ಪ ಹೊತ್ತಿನ ಮೇಲೆ ಮೃತನಾದನು.

ಸಾರಾಭಿಗೆ ಕ್ರಯ ಹೆಚ್ಚಾದರೂ ವಿರಾಜಪೇಟೆಯಲ್ಲಿ ಕೈಲ್‌ಪೊಳುದು ದಿನ ಸಮಾರಂಭಕ್ಕೆ ಮಿದಿಗೆ ತಲೆಯಲ್ಲಿ ಹೊತ್ತಿರುವ ಜನರ ಮೆರವಣಿಗೆಯು ಬಹಳ ಹೆಚ್ಚಿತ್ತೆಂದು ವೀರಾಜಪೇಟೆಯ ಬಾತ್ಮಿದಾರರು ತಿಳಿಸಿರುತ್ತಾರೆ.

ವೀರಾಜಪೇಟೆ ಮುನಿಸಿಪಾಲಿಟಿ ಜನಾಸಣೆ ವಿಷಯ ಲಿಸ್ಟಿನ ಒಟರುಗಳು ಕಣ್ಣು ತೆರೆದಿದ್ದಾರೆಂದೂ, ಪ್ರತಿ ಪಂಗಡದವರೂ ತಮ್ಮ ತಮ್ಮ ಪಂಗಡಗಳ ಪ್ರತಿನಿಧಿಗಳನ್ನೇ ಚುನಾಯಿಸಲಿಕ್ಕೆ ಪ್ರಯತ್ನಿಸುತ್ತಾರೆಂದೂ ಬಾತ್ಮಿಯೊಂದು ಬಂದಿದೆ

ಕೊಡಗು ದೇಶದ ಚೀಫ್ ಕಮಿಶನರಾಗಿದ್ದ ಮೆ. ಬಾರ್ನೆಸ್‌ರವರ ಮಗನು ಮೃತನಾದನೆಂತ ತಿಳಿಯಲು ವ್ಯಸನಪಡುತ್ತೇವೆ. ಈಗಿನ ಚೀಫ್ ಕಮಿಶನರ ಪತ್ನಿಯವರು ಈ ವರ್ತಮಾನ ಸಿಕ್ಕಿದ ಕೂಡಲೇ ಹೈದರಾಬಾದಿಗೆ ಹೋಗಿರುತ್ತಾರೆ.

ಬೆಳ್ಗಾಮ್ ಕಾಂಗ್ರೆಸ್ಸಿನ ಪ್ರಿಂಟಾದ ಪಠವಿಯು ನಮ್ಮ ಕೈಸೇರಿದೆ. ತುಂಬಾ ನಕ್ಷೆಗಳಿಂದಲೂ, ಇಂಗ್ಲಿಷ್, ಹಿಂದೀ, ಉರ್ದು, ಕನ್ನಡ ಭಾಷಣಗಳಿಂದಲೂ ಕೂಡಿ ಬಹಳ ಚೆನ್ನಾಗಿದೆ. ಇನ್ನೊಂದು ಸಂಚಿಕೆಯಲ್ಲಿ ಇದರ ವಿಮರ್ಶೆ ಮಾಡುವೆವು.

ಮಡಿಕೇರಿಯಲ್ಲಿ ಇರುವ ಕೊಡವರು ಕೈಲ್‌ಮುಹೂರ್ತ ಹಬ್ಬವನ್ನು ಬುಧವಾರ ದಿವಸ ನಡಿಸಿದರು ಮ್ಯಾನ್ಷನ್ ಕಂಪೌಂಡಿನಲ್ಲಿ ಸಾಯಂಕಾಲ ಮೂರು ಘಂಟೆಗೆ ಗುಂಡು ಹೊಡಿಯುವುದು ಹುಡುಗರಿಗೆ ಸ್ಪೋರ್ಟ್ಸ್ ಸಹ ನಡೆಯಿತು. ರಾತ್ರಿ 8 ಘಂಟೆಗೆ ಊಟ ನಡೆಯಿತು.

ಕಳೆದ ಸೋಮವಾರ ಸಾಯಂಕಾಲ 1 ಗಂಟೆಗೆ ವೀರಾಜಪೇಟೆಯ ಟ್ರಾವಲರ್ಸ್ ಬಂಗಲಿಯಲ್ಲಿ ದಕ್ಷಿಣ ಕೊಡಗಿನ ಅನೇಕ ಮಹನೀಯರು ಕೂಡಿ, ಡಾಕ್ಟರ್ ನಡಿಕೇರಿಯಂಡ ಅಪ್ಪೈಯ್ಯನವರಿಗೆ ಒಂದು ಎಟ್ ಹೋಮ್ ಕೊಟ್ಟರು ಡಾ. ಅಪ್ಪೈಯ್ಯನವರು ತಮ್ಮ ಭಾಷಣದಲ್ಲಿ ಬಡ ಜನರಿಗೆ ಆದಷ್ಟು ಸಹಾಯವನ್ನು ಮಾಡುವುದೇ ತನ್ನ ಧ್ಯೇಯವೆಂದು ಹೇಳಿದರಂತೆ.

ಲೇಟ್ ಬಿದ್ದಂಡ ಗಣಪತಿಯವರ ಜ್ಞಾಪಕಾರ್ಥ, ವೀರಾಜಪೇಟೆಯಲ್ಲಿ ತೆರೆಯಲ್ಪಡುವ ಪಬ್ಲಿಕ್ ವಾಚನಾಲಯ ಮತ್ತು ಪುಸ್ತಕ ಭಂಡಾರಕ್ಕೆ ಅನೇಕ ಮಹನೀಯರು ತಮ್ಮ ಸಹಾಯಗಳನ್ನು ವಾಗ್ದಾನ ಮಾಡಿರುವರೆಂದೂ, ಕೆಲವು ಮಹನೀಯರು ತಮ್ಮ ಚಂದಾಹಣವನ್ನು ಕಳುಹಿಸಿರುತ್ತಾರೆಂದೂ, ಈ ಪೈಕಿ ಯೂರೋಪಿಯನ್ ಕಾಫಿಪ್ಲಂಟರ್ ಮತ್ತು ಕೌನ್ಸಿಲ್ ಮೆಂಬರು ಮೆ. ಸ್ಕಾಟಮರ್‌ರವರು ಐವತ್ತು ರೂಪಾಯಿ ಕಳುಹಿಸಿರುತ್ತಾರೆಂದೂ, ಹಣ ಕಳುಹಿಸಿದವರ ಪಟ್ಟಿಯನ್ನು ಒದನೇ ಪತ್ರಿಕೆಯಲ್ಲಿ ಪ್ರಕಟಿಸುತ್ತಾರೆಂದೂ, ಲೈಬ್ರೆರಿಯ ಪ್ರಮೋಟರವರು ತಿಳಿಸಿರುತ್ತಾರೆ.

ಕಡಮಕಲ್ಲು ರಬ್ಬರ್ ತೋಟದಲ್ಲಿ ಪಾಲೆ ಜಾತಿಯ ಅಪ್ಪನು ತನ್ನ ಹೆಂಡತಿಗೆ ದಪ್ಪದ ಕೋಲಿನಿಂದ ಹೊಡೆದು ಅವಳು ಮೃತಳಾದಳೆಂತ ವರ್ತಮಾನ ಒಂದು ಪೊಲೀಸಿನವರು ಶ್ರವವನ್ನು ಸಾಗಿಸಿ ತಂದು ಡಾಕ್ಟರಿಂದ ಪರೀಕ್ಷಿಸುವಲ್ಲಿ ಮೃತಳ ಗೆಜ್ಜೆಯು ಒಡೆದು ಹೋಗಿತ್ತಾಗಿಯೂ, ಗೆಜ್ಜೆಯು ಸ್ವಾಭಾವಿಕ ಸ್ಥಿತಿಗಿಂತ ಹೆಚ್ಚು ದಪ್ಪವಾಗಿರಲಿಲ್ಲವೆಂತಲೂ ಆದ್ದರಿಂದ ಅಪಾಯಕರವಾದ ಘಾಯವನ್ನು ಮಾಡಿದ ತಕ್ಕೀರಿಗೆ ಗಂಡನನ್ನು ಗುರಿ ಮಾಡುತ್ತಾರೆಂತಲೂ ಗಂಡನು ತಂದುಕೊಟ್ಟ ಸೀರೆಯು ಹೆಂಡತಿಗೆ ಒಪ್ಪದ್ದರಿಂದ ಜಗಳವಾಗಿ ವಾದಾ ನಡೆದು ಗಂಡನು ಸಿಟ್ಟುಗೊಂಡು ಹೊಡೆದನೆಂತ ಹೇಳುತ್ತಾರೆಂತಲೂ ತಿಳಿದು ಬಂದಿದೆ.

ಹಿಂದೂದೇಶ.

ಮ. ಯಂ. ಇ ಕೌಚಾಮ್ಯನರು ರಿಟೈರ್ ಆಗುವ ಒಗ್ಗೆ ತಮ್ಮ ರಜವನ್ನು ಹೆಚ್ಚಿಸಿಕೊಂಡಿರುತ್ತಾರೆ

ಭುಲಾಬಾಯಿ ದೇಸಾಯಿ ಎಂಬವರು ವೈಸ್‌ರಾಯ್ ಕೌನ್ಸಿಲಿನ ಲಾ ಮೆಂಬರಾಗಿ ಆರಿಸಲ್ಪಡುತ್ತಾರೆಂಬ ವರ್ತಮಾನವಿದೆ

ಬೊಂಬಾಯಿ ಅಧಿಪಕ್ಷದ ಲಿಬರಲ್ ಪಕ್ಷದವರ ಕಾನ್ಫರೆನ್ಸ್ ಪೂನಾದಲ್ಲಿ ನಡೆಯಿತು. ಸಿ ಪ್ಯ. ಚಿಂತಾಮಣಿಯವರ ಅಧ್ಯಕ್ಷರಾಗಿದ್ದರು.

... ದಲ್ಲಿ ಯುನಾನಿ ವೈದ್ಯದ ವಸ್ತುಪ್ರದರ್ಶನ ... ಈ ವಾರ ನಡಿಯುತ್ತಿದೆ. ಇದನ್ನು ಮದ್ರಾಸಿನ ... ಪಸಗಳ್ ರಾಜರು ತೆರೆದರು.

... ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನಕ್ಕೆ ಶ್ರೀಮತಿ ಸರೋಜಿನಿ ನಾಯಿಡುರವರ ಹೆಸರನ್ನು ಅನೇಕ ಪ್ರಾಂತಿಕ ... ಸ್ಸವೆ.

... ಲ್ಲಿ ಕೀಳವರನ್ನು ಅಸ್ಪೃಶ್ಯರಾಗಿ ಕಾಣುವದರಿಂದ ಅವರನ್ನು ಕ್ರಿಶ್ಚಿಯನ್ ಜಾತಿಗೂ, ಮುಸಲ್ಮಾನ ಜಾತಿಗೂ ಸೇರಿಸಿಕೊಳ್ಳಲಿಕ್ಕೆ ತುಂಬಾ ಪ್ರಯತ್ನ ನಡಿಯುತ್ತಿದೆ ಆದರೆ ಆರ್ಯಸಮಾಜದವರು ಇವರಲ್ಲಿ ಅನೇಕರಿಗೆ ಗಾಯತ್ರಿ ಉಪದೇಶಕೊಟ್ಟು ಆರ್ಯಮತಕ್ಕೆ ಸೇರಿಸಿ ಈ ವರೆಗೆ ಹೋಗಬಾರದೆಂತ ಇದ್ದ ಬ್ರಾಹ್ಮಣ ಅಗ್ರಹಾರಗಳಿಗಾಗಿ ಇವರನ್ನು ಕರೆದುಕೊಂಡು ಹೋಗುತ್ತಿದ್ದಾರೆ.

ಹಿಂದೂಸ್ಥಾನಕ್ಕೆ ಕೊಟ್ಟ ಸುಧಾರಣೆಗಳನ್ನು ಜಾರಿಮಾಡುವದರಲ್ಲಿ ಇರುವ ಕೊರತೆಗಳನ್ನು ಹೋಗಲಾಡಿಸಲು ನೇಮಿಸಲ್ಪಟ್ಟ ಕಮಿಟಿಯಾದ ಮುಡ್ಡಿಮ್ಯಾನ್ ಕಮಿಟಿಯು ಒಹುಮತದ ಶಿಫಾರಸ್ಸನ್ನು ಸರಕಾರದವರು ಗಮನಕ್ಕೆ ತೆಗೆದುಕೊಳ್ಳಬೇಕೆಂಬ ಠರಾವನ್ನು ಸರಕಾರದವರೇ ಅಸಂಬ್ಲಿಯ ಮುಂದೆ ಚರ್ಚೆಗೆ ತರುತ್ತಾರೆ ತಾ 7,8 ರಲ್ಲಿ ಚರ್ಚೆ ನಡಿಯುತ್ತದೆ ಇದನ್ನು ಯಾವರೀತಿಯಲ್ಲಿ ವಿರೋಧಿಸುವದು ಎಂಬದನ್ನು ಸ್ವರಾಜ್ಯಪಕ್ಷದವರು ಯೋಚಿಸುತ್ತಿದ್ದಾರೆ

'ಟೈಮ್ಸ್ ಆಫ್ ಇಂಡಿಯಾ' ಎಂಬ ಬೊಂಬಾಯಿ ಪತ್ರಿಕೆಗೆ ನಾಗಪುರದಿಂದ ಈ ವರ್ತಮಾನವು ಬಂದಿದೆ—ನಾಗಪುರದ ಪಾಂಡುರಂಗ ದೇವಸ್ಥಾನದ ಮೂರ್ತಿಗಳಾದ ವಿಟ್ಠಲ ಮತ್ತು ರುಕ್ಮಿಣಿಯ ಕಣ್ಣಿನಿಂದ 17—8—25ರಲ್ಲಿ 12 ಘಂಟೆ ಕಾಲ ಕಣ್ಣೀರು ಸುರಿಯಿತಂತೆ. ಇದಕ್ಕಾಗಿ ವಿಶೇಷ ಉತ್ಸವಗಳು ನಡೆದವು. ಆ ಊರಿನ ತಾಜುದ್ದೀನ್ ಸಾಹೇಬ್ ಎಂಬ ಮುಸಲ್ಮಾನ್ ಬೈರಾಗಿಯು ಅದೇ ದಿನ ಮೃತನಾಗಿದ್ದನು. ಈ ಮರಣಕ್ಕಾಗಿಯೇ ದೇವತಾ ಮೂರ್ತಿಗಳು ಕಣ್ಣೀರು ಹಾಕಿರಬೇಕೆಂತ ಊಹಿಸುತ್ತಾರೆ.

ಕೊಯಮುತ್ತೂರಿನ ಒಂದು ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದ ಚಿನ್ನಯ್ಯ ಗೌಡ ಎಂಬವನು ತನ್ನ ಹೆಂಡತಿಯನ್ನೂ, ಅತ್ತಿಗೆಯನ್ನೂ ಕೊಂದದ್ದಕ್ಕೆ ಅವನಿಗೆ ಸೆಶನ್ ಜಡ್ಜಿಯವರು ಫಾಶಿಶಿಕ್ಷೆ ವಿಧಿಸಿದ್ದಾರೆ. ಅಪರಾಧಿಯನ್ನು ವಿಚಾರಣೆಮಾಡುವಾಗ 'ನನಗೆ ಈ ಲೋಕದ ಜೀವನ ಸಾಕಾಗಿದೆ. ನನ್ನನ್ನು ಪರಲೋಕಕ್ಕೆ ಕಳುಹಿಸಿಬಿಡಿ.' ಎಂತ ಹೇಳಿದನು. ಅಪ್ಪೀಲಿನಲ್ಲಿ ಹೈಕೋರ್ಟಿನಲ್ಲಿ ಆರ್ಗ್ಯುಮೆಂಟ್ ನಡೆಯುವಾಗ ಅಪರಾಧಿ ಪಕ್ಷ ಲಾಯರು ಅವನು ಬಯಸುವದನ್ನೇ ಕೊಟ್ಟರೆ ಅದು ಶಿಕ್ಷೆಯಾಗುವದಿಲ್ಲವೆಂತ ವಾದಿಸಿದರು, ಆದರೆ ಜಡ್ಜಿಯವರು ಫಾಶಿ ಸಜವನ್ನೇ ಖಾಯಂಮಾಡಿ ಅಪರಾಧಿಯ ಕೋರಿಕೆಯನ್ನು ನೆರವೇರಿಸಿದ್ದೇವೆ ಎಂತ ಹೇಳಿದರು.

ಕಲ್ಕತ್ತಾ ಪಟ್ಟಣದಲ್ಲಿ ಕುಕ್ ಮತ್ತು ಕೆಲ್ವಿ ಎಂಬ ಜವಾಹಿರ ನಗಗಳ ವ್ಯಾಪಾರಿಗಳ ಅಂಗಡಿಗೆ ಕೆಲವರು ವ್ಯಾಪಾರಕ್ಕಂತ ಒಂದು ವಜ್ರದ ಉಂಗುರಗಳನ್ನು ನೋಡುತ್ತಿರುವಾಗ ಐದು ವಜ್ರಗಳುಳ್ಳ ಒಂದು ಉಂಗುರ ಕಾಣದೆ ಆಯಿತು. ಕೂಡಲೇ ಅವರನ್ನು ಪೊಲೀಸಿನವರು ಹಿಡಿದು ದೇಹವನ್ನೆಲ್ಲಾ ಶೋಧನೆ ಮಾಡಿದರೂ ಉಂಗುರ ಸಿಕ್ಕಲಿಲ್ಲ. ಅವರನ್ನು ರುಜುಪಾತ್ರವೆಂತ ಬಿಡಬೇಕೆಂತ ಯೋಚಿಸುವಷ್ಟರಲ್ಲಿ ಈ ವ್ಯಾಪಾರಕ್ಕೆ ಬಂದವರ ಪೈಕಿ ಒಬ್ಬನು ಬಾಯಿಗೆ ಕೈ ಹಾಕಿಕೊಂಡು ಹೋದನೆಂತಲೂ ಕಷ್ಟದಿಂದ ಏನನ್ನೋ ನುಂಗಿದನೆಂತಲೂ ಕಂಪೆನಿಯ ಆಳು ಒಬ್ಬನು ಹೇಳಿದ್ದರಿಂದ ಎಕ್ಸ್‌ರೇಯನ್ನು ಉಪಯೋಗಿಸಿ ಹೊಟ್ಟೆ ಒಳಗೆ ನೋಡಿದರು. ಉಂಗುರವು ಹೊಟ್ಟೆಯೊಳಗೆ ಇತ್ತು. ಅದನ್ನು ಹೊಟ್ಟೆಯಿಂದ ತೆಗೆದಿದ್ದಾರೆ

ಪಂಜಾಬಿನ ಅಮೃತಸರದ ಸಮೀಪ ಒಂದು ಗ್ರಾಮದಲ್ಲಿ ಕಳ್ಳರ ಗುಂಪೊಂದು ಇದೆಯೆಂತ ತಿಳಿದು ಲಾಲಾ ಸರ್ದಾರಿಲಾಲ್ ಎಂಬ ಡಿಪ್ಯುಟಿ ಸುಪರಿಂಟೆಂಡರು ಒಬ್ಬ ಸಬ್ ಇನ್ಸ್‌ಪೆಕ್ಟರನ್ನೂ ನಾಲ್ಕು ಹೆಡ್ ಕಾನ್ಸ್‌ಟೇಬಲ್‌ರನ್ನೂ, 30 ಇತರ ಕಾನ್‌ಸ್ಟೇಬಲ್‌ಗಳನ್ನೂ ಕರೆದುಕೊಂಡು ಕೋವಿ ಸಮೇತ ಗ್ರಾಮಕ್ಕೆ ಹೋದರು. ಮಧ್ಯರಾತ್ರಿಗೆ ಗ್ರಾಮಕ್ಕೆ ತಲುಪಿದರು ತಲುಪಿ ಕಳ್ಳರಿರುವ ಮನೆಯ ಸುತ್ತು ನಿಲ್ಲುವಷ್ಟರಲ್ಲಿ ಇವರಕಡೆಗೆ ಗುಂಡುಗಳು ಹಾರಲು ಪ್ರಾರಂಭವಾದವು. ಪೊಲೀಸಿನವರೂ ಗುಂಡುಹಾರಿಸಿದರು. ಈ ರೀತಿ ಯುದ್ಧವು 5 ಗಂಟೆಕಾಲ ಬೆಳಗಿನವರೆಗೂ ನಡೆದ ಕಳ್ಳರು ಇದ್ದ ಮನೆಯನ್ನು ಪೊಲೀಸಿನವರು ಸ್ವಾಧೀನ ಪಡಿಸಿಕೊಂಡರು. ತುಂಬಾ ಕೋವಿಗಳೂ, 450 ರಿವಾಲ್ವರುಗಳೂ, ಕೆಲವು ಬಾಂಬುಗಳೂ ಇತರ ಮದ್ದುಗಳೂ ಸಿಕ್ಕಿದವು. ಕಳ್ಳರಲ್ಲಿ 6 ಜನರನ್ನು ಹಿಡಿದಿದ್ದಾರೆ. ಕೆಲವರು ಕತ್ತಲೆಯಲ್ಲಿ ಓಡಿಬಿಟ್ಟಿದ್ದಾರೆ

ವಿದೇಶ.

ಜಪಾನಿನಲ್ಲಿ ಬಿರುಗಾಳಿಯಿಂದ ತುಂಬಾ ನಷ್ಟವಾಗಿದೆ ಹದಿನೆಂಟು ಜನರು ಮೃತರಾಗಿದ್ದಾರೆ

ಲಾರ್ಡ್ ರೀಡಿಂಗ್‌ರವರು ಮುಂದಿನ ವೈಸರಾಯರಾಗಿ ಬರುವರೆಂಬ ವರ್ತಮಾನವಿದೆ

ಇಂಗ್ಲೆಂಡಿನಲ್ಲಿ ಉದ್ಯೋಗವಿಲ್ಲದೆ ಇರುವ ಜನರ ಸಂಖ್ಯೆಯು ಈಗ 12 9?,000ಕ್ಕೆ ತಲುಪಿದೆ

ಬೆಲ್ಜಿಯಮ್ ದೇಶದ ರಾಜರೂ ರಾಣಿಯವರೂ ಸಹ ಹಿಂದುಸ್ಥಾನಕ್ಕೆ ಪ್ರಯಾಣಮಾಡಿದ್ದಾರೆ

ಮೆಸೊಪೊಟೇಮಿಯದಲ್ಲಿ ಒಂದು ಲಕ್ಷ ಎಕರೆ ಜಾಗದಲ್ಲಿ ಹತ್ತಿ ಬೆಳೆಸುವ ಉದ್ದೇಶದಿಂದ ಇಂಗ್ಲೆಂಡಿನಲ್ಲಿ ಒಂದು ಕಂಪೆನಿಯು ಏರ್ಪಾಡಾಗಿದೆ

ರಷ್ಯಾದೇಶದ ವಿಲಟಿಕಿ ಇಲಾಖೆಯಲ್ಲಿ ಸಾಮಾನುಗಳನ್ನು ಮೋಸದಿಂದ ದುರುಪಯೋಗಿಸಿದ ಆಪೀಸರುಗಳ ಪೈಕಿ 9 ಜನರಿಗೆ ಫಾಶಿಸಜವೂ, 33 ಜನರಿಗೆ 10 ವರ್ಷಗಳವರೆಗೆ ಸಜಾಶಿಕ್ಷೆಯೂ ವಿಧಿಸಲಾಗಿದೆ.

ಇಂಗ್ಲಿಷ್ ಫ್ರೆಂಚ್ ಮತ್ತು ಜರ್ಮನಿಯವರೊಳಗೆ ರಾಜಿ ಮಾತುಗಳು ಲಂಡನ್ ಪಟ್ಟಣದಲ್ಲಿ ನಡೆಯುತ್ತಿದೆ. ಇದರಿಂದ ಖಾಯಮಾದ ಶಾಂತತೆಯು ಯೂರೋಪಿನಲ್ಲಿ ಸ್ಥಾಪಿಸಲ್ಪಡಬಹುದೆಂತ ಊಹಿಸುತ್ತಾರೆ.

ಲಂಡನ್ ಪಟ್ಟಣದಲ್ಲಿ ಪಿ ಜೆ ಕಾಕ್ರಾನಿಯ ಎಂಬ ವಿದ್ಯಾರ್ಥಿಯು ರೈಲ್‌ವೇಕಂಪಿಯಮೇಲೆ ರೈಲ್ ಬರುವಾಗ ಬಿದ್ದು ಆತ್ಮಹತ್ಯ ಮಾಡಿಕೊಂಡಿರುತ್ತಾನೆ. ತತ್ಕಾಲಿಕ ಹುಚ್ಚಿನಿಂದ ಹಾಗೆ ಮಾಡಿದನೆಂತ ಡಾಕ್ಟರ್ ಸರ್ಟಿಫಿಕೇಟ್ ಆಗಿದೆ.

ಇಂಗ್ಲೆಂಡಿನ ಕೇಂಬ್ರಿಜ್ ಎಂಬಲ್ಲಿ ಆಕಾಶದಲ್ಲಿ 1000 ಅಡಿ ಎತ್ತರದಲ್ಲಿ ಯುದ್ಧಮಾಡುವದನ್ನು ಅಭ್ಯಾಸಿಸುತ್ತಿದ್ದಾಗ ಒಂದಕ್ಕೊಂದು ತಗಲಿ ಎರಡು ಆಕಾಶ ವಿಮಾನಗಳು ಮುರಿದು ನೆಲಕ್ಕೆ ಬಿದ್ದು ಪುಡಿಪುಡಿಯಾಗವು. ಅವುಗಳಲ್ಲಿ ಇದ್ದ ಮೂರು ಜನರೂ ಮೃತರಾದರು.

ಲಂಡನ್ ಪಟ್ಟಣದಲ್ಲಿ ನೆರಕುಗಳನ್ನು ಸಾಗಿಸಲಿಕ್ಕಾಗಿಯೇ ಭೂಮಿಯ ಒಳಗಡೆ 60 ಮೈಲು ಒಟ್ಟು ಉದ್ದದ ರೈಲ್‌ವೇಯನ್ನು ಕಟ್ಟುವ ಏರ್ಪಾಡು ನಡೆಯುತ್ತಿದೆ. ಇದಕ್ಕೆ 3,000000 ಪೌಂಡು ಖರ್ಚು ಬೇಕಾಗುತ್ತದೆಂತ ಅಂದಾಜು ಮಾಡಲ್ಪಟ್ಟಿದೆ.

COORG FOREST DEPARTMENT.

TENDER NOTICE

Mercara, the 27th August 1925.

Offers are invited by 30th September 1925 for 54 logs of 1775 c. ft. of first class selectd biti timber (Dalbergia latifolia). Immediate/ delivery of 14 logs of 425 c. ft. can be given at Hunsur and the balance 40 logs of 1350 c ft in December next. Hunsur is 30 miles from Mysore and 13 miles from Yedathore Railway stations. There is public conveyance from Mysore to Hunsur and Yedathore to Hunsur. For further particulars apply to the Divisional Forest Officer, South Coorg, Mercara.

ಆದರೆ, ರೈತರ ಹಿತಚಿಂತನೆಯೇ ಸರ್ಕಾರದ ಕರ್ತವ್ಯವಾಗಿರುವಲ್ಲಿ, ರೈತರು ತಮ್ಮ ಹೊಲಗದ್ದೆಗಳಲ್ಲಿ ಬೆಳೆಯುವ ಧಾನ್ಯಗಳನ್ನು ಹೆಚ್ಚಾಗಿ ನಷ್ಟಪಡಿಸುವ ಹಂದಿಗಳನ್ನು ಗುಂಡು ಹೊಡೆಯಲಾಗದೆಂತಲೂ ಅಂಥಾ ಹಂದಿಗಳನ್ನು ದನಗಳಂತೆ ದೊಡ್ಡಿಗೆ ಸೇರಿಸಿ ನಷ್ಟಕ್ಕೆ ದಾವಾ ಹಾಕುವಂತೆಯೂ ಮಾಡಿಟ್ಟಿರುವ ಬಾಸೂಸು ಸರ್ಕಾರವು ರೈತಾಭಿವೃದ್ಧಿಗಾಗಿ ತೋರಿಸುವ ಹಿತಚಿಂತನೆಯೇ ?

ಮೇಲ್ಕಂಡ ಎರಡು ಮುನಿಸಿಪಾಲಿಟಿಗಳಲ್ಲಿಯೂ ಜನರಿಗೆ ಅಷ್ಟೇನೂ ನಷ್ಟವಿಲ್ಲದಿದ್ದರೂ ಅಲ್ಲಿ ಹಂದಿಗಳಿಗೆ ಗುಂಡು ಹೊಡೆಯಲು ಅಧಿಕಾರ ಕೊಟ್ಟಿರುವಾಗ್ಯೆ ಕೊಡಗಿನ ಇಡೀ ಜನಾಂಗಕ್ಕೆ ಆ ಅಧಿಕಾರವನ್ನು ಕೊಡಬಾರದೇಕೆ? ರೈತರ ಛತ್ರವನ್ನು ಹಂದಿಗಳು ಗದ್ದೆಗಳಲ್ಲಿಯೂ ಕಣಗಳಲ್ಲಿಯೂ ಲೂಟಿ ಮಾಡಿದರೂ ಸರ್ಕಾರದ ಬಾಸೂಸು ಮೇರೆ ನಡೆಯಲು ಈ ದೇಶದ ಹಂದಿಗಳನ್ನು ಹಿಡಿದು ದೊಡ್ಡಿಗೆ ಸೇರಿಸುವುದು ಸಾಧ್ಯವಿಲ್ಲದ ಕಾರಣ ಕೆಲವು ಗ್ರಾಮಸ್ಥರು ಒಗ್ಗಟ್ಟಿನಿಂದ ತಮ್ಮ ಗದ್ದೆಗಳಲ್ಲಿ ನಷ್ಟಪಡಿಸುವ ಹಂದಿಗಳನ್ನು ಗುಂಡು ಹೊಡೆಯಲು ಏರ್ಪಡಿಸಿಕೊಂಡಿರುವರು. ಹೀಗೆ ಗ್ರಾಮಸ್ಥರು ಒಗ್ಗಟ್ಟಾದರೂ, ಸರ್ಕಾರವು ರೈತರ ಅಭಿವೃದ್ಧಿಯ ವಿಷಯದಲ್ಲಿ ಆಲಸ್ಯದಿಂದಿರುವರೆಂಬ ಅಭಿಪ್ರಾಯವುಂಟಾಗದೇ ?

ಇದೀಗ ನಾಟಿ ಕೆಲಸವು ಪ್ರಾರಂಭವಾಗಿರುವ ಸಮಯವು, ಇನ್ನು ಕೆಲವು ದಿನಗಳಲ್ಲೇ ಹಂದಿಗಳ ಲೂಟಿಯು ಪ್ರಾರಂಭವಾಗತೊಡಗುವುದು. ಆದುದರಿಂದ ಈ ಮೊದಲೇ ಮಾಡಬೇಕಾಗಿದ್ದ ಬಾಸೂಸನ್ನು ಸರ್ಕಾರವು ಇನ್ನಾದರೂ ಒಡನೆ ಮಾಡಿ ರೈತರನ್ನು ಕಾಪಾಡಲು ಮರೆಯಲಾರರಾಗಿ ನಂಬುತ್ತೇನೆ. ರೈತರ ಪ್ರತಿನಿಧಿಗಳೆಂದು ರೈತರಿಂದ ಓಟು ಪಡೆಕೊಂಡ ಕೌನ್ಸಿಲು ಮೆಂಬರುಗಳು ಈ ವಿಷಯವನ್ನು ಇನ್ನೊಂದು ಮೀಟಿಂಗಿನಲ್ಲಿ ಚರ್ಚಿಸಿ ಸರ್ಕಾರದವರಿಗೆ ಒತ್ತಾಸೆಕೊಟ್ಟು ರೈತಾವಳಿಯಾಭಿವೃದ್ಧಿಗೆ ಬದ್ಧಕಂಕಣರಾಗಲು ಹಿಂಜರಿಯಲಾರರಾಗಿ ಆಶಿಸುತ್ತೇನೆ.

"ರೈತ"

"ಶಾಂತತೆ"

ಮಹನೀಯರೆ,

ಲೋಕದ ನಿಂದೆಯು ಅನ್ಯರನ್ನು ಜಯಿಸುವದಕ್ಕೆ ಮಾಡುವ ಕೌಶಲವೆಂದು ತೋರುವುದಾದರೂ ಅದು ಅಂಥಾ ನಿಂದನೆಗೆ ಗುರಿಮಾಡಲ್ಪಟ್ಟವರ ಸ್ವಂತ ತಿದ್ದುಪಡಿಗಾಗಿಯೇ ಮಾಡಲ್ಪಡುವದೆಂದು ಸಜ್ಜನರು ತಿಳಿದುಕೊಳ್ಳಬೇಕಾಗಿದೆ. ಯಾರು ಸ್ವಲ್ಪ ಮುಂದರಿಯುವರೊ ಅವರ ಮೇಲೆ ಇಲ್ಲದ ಸಲ್ಲದ ಆರೋಪ ಬೀಳುವದು ನಮ್ಮ ಕೊಡಗಿನ ಸ್ವಭಾವ ಧರ್ಮವು.

"ನಿಂದಿಸುವವರು ನಮ್ಮ ಬಂಧುಕಲಾ
ನರ ಹಂದಿಗಳೊಳಗೆ ನಮಗೇನು ಛಲಾ ||"

ಎಂಬಂತೆ ಯಾರು ನಮ್ಮನ್ನು ನಿಂದಿಸುವರೊ ಅವರು ನಮ್ಮ ಸಮೀಪದ ಬಂಧುಗಳೆಂದು ತಿಳಿದು ಬಿಡುವದರಿಂದ ನಮಗೇನೂ ಬಾಧಕವಿಲ್ಲ. ಮಾತ್ರವಲ್ಲ, ಸಮಾಜವು ಸರಿಯಾದ ಅಭಿವೃದ್ಧಿ ಹೊಂದುವರೆ ಆಕ್ಷೇಪಣೆಯು ಆವಶ್ಯವಾಗಿ ಬೇಕು. ತೋಟದ ಸಸಿಗಳು ಚನ್ನಾಗಿ ಬೆಳೆಯುವದಕ್ಕೂ ಹಸನಾಗಿ ತೋರುವದಕ್ಕೂ ಅವುಗಳನ್ನು ಕತ್ತರಿಸುವ ಅವಶ್ಯಕತೆ ಹೇಗೆ ಬೀಳುವದೊ ಹಾಗೆಯೆ ನಮ್ಮ ಮುಂದಣ ಅಭಿವೃದ್ಧಿಗೆ ದೂಷಣೆಯು ಅವಶ್ಯಕವಾಗಿದೆ. ದೂಷಣೆ ಎಂಬ ಕತ್ತರಿಯು ನಮ್ಮ ಮೇಲೆ ತಿರುಗಿದ ಹಾಗೆಲ್ಲಾ ನಮ್ಮ ಪ್ರತಿಭೆಯು ಹೆಚ್ಚುವದಲ್ಲದೆ ಅದರಿಂದ ನಮಗೆ ಯಾವ ಅಪಾಯವೂ ಇಲ್ಲ. ದೂಷಣೆಯ ಅಸ್ತ್ರವು ನಮ್ಮ ಮೇಲೆ ಬಂದ ಹಾಗೆಲ್ಲಾ ನಮ್ಮ ಜಾಗ್ರತೆಯು ತಾನಾಗಿಯೆ ಉಂಟಾಗುತ್ತದೆ. ನಾವು ವ್ಯವಹಾರದಲ್ಲಿ ಯಾವುದಕ್ಕೆ ದುಃಖವೆನ್ನುತ್ತೇವೆಯೊ ಅದು ನಮ್ಮ ಮುಂದಿನ ಅಭಿವೃದ್ಧಿಯ ಸೂಚಕವಾಗಿ ಪರಿಣಮಿಸುವದು. ಸತ್ಯ ಸ್ವರೂಪವನ್ನು ಹೊಂದತಕ್ಕ ನಮ್ಮ ಕಾರ್ಯಕ್ಕೆ ದೂಷಣೆ ಎಂಬ ಪ್ರೋತ್ಸಾಹವು ಅವಶ್ಯವಾಗಿದೆ.

ವೈರಿಗಳ ಇಲ್ಲವೆ ಬಂಧುಗಳ ನುರ್ಮಭೇದಕ ದೂಷಣೆಯು ನಮ್ಮ ಮುಂದಿನ ದಾರಿ ತೋರಿಸತಕ್ಕ ವಿಧಾನಕ್ಕೆ ಸಹಾಯಕವಾಗಿಯೇ ಆಗುವದು. ಈ ಪ್ರಪಂಚವೆಂಬ ಆಟಸ್ಥಳದಲ್ಲಿ ತಪ್ಪಿ ಬೀಳುವದೂ, ಬಿದ್ದರೆ ನಗಾಡಿಸಿಕೊಳ್ಳುವದೂ ಸಾಮಾನ್ಯವಾಗಿರುವಾಗ ಈ ಮಾತ್ರದಿಂದ ಮುಂದಿನ ಕರ್ತವ್ಯತೆಯಲ್ಲಿ ಭಯಪಡುವದೂ, ಇಲ್ಲವೆ ನಿರುತ್ಸಾಹಿಗಳಾಗಿರುವದೂ ಸಮಂಜಸವಲ್ಲ. ಯಾವನು ತಪ್ಪಿಬಿದ್ದರೂ, ಇತರರಿಂದ ನಗಾಡಿಸಿಕೊಂಡರೂ, ನಿರುತ್ಸಾಹನಾಗದೆ ಪುನಃ ತಾನು ಕೈಕೊಂಡ ಆಟದಲ್ಲೇ ಬುದ್ಧಿಶ್ಯವಿಟ್ಟು ಮುಂದರಿಸುತ್ತಾನೋ ಆಗಲೆ ಆತನ ನಿಜವಾದ ಸಾಮರ್ಥ್ಯದ ಪರೀಕ್ಷೆಯಾಗುವದು. ಜನಗಳ ದೂಷಣೆಯೆಂಬ ಬಿರುಗಾಳಿ ಬೀಸಿದಾಗ ಮಾನಸಿಕ ವ್ಯಥೆಗೆ ಯಾರು ಭಯಪಡುವದಿಲ್ಲವೊ ಅವರು ಯಾವ ಕಾರ್ಯವನ್ನು ತಾನೆ ಸಮರ್ಥಿಸದಿರರು? ನಮ್ಮಲ್ಲಿ ಸಾಮಾನ್ಯ ಒಬ್ಬರ ಮೇಲೊಬ್ಬರು ದೂಷಣೆ ಎತ್ತುವ ಆಚರಣೆಯನ್ನೇ ಕೈಕೊಂಡು ಬರುವ ವಾಡಿಕೆಯಾದ್ದರಿಂದ ಅದಕ್ಕೆ ಸ್ವಲ್ಪವೂ ಭಯಪಡತಕ್ಕ ಕಾರಣವಿಲ್ಲ. ದನಗಳ ಮೇಲಿರುವ ಉಣ್ಣೆಯನ್ನು ಕಾಗೆಯು ಕುಕ್ಕಿ ತೆಗೆದು ದನಕ್ಕೆ ಆರೋಗ್ಯವನ್ನು ಹೇಗೆ ಕಲ್ಪಿಸಿಕೊಡುವದೊ ಹಾಗೆಯೆ ನಿಂದಕರು ನಮ್ಮ ಮನೋಭಾವಗಳ ಮೇಲೆ ಏನಾದರೂ ಸ್ವಲ್ಪ ಇರತಕ್ಕ ಕೊಳೆಯನ್ನು ತೆಗೆದು ಪರಿಶುದ್ಧರನ್ನಾಗಿ ಮಾಡುವವರಾಗಿದೆ. ಇತರರನ್ನು ದೂಷಣೆ ಮಾಡುವ ಕೆಲಸವಾದರೂ, ತಮ್ಮ ಕೈಯಲ್ಲೇನೂ ಹರಿಯದ ತಿಳಿಗೇಡಿಗಳ ಕರ್ತವ್ಯ ಎಂಬುದು ಚನ್ನಾಗಿ ಅವರ ಕಾರ್ಯಕ್ರಮದಲ್ಲಿ ವ್ಯಕ್ತವಾಗುವದರಿಂದ ಈ ಇಂದ್ರಜಾಲಕ್ಕೆ ಯಾರೂ ಹೆದರಬೇಕಾಗಿಲ್ಲ.

"ಅನುಭವಿ"

ಸಂಪಾಜೆ ಮಲ್ಲೇಶ್ವರ ಸಹಕಾರಿ ಸಂಘ.

ಅಯ್ಯಾ,

ಕೊಡಗು ಸಹಕಾರಿ ಸಂಘಗಳ ರಿಜಿಸ್ಟ್ರಾರರವರು ಸಂಪಾಜೆ ಮೊಕ್ಕಾಮಿಗೆ ದಯಮಾಡಿಸಿ ಪರಸ್ಪರ ಸಹಾಯಕ ಸಂಘ ಒಂದನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ತಾರೀಕು 20--8—25ನೇ ದಿನ ಹಗಲು 2 ಗಂಟೆ ಸಮಯಕ್ಕೆ ಒಂದು ಸಭೆಯನ್ನು ಕೂಡಿಸಬೇಕೆಂದು ಸೂಚಿಸಿದರಿಂದ ಸಂಪಾಜೆ, ಕಲ್ಲ ೪ ಈ ಗ್ರಾಮಗಳಿಂದ ಸುಮಾರು 30 ಮಂದಿ ಮಹನೀಯರು ಕೂಡಿದ್ದರು.

ಕೂಡಿದ ಮಹನೀಯರಿಗೆ "ಸಂಘೇಶಕ್ತಿ ಕಲಾಯುಗೆ" ಎಂಬ ತತ್ವದ ಸಾರಾಂಶವನ್ನು ಎಲ್ಲರಿಗೂ ತಿಳಿಯುವ ಹಾಗೆ ವಿವರಿಸಿ, ಸಂಪಾಜೆ ಮಲ್ಲೇಶ್ವರ ಸಹಕಾರಿ ಸಂಘವೆಂಬ ಹೆಸರಿನಿಂದ ರಿಜಿಸ್ಟ್ರಿ ಮಾಡಿದನಂತರ ಕೂಡಿದವರ ಪೈಕಿ 26 ಮಂದಿ ಮೆಂಬರರಾಗಿ ಸಂಘಕ್ಕೆ ಸೇರಿದ್ದು ಸ್ತೋತ್ರಾರ್ಹವಾಗಿದೆ. ಸಂಘವು ಆಚಂದ್ರಾರ್ಕ ಪರಿಯಂತ ಚಿರಸ್ಥಾಯಿಯಾಗಿ ಬಾಳಲೆಂದು ದೇವರನ್ನು ಪ್ರಾರ್ಥಿಸುವ,

'ಸಹಕಾರಿ'

ಮಡಿಕೇರಿ ಮುನಿಸಿಪಾಲಿಟಿ ಕಮಿಟಿಯವರಲ್ಲಿ ಒಂದು ವಿನಂತಿ.—

ಮಹನೀಯರೆ

ಇದನ್ನು ಯಾರು ಬರೆಯುವನೆಂದು ಆಶ್ಚರ್ಯ ಪಡಬೇಡಿರಿ. ನಾನು ಕಣ್ಣಾರೆ ಕಂಡ ಒಂದು ಸಂಗತಿಯನ್ನು ನಿಮ್ಮಲ್ಲಿ ಅರಿಕೆಮಾಡಿಕೊಳ್ಳುವದಕ್ಕೋಸ್ಕರ ಇದನ್ನು ಬರೆಯಬೇಕಾಯಿತು.

ಅದೇನೆಂದರೆ—ಮಡಿಕೇರಿಯ ಹಿಲ್ ರೋಡ್‌ನಲ್ಲಿದ್ದಂಥ ಮುನ್ಸಿಪಾಲಿಟಿಯ ಕಸಬುಗಾರರ ಮಾದಿಗರು ಈಗ ಸೆಂಟ್ರಲ್ ಹೈಸ್ಕೂಲಿನ ಹತ್ತಿರವಿರುವರಷ್ಟೆ. ಅವರಿಗೆ ಅಲ್ಲಿರಲಿಕ್ಕೆ ಯಾರು ತಾನೇ ಅಪ್ಪಣೆಕೊಟ್ಟರೋ ಗೊತ್ತಿಲ್ಲ. ಪಾಪ ಬಡವರು. ಇಂಥವರಿಗೆ ಉಚಿತವಾಗಿಯೂ ಸಹಾಯಮಾಡಬೇಕು. ಆದರೆ ಇವರ ನಡಾವಳಿಕೆಯನ್ನು ಕೇಳುವಿರಾ. ಸಾಯಂಕಾಲದಲ್ಲಿ ಸೆಂಡಿ ಕುಡಿದುಕೊಂಡು ಜಗಳವಾಡುವುದು ಇವರ ನಿತ್ಯಕರ್ಮವಾಗಿ ಬಿಟ್ಟಿದೆ. ಚಳಿ, ರೋಗಗಳಿಂದ ಸತ್ತಂಥ ದನಕರಗಳನ್ನು ತೆಗೆದುಕೊಂಡು ಹೋಗಿ ಸ್ಕೂಲಿನ ಹಿಂದುಗಡೆಯೇ ಇರುವಂಥ ಕಾಫಿತೋಟದಲ್ಲೋ ಅಥವಾ ಅದರ ಹತ್ತಿರವೇ ಹರಿಯುತ್ತಿರುವ ತೋಡಿನ ಕರೆಯಲ್ಲಿಯೋ, ಮಾಂಸ ಮತ್ತು ಚರ್ಮಕ್ಕೋಸ್ಕರ ಅವುಗಳನ್ನು ಸುಲಿದು ಹೊಲಸನ್ನೆಲ್ಲಾ ನೀರಲ್ಲಿ ಹಾಕಿ ನೀರನ್ನೂ ಸ್ಥಳವನ್ನೂ ಕೆಡಿಸುತ್ತಾರೆ. ಇದರಿಂದ ಸ್ಕೂಲಿನ ಹುಡುಗರಿಗೂ, ಬೋರ್ಡಿಂಗಿನ ಹುಡುಗರಿಗೂ ಎಷ್ಟು ಕಷ್ಟವೆಂದು ಯೋಚಿಸಿರಿ. ತೋಡಿನ ನೀರನ್ನು ಅನೇಕರು ಕುಡಿಯುವುದಕ್ಕೂ ಬಟ್ಟೆಗಳನ್ನು ಒಗೆಯುವದಕ್ಕೂ, ಸ್ನಾನ ಮಾಡುವುದಕ್ಕೂ ಉಪಯೋಗಿಸುತ್ತಾರೆ. ಹೀಗಿರುವಾಗ ಆ ನೀರನ್ನು ಕಡಿಸುವುದು ಎಷ್ಟು ಪಾಪ! ಪಟ್ಟಣವಾಸಿಗಳ ಮೇಲೆ ಕರುಣೆ ಇಟ್ಟು ಈ ಅಕ್ರಮವನ್ನು ಜನರ ಕ್ಷೇಮಾರ್ಥಕ್ಕಾಗಿ ನಿಲ್ಲಿಸಬೇಕೆಂದು ಬೇಡುತ್ತೇನೆ.

'ಕಂಡವ.'

ಗ್ರಾಮಾಂತರ ರಸ್ತೆ.

ಅಯ್ಯಾ,

ವೀರಾಜಪೇಟೆಯಿಂದ ಹೊರಟು ಚೆಂಬೆಬೆಳ್ಳೂರು ಗ್ರಾಮಕ್ಕಾಗಿ ಅಲ್ಲಿಂದ ಬಂಟೆ ಅಂಗಡಿಗೆ ಹೋಗುವ ರಸ್ತೆ ಬಿಟ್ಟು ದೇವಣಗೇರಿ ಹಾಲುಗುಂದಕ್ಕಾಗಿ ಕೊಂಡಗೇರಿ ಕಡುವಿಗೆ ಕೂಡುವ ವಿಲೇಜ್ ಕಮ್ಯುನಿಕೇಶನ್ ರೋಡಿನ ಹೀನಸ್ಥಿತಿ ಹೇಳಿ ಪೂರೈಸಲಾರದ ಸಂಗತಿಯಾಗಿದೆ. ಮಳೆಗಾಲ ಸಮಯ ಬೇತರಿ ಕಡು ಮತ್ತು ಕೊಂಡಂಗೇರಿ ಕಡುಗಳಲ್ಲಿ ನೀರು ತುಂಬಿದರೆ ಈ ರೋಡಿಗಾಗಿಹಾದು ಪಯಣಮಾಡಲು ಅನುಕೂಲವಿರುತ್ತದೆ. ಕಳೆದ ವರ್ಷ ಡಿ ಬೋರ್ಡಿನಿಂದ ಈ ರೋಡಿಗೆ ಕೆಲವು ಹಣ ಮಂಜೂರಾದರೂ ಸಾಲದ್ದರಿಂದ ಗ್ರಾಮಸ್ಥರು ಚಂದಾ ಹಾಕಿ ನದರಿ ರೋಡನ್ನು ರಿಪೇರಿಮಾಡಿದ್ದರಿಂದ ಒಸರಿಗೆ ಸ್ವಲ್ಪ ಮಟ್ಟಿಗೆ ಅನುಕೂಲವಾಯಿತು. ಕ್ರಮವಾಗಿ ಅನುಕೂಲವಾಗಬೇಕಾದರೆ ಸದರಿ ರೋಡಿಗೆ ಇನ್ನೂ ಕನಿಷ್ಠಪಕ್ಷ 500/ ರೂಪಾಯಿಯಾದರೂ ಸ್ಯಾಂಕ್ಷನ್ ಮಾಡಿದರೆ ತಕ್ಕಮಟ್ಟಿಗಾದರೂ ರೈತರ ಕಷ್ಟ ಪರಿಹಾರವಾದೀತಲ್ಲದೆ ಗಾಡಿ ವಗೈರೆ ಸಂಚಾರಕ್ಕೂ ಸ್ವಲ್ಪ ಅನುಕೂಲವಾಗಬಹುದಾದ್ದರಿಂದ ಈ ವಿಷಯದಲ್ಲಿ ನಮ್ಮ ಡಿ ಬೋರ್ಡು ಮೆಂಬರರು ಇದಕ್ಕೆ ಹೆಚ್ಚಿನ ನಿಗ ಇಟ್ಟು ಬಜೆಟ್ಟಿನಿಂದ ಹೆಚ್ಚಿಗೆ ಹಣ ಮಂಜೂರು ಮಾಡಿ ರೈತರಿಗೆ ಅನುಕೂಲಪಡಿಸಿಕೊಡುವರೆಂದು ನಂಬುತ್ತೇನೆ.

ಮುಕ್ಕಾಟಿರ ಕುಟ್ಟಪ್ಪ.

ಪಾರಮಾರ್ಥಿಕ ವಿದ್ಯೆ

ಅಯ್ಯಾ ಸಂಪಾದಕರೇ—

ನಿಮ್ಮ ತಾ॥ 14/8/25 ರ ಸಂಚಿಕೆಯಲ್ಲಿ "ಪರಲೋಕ ವಿದ್ಯೆ" ಎಂಬದಾಗಿ ಪ್ರಕಟಿಸಿದ ದೇಶಬಂಧು ದಾಸರವರ ಆತ್ಮದೊಂದಿಗೆ ಶ್ರೀ ನಲಿನೀನಾಥ ಜೋಶರವರು ಮಾತಾಡಿದ ವಿಷಯದಲ್ಲಿ ಅನೇಕರು ಸಂಶಯಗೊಂಡು, ಇದು ಸಾಧ್ಯವೋ ಎಂಬದಾಗಿ ಕೇಳುತ್ತಾರೆ, ಮತ್ತು ಅನೇಕರು ನನ್ನಲ್ಲಿ ಇದರ ಪ್ರಸ್ತಾಪವನ್ನೆತ್ತಿರುವದರಿಂದ ಈ ಸ್ಮರಣಶಕ್ತಿಯು ನಿಜವೆಂದು ಸ್ಥಿರಪಡಿಸಲು ವಾಚಕ ಮಹಾಶಯರ ಮನವರಿಕೆಗೆ ಸ್ವರ್ಗೀಯ ಬಾಬು ಭೂಪೇಂದ್ರನಾಥ ಬಾಸುಗಳು ವಿಲಾಯತಿಯಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಆಫೀಸಿನಲ್ಲಿರುವಾಗ ಅಮೃತ ಬಜಾರ್ ಪತ್ರಿಕೆ ಸಂಪಾದಕ ಶ್ರೀ ಗೋಲಾಪ ಲಾಲ್ ಘೋಷರವರಿಗೆ ಬರೆದ ಪತ್ರವನ್ನು ಇಲ್ಲಿ ವರ್ಣಿಸುವೆನು. ಮತ್ತು ಸ್ವಾಮಿ ವಿವೇಕಾನಂದ, ರಾಮತೀರ್ಥ, ಮೋತೀಲಾಲ್ ಘೋಷ್ ಮೊದಲಾದವರ ಆತ್ಮಗಳೊಂದಿಗೆ ಮಾತಾಡಿದ್ದು ಸಹ ಅವಶ್ಯವೆಂದು ಕಂಡು ಬಂದಲ್ಲಿ ಮುಂದೆ ಬರೆಯುವೆನು.

ಬಾಬು ಭೂಪೇಂದ್ರನಾಥರವರ ಅನುಭವದ ಪತ್ರ.

ನನ್ನ ಪ್ರೀಯ ಗೋಲಾಪ್,

ನೀನು ನಿನ್ನ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಲಿಕ್ಕೆಂದು ವೈದೀಕ ವಿದ್ಯೆಯ (Spiritualism) ನನ್ನ ಅನುಭವವನ್ನು ಕೇಳುತ್ತೀಯಷ್ಟೇ. ನೀನು ಪ್ರಚುರ ಪಡಿಸುವ ವಿಷಯ ಸ್ವಲ್ಪ ಸಂಶಯ ಪಡುತ್ತಿದ್ದೆನು. ಆದರೆ ಪ್ರಚುರ ಪಡಿಸುವದರಿಂದ ವೈದಿಕ ವಿದ್ಯೆಯನ್ನು ಕೈ ಕೊಳ್ಳುವ ಇತರರಿಗೆ ಅದರ ನಗಿತದಲ್ಲಿ ಹೆಚ್ಚಿನ ಅವಕಾಶವಿರುವದೆಂದು ನೀನು ಹೇಳುತ್ತಿ. ಆದದ್ದರಿಂದ ನನ್ನ ಅನುಭವವನ್ನು ಹೇಳುವನು—ಮುಂದುವರಿಯುವ ನಂಬಿ ಅಭಿಲಾಷೆಯುಳ್ಳಿದ್ದ ನನ್ನ ಕಿರೀ ಮಗನು ಕಳೆದ ವರ್ಷ ಸ್ವರ್ಗಸ್ಥನಾದನು, ಮತ್ತು ಕೆಲವು ವಾರಗಳ ನಂತರ ನಾನು ಇಲ್ಲಿಗೆ ಬಂದೆ ನನ್ನ ಜಾಡಿಯಲ್ಲೇ ಇದ್ದು ನನ್ನ ಸಂಸಾರವನ್ನು ಅಗಲಿಬಂದು ಇಲ್ಲ ಏಕಾಂಗಿಯಾಗಿರುವ ಸಮಯದಲ್ಲಿ ನನಗೆ ಆನಂದವನ್ನೀಯುತ್ತಿದ್ದ ನನ್ನ ಕಿರೀ ಮಗನು ಸಹ ಸ್ವರ್ಗಸ್ಥನಾದ್ದರಿಂದ ನಾನು ಎಷ್ಟರ ಮಟ್ಟಿಗೆ ಖಿನ್ನನಾಗಿದ್ದೆನೆಂದು ನಾನು ನಿನಗೆ ಹೇಳತಕ್ಕದ್ದೇನಿದೆ. ಆ ಸಮಯದಲ್ಲಿ ನನ್ನ ಮಿತ್ರನಾದ ನಿನ್ನ ಅಣ್ಣ ಮೋತೀಲಾಲನು ಕಾಯಿಲಸ್ತನಾಗಿ ಮಲಗಿದ್ದಲ್ಲಿಂದ ಸಹ ನನ್ನ ಪರಿತಾಪವನ್ನು ಹೋಗಲಾಡಿಸಲು ಕಾಗದ ಬರೆದದ್ದಲ್ಲದೆ ಅವನು ವೈದಿಕ ವಿದ್ಯೆಯ ಅನುಭವಸ್ಥನಾದದ್ದರಿಂದ ಅನೇಕ ವೈದಿಕ ವಿದ್ಯೆಯ ಪುಸ್ತಕಗಳನ್ನು ಸಹ ಕಳುಹಿಸಿಕೊಟ್ಟನು. ಅಲ್ಲದೆ ನಮ್ಮನ್ನು ತ್ಯಜಿಸಿದ ಆತ್ಮಕ್ಕೆ ವ್ಯಸನ ಪಡಬಾರದಾಗಿಯೂ, ಆತ್ಮವು ಎಂದೂ ನಾಶವಾಗುವದಿಲ್ಲವಾಗಿಯೂ ಸಹ ಬೋಧಿಸುತ್ತಿದ್ದನು. ಅದೇ ರೀತಿ ನಾನು ಎಲ್ಲಾ ಪುಸ್ತಕಗಳನ್ನು ಓದಿದೆನು. ನಾನು ವಿಲಾಯಿತಿಗೆ ವಾಪಸು ಬಂದನಂತರ ಒಬ್ಬ ವೈದಿಕ ವಿದ್ಯೆಯ ಅನುಭವಸ್ಥನಿಗೆ ನನ್ನನ್ನು ಭೇಟಿಮಾಡಿಸಲು ನನ್ನ ಮಿತ್ರನೊಬ್ಬನನ್ನು ಕೇಳಿಕೊಂಡೆನು. ಅವನು ನನ್ನನ್ನು ಹ್ಯಾಮ್‌ಸ್ಟೆಡ್ ಪಟ್ಟಣದಲ್ಲಿ ವಾಸವಿರುವ ಕರ್ನಲ್ ಕೌಲೆ (Col. Cawlay) ಎಂಬ ಇಂಡಿಯನ್ ಆಫೀಸರಾಗಿದ್ದು ಪೆನ್‌ಶನಿನಲ್ಲಿರುವ ಮಹನೀಯರಿಗೆ ಭೇಟಿಮಾಡಿಸಿದನು. ಇದರ ಪರಿಶೋಧನೆಗೆಂದು ಅನೇಕ ಪ್ರಸ್ತಾಪವಾಯಿತು. ಪ್ರಕೃತದಲ್ಲಿ ಇದರ ಅನುಭವವು ನನಗೆ ಇಲ್ಲದ್ದರಿಂದ ಸ್ವಲ್ಪ ಕಷ್ಟತೋರಿತು. ಆದರೆ ಅವುಗಳನ್ನೆಲ್ಲಾ ಹೋಗಗೊಳಿಸಿ ನನ್ನಿ ವಿದ್ಯೆಯಲ್ಲಿ ಕಡೆಗೆ ಅಭಿಮಾನವನಿತ್ತರು. ನಾನು ನನ್ನ ಜೊತೆಯಲ್ಲಿ ಶ್ರೀ. ಯನ್. ಸಿ ಸೆನ್ನ (Mr. N. C. Sen, secy. of students advisory committee) ಎಂಬವರನ್ನು ಕರಕೊಂಡು ಶ್ರೀ. ಕೌಲೆ ಬಂಗ್ಲೆಗೆ ಹೋದೆನು. ಅಲ್ಲಿ ಅವರು ನಮ್ಮನ್ನು ಮಿಸೆಸ್ ಜಾನ್‌ಸನ್ (Mrs Jhonson) ಎಂಬವಳಿಗೆ ಭೇಟಿಮಾಡಿಸಿದರು. ಅಲ್ಲಿ ಒಂದು ಕೋಣೆಯೊಳಗೆ ನಾವು ನಾಲ್ವರು ಹೋದೆವು. ಕೋಣೆಯೊಳಗೆ ಸೇರಿ ಕುರ್ಚಿಯಲ್ಲಿ ಕೂತನಂತರ ಬೆಳಕನ್ನು ತೆಗೆದು ಹಾಕಿದರು. ಜಾನ್‌ಸನ್ ನನ್ನ ಎಡಭಾಗದಲ್ಲಿ ಸೆನ್ನ ನನ್ನ ಬಲಭಾಗದಲ್ಲೂ, ಕೌಲೆ ನನ್ನ ಎದುರಿಗೂ ಕೂತರು. ಗ್ರಾಮಾಫೋನದ ಕೊಳವೆಯಂತಿರುವ (Horn) ಒಂದು ಸಣ್ಣ ತುತ್ತೂರಿಯನ್ನು ನಮ್ಮ ಎದುರಿನಲ್ಲಿ ಇಡಗಿದ್ದರು. ಕೂತಮೇಲೆ ಮಿಸೆಸ್ ಜಾನ್‌ಸನ್ ನನಗೆ ಎಚ್ಚರಿಕೆ ಕೊಟ್ಟದ್ದೇನಂದರೆ—'ಕೆಲವುವೇಳೆ ಪ್ರಥಮದ ಪರಿಶೋಧನೆಯು ಫಲಿಸದ್ದಾಗುವದುಂಟು. ಹಾಗಾದಲ್ಲಿ ನೀವು ಮನಗುಂದಬೇಡಿ. ಸರಿಬಂದು ಹೋಗುವ ನನ್ನ ಒಬ್ಬ ಲ್ಯಾಂಕ್ಯಾಷಯರ್ ಹುಡುಗನ ಆತ್ಮವು ಬಂದಲ್ಲಿ ಆ ತುತ್ತೂರಿಯು ಕೋಣೆಯ ಸುತ್ತಲೂ ಶಬ್ದಮಾಡುತ್ತಾ ತಿರುಗಿ ನಮ್ಮ ಶರೀರದ ಕೆಲವು ಭಾಗಗಳನ್ನು ಮುಟ್ಟುವದುಂಟು. ಅಂಥಾ ಸಮಯದಲ್ಲಿ ವಂದಿಸುತ್ತೇನೆಂದು (Thank you) ಹೇಳಬೇಕು. ಅದು ಆತ್ಮವು ಬಂದ ಸೂಚನೆಯು. ಈ ಆತ್ಮಗಳಿಗೆ ಗಾನದಲ್ಲಿ ಬಹು ಮಮತೆ. ಕೆಲವು ಸಮಯದಲ್ಲಿ ನಾವು ಹಾಡಲೂ ಬೇಕಾಗುತ್ತೆ'— ಎಂದು ಹೇಳಿದಳು.

ನಾವು ಕೂತ ಮೇಲೆ ಮಿಸೆಸ್ ಜಾನ್‌ಸನ್ನಳು ಕೆಲವು ಹಾಡುಗಳನ್ನು ಹಾಡಿದಳು. ನಾವು ಸಹ ಸದರಿ ಹಾಡಿನಲ್ಲಿ ಸಹಕರಿಸಿದೆವು. 15 ನಿಮಿಷದನಂತರ ಆ ತುತ್ತೂರಿಯು ಶಬ್ದವಾಗ ತೊಡಗಿತು. ಆ ಶಬ್ದವು ಕೋಣೆಯ ನಾನಾ ಭಾಗಗಳಲ್ಲಿ ಕೇಳಲಾಯಿತು. ಕಡೆಗೆ ಆ ತುತ್ತೂರಿಯು ನಮ್ಮ ಶರೀರದ ನಾನಾ ಭಾಗಗಳನ್ನು ಮುಟ್ಟುತ್ತಿದ್ದು ಕೆಳಕ್ಕೆ ಬಿತ್ತು. ಮಿಸೆಸ್ ಜಾನ್‌ಸನ್ ಹತ್ತಿರ ಬಂದ ಕೂಡಲೆ ನಾವು ಸ್ಪಷ್ಟವಾಗಿ ಒಂದು ಧ್ವನಿಯನ್ನು ಕೇಳಿದೆವು. ಸ್ವಲ್ಪ ಹೊತ್ತಿನ

ರ ನನ್ನ ಹಿಂದುಗಡೆ ತೆಳ್ಳಗಿರುವ ಒಬ್ಬ ಸುಂದರ ಯೌವನಸ್ಥನು ನಿಂತಿರುವದಾಗಿ ಜಾನ್‌ಸನ್‌ಳು ನನಗೆ ಹೇಳಿದಳು. ಆತನು ನನಗೆ ಕಾಣುತ್ತಿರಲಿಲ್ಲ. ಅದು ಯಾರೆಂಬದಾಗಿ ಜಾನ್‌ಸನ್ನಳು ಅವಳ ನಿತ್ಯ ದರ್ಶನದ ಆತ್ಮವನ್ನು ಕೇಳಲು ಅವನು ನನ್ನ ಮಗನೆಂಬದಾಗಿ ಹೇಳಿತು. ನನಗೆ 30 ವರ್ಷ ಪ್ರಾಯದ ಮಗನಿದ್ದದ್ದೂ ಅವನು ಮೃತಪಟ್ಟದ್ದೂ ಜಾನ್‌ಸನ್‌ಳಿಗೆ ಗೊತ್ತೇ ಇರಲಿಲ್ಲ. ಮತ್ತು ಆ ಯುವಕನಿಗೆ ತನ್ನಲ್ಲು ಮಾತನಾಡಲು ತುಂಬಾ ಆಶೆ ಇರುವದಾಗಿ ತಿಳಿಸಿದಳು. ಆದರೆ ಅದಕ್ಕಿರುವ ಶಕ್ತಿ ನನ್ನಲ್ಲಿ ಕೇವಲ ಕಮ್ಮಿಯಾಗಿದ್ದದರಿಂದ ಸಫಲವಾಗಲಿಲ್ಲವಷ್ಟೆ. ನೀನು ಸೌಖ್ಯದಲ್ಲಿದ್ದೀಯೋ ಎಂದು ಕೇಳಿದೆನು. ಅದಕ್ಕೆ ಮೂರಾವರ್ತಿ ಆ ಕುತ್ಪುರಿಯನ್ನು ತಬ್ಬಿಕೊಡಿತು. ಅದು ನನ್ನ ಪ್ರಶ್ನೆಗಿರುವ ಉತ್ತರವೆಂದು ಜಾನ್‌ಸನ್‌ಳು ಹೇಳಿದಳು. ಅವಳು ತಿಳಿಸಿದ ಗುರ್ತುಗಳೆಲ್ಲಾ ಸರಿಯಾಗಿ ನನ್ನ ಮಗನನ್ನೇ ಹೋಲುತ್ತಿತ್ತು. ಇವುಗಳನ್ನೆಲ್ಲಾ ನೋಡುತ್ತಾ ನನ್ನ ಹಿಂದುಗಡೆ ಜೋಕಿಚಲೆಯ ಒಬ್ಬ ಗೃಹಸ್ಥನು ನಿಂತಿರುವದಾಗಿ ತಿಳಿಸಿದಳು. ಇವನು ಯಾರೆಂದು ನನಗೆ ಮೊದಲು ಗೊತ್ತಾಗಲಿಲ್ಲ. ಕೆಲವು ಹೊತ್ತಿನ ತನಕ ನನ್ನ ಕಣ್ಣಿಗೆ ಯಾವುದು ಕಾಣಬರಲಿಲ್ಲ. ಮಿಸೆಸ್ ಜಾನ್‌ಸನ್ನಳು ನನ್ನ ಕಡೆ ತಿರುಗಿ ಅವನ ಹತ್ತರ ತಲೆಗೆ ರುಮಾಲು ಸುತ್ತಿ ನಿಂತಿರುವ ಒಬ್ಬ ಕುಳ್ಳರೂಪವನ್ನು ತಿಳಿಸಿದನು. ಕೂಪಚೆಮ್ಮದ ಮೇಲು ಮುಸುಕು ಹಾಕಿ ತನ್ನ ಮಗನೊಂದಿಗೆ ಒಬ್ಬ ಸ್ತ್ರೀಯು ನಿಂತಿರುವದಾಗಿ ಹೇಳಿದಳು. ಅವರು ಯಾರೆಂದು ಜಾನ್‌ಸನ್‌ಳ ಪ್ರೇಮ ಮಡುಗನನ್ನು ಕೇಳಲು ಅವರು ನನ್ನ ನ ತಾಯಿ ಮತ್ತು ಅವನ ಸಹೋದರನೆಂದು ತಿಳಿಸಿದನು. ಆ ಮೇಲೆ ಅವನ ತಾಯಿಗೆ ಮಗನಲ್ಲು ಮಾತಾಡಲು ಒಪ್ಪಳೆ ಇರುವದಾಗಿ ತಿಳಿಸಿದಳು. ಕೂಡಲೆ ಆ ಕುತ್ಪುರಿಯು ಶಬ್ದವಾಯಿತು. ಅವನ ತಾಯಿಯು ಹಾಡುತ್ತಿರುವ ಪದ ಯಾವದಾದರೂ ಗೊತ್ತಿದ್ದಲ್ಲಿ ಹಾಡಲು ನನ್ನಿಗೆ ಜಾನ್‌ಸನ್ನಳು ಹೇಳಿದಳು. ಅವನ ತಾಯಿಯು ಮೊದಲು ಯಾವಾಗಲು ಮುಂಜಾನೆ ಹಾಡುತ್ತಿದ್ದ ಒಂಗಾಳಿ ಗೀತೆಯೊಂದನ್ನು ನಾನು ಹಾಡಿದನು. ಆ ಹಾಡಿನ ಜೊತೆಯಲ್ಲು ಅವನ ತಾಯಿಯೂ ಹಾಡುವದು ಕೇಳಿ ನನಗೆ ಆಶ್ಚರ್ಯವಾಯಿತು. ಅನಂತರ ಈ ದಿವಸದ ಶೋಧನೆಯಲ್ಲು ಮತ್ತೆ ಯಾರೂ ಕಾಣಲಿಲ್ಲ. ನನ್ನ ಮಗನ ಹೇರೆಯು ಜಾನ್‌ಸನ್‌ಳು ಹೇಳಿದ್ದಕ್ಕೆ ಸರಿಹೋಲುತ್ತಿತ್ತು. ಮತ್ತು ನನ್ನ ಮಗನನ್ನು ನೆನ್ನಿಗೂ ಚೆನ್ನಾಗಿ ಗೊತ್ತಿತ್ತು. ನಮ್ಮ ಶೋಧನೆಯನ್ನು ಈ ದಿವಸಕ್ಕೆ ನಿಲ್ಲಿಸಿ ವಾಪಸು ... ರೆಟೆವು. ಹೊರಡುವಾಗ ಮಿಸೆಸ್ ಜಾನ್‌ಸನ್ನಳು ... ನೇನೆಂದರೆ– ಪ್ರಥಮದಲ್ಲೇ ನನ್ನ ಕೆಲಸವು ನೆರವೇರಿದ್ದು ಬಹಳ ಸಂತೋಷ ಮತ್ತು ಹಿಗ್ಗಿಯು. ಇನ್ನೂ ಕೆಲವು ದಿವಸಗಳು ನೀವು ಪ್ರಯತ್ನಿಸಿದರೆ ನೀವು ಖುದ್ದು ಮಾತಾಡಬಹುದು ಎಂದು ಹೇಳಿದಳು. ಇದೆಲ್ಲಾ ನೋಡಿದ ನಮಗೆ ಇದರಲ್ಲಿ ಅಭಿಮಾನವು ಸ್ವಲ್ಪ ಉಂಟಾಯಿತು. ಅಲ್ಲಿಂದ ಹೊರಟು ಹೋದೆನು.

(ಈ ವಿಷಯ ಹೆಚ್ಚು ತಿಳಿಯಲು ವಾಚಕರಿಗೆ ಕುತೂಹಲವು ಇದ್ದರೆ ಮುಂದುವರಿಸಲ್ಪಡುವುದು)

ಪಿ. ಯಂ. ಮುತ್ತಣ್ಣ

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗೋಣ, ಶರೀರ ಸುಖವಾಗೋಣ, ನೌಕರಿ ಸಿಗೋಣ, ಸಂಬಳ ಹೆಚ್ಚೋಣ, ವಿವಾಹವಾಗೋಣ, ಸಂತತಿಯಾಗೋಣ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗೋಣ, ವ್ಯಾಪಾರದಲ್ಲಿ ಬಹಳೇ ಲಾಭ ಸಿಗೋಣ, ಸಾಲ ಮುಕ್ತ ಆಗೋಣ, ಭೂತ ಪಿಶಾಚ ಗ್ರಹಬಾಧೆ ಆಗದಿರೋಣ, ಪ್ರತಿಕೂಲ ಜನರು ಅನುಕೂಲವಾಗೋಣ, ಇವೇ ಮತ್ತು ಬೇರೆ ಎಷ್ಟೋ ಮಾತುಗಳು ಇಷ್ಟೆಯಂತೆಯೇ ಆಗುವ ಅಪೇಕ್ಷೆ ಇದ್ದರೆ ಇಚ್ಛಿತಫಲ ಕೊಡುವ ಲೋಕಮಾನ್ಯ ಕಲ್ಪತರು ತಾಯಿತ ಯಾವಾಗಲೂ ಹತ್ತಿರ ಇಡಿರಿ, ಅಂದರೆ ಇಚ್ಛೆ ಪೂರ್ಣವಾಗುವದು. ಅನುಭವದ ಹೊರತು ಖಾತ್ರಿ ಆಗಲಾರದು. ತಾ. ನ. ೧ಕೆ ರೂ ೧-೨ ಗುಣ ತೀವ್ರವಾಗಿ, ತಾ. ನ. ೨ಕೆ. ರೂ. ೭ ಗುಣ ೧೫ದಿವಸಗಳಲ್ಲಿ, ತಾ. ನ. ೩ಕೆ ರೂ ೩ ಗುಣ ೧ ತಿಂಗಳಲ್ಲಿ ವಿ. ಪಿ. ಖರ್ಚು ಬೇರೆ ಗುಣಬಾರದಲ್ಲಿ ತಾಯಿತದ ಖರ್ಚ ವಜಾಹೋಗಿ ಬಾಕೀ ಸಿಗುವದು.

ವಿಳಾಸ:—ಮ್ಯಾನೇಜರ, ಕಲ್ಪತರು ತಾಯಿತ, ಕೆ. ಎ ಮ್. ಪ್ರೋ. ಸಂಕೇಶ್ವರ ಜಿ, ಬೆಳಗಾಂವ.

FOR SALE.

The following property about ten miles from Mercara, on Somwarpett road, consisting of –

	Rs	As.	P
Wetlands, 30 93 acres or about 1000 batties at Rs 500/ per 100 batties	5000	0	0
Coffee, 33 40 acres at Rs 400/ per acre	13200	0	0
Bane and Jungle, 90 00 acres. at Rs 20/ per acre	1800	0	0
Total 154 39 acres	20000	0	0

With a decent upstaired house, out houses, and cooly lines,

is open for sale

Please apply to —

R Framjee,

12-12 Mercara

ಕಂಚಿ ಕೊರ್ನಾಡು ಸೀರೆಗಳು.

ಇವು ಆರೆಳೆ ಹೇಟಿ ಸೀರೆಯಂತೆ ಇರುವವು. ಸುಂದರವಾದ ರೇಷ್ಮೆಯ ಸೆರಗೂ, ಅಂಚೂ ಇರುವವು 18 ಮೊಳ ಉದ್ದ ದೊಡ್ಡ ಪನ್ನ ಬಣ್ಣ ಹೋಗದು ಮತ್ತು ಇವರ ಒಣ್ಣವು ರೇಷ್ಮೆಯಂತೆ ಇರುವದು ಶ್ರೀಮಂತರೂ ನಂಬದೂ ಕಟ್ಟಲು ಲಾಯಕ್ಕಾದುದು ಕ್ರಯ 1ನೇ ನಂಬರು 7—8—0 2ನೇ ನಂಬರು 8—8—0 ಸೆರಗಿಯು ಸೆರಗಿನವು ರೂ 10—8—0

ವಿಳಾಸ —

ಬಿ ಪೆರುಮಾಳ್ ಕಂಪೆನಿ,
28, ಹನುಮಂತರಾಯನ ಕೋಯಿಲ್ ಬೀದಿ,
ಪಾರ್ಕಟೌನ್ ಮದ್ರಾಸ್.

ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚ್.

ಈ ಗಡಿಯಾರಗಳನು ... ಧರ್ಮದಿಂದ (... ಮಾಡ್) ಲೀವರ್ ಮೂವ್‌ಮೆಂಟ್‌ಗಳಿಂದ ತಯಾರಿಸಿದ್ದು ಇವಕ್ಕೆ ಭರವಸೆಯುಳ್ಳ



[illegible]

... ವರುಷ ಗ್ಯಾರಂಟಿ ... ರೂ 10—8—0
... ವರುಷ ... ರೂ ...
... ಲೀವರ್ ಪಾಕೆಟ್ ವಾಚ್ ರೂ 5—8—0

ಹೊಸ ನಮೂನೆ ಅಲಾರಂ ಟೈಂಪೀಸ್.

ಇವು ಜರ್ಮನ್ ದೇಶದಲ್ಲಿ ತಯಾರಿಸಿದ್ದು ನಡಿಯಾರದ ಎತ್ತರ 7 ಅಂಗುಲವಿದೆ ಗಂಟೆ ಹೊಡೆಯುವುದು ಮತ್ತು ಗಂಟೆ ತೋರುವ ಡೈಯಲಿನಲ್ಲಿ ಅನೇಕ ವಿಧವಾದ ಗುಂಡಿಗಳು

ಇರುವವು ... ಲಾಲು ... ಸಲಾಂ ಮಾಡುವುದು ಕುದುರೆ ಸವಾರಿ ... ಮುಂತಾದ ... ಬಹು ಚೆನ್ನಾಗಿ ಕಾಣುವವು. ರೀಡಿಂಗ್ ರೂಮು, ಅಂಗಡಿ, ಸ್ಕೂಲು ಗುಡಿ ಮುಂತಾದವುಗಳಲ್ಲಿ ಇವು ಬಹು ಲಾಯಕ್ಕಾದವು 3 ವರುಷ ಗ್ಯಾರಂಟಿ ಕೊಡುವೆವು ಕ್ರಯ 1ಕ್ಕೆ ರೂ 5—4—0

ರೋಲ್ಡ್ ಗೋಲ್ಡ್ ಆಭರಣಗಳು.

ಒಂದು ಮಿಶ್ರ ಲೋಹದೊಂದಿಗೆ ಒಂದು ಭಾಗ ಚೊಕ್ಕ ಚಿನ್ನ ಸೇರಿಸಿ ರೋಲ್ಡ್ (ಹೊದಿಕೆ ಕೊಟ್ಟ) ಗೋಲ್ಡಿನ ಉತ್ತಮ ತರದ ಆಭರಣಗಳು ಇವು ಹತ್ತು ವರುಷಗಳ ವರೆಗೆ ಇವು ತಮ್ಮ ಬಣ್ಣವನ್ನೂ ನೋಟವನ್ನೂ ಕಳಕೊಳ್ಳುವದಿಲ್ಲವೆಂದು ಭರವಸೆ ಕೊಡುತ್ತೇವೆ ಈಗಿನ ಹೊಸ ನಮೂನೆಯು ಕೆಲಸದವಾಗಿರುತ್ತವೆ

ಬಾವಲಿಯುಳ್ಳ ಕುತ್ತಿಗೆ ಸರ	ರೂ 5—12—0
ಓಲೆ	ರೂ 2—12—0
ಬಳೆಗಳು ಜೊತೆಗೆ	ರೂ 3—0—0

ಬರಕೊಂಡರೆ ಕ್ಯಾಟಲಾಗು ಕಳುಹಿಸಲಾಗುವುದು

ವಿಳಾಸ —

ಅಮೇರಿಕನ್ ವಾಚ್ ಕಂಪೆನಿ,
ಪೋ ಬಾ. ನಂ 509
11. ಪಾರ್ಕಟೌನ್, ಮದ್ರಾಸು

ಬಡ ವ್ಯವಸಾಯಗಾರನಿಗೂ ಐಶ್ವರ್ಯವಂತ ಜಮೀನುದಾರನಿಗೂ ಒಂದು ಅಪರೂಪವಾದ ಉಪಕಾರ! (1) ದನಗಳ, ಕುದುರೆಗಳ, ಆನೆಗಳ ಮತ್ತು ಇತರ ಜೀವಧನಗಳ ಜೀವವಿಮೆ (2) ಒಂದು ವರುಷದ ಒಳಗೆ ಮೃಗವು ಸತ್ತರೆ ವಿಮೆಯ ಮುಂಗಡದ (ಪ್ರೀಮಿಯಮ್) ಒಂದೂವರೆಯಷ್ಟು ಕೊಡಲು ಗ್ಯಾರಂಟಿ (3) ವಿಮೆದಾರರಿಗೆ ಸತ್ತ ಮೃಗದ ಬದಲಿಗೆ ಇನ್ನೊಂದನ್ನು ತೆಗೆದುಕೊಳ್ಳಲು ಒಂದು ವರುಷದಲ್ಲು ವಾಪಸು ಕೊಡಬೇಕಾದಂತ 9 % ರ ಬಡ್ಡಿಯ ಸಾಲ. (4) ಒಂದು ವರುಷದೊಳಗೆ ವಾಪಸುಕೊಡಬೇಕಾದ ವ್ಯವಸಾಯದ ಕೆಲಸಕ್ಕೆ 12 % ಬಡ್ಡಿಯ ಸಾಲ (5) ಪಾಲಿ ಮತ್ತು ಕೃಷಿ ದಾರರಿಗೆ ಭೂಮಿ ಮತ್ತು ಮನೆಗಳನ್ನು ತೆಗೆದುಕೊಳ್ಳಲು ಸಾಲ— ಈ ಸಾಲವನ್ನು 12 % ಬಡ್ಡಿಯಿಂದ ಸಾಲಸ ಗಿ 12½ ವರುಷಗಳಲ್ಲಿ ವಾಪಸುಕೊಡುವುದು. (6) ಒಂದು ವರುಷದನಂತರ 12 ವರುಷಗಳೊಳಗೆ ಮೃತಪಟ್ಟರೆ ಅಥವಾ 12 ವರುಷಗಳ ಮೇಲೆ

ದಿ ಮೈಸೂರು ಎಗ್ರಿಕಲ್ಚರಲ್ ಪಯೊನಿಯರ್ ಫಾರ್ಮ್ಸ್ ಕೋ. ಲಿಮಿಟೆಡ್.

ಹೆಡ್ ಆಫೀಸ್ ... ಕಾಚೆಯನ್ನು ಸ್ವೀಕರಿಸಿಕೊಂಡಿದೆ.

ಒಡುಕೆದರೆ ಮೃಗದ ಪೂರ್ತಿ ಬೆಲೆಯು ಲಾಭ ಸಮೇತ ಕೊಡಲಾಗುವುದು.

ಜರೂರಿನಿಂದ ಬೇಕಾಗಿದೆ.

ಒಳ್ಳೇ ಸಂಬಳದಲ್ಲಿ ಕೊಡಗಿನಲ್ಲೆಲ್ಲಾ ವಜನದಾರರಾದ ಮತ್ತು ಸಂಬಂಗಸ್ಥರಾದ ಏಜಂಟರುಗಳು ಬೇಕಾಗಿವೆ. ಒಂದಾಣೆ ಸ್ಟಾಂಪು ಸಮೇತ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

V. K. R. ACHARYA,
C/o U. RAGHAVENDRA RAO,
Brahmins' Lane,
MERCARA.

43.

CARS FOR HIRE.

For easy and comfortable travelling with little cost please run up to T R. Ramiah, Agent, C P C Co Ltd Booking Office, Chowk, Mercara, where Ford and Overland cars are ever ready for hire Seats in buses can be had and parcels are carried between Mercara Mysore via Siddapore, Mercara Somwarpet via Fraserpet, Mercara Mangalore

ಬಾಡಿಗೆಗೆ ಮೋಟಾರುಗಳು.

ಸುಲಭ ದಾರಿಯಲ್ಲಿ ಅನುಕೂಲವಾಗಿ ಪ್ರಯಾಣ ಮಾಡಬೇಕಾದರೆ ಮೋಟಾರು ಕಾರುಗಳು ಬಾಡಿಗೆಗೆ ಸಿಕ್ಕುವ ಮಡಿಕೇರಿ ಚೌಕಿಯ ಸಿ. ಪಿ. ಸಿ. ಕಂಪೆನಿ ಲಿಮಿಟೆಡ್ ಬುಕ್ಕಿಂಗ್ ಆಫೀಸಿನಲ್ಲಿರುವ ಏಜೆಂಟ್, ಟಿ. ಆರ್. ರಾಮಯ್ಯನವರಲ್ಲಿ ದಯವಿಟ್ಟು ಹೋಗಿರಿ. ಸಿದ್ದಾಪುರಕ್ಕಾಗಿ ಮಡಿಕೇರಿಯಿಂದ ಮೈಸೂರಿಗೂ, ಫ್ರೇಜರಪೇಟೆಗಾಗಿ ಮಡಿಕೇರಿಯಿಂದ ಸೋಮವಾರಪೇಟೆಗೂ, ಮಡಿಕೇರಿಯಿಂದ ಮಂಗಳೂರಿಗೂ ಬಸ್ಸು ಟಿಕೇಟುಗಳು ದೊರೆಯುವವಲ್ಲದೆ ಸಾಮಾನುಗಳೂ ಒಯ್ಯಲ್ಪಡುವವು.

ಬೇಟೆಗೆ ಅವಶ್ಯವಾದ

ಕೋವಿಮದ್ದು ಪೌಂಡಿಗೆ ರೂ. ೩-೪-೦

ಕೇಪು ಕೋವಿನ ಕೇಪುಗಳು, ೭೦೦ ಉಳ್ಳ ಪೆಟ್ಟಿಗೆಗೆ ೯-೬-೦



ಆರ್ಡರು ಕಳುಹಿಸುವಾಗ್ಯೆ ಯಾವಾಗಲೂ ರೂ ೫ ಅಡ್ವಾನ್ಸು ಕಳುಹಿಸತಕ್ಕದ್ದು ಜಮ್ಮ ಹಿಡುವಳಿದಾರರು ಆರ್ಡರು ಕಳುಹಿಸುವಾಗ ಮೊದಲನೇ ಸಾರಿಮಾತ್ರ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರಿಂದ ವಿನಾಯತಿ (ಎಕ್ಸೆಂಪ್ಶನ್) ಸರ್ಟಿಫಿಕೇಟನ್ನು ಕಳುಹಿಸಬೇಕು ತಪ್ಪಿದಲ್ಲಿ ನಿಮಗಾಗಿ ನಾವೇ ಆ ಸರ್ಟಿಫಿಕೇಟನ್ನು ಒದಗಿಸಲು ತಯಾರಾಗಿದ್ದೇವೆ

ಈ ಕೆಳಗಿನ ವಿಳಾಸಕ್ಕೆ ಆರ್ಡರುಗಳನ್ನೂ ಪತ್ರವ್ಯವಹಾರಗಳನ್ನೂ ಇಂಗ್ಲಿಷಿನಲ್ಲಿ ನಡಿಸತಕ್ಕದ್ದು

S Venkatarangam Chetty,
Ammunition & Sulphur Merchant,
No 9, China Bazar,
12—4 Madras

MY SCIENTIFIC SYSTEM OF GRADUATED PHYSICAL CULTURE

SENT FREE TO EVERY ONE.

This will show you some of my remarkable achievements in Health building exercises, many pages with nice photographs of myself and a number of my pupils Read what they say about my system Don't take my word for it This book will be an impetus an inspiration to every young man. All I ask is the price of postage two annas Remember this does not obligate you in any way, so don't delay one minute in your life Write for this big book now while it is on your mind

Prof. M. V. Krishna Rao,
P O Basuvangudi
BANGALORE CITY (S. I.)

ಪ್ರಕಟಣೆ.

ನಮ್ಮ ಅಂದವಾದ ಹೊಸ ಅಕ್ಷರಗಳು ಬಂದು ತಲಪಿರುವುದರಿಂದ, 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ

ಮಡಿಕೇರಿ ಮೇನೇಜರ್,
'ಕೊಡಗು' ಲಿಮಿಟೆಡ್

ನೀರಿನ ಚಿಂತೆಯನ್ನು ತಪ್ಪಿಸುವ ಕಿರ್ಲೋಸ್ಕರ ಪಂಪು.

ಮನೆಗಳಲ್ಲಿ ನೀರು ಸೇದುವದೊಂದು ಬಹು ಕಷ್ಟದಾಯಕವು ಅದರಲ್ಲಿ ಈ ಕೆಲಸವನ್ನು ಕರ್ನಾಟಕದಲ್ಲಿ ಬಹುಶಃ ಸ್ತ್ರೀಯರೇ ಮಾಡಬೇಕಾದ್ದರಿಂದ ಅದು ಇಮ್ಮಡಿ ಕಷ್ಟವಾಗುತ್ತೆ ಮನೆಯಲ್ಲಿ ಶ್ರೀಮಂತರಿದ್ದಾಗ್ಯೂ ನೀರಿನ ವಿಷಯದಲ್ಲಿ ಸ್ವತಃ ಸೇದಬೇಕಾಗುತ್ತದೆ ಆದ್ದರಿಂದ ಈ ಅಡಚಣೆಗಳು ಇನ್ನು ದೂರವಾಗುವದಕ್ಕೆ

ಕಿರ್ಲೋಸ್ಕರ ಪಂಪುಗಳನ್ನೇ

ಉಪಯೋಗಿಸಿ ಇದರಿಂದ ಆರೋಗ್ಯ ಉಳಿಯುವದು ತಿಂದ ಅನ್ನ ಮೈಯಿಗೆ ಹತ್ತುವದು ಇವುಗಳ ಬಿಡಿಭಾಗಗಳು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುವದರಿಂದ ಪಂಪುಗಳು ಕೆಡುವ ಭೀತಿಯಿಲ್ಲ ಬಾಳಿಕೆಯಲ್ಲಿ ಗಟ್ಟಿ ಬೆಟ್ಟು ಆರು ನಮೂನೆಗಳು ಇರುತ್ತವೆ

ಬೆಲೆ ಮತ್ತು ಸವಿಸ್ತಾರ ಸಂಗತಿಯ ಬಗ್ಗೆ ತಿಳಿದುಕೊಳ್ಳಿರಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
10 ಜಿ. ಸಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯಕ್ರಯ ವಾಪಾಸು ದೇಹಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ

ಟ್ರೇಡ್‌ಮಾರ್ಕ]ರಜಿಸ್ಟರಾದದ್ದು [ನೋಡಿ ತಕ್ಕೊಳ್ಳಿರಿ

ಅಗಸ್ತ್ಯಮನ್ಮಥ ಚಿಂತಾಮಣಿ ಲೇಹ

ಆಬಾಲವೃದ್ಧ ಸ್ತ್ರೀ ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾದದ್ದು ಮೇಹ ವಿಕಾರವಿದ್ದವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ ಜ್ಞಾನಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಬಹುಪರಮಾನಂದ ಔಷಧಿ 1ಸೇರು 48ದಿವಸ ಸೇವಿಸಬಹುದು ನಂ (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0. ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0 ನಂ (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0 ವಿ ಪಿ ಖರ್ಚು ಪ್ರತ್ಯೇಕ ವಿಶೇಷ ಮಾಹಿತಿಗೆ ಬರೆಕೊಳ್ಳಿರಿ

ವಿಳಾಸ.—ದೇವಣ್ಣ ನಾರಾಯಣಸೇಟ್
ಗೋಳಿಕಟ್ಟಾ,
ಮಂಗಳೂರು,
12—8 ದ. ಕ.

ಕರ್ಣಾಟಕ ಎಗ್ಯು ಮಿಕ್ಶ್ಚರ್

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝಾ ಇವೇ ಜ್ವರ ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦

ಟಪ್ಪಾಲು ಚಾರ್ಜು ಬೇರೆ

ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು ೯—೨—೦

ಏಜಂಟರು ಬೇಕು, ಕೊಡಗಿನ ಸ್ಕೂಲ್ಮಾಸ್ತರುಗಳು ತಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ.

12—5 ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಸು ಪ್ರಕಾರ ರಿಜಿಸ್ಟರಾಗಿದೆ.

	ರೂ.
ಶೇರ್ ಬಂಡವಾಳ ..	50,000
ವಸೂಲಾದ ಶೇರ್ ಮೊಬಲಗು ...	3890
ಒಮೊಬಂದ ಠೇವಣಾತಿ .	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 6-4-0 ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಮಾಯಿಷಿ ಮಾಡುತ್ತಾರೆ

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್ ಬಿ.ಎ., ಬಿ.ಎಲ್

ಸೆಕ್ರೆಟರಿ.
ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ. ಬಿ.ಎಲ್

ತಾರೀಕು 29—8—1925.

"ಲೋಕರಹಸ್ಯ."

ಕೃಷಿಯ ಉತ್ತಮೋತ್ತಮ ರೀತಿಗಳು, ವ್ಯಾಪಾರದ ವಿಷಯಗಳು, ಹೆಂಗಸರಿಗೆ ಬೇಕಾದ ಗೃಹಕೃತ್ಯದ ವಿಷಯಗಳು, ಹೊಲಿಗೆ ಮಕ್ಕಳನ್ನು ಸಾಕುವ ವಿಷಯಗಳು, ಬಡವರಿಗೆ ಬೇಕಾದ ಹಣ ಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು ಆಯುರ್ವೇದಯುನಾನಿ ವೈದ್ಯ ಸಂಗ್ರಹ ಪ್ರತಿಯೊಬ್ಬನೂ ತಿಳಿಯಬೇಕಾದ 'ಆ' ವಿಚಾರ, ವಿದ್ಯಾ ವಿಷಯ ವೇದಾಂತ ವಿಚಾರಗಳಿಂದಲೂ, ತುಂಬಿ ಮೆರೆಯುತ್ತಿರುವ ಈ ಮಾಸ ಪತ್ರಿಕೆಗೆ ವರ್ಷಕ್ಕೆ ಚಂದಾ ರೂ 3—8—0 ಮಾದರಿ ಸಂಚಿಕೆಗೆ 0—5—0.

ಪ್ರತಿ ತಿಂಗಳಲ್ಲೂ 60 ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

"ಲೋಕರಹಸ್ಯ ಆಫೀಸು,
ವೀರರಾಜೇಂದ್ರಪೇಟೆ.
(ಕೊಡಗು.)

GOOLAMHUSSAIN ALLIBHOY & SONS.

Largest Importers of Fire Arms and Ammunition, Cheapest priced firm in India,

210 Abdul Rehman Street, BOMBAY.

Brilliant Search light tied over the hat.



Use our Brilliant Search Light Lamp for **Hunting, Camping, Fishing, Trapping and all kinds of out door sports during the night,** price Rs 40/— Free Delivery

12 and 16 bore Zeppelin Bullet cartridges **recommendable for big Game shooting,** Rs 30/—100

We stock Arms, Ammunition and shooting requisites of almost all the kinds and classes ranging from Re 1/— to Rs 3,600/—

Apply for the Current Catalogue.

24—9

Printed & published by Kodanda Appayya, R.B., Chairman, Board of Directors, at "Kodagu" Press Mercara for "Kodagu" Ltd

Reg. No. M. 1550

If not delivered please return to

"KODAGU" OFFICE MERCARA

ಕೊಡಗು.

ಸತ್ಯೇನ ಧೂತರದಯಾಯ ವಿದ್ಯಾ ನೀತಿ ಪ್ರಯತ್ನತಾ || ಐಕ್ಯಮತ್ಯೇನ ಲೋಕಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧]   ಸೆಪ್ಟೆಂಬರ್ ತಾರೀಖು   ಶುಕ್ರವಾರ   ಸಂಚಿಕೆ ೦

ಶ್ರೀ

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಗಳ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ತಿಳುವಳಿಕೆ ದೊರೆಯುವ ಬಗ್ಗೆ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಕೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷ ಕ್ಕೆ 1-8-0 ಬಿಡಿ ಪತ್ರಿಕೆ 1ಕ್ಕೆ 0-2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ: ಆರೋಗ್ಯ ಚಂದ್ರಿಕೆ' 323,

ತಂಬುಶೆಟ್ಟಿ ಬೀದಿ, ಮದ್ರಾಸ್.

ಮಡಿಕೇರಿ   ಮೇನೇಜರ್,
17 9 21   ಕೊಡಗು ಆಫೀಸ್.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ ಚಂಗಂಡ ಕುಟ್ಟಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಏಜಂಟರುಗಳು

ವೀರಾಜಪೇಟೆ—ಖಾದಿ ಭಂಡಾರದಲ್ಲಿ ಮೆ ನುಂಡೇಟಿರ ಚೆರಿಮಣ್ಣನವರು

ಮೂರ್ನಾಡು—ಕಮರ್ಶಿಯಲ್ ಸ್ಟೋರಿನಲ್ಲಿ ಮೆ ಮಡೆಯಂಡ ದೇವಯ್ಯನವರು.

ನಾಪೋಕ್ಲು—ಮೆ. ಅರೆಯಡ ಪೊಣ್ಣಯ್ಯನವರು

"   ಮೆ ಪೊನ್ನಚಂಡ ಮುದ್ದಪ್ಪನವರು

ಗೋಣಿಕೊಪ್ಪಲು—ಮೆ. ಐಮ್ಮುಡ ಮಾದಪ್ಪನವರು,

ಪೊನ್ನಂಪೇಟೆ—ಮೆ. ಪೃಥ್ವಿನ ಮುದನ ... ನವರು.

ಮಡಿಕೇರಿ—ಮೆ. ... ನವರು

...

...

ವಿಷಯಗಳ ...

... ರವಾಗ ... ಕೋರಿಕೆ.

ಕೋದಂಡ ಉತ್ತಯ್ಯ.

ಆರ್ಗನೈಜಿಂಗ್ ಡೈರೆಕ್ಟರು, "ಕೊಡಗು" ಲಿಮಿಟೆಡ್

ಶ್ರೀ ಗುರು ಕೃಪೆಯ ಅನುಭವಸಿದ್ಧ
ಎರಡು ಔಷಧ ರತ್ನಗಳು.

೧. ಬಾಲ ಭೀಮ ಟೊನಿಕ್.

ಇದು ಬಾಲಕರ ಉತ್ತಮ ಶಕ್ತಿ ವರ್ಧಕ, ರೋಗ ನಿವಾರಕ, ಉತ್ತೇಜಕ, ಔಷಧ. ಹುಡುಗರ ಎಲ್ಲಾ ತರದ ಅಶಕ್ತಿ, ಕೃಶ ಶರೀರ ಸೆಗಣಿ, ಕೋವೆ ಅಜೀರ್ಣ, ಜ್ವರ ಮತ್ತು ದುರ್ಗುಣ ಕಂದೆ ತಾಯಿಗಳಿಂದ ಬಂದ ಗರ್ಭದೂಷಿತ ಮೇಹ, ವಾತ ರೋಗಗಳಿಗೆ ಅತ್ಯಂತ ಗುಣಕಾರಿ. ಅಪ್ಪೇಕೆ, ಒಮ್ಮೆ ತರಿಸಿ ಪರೀಕ್ಷಿಸಬಾರದೇ? ಬಾಟ್ಲಿ ೧ಕ್ಕೆ ರೂ. ೧—೪—೦, ಡಜನ್ ೧ಕ್ಕೆ ೧೩—೦—೦.

೨. ಬಾಲಾರಿಷ್ಟ ನಿವಾರಕ ತೈಲ.

ಈ ತೈಲಾಭ್ಯಂಗ ಸ್ನಾನದಿಂದ ಹುಡುಗರ ಅಶಕ್ತಿ, ಬಾಲಗ್ರಹ, ಕಡ್ಡಿ ವಗೈರೆ ವ್ಯಾಧಿಗೆ ಗುಣಕರ. ಬಾಟ್ಲಿ ೧ಕ್ಕೆ ರೂ. ೧—೪—೦, ಡಜನ್ ೧ಕ್ಕೆ ರೂ ೧೩—೮—೦

ತನು ಭಗಿನಿಯ ಪತ್ರೆ—ಶ್ರೀಮತಿ ತಿಪ್ಪುಬಾಯಿ, ಹಸಿಹಿತಲು, ಕಾನಗೋಡ ಸಿರ್ಸಿ, ಉ, ಕಾನಡಾ, ಮುಂಬಯಿ
12 3

ಮಾರಾಟಕ್ಕೆ ತಯಾರಿವೆ.

ಒಗೆ ಬಗೆಯ ಪಕಾರಗಳು ವೀರಾಜಪೇಟೆಯ ಪಿದ್ದರ್ ಸ್ಟೋರಿನಲ್ಲಿ ಮಾರಾಟಕ್ಕೆ ತಯಾರಿವೆ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ಪಿ ಪಿ ಐಯ್ಯಪ್ಪ,
ಪಿದ್ದರ್ ಸ್ಟೋರ್ಸ್,
7   ವೀರಾಜಪೇಟೆ

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಚಾರ, ವರ್ತಮಾನ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

... "ಕೊಡಗು" ... ೭ ... ಈ ... ಅಭಿಪ್ರಾಯ ...

... ಕಳುಹಿಸುವ ... ಮೆ ...

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

SPENCERS-
FOUNTAIN PEN SPECIALISTS.
... at Rs 12½, & 9 each
... Rs 14½ ... 9½ & 6½ each
... at Rs 11 each
Black ... at Rs 3 each
Jackdaw at Rs 4 each
Spencers S F at Rs 3½ each.
Spencers ... at Rs 2½ each
"Order by post,
"Distance makes
"No difference"
Get a copy of our Revised wine and Store price lists, very handy

Spencer & Co. Ltd,
MERCARA & POLLIBETTA.

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯ ಶಾಖೆಯಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ **ಸೋಮವಾರಪೇಟೆಯಲ್ಲಿ** ತೆರೆಯಲ್ಪಟ್ಟಿದೆ.

ಕೃಷ್ಣ ನಂಬೀಶನ್ ಮತ್ತು ನಾರಾಯಣ ನಂಬೀಶನ್ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜನಿಂದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಡಿಮೆ ಬೆಲೆಯಾಗಿದೆ

ನಂಬೀಶನ್ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಲ್ಲೂರು, ವೀರಾಜಪೇಟೆ ಮತ್ತು
52 25   **ಸೋಮವಾರಪೇಟೆ.**

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.
Telegrahic Address:-"SHOOTER" Bombay
[52 3] Please write for latest Catalogues.

"ಕೊಡಗು"

ಸನ್ ೧೯೨೫ನೇ ಇಸವಿ ಸೆಪ್ಟೆಂಬರ್ ತಾ. ೧೧ನೇ ಶುಕ್ರವಾರ.

ನಿ ಷಾ ನಿ ಷೇ ಧ.

ಇಡೀ ಹಿಂದೂದೇಶದಲ್ಲಿ, ಯಾಕೆ ನಮ್ಮ ದೇಶದಲ್ಲಿಯೂ ಕೂಡ ಮೂರು ನಾಲ್ಕು ವರುಷಗಳ ಹಿಂದೆ ನಿಷಾ ನಿಷೇಧದ ಮೇಲೆ ನಡಿಸಿದ ಬಲವಾದ ಚಳವಳವನ್ನೂ ಅದರಿಂದುಂಟಾದ ಅಲ್ಪ ಸ್ವಲ್ಪ ಪ್ರಯೋಜನವನ್ನೂ ಯಾರೂ ಮರೆತಿರಲಿಕ್ಕಿಲ್ಲವಾಗಿ ನಂಬುತ್ತೇವೆ. ಈ ಚಳವಳವು ಪ್ರಾರಂಭಿಸಲ್ಪಟ್ಟಾಗ ಇದ್ದಷ್ಟು ಮುತುವರ್ಜಿಯಿಂದಲೇ ಮುಂದರಿಸಲ್ಪಡದೆ ಅದರ ಬಲವು ಇತ್ತೀಚೆಗೆ ಕಡಿಮೆಯಾಗುತ್ತಾ ಬರುತ್ತಿರುವದು ಬಹು ವ್ಯಸನಕರ. ಆದರೆ ಜನ ಸಮುದಾಯದಲ್ಲಿ ಈ ವಿಷಯ ಉತ್ಸಾಹವು ತಗ್ಗಿದ್ದಾಗಿ ತೋರಿದರೂ ನ್ಯಾಯವಿಧಾಯಕ ಸಭೆಗಳಿಗೆ ಕಳುಹಿಸಲ್ಪಟ್ಟಿರುವ ಅವರ ಪ್ರತಿನಿಧಿಗಳು ದೇಶದ ಜನರ ಮುಖ್ಯವಾಗಿ ಬಡವರ ಏಳಿಗೆಗೆ ಅವಶ್ಯವಾಗಿರುವ ಈ ಸಂಗತಿಯನ್ನು ಕುರಿತು ಸರಕಾರದವರಿಂದಲೇ ಕಾನೂನುಗಳನ್ನು ಮಾಡಿಸಲೆತ್ನಿಸುತ್ತಿರುವದು ಶುಭಕರವಾಗಿದೆ. ಈಗಾಗಲೇ ಬೊಂಬಾಯಿಯ ಕೌನ್ಸಿಲಿನವರು ಅಮಲುಪದಾರ್ಥದ ಇಲಾಖೆಯನ್ನು ನಡಿಸುವ ಕ್ರಮವನ್ನೂ ಅದರಿಂದುಂಟಾಗುವ ಉತ್ಪತ್ತಿಯನ್ನೂ ವಿಚಾರಿಸಲು ನೇಮಿಸಿದ್ದ ಕಮಿಟಿಯ ಸಿಫಾರಸ್ಸಿನ ಮೇರೆ ಆ ಸರಕಾರದವರು ಪೂರ್ತಿ ನಿಷಾ ನಿಷೇಧವೇ ತಮ್ಮ ಉದ್ದೇಶವೆಂದು ಒಪ್ಪಿಕೊಂಡಿರುವರು. ಈ ಸಮ್ಮಂಧ ಅಲ್ಲಿಯ ಗವರ್ನರರವರು ಸೋಲಾಪುರದಲ್ಲಿ ಕೊಟ್ಟ ತುಂಬಾ ಸಹಾನುಭೂತಿಯ ಭಾಷಣದ ಸಾರಾಂಶವನ್ನು ಕೆಲವು ದಿವಸಗಳ ಹಿಂದೆ ಪ್ರಕಟಿಸಿದ್ದು ವಾಚಕರ ಜ್ಞಾಪಕದಲ್ಲಿರಬಹುದು.

ಇದೇ ತಾರೀಕು 1ರಲ್ಲಿ ಹಾಜಿ ವಾಜಿಹುದಿನ್‌ರವರು ಅಮಲು ಪದಾರ್ಥದ ಸಂಪೂರ್ಣ ನಿಷೇಧಕ್ಕಾಗಿ ಕಾನೂನು ಮಾಡಬೇಕೆಂದು ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಚರ್ಚೆಗೆ ತಂದರು. ಈ ಠರಾವಿನ ಮೇಲೆ ಕೆಲವು ಬದಲಾವಣೆಗಳು ಸೂಚಿಸಲ್ಪಟ್ಟವು. ಇವುಗಳ ಪೈಕಿ ಮ. ಎನ್. ಸಿ ಕೇಲ್ಕಾರರವರ ಬದಲಾಯಿಸಿದ ಠರಾವು, ಅಂದರೆ 'ಅಮಲು ಪದಾರ್ಥವನ್ನು ಔಷಧಿಗೆ ಮತ್ತು ಶಾಸ್ತ್ರ ಪರಿಶೋಧನೆಗಲ್ಲದೆ ಬೇರೆ ಯಾವ ಕೆಲಸಕ್ಕೂ ಮಾಡಕೂಡದು, ಮಾರಕೂಡದು ಮತ್ತು ಪರದೇಶದಿಂದ ತರಿಸಕೂಡದೆಂಬುದೇ ಸರಕಾರದವರ ಅಂತಿಮ ಧ್ಯೇಯವಾಗಿರಬೇಕೆಂದೂ, ಈ ತತ್ವವನ್ನು ಜಾರಿಗೆ ತರಲು ಪ್ರಾರಂಭಿಸುವುದಕ್ಕಾಗಿ ಸಾರಾಯಿ ಸೇಂದಿ ಅಂಗಡಿಗಳ ಸಂಖ್ಯೆ ಮತ್ತು ಸ್ಥಳವನ್ನು ನಿರ್ಣಯಿಸಿಕೊಳ್ಳುವ ಅಧಿಕಾರವನ್ನು ಸ್ಥಳೀಯ ಸ್ವರಾಜ್ಯ ಸಂಸ್ಥೆಗಳಿಗೆ (ಅಂದರೆ ಡಿಸ್ಟ್ರಿಕ್ಟ್‌ಬೋರ್ಡ್, ತಾಲೋಕುಬೋರ್ಡ್, ಮುನಿಸಿಪಾಲಿಟಿ ಮೊದಲಾದವುಗಳಿಗೆ) ಅಥವಾ ಇದಕ್ಕಾಗಿ ಜನರಿಂದ ಚುನಾಯಿಸಲ್ಪಡುವ ಮೆಂಬರುಗಳುಳ್ಳ ಲೈಸೆನ್ಸಿಂಗ್ ಬೋರ್ಡ್ (ಲೈಸೆನ್ಸ್ ಕೊಡುವ ಕಮಿಟಿ) ಗಳಿಗೆ ಒಡನೆ ಕೊಡುವಂತೆ ಪ್ರಾಂತೀಕ ಸರಕಾರಗಳಿಗೆ ತಿಳಿಸಬೇಕೆಂದೂ, ಇದಕ್ಕೆ ಬೇಕಾಗುವ ಕಾನೂನನ್ನು ಇಂಡಿಯಾ ಸರಕಾರವು ಮಾಡಬೇಕೆಂದೂ' ದೀರ್ಘ ಚರ್ಚೆಯಾದ ನಂತರ ಸರಕಾರಿ ಮೆಂಬರುಗಳು ಇದಕ್ಕೆ ವಿರೋಧಿಸಿದರೂ ಕೂಡ ದೊಡ್ಡ ಬಹುಮತದಿಂದ ಪಾಸಾಯಿತು. ಈ ಠರಾವನ್ನು ಸೂಚಿಸಿದಾಗ್ಗೆ ಮಿ ಕೇಲ್ಕರ್‌ರವರು, ಓಟಿನ ಇರುವ ಹಕ್ಕನ್ನು ಮಾತ್ರ ತಾನು ಕೇಳುವವನಾಗಿದೆ; ಬೈಬಲಿನಲ್ಲಿ ನಿಷಾ ನಿಷೇಧ ಮಾಡಬೇಕೆಂದು ಹೇಳದಿರುವುದರಿಂದ ಸಭೆಗಳಲ್ಲಿ ತಮ್ಮ ಅರಸರ ಕ್ಷೇಮವನ್ನು ಬಯಸುವಾಗ (ಟೋಸ್ಟ್) ನಿಷಾಪದಾರ್ಥ ಸೇವಿಸದೆಹೋದರೆ ಅದು ರಾಜದ್ರೋಹವೆಂದು ಯೋಚಿಸುವ ಯೂರೋಪಿಯನರ ಮೇಲೆ ಬಲಾತ್ಕಾರ ಉಪಯೋಗಿಸಬೇಕೆಂದು ತಾನು ಹೇಳುವುದಿಲ್ಲ. ಆದರೆ ಭಾರತೀಯರಿಗೆ ತಮ್ಮ ಮನೆಮಠಗಳಿಂದಲೂ ನೆರೆಕರೆಗಳಿಂದಲೂ ಈ ಪಿಶಾಚಿಯನ್ನು ದೂರವಾಗಿ ಇಡುವ ಸ್ವಾತಂತ್ರ್ಯಕೊಡಿ ಎಂದು ಕೇಳಬಾರದೇ? ಈ ವಿಷಯದಲ್ಲಿ ಅಮೇರಿಕದವರು ನಡಿಸುತ್ತಿರುವ ಧೃಢಪ್ರಯತ್ನವು ಹಿಂದೂ ದೇಶದವರನ್ನು ಎಚ್ಚರಗೊಳಿಸಬೇಕೆಂದು ಮುಂತಾಗಿ ಹೇಳಿದರು.

ಈ ಸಮ್ಮಂಧ ಮಾತಾಡಿದಾಗ ಡಾಕ್ಟರ್ ದತ್ತರವರು, ಔಷಧ ಮತ್ತು ಆರ್ಥಿಕ ಕಾರಣಗಳಿಂದ ತಾನು ಇದಕ್ಕೆ ಒತ್ತಾಸೆಕೊಡುವುದಾಗಿದೆ; ನ್ಯೂಯಾರ್ಕ್ ಸಂಸ್ಥಾನದಲ್ಲಿ ನಿಷಾ ನಿಷೇಧದ ಫಲಿತಾಂಶಗಳಲ್ಲಿ ಕುಡುಕರ ಸಂಖ್ಯೆಯು ಕ್ರಮವಾಗಿ ಕಡಿಮೆಯಾಗುತ್ತಿರುವುದು ಒಂದಾಗಿದೆಯೆಂದು ಸಂಖ್ಯೆಗಳ ಮೂಲಕ ತೋರಿಸಿದಲ್ಲದೆ ಅಲ್ಲಿ ಅಮಲು ಪದಾರ್ಥ ಮತ್ತು ಔಷಧಿಗಳಿಂದ ಸರ್ಕಾರದ ಉತ್ಪತ್ತಿಯು 1912—13ರಲ್ಲಿ ರೂ. 928 ಲಕ್ಷ ಇದ್ದದ್ದು 1923—24ರಲ್ಲಿ ರೂ. 1920ಲಕ್ಷಕ್ಕೆ ಏರಿತು; ಅಂದರೆ 1912—13ರಲ್ಲಿ ಇದ್ದ 0—7—9 ಜನರ ತಲೆತೆರಿಗೆಯು 1923—24ರಲ್ಲಿ 0—12—5 ಆಯಿತು ಎಂದು ಹೇಳಿದರು,

ಮಿ ಯಮ್ನದಾಸ್ ಮೆಹತಾರವರು ಅಂದದ್ದೇನೆಂದರೆ— ನಿಷಾನಿಷೇಧಕ್ಕೆ ವಿರೋಧಿಸಿದ ಮೆಂಬರರು ಸಾರಾಯಿ ತಯಾರಿಸುವವರು ಪ್ರಕಟಿಸಿದ ಹಸ್ತಪತ್ರಿಕೆಗಳನ್ನು ತಮ್ಮ ಆಧಾರವಾಗಿ ತೆಗೆದುಕೊಂಡಿರುವರು. ಹಿಂದೂದೇಶದ ನಿವಾಸಿಗಳಾದ ಹಿಂದೂ ಮತ್ತು ಮುಸಲ್ಮಾನರ ಮತಗಳೂ ಪದ್ಧತಿಗಳೂ ಕುಡಿತಕ್ಕೆ ವಿರೋಧವಾಗಿವೆ. ಆದರೆ ಬ್ರಿಟಿಷ್ ಸರ್ಕಾರದವರು ಈ ಕೇಡನ್ನು ಹಿಂದೂದೇಶದಲ್ಲಿ ಹರಡಿ ವರ್ಷಕ್ಕೆ ಇಪ್ಪತ್ತು ಕೋಟಿ ರೂಪಾಯಿಗಳನ್ನು ಉತ್ಪತ್ತಿಮಾಡುತ್ತಿರುವರು. ಗವರ್ನರುಗಳೂ ಮತ್ತು ಸರ್ಕಾರಿಮೆಂಬರುಗಳೂ ನಿಷಾಸೇವನ ಮಾಡದೆ ದೇಶಕ್ಕೆ ಒಳ್ಳೇ ಮೇಲ್ಪಂಕ್ತಿ ಹಾಕುವದರ ಬದಲು ಬಹಿರಂಗವಾಗಿ ಕುಡಿಯುತ್ತಿದ್ದಾರೆ. ಬ್ರಿಟಿಷ್ ಸರ್ಕಾರವು ಜನರ ಜೀವಕ್ಕಿಂತ ಉತ್ಪತ್ತಿಯ ಮೇಲೆ ಹೆಚ್ಚು ಗಮನಕೊಡುವದಾದರೆ ಅವರು ತೊಲಗಿಹೋಗಲಿ. ಮಹಾತ್ಮಗಾಂಧಿಯವರು ಪಿಕೆಟಿಂಗ್ (ನಿಷಾಸೇವಿಸಬೇಡವೆಂದು ಅಂಗಡಿಗಳ ಮುಂದೆ ಜನರಿಗೆ ಬೋಧಿಸುವದು) ಸುರುಮಾಡಿರುವರು, ಸರ್ಕಾರದವರು ಪುರುಷ ಪ್ರಯತ್ನದಲ್ಲಿ ನಂಬುವವರಾದರೆ ಸರ್ ಬೇಸಿಲ್ ಬ್ಲಾಕೆಟ್‌ರವರು, ಹೋಮ್ ಮೆಂಬರು ಮತ್ತು ಇತರೆಯವರು ಸ್ವಯಂ ಸೇವಕರಾಗಿ ಗಾಂಧಿಯವರ ಸಂಗಡ ಪಿಕೆಟಿಂಗಿಗೆ ಸೇರಲಿ ಎಂದು ಮೊದಲಾಗಿ ಹೇಳಿ ಸಾರಾಯಿಯು ಕೆಲಸಗಾರರಲ್ಲಿ ಮಾಡುತ್ತಿರುವ ಘೋರವಾದ ಕೇಡನ್ನು ವಿವರಿಸಿಯೂ, ಹೆಚ್ಚಿನ ಡಾಕ್ಟರುಗಳು ಅಮಲು ಪದಾರ್ಥದಲ್ಲಿ ವಿಷವಿದೆಯೆಂದು ಅಭಿಪ್ರಾಯಪಟ್ಟಿರುವರೆಂದೂ ಭಾಷಣಮಾಡಿದರು.

ಫೈನಾನ್ಸ್ ಮೆಂಬರಾದ ಸರ್ ಬೇಸಿಲ್ ಬ್ಲಾಕೆಟ್‌ರವರು ಈ ಠರಾವನ್ನು ವಿರೋಧಿಸಿ ಮುಕ್ಕಾಲು ಗಂಟೆಯವರೆಗೆ ಮಾತಾಡಿದರು. ತಾನು ಠರಾವಿಗೆ ವಿರೋಧಿಸಿದರೂ ಇಲ್ಲಿ ಮಾತಾಡಿದವರೆಲ್ಲರೂ ಸಾರಾಯಿಯ ದುರುಪಯೋಗವನ್ನು ನಿಲ್ಲಿಸುವ ಅಭಿಪ್ರಾಯದಲ್ಲಿ ಒಂದಾಗಿರುವದು ಸಂತೋಷಕರವೆಂದೂ ಸರಕಾರದವರ ಧ್ಯೇಯವು ಮಿತಸೇವನೆಯೆಂದೂ, ಆದಷ್ಟು ಕಮ್ಮಿ ಸೇವನೆಯಿಂದ ಹೆಚ್ಚು ಉತ್ಪತ್ತಿ ಮಾಡಬೇಕೆಂಬ ತತ್ವದಿಂದಲೇ ಸರಕಾರದ ಉತ್ಪತ್ತಿಯು ಹೆಚ್ಚಾಗಿದೆಯೆಂದೂ, ಈಗಿನ ಚರ್ಚೆಯ ಮೇರೆ ಸರಕಾರದವರು ಈ ವಿಷಯ ಪುನಹ ಆಲೋಚನೆ ಮಾಡುವರೆಂದೂ ಮೊದಲಾಗಿ ಹೇಳಿದರು. ಆದರೆ ಜನರ ಪ್ರತಿನಿಧಿಗಳಾದ ಚುನಾಯಿತ ಮೆಂಬರುಗಳು ದೇಶದ ಜನರ ಅಭಿಪ್ರಾಯಕ್ಕನುಸಾರವಾಗಿ ಠರಾವಿಗೆ ಪರವಾಗಿ ನಿಂತರು. 69 ಜನರು ಪರವಾಗಿಯೂ 39 ಜನರು ವಿರೋಧವಾಗಿಯೂ ಓಟು ಕೊಟ್ಟದ್ದರಿಂದ ಜನರ ಪಕ್ಷದವರಿಗೆ ಜಯವಾಯಿತು. ಸರಕಾರದವರು ಈ ವಿಷಯದಲ್ಲಿ ಹೇಗೆ ವರ್ತಿಸಿದರೂ ಜನರ ಬಹುಮತದ ಅಭಿಪ್ರಾಯಕ್ಕೆ ಸರಕಾರದವರ ಕೌನ್ಸಿಲ್ ಸಭೆಗಳಲ್ಲಿಯೂ ಜಯವಾಗುತ್ತಿರುವುದು ದೇಶಕ್ಕೆ ತೃಪ್ತಿಕರವು. ಕುಡಿಯುವುದನ್ನು ಪೂರ್ತಿ ನಿಷೇಧಮಾಡಬೇಕೆಂದು ಹೇಳದೆ ಇರುವ ಮತಸ್ಥರ ದೇಶಗಳಾದ ಅಮೇರಿಕ ಮೊದಲಾದವುಗಳಲ್ಲಿ ಸಂಪೂರ್ಣ ನಿಷಾ ನಿಷೇಧದ ಕಾನೂನು ಮಾಡಿ ಅದರಿಂದ ತುಂಬಾ ಪ್ರಯೋಜನವನ್ನು ಹೊಂದುತ್ತಿರುವಾಗ ಹಿಂದೂ ಮುಸಲ್ಮಾನರ ಧರ್ಮಶಾಸ್ತ್ರಗಳಲ್ಲಿಯೂ ಕೂಡ ವಿರೋಧಿಸಲ್ಪಟ್ಟಿರುವ ಅಮಲು ಸೇವನೆಯನ್ನು ವರ್ಜಿತಮಾಡಲು ಹಿಂದೂದೇಶದ ಸರಕಾರದವರು ಕಾನೂನು ಮಾಡಬೇಕಾದದ್ದು ಅತ್ಯಗತ್ಯವಾಗಿದೆ.

ನಮ್ಮ ದೇಶದ ಸ್ಥಿತಿಯು ಈ ವಿಚಾರದಲ್ಲಿ ಹಿಂದೂ ದೇಶದ ಅನೇಕ ಪ್ರಾಂತ್ಯಗಳಿಗಿಂತ ಹೀನವಾಗಿದೆಯೆಂಬುದು ನಮ್ಮ ದೇಶಿಯರಿಗೂ, ಸರಕಾರದವರಿಗೂ ತಿಳಿಯದಲ್ಲ. ದೇಶದ ಬಡತನಕ್ಕೆ ಮುಖ್ಯ ಕಾರಣಗಳಲ್ಲಿ ಒಂದಾದ ಈ ಅಮಲು ಸೇವನೆಯ ಹಾವಳಿಯನ್ನು ನಿಲ್ಲಿಸಲು ಸಾಕಷ್ಟು ಪ್ರಯತ್ನವು ಜನರಿಂದಾಗಲಿ ಸರಕಾರದಿಂದಾಗಲೀ ನಡೆಸಲ್ಪಡುತ್ತಿರುವುದಿಲ್ಲವೆಂದು ಹೇಳಲು ವ್ಯಸನಪಡುತ್ತೇವೆ. ಹಿಂದೂದೇಶದ ಮಧ್ಯವರ್ತಿ ಸರಕಾರವು ಎಸೆಂಬ್ಲಿಯಲ್ಲಿ ಪಾಸಾಗಿರುವ ಠರಾವನ್ನು ಜಾರಿಗೆ ತರಲಿ, ಯಾ ತಾರದೆ ಇರಲಿ, ಪ್ರಾಂತೀಕ ಸರಕಾರಗಳು ತಮ್ಮ ತಮ್ಮ ಸ್ಥಳೀಯ ಸ್ಥಿತಿಗಳಿಗನುಸಾರವಾಗಿ ನಿಷಾ ನಿಷೇಧದ ಕಾರ್ಯವನ್ನು ಕೈಕೊಳ್ಳುವುದು ಉತ್ತಮವಾಗಿದೆ. ಅವರಲ್ಲೂ ನಮ್ಮ ದೇಶದ ಸರಕಾರವು ಈ ಕೆಲಸಕ್ಕೆ ಒಡನೆ ಕೈ ಹಚ್ಚಬೇಕಾಗಿದೆ. ಆಯಾಯ ಸ್ಥಳೀಕ ಜನರ ಅಭಿಪ್ರಾಯದಂತೆ ಸಾರಾಯಿ ಸೇಂದಿ ಅಂಗಡಿಗಳ ಸಂಖ್ಯೆ ಮತ್ತು ಸ್ಥಳವನ್ನು ನಿಶ್ಚೈಯಿಸುವ ಮತ್ತು ಸೇಂದಿ ಇಳಿಸಲು ಲೈಸೆನ್ಸ್‌ಕೊಡುವ ಅಧಿಕಾರವುಳ್ಳ ನಾಡು ಕಮಿಟಿಗಳನ್ನು ಸರಕಾರದವರು ಏರ್ಪಡಿಸತಕ್ಕದ್ದು. ಈ ಕಮಿಟಿಗಳ ಮೆಂಬರುಗಳನ್ನು ಆಯಾಯ ನಾಡಿನ ಜನರೇ ಚುನಾಯಿಸಬೇಕು. ಇಂಥಾ ಕಮಿಟಿಗಳ ಹುಕುಂ ಚಲಾವಣೆ ಬಗ್ಗೆ ಸರಕಾರದವರು ತಕ್ಕ ಕಾನೂನು ಮಾಡತಕ್ಕದ್ದು. ನಿಷಾಸೇವನೆಗೆ ಉತ್ತೇಜನ ಕೊಡದೆ ಇರುವಂಥ ಈಗಿನ ಕಮಿಷನರವರು ಮೇಲಿನ ಸೂಚನೆಗಳನ್ನು ಜಾರಿಗೆ ತರಲು ಮೇಲಧಿಕಾರಿಗಳಿಗೆ ಬರೆಯಲು ಸ್ವಲ್ಪವಾದರೂ ಕಾಲವಿಳಂಬಮಾಡಲಿಕ್ಕಿಲ್ಲವಾಗಿ ನಂಬುತ್ತೇವೆ.

ಮದೀನದ ಮುತ್ತಿಗೆ?

ಮಹಮ್ಮದೀ ಮತಸ್ಥಾಪಕನಾದ ಮಹಮ್ಮದನ ಗೋರಿ ಇರುವಂಥ ಮತ್ತು ಮುಸಲ್ಮಾನರಿಗೆ ಪವಿತ್ರಸ್ಥಳವಾದ ಅರೇಬಿಯದಲ್ಲಿರುವ ಮದೀನಪಟ್ಟಣವನ್ನು ಇಬ್ನ್ ಸಾಉದ್‌ರವರ ಮುಂದಾಳುತನದಲ್ಲಿ ಮಹಮ್ಮದೀ ಮತಕ್ಕೆ ಸೇರಿದವರೇ ಆದ ವಹಾಬೀ ಎಂಬವರು ಮುತ್ತಿಗೆ ಹಾಕಿ ಮಹಮ್ಮದನ ಗೋರಿಯನ್ನು ಮುರಿದಿರುವರೆಂಬ ವರ್ತಮಾನವು ಹಿಂದೂದೇಶದಲ್ಲೆಲ್ಲಾ ಹರಡಿ ಮುಸಲ್ಮಾನರಲ್ಲಿ ಅತೃಪ್ತಿಯು ತೋರಲಾರಂಭಿಸಿವೆ. ಮುಖ್ಯಪಟ್ಟಣಗಳಲ್ಲಿ ದೊಡ್ಡದೊಡ್ಡ ಸಭೆಗಳನ್ನು ಮಾಡಿ ಈ ವರ್ತಮಾನವು ನಿಜವಾಗಿದ್ದರೆ ವಹಾಬೀಗಳ ಈ ಅಪವಿತ್ರಕೃತ್ಯವು ಹಿಂದೂದೇಶದ ಮಹಮ್ಮದೀಯರಲ್ಲಿ ತುಂಬಾ ಅಸಮಾಧಾನವನ್ನುಂಟುಮಾಡಿದೆಯೆಂದೂ, ಇಬ್ನ್ ಸಾಉದ್‌ರವರು ಇಂಥಾ ಕೆಲಸವನ್ನು ಇನ್ನು ಮಾಡಕೂಡದೆಂದು ಅವರಿಗೆ ತಿಳಿಸುವಂತೆಯೂ ಠರಾವುಗಳನ್ನು ಪಾಸುಮಾಡುತ್ತಲಿದ್ದಾರೆ.

ಈಗ ಹಿಂದೂದೇಶದಲ್ಲಿ ಹಬ್ಬಿರುವ ವರ್ತಮಾನವು ನಿಜವಾದದ್ದಲ್ಲವೆಂತಲೂ ಹಿಂದೂದೇಶದಿಂದ ಹೋದ ಹಾಜಿಗಳ ಡೆಪ್ಯುಟೇಶನಿಗೆ 'ಮದೀನವನ್ನು ತಾನು ಮುತ್ತುವದಿಲ್ಲ, ಮತ್ತು ತನ್ನ ಸೈನಿಕರು ನಾಶಪಡಿಸಿರುವ ಪವಿತ್ರ ಗೋರಿಗಳನ್ನು ಸರಿಪಡಿಸಿಕೊಡುವ ಭಾರವು ತನ್ನದೆಂದು' ಇಬ್ನ್ ಸಾಉದ್‌ರವರು ಭಾಷೆಕೊಟ್ಟಿರುವರೆಂತಲೂ, ಆದುದರಿಂದ ಸತ್ಯಸಂಗತಿ ತಿಳಿಯುವವರೆಗೆ ಅತೃಪ್ತಿಸೂಚಕವಾದ ಯಾವ ಕೆಲಸವನ್ನೂ ಮಾಡುವದು ನ್ಯಾಯವಲ್ಲವೆಂದೂ ಮತ್ತು ಮಹಮ್ಮದೀಯರು ಅನಾವಶ್ಯಕವಾಗಿ ಘಾಬರಿಪಡಬಾರದೆಂದೂ ಖಿಲಾಫತ್ ಕಮಿಟಿಯವರು ಪ್ರಕಟಿಸಿರುವರು. ಹಾನಫಿಯೆಂಬ ಇನ್ನೊಂದು ಪಂಗಡದವರು ಈಗಿನ ಸುದ್ದಿಯು ನಿಜವಾದುದೆಂದೂ ವಹಾಬೀಗಳು ಮುಸಲ್ಮಾನರೆನ್ನಿಸಿಕೊಳ್ಳಲು ಯೋಗ್ಯರಲ್ಲವೆಂದೂ ಮುಂತಾಗಿ ಹೇಳುತ್ತಿರುವರು. ಇಬ್ನ್ ಸಾಉದ್‌ರವರ ಶತ್ರುವಾದ ಅಮೀರ್ ಅಲಿಯವರ ಕಡೆಯವರೇ ಇಂಥಾ ಸುಳ್ಳುವರ್ತಮಾನ ಹರಡಿಸುತ್ತಿರುವರೆಂದು ಕೆಲವರ ಅಭಿಪ್ರಾಯ. ಮದೀನವು ಮುತ್ತಲ್ಪಟ್ಟರೂ ಗೋರಿಗಳನ್ನು ನಾಶಪಡಿಸಲಿಲ್ಲನೆಂಬ ತಂತೀ ಸುದ್ದಿಯು ಬಂದೆರಡುಕಡೆ ಬಂದಿವೆಯಂತೆ

ಮದೀನದ ಮುತ್ತಿಗೆಯ ವಿಷಯ ವ್ಯಸನ ಸೂಚಿಸಲಿಕ್ಕಾಗಿ ಇಡೀ ಪರ್ಶಿಯಾದಲ್ಲಿ ಎಲ್ಲಾ ಸರ್ಕಾರಿ ಇಲಾಖೆಗಳನ್ನೂ ವ್ಯಾಪಾರದ ಅಂಗಡಿ ಮೊದಲಾದವುಗಳನ್ನೂ ಈ ತಾ 5ರಲ್ಲಿ ಮುಚ್ಚುವಂತೆ ಪರ್ಶಿಯಾದ ಸರ್ಕಾರದವರು ಹುಕುಂ ಮಾಡಿದ್ದರು.

ಹೇಗೂ ಮಹಮ್ಮದನ ಗೋರಿಯ ನಾಶದ ವಿಷಯ ನಿಜಸಂಗತಿಯನ್ನು ತಿಳಿಯಲಿಕ್ಕಾಗಿ ಪಂಜಾಬು ಖಿಲಾಫತ್ ಕಮಿಟಿಯ ಪ್ರೆಸಿಡೆಂಟರಾದ ಮೌಲಾನ ಜಾಫರ್ ಅಲಿಖಾನರವರು ಬೇಗನೆ ಮದೀನಕ್ಕೆ ಹೋಗಲು ನಿಶ್ಚೈಸಿರುವರಾಗಿ ಸುದ್ದಿ. ಸತ್ಯ ಸಮಾಚಾರವನ್ನು ತಿಳಿಯುವ ಮುಂಚೆ ನಮ್ಮ ಮಹಮ್ಮದೀಯ ಸಹೋದರರು ತಮ್ಮತಮ್ಮೊಳಗೆ ಭಿನ್ನಾಭಿಪ್ರಾಯಗಳನ್ನು ಸೂಚಿಸಿ ಪಂಗಡಗಳಾಗುವುದು ಉತ್ತಮವಲ್ಲ. ಮದೀನದಲ್ಲಿ ನಡೆದಿರುವ ಸಂಗತಿಗಳನ್ನು ಇದ್ದಕ್ಕಿದ್ದಹಾಗೆ ತಿಳಿಯಲು ತಾಳ್ಮೆಯನ್ನು ತೆಗೆದುಕೊಂಡು ಬಿಗ್ಗಟ್ಟನ್ನು ಕಾಪಾಡುವರಾಗಿ ಹಾರೈಸುತ್ತೇವೆ.

ಹರ್ಷ ವಾರ್ತೆ.

ಮದ್ರಾಸು ಪ್ರಾಂತ್ಯದಲ್ಲಿ ಪೋಲೀಸು ಡಿಪ್ಯುಟಿ ಸುಪರಿಂಟೆಂಟರ ಉದ್ಯೋಗಕ್ಕೆ ಚುನಾಯಿಸಲ್ಪಟ್ಟಿರುವವರ ಪೈಕಿ ನಮ್ಮಿಂದ ಪೊಣ್ಣಪ್ಪ ಬಿ ಎ ಯವರು ಒಬ್ಬರಾಗಿರುವರೆಂಬ ವದಂತಿ ಇದೆಯೆಂದು ಎರಡು ವಾರಗಳ ಹಿಂದೆ ಪ್ರಕಟಿಸಿದ್ದೆವು. ಆ ವದಂತಿಯು ಈಗ ನಿಜವಾದ ಸಂಗತಿಯಾಗಿದೆಯೆಂದು ತಿಳಿಸಲು ಬಹಳ ಸಂತೋಷಪಡುತ್ತೇವೆ. ಅಲ್ಲದೆ ಈ ದೊಡ್ಡ ಉದ್ಯೋಗಕ್ಕೆ ಮದ್ರಾಸು ಪ್ರಾಂತ್ಯದಿಂದ ಮುಂದುಬಂದ ಅನೇಕ ಉಮೇದುವಾರರಲ್ಲಿ ಇವರೊಬ್ಬರೇ ಆರಿಸಲ್ಪಟ್ಟಿರುವರೆಂಬುದು ಮತ್ತಷ್ಟು ಹರ್ಷಕ್ಕೆ ಕಾರಣವಾಗಿದೆ. ನಮ್ಮ ಈ ಚಿಕ್ಕ ದೇಶದಲ್ಲಿ ದೇಶೀಯರಿರುವ ಗಜೆಟೆಡ್ ಉದ್ಯೋಗಗಳೇ ಕಡಿಮೆಯಾಗಿರುವುದರಿಂದ ಅರ್ಹರಾದ ಯುವಕರಿಗೆ ಉದ್ಯೋಗದಲ್ಲಿ ಮೇಲಕ್ಕೇರುವ ಸಂದರ್ಭವು ಸ್ವಲ್ಪವೆಂದೇ ಹೇಳಬೇಕಾಗಿಲ್ಲ. ದೊಡ್ಡ ಪ್ರಾಂತ್ಯಗಳಲ್ಲಾದರೆ ಉದ್ಯೋಗವುಮಿಯು ವಿಶಾಲವಾಗಿರುವ ಕಾರಣ ವಿದ್ಯಾಬುದ್ಧಿಯಲ್ಲಿ ಗಟ್ಟಿಗರಾದವರಿಗೆ ಯೋಗ್ಯತಾನುಸಾರ ಜಯವಾಗ ವುದಕ್ಕೆ ಅನುಕೂಲವಿದೆ. ಆದುದರಿಂದಲೇ ನಮ್ಮ ದೇಶದಿಂದ ಹೊರಗೆಹೋಗಿ ಉದ್ಯೋಗಮಾಡುತ್ತಿರುವವರನೇಕರು ಚೆನ್ನಾಗಿ ಅಭಿವೃದ್ಧಿ ಹೊಂದಿದವರು. ಹಾಗೆಯೇ ಮಿ ಪೊಣ್ಣಪ್ಪನವರೂ ಅಭಿವೃದ್ಧಿ ಹೊಂದಲಿ ಎಂದು ನಾವು ಆಶಿಸುತ್ತೇವೆ. ನಮ್ಮ ದೇಶೀಯರಲ್ಲಿ ದೊಡ್ಡ ಉದ್ಯೋಗ ಮಾಡುವವರಲ್ಲಿ ಹೆಚ್ಚಿನವರು ಈ ನೌಕರಿಯಿಂದ ಮೆಲ್ಲಗೆ ಮೇಲಕ್ಕೆ ಏರಿದವರಾಗಿರುತ್ತಾರೆ. ಈ ದೇಶದ ... ಮೊದಲ ಜನರಲ್ಲೊಬ್ಬರಾದ ಪೊಣ್ಣಪ್ಪನವರು ... ಪೋಲೀಸ್ ಡಿಪ್ಯುಟಿ ಸುಪರಿಂಟೆಂಡೆಂಟರ ಪದವಿಗೆ ಹೊಂದಿದ್ದಕ್ಕೆ ದೇಶಕ್ಕೇನೇ ಹರ್ಷವುಂಟಾಗಿದೆಯೆಂದು ಹೇಳಿದರೆ ತಪ್ಪಾಗದು. ಮಿ ಪೊಣ್ಣಪ್ಪನವರನ್ನು ಅವರ ಆರಿಸುವಿಕೆಗಾಗಿ ನಾವು ಅಭಿನಂದಿಸುತ್ತೇವೆ.

ಮನುಷ್ಯ ಮಾತ್ರರ ಬಂಧುತ್ವ.

(ಕಲ್ಕತ್ತೆಯ ಭಾರತೀಯ ಐಂಡಸ್ ವಿಕರಾ ಸೋಸಾಯಟಿಯಲ್ಲಿ ಮಹಾತ್ಮಾ ಗಾಂಧಿಯವರು 'ಮನುಷ್ಯ ಮಾತ್ರರಲ್ಲಿ ಭ್ರಾತೃಭಾವ' ಎಂಬ ವಿಷಯ ಕುರಿತು ಮಾಡಿದ ಭಾಷಣದ ಸಾರಾಂಶ)

ದಕ್ಷಿಣ ಆಫ್ರಿಕದಲ್ಲಿರುವಾಗ ನನಗೆ ಎಷ್ಟೋ ಮಂದಿ ಕ್ರೈಸ್ತ ಮಿತ್ರರಿದ್ದರು. ಅವರಲ್ಲಿ ಅನೇಕರು ತಮ್ಮ ಮಾತೃಭೂಮಿಯಾದ ಹಿಂದುಸ್ಥಾನವನ್ನು ಎಂದೂ ನೋಡಿರಲಿಲ್ಲ. ಆದರೂ ಮಾತೃಭೂಮಿಯ ಮೇಲೆ ಅವರಿಗೆ ಬಹಳ ಪ್ರೀತಿಯಿತ್ತು. ಇದನ್ನು ನೋಡಿ ನನಗೆ ಆನಂದವೂ ಆಶ್ಚರ್ಯವೂ ಆಯಿತು. ಅವರಲ್ಲಿ ಹೆಚ್ಚಿನ ಜನರ ಸ್ಥಿತಿಯನ್ನು ಗುಲಾಮಗಿರಿಯೆಂದೇ ವರ್ಣಿಸಬೇಕಾಗುವುದು. ಈ ನಮ್ಮ ದೇಶಬಂಧುಗಳು ಪರದೇಶಕ್ಕೆ ಹೋಗಿ ಮರ್ಯಾದೆಯಿಂದ ಜೀವಿಸಲು ಎಷ್ಟು ಕಷ್ಟಗಳನ್ನನುಭವಿಸಿ ಎಷ್ಟು ಸಾಹಸವನ್ನು ವ್ಯಕ್ತಪಡಿಸಬೇಕಾಗಿತ್ತೆಂಬ ಕಲ್ಪನೆಯು ನಿಮಗೆ ಆಗುವಂತೆ ನಾನು ಇದನ್ನು ಹೇಳಿರುವೆನು. ಅವರಲ್ಲಿ ಎಷ್ಟೋ ಮಂದಿ ಈಗ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣವನ್ನು ಹೊಂದಿ ಬಂದಿರುವರು. ಕೆಲವರು ಸ್ವತಂತ್ರ ಉದ್ಯೋಗಗಳನ್ನು ಅನುಸರಿಸುತ್ತಿದ್ದಾರೆ. ಬೋಯರ್ ಯುದ್ಧದ ಮತ್ತು ಜೂಲುದಂಗೆಯ ಸಮಯದಲ್ಲಿ ಅನೇಕ ಯುವಕರು ಸರಕಾರಕ್ಕೆ ತಮ್ಮ ಸೇವೆಯನ್ನು ಅರ್ಪಿಸಿದರು. ಕೆಲವರು ನನ್ನ ಮನೆಯಲ್ಲಿಯೇ ಬೆಳೆದವರು—ಇವರಲ್ಲಿಬ್ಬರು ಈಗ ಬೇರಿಸ್ಟರಾಗಿರುವರು. ಇದರಿಂದ ಹಿಂದೀ ಕ್ರೈಸ್ತರೊಡನೆ ನನಗೆ ಎಂತಹ ಸಮ್ಬಂಧವಿತ್ತೆಂದು ನಿಮಗೆ ತಿಳಿಯುವುದು. ಅಲ್ಲಿ ನನ್ನ ಪರಿಚಯವಿಲ್ಲದ ಒಬ್ಬನಾದರೂ ಹಿಂದೀ ಕ್ರೈಸ್ತನಿಲ್ಲವೆಂದು ಹೇಳಿದರೂ ಅತಿಶಯೋಕ್ತಿಯಾಗಲಿಕ್ಕಿಲ್ಲ. ಈ ಕಾರಣದಿಂದ ನನಗೆ ಈ ದಿನ ಮಾನವರ ಬಂಧುತ್ವದ ಕುರಿತು ಮಾತನಾಡಲು ಆನಂದವೆನಿಸುತ್ತದೆ. ಈಗ ಅಲ್ಲಿ ಯಾವ ನಮ್ಮ ಸಹೋದರರ ಅವಮಾನವಾಗುತ್ತಿದೆಯೋ ಅವರಿಗೆ ಈ ಬಂಧುತ್ವದ ಕಲ್ಪನೆಯು ಬರುವುದು ಶಕ್ಯವಿದೆಯೋ? ಎಲ್ಲಿ ಹಿಂದೀಯರನ್ನು ಹೊರಡಿಸುವ, ಅಥವಾ ಒಂದು ಇಂಗ್ಲಿಷ್ ಪತ್ರಿಕೆಯು ಹೇಳುವಂತೆ ಉಪವಾಸಮಾಡಿ ಓಡಿಸುವ—ಯೋಜನೆಯನ್ನು ಸರಕಾರವು ಮಾಡುತ್ತಿದೆಯೋ, ಅಲ್ಲಿ ಬಂಧುತ್ವವು ಹೇಗೆತಾನೇ ಸಾಧ್ಯವಾಗಬಹುದೆಂದು ನಮಗೆ ತಿಳಿಯುವುದಿಲ್ಲವೆಂದು ಅವರು ಹೇಳಬಹುದು. ಆದರೂ ನಾನು ನಿಮ್ಮ ಮುಂದೆ ಈ ವಿಷಯ ಕುರಿತು ಮಾತನಾಡಲು ಒಪ್ಪಿಕೊಂಡಿರುವುದೇಕೆಂದರೆ—ಈ ರೀತಿ ಅನ್ಯಾಯವಾಗುತ್ತಿರುವಾಗಲೇ ಮನುಷ್ಯರೊಳಗೆ ಇರಬೇಕಾದ ಪರಸ್ಪರ ಭ್ರಾತೃಭಾವದ ಪರೀಕ್ಷೆಯಾಗಬೇಕು.

ಅನೇಕಸಲ ಜನರು ನನ್ನ ಸ್ತುತಿಯನ್ನು ಮಾಡುವರು. ಅವನ್ನು ನಾನು ಒಂದು ಕಿವಿಯಿಂದ ಕೇಳಿ ಇನ್ನೊಂದು ಕಿವಿಯಿಂದ ಹೊರಗೆ ಬಿಡುತ್ತೇನೆ. ಆದರೆ ನೀವು ಈ ದಿನ ನನ್ನ ಮೇಲೆ ಯಾವ ಗುಣದ ಆರೋಪವನ್ನು ಮಾಡಿರುವಿರೋ ಅದನ್ನು ಸ್ವೀಕರಿಸಲು ಯೋಗ್ಯನಾಗಬೇಕೆಂದು ನನಗೆ ಬಹಳ ಇಚ್ಛೆಯಿದೆ. ಇಂದಿನ ಭಾಷಣದ ವಿಷಯ ಕುರಿತು ಮಾತನಾಡಲು ಯಾರಿಗಾದರೂ ಅಧಿಕಾರವಿದ್ದರೆ ಅದು ನನಗೆ ಇದೆ ಎಂದು ನೀವು ಹೇಳುತ್ತೀರಿ. ನಾನು ಆ ಮಾತನ್ನು ಮನ್ನಿಸುತ್ತೇನೆ. ಶತ್ರುವನ್ನು ಘೃಣಾಭಾವದಿಂದ ನೋಡಲು ನನಗೆ ಸಾಧ್ಯವಿದೆಯೋ ಇಲ್ಲವೋ ಎಂದು ನಾನು ಅನೇಕಸಲ ಪರೀಕ್ಷಿಸಿರುವೆನು. ಪ್ರಾಮಾಣಿಕತನದಿಂದಲೂ ಸಂಪೂರ್ಣ ನಮ್ರಭಾವದಿಂದಲೂ ನನಗೆ ಅಂಥಾ ಘೃಣಾಭಾವವನ್ನು ಸ್ವಲ್ಪವಾದರೂ ಇಟ್ಟುಕೊಳ್ಳಲು ಸಾಧ್ಯವಿಲ್ಲವೆಂದು ಹೇಳುತ್ತೇನೆ. ನನಗೆ ಯಾವ ಮನುಷ್ಯನ ವಿಷಯದಲ್ಲಿಯೂ ತಿರಸ್ಕಾರಭಾವವನ್ನು ತಾಳಿದ ಜ್ಞಾಪಕವಿಲ್ಲ. ಈ ಸ್ಥಿತಿಯು ನನಗೆ ಹೇಗೆ ಪ್ರಾಪ್ತವಾಯಿತೆಂದು ನನಗೆ ಗೊತ್ತಿಲ್ಲ. ಆದರೆ ನನ್ನ ಇಡೀ ಜೀವನದಲ್ಲಿ ಇದರ ಆಚರಣೆಯನ್ನು ಮಾಡುತ್ತ ಬಂದಿರುವೆನೆಂದು ಹೇಳಿರುವೆನು.

ಬಂಧುತ್ವವೆಂದರೆ ಯಾರು ನಮ್ಮನ್ನು ಪ್ರೀತಿಸುವರೋ, ಯಾರು ನಮ್ಮೊಡನೆ ಸಹೋದರಭಾವದಿಂದ ವರ್ತಿಸುವರೋ ಅವರೊಡನೆ ಪ್ರೇಮವಿಡುವುದೆಂದು ಅರ್ಥವಲ್ಲ. ಇದು ವ್ಯಾಪಾರದ ರೀತಿಯಾಯಿತು. ಬಂಧುತ್ವದಲ್ಲಿ ಇಂತಹ ವ್ಯಾಪಾರಭಾವವಿಲ್ಲ. ಬಂಧುತ್ವವು ಕೇವಲ ಮನುಷ್ಯರೊಡನೆ ಮಾತ್ರವಲ್ಲ ಪ್ರಾಣಿಮಾತ್ರದೊಡನೆಯೂ ಇರಬೇಕೆಂದು ನನ್ನ ಧರ್ಮವು ಬೋಧಿಸುತ್ತದೆ. ಇಂಗ್ಲಾಂಡಿನ ಒಂದು ಮಾಸಿಕ ಪತ್ರಿಕೆಯಲ್ಲಿ 30-35 ವರುಷಗಳ ಹಿಂದೆ ನಾನು ... ಬಂಧುವಾದ ... ಒಂದು ಪದ್ಯವನ್ನು ಓದಿದ್ದೆನು. ... ಪ್ರೀತಿಸುವವನು ಪ್ರಾಣಿಮಾತ್ರದ ಮೇಲೆಲ್ಲ ದಯೆ ತೋರಿಸುವ ... ಉಪದೇಶವು ಆ ಪದ್ಯದಲ್ಲಿ ಬಹು ಮನೋಹರವಾದ ರೀತಿಯಲ್ಲಿ ಕೂಡಿತ್ತು. ಆ ಪದ್ಯವು ನನ್ನಲ್ಲಿ ಅತ್ಯಂತ ಆನಂದವನ್ನುಂಟುಮಾಡಿತು. ಆಗ ನನ್ನಲ್ಲಿ ಹಿಂದೂ ಧರ್ಮದ ... ನನ್ನ ತಂದೆತಾಯಿಗಳಿಂದ ಮತ್ತು ... ದೊರೆತ ... ಬಂಧುತ್ವದ ಉಪದೇಶಿಸುತ್ತದೆಂದು ನಾನು ತಿಳಿದಿದ್ದೆನು. ಆದರೆ ಈ ದಿನ ನಾನು ಇಂತಹ ವ್ಯಾಪಕ ಬಂಧುತ್ವದ ಕುರಿತು ಮಾತನಾಡಬಯಸುವುದಿಲ್ಲ. ಇದನ್ನಿಷ್ಟು ಹೇಳಲು ಕಾರಣವೇನೆಂದರೆ ನಾವು ನಮ್ಮ ಶತ್ರುಗಳೊಡನೆಯೂ ಪ್ರೇಮಭಾವವನ್ನಿಟ್ಟುಕೊಳ್ಳಲಾರೆವಾದರೆ ನಮ್ಮ ಬಂಧುತ್ವವು ಬರೀ ತೋರಿಕೆಯದಾಗಿಬಿಟ್ಟಿತೆಂದು ಹೇಳ ಬೇಕಾಗುವುದು. ... ಯಾವನು ಬಂಧುತ್ವದ ಭಾವವನ್ನು ತನ್ನ ಹೃದಯದಲ್ಲಿ ಸ್ಥಾನವನ್ನು ಕೊಟ್ಟಿರುವನೋ ಅವನಿಗೆ ಒಬ್ಬನಾದರೂ ಶತ್ರುವಿಲ್ಲ. ಜನರು ಬೇಕಾದರೆ ನಮ್ಮನ್ನು ಶತ್ರುಗಳೆಂದು ತಿಳಿಯಲಿ, ಅದು ನಮ್ಮ ಹಾಗೆ ತಿಳಿಯಲಾಗದು.

ಯಾರು ನಮ್ಮನ್ನು ಶತ್ರುಗಳೆಂದು ತಿಳಿಯುತ್ತಾರೋ ಅವರನ್ನು ಪ್ರೀತಿಸುವುದು ಹೇಗೆಂದು ... ಶತ್ರುಗಳನ್ನು ... ಪ್ರೀತಿಸುವುದು ಸಾಧ್ಯವೆ ... ಹೇಳುವ ... ಪ್ರಶ್ನಿಸುವ ಹಿಂದುಗಳಿಂದಲೂ ಮುಸಲ್ಮಾನರಿಂದಲೂ ಕ್ರೈಸ್ತರಿಂದಲೂ ನನಗೆ ಬರುತ್ತವೆ. ನನಗೆ ಪ್ರಾಣಕ್ಕಿಂತ ಪ್ರಿಯವಾದ ಗೋವನ್ನು ಕೊಲ್ಲುವ ಮುಸಲ್ಮಾನರನ್ನು ಪ್ರೀತಿಸುವುದು ಹೇಗೆಂದು ಹಿಂದೂ ಲೇಖಕರು ಕೇಳುವರು. ಅಸ್ಪೃಶ್ಯತೆಯಲ್ಲಿ ವಿಶ್ವಾಸವನ್ನಿಟ್ಟು ತಮ್ಮ ಬಂಧುಗಳನ್ನು ಪೀಡಿಸುವ ಹಿಂದುಗಳೊಡನೆ ಪ್ರೇಮಭಾವವನ್ನಿಟ್ಟುಕೊಳ್ಳುವುದು ಸಾಧ್ಯವಿಲ್ಲವೆಂದು ಕ್ರೈಸ್ತರು ಬರೆಯುವರು. ಮೂರ್ತಿಪೂಜಕರಾದ ಹಿಂದುಗಳೊಡನೆ ಪ್ರೇಮವೆಂಥದೆನು—ಎಂದು ಮುಸಲ್ಮಾನ ಲೇಖಕರು ಪ್ರಶ್ನೆ ಮಾಡುವರು. ಮುಸಲ್ಮಾನರೊಡನೆಯೂ ನನ್ನ — ನೀವು ಪ್ರೀತಿಸುವ ಜನರನ್ನು ನೀವು ಪ್ರೀತಿಸಲಾರಿರಾದರೆ ನಿಮ್ಮ ಬಂಧುತ್ವದ ಮಾತುಗಳೆಲ್ಲವೂ ವ್ಯರ್ಥವೆಂದು ಹೇಳುವೆನು. ಇದರ ಮೂಲದಲ್ಲಿ ಭಯವಿದೆಯೋ? ಸಹಿಷ್ಣುತೆಯೋ? ನಾವೆಲ್ಲರೂ ಒಬ್ಬ ಈಶ್ವರನ ಸಂತಾನರಾದರೆ ಒಬ್ಬರನ್ನೊಬ್ಬರು ದ್ವೇಷಿಸುವುದೇಕೆ? ನಮ್ಮಿಂದ ಭಿನ್ನಮತಕ್ಕೆ ಸೇರಿದವರನ್ನು ದ್ವೇಷಿಸುವುದೇಕೆ? ಆದರೆ ನಾವು ಯಾವ ಕೃತ್ಯವನ್ನು ಘೃಣಾದೃಷ್ಟಿಯಿಂದ ನೋಡುತ್ತೇವೋ ಅಂಥ ಕೃತ್ಯವನ್ನು ಮಾಡಲು ... ಬೇಕೇ? 'ಹೌದು' ಎಂದು ನನ್ನ ಬಂಧುತ್ವವು ಉತ್ತರಕೊಡುತ್ತಿದೆ. ಹೀಗೆ ಹೇಳುವಾಗ ಇದನ್ನು ನಾನು ನೀವು ... 'ನೀವು ಅತ್ಯುಚ್ಚವನ್ನು ಮಾಡಿರಿ. ನಿಮಗೆ ಪ್ರಿಯವಾದ ವಸ್ತುವಿನ ರಕ್ಷಣೆಯನ್ನು ಮಾಡಲು ಮನಸ್ಸಿದ್ದರೆ ಯಾರನ್ನೂ ಕೊಲ್ಲದೆ ಆವಶ್ಯಕವಾದರೆ ಪ್ರಾಣವನ್ನು ನೀಗಿರಿ. ನಿಮ್ಮಲ್ಲಿ ಪ್ರೇಮದಿಂದ ಕಷ್ಟ ಸಹನಶಕ್ತಿಯೂ ಇದ್ದರೆ ನೀವು ಪಾಷಾಣ ಹೃದಯವನ್ನಾದರೂ ಕರಗಿಸಲು ಸಮರ್ಥರಾಗುವಿರಿ. ನನಗೆ ಇಂಥ ಘಟನೆಗಳು ಜ್ಞಾಪಕವಿವೆ. ಒರಟಾದ ಮನುಷ್ಯನು ನಿಮ್ಮನ್ನು ನೋಯಿಸಿ ಇನ್ನಷ್ಟು ದುಷ್ಕೃತ್ಯವನ್ನು ಮಾಡಬಹುದು. ದುಷ್ಟತೆಯು ಆಗ್ನಿಯು ಎರೆಯಿಂದ ಕುಪ್ಪಳಿಸಿದಂತೆ ಇನ್ನಷ್ಟು ಉರಿಯುವುದು. ಇತಿಹಾಸವು ಇದಕ್ಕೆ ಸಾಕಷ್ಟು ಸಾಕ್ಷಿಯನ್ನು ಕೊಡುವುದಿಲ್ಲವೇ? ಇತಿಹಾಸದಲ್ಲಿ ಅಹಿಂಸೆಯು ಪರಾಕ್ರಮವನ್ನು ತೋರಿದವರು ದೊಡ್ಡ ದೊಡ್ಡ ಎಕವಾಳ ವಸ್ತುಗಳನ್ನು ... ಉದಾಹರಣೆಗಳಿಲ್ಲವೇ? ಆದರೆ ಈ ಅಹಿಂಸೆಯು ... ವನ್ನು ಬಯಸುತ್ತದೆ. ಇದಕ್ಕೆ ಮಹಾ ಧೈರ್ಯವು ಬೇಕು ... ಕ್ಕಿಂತ ಹೆಚ್ಚಿನ ... ನಾವು ... ಈ ವಿಷಯದಲ್ಲಿ ನನಗೆ ತಿರಸ್ಕಾರಭಾವವಿದೆಯೋ ಎಂದರೆ, ಕಾಪಾಡುವ ಶಕ್ತಿಯಿಲ್ಲದೆ ಹೇಡಿತನದಿಂದ ಸುಮ್ಮನೆ ಕುಳಿತುಕೊಳ್ಳುವುದಕ್ಕಿಂತ ಕಾದಾಡುವುದೇ ಮೇಲು. ಹೇಡಿತನವೂ ಬಂಧುತ್ವವೂ ಪರಸ್ಪರ ವಿರುದ್ಧವಾಗಿವೆ. ಲೋಕದ ಜನರು ಶತ್ರುಗಳನ್ನು ಪ್ರೀತಿಸುವುದು ಅಶಕ್ಯವೆಂದು ಹೇಳುವರು. ಕ್ರೈಸ್ತ ಮತಾವಲಂಬಿಯಾದ ಯುರೋಪಿನಲ್ಲಿ ಕೂಡ ಅಹಿಂಸೆಯು ಮೂರ್ಖತನವೆಂದು ಹಾಸ್ಯಮಾಡುವರು. ಅಲ್ಲಿಯ ಕೆಲವು ಲೇಖಕರು 'ನೀವು ಅಹಿಂಸೆಯ ಕುರಿತು ಹಿಂದುಸ್ಥಾನದಲ್ಲಿಯೇ ನಿಂತು ಬೇಕಷ್ಟು ವ್ಯಾಖ್ಯಾನಕೊಡಿರಿ, ಯುರೋಪಿನಲ್ಲಿ ನಾವು ನಿಮ್ಮ ಮಾತಿಗೆ ಕಿವಿಗೊಡುವಂತಿಲ್ಲ'ವೆಂದು ಹೇಳುವರು. ಇನ್ನು ಕೆಲವರು ಕ್ರೈಸ್ತರು ಕ್ರೈಸ್ತನ ಸಂದೇಶವನ್ನು ಮರೆತಿರುವರೆಂದು ಒಪ್ಪುವರು. ಆದರೆ ಶತ್ರುವನ್ನು ಪ್ರೀತಿಸಬೇಕೆಂಬ ಸಿದ್ಧಾಂತವನ್ನು ಸ್ವೀಕರಿಸದೆ ಬಂಧುತ್ವದ ಕುರಿತು ಮಾತನಾಡುವುದು ದರ ಗಾಳಿಯಲ್ಲಿ ಮಹಲುಗಳನ್ನು ಕಟ್ಟಲು ಯತ್ನಿಸಿದಂತೆಯೇ ಸರಿ. ... ವೈರಭಾವವನ್ನು ಬಿಡಲು ಸಾಧ್ಯವಿದೆಯೇ ಎಂದು ಅನೇಕರು ನನ್ನೊಡನೆ ಕೇಳುವರು. ನಾನು ಅವರಿಗೆ ಹೌದು ಎಂದು ಉತ್ತರಕೊಡುತ್ತೇನೆ. ನಮಗೆ ನಮ್ಮ ಮನುಷ್ಯತ್ವದ ಪೂರ್ಣ ಪರಿಚಯವಿಲ್ಲದಿರುವುದರಿಂದ ನಾವು ವೈರವನ್ನು ತ್ಯಜಿಸಲಾರೆವು. ಡಾರ್ವಿನನು ನಾವು ಕಪಿಗಳ ವಂಶಜರೆಂದು ಹೇಳುವನು. ಇದು ನಿಜವಾದರೆ ನಾವಿನ್ನೂ ಮನುಷ್ಯದಶೆಯನ್ನು ಪ್ರಾಪ್ತಮಾಡಿಕೊಂಡಿಲ್ಲ. ಡಾಕ್ಟರ್ ಅನಾ ಕಿಂಗ್ಸ್ ಫೋರ್ಡ್ ... ಮನುಷ್ಯರೂಪವನ್ನು ತಾಳಿರುವ ... ಸಂತತಿಯೆಂದು ... ಬರೆದಿದ್ದಾರೆ. ಈ ... ನಾಶವಾಗಬೇಕಾದರೆ ಮನುಷ್ಯರು ... ತ್ಯಜಿಸುವುದು ಅತ್ಯಾವಶ್ಯಕವಾಗಿದೆ. ಭಯವನ್ನು ದೂರಮಾಡುವುದಕ್ಕೆ ಶಸ್ತ್ರವನ್ನು ಧರಿಸುವುದಲ್ಲ—ಆತ್ಮಬಲವನ್ನು ವೃದ್ಧಿಮಾಡುವುದೇ ಸಂಗತಿ. ಮಹಾಭಾರತದಲ್ಲಿ ಕ್ಷಮೆಯೇ ವೀರರ ... ವೆಂದು ಹೇಳಿದೆ. ಜನರಲ್ ಗೋರ್ಡನ್ ... ಒಂದು ಪ್ರತಿಮೆಯಿದೆ—ಅದರಲ್ಲಿ ಅವನು ವೀರನೆಂದು ತೋರಿಸಲು ಅವನ ಕೈಯಲ್ಲಿ ಬತ್ತದ ಒಂದು ಛಡಿಯನ್ನು ಕೊಡಲ್ಪಟ್ಟಿದೆ. ನಾನು ಶಿಲ್ಪಕಾರನಾಗಿ ಆ ಮೂರ್ತಿಯನ್ನು ನಿರ್ಮಿಸುತ್ತಿದ್ದರೆ ಗೋರ್ಡನನು ಎದೆಯನ್ನು ಮುಂದೆಮಾಡಿ ಶಾಂತಿಯಿಂದ ನಿಂತಿರುವಂತೆಯೂ ಈ ರೀತಿ ಜಗತ್ತಿಗೆ ಹೇಳುವಂತೆಯೂ ತೋರಿಸುತ್ತಿದ್ದೆನು—ನಿಮ್ಮ ಪ್ರಹಾರಗಳು ಎಂದರೂ ... ನನ್ನ ವೈರವಿಲ್ಲದೆಯೂ ಅವುಗಳನ್ನು ಸ್ವೀಕರಿಸುವುದಕ್ಕೆ ನನ್ನ ಎದೆಯನ್ನು ಒಡ್ಡಿರುವೆನು. ಇದೇ ನನ್ನ ... ಇಂತಹ ವೀರರು ಜಗತ್ತಿನ ಚರಿತ್ರೆಯಲ್ಲಿ ಅಮರರಾಗಿರುವರು. ಕ್ರೈಸ್ತಧರ್ಮವು ಇಂತಹ ಹೋರಾಟಗಳಿಗೆ ... ಹಿಂದೂಧರ್ಮವೂ ಮುಸಲ್ಮಾನ ಧರ್ಮವೂ ... ಇಸ್ಲಾಮವು ... ಧರ್ಮವೆಂದು ... ನನಗೆ ... ವುದಿಲ್ಲ. ... ಹೇಳುವುದಿಲ್ಲ.

... ಅನೇಕ ಪ್ರಶ್ನೆ ... ಹಿಂದೂ ... ಲೇಖಕರು ... ಜಾತಿಯು ... ಎಂದಿಗೂ ಒಂದಾಗರೆಂದು ಹೇಳುವರು. ಈ ವಿಷಯದಲ್ಲಿ ನನ್ನ ಆಕ್ಷೇಪವಿದೆ. ಅದಕ್ಕೆ ವಿರುದ್ಧವಾಗಿ ನಾನು ಹೇಳುವುದೇನೆಂದರೆ—ಮನುಷ್ಯನು ಎಂದಿನವರೆಗೆ ನಿರ್ವೈರನಾಗುವುದಿಲ್ಲವೋ ಅಂದಿನವರೆಗೆ ಅವನು ನಿಜವಾದ ಮನುಷ್ಯನಾಗುವುದಿಲ್ಲ. ... ನಮಗೆ ಇಷ್ಟವಿರಲಿ ಇಲ್ಲದಿರಲಿ ನಾವು ಅದೇ ಮಾರ್ಗವನ್ನು ಅನುಸರಿಸಬೇಕಾಗುವುದು. ... ಹಾಗೆ ಮಾಡಿದೆಂದು ನಾನು ಹೇಳುವೆನು. ಕ್ರೈಸ್ತ ಧರ್ಮಾನುಯಾಯಿಗಳ ಮುಂದೆ ಈ ಮಾತನ್ನು ಹೇಳಬೇಕಾಗುವುದು ನನಗೆ ಸ್ವಲ್ಪ ವಿಚಿತ್ರವೆನಿಸುತ್ತದೆ. ಆದರೆ ನಾನು ಹಿಂದುಗಳೊಡನೆಯೂ ಇದನ್ನು ಹೇಳುತ್ತೇನೆ.

ಪ್ರಸಿದ್ಧ ... ಜಗತ್ತಿನ ಶಾಂತಿರಕ್ಷಣೆಗಾಗಿ 14 ಸಿದ್ಧಾಂತಗಳನ್ನು ರಚಿಸಿದರು. 'ಇವುಗಳಲ್ಲಿ ನಾವು ಸಫಲತೆಯನ್ನು ಹೊಂದದಿದ್ದರೆ ಬಿಡ್ಡದಂತೂ ಇದ್ದೇ ಇದೆ' ಎಂದು ಹೇಳಿದರು. ನಾನು ಅದಕ್ಕೆ ವಿರುದ್ಧವಾಗಿ—'ನಮ್ಮ ಎಲ್ಲ ... ಶಸ್ತ್ರಗಳು ವ್ಯರ್ಥವಾದುವು. ಈಗ ಹೊಸ ಶಸ್ತ್ರದ ಶೋಧವನ್ನು ಮಾಡುವ. ನಮ್ಮಲ್ಲಿ ಪ್ರೇಮದ ಶಸ್ತ್ರವನ್ನು—ಸತ್ಯದ ಶಸ್ತ್ರವನ್ನು ಧರಿಸುವ ಎಂದು ಹೇಳುವೆನು. ಈ ಶಸ್ತ್ರವು ನಮಗೆ ದೊರೆತರೆ ನಮಗೆ ಇನ್ನಾವ ಶಸ್ತ್ರದ ಆವಶ್ಯಕತೆಯೂ ಉಳಿಯಲಾರದು.

(ಸತ್ಯಾಗ್ರಹೀ)

ತಾರೀಕು ೧—9—1925ರಲ್ಲಿ ನಡೆದ ಕೊಡಗು ಜಮೀನ್ದಾರರ ಸಂಘದ ಎಗ್ಸಿಕ್ಯುಟಿವ್ ಕಮಿಟಿ ಮೀಟಿಂಗಿನ ವಿವರ.

19 ಕಮಿಟಿ ಮೆಂಬರುಗಳು ಹಾಜರಿದ್ದರು.

I. ಮಿ ನಿಡ್ಯದ ... ಯವರು ... ತಮ್ಮ ... ಯವರ ... ವಾಗಿ ಒಂದು ... ಕೊಂಡು ... ಸಂಘವು ಅವರಿಗೆ ಅಭಿನಂದನೆಯನ್ನು ಒಪ್ಪಿಸುತ್ತದೆ.

'ಇವರ ಸಮಾಧಾನಕ್ಕಾಗಿ ಇವರ ಉಚಿತವನ್ನು ಸಮರ್ಪಿಸುವ ಒಂದು ಶಾಸನವನ್ನು ಮತ್ತು ಅವರ ... ಯೊಂದನ್ನು ಸಂಘದ ಕಟ್ಟಡದಲ್ಲಿ ಇಡಬೇಕು.' ಎಂಬುದು ಸರ್ವಸಮ್ಮತದಿಂದ ಮಂಜೂರಾಯಿತು.

2. ಮೆ. ನಿಡ್ಮದ ಸುಬ್ಬಯ್ಯನವರು ಕೊಟ್ಟ ಮನೆಯನ್ನು ರಿಪೇರಿ ಮಾಡುವ ವಿಷಯ ಯೋಚಿಸಲಾಯಿತು

ರಿಪೇರಿ ಮಾಡಬೇಕೆಂತ ತೀರ್ಮಾನವಾಯಿತು

3 ರಿಪೇರಿ ಖರ್ಚಿಗೆ ಹಣ ದೊರಕಿಸುವ ವಿಷಯ ಯೋಚಿಸಲಾಯಿತು.

ರಿಪೇರಿ ಖರ್ಚಿನ ಬಗ್ಗೆ ಚಂದಾ ಎತ್ತಬೇಕೆಂತ ತೀರ್ಮಾನವಾಯಿತು ಕೂಡಲೆ ರಾ ಬಾ ಮನೆಯಪಂಡ ಮುತ್ತಣ್ಣನವರ ಮಕ್ಕಳು ತಮ್ಮ ತಂದೆಯವರ ಜ್ಞಾಪಕಾರ್ಥವಾಗಿ ಕಟ್ಟಡಕ್ಕೆ ಕೊಡುತ್ತೇವೆಂದು ಮೊದಲೇ ಹೇಳಿದ್ದ ಒಂದುಸಾವಿರ ರೂಪಾಯಿಯನ್ನು ರಿಪೇರಿಗೆ ಕೊಡುತ್ತೇವೆಂದು ಹೇಳಿದರು

ಮೀಟಿಂಗಿನಲ್ಲಿ ಹಾಜರಿದ್ದವರು ಕೊಡಲು ಒಪ್ಪಿದ ಮೊಬಲಗಿನ ಪಟ್ಟಿ ಈ ಕೆಳಗೆ ಕೊಟ್ಟಿದೆ

ಸಂಘದ ಕಮಿಟಿಯವರೇ ಚಂದಾ ವಸೂಲ್ಮಾಡುವಂತೆ ನೇಮಿಸಲಾಯಿತು

4 ಸಂಘದ ನಿಧಿಯಿಂದ 500 ರೂಪಾಯಿ ಈ ರಿಪೇರಿ ಬಗ್ಗೆ ಉಪಯೋಗಿಸಬಹುದೆಂತ ತೀರ್ಮಾನವಾಯಿತು

5 ಕಟ್ಟಡದ ರಿಪೇರಿ ಕೆಲಸಕ್ಕೆ ಈ ಕೆಳಗಿನವರ ಉಪ ಕಮಿಟಿಯನ್ನು ನೇಮಿಸಿ ಅವರು ಕೂಡಲೇ ಕೆಲಸ ನಡೆಸಲು ಮಂಜೂರು ಮಾಡಿದೆ

(1) ಅಧ್ಯಕ್ಷರ — ಮೆ ರಾ ಬಾ ಕೆ ಅಪ್ಪಯ್ಯನವರು
(2) ಉಪಾಧ್ಯಕ್ಷರು — [illegible] ವೆಂಕಪ್ಪಯ್ಯನವರು [illegible]
(3) ಸೆಕ್ರೆಟರಿ — ಮೆ [illegible]ಯಪಂಡ ಚಿಣ್ಣಪ್ಪನವರು [illegible]
(4) ಮೆ ಕೊಂಗೆಟ್ಟಿರ ಅಪ್ಪಯ್ಯನವರು

6 ಸರ್ಕಾರದವರು [illegible] ರೂಪಾಯಿ ಕಾಯದ ಮರವನ್ನು [illegible] ಕೊಡುವಂತೆ ಕೇಳಿಕೊಳ್ಳಬೇಕೆಂದು ನಿಶ್ಚಯಿಸಲಾಯಿತು.

7 ಮೆ ಬಿದ್ದಂಡ [illegible]ಯ್ಯಪ್ಪನವರು ಸಂಘದ ಆಶ್ರಯದಲ್ಲಿ ನಡೆಸಲ್ಪಡುವ ಸಮಾಜಕ್ಕೆ ಒಬ್ಬರನ್ನು ಮದ್ರಾಸಿಯ ಡಾಕ್ಟರ್ ಪಟ್ಟಣಕರರವರ ಕೈ ಕೆಳಗೆ ತಯಾರಿಸುವ ಬಗ್ಗೆ ಅವರ ದತ್ತ ಕಾಗದ ಅವರು ಪ್ರೈವಿ ಸೀಟಿಗೆ ಹೋಗಬೇಕುವ ಸಿಪಾರ್ಸು ಕೊಡಬೇಕೆಂದು ಬರಕೊಂಡ ಕಾಗದವು ಓದಲಾಯಿತು.

ಸಂಘದಿಂದ ಈ ಖರ್ಚನ್ನು ಕೊಡಲಿಕ್ಕೆ ಆಗುವುದಿಲ್ಲವೆಂತ ಬಹುಮತದವರು ತೀರ್ಮಾನಿಸಿದರು

8 ಮೆ ಉದಿಯಾಂಡ ಪೂವಯ್ಯನವರು ಉತ್ತರ ಕೊಡಗಿಗೂ, ಮೆ ಚಂಗಂಡ ಕುಟ್ಟಪ್ಪನವರು ದಕ್ಷಿಣ ಕೊಡಗಿಗೂ ಆರ್ಗನೈಜರುಗಳಾಗಿ ನೇಮಿಸಲ್ಪಟ್ಟಿರುತ್ತಾರೆ ಇವರ ನೇಮಕವು ತಾರೀಕು 23—1—24ರ ಮೀಟಿಂಗಿನ 3ನೇ ಠರಾವಿನಲ್ಲಿ ನಮೂದಿಸಿರುವ ಷರತ್ತುಗಳಿಗೆ ಒಳಪಟ್ಟಿರುತ್ತದೆ.

9 ಮೆ ಬಿದ್ದಂಡ ಕಾರ್ಯಪ್ಪನವರು ಬರಕೊಂಡ ತಾ 15—1—24ರ ಕಾಗದ ಓದಲಾಯಿತು

ಇವರ ಬಿಲ್ಲನ್ನು ಮಂಜೂರ್ಮಾಡಲು ಆಗುವುದಿಲ್ಲವೆಂತ ತೀರ್ಮಾನವಾಯಿತು

ಕಟ್ಟಡ ರಿಪೇರಿ ಬಗ್ಗೆ ಮೀಟಿಂಗಿನಲ್ಲಿ ಹಾಜರು ಇದ್ದ ಮೆಂಬರುಗಳು ಕೊಡಲು ಒಪ್ಪಿದ ಚಂದಾ ಮೊಬಲಗಿನ ತಪಸೀಲು

1	ಮೆ	ಮನೆಯಪಂಡ ಚಿಣ್ಣಪ್ಪನವರು	ರು 1000—0—0
2	„	ಕೋದಂಡ ಅಪ್ಪಯ್ಯನವರು	200—0—0
3	„	ನಿಡ್ಮದ ಸುಬ್ಬಯ್ಯನವರು	100—0—0
4	„	[illegible] ವೆಂಕಪ್ಪಯ್ಯನವರು	100—0—0
5		ಬಿದ್ದಂಡ ಕುಟುಂಬಸ್ಥರ ಫಂಡು	100—0—0
6	„	ಕೊಂಗೆಟ್ಟಿರ ಅಪ್ಪಯ್ಯನವರು	30—0—0
7	„	ಕೋಟೆರ ಚಿಣ್ಣಪ್ಪನವರು	25—0—0
8	„	ನಿಡ್ಮಮಲೆ ಮುದ್ದಪ್ಪನವರು	25—0—0
9	„	ಪಟ್ಟಮಾಡ ಚಿಣ್ಣಪ್ಪನವರು	20—0—0
10	„	ಉದಿಯಂಡ ಪೂವಯ್ಯನವರು	10—0—0
11	„	ಕಳ್ಳಿರ ಮಾದಪ್ಪನವರು	10—0—0
12	„	ಚೌರೀರ ಅಪ್ಪಯ್ಯನವರು	10—0—0
13	„	ಬ್ಯೆಟ್ಟಿರ ಅಪ್ಪಯ್ಯನವರು	5—0—0
14.	„	ಚಂಗಂಡ ಕುಟ್ಟಪ್ಪನವರು	5—0—0
		ಒಟ್ಟು ರೂ	1640—0—0

ಕೆ. ಅಪ್ಪಯ್ಯ,
(ಅಧ್ಯಕ್ಷರು)

ಸರೋಜ ಬಾಲೆ
(ಕಳೆದವಾರದಿಂದ ಮುಂದುವರಿದುದು)

ಸಾಧು—ಹೌದು ನಾನು ಅವನನ್ನು ಕಂಡಿದ್ದೇನೆ ತನ್ನ ಕೆಟ್ಟ ಹಸರನ್ನು ಹೋಗಲಾಡಿಸಬೇಕೆಂದು ಪ್ರಯತ್ನವನ್ನು ಮಾಡಿರುವನು

ಸರೋ—ನೀಯೋಣವು ರಾಜಪುತ್ರಿಯೆಂದೂ, ತನ್ನ ಜೀವಮಾನದಲ್ಲೆಲ್ಲಾ ಅವನ ವಿಷಯ ಹಾಡುತ್ತಿರುವನೆಂದು ಅವನು ತಪ್ಪಿತಸ್ಥನಲ್ಲವೆಂದು ಸದಾ ತಿಳಿದಿರುವನೆಂದೂ ಹೇಳು

ಸಾಧು.—ಆದರೆ ತಾನು ತಪ್ಪಿತಸ್ಥನಲ್ಲನೆಂದು [illegible]ವನು ಅವನಿಂದ ಸಾಧ್ಯವಾಗಲಾರದು .

ಸರೋ.—ಬಂತೆಯಿಲ್ಲ ತನ್ನ ಕೆಟ್ಟ ಹೆಸರನ್ನು ಹೋಗಲಾಡಿಸಲು ನಾನು ಸರ್ವದಾ ಅವನನ್ನು ಆಗಿರುವನು ನಿನ್ನ ಹೆಸರೇನು ?

ಸಾಧು—ಸೀತಾಪತಿ ಗೋಸ್ವಾಮಿ

ವೇಷಧಾರಿಯಾದ ಸನ್ಯಾಸಿಯು ರಘುನಾಥನೆಂದು ನಮ್ಮ ವಾಚಕರಿಗೆ ಹೇಳಬೇಕಾದುದಿಲ್ಲ ರಘುನಾಥನು ಶಿವಾಜಿಮಹಾರಾಜರು ಔರಂಗಜೇಬನಿಂದ ಡೆಲ್ಲಿಯಲ್ಲಿ ಬಂದಿಸಲ್ಪಟ್ಟಿದ್ದಾಗ, ಮಹಾರಾಜರನ್ನು ಬಂಧೀಖಾನೆಯಲ್ಲಿ ಕಂಡು ತಪ್ಪಿಸಿಕೊಳ್ಳುವ ಉಪಾಯವನ್ನು ಹೇಳಿದ್ದು ಈ ವೇಷದಲ್ಲೇ! ತಾನು ತಪ್ಪಿಸಿಕೊಂಡು ಹೋದರೆ ಡೆಲ್ಲಿಯಲ್ಲಿದ್ದ ತನ್ನ ಸೈನಿಕರೆಲ್ಲರೂ ಪಾಪ ಔರಂಗಜೇಬನ ಬಲೆಗೆ ಬದ್ದಾರೆಂದು ತಿಳಿದು ಈ ಉಪಾಯಕ್ಕೆ ಒಪ್ಪಲಿಲ್ಲ ಕಡೆಗೆ ಮಹಾರಾಜರು ತನ್ನ ಮಗ ಸಂಭಾಜಿಯೊಡನೆ ಡೆಲ್ಲಿಯಿಂದ ತಪ್ಪಿಸಿಕೊಂಡು ಹೋದರು ಈ ಸೀತಾಪತಿಯು ಆಗ ಕುದುರೆ ಸವಾರನಾಗಿದ್ದನು. ಇವರು ತಪ್ಪಿಸಿಕೊಂಡು ಹೋಗುತ್ತಿದ್ದಾಗ ಮೊಗಲರ ಸವಾರರು ಇವರನ್ನು ಕಂಡು ಗುರುತಿಸಿದರು ಆದರೆ ಮಹಾರಾಜರು ತನ್ನನ್ನು ಹಿಡಿಯಲು ಬಂದವನಿಗೆ ತಮ್ಮ ಮುಷ್ಟಿಯಿಂದ ಒಂದೇಟನ್ನು ಕೊಟ್ಟು ಕೆಳಗುರುಳಿಸಿದರು ಉಳಿದಬ್ಬರೂ ಅಲ್ಲೇ ಇದ್ದರು ಆದರೆ ಅವರು ಮುಂದುವರಿಯುವುದರೊಳಗಾಗಿ ಸವಾರರ ಬಾಣಗಳಗಿಡು ಅವರನ್ನು ಕಡಹಿತು ತನ್ನ ಪ್ರಾಣವನ್ನು ಉಳಿಸಿದಕ್ಕಾಗಿ ಮಹಾರಾಜರು ಅವನನ್ನು ಬಹುಕಾಲ ಕೊಂಡಾಡಿ ವೇಷಧಾರಿ ಗೋಸ್ವಾಮಿಯನ್ನು ಕಂಡು ಬಹಳ ಆಶ್ಚರ್ಯಗೊಂಡರು

'ಮಹಾರಾಜಾ ನಾನು ಕದುರೆಗಾರನೂ ಅಲ್ಲ ವೇಷದಾರಿಯೂ ಅಲ್ಲ ನಿಮ್ಮ ಬಾಯಿಂದ ರಘುನಾಥ ಇಷ್ಟು ದಿನಗಳವರೆಗೆ ನಿಮಗೆ [illegible] ಮುಂದೂ ಇರುವನು ಎಂದು ಮಹಾರಾಜರ ಪಾದಗಳಲ್ಲಿ ಬಿದ್ದ ವರರಿತ್ತನು

ಮಹಾರಾಜರು ಸಂತೋಷದಿಂದ ರಘುನಾಥನನ್ನು ಎತ್ತಿ ಅಪ್ಪಿಕೊಂಡು, ರಘುನಾಥ ಅವನನ್ನ ಮುಂದೆ [illegible] ಯೋಜನೆ ಈಗಲೇ ನಾವು [illegible] ದಿನ ವಿಚಾರಗಳಲ್ಲಿ ನೀನು [illegible] ವೆಂದು ತಿಳಿದೆ ಆ ವಿಷಯ ಈಗಲೂ ಮುಳ್ಳಿನಾಗೆ [illegible] ವಯನ್ನು ನಾನು ಹೊತಿರುವ ಮಾಡ ಬೇಕು ಎಂದನು

ಅತ್ತ ತುರಾನ ಕೋಟೆಯಲ್ಲಿ ಸರೋಜಯು, ತನ್ನ ಪ್ರೀಯನನ್ನು ಕಾಣದೆಯೂ, ತಂದೆಯು ಇನ್ನೊಬ್ಬ ವರನನ್ನು ಹುಡುಕುತ್ತಿದ ದುಃಖದಲೂ ಬಹಳ ವ್ಯಸನದಿಂದ ಕೊರಗಿ ಕ್ಷೀಣಳಾಗಿದ್ದಳು ಸರೋಜೆಯು ತನಗೆ ಸದುವ ವೇದನೆಯೆಂದು ಹೇಳುತ್ತಿದ್ದರೂ, ಜನಾರ್ದನನು ತನ್ನ ವರನನ್ನು ಹುಡುಕಿ ಮದುವೆಯ ದಿವಸವನ್ನು ನಿಶ್ಚೈಸಿದ್ದನು ಆದರೆ ಆ ಮದುವೆಯಾಗ ಸರೋಜೆಯು [illegible]ಳು ಅವಳು ಪಕ್ಕದ ಗ್ರಾಮದ ಒಬ್ಬ ಶ್ರೀಮಂತನ ಮನೆಯಲ್ಲಿ ಕೆಲಸಮಾಡುತ್ತಾ ತನ್ನ ದಿನ ಕಳೆಯುತ್ತಿದ್ದಳು ಕಡೆಗೆ ಒಂದಾನೊಂದು ದಿನ ತನ್ನ ರಘುನಾಥನು ತಿರುಗಿ ಶಿವಾಜೀಮಹಾರಾಜರ ಸೈನ್ಯದ ಉದ್ಯೋಗದಲ್ಲಿದ್ದಾನೆಂದು ತಿಳಿದು ಬಹು ಸಂತೋಷಪಟ್ಟಳು

ಒಂದು ದಿನ ಆ ಶ್ರೀಮಂತನ ಚಿಕ್ಕ ಮಗಳನ್ನು ಕರೆದುಕೊಂಡು ತಿರುಗಾಡುತ್ತಿದ್ದಾಗ, ಸೀತಾಪತಿ ಗೋಸ್ವಾಮಿಯು ಅಲ್ಲಿ ಬರುತ್ತಿದ್ದುದನ್ನು ಕಂಡು ಅವನ ಕಾಲು ಹಿಡಿದು ಸದಾ ರಘುನಾಥನನ್ನು ನನಯುತ್ತಿರುವ ಪ್ರತಿಫಲವಾಗಿ ನನಗೆ ಇರಲು ಮನೆಯಿಲ್ಲದಾಗಿದೆ' ಎಂದನು

ರಘುನಾಥನ ಕಣ್ಣುಗಳಲ್ಲಿ ನೀರು ಉಕ್ಕಿತು "ರಘುನಾಥನು ನೃತ ನಿನ್ನಲ್ಲಿಗೆ ಬಂದರೆ ನೀನು ಅವನನ್ನು ಗುರುತಿಸುವಳೆಯೋ ಎಂದು ನನ್ನನ್ನು ಕೇಳಿಕೊಂಡು ಒರುವುದಕ್ಕೆ ರಘುನಾಥನಿಂದಲೇ ಕಳುಹಿಸಲ್ಪಟ್ಟಿರುವೆ ನೆಂದು ಹೇಳುವುದರೊಳಗಾಗಿ ಸರೋಜೆಯು ಅವನನ್ನು ಗಟ್ಟಿಯಾಗಿ ಹಿಡಿದು, ರಘುನಾಥನ ಕೈಯಲ್ಲಿದ್ದ, ಆನಂದದಿಂದ ಮೂರ್ಛೆಹೋದಳು

ರಘುನಾಥನು ಮಹಾರಾಜರಿಂದ ಬಹುಮಾನ ಮ ಯರ್ಯಾದೆಯನ್ನು ಹೊಂದುತ್ತಿದ್ದನು ಜನಾರ್ದನನ ಕಲ್ಲೇದಾರನು ಸತ್ಯಾನಂತರ ಅವನ ಕಾಗದಪತ್ರಗಳಿಂದ ಚಂದ್ರರಾಯನೇ ರಾಜದ್ರೋಹಿಯೆಂದು ತಿಳಿದುಬಂದ ದರಿಂದ ಅವನ ತಲೆಕಡಿಯಲು ಅಪ್ಪಣೆಯಾಯಿತು ಆದರೆ ರಘುನಾಥನು ಅವನ ಪ್ರಾಣವನ್ನು ಉಳಿಸಲು ಬಹುವಾಗಿ ಬೇಡಿಕೊಂಡನು ಆದರೂ ರಘುನಾಥನಿಂದ ಕಾಪಾಡಿಸಿಕೊಳ್ಳದೆ ಆತ್ಮಹತ್ಯಮಾಡಿಕೊಂಡನು

ಅನಂತರ ರಘುನಾಥನಿಗೆ ಸರೋಜಬಾಲೆಯೊಡನೆ ಗಂಡ ಹೆಂಡರಾಗಿ ಬಹುಕಾಲ ಸುಖದಿಂದಿರುವದರ ಸಂಗತಿಯು ತಿಳಿಯುತ್ತದಲ್ಲಿ ಬಾಳಿದರೆಂದು ನಮ್ಮ ವಾಚಕರಿಗೆ ಹೇಳಬೇಕೇ ?

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು.

ಇದೇ ತಾರೀಕು 6ರಲ್ಲು ಮಡಿಕೇರಿಯಲ್ಲಿ ಕಂಪನಿಯ ಆಫೀಸಿನಲ್ಲಿ ಡೈರೆಕ್ಟರುಗಳ ಮೀಟಿಂಗು ನಡೆಯಿತು, ಒಂದು ಡೈರೆಕ್ಟರುಗಳು ಹಾಜರಿದ್ದರು. ಕಂಪನಿಯ ಕಾರ್ಯದರ್ಶಿ ಅಧ್ಯಕ್ಷರು ಅಧ್ಯಕ್ಷರಾಗಿದ್ದರು.

1 ಜೂನ್ ಜುಲೈ ಮತ್ತು ಆಗೋಸ್ತು ತಿಂಗಳುಗಳ ಆದಾಯ ವೆಚ್ಚದ ಲೆಕ್ಕವು ಓದಲಾಯಿತು

2 ಡೈರೆಕ್ಟರುಗಳ ಮೀಟಿಂಗಿನ ಹದಿನೈದು ದಿವಸಗಳಿಗೆ ಮುಂಚಿತವಾಗಿ ಹಿಂದಿನ ತಿಂಗಳ ಅಖೈರು ವರೆಗಿನ ಲೆಕ್ಕದ ಸಾರಾಂಶವನ್ನು ಡೈರೆಕ್ಟರುಗಳಿಗೆ ಕಳುಹಿಸಿಕೊಡಬೇಕೆಂದು, ಮೆ. ಬಿ. ಯಂ ಕಾರ್ಯಪ್ಪನವರು ಸೂಚಿಸಿದಕ್ಕೆ ಎಲ್ಲರೂ ಒಪ್ಪಿದರು

3 1923 24 ಮತ್ತು 1924—25ನೇ ವರ್ಷಗಳ ಲೆಕ್ಕಕ್ಕೆ ರುಜು ಬಿದ್ದಾಗಬೇಕಾದ್ದೂ, ಶೇರುದಾರರ ಕಳೆದ ಜನರಲ್ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಮತ್ತು ರಾ ಬಾ ಕೆ ಅಪ್ಪಯ್ಯನವರು ವೀರಾಜಪೇಟೆಯಲ್ಲಿ ನಡೆಸಿದ ಮೀಟಿಂಗನ್ನು ಟೀಕಿಸಿ ಬರೆದ ಬಿ ಯಂ ಕಾರ್ಯಪ್ಪನವರ ಪತ್ರವು ಓದಲಾಗಿ ಅದರಲ್ಲಿದ್ದ ಆಕ್ಷೇಪಗಳಿಗೆ ಜವಾಬು ಕೊಡಲಾಯಿತು.

4 2ನೇ ಮತ್ತು 3ನೇ ಕಂತಿನ ಶೇರು ಹಣವನ್ನು ಪಾವತಿ ಮಾಡಿರುವ ಶೇರುದಾರರು ಅವರ ಶೇರು ಸರ್ಟಿಫಿಕೇಟುಗಳನ್ನು ತಕ್ಕ ಶರಾ ಬರೆಯಲಿಕ್ಕಾಗಿ ಕಂಪನಿಯ ಆಫೀಸಿಗೆ ಕಳುಹಿಸಿಕೊಡಲು ಅವರಿಗೆ ನೋಟೀಸು ಕೊಡುವಂತೆ ತೀರ್ಮಾನವಾಯಿತು

5 ಕಂಪೆನಿಯ ಏಜೆಂಟುತನಕ್ಕೆ ಮೆ. ಕೆ ಪಿ ಚಿಣ್ಣಪ್ಪನವರ ರಾಜಿನಾಮೆಯು ಓದಲಾಯಿತು ಅದು ಒಪ್ಪಲಾಯಿತು ಮೆ ಚಿಣ್ಣಪ್ಪನವರು 1922 23, 1923 24 ಮತ್ತು 1924 25ನೇ ವರ್ಷಗಳಲ್ಲಿ ಬಾಕಿಯಾಗಿರುವ ಚಂದಾಹಣವನ್ನು ವಸೂಲು ಮಾಡುವರಾಗಿ ನಿರೀಕ್ಷಿಸಲಾಗಿದೆ

6 ಕಂಪನಿಯ ಆಡಿಟರವರಿಗೆ 1923-24 ಮತ್ತು 1924 25ನೇ ವರ್ಷಗಳಿಗೆ ರೂ 225 ಫೀಸು ಕೊಡುವಂತೆ ತೀರ್ಮಾನವಾಯಿತು

ಕೆ. ಅಪ್ಪಯ್ಯ,
(ಕಾರ್ಯಾಧ್ಯಕ್ಷರು)

ಗಣಪತಿ ವಾಚನಾಲಯ ಮತ್ತು ಪುಸ್ತಕ ಭಂಡಾರದ ವಿಷಯ
ದೇಶಬಾಂಧವರಲ್ಲಿ ವಿನಂತಿ.

(1) ಇದರ ಉದ್ದೇಶವು ವೀರಾಜಪೇಟೆಯಲ್ಲಿ ಒಂದು ದೊಡ್ಡ ಪುಸ್ತಕಭಂಡಾರವನ್ನೂ ದೇಶದ ಮುಖ್ಯ ಸ್ಥಳಗಳಲ್ಲೂ ಮತ್ತು ಗ್ರಾಮಗಳಲ್ಲೂ ಸಣ್ಣ ಸಣ್ಣ ಪುಸ್ತಕಭಂಡಾರವನ್ನೂ ಸ್ಥಾಪಿಸುವುದೇ ಆಗಿದೆ

(2) ಈ ಭಂಡಾರವು 1860ನೆ ಇಸವಿ ಬುಕ್ ರಿಜಿಸ್ಟ್ರೇಷನ್ ಆಕ್ಟಿಗನುಗುಣವಾಗಿ ರಿಜಿಸ್ಟರ್ ಮಾಡಲ್ಪಡುತ್ತೆ

(3) ಪುಸ್ತಕಭಂಡಾರವು ತೆರೆಯಲ್ಪಟ್ಟ ಕೂಡಲೇ, ಸರಕಾರದ ಸಹಾಯವನ್ನು ಕೋರಲಾಗುತ್ತೆ

(4) ಈ ಭಂಡಾರದ ಕೆಲಸದಲ್ಲಿ, ಯಾವ ಪಂಗಡಬೇಧವೂ ರಾಜಕೀಯ ಭಿನ್ನಾಭಿಪ್ರಾಯಗಳೂ ಇರುವುದಿಲ್ಲ

(5) ಜನಸಮುದಾಯದಲ್ಲಿ ಕೃಷಿ, ಕೈಗಾರಿಕೆ, ವಿದ್ಯಾಭಿವೃದ್ಧಿ, ಸಹಕಾರ, ಸ್ವಸಹಾಯ, ಸ್ವಾಭಿಮಾನ, ಮತ್ತು ದೇಶಭಕ್ತಿಯನ್ನುಂಟುಮಾಡುವುದೇ ಈ ಪುಸ್ತಕಭಂಡಾರದ ಧ್ಯೇಯವಾಗಿತ್ತದೆ

ದಯವಿಟ್ಟು ದೇಶಬಾಂಧವರುಗಳು ತಮ್ಮ ಉದಾರತ್ವವನ್ನು ಇದಕ್ಕೆ ಧನಸಹಾಯಮಾಡುವುದರಲ್ಲಿ ತೋರಿಸಬೇಕಾಗಿ ಪ್ರಾರ್ಥನೆ

ಹೆಚ್ಚಿನ ವಿಷಯವನ್ನು ತಿಳಿಯಬೇಕೆನ್ನುವವರೂ, ಧನಸಹಾಯ ಮಾಡಲಿಚ್ಛಿಸುವವರೂ ಈ ಕೆಳಗಿನವರಿಗೆ ದಯವಿಟ್ಟು ಬರೆಯಬೇಕಾಗಿ ಕೋರಿಕೆ

ವೀರಾಜಪೇಟೆ, ಕೆ. ಪಿ. ಚಿಣ್ಣಪ್ಪ,
ದಕ್ಷಿಣ ಕೊಡಗು, ಪ್ರಮೋಟರ್
1

ಚಂದಾದಾರರಲ್ಲಿ ವಿನಂತಿ.

ಮಳೆಗಾಲವಾದ ಜೂನ್ ಜುಲಾಯಿ ಮತ್ತು ಆಗೋಸ್ತು ತಿಂಗಳುಗಳಲ್ಲಿ ನಾಟಿ ಕೆಲಸನಾದ್ದರಿಂದ ಕೆಲಸ ಬಿಟ್ಟು ಹೋಗಿ ಹಣ ವಿನಾವಸೂಲು ಮಾಡುವರೆ ತೊಂದರೆಯಾಗಿದ್ದು ಈಗ ಕೆಲಸ ತೀರದ ಕಾರಣ ನಮಿಲೆ ಚಂದಾದಾರರು ಚಂದಾಹಣ ಪಾವತಿಮಾಡಬೇಕಾಗಿಯೂ, ಅಲ್ಲದೆ ಪತ್ರಿಕೆ ಬೇಕೆಂದು ಆರ್ಡರ್ ಕೊಟ್ಟವರು ಒಂದು ತಿಂಗಳ ವಾಯಿದೆ ಒಳಗೆ ತಮ್ಮ ಹಣವನ್ನು ಕಳಿಸಬೇಕಾಗಿಯೂ ಕೋರುತ್ತೇವೆ ವಿ ಪಿ ಕಳುಹಿಸುವುದರಿಂದ ಚಂದಾದಾರರಿಗೆ ನಷ್ಟವಾಗುವ ಕಾರಣ ಅವರು ವಿ ಪಿ ಗೆ ಕಾಯದೆ ಹಣವನ್ನು ನಮ್ಮ ಏಜಂಟರುಗಳಿಗೆ ಕೊಡುವುದಾಗಲಿ ನೇರ ಮೇನೇಜರವರಿಗೆ (ಮಡಿಕೇರಿಗೆ) ಮನಿಯಾರ್ಡರ್ ಮೂಲಕ ಕಳುಹಿಸುವುದಾಗಲಿ ಉತ್ತಮವಾಗಿದೆ

" ಮೇನೇಜರು "

ವರ್ತಮಾನ ಸಂಗ್ರಹ.
ಸ್ವದೇಶ.

ಪೊನ್ನಂಪೇಟೆಯಲ್ಲಿ ಅಸಿಸ್ಟೆಂಟ್ ಪಾರುಪತ್ಯಗಾರರನ್ನು ಇಡುವಂತೆ ಮಂಜೂರಾಗಿದೆ

ರಿಟಯರ್ಡ್ ಸಬ್ ಅಸಿಸ್ಟೆಂಟ್ ಸರ್ಜನ್ ಮೆ ದೇವಣೀರ ಕಂಗಾಪ್ಪನವರು ತಾ 10ರಲ್ಲು ಶಿವಾಧೀನರಾದರು

ಮದ್ರಾಸಿನ ವಿ ಎನ್ ನಾಟ್ ಕಂಪನಿಯವರ ನಾರ್ಮಲ್ ಮಾರಾಟದ ಸಾಮಾನುಗಳ ಪಟ್ಟಿಯ ಸಸ್ತಿಮೆಂಬನ್ನು ಈ ಸಂಚಿಕೆಯೊಂದಿಗೆ ಕಳುಹಿಸಿರುತ್ತೇವೆ

ಸಾಪ್ತಾಕ್ಕಿನಲ್ಲಿ ಒಂದು ಅಂಗಡಿ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿಯ ವಿದ್ಯಾರ್ಥಿಗಳಿಗೆ ಉಳಕೊಳ್ಳಲು ಒಂದು ಬೋರ್ಡಿಂಗನ್ನು ತಾ 7ರಲ್ಲಿ ತೆರೆದಿರುವರು.

ವೀರಾಜಪೇಟೆಯಲ್ಲಿ ಕೈಗಾರಿಕ ಶಾಲೆಯ ಈ ತಾ. 10ರಲ್ಲು ತೆಯಲ್ಪಟ್ಟಿದೆಯೆಂದೂ ತತ್ಕಾಲ ಮರದ ಕೆಲಸ ಮಾತ್ರ ಪ್ರಾರಂಭಿಸಿರುವರಾಗಿಯೂ ತಿಳಿಯುತ್ತೇವೆ

Supplement to this issue of "KODAGU."

Direct Importers of all kinds of Wrist Watches, ordinary and octagonal shape Watches, Radium dial fancy shaped Wrist Watches &c &c

V. S. WATCH & Co.,

POST BOX No. 105, MADRAS, E.

Fancy Dial Wrist Watches a Speciality. Nickel Watches in Radium Dial and other up-to-date Fancy Wrist Watches.

Our Wrist Watches priced very low strong in movement all are guaranteed.

Every Wrist Watch is supplied with fine leather strap, English made & is handy

Persons desiring to order, may give only the numbers marked against each Wrist Watch

All Wrist Watches are tested before despatch ing and guaranteed for three years

Every Wrist Watch is packed soundly and carefully and to save unnecessary breakage in transit

All Wrist Watches are of Swiss make and are beautiful to wear and to carry. A trial will convince.

The world's best record TIME-KEEPER.

No. 362

Our rolled gold silver and nickel wrist watches are strongly recommended. Very charming to look at. Fitted with the best movement of higher grade. Guaranteed for three years.

Nickel watch	Rs	6 0
Electro rolled-gold plated		9 0
Silver		10 0

Fashionable wrist watch supplied with fine wrist chain



No. 363.

The up-to-date fancy shaped ladies wrist watch manufactured with best materials and guaranteed for its durability excellence and quality. Highly beautiful.

Nickel watch	Rs.	7 0
Electro rolled-gold plated		8 0

Fancy shaped handy wrist watch supplied with fine wristlet.



No 364.

A new wrist watch recently imported from Switzerland with the latest up-to-date mechanism gives accurate time and guaranteed. Supplied with fine wristlet.

Nickel watch	Rs.	7 8
Electro rolled gold plated		8 8

An up-to-date fancy cut wrist watch set with roman figures

Fresh consignment

No. 365.

A really sound movement and set with attractive Roman figures and second hand. The best ornament for wrist and largely used by the student population

Nickel watch	Rs	7 8
Electro rolled gold plated		9 0

Newly-made handy wrist watches with improved and sound mechanism.



No. 366

Prepared specially to suit the taste of one and all and with fine and durable mechanism artistically prepared and strong for wearing

Nickel watch	Rs	8 8
Electro rolled gold plated		10 0

High-class Radium dial Wrist Watch with Roman figures.

No 367.

Can be seen even in dark nights. Well fitted with best movement and strong to use. Used by one and all.

Nickel case	Rs.	11 0
Electro rolled gold plated		12 8

Fashionable wrist watch Lady's size. Reliable movement Guaranteed.

No 368

Handy to wear and looks beautiful. Gives punctual time, strong movement

Nickel case	Rs	10 8
Electro rolled gold plated		12 0

'Student's own' wrist watch Guaranteed for three years

No 369.

The most up-to-date Student's friend in need and gives punctual time

Nickel case	Rs	8 0
Electro rolled-gold plated		10 0

"OVAL" shaped ornamental wrist watch.

No. 370.

Fitted with strong movement and guaranteed to work a long time.

Nickel case	Rs.	8 12
Electro rolled gold plated		10 0

"OCTAGONAL" New-style Wrist Watch



No. 371.

The most up-to-date handy ornament to wear. Gives perfect time

Nickel case	Rs.	8 0
Electro rolled gold plated		10 0

Radio light wrist watch

No. 372

Fitted with the best mechanism and guaranteed to work and keeps perfect time for a long time with Radium dial

Nickel case	Rs	7 8
Electro rolled gold		9 0

Fancy wrist watch with expanding wristlet

No 373

One of the latest style of watches recieved from Switzerland. Gives perfect time and handy to wear

Nickel case	Rs	8 8
Electro rolled gold plated		10 8

Our "Cheap" wrist watch.

No. 374

This wrist watch is so priced as to be within the reach of rich and poor alike. A perfect time-keeper.

Nickel case	Rs	6 0
Electro rolled gold		7 0

"Ladies Own" Wrist Watch

No. 375.

Specially suited to the taste of Ladies. Beautiful to look at and strong in movement.

Nickel case	Rs	8 12
Electro rolled gold		10 0

'Student's Special wrist watch.

No. 376

Fancy shaped with strong movement and useful even to hard wear. Perfect time-keeper

Nickel case	Rs.	6 0
Electro rolled-gold		11 0

"King's Own' wrist watch



No. 377

Beautifully shaped and strong to wear. Guaranteed. Fitted with strong movement.

Nickel case	Rs.	9 0
Electro rolled-gold plated		10 8

"Our-Own" wrist watch.

No 378.

Strong in movement and with fancy dial. Excels in quality, finish and in durability. One of our best watches.

Nickel case	Rs.	7 12
Electro rolled-gold plated		9 0

"Up-to-date" fancy Wrist Watch



No 379.

Line movement and strong mechanism. The cheapest and best wrist watch.

Nickel case	Rs.	5 8
Electro rolled-gold		8 12

'New-Style' wrist watch.

No. 380.

Beautiful faced and handy wrist watch. Strong in mechanism. Try.

Nickel case	Rs.	7 14
Electro rolled-gold		9 4

"Ladies Extra" wrist watch.

No. 381.

Our special noteworthy make. Gives correct time. Used by all Ladies

Nickel case	Rs	8 8
Electro rolled-gold		9 8

When ordering, please quote the number marked against each watch.

WHOLE-SALE IMPORTERS } **V. S. WATCH & Co.** POST BOX No. 105, MADRAS.

V Nayak & Co., Printers, 194, Wall Tax Road, Madras

Supplement to this issue !
Lose not this opportunity !
OUR ANNUAL SUPPLEMENTARY SALE LIST
Offered at greatly reduced prices, to give a chance for our patronizing public. The prices noted are only a supplement to our catalogue. Sales and cut prices are not a feature of our business as our prices are at all times the lowest possible. Reduced rates are applicable only to the articles specially mentioned. No claim for concessions of a similar nature upon any other articles can be entertained. The prices reduced are made as we have excess stock of the line mentioned. Avail of this chance and order at once to avoid disappointment.
OUR RECENT IMPORTS IN OFFICE CLOCKS.
THE Modern : : Regulator
A new invention and is guaranteed. The best Office Clock made with wall nut case. Prepared with best mechanism. Gives correct time.
Price Rs. 7
THE SECOND OF THE SERIES OF OUR OFFICE CLOCKS
Purely made in wall nut case. The most economical office clock in use in all public offices
Price Rs 5
ALL OUR OFFICE CLOCKS ARE GUARANTEED FOR FIVE YEARS.
BEST GERMAN ALARM TIME-PIECES.
Note :—OUR REDUCED PRICE.
World renowned German
"B" TIME PIECE
Rs. 2-8.
BOOK NOW
Only A Few in Stock !!
Single bell alarm in Roman figures.
Price Rs. 5
Double bell alarm in Arabic figures
Price Rs. 6.
Fancy time piece with single bell alarm with moving eyes.
Price Rs. 5
Fancy pocket watches with Roman figures
Price Rs. 5.
Gent's Lever pocket watches with second hand
Price Rs. 3-8.
Superior German Carriage clocks Guaranteed
Germany's Super-production
Price with Hours and half hours striking Rs 12
With music and alarm Rs 12-8.
Plain with hours and halves Rs 10
Our New Model Rocking Clock.
A marvel of mechanical ingenuity
An ornament to any perfectly furnished Hall.
Charming to look at ! Perfect in Timekeeping !!
The doll swings to and fro in quite a realistic manner
Size 12" x 5" x 4"
Price Rs. 15 only
Only a limited stock on hand
Order early to avoid disappointment.
FANCY CIGAR LIGHTER.
Ready to burn at all times.
No need of wick or oil. The instant the finger is placed on the wheel, the light is flashed out. Can be safely carried.
Price of one Re. 1—4—0
One dozen at a time Rs. 12.
Magnet stones for the Cigar Lighter 12—1-8-0.
A CLOCK FOR Rs. 3
DO NOT HESITATE—
BUT ORDER NOW
For ONE CLOCK of our
"TIC-TAC"
(REGD.) WALL CLOCK
Rupees Three Only.
P. S. Orders for Rupees Twenty and above should accompany an advance of 25% of the order. All orders should be clearly written with clear names of village and Post Office
Write to: V. S. WATCH & COMPANY. Post Box 105. MADRAS

ಪೊಲೀಸು ಸಬ್ ಇನ್‌ಸ್ಪೆಕ್ಟರಾದ ಮ. ಕೋದಂಡ ಮುದ್ದಪ್ಪನವರು ಒರುವ ಪಅಜ– 15 ರ ವರೆಗೆ ಮೆಡಿಕಲ್ ರಜೆಯಲ್ಲಿರುವರು.

ಶ್ರೀ ಕಾವೇರಿ ಮೋಟಾರು ಬಸ್ಸು ಸರ್ವೀಸಿನವರು ಮಡಿಕೇರಿಯಿಂದ ಪೊನ್ನಂಪೇಟೆಗಾಗಿ ವೀರಾಜಪೇಟೆಗೆ ಬಸ್ಸು ನಡಿಸಲು ತಾ 10ರಿಂದ ಪ್ರಾರಂಭಿಸಿರುವರು

ಮ. ಪಟ್ಟಮಾಡ ಮಂದಪ್ಪನವರು ಶನಿವಾರಸಂತೆ ಪಾರುಪತ್ಯಗಾರರಾಗಿಯೂ ಮ ಮಾಡರ ತಿಮ್ಮಯ್ಯನವರು ದಕ್ಷಿಣಕೊಡಗಿನ ಅಬ್ಕಾರಿ ಸಬ್ ಇನ್‌ಸ್ಪೆಕ್ಟರಾಗಿಯೂ ನೇಮಿಸಲ್ಪಟ್ಟಿರುವರು

ಮ ಕೊಳ್ಳಿಮಾಡ ಕರುಂಬಯ್ಯನವರು ನ ಮೂ... ರಡು ತಿಂಗಳ ಹಿಂದೆ ಜಾಮಿಗೆ ಒಡ್ಡದ್ದು ಅತ ಪತ ಮಡಿಕೇರಿ ಕ್ಷಲಿಕ್ಕೆಂದು ಪೊಲೀಸಿನವರು ಅವರ ಮೇಲೆ ಕೇಸು ನಡಿಸಿದ್ದರು. ಅದರಲ್ಲಿ ಅವರಿಗೆ ಖುಲಾಸ ಆಗಿದೆ

ಜೈಲದಾದ ಮ ಮುಕ್ಕಾಟಿರ ಉತ್ತಯ್ಯನವರು ಗಡಾಗದಲ್ಲಿ ದರೋಗರ ಜಾಮೀನ ಕೆಗೆದ ಕೊಂಡಿರುವವರಿಂದ ಮ ಎ ಸುಬ್ಬಣ್ಣನವರು ಉತ್ತರ ಕ... ಅಬ್ಕಾರಿ ಸಬ್ ಇನ್ಸ್‌ಪೆಕ್ಟರಾಗಿ ತಮ್ಮ ಮೊದಲಿನ ಕೆಲಸಕ್ಕೆ ಹಿಂತಿರುಗುವರು.

ಸೋಮವಾರಪೇಟೆ ಕಡೆಯಲ್ಲು ಹೊಸ್ಕೇರಿ ದನಗಳನ್ನು ... ತಿನ್ನುತಿದ್ದ ಎರಡು ಹುಲಿಗಳಲ್ಲಿ ಒಂದನ್ನು ಆ ಗ್ರಾಮದ ಪಟೇಲ ಮ ಎನ್ ಸುಬ್ಬಯ್ಯನವರು ಇಸ್ಸುಂದರ್ ... ಗೇರಿ ಗ್ರಾಮದ ಜೇನ್ನದಲ್ಲಿ ... ಕಳೆದ ಕೆಲವು ದಿನಗಳಲ್ಲಿ ಗುಂಡು ಹೊಡೆದು ಕೊಂದರಂತೆ

ಸಿದ್ದಾಪುರ ನಾಡ ... ಗ್ರಾಮದ ಗೌಡರ ... ರಾಮಪ್ಪನವರ ಮನೆಯಲ್ಲಿ ... ಜಾತಿನ ಒಂದು ಹೆಂಟೆಗೆ ... ಒಂದು ಕಾಲು ... ಎರಡು ಕಾಲುಗಳೂ ... ಗಳಿವೆಯೆಂದು ಅಲ್ಲಿಯ ಒಬ್ಬರು ಬರೆದಿರುತ್ತಾರೆ

ಕುಟ್ಟಗ್ರಾಮದಲ್ಲಿ ಅನೇಕ ವರ್ಷಗಳಿಂದಲೂ ... ಮಾಡಿದ್ದ ಕೈಲ್ ಮುಹೂರ್ತ ಹಬ್ಬವನ್ನು ಅಲ್ಲಿರುವ ಪಂಗಾಳಿ ಕೊಡಗರು ಈ ವರ್ಷ ಬರು ... ದಿಂದ ನಡಸಿದರೆಂದೂ, ಇನ್ನು ಮುಂದಕ್ಕೆ ಅಲ್ಲಿರುವ ... ಕೊಡಗರಲ್ಲರೂ ಸೇರಿ ಯಾವ ಅನ್ಯಂಕರವೂ ಇಲ್ಲದೆ ನಡೆಸ ... ಬರೆದಿದ್ದಾರೆ ... ಒಂದು ವಾರ್ತೆ ಬಂದಿದೆ

ಈಗಿನ ಏರ್ಪಾಡಿನ ಪ್ರಕಾರ ... ಕೊಡಗಿಗೆ ಅಕ್ಟೋಬರಿನ ಎರಡನೇ ವಾರದಲ್ಲಿ ಬಂದು ಇಲ್ಲ ನವಂಬರಿನ ಎರಡನೇ ವಾರದ ವರೆಗೆ ಇರುವರು ... ಜಾಗವನ್ನೂ ಸೋಮವಾರಪೇಟೆ ... ಶ್ರೀಮಂಗಲ ಮತ್ತು ಪೊನ್ನಂಪೇಟೆ ಕ್ಯಾಂಪುಗಳಿಗೆ ಹೋಗಿ ... ಸ್ಥಳಗಳನ್ನು ನೋಡುವ ಸಂಭವವುಂಟೆಂದೂ ... ತಿಳಿಸಿರುತ್ತಾರೆ

ಕೊಡಗು ಖಜಾನೆಯಿಂದ ತಾ 8 ರಲ್ಲು ಹೊರಗೆ ತೆಗೆದ ಒಂದು ಜೇಲ (ಕೈಲೆ) ದಲ್ಲಿ ರೂ 175 ಕಡಿಮೆ ಸಂಗ್ರಹವಿತ್ತೆಂತೆ ಮರುದಿನ ಕಮಿಷನರವರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಹೋಗಿ ... ಜೇಲುಗಳನ್ನು ಸಾಯಂಕಾಲ 7 ಗಂಟೆಯವರೆಗೆ ಅವಸರದಿಂದ ನೋಡಿದಲ್ಲಿ ಇನ್ನೊಂದರ ಜೇಲದಲ್ಲಿ 10 ರೂ ... ಅದರಲ್ಲಿ ರೂ 175 ... ಕಂಡು ಬಂದಿದೆ ಖಜಾನೆಯಲ್ಲಿ ಒಟ್ಟು ರೂ 4..0 ಕಾಣದೆ ಆಗಿವೆಯೆಂದು ತಿಳಿಯಬರುತ್ತದೆ

ಬಾಸಲ್ ಮಿಶನರಿಗಳಾದ ... ಪೂನಾನವರಲ್ಲಿದ್ದ ರೆವರೆಂಡ್ ಎ ಮಿಂಚ್ ಮತ್ತು ತಲಚೇರಿಯಲ್ಲಿದ್ದ ರೆವರೆಂಡ್ ಜಿ ಲಿಪ್ಸ್ ಎಂಬ ಜರ್ಮನ್ ಮಿಶನರಿಗಳು ಒರ ... ತಿಂಗಳ ನಂತರ ... ಒರುವಲಿವರೆಂದು ಹೇಳಿದೆಯೆಂದೂ ಹೀಗೆ ... ಬಾಸೆಲ್ ಮಿಶನ್ ... ಪುನಃ ... ಭಾವಿದಯೆಂದೂ ... ನಲ್ಲಿಯ ಸಗಳಗೂ ಸದರಿ ಜರ್ಮನ್ ಮಿಶನರಿ ... ಮಾಡಿ ... ತಾ 3 ರಲ್ಲು ... ನ್ಯಾಸ ... ವಾಲ್ಟರ್ ದೊರೆಗಳು ಮಂಗಳೂರಿನ ಒಬ್ಬರ ಶಾಂತಿ ದೇವಾಲಯದಲ್ಲಿ ಮಾಡಿದ ಭಾಷಣದಲ್ಲಿ ಹೇಳಿರುತ್ತಾರೆಂದೂ ಹೀಗಿರುವುದರಿಂದ ಕೊಡಗಿನ ಕ್ರೈಸ್ತರ ಕ ... ನಿರೀಕ್ಷಣೆಯು ಕೃಗೂಡುವ ಸಂಭವ ತೋರುತ್ತದೆಂದೂ ಒಂದು ವಾರ್ತೆ

ಹಿಂದೂದೇಶ.

ಈಗ ... ಜಾರಾ ಲಜಪತರಾಯರ ಕಾಯಿಲೆಯು ವಾಸಿಯಾಗುತ್ತಾ ಇದೆಯಾಗಿ ವರ್ತಮಾನ

ಮಹಾತ್ಮಗಾಂಧಿಯವರು ಬಂಗಾಳ ಪ್ರವಾಸವನ್ನು ಮುಗಿಸಿ ಬೊಂಬಾಯಿಗೆ ಹೋಗಿ ಅಲ್ಲಿಂದ ಸಬರಮತಿ ಆಶ್ರಮಕ್ಕೆ ಬಂದು ಅಲ್ಲಿ ಕೆಲವು ದಿವಸಗಳಿದ್ದರು.

ವಾಲ್ಟೇರ್ ದ ತ್ತು ವಿಶಾಖಪಟ್ಟಣಗಳಲ್ಲಿ ತಾರೀಖು 4ರಲ್ಲಿ ಬೆಳಿಗ್ಗೆ 10 ಗಂಟೆಗೆ ಒಂದು ಸಿಡಿಲಿನ ... ಭೂಕಂಪ ... ವರ್ತಮಾನ

ಮಿಸ್ಟರ್ ಶಂಕ್ಲಾನರ ಗಾಂಬಟಾ ಪಟ್ಟದ ನಿವಾಸಿಗಳು ಅವರ ಮೇಲೆ ಸರ್ಕಾರದವರು ... ಮನೆ ಕಂದಾಯಕ್ಕೆ ವಿರೋಧಿಸಿ ಸತ್ಯಾಗ್ರಹವನ್ನು ಕೈಕೊಂಡಿರುವರು.

ಬೊಂಬಾಯಿಯ ಬಾವ್ನಗರ್ ಕೊಲಿಕೇಸಿನ ಅಪ್ಪೀಲನ್ನು ಪ್ರಿವಿ ಕೌನ್ಸಿಲಿನವರು ಅಂಗೀಕರಿಸಿರುವರೆಂತಲೂ, ಆ ವಿಚಾರವು ಅಕ್ಟೋಬರದಲ್ಲಿ ನಡೆಯುವುದೆಂತಲೂ ಸುದ್ದಿ

ಬೊಂಬಾಯಿಯ ಒಬ್ಬ ಭಾಟ್ಯ ಗೃಹಸ್ಥರು 1000 ರೂ ಮತ್ತು ಒಬ್ಬ ಪಾರ್ಸಿಯವರು ರೂ 25000 ನ್ನು ಅಖಿಲಭಾರತ ದಾಸ ಸ್ಮಾರಕ ಫಂಡಿಗೆ ಕೊಟ್ಟಿರುವರು

ಕಾಂಗ್ರೆಸು ಮೆಂಬರ ತನದ ಫೀಸ ತಿಂಗಳಿಗೆ 2000 ಗ ... ಇರುವುದನ್ನು ವರ್ಷಕ್ಕೆ 4 ಆಣೆ ವರೆಗೆ ಬೇಗನೆ ಬದಲಾಯಿಸುವರೆಂದು ಮ. ಸೆನ್‌ಗುಪ್ತರವರು ಬಾಗವ ... ಲ್ಲಿ ಕೊಟ್ಟ ಭಾಷಣದಲ್ಲಿ ಸೂಚಿಸಿರುವರು

ಸ್ವರಾಜ್ಯ ಪಾರ್ಟಿಯವರು ಡಾಕ್ಟರ್ ಒನೆಟರವರ ... ಒಪ್ಪಲಿಲ್ಲವೆಂದೂ ... ದಾಸರವರು ಅದಕ್ಕೆ ... ಮಾಡಿರಲ್ಲವೆಂದು ... ಮೋತಿಲಾಲ್ ನೆಹರೂ ... ರ ... ಇಂಗ್ಲೆಂಡಿನಲ್ಲಿರುವ ... ಟ ... ತಿಳಿಯುವುದೆಂತೆ

... ಗೆ ಇಂಡಿಯಾ ... ಇಂಡಿಯಾದ ಸ್ವತಂತ್ರ್ಯ ... ಪ್ರಸ್ತುತದಲ್ಲಿ ಸ್ವರಾಜ್ಯ ... ಕ್ಕೆ ತೀರದು ... ಲೇಬರ್ ಪಾರ್ಟಿ ಯವರು ... ಮತ್ತು ... ಸ್ವರಾಜ್ಯ ಪಾರ್ಟಿಗೆ ಸಂದೇಶ ... ರುವರು

ಇಂಗ್ಲೆಂಡಿನ ... ಮಹಾತ್ಮಗಾಂಧಿ ... ಹಿಂದೂ ಸ್ತ್ರೀಯರ ... ಗೆ ... ಪೂಜ್ಯರ ... ದ ... ಯಿಯ ... ಕೊಟ್ಟರು.

ಅಮೇರಿಕದಲ್ಲಿರುವ ... ಪವಿತ್ರ ಸ್ಥಳವಾದ ... ಪುನಃ ... ಇಂಡಿಯಾದಲ್ಲಿ ... ಜೇಲ ... ವರ್ತಮಾನ ... ನಾರಾಯಣ ... ವರೆಗೆ ... ಕೆಲವು ... ಪ್ರಕಟಿಸಿರುವರು

ವಿದೇಶ.

ಆಮೆರಿಕಾದ ... ಮೇಲೆ ... ವೈಸರಾಯರಾಗಿ ... ಪತ್ರಿಕೆಯು ... ದೆ

ಸ್ಪೈನಿನ ... ಸರ್ಕಾರದವರು ... 26 ರಲ್ಲು ... ಮುಕ್ಲಿಯವರು ...

ಚೀನ ... ಯೂರೋಪಿಯನ್ ಸರಕಾರದವರು ... ಹಾಂಕಾಂಗ್ ... ಪುರೋಹಿತರು ... ಅವರು ... ಅದನ್ನು ತೆಗೆದ ...

... ಸರಕಾರದ ... 7 ರಲ್ಲು ಕೂಲಿ ... ವೇಳೆ ದೊಡ್ಡ ... ಪೋಲೀಸರು ... ಗುಂಡಿನ ಮೇಲೆ ಗುಂಡು ಹಾರಿಸಿದರು

ಮೊರಾಕೋದಲ್ಲಿ ... ಸ್ಪೈನ್ ... 60 ಸಾವಿರ ... ಉಪಯೋಗಿಸುತ್ತಿರುವರೆಂದೂ, ಯೂರೋಪಿನ ಈಗಿನ ಶತ್ರುಗಳು ಕೆಲವು ವರ್ಷಗಳ ಹಿಂದಿನವರಂತೆ ... ಯುದ್ಧ ಸಾಮಗ್ರಿಗಳಿಲ್ಲದವರಾಗಿಲ್ಲವೆಂತಲೂ, ಎಲ್ಲಾ ... ಸನ್ನದ್ಧರಾಗಿರುವರಂತಲೂ ... ಪ್ರಸಿದ್ಧಿಯ ... ಕಾಲದ ಜನಾಂಗಗಳಿಗೆ ... ತಿಳಿಯದ ... ಹೇಳುತ್ತಾರೆ

FOR SALE

One 4½ H P Hornsby Akroyd oil Engine in good order

For Particulars apply to—

W. G L. PARSONS,
DALQUARREN Estate,
Chettalli P O Coorg

ಪತ್ರವ್ಯವಹಾರ.

ಒಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ ಸಂ

ಬಂದಿಗಳನ್ನು ದೊಡ್ಡಿಗೆ ಸೇರಿಸುವುದು

ಸಂಪಾದಕ ಮಹಾಶಯರೆ

ಅನೇಕ ತಿಂಗಳ ಹಿಂದೆ ತಮ್ಮ ಪತ್ರಿಕೆಯಲ್ಲಿ ಮಡಿಕೇರಿ ಟವ್ನಿನಲ್ಲಿ ಹಂದಿಗಳು ... ಬೀದಿಗಳಲ್ಲಿ ... ತಿರುಗಿದರೆ ಗುಂಡು ಹೊಡೆಯಬಹುದೆಂತಲೂ, ಆ ಮೇಲೆ ತಿರುಗಿದರೆ ಗುಂಡು ಹೊಡೆಯುವುದಲ್ಲದೆ ದಂಡವೂ ... ಆದಂತರ ವೀರಾಜಪೇಟೆ ಟವ್ನಿನಲ್ಲಿ ಹಂದಿಗಳಿಂದೇ ... ಗಳನ್ನು ನಾಶಮಾಡುವ ... ಹಾಗೆ ಬೀದಿಗಳಲ್ಲಿ ತಿರುಗುವ ... ಗಳನ್ನು ಹಿಡಿಯಲು ಸಾಧ್ಯವಿರುವುದರಿಂದ ದೊಡ್ಡಿಗೆ ಸೇರಿಸಬೇಕಲ್ಲದೆ ಗುಂಡು ಹೊಡೆಯುವುದು ... ಕಾರಣಗಳನ್ನು ತೋರಿಸಿದ್ದನ್ನು ಇದೇ ಪತ್ರಿಕೆಯು ಒಂದಾನೊಂದು ಸಂಚಿಕೆಯ ಅಗ್ರಲೇಖನದಲ್ಲಿ ಸೂಚಿಸಿದೆನು

(ಇದರ ಬಾಕಿ ಭಾಗವು ಕಳೆದ ವಾರ 6ನೇ ಪುಟದ 1ನೇ ಕಾಲಮಿನಲ್ಲಿ ಪ್ರಕಟವಾಗಿತ್ತು ಈ ಭಾಗವು ... ತಪ್ಪಿನಿಂದ ಕಳೆದವಾರ ಬಿಟ್ಟು ಹೋಗಿದ್ದಿತು ಸಂ)

ಆರ್ಯ ಬಾಂಧವರೇ,

ಇದಕ್ಕೆ ... ಸಹೋದರರು 'ಪ್ರಯಾಣ' ... ಅವರ ... ತಕ್ಕ ಸನ್ನಿವೇಶಗಳ ... ಪ್ರಾರ್ಥಿಸಿಕೊಂಡಿರುವರು ಆದರೆ ಪ್ರಯಾಣಿಕರ ... ಹಿಂದಿನ ... ಸದಲ್ಲಿ ... ತನ್ನ ... ಹೀಗೆ ಅವರಿಗೆ ... ಹೀಗೆ ಹೋಗಿರುವುದು ಈ ... ದೊರಕುವಂತೆ ... ಕೊಡಗು ಪತ್ರಿಕೆಯಲ್ಲಿ ಪ್ರಕಟವಾಗ್ತಿ ... ಸಂತೋಷವೆನಿಸುವುದು ...

ಈಗ ಕೆಲವು ದಿವಸಕ್ಕೆ ಹಿಂದೆ ನಾನು ವೀರಾಜಪೇಟೆಗೆ ಹೋಗಬೇಕಾಗಿ ... ನಾನು ... ಮೋಟಾರ ... ಒಂದು ಟಿಕೇಟನ್ನು ಪಡೆದೆನು ... ಸಿದ್ದಾಪುರದಿಂದ ... ಟಿಕೆಟ್ ... ಹಣ ಕೊಟ್ಟೆನು ... ಇನ್ನು ... ಕೊಡಬೇಕೆಂದು ಕೇಳಿದನು ಅವ್ವರಲ್ಲಿ

ಪ್ರ— ಸಿದ್ದಾಪುರಕ್ಕೆ ಇಲ್ಲಿಂದ ಎಷ್ಟು ಚಾರ್ಜ್?

ಕ— ಒಂದು ರೂಪಾಯಿ ಎರಡಾಣೆ

ಪ್ರ— ಅಲ್ಲಿಂದ ... ಈಗ ಅದಕ್ಕಿಂತ ಹೆಚ್ಚು ... ?

ಕ— 'ಹೌದು, ಒಬ್ಬರ ಕಾಲ ... ಈಗಿನಾದರೂ ... ಹಾಕುವುದು

ಪ್ರ— 'ಇದು ... ಕಂಪೆನಿಯವರು ಪ್ರಯಾಣಿಕರ ... ಇದೇ ಇಲ್ಲವೇ?'

ಕ— "ಅದೆಲ್ಲಾ ... ಬೇಕಾದರೆ ತೆಗೆದುಕೊಳ್ಳಿ ... ನಾವು ಲೆಕ್ಕ ...?

ಪ್ರ— ಅವರಲ್ಲಿ ಇನ್ನೊಬ್ಬರು ಒಂದರು ... ಅವರು ನಡೆದ ಸಂಗತಿಗಳನ್ನು ತಿಳಿದು ಹೀಗೆಂದರು

ಪ್ರಯಾಣಿಕರಿಗೆ—' ... ಟಿಕೆಟ್ ... " ಮತ್ತು ... "ನಿಮಗೆ ಇಷ್ಟು 0– 1—3ಯಂತೆ ... ಆಗಲಿ ...?' ... ಹೀಗೆ ಹೇಳಿದೆ'

ಕ— '... ಇದ್ದರೆ ಏನು ...?

ಪ್ರ— ನಾನಾದರ ... ನ್ನು ...

ಆರ್ಯರೇ ಇದು ಕಂಪೆನಿಯವರಲ್ಲ ... ಯಲ್ಲವೆ? ಎಲ್ಲಾ ... ಪ್ರಯಾಣಿಕರು ... ಚಾರ್ಜ ... ಮಾಡಿದ ... ಹೇಳುತ್ತೇನೆ ... ಅವರ ... ಒಬ್ಬನಲ್ಲ ... ಬರು ಅವರ ದೃಷ್ಟಿಗೆ ... ?

ಅದಕಾರಣ ಇನ್ನಾದರೂ ನಮ್ಮ ... ಸರ್ಕಾರದವರು ಇದನ್ನು ... ಮಾಡಿ ... ಪ್ರಯಾಣಿಕರಿಗೆ ... ದು ... ನಾನು ಇದರಿಂದ ... ಮುದ್ದಣ್ಣ

ಎಲ್ಲೆ ... ಗೇ

ಶ್ರೀ ಕಾವೇರಿಯು ... ಮೋಟಾರ ... ಸಾಧನ ... ಕೆಲ ತಿಂಗಳ ... ಯವರಲ್ಲಾ ... ಮೋಟಾರ ...

ನೆಯುಷ್ಟೆ. ಅವಳೇನೊ ನಿರಂಕುಶ ಆಡಳಿತದಲ್ಲಿದ್ದು ಏನು ಬೇಕಾದರೂ ಮಾಡಲಾಪಳು. ನೀನಾದರೋ ಪ್ರಜಾ ಪ್ರತಿನಿಧಿಯಾಗಿ ಹಲ ಕೆಲವರ ಆಶ್ರಯದಲ್ಲಿರುತ್ತಿ. ಅವಳು ನುಡಿಯುವಂತೆ "ಕಂಡದ್ದು ಕಂಡ ಹಾಗೆ ಹೇಳಿದರೆ ಕೆಂಡದಂಥಾ ಕೋಪ"ವೆಂಬದೇನೋ ಸಹಜವೇ. ನಿನ್ನ ತಪ್ಪಿದ್ದಲ್ಲಿ ಒಪ್ಪಿಕೋ, ಅಲ್ಲನ್ನಲ್ಲದ್ದಾದರೆ ಅಪರಾಧವನ್ನು ಓರ್ಬಿಸಿಕೊಂಡು ಮೌನವನ್ನು ತಾಳಿ ನೀನು ಹಿಡಿದ ಕೆಲಸದಲ್ಲು ಜಾಗರೂಕನಾಗು.

ಅದೇ "ಲೋಕಪಾವನ"ವು ನಿರಂತರವಾಗಿ ಈ ತನಕ ಪ್ರಚುರಪಡಿಸಿದ "ಜಮ್ಮದ" ಬಾತ್ಮಿಯಲ್ಲು ನಾವು ಸ್ವಲ್ಪ ನಿಗ ಇಡತಕ್ಕದ್ದಿದೆ. ನೀನೂ ಈ ಮೊದಲು ತಿಳಿಸಿದ್ದು ಸರಿಯೇ. ಆದರ ವಾಚಕ ಮಹಾಶಯರಲ್ಲು ಪ್ರಜ್ಞಾನಿಧಿಗೆ ಕೇವಲ ಕುಂದಕವು ಆದದ್ದರಿಂದ ನೀನು ಸ್ವಲ್ಪ "ಲೋಕಪಾವನ"ಳನ್ನು ಸುಧಾರಿಸು. ಅವಳೇನೋ ತಾನು ಸ್ವತಂತ್ರಿ ಎಲ್ಲಾವನ್ನು ತಾನೇ ಮಾಡಬಲ್ಲೆನೆಂದು ನುಡಿದರೂ ಒಗ್ಗಟ್ಟಿನಲ್ಲೇ ಬಲವೂ, ಫಲವೂ ಇರುವದೆಂದು ನನ್ನ ಭಾವನೆಯು. ಆದದ್ದರಿಂದ ನಿನ್ನ "ಕಳ ಲಾಗ, ಮೇಲ್ ಲಾಗ, ಲಾಗದ ಮೇಲೆ ಲಾಗ" ಹಾಕಿ ನಿನ್ನ ಗೇಟು ಹಾಕುವದನ್ನು ಸ್ವಲ್ಪ ತಾಳು. ನಿನ್ನ ಗೇಟಿನೊಳಗಣ ಕೆಲಸದಲ್ಲು ಸ್ವಲ್ಪ ಹೆಚ್ಚು ಗಮನವಿಡು ಅವಳೇನೋ ಆಗಲೇ 3 X 3ಲಿ ಯವರಲ್ಲು ಮನಸ್ತಾಪಗೊಂಡಿರುವಳು. ಅದು ನಿಮ್ಮ ಕೋಣೆಯೊಳಗಣ ಸತಿ, ಪತಿಗಳ ವ್ಯವಹಾರವಾಗಿರುತ್ತೆ. ಅಂಥಾ ಜಗಳವು ನಮಗೆ ದಕ್ಕದು, ಅದನ್ನು ನಿನ್ನ ವಕ್ತೃತ್ವದ ಕುಶಾಸಭ್ಯನಿಯಿಂದ ಪ್ರತಿವಾದಿಸು. ನಮ್ಮನ್ನು ಸತಾಯಿಸ ಬ್ಯಾಡ. ನೀನು ಪ್ರತಿಭಟಿಸಬು. ಇಚ್ಛೈಸುವವನಾದರೆ ನಿನ್ನ ಎಂಟು ಪುಟದಲ್ಲಿಯಣ ಪರ ಒಂದನ್ನು "3 X 3ಲಯವರದೊಂದುತ್ತರಾ"ವೆಂದು ದಪ್ಪಾದ ದೊಡ್ಡ ಅಕ್ಷರಗಳಿಂದ ಕಾಣಿಸಿ ನಮ್ಮಂಥಿಕರು ಮಾತ್ರ ನೋಡುವಂತೆ ಮಾಡಿ ಒಗ್ಗಟ್ಟಿನ ಪ್ರೇಮಬಂಧುವಾಗಲು ಪ್ರಯತ್ನಿಸು. ನಾನೂ ಒಗ್ಗಟ್ಟಿನ ನಗಿತಕ್ಕೆ ಮುಂದೆ ಸಾಗುವೆನು. ಈಗಕ್ಕೆ ನಮಸ್ತೇ.

ಒಗ್ಗಟ್ಟಿನ ಅಪೇಕ್ಷಿ,
ಪಿ. ಯಂ. ಮುತ್ತಣ್ಣ.

[ಈ ಪತ್ರದ ಅನೇಕ ನುಡಿಗಳು ಅರ್ಥವಾಗುವದಿಲ್ಲವಾದರೂ ಲೇಖಕರ ಅಪೇಕ್ಷೆ ಮೇರೆ ಪ್ರಕಟಿಸಿದ್ದೇವೆ ಸಂ.]

ಮೂರ್ನಾಡು ಕೈಲು ಪೊಳುದು.

ಅಯ್ಯಾ,

ಮೂರ್ನಾಡಿನಲ್ಲು ತಾ 3—9—25ರಲ್ಲು ನಾಡಿನವರೆಲ್ಲಾ ಕೇರಿ ಕೈಲು ಪೊಳ್ದಿನ ಊರು ಮಂದುಮಾನಿಗಳಲ್ಲು ಕೆಲವು ವರ್ಷಗಳಿಂದೀಚೆಗೆ ಹೀನಸ್ಥಿತಿಯಲ್ಲು ನಡಿಸುತಿದ್ದ ಪದ್ಧತಿಗಳನ್ನು ಈ ವರ್ಷ ನಾಡುಮಂದಿನಲ್ಲು ಬಹಳ ವಿಜೃಂಭಣೆಯಿಂದ ನಡಿಸಿದರು. ಸಾಧಾರಣ 500 ಜನರಿಗಿಂತ ಹೆಚ್ಚಾಗಿಯೇ ಜನರು ಸೇರಿದ್ದರು. ನಾನಾ ತರದ ಜನಾರ್ದನ ವಿದ್ಯೆ (Sports) ಚಮತ್ಕಾರಗಳಲ್ಲಿ ಬಾಲಕರಿಗೂ, ಯುವಕರಿಗೂ, ವೃದ್ಧರಿಗೂ ಸಾಧನಯ ಚಮತ್ಕಾರವನ್ನನುಸರಿಸಿ ಬಹುಮಾನಗಳನ್ನು ಕೊಡಲಾದವು. ತೆಂಗಿನ ಕಾಯಿಗೆ ಗುಂಡು ಹೊಡೆಯುವದು ಬಹಳ ಚಮತ್ಕಾರದಿಂದ ನಡೆಯಿತು. ಬಹುಮಾನಗಳು ಕೊಡುವಾಗ್ಯೆ ಮೆ ಪಾಂಡಂಡ ಮುತ್ತಣ್ಣನವರು ನದರಿ ದಿವಸದ ಕೆಲಸದ ಉದ್ದೇಶಗಳನ್ನು ಸ್ವಾರಸ್ಯವಾದ ಭಾಷಣದಿಂದ ತಿಳಿಸಿದ್ದೇನಂದರೆ — ಪ್ರಾಚೀನ ಕಾಲದಿಂದಲೂ ಪರಾಕ್ರಮಿಗಳೂ ಸ್ವಾತಂತ್ರರೂ ಆಗಿದ್ದ ಕೊಡಗರು ಮತ್ತು ಜಾಹಗೀರ್‌ದಾರರು ಜಮ್ಮ ಹಿಡುವಳಿದಾರರೂ ಆದ ಇತರ ದೇಶೀಯರಿಸೆ ಸಹ ಅವರ ಸ್ವಾತಂತ್ರವನ್ನೂ, ಪರಾಕ್ರಮವನ್ನೂ ಕೇವಲ ದಾಸತ್ವದ ಮತ್ತು ಹೇಡಿತ್ವದ ಬದಿಗೊತ್ತಿ ನಮ್ಮ ಶಕ್ತಿ ಕೋವಿಗಳನ್ನು ಸಹ ದೇಹಸುಖಸಾಧನೆಯ ರೂಪಿತಕ್ಕೆಂದು ವಿಕ್ರಯಿಸಿ ತರುಣ ಜನಾಂಗವನ್ನು ಬಹಳ ಹೀನತೆಯ ಗೋಚರಕ್ಕೊಳಪಡಿಸುತ್ತಾ ಬರುವದು ಬಹಳ ವ್ಯಸನಕರವಾಗಿರುತ್ತೆ. ಸ್ವಾತಂತ್ರವೆಂದರೆ ರಾಜಕೀಯ ಶಬ್ದವೆಂದೇ ಅನೇಕರು ಭಾವಿಸುತ್ತಾರೆ. ನಮ್ಮ ರಾಜರನ್ನು ಓಡಿಸಿ ನಾವೇ ರಾಜ್ಯಭಾರ ಮಾಡುವದಲ್ಲವು. ಕೃತಿಕಾರರನ್ನುವ ನಮಗಳ ಬಿನಿಸಾ ಉತ್ಪತ್ತಿಯನ್ನು ನಮ್ಮ ಮನೆಗೆ ತಂದು ಯಾರ ಬಂಧನವೂ ಇಲ್ಲದಂತೆ ನಮ್ಮ ಅನುಕೂಲಕ್ಕಿರುವ ಖರ್ಚುಮಾಡುತ್ತಾ ಕಾಲವೃದ್ಧಿಯನ್ನೂ, ಸ್ವಧರ್ಮವನ್ನೂ ಆಚರಿಸುತ್ತಿರುವದೇ ಸ್ವಾತಂತ್ರ್ಯವು. ಈ ಸ್ವಾತಂತ್ರ್ಯಕ್ಕೆ ಈಗಿನ ಕಾಲದಲ್ಲು ಸ್ವಲ್ಪ ಬಂಧನವು ಕಾಣತೊಡಗಿದೆ. ಅದೇನಂದರೆ—ನಾನು, ತಾನು, ನನ್ನದು, ತನ್ನದು ಎಂದೆನ್ನುವ ಸ್ವಾರ್ಥತೆಯ ಅಹಂಕಾರವೇ ಇನರ ಮುಖ್ಯ ಬಂಧನವು. ಅರ್ಜುನನು ತನ್ನ ಸಹೋದರರೊಡನೆ ಇಡೀ ಭಾರತವರ್ಷವೇ ಜಯಿಸಿದರೂ ಅವನ ಪರಾಕ್ರಮ ಮಾತ್ರ ಉಳಿದಿರುವದಲ್ಲದೆ ಅವನ ಸಂಸಾರವಾಗಲಿ ದ್ರವ್ಯವಾಗಲಿ ಉಳಿದಿರುವದಿಲ್ಲ. ರಾವಣನು ರಾಕ್ಷಸರನ್ನೆಲ್ಲ ಸಂಹಾರ ಮಾಡಿ ರಾಜ್ಯವನ್ನಾಳಿದರೂ ಅವನ ಸತ್ಕರ್ಮಗಳು ಮಾತ್ರ ಉಳಿದಿರುವದಲ್ಲದೆ ಅವನ ದ್ರವ್ಯವಲ್ಲ. ದೇಶಬಂಧು ದಾಸರು ತಿಂಗಳೊಂದರ 40, 50 ಸಾವಿರ ರೂಪಾಯಿಯ ಉತ್ಪತ್ತಿಯ ವಕೀಲತನ ಮಾಡಿದ್ದರೂ ಅವರ ದ್ರವ್ಯ ಉಳಿಯದೆ ಗರೀಬರಾಗಿ ತೆರಳಿದರೂ ಅವರ ದೇಶಭಾಂದವರ ಮೇಲಿನ ಪ್ರೀತಿಯನ್ನು ಮಾತ್ರ ಸ್ಥಿರಪಡಿಸಿ ತೆರಳಿರುತ್ತಾರೆ. ನಾವುಗಳು ನಮ್ಮ ದೇಹಸುಖ ಸಾಧನೆಯ ಊಟದಲ್ಲಿಯೂ ಕುಡಿತದಲ್ಲಿಯೂ ನಮ್ಮ ಇಷ್ಟಮಿತ್ರ ಸಂಸಾರರೊಡನೆ ನಮ್ಮ ಕಾಲವನ್ನು ಕಳೆದಲ್ಲು ನಮ್ಮ ತರುಣ ಜನಾಂಗಕ್ಕೆ ನಮ್ಮ ದಾಸತ್ವವನ್ನೂ ಹೇಡಿತ್ವವನ್ನೂ ಕಲ್ಪಿಸುವಂಥಾದ್ದೇ ಹೊರ್ತು ನಮ್ಮ ಹಿರಿಯರು ನಮಗೆ ದಯಪಾಲಿಸಿದ ಪರಾಕ್ರಮವನ್ನೂ ಸ್ವಾತಂತ್ರ್ಯವನ್ನೂ ಅಲ್ಲವು. ನಾವು ಭೂಲೋಕದಲ್ಲು ನಾಲ್ಕು ದಿವಸವಿದ್ದು ನಮ್ಮ ಕರ್ಮವನ್ನು ಮಾಡಿ ಹೋಗಲಿಕ್ಕೆಂದು ಬಂದವರೇ ಹೊರತು ನಮ್ಮ ಸಂಸಾರದೊಂದಿಗೂ ದ್ರವ್ಯದೊಂದಿಗೂ ಸ್ಥಿರವಾಗಿರಲಿಕ್ಕಲ್ಲವೆಂದು ಚೆನ್ನಾಗಿ ಮನವಿಟ್ಟು ಕೆಲವು ಮಟ್ಟಿಗೆ, ನಾನು, ತಾನು, ನನ್ನದು, ತನ್ನದು ಎನ್ನುವ ಸ್ವಾರ್ಥತೆಯ ಅಹಂಕಾರವನ್ನು ತ್ಯಜಿಸಿ ನಮ್ಮ ಚೌರ್ಯವೆನ್ನುವ ತರುಣರನ್ನು ನಮ್ಮ ಹಿರಿಯರು ನಮಗೆ ತೋರಿಸಿಕೊಟ್ಟಂತೆ ಒಂದು ಜನಾಂಗವಾಗಲಿಕ್ಕೆತ್ತಿಸುವದು ನಮ್ಮ ಕರ್ತವ್ಯವಾಗಿರುತ್ತೆ ಆದದರಿಂದ ತರುಣ ಜನಾಂಗದ ಅಭಿವೃದ್ಧಿಯ ದೃಷ್ಟಿ ಇಲ್ಲಿಡವರಿಗೆ ಇದು ಒಂದು ವಿಧವಾದ ಪಾರವಾಗಿರುತ್ತದೆಂದು ಮೊದಲಾಗಿ ಒಂದು ಉದ್ದವಾದ ಭಾಷಣ ಮಾಡಿದರು. ಆ ಮೇಲೆ ಬಹುಮಾನಗಳನ್ನೆಲ್ಲಾ ಕೊಟ್ಟು ಅಲ್ಲಿ ನೆರೆದಿದ್ದ ಜನ ಸ್ತೋಮವು ಜಯಘೋಷದಿಂದ ಚದರಿತು.

ಬಡುವಂಡ ಗಣಪತ್ತಿ.

ಮುಜರಾಯಿ ಇಲಾಖೆ.

ಎಡಿಟರವರೇ,

ನಿಮ್ಮ ಜುಲೈ ತಾರೀಕು 17ರ ಮತ್ತು 31ರ ಅಲ್ಲದೆ ಆಗೊಸ್ಟು ತಾರೀಕು 14ರ ನಂಚಿಕೆಗಳಲ್ಲು ಭಾಗಮಂಡಲದ ಹೊಸ ಛತ್ರದ ವಿಷಯ ನ್ಯಾಯವಾದಿಗಳಿಬ್ಬರೂ ಮತ್ತು ರಿಕಾರ್ಡರ್ ಎಂಬವರು ಪ್ರಕಟಿಸಿದ ಬಾತ್ಮಿಗಳನ್ನು ಓದಿದೆನು.

ಈ ಛತ್ರದ ವಿಷಯದಲ್ಲಿ ಬನ್ನಾಭಿಪ್ರಾಯಗಳು ಪ್ರಕಟಿಸಲ್ಪಟ್ಟಿರುವದರಿಂದ ನಾನು ಈ ಬಾತ್ಮಿಯನ್ನು ನಿಮಗೆ ಕಳುಹಿಸಬೇಕಾಗಿದೆ.

ದಿವಂಗತರಾದ ನನ್ನ ಪ್ರಿಯಪತಿಯವರ ಅವಸಾನ ಪತ್ರದಲ್ಲಿ ಪುನರ್ವಿವಾಹ ವಿಷಯ ಸೂಚಿಸಿದನ್ನು ಕಂಡ ಮೊದಲ್ಗೊಂಡು ಅದಕ್ಕಾಗಿ ಬಿಟ್ಟ ಹಣದಿಂದಲೇ ನನ್ನ ಜೀವಿತ ಕಾಲದಲ್ಲಿ ಒಂದು ಧರ್ಮಕಾರ್ಯವನ್ನು ನನ್ನ ಪತಿಯ ಹೆಸರಿನಲ್ಲು ಮಾಡಬೇಕೆಂಬ ಕುತೂಹಲವುಂಟಾಯಿತು. ಆದ್ದರಿಂದ ಇದರ ವಿಷಯವಾಗಿ ಮೊ. ರಾ. ಶ್ರಿ ರಾ ಬಾ ಸಿ ಮೊದ್ಯೆಯ್ಯನವರ ಅಭಿಪ್ರಾಯವನ್ನು ಕೋರಿದೆನು ಮುರುಪಿನಲ್ಲಿ ಅವರಿಗೆ ನನ್ನ ಜೀವನಾಂತಕ್ಕ ಬಿಟ್ಟ ಹಣವು ಕಮ್ಮಿಯಾಗಿ ನನಗೆ ಕಷ್ಟವಾದೀತೆಂಬ ಬೇಸರಿಕ ಇತ್ತು. ಆದರೆ ಕೆಲವು ತಿಂಗಳನಂತರ ಸರ್ಪ್ಲಸ್ ಹಣವು ಸ್ವಲ್ಪವಿದೆ ಎಂದೂ ಮತ್ತು ಆ ಹಣವು ನನಗೆ ಸೇರಿದೆಯೆಂದೂ ಮೊ. ರಾ. ಶ್ರಿ ರಾ ಬಾ ಸಿ ಮೊದ್ಯೆಯ್ಯನವರೇ ನನಗೆ ಸೂಚಿಸಿದರು. ಆಗ ನನ್ನ ಜೀವನಾಂತಕ್ಕೆ ಮತ್ತು ನನ್ನ ಮನೆ ರಿಪೇರಿ ಮತ್ತು ಕಂದಾಯಕ್ಕೂ ತಕ್ಕಷ್ಟು ಅದರಲ್ಲಿ ಹಣವಿದ್ದುದರಿಂದ ಕೂಡಲೇ ನನ್ನ ಕೋರಿಕೆಯನ್ನು ಪುನಃ ಅವರ ಮುಂದೆ ಇಟ್ಟೆನು. ಆಗ ಅವರು ಈ ವಿಷಯದಲ್ಲಿ ಅನುಮತಿಯನ್ನು ಕೊಟ್ಟು ಕಟ್ಟಡ ಕಾರ್ಯವನ್ನೂ ಮುಜರಾಯಿ ಇಲಾಖೆಯವರ ಮೂಲಕ ನಡಿಸಲು ತಾನೇ ಒಪ್ಪಿಕೊಂಡು ಕಾಗದ ಪತ್ರಗಳನ್ನು ನಡಿಸುತ್ತಿದ್ದರು. ಆ ಸಮಯದಲ್ಲಿ ನಾನು ಕಾಯಿಲೆಯಾಗಿ ಚಿಕಿತ್ಸೆಗಾಗಿ ಮೈಸೂರು ಮತ್ತು ಬೆಂಗಳೂರಿಗೆ ಹೋಗಿದ್ದೆನು. ಅವರ ಕಾಗದ ಪ್ರಕಾರ (5000) ಐದುಸಾವಿರ ರೂಪಾಯಿಗಳನ್ನು ಅಲ್ಲಿಂದಲೇ ನಾನು ಕಳುಹಿಸಿಕೊಟ್ಟೆನು. ಹಣವು ಅವರಿಗೆ ತಲುಪಿದಕ್ಕೂ ಅದನ್ನು ಟೆಂಪಲ್ ಪ್ರೆಸಿಡೆಂಟರವರಿಗೆ ಕೊಟ್ಟದಕ್ಕೂ ಒಸದ ಕಾಗದಗಳು ನನ್ನಲ್ಲಿ ಇವೆ. ಹಣವನ್ನೂ ಕಳುಹಿಸಿದ ಕೆಲವು ದಿನಗಳಲ್ಲೇ ಅವರು ವಿಷಾಧೀನರಾದರು. ಈ ವರ್ತಮಾನವನ್ನು ಕೇಳಿದ ದಿನವೇ ನಾನು ಅಲ್ಲಿಂದ ಇಲ್ಲಿಗೆ ಬರುವದಾಗಿದೆ. ಆಮೇಲೆ ನಾನು ಈ ಛತ್ರಕ್ಕೆ ಸಮ್ಮಂಧವಾದ ಕಾಗದ ಪತ್ರಗಳಲ್ಲೆಲ್ಲಾ For Safe custody (ಭದ್ರತೆಗಾಗಿ) ಎಂದು ಬರೆದು ನನ್ನ ಸಹೋದರ ಬಚ್ಚಟ್ಟಿರ ಮಾದಪ್ಪನ ಕೈಯಲ್ಲಿ ಕೊಟ್ಟಿದ್ದನ್ನು ನಾನು ನೋಡುವಾಗ್ಯೆ ಛತ್ರದ ಶಾಸನದ ಶಬ್ದಗಳಲ್ಲಿ ನನ್ನ ಹೆಸರನ್ನು ಸೂಚಿಸದೆ ಮರೆತುಹೋದ ಸಂಗತಿಯನ್ನು ನೋಡಿ ಕೊಡಗು ಮುಜರಾಯಿ ಇಲಾಖೆಯ ಪ್ರಸಿಡೆಂಟರೇ ಉಳಿದ ಮೂವರಲ್ಲೊಬ್ಬ ಎಗ್ಜಿಕ್ಯುಟರಾಗಿರುವದರಿಂದ ಈ ವಿಷಯವನ್ನು ಅವರು ನೆರವೇರಿಸಬಹುದೆಂದು ಧೈರ್ಯವನ್ನು ಹೊಂದಿ ಅವರಿಗೆ ಬರೆದೆನು. ಅವರಿಗೆ ಮೂರುಸಾರಿ ಕಾಗದವನ್ನು ಬರೆದು ಕೇಳಿಕೊಂಡರೂ ಏನೊಂದೂ ವಿಚಾರವನ್ನು ಸಹ ಮಾಡದೆ ತಮಗೆ ಅಸಾಧ್ಯವೆಂದು ಮಾತ್ರ ಹೇಳಿ ಉತ್ತರ ಕೊಟ್ಟರು. ಹ್ಯಾಗೂ ಸರ್ಪ್ಲಸ್ ಹಣವಾಗಲೀ ಅಥವಾ ಪುನರ್ವಿವಾಹದ ಹಣವಾಗಲೀ ಎರಡೂ ನನ್ನ ಪತಿಯ ಮತ್ತು ನನ್ನ ಸ್ವಂತ ಹಣವಾದದ್ದರಿಂದ ಮುಜರಾಯಿ ಇಲಾಖೆಯವರು ನನ್ನ ಅಭಿಪ್ರಾಯವನ್ನು ಗಣ್ಯಕ್ಕೆ ತರಬಹುದಿತ್ತು. ಮೊ. ರಾ ಶ್ರಿ. ರಾ. ಬಾ ಸಿ. ಮೊದ್ಯೆಯ್ಯನವರು ನನ್ನ ಪತಿಯನ್ನು ಚಿಕ್ಕಂದಿನಿಂದಲೇ ತನ್ನ ಮಗನೋಪಾದಿಯಲ್ಲಿ ಸಾಕಿ, ವಿದ್ಯೆ ಬುದ್ಧಿಗಳನ್ನು ಕಲಿಸಿ ಸರ್ಕಾರ ಕಾರ್ಯದಲ್ಲಿ ಸಹಾಯಮಾಡಿ ಅಭಿವೃದ್ಧಿಗೆ ಬಂದ ತನ್ನ ಸಹೋದರನ ಮರಣದಿಂದ ಅವರಿಗೆ ಎಷ್ಟರ ಮಟ್ಟಿಗೆ ದುಃಖವಿತ್ತೆಂಬುದು ಎಲ್ಲರಿಗೂ ವೇದ್ಯವಿದೆ. ತದೇಪ್ರೀತಿಯಲ್ಲಿಯೇ ತನ್ನ ಸಹೋದರನು ಸಿ. ಮೊದ್ಯೆಯ್ಯನವರಲ್ಲಿ ಇಟ್ಟಿದ್ದ ಪ್ರೀತಿಗೆ ನನ್ನ ಪತಿಯು ಅವರ ಅವಸಾನ ಪತ್ರದಲ್ಲಿ ಸೂಚಿಸಿ ಧರ್ಮಕಾರ್ಯಕ್ಕೆ ಬಿಟ್ಟ (15000) ಹದಿನೈದುಸಾವಿರ ರೂಪಾಯಿಗಳೇ ಸಾಕ್ಷಿಯಾಗಿದೆ.

ಮೊ. ರಾ. ಶ್ರಿ. ಮೊದ್ಯೆಯ್ಯನವರಿಗೆ ಹಾಲಿ ಇರುವ ಎಗ್ಜಿಕ್ಯುಟರುಗಳಿಗಿಂತಲೂ ಹೆಚ್ಚಿನ ಮೇಲ್ವಿಚಾರಣೆಗಳ ಹಕ್ಕು ಇದ್ದದ್ದರಿಂದ ನನ್ನ ವಿಷಯದ ಸರ್ವಕಾರ್ಯದಲ್ಲೂ ನನ್ನ ಕಾಯಿಲೆಯಲ್ಲಿಯೂ ಎಷ್ಟು ತೊಂದರೆ ತೆಕ್ಕೊಂಡು ಇದ್ದರೆಂಬದನ್ನು ನಾನು ಎಂದಿಗೂ ಮರೆಯಲಾರೆನು. ನನ್ನ ಪ್ರಾರ್ಥನೆಯೇ ನಾನು ನನ್ನ ಈ ಬಡಸ್ಥಿತಿಯಲ್ಲಿ ಅವರಿಗೆ ಮಾಡುವಂತ ಧರ್ಮಕಾರ್ಯಗಳಾಗಿವೆ. ನನ್ನ ವ್ಯಸನದ ಕಾಲದಲ್ಲಿ ಧೈರ್ಯವನ್ನು ಬೋಧಿಸಿ ನನ್ನ ಮನಸ್ಸಿಗೆ ಶಾಂತತೆ ಬೇಕೆಂದು ನಾನು ಬೇಡಿದ ಮೇರೆ ನನ್ನ ಮೇಲೆ ಕರುಣೆಯನ್ನು ಮಾಡಿ ಧರ್ಮಕಾರ್ಯದ ವಿಷಯದಲ್ಲಿ ಉತ್ತೇಜನವನ್ನು ಕೊಟ್ಟು ಇದರ ಸಮ್ಮಂಧದ ಪತ್ರಗಳನ್ನೆಲ್ಲಾ ನನ್ನ ಸ್ವಾಧೀನಕ್ಕೆ ಕೊಟ್ಟಿರುವದು ಅವರ ನ್ಯಾಯಪರತೆಯ ಸಾಕ್ಷಿಯಾಗಿದೆ.

ದಿವಂಗತರಾದ ಇಬ್ಬರ ಗೌರವವಾದ ಹೆಸರುಗಳನ್ನು ಈ ಅಲ್ಪಕಾರ್ಯಕ್ಕಾಗಿ ಬಯಲಿಗೆ ತರಬಾರದೆಂದೇ ನಾನು ಮೂರುಸಾರಿ ಮುಜರಾಯಿ ಇಲಾಖೆಯವರಿಗೆ ಕಾಗದ ಬರೆದು ಕೇಳಿಕೊಂಡದ್ದಾಗಿದೆ. ಆದರೇನು? ನನ್ನ ಕೋರಿಕೆಯಲ್ಲಿ ಟೆಂಪಲ್ ಪ್ರೆಸಿಡೆಂಟರ ಮನಸು ಕರಗದಕ್ಕ ಬಹಳ ವ್ಯಸನಪಡುತ್ತೇನೆ ....

ನನ್ನ ಹೆಸರನ್ನು ನಾನು ನನ್ನ ಪತಿಯ ಹೆಸರಿನಲ್ಲಿ ಮಾಡಿದ ಧರ್ಮಕಾರ್ಯಕ್ಕೆ ಸೇರಿಸದಕ್ಕೆ ನನಗೂ ನನ್ನ ಪ್ರೀಯಪತಿಯ ಎಲ್ಲಾ ಇಷ್ಟ ಮಿತ್ರರುಗಳವರಿಗೂ ಎಷ್ಟು ವ್ಯಸನಕ್ಕೆ ಮತ್ತು ಅಸಮಾಧಾನಕ್ಕೆ ಕಾರಣವಿದೆಯೆಂದು ನಾನು ಹೇಳುವುದಿಲ್ಲ. ನನ್ನ ಪರವಾಗಿ ದೇವನೇ ಹೇಳಲಿ.

ಹಾಲಿ ಎಗ್ಜಿಕ್ಯುಟರುಗಳಲ್ಲಿ ಇನ್ನೊಬ್ಬರಾದ ಕ್ಯಾಪ್ಟನ್ ಸಿ ಯಮ್. ಗಣಪತ್ತಿಯವರು ನನಗೆ ಅವರ ತಾರೀಕು 15-2-1924ರ ಕಾಗದದಲ್ಲು ತಿಳಿಸಿರುವುದೇನಂದರೆ:—'With reference to your request that the inscription, you desire to be placed in the chathra at Cauvery, I am afraid it cannot be carried out either as Chengappana was told by my Father that it was built by the latter for Nanjappa' ಈ ರೀತಿಯಾಗಿ ಬರೆದಿದ್ದಾರೆ. ಅದು ಹೇಗೆ? ಆ ಛತ್ರ ಕಟ್ಟಿಸಲಿಕ್ಕೆ ಕೊಟ್ಟ ಹಣವನ್ನು ನನ್ನಿಂದ ಹೊಂದಿಕೊಂಡು ಅದಕ್ಕೆ ಸಮ್ಮಂಧಪಟ್ಟ ಪತ್ರಗಳನ್ನೆಲ್ಲಾ ನನ್ನಲ್ಲಿ ಮೊ. ರಾ ಶ್ರಿ, ಮೊದ್ಯೆಯ್ಯನವರು Safe custody ಗೆಂದು ಬರೆದು ಕೊಡಲಿಕ್ಕೆ ಕಾರಣವೇನು? ಅವರು ಒಂದುವೇಳೆ ಅವರ ಹೆಸರನ್ನೇ ಸೂಚಿಸಬೇಕೆಂದು ಇಷ್ಟಪಟ್ಟಿದ್ದರೆ ಈ ಕಾಗದಗಳೆಲ್ಲವನ್ನೂ ಅವರಲ್ಲಿಯೇ ಇಡಬಹುದಿತ್ತಲ್ಲಾ. ಅವರು ಒಂದುವೇಳೆ ಮುಂದಕ್ಕೆ ಬರುವ ಅಪವಾದವನ್ನು ಮರೆತು ಹೇಳಿಬಿಟ್ಟಿದ್ದರು. ಅವರು ನನಗೆ ತೋರಿಸಿದ ಧರ್ಮದ ಹೃದಯದಿಂದ ಹೇಳಿದ್ದಲ್ಲವೆಂದು ನನ್ನ ದೃಢವಾದ ನಂಬಿಕೆಯಾಗಿದೆ.

ಈಗ ಹಾಲಿ ಎಗ್ಜಿಕ್ಯುಟರುಗಳಾಗಿರುವ ಮಹನೀಯರು ಹೇಳಿದಕ್ಕೆಲ್ಲಾ ಒಪ್ಪಿಕೊಂಡು ನಾನು ಸುಮ್ಮನೆ ಇರಬಹುದೆಂದು ನನಸಿರಬಹುದು.

"ರಿಕಾರ್ಡರ್"ಗಳವರು ಸೂಚಿಸಿದ ರೀತಿ ಮರಣ ಶಾಸನಕ್ಕೆ ಎಂದೂ ವಿರೋಧಪಡಲಿಕ್ಕಿಲ್ಲ. ನನ್ನ ಇಷ್ಟಗಳನ್ನು ನನ್ನ ಮರಣಾಂತರದಲ್ಲಿ ನೆರವೇರಿಸಲಿಕ್ಕೆ ಮಕ್ಕಳು ಇಲ್ಲದುದರಿಂದ ನನ್ನ ಆಶೆಯನ್ನು ನನ್ನ ಜೀವನಕಾಲದಲ್ಲೇ ನನ್ನ ಮನಃಪೂರ್ತಿ ಒಪ್ಪಿಗೆ ಕೊಟ್ಟು ಧರ್ಮಕಾರ್ಯಕ್ಕಾಗಿ ಈ ಲೋಕದಲ್ಲಿ ಇರುವಂತ ಅಲ್ಪ ಸುಖಕ್ಕೆ ಇಷ್ಟಪಡದೆ ನನ್ನ ಪತಿಯ ಹೆಸರಿನಲ್ಲೇ ಮಾಡಿಸಿದ್ದರಿಂದ ಸಾಧು ಜನರುಗಳಿಗೂ ದೇವರಭಕ್ತಿಯಲ್ಲಿ ನಂಬಿಕೆ ಇರುವವರಿಗೂ ಎಂದೂ ವಿರೋಧವಾಗಿ ಕಾಣುವುದಿಲ್ಲವೆಂದೂ ನನ್ನ ಧೈರ್ಯವಾದ ನಂಬಿಕೆಯಾಗಿದೆ.

ಮತ್ತು "ರಿಕಾರ್ಡರ್"ಗಳವರು ನನ್ನ ಪತಿಯು ಬಿಟ್ಟ ಧರ್ಮಕಾರ್ಯಗಳೆಲ್ಲವು ಭದ್ರವಾಗಿವೆಯೋ ಇಲ್ಲವೋ ಎಂದು ಸಹ ಸೂಚಿಸಿದ್ದಾರೆ; ಆದರೆ ನನಗೆ ಇವರುಗಳಿಗಿಂತಲೂ ಹೆಚ್ಚಿಗೆ ಕುತೂಹಲವಿದ್ದದ್ದರಿಂದ ಧರ್ಮಕಾರ್ಯಗಳಿಗೆ ವಿಘ್ನಬರದ ಹಾಗೆ ಮೊ. ರಾ. ಶ್ರಿ. ರಾ. ಬಾ ಸಿ. ಮೊದ್ಯೆಯ್ಯನವರಿಂದಲೇ ಭದ್ರತೆ ಮಾಡಿಸಿಕೊಂಡಿರುವುದು "ರಿಕಾರ್ಡರ್" ಎಂಬವರುಗಳಿಗೆ ಇನ್ನೂ ತಿಳಿಯದ ಹಾಗೆ ಕಂಡು ಬರುತ್ತೆ. ಆದರೆ ನಾನು ಈ ಕೆಳಗೆ ತಿಳಿಸುವೆನು. ಮೊದಲನೆಯದು,—ನನ್ನ ಹೆಸರಿನಲ್ಲೆ ಮೈಸೂರು ಲೋನ್ ತೆಗೆಸಿ ಅದರ ಬಡ್ಡಿಯು ನನಗೆ ಏನೊಂದು ತೊಂದರೆಗಳಿಲ್ಲದೆ ಬರುವ ಹಾಗೂ ನನ್ನ ಮರಣಾನಂತರದ ಮೇಲೆ ಸಿ. ಮೊದ್ಯೆಯ್ಯನವರ ಹೆಸರಿಗಾಗುವ ಈ ಮೊಬಲಗು 15000 ರೂಪಾಯಿಯನ್ನು ನನ್ನ ಪತಿಯು ಸೂಚಿಸಿದಂತ ಧರ್ಮಕಾರ್ಯಕ್ಕೆ ಸಿ. ಮೊದ್ಯೆಯ್ಯನವರ ಮಕ್ಕಳು ಎಜ್ಞರದಲ್ಲಿ ಮಾಡಿಸುವರೆಂಬ ನಂಬಿಕೆ ನನಗಿದೆ. ಎರಡನೆಯದು,—ನಾನು ನನ್ನ ಮನೆಗೆ ಬಂದದ್ದೇ ಆಗಿದೆ. ಇದನ್ನೂ ಸಹ ನನ್ನ ಮರಣಾನಂತರದಮೇಲೆ ಮಾರಿಸಿ ಅದರ ಮೊಬಲಗಿನಲ್ಲಿ ನನ್ನ ಪತಿಯ ಹೆಸರಿನಲ್ಲಿ ಮಾಡಿಸಬೇಕಾದ ಟವ್ನ್ ಹಾಲ್ ಅಥವಾ ಕ್ಲಾಕ್‌ಟವರು ಎರಡರಲ್ಲೊಂದು ಮಾಡಿಸಲಿಕ್ಕೆ ಗವರ್ನ್‌ಮೆಂಟಿನವರು ವಿಘ್ನಬಾರದ ಹಾಗೆ ಮಾಡುವರೆಂದು ನಾನು ನಂಬಿದ್ದೇನೆ. ಇವೆಲ್ಲಾ ವಿವರವಾಗಿ ನನ್ನ ಮನಸ್ಸಿಗೆ ಆಗುವ ವ್ಯಸನವನ್ನು ತಾಳಲಾರದ್ದರಿಂದ ಬರೆಯುದಾಯಿ

ನನ್ನ ಪತಿಯು ಮತ್ತು ನನ್ನ ತಂದೆಯೋಪಾದಿಯಲ್ಲಿದ್ದ ಮೊ॥ ರಾ॥ ಶ್ರೀ ರಾ॥ ಬಾ॥ ಸಿ. ಮಂದ್ಯೈಯ್ಯನವರಲ್ಲಿ ನನಗಿಬ್ಬರಿಗೆ ಇದ್ದ ಸಂಬಳಿಗೆ ಇನ್ನಾದರು ವಿಘ್ನ ಮಾಡದೆ ನನ್ನ ಕೋರಿಕೆಯನ್ನು ನೆರವೇರಿಸಿ ನನ್ನ ಮನಸ್ಸಿನ ಕಾಂಕ್ಷೆಯನ್ನು ತೃಪ್ತಿಪಡಿಸಿಕೊಡುವ, ಸರ್ವಭಾರ ಟೆಂಪಲ್ ಪ್ರೆಸಿಡೆಂಟರಿಗೂ ಹಾಲಿ ಎಗ್ಜಿಕ್ಯೂಟರುಗಳಿಗೂ ಸಿ ಮಂದ್ಯೈಯ್ಯನವರ ಮೃಗಂದಿಯರಿಗೂ ಸೇರಿದೆ. ನನ್ನ ಇಷ್ಟೆಲ್ಲಾ ಕೋರಿಕೆ ಮೇಲೂ ನನ್ನ ಹೆಸರನ್ನು ನನ್ನ ಪ್ರಿಯ ಪತಿಯ ಸ್ಮಾರಕಕಟ್ಟಡದಲ್ಲಿ ಸೂಚಿಸಲಿ ಅಥವಾ ಸೂಚಿಸದಿರಲಿ, ಒಬ್ಬನೇ ಇದ್ದ ನನ್ನ ಪ್ರಿಯ ಮಗುವಿನ ಮತ್ತು ಪತಿಯ ಅಕಾಲಮರಣಗಳಿಂದ ನನಗೆಸಂಭವಿಸಿರುವ ದುಃಖಮತ್ತು ನಷ್ಟಕ್ಕಿಂತ ಈ 5000 ರೂಪಾಯಿಗಳು ಅಲ್ಪವಾದ ನಷ್ಟವೆಂದೇ ಭಾವಿಸಿ ಧೈರ್ಯವನ್ನು ತಾಳುವೆನು. ಧರ್ಮವು ಎಂದೂ ಅಧರ್ಮವಾಗಲಾರದು.

ಕೋದಂಡ ಪೊನ್ನಮ್ಮ ನಂಜಪ್ಪ.

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗೋಣ, ಶರೀರ ಸುಖವಾಗೋಣ, ನೌಕರಿ ಸಿಗೋಣ, ಸಂಬಳ ಹೆಚ್ಚೋಣ, ವಿವಾಹವಾಗೋಣ, ಸಂತತಿಯಾಗೋಣ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗೋಣ, ವ್ಯಾಪಾರದಲ್ಲಿ ಬಹಳ ಲಾಭ ಸಿಗೋಣ, ಸಾಲ ಮುಕ್ತ ಆಗೋಣ, ಭೂತ ಪಿಶಾಚ ಗ್ರಹಬಾಧೆ ಆಗದಿರೋಣ, ಪ್ರತಿಕೂಲ ಜನರು ಅನುಕೂಲವಾಗೋಣ, ಇನ್ನೂ ಮತ್ತು ಬೇರೆ ಎಷ್ಟೋ ಮಾತುಗಳು ಇಚ್ಛೆಯಂತೆಯೇ ಆಗುವ ಅಪೇಕ್ಷೆ ಇದ್ದರೆ ಇಚ್ಛಿತಫಲ ಕೊಡುವ ಲೋಕಮಾನ್ಯ ಕಲ್ಪತರು ತಾಯಿತ ಯಾವಾಗಲೂ ಹತ್ತಿರ ಇಡಿರಿ ಅಂದರೆ ಇಚ್ಛೆ ಪೂರ್ಣವಾಗುವದು. ಅನುಭವದ ಹೊರತು ಖಾತ್ರಿ ಆಗಲಾರದು ತಾ. ನ. ೧ಕ್ಕೆ ರೂ ೧॥ ಗುಣ ತೀವ್ರವಾಗಿ, ತಾ ನ ೨ಕ್ಕೆ ರೂ. ೭ ಗುಣ ೧೫ದಿವಸಗಳಲ್ಲಿ, ತಾ ನ ೩ಕ್ಕೆ ರೂ ೩ ಗುಣ ೧ ತಿಂಗಳಲ್ಲಿ ವಿ ಪಿ ಖರ್ಚು ಬೇರೆ ಗುಣಬಾರದಲ್ಲಿ ತಾಯಿತದಖರ್ಚು ವಜಾಹೋಗಿ ಬಾಕೀ ಸಿಗುವದು.

2

ವಿಳಾಸಃ—ಮ್ಯಾನೇಜರ, ಕಲ್ಪತರು ತಾಯಿತ, ಕೆ. ಮ್. ಪೋ. ಸಂಕೇಶ್ವರ ಜಿ, ಬೆಳಗಾಂವ.

COWS FOR SALE.

Four hardy country bred milch cow with calves from one & a half to three & a half months of age, for sale in one or two lots

Apply to— Proprietor,
River side Estate,
Sidapur, South Coorg.

GENTLEMEN,

It is hereby published for the information of the public that we have been doing receiving and forwarding business for a long time and supplying all sorts of estate requisites such as manures, tools, ate mats etc, to the various estates in Coorg at moderate commission and the following cart hire.

Somawarpet, Rs. 10, Mercara Rs. 9, Virajpet Sunticoppa, 8, Pollibetta 8, Siddapur, 8.

Even small orders will have our maximum attention and are promptly and most carefully executed

We have been doing this work for the cause convenience of the public and to get reasonable charges for our hard labour and safe and quick delivery of things.

Promptitude and honesty are our guiding factors

Intending purchasers, senders and receivers are earnestly requested to place their esteemed orders with us and oblige. In order to save time, demmurrage etc, it is requested to make arrangements to send the Railway pass direct to us for doing the needful in the matter

For further particulars please apply to—

B BETTIAH,
Receiving & Forwarding Agent,
Vani Vilas Mohalla
MYSORE

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ.—

ನಾವು ಈಗ ಬಹಳ ದಿವಸಗಳಿಂದಲೂ ರಿಸೀವಿಂಗ್ ಮತ್ತು ಫಾರ್ವರ್ಡಿಂಗ್ ಕೆಲಸವನ್ನು ಮಾಡಿ ಅನುಭವವನ್ನು ಪಡೆದಿರುವುದಲ್ಲದೆ, ಮಹಾ ಜನಗಳ ಸೌಕರ್ಯಕ್ಕಾಗಿ ಈಗ ನಾವು ಗಾಡಿಬಾಡಿಗೆಯನ್ನೂ ಮತ್ತು ಕಮೀಶನ್ ದರವನ್ನೂ ಬಹಳ ಕಮ್ಮಿ ಮಾಡಿರುತ್ತೇವೆ. ಎಸ್ಟೇಟುಗಳಿಗೆ ಬೇಕಾಗುವ ಗೊಬ್ಬರಗಳು, ಅಂದರ ಕಡಲೆ, ಹೊಂಗೆ, ಹಿಪ್ಪೆ, ಹರಳು ಮುಂತಾದ ಹಿಂಡಿಗಳನ್ನೂ, ಚಾಪೆ, ಕುಕ್ಕೆ ಮತ್ತು ಗುದ್ದಲಿ, ಮುಳ್ಳುತಂತಿ ವೊದಲಾದ ಸಾಮಾನುಗಳನ್ನೂ ನಾವು ಸಪ್ಲೈ ಮಾಡುತ್ತೇವೆ ಮಹಾ ಜನಗಳು ತಮ್ಮ ರೈಲ್ವೆ ರಸೀತಿಗಳನ್ನು ನಮ್ಮ ಆಫೀಸಿಗ ಡೈರೆಕ್ಟಾಗಿ ಕಳುಹಿಸುವಂತೆ ತಮ್ಮ ಪಾರ್ಟಿಗಳಿಗೆ ತಿಳಿಸಿದಲ್ಲಿ, ಸಾಮಾನುಗಳಿಗೆ ಡೆಮರೇಜು ವಗೈರೆ ಆಗದಂತೆ, ಬಿಲವರಿಯನ್ನು ತೆಗದುಕೊಂಡು ಸಾಮಾನುಗಳನ್ನು ಸುರಕ್ಷಿತವಾಗಿಯೂ, ಜಾಗ್ರತೆಯಾಗಿಯೂ ಕಳುಹಿಸಿಕೊಡುತ್ತೇವೆ. ಮಹಾ ಜನಗಳು ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ. ಹೆಚ್ಚು ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಗಾಡಿಬಾಡಿಗೆ—ಸೋಮವಾರಪೇಟೆಗೆ ರೂ 10, ಮಡಿಕೇರಿಗೆ ರೂ 9 ವೀರಾಜಪೇಟೆಗೆ ರೂ 9 ಸುಂಟಿಕೊಪ್ಪಕ್ಕೆ ರೂ. 8. ಪೊಳ್ಳಿಬೆಟ್ಟಕ್ಕೆ ರೂ 8, ಸಿದ್ದಾಪುರಕ್ಕೆ ರೂ 8,

ಬಿ. ಬೆಟ್ಟೈಯ್ಯ,
ರಿಸೀವಿಂಗ್ ಮತ್ತು ಫಾರ್ವರ್ಡಿಂಗ್ ಏಜೆಂಟರು,
1. ವಾಣೀ ವಿಲಾಸ ಮೊಹಲ್ಲಾ, ಮೈಸೂರು.

ಬಡ ವ್ಯವಸಾಯಗಾರರಿಗೂ ಐಶ್ವರ್ಯವಂತ ಭೂಮಾಲಿಕರಿಗೂ ಒಂದು ಅಪರೂಪವಾದ ಉಪಕಾರ! (1) ದನಗಳ, ಕುದುರೆಗಳ, ಆನೆಗಳ ಮತ್ತು ಇತರ ಜೀವಧನಗಳ ಜೀವವಿಮೆ (2) ಒಂದು ವರುಷದ ಒಳಗೆ ಮೃಗವು ಸತ್ತರೆ ವಿಮಾ ಮುಂಗಡದ (ಪ್ರೀಮಿಯಮ್ಮು) ಒಂದೂವರೆಯಷ್ಟು ಕೊಡಲು ಗ್ಯಾರಂಟಿ (3) ಸಿದಾರರಿಗೆ ಸತ್ತ ಮೃಗದ ಬದಲಿಗೆ ಇನ್ನೊಂದನ್ನು ತೆಗೆದುಕೊಳ್ಳಲು ಒಂದು ವರುಷದಲ್ಲು ವಾಪಸು ಕೊಡಬೇಕಾದಂತ 9 % ರ ಬಡ್ಡಿಯ ಸಾಲ (4) ಐದು ವರುಷದೊಳಗೆ ವಾಪಸುಕೊಡಬೇಕಾದ ವ್ಯವಸಾಯದ ಕೆಲಸಕ್ಕೆ 12 ಬಡ್ಡಿಯ ಸಾಲ. (5)ಪಾಲಿಸಿ ಮತ್ತು ಶೇರುದಾರರಿಗೆ ಭೂಮಿ ಮತ್ತು ಮನೆಗಳನ್ನು ತೆಗೆದುಕೊಳ್ಳಲು ಸಾಲ—ಈ ಸಾಲವ 12 % ಬಡ್ಡಿಯಿಂದ ಸರಿಯಾಗಿ 12½ ವರುಷಗಳಲ್ಲಿ ವಾಪಸುಕೊಡುವುದು. (6) ಒಂದು ವರುಷದನಂತರ 12 ವರುಷಗಳೊಳಗೆ ಮೃತಪಟ್ಟರೆ ಅಥವಾ 12 ವರುಷಗಳ ಮೇಲೆ ಬದುಕಿದರೆ ಮೃಗದ ಪೂರ್ತಿ ಬೆಲೆಯು ಲಾಭ ಸಮೇತ ಕೊಡಲಾಗುವುದು.

ಜರೂರಿನಿಂದ ಬೇಕಾಗಿದೆ.

ಒಳ್ಳೇ ಸಂಬಳದಲ್ಲಿ ಕೊಡಗಿನಲ್ಲೆಲ್ಲಾ ಪ್ರಚಾರಕರೂ ಮತ್ತು ಸಂಸ್ಥಿರವಾದ ಏಜಂಟರುಗಳು ಬೇಕಾಗಿವೆ. ಒಂದಾಣೆ ಸ್ಟಾಂಪು ಸಮೇತ ಕೆಳಗಿನ ವಿಳಾಸಕ್ಕೆ ಬರೆಯಿರಿ.

V. K. R. ACHARYA,
C/o U. RAGHAVENDRA RAO,
Brahmins' Lane,
MERCARA.

ಕಂಚಿ ಕೊರಾಡು ಸೀರೆಗಳು.

ಇವು ಅರಳೀಪೇಟೆ ಸೀರೆಯಂತೆ ಇರುವುವು, ಸುಂದರವಾದ ರೇಷ್ಮೆಯ ಸೆರಗೂ, ಅಂಚೂ ಇರುವುವು. 18 ಮೊಳ ಉದ್ದ, ದೊಡ್ಡ ಪನ್ನ ಬಣ್ಣ ಹೋಗದು ಮತ್ತು ಇವರ ಬಣ್ಣವು ರೇಷ್ಮೆಯಂತೆ ಇರುವುದು. ಶ್ರೀಮಂತರೂ, ಗರೀಬರೂ ಕಟ್ಟಲು ಲಾಯಕ್ಕಾದುದು ಕ್ರಯ 1ನೇ ನಂಬರು 7—8—0 2ನೇ ನಂಬರು 9—8—0 ಸೆರಗು ಸರಿಗೆಯದು ರೂ 10—8—0

ವಿಳಾಸ —

ಬಿ ಪೆರುಮಾಳ್ ಕಂಪೆನಿ,
28, ಹನುಮಂತರಾಯನ ಕೋಯಿಲ್ ಬೀದಿ,
ಜಾರ್ಜಟೌನ್, ಮದ್ರಾಸ್.

ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚ್.

ಈ ಗಡಿಯಾರಗಳನ್ನು ಸೀಮೆ ಭಂಗಾರದಿಂದ (ಫ್ರೆಸ್ ಮೋಲ್ಡ್) ಲೀವರ್ ಮೂವ್ಮೆಂಟ್ಸ್‌ಗಳಿಂದ ತಯಾರಿಸಿದ್ದು ಇವಕ್ಕೆ ಭರವಸೆಯುಳ್ಳ 5 ವರುಷ ಗ್ಯಾರಂಟಿಯು ಕಂಪೆನಿಯವರ ಸೀಲು ಗಡಿಯಾರದ ಮೇಲೆ ಮುದ್ರಿಸಿರುವದು ಇದಕ್ಕೆ ಸುಮ್ಮನೆ ಕೆಟ್ಟುಹೋದರೆ ಯಾವ ಖರ್ಚಿಲ್ಲದೆ ನಾವೇ ಸರಿಮಾಡಿ ಕೊಡುವೆವು ಇದು ಐದಾರು ಗಂಟೆಯನ್ನು ತೋರಿಸುವದು ಇವು ಸುಖ ಭಂಗಾರದ ಗಡಿಯಾರಕ್ಕೆ ಸರಿಸಮವಾಗಿರುವವು



5 ವರುಷ ಗ್ಯಾರಂಟಿಯುಳ್ಳದ್ದು ರೂ 10—8—0
3 ವರುಷ ಗ್ಯಾರಂಟಿಯುಳ್ಳದ್ದು ರೂ 8—5—0
ಬೆಸ್ಟ್ ಲೀವರ್ ಪಾಕೆಟ್ ವಾಚ್ ರೂ 5—8—0

ಹೊಸ ನಮೂನೆ ಅಲಾರಂ ಟೈಂಪೀಸ್.

ಇವು ಜರ್ಮನ್ ದೇಶದಲ್ಲಿ ತಯಾರಿಸಿದ್ದು ಗಡಿಯಾರದ ಎತ್ತರ 7 ಅಂಗುಲವಿದೆ ಗಂಟೆ ಹೊಡೆಯುವುದು ಮತ್ತು ಗಂಟೆ ತೋರಿಸುವ ಡೈಯಲಿನಲ್ಲಿ ಅನೇಕ ವಿಧವಾದ ಗೊಂಬೆಗಳು ಇರುವವು ಅವು ಕಣ್ಣು, ಕೈ, ಕಾಲು ಆಡಿಸುವವು. ಸಲಾಂ ಮಾಡುವವು, ಕುದುರೆ ಸವಾರಿ ಮಾಡುವದು ಮುಂತಾದ ಸವಾರಿಗಳು ಬಹು ಚನ್ನಾಗಿ ಕಾಣುವವು ಡಿಂಗ್ ರೂಮು, ಅಂಗಡಿ, ಸಾಲು, ಗುಡಿ ಮುಂತಾದವುಗಳಲ್ಲಿ ಇಡಲು ಬಹು ಲಾಯಕ್ಕಾದದ್ದು 3 ವರುಷ ಗ್ಯಾರಂಟಿ ಕೊಡುವೆವು ಕ್ರಯ 1ಕ್ಕೆ ರೂ 5—4—0.

ರೋಲ್ಡ್ ಗೋಲ್ಡ್ ಆಭರಣಗಳು.

ಇವು ಮಿಶ್ರ ಲೋಹದೊಂದಿಗೆ ಒಂದು ಭಾಗ ಚೊಕ್ಕ ಚಿನ್ನ ಸೇರಿಸಿ ರೋಲ್ಡ್ (ಹೊದಿಕೆ ಕೊಟ್ಟು) ಗೋಲ್ಡಿನ ಉತ್ತಮ ತರದ ಆಭರಣಗಳು ಇವು ಹತ್ತು ವರುಷಗಳ ವರೆಗೆ ಇವು ತಮ್ಮ ಒಳ್ಳೆಯನ್ನೂ ನೋಟವನ್ನೂ ಕಳೆದುಕೊಳ್ಳುವದಿಲ್ಲವೆಂದು ಭರವಸೆ ಕೊಡುತ್ತೇವೆ ಈಗಿನ ಹೊಸ ನಮೂನೆಯ ಕೆಲಸದವಾಗಿರುತ್ತವೆ

ಬಿಲ್ಲೆಯುಳ್ಳ ಕುತ್ತಿಗೆ ಸರ	ರೂ 5—12—0
ಓಲೆ	ರೂ. 2—12—0
ಬಳೆಗಳು ಜೊತೆಗೆ	ರೂ 3—0—0

ಬರೆದೊಡನೆ ಕ್ಯಾಟಲಾಗು ಕಳುಹಿಸಲಾಗುವುದು.

ವಿಳಾಸ —

ಅಮೇರಿಕನ್ ವಾಚ್ ಕಂಪೆನಿ,
ಪೋ. ಬಾ. ನಂ. 509
10. ಜಾರ್ಜಟೌನ್, ಮದ್ರಾಸು

CARS FOR HIRE.

For easy and comfortable travelling with little cost please run up to T. R. Ramiah, Agent, C. P. C. Co. Ltd., Booking Office, Chowk, Mercara, where Ford and Overland cars are ever ready for hire. Seats in buses can be had and parcels are carried between Mercara Mysore via Siddapore; Mercara Somwarpet via Fraserpet; Mercara Mangalore.

ಬಾಡಿಗೆಗೆ ಮೋಟಾರುಗಳು.

[illegible] ಸಿದ್ದಾಪುರಕ್ಕಾಗಿ ಮಡಿಕೇರಿಯಿಂದ ಮೈಸೂರಿಗೂ ಫ್ರೇಜರ್‌ಪೇಟೆಗಾಗಿ ಮಡಿಕೇರಿಯಿಂದ ಸೋಮವಾರಪೇಟೆಗೂ, ಮಡಿಕೇರಿಯಿಂದ ಮಂಗಳೂರಿಗೂ ಬಸ್ಸು ಟಿಕೇಟುಗಳು ದೊರೆಯುವವಲ್ಲದೆ ಸಾಮಾನುಗಳೂ ಒಯ್ಯಲ್ಪಡುವವು.

ಬೇಟೆಗೆ ಅವಶ್ಯವಾದ

ಕೋವಿಮದ್ದು ಪೌಂಡಿಗೆ ರೂ. ३—४—०

ಕೇಪು ಕೋವಿನ ಕೇಪುಗಳು, ೨೫೦ಉಳ್ಳ ಪೆಟ್ಟಿಗೆಗೆ ೭—४—०



ಆರ್ಡರು ಕಳುಹಿಸುವಾಗ್ಯೆ ಯೂವಾಗಲೂ ರೂ. 5 ಅಡ್ವಾನ್ಸು ಕಳುಹಿಸತಕ್ಕದ್ದು. ಜಮ್ಮ ಹಿಡುವಳಿದಾರರು ಆರ್ಡರು ಕಳುಹಿಸುವಾಗ ಮೊದಲನೇ ಸಾರಿಮಾತ್ರ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರಿಂದ ವಿನಾಯತಿ (ಎಕ್ಸೆಂಪ್ಶನ್) ಸರ್ಟಿಫಿಕೇಟನ್ನು ಕಳುಹಿಸಬೇಕು. ತಪ್ಪಿದಲ್ಲಿ ನಿಮಗಾಗಿ ನಾವೇ ಆ ಸರ್ಟಿಫಿಕೇಟನ್ನು ಒದಗಿಸಿಕೊಳ್ಳಲು ತಯಾರಾಗಿದ್ದೇವೆ.

ಈ ಕೆಳಗಿನ ವಿಳಾಸಕ್ಕೆ ಆರ್ಡರುಗಳನ್ನೂ ಪತ್ರವ್ಯವಹಾರಗಳನ್ನೂ ಇಂಗ್ಲಿಷಿನಲ್ಲಿ ನಡಿಸತಕ್ಕದ್ದು.

S Venkatarangam Chetty,
Ammunition & Sulphur Merchant
No 9, China Bazar,
12-5. Madras.

MY SCIENTIFIC SYSTEM OF GRADUATED PHYSICAL CULTURE.

SENT FREE TO EVERY ONE.

This will show you some of my remarkable achievements in Health building exercises, many pages with nice photographs of myself and a number of my pupils Read what they say about my system Don't take my word for it. This book will be an impetus, an inspiration to every young man. All I ask is the price of postage two annas Remember this does not obligate you in any way, so don't delay one minute in your life. Write for this big book now while it is on your mind

Prof. M. V. Krishna Rao,
P. O. Basuvangudi.
BANGALORE CITY (S. I.)

ಪ್ರಕಟಣೆ.

ನಮ್ಮ ಅಂದವಾದಹೊಸ ಅಕ್ಷರಗಳು ಬಂದು ತಲಪಿರುವುದರಿಂದ, 'ಲೆಟರ್ ಹೆಡ್ಸ್,' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ. ಮೇನೇಜರ್,
'ಕೊಡಗು' ಲಿಮಿಟೆಡ್

ನೀರಿನ ಚಿಂತೆಯನ್ನು ತಪ್ಪಿಸುವ ಕಿರ್ಲೋಸ್ಕರ ಪಂಪು.

ಮನೆಗಳಲ್ಲಿ ನೀರು ಸೇದುವದೊಂದು ಬಹು ಕಷ್ಟದಾಯಕವು. ಅದರಲ್ಲಿ ಈ ಕೆಲಸವನ್ನು ಕರ್ನಾಟಕದಲ್ಲಿ ಬಹುಶಃ ಸ್ತ್ರೀಯರೇ ಮಾಡಬೇಕಾದ್ದರಿಂದಲೂ ಇಮ್ಮಡಿ ಕಷ್ಟವಾಗುತ್ತೆ. ಮನೆಯಲ್ಲಿ ಶ್ರೀಮಂತರಿದ್ದಾಗ್ಯೂ ನೀರಿನ ವಿಷಯದಲ್ಲಿ ಸ್ವತಃ ಸೇದಬೇಕಾಗುತ್ತದೆ ಆದ್ದರಿಂದ ಈ ಅಡಚಣೆಗಳನ್ನು ದೂರವಾಗುವದಕ್ಕೆ

ಕಿರ್ಲೋಸ್ಕರ ಪಂಪುಗಳನ್ನೇ

ಉಪಯೋಗಿಸಿ. ಇದರಿಂದ ಆರೋಗ್ಯ ಉಳಿಯುವದು ತಿಂದ ಅನ್ನ ಮೈಯಿಗೆ ಹತ್ತುವದು. ಇವುಗಳ ಬಿಡಿಭಾಗಗಳು ಸಮ [illegible] ತಯಾರಾಗುವದರಿಂದ [illegible] ಬಾಳಿಕೆಯಲ್ಲಿ ಗಟ್ಟಿ [illegible] ನಗಳು ಇರುತ್ತವೆ

[illegible]

ಕಿರ್ಲೋಸ್ಕರ [illegible]

11 ಜಿ. ನಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ

ಮೂರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯಕ್ರಯ ವಾಪಾಸು. ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಟ್ರೇಡ್‌ಮಾರ್ಕ]ರಜಿಸ್ಟರ್‌ವಾದದ್ದು [ನೋಡಿ ತೆಕ್ಕೊಳ್ಳಿ].

ಅಗಸ್ತ್ಯಮುನಿಪ್ರಿಯ ಚಿಂತಾಮಣಿ ಲೇಹ

ಆಬಾಲವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾಣಿಸಿದದ್ದು ಮೇಹ ವಿಕಾರವಿದ್ದವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ, ಜ್ಞಾನಿ ಮುಮುಕ್ಷುಗಳಿಗೂ ಉಪಯೋಗವುಳ್ಳ ಬಹುಪರಮಾನಂದ ಔಷಧಿ. 1ಸೇರು 48ದಿವಸ ಸೇವಿಸಬಹುದು. ನಂ (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3—0—0. ½ಸೇರು ಡಬ್ಬಿ 1ಕ್ಕೆ ರುಪಾಯಿ 1—9—0, ನಂ. (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2—0—0, ½ ಸೇರು ಡಬ್ಬಿ 1ಕ್ಕೆ 1—1—0, ವಿ ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ

ವಿಳಾಸ.—ದೇವಣ್ಣ ನಾರಾಯಣಶೇಟ್,
ಗೋಳಿಕಟ್ಟಾ,
ಮಂಗಳೂರು,
12—9 ದ. ಕ.

ಕರ್ಣಾಟಕ ಎಗ್ಯೂ ಮಿಕ್ಸ್ಚರ್

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝಾ ಅಡವಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧४—೦

ಟಪ್ಪಾಲು ಖರ್ಚು ಬೇರೆ

ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು. ೯—೨—೦

ಏಜಂಟರು ಬೇಕು, ಕೊಡಗಿನ ಸ್ಥಳ [illegible] ಗಳು [illegible]

ಪ್ರಕಟಣೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಸ ಪ್ರಕಾರ ರಿಜಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	3890
ಜಮಾಬಂದ ಠೇವಣಾತಿ	....	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಅಪರೇಟಿವ್ ರಜಿಸ್ಟ್ರಾರವರು ಲೆಕ್ಕ ಅಜಮಾಯಿಷಿ ಮಾಡುತ್ತಾರೆ.

ಪ್ರಸಿಡೆಂಟರು, ಟ್ರೆಜರರ್.
ಓಡಂದೇರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ.
ಸಿ. ಯಂ. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಕು 29—8—1925.

"ಲೋಕರಹಸ್ಯ."

ಕೃಷಿಯ ಅತ್ಯುತ್ತಮ ರೀತಿಗಳು, ವ್ಯಾಪಾರದ ವಿಷಯಗಳು, ಹೆಂಗಸರಿಗೆ ಬೇಕಾದ ಗೃಹಕೃತ್ಯದ ವಿಷಯಗಳು, ಹುಲಿಗೆ ಮಕ್ಕಳನ್ನು ಸಾಕುವ ವಿಷಯಗಳು, ಬಡವರಿಗೆ ಬೇಕಾದ ಹಣ ಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದಯುನಾನಿ ವೈದ್ಯ ಸಂಗ್ರಹ, ಪ್ರತಿಯೊಬ್ಬನೂ ತಿಳಿಯಬೇಕಾದ 'ಆ' ಚಾರ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂದಲೂ, ತುಂಬಿ ತುಳುಕುತ್ತಿರುವ ಈ ಮಾಸ ಪತ್ರಿಕೆಗೆ ವರ್ಷಕ್ಕೆ ಚಂದಾ ರೂ. 3—8—0 ಮಾದರಿ ಸಂಚಿಕೆಗೆ 0—5—0.

ಪ್ರತಿ ತಿಂಗಳು [illegible] 60 ಪುಟ [illegible]

[illegible] 8

GOOLAMHUSSAIN ALLIBHOY & SONS.

Largest Importers of Fire Arms and Ammunition, Cheapest priced firm in India,

210 Abdul Rehman Street, BOMBAY.



Brilliant Search light tied over the hat.

Use our Brilliant Search Light Lamp for Hunting, **Camping, Fishing, Trapping and all kinds of out door sports during the night**, [illegible]
Free Delivery

12 and 16 bore Zeppelin Bullet cartridges recommendable for **big Game shooting,** Rs 30/-100.

We stock Arms, Ammunition and shooting requisites of almost all the kinds and classes ranging from Re 1/- to Rs 3,600/-

Apply for the Current Catalogue.
24—10

Printed & published by Kodanda Appayya, R.B., Chairman, Board of Directors, at "Kodagu" Press, Mercara for Kodagu" Ltd.

If not delivered please return to
"KODAGU" OFFICE MERCARA

ಕೊಡಗು.

ವಾರ್ಷಿಕ ಚಂದಾ ರೂ—೮—೦.

ಕಣ್ವನ ಭೂಕರದಯುತ ವಿದ್ಯಾ ನೀತಿ ಪ್ರಯತ್ನತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ:—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೫] ಕೊಡಗು, ಸಗ ೧೯೨೩ನೇ ಇಸವಿ ಸೆಪ್ಟೆಂಬರ್ ತಾರೀಕು ೧೪ನೇ ಶುಕ್ರವಾರ [ಸಂಚಿಕೆ ೧೬

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು ರಾಮರಾವ್, ಯಮ್. ಎಲ್ ಸಿ ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ಹಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುವು

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ. 'ಆರೋಗ್ಯ ಚಂದ್ರಿಕೆ' 323, ತಂಬುಶೆಟ್ಟಿ ಬೀದಿ, ಮದ್ರಾಸ್.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ ಚಂಗಂಡ ಕುಟ್ಟಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಏಜಂಟರುಗಳು

ವೀರಾಜಪೇಟೆ—ಖಾದಿ ಭಂಡಾರದಲ್ಲಿ ಮೆ ಮುಂಡೇಟಿರ ಚಿರಮಣ್ಣನವರು

ಮೂರ್ನಾಡು—ಕಮರ್ಶಿಯಲ್ ಸ್ಟೋರಿನಲ್ಲಿ ಮೆ. ಮಡೆಯಂಡ ದೇವಯ್ಯನವರು

ಸಾಪ್ಪೋಕ್ಲು—ಮೆ ಅರಯಡ ಸುಬ್ಬಯ್ಯನವರು.

„ ಮೆ ಪೊನ್ನಚಂಡ ಮುದ್ದಪ್ಪನವರು

ಗೋಣಿಕೊಪ್ಪಲು—ಮೆ ಜಮ್ಮಡ ಮಾದಪ್ಪನವರು,

ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಮ್ಮಯ್ಯನವರು.

ಮಡಿಕೇರಿ—ಮೆ. ಜಿ. ಮಾದಮ್ಮನವರು.

ಅಮ್ಮತ್ತಿ ಸಿದ್ದಾಪುರ—ಮೆ. ಐನಂಡ ಮಾದಪ್ಪನವರು
ಮೆ. ಕಲಿಯಂಡ ಸೋಮಯ್ಯನವರು.

ಅಲ್ಲದೆ ಈ ಸಮ್ಮಂಧ ಮೆ ಚಂಗಂಡ ಕುಟ್ಟಪ್ಪನವರು, ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಸಹ ಮೊಬಲಗು ಕೊಡಬೇಕಾಗಿ ಕೋರಿಕೆ.

ಕೋದಂಡ ಉತ್ತಯ್ಯ.

ಆರ್ಗನೈಜಿಂಗ್ ಡೈರೆಕ್ಟರು, "ಕೊಡಗು" ಲಿಮಿಟೆಡ್

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಂಟಾದ ಕಂಟ್ರಾಕ್ಟು ಎಗ್ರಿಮೆಂಟು ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ ಬೇಕಾದವರು 'ಕೊಡಗು' ಆಫೀಸಿಂದ ಪಡಕೊಳ್ಳಬಹುದು.

ಮಡಿಕೇರಿ 17-9-21 — ಮೇನೇಜರ್, 'ಕೊಡಗು' ಆಫೀಸು

ಶ್ರೀ ಗುರು ಕೃಪೆಯಿಂ ಅನುಭವಸಿದ್ಧ ಎರಡು ಔಷಧ ರತ್ನಗಳು.

೧. ಬಾಲ ಭೀಮ ಟೊನಿಕ್.

ಇದು ಬಾಲಕರ ಉತ್ತಮ ಶಕ್ತಿ ವರ್ಧಕ, ರೋಗ ನಿವಾರಕ, ಉತ್ತೇಜಕ, ಔಷಧ ... ಮಕ್ಕಳ ಎಲ್ಲಾ ತರದ ಅಶಕ್ತಿ, ಕೃಶ ಶರೀರ, ಸೆಗಣಿ, ಕೋವೆ, ಅಜೀರ್ಣ, ಜ್ವರ ಮತ್ತು ದುರ್ಗಂಧ, ತಂದೆ ತಾಯಿಗಳಿಂದ ಬಂದ ಗರ್ಭದೂಷಿತ ಮೇಹ ವಾತ ರೋಗಗಳಿಗೆ ಅತ್ಯಂತ ಗುಣಕಾರಿ ... ಒಮ್ಮೆ ತರಿಸಿ ಪರೀಕ್ಷಿಸಬಾರದೇ? ಬಾಟ್ಲಿ ೧ಕ್ಕೆ ರೂ ೧—೪—೦, ಡಜನ್ ೧ಕ್ಕೆ ೧೩—೦—೦.

೨. ಬಾಲಾರಿಷ್ಟ ನಿವಾರಕ ತೈಲ.

ಈ ತೈಲಾಭ್ಯಂಗ ಸ್ನಾನದಿಂದ ಮಕ್ಕಳ ಅಶಕ್ತಿ, ಬಾಲಗ್ರಹ, ಕಜ್ಜಿ ವಗೈರೆ ವ್ಯಾಧಿಗೆ ಗುಣಕರ ಬಾಟ್ಲಿ ೧ಕ್ಕೆ ರೂ. ೧—೪—೦, ಡಜನ್ ೧ಕ್ಕೆ ರೂ ೧೨—೮—೦.

ತನು ಭಗಿನಿಯ ಪತ್ತೆ—ಶ್ರೀಮತಿ ತಿಪ್ಪುಬಾಯಿ, ಸಹಿತಲ, ಕಾನಗೋಡ ಸಿಸಿರ್, ಉಕಾನದಾ, ಮುಂಬಯಿ

12-4

ಮಾರಾಟಕ್ಕೆ ತಯಾರಿವೆ.

ಬಗೆ ಬಗೆಯ ಚಕಾರಗಳು ವೀರಾಜಪೇಟೆಯ ಮದ್ರಾಸ್ ಸ್ಟೋರಿನಲ್ಲಿ ಮಾರಾಟಕ್ಕೆ ತಯಾರಿವೆ ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿ

ಬಿ. ಎ. ವಿಷ್ಣುಪ್ಪ,
ಮದ್ರಾಸ್ ಸ್ಟೋರ್ಸ್,
8 ವೀರಾಜಪೇಟೆ

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3 ವಾರ್ತಾದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ವಾರ್ತೆಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಟಾಂಪು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು 5. ಪ್ರಕಟಿಸಲಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

SPENCERS-
FOUNTAIN PEN SPECIALISTS.

Watermans pens at Rs 12½, & 9 each
Swan pens at Rs 14½, 9½, 9½, & 6½ each
Onoto pens at Rs 11½ each
Blackbird at Rs 3½ each
Jackdaw at Rs 4 each
Spencers S F. at Rs 3½ each.
Spencers ordy at Rs. 2½ each
" Order by post,
" Distance makes
" No difference "

Get a copy of our Revised wine and Store price lists, very handy

Spencer & Co.Ltd,
47 MERCARA & POLLIBETTA.

ಮಹನೀಯರೇ,

1923ನೆ ಇಸವಿಯಲ್ಲಿ ವೀರರಾಜೇಂದ್ರಪೇಟೆಯಲ್ಲಿ ತೆರೆದ ನಮ್ಮ ವೈದ್ಯಶಾಲೆಯು ರಾಜ್ಯದಲ್ಲಿ ಅನೇಕ ದುಸ್ಸಾಧ್ಯವಾದ ಕಾಯಿಲೆಗಳನ್ನು ಗುಣಪಡಿಸಿ ಹೆಸರುವಾಸಿ ಹೊಂದಿದ ನಮ್ಮ ಕಂಪೆನಿಯ ಮತ್ತೊಂದು ಶಾಖೆಯು ಈಗಾಗಲೇ ಸೋಮವಾರಪೇಟೆಯಲ್ಲಿ ತೆರಯಲ್ಪಟ್ಟಿದೆ

ಕೃಷ್ಣ ಸಂಪೇಶ್ವರ ಮತ್ತು ನಾರಾಯಣ ಸಂಪೇಶ್ವರ ಎಂಬ ಹೆಸರುಗಳುಳ್ಳ ನಮ್ಮ ಪ್ರಧಾನ ವೈದ್ಯರುಗಳು ಒಬ್ಬೊಬ್ಬರು ಒಂದೊಂದು ಶಾಖೆಯಲ್ಲಿ ಯಾವಾಗಲೂ ಇರುತ್ತಾರೆ.

ಈ ವೈದ್ಯರುಗಳು ಇಂಡಿಯಾ ಚಕ್ರವರ್ತಿಯವರಿಂದ ವೈದ್ಯರತ್ನವೆಂಬ ಬಿರುದನ್ನು ಹೊಂದಿದವರಾಗಿಯೂ ಕೊಚ್ಚಿ ಸಂಸ್ಥಾನದ ರಾಜವಂಶದ ಸ್ಥಿರ ವೈದ್ಯರಾಗಿಯೂ ಸುಪ್ರಸಿದ್ಧ ಹೆಸರುವಾಸಿಯನ್ನು ಪಡೆದವರಾಗಿಯೂ ಇರುವ ಇ. ಟಿ. ನಾರಾಯಣನ್ ಮೂಸ್ ಎಂಬ ಮಹಾನುಭಾವರ ಕೈಕೆಳಗೆ ಹೆಚ್ಚು ವರ್ಷಗಳಿದ್ದು ಪಾಂಡಿತ್ಯವನ್ನೂ ಪರಿಚಯವನ್ನೂ ಪಡೆದವರಾಗಿಯೂ ಇದ್ದಾರೆ.

ಇವರಲ್ಲಿನ ಎಲ್ಲಾ ಔಷಧಗಳಿಗೆ ಮಲಬಾರಿನ ಎಲ್ಲಾ ವೈದ್ಯಶಾಲೆಗಳ ಔಷಧಗಳ ಚಾರ್ಜಿಗಿಂತಲೂ ಕಮ್ಮಿಯಾಗಿದೆ.

ನಂಬೀಶನ್ ಮತ್ತು ಕಂಪೆನಿ,
ಆಯುರ್ವೇದಿಕ್ ಪ್ರೈವೇಟ್ ಡಿಸ್ಪೆನ್ಸರಿ.
ಕಣ್ಣೂರು, ವೀರಾಜಪೇಟೆ ಮತ್ತು
52-20 ಸೋಮವಾರಪೇಟೆ.

ARMS & AMMUNITION MART.

Mahomedally-Noorbhoy.



337, Andul Rehman, Street, near
Crawford Market, BOMBAY
Telegrahic Address :-" SHOOTER "
Bombay

[52 4] Please write for latest Catalogues.

"ಕೊಡಗು".

೧೯೨೫ನೇ ಇಸವಿ ಸೆಪ್ಟೆಂಬರ್ ತಾ. ೧೮ನೇ ಶುಕ್ರವಾರ.

ಇಂಡಿಯಾ ಸುಧಾರಣೆ.

ಹಿಂದೂದೇಶದ ಅನೇಕ ಕಡೆಗಳಲ್ಲಿ ತುಂಬಾ ಆಶೆಯನ್ನು ಹುಟ್ಟಿಸಿದ್ದ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮತ್ತು ವೈಸರಾಯರವರ ಭಾಷಣಗಳು ಆದವು. ಅವುಗಳ ನಿಸ್ಸಾರವು ಹಿಂದೀಯರಿಗೆಲ್ಲಾ ಸಂಪೂರ್ಣ ಆಶಾಭಂಗವನ್ನುಂಟು ಮಾಡಿತು. ಈ ರೀತಿ ಹಿಂದೂದೇಶವು ಉತ್ಸಾಹ ಹೀನವಾಗಿದ್ದಾಗ ಅಖಿಲಭಾರತ ನ್ಯಾಯವಿಧಾಯಕ ಸಭೆಯಲ್ಲಿ ಕಳೆದವಾರ ಆದ ತೀರ್ಮಾನವು ಜನರಿಗೆ ಧೈರ್ಯಕೊಟ್ಟು ಉತ್ಸಾಹವನ್ನು ಹೆಚ್ಚಿಸಿದೆ ಅನ್ನುವುದರಲ್ಲಿ ಏನೂ ಸಂಶಯವಿಲ್ಲ.

1924ನೇ ಇಸವಿ ಫೆಬ್ರವರಿಯಲ್ಲಿ ಇದೇ ಎಸೆಂಬ್ಲಿಯಲ್ಲಿ ದೇಶದ ಪ್ರತಿನಿಧಿಗಳು ಈಗಿನ ಸುಧಾರಣೆಗಳು ತೃಪ್ತಿಕರವಲ್ಲವಾದುದರಿಂದ ಹೆಚ್ಚಿನ ಮಾರ್ಪಾಡುಗಳನ್ನು ಒಡನೆ ಕೊಡಬೇಕೆಂದು ಪಾಸುಮಾಡಿದ ರಠಾವಿನ ಪರಿಣಾಮವಾಗಿ 1919ರಲ್ಲಿ ದೊರೆತ ಸುಧಾರಣೆಯಲ್ಲಿರುವ ಕೊರತೆಗಳನ್ನು ಕಂಡು ಹಿಡಿಯಲು ಮಡ್ಡಿಮ್ಯಾನ್ ಕಮಿಟಿಯು ನೇಮಕವಾಯಿತು. ಈ ಕಮಿಟಿಯಲ್ಲಿ ಸರಕಾರಿ ಪರವಾದ ಬಹು ಮತದವರು ಹೆಚ್ಚಿನ ಸುಧಾರಣೆಯ ವಿಷಯ ಮಾತೆತ್ತದೆ ಹೋದರೂ ಉದ್ಯೋಗಸ್ಥರಲ್ಲದ ಮೈನಾರಿಟಿಯವರು ಹೆಚ್ಚಿನ ಮಾರ್ಪಾಡುಗಳನ್ನು ಕೂಡಲು ಒಂದು ರಾಯಲ್ ಕಮಿಷನನ್ನು ಒಡನೆ ನೇಮಿಸಬೇಕೆಂದು ಬರೆದಿರುವರು. ಸ್ಟೇಟ್ ಸೆಕ್ರೆಟರಿಯವರ ಮತ್ತು ವೈಸರಾಯಿಯವರ ಭಾಷಣಗಳನ್ನನುಸರಿಸಿ ಮೈನಾರಿಟಿಯವರ ಸೂಚನೆಯನ್ನು ಮೂಲೆಗೊತ್ತಿ ಬಹು ಮತದವರ ಶಿಫಾರಸ್ಸುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಜಾರಿಗೆತರಬೇಕೆಂಬ ರಠಾವನ್ನು ಸರಕಾರಿ ಮೆಂಬರು ಎಸೆಂಬ್ಲಿಯಲ್ಲಿ ಕಳೆದವಾರ ಚರ್ಚೆಗೆ ತಂದರು. ಇದಕ್ಕೆ ವಿರೋಧವಾಗಿ ಹಿಂದೂಸ್ಥಾನದ ಜನರ ಪರವಾಗಿ ಚುನಾಯಿತ ಮೆಂಬರರು ಈ ಕೆಳಗಿನ ಅಭಿಪ್ರಾಯಗಳುಳ್ಳ ಬದಲಾಯಿಸಿದ ರಠಾವನ್ನು ಸೂಚಿಸಿದರು. ಇದು ದೀರ್ಘ ಚರ್ಚೆಯಾದನಂತರ ದೊಡ್ಡ ಬಹುಮತದಿಂದ ಪಾಸಾದದ್ದೇ ಉತ್ಸಾಹ ಜನಕವಾದ ಸಂಗತಿಯಾಗಿದೆ.

ಪ್ರಜಾ ಪ್ರತಿನಿಧಿಗಳ ರಠಾವಿನ ಸಾರಾಂಶವೇನೆಂದರೆ— ಹಿಂದೂಸ್ಥಾನದ ಆಡಳಿತ ಕ್ರಮದಲ್ಲಿ ಈ ಕೆಳಗಿನ ಮುಖ್ಯ ಬದಲಾವಣೆಗಳನ್ನು ಮಾಡುತ್ತೇವೆಂಬ ವಾಗ್ದಾನವನ್ನು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಚಕ್ರವರ್ತಿಯವರ ಸರಕಾರವು ಬಹಿರಂಗಪಡಿಸಬೇಕು :—

(1) ಈ ವರೆಗೆ ಚಕ್ರವರ್ತಿಯವರದೆನಿಸಿಕೊಳ್ಳುವ ಹಿಂದೂಸ್ಥಾನದಲ್ಲಿರುವ ಸರ್ವ ಆಸ್ತಿಗಳೂ ಉತ್ಪತ್ತಿಗಳೂ ಇನ್ನು ಮುಂದೆ ಹಿಂದೂಸ್ಥಾನದ ಸರಕಾರದವರ ಪರವಾಗಿ ಮಂತ್ರಿ ಮಂಡಲಿಯನ್ನೊಳಕೊಂಡ ಗವರ್ನರ್ ಜನರಲರವರ ವಶದಲ್ಲಿರಬೇಕು.

(2) ಮಂತ್ರಿ ಮಂಡಲಿಯನ್ನೊಳಕೊಂಡ ಗವರ್ನರ್ ಜನರಲರು ಅಖಿಲ ಹಿಂದೂಸ್ಥಾನದ ನ್ಯಾಯವಿಧಾಯಕ ಸಭೆಗೆ ಜವಾಬ್ದಾರರಾಗಿರಬೇಕು. ಈ ಜವಾಬ್ದಾರಿಕೆಗೆ ಒಳಪಟ್ಟು ಹಿಂದೂಸ್ಥಾನದ ಉತ್ಪತ್ತಿಯನ್ನು ಖರ್ಚು ಮಾಡುವ ಹಕ್ಕು ಅವರಿಗಿರಬೇಕು. ಆದರೆ ನಿಯಮಿತ ಕಾಲದ ವರೆಗೆ ಮಾತ್ರ ಒಂದು ಮಿತಿಗೆ ಮೀರದ ಸೈನ್ಯದ ಖರ್ಚು, ರಾಜಕೀಯ, ಪರರಾಷ್ಟ್ರೀಯ ಖರ್ಚುಗಳೂ, ಹಿಂದೂಸ್ಥಾನ ಸರ್ಕಾರಕ್ಕಾಗಿ ಈ ವರೆಗೆ ಮಾಡಿದ ನ್ಯಾಯವಾದ ಸಾಲಗಳನ್ನು ತೀರಿಸುವ ಜವಾಬ್ದಾರಿಯೂ ಸ್ಟೇಟ್ ಸೆಕ್ರೆಟರಿಯವರ ಕೈಯೊಳಗಿರಬೇಕು.

(3) ಇಂಡಿಯಾ ಸ್ಟೇಟ್ ಸೆಕ್ರೆಟರಿ ಮತ್ತು ಅವರ ಕೌನ್ಸಿಲು ಮಾಡಬೇಕಾಗಿರುವ ಕೆಲಸಗಳನ್ನು ಸ್ವತಂತ್ರ ವಸಾಹತುಗಳ ಸೆಕ್ರೆಟರಿಯವರು ನೋಡಿಕೊಳ್ಳಬೇಕು.

(4) ಹಿಂದೂಸ್ಥಾನದ ಸೈನ್ಯವು ಸಾಧ್ಯವಾದಷ್ಟು ಶೀಘ್ರದಲ್ಲಿ ರಾಷ್ಟ್ರೀಯ ಸೈನ್ಯವಾಗಬೇಕು. ಸೈನ್ಯದ ಎಲ್ಲಾ ಉದ್ಯೋಗಗಳಿಗೂ ದೇಶೀಯರಿಗೆ ಹಕ್ಕಿರಬೇಕು. ಹಿಂದೂಸ್ಥಾನದ ಕಮಾಂಡರ್ ಇನ್ ಚೀಫ್‌ರಿಗೆ ಒಬ್ಬ ಮಂತ್ರಿ ಇರಬೇಕು. ಅವರಿಬ್ಬರು ಎಸೆಂಬ್ಲಿಗೆ ಜವಾಬ್ದಾರರಾಗಿರಬೇಕು.

(5) ಮಧ್ಯವರ್ತಿ ಮತ್ತು ಪ್ರಾಂತಿಕ ನ್ಯಾಯವಿಧಾಯಕ ಸಭೆಗಳು ಸಂಪೂರ್ಣವಾಗಿ ಸಾಧ್ಯವಾದಷ್ಟು ತುಂಬಾ ಓಟುಗಳಿಂದ ಚುನಾಯಿತರಾದ ಮೆಂಬರುಗಳಿಂದ ಕೂಡಿರಬೇಕು.

(6) ನ್ಯಾಯವಿಧಾಯಕ ಸಭೆಗೆ ಅಧೀನವಾಗಿರಬೇಕೆಂಬ ತತ್ವವನ್ನು ಮೇಲ್ಕಂಡ ಶರತ್ತುಗಳಿಗೆ ಒಳಪಟ್ಟು ಮಧ್ಯವರ್ತಿ ಸರಕಾರದ ಎಲ್ಲಾ ಇಲಾಖೆಗಳಿಗೂ ವ್ಯಾಪಕವಾಗುವಂತೆ ಮಾಡಬೇಕು.

(7) ಪ್ರಾಂತ್ಯಗಳಲ್ಲಿ ದ್ವಿಮುಖ ಸರಕಾರವು ಹೋಗಿ ಸಂಪೂರ್ಣ ಜವಾಬ್ದಾರಿ ಕ್ರಮವು ಸ್ಥಾಪಿತವಾಗಿ ಮಧ್ಯವರ್ತಿ ಸರಕಾರದ ಮೇಲ್ವಿಚಾರಕ್ಕೆ ಮಾತ್ರ ಒಳಪಟ್ಟು ಸ್ವತಂತ್ರ ಸರಕಾರಗಳಿರಬೇಕು.

(8) 2ನೇ ಕಲಮಿಗೆ ಒಳಪಟ್ಟು ಹಿಂದೂಸ್ಥಾನದ ರಾಜಕೀಯ ಸುಧಾರಣೆಗಳನ್ನು ಮಾಡಿಕೊಳ್ಳುವ ಹಕ್ಕು ಅಖಿಲ ಭಾರತೀಯ ನ್ಯಾಯವಿಧಾಯಕ ಸಭೆಗೆ ಇರಬೇಕು.

ದೇಶೀಯ, ಯೂರೋಪಿಯನ್, ಆಂಗ್ಲೋ ಇಂಡಿಯನ್ ಮತ್ತು ಇತರ ಎಲ್ಲಾ ಕಡಿಮೆ ಸಂಖ್ಯೆಯ ಜನರ ಗುಂಪುಗಳ ಪ್ರತಿನಿಧಿಗಳುಳ್ಳ ಒಂದು ಸಭೆಯನ್ನು (ರೌಂಡ್ ಟೇಬಲ್ ಕಾನ್ಫರೆನ್ಸ್) ಎಸೆಂಬ್ಲಿಯ ಅನುಮತಿಯೊಡನೆ ಏರ್ಪಡಿಸಿ ಇದರ ಮೂಲಕ ಮೇಲ್ಕಂಡ ತತ್ವಗಳಿಗೆ ಒಳಪಟ್ಟು ಆಡಳಿತ ರಚನಾಕ್ರಮ ಒಂದನ್ನು ತಯಾರಿಸಿ ಅದಕ್ಕೆ ಎಸೆಂಬ್ಲಿಯ ಅನುಮತಿಪಡೆದು ಪಾರ್ಲಿಮೆಂಟಿನಿಂದ ಮಂಜೂರಾತಿ ಪಡೆಯಬೇಕು.

ಈ ರೀತಿ ಸಾಧಾರಣ ಸಂಪೂರ್ಣ ಸ್ವತಂತ್ರವನ್ನು ಕೇಳುವ ಠರಾವಿಗೆ ಚುನಾಯಿತ ಮೂರು ಮೆಂಬರುಗಳು ವಿನಹ ಇತರ ಎಲ್ಲಾ ಚುನಾಯಿತ ಮತ್ತು ಹಲವು ನಿಯಮಿತ ದೇಶೀಯ ಮೆಂಬರುಗಳೂ ಸಹ ಓಟುಕೊಟ್ಟಿದ್ದಾರೆಂದ ಮೇಲೆ ಅಖಿಲ ಹಿಂದುಸ್ಥಾನವು ಒಗ್ಗಟ್ಟಾಗಿ ಸ್ವತಂತ್ರವನ್ನು ಕೇಳಿದಂತೆಯೇ ಆಯಿತು. ಈ ಠರಾವಿನ ಪರವಾಗಿ 72 ಓಟುಗಳೂ ವಿರೋಧವಾಗಿ 45 ಓಟುಗಳೂ ಎಣಿಸಲ್ಪಟ್ಟವು. ವಿರೋಧಿಸಿದವರಲ್ಲಿ ಹೆಚ್ಚಿನವರು ಉದ್ಯೋಗಸ್ಥರೂ ಮತ್ತು ಯೂರೋಪಿಯನರೂ ಆಗಿದ್ದರು. ಪಾರ್ಲಿಮೆಂಟಿನಲ್ಲಿ ಸ್ಟೇಟ್ ಸೆಕ್ರೆಟರಿಯವರು ಮಾಡಿದ ಭಾಷಣದಲ್ಲಿ ಹಿಂದೂಸ್ಥಾನದ ಎಲ್ಲಾ ಪಂಗಡದವರು ಸೇರಿ ಒಂದು ಆಡಳಿತ ರಚನಾ ಕ್ರಮವನ್ನು ತಯಾರಿಸಿದರೆ ಅದನ್ನು ಗಮನಕ್ಕೆ ತೆಗೆದುಕೊಳ್ಳಲಾಗುವದೆಂತ ಹೇಳಿದ ಮಾತಿನ ಪ್ರತಿ ಧ್ವನಿಯು ನಿಲ್ಲುವದರೊಳಗೆ ಎಲ್ಲಾ ಪಕ್ಷದವರು ಒಂದಾಗಿ ಸ್ವತಂತ್ರ ಹಿಂದೂಸ್ಥಾನದ ಆಡಳಿತ ಕ್ರಮವನ್ನು ಧೀರರೀತಿಯಲ್ಲಿ ಸೂಚಿಸಿದ್ದಾರೆ. ಸ್ಟೇಟ್ ಸೆಕ್ರೆಟರಿಯವರು ಈಗ ಏನು ಮಾಡುವರೆಂದು ನೋಡಬೇಕು. ಹಿಂದೂಸ್ಥಾನದವರು ಒಗ್ಗಟ್ಟಾಗುವ ಸಂಭವವೇ ಇಲ್ಲವೆಂಬ ಧೈರ್ಯದಿಂದ ಸ್ಟೇಟ್ ಸೆಕ್ರೆಟರಿಯವರು ಆಡಳಿತ ರಚನಾ ಕ್ರಮವನ್ನು ಕೇಳಿದರೋ, ಅಥವಾ ಮನಃಪೂರ್ತಿಯಾಗಿ ಕೇಳಿದರೋ ಎಂಬುದು ಈ ಠರಾವಿನ ಮೇಲೆ ಅವರ ವರ್ತನೆಯಿಂದ ತಿಳಿಯಬರುವುದು. ಈ ಕೋರಿಕೆಗೆ, ಈಗಿನ ಕೌನ್ಸಿಲುಗಳಿಂದ ಪ್ರಯೋಜನವಿಲ್ಲವೆಂತ ನಂಬಿ ಅವುಗಳನ್ನು ನಾಶಪಡಿಸಿ ಸ್ವಾತಂತ್ರ್ಯ ಪಡೆಯಬೇಕೆನ್ನುವ ಪಂಗಡದ ಮುಖ್ಯಸ್ಥರಾದ ಪಂಡಿತ ಮೋತಿಲಾಲ್ ನೆಹರುರವರೂ, ಬ್ರಿಟಿಷ್ ಅಧಿಕಾರಿಗಳ ಒಳ್ಳೇ ಉದ್ದೇಶವನ್ನು ನಂಬಿ ಅವರು ಕೊಟ್ಟಿರುವ ಸುಧಾರಣೆಯನ್ನು ಉಪಯೋಗಿಸಿ ಸರಕಾರದೊಡನೆ ಸಹಕರಿಸಬೇಕೆನ್ನುವ ಸರ್ ಶಿವಸ್ವಾಮಿ ಅಯ್ಯರವರೂ, ಇವೆರಡು ಅಭಿಪ್ರಾಯಗಳ ಮಧ್ಯದಲ್ಲಿರುವ ಮಿ. ಜಿನ್ನಾರವರೂ ಸಹ ಒಪ್ಪಿರುವಾಗ ಇದಕ್ಕಿಂತ ಮೀರಿದ ಒಗ್ಗಟ್ಟಿನ ಕೋರಿಕೆ ಬೇರೆ ಬೇಕೇ?

ಮೇಲೆ ಕಾಣಿಸಿದ ಪ್ರಜಾಪಕ್ಷದ ಠರಾವಿನಲ್ಲಿ ಇಂಡಿಯಾ ಸರ್ಕಾರದ ಉತ್ಪತ್ತಿಯನ್ನು ಸ್ಟೇಟ್ ಸೆಕ್ರೆಟರಿಯವರ ಸ್ವಾಧೀನದಿಂದ ತಪ್ಪಿಸಿ ಇಂಡಿಯಾ ಸರ್ಕಾರಕ್ಕೆ ಕೊಟ್ಟು ಇಂಡಿಯಾ ಸರ್ಕಾರವನ್ನು ಪ್ರಜಾಪ್ರತಿನಿಧಿಗಳಿಗೆ ಜವಾಬ್ದಾರಿಯಾಗಿ ಮಾಡುವುದೇ ಬಹಳ ಮುಖ್ಯವಾದ ಅಂಶವಾಗಿದೆ. ಈ ವರೆಗೆ ಹಿಂದೂದೇಶದ ಕೋಟಿ ಸಂಖ್ಯೆ ಜನರ ಕ್ಷೇಮಕ್ಕೆ ಸ್ಟೇಟ್ ಸೆಕ್ರೆಟರಿಯವರು ಇಂಗ್ಲಿಷ್ ಪಾರ್ಲಿಮೆಂಟಿಗೆ ಜವಾಬ್ದಾರರಾಗಿದ್ದಾರೆಂತ ಹೇಳಿಕೊಳ್ಳುತ್ತಿದ್ದಾರೆ. ಬ್ರಿಟಿಷ್ ಪಾರ್ಲಿಮೆಂಟಿಗೆ ಜವಾಬ್ದಾರರಾದರೆ ಹಿಂದೂಸ್ಥಾನದ ಪ್ರಜೆಗಳ ಕ್ಷೇಮವು ಸುರಕ್ಷಿತವಾಗಿರುವುದು ಹೇಗೆ? ಬ್ರಿಟಿಷ್ ಸರ್ಕಾರವು ಇಂಡಿಯಾವನ್ನು ಆಳುವುದರಿಂದ ಹಿಂದೂಸ್ಥಾನವು ದಿನದಿನಕ್ಕೆ ಬಡತನ ಸ್ಥಿತಿಗೆ ಹೋಗುತ್ತಿದೆಯೆಂಬುದೇ ಹಿಂದೀಯರ ಕೂಗು. ತುಂಬಾ ಬಡತನದಲ್ಲಿರುವ ಹಿಂದೂಸ್ಥಾನವು ಪ್ರಪಂಚದಲ್ಲಿ ಯಾವ ಸರ್ಕಾರದಲ್ಲೂ ಇಲ್ಲದಷ್ಟು ದೊಡ್ಡ ಸಂಬಳವನ್ನು ಬ್ರಿಟಿಷ್ ಅಧಿಕಾರಿಗಳಿಗೆ ಕೊಡುತ್ತಾ ಇದೆ. ವ್ಯಾಪಾರದ ಕಾನೂನುಗಳೆಲ್ಲಾ ಬ್ರಿಟಿಷ್ ಜನಾಂಗಕ್ಕೆ ಅನುಕೂಲವಾಗಿದೆಯೇ ಹೊರತು ಹಿಂದೀಯರಿಗಲ್ಲ. ಇಂಡಿಯಾ ಸರಕಾರದ ಉತ್ಪತ್ತಿಯ ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ಬ್ರಿಟಿಷ್ ಸೈನ್ಯಗಳಿಗೆ ಖರ್ಚು ಮಾಡುತ್ತಿರುವುದು ಬ್ರಿಟಿಷ್ ಸಾಮ್ರಾಜ್ಯದ ಭದ್ರತೆಗಾಗಿಯೇ ಹೊರತು ಹಿಂದೂಸ್ಥಾನದ ಕ್ಷೇಮಕಲ್ಲ. ಹಿಂದೂಸ್ಥಾನದ ಕ್ಷೇಮಕ್ಕಾದರೆ ಇಷ್ಟು ದೊಡ್ಡ ಖರ್ಚು ಅವಶ್ಯವಿಲ್ಲ. ಹೀಗಿರುವಾಗ ಬ್ರಿಟಿಷ್ ಪಾರ್ಲಿಮೆಂಟಿನವರು ಹಿಂದೂಸ್ಥಾನದ ಕ್ಷೇಮವನ್ನು ಕಾಪಾಡುವುದು ಹೇಗೆ? ಆದುದರಿಂದಲೇ ಹಿಂದೂಸ್ಥಾನದ ಸರಕಾರದ ಆದಾಯ ವೆಚ್ಚವನ್ನು ಹಿಂದೀಯರ ಪ್ರತಿನಿಧಿಗಳಿಗೆ ಜವಾಬ್ದಾರಿಯಾಗಿರುವ ಮಂತ್ರಿಮಂಡಲಿಯಿಂದ ಗವರ್ನರ್ ಜನರಲರವರ ಅಧೀನಕ್ಕೆ ಇದನ್ನು ಶೀಘ್ರದಲ್ಲಿ ಬಿಟ್ಟು ಕೊಡುವದು ಬಹಳ ಅವಶ್ಯ.

ಈ ಠರಾವಿನ ಚರ್ಚೆಯಲ್ಲಿ ಸರಕಾರಿ ಪರವಾದ ಭಾಷಣಗಳು ಲಾರ್ಡ್ ಬರ್ಕನ್ ಹೆಡ್ ಮತ್ತು ಲಾರ್ಡ್ ರೀಡಿಂಗ್‌ರವರ ಭಾಷಣಗಳನ್ನು ಅನುಸರಿಸಿಯೇ ಇರುವುದರಿಂದಲೂ ಈ ಮುಖ್ಯ ಅಧಿಕಾರಿಗಳ ಭಾಷಣಗಳ ಮೇಲೆ ನಾವು ಈ ಮೊದಲೇ ಬರೆದಿರುವುದರಿಂದಲೂ ಈಗ ಪುನಹ ಬರೆಯಬೇಕಾಗಿಲ್ಲ. ಆದರೆ ರಾಷ್ಟ್ರ ಪಕ್ಷದವರ ಭಾಷಣಗಳ ಕೆಲವು ಮುಖ್ಯ ಮಾತುಗಳನ್ನಾದರೂ ಸೂಚಿಸದೆ ಇರಲು ಸಾಧ್ಯವಿಲ್ಲ. ಪಂಡಿತ ಮೋತಿಲಾಲ್ ನೆಹರುರವರು ಈ ಠರಾವನ್ನು ಎಸೆಂಬ್ಲಿಯ ಮುಂದಿಟ್ಟಾಗ "ಬೆಳಕಿನಲ್ಲಿ ಒಂದು ಸ್ಥಳವನ್ನು ಪಡೆಯಲಿಕ್ಕೆ ನಾವು ಪ್ರಯತ್ನಿಸುವುದಾಗಿದೆ. ನಮ್ಮ ಹಕ್ಕಾದ ಈ ಸ್ವತಂತ್ರವನ್ನು ನಾವು ಪಡೆಯುವೆವಾದರೆ ನಿಮ್ಮ (ಸರಕಾರದ) ಸಹಾಯ ಏನೂ ಅವಶ್ಯವಿಲ್ಲ. ನಾವು ಪಡೆಯಲಾರೆವಾದರೆ ನಿಮ್ಮ ಶಿಫಾರಸ್ಸಿನಿಂದ ಪ್ರಯೋಜನವೂ ಆಗುವುದಿಲ್ಲ". ಸ್ವಾತಂತ್ರ್ಯ ಸಂಪಾದನೆಯ ಕೆಲಸವು ಹಿಂದೀಯರದ್ದೇ ಆಗಿದೆ ಎಂಬುದನ್ನು ಚೆನ್ನಾಗಿ ಮನಮುಟ್ಟುವಂತೆ ಹೇಳಿದ್ದಾರೆ. ಸರಕಾರ ತತ್ವವನ್ನು ಹೀಗೆಯೇ ಎರಡೇ ಮಾತುಗಳಲ್ಲಿ ಅರ್ಥಮಾಡಿ ಸೂಚಿಸಿದ್ದಾರೆ, "ಸಾಧ್ಯವಿರುವಷ್ಟು ಕಡಿಮೆ ಕೊಟ್ಟು ಕೊಡುವ ಸ್ವಲ್ಪದಿಂದ ಆಳರಸರ (ಬ್ಯೂರೊಕ್ರೆಸಿ) ಹಕ್ಕುಗಳ ಗೌರವವೂ ಕಡಿಮೆಯಾಗದಂತೆ ನೋಡಿಕೊ." "ಈಗ ಕೊಟ್ಟಿರುವ ಸುಧಾರಣೆಯನ್ನು ಜನರಿಗೆ ಪ್ರಯೋಜನವಾಗುವಂತೆ ಉಪಯೋಗಿಸಲು ಸಾಧ್ಯವಿಲ್ಲವೆಂತ ಹಿಂದೀಯರೆಲ್ಲರೂ ಕೂಗುತ್ತಿರುತ್ತಾರಾದರೂ ಲಾರ್ಡ್ ಬರ್ಕನ್ ಹೆಡ್ಡರವರೇ ಮುಂತಾದವರು "ನಡೆಯದೇ ಇರುವಂಥ ಯಂತ್ರವನ್ನು ಕೊಟ್ಟಿದ್ದೇವೆ ಅದನ್ನು ನಡಿಸಲು ಪ್ರಯತ್ನಿಸಿ" ಎಂತ ಬೋಧಿಸುತ್ತಾರೆ. ಈ ತರದ ದ್ವಿಮುಖ ಸರಕಾರವನ್ನು ಈ ಮೊದಲೇ ಅಮೇರಿಕಾ ಕೆನಡಾ ರಾಜ್ಯದಲ್ಲಿ ಪ್ರಯತ್ನಿಸಿ ಅಸಾಧ್ಯವೆಂತ ಅನುಭವಸಿದ್ಧವಾದದನ್ನು ಹಿಂದೂಸ್ಥಾನದಲ್ಲಿ ಪುನಹ ಯಾಕೆ ಉಪಯೋಗಿಸಲು ಒತ್ತಾಯಪಡಿಸುತ್ತೀರಿ? ಆಸ್ಟ್ರೇಲಿಯ, ದಕ್ಷಿಣ ಆಫ್ರೀಕ ಮುಂತಾದ ಸ್ವತಂತ್ರ ವಸಾಹತುಗಳು ತಾವೇ ತಯಾರಿಸಿದ ಆಡಳಿತ ರಚನೆಗಳನ್ನು ಒಂದಕ್ಷರ ಸಹ ಬದಲಾಯಿಸದ ಪಾರ್ಲಿಮೆಂಟಿನಲ್ಲಿ ಮಂಜೂರು ಮಾಡಿರುವಾಗ ಇಂಡಿಯಾದ ಆಡಳಿತ ಕ್ರಮವನ್ನು ನಿರ್ಣಯಿಸುವುದು ಬ್ರಿಟಿಷ್ ಪಾರ್ಲಿಮೆಂಟಿನ ಹಕ್ಕೆಂದು 1919ರ ಗವರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟಿನಲ್ಲಿ ಇರುವಂಥಾದ್ದು ಹಿಂದೀಯರಿಗೆ ಅವಮಾನಕರವಲ್ಲವೇ?" ಎಂಬ ಅರ್ಥವಿರುವ ಮಾತುಗಳನ್ನು ಆಡಿ ಹಿಂದೂಸ್ಥಾನದ ಭವಿಷ್ಯತ್ತು ಸಭೆಯ ಮುಂದಿರುವ ಠರಾವಿನ ಮೇಲೆ ಸರಕಾರದವರ ತೀರ್ಮಾನವನ್ನು ಹೊಂದಿದೆ ಎಂತಲೂ "ಸ್ವಾತಂತ್ರ್ಯದ ಹೋರಾಟವು ಒಂದಾವರ್ತಿ ಪ್ರಾರಂಭವಾದದ್ದು ಶೀಘ್ರದಲ್ಲಾಗಲಿ, ತಡೆದಾಗಲಿ, ಪೂರ್ಣಸ್ವತಂತ್ರ ಸ್ಥಾಪನೆಯಲ್ಲಿ ಅಂತ್ಯವಾಗಬೇಕು. ಈ ಸ್ವತಂತ್ರ ಸ್ಥಾಪನೆಗೆ ಇಂಗ್ಲಂಡು ಸಹಾಯ ಕೊಟ್ಟು ಗೌರವಪಡೆಯುತ್ತದೋ ಅಥವಾ ಸ್ವಾತಂತ್ರ್ಯವನ್ನು ಕೊಡಲು ಇಚ್ಛೆ ಇಲ್ಲದ್ದರಿಂದ ಬಲುಮೆಯಿಂದ ಕಿತ್ತುಕೊಳ್ಳುವಂತೆ ಮಾಡುತ್ತದೋ ಎಂಬುದನ್ನು ನೋಡಬೇಕಾಗಿದೆ. ಇಂಗ್ಲೆಂಡಿಗೆ ಆರಿಸಲು ಇವೆರಡೇ ದಾರಿಗಳಿವೆಯಷ್ಟೆ" ಎಂದು ಹೇಳಿ ತಮ್ಮ ಭಾಷಣವನ್ನು ಪೂರೈಸಿದರು.

ಮಿ. ಅಯ್ಯಂಗಾರರವರು 'ವ್ಯಾಪಾರ ಇಲಾಖೆಯ ಸರಕಾರಿ ಮೆಂಬರರು ಈಗ ಇಂಡಿಯಾದಲ್ಲಿ ಮನುಷ್ಯ ಜೀವವೂ ಹೆಂಗಸರ ಮರ್ಯಾದೆಯೂ ಸುರಕ್ಷಿತವಾಗಿದೆಯೆಂತ ಹೇಳಿದರು. ಇದು ನಿಜವೋ? ನಮ್ಮ ಮನೆಗಳು ಅಪಾಯಗಳಿಗೆ ಈಡಾಗಿಲ್ಲವೇ? ನಮ್ಮ ಮಹಾಪುರುಷರು ಜೈಲಿಗೆ ಎಳೆಯಲ್ಪಟ್ಟಿರುವುದಿಲ್ಲವೇ? ಜಲಿಯನ್ ವಾಲಾಬಾಗಿನಲ್ಲಿ ನೂರಾರು ಜನರು ನಾಯಿಗಳಂತೆ ಕೊಲ್ಲಲ್ಪಡಲಿಲ್ಲವೇ?" ಎಂತ ಕೇಳಿದರು. ಇಂಗ್ಲೆಂಡಿನಲ್ಲಿ ಸ್ವತಂತ್ರವಿದ್ದಾಗಲೂ ರೋಮನ್ ಕೆಥೋಲಿಕರನ್ನು ಜನರು ಹಿಂಸಿಸುತ್ತಿದ್ದರೆಂತ ತೋರಿಸಿ ಹಿಂದುಸ್ಥಾನದಲ್ಲಿ ಪಂಗಡಗಳಿರುವುದು ಸ್ವರಾಜ್ಯ ಸ್ಥಾಪನೆಗೆ ಅಡ್ಡಿಯಲ್ಲವೆಂತ ಹೇಳಿದರು. ಮಿ. ಜಿನ್ನಾರವರು ಹೇಳಿದ್ದೇನೆಂದರೆ—"ಸರಕಾರಿ ಮೆಂಬರರೊಬ್ಬರು ಒಂದು ಶತಮಾನದಿಂದ ಹಿಂದೂಸ್ಥಾನದಲ್ಲಿ ಅನಾಯಕತ್ವವೂ ಗಲಿಬಿಲಿಯೂ ಇಲ್ಲವೆಂತ ಹೇಳಿದರು. ಆದರೆ ನಿರಾಯುಧರಾಗಿ ಮಾಡಲ್ಪಟ್ಟಿರುವದರಿಂದಲೂ, ನಮ್ಮ ದೇಶದ ಆಡಳಿತದಿಂದ ನಾವು ಹೊರಪಡಿಸಲ್ಪಟ್ಟಿರುವುದರಿಂದಲೂ, ಬ್ರಿಟಿಷ್ ಆಳ್ವಿಕೆಯಲ್ಲಿ ಒಂದು ಶತಮಾನದಿಂದಿದ್ದರೂ ಜನರು ನಿರಕ್ಷರಕುಕ್ಷಿಗಳಾಗಿಡಲ್ಪಟ್ಟಿರುವುದರಿಂದಲೂ, ಉಂಟಾದ ಘೋರ ಕೆಡಕುಗಳನ್ನು ನಾವು ನೋಡುತ್ತಿಲ್ಲವೇ? ಈ ಕೆಡಕುಗಳನ್ನು ತಪ್ಪಿಸಿಕೊಳ್ಳಬೇಕೆಂತ ನಾವು ನಿಶ್ಚೈಸಿದ್ದೇವೆ. ಇದಕ್ಕೆ ಒಂದೇ ದಾರಿ. ನಿರಂಕುಶ ಆಳರಸರ ಆಳ್ವಿಕೆಯನ್ನು ಹೋಗಲಾಡಿಸಿ ಪ್ರಜಾಪ್ರತಿನಿಧಿ ಸರಕಾರವನ್ನು ಸ್ಥಾಪಿಸುವುದೇ. ಕಷ್ಟಗಳು ಇವೆಯೆಂತ ನನಗೆ ಗೊತ್ತಿದೆ. ಅದಕ್ಕಾಗಿಯೇ ನಿಮ್ಮ ಸಹಾಯವನ್ನು ಕೇಳುವುದಾಗಿದೆ."

ಇಂಥಾ ಮನಸ್ಸು ಕರಗುವಂತ ಮತ್ತು ಮುಚ್ಚುಮರೆಯಿಲ್ಲದ ಭಾಷಣಗಳನ್ನು ಮಾಡಿ ಎಸೆಂಬ್ಲಿ ಸಭೆಯ ಮೂಲಕ ಸರಕಾರಕ್ಕೆ ಕಳುಹಿಸಿದ 33 ಕೋಟಿ ಜನರ ಕೋರಿಕೆಗೆ ಚಕ್ರವರ್ತಿಯವರ ಸರಕಾರದವರು ಕೊಡುವ ಜವಾಬನ್ನು ಹಿಂದೂಸ್ಥಾನದ ಜನರು ತುದಿಗಾಲಿನಲ್ಲಿ ನಿಂತು ಕಾಯುತ್ತಿದ್ದಾರೆ.

ಜಮೀನುದಾರರ ಸಂಘದ ಕಟ್ಟಡ.

ಜಮೀನ್ದಾರರ ಸಂಘಕ್ಕೆ ರೂ. 1,600 ಬೆಲೆಕೊಟ್ಟು ಒಂದು ಕಟ್ಟಡವನ್ನು ಮ. ರಾ. ಶ್ರೀ. ಸಿದ್ದದ ಸುಬ್ಬಯ್ಯನವರು ತೆಗೆದುಕೊಟ್ಟಿರುವರೆಂದು ಕೆಲವು ವಾರಗಳ ಹಿಂದೆ ಬರೆದಿದ್ದೆವಷ್ಟೆ. ಅವರ ಉದಾರತ್ವದ ಸ್ಮರಣೆಗಾಗಿ ಈ ಉಚಿತವನ್ನು ಸೂಚಿಸಿ ಒಂದು ಶಾಸನವನ್ನೂ ಅವರ ಒಂದು ಭಾವಚಿತ್ರವನ್ನೂ ಕಟ್ಟಡದಲ್ಲಿ ಇಡಬೇಕೆಂತ ಸಂಘದ ಕಾರ್ಯನಿರ್ವಾಹಕ ಕಮಿಟಿಯು ಕಳೆದ ಮೀಟಿಂಗಿನಲ್ಲಿ ತೀರ್ಮಾನಿಸಿದ್ದು ಯೋಗ್ಯವಾದದ್ದೆ. ಇಷ್ಟುಮಾತ್ರವಲ್ಲದೆ ಸದರಿ ಕಟ್ಟಡ ರಿಪೇರಿಗಾಗಿ ಮಿ. ಸುಬ್ಬಯ್ಯನವರು ನೂರು ರುಪಾಯಿಗಳನ್ನು ಕೊಡುತ್ತೇನೆಂದು ಒಪ್ಪಿ ಸಂಘದಮೇಲೆ ತಮಗಿರುವ ಪ್ರೀತಿಯನ್ನು ತೋರಿಸಿದರ ಮೇಲೆ ನಾವು ಟೀಕಿಸುವ ಅವಶ್ಯವಿಲ್ಲ.

ಸಂಘಕ್ಕೆ ಒಂದು ಕಟ್ಟಡವನ್ನು ಕಟ್ಟಿಸಲಿಕ್ಕಾಗಿ ರಾ. ರಾ. ಕಾರ್ಯಪ್ರಸಕ್ತ ಮನೆಯಪಂಡ ಮುತ್ತಣ್ಣನವರನ್ನು ಅವರ ಮಕ್ಕಳು ಒಂದು ಸಾವಿರ ರೂಪಾಯಿಯ ಕೊಡುತ್ತೇವೆಂದು ಮೊದಲೇ ಹೇಳಿದ್ದರ ಮೇರೆ ಈಗಿನ ಕಟ್ಟಡದ ರಿಪೇರಿಗಾಗಿ ಆ ವಾಗ್ದಾನದ ಮೊಬಲಗನ್ನು ಕೊಡುವುದಾಗಿ ಅವರು ಒಪ್ಪಿರುವುದು ಶ್ಲಾಘನೀಯವಾದ ಸಂಗತಿಯಾಗಿದೆ. ರಾ ಬಾ ಮುತ್ತಣ್ಣನವರು ಇಷ್ಟರವರೆಗೆ ಜೀವಿಸಿದ್ದಿದ್ದರೆ ಸಂಘಕ್ಕಿರುವ ದೊಡ್ಡ ಕಟ್ಟಡವನ್ನೇ ಅವರು ಕಟ್ಟಿಕೊಡುತ್ತಿದ್ದರೆಂದು ಅನೇಕರ ನಂಬಿಕೆಯಾಗಿತ್ತು. ಅವರ ಮಕ್ಕಳು ಅವರಿಗೆ ಈ ಸಂಘದ ಮೇಲೆ ಇದ್ದ ಪ್ರೀತಿಯ ಸ್ವಲ್ಪವಾದರೂ ಸೂಚಿಸಲಿಕ್ಕೆ ದೊಡ್ಡ ಮನಸ್ಸುಮಾಡಿದ್ದು ಪ್ರಸ್ತಾರ್ಹವಲ್ಲವೇ. ದೇಶದ ಹಿತಕ್ಕಾಗಿ ಜಮೀನ್ದಾರರ ಸಂಘದಲ್ಲಿ ಕೆಲವು ವರುಷಗಳವರೆಗೆ ಎಡೆಬಿಡದೆ ಕೆಲಸಮಾಡಿ ಸಂಘವನ್ನೂ ಅದರೊಂದಿಗೆ ದೇಶವನ್ನೂ ಮುಂದಕ್ಕೆ ತಂದ ರಾ. ಬಾ. ಮುತ್ತಣ್ಣನವರ ಜ್ಞಾಪಕಾರ್ಥವಾಗಿ ಮಾಡಬೇಕಾದ ಕೆಲಸವು ದೇಶದವರ ಕೈಯ್ಯಲ್ಲಿದೆ. ಅವರ ಮಕ್ಕಳು ಕೊಟ್ಟಿರುವ ಮೊಬಲಗಿನಮೇಲೆ ನಾಡದವರು ಅವರ ಸ್ಮರಣೆಯನ್ನು ಸ್ಥಾಪಿಸುವುದಲ್ಲ. ಅವರ ಉಜ್ವಲ ದೇಶಭಕ್ತಿಯ ಸ್ಮಾರಕವನ್ನು ದೇಶದವರೇ ಯಾವದಾದರೂ ಒಂದು ವಿಧದ ಸ್ಥಿರಗೊಳಿಸಬೇಕಾದದ್ದು ದೇಶದ ಕರ್ತವ್ಯವಾಗಿದೆ.

ಕಟ್ಟಡವನ್ನು ದುರುಸ್ತುಪಡಿಸಲಿಕ್ಕಾಗಿ ಸಂಘದ ಈಗಿನ ಪ್ರೆಸಿಡೆಂಟರಾದ ರಾ. ಬಾ ಕೋದಂಡ ಅಪ್ಪಯ್ಯನವರು ರೂ. 200ನ್ನೂ, ಸೆಕ್ರಟರಿಯಾದ ಪಿ. ಸಿ ಎನ್ ವೆಂಕಪ್ಪಯ್ಯನವರು ರೂ. 100ನ್ನೂ, ಬಿದ್ದಂಡ ಕುಟುಂಬ ಫಂಡಿನಿಂದ ರೂ 50ನ್ನೂ ಕೊಟ್ಟದ್ದಕ್ಕೆ ದೇಶದವರು ಅವರಿಗೆ ವಂದಿಸದೆ ಇರರು. ಕಮಿಟಿ ಮೀಟಿಂಗಿನಲ್ಲಿ ಹಾಜರಿದ್ದ ಬೇರೆ ಕಮಿಟಿ ಮೆಂಬರುಗಳೂ ತಮ್ಮ ಶಕ್ತ್ಯಾನುಸಾರ ಉದಾರವಾದ ಚಂದಾ ಕೊಟ್ಟದ್ದು ಬೇರೆಯ ಕಡೆಗೆ ಒಳ್ಳೇ ಮೇಲ್ಪಂಕ್ತಿಯಾಗಿದೆ. ಮೀಟಿಂಗಿನಲ್ಲಿ ಹಾಜರಿದ್ದವರಿಂದಲೇ ರೂ 1,640 ಆದದ್ದು ಶುಭ ಸೂಚನೆಯು. ಈ ಸೂಚನೆಯಮೇರೆ ಸಂಘಕ್ಕೆ ತಕ್ಕದಾದ ಕಟ್ಟಡವನ್ನು ಕಟ್ಟಿಸಿಕೊಳ್ಳುವುದು ಕಷ್ಟವಾಗಿ ತೋರುವುದಿಲ್ಲ. ಹೊಟ್ಟೆನಲ್ಲಿರುವ ದೇಶಭಕ್ತರೂ ಉದಾರಿಗಳೂ ನಮ್ಮ ದೇಶದಲ್ಲಿ ಅನೇಕರಿರುವರು. ಇವರು ಬಹಿರಂಗಕ್ಕೆ ಬರಲು ಈ ಸುಸಮಯವನ್ನು ಕಳಕೊಳ್ಳಲಿಕ್ಕಿಲ್ಲವಾಗಿ ಆಶಿಸುತ್ತೇವೆ.

ದಿವಂಗತ ಸ್ವಾಮಿಕಣ್ಣು ಪಿಳ್ಳೆಯವರು.

ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನ ಅಧ್ಯಕ್ಷರಾಗಿದ್ದ ದಿವಾನ್ ಬಹದ್ದೂರ್ ಎಲ್ ಡಿ. ಸಾಮಿಕಣ್ಣು ಪಿಳ್ಳೆಯವರು ತಾ 10ರ ಸಾಯಂಕಾಲ ಮದ್ರಾಸಿನಲ್ಲಿ ಶಿವಾಧೀನರಾದದ್ದು ಅಲ್ಲಿಯ ಜನರಿಗೆ ಆಶ್ಚರ್ಯವನ್ನುಂಟು ಮಾಡಿದೆ. ಕಳೆದ ತಿಂಗಳಲ್ಲಿ ಆದ ಕೌನ್ಸಿಲು ಮೀಟಿಂಗನ್ನು ನಡಿಸಿದ ಇವರಿಗೆ ಸ್ವಲ್ಪ ದಿನ ಮಾತ್ರ ಕಾಯಿಲೆಯಾಗಿತ್ತು. 13 ಮಕ್ಕಳ ತಂದೆಯಾದ ಇವರು ತನ್ನ 60ನೇ ವಯಸ್ಸಿನಲ್ಲಿ ಮೃತರಾದರು.

ಇವರು ಚಿಕ್ಕಂದಿನಲ್ಲಿ ಬಹು ಬಡವರಾಗಿದ್ದರೂ ಇವರು ರೋಮನ್ ಕಥೋಲಿಕ್ ಪುರೋಹಿತರಿಂದ ಪ್ರೋತ್ಸಾಹಿಸಲ್ಪಟ್ಟು ದೊಡ್ಡ ಡಿಗ್ರಿಗಳನ್ನು ಪಡೆದರು. ಇವರಿಗೆ ಹಲವು ಭಾಷಾಪರಿಚಯವಿದ್ದದರಿಂದಲೂ ಮಹಾ ಪಾಂಡಿತ್ಯವಿದ್ದದರಿಂದ ಲೂ ಉದ್ಯೋಗದಲ್ಲಿ ಕ್ರಮವಾಗಿ ಮೇಲಕ್ಕೇರಿದರು. ಕಾಲೇಜಿನ ಪ್ರೊಫೆಸರಾತನದಿಂದ ಮೆಲ್ಲ ಮೆಲ್ಲಗೆ ಜಿಲ್ಲಾ ಕಲೆಕ್ಟರ್ ಪದವಿಗೆ ಬಂದರು. ನಂತರ ಪಾರ್ಲಿಮೆಂಟನ್ನು ನಡಿಸುವ ಕ್ರಮಗಳನ್ನು ಕಲಿಯಲಿಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಲ್ಪಟ್ಟರು. ಅಲ್ಲಿಂದ ಹಿಂತಿರುಗಿದ ನಂತರ ಸುಧಾರಿಸಿದ ಕೌನ್ಸಿಲಿನ ಮೊದಲನೇ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟರು. ಸಾಯುವ ಕಾಲದಲ್ಲಿ ಮದ್ರಾಸು ಕೌನ್ಸಿಲಿನ ಚುನಾಯಿತ ಪ್ರೆಸಿಡೆಂಟರಾಗಿದ್ದರು. ಇವರು ಕೆಲವು ಉತ್ತಮ ಗ್ರಂಥಗಳನ್ನು ಬರೆದಿರುವರು. ಇವರ ಮರಣದಿಂದ ಭಾರತಖಂಡದ ಕಥೋಲಿಕ್ ಕ್ರೈಸ್ತ ಜನರಿಗೆ ಮುಖ್ಯವಾಗಿ ದುಃಖ ಉಂಟಾಗುವದಾದರೂ, ಇಡೀ ಹಿಂದೂದೇಶವು ತನ್ನೊಬ್ಬ ವಿದ್ಯಾವಂತ ಸತ್ಪುತ್ರನನ್ನು ಕಳಕೊಂಡಿದೆ.

ನಿಷೇಕಪ್ರಸ್ತಕ್ಕೆ ಬಾಲಕಿಯ ವಯಸ್ಸಿನ ಪರಿಮಿತಿ.

ಮೊನ್ನೆ ಜರುಗಿದ ಪರಿಷ್ಕೃತಾಯಿದೆ ಮಂಡಳದಲ್ಲಿ "Age of Consent" ಹೆಣ್ಣುಮಕ್ಕಳ ಸಮ್ಮತಿಯ ವಯಸ್ಸನ್ನು ಕುರಿತು ದೊಡ್ಡ ಚರ್ಚೆ ನಡೆಯಿತು. ಈ ಮಸೂದೆಯ ಕರ್ತೃಗಳಾದ ಸರ್ ಗೋರರವರು ಕಳೆದ ಮಾರ್ಚ ತಿಂಗಳ ಸಭೆಯಲ್ಲಿ ವಿಮರ್ಶೆಗೆ ಸದ್ರಿ ಮಸೂದೆಯನ್ನು ಮಾಡಿದ್ದರು. ಆಗ್ಗೆ ಸ್ವರಾಜ್ಯಪಕ್ಷದವರು ಸದ್ಯಕಾಲದಲ್ಲಿ ಸಾಮಾಜಿಕ ಮಾರ್ಪಾಟುಗಳನ್ನು ಕುರಿತು ಯಾವದೊಂದು ಬಾಸಾನು ಅನುಲಗಿ ಒಪ್ಪಕೊಡದೆಂದೂ, ಪ್ರಾಮುಖ್ಯವಾದ ರಾಜಕೀಯ ವಿಚಾರವಾದ ಚರ್ಚೆಗಳೇ ಅವಶ್ಯಕವೆಂದೂ ಹೇಳುತ್ತಾ, ಈ ಮಸೂದೆಯನ್ನು ಮೂಲೆಪಾಲು ಮಾಡಿದರು.

ಕಳೆದ ವರುಷದಲ್ಲಿ ಸ್ವರಾಜ್ಯ ಬಾಂಧವರು ಶಾಸನ ಮಂಡಲದಲ್ಲಿ ನಡೆಸಿದ ಆಡಚಣೆಯಿಂದ ಸರಕಾರವು ಸಕ್ಕು ಸುಣ್ಣವಾಗಿತ್ತೆಂಬುದು ನಮಗೆ ತಿಳಿದಿದೆಯಷ್ಟೆ. ಸರ್ ವಿಲ್ಲಿಯಂ ವಿನ್ಸೆಂಟರು ಊರಿಗೆ ಹೊರಟು ಹೋದನಂತರ, ಸರ್ ಮೂಡಿಮಾನ್ ಹಾಯಿಲಿಯವರು ಸರಕಾರಿ ಮೆಂಬರಾಗಿ ಬಂದರು. ಇವರ ವಾಗ್ಝರಿಯು ರಂಬಕವಾದದ್ದೆಂದು ಕಂಡು ಬಂದು, ಸರಕಾರವು ಇವರಿಗೆ ಉತ್ತಮ ಪದವಿಯನ್ನು ಕೊಟ್ಟಿತು. ಇವರ ಕೆಲಸಕ್ಕೆ ಸರ್ ಮುಡ್ಡಿಮಾನರು ಬಂದರು. ಇವರಿಗೆ ಒಳ್ಳೇ ವಾಕ್ಚಾತುರ್ಯ ಇಲ್ಲವೆಂಬ ಜನಶ್ರುತಿಯಿದೆ. ಸರ್ ಮುಡ್ಡಿಮ್ಯಾನರು "ರಿಫಾರ್ಮ್ಸ್ ಕಮಿಟಿ"—ಸುಧಾರಣೆ ಸಭೆ—ಯಪರವಾಗಿ ಕಾರ್ಯ ನಡೆಸಿ ನಿಸ್ತೇಜರಾಗಿದ್ದರು, ಹೀಗಿರುವ ಸಮಯಕ್ಕೆ ಸ್ವರಾಜ್ಯಪಂಗಡದವರು, ರಾಷ್ಟ್ರ ಸಭಿಕರಾದ (No Changers) ಬರಲು ಸದಸ್ಯರುಗಳ ಸಹಾನುಭೂತಿಯನ್ನು ಸಂಪಾದಿಸಿಕೊಂಡರು. ರಾಷ್ಟ್ರಸಭೆಗೆ ವೀರ್ಯವೂ ಶೌರ್ಯವೂ ಬಂದುವು. ಇಂಥ ವೇಳೆಯಲ್ಲಿ ಸರಕಾರಿ ಮೆಂಬರರು ತಾವು ವಿರಾಮ ಪಡೆಯಲಿಕ್ಕೂ, ರಾಜಕೀಯ ವಿಷಯಗಳಿಗೆ ಹೆಚ್ಚುಕಾಲ ಹಾಳಾಗದಂತೆ ಮಾಡಲಿಕ್ಕೂ, ವೈದೀಕ ವಿರಪಕ್ಷದವರ ಸಹಾನುಭೂತಿಯನ್ನು ಸರಕಾರವು ಪಡೆಯುವಂತೆ ಮಾಡಲಿಕ್ಕೂ, ಈ ಕಾರಣಗಳಿಂದ ಲಾರ್ಡಬರ್ಕನ್‌ಹೆಡ್ ಮತ್ತು ಲಾರ್ಡ ರೀಡಿಂಗರ ಪತ್ರಗಳಿಗೆ ಅಲಂಕಾರವನ್ನುಂಟುಮಾಡಲಿಕ್ಕೂ, ಯುಕ್ತಿಯನ್ನು ಕಂಡುಹಿಡಿಯುತ್ತಿದ್ದರು. ಓಹೋ! ಸರ್ ಗೋರರವರ ಕಳೆದ ಸಭೆಯಲ್ಲಿ ಸೋತು ಬಿದ್ದ ನಿಷೇಕ ಸಂಬಂಧದ ಮಸೂದೆಯು ತಟ್ಟನೆ ಸರಕಾರಿ ಮೆಂಬರರ ಸ್ಮೃತಿಗೆ ಬಂತು. ಈ ಮಸೂದೆಯನ್ನು ಇದರ ಎರಡನೆ ತಂದೆಯರಾದ ಸರ್ ಮುಡ್ಡಿಮಾನರು ಸಭೆಯಮುಂದಕ್ಕೆ ಹಗುರ ಹಸ್ತವಾಗಿ ಮಧುರವಾದ ಮಾತುಗಳಿಂದ ನೂಕಿದರು.

ಮಸೂದೆಯನ್ನು ಕುರಿತು ವಾದ ವಿವಾದಗಳು ಸಭೆಯಲ್ಲಿ ನಡೆಯುವಾಗ ಮುಡ್ಡಿಮಾನರು ಕಿರುನಗೆಯಿಂದ ಆನಂದಪಡುತ್ತಿದ್ದಿರಬಹುದು. ಸರ್ ಗೋರರವರು ಅವಿವಾಹಿತೆಯರಾದ ಹುಡುಗಿಯರ ನಿಷೇಕ ಪ್ರಸ್ತದ ವಯಸ್ಸು 12ರಿಂದ 15ನೇ ವರುಷಕ್ಕೆ ಏರಿಸಲ್ಪಡಬೇಕೆಂದು ಒತ್ತಿ ಹೇಳಿದರು. ಸರಕಾರಿ ಮೆಂಬರರು ಹೀಗೆ ಸಭೆಯು ತೀರ್ಮಾನಮಾಡುವದಾದರೆ, ಮಸೂದೆಯ ಪ್ರಯೋಜನವು ಸಮ್ಯಕ್ಕ ದೊರೆಯಲಾರದೆಂದೂ, ಇತರ ಪ್ರಾಂತಿಕ ಮಂಡಲಗಳ ಅಭಿಪ್ರಾಯಗಳನ್ನು ಸರಕಾರವು ಸಂಗ್ರಹಿಸಬೇಕೆಂದೂ ಹೇಳಿದರು.

ಮ ಯಂ ಕೆ ಆಚಾರ್ಯರೇ ಮೊದಲಾದ ವೈದೀಕ ಪಕ್ಷದವರು ಮಸೂದೆಯನ್ನು ತಿರಸ್ಕರಿಸಿದರು. ಆದರೆ ವೈದೀಕ ಗೊಡ್ಡುಗಳ ಮುಖಂಡರಾದ ಪಂಡಿತ ಮಾಳವಿಯರು ಹೇಳಿದ ಮಾತು ಸ್ಮರಣಾರ್ಹವಾಗಿದೆ "ಸರಕಾರವು ಈ ಮಸೂದೆಯನ್ನು ತಂದದಕ್ಕಾಗಿ ಅದನ್ನು ನಾನು ಅಭಿನಂದಿಸುತ್ತೇನೆ. ಪ್ರಸ್ತದ ಕುರಿತ ಹುಡುಗಿಯ ವಯಸ್ಸನ್ನು ಸಮಯ ಹೊಂದುವಂತೆ ನಾವು ಹೆಚ್ಚಿಸುವುದು ಹಿಂದು ಧರ್ಮಶಾಸ್ತ್ರಪ್ರಕಾರವಾಗಿ ವಿವಾಹಕ್ಕೆ ಯೋಗ್ಯವಾದ ವಯಸ್ಸುಗಳು ಹೀಗಿವೆ-ಹುಡುಗನಿಗೆ 25ನೇ ವಯಸ್ಸು, ಹುಡುಗಿಗೆ 16ನೆ ವಯಸ್ಸು" ಮ ರಾಮೈಯ್ಯಂಗಾರರು ಮುಂದಿಟ್ಟ, ನಿಷೇಕ ಪ್ರಸ್ತದ ವಯಸ್ಸು 12ಕ್ಕೆ ಇರಬೇಕೆಂಬ ಸೂಚನೆಯು ತಿರಸ್ಕೃತವಾಯಿತು

ಮಹಮ್ಮದೀಯ ಸದಸ್ಯರು ಮಸೂದೆಯನ್ನು ಕುರಿತು ಚಲೋ ರೀತಿಯಿಂದ ಮಾತಾಡಿದರು. ಇವರು ಸರ್ ಗೋರರಂತೆ ವಯಸ್ಸನ್ನು 12ರಿಂದ 15ಕ್ಕೆ ಏರಿಸುವುದು ಅತ್ಯಗತ್ಯವೆಂದು ಒತ್ತಿ ಹೇಳಿದರು. ಮ. ಟಿ ರಂಗಾಚಾರ್ಯರು ಸಹ ಸರಕಾರದೊಂದಿಗೆ ಸಹಕರಿಸಿದರು.

ಕಳೆದ ಸಮಯ ಸ್ವರಾಜ್ಯಬಾಂಧೀಕರನ್ನು "ಸ್ತ್ರೀಧರ್ಮವು" ಅವರು ಮಸೂದೆಯನ್ನು ತಿರಸ್ಕರಿಸಿದುದಕ್ಕಾಗಿ ಕಠಿಣವಾಗಿ ಆಕ್ಷೇಪಿಸಿತ್ತು. ಅಲ್ಲದೆ, ಹಲವು ಸುಧಾರಕರು ಇವರನ್ನು ದೂಷಿದ್ದರು. ಈ ಸಮಯ ಇವರು ಸರಕಾರದೊಂದಿಗೆ ಯಥಾವತ್ ರೀತಿಯಲ್ಲಿ ಸಹಕರಿಸಲಾಗಿ" ಸಭೆಯ 61 ಸದಸ್ಯರು ಈ ಮಸೂದೆಯ ಸಾಧುವಾದದ್ದೆಂದೂ, 29 ಮಂದಿ ಇದು ಅಸಾಧುವಾದದೆಂದೂ ಹೇಳಿದ ಮೇಲೆ, ಮಸೂದೆಯು ಪಾಸಾಯಿತು. ಈ ಮಸೂದೆಯ ಪ್ರಕಾರ ವಿವಾಹಿತೆಯರ ವಳ ವಯಸ್ಸನ್ನು ನಿಷೇಕಕ್ಕೆ 12ರಿಂದ 13ಕ್ಕೂ, ಅವಿವಾಹಿತೆಯಾದವಳ ವಯಸ್ಸನ್ನು 12ರಿಂದ 14ಕ್ಕೂ ಏರಿಸಲಾಯಿತು.

ಬಾಲಿಕೆಯರು ಸ್ವತಂತ್ರರಾಗಬೇಕಾದರೆ ಪೃಥಕ್ಕರಿಸಬೇಕು. ಈಗಿನ ಯುವಕರು ತಿಳಿದರೆ ಒಳ್ಳೆಯದಾಗಿರುವರು. ನಮಗೆ ಸ್ವರಾಜ್ಯ ಸಿಕ್ಕಿದಾಗ ನಮ್ಮ ನಡೆಯುವರಾದ ಅಭಿಮಾನರನ್ನೂ ರಕ್ಷಾದಪರನ್ನೂ ನಾವು ಪ್ರತಿಭಟಿಸುವಂತವರಾಗಿರಬೇಕು. ಹೀಗಾಗಲಿಕ್ಕೆ ಉಪಯುಕ್ತ ಮಸೂದೆಯು ಸಾಧ್ಯವಾದಷ್ಟು ಬೇಗನೆ ಕಾಯಿದೆಯಾಗಿ ಹೊರಬೀಳಬೇಕು. ಇಷ್ಟೇ ಅಲ್ಲ ವಿದ್ಯಾವಂತ ತಂದೆತಾಯಿಗಳು ತಮ್ಮ ಮಕ್ಕಳನ್ನು ಅವರ ಶರೀರಗಳು ಬಲಿಯುವ ವರೆಗೆ ಲಗ್ನ ಮಾಡದಂತೆ ಯತ್ನಮಾಡಬೇಕು. ವಿವಾಹ ಯೋಗ್ಯರಾದ ಬಾಲಕಬಾಲಕಿಯರು ತಾವೇ ತಮ್ಮ ಅನುಮತಿಯನ್ನು ಕೊಡುವಂತಾಗಲಿಕ್ಕೆ ವಿದ್ಯೆಯನ್ನು ಸಂಗ್ರಹಿಸಬೇಕು. ಹೆಣ್ಣುಮಕ್ಕಳಿಗೆ 16 ಇಲ್ಲವೆ 18 ವರುಷಗಳ ವರೆಗೆ ವಿದ್ಯೆ ಕೊಡುತ್ತಿದ್ದರೆ, ಲಗ್ನದ ಮಾತು ಮುಂದೆ ಮುಂದೆ ಹೋಗುವುದು. ದಮಯಂತಿ, ದ್ರೌಪದಿ, ಸಾವಿತ್ರಿ, ಮೊದಲಾದ ಪತಿವ್ರತಾ ಶಿರೋಮಣಿಯರು ತಮ್ಮ ಶರೀರಗಳು ಬಲಿತ ಮೇಲೆ ಲಗ್ನವಾದರು. ಭರತನು ಯಾರು? ಭಾರತೀಯರು ಯಾರು? ಎಂಬುದನ್ನು ವಾಚಕರೇ ತಿಳಿದುಕೊಳ್ಳಲಿ. ವರ್ಣಾಶ್ರಮ ಧರ್ಮವು ಪ್ರಾಬಲ್ಯದಲ್ಲಿದ್ದ ಕಾಲದಲ್ಲಿ, ಬಾಲಕನು 25—30ನೇ ವಯಸ್ಸಿನ ವರೆಗೆ ಬ್ರಹ್ಮಚಾರಿಯಾಗಿ ತನ್ನ ವಿದ್ಯೆಯನ್ನಾರ್ಜಿಸುತಿದ್ದನು. ಈಗ ಬಾಲಕನ ಜೀವನವೇ 25ನೆ ವರುಷಕ್ಕೆ ಕೊನೆಗಾಣುವುದಾಗಿದೆ. ಮತ್ತೆ ಬ್ರಹ್ಮಚರ್ಯದ ಮಾತೆಲ್ಲಿಂದ ಬಂದೀತು? ಈ ರೀತಿಯು ನಮ್ಮ ದುರ್ಗತಿಯನ್ನು ಬದಲಾಯಿಸಿಕೊಳ್ಳುವುದುಯೋಗ್ಯವಿದೆ. ಸಮಾಜ ಸುಧಾರಣೆಗಾಗಿ ಹೋರಾಡಿದ ಪ್ರಭೃತಿಗಳಾದ ರಾನಡೆ, ಚಂದಾವರ್ಕರ್, ರಘುನಾಥರಾವ್, ವೀರೇಶಲಿಂಗಂಪಂತುಲು, ರಾಜರಾಮಮೋಹನರಾಯ್, ಶಶಿಪಾದಬನರ್ಜಿ, ಲಾಲಾ ಲಜಪತರಾಯ್, ಸ್ವಾಮಿ ಶ್ರದ್ಧಾನಂದ ಇವರೇ ಮೊದಲಾದವರಿಗೆ ನಮ್ಮ ಧನ್ಯವಾದಗಳು

ಹಿಂದೂದೇಶದಲ್ಲಿ ಬಾಲ್ಯ ವಿವಾಹದಿಂದ ಹಲವು ಅನರ್ಥಗಳುಂಟಾಗಿವೆ. ಬಾಲ್ಯವಿವಾಹವು ಆಚರಣೆಯಲ್ಲಿದ್ದುದರಿಂದ, ನಮ್ಮ ದೇಶದಲ್ಲಿ ವಿಧವೆಗಳ ಸಂಖ್ಯೆ ಅತಿ ಹೆಚ್ಚಾಗುತ್ತಿತ್ತು. ನಮ್ಮ ವಿಧವೆಯರ ಸಂಖ್ಯೆಯನ್ನು ಈ ಕೆಳಗೆ ಕೊಟ್ಟಿದೆ. ಈ ತಖ್ತೆಯು ಜನಗಣತಿಯ ರಿಪೋರ್ಟಿನಿಂದ ತೆಗೆಯಲ್ಪಟ್ಟಿತು.

ಪ್ರಾಯ	ವಿಧವೆಯರ ಸಂಖ್ಯೆ
1 ವರುಷದೊಳಗೆ	597
1 ರಿಂದ 2 ರೊಳಗ	494
2 ,, 5 ,,	167000
5 ,, 10 ,,	85000
10 ,, 15 ,,	232000
ಜುಮ್ಲ	485091

ಒಂದು ವರುಷದ ವಯಸ್ಸಿನ ಬಾಲಿಕೆಯಿಂದ ಹದಿನೈದು ವರುಷಗಳ ವಯಸ್ಸಿನ ವರೆಗೆ ಇರತಕ್ಕ ವಿಧವೆಯರ ಸಂಖ್ಯೆಯು 4 ಲಕ್ಷ 85 ಸಾವಿರ ಚಿಲ್ಲರೆ. ಹಾ! ಭಗವಂತ! ನಾವು ಅಧೋಗತಿಯಲ್ಲಿದ್ದೇವೆ ನಮ್ಮನ್ನೆತ್ತು. ನಮಗೆ ಶೀಘ್ರದಲ್ಲಿ ಕೈ ಕೊಡು. ಮುಂದೆ ನಮ್ಮ ಗತಿ ಏನ ನಾದೀತೋ ನಾವರಿಯೆವು. ನೀನಲ್ಲದೆ ನಮಗಿನ್ನಾರು ಗತಿ! ಕಾಪಾಡು!! ಕಾಪಾಡು!!!

ಮಹಾತ್ಮ ಗಾಂಧಿಯವರು ನಿಷೇಕ ಪ್ರಸ್ತದ ವಯಸ್ಸನ್ನು 12 ರಿಂದ 14 ಕ್ಕೆ ಮಾತ್ರವಲ್ಲ, 16 ರಕ್ಕೂ ಸಹ ಏರಿಸಬಹುದೆಂದು ಅಭಿಪ್ರಾಯಪಡುತ್ತಾರೆ ವೈದೀಕರು ಜನರ ಮುಂದೆ ತೋರುವ ಸಂಸ್ಕೃತಾಧಾರಗಳು ಪ್ರಕ್ಷಿಪ್ತಗಳಾಗಿರಬೇಕೆಂದು ಇವರ ಮತವಾಗಿದೆ. ಆಚಾರ್ಯರನ್ನು ಉದ್ದೇಶಿಸಿ ಮಾಡುವ ಯಾವದೊಂದು ಸಂಗದವರಿಗೂ ತನ್ನ ಸಹಾನುಭೂತಿಯನ್ನು ತಾನು ತೋರುತ್ತೇನೆಂದು ಇವರು ಉಚ್ಚರಿಸುವರು.

ಕೊಡಗಿನಲ್ಲಿ ಬ್ರಾಹ್ಮಣ, ಲಿಂಗಾಯತ, ವೈಶ್ಯ, ದೇವಾಂಗ, ಗೌಡ ಕೊಡಗ ಮುಂತಾದ ನಿವಾಸಿಗಳಿದ್ದಾರೆ. ಕೊಡಗರಲ್ಲಿ ಬಾಲ್ಯ ವಿವಾಹವಂತು ಬಹಳ ಅಪರೂಪ. ಇವರು ಸದ್ಯದ ಸಮಾಜ ಸುಧಾರಣೆಯ ಎಲ್ಲೆಕಟ್ಟನ್ನು ಮೀರಿರುವರು. 'ನಿಯೋಗ' ಪದ್ಧತಿಯನ್ನನುಸರಿಸುವುದಲ್ಲದೆ, ಇವರು ವಿಧವಾ ವಿವಾಹವನ್ನು ತಾರತಮ್ಯವಿಲ್ಲದೆ ನಡಸುವರು. ಲಿಂಗಾಯತರು ಸಹ ಕೊಡಗರಂತೆ ಬಾಲ್ಯ ವಿವಾಹವನ್ನು ನಿಷೇಧಿಸುವರಲ್ಲದೆ, ವಿಧವಾ ವಿವಾಹವನ್ನು ಆಚರಣೆಯಲ್ಲಿ ತಂದಿರುವರು. ಈ ಪದ್ಧತಿಯು ಸಮಾಜ ಸುಧಾರಕನಾದ ಬಸವನ ಕಾಲದಿಂದಲೂ ಇವರಲ್ಲಿ ನಡೆದು ಬರುತ್ತಿದೆ. ಬಸವನು ವಿಶಾಲ ಹೃದಯನಾದುದರಿಂದಲೇ, ಎಲ್ಲ ಜಾತಿಯವರನ್ನು ತನ್ನ ಮತಕ್ಕೆ ಸೇರಿಸಿಕೊಂಡನು. ದೇವಾಂಗದವರು ತಮ್ಮ ಆಚಾರ ವಿಚಾರಗಳ ಕೆಲವು ಭಾಗದಲ್ಲಿ ಬ್ರಾಹ್ಮಣರಂತೆಯೂ, ಮತ್ತೆ ಕೆಲವು ಭಾಗದಲ್ಲಿ ಲಿಂಗಾಯತರಂತೆಯೂ ಆಚರಿಸುವವರಾಗಿದ್ದಾರೆ. ಶಾಸ್ತ್ರಪೂರ್ವಕವಾಗಿ ಇವರಲ್ಲಿ ವಿಧವಾ ವಿವಾಹ ಆಗದು. ಬಾಲ್ಯವಿವಾಹಗಳು ಇವರೊಳಗೆ ಪರೂಪ. ಆದರೆ ಅಕ್ಕಸಾಲಿಗರು ಏನೋ ಒಂದು ತರದ ಭ್ರಮೆಯಿಂದ ತಮ್ಮ ಮಕ್ಕಳಿಗೆ ಬಾಲ್ಯದಲ್ಲಿಯೇ ವಿವಾಹ ನಡೆಸುವರು. ಅನಂತರ, ವೈಶ್ಯರು ವಿಧವಾ ವಿವಾಹದ ವಿರೋಧಿಗಳಾಗಿ ಇರುವರು. ಇವರಲ್ಲಿ ಬಾಲ್ಯವಿವಾಹವು ನಡೆಯಬೇಕಾದ್ದು ಶಾಸ್ತ್ರೋಕ್ತ. ವಿವಾಹವಾಗದೆ ಋತುಮತಿಯಾದ ಹೆಣ್ಣನ್ನು ಇವರು ಜಾತಿಯಿಂದ ದೂರವಿಡುವರು. ಇಂಥ ಹೆಣ್ಣನ್ನು ಕಣ್ಣುಕಟ್ಟಿ ಕಾಡಿನಲ್ಲಿ ಬಿಡುವುದಕ್ಕೆ ಅವರಿಗೆ ಶಾಸ್ತ್ರಾಧಾರವಿದೆಯಂತೆ. ಒಂದುವೇಳೆ ಹಿಂದಿಲ್ಲದಿದ್ದರೂ, ಈಗಲಾದರೂ ಶಾಸ್ತ್ರಗಳನ್ನು ತಮ್ಮನುಕೂಲಕ್ಕೆ ತಕ್ಕಂತೆ ಮಾರ್ಪಾಟು ಮಾಡಿರಬಹುದು. ಇಲ್ಲವೆ ಇವರ ಆಚಾರವು ವೃದ್ಧಾಚಾರವಾಗಿ ಬಂದಿರುವುದರಿಂದ, ಹಿರಿಯರು ಹದರಿಕೆ ಬಡಿಸುವ ಅಭಿಪ್ರಾಯಗಳನ್ನು ತಮ್ಮ ಜನರೊಳಗೆ ಹರಡಿರಬಹುದು. ಗೌಡರುಗಳ ಜನರು ಬಾಲ್ಯವಿವಾಹವನ್ನು ಮಾಡುವುದಿಲ್ಲ. ಇವರು ಸಹ ವಿಧವಾ ವಿವಾಹವನ್ನಾಚರಿಸುವರು. ಇನ್ನು, ಬ್ರಾಹ್ಮಣರ ವಿಷಯ ವಿಶೇಷವಾಗಿ ಹೇಳಬೇಕಾಗಿಲ್ಲ

ಎಂತೂ, ಹಿಂದೂದೇಶವು ಸಮಾಜ ಸುಧಾರಣೆಯಲ್ಲಿ ತೀವ್ರವಾಗಿ ಮುಂದರಿಯುತ್ತಿದೆ. ನಮಗೆ ಸ್ವರಾಜ್ಯಪ್ರಾಪ್ತವಾಗುವವರೆಗೆ ಸಮಾಜೋದ್ಧಾರಣೆಯ ವಿಷಯದಲ್ಲಿ ಸ್ವರಾಜ್ಯಬಾಂಧೀಕರು ತಟಸ್ಥರಾಗಬಾರದು. ರಾಜಕೀಯ ಚಳವಳಿಯೊಂದಿಗೆ

ಸಾಮಾಜಿಕ ವಲನವೂ ನಡೆಯಬೇಕು. ನಾವು ಬೆಳೆಯಲೂ ಬೇಕು, ಬದಲಾಗಲೂ ಬೇಕು. ಇದು ಪ್ರಾಕೃತಿಕ ಸೂತ್ರ. ಇದನ್ನು ಎಲ್ಲ ಮುಂದಾಳುಗಳು ಗಮನಿಸುವುದಗತ್ಯ. ಇದು ವರೆಗು ಪ್ರಸ್ತಾಪಿಸಿದ ಬಿಲ್ಲನ್ನ ಹಿಂದೆ ಸಭೆಗೆ ತಂದಿದ್ದ ಸರ್ ಗೋರರಿಗೂ ಈಗ ಅದೇ ಬಿಲ್ಲನ್ನು ಜನರ ಮುಂದಿಟ್ಟ ಸರಕಾರಕ್ಕೂ ನಮ್ಮ ಧನ್ಯವಾದಗಳು.

"ಸುಧಾರಕಪಕ್ಷೀಯ್ಬ."

ವಿಮರ್ಶೆ.

ಕರ್ನಾಟಕಪ್ರಬಂಧ ಮುಕ್ತಾವಳಿ:—ಪಂಡಿತ ಕೆ. ಹನುಮಂತರಾವ್ ಇವರಿಂದ. ಬೆಲೆ—12 ಆಣೆ ಪ್ರಕಾಶಕರು—ದಿ ಸಿಟಿ ಬುಕ್ ಡಿಪೊ, ಅವೆನ್ಯೂರೋಡ್, ಬೆಂಗಳೂರು ಸಿಟಿ.

ಪುಸ್ತಕವು ಸರ್ವಾಂಗಸುಂದರವಾದ ರೀತಿಯಲ್ಲಿ ರಚಿತವಾಗಿದೆ. ಇದು ಪ್ರಥಮತಃ 1915ರಲ್ಲಿ ಬೆಳಕಿಗೆಬಿದ್ದು, ಪುನಃ ಈ ಸರುಪ ಸಂಪೂರ್ಣವಾಗಿ ತಿದ್ದಲ್ಪಟ್ಟು, ಉಪನ್ಯಾಸಗಳ ಸಾರಾಂಶ ಪಟ್ಟಿಯನ್ನು ಹೊಸದಾಗಿ ಒಳಗೊಂಡು ಹೊರಬಿದ್ದಿದೆ. ಕಥೆಗಳನ್ನೂ, ಕಾಗದಗಳನ್ನೂ, ಪ್ರಬಂಧಗಳನ್ನೂ ಬರೆಯುವ ರೀತಿಗಳು ಸಲಲಿತವಾಗಿ ವಿವರಿಸಲ್ಪಟ್ಟಿವೆ. ಅಲ್ಲಲ್ಲಿ ಈ ವಿಷಯಗಳ ಕುರಿತು ಮಾದರಿಗಳು ಸಹ ಅವೆ. ಮೈಸೂರು ಸರಕಾರದವರು ಈ ಪುಸ್ತಕವನ್ನು ಉಪಸಹ್ಯ ಪುಸ್ತಕವನ್ನಾಗಿ ನೇಮಿಸಿರುವರು. ಲೋವರಸಕಂಡರಿ ಮತ್ತು ಸ್ಕೂಲ್ ಫೈನಲ್ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ. ನಮ್ಮ ಮಾತೃಭಾಷೆಯಾದ ಕನ್ನಡದ ಮೇಲೆ ಪ್ರೀತಿಯುಂಟಾಗಲಿಕ್ಕೂ, ವಿಷಯ ಸಂಗ್ರಹಕ್ಕೂ, ಅವಶ್ಯವಾಗಿ ಇಂತ ಪ್ರಬಂಧ ಪುಸ್ತಕಗಳು ವಿದ್ಯಾರ್ಥಿಗಳ ಕೈಯಲ್ಲಿರಬೇಕು ದುತ್ತಮವು. ಚಿಕ್ಕಮಕ್ಕಳ ಆಲೋಚನಾಕಾರ್ಯವು ಪರಭಾಷೆಯಾದ ಇಂಗ್ಲೀಷಿನಲ್ಲಿ ನಡಯುತ್ತಿರುವುದನ್ನು ನಿರೋಧಿಸಲಿಕ್ಕಾಗಿಯೇ ಇಂತ ಗ್ರಂಥಗಳು ಹುಟ್ಟುತ್ತಲಿವೆ. ಕನ್ನಡ ವಾಣಿಯನ್ನು ಉದ್ಧಾರ ಮಾಡಬೇಕಾದರೆ ಪ್ರತಿಯೊಬ್ಬನೂ ಹುಡುಗನಾಗಿರುವಾಗಲೇ ಭಾಷಾ ರಚನೆಯ ವಿಚಾರ ಕೂಂಚಮಟ್ಟಿಗಾದರೂ ತಿಳಿದವನಾಗಿರಬೇಕು. ಸಮ್ಮಾನಿಸುವರು ಲೇಖಾವೃತ್ತಿಯಲ್ಲಿ ಮುಂದರಿದಿಲ್ಲವೆಂಬುದು ನಿಶ್ಚಯವಷ್ಟೆ. ಹೀಗಾಗಲಿಕ್ಕೆ ನಮ್ಮ ಮಾತೃಭಾಷೆಯ ಕಡೆಗೆ ನಾವು ಇಟ್ಟ ಧಿಕ್ಕಾರವೇ ಕಾರಣ. ನಮ್ಮ ಈಗಿನ ಮತ್ತು ಮುಂದಿನ ಮಕ್ಕಳು ಪ್ರಬಂಧಗಳನ್ನಿ ಸಿಕೊಳ್ಳಬೇಕಾದರೆ ಪತ್ರಿಕೆಗಳನ್ನೋದಲಿಕ್ಕೂ, ಪತ್ರಗಳಿಗೆ ಜನೋದ್ಧಾರದ ಕುರಿತು ಬರಯಲಿಕ್ಕೂ ಕೈ ಹಚ್ಚುವವರಾಗಬೇಕು. ಆದಕಾರಣ ಇವುಗಳನ್ನೋದುವುದರಿಂದ ಹೆಚ್ಚು ಬುದ್ಧಿಯನ್ನು ಗಳಿಸುವರು.

ಅಲ್ಲಲ್ಲಿ ಮುದ್ರಣ ತಪ್ಪುಗಳಿವ. ಬೆಲೆ ಪುಸ್ತಕ ಪ್ರಮಾಣದ ಮತ್ತು ಅದರೊಳಗಡಗಿರುವ ವಿಷಯದ ದೆಸೆಯಿಂದ ಕಡಿಮೆಯೆಂದೇ ಹೇಳಬೇಕು.

ರಾಷ್ಟ್ರಗೀತಾರತ್ನಾಕರ.

ಲೇಖಕ, ಮೆ. ಪುಂಡೂರು ರಾಮಚಂದ್ರ ಪುಣಿಂಚತ್ತಾಯರು. ಬೆಲೆ 8 ಆಣೆ. ಸಿಗುವ ಸ್ಥಳ—ಕೆ ಯಂ ದಾಸ ಪ್ರಭು ಅಂಡ್ ಸನ್ಸ್, ರಥಬೀದಿ, ಮಂಗಳೂರು.

ಇದೊಂದು ಗೀತಾಪುಸ್ತಕವೆಂದು ಅದರ ನಾಮಾಂಕಿತವೇ ಸೂಚಿಸುತ್ತದೆ. ಲೋಕ ಮಾನ್ಯ ತಿಲಕರ ನಿಧನವೇ ಗ್ರಂಥಕರ್ತರಿಗೆ ಹಲವು ಸ್ಫೂರ್ತಿದಾಯಕವಾದ ಗೀತೆಗಳನ್ನು ಬರೆಯುವದಕ್ಕೆ ಉತ್ತೇಜನಕೊಟ್ಟಿತೆಂದು ಮುನ್ನುಡಿಯಿಂದ ಸಮಗರವಾಗುತ್ತದೆ. ಮೆ. ಪುಣಿಂಚತ್ತಾಯರು ಹಲವು ಬಿರುದುಗಳನ್ನು ತಮ್ಮ ಕವನಗಳಿಗಾಗಿ ಪಡೆದಿರುವರು. ಇವರ ಗೀತೆಗಳು ಜನರ ಮನವನ್ನು ಉದ್ದೀಪನಗೊಳಿಸುವಂಥವುಗಳು. ಗೀತೆಗಳ ಭಾಷೆ ಸರಳವಾಗಿದೆ, ದಾಟಿಯುಸಹ ಸುಲಭ.

ಲೋಕ ಮಾನ್ಯರ ಚರಿತ್ರೆ, ಮಹಾತ್ಮ ಗಾಂಧಿ ವಿಜಯ, ಮಹಾತ್ಮರ ಅನಶನವ್ರತ, ಚರಕ ಗೀತೆ, ಭಾರತರಾಣಿ, ಸ್ವರಾಜ್ಯಗೀತೆ ಇವುಗಳೆಲ್ಲಾ ಮನೋರಂಜಕವಾಗಿದ್ದು, ಪ್ರತಿಯೊಬ್ಬ ಕನ್ನಡಾಭಿಮಾನಿಯು ಓದಲರ್ಹವಾಗಿದೆ. ಮೊದಲೇ ಕೆಲವು ಗೀತೆಗಳನ್ನು ಗ್ರಂಥಕರ್ತರು ರಚಿಸಿ ಧರ್ಮಾರ್ಥವಾಗಿ ಬಹಳಜನಗಳಿಗೆ ಹಂಚಿರುವರು. ಗ್ರಂಥಕರ್ತರನ್ನು ನಮ್ಮ ಕನ್ನಡನಾಡಿನ ಕವಿಶ್ರೇಷ್ಠರಲ್ಲಿ ಒಬ್ಬರೆಂದು ಮನಃಪೂರ್ವಕವಾಗಿ ಹೇಳುವೆವು.

ಪುಸ್ತಕವು ಅಚ್ಚುಕಟ್ಟಾಗಿ ಮುದ್ರಿತವಾಗಿದೆ. ಕನ್ನಡನಾಡಿನ ಧುರೀಣರಾದ ಮೆ ಗಂಗಾಧರ ಬಾಳಕೃಷ್ಣ ದೇಶಪಾಂಡೆಯವರು ಈ ಗ್ರಂಥಕ್ಕೆ ಮುನ್ನುಡಿಯನ್ನು ಬರೆದು, ಅದಕ್ಕೆ ಒಳ್ಳೇ ಮಹತ್ವವನ್ನು ತಂದಿರುವರು.

ಗ್ರಂಥವನ್ನು ಓದಲಿಕ್ಕೆ ಹಿಡಿದರೆ ಅದನ್ನು ಪೂರೈಸುವತನಕ ಮನಸ್ಸೇ ನಿಲ್ಲದು. ಎಲ್ಲ ಗೀತೆಗಳು ಹೃದಯಂಗಮವಾಗಿವೆ.

ಲೇಲೇ:—ಗ್ರಂಥಕರ್ತ, ಪೋಲಿಸ ಮೆ. ಪುಣಿಂಚತ್ತಾಯರು. ಬೆಲೆ, ಒಂದಾಣೆ. ಸಿಕ್ಕುವ ಸ್ಥಳ—ದಾಸ ಪ್ರಭು ಅಂಡ್ ಸನ್ಸ್, ಮಂಗಳೂರು.

ಮಾಯೆ ಎನೆಂಬುದು ಇದರಲ್ಲಿ ವಿವರಿಸಿದೆ. ಪರಮಾತ್ಮನ ಅವತಾರ ವರ್ಣನೆಯು ಚೆನ್ನಾಗಿದೆ. ಇದೊಂದು ಸಣ್ಣ ವೇದಾಂತ ಪುಸ್ತಕ. ಅಸ್ತಿಕರು ಇದನ್ನೋದುವುದರಿಂದ ಹೆಚ್ಚು ಲಾಭ ಹೊಂದುವರು.

ನೋಟೀಸು.

ನನ್ನ ಸೈಕಲ್ ಲಾಟರಿಯು ಅಕ್ಟೋಬರ್ ತಿಂಗಳು 6ನೇ ಮಂಗಳವಾರ ದಿನ 2½ ಗಂಟೆಗೆ ಅಮ್ಮತ್ತಿಯಲ್ಲಿ ಹಾಕಲ್ಪಡುವುದು. ಸದ್ರಿ ದಿನ ಟಿಕೇಟು ಪಡೆದುಕೊಂಡವರು ದಯವಿಟ್ಟು ಬರಬೇಕಾಗಿ ನನ್ನ ಕೋರಿಕೆ.

ಎಸ್. ಎಸ್. ಮೇದಪ್ಪ,
ಕಣ್ಣಂಗಾಲ,
1 ಅಮ್ಮತ್ತಿ

ಮದ್ಯನಿಷೇಧ ಸಂಘದ ಮತ್ತು ಮದ್ಯಪಾನ ವಿಸರ್ಜನೆ ಮಾಡುವ ಎಲ್ಲಾ ಮಹಾನೀಯರು ಗಳಿಗೆ ಮತ್ತು ಕ್ಷೇಮಚಿಂತಕರಿಗೆ ಸಹ ವಿನಂತಿ.

(ಕೊಡಗು ನಿಷಾಸೇಧ ಸಂಘದ ಸೆಕ್ರೆಟರಿಯವರಿಂದ)

ಇದೇ ಬರುವ 1926ನೇ ಜನವರಿ ತಾ 29ರಿಂದ 31ರವರೆಗೆ ಉತ್ತರ ಹಿಂದುಸ್ಥಾನದ ಡೆಲ್ಲಿ ಪಟ್ಟಣದಲ್ಲಿ ಹಿಂದುದೇಶದ ಮದ್ಯ ನಿಷೇಧ ಮತ್ತು ಬಹಿಷ್ಕಾರ ಸಂಘಗಳವರ ಒಂದು ಭಾರೀ ಕೂಟ ಯಾನೆ ಸಮ್ಮೇಳನವು ಜರಗುವದಿದೆ. ಈ ಸಮ್ಮೇಳನಕ್ಕೆ ದಿವಾನ್ ಬಹದ್ದೂರ್ ಎಲ್ಲಾರ್ ರಾಮಚಂದ್ರರಾವು ಯಂ ಎಲ್ ಎ ಯವರು ಅಧ್ಯಕ್ಷರಾಗಿರುವರು. ಹಿಂದೂದೇಶದ ಪ್ರತಿನಿಧಿಗಳ ಪೈಕಿ ಮಹಾತ್ಮ ಗಾಂಧೀಜಿಯವರೂ, ಪಂಡಿತ ಮದನಮೋಹನ ಮಾಲವೀಯರೂ, ಕಸ್ತೂರಿರಂಗರವರೂ ಸಿ ಎಫ್ ಅಂಡ್ರೂಸ್‌ರವರೂ ಮತ್ತು ಇನ್ನೂ ಅನೇಕ ಮಹನೀಯರುಗಳೂ ಉಪನ್ಯಾಸಮಾಡಲಿಕ್ಕಿರುವರು. ದೇಶದ ನಾನಾಕಡೆಯಿಂದ ಮಹಿಳೆಯರೂ, ಇಂಡಿಯನ್ ಮತ್ತು ಯುರೋಪಿಯನ್ ಮದ್ಯ ನಿಷೇಧ ಸಂಘಗಳ ಮೆಂಬರುಗಳೂ ದಯಮಾಡಲಿರುವರು. ಈ ಸಂಗತಿಯನ್ನು ಎಲ್ಲಾ ಮದ್ಯ ನಿಷೇಧ ಸಂಘಗಳ ಹಿತೈಷಿಗಳಿಗೂ ಹಿತಚಿಂತಕರಿಗೂ ಒಪ್ಪಿದಂತೆ ಪಡಿಸಬೇಕೆಂಬದಾಗಿಯೂ, ಸಾಧ್ಯವಾದಷ್ಟು ಮಟ್ಟಿಗೆ ಜನರನ್ನು ಮೀಟಿಂಗಿಗೆ ಹಾಜರ್ ಪಡಿಸಬೇಕಾಗಿಯೂ, ಹಾಗೆ ಹೋಗುವವರು ಈಗಲೇ ಅವರವರ ಹೆಸರುಗಳನ್ನು ತಿಳಿಸಬೇಕಾಗಿಯೂ ಕೋರಲಾಗಿದೆ. ಅಲ್ಲದೆ ಹೋಗುವವರು ಅವರವರ ಖರ್ಚನ್ನು ಮತ್ತು ಪ್ರಯಾಣದ ಊಟದ ಚಾರ್ಜನ್ನು ಮತ್ತು ಉಳಕೊಳ್ಳುವ ಖರ್ಚನ್ನೂ ಅವರವರೇ ಮಾಡಿಕೊಳ್ಳಬೇಕಲ್ಲದೆ, ಉಪನ್ಯಾಸ ಮಾಡಲಿಚ್ಛಿಸುವವರು ಭಾಷಣದ ವಿಷಯ ಮತ್ತು ಠರಾವುಗಳನ್ನು ಪಡನೆ ಕಳುಹಿಸಬೇಕು. ಈ ಕಾರ್ಯಕ್ಕಾಗಿ ಚಂದಾದಾರರು ಚಂದಾಹಣವನ್ನು ಈ ಕೆಳಗಿನ ಅಡ್ರೆಸಿಗೆ ರವಾನಿಸಬೇಕಾಗಿ ತಿಳಿಸಿರುತ್ತಾರೆ.

Herbert Anderson, Convener,
Prohibition League of India Convention,
59 King's Road,
Howrah, Calcutta.

ಗಣಪತಿ ವಾಚನಾಲಯ ಮತ್ತು ಪುಸ್ತಕ ಭಂಡಾರದ ವಿಷಯ

ದೇಶಬಾಂಧವರಲ್ಲಿ ವಿನಂತಿ.

(1) ಇದರ ಉದ್ದೇಶವು ವೀರರಾಜಪೇಟೆಯಲ್ಲಿ ಒಂದು ದೊಡ್ಡ ಪುಸ್ತಕಭಂಡಾರವನ್ನೂ ದೇಶದ ಮುಖ್ಯ ಸ್ಥಳಗಳಲ್ಲೂ ಮತ್ತು ಗ್ರಾಮಗಳಲ್ಲೂ ಸಣ್ಣ ಸಣ್ಣ ಪುಸ್ತಕಭಂಡಾರಗಳನ್ನೂ ಸ್ಥಾಪಿಸುವುದೇ ಆಗಿದೆ.

(2) ಈ ಭಂಡಾರವು 1860ನೆ ಇಸವಿ ಬುಕ್ ರಿಜಿಸ್ಟ್ರೇಶನ್ ಆಕ್ಟಿಗನುಗುಣವಾಗಿ ರಿಜಿಸ್ಟರ್ ಮಾಡಲ್ಪಡುತ್ತೆ.

(3) ಪುಸ್ತಕಭಂಡಾರವು ತೆರೆಯಲ್ಪಟ್ಟಕೂಡಲೇ ಸರಕಾರದ ಸಹಾಯವನ್ನು ಕೋರಲಾಗುತ್ತೆ.

(4) ಈ ಭಂಡಾರದ ಕೆಲಸದಲ್ಲಿ ಯಾವ ಪಂಗಡಭೇದವೂ, ರಾಜಕೀಯ ಭಿನ್ನಾಭಿಪ್ರಾಯಗಳೂ ಇರುವುದಿಲ್ಲ.

(5) ಜನಸಮುದಾಯದಲ್ಲಿ ಕೃಷಿ, ಕೈಗಾರಿಕೆ, ವಿದ್ಯಾಭಿವೃದ್ಧಿ, ಸಹಕಾರ, ಸ್ವಸಹಾಯ, ಸ್ವಾಭಿಮಾನ, ಮತ್ತು ದೇವಭಕ್ತಿಯನ್ನುಂಟುಮಾಡುವುದೇ ಈ ಪುಸ್ತಕಭಂಡಾರದ ಧ್ಯೇಯ ಮತ್ತು ತತ್ವ.

ದಯವಿಟ್ಟು ದೇಶಾಭಿಮಾನಿಗಳು ತಮ್ಮ ಉದಾರತ್ವವನ್ನು ಇದಕ್ಕೆ ಧನಸಹಾಯಮಾಡುವುದರಲ್ಲಿ ತೋರಿಸಬೇಕಾಗಿ ಪ್ರಾರ್ಥನೆ.

ಹೆಚ್ಚಿನ ವಿಷಯವನ್ನು ತಿಳಿಯಲಪೇಕ್ಷಿಸುವವರೂ, ಧನಸಹಾಯ ಮಾಡಲಿಚ್ಛಿಸುವವರೂ, ಈ ಕೆಳಗಿನವರಿಗೆ ದಯವಿಟ್ಟು ಬರೆಯಬೇಕಾಗಿ ಕೋರಿಕೆ.

ವೀರಾಜಪೇಟೆ, ಕೆ. ಪಿ. ಚಿಣ್ಣಪ್ಪ,
ದಕ್ಷಿಣ ಕೊಡಗು, ಪ್ರಮೋಟರ್. 2

ಮಾರಾಟಕ್ಕೆ!

ಒಳ್ಳೆಯ ಸ್ಥಿತಿಯಲ್ಲಿಯೂ, ನಾಜೂಕಾಗಿಯೂ ಇರುವ ಒಂದು ಟೋಂಗವು ಮಾರಾಟಕ್ಕೆ ಇದೆ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರೆಯಿರಿ.

ಜಿ. ಯಂ. ಮಂಚನಾಚ್ಚಯ್ಯ
ಕಾಫಿ ಪ್ಲಾಂಟರ್,
ಸುಂಟಿಕೊಪ್ಪ (ಕೊಡಗು).

ವಿನಂತಿ.

ಕೊಡಗು ಜಮೀನ್‌ದಾರರ ಸಂಘಕ್ಕೆ ಮ. ರಾ ಶ್ರೀ. ಗೈದ ಸುಬ್ಬಣ್ಣಯ್ಯನವರು ತಮ್ಮ ದೇಶಭಕ್ತಿಯಿಂದ ಒಂದು ಸಾವಿರದ ಆರುನೂರು ರುಪಾಯಿಗಳನ್ನು ಕೊಟ್ಟು ಒಂದು ಕಟ್ಟಡವನ್ನು ತೆಗೆದುಕೊಟ್ಟದ್ದಾರೆ. ಈ ಕಟ್ಟಡದ ರಿಪೇರಿಗೆ ಜಮಾಯಿಸಬೇಕೆಂತ ಸಂಘದ ಕಮಿಟಿಯಲ್ಲಿ ತೀರ್ಮಾನಿಸಿ ದೇಶದ ಉದಾರತ್ವಯುವು ಧಾರಾಳವಾಗಿದೊರಕು ಸಾಧ್ಯವಾದರೆ ಒಂದು ಪ್ರತ್ಯೇಕ ಹಾಲ್ ಸಹ ಕಟ್ಟುವ ಯೋಚನೆ ಇದೆ. ಕಟ್ಟಡದ ರಿಪೇರಿಗೆ 5000ರೂಪಾಯಿ ಮತ್ತು ಹೊಸ ಕಟ್ಟಕ್ಕೆ 10000 ರೂಪಾಯಿ ಬೇಕಾದೀತೆಂತ ಸಾಧಾರಣದ ಅಂದಾಜು ಮಾಡಲಾಗಿದೆ. ಕೊಡಗು ದೇಶದ ಪ್ರೀತಿಗೆ ಪಾತ್ರರಾದ ಮ. ರಾ. ಶ್ರೀ ರಾಯಬಹದ್ದೂರ್ ರಾಜಕಾರ್ಯ ಪ್ರಸಕ್ತ ಚೆಪ್ಪುಡಿರ ಮುತ್ತಣ್ಣನವರ ಜ್ಞಾಪಕಾರ್ಥವಾಗಿ ಅವರ ಮಕ್ಕಳು ಈ ಫಂಡಿಗೆ 1000 ರೂಪಾಯಿ ಕೊಟ್ಟಿರುತ್ತಾರೆ. ದೇಶದವರೆಲ್ಲರೂ ಈ ದೇಶದ ಕಾರ್ಯಕ್ಕೆ ತಮ್ಮ ಶಕ್ತಿ ಮೀರಿ ಸಹಾಯಮಾಡಬೇಕಾಗಿ ಅತಿವಿನಯದಿಂದ ಕೋರುತ್ತೇವೆ.

ಕೋದಂಡ ಅಪ್ಪಯ್ಯ,
ಪ್ರೆಸಿಡೆಂಟ್.

ಕೊಡಗುಜಮೀನ್‌ದಾರರ ಸಂಘ, ಸಿ. ಯನ್. ವೆಂಕಪ್ಪಯ್ಯ,
ಮಡಿಕೇರಿ, 17—9—25 ಜನರಲ್ ಸೆಕ್ರೆಟರಿ.

ವರ್ತಮಾನ ಸಂಗ್ರಹ.

ಒಳದೇಶ.

ಕಮಿಷನರ ರೆವಿನ್ಯುಆಫೀಸಿನಲ್ಲಿದ್ದ ಮೆ. ಒಬ್ಬಟಿರಾಮದ ಚಂಗಪ್ಪನವರು ಬಾಗಮಂಡಲಕ್ಕೆ ಪಾರುಪತ್ಯಗಾರರಾಗಿ ವರ್ಗಾಯಿಸಲ್ಪಟ್ಟಿರುವರು.

ಮಡಿಕೇರಿಯಲ್ಲಿ ಪಾರ್ಚ್‌ಮೆಂಟ್ ಕಾಫಿಯ ಕ್ರಯ ಹಂಡ್ರಡ್‌ವೈಟಿಗೆ 80ರಿಂದ 82 ರೂ ವರೆಗೆ ಇದೆ. 80 ರೂಪಾಯಿಯ ದರದಲ್ಲಿ ಸ್ವಲ್ಪ ಕಾಫಿ ಮಾರಾಟವೂ ಆಗಿದೆ.

ಬೊಂಬಾಯಿ ಜೆ. ಜೆ. ಆಸ್ಪತ್ರೆಯಲ್ಲಿ ಕಾಯಿಲಸ್ಥರಾಗಿದ್ದ ಮೆ. ಐಚೆಟ್ಟಿರ ಪೂವಯ್ಯನವರು ತಾ 5—9—'25ರಲ್ಲು ಸ್ವಾಧೀನರಾದರು. ಅಲ್ಲಿನ ಕೊಡಗರೆಲ್ಲರೂ ಸೇರಿ ಅವರ ಶವವನ್ನು ಮೆರಿನ್ ಲೈನ್ ಎಂಬಲ್ಲಿ ದಹಿಸಿದರು.

ಕಳೆದ ಮೇ ತಿಂಗಳಲ್ಲಿ ಬೆಳಗಾವಿಯಲ್ಲಿ ಜರಗಿದ 11ನೇ ಕರ್ನಾಟಕ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರಾದ ಮೆ ಬೆನಗಲ್ ರಾಮರಾಯರು ಮಾಡಿದ ಭಾಷಣದ ಇಂಗ್ಲೀಷ್ ಪ್ರತಿಯೊಂದನ್ನು ವಂದನಾ ಪೂರ್ವಕವಾಗಿ ಸ್ವೀಕರಿಸುತ್ತೇವೆ.

ಚೆಂಬೆಳೆಯೂರು ಗ್ರಾಮದ ಚೆಂಬಾಂಡ ಕುಶಾಲಪ್ಪನವರ ಪತ್ನಿಯು ಈ ವಾರ ಎರಡು ಮಕ್ಕಳನ್ನು ಪ್ರಸವಿಸಿದ ನಂತರ ಒಂದು ಮಗು ಹೊಟ್ಟೆಯೊಳಗೆ ಮರಣಪಟ್ಟು ತಾಯಿಯುಕೂಡಲೇ ಮೃತಪಟ್ಟಳೆಂದೂ ಎರಡು ಮಕ್ಕಳು ಜೀವನ್ನಾಗಿವೆಯೆಂದೂ ಸುದ್ದಿ.

ಡಿ. ಪಿ. ಡಬ್ಲ್ಯು ಹೆಡ್ಡ್ ಆಫೀಸಿನಲ್ಲಿ ಅಸಿಸ್ಟೆಂಟ್ ಡ್ರಾಫ್ಟ್ಸ್‌ಮ್ಯಾನರ ಹೊಸ ಉದ್ಯೋಗ ಒಂದು, ತಿಂಗಳಿಗೆ 50 ರೂ ಸಂಬಳದಲ್ಲಿ ತತ್ಕಾಲಕ್ಕೆ ಮಂಜೂರಾಗಿದೆ. ಇದಕ್ಕೆ ಅರ್ಹರಾದವರನ್ನು ಪ್ರಕಟನ ಮೂಲಕ ಅರ್ಜಿ ತರಿಸಿ ಚುನಾಯಿಸುವರಾಗಿ ಸುಚಿಸಲಾಗಿದೆ.

ಈ ತಾ 13ನೇ ರಾತ್ರಿ ಪೊನ್ನಂಪೇಟೆಯಲ್ಲಿ ಮಾಪಿಳ್ಳೆ ತಂಗುಟ್ಟಿ ಮತ್ತು ಮೈದಿನ್ ಕುಟ್ಟಿ ಎಂಬವರ ಅಂಗಡಿ ಮನೆಗೆ ಕಳ್ಳರು ನುಗ್ಗಲಿಕ್ಕೆ ಪ್ರಯತ್ನ ಮಾಡುತ್ತಿರುವಷ್ಟರಲ್ಲಿ ಅಂಗಡಿಯವರಿಗೆ ಎಚ್ಚರವಾಗಿ ಗುಲ್ಲು ಮಾಡಲು ಕಳ್ಳರು ಓಡಿಹೋದರೆಂದು ವರ್ತಮಾನ.

ಈ ವರ್ಷ ಕಿಗ್ಗಟ್ಟುನಾಡಿನಲ್ಲಿ ದನಗಳ ಬಾಯಿಲೆಯಿಂದ ಅನೇಕರ ಆರಂಭವು ಹಿಂದೆ ಬಿದ್ದಿತೆಂತಲೂ, ಈಗ ಮಳೆ ಕಡಿಮೆಯಾಗಿ ನೀರಿನ ಕೊರತೆಯಿಂದ ಹಲವು ಕಡೆಗಳಲ್ಲಿ ಭೂಮಿ ಪಾಳುಬಿದ್ದಾಗಿರುವದಲ್ಲದೆ ನೆಟ್ಟ ಗದ್ದೆಗಳೂ ಒಣಗುತ್ತಾ ಬರುತ್ತಿವೆಯೆಂದೂ ಒಂದು ವಾರ್ತೆ.

ಇಂಡಿಯನ್ ಕ್ರಿಶ್ಚಿಯನ್ ಮ್ಯಾರೇಜ್ ಆಕ್ಟು ಪ್ರಕಾರ ಚೀಫ್ ಕಮಿಷನರವರು ಕೊಡಗಿನ ಕ್ರೈಸ್ತರ ಮದುವೆಗಳಿಗೆ ರಿಜಿಸ್ಟ್ರಾರರಾಗಿ ಸಿವಿಲ್ ಸರ್ಜನರಾದ ಕ್ಯಾಪ್ಟನ್ ಎಸ್. ಆರ್ ತಾರ್ನಂಟನ್‌ರವರನ್ನೂ, ಪೋಲಿಸ ಆಕ್ಟಿಂಗ್ ಚಾರ್ಜಾಗಿ ಡಿಸ್ಟ್ರಿಕ್ಟ್ ಜಡ್ಜರಾಗಿ ಕಮಿಷನರನ್ನೂ ನೇಮಿಸಿರುವರು.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಸ್ವಲ್ಪ ಕಾಲದ ಮೀಟಿಂಗೊಂದು ಅಕ್ಟೋಬರು ತಿಂಗಳ ಎರಡನೇ ವಾರದಲ್ಲಿ ಸೇರುವುದೆಂದೂ, ಮತ್ತೊಂದು ಮೀಟಿಂಗು ಡಿಸೆಂಬರು ಮೂರನೇ ವಾರದಲ್ಲಿ ನಡೆಯಬಹುದೆಂದೂ, ಮೀಟಿಂಗಿನ ತಾರೀಕು ಹಿಂದಕಿಂದ ತಿಳಿಸಲಾಗುವದೆಂದೂ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಮಡಿಕೇರಿಯಲ್ಲಿ ಮೊದಲು ಫಾರೆಸ್ಟು ಆಫೀಸಿನ ಹೆಡ್‌ಗುಮಾಸ್ತನಾಗಿದ್ದ ಮೆ. ಅಬ್ದುಲ್ ರಹಿಮಾನ್‌ರವರ ಮೇಲೆ ನಡೆಯುತ್ತಿದ್ದ ಆಫೀಸು ಹಣ ಗಫಲತ್ತಿನ ಕೇಸಿನಲ್ಲಿ ಅವರಿಗೆ ಕೋರ್ಟು ವಿಧಿಸುವವರೆಗೆ ಸಜೆಯೂ ಒಂದು ಸಾವಿರ ರೂಪಾಯಿ ಜುಲುಮಾನೆಯೂ ತಪ್ಪಿದರೆ 6 ತಿಂಗಳು ಸಜೆಯೂ ಸಬ್ ಜಡ್ಜಿಯವರ ಕೋರ್ಟಿನಲ್ಲಿ ವಿಧಿಸಲಾಯಿತು.

ವಯನಾಡಿನಲ್ಲಿರುವ ಕೊಡಗರೆಲ್ಲರೂ ಸೇರಿ ಅಲ್ಲಿರುವ ಮೆ. ಬಿ ಸಿ ಕುತ್ತೈಯ್ಯನವರ ಬಿಡಾರದಲ್ಲಿ ಕೈಲ್‌ಪೊಳ್ದು ಹಬ್ಬದ ಔತಣವನ್ನು ಸ್ವೀಕರಿಸಿ, ಸಾಯಂಕಾಲ ತೆಂಗಿನಕಾಯಿ

ಗುರಿ ಹೊಡೆದರೆಂದೂ, ಅಲ್ಲಿ ಹೀಗೆ ಮಾಡಿದ್ದು ಇದೇ ಮೊದಲೆಂದೂ ಇನ್ನು ಮುಂದೆಯೂ ಹೀಗೆ ನಡೆಯಲೆಂದೂ ಒಬ್ಬರು ಬರೆದಿರುತ್ತಾರೆ.

ದಕ್ಷಿಣ ಕೊಡಗಿನ ಸಹಕಾರ ಸಂಘದ ಗೌರವ ಪ್ರಚಾರಕರು ಈಗಾಗಲೇ ಮೂನಾಳಡು, ಬಾಡಗ, ಜೋಡುಬೀಟಿಯೂ, ಬೀರು, ಕೊಳಕೇರಿ ಮತ್ತು ಒಲಮುರಿ ಗ್ರಾಮಗಳಲ್ಲಿ ಉತ್ಥಾನ ಸಾಲ ಕೊಡುವ ಸಹಕಾರ ಸಂಘಗಳನ್ನು ಏರ್ಪಡಿಸಿರುತ್ತಾರೆಂತಲೂ, ಬಿಟ್ಟಂಗಾಲ, ಕುಂಜಿಲಗೇರಿ, ನಾಂಗಾಲ, ಚೂಳಗೋಡು ವಗೈರೆ ಗ್ರಾಮಗಳಲ್ಲಿ ಈ ವಿಷಯ ಬೇಗನೆ ಮೀಟಿಂಗ್ ಮಾಡಲಿಕ್ಕಿರುವರೆಂತಲೂ ತಿಳಿಯುತ್ತೇವೆ.

ಖಜಾನೆಯಲ್ಲಿ ಹಣವು ಕಡಿಮೆಯಾದ ಸಂಗತಿಯಲ್ಲಿ ಹಿಂದಿನ ಬರೆದ ವರ್ತಮಾನವು ಪೂರ್ತಿ ಸರಿಯಿರದಲ್ಲ ...9—25ರಲ್ಲಿ ಒಂದು ಚೀಲದಲ್ಲಿ 175 ರೂ ಕಡಿಮೆಯಾಗಿದ್ದುದರಿಂದ ಕರ್ಣೀಕರು ಟ್ರೆಜರಿ ಆಫೀಸರಿಗೆ ತಿಳಿಸಿದ ಮೇಲೆ ತಾ 9ರಲ್ಲು ಖಜಾನೆಯ ಹಣವನ್ನೆಲ್ಲಾ ತೂಕಮಾಡಿ ನೋಡಿದರು. ಆಗ ಇನ್ನೊಂದು ಚೀಲದಲ್ಲಿ 175 ರೂ ಯೂ ಮತ್ತೊಂದು ಚೀಲದಲ್ಲಿ 100 ರೂ ಯೂ ಕಡಿಮೆ ಕಂಡು ಬಂತು. ಅನಂತರ ಟ್ರೆಜರಿ ಆಫೀಸರು ಕಮಿಷನರಿಗೆ ರಿಪೋರ್ಟ್ ಮಾಡಿದರು. ಆ ಮೇಲೆ ಕಮೀಷನರವರು ಪುನಹ ಎಲ್ಲಾ ಹಣವನ್ನು ಜಪ್ತಿ ನೋಡಿದ್ದಾಗಿದೆ. ಇವರು ನೋಡಿದಾಗ ಎರಡು ಚೀಲಗಳಲ್ಲಿ ಒಂದೊಂದು ರೂಪಾಯಿ ಕಡಿಮೆ ಇತ್ತೇ ಹೊರತು ಮೊದಲಿಗಿಂತ ಬೇರೆ ವ್ಯತ್ಯಾಸವೇನೂ ಇರಲಿಲ್ಲವೆಂದು ತಿಳಿಯುತ್ತೇವೆ.

ವೀರರಾಜಪೇಟೆ ಮುನಿಸಿಪಲ್ ಕಮಿಟಿ ಚುನಾವಣೆಗೆ ಈ ಕೆಳಗಿನ ಮಹನೀಯರು ಉಮೇದುವಾರರಾಗಿ ನಿಂತಿರುವರು— ಹಿಂದೂಗಳು ಮತ್ತು ಇತರರು—1 ಮೆ. ಅಪ್ಪಾರಂಡ ಜಂಗಪ್ಪನವರು, 2 ಮೆ. ಪುಲಿಯಂಡ ಗಣಪತಿಯವರು, 3 ಮ ಕೋದಂಡ ಉತ್ತಯ್ಯನವರು, 4 ಮೆ. ಪುಟ್ಟಿಚಂಡ ನಾಣ್ಯಯ್ಯ ಬಿ ಎ ಬಿ ಎಲ್ ರವರು, 5 ಮೆ ಸಜ್ಜೇರಾ ಯಂ ರಾಮರಾಯರು, 6 ಮೆ ಟಿ ಆರ್ ತಿರುವೆಂಗಡ ಯ್ಯಂಗಾರ್ಯರು, 7. ಮೆ. ಟಿ ಎನ್. ಸುಬ್ಬಯ್ಯನವರು, 8 ಮ ಎ ಕೆ ಕೃಷ್ಣಯ್ಯ ಬಿ ಎ ಎಲ್ ಎಲ್ ಬಿ ಯವರು. ಮಹಮ್ಮದೀಯರು—1. ಮೆ. ಜಿ ಉಮ್ಮರ್ ಸಾಹೇಬರವರು, 2 ಮೆ ಒಲಿಯಾ ಖಾನ್ ಕೃಷ್ಟಿಯವರು, 3 ಮೆ. ಅಬ್ದುಲ್ ಕರೀಮ್ ರವರು 4 ಮೆ ಜಿ ಮಹಮ್ಮದ್ ಗೌಸ್ ರವರು. ಕ್ರೈಸ್ತರ— 1 ಮೆ. ಪೀಟರ್ ಲೋಬೋರವರು, 2 ಮೆ. ಪಿ ಜಿ ಲೋಬೋರವರು.

ಹಿಂದೂದೇಶ.

ತಾ 15 ರಲ್ಲಿ ಕೂಲಿ ಆಳುಗಳ ಮುಷ್ಕರದಿಂದ ಬೊಂಬಾಯಿಯಲ್ಲಿ 14 ಗಿರಣಿಗಳು ಮುಚ್ಚಲ್ಪಟ್ಟಿವೆ.

ಮೈಸೂರಾಯರವರ ಕಳೆದ ವಿಲಾಯಿತಿ ಪ್ರವಾಸಕ್ಕೆ ಒಟ್ಟಿಗೆ ರೂ 64,000 ಖರ್ಚಾಯಿತೆಂದು ತಿಳಿಯ ಬಂದಿದೆ.

ಬೊಂಬಾಯಿ ಬಾಂಬ್ ಕೊಲೆ ಕೇಸಿನಲ್ಲಿ ಪತ್ತೆ ತಂದೂದು ಮಾಡಿದ ಪೋಲೀಸಿನವರಿಗೆ ಹನ್ನೊಂದು ಸಾವಿರ ರೂಪಾಯಿ ಇನಾಮು ಕೊಡಲ್ಪಟ್ಟಿದೆಯಂತೆ.

ಈ ವಾರದ ಮದ್ರಾಸು ಮುನ್ಸಿಪಲ್ ಚುನಾವಣೆಯಲ್ಲಿ ಮೂವರು ಸ್ವರಾಜ್ಯ ಪಕ್ಷದ ಉಮೇದುವಾರರೇ ಜಯಶೀಲರಾಗಿರುವರು.

ಮೈಸೂರಿನಲ್ಲಿ ದಸರಾ ಮಹೋತ್ಸವವನ್ನು ಈ ತಾ 19 ರಿಂದ 29 ರ ವರೆಗೆ ಬಹು ವಿಜೃಂಭಣೆಯಿಂದ ನಡೆಸಲು ಏರ್ಪಾಡಾಗಿದೆ.

ಮಂಗಳೂರಿನ ಸೆಯಿಂಟ್ ಎಲೋಸಿಯಸ್ ಕಾಲೇಜಿನಲ್ಲಿ ದೇಶಬಂಧು ದಾಸರವರ ಛಾಯಾಚಿತ್ರವನ್ನು ಇಡುವ ಸಮಾರಂಭವನ್ನು ರಾವ್‌ಸಾಹೇಬ್ ಎ ಜೆ ಲೋಬೋರವರು ನಡೆಸಿದರು.

ಮೈಸೂರು ಯುನಿವರ್ಸಿಟಿಯ ಕಾನ್ವಕೇಶನು ತಾ 11 ರಲ್ಲಿ ಮಹಾರಾಜರವರ ಅಧ್ಯಕ್ಷತೆಯಲ್ಲಿ ನಡೆಯಿತು. ನಾಮದಾರ ವಿ ಯಸ್. ಶ್ರೀನಿವಾಸ ಶಾಸ್ತ್ರಿಯವರು ಡಿಗ್ರಿ ಪಡೆದವರಿಗೆ ಬುದ್ಧಿವಾದದ ಭಾಷಣವನ್ನು ಮಾಡಿದರು.

ಮಲಬಾರಿನ ಕಲ್ಲಿಕೋಟೆ ಬಳಿ ಇರುವ ಚಾಕನುಂಗಲವೆಂಬ ಗ್ರಾಮದಲ್ಲಿ ಉತ್ತಮ ಜಾತಿಯ ಸ್ತ್ರೀಯೊಬ್ಬಳು ತನ್ನ ಗಂಡನು ಆರ್ಯ ಸಮಾಜಕ್ಕೆ ಸೇರಿ ಪಂಚಮರೊಂದಿಗೆ ಬೆರೆತನೆಂಬ ಕಾರಣದಿಂದ ಆತ್ಮಹತ್ಯ ಮಾಡಿಕೊಂಡಳು!

ಪಂಡಿತಮದನ ಮೋಹನ ಮಾಲವೀಯರನ್ನು ಮೈಸೂರಾಯರ ಕಾರ್ಯಕಾರೀ ಮಂಡಳಿಗೆ ಒಬ್ಬ ಮೆಂಬರಾಗಿ ಬರಬೇಕೆಂದು ಕೇಳಿರುವರೆಂದೂ, ಅದಕ್ಕೆ ಮಾಲವೀಯರು ಒಪ್ಪುವ ಸಂಭವವಿದೆಯೆಂದೂ ಬೊಂಬಾಯಿಯ ವರ್ತಮಾನ.

ರಿಫ್ ಜನರ ಮುಂದಾಳಾದ ಅಬ್ದೆಲ್ ಕ್ರಿಮ್‌ರವರಿಗೆ ಯುದ್ಧದಲ್ಲಿ ಜಯವಾಗುವಂತೆ ಹಿಂದೂದೇಶದ ಮುಸಲ್ಮಾನರೆಲ್ಲರೂ ಈ ತಾ 18 ರಲ್ಲು ಮಸೀದಿಗಳಲ್ಲಿ ಪ್ರಾರ್ಥನೆಮಾಡಬೇಕೆಂದು ಸೆಂಟ್ರಲ್ ಖಿಲಾಫತ್ ಕಮಿಟಿಯ ಅಧ್ಯಕ್ಷರ ಸೂಚನೆ ಮೇರೆ ಮೌ. ಶೌಕತ್ ಅಲಿಯವರು ವಿನಂತಿ ಮಾಡಿರುವರು.

ಬರುವ ಡಿಸೆಂಬರಿನಲ್ಲಿ ಕ್ಯಾನ್ ಪುರದಲ್ಲಿ ನಡೆಯಲಿಕ್ಕಿರುವ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಬೇರೆ ಬೇರೆ ಪ್ರಾಂತ್ಯಗಳು ಹೀಗೆ ಮತಕೊಟ್ಟಿರುವವು—ಶ್ರೀಮತಿ ಸರೋಜಿನಿದೇವಿ 12, ಜನಾಬ ಅಬದುಲ ಘೋಷ್ 10, ಮೆ ನ. ಕೆಲ್ಕಾರ್ 10, ಲಾಲಾಲಜಪತರಾಯ್ 4, ಮೆ ಶ್ರೀನಿವಾಸಅಯ್ಯಂಗಾರ್ 4, ಡಾ ಅನ್ಸಾರಿ 3, ಮೆ. ವಲ್ಲಭಾಯಿ ಪಟೇಲ್ 3, ಕೊಂಡಾ ವೆಂಕಟಪಯ್ಯ 2, ಇನ್ನು 11 ಜನರಿಗೆ ಒಂದೊಂದರಂತೆ ಮತಗಳು ದೊರೆತವು.

ಕಳೆದ ಘೋರ ಯುದ್ಧದಲ್ಲಿ ಶತ್ರು ಪಂಗಡದ ಜನಾಂಗಗಳಾಗಿದ್ದವರನ್ನು ಸಂಧಿ ಯುದ್ಧ ತೀರಿದ ನಂತರ 5ವರ್ಷಗಳ ಅವಧಿವರೆಗೆ ಇಂಡಿಯಾ ದೇಶಕ್ಕೆ ಬರಗೊಡಿಸಲಿಕ್ಕಾಗುವುದಿಲ್ಲವೆಂಬದಾಗಿ ಇಂಡಿಯಾ ಸರಕಾರವು ಸ್ಟೇಟ್ ಸಕ್ರೆಟರಿಯವರ ಅನುಮತಿ ಮೇರೆಗೆ 1919—20ರಲ್ಲಿ ಕಾನೂನು ಮಾಡಿಸಿತಷ್ಟೆ. ಈಗ ಆಂಗ್ಲ ಜರ್ಮನ್ ಒಪ್ಪಂದದ ಅವಧಿಯು ತೀರಿಹೋಗಿ ಆಂಗ್ಲದೇಶಕ್ಕೆ ಮುಂಚೆ ಶತ್ರುಗಳಾಗಿದ್ದ ಜನಾಂಗಗಳವರನ್ನು ಬರಗೊಡಿಸದಿದ್ದಂಥಾ ಎಲ್ಲಾ ನಿರ್ಬಂಧನೆಗಳನ್ನು ಸರಕಾರದವರು ತೆಗೆದುಹಾಕಿರುವರು. ಇದರಂತೆಯೇ ಈಗ ಇಂಡಿಯಾ ಸರಕಾರವೂ ಈ ಮುಂಚೆ ಇದ್ದ ಮೇಲ್ಕಾಣಿಸಿದ ನಿರ್ಬಂಧನೆಗಳನ್ನು ತೆಗೆದುಹಾಕಲು ತೀರ್ಮಾನಿಸಿರುವುದರಿಂದ ಹೀಗಿರುವುದರಿಂದ ಶತ್ರು ಪಂಗಡದ ಜನಾಂಗಗಳಲ್ಲೊಂದಾದ ಜರ್ಮನರೇ ಮುಂತಾದವರು ಹಿಂದೂದೇಶಕ್ಕೆ ಬರುವ ಮುಂಚೆ ಇದ್ದ ಬೇಧ ಭಾವವು ಇನ್ನು ಮುಂದೆ ಇರುವುದಿಲ್ಲ. ಬರುವವರು ಮಾತ್ರ ಅವರ ಚೀಟು (ಪಾಸ್‌ಪೋರ್ಟ್) ಪಡೆದುಕೊಂಡು ಬರಬೇಕೆಂಬ ನಿಬಂಧನ ಇದ್ದೇ ಇದೆ. ಪರದೇಶದ ಕ್ರೈಸ್ತ ಮಿಶನರಿ ಸೊಸೈಟಿಗಳೂ ಸಂಸ್ಥಾಪನೆಗಳೂ ಮತ್ತು ಅವಕ್ಕೆ ಸೇರಿದ ಬರಿಗಾರ ಮೆಂಬರರೂ ಪ್ರತಿ ಮಿಶನರಿಗಳೂ ಹಿಂದೂದೇಶಕ್ಕೆ ಬರಲು ನೇಮಿಸಿದ್ದ, ಹಾಲು ಇರುವ ನಿಬಂಧನೆಗಳನ್ನು ಸ್ವಲ್ಪ ಸಡಿಲಿಸುವ ಬಗ್ಗೆ ಅದು ಸರಕಾರದ ಆಲೋಚನೆಯಾಗಿದೆ. ಮತ್ತು ಈ ವಿಷಯವನ್ನು ಸಂಬಂಧಪಟ್ಟವರಿಗೆ ತಕ್ಕ ಸಮಯದಲ್ಲಿ ತಿಳಿಸಲಾಗುವುದು.

ಮ. ವ.

ವಿದೇಶ.

ಚಳ್ಳಿ ಮುಸ್ಮಿನ್ ಅರಸರು ತಮ್ಮ ರಾಣಿಸಮೇತ ಈಗ ಇಂಡಿಯಾದಲ್ಲಿರುವರು. ಅವರು ಹಲವು ಮುಖ್ಯ ಸ್ಥಳಗಳನ್ನು ನೋಡುತ್ತಲಿರುವರು.

ಜಪಾನಿನ ದ್ವೀಪದಲ್ಲೊಂದರಲ್ಲಿ ಒಂದು ವಿಷ ಕವಡು ಹುಟ್ಟಿದೆಯೆಂದೂ ಅದರಿಂದ ಅಂತಿಮನಸ್ಥಾಪ ಮತ್ತೆ ಮಡಿ ಹೋಗಲು ಹಾಕುವ ಅವಶ್ಯವಿಲ್ಲವೆಂದೂ ಅಲ್ಲಿಯವರು ಹೇಳುತ್ತಿರುವರು.

ಮೆ ಸಕ್ಲತ್‌ವಾಲಾರವರು ಬ್ರಿಟಿಷ್ ಪಾರ್ಲಿಮೆಂಟಿನ ಪರವಾಗಿ ವಾಷಿಂಗ್ಟನ್ ಕಾನ್‌ಫರೆನ್ಸಿಗೆ ಹೋಗಲು ಅಮೇರಿಕದವರು ಅಡ್ಡಿಮಾಡುವರು ಎಂಬ ವರ್ತಮಾನವು ಸುಳ್ಳೆಂದು ತಿಳಿಯಬರುತ್ತದೆ.

ಕುರಿಯ ಉಣ್ಣೆಯಂತೆಯೇ ಮೃದುವಾದ ಉಣ್ಣೆಯನ್ನು ಒಂದು ಜಾತಿಯ ಗಿಡದಿಂದ ಮಾಡುವುದನ್ನು ಯಾರೋ ಒಬ್ಬರು ಕಂಡುಹಿಡಿದಿರುವರಂತೆ. ಹೀಗೆ ತಯಾರಿಸಿದ ಉಣ್ಣೆಯು ಎಲ್ಲಾ ತರದ ಉಪಯೋಗಕ್ಕೂ ಬರುವುದು.

ಎಲ್ಲಾ ತರದ ಉಡುಪುಗಳಿಗೆ ದ್ರಾವಣ ಗಿಲಿಟು ಹಾಕಿ ಹಾಲಿದ ಸ್ಥಳದಲ್ಲಿಯೂ ತಗಲು ಉಳಿಯದಂತೆ ಮಾಡಿ ಅವುಗಳನ್ನು ನಿಜವಾಗಿಯೂ 'ರೇನ್ ಪ್ರೂಫ್' ಮಾಡಬಹುದಾಗಿ ಅಮೇರಿಕದ ಸಂಶೋಧಕನೊಬ್ಬನು ಕಂಡುಹಿಡಿದಿರುವನು.

ವಿಜ್ಞಾಪನೆ.

ಪೀಯರ್ಸ್ ಲೆಸ್ಸಿ ಏಜೆಂಟನಾದ ನಾನು ಕೊಡಗಿನ ಕಾಫಿ ಪ್ಲಾಂಟರುಗಳಲ್ಲಿ ವಿಜ್ಞಾಪಿಸಿಕೊಳ್ಳುವುದೇನೆಂದರೆ—

ಈ ವರ್ಷ ಕಾಫಿಗೆ ಒಳ್ಳೇ ಬೆಲೆಯು ಸಿಗುವಹಾಗೆ ಇದೆ. ಆದಕಾರಣ ನೀವು ನಿಮ್ಮ ಮಾಲನ್ನು ವಿಕ್ರಿ ಮಾಡುವ ಮುಂಚೆ ನನ್ನನ್ನು ವಿಚಾರಿಸಿದಲ್ಲಿ ಪ್ರಯೋಜನ ದೊರಕುವುದು.

ಎ ಜ ಲೋಬೊ,
ಪೀಯರ್ಸ್ ಲೆಸ್ಸಿ ಏಜೆಂಟ್,
ಸ್ಪೆನ್ಸರ್ ಕಂಪೆನಿ ಬಳಿ,
ಮಡಿಕೇರಿ

ಪತ್ರವ್ಯವಹಾರ.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಒಡತೋ, ಒಗ್ಗಟ್ಟೋ

ಅಯ್ಯಾ,

"ಲೋಕಪಾವನ"ದ ಕಳೆದ ಸಂಚಿಕೆಯಲ್ಲಿ ಮಾ ಪ್ರಿ ರಾ ಪಾಕ ಕುಟ್ಟಯ್ಯ ಅಚ್ಚಯ್ಯನವರು ಕ್ಲಬ್ ಉತ್ಸವದ ಒಂದು ಪಟ್ಟು ಕೊಟ್ಟ ಭಾಷಣದಲ್ಲು "ಕೊಡಗು ಕೊಡಗರ ದೇಶ ಪೂರ್ವಕಾಲದಲ್ಲಿ ಕೊಡಗರು ಮುಂದೆ ಇದ್ದು ಬಾಕಿಯವರನ್ನು ಹಿಂದೆ ನಡೆದ ಕೊಂಡು ಹೋಗುತ್ತಿದ್ದರು. ಈಗ ಕೊಡಗರು ಹಿಂದೆ ಬಿದ್ದಿರುವರು" ಎಂದು ಮುಂತಾಗಿ ಹೇಳಿದರೆಂಬ ಮಾತನ್ನು ನೋಡಿದರೆ ನಾಡಿನಲ್ಲಿರುವ ನಮ್ಮಂಥವರಿಗೆ ಬಹಳ ವ್ಯಸನವಾಗುತ್ತದೆ. ಕೊಡಗು ಕೊಡಗರದ್ದೇ ಆಗಿದ್ದಪಕ್ಷ, ಅನೇಕವರ್ಷ ಲಿಂಗರಾಜರು ಜಮ್ಮ, ಜಹಗೀರ್, ಉಂಬಳಿ, ಪಿಂಚಣಿ ಮತ್ತು ಬಿರುದಾವಳಿಪಡೆದು, ಈ ದೇಶದಲ್ಲು ನಾಡಿರುವ ವರುಷಗಳಿಂದ ಇರುವವರು ದೇಶಾನ್ಯರೆ? ಅಲ್ಲದೆ ಕೊಡವರೇ ಪೂರ್ವದಿಂದಲೂ ಮುಂದಾಳುಗಳು ಆಗಿದ್ದರೆ, ಈ ಕೊಡಗರ ಪ್ರೈಸ ಒಬ್ಬನಾದರೂ ಯಾಕೆ ರಾಜ್ಯವಾಳಲಿಲ್ಲ? ಎಲ್ಲಿಂದಲೋ ಬಂದ ಒಬ್ಬ ಲಿಂಗಾಯತನಿಗೆ ನಮ್ಮ ರಾಜ್ಯವನ್ನು ಬಿಟ್ಟುಕೊಟ್ಟು ಅವನಿಗೆ ಯಾಕೆ ಪಟ್ಟಕಟ್ಟಿದರು? ಪುನಹ ಅಂಥಾ ರಾಜರ ಅನೇಕ ತೊಂದರೆಗಳನ್ನು ಅನುಭವಿಸಿ, ಆ ರಾಜರನ್ನು ಹೊರಪಡಿಸಿದಾಗ ನಮ್ಮ ಸ್ವಾತಂತ್ರ್ಯವನ್ನು ಯಾಕೆ ಉಳಿಸಿಕೊಳ್ಳಲಿಲ್ಲ? ಈಗಿನ ಉದ್ಯೋಗದಲ್ಲಿ ಮುಂದಾಳುಗಳು ಎನ್ನಿಸಿಕೊಂಡವರು, ನಮ್ಮ ಜನ್ಮ ಜಹಗೀರುಗಳ ಸನ್ನದಿನಲ್ಲಿ ಇರುವ ಹಕ್ಕುಗಳನ್ನು ಉಳಿಸಿಕೊಳ್ಳದೆ, ಎಲ್ಲ ಸ್ವತಂತ್ರವನ್ನು ಕಳೆದುಕೊಂಡು, ಸರಕಾರದವರ ಜಲ್ಮದಾಸರನ್ನಾಗಿ ಮಾಡಿದ ಕಾರಣವೇನು? ಈಗ ಕೊಡವರು ಹಿಂದಕ್ಕೆ ಬಿದ್ದಿದ್ದಾರೆ ಎಂಬುದಕ್ಕೆ ಆಧಾರವೇನು? ಹಾಗೆ ಮುಂದಕ್ಕೆ ಹೋಗುವುದಕ್ಕೆ ಅವಕಾಶ ಕೊಟ್ಟವರ್ಯಾರು?

ಅಚ್ಚಯ್ಯನವರೇ, ನಾಡಿನಲ್ಲಿರುವ ಬಡ ರೈತನಿಗೆ ತಿಳಿದ ಇದೆ ಈ ವಿಷಯವಲ್ಲು ವೃದ್ಧಾಪ್ಯದಲ್ಲು ತಮಗೆ ವ್ಯಸನ ಮತ್ತು ತೊಂದರೆ ಬೇಡ. ಚಿಕ್ಕ ವಯಸ್ಸಿನವನಾದ ನನ್ನದೊಂದು ವಿಜ್ಞಾಪನೆ—ಕೊಡಗು ಕೊಡಗಿನ ಜನರೆಲ್ಲ, ಕೊಡಗಿನವರೆಲ್ಲಾ ಸಹೋದರಭಾವದಲ್ಲು ಇರಬೇಕೆಂತಲೂ, ವಿದ್ಯೆ, ಬುದ್ಧಿ, ಚಾತುರ್ಯದಲ್ಲಿ ನಿಪುಣರಾದವರು, ಜಾತಿ ಮತ ಭೇದವಿಲ್ಲದೆ ಮುಂದಾಳುಗಳು ಆಗಬಹುದಾಗಿಯೂ ತಮ್ಮ ಅಭಿಪ್ರಾಯವನ್ನು ಕೊಂಚ ಬದಲಾಯಿಸಿ ಪ್ರಚುರಗೊಳಿಸಿದರೆ, ದೇಶದ ಒಗ್ಗಟ್ಟಿಗೂ, ಏಳಿಗೆಗೂ ತಮ್ಮಂಥ ಮುಂದಾಳುಗಳು ಪ್ರೋತ್ಸಾಹಕೊಟ್ಟಂತಾಗ ಇದು ... ಒಳ್ಳೆದಕ್ಕೆ ತಮ್ಮ ಮೇಲಿನ ಅಭಿಪ್ರಾಯದಿಂದ ... ಬಡಕುಂಟುವದು ತಪ್ಪಕ್ಕೆ ... ಯುಕ್ತಿಸುತ್ತಿದ್ದೀರೆಂದು, ಈ ... ಹೇಳಿದ್ದೇ ನಾನು ಬಂದೆನು.

ನಾಡಿನ ಬೆಳ್ಳಪ್ಪ

ಬೆಂಗಳೂರು ಕೊಡಗರ ಕೈಲಾಸಮುಹೂರ್ತ ಹಬ್ಬ

ತಾರೀಖು 14—9—1925 ಈ ಪಟ್ಟಣದಲ್ಲಿರುವ ಕೊಡಗು ಯುವಕರಿಗೆಲ್ಲಾ ಆ ದಿನ ಮಹೋಲ್ಲಾಸ ಏತಕ್ಕಾಗಿ! ಈ ದಿನವೇ ನಮ್ಮ ಕೈಲ್‌ಮುಹೂರ್ತ ಹಬ್ಬ.

ವಿಚಾರವಾದಂತೆ ಎಲ್ಲರೂ ಮಧ್ಯಾಹ್ನ 1 ಗಂಟೆಗೆ ಸರಿಯಾಗಿ ಲಾಲ್‌ಬಾಗಿನಲ್ಲಿ ಬಂದು ಸೇರಿದರು. ಮಾ ರಾ ಶ್ರೀಗಳಾದ ಪಾಲೇಕಂಡ ಮೇದಪ್ಪನವರೂ, ಮಾತಂಡ ಚೆನ್ನಪ್ಪನವರೂ, ಒಲ್ಲಿಚಂಡ ಸುಬ್ಬಯ್ಯನವರೂ ಮುಂಚಾಂದಿರ ಕಾಳಪ್ಪನವರೂ ಬರಗಿನವರಾಗಿ ನಮ್ಮ ಅತಿಥಿಗಳಾಗಿ ಬಂದುದನ್ನು ನೋಡಿ ಎಲ್ಲರಿಗೂ ಪರಮಾನಂದವಾಯಿತು.

ಕೊಡಗರ ಪದ್ಧತಿ ಮೇರೆ ತಯಾರಾದ ಭೋಜನೋಪರಾಂತರ ಆಟ ಪಗಡೆ ತರಗತಿ ... ಗಡದ ಓಟ ... 'ಸ್ಯಾಕ್ ರೇಸ್' ಓಟ, ಹಾಕಿ ಪೈಲು ಓಟ, ಇವುಗಳಲ್ಲಿ ಮಾ ಶ್ರೀ ಕೋಡಿರ ಅಪ್ಪಣ್ಣನವರಿಗೂ, ಕೃಷ್ಣಂಡ ... ಬಿ ಮಾದಪ್ಪನವರಿಗೂ ಭಾರದ ಚೆಂಡು ಎಸೆಯುವುದರಲ್ಲಿ ಕಾರ್ಯಪ್ಪನವರಿಗೂ, ತೆಂಗಿನ ಕಾಯಿಗೆ ಕಲ್ಲೆಸೆಯುವುದರಲ್ಲಿ ... ಮಂದಣ್ಣನವರಿಗೂ, ಬಂದನೆ ಇನಾಮುಗಳು ದೊರೆತವು. ಅಲ್ಲದೆ ಈ ವರ್ಷದ ಚಾಂಪಿಯನ್‌ಷಿಪ್ ಮಾ ಶ್ರೀ ಅಪ್ಪಣ್ಣನವರಿಗೆ ದೊರಯಿತು.

ಆಟ ಓಟಗಳ ಸಮಾಪ್ತಿಯು ಮುಗಿದಿತು. ಆಷ್ಟರಲ್ಲಿ ... ಆದ ದಿವ್ಯ ಹತ್ತಿತು. ಕೊಡಗರ ಪದ್ಧತಿಗನುಸಾರವಾಗಿ ಎಲ್ಲವೂ ಇದ್ದವು. ಆದರೆ ಉದಾಹರಣೆ ಪೂರ್ವಕವಾಗಿ ... ಮಡಿಕೇರಿಯವರಲ್ಲಿ ಇದ್ದಂತೆ ಮದ್ಯಪಾನ ... ಸಿಕ್ಕಲಿಲ್ಲ. ಇದು ಶ್ಲಾಘನೀಯ ... ಇದರಲ್ಲಿಯೂ ತೃಪ್ತಿಯಾಗಿ ನಡೆದವು. ಇನಾಮುಗಳೆಲ್ಲವೂ ಮಾ ರಾ ಶ್ರೀ ... ಅಯ್ಯಯ್ಯ ದಾಕ್ಷಿಣ್ಯದಿಂದ ಕೊಡಲ್ಪಟ್ಟವು. ... ಅಸ್ತಮಿಸುತ್ತಾ ಬಂದನು. ಎಲ್ಲರೂ ... ನಡೆದ ಆಪರವರ ಸ್ಥಳಗಳಿಗೆ ಹೊಟ್ಟೆಯೂ, ಮನವೂ ತುಂಬಿದವರಾಗಿ ತೆರಳಿದರು.

"ಒಬ್ಬ ಕೊಡಗ"

ರಾ ಬಾ ಕೊಡಂದೇರ ಕುಟ್ಟಯ್ಯನವರ
ಬರಸಿಡಿಲುಗಳು!!

ಇದೇ ತಿಂಗಳ 6ನೆ ತಾರೀಖಿನಲ್ಲು ಪ್ಯಾಸ್ಸ್ ಕಾಂ... ದಿನಲ್ಲಿ ಕೈಲ್‌ಪೋಳದು ಹಬ್ಬವು ಮಡಿಕೇರಿಯ ಕೊಡವರಿಂದ ಆಚರಿಸಲ್ಪಟ್ಟುಗೀಳದಾಂಬರಿಹಾಲಿನಲ್ಲಿ ತೀರ್ಮಾನಗಳ ಬಳಿಯ ಕೆಲವು ಅಪ್ರಿಯಕರವಾದ ಭಾಷಣಗಳು ನಡೆದವು. ಮೆ ಕುಟ್ಟಯ್ಯನವರು ಮಾಡಿದ ಭಾಷಣವು ಕೊಡಗು ಕೊಡಗೇತರರೊಳಗೆ ಒಡಕು ಮನಸ್ಸನ್ನುಂಟು ಮಾಡುವ ಸ್ವಭಾವದ್ದಾಗಿತ್ತು. ಇವರು ಹೇಳಿದ ಮಹೋದ್ಘಾಟನ ಮಾತುಗಳಾವುವೆಂದರೆ—" ನಾನು ವೃದ್ಧನು. ಜೀವಿಸಿದಷ್ಟು ವರುಷ ಇನ್ನು ಜೀವಿಸಲಾರೆನು * * * ಕೊಡಗು ಕೊಡಗರ ದೇಶ. ಪೂರ್ವಕಾಲದಲ್ಲಿ ಕೊಡಗರು ಮುಂದೆ ಇದ್ದು ಬಾಕಿಯವರನ್ನು ಹಿಂದೆ ಕರೆದುಕೊಂಡು ಹೋಗುತ್ತಿದ್ದರು. ಈಗ ಕೊಡಗರು ಹಿಂದೆ ಬಿದ್ದಿರುವರು. ಬಾಕಿಯವರು ಮುಂದೆ ಹೋಗಲಿಕ್ಕೆ ಯತ್ನಿಸುತ್ತಾರೆ. ಕೊಡಗು ಕೊಡಗರ ದೇಶ. ನಾನು ಕೊಡವರ ಮಗ. ನಾವು ನಮ್ಮ ಕೈಯನ್ನು ಹಿಂದಕ್ಕೆ ಒಡ್ಡಬೇಕೇ ಹೊರತು ಮುಂದಕ್ಕೆ ಕೊಡಬಾರದು."

ವೃದ್ಧರ ಬಾಯಿಯಿಂದ ಇಂತಹ ದುರಭಿಮಾನಕರವಾದ ವಚನಗಳು ಬೇಕಾಗಿದ್ದುವೇ? ಅಲ್ಲದೆ ಈ ಮಾತುಗಳಲ್ಲೊಂದೊಂದು ಮರುಳನ ನುಡಿ ಹೇಳಲು ಮೆ ಕುಟ್ಟಯ್ಯನವರು ಜನಾನುರಾಗವನ್ನು ತಮ್ಮ ವೃದ್ಧಾಪ್ಯದಲ್ಲಿ ಸಂಪಾದಿಸುವುದಕ್ಕಾಗಿ ತಮ್ಮ ಸಣ್ಣ ಮಾತುಗಳಿಂದ ತಮ್ಮ ಜನಗಳಿಗೆಲ್ಲ ಸಂತೋಷಪಡಿಸಿರಲೂ, ಕೊಡಗೇತರರಿಗೆ ದುಃಖ ಉಂಟುಮಾಡುವುದು ಅವರಿಗೆ ಭೂಷಣವಲ್ಲ. ಇವರ ಮಾತಿನ ಪ್ರಕಾರ ಕೊಡಗಿನ ಜನಾಂಗವಾದ ಕೊಡವರೊಂದಿಗೆ ಕೊಡಗೇತರರು ಸೇರಿಹೋಗಲಿಲ್ಲವೇ? ಕಾರಣ ಕೊಡಗರು, ಕೊಡವ ಮತ್ತು ಕೊಡಗೇತರರಿಂದ ಕೂಡಿರುವ ಬಂದೇ ಹಿಂದಿನ ಜನರಾಗಿದ್ದಾರೆಂದು ನಮ್ಮ ಅಭಿಪ್ರಾಯ. ಈ ಮಾತನ್ನು ವಿದ್ಯಾವಂತ ಜನರೆಲ್ಲರೂ ಮನ್ನಿಸುವರು. ಇವರು ... ಕೊಡಗೇತರರಂತೆ ಪೂರ್ವಪ್ರಾಂತ್ಯದಿಂದ ಹಿಂದೆ ಬಂದವರೇ. ಕೊಡವರು ಕೊಂಚ ಮುಂದೆ ಬಂದಿರಬಹುದು, ಕೊಡಗೇತರರು ಕೊಂಚ ಹಿಂದೆ ಬಂದಿರಬಹುದು. ... ಬಹುಕಾಲ ಜೀವಿಸಿದ ಮೆ ವರ್ಡ್ಸನ್ ಮ. ಸ್ಮಿತ್, ಮೆ,

ರಿಕ್ಟರ್ ಇತ್ಯಾದಿ ಆಂಗ್ಲ ಪಂಡಿತರು ಕೊಡವರು ಕೊಡಗಿನ ಮೂಲ ನಿವಾಸಿಗಳಲ್ಲವೆಂದು ಹೇಳಿರುವರು. ಇವರು ಬರೆದಿಟ್ಟಿರುವ ಗ್ರಂಥಗಳೇ ಈ ಮಾತಿಗೆ ಪ್ರಮಾಣಗಳು.

ಬಹು ಕಾಲಕ್ಕೆ ಹಿಂದೆ, ಅಂದರೆ ಉತ್ತರ ಕೊಡಗು ದಕ್ಷಿಣ ಕೊಡಗಿಗೆ ಸೇರದೆ ಇದ್ದ ಕಾಲದಲ್ಲಿ, ದಕ್ಷಿಣ ಕೊಡಗಿಗೆ ಕೊಡವರು ಬರುವುದಕ್ಕೆ ಎಷ್ಟೋ ಕಾಲಕ್ಕೆ ಮೊದಲೇ ಕೊಡಗೇತರರು ಉತ್ತರ ಕೊಡಗಿಗೆ ಬಂದಿದ್ದರು. ಹೀಗಿರುವಲ್ಲಿ ಈಗಿನ ದೊಡ್ಡ ಕೊಡಗಿನಲ್ಲಿ ಕೊಡಗರಿಗೆ ಮಾತ್ರ ಹಕ್ಕುಬಾಧ್ಯತೆಗಳಿರಬೇಕೆಂದೂ, ಕೊಡಗೇತರರಿಗೆ ಇವುಗಳಿರಬಾರದೆಂದೂ ನಮ್ಮೊಳಗೆ ನಾವೇ ಕಾದಾಡುವುದು ಯೋಗ್ಯವೇ? ಇದುವರೆವಿಗೂ ಕೊಡವ-ಕೊಡಗೇತರರು ಒಂದೇ ತಾಯಿ ಮಕ್ಕಳಂತಿದ್ದು, ಇತಃಪರ ಇಬ್ಭಾಗವಾಗುವುದು ಉಚಿತವಲ್ಲ.

'ಕೊಡಗು ಕೊಡಗರ ದೇಶ' ವೆಂದರೆ, ಕೊಡಗು ಆಂಗ್ಲ ಜನರ ದೇಶವಲ್ಲವೆಂದೂ, ಇದು ಭಾರತೀಯರಾದ ನಮ್ಮ (ಕೊಡವ-ಕೊಡಗೇತರರ) ದೇಶವೆಂದೂ ನಾವು ಘಂಟಾಘೋಷವಾಗಿ ಹೇಳಬಹುದಲ್ಲವೇ? ಈ ಯೋಚನೆಯು, ಮೆ. ಕುಟ್ಟೈಯ್ಯನವರಿಗೆ ಇದ್ದಿರಬಹುದೇ? ಒಂದುವೇಳೆ ಅವರಿಗೆ ಈ ಅಭಿಪ್ರಾಯವಿದ್ದರೆ, ಅದು ಸಹ ಯೋಗ್ಯವಾದದಲ್ಲವೆಂದು ನಮಗೆ ತೋರುತ್ತದೆ. ಆಂಗ್ಲೇಯರು ಸಹ ನಮ್ಮ ಅಣ್ಣತಮ್ಮಂದಿರೇ. ಅವರಿಂದ ನಾವು ಬಹಳವಾಗಿ ಸುಧಾರಿಸಲ್ಪಟ್ಟಿದ್ದೇವೆ. ಅವರು ನಮ್ಮ ಒಡನಾಡಿಗಳಾಗಿಯೇ ಇರಲಿ. ನಮ್ಮ ರಾಷ್ಟ್ರಭಕ್ತರು ಸಹ ಆಂಗ್ಲ ಜನರು ಹೋಗಬೇಕೆಂದು ಹೇಳುವುದಿಲ್ಲ. ಕೊಡವರು, ಕೊಡಗೇತರರು ಮತ್ತು ಆಂಗ್ಲೇಯರು ಸರಸಮಾನತ್ವದಿಂದ ಬದುಕುವುದು ಲೇಸು. ಇದೇ ನಮ್ಮೆಲ್ಲರ ಕೋರಿಕೆ.

ಕೊಡವರು ಹಿಂದೆಬಿದ್ದಿರುವರೆಂದು ಮೆ. ಕುಟ್ಟೈಯ್ಯನವರು ಹೇಳುವರು. ಈ ಮಾತಿನ ಸತ್ಯತೆಯನ್ನು ನೋಡಿರಿ. ಕಮಿಷನರ ಹೊರತು ಬಾಕಿಯ ಹುದ್ದೆದಾರರೆಲ್ಲರೂ ಕೊಡವರಲ್ಲವೇ? ಹೈಸ್ಕೂಲ್ ಹೆಡ್ಮಾಸ್ಟರ ಮತ್ತು ಡಿಪ್ಯುಟಿ ಡೈರೆಕ್ಟರವರ ಪದವಿಗಳು ಸಹ ನಾಳೆ ಕೊಡವರಪಾಲಿಗೆ ಬೀಳುತ್ತದೆ. ಒಂದುವೇಳೆ ಹೀಗಾದರೂ, ಕೊಡಗೇತರರಿಗೆ ಕೊಡವರಮೇಲೆ ಅಸೂಯೆಯಿಲ್ಲ. ಕೊಡವರಂತು ಜಮ್ಮಾದ ಹಿಡುವಳಿದಾರರಾಗಿದ್ದು, ಪ್ರಾಬಲ್ಯವನ್ನು ಪಡೆದಿರುವರು. ಇವರೇ ಆಂಗ್ಲ ಜನರ ಪ್ರೀತಿಯನ್ನು ಗಳಿಸಿರುವರು. ಮೆ. ಕುಟ್ಟೈಯ್ಯನವರ ಮಾತಿನಂತೆ ಕೊಡಗೇತರರು ಕೊಡವರ ಹಿಂದೆಯೇ ಇರುವರು. ಇವರು ಕೊಡವರನ್ನು ಎಂದೆಂದಿಗೂ ಮೀರಬಾರರೆಂದು ಸಹ ನಾವು ಹೇಳುತ್ತೇವೆ. ಆದರೆ ಎಲ್ಲರೂ ಸರಿಸಮಾನತ್ವದಿಂದಿರಬೇಕೆಂಬುವ ವಿಚಾರದಲ್ಲಿ ಯಾರೂ ಅನುಮಾನಿಸರು.

ಸ್ವಾಮಿ, ಕುಟ್ಟೈಯ್ಯನವರೆ! ನೀವು "ಕೊಡಗೇತರರು ನಮ್ಮ ಹಿಂದೆಬರಲಿ ಅವರು ಮುಂದೆಹೋಗಲಿಕ್ಕೆ ಬಿಡಬಾರದು" ಎನ್ನುವಿರಿ. "ಮುಂದೆಹೋಗಲಿಕ್ಕೆ ಬಿಡಬಾರದು" ಎಂಬ ಮಾತಿನ ಅರ್ಥವು ನಮಗೆ ವಿವರವಾಗುವುದಿಲ್ಲ. ಕೊಡಗೇತರರು ಆಸ್ತಿಪಾಸ್ತಿ ಮಾಡಬಾರದೆಂದಾಗಲಿ, ಇವರು ಸರಕಾರಿ ಹುದ್ದೆಗಳನ್ನು ಪಡೆಯಬಾರದೆಂದಾಗಲಿ ನಿಮ್ಮ ಅಭಿಪ್ರಾಯವೊ? ಹಾಗಾದರೆ ಕೊಡಗಿಗೆ ಶಾಸನಸಭಾಮಂಡಲ ಬಂದು, ನಿಮ್ಮ ಕೋರಿಕೆಗೆ ಭಂಗಬಂತಲ್ಲವೆ? ಶಾಸನಸಭಾಮಂಡಲಬೇಕೆಂದು ಹೆಣಗಾಡಿದವರೊಳಗೆ ನೀವೊಬ್ಬರು. ಈ ವಿಚಾರವು ಮೊದಲೆ ನಿಮಗೆ ಹೊಳೆಯಲಿಲ್ಲವೆ? ಶಾಸನಸಭಾಮಂಡಲ ಸಿಕ್ಕದಿದ್ದರೆ ಬಹಳ ಚೆನ್ನಾಗಿತ್ತು!! ಇಲ್ಲವಾದರೆ ನೀವು ನಿಮ್ಮ ಕೈಯನ್ನು ಅಹೋರಾತ್ರಿ ಹಿಂದಕ್ಕೆ ಒಟ್ಟಬಹುದಿತ್ತು. ಆಗ ನಾವು ನಿಮ್ಮ ಹೆಜ್ಜೆಯಮೇಲೆ ನಮ್ಮ ಹೆಜ್ಜೆಯನ್ನಿಡುತ್ತಿದ್ದೆವು. ಆದರೆ ಶಾಸನಸಭಾಮಂಡಲದಿಂದ ಕೊಡಗೇತರರಾದ ನಮಗೆ ಒಂದಿಷ್ಟು ಧೈರ್ಯ ಬರಲಾಗಿದೆ.

ಇಂತಹ ಉಚ್ಚ ಅಭಿಪ್ರಾಯವುಳ್ಳರಾದುದರಿಂದಲೇ ನೀವು ಕೌನ್ಸಿಲಿಗೆ ಚುನಾಯಿತರಾಗಲಿಲ್ಲವೆಂದು ಕಾಣುತ್ತದೆ. ಮೆ. ರಾ. ಬಾ. ಮಾದೈಯ್ಯನವರಿಗಾಗಲಿ ಅಥವಾ ಮೆ. ರಾ. ಬಾ. ಮುತ್ತಣ್ಣನವರಿಗಾಗಲಿ ನಿಮ್ಮ ಅಭಿಪ್ರಾಯಕ್ಕೆ ಒಪ್ಪಿಗೆ ಹಾಕುತ್ತಿದ್ದರೆಂದು ನಾವು ಕನಸಿನಲ್ಲಿಯೂ ಊಹಿಸಲಾರೆವು. ಮೆ. ಮುತ್ತಣ್ಣನವರು ಒಳ್ಳೇ ರಾಜಕಾರಣಪಟುಗಳಾಗಿದ್ದರು. ಕೊಡಗಿನ ಸ್ಥಿತಿಗತಿ ಅವರಿಗೆ ಚೆನ್ನಾಗಿ ತಿಳಿದಿದ್ದಿತು. ಆದುದರಿಂದಲೇ ಅವರು ಜನರೊಳಗೆ ಒಡಕನ್ನು ತಂದುಹಾಕಲಿಲ್ಲ. ಅವರ ಹಲವು ಭಾಷಣಗಳಿಂದ ಕೊಡಗೇತರರಮೇಲೆ ಅವರಿಗಿದ್ದ ಪ್ರೇಮವು ಕಂಡುಬರುವುದು. ಜಾತಿಮತ್ಸರದಿಂದುಂಟಾಗಿರುವ ಅಪ್ರೀತಿ, ಅವಿಶ್ವಾಸಗಳನ್ನು ಅಡಗಿಸಲಿಕ್ಕೆ ಅವರು ಈ ವೇಳೆಯಲ್ಲಿರಬೇಕಾಗಿತ್ತು. ಉದ್ಯೋಗಸ್ಥರ ಸಹಾಯವನ್ನು ಬೇಡುವ ಮೆ. ಪಿ. ಮೇದಪ್ಪನವರಿಗೆ, ಅವರಿದ್ದಿದ್ದರೆ, ಈ ಮೇದಪ್ಪನವರಿಗೆ ಬಾಯಿಮೇಲೆ ಕೈ ಇಡುವಂತ ಸದುತ್ತರವನ್ನು ಕೊಡುತ್ತಿದ್ದರು. ಅವರ ನಿಧನವು, ಕೊಡಗಿಗೆ, ಅಂದರೆ ವಿಶೇಷವಾಗಿ ಕೊಡಗೇತರರಿಗೆ ಅಭಾಗ್ಯವನ್ನು ತಂದಿತು.

ಕೊಡವರೆ! ನೀವೆಲ್ಲರೂ ನಿಮ್ಮ ಏಳಿಗೆಗೆ ಮಾತ್ರ ಹೋರಾಡಬೇಕೆಂದು ಮೆ. ಕುಟ್ಟೈಯ್ಯನವರು ಕಲಿಸಿಕೊಟ್ಟಿರುವರು. ಹೇಗೂ ನೀವು ಕೊಡಗೇತರರಿಗಿಂತ ಮೇಲ್ಮೆಯಲ್ಲಿಯೇ ಇದ್ದೀರಿ. ಈ ವಿಚಾರವಾಗಿ ನಮಗೆ ಬಹಳ ಸಂತೋಷ. ನೀವು ನಾವು ಅಣ್ಣತಮ್ಮಂದಿರು. ನಿಮಗೆ ಜಮ್ಮಾವನ್ನು ಕೊಟ್ಟ ಕೊಡಗಿನ ಅರಸರು ಕೊಡಗೇತರರಲ್ಲವೆ? ಕೊಡಗನ್ನು ಹಾಳುಮಾಡಬೇಕೆಂದು ಅವರು ಇಚ್ಛಿಸಿದ್ದರೆ, ಅವರು ಜಮ್ಮಾದಾನಮಾಡುತ್ತಿದ್ದರೆ? ನಾವೂ, ನೀವೂ, ಅವರೂ, ಮುಸಲ್ಮಾನರೂ ಎಲ್ಲರೂ ಭಾರತೀಯರು. ನಮ್ಮೊಳಗೆ ವೈಮನಸ್ಸು ಇರಲಾಗದು. ಆದರೆ, ಹಿಂದೆಬಿದ್ದಿರುವ ಕೊಡಗೇತರರನ್ನು ತಮ್ಮ ಹದ್ದಿಗೆ ಎತ್ತಿಕೊಳ್ಳುವುದು ಕೊಡವರ ಕರ್ತವ್ಯ. ಮೆ. ಕುಟ್ಟೈಯ್ಯನವರ ಹೇಳಿಕೆಯು ಈಗಾಗಲೇ ಕಾರ್ಯರೂಪಕ್ಕೆ ಬಂದಿದೆ. ಹೀಗಿರುತ್ತಾ, ಕೊಡಗೇತರರು ದಿಕ್ಕುದೆಸೆತೋರದೆ ನಿರ್ಗತಿಕರಾಗಿರುವರೆಂದರೆ ಆಶ್ಚರ್ಯವೇನಿಲ್ಲ.

ಪ್ರಿಯ ಕೊಡವರೆ! ಭರತಖಂಡಕ್ಕೆ ಆರ್ಯರು ಮೊದಲು ಬಂದರು. ಇವರನಂತರ ಮುಸಲ್ಮಾನರು ಬಂದರು. ಮುಸಲ್ಮಾನರನ್ನು ಆಂಗ್ಲೇಯರು ಅನುಸರಿಸಿದರು. ಈ ಮೂರು ಪಂಗಡದವರು ಹಿಂದೂದೇಶದಲ್ಲಿ ವಾಸಿಸಿರುವರು. ಮೆ. ಕುಟ್ಟೈಯ್ಯನವರು ಹೇಳಿದಂತೆ, ಆರ್ಯರು ಮುಸಲ್ಮಾನರಿಗೂ, ಆಂಗ್ಲೇಯರಿಗೂ "ಎಲಾ! ಜನರಾ! ನಾವು ಆರ್ಯರು. ಹಿಂದೂದೇಶವು ನಮ್ಮ ದೇಶ. ನೀವು ನಮ್ಮ ಹಿಂದೆಯೇ ಇರಬೇಕು, ಮುಂದೆಹೋಗಕೂಡದು. **ಹೋದರೆನು ತ್ತುಂಟು!**" ಎಂದು ಬೆದರಿಸಬಹುದೇ? ಹಿಂದೂಗಳಿಗಿರುವಷ್ಟು ಹಕ್ಕುಬಾಧ್ಯತೆಗಳು ಮುಸಲ್ಮಾನರಿಗೂ ಆಂಗ್ಲೇಯರಿಗೂ ಇಲ್ಲವೇ? ಭೂಲೋಕದ ಯಾವ ಮನುಷ್ಯನು ಒಂದರೂ, ಅವನಿಗೆ ಭರತಭೂಮಿಯಲ್ಲಿ ಜಾಗವುಂಟು. ಹಿಂದುಗಳು, ಮುಸಲ್ಮಾನರು, ಆಂಗ್ಲೇಯರು ಬೆರೆತು ಸಮಾನಸ್ಕರಾಗಿ ಆಡಳಿತ ನಡಿಸುತ್ತಿಲ್ಲವೇ? ಇವರು ನಿರ್ಭಯದಕವಾಗಿ ಆಸ್ತಿಪಾಸ್ತಿಗಳನ್ನು ಕಾಪಾಡಿಕೊಂಡಿಲ್ಲವೇ? ಕೊಡಗಿನಲ್ಲಿಯೂ ಅವರು ಈ ರೀತಿ ಬೇಡಿ ಇತ್ತಿಲ್ಲವೇ? ಅಹಾ! ಪನಾಶ್ಚರ್ಯ!! ಮೆ. ಕುಟ್ಟೈಯ್ಯನವರು ಕೊಡಗಿನ ಪ್ರಜೆಗಳೊಳಗೆ ಭಿನ್ನಭೇದಗಳನ್ನು ಬಿತ್ತಲಿಕ್ಕಾರಂಭಿಸಿರುವರು. ಇವರ ನೆರವಿಗೆ ಮೆ. ಪಿ. ಮೇದಪ್ಪನವರು ಬಂದಿರುವರು. ಇವರ ಬೆಂಬಲಕ್ಕೆ ಉದ್ಯೋಗಸ್ಥರು ಅವಶ್ಯವಂತೆ! ಉದ್ಯೋಗಸ್ಥರು ನಿಷ್ಪಕ್ಷಪಾತಿಗಳಾಗಿದ್ದರೆ, ರಾಜ್ಯಾಡಳಿತವು ಚೆನ್ನಾಗಿ ನಡೆಯುವುದು. ಇವರು ಜನಾನುರಾಗವನ್ನು ಕಳಕೊಳ್ಳುವ ತೆರನಾಗಿ ವರ್ತಿಸುವರೆಂದು ನಾವು ನಂಬುವುದಿಲ್ಲ.

ಪ್ರಿಯ ಕೊಡವ ಮಿತ್ರರೇ! ನಾವು ನಿಮ್ಮಲ್ಲಿ ಬಿನ್ನೈಸಿಕೊಳ್ಳುವುದಿಷ್ಟೆ. ಕೊಡಗೇತರರಾದ ನಮ್ಮನ್ನು ನೀವು ಕಾಯಿರಿ. ನಾವು ನಿಮ್ಮನ್ನು ಕಾಯುವೆವು. ನಮ್ಮೊಳಗಿನ ವಿಶ್ವಾಸವು ಹಸಗೆಡುವ ಕಾಲಬಂದಿದೆ. ಹೀಗಾಗಲಿಕ್ಕೆ ಅವಕಾಶಕೊಡಬೇಡಿರಿ. ಮೆ. ರಾ. ಬಾ. ಕುಟ್ಟೈಯ್ಯನವರ ಮತ್ತು ಮೆ. ಪಿ. ಮೇದಪ್ಪನವರ ಆಶ್ರಯದಲ್ಲಿರುವ 'ಲೋಕಪಾವನ' ಪತ್ರವು ಹೊರಟಿರುವುದು ಏತಕ್ಕೆಂದು ನಮಗೀಗ ತಿಳಿಯಿತು. ಕೊಡಗೇತರರನ್ನು ಹಿಡುಮುರಿಕಟ್ಟಿ, ಗಾಢಾಂಧಕಾರದ ಕೂಪದಲ್ಲಿ ಹಾಕಲಿಕ್ಕೆಯತ್ನಿಸುತ್ತಿರುವ 'ಲೋಕಪಾವನ'ಕ್ಕೆ ಕಲ್ಯಾಣವಾಗಲಿ!! ಸಮಗ್ರ ಹಿಂದೂದೇಶದಲ್ಲಿ ಐಕ್ಯಮತ್ಯಕ್ಕಾಗಿ ಹೋರಾಟವಾದರೆ, ಕೊಡಗಿನಲ್ಲಿ ಅನೈಕ್ಯತೆಗಾಗಿ ಬಡಿದಾಟ.

ಕೊಡಗೇತರ ಬಂಧುವರ್ಗದವರಲ್ಲಿ ನಮ್ಮ ವಿಜ್ಞಾಪನೆ

ಹಿಂದೊಮ್ಮೆ ಇದೇ ರೀತಿಯ ಒಂದು ಪ್ರಶ್ನೆಯ ಕುರಿತು ಬರೆಯುವಾಗ ಗಾಂಧೀಜೀಯವರು ಹೀಗೆ ಹೇಳಿದ್ದರು 'ಖಾದಿಯನ್ನು ಧರಿಸುವವರಲ್ಲಿ ಹೆಚ್ಚಿನವರು ಮಿಥ್ಯಾಚಾರಿಗಳೆಂದು ಹೇಳಿದರೆ ಅವಿಚಾರದ ಮಾತಾಗುವುದು. ನಾನು ಹೋದಲ್ಲೆಲ್ಲ ಖಾದಿಯ ಉಡುಪನ್ನೇ ನೋಡಬೇಕೆಂದು ನನಗೆ ಇಚ್ಛೆಯಿದೆ. ಆದರೆ ಎಲ್ಲ ಕಡೆಗಳಲ್ಲಿಯೂ ಇಂತಹ ದೃಶ್ಯವು ನನ್ನ ದೃಷ್ಟಿಗೆ ಬೀಳುವುದಿಲ್ಲ. ನನ್ನ ಕಣ್ಣಿಗೆ ಬೀಳುವ ಕೆಲವು ಖಾದೀ ಟೊಪ್ಪಿಗಳನ್ನು ಧರಿಸುವವರು ನನ್ನನ್ನು ಮೋಸಗೊಳಿಸುವುದಕ್ಕಾಗಿ ಅವುಗಳನ್ನು ಧರಿಸುವರೆಂದು ಎಣಿಸಲು ಕಾರಣವಿಲ್ಲ. ಎಷ್ಟೋ ಜನರನ್ನು ನಾನು ಇಡೀ ಆಯುಷ್ಯದಲ್ಲಿ ಒಂದೇ ಸಲ ನೋಡುತ್ತೇನೆ. ನನಗೆ ಸಂತೋಷವಾಗಬೇಕೆಂದು ಖಾದಿಯನ್ನು ಧರಿಸುವುದರಲ್ಲಿ ಅವರಿಗೆ ಯಾವ ಸ್ವಾರ್ಥವಿರುವುದು ಸಾಧ್ಯವಿದೆ? ಒಂದುವೇಳೆ ಅವರು ನನ್ನನ್ನು ಸಂತೋಷಗೊಳಿಸುವುದಕ್ಕಾಗಿ ಖಾದಿಯನ್ನು ಧರಿಸುವುದಾದರೂ ಅವರನ್ನು ಮಿಥ್ಯಾಚಾರಿಗಳೆಂದು ಕರೆಯುವುದು ಯಾವ ನ್ಯಾಯ?'

"ಸತ್ಯಾಗ್ರಹೀ."

ಮಾತೃ ಸೇವೆ.

ಒಳ್ಳಿತೀಭೂಮಿಯಲಿ ಜನಿಯಿಸಿದ ಮೊದಲಾದು,
ಇಲ್ಲಿ ಕಾಣೆನು ನುಡಿದ ಸತ್ಯವಿಂದು ॥
ನಲ್ಲ ನುಡಿಗಳ ಕೇಳಿ ನಲಿದಾಡುವರ ಕಂಡು ।
ಮುಳ್ಳಿಡಿದ ಕೆರನಾಯ್ತು ಮನಸಿನಲ್ಲಿ ॥ ೧ ॥

ಧರ್ಮವಂ ತೊರೆಯುತ್ತ ಕರ್ಮವಂ ಮರೆಯುತ್ತ ।
ಚರ್ಮದೇಹದ ಒಲುಮೆ ಮೋಹದಿಂದ ॥
ನಿರ್ಮಲಾತ್ಮನ ಮರೆದು ಧ್ಯಾನಿಸದೆ ಕ್ರೂರತರ
ಕರ್ಮಯೋಗದ ಪರಿಗೆ ಪಾರವಾಗಿ ॥ ೨ ॥

ಸಿರಿಯ ಸೊಬಗಿನ ಗುಡಿಯ ಮೆರೆವ ಸುಂದರವೇಷ
ಪರಿಪರಿಯ ಪರಿಮಳದ ವಾಸನೆಯಿಂ ॥
ತರತರದ ಹಸನೊಳಾ ಕಾಂಚನದ ಕಾಟಕೆಡೆ
ಮರುಗಿ ತೋರುವ ಪ್ರಿಯ ಚಿನ್ನದ ಹೂವು ॥ ೩ ॥

ಕೇಶರಾಶಿಯ ತೆಗೆದು ಮುಂದೆ ಬೈತಲೆಯಿಕ್ಕಿ
ಪಾಶವಂ ಬಿಗಿಯುತ್ತ ಕುತ್ತಿಗೆಯಲಿ
ರೋಷವಂ ನಟಿಸುತ್ತ ವೇಷವಂ ಗೈಯುತ್ತ
ತೋಷದಿಂ ಬಗೆಬಗೆಯ ಸೌಂದರ್ಯದಿಂ ॥ ೪ ॥

ಮುದದಿಂದ ಮೆರೆಯುತ್ತ ಸುಖವನ್ನು ಬಯಸುತ್ತ
ಮದದಿಂದ ರಾಗವಂ ನಿರುತ ಮರೆದು ॥
ಪರುಳದಿಂ ಭಾರತದ ಸೇವೆಗೈಯ್ಯದ ಬಟ್ಟೆ
ಎದುರಾಗಿ ತಾನಿಂತು ಮರೆವುದೇಕೆ? ॥ ೫ ॥

ಪರನಾರಿ ಪರವಸ್ತು ಮೋಹವಾಡುವನು ಬಯಸಿ
ಪರದೇಶಿಯಾಗಿ ತಾ ಮರೆದು ಬಿಡಗಂ ॥
ಅರಘಳಿಯೊದರೇ ಸಕಲವಂ ತ್ಯಜಿಸುತ್ತ
ಪರದೇಶಿಯಂತೆ ತಾ ಸಾಯುತಿಹನು ॥ ೬ ॥

ಪರಸೇವೆಯಿಂದ ಬಹು ನರಕ ಭಾಗಿಸನಾಗಿ
ಪರಿಪರಿಯ ಕಷ್ಟಗಳ ಪಡುವ ಬದುಕು
ಪರಮ ಹರ್ಷವೊತೆ ಭಾರತಾಂಬೆಯ ಬಿಡದೆ
ಭರದಿ ಪೂಜಿಸಲೇಕೆ ಮನವು ಸಿಲದು ॥ ೭ ॥

ಮಾತೆಕೊಡುವಳು ನಿನ್ನ ಸಕಲ ಲೋಕಗಳಲ್ಲಿ
ಪೂತನೆನಿಸುವೆ ನೀನು ಅಲ್ಲಿ ಇಲ್ಲಿ ।
ಮಾತುಮಾತಿಗು ನೀನು ವಂದಿಸುತ ಮಣಿಸುವೆಯೊ ।
ಪ್ರೀತಿಯಿಂ ಸ್ಮರಿಸುತಿರು ಜನನಿಯನ್ನು ॥ ೮ ॥

ನನ್ನ ತಾಯಿಯ ಹಾಡು ನನ್ನ ಮಾತೆಯ ನುಡಿಯು,
ನನ್ನ ಮುಂದಿನ ಸುಖದ ಸಂಕಲ್ಪಯು ॥
ನನ್ನ ತಾಯಿಯ ಸೊಬಗು ಎನ್ನ ಮೋಕ್ಷದ ಮಿನುಗು ।
ಎನ್ನ ಮಾತೆಯ ನಗುವು ಕ್ಷೇಮಕರವು ॥ ೯ ॥

ಬಾಳಿಗಾಗಿ ಮನದಿ ಭಾರತಾಂಬೆಯ ನೆನೆದು
ಭಾರತೀಯರ ಸೇವೆಗೈದು ನಲಿದು ।
"ಭಾರತೀಯನು ನಾನು" ಎಂದು ನೀ ಮನದೊಳಗೆ
ಭಾರತೀಯರ ಗಣದಿ ನಲಿಯುತಿರುನೀ ॥ ೧೦ ॥

ಪರನಿಂದೆ ಪರಹಿಂಸೆ ಪರದ್ರೋಹ ಪರನುಡಿಯ
ಪರಿಪರಿಯ ವ್ಯಸನಗಳ ಮರೆತು ಮರೆತು ।
ಪರಹಿತವ ಬಯಸುತ್ತ ನಮ್ಮ ದೇಶದ ಅನ್ನ ।
ಪರಮ ಪಾವನದಿ ಹಾಡು ನಮ್ಮ ಜನನಿ ॥ ೧೧ ॥

ಶರಣು ಭಾರತ ಮಾತೆ ಶರಣು ಮಂಗಳ ಮೂರ್ತಿ ।
ಶರಣು ಶ್ರೀ ಭೂಮಾತೆ ಲೋಕ ಪೂತೆ ।
ಶರಣು ಶರಣೆಂದೆನುತ ಚರಣಯುಗಳವನಿರುತ ।
ಭರದಿ ಸೇವಿಸಿ ಪಾದವನ್ನು ನೀರು ॥ ೧೨ ॥

ಕೊಡಗಿನ ಗೆಳೆಯ

ಗಣಪತಿ ವಾಚನಾಲಯ ಮತ್ತು ಪುಸ್ತಕ ಭಂಡಾರದ ವಿಷಯ

ದೇಶಬಾಂಧವರಲ್ಲಿ ವಿನಂತಿ.

(1) ಇದರ ಉದ್ದೇಶವು ವೀರರಾಜಪೇಟೆಯಲ್ಲಿ ಒಂದು ದೊಡ್ಡ ಪುಸ್ತಕಭಂಡಾರವನ್ನೂ ದೇಶದ ಮುಖ್ಯ ಸ್ಥಳಗಳಲ್ಲೂ ಮತ್ತು ಗ್ರಾಮಗಳಲ್ಲೂ ಸಣ್ಣ ಸಣ್ಣ ಪುಸ್ತಕಭಂಡಾರಗಳನ್ನು ಸ್ಥಾಪಿಸುವುದೇ ಆಗಿದೆ.

(2) ಈ ಭಂಡಾರವು 1860ನೆ ಇಸವಿ ಬುಕ್ ರಿಜಿಸ್ಟ್ರೇಶನ್ ಆಕ್ಟಿನನುಗುಣವಾಗಿ ರಿಜಿಸ್ಟರ್ ಮಾಡಲ್ಪಡುತ್ತೆ.

(3) ಪುಸ್ತಕಭಂಡಾರವು ಕರೆಯಲ್ಪಟ್ಟಕೂಡಲೇ ಸರಕಾರದ ಸಹಾಯವನ್ನು ಕೋರಲಾಗುತ್ತೆ.

(4) ಈ ಭಂಡಾರದ ಕೆಲಸದಲ್ಲಿ ಯಾವ ಜಾತಿಮತಭೇದವೂ, ರಾಜಕೀಯ ಭಿನ್ನಾಭಿಪ್ರಾಯಗಳೂ ಇರುವುದಿಲ್ಲ.

(5) ಜನಸಮುದಾಯದಲ್ಲಿ ಕೃಷಿ, ಕೈಗಾರಿಕೆ, ವಿದ್ಯಾಭಿವೃದ್ಧಿ, ಸಹಕಾರ, ಸ್ವಸಹಾಯ, ಸ್ವಾಭಿಮಾನ ಮತ್ತು ದೇಶಭಕ್ತಿಯನ್ನುಂಟುಮಾಡುವುದೇ ಈ ಪುಸ್ತಕಭಂಡಾರದ ಧ್ಯೇಯ ಮತ್ತು ತತ್ವ.

ದಯವಿಟ್ಟು ದೇಶಾಭಿಮಾನಿಗಳು ತಮ್ಮ ಉದಾರತ್ವವನ್ನು ಇದಕ್ಕೆ ಧನಸಹಾಯಮಾಡುವುದರಲ್ಲಿ ತೋರಿಸಬೇಕಾಗಿ ಪ್ರಾರ್ಥನೆ.

ಹೆಚ್ಚಿನ ವಿಷಯವನ್ನು ತಿಳಿಯಲಪೇಕ್ಷಿಸುವವರೂ, ಧನಸಹಾಯ ಮಾಡಲಿಚ್ಛೈಸುವವರೂ, ಈ ಕೆಳಗಿನವರಿಗೆ ದಯವಿಟ್ಟು ಬರೆಯಬೇಕಾಗಿ ಕೋರಿಕೆ.

ವೀರರಾಜಪೇಟೆ, ಕೆ. ಸಿ. ಚಿಟ್ಟಿಯಪ್ಪ,
ದಕ್ಷಿಣ ಕೊಡಗು. ಪ್ರಮೋಟರ್. 3

ಶ್ರೀ ಕಾವೇರಿ ತೀರ್ಥ.

ಶ್ರೀ ಮೂಲ ಕಾವೇರಿ ತುಲಾ ಸಂಕ್ರಮಣದ ತೀರ್ಥೋದ್ಭವ ಪುಣ್ಯಕಾಲದ ಮುಹೂರ್ತ ಪಟ್ಟಿ.

(1) ಸನ್ 1925 ನೆ ಇಸವಿ ಅಕ್ಟೋಬರ್ ತಾರೀಕು 14 ನೆ ಬುಧವಾರ ದಿನ ಬೆಳಗ್ಗೆ 10 ಗಂಟೆಗೆ ದ್ವಾದಶಿಯು ವೃಶ್ಚಿಕ ಲಗ್ನ ಗುರುವಿನ ಕಾಲ ಹೋರೆಯಲ್ಲು ಅಕ್ಷಯಪಾತ್ರೆ ಇಡುವ ಶುಭ ಮುಹೂರ್ತ.

(2) ಇದೇ ದಿನ ಸಾಯಂಕಾಲ 4 ಗಂಟೆಯ ಮೇಲೆ 5 ಗಂಟೆಯೊಳಗೆ ಕುಂಭ ಲಗ್ನ ಗುರುವಿನ ಕಾಲ ಹೋರೆಯಲ್ಲು ಕಾಣಿಕೆಯನ್ನು ಮುಡಿಪುಕಟ್ಟುವದಕ್ಕೆ ಶುಭ ಮುಹೂರ್ತ.

(3) ಇದೇ ಅಕ್ಟೋಬರ್ ತಾರೀಕು 16 ನೆ ಶುಕ್ರವಾರ ದಿನ ರಾತ್ರಿ 2 ಗಂಟೆ 47½ ಮಿನಿಟಿಗೆ ಸರಿಯಾಗಿ ಹಸ್ತ ನಕ್ಷತ್ರದಲ್ಲು ಶ್ರೀಮೂಲ ಕಾವೇರಿಯಮ್ಮನವರ ತುಲಾ ಸಂಕ್ರಮಣದ ತೀರ್ಥೋದ್ಭವ ಪುಣ್ಯಕಾಲದ ಶುಭ ಮುಹೂರ್ತ.

ಕೆ. ಚಂಗಪ್ಪ.
ತಾ. 18—9—25 ಪ್ರೆಸಿಡೆಂಟರು,
(ದೇವಸ್ಥಾನಗಳ ಫಂಡಿನ ಕಮಿಟಿ)

ಪಾರಮಾರ್ಥಿಕ ವಿದ್ಯೆ.

ಬಾಬು ಭೂಪೇಂದ್ರನಾಥರವರ ಅನುಭವದ ಪತ್ರ

(೧೩ನೇ ಸಂಚಿಕೆಯಿಂದ ಮುಂದುವರಿದದ್ದು)

ನಾನು ಮಿಸೆಸ್ ಜಾನ್‌ಸನ್ನಳನ್ನು ಬಿಟ್ಟು ಹೋದನಂತರ ನನ್ನ ಮನಸ್ಸು ಪೂರ್ತಿ ಸ್ವರ್ಗ ಒಳಲ್ಲು ಸಂಭಾಷಣೆಮಾಡುವ ವಿಚಾರದಲ್ಲೇ ನೆಲೆಗೊಂಡಿತ್ತು. ನನ್ನ ಮಗನ್ನೂ ಇನ್ನು ಮಾತಾಡಬೇಕೆಂಬ ಅಭಿಲಾಷೆಯು ಪೂರಾ ನನ್ನ ವಶವಾಗಿತ್ತು. ಆದರೆ ಮಾರನೇ ವಾರದಲ್ಲೇ ಇಂಟರ್‌ನೇಶನಲ್ ಲೇಬರ್ ಕಾನ್‌ಫರೆನ್ಸಿಗೆಂದು ಜಿನೀವಾ ಪಟ್ಟಣಕ್ಕೆ ಹೋಗತಕ್ಕ ಅವಶ್ಯ ಬಿದ್ದದರಿಂದ ಕೂಡ್ಲೆ ಇದರ ಶೋಧನೆಗೆ ಅವಕಾಶವಾಗಲಿಲ್ಲ. ನಾನು ಕಾನ್‌ಫರೆನ್ಸಿನಿಂದ ಹಿಂತಿರುಗಿದ ಕೂಡ್ಲೆ ನನ್ನ ಸ್ನೇಹಿತಳೊಂದಿಗೆ ಬೇರೆ ಆತ್ಮಜ್ಞರಲ್ಲು ನನ್ನನ್ನು ಭೇಟಿಮಾಡಿಸಲಿಕ್ಕೆ ಕೇಳಿಕೊಂಡನು. ನನ್ನ ಕೋರಿಕೆಗನುಸರಿಸಿ ಹಾಲೆಂಡ್‌ಪಾರ್ಕ್ ಫಿಸಿಕ್‌ಸೊಸೈಟಿಯ ಸೆಕ್ರೆಟರಿ ಮಿಸೆಸ್ ಮೆಕೆನ್ಸಿ ಎಂಬವಳಿಗೆ ಭೇಟಿಮಾಡಿಸಿದಳು. ನಾನು ಅವಳ ಇಷ್ಟದಂತೆ ಅವರ ಸಣ್ಣ ಕೋಣೆಗಳಲ್ಲು ಶೋಧನೆಗೆಂದು ಮಿಸೆಸ್ ಮೆಕೆನ್ಸಿಯವರಲ್ಲಿಗೆ ಹೋದೆನು. ಅವಳು ಕೊಟ್ಟಿದ್ದ ಕೋಣೆಯು ಭಾಷಣಕ್ಕೆ ಬಹಳ ಅನುಕೂಲದ್ದಾಗಿಯೂ, ಅಂದವಾಗಿಯೂ ದೊಡ್ಡದಾಗಿಯೂ ಇತ್ತು. ಅವಳು ನನ್ನನ್ನು ಇದರ ಶೋಧನೆಗೆಂದು ಕೂತಿರುವ ಮಿಸೆಸ್ ಕೂಪರ್ (Mrs Cooper) ಎಂಬ ಆತ್ಮಜ್ಞಳಲ್ಲಿ ಭೇಟಿಮಾಡಿಸಿ ಮಹಡಿಯಮೇಲೆ ಸಾಧಾರಣ ಒಂದು ದೊಡ್ಡ ಕೋಣೆಯೊಳಕ್ಕೆ ಕರೆದೊಯ್ದಳು. ಅಲ್ಲಿ ನನ್ನನ್ನು ಮಿಸೆಸ್ ಮೆಕೆನ್ಸಿ ಎಂಬವಳು ಮಿಸೆಸ್ ಕೂಪರರಲ್ಲಿ ಬಿಟ್ಟು ವಾಪಾಸು ತೆರಳಿದಳು. ಆ ಕೋಣೆಯ ಮಧ್ಯದಲ್ಲು ಎರಡು ಕುರ್ಚಿಗಳೂ ಒಂದು ಸ್ಟ್ಯಾಂಡೂ ಮತ್ತು ಸ್ಟ್ಯಾಂಡಿನಮೇಲೆ ಒಂದು ರಾಗನಾಳಿಯೂ ಇತ್ತು. ನಾನು ಆ ಕೋಣೆಯಲ್ಲು ರಾಗನಾಳಿಬಳಿ ಕೂತೆನು. ಮಿಸೆಸ್ ಕೂಪರ್ ನನ್ನ ಬಲಭಾಗದಲ್ಲು ಅವಳ ಎಡಗೈಯಿಂದ ನನ್ನ ಬಲಗೈಯನ್ನು ಹಿಡಿದುಕೊಂಡು ಕೂತಳು, ಮತ್ತೆ ಕೋಣೆಬಾಗಿಲು ಮುಚ್ಚಿ ಬೆಳಕು ಕೆಡಿಸಿದಳು. ನನ್ನ ಎಡಗೈಯು ಮೇಜಿನಮೇಲೆ ಆ ರಾಗನಾಳಿಗೆ ಜೋಡಿಸಿದ ಹಿಡಿಯಮೇಲೆ ಮಡಗಿದ್ದೆನು. ಆ ಮೇಲೆ ಮೆಲ್ಲನೆ ಆ ಹಿಡಿಯನ್ನು ತಿರುಗಿಸಲು ಆ ರಾಗನಾಳಿಯು ಹಾಡತೊಡಗಿತು. ನನ್ನ ಎದುರಿನಲ್ಲಿ ಒಂದು ತುತ್ತೂರಿಯೂ ಇತ್ತು. ಸ್ವಲ್ಪ ಹೊತ್ತಿನಲ್ಲು ಏನೋ ಒಂದು ತರದ ಒಂದು ಧ್ವನಿಯು ಕೇಳತೊಡಗಿತು. ಅದು ನನ್ನ ಆತ್ಮಜ್ಞಳಾದ ಕೂಪರ್‌ಳ ಪ್ರತ್ಯಕ್ಷದಲ್ಲು ನನಗೆ ಸರಿಯಾಗಿ 'ನಾದಾ' ಎಂಬ ಒಂದು ಹಿಂದಿ ಶಬ್ದವಾಗಿ ಅತ್ಯಂತ ಸ್ಪಷ್ಟವಾಗಿ ತಿಳಿದೆನು. ಆ ಶಬ್ದವು ಆ ತುತ್ತೂರಿಯಮೂಲಕ ಬಹಳ ಸ್ಪಷ್ಟವಾಗಿ ಮಾತಾಡುತ್ತಿತ್ತು. ಕೂಡ್ಲೆ ಆ ತುತ್ತೂರಿಯು ನನ್ನ ಶರೀರದ ನಾನಾ ಭಾಗಗಳನ್ನು ಮುಟ್ಟಿದಂತಾಯಿತು. ಆ ಸಮಯದಲ್ಲು ಆ ತುತ್ತೂರಿಯು ನನ್ನೊಂದಿಗೆ ಮೆಲ್ಲನೆ ಮಾತಾಡುವದನ್ನು ನಾ ಕೇಳಿದೆನು. ಮತ್ತು ಆ ಮಾತು ಸ್ಪಷ್ಟವಾಗಿತ್ತು. ಆ ಮೇಲೆ ಹಿಂದಿನ ಅಣ್ಣನಂದು ಆ ತುತ್ತೂರಿಮೂಲಕ ಅಣ್ಣ (brother) ಎಂದು ಕರೆಯಿತು. ಕೂಡ್ಲೆ ಆ ನಾದಾ ಹುಡುಗಿಯು ಆ

ದು ನನ್ನ ಸಹೋದರನ ಆತ್ಮವೆಂದು ಹೇಳಿದೆನು. ನೀನು ನನ್ನ ಸಹೋದರನೆಂದು ನನಗೆ ಹ್ಯಾಗೆ ಗೊತ್ತಾಗುತ್ತೆ ಎಂದು ನಾನು ಕೇಳಿದೆನು ಅದಕ್ಕೆ ನಾವಿಬ್ಬರು 'ಟಾಜ'ಗೆ (Taj) ಹೋಗಿದ್ದು ತಿಳಿಯದೋ ಎಂದು ಹೇಳಿದನು. ಟಾಜಿಗೆ ಹೋಗಿದ್ದು ನಾವಿಬ್ಬರೇ ಅಲ್ಲ ಬೇರೆಯವರಿದ್ದರೆಂದು ಹೇಳಿದೆನು ನನ್ನ ಸಹೋದರರು ಮೃತಪಟ್ಟ ಕಾಯಿಲೆಗಳನ್ನೆಲ್ಲಾ ತಿಳಿಸಿದನು ಇದೆಲ್ಲಾ ಸರಿಯಾಗಿಯೇ ಇತ್ತು. ಸ್ವಲ್ಪ ಹೊತ್ತಿನಲ್ಲೇ 'ನಾನು ಸಮಾಧಾನದಿಂದ ಸತ್ತಿರುತ್ತೇನೆ. ಈಗ ಬಹಳ ಆನಂದದಲ್ಲಿರುತ್ತೇನೆ'ಎಂಬದಾಗಿ ತಿಳಿಸಿದನು. ನಿನಗೆ ಅನೇಕ ವರ್ತಮಾನಗಳನ್ನು ಕೊಡಲು ನಾನು ಇಷ್ಟಪಡುತ್ತೇನೆ ನೀನು ಸ್ವಬರಹ ಮೂಲಕವೇ (automatic writing) ಪ್ರಯತ್ನಿಸತಕ್ಕದ್ದೆಂದು ಹೇಳಿದನು ನಾನು ಈ ವೊದಲು ಪ್ರಯತ್ನಿಸಿರುತ್ತೇನೆ. ಆದರೆ ಅದು ಫಲಕ್ಕೆ ಬರಲಿಲ್ಲವೆಂದೆನು ನೀನು ಪ್ರಯತ್ನಿಸುವದಾದರೆ ನಾನು ನಿನಗೆ ಸಹಾಯಕನಾಗುವನೆಂದು ಹೇಳಿ ನನಗೆ ಈ ದಿವಸದ ನಿನ್ನ ಭೇಟಿಯಿಂದ ಬಹಳ ಸಂತೋಷವಾಯಿತೆಂದನು ಮತ್ತು ನನ್ನ ಎಲ್ಲಾ ಇಷ್ಟ ಬಂಧುಗಳನ್ನು ನಾನು ಇಲ್ಲಿ ನೋಡಿರುತ್ತೇನೆ, ನಾವೆಲ್ಲರೂ ಸಂತೃಪ್ತಿಯಲ್ಲೇ ಇರುತ್ತೇವೆ ಎಂದು ಹೇಳಿ ನೀನು ಹಿಂದೂಸ್ಥಾನದಲ್ಲಿರುವ ನನ್ನ ಪತ್ನಿಗೆ ನನ್ನ ಪ್ರೀತಿಯನ್ನು ಕಳುಹಿಸಬೇಕೆಂದನು. ನಿನ್ನ ಹೆಸರೇನೆಂದು ಕೇಳಲು ಪ್ರಥಮದಲ್ಲಿ "ಇಂದ್ರ"ವೆಂಬದಾಗಿ ಕೇಳಿಸಲ್ಪಟ್ಟಿತು ತರುವಾಯ 'ಹಿತೇಂದ್ರ"ವೆಂದು ಮೆಲ್ಲನೆ ಕೇಳಿದಂತಾಯಿತು ಅದು ಅಷ್ಟು ಸ್ಪಷ್ಟವಾಗಿರಲಿಲ್ಲ, ಅವನ ಹೆಸರು 'ಉಪೇಂದ್ರ" ವೆಂದಿತ್ತು. ಇಷ್ಟು ಮಾತುಗಳನ್ನು ಹೇಳಿ ಪುನಹ ನನ್ನನ್ನು ಕಾಣಲು ಇಷ್ಟಪಡುತ್ತೇನೆಂದು ನುಡಿದು ಮರಳಿದನು.

ವಿಲಾಯಿತಿಯಲ್ಲು, ಮಿಸೆಸ್ ಜಾನ್ ನನ್ನಿಗಾಗಲೀ ಮಿಸೆಸ್ ಕೂಪರಗಾಗಲೀ ನನ್ನ ಸಹೋದರನ ಮೃತವೂ, ಅವನ ಕಾಯಿಲೆಯೂ, ಗೊತ್ತಿರಲಿಲ್ಲ ಅಲ್ಲದೆ ನಾನು ಶೋಧನೆಗೆಂದು ಹೋಗುವಾಗ ಮೃತಪಟ್ಟು ಅನೇಕ ವರ್ಷಗಳಾದ ಸಹೋದರನ ಮೃತ ವಿಷಯವಾಗಲೀ ಎಂದೂ ನೆನಸಿರಲಿಲ್ಲ. ಈ ಶೋಧನೆಗೆಂದು ಹೋಗುವಾಗ ನನ್ನ ಮಗನೂ, ಮೊಮ್ಮಗನೂ ಮೃತಪಟ್ಟ ವಿಷಯದಲ್ಲು ಬಹಳ ಖಿನ್ನ ಮನಸಿನವನಾಗಿದ್ದೆನು ಆದರೆ ನನ್ನ ಮಗನ ಆತ್ಮವು ಈ ಸಲ ಪ್ರತ್ಯಕ್ಷವಾಗಲಿಲ್ಲ. ಇದೇ ತರಹದ ಇನ್ನು ಕೆಲವು ಶೋಧನೆಗಳಾದವು ಅವುಗಳನ್ನು ಹಿಂದಳಿಂದ ವಿವರಿಸುವೆನು

ನಿನ್ನ ಮಿತ್ರನಾದ
ಬಿ ಯನ್. ಬಾಸು.

ಈ ಪತ್ರವನ್ನೋದುವ ಅನೇಕ ಪಾಶ್ಚಿಮಾತ್ಯ ಭಜನೆಯವರು (Hypnotists) ಇದು ಮನ ತಿಳಿಯುವ ವಿದ್ಯೆ (Thought reading) ಎಂಬದಾಗಿ ಭಾವಿಸಲಿಕ್ಕೂ ಸಾಕು ಆದರೆ ಆ ವಿದ್ಯೆಯ ತತ್ವವು ಶ್ರೀ, ಬಾಬು ಭೂಪೇಂದ್ರನಾಥರಿಗೆ ಗೊತ್ತೇ ಇಲ್ಲದೆ ಆತ್ಮವು ಪ್ರತ್ಯಕ್ಷನಾಗಿರುವಾಗ ತೆಗೆದ ನಕ್ಷೆಗಳನ್ನು ಸ್ವತ ನಾನು ನೋಡಿರುತ್ತೇನೆ ಮತ್ತು ಈಗ 5 8-25 ರಲ್ಲು ಇಂಟರ್ ನೇಶನಲ್ ಸ್ಪಿರಿಚುವಲಿಸ್ಟಿಕ್ ಕಾಂಗ್ರೆಸ್‌ಗೆಂದು ಪ್ಯಾರಿಸ್ ಪಟ್ಟಣಕ್ಕೆ ದಯಮಾಡಿಸಿದ ಆತ್ಮಜ್ಞನಾದ ಶ್ರೀ, ಆರ್ ಡಿ. ರಾವ್ ಬಿ. ಎ. ಎಲ್‌ಎಲ್. ಬಿ. ಎಂಬವರಲ್ಲು ಸಂಭಾಷಣೆ ಮಾಡಿರುತ್ತೇನೆ ಮತ್ತು ಅವರಲ್ಲಿದ್ದ ನಕ್ಷೆಗಳನ್ನೆಲ್ಲಾ ಪೂರ್ತಿ ನೋಡಿರುತ್ತೇನೆ.

ಪಿ ಯಂ ಮುತ್ತಣ್ಣ.

ಮಾರಾಟಕ್ಕೆ!

ಒಳ್ಳೆಯ ಸ್ಥಿತಿಯಲ್ಲಿಯೂ, ಸಾಜೂಕಾಗಿಯೂ ಇರುವ ಒಂದು ಟೋಂಗವು ಮಾರಾಟಕ್ಕೆ ಇದೆ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರೆಯಿರಿ

ಪಿ. ಯಂ. ಮಂಜನಾಥಯ್ಯ,
3 ಕಾಫಿ ಪ್ಲಾಂಟರ್,
ಸುಂಟಿಕೊಪ್ಪ (ಕೊಡಗು).

ವಿಮರ್ಶೆ.

ರಂಗಭೂಮಿ:—ಸಂಪಾದಕರು—ದ ಕೃ ಭಾರದ್ವಾಜ ವಾರ್ಷಿಕ ಚಂದಾ, ಮೂರು ರೂಪಾಯಿ ಪತ್ರ—ವ್ಯವಸ್ಥಾಪಕ, ರಂಗ ಭೂಮಿ ಬಸವನ ಗುಡಿ, ಬೆಂಗಳೂರು ಸಿಟಿ.

ಇದೊಂದು ಉತ್ತಮ ವರ್ಗದ ನಾಟಕೀಯ ಮಾಸ ಪತ್ರಿಕೆ ಇದರಲ್ಲಿ ಸುಪ್ರಸಿದ್ಧ ಲೇಖಕರರಾದ ಮಿ. ಶ್ರೀನಿವಾಸರಾಯರು ಮಿ. ವೆಂಕಟೇಶಯ್ಯಂಗಾರರು, ಮಿ ನರಸಿಂಹಶಾಸ್ತ್ರಿಗಳು, ಶ್ರೀ ಕಲ್ಯಾಣಮ್ಮನವರು, ಇವರೇ ಮೊದಲಾದವರ ಬರವಣಿಗೆಗಳು ನಮಗೆ ಲಭಿಸಿರುವ ಭಾದ್ರಪದ ಸಂಚಿಕೆಯಲ್ಲಿ ಬಂದಿವೆ ಶ್ರೇಷ್ಠ ಕವಿಗಳ ವರ್ಗಕ್ಕೆ ಸೇರಿದವರಾದ ಪಿ. ಜಟ್ಟಿವಾದ್ಯರ ಲೇಖನಗಳು ಮುಂದಿನ ಸಂಚಿಕೆಗಳಲ್ಲಿ ಬರುತ್ತವೆಂಬ ಸೂಚನೆ ಈ ಸಂಚಿಕೆಯಲ್ಲಿದೆ.

ರಂಗಭೂಮಿಯು ನಿವೇದಿಸಿಕೊಳ್ಳುವ—"ಭಾಸ, ಕಾಳಿದಾಸ, ಭವಭೂತಿ, ಪ್ರಭೃತಿ ಕವಿರತ್ನರಿಂದ ಪವಿತ್ರತನುಳೆನಿಸಿಕೊಂಡು, ರಾಜಾಧಿರಾಜರಿಂದ ಆದರಿಸಲ್ಪಟ್ಟಿದ್ದ ನನ್ನ ಈಗಿನ ಅವಸ್ಥೆಯು ಎಷ್ಟು ಹೀನವಾಗಿದೆ! ಅದರಲ್ಲಿಯೂ ಕರ್ನಾಟಕದಲ್ಲಿ ನನಗೊದಗಿರುವ ಅನಾದರವೂ, ಅಗೌರವವೂ ನನಗೆ ವಃತೃಪ್ತಿಯನ್ನೂ ಉಂಟಾಗಿರುವುದಿಲ್ಲ. ಈಗ ರಸಾಭಾಸವಾದ ನಾಡಿಗೆ ಗೇಡಾದ ದುರ್ನೀತಿಯ ದುರ್ನುಡಿಗಳು ಹೊರಬೀಳುತ್ತಿರುವುವು" ಎಂಬೀ ವಚನಗಳು ಯಾರ ಮನಸ್ಸನ್ನು ದಣಿಸುವುದಿಲ್ಲ. ಇವುಗಳನ್ನು ಕೇಳಿದ ನಮ್ಮ ಕಿವಿಗಳು ಕಿವುಡಾಗುವುವು!!

"ನಾಟಕ ಕಲೆಯ ಕುರಿತು ಯೋಗ್ಯ ಶಿಕ್ಷಣವನ್ನು ಕೊಟ್ಟು, ಧರ್ಮಪರಿಗಳಾಗುವಂತೆ ಮಾಡುವುದೇ ಈ ಪತ್ರಿಕೆಯ ಧ್ಯೇಯವಾಗಿದೆ. ಸುಪ್ರಸಿದ್ಧ ಅಭಿನಯಕಾರರಾದ ಪಿ ವರದಾಚಾರರು, ಮಿ ಗುಬ್ಬಿವೀರಣ್ಣ, ಮಿ ಬೆನಗಲ್ ರಾಮರಾಯ ಈ ಶ್ರೇಷ್ಠ ಪುರುಷರ ಚಿತ್ರಪಟಗಳು ಅಂದವಾದ ಕಾಗದದ ಮೇಲೆ ಬಂದಿವೆ ಅಲ್ಲದೆ ಇನ್ನೂ ಇತರ ನಕ್ಷೆಗಳು ಸಹ ಇವೆ.

"ಜನಸಮೂಹದ ತಿದ್ದುವಿಕೆಯೇ ನಾಟಕಾಭಿನಯದ ಮುಖ್ಯೋದ್ದೇಶವಾಗಿರಬೇಕಲ್ಲದೆ, ದ್ರವ್ಯಾರ್ಜನೆಯು ನಾಟಕ ಸಂಘಗಳ ಮುಖ್ಯೋದ್ದೇಶವಾಗಿರಕೂಡದು" ಎಂದು ಉಲ್ಲೇಖಿಸಿರುವ ಶ್ರೀಮತಿ, ಆರ್. ಕಲ್ಯಾಣಮ್ಮನವರ ಸದ್ಬುದ್ಧಿಯ ಮಾತಿಗೆ ನಮ್ಮ ಕೊಡಗಿನ ಅಭಿನಯಕಾರರೂ, ನಾಟಕ ಮಂಡಲಿಕರೂ ತಮ್ಮ ಗಮನವನ್ನು ಕೊಡುವುದು ಉಚಿತವೆಂದು ನಾವು ಆಗ್ರಹಪೂರ್ವಕವಾಗಿ ಅರಿಕೆಮಾಡಿಕೊಳ್ಳುತ್ತೇವೆ

ಅಂದಚಂದವಾದ ರೀತಿಯಿಂದ, ಎಲ್ಲರ ಮೆಚ್ಚಿಗೆಯನ್ನು ತನ್ನ ಸರ್ವೋತ್ಕೃಷ್ಟ ಲೇಖನಗಳಿಂದ ಪಡೆಯಲು ಹೊರಟಿರುವ "ರಂಗಭೂಮಿ"ಗೆ ಭಗವಂತನು ಸಕಲಾನುಕೂಲಗಳನ್ನು ಪ್ರಾಪ್ತಗೊಳಿಸಲಿ ಎಂಬದೇ ನಮ್ಮ ಪ್ರಾರ್ಥನೆ. ಕರ್ನಾಟಕರು ಈ ಪತ್ರಕ್ಕೆ ತಮ್ಮ ಉದರಾಶ್ರಯವನ್ನಿತ್ತು, ಇದು ನಿರ್ವಿಘ್ನವಾಗಿ ನಡೆದುಕೊಂಡು ಬರುವಂತೆ ಯತ್ನಿಸದಿರರು.

"ರಾಮಕೋಟಿ" ಯ 3ನೆಯ ಸಂಚಿಕೆಯಾದ "ವೈಕುಂಠ ನಿರೂಪಣ"ವೆಂಬ ಗ್ರಂಥವು ನಮ್ಮ ಕೈಸೇರಿ ಅತಿಯಾನಂದದಿಂದ ಸ್ವೀಕರಿಸಿರುವೆವು. ಈ ಪತ್ರಿಕೆಯು ಶೀಲಂ ಬಲ್ಲೆ, ಹೊಸೂರು' ರಾಮಕೋಟಿ ಎಂಬಲ್ಲಿ ಹರಿಕಥಾರತ್ನಾಕರ, ವಿದ್ಯಾನಿಧಿ ಕಾರುಪಲ್ಲಿ ಶಿವರಾಮದಾಸರಿಂದ ಪ್ರಕಾಶಪಡುತ್ತಲಿರುವ ನಮ್ಮ ಕನ್ನಡ ನಾಡಿನ ಶ್ರೀರಾಮ ಭಕ್ತವೃಂದದ ಕಮಲದಲ್ಲಿ ಸದಾ ವಿರಾಜಿಸಲ್ಪಡತಕ್ಕದ್ದಾಗಿರುವ ಕರದರ್ಪಣವಾಗಿದೆ. ಶ್ರೀರಾಮನ ಒಂದು ಕೋಟಿನಾಮವನ್ನು ಹೆಚ್ಚು ಪ್ರಯಾಸವಿಲ್ಲದೆ ತಿಳಿದುಕೊಳ್ಳಲು ಸಹಾಯವಾಗತಕ್ಕದ್ದೆಂದರೆ ಈ ಪತ್ರಿಕೆಯೊಂದರಿಂದಲೇ ಎಂದು ಧಾರಾಳವಾಗಿ ಹೇಳಬಲ್ಲೆವು. ಸರ್ವ ಚೈತನ್ಯನಾದ ಭಗವಂತನ ಅನಂತ ಮಹಿಮೆಯನ್ನು ವರ್ಣಿಸಲು ಯಾರಿಂದಲೂ ಸಾಧ್ಯವಲ್ಲದಿದ್ದರೂ ಸಮಯೋಚಿತವಾಗಿ ಬೋಧನೆಕೊಟ್ಟು, ಭಕ್ತರ ಚಿತ್ತವನ್ನು ಭಗವಂತನ ಧ್ಯಾನದಲ್ಲಿ ರಿಸಲು ಈ ಪತ್ರಿಕೆಯು ಬಹುಪಡ್ಗರುವಿನೋಪಾದಿ ಸಹಾಯಮಾಡಬಲ್ಲುದೆಂಬದನ್ನು ಇದನ್ನು ಓದಿನೋಡಿದರೆ ವೇದ್ಯವಾಗದುದು. ಈ ಪತ್ರಿಕೆಯು ಕನ್ನಡ ನಾಡಿನ ಸಕಲರಿಗೂ ಅರ್ಹವಾದುದಾಗಿದೆ ಇದನ್ನು ಬಾಲಕ, ಬಾಲಕಿಯರೂ ಯುವಕ, ಯುವತಿಯರೂ, ವೃದ್ಧ, ವೃದ್ಧೆಯರೂ ಸದಾ ಓದಲು ಕನ್ನಡ ಅಕ್ಷರದಲ್ಲಿ ಮುದ್ದಾದ ಮುದ್ರಣದಿಂದಲೂ ರಸವತ್ತಾದ ಭಾಷಾವೇಶಗಳಿಂದಲೂ ಮುದ್ರಿಸಲು ಶ್ರಮ ತೆಗೆದುಕೊಂಡ ಶಾ ಶಿವರಾಮ ದಾಸರಿಗೆ ನಮ್ಮ ಕನ್ನಡ ನಾಡಿನ ಭಕ್ತಾಗ್ರಣಿಗಳೆಲ್ಲರೂ ಋಣಿಗಳಾಗಬೇಕಾಗಿದೆ ಈ ಪತ್ರಿಕಗ ವಾರ್ಷಿಕ ಚಂದಾ ರೂ 5/- ಇನ್ನು ಬಡವರಾದ ಚಂದಾದಾರರಿಗೆ ರೂ. 2/- ಎಂಬುದಾಗಿಟ್ಟಿರುವುದರಿಂದ ದಾಸರಿಗೆ ಎಷ್ಟು ವಂದಿಸಿದರೂ ತೀರದು. ಇಂಥಾ ಪುಣ್ಯಾಚಾರಿತ್ರ್ಯ ಪತ್ರಿಕೆಗೆ ಪ್ರೋತ್ಸಾಹವಿತ್ತು ಅಭಿವೃದ್ಧಿ ಸ್ಥಿತಿಗೆ ತರುವುದು ಕನ್ನಡ ನಾಡಿನ ಸರ್ವ ಸಜ್ಜನರ ಕರ್ತವ್ಯವಲ್ಲವೇ?

ವಿನಂತಿ.

ಕೊಡಗು ಜಮೀನ್ದಾರರ ಸಂಘಕ್ಕೆ ಮ. ರಾ. ರಾ ನಿತ್ಯದ ಸುಬ್ಬಯ್ಯನವರು ತಮ್ಮ ದೇಶಭಕ್ತಿಯಿಂದ ಒಂದು ಸಾವಿರದ ಆರುನೂರು ರುಪಾಯಿಗಳನ್ನು ಕೊಟ್ಟು ಒಂದು ಕಟ್ಟಡವನ್ನು ತೆಗೆದುಕೊಟ್ಟಿದ್ದಾರೆ ಈ ಕಟ್ಟಡದರಿಪೇರಿಗೆ ಹಣ ಜಮಾಯಿಸಬೇಕೆಂತ ಸಂಘದ ಕಮಿಟಿಯಲ್ಲಿ ತೀರ್ಮಾನಿಸಿದೆ. ದೇಶದ ಉದಾರಾಶ್ರಯವು ಧಾರಾಳವಾಗಿ ದೊರೆತು ಸಾಧ್ಯವಾದರೆ ಒಂದು ಪ್ರತ್ಯೇಕ ಹಾಲ್ ಸಹ ಕಟ್ಟುವ ಯೋಚನೆ ಇದೆ. ಕಟ್ಟಡದ ರಿಪೇರಿಗ 5000 ರೂಪಾಯಿ ಮತ್ತು ಹೊಸ ಕಟ್ಟಡಕ್ಕೆ 10000 ರೂಪಾಯಿ ಬೇಕಾದೀತೆಂತ ಸಾಧಾರಣದ ಅಂದಾಜು ಮಾಡಲಾಗಿದೆ ಕೊಡಗು ದೇಶದ ಪ್ರೀತಿಗೆ ಪಾತ್ರರಾದ ಮ. ರಾ. ಶ್ರಿ ರಾಯಬಹದ್ದೂರ್ ರಾಜಕಾರ್ಯಪ್ರಸಕ್ತ ಮನೆಯಪಂಡ ಮುತ್ತಣ್ಣನವರ ಜ್ಞಾಪಕಾರ್ಥವಾಗಿ ಅವರ ಮಕ್ಕಳು ಈ ಫಂಡಿಗೆ 1000 ರೂಪಾಯಿ ಕೊಟ್ಟಿರುತ್ತಾರೆ ದೇಶದವರೆಲ್ಲರೂ ಈ ದೇಶದ ಕಾರ್ಯಕ್ಕೆ ತಮ್ಮ ಶಕ್ತಿ ಮೀರಿ ಸಹಾಯಮಾಡಬೇಕಾಗಿ ಅತಿವಿನಯದಿಂದ ಕೇಳುತ್ತೇವೆ.

ಕೋದಂಡ ಅಪ್ಪಯ್ಯ,
ಪ್ರೆಸಿಡೆಂಟ್.
ಕೊಡಗುಜಮೀನ್ದಾರರ ಸಂಘ,
ಸಿ. ಯನ್. ವೆಂಕಪ್ಪಯ್ಯ.
ಮಡಿಕೇರಿ, 17—9—25. ಜನರಲ್ ಸೆಕ್ರೆಟರಿ.

ನೋಟೀಸು.

ಈ ಮೂಲಕ ಸಕಲರಿಗೂ ತಿಳಿಸುವದೇನೆಂದರೆ, ದಕ್ಷಿಣ ಕೊಡಗು ತಾಲೋಕು ... ಟಿ ನಾಡು ಮೊಗ್ಗಮೂಡಿ ಗ್ರಾಮದಲ್ಲಿರುವ ... ಬದ್ರಮ್ಮ ಮತ್ತು ನನ್ನ ಮಗ ಪೌತಿಮಾಡೈಯ್ಯನ ... ಸಿಂಗಮ್ಮನಿಗೂ ಸಹ ನೋಡಬೇಕಾಗಿ ನಮ್ಮ ಹಕ್ಕಾಗಿರುವ ಭೂಸೊತ್ತನ್ನು ಪೌತಸ ತಮ್ಮ ತೋಟೈಯ್ಯ ಯಾನೆ ಪರುವತೈಯ್ಯನು ಯಾರಿಗೋ ವಿಕ್ರಯಿಸಲು ಉದ್ಯುಕ್ತನಾಗಿರುವನಾಗಿ ತಿಳಿಯುತ್ತೇವೆ. ಅವನಿಂದ ಮೇಲ್ಕಂಡ ಭೂಸೊತ್ತನ್ನು ಕೊಂಡುಕೊಂಡಲ್ಲಿ ಅದು ಖಂಡಿತವಾಗಿ ಸಿಂಧುವಾಗತಕ್ಕದ್ದಲ್ಲವೆಂಬ ಸಂಗತಿಯನ್ನು ಈ ಮೂಲಕ ತಿಳಿಸಿರುತ್ತೇವೆ.

4 ಶಿ. ಬದ್ರಮ್ಮ
ತಾ 21—9—25 ಶಿ ಸಿಂಗಮ್ಮ.

ವರ್ತಮಾನ ಸಂಗ್ರಹ.

ಒಳದೇಶ.

ಚೀಫ್ ಕಮೀಷನರವರು ಅಕ್ಟೋಬರು 6ರಲ್ಲಿ ಮಡಿಕೇರಿಗೆ ಬರುವರು.

ಮರೆನಾಡಿನಲ್ಲಿಯೂ ಬಲಮುರಿಕಡೆಯಲ್ಲಿಯೂ ದನಗಳಿಗೆ ದೊಡ್ಡ ರೋಗ ಜೋರಾಗಿದೆಯೆಂದು ಒಬ್ಬರು ಬರೆದಿರುತ್ತಾರೆ.

ಕೊಡಗಿನ ಸಹಕಾರಿ ಸಂಘಗಳ ರಿಜಿಸ್ಟ್ರಾರವರು ತಾ 23ರಲ್ಲು ಮೈಸೂರಲ್ಲು ನಡೆದ ಕೋ ಆಪರೇಟಿವ್ ಕಾನ್‌ಫರೆನ್ಸಿಗೆ ಹೋಗಿದ್ದರು

ಎಡೆನಾಲ್ಕುನಾಡಿನ ನಾಂಗಾಲ, ಬಾಳುಗೋಡು ಮತ್ತು ಬಿಟ್ಟಂಗಾಲ ಗ್ರಾಮಗಳಲ್ಲಿಯೂ ಲಂತಾನ ನಾಶಕ ಸೊಸೈಟಿಗಳು ಏರ್ಪಡಿಸಲ್ಪಟ್ಟಿವೆ.

ತಾ 4—10—25 ರಲ್ಲು ಜಮೀನ್ದಾರರ ಸಂಘದ ಕಮಿಟಿ ಮೀಟಿಂಗು ವೀರಾಜಪೇಟೆ ಬಿದ್ದರ್ ಭಂಡಾರದ ಮಹಡಿಯಲ್ಲಿ ಮಧ್ಯಾಹ್ನ 1 ಗಂಟೆಗೆ ನಡೆಯುವುದು

ಈ ತಾ 19ರಲ್ಲು ನಡೆದ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗಿನಲ್ಲಿ ಭಾಗಮಂಡಲ ಸಹಕಾರಿ ಸಂಘಕ್ಕೆ ರೂ 300 ಮತ್ತು ಹಳ್ಳಿಗಟ್ಟು ಸಂಘಕ್ಕೆ ರೂ. 250 ಸಾಲ ಮಂಜೂರಾಯಿತು.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಮೀಟಿಂಗು ಅಕ್ಟೋಬರು ತಾರೀಕು 8 ರಲ್ಲಿ ನಡೆಯುವುದೆಂದೂ, ಒಂದು ದಿನದ ಮಟ್ಟಿಗೆ ಮಾತ್ರ ಮೀಟಿಂಗು ಆಗುವದೆಂದೂ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಮಿ. ನಲ್ಲಮಕ್ಕಳ ಸುಬ್ಬಯ್ಯನವರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಆಫೀಸಿನ ಶಿರಸ್ತೆದಾರರ ಚಾರ್ಜನ್ನು ವಹಿಸಿಕೊಂಡಿರುವರು. ಮಿ. ಕೋದಂಡ ಕಾಳಪ್ಪನವರು ವೀರಾಜಪೇಟೆ ನಾಡುಪತ್ಯಕ್ಕೆ ಹೋದರು.

ತಲಕಾವೇರಿಯ ಮಿ. ನಾರಾಯಣಾಚಾರ್ಯರು ವೀರಾಜಪೇಟೆ ಹೈಸ್ಕೂಲಿಗೂ, ಮಂಗಳೂರಿನಲ್ಲಿದ್ದ ಮಹಾರಾಷ್ಟ್ರ ಪ್ರಾಂತ್ಯದ ಮಿ. ಆತ್ಮರಾಮಶಾಸ್ತ್ರಿಯವರು ಮಡಿಕೇರಿ ಹೈಸ್ಕೂಲಿಗ ಸಂಸ್ಕೃತ ಪಂಡಿತರಾಗಿ ನೇಮಿಸಲ್ಪಟ್ಟಿರುವರು.

ಸಹಕಾರಿಸಂಘಗಳ ಸುಪರ್‌ವೈಸರುಗಳ ಪೈಕಿ ಮಿ. ಚಿಕ್ಕಚೆಟ್ಟಿರ ಚಂಗಪ್ಪ, ಮಿ. ಕಲಿಯಂಡ ಸೋಮೈಯ್ಯ ಮತ್ತು ಮಿ ಪುತ್ತಮನೆ ಮುದ್ದಮೈಯ್ಯನವರನ್ನು ಅಕ್ಟೋಬರ್ 1ರಿಂದ ಮೂರು ತಿಂಗಳ ತರಬೇತಿಗಾಗಿ ಮದ್ರಾಸಿಗೆ ಕಳುಹಿಸುವಂತೆ ತೀರ್ಮಾನವಾಗಿದೆ.

ಈ ವರ್ಷ ಬೊಂಬಾಯಿಯಲ್ಲಿ ಯಂ. ಬಿ. ಸಿ ಯಸ್, ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮಿ. ಬಿದ್ದಂಡ ಭೀಮೈಯ್ಯನವರನ್ನು ಮದ್ರಾಸಿನ ಜನರಲ್ ಆಸ್ಪತ್ರೆಯಲ್ಲು ಗೌರವ ಸರ್ಜನರಾಗಿ ಕೆಲವು ದಿವಸಗಳ ಹಿಂದೆ ನೇಮಿಸಿರುವರಾಗಿ ತಿಳಿಯುತ್ತೇವೆ.

ಈ ವಾರ ಬಿಸಿಲಾಗಲೀ ಮಳೆಯಾಗಲೀ ಚೆನ್ನಾಗಿಬಾರದೆ, ಮೋಡ ಕವಿದುಕೊಂಡಿರುವುದರಿಂದ ಹವವು ಬದಲಾಗುತ್ತಿದೆ. ತಾ. 23ರಲ್ಲಿ ಮಡಿಕೇರಿಗೂ ಇನ್ನು ಕೆಲವುಕಡೆಗಳಿಗೂ ಸ್ವಲ್ಪಮಟ್ಟಿಗೆ ಮಳೆ ಬಿತ್ತು. ನಾಡುಕಡೆಗಳಲ್ಲಿ ಮಳೆ ಇಲ್ಲದೆ ಗದ್ದೆಗಳಲ್ಲಿ ನೀರು ಬತ್ತುತ್ತಾ ಬರುತ್ತಿದೆಯೆಂದೂ ಹವ ಬದಲಾವಣೆಯಿಂದ ಆರೋಗ್ಯವು ಚೆನ್ನಾಗಿಲ್ಲವೆಂದೂ ತಿಳಿಯುತ್ತೇವೆ

ಕೆಲವು ವಾರಗಳ ಹಿಂದೆ ಪ್ರಕಟವಾದಂತೆ ಸರ್ವೆ ಆಫ್ ಇಂಡಿಯಾದಲ್ಲಿರುವ ಮಿ ಪಚೆಟ್ಟಿರ ಪೊನ್ನಪ್ಪನವರನ್ನು ಸರಕಾರಿ ಸ್ಕಾಲರ್‌ಶಿಪ್ಪಿನಿಂದ ಹೆಚ್ಚಿನ ತರಬೇತಿಗೆ ಡೇರಾಡನ್ನಿಗೆ ಕಳುಹಿಸಿದಲ್ಲವೆಂತಲೂ, ಅವರನ್ನು ಬೇರೆ ಸರ್ವೆ ಪಾರ್ಟಿಗೆ ವರ್ಗಾಯಿಸಿರುವ ಕಾರಣ, ಆ ಪಾರ್ಟಿಯ ಹೊರ ಕೆಲಸವನ್ನು ಸ್ವಲ್ಪ ತೀರಿಸಿ ಕೊಂಡಲು ಅವರು ಡೇರಾಡನ್ನಿಗೆ ಹೋದಲ್ಲೆಂತಲೂ ಇತ್ತೀಚೆಗೆ ತಿಳಿಯ ಬಂದಿದೆ.

ಈ ಕೆಳಗಿನ ವಿಷಯಗಳಲ್ಲಿ 1926ನೇ ಜನವರಿ ಅಖೈರೊಳಗೆ ಮಡಿಕೇರಿಯಲ್ಲಿ ಒಂದು ಪರೀಕ್ಷೆಯು ನಡೆಸಲ್ಪಡುವುದು. ಪರೀಕ್ಷೆಯ ತಾರೀಕು ಹಿಂದಳಿಂದ ಪ್ರಕಟಿಸಲ್ಪಡುವುದು. ವಿಷಯಗಳು.—(1) 1899ರ ಕೊಡಗು ಲ್ಯಾಂಡ್‌ಮತ್ತು ರೆವಿನ್ಯು ರೆಗ್ಯುಲೇಶನ್ ನಂ 1 (2) ಮೇಲಿನ ರೆಗ್ಯುಲೇಶನಿನ ರೂಲ್ಸುಗಳು.

(3) ತಾಲೋಕು ಟ್ರೆಜರಿಯ ಲೆಕ್ಕ ಇಡುವಿಕೆ (4) 1915ರ ಎಕ್ಸೈಸ್ ರೆಗ್ಯುಲೇಶನ್ 1 ಮತ್ತು ಅದರ ರೂಲ್ಸುಗಳು. (5) ಟಕಾವಿಸಾಲಗಳ ಆಕ್ಟುಗಳು ಮತ್ತು ಅವುಗಳ ರೂಲ್ಸುಗಳು. (6) ನಾಡು ಆಫೀಸಿನ ಕೆಲಸ 30ರೂ ಮೇಲೆ ತಲಬಿರುವ ಉದ್ಯೋಗಸ್ಥರನ್ನು ಈ ಪರೀಕ್ಷೆಗೆ ಬಿಡಲಾಗುವುದು. ಉಮೇದುವಾರರು 1925ನೇ ನವಂಬರು 25ರೊಳಗೆ ಕಮಿಷನರಿಗೆ ಅರ್ಜಿ ಕಳುಹಿಸತಕ್ಕದ್ದೆಂದು ಕಮಿಷನರವರು ಪ್ರಕಟಿಸಿರುವರು

ಕೋರ್ಟು ಖಚೇರಿ ವರ್ತಮಾನ.

ಆಂಗ್ಲೋ ಇಂಡಿಯನ್ ಸಿ ಯಫ್ ಒ.ಜಿ ಎಂಬವನು ಮೂವರು ಯೂರೋಪಿಯನ್ ಪ್ಲಾಂಟರುಗಳಿಂದ ತಾನು ಆಳು ಸಪ್ಲೈ ಮಾಡುವ ಏಜಂಟೆಂತ ನಂಬಿಸಿ 125 ರೂ, 150 ರೂ, 150 ರೂ, ಸಹ ಪೊಂದಿಕೊಂಡದ್ದಲ್ಲದೆ ಇವರ ಪೈಕಿ ಒಬ್ಬರಿಂದ ಪುನಃ 250 ರೂ ಹೊಂದಿಕೊಂಡನು ಈ ಹಣಗಳಲ್ಲಿ ಕೆಲವು ಭಾಗ ಮೊದಲೇ ಹೊಂದಿಕೊಂಡು ಅನಂತರ ಕೆಲವು ದಿನಗಳ ಮೇಲೆ ತೋಟಕ್ಕೆ ಆಳುಗಳು ಹೊರಡಲು ತಯಾರಿದ್ದಾರೆ, ಖರ್ಚಿಗೆ ಬೇಕೆಂತ ಹೇಳಿ ಬಾಕಿ ಹಣ ತರಿಸಿಕೊಂಡನು. ಅಪರಾಧಿಯು ತನ್ನ ತಪ್ಪನ್ನು ಒಪ್ಪಿಕೊಂಡನು. "ಅಪರಾಧಿಯು ಒಡತನದಿಂದಲೇ ಈ ಹಾಳು ಜೀವನಕ್ಕೆ ಇಳಿದದ್ದಾಗಿದೆ ಅವರೆ ತಪ್ಪು ಮಾಡಿದವನಿಗೆ ಶಿಕ್ಷೆ ಕೊಡದೆ ಕಳೆಯದು ದೊಡ್ಡ ಶಿಕ್ಷೆಗೆ ಅಪರಾಧಿಯು ಅರ್ಹನಾದರೂ ಈ ಮೊದಲು ಅಪರಾಧಿಯು ಒಳ್ಳೇ ನಡತೆಯುಳ್ಳವನಾಗಿದ್ದುದರಿಂದ ಕಡಿಮೆ ಶಿಕ್ಷೆ ಕೊಡಲಾಗಿದೆ ಮೂರು ಚಾರ್ಜುಗಳ ಮೇಲೆಯೂ ಆರಾರು ತಿಂಗಳು ಸಜೆ ವಿದಿಸಿ ಈ ಮೂರು ಸಜೆಗಳನ್ನು ಏಕ ಕಾಲದಲ್ಲಿ ಅನುಭವಿಸಲು ವಿಧಿಸಲಾಗಿದೆ ಎಂತ ಸುಬಾರ್ಡಿನೇಟ್ ಜಡ್ಜ್ ಮತ್ತು 1 ಕ್ಲಾಸ್ ಮೆಜಿಸ್ಟ್ರೇಟರು ಫೈಸಲ್ ಮಾಡಿದ್ದಾರೆ

ಫಾರೆಸ್ಟ್ ಆಫೀಸ್ ಮೇನೇಜರ್ ಅಬ್ದುಲ್ ರಹಿಮಾನ್‌ರವರ ಕೇಸಿನ ವಿಷಯ ಈ ಕೆಳಗಿನ ಸಂಗತಿಗಳನ್ನು ಸಬಾರ್ಡಿನೇಟ್ ಜಡ್ಜಿಯವರ ಫೈಸಲಿನಿಂದ ತೆಗೆದದ್ದಾಗಿದೆ—

1922ನೇ ಇಸವಿ ಜೂನ್ ತಿಂಗಳಲ್ಲಿ ಮಹಮ್ಮದ್ ಬ್ಯಾರಿ ಎಂಬ ಬೆತ್ತದ ಕಂಟ್ರಾಕ್ಟರು ಕಳುಹಿಸಿದ ಟೆಲಿಗ್ರಾಫ್ ಮನಿಯಾರ್ಡರಿನ 1101 ರೂ ಪೈಕಿ 1000 ರೂಪಾಯಿಗಳನ್ನು ಫಾರೆಸ್ಟ್ ಆಫೀಸ್ ಮೆನೇಜರಾಗಿದ್ದ ಅಪರಾಧಿಯು ದುರುಪಯೋಗ ಪಡಿಸಿದರೆಂಬದಾಗಿ ಫಿರ್ಯಾದಿ 1924ನೇ ಇಸವಿಯಲ್ಲಿ ಸದರಿ ಬೆತ್ತದ ಕಂಟ್ರಾಕ್ಟರನಿಂದ ತನ್ನ ಡಿಪಾಜಿಟ್ ಹಣ ವಾಪಸು ಕೊಡಬೇಕೆಂಬ ಅಪ್ಲಿಕೇಶನ್ ಬಂತು ಆಗಿನ ಮೇನೇಜರು ಈತನಿಂದ ಬರಬೇಕಾದ ಹಣವೆಲ್ಲಾ ಬಂದಿದೆಯೋ ಎಂತ ಅಜಮಾಯಿಷಿ ಮಾಡುವಾಗ ಖಜಾನೆಯಿಂದ ಆಫೀಸಿಗೆ ಕೊಟ್ಟ ರಶೀದಿಯಲ್ಲಿ 1101 ರೂ ಎಂತ ಇದ್ದರೂ ಟ್ರೆಜರಿಯಿಂದ ಬಂದ ಇನ್ನೊಂದು ಪಟ್ಟಿಯಲ್ಲಿ 101 ರೂ. ಎಂತ ಮಾತ್ರ ಇದ್ದದ್ದು ಕಂಡುಬಂತು. ಪುಸ್ತಕದಲ್ಲೂ 101 ಎಂತ ಇದ್ದದ್ದು 1101 ಎಂತ ತಿದ್ದಿದ್ದು ಗೊತ್ತಾಯಿತು ಟೆಲಿಗ್ರಾಫ್ ಮನಿಆರ್ಡರ್ ಫಾರೆಸ್ಟ್ ಡಿಪ್ಯುಟಿಕನ್ಸರ್ವೇಟರಿಗೆ ಎಂತ ಇತ್ತು. ಮನಿಆರ್ಡರ್ ಫಾರ್ಮ್ ಮೇಲೆ ಸೈನ್ ಹಾಕಿ ಆಫೀಸ್ ಮೇನೇಜರಿಗೆ ಕೊಡತಕ್ಕದ್ದು ಎಂತ ಬರೆದರು ಇತರ ವಿದ್ಯಮಾನಗಳಿಂದ ಅಪರಾಧಿಯೇ ಈ ಹಣವನ್ನು ಪೋಸ್ಟಾಫೀಸಿನಿಂದ ಹೊಂದಿಕೊಂಡಿದ್ದಾನೆಂತ ರುಜುವಾತಾಗಿದೆಯೆಂತ ಫೈಸಲ್ ಮಾಡಿ ಸಬಾರ್ಡಿನೇಟ್ ಜಡ್ಜಿಯವರು ಹೀಗೆ ಬರೆದಿದ್ದಾರೆ—ಹಣವು 10—6—22ರಲ್ಲಿ ಅಪರಾಧಿಯ ಕೈಗೆ ಸೇರಿದ್ದರೂ 10—7—22ರ ವರೆಗೆ ಹಣವನ್ನು ಉಪಯೋಗಿಸಿಕೊಂಡು ಅನಂತರ ಖಜಾನೆಗೆ 101 ರೂ ಮಾತ್ರ ಕಳುಹಿಸಿ ಲೆಖ್ಖ ಪತ್ರಗಳನ್ನೆಲ್ಲಾ ತಿದ್ದಿದ್ದಾನೆ ಅಪರಾಧಿಯು ಮೇನೇಜರಾಗಿದ್ದರಿಂದ ಎಲ್ಲಾ ರಿಕಾರ್ಡುಗಳು ಅವನ ಸ್ವಾಧೀನ ಇದ್ದವು ಮೇಲಾಫೀಸರುಗಳು ತನ್ನ ಮೇಲೆ ಪೂರ್ಣ ನಂಬಿಕೆ ಇಟ್ಟಿದ್ದರಿಂದ ಅವರು ತಪಶೀಲ್ ಲೆಖ್ಖ ನೋಡುವದಿಲ್ಲವೆಂತ ಅಪರಾಧಿಗೆ ಗೊತ್ತಿತ್ತು ತನ್ನ ಮೇಲಾಫೀಸರುಗಳನ್ನು ಮೋಸಗೊಳಿಸಲಿಕ್ಕೆ ತನ್ನ ಬುದ್ಧಿವಂತಿಕೆಯನ್ನೆಲ್ಲಾ ಉಪಯೋಗಿಸಿದ್ದಾನೆ ಅಪರಾಧಿಯು 28 ವರ್ಷ ಸರ್ವಿಸ್ ಮಾಡಿ ಮುದುಕನಾಗಿರುವಾಗ ಇಂಥಾ ಕೆಲಸ ಮಾಡಿಯಾನೆಂತ ಯಾರು ಶಂಕಿಸಿಯಾರು? ಸರಕಾರದ ಕೆಲಸಗಳು ಅನ್ಯೋನ್ಯ ನಂಬಿಕೆಯಿಂದ ನಡಿಯಬೇಕು ಇಂಥಾ ನಂಬಿಕೆಯಲ್ಲಿ ವಿಶ್ವಾಸಘಾತಕ ಮಾಡಿದಾಗ ಏನೂ ದಯ ತೋರಿಸಲು ಎಡೆ ಇಲ್ಲ ಅದರೆ ಯೂರೋಪಿಯನ್ ಆಫೀಸರುಗಳು ಅಪರಾಧಿಯು ಒಳ್ಳೇ ನಡತೆಯುಳ್ಳವನಾಗಿದ್ದನೆಂತ ಹೇಳಿರುವದರಿಂದಲೂ ಅತನ ಪೆನ್ಶನನ್ನು ಕಳಕೊಳ್ಳುವುದಾದ್ದರಿಂದಲೂ ಕೋರ್ಟು ಏಳುವ ವರೆಗೆ ಸಜೆ ಮತ್ತು 1000 ರೂ ಜುಲ್ಮಾನೆ ವಿಧಿಸಲಾಗಿದೆ. ಹಣ ವಸೂಲಾದರೆ ಫಾರೆಸ್ಟ್ ಇಲಾಖೆಗೆ ಕೊಡಲಾಗುತ್ತದೆ.

ಹಿಂದೂದೇಶ.

ಬೊಂಬಾಯಿಯ 82 ಗಿರಣಿಗಳ ಪೈಕಿ ತಾ. 22ರ ವರೆಗೆ 65 ಕೆಲಸವಿಲ್ಲದೆ ಮುಚ್ಚಲ್ಪಟ್ಟಿದ್ದವು ಮುಷ್ಕರ ಹಿಡಿದಿರುವ ಕೆಲಸಗಾರರ ಸಂಖ್ಯೆಯು 125000ಕ್ಕೆ ಏರಿತೆ

ಬೊಂಬಾಯಿಯ ಗವರ್ನರವರು ಅಹ್ಮದಾಬಾದಿಗೆ ಹೋಗುವಾಗ ಅವರಿಗೆ ಬಿನ್ನಹ ಪತ್ರವನ್ನು ಅರ್ಪಿಸಕೂಡದೆಂದು ಅಲ್ಲಿಯ ಮುನ್ಸಿಪಾಲಿಟಿಯವರು ಬಹುಮತದಿಂದ ತಿರ್ಮಾನಿಸಿರುವರು.

ವಿದ್ಯಾರ್ಥಿಗಳಿಗೆ ಮಿಲಿಟರಿ ತರಬೇತು ಕೊಡಬೇಕೋ ಎಂಬದನ್ನು ವಿಚಾರಿಸಲು ಸ್ವರಾಜ್ಯಪಂಗಡದ ಮೆಂಬರುಗಳೂ ಉಳ್ಳ ಒಂದು ಕಮಿಟಿಯನ್ನು ಮಧ್ಯಪ್ರಾಂತ್ಯದ ಸರಕಾರದವರು ನೇಮಿಸಿರುವರು.

ಟಕಾವಿ ಚಾಕವೆಂಬಲ್ಲಿ ಸಿಕ್ಕಿದ ಒಂದು ಅದ್ಭುತ ಹಾವನ್ನು ಕಲ್ಕತ್ತಾದ ಪ್ರದರ್ಶನ ಮಂದಿರದಲ್ಲಿ ಇಟ್ಟಿರುವರು ಇದಕ್ಕೆ 2 ಕಾಲುಗಳೂ, ಕಾಲಿಗೆ 5ಬೆರಳುಗಳೂ ಇವೆ ಉಗುರುಗಳೂ ಇವೆಯಂತೆ!

ವೈಸರಾಯರ ಎಗ್ಸಿಕ್ಯೂಟಿವ್ ಕೌನ್ಸಿಲ್ಲಿನಿಂದ ರಿಟಯರ್ ಆದ ಸರ್ ಬಿ ಯನ್ ಮಿತ್ರರವರ ಬದಲಿಗೆ ಲಾ ಮೆಂಬರಾಗಿ ಬಂಗಾಳದ ಅಡ್ವೊಕೇಟ್ ಜನರಲಾದ ಮಿ ಯಸ್ ಆರ್. ದಾಸ್‌ರವರನ್ನು ನೇಮಿಸಿರುವರು

ತಾ 21ರಲ್ಲು ಸಿಮ್ಲಾದ ಪೋಲೀಸ್‌ಲೈನಿನ ಬಳಿ ಸಿಪಾಯಿಗಳು ದಸರಾ ಮೆರವಣಿಗೆಯನ್ನು ನೋಡುತ್ತಿದ್ದಾಗ್ಯೆ ಒಂದು ಬಾಂಬು ಒಡಯಲಾಗಿ 12ಜನರಿಗೆ ಗಾಯವಾಯಿತಂತೆ ಮೂವರು ಮೃತಪಟ್ಟಿರುವರು ವಿಚಾರವು ನಡಿಯುತ್ತಿದೆ

ಕಾನ್ಪುರದಲ್ಲಿ ಡಿಸಂಬರ್ ಕಡೆಯ ವಾರದಲ್ಲಿ ನಡೆಯಲಿಕ್ಕಿರುವ 'ಇಂಡಿಯನ್ ಕನ್ಗ್ರೆಸಿನ', ಪಾರ್ಟಿಯವರ ಕಾನ್ಫರೆನ್ಸಿಗೆ ಮಿ ಸಕ್ಲಾತ್ವಾಲರನ್ನು ಅಧ್ಯಕ್ಷರಾಗಿಯೂ, ಸ್ವಾಗತ ಮಂಡಳಿಯ ಚೇರ್‌ಮೆನರಾಗಿ ಮೌಲಾನ ಹಸರತ್ ಮೊಹಾನಿಯವರನ್ನೂ ಆರಿಸಿರುವರು

ಕೌನ್ಸಿಲ್ ಆಫ್ ಸ್ಟೇಟಿನ ಮೆಂಬರುಗಳ ಅವಧಿಯನ್ನು ಮುಂದರಿಸಬೇಕೆಂದು ಸರಕಾರದವರಿಗೆ ವಿನಂತಿ ಮಾಡಿಕೊಂಡ ಮನ್ನಪತ್ರಿಕೆಯನ್ನು ಒಬ್ಬ ಸ್ವರಾಜ್ಯಪಂಗಡದ ಮೆಂಬರನು ಹೊರಡಿಸಿದ್ದೆಂದು ಅರೋಪಣ ಹುಟ್ಟಿತ್ತು. ಇದು ಸುಳ್ಳೆಂತಲೂ, ಕೌನ್ಸಿಲ್ ಆಫ್ ಸ್ಟೇಟಿನ ಒಬ್ಬ ಮುಸಲ್ಮಾನ ಮೆಂಬರನೇ ಆ ಮನ್ನಪತ್ರಿಕೆಗಳನ್ನು ಸಿಮ್ಲಾದಲ್ಲಿ ಅಚ್ಚುಹಾಕಿ ಪ್ರಕಟಿಸಿದ್ದೆಂದೂ ಈಗ ತಿಳಿಯಬಂದಿದೆ

ಮದೀನದ ಮುತ್ತಿಗೆಯ ವಿಷಯ ಲೆಜಿಸ್ಲೇಟಿವ್ ಎಸಂಬ್ಲಿಯ ಮಹಮ್ಮದೀಯ ಮೆಂಬರುಗಳು ಇಬ್ನ ಸಾವೂದನಿಗೆ ಬರೆದ ಕಾಗದಕ್ಕೆ ಅವನ ಜವಾಬು ಬಂದಿರುವುದೇನಂದರೆ—ಮದೀನವನ್ನು ಅಲ್ಲಿಯ ಗೋರಿಗಳನ್ನು ನಾಶಪಡಿಸಿದ ವರ್ತಮಾನ ಸುಳ್ಳು ಆ ಪವಿತ್ರ ಪಟ್ಟಣವನ್ನು ಶತ್ರುಗಳಿಂದ ಕಾಪಾಡಲಿಕ್ಕಾಗಿ ಮುತ್ತಿರುವದಾಗಿದೆ ಶತ್ರುಗಳ ಸುಳ್ಳು ವರ್ತಮಾನದಿಂದ ಹಿಂದೂ ದೇಶದ ಮುಸಲ್ಮಾನರು ಅತೃಪ್ತರಾದದ್ದು ಬಹಳ ವ್ಯಸನಕರ'

ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಪಾಸಾದ ಸುಧಾರಣೆಯ ಉಪರಾವವನ್ನು ಸರಕಾರದವರು ಗಣನೆಗ ತೆಗೆದುಕೊಳ್ಳದೆ ಇರುವ ಕಾರಣದಿಂದ ಸ್ವರಾಜ್ಯ ಪಕ್ಷದ ಮತ್ತು ಇಂಡಿಪೆಂಡೆಂಟ್ ಪಾರ್ಟಿ ಎಸಂಬ್ಲಿಯ ಮೆಂಬರುಗಳು ರಾಜಿನಾಮೆ ಕೊಡುವ ಯೋಜನೆಯಲ್ಲಿರುತ್ತಾರೆ ಈಗಾಗಲೇ 45 ಸ್ವರಾಜ್ಯ ಪಕ್ಷದ ಮೆಂಬರುಗಳೂ 16 ಇಂಡಿಪೆಂಡೆಂಟ್ ಪಾರ್ಟಿಯ ಮೆಂಬರುಗಳೂ ರಾಜಿನಾಮೆ ಪತ್ರಿಕೆಗೆ ರುಜು ಹಾಕಿರುವರು ರಾಜಿನಾಮೆ ಪತ್ರದಲ್ಲಿ ಸುಧಾರಣೆಯ ಉಪರಾವವನ್ನು ಸೂಚಿಸಲು ಉಂಟಾದ ಕಾರಣಗಳನ್ನು ತೋರಿಸಿ ಎಸೆಂಬ್ಲಿಯನ್ನು ಮುಕ್ತಾಯಗೊಳಿಸಿ ಎಂತ ವೈಸರಾಯರನ್ನು ಕೇಳಿಕೊಳ್ಳುವರೆಂದೂ ವರ್ತಮಾನ

ನಾಶಿಕದ ಹತ್ತಿರ ಇರುವ ಶ್ರೀನಾಥ ಮಹಾರಾಜನೆಂಬೋರ್ವ ಸಾಧು ಪುರುಷನು ಹೇಳುವುದೇನೆಂದರೆ— ಈ ಜಗತ್ತಿನ ಮೇಲೆ ಒಂದು ಭಯಂಕರವಾದ ಸಂಕಟವು ಪ್ರಾಪ್ತಿಸುವುದು ಮಾನವರು ತಮ್ಮ ಪಾಪಪರಿಹಾರಕ್ಕಾಗಿ ಒಂದು ತಿಂಗಳ ವೃತೋಪವಾಸವನ್ನು ನಡಸಬೇಕಾಗಿಯೂ, ಹಾಗೆ ಮಾಡದಿದ್ದರೆ, ಈ ಸಂಕಟ ದೆಸೆಯಿಂದ ಮನುಷ್ಯ ಜಾತಿಯೇ ನಿರ್ಮೂಲವಾಗದೆ ಉಳಿಯಲಾರದಾಗಿಯೂ ಈಶ್ವರನು ತನಗೆ ಒಂದು ಸಂದೇಶವನ್ನು ತಿಳಿಸಿರುವನು ಎಂಬದಾಗಿ ಹೇಳುವನು ಶ. ವ್ಯ.

ದೈನಹಾಟವೆಂಬ ಗ್ರಾಮದ ಬಳಿ ಹರಿಕೀರ್ತನೆಯಲ್ಲಿ ಪ್ರಖ್ಯಾತನಾಗಿದ್ದ ಹರಿದಾಸನೆಂಬ ವೈಷ್ಣವ ಭಿಕ್ಷುವೊಬ್ಬನು ಆಗಸ್ಟ 1 ರಲ್ಲಿ ಶಿವಾಧೀನನಾದನು ಇವನ ಶವವನ್ನು ಅನುಯರು ಭಜನೆ ಮಾಡುತ್ತಾ ಗಂಗಾ ತೀರಕ್ಕೆ ಮುಟ್ಟಿಸಿದಾಗ್ಯ ಆ ಶವವು ಪಕ್ಕನೆ ಎದ್ದುನಿಂತು ಗಂಗಾನದಿಯ ಪ್ರವಾಹದಲ್ಲಿ ತೇಲನಾಗಿ ಹೋಯಿತು ಭಜನೆಯು ನಡಿಯುತ್ತಲೇ ಇತ್ತು ಅನಂತರ ನದಿಯಿಂದ ಮೃತ ದೇಹವು ಮೇಲಕ್ಕೆ ಬಂದು ಘಂಟೆ ಮಾಡುತ್ತಿದ್ದಲ್ಲಿ 10 ನಿಮಿಷಗಳವರೆಗ ಕಾಣಿಸುತ್ತಾ ಇದ್ದು ಪುನಃ ಗಂಗೆಯನ್ನು ಸೇರಿಕೊಂಡಿತು ಈ ಚಮತ್ಕಾರವನ್ನೆಲ್ಲಾ ಅನೇಕರು ಕಣ್ಣಾರೆ ನೋಡಿರುವರೆಂದು ಹಿಂದೂಸಮಾಚಾರ ಪತ್ರಿಕೆಯು ಪ್ರಕಟಿಸಿರುವುದು

ವಿದೇಶ.

ಇಬ್ನ್ ಸಾವೂದ್‌ರವರು ರಕ್ತಚೆಲ್ಲಿಸದೆ ಮದೀನ ಪಟ್ಟಣವನ್ನು ಸ್ವಾಧೀನಮಾಡಿಕೊಂಡಿರುವರು ಅಲ್ಲಿಯ ಪವಿತ್ರ ಕಟ್ಟಡಗಳೆಲ್ಲ ಭದ್ರವಾಗಿಯೇ ಇವೆ ಶರೀಫ್ ಅಲಿಯವರ ಸೈನಿಕರು ಕಾಲಿಗೆ ಬುದ್ಧಿ ಹೇಳಿರುವರು

ರಿಫ್ ಜನರ ಮುಂದಾಳಾದ ಅಬ್ದುಲ್‌ಕ್ರಿಮ್ ಅಥವಾ ಅವನ ಸಹೋದರನನ್ನು ಜೀವಸಹಿತವಾಗಲೀ ಕೊಂದಾಗಲೀ ತಂದವರಿಗೆ ಅರ್ಧಮಿಲಿಯ ಫ್ರಾಂಕ್ಸ್ ಬಹುಮಾನ ಕೊಡಲಾಗುವುದೆಂದು ಮೊರಾಕ್ಕೊದ ಸುಲ್ತಾನರು ಪ್ರಕಟಿಸಿರುವರೆಂದು ಸುದ್ದಿ.

ನಿಮಿಷಕ್ಕೆ 3 ಲಕ್ಷ ಚಿತ್ರಗಳನ್ನು ಗ್ರಹಿಸತಕ್ಕಂಥಾ ಫೋಟೋಗ್ರಾಫ್ ಯಂತ್ರ ಒಂದನ್ನು ನಿರ್ಮಿಸಲು 4 ವರ್ಷ ಹಿಡಿದುದಲ್ಲದೆ 2,25,000 ವೆಚ್ಚವಾಯಿತಂತೆ! ಇಂಥಾ ಅತ್ಯಂತ ವೇಗವಾದ ಫೋಟೋಗ್ರಾಫ್ ಯಂತ್ರವು ಬ್ರಿಟಿಷ್ ಸೈನ್ಯದವರಲ್ಲದೆ ಬೇರೆ ಯಾರಲ್ಲಿಯೂ ಇಲ್ಲ

ಈಜಿಪ್ಟಿನ ಅರಸನಾದ ಫಾಡ್‌ರವರ ವೈದ್ಯನಾದ ಅಹ್ಮದ್ ಸೀಸದಿನ್ ರಾಜಕುಮಾರರನ್ನು ಹಲೆಸರಿಯಿಲ್ಲವೆಂದು ಪ್ಯಾರಿಸ್ ಪಟ್ಟಣದ ಒಂದು ಆಸ್ಪತ್ರೆಯಲ್ಲಿ ಕಳೆದ 24 ವರ್ಷಗಳಿಂದ ಇಟ್ಟಿದ್ದರು ಅವನು ಅಲ್ಲಿಂದ ಈ ತಾ 4 ರಲ್ಲಿ ತಪ್ಪಿಸಿಕೊಂಡು ಕಾನ್‌ಸ್ಟೆಂಟಿನೋಪಲಿಗೆ ಬರುವ ಹಡಗನ್ನು ಹತ್ತಿದರಂತೆ

ಲಾರ್ಡ್ ರೀಡಿಂಗ್‌ರವರು ತಮ್ಮ ವೈಸರಾಯಪದವಿಯ ಕಾಲವನ್ನು ಮುಂದರಿಸಿಕೊಳ್ಳಲು ಇಷ್ಟಪಡುವುದಿಲ್ಲವೆಂತಲೂ, ಲಾರ್ಡ್ ಲಾಂಡಾಡರಿಯವರು ಲಾರ್ಡ್ ರೀಡಿಂಗರ ನಂತರ ವೈಸರಾಯರಾಗಿ ಬರುವ ವರ್ತಮಾನವು ಪ್ರಬಲವಾಗಿದೆಯೆಂತಲೂ ಬೊಂಬಾಯಿಯ "ಟಯಿಮ್ಸ್ ಆಫ್ ಇಂಡಿಯಾ" ಪತ್ರಿಕೆಯು ಹೇಳಿತೆ

ತಾ 18ರಲ್ಲಿ ಜಪಾನಿನ ಟೋಕಿಯೊ ಪಟ್ಟಣದಲ್ಲಿ ಆಕಸ್ಮಿಕ ಬೆಂಕಿಬಿದ್ದು ಅಲ್ಲಿಯ ಪಾರ್ಲಿಮೆಂಟ್ ಸಭೆಯ ಕಟ್ಟಡವೂ ಅದರಲ್ಲಿದ್ದ ಪುಸ್ತಕ ಭಂಡಾರವು ನಾಶವಾಗಿ ನೂರಾರು ಒಂದು ಮಿಲಿಯಯನ್ ನಷ್ಟವಾಗಿದೆ. ಮರುದಿನ ಪುನಹ ಟೋಕಿಯೊಗಾವ ರಾಜಕುಮಾರರ ಒಂದು ಮಿಲಿಯಯೆನ್ ಬೆಲೆಯ ಅರಮನೆಯು ಇನ್ನೊಂದು ಬೆಂಕಿಯಿಂದ ಸುಡಲ್ಪಟ್ಟಿತು

ಅಮೇರಿಕಾದ ಜಾನ್ಸ್ ಬರ್ಗನ ಚ್ಯಾಂಪಿಯನ್ ಎಂಬಲ್ಲಿ ಕೂಲಿ ಕೆಲಸಮಾಡುತ್ತಿದ್ದ ಅತ್ಯಂತ ಬಡ ಹುಡುಗನಿಗೆ ಒಂದು ಬೆಲೆಯುಳ್ಳ ವಜ್ರವು ದೊರೆತು ತನ್ನ ತಂದೆಗೆ ಕೊಟ್ಟಲ್ಲಿ, ತಂದೆಯು ಆ ವಜ್ರವನ್ನು 30ಸಾವಿರರೂಪಾಯಿಗೆ ಮಾರಿ ಒಂದು ಗ್ರಾಮವನ್ನು ಒಂದು ಮೋಟಾರು ಕಾರನ್ನೂ ಕೊಂಡುಕೊಂಡು ಸಂತೋಷದಿಂದ ಸಂಸಾರ ನಡಿಸುತ್ತಿರುವನು ದೈವತಂತ್ರವನ್ನು ಕಂಡವರ್‍ಯಾರು!

ಇಟಲಿಯ ಒಬ್ಬ ಇಂಜನೀಯರು ಗೋಧಿರೊಟ್ಟಿಯ ಸಾದಿದ ಹಿಟ್ಟಿನಿಂದ ಅಮಲು ಪದಾರ್ಥವನ್ನು ತೆಗೆಯುವ ಉಪಾಯವನ್ನು ಕಂಡುಹಿಡಿದಿರುವರಂತೆ ಈ ಉಪಾಯವನ್ನು ಜರ್ಮನಿಯ ದೊಡ್ಡದೊಂದು ಬೇಕರಿಯಲ್ಲಿ ಜಾರಿಗೆ ತಂದಿರುವರು. ಜರ್ಮನಿಯ ಎಲ್ಲಾ ಬೇಕರಿಗಳಲ್ಲಿ ಈ ಏರ್ಪಾಡನ್ನು ನಡಿಸಿದರೆ ಆ ದೇಶಕ್ಕೆ ಬೇಕಾಗುವ ಅರ್ಧ ನಿಶಾ ಪದಾರ್ಥವನ್ನು ಬೇರೆ ಯಾವ ಖರ್ಚಿಲ್ಲದೆಯೇ ಮಾಡಿಕೊಳ್ಳಬಹುದಂತೆ!

ನೋಟೀಸು.

ನನ್ನ ಸೈಕಲ್ ಲಾಟರಿಯು ಅಕ್ಟೋಬರ್ ತಿಂಗಳು 6ನೇ ಮಂಗಳವಾರ ದಿನ 4½ ಗಂಟೆಗೆ ಅಮ್ಮತ್ತಿಯಲ್ಲು ಹಾಕಲ್ಪಡುವುದು ಸದ್ರಿ ದಿನ ಟಿಕೇಟು ಪಡೆದುಕೊಂಡವರು ದಯವಿಟ್ಟು ಬರಬೇಕಾಗಿ ನನ್ನ ಕೋರಿಕೆ

ಎಸ್. ಎನ್. ಮೇದಪ್ಪ,
ಕಣ್ಣಂಗಾಲ,
1 ಅಮ್ಮತ್ತಿ

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ ಸಂ

ದೇಶೀಯ ಯುವಕರ ಹಿತಚಿಂತಕರಲ್ಲಿ ಒಂದು ವಿನಂತಿ.

ಮಹನೀಯರೆ,

ಕೆಲವು ವಾರಗಳ ಹಿಂದಿನ ಪತ್ರಿಕೆಯಲ್ಲಿ ಸ್ಕೌಟು ದಳದ ವಿಷಯವನ್ನು ಓರ್ವ ಪುಣ್ಯಾತ್ಮರು ಕೆಲವು ಮಟ್ಟಿಗೆ ವಿವರಿಸಿ ಬರೆದಿದ್ದರು ಒಂದಾನೊಂದು ಕಾಲದಲ್ಲಿ ನಾನೂ ಸಹ ಸ್ಕೌಟಾಗಿದ್ದೆನು ಆ ಕಾಲದಲ್ಲಿ ನಾವು ಮತ್ತು ನಮ್ಮ ಅಧಿಕಾರಿಗಳು ಅಲ್ಲಲ್ಲಿ ನಡೆಸಿದ ಕಾರ್ಯಕ್ರಮಗಳನ್ನೂ, ಮಾಡಿದ ಉಪಕಾರಗಳನ್ನೂ, ಸಾಧಿಸಿದ ಸಾಹಸ ಕೃತ್ಯಗಳನ್ನೂ ಈಗ ನನ್ನ ಹೃದಯದಲ್ಲಿ ಚಿತ್ರಿಸಿ ಈಗಿನ ಸ್ಥಿತಿಯನ್ನು ಅದರೊಡನೆ ಹೋಲಿಸಿದರೆ, ಮುಗುಳುನಗೆಯಿಂದ ಶೋಭಿತಳೂ, ಸರ್ವಾಲಂಕಾರ ಭೂಷಿತಳೂ ಆದ ಒಬ್ಬ ಸುಂದರಿಯು ಕಾಲನಕ್ಕೆಗೆ ಸಿಕ್ಕಿ ಗೋಳಿಡುವ ಎಧವೆಯಂತೆ ಕಾಣುವುದು! ಕಾರಣವೇನು?

ಆ ಕಾಲದಲ್ಲಿ ಸ್ಕೌಟುಗಳ ಧ್ವಜಪತಾಕೆಯು ಯಾವರೀತಿಯಿಂದ ಬಿಸಿಲು ಗಾಳಿಗಳಿಗೆ ಅಂಜದೆ ನರ್ತಿಸುತ್ತಿತ್ತೋ ಹಾಗೆಯೇ ಗುರುತಿಸ್ಥರ ಮನಸ್ಸು ಆಹ್ಲಾದಿಸುತ್ತಿತ್ತು. ಮಿ ಡಾಸನ್ ಸಾಹೇಬರವರು ಸುಮಾರು 350ರೂಪಾಯಿ ವೆಚ್ಚಮಾಡಿ ತರಿಸಿದ ಆ ಯೂನಿಯನ್ ಜಾಕ್ ಗದ್ದಲು ಹಿಡಿಯಿತೋ? ಅದರ ಮೊತೆಯಲ್ಲಿ ಬನ್ನಾಯವದೆಲ್ಲಾ ಯಮಪುರಿಗೈದಿತು! ಸರಕಾರದವರು ದೇಶೀಯ ಯುವಕರಿಗೆ ಬೇಕಾದ ವಿದ್ಯೆ ಮಾತ್ರವಲ್ಲದೆ ದೇಹಾರೋಗ್ಯ ಮತ್ತು ದೇಶಾಭಿಮಾನವು ಹುಟ್ಟುವಂತೆ ಈ ದಳವನ್ನು ಇಲ್ಲಿ ನಡೆಸಲು ಬಹಳ ವ್ಯಯ ಮಾಡಿದರು. ಏನು ಫಲವಾಯಿತೇನು?

ಮೊದಲಿನ ಮುಖ್ಯೋಪಾಧ್ಯಾಯರು ದಯೆಗೆಯ್ದು ಸ್ಕೌಟುಗಳಿಗೆ ಕೊಟ್ಟಿದ್ದ ಕೋಣೆಯೂ ಅದರ ಸಲಕರಣೆಗಳೂ, ಅಲ್ಲಿ ನಡೆಯುತ್ತಿದ್ದ ಜರ್ನಬೋಧನೆ ಮೊದಲಾದುವುಗಳೂ ಈಗ ಮಗ್ಗೆ ತೊಡರಿ ಯಾವ ದಾರಿಯು ಸ್ಕೌಟುಉದ್ಯೋಗಸ್ಥರಾಗಲೀ ವಿದ್ಯಾರ್ಥಿಗಳಾಗಲೀ ದಬುವ ಶಕ್ತಿ ನಿರಿಯಲಿಕ್ಕಿಲ್ಲ

ಸದ್ಯ ಇದಕ್ಕೆ ಪುನರ್ಜನ್ಮವನ್ನೀಯಲು ಒಂದು ದೊಡ್ಡ ತೊಡಕು ಶಾಲೆಯಲ್ಲಿರುವದನ್ನು ತಿಳಿದೇ ಇದರ ಪ್ರೋತ್ಸಾಹಕರು ಮುಂದಕ್ಕೆ ಸುಸಮಯ ಒದಗುವುದೆಂದು ಕೈ ಕಟ್ಟಿರಬಹುದು. ಇದರ ಅಡಚಣೆ ಏನು ?

ಸರಕಾರದವರು ಮೆ· ಕೋಡಿರ ಉತ್ತಯ್ಯನವರನ್ನು ಮೆ. ಬಲ್ಯಾಟಂಡ ಚಂಗಪ್ಪನವರನ್ನೂ ಸ್ಕೌಟುದಳದ ತರಬೇತಿಗಾಗಿ ಮದ್ರಾಸಿಗೆ ಕಳುಹಿಸಿದರು. ಇವರ ತರಬೇತಿನ ಫಲವೇನು?

ಮಡಿಕೇರಿಯ ಈ ದಳವು ಬಹಳ ಚೆನ್ನಾಗಿದ್ದದರಿಂದ ಎರಡು ಸಲ ಸರಕಾರದವರೇ ಇಲ್ಲಿಯ ಸ್ಕೌಟುಗಳನ್ನು ಮದರಾಸಿಗೆ ಕರೆಯಿಸಿಕೊಂಡರು. ಈಗಿನ ವಿದ್ಯಾರ್ಥಿಗಳಿಗೆ ಈ ಪುಣ್ಯವಿರುವದೇನು ? ಮೆ. ಚಂಗಪ್ಪನವರು ಹೋದಮೇಲೆ ಮೆ. ಪಿ ಸಿ ಉತ್ತಯ್ಯನವರು ಒಂದು ಈ ಕಾರ್ಯವನ್ನು ತೃಪ್ತಿಕರವಾಗಿಯೂ ದೇಶೀಯರ ಮನ ಮೆಚ್ಚುವಂತೆಯೂ ಒಗಿಸಿದರು. ಆ ಸಮಯದಲ್ಲಿ ಸ್ಕೌಟುಗಳ ಸಂಖ್ಯೆ ಎಷ್ಟು? (Excursion) ಪರಸ್ಥಳಗಳಿಗೆ ಹೋಗುವುದಕ್ಕೆ ಮೆ ಸ್ಲಿಮಕ್ಕಳ ಚಂಗಪ್ಪನವರೂ ಸಹ ಈ ವಿಷಯದಲ್ಲಿ ತೆಗೆದ ಕೊಂಡ ಶ್ರಮವನ್ನು ವರ್ಣಿಸುವುದು ಅಸದಳ. ಈ ರೀತಿಯಲ್ಲಿರಲು ಕಾರಣವೇನು ?

ಆಗಿನ ಮುಖ್ಯ ಉಪಾಧ್ಯಾಯರಾದ ಮೆ ಪ್ರೀಯರ್ಸ್ ಸಾಹೇಬರವರು ಪಾಠಗಳಲ್ಲಿಮಾತ್ರವಲ್ಲದೆ ಅಷ್ಟೇ ಆವಶ್ಯಕವಿರುವ ಆಟಕೂಟಗಳಲ್ಲಿಯೂ ಬಾಲಕರೊಡನೆ ಕೂಡಾಡುತ್ತಿದ್ದರು. ಅವರೊಡನೆ ಒಂದೆರಡು ರಾತ್ರಿ ಬೆಟ್ಟದಲ್ಲಿ ಗುಡಿಸಲು ಕಟ್ಟಿಕೊಂಡು ವಿಹರಿಸಿದ್ದು ನನಗೆ ಈಗಲೂ ಜ್ಞಾಪಕವಿದೆ. ಆದರೆ ಮುಖ್ಯ ಉಪಾಧ್ಯಾಯರು ಈಗಲೋ ? ಆಟಕೂಟಗಳ ಮಾತಿರಲಿ ದರೆ ನಿಮಗೆ ಪಂದ್ಯಾಟಗಳೇ ಉಚಿತು ಪರೀಕ್ಷೆಯ ಜ್ಞಾಪಕವೆ ಇಲ್ಲ, ಒಂದು ಹೇಳಿ ಅದರ ಅಕಯ ಪೇರನ್ನು ಸಹ ಕಿತ್ತು ಒಣಗಿಸಿ ಬಿಡುವರಂತೆ ವಿದ್ಯಾರ್ಥಿಗಳ ಮಾತು ನಿಜವೇನು ?

ಇಂಗ್ಲೆಂಡಿನಲ್ಲಿ ಉಪಾಧ್ಯಾಯರು ಹೀಗೆ ನುಡಿದಿದ್ದರೆ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಏನನ್ನುತ್ತಿದ್ದರೆಂಬುದು ಮೆ. ಬಿ. ಎಸ್. ಕುಶಾಲಪ್ಪನವರಿಂದ ಕೇಳಲು ಕುತೂಹಲವಿರುವುದು.

ಆ ಮೇಲೆ ಮೆ ಪಟ್ಟಮಾಡ ಪೂವಯ್ಯನವರು ಈ ಕಾರ್ಯಕ್ಕೆ ಕೈ ಹಚ್ಚಿದರು ಇದರಲ್ಲಿ ಅವರಿಗೆ ಒಳ್ಳೆಯ ಉತ್ಸಾಹವಿತ್ತು. ಇವರು ಸರಕಾರದವರಲ್ಲಿ ಅರಿಕೆಮಾಡಿಕೊಂಡು ಹೊಸ ಬೋರ್ಡಿಂಗಿನ ಹತ್ತಿರ ಕಟ್ಟಿಸಿದ ಖಾಲಿಯಾದ ಆಸ್ಪತ್ರೆಯ ಕಟ್ಟಡವನ್ನು ಸ್ಕೌಟು ರೂಮಾಗಿ ಮಾಡಿದರು ಇದನ್ನು ಅಲಂಕರಿಸಿದ್ದನ್ನು ಆಗನೋಡಿದರೆ ಎಷ್ಟೊಂದು ಸಂತೋಷವಾಗುತ್ತಿತ್ತು. ಆ ಕಾಲದಲ್ಲಿ ಸ್ಕೌಟುಗಳು ಒಂದು ನಾಟಕ ಮಾಡಿದರು. ಇದರಿಂದ ಅವರಿಗೆ ಸುಮಾರು 250 ರೂಪಾಯಿಗಳು ಸಿಕ್ಕಿದುವು. ಅದನ್ನು ಸ್ಕೌಟುಗಳ ಉಡುಪಿಗೂ ಉಪಯೋಗಿಸಿದರು. ಮುಂದಿನ ಜನಾಂಗವು ಮುತ್ಸದ್ದಿಗಳಾದರೆ ಮಾತ್ರ ಸಾಲದು. ಕಾಯಪುಷ್ಟಿ ಇರುವವರಾಗಬೇಕು ಎಂದು ತಿಳಿದಿರುವ ದೇಶಾಭಿಮಾನಿಯರಲ್ಲಿಯೂ ಮತ್ತು ಈಗಿನ ಮುಖ್ಯೋಪಾಧ್ಯಾಯರಲ್ಲಿಯೂ ನನ್ನ ವಿನಂತಿ.

" ಹಳೇ ಸ್ಕೌಟು "

ವಿರಾಜಪೇಟೆ ಸಂತೆಯನ್ನು ಬದಲಾಯಿಸುವದರಿಂದ ಉಂಟಾಗುವತೊಂದರೆಗಳು—

ಅಯ್ಯಾ,

ವೀರಾಜಪೇಟೆ ಸಂತೆಯು ಬುಧವಾರವಾಗುದರಿಂದ ನಾಡಿನ ಮತ್ತು ಪಟ್ಟದ ಜನರಿಗೆ ಉಂಟಾಗುವ ನಷ್ಟವೇನೆಂದರೆ— ಸಿದ್ದಾಪುರದಿಂದ ಬರುವ ಹೊಸ ತರಕಾರಿ ವಗೈರೆ ಸಿಕ್ಕುವದಿಲ್ಲವೆಂತಲೂ ನಾಡಿನ ಪಟೇಲರಿಗೆ ವರ್ದಿಕೊಡುವದಕ್ಕೆ ಬುಧವಾರ ಹೋಗಬೇಕೆಂತಲೂ ಕೆಲಸಕ್ಕೆ ಅಡಚಣೆಯಾಗುತ್ತದೆಂತಲೂ, 2 ದಿನ ಅರ ಕಟ್ಟದೆ ಬಾಕಿಯಾಗುತ್ತದೆಂತಲೂ ಈ ಮೇಲ್ಕಂಡ ತೊಂದರೆಗಳಿಗೋಸ್ಕರ ಸಂತೆಗಳನ್ನು ಬದಲಾಯಿಸಬೇಕೆಂತ ನಮ್ಮ ನಾಡಿನವರು ಸರಕಾರಕ್ಕೆ ಅರ್ಜಿ ಬರೆದ ಸುದ್ದಿಯನ್ನು ಕೇಳಿ ನಾವು ತುಂಬ ವ್ಯಸನಪಡಬೇಕಾಗಿದೆ ಯಾಕಂದರೆ, ಬುಧವಾರ ವೀರಾಜಪೇಟೆಯಲ್ಲಾಗುವ ಸಂತೆಯು ಸೋಮವಾರ ಆದದ್ದೇಯಾದರೆ ಮಡಿಕೇರಿ ಸಂತೆಯು ಕ್ಷೀಣ ಸ್ಥಿತಿಗೆ ಹೋಗುವದರಲ್ಲಿ ಯಾವ ಸಂದೇಹವೂ ಇಲ್ಲ. ಯಾಕಂದರೆ ಸೋಮವಾರ ಮಡಿಕೇರಿ ಸಂತೆಗೆ ಬರುವ ಸಾಮಾನುಗಳು ಒಟ್ಟು, ಎಣ್ಣೆ, ತೆಂಗಿನಕಾಯಿ, ವಗೈರೆ ಸಾಮಾನುಗಳು ಆದಿತ್ಯವಾರ ದಿವಸ ಗೋಣಿಕೊಪ್ಪಲಿಗೆ ವೀರಾಜೇಂದ್ರಪೇಟೆಯಿಂದ ಬಂದು ಮಾರಣೆದಿನ ಮಡಿಕೇರಿಗೆ ಬರುತ್ತಾಯಿದೆ ಮತ್ತು ಮೈಸೂರು ಕಡೆಯಿಂದ ಬರುವ ಸಾಮಾನುಗಳು ಸಹ ಇದೇ ರೀತಿ ಮಡಿಕೇರಿಗೆ ಬರುತ್ತಾಯಿದೆ. ಈ ಸಂತೆಯು ಬದಲಾದ ಪಕ್ಷಕ್ಕೆ ಸೋಮವಾರ, ಮಡಿಕೇರಿಗೆ ಬರುವದರಬದಲು ಸೋಮವಾರದಿನ ಗೋಣಿಕೊಪ್ಪಲಿನಿಂದ ವೀರಾಜಪೇಟೆಗೆ ಹೋಗುತ್ತೆ. ಮಡಿಕೇರಿಗೆ ಈ ಎರಡುಕಡೆಯಿಂದಲ್ಲದೆ ಬೇರೆ ಕಡೆಯಿಂದ ಸಾಮಾನುಗಳು ಬರುವದಿಲ್ಲ. ಹಾಗಾದರೆ ಈ ಯಲ್ಲೆಯಾದ ಮಡಿಕೇರಿಯಲ್ಲಿರುವ2ಯಾ3ಅಂಗಡಿಗಳುಮಾತ್ರಇಷ್ಟುಜನರಿಗೆ ಬೇಕಾದಸಾಮಾನುಗಳನ್ನು ಒದಗಿಸಬಹುದೇ ಇದು ಅಲ್ಲದೆ ಟೀ ತೋಟದಲ್ಲಿರುವ ಸುಮಾರು ನೂರಾರು ಆಳುಗಳು ಮತ್ತು ಶ್ರೀಮಂಗಲನಾಡಿನ ಕುಟ್ಟ, ಕರ್ಚಿ, ಬೀರ್ಗ ಮತ್ತು ಮರೆನಾಡಿನಜನರಿಗೆ ಸಂತೆಯಿಲ್ಲದೆ ಸಾಮಾನುಗಳಿಗೆ ಒಂದೇಕ್ಕೆರಡುತೆತ್ತು ಇನ್ನಷ್ಟು ಗರೀಬರಾಗುವದನ್ನು ದೇಶಾಭಿಮಾನಿಗಳು ಮತ್ತು ಸರಕಾರದವರು ಸಹ ಕಣ್ಣಿನಿಂದ ನೋಡಲೇಬೇಕಾಗುತ್ತೆ. ಒಂದು ವೇಳೆ ಸಂತೆಗಳನ್ನು ಬೇರೆ ದಿನ ಮಾಡುವ ಆದರೆ, ಆದಿತ್ಯವಾರ ಗೋಣಿಕೊಪ್ಪ ಮತ್ತು ಸಿದ್ದಾಪುರದಲ್ಲು, ಸೋಮವಾರ ವೀರಾಜಪೇಟೆಯಲ್ಲು ಮಂಗಳವಾರ ಅಮ್ಮತ್ತಿಯಲ್ಲು, ಮೂರುದಿನ ಜೊತೆಯಲ್ಲೇ ಸಂತೆಯಾಗುವದರಿಂದ ಬುಧವಾರ ದಿವಸ ಮಡಿಕೇರಿ ಸಂತೆಯನ್ನು ಮಾಡುದೆಂದರೆ, ಮೈಸೂರಿನಿಂದ ಬರುವ ಬೆಲ್ಲ, ರಾಗಿ, ಹುರುಳಿ ವಗೈರೆ ಸಾಮಾನುಗಳು ಸಿಕ್ಕುವದು ಬಹಳ ಕಷ್ಟವಾಗಿದೆ. ಮೇಲಾಗಿ ವೀರಾಜಪೇಟೆಯು ಪಟ್ಟಣವಾಗಿಯು ಕೊಡಗಿನ ಮಧ್ಯ ಸ್ಥಳವಾಗಿಯೂ ಇರುವದರಿಂದ ಮಲೆಯಾಳ ಮತ್ತು ಮೈಸೂರುವಗೈರೆ ನಾನಾ ಕಡೆಯಿಂದ ಬರುವ ಸಾಮಾನುಗಳು ವೀರಾಜಪೇಟೆಗೆ ಒಂದು ಒಂದೆರಡುದಿವಸವಾದನಂತರವೆ ಬೇರೆಕಡೆಗಳಿಗೆ ಹೋಗುವದು ಎಲ್ಲರಿಗೂ ಚೆನ್ನಾಗಿಗೊತ್ತಿರುವ ಸಂಗತಿಯಾಗಿದೆ. ಮತ್ತು ವೀರಾಜಪೇಟೆಯಲ್ಲಿ ದಿನನಿತ್ಯವು ಸಂತೆಯ ಹಾಗೆ ಮಾರ್ಕೆಟುಗಳಲ್ಲಿ ಬೇಕಾದ ಸಾಮಾನುಗಳು ಒದಗುತ್ತಿರುವದರಿಂದ ಸೋಮವಾರದಿವಸವೆ ಸಂತೆನಡಿಸಬೇಕೆಂಬ ಯಾವ ಆಗತ್ಯವು ಕಂಡುಬರುವದಿಲ್ಲ ಅಲ್ಲದೆ ಈ ಸಂಗತಿಯು ಕಳೆದ ಮಾರ್ಚಿನಲ್ಲಿ ನಡೆದ ಜಮಾಬಂದಿಯ ಸಾಫಡ ಸಮ್ಮೇಳನದಲ್ಲು ಚರ್ಚೆಗಬಂದು ಈ ಮೇಲ್ಕಂಡತೊಂದರೆಗಳಿಗೋಸ್ಕರ ನಾವು ವಿರೋಧಿಸಿರುತ್ತೇವೆ ಆದುದರಿಂದ ಈ ಸರಕಾರದವರು ಕೌನ್ಸಿಲು ಮೆಂಬರುಗಳು ಮತ್ತು ದೇಶಾಭಿಮಾನಿಗಳು ಸಹ ಮೇಲ್ಕಂಡತೊಂದರೆಗಳಿಗೆ ಆಸ್ಪದ ಕೊಡದಹಾಗೆ ಸಂತೆಯನ್ನು ಮಾಮೂಲಿನಂತೆ ಇಡಬೇಕಾಗಿ ಶ್ರೀಮಂಗಲನಾಡಿನವರಾಗಿ ನಾನು ಪ್ರಾರ್ಥಿಸುತ್ತೇನೆ.

ಸಿ. ಕೆ.

ಜಮ್ಮ.

ವಾಚಕ ಮಹಾಶಯರೇ,

'ಲೋಕಪಾವನ'ದ ಸಂಚಿಕೆಗಳಲ್ಲು ಜಮ್ಮದ ಭೂಮಿ ಸಂಗತಿಯಾಗಿ ಬರೆದ ಲೇಖನಗಳನ್ನು ನೋಡಿದೆನು. ಅದರಲ್ಲು ಹೇಳುವ ಸಂಗತಿಗಳೆಲ್ಲಾ ಪುರಾತನದ ಜಮ್ಮ ಭೂಮಿಯ ನಿರೂಪ ಹೊಂದಿರುವ ಪ್ರತಿ ಮನುಜನವರಿಗೆ ತಿಳಿದ ಸಂಗತಿಯಾಗಿದೆ. ಆದರೆ ಮಾಡುವದೇನು ? ನಮಗಿಂತ ಮುಂದೆ ಇದ್ದ ಈಗಲೂ ಇರುವಾದ ಕೆಲವು ದೇಶಾಭಿಮಾನಿಗಳು ಸರಕಾರದವರ ಸಂಗಡ ಹೊಡೆದಾಡಿ ನಮ್ಮ ನಿರೂಪದಲ್ಲು ಹೇಳುವ ಹಕ್ಕನ್ನೆಲ್ಲಾ ಪಡೆಯುತ್ತೇವೆಯಾಗಿ ದೇಶೀಯರಿಂದೆಲ್ಲಾ ಚಂದಾ ಎತ್ತಿದ ವಿಷಯ ಈ ಲೇಖಕನಿಗೆ ಗೊತ್ತಿರುವ ಸಂಗತಿಯಾಗಿದೆ ಸದರಿ ಹಣವೆಲ್ಲಾ ಕಾಫಿತೋಟದ ಮೂಳೆ ಗೊಬ್ಬರಕ್ಕೆ ಹೋಯಿತೆಂದು ದೇಶದಲ್ಲೆಲ್ಲಾ ಗಲಬೆ ಹುಟ್ಟಿದ ಸಂಗತಿಯೂ ಬಲ್ಲೆ. ಆಗ್ಗೆ ಉದ್ಯೋಗಸ್ಥರಾಗಿದ್ದ ಮುಂದಾಳುಗಳುಸರಕಾರದವರಲ್ಲು ಹೋರಾಡುವದರವಾಜು ಅವರಮಾತಿಗೆ ಮರುಳಾಗಿ, ನಿರೂಪದಲ್ಲಿ ಇಲ್ಲದ ಹಿಟ್ಟಿ ಬಟ್ಟಿ ಗಂಧದಮರ, ತ್ಯಾಗದಮರ, ಭೂಮಿಯ ಕೆಳಗೆ ಇರುವ ಕಲ್ಲು ಸಮೇತ ಸರಕಾರದವರ ಹಕ್ಕೆಂಬ ಸರಕಾರದ ವಾದಕ್ಕೆ (ದೂರಿಯಾಡೋ ಬಸವಣ್ಣ ದೂರಿಯಾಡೋ ಎಂಬಂತೆ) ತಲೆತೂಗಿಸಿ ಒಪ್ಪಿಕೊಂಡು ದೇಶೀಯರ ಹಕ್ಕುಗಳಿಗೆ ಕಂಟಕರಾದರು ಇನ್ನೂಂದಾವರ್ತಿ ಕೊಡಗು ನ್ಯಾಯ ವಿಧಾಯಕ ಸಭೆಗೂ, ಮತ್ತು ಸದ್ಯದಲ್ಲು ಇಂಡಿಯಾಕ್ಕೆ ಬರಲಿಕ್ಕಿರುವ ಭರತ ಚಕ್ರವರ್ತಿಯವರ ಭೇಟಿಗೂ ಮೇಲ್ಕಂಡ ಬಸವಣ್ಣನಂತವರನ್ನು ದೇಶೀಯರು ಚುನಾಯಿಸಿದ್ದೇ ಆದರೆ ದೇಶವು ಇನ್ನೂ ಹಾಳಾಗುವುದರಲ್ಲಿ ಸಂದೇಹವು ಇರಲಾರದು.

ಜಮ್ಮ ಹಿಡುವಳಿ ನಿರೂಪದ ಸಂಗತಿಯಾಗಿ ಬರೆಯುವ ಮಹನೀಯರೇ, ಇತ್ತಲಾಲಿಸಿ ನಿರೂಪದಲ್ಲು ನಿನಗೂ, ನಿನ್ನ ಪುತ್ರ, ಪವುತ್ರ, ಪಾರಂಪರ್ಯದವರಿಗೆ ಎಂದಿರುವದು ಈ ಲೇಖಕನಲ್ಲಿರುವ ನಿರೂಪದಲ್ಲು ಇದೆ ಈ ದೇಶದ ಜಮ್ಮ ಹಿಡುವಳಿದಾರರಾದ ಮಾಪಿಳ್ಳೆಯರ ನಿರೂಪದಲ್ಲು ನಿನ್ನ ಪುತ್ರ, ಪುತ್ರಿ, ಪವುತ್ರ, ಪವುತ್ರಿ, ಪಾರಂಪರ್ಯದವರಿಗೆ ಎಂದಿದೆಯೇನು ? ನಮ್ಮ ಕೊಡಗು ರಾಜ್ಯಕ್ಕೆ ವಿರೋಧವಾಗಿ ಕನ್ನಡಾ ಜಿಲ್ಲೆ, ಮಲೆಯಾಳ ಜಿಲ್ಲೆಗಳಿಂದ ಬಂದ ಮಾಪಿಳ್ಳೆಯರಿಗೆ ಜಮ್ಮಗಾರ ಮಾಪಿಳ್ಳೆಯ ಹೆಣ್ಣುಮಕ್ಕಳನ್ನು ಕೊಟ್ಟು ಆ ಹೆಣ್ಣುಮಕ್ಕಳಿಗೆ ಜಮ್ಮದ ಭೂಮಿಯನ್ನು ಮಹಮ್ಮದಿ ಲಾದ ಮೇರೆ ಪಾಲುವಂತಿಗೆ ಕೊಟ್ಟರೆ ಆ ವರಿಗೂ ಸಹ ಜಮ್ಮದ ಹಕ್ಕು ಆಯದ (Arms Act) ಕೋವಿ ಹಿಡಿಯುವ ಹಕ್ಕು, ಮತ್ತು ಆಫಕಂದಾಯದ ಹಕ್ಕು ಇದೆಯೇ ? ಈ ಕಳೆದ ಸರ್ವೆಸೆಟ್ಲ್‌ಮೆಂಟಿನಲ್ಲು ಅಮ್ಮತ್ತಿನಾಡು ಬಿಳುಗುಂದ ಗ್ರಾಮದ ಮುಕ್ರಿಯ ನಾ ಬಹಗೀರ್‌ದಾರರ ನಿರೂಪದಲ್ಲು ನಿನಗೂ ನಿನ್ನ ಪುತ್ರ ಪವುತ್ರರವರೆಗೆ ಜಹಗೀರಾಗಿ ಅನುಭವಿಸಿ ಬರುವದೆಂಬದಾಗಿ ಇದ್ದುದರಿಂದ 3ತಲೆ ತೀರಿದರಿಂದ ಜಹಗೀರ್ ವಜಾಮಾಡಿ ಸಾಗಿನಂತೆ ಮಾಡಿರುವಾಗ್ಯೆ, ಪುತ್ರಿಪವುತ್ರಿಯೆಂದಿಲ್ಲದ ನಿರೂಪದ ಜಮ್ಮವನ್ನು ಯಾಕೆ ಸಾಗಿನಂತೆ ಮಾಡಿರುವದಿಲ್ಲವೆಂಬದು ಗೊತ್ತಾಗುವದಿಲ್ಲ. ಪರದೇಶದಿಂದ ಮರಾಟಕ್ಕೆ ಬರುವ ಜಿನಸುಗಳು ಸಹ ಸುಂಕ ವಸೂಲಾತ್ತಿ ದೇಶಕ್ಕೆ ಆದಾಯವಹುತ್ತಿರುವಾಗ ಪರದೇಶದಿಂದ ಬಂದು ಜಮ್ಮದ ಭೂಮಿಯನ್ನನುಭವಿಸುವವರಿಗೆ ಯಾಕೆ ಸಾಗಿನ ಕಂದಾಯ ವಿಧಿಸಿ ದೇಶೀಯರಿಗೆ ಆದಾಯ ತೋರಿಸಲು ಸರಕಾರದವರು ಮತ್ತು ಕೊಡಗು ನ್ಯಾಯ ವಿಧಾಯಕ ಸಭೆಯವರು ಆಲೋಚಿಸುವದಿಲ್ಲವೆಂದು ಗೊತ್ತಾಗುವದಿಲ್ಲ.

ದೂರದೃಷ್ಟಿ

ಯರವ ಮತ್ತು ಕುರುಬರಿಗೆ ಶಾಲೆ.

ಶಾಲಾ ಸ|| ಅ|| ಇನಾಸ್ಪೆಕ್ಟರವರ ಹುಕುಂ ಮೇರೆ ಇದೇ ಸಪ್ಟಂಬರ್ ತಾರೀಖು 1ನೆ ಮಂಗಳವಾರದಿನ ಹ 11ಘಂಟೆಗೆ ತಿತಿಮತಿಯಲ್ಲಿ ಕುರುಬರ ಮತ್ತು ಯರವರ ಮಕ್ಕಳ ಸ್ಕೂಲ್ ತೆರೆಯುವದರಿಂದ ತಾವುಗಳೆಲ್ಲರೂ ದಯಮಾಡಿಸಬೇಕೆಂದು ಈ ಗ್ರಾಮದ ಮಹನೀಯರಿಗೂ, ಸ್ಕೂಲ್ ಪಂಚಾಯತರಿಗೂ ಮಕ್ಕಳ ಪೋಷಕರಿಗೂ ಸಹ ಈ ಶಾಲೆಯ ಮಾಸ್ಟರು 2 ದಿವಸಕ್ಕೆ ಮುಂದಾಗಿ ಆಮಂತ್ರಣವನ್ನು ಕಳುಹಿಸಿದ್ದ ಮೇರೆ ಸಮಯಕ್ಕೆ ಸರಿಯಾಗಿ ಗ್ರಾಮದ ಕೆಲವು ಮಹನೀಯರೂ, ಸ್ಕೂಲ್ ಪಂಚಾಯತರೂ, ಮಕ್ಕಳ ಪೋಷಕರೂ ಮತ್ತು ತಿತಿಮತಿ ರೇಂಜರರೂ, ಅವರ ಆಫೀಸು ಉದ್ಯೋಗಸ್ಥರೂ ಸಹ ದಯಮಾಡಿಸಿದ್ದರು.

ಸ್ಕೂಲು ಪಂಚಾಯತರ ಏರ್ಪಾಡಿನ ಮೇರೆ ಸ್ಕೂಲು ಕಟ್ಟೋಣದ ಒಳಗೆ ಬ್ರಾಹ್ಮಣನಿಂದ ಒಂದು ಗಣಪತಿ ಹೋಮವನ್ನು ಹಾಕಿಸಿ ಅಲ್ಲಿ ಕೂಡಿದ್ದ ಜನರಿಗೆಲ್ಲಾ ತೀರ್ಥಪ್ರಸಾದವನ್ನು ಕೊಡಿಸಿದ ಮೇಲೆ ನಮ್ಮ ಘನಹೊಂದಿದ ಚಕ್ರವರ್ತಿ ಚಕ್ರವರ್ತಿನಿಯವರ ಫೋಟೋವನ್ನು ಶಾಲೆ ಒಳಗೆ ಯೋಗ್ಯ ರೀತಿಯಲ್ಲಿ ಇರಿಸಿ ಶಾಲೆಯ ಬಾಗಿಲನ್ನು ಬಟ್ಟೆಯಿಂದ ಮುಚ್ಚಿದರು.

ಅನಂತರ ಮೆ. ಪಿ ಟಿ ಕುಶಾಲಪ್ಪ ಎಂ ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಮೀಟಿಂಗು ನಡೆಯಿತು

ಸ್ಕೂಲು ಮಾಸ್ಟರು ಅಧ್ಯಕ್ಷರ ಅಪ್ಪಣೆ ಮೇರೆ ಹೊಸ ಸ್ಕೂಲು ತೆರೆಯುವ, ಹುಡುಗರನ್ನು ಒಟ್ಟುಮಾಡುವ ವಗೈರೆಯಾದ ಮುಂದಿನ ಕರ್ತವ್ಯವನ್ನು ಕುರಿತು ವಿವರಿಸಿ ಹೇಳಿದರು.

ಅಧ್ಯಕ್ಷರು, ನಮ್ಮ ಘನ ಸರಕಾರವು ಹಿಂದುಳಿದ ಪಂಗಡವಾದ ಕುರುಬ ಯರವರ ಮಕ್ಕಳಿಗೆ ವಿದ್ಯೆಕೊಟ್ಟು ಅವರನ್ನು ಮುಂದಕ್ಕೆ ತರಬೇಕೆಂದು ತಮ್ಮ ಕರುಣೆಯನ್ನು ತೋರಿಸುತ್ತಾ ಇದ್ದಾರೆಂದೂ, ಇದಕ್ಕೆ ಈಗ ತೆರೆಯುವ ಸ್ಕೂಲೇ ದೃಷ್ಟಾಂತರವಾದೂ, ಇದನ್ನು ನಾವುಗಳೆಲ್ಲರೂ ಸೇರಿ ಅಭಿವೃದ್ಧಿಗೆ ತರುವ ಯೋಚನೆಯಲ್ಲೇ ಇರಬೇಕೆಂದೂ, ಇಲ್ಲಿ ನೆರೆದ ಸಭಿಕರಲ್ಲಿ ಅವರವರ ತಾಬೆಯಲ್ಲಿರುವ ಯರವ ಕುರುಬರ ಮಕ್ಕಳನ್ನು ಶಾಲೆಗೆ ಕಳುಹಿಸಿ ಕೊಡಬೇಕೆಂದು ಮುಂತಾಗಿ ಒಳ್ಳೆ ಸ್ವಾರಸ್ಯವಾದ ಭಾಷಣ ಮಾಡಿದರಲ್ಲದೆ ವಿದ್ಯಾರ್ಥಿಯರಿಗೂ, ಅವರ ಪೋಷಕರಿಗೂ ಸಹ ಸಾಂಗವಾಗಿ ಉಪನ್ಯಾಸವನ್ನು ಕೊಟ್ಟು ಸಿದ್ಧಿವಿನಾಯಕನ ಸ್ತೋತ್ರವನ್ನು ಹೇಳುತ್ತಾ ಹೋಗಿ ಸ್ಕೂಲು ಬಾಗಲನ್ನು ತೆರೆದರು.

ಸ್ಕೂಲು ಬಾಲ ಬಾಲಕಿಯರು ದೇವರಪ್ರಾರ್ಥನೆ, ಮಂಗಳ ಪದ್ಯ ವಗೈರೆಯನ್ನು ಹೇಳಿಕೊಂಡು ಒಳಗೆ ಪ್ರವೇಶಿಸಿ ಇರಿಸಿದ್ದ ರಾಜ ರಾಣಿಯವರ ಫೋಟೋಗಳಿಗೆ ಶರಣು ಮಾಡಿದರು.

ಈ ದಿನ ನಡಿಸಿದ ಈ ಸುಕಾರ್ಯವು ದೇವರ ದಯದಿಂದ ಸಾಸ್ವಿತವಾಗಲೆಂದು ಹೇಳಿ ಎಲ್ಲರೂ ಕೈಚಪ್ಪಾಳೆಯಿಂದ ಜಯ ಘೋಷಮಾಡಿ ಮೀಟಿಂಗನ್ನು ಮುಕ್ತಾಯ ಮಾಡಿದರು.

ನೆರೆದಿದ್ದ ಜನರೆಲ್ಲರೂ ಫಲಾಹಾರ ತಾಂಬೂಲಾದಿಗಳನ್ನು ಸ್ವೀಕರಿಸಿ ತೆರಳಿದರು.

ಹಾಜರಿದ್ದವ.

ಕೊಡಗು ಯಾರ ದೇಶ ?

" ಕೊಡಗು ಕೊಡಗರ ದೇಶ ನಾನು ಕೊಡಗನ ಮಗ, ನಾವು ನಮ್ಮ ಕೈಯನ್ನು ಹಿಂದಕ್ಕೆ ಒಡ್ಡಬೇಕೇ ಹೊರತು ಮುಂದಕ್ಕೆ ಕೊಡಬಾರದು. ಅಂದರೆ ನಾವು ಯಾವಾಗಲೂ ಮುಂದಕ್ಕೆ ಹೋಗಬೇಕು. ಬಾಕಿಯವರನ್ನು ಬೇಡವೆಂದು ಹೇಳುವುದಿಲ್ಲ· ನಮ್ಮ ಹಿಂದೆ ಅವರು ಬರಲಿ, ನಮ್ಮ ಮುಂದೆ ಹೋಗಲಿಕ್ಕೆ ಬಿಡಬಾರದು " ಎಂದು ಮೊದಲಾಗಿ ರಾವ್ ಬಹದ್ದೂರ್ ಕುಟ್ಟಯ್ಯನವರು ಕೈಲು ಪೊಳದು ದಿನ ಕೊಡಗು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್, ಪೋಲೀಸು ಸುಪರಿಂಟೆಂಡೆಂಟ್ ಮತ್ತು ಅನೇಕ ಸರಕಾರಿ ಉದ್ಯೋಗಸ್ಥರ ಮುಖದ ಮುಂದೆ ಒತ್ತಿ ಒತ್ತಿ ಹೇಳಿದರಂತೆ ರಾ. ಬಾ. ಕುಟ್ಟಯ್ಯನವರು 'ಈ ಅಭಿಪ್ರಾಯಗಳನ್ನು ತನ್ನ ಉತ್ತೇಜನದಿಂದ ನಡಿಸಲ್ಪಡುವ 'ಲೋಕಪಾವನ' ಪತ್ರಿಕೆಯಲ್ಲಿ ಪ್ರಕಟಪಡಿಸಿದ್ದಕ್ಕೆ ಕೊಡಗೇತರರು ಅವರನ್ನು ಎಷ್ಟು ವಂದಿಸಿದರೂ ಸಾಲದು ಇನ್ನು ಮುಂದೆಯೂ ರಾ. ಬಾ. ಕುಟ್ಟಯ್ಯನವರು ಕೊಡಗೇತರರನ್ನು ಮುಂದುವರಿಯುವಂತೆ ಮಾಡುತ್ತಿರುವ ಪ್ರಯತ್ನಗಳನ್ನು ಕೊಡಗೇತರರಾದ ನಮಗೆ ಕಾಲೋಚಿತವಾಗಿ ತಿಳಿಸಬೇಕೆಂದು ನಾವು ಅವರನ್ನು ಬೇಡಿಕೊಳ್ಳುವೆವು

ರಾ ಬಾ ಕುಟ್ಟಯ್ಯನವರ ಭಾಷಣಕ್ಕೆ ಕೊಡಗೇತರರು ಭೀತಿಪಡಬೇಕಾದದ್ದಿಲ್ಲ. ಈಗ ಅವರ ಕೈಯಲ್ಲಿ ಕೊಡಗೇತರರನ್ನು ನಾಶಪಡಿಸಲಿಕ್ಕೆ ಸಾಕಷ್ಟು ಅನುಕೂಲಗಳು ಇರುವಂತೆ ಕಂಡ ಬರುವದಿಲ್ಲ. ಆದರೆ ಅವರ ಭಾಷಣದಿಂದ ಎರಡು ಮುಖ್ಯವಾದ ವಿಷಯಗಳನ್ನು ತಿಳಿದುಕೊಳ್ಳಬಹುದು. ಅವು ಯಾವುವೆಂದರೆ—(1) ರಾ ಬಾ. ಕುಟ್ಟಯ್ಯನವರು ಬಹು ಕಾ

ಲದ ವರೆಗೆ ಕೊಡಗು ಅಸಿಸ್ಟ್ಯಾಂಟ್ ಕಮೀಷನರಾಗಿದ್ದರು. ಅಸಿಸ್ಟ್ಯಾಂಟ್ ಕಮೀಶನರ ಪದವಿಯು ಒಬ್ಬ ರಾಜನ ಕೈಕೆಳಗಿನ ಮಂತ್ರಿತ್ವಕ್ಕೆ ಸಮಾನ. ಅಸಿಸ್ಟ್ಯಾಂಟ್ ಕಮೀಶನರು ಮೊದಲು ಕೊಡಗು ಕಮೀಶನರಿಗೆ ದೇಶದ ಸ್ಥಿತಿಯನ್ನೂ ಮತ್ತು ದೇಶದ ಆಡಳಿತಕ್ಕೆ ತಕ್ಕ ಏರ್ಪಾಡನ್ನೂ ಸೂಚಿಸುತ್ತಿದ್ದರು. ಅದರಂತೆ ಕಮೀಶನರೂ ನಡೆದುಕೊಳ್ಳುತ್ತಿದ್ದರು. ಆ ಸಮಯದಲ್ಲಿ, ಕೊಡಗೇತರರಮೇಲೆ ಇಷ್ಟು "ಪ್ರೀತಿ"ಯುಳ್ಳ ಕುಟ್ಟಯ್ಯನವರು ಏನು ಅಭಿಪ್ರಾಯಗಳನ್ನು ಕೊಟ್ಟಿರಬಹುದೆಂದೂ ಕೊಡಗೇತರರನ್ನು ಮುಂದುವರಿಸದಂತೆ ಇವರು ಏನೇನು ಉಪಾಯಗಳನ್ನು ಹುಡುಕಿರಬಹುದೆಂದೂ ನಾವು ಸುಲಭವಾಗಿ ಊಹಿಸಿಕೊಳ್ಳಬಹುದು. ಎರಡನೆಯ ವಿಷಯವೇನೆಂದರೆ—ನಮ್ಮ ಹೊಸ'ಲೋಕಪಾವನ'ವು ಇದುವರೆಗೆ ದೇಶದ "ಒಗ್ಗಟ್ಟು" ಬೇಕೆಂದು ಬೊಬ್ಬೆ ಇಡುತ್ತಿತ್ತು. ಆದರೆ "ಲೋಕಪಾವನ"ದ ಬೆನ್ನ ಹಿಂದೆ ನಿಂತು ಅದನ್ನು ಪ್ರತಿ ದಿನವೂ ಮುಂದೆ ನಡೆಸುತ್ತಿರುವ ರಾ. ಬಾ. ಕುಟ್ಟಯ್ಯನವರ ಭಾಷಣದನಂತರ "ಲೋಕಪಾವನ"ಕ್ಕೆ ಹೇಗೆ ಒಗ್ಗಟ್ಟಿನ ಮಾತು ಎತ್ತಲು ಸಾಧ್ಯವಿದೆ?

ರಾ. ಬಾ. ಕುಟ್ಟಯ್ಯನವರ ಭಾಷಣಾನಂತರ ಮಿ ರಾ. ರಾ. ಪಾಲೆಕಂಡ ಮೇದಪ್ಪನವರು ಭಾಷಣ ಮಾಡಿದಲ್ಲಿ ಅವರು ಹೀಗೆಂದು ಹೇಳಿರುವರ.—"ಈ ಸಮಯದಲ್ಲಿ ಉದ್ಯೋಗಸ್ಥರು ಕೈಬಿಟ್ಟರೆ ನಮ್ಮ ಅಭಿವೃದ್ಧಿಗೆ ಕುಂದಕ ಬರುತ್ತದೆ ಉದ್ಯೋಗಸ್ಥರು ಸ್ವಲ್ಪ ಕಾಲದ ವರೆಗೆ ನಮ್ಮ ಬೆಂಬಲವಾಗಿರಬೇಕು." ಈ ಮಾತುಗಳು ಕೊಡಗೇತರರಿಗೆ ಇಷ್ಟಷ್ಟು ಆನಂದವನ್ನುಂಟು ಮಾಡಬೇಕು ಯಾಕೆಂದರೆ ಇದರಿಂದ ಇನ್ನು ಮುಂದೆ ಸರಕಾರಿ ಉದ್ಯೋಗಸ್ಥರು ಕೊಡವರ ಬೆಂಬಲವಾಗಿರಬೇಕೆಂಬುದು ಮಾತ್ರವಲ್ಲ, ಈ ಮೊದಲು ಸಹ ಅವರು ಹಾಗಿದ್ದರೆಂದು ತಿಳಿಯಬರುತ್ತದೆ 'ಈ ಸಮಯದಲ್ಲಿ ಉದ್ಯೋಗಸ್ಥರು ನಮ್ಮ ಕೈಬಿಟ್ಟರೆ ನಮ್ಮ ಅಭಿವೃದ್ಧಿಗೆ ಕುಂದಕ ಬರುತ್ತದೆ' ಎಂದು ಹೇಳಿರುವರು. ಹಾಗಾದರೆ ಇಷ್ಟರ ವರೆಗೆ ಸರಕಾರಿ ಉದ್ಯೋಗಸ್ಥರು ಕೊಡವರ ಕೈ ಹಿಡಿದು ಕೊಂಡಿರುವರೆಂದು ಅರ್ಥವಾಗುವುದಿಲ್ಲವೇ? ಈಗ ಕೆಲವು ದಿನಗಳ ಹಿಂದೆ ರಾ. ಬಾ. ಕುಟ್ಟಯ್ಯನವರು ಅವರ ಸಂಘದವರಿಗೆ ಹೆಚ್ಚಿನ ಉಪಕಾರ ಮಾಡಿದುದಕ್ಕೆ ಕೊಡಗು ಚೀಫ್ ಕಮೀಶನರಾಗಿದ್ದ ಮಿ. ಬಾರ್ಟನರವರನ್ನು ವಂದಿಸಿದರು. ಈ ಮಾತುಗಳನ್ನೆಲ್ಲಾ ಒಂದಾಗಿ ಗಣನೆಗೆ ತೆಗೆದುಕೊಳ್ಳಿ. ಅದರಿಂದ ಕೊಡಗೇತರರ ಸ್ಥಿತಿಯು ಇನ್ನೂ ಚೆನ್ನಾಗಿ ತಿಳಿಯುವುದು

ಭೂಲೋಕದಲ್ಲಿ ತಾವು ಮುಂದಕ್ಕೆ ಹೋಗಬೇಕೆಂದು ಎಲ್ಲರೂ ಅಭಿಪ್ರಾಯ ಪಡುವರು. ಆದರೆ ಬೇರೆಯವರನ್ನು ಮುಂದುವರಿಸಲು ಬಿಡಬಾರದೆಂಬ ಮಾತು ನಾನು ಕೇಳಿಲ್ಲ. ಅಂಥಾ ಮಾತುಗಳು ನಾಚಿಕೆಕರವಾದುವೆಂದೇ ನನ್ನ ಭಾವನೆ. ಇಡೀ ಬ್ರಿಟಿಷ್ ಹಿಂದೂದೇಶದಲ್ಲಿ ಹೀಗೆ ಬೇರೆಯವರ ಅಭಿವೃದ್ಧಿಯನ್ನು ತಡೆಯುವ ಅಭಿಪ್ರಾಯಗಳನ್ನು ಯಾರೂ ಕೊಡಲಿಲ್ಲ. ಯಾವ ಸಂಗಡವಾದರೂ ಪರರ ಅಭಿವೃದ್ಧಿಯನ್ನು ಕೆಡಿಸಲಿಕ್ಕೆ ಸರಕಾರಿ ಉದ್ಯೋಗಸ್ಥರ ಸಹಾಯವನ್ನು ಕೇಳಿದ್ದಿಲ್ಲ. ನಮ್ಮ ದೇಶದಲ್ಲಿ ಅದೂ ಆಯಿತು. ಡಿಸ್ಟ್ರಿಕ್ಟ ಮೇಜಿಸ್ಟ್ರೇಟರು ಪೊಲೀಸು ಸುಪರಿಂಟೆಂಡೆಂಟರವರು ಮತ್ತು ಹಲವು ವಿದ್ಯಾವಂತ ಕೊಡವರ ಮುಂದೆ ಇಂಥಾ ಮಾತುಗಳನ್ನಾಡಿದರೂ ಯಾರೊಬ್ಬರೂ ಅವುಗಳನ್ನು ಖಂಡಿಸದ್ದು ವಿಷಾದಕರ. ಈ ಅಭಿಪ್ರಾಯಗಳು ಕೊಡವರ ಬಹುಮತದ ಅಭಿಪ್ರಾಯಗಳಲ್ಲವೆಂದು ನಂಬುತ್ತೇನೆ

ಪಾಲೇಕಂಡ ಮೇದಪ್ಪನವರಲ್ಲಿ ಒಂದು ವಿನಂತಿ—ನೀವು ಜನರಿಂದ ಚುನಾಯಿತರಾದ ಕೌನ್ಸಿಲು ಮೆಂಬರು. ನಿಮ್ಮ ಚುನಾವಣೆಗಾಗಿ ನೀವು ನೂರಾರು ಕೊಡಗೇತರರ ಓಟುಗಳನ್ನು ಬೇಡಿದ್ದೀರಿ ಆದರೆ ಈಗ ನೀವು ನಿಮ್ಮ ಸಂಗಡವರ ಸಹಾಯಕ್ಕೆ ಸರಕಾರಿ ಉದ್ಯೋಗಸ್ಥರ ಸಹಾಯವನ್ನು ಕೇಳಿಕೊಳ್ಳುವಿರಿ. ನಿಮಗೆ ಓಟು ಕೊಟ್ಟ ಬಡಪಾಯಿಗಳಿಗೆ ಈ ಅಭಿಪ್ರಾಯವು ತಿಳಿದಿರುವದೇ?

ನಮ್ಮ ಕೊಡಗೇತರರಲ್ಲಿ ಒಂದು ವಿಜ್ಞಾಪನೆ. ಕುಟ್ಟಯ್ಯನವರ ಮತ್ತು ಮೇದಪ್ಪನವರ ಭಾಷಣಗಳಿಂದ ಕೊಡಗೇತರರಿಗೆ ಇನ್ನು ಮುಂದೆ ಇಲ್ಲಿ ಹರ್ಷಕರವಾಗಲು ಸಾಧನವಾಗಲಿ ಇಲ್ಲವೆಂದೂ, ಅವರ ಸ್ಥಿತಿಯು ದಕ್ಷಿಣ ಆಫ್ರಿಕದ ಹಿಂದೀಯರ ಸ್ಥಿತಿಗಿಂತ ಕಡೆಯಾಗಿರುವದೆಂದೂ ತಿಳಿಯಬರುವದೇನೋ ನಿಜ. ಆದರೆ ಇದಕ್ಕೆ ನೀವು ಬೆದರಬೇಕಾಗಿಲ್ಲ. ಕುಟ್ಟಯ್ಯನವರು ನಮ್ಮನ್ನು ಮುಂದೆ ಹೋಗದಂತೆ ತಡೆದ ಹಾಗೆಲ್ಲಾ ನಮ್ಮ ಶಕ್ತಿಯು ಹೆಚ್ಚೀತು ಅವರು ಒತ್ತಿ ಹೇಳಿದ ಮಾತುಗಳನ್ನು ಇನ್ನು ಒಂದು ಸಾವಿರ ಸರ್ತಿ ಹೇಳಲಿ ಅದರಿಂದ ನಿದ್ರಾ ಪರವಶರಾಗಿದ್ದ ಕೊಡಗೇತರರ ಕಣ್ಣುಗಳನ್ನು ಒಂದು ಸಾವಿರ ಸಲ ತೆರೆಯಬಹುದು. ಸಮುದ್ರದ ತೆರೆಗಳನ್ನು ಹೇಗೆ ಯಾರಿಂದಲೂ ತಡೆಯಲು ಸಾಧ್ಯವಿಲ್ಲವೋ ಅದರಂತೆಯೇ ಯಾವನೊಬ್ಬ ಮನುಷ್ಯನ ಸ್ವಾಭಾವಿಕ ಹಕ್ಕುಗಳನ್ನು ತಡೆಯಲು ಸಾಧ್ಯವಿಲ್ಲ ಮೇದಪ್ಪನವರು ಸರಕಾರಿ ಉದ್ಯೋಗಸ್ಥರ ಸಹಾಯವನ್ನು ಕೇಳಿಕೊಳ್ಳಲಿ. ಇದರಿಂದ ಮೇದಪ್ಪನವರು ಕೊಡಗೇತರರನ್ನು ಸ್ವಲ್ಪ ಕಾಲ ಗದರಿಸಬಹುದು. ಆದರೆ ಗುಳ್ಳೆನರಿಯು ಸಿಂಹದ ಚರ್ಮವನ್ನು ಹೊದ್ದು ಸಿಂಹನೆಂದು ಬಹುಕಾಲ ನಟಿಸಲಾರದು.

ಚಿತ್ರಿತ್ಯನಾಗಿಲ್ಲದ ಕೊಡಗೇತರ.

GENTLEMEN,

It is hereby published for the information of the public that we have been doing receiving and forwarding business for a long time and supplying all sorts of Estate requisites such as manures, tools Date mats etc., to the various estates in Coorg at moderate commission and the following cart hire per 14 Railway maunds.

Somawarpet, Rs 10, Mercara Rs. 9, Virajpet 9, Sunticoppa, 8, Pollibetta 8, Siddapur, 8.

Even small orders will have our maximum attention and are promptly and most carefully executed

We have been doing this work with a view to cause convenience to the public and to get reasonable charges for our hard labour and safe and quick delivery of things.

Promptitude and honesty are our guiding factors

Intending purchasers, senders and receivers are earnestly requested to place their esteemed orders with us and oblige In order to save time, demmurrage etc., It is requested to make arrangements to send the Railway pass direct to us for doing the needful in the matter

For further particulars please apply to—

B BETTIAH,
Receiving & Forwarding Agent,
Ramvilas Mohalla
MYSORE

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—

ನಾವು ಈಗ ಬಹಳ ದಿವಸಗಳಿಂದಲೂ ರಿಸೀವಿಂಗ್ ಮತ್ತು ಫಾರ್ವರ್ಡಿಂಗ್ ಕೆಲಸವನ್ನು ಮಾಡಿ ಅನುಭವವನ್ನು ಪಡೆದಿರುವುದಲ್ಲದೆ, ಮಹಾ ಜನಗಳ ಸೌಕರ್ಯಕ್ಕಾಗಿ ಈಗ ನಾವು ಗಾಡಿಬಾಡಿಗೆಯನ್ನೂ ಮತ್ತು ಕಮೀಶನ್ ದರವನ್ನೂ ಬಹಳ ಕಮ್ಮಿ ಮಾಡಿರುತ್ತೇವೆ. ಕಾಪಿತೋಟಗಳಿಗೆ ಬೇಕಾಗುವ ಗೊಬ್ಬರಗಳು, ಆಂಡರೆ ಕಡಲೆ, ಹಿಂಡಿಗೆ, ಹಿಪ್ಪೆ, ಹರಳು ಮುಂತಾದ ಹಿಂಡಿಗಳನ್ನೂ, ಬಾಳೆ ಕುಕ್ಕೆ ಮತ್ತು ಗುದ್ದಲಿ, ಮುಳ್ಳುತಂತಿ ಮೊದಲಾದ ಸಾಮಾನುಗಳನ್ನೂ ನಾವು ಸಪ್ಲೈ ಮಾಡುತ್ತೇವೆ ಮಹಾ ಜನಗಳು ತಮ್ಮ ಆರ್ಡರುಗಳನ್ನು ನಮ್ಮ ಅಡ್ರೆಸಿಗೆ ದಯಮಾಡಿ ಕಳುಹಿಸುವಂತೆ ತಮ್ಮ ಪಾರ್ಟಿಗಳಿಗೆ ತಿಳಿಸಿದಲ್ಲಿ, ಸಾಮಾನುಗಳಿಗೆ ಡೆಮರೇಜು ವಗೈರೆ ಆಗದಂತೆ, ಡೆಲಿವರಿಯನ್ನು ತೆಗೆದುಕೊಂಡು ಸಾಮಾನುಗಳನ್ನು ಭದ್ರವಾಗಿಯೂ ಜಾಗ್ರತೆಯಾಗಿಯೂ ಕಳುಹಿಸಿಕೊಡುತ್ತೇವೆ ಮಹಾ ಜನಗಳು ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ. ಹೆಚ್ಚು ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಗಾಡಿಬಾಡಿಗೆ—ರೈಲ್ವೆ 14 ಮಣ ತೂಕಕ್ಕೆ ಸೋಮವಾರಪೇಟೆಗೆ ರೂ 10, ಮಡಿಕೇರಿಗೆ ರೂ 9 ವೀರಾಜಪೇಟೆಗೆ ರೂ 9 ಸುಂಟಿಕೊಪ್ಪಕ್ಕೆ ರೂ. 8, ಪೊಳ್ಳಿಬೆಟ್ಟಕ್ಕೆ ರೂ 8, ಸಿದ್ದಾಪುರಕ್ಕೆ ರೂ 8

ಬಿ. ಬೆಟ್ಟಯ್ಯ,
ರಿಸೀವಿಂಗ್ ಮತ್ತು ಫಾರ್ವರ್ಡಿಂಗ್ ಏಜೆಂಟರು,
3 ರಾಮವಿಲಾಸ ಮೊಹಲ್ಲಾ, ಮೈಸೂರು.

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗಲೀಕ್ಕೆ, ಹಿರಿಯ ಸಂಬಳವಾಗಲಿಕ್ಕೆ, ಸ್ತ್ರೀಯರಿಗೆ ಸಂಬಳ ಹೆಚ್ಚಲಿಕ್ಕೆ, ವಿವಾಹವಾಗಲಿಕ್ಕೆ, ಸಂತತಿಯಾಗಲಿಕ್ಕೆ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗಲಿಕ್ಕೆ, ವ್ಯಾಪಾರದಲ್ಲಿ ಬಹಳ ಲಾಭ ಸಿಗಲಿಕ್ಕೆ, ಸಾಲ ಮುಕ್ತ ಆಗಲಿಕ್ಕೆ, ಭೂತ ಪಿಶಾಚ ಗ್ರಹಭಾಧೆ ಆಗದಿರಲಿಕ್ಕೆ, ಪ್ರತಿಕೂಲ ಜನರು ಅನುಕೂಲವಾಗಲಿಕ್ಕೆ, ಇವೇ ಮತ್ತು ಬೇರೆ ಎಷ್ಟೋ ಮಾತುಗಳು ಇಷ್ಟದಂತೆಯೇ ಆಗುವ ಅಪೇಕ್ಷೆ ಇದ್ದರೆ ಇಷ್ಟಿತಫಲ ಕೊಡುವ ಪೋಕವೂ ಕಲ್ಪತರು ತಾಯಿತ ಯಶವಾಗಲೂ ಪತ್ರಿಕ ಇಡಿರಿ, ಆಂದರೆ ಇಷ್ಟ ಪೂರ್ಣವಾಗುವದು. ಅನುಭವದ ಮೇಲೆ ಖಾತ್ರಿ ಆಗಬಹುದು. ತಾ. ೯. ೧೬ ರೂ. ೧೨ ಗುಣ ಬೀಳ್ಪಟ್ಟಿಗಿ, ತಾ. ೧. ೨೭. ರೂ. ೭ ಗುಣ ಗುಡವನಹಳ್ಳಿ, ತಾ. ೧ ೧೬ ರೂ. ೧ ಗುಣ ೧ ಸಿಂಗಳ್ಳಿ ಎ. ಪಿ. ಮಿಸ್ಟರ್ ಹೆಸರೆ, ಗುಣಪಾಠದಲ್ಲಿ ತಾಯಿತದಯಶಸ್ಸು ಪತ್ರ ಬಾಕಿ ಸಿಗುವದು.

ವಿಳಾಸ:—ಮ್ಯಾನೇಜರ, ಕಲ್ಪತರು ತಾಯಿತ, ಕೆ. ಎ ಮಾ. ಪೋ. ಸಂಕೇಶ್ವರ ಜಿ, ಬೆಳಗಾಂವ. 4

FOR SALE

One 4½ H P Hornsby Akroyd oil Engine in good order

For Particulars apply to—

W. G. L. PARSONS,
DALQUARREN Estate,
3 Chettalli P. O. Coorg.

ಕಂಚಿ ಕೊನಾರಡು ಸೀರೆಗಳು.

ಇವು ಅರಳೀಪಟ್ಟೆ ಸೀರೆಯಂತೆ ಇರುವವು, ಸುಂದರವಾದ ರೇಷ್ಮೆಯ ಸೆರಗೂ, ಅಂಚೂ ಇರುವವು 18 ಮೊಳ ಉದ್ದ, ದೊಡ್ಡ ಪತ್ತ ಬಣ್ಣ ಹೋಗದು ಮತ್ತು ಇವು ಬಣ್ಣವು ರೇಷ್ಮೆಯಂತೆ ಇರುವವು ಶ್ರೀಮಂತರೂ, ಗರೀಬರೂ ಕಟ್ಟಲು ಲಾಯಕ್ಕಾದುವು ಕ್ರಯ 1ನೇ ನಂಬರು 7—8—0. 2ನೇ ನಂಬರು 8—8—0 ಸಿಂಗಯ ಸರಿಗಿನದು ರೂ 10—8—0

ವಿಳಾಸ:—

ಬಿ. ಪೆರುಮಾಳ್ ಕಂಪೆನಿ,
28, ಹನುಮಂತರಾಯನ ಕೋಯಿಲ್ ಬೀದಿ,
ಪಾರ್ಕ್‌ಟೌನ್, ಮದ್ರಾಸು.

ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚ್.

ಈ ಗಡಿಯಾರಗಳನ್ನು ಸೀಮೆ ಭಂಗಾರದಿಂದ (ಸ್ವಿಸ್ ಮೇಡ್) ಲೀವರ್ ಮೂವ್‌ಮೆಂಟ್‌ಗಳಿಂದ ತಯಾರಿಸಿದ್ದು ಇವಕ್ಕೆ ಭರವಸೆಯುಳ್ಳ 5 ವರುಷ ಗ್ಯಾರಂಟಿಯು ಕೊಡಲಾಗುವದ ನೀಲು ಗಡಿಯಾರದ ಮೇಲೆ ಮುದ್ರಿಸಿರುವದು ಇದಕ್ಕೆ ಮುಂಚಿತವಾಗಿ ಕೆಟ್ಟುಹೋದರೆ ಯಾವ ಖರ್ಚೂ ಇಲ್ಲದೆ ನಾವು ರಿಪೇರಿ ಕೊಡುವೆವು. ಇದು ಸರಿಯಾದ ಗಂಟೆಯನ್ನು ತೋರಿಸುವದು. ಇದು ನಿಜವಾದ ಭಂಗಾರದ ಗಡಿಯಾರಕ್ಕೆ ಸರಿಸಮಾನವಾಗಿರುವದು



5 ವರುಷ ಗ್ಯಾರಂಟಿಯುಳ್ಳದ್ದು ರೂ 10—8—0
3 ವರುಷ ಗ್ಯಾರಂಟಿಯುಳ್ಳದ್ದು ರೂ 8—8—0
ರೋಲ್ಡ್ ಲಿವರ್ ಪಾಕೆಟ್ ವಾಚ್ ರೂ. 5—8—0

ಹೊಸ ನಮೂನೆ ಅಲಾರಂ ಟೈಂಪೀಸ್.

ಇದು ಜರ್ಮನ್ ದೇಶದಲ್ಲಿ ತಯಾರಿಸಿದ್ದು. ಗಡಿಯಾರದ ಎತ್ತರ 7 ಅಂಗುಲವಿದೆ ಗಂಟೆ ಹೊಡೆಯುವುದು ಮತ್ತು ಗಂಟೆ ತೋರಿಸುವ ಡಯಲಿನಲ್ಲಿ ಅನೇಕ ವಿಧವಾದ ಗೊಂಬೆಗಳು ಇರುವವು ಅವು ಕಣ್ಣು ಕೈ, ಕಾಲು ಆಡಿಸುವವು. ಸಲಾಂ ಮಾಡುವುದು, ಕುಸ್ತಿ ನರ್ತನ ಮಾಡುವುದು ಮುಂತಾದ ಕೌತುಕಗಳು ಬಹು ಚನ್ನಾಗಿ ಕಾಣುವವು ಡ್ರಾಯಿಂಗ್ ರೂಮು, ಅಂಗಡಿ, ಸ್ಕೂಲು, ಗುಡಿ ಮುಂತಾದವುಗಳಲ್ಲಿ ಇಡಲು ಬಹು ಲಾಯಕ್ಕಾದದ್ದು 3 ವರುಷ ಗ್ಯಾರಂಟಿ ಕೊಡುವೆವು ಕ್ರಯ 1ಕ್ಕೆ ರೂ 5—4—0

ರೋಲ್ಡ್ ಗೋಲ್ಡ್ ಆಭರಣಗಳು.

ರೋಲ್ಡ್ ಗೋಲ್ಡ್ ಭಂಗಾರದೊಂದಿಗೆ ಒಂದು ಭಾಗ ಚೊಕ್ಕ ಚಿನ್ನ ಸೇರಿಸಿ ತಯಾರಿಸಿದ ಹತ್ತು ವರುಷಗಳ ವರೆಗೆ ಇವು ತಮ್ಮ ಬಣ್ಣವನ್ನೂ ಸೊಬಗನ್ನೂ ಕಳಕೊಳ್ಳುವದಿಲ್ಲವೆಂದು ಭರವಸೆ ಕೊಡುತ್ತೇವೆ ಈಗಿನ ಕಾಲದಲ್ಲಿ ಪ್ರತಿಯೊಬ್ಬರೂ ಉಪಯೋಗಿಸಲು ಲಾಯಕ್ಕಾಗಿದೆ

ಬಾವಲಿಯುಳ್ಳ ಕುತ್ತಿಗೆ ಸರ	ರೂ 5—12—0
ಲೋಲಾಕ್	ರೂ, 2—12—0
ಬಳೆಗಳು ಜೊತೆಗೆ	ರೂ 3—0—0

ವಿಳಾಸ —

ಅಮೇರಿಕನ್ ವಾಚ್ ಕಂಪೆನಿ,
ಪೋ. ಬಾ. ನಂ. 509,
8. ಪಾರ್ಕ್‌ಟೌನ್, ಮದ್ರಾಸು.

CARS FOR HIRE·

For easy and comfortable travelling with little cost please run up to T R. Ramiah, Agent, C P C Co Ltd, Booking Office, Chowk, Mercara, where Ford and Overland cars are ever ready for hire Seats in buses can be had and parcels are carried between Mercara Mysore via Siddapore; Mercara-Somwarpet via Fraserpet; Mercara Mangalore

ಬಾಡಿಗೆಗೆ ಮೋಟಾರುಗಳು.

ಸುಲಭ ಚಾರ್ಜಿನಲ್ಲಿ ಅನುಕೂಲವಾಗಿ ಪ್ರಯಾಣ ಮಾಡಬೇಕಾದರೆ ಮೋಟಾರು ಕಾರುಗಳು ಬಾಡಿಗೆಗೆ ಸಿಕ್ಕುವ ಮಡಿಕೇರಿ ಚೌಕಿಯ ಸಿ. ಪಿ. ಸಿ ಕಂಪೆನಿ ಲಿಮಿಟೆಡ್ ಬುಕ್ಕಿಂಗ್ ಆಫೀಸಿನಲ್ಲಿರುವ ಏಜೆಂಟ್, ಟಿ. ಆರ್. ರಾಮಯ್ಯನವರಲ್ಲಿ ದಯವಿಟ್ಟು ಹೋಗಿರಿ. ಸಿದ್ದಾಪುರಕ್ಕಾಗಿ ಮಡಿಕೇರಿಯಿಂದ ಮೈಸೂರಿಗೂ ಫ್ರೇಸರ್‌ಪೇಟೆಗಾಗಿ ಮಡಿಕೇರಿಯಿಂದ ಸೋಮವಾರಪೇಟೆಗೂ ಮಡಿಕೇರಿಯಿಂದ ಮಂಗಳೂರಿಗೂ ಬಸ್ಸಿನ ಟಿಕೇಟುಗಳು ದೊರೆಯುವದಲ್ಲದೆ ಸಾಮಾನುಗಳೂ ಒಯ್ಯಲ್ಪಡುವವು. 6

ಬೇಟೆಗೆ ಅವಶ್ಯವಾದ

ಕೋವಿಮದ್ದು ಪೌಂಡಿಗೆ ರೂ. ೨-೮-೦
ಕೇಪು ಕೋವಿನ ಕೇಪುಗಳು, ೨೫೦ಉಳ್ಳ ಪೆಟ್ಟಿಗೆಗೆ ೧-೪-೦

ಆರ್ಡರು ಕಳುಹಿಸುವಾಗ್ಯೆ ಯಾವಾಗಲೂ ರೂ. ೫ ಅಡ್ವಾನ್ಸು ಕಳುಹಿಸತಕ್ಕದ್ದು. ಜನ್ಮು ಹಿಡುವಳಿದಾರರು ಆರ್ಡರು ಕಳುಹಿಸುವಾಗ ಮೊದಲನೇ ಸಾರಿಮಾತ್ರ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರಿಂದ ವಿನಾಯತಿ (ಎಕ್ಸೆಂಪ್ಷನ್) ಸರ್ಟಿಫಿಕೇಟನ್ನು ಕಳುಹಿಸಬೇಕು. ತಪ್ಪಿದ್ದಲ್ಲಿ ನಿಮಗಾಗಿ ನಾವೇ ಆ ಸರ್ಟಿಫಿಕೇಟನ್ನು ಒದಗಿಸಿಕೊಳ್ಳಲು ತಯಾರಾಗಿದ್ದೇವೆ.

ಈ ಕೆಳಗಿನ ವಿಳಾಸಕ್ಕೆ ಆರ್ಡರುಗಳನ್ನೂ ಪತ್ರವ್ಯವಹಾರಗಳನ್ನೂ ಇಂಗ್ಲಿಷಿನಲ್ಲಿ ನಡಿಸತಕ್ಕದ್ದು.

S. Venkatarangam Chetty,
Ammunition & Sulphur Merchant,
No. 9, China Bazar,
12—7. Madras.

MY SCIENTIFIC SYSTEM OF GRADUATED PHYSICAL CULTURE.

SENT FREE TO EVERY ONE.

This will show you some of my remarkable achievements in Haalth building exercises, many pages with nice photographs of myself and a number of my pupils. Read what they say about my system. Don't take my word for it. This book will be an impetus, an inspiration to every young man. All I ask is the price of postage two annas. Remember this does not obligate you in any way, so don't delay one minute in your life. Write for this big book now while it is on your mind.

Prof. M. V. Krishna Rao,
P. O. Basuvangudi.
BANGALORE CITY (S. I.)

ಪ್ರಕಟಣೆ.

ನಮ್ಮ ಅಂದವಾದಹೊಸ ಅಕ್ಷರಗಳು ಬಂದು ತಲಪಿರುವುದರಿಂದ, 'ಲೆಟರ್ ಹೆಡ್ಸ್' 'ವಿಸಿಟಿಂಗ್ ಕಾರ್ಡ್ಸ್' ಆಮಂತ್ರಣಗಳು (ಇನ್ವಿಟೇಶನ್) ಮೊದಲಾದ ಪ್ರಿಂಟಿಂಗ್ ಕೆಲಸಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಚಂದವಾಗಿಯೂ ಕಡಿಮೆ ಚಾರ್ಜಿನಲ್ಲಿಯೂ ನಿಯಮಿತ ಕಾಲದಲ್ಲಿಯೂ ಮಾಡಿಕೊಡಲು ತಯಾರಾಗಿದ್ದೇವೆ.

ಮಡಿಕೇರಿ. ಮ್ಯಾನೇಜರ್,
'ಕೊಡಗು' ಲಿಮಿಟೆಡ್

ನೀರಿನ ಚಿಂತೆಯನ್ನು ತಪ್ಪಿಸುವ ಕಿರ್ಲೋಸ್ಕರ ಪಂಪು.

ಮನೆಗಳಲ್ಲಿ ನೀರು ಸೇದುವದೊಂದು ಬಹು ಕಷ್ಟದಾಯಕವು. ಅದರಲ್ಲಿ ಈ ಕೆಲಸವನ್ನು ಕರ್ನಾಟಕದಲ್ಲಿ ಬಹುಶಃ ಸ್ತ್ರೀಯರೇ ಮಾಡಬೇಕಾದ್ದರಿಂದ ಅವರಿಗೆ ಇಮ್ಮಡಿ ಕಷ್ಟವಾಗುತ್ತೆ. ಮನೆಯಲ್ಲಿ ಶ್ರೀಮಂತರಿದ್ದಾಗ್ಯೂ ನೀರಿನ ವಿಷಯದಲ್ಲಿ ಸ್ವತಃ ಸೇದಬೇಕಾಗುತ್ತದೆ. ಅದ್ದರಿಂದ ಈ ಅಡಚಣೆಗಳು ಇನ್ನು ದೂರವಾಗುವದಕ್ಕೆ

ಕಿರ್ಲೋಸ್ಕರ ಪಂಪುಗಳನ್ನೇ

ಉಪಯೋಗಿಸಿ. ಇದರಿಂದ ಆರೋಗ್ಯ ಉಳಿಯುವದು. ತಿಂದ ಅನ್ನ ಮೈಯಿಗೆ ಹತ್ತುವದು. ಇವುಗಳ ಬಿಡಿಭಾಗಗಳು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುವದರಿಂದ ಪಂಪುಗಳು ಕೆಡುವ ಭೀತಿಯಿಲ್ಲ. ಬಾಳಿಕೆಯಲ್ಲಿ ಗಟ್ಟಿ. ಬಟ್ಟು ಆರು ನಮೂನೆಗಳು ಇರುತ್ತವೆ.

ಬೆಲೆ ಮತ್ತು ಸವಿಸ್ತಾರ ಸಂಗತಿಯ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
13 ಜಿ. ಸಾತಾರ್.

ಲೋಕಪ್ರಸಿದ್ಧವಾದ! ಅನುಭವಸಿದ್ಧವಾದ!

ಮೂರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯುಕ್ರಯ ವಾಪಾಸು. ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖ ಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಟ್ರೇಡ್‌ಮಾರ್ಕ] ಅಗಸ್ತ್ಯ [ನೋಂದಿ ಕೆಕ್ಕೊಳ್ಳಿದೆ.

ಮನ್ಮಥ ಚಿಂತಾಮಣಿ ಲೇಹ

ರಿಜಿಸ್ಟರ್ ಆದದ್ದು.

ಆಬಾಲವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣ ಕಾರಿಯಾದದ್ದು. ಮೇಹ ವಿಕಾರಪಟ್ಟವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಬಾಲಕರಿಗೂ, ಜ್ಞಾನಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಬಹುಪರವಾನಂದ ಔಷಧಿ, 1ಸೇರು 48ದಿವಸ ಸೇವಿಸಬಹುದು. ನಂ. (1) 1ಸೇರು ಡಬ್ಬಿ 1ಕ್ಕೆ ರುಪಾಯಿ 3-0-0. ½ಸೇರು ಡಬ್ಬಿ 1ಕ್ಕೆ ರುಪಾಯಿ 1-9-0. ನಂ. (2) 1ಸೇರು ಡಬ್ಬಿ 1ಕ್ಕೆ ರುಪಾಯಿ 2-0-0, ½ ಸೇರು ಡಬ್ಬಿ 1ಕ್ಕೆ 1-1-0. ವಿ ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ.

ವಿಳಾಸ:—ದೇವಣ್ಣ ನಾರಾಯಣಸೆಟ್,
ಗೋಳಿಕಟ್ಟಾ,
ಮಂಗಳೂರು,
12—11 ದ. ಕ.

ಕರ್ಣಾಟಕ

ಜ್ವರ ನಿವಾರಕ

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝಾ ಆದಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷದವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦
ಟಪ್ಪಾಲು ಹಾಶುಲ ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು.
೯—೨—೦

ಏಜಂಟರು ಬೇಕು. ಕೊಡಗಿನ ಸ್ಕೂಲ್‌ಮಾಸ್ತರುಗಳು ತಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ.

12—8 ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ಸಿ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	9890
ಜಮಾಬಂದ ಠೇವಣಾತಿ	....	90,600

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ, ಬಿ.ಎಲ್.
ಸೆಕ್ರೆಟರಿ,
ಸಿ. ಯಂ. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್
ತಾರೀಖು 29—8—1925.

"ಲೋಕರಹಸ್ಯ."

ಕೃಷಿಯ ಅತ್ಯುತ್ತಮ ರೀತಿಗಳು, ವ್ಯಾಪಾರದ ವಿಷಯಗಳು, ಹೆಂಗಸರಿಗೆ ಬೇಕಾದ ಗೃಹಕೃತ್ಯದ ವಿಷಯಗಳು, ಹೊಲಿಗೆ, ಮಕ್ಕಳನ್ನು ಸಾಕುವ ವಿಷಯಗಳು, ಬಡವರಿಗೆ ಬೇಕಾದ ಹಣ ಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದಮುಖಾಂತ ವೈದ್ಯ ಸಂಗ್ರಹ, ಪ್ರತಿಯೊಬ್ಬನೂ ತಿಳಿಯಬೇಕಾದ 'ಲಾ' ವಿಚಾರ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂದಲೂ, ತುಂಬಿ ತುಳುಕುತ್ತಿರುವ ಈ ಮಾಸ ಪತ್ರಿಕೆಗೆ ವರ್ಷಕ್ಕೆ ಚಂದಾ ರೂ. 3—8—0 ಮಾದರಿ ಸಂಚಿಕೆಗೆ 0—5—0.

ಪ್ರತಿ ತಿಂಗಳಲ್ಲೂ 60 ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

"ಲೋಕರಹಸ್ಯ" ಆಫೀಸು,
ವೀರರಾಜೇಂದ್ರಪೇಟೆ.
(ಕೊಡಗು.)
10

GOOLAMHUSSAIN ALLIBHOY & SONS.

Largest Importers of Fire Arms and Ammunition, Cheapest priced firm in India,

210 Abdul Rehman Street, BOMBAY.



Brilliant Search light tied over the hat.

Use our Brilliant Search Light Lamp for **Hunting, Camping, Fishing, Trapping and all kinds of ou door sports during the night,** price Rs. 40/- Free Delivery.

12 and 16 bore Zeppelin Bullet cartrdges **recommendable for big Game shooting,** Rs. 30/-100.

We stock Arms, Ammunition and shooting requisites of almost all the kinds and classes ranging from Re. 1/- to Rs. 3,600/-.

Apply for the Current Catalogue.
24—12

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.